ನವಯುಗ

5—1—1967



೨೦ ಪೈಸೆ

ಕಥಾ ಪ್ರಪಂಚ

ತಪ್ಪು ಯಾರದು ?

ಬರೆದವರು :
ಶ್ರೀ ಹಳೆನಾಡು ಸುಬ್ರಾಯ ಭಟ್ಟ, ಜೋನಾಳಿ

ಅಂದು ಯುಗಾದಿ ಹಬ್ಬ. ಮನೆ ಮನೆಯಲ್ಲೂ ಹೊಸ ವರುಷವನ್ನು ಹರುಷದಿಂದ ಬರಮಾಡಿಕೊಳ್ಳುವ ಸಿದ್ಧತೆ ನಡೆದಿತ್ತು.

ಸುಮತಿಯ ಪತಿ ರಾಮಚಂದ್ರನೂ ಕೂಡಾ ಮೊದಲ ದಿನವೇ ಹೊಸ ಬಟ್ಟೆಯನ್ನು ತಂದು ಮನೆಯವರಿಗೆಲ್ಲಾ ಹಂಚಿದ್ದನು. ಅಂದಿನ ವಿಶೇಷ ಅಡಿಗೆಯ ತಯಾರಿಗೆ ಎಲ್ಲವೂ ಸಿದ್ಧವಾಗಿತ್ತು.

ಆದರೆ ಅಂದೇಕೋ ಸುಮತಿಯ ಮನ ನೆಮ್ಮದಿಯಿಂದಿರಲಿಲ್ಲ. ಸದಾಕಾಲ ಅವಳನ್ನು ಕೊರೆಯುತ್ತಿದ್ದ ಚಿಂತೆಯೇ ಮೇಲೆದ್ದು ಮನದಲ್ಲಿ ನರ್ತಿಸತೊಡಗಿತ್ತು.

ಮಕ್ಕಳೆಲ್ಲಾ ಹೊಸ ಬಟ್ಟೆ ತೊಟ್ಟು ಉತ್ಸಾಹದಿಂದಲೇ ಬಂದು ಅವಳ ಕಾಲಿಗೆರಗಿದಾಗ ಯಾಂತ್ರಿಕವಾಗಿಯೇ ಉಪಚರಿಸಿ ಹಿಂದೆ ಕಳುಹಿಸಿದ್ದಳು.

ಅವಳಿಗಾಗಿ ತಂದಿದ್ದ ಹೊಸ ಸೀರೆ ಹಾಗೆಯೇ ಮೂಲೆಯಲ್ಲಿ ಮುದುಡಿ ಬಿದ್ದಿತ್ತು. ಅದನ್ನು ಕಣ್ಣೆತ್ತಿನೋಡುವ ಆಸೆಯೂ ಅವಳಿಗಿರಲಿಲ್ಲ. ಪೆಟ್ಟಿಗೆಯೊಳಗಿನ ಚಿನ್ನವೆಲ್ಲಾ ಸುಮತಿಯುಬರವನ್ನೇ ಕಾದು ಬೇಸತ್ತಿದ್ದವು.

ನಾಲ್ಕು ವರ್ಷಗಳ ಹಿಂದೆ ಎಲ್ಲವೂ ಬೇಕೆಂಬಾಸೆ ಅವಳಲ್ಲಿದ್ದಿತ್ತು. ಆಗ ಎಲ್ಲರೊಡನೆಯೂ ನಕ್ಕು ನಲಿಯುತ್ತಿದ್ದಳು. ಆದರೆ ದಿನ ಸರಿದಂತೆ; ವರ್ಷಗಳುರುಳಿದಂತೆ ಎಲ್ಲವೂ ನೀರಸವಾಗಿ ತೋರ ತೊಡಗಿತು. ಪತ್ನಿಯ ಅವಸ್ಥೆ ರಾಮಚಂದ್ರನಿಗೆ ನುಂಗಲಾರದ ತುತ್ತಾಗಿತ್ತು. ದಿನ ದಿನಕ್ಕೆ ಕೃಶಳಾಗುತ್ತಿರುವ ಮಡದಿಯ ಅಂತರ್ಯ ಅರಿಯಲು ಅಸಮರ್ಥನಾಗಿದ್ದನು. ಡಾಕ್ಟರರಿಗೆ ತೋರಿಸಿದಾಗ ಯಾವ ಕಾಹಿಲೆಯೂ ಇಲ್ಲವೆಂದಿದ್ದರು.

o o o

ಮದುವೆಯಾಗಿ ಮನೆ ಸೇರಿದ ಮೊದಲ ದಿನ ಸುಮತಿ ನಕ್ಕು ನಲಿದಾಡಿದ್ದಳು. ತಾನು ವಿಧುರನ ಕೈಹಿಡಿದಿರುವೆನೆಂಬ ಭಾವನೆ ಒಂದಿನಿತೂ ಇರಲಿಲ್ಲ. ಹಿರಿಯ ಹೆಂಡತಿಯ ಮಕ್ಕಳನ್ನು ಸವತಿಯ ಮಕ್ಕಳೆಂಬ ಭಾವನೆ ತಾರದೆ ಅಕ್ಕರೆಯಿಂದ ನೋಡುತ್ತಿದ್ದಳು.

ಪತಿಯನ್ನು ಮರವನ್ನಪ್ಪಿದ ಬಳ್ಳಿಯಂತೆ ಆಶ್ರಯಿಸಿದ್ದಳು. ರಾಮಚಂದ್ರನ ಮೊದಲ ಮಡದಿ ರತ್ನನ ನೆನಪನ್ನು ಪತಿಯ ಮನದಿಂದ ಆರೇ ತಿಂಗಳಲ್ಲಿ ಮರೆಯಿಸಿದ್ದಳು.

ಆಗ ಮನೆ ಎಂಬುದು ನಂದನವನವಾಗಿತ್ತು. ಸುಮತಿ ತನಗೆ ದೊರಕಿದ್ದು ತನ್ನ ಪೂರ್ವಪುಣ್ಯವೆಂದೇ ಭಾವಿಸಿದ್ದನು. ಸವತಿ ಮಕ್ಕಳೆಂಬ ಭಾವನೆಯನ್ನು ಒಂದು ದಿನವೂ ತೋರಿರಲಿಲ್ಲ.

'ಹೆತ್ತ ತಾಯಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದೆಯಲ್ಲಾ ಮಕ್ಕಳನ್ನು" ಎಂದಾಗ—.

'ಅವರೂ ನನ್ನ ಮಕ್ಕಳೇ ಅಲ್ಲವೆ?' ಎಂದು ಮಾತನ್ನು ಪೂರೈಸುತ್ತಿದ್ದಳು. ಮಕ್ಕಳನ್ನು ಉಪಚರಿಸುವ ದಾದಿ ಮನೆಯಲ್ಲಿದ್ದರೂ ಊಟೋಪಚಾರದ ಮೇಲ್ವಿಚಾರ ಸುಮತಿಯ ಕೈಯಿಂದಲೇ ನಡೆಯುತಿತ್ತು.

ಮಕ್ಕಳ ಮೇಲಿನ ಅಕ್ಕರೆಯಾಗಲೀ ಪತಿಯ ಮೇಲಿನ ಪ್ರೇಮವಾಗಲೀ ಒಂದಿನಿತೂ ಕಡಿಮೆಯಾಗಿರಲಿಲ್ಲ.

ಮೊದಲ ಮಡದಿ ಮರಣವನ್ನಪ್ಪಿದಾಗ; ಮೂರು ಮಕ್ಕಳ ತಂದೆ ರಾಮಚಂದ್ರ ಮರು ಮದುವೆಯಾಗಲಾರೆನೆಂದು ಹಟ ಹಿಡಿದಿದ್ದರೂ, ಕೊನೆಗೆ ಆಪ್ತೇಷ್ಟರ ಬಲವಂತಕ್ಕೆ ಬಲಿಯಾಗಿ ಸುಮತಿಯ ಕೈ ಹಿಡಿದಿದ್ದನು.

ಸುಮತಿಯ ತಂದೆ ಬಡವರಾದ ಕಾರಣ ಮಗಳಿಗೆ ವಯಸ್ಸು ಇಪ್ಪತ್ತು ದಾಟಿದ್ದರೂ; ಮದುವೆ ಮಾಡಲು ಸಮರ್ಥರಾಗಿರಲಿಲ್ಲ. ಕೊನೆಗೆ ತಿಪ್ಪಾ ಜೋಯಿಸರ ಮುಖಾಂತರ ಬಂದ ವರ ರಾಮಚಂದ್ರನಿಗೆ ಮೊದಲ ಮಡದಿಯಲ್ಲಿ ಮೂರು ಮಕ್ಕಳಿವೆ ಎಂಬ ವಿಚಾರ ತಿಳಿದೂ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ವರನ ವಯಸ್ಸೇನೂ ನಾಲ್ವತ್ತಕ್ಕೆ ಮೀರಿಲ್ಲವೆಂಬ ಸಮಾಧಾನದ ಮೇಲೆ ಮಗಳನ್ನು ಧಾರೆಯೆರೆದು ಕೈತೊಳೆದು ಕೊಂಡಿದ್ದರು.

ಕೆಲಕಾಲಗಳಿಂದ ಸುಮತಿ ತನ್ನ ಅಂತರ್ಯವನ್ನು ಯಾರೊಡನೆಯೂ ಬಾಯ್ಬಿಟ್ಟು ಹೇಳದೆ ಮೂಕ ವೇದನೆಯಲ್ಲಿಯೇ ಕಾಲತಳ್ಳುತ್ತಿದ್ದಳು. ಹೆಂಡತಿಯ ಅಂತರಂಗ ಅರಿಯಲು ಮಾಡಿದ ಉಪಾಯಗಳೆಲ್ಲಾ ರಾಮಚಂದ್ರನ ಪಾಲಿಗೆ ನೀರಸವಾಯಿತು.

ಹಬ್ಬ ಹರಿದಿನಗಳಲ್ಲಿ ಉತ್ಸಾಹ ತಾಳಿರುತ್ತಿದ್ದ ಸುಮತಿ ಮೂಲೆಯಲ್ಲಿ ಕುಳಿತು ಯೋಚಿಸುವುದನ್ನು ನೋಡಿ—

"ಸುಮತಿ ಇಂದೇನಾಯಿತು ನಿನಗೆ? ಯಾಕೆ ಸುಮ್ಮನೆ ಕುಳಿತಿದ್ದಿ?' ಎಂದನು.

ಮಾತಿಗುತ್ತರವೀಯದೆ ಮೌನವಾಗಿಯೇ ಕುಳಿತಿದ್ದಳು.

"ಮಕ್ಕಳ ಸ್ನಾನವಾಗಿ ಆಗಲೇ ಹೊಸ ಬಟ್ಟೆಯುಟ್ಟರೂ ನೀನೇಕೆ ಇನ್ನು ಕುಳಿತಲ್ಲಿಯೇ ಇದ್ದಿಯೇ?" ಎಂದು ಪುನಃ ಪ್ರಶ್ನಿಸಿದನು.

ಪತಿಯ ಮಾತಿಗುತ್ತರವೀಯದೆ ಮೇಲೆದ್ದು ಸ್ನಾನದ ಮನೆಯತ್ತ ತೆರಳಿದಳು.

ಅತ್ತ ತೆರಳಿ ಹದಿನೈದು ನಿಮಿಷಗಳುರುಳಿದರೂ ಸ್ನಾನದ ಸದ್ದು ಕೇಳಬರದಾಗ ರಾಮಚಂದ್ರನೇ ಅತ್ತ ಸಾಗಿದನು. ಆಗ ಕಂಡ ದೃಶ್ಯ ಅವನನ್ನು ತಬ್ಬಿಬ್ಬಾಗಿಸಿತು.

ಚಿಕ್ಕ ಮಗಳು ಶಶಿಯು ಬಣ್ಣದ ಗೊಂಬೆಯನ್ನು ತನ್ನ ಕಾಲ ಮೇಲಿಟ್ಟು ಅದರ ಮೈಗೆ ಸುಮತಿ ಎಣ್ಣೆ ಉಜ್ಜ ತೊಡಗಿದ್ದಳು. ಕ್ಷಣಕಾಲ ನಿಂತುನೋಡಿ 'ಸುಮತಿ' ಎಂದನು.

'ಬಂದಿರಾ! ಮಗುವಿನ ಸ್ನಾನವಿನ್ನೂ ಆಗಿಲ್ಲ ಇದಕ್ಕ ನೀರೆರೆದು ನಾನು ಮಿಯುವೆ" ಎಂದಳು.

"ಸುಮತಿ! ಇದೇನು ಹುಡುಗಾಟ! ಏನಾಯಿತು ನಿನಗೀದಿನ? ಆ ಬೊಂಬೆಯನ್ನು ಮೊದಲು ಆಚೆಗೆಸೆದು ಬಿಡು." ಎಂದನು ಸ್ವಲ್ಪ ಗಡುಸಾಗಿ.

ಆ ಮಾತಿನತ್ತ ಲಕ್ಷ್ಯವೀಯದೆ ಎಣ್ಣೆ ಉಜ್ಜುತ್ತಲೇ ಇದ್ದಳು. ಆಗ ರಾಮಚಂದ್ರ ರೋಷದಿಂದ ಅದನ್ನು ಅವಳಿಂದ ಕಿತ್ತುಕೊಂಡು ಉರಿಯುವ ಬೆಂಕಿಗೆಸೆದು ಬಿಟ್ಟನು.

ಅದನ್ನು ನೋಡಿದ ಸುಮತಿ "ಅಯ್ಯೋ!" ಎಂದು ಚೀರಿ ಕೆಳಗುರುಳಿದಳು

o o o o

ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ ಸುಮತಿಗೆ ಪ್ರಜ್ಞೆ ಬಂದಿರಲಿಲ್ಲ ರಾಮಚಂದ್ರ ತಲೆಯಮೇಲೆ ಕೈಹೊತ್ತು "ನನ್ನ ಸುಮತಿ ಬದುಕುವಳೇ ಡಾಕ್ಟರ್" ಎಂದು ಕಾತರದಿಂದ ಕೇಳಿದನು. ಯಾವುದಕ್ಕೂ ಆತುರ ಪಡಬೇಡಿ ಮಿಸ್ಟರ್! ಯಾವುದನ್ನೂ ಈಗ ಹೇಳುವಂತಿಲ್ಲ" ಎಂದರು.

"ಹೇಗಾದರೂ ನನ್ನ ಸುಮತಿಯನ್ನು ಉಳಿಸಿಕೊಡಿ ಡಾಕ್ಟರ್!' ಎಂದಾಗ—

"ನೀವೇನೂ ಭಯ ಪಡಬೇಡಿ.' ಎಂದಿಷ್ಟೇ ಹೇಳಿ ಒಳಹೋದರು. ಪ್ರಜ್ಞೆಹೀನಳಾದ ಕೆಲಗಳಿಗೆಯಲ್ಲಿಯೇ ಸ್ಮೃತಿ ತಪ್ಪುತ್ತಿತ್ತು. ಆ ನಾಲ್ಕು ದಿನಗಳು ರಾಮಚಂದ್ರನಿಗೆ ಅನ್ನಾಹಾರಗಳು ಸೇರಿರಲಿಲ್ಲ. ನಿದ್ದೆ ಇಲ್ಲದೆ ಕುಳಿತೇ ಬೆಳಗು ಮಾಡಿದ್ದನು.

ಐದನೇ ದಿನ ಸ್ವಲ್ಪ ನೆಮ್ಮದಿಯಾಗಿಯೇ ಕಾಣತೊಡಗಿತು. ಇದರಿಂದ ಅವನಿಗೆ ತುಸು ಧೈರ್ಯವೇ ಬರತೊಡಗಿತು.

ಎಂಟನೇ ದಿನ ಡಾಕ್ಟರಿಂದ ಕರೆ ಬಂದಾಗ ಅವರ ಕೊಠಡಿಯತ್ತ ಸಾಗಿದನು.

ಸಿಗರೇಟಿನ ಹೊಗೆಯುಗುಳುತ್ತ ಕುಳಿತ ಡಾಕ್ಟರು ಎದುರು ಬೆಂಚಿನ ಮೇಲೆ ಕುಳಿತು ಕೊಳ್ಳಲು ಅಪ್ಪಣೆಯಿತ್ತರು.

ಅವರಿಂದಾದ ಮಾತು ಹೊರಬೀಳಬಹುದೆಂದು ಕಾದು ಕುಳಿತನು.

ಆಗ ಮೌನ ಮುರಿದು ಡಾಕ್ಟರೇ ಮಾತಿಗಾರಂಭಿಸಿದರು—

'ನೋಡಿ! ನಿಮ್ಮ ಪತ್ನಿಯ ದೇಹಾರೋಗ್ಯವೇನೂ ಕೆಟ್ಟಿಲ್ಲ. ಆದರೆ ಮಾನಸಿಕ ಆಘಾತವೇ ಅವಳನ್ನು ಈ ಸ್ಥಿತಿಗೆ ತಂದಿದೆ.' ಎಂದರು.

'ಮೊದಲೇನೋ ಚೆನ್ನಾಗಿಯೇ ಇದ್ದಳು. ಆದರೆ ಇತ್ತೀಚೆಗೆ ಒಂದು ತರಹವಾಗಿದ್ದಳು. ಆದರೆ ಅದೇನೆಂಬುದು ಮಾತ್ರ ನನಗರಿವಾಗಿಲ್ಲ ಡಾಕ್ಟರ್."

"ಅದೇ ಈಗ ಜೀವಕ್ಕಪಾಯವನ್ನುಂಟು ಮಾಡುವಂತಿದ.

"ಅದಕ್ಕೇನೂ ಉಪಾಯವಿಲ್ವೆ ಡಾಕ್ಟರ್?"

"ಉಪಾಯ ಸೂಚಿಸುವ ಮೊದಲು ನಾನು ಕೇಳುವ ಕೆಲವು ಪ್ರಶ್ನೆಗಳಿಗೆ ನೀವು ಉತ್ತರಿಸಬೇಕಾಗುವುದು."

(ಹದಿನೈದನೇ ಪುಟ ನೋಡಿರಿ)

ಪ್ರಗತಿಯ ಏರು ದಾರಿಯಲ್ಲಿ

ಸಿಂಡಿಕೇಟ್ ಬ್ಯಾಂಕು ತನ್ನ ಶಾಖಾ ವಿಸ್ತರಣಾ ಯೋಜನೆಯನ್ವಯ, ಬಹುಮುಖದ ಆರ್ಥಿಕ ಸೇವೆಯನ್ನು ವ್ಯಾಪಕ ಪ್ರಮಾಣದಲ್ಲಿ ನೀಡಲು, ಬ್ಯಾಂಕಿಂಗ್ ಪಸರಿಸಿದ ಗ್ರಾಮೀಣ ಪ್ರದೇಶಗಳಲ್ಲೂ ದೇಶದ ಪ್ರಮುಖ ವಾಣಿಜ್ಯ, ಔದ್ಯೋಗಿಕ ಕೇಂದ್ರಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ತನ್ನ ಬ್ಯಾಂಕಿಂಗ್ ಶಾಖೆಗಳನ್ನು 1966ನೆಯ ವರ್ಷದಲ್ಲಿ ತೆರೆದಿದೆ.

1966ನೆಯ ವರ್ಷದಲ್ಲಿ ಬ್ಯಾಂಕು ತೆರೆದ ಶಾಖೆಗಳು :

ಪೂನಾ (ಮಹಾರಾಷ್ಟ್ರ)
ನವದೆಹಲಿ — ಕನಾಟ್ ಸರ್ಕಸ್
ಅಹ್ಮದಾಬಾದ್ (ಗುಜರಾಥ ರಾಜ್ಯ)
ನವದೆಹಲಿ — ಚಾಂದಿನಿ ಚೌಕ್
ವಿಜಯನಗರಂ (ಆಂಧ್ರ ಪ್ರದೇಶ)
ಮಧುರೈ (ಮದರಾಸು ರಾಜ್ಯ)
ಮೈಸೂರು — ವಾಣಿ ವಿಲಾಸ ಮೊಹಲ್ಲಾ
ಬೆಂಗಳೂರು — ಎಚ್. ಎ. ಎಲ್.
ಪಂಜಿಮ್ (ಗೋವಾ)
ಬೇಟಿಮ್ (ಗೋವಾ)
ಸದಾಶಿವಘಡ್ (ಮೈಸೂರು ರಾಜ್ಯ)
ಕೋಟೆಕಾರ್ (ಮೈಸೂರು ರಾಜ್ಯ)
ಯಾಡಿಕಿ (ಆಂಧ್ರ ಪ್ರದೇಶ)

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಯಕ್ಷಿಣಿ ಭವಿಷ್ಯ

1) ಹರಿಂದ ಜಪ ಶ ಕೇಳಿದರೆ ೨ರೂ.— ಅಷ್ಟ ಪ್ರಶ್ನೆಗಳಿಗೆ ಕೇಳಿದರೆ ೪ರೂ.
2) ಇಸಣಿನ ಅಂಗ —ಸ್ವಂತ ಅನುಭವದ ಖಾತ್ರಿ ಮುಲಾಮು ೧ ಡಬ್ಬಿಗೆ ೬ ರೂ.— ಬೇಕಾದವರು ವ್ಹಿ. ಪಿ. ಯಿಂದ ತರಿಸಿಕೊಳ್ಳಿರಿ.

ಪಂಡಿತ. ಎ. ಗುರುಪುತ್ರಯ್ಯ ಶಾಸ್ತ್ರಿ, ಮು. ಪೊ. — ಬೈಲೂರ, ತಾ. ಬೈಲಹೊಂಗಲ, ಜಿ. ಬೆಳಗಾಂವ್.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೧೯ | ೫—೧—೧೯೬೭ | No. 19

Estd. 1921
NAVAYUGA
Leading Kannada Weekly
UDIPI, S. Kanara

ವಿ. ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಾಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಾಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ನವಂಬರ ೬ರಂದು ಅಮೆರಿಕದ ಕೇಪ್ ಕೆನ್ನೆಡಿಯಿಂದ ಹಾರಿಸಲ್ಪಟ್ಟ ಅಮೆರಿಕದ ವ್ಯೋಮ ನೌಕೆಯು ಚಂದ್ರನ ಹದಿಮೂರು ಸ್ಥಳಗಳಲ್ಲಿ ತಂಗಿ ಚಿತ್ರಗಳನ್ನು ತೆಗೆದು ಭೂಮಿಗೆ ಕಳುಹಿಸಿತು. ಅದು ಕಳುಹಿಸಿದ ಚಂದ್ರನ ಚಿತ್ರಗಳಲ್ಲೊಂದು.

ಹೊಸ ವರುಷ

೧೯೬೬ನ್ನು ದಾಟಿ ೧೯೬೭ರಲ್ಲಿ ನಾವು ಕಾಲಿರಿಸಿದ್ದೇವೆ. ನವ ವರುಷದ ಆರಂಭ ನಮ್ಮಲ್ಲಿ ನವ ಪ್ರಜ್ಞೆಯನ್ನು ಮೂಡಿಸುವ ಪರ್ವಕಾಲ. ಕಳೆದ ವರುಷದ ಸಿಹಿ-ಕಹಿಗಳೆಲ್ಲವನ್ನೂ ಕೂಲಂಕಷವಾಗಿ ವಿವೇಚಿಸಿ, ಮುಂದಿನ ವರುಷ ವಿವೇಕದಿಂದ ವರ್ತಿಸುವ ಪ್ರತಿಜ್ಞೆ ತೊಡಬೇಕಾದ ಕಾಲವಿದು.

೧೯೬೬ ಭಾರತದ ಪಾಲಿಗೆ ಬಹು ಕಠಿಣತರವಾದ ಕಾಲ. ಕಳೆದ ಐವತ್ತು ವರುಷಗಳ ಚರಿತ್ರೆಯಲ್ಲೇ ಇಲ್ಲದ ಭೀಕರ ಆಹಾರ ಪರಿಸ್ಥಿತಿ ಹಾಗೂ ಕ್ಷಾಮ ಭಾರತದ ಜನತೆಯನ್ನು ತತ್ತರಿಸುವಂತೆ ಮಾಡಿತು. ಆಹಾರಾಭಾವದ ಪರಿಸ್ಥಿತಿ ಈ ವರುಷದಲ್ಲೂ ನಿಸ್ಪೃಷ್ಟ ಅವಸ್ಥೆಯಲ್ಲೇ ಮುಂದುವರಿಯುವ ಚಿಹ್ನೆಗಳು ಕಾಣುತ್ತಿವೆ. ಹಾಗಾಗಿ, ಈ ಸಮಸ್ಯೆ ಪ್ರಕೃತ ವರುಷದಲ್ಲೂ ಸರಕಾರದ ಹಾಗೂ ಜನತೆಯ ಕೇಂದ್ರ ಸಮಸ್ಯೆಯಾಗಿ ಉಳಿದರೆ ಆಶ್ಚರ್ಯವೇನಿಲ್ಲ.

೧೯೬೬ರ ಅರುಣೋದಯದಲ್ಲೇ ಭಾರತದ ಪ್ರಧಾನಿ ಲಾಲಬಹಾದ್ದೂರು ತಾಷ್ಕೆಂಟಿನಲ್ಲಿ ಹೃದಯಾಘಾತದಿಂದ ನಿಧನ ಹೊಂದಿದುದು ಭಾರತದ ತುಂಬಿ ಬಾರದ ನಷ್ಟ. ಈ ದೇಶ ವೀರನ ಸಾವಿನ ಸಂತಾಪದಲ್ಲೇ ಭಾರತೀಯರು ವರುಷಾರಂಭವನ್ನು ಕಳೆಯಬೇಕಾಗಿ ಬಂತು. ಭಾರತ ಪಾಕ್ ಘರ್ಷಣೆಯ ಅಂತ್ಯಕ್ಕೆ ತಾಷ್ಕೆಂಟಿನಲ್ಲಿ ಚರಿತ್ರಾರ್ಹ ಒಪ್ಪಂದಕ್ಕೆ ಸಹಿ ಹಾಕಿದ ಲಾಲಬಹಾದ್ದೂರರು ಸ್ವಲ್ಪ ಸಮಯದಲ್ಲೇ ನಿಧನ ಹೊಂದಿದರು. ತಾಷ್ಕೆಂಟ್ ಘೋಷಣೆಯು ಜಗತ್ತಿನ ಮುತ್ಸದ್ದಿಗಳನೇಕರಿಂದ ಹೊಗಳಲ್ಪಟ್ಟಿತು. ಆ ಒಪ್ಪಂದದ ಕಾರ್ಯಾಚರಣೆಯಲ್ಲಿ, ವಿಳಂಬ ನೀತಿ ಆಗಿರುವುದಾದರೂ ಭಾರತ ಪಾಕ್‌ಗಳ ಇತಿಹಾಸದಲ್ಲಿ ಇದೊಂದು ಅಪೂರ್ವ ಘಟನೆ. ಈ ಎರಡು ದೇಶಗಳ ಮಧುರ ಸಂಬಂಧವು ೧೯೬೭ರಲ್ಲಾದರೂ ಕಾದುರೀತೆಂದು ಆಶಿಸೋಣ.

ಇಂದಿರಾಜಿ ಪ್ರಧಾನಿ ಪಟ್ಟವೇರಿದ ವರ್ಷ ೧೯೬೬. ದೇಶವು ಬಹುಮುಖ ಸಮಸ್ಯೆಗಳನ್ನೆದುರಿಸುತ್ತಿದ್ದ ಕಠಿಣಕಾಲದಲ್ಲೇ ಈ ದೇಶದ ನೇತೃತ್ವವನ್ನು ಮಹಿಳಾ ಪ್ರಧಾನಿ ವಹಿಸಿದರು. ಮಹಾಂತ ನೆಹರೂರವರ ಪುತ್ರಿ ಎಂಬುದರೊಂದಿಗೆ, ಅಂತರಾಷ್ಟ್ರೀಯ ಖ್ಯಾತಿಯ ಮಹಿಳೆ ಎಂಬುದು ಅವರ ಆಯ್ಕೆಗೆ ಮೂಲವಾಯಿತು. ದೇಶದ ಹಲವಾರು ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಿದ ಇಂದಿರಾಜಿಯ ಭವಿಷ್ಯ ಕಾಣಬೇಕಾದುದು ೧೯೬೭ರ ಚುನಾವಣೆಯ ಮೂಲಕವೆ.

ಕೇಂದ್ರ ಮಂತ್ರಿ ಮಂಡಲದಿಂದ ಟಿ. ಟಿ. ಕೆ. ಹಾಗೂ ನಂದಾರಂತಹ ಹಿರಿಯ ಮುತ್ಸದ್ದಿಗಳು ರಾಜೀನಾಮೆ ಇತ್ತು ಹೊರಬಂದರು ಮಂತ್ರಿ ಮಂಡಲದಲ್ಲಿ ಬದಲಾವಣೆ ಆಯಿತು. ನಂದಾರ ರಾಜೀನಾಮೆಯಂತೂ ಅನಿರೀಕ್ಷಿತ ಎಂಬಂತೆ ಕೊಡಲ್ಪಟ್ಟಿತು. ಗೋಹತ್ಯಾ ನಿರೋಧ ಚಳವಳದಿಂದ ಪ್ರಥಮವಾಗಿ ಅಧಿಕಾರ ತ್ಯಜಿಸಬೇಕಾದ ನಂದಾರ ನಿರ್ಗಮನವಾದರೂ, ಆ ಚಳವಳ ೧೯೬೭ರಲ್ಲೂ ಮುಂದರಿಯುತ್ತಿದೆ. ಇದರ ಪರಿಣಾಮದ ಕುರಿತು ೧೯೬೭ರಲ್ಲಿ ನೋಡಬೇಕು.

ಅಂತರಿಕ್ಷ ಯಾನದ ಯತ್ನ ಮುಂದುವರಿಯುತ್ತಿದ್ದಂತೆಯೇ ವಿಶ್ವಶಾಂತಿಯ ಯತ್ನಗಳೂ ಸಾಗುತ್ತಿವೆ. ವಿಯೆಟ್ನಾಂ ಒಂದನ್ನು ಬಿಟ್ಟರೆ ಬೇರೆಲ್ಲೂ ಜಾಗತಿಕ ಶಾಂತಿಯನ್ನು ಕದಡುವ ಲಕ್ಷಣಗಳಿಲ್ಲ. ವಿಯೆಟ್ನಾಂ ಶಾಂತಿಯತ್ನ ೧೯೬೭ರಲ್ಲಿ ಯಶಸ್ವಿಯಾದರೆ ಅದೊಂದು ವಿಶೇಷ ಘಟನೆಯಾದೀತು.

೧೯೬೭ ಭಾರತದಲ್ಲಿ ನಾಲ್ಕನೆಯ ಮಹಾ ಚುನಾವಣೆಯ ಬಿಸಿಯನ್ನು ಹೊತ್ತೇ ಕಾಲಿರಿಸಿದೆ. ಜಗತ್ತಿನ ಅತಿ ದೊಡ್ಡ ಪ್ರಜಾರಾಜ್ಯವಾದ ಭಾರತದ ಈ ಚುನಾವಣೆ ಏಕಮೇವದ್ವಿತೀಯ ಪಕ್ಷ ಕಾಂಗ್ರೆಸಿನ ಕೊರಳಿಗೇ ಜಯಮಾಲೆ ಹಾಕುವುದೇನೋ ನಿಜ. ಆದರೆ, ಈ ಹಿಂದಿನ ಚುನಾವಣೆಗಳಷ್ಟು ಸುಲಭವಾಗಿ ಈ ಬಾರಿ, ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಕಷ್ಟ ಎಂದು ತೋರಿಬರುತ್ತಿದೆ. ಮತದಾರರು ಬುದ್ಧಿವಂತರಾಗುತ್ತಿರುವರೋ ಅಥವಾ ಕಾಂಗ್ರೆಸ್ಸು ಜನಪ್ರಿಯತೆಯನ್ನು ಕಳೆದುಕೊಂಡಿದೆಯೋ, ಅಥವಾ ವಿರೋಧ ಪಕ್ಷಗಳ ಸಂಘಟನೆ ಉತ್ತಮವೋ ಹೇಳಲಾಗದು. ಅಂತೂ ಚುನಾವಣೆಯ ಚುರುಕಿನೊಂದಿಗೆ ೧೯೬೭ ಆರಂಭವಾಗಿದೆ.

ಕಳೆದ ವರುಷದಲ್ಲಾದ ತಪ್ಪುಗಳನ್ನು ತಿದ್ದಿಕೊಂಡು, ಅವುಗಳಿಂದ ಪಾಠ ಕಲಿತು, ಪ್ರತಿಯೊಬ್ಬರೂ, ಹೊಸ ವರುಷದಲ್ಲಿ ಹುಶತನದಿಂದ, ಜಾಣನಾಗಿ ವರ್ತಿಸಬೇಕಾಗಿದೆ. ಹೊಸ ವರುಷ ನಮಗೆಲ್ಲಾ ಅಂತಹ ಪ್ರಜ್ಞೆಯನ್ನು ಕೊಡಲಿ, ಹರುಷವನ್ನು ಹೊತ್ತು ತರಲಿ ಎಂದು ಹಾರೈಸಿ, ಕರ್ತವ್ಯ ಪಾಲಿಸುವ ಪ್ರತಿಜ್ಞೆ ಮಾಡೋಣ.

ಹೀಗಾಗ ಬಾರದಿತ್ತು

ದಕ್ಷಿಣ ಕನ್ನಡದ ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸುವ ಕಾಂಗ್ರೆಸ್ ಅಭ್ಯರ್ಥಿಗಳ ಯಾದಿ ಪ್ರಕಟವಾಗಿದೆ. ಅದರ ಕುರಿತು ಸಾಕಷ್ಟು ಪ್ರತಿಕ್ರಿಯೆಗಳು ವ್ಯಕ್ತಗೊಳಿಸಲ್ಪಟ್ಟಿವೆ. 'ಕಾಂಗ್ರೆಸ್ ಜಿಲ್ಲೆ' ಎಂದು ಒಮ್ಮೆ ಕರೆಸಿಕೊಂಡಿದ್ದ ದಕ್ಷಿಣ ಕನ್ನಡದಲ್ಲಿ ಈ ಬಾರಿ ಮಾತ್ರ ಕಾಂಗ್ರೆಸ್ ಅಭ್ಯರ್ಥಿಗಳು ಬಹುಸಂಖ್ಯೆಯಲ್ಲಿ ಗೆದ್ದು ಬರುವ ಲಕ್ಷಣಗಳು ಕಾಣುತ್ತಿಲ್ಲವೆನ್ನಬೇಕು.

ಇದಕ್ಕೆ ಕಾರಣ ವಿರೋಧ ಪಕ್ಷಗಳ ಸಂಘಟಿತ [illegible] ಎಚ್ಚರಿಕೆ ಎನ್ನಲು ಬರುವುದಿಲ್ಲ. ಬದಲು ಕಾಂಗ್ರೆಸಿನೊಳಗಣ ಬಿರುಕು ಹಾಗೂ ಗುಂಪುಗಾರಿಕೆ ಎನ್ನಬೇಕು. ಕಾಂಗ್ರೆಸಿನಲ್ಲಿ ಹಿಂದೆಂದೂ ಕಾಣದಂತಹ ಕೂಟಶಕ್ತಿಗಳ ಕಾರಸ್ಥಾನವನ್ನಿಂದು ನಾವು ಕಾಣುತ್ತಿದ್ದೇವೆ. ಜಾತೀಯತೆ, ಗುಂಪುಗಾರಿಕೆ ಇವೆಲ್ಲವುಗಳಿಂತ ಮಿಗಿಲಾಗಿ ಮತ್ಸರದ ಭಾವನೆಯು ತಾಂಡವವಾಡುತ್ತಿದೆ. ಏನಾದರೂ ಮಾಡಿ, ಯಾವ ದಾರಿಯನ್ನಾದರೂ ಹಿಡಿದು ಯೋಗ್ಯರನ್ನು, ನಿಷ್ಠಾವಂತರನ್ನು ತುಳಿಯುವ ಶಕ್ತಿ ಅಧಿಕಾರ ನಡೆಸುತ್ತಿದೆ. ಜಾತ್ಯತೀತತೆ, ಜನಸೇವೆ, ಸಮಾಜವಾದವನ್ನು ನೆಚ್ಚಿರುವ ಕಾಂಗ್ರೆಸಿನಲ್ಲೇ ಇವುಗಳಿಗೆ ವಿರುದ್ಧವಾದ ಶಕ್ತಿಗಳು ಕಾರ್ಯವೆಸಗುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಅಭ್ಯರ್ಥಿಗಳ ಆಯ್ಕೆ ಸರಿಯಲ್ಲದ ಕಾರಸ್ಥಾನದ ಕುರಿತು ಎಲ್ಲರೂ ಬಲ್ಲರು. ಹಲವಾರು ನಿಷ್ಠಾವಂತ ಕಾಂಗ್ರೆಸ್ಸಿಗರು, ತಾವು ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ, ಕಾರ್ಯರಂಗಕ್ಕಿಳಿಯುವುದಿಲ್ಲ ಎಂದು ಶಸ್ತ್ರಸನ್ಯಾಸ ಮಾಡಿದ್ದಾರೆ. ಇನ್ನು ಕೆಲವೆಡೆ ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ವ್ಯಕ್ತಗೊಳಿಸಿ, ಕಾಂಗ್ರೆಸಿಗೆ ವಿರುದ್ಧವಾಗಿ ಅಭ್ಯರ್ಥಿಗಳನ್ನು ನಿಲ್ಲಿಸುವ ದೀಕ್ಷೆ ತೊಟ್ಟವರೂ ಇದ್ದಾರೆ. ಕಾಂಗ್ರೆಸ್ ಕೆಲಸಗಾರರಲ್ಲಿ ನಿರುತ್ಸಾಹವೇ ಎದ್ದು ತೋರುತ್ತಿದೆ.

ಯೋಗ್ಯತೆ ಇದ್ದವರನ್ನು, ಸಂಸ್ಥೆಯಲ್ಲಿ ನಿಷ್ಠೆಯುಳ್ಳವರನ್ನು, ಜನ ಪ್ರೇಮಿಗಳನ್ನೆಲ್ಲಾ ಒದಗೊತ್ತಿ ಕೇವಲ ಗುಂಪುಗಾರಿಕೆಯ ನೆಲೆಯಲ್ಲಿ ಅಭ್ಯರ್ಥಿಗಳ ಆಯ್ಕೆಯಾದುದು ವಿರೋಧ ಪಕ್ಷಗಳ ಭಾಗ್ಯವೆಂದೇ ಹೇಳಬೇಕು. ಇದರಿಂದ ವ್ಯಕ್ತವಾಗುವ ವಿಷಯವೆಂದರೆ ರಾಜಕೀಯದಲ್ಲಿ ಸರಳ ಸ್ವಭಾವದವರಿಗೆ, ನಿಷ್ಠಾವಂತರಿಗೆ ಹಾಗೂ ಜನಪ್ರೇಮಿಗಳಿಗೆ ಅವಕಾಶವಿಲ್ಲ ಎಂಬುದು. ಇದರ ಪರಿಣಾಮಕ್ಕಾಗಿ ಬಹು ದಿನಗಳವರೆಗೆ ಕಾದು ನೋಡಬೇಕಾದ್ದಿಲ್ಲ. ಚುನಾವಣೆಯ ಫಲಿತಾಂಶ ಪ್ರಕಟವಾದಾಗಲೇ ತಿಳಿಯುವುದು.

ಜಿಲ್ಲಾ ಕಾಂಗ್ರೆಸು ಇನ್ನಾದರೂ ಆದ ಪ್ರಮಾದವನ್ನು ತಪ್ಪಿಸಿ, ಕಾಂಗ್ರೆಸಿನ ವಿಜಯಧ್ವಜ ಈ ಜಿಲ್ಲೆಯಲ್ಲಿ ಹಾರಾಡುವಂತೆ ಮಾಡುವುದೆಂದು ಆಶಿಸೋಣ.

ವಚನ ಸುಧೆ

ಸಂಪನ್ನತರ ಮೇವಾನ್ನಂ
ದರಿದ್ರಾ ಭುಂಜತೇ ಸದಾ
ಕ್ಷುತ್ ಸ್ವಾದುತಾಂ ಜನಯತಿ
ಸಾ ಚಾಢ್ಯೇಷು ಸುದುರ್ಲಭಾ||

ಬಡವರು ಸದಾ ರುಚಿಕರವಾದ ಆಹಾರವನ್ನೇ ಉಣ್ಣುತ್ತಾರೆ. ಏಕೆಂದರೆ, ಹಸಿವೆಯು ಅವರ ಆಹಾರದಲ್ಲಿ ರುಚಿಯನ್ನು ಹುಟ್ಟಿಸುತ್ತದೆ. ಶ್ರೀಮಂತರ ಭೋಜನ ಸಂಸ್ವಾದುವಿರುವುದು ಸಾಧ್ಯವಿಲ್ಲ.

ನರಸಾಗ್ನಿನ ಸರಸ



'ಕಾಂಗ್ರೆಸ್ ಜಿಲ್ಲೆಯಿಂದ ಕಾಂಗ್ರೆಸ್ ಓಡಿಹೋಗುತ್ತಿರುವಂತೆ ಕಾಣುತ್ತಿದೆ ಅಲ್ಲ?'

ಇಂದಿನ 'ಫ್ಯಾಶನ್' ನಿಂದ

ಸಮಾಜ ಹಾಳಾಗುತ್ತಿದೆ

ಬರೆದವರು
"ನೇಗಿಲಯೋಗಿ"

"ಮನಶ್ಚಾಂಚಲ್ಯವನ್ನುಂಟು ಮಾಡುವ ವಸ್ತು ಎದುರಿಗಿರುವಾಗಲೂ ಯಾರ ಮನಸ್ಸು ವಿಕಾರವಾಗುವುದಿಲ್ಲವೋ ಅವರೇ ಲೋಕದಲ್ಲಿ ಧೀರರು."

ತಂದೆಯ ಪೂರ್ವ ಸಮ್ಮತಿ ಪಡೆಯದೆಯೇ ದುಷ್ಯಂತ ರಾಜನನ್ನು ಗಾಂಧರ್ವವಿಧಿಯಿಂದ ವರಿಸಿ, ಆ ತಪ್ಪಿಗಾಗಿ ಕಷ್ಟಪಟ್ಟ ಶಕುಂತಲೆಯನ್ನು ವರ್ಣಿಸಿದ ಕವಿ ಕಾಳಿದಾಸನ ಉಕ್ತಿಯನ್ನು ಮೇಲೆ ಕೊಟ್ಟೇ ಈ ಲೇಖನವನ್ನು ಮುಂದುವರಿಸುತ್ತಿದ್ದೇನೆ.

ಶಕುಂತಲೆಯಾದರೂ ಯಾರು? ದೃಢ ನಿರ್ಧಾರದಿಂದ ತಪಸ್ಸಿಗಾಗಿ ಕೂತಿದ್ದ ವಿಶ್ವಾಮಿತ್ರ ಮುನಿಯಿಂದ ದೇವಲೋಕದ ಅಪ್ಸರೆ ಮೇನಕೆಗೆ ಹುಟ್ಟಿದ "ಅನೌರಸ" ಕನ್ಯೆ; ಕಣ್ವ ಮುನಿಯ ಆಶ್ರಯವಿಲ್ಲದೆ ಹೋಗಿದ್ದರೆ ಅವಳ ಪಾಡು ಏನಾಗುತ್ತಿತ್ತೋ! ಮೇನಕೆ ವಿಶ್ವಾಮಿತ್ರ ಮುನಿಯ ತಪೋಭಂಗಕ್ಕಾಗಿಯೇ ಕಳಿಸಲ್ಪಟ್ಟ ವಿಷಕನ್ಯೆ. ಅವಳ ಶೃಂಗಾರಭರಿತ ನೃತ್ಯಕ್ಕೆ, ತನ್ನ ತಪಸ್ಸನ್ನೇ ಮರೆತು ಮುನಿ ವಿಶ್ವಾಮಿತ್ರನು ಅವಳೊಡನೆ ರತಿಕೇಳಿಯಾಡಿದನು. ಕೆಟ್ಟ ಮೇಲೆ ಬುದ್ಧಿ ಬಂತು ಅವನಿಗೆ. ಮನುಷ್ಯ ಸ್ವಭಾವದ ನಿಜ ಚಿತ್ರಣ ಈ ಆಖ್ಯಾಯಿಕೆಯಲ್ಲಿ ಬಂದಿದೆ.

ವಿಶ್ವಾಮಿತ್ರನಂಥ ಮಹಾಮುನಿಗೇ ಹೆಣ್ಣಿನ ಆಸೆಯಿಂದ ಮುಕ್ತನಾಗಲು ಆಗದಿದ್ದಾಗ ನಮ್ಮಂಥವರ ಪಾಡು ಏನು? ಎಂದು ಈಗಲೂ ಆತ್ಮಸಂಯಮವಿಲ್ಲದ ಹುಲು ಮಾನವರು ಆಡುತ್ತಿರುತ್ತಾರೆ. ಅಂದರೆ ವಿಕಾರವಶರಾಗದ ಧೀರರು ಇಂದು ಯಾರೂ ಇಲ್ಲವೆಂಬಷ್ಟು ಅಧೋಗತಿಗೆ ಇಳಿದಿದೆ ನಮ್ಮವರ ಪಾಡು. ಈ ಮಾತು ಗಂಡಸರದಾದರೆ, ಹೆಂಗಸರ ಪಾಡು ಅದಕ್ಕಿಂತ ಬೇರೆ ಇಲ್ಲ. ಅದನ್ನಿಲ್ಲಿ ಸ್ವಲ್ಪ ವಿವೇಚಿಸೋಣ.

ಪುರಾಣ ಪ್ರಸಿದ್ಧರಾದ ಸೀತೆ, ಸಾವಿತ್ರಿ, ಮಂಡೋದರಿ, ತಿಲೋತ್ತಮೆಯರು ಸ್ತ್ರೀ ಕುಲಕ್ಕೇ ಆದರ್ಶಪ್ರಾಯರು. ಆದರೆ ಈಗಿನ ಹೆಂಗಸರಿಗೆ ಅವರು ಯಾರೆಂಬುದೇ ಸರಿಯಾಗಿ ಗೊತ್ತಿಲ್ಲ. ಇವರ ಆದರ್ಶ ಸಿನೇಮಾ ಪ್ರಪಂಚದ ವೈಜಯಂತಿ ಮಾಲಾ, ಆಶಾಪರೇಖ, ಜಯಂತಿ, ಜಯಲಲಿತಾರಂಥ ತಾರೆಯರು. ಈ ನಟಿಯರ ಹಾವಭಾವ ಉಡುಗೆ ತೊಡುಗೆ ಬೆಳೆಯುವ ಹೆಣ್ಣು ಮಕ್ಕಳಿಗೆ ಆದರ್ಶವೆನಿಸಿವೆ. ಈ ಆದರ್ಶಗಳನ್ನು ಅನುಸರಿಸಿದ ಮೇಲೆ, ಜೀವನ ನಿರ್ವಹಣೆಯ ಮಟ್ಟಿಗೂ ಅವರ [illegible]ಯನ್ನೂ, ಸ್ವಚ್ಛಂದ ಪ್ರವೃತ್ತಿಯನ್ನೂ ಅಳವಡಿಸಿಕೊಳ್ಳುವುದೇ ಆಧುನಿಕತೆಯ ಲಕ್ಷಣವೆಂದು ಅವರು ತಿಳಿಯುತ್ತಾರೆ. ಈ ತಾರೆಯರಲ್ಲಿ ಹೆಚ್ಚಿನವರ ಜೀವನವೆಂದರೆ ಸ್ವೈರಪ್ರವೃತ್ತಿಯ ನರಕಕೂಪವೆಂದು ಬೇರೆ ಹೇಳಬೇಕಾಗಿಲ್ಲ.

ರೂಪವತಿಯರಿರುವುದರಿಂದ ಪುರುಷರ ಆಕರ್ಷಣೆಯ ವಸ್ತುಗಳೇ ತಾವು ಎಂಬ ಭಾವನೆ ಹೆಣ್ಣು ಮಕ್ಕಳಲ್ಲಿದೆ. ಇದಕ್ಕೆ ಅಪರೋಕ್ಷ ಬೆಂಬಲ ನೀಡುವಂತೆ ತರತರದ ಕಥೆ ಕಾದಂಬರಿಗಳೂ, ಬಗೆಬಗೆಯ ಸಾಪ್ತಾಹಿಕ ಮಾಸಿಕಗಳೂ ಪ್ರಕಟವಾಗುತ್ತವೆ. ಚಲನಚಿತ್ರಗಳೂ ತಯಾರಾಗುತ್ತವೆ. ಕಾಮಪ್ರಚೋದಕ ಕಥೆ ಕಾದಂಬರಿಗಳು, ಚಲನಚಿತ್ರಗಳು ತರುಣ ತರುಣಿಯರನ್ನು ಮಾತ್ರವಲ್ಲ, ವಯಸ್ಸು ಮೀರಿದ ಸ್ತ್ರೀ ಪುರುಷರನ್ನೂ ಬಲಿ ತೆಗೆದುಕೊಳ್ಳುತ್ತಿವೆ.

ಈ ತರದ ಹೊಲಸು ವಾತಾವರಣಕ್ಕೆ ಪುಟಕೊಡುವ ಒಂದು ವಿಷಯವೆಂದರೆ, ಮೇರೆ ಮಿತಿಯನ್ನು ದಾಟಿದ ಇಂದಿನ ಫ್ಯಾಶನ್—ಅಂದರೆ ಅಲಂಕಾರ ಪ್ರಿಯತೆ ಅದರಲ್ಲೂ "ಟೀನ್ ಏಜ್" ಎಂದು ಇಂಗ್ಲಿಷ್‌ನಲ್ಲಿ ಹೇಳಲಾಗುವ ಹದಿಮೂರನ್ನು ದಾಟಿ ಇಪ್ಪತ್ತರೊಳಗಿನ ಹೆಣ್ಣು ಮಕ್ಕಳು ಪ್ರಮುಖ್ಯವಾಗಿ ದೊಡ್ಡ ದೊಡ್ಡ ನಗರಗಳಲ್ಲಿ ಮಾಡುತ್ತಿರುವ ಅತಿ ಆಡಂಬರದ ಉಡುಪು ಪುರುಷನ ಬೀಭತ್ಸ ಭಾವನೆಯನ್ನು ಕೆರಳಿಸುತ್ತವೆ.

ರಸ್ತೆಯಲ್ಲಿ ಆಗುತ್ತಿರುವ ವಾಹನಾಪಘಾತಗಳಿಗೂ ಇದೇ ಕಾರಣ ಎಂಬಷ್ಟರವರೆಗೆ ಈ ಫ್ಯಾಶನ್ ಹಚ್ಚಿದೆ. ಬೀದಿ - ಕಾಮಣ್ಣರ ಸಂಖ್ಯೆಯ ಏರಿಕೆಗೂ ಹೆಣ್ಣು ಮಕ್ಕಳ ಚಿತ್ತ ಕೆರಳಿಸುವ ಉಡುಪೇ ಕಾರಣವೆಂದು ಮಾನಸಿಕ ತಜ್ಞರು ಅಭಿಪ್ರಾಯಪಡುತ್ತಾರೆ.

ಹೆಣ್ಣನ್ನು, ಕೇವಲ 'ಭೋಗವಸ್ತು' ಎಂದು ತಿಳಿಯುವಷ್ಟು ಆಧುನಿಕತೆ ಬೆಳೆದಿದೆ. ಸಿನೆಮಾಗಳಲ್ಲಿ ದುಡ್ಡುಗಳಿಸುವ ದೃಷ್ಟಿಯಿಂದ ತರುಣಿಯರನ್ನು ಸಿಕ್ಕ ಸಿಕ್ಕ ಹಾಗೆ ಉಡುಪು ತೊಡಿಸಿ, ಅವರಿಂದ ಕಾಮಚೇಷ್ಟೆ ಮಾಡಿಸಿ, ಪ್ರೇಕ್ಷಕರಿಗೆ ತೋರಿಸಲಾಗುತ್ತದೆ. ಪತ್ರಿಕೆಗಳು ವಿವಸ್ತ್ರಳಾದ ಹೆಣ್ಣಿನ ಚಿತ್ರ ಪ್ರಕಟಿಸಿ, ಹೊಸ ಹೊಸ ಆವಗಳ ಜಾಹೀರಾತನ್ನು ಪ್ರಕಟಿಸುತ್ತವೆ. ಕಾಲವೇ ಬೇಗ ಬದಲಾಗುವಾಗ ತಾವೂ ಕಾಲಕ್ಕೆ ಸರಿಯಾಗಿ ಇರೋಣ ಎಂಬ ತಿಳಿವಳಿಕೆ ಬೆಳೆಯುವ ತರುಣಿಯರಲ್ಲಿ ಬೇರೂರಿದೆ.

ಈ ಅಶ್ಲೀಲ ನೋಟವು ಶಾಲೆ ಕಾಲೇಜುಗಳಿಗೆ ಹೋಗುವ ಅಪ್ರಬುದ್ಧ ಹೆಣ್ಣು ಮಕ್ಕಳ ಉಡುಪುಗಳಲ್ಲಿ ಕಂಡುಬರುವುದು ಮುಂದುವರಿದ ನಗರಗಳಲ್ಲಿ ಮಾತ್ರವಲ್ಲ, ಪೂರ್ಣ ಪೇಟೆಯೂ ಅಲ್ಲ, ಪೂರ್ಣ ಹಳ್ಳಿಯೂ ಅಲ್ಲದಿರುವ ಊರುಗಳಲ್ಲೂ ಸತ್ಯಾನುಭವವಾಗಿಬಿಟ್ಟಿದೆ. ಕಾಮಪ್ರಚೋದನೆಯೇ ಈ ಅಲಂಕಾರದ ಗುರಿ ಎಂಬಷ್ಟು ಅದು ಅತಿಯಾದದ್ದನ್ನು ನಾವು ಕಾಣಬಹುದಾಗಿದೆ.

ಸಾಂಸ್ಕೃತಿಕವಾಗಿ ಅತ್ಯಂತ ಪವಿತ್ರ ಪರಂಪರೆಯುಳ್ಳ ಭಾರತದಲ್ಲಿ ಇಂಥ ಕಾಮಪ್ರಚೋದಕ ಅಲಂಕಾರಕ್ಕೆ ಪ್ರೋತ್ಸಾಹವಿತ್ತರೆ, ಸ್ವೇಚ್ಛಾಚಾರದ್ದೇ ಮೇಲಾಟವಾಗುವ ಸಂಭವವಿದೆ. ಓರ್ವ ಶಿಕ್ಷಣ ತಜ್ಞರು ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

'ನಿಮ್ಮ ಅಂಗ—ಸೌಷ್ಟವವನ್ನು ಎತ್ತಿ ತೋರಿಸುವ ಉಡುಪು ನಿಮ್ಮ ನೀತಿಗೆಟ್ಟ ಆತ್ಮದೌರ್ಬಲ್ಯವನ್ನು ಸೂಚಿಸುತ್ತದೆ. ಮೇಲಾಗಿ ಹುಡುಗರನ್ನು ಅನೀತಿಯ ವಿರುದ್ಧವಾಗಿ ಆಲೋಚಿಸುವುದಕ್ಕೆ ಅಣಿಗೊಳಿಸುತ್ತದೆ. ಅವರ ಆ ತಪ್ಪಿಗೆ ನೀವೇ ಹೊಣೆಗಾರರಾಗುತ್ತೀರಿ' ಎಂದು ಅವರು ವಿದ್ಯಾರ್ಥಿನಿಯರ ಕಿವಿಹಿಂಡಿದ್ದಾರೆ.

ಬಿಚ್ಚಿ ಬಣ್ಣವನುಟ್ಟು ಉಚ್ಚಬೈತಲೆ ಬಿಟ್ಟು
ನಿಚ್ಚಲು ಸಂಗ ಹಾರುವಳ ಹಂ-
ದರಕ ಮುಚ್ಚು ಕಾಣಯ್ಯ ಸರ್ವಜ್ಞ॥

ತ್ರಿಕಾಲಜ್ಞಾನಿಯೆನಿಸಿದ್ದ ಸರ್ವಜ್ಞ ಕವಿಯೂ ಈ ಎಚ್ಚರಿಕೆಯನ್ನು ಶತಮಾನಗಳ ಹಿಂದೆ ಮೇಲಿನ ಕವಿತೆಯಲ್ಲಿ ಹೇಳಿದ್ದುಂಟು.

ಈ ಪ್ರಸಂಗದಲ್ಲಿ ಗತವರ್ಷ ಡಿಸೆಂಬರ್ ೨೧ರಂದು ಪುಣೆಯ ಮಹಿಳಾ ಮಂಡಳಿಯವರು ಮಾಡಿದ ಒಂದು ಗೊತ್ತುವಳಿ

(ಹದಿಮೂರನೇ ಪುಟ ನೋಡಿರಿ)

ನಮ್ಮ ನಿಮ್ಮೊಳಗೆ? . .

ನಾನಿಂದು ಎಷ್ಟು ಸುಖಿ

ಹೇಗೆ ಸುಖವಾಗಿ ಆಯಿತು. ಲಕ್ಷ್ಮೀ, ದೇವರು ನನ್ನನ್ನು ಸಂತೋಷವಾಗಿಡಲಿ ಲೇಡಿ ಡಾಕ್ಟರು ತುಂಬ ಒಳ್ಳೆಯವರು ಅವರ ಕೈಗುಣ ಒಳ್ಳೇದು.

ನನ್ನ ಅಪ್ಪ ನನ್ನ ವಯಸ್ಸಿನಲ್ಲೇ ಹೆರಿಗೆಯಲ್ಲಿ ತೀರಿಕೊಂಡಳು. ಸೂಲಗಿತ್ತಿಯಿಂದ ಏನೂ ಮಾಡಲಾಗಲಿಲ್ಲ. ಹತ್ತಿರದ ಹತ್ತು ಮೈಲಿನ ಒಳಗೆ ಎಲ್ಲೂ ಆಸ್ಪತ್ರೆ ಇರಲಿಲ್ಲ. ಲೇಡಿ ಡಾಕ್ಟರನ್ನು ಕರೆ ತರಲು ಆಗ್ಲಿಲ್ಲ. ಅವರ ಕಾಯಿಲೆ ನನ್ನ ಮನೆಯ ತನಕ ಬರಲಿಲ್ಲ. ಕಾಲ ಕೈ ಮೀರಿ ಹೋಗಿತ್ತು.

ಆ ವರ್ಷ—1944ರಲ್ಲಿ ಅಂತ ಕಾಣುತ್ತದೆ—[illegible]

ನಿಜವಾಗಿ ಇವತ್ತು

ಯೋಜನೆಯ ಸಾಧನೆ

DA-SC/4-1

ಆತ್ಮ ಶೋಧ

ವೈದ್ಯರಿಗೆ ನಾವು ಕೃತಜ್ಞರು

ಒಂದಾನೊಂದು ಕಾಲದಲ್ಲಿ ಒಂದು ಯಕ್ಷ ದೇವತೆ ಒಬ್ಬ ಯಜುಸ್ವಭಾವದ ಕೋಮಲ ಚಿಕ್ಕ ಹುಡಿಗೆಯ ಬಗ್ಗೆ ತನ್ನ ಮಮತೆಯನ್ನು ಸೂಸುತ್ತ, ಕೇಳಿದಳು 'ನೋಡು ಮಗು, ನಿನ್ನಲ್ಲಿ ನಾನು ಸುಪ್ರೀತಳಾಗಿದ್ದೇನೆ. ನಿನಗೇನು ಬೇಕು ಕೇಳು. ನಾನು ಆ ವರವನ್ನು ದಯಪಾಲಿಸುತ್ತೇನೆ". ಈ ಕಥೆ ನಡೆದದ್ದು ಕಾಶ್ಮೀರದಲ್ಲಿ...

ಮಧ್ಯಪ್ರದೇಶದ ಒಂದು ಹೊಲದಲ್ಲಿ ಮೂವರು ಹೆಣ್ಣು ಮಕ್ಕಳು ಹತ್ತಿ ಬಿಡಿಸುತ್ತಿದ್ದರು. ಅವರಿಗೆ ದಣುವಾಗಿ, ತಮ್ಮ ಚಿಂತೆಗಳನ್ನೆಲ್ಲ ಕ್ಷಣಕಾಲ ಮರೆತು; ಒಂದು ಗಿಡಬಡಿಯಲ್ಲಿ ಒರಗಿಕೊಳ್ಳುತ್ತಿದ್ದಂತೆ ಅವಳಲ್ಲಿ ಒಬ್ಬಳು ಎಂದಳು "ನಿನ್ನ ಯಾವದೇ ಒಂದು ಬಯಕೆಯು ಈಗಲೇ ಈಡೇರುವಂತಿದ್ದರೆ ನೀನು ಯಾವ ಬಯಕೆಯನ್ನು ಹೇಳುವಿ?

ಹನ್ನೆರಡು ಜನ ದಾಂಡಿಗ ಜಾಲಗಾರರು ತಮ್ಮ ದೋಣಿಯನ್ನು ಸಮುದ್ರದಲ್ಲಿ ಬಿಡುವ ಮೊದಲು ತಮ್ಮ ಹುಟ್ಟಿಗೆ ಆತುಕೊಂಡು ಸ್ವಲ್ಪ ವಿಶ್ರಾಂತಿ ಪಡೆಯಲೆಂದು ಇಳಿಸಿದರು. ಒಬ್ಬಾತ ಇನ್ನೊಬ್ಬಗೆ ಹೇಳಿದ, "ಒಂದು ವೇಳೆ ಸಮುದ್ರ ದೇವತೆ ಏನಾದರೂ ಮೇಲೆದ್ದು ಬಂದು, ನನ್ನ ಮೀನುಗಳನ್ನೆಲ್ಲ ಬಿಟ್ಟು ಬಿಡು, ಅದರ ಬದಲು ಬೇರೆ ಬೇಕಾದ ಒಂದು ವರವ ಬೇಡು ಎಂದರೆ ನೀನೇನು ಬೇಡುವಿ?.... ಅವರ ಈ ಪ್ರಶ್ನೆ ಕೇಳಿ ಅವನ ಕೆಲಸದ ಸಹೋದ್ಯೋಗಿಗಳು ಘೊಳ್ಳನೆ ನಕ್ಕುಬಿಟ್ಟರು........

ಆದರೆ ಆ ಜಾಲಗಾರರ ತಲೆಯಲ್ಲಿ ಸುಳಿದ ವಿಚಾರ, ಪ್ರಪಂಚದ ಇನ್ನಾವುದೇ ದೇಶದ ಜಾನಪದ ಕಥೆಯಲ್ಲಿ ಬರುವ ವಿಚಾರವೇ ಆಗಿದೆ.

ನಮ್ಮಲ್ಲಿ ಅದೆಷ್ಟು ಜನ ನಮ್ಮ ಸ್ನೇಹಿತರೊಂದಿಗೆ ಇಂತಹ ಇಷ್ಟ ವಿಚಾರವನ್ನು ಪ್ರಸ್ತಾಪಿಸಿಲ್ಲ? ನಮ್ಮಲ್ಲಿ ಎಷ್ಟು ಜನಕ್ಕೆ ಅವರ ಮನಸ್ಸಿನಲ್ಲಿ ಇಂತಹ ವಿಚಾರ ತಲೆದೋರಿಲ್ಲ? ಹತ್ತರಲ್ಲಿ ಒಂಬತ್ತು ಜನ ಈ ಪ್ರಶ್ನೆಗೆ ಉತ್ತರ ಕೊಡುವಾಗ ಅಶೇಷ ಆಶೀರ್ವಾದ—'ಜೀವೇಮ ಶರದಾಂ ಶತಂ' ಬಯಸಬಹುದು, ಆಯುರಾರೋಗ್ಯವನ್ನು ಕೋರಬಹುದು.

ಭಾರತವರ್ಷದಲ್ಲಿ ಹಾಲ ಹೊಳೆ ಹರಿಯುತ್ತಿದ್ದಾಗ ನಮ್ಮ ಜನರು ಆರೋಗ್ಯ ಸಂಪತ್ತನ್ನು ದೀರ್ಘಾಯುಷ್ಯವನ್ನೂ ಪಡೆದಿದ್ದರು. ಪರದೇಶದಿಂದ ಬಂದ ಅನೇಕ ಪ್ರವಾಸಿಗಳು ಭಾರತ ವರ್ಷದ ಭೂಸಂಪತ್ತನ್ನು ಮತ್ತದರ ಬಲಶಾಲಿ ಜನರನ್ನು ಹೊಗಳಿದ್ದಾರೆ. ಆದರೆ ಶತಮಾನಗಳು ಕಳೆದಂತೆ ನಾವು ಅಂತಹ ಉನ್ನತ ಮಟ್ಟವನ್ನು ಕಳೆದುಕೊಂಡಿದ್ದೇವೆ.

ಇತ್ತೀಚಿನ ಕೆಲವು ನೂರು ವರ್ಷಗಳಲ್ಲಿಯ ನಮ್ಮ ಇಳಿಗಾಲಕ್ಕೆ ಕಾರಣಗಳು ಹಲವಾರು ಇವೆ. ಪರಕೀಯರ ಆಡಳಿತದಲ್ಲಿ ಆರೋಗ್ಯದ ಬಗ್ಗೆ ಅನಾಸ್ಥೆ ಮತ್ತು ಬಡತನಗಳು ಪ್ರಮುಖ ಕಾರಣಗಳಾಗಿವೆ. ಸರ್ಕಾರದಿಂದ ನೇಮಕಗೊಂಡ ಭೋರ ಸಮಿತಿಯು ೧೯೪೬ರಲ್ಲಿ ತನ್ನ ವರದಿಯಲ್ಲಿ "ಜನರ ಆಯುರಾರೋಗ್ಯವನ್ನು ಕಾಪಾಡಿಕೊಂಡು ಬರಲು ಇರುವ ಅನುಕೂಲತೆಗಳು ತೀರ ಅಸಮರ್ಪಕವಿವೆ ಎಂದು ಹೇಳಿದೆ.

ಆದರೆ ಸುದೈವದಿಂದ ಅಂತಹ ವಿಷಣ್ಣತೆಗಳ ದಿನ ಗತಕಾಲಕ್ಕೆ ಸೇರಿದ್ದಾಗಿದೆ. ನಾವಿಂದು ಭಾರತದಲ್ಲಿ ಮತ್ತೆ ಹಿಂದಿನಂತಹ ಆರೋಗ್ಯಭರಿತ ದೀರ್ಘಾಯುಷ್ಯವನ್ನು ಪಡೆಯುವ ಸುದಿನಗಳನ್ನು ತಲುಪುತ್ತಿದ್ದೇವೆ. ಇದಕ್ಕೆಲ್ಲ ಕಾರಣವೇನೆಂದರೆ ರಾಷ್ಟ್ರೀಯ ಸರ್ಕಾರ ಅನುಸರಿಸಿದ ರೀತಿ. ಯಾರೂ ಬಡತನದಿಂದಾಗಿ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಬಾರದು, ಇದು ರಾಷ್ಟ್ರೀಯ ಸರ್ಕಾರದ ನೀತಿ. ಸ್ವಾತಂತ್ರ್ಯ ಪೂರ್ವದಲ್ಲಿ ಆಸ್ಪತ್ರೆಗಳು ಅಲ್ಪ ಸಂಖ್ಯೆಯಲ್ಲಿ ಅಲ್ಲಿ ಇಲ್ಲಿ ಮಾತ್ರ ಇದ್ದವು. ಕೆಲವೇ ಜನರಿಗೆ ವೈದ್ಯಕೀಯ ಸೇವೆ ಸಾಧ್ಯವಿತ್ತು. ಆದರೆ ಇಂದು ಪರಿಸ್ಥಿತಿ ತೀರ ಬದಲಾಗಿದೆ.

ಆಯುಃ ಪ್ರಮಾಣದಲ್ಲಿ ಏರಿಕೆ, ವ್ಯಕ್ತಿಯ ಆಯುಃ ಪ್ರಮಾಣದಲ್ಲಿ ಇಳಿಕೆ. ಬ್ರಿಟಿಷರ ಆಳಿಕೆಯ ಕೊನೆಯ ದಿನಗಳಲ್ಲಿ ಸಾಮಾನ್ಯ ಭಾರತೀಯನ ಜೀವಮಾನ ೨೭ ವರ್ಷ. ಇಂದು ಭಾರತದಲ್ಲಿ ಜನಿಸಿದ ಮಗುವು ಹೆಚ್ಚು ಕಡಿಮೆ ೫೦ ವರ್ಷ ಬದುಕಬಹುದು. ಇದಕ್ಕೆಲ್ಲ ಕಾರಣವೆಂದರೆ ಮಕ್ಕಳ ಬಗ್ಗೆ, ಚಿಕ್ಕವರ ಬಗ್ಗೆ, ಗರ್ಭಸ್ಥ ತಾಯಂದಿರ ಬಗ್ಗೆ, ಹುಟ್ಟಿದ ಮಕ್ಕಳ ಬಗ್ಗೆ ಉತ್ತಮ ರೀತಿಯಲ್ಲಿ ಲಕ್ಷ್ಯವಹಿಸಿದ್ದು. ಆಗಾಗಲೇ, ಪ್ರತಿ ಸಾವಿರ ಜನರಲ್ಲಿ ೨೭ ಮರಣಗಳು ಸಂಭವಿಸುತ್ತಿದ್ದರೆ, ಇಂದು ಪ್ರತಿ ಸಾವಿರ ಜನರಲ್ಲಿ ೧೭ ಜನರು ಸಾವನ್ನಪ್ಪುತ್ತಿದ್ದಾರೆ. ಬರುವ ಇಪ್ಪತ್ತು ವರ್ಷಗಳಲ್ಲಿ ಈ ಸಂಖ್ಯೆಯು ಇನ್ನೂ ಇಳಿದು ಪ್ರತಿ ಸಾವಿರ ಜನರಲ್ಲಿ ೮ ಮರಣಗಳು ಸಂಭವಿಸಬಹುದಾಗಿದೆ.

ಡಾಕ್ಟರ್, ನರ್ಸ್ ಮತ್ತು ಹಾಸ್ಪಿಟಲ್‌ಗಳ ಸಂಖ್ಯೆಯಲ್ಲಿಯ ಏರಿಕೆಯಿಂದಾಗಿ ಭಾರತದಲ್ಲಿ ಜನರು ಇಂದು ಹೆಚ್ಚು ಆರೋಗ್ಯದಿಂದ ಬಾಳಲು ಸಾಧ್ಯವಾಗಿದೆ. ಮೂರು ಪಂಚವಾರ್ಷಿಕ ಅವಧಿಯಲ್ಲಿ ಕಂಡು ಬಂದ ಅಂತರವನ್ನು ಕೆಳಗಿನ ಅಂಕಿಸಂಖ್ಯೆಯಿಂದ ಖಚಿತಪಡಿಸಿಕೊಳ್ಳಬಹುದು: -

	1966ರಲ್ಲಿ
ತಾಯಂದಿರ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳು	10,000
ಪ್ರಾಥಮಿಕ ಆರೋಗ್ಯ ಕೇಂದ್ರಗಳು	5,223
ದಾಯಿಗಳು	48 000
ನರ್ಸ್	42,000
ಆಸ್ಪತ್ರೆ ಮತ್ತು ಔಷಧಾಲಯಗಳು	14,600
ಆಸ್ಪತ್ರೆಯಲ್ಲಿಯ ಹಾಸಿಗೆಗಳು	2,40,100
ಮೆಡಿಕಲ್ ಕಾಲೇಜು	88
ಮೆಡಿಕಲ್ ಕಾಲೇಜಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು	11,500

ಈ ಪ್ರಗತಿಯನ್ನು ಸಾಧಿಸಲು ನಾವು ಶ್ರಮ ಪಡಬೇಕಾಯಿತು. ವೈದ್ಯಕೀಯ ಸೌಲಭ್ಯಗಳು ಹೆಚ್ಚಾಗುತ್ತ ನಡೆದಿವೆ, ಪ್ರತಿಯೊಬ್ಬರಿಗೂ ತನ್ನ ಮನೆಯಿಂದ ಅನತಿ ದೂರದಲ್ಲಿ ಸೌಲಭ್ಯಗಳು ದೊರೆಯುತ್ತಿವೆ.

(ಹನ್ನೆರಡನೇ ಪುಟ ನೋಡಿರಿ)



ವಿಕ್ಸ್ ವೆಪೋರಬ್ ಕೂಡಲೆ ಆರಾಮವನ್ನುಂಟುಮಾಡುತ್ತದೆ...ನಿಮ್ಮ ಮಗು
ನಿರಾತಂಕವಾಗಿ ಉಸಿರಾಡಿಸುವುದು...ಅದು ಇಡೀ ರಾತ್ರಿ ಗಾಢವಾಗಿ ಮಲಗುವದು

ನಿಮ್ಮ ಮಗು ತನ್ನ ಸುಖ-ಸೌಕರ್ಯಗಳಿಗೆ ನಿಮ್ಮನ್ನು ಅವಲಂಬಿಸಿದೆ. ಆದುದರಿಂದಲೇ ನಿಮ್ಮ ಮಗುವಿಗೆ ನೆಗಡಿಯ ಬಾಧೆಯ ಮೊದಲ ಲಕ್ಷಣಗಳಾದ ಕಣ್ಣು-ಮೂಗುಗಳಿಂದ ನೀರು ಸುರಿಯುವಿಕೆ, ಗಂಟಲು ಕಟ್ಟುವುದು, ಉಸಿರಾಟದಲ್ಲಿ ತೊಂದರೆ ಮುಂತಾದವು ಕಂಡುಬಂದರೆ, ವಿಕ್ಸ್ ವೆಪೋರಬ್‌ನ್ನು ತಿಕ್ಕಿರಿ.

ನಿಮ್ಮ ಮಗುವಿನ ನೆಗಡಿಗೆ ವಿಕ್ಸ್ ವೆಪೋರಬ್ ಅಪ್ರತಿಮ ಉಪಾಯವಾಗಿದೆ. ಏಕೆಂದರೆ ಅದು ನೆಗಡಿಯ ಪ್ರಭಾವದಿಂದ ಪೀಡಿತವಾದ ಭಾಗಗಳಲ್ಲಿ ಅಂದರೆ ಮೂಗು, ಗಂಟಲು ಮತ್ತು ಎದೆಗಳಲ್ಲಿ—ಪರಿಣಾಮಕಾರಿಯಾಗಿ ವರ್ತಿಸುತ್ತದೆಯಲ್ಲದೆ ಮಗುವಿನ ಮೃದುವಾದ ಚರ್ಮಕ್ಕೆ ಹಿತಕರವಾಗಿದೆ.

ನಿಮ್ಮ ಮಗುವಿಗೆ ನೆಗಡಿ ಆದಾಗ ನೀವು ಮಾಡಬೇಕಾದುದು ಇಷ್ಟು ಮಾತ್ರ. ವಿಕ್ಸ್ ವೆಪೋರಬ್ಬನ್ನು ಸವರಿ, ನಿಮ್ಮ ಮಗುವನ್ನು ಆರಾಮವಾಗಿ ಹಾಸಿಗೆಯಲ್ಲಿ ಹೊದಿಸಿ ಮಲಗಿಸಿ. ನಿಮ್ಮ ಮಗು ಇಡೀ ರಾತ್ರಿ ಗಾಢವಾಗಿ ಮಲಗಿರುವಾಗ ವಿಕ್ಸ್ ವೆಪೋರಬ್ ತನ್ನ ಕ್ರಿಯೆಯನ್ನು ಮಾಡುತ್ತದೆ. ಬೆಳಗಾಗುವುದರಲ್ಲಿ ನೆಗಡಿಯ ಬಾಧೆ ಇಲ್ಲದಂತಾಗಿ ನಿಮ್ಮ ಅಕ್ಕರೆಯ ಮುದ್ದು ಮಗು ಉಲ್ಲಸಿತವಾಗಿ, ನಗುನಗುತ್ತ ಏಳುವದು.

ವಿಕ್ಸ್ ವೆಪೋರಬ್ 3 ಸೈಜುಗಳಲ್ಲಿ

ಸಾಹಿತ್ಯ ಸಂಸದ

ನಮ್ಮ ಜಿಲ್ಲೆಯ ಸಾಹಿತ್ಯ ಸೌಭಾಗ್ಯ

ಕಳಿಸಿದವರು: ಶ್ರೀ ಪಿ. ಕೆ. ಪ್ರಕಾಶರಾವ್

ಪರಶುರಾಮ ಸೃಷ್ಟಿಯೆಂದೆನಿಸಿರುವ ಪಡುಗಡಲ ತೀರದ ಕರಾವಳಿಯಲ್ಲಿ ನಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡವು ಸೇರಿದೆ. ಪಡುಗಡೆ ಕಡಲು; ಮೂಡು ದಿಕ್ಕಿಗೆ ಉತ್ತುಂಗ ಪರ್ವತದ ಗೋಡೆ. ಇದೊಂದು ನಿಸರ್ಗ ಸೌಂದರ್ಯದ ಬೀಡು. ಭಾರತದ ಪ್ರಸಿದ್ಧ ಆಚಾರ್ಯ ಪುರುಷರಾದ ಮಧ್ವಾಚಾರ್ಯರು ಹುಟ್ಟಿದ ನಾಡು ಇದೇ. ತುಳುನಾಡ ಹೆಸರಾಂತ ಅರಸ ನಾಗೂ ಅಳಿಯ ಸಂತಾನ ಕಟ್ಟಿನ ಜನಕ—ಭೂತಾಳ ಪಾಂಡ್ಯನು ಅರಸಾಗೈದ ನಾಡೂ ಇದೇ. ಇಲ್ಲಿ ಕಣ್ಮನ ತಣಿಯಿಸುವ ಪ್ರಕೃತಿ ನೋಟವಿದೆ. ಮನದಣಿಸುವಷ್ಟು ಕೃತಕ ಸೌಂದರ್ಯವಿದೆ. ಮೇಲಾಗಿ ನಕ್ಕು ನಗಿಸುವ ಕಾವ್ಯಗಳಿವೆ. ನಲಿಯಿಸುವ ಕತೆಗಳಿವೆ. ಮನಸ್ಸನ್ನು ಸೂರೆಗೈಯುವ ಗ್ರಂಥಗಳಿವೆ. ನಲಿದುಲಿಸುವ ಯಕ್ಷಗಾನ; ಬಯಲಾಟ ಮೊದಲಾದ ಸಾಹಿತ್ಯಿಕ ಚಟುವಟಿಕೆಗಳೂ ಇಲ್ಲಿವೆ.

ಕಳರುತಿಯ ಕೋಗಿಲೆ—ಮುದ್ದಣ್ಣ. ವಿಶ್ವ ಸಾಹಿತ್ಯದಲ್ಲಿ ತುಳುನಾಡ ಪ್ರಾತಿನಿಧ್ಯಕ್ಕೆ ಮುದ್ದಣ್ಣನೋರ್ವನೆ ಸಾಕು—ಈತನ ನಿಜವಾದ ಹೆಸರು ಲಕ್ಷ್ಮೀನಾರ್ಣಪ್ಪನೆಂದು. ಆದರೆ ತಂದೆ-ತಾಯಿಗಳಿಟ್ಟ ಒಲುಮೆಯ ಹೆಸರು ಮುದ್ದಣ್ಣ ನಮ್ಮ ಪಾಲಿಗೂ ಈತನು ಪರಿದ್ದದ ಮುದ್ದಣನೇ—ಅವನೊಂದಿಗೆ ಮೂಡಬಿದಿರೆಯ ರತ್ನಾಕರ ವರ್ಣಿಯೂ ಸೇರಿದನೆಂದರೆ ತುಳುನಾಡಿಗೊಂದು ಅಗ್ರಸ್ಥಾನವೇ ಇದೆ. ಮುದ್ದಣನ ವಾಙ್ಮಯಗಳು ಕಾವ್ಯೋದ್ಯಾನದಲ್ಲಿ ಗಮಗಮಿಸುವ ಕುಸುಮಗಳು. ಆತನ ರಾಮಾಶ್ವಮೇಧವೆಂಬುದು ಕನ್ನಡದ ವಾಗ್ದೇವಿಗೊಂದು ನವೀನ ಕಾಣಿಕೆ. ಹಳೆಗನ್ನಡ ಸಾಹಿತ್ಯ ವೃಕ್ಷವನ್ನು ನೂತನ ಭಾವನಾಜಲದಿಂದ ಪೋಷಿಸಿದ್ದಾನೆ. ಮುದ್ದಣನೇ ಹೇಳಿರುವಂತೆ 'ಕಾವಗಿಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲ" ರಾಮಾಶ್ವಮೇಧದ ಕಥೆಯಲ್ಲಿನ ಗಂಡಹೆಂಡಿರ (ಮುದ್ದಣ ಮನೋರಮೆಯರ) ಸರಸ ಸಂವಾದದ ಬೆಡಗು ಇತರ ಯಾವ ಗ್ರಂಥಗಳಲ್ಲೂ ಕಂಡು ಬರುವುದಿಲ್ಲ. ನಡುನಡುವ ರಸಿಕ ಮುದ್ದಣ ತನ್ನಿನಿಯಳನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಾನೆ. ಅವರ ನಲ್ನುಡಿಗಳನ್ನು ಕೇಳಿ ನಾವೂ ಗಹಗಹಿಸಿ ನಗುತ್ತೇವೆ. ಮುದ್ದಣನ ಭಾವನೆಯಲ್ಲಿ ಗದ್ಯವು ಪದ್ಯಕ್ಕಿಂತ ಚೆಲುವು. ಅದನ್ನೇ ಪ್ರತಿಪಾದಿಸಲೋಸುಗ ಹೆಂಡತಿಯ ಬಾಯಿಯಿಂದ 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ" ಎಂದು ಹೇಳಿಸುತ್ತಾನೆ. ಇವರ ನುಡಿ ಸಹೃದಯರಾದ ರಸಿಕರಿಗೆ ಕರ್ಣಪೀಯೂಷ.

ಮುದ್ದಣನ ಇನ್ನೊಂದು ಗ್ರಂಥ ರಾಮಪಟ್ಟಾಭಿಷೇಕ. ಇದು ಶೈಲಿಯ ದೃಷ್ಟಿಯಿಂದ ರಾಮಾಶ್ವಮೇಧದಷ್ಟು ಉತ್ಕರ್ಷವಾಗಿಲ್ಲದಿದ್ದರೂ ಅಷ್ಟೇ ರಮ್ಯವಾಗಿದೆ. ಅದು ಸ್ತ್ರೀ ರಚಿತವಾದ ಗ್ರಂಥವೆಂದು ಹಲವರ ವಾದವಿದ್ದರೂ ಅದು ಮುದ್ದಣನ ಕೃತಿಯೇ ಎಂಬುದು ನಿಸ್ಸಂದೇಹ. ಆತನು ತನ್ನ ತಾಯಿ ಮಹಾಲಕ್ಷ್ಮಿಯ ಹೆಸರಿಂದ ತನ್ನ ಗ್ರಂಥವನ್ನು ಅಂಕಿತ ಮಾಡಿರಬೇಕು.

'ಉಡುಪಮುನೆಂಬ ಸುಕ್ಷೇತ್ರ
ಮುಂಟಲ್ಲಿ ಜಾ- |
ವಡಿ ರಂಗಭಟ್ಟನಾತ್ಮಜೆ ಮಹಾ
ಲಕ್ಷ್ಮಿಕೆ- |
ನ್ನಡತಿ ಜಂಗಳೆ ದೇವಿ ಪೇಳೆಂದು
ಪೇಳೆ ನೆರೆ ಪೇಳ್ದಳೀ ಸತ್ಕೃತಿಯನು.||"

ಎಂದು ಕವಿಯು ತನ್ನ ಕಾವ್ಯಕ್ಕೆ ಪೂರ್ಣವಿರಾಮವನ್ನಿತ್ತಿರುವನು. ಇದರಲ್ಲಿನ ಕೆಲವು ವರ್ಣನೆಗಳು ಬಹುಗಂಭೀರವಾಗಿವೆ. ಸಮುದ್ರದ ಹೇಳಿಕೆಯನ್ನು ಸಮಾರು ಇಪ್ಪತ್ತು ಇಪ್ಪತ್ತೈದು ಷಟ್ಪದಿಗಳಲ್ಲಿ ಬರೆದಿರುವನು. ಆತನ ಪ್ರತಿಭೆಗೆ, ಕಲ್ಪನಾ ಶಕ್ತಿಗೆ, ಬಣ್ಣನೆಯ ವೈಖರಿಗಳಿಗೆ ಇದೊಂದು ಪ್ರತೀಕ. ಆತನ ಮತ್ತೊಂದು ಗದ್ಯಕಾವ್ಯ ಅದ್ಭುತ ರಾಮಾಯಣ ಇದೊಂದು ಸಾಮಾನ್ಯ ಗ್ರಂಥ. ರಾಮಾಯಣ ಕಥೆಯಲ್ಲಿನ ಅಮೃತವನ್ನು ಮಥಿಸಿ ಇದರಲ್ಲಿ ಸಂಗ್ರಹಿಸಿದ್ದಾನೆ. ಕವಿ, ಪಂಪ, ಜನ್ನರೇ ಮೊದಲಾದ ಕವಿವರ್ಯರ ಗ್ರಂಥಗಳು ಪಂಡಿತರ ಸೊತ್ತು. ಪಾಮರರಿಗೆ ಅವನ್ನಿತ್ತರ ಅವರಿಗೆ ಕಾವ್ಯ ಕ್ಷೇತ್ರವು ಮರುಭೂಮಿಯಾಗಿ ಕಾಣುವುದು. ಅಂತಹವರಿಗೆ ಮುದ್ದಣನ ರಾಮಾಶ್ವಮೇಧವೇ ಬೇಕು; ಅದ್ಭುತ ರಾಮಾಯಣವೇ ಬೇಕು.

ಬಡವನಾಗಿ ಹುಟ್ಟಿ ಬಡವನಾಗಿಯೇ ಕಳೆದು ತನ್ನ ಕಾವ್ಯ ವ್ಯವಸಾಯವನ್ನು ಕೈಕೊಂಡಿದ್ದನವನು. ಸರಸ್ವತೀ ಕಟಾಕ್ಷ ಆತನಿಗಿತ್ತು ಆದರೆ ಸಂಪತ್ತು ಇರಲಿಲ್ಲ. ಉಡುಪಿಯ ಮಿಶನ್ ಹಾಯ್ಸ್ಕೂಲಿನಲ್ಲಿ ಹಲವು ರೂಪಾಯಿಗಳನ್ನಾತ ಸಂಪಾದಿಸಿರಬಹುದು. ಕವಿಗಳಿಗೆ ಬೇಡುವುದೊಂದೇ ಜೀವನೋಪಾಯವೆಂದು ತನ್ನ ರಾಮಾಶ್ವಮೇಧದಲ್ಲಿ ಸಾರಿದ್ದಾನೆ. 'ಭವತಿಭಿಕ್ಷಾಂದೇಹಿ' ಇದುವೆ ಕವಿಗಳಿಗೆ ಸಿದ್ಧಿಸಿದ ಮಂತ್ರ. ನಮ್ಮೀ ಕವಿಯೂ ಬಡತನದ ಬೇಗೆ, ರೋಗದ ಹಾವಳಿಗಳಿಂದ ನರಳಿ ಯೌವನಾವಸ್ಥೆಯಲ್ಲಿಯೇ ಅಳಿದು ಹೋದನು; ಅಮರನಾದನು. ಆತನೀಗ ಇಷ್ಟದ ಪಣ್ಣು ... ನಗಿಯುತ್ತಿದ್ದನು; ಇನ್ನಷ್ಟು ಹೆಸರುಗಳಿಸುತ್ತಿದ್ದನು. 'ಆದರೆ ಕಾಲನ ಕಟ್ಟಳೆಗಳಿಗೆ ಇದಿರಾಡುವವರಾರುಂಟು?'

ರತ್ನಾಕರ ವರ್ಣಿ

ಈ ಜೈನ ಕವಿಯು ಮೂಡಬಿದಿರೆಯವನು. ಮುದ್ದಣ್ಣನಿಗಿಂತಲೂ ಪೂರ್ವದವ. ಭರತೇಶ ವೈಭವವೆಂಬ ಮಹಾಕಾವ್ಯವನ್ನು ಸಾಂಗತ್ಯ ರೂಪದಲ್ಲೇ ರಚಿಸಿದ್ದಾನೆ. ಈತನೂ ರಸಿಕ ಶಿಖಾಮಣಿ. ತನ್ನ ಗ್ರಂಥವನ್ನೋದಿದವರಿಲ್ಲ ಏನೆಂದು ಕೊಳ್ಳುವರೆಂದು ತಾನೇ ಊಹಿಸಿದ್ದಾನೆ.

"ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು.
ರಯ್ಯ ಮಿಂಚಿದಿಯೆನೆ ತೆಲುಗರು||
ಅಯ್ಯಯ್ಯ ಎಂಚ ಪೊರ್ಲುಂ ಡೆಂದುತುಳುವರು
ಮೆಚ್ಚುವ್ಪಿ ಕೇಳಬೇಕಣ್ಣಾ||"

ಭರತೇಶ ದಿಗ್ವಿಜಯದ ಕತೆಯನ್ನು ಸುರಸವಾಗಿ ವರ್ಣಿಸಿದ್ದಾನೆ. ಸಾಂಗತ್ಯವು ದಕ್ಷಿಣಕನ್ನಡ ಜಿಲ್ಲೆಯ ಹಳ್ಳಿಹಳ್ಳಿಗಳಲ್ಲೂ ಪಾರಾಯಣಗೊಳ್ಳುತ್ತದೆ. ಹಳ್ಳಿಗರಿಗೆ ಇವನ ಸಾಂಗತ್ಯ ರುಚಿಸುತ್ತದೆ. ಈತನು ಗ್ರಂಥವನ್ನು ಆತ್ಮಲೀಲಾರ್ಥವಾಗಿ ಬರೆದನಲ್ಲದೆ ಕೀರ್ತಿಗಾಗಿಯಲ್ಲವೆಂದು ತಾನೇ ಹೇಳಿರುವುದು ಸತ್ಯ. 'ಕೀರ್ತಿಯ ಬಯಸಿ ಕಾಮಿಸಿರುವೆನಲ್ಲ ನಗೆ ಸತ್ಕೀರ್ತಿ ತಾನೇ ಬರುತಿರುವುದು' ಎಂದು ತಿಳಿಸಿದ್ದಾನೆ. ಈತನು ಇದೊಂದೇ ಗ್ರಂಥವನ್ನಲ್ಲದೆ ಹಲವು ಶತಕಗಳನ್ನೂ ಇನ್ನೂ ಹಲವು ಆಧ್ಯಾತ್ಮಿಕ ಗೀತಗಳನ್ನೂ ರಚಿಸಿರುವನೆಂದು ತಿಳಿದು ಬರುತ್ತದೆ. ಈತನು ಯೋಗಾಭ್ಯಾಸ ಮಾಡಿದ್ದನು. ಅದು ಕಾರಣವೇ ಆತನಿಗೆ ರತ್ನಾಕರ ಸಿದ್ಧ, ರತ್ನಾಕರ ವರ್ಣಿ ರತ್ನಾಕರ ಅಣ್ಣ ಮೊದಲಾದ ಬಿರುದುಗಳೂ ಬಂದಿವೆ. ಈತನು ಮುದ್ದಣ್ಣನಂತೆ ಬಡತನದ ಭೂತಕ್ಕೆ ಬಲಿಯಾಗಲಿಲ್ಲ. ಆದುದರಿಂದಲೇ ಆತನ ಗ್ರಂಥಗಳಲ್ಲಿ ಬಡತನದ ಚಿತ್ರವಿಲ್ಲ. ಸಂಸಾರವು ಸಾರವು ಎಂಬುದಾಗಿ ತೋರಿಬರುವುದು. ಹೀಗೆ "ನಿಮ್ಮ ನಾಡಿನಲ್ಲಿ ಕವಿಗಳು ಹುಟ್ಟಿದರೆ? ... ಕಾವ್ಯಗಳು ಯಾವುವು?" ಎಂದು ... ರಾಮಾಶ್ವಮೇಧ, ಭರತೇಶ ವೈಭವ ಈ ಎರಡು ಕಾವ್ಯಗಳನ್ನು ಎದುರಿಟ್ಟರೆ ಸರಿ. ಕೇಳ್ವಾತ ಬಾಯಿಗೆ ಬೀಗ ಬೀಳದಿರನು. ಕನ್ನಡದ ಶ್ರೇಷ್ಠ ಕವಿಗಳನ್ನು ಬೆರಳೆಣಿಕೆಯಿಂದ ಗಣಿಸುವುದಾದರೆ ಈ ಇರ್ವರ ಕವಿಗಳ ಹೆಸರು ಬಂದೇ ತೀರಬೇಕು.

ಆಧುನಿಕ ಸಾಹಿತ್ಯ.— ಈ ಇಪ್ಪತ್ತನೆಯ ಶತಮಾನದಲ್ಲಂತೂ ಸಾಹಿತ್ಯ ಸರ್ವತೋಮುಖವಾಗಿ ಬೆಳೆದಿದೆ. ಹೆಸರಾಂತ ಕಾದಂಬರಿಕಾರರನ್ನು, ಕವಿಗಳನ್ನು ನಮ್ಮ ಜಿಲ್ಲೆಯು ಕರ್ನಾಟಕಕ್ಕೆ ಕೊಟ್ಟಿದೆ. ಕಾದಂಬರಿಯುಗದಲ್ಲಿ ಕ್ರಾಂತಿಯನ್ನುಟ್ಟುಸಿದ ಕಾರಂತರು-ಶಿವರಾಮ ಕಾರಂತರು-ನಮ್ಮವರಲ್ಲವೆ? ಅವರ ಬಾಲಪ್ರಪಂಚದಷ್ಟು ವಿಶಾಲವಿಲ್ಲ. ಬೆಟ್ಟದ ಜೀವವನ್ನು ಕಾಣದವರಿಲ್ಲ. ಮರಳಿ ಮಣ್ಣಿಗೆ ಸೇರದವರಿಲ್ಲ. ರಾಷ್ಟ್ರಕವಿ ಗೋವಿಂದ ಪೈಗಳು ನಮ್ಮವರಲ್ಲವೆ? ತಮ್ಮ ಭಾವನಾ ವೈಚಿತ್ರ್ಯಗಳಿಂದ ಕನ್ನಡದ ಪಲ್ಲ ಎನಿಸಿದ್ದಾರವರು. ಅಂತಹ ಕವಿ ಬೇರೊಬ್ಬ ದೊರೆತಾನೆ? ಇನ್ನು ವಿಮರ್ಶಕರು ಪತ್ರಿಕೋದ್ಯೋಗಿಗಳು ಕತೆಗಾರರು ನಮ್ಮ ಜಿಲ್ಲೆಯಲ್ಲಿಂದು ತುಂಬಿ ಹೋಗಿದ್ದಾರೆ. ನೃತ್ಯ ತುಂಗನೆನ್ನುವಂತ ಜಿಲ್ಲೆಯ ಜನ ಕಾವ್ಯ ಪ್ರಯೋಗ ಪರಿಣತ ಮತಿಗಳ ಸರಿ.

ಇಷ್ಟಲ್ಲದೆ ಇನ್ನೂ ಹಲವು ವಿಧಗಳಿಂದ ನಮ್ಮ ಜಿಲ್ಲೆಯು ಕನ್ನಡ ತಾಯ ಸೇವೆಯನ್ನು ಮನವಾರೆ ಮಾಡಿದೆ. ಯಕ್ಷಗಾನಗಳ ಮೂಲಕ ಬಯಲಾಟಗಳಿಂದ ಅಲ್ಲದೆ ಜನಪದದಿಂದ ಸಾಹಿತ್ಯ ಊರ್ಧ್ವಮುಖವಾಗಿ ಬೆಳೆದಿದೆ.

ಯಕ್ಷಗಾನಕಲೆಯು ನಮ್ಮ ಜಿಲ್ಲೆಯ ಸಂಸ್ಕೃತಿಯ ದ್ಯೋತಕ ತನ್ನದೇ ಆದೊಂದು ವೈಶಿಷ್ಟ್ಯ ಕಲೆಯಲ್ಲಿದೆ. ಮಾತುಗಾರಿಕೆ ಸರಸ—ಸಾಹಿತ್ಯ ಈ ಕಲೆಯ ಉಸಿರು. ಪಾರ್ತಿಸುಬ್ಬನೇ ಮೊದಲಾದವರು ಈ ಸಾಹಿತ್ಯಕ್ಕೆ ಒಂದು ತರದ ನವೀನತೆಯನ್ನು ಕೊಟ್ಟಿದ್ದಾರೆ. ಭಾರತದ ಪುರಾಣಗಳ ಪ್ರತಿರೂಪ ಈ ಯಕ್ಷಗಾನಗಳಲ್ಲಿ ತೋರಿಬರುತ್ತದೆ. ಅಂತೂ ಇದೊಂದು ಯಕ್ಷಗಾನ- ಕಿನ್ನರಗಾನ— ಪ್ರತಿಭಾಸಂಪನ್ನ ಕವಿಗಳ ಕಳಕಳಿ ಸ್ವನ.

ಬಯಲಾಟವೂ ಸಾಹಿತ್ಯದ ಮುನ್ನೋಟಕ್ಕೆ ಬೆಂಬಲವಿತ್ತಿದೆ. ಬಟ್ಟಬಯಲಲ್ಲಿ ಕುಳಿತು ಸಾಹಿತ್ಯರುಚಿ ಸವಿಯುವ ಹಳ್ಳಿಗರ ಸೊಬಗನ್ನೇನನಬೇಕು?

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶ್ರೀ ಕೃಷ್ಣ ಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಶಾಂತಿಯ ಗಳಿಗೆಯೇ ಶಾಶ್ವತವಾಗುವಂತೆ ಮಾಡುವ ಕೃತಿ
ಬೆಲೆ. 0-19 ಪೈಸೆ.
ರಚನೆ ಪ್ರತಿಗಳಿಗೆ ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ.

ನೀವೂ ತಿಳಿದುಕೊಳ್ಳಿ

ಧನಾಧಿಪತಿ ಕುಬೇರ

ಬರೆದವರು: ಶ್ರೀ ಸ. ನಾರಾಯಣ

ಪಂಚ ಭೂತಗಳಿಂದ ಪ್ರತಿಷ್ಠಿತವಾದುದು ಈ ಪೃಥ್ವಿ. ದಿಕ್ಕುಗಳು ಎಂಟು. ಎಂಟು ದಿಕ್ಕುಗಳಿಗೂ ಒಬ್ಬೊಬ್ಬ ದೇವತೆಯನ್ನು ನಿರ್ದೇಶಿಸಿ ಅವನಿಗೆ ಆ ದಿಕ್ಕಿನ ಅಧಿಪತ್ಯವನ್ನು ಕೊಟ್ಟರು ಆರ್ಯರು. ಆ ದೇವತೆಗಳಿಗೆ ಅಷ್ಟ ದಿಕ್ಪಾಲಕರು ಎಂದು ಕರೆದರು. ಉತ್ತರ ದಿಕ್ಕಿನ ಅಧಿಪತಿ ಕುಬೇರ. ಕುಬೇರ ದೇವ,ಧನಾಧಿಪತಿಯೂ ಹೌದು, ಇವನು ಶ್ರೀಮಂತ. ಹಣದ ವಹಿವಾಟು ಇವನಿಗೆ ಗೊತ್ತು. ಶ್ರೀನಿವಾಸನು ಪದ್ಮಾವತಿಯನ್ನು ವಿವಾಹ ಮಾಡಿಕೊಳ್ಳುವ ಸಲುವಾಗಿ ಕುಬೇರನಲ್ಲಿ ಸಾಲಪಡೆದ. ಇಂದು ಶ್ರೀನಿವಾಸನ ಭಕ್ತರು ಶ್ರೀನಿವಾಸನ ಪರವಾಗಿ ಸಾಲ ತೀರಿಸುವ ಸಲುವಾಗಿ ಹುಂಡಿಗೆ ಹಣ ಹಾಕುತ್ತಾರೆ. ಇದು ಪುರಾಣದ ಕಥೆ. ಆದರೆ ಕುಬೇರ ಧನದ ಒಡೆಯ. ಧನಾಧಿಪತಿಯವನ ಕ್ಷೇತ್ರ ಉತ್ತರ ದಿಕ್ಕು ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಕುಬೇರನ ಬಗೆಗೆ ಪುರಾಣ ಗ್ರಂಥಗಳಲ್ಲಿ ನಾನಾ ಬಗೆಯ ಕಲ್ಪನೆ, ವ್ಯಾಖ್ಯಾನ, ವಿವರಣೆಗಳು ಇವೆ. ಕೆಲವನ್ನು ಕೆಳಗೆ ಸಂಗ್ರಹಿಸಿ ಬರೆಯಲಾಗಿದೆ. ವರಾಹ ಪುರಾಣದ ಕಥೆಯ ಹೇಳಿಕೆಯಂತೆ— ಪೂರ್ವದಲ್ಲಿ ಬ್ರಹ್ಮ ಸೃಷ್ಟಿ ರಚನಾ ಕಾರ್ಯದಲ್ಲಿ ತಲ್ಲೀನನಾಗಿದ್ದ. ಆಗ ಅವನ ಮುಖದಿಂದ ಕಲ್ಲಿನ ಮಳೆ ಸುರಿಯಿತು. ಭೀಕರ ಬಿರುಗಾಳಿ ಬೀಸತೊಡಗಿತು. ಕೆಲಕಾಲಾನಂತರ ಬಿರುಗಾಳಿ ಶಾಂತವಾಯಿತು. ಬ್ರಹ್ಮ ತನ್ನ ಮುಖದಿಂದ ಸಿಡಿದು ಉರುಳಿದ ಶಿಲೆಯನ್ನು ಜೋಡಿಸಿ ಅಲೌಕಿಕ ಪುರುಷನನ್ನು ರೂಪಿಸಿ ಆವನನ್ನು ದೇವತೆಗಳ ಧನದ ರಕ್ಷಣೆಗಾಗಿ ನಿಯಮಿಸಿದ. ಆ ಅಲೌಕಿಕ ಪುರುಷನು ಕುಬೇರನೆಂಬ ಹೆಸರಿನಿಂದ ಪ್ರಸಿದ್ಧನಾದ.

ಪುಲಸ್ತ್ಯ ಬ್ರಹ್ಮನ ಮಾನಸ ಪುತ್ರ. ಅವನ ಮಗ ವೈಶ್ರವಣ. ಅವನಿಗೆ ಕುಬೇರನೆಂದು ಮತ್ತೊಂದು ಹೆಸರು. ಅವನು ತಂದೆ ಪುಲಸ್ತ್ಯನಿಂದ ದೂರನಾಗಿ ಅಜ್ಜ ಬ್ರಹ್ಮನನ್ನು ಭಕ್ತಿಯಿಂದ ಸೇವಿಸಿದ. ಮೊಮ್ಮಗನ ಪ್ರೀತಿಯ ಸೇವೆಯಿಂದ ಸಂಪ್ರೀತನಾದ ಬ್ರಹ್ಮದೇವ ಅವನಿಗೆ ಅನುರಕ್ತ ಅಪಾರ ಧನರಾಶಿಯನ್ನು ಕರುಣಿಸಿ ಪುಷ್ಪಕ ವಿಮಾನವನ್ನು ಉಡುಗೊರೆಯಾಗಿತ್ತು ಲಂಕಾಧಿಪತಿಯನ್ನಾಗಿ ಮಾಡಿದ.

ಮಗನ ಕೀರ್ತಿ ಪ್ರತಿಷ್ಠೆಗಳನ್ನು ಕಂಡು ಸಹಿಸದ ಪುಲಸ್ತ್ಯ ಕೋಪದಿಂದ ತನ್ನ ಶರೀರದಿಂದ ಮತ್ತೊಬ್ಬ ಮಗ ವಿಶ್ರವಸನನ್ನು ಉತ್ಪಾದಿಸಿದ. ತಂದೆಯ ಉಗ್ರ ಮನೋಭಾವದಿಂದ ಜನಿಸಿದ ವಿಶ್ರವಸ ಅಣ್ಣ ಕುಬೇರನನ್ನು ದ್ವೇಷಿಸತೊಡಗಿದ. ತಂದೆಯನ್ನು ಸಮಾಧಾನ ಪಡಿಸುವ ಸಲುವಾಗಿ, ತಂದೆಯ ಅನುಗ್ರಹಕ್ಕೆ ಪಾತ್ರನಾಗುವ ಸಲುವಾಗಿ ಕುಬೇರ ತಂದೆ ಪುಲಸ್ತ್ಯನಿಗೆ ಮೂವರು ರಾಕ್ಷಸಿಯರನ್ನು ಕಾಣಿಕೆಯಾಗಿ ಕೊಟ್ಟ. ಪುಷ್ಪೋತ್ಕಟಾ, ಮಾಲಿನಿ ಮತ್ತು ರಾಕಾ ಈ ಮೂವರೇ ಆ ರಾಕ್ಷಸಿಯರು. ಈ ಮೂವರು ರಾಕ್ಷಸಿಯರ ಗರ್ಭದಲ್ಲಿ ಪುಲಸ್ತ್ಯನಿಗೆ ಪುಷ್ಪೋತ್ಕಟಾಳಿಂದ ರಾವಣ ಮತ್ತು ಕುಂಭಕರ್ಣ, ಮಾಲಿನಿಯಿಂದ ವಿಭೀಷಣ ಮತ್ತು ರಾಕಾಳಿಂದ ಖರ-ದೂಷಣ, ಶೂರ್ಪನಖಾ ಹುಟ್ಟಿದರು. ಇವರೆಲ್ಲರೂ ಮಲ ಅಣ್ಣ ಕುಬೇರನ ಐಶ್ವರ್ಯವನ್ನು ಕಂಡು ಅಸೂಯೆಪಡುತ್ತಿದ್ದರು.

ಘೋರ ತಪಸ್ಸಿನಿಂದ ರಾವಣ ಬ್ರಹ್ಮನನ್ನು ಒಲಿಸಿಕೊಂಡ. ಅನೇಕ ರೂಪ ಧರಿಸುವ ಮತ್ತು ಕತ್ತರಿಸಿದ ತಲೆ ಮತ್ತೆ ಸೇರುವ ದಿವ್ಯ ವರ ಪಡೆದು ರಾವಣ ಲಂಕೆಗೆ ಬಂದು ಕುಬೇರನೊಂದಿಗೆ (ವೈಶ್ರವಣ) ಯುದ್ಧ ಮಾಡಿ ಅವನನ್ನು ಲಂಕೆಯಿಂದ ಓಡಿಸಿ, ಅವನ ಸಮಸ್ತ ಸಂಪತ್ತನ್ನು ವಶಪಡಿಸಿಕೊಂಡ. ಕುಬೇರ ಗಂಧಮಾದನ ಪರ್ವತಕ್ಕೆ ತೆರಳಿದ—ಇದು ರಾಮಾಯಣದ ಉತ್ತರ ಕಾಂಡದಲ್ಲಿರುವ ಕುಬೇರನ ಕಥೆ.

ಓರ್ವ ಕಳ್ಳ ದೇವರ ಆಭರಣವನ್ನು ಅಪಹರಿಸಲು ಒಂದು ಶಿವಾಲಯಕ್ಕೆ ಬಂದ. ಶಿವನ ಎದುರಿನಲ್ಲಿದ್ದ ನಂದಾದೀಪ ಮಂದ ಪ್ರಕಾಶ ನೀಡುತ್ತಾ ಉರಿಯುತ್ತಿತ್ತು. ಕ್ಷೀಣ ಪ್ರಕಾಶವನ್ನು ಗಮನಿಸಿದ ಕಳ್ಳ ಆಭರಣಗಳನ್ನು ಹುಡುಕುವ ಸಲುವಾಗಿ ನಂದಾದೀಪದ ಬತ್ತಿಯನ್ನು ಮುಂದೆ ಚಾಚಿ ಗರ್ಭಗುಡಿಯನ್ನು ಬೆಳಗಿಸಿದ. ಆ ಮಂದಿರದಲ್ಲಿದ್ದ ಶಿವ ಆ ಕಳ್ಳನನ್ನು ಮಹಾಭಕ್ತನೆಂದು ಭಾವಿಸಿ ಪ್ರತ್ಯಕ್ಷನಾಗಿ ಮುಂದಿನ ಜನ್ಮದಲ್ಲಿ ಧನ ದೇವತೆ ಕುಬೇರನಾಗುವಂತೆ ವರವಿತ್ತ. ಇದು ಇನ್ನೊಂದು ಕಥೆ ಕುಬೇರ ಧನ ದೇವತೆಯಾಗಲು.

ಬೌದ್ಧರ ದೀರ್ಘ-ನಿಕಾಯ ಕಥೆಯ ಪ್ರಕಾರ—"ಕುಬೇರ ಪೂರ್ವ ಜನ್ಮದಲ್ಲಿ ಕುಬೇರನೆಂಬ ಬ್ರಾಹ್ಮಣನಾಗಿದ್ದ. ತನ್ನ ಆಸ್ತಿಯಿಂದ ಬರುವ ಉತ್ಪನ್ನದಲ್ಲಿ ಏಳರಲ್ಲಿ ಒಂದು ಭಾಗವನ್ನು ದಾನ ಮಾಡುತ್ತಿದ್ದ. ಹೀಗೆ ಇಪ್ಪತ್ತು ಸಾವಿರ ವರ್ಷಗಳ ಕಾಲ ದಾನ ಮಾಡಿದ ಪರಿಣಾಮವಾಗಿ ಅವನು ದೇವತೆಯಾಗಿ ಜನ್ಮತಾಳಿದ ಎಂದು ತಿಳಿದು ಬರುತ್ತದೆ.

"ಶತಪಥ-ಬ್ರಾಹ್ಮಣ'ದಲ್ಲಿ ಕುಬೇರನನ್ನು ರಾಕ್ಷಸನೆಂದೂ ಕರೆಯಲಾಗಿದೆ. ವೈದಿಕ ಸಾಹಿತ್ಯದಲ್ಲಿ ವಿಶೇಷವಾಗಿ ಕುಬೇರನನ್ನು ಯಕ್ಷನೆಂದು ಸಂಬೋಧಿಸಲಾಗಿದೆ. ಯಕ್ಷರಾಜ, ಯಕ್ಷೇಂದ್ರ, ದೇವ ಯಕ್ಷರಾಜ ಎಂದೂ ಕರೆಯಲಾಗಿದೆ. ಬ್ರಾಹ್ಮಣ, ಬೌದ್ಧ, ಜೈನ ಸಾಹಿತ್ಯಗಳಲ್ಲಿಯೂ ಇದೇ ಬಗೆಯ ಉಲ್ಲೇಖವಿದೆ.

ಕುಬೇರನ ರಾಜಧಾನಿ ಅಲಕಾ ನಗರ. ಅಲಕಾನಗರ ಭವ್ಯನಗರ. ಇದು ಕೈಲಾಸ ಪರ್ವತದ ಮೇಲೆ ಶಿವನ ನಿವಾಸ ಸ್ಥಾನದಲ್ಲಿದೆ. ಯಕ್ಷ, ಕಿನ್ನರ, ಗಂಧರ್ವ, ಮುನಿ, ರಾಕ್ಷಸರು ಅಲ್ಲಿಯ ನಿವಾಸಿಗಳು. ಕೈಲಾಸ ಪರ್ವತದ ಈ ಭವ್ಯನಗರದಲ್ಲಿ ರತ್ನಮಣಿಮಯ ಮಹಾ ಸೌಧಗಳು, ಸುಂದರ ಪ್ರಾಸಾದಗಳು ತೋಟ—ಸರೋವರಗಳೂ ಇವೆ. ಅದರಲ್ಲಿ ಚೈತ್ರ— ರಥವೆಂಬ ಉದ್ಯಾನವನ ರಮಣೀಯವಾದದು.

ಮಹಾಭಾರತದಲ್ಲಿ ವಾಯು ಅಗ್ನಿಗಳ ಸಂಪರ್ಕದಿಂದ ಸುವರ್ಣ ಉತ್ಪತ್ತಿಯಾಗುವುದೆಂಬ ಪ್ರಸ್ತಾಪವಿದೆ. ಅದರಂತೆ ಮನುಷ್ಯನಿಗೆ ಅಗ್ನಿ ಪೂಜೆಯ ನಂತರವೇ ಬಂಗಾರ ಪ್ರಾಪ್ತಿ. ಶುಕ್ರವಾರ ಅಗ್ನಿಗೆ ದೊರೆತ ಸುವರ್ಣ ಕುಬೇರನಿಗೆ ಅರ್ಪಿತವಾಗುವುದು. ಕುಬೇರ ಖನಿಜ ಧನಗಳ ಮೂಲ ಪುರುಷ.

ಕೆಲವು ಸಂಗತಿಗಳ ಪ್ರಸ್ತಾಪದ ಮೇರೆಗೆ ಕುಬೇರ ಆರಂಭದಲ್ಲಿ ಅನಾರ್ಯನಾಗಿದ್ದ. ಆದರೆ ಪ್ರಾರಂಭದಿಂದಲೂ ಬ್ರಾಹ್ಮಣರೊಂದಿಗೆ ಕೂಡಿದ್ದ. ಮುಂದೆ ವೈದಿಕ ಹಿಂದೂ ಧರ್ಮದಲ್ಲಿ ಪ್ರವೇಶಿಸಿದ. ಪ್ರಾಶಸ್ತ್ಯ ಪಡೆದ. ಧರ್ಮದಲ್ಲಿ ಅವನಿಗೆ ಪ್ರವೇಶ ದೊರೆತ ಕಾರಣ ಪೂಜೆಗೆ ಅರ್ಹನಾದ. ಮುಂದೆ ಕುಬೇರನ ಪೂಜೆಯೂ ಬಳಕೆಗೆ ಬಂತು. ಕೌಟಿಲ್ಯ ರಾಜ್ಯದ ಭಂಡಾರ (ಖಜಾನ) ದಲ್ಲಿ ಧನಾಧಿಪತಿ ಕುಬೇರನ ಮೂರ್ತಿಯನ್ನು ಸ್ಥಾಪಿಸಬೇಕೆಂದು ಅಭಿಪ್ರಾಯ ಪಟ್ಟಿದ್ದಾನೆ—ಬರೆದಿಟ್ಟಿದ್ದಾನೆ.

ಕ್ರಿ. ಪೂ. ಎರಡನೆಯ ಶತಮಾನದಲ್ಲಿ ಕುಬೇರನಿಗೆ ಪ್ರತ್ಯೇಕ ಮಂದಿರವಿತ್ತು ಎಂಬ ಸಂಗತಿ ವಿದಿಶಾ ಪಟ್ಟಣದ ಸಮೀಪದ ಧ್ವಜಸ್ತಂಭದಿಂದ ತಿಳಿಯ ಬರುತ್ತದೆ. ಅದರ ಹೇಳಿಕೆಯ ಮೇರೆಗೆ ಕುಬೇರನ ನಿವಾಸ ವಟವೃಕ್ಷವೆಂದೂ ಗೊತ್ತಾಗುತ್ತದೆ. ಸ್ತಂಭದ ಮೇಲಿರುವ ವೃಕ್ಷದಲ್ಲಿ ಒಂದು ಕೊಡ ಮತ್ತು ರೂಪಾಯಿ (ನಾಣ್ಯ) ಗಳಿಂದ ತುಂಬಿದ ಎರಡು ಚೀಲಗಳ ಚಿತ್ರವಿದೆ. ಆ ಧ್ವಜಸ್ತಂಭದಲ್ಲಿ ವೃಕ್ಷದ ಮತ್ತೊಂದು ಬದಿ ಶಂಖ ಪದ್ಮಗಳಿವೆ.

ದೀಪಾವಳಿ ಇಂದು ಭಾರತೀಯರ ಪ್ರಸಿದ್ಧ ಹಬ್ಬ. ಲಕ್ಷ್ಮಿ— ಮತ್ತು ಲಕ್ಷ್ಮೀಪುತ್ರರ ವೈಭವದ ಹಬ್ಬ. ಈ ಹಬ್ಬದಲ್ಲಿ ಲಕ್ಷ್ಮಿ ಪೂಜೆಗೆ ವಿಶೇಷ ಪ್ರಾಶಸ್ತ್ಯವಿದೆ. ಹಿಂದೆ ದೀಪಾವಳಿಯಂತೆ "ಯಕ್ಷ-ರಾತ್ರಿ'ಯನ್ನು ಆಚರಿಸುತ್ತಿದ್ದರೆಂದು ಯಶೋಧರ ಕೃತ 'ಕಾಮ ಸೂತ್ರ'ದ 'ಜಯಮಂಗಲೀ ಟೀಕಾ" ಗ್ರಂಥದಿಂದ ತಿಳಿದು ಬರುತ್ತದೆ. ಹೇಮಚಂದ್ರ ಕೃತ "ದೇಶೀ ನಾಮ-ಮಾಲಾ" ಕೋಶದಲ್ಲಿ 'ಯಕ್ಷ—ರಾತ್ರಿ'ಯ ಉಲ್ಲೇಖವಿದೆ. ದೀಪಾವಳಿಯಲ್ಲಿ ಲಕ್ಷ್ಮಿ ಪೂಜೆ ನಡೆಯುವಂತೆ, ಯಕ್ಷ ರಾತ್ರಿಯಲ್ಲಿ ಕುಬೇರನ ಪೂಜೆ ನಡೆಯುತ್ತಿತ್ತು. ಯಕ್ಷ ರಾತ್ರಿಗೆ "ಸುಖ ರಾತ್ರಿ' ಎಂಬ ಮತ್ತೊಂದು ಹೆಸರೂ ಇತ್ತು. ವರಾಹ ಪುರಾಣದ ಪ್ರಕಾರ ಯಕ್ಷ ರಾತ್ರಿಯ ಕಾರ್ತೀಕ ಶುಕ್ಲ ಪ್ರತಿಪದೆಗೆ ಆಚರಿಸುತ್ತಿದ್ದರು.

ಇಂದು ಕುಬೇರನ ಪೂಜೆಯೂ ಬಳಕೆಯಲ್ಲಿಲ್ಲ. ಕುಬೇರ ಧನಾಧಿಪತಿ ಎಂದು ನಾವು ಹೇಳಿಕೊಳ್ಳುವುದೂ ಇಲ್ಲ. ಇಂದು ಕುಬೇರ ಕೇವಲ ದಿಕ್ಪಾಲಕ

[ಹತ್ತನೇ ಪುಟ ನೋಡಿರಿ]

NAVAYUGA

Republic Day Issue 1967

"NAVAYUGA" established in 1921 by a nationalist leader of South India, Sri A. B Shetty proposes a sumptuous REPUBLIC DAY ISSUE on January 26, 1967 containing essays, skits and short stories by well-known authors of Karnataka.

"NAVAYUGA" has over these years earned a place in the heart of the masses on account of the high standard of journalism maintained by it in the national interest Our Republic Day Special has always been an event hailed by the people and also discriminating contemporaries.

Journals like "NAVAYUGA" perform a significant part in spreading the message of economic and industrial development among the people of the country. If democracy is to survive in India, it is necessary that a bridge of sympathy and understanding must be erected between the leaders on the one hand and the public on the other.

Successful salesmanship likewise depends on your goods and services being understood and their value appreciated by the consumer. The Republic Day Special of the "NAVAYUGA" is a fitting instrument to publicize your products in the wide countryside of Mysore State

Please permit us to serve you

ADVERTISEMENT RATES.

Full Page	... Rs 200/-	Back Cover Page	...Rs 500/-
Half Page	... Rs 100/-	Inside 1st Cover Page	...Rs 400/-
Quarter Page	... Rs. 50/-	Inside 2nd Cover Page	..Rs. 300/-

MECHANICAL DATA.

Paper Size	15 × 10"	Size of type page	.. 13" × 8"
	(37.5 Cm × 25 Cm)		(32.5 Cm × 20 Cm)

Date of Publication. 26—1—1967

Kindly send the advertisement matter to reach us on or before 10—1—1967.

Advt. Manager

Navayuga Weekly

Udipi, S. K.

ಹಸಿವಿನ ಪ್ರಶ್ನೆ

ವಿಶ್ವ ಸಂಸ್ಥೆಯು ಭೀಕರ ಹೋರಾಟಕ್ಕೆ ತೊಡಗಿದೆ

ಬರೆದವರು: ಶ್ರೀ ಸಿಡ್ರಿಕ್ ಡೇ.

ಹಸಿವು ಇಂದು ಮಾನವ ಜನಾಂಗವನ್ನು ಪೀಡಿಸುತ್ತಿದೆ. ವಿಶ್ವದ ಒಟ್ಟು ಜನ ಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚು ಜನ ಅಂದರೆ ಸರಿ ಸುಮಾರು ೧೫೦ ಕೋಟಿ ಜನರಿಗೆ ಹೊಟ್ಟೆತುಂಬ ಆಹಾರ ಸಿಗುತ್ತಿಲ್ಲ. ಇನ್ನುಳಿದ ೫೦ ಕೋಟಿ ಜನ ತಮ್ಮ ಜೀವಮಾನ ಪರ್ಯಂತ ಹಸಿವಿನಿಂದ ನರಳುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ವಿಶ್ವ ಆಹಾರ ಸಂಸ್ಥೆಯು, ಈ ಸಮಸ್ಯೆಯ ನಿವಾರಣೆಗೆ ಯಾವ ರೀತಿ ಯತ್ನಿಸುತ್ತಿದೆ ಎಂಬುದನ್ನು ವಿವರಿಸಲಾಗಿದೆ.

ದ್ವಿತೀಯ ವಿಶ್ವ ಸಮರದ ನಂತರ ಎರಡು ದಶಕಗಳು ಕಳೆದಿವೆ. ಈ ಅವಧಿಯು ಎರಡು ಕಾರಣಗಳಿಂದಾಗಿ ವೈಶಿಷ್ಟ್ಯಪೂರ್ಣವಾಗಿದೆಯೆಂದು ಹೇಳಬಹುದು. ಮೊದಲನೆಯದು, ಈ ಅವಧಿಯಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಸಹಕಾರ ಅಭಿವೃದ್ಧಿಗೊಂಡಿತು. ಎರಡನೆಯದು, ಮಾನವ ಜನಾಂಗದ ಸ್ಥಿತಿ-ಗತಿಗಳ ಸುಧಾರಣೆಗೆ ಈ ಅವಧಿಯಲ್ಲಿ ಯತ್ನಗಳು ಆರಂಭವಾದವು.

ರಾಷ್ಟ್ರ—ರಾಷ್ಟ್ರಗಳ ನಡುವೆ ರಾಜಕೀಯ ಹಾಗೂ ತಾತ್ವಿಕ ಭಿನ್ನಾಭಿಪ್ರಾಯಗಳು ಎಷ್ಟೇ ತೀವ್ರವಾಗಿದ್ದರೂ—ಅವು ಮಾನವ ಜನಾಂಗದ ನಿತ್ಯಜೀವನದ ಮೇಲೆ ಪ್ರಭಾವ ಬೀರಬಹುದಾದ ಕ್ಷೇತ್ರಗಳಲ್ಲಿ ಮಾತ್ರ ಸದಾ ಸಹಕರಿಸುತ್ತಲೇ ಬಂದಿವೆ. ಆರೋಗ್ಯ; ಶಿಕ್ಷಣ ಮತ್ತು ಮಕ್ಕಳ ಹಿತರಕ್ಷಣೆ ಇವೇ ಮೊದಲಾದ ಕ್ಷೇತ್ರಗಳಲ್ಲಿ ಈ ಸಹಕಾರವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯಲ್ಲಿರುವ ನಾವು ಆಹಾರ ಪರಿಸ್ಥಿತಿಯನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದೇವೆ. ವಿಶ್ವದಲ್ಲಿ ಹಸಿವಿನ ಸಮಸ್ಯೆ ಹೆಚ್ಚು ಹೆಚ್ಚು ಅನುಭವಕ್ಕೆ ಬರುತೊಡಗಿದೆ ಅದಕ್ಕೆ ಸಾಕಷ್ಟು ನಿದರ್ಶನಗಳೂ ಇವೆ. ಈ ಸಮಸ್ಯೆಯ ನಿವಾರಣೆಗೆ ಏನು ಉಪಾಯ? ಹಸಿವಿನ ಸವಾಲನ್ನು ಎದುರಿಸಲು ಈಗ ವಿಶ್ವವ್ಯಾಪೀ ಪ್ರಮಾಣದಲ್ಲಿ ಯತ್ನಗಳು ನಡೆಯಬೇಕಾಗಿದೆ. ಏಕೆಂದರೆ ಇಂತಹ ಯತ್ನಗಳಿಂದ ಮಾತ್ರವೇ ಸಮಸ್ಯೆಯು ಪರಿಹಾರ ಮಾರ್ಗ ಗೋಚರಿಸಬಲ್ಲುದು.

ಭಾರತದಲ್ಲಿ, ಹಸಿವಿನ ಸಮಸ್ಯೆ ತೀವ್ರಗೊಂಡಿದೆ ಆಫ್ರಿಕ ಮತ್ತಿತರ ಕಡೆಗಳಲ್ಲಿ ಈ ಸಮಸ್ಯೆಯು ಉಗ್ರರೂಪ ತಾಳಿದೆ. ಇಂತಹ ಒಂದು ಪ್ರಸಂಗದಲ್ಲಿ ಹಸಿವಿನ ನಿವಾರಣೆಗಾಗಿ ನಮ್ಮ ಹೋರಾಟವನ್ನು ತ್ವರಿತಗೊಳಿಸಬೇಕಾಗಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಬೇಸಾಯ ಸಂಸ್ಥೆಯ ಡೈರೆಕ್ಟರ್ ಜನರಲ್ ಡಾ। ಬಿ. ಆರ್. ಸೇನ್ ಅವರು ಫೆಬ್ರವರಿ ೧೧ರಂದು ಭಾರತದ ಆಹಾರ ಕೊರತೆಯನ್ನು ನೀಗಿಸಲು ನೆರವಾಗಬೇಕೆಂದು ಮನವಿ ಮಾಡಿಕೊಂಡರು. ಈ ಮನವಿಗೆ ವಿಶ್ವದ ವಿವಿಧ ರಾಷ್ಟ್ರಗಳಿಂದ ದೊರೆತ ಪ್ರತಿಕ್ರಿಯೆ ಆಶಾದಾಯಕವಾಗಿದೆ. ವಿಶ್ವವು ಹಸಿವಿನ ಸಮಸ್ಯೆಯನ್ನು ನಿವಾರಿಸಲು ಸಂಕಲ್ಪ ಮಾಡಿದೆ ಎಂಬುದನ್ನು ಇದು ಸ್ಪಷ್ಟಗೊಳಿಸಿದೆ.

"ಹಸಿವಿನಿಂದ ವಿಮೋಚನೆ" ಚಳುವಳಿಯು ಆರಂಭವಾದದ್ದು ೧೯೬೦ರಲ್ಲಿ ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯ ಡೈರೆಕ್ಟರ್ ಜನರಲ್‌ರು ಆರಂಭಿಸಿದ ಈ ಚಳುವಳಿಯು ಅಂತಾರಾಷ್ಟ್ರೀಯ ಸಹಕಾರದ ಒಂದು ಅತ್ಯುತ್ತಮ ಉದಾಹರಣೆ ಎಂದು ಹೇಳಬಹುದು. ಮಾನವ ಜನಾಂಗಕ್ಕೆ ಪುಷ್ಟಿಕರ ಆಹಾರವನ್ನು ಒದಗಿಸುವುದು ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯ ಮುಖ್ಯ ಗುರಿ. ಈ ಚಳುವಳಿಯು ಸಂಸ್ಥೆಯ ಈ ಆಶಯವನ್ನೇ ಮತ್ತೆ ದೃಢೀಕರಿಸಿದೆ.

ಹಸಿದ ಜನ ಕೋಟಿ

ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯು ಹಸಿವಿನ ವಿರುದ್ಧ ಆರಂಭಿಸಿರುವ ಚಳುವಳಿಗೆ ವಿಶ್ವಸಂಸ್ಥೆಯ ೧೧೦ ಸದಸ್ಯ ರಾಷ್ಟ್ರಗಳ ಬೆಂಬಲ ಪಡೆದಿದೆ. ಜೊತೆಗೆ ವಿಶ್ವ ಸಂಸ್ಥೆಯ ಅಧೀನದಲ್ಲಿರುವ ವಿಶಿಷ್ಟ ಸಂಸ್ಥೆಗಳು ಸಹಾಯ ಸಹಕಾರಗಳನ್ನು ನೀಡುತ್ತಿವೆ. ಜನರು ವೈಯಕ್ತಿಕವಾಗಿ ಮತ್ತು ಸಾಂಘಿಕವಾಗಿ ಈ ಚಳವಳಿಗೆ ಬೆಂಬಲ ನೀಡಲು ಮುಂದೆ ಬರುತ್ತಿದ್ದಾರೆ ಫಲ ಸ್ವರೂಪವಾಗಿ ವಿಶ್ವವು ಜನರು ಹಸಿವಿನ ವಾಸ್ತವತೆಯನ್ನು ಮತ್ತು ಅದು ಮಾನವ ಜನಾಂಗಕ್ಕೆ ಹಾಕಿರುವ ಸವಾಲನ್ನು ಈಗ ಹೆಚ್ಚು ಸ್ಪಷ್ಟವಾಗಿ ಅರಿತುಕೊಂಡಿದ್ದಾರೆ. ವಿಶ್ವದಲ್ಲಿ ಇಂದು ಹೊಟ್ಟೆ ತುಂಬಾ ಊಟ ಮಾಡುವವರ, ಪುಷ್ಟಿಕರವಾದ ಆಹಾರವನ್ನು ಸೇವಿಸುವವರ ಸಂಖ್ಯೆ ಅತ್ಯಲ್ಪವಿದೆ ಎಂಬುದನ್ನು ಅವರು ಬಲ್ಲವರಾಗಿದ್ದಾರೆ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಅಂದರೆ ೩೦೦ ಕೋಟಿಗೂ ಹೆಚ್ಚು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರಿಗೆ, ಊಟ ಮಾಡಲು ಸಾಕಷ್ಟು ಆಹಾರವಿಲ್ಲ ಮತ್ತೆ ಇನ್ನು ೫೦ ಕೋಟಿ ಜನ ಜೀವಮಾನದುದ್ದಕ್ಕೂ ಹಸಿವಿನಿಂದ ಬಳಲುತ್ತಿದ್ದಾರೆ. ಮಾನವ ಜನಾಂಗಕ್ಕೆ ಬಂದೊದಗಿರುವ ಈ ವಿಪತ್ತು ಭೀಕರವೇ ಸರಿ. ನಾವು ಜನಸಂಖ್ಯೆಯ ಹೆಚ್ಚಳಕ್ಕೆ ತಕ್ಕಂತೆ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಸಕಾಲದಲ್ಲಿ ಯತ್ನಿಸದಿದ್ದರೆ ನಮ್ಮ ಪರಿಸ್ಥಿತಿ ಇನ್ನಷ್ಟು ಚಿಂತಾಜನಕವಾಗುತ್ತದೆ.

ವಿಶ್ವದ ಜನಸಂಖ್ಯೆಯು ಈಗಿನ ಪ್ರಮಾಣದಲ್ಲೇ ಹೆಚ್ಚುತ್ತ ನಡೆದರೆ, ಮುಂದಿನ ೩೫ ವರ್ಷಗಳಲ್ಲಿ ಜನಸಂಖ್ಯೆ ೭೦೦ ಕೋಟಿ ಆಗುತ್ತದೆ. ಅಂದರೆ ಈಗಿನದರ ಸುಮಾರ ಎರಡರಷ್ಟು. ನಾವು ಈ ಅವಧಿಯಲ್ಲಿ ನಮ್ಮ ಬೇಸಾಯ ಉತ್ಪಾದನೆಯನ್ನು ಎರಡರಷ್ಟು ಹೆಚ್ಚಿಸಿವೆವು ಎಂದು ಇಟ್ಟುಕೊಳ್ಳೋಣ. ಆಗ ಹಸಿವಿನ ಸಮಸ್ಯೆ ಬಗೆ ಹರಿಯುತ್ತದೆಯೆ? ಇಲ್ಲ ಏಕೆಂದರೆ ಆಗಲೂ ಸಹ ೩೫೦ ಕೋಟಿಗೂ ಹೆಚ್ಚು ಜನರಿಗೆ ಉಣ್ಣಲು ಸಾಕಷ್ಟು ಆಹಾರ ದೊರೆಯುವುದಿಲ್ಲ. ಕ್ರಿ. ಶ. ೨೦೦೦ ಹೊತ್ತಿಗೆ ನಾವು ನಮ್ಮ ಎಲ್ಲ ಜನರಿಗೆ ಪೌಷ್ಟಿಕ ಆಹಾರವನ್ನು ಒದಗಿಸಲು, ನಮ್ಮ ಆಹಾರ ಉತ್ಪಾದನೆಯನ್ನು ಮೂರರಿಂದ ನಾಲ್ಕರಷ್ಟು ಹೆಚ್ಚಿಸಬೇಕಾಗುತ್ತದೆ.

ಭವಿಷತ್ತು ಭಯಾನಕವಾಗಿದೆ. ಆದರೂ ಹಸಿವಿನ ಭೀಕರ ಸ್ವರೂಪವನ್ನು ಜನ ಬೇಗ ಅರ್ಥಮಾಡಿಕೊಂಡು ಆಹಾರ ಉತ್ಪಾದನೆ ಅಭಿವೃದ್ಧಿಗೆ ಸಾಮೂಹಿಕ ಯತ್ನ ಕೈಗೊಂಡರೆ, ಈ ಹೋರಾಟದಲ್ಲಿ ಯಶಸ್ಸುಗಳಿಸಲು ಸಾಧ್ಯ. "ಹಸಿವಿನಿಂದ ವಿಮೋಚನೆ" ಚಳುವಳಿಯ ಮುಖ್ಯ ಗುರಿ ಕೂಡಾ ಇದೇ ಆಗಿದೆ.

ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯ ಡೈರೆಕ್ಟರ್ ಡಾ। ಬಿ. ಆರ್. ಸೇನ ಅವರು ಹಸಿವಿನ ಸಮಸ್ಯೆಯ ಬಗ್ಗೆ ವಿಶ್ವದ ಜನತೆಗೆ ಆಗಾಗ್ಗೆ ಎಚ್ಚರಿಕೆ ನೀಡುತ್ತಲೇ ಬಂದಿದ್ದಾರೆ. ಹಸಿವಿನ ಸಮಸ್ಯೆಯ ಭಯಾನಕ ಸ್ವರೂಪವನ್ನು ಜನರಿಗೆ ವಿವರಿಸಿ, ಸಾಮೂಹಿಕ ತಳಹದಿಯ ಮೇಲೆ ಈ ಸವಾಲನ್ನು ಎದುರಿಸಲು ಅವರನ್ನು ಸಿದ್ಧಗೊಳಿಸುವುದೇ ಡಾ। ಸೇನ್ ಅವರ ಉದ್ದೇಶವಾಗಿದೆ. ಆಹಾರ ಸಮಸ್ಯೆಯ ತೀವ್ರತೆ, ಈಗ ಬಹುತೇಕ ಜನರಿಗೆ ಮನವರಿಕೆಯಾಗಿದೆ. ಆದರೆ ಈ ಸಮಸ್ಯೆಯ ನಿವಾರಣೆಗೆ ವಿಶ್ವವ್ಯಾಪಿ ಕ್ರಮಗಳನ್ನು ಇನ್ನು ಕೈಗೊಳ್ಳಬೇಕಾಗಿದೆ.

ಆರ್ಥಿಕ ಅಭಿವೃದ್ಧಿಗಾಗಿ ಆಹಾರ

ಈವರೆಗೆ ಆಹಾರ ಸಮಸ್ಯೆಯನ್ನು ಕುರಿತು ಹೇಳಿದ್ದಾಯಿತು ಇನ್ನು ಈ ಸಮಸ್ಯೆಯ ನಿವಾರಣೆಗೆ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಇಲ್ಲಿ ಗಮನಿಸೋಣ. ಅಭಿವೃದ್ಧಿಹೊಂದಿದ ರಾಷ್ಟ್ರಗಳು ಹಸಿವಿನಿಂದ ವಿಮೋಚನೆ ಪಡೆಯಲು ಅನೇಕ ಮಹತ್ವಪೂರ್ಣ ಕಾರ್ಯಕ್ರಮಗಳನ್ನೂ ಕಾರ್ಯ ಯೋಜನೆಗಳನ್ನೂ ಕೈಗೊಂಡಿವೆ. ಈ ಯೋಜನೆಗಳನ್ನು ಸ್ವಸಹಾಯದಿಂದ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಷ್ಟ್ರಗಳ ನೆರವಿನಿಂದ ಕೈಗೊಂಡಿವೆ. ಕೊಲಂಬೋ ಯೋಜನೆ ಮತ್ತು ವಿ



ವಿಯಟ್ನಾಮನ್ನೊಳಗೊಂಡು ಏಶ್ಯ ಮತ್ತು ಶಾಂತ ಸಾಗರ ಪ್ರದೇಶದಲ್ಲಿ ಶಾಂತಿ—ಸ್ವಾತಂತ್ರ್ಯಾದಿಗಳ ಆವಶ್ಯಕತೆಗಳನ್ನು ಪರ್ಯಾಲೋಚಿಸಲು ಸೇರಿದ ಮನಿಲಾ ಸಮ್ಮೇಳನ. ಇದರಲ್ಲಿ ಅಮೆರಿಕನ್ ಅಧ್ಯಕ್ಷ ಜಾನ್ಸನ್ನರೂ ಭಾಗವಹಿಸಿದ್ದರು.

ಆಹಾರ ಮತ್ತು ಬೇಸಾಯ ಸಂಸ್ಥೆ ದ ಅಧೀನ ಸಂಸ್ಥೆಗಳು ಮತ್ತು ವಿಶ್ವ ಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಕಟ್ಟಿನಲ್ಲಿ ಈ ರಾಷ್ಟ್ರಗಳು ಅಭಿವೃದ್ಧಿ ನೆರವನ್ನು ಪಡೆಯುತ್ತಿದೆ. ವಿಶ್ವಸಂಸ್ಥೆ ಯ ವಿಶೇಷ ನಿಧಿ ಸಂಸ್ಥೆಗಳೂ ಕೆಲವು ಇ ವೆ. ಇವುಗಳ ಮುಖ್ಯ ಉದ್ದೇಶ ಬೇಸಾಯದ ಸುಧಾರಣೆ.

ವಿಶ್ವ ಆಹಾರ ಅಭಿವೃದ್ಧಿ ಕಾರ್ಯಕ್ರಮದ ಮೇರೆಗೆ ಆಹಾರ ಅಭಿವೃದ್ಧಿಗಾ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಲಾಗಿದೆ. ಅಣೆಕಟ್ಟುಗಳಲ್ಲಿ ಕಾರ್ಯ ನಿರತರಾದ ಶ್ರಮಿಕರಿಗೆ, ಮತ್ತಿತರ ಇತರ ಕಾರ್ಯಯೋಜನೆಗಳಲ್ಲಿ ದುಡಿಯುವ ಸಹಸ್ರಾರು ಜನರಿಗೆ ಆಹಾರ ಪೂರೈಸಲಾಗುತ್ತಿದೆ. ಆಹಾರ ಪೂರೈಕೆಯ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸುವುದೇ ವಿಶ್ವ ಆಹಾರ ಕಾರ್ಯಕ್ರಮದ ಮುಖ್ಯ ಉದ್ದೇಶ.

ವಿಶ್ವ ಆಹಾರ ಹಾಗೂ ಬೇಸಾಯ ಸಂಸ್ಥೆ ಮತ್ತು ಅಂತಾರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕ್‌ನವರು ಇತ್ತೀಚೆಗೆ ಸಂಯುಕ್ತವಾಗಿ ಕಾರ್ಯಯೋಜನೆಯೊಂದನ್ನು ಕೈಗೊಂಡಿದ್ದಾರೆ. ಈ ಕಾರ್ಯಯೋಜನೆಯನ್ವಯ ಬೇಸಾಯ ಕ್ಷೇತ್ರದಲ್ಲಿ ಸೂಕ್ತವಾದ ಕಡೆಗಳಲ್ಲೆಲ್ಲಾ ಹೆಚ್ಚು ಬಂಡವಾಳವನ್ನು ತೊಡಗಿಸಿ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಯತ್ನಿಸಲಾಗುತ್ತಿದೆ. ವಿಶ್ವ ಆಹಾರ ಹಾಗೂ ಬೇಸಾಯ ಸಂಸ್ಥೆಯ ಕೈಗಾರಿಕಾ ಸಹಕಾರಿ ಕಾರ್ಯಕ್ರಮವು ಈ ದಿಸೆಯಲ್ಲಿ ಒಂದು ಹೊಸ ಸಂಶೋಧನೆಯೆಂದೂ ಹೇಳಬಹುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನ ಬೇಸಾಯ ಪ್ರಧಾನವಾದ ಕೈಗಾರಿಕೆಗಳಿಗೆ ವಿದೇಶಗಳಿಂದ ಹೆಚ್ಚು ಬಂಡವಾಳವನ್ನು ಆಕರ್ಷಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ.

"ಹಸಿವಿನಿಂದ ವಿಮೋಚನೆ" ಚಳುವಳಿಯ ಅಂಗವಾಗಿ, ವಿಶ್ವದ ಅನೇಕ ಕಡೆಗಳಲ್ಲಿ ನೂರಾರು ಕಾರ್ಯ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಭಾರತದಲ್ಲಿ ಇದುವರೆಗೆ ಅನೇಕ ಕಾರ್ಯ ಯೋಜನೆಗಳಿವೆ. ಕ್ಷಾಮ ಪರಿಹಾರ ಸಂಬಂಧದ ಆಕ್ಸ್‌ಫರ್ಡ್ ಸಮಿತಿಯವರು ಗುಜರಾತಿನ ಆನಂದ್ ಬಳಿಯಲ್ಲಿ ಸ್ಥಾಪಿಸಿರುವ ಪಶುಗಳ ಆಹಾರ ತಯಾರಿಕ ಕಾರ್ಖಾನೆ, ಮತ್ತು ಮೈಸೂರಿನಲ್ಲಿರುವ ವಿಜ್ಞಾನ ಹಾಗೂ ಆಹಾರ ಸಂಬಂಧವಾದ ಪ್ರಾದೇಶಿಕ ತರಬೇತಿ ಕೇಂದ್ರ, ಉತ್ತರ ಪ್ರದೇಶದ ಬಾಬುಗರ್ ಕೋಳಿ ಅಭಿವೃದ್ಧಿ ಫಾರಂಗಳು ಈ ಕಾರ್ಯಯೋಜನೆಗಳಲ್ಲಿ ಮುಖ್ಯವಾಗಿವೆ. ಕೂನಯ ಎರಡು ಕಾರ್ಯ ಯೋಜನೆಗಳಿಗೆ, ಕೆನಡಾ ಮತ್ತು ಆಸ್ಟ್ರೇಲಿಯಾಗಳ ಹಸಿವಿನಿಂದ ವಿಮೋಚನಾ ಆಂದೋಲನದ ಸಮಿತಿಗಳು ಮತ್ತು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಕುಡಿಯುವ ನೀರು ಪೂರೈಕೆ ಯೋಜನೆಗೆ ಫಿನ್‌ಲೆಂಡಿನ 'ಹಸಿವಿನಿಂದ ವಿಮೋಚನಾ' ಚಳುವಳಿಯ ಸಮಿತಿಯು ಸಹಾಯ ನೀಡಿವೆ.

ಈ ಸಹಾಯದ ಜೊತೆಗೆ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ನೆರವು ಪಡೆಯುವ ಒಂಭತ್ತು ಕಾರ್ಯಯೋಜನೆಗಳೂ ಇವೆ. ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯ ಉಸ್ತುವಾರಿಯಲ್ಲಿ ನಡೆಯುತ್ತಿರುವ ಈ ಕಾರ್ಯಯೋಜನೆಗಳಿಗೆ ರೂ. ೫೫೦ ಲಕ್ಷ ಕೋಟಿ ವೆಚ್ಚ ತಗಲಿದೆ. ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯು ಭಾರತಕ್ಕೆ ಇದಲ್ಲದೆ ಇನ್ನೂ ಅನೇಕ ರೀತಿಯಲ್ಲಿ ನೆರವಾಗುತ್ತಿದೆ. ಈ ಸಂಸ್ಥೆಯು ತನ್ನ ನಿತ್ಯದ ಕಾರ್ಯಕ್ರಮದ ಪ್ರಕಾರ ಸಭೆಗಳನ್ನು ವಿಚಾರಗೋಷ್ಠಿಗಳನ್ನು ಮತ್ತು ಕಾರ್ಯಾಧ್ಯಯನವನ್ನು ವ್ಯವಸ್ಥೆಗೊಳಿಸುತ್ತಿದೆ. ಈ ರಿಪೋರ್ಟುಗಳನ್ನು ಅಂಕಿ—ಅಂಶಗಳ ವಿಶ್ಲೇಷಣೆಯ ವಸ್ತುಗಳ ವಿಷಯಕ ಅಧ್ಯಯನ, ಮತ್ತು ವರದಿಗಳನ್ನು ಪೂರೈಸುತ್ತಿದೆ.

ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಮೇರೆಗೆ ವಿಶ್ವ ಆಹಾರ ಮತ್ತು ಬೇಸಾಯ ಸಂಸ್ಥೆಯು ೧೯೬೭—೬೮ನೇ ಸಾಲಿನಲ್ಲಿ ವಿವಿಧ ಕಾರ್ಯಯೋಜನೆಗಳಿಗೆ ೫೦ ಜನ ತಂತ್ರಜ್ಞರ ಸೇವೆಯನ್ನು ಒದಗಿಸಲಿವೆ. ಈ ಕಾರ್ಯಕ್ಕೆ ೧.೩ ಲಕ್ಷ ಡಾಲರ್‌ಗಳ ವೆಚ್ಚ ತಗಲುವುದು. ಇದಲ್ಲದೆ ಈ ಸಂಸ್ಥೆಯು ಯುನಿಸೆಫ್ ಮತ್ತು ವಿಶ್ವ ಆರೋಗ್ಯ ಸಂಸ್ಥೆಗಳೊಂದಿನ ಜಂಟಿ ಕಾರ್ಯಕ್ರಮದ ಪ್ರಕಾರ ಭಾರತ ಸರ್ಕಾರದ ಪೌಷ್ಟಿಕ ಆಹಾರ ಕಾರ್ಯಕ್ರಮದಲ್ಲಿ ೧೧ ಜನ ವಿದೇಶಿ ತಜ್ಞರು ಸೇವೆ ಸಲ್ಲಿಸುತ್ತಿದ್ದಾರೆ.

ಯುವಜನರ ಪಾತ್ರ

ವಿಶ್ವದಲ್ಲಿ ಆಹಾರ ಸಮಸ್ಯೆಯನ್ನು ಬಗೆಹರಿಸಲು ಸಾರ್ವಜನಿಕ ಬೆಂಬಲ ಗಳಿಸುವ ಯತ್ನಕ್ಕೆ ಈಗ ಹೆಚ್ಚು ಗಮನ ದೊರಕುತ್ತಿದೆ. ಆಹಾರ ಉತ್ಪಾದನೆಯ ಅಭಿವೃದ್ಧಿಗಾಗಿ ವಿಶ್ವದ ಯುವಜನಾಂಗ ಹೆಚ್ಚು ಕ್ರಿಯಾಶೀಲ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಭಾರತದ ಆಹಾರ ಸಮಸ್ಯೆ ಕ್ಲಿಷ್ಟವಾಗಿದೆ. ಸರ್ಕಾರ ಹಾಗೂ ಜನತೆ ಈ ಸಮಸ್ಯೆಯನ್ನು ಬಗೆಹರಿಸಲು ಶಕ್ತಿ ಮೀರಿ ಯತ್ನಿಸುತ್ತಿದ್ದಾರೆ. ಈ ಒಂದು ನಿರ್ಣಾಯಕ ಹೋರಾಟದಲ್ಲಿ, ಭಾರತದ ಯುವಕರು ಮಹತ್ವಪೂರ್ಣ ಪಾತ್ರ ನಿರ್ವಹಿಸಬೇಕಾಗಿದೆ. ಭಾರತದ ಯುವಕರು "ಹಸಿವಿನಿಂದ ವಿಮೋಚನಾ" ಸಮಿತಿಯ ಕರೆಗೆ ಓಗೊಟ್ಟು ಆಹಾರ ಸಮಸ್ಯೆಗೆ ನಿವಾರಣೆಗೆ ಶ್ರದ್ಧೆ ಹಾಗೂ ಉತ್ಸಾಹಗಳಿಂದ ಯತ್ನಿಸಬೇಕು. ಇಂತಹ ಒಂದು ಪ್ರತಿಕ್ರಿಯೆ ಹಾಗೂ ಪ್ರಜ್ಞೆಯು ಐತಿಹಾಸಿಕ ಬದಲಾವಣೆಯನ್ನು ತರಬಲ್ಲುದು.



ಪ್ರಪಂಚದಲ್ಲಿಯೇ ಹಿರಿದಾದ ವಿಮಾನ "ಸೂಪರ್ ಗುಪ್ಪಿ"

ಮೆಲ್ಬೋರ್ನಿನ ಜನಸಮುದ್ರ ಅಧ್ಯಕ್ಷ ಜಾನ್ಸನ್ನರನ್ನು ಹಾರ್ದಿಕವಾಗಿ ಸ್ವಾಗತಿಸಿದ ಸನ್ನಿವೇಶ (ಆಸ್ಟ್ರೇಲಿಯಾ ಸಂದರ್ಶನದ ವೇಳೆ)

"ಹಾಗಾದರೇನೇ! ಈ ರೂ. 10ರ ನೋಟು ನಮ್ಮ ರಾಮುಗೆ ಸಿಗದ ಹಾಗೆ ಎಲ್ಲಿ ಇರಿಸೋದು?.... ಕಂಡರೆ ಅತ ಅದನ್ನು ಚಾರಿಸದೆ ಬಿಡ .."

'ಅದಕ್ಕೇನು?....ಅತನ ಚೀಲದಲ್ಲಿ ಗಣಿತ ಪುಸ್ತಕದ ಯಾವುದಾದರೂ ಪುಟಗಳೆಡೆಯಲ್ಲಿರಿಸಿದರಾಯ್ತು....'

ಓದಿ ಚತುರ

ಶಿಕ್ಷಣ ಕ್ಷೇತ್ರ

ಇಲ್ಲಿ ನಾವು ಅಂಬೆಗಾಲಿಕ್ಕುತ್ತಿದ್ದೇವೆ

ಸೋವಿಯತ್ತಿನಲ್ಲಿ ದೊರೆಯುವ ಸೌಲಭ್ಯ ನಮ್ಮ ದೇಶದಲ್ಲಿ ದೊರೆಯಲು ಎಷ್ಟು ತಲೆಮಾರು ಕಳೆಯಬೇಕು?

ಶಾಲಾಪೂರ್ವ ಸಂಸ್ಥೆಗಳು, ಸಾಮಾನ್ಯ ಶೈಕ್ಷಣಿಕ ಶಾಲೆಗಳು (ಬೋರ್ಡಿಂಗ್ ಶಾಲೆಗಳು, ವೃತ್ತಿ ಶಾಲೆಗಳು ಹಾಗೂ ಮತ್ತಿನ್ನಿತರ ಬಗೆಯ ಶಾಲೆಗಳೂ ಸೇರಿಕೊಂಡು), ವಿಶೇಷೀಕೃತ ಸೆಕೆಂಡರಿ ಹಾಗೂ ಹೈಯರ್ ಶಾಲೆಗಳು ಇವೆಲ್ಲವೂ ಸೋವಿಯೆತ್ ಒಕ್ಕೂಟದ ಏಕೈಕ ಶಿಕ್ಷಣ ವ್ಯವಸ್ಥೆಯಲ್ಲಿ ಅಡಕವಾಗಿದ್ದು ಪ್ರತಿಯೊಂದು ವರ್ಷವೂ ಶೈಕ್ಷಣಿಕ ಮತ್ತು ಜೀವನಾನುಭವಗಳ ಸಂಚಯನದಿಂದ ಇದನ್ನು ಸುಧಾರಿಸುತ್ತಲೇ ಇರುತ್ತದೆ.

ಸೋವಿಯತ್ ದೇಶದಲ್ಲಿ ಖಾಸಗೀ ಶಾಲೆಗಳಿಲ್ಲ. ಎಲ್ಲ ಶಾಲೆಗಳೂ ಪ್ರಭುತ್ವ ನಿಯಂತ್ರಣದಲ್ಲೇ ಇವೆ. ಶೈಕ್ಷಣಿಕ ಸಂಸ್ಥೆಗಳು ಧಾರ್ಮಿಕ ಮತಗಳಿಂದ ಸಂಪೂರ್ಣ ಪ್ರತ್ಯೇಕವಾಗಿವೆ. ಜನಾಂಗೀಯ ಅಥವಾ ಧಾರ್ಮಿಕ ಅಥವಾ ಲಿಂಗಭೇದ ಮುಂತಾದ ಯಾವ ತಾರತಮ್ಯಗಳೂ ಇಲ್ಲ. ಎಲ್ಲ ಸೋವಿಯೆತ್ ಗಣರಾಜ್ಯಗಳಲ್ಲೂ ಮಕ್ಕಳು ತಮ್ಮ ಪಾಲಕರ ಅಪೇಕ್ಷೆಯ ಮೇರೆಗೆ ತಮ್ಮ ತಾಯ್ನುಡಿಯಲ್ಲಿ ಅಥವಾ ರಶ್ಯನ್ ಭಾಷೆಯಲ್ಲಿ ಶಿಕ್ಷಣ ಪಡೆಯುತ್ತವೆ. ಸೋವಿಯೆತ್ ಒಕ್ಕೂಟದಲ್ಲಿ ಒಟ್ಟು ೬೬ ಭಾಷೆಗಳಲ್ಲಿ ಶಿಕ್ಷಣವು ನಡೆಯುತ್ತದೆ.

ಸೋವಿಯೆತ್ ಒಕ್ಕೂಟದಲ್ಲಿ ಸೆಕೆಂಡರಿ ಶಿಕ್ಷಣವು ಎರಡು ಹಂತಗಳಾಗಿ ವಿಂಗಡಿಸಲ್ಪಟ್ಟಿದೆ. ಮೊದಲನೆಯದು ಅಪೂರ್ಣ ಎಂಟು ವರ್ಷಗಳ ಸೆಕೆಂಡರಿ ಶಿಕ್ಷಣ. ಇದು ೧೫—೧೬ ವರ್ಷದ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿದೆ. ಇದನ್ನು ಮುಗಿಸಿದ ಬಳಿಕ ಯಾರೂ ಸಂಪೂರ್ಣ ಸೆಕೆಂಡರಿ ಸಾರ್ವತ್ರಿಕ ಶೈಕ್ಷಣಿಕ ಶಾಲೆಗಳಲ್ಲಿ ಶಿಕ್ಷಣವನ್ನು ಮುಂದುವರಿಸಬಹುದು.

ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೆ ಬೋಧನ ವಿದ್ಯಾ ಮಂದಿರಗಳಲ್ಲಿ ಶಿಕ್ಷಣ ನೀಡಲಾಗುವುದು. ಇಂಥ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿರಲೇ ಬೇಕು. ಮೇಲ್ತರಗತಿಗಳಲ್ಲಿ ಪಾಠ ಮಾಡುವ ಅಧ್ಯಾಪಕರು ಕಾಲೇಜುಗಳಿಂದ, ಶಿಕ್ಷಕರ ತರಬೇತು ಕೇಂದ್ರಗಳಿಂದ ಮತ್ತು ವಿಶ್ವವಿದ್ಯಾಲಯಗಳಿಂದ ತೇರ್ಗಡೆಯಾದವರಾಗುತ್ತಾರೆ. ಅಧ್ಯಾಪಕರ ಜ್ಞಾನ ಮಟ್ಟದ ವಿಕಾಸಕ್ಕೆ ಬಹಳಷ್ಟು ಗಮನ ಕೊಡಲಾಗುತ್ತಿದೆ. ದೇಶದಲ್ಲಿ ನಾನಾ ರೀತಿಯ ಶೈಕ್ಷಣಿಕ ಸಾಹಿತ್ಯದ ಪತ್ರಿಕೆಗಳೂ ನಿಯತಕಾಲಿಕಗಳೂ ಪ್ರಕಟವಾಗುತ್ತಿವೆ.

ಬೋರ್ಡಿಂಗ್ ಶಾಲೆಗಳ ಮುಖ್ಯ ಗುರಿ ಉದಯೋನ್ಮುಖ ಪೀಳಿಗೆಯನ್ನು ಅತ್ಯುತ್ತಮ ಸ್ಥಿತಿಗತಿಗಳಲ್ಲಿ ಬೆಳೆಸುವುದು. ಸೋವಿಯೆತ್ ಜನರ ಅಭಿಪ್ರಾಯದಲ್ಲಿ ಸಾರ್ವಜನಿಕ ಮತ್ತು ಕೌಟುಂಬಿಕ ಪೋಷಣೆಯ ಎಲ್ಲ ಹಿತಕರ ಅಂಶಗಳನ್ನೂ ಈ ಸ್ಥಿತಿಗತಿಗಳು ಒಳಗೊಂಡಿರಬೇಕು. ಇಂಥ ಶಾಲೆಗಳು ಉತ್ಪಾದನ ಕಾರ್ಯದೊಂದಿಗೆ ಶಿಕ್ಷಣವನ್ನು ಸಮ್ಮಿಳಿತಗೊಳಿಸಿ ಯಶಸ್ವಿಯಾಗಿ ಬೆಳೆಯುವಂಥ ಮಹತ್ ಸಾಧ್ಯತೆಗಳನ್ನು ತೆರೆಯುತ್ತಿವೆ.

ಶಿಕ್ಷಣದಲ್ಲಿ ವಿವಿಧ ಕಲೆಗಳು

ಶಿಕ್ಷಣದಲ್ಲಿ ವಿವಿಧ ಕಲೆಗಳನ್ನು ಅಡಕಗೊಳಿಸುವಿಕೆಯನ್ನು ಆಧುನಿಕ ಉತ್ಪತ್ತಿ ವಿಕಾಸದ ಮಟ್ಟವೇ ನಿರ್ಧರಿಸುತ್ತದೆ. ಇವುಗಳಲ್ಲಿ ವಿದ್ಯುಚ್ಛಕ್ತಿ, ಉಷ್ಣ ವಿದ್ಯುಚ್ಛಕ್ತಿ ಮತ್ತು ಯಾಂತ್ರಿಕ ಶಕ್ತಿಗಳಿಗೆ (ಒಂದಿಲ್ಲೊಂದು ರೂಪದಲ್ಲಿ) ಆದ್ಯ ಸ್ಥಾನ ದೊರೆಯುತ್ತದೆ. ಅಂತೆಯೆ ವಿವಿಧ ಕಲಾ ಶಿಕ್ಷಣವು ಈ ಮೂರು ಬಗೆಯ ಶಕ್ತಿಗಳ ಮೂಲಜ್ಞಾನ ಹಾಗೂ ಇವುಗಳನ್ನು ಬಳಸುವ ಪ್ರತ್ಯಕ್ಷ ತಿಳವಳಿಕೆಗಳನ್ನು ಒಳಗೊಂಡಿರುತ್ತದೆ.

ಯಂತ್ರಗಳಿಲ್ಲದೆ ಆಧುನಿಕ ಉತ್ಪತ್ತಿ ವಿಧಾನವನ್ನು ಯಾರೂ ಯೋಚಿಸುವಂತೆಯೆ ಇಲ್ಲ. ವಿದ್ಯಾರ್ಥಿಗಳು ವಿನ್ಯಾಸ ಹಾಗೂ ಕಾರ್ಯ ರೀತಿಯಲ್ಲಿ ಪರಿಚಯ ಮಾಡಿಕೊಳ್ಳುತ್ತಾರೆ.

ಉತ್ಪಾದನೆಯಲ್ಲಿ ರಸಾಯನ ಶಾಸ್ತ್ರವಂತೂ ಬಹು ವ್ಯಾಪಕವಾಗಿ ಬಳಕೆಗೆ ಬರುತ್ತಿದೆ. ವಿವಿಧ ಕಲಾಶಿಕ್ಷಣವು ಅತಿ ಮಹತ್ವದ ರಾಸಾಯನಿಕ ದ್ರವ್ಯಗಳನ್ನು ಪಡೆಯುವ ಮತ್ತು ಅವುಗಳನ್ನು ಅನ್ವಯಿಸುವ ಮೂಲಭೂತ ಜ್ಞಾನವನ್ನೂ ವಿದ್ಯಾರ್ಥಿಗಳಿಗೆ ನೀಡುತ್ತದೆ.

ಗ್ರಾಮಾಂತರ ಶಾಲೆಗಳ ವಿದ್ಯಾರ್ಥಿಗಳಿಗೆ ಬೆಳೆಗಳನ್ನು ನೆಡುವುದೆಂತು, ಬೆಳೆಸುವುದೆಂತು ಮತ್ತು ಪಶು ಸಂಗೋಪನೆ ಮಾಡುವುದೆಂತು ಎಂಬೆಲ್ಲ ತಿಳವಳಿಕೆಗಳನ್ನೂ ನೀಡಲಾಗುವುದು. ಅದೇ ಕಾಲಕ್ಕೆ ಬೇಸಾಯದಲ್ಲಿ ವಿದ್ಯುಚ್ಛಕ್ತಿ ಯಂತ್ರೋಪಕರಣ ಹಾಗೂ ರಸಾಯನಗಳನ್ನು ಹೇಗೆ ಬಳಸುವುದೆಂಬುದರ ಬಗ್ಗೆ ವಿಶೇಷ ಒತ್ತಡ ಹಾಕಲಾಗುವುದು.

ಪಾಲಕರ ನಡುವಿನ ಸಂಬಂಧ

ಶಾಲೆ ಮತ್ತು ತಂದೆ ತಾಯಿಗಳ ಪ್ರಯತ್ನಗಳು ಏಕ ಸಾಮಾನ್ಯ ಗುರಿಯಿಂದ ಐಕ್ಯಗೊಂಡಿವೆ. ಅದೆಂದರೆ ಮಕ್ಕಳ ಉತ್ತಮ ಬೆಳವಣಿಗೆ. ತಂದೆ ತಾಯಿಗಳು ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಮತ್ತು ಅಧ್ಯಾಪಕರು ಕುಟುಂಬದ ಜೀವನ ಸ್ಥಿತಿಗತಿಗಳಲ್ಲಿ ಆಸಕ್ತಿ ವಹಿಸುತ್ತಾರೆ. ಯಾಕೆಂದರೆ ಉದಯೋನ್ಮುಖ ಪೀಳಿಗೆಯ ವಿಕಾಸದಲ್ಲಿ ಕುಟುಂಬವೇ ದೊಡ್ಡ ಪಾತ್ರ ನಿರ್ವಹಿಸುತ್ತದೆ. ಅತ್ಯಂತ ಚಟುವಟಿಕೆಯ ಮಾತಾ—ಪಿತರು ಸಾಮಾನ್ಯವಾಗಿ ಪಾಲಕರ ಸಮಿತಿಗಳಲ್ಲಿ ಸೇರಿಸಲ್ಪಡುತ್ತಾರೆ. ಈ ಸಮಿತಿಯೇ ಸಾಮಾಜಿಕ ಕಾರ್ಯವನ್ನು ನಿರ್ದೇಶಿಸುತ್ತದೆ ಮತ್ತು ಕ್ರಮಗೊಳಿಸುತ್ತದೆ.

ಶಾಲೆ ಮತ್ತು ಮಾತಾ-ಪಿತರಿಬ್ಬರೂ ಮಕ್ಕಳ ಆರೋಗ್ಯ, ಆಹಾರ, ಶಾಲೆಗಳ ಸ್ವಚ್ಛತೆ, ವಿದ್ಯಾರ್ಥಿಯ ಪ್ರಗತಿ, ಅವರ ನಿತ್ಯ ಜೀವನದ ನಿರೀಕ್ಷಣೆ ಮೊದಲಾದವುಗಳಲ್ಲಿ ಒಟ್ಟಾಗಿ ಆಸಕ್ತಿ ವಹಿಸುತ್ತಾರೆ. ಶಾಲಾ ಆಡಳಿತವು ಮಕ್ಕಳ ವಯಸ್ಸಿನ ಒಂದೊಂದು ಘಟ್ಟದಲ್ಲಿ ಏನನ್ನು ಉಚಿತವಾಗಿ ಕಲಿಸಿಕೊಡಬೇಕು ಎಂಬ ಬಗೆ ಮಾತಾಪಿತರಿಗೆ ಸಲಹೆ ಸಹಕಾರಗಳನ್ನು ನೀಡುತ್ತದೆ. ಹೆತ್ತವರು ತಮ್ಮ ಕಡೆಯಿಂದ ಮಕ್ಕಳ ಬೆಳವಣಿಗೆಯ ಅನುಭವಗಳಲ್ಲಿ ಶಾಲೆಯೊಂದಿಗೆ ಪಾಲ್ಗೊಳ್ಳುತ್ತಾರೆ.

ತಾಂತ್ರಿಕ ಶಾಲೆಗಳು

ತಾಂತ್ರಿಕ ಶಾಲೆಗಳು ವೃತ್ತಿ ಶಾಲೆಗಳಾಗಿದ್ದು ವಿಶಾಲ ಸಾಮಾನ್ಯ ಜ್ಞಾನದ ಹಿನ್ನೆಲೆಯಲ್ಲಿ ಅತ್ಯಂತ ಉನ್ನತ ಚತುರ ಶಿಕ್ಷಣವನ್ನು ನೀಡುತ್ತವೆ. ಇಲ್ಲಿ ಅಧ್ಯಯನದ ಅವಧಿ ಆಯಾ ವೃತ್ತಿಯನ್ನು ಅನುಸರಿಸಿ ಒಂದು — ಎರಡು ವರ್ಷವಿರುತ್ತದೆ. ವಿಶೇಷ ಶಾಲೆಗಳು ಕೃಷಿ ತಜ್ಞರಿಗೂ ಶಿಕ್ಷಣ ಮತ್ತು ತರಬೇತುಗಳನ್ನು ನೀಡುತ್ತವೆ.

ತಾಂತ್ರಿಕ ಶಾಲೆಗಳು ಟೆಕ್ನಿಕಮ್‌ಗಳಿಂದ ಭಿನ್ನವಾಗಿವೆ. ಟೆಕ್ನಿಕಮ್‌ಗಳು ಸೆಕೆಂಡರಿ ವೃತ್ತಿ ಶಾಲೆಗಳಿದ್ದಂತೆ. ಈ ಶಾಲೆಗಳ ಚಿತ್ರವೇ ಬೇರೆ. ಕೈಗಾರಿಕೆ, ಹಣಕಾಸು, ಸಾರಿಗೆ ಸಂಪರ್ಕ, ಕಟ್ಟಡ, ಕೃಷಿ ಮುಂತಾದುವು ಇಲ್ಲಿ ಅಧ್ಯಯನ ವಿಷಯಗಳಾಗಿವೆ. ಇವುಗಳು ಮಧ್ಯಮ ದರ್ಜೆಯ ತಜ್ಞರನ್ನೂ, ಎಲೆಕ್ಟ್ರಿಷಿಯನ್ನರನ್ನೂ, ಮೆಕ್ಯಾನಿಕ್‌ರನ್ನೂ ತಯಾರಿಸುತ್ತವೆ.

ಈ ಶಾಲೆಗಳ ಪಠ್ಯಕ್ರಮದಲ್ಲಿ ಸಾಹಿತ್ಯ, ಗಣಿತಶಾಸ್ತ್ರ, ವಸ್ತು ವಿಜ್ಞಾನ, ರಸಾಯನ ಶಾಸ್ತ್ರ ಮೊದಲಾದಂಥ ಸಾಮಾನ್ಯ ಶೈಕ್ಷಣಿಕ ವಿಷಯಗಳೂ ವಿಶೇಷ ವೃತ್ತಿ ಶಿಕ್ಷಣಗಳೂ ಅಡಕವಾಗಿರುತ್ತವೆ. ಇಲ್ಲಿ ಅಧ್ಯಯನಾವಧಿ ೪ ವರ್ಷಗಳು.

ಸೋವಿಯೆತ್ ಒಕ್ಕೂಟದಲ್ಲಿ ಎಲ್ಲ ಹೈಯರ್ ಶಾಲೆಗಳನ್ನು ಪ್ರಭುತ್ವವು ತನ್ನ ವೆಚ್ಚದಲ್ಲೇ ನೋಡಿಕೊಳ್ಳುತ್ತದೆ. ಅಪವಾದಾತ್ಮಕವಾಗಿ ಕೆಲವೊಂದು ಕಾಲೇಜುಗಳನ್ನು ಮಾತ್ರ ಸಾರ್ವಜನಿಕ ಸಂಸ್ಥೆಗಳೂ ಸಹಕಾರ ಸಂಘಗಳೂ ನೋಡಿಕೊಳ್ಳುತ್ತವೆ.

(ಹದಿನಾಲ್ಕನೇ ಪುಟ ನೋಡಿರಿ)

ಧನಾಧಿಪತಿ ಕುಬೇರ

(ಏಳನೇ ಪುಟದಿಂದ)

ರಲ್ಲಿಲ್ಲ. ಬ್ಬ. ನಾಮ ಮಾತ್ರ ದೇವ ಧನಾಧಿಪತಿ. (ಬಾಹ್ಯ ಅಲಂಕಾರಕ್ಕೆ ಮಾತ್ರ) ಹಿಂದಿನ ಅವನ ಪ್ರಾಶಸ್ತ್ಯ—ಪ್ರಭಾವ—ವೈಭವಗಳು ಇಂದು ಮೂಲೆ ಗುಂಪಾಗಿವೆ. ಉತ್ತರ ದಿಕ್ಕಿನ ಒಡೆತನ ಮಾತ್ರ ಶಾಶ್ವತವಾಗಿ ಉಳಿದಿದೆ.

ನಾಲ್ಕು ಅಥವಾ ಐದನೆಯ ಶತಮಾನದಲ್ಲಿ, ಗುಪ್ತರ ಆಳ್ವಿಕೆಯ ಅವಧಿಯಲ್ಲಿ ವೈಷ್ಣವ ಧರ್ಮ ಉರ್ಜಿತವಾಯಿತು, ಪ್ರಬಲವಾಯಿತು. ವೈಷ್ಣವ ಧರ್ಮದ ಬೆಳವಣಿಗೆಯೊಂದಿಗೆ 'ಶ್ರೀ' ಅಥವಾ "ಲಕ್ಷ್ಮಿ"ಯನ್ನು ಧನದೇವಿ ಎಂದು ಪ್ರತಿಷ್ಠಾಪಿಸಿ ಪೂಜಿಸಲಾರಂಭಿಸಿದರು. ಮುಂದೆ ಲಕ್ಷ್ಮಿಯೇ ಸಂಪತ್ತಿನ ಅಧಿದೇವತೆಯಾದಳು. ಕುಬೇರನಿಗಿದ್ದ ಹಿರಿಯ ಸ್ಥಾನ ಲಕ್ಷ್ಮಿಯ ಪಾಲಾಯಿತು. ಕುಬೇರ ಮಾಜಿ ಧನಾಧಿಪತಿಯಾಗಿ ಉಳಿದಿದ್ದಾನೆ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(¼ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)



ನೀವೂ ತಿಳಿದುಕೊಳ್ಳಿ

ಹೀಗಿದ್ದರು ನಮ್ಮ ನೆಹರೂ

ಬರೆದವರು.
ಶ್ರೀ ಬಿ. ನರಸಿಂಗ ರಾವ್, ಕಾಸರಗೋಡು.

ಹ್ಯಾರೋ ಶಾಲೆಯಲ್ಲಿ ಜವಾಹರಲಾಲರು ಕಲಿಯುತಿದ್ದ ಸಮಯದಲ್ಲಿ ಪಿತ ಮೋತಿಲಾಲರು ಒಮ್ಮೆ ಅಲ್ಲಿ ಭೇಟಿನೀಡಿದರು. ಬೆಳಗ್ಗಿನ ಸಮಯವಾಗಿತ್ತು. ಜವಾಹರರು ಎಂದಿನಂತೆ ತಮ್ಮ ಬೂಟನ್ನು ಪಾಲಿಷ್ ಮಾಡುತ್ತಿದ್ದರು. ತಂದೆಯು ಇದನ್ನು ನೋಡುತ್ತಲೆ ಹೇಳಿದರು "ನೀನು ಈ ಕೆಲಸವನ್ನು ಮಾಡಲು ನೌಕರನನ್ನೇಕೆ ನೇಮಿಸಬಾರದು?" ಜವಾಹರ್ ಕೂಡಲೇ ಉತ್ತರವಿತ್ತರು. "ನನ್ನಿಂದ ಮಾಡಲಾಗುವ ಸುಲಭ ಕೆಲಸಕ್ಕೆಲ್ಲಾ ನೌಕರನನ್ನು ನೇಮಿಸುವ ಆವಶ್ಯಕತೆ ಏಕೆ?' ಆದರೆ ತಂದೆಯವರಿಗೆ ಇದರಿಂದ ತೃಪ್ತಿಯಾಗಲಿಲ್ಲ. ಮರುದಿನವೇ ಬಾಲಕ ಜವಾಹರ ತನ್ನ ಅಧ್ಯಾಪಕರೊಡನೆ ಓರ್ವ ನೌಕರನ ವ್ಯವಸ್ಥೆ ಮಾಡಲು ಕೇಳಿಕೊಂಡರು.

ಜವಾಹರರ ಈ ಕೇಳಿಕೆಯಿಂದ ಗುರುಗಳು ಕುಪಿತರಾದರು. ಹ್ಯಾರೋ ಶಾಲೆಯಲ್ಲಿ ಇಂತಹ ಚಿಕ್ಕಪುಟ್ಟ ಕಾರ್ಯಗಳನ್ನು ಸ್ವತಃ ಮಾಡಬೇಕಿತ್ತು. ಇದರಿಂದ ಸ್ವಾವಲಂಬನೆಗೆ ದಾರಿ ಮಾಡಿದಂತೆಯೇ ಎಂದು ನಿಯಮವೂ ಇದ್ದಿತು. ಆದುದರಿಂದ ಜವಾಹರರು ಅಧ್ಯಾಪಕರಿಂದ ಶಿಕ್ಷೆಗೊಳಗಾಗಿ ತನ್ನ ಮಿತ್ರರೆಲ್ಲರ ಬೂಟುಗಳನ್ನು ಪಾಲಿಷ್ ಮಾಡಲು ಆಜ್ಞೆ ಪಡೆದರು.

ಮರುದಿನ ಮೋತಿಲಾಲರು ಪುನಃ ಜವಾಹರರ ಕೋಣೆಗೆ ಭೇಟಿ ನೀಡುತ್ತಲೆ ಕೋಣೆಯಲ್ಲಿ ಬೂಟಿನ ರಾಶಿಯೇ ಬಿದ್ದಿತ್ತು. ಜವಾಹರರು ಪಾಲಿಷ್ ಮಾಡುವುದರಲ್ಲಿ ಮಗ್ನರಾಗಿದ್ದರು. ಸಿಟ್ಟುಗೊಂಡ ಮೋತಿಲಾಲರು ಪ್ರಶ್ನಿಸಿದರು— "ಏನು ಮೂರ್ಖ ಕಾರ್ಯ ಕೈಗೊಂಡಿದ್ದಿಯೋ?"

ಜವಾಹರರು ನಡೆದ ಸಂಗತಿಯೇನೆಂದು ತಂದೆಗೆ ತಿಳಿಸಿದರು. ಆಗಲೇ ಮೋತಿಲಾಲರಿಗೆ ತಮ್ಮ ತಪ್ಪಿನ ಅರಿವಾಯಿತು. ಆ ರೀತಿ ಚಿಕ್ಕಂದಿನಲ್ಲೆ ಜವಾಹರರಿಗೆ ಚಿಕ್ಕ-ಪುಟ್ಟ ಕೆಲಸಗಳನ್ನು ಸ್ವತಃ ಮಾಡುವ ಅಭ್ಯಾಸವೇರ್ಪಟ್ಟಿತು.

ೲ ೲ ೲ

ಪಂಡಿತ ನೆಹರೂ ಅಲ್ಮೋರಾ ಜೇಲಿನಿಂದ ಬಿಡುಗಡೆಯಾಗಿ ನೈನಿತಾಲದಲ್ಲಿ ಪಂಡಿತ ಗೋವಿಂದ ವಲ್ಲಭ ಪಂತರಲ್ಲಿ ತಂಗಿದ್ದರು. ಅಲ್ಲಿಂದ ಹೊರಡುವ ಸಮಯವಾಗುತ್ತಲೇ ಜವಾಹರರು ತಮ್ಮ ಗಂಟು-ಮೂಟೆಯನ್ನು ತಾವೇ ಸ್ವತಃ ಕಟ್ಟ ತೊಡಗಿದರು. ಅದಷ್ಟರಲ್ಲೇ ಪಂತರಿಗೆ ಇದನ್ನು ಕಂಡು ಸಹಿಸದೇ ತಾವೇ ಸಹ ಗಂಟು ಕಟ್ಟುತ್ತೇವೆಂದು ಮುಂದಾದರು. ಸರಿ! ಸಿಟ್ಟುಗೊಂಡ ನೆಹರೂ ಹೇಳಿದರು "ನನ್ನ ಗಂಟು ಮೂಟೆ ಕಟ್ಟೋಕೆ ನನ್ನ ಕೈಗೇನು ಧಾಡಿ ಬಂದಿದೆ ಅಂತೀರಿ!"

ೲ ೲ ೲ ೲ

ನೆಹರೂರವರು ರಾಷ್ಟ್ರೀಯ ಧ್ವಜಕ್ಕೆ ಬಹಳ ಗೌರವ ಮಾಡುತಿದ್ದರು. ಅದೊಂದು ದಿನ ಹಳ್ಳಿಯೊಂದರಲ್ಲಿ ಅವರಿಗೆ ಧ್ವಜಾರೋಹಣ ಮಾಡುವುದಿತ್ತು. ಅವರು ಧ್ವಜವನ್ನು ಅರಳಿಸ ಹೊರಡುತ್ತಾರೆ. ಸ್ತಂಭವು ಕಟ್ಟಿತು. ಅದಷ್ಟರಲ್ಲೆ ಬಡಗಿಯು ಬಂದು ಸ್ತಂಭವನ್ನು ಸರಿ ಮಾಡತೊಡಗಿದನು. ಸರಿ ಮಾಡಲು ತುಂಬಾ ಸಮಯವಾದರೂ ಜವಾಹರರು ಅದೆಷ್ಟೋ ಹೊತ್ತು ರಣ ಬಿಸಿಲಲ್ಲಿ ನಿಂತೇ ಇದ್ದರು. ಜನತೆ ಎಷ್ಟು ಒತ್ತಾಯಿಸಿದರೂ ಅವರು ಆ ಬಿಸಿಲಿನಲ್ಲಿ ನಿಂತು, ಧ್ವಜವನ್ನು ಅರಳಿಸಿ, ವಂದಿಸಿಯೇ ಅಲ್ಲಿಂದ ಕಾಲೆತ್ತಿದರು.

ೲ ೲ ೲ ೲ

ಕಾಂಗ್ರೆಸ್‌ನ ಒಂದು ಸಭೆಯಲ್ಲಿ ನಡೆದ ಘಟನೆ. ಆಂದಿನ ಸಭೆಯಲ್ಲಿ ಆಚಾರ್ಯ ಕೃಪಲಾನಿಯವರು ನೆಹರೂಜಿಯವರ ವಿಚಾರವನ್ನು ಸಾಕಷ್ಟು ವಿರೋಧಿಸಿದ್ದರು. ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯನ್ನು ರಚಿಸುವ ಅಧಿಕಾರ ನೆಹರೂರವರದಾಗಿತ್ತು. ಸಮಿತಿಯ ಸದಸ್ಯರನ್ನು ಆಯ್ದು ಅವರ ಹೆಸರನ್ನೋದುತ್ತಲೆ ಆಚಾರ್ಯ ಕೃಪಲಾನಿಯವರ ಹೆಸರೂ ಅದರಲ್ಲಿ ಬಂದಿತ್ತು. ಕೃಪಲಾನಿಯವರನ್ನು ಕಾಂಗ್ರೆಸ್‌ನ ಮಂತ್ರಿಗಳಾಗಿ ನೇಮಿಸಿದ್ದರು. ಅವರ ಹೃದಯದಲ್ಲಿ ತಮ್ಮ ವಿರೋಧಿಯ ಕುರಿತೂ ಪ್ರೇಮ-ಸೌಹಾರ್ದವಿತ್ತೆನ್ನುವುದಕ್ಕೆ ಇದೇ ಘಟನೆ ಸಾಕ್ಷಿ.

ೲ ೲ ೲ

ಪಾಂಡಿಚೇರಿಯ ರೈಲ್ವೆ ಸ್ಟೇಶನ್. ಪೋಲೀಸರ ಕಠೋರ ಸಂರಕ್ಷಣಾ ವ್ಯವಸ್ಥೆಯಿಂದ ಜನರು ಪ್ಲೇಟ್ ಫಾರ್ಮನ್ನು ಪ್ರವೇಶಿಸುವುದಸಾಧ್ಯವಾಗಿತ್ತು. ಅಷ್ಟರಲ್ಲೆ ಟ್ರೈನ್ ಬಂತು. ನೆಹರೂಜಿಯವರು ಕೆಳಗಿಳಿದರು. ಸಮಸ್ತ ಜನತೆ ವಿವಶವಾಗಿತ್ತು. ಆದರೂ ಎಲ್ಲರೂ "ಜವಹರಲಾಲರಿಗೆ ಜಯವಾಗಲಿ" ಎಂದು ಘೋಷಿಸಿದರು. ನೆಹರೂ ಇದನ್ನು ಕೇಳಿದರು; ಅವರ ಕಣ್ಣುಗಳು ಪ್ಲಾಟ್‌ಫಾರ್ಮನ್ನು ಪೂರ್ಣ ನೋಡಿದವು ಆದರೆ ಎಲ್ಲೆಲ್ಲೂ ಪೋಲೀಸರೇ ತುಂಬಿದ್ದರು. ಇದನ್ನೆಲ್ಲ ಕಂಡ ಹೃದಯ ವಿಚಲಿತಗೊಂಡ ನೆಹರೂ ಕ್ರೋಧಗೊಂಡ ಹೇಳಿದರು— "ನಡೆಯಿರಿ ಇಲ್ಲಿಂದ! ಹೂಂ! ತೊಲಗಿ!! ನಾನು ಪೋಲೀಸರನ್ನು ನೋಡಲ ಇಲ್ಲಿ ಬಂದವನಲ್ಲ, ನನ್ನ ದೇಶದ ಪ್ರಜೆಗಳನ್ನು ನೋಡಲು ಬಂದಿದ್ದೇನೆ. ಆವರೆಲ್ಲಿದ್ದಾರೆ'

ಇದನ್ನು ಕೇಳುತ್ತಲೆ ಜನರ ಪ್ರವಾಹವೇ ಪ್ಲಾಟ್ ಫಾರ್ಮನ್ನು ಮುತ್ತಿತು. ಅವರ ಜಯಕಾರಗಳಿಂದ ಸ್ಟೇಶನ್ ಪ್ರತಿಧ್ವನಿಸಿತು.

ೲ ೲ ೲ ೲ

ಮಧ್ಯಾಹ್ನದ ಸಮಯ. ಒಂದೆಡೆ ಪುಟ್ಟ ಬಾಲಕನೋರ್ವನು ಬಸ್ಸಿನ ಹೊಡೆತದಿಂದ ಆಹತನಾಗಿ ಕೂಗುತ್ತಿದ್ದನು. ಅಲ್ಲಿ ವಿಶಾಲ ಜನ ಸಮೂಹವು ಕೂಡಿದ್ದರೂ ಬಾಲಕನೆಡೆಗೆ ಯಾರೂ ದೃಷ್ಟಿ ಹಾಯಿಸಲಿಲ್ಲ. ಎಲ್ಲಾ ವೇದನೆ—ಸಹಾನುಭೂತಿ ತೋರಲಿಲ್ಲ — ಬಾಲಕನಿಗೆ. "ಪಂಡಿತ್ ಜವಾಹರಲಾಲ್ ನೆಹರೂ ಕೀ ಜೈ" ಎಂದಷ್ಟು [illegible] ಕೇಳುತಿತ್ತು. ನೆಹರೂಜೀ ಕಾರಿನಿಂದ ಕೆಳಗಿಳಿದರು. ಅವರ ದೃಷ್ಟಿ ಆ ಘಾಯಗೊಂಡ, ನರಳುತಿದ್ದ ಬಾಲಕನ ಮೇಲಿತ್ತು. ಜನರನ್ನು ದ್ವೇಷಿಸಿ [illegible] ಅವರೆಂದರು — 'ಏನು ಜಯಕಾರ ಮಾಡ್ತಾ ಇದ್ದೀರಿ? ಆ ಬಾಲಕ ಜಖಂ ಆಗಿ ನರಳೋದು ಕಾಣ್ತಾ ಇಲ್ವೇನು?' ಹೀಗೆ ಹೇಳುತ್ತಾ ಅವರು ಆ ಬಾಲಕನನ್ನೆತ್ತಿ ತಮ್ಮ ಕಾರಿನಲ್ಲಿ ಕುಳ್ಳಿರಿಸಿದರು. ಜನತೆ ಸ್ತಬ್ಧವಾಗಿ ಇದನ್ನೇ ನೋಡುತಿತ್ತು.

ೲ ೲ ೲ ೲ

ಜವಾಹರಲಾಲರು ಪಂಜಾಬಿನ ಕಪರತಾಲದ ಹತ್ತಿರ ದಾಹರ ಎಂಬ ಹಳ್ಳಿಯಲ್ಲಿ ಜಲ—ಸೇಚನ ಯೋಜನೆಯ ಉದ್ಘಾಟನೆ ಮಾಡುವವರಿದ್ದರು. ಇದಕ್ಕೋಸ್ಕರ ಉಚ್ಚಾಧಿಕಾರಿಗಳು ಅವರಿಗೆ ಬೆಳ್ಳಿಯ ಪಿಕ್ಕಾಸನ್ನು ಕೊಡಲು ಮುಂದೆ ಬಂದರು.

ಕೂಡಲೆ ನೆಹರೂರವರು ಆ ಬೆಳ್ಳಿಯ ಪಿಕ್ಕಾಸನ್ನು ಎಸೆದು ಗಂಭೀರವಾಗಿ ನುಡಿದರು." ಭಾರತದ ರೈತನು ಬೆಳ್ಳಿಯ ಪಿಕ್ಕಾಸಿನಿಂದೇನು ಭೂಮಿ ಅಗೆಯುವುದು?' ಮತ್ತು ಹತ್ತಿರವೇ ಬಿದ್ದಿದ್ದ ಕಬ್ಬಿಣದ ಪಿಕ್ಕಾಸನ್ನು ಕೈಗೆತ್ತಿಕೊಂಡರು.

ೲ ೲ ೲ ೲ

ಚಾಚಾನೆಹರೂ ಅಂಕಲೇಶ್ವರಕ್ಕೆ ಬೇಟಿ ನೀಡುತ್ತಲಿದ್ದರು. ಅಲ್ಲಿರುವ ಕಲೆಣ್ಣೆ ಉತ್ಪಾದನಾ ಘಟಕವನ್ನು ಅವರು ಸಂದರ್ಶಿಸುತಿದ್ದರು. ಅಷ್ಟರಲ್ಲಿ ಕೊಂಚ ಕಲ್ಲೆಣ್ಣೆಯು ಅವರ ಬಟ್ಟೆಯ ಮೇಲೆ ಬಿದ್ದು ಕಲೆಯಾಯಿತು. ಕೂಡಲೆ ಅಧಿಕಾರಿಗಳು ಈ ಕುರಿತು ಯೋಚಿಸುತ್ತಾ ನೆಹರೂರವರಿಗೆ ಬೇರೆ ಬಟ್ಟೆಯನ್ನು ಧರಿಸುವ ವ್ಯವಸ್ಥೆ ಮಾಡುವಂತೆ ಕೇಳಿಕೊಂಡರು. ಆದರೆ ಪಂಡಿತ ನೆಹರೂ ಇದನ್ನು ನಿರಾಕರಿಸುತ್ತಾ ಹೇಳಿದರು— "ಇಲ್ಲ, ನಾನಿದೇ ಬಟ್ಟೆಯನ್ನು ಧರಿಸುವೆ. ನನ್ನ ಸಹೋದ್ಯೋಗಿಗಳೊಡನೆಯೂ ಮಿತ್ರರೊಡನೆಯೂ ಹೇಳುವೆ—"ನೋಡಿ, ನನ್ನ ದೇಶವಲ್ಲುತ್ಪಾದಿಸಿದ ಎಣ್ಣೆಯ ಕಲೆಯನ್ನು" ಎಂದು"

ೲ ೲ ೲ

ಜವಾಹರಲಾಲರು ಭಾಷಣವಿತ್ತು ಪ್ಲೇಟ್‌ಫೋರ್ಮ್‌ನಿಂದ ಕೆಳಗಿಳಿದರು. ಅಷ್ಟರಲ್ಲಿ "ಹಸ್ತಾಕ್ಷರ" ಪಡೆಯಲೆಂದು ಓರ್ವ ಯುವಕನು ಅತ್ತ ಧಾವಿಸಿದನು. ಅಂತೆಯೇ ಅವರು ತಮ್ಮ ಹಸ್ತಾಕ್ಷರವನ್ನು ಹಿಂದಿಯಲ್ಲಿ ಬರೆದರು. ಆಗ ಆ ಯುವಕನು "ಡೇಟ್? ಅಂದನು. ನೆಹರೂರವರು ತಾರೀಖನ್ನು ಇಂಗ್ಲಿಷಿನಲ್ಲಿ ಬರೆದರು. ಆಶ್ಚರ್ಯಗೊಳಗಾದ ಆ ಯುವಕನು ಕೇಳಿದನು 'ಇದೇನು ಹಸ್ತಾಕ್ಷರವನ್ನು ಹಿಂದಿಯಲ್ಲೂ, ತಾರೀಖನ್ನು ಇಂಗ್ಲೀಷಿನಲ್ಲೂ ಬರೆದಿದ್ದೀರಿ?" ಉತ್ತರವಾಗಿ ಜವಾಹರರೆಂದರು— 'ಹಸ್ತಾಕ್ಷರವು ಹಿಂದೀ ಶಬ್ದ, 'ಡೇಟ್" ಇಂಗ್ಲೀಷ್ ಶಬ್ದವಲ್ಲವೇ? ಅದಕ್ಕೆ...."

ನವಯುವಕ ಅನುವಾದ.

ನವಯುಗ

ಪ್ರಜಾರಾಜ್ಯ ವಿಶೇಷಾಂಕ—1967

ಕರ್ನಾಟಕದ ಖ್ಯಾತ ಬರಹಗಾರರ
ಕತೆ, ಕವನ, ಲೇಖನಾದಿಗಳಿಂದ ಕೂಡಿ
ವಿಶಿಷ್ಟ ರೀತಿಯಿಂದ
ತಾ. 26—1—1967ರಂದು ಪ್ರಕಟವಾಗುವುದು,

ಅಖಿಲ ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಹೊರನಾಡುಗಳಲ್ಲಿಯೂ ಪ್ರಚಾರವಾಗುವ ನವಯುಗ ವಿಶೇಷ ಸಂಚಿಕೆಯು ಜಾಹೀರಾತಿಗೆ ಉತ್ತಮ ಸಾಧ್ಯಮವಾಗಿದೆ. ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಆದಷ್ಟು ತ್ವರಿತ ಕಳಿಸುವಂತೆ ವಿನಂತಿ
ಮೆನೇಜರ್, ನವಯುಗ, ಉಡುಪಿ

ವರ್ಧಂತ್ಯುತ್ಸವ

ದಾವಣಗೆರೆ — ದೊಡ್ಡಪೇಟೆ — ಇಲ್ಲಿ ತಾ. 16—12—66ರಂದು ಶ್ರೀಸಿದ್ಧಾಂತಾಶ್ರಮದಲ್ಲಿ ಶ್ರೀ ಜಗಂಜ್ಯೋತಿ ಪರಮಹಂಸ ಸ್ವಾಮೀಜಿಯವರ 44ನೇ ವರ್ಧಂತ್ಯುತ್ಸವವು ಶ್ರೀ ಡಿ. ಪಿ. ಜಿ. ಜೆ. ಕಾರ್ಂವಾಲ್, ಬಾಂಬೆ ಅವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯುದರೊಂದಿಗೆ ಶ್ರೀ ಜಗಂಜ್ಯೋತಿ ಪರಮಹಂಸ ಸ್ವಾಮೀಜಿಯವರು ಸ್ವತಃ ಉಪದೇಶ ರೂಪವಾದ ಭಾಷಣವನ್ನು ಹೃದಯ ಸ್ಪರ್ಶಿಯಾಗಿ ಮಾಡಿದರು. ಇವರ ಭಾಷಣಾನಂತರ ಶ್ರೀ ಕೆ. ಎನ್. ಭಟ್, [illegible] ಅವರು 'ಅದ್ವೈತ ಸಿದ್ಧಾಂತ' ಎಂಬ ವಿಚಾರದ ಮೇಲೆ ಭಾಷಣ ಮಾಡಿದರು. ಶ್ರೀ ಜಿ ಜಿ ದೇವೇಂದ್ರ, ಶ್ರೀ [illegible] ಮೊದಲಾದವರೂ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ ನಡೆದ ಬಳಿಕ ಭಜನೆ, ಸಂಗೀತ ನಡೆಯಿತು. ಶ್ರೀ ಜಿ ಜೆ. ಬಾಬು ಅವರು ಧನ್ಯವಾದಾರ್ಪಣೆ ಮಾಡಿದ ಬಳಿಕ ನೆರೆದಿದ್ದ ಸುಮಾರು ಹತ್ತು ಸಾವಿರ ಜನರಿಗೆ ಅನ್ನಸಂತರ್ಪಣೆ ನಡೆಯಿತು.

ವೈದ್ಯರಿಗೆ ನಾವು ಕೃತಜ್ಞರು

(ಐದನೇ ಪುಟದಿಂದ)

ಜನರಿಗೂ ಆರೋಗ್ಯ ಸೇವೆಗೂ ನಿಕಟ ಸಂಪರ್ಕ ಕಲ್ಪಿಸಲು ಸರ್ಕಾರವು ಬಯಸಿರುವಿಕೆಯಲ್ಲಿ ಕಾರ್ಯಶಕ್ತವಾಗಿದೆ.

ರೋಗ ಪ್ರತಿಬಂಧ

ಅನಾರೋಗ್ಯದ ಮೂಲಬೇರುಗಳನ್ನೇ ಕಿತ್ತೊಗೆಯುವ ಸರ್ಕಾರದ ಆರೋಗ್ಯ ಕಾರ್ಯಕ್ರಮಗಳ ಗುರಿಯಾಗಿದೆ. ರೋಗಗಳು ಬರದಂತೆ ನೋಡಿಕೊಳ್ಳುವದೇ, ರೋಗ ಬಂದನಂತರ ಅದಕ್ಕಾಗಿ ಪರಿಹಾರ ಚಿಕಿತ್ಸೆಯಲ್ಲಿ ತೊಡಗುವದಕ್ಕಿಂತ ಹೆಚ್ಚು ಉತ್ತಮ. ಅನೇಕ ರೋಗಗಳು ಸಾಂಕ್ರಾಮಿಕವಾಗಿ ಹಬ್ಬುತ್ತವೆ, ಸಂಸರ್ಗದಿಂದ ವೃದ್ಧಿ ಹೊಂದುತ್ತವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಸಾಂಕ್ರಾಮಿಕ ರೋಗಗಳೇ ಜನರನ್ನು ಅತಿಯಾಗಿ ಬಲಿ ತೆಗೆದುಕೊಳ್ಳುತ್ತಿದ್ದವು ಮಲೇರಿಯಾ, ಸಿಡುಬು, ಕಾಲರಾ ಮತ್ತು ಪ್ಲೇಗು ಈ ಭಯಂಕರ ರೋಗಗಳು ಸಾವಿರಗಟ್ಟಲೆ ಆಹುತಿ ತೆಗೆದುಕೊಳ್ಳುತ್ತಿದ್ದವು, ಇಷ್ಟೇ ಅಲ್ಲ ಸಾವಿನ ಹಿಡಿತದಿಂದ ಉಳಿದವರು ಕೂಡ ತೀರ ದುರ್ಬಲರಾಗಿ ಜೀವಂತ ಶವಗಳಂತೆ ಓಡಾಡುವಂತೆ ಈ ರೋಗಗಳು ಮಾಡಿವೆ. ಭೋರ ಸಮಿತಿಯು, 'ಈ ಎಲ್ಲ ರೋಗಗಳನ್ನು ನಾವು ಪ್ರತಿಬಂಧಿಸಬಹುದಾಗಿದ್ದರೂ ಭಾರತದಲ್ಲಿ ಸಿಡುಬು, ಕಾಲರಾ, ಮತ್ತು ಪ್ಲೇಗ್ ರೋಗಗಳು ಅತಿಶಯವಾಗಿ ಬಲಿ ತೆಗೆದುಕೊಳ್ಳುತ್ತಲಿವೆ'ಎಂದು ಹೇಳಿದೆ. ಟಿಬಿ ಮತ್ತು ಮಲೇರಿಯಾದಿಂದ ಲಕ್ಷಗಟ್ಟಲೆ ಜನರು ಜೀವನ ಸೌಖ್ಯಕ್ಕೆ ಎರವಾಗಿದ್ದಾರೆ. ಪಂಚವಾರ್ಷಿಕ ಯೋಜನೆಯಲ್ಲಿ ರೂಪುಗೊಂಡ ಕಾರ್ಯಕ್ರಮಗಳನ್ನು ಜ್ಯಾರಿಯಲ್ಲಿ ತಂದು, ವೈದ್ಯಕೀಯ ಸೇವೆಯಲ್ಲಿ ತಜ್ಞರು ಈ ರೋಗಗಳನ್ನು ಬೇರು ಸಹಿತ ಕಿತ್ತೊಗೆಯಲು ಪ್ರಯತ್ನಿಸಿದ್ದಾರೆ.

ಸೋಂಕು ರೋಗಗಳ ನಿರ್ಮೂಲನ

ನೊಣದಿಂದ ಹಬ್ಬುವ ಮಲೇರಿಯಾ ರೋಗವನ್ನು ಪೂರ್ತಿಯಾಗಿ ಸದೆಬಡೆಯಲು ಸಾವಿರಾರು ಕಾರ್ಯಕರ್ತರು ದೇಶದ ಮೂಲೆ ಮೂಲೆಗಳನ್ನು ಶೋಧಿಸಿ, ಮಲೇರಿಯಾ ಕಾರಕ ನೊಣಗಳ ಉಚ್ಚಾಟನೆ ಮಾಡಲು ಸಮರವನ್ನೇ ಸಾರಿ ಇದೀಗ ಮಲೇರಿಯಾ ರೋಗದ ನಿರ್ಮೂಲನೆಯ ಸಮೀಪಕ್ಕೆ ಬಂದಿದ್ದಾರೆ. ೧೯೫೩ರಲ್ಲಿ ಹತ್ತು ಕೋಟಿ ಜನರು ಮಲೇರಿಯಾದಿಂದ ಬಳಲುತ್ತಿದ್ದರೆ ಇಂದು ಕೇವಲ ೫೭,೦೦೦ ಜನರಿಗೆ ಮಲೇರಿಯಾ ತಗುಲಿದೆ.

ಸಿಡಿಬಿನಂತಹ ಭೀಕರ ರೋಗವಿಲ್ಲ. ಮನುಷ್ಯರನ್ನೆಲ್ಲಾ ಕುರೂಪಿಯನ್ನಾಗಿ, ಕುರುಡರನ್ನಾಗಿ ಮಾಡುತ್ತದೆ. ದೇಶದಲ್ಲಿಂದು ಅರ್ಧಕ್ಕಿಂತ ಹೆಚ್ಚು ಜನರಿಗೆ ಸಿಡುಬಿನ ವಿರುದ್ಧ ಪ್ರತಿಬಂಧಕ ದೇವಿ ಹಾಕಲಾಗಿದೆ. ತತ್ ಪರಿಣಾಮವಾಗಿ ಸಿಡುಬು ರೋಗ ಇಳಿಮುಖವಾಗಿದೆ. ೧೯೬೩ರಲ್ಲಿ ಕೇವಲ ೭,೦೦೦ ಜನರು ಸಿಡುಬಿನಿಂದ ಸತ್ತರು; ಅದೇ ೧೯೫೦ರಲ್ಲಿ ಸಿಡುಬಿನಿಂದ ಸತ್ತವರ ಸಂಖ್ಯೆ ೫೭,೦೦೦.

ಒಂದಾನೊಂದು ಕಾಲಕ್ಕೆ ಪ್ಲೇಗ್ ಹೆಸರೆತ್ತಿದೊಡನೆ ಪ್ರಪಂಚವೇ ಹೌಹಾರಿ ಕುಳ್ಳಿರುವ ಪ್ರಸಂಗವಿತ್ತು. ಯೂರೋಪಿನಲ್ಲಿ ಭಾರತದಲ್ಲಿ, ಅನೇಕ ನಗರಗಳೇ ಖಾಲಿಯಾಗಿ ಹೋದವು. ಇಂದು ಅನೇಕರಿಗೆ ಪ್ಲೇಗಿನ ನೆನಪು ಕೂಡ ಇಲ್ಲ, ಹೆಸರು ಕೂಡ ಮರೆತು ಹೋಗಿದೆ. ಪ್ಲೇಗ್ ರೋಗವನ್ನು ಪೂರ್ಣವಾಗಿ ಅಳಿಸಿ ಬಿಡಲಾಗಿದೆ.

ಕಾಲರಾ ನೊಣಗಳಿಂದ, ಹೊಲಸಿನಿಂದ, ಕಾಲರಾಗ್ರಸ್ತ ರೋಗಿಯಿಂದ ಹಬ್ಬುವ ಸಾಂಕ್ರಾಮಿಕ ರೋಗ. ಈ ರೋಗ ನೊಣದಿಂದ ಪ್ರಸಾರವಾಗುವದು ಎಂಬ ವಿಷಯ ಗೊತ್ತಾಗುವ ಮುಂಚೆ, ಅನಾರೋಗ್ಯಕರ ಪರಿಸರ ಹಬ್ಬಿದಾಗ, ಕಾಲರಾ ಲಕ್ಷಾವಧಿ ಜನರನ್ನು ಬಲಿ ತೆಗೆದುಕೊಂಡಿತು. ಪ್ರತಿವರ್ಷವೂ ಹಳ್ಳಿಪಟ್ಟಣಗಳಿಗೆ 'ಮುತ್ತಿಗೆ' ಹಾಕಿ ಅನರ್ಥ ಪರಂಪರೆಯನ್ನು ಪ್ರಾರಂಭಿಸುತ್ತಿತ್ತು. ಇಂದು ಕಾಲರಾ ಪಿಡುಗು ಕ್ವಚಿತ್ತಾಗಿ ಕಾಣಿಸಿಕೊಳ್ಳುತ್ತಿದೆ. ಎಲ್ಲಿ ನೈಸರ್ಗಿಕ ಕಾರಣದಿಂದಾಗಿ ನೈರ್ಮಲ್ಯದ ಪರಿಸರವನ್ನು ಕಲ್ಪಿಸುವದು ಅಸಾಧ್ಯವಾಗಿದೆಯೋ, ಅಂತಹ ಕಡೆ ಇನ್ನೂ ಕಾಲರಾ ತನ್ನ ಪ್ರಭಾವವನ್ನು ತೋರುತ್ತಲಿದೆ, ಮತ್ತು ಅಂತಹ ಪ್ರದೇಶದಲ್ಲಿಯೂ ಕಾಲರಾವನ್ನು ತಡೆಗಟ್ಟಲು ಪ್ರಯತ್ನ ಮುಂದುವರಿಸಲಾಗುತ್ತಿದೆ.

ಕ್ಷಯ

ಟಿಬಿ ಅಥವಾ ಕ್ಷಯರೋಗ, ಮಾನವನ ಭಯಂಕರ ಶತ್ರು. ಈ ರೋಗ ಮನುಷ್ಯನಿಂದ ಮನುಷ್ಯನಿಗೆ, ಗಂಡನಿಂದ ಹೆಂಡತಿಗೆ, ತಾಯಿಯಿಂದ ಮಗುವಿಗೆ ಹಬ್ಬಿ, ಮನುಷ್ಯ ಶಕ್ತಿಯನ್ನು ಹೀರಿ ಹ್ರಾಸಗೊಳಿಸಿ ಅವನನ್ನು ಕೆಲಸಕ್ಕೆ ಬಾರದ ವಸ್ತುವನ್ನಾಗಿ ಮಾಡುತ್ತದೆ. ಈ ರೋಗವನ್ನು ಶೀಘ್ರದಲ್ಲಿ ಗುರುತಿಸ ಬೇಕು ಮತ್ತು ನಿಯಮಿತ ಚಿಕಿತ್ಸೆ ಪಡೆಯಬೇಕು—ಮುಖ್ಯವಾಗಿ ಈ ರೋಗ ತಗುಲದಂತೆ ಲಕ್ಷ್ಯ ವಹಿಸುವದೇ ಉತ್ತಮ.

ಈ ರೋಗವನ್ನು ಕಂಡು ಹಿಡಿಯುವುದು ಹೇಗೆ? ಸಂಶಯ ಬಂದ ಕೂಡಲೇ ಡಾಕ್ಟರರ ಬಳಿಗೆ ಪರೀಕ್ಷೆಗೆ ಹೋಗುವದು ಒಂದು ರೀತಿ. ಡಾಕ್ಟರರ ಬಳಿ ಈ ರೋಗವನ್ನು ಕಂಡು ಹಿಡಿಯಲು ಎಕ್ಸ್ ರೇ ಫೋಟೋಗ್ರಾಫಿ ಇಂತಹ ಅನೇಕ ಸಲಕರಣೆಗಳಿವೆ. ಬಿ ಸಿ ಜಿ ದೇವಿ ಹಾಕಿಸಿಕೊಳ್ಳುವದರಿಂದ ಟಿಬಿ ರೋಗವನ್ನು ಪ್ರತಿಬಂಧಿಸಬಹುದು. ಭಾರತದಲ್ಲಿ ಇಂದು ಅರ್ಧಕ್ಕಿಂತ ಹೆಚ್ಚು ಜನರನ್ನು ಈ ರೋಗದ ಬಗ್ಗೆ ಪರೀಕ್ಷೆಗೆ ಒಳಪಡಿಸಲಾಗಿದೆ. ಟಿಬಿ ರೋಗದಿಂದ ರಕ್ಷಣೆ ಪಡೆಯಲು ದೇಶದಲ್ಲಿ ಎಂಟು ಕೋಟಿ ಜನರಿಗೆ ಬಿ. ಸಿ. ಜಿ. ದೇವಿ ಹಾಕಲಾಗಿದೆ. ಈ ರೋಗದಿಂದ ಬಳಲುವವರ ಶುಶ್ರೂಷೆಗೆಂದು ೪೦೦ ಉಪಚಾರ ಕೇಂದ್ರಗಳು ಕೆಲಸ ಮಾಡುತ್ತಿವೆ, ಅವುಗಳಲ್ಲಿ ೩೩,೦೦೦ ಜನರಿಗೆ ಸಾಕಾಗುವಷ್ಟು ಹಾಸಿಗ ವ್ಯವಸ್ಥೆ ಇದೆ. ಔಷಧ ಸಂಶೋಧನೆಯಲ್ಲಿ ಸಾಕಷ್ಟು ಪ್ರಗತಿಯಾಗಿರುವ ಇಂದಿನ ಕಾಲದಲ್ಲಿ ಆಗಾಗ್ಗೆ ಡಾಕ್ಟರರ ಬಳಿ ಹೋದರೆ ಈ ರೋಗವನ್ನು ಸುಲಭವಾಗಿ, ಅಲ್ಪ ವೆಚ್ಚದಲ್ಲಿ ಮನೆಯಲ್ಲೇ ಪ್ರತಿಬಂಧಿಸಬಹುದಾಗಿದೆ.

ಭಾರತದಲ್ಲಿ ಕುಷ್ಟರೋಗದಿಂದ ೨೫ ಲಕ್ಷ ಜನರು ಬಳಲುತ್ತಿದ್ದಾರೆ. ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕಾರ್ಯಯೋಜನೆಯ ಮುಖಾಂತರ ಈ ಅಂಟು ರೋಗವನ್ನು ಸದೆಬಡೆಯಲು ಪ್ರಯತ್ನಿಸಲಾಗುತ್ತಿದೆ, ಗುಹ್ಯ ರೋಗದ ಜನರಿಗಾಗಿ ೨೨೦ ಉಪಚಾರ ಕೇಂದ್ರಗಳನ್ನು ತೆರೆಯಲಾಗಿದೆ. ರಾಷ್ಟ್ರೀಯ ನೇತ್ರ ರೋಗ ಹತೋಟಿ ಕಾರ್ಯಕ್ರಮದ ಮುಖಾಂತರ ಲಕ್ಷಾವಧಿ ಜನರಿಗೆ ಉಪಚಾರವನ್ನು ಕಲ್ಪಿಸಿ ಕೊಡಲಾಗಿದೆ.

ನೈರ್ಮಲ್ಯದ ವಾತಾವರಣ

ಸ್ವಚ್ಛ ಕುಡಿಯುವ ನೀರು, ನೈರ್ಮಲ್ಯದ ಪರಿಸರ—ಇದ್ದಿದ್ದರೆ ನಾವು ಅನೇಕಾನೇಕ ರೋಗಗಳನ್ನು ಪ್ರತಿಬಂಧಿಸಬಲ್ಲೆವು. ಆದರೆ ಇದನ್ನು ನಮ್ಮ ದೇಶದಂಥ ಬೃಹತ್ ಭೂಮಿಯಲ್ಲಿ ಸಾಧಿಸುವದು ದುಸ್ತರ ವಿಷಯ. ಜನರೂ ಸರಕಾರವೂ ಕೂಡಿ ಮಾಡಬೇಕಾದ ಕೆಲಸವಿದು. ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಕ್ಕಾಗಿ ಎರಡು ನೂರು ಕೋಟಿ ರೂಪಾಯಿಗಿಂತಲೂ ಸ್ವಲ್ಪ ಹೆಚ್ಚು ಹಣವನ್ನು ತೆಗೆದಿರಿಸಿ ಅನೇಕ ಯೋಜನೆಗಳನ್ನು ಕೈಕೊಂಡಿದ್ದಾರೆ. ೧೯೫೪ರಿಂದ ಪಟ್ಟಣಗಳಿಗೆ ನೀರು ಸರಬರಾಜು ಮಾಡುವ ಕಾರ್ಯಯೋಜನೆಗಳು ೩೬೦ ಪಟ್ಟಣಗಳ ಒಳಚರಂಡಿಯೋಜನೆಗಳು ೧೦೦, ಗ್ರಾಮೀಣ ನೀರು ಸರಬರಾಜು ಯೋಜನೆ ೩,೫೦ ಅಲ್ಲದೆ ಅನೇಕ ಆರೋಗ್ಯವರ್ಧಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ರಾಷ್ಟ್ರಾದ್ಯಂತ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಮುಖಾಂತರ ಹಳ್ಳಿಗಳಲ್ಲಿ ಕೈಪಂಪ., ಬಾವಿಗಳನ್ನು ಒದಗಿಸಲಾಗಿದೆ. ಆದರೆ ನಮ್ಮ ದೇಶಕ್ಕೆ, ನಮ್ಮ ಜನಸಂಖ್ಯೆಗೆ, ಉತ್ತಮ ರೀತಿಯ ನೀರಿನ ಸರಬರಾಜು ಪ್ರತಿಹಳ್ಳಿಗೆ ಮುಟ್ಟಲು, ಸುಮಾರು ೩,೫೦೦ ಕೋಟಿ ರೂ. ಗಳು ವೆಚ್ಚವಾಗುವವು. ಮುಂದಿನ ೨೦ ವರ್ಷದಲ್ಲಿ ಈ ಗುರಿಯನ್ನು ಸಾಧಿಸಲು ಯೋಜನೆಗಳನ್ನು ತಯಾರಿಸಲಾಗಿದೆ.

ಮಕ್ಕಳ ಆರೋಗ್ಯ ರಕ್ಷಣೆ

ಯುನಿಸೆಫ್ ಮುಖಾಂತರ ೧೭ ಕೋಟಿ ರೂ. ಬೆಲೆಯ ಹಾಲಿನ ಪುಡಿಯನ್ನು ಮಕ್ಕಳಿಗೆ ಹಂಚಲಾಗಿದೆ. ಅನೇಕ ಕಡೆ ಶಾಲೆಗಳಲ್ಲಿ ಮಧ್ಯಾಹ್ನ ಊಟವನ್ನು, ಹಾಲು, ಮಕ್ಕಳಿಗೆ ನೀಡಲು ಪ್ರಯತ್ನಿಸಲಾಗಿದೆ. ಸುಮಾರು ೬೦ ಲಕ್ಷ ಶಾಲಾ ಮಕ್ಕಳಿಗೆ ನೀಡಲು ಪ್ರಯತ್ನಿಸಲಾಗಿದೆ. ಸುಮಾರು ೪೦ ಲಕ್ಷ ಶಾಲಾ ಮಕ್ಕಳಿಗೆ ಇದರಿಂದ ಪ್ರಯೋಜನ ಲಭಿಸಿದೆ.

ಮಕ್ಕಳ ಆರೋಗ್ಯದ ಬಗ್ಗೆ ಅನೇಕ ಸಮೀಕ್ಷೆ ನಡೆಯುತ್ತಿವೆ ಅವರ ಆರೋಗ್ಯದ ಬಲವರ್ಧನೆಗೆ ಗಮನ ಕೊಡಲಾಗಿದೆ.

ಭಾರತದಲ್ಲಿ ಇಂದು ಹುಟ್ಟುವ ಮಗುವು ನಮ್ಮ ಹಿಂದಿನ ಜನಕ್ಕಿಂತ ಹೆಚ್ಚಿನ ಆರೋಗ್ಯದಾಯಕ ದೀರ್ಘ ಬಾಳನ್ನು ಬಾಳಲು ಶಕ್ಯವಾಗುವಂತೆ ನಮ್ಮ ಪ್ರಯತ್ನಗಳು ಮುಂದುವರಿದಿವೆ. ಜನಸಂಖ್ಯೆ ಬೆಳೆದಂತೆ ಸಾರ್ವಜನಿಕ ಆರೋಗ್ಯವನ್ನು ಕಾಪಾಡಿಕೊಂಡು ಬರಲು ಬಲುವೆಚ್ಚ ತಗಲುವದು. ಪ್ರಥಮ ಮೂರು ಯೋಜನೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಯೋಜನೆಗೆಂದು ನಾವು ೨೩೦ ಕೋಟಿ ರೂ. ಗಳನ್ನು ವೆಚ್ಚಮಾಡಿದ್ದೇವೆ. ನಾಲ್ಕನೇ ಯೋಜನಾವಧಿಯಲ್ಲಿ ಈ ಕಾರ್ಯಕ್ಕಾಗಿ ೧೦೦೦ಕೋಟಿ ರೂ. ವೆಚ್ಚ ಮಾಡಲು ಸೂಚಿಸಲಾಗಿದೆ.

ನಮ್ಮ ದೇಶದಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆದಿದೆ. ಭೂಮಿಯ ಒಂದು ನಲ್ವತ್ತನೇ ಅಂಶ ಭಾಗ ಭಾರತದಲ್ಲಿ ಇದೆ. ಆದರೆ ಭೂಮಿಯ ಒಂದು–ಎಂಟನೇ ಅಂಶದ ಜನಸಂಖ್ಯೆ ಇಲ್ಲಿ ನೆಲೆಸಿದೆ ೧೯೫೧ರಿಂದ ೧೯೬೧ ಅವಧಿಯಲ್ಲಿ ಭಾರತದ ಜನಸಂಖ್ಯೆ ಎಂಟು ಕೋಟಿಯಷ್ಟು ಹೆಚ್ಚಾಗಿದೆ. ಜನಸಂಖ್ಯೆಯನ್ನು ನಿಯಂತ್ರಿಸುವುದು ಸುಲಭದ ಮಾತೇನೂ ಅಲ್ಲ. ಆದರೂ ನಾವು ಏನನ್ನಾದರೂ ಮಾಡಿ ಜನಸಂಖ್ಯೆಯನ್ನು ಹಿಂದಕ್ಕೆ ತರಬೇಕು. ೧೯೮೬ರ ವೇಳೆಗೆ ನಮ್ಮ ಜನಸಂಖ್ಯೆ ೭೦ ಕೋಟಿಯಷ್ಟಾದರೆ ಮಾತ್ರ ನಾವು ಆಗ ಪರಿಸ್ಥಿತಿಯನ್ನು ನಿಯಂತ್ರಿಸಬಲ್ಲೆವು. ಇದನ್ನು ಸಾಧಿಸಲು ೧೯೮೬ ಸಾಲಿಗೆ ಪ್ರತಿ ಸಾವಿರ ಜನಸಂಖ್ಯೆಗೆ ಜನನ ಪ್ರಮಾಣವು ೧೮ಕ್ಕೆ ಇಳಿಯಬೇಕು. ಸದ್ಯಕ್ಕೆ ಜನನ ಪ್ರಮಾಣವು ಪ್ರತಿಸಾವಿರ ಜನರಿಗೆ ೪೦ ರಷ್ಟಿದೆ. ಜನಸಂಖ್ಯೆಯ ಹತೋಟಿಗೆ ಕುಟುಂಬ ಯೋಜನೆಯನ್ನು ಜನಪ್ರಿಯಗೊಳಿಸಲು ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಇಂದು ೧೬,೦೦೦ ಕೇಂದ್ರಗಳಲ್ಲಿ ಕುಟುಂಬ ಯೋಜನೆ ಬಗ್ಗೆ ಸಲಹೆ ನೀಡಲು ಸೌಕರ್ಯ ಕಲ್ಪಿಸಿ ಕೊಡಲಾಗಿದೆ. ಇದರ ಪೈಕಿ ೧೫,೦೦೦ ಕೇಂದ್ರಗಳು ಕೆಲಸ ಮಾಡುತ್ತಿವೆ. ಹತ್ತು ಲಕ್ಷ ಸ್ತ್ರೀಯರು ವಂಕೀಧಾರಣೆ ಮಾಡಿಕೊಂಡಿದ್ದಾರೆ. ೧೯೭೦ರ ಸಾಲಿಗೆ ೧೦೦ ಲಕ್ಷ ಮಹಿಳೆಯರು ವಂಕೀಧಾರಣೆ ಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ನಾವು ಎಲ್ಲಿಂದ ಕಥೆ ಪ್ರಾರಂಭಿಸಿದ್ದೆವೋ ಅಲ್ಲಿಗೆ ಹಿಂದಿರುಗೋಣ. ೧೯೧೧-೨೦ ಸಾಲಿನಲ್ಲಿ ಪ್ರತಿವರ್ಷ ಅಲಕ್ಷ್ಯ ಹೆಚ್ಚು ಜನ ಸಾಯುತ್ತಿದ್ದರು. ೧೯೫೧ರಲ್ಲಿ ಪ್ರತಿ ಸಾವಿರ ಜನರಲ್ಲಿ ಪ್ರತಿವರ್ಷ ೨೭ ಜನರು ಸಾವಿಗೆ ಬಲಿಯಾಗುತ್ತಿದ್ದರು. ಇಂದು ಈ ಸಂಖ್ಯೆ ೧೭ಕ್ಕಿಳಿದಿದೆ.

ಇದರ ಶ್ರೇಯಸ್ಸು ನಮ್ಮ ದೇಶದ ಡಾಕ್ಟರರಿಗೆ ಆರೋಗ್ಯ ವಿಷಯದ ಕಾರ್ಯಕರ್ತರಿಗೆ ಸಲ್ಲಬೇಕು. ನಮ್ಮ ಜನಸಂಖ್ಯೆಯಲ್ಲಿ ಇಳಿಮುಖವಾಗಿ ಪ್ರತಿ ಸಾವಿರ ಜನರಿಗೆ ೨೫ರಷ್ಟು ಜನನ ಪ್ರಮಾಣ ಉಂಟಾದರೆ ನಮ್ಮ ಪಂಚವಾರ್ಷಿಕ ಯೋಜನೆಗಳ ಲಾಭಗಳು ಎಲ್ಲರಿಗೂ ದೊರೆಯುವವು. ಆ ನೆಲೆಯಲ್ಲೇ ನಾವು ಹೆಚ್ಚು ಉತ್ಪಾದಿಸಲು ಶಕ್ತರಾಗುವೆವು, ಹೆಚ್ಚು ಗಳಿಸಲೂ ಹೆಚ್ಚು ಹೆಚ್ಚಾಗಿ ಬೆಳೆಸುದರಲ್ಲಿ ಪಾಲುಗೊಳ್ಳಲೂ ನಾವು ಸಮರ್ಥರಾಗುವೆವು. ದೀರ್ಘಾಯುಷ್ಯವನ್ನು ಸುಖೀ ಜೀವನವನ್ನಾಗಿ ಕಳೆಯಬಹುದು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಇಲ್ಲಿ ನಾವು ಅಂಬೆಗಾಲಿ ಕ್ಕುತ್ತಿದ್ದೇವೆ

(ಹತ್ತನೇ ಪುಟದಿಂದ)

ಮೂರು ಲೀಪಿಯ ಉನ್ನತ ಶಿಕ್ಷಣಗಳ ವ್ನೈ ಹಗಲು ಹೊತ್ತಿನಲ್ಲಿ ನಡೆಯುವಂಥ ವ್ರ ಒಂದು. ಕೆಲಸ ಮಾಡುತ್ತ ಕಲಿಯು ವವರಿಗೆ ಸಂಜೆ ಹೊತ್ತಿನಲ್ಲಿ ನಡೆಯುವಂ ಥವು ಮತ್ತು ಪತ್ರವ್ಯವಹಾರದ ಮೂಲ ಕ ಶಿಕ್ಷಣ ನೀಡ ವಂಥವು ಉಳಿದುವು.

ಸಂಜೆ ಹೊತ್ತು ಮತ್ತು ಪತ್ರ ಮುಖೇನ ಶಿಕ್ಷಣ

ಸೋವಿಯೆತ್ ಒಕ್ಕೂಟದಲ್ಲಿ ಸಂಜೆ ಹೊತ್ತು ನಡೆಯುವ ಮತ್ತು ಪತ್ರ ವ್ಯವ ಹಾರ ಮುಖೇನ ಶಿಕ್ಷಣ ನೀಡುವಂಥ ವಿ ದ್ಯಾಪೀಠಗಳ ಕೆಲವು ವಿಭಾಗಗಳು ಕೂ ಡ ಸಂಜೆ ಹೊತ್ತು ಶಿಕ್ಷಣ ನೀಡುತ್ತವೆ. ಪತ್ರವ್ಯವಹಾರ ಮೂಲಕವೂ ಶಿಕ್ಷಣ ಕೊಡುತ್ತವೆ. ಶೇ.೫೦ರಷ್ಟು ವಿದ್ಯಾರ್ಥಿಗ ಳು ಈ ಪೀಠಗಳಿಗೆ ತೆರಳುತ್ತಾರೆ. ಬಹು ದೊಡ್ಡ ಕೈಗಾರಿಕಾ ಸಂಸ್ಥೆಗಳಲ್ಲೂ ನಿ ರ್ಮಾಣ ಕ್ಷೇತ್ರಗಳಲ್ಲೂ ಈ ರೀತಿಯ ಏ ರ್ಪಾಟುಗಳನ್ನು ಕಲ್ಪಿಸಲಾಗಿದೆ. ಇಂಥಲ್ಲಿ ಕಾಲೇಜುಗಳ ಶಾಖೆಗಳನ್ನು ತೆಗೆಯಲಾ ಗಿದೆ.

ವಿದ್ಯಾರ್ಥಿಗಳಿಗೆ ಉತ್ಪತ್ತಿ ವಿಧಾನದ ಪರಿಚಯವಾಗುವುದರಿಂದ ತಾತ್ವಿಕ ತರ ಬೇತು ಕೊಡುವುದರ ಕಡೆಗೇ ಮುಖ್ಯ ಗಮನ ಕೊಡಲಾಗುತ್ತದೆ. ಅಧ್ಯಯನದ ಕೊನೇ ವರ್ಷಗಳಲ್ಲಿ ಮಾತ್ರ ವಿದ್ಯಾರ್ಥಿಗ ಳು ಸಂಶೋಧನಾ ವಿಧಾನಗಳನ್ನೂ, ವಿ ನ್ಯಾಸ ಕಾರ್ಯಗಳನ್ನೂ ಪರಿಪೂರ್ಣವಾಗಿ ತಿಳಿದುಕೊಳ್ಳುವುದಕ್ಕಾಗಿ ಪೂರ್ಣಾವಧಿ ಶಿಕ್ಷಣಕ್ಕೆ ತೆರಳುತ್ತಾರೆ.

ಕೆಲಸ ಮಾಡುತ್ತ ಕಲಿಯುತ್ತಿರುವಂ ಥವರಿಗೆ ಬಹು ಹೆಚ್ಚಿನ ಸೌಕರ್ಯಗಳ ನ್ನು ಕಲ್ಪಿಸಲಾಗಿವೆ. ಉದಾಹರಣೆಗೆ: ಮೊ ದಲ ಮತ್ತು ಎರಡನೇ ವರ್ಷದ ವಿದ್ಯಾ ರ್ಥಿಗಳು ಪ್ರತಿಯೊಂದು ವರ್ಷಕ್ಕೂ ಅಧ ಿಕ ೩೦ ದಿನಗಳ ಸಂಬಳ ಸಹಿತ ರಜೆ ಪಡ ಯುತ್ತಾರೆ. ಈ ಅವಧಿಯಲ್ಲಿ ಅವರು ಪ್ರ ಯೋಗ ಶಾಲೆಯ ಕಾರ್ಯಗಳನ್ನು ಮಾ ಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತಾರೆ. ಮೂರನೇ ವರ್ಷದ ಮತ್ತು ಜೇಷ್ಠ ವಿ ದ್ಯಾರ್ಥಿಗಳಿಗೆ ೪೦ ಅಧಿಕ ದಿನಗಳ ಸಂಬ ಳ ಸಹಿತ ರಜೆ ದೊರಕಲಾಗುತ್ತದೆ.

ವಿದ್ಯಾರ್ಥಿಗಳು ತಮ್ಮ ಡಿಪ್ಲೋಮಾಗ ಳನ್ನೂ ಅರ್ಪಿಸಲು ಸಿದ್ಧತೆ ಮಾಡುವ ಕಾ ಲದಲ್ಲಿ ೪ ತಿಂಗಳ ಸಂಬಳ ಸಹಿತ ರಜೆ ಪ ಡೆಯುತ್ತಾರೆ. ಅಲ್ಲದೆ ಅಧ್ಯಯನದ ಕೊ ನೇ ಎರಡು ವರ್ಷಗಳಲ್ಲಿ ಪ್ರತಿಯೊಂದು ವಾರಕ್ಕೂ ಶೇ. ೫೦ರಷ್ಟು ಸಂಬಳದೊಡನೆ ಒಂದು ದಿನದ ರಜೆಯನ್ನೂ ಪಡೆಯು ತ್ತಾರೆ.

ಕಾಲೇಜಿಗೆ (ಪ್ರಯೋಗ ಶಾಲೆಯ ಕೆ ಲಸಗಳಿಗಾಗಿ, ಪರೀಕ್ಷೆಗಳನ್ನು ಕಟ್ಟುವು ದಕ್ಕಾಗಿ) ಹೋಗುವ ದಾರಿಯ ಖರ್ಚಿನ ಲ್ಲಿ ಅರ್ಧದಷ್ಟನ್ನು ಮಾತ್ರವೇ ವಿದ್ಯಾರ್ಥಿ ಗಳು ನೀಡುತ್ತಾರೆ.

ಕನ್ನಡ ನಾಟಕ ರಚನೆಯ ಸ್ಪರ್ಧೆ—1967

ಉಡುಪಿಯ ರಂಗಭೂಮಿ (ರಿ) ಸಂಸ್ಥೆಯ ವ... ಕನ್ನಡ ಸಾಮಾಜಿಕ ನಾಟಕ ರಚನೆಯ ಸ್ಪರ್ಧೆ ಏರ್ಪಡಿಸಿದ್ದು, ಉತ್ತಮ ನಾಟಕಗಳಿ ಗೆ ಅನುಕ್ರಮವಾಗಿ ರೂ. 100/- ಮತ್ತು ರೂ. 50/ನ್ನು— ಪ್ರಥಮ ಮತ್ತು ದ್ವಿತೀಯ ಬಹು ಮಾನಗಳಾಗಿ ಕೊಡಲಾಗುವುದೆಂದು ನಿಶ್ಚ ಯಿಸಲಾಗಿದೆ.

ಯಾವ ತರದ ನಿರ್ಬಂಧವೂ ಇಲ್ಲದೆ ಸ್ಪರ್ಧೆ ಯಲ್ಲಿ ಯಾರೂ ಭಾಗವಹಿಸಬಹುದು. ಕೃತಿ ಯು ಸಂಪೂರ್ಣವಾಗಿ ಸ್ವತಂತ್ರವೂ ನವೀನ ವೂ ಆಗಿರಬೇಕು. ನಾಟಕದ ಕಥಾವಸ್ತು ಸಾ ಮಾಜಿಕವಾಗಿರಬೇಕು. ನಾಟಕಾಭಿನಯದ ಕಾಲಾವಧಿಯು (ಸಂಗೀತವನ್ನು ಬಿಟ್ಟು) ಎರ ಡು ತಾಸಿಗಿಂತ ಜಾಸ್ತಿ ಹಾಗೂ ಮೂರು ತಾ ಸಿಗಿಂತ ಕಡಿಮೆಯಾಗಿರಬೇಕು.

ಸ್ಪರ್ಧೆಗೆ ನಾಟಕದ ಹಸ್ತಪ್ರತಿಗಳನ್ನು 'ರಂ ಗಭೂಮಿ' ತಲುಪುವ ಕೊನೆಯ ತಾರೀಕು 21-8-1967 ಆಗಿರುತ್ತದೆ.

ಬಹುಮಾನ ನಿರ್ಣಯ ವಿಷಯದಲ್ಲಿ 'ರಂಗ ಭೂಮಿ' ನೇಮಿಸಿದ ತೀರ್ಪುಗಾರರ ತೀರ್ಮಾ ನವೇ ಕೊನೆಯದು. ಈ ಕುರಿತು ಯಾವ ಪ ತ್ರ ವ್ಯವಹಾರವನ್ನೂ ನಡೆಸಲಾಗುವುದಿಲ್ಲ.

ಡಾ| ಕೆ. ಎಲ್. ಐತಾಳ
ಅಧ್ಯಕ್ಷ
ರಂಗಭೂಮಿ, ಉಡುಪಿ.

ಸಮಾಜ ಹಾಳಾಗುತ್ತಿದೆ

(ನಾಲ್ಕನೇ ಪುಟದಿಂದ)

ಮನ್ನು ಸ್ಮರಿಸಬಹುದಾಗಿದೆ. ಅವರು, ಸ್ಥ ಳೀಯ ಹೈಸ್ಕೂಲುಗಳಲ್ಲಿ ಓದುವ ಹೆಣ್ಣು ಮಕ್ಕಳು ಕನಿಷ್ಠ ಮೇಲಿನ ಎರಡು ತರಗ ತಿಗಳಲ್ಲಾದರೂ ಸೀರೆಯನ್ನುಡುವಂತೆ ಕಡ್ಡಾಯ ಮಾಡಬೇಕೆಂದು ಕೇಳಿಕೊಂ ಡಿದ್ದರು. ಅತಿಯಾಗಿ ಬೆಳೆದುನಿಂತ ಹೆಣ್ಣು ಮಕ್ಕಳೂ ಮಂಡಿ ಮೇಲೆ ನಿಲ್ಲುವ ಸ್ಕರ್ಟ್ ಹಾಕುವ ಫ್ಯಾಶನ್ ಇತ್ತೀಚೆಗೆ ಅತಿಯಾಗಿ ಬೆಳೆಯುತ್ತಿರುವುದನ್ನು ಅ ವರು ಅತಿ ವ್ಯಸನದಿಂದ ಗಮನಿಸಿ, ಮೇ ಲಿನ ಠರಾವನ್ನು ಸ್ವೀಕರಿಸಿದರು. ಈ ಮಾತು ಎಲ್ಲಾ ಕಡೆಗೂ ಅನ್ವಯಿಸು ತ್ತದೆ.

ಭಾವೀ ನಾಗರಿಕತೆಯ ಅಸ್ತಿವಾರದಂ ತಿರುವ ತರುಣ ವರ್ಗಕ್ಕೆ ನಾವು ಈ ರೀತಿ ಸ್ವೇಚ್ಛಾಚಾರಕ್ಕೆ ಚಾಲನೆ ಕೊಡುವಂತೆ ಉಡಿಗೆ—ತೊಡಿಗೆ ನುಡಿ ನಡತೆಯನ್ನು ಅನುಸರಿಸಲು ಬಿಟ್ಟರೆ ನಮ್ಮ ಭವಿಷ್ಯ ಹೇಗಾದೀತು. ಸಮಾಜ ಸುಧಾರಕರೂ, ಶೈಕ್ಷಣಿಕ ಸಂಸ್ಥೆಗಳೂ ಈ ವಿಚಾರ ಆ ಲೋಚಿಸಬೇಕು.

(ಪ. ಸ.)

ಎಲ್ಲೆಲ್ಲಿ ಏನೇನು?

ಮಣಿಪಾಲದಲ್ಲಿ ಅ. ಭಾ. ಶಸ್ತ್ರ ವೈದ್ಯರ ಸಮ್ಮೇಳನ

ತಾ. 27ರಂದು, ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಂಗಣದ ಬಯಲಿ ನಲ್ಲಿ ಭವ್ಯವಾಗಿ ನಿರ್ಮಿಸಲಾದ ಮಂಟಪದಲ್ಲಿ 27ನೇ ಅ. ಭಾ. ಸರ್ಜನರ ಸಮ್ಮೇಳನವನ್ನು, ಕೇಂದ್ರ ಸಚಿವ ಶ್ರೀ ಸಿ. ಎಂ. ಪೂಣಚ್ಚನವ ರು, ಡಾ|| ಎಸ್. ಟಿ. ಪಾಸ್ತವರ ಅಧ್ಯಕ್ಷತೆ ಯಲ್ಲಿ ಉದ್ಘಾಟಿಸುತ್ತಾ, ತರುಣ ವೈದ್ಯರು ಡಿ ಗ್ರಿ ಸಂಪಾದಿಸಿದ ಮಾತ್ರಕ್ಕೆ ತಮ್ಮ ಶಿಕ್ಷಣಗಾ ರಿಕೆ ಮುಗಿಯಿತೆಂದು ಭಾವಿಸದೆ ಪ್ರಯೋಗಿಕ ಸಾಧನೆ—ತಾಂತ್ರಿಕ ಸಂಶೋಧನೆಗಳ ಮೂ ಲಕ ಹೆಚ್ಚಿನ ಅನುಭವ ಗಳಿಸಬೇಕೆಂದೂ, ಇಂದು ಸರ್ಜರಿಯ ವಿಜ್ಞಾನ ಬಹಳ ಮುಂದು ವರಿಯುತ್ತಿದ್ದು ಆಧುನಿಕ ಸರ್ಜರಿ ವಿಧಾ ನಗಳಿಂದ ಅನೇಕ ಉಪಯುಕ್ತ ಸಾಧನಗಳಾ ಗಿವೆಯೆಂದೂ ಹೇಳಿದರು.

ಮೈಸೂರು ಆರೋಗ್ಯ ಸಚಿವ ಡಾ| ಕೆ. ನಾ ಗಪ್ಪ ಆಳ್ವರು ಈ ಸಂದರ್ಭದಲ್ಲಿ ವೈಜ್ಞಾನಿಕ ಅಧಿವೇಶನವನ್ನು ಉದ್ಘಾಟಿಸುತ್ತಾ ಸಂತತಿ ನಿ ಯಂತ್ರಣದ ಬಗ್ಗೆ ಇಲ್ಲಿ ವಿಚಾರ ವಿನಿಮಯ ನಡೆಸಿರುವಂಥದು ಸ್ವಾಗತಾರ್ಹ. ಸರಿಯಾದ ರೀತಿಯಲ್ಲಿ ಜನಕ್ಕೆ ಈ ಕುರಿತು ಮಾರ್ಗದರ್ಶ ನ ಅತ್ಯಗತ್ಯವೆಂದರು. ಗ್ರಾಮಾಂತರ ಜನರಿಗೆ ಹೆಚ್ಚಿನ ವೈದ್ಯಕೀಯ ಸವಲತ್ತನ್ನು ನಾವು ನೀ ಡಬೇಕೆಂದೂ ಅವರು ಹೇಳಿದರು. ಶ್ರೀ ಟಿ. ಎ. ಪೈಗಳು ಸ್ಮಾರಕ ಸಂಚಿಕೆಯ ಉದ್ಘಾಟನೆಯ ನ್ನು ಮಾಡುತ್ತಾ, ದೇಶದ ಜನರಲ್ಲಿರುವ ಜಡ ಭರಿತ ಸ್ವಭಾವವನ್ನು ಬದಲಿಸುವ ಜರೂರು ಈಗಿನ ಅವಶ್ಯ ನಿವಾರಣೆಯಾಗದು. ಹಳ್ಳಿಗೆ ಹೋಗಿ ಸರ್ಜರಿ ಕೆಲಸ ಮಾಡಿ ಎಂದು ಉಪ ದೇಶ ಮಾಡುವದು ಸುಲಭ ಆದರೆ ಹಾಗೆ ಮಾ ಡುವುದಕ್ಕೆ ಅಲ್ಪ ಸೌಕರ್ಯ, ಮೇನಿವೆಯೆನ್ನುವುದ ನ್ನು ನಾವು ನೋಡಬೇಕಾಗಿದೆ. ಇಂದು ದೇಶದ ಮುಂದಿರುವ ಸಮಸ್ಯೆ ಬದಲಾಗಿ ದೇಶ ಎಲ್ಲ ಮುಖದಲ್ಲಿಯೂ ಪ್ರಗತಿಹೊಂದಬೇಕಾದರೆ ಏ ಕ ಮನಸ್ಸಿನಿಂದ ಒಂದಾಗಿ ದುಡಿಯಬೇಕಾ ದ್ದು ಅವಶ್ಯವೆಂದು ಹೇಳಿದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಡಾ| ಟಿ. ಮಾಧವ ಪೈಗಳು ಸ್ವಾಗತಿಸುತ್ತಾ ಎಕೆಡೆಮಿಯ ಶೈಕ್ಷಣಿಕ ಸಂಸ್ಥೆಗಳ ಪರಿಚಯ ಮಾಡಿಸಿಕೊಟ್ಟು ಇದೊಂದು ಆದರ್ಶ ಸಂಸ್ಥೆ ಯಾಗಿದೆಯೆಂದರು.

ಶ್ರೀ ಟಿ. ರಮೇಶ ಪೈಗಳು ಶಿವಳ್ಳಿ ಪಂಚಾ ಯತಿನ ಪರವಾಗಿ ಮಾನಪತ್ರವನ್ನರ್ಪಿಸಿದರು. ಡಾ| ಎ. ಕೃಷ್ಣರಾಯರು ಅಭಿನಂದಿಸಿ ಬಂದ ಸಂದೇಶಗಳನ್ನೋದಿದರು.

ಬಳಿಕ ಅಧ್ಯಕ್ಷ ಸ್ಥಾನದಿಂದ ಡಾ|| ಎಸ್. ಪಿ. ವಾಸ್ತವಾರವರು ಮಾತನಾಡುತ್ತಾ, ಹಳ್ಳಿ ಗಳಿಗೆ ತಜ್ಞ ವೈದ್ಯರ ಸಹಕಾರ ದೊರಕುವಂತೆ ಸರಕಾರ ಪ್ರಯತ್ನಿಸಬೇಕೆಂದರು. ಮುಂದು ವರಿಸುತ್ತಾ ಅವರು, ಚಿಕ್ಕ ಪ್ರಾಯದ ವೈದ್ಯರ ನ್ನು ಸೈನ್ಯಕ್ಕೆ ಸೇರಲು ಪ್ರೋತ್ಸಾಹಿಸಬೇಕು ಎಂದರು. ಭಾರತದಂಥ ವಿಶಾಲ ದೇಶದಲ್ಲಿ ಕೇ ವಲ 84 ಮೆಡಿಕಲ್ ಕಾಲೇಜುಗಳಿದ್ದು, ಇದು ನಮ್ಮ ರಾಷ್ಟ್ರದ ಅಗತ್ಯಗಳನ್ನು ಪೂರೈಸ ಲು ನಮಗೆ ಬೇಕಾದಷ್ಟು ವೈದ್ಯರನ್ನು ಒದಗಿ ಸಲು ಬಹಳ ಕಡಿಮೆಯಾಗಿದೆ. ನಮ್ಮಲ್ಲಿ ಮೆಡಿ ಕಲ್ ಕಾಲೇಜುಗಳ ಸಂಖ್ಯೆ ಹೆಚ್ಚಾಗಬೇಕು. ಆದರೆ ಮೊದಲಾಗಿ, ಈಗಿರುವ ಕಾಲೇಜುಗಳ ಕೊರತೆಗಳನ್ನು ತುಂಬಿಸಿಕೊಳ್ಳಬೇಕು ಎಂ ದೂ ಹೇಳಿದರು. ಕೊನೆಯಲ್ಲಿ ಅವರು ನಮ್ಮ ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿಯಂ ತ್ರಿಸಲು ನಾವು ವಿಶೇಷ ಪರಿಶ್ರಮ ವಹಿಸಬೇ ಕೆಂದೂ ನುಡಿದರು.

ಕೊನೆಯಲ್ಲಿ ಡಾ| ಎಂ. ಕೆ. ಪೈಗಳು ಧನ್ಯ ವಾದ ಸಮರ್ಪಿಸಿದರು.

ತಾ. 30ರ ತನಕ ಯಶಸ್ವಿಯಾಗಿ ಜರಗಿದ ಈ ಸಮ್ಮೇಳನದಲ್ಲಿ ಬೇರೆ ಬೇರೆ ವಿಭಾಗದಲ್ಲಿ ತಜ್ಞರಾದವರಿಂದ ಲಿಖಿತ ಪತ್ರಗಳು ಓದಲ್ಪ ಟ್ಟವು. ರಾತ್ರಿ ಮನರಂಜನಾ ಕಾರ್ಯಕ್ರಮ ಗಳಿದ್ದುವು. ಸ್ವಾಗತ ಸಮಿತಿಯವರು ಅತಿಥಿ ಅಭ್ಯಾಗತರಿಗೆ ಯಾವ ಅನಾನುಕೂಲತೆಯೂ ಆಗದಂತೆ ಯೋಗ್ಯ ವ್ಯವಸ್ಥೆ ಮಾಡಿದ್ದರು.

ಶ್ರೀ ಪೊವಾರಡಿ ಗೋವಿಂದರಾಜ ಹೆಗ್ಡೇರ ನಿಧನ

ಪುತ್ತೂರಿನ ವರ್ಷಗಳ ಕಾಲ ಪುತ್ತೂರು ಬೋರ್ಡಿನ ಸದಸ್ಯರೂ ಪಂಚಾಯತಿನ ಅಧ್ಯಕ್ಷರೂ ಆಗಿದ್ದ ಪೊವಾರಡಿ ಗೋವಿಂದರಾಜ ಹೆಗ್ಡೇರು ಕೆಲವು ಸಮಯದಿಂದ ಅನಾರೋಗ್ಯದಿಂದಿದ್ದು ತಾರೀಕು 27-12-66ರಂದು ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ದಿವಂಗತರು ಪ್ರತಿಷ್ಠಿತ ಮನೆತನಕ್ಕೆ ಸೇರಿದವರಾಗಿದ್ದು ಉತ್ತಮ ಕೃಷಿಕರಾಗಿ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದ್ದ ರು. ಗ್ರಾಮಾಂತರ ಪ್ರದೇಶದಲ್ಲಿ ಶಾಲೆಗಳನ್ನು ತೆರೆದು ವಿದ್ಯಾ ಪ್ರಸಾರಕ್ಕೆ ನೆರವಾಗಿದ್ದರು. ಜಿಲ್ಲಾ ಮಂಡಲ ಕಾಂಗ್ರೆಸ್ ಅಧ್ಯಕ್ಷರಾ ಗಿದ್ದರಲ್ಲದೆ ಜನಪ್ರಿಯರಾಗಿಯೂ ಇದ್ದರು.

ಹರೀಶ್ ಜೈನರಿಗೆ ಸರಕಾರಿ ಗೌರವ

ನೇಶನಲ್ ಎಡ್ವರ್ಟೈಸಿಂಗ್ ಸರ್ವಿಸ್ ಪ್ರೈವೇಟ್ ಲಿಮಿಟೆಡ್ ಇದರ ಅಧ್ಯಕ್ಷ ಮ ತ್ತು ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಹರೀ ಶ್ ಸಿ ಜೈನ್ ಇವರನ್ನು ಮಹಾರಾಷ್ಟ್ರ ಸ ರಕಾರವು ಜಸ್ಟೀಸ್ ಆಫ್ ಪೀಸ್ ಆಗಿ ಗೌರ ವಿಸಿದೆ.

ಇವರು ಎರಡು ತಿಂಗಳ ಹಿಂದೆ ನೋರ್ತ್ ಬೊಂಬಾಯಿ ಸೆಂಟ್ರಲ್ ಕೋಪರೇಟಿವ್ ಕನ್ಸ್ಯೂಮರ್ಸ್ ಹೋಲ್‌ಸೇಲ ಎಂಡ್ ರಿಟೈಲ್ ಸ್ಟೋರ್ಸ್ ಲಿಮಿಟೆಡಿನ ಡೈರೆಕ್ಟರರಾಗಿ ರಾಜ್ಯ ಸರಕಾರದಿಂದ ನೇಮಕ ಹೊಂದಿದ್ದರು.

ಜಾಹೀರಾತು ಕಸುಬಿನವರೊಬ್ಬರು ಜೆ. ಪಿ. ಆಗುವುದು ಇದೇ ಪ್ರಥಮವಾಗಿದೆ.

ವ್ಯಾಪಾರಿಯ ಸಂತೃಪ್ತಿ

ಒಬ್ಬ ಜವುಳಿ ವ್ಯಾಪಾರಿಯ ಅಂಗಡಿ ಯಿಂದ ಹಿಂದಿನ ರಾತ್ರಿ ಕಳವಾದ ವಾ ರ್ತೆ ಕೇಳಿ ನೆರೆಕರೆಯವರು ಬಂದು ಸೇರಿ ದ್ದರು.

'ಎಷ್ಟು ಬೆಲೆಯ ಜವುಳಿ ಕಳವಾಗಿದೆ?' —ಒಬ್ಬ ವ್ಯಾಪಾರಿಯನ್ನು ವಿಚಾರಿಸಿದ.

'ಸುಮಾರು ರೂ. 4000ದಷ್ಟು...ಆದ ರೆ ಒಂದು ಸಮಾಧಾನ, ಒಂದು ವಾರದ ಹಿಂದೆ ಈ ಕಳವು ಆಗಿದ್ದರೆ ರೂ. 8000 ನಷ್ಟವಾಗುತ್ತಿತ್ತು...'

"ಅದೇನು?..."

'ಹಳೆ ಸರಕುಗಳೆಲ್ಲವೂ ವಿಕ್ರಯವಾಗ ಲೆಂದು ಶೇ. 50ರಷ್ಟು ಬೆಲೆ ಇಳಿತದ ಪ್ರ ಕಟಣೆ ರಿಯಾಯತಿಯ ದರ ಹೇರಿದ್ದು ಈ ವಾರದಲ್ಲಾಗಿತ್ತು. ಇಲ್ಲವಾದರೆ ಆ ಕಳ್ಳರಿಗೆ ನನ್ನ ಹೆಚ್ಚಿನ ನಷ್ಟವಾಗದು."

ಎಚ್. ಎಲ್.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಜಿಲ್ಲಾಧಿಕಾರಿಗಳಿಂದ ಸತ್ಯಸಾಯಿ ವೃಂದದ ಉದ್ಘಾಟನೆ

18-12-66ರಂದು ಅಲ್ಲಿ ಗ್ರಾಮದ ಸತ್ಯಸಾಯಿ ನಿವಾಸದಲ್ಲಿ ಶ್ರೀ ಸತ್ಯಸಾಯಿ ಭಕ್ತವೃಂದವೆಂಬ ಧಾರ್ಮಿಕ ಸಂಸ್ಥೆಯನ್ನು ಜಿಲ್ಲಾಧಿಕಾರಿ ಶ್ರೀ ಯಚ್. ಎಲ್. ನಾಗೇಗೌಡ ಇವರು ಉದ್ಘಾಟಿಸುತ್ತಾ "ಪರಮ ಪೂಜ್ಯ ಸಾಯಿ ಬಾಬಾರವರ ದಯೆಯಿಂದ ಈ ಸಂಸ್ಥೆಯು ಅಭಿವೃದ್ಧಿಗೊಂಡು ಹೆಚ್ಚಿನ ಧಾರ್ಮಿಕ ಜಾಗೃತಿಯನ್ನುಂಟು ಮಾಡಲು ಶಕ್ತವಾಗಲಿ" ಎಂದು ಹಾರೈಸಿದರು. ಇದೇ ದಿನ ಶ್ರೀ ಸತ್ಯಸಾಯಿ ಭಕ್ತವೃಂದದ ಆಶ್ರಯದಲ್ಲಿ ನಡೆಸಿದ ಪ್ರಶಾಂತಿ ಧರ್ಮೋತ್ಸವದ ಅಂಗವಾಗಿ ಉಪನ್ಯಾಸ ಕಾರ್ಯಕ್ರಮವು ಸಂಜೆ ಪ್ರಾರಂಭವಾಯಿತು. ಆರಂಭದಲ್ಲಿ ಧಾರವಾಡದ ಜನತಾ ಶಿಕ್ಷಣ ಸಮಿತಿಯ ಬನಶಂಕರಿ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲ್ ಆರ್. ವೈ. ಧಾರವಾಡ್‌ಕರ್ ಮತ್ತು ಯಂ. ಜಿ. ಯಂ. ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಯಚ್. ಸುಂದರ ರಾವ್, ಇವರು ಭಗವಾನ್, ಬಾಬಾರವರ ತತ್ವ ಹಾಗೂ ಮಹಿಮಾ ವಿಶೇಷಗಳನ್ನು ವಿವರಿಸಿದರು.

ಉಪನ್ಯಾಸ ಸಭೆಗಳ ನಂತರ ಲೋಕ ಸೇವಾ ಹೈಸ್ಕೂಲಿನ ವಿದ್ಯಾರ್ಥಿಗಳಿಂದ ಭಕ್ತ ಪುರಂದರ ದಾಸ ಎಂಬ ನಾಟಕ ಅಭಿನಯಿಸಲ್ಪಟ್ಟಿತು.

ಎರಡನೆಯ ದಿನವೂ ಪ್ರಣವೋಚ್ಚಾರಣೆ, ಸುಪ್ರಭಾತಗಳೊಂದಿಗೆ ಕಾರ್ಯಕ್ರಮವು ಪ್ರಾರಂಭವಾಗಿ ವೇದಪಾರಾಯಣದ ನಂತರ ಶ್ರೀ ಸತ್ಯಸಾಯಿಬಾಬಾರವರ ತತ್ವಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮಗಳನ್ನು ಹೇಗೆ ಅನುಷ್ಠಾನಕ್ಕೆ ತರಬಹುದು ಎಂಬ ಕುರಿತು ಫಲಪ್ರದವಾದ ವಿಚಾರಗೋಷ್ಠಿಯೊಂದು ನಡೆಯಿತು. ಆಮೇಲೆ ಭಜನೆ ಪೂಜೆಗಳ ನಂತರ 8-30ಕ್ಕೆ ಮಿತ್ತೂರು ಶ್ರೀ ಪುರೋಹಿತ ಶಂಕರ ನಾರಾಯಣ ಭಟ್ಟರಿಂದ ಶ್ರೀ ಸತ್ಯಸಾಯಿ ಗೀತಾ ಪ್ರವಚನವು ನಡೆಯಿತು. ಶ್ರೀ ಯಚ್. ಯಂ. ಶಿವರಾಂ ಪ್ರಶಾಂತಿ ಸಂಪಾದಕರು, ಶ್ರೀ ಗಿರಂಕಲ್ಲು ಕೃಷ್ಣ ಭಟ್ಟರು; ಯಂ. ನಾರಾಯಣ ಭಟ್ ಬಿ. ಯಸ್. ಸಿ. ಬಿ. ಟಿ. ಅಧ್ಯಕ್ಷ, ಲೋಕ ಸೇವಾ ವೃಂದ; ಇವರು ಮತ್ತು ಬಿ. ಪ್ರಭಾಕರ ರಾವ್ ಸಂಜೆ 6ಕ್ಕೆ ಪ್ರಾರಂಭವಾದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರ

ಉಡುಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 29 of 1966.

1) ಸರಸ್ವತಿ 2) ರಾಧಾಕೃಷ್ಣ— ಮೃತ ಮನಡಾಕ್ಷಿ ಅಮ್ಮನ ಮ್ಯಾನೇಜರ್ ಮಕ್ಕಳು— ಕ್ಷೇಮಚಿಂತಕಳು— ಚಿಕ್ಕತಾಯಿ—ಜಲಜಾಕ್ಷಿ ಅಮ್ಮ—ಶಿವಪುರ ರಾಮರಾಯರ ವಿಧವೆ—ಕಾರ್ಕಳ ತಾಲೂಕು ಶಿವಪುರ ಗ್ರಾಮ

—ಅರ್ಜಿದಾರ್ರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದ್ರೆ:—

ತಾರೀಕು 1—1—1966ರಲ್ಲಿ ಮೃತಪಟ್ಟ ಬೆಳ್ಳ ಪುಟ್ಟಣ್ಣ ಭಟ್ರ ಮಗಳು ಮನಡಾಕ್ಷಿ ಅಮ್ಮನ ಬಾಬ್ತು The Special Land Acquisition Officer (West-coast Road),— Mangalore-ಯವರ ಆಫೀಸಿನಲ್ಲಿ L. A. C. No—6/1960—Ref: E. 880/64ರ ಪ್ರಕಾರ Revenue Depositನಲ್ಲಿರುವ ರೂಪಾಯಿ 768—82ನ್ನು ಪಡೆಯುವರೆ ಸದ್ರಿ ಮ್ಯಾನರ್ ಅರ್ಜಿದಾರ್ರ ಕ್ಷೇಮ ಚಿಂತಕಳಾಗಿ ತನ್ನ ಹೆಸರಿನಲ್ಲಿ ಒಂದು ವಾರೀಸು ಪತ್ರ ಸರ್ಟಿಫಿಕೇಟು ಕೊಡಬೇಕಾಗಿ ಸದ್ರಿ ಅರ್ಜಿದಾರ್ರ ಕ್ಷೇಮಚಿಂತಕಳು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ.7—1—1967ಕ್ಕೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಆ ದಿವ್ಸ ಪೂರ್ವಾಹ್ನ 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Balachandra Rao.
Advocate for petitioners.
Udipi, 31—12—1966.

ಮದ ಅಂಗವಾಗಿ ಮೂಡುಬಿದಿರೆಯ ಕುಮಾರಿ ವಸುಂಧರಾ ಇವರಿಂದ ಭರತನಾಟ್ಯ, ಆಕಾಶವಾಣಿ ಕಲಾವಿದರಾದ ಶ್ರೀ ಗೋಪಾಲಕೃಷ್ಣರ ವೇಣುವಾದನ ನಡೆಯಿತು.

ವಿದೇಶ ಪ್ರಯಾಣ

ಕುಂದಗೆ ಶ್ರೀ ಪಿ. ಕೆ. ಗೌಡರ ಪುತ್ರಿ ಶ್ರೀಮತಿ ಅಮೂಲ್ಯ ಕೆ. ಅಧಿಕಾರ್ ಇವರು ಕೆನಡಾದಲ್ಲಿರುವ ತಮ್ಮ ಪತಿ ಶ್ರೀ ಕುಶಾಲಪ್ಪ ಅಧಿಕಾರ್ ಇವರನ್ನು ಕಾಣಲು ತಾರೀಖು 28-12-66ರಂದು ಮುಂಬಾಯಿಯಿಂದ ವಿಮಾನ ಮೂಲಕ ಕೆನಡಾಕ್ಕೆ ತೆರಳಿದರು.

ತೆರಳುವ ಮುನ್ನ ಶ್ರೀಮತಿಯವರಿಗೆ ಬೋರ್ಡ್ ಹಾ. ಎ. ಶಾಲೆ ಕೆಯ್ಯೂರಿನಲ್ಲಿ ಸತ್ಕಾರವನ್ನೇರ್ಪಡಿಸಲಾಯಿತು. ಶಾಲಾ ಅಧ್ಯಾಪಕ ವೃಂದ ವಿದ್ಯಾರ್ಥಿ ಬಳಗ ಹಿತೈಷಿಗಳು ಶುಭಾಶೀರ್ವಾದಗಳನ್ನಿತ್ತರು. ಶ್ರೀಮತಿಯವರು ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ನಾಲ್ವರಿಗೆ 1967ರ ಹೊಸ ವರ್ಷದ ಪ್ರಶಸ್ತಿ

ಉಡುಪಿ, ತಾ. 1. ಬೇರೆಬೇರೆ ಕ್ಷೇತ್ರಗಳಲ್ಲಿ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಿದ ನಾಲ್ವರಿಗೆ 1967ನೇ ಹೊಸ ವರ್ಷದ ಪ್ರಶಸ್ತಿಯನ್ನಿತ್ತು ಗೌರವಿಸುವ ಸಮಾರಂಭವು ಕಲ್ಪನಾ ಥಿಯೇಟರಿನಲ್ಲಿ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಮತ್ತು ಉಡುಪಿ ರೋಟರಿ ಕ್ಲಬ್ ವತಿಯಿಂದ ನೆರವೇರಿತು. ಈ ವರ್ಷ ವೈದ್ಯಕೀಯ; ಹೋಟೆಲ್ ಉದ್ಯಮ, ಶಿಕ್ಷಣ ಮತ್ತು ಸಹಕಾರಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯ ವ್ಯಕ್ತಿಗಳಾದ ಕರ್ನಲ್ ವಿ. ಆರ್. ಮಿರಜ್‌ಕರ್, ಶ್ರೀ ಕೆ. ಕೃಷ್ಣರಾವ್, ರೆ। ಮದರ್ ಎಂ. ಥಿಯೊಡೊಸಿಯ, ಮತ್ತು ಶ್ರೀ ಬಿ. ಪ್ರಭಾಕರ ರಾವ್ ಇವರಿಗೆ ಪ್ರಶಸ್ತಿಗಳನ್ನಿತ್ತು ಗೌರವಿಸಲಾಯಿತು. ಉಪಹಾರವಾದ ಬಳಿಕ ಡಾ| ಟಿ. ಎಂ. ಎ. ಪೈಗಳು ಸ್ವಾಗತಿಸುತ್ತ ಸರ್ವರಿಗೂ ನೂತನ ವರ್ಷದ ಶುಭಕಾಮನೆ ಸಲ್ಲಿಸಿದರು, ಡಾ. ಕೃಷ್ಣರಾಯರು ಮಿರಜ್‌ಕರರ, ಶ್ರೀ ಪಿ. ಶ್ರೀಪತಿರಾಯರು ಕೃಷ್ಣರಾಯರ, ಶ್ರೀ ಎ. ಜೆ. ಆಳ್ವಯವರು ಪ್ರಭಾಕರ ರಾಯರ, ಶ್ರೀ ಕು. ಶಿ. ಹರಿದಾಸ ಭಟ್ಟರು, ಥಿಯೊಡೊಸಿಯವರ ಪರಿಚಯ ಮಾಡಿಕೊಟ್ಟರು. ಡಾ| ಟಿ. ಎಂ. ಎ. ಪೈಯವರು ಪ್ರಶಸ್ತಿ ಪತ್ರಗಳನ್ನೋದಿ ಅತಿಥಿಗಳಿಗೆ ಅರ್ಪಿಸಿದರು.

ಅನಂತರ ಸನ್ಮಾನಿತರು ತಮ್ಮ ಉತ್ತರ ರೂಪದ ಸಂದೇಶಗಳನ್ನಿತ್ತು, ತಮ್ಮನ್ನು ಸನ್ಮಾನಿಸಿದುದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರಲ್ಲದೆ ಎಕೆಡೆಮಿಯ ಹಾಗೂ ಡಾ| ಪೈಗಳ ಕಾರ್ಯ ಸಾಧನೆಗಳನ್ನು ಕೊಂಡಾಡಿದರು. ರೆ। ಮ। ಥಿಯೊಡೋಸಿಯಾಗರು ಅನಾರೋಗ್ಯದ ಕಾರಣಗಳಿಂದ ಉಪಸ್ಥಿತರಿರದ್ದರಿಂದ ಅವರ ಉತ್ತರವನ್ನು ಶ್ರೀಮತಿ ಮನೋರಮಾ ಎಸ್. ಆಚಾರ್ಯರು ಓದಿದರು.

ಕೊನೆಗೆ ಶ್ರೀ ಟಿ. ಎ. ಪೈಯವರು ಧನ್ಯವಾದಗಳನ್ನರ್ಪಿಸುತ್ತ ಅನ್ಯರಲ್ಲಿರುವ ಯೋಗ್ಯತೆಯನ್ನು ಗುರುತಿಸಿ ಅವರಿಗೆ ಯೋಗ್ಯ ಮನ್ನಣೆಕೊಡುವ ವಿಶಾಲಮನಸ್ಸು ನಮಗಿರಲೆಂದರು. ಶ್ರೀ ಟಿ. ರಮೇಶ ಪೈಗಳ ಸೂತ್ರಧಾರತ್ವದಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.

ಸಂಕ್ಷಿಪ್ತ ಸುದ್ದಿಗಳು

೧೯೬೬ನೇ ನವೆಂಬರ್ ತಿಂಗಳಲ್ಲಿ ಭಾರತೀಯ ರೈಲ್ವೆಯು ಒಟ್ಟು ಸುಮಾರು 60.67 ಕೋಟಿ ರೂ.ಗಳ ವರಮಾನಗಳಿಸಿದೆ. ಅದರಲ್ಲಿ ಗೂಡ್ಸ್ ಸಾಗಾಣಿಕೆಯಿಂದ 37.40 ಕೋಟಿ ರೂ.ಗಳು, ಪ್ರಯಾಣಿಕರಿಂದ 17.51 ಕೋಟಿ ರೂ.ಗಳು, ಮತ್ತು ಪಾರ್ಸೆಲ್‌ಗಳು. ಲಗ್ಗೇಜ್ ಮತ್ತು ಇತರ ಬಾಬ್ತುಗಳಿಂದ ಉಳಿದ ಹಣವು ವರಮಾನವಾಗಿ ಬಂದಿದೆ.

o o o o

ಕ್ಷಾಮ ಪರಿಹಾರಕ್ಕಾಗಿ ಕೈಗೊಳ್ಳುವ ಕೂಲಿ ಕೆಲಸವನ್ನು ಇಲಾಖೆಯ ಮೂಲಕ ನಡೆಸಲು ಬಿಹಾರ್ ಸರಕಾರವು ನಿರ್ಧರಿಸಿದೆ. ಇದರಿಂದ "ಕಂಟ್ರಾಕ್ಟರ್"ಗಳ ಅಗತ್ಯವಿಲ್ಲದೇ ಕೆಲಸವನ್ನು ನಡೆಸಲು ಮತ್ತು ಸಕಾಲದಲ್ಲಿ ಕೆಲಸಗಾರರಿಗೆ ಸಂಬಳವನ್ನು ನಿಗದಿಯಾದ ದರದಲ್ಲಿ ಕೊಡಲು ಸಾಧ್ಯವಾಗುತ್ತದೆ.

o o o o

ಬ್ಯಾಂಗ್‌ಕಾಕ್‌ನಲ್ಲಿ ನಡೆದ ಏಸಿಯನ್ ಕ್ರೀಡೆಗಳಲ್ಲಿ ಇದೇ ಡಿಸೆಂಬರ್ ... ರಂದು ಭಾರತದ ಹಾಕಿ ಟೀಂ ವಿಜಯಗಳಿಸಿದ್ದರ ಸಂಕೇತವಾಗಿ ಭಾರತದ ಅಂಚೆ ಮತ್ತು ತಂತಿ ಇಲಾಖೆಯು 15 ಪೈಸೆ ವಿಶೇಷ ಅಂಚೆ ಚೀಟಿಯನ್ನು ಡಿಸೆಂಬರ್ 31ರಂದು ಬಿಡುಗಡೆ ಮಾಡಿದೆ.

o o o o

ದೇಶದಲ್ಲಿಯ ನ್ಯಾಷನಲ್ ಕ್ಯಾಡೆಟ್ ಕೋರ್‌ನ ಸೀನಿಯರ್ ವಿಭಾಗದ ಆಯ್ಕೆಯಾದ 10 ಕ್ಯಾಡೆಟ್‌ಗಳು ಕ... ಜನ್‌ನಿಂದ ಮುಂಬೈಗೆ ಯುದ್ಧ ಹಡಗಿನ ಯೋಜನೆ... ಡಲು ಪ್ರಯಾಣ ಮಾಡುವ ... ದ ತಂಬೀತನ್ನು ... ಗೊಳ್ಳುತ್ತಿದ್ದಾರೆ. ಇದರಲ್ಲಿ ವೈಸಿ... ಒಬ್ಬ ಕ್ಯಾಡೆಟ್ ಸೇರಿದ್ದಾರೆ.

o o o

ಕೇಂದ್ರ ಶಿಕ್ಷಣ ಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ಅವರು ಭಾರತೀಯ ಹಾಕಿ ಫೆಡರೇಷನ್ನಿನ ಅಧ್ಯಕ್ಷ ಶ್ರೀ ಅಶ್ವಿನಿ ಕುಮಾರ್ ಅವರಿಗೆ ತಂತಿಯನ್ನು ಕಳುಹಿಸಿ, ಬ್ಯಾಂಗ್‌ಕಾಕ್‌ನಲ್ಲಿ ಭಾರತದ ಹಾಕಿ ಟೀಮು ಚಾಂಪಿಯನ್ ಗಳಿಸಿದ್ದಕ್ಕಾಗಿ ಅಭಿನಂದನೆಗಳನ್ನು ... ಸಿದ್ದಾರೆ.

o o o

ಸುಮಾರು ಮೂವತ್ತು ಸಣ್ಣ ನೀರಾವರಿ ಹಾಗೂ ಕೆಲವು ಮಧ್ಯಮ ನೀರಾವರಿ ಯೋಜನೆಗಳನ್ನು ಕ್ಷಾಮಪೀಡಿತ ಒಳಗಾಗಿರುವ ಸ್ಥಳಗಳಲ್ಲಿ ಕೈಗೊಳ್ಳಲು ಬಿಹಾರ ಸರಕಾರವು ಕ್ಷಾಮ ಪರಿಹಾರ ನಿಧಿಯ 29 ಲಕ್ಷ ರೂ.ಗಳನ್ನು ಮಂಜೂರು ಮಾಡಿದೆ.

ಪ್ರಣಯಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಯೂ ವಿಚಾರಿಸಿರಿ)

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಕಾಲುಕೋಟೆ, ಉಡುಪಿ, ದ. ಕನ್ನಡ.

ಶ್ರೀ ಶಿ. ಇ. ಶೆಟ್ಟಿ.ಎಂ.ಎಲ್. ಸಿ.ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=2.
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=0.
ಹೆಂಡ್ತಿ ಗಂಡನಾದರೆ?	0=25
ಪುರುಷಪಶು	0=25
ಸನ್ಯಾಸಿಯ ಸೂಳೆನಲ್ಲಿ!	0=75
... ಪಿಶಾಚಿ	0=70
ಕುಶಲವ	0=50
ಬತ್ತಿಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ತಪ್ಪು ಯಾರದು ?

(ಎರಡನೇ ಪುಟದಿಂದ)

"ಅದೇನು ಕೇಳಿ ಡಾಕ್ಟರ್!"

"ನಿಮಗಿದು ಮೊದಲನೇ ಮದುವೆಯೇ?"

"ಅಲ್ಲ...."

"ನಿಮ್ಮ ಮೊದಲ ಮಡದಿಗೆ ಮಕ್ಕಳಿದ್ದಾರೆಯೇ?'

"ಹೌದು."

'ಎಷ್ಟಿದ್ದಾರೆ?'

'ಮೂರು.'

"ಈಗಿನ ಮಡದಿ ಈ ವರೆಗೂ ಗರ್ಭವತಿಯಾದಂತಿಲ್ಲ. ಅಲ್ಲವೇ?'

"... ...."

'ನೀವು ಯಾರಾದರೂ ತಜ್ಞರಲ್ಲಿಗೆ ಹೋಗಿ ಆ ಬಗ್ಗೆ ವಿಚಾರಿಸಿದ್ದೀರಾ?'

'ಇಲ್ಲ!'

'ಅದೇಕೆ ಹಾಗೆ ಸುಮ್ಮನುಳಿದಿರಿ?'

'ಅದರಿಂದಾವ ಪ್ರಯೋಜನವೂ ಸಿಗಲಾರದೆಂದು.'

"ಅದನ್ನು ನೀವೇ ಹೇಗೆ ನಿರ್ಧರಿಸಿದಿರಿ?'

"ನಾನು ಮೊದಲ ಮಡದಿ ಇರುವಾಗಲೇ ಕುಟುಂಬ ಯೋಜನೆಗೆ ಒಳಪಟ್ಟಿದ್ದೇನೆ.'

'ನಿಮ್ಮ ಈಗಿನ ಮಡದಿಗೆ ಈ ವಿಚಾರ ತಿಳಿದಿದೆಯೇ?"

'ನಾನೇನೂ ಹೇಳಿಲ್ಲ.'

"ನಿಮ್ಮೊಡನೆ ಎಂದಾದರೂ ಮಕ್ಕಳಾಗಬೇಕೆಂಬಾಸೆಯನ್ನು ತೋರ್ಪಡಿಸಿದ್ದಳೇ?'

'ಬಾಯಿಬಿಟ್ಟು ಎಂದೂ ಹೇಳಿಲ್ಲ."

"ಅದೇ ಯೋಚನೆಯೇ ಈ ಅನಾಹುತಕ್ಕೆ ಕಾರಣವಾಗಿದೆ. ತಾನು ಬಂಜೆ ಎಂಬ ಭಾವನೆಯೇ ಅವಳನ್ನು ಈ ಸ್ಥಿತಿಗೆ ತಂದಿದೆ.'

"ಅದಕ್ಕೇನೂ ಉಪಾಯವಿಲ್ಲವೇ ಡಾಕ್ಟರ್?'

ಕ್ಷಣಕಾಲ ಕುಳಿತು ಯೋಚಿಸಿದರು. ಆ ಮೇಲೆ—

"ಉಪಾಯ ಸೂಚಿಸಬಹುದು. ಆದರೆ ಅದಕ್ಕೆ ನೀವೊಪ್ಪಬೇಕು. ಹಣವನ್ನು ವ್ಯಯಿಸಬೇಕಾದೀತು. ಹಾಗಿದ್ದರೆ ಮಾತ್ರ ಸಾಧ್ಯವಾಗಬಹುದು."

"ಅದಕ್ಕಾಗಿ ಯೋಚಿಸಬೇಡಿ ಡಾಕ್ಟರ್. ಅದೇನೆಂಬುದನ್ನು ಮೊದಲು ಹೇಳಿ.'

"ರೋಗಿಯ ಮನದಲ್ಲಿ ನಾವೀಗ ಗರ್ಭಿಣಿ ಎಂಬ ಭಾವನೆಯನ್ನು ಬಿತ್ತುವೆವು. ನೀವು ಕೂಡಾ ಆಗಾಗ ಬಂದು ಉಪಚಾರದ ಮಾತುಗಳನ್ನಾಡಿ ಮನಸ್ಸಿಗೆ ಧೈರ್ಯವನ್ನುಂಟು ಮಾಡಬೇಕು. ಒಂಭತ್ತು ತಿಂಗಳು ಕಳೆದ ಮೇಲೊಮ್ಮೆ ಅನಾಥಾಶ್ರಮಕ್ಕೆ ಹಣತೆತ್ತು ಹಸುಗೂಸನ್ನು ತಂದು ಅವಳಿಗರಿಯದಂತೆ ಪಕ್ಕದಲ್ಲಿರಿಸಿ ಅವಳು ಹೆತ್ತ ಮಗುವೇ ಅದೆಂಬುದನ್ನು ಮನಗಾಣಿಸಿದರೆ ಪ್ರಯೋಗ ಫಲಿಸೀತು" ಎಂದು ಮತ್ತೊಂದು ಸಿಗರೇಟಿಗೆ ಬೆಂಕಿ ಹಚ್ಚಿದರು. ಎಲ್ಲವನ್ನೂ ಕೇಳಿದ ರಾಮಚಂದ್ರನಿಗೆ ಕಣ್ಣೆದುರೊಂದು ನಾಟಕ ಕುಣಿದಂತಾಯಿತು.

"ಏನು ಯೋಚಿಸುತ್ತಾ ಇದ್ದೀರಿ? ಯಾವುದನ್ನು ನಿರ್ಣಯಿಸಿ ಹೇಳಿಬಿಡಿ" ಎಂದು ಬೀಳ್ಕೊಟ್ಟರು.

ಡಾಕ್ಟರರ ಉಪಾಯ ಸುಮತಿಯ ಮೇಲೆ ಚೆನ್ನಾಗಿಯೇ ಪರಿಣಾಮ ಮಾಡಿತು. ನಿಲ್ಲುವಾಗ ನಡೆಯುವಾಗ ಉಸ್ಸೆನ್ನುವದು. ನಾನಾ ವಿಧದ ತಿಂಡಿಗಳನ್ನು ತಿನ್ನಬೇಕೆಂಬ ಬಯಕೆಯನ್ನು ತೋರ್ಪಡಿಸುವಳು. ಸವತಿಯ ಮಕ್ಕಳನ್ನು ಆಗಾಗ ಬರಮಾಡಿಕೊಂಡು ಮುದ್ದುಮಾಡುವಳು. ಹುಟ್ಟಲಿರುವ ಕೂಸಿಗಾಗಿ ಕುಲಾವಿ ರಾಲುಚೀಲವನ್ನು ಹೊಲಿಯುವಳು. ಪತಿಯೊಡನೆ ಮಾತನಾಡುವಾಗ ನಾಚಿಕೆಯನ್ನೂ ಆಯಾಸವನ್ನೂ ತೋರ್ಪಡಿಸುವಳು.

ಅವಳ ಆರೋಗ್ಯ ದಿನ ದಿನಕ್ಕೆ ಸುಧಾರಿಸುತ್ತಲಿತ್ತು. ತಿಂಗಳು ತಿಂಗಳೂ ಹೊರಗಾಗದಂತೆ ಡಾಕ್ಟರರು ಮೊದಲೇ ತಡೆಹಿಡಿದಿದ್ದರು.

ದಿನಗಳು ಸರಿದುದೇ ತಿಳಿಯಲಿಲ್ಲ. ಅದೊಂದು ದಿನ ಡಾಕ್ಟರರ ಓಡಾಟ; ದಾದಿಯರ ಪೇಚಾಟ ಕೋಣೆಯಲ್ಲಿ ನಡೆದಿತ್ತು. ಯಾವ ಪರಿವೆಯೂ ಇಲ್ಲದೆ ಸುಮತಿ ಪ್ರಜ್ಞಾಹೀನಳಾಗಿದ್ದಳು. ಯಾವುದೋ ಅನಾಮಧೇಯ ಮಗುವೊಂದು ಅವಳ ಮಗ್ಗುಲಲ್ಲಿ ಕಿರುಚುತ್ತಿತ್ತು.

ಅವಳಿಗರಿಯದಂತೆ ಅಂದು ಅವಳನ್ನು ಮೂರ್ಛಾವಸ್ಥೆಗೊಳಿಸಿದ್ದರು. ಆದರೆ ಮತ್ತೆ ಸತತಪ್ರಯತ್ನ ನಡೆಯಿಸಿದರೂ ಸ್ಮೃತಿ ಬಂದಿರಲಿಲ್ಲ

ಹೊರಗಡೆ ರಾಮಚಂದ್ರ ಪತ್ನಿಯನ್ನು ಆದರಿಸಲು ಕಾದು ಕುಳಿತಿದ್ದನು. ನಿಮಿಷಗಳ ಜೊತೆಯಲ್ಲಿ ಗಂಟೆಗಳೇ ಉರುಳಿದರೂ ಯಾರೂ ಹೊರಬಾರದುದನ್ನು ನೋಡಿ ಅವನೇ ಬಾಗಿಲನ್ನು ದೂಡಿ ಒಳನುಗ್ಗಿದನು. ಅಗಳಿ ಇಲ್ಲದ ಬಾಗಿಲು ಕ್ರಿರ್ರೆಂದು ತೆರೆದಾಗ ಡಾಕ್ಟರರು ತಲೆಯ ಮೇಲೆ ಕೈ ಹೊತ್ತು; ನಿಸ್ಸಾರ ಮೋರೆಯಿಂದ ಹೊರಬಿದ್ದರು.

"ಸುಮತಿ ನನ್ನನ್ನು ಕ್ಷಮಿಸೆಂದು" ಶವದ ಮೇಲೆ ಸ್ಮೃತಿ ತಪ್ಪಿ ಬಿದ್ದ ರಾಮಚಂದ್ರನನ್ನು ಎತ್ತಿ ಬೇರೆ ಕೋಣೆಗೆ ಕೊಂಡೊಯ್ದರು.

ಸ್ತ್ರೀ ಸುಮ

—ಮ ಗೋ. ರಾವ್, ಮುಲ್ಕಿ.

ಪಚ್ಚನೆಯ ತಳಿರಿನಲಿ
ಕೆಚ್ಚನೆಯ ಸುಮವೊಂದು
ಹೊಚ್ಚ ಹೊಸ ಸೌರಭವ
ಸೂಸುತಿತ್ತು

ಬಿಚ್ಚು ಮನಸಿದ ಹೂವೆ
ಕೆಚ್ಚೆದೆಯ ಸ್ತ್ರೀ ಸುಮವೆ
ನಚ್ಚು ತುಂಬಿಹ ನಿನ್ನ
ಮನವೆಲ್ಲ ಬೆಣ್ಣೆ

ಯೌವನದ ಹೊಸಿಲಿನಲಿ
ನವನವೀನ ವೇಷದಲಿ
ಜನಗಳುಕದಲೆ ನೀನು ನವ
ಪಥವ ತುಳಿದೆ

ಕರದಿಂದಲೆಳೆದಾಗ
ಪರರೊಲುಮೆ ಕರೆದಾಗ
ಗರಗರನೆ ತಿರುಗುತಿಹ ಮನವ
ಹಳಿದೆ

ಮಗದೊಂದು ದಿನದಲ್ಲಿ
ನಗಲೆಂದು ಮನದಲ್ಲಿ
ಬಗೆಯೊಂದು ಹೊಳೆದು ತಾ
ಸನಿಹ ಸುಳಿದೆ

ಸುಮವಲ್ಲಿ ಇಂಪಿಲ್ಲ
ಕಮನೀಯ ಕಂಪಿಲ್ಲ
'ಮಮತೆ ಮಮ್ಮಲಗಾದಿ"
ಎಂದು ನುಡಿದೆ

ಕ್ರಮವಾದ ಕಡೆಯಿಲ್ಲ
ಕಮವು ಜೀವನವೆಲ್ಲ
ಗಮಿಸಿ ಗರ ಬಡಿದಂತೆ
ನಾ ಖಿನ್ನನಾದೆ.

ರಾಜಗಾರ್ದಭ

— ಎಸ್. ಪದ್ಮನಾಭ ನಾಯಕ್
ಉಡುಪಿ.

ನಾನು ರಾಜಗಾರ್ದಭ!
ಕತ್ತೆಗಳ ಲೀಡರ್ರು!
ಕೇರಿ ಕೇರಿಯಲೆಲ್ಲಾ
ನನ್ನದೇ ಹೆಸರು,
ನಾನೇ ಆ ಕತ್ತೆ!
ಎಲ್ಲ ಕತ್ತೆಗಳಟ್ಟೆ ದಿಲ್ಲಿಗೆ
ನಮ್ಮ ಕೋರಿಕೆಯರಹುನೆ.
ಇಲ್ಲವಾದರೆ—
ಮುಟ್ಟಲಾರೆನು, ತಿನ್ನಲಾರೆನು
ಮೇವನು!

ಗಲ್ಲಿಗೇರಲು ಸಿದ್ಧ
ಯುದ್ಧ ಮಾಡಲು ಸಿದ್ಧ'
ಆದರೆ—
ಧೋಬಿ ರಾಜನ ಜತೆಗೆ
ಬಾಳುವೆ ಅಸಾಧ್ಯ!
ನಮಗೆ ಬೇಕು ನಮ್ಮದೇ ಕೇರಿ
ಸರ್ವತಂತ್ರ ಸ್ವಾತಂತ್ರ್ಯ!
ಇಲ್ಲವಾದರೆ—
ಮುಟ್ಟಲಾರೆನು, ತಿನ್ನಲಾರೆನು
ಮೇವನು!

ಅಹರ್ನಿಶಿ ದುಡಿವವರು ನಾವು
ಕಷ್ಟ ಪಡುವವರೂ ನಾವು
ಆದರೂ—
ಮೂಢಜನಾನವ ಸಮಾಜ
ದೂರುವರು ನಮ್ಮನ್ನು
ನಿಲಬೇಕು, ನಿಲಬೇಕು,
ದೂರುವಿಕೆ ನಿಲಬೇಕು
ಇಲ್ಲವಾದರೆ—
ಮುಟ್ಟಲಾರೆನು ತಿನ್ನಲಾರೆನು ಮೇವನು!

ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ ಪ್ರಧಾನ ಮಂತ್ರಿಯವರ ಕ್ಷಾಮ

ಇದೊಂದು ಸಾಮಾನ್ಯವಾದ ಮನವಿಯಲ್ಲ.......

"ಇದೀಗ ಎರಡನೇ ವರ್ಷ ಮಳೆಯ ತೀವ್ರ ಅಭಾವ ನಮ್ಮ ದೇಶವನ್ನು ಕಾಡುತ್ತಿದೆ. ಲಕ್ಷಾಂತರ ಮಂದಿ ದೇಶಬಾಂಧವರ ಬಾಳು ಅಸಹನೀಯ ಕಷ್ಟಗಳಿಗೀಡಾಗಿದೆ.

"ಇಂದು ಅಭಾವಪೀಡಿತ ಪ್ರದೇಶಗಳ ಜನತೆಗೆ ಎಲಾ ರೀತಿಯಿಂದ ಸಹಾಯ ಮಾಡಲು ಭಾರತೀಯರೆಲ್ಲರೂ ಮುಂದೆ ಬರಬೇಕೆಂಬುದಾಗಿ ನಾನು ಅರಿಕೆ ಮಾಡುತ್ತಿದ್ದೇನೆ.

"ಚೆಕ್ಕುಗಳನ್ನು ಅಥವಾ ನಗದು ಹಣವನ್ನು ಮತ್ತು ಇತರ ಸಾಮಗ್ರಿಗಳನ್ನು ಇಲ್ಲಿಗೆ ಕಳುಹಿಸಿರಿ:

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿ,
ಕ್ಯಾಬಿನೆಟ್ ಸಚಿವಾಲಯ,
ರಾಷ್ಟ್ರಪತಿ ಭವನ,
ನವದಹಲಿ—4.

ಇಂದಿರಾ ಗಾಂಧಿ
ಪ್ರಧಾನ ಮಂತ್ರಿ

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ
ಉದಾರವಾಗಿ ಕಾಣಿಕೆ ನೀಡಿರಿ

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 5—1—1962
Registered with the Registrar
of News Papers for India
under No. R. N. 3546/'57

REGD. No. B G. 176
LICENCE No. 31
Licensed to Post without Prepayment

ಕುಟುಂಬ ಯೋಜನೆ

ವಂಕಿ ಅತ್ಯುತ್ತಮ ಸಾಧನ

ಬರೆದವರು
ಡಾ। ವಿ. ಎನ್. ಶಿರೋಡ್‌ಕರ್

ಒಂದು ಮಗುವಿನ ಜನನಕ್ಕೂ ಮತ್ತೊಂದು ಮಗುವಿನ ಜನನಕ್ಕೂ ಕಾಲದಲ್ಲಿ ಅಂತರವಿರಬೇಕು. ಅಲ್ಲದೇ ಮಕ್ಕಳ ಸಂಖ್ಯೆಯನ್ನು ಮಿತಿಗೊಳಿಸುವುದೂ ಆಗತ್ಯ. ಇದು ಇಂದು ರಾಷ್ಟ್ರದ ಸಮಸ್ಯೆಯಾಗಿದೆ.

ಜನನ ನಿಯಂತ್ರಣ ಮಾಡಲು ಅನೇಕ ಮಾರ್ಗಗಳಿವೆ. ಪ್ರತಿಯೊಂದು ಮಾರ್ಗದಲ್ಲಿ, ಅನುಕೂಲ ಅನಾನುಕೂಲಗಳಿವೆ. ಪ್ರಥಮವಾಗಿ, ಬಹುಕಾಲದಿಂದ ಬಳಕೆಯಲ್ಲಿರುವ ಕ್ರಮಗಳನ್ನು ಪರಿಶೀಲಿಸೋಣ.

ಮುಟ್ಟಾದ ನಂತರದ ೧೦ ಮತ್ತು ೧೮ ದಿವಸಗಳ ನಡುವಿನ ದಿನಗಳು ಗರ್ಭಕೂಡುವ ದಿನಗಳೆಂದು ಸಾಮಾನ್ಯವಾಗಿ ನಂಬಲಾಗಿದೆ. ಅಂದರೆ ಮುಟ್ಟಾದ ಮೊದಲ ೫ ರಿಂದ ೯ ದಿನಗಳು ಮತ್ತು ೧೯ ರಿಂದ ೨೮ ದಿನದ ವರೆಗಿನ ಕಾಲವನ್ನು ಸುರಕ್ಷಿತ ಕಾಲವೆಂದು ಪರಿಗಣಿಸ ಬಹುದು. ಆದರೆ ಈ ಸುರಕ್ಷಿತ ದಿನಗಳಲ್ಲೂ ಗರ್ಭ ಧಾರಣೆಯಾಗುವ ಅವಕಾಶವಿದೆ.

ಪುರುಷರು ಶಿಷ್ನಕೋಶವನ್ನು ಉಪಯೋಗಿಸಿ ಜನನ ನಿಯಂತ್ರಣ ಕಾರ್ಯ ಕೈಗೊಳ್ಳಬಹುದು. ಇದರಿಂದ ಸುಮಾರು ಶೇಕಡ ೮೨ ರಿಂದ ೯೦ರವರೆಗೆ ಯಶಸ್ಸು ದೊರೆಯುತ್ತದೆ. ಶಿಷ್ನಕೋಶದ ರಬ್ಬರು ನಮ್ಮ ದೇಶದ ವಾಯುಗುಣಕ್ಕೆ ಹರಿಯುವ ಅವಕಾಶವಿರುವುದರಿಂದ, ಇದರ ಅನುಕೂಲ ಅಷ್ಟು ಕಡಿಮೆಯಾಗುತ್ತದೆ.

ಡಯೊಫ್ರಂ ಕೂಡ ಹರಿಯುವ ಸಾಧ್ಯತೆ ಇದೆ ಅಲ್ಲದೇ ಇದು ಆರೋಗ್ಯದೃಷ್ಟಿಯಿಂದಲೂ ಉತ್ತಮವಲ್ಲ. ಸರಿಯಾದ ಅಳತೆಯ ಡಯೋಫ್ರಂ ಆಯ್ಕೆ ಮಾಡಿಕೊಳ್ಳದಿದ್ದರೆ, ಅದು ಪ್ರಯೋಜನಕಾರಿಯಾಗಲಾರದು. ಅನೇಕ ಸ್ತ್ರೀಯರ ಇದರ ಬಳಕೆಗೆ ವಿರೋಧ ವ್ಯಕ್ತಪಡಿಸುವುದುಂಟು. ಕೆಲವರು ಡಯೊಫ್ರಂನ್ನು ಸರಿಯಾಗಿ ತೊಳೆಯುವುದಿಲ್ಲ ಮತ್ತು ಅದರ ಪುನಃ ಉಪಯೋಗಕ್ಕೆ ಸಾಕಷ್ಟು ಎಚ್ಚರಿಕೆಯಿಂದ ಎತ್ತಿಡುವುದಿಲ್ಲ. ಆಗ ಅದರ ಬಳಕೆಯ ಉದ್ದೇಶ ಸಾರ್ಥಕವಾಗುವುದಿಲ್ಲ.

ಗರ್ಭ ನಿರೋಧಕ ಜೆಲ್ಲಿಗಳು, ಕ್ರೀಮ್ಸ್ ಮತ್ತು ಫ್ರೋಮ್ ಟ್ಯಾಬ್ಲೆಟ್ಸ್‌ಗಳ ಬಳಕೆಯಿಂದ ಗರ್ಭ ನಿರೋಧವು ಶೇಕಡ ಕೇವಲ ೧೦ರಿಂದ ೧೫ರಷ್ಟು ವಿಫಲವಾಗುವುದು. ಈ ವಿಫಲತೆಗೆ ಕಾರಣಗಳು ಹೀಗಿವೆ:—

೧) ಜೆಲ್ಲಿಗಳು ಮತ್ತು ಫ್ರೋಮ್ ಟ್ಯಾಬ್ಲೆಟ್‌ಗಳು ಕರಗಲು ಹೆಚ್ಚು ಕಾಲ ತೆಗೆದುಕೊಳ್ಳುವುವು. ೨) ಕೆಲವು ಜೆಲ್ಲಿಗಳು ಮತ್ತು ಫ್ರೋಮ್ ಟ್ಯಾಬಲೆಟ್‌ಗಳು ಉರಿಯನ್ನು ಉಂಟುಮಾಡುವುವು. ೩) ರಬ್ಬರು ಮತ್ತು ರಾಸಾಯನಿಕ ರೀತಿಯ ಗರ್ಭ ನಿರೋಧಕ ವಸ್ತುಗಳನ್ನು ಆಗಾಗ್ಗೆ ಬದಲಾಯಿಸುತ್ತಿರಬೇಕು. ಇದಕ್ಕೋಸ್ಕರವಾಗಿ ಇವುಗಳನ್ನು ಹಂಚುವ ಕೇಂದ್ರಗಳಿಗೆ ಸ್ತ್ರೀಪುರುಷರು ಆಗಾಗ್ಗೆ ಹೋಗಿ ಬರಬೇಕಾಗುತ್ತದೆ. ಅವುಗಳನ್ನು ಆಗಾಗ್ಗೆ ಪಡೆಯಲು ಅಂತಹ ಕೇಂದ್ರಗಳಿಗೆ ಭೇಟಿ ಕೊಡಲು ಕೆಲವರು ಹಿಂಜರಿಯುತ್ತಾರೆ.

ಇನ್ನು ಗರ್ಭನಿರೋಧ ಕಾರ್ಯದಲ್ಲಿ, ಇತ್ತೀಚಿನ, ವಂಕಿ ಹಾಗೂ ಸೇವನೆಯ ಗುಳಿಗೆಗಳ ಪಾತ್ರವನ್ನು ಅವಲೋಕಿಸೋಣ.

ಸೇವನೆಯ ಗುಳಿಗೆಗಳಿಂದಾಗುವ ಅನುಕೂಲಗಳು ಹೀಗಿವೆ:—

[೧] ಮುಟ್ಟಾದ ೫ನೇ ದಿನದಿಂದ ಎಡೆಬಿಡದ ೨೦ ದಿನಗಳು ಪ್ರತಿ ದಿನಕ್ಕೊಂದರಂತೆ ಗುಳಿಗೆಯನ್ನು ಸೇವಿಸುವುದರಿಂದ, ವಿಫಲವಾಗುವ ಪ್ರಸಂಗಗಳು ಕಡಿಮೆ. ಗುಳಿಗೆಗಳನ್ನು ತೆಗೆದು ಕೊಳ್ಳುವುದರ ನಿಯಮ ತಪ್ಪಿದರೆ, ವಿಫಲತೆ ಪ್ರಸಂಗಗಳು ಹೆಚ್ಚಾಗುವುವು [೨] ಅವುಗಳ ಬಳಕೆ ಕ್ಯಾನ್ಸರ್ ಅಥವ ಟ್ರಾಂಬೋಸಿಸ್ ಉಂಟಾಗುವ ಪ್ರಮೇಯಗಳು ಕಾಣಬರುವುದಿಲ್ಲ. [೩] ಟ್ಯಾಬ್ಲೆಟ್‌ಗಳ ಬಳಕೆಯನ್ನು ನಿಲ್ಲಿಸಿದ ನಂತರ, ತಡೆಯಿಲ್ಲದೆ ಗರ್ಭಧಾರಣೆಯಾಗುತ್ತದೆ.

ಸೇವನೆಯ ಗುಳಿಗೆಗಳ ಬಳಕೆಯಿಂದಾಗುವ ಅನಾನುಕೂಲಗಳು ಹೀಗಿವೆ:—

[ಅ] ಸೇಕಡ ೨೦ರಷ್ಟು ಮಹಿಳೆಯರು ಹೊಟ್ಟೆಯೊತನೆ ಪಡುವರು, ಅವರ ತೂಕವೂ ಹೆಚ್ಚುವುದು. (ಆ) ಆಗಾಗ್ಗೆ ರಕ್ತಸ್ರಾವ ಆಗುವ ಸಂಭವವಿದೆ. ಆದ್ದರಿಂದ ಎಷ್ಟು ಗುಳಿಗೆಗಳನ್ನು ಬಳಸಬೇಕೆಂಬುದರ ಬಗ್ಗೆ ವೈದ್ಯಕೀಯ ಸಲಹೆಯನ್ನು ಪಡೆಯಬೇಕಾಗುತ್ತದೆ. (ಇ) ಈ ಮೊದಲು ತಿಂಗಳಿಗೆಬೇಕಾದ ೨೦ ಗುಳಿಗೆಗಳಿಗೆ ೧೦ರೂ. ಬೆಲೆಯಾಗುತ್ತಿತ್ತು. ಈಗ ಕೆಲವುಗುಳಿಗೆಗಳಬೆಲೆ ೪ರೂ ಆದರೂ, ಬಹುಜನಕ್ಕೆ ದುಬಾರಿಯಾಗಿ ಕಾಣುವುದು.

ಇನ್ನು ವಂಕಿಗಳಿಂದಾಗುವ ಅನುಕೂಲ ಹಾಗೂ ಅನಾನುಕೂಲಗಳನ್ನು ವಿಮರ್ಶಿಸೋಣ.

ಅನುಕೂಲಗಳು:

(ಅ) ತಾಳ್ಮೆಯಿಂದ ಅದನ್ನು ಧಾರಣೆ ಮಾಡುವುದಾದರೆ, ಅದಕ್ಕಿಂತ ಉತ್ತಮವಾದ ಗರ್ಭನಿರೋಧಕವಿಲ್ಲ ಎನ್ನಬಹುದು. (ಆ) ಖರ್ಚು ಕಡಿಮೆಯಾಗುತ್ತದೆ. (ಇ) ಕ್ಯಾನ್ಸರ್ ಬರುವುದಿಲ್ಲ. (ಈ) ಆಗಾಗ್ಗೆ ಬದಲಿಸುವ, ತೆಗೆಯುವ ಗೋಜಿರುವುದಿಲ್ಲ. (ಉ) ಸುಲಭವಾಗಿ ಧಾರಣೆ ಮಾಡಬಹುದು ಹಾಗೂ ತೆಗೆಯಬಹುದು. (ಊ) ಉದರ ಬೇನೆ ಯಾವುದೂ ಕಾಣುವುದಿಲ್ಲ

ವಂಕಿಯ ಅನಾನುಕೂಲಗಳು:

(ಅ) ವಂಕಿಯ ಧಾರಣೆ ಕೆಲವು ಸ್ತ್ರೀಯರಿಗೆ ಸಹಿಸಲಾಗುವುದಿಲ್ಲ. ಧಾರಣೆಯಾದ ತಿಂಗಳಲ್ಲಿ ಕೆಲವರಿಗೆ ರಕ್ತಸ್ರಾವವಾಗುವುದು. ಇದನ್ನು ತಾಳ್ಮೆಯಿಂದ ಸಹಿಸಬಹುದು. ಕೆಲವರಿಗೆ ಬೆನ್ನು ನೋವು ಕಾಣಿಸುವುದು. ಇದನ್ನೂ ತಾಳ್ಮೆಯಿಂದ ಗೆಲ್ಲಬಹುದು. (ಆ) ವಂಕಿಯು ಕೆಲವರಿಗೆ ಕೂಡಲೆ ಹೊರಬೀಳುವುದು. ಅದು ಕೇವಲ ಶೇಕಡ ೪ರಿಂದ ೫ರಷ್ಟು ಮಾತ್ರ (ಇ) ವಂಕಿಯು ಇದ್ದರೂಕೂಡ ಅಪರೂಪವಾಗಿ ಗರ್ಭಧಾರಣೆಯಾಗಬಹುದಾದ ಪ್ರಸಂಗವಿರುತ್ತದೆ.

ಈ ಮೇಲ್ಕಂಡ ಕುಟುಂಬ ಯೋಜನಾ ಪದ್ಧತಿಗಳ ಅನುಕೂಲ ಹಾಗೂ ಅನಾನುಕೂಲಗಳನ್ನು ಪರಿಶೀಲಿಸಿದ ನಂತರ, ನಮ್ಮ ದೇಶಕ್ಕೆ ವಂಕಿಯ ಪದ್ಧತಿಯು ಅತ್ಯುತ್ತಮವೆಂದು ನಾನು ಭಾವಿಸುತ್ತೇನೆ. ಕಾರಣಗಳು ಹೀಗಿವೆ:

೧) ಶೇಕಡ ೭೫ರಿಂದ ೮೦ ಜನ ಸ್ತ್ರೀಯರು ವಂಕಿ ಪದ್ಧತಿಯನ್ನು ಅನುಸರಿಸುವುದ. ಸಂತೋಷವಾಗಿ ಒಪ್ಪುತ್ತಾರೆ. ಖರ್ಚು ಸಹ ಕಡಿಮೆ. ೫ ವರ್ಷಗಳ ಕಾಲ ಅದನ್ನು ಬದಲಾಯಿಸಬೇಕಾಗಿಲ್ಲ. ೨) ವಂಕಿಯನ್ನು ತೆಗಯಲೂ ಸಾಧ್ಯವಿದೆ. ಅದನ್ನು ತೆಗೆದ ನಂತರ, ಗರ್ಭಧಾರಣೆಗೆ ಅವಕಾಶವಿದೆ. (೩) ಮನೋಭಾವದ ಸಮಸ್ಯೆಯು ವಂಕಿಯ ಧಾರಣೆಯಿಂದ ದೂರವಾಗುತ್ತದೆ. (೪) ಉದರ ಬಾಧೆಯಾಗುವುದಿಲ್ಲ. ಕ್ಯಾನ್ಸರ್ ಆದ ಪ್ರಸಂಗ ಎಲ್ಲೂ ಕಂಡುಬಂದಿಲ್ಲ.

ಕಂಡೋಮ್ಸ್, ಡೈಯಾಫಾರಂ, ಜೆಲ್ಲಿಗಳೂ ಮತ್ತು ಸೇವಿಸುವ ಗುಳಿಗೆಗಳ ಪ್ರಯೋಜನಗಳೂ ಇಲ್ಲವೆಂದಲ್ಲ, ವಂಕಿ ಧಾರಣೆಯನ್ನು ತಡೆಯಲಾರದವರು, ಅವುಗಳ ಉಪಯೋಗ ಪಡೆಯಬಹುದು. ಎರಡು ಮೂರು ಮಕ್ಕಳಿದ್ದರೆ, ಪುರುಷರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬಹುದು.

ವ್ಯಕ್ತಿಯನ್ನು ಅವಲಂಬಿಸಿ, ಯಾವ ಪದ್ಧತಿಯು ಅನುಕೂಲವೋ ಹಾಗೂ ಸಮಾಧಾನಕಾರಕವೂ ಆದ ಪದ್ಧತಿಯನ್ನು ಅನುಸರಿಸುವುದೇ ಬಹುಮುಖ್ಯವಾದ ಅಂಶವಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ರೂ. ೧—೫೦
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 2-00ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

12—1—1967



೨೦
ಪೈಸೆ

ಕಥಾ ಪ್ರಪಂಚ

ಗೋಲ್ಡ್ ಬಾಂಡ್

ಕಥೆಗಾರರು

ಶ್ರೀ ವಿ. ವಿ. ಗೂಳೂರ್, ತಿಪಟೂರು.

ಮಾತೆಯರೇ, ಸಹೋದರಿಯರೇ,

ನನಗೆ ಭಾಷಣ ಮಾಡಲು ಬರುವುದಿಲ್ಲ. ಆದರೆ ಹೃದಯದಲ್ಲಿನ ಒತ್ತಡ ತಾನೇ ತಾನಾಗಿ ಧ್ವನಿಯಾಗಿ ನುಡಿಯುತ್ತಿದೆ. ಪಾಕೀಸ್ತಾನಿಗಳು ದ್ರೋಹಿಗಳು, ಚೀನಾ ದೇಶದ ವಂಚಕರು ನಮ್ಮ ಮೇಲೆ ಧಾಳಿ ಮಾಡಿದಾಗ ನಮ್ಮ ಅಣ್ಣ-ತಮ್ಮಂದಿರು ಮಾಡಿದ ಪ್ರಾಣತ್ಯಾಗಕ್ಕೆ ಸರಿದೂಗುವ ಯಾವ ತ್ಯಾಗವನ್ನು ನಾವು ಮಾಡುತ್ತಿದ್ದೇವೆ?—ಇದು ಇಂದು ಪ್ರತಿಯೊಬ್ಬ ಭಾರತೀಯ ಮಹಿಳೆಯೂ ಕೇಳಿಕೊಳ್ಳಬೇಕಾದ ಪ್ರಶ್ನೆ. ವೀರ ಪುತ್ರರನ್ನು ದೇಶಕ್ಕೆ ಕೊಟ್ಟಿದ್ದೇವೆ ನಿಜ. ಆದರೆ ಬರೀ ಅಷ್ಟೇ ಸಾಲದು. ಇಂದು ನಿಮ್ಮ ತಾಯಿ ನಿಮ್ಮನ್ನು ಬೇಡುತ್ತಿದ್ದಾಳೆ. ನಾವು ಮಾಡುವುದೇನು ಮಹಾ ತ್ಯಾಗವಲ್ಲ. ಅದು ನಮ್ಮ ಕರ್ತವ್ಯ. ಪ್ರತಿಯೊಬ್ಬ ಮಹಿಳೆಯಲ್ಲಿಯೂ ಅಲ್ಪವೋ ಸ್ವಲ್ಪವೋ ಚಿನ್ನ ಇದ್ದೇ ಇರುವುದಲ್ಲವೆ? ನಿಮ್ಮ ಮಾಂಗಲ್ಯವನ್ನು ಬಿಟ್ಟು ಮಿಕ್ಕ ಚಿನ್ನವನ್ನು ರಾಷ್ಟ್ರಕ್ಕೆ ಕೊಡಿ. ನಿಮ್ಮಿಂದ ದಾನ ಮಾಡಲಾಗದಿದ್ದರೆ ಬಾಂಡಿನ ರೂಪದಲ್ಲಿ ಯಾದರೂ ಕೊಡಿ. ನಿಮಗೆ ಶರೀರವನ್ನು ಕೊಟ್ಟ ತಾಯಿ ಒಂದೇ ಒಂದು ಹನಿ ರಕ್ತವನ್ನು ಬಯಸಿದರೆ ಕೊಡಲಾರಿರಾ? ಮೋಹವನ್ನು ಬಿಡಿ. ಅಂಥ ಅಭಿಮಾನವನ್ನು ಹೊರದೂಡಿ, ಸ್ವಾರ್ಥದ ದೃಷ್ಟಿಯಿಂದ ನೋಡಿದರೂ ನೀವು ಕೊಡಲೇ ಬೇಕು. ಅದು ನಿಮಗಾಗಿ. ನಿಮ್ಮ ರಕ್ಷಣೆಗಾಗಿ, ನಮ್ಮ ದೇಶಕ್ಕೆ ಕೇಡು ಬಂದರೆ ನಮಗೆ ಕೇಡಲ್ಲವೆ? ಅನೇಕರು ದಾನಮಾಡುತ್ತಿದ್ದಾರೆ. ಆದರೆ ಅದು ಸಾಲದು. ನೀವೆಲ್ಲ ಮುಂದೆ ಬರಬೇಕು.

ತನ್ನ ಸರ್ವ ಸುವರ್ಣವನ್ನು ತೆಗೆದಿಟ್ಟು ನಾರುಡಿಯುಟ್ಟು ಶ್ರೀ ರಾಮನೊಂದಿಗೆ ಕಾಡಿಗೆ ಹೋದ ಸೀತಾಮಾತೆ ನಮ್ಮ ಆದರ್ಶ ಮಹಿಳೆಯಲ್ಲವೆ? ಗಂಡನ ಭುಜಕ್ಕೆ ಭುಜ ಕೊಟ್ಟು ದುಡಿಯುವುದೇ ಭಾರತದ ಮಹಿಳೆಯರ ವೈಶಿಷ್ಟ್ಯವಲ್ಲವೆ? ಹಿಂದಿನ ನಮ್ಮ ಮಾತೆಯರು ಗಳಿಸಿರುವ ಹೆಸರನ್ನು ಉಳಿಸಿಕೊಳ್ಳುವುದು ನಮ್ಮ ಧರ್ಮ ತಾನೇ? ಅದಕ್ಕಾಗಿ ಹೋರಾಡೋಣ. ನಮ್ಮ ಅಣ್ಣ-ತಮ್ಮಂದಿರನ್ನು ಯುದ್ಧರಂಗಕ್ಕೆ ಕಳುಹಿಸೋಣ. ಅವರ ಹಿಂದೆ ನಾವಿದ್ದೇವೆ ಅನ್ನುವುದನ್ನು ಕೃತಿಯಲ್ಲಿ ತೋರಿಸೋಣ. ಯುದ್ಧಕ್ಕೆ ಸಂತಸದಿಂದ ನಿಮ್ಮ ಮಕ್ಕಳನ್ನೇ ಕಳುಹಿಸುತ್ತಿರುವ ಮಾತೆಯರೇ, ಚಿನ್ನ, ನಿಮ್ಮ ಮಕ್ಕಳಿಗಿಂತ ಬೆಲೆ ಬಾಳುವ ವಸ್ತುವೇನಲ್ಲವಲ್ಲ? ಮತ್ತೊಮ್ಮೆ ಬೇಡಿಕೊಳ್ಳುತ್ತೇನೆ. ಇದು ನಮ್ಮ ಕರ್ತವ್ಯವೇ ವಿನಃ ನಮ್ಮ ತ್ಯಾಗವೇನಲ್ಲ, ಆದ್ದರಿಂದ ಚಿನ್ನವನ್ನು ಬಾಂಡಿನಲ್ಲಿ ತೊಡಗಿಸಿರಿ.

ಜೈ ಹಿಂದ್.

ಇದು ಮಂತ್ರಿಗಳ ಪತ್ನಿ ಮಾಡಿದ ಭಾಷಣ. ಭಾಷಣ ಮುಗಿದ ನಂತರ ಸಭೆಯಲ್ಲಿ ಯುಧಾತ್ರಕಾರ ಗುಟು, ಗುಟು ಪ್ರಾರಂಭವಾಯಿತು. ಒಬ್ಬರ ಕೊರಳನ್ನು ಒಬ್ಬರು, ಒಬ್ಬರ ಕೈಯನ್ನು ಒಬ್ಬರು ನೋಡಲು ಪ್ರಾರಂಭಿಸಿದರು. ಏನೋ ಚಿನ್ನದ ವಿಷಯವಾಗಿ ಭಾಷಣ ಮಾಡುತ್ತಾರೆಂದಾಗಲೇ ಯಾರೂ ಚಿನ್ನದ ಒಡವೆಗಳನ್ನು ಹಾಕಿಕೊಂಡು ಬರುವ ಮೂರ್ಖತನವನ್ನು ತೋರಿಸಿರಲಿಲ್ಲ! ಎಲ್ಲೋ ಅಲ್ಲೊಬ್ಬರು ಇನ್ನೊಬ್ಬರು ಉಂಗುರಗಳನ್ನೋ ಬಳೆಗಳನ್ನೋ ಕೊಟ್ಟರು. ಅವರ ಸಂಖ್ಯೆ ಅತ್ಯಲ್ಪ. ಮಿಕ್ಕ ಮಹಿಳೆಯರು ಮುಖ ಮುಖ ನೋಡುತ್ತಾ ಕುಳಿತರು. ಯಾರೂ ಮುಂದೆ ಬರದಿದ್ದುದನ್ನು ನೋಡಿ, "ಮತ್ತೊಮ್ಮೆ ಯೋಚಿಸಿ, ಗೋಲ್ಡ್ ಬಾಂಡಿಗಾದರೂ ಕೊಡಿ" ಎಂದು ನಿಧಾನವಾಗಿ ಸಪ್ಪೆ ಧ್ವನಿಯಿಂದ ನುಡಿದು ಕುಳಿತುಕೊಂಡರು ಅಧ್ಯಕ್ಷಿಣಿ. ಒಂದು ಮೂಲೆಯಲ್ಲಿ ಗಲಾಟೆ ಪ್ರಾರಂಭವಾಯಿತು. ಯಾರೋ ಒಬ್ಬ ಮಾಸಿರು ಮಾರುವ ಹೆಂಗಸು ತನ್ನ ಮಾಂಗಲ್ಯಕ್ಕೆ ಅರಿಸಿನದ ಕೊನೆಯನ್ನು ಕಟ್ಟಿಕೊಂಡು ಚಿನ್ನದ ಮಾಂಗಲ್ಯವನ್ನು ದಾನವಾಡಲು ಮುಂದೆ ಬಂದಳು. ಅದನ್ನು ನೋಡಿ ಮಂತ್ರಿಗಳ ಪತ್ನಿಯವರ ಕಣ್ಣಲ್ಲಿ ನೀರು ಬಂತು.

ಮುಂದಿನ ವಾರದ ಹೊತ್ತಿಗೆ ಒಂದು ಆರ್ಡಿನೆನ್ಸ್ ಬನ್ನ. ಚಿನ್ನವನ್ನು ದಾನವಾಗಿ ಕೊಡದಿದ್ದರೂ ಚಿಂತೆಯಿಲ್ಲ. ಚಿನ್ನದ ಬಾಂಡುಗಳನ್ನು ಕೊಂಡುಕೊಳ್ಳಿ"

ಎಂದು ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು.

ಹೆಂಗಸರು ತನ್ನ ತಮ್ಮಲ್ಲಿರುವ ಚಿನ್ನದ ದರ್ಜೆಗೆ ತಕ್ಕಂತೆ ಗುಂಪು ಗುಂಪು ಮಾಡಿಕೊಂಡು ಹೊರಟರು.

"ಅಲ್ರಿ, ಶ್ರೀರಂಗಮ್ನೋರೆ ನಮ್ಮಲ್ಲಿರೋ ಚಿನ್ನಾನೆಲ್ಲಾ ಕೊಟ್ಟು ಮಣ್ಣು ಮುಕ್ಕ ಬೇಕೆ?

"ಹೌದಮ್ಮ ಹೌದು' ಕೋಲೇ ಬಸವನ ಹಾಗೆ ತಲೆ ಹಾಕಿದರು ಶ್ರೀ ರಂಗಮ್ಮನೋರು.

'ಬೇಡಿ, ಬೇಡಿ, ಕೊಡ್ಬೇಡಿ. ಮಣ್ಣು ಮುಕ್ಕ ಬೇಡಿ, ಚಿನ್ನಾನೇ ಮುಕ್ಕಿ' ಸಿಡಿ ಮಿಡಿ ಗುಟ್ಟುತ್ತಾ ಹೇಳಿದಳು ಜಾನಕಿ.

ಸೊಗಸುಗಾತಿ ಜಾನಕೀನ ಮುಖ ಮುರಿಯಲು ಇದೇ ತಕ್ಕ ಸಮಯವೆಂದು ಬಿನ್ನಾಣವಾಗಿ ಬಾಣವನ್ನು ಬಿಟ್ಟಳು ಭಾಗಮ್ಮ.

"ನಾವೇನು ಉಟ್ಟರೂ ಚಿನ್ನ ಇಲ್ಲದ ಭಿಕಾರಿಗಳು ಕಟ್ಟೋದ್ದೇನು!"

"ಭಿಕಾರಿಗಳೇಕೆ ಭಕ್ರುಗ್ಳು. ಯಾವ್ದಾದ್ರು ಬಿದ್ದು ಬಯ್ಸ್ಕಂಡ್ರ ಗೊತ್ತಾಗುತ್ತ ಬುದ್ಧಿ ಮಂತಿಕೆ." ಜಾಡಿಸಿಯೇ ಬಿಟ್ಟಳು ಜಾನಕಿ.

'ಈಗಿನ ಕಾಲದ ಹುಡುಗಿಯರೇ ಹೀಗೆ. ಗಂಡಂದಿರನ್ನು ಹಿಡಿತದಲ್ಲಿಟ್ಕೊಳ್ಳೋಕೆ ಬರೋಲ್ಲ. ಚಿನ್ನ ನಮ್ಮ ಹತ್ರ ಇದ್ದರೆ ಗಂಡಸರುಗಳು ಬಲೆಗೆ ಬಿದ್ದ ಮೀನುಗಳಿಗೆ ನಮತ್ತ ಒದ್ದಾಡ್ತ ಬಿದ್ದಿರ್ತಾರೆ. ಅದಿಲ್ದಿದ್ರು ಯಾರು ಕೇಳ್ತಾರೆ ನಮ್ಮನ್ನ. ಅದಕ್ಕೆ ನೋಡಿ ಈಗಿನ ಕಾಲದಲ್ಲಿ ಅದೇನೋ ಅಂತಾರಲ್ಲ ಆ ಡೈವರ್ಸ್ (ಡೈವರ್ಸ್) ಜಾಸ್ತಿಯಾಗಿರೋದು" ವೃದ್ಧ ಮಹಿಳೆ ಶ್ರೀ ರಂಗಮ್ಮ ತಮ್ಮ ತರ್ಕ ಸ್ಮರಣೆಯನ್ನು ಮಂಡಿಸಿದರು.

"ಒಡವೆಯಿಲ್ಲದ ಹೆಣ್ಣು ಬಾಲ ಇಲ್ಲದ ನಾಯಿಯಿದ್ದಂಗೆ, ಅಲ್ವ ಮಹಾಲಕ್ಷ್ಮಮ್ಮನೋರೆ?" ಲಕ್ಷ್ಮಮ್ಮನ ಕೀರಲು ಧ್ವನಿ.

"ಒಳ್ಳೆ ಗಾದೇನೇ ಕಲ್ತಿದೀರ. ನಿಮಗೆ ಸರಿಹೋಗಿದೆ. ಅಬ್ಬಾ! ಎಂತಹ ಹೋಲಿಕೆ!" ಜಾನಕಿಯ ನುಡಿ...

"ಈಗಿನ್ನ ಕಾಲ್ದೋವಕ್ಕೆ ಏನು ಗೊತ್ತಾಗುತ್ತೆ? ನಮ್ಕಾಲದಲ್ಲಿ ಹಾಕ್ಕೋತಿದ್ದ ಒಡವೆಗಳನ್ನು ಹೊರಲೂ ಇವುಗಳ ಕೈಲಾಗೊಲ್ಲ."

"ಹಾದು ನ್ಸಾವೇನು ಗಂಡಸರ ಸಡಿಸುವ ಬ್ಯಾಂಕೇ?'

"ಅದೇನು ಇಂಗ್ಲೀಷೋ ಸಂಗ್ಲೀಷೋ ಯಾರಿಗೆ ಅರ್ಥವಾಗುತ್ತೆ? ಬಿಚ್ಚಿಟ್ಟರೆ ಗೌರಮ್ಮನ ಹೆಂಗಿರೋಕೆ ನಮ್ಗೇನು ಬಂದಿರೋ ಬರ."

"ಮಂತ್ರಿಗಳ ಮಡದ್ಯೋರು ಚಿನ್ನದ ಬ್ಯಾಂಡಿಗೆ (ಬಾಂಡಿಗೆ) ಕೊಟ್ಟಿವಂತೇ ಇವತ್ತು. ಸುಮ್ಮನಿದ್ದ ಚಿನ್ನಮ್ಮ ತನ್ನ ಪಾಲಿನದನ್ನೂ ಸೇರಿಸಿದಳು.

"ಕೊಡ್ದೇ ಏನು? ಬಲಗೈಲಿ ಕೊಡೋದು, ಎಡಗೈಲಿ ಇಸ್ಕೊಳ್ಳೋದು. ಹಾಗಿದ್ರೆ ನಾನೂ ನೀನೂ ಕೊಡ್ತೀವಿ." ಬಹುಶಃ ಸದಾಚಾರ ಸಮಿತಿಯ ನಿವೃತ್ತ ಮಹಿಳೆಯೆಂದು ತೋರುತ್ತದೆ.

"ಒಟ್ಟಿನಲ್ಲಿ ನಾವು ಚಿನ್ನವನ್ನೇನು ಬದಂ ಮೇಲಿನ ಧೂಳನ್ನೂ ಸಹ ಕೊಡುವುದಿಲ್ಲ." ನಿರ್ಧಾರದ ನುಡಿಯಿಂದ ಘೋಷಿಸಿದರು ಶೆಟ್ಟರ ಶೃಂಗಾರಮ್ಮ. ಚಿನ್ನವಿದ್ದೂ ಸಹ ಮೌನವಾಗಿ ಬಂದಳು. ಅವಳೇ ಸ್ವರ್ಣಲತಾ.

○ ○ ○ ○

"ಲೇ ಚಿನ್ನಾ..."

... .

"ಚಿನ್ನಾ, ಇಲ್ವಾರೆ'

"ಅಲ್ಲಾಂದ್ರೆ, 'ಚಿನ್ನಾ' ಅಂದಾಗ ಜ್ಞಾಪಕಕ್ಕೆ ಬಂತು ನೋಡಿ ಚಿನ್ನಕ್ಕೆ ಮತ್ತೆ ಕನಿ ವಕ್ರಿಸಿದ್ದಾನೆ.'

"ಯಾವ ಚಿನ್ನಕ್ಕೆ?"

"ನನಗಲ್ಲಾಂದ್ರ ಚಿನ್ನ, ಗೋಲ್ಡ್."

"ಆ ವಿಚಾರವಾಗಿ ನಿನ್ನ ಹತ್ತಿರ ಮಾತಾಡೋಣ ಅಂತ ಇದ್ದೆ."

"ಹೂಂ ಹೇಳಿ. ಅದೇ ವಿಚಾರವಾಗಿಯೇ ನಮ್ಮ ಸಮಾಜದಲ್ಲೂ ಭಾಷಣ ಇತ್ತು ಭಾಷಣಕ್ಕೇನು ನಾನೂ ಸಾವಿರ ಹೇಳ್ತ್ನೆ."

'ಅಲ್ವೆ, ಯಾವುದೇ ವಿಷಯವಾದರೂ ಮೊದಲು ಚೆನ್ನಾಗಿ ಅರ್ಥ ಮಾಡಿಕೋಬೇಕು. ಸುಮ್ಮನೆ ಬಡ ಬಡ ಅನ್ಬಾರ್ದು. ನಿಮ್ಮ ಸಮಾಜದಲ್ಲಿ ಏನು ಹೇಳಿದ್ರು?"

"ಚಿನ್ನವನ್ನು ದೇಶಕ್ಕೋಸ್ಕರ ಕೊಡಬೇಕಂತೆ, ಇಲ್ಲಿದ್ರೆ ಗೋಲ್ಡ್ ಬಾಂಡಿಗಾದರೂ ಹಾಕಬೇಕಂತೆ. ಹಾಗೆ ಮಾಡೋದ್ರಿಂದ ದೇಶ ಉದ್ಧಾರವಾಗುತ್ತಂತೆ."

"ಸರಿ, ಅದರ ವಿಷಯ ಏನಾಗಿ ಯೋಚಿಸಿಯೇ? ನೀನೂ ಕೊಂಚ ಓದಿದ್ದೀಯ. ಸ್ವಲ್ಪ ಯೋಚಿಸುವುದನ್ನು ಕಲಿ."

"ಅದು ಸರೀಂದ್ರೆ, ಚಿನ್ನ ಕೊಡುವುದರಿಂದ ದೇಶಕ್ಕೆ ಹೇಗೆ ಸಹಾಯವಾಗುತ್ತೆ?"

'ನೋಡು, ಈಗ ನಮ್ಮ ದೇಶ ಇಬ್ಬರು ಶತ್ರುಗಳನ್ನು ಹೊರಗಡೆ ಎದುರಿಸಬೇಕಾಗಿದೆ. ಒಳಗಡೆ ಆಹಾರ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇದಕ್ಕಾಗಿ ಶಸ್ತ್ರಾಸ್ತ್ರ ಹೇಗೂ ಆಹಾರವನ್ನು ನಾವು ಪರದೇಶಗಳಿಂದ ತರಿಸಬೇಕು. ನಾವೇನೋ ಸಾಧ್ಯವಾದ ಮಟ್ಟಿಗೂ ತಯಾರಿಸುತ್ತಿದ್ದೇವೆ. ಆದರೆ ಅದು ಸಾಲದು. ನಾವು

(ಹನ್ನೊಂದನೇ ಪುಟದಿಂದ)

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ

ಈಗ ನಿಮ್ಮ ಸಹಾಯ ಬೇಕು

"ನಾವು ಒಂದು ದೇಶ. ಒಂದು ಜನ. ಇಂದು ಬಿಹಾರ್, ಉತ್ತರ ಪ್ರದೇಶ ಮತ್ತು ಇತರ ಕ್ಷಾಮ ಪೀಡಿತ ಪ್ರದೇಶಗಳ ಗೋಳು ಇಡೀ ಭಾರತದ ಗೋಳು. ಕ್ಷಾಮದ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗೋಣ, ನಮ್ಮೊಡನೆ ಇರುವುದನ್ನು ಹಂಚಿಕೊಳ್ಳೋಣ. ಸುಖಮಯವಾದ ಭವಿಷ್ಯವನ್ನು ನಿರ್ಮಿಸಲು ನಾವು ಒಟ್ಟಾಗಿ ದುಡಿಯೋಣ."

ಇಂದಿರಾ ಗಾಂಧಿ
ಪ್ರಧಾನ ಮಂತ್ರಿ

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ನಗದು ಹಣ ಅಥವಾ ವಸ್ತುಗಳ ರೂಪದಲ್ಲಿ ಕಾಣಿಕೆಗಳನ್ನು ಇಲ್ಲಿಗೆ ಕಳುಹಿಸಿ:
ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿ,
ಕ್ಯಾಬಿನೆಟ್ ಸಚಿವಾಲಯ, ರಾಷ್ಟ್ರಪತಿ ಭವನ, ನವದೆಹಲಿ–4.

DA 66/F3

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೦	೧೨—೧—೧೯೬೭	No. 20

Estd. 1921
NAVAYUGA
Leading Kannada Weekly
UDIPI, S. Kanara

ವಿ. ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2–00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1–50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮೈಸೂರಿನಲ್ಲಿರುವ ಸೆಂಟ್ರಲ್ ಫುಡ್ ಟೆಕ್ನೋಲಜಿಕಲ್ ರೀಸರ್ಚ್ ಸಂಸ್ಥೆಯು ಹಲವು ತರದ ಸತ್ವಶಾಲಿ ಆಹಾರವನ್ನು ಪರಿಶೋಧಿಸಿದೆ. ಮೇಗಿನ ಚಿತ್ರದಲ್ಲಿ ಮೀನಿನ ಬಲವರ್ಧಕ ಸತ್ವ ತಯಾರಿಕೆಗೆ ಸಂಸ್ಥೆಯ ಕೆಲಸಗಾರನೊಬ್ಬನು ಮೀನನ್ನು ತೊಳೆಯುತ್ತಿರುವುದು.

ದುರಂತದ ಬೀಜ

ಮೊನ್ನೆ ಐದನೆಯ ತಾರೀಕು ಕರ್ನಾಟಕದ ಎನ್ ಜಿ ಓ ಗಳು ಸಾಮೂಹಿಕ ರಜೆ ತೆಗೆದು ತಮ್ಮ ಬೇಡಿಕೆಗಳನ್ನು ಪೂರಯಿಸುವಂತೆ ಸರಕಾರವನ್ನು ಒತ್ತಾಯಿಸಿ ಕೇಳಿಕೊಂಡರು. ಇದು ಸಾಂಕೇತಿಕ ಮುಷ್ಕರವೆನ್ನಬಹುದು; ಉಗ್ರಕ್ರಮವೆಂದರೂ ಸಲ್ಲಬಹುದು—ಈ ಕ್ರಮವು ಯಶಸ್ವಿಯಾಯಿತೆಂದೂ ಆಗಲಿಲ್ಲವೆಂದೂ ವಾದ ವಿವಾದ ಮಾಡಲೂ ಬಹುದು. ಆದರೆ, ಬರಿಯ ಮಾತುಗಾರಿಕೆಯಿಂದ ತೇಲಿಸಿ ಬಿಡುವಷ್ಟು ಕ್ಷುಲ್ಲಕವಾದ ಸಂಗತಿ—ಘಟನೆಯಿದಲ್ಲವೆಂಬುದನ್ನು ಸರಕಾರವು ಅವಶ್ಯ ಮನಗಾಣಬೇಕು. ಎನ್ ಜಿ ಓ ಸಂಘದ ಅಧ್ಯಕ್ಷರೇ ದೇವಾಸಿಯೂ ಹೇಳುವಂತೆ ಆ ದಿನ ರಾಜ್ಯದಲ್ಲಿ ಸರಕಾರವೆಂಬುದೇ ಇಲ್ಲವೆಂಬುದು ಉಚಿತವಾಗಲಾರದಾದರೂ ಸರಕಾರಿ ಕೆಲಸಗಳು ಸ್ತಗಿತಗೊಂಡುದನ್ನು ಕಣ್ಣಿದ್ದವರಾರೂ ಅಲ್ಲಗಳೆಯುವಂತಿಲ್ಲ.

ಈ ಸಾಮೂಹಿಕ ರಜೆಯ ಕಾರ್ಯಕ್ರಮ ಕೆಲಸಮಯ ಹಿಂದೆಯೇ ನಡೆಯಬೇಕಿತ್ತು. ಆದರೆ, ಮುಖ್ಯಮಂತ್ರಿ—ಎನ್ ಜಿ ಓಗಳ ನಡುವೆ ಮಾತುಕತೆ ನಡೆದದ್ದರಿಂದ ಅದನ್ನು ಮುಂದೂಡಲಾಯಿತು. ಎನ್ ಜಿ ಓ ಗಳ ಬೇಡಿಕೆಯಂತೆ ವೇತನ ಆಯೋಗವನ್ನು ನಿರ್ಮಿಸಲಾಯಿತೇನೋ ನಿಜ. ಆದರೆ, ಮಧ್ಯಾವಧಿ ಪರಿಹಾರ, ಕೇಂದ್ರ ಸರಕಾರದ ಶ್ರೇಣಿಯ ತುಟ್ಟಿಭತ್ತೆ ಮೊದಲಾದವುಗಳ ಬಗ್ಗೆ ಸರಕಾರ ತೀವ್ರ ಅನಾಸ್ಥೆ ತೋರಿದ್ದರಿಂದ ಇಂತಹ ದುರ್ದಿನ ಬಂದಿತು. ಬಂತು; ಬಂದ ಹಾಗೆಯೇ ಹೋಯಿತೆಂದು ನಿಶ್ಚಿಂತೆಯಿಂದ ಕೂತುಕೊಳ್ಳುವಂತಿಲ್ಲ. ಇಂದು ನಡೆದ ಈ ಕ್ರಮ ಮುಂದಿನ ಉಗ್ರಕ್ರಮಗಳಿಗೆ ನಾಂದಿ. ಎನ್ ಜಿ ಓಗಳಲ್ಲಿನ ಸಂಘಟನಾ ಶಕ್ತಿಯು ಹೆಗ್ಗುರುತು ಇದು. ಅವರ ಸಾಮೂಹಿಕ ಅತೃಪ್ತಿಯ ದ್ಯೋತಕವಿದು. ಇಂತಹ ದುರ್ಘಟನೆ ನಡೆಯುವುದಕ್ಕೆ ಸರಕಾರ ಬಿಡಬಾರದಿತ್ತು. ತಾನು ಕೊಡುತ್ತಿರುವ ವೇತನ—ಭತ್ತೆಗಳಿಂದ ದಿನ ಮಾಡುವುದು ಅಸಾಧ್ಯವೆಂದು ಅದಕ್ಕೆ ಮೊದಲೇ ಮನವರಿಕೆಯಾಗಬೇಕಿತ್ತು. ಶಾಸಕರ ವೇತನ—ಭತ್ತೆಗಳನ್ನು ಹೆಚ್ಚಿಸಲು ಒಪ್ಪಿದ ಸರಕಾರ, ಅವರಿಗ ಹೆಚ್ಚಿನ ಸೌಕರ್ಯವೊದಗಿಸಲು ಮುಂದು ಬಂದ ಸರಕಾರ ಎನ್ ಜಿ ಓಗಳ ವೇತನದ ಹೆಚ್ಚಳದ ಪ್ರಶ್ನೆ ಮುಂದೆ ಬಂದಾಗ ಸಂಚಿತಸ್ಥನಿಗಳ ಅಭಾವದ ಪ್ರಶ್ನೆಯನ್ನೇ ಮುಂದೆ ಮಾಡಿ ಅಕರ್ಮಣ್ಯ ಸಲಹೆಗಳನ್ನು ನೀಡಿ ಅವರನ್ನೂ ವಾಮ ಮಾರ್ಗಕ್ಕೆ ಸರಿಯುವಂತೆ ಪ್ರೇರೇಪಿಸಿರುವುದು ಶೋಚನೀಯವಲ್ಲದೆ ಬೇರೇನು? ಅತೃಪ್ತ ನೌಕರರನ್ನು ಕಟ್ಟಿಕೊಂಡು ಯಾರು ಹೇಗೆ ಮುಂದುವರಿಯಬಹುದು? ಸರಕಾರವಾದರೂ ತನ್ನ ನೌಕರರಲ್ಲಿ ಅತೃಪ್ತ ಭಾವನೆಯನ್ನು ಬೆಳೆಸಿ ಅವರ ವಿಶ್ವಾಸವನ್ನು ಕಳೆದುಕೊಂಡಂತಾಗಿದೆ—ಅವಿಶ್ವಾಸದ ಭೀಕರ ಪರಿಣಾಮವನ್ನು ಎದುರಿಸಬೇಕಾಗಿದೆ.

ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಉಗ್ರಕ್ರಮಗಳೇ ಬೇಕಾಗುವಷ್ಟು ಒಡೆಯರ ಕಿವಿ ಹೊಟ್ಟು ಹೋಗುತ್ತಿರುವುದು ಇಂದಿನ ಯುಗದ ಒಂದು ವೈಶಿಷ್ಟ್ಯ. ಆದರೆ, ಬುದ್ಧಿವಂತ ಒಡೆಯರು ಉಗ್ರಕ್ರಮವು ಜ್ಯಾರಿಯಲ್ಲಿ ಬರುವುದಕ್ಕೆ ಮೊದಲೇ ಏನಾದರೂ ನೀಡಿ ಕೈ ಒರಸಿಕೊಳ್ಳುತ್ತಾರೆ. ಸರಕಾರವಾದರೂ ಜನತೆಯನ್ನು ಸಂರಕ್ಷಿಸಲು ಅದಕ್ಕೆ ಸೇವೆಸಲ್ಲಿಸಲು ಇರುವುದು. ಅದರ ನೌಕರರೂ ಸುಮ್ಮನೆ ಕೈ ಕಟ್ಟಿ ಕುಳಿತರೆ ಜನ ಏನಾಗಬೇಕು? ಇಂದು ನಡೆದ 'ಒಂದು ದಿನದ ಸಾಮೂಹಿಕ ರಜೆಯ ಕ್ರಮ" ಮುಂದಿನ ವಿಪತ್ಪರಂಪರೆಗಳಿಗೆ ನಾಂದಿ.

ಒಂದು ಬಾರಿ ಮಾದಕ ದ್ರವ್ಯಸೇವಿಸಿದವನಿಗೆ ಮುಂದೆ ಯಾರ ಭೀತಿ ಏಕೆ ಬೇಕು? 'ಮೊದಲಾಗುವುದು ನಿನ್ನಿಂದ, ಮತ್ತಾಗುವುದು ನನ್ನಿಂದ'—ಇದು ಈ ಬಗೆಯ ಕ್ರಮಗಳಿಗೆ ನೂರಕ್ಕೆ ನೂರರಷ್ಟು ಅನ್ವಯಿಸುತ್ತದೆ. ಸರಕಾರವು ನೌಕರರ ಈ ಬಗೆಯ ವರ್ತನೆಗಳನ್ನು ಶಾಸನ ರೀತ್ಯಾ ತಡೆಯುವ ಪ್ರಯತ್ನ ಮಾಡಿತು. ಆದರೆ, ಹೃದಯವನ್ನು ಗೆಲ್ಲದ ರಾಜಪ್ರಭುತ್ವ ಗೆಲ್ಲಲಾರದೆಂಬುದನ್ನು ಈಗ ಅರಿತುಕೊಂಡಿತು. ಮೊದಮೊದಲು ಔದ್ಯೋಗಿಕ ರಂಗದಲ್ಲಿ ಮಾತ್ರ ಕಾಣಿಸಿಕೊಳ್ಳುತಿದ್ದ ಈ ಸಂಪಿನ ಗಾಳಿ ಈಗ ಸರಕಾರಿ ನೌಕರರತ್ತಲೂ ಬೀಸಿತು. ಶಿಕ್ಷಣ ಸಂಸ್ಥೆಗಳಲ್ಲಿ ಇದು ವರೆಗೆ ವಿದ್ಯಾರ್ಥಿಗಳ ಸಂಪಿನ ಕಥೆಯನ್ನು ಮಾತ್ರ ಕೇಳುತಿದ್ದೇವೆ; ಇನ್ನು ಮುಂದೆ ಶಿಕ್ಷಕರೂ ಸಂಪಿನ ಗಾಳಿಯನ್ನುಸುರುವಷ್ಟು ಮುಂದೆ ಹೋದರೆ ತೀರಿತು—ಈಗಾಗಲೇ ಉದ್ರಿಕ್ತ ಜನ ಜಂಗುಳಿಯನ್ನು ಚದರಿಸುವಲ್ಲಿ ಪೋಲೀಸರು ಅಶಕ್ತರಾಗಿದ್ದಾರೆ—ಎಲ್ಲಿ ಸೇನೆಯನ್ನು ಕರೆ ತರುವುದು ಅಗತ್ಯವೆಂಬಂತಹ ದುಸ್ಥಿತಿ ತಲೆದೋರಿದೆ. ಇನ್ನು ಮುಂದುವರಿದು, ಸೇನೆಯ ಕೈಯಲ್ಲೇ ರಾಜ್ಯದ ಸೂತ್ರಗಳನ್ನು ಬಿಟ್ಟು ಕೊಡಬೇಕಾಗಿ ಬಂದರೆ ಆಶ್ಚರ್ಯವಿಲ್ಲ—ನಾವು ಮಾರಕ ಅತೃಪ್ತಿಯನ್ನು ಎದುರಿಸುವಲ್ಲಿ ಸರಕಾರ ನಡೆದುಕೊಂಡರೆ ಸಂಪೂರ್ಣ ಕಟ್ಟೆಯೊಡೆ—ಸರ್ವಾಧಿಕಾರಿಯೊಬ್ಬ ಬರಬೇಕೆಂದು ಕೆಲ ಬುದ್ಧಿವಂತರು ಪಿಸುಮಾತಾಡುತ್ತಿರುವರು. ಎಂದು ಯೋಚಿಸಬೇಕಾದುದು. ಇದೇ ಅಂತಹ ದುರಂತಕಾರಕ ದುರ್ದಿನವನ್ನು ಸಾವಿರ ರು ನೋಡಬೇಕೆ?

ಚುನಾವಣೆಯ ಹಿನ್ನೆಲೆ

ಚುನಾವಣೆಗಳು ಸಮೀಪಿಸಿದಂತೆಯು ರಿಯಾಳುಗಳ ಯಾದಿಯು ಅಂತಿಮವಾಗಿ ತಯಾರಾಗುತ್ತಿದೆ—ಅಧಿಕಾರಾರೂಢ ಪಕ್ಷ ಕಾಂಗ್ರೆಸಿನ ಯಾದಿಯು ಕಾಂಗ್ರೆಸಿಗರ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಿ ಅನೇಕರ ರಾಜೀನಾಮೆಯಲ್ಲಿ ಪರಿಣಾಮಗೊಂಡಿದೆ. ರಾಜ್ಯ ಕಾಂಗ್ರೆಸ್ ಚುನಾವಣಾ ಮಂಡಳಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಎಲ್ಲ ವಿಷಯಗಳನ್ನೂ ಎಲ್ಲಾ ದಿಟ್ಟಿನಲ್ಲೂ ಪರಿಶೀಲಿಸಿ ನಿರ್ಧಾರಕ್ಕೆ ಬಂದಿದೆಯೆಂದು ಹೇಳುತ್ತದೆ. ಅನೇಕ ಹಿರಿಯ ಕಾಂಗ್ರೆಸಿಗರಿಗೆ ಟಿಕೇಟು ದೊರೆಯದೆ ಹೋದುದೂ ಇದೆ. ಇದೇಕೆ ಹೀಗೆ? ಹೊಸ ಮುಖಗಳನ್ನು ತರುವುದಕ್ಕಾಗಿಯೇ ಇದ್ದರೂ ಇರಬಹುದು. ಉದ್ದೇಶ ಪೂರ್ವಕವಾಗಿಯೇ ತಮಗೆ ಟಿಕೇಟು ನೀಡಲಿಲ್ಲ ಎನ್ನುತ್ತಾರೆ ಅತೃಪ್ತರು. ಇತ್ತಂಡದವರೂ ತಂತಮ್ಮ ವಾದವನ್ನು ಸಮರ್ಥಿಸುವುದೂ ನ್ಯಾಯವೇ. ಆದರೆ, ಜನ ಏನನ್ನುತ್ತದೆ ಎಂಬುದು ಮುಖ್ಯವಿಲ್ಲ. ಮತದಾರರಿಗೆ ಬೇಡವಾದವರನ್ನು ತಂದು ನಿಲ್ಲಿಸಿದ್ದ ಚುನಾವಣೆ ಗೆಲ್ಲುವುದು ಸಾಧ್ಯವಿಲ್ಲ. ಕಾಂಗ್ರೆಸಿಗರಾಗಿ ಹೋರಾಡಿ ದುಡಿದ ಹಿರಿಯರಿಗೇನೇ ಕಾಂಗ್ರೆಸ್ಸಿನ ಕಾರ್ಯಾಚರಣೆಯು ಒಪ್ಪಿಗೆಯಾಗದಿರುವಾಗ ಜನ ಸಾಮಾನ್ಯರ ಪಾಡು ಏನಾಗ ಬೇಡ? ನಾಲ್ಕನೆಯ ಬಾರಿಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆ ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟನ್ನು ಮಾತ್ರವಲ್ಲ, ಜನತೆಯಲ್ಲಿ ಸ್ಥಿರ ಸರಕಾರ ರಚನೆಯ ಬಗ್ಗೆ ಸಂದೇಹ ಹುಟ್ಟಿಸಿದೆಯೆಂಬ ಮಾತನ್ನು ಸಂಪೂರ್ಣ ಅಲ್ಲಗಳೆಯಲು ಸಾಧ್ಯವಿಲ್ಲ.

ವಚನ ಸುಧೆ

ಪ್ರಾಯೇಣ ಶ್ರೀಮತಾಂ ಲೋಕೇ
ಭೋಕ್ತುಂ ಶಕ್ತಿರ್ನ ವಿದ್ಯತೇ
ಜೀರ್ಯಂತ್ಯಪಿ ಹಿ ಕಾಷ್ಠಾನಿ
ದರಿದ್ರಾಣಾಂ ಮಹೀಪತೇ॥

ಶ್ರೀಮಂತರಲ್ಲಿ ಆಹಾರವನ್ನು ಸೇವಿಸುವ ಶಕ್ತಿಯೂ ಇರುವುದಿಲ್ಲ; ಆದರೆ ಬಡವರಲ್ಲಿ ಕಟ್ಟಿಗೆಯನ್ನೂ ಕರಗಿಸುವಷ್ಟು ಜೀರ್ಣಶಕ್ತಿ ಇರುತ್ತದೆ.

ತಿದ್ದುಪಡಿ

ಕಳೆದ ತಾ. 29.12.66ರ ಸಂಚಿಕೆಯ ಒಂಭತ್ತನೇ ಪುಟದಲ್ಲಿ ಪ್ರಕಟವಾದ 'ಪಂಕ್ಚರ್' ಲೇಖನದಲೇಖಕರ ಹೆಸರು ಶ್ರೀ. ಬಿ. ರಾಮ್‌ಕುಮಾರ್, ಬಿ. ವಿ. ಕೊಡಪೂರ್ ಎಂಬುದು ಬಿಟ್ಟು ಹೋಗಿದೆ. ಈ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. (ಸಂ. ನ)

ನಗಸಣ್ಣನ ಸರಸ



'ಸದ್ಯ ರೇಶನ್ ಕಡಿತ ಮಾಡೋದಿಲ್ಲಾಂತ ಆಹಾರ ಮಂತ್ರಿ ಸಾರಿದ್ದಾರೆ...."
"ಕೋಟಾನೇ ರಿಡಿಜ್ ಮಾಡದೆ ಇದ್ರೆ ಸರಿ ಹೋಗುತ್ತೆ....."

ಘೂರ್ಕ

ಗೇಹ ರಾಜ್ಯದಲ್ಲಿ

ವ್ಯಕ್ತಿತ್ವದ ಕೊರತೆ, ಪಕ್ಷನಿಷ್ಠೆಗೆ ಚ್ಯುತಿ

"ಏನ್ರೀ ಇದು?"

"ಯಾವುದು?"

"ನೋಡಿ, ಇದೆಲ್ಲಾ ಇಂಥದ್ದೂಂತ?"

"ಅದೇ ಕೇಳಿದೆನಲ್ಲಾ, ಯಾವುದೂಂತ?"

"ಅಲ್ರಿ, ನೋಡಿ, ಈಗ ಕೆಲವು ದಿನಗಳಿಂದ ಏಕ್‌ಸಾನ್ ಬರುತ್ತ ಇದೆ ನೋಡಿ, ಪೇಪ್ರುಗಳಲ್ಲಿ...?"

"ಏನಂತ?"

"ಮತ್ತೆಂಥದು? ಕಾಂಗ್ರೆಸಿಗರೆಲ್ಲ ಅದರಿಂದ ಹೊರ ಬರುವ ಚಳುವಳಿ ಹೂಡುತ್ತಲಿದ್ದಾರೆ...."

"ಓಹೋ, ಹಾಗೆ, ಸರಿಯೇ. ಇದ್ರಲ್ಲಿ ಏನು ವಿಶೇಷ?

"ಯಾಕೆ? ಏನೂ ಇಲ್ವೆ?'

"ನಾನು ಹೇಳುವುದಾದರೆ ಏನೂ ಇಲ್ಲ.!

'ಯಾಕೆ?'

'ರಾಜಕೀಯದಲ್ಲಿ ವಿಶೇಷವೆನ್ನುವುದೇ ಇಲ್ಲ. ಎಲ್ಲವೂ ಗಾಳಿ ಬಂದತ್ತ ತೂರಿಕೊಳ್ಳುವ ಬಣ್ಣ ಬದಲಿಸುವ ಓತಿಗಳು...'

'ಅಂದರೆ?'

'ಅಂದರೇನು? ರಾಮಾಯಣ ಸೃಷ್ಟಿ; ರಾವಣಾಯಣ ಸೃಷ್ಟಿ....'

'ಹಾಗಂದರೆ?'

'ಯಾರು ತಮ್ಮ ಕೊರಳಿಗೆ ಮಾಲೆ ಹಾಕುತ್ತಾರೆಯೋ ಅವರ ದಾಸಾನುದಾಸರು ರಾಜಕಾರಣಿಗಳು....'

'ಸ್ವಲ್ಪ ವಿವರಿಸೀಂದ್ರೆ...'

'ಏನು ವಿವರಿಸೋದು? ಚುನಾವಣೆಯಲ್ಲಿ ಯಾರು ಸೀಟು ಕೊಡ್ತಾರೆ, ಅವ್ರ ಪಕ್ಷ ಸೇರುವವರೇ ನಿಜವಾದ ರಾಜಕಾರಣಿಗಳು...'

'ಅಂದರೆ, ಅವ್ರಿಗೆ ಪಕ್ಷಕ್ಕಿಂತ ಸ್ಥಾನ ಮುಖ್ಯ ಅಂದ ಹಾಗಾಯ್ತು...'

'ಹ್ಞಾ...ನಮ್ಮ ದೇಶದ ಕಥೆ ಹೀಗೆ. ಚುನಾವಣೆ ಮುಗಿದು ಮಂತ್ರಿಮಂಡಲ ರಚನೆಯಾದ ದಿನ ಆರಂಭವಾದ ಈ ಭಿನ್ನಮತೀಯತೆ ಈ ಬಾರಿ ಚುನಾವಣೆಯ ಹಿಂದಿನ ಸಂಧ್ಯಾಕಾಲದಲ್ಲಿ ಈ ರೀತಿ ಪರ್ಯವಸಾನ ಹೊಂದತೊಡಗಿದೆ...'

'ಅಲ್ರಿ, ಈ ಹಳೆ ಹಿರಿ ಹುಲಿಗಳೆಲ್ಲ ಹೀಗೆಲ್ಲಾ ಮಾಡಿದ್ರೆ ಮತ್ತೆ ಹೊಸರಕ್ತ ಏನು ಮಾಡಲೊಲ್ಲದು?'

ಅದೆಲ್ಲ ಕೇಳಬೇಡ. ಹಳೆಯರಲ್ಲಿ ತಾವು - ತಮ್ಮದು ಎಂಬ ಅಭಿಮಾನ ಹೆಚ್ಚಿರುತ್ತೆ. ಹಾಗಾಗಿ ಅವ್ರ ಅಭಿಪ್ರಾಯದಲ್ಲಿ ಅವ್ರೇ ಕಾಂಗ್ರೆಸಿಗರು; ಉಳಿದವರೆಲ್ಲ 'ಕಸಿ ಕಾಂಗ್ರೆಸ್" ಕಾಂಗ್ರೆಸ್ಸೇ ಅವರ ಉಸಿರು; ಕಾಂಗ್ರೆಸ್ಸೇ ಅವರ ಜೀವ, ತನುಮನ ಧನವೆಲ್ಲ..."

"ಒಂದು...'

"ಏನು?"

"ಅಂಥವ್ರು ತಿಳ್ಕೊಂಡಿರ ಬಹುದು— ತಾವು ಕಾಂಗ್ರೆಸ್ಸಿಲ್ಲದೆಯೂ ಜೀವಿಸ ಬಹುದು ಆದರೆ, ಕಾಂಗ್ರೆಸ್ಸು ಮಾತ್ರ ತಾವಿಲ್ಲದೆ ಬದುಕಲಾರದೂಂತ..."

'ಹಾಗೇನೂ ಇಲ್ಲ....ಏನೋ ಕೆಲವರು ಹಾಗೆ ಅಂದುಕೊಂಡಿರ ಬಹುದೂನ್ನಿ. ಆದರೆ, ಅವ್ರಲ್ಲಿ ವ್ಯಷ್ಟಿ ಹಿತದತ್ತ ದೃಷ್ಟಿ ಅಧಿಕ ಹರಿಯ ತೊಡಗಿದ್ದೇ ಈಯೆಲ್ಲಾ ದುರಂತಗಳಿಗೆ ಕಾರಣ....'

'ಅಲ್ರಿ, ತಮಗೆ ಕಾಂಗ್ರೆಸ್ಸು ಟಿಕೇಟು ದೊರಿಲಿಲ್ಲಾಂತ ಹೇಳಿ ಹೊರಬರುವ ಈ ಹಳೇ ಹುಲಿಗಳಲ್ಲಿ ಪಕ್ಷ ನಿಷ್ಠೆಗಿಂತ ಅಧಿಕಾರ ವ್ಯಾಮೋಹವೇ ಅಧಿಕವಿದೆಯೆನಿಸುವುದಿಲ್ಲವೆ?

"ನೋಡಮ್ಮ, ಮನೇ ಮುದುಕ, ಮುದುಕಿಯರಿಗೆ ಯಜಮಾನಿಕೆ ಮಾಡೋ ಆಸೆ ಹೋಗುತ್ತ್ಯೆ' ನಮ್ಮಜ್ಜ ಇದ್ರಂತೆ, ಸಾಯೋವರೆಗೂ ಅಧಿಕಾರ ಚಲಾಯಿಸಿದ್ರಂತೆ—ಈ ಗೌಜಿಯಲ್ಲಿ ಬೀಗದ ಕೈ ಎಲ್ಲಿಟ್ಟಿದ್ದಾರೇಂತ ಯಾರಿಗೂ ಗೊತ್ತಾಗದೆ ಹದಿನೈದನೆಯ ದಿನ ಕಮ್ಮಾರನಿಂದ ಬೀರಿ ಮಾಡಿಸಿಕೊಳ್ಳ ಬೇಕಾಯ್ತಂತೆ....'

'ಅಧಿಕಾರ ಅಂದ್ರೆ ಹಾಗೇ ತಾನೆ?'

'ಅತ್ತೆಯಂದಿರಿಗೆ ಏಳೋಕಾಗದೆ ಹೋದ್ರೂ ಸೊಸೆಯನ್ನ ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳೋ ವ್ಯಾಮೋಹ...'

'ಎಷ್ಟಾದ್ರೂ ಹಿರಿಯರು ತಾನೆ? ಹಿರಿಯರಿಗೆ ಗೌರವ ಕೊಡಬೇಕಲ್ಲಾ?'

'ಅದು ಕೌಟುಂಬಿಕ ಪ್ರಪಂಚದಲ್ಲಿ. ಆದರೆ, ರಾಜಕೀಯ ಪ್ರಪಂಚ ಇದಕ್ಕೆ ತೀರ ಭಿನ್ನವಾದುದು. ಯಾರಿಂದ ಯಾವ ಕಾಲದಲ್ಲಿ ಏನಾಗಬೇಕು, ಅದಕ್ಕೆ ತಕ್ಕಂತೆ ವೇಶ ಹಾಕಬೇಕಾಗುತ್ತದೆ; ಹಲ್ಲಿಲ್ಲದ ಹುಲಿ ಹೊಟ್ಟೆ ಹೊರೆಯೋಕೆ ಎಷ್ಟು ಪಾಡು ಪಡಬೇಕಾಗುತ್ತೆ ನೋಡು...'

'ಅಂದರೆ?'

'ಆಡುಗಳಿಗೆ ವನಮಹೋತ್ಸವ, ಖಿಲಾಡಿಗಳಿಗೆ ಕ್ರೀಡೋತ್ಸವ ಪುಡಾರಿಗಳಿಗೆ ವರಣೋತ್ಸವ ....

'ಅಲ್ರಿ, ವರಣೋತ್ಸವ ಅಂದ್ರೆ?'

'ಅದೇ, ವರಣ ಅಂದರೆ ಆಯ್ದುಕೊಳ್ಳುವುದು, ಚುನಾಯಿಸಿಕೊಳ್ಳುವುದು....'

"ಓ, ವರಣೋತ್ಸವ ಅಂದ್ರೆ ಚುನಾವಣೇ ಅಂತಾಯ್ತು...."

'ಹೌದು....'

'ಹ್ಞಾಂ...ಇದೂ ಒಂದು ರೀತಿಯಲ್ಲಿ ಸರೀನ್ನಿ...'

'ವರಣ ವೇಳೆ ವರಗಳು ತಮ್ಮ ನೈಜ ಯೋಗ್ಯತೆಗಿಂತ ಬಾಹ್ಯ ಥಳುಕು ಹೆಚ್ಚಿಸಿಕೊಂಡು ವಧುಗಳ ಮನವನ್ನಾಕರ್ಷಿಸಲು ಹಾತೊರೆಯುತ್ತಿದ್ದರು ನೋಡು; ತಮ್ಮ ಕೊರಳಿಗೆ ಮಾಲೆ ಬಿದ್ದೀತೂಂತ ಅವರು ಒಂಟಿ ಕೊರಳು ಮಾಡುತ್ತಲೇ ಕುಳಿತಿರುತ್ತಾರೆ, ತುದಿಗಾಲಲ್ಲಿ....'

'ಹ್ಞಾಂ...ವಧು ಏನು ಮಾಡಬೇಕು? ಆಕೆ ಯಾರಾದರೂ ಒಬ್ಬರ ಕೊರಳಿಗೆ ಮಾತ್ರ ಮಾಲೆ ಹಾಕಬಲ್ಲಳಷ್ಟೆ?"

"ಹಾಗೆಯೇ ನೋಡು ಒಂದು ಹುಡುಗಿಯನ್ನು ಒಬ್ಬನಿಗೆ ಮಾತ್ರ ಧಾರೆಯೆರೆಯ ಬಹುದು; ಒಂದು ಕ್ಷೇತ್ರಕ್ಕೆ ಒಬ್ಬನನ್ನು ಮಾತ್ರ ಒಂದು ಪಕ್ಷದ ಹುರಿಯಾಳಾಗಿ ಆರಿಸ ಬಹುದ ...."

"ಅದು ಸರಿ. ಆಗ ನಿರಾಶರಾದವರು ಸುಮ್ಮ ಸುಮ್ಮನೆ ರೇಗಾಡಿದರೆ? ಮಾತಾಪಿತರು ಏನು ಮಾಡಬೇಕು?'

"ಮಾಡುವುದೇನು? ವಧುವಿನ ಮನಸ್ಸನ್ನೂ ವರನ ತೂಕವನ್ನೂ ಅರಿತುಕೊಳ್ಳಬೇಕು. ಕೊಡಬೇಕುತ್ತಮನಾದವಂಗೆ ಮಂಗಳಂ....'

"ಅದು ಸರಿ. ಆದ್ರೆ ಅವ್ರು ಹೇಗಿದ್ದಾರೇಂತ ತಿಳಿಯುವುದು? ಒಳಗಿನ ಗುಟ್ಟು ಶಿವನೂ ಹೇಳಲಾರ ಅಂತೆ....'

"ಅದೇ ಇದ್ದಾರಲ್ಲಾ. ಆ ಕ್ಷೇತ್ರದವರು, ತಾಲೂಕಿನವರು, ಜಿಲ್ಲೆಯವರು ..'

ಇವರೆಲ್ಲ ಮೋಸ ಮಾಡಿದರೆ?"

"ಅದಕ್ಕೇ]ಅನ್ನುವುದು, ರಾಜಕೀಯದಲ್ಲಿ ನಾಟಕೀಯತೆಯೇ ಹೆಚ್ಚು, ಮೋಸ, ವಂಚನೆಗಳಿಗೆ ಬೀಜ. ಹಗೆಹುಟ್ಟುವುದೂ ರಾಜಕೀಯದಲ್ಲಿ; ಅದು ಮಾಯವಾಗುವುದೂ ಅದರಲ್ಲೇ...'

'ಒಂದು ನೆನಪಿಗೆ ಬರುತ್ತದೆ...."

'ಬಿಲ್ಲಿ ಬಿಡು....ಹಳಬರಿಗೆ ಶಾಸಕರಾಗಿ ಉಳಿಯಬೇಕು ಎಂಬ ಆಶೆ, ಯುವಕರಿಗೂ ಆಸೆ....ಅಂದರೆ, ಅಧಿಕಾರ ಮೋಹ....ಇದಕ್ಕೆ ಅಡ್ಡ ಬಂದರೆ, ಪಕ್ಷತ್ಯಾಗ...ಈ ಬಾರಿ ಇದು ತುಸು ಹೆಚ್ಚು....'

'ಅಲ್ಲ, ಹೀಗೆ ಎಲ್ಲರೂ ಕಾಂಗ್ರೆಸ್ ತ್ಯಜಿಸುತ್ತ ಹೋದರೆ?'

'ಏನೂ ಹೆದರ ಬೇಕ್ವ, ಉಳಿದವ್ರು ಸಮೃದ್ಧಿಯಾಗಿ ದಿನದೂಡ್ತಾರೆ....'

'ಅವ್ರು ದಿನ ದೂಡ್ಬಹುದು...ಜನ?'

'ಜನಕ್ಕೇನು? ನೋಡು, ಪ್ರಾಚೀನ ಸಂಸ್ಕೃತಿಯುಳ್ಳ ಭಾರತ ದೇಶದ ಕ್ರಮ ನೋಡು. ಪ್ರಜೆಗಳು ದುಡೀಬೇಕು; ತಮ್ಮ ಉತ್ಪತ್ತಿಯಲ್ಲಿ ನಾಲ್ಕರಲ್ಲಿ ಒಂದಂಶ, ಬಗಕ್ಕವೆಂದರೆ ಮೂರರಲ್ಲೊಂದಂಶ ರಾಜನಿಗೆ ನೀಡಬೇಕು. ಅದನ್ನು ತಿಂದು ರಾಜ ಭೋಗವಿಲಾಸಗಳಲ್ಲಿ ಮೈಮರೆತರೂ ಜನಕ್ಕೆ ಕೇಳುವ ಅಧಿಕಾರವಿಲ್ಲ...'

'ಅಂದರೆ, ಕರಭಾರವನ್ನು ಹೊರುವುದು ಜನತೆಯ ಕೆಲಸ; ಅದನ್ನು ತಿಂದು ತೇಗುವುದು ಶಾಸಕರ ಧರ್ಮ ಅಂತಲೆ.'

'ಹಾಗೇನೂ ಅಲ್ಲ. ಆದರೂ ಒಂದು ಮಾತು ನಿಜ. ನಮ್ಮ ನಮ್ಮ ಉದ್ಧಾರ ನಾವು ನಾವೇ ಮಾಡಿಕೊಳ್ಳಬೇಕು....ಸರಕಾರವನ್ನು ನಂಬಿದ್ರ ಸಂಚಕಾರವೇ...'

'ಯಾಕೆ?' ಅವ್ರಿಗೆ ಎಲ್ಲಿ ಬಿಡುವು? ಎನ್‌ಜಿಓಗಳಿಗೆ ಸರಕಾರವನ್ನು ಗದರಿಸೋ ಚಿಂತೆ. ಜಿಓಗಳಿಗೆ ಎನ್‌ಜಿಓಗಳ ಮೇಲೆ ಸವಾರಿ ಮಾಡೋ ಚಿಂತೆ. ಮಂತ್ರಿ ಮಾಗಧರಿಗೆ ಅಧಿಕಾರ ಉಳಿಸಿಕೊಳ್ಳೋ ಚಿಂತೆ. ಹಾಗಿರುವಾಗ ಜನರ ಚಿಂತೆ ಯಾರಿಗೆ?'

"ಅವ್ರವ್ರ ಚಿಂತೆ ಅವ್ರವ್ರಿಗೆ. ಅದೂ ನೋಡಿ, ನಮ್ಮ ಕರ್ತವ್ಯವೇನೆಂಬುದನ್ನು ಅರಿತುಕೊಳ್ಳದ ಹೋದ್ರೆ....'

"ನಮಗ ಕರ್ತವ್ಯವೆಂಬುದಿಲ್ಲ, ಅಧಿಕಾರ ಮಾತ್ರ ಗೊತ್ತು..."

"ಆದ್ದರಿಂದ್ಲೇ ಇಂತಹ ಪರಿಸ್ಥಿತಿ ನಮಗೆ ಪ್ರಾಪ್ತವಾಗಿದ್ದು...'

'ನಮಗೆ?'

(ಒಂಭತ್ತನೇ ಪುಟ ನೋಡಿರಿ)

ಕುಂದಾಪುರದ ಮುನ್ಸಿಫ್
ಕೋರ್ಟಿನಲ್ಲಿ

O. S. 362/1966.

ವಾದಿರು—ನರಸಿಂಹ ಪೈ ಕೂಡಾ

ಪ್ರತಿವಾದಿರು— ಪದ್ಮನಾಭ ಪೈ ಕೂಡಾ

ಮೇಲಿನ ದಾವೆಯ 16ನೆ ಪ್ರತಿವಾದಿ ರಗುನಾಥ ಪೈ, ನಾರಾಯಣ ಪೈಗಳ ಮಗ,

ಸೋಲಾಪುರ ಡಿಸ್ಟ್ರಿಕ್ಟ್, ಸೋಲಾಪುರದಲ್ಲಿರುವವ—

ಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ನೀವು ವಗೈರೇರ ಮೇಲೆ ವಾದಿರು ದಾಖಲು ಮಾಡಿದ ಮೇಲಿನ ದಾವೆಯು ತಾರೀಖು 19—1—1967ನೇ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ವಿಚಾರಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

K. R. Shenai
Advocate for Plff.

ಮೊಕ್ಕಾಂ: ಕುಂದಾಪುರ.

ನವಯುಗ

ಪ್ರಜಾರಾಜ್ಯ ವಿಶೇಷಾಂಕ—1967

ಕರ್ನಾಟಕದ ಖ್ಯಾತ ಬರಹಗಾರರ
ಕತೆ, ಕವನ, ಲೇಖನಾದಿಗಳಿಂದ ಕೂಡಿ
ವಿಶಿಷ್ಟ ರೀತಿಯಿಂದ
ತಾ. 26—1—1967ರಂದು ಪ್ರಕಟವಾಗುವುದು,

ಅಖಿಲ ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಹೊರನಾಡುಗಳಲ್ಲಿಯೂ ಪ್ರಚಾರವಾಗುವ ನವಯುಗ ವಿಶೇಷ ಸಂಚಿಕೆಯು ಜಾಹೀರಾತಿಗೆ ಉತ್ತಮ ಸಾಧನವಾಗಿದೆ. ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಆದಷ್ಟು ತ್ವರಿತ ಕಳಿಸುವಂತೆ ವಿನಂತಿ.

ಮೆನೇಜರ್, ನವಯುಗ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ,
ವಾರ್ಷಿಕ ಚಂದಾ ರೂ. ೧೦

ವಿವೇಚನೆ

ಹಿಂದೂ-ಸಿಖ್ಖ್ ಒಗ್ಗಟ್ಟಿನ ಒಳಿಯಲ್ಲಿರುವ ಬಿಕ್ಕಟ್ಟು

ಬರೆದವರು: ಶ್ರೀ ಶಿವಶಂಕರ.

ಅಮೃತಸರದಲ್ಲಿರುವ ಸ್ವರ್ಣಮಂದಿರದಲ್ಲಿ ದಶಂಬರ ದಿನಾಂಕ ಹದಿನೇಳರಂದು ಸಂತ ಫತೇ ಸಿಂಗರು ಉಪವಾಸ ಮಾಡಲಾರಂಭಿಸಿರುವರು. ಅದನ್ನು ವೀಕ್ಷಿಸಲು ಬಂದಿದ್ದ ಜನರೆದುರು ಅವರು ಹಿಂದೂ-ಸಿಖ್ ಒಗ್ಗಟ್ಟಿನ ಆವಶ್ಯಕತೆಯ ಕುರಿತು ಭಾಷಣ ಮಾಡಿರುವರು. ಅದೇ ರೀತಿ ಪ್ರಧಾನಿ ಇಂದಿರಾಜೀಯವರಿಗೂ ಬರೆದಿರುವ ಪತ್ರದಲ್ಲಿ ತಾನು ಹಿಂದೂ-ಸಿಖ್ಖರ ಒಗ್ಗಟ್ಟಿಗಾಗಿ ಹಾಗೂ ರಾಷ್ಟ್ರೀಯ ಐಕ್ಯತೆಗಾಗಿ ವಾದಿಸಿರುವದಾಗಿ ತಿಳಿಸಿರುವರು.

ಅದಕ್ಕಿಂತ ಒಂದು ವಾರದ ಹಿಂದೆ ಲುಧಿಯಾನದಲ್ಲಿ ನಡೆದ ಅಕಾಲಿ ದಳದ ಸಭೆಯಲ್ಲಿ ಮಾಸ್ಟರ್ ತಾರಾಸಿಂಘರವರು ಮಾತಾಡುತ್ತ ಸಿಖ್ಖರು ಮತ್ತು ಮುಹಮ್ಮದೀಯರು ರಾಷ್ಟ್ರೀಯರುಗಳು, ಹಿಂದೂಗಳು ಒಂದು ರಾಷ್ಟ್ರಕ್ಕೆ ಸೇರಿದವರಲ್ಲವೆಂದು ಹೇಳಿರುವರು.

ಅದೇ ಸಭೆಯಲ್ಲಿ ಮಾತಾಡಿದ ಪ್ರತ್ಯೊಬ್ಬ ಮಹಾಶಯ ಸರದಾರ ಗೋಪಾಲ ಸಿಂಘರು ಗುರು ಗೋವಿಂದ ಸಿಂಘರ ಹೆಸರನ್ನೂ ರಾಣಾ ಪ್ರತಾಪ, ಶಿವಾಜಿ ಮುಂತಾದವರ ಹೆಸರಿನ ಸಾಲಿನಲ್ಲಿ ಸೇರಿಸುವದನ್ನು ಖಂಡಿಸಿರುವರು. [ಅವರ ಅಭಿಪ್ರಾಯದ ಪ್ರಕಾರ ಗುರುಗೋವಿಂದ ಸಿಂಘರ ಹೆಸರನ್ನು ಅಕ್ಬರ್-ಔರಂಗಜೇಬರ ಸಾಲಿನಲ್ಲಿ ಸೇರಿಸಬೇಕೆಂದಿರಬಹುದು. ಯಾಕೆಂದರೆ ಸಿಖ್ಖರು ಒಂದು ರಾಷ್ಟ್ರಕ್ಕೆ ಸೇರಿದವರಂತೆ ಮುಸ್ಲಿಮರೂ ಒಂದು ರಾಷ್ಟ್ರಕ್ಕೆ ಸೇರಿದವರು; ಆದರೆ ಹಿಂದೂಗಳು ಹಾಗಲ್ಲ. ಹಾಗಿರುವಾಗ ಅಂತಹವರ ಸಾಲಿನಲ್ಲಿ ತಮ್ಮ ಗುರುಗಳ ಹೆಸರನ್ನು ಸೇರಿಸುವದೇ! ಗುರುಗೋವಿಂದ ಸಿಂಘರ ಹೆಸರನ್ನು ಹಿಂದಕ್ಕೆ ಸರಿಸಿ ಬಿಡಲು. ಹಿಂದು ಳಂದ ಸಾಧ್ಯವೇನು? ಗೋವಿಂದಾ! ಗೋವಿಂದಾ ಹೇಳದೆ ಇರಲು ಅವರಿಗೆ ಸಾಧ್ಯವೇ ಇಲ್ಲ.

ಮಾಸ್ಟರ್ ತಾರಾಸಿಂಘರ ಹಾಗೂ ಅವರ ಅನುಯಾಯಿಗಳ ಪ್ರಚಾರ ಪಥಕ್ಕಿಂತಲೂ ತಮ್ಮ ಪ್ರಚಾರ ಪಥ ಮತ್ತಷ್ಟು ಕೆಂಪಗಿರಬೇಕೆಂದು ಸಂತ ಫತೇ ಸಿಂಘರ ಅನುಯಾಯಿಗಳು ಅರ್ಭಟಿಸುತ್ತಿದ್ದಾರೆ. ಅಕಾಲಿ ದಳದ ಪ್ರಧಾನ ಕಾರ್ಯದರ್ಶಿ ಶ್ರೀ ಹರಿಚರಣ ಸಿಂಘಹುದಿಯಾರ ಮತ್ತು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷ ಸಂತ ಚನಾನ್ ಸಿಂಘರವರು ದ್ವೇಷಾಗ್ನಿಯನ್ನು ಕಾರುತ್ತಿದ್ದಾರೆ.

ಇತ್ತ ಗಮನ ಹರಿಸಿದಾಗ ಅಕಾಲಿ ದಳದವರು ಸಿಖ್ಖರು ಹಿಂದೂಗಳಲ್ಲ ಎನ್ನುವ ವಿಭಜನೆಯ ವಾದವನ್ನು ಮುಂದಿಡುತ್ತಿರುವದನ್ನು ಕಂಡುಕೊಳ್ಳಬಹುದು. ಸಂತರ ಪ್ರಮುಖ ಅನುಯಾಯಿಗಳು ಬಂಡಾಯದ ಜೋಷ್ ತೋರುತ್ತಿರುವಾಗ, ಸಂತರು ಉಪವಾಸವಾಗಿ ಅದಕ್ಕೆ ಅಸ್ತು ಅನ್ನುತ್ತಿದ್ದಾರೆ. ಒಂದೇ ಮಾತಿನಲ್ಲಿ ಸೂಚಿಸುವದಾದರೆ ಅವರು ಸಿಖ್ಖರು ಬೇರೆ ಹಿಂದೂಗಳು ಬೇರೆ ಎನ್ನುವ ಅಪಪ್ರಚಾರವನ್ನು ನಡೆಸುತ್ತಿದ್ದಾರೆ. ನಂತರ ಅನುಯಾಯಿಗಳು ಹಾಗೂ ತಾರಾಸಿಂಘರು ಸಿಖ್ಖರು ಬೇರೆ ಹಿಂದೂಗಳೂ ಬೇರೆ ಅರ್ಥಾತ್ ಸಿಖ್ಖರು ಹಿಂದೂಗಳಲ್ಲ ಎನ್ನುವದನ್ನು ಮುಚ್ಚುಮರೆ ಇಲ್ಲದೆ ಸ್ಪಷ್ಟವಾಗಿ ಸಾರುತ್ತಿರುವರಾದಲ್ಲಿ ಸಂತ ಫತೇ ಸಿಂಘರು ಹಿಂದೂಗಳು ಬೇರೆ ಸಿಖ್ಖರು ಬೇರೆ ಎನ್ನುವದನ್ನು ನಯವಾದ ನುಡಿಗಳಲ್ಲಿ ಹಿಂದೂ—ಸಿಖ್ಖರ ಒಗ್ಗಟ್ಟೆಂದು (ಅಂದರೆ 'ಹಿಂದೂ—ಮುಸ್ಲಿಂ' ಅಥವಾ 'ಹಿಂದೂ—ಕ್ರಿಶ್ಚಿಯನ್" ಒಗ್ಗಟ್ಟಿನಂತೆ) ಹೇಳುತ್ತಿದ್ದಾರೆ. ಸಿಖ್ಖರು ಪ್ರತ್ಯೇಕವೆಂದಾದಲ್ಲಿ ಮಾತ್ರ ತಾನೇ ಹಿಂದೂ—ಸಿಖ್ಖ ಒಗ್ಗಟ್ಟಿನ ಪ್ರಶ್ನೆ ಬರುವದು?

ಈ ದುಃಸ್ಥಿತಿಗೆ ಕಾರಣವೇನು? ೧೯೪೭ರ ಪೂರ್ವ ಇಂತಹ ಮಾತು ಕೇಳಬರುತ್ತಿರಲಿಲ್ಲ. ಹಿಂದೂ ಧರ್ಮದ ನಾಶಕ್ಕಾಗಿ ಅಥವಾ ಅವಹೇಳನೆಗಾಗಿ ನಾನಕರು ಸಿಖ್ಖ ಮತವನ್ನು ಆರಂಭಿಸಲಿಲ್ಲ. ಹಿಂದೂ ಧರ್ಮವನ್ನು ನಾಶಗೊಳಿಸ ಬೇಕೆಂದು ಬಂದ ಮುಹಮ್ಮದೀಯರನ್ನು ಸುಸಂಸ್ಕೃತರನ್ನಾಗಿಸಲು ಹಾಗೂ ಹಿಂದೂಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕೆಲವು ದುರಾಚಾರಗಳನ್ನು ನಾಶಗೊಳಿಸಲಿಕ್ಕಾಗಿ ಅವರು ಸಿಖ್ಖಮತವನ್ನು ಆರಂಭಿಸಿದರು. ಬೌದ್ಧರಂತೆ, ಜೈನರಂತೆ ಸಿಖ್ಖಮತವೂ ಹಿಂದೂ ಧರ್ಮದ ಒಂದು ಶಾಖೆಯೇ ಇದೆ. ಈ ವಿಷಯವನ್ನಿಂದು ಧೈರ್ಯದಿಂದ ಹೇಳಲು ನಮ್ಮ ಸರಕಾರ ಸಹ ಹಿಂಜರಿಯುತ್ತಿದೆ. ಬ್ರಿಟಿಷರ ರಾಜಕೀಯ ಗರಡಿಯಲ್ಲಿ ಒಡೆದು ಆಳುವ ನೀತಿಯಲ್ಲಿ ಪಳಗಿರುವ ಕಾಂಗ್ರೆಸ್ಸಿಗರು ಬೌದ್ಧರನ್ನು, ಜೈನರನ್ನು ಸಿಖ್ಖರನ್ನು...ಹಿಂದೂಗಳೆಂದು ಒಪ್ಪಿಕೊಳ್ಳದೆ ಅವರನ್ನು ಪ್ರತ್ಯೇಕವಾಗಿಡಲು ಹೋರಾಡುತ್ತಿದ್ದಾರೆ. ಇಲ್ಲಿ ಸ್ವತಃ ಮಹಾತ್ಮಾ ಮೋಹನದಾಸ್ ಕರಂಚಂದ ಗಾಂಧೀಜೀಯವರೂ ತಪ್ಪಿದ್ದಾರೆಂದು ಹೇಳಲೇ ಬೇಕಾಗುತ್ತದೆ. ಹರಿಜನರೆಂದು ಕರೆಯುತಿದ್ದ ಜನರು ಸಿಖ್ಖಮತಕ್ಕೆ ಸೇರುವದನ್ನು ಕಂಡ ಮಹಾತ್ಮಾಜೀಯವರು ಅದನ್ನು ಖಂಡಿಸಿ, ಸಿಖ್ಖರಾಗುವ ಬದಲು ಮುಹಮ್ಮದೀಯರಾಗಬಹುದೆಂದು ಹೇಳಿರುವರು. ಒಂದು ರೀತಿಯಲ್ಲಿ ಅದು ಸರಿಯೆಂಬಂತೆ ಕಂಡು ಬಂದರೂ, ಅದರ ದುಷ್ಪರಿಣಾಮ ಮಾತ್ರ ಬಹಳಷ್ಟು ಇದೆ.

ಗುರುನಾನಕರ ನಂತರ ಬಂದ ಗುರುಗಳು ಕೂಡಾ ಹಿಂದೂ ಧರ್ಮಕ್ಕೆ ವಿರೋಧಿಗಳಾಗಿರಲಿಲ್ಲ. ಗುರುಗ್ರಂಥದಲ್ಲಿ ಅಡಿಗಡಿಗೆ ರಾಮ, ಕೃಷ್ಣರ ಹೆಸರುಗಳು ಇರುವದನ್ನು ಕಾಣಬಹುದು. ಅಷ್ಟು ಮಾತ್ರವಲ್ಲ ಅಲ್ಲಿ ದಾಮೋದರ, ಗೋಪಾಲ, ವಿಠಲ, ಮುರಾರಿ, ಕೇಶವ, ಮಾಧವ, ಶ್ಯಾಮಸುಂದರ, ಮುರಳಿ ಮನೋಹರ, ದೇವಕಿನಂದನ ಮುಂತಾದ ಹೆಸರುಗಳನ್ನು ಕಾಣಬಹುದು.

ರಕ್ತಪಿಪಾಸಿ ಆಕ್ರಮಣಗಾರರನ್ನು ಆರ್ಯರನ್ನಾಗಿಸುವದರಲ್ಲಿರುವ ಕಷ್ಟವನ್ನು ನಂತರದ ಸಿಖ್ಖಗುರುಗಳು ಕಂಡುಕೊಂಡರು. ಅಕ್ಬರನ ಸಿಹಿಮಿಶ್ರಿತ ವಿಷಗುಳಿಗೆಯನ್ನು ನುಂಗಲೊಲ್ಲದೆ ಅದನ್ನು ರಾಣಾ ಪ್ರತಾಪನು ಎದುರಿಸುತ್ತಿದ್ದಾಗ ಗುರುನಾನಕರ ಪ್ರಥಮ ಪುತ್ರ ಶ್ರೀಚಂದನು ಸ್ನೇಹ ಹಸ್ತವನ್ನು ನೀಡಲು ಸಿದ್ಧನಾಗಿದ್ದನು. ಹಾಗೆಯೇ ಔರಂಗಜೇಬನ ಅತಿಕ್ರೂರ ದಬ್ಬಾಳಿಕೆಯನ್ನು ಎದುರಿಸಿ ಶಿವಾಜಿಯು ಹೋರಾಡುತ್ತಿದ್ದಾಗ ಗುರುಗೋವಿಂದ ಸಿಂಘರು ಸ್ನೇಹ ಹಸ್ತವನ್ನು ನೀಡಲು ಕಾತುರರಾಗಿದ್ದರು. ಆದರೆ ಅದೇನು ದೈವದ ಸಂಚೋ! ಈ ಎರಡು ಶಕ್ತಿಗಳು ಒಂದಾಗಿ ಏಕಕಾಲದಲ್ಲಿ ಶತ್ರುವನ್ನೆದುರಿಸಲಿಲ್ಲ. ಗುರು ನಾನಕರ ಉಪದೇಶಕ್ಕೊಳಗಾಗಿದ್ದವರು ಹೆಚ್ಚಾಗಿ ಸೌಮ್ಯ ಸ್ವಭಾವದವರಾಗಿದ್ದು, ತೋಳದ ಹಿಂಡಿನಲ್ಲಿ ಸಿಕ್ಕಿಬಿದ್ದಿರುವ ಸಿಂಹ ತಾನೆಂಬುದನ್ನು ಸಿಖ್ಖರು ತಿಳಿದುಕೊಂಡಿರದೆ ತಾವೂ ತೋಳಗಳೆಂದೇ ತಿಳಿದುಕೊಂಡಿದ್ದರು. ಈ ತಪ್ಪು ಅಭಿಪ್ರಾಯವನ್ನು ದೂರಮಾಡಿ, ಹಿಂದೂಧರ್ಮವನ್ನು ರಕ್ಷಿಸಲಿಕ್ಕಾಗಿ ಗುರುಗೋವಿಂದ ಸಿಂಘರು ಖಾಲ್ಸಾಪಂಥವನ್ನು ಸ್ಥಾಪಿಸಿದರು. ಆರಂಭದಲ್ಲಿ ಐದು ಜನರು ಅದರಲ್ಲಿದ್ದರು. ಖಾಲ್ಸಾ ಪಂಥಕ್ಕೆ ಸೇರಿದವರು ಕ್ಷೌರಮಾಡಿಸಿಕೊಳ್ಳದ ಕೇಶಧಾರಿಗಳಾಗಿರಬೇಕು. ಅವರ ಬಳಿ ಬಾಚಣಿಗೆ ಕಾಚ, ಕಬ್ಬಿಣದ ಬಳೆ ಮತ್ತು ಕೃಪಾಣ ಇರಬೇಕು. ಇವು ಅವರ ಗಣವೇಷ. ಅವರ ಕರ್ತವ್ಯವಾದರೋ ಹಿಂದೂ ಧರ್ಮವನ್ನು ಜಾಗರಿಸುವದು, ಹಾಗೆಯೇ ದೇಶ ಮತ್ತು ಧರ್ಮವನ್ನು ಕಾಪಾಡುವದು.

ಸಕಲ ಜಗತ ಮೇ ಖಾಲಸಾ ಪಂಥ
ಗಾಜ್
ಜಗೇ ಧರ್ಮ ಹಿಂದೂ ಸಕಲ ಭಂಡ್
ಭಾಜೆ||

ಈ ಗುರುವಾಕ್ಯವು ಖಾಲ್ಸಾ ಒಂದು ಪಂಥವಿದ್ದು, ಹಿಂದೂ ಧರ್ಮವನ್ನು ರಕ್ಷಿಸಲಿಕ್ಕಾಗಿ ಉಂಟಾಗಿದೆಂಬುದು ಸ್ಪಷ್ಟವಾಗುತ್ತದೆ. ಹಾಗಿರುವಾಗ ಸಿಖ್ಖರನ್ನು ಹಿಂದೂಗಳಲ್ಲವೆಂದು ಹೀಗಳೆಯುವದು ನ್ಯಾಯವೇನು? ನಮ್ಮ ಅತಿ ಸಂಪ್ರದಾಯವಾದಿಗಳು ಹಾಗೂ ಸರಕಾರ ಅವರನ್ನು ತಮ್ಮ ತಮ್ಮ ಬಿಕ್ಕಟ್ಟು ಕಾರಣ ಮತ್ತು ಲಾಭಕ್ಕಾಗಿ ದೂರವಿಡಲು, ಪ್ರತ್ಯೇಕಿಸಲು ಪ್ರಯತ್ನಿಸಿದುದರ ವಿಷಫಲವನ್ನಿಂದು ದೇಶವಿಡೀ ಅನುಭವಿಸಬೇಕಾಗಿ ಬಂದಿರುತ್ತದೆ. ಇದೀಗ ದೇಶವಿಡೀ ಗುರುಗೋವಿಂದ ಸಿಂಘರ ಮುನ್ನೂರನೇ ಹುಟ್ಟು ಹಬ್ಬವನ್ನಾಚರಿಸಬೇಕೆಂದು ಸರಕಾರ ಸಹಾ ಸೂಚಿಸಿರುತ್ತದೆ. ಅವರ ಸಂಸ್ಮರಣಾರ್ಥ ವಿಶೇಷ ಅಂಚೆ ಚೀಟಿಯನ್ನು ಪ್ರಕಟಿಸಲಾಗುತ್ತದೆ [illegible] ಆದರೆ ಗುರುಗೋವಿಂದ ಸಿಂಘ ಅಂಚೆ ಚೀಟಿಯನ್ನು ಪ್ರಕಟಿಸಲು ಇಂದು ಸರಕಾರಕ್ಕೆ ನೈತಿಕ ಬಲ ಹಾಗೂ ಧೈರ್ಯ ಇ

(ಎಂಟನೇ ಪುಟ ನೋಡಿ)

ಸಿಂಡಿಕೇಟ್ ಬ್ಯಾಂಕು

ತನ್ನ ಅಸಂಖ್ಯಾತ ಮಂದಿ ಗಿರಾಕಿಗಳಿಗೆ, ಶೇರುದಾರರಿಗೆ, ಮತ್ತು ಹಿತೈಷಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ಸಲ್ಲಿಸಲು ಹರ್ಷಪಡುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ. ಮೈಸೂರು ರಾಜ್ಯ.

ಸಾಧನ ಸಂಪತ್ತು: ರೂ. ೬0 ಕೋಟಿ.
ಶಾಖೆಗಳು: 217.
ತೆತ್ತ ಭಂಡವಾಳ ಮತ್ತು ಕಾದಿಟ್ಟ ನಿಧಿ. ರೂ. 2 ಕೋಟಿ

ಕನಲುದಾರಿ — ಕೆಂಪು ದೀಪ

ಮುರುಟಿದ ಬಳ್ಳಿಗೆ ಕಣ್ಣೀರ ಸಿಂಚನ

ದ್ವಾಪರಯುಗ ಕೊನೆಗೊಂಡು ಕಲಿಯುಗ ಪಾದಾರ್ಪಣ ಮಾಡಿದ ಸಂಕ್ರಾಂತಿ ಸಮಯ.

ದ್ವಾರಕೆಯ ದುರಂತ—

ನಡೆದುದೇನೂ ಇಲ್ಲ—ಬರಿಯ ಆಂತರಿಕ ಸಂಘರ್ಷ.

ಯಾವುದಕ್ಕಾಗಿ?

ಕಲಿ ಪುರುಷನನ್ನು ಓಡಿಸಲಿಕ್ಕಾಗಿ; ಮತ್ತೆ ದ್ವಾಪರಾಯುಗವನ್ನು ತರುವುದಕ್ಕಾಗಿ ಅಲ್ಲ—ಮತ್ತೆ? ಬರಿಯ ಅಧಿಕಾರಕ್ಕಾಗಿ.

ಯಾದವರು ಮನಸ್ವಿಯಾಗಿ ಅಮಲು ಕುಡಿದು, ಅಧಿಕಾರದಾಹದಿಂದ ಪರಸ್ಪರ ಹೊಡೆದಾಡಿಕೊಂಡರು. ತಮ್ಮವರನ್ನು ತಾವೇ ಕೊಂದು ಹಾಕಿದರು; ಕೊಂದವರೂ ಉಳಿಯಲಿಲ್ಲ.

ಬಹುಕಾಲ ತಲೆಯೆತ್ತಿ ಮೆರೆದಾಡಿದ ಯಾದವರ ರಾಜ್ಯ ಇದರಿಂದ ಸಂಪೂರ್ಣ ಪತಿತರಾದರು—

ಇದು ದುರಂತ.

"ಯಾದವೀ ಕಲಹ" ಭಾರತೀಯ ಭಾಷೆಗಳಲ್ಲಿ, ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದಿದೆ.

ಚರಿತ್ರೆಯು ಪುನರಾವರ್ತನೆಗೊಂಡಂತೆನಿಸುತ್ತಿದೆ ಈಗ.

ಹಲವು ಶತಮಾನದ ದಾಸ್ಯ ಶೃಂಖಲೆಯಿಂದ ಭಾರತ ಮುಕ್ತಿ ಹೊಂದಿ ಸ್ವತಂತ್ರವಾಯಿತು.

ಈ ದಶಕದ ಕೊನೆಯಲ್ಲಿ ಚಂದ್ರನತ್ತ ಹಾರಲಿರುವ ಸಟರ್ನ್-೫ ಉಪಗ್ರಹದ ಮಾದರಿ ೧೧೧ ಮೀಟರ್ ಎತ್ತರವಿರುವ ಇದರಲ್ಲಿ ಮೂವರು ಗಗನಯಾತ್ರಿಗಳನ್ನು ಕಳಿಸಲು ಅಮೆರಿಕೆಯು ಆಲೋಚಿಸುತ್ತಿದೆ.



ಅಂತರಿಕ್ಷ ಸಂಪರ್ಕ ಬೆಳೆಸುವ ಲವಲವಿಕೆ ಹೆಚ್ಚಿದಂತೆ ಈ ದಿಸೆಯಲ್ಲಿ ವಿಶೇಷ ಸಂಶೋಧನೆಗಳು ನಡೆಯ ತೊಡಗಿವೆ. ಡಾ। ಸ್ಟಿವನ್ ಹಾಲ್‌ಸ್ಟೆಡ್ ಈ ಸಂಬಂಧದ ಶೋಧದಲ್ಲಿ ತಲ್ಲೀನರಾಗಿದ್ದಾರೆ.

ಬ್ರಿಟಿಷರ ರಾಜಕೀಯಪಕರಣತೆಯಿಂದ ಹೋಳು ಹೋಳಾಗಿಯೇ ಇದ್ದ ಅಖಂಡ ಭಾರತ ಬರಿಯ ಎರಡು ಹೋಳುಗಳಲ್ಲಿ ವಿಭಜನೆಗೊಂಡಿತು.

ಹರಿ ಹಂಚಾಗಿದ್ದ ಭಾರತದ ವಿವಿಧ ಭೂ ಭಾಗಗಳನ್ನು ಮೊತ್ತ ಮೊದಲು ಏಕ ಸೂತ್ರದಲ್ಲಿ ಬಂಧಿಸಿದರು ಆಂಗ್ಲೇಯರು. — ಅವನ್ನು ಒಂದೇ ಹಗ್ಗದಲ್ಲಿ ಪೋಣಿಸಿದ ಕೀರ್ತಿ ಸರ್ದಾರ ಪಟೇಲರಿಗೆ. ಸುದೈವದಿಂದ ಪಾಕಿಸ್ತಾನವೊಂದರ ನಿರ್ಮಾಣವಾದರೂ ಉಳಿದ ಭಾರತ ಇದೇ ಹೆಸರಲ್ಲಿ ಬೆಳೆದು ಬಂದಿತು—ಉಳಿದು ಕೊಂಡಿತು.

ಪಂ॥ ನೆಹರುರಂತಹ ದೇಶಭಕ್ತ, ಲೋಕ ನಾಯಕನ ನಾಯಕತ್ವದ ನೆಳಲಿನಾಶ್ರಯ ಭಾರತಕ್ಕೆ ಲಭಿಸಿತು.

ಸ್ವಾತಂತ್ರ್ಯಕ್ಕಾಗಿಯೇ ಹೋರಾಡಿ ಯಶಗಳಿಸಿದ ಕಾಂಗ್ರೆಸ್ ಅಧಿಕಾರ ಸೂತ್ರ ವಹಿಸಿತು. ಮೂರು ಸಾರ್ವತ್ರಿಕ ಚುನಾವಣೆಗಳಲ್ಲೂ ಅದು ಮಿತಿಮೀರಿದ ಜನ ಬೆಂಬಲಗಳಿಸಿತು.

ಕಾಂಗ್ರೆಸ್ ಜಯಭೇರಿ ಮೊಳಗಿಸಿತು. ಇದಕ್ಕೆ ಜನ ಕಾಂಗ್ರೆಸ್ಸಿನಲ್ಲಿ ಇಟ್ಟ ವಿಶ್ವಾಸಕ್ಕಿಂತ ವಿರೋಧಿ ಪಕ್ಷಗಳ ದುರ್ಬಲತೆಯೇ ಕಾರಣವೆನ್ನುವವರೂ ಇದ್ದಾರೆ—ಅಂಶಿಕವಾಗಿ ಇದನ್ನು ಅಲ್ಲಗಳೆಯುವಂತಿಲ್ಲ.

ಕಾಂಗ್ರೆಸ್ಸಿನ ಕೈಯಿಂದ ಅಧಿಕಾರ ಕಸಿದುಕೊಳ್ಳುವಷ್ಟು ತಾಕತ್ತು ನಮ್ಮ ಯಾವ ವಿರೋಧ ಪಕ್ಷಕ್ಕೂ ಇರುವುದಿಲ್ಲ. ಇದನ್ನು ವಿರೋಧ ಪಕ್ಷೀಯರೇ ಬಾಯಿ ಬಿಟ್ಟು ಒಪ್ಪಿಕೊಳ್ಳುತ್ತಾರೆ.

ವಿರೋಧೀ ಪಕ್ಷಗಳು ಸಂಯುಕ್ತರಂಗವನ್ನು ಒಡ್ಡಿಯಾದರೂ ಕಾಂಗ್ರೆಸ್ಸನ್ನು ಅಧಿಕಾರ ಗದ್ದುಗೆಯಿಂದ ಇಳಿಸುವ ಒಂದು ಯೋಚನೆ ಮಾಡಿದ್ದಲ್ಲ. ಆದರೆ, ಇದು ಕಾರ್ಯರೂಪಕ್ಕೆ ಬರುವಂತಿಲ್ಲ ಎಂಬುದಕ್ಕೆ ಈಗಾಗಲೇ ನಿದರ್ಶನಗಳು ಸಾಕಷ್ಟು ದೊರೆತಿವೆ.

ಸ್ಥಾನಗಳನ್ನು ಹಂಚಿಕೊಳ್ಳುವಲ್ಲಿಯೇ ಇವು ಬೆಕ್ಕುಗಳಂತೆ ಕಚ್ಚಾಡತೊಡಗಿವೆ —ಮುಂದೆ ಆಗುವುದು— ತಿಳಿದೇ ಇದೆ, ಮಂಗನ ಪಾಲು.

ಅಡಳಿತೆಯ ಯಂತ್ರ ಕಾಂಗ್ರೆಸ್ಸಿನ ಸುಭದ್ರ.

ಇದೇ ಒಳ್ಳೆಯದು. ಹೊಸ ವೈದ್ಯನಿಗಿಂತ ಹಳೆಯ ರೋಗಿಯೇ ವಾಸಿ.

ಕಾಂಗ್ರೆಸ್ಸು ಯಾದವೀ ಕಲಹದಲ್ಲಿ ತೊಡಗಿರುವುದನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು. ಕಾಂಗ್ರೆಸ್ ತತ್ವಗಳಲ್ಲಿ ವಿಶ್ವಾಸವಿಲ್ಲದವರು ಅದರಿಂದ ಹೊರಬರುವುದು ನ್ಯಾಯ; ಅವರ ಹಾಗೂ ಪಕ್ಷದ ದೃಷ್ಟಿಯಿಂದ ಉಚಿತ.

ಆದರೆ, ಇಂದೇನು ನಡೆಯುತ್ತಿದೆ?

ಪಕ್ಷದ ತತ್ವಗಳಲ್ಲಿ ಯಾವ ತಪ್ಪನ್ನೂ ಕಾಣದೆ, ಅವುಗಳ ಕಾರ್ಯಾಚರಣೆಯಲ್ಲಿ ನಡೆಯುವ 'ಅನ್ಯಾಯ'ಗಳನ್ನು ಕಾಣಲಾರದೆ, ಹೊರ ಬರುವವರ ಸಂಖ್ಯೆ ಹೆಚ್ಚುತ್ತಿದೆ.

ಈ 'ಅನ್ಯಾಯ'ಗಳಿಗೊಂದು ವಿಶಾಲ ಅರ್ಥವಿರುವುದಾದರೆ, ಈಗ ಹೊರ ಬಂದ ಮಹನೀಯರು ಪಕ್ಷದ ಸಕ್ರಿಯ ಸದಸ್ಯರಾಗಿರುವಾಗ, ಅಧಿಕಾರ ಸ್ಥಾನಗಳಲ್ಲಿರುವಾಗ ಅವನ್ನು ಸರಿಗೊಳಿಸಬಹುದಿತ್ತು. ತಮ್ಮ ಅಮೂಲ್ಯ ಸೂಚನೆಗಳನ್ನು ಅವರು ನೀಡಬಹುದಿತ್ತು. ಅವರಿಗೆ ಜನಬಲವಿದ್ದಿದ್ದರೆ, ಅವನ್ನು ಕಾರ್ಯಾಚರಣೆಗೆ ತರಲು ಮುಂದು ಬರಬೇಕಾಗಿತ್ತು.

ಆದರೆ, ಹೀಗೆ ನಡೆಯಲಿಲ್ಲ.

ನಡೆದುದ್ದು, ನಡೆಯುತ್ತಿರುವುದೇನು?

ಕೃಷ್ಣಮೆನನ್ ಅಧುನಿಕ ಕೃಷ್ಣಾವತಾರ ತಳೆದರು. ತಮ್ಮ ಮೂಲಗೇಣಿಯೆಂದು ತಿಳಿದು ಕೊಂಡ ಮತದಾರಕ್ಷೇತ್ರದಿಂದ ತನಗ ಟಿಕೇಟು ದೊರೆಯಲಿಲ್ಲವೆಂದು ರಾಜಿನಾಮೆಯಿತ್ತು, ಅದೇ ಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸಲು ಮುಂದೆ ಬಂದರು.—ಅವರನ್ನು ಇನ್ನೂ ಕೆಲವರು ಅನುಸರಿಸಿದರು.

ಕರ್ನಾಟಕದ ಕಥೆ ವಿಚಿತ್ರ--

ವೀರಣ್ಣಗೌಡ, ವೆಂಕಟಪ್ಪ, ಹುಚ್ಚಮಾಸ್ತಿಗೌಡ ಮೊದಲಾದ ನಾಯಕರು ಹೊರಬಂದರು. ಯಾಕೆ?

ಕಾಂಗ್ರೆಸ್ಸಿನಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಅವರಿಂದ ಸಹಿಸಲಾಗುವುದಿಲ್ಲವಂತೆ—ನಿಜ. ನ್ಯಾಯೋಚಿತ ಆದರೆ, ಖೇದವೆಂದರೆ, ಇವರು ಹೇಳುವ 'ಅನ್ಯಾಯ' ಪದದ ವ್ಯಾಖ್ಯೆ.

ಇವರ ಅಭಿಪ್ರಾಯದಲ್ಲಿ ಕರ್ನಾಟಕದ ವಿಭಜನೆಯಾಗಬೇಕು.

ಪಂಜಾಬದ ವಿಭಜನೆಯನ್ನು ಒಪ್ಪಿ

ಕೊಂಡ ಕಾಂಗ್ರೆಸ್ ಕರ್ನಾಟಕವನ್ನೇಕೆ ವಿಭಜಿಸಲಾರದು?

ಹಳೆಯ ಮೈಸೂರಿಗೆ ಆಗಿರುವ ಅನ್ಯಾಯವನ್ನು ನ್ಯಾಯದಲ್ಲಿ ಪರಿಣಮಿಸುವುದಕ್ಕಾಗಿ, ರಾಜ್ಯ ವಿಭಜನೆಗಾಗಿ ಅವರು ಹೋರಾಡಲು ಬದ್ಧಕಂಕಣರು!

ಹಿಂದೊಮ್ಮೆ ಹರಿಹಂಚಾಗಿದ್ದ ಕನ್ನಡ ನಾಡನ್ನು ಒಂದುಗೂಡಿಸಲು ಹೆಣಗಿದ ಆ ಮರಾತ್ಮಗಳು ಅಮೃತವೃಷ್ಟಿ ಸುರಿಸಿ ಇವರಿಗೆ ಆಶೀರ್ವಾದ ಮಾಡಬೇಕು.

ಇದೊಂದೇ ಅನ್ಯಾಯವಾದರೆ ಅದನ್ನೂ ಒಪ್ಪಿಕೊಳ್ಳೋಣ. ಮುಗಿಯಲಿಲ್ಲ, ಇನ್ನೂ ಇದೆ.

ಇವರನ್ನುವಂತೆ ವಿಧಾನ ಸಭೆ—ಲೋಕಸಭೆಯ ಸ್ಥಾನಗಳನ್ನು ಜಾತಿವಾರಾಗಿ ಹಂಚಬೇಕಿತ್ತು— ಕುರುಬರಿಗೆ ಇಷ್ಟು, ಒಕ್ಕಲಿಗರಿಗೆ ಇಷ್ಟು, ಲಿಂಗಾಯತರಿಗೆ ಇಷ್ಟು.... ಇವೆಲ್ಲವೂ ಆಯಾ ಜಾತಿಯ ಜನಸಂಖ್ಯೆಯ ಆಧಾರದ ಮೇಲೆ ಹಂಚಬೇಕು.

ಜಾತ್ಯತೀತ ರಾಷ್ಟ್ರದಲ್ಲಿ ಜಾತೀಯತೆಗೆ ಚುನಾವಣೆಗಳು ಪಂಚಾಂಗ ಹಾಕಬೇಕು.

ದಿ| ನೆಹರುರವರು ಸ್ವರ್ಗದಲ್ಲಿ ಇದನ್ನು ಕೇಳಿದರೆ ಆತ್ಮಹತ್ಯೆ ಮಾಡಿಕೊಳ್ಳುವಂತಿಲ್ಲ.

ಹೀಗೆಯೇ ಬೆಳೆಯುತ್ತಿದೆ ಅನ್ಯಾಯದ ವ್ಯಾಖ್ಯಾನ.

ಇದೆಲ್ಲದರ ಅರ್ಥವೇನು?

ತಮಗೆ ಟಿಕೇಟು ದೊರೆತಿಲ್ಲ—ಆದುದರಿಂದ ಅನ್ಯಾಯವಾಗಿದೆ—ಪ್ರತಿಭಟನೆ ಅಗತ್ಯ. ಆದುದರಿಂದ ಕಾಂಗ್ರೆಸ್ಸು ಅನ್ಯಾಯಿ—ಅತ್ಯಾಚಾರಿ, ಅಹಂಕಾರಿಗಳ ಸಂಸ್ಥೆಯಾಗಿದೆ—ಅದರಲ್ಲಿ ಅಧಿಕಾರ ಲೋಭಿಗಳದೇ ಕೈವಾಡ.

ತಮಗೆ ಅಧಿಕಾರ ಬೇಡ. ತಾವು ನಿರಹಂಕಾರಿಗಳು, ಸಚ್ಚಾ ಕಾಂಗ್ರೆಸಿಗರಾಗಿದ್ದವರು—ಆದುದರಿಂದಲೇ ಈ ಅನ್ಯಾಯ ಸಹಿಸಲಾಗದೆ — ನಮಗೆ ಸೀಟು ದೊರೆಯದ್ದರಿಂದಲ್ಲ—ಹೊರ ಬಂದಿದ್ದೇವೆ.

ಯಾರಿಗೆ ಅಧಿಕಾರ ಬೇಕು? ಯಾರಿಗೆ ಬೇಡ?



ಅಮೇರಿಕೆಯ ನೌಕಾದಳದ ಹೊಸ ಜಲಾಂತರ್ಗಾಮಿ — ವಿಲ್ ರೋಗರ್ಸ್. ಇದು ಮುಂದಿನ ವರ್ಷದಿಂದ ಕಾರ್ಯಾರಂಭಿಸುವುದು.

ಅಧಿಕಾರ ಮೋಹವಿರುವವರು ಮಾತ್ರ ರಾಜಕೀಯದಲ್ಲಿ ತಲೆಹಾಕುತ್ತಾರೆಂದು ಜನಸಾಮಾನ್ಯ ವ್ಯಾಖ್ಯೆ ನೀಡಿದರೆ ಅದು ತಪ್ಪಾಗುವುದೆ?

ತಾವು ಕಾಂಗ್ರೆಸ್ಸಿನಲ್ಲಿದ್ದು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪೆಟ್ಟು ತಿಂದು, ಜೇಲು ಸೇರಿದಾಗ ಇನ್ನೂ ವಿದ್ಯಾರ್ಥಿ ದಶೆಯಲ್ಲಿದ್ದವರು [ಹುಟ್ಟದಿರುವವರೂ] ಕಾಂಗ್ರೆಸ್ ಟಿಕೇಟು ಹಂಚುವ ಅಧಿಕಾರ ಪಡೆದಿದ್ದಾರೆ—

ಇದು ದೊಡ್ಡ ಅನ್ಯಾಯ.

ಪ್ರಾಥಮಿಕ ಶಾಲೆಯ ಅಧ್ಯಾಪಕರ ಗತಿಯೇನಾಗಬೇಡ? ತಮ್ಮಿಂದಲೇ ಅಆಇ ಕಲಿತವರೇ ಇನ್ಸ್‌ಪೆಕ್ಟರರಾಗಿ, ಡೈರೆಕ್ಟರರಾಗಿ, ಒಂದು ದಿನ ಮಂತ್ರಿಗಳಾಗಿಯೇ ತಲೆಯ ಮೇಲೆ ಸವಾರಿ ಮಾಡಿದಾಗ ಆ ಮುದಿ ಶರೀರ ಈ 'ಯಾತನೆ'ಯನ್ನು ಹೇಗೆ ಹೊರಬೇಕು?

ರಾಜಕೀಯದಲ್ಲಿ ಸ್ಥಾನಮಾನಗಳು ಹಳೆಯ ಹುಲಿಗಳಿಗೆ ಮಾತ್ರವೆ? ಹೊಸ ರಕ್ತದ ಸದುಪಯೋಗವಾಗದೆ ಹೋದರೆ, ಅದು ದುರುಪಯೋಗವಾಗುವುದಿಲ್ಲವೆ? ಆದರಿಂದ ಯಾರಿಗೆ ಹಿತ?

ಕಾಂಗ್ರೆಸ್ಸು ಪವಿತ್ರ ಉದ್ದೇಶ ಹೊತ್ತ ಸಂಸ್ಥೆ.. ಅದರಲ್ಲಿ ಅಧಿಕಾರ ಮೋಹವಿರುವವರೂ ಇದ್ದಾರೆನ್ನೋಣ. ಆದರೆ, ಮೊರಾರ್ಜಿ ದೇಸಾಯಿಯವರೂ ಉಳಿದಿದ್ದಾರೆ, ತಾನು ಕಾಂಗ್ರೆಸ್ ಬಿಡಲಾರೆ, ಅದು ತನ್ನ ರಕ್ತದಲ್ಲಿ ಹರಡಿದೆಯೆನ್ನುತ್ತಾರೆ ಅವರು.

ಅಷ್ಟು ದೂರ ಯಾಕೆ ಹೋಗಬೇಕು?

ಯೋಗ್ಯತೆಗೆ ತಕ್ಕ ಸ್ಥಾನ—ಮಾನ ದೊರೆಯದೆ ಹೋದರೂ ಕೆಂಗಲ್ಲರು ಕಾಂಗ್ರೆಸ್ಸಿನಲ್ಲೇ ತನ್ನ ತನು—ಮನವನ್ನು ತೇಯುತಿದ್ದಾರೆ. ಟಿ. ಎ. ಪೈಯವರೂ ಕಡಿಮೆಯವರಲ್ಲ — ತನಗೆ ಸೀಟು ದೊರೆಯಲಿಲ್ಲ ಎಂಬ ಸಂಕುಚಿತ ಭಾವನೆಯಿರುವುದಾದರೆ, ಮೆನನ್ನರಂತೆ ಅವರೂ ಸ್ವತಂತ್ರವಾಗಿ ಸ್ಪರ್ಧಿಸಬಹುದಾಗಿತ್ತು— ಗೆಲು ಅವರದೇ ಆಗುತಿತ್ತು.

ವ್ಯಷ್ಟಿಗಿಂತ ಸಮಷ್ಟಿ ಮುಖ್ಯ. ದೇಶದ ಉದ್ಧಾರ ಸಮಷ್ಟಿಯಿಂದಾಗಬೇಕು. ಸಮಷ್ಟಿಯಾಗಿ ವಿಚಾರಿಸುವಾಗ ಒಬ್ಬೊಬ್ಬರಿಗೆ ಅನ್ಯಾಯವಾಗುವುದೂ ಇದೆ. ಇದನ್ನು ಸಮಷ್ಟಿಗಾಗಿ ತಾಳಿಕೊಳ್ಳುವಂತಹ ಶಕ್ತಿಯಿಲ್ಲದಿರುವವರು ಅಧಿಕಾರದಾಹಿಗಳಲ್ಲವೆಂದು ಜನತೆ ನಂಬುವುದಾದರೂ ಹೇಗೆ?

ಇದೊಂದು ಸಂಕ್ರಾಂತಿ ಯುಗ. ಕಾಂಗ್ರೆಸ್ಸು ಯಾವದೇ ಕಲಹದಲ್ಲೇ ಮುಂದುವರಿದರೆ, ಅದರ ಸಮಾಧಿಯಾಗುವುದು ಖಂಡಿತ. ಉನ್ನತ ಆದರ್ಶ ಹೊತ್ತ ಕಾಂಗ್ರೆಸ್ಸು ಬದುಕಬೇಕು; ಬೆಳೆಯಬೇಕಾದರೆ, ಅದರ ಸದಸ್ಯರಲ್ಲಿ ಏಕನಿಷ್ಠೆ ಬೆಳೆಯಬೇಕು. ಇದಿಲ್ಲವಾದರೆ, ಪಕ್ಷ ಬಲಿತೆ ಮುರುಟುತ್ತದೆ. ಪಕ್ಷದ ಉನ್ನತ ಸ್ಥಾನಗಳಲ್ಲಿರುವವರು ಬಿಸಿ ನೀರನ್ನು ಎರೆಯದೆ ಕಣ್ಣೀರನ್ನು ಸುರಿಯಬೇಕು; ಉಳಿದವರು ಕೂಡಾ.

ಇಂದು ದೇಶವನ್ನು ಸರಿದಾರಿಯಲ್ಲಿ ಒಯ್ಯಬಲ್ಲ ಪಕ್ಷವೊಂದಿದ್ದರೆ, ಅದು ಕಾಂಗ್ರೆಸ್ಸು ಮಾತ್ರ. ಅದು ನಡೆವಾಗ ಮುಗ್ಗರಿಸಬಹುದು; ಆದರೆ, ದೇಶವನ್ನು ಪತಿತವಾಗಲು ಬಿಡಲಾರದು; ಬಿಡಬಾರದು.

ಜೆಮಿನಿ—೧೨ ಉಪಗ್ರಹ ನವಂಬರದಲ್ಲಿ ಹಾರಾಟ ನಡೆಸಿತು. ಚಿತ್ರದಲ್ಲಿ ಈ ಉಪಗ್ರಹವು ಕಾರಖಾನೆಯಿಂದ ಹೊರಡುತ್ತಿರುವುದನ್ನು ಕಾಣಬಹುದು.

ವಿಯತನಾಮದ ಮಿಕೊಂಗ್ ನದೀ ಮುಖಜ ಭೂಮಿಯಿಂದು ಸುಡುಗಾಡಾಗುತ್ತಿದೆ. ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾದ ವಿಯತನಾಮಿಗಳಿಗೆ ಅಮೇರಿಕೆಯ ಜನರು ಆಹಾರ, ಬಟ್ಟೆಬರೆಗಳನ್ನು ದಾನ ಮಾಡಿದ್ದಾರೆ. ಆಹಾರ ತುಂಬಿದ ಗೋಣಿಯೊಂದನ್ನು ಉಲ್ಲಾಸದಿಂದಲೇ ವಿಯತನಾಮಿಗಳು ತಮ್ಮ ಆಶ್ರಯಗಳಿಗೆ ಒಯ್ಯುತ್ತಿರುವ ಸನ್ನಿವೇಶವಿದು.

ಹಿಂದೂ-ಸಿಖ್ಖ್ ಒಗ್ಗಟ್ಟಿನ ಒಲೆಯಲ್ಲಿರುವ ಬೆಕ್ಕು

(ಐದನೇ ಪುಟದಿಂದ)

ದೆಯೋ ಎನ್ನುವ ಪ್ರಶ್ನೆ ಸಹಜವಾಗಿ ಎದ್ದು ಬರುತ್ತದೆ. ಮೊದಲನೆಯದಾಗಿ ಗುರುಗೋವಿಂದ ಸಿಂಘರ ಅನುಯಾಯಿಗಳನ್ನು ಹಿಂದೂಗಳಿಂದ ಪ್ರತ್ಯೇಕಿಸಲು ಸರಕಾರ ಪ್ರಯತ್ನಿಸುತ್ತಿದೆ. ಎರಡನೆಯದಾಗಿ ಗುರುಗೋವಿಂದ ಸಿಂಘರ ಚಟುವಟಿಕೆ ಅಥವಾ ಕಾರ್ಯಕ್ಕೆ ತಿಲಾಂಜಲಿ ಇತ್ತು, ಅವರ ನಾಮ ಜಪವನ್ನು ಮಾಡುತ್ತಿದ್ದೇವೆ—ರಾಜಕೀಯ ಲಾಭಕ್ಕಾಗಿ. ಗುರು ಗೋವಿಂದ ಸಿಂಘರಾದರೋ ಗೋವಿನ ಕಣ್ಣೀರೊರೆಸಲು, ಗೋವಧೆಯನ್ನು ತಡೆಯುವದಕ್ಕಾಗಿ ಮಹಮ್ಮದೀಯರನ್ನು ತಾನು ಎದುರಿಸುವದಾಗಿ ಹೇಳಿದ್ದರು. ಅವರ ಹೆಸರೇ ಅಂತಹದ್ದು. ಇಂದು ಅದೆಷ್ಟು ಕಾಂಗ್ರೆಸ್ಸಿಗರು ಅವರ ಕರೆಗೆ ಓಗೊಡಲು ಸಿದ್ಧರಿದ್ದಾರೆ? ಗೋಹತ್ಯೆ ನಿರೋಧ ಕಾನೂನನ್ನು ಪ್ರಯೋಗಕ್ಕೆ ತರಲು ಸರಕಾರವು ಮೀನಮೇಷ ಎಣಿಸುತ್ತಿರುವಾಗ ಅಂಚೆ ಚೀಟಿ ಪ್ರಕಟಿಸುವುದರಲ್ಲಿರುವ ಉದ್ದೇಶವಾದರೂ ಏನು? ಕೇವಲ ಪಕ್ಷಲಾಭವಲ್ಲದೆ ಬೇರಿನ್ನೇನು? ಪಂಜಾಬಿನಲ್ಲಿ ಗೋವಾದಲ್ಲಾದಂತಾಗಬಾರದೆಂದು, ಸಿಖ್ಖರ ಮತಗಳನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳಲಿಕ್ಕಾಗಿ ಅವರ ಜಪಿಸಬೇಕಾಗುತ್ತದೆ ಕಾಂಗ್ರೆಸ್ಸಿಗೆ. ಅದು ಹಾಗಲ್ಲ, ನಿಜವಾಗಿ ಕಾಂಗ್ರೆಸ್ಸಿಗರು ಗುರುಗೋವಿಂದ ಸಿಂಘರನ್ನು ಗೌರವಿಸುತ್ತಾರೆ, ಮರ್ಯಾದಿಸುತ್ತಾರೆಂದಾದಲ್ಲಿ ಅವರ ಹುಟ್ಟುಹಬ್ಬವನ್ನಾಚರಿಸುವಂತಾದರೂ ಗೋಹತ್ಯಾ ನಿರೋಧ ಕಾನೂನನ್ನು ಬಳಕೆಗೆ ತಂದು, ಗುರುಗೋವಿಂದ ಸಿಂಘರ ನಿಜವಾದ ಅನುಯಾಯಿಗಳಾಗಿ, ಅವರ ಕಾರ್ಯವನ್ನು ಪೂರ್ತಿಗೊಳಿಸಬೇಕು.

ಸ್ವಾಮಿ ವಿವೇಕಾನಂದರು ಗುರುಗೋವಿಂದ ಸಿಂಘರ ಕುರಿತು ಹೇಳಿರುವ ಮಾತುಗಳನ್ನು ಮಾನನೀಯ ಶ್ರೀ ಏಕನಾಥ ರಾನಡೆ (ಪ್ರಧಾನ ಕಾರ್ಯದರ್ಶಿ—ವಿವೇಕಾನಂದ ಶಿಲಾಸ್ಮಾರಕ ಸಮಿತಿ) ಸಂಗ್ರಹಿಸಿರುವ "ಏಳಿ! ಎದ್ದೇಳಿ" ಪುಸ್ತಕದಲ್ಲಿ ಕಾಣಬಹುದು:—

"ಆ ಮಹಾ ಪುರುಷ ಗುರುಗೋವಿಂದ ಸಿಂಹನಂತೆ ಹಿಂದೂಗಳಿಗಾಗಿ ನೀನು ಎಲ್ಲವನ್ನೂ ಸಹಿಸಲು ಸಿದ್ಧನಾದಾಗ ಮಾತ್ರ ಆಗ ಮಾತ್ರವೇ ನೀನೊಬ್ಬ ಹಿಂದು.

ಅಷ್ಟು ಮಾತ್ರವಲ್ಲ. ಯಾರಿಗಾಗಿ ಅವನು ತನ್ನ ರಕ್ತ ತೆತ್ತನೋ, ಯಾರಿಗಾಗಿ ತನ್ನ ಅಚ್ಚುಮೆಚ್ಚಿನವರ ನೆತ್ತರು ಹರಿಸಿದನೋ, ಅದೇ ಜನ ತನ್ನನ್ನು ಕೈ ಬಿಟ್ಟಾಗಲೂ ಆ ಮಹಾಗುರು ನಡೆದುಕೊಂಡ ಬಗೆ ನೋಡು!

ಹಿಂದೂಧರ್ಮದ ಉಳಿವಿಗಾಗಿ ತನ್ನ ಸ್ವಂತ ರಕ್ತವ ಚೆಲ್ಲಿದ ಸಿಂಹ, ತನ್ನ ಕ [illegible] ಕೈಬಿಟ್ಟವರ ವಿರುದ್ಧವಾಗಿ ಒಂದಾದರೂ ಕಟುವ ನುಡಿ ಅವನ ಬಾಯಿಂದ ಬರಲಿಲ್ಲ!

ನಿಮ್ಮ ದೇಶದ ಹಿತ ಸಾಧಿಸುವ ಹಂಬಲ ನಿಮಗಿದ್ದಲ್ಲಿ ನಿಮ್ಮಲ್ಲಿ ಪ್ರತಿಯೋರ್ವನೂ ಓರ್ವ ಗುರು ಗೋವಿಂದಸಿಂಹನಾಗಬೇಕು."

ಇದು ವಿವೇಕವಾಣಿಯೇ ಇದೆ. ಗುರುಗೋವಿಂದ ಸಿಂಘ ತನ್ನನ್ನು ಧರ್ಮರಕ್ಷಣಾರ್ಥ ಬಲಿದಾನದ ಹವನ ಕುಂಡಕ್ಕೆ ಅರ್ಪಿಸಿಕೊಂಡದ್ದು ಮಾತ್ರವಲ್ಲ, ತನ್ನ ಮಕ್ಕಳನ್ನು ಅರ್ಪಿಸಿರುವನು. ಅವರ ಪೂಜ್ಯ ಪಿತಾಜೀಯವರೇ, ನವಮ ಗುರು ಶ್ರೀ ತೇಜ ಬಹದ್ದೂರ್‌ರವರೇ, ಅವರಿಗೆ ಈ ದಿಶೆಯಲ್ಲಿ ಮಾರ್ಗದರ್ಶನ ಮಾಡಿಸಿರುವರು. ಅದು ನಡೆದದ್ದು ದಶಂಬರ ಹದಿನೇಳರಂದು. ಅದೇ ದಶಂಬರ ಹದಿನೇಳರಂದು ಸಂತ ಫತೇಸಿಂಘರು ಉಪವಾಸ ಆರಂಭಿಸಿರುವದು. ಒಂಭತ್ತನೇ ಗುರು ತೇಜ ಬಹದ್ದೂರ್‌ರವರು ಮಹಮ್ಮದೀಯರ ಮತಾಂಧತೆಯನ್ನೆದುರಿಸಿ ಪ್ರಾಣಾರ್ಪಣೆಗೈದ ದಿನದಂದು, ಉಪವಾಸ ಆರಂಭಿಸಿರುವದರ ಕುರಿತು ಫತೇ ಸಿಂಘರು 'ಅಭಿಮಾನದಿಂದ ಹೇಳಿರುವರು.' ಗುರು ತೇಜ ಬಹದ್ದೂರ್‌ಜೀಯವರ ಬಲಿದಾನ ನಡೆದುದಾದರೂ ಏತಕ್ಕೆ? ಪರಕೀಯ ಶಾಸನದ ಇತಿಶ್ರೀಗಾಗಿ ಅಂದರೆ ಧರ್ಮ ಹಾಗೂ ದೇಶಕ್ಕಾಗಿ. ಫತೇಸಿಂಘರು ಉಪವಾಸ ಆರಂಭಿಸಿರುವೆನೆಂದು ಹೇಳುವುದಾದರೂ ಏತಕ್ಕೆ? – ಧರ್ಮ ಹಾಗೂ ದೇಶದ ನಾಶಕ್ಕಾಗಿ! ಎಂತಹ ವಿಪರ್ಯಾಸ! ನವಮ ಗುರುವಿನ ತೇಜಕ್ಕೆ (ಪ್ರಕಾಶಕ್ಕೆ) ಫತೇ ಸಿಂಘರು ಕರಿ ಮೋಡವನ್ನು ಎದುರಾಗಿ ನಿಲ್ಲಿಸುತ್ತಿದ್ದಾರೆ.

ಮತಾಂಧ ಅವರಂಗಜೇಬನು ಗುರುಗೋವಿಂದ ಸಿಂಘರ ಪುತ್ರರತ್ನಗಳಿಬ್ಬರನ್ನು ಜೋರಾವರ್ ಸಿಂಘ್, ಮತ್ತು ಫತೇಸಿಂಘ — ಜೀವಂತ ಸಮಾಧಿ ಮಾಡಿದನು. ಅವರಿಬ್ಬರನ್ನು ನಿಲ್ಲಿಸಿ ಸುತ್ತ ಗೋಡೆ ಕಟ್ಟಿಸಿದನು. ಅವರಿಬ್ಬರೂ ಹಿಂದೂ ಧರ್ಮವನ್ನು ಬಿಡಲು ಸಿದ್ಧವಿಲ್ಲವೆಂಬುದಾಗಿ ಖಡಾಖಂಡಿತವಾಗಿ ಹೇಳುತ್ತಾರೆ. ಅವರ ಕಣ್ಣಿಂದ ಒಂದು ತೊಟ್ಟು ನೀರೂ ಬರುವುದಿಲ್ಲ. ಬದಲು ಧ್ಯೇಯಕ್ಕಾಗಿ ಆತ್ಮಾರ್ಪಣೆಯ ಆನಂದ ಅವರ ಮುಖದಲ್ಲಿ ತಿಳಿದು ಬರುತ್ತದೆ. ಆಗ.. ಆಗ ದೊಡ್ಡವನ ಕಣ್ಣಲ್ಲಿ ನೀರು ಬರುತ್ತದೆ ಯಾಕೆ? ಹೆದರಿ ಏನು? ಅಲ್ಲ, ಹೆದರಿಕೆಯೆಂದರೇನೆಂಬುದೇ ಸಿಂಹದ ಮರಿಗಳಿಗೆ ಗೊತ್ತಿರುವದಿಲ್ಲ. ದೊಡ್ಡವನು ಮೊದಲು ಇಹಲೋಕಕ್ಕೆ ಬಂದಿರುವನಾದರೂ, ಪರಲೋಕಕ್ಕೆ ಹೋಗುವಾಗ ಚಿಕ್ಕವನು ಮೊದಲು ಹೋಗಬೇಕಾಗುತ್ತದಲ್ಲಾ ಎಂದು ತಮ್ಮನೂ ನಂತರ ಅಣ್ಣನೂ ಅವರಂಗಜೇಬನ ಅಮಾನುಷಕ್ರೂರ ಕೃತ್ಯವನ್ನು ಧೈರ್ಯದಿಂದಲೇ ಎದುರಿಸಿದರು. ಆ ಶುಭದಿನದಂದು ರಕ್ತ ಕುದಿದೇಳುವಂತಹ ದಿನದಂದು, ದಶಂಬರ ೨೭ರಂದು ಈ ಫತೇ ಸಿಂಘ ತನ್ನ ಪ್ರಾಣವನ್ನು ಬಿಡಲು ನಿಶ್ಚಯಿಸಿರುವರು! ವಿಧಿಯ ವಿಕಟ ಅಟ್ಟಹಾಸ ಇದು! ವೀರ ಚರಿತ್ರೆಯತ್ತ ಕುಚೋದ್ಯ ಇದು! ಹಿಂದೂ ಧರ್ಮದ ರಕ್ಷಣೆ ಹಾಗೂ ಹಿಂದೂ ದೇಶದ ಐಕ್ಯತೆಗಾಗಿ ಆ ವೀರ ಗುರುವರೇರು ಬಲಿದಾನಕ್ಕೆ ಬೆದರದೆ ತಲೆಎತ್ತಿ ನಿಂತ ದಿನದಂದು, ಅದೇ ಈ ಫತೇ ಸಿಂಘ ಧರ್ಮದ ಅವಹೇಳನೆ ಹಾಗೂ ದೇಶದ ವಿಭಜನೆಗಾಗಿ ಅಲ್ಲದೆ ವೀರಪುತ್ರರ ಹೆಸರಿಗೆ ಕಳಂಕ ತರಲು, ದೇಹವನ್ನು ಹಾಳುಮಾಡಿಕೊಳ್ಳಲು, ಅಗ್ಗದ 'ಖ್ಯಾತಿ'ಗಾಗಿ ಮುಂದಕ್ಕೆ ಬಂದಿರುವರು!

ಮತಾಂಧ ಮುಸಲ್ಮಾನರ ದಬ್ಬಾಳಿಕೆಯನ್ನೆದುರಿಸುತ್ತಿದ್ದಂತೆ ಬ್ರಿಟಿಷರ ಬೂಟಾಟಿಕೆಯನ್ನು ಎದುರಿಸಬೇಕಾಗಿ ಬಂತು. ಇವರಿಬ್ಬರೂ ತಮ್ಮ ಮತೀಯ ಆಚರಣೆಗೆ ವಿರುದ್ಧವೇ ಇದ್ದರೂ, ಹಿಂದೂಗಳ ಧಾರ್ಮಿಕ ಭಾವನೆಗೆ ಭಂಗ ತರಬೇಕೆಂದು ಗೋಹತ್ಯೆಯನ್ನು ನಡೆಸಲಾರಂಭಿಸಿದಾಗ ಸಿಖ್ಖರಲ್ಲಿ ಇನ್ನೊಂದು ಪಂಥ ನಾಮಧಾರಿಗಳು ಬ್ರಿಟಿಷರ ವಿರುದ್ಧ ಕತ್ತಿ ಹಿಡಿದರು. ಖಾಲ್ಸಾ ಪಂಥದವರು ಖಡ್ಗ ಹಿಡಿಯಲಿಕ್ಕಾಗಿಯೇ ಇರುವದಾದರೂ, ನಾಮಧಾರಿಗಳು ರಾಮನಾಮ ಜಪಿಸಲಿಕ್ಕಾಗಿಯೇ ಇರುವದಾದರೂ ಗೋಮಾತೆಯ ಆಕ್ರಂದನವು ಆ ಗುಬ್ಬಚ್ಚಿಗಳನ್ನು ಗಿಡುಗಗಳನ್ನಾಗಿ ಮಾರ್ಪಡಿಸಿತು. ಈ ರೀತಿ ಹಿಂದೂ ಧರ್ಮದ ರಕ್ಷಣೆಗಾಗಿ ಸಿಖ್ಖ್ ಮತವು ಸಿದ್ಧವಾಗಿಯೇ ಇತ್ತು.

ದುರದೃಷ್ಟವಶಾತ್ ೧೯೪೭ರಲ್ಲಿ ಭಾರತದ ವಿಭಜನೆಯ ಘೋರ ಘಾತಕ ನಡೆದೇ ಹೋಯಿತು. ಪಂಜಾಬು ಒಡೆದು ಹೋಯಿತು. ಸಿಖ್ಖರ ಸಿಟ್ಟು ಸಿಡಿದೆದ್ದಿತು. ಯಾರಿದಕ್ಕೆ ಕಾರಣ? ಬ್ರಿಟಿಷರೇ? ಅವರಾಗಲೇ ಗಂಟುಮೂಟೆ ಕಟ್ಟಿಕೊಂಡ ಸಮುದ್ರದಾಚೆ ಸಾಗಿದ್ದರು. ಬ್ರಿಟಿಷ್ ಬೆಳೆವಣ್ಣಿತ್ತಿದ್ದ ಅಧಿಕಾರದ ಅಮಲನ್ನು ಸೇವಿಸಿರುವ ಕಾಂಗ್ರೆಸ್ಸ್ ಅವರಿಗೆದುರಾಯಿತು. ಆಕ್ರಮಣ ನಡೆಸಿರುವ ಮಹಮ್ಮದೀಯರು ಪ್ರತ್ಯೇಕ ರಾಜ್ಯವನ್ನು ಕಟ್ಟಿಕೊಳ್ಳಬಹುದಾದಲ್ಲಿ ಸಿಂಹ ಸದೃಶವಾಗಿರುವ ಸಿಖ್ಖರೇತಕ್ಕೆ ಪ್ರತ್ಯೇಕ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬಾರದು? ಕಸಿವಿಸಿ ಆರಂಭವಾಯಿತು. ಖಾಲ್ಸಾ ಪಂಥದ ಪ್ರದೇಶ ರಕ್ಷಣೆಯ ರವಿಗೆ ಅಖಾಲಿ ದಳದ ದೇಶ ವಿಭಜನೆಯ ಗ್ರಹಣ ಹಿಡಿಯಿತು. ಆರ್ಥಿಕ ಲಾಲಸೆಯ ರಾಹು ಬಾಯಿ ತೆರೆದ, ವೈಯಕ್ತಿಕ ಕೀರ್ತಿ ಕೇತುವನ್ನು ಹಾರಾಡಿಸುವ ಮುಖಂಡರ ದುರಾಸೆಯ ಕೇತು ಬಾಲ ಬಿಚ್ಚಿದ. ಹೀಗೆ ಆರಂಭವಾಯಿತು. ಈ ವಿಷ ವೃಕ್ಷಕ್ಕೆ ದಿಲ್ಲಿ ದೇವತೆಗಳು ನೀರೆರೆದು ಬೆಳೆಸಿದರು.

ಪಂಜಾಬ್ ಪುನಃ ಭಾಗವಾಯಿತು ಬೇರೊಂದು ವಿಧದಲ್ಲಿ. ಅದರಿಂದಲೂ ತೃಪ್ತಿಗಾಣದ ಸಂತ ಫತೇಸಿಂಘ ಹಾಗೂ ಮಾಸ್ಟರ್ ತಾರಾಸಿಂಘರವರು ಮುಂದಿನ ಕಾರ್ಯಾಚರಣೆಗೆ ಕಾಲಿಟ್ಟಿದ್ದಾರೆ. ತಮ್ಮ ಕೈಯಲ್ಲಿರುವ ಕೃಪಾಣದಿಂದ ಕಾಂಗ್ರೆಸ್ಸಿನ ಬಸವಣ್ಣಗಳನ್ನು ಬೆದರಿಸಲಾರಂಭಿಸಿದ್ದಾರೆ. ಅಮೇರಿಕನರ ಅಲ್ಲದೆ ರಷ್ಯನರ ಭಾರೀ ಭಾರೀ ಕಸಾಯಿಖಾನೆಗಳತ್ತ ಸ್ವಸಂತೋಷದಿಂದ ಸಾಗುತ್ತಿರುವ ಈ ಹೋರಿಗಳು ಖಡ್ಗವನ್ನು ಝಳಪಿಸುತ್ತಿರುವ ಸಿಖ್ಖರನ್ನು ಸಂತೃಪ್ತಿಸಲು ಸಾಗುತ್ತಿವೆ. ಈ ಹೋರಿಗಳಿಗಾದರೂ ಅವರ ಹುಲುಸಾದ ಗದ್ದೆ ಮೇಯುವ ಹಂಬಲ, ಅವರಿಗಾದರೋ ಈ ಬಸವಣ್ಣಗಳನ್ನು ನುಂಗುವ ಆಶೆ. ಹೀಗೆ ಸ್ಪರ್ಧೆ ನಡೆಯುತ್ತಿದೆ.

ಸ್ಪರ್ಧೆಯಾದರೋ ಹಿಂದೂ—ಸಿಖ್ಖ್ ಒಗ್ಗಟ್ಟಿಗಾಗಿ ನಡೆಯುತ್ತಿದೆಯಂತೆ! ಏನು ತಮಾಷೆ! ನಮ್ಮ ದೇಹದ ಒಂದು ಭಾಗವನ್ನೇ (ಕೈಯನ್ನೇ) ಪ್ರತ್ಯೇಕ ದೇಹವೆಂದು ಹೇಳಿಕೊಂಡು ಮತ್ತೆ ಅವುಗಳ ಐಕ್ಯಕ್ಕಾಗಿ ಶ್ರಮಿಸುವದು, ತ್ಯಾಗಮಾಡುವದೆಂದು ಹೇಳಿಕೊಳ್ಳುವಂತಹ ದುರ್ದಿನ ಇಂದು ಬಂದಿದೆ. ಹಿಂದೂ—ಸಿಖ್ಖ್ ಒಗ್ಗಟ್ಟಿನ ಒಲೆಯಲ್ಲಿ ಮಲಗಿರುವ ಬೆಕ್ಕು, ಸಿಖ್ಖರನ್ನು ಪ್ರತ್ಯೇಕ ಜನಾಂಗವೆಂದು ಕರೆಯುವದೇ ಇದೆ. ಸಿಖ್ಖರು ಹಿಂದೂ ಹಿರಿವೃಕ್ಷದ ಒಂದು ಬಲಶಾಲೀ ಕೊಂಬೆ ಮಾತ್ರ. ಇದನ್ನು ಸರಕಾರ ಧೈರ್ಯದಿಂದ ಹೇಳಲಾರಂಭಿಸಿದಲ್ಲಿ ಫತೇಸಿಂಘ ಮತ್ತು ತಾರಾಸಿಂಘರಲ್ಲಿ ಮನೆ ಮಾಡಿಕೊಂಡಿರುವ ಪ್ರತ್ಯೇಕತೆಯ ಭೂತ ತಾನಾಗಿ ದೂರ ಹಾರಿಹೋಗುವದರಲ್ಲಿ ಸಂದೇಹವಿಲ್ಲ. ಆದರೆ ಇದಕ್ಕೆ ಕಾಂಗ್ರೆಸ್ಸಿನ ಕಾಲು ನಡುಗುತ್ತಿರಬಾರದು.

ಕೊನೆಯಲ್ಲಿ ನಡೆದದ್ದಾದರೂ ಏನು? ಒಪ್ಪಂದಕ್ಕಿಂದ ಶ್ರೀ ಜಯಪ್ರಕಾಶ ನಾರಾಯಣರು ಪಟ್ನಾಗೆ, ದಿಲ್ಲಿಯಿಂದ [illegible] ತಸಂಕ್ಯ ಅಲೆದಾಡಿದರು. ಅದಕ್ಕಿಂತಲೂ ಕಾಂಗ್ರೆಸ್ ಸರಕಾರ ಅವರನ್ನು [illegible] ವರೋ ಎಲ್ಲ ದೇವತೆಗಳನ್ನು ಕರೆ ಫತೇ ಸಿಂಘಜೀಯವರ ಭೇಟಿಗೆ ಹೋಗಿದ್ದರು. ಅವರ ಬಳಿ ತನೋ ಮನೋ ಇಂಗಿತವನ್ನು ಶ್ರೀಮತಿ ಇಂದಿರಾಜೀಯವರ

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಗೆ ತಿಳಿಸ ಬಹುದಾಗಿತ್ತು. ಆದರ ಬದಲು ಅವರು ಉಪವಾಸ-ಪ್ರಾಣತ್ಯಾಗಕ್ಕೆ ತಾನು ಜಗ್ಗುವದಿಲ್ಲವೆಂದು ಘೋಷಿಸಿದರು. ಒಡನೆ ಪುರಿ ಜಗದ್ಗುರು ಪೂಜ್ಯ ಶಂಕರಾಚಾರ್ಯರವರು, ಅಮ್ಮಾ ನಿಮ್ಮ ಬಣ್ಣ ನನಗೆ ಗೊತ್ತು. ಆಂಧ್ರದಿಂದ ಆರಂಭಿಸಿ ಪ್ರತ್ಯೇಕ ರಾಜ್ಯಗಳು ನಂತರ ಪಂಜಾಬು ಆದದ್ದು ಹೇಗೆಂಬುದೆಲ್ಲಾ ನನಗೆ ಗೊತ್ತು. ನಾಳೆ ಫತೇಸಿಂಘರ ಒತ್ತಾಯಕ್ಕೆ ಒಪ್ಪುವ ವಿಷಯವೂ ನನಗೆ ಗೊತ್ತೆಂಬ ರೀತಿಯಲ್ಲಿ ಬದಲಿತ್ತರು. ಫತೇಸಿಂಘರು ಕೂಡಾ, ಬೇಡವಮ್ಮಾ, ನನ್ನ ಒತ್ತಾಯಕ್ಕೆ ಒಪ್ಪಬೇಡವೆಂದು ಒಪ್ಪದ ಮಾತುಗಳನ್ನಾಡಿದರು. ಜಯಪ್ರಕಾಶನಾರಾಯಣರಿಗೆ ಸೋಲು ಸಿಕ್ಕಿತು. ಅದಕ್ಕಿಂತಲೂ ನಂತರ ಅವರ ತೇಜೋವಧೆಯೇ ನಡೆಯಿತು.

ಕೊನೆಯ ಗಳಿಗೆ ಹತ್ತಿರಕ್ಕೆ ಬರುತ್ತಿರುವಂತೆ ಶ್ರೀ ಹುಕುಂ ಸಿಂಘರೇ ಫತೇಸಿಂಘರ ಪಕ್ಕಕ್ಕೆ ಹಾರಬೇಕಾಯಿತು. ನಾಟಕದ ಕೊನೆಯ ಅಂಕದಲ್ಲಿರಬೇಕಾಗಿದ್ದ ದುರಂತ ಘಟನೆಯ ಬದಲಾಗಿ ಹಾಸ್ಯ ಘಟನೆಯಲ್ಲಿ ಮುಕ್ತಾಯವಾಯಿತೆಂದು ಸ್ವರ್ಣ ಮಂದಿರದಿಂದ ಸಾರಿದರು. ಶ್ರೀ ಫತೇಸಿಂಘರ ಪ್ರಾಣ ಉಳಿಯಿತು. ಅವರ ಪ್ರಾಣವೇನೋ ಉಳಿಯಿತು. ಅವರ ಆಶೆಯೇನೋ ಕೈಗೂಡಿತು. ಆದರೆ ಅದಕ್ಕಾಗಿ ಅವರು ಪಟ್ಟ ಪಾಡು ಎಷ್ಟು? ಓಹೋ, ಹಾಗಾಯಿತು! ಇದೇನು ರಾಜನೀತಿಯ ವ್ಯಾಪಾರವೇ? ಎಷ್ಟು ಬೆಲೆ ಮಾಡುವದು, ಕೋಣದ ಬೆಲೆ ಕೇಳುವದೇ, ಹೋರಿಯ ಕ್ರಯ ಕೇಳುವದೇ, ಯಾವ ಕೊಲೆಗಡುಕ, ಕಸಾಯಿ ಕೇಳುವದು? ರಾಜ್ಯವನ್ನು ವಿಗಂಡಿಸಿದಾಗಲೇ ಇವೆಲ್ಲವನ್ನೂ ತೀರಿಸಬಹುದಾಗಿತ್ತಲ್ಲಾ? ಪೂರನೇಯವನ ಅಧಿವೇಶನದಲ್ಲಿ ಇಬ್ಬರಿಗೆ ಒಂದೇ ಕಾಲದಲ್ಲಿ ಮದುವೆಯಾದ ತರುಣಿಯೊಬ್ಬಳನ್ನು ಇಡುವದು ಸರಿಯೇನು?

ಹೀಗೆ ರಾಜ್ಯ ವಿಗಂಡನೆಯ ಸಮಯದಲ್ಲಿ ಎಲ್ಲಾ ಸರಿ ಮಾಡಬಹುದಿತ್ತು. ಆಗ ಫತೇಸಿಂಘರೂ ಸಿಕ್ಕಿದ್ದು ಪುಣ್ಯವೆಂದು ಸುಮ್ಮಗುಳಿದರು. ಅನಂತರ ಫತೇಸಿಂಘರು ಉಪವಾಸ ಪ್ರಾಣತ್ಯಾಗದ ಕುರಿತು ಘೋಷಿಸಿದಾಗಲಾದರೂ ಒಪ್ಪಬಹುದಿತ್ತು. ಬೇಡ ಜಯಪ್ರಕಾಶರ ಬಳಿಯಾದರೂ ಹೇಳಿ ಬಿಡಬಹುದಿತ್ತು. ಆದೇಕೆ ಹುಕುಂಸಿಂಘರನ್ನು (ಉನ್ನತ ಪದವಿಯಲ್ಲಿರುವವರನ್ನು ಸಿಖ್ಖನನ್ನು) ಇದಕ್ಕೆ ಉಪಯೋಗಿಸಿಕೊಳ್ಳಲಾಯಿತು? ಈ ರೀತಿ ದೊಡ್ಡವರ ಪ್ರಾಣದೊಂದಿಗೆ ಇಂದಿರಾಜೀ ಇದೇತಕ್ಕೆ ಚೆಲ್ಲಾಟವಾಡುವದು?

ಇದು ಹಿಂದೂ ಸಿಖ್ಖ್ ಒಕ್ಕಟ್ಟಿನ ಲಕ್ಷಣವೇನು? ಅಂದರೆ ಪುನಃ ಇಲ್ಲಿ ಸಿಖ್ಖರು ಹಿಂದೂಗಳಲ್ಲಿ, ಅವರ ಬಳಿ ಒಪ್ಪಂದಕ್ಕೆ (ಸಿಖ್ಖೇತರ) ಹಿಂದೂಗಳು ಯೋಗ್ಯರಲ್ಲ, ಸಿಖ್ಖರೇ ಸರಿ ಎಂಬುದನ್ನು ಅಕ್ಷರಶಃ ಒಪ್ಪಿಕೊಂಡಂತಾಯಿತು. ಹಿಂದೂ ಸಿಖ್ಖರ ಒಗ್ಗಟ್ಟಿನ ಒಲೆಯಲ್ಲಿ ಮಲಗಿಕೊಂಡಿರುವ ಬೆಕ್ಕು ಇದೇ ಇವ. ಇಂತು ಇಂದಿರಾಜಿ ಸಾಧಿಸಿರುವ ಹಿಂದೂ ಸಿಖ್ಖ್ ಒಕ್ಕಟ್ಟಿನ ನಾಟಕದ ಮುಂದಿನ ಭಯಾನಕ ದೃಶ್ಯ ಅದೆಂತಿದೆಯೋ!

NOTICE

The share certificate No. 55 for twelve shares numbered 1071 to 1082 issued to late Sri H. Duggappa Bhandary S/o Veeranna Bhandary, Halady village and post, Coondapoor Taluk, S. Kanara, is missing. The company will issue a duplicate share certificate to Mrs [illegible] Hegde D/o Late Sri H. Duggappa Bhandary, legal heir for these shares, 15 days after the date of this Publication, if no objections are received.

Bharath Industrial & Canning Co., Ltd.,
KAUP, SOUTH KANARA.

ವ್ಯಕ್ತಿತ್ವದ ಕೊರತೆ, ಪಕ್ಷನಿಷ್ಠೆಗೆ ಚ್ಯುತಿ

(ನಾಲ್ಕನೇ ಪುಟದಿಂದ)

'ಹ್ಞಾಂ...ನಮಗೆ ಆಂಧ್ರ ದೇಶಕ್ಕೆ..'

"ಅದು ಬಿಡೇನ್ನು. ಸದ್ಯ ಈ ಪ್ರಶ್ನೆಯಾದರೂ ನಮ್ಮ ರಾಜಕೀಯ ಪುಢಾರಿಗಳಿಗೆ ಬರುತಿದ್ದರೆ...'

"ಯಾಕೆ ಬರಬೇಕು?'

"ಬೇಡ ಬಿಡು....ನೀನಾದ್ರೂ .'

"ನಾನು? ಬಾರದೆ ಉಂಟೇ ವ್ಯಕ್ತಿ ಮುಖ್ಯ; ವ್ಯಕ್ತಿಗಿಂತ ಪಕ್ಷ ಮುಖ್ಯ....'

"ಊಹ್ಞಾಂ...'

"ಮತ್ತೆ?'

"ವ್ಯಕ್ತಿತ್ವ ಮತ್ತು ಪಕ್ಷ ನಿಷ್ಠೆ ಮುಖ್ಯ...."

'ಇದಿಲ್ಲದೆಯೇ ತೊಂದರೆ....'

"ನಮಗೇನು ಬಿಡು, ನಮ್ಮಲ್ಲಿ ವ್ಯಕ್ತಿತ್ವಕ್ಕೂ ಕೊರತೆಯಿಲ್ಲ; ಪಕ್ಷನಿಷ್ಠೆಗೂ ಚ್ಯುತಿಯಿಲ್ಲ...."

"ಹಾಗೆಂದೇ ಬಡತನ ಬರಲಿ, ಸಿರಿತನ ಬರಲಿ, ಸಮರಸದ ಬದುಕು ಬಾಳುವುದು ಸಾಧ್ಯವಾಗಿದೆ....'

'ಹ್ಞಾಂ...'

"ಅಯ್ಯೋ..."

"ಏನಿದು?"

"ಏನೂ ಇಲ್ಲ—"

—ಗೋರಾ,

ನಿಮಗೂ ಗೊತ್ತಿರಲಿ
ಕಾಲೀ ಸರೋವರದ ರಹಸ್ಯ

ಸೋವಿಯೆತ್ ಬಾಲ್ಟಿಕ್ ಗಣರಾಜ್ಯವೊಂದಾದ ಎಸ್ತೋನಿಯದ ಬಹುದೊಡ್ಡ ನಡುಗಡ್ಡೆ ಪೂರಾ ಸಾರೆಯಲ್ಲಿ ಕಾಲೀ ಸರೋವರವಿದೆ. ಇಂಗ್ಲೀಷ್ ಭಾಷೆಯಲ್ಲಿ ಹೇಳುವ 'ಸಿಪಿ ಟರ್ನಿಪ್ ಗೆಡ್ಡೆ'ಯೆಂಬ ಪದವೇ ಈ 'ಕಾಲೀ' ಪದಕ್ಕೆ ಅರ್ಥ ಸರೋವರದ ಅಸಹಜ ಸ್ವರೂಪದಿಂದಾಗಿಯೆ ಈ ಹೆಸರು ಬಂದಿದೆ. ಜೋಗುಣಿ ಕುಳಿಯಾಕಾರದ ಇದರ ಆಳವು ತಳಕ್ಕೆ ಹೋದಂತೆ ಕಿರಿದಾಗುತ್ತ ಒಂದು ಟರ್ನಿಪ್ ಗೆಡ್ಡೆಯ ಆಕಾರವನ್ನು ಹೋಲುತ್ತದೆ. ಒಂದು ತಗ್ಗು ನಡುಗಡ್ಡೆಯಲ್ಲಿರುವ ಈ ಆಳ ಕುಳಿಯ ಸರೋವರ ಹುಟ್ಟಿದ್ದು ಹೇಗೆ? ಈ ಪ್ರಶ್ನೆ ಅನೇಕರಿಗೆ ಗೊಂದಲವನ್ನುಂಟು ಮಾಡಿದೆ. ಇದರ ಆಳವನ್ನು ಅಳೆಯಲು ಶಕ್ತರಾಗಿಲ್ಲ. ಸರೋವರದ ಕುರಿತು ಅನೇಕ ರಹಸ್ಯದಂತ ಕಥೆಗಳೂ ಪ್ರಚಲಿತವಿವೆ.

ಆದರೆ ನಡುಗಡ್ಡೆಯಲ್ಲೇ ಇದು ಅತ್ಯಂತ ರಮಣೀಯ ಸ್ಥಳವಾಗಿದೆ. ರಮ್ಯ ಕಥೆಗಳಲ್ಲಿ ಬರುವಂತವಲ್ಲ, ಆದರೆ ನಿಜವಾಗಿಯೆ ಇರುವಂಥ ಸುಂದರ ಬರ್ಚ್ ಮರಗಳು, ಓಕ್ ವೃಕ್ಷಗಳು, ಪೈನ್ ಮರಗಳು ಇದನ್ನು ಸುತ್ತುವರಿದಿವೆ. ಕಲ್ಪನೆಯ ಸೊಬಗಿನ ಪಕ್ಷಿಗಳಲ್ಲ, ಆದರೆ ನಿಜವಾಗಿಯೂ ಭೂಮಿಯ ಸುಂದರ ಪಕ್ಷಿಗಳ ಕಲಕಲ ಕೇಳಬರುತ್ತಿರುತ್ತದೆ.

ಆದರೆ ಈ ಸುಂದರ ಚಿತ್ರ ಕೆಲವೊಂದು ಭಾಗಗಳಲ್ಲಿ ಸುಣ್ಣದ ಕಲ್ಲು ಹಾಗೂ ಡೋಲೊಮೈಟ್ ಶಿಲೆಗಳ ಗುಡ್ಡಗಳಿಂದ ಅಂದಗೆಟ್ಟಿದೆ. ಪ್ರಾಚೀನ ಕಾಲದಲ್ಲಿ ನಡೆದ ಪ್ರಳಯಕ್ಕೆ ಇವು ಸಾಕ್ಷೀಭೂತವಾಗಿವೆ. ಈ ಎಲ್ಲ ವಿಶಿಷ್ಟ ಲಕ್ಷಣಗಳೂ ವಿಜ್ಞಾನಿಗಳ ಗಮನವನ್ನು ಸೆಳೆಯುತ್ತವೆ. ಸ್ಥಳೀಯ ಶಾಲೆಯೊಂದರಲ್ಲಿ ಅಧ್ಯಾಪಕರಾಗಿರುವ ಹೆಲ್ಗಿಸಾರ್ ಇಲ್ಲಿ ಸ್ವಯಂಕೃತ ಮಾರ್ಗದರ್ಶಿಯಾಗಿದ್ದಾರೆ. [illegible] ಹಿಂದಿನಿಂದಲೇ ವಿಜ್ಞಾನಿಗಳು ಕಾಲೀ ಸರೋವರದಲ್ಲಿ ಆಸಕ್ತಿ ತಾಳಿದ್ದಾರೆಂದು ಆತ ಹೇಳುತ್ತಾರೆ. ಇದರ ಮೂಲದ ಬಗ್ಗೆ ಅನೇಕಾನೇಕ ವದಂತಿಗಳು ಹರಡಲಾಯಿತು. ಇಲ್ಲಿ ಅಸಿಬವು ಆಸ್ಫೋಟಿಸಿತೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಕಾರ್ಸ್ಟ್ ಗುಹೆಗಳು ಕುಸ್ಸಳಿಸಿರಬೇಕೆಂದು ಭಾವಿಸುತ್ತಾರೆ. ಮತ್ತೆ ಹಲವರು ಇದು ಮಾನವ ನಿರ್ಮಿತ ಸರೋವರವಿರಬೇಕೆಂದೇ ಹೇಳುತ್ತಾರೆ. ಹಳೇ ಕೋಟೆಯೊಂದರ ಸುತ್ತಲಿರುವ ಸೈನಿಕ ರಕ್ಷಾವರಣದ ಅವಶೇಷವೆಂದು ಇವರ ಭಾವನೆ.

ವಿಜ್ಞಾನಿಗಳು ಸುಮಾರು ೧೦೦ ವರ್ಷಗಳ ಕಾಲ ಈ ಬಗ್ಗೆ ವಾದವಿವಾದ ನಡೆಸಿದ್ದಾರೆ. ಎಸ್ತೋನಿಯದ ಗಣಿ ಎಂಜಿನೀಯರ್ ಜಸ್'ರೆನ್'ವಾಳ್ಡ್ ಮೊತ್ತಮೊದಲ ಇದರ ರಹಸ್ಯೋದ್ಘಾಟನೆ ಮಾಡಲು ಶಕ್ತರಾದರು. ರೆನ್'ವಾಲ್ಡ್‌ರೂ ನೋಡುವುದಕ್ಕೆ ಒಂದು ಅದ್ಭುತ ಕಲ್ಪನೆಯನ್ನೇ ಮುಂದಿಟ್ಟರು: 'ಇದರ ಮೇಲ್ಮೈಯಿಂದ ಕಂಡುಬರುವುದೇನೆಂದರೆ ಅತ್ಯಂತ ಕಠಿನತಮವಾದ ವಸ್ತುವೊಂದು ಅದ್ಭುತವೇಗದಲ್ಲಿ ಬಂದು ಭೂಮಿಯ ಈ ಸ್ಥಳದಲ್ಲಿ ಬಲವಾಗಿ ಅಪ್ಪಳಿಸಿರಬೇಕು. ಇದೆಂದರೆ ಉಲ್ಕಾಪಾತ ಆಗಿರಲು ಸಾಕು.' ಇವರ ಸಿದ್ಧಾಂತವನ್ನು ಪುಷ್ಟೀಕರಿಸುವಂತೆ ವಿಜ್ಞಾನಿಗಳು ಇಲ್ಲಿ ಇನ್ನೂ ಏಳು ಜ್ವಾಲಾಮುಖಿ ಬಾಯಿಗಳನ್ನು ಕಂಡುಹಿಡಿದರು. ಆದರೆ ಈ ಮಾತನ್ನು ಸಿದ್ಧಪಡಿಸಲು ಮತ್ತೆ ಹತ್ತು ವರ್ಷಗಳೇ ಬೇಕಾದವು. ಕೊನೆಗೆ ೧೯೩೭ರಲ್ಲಿ ವಿಜ್ಞಾನಿಯ ಆಧಾರ ಕಲ್ಪನೆ ದೃಢವಾಯಿತು. ಅಂದರೆ ಅತ್ಯಂತ ಮಹತ್ವದ ಸಾಕ್ಷಿಯಾದ ಉಲ್ಕಾ ಶಿಲೆಯ ಕಬ್ಬಿಣದ ಚೂರುಗಳು ಪತ್ತೆಯಾದವು.

[illegible] ವ್ಯಕ್ತಿಯು ಎತ್ತರವನ್ನು ನಿರ್ಧರಿಸುವಂತ ರೆನ್'ವಾಲ್ಡ್‌ರ ಕಲ್ಪನೆಗೆ ಅನುಗುಣವಾಗಿ ಉಲ್ಕಾಪಾತದ ಗಾತ್ರ ಹಾಗೂ ತೂಕಗಳನ್ನು ನಿರ್ಧರಿಸಿದರು. ಕಾಲೀ ಸರೋವರವನ್ನು ನಿರ್ಮಿಸಿದ, ಅವರ ಅತ್ಯಂತ ದೊಡ್ಡ ತುಂಡು ಭಾಗದ ತೂಕ ೯೦೦ ಟನ್ನುಗಳು, ವ್ಯಾಸ ೩ ಮೀಟರುಗಳು ಮತ್ತು ಅಂತ್ಯ ವೇಗ ಸೆಕೆಂಡಿಗೆ ೧೦ ಅಥವಾ ೧೫ ಕಿಲೋಮೀಟರು, ಭಯಂಕರ ಸಂಘಟನೆಯ ರಭಸದಿಂದ ಈ ಉಲ್ಕಾಪಾತವು ಸಿಡಿದು, ಕುಳಿಯನ್ನು ರಚಿಸಿರಬೇಕು, ಅನಂತರ ಕುಳಿಯನ್ನು ಕ್ರಮೇಣ ನೀರು ತುಂಬಿರಬೇಕು. ವಿಜ್ಞಾನಿಗಳು ಕೆಲವೊಂದು ಶತಮಾನದಿಂದ ತಲೆ ಕೆಡಿಸಿಕೊಳ್ಳುತ್ತಿದ್ದ ರಹಸ್ಯವೊಂದು ಹೀಗೆ ಬಿಟ್ಟಿತು. ಯೂರೋಪಿನ ಉಲ್ಕಾಪಾತದ ಕುಳಿಗಳಲ್ಲಿ ಕಾಲೀ ಕುಳಿಯೊಂದೇ ಈವರೆಗೂ ಪರೀಕ್ಷಿಸಲ್ಪಟ್ಟದ್ದಾಗಿದೆ.

ಆದರೆ ಸರೋವರದ ಕೊನೆ ಇದೇ ಆಗಿರಲಿಲ್ಲ. ಎಸ್ತೋನಿಯದಲ್ಲಿ ಸೋವಿಯೆತ್ ಅಧಿಕಾರದ ಪುನರ್‌ಸ್ಥಾಪನೆಯಾದಾಗ ಸಂಶೋಧನಾ ಕಾರ್ಯ ರೆನ್'ವಾಲ್ಡ್‌ರ ಅನುಯಾಯಿಗಳಿಂದ ಅವರ ಶಿಷ್ಯ ಆಗೋ ಐವ'ಲೋಜ್, ಎಂ. ಎಸ್. ಸಿ. (ವಿಜ್ಞಾನ) ಅವರ ಮಾರ್ಗ ನಿರ್ದೇಶನದಲ್ಲಿ ಮುಂದುವರಿಯಿತು. ಸಂಶೋಧನೆಯ ಆಧುನಿಕ ಪದ್ಧತಿಗಳು ವಿಜ್ಞಾನಿಗಳಿಗೆ ಕಾಲೀ ಉಲ್ಕಾಶಿಲೆಯ ವಯಸ್ಸನ್ನು ನಿರ್ಧರಿಸಲು ಸಹಾಯಕವಾದುವು. ಈ ವಯಸ್ಸು ೨೬೭೦ ವರ್ಷಗಳು.

ಇಂಥ ಕುಳಿಗಳ ಅಧ್ಯಯನ ತುಂಬ ಮಹತ್ವದ್ದಾಗಿದೆ. ವಿಜ್ಞಾನಿಗಳು ಕೈಗೆತ್ತಿ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಅಭಿಪ್ರಾಯ

ಮತದಾರರನ್ನು ವಿಸ್ಮಯಗೊಳಿಸಿದ

ಈ ನಾಟಕದ ಉದ್ದೇಶವೇನು?

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಿಂದ ಕಾಂಗ್ರೆಸ್ ಟಿಕೇಟಿಗೆ ಅರ್ಜಿ ಹಾಕಿದವರಲ್ಲಿ ಶ್ರೀ ಟಿ. ಎ. ಪೈ ಅವರೂ ಒಬ್ಬರು. ಆರಂಭದಲ್ಲಿ ಈ ಕ್ಷೇತ್ರದ ಅಭ್ಯರ್ಥಿಯನ್ನು ಆರಿಸಲು ಪ್ರಾದೇಶಿಕ ಚುನಾವಣಾ ಸಮಿತಿಯು ಅಶಕ್ತವಾಯಿತು—ಮುಂದಕ್ಕೆ ಪ್ರಕಟಿಸಲಾಗುವುದು ಎಂದು ಅದು ತಿಳಿಸಿತು.

ಈ ವಿಳಂಬಕ್ಕೇನು ಕಾರಣ? ಶ್ರೀ ಟಿ. ಎ. ಪೈಯವರು ಹೇಳುವಂತೆ ಅವರ ಉಮೇದ್ವಾರಿಕೆಯು ಹಲವು ತೊಡಕುಗಳಿಗೆ ಕಾರಣವಾಗಿದೆ. ಆದುದರಿಂದ ಚುನಾವಣಾ ಸಮಿತಿಗೆ ತನ್ನ ಕೆಲಸವನ್ನು ಸಲೀಸಾಗಿ ಮುಂದುವರಿಸಲು ಅನುಕೂಲವಾಗುವಂತೆ ಅವರು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡರು. ಇದು ನಡೆದ ಒಂದೆರಡು ದಿನಗಳಲ್ಲೇ ಅಭ್ಯರ್ಥಿಯ ಆಯ್ಕೆಯನ್ನು ಸಾರಲಾಯಿತು—ಕೇಂದ್ರ ಚುನಾವಣಾ ಸಮಿತಿಯಿಂದಲೂ ಇದು ದೃಢೀಕೃತವಾಯಿತು.

ಇದನ್ನು ನೋಡುವಾಗ, ಶ್ರೀ ಟಿ ಎ. ಪೈ ಅವರ ಅರ್ಜಿಯು ನುಂಗಲಾರದ ತುತ್ತಾಗಿತ್ತು ಎಂದು ಅನಿಸುತ್ತದೆ. ಜನಪ್ರಿಯತೆಯಲ್ಲಿ, ಕಾರ್ಯದಕ್ಷತೆಯಲ್ಲಿ, ವ್ಯಕ್ತಿತ್ವದಲ್ಲಿ, ಪ್ರಭಾವದಲ್ಲಿ, ಪಕ್ಷದ ತತ್ವಗಳ ಪಾಲನೆ ಮುಂತಾದ ಎಲ್ಲವುಗಳಲ್ಲಿಯೂ ಶ್ರೀ ಟಿ. ಎ. ಪೈ ಅವರ ಅರ್ಜಿಯ ಮುಂದೆ ಆ ಉಳಿದ ಅರ್ಜಿಗಳೆಲ್ಲವೂ ಬರಿಯ ಕತ್ತಲೋ ಕತ್ತಲು. 'ಆದರೆ, ಅವರಿಗೆ ಸ್ಥಾನ ನೀಡದಂತೆ ಒಂದು 'ದುಶ್ಶಕ್ತಿ' ಪ್ರಯತ್ನಿಸುತಿತ್ತು'—ಇದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಬಾಯಿಂದ ಹೊರ ಬಂದ ಮಾತು.

ಈ ದುಶ್ಶಕ್ತಿಯ ಚಟುವಟಿಕೆಗಳ ಬಾಯಿಗೆ ಪ್ರಾದೇಶಿಕ ಚುನಾವಣಾ ಸಮಿತಿ ಸಿಕ್ಕಿ ಬಿದ್ದುದು ವಿಲಕ್ಷಣ. ಪ್ರಾಮಾಣಿಕ ಸೇವಕರನ್ನು ಕಡೆಗಣಿಸುವುದು ಕಾಂಗ್ರೆಸಿಗೆ ಮುಳುವು ಎಂಬುದನ್ನು ಅದು ಕಂಡುಕೊಳ್ಳದೆ ಹೋದುದೂ ಶೋಚನೀಯ. ಇರಲಿ—ಅದು ತೊಯ್ದಾಡುತಿತ್ತು. ಆಗ ಶ್ರೀ ಟಿ. ಎ. ಪೈಯವರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡು ಅವಸರ ಮಾಡಿದರು—ದುಶ್ಶಕ್ತಿಯ ವಿಜಯದ ಬಾಗಿಲು ತಾನಾಗಿಯೇ ತೆರೆಯಿತು— ಮುಂದೆ? ಶ್ರೀ ಪೈಯವರು ತತ್ವನಿಷ್ಠರು; ಉಜ್ವಲ ಕಾಂಗ್ರೆಸಿಗರು—ಅವರಿಗೆ ಮುಂದೆ ಭವಿಷ್ಯವಿದೆ—

ಇದೆಲ್ಲ ರಾಜಕಾರಣಿಗಳ ಮುತ್ತಿನ ಮಾತು, ಶ್ರೀ ಪೈಯವರು ಅವಸರ ಮಾಡಿದರೆಂದೇ ಹೇಳೋಣ — ಪ್ರಾದೇಶಿಕ ಚುನಾವಣಾ ಸಮಿತಿಯು ದುಶ್ಶಕ್ತಿಯ ಮುಂದೆ ತಲೆ ಬಾಗದೆ ಇರುತ್ತಿದ್ದರೆ ಆರಂಭದಲ್ಲೇ ತೀರ್ಮಾನ ಮಾಡಿಬಿಡಬಹುದಿತ್ತು; ಹಿಂತೆಗೆದು ಕೊಂಡ ನಂತರವಾದರೂ ಅವರನ್ನು ಒಲಿಸುವ ಯಾವ ಪ್ರಯತ್ನವನ್ನು ಯಾರು ಮಾಡಿದ್ದಾರೆ? ಅಂದರೆ, ಶ್ರೀ ಪೈಯವರಿಗೆ ಟಿಕೇಟು ನೀಡಬಾರದು ಎಂಬ ಉದ್ದೇಶವನ್ನು ಇಟ್ಟುಕೊಂಡೇ ಆಡಿದ ರಾಜಕೀಯ ನಾಟಕವಲ್ಲವೆ ಇದು? ಇದು ನಾಟಕವೆಂಬುದು ಎಲ್ಲ ಮತದಾರರಿಗೂ ಗೊತ್ತು; ಸತ್ಯವನ್ನು ಅರಿತುಕೊಂಡಿದ್ದಾರೆ ಮತದಾರರು. ಇನ್ನಾದರೂ ಅವಕಾಶವಿದ್ದರೆ, ಕಾಂಗ್ರೆಸ್ಸು ಶ್ರೀ ಪೈಯವರಿಗೆ ಟಿಕೇಟು ನೀಡಲೇ ಬೇಕು. ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳಬೇಕು. ಅದಿಲ್ಲವಾದರೆ, ಶ್ರೀ ಪೈಯವರೇನು ಮಾಡಬೇಕು? ರಾಜಕಾರಣದಿಂದಾಗಿ ಹೆಸರು ಪಡೆದವರು ಕೆಲವರಿರಬಹುದು. ಆದರೆ, ಶ್ರೀ ಪೈಯವರಿಂದ ರಾಜಕಾರಣಕ್ಕೆ, ಕಾಂಗ್ರೆಸಿಗೆ ಮೆರುಗು ಬಂದಿದೆಯೆಂಬುದನ್ನು ಮರೆಯಬಾರದು. ಶ್ರೀ ಪೈಯವರಿಗೆ ಎಂಪಿ ಆಗಿಯೋ ಮಂತ್ರಿಯಾಗಿಯೋ ಏನನ್ನೂ ಸಾಧಿಸಬೇಕಾಗಿಲ್ಲ. ಆದರೆ, ಅಂತಹ ಅವಕಾಶವೊಂದು ದೊರೆತರೆ, ಅನುಕೂಲ ವಾತಾವರಣವೊದಗಿದರೆ, ದೇಶ ಅವರಿಂದ ಹೆಚ್ಚಿನ ಸೇವೆಯನ್ನು ಪಡೆಯಬಹುದು. ನಂದಾರನ್ನು ಹೊರದೂಡಿದ ಕುಹಕ ಶಕ್ತಿ ಪೈಯವರನ್ನೂ ಸದ್ಯ ಹೊರ ದೂಡಿತೆನ್ನುವುದರಲ್ಲಿ ಸತ್ಯಾಂಶವಿದೆ.

ಶ್ರೀ ಪೈಯವರಿಗೆ ಕಾಂಗ್ರೆಸ್ಸಿನಲ್ಲಿ ಮುಂದೆ ಸ್ಥಾನವಿಲ್ಲ; ಅವರನ್ನು ಅದುಮುವ ಪ್ರಯತ್ನ ನಡೆಯುತ್ತಿದೆ, ಆದಿಂದು ಜಯವನ್ನೂ ಗಳಿಸಿದೆ. ಆದುದರಿಂದ ಅವರು ವಿರೋಧಿ ಪಕ್ಷ ಸೇರಬೇಕೆನ್ನುವವರೂ ಇದ್ದಾರೆ. ಆದರೆ, ಇದು ಅರ್ಥವಿಲ್ಲದ ಸಲಹೆ. ಹಿರಿಹಿರಿಯ ಕಾಂಗ್ರೆಸಿಗರೆಲ್ಲರೂ ಟಿಕೇಟು ದೊರೆಯಲಿಲ್ಲವೆಂದು ರಾಜಿನಾಮೆ ನೀಡಿ ಹೊರ ನಡೆಯುವುದು ಅವರ ಅಧಿಕಾರ ಮೋಹದ ಅಭಿವ್ಯಂಜಕ ಕ್ರಿಯೆ. ಆಗ ಈ 'ಕಿರಿಯ' ಕಾಂಗ್ರೆಸ್ಸಿಗರೂ ಅವರ ದಾರಿಯನ್ನೇ ತುಳಿದರೆ ಕಾಂಗ್ರೆಸ್ಸನ್ನು ಉಳಿಸುವವರು ಯಾರು? ತತ್ವ ನಿಷ್ಠೆಯುಳ್ಳ ಹಿರಿಯರೆಲ್ಲರೂ ಗಮನಿಸಿದರೆ, ಕಾಂಗ್ರೆಸ್ಸು ತತ್ವನಿಷ್ಠರ ಕೈಗಳಲ್ಲಿ ಭದ್ರವಾಗಿ ಉಳಿದೀತು.

ಶ್ರೀ ಪೈಯವರು ಕಾಂಗ್ರೆಸ್ಸಿನಲ್ಲಿಯೇ ಉಳಿದು; ಅದರ ಬೆಳವಣಿಗೆಯಲ್ಲಿಯೇ, ಯಶದಲ್ಲಿಯೇ ಅವರು ತೃಪ್ತಿ ಕಾಣಬೇಕು.

ಶ್ರೀ ಪೈ ಒಂದು ಅಮೂಲ್ಯ ಮಣಿ. ಅದೀಗ ಗನಿಗಳಲ್ಲಿ ಮಣ್ಣಿನಡಿಯಲ್ಲಿ ಅಡಗಬಹುದು; ಅಲ್ಲವೇ, ಅದರ ಮೇಲೆ ಎಟಕದವರು ಮಣ್ಣು ಚೆಲ್ಲಲೂ ಬಹುದು. ಆದರೆ, ಒಂದು ದಿನ ಬರುತ್ತಿದೆ—ಗುಲಾಬಿಯ ಹೂವು ತನ್ನ ಪರಿಮಳ ಮತ್ತು ಔಷಧ ಪ್ರಯೋಗ ಗುಣಗಳಿಂದ ಸರ್ವ ಜನಾದರಣೀಯವಾಗಿರುವಂತೆ, ಚೆಲ್ಲಿದ ಮಣ್ಣು ತಾನಾಗಿಯೇ ಸರಿಯುತ್ತದೆ; ಮಣಿ ರಾಜಮುಕುಟದಲ್ಲಿ ತಾನಾಗಿಯೇ ಸೇರುತ್ತದೆ.

ಕಾಂಗ್ರೆಸ್ಸು ಸಂಸ್ಥೆ ಶ್ರೀ ಪೈಯವರಲ್ಲಿ ವಿಶ್ವಾಸದಿಂದಿದೆ. ತಾನು ಅವರಿಗೆ ಅನ್ಯಾಯ ಮಾಡಿದರೂ ಅವರು ಪಕ್ಷದಿಂದ ಹೊರ ಹೋಗುವುದಿಲ್ಲವೆಂದು ಅದು ನಂಬಿದೆ—ಏಕೆಂದರೆ, ಶ್ರೀ ಪೈ—ಕಾಂಗ್ರೆಸ್ಸುಗಳ ಸಂಬಂಧ ಹಾಲು ನೀರಿನದ್ದು—ಎಣ್ಣೆ—ನೀರಿನದ್ದಲ್ಲ. ಅವರ ನಂಬಿಕೆಯನ್ನು ಶ್ರೀ ಪೈಯವರು ನಿಜ ಮಾಡಿಕೊಡುತ್ತಾರೆ ಹಿರಿಯರೆಲ್ಲರಿಗೂ ಈ ಕಿರಿಯ ಈ ವಿಷಯದಲ್ಲೂ ಮಾರ್ಗದರ್ಶಿಯಾಗುತ್ತಾರೆ—ಎಂಬುದು ನಮ್ಮ ಹಾರ್ದಿಕ ಆಶಯ. ಆದರೆ, ಕಾಂಗ್ರೆಸು ಮುಂದೆ ಇಂತಹ ತಪ್ಪುಗಳನ್ನು ಎಂದಿಗೂ ಮಾಡದಿರಲಿ—ದುಶ್ಶಕ್ತಿಗೆ ಸೋಲದಿರಲಿ. ಎಲ್ಲರೂ ಶ್ರೀ ಪೈಯವರಂತಿಲ್ಲವೆಂಬುದನ್ನದು ಈಗಲೇ ಅರಿತುಕೊಳ್ಳಲಿ.

— —

ಕೊಂಡು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಬಹುದಾದಂಥ ಕೇವಲ ಅಂತರಿಕ್ಷಕಾಯಗಳೆಂದರೆ ಉಲ್ಕಾಶಿಲೆಗಳೇ ಆಗಿವೆ. ಭೂಮಿಯ ಮೇಲೆ ತಿಳಿದಿರುವಂಥ ದ್ರವ್ಯಗಳೇ ಉಲ್ಕಾಶಿಲೆಗಳಲ್ಲೂ ಇರುತ್ತವೆಯೆಂದು ವಿಜ್ಞಾನಿಗಳು ಸ್ಥಾಪಿಸಿದ್ದಾರೆ. ಬ್ರಹ್ಮಾಂಡದ ಐಕ್ಯತೆಯನ್ನು ಹೀಗೆ ಸಿದ್ಧಪಡಿಸಲಾಗುತ್ತದೆ. ನಾನಾ ಔನ್ನತ್ಯಗಳಲ್ಲಿ ಹವಾಮಾನದ ತಾಪಾಂಶ ಮತ್ತು ಪ್ರತಿರೋಧ ಶಕ್ತಿ ಎಷ್ಟೆಂಬುದನ್ನು ನಿರ್ಧರಿಸಲು ಸಹಾಯಕವಾಗುತ್ತವೆ. ಇದು ಖಗೋಲಯಂತ್ರಶಾಸ್ತ್ರಕ್ಕೆ ಬಹು ಮಹತ್ವದ್ದಾದ ಉಲ್ಕಾಕಾಯಗಳ ಸಂಚಾರದ ಕುರಿತು ಮಾಹಿತಿ ನೀಡುತ್ತದೆ.

ಹೀಗೆ ಸುಮಾರು ನೂರು ವರ್ಷಗಳಿಂದಿದ್ದ ಕಾಲೀ ಸರೋವರದ ರಹಸ್ಯವನ್ನೂ ಬಿಡಿಸಲ್ಪಟ್ಟಿತು. ಆದರೆ ಅದರ ಸಂಶೋಧನ ಮಾತ್ರ ಮುಂದುವರಿದಿದೆ.

ಪ್ರಕಟಣೆ

ಮೋಟಾರ್ ಕಾರು ಕಮ್ಮಿ ಬೆಲೆಗೆ ವಿಕ್ರಯ

1947ನೇ ಮೋಡಲಿನ ಉತ್ತಮ ಚಾಲೂಸ್ಥಿತಿಯಲ್ಲಿರುವ ಡೋಜ್ ಕಾರ್ (ಹೊಸ ಪೈಂಟು) ಮಾರಾಟಕ್ಕಿದೆ. ಅಪೇಕ್ಷಿಸುವವರು ಈ ಕೆಳಗಿನವರೊಂದಿಗೆ ವಿಚಾರಿಸಬಹುದು. ಬಿ. ಕೆ. ವೆಂಕಟಸುಬ್ಬರಾವ್, ಮಿತ್ತಬಾಗಿಲು ಗ್ರಾಮ, P. O. ಕಿಲ್ಲೂರು. (ದ. ಕ.)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ

ನವಯುಗ ಪ್ರೆಸ್, ಉಡುಪಿ.

ತಯಾರಾಗಿದೆ—

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಎಂಬ ಭಗವದ್ಗೀತೆಯ ಸಮೂಲ ಭಾಷಾಂತರದ ಹೊಸ ಮುದ್ರಣ

ಆಕರ್ಷಕ ಮುಖಪತ್ರ 450 ಪುಟಗಳು.

ಬೆಲೆ ರೂ. 1—50 [ಟ. ಖ. ಪ್ರತ್ಯೇಕ]

ರಖಂ ಪ್ರತಿಗಳಿಗೆ ರಿಯಾಯತಿ ದರ.

ತ್ವರೆ ಮಾಡಿರಿ!

ನವಯುಗ ಪ್ರೆಸ್, ಉಡುಪಿ.

ನೂತನ ಶಾಲಾ ಕಟ್ಟಡದ ಉದ್ಘಾಟನೆ

ಸಾಸ್ತಾನ— ಪಾಂಡೇಶ್ವರ ಪ್ರಾಥಮಿಕ ಶಾಲಾ ನೂತನ ಕಟ್ಟಡದ ಉದ್ಘಾಟನೆಯು ತಾ. 8ರಂದು ಉಡುಪಿ ಶ್ರೇಣಿಯ ಶಾಲೆಗಳ ಹಿರಿಯ ಪರೀಕ್ಷಾಧಿಕಾರಿ ಶ್ರೀ ಶ್ರೀಪತಿರಾವ್ ಪಲಿಮಾರ್‌ರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಬಿಶಪರಾದ ರೈಟ್ ರೆವರೆಂಡ್ ಡಾ| ಬಿ. ಎಸ್. ಡಿ. ಸೋಜಾರವರಿಂದ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಶ್ರೀ ಸಿ. ಜಿ. ಪಿ. ಚಡಗರವರು ಸ್ವಾಗತಿಸಿ ಪ್ರಾಸ್ತಾವಿಕ ಗೈದರು. ಮುಖ್ಯೋಪಾಧ್ಯಾಯ ಶ್ರೀ ಪಿ. ಬಸವ ಪೂಜಾರಿಯವರು ವಂದಿಯಾನೋದಿದರು. ರೆ| ಫಾ| ಅಲ್ಫ್ರೆಡ ಇವರು ಸ್ವಸ್ತಿವಾಚನವನ್ನು ಮಾಡಿದರು. ಕರೆಸ್ಪಾಂಡೆಂಟ್ ರೆ| ಫಾ| ಎಡ್ವಿನ್ ಸಿ. [illegible] ಇವರು ಸಂದೇಶಗಳನ್ನೋದಿದರು. ಶ್ರೀ ಬಿಶಪರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಶಾಲೆಯನ್ನು ಜ್ಞಾನ ದೇಗುಲವೆಂದು ಸಾರುತ್ತ ಶುಭಾಶೀರ್ವಾದವನ್ನು ಮಾಡಿದರು. ಶ್ರೀ ಶ್ರೀಪತಿರಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಲಾ ಸಂಚಾಲಕರು, ಅಧ್ಯಾಪಕರು ಹಾಗೂ ಮಕ್ಕಳ ರಕ್ಷಕರ ಸಹಕಾರದ ಬಗ್ಗೆ ಸಂತೋಷ ಸೂಚಿಸಿ ಶಾಲಾ ಮಕ್ಕಳಿಗೆ ಹಿತವಚನವನ್ನು ನುಡಿದರು. ಅನಂತರ ಮಕ್ಕಳ ಮನರಂಜನಾ ಕಾರ್ಯಕ್ರಮಗಳಾದವು.

ಪೂರ್ವಾಹ್ನ ಶ್ರೀ ಯುಸ್. ಬಿ. ಕಲ್ಕೂರರು ಧ್ವಜಾರೋಹಣ ಮಾಡಿದ್ದರು. ಅವರ ವತಿಯಿಂದ ಶಾಲಾ ಮಕ್ಕಳಿಗೆ ಸಿಹಿತಿಂಡಿ ವಿತರಣೆಯನ್ನು ಏರ್ಪಡಿಸಲಾಗಿತ್ತು.

'ನವಯುಗ'ದ ಚಂದಾದಾರರು

ದಯಮಾಡಿ ತಮ್ಮ ಬಾಕಿ ಚಂದಾಹಣವನ್ನು ತ್ವರೆಯಾಗಿ ಕಳುಹಿಸಿ ಕೊಡುವಂತೆ ವಿನಂತಿ.

ಮೆನೇಜರ್.

ಗೋಲ್ಡ್ ಬಾಂಡ್

(ಎರಡನೇ ಪುಟದಿಂದ)

ಸ್ವಯಂ ಪೂರ್ಣವಾಗುವ ವರೆವಿಗೂ ಪರದೇಶಗಳಿಂದ ತರಿಸಿಕೊಳ್ಳಲೇ ಬೇಕು ನಾವು ಮುದ್ರಿಸಿದ ನೋಟುಗಳನ್ನ ಅವರಿಗೆ ಕೊಡಲು ಬರುವುದಿಲ್ಲ. ಅವರಿಗೆ ಚಿನ್ನದ ಬೆಲೆಯಿಂದ ಮೌಲ್ಯವನ್ನು ಕೊಡಬೇಕು. ನಮಗೆ ಶಸ್ತ್ರಾಸ್ತ್ರಗಳನ್ನು ಕೊಡುವ, ಆಹಾರವನ್ನು ಕೊಡುವ ಚಿನ್ನವನ್ನು ನಾವು ಹೆಂಗಸರ ಮೇಲೆ ಹೇರಿದ್ದೇವೆ. ಲಕ್ಷ್ಮಿಯನ್ನು ಜೈಲಿನಲ್ಲ ಕೂಡಿಟ್ಟಿದ್ದೇವೆ. ಈಗ ಸರಕಾರಕ್ಕೆ ನಾವು ಚಿನ್ನವನ್ನು ಕೊಟ್ಟರೆ ಅದನ್ನು ಉಪಯೋಗಿಸಿ ಕೊಂಡು ಮತ್ತೆ ಹಿಂದಿರುಗಿಸುತ್ತಾರೆ. ಅಲ್ಲದೆ ಅವರ ಹತ್ತಿರ ಇರುವಷ್ಟು ದಿವಸಕ್ಕೆ ಬಡ್ಡಿಯನ್ನು ಕೊಡುತ್ತಾರೆ. ನನಗೆ 'ವಸ್ತು' ನೀವಿರುವಾಗ ಬೇರೆಯ ಚಿನ್ನವಾದರೂ ಏಕೆ? ನಿನ್ನ ಹತ್ತಿರ ಇರುವ ಚಿನ್ನವನ್ನು ಗೋಲ್ಡ್ ಬಾಂಡಿಗೆ ಕೊಟ್ಟುಬಿಡುವೆ?'

"ಅಲ್ಲಾಂದ್ರೆ, ನಮ್ಮ ಒಡವೆಗಳನ್ನು ಹಾಗೆಯೇ ಇಟ್ಟಿದ್ದು ವಾಪಾಸು ಕೊಡ್ತಾರೆಯೆ?"

"ಇಲ್ಲ. ಅದನ್ನು ಕರಗಿಸಿ ಗಟ್ಟಿಯ ರೂಪಕ್ಕೆ ತರುತ್ತಾರೆ. ಅಂತಹದೇ ಗಟ್ಟಿಯನ್ನು ವಾಪಸ್ಸು ಮಾಡುತ್ತಾರೆ."

"ಹೋಗೀಂದ್ರೆ, ಹೋಗೀಂದ್ರೆ. ಇನ್ನೂ ಹದಿನೈದು ವರ್ಷದ ಮಾತು. ಆ ಮೇಲೆ ಸರ್ಕಾರ ಹೇಳಲಿ, ಅದಕ್ಕಾಗುವ ದುಡ್ಡು ತೆಗೆದುಕೊಳ್ಳಿ, ಚಿನ್ನವನ್ನು ಕೊಡಲಾಗುವುದಿಲ್ಲವೆಂದು. ಅಷ್ಟೇ ಅಷ್ಟು ವರ್ಷಕ್ಕೆ ಚಿನ್ನದ ಒಡವೆ ಮಾಡುವ ಹೂಸ ಆಚಾರ ಇರುತ್ತಾರೆ. ಈಗಿರೋರೆಲ್ಲಾ ಸತ್ತ ಮೇಲೆ ಯಾರೂ ಇರೋಲ್ಲ. ಅವರ ಮಕ್ಕಳನ್ನ ಚಪ್ಪಲಿ ಹೊಲಿಯೋಕೋ, ಪಿಕ್ ಪಾಕೆಟ್ ಮಾಡೋಕೋ ಕಳಿಸುತ್ತಾರೆ. ಅನ್ಯಾಯವಾಗಿ ಹಾಳ್ಮಾಡ್ಬಿಟ್ರು ಆ ಕಲೇನ. ನಮ್ಮಪ್ಪನಾಣೆಗೂ ಒಡವೆಗಳನ್ನ ನಾನು ಕೊಡೋದಿಲ್ಲ.' ಕಲ್ಲೋದ್ಧಾರಕ ವಾಣಿಯಲ್ಲಿ ಹೇಳಿದಳು ಸ್ವರ್ಣ.

"ಹೋಗ್ಲಿ ಬಿಡು. ಅದು ಎಲ್ಲಾ ದೃಷ್ಟಿಯಲ್ಲೂ ಅನುಕೂಲವಾಗುತ್ತೆ. ನಿನಗೆ ಇಷ್ಟವಿಲ್ಲದಿದ್ದರೆ ಏನು ಮಾಡೋಕಾಗುತ್ತೆ?"

ಭೂಪಾಲಂ ವೆಂಕಟಾಚಲಪತಿ ಶೆಟ್ಟರಿಗೆ ಮೊದಲಿನಿಂದಲೂ ವ್ಯಾಪಾರಕ್ಕಿಂತಲೂ ವಿದ್ಯಾಭ್ಯಾಸದ ಕಡೆಗೆ ಒಲವು ಜಾಸ್ತಿ. ಅವರ ತಂದೆ, ಅಕ್ಕ ಹಾಗೆ ಶ್ರೀಮಂತರಾಗಿದ್ದರು. ಆದ್ದರಿಂದ ಇವರನ್ನ ಓದಿಸಲು ಏನೂ ಕಷ್ಟವಾಗಲಿಲ್ಲ. ಇವರ ಹೆಂಡತಿ ಸ್ವರ್ಣಲತಾ. ನೋಡಲು ಕೂಡ ಕಪ್ಪು. ಫೇಸ್ ಕಟ್ ಮಾತ್ರ ಚೆನ್ನಾಗಿ ಹಾಗೆ ಅಷ್ಟು.

ಅವಳ ಗಂಡನಿಗೆ ಕಾಣುವುದೆಲ್ಲ ವೃತ್ತಿಯಲ್ಲೇ ಕಳೆದು ಹೋಗುತ್ತಿತ್ತು. ಇವಳಷ್ಟು ಪ್ರಪಂಚಕತೆ ಅವನಲ್ಲಿ ಇರಲಿಲ್ಲ. ಎಷ್ಟೋ ವೇಳೆ ಇವಳ ಸಣ್ಣತನವನ್ನು ಅರ್ಥ ಮಾಡಿಕೊಳ್ಳಲೂ ಅವನಿಗೆ ವೇಳೆಯಿಲ್ಲದ್ದರಿಂದ ವಿರಸವಾಗಲು ಕಾರಣವಿರಲಿಲ್ಲ.

○ ○ ○ ○

"ಮಲಗಿ ಕೊಳ್ಳೀಂದ್ರೆ"

"ಇನ್ನೂ ಟೈಂ ಏನೂಂತ? ಒಬ್ಬೇ ಹನ್ನೊಂದು ಗಂಟೆ. ನಿನಗೆ ಮದುವೆಯ ಮನೆಯ ಆ ಹೂಸ ಫಿಡ್ಲೆ ನೋಡು."

'ಫಿಡ್ಲೆ ಎಲ್ಲಿ ಬರುತ್ತೆ, ಅದೇನೋ ಶಬ್ದ ಮಾಡ್ತಾ ಇದೀರ.'

"ಇಲ್ವೇ ಆಗೋಯ್ತು. ನಾನು ಮಲಗ್ತೀನಿ.'

ಡಾಕ್ಟರರು ಮಲಗಲಿಕ್ಕೆ ರೆಡಿಯಾದರು. ಅಷ್ಟರಲ್ಲಿ ಫೋನ್ ಹೊಡೆದುಕೊಳ್ಳಲು ಪ್ರಾರಂಭಿಸಿತು. ಹೋಗಿ ಮಾತಾಡಿದರು.

ಆಸ್ಪತ್ರೆಯಿಂದ ಕರೆ ಬಂದಿತ್ತು. ಯಾವುದೋ ಹೆಂಗಸಿನ ಕೇಸು ಬಹಳ ಸೀರಿಯಸ್ ಆಗಿತ್ತು. ಲೇಡಿ ಡಾಕ್ಟರಿರಲಿಲ್ಲ. ನರ್ಸ್‌ಗಳ ಕೈ ಕೆಳಗಿನ ಡಾಕ್ಟರುಗಳ ಕೈ ಮೀರಿತ್ತು. ಬಟ್ಟೆಯನ್ನು ಬದಲಿಸಿ ಹೊರಟೇ ಬಿಟ್ಟರು. ಅರ್ಧ ನಿದ್ದೆಯಲ್ಲಿದ್ದ ಮಡದಿಯನ್ನ ಬಾಗಿಲು ಹಾಕಿ ಕೊಳ್ಳುವಂತೆ ಹೇಳಿದರು. ಸ್ವರ್ಣಳಿಗೆ ಇದೇನೂ ಹೊಸದಾಗಿರಲಿಲ್ಲ. ಆದರೆ ಇವತ್ತೇನೋ ಒಂದು ರೀತಿಯ ಭೀತಿ ಎದುರಾಯಿತು. ಡಾಕ್ಟರು ಹೊರಟು ಹೋಗಿ ಎಷ್ಟೋ ಹೊತ್ತಾದರೂ ಅವರ ಅರಿವು ಆಗಲಿಲ್ಲ. ಅವರು ಹೊರಟು ಹೋದ ಮೇಲೆ ಭೀತಿ ಇನ್ನೂ ಜಾಸ್ತಿಯಾಯಿತು. ಹಾಗೆಯೇ ಜವಾನ ಮಲಗಿದ್ದ. ಅವನಿಗೆ ಎಚ್ಚರಿಕೆ ಕೊಟ್ಟು ಬಂದಳು. ನಾಯಿ ಕೂಲಿಗೆ ಒಂದು ಮುತ್ತು ಕೊಟ್ಟು ಬಂದಳು. ಹಾಗೆಯೇ ಹಾಸಿಗೆಯ ಮೇಲೆ ಉರುಳಿದಳು. ಹಚ್ಚಿಟ್ಟ ಕಿಡಿಯು ಒಂದುಗೂಟಿ ಹಾರಲೊಡೆದಳು. ದೇವರ ಮನೆಗೆ ಹೋಗಿ ದೇವರ ಮುಂದೆ ದೀಪ ಹಚ್ಚಿ ಬಂದು ಮಲಗಿದಳು. ಎಷ್ಟೋ ಹೊತ್ತಿನ ಮೇಲೆ ಸ್ವಲ್ಪ ಜೊಂಪು ಹತ್ತಿತು.

○ ○ ○ ○

'ಅಯ್ಯೋ, ಅಯ್ಯೋ'

'ಏ ಸ್ವರ್ಣ, ಏನೇ? ಏನೇ?"

"ಏನೂಂದ್ರೆ?"

ಕಣ್ಣು ಬಿಟ್ಟು ನೋಡುತ್ತಾಳೆ, ಲೈಟು ಹಾಕಿದೆ. ಎದುರಿಗೆ ಗಂಡನಿಂತಿದ್ದಾನೆ. ಒಮ್ಮೆಗೆ ಹಾರಿ ಅವನ ತೋಳಿನ ಆಶ್ರಯ ಪಡೆದಳು

"ಏನಾಯ್ತು ಚಿನ್ನ?"

"ಅಬ್ಬಾ! ಕೆಟ್ಟ ಕನಸು! ಯಾವಾಗ ಬಂದ್ರೀಂದ್ರೆ ಎಷ್ಟೊತ್ತಾಯ್ತು ಬಂದು? ಈಗೆಷ್ಟು ಗಂಟೆ?"

ಅವಳ ಯಾವ ಪ್ರಶ್ನೆಗೂ ಉತ್ತರಿಸದೆ "ಈಗ ನಾಲ್ಕೂಮುಕ್ಕಾಲು ಗಂಟೆ ಕಣೆ" ಎಂದು ಒಂದೇ ಪ್ರಶ್ನೆಯನ್ನ ಮಾತ್ರ ತಿಳಿಸಿದ. ಅವನು ಕಂಡದ್ದೆಲ್ಲಾ ಹೇಳಿದ್ದರೆ ಬಹುಶಃ ಅವಳ ಹೃದಯ ಕ್ರಿಯೆಯೇ ನಿಲ್ಲುತ್ತಿತ್ತೋ ಏನೋ? ಅವನು ಬಂದು ಆಗಲೇ ಎರಡು ಗಂಟೆಗಳ ಕಾಲವಾಗಿತ್ತು. ಬಂದವನೇ ಬಾಗಿಲು ಅನೇಕ ಸಲ ಬಡಿದ. ಯಾರೂ ಉತ್ತರಿಸಲಿಲ್ಲ. ಒಳಗಡೆ ಏನೋ ಶಬ್ದವಾಯಿತು. ಯಾರೋ ಓಡಿ ಹೋದಂತಾಯಿತು. ಹಾಗಾಗಿ ಲೈಟ್ ಹಾಕಿದ. ಅದು ಹತ್ತಲಿಲ್ಲ. ಬ್ಯಾಟರಿಯ ಸಹಾಯದಿಂದ ಫ್ಯೂಸ್ ನೋಡಿದ. ಅದು ಹೊರಟು ಹೋಗಿತ್ತು. ಜವಾನನ ಹೆಸರು ಹಿಡಿದು ಕೂಗಿದ. ಅದರ ಉತ್ತರವೇ ಇಲ್ಲ. ಎಲ್ಲಕ್ಕಿಂತ ಆಶ್ಚರ್ಯ: ನಾಯಿಯೂ ಇಲ್ಲ. ಹಿಂಬಾಗಿಲು ತಗೆದಿದೆಯೋ ನೋಡೋಣವೆಂದ. ಕೈತೋಟದ ಕಡೆಯಿಂದ ಹೊರಟ. ಬ್ಯಾಟರಿಯ ಸಹಾಯದಿಂದ ಮುಂದೆ ನಡೆಯುತ್ತಿದ್ದ. ಇದ್ದಕ್ಕಿದ್ದ ಹಾಗೆಯೇ ಸ್ತಬ್ಧನಾಗಿನಿಂತ. ಅವನು ಡಾಕ್ಟರೇ ಆಗಿದ್ದರೂ ಆ ನೋಟವನ್ನ ನೋಡಲಾಗಲಿಲ್ಲ. ಅದು ಅಷ್ಟು ಭಯಾನಕವಾಗಿತ್ತು. ಗಿಡದ ಪಕ್ಕದಲ್ಲಿ ರಕ್ತದ ಮಡುವಿನಲ್ಲಿ ಹೊರಳಾಡುತ್ತಿತ್ತು. ಅದರ ಪ್ರಾಣ ಬಹುಶಃ ಆಗಲೇ ಹೋಗಿತ್ತು. ಅದನ್ನು ನೋಡಲಾಗದೆ ಮುಂದೆ ಹೋದ. ಅಲ್ಲಿಯೇ ಸ್ವಲ್ಪ ದೂರದಲ್ಲಿ ತಿಮ್ಮ ಮರಕ್ಕೆ ಕಟ್ಟಹಾಕಲ್ಪಟ್ಟಿದ್ದ. ಅವನಿಗೆ ಪ್ರಜ್ಞೆಯಿರಲಿಲ್ಲ. ತಕ್ಷಣ ಡಾಕ್ಟರಿಗೆ ಸ್ವರ್ಣಳ ಜ್ಞಾಪಕಬಂತು. ಹಿಂಬಾಗಿಲಿಗೆ ಬಂದು ನೋಡುತ್ತಾರೆ. ಅವರ ಊಹೆ ಸರಿಯಾಗಿತ್ತು. ಆ ಬಾಗಿಲು ತೆಗೆದಿತ್ತು. ಒಳಗೆ ಹೇಗೆ ತಾವು ಹೋದರೆಂಬುದೇ ಅವರಿಗೆ ಅರಿವಾಗಲಿಲ್ಲ. ಒಂದೇ ನೆಗತಕ್ಕೆ ನೆಗೆದು ಸ್ವರ್ಣಳ ಮಂಚದ ಹತ್ತಿರ ಇದ್ದರು. ಅವಳೂ ಸಹ ಪ್ರಜ್ಞೆಯಿಲ್ಲದೆ ಮಲಗಿದ್ದಳು. ಮೊದಲು ಅವಳಿಗೂ ಜವಾನನಿಗೂ ಇಂಜೆಕ್ಷನ್ ಕೊಟ್ಟರು. ಜವಾನನಿಗೆನೋ ತಕ್ಷಣಪ್ರಜ್ಞೆ ಬಂತು. ಆದರೆ ಸ್ವರ್ಣಳಿಗೆ ಬರಲಿಲ್ಲ. ಫ್ಯೂಸ್ ಹಾಕಿದರು ಲೈಟ್ ಬಂತು. ಆ ರೀತಿ ಇನ್ನೂ ಏನೇನು ಅನಾಹುತವಾಗಿದೆಯೋ ಎಂದು ಮನೆಯೆಲ್ಲಾ ಒಮ್ಮೆ ನೋಡಿ ಬಂದರು. ಎದೆ ಹೊಡೆದುಕೊಳ್ಳುತ್ತಿತ್ತು. ಬಹುಶಃ ಬಾಗಿಲು ಬಡಿದಾಗ ಕಳ್ಳರು ಒಳಗಿದ್ದರೆಂದು ತೋರುತ್ತದೆ. ಅವರ ವಸ್ತುಗಳನ್ನು ಎಸೆದಿದ್ದ ರೀತಿಯನ್ನು ನೋಡಿದರೆ ಬಹುಶಃ ಅವಸರ ಅವಸರವಾಗಿ ಓಡಿಹೋಗಿರುವಂತೆ ಕಾಣುತ್ತದೆ. ಇವರು ಬರುವುದು ಸ್ವಲ್ಪ ತಡವಾಗಿದ್ದರೆ ಇನ್ನೂ ಅನೇಕ ವಸ್ತುಗಳು ಹೋಗುವ ಸಂಭವವಿದ್ದಿತಬಹುದು. ಗೋಡ್ರೇಜ್ ಬೀರುವಿನ ಬಾಗಿಲು ತೆರೆಯಲ್ಪಟ್ಟಿತ್ತು. ಸ್ವರ್ಣಳ ಒಡವೆಗಳ ಚಿಕ್ಕ ಪೆಟ್ಟಿಗೆಯು ಮಾಯವಾಗಿತ್ತು. ಅದನ್ನು ನೋಡಿ ಅವರಿಗೆ ಬಹಳ ದುಃಖವಾಯಿತು. ಅದರಿಂದ ಸ್ವರ್ಣಳಿಗೆ ಆಗುವ ದುಃಖವನ್ನ ಅವರು ಊಹಿಸದಾದರು.

ಸ್ವರ್ಣಳಿಗೆ ಪ್ರಜ್ಞೆ ಬಂತು. ಬಂದ ಮೇಲೆ ಎಷ್ಟೊತ್ತಾದರೂ ನಡುಗುತ್ತಲೇ ಇದ್ದಳು. ಅವರ ಮುಖ ಕಪ್ಪಿಟ್ಟಿರುವುದನ್ನು ನೋಡಿ 'ಏನಾಯಿತೂಂದ್ರೆ?' ಎಂದು ಅನೇಕ ಸಲ ಕೇಳಿದಳು. ಮೌನವೇ ಅದಕ್ಕೆ ಉತ್ತರವಾಯಿತು. ಅವಳಿಗೆ ಚೆನ್ನಾಗಿ ಎಚ್ಚರವಾದ ಮೇಲೆ ಕೇಳಿದಳು, "ನೀವು ಬಾಗಿಲು ಹಾಕಿದ್ದನಲ್ಲ ನೀವು ಒಳಗೆ ಹೇಗೆ ಬಂದ್ರಿ?'

'ಹಿಂಬಾಗಿಲಿನಿಂದ.'

"ಏನು? ಹಿಂಬಾಗಿಲನ್ನು ಹಾಕುವುದನ್ನು ಮರೆತಿದ್ದನೇ?'

"ಹಾಗೇನಿಲ್ಲ. ಆದರೆ ತರದಿತ್ತು ಒಂದೆ."

'ಹಾಗೆಂದರೇನೂಂದ್ರೆ?"

ಡಾಕ್ಟರರಾಗಿ ಅವರು ಇಷ್ಟು ವರ್ಷ ಕಲಿತಿದ್ದ ಬುದ್ಧಿಯನ್ನೆಲ್ಲ ಖರ್ಚು ಮಾಡಿ ವಿಷಯವನ್ನು ತಿಳಿಸಿದರು. ಅದನ್ನು ಕೇಳದ ಕೂಡಲೆ ಮತ್ತೆ ಮೂರ್ಛೆ ಹೋದಳು. ಆ ಡಾಕ್ಟರು ಮತ್ತೊಮ್ಮೆ ಪ್ರಯಾಸ ಪಟ್ಟು ಅವಳಿಗೆ ತಿಳಿವುಂಟಾಗುವಂತೆ ಮಾಡಬೇಕಾಯಿತು. ಚಿನ್ನ ಹೋದುದಕ್ಕಾಗಿ ದೇವರನ್ನು ಶಪಿಸಿದಳು. ಪ್ರಾಣ ಉಳಿದುದಕ್ಕಾಗಿ ದೇವರನ್ನು ವಂದಿಸಿದಳು. ಆಗಲೇ ಪೋಲೀಸ್ ಕಂಪ್ಲೇಂಟ್ ಕೊಡುವಂತೆ ಒತ್ತಾಯ ಪಡಿಸಿದಳು. ಬೆಳಗಾಗಲಿ, ಆ ಮೇಲೆ ತಿಳಿಸೋಣವೆಂದು ಡಾಕ್ಟರು ಹೇಳಿದುದು ಅವಳಿಗೆ ಕಿವಿಯ ಮೇಲೆ ಬೀಳಲೇ ಇಲ್ಲ. ಅವಳ ಒತ್ತಾಯಕ್ಕಾಗಿ ಆಗಲೇ ಫೋನ್ ಮಾಡಬೇಕಾಯಿತು. ಪೋಲಿಸಿನವರೂ ಬಂದು ಅವರ ಮಾಲಿನ ಗುರುತನ್ನು ಮಾಡಿ ಹೋದರು. ಬೆಳಗ್ಗಿನ ಹೊತ್ತಿಗೆ ಗುಲ್ಲೋ ಗುಲ್ಲಾಯಿತು. ಸ್ವರ್ಣಳವರಿಗೆ ಅವಳ ಒಡವೆಯ ವಿಷಯದಲ್ಲಿ ಪೆಟ್ಟಿಗೆಯನ್ನು ತೋರಿಸಿದ್ದ ಅನೇಕ ಕಥೆ... ಕಾರಣವಾದದ್ದಕ್ಕಾಗಿ ಮನಸ್ಸಿನಲ್ಲಿಯೇ ... ಸಂತೋಷಪಟ್ಟು ... ಎಲ್ಲ ... ಗಡಗಡ ನಡುಗಿದರು. ಬಸ್ಸಿನಲ್ಲಿ ಎಲ್ಲರೂ ಬಂದು ತಮ್ಮ ಸಂತಾಪವನ್ನು ಸೂಚಿಸಿ ಹೋದರು. ಸ್ವರ್ಣಳಿಗೆ ಬಂದವರ ಮುಂದೆಲ್ಲಾ ಅತ್ತು ಅತ್ತು ಸಾಕಾಯಿತು.

ಇದಾದ ಹತ್ತು-ಹದಿನೈದು ದಿವಸಗಳೊಳಗೆ ಕಳ್ಳನೇನೋ ಸಿಕ್ಕಿದ. ಆದರೆ ಒಡವೆ

ಚಿನ್ನೊಂದೇ



ರೈತ ಭಾಂಧವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು ....

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಪೀಟರ್ ಸ್ಟಾರ್ಟರುಗಳು.. ......

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ, ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

NAVAYUGA 12—1—1967
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಗಳು ಸಿಕ್ಕಲಿಲ್ಲ. ಅವನ ಹೇಳಿಕೆಯ ಪ್ರಕಾರ ಪೆಟ್ಟಿಗೆಯಲ್ಲಿ ಕನ್ನಡಿ, ಬಾಚಣಿಗೆ, ಸ್ನೋ, ಪೌಡರುಗಳಿದ್ದವಂತೆ! ಪೋಲಿಸರು ತಾವು ಕೊಡಬಹುದಾದ ಚಿತ್ರಹಿಂಸೆಯನ್ನೆಲ್ಲಾ ಕೊಟ್ಟರು. ಇವನ್ನು ತಿಳಿದು ಡಾಕ್ಟರೇ ಪೋಲಿಸ್ ಠಾಣೆಗೆ ಹೋಗಿ, "ಎಲ್ಲಾದರೂ ಹೋಗಲಿ ಬಿಟ್ಟುಬಿಡಿ ಎಂದು ಬಿಡಿಸಿದರು. ಅಲ್ಲದೆ ಡಾಕ್ಟರೂ ಸರ್ಕಲ್ ಇನ್ಸ್‌ಪೆಕ್ಟರರೂ ಬಹಳ ಹೊತ್ತು ಮಾತಾಡುತ್ತಲಿದ್ದರು.

ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲ, ಕಳ್ಳ ಸಿಕ್ಕಿದರೂ ಒಡವೆಗಳು ಸಿಕ್ಕಲಿಲ್ಲವಲ್ಲ ಎಂದು ಸ್ವರ್ಣ ಬಹಳವಾಗಿ ಪೇಚಾಡಿದಳು.

"ಅಯ್ಯೊ, ನಿಮ್ಮ ಮಾತನ್ನು ಕೇಳಿಕೊಂಡು ಗೋಲ್ಡ್ ಬಾಂಡಿಗಾದರೂ ಹಾಕಿದ್ದರೆ ದೇಶಕ್ಕೂ ಆಗುತ್ತಿತ್ತು, ನನ್ನ ಚಿನ್ನವೂ ಉಳಿಯುತ್ತಿತ್ತು."

"ಎಲ್ಲಾ ಆಟ್ಟಮೇಲೆ ತಾನೆ ಒಲೆಯುರಿಯುವುದು? ನಾನು ಗಿಳಿಗೆ ಹೇಳಿದ ಹಾಗೆ ಹೇಳಲಿಲ್ಲವೆ?"

"ಹೇಳಿದಿರಿ. ಆದರೆ ನನಗೆ ಹೀಗೆಲ್ಲಾ ಆಗುತ್ತೇ ಅನ್ನಿಸಿರಲಿಲ್ಲ."

"ನಿನಗೆ ಚಿನ್ನ ಹೋಯಿತಲ್ಲ ಅನ್ನುವ ಚಿಂತೆ. ನನಗೆ ಜೂಲಿ ಹೋಯಿತಲ್ಲ ಅನ್ನುವ ಚಿಂತೆ.'

"ಜೂಲಿ ಹೋದರೆ ಮತ್ತೊಂದು ಜೂಲಿ ತರಬಹುದು. ಆದರೆ ಚಿನ್ನಕ್ಕಾಗುವ ಬೆಲೆ?"

"ಅಯ್ಯೊ ಹುಚ್ಚಿ. ಚಿನ್ನ ಬೇಕಾದರೆ ತರಬಹುದು. ಆ ಜೂಲಿಯ ಹೃದಯಕ್ಕೆ ಎಷ್ಟು ಮಣ ಚಿನ್ನ ಸಮ? ಪೆದ್ದಿ, ಪೆದ್ದಿ, ಇನ್ನೂ ಕಣ್ಣು ತೆರೆಯಲಿಲ್ಲವೆ!"

ಆಗ ಜೂಲಿಗೆ ಅವಳ ಮೇಲಿದ್ದ ಪ್ರೀತಿಯನ್ನು ನೆನೆಸಿಕೊಂಡಳು. ಮಕ್ಕಳಿಲ್ಲದ ಅವಳಿಗೆ ಅದೇ ಮಗುವಾಗಿತ್ತು. ಅವಳಿಲ್ಲದೆ ಮತ್ತೆ ಯಾರು ಊಟಕ್ಕಿಟ್ಟರೂ ಊಟ ಮಾಡುತ್ತಲಿರಲಿಲ್ಲ. ಒಮ್ಮೆ ಇವಳು ತಾಯಿ ಮನೆಗೆ ಹೋಗಿದ್ದಾಗ ಮೂರು ದಿವಸ ಊಟವಿಲ್ಲದ ಉಪವಾಸ ಮಾಡಿತ್ತು. ಒಂದೊಂದಾಗಿ ಇಂತಹ ನೆನಪು ಬರಲು ಪ್ರಾರಂಭವಾಯಿತು. ಕಣ್ಣೀರು ಸುರಿಸುತ್ತಾ ಹೇಳಿದಳು.

"ಹೌದು, ನಿಜ ಒಂದು ನಾಯಿಯೂ ತನ್ನ ಸ್ವಾಮಿಗಾಗಿ ಹೋರಾಡುತ್ತದೆ. ಪ್ರಾಣಾರ್ಪಣ ಮಾಡುತ್ತದೆ. ನಾನು ಅದಕ್ಕಿಂತ ಕೀಳಾದೆ. ದೇಶಕ್ಕಾಗಿ ದಾನವೇನೂ ಬೇಡ ಹೋಗಲಿ ಹಿಂದಿರುಗಿ ಬರುತ್ತದೆಂದರೂ ಕೊಡಲಿಲ್ಲ. ನನ್ನಂತವರಿಂದಲೇ ದೇಶ ಇನ್ನೂ ಹಿಂದುಳಿದಿರುವುದು."

"ಲೇ ಸ್ವರ್ಣ, ಲೇ ಸ್ವರ್ಣ ನಿನ್ನಿಂದಲೇ ಈ ಮಾತು!"

"ಹೌದೂಂದ್ರೆ, ನಾನು ನಾಯಿಗಿಂತಲೂ ಕೀಳಾದೆ."

"ಬಿಡು ಅನ್ನು, ಒಂದು ವೇಳೆ ಈಗಲೂ ನಿನ್ನ ಚಿನ್ನ ಸಿಕ್ಕಿದರೆ ಏನು ಕೊಡುತ್ತೀಯೆ?"

"ಹಾಂ! ನನ್ನ ಚಿನ್ನ ಸಿಕ್ಕಿದರೆ... ಸಿಕ್ಕಿದರೆ......ಅದು ಖಂಡಿತ ಸಾಧ್ಯವಿಲ್ಲ."

"ಖಂಡಿತವಾಗಿಯೂ ಸಿಕ್ಕಿದರೆ ಏನು ಮಾಡುತ್ತೀಯೆ?"

"ಒಂದು ವೇಳೆ...ಒಂದು ವೇಳೆ ಸಿಕ್ಕಿದರೆ....ಅರ್ಧವನ್ನು ಸರ್ಕಾರಕ್ಕೆ ದಾನ ಮಾಡುತ್ತೇನೆ. ಉಳಿದರ್ಧವನ್ನು ಬಾಂಡಿನ ರೂಪದಲ್ಲಿ ಕೊಡುತ್ತೇನೆ."

'ಖಂಡಿತವೂ?'

"ಖಂಡಿತ."

"ತೋಗೋ' ಎಂದು ಅವಳ ಮುಂದೆ ೬೦ ಗ್ರಾಂನ ಚಿನ್ನದ ಬಾಂಡನ್ನು ಹಿಡಿದ.

'ಇದೆಲ್ಲಾ ಏನೂಂದ್ರೆ ನಾಟಕ?'

'ನಾಟಕ ಆಡಿದವನು ನಾನಲ್ಲ. ದೇವರು ಆಡಿಸಿದ ನಾಟಕದಲ್ಲಿ ನನಗೂ ಒಂದು ಸಣ್ಣ ಪಾತ್ರವನ್ನು ಕೊಟ್ಟಿದ್ದ. ಅದನ್ನು ನನ್ನ ಕೈಲಾದಷ್ಟು ಮಟ್ಟಿಗೆ ನಿರ್ವಹಿಸಿದೆ. ನೀನು ಎದುರಿಗೆ ಬಂದಾಗ ಈ ರೀತಿ ಆಗಬಹುದೆಂದೂ ಊಹಿಸಿದ್ದೆ. ನೀನು ನಿದ್ದೆ ಮಾಡುತ್ತಿದ್ದಾಗ ಚಿನ್ನದ ಬದಲು ಕಲ್ಲ ವಸ್ತುಗಳನ್ನು ತುಂಬಿದೆ. ಒಡವೆಗಳು ಭದ್ರವಾಗಿ ನನ್ನ ಜೊತೆಯಿದ್ದುವು. ಮರುದಿನ ಅದನ್ನು ನಾನು ಗೋಲ್ಡ್ ಬಾಂಡಿಗೆ ಹಾಕಿದೆ. ಮುಂದಿನದು ಕಳ್ಳತನ. ಅದರಲ್ಲಿ ನಿಜ ಘಟನೆ. ಪೆಟ್ಟಿಗೆಯನ್ನು ತಿಮ್ಮ (ಜವಾನ) ನೋಡಿದ್ದ. ಇದರಲ್ಲಿ ಅವನ ಕೈವಾಡವಿದೆ. ಅವಸರದಲ್ಲಿ ಪೆಟ್ಟಿಗೆಯಲ್ಲಿ ಏನಿದೆಯೋ ನೋಡದೆ ತೆಗೆದುಕೊಂಡು ಓಡಿದ್ದಾರೆ."

"ಆಯಿತು. ಅರ್ಧ ಚಿನ್ನವನ್ನು ಈಗಲೇ ದಾನವಾಗಿ ಕೊಡೀರಿ."

"ಅಷ್ಟೇನೆ ನನ್ನ ಚಿನ್ನ."

ಕಲಾರಂಗ

ಕಾಶ್ಮೀರದ ವಿಶ್ವವಿಖ್ಯಾತ ಹಸ್ತಕಲೆ

ಶ್ರೀನಗರ—ಜಮ್ಮು ಕಾಶ್ಮೀರದ ಹೃದಯವೆಂದು ಹೇಳಿದರೆ ಅದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಶಂಕರಾಚಾರ್ಯ ದೇವಾಲಯ ಮತ್ತು ಗಿರಿಯ ತುದಿಯಲ್ಲಿರುವ ಹರಿ ಪರ್ವತ ಕೋಟೆ ಇವು ಈ ನಗರದ ಪುರಾತತ್ವವನ್ನು ಸಾರಿ ಹೇಳುತ್ತಿವೆ. ದಾಲ್ ಸರೋವರದ ದಂಡೆಯಲ್ಲಿರುವ ವಿಶಾಲವಾದ ನಾಲ್ಕು ಮಾರ್ಗಗಳ ಬೀದಿ, ನಗರದ ಆಧುನಿಕತೆಯ ಸಂಕೇತವೆನಿಸಿದೆ.

ಹರಿ ಪರ್ವತದ ಅಡಿಯಲ್ಲಿರುವ ಪಟ್ಟಣದ ಪ್ರದೇಶದಲ್ಲಿಯೇ ಈ ಹಿಂದೆ ತಮ್ಮ ಹಸ್ತಕುಶಲ ಕಲೆಗಾಗಿ ವಿಶ್ವ ವಿಖ್ಯಾತರಾದ ಕಾಶ್ಮೀರಿ ಕಲಾವಿದರು ವಾಸಿಸುತ್ತಿದ್ದರು. ಅವರು ತಮ್ಮ ಕಲಾ ನೈಪುಣ್ಯವನ್ನು ತಮ್ಮ ಪೂರ್ವಜರಿಂದ ಪಡೆದರು. ಕಾಶ್ಮೀರದ ಈ ಕಲಾವಿದರು ತಯಾರಿಸಿದ ಸುಂದರವಾದ ಕಲಾಕೃತಿಗಳಿಗೆ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆಯಿದ್ದಿತಾದರೂ ಇವುಗಳಿಗೆ ದೊರೆಯುತ್ತಿದ್ದ ಪ್ರತಿಫಲ ಅತ್ಯಲ್ಪವಾಗಿತ್ತು. ಕಲೆಗೆ ಉಚಿತವಾದ ಪುರಸ್ಕಾರ ದೊರೆಯದ್ದರಿಂದಾಗಿ ಖ್ಯಾತ ಕಲಾವಿದರಾಗಬಹುದಾಗಿದ್ದ ಅನೇಕರು ಅಜ್ಞಾತರಾಗಿಯೇ ಬದುಕಿ ಹೋದರು.

ಹರಿಪರ್ವತ ಕಾಶ್ಮೀರದ ಹಸ್ತ ಕುಶಲ ಕಲಾವಿದರ ಅಂದು ಮತ್ತು ಇಂದಿನ ಸ್ಥಿತಿಗಳಿಗೆ ಸಾಕ್ಷಿಯಾಗಿದೆ. ಇಂದು ಕಾಶ್ಮೀರಿ ಕಲಾವಿದರ ಜೀವನ ಉತ್ತಮಗೊಂಡಿದೆ. ಅವರ ಕಲೆಗೆ, ಉಚಿತವಾದ ಪುರಸ್ಕಾರ ದೊರೆಯುತ್ತಿದೆ. ಅವರು ಉತ್ತಮ ಸಾಧನಗಳನ್ನು ಬಳಸಿಕೊಂಡು ಶ್ರೇಷ್ಠ ಕಲಾಕೃತಿಗಳನ್ನು ತಯಾರಿಸುತ್ತಿದ್ದಾರೆ. ಇದರಿಂದಾಗಿ ವರಮಾನವು ಹೆಚ್ಚಿದೆ. ಕಾಶ್ಮೀರದ ಹಸ್ತಕುಶಲ ಕಲಾವಿದನ ಮನೆ ಇಂದು ಸುಖ—ಸಂತೋಷಗಳ ಬೀಡಾಗಿದೆ.

ಕಾಶ್ಮೀರದ ಹಸ್ತಕುಶಲ ಕಲಾವಿದನು ತಾನು ತಯಾರಿಸಿದ ವಸ್ತುಗಳನ್ನು ನೇರವಾಗಿ ಕಲಾಕೃತಿಗಳ ಸಂಗ್ರಹಾಲಯಕ್ಕೇ ಮಾರುತ್ತಾನೆ. ಈ ಸಂಗ್ರಹಾಲಯವು ರಾಜ್ಯ ಸರಕಾರದ ಪರವಾಗಿ ಕಲಾಕೃತಿಗಳನ್ನು ಕೊಳ್ಳುವ ಸಂಸ್ಥೆಯಾಗಿದೆ.

ಈ ಕಲಾಕೃತಿಗಳ ಸಂಗ್ರಹಾಲಯದ ಪ್ರಧಾನ ಕಚೇರಿ ಸಿವಿಲ್ ಲೈನ್‌ನಲ್ಲಿದೆ. ಹಿಂದೆ ಈ ಕಟ್ಟಡದಲ್ಲಿ ಬ್ರಿಟಿಷ್ ರೆಸಿಡೆಂಟ್ ವಾಸಿಸುತ್ತಿದ್ದರು. ಕಟ್ಟಡದ ವಿಶಾಲವಾದ ಆವರಣದಲ್ಲಿ ಬೆಳೆದಿರುವ ಅಸಂಖ್ಯಾತ ಹೂಗಳನ್ನು ಕಾಶ್ಮೀರದ ಕಲಾವಿದರೇ ಬೆಳೆಸಿದ್ದಾರೆ. ಇದು ಹೂಗಳ ಬಗ್ಗೆ ಅವರಿಗಿರುವ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ. ಸ್ವಭಾವತಃ ಕಾಶ್ಮೀರಿಗಳು ಪ್ರಕೃತಿ ಸೌಂದರ್ಯ ಪ್ರಿಯರು. ಶ್ರೀನಗರದಲ್ಲಿ ಕಲಾಕೃತಿಗಳ ವಿನ್ಯಾಸ ಸಂಬಂಧವಾದ ತರಬೇತಿ ಕೇಂದ್ರವಿದೆ. ಈ ಕೇಂದ್ರವು ಕಲಾವಿದರ ಪ್ರತಿಭೆಯ ವಿಕಾಸದಲ್ಲಿ ನೆರವಾಗುತ್ತಿದೆ.

ಕಾಶ್ಮೀರದಲ್ಲಿ ಇಂದು ಆಕಾಶನೀಲಿ ಬಣ್ಣದ ತಿಳಿಯ ಕಲಾಕೃತಿಗಳನ್ನು ಮರದ ಕೆತ್ತನೆಗಳನ್ನು ಕಸೂತಿ ಮತ್ತು ರತ್ನಗಂಬಳಿಗಳನ್ನು ತಯಾರಿಸುವ ೬೪ ಸಂಸ್ಥೆಗಳಿವೆಯೆಂದು ಇತ್ತೀಚಿನ ಸಮೀಕ್ಷೆಯಿಂದ ತಿಳಿದು ಬಂದಿದೆ. ಈ ಸಂಸ್ಥೆಗಳು ೧೯೭೦ ಬಗೆಯ ಸುಧಾರಿಸಿದ ವಿನ್ಯಾಸಗಳನ್ನು ಅಳವಡಿಸಿಕೊಂಡು ೧೧೩ ೦೦೦ ಕಲಾಕೃತಿಗಳನ್ನು ಸಿದ್ಧಗೊಳಿಸಿವೆ. ಈ ಕಲಾಕೃತಿಗಳ ಒಟ್ಟು ಮೌಲ್ಯ ೨೦ ಲಕ್ಷ ರೂ. ಗಳಷ್ಟು. ತಾಳ್ಮೆಯಿಂದ ಕೂಡಿದ ಪ್ರಯೋಗಶೀಲತೆ, ಮತ್ತು ಸಂಶೋಧನೆಗಳಿಂದಾಗಿ ಕಾಶ್ಮೀರದ ಹಸ್ತಕುಶಲಕಲೆಗಳ ವಿನ್ಯಾಸದಲ್ಲಿ ಅದ್ಭುತ ಪರಿವರ್ತನೆಯಾಗಿವೆ. ಅಖಿಲ ಭಾರತ ಹಸ್ತಕುಶಲ ಕಲಾ ಮಂಡಳಿಯವರು ಈ ವರ್ಷ ಶ್ರೀನಗರದ ೬೦ ಬಗೆಯ ವಿನ್ಯಾಸಗಳುಳ್ಳ ವಸ್ತುಗಳಿಗಾಗಿ ಬೇಡಿಕೆ ಸಲ್ಲಿಸಿದೆ.

ಕಾನಿಶಾಲ್ ಕಾಶ್ಮೀರದ ಹಸ್ತಕುಶಲ ಕಲಾ ಪರಂಪರೆಯಲ್ಲಿಯೇ ಒಂದು ಹೆಮ್ಮೆಯ ಸಾಧನೆಯೆನಿಸಿದೆ. ಈ ಕೈಗಾರಿಕೆಯು ರಾಜ್ಯದಲ್ಲಿ ಸಹಸ್ರಾರು ಕಲಾವಿದರಿಗೆ ಉದ್ಯೋಗ ನೀಡಿತ್ತು. ಕೆಲವು ವರ್ಷಗಳ ಹಿಂದೆ ಕಾನಿಶಾಲ್ ಕೈಗಾರಿಕೆ ದುರ್ಬಲವಾಗುವ ಸ್ಥಿತಿಯನ್ನು ತಲುಪಿತು. ಸಕಾಲಿಕ ನೆರವಿನಿಂದಾಗಿ ಈ ಕೈಗಾರಿಕೆ ಇಂದು ಪುನರುಜ್ಜೀವನಗೊಂಡಿದೆ. ಕಾನಿಹಾಮಾದಲ್ಲಿ ಈ ಕಲೆಯ ತರಬೇತಿ ಕೊಡುವ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಗುಲಾಮ್ ಖಾದಿರ್ ಲಾಲಾ ಅವರು ಈ ಕೇಂದ್ರದ ಮಾರ್ಗದರ್ಶಕರಾಗಿದ್ದಾರೆ. ಲಾಲಾ ಅವರು ಶ್ರೇಷ್ಠ ಕಲಾವಿದರಾಗಿದ್ದಾರೆ. ಅವರಿಗೆ ಈ ವರ್ಷ ರಾಷ್ಟ್ರೀಯ ಪ್ರಶಸ್ತಿ ದೊರಕಿದೆ.

ಲಾಲಾ ಅವರ ಕಲಾಸಿದ್ಧಿ ಅವರ ನಿರಂತರ ತಪಸ್ಸಿನ ಫಲ. ಗುರುಗಳಾದ ತಾಲೀಮ್ ಅವರಿಂದ ಲಾಲಾಜಿ ವರ್ಣ ವಿನ್ಯಾಸ ಮತ್ತು ಹಸ್ತಕುಶಲ ಕಲೆಯ ಮರ್ಮವನ್ನು ಅಭ್ಯಸಿಸಿದರು. ಹಿಂದೆ ತಮ್ಮ ಕಲಾಕೃತಿಗಳನ್ನು ಮಾರಲು ಪಟ್ಟ ಕಷ್ಟವನ್ನು ಅವರು ಈಗಲೂ ನೆನೆಸಿಕೊಳ್ಳುತ್ತಾರೆ. ಆಗ ಅವರಿನ್ನೂ ಚಿಕ್ಕವರು. ಇಂದು ವೃದ್ಧರಾಗಿದ್ದರೂ ಅವರ ಉತ್ಸಾಹಕ್ಕೆ ಇತಿ—ಮಿತಿಗಳಿಲ್ಲ.

ಕಾಶ್ಮೀರದ ರತ್ನಗಂಬಳಿ ತಯಾರಿಸುವ ಕೈಗಾರಿಕೆಯೂ ವಿದೇಶಿ ವಿನಿಮಯ ಗಳಿಸುವ ಕೈಗಾರಿಕೆಯಾಗಿದೆ. 'ನಮದಾ' ಮತ್ತು ಇತರ ಹಸ್ತ ಕುಶಲಕಲಾ ವಸ್ತುಗಳು ಸಾಕಷ್ಟು ವಿದೇಶಿ ವಿನಿಮಯವನ್ನು ತರುತ್ತಿವೆ. ಈ ಕಲಾಕೃತಿಗಳಿಂದ ಪ್ರತಿ ವರ್ಷ ಆರು ಕೋಟಿ ರೂ. ವಿದೇಶಿ ವಿನಿಮಯ ಸಂಗ್ರಹವಾಗುತ್ತಿದೆ.

ಕಾಶ್ಮೀರದಲ್ಲಿ ಕುಂಭಗಾರಿಕೆಯ ಸುಧಾರಣೆಗಾಗಿ ಯತ್ನಗಳು ನಡೆದಿವೆ. ಈ ಕೈಗಾರಿಕೆಯ ಸ್ಥಿತಿಗಳ ಸಮೀಕ್ಷೆಯೊಂದನ್ನು ನಡೆಸಲಾಗುವುದಲ್ಲದೆ, ಅನೇಕ ಪ್ರಯೋಗಗಳನ್ನು ಕೈಗೊಳ್ಳಲಾಗುವುದು. ಈ ಕಾರ್ಯದಲ್ಲಿ ಕಲ್ಕತ್ತಾದ ಕುಂಭಕಲಾ ಪ್ರವೀಣರ ನೆರವನ್ನು ಪಡೆಯಲಾಗಿದೆ.

ಆಭರಣಗಳು, ಮತ್ತು ಮರದ ಕೆತ್ತನೆಯ ಕಲಾ ವಸ್ತುಗಳ ರಫ್ತು ಅಭಿವೃದ್ಧಿಗಾಗಿ ಉತ್ತೇಜನ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ವಸ್ತುಗಳ ಉತ್ಪಾದನೆಯ ಗುಣಾಂಶ ಮತ್ತು ಮಟ್ಟವನ್ನು ಸುಧಾರಿಸಲು ಅನೇಕ ಕ್ರಮಗಳನ್ನು ಕೈಗೊಂಡಿವೆ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ-ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧

Edited, Printed & Published by K. H. Shetty at the Navayuga Press, Udipi, S. India.

నవయుగ

19—1—1967



NAVAYUGA

౧౦
పైస

ಕಥಾ ಪಸಂಚೆ

ಕಳ್ಳನ ಕುಮಾರ

ಕಥೆಗಾರರು:
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್

ತನ್ನ ತಂದೆಯು ಜೈಲುವಾಸಕ್ಕೆ ತೆರಳುತ್ತಿರುವಾಗ ಕೊಚ್ಚನ್ನಿಗೆ ಎರಡೇ ವರ್ಷ. ಜೈಲಿನಿಂದ ಮರಳಿ ಬಂದಾಗ ಆತನಿಗೆ ಐದು ವರ್ಷವಾಗಿತ್ತು. ರಾತ್ರಿ ಒಂದು ಗಂಟೆಯಾಗಿರಬಹುದು. ಜಗತ್ತೇ ನಿದ್ರಾದೇವಿಯ ಮಡಿಲಲ್ಲಿರುವಂತಿದೆ. ಕೊಚ್ಚನ್ನಿಗೂ ಗಾಢ ನಿದ್ರೆಯು ಆವರಿಸಿತ್ತು. ಅಷ್ಟರಲ್ಲಿಯೇ ಬಿಸಿಯಾದ 'ಮುದ್ದು' ಅವನನ್ನು ಎಚ್ಚರಗೊಳ್ಳುವಂತೆ ಮಾಡಿತು. "ಮಗನೇ, ಮುದ್ದು ಮಗನೇ' ಎನ್ನುತ್ತಾ ಎದುರಿಗೆ ತನ್ನ ತಂದೆಯು ಕುಳಿತಿರುವುದು ಗೋಚರಿಸಿತು. ಕೊಚ್ಚನ್ನಿಗೆ ಆಶ್ಚರ್ಯದೊಂದಿಗೆ, ನಗುವೂ ಬಂತು. ಸಂತೋಷದಿಂದ "ಅಪ್ಪಾ, ನೀವು ಇಷ್ಟು ದಿನ ಎಲ್ಲಿದ್ದಿರಿ?" ಎಂದು ಕೇಳಲು ಆ ತಂದೆಗೆ ಏನು ಉತ್ತರ ಕೊಡಲೂ ತೋರಲಿಲ್ಲ.

ಮರುದಿನ ಆತನು ಶಾಲೆಗೆ ಹೋದಾಗ ತನ್ನ ಗೆಳೆಯರಿಗೆಲ್ಲಾ "ನನ್ನ ತಂದೆಯು ಬಂದಿರುವರು" ಎಂದು ಹೇಳುತ್ತಾ ಕುಣಿದಾಡಿದನು. ತನ್ನ ತಂದೆಯು ಬಂದುದು ಆತನಿಗೆ ಮಹಾ ಘಟನೆಯಾಗಿತ್ತು. ಆಗ ಅವನ ಗೆಳೆಯರ ಪೈಕಿ ಬಾಲಕನೊಬ್ಬನು ಮುಂದೆ ಬಂದು– "ಹೌದು ಅವನು ಬಂದಿದ್ದಾನೆ, ಆದರೆ ಸ್ವಲ್ಪ ದಿನಗಳೊಳಗೇ ಮಾಯವಾಗುವನು" ಎಂದನು.

ಗುಡುಗೂ—ಮಿಂಚು ಒಮ್ಮೆಲೆ ಎರಗಿದಂತಾಗಿ ಕೊಚ್ಚನ್ನಿಗೆ ವಿಪರೀತ ಸಿಟ್ಟು ಬಂದಿತು. ಕೂಡಲೇ ಮುಷ್ಟಿಯನ್ನು ಬಿಗಿಹಿಡಿದು "ಬಾಯಿಮುಚ್ಚು! ಸಾಕು ನಿನ್ನ ಮಾ...." ಎಂದು ಹೇಳುತ್ತಿರುವಾಗಲೇ ಉಳಿದ ಹುಡುಗರೆಲ್ಲ ಕೂಡಿದರು. ಆದರೆ ಕೊಚ್ಚನ್ನಿಯು ಆ ಹುಡುಗರನ್ನೆಲ್ಲಾ ಹೊಡೆದು, ಪರಚಿ ಅಪ್ಪಳಿಸಿ ಗಾಯಗೊಳಿಸಿದನು. ಅವರೆಲ್ಲರ ಚರ್ಮವು ಸುಲಿದು ರಕ್ತ ಸುರಿಯಿತು.

ದೂರು ಉಪಾಧ್ಯಾಯರಲ್ಲಿಗೆ ಹೋಯಿತು. ಆ ಜಗಳವೂ ಶಾಲೆಯ ಆವರಣದೊಳಗೇ ನಡೆದುದರಿಂದ ಉಪಾಧ್ಯಾಯರು ಎಲ್ಲ ವಿಚಾರಗಳನ್ನೆಲ್ಲಾ ಅವರಿಂದ ಕೇಳಿದರು. "ನನ್ನ ತಂದೆಯವರು ನಿನ್ನೆ ತಾನೇ ಜೈಲಿನಿಂದ ಬಂದುದು; ಇವನು ಹೇಳುವನೇನೆಂದರೆ ನನ್ನ ತಂದೆಯು ಪುನಃ ಜೈಲಿಗೆ ಹೋಗುವರಂತೆ!" ಎಂದು ಕೊಚ್ಚನ್ನಿಯು ದೂರಿತ್ತನು.

ತಾನು ಹೇಗೆ ಮಾತನಾಡಬೇಕೆಂದು ಆ ಕಿಲಾಡಿ ಹುಡುಗನು ಮೊದಲೇ ನಿರ್ಧರಿಸಿದ್ದನು. 'ಸಾರ್, ಈ ದಿನ ಬೆಳಗ್ಗೆ ನನ್ನ ಮನೆಯಲ್ಲಿ ತಂದೆ ತಾಯಿಯಂದಿರು ಈ ಕೊಚ್ಚನ್ನಿಯ ತಂದೆ ಪುನಃ ಜೈಲಿಗೆ ಹೋಗುವನೆಂದು ಹೇಳಿದ್ದರು. ಅದನ್ನೇ ನಾನು ಇಲ್ಲಿ ಇವನೊಂದಿಗೆ ಹೇಳಿದೆ' ಎಂದನು.

ಉಪಾಧ್ಯಾಯರು ಒಂದು ನಿರ್ಧಾರಕ್ಕೆ ಬಂದರು. ಸಣ್ಣ ವಿಚಾರದಲ್ಲಿ ಕೊಚ್ಚನ್ನಿಯು ಎಲ್ಲಾ ಮಕ್ಕಳನ್ನು ಪರಚಿ ಗಾಯಗೊಳಿಸಿದುದಕ್ಕಾಗಿ ಅವನಿಗೆ ಕಠಿಣ ಶಿಕ್ಷೆ ವಿಧಿಸಿದರು. ಸರಿಯಾದ ಮೂರು ಛಡಿಗಳನ್ನು ಕೊಟ್ಟರು.

ಪೆಟ್ಟಿನ ನೋವು, ಅಪಮಾನ— ಇತ್ಯಾದಿಗಳಿಂದ ಕೊಚ್ಚನ್ನಿಯು ಅಳುತ್ತಲೇ ಮನೆ ಸೇರಿದನು.

ಕೊಚ್ಚನ್ನಿಯ ತಂದೆಯ ಹೆಸರು ನೀಲಕಂಠ. ನೀಲಕಂಠನು ತನ್ನ ಮಗನು ಅಳುತ್ತಾ ಬಂದುದನ್ನು ಕಂಡು 'ಏಕೆ ಅಳುವೆ' ಯೆಂದು ವಿಚಾರಿಸಿದನು. ಆಗ ಆತನು ಅಳುತ್ತಾ 'ಅಪ್ಪಾ, ನೀವು ಪುನಃ ನನ್ನನ್ನು ಬಿಟ್ಟು ಹೋಗುವಿರೇ?' ಎನ್ನಲು, 'ಇಲ್ಲ ಮಗನೇ, ಏಕೆ ಅಳುತ್ತಿರುವೆ?' ಎನ್ನುತ್ತಾ ನೀಲಕಂಠನು ತನ್ನ ಮಗನನ್ನು ಬಿಗಿದಪ್ಪಿದನು.

o o o

ಮಥಾಯ್ ಶ್ರೀಮಂತನು. ಆಸ್ತಿಪಾಸ್ತಿಗಳೆಲ್ಲವೂ ಅವನಿಗಿತ್ತು. ಸುಪ್ರಸಿದ್ಧ ಕಳ್ಳನು ಜೈಲಿನಿಂದ ಬಂದಿರುವ ವಿಚಾರ ತಿಳಿದು ತುಂಬಾ ಭಯಗೊಂಡನು. ಹಣವಿದ್ದರೆ ಕಳ್ಳರ ಚಿಂತೆಯಷ್ಟೇ ಇದೆ. ತನ್ನ ಹೆಂಡತಿಯೊಂದಿಗೆ ಅಂದು ಬೆಳಗ್ಗೆ ನೀಲಕಂಠನ ವಿಚಾರವಾಗಿ ಮಾತನಾಡಿದ್ದನು.

ಆ ವಿಚಾರಗಳೆಲ್ಲವನ್ನು ಅವರ ಮಗ ಶಾಲೆಗೆ ಹೋಗುವ ಹುಡುಗ ಕುರಿಯನ್ ಸವಿಸ್ತಾರವಾಗಿ ಕೇಳಿಕೊಂಡನು. ತನ್ನ ತಂದೆ ತಾಯಿಯಂದಿರು ಆ ನೀಲಕಂಠನು ಪುನಃ ಜೈಲಿಗೇ ಹೋಗುವನೆಂದು ಹೇಳಿದುದನ್ನೂ ಅವನನ್ನು ಜೈಲಿಗೇ ಕಳುಹಿಸಲು ತಕ್ಕ ಏರ್ಪಾಡು ಮಾಡಬೇಕೆಂದು ನಿರ್ಧರಿಸಿದುದನ್ನೂ ಕುರಿಯನ್ ಕೇಳಿದ್ದನು. ಅದನ್ನೇ ಶಾಲೆಯಲ್ಲಿ ಬಂದಾಗ ಕೊಚ್ಚನ್ನಿಗೆ ಹೇಳಿದನು. ಆ ಮಾತಿನಿಂದಲೇ ಕೊಚ್ಚನ್ನಿಗೂ ಕುರಿಯನ್‌ನಿಗೂ ಜಗಳವಾಗಿ ಬಿಟ್ಟಿತ್ತು. ಕುರಿಯನ್‌ನ ಮುಖಗಳಿಂದ ರಕ್ತವು ಧಾರಾಕಾರವಾಗಿ ಸುರಿಯುತ್ತಿತ್ತು.

ತನ್ನ ಮಗನು ಗಾಯಗಳಿಂದಲೂ, ರಕ್ತ ಸುರಿಸಿಕೊಂಡು ಬರುವುದನ್ನು ಕಂಡು ಮಥಾಯ್‌ನು ಮನಸ್ಸಿನಲ್ಲಿ ನಸುನಗಿದನು. ಕೋಪದಿಂದ ಕಿಡಿಗಾರಿದನು. ಎಂದಾದರೊಂದು ದಿನ ಆತನಿಂದ ತನಗೆ ಅಪಾಯವಿದೆಯೆಂದು ಭಾವಿಸಿದ ಮಥಾಯ್— "ಸುಪ್ರಸಿದ್ಧ ಕಳ್ಳನು ಜೈಲಿನಿಂದ ಹಿಂದೆ ಬಂದಿರುವುದು ಊರಿನ ಜನರಿಗೆಲ್ಲಾ ಭಯವನ್ನು ತಂದೊಡ್ಡಿದೆ. ಅವನಿಂದ ತುಂಬಾ ಅನ್ಯಾಯವಾಗುತ್ತಿದೆ"— ಇತ್ಯಾದಿ ಇತ್ಯಾದಿಗಳನ್ನೆಲ್ಲಾ ಬರೆದು, ಆ ಊರಿನ ನಾಗರಿಕರೆನಿಸಿದ ಇಪ್ಪತ್ತು ಮಂದಿಯ ಸಹಿಯನ್ನು ಹಾಕಿಸಿ, ಒಂದು ಉದ್ದವಾದ ಮನವಿಯನ್ನು ತಯಾರಿಸಿ ಪೋಲೀಸ್ ಆಫೀಸರರಿಗೆ ಕಳುಹಿಸಿದನು. ಕ್ರಮದಂತೆಯೇ ಪೋಲೀಸರು ಅವನನ್ನು ಪುನಃ ಬಂಧಿಸಿ ಜೈಲಿಗೇ ಒಯ್ದರು.

ಹೃದಯ ವೇದನೆಯಿಂದ ಕೊಚ್ಚನ್ನಿಯು ಅಸಹಾಯಕನಾಗಿ ಬೊಬ್ಬಿಟ್ಟನು. ಇದು ಕಲ್ಲೂ ಕರಗುವಂತಿತ್ತು. "ಅಮ್ಮಾ ಅಪ್ಪನು ಪುನಃ ಹೋದರೇ...." ಎಂದು ಅಳುತ್ತಾ ಕೇಳಿದನು. ಅವನ ತಾಯಿ ತನ್ನ ಮಗನಿಗೆ ಏನು ಹೇಳಿ ಸಮಾಧಾನ ಪಡಿಸಿಯಾಳು?

"ಮಗೂ, ನಿನ್ನ ತಂದೆ ಬೇಗನೇ ಬರುವರು" ಎಂದಷ್ಟೇ ಹೇಳಿದಳು.

"ಪುನಃ ಏಕೆ ಅವರೆಲ್ಲಾ ನನ್ನ ತಂದೆಯನ್ನು ಕರೆದುಕೊಂಡು ಹೋದುದು?" ಮುಗ್ಧ ಹುಡುಗನ ಪ್ರಶ್ನೆಯಾಗಿತ್ತು.

'ಅದು ವಿರೋಧಿಗಳು ಮಾಡಿದ ಕೆಲಸ' ಎಂದು ಅವನ ತಾಯಿ ಹೇಳಿದ್ದಳು ಅಷ್ಟೆ.'

ಮರುದಿನ ಶಾಲೆಯಲ್ಲಿ ಕುರಿಯನ್ನನ್ನು ಕಂಡಾಗ ಕೊಚ್ಚನ್ನಿಯು ತನ್ನ ತಲೆಯನ್ನು ತಗ್ಗಿಸಿದನು. ಕುರಿಯನ್ ತನ್ನ ತಲೆಯನ್ನು ಮೂಗಿನ ನೇರಕ್ಕೇ ಇರಿಸಿ ಠೀವಿಯಲ್ಲಿಯೇ ಅವನ ಇದಿರು ನಡೆಯುತ್ತಾ ಬಂದನು. ಆದರೆ ಆತನು ಕೊಚ್ಚನ್ನಿಗೆ ಏನೂ ಹೇಳಲಿಲ್ಲ. ಹಿಂದೆ ನಡೆದ ಜಟಾಪಟಿಯಿಂದಾದ ಗಾಯಗಳು ಕುರಿಯನ್‌ನ ಮುಖದಲ್ಲಿ ಅಚ್ಚಳಿಯದೆ ಉಳಿದು ಹೆದರಿಸಿ ಬಿಟ್ಟಿದ್ದುವು.

o o o

ದೂರದ ಮನೆಯೊಂದರಿಂದ ರೇಡಿಯೋದಿಂದ ಹಾಡೊಂದು ಕೇಳಿಬರುತ್ತಿತ್ತು—

......ಜಗದಲ್ಲಿ ಕುಳಿತುಕೊಂಡು ಕಲ್ಲುದೊಣ್ಣೆ ಹಿಡಿದು ಕೊಂಡು | ಕಳ್ಳತನವ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ || ತುಂಬಾ ಹಳ್ಳಕ್ಕೆ ಏರಿ ಮಂದಿ ಮೋರ್ಬಲಗೊಡಿ | ಚಂದದಿಂದ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ || ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ ||...

ಕೊಚ್ಚನ್ನಿಗೆ ಮೇಲಿನ ಹಾಡು ಕೇಳಿಸಿತು. ಹೌದು, ತನ್ನ ತಂದೆ ಕಳ್ಳ. ನನ್ನ ತಾಯಿ ಕಳ್ಳನ ಹೆಂಡತಿ, ತಾನು ಕಳ್ಳನ ಮಗ—ಹೀಗೆ ಆ ಊರಿನ ಜನರೆಲ್ಲರೂ ಹೇಳುತ್ತಿದ್ದರು. ತನ್ನ ತಂದೆಯು ಕಳ್ಳತನದ ದ್ರವ್ಯದಿಂದಲೇ ಅವರ ಜೀವನ ಸಾಗುತ್ತಿದೆಯೆಂದು ಜನರು ಹೇಳತೊಡಗಿದ್ದರು. ಪಾಪ ಮುಗ್ಧ ಹುಡುಗನು ದುಃಖದಲ್ಲಿ ಮುಳುಗಿದನು. ಎಲ್ಲಾ ಹೊಟ್ಟೆಗಾಗಿ, ಎಂಬುದು ಆ ಚಿಕ್ಕ ಹುಡುಗನಿಗೆ ದೃಢವಾಯಿತು.

"ಅಮ್ಮಾ, ಪಪ್ಪುವಿನ ತಂದೆಗೆ ಉದ್ಯೋಗವಿದೆ. ನಾರಾಯಣನ ತಂದೆಗೆ ಉದ್ಯೋಗವಿದೆ. ಕುರಿಯನ್‌ನ ತಂದೆಗೆ ಭತ್ತ, ತೆಂಗಿನ ತೋಟಗಳಿವೆ, ಆದರೆ ನಮಗೇ......?'

"ನಮಗೆ ತಂದೆಯೇ ರಕ್ಷಕರು.'

"ಹೇಗೆ?'

ತಾಯಿಗೆ ಇದರಿಂದ ಏನು ಉತ್ತರಿಸಲಿಕ್ಕೂ ಹೊಳೆಯಲಿಲ್ಲ. "ನಿನ್ನ ಕೆಲಸ ನೀನು ನೋಡಿಕೋ" ಎಂದಳು. ಕೊನೆಗೆ ಕೊಚ್ಚನ್ನಿಯು ಸುಮ್ಮನಾಗಬೇಕಾಯಿತು. ತನ್ನನ್ನೇ ತಾನು "ಕಳ್ಳನ ಮಗ, ಕಳ್ಳನ ಮಗ" ಎಂದು ಹೇಳತೊಡಗಿದನು. ಸುತ್ತಲಿನ ಮರಗಳು, ಕಟ್ಟಡಗಳು ಎಲ್ಲವೂ ತನ್ನನ್ನು ಕಳ್ಳನ ಮಗನೆಂದು ಕರೆಯುತ್ತಿರುವಂತೆ ಭಾಸವಾಯಿತು.

ನೀಲಕಂಠನಿಗೆ ಮೂರು ವರ್ಷಗಳ ತನಕ ಜೈಲು ವಾಸವನ್ನು ವಿಧಿಸಿದ್ದರು. ಜೀವನ ನಿರ್ವಹಿಸಲು ಕೊಚ್ಚನ್ನಿಯ ತಾಯಿಯು ಚಾಪೆ ಹೆಣೆಯುವುದು, ಬೀಡಿ ಕಟ್ಟುವುದು—ಇತ್ಯಾದಿಗಳನ್ನು ಮಾಡುತ್ತಿದ್ದಳು. ಶಾಲೆಗೆ ಹೋಗುತ್ತಿರುವ ಕೊಚ್ಚನ್ನಿಗೆ ಕೆಲವಾರು ವೇಳೆಗಳಲ್ಲಿ ಮಧ್ಯಾಹ್ನ ಊಟವಿಲ್ಲ. ಹರಿದ ಪಂಟು, ಚಿಂದಿಯಾದ ಶರ್ಟು, ಸರಿಯಾಗಿ ಪುಸ್ತಕಗಳಿಲ್ಲ. ಹೀಗೆ ಬಹಳ ಕಷ್ಟದಿಂದ ಜೀವನ ಸಾಗುತ್ತಿತ್ತು. ಮನೆಯ ಮಾಡಿಗೆ ಸರಿಯಾದ ಹೊದಿಕೆಯಿಲ್ಲ. ಮಳೆಗಾಲದಲ್ಲಿ ಅಲ್ಲಲ್ಲಿ ಸೋರುತ್ತಿತ್ತು.

(ಹನ್ನೊಂದನೇ ಪುಟನೋಡಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಜುಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮೇಲಿನಿಂದ ತೆಗೆದ ಭೂಮಿಯ ಛಾಯಾಚಿತ್ರ

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೧	೧೯—೧—೧೯೬೭	No. 21

ಜನ ಮೂರ್ಖರಲ್ಲ

ಸಾರ್ವತ್ರಿಕ ಚುನಾವಣೆಗಳಿಗಿನ್ನುಳಿದಿರುವುದು ಬರಿಯ ಒಂದು ತಿಂಗಳು ಮಾತ್ರ. ನಾಮಪತ್ರ ಸಲ್ಲಿಸುವ ಕಾರ್ಯಕ್ರಮವಿದೀಗ ಆರಂಭವಾಗುತ್ತಿದೆ. ವಿವಿಧ ರಾಜಕೀಯ ಪಕ್ಷಗಳು ತಂತಮ್ಮ ಪಕ್ಷೀಯ ಉಮೇದ್ವಾರಿಗರನ್ನು ಈಗಾಗಲೇ ಆರಿಸಿಕೊಂಡಿವೆ. ನಾಮಪತ್ರವೂ ಇಷ್ಟರಲ್ಲೇ ಸಲ್ಲಿಸಲಾಗುತ್ತಿದೆ. ಇವರೆಡೆಯಲ್ಲಿ ಕೆಲ ಸ್ವತಂತ್ರ ವ್ಯಕ್ತಿಗಳೂ ಸ್ಪರ್ಧಿಸುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ. ಪಕ್ಷೀಯ ಪದ್ಧತಿಯಲ್ಲಿ ಆಡಳಿತ ನಡೆಯುವ ಪ್ರಜಾಪ್ರಭುತ್ವ ಭಾರತದಲ್ಲಿ ಈ ಬಗೆಯ ಸ್ವತಂತ್ರರಿಗೆ ಯಾವುದೇ ಸ್ಥಾನಮಾನವಿರುವುದಿಲ್ಲವಾದರೂ ಹೀಗೆ ಸ್ಪರ್ಧಿಸುವವರ ಸಂಖ್ಯೆಯೂ ಕಡಿಮೆಯೆನ್ನುವಂತಿಲ್ಲ. ವಿವಿಧ ಪಕ್ಷಗಳಲ್ಲಿ ಟಿಕೇಟು ಸಿಗದೆ ನಿರಾಶರಾದಾಗ ಹೀಗೆ ಪಕ್ಷಾತೀತವಾಗಿ ಸ್ಪರ್ಧಿಸುವುದುಂಟು. ಶ್ರೀ ವಿ. ಕೆ. ಕೃಷ್ಣ ಮೆನನ್ನರಂಥವರೂ ಈ ವ್ಯಾಮೋಹಕ್ಕೆ ಹೊರಗಾಗಿಲ್ಲ ಮತ್ತು ಉಳಿದವರ ಪಾಡೇನು? ಅಂತೂ ಈ ಬಾರಿಯ ಚುನಾವಣೆಯು 'ಬಿಸಿ' ತಡವಾಗಿಯೇ ಆರಂಭವಾಗುತ್ತಿದ್ದರೂ, ಬೇಗನೇ ತಣಿಯುತ್ತಿದೆ. ಇದು ಸಂತೋಷವೇ. ಏಕೆಂದರೆ, ಚುನಾವಣೆಗಳು ಪ್ರಜಾಪ್ರಭುತ್ವದ ಬುನಾದಿಗಳೆಂಬುದು ನಿಜವಾದರೂ ಭಾರತದಲ್ಲಿ ವಿಷಬೀಜ ಬಿತ್ತನೆಗೆ ವಸಂತ ಕಾಲವೂ ಇದೇ ಆಗಿದೆ. ಈ ಬೀಜ ಮೊಳಕೆ ಬರುವುದರೊಳಗೆ ಗ್ರೀಷ್ಮಕಾಲ ಬಂದಿತೆಂದರೆ, ವಿಷವೃಕ್ಷ ಮುರುಟಿ ನಿರ್ನಾಮವಾಗಲು ಸಹಾಯವಾಗುವುದು.

ಕಳೆದ ಮೂರು ಚುನಾವಣೆಗಳಲ್ಲಿಯೂ ಕಾಂಗ್ರೆಸ್ಸು ರಾಜ್ಯಗಳಲ್ಲೂ ಕೇಂದ್ರದಲ್ಲೂ ಪ್ರಚಂಡ ಬಹುಮತ ಪಡೆದಿದೆ. ಒರಿಸ್ಸಾ, ಕೇರಳ ರಾಜ್ಯಗಳು ಒಮ್ಮೊಮ್ಮೆ ಇದಕ್ಕೆ ಅಪವಾದಗಳಾಗಿ ಪರಿಣಮಿಸಿವೆ ನಿಜ. ಆದರೆ, ಸಾಮಾನ್ಯವಾಗಿ ಹೇಳುವುದಾದರೆ ಕಾಂಗ್ರೆಸ್ಸೇ ಎಲ್ಲೆಡೆಯೂ ಜಯಭೇರಿ ಬಾರಿಸಿದೆ. ಮೂರು ಚುನಾವಣೆಗಳೂ ದಿವಂಗತ ಪ್ರಧಾನಿ ಜವಾಹರಲಾಲರ ಸಮ್ಮುಖದಿಂದಲೇ ನಡೆದಿದ್ದುವು. ಸ್ವಯಂ ನೆಹರೂರವರೇ ಚುನಾವಣಾರಂಗಕ್ಕಿಳಿದು ಪ್ರಚಾರ ಮಗ್ನರಾಗಿದ್ದರು. ಅಭ್ಯರ್ಥಿಗಳನ್ನು ಆಯ್ದುಕೊಳ್ಳುವಲ್ಲಿಯೂ ಅವರ ವಾಕ್ಯವೇ ವೇದವಾಕ್ಯವಾಗುತಿತ್ತು. ಟಿಕೇಟು ದೊರೆಯದ ಕಾರಣದಿಂದ ಪಕ್ಷದಲ್ಲಿ ಕುಂದು—ಕೊರತೆ ಕಂಡು ಹೊರ ಬಂದವರ ಸಂಖ್ಯೆಯೂ ಅತ್ಯಲ್ಪ. ಪಕ್ಷದಲ್ಲಿ ವಿಶ್ವಾಸ—ನಿಷ್ಠೆಯಿಲ್ಲದ ವ್ಯಕ್ತಿಗಳು ಪಕ್ಷದಿಂದ ಹೊರ ಹೋಗಬೇಕು, ಎಂಬುದು ಜವಾಹರಲಾಲರ ಅಭಿಪ್ರಾಯವಿತ್ತು. ಕಳೆದ ಐದು ವರ್ಷಗಳಲ್ಲಿ ಪರಿಸ್ಥಿತಿ ಬಹಳಷ್ಟು ಬದಲಾಗಿದೆ. ದೇಶವು ಇಬ್ಬರು ಪ್ರಧಾನಿಗಳನ್ನು ಕಳೆದುಕೊಂಡಿತು. ಇಬ್ಬರು ಶತ್ರುಗಳ ಆಕ್ರಮಣಕ್ಕೆ ತುತ್ತಾಯಿತು. ಆಹಾರ—ಉತ್ಪಾದನೆ—ಅರ್ಥ ರಂಗಗಳಲ್ಲಿ ಭಾರತದ ಮುನ್ನಡೆ ಕುಂಠಿತವಾಯಿತು, ವಿದೇಶೀಯರ ನೆರವು ಹಿಂಜರಿಯಿತು— ಪಂಚವಾರ್ಷಿಕ ಯೋಜನೆಯು ನಿರೀಕ್ಷಿತ ವಿಧಾನದಂತೆ ಮುಂದುವರಿಯಲಿಲ್ಲ; ನಿರೀಕ್ಷಿತ ಪರಿಣಾಮ ನೀಡಲೂ ಇಲ್ಲ—ದೇಶವೊಂದು ಸಮಸ್ಯಾ ರಾಷ್ಟ್ರವಾಗಿ ರೂಪಿತವಾಗಿದೆ. ಜಾಗತಿಕ ರಾಜಕಾರಣದಲ್ಲೂ ದೇಶ ಜವಾಹರರ ಕಾಲದಲ್ಲಿ ಪಡೆದಿದ್ದ ಸಂಮಾನದಿಂದ ವಂಚಿತವಾಗುತ್ತಿದೆ. ಇದಕ್ಕೇನು ಕಾರಣ? ಕಾಂಗ್ರೆಸ್ಸು ಆಡಳಿತೆಯನ್ನು ನಿರ್ವಹಿಸಲು ಅಶಕ್ತವಾಗಿದೆ ಎಂಬುದು ವಿರೋಧಿ ಪಕ್ಷಗಳ ಏಕೈಕ ಘೋಷಣೆ ಪ್ರಚಾರ ಸಾಧನ. ಆದರೆ, ಮತ್ತಾವ ಪಕ್ಷವು, ಆಡಳಿತ ನಿರ್ವಹಿಸುವ ಮಾತಂತಿರಲಿ, ಆಡಳಿತ ವಹಿಸಿಕೊಳ್ಳುವಷ್ಟು ಶಕ್ತಿಶಾಲಿಯಿದೆ? ಎಲ್ಲ ವಿಧಾನ ಮತ್ತು ಲೋಕ ಸಭೆಗಳ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸುವುದಕ್ಕೂ. ಗೆಲ್ಲುವ ಮಾತು ಬೇರೆ, ಅಶಕ್ತವಾದ ನಮ್ಮ ವಿರೋಧಿ ಪಕ್ಷಗಳು ದೇಶದ ಆಡಳಿತೆಯನ್ನು ಹೊರುವುದು ಸಾಧ್ಯವೆ? ಇದು ಕಲ್ಪನೆಗೂ ನಿಲುಕದ ಸಂಗತಿಯೇ.

ವಿರೋಧೀ ಪಕ್ಷಗಳ ಸಂಯುಕ್ತ ರಂಗವೊಂದರ ಕನಸು ಕಟ್ಟಿ ಕಾಂಗ್ರೆಸ್ಸನ್ನು ಚುನಾವಣೆಗಳಲ್ಲಿ ಪರಾಜಿತಗೊಳಿಸುವ ಆಶಯ ಕೆಲವರದ್ದು. ಆಡಳಿತೆ ನಡೆಸುವ ದೃಷ್ಟಿಯಿಂದ ಇದು ಅಪಮರ್ಶಕವಾದರೂ ಚುನಾವಣೆಯ ದೃಷ್ಟಿಯಿಂದ ಒಪ್ಪತಕ್ಕದ್ದೇ ಎನ್ನೋಣ. ಆದರೆ, ದುಃಖದ ಸಂಗತಿಯೆಂದರೆ, ಹುಲಿ, ದನ, ಇಲಿ, ನರಿ, ಬೆಕ್ಕು, ನಾಯಿಗಳೆಲ್ಲ ಒಂದಾಗಿ ಬಾಳುವ ಕಥೆಯಾಯಿತು ಇದು. ಅಭ್ಯರ್ಥಿಗಳ ಆಯ್ಕೆಯಲ್ಲಿಯೇ ಗದರಿಕೆಗಳ ಪ್ರದರ್ಶನ ನಡೆದು ಹೆಚ್ಚಿನೆಡೆಗಳಲ್ಲಿ ಈ ಸಂಯುಕ್ತರಂಗ ಚೂರು ಚೂರಾಯಿತು; ಕೆಲವೆಡೆ ಇದು ಗೋಚರವಾಗುತ್ತಿದೆಯಾದರೂ ಅದೇನೂ ಮಹಾ ಸಾಧನೆಯೆಂಬಂತಿಲ್ಲ. ಹೀಗಿರುವಾಗ, ಕಾಂಗ್ರೆಸ್ಸನ್ನು ಸೋಲಿಸುವ ವಿರೋಧಿಗಳ ಸಂಚು ಸಂಪೂರ್ಣವಾಗಿ ನಿಷ್ಪ್ರಯೋಜಕವಾಗುವುದು. ಆದರೆ, ಈ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಹಿಂದಿನ ಬಾರಿಗಳಿಗಿಂತ ತೀವ್ರವಾದ ಸ್ಪರ್ಧೆಯನ್ನು ಎದುರಿಸಬೇಕಾಗುವುದು ಖಂಡಿತ. ಪ್ರಜಾಪ್ರಭುತ್ವದಲ್ಲಿ ಇದು ನ್ಯಾಯವೂ ಸ್ವಾಭಾವಿಕವೂ ಹೌದು. ಜನತೆಯಲ್ಲಿ ರಾಜಕೀಯ ಪ್ರಜ್ಞೆ ಬೆಳೆಯುತ್ತಿರುವುದರ ದ್ಯೋತಕವಲ್ಲವೇ ಇದು?

ವಿರೋಧೀ ಪಕ್ಷಗಳ ಹೊಯ್ದಾಟವೇನೇ ಇರಲಿ; ಕಾಂಗ್ರೆಸ್ಸು ರಾಜ್ಯಗಳಲ್ಲೂ ಕೇಂದ್ರಗಳಲ್ಲೂ ಮತ್ತೊಮ್ಮೆ ಅಧಿಕಾರ ಪೀಠವೇರುವುದು ಖಂಡಿತ— ಇದು ಕಾಂಗ್ರೆಸ್ ಪರಿಷ್ಕರ ಅಭಿಪ್ರಾಯ ಮಾತ್ರವಲ್ಲ, ಕೆಲವು ವಿರೋಧಿ ಪಕ್ಷಗಳ ನಾಯಕರದ್ದೂ. ಈ ಖಚಿತ ಭವಿಷ್ಯಕ್ಕೆ ಧ್ಯೇಯ ನಿಷ್ಠೆಯಿಂದ ಪ್ರಬಲ ವಿರೋಧೀ ಪಕ್ಷದ ಅಭಾವವೇ ಕಾರಣವೆಂಬುದು ಎಲ್ಲರಿಗೂ ತಿಳಿದಿದೆ. ಅಸಂಬದ್ಧ—ಅತಿ ಉದರ್ಶವಾದಿ, ಅವ್ಯಾವಹಾರಿಕ, ಈ ಶತಮಾನದಾರಿಗೂ ಒಪ್ಪದ ಧ್ಯೇಯವುಳ್ಳ ನೂರು ಪಕ್ಷಗಳಿಂದ ಏನು ಮಾಡಲು ಸಾಧ್ಯ? ದೇಶವು ಇದು ವರೆಗೆ ನಡೆದು ಬಂದ ದಾರಿ ಕಠಿನವಾದುದು, ದುರ್ಗಮವೂ ಹೌದು. ಕಲ್ಲು—ಮುಳ್ಳುಗಳಿಂದ ತುಂಬಿರುವುದೂ ನಿಜವೇ. ಇಂತಹ ದಾರಿಯಲ್ಲಿ ದೇಶವನ್ನು ಕೈಹಿಡಿದು ನಡೆಸಿದ ಕಾಂಗ್ರೆಸ್ಸು ಮುಂದೆಯೂ ಹಾಗೆಯೇ ನಡೆಸಬೇಕು. ಅದು ಅಶಕ್ತವಾಗಿದೆ; ಅನ್ಯಾಯಿಯಾಗಿದೆ —ಇತ್ಯಾದಿ ಹಲವಾರು ಆರೋಪಗಳು ಇವೆ. ಕೆಲವು ಆರೋಪಗಳಲ್ಲಿ ಅಲ್ಪಸ್ವಲ್ಪ ಸತ್ಯಾಂಶವೂ ಇದೆ. ನಡೆಯುವವರು ಮುಗ್ಗರಿಸದೆ ಕುಳಿತವರೆ? ಆದರೆ, ಕಾಂಗ್ರೆಸ್ಸಿನಲ್ಲಿರುವಷ್ಟು ಶಕ್ತಿಯಿಂದು ಉಳಿದ ಯಾವ ಪಕ್ಷಕ್ಕೂ ಇರುವುದಿಲ್ಲ. ಆದುದರಿಂದ ಕಾಂಗ್ರೆಸ್ಸೇ ಚುನಾವಣೆಗಳಲ್ಲಿ ಗೆಲ್ಲಬೇಕು; ಅದು ಜನಸಾಮಾನ್ಯರ ಪಕ್ಷ; ಭದ್ರ ಸರಕಾರ ರಚನೆಗೆ ದೇಶದ ರಕ್ಷಣೆಗೆ ಜನಹಿತ ಸಾಧನೆಗೆ ಕಾಂಗ್ರೆಸ್ಸು ನಿಶ್ಚಿತ ದಾರಿಯಲ್ಲಿ ಮುನ್ನಡೆಯುತ್ತದೆ; ಅದರ ಕೈಯಲ್ಲೇ ಅಧಿಕಾರ ಸೂತ್ರವುಳಿಯುವುದು ಅಪೇಕ್ಷಣೀಯ; ಜನತೆಯಿದನ್ನು ಮರೆಯುವಷ್ಟು ಮೂರ್ಖವಾಗುವುದಿಲ್ಲ.

ವಚನ ಸುಧೆ

ವಿದ್ಯಾಶೀಲ ವಯೋವೃದ್ಧಾನ್
ಬುದ್ಧಿವೃದ್ಧಾಂಶ್ಚ ಭಾರತ
ಧನಾಭಿಜಾತ ವೃದ್ಧಾಂಶ್ಚ
ನಿತ್ಯಂ ಮೂಢೋವ ಮನ್ಯತೇ||

ವಿದ್ಯೆ, ಶೀಲ, ವಯಸ್ಸು, ಬುದ್ಧಿ, ಧನ ಮತ್ತು ಕುಲದಿಂದ ಉನ್ನತರಾದವರಲ್ಲಿ ಮೂಢರು ಮಾತ್ರ ಅನಾದರ ತೋರಿಸುತ್ತಾರೆ.

ಚೀನಾದ ಬೂದಿ ಬೆಂಕಿ

ಕೆಲಕಾಲದಿಂದ ಬೂದಿಯೊಳಗೆ ಉರಿಯುತ್ತಿದ್ದ ಬೆಂಕಿ ಇದೀಗ ಕೆಂಪು ಚೀನಾದಲ್ಲಿ ಉರಿಯ ಹತ್ತಿದೆ. ಇದರಿಂದ ತಮ್ಮನ್ನೂ ತಮ್ಮ ಅಧಿಕಾರವನ್ನೂ ಉಳಿಸಿಕೊ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



'ಇಂದಿರಾ ಗಾಂಧಿಯವರು ೨೦೦ ಮೈಲು ಸಂಚರಿಸಿ ೧೧ ಸಭೆಗಳಲ್ಲಿ ಭಾಷಣ ಮಾಡಿದರು.'

'ಎಷ್ಟು ಸಲ ಚಹ ಸೇವಿಸಿದರು ಎಂಬುದರ ಲೆಕ್ಕವಿಲ್ಲ...'

ಶೆಣೈ

ಗೇಹೆ ರಾಜ್ಯದಲ್ಲಿ

ಚಂಡಿಯ ಅವತಾರ ತಾಳಬೇಕು

"ಹೌದ್ರೀ...'

'ಹೌದು...'

"ಏನು?

'ಒಳ್ಳೆದು..."

"ಅಲ್ಲಾ, ಏನಿದು ಶಿಷ್ಟಾಚಾರಕ್ಕೆ ಆರಂಭವಾಯ್ತೊಂತ?"

"ಶಿಷ್ಟಾಚಾರ ಏನು ಬಂತೆ?"

"ಮತ್ತೆ, ಮಾತಿಗೆ ಮಾತು ಆಡೋರು...'

"ಮತ್ತೇನೀಗ ಮೂಗು ಹಿಡಿದು ಕೂತಿದ್ದೇನೆಯೆ?"

"ಹಾಗಲ್ಲಾನ್ರಿ. ಯಾರಾದ್ರೂ ಮಾತಾಡಾರ; ಅದ್ರೆ ನೀವು...."

'ಆದೂ ನಿನ್ನ ಎದುರಲ್ಲಿ....'

'ಸಾಕು ಬಿಡೀಂದ್ರೆ...'

"ಬಿಡೋದೇನು ಬಂತೆ?'

"ಅದೆಲ್ಲಾ ಇರ್ಲಿ ಹಾಗೆ...' ·

'ಇರ್ಲಿ. ಯಾರು ಬೇಡಾಂತಾರೆ?'

'ನೋಡಿ, ಇಲ್ಲಿ ತುಸು ಕೇಳಿಂದ್ರೆ..."

'ಕೇಳ್ತಾನೇ ಇದ್ದೇನೆ ನೋಡು...'

"ಹೌದು, ಅದ್ರೆ ಮನ್ಸು..."

ಮನ್ಸು...ಅದು ಮತ್ತೆಲ್ಲಿರಬೇಕು?'

"ಹ್ಞೂಂ...ಅದು ಗೊತ್ತಿದೇನ್ರಿ...."

'ಮತ್ತು ಗೊತ್ತಿದ್ದೂ ಗೊತ್ತಿದ್ದೂ ಕೇಳ್ತಾ ಇದೀಯಲ್ಲ?....'

"ಹ್ಞೂಂ....ಸರಿ ಈಗ ಹೇಳಿ..."

'ಹೇಳಿ ಹೇಳಿ ಅನ್ತಾನೇ ಹೇಳ್ತಾ ಇದ್ದೀ ಹೊರ್ತು ಕೇಳೋ ಮಾತಂತೂ ತೆಗೆಯೋದಿಲ್ಲ...."

"ಕೇಳಿ, ಅಸಾಮ ರಾಜ್ಯವನ್ನು ಮತ್ತೆ ವಿಭಜಿಸಬೇಕೂಂತ ಅಂತಾರಂತಲ್ಲಾ..."

'ಯಾರೇ ಹಾಗೆಂದವ್ರು....?"

'ಮತ್ಯಾರು? ಪೇಪ್ರಿನಲ್ಲಿ ಬಂದಿದೆ ನೋಡಿ, ಅಸಾಮದ ಗುಡ್ಡಗಾಡುಗಳ ಆರು ಜಿಲ್ಲೆಗಳನ್ನು ಪ್ರತ್ಯೇಕವಾಗಿ ಒಂದು ರಾಜ್ಯನಿರ್ಮಿಸಬೇಕೂಂತ ಅಲ್ಲಿನ ಪ್ರತಿನಿಧಿ ನಿಯೋಗ ಬಂದಿದೆಯಂತೆ..."

"ಹ್ಞೂಂ....ಸರಿ.ನಿಯೋಗ ಬಂದ ಕೂಡ್ಲೆ ರಾಜ್ಯ ಆಗುತ್ಯೆ?"

'ಅದೆಲ್ಲ ಬಿಡಿ. ನೀವೆಲ್ಲ ಹೀಗೇ. ಮೊದಲಿಗೆ ಸಾಧ್ಯಾನೇ ಇಲ್ಲ ಅನ್ನೋದು; ಆ ಮೇಲೆ ಸಾಧಿಸಿಯೇ ಬಿಡೋದು....!

"ಪರ್ವಾಗಿಲ್ಲ ಕಣೆ ನೀನು....ಬೊಂಬಾಯಿ ವಿಭಜನೆ, ಪಂಜಾಬ ವಿಭಜನೆ, ಗೋವಾವರಣದ ಬಗ್ಗೆ ತಾನೇ ನಿನನ್ನೋದು?"

'ಮತ್ತೆಂಥದು? ನಾಗಾಗಳಿಗೆ ಒಂದು ಪ್ರತ್ಯೇಕ ರಾಜ್ಯಕೊಡಲಿಲ್ಲವೆ? ಹಾಗೇ ಮಿಜೋ ರಾಜ್ಯವನ್ನೂ ಕೊಡಬಹುದಿತ್ತು. ಆದ್ರಮೇಲೆ ಈಗ ಬೇಡುವ ಗುಡ್ಡಗಾಡು ರಾಜ್ಯ ನಾಗಾರಾಜ್ಯಕ್ಕಿಂತ ಆರು ಮಡಿ ವಿಶಾಲವಾಗುವುದಂತೆ, ಹಾಗಿರುವಾಗ...."

"ಆದೂ ಸರೀನ್ನು....'

"ಅತ್ತ ಪಂಜಾಬದವರು ತಮಗೆ ಪಂಜಾಬ ಬೇಡ; ಸಿಕ್ಕಿಸ್ತಾನ ಬೇಕು ಅಂತ ರಾಗನೆಬ್ಬಿಸಿದ್ದಾರೆ...'

"ಹ್ಞಾಂ..."

"ಸಂತ ಫತೇ ಸಿಂಗರು, ತಾರಾಸಿಂಗರು ಬಲಿದಾನ ಕ್ರಮ ಸಂಘಟಿಸುತ್ತಾ ಇದ್ದಾರೆ."

'ಹೌದು.... ಇವರಿಗೆ ಪಾಕಿಸ್ತಾನದ ಪ್ರೋತ್ಸಾಹವೂ ಇದೆ...'

'ಇದು ಹೇಗೆ ಗೊತ್ತು?'

"ನೋಡು, ಕರಾಚಿಯಿಂದ ಪ್ರಸಾರವಾಗುವ "ಆಜ್‌ಕೀ ಬಾತ್" ಕಾರ್ಯಕ್ರಮದಲ್ಲಿ ಅವರ ಕೆಲಸವೇ ಇದು. ಸೀಖಿಸ್ತಾನದ ಬೇಡಿಕೆಯನ್ನು ನ್ಯಾಯವೆಂದು ಕರೆಯುವುದು; ಇದನ್ನು ಭಾರತ ಸರಕಾರವು ಎಷ್ಟು ಬೇಗ ಮನಗಾಣುವುದೋ ಅಷ್ಟು ನೆಮ್ಮದಿಯೆಂದು ಸಲಹೆ ನೀಡುವುದು; ಕಾಶ್ಮೀರದ ಮೇಲೆ ತಮ್ಮ ಹಕ್ಕು ಸ್ಥಾಪನೆಯನ್ನು ಮಾಡುವುದು.......'

'ಅಲ್ರಿ, ಪಾಕಿಸ್ತಾನಕ್ಕೇನು ಸೀಖರಲ್ಲಿ ಆಸಕ್ತಿ?'

'ಏನು ಅಂದ್ರೆ? ಗಡಿರಾಜ್ಯ. ಅಲ್ಲ ವಿಷಬೀಜ ಬಿತ್ತಿದ್ರೆ ಮುಂದೆ ತಮಗೆ ನೆರವಾಗ ಬಹುದೂಂತಿರ ಬಹುದು....'

'ಓ...ಹಾಗೆ...ಆದ್ರೆ ಇದೆಲ್ಲಾ ಅನ್ಯಾಯವಲ್ಲವೇನು?'

'ನ್ಯಾಯ-ಅನ್ಯಾಯಗಳ ಪರಿಭಾಷೆ ದಿನದಿಂದ ದಿನಕ್ಕೆ ಬದಲಾವಣೆಯಾಗುತ್ತಿದೆ.

'ನೋಡಿ, ಇಲ್ಲಿ, ನಮ್ಮ ಕರ್ನಾಟಕವನ್ನೂ ವಿಭಜಿಸಬೇಕು ಎಂಬ ಒಂದು ವಾದ ಬಂದಿದೆಯಂತೆ...."

'ಹೌದು, ಹಲ್ಲಿಲ್ಲದ ಹಳೆಯ ಹುಲಿಗಳು ಹೀಗೂ ಆಡ್ತಾರೆ.... ಇರ್ಲಿ... ನನ್ನದೊಂದು ಸವಾಲು...."

'ಏನು?'

'ಮತ್ತೇನೂ ಇಲ್ಲ. ನಮ್ಮ ರಾಜ್ಯ ವಿಭಜನೆಯಾಗುವುದಾದರೆ ನಾವು ಯಾವ ರಾಜ್ಯಕ್ಕೆ ಸೇರಬೇಕು?"

'ರೀ, ನಮಗೆ ಯಾವ ರಾಜ್ಯಾನೂ ಬೇಡಾರೀ....'

'ಯಾಕೆ?"

'ಧಾರವಾಡಕ್ಕೆ ಸೇರಿದ್ರೆ ಲಿಂಗಾಯತರ ದಾಸರಾಗಬೇಕು; ಮೈಸೂರಿಗೆ ಸೇರಿದ್ರೆ ಒಕ್ಕಲಿಗರು ಕುರುಬರ ದಾಸರಾಗಬೇಕು..."

'ಮತ್ತೆ....?'

'ನನ್ನ ಅಭಿಪ್ರಾಯದಲ್ಲಿ ನೋಡಿ, ನೀವು ಮತ್ತೆ ಏನೇನೂ ಅನ್ನಬಾರದು....ನಮ್ಮದು ತುಳುನಾಡು; ನಮ್ಮ ಭಾಷೆ, ಸಂಸ್ಕೃತಿ ನಡೆ, ನುಡಿ, ಆಚಾರ, ವಿಚಾರ ಎಲ್ಲವೂ ತುಳು. ಆದುದರಿಂದ ನಾಗಾಗಳಿಗೆ ಪ್ರತ್ಯೇಕ ರಾಜ್ಯ ಕೊಟ್ಟಂತೆ ತುಳುವರಿಗೂ ಯಾಕೆ ಕೊಡಬಾರದು?"

'ಭಲೇ, ಭಲೇ...ನಿಮಗೆ ರಾಜಧಾನಿ?'

'ಅಯ್ಯೋ, ಅದಕ್ಯಾಕೆ ಚಿಂತೆ? ಬೆಂಗಳೂರು ನಗರವನ್ನು ಕೇಂದ್ರಾಧೀನ ಪ್ರದೇಶ ಮಾಡುವದು, ವಿಧಾನ ಸೌಧದ ಒಂದು ತುಂಡಿನಲ್ಲೇ ನಮ್ಮದೂ ಕಾರಬಾರ.....'

'ಅದ್ಯಾಕೆ?'

'ಯಾಕೆ ಅಂದರೆ, ಚಂಡೀಗಡ ಎರಡು ರಾಜ್ಯಗಳ ರಾಜಧಾನಿಯಾಗ ಬಹುದಾದರೆ, ಬೆಂಗಳೂರೇನು ಕಡಿಮೆಯೆ? ಅದು ಮೂರು ರಾಜ್ಯಗಳ ರಾಜಧಾನಿಯಾಗಬೇಕು....'

'ಹ್ಞೂಂ....ನೀನು ಪ್ರಧಾನಿಯಾದರೆ, ಖಂಡಿತ ಹಾಗೇ ಮಾಡ್ತಿ...'

'ನೋಡಿ, ನಮ್ಮ ಇಂದಿರಾ ಮಾಡಿದ್ದರಲ್ಲಿ, ಮಾಡುವುದರಲ್ಲಿ ಅನ್ಯಾಯವೇನ?'

'ಏನೂ ಇಲ್ಲವೆ?'

"ಇಲ್ಲಾಂತೀನಿ..."

'ಯಾಕೆ?"

'ರಾಜ್ಯ ವಿಭಜನೀಕರಣ ಸೂತ್ರಕ್ಕೆ ಪಂ। ಜವಾಹರಲಾಲ ನೆಹರುರವರೇ ಜನಕರು....'

"ಇರಲಿ... ಸಾಮಾಜಿಕ ನ್ಯಾಯದ ಪರಿಭಾಷೆ ಕಾಲಕಾಲಕ್ಕೆ ಬೇರೆಯಾಗುತ್ತೆ ಅಂದೆನಲ್ಲಾ...."

'ಏನು?'

"ನೋಡು, ಒಂದು ಕಾಲವಿತ್ತು....ಮದುವೆಯಾಗಿ ಒಂದು ವರ್ಷವಾದ್ರೂ ಮದುಮಗಳು ಪತಿಗೃಹಕ್ಕೆ ಬರದ ಕಾಲ.... ಈಗ...."

"ಅಯ್ಯೋ, ಎಲ್ಲಾ ಬಿಟ್ಟು ಇಲ್ಲಿ ಒಂದು ಬಿಟ್ರಿ?'

ಈಗ ಹೇಳು....'

"ಅಲ್ಲ, ಹಿಂದಿನ ಕಾಲದಲ್ಲಿ ಬೇಗನೇ ಮದುವೆಯಾಗಿತ್ತು....ಈಗ ಹಾಗಲ್ಲನೋಡಿ"

"ಸಾಕಲ್ಲಾ....ಅಂದಿಗೆ ಅದೇ ನ್ಯಾಯ ಇಂದಿಗೆ ಇದೇ....ಒಂದು ಕಾಲದಲ್ಲಿ ಭಾಷಾವಾರು ರಾಜ್ಯವಿಭಜನೆಯಿಂದ ಪ್ರಯೋಜನವಾಗಬಹುದೆಂದು ನೆಹರು ಅಂದದ್ದು ನಿಜ. ಆದರೆ, ಇಂದೇನಾಗುತ್ತಿದೆ'

'ಆದೂ ಸರೀನ್ರಿ...'

"ಮತು ಮಾತಿಗೆ ಬಲಿದಾನ, ಆತ್ಮಾರ್ಪಣೆ, ಉಪವಾಸ, ಸತ್ಯಾಗ್ರಹ, ಸಂಪ್ರಮತ ಪ್ರದರ್ಶನ ಮೊದಲಾದ ಮಹಿಷಾಸುರನ ಅವತಾರವಾದಿಗಳನ್ನು ದಮನಿಸಿ ದುಃಶಕ್ತಿ, ಕುಶಕ್ತಿಗಳನ್ನು ನಾಶಮಾಡಿ, ದೇಶದಲ್ಲಿ ಶಾಂತಿ—ಸುಭಿಕ್ಷೆ ಭದ್ರತೆಗಳು ನೆಲೆಯೂರಬೇಕಾದರೆ, ನಿಮ್ಮ ಇಂದಿರಾಜಿ ಚಂಡಿಯ ಅವತಾರ ತಾಳಬೇಕು ಕಣೇ...ಚಂಡಿಯ ಅವತಾರ..."

"ಹೌದು, ಹೌದು... ಪಾಪ, ಹೆಂಗಸು ಅಂದ್ರೆ ಇಷ್ಟೂ ಸಸಾರ...."

'ಅಯ್ಯೋ, ಯಾರೇ, ಸಸಾರ ಮಾಡಿದವ್ರು? ಚಂಡಿ - ದುರ್ಗೆ — ಎಲ್ಲಾ ಪಾರ್ವತಿಯ ಅವತಾರ.... ಅದರಲ್ಲಿ ಸಸಾರವೇನು ಬಂತು...'

"..............'

"ಅಬ್ಬಾ: ನಮ್ಮ ಚಂಡಿಯ ಮುಸುಡಿ?"

'ಊ್ಞಂ...'

"ನೋಡೋಣ........ಆದ್ರೆ ಇಲ್ಲಿ ಮಹಿಷಾಸುರನಿಲ್ಲ ನೋಡು....'

'ನನಗೆ ಯಾರೂ 'ಬೇಡ....'

"ಏನ.? ನಾನೂ...."

"ಎಂಥ ಮಾತಾಡ್ತೀರಿ?..."

"ಬದುಕಿದೆ ಸದ್ಯ...'

'ನಾನು ಮಾತ್ರ..."

'ಶ್ಶೂ....ಸಾಕೇ, ಸುಮ್ಮನಿರೂಂದ್ರೆ..'

"ಹ್ಞೂಂ..."

ಗೋರಾ.

ರಥ ಚಲಿಸುವ ದಾರಿಯಲ್ಲಿ



ಸಹಸ್ರಾರು ಭಾವುಕರು ರಥದ ಹಗ್ಗಕ್ಕೆ ಕೈ ನೀಡಿ, ಆದಮ್ಯ ಶಕ್ತಿಯನ್ನು ತಮ್ಮಲ್ಲಿ ತುಂಬಿಸಿ, ತೇರಿನ ಗಾಲಿಗಳನ್ನು ಮುಂದಕ್ಕೆ ಚಲಿಸುತ್ತಾರೆ. ಚಕ್ರಗಳ ಜೊತೆಗೆ ರಥ ಕೂಡಾ ಸಾಗುತ್ತದೆ. ಸಾವಿರ ಭುಜಗಳ ಬಲವೇ ರಥವನ್ನು ಮುಂದೂಡುವ ಚೇತನ.

ಅನಂತ ಶಕ್ತಿಯ ಸಂಘಟನೆಯೇ ಬೆಳೆಯುತ್ತಿರುವ ಸಂಸ್ಥೆಯ ಸಂಚಲನ ಶಕ್ತಿ. ಅಸಂಖ್ಯಾತ ಮಂದಿ ನೌಕರರ, ಗಿರಾಕಿಗಳ, ಶೇರುದಾರರ, ಹಿತೈಷಿಗಳ ಸಹಕಾರದ ಹಸ್ತವೇ ಸಿಂಡಿಕೇಟ್ ಬ್ಯಾಂಕನ್ನು ಪ್ರಗತಿಯ ದಾರಿಯಲ್ಲಿ ಚಲಿಸಿದ ಅವ್ಯಕ್ತ ಶಕ್ತಿ. ತೀರಾ ಚಿಕ್ಕ ಗ್ರಾಮದಲ್ಲಿ ಅಸ್ತಿತ್ವಕ್ಕೆ ಬಂದ ಈ ಬ್ಯಾಂಕು, ತನ್ನ ದೀರ್ಘ ಕಾಲದ ದಕ್ಷ, ಪ್ರಾಮಾಣಿಕ ಸೇವೆಯಿಂದ ಜನರ ವಿಶ್ವಾಸವನ್ನು ಗಳಿಸಿ ಪೂರ್ಣ ಚೈತನ್ಯವನ್ನು ಮೈತುಂಬಿಸಿಕೊಂಡು, ಇಂದು ಬೃಹತ್ ರಥದ ಗಾತ್ರದಲ್ಲಿ ಬೆಳೆದಿದೆ, ಬೆಳೆದು ಜಡವಾಗಿ ನಿಂತಿಲ್ಲ. ಸಹಸ್ರ ಭುಜ ಬಲದಿಂದ ಏರು ದಾರಿಯಲ್ಲಿ ದ್ರುತ ಗತಿಯಿಂದ ಮುನ್ನಡೆಯುತ್ತದೆ. ಬಹುಮುಖದ ಆರ್ಥಿಕ ಸೇವೆಯನ್ನು ವ್ಯಾಪಕ ಪ್ರಮಾಣದಲ್ಲಿ ನೀಡಲು ತನ್ನ ಪಯಣವನ್ನು ಮುಂದರಿಸುತ್ತದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಭಾರತದಲ್ಲಿ

ಸ್ವಾಭಿಮಾನದ ಸಿಂಹ ಸತ್ತಿಲ್ಲ —೧

ಬರೆದವರು

ಶ್ರೀ ಶಿವಶಂಕರ

"ಭಾರತವು ಹೆಮ್ಮೆಪಡುವಂತಹದ್ದೇನಾದರೂ ಇದೆಯೆಂದಲ್ಲಿ ಅದು ಭಾರತದ ಗೌರವವೇ ಇದೆ. ಭಾರತದ ಜನರು ಬಡವರಿರಬಹುದು ಮತ್ತು ಅವಿದ್ಯಾವಂತರಿರಬಹುದು. ಆದರೆ ಅವರ ಗೌರವ ಹಾಗೂ ಸ್ವಾಭಿಮಾನವು ಪ್ರಖ್ಯಾತವೇ ಇದೆ." ಈ ಮಾತುಗಳನ್ನು ನುಡಿದವರು ಬಡವರೋ ಅವಿದ್ಯಾವಂತರೋ— ಇರುವದಿಲ್ಲ. ಭಾರತ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜೀ ಅದನ್ನು ಗೌರವದಿಂದಲೇ ಹೇಳಿರುವರು.

"ಭಾರತ ಕಾ ಕಣ ಕಣಮೇ ಹೈ ಅಂಕಿತ ಗೌರವ ಗಾನ ಹಮಾರಾ।"

ಶ್ರೀಮತಿ ಇಂದಿರಾ ಗಾಂಧಿಯವರ ಮಾತುಗಳನ್ನೋದಿದಾಗ ಹಾಡಿನ ಸಾಲು ಜ್ಞಾಪಕಕ್ಕೆ ಬಂತು.

"ಜಗತ್ತಿಗೆಲ್ಲಾ ಮತೀಯ ಸಹಾನುಭೂತಿ ಹಾಗೂ ಸಾರ್ವತ್ರಿಕ ಅಂಗೀಕಾರವನ್ನು ಬೋಧಿಸಿದ ಧರ್ಮಕ್ಕೆ ನಾನು ಸೇರಿದವನೆಂಬುದು ಒಂದು ಹೆಮ್ಮೆ...." ಚಿಕಾಗೋದಲ್ಲಿ (1893) ನಡೆದ ಸರ್ವಮತ ಸಮ್ಮೇಳನದಲ್ಲಿ ಧಾರ್ಮಿಕ ವಿಶ್ವವಿಜೇತ ಸ್ವಾಮೀ ವಿವೇಕಾನಂದರು ಹೆಮ್ಮೆಯಿಂದ ಆಡಿದ ಮಾತುಗಳಿವು.

ಭಾರತದ ಗೌರವ, ಹೆಮ್ಮೆ, ಸ್ವಾಭಿಮಾನದ ಕುರಿತು ಧೈರ್ಯದಿಂದ ಮಹಾನ್ ವ್ಯಕ್ತಿಗಳು ಹೇಳಿರುವರಾದರೂ ಶ್ರೀಮತಿ ಇಂದಿರಾಜಿಯವರು, ಪಂಡಿತ ಮಹಾ ದಿರನಿಗೆ ಕಲೆ ಇರುವಂತೆ, ಬಡತನ ಹಾಗೂ ಅವಿದ್ಯಾಭ್ಯಾಸದ ಕುರಿತೂ ಹೇಳಿರುವರು. ಅದು ಅವರು ಕಂಡು, ಅರಿತುಕೊಂಡಿರುವ ಜ್ಞಾನ ಭಂಡಾರವಿದೆ. ಅವರೇದರೋ ಭಾರತದ ಜನರು (ಅಂದರೆ ಭಾರತೀಯರೇ ಇರಬಹುದು) ಬಡವರಿರಬಹುದು. ಆದರೆ ಬಡತನದ ಬರಡು ಭೂಮಿ ಭಾರತವೆಂಬುದನ್ನವರು ಹೇಳಲು ಸಿದ್ಧರಿರುವದಿಲ್ಲ. ಅಲ್ಲದೆ ಭಾರತವು ನಿಜವಾಗಿ ಬಡತನದ ಸ್ವರ್ಗವಾಗಿದ್ದಲ್ಲಿ ಅನ್ಯರು ಅತಿಥಿಯಾಗಿ ಬಂದು ಆಕ್ರಮಣ ನಡೆಸಿ ಕೊಂಡೊಯ್ದುದಾದರೂ ಏನನ್ನು? ಬ್ರಿಟಿಷರು ವ್ಯಾಪಾರದ ನೆವದಲ್ಲಿ ಒಂದವರಾದರೂ ಏತಕ್ಕಾಗಿ? ಹೋಗಲಿ. ಇದೆಲ್ಲಾ ಚಿನ್ನ ಹೋಗಿರುವ ಕಾಲೆಂದು ಪ್ರಗತಿಶೀಲರು ಹೇಳುವದಿಂದ ಹೇಳಿಯಾರು. ಅದೂ ಬೇಡ. ಇನ್ನು ಕ್ರಿಸ್ತೀಯ ಮತಪ್ರಸಾರಕರು, ರಷ್ಯಾ ಹಾಗೂ ಚೈನಿ ಕಮ್ಯೂನಿಷ್ಟರು ಅಲ್ಲದ ಪಾಕಿಸ್ಥಾನ ಏನವರೋ! ಇತ್ತ ಗೃಧ್ರ ದೃಷ್ಟಿಹರಿಸುತ್ತಿರಲು ಕಾರಣವೇನು? ಬಡಾಯಾ ಬರುಡು ಭೂಮಿಯ ... ಕಣ್ಣೋಟವೂ ಹೋಗಲಾರದು. ಹೋರಿಯಿಂದ ಹಾಲು ಕರೆಯುವ ಸಾಹಸಕ್ಕೆ ಯಾವ ಪ್ರಗತಿಶೀಲನು ಕೂಡಾ ಮುಂದಾಗಲಿಕ್ಕಿಲ್ಲ. ಆ ಹಳೆಯ ಗೊಡ್ಡು ಸಂಪ್ರದಾಯದಂತೆ ಇಂದೂ ಬಸಗಳಿಂದಲೇ ಹಾಲು ಕರೆಯಬೇಕೇ? ನಾವೇಕೆ ಬಸವಣ್ಣಗಳನ್ನು ಬಿಗಿದು ಹಾಲು ತೆಗೆಯಬಾರದೆಂದು ನವನಾಗರಿಕ ಪ್ರಗತಿಶೀಲನು ಹಿಡಿಯ ಹುಂಬಿಡಲಿಕ್ಕಿಲ್ಲ. ಹಾಗಾದರೆ ಭಾರತ ಬರಡು ಬಂಜರುಭೂಮಿ ಇರುವುದಿಲ್ಲ. ಆಕ್ರಮಣಗಾರರು ಸೂರೆ ಮಾಡಿರುವದರಿಂದ ಹಾಗೂ ದಬ್ಬಾಳಿಕೆ ನಡೆಸಿರುವದರಿಂದ ಇರುವದಿಲ್ಲ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಭಾರತ ಮಾತೆಯ ಸುಪುತ್ರನೆಂಬ ಸಹೋದರ ಭಾವನೆಯ ಬೆಳವಣಿಗೆಗೆ ಸಂಕಷ್ಟ ಅವಕಾಶ ಸಿಗದಿರುವದರಿಂದಾಗಿ ಆಳಿದುಳಿದಿರುವ ಬಂಡವಾಳ ಹಾಗೂ ಉದ್ಯಮಿಗಳು ಸಣ್ಣ ಮೀನನ್ನು ದೊಡ್ಡ ಮೀನು ನುಂಗುವಂತೆ, ಆರ್ಥಿಕ ಅಸಹಾಯಕತೆಯ ದುರ್ವಿನಿಯೋಗ ನಡೆಸುತ್ತಿರುವದರಿಂದ ಬಡತನ ಬಟ್ಟಬಯಲಾಗಿದೆ, ದಾರಿದ್ರ್ಯ ದಾರಿಂದಲೆ ನಡೆಸುತ್ತಿದೆ. ಅದರ ಅನುಭವದಿಂದಲೇ ಶ್ರೀಮತಿ ಇಂದಿರಾಜಿಯವರು ಭಾರತದ ಜನರು ಬಡವರಿರ ಬಹುದೆನ್ನುವ ಸ್ವರ ಎತ್ತಿರುವರು. ಬಡವರಿರದಿದ್ದಲ್ಲಿ ಭಿಕ್ಷಾಂದೇಹಿಯ ಆವಶ್ಯಕತೆಯಾದರೂ ಏನು? ರೂಪಾಯಿಯ ಅಪಮೌಲ್ಯದ ಆಗತ್ಯವಾದರೂ ಏನು? ಆದರ ಇದಕ್ಕೆಲ್ಲಾ ಕಾರಣವೇನೆಂಬುದನ್ನು ಹಿಂದೆಯೇ ತಿಳಿಸಲಾಗಿರುತ್ತದೆ.

ಭಾರತೀಯ ಬಾಲಕರೆಲ್ಲಾ ಇಂದು ಬ್ರಿಟನಿನಲ್ಲೋ, ಅಮೇರಿಕದಲ್ಲೋ, ಪ್ಯಾರಿಸನಲ್ಲೋ ಶಿಕ್ಷಣ ಪಡೆಯುವದಿಲ್ಲ; ಅನುಕೂಲಸ್ಥರ ಹಾಗೂ ಪಾಶ್ಚಿಮಾತ್ಯತೆಯನ್ನೇ ನಾಗರಿಕತೆ ಮತ್ತು ಆಧುನಿಕತೆಯೆಂದು ಅರಿತುಕೊಂಡಿರುವವರು ಮಾತ್ರ ನಮ್ಮ ಮಕ್ಕಳನ್ನು ಪರದೇಶಕ್ಕೆ ಕಳಿಸುತ್ತಿದ್ದಾರೆ. ಉಳಿದ ಮಕ್ಕಳೆಲ್ಲ ಹೆಚ್ಚೆಂದರೆ ಇಲ್ಲೇ ವಿದ್ಯಾಭ್ಯಾಸ ಅಂದರೆ ಶಾಲೆಗಳಲ್ಲಿ ಕಲಿಸಿಕೊಡಲಾಗುತ್ತಿರುವದನ್ನು ಕಲಿಯುತ್ತಿದ್ದಾರೆ. ಆ ಅವಕಾಶದಿಂದಲೂ ವಂಚಿತರಾದ ಮಕ್ಕಳು ಅದೆಷ್ಟೋ ಇವೆ. ಹಾಗಿದ್ದರೂ ಜಗತ್ತಿನೆದುರು ನಾವು ಅವಿದ್ಯಾವಂತರೆಂದು ಕೈಕಟ್ಟಿ ತಲೆ ತಗ್ಗಿಸಿಕೊಂಡು ನಿಲ್ಲಬೇಕಾಗಿರುವದಿಲ್ಲ. ಅಂದರೆ ಒಂದೊಂದು ವಿಷಯದಲ್ಲಿ ಒಂದೊಂದು ದೇಶ ಮುಂದುವರಿದಿರಬಹುದು. ಹಾಗೆಯೇ ಆಧ್ಯಾತ್ಮಿಕತೆಯ ವಿಷಯದಲ್ಲಿ ನಮ್ಮ ನಾಡು ಇಂದೂ ಬಹಳಷ್ಟು ಮುಂದಕ್ಕಿದೆನ್ನುವದರಲ್ಲಿನಿತೂ ಸಂದೇಹಕ್ಕೆ ಎಡೆಯೇ ಇರುವದಿಲ್ಲ. ಅದು ಮಾತ್ರವಲ್ಲ—"ಇಂದು ನಿಮಗೆ ಸಿಗುತ್ತಿರುವ ಶಿಕ್ಷಣದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ, ನಿಜ. ಆದರೆ ಅದರಲ್ಲಿರುವ ದೋಷವು ಅದೆಷ್ಟು ಘೋರವಾಗಿದೆ ಎಂದರೆ ಆ ಎಲ್ಲ ಒಳ್ಳೆಯ ಅಂಶಗಳೂ ಕೊಚ್ಚಿಹೋಗಿವೆ. ಅದರ ಮುಖ್ಯ ದೋಷವೆಂದರೆ, ಮನುಷ್ಯ-ನಿರ್ಮಿತಿಯ ವಿದ್ಯೆ ಅದಾಗಿಲ್ಲ. ಅದೊಂದು ಕೇವಲ ಆತ್ಮನಿರೋಧಕ ಶಿಕ್ಷಣ, ಅಷ್ಟೆ. ಅಂತಹ ಯಾವುದೇ ನಿಷೇಧ ಪ್ರಧಾನ ಶಿಕ್ಷಣವಾದರೂ ಮೃತ್ಯುವಿಗಿಂತ ಕೆಟ್ಟದೇ ಸರಿ! ಬಾಲಕನೊಬ್ಬ ಶಾಲೆಗೆ ಹೋದೊಡನೆ ಅವನು ಕಲಿಯುವ ಮೊದಲನೆ ಪಾಠ, ತನ್ನ ತಂದೆಯೊಬ್ಬ ಮೂರ್ಖ; ಎರಡನೆಯದಾಗಿ, ತನ್ನ ತಾತ ಒಬ್ಬ ಹುಚ್ಚ; ಮೂರನೆಯದಾಗಿ, ತನ್ನೆಲ್ಲ ಧರ್ಮಗುರುಗಳೂ ಢೋಂಗಿಗಳು; ಮತ್ತು ನಾಲ್ಕನೆಯದಾಗಿ, ತನ್ನೆಲ್ಲ ಧರ್ಮ ಗ್ರಂಥಗಳೂ ಸುಳ್ಳಿನಕಂತೆ. ಹೀಗೆ ಕಲಿತ ಆ ಹುಡುಗ ಹದಿನಾರು ವಯಸ್ಸಾಗುವ ವೇಳೆಗೆ ಆತ್ಮನಿಷೇಧದ, ಪ್ರಾಣಶೂನ್ಯ, ಶಕ್ತಿಶೂನ್ಯ ಮುದ್ದೆಯಾದಲ್ಲಿ ಆಶ್ಚರ್ಯ ಏನು?

'ನಮ್ಮ ದೇಶದಲ್ಲೂ ಮಹಾ ಪುರುಷರು ಜನ್ಮತಾಳಿದ್ದರೆಂಬುದನ್ನು ತಿಳಿಯಲೂ ಸಹ ಈ ಶಿಕ್ಷಣ ಕ್ರಮದಲ್ಲಿ ನಮಗೆ ಅಸ್ಪದವಿತ್ತಿಲ್ಲ. ಭಾವಾತ್ಮಕವಾದುದು ಯಾವುದನ್ನೂ ನಮಗೆ ಕಲಿಸಿಲ್ಲ. ಹೀಗಾಗಿ, ನಮ್ಮ ಕೈಕಾಲುಗಳನ್ನು ಹೇಗೆ ಉಪಯೋಗಿಸಬೇಕೆಂಬುದನ್ನೂ ನಾವು ಅರಿತಿಲ್ಲ. ಇಂಗ್ಲೀಷರ ತಾತ ಮುತ್ತಾತಂದಿರ ಬಗ್ಗೆ ಎಲ್ಲ ಅಂಕಿ ಸಂಗತಿಗಳನ್ನು ನಾವು ಬಾಯಿಪಾಠ ಮಾಡುತ್ತೇವೆ. ಆದರೆ ಸ್ವಂತ ನಮ್ಮ ಪೂರ್ವಜರ ಬಗ್ಗೆ ಮಾತ್ರ ಒಂದು ಅಕ್ಷರವೂ ನಮಗೆ ಗೊತ್ತಿಲ್ಲ. (ಇಲ್ಲಿ ಗಾಂಧಿ ನೆಹರೂ ಮಾತ್ರ ಅಪವಾದವಾಗಿರಬಹುದು) ನಾವು ಕಲಿತಿರುವದಲ್ಲಾ ಬರೇ ಅಶ್ರದ್ಧೆ, ಬರೇ ದುರ್ಬಲತೆ. ಸೋತ ಜನಾಂಗ ನಾವಾದ್ದರಿಂದ, ನಾವು ಎಲ್ಲ ಸಂಗತಿಗಳಲ್ಲೂ ಪರತಂತ್ರರು, ದುರ್ಬಲರು ಎನ್ನುವ ಮನೋಭಾವ ಬೇರೂರಿ ಹೋಗಿದ ಎಂದ ಮೇಲೆ, ಇಂತಹ ಶಿಕ್ಷಣದಿಂದ ನಾವು ಆತ್ಮಶ್ರದ್ಧೆಯನ್ನು ಕಳೆದುಕೊಳ್ಳದಿರಲು ಹೇಗೆ ಸಾಧ್ಯವೆಂದು ಆಂಗ್ಲ ವಿದ್ಯಾಭ್ಯಾಸ ಪಡೆದಿದ್ದು ವಿಶ್ವದ ಜ್ಞಾನ ಪಡೆದಿರುವ ಸ್ವಾಮೀ ವಿವೇಕಾನಂದರೇ ಕೇಳಿರುವರು. ಹೀಗಿದ್ದರೂ ನಾವು ಅವಿದ್ಯಾವಂತರಿದ್ದು, ಅನ್ಯರಿಂದ ಕಲಿತುಕೊಳ್ಳಲಿಕ್ಕಾಗಿಯೇ ಇರುವವರೆಂಬುದನ್ನು ಅವರು ಬಲವಾಗಿ ಖಂಡಿಸಿರುವರಲ್ಲದೆ, "ನಿಮಗೆ ಆಂಗ್ಲೇಯರು ಅಥವಾ ಅಮೇರಿಕದವರೊಂದಿಗೆ ಸರಿಸಮಾನರಾಗಲು ಇಷ್ಟವಿದೆಯಾದಲ್ಲಿ, ಅವರಿಂದ ಕಲಿತುಕೊಳ್ಳುವಂತೆ ಅವರಿಗೇನೇ ನೀವು ಕಲಿಸಿಕೊಡಬೇಕಾಗಿರುತ್ತದೆ. ಮತ್ತು ಕಲಿಸಿಕೊಡಲು ನಿಮ್ಮ ಬಳಿ ಹೇರಳ ಇದೆ. ಶತಶತಮಾನಗಳವರೆಗೆ ಹೇಳಿಕೊಟ್ಟರೂ ಅನಂತರವೂ ಕಲಿಸಿಕೊಡಲು ಧಾರಾಳ ಇದೆ. ಈ ಕಾರ್ಯ ನಡೆಯಲೇ ಬೇಕೆಂದು ನಮ್ಮಲ್ಲಿರುವ 'ಅವಿದ್ಯಾವಂತರ' ಮೇಲೆ ಸ್ವಾಮೀ ವಿವೇಕಾನಂದರು ವಿವೇಕದ ಕ್ಷ—ಕಿರಣ ಬೀರಿರುವರು.

ಹೀಗಿರುವಾಗ, ನಿಜವಾಗಿ, ನಾವು ಬಡವರು ಹಾಗೂ ಅವಿದ್ಯಾವಂತರೆಂದು ಕರೆದುಕೊಳ್ಳಲು ಸಾಧ್ಯವೇ ಇರುವದಿಲ್ಲ. ಹಾಗಿಲ್ಲವಾದರೂ ಶ್ರೀಮತಿ ಇಂದಿರಾಜೀಯವರು ಹೇಳಿರುವಂತೆ ಹೆಮ್ಮೆಪಡಲು ನಮ್ಮ ಬಳಿ ಇರುವದಾದರೂ ಏನು?

ಕರುಳನ್ನೇ ಸೀಳಿ ಬಿಡುವ ರೀತಿಯಲ್ಲಿ ಮಗುವಿನ ಕೂಗು ಕೇಳಿ ಬರುತ್ತದೆ. ಹೆತ್ತವರುಗಳು ಅದನ್ನು ಸಹಿಸಿಕೊಳ್ಳುವದಾದರೂ ಹೇಗೆ? ಹಸಿವಿನಿಂದ ಮಗು ತತ್ತರಿಸುತ್ತಾ ಇದೆ. ಇದ್ದ ಒಂದು ತುಂಡು ಒಣ ರೊಟ್ಟಿಯನ್ನು ಕಾಡಬೆಕ್ಕು ಹಿಡಿದುಕೊಂಡು ಓಡಿಹೋಗಿರುತ್ತದೆ. ರಾಜಭೋಗದಲ್ಲಿ ಮೆರೆಯಬೇಕಾಗಿದ್ದ ರಾಣಾ, ಅವೆಲ್ಲವನ್ನೂ ತ್ಯಜಿಸಿ ಕಾಡುಮೇಡುಗಳನ್ನಾದ ವಿಜಯ ಪತಾಕೆಯನ್ನು ಹಾರಿಸುವ ಏಕಮೇವ ಉದ್ದೇಶದಿಂದ ಪರಿಶ್ರಮಿಸುತ್ತಿರುವಾಗ ಇಂತಹ ಕರುಳು ಹಿಚುಕುವ ದುರ್ಘಟನೆಗಳು ನಡೆಯಬೇಕೇ? ಆದರೂ ಆ ಮಾನಧನ ಸ್ವಾಭಿಮಾನದ ಸಿಂಹ ರಾಣಾಪ್ರತಾಪನು ಅಕ್ಬರನ ಆಳ್ವಿಕೆಯನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಅವನ ಹೃದಯ ಹಣತೆಯಲ್ಲ ಸ್ವಾಭಿಮಾನಪೂರ್ಣ ಸ್ವಾತಂತ್ರ್ಯದ ಜ್ಯೋತಿ ಆರಿಲಿಲ್ಲ. (ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತು ವರ್ಷಗಳಾಗುತ್ತಿರುವಾಗ, ರಾಜಸ್ಥಾನದಲ್ಲಿ ಕಾಂಗ್ರೆಸ್ಸಿನ ಕಾಲು ಕುಸಿಯುತ್ತಿರುವ ಸಮಯದಲ್ಲಿ ಚುನಾವಣೆ ಸಮೀಪಿಸುತ್ತಿರುವಾಗ ಭಾರತ ಸರಕಾರವು ರಾಣಾಪ್ರತಾಪ ಸಿಂಹನ ಜ್ಞಾಪಕಾರ್ಥ ಅಂಚೆಚೀಟಿಯನ್ನು ಗಡಿಬಿಡಿಯಲ್ಲಿ ಹಾಕುತ್ತದೆಯಂತೆ!....)

ಆ ಮುದ್ದು ಕುವರರಿಬ್ಬರು! ಜೀವಂತ ಸಮಾಧಿ ನಡೆಯುತ್ತಿದ್ದರೂ, ಅವರಂಗಜೇಬನ ಅಧೀನ ಜಬರದಸ್ತಿಗೂ ಭಯಪಡದ ವೀರಗುವರರು! ಹಿಂದೂ ಧರ್ಮವನ್ನು ತ್ಯಜಿಸಲು ಒಪ್ಪದೆ ಕಟುಕನ ಹೃದಯವನ್ನೇ ಹಿಂಡಿಬಿಟ್ಟ ಆ ಗುರುಗೋವಿಂದ ಸಿಂಹರ ಮಕ್ಕಳಿಬ್ಬರು!

"ನಿನ್ನ ಹೆಸರೇನು?" — 'ಆಝಾದ್'

"ನಿನ್ನ ತಂದೆಯ ಹೆಸರೇನು?" "ಭಾರತವರ್ಷ"

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಲಾಲಬಹದೂರರ ಸಾಧನೆ

ತಾಷ್ಕೆಂಟ್ ಭಾವನೆಯನ್ನು ಬಲಗೊಳಿಸಲು

ಲೇಖಕರು
ಶ್ರೀ ಕೇವಲ್ ಸಿಂಘ್

ಕಳೆದ ವರ್ಷ ಜನವರಿ ೩ರಂದ ಭಾರತದ ನಿಯೋಗವು—ಇದರ ಸದಸ್ಯನಾಗಿರುವ ಗೌರವ ನನ್ನದಾಗಿತ್ತು—ತಾಷ್ಕೆಂಟಿಗೆ ಆಗಮಿಸಿದಾಗ, ಏಷ್ಯನ್ ಸೋವಿಯೆತ್ ಗಣರಾಜ್ಯವಾದ ಉಜ್ಬೆಕಿಸ್ತಾನದ ಮಹಾನ್ ರಾಜಧಾನಿಯಲ್ಲಿ ಸ್ವಚ್ಛವಾದ ಬಿಸಿಲೂ, ಅದರ ಹಿಂದೆಯೇ ಒಂದು ಸೆಳಕು ಮಳೆಯೂ ಸ್ವಾಗತಿಸಿತು. ಸುಮಾರು ಐದು ತಿಂಗಳುಗಳ ಹಿಂದೆ ದುರದೃಷ್ಟವಶಾತ್ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಆರಂಭವಾಗಿದ್ದಂಥ ಘರ್ಷನೆಯ ಕೆಟ್ಟ ಪರಿಣಾಮಗಳನ್ನು ಇತ್ಯರ್ಥಗೊಳಿಸಲು ಈಗ ಸೋವಿಯೆತ್ ಸರ್ಕಾರವು ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸಲು ಕೈಕೊಂಡಿದ್ದ ಶಾಂತಿಪ್ರಿಯ ಉಪಕ್ರಮಗಳ ಬಗ್ಗೆ ಆಶೆ ಭರವಸೆಗಳನ್ನು ಸೂಚಿಸುವ ಸಂಕೇತವಿದಾಗಿತ್ತು.

ಅಧ್ಯಕ್ಷ ಕೊಸಿಗಿನ್‌ರಿಂದ ಸ್ವಾಗತಿಸಲ್ಪಟ್ಟು ಪ್ರಧಾನಿ ಲಾಲ್‌ಬಹಾದೂರ್ ಶಾಸ್ತ್ರಿಯವರು ಗೌರವ ರಕ್ಷೆಯನ್ನು ಸಮೀಕ್ಷಿಸುತ್ತಿದ್ದಂತೆ—ಸ್ವಾಗತದ ಒಂದು ಭಾಗವಾದ ಗೌರವ ರಕ್ಷೆ ವಿಮಾನ ನಿಲ್ದಾಣದಿಂದ ಆರಂಭವಾಗಿ, ಉದ್ದಕ್ಕೂ ನಗರದ ಬೀದಿಗಳಗುಂಟ—ಮುಂದೆ ಎಂಟು ದಿನಗಳ ಬಳಿಕ ಈ ಸಂತಸಕರ ದೃಶ್ಯ ತಿರುವು ಮುರುವಾದೀತೆಂಬ ಸೂಚನೆ ಒಂದಿಷ್ಟೂ ಇರಲಿಲ್ಲ. ತಾಷ್ಕೆಂಟಿನ ಈ ಉಲ್ಲಸಿತ ಜನ ಶೋಕತಪ್ತರಾಗುತ್ತಾರೆಂಬ ಚಿಹ್ನೆಯಾವುದೂ ಇರಲಿಲ್ಲ, ಭಾರತ—ಪಾಕಿಸ್ತಾನ್ ಉಪಖಂಡದ ಎರಡು ಮಹಾ ನೆರೆಹೊರೆಗಳ ನಡುವೆ ಹೊಸ ಸಂಬಂಧಗಳನ್ನು ಸ್ಥಾಪಿಸಲು ಪಾಕಿಸ್ತಾನ್ ಅಧ್ಯಕ್ಷರೊಡನೆ ಕೈಕೂಡಿಸಿದ ಮತ್ತು ಅಂಥ ಆಶೆ—ಸಾಧನೆಗಳ ಗಳಿಗೆಯಲ್ಲೇ ಶಾಂತಿ ಪುರುಷ ಶಾಸ್ತ್ರಿಜಿಯವರು ಅಸುನೀಗಿ ಶೋಕಿಸಬೇಕಾದಂಥ ಸಂದರ್ಭ ಒದಗುತ್ತದೆಯೆಂಬ ಸೂಚನೆ ಯಾವುದೂ ಇರಲಿಲ್ಲ.

ಈಗ ಒಂದು ವರ್ಷ ಕಳೆದಿದೆ. ನಾವು ತಾಷ್ಕೆಂಟಿನಲ್ಲಿಯ ಆ ಐತಿಹಾಸಿಕ ಘಟನೆಗಳ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಿದ್ದೇವೆ. ಒಪ್ಪಂದವಾಗುವುದರಲ್ಲಿ ಅತ್ಯುತ್ತಮ ಮಂತ್ರಿವನ್ನು ಸಲ್ಲಿಸಿದಂಥ ಸೋವಿಯತ್ ನಾಯಕರ ಸಮಕ್ಷಮದಲ್ಲಾದ ಒಡಂಬಡಿಕೆಯೂ, ಅನಂತರ ಘಟಿಸಿದ ದುರಂತದೊಡನೆ ಸ್ಮರಣೆಯಲ್ಲಿ ನಿಕಟವಾಗಿ ಉಳಿದಿದೆ. ಶಾಂತಿಯು ಆಗಸುವದರಿಂದಾಗಿ ದೊರೆತ ಸಂತೃಪ್ತ ಭಾವನೆಯನ್ನೂ ನಮ್ಮ ಮಹಾ ನಾಯಕನ ನಿರ್ಗಮನದಿಂದುಂಟಾದ ದುಃಖ ಭಾವನೆಯನ್ನೂ ಪ್ರತ್ಯೇಕಗೊಳಿಸುವುದು ಕಷ್ಟವಾಗಿದೆ. ಶಾಸ್ತ್ರೀಜಿಯವರ ಸ್ಮರಣೆಗ ಮತ್ತು ತಾಷ್ಕೆಂಟ್ ಘೋಷಣೆಗೆ ಭಾರತದ ಸಮರ್ಪಣೆಯು ಪುನರ್‌ಪ್ರತೀಕ ವಾಕ್ಯ ಹರವೋಚಿತವಾದ ಗೌರವ ಸಂದರು ಶಾಸ್ತ್ರೀಜೀ ಮತ್ತು ಅಧ್ಯಕ್ಷ ಅಯೂಬ್ ಖಾನರು ೧೯೬೬, ಜನವರಿ ೧೦ನೇ ತಾರೀಖು ತಾಷ್ಕೆಂಟಿನಲ್ಲಿ ನಡೆಸಿದ ಹಸ್ತಲಾಘವ, ಶಾಂತಿಯುತ ಸಹಜೀವನ ಪಥದಲ್ಲಿಯ ಈ ಮೈಲಿಗಲ್ಲಿನ ಮಹತ್ವ ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಅದೆಷ್ಟು ಮಹತ್ವಪೂರ್ಣವಾದುದೆಂಬುದನ್ನು ಪುನಃ ಒತ್ತಿ ಹೇಳುವುದೇ ಆಗಿದೆ.

ತಾಷ್ಕೆಂಟ್ ಘೋಷಣೆಯು ರಾಜ್ಯ ರಾಜ್ಯಗಳ ನಡುವಣ ಶಾಂತಿಯುತ ಸಹಜೀವನ ಸೂತ್ರದ ಮೂರ್ತಸ್ವರೂಪವಾಗಿದ್ದು, ಈ ಸಿದ್ಧಾಂತದ ವಿಕಾಸಕ್ಕೂ, ಅಂತರಾಷ್ಟ್ರೀಯ ಅಂಗೀಕಾರಕ್ಕೂ ಸೋವಿಯತ್ ಸರಕಾರವು ಬಹಳಷ್ಟು ಕಾರ್ಯ ಮಾಡಿದೆ. ರಾಜ್ಯರಾಜ್ಯಗಳ ಸಾಮಾಜಿಕ ಅಥವಾ ರಾಜಕೀಯ ವ್ಯವಸ್ಥೆಗಳಲ್ಲಿ ವ್ಯತ್ಯಾಸ ಅದೆಷ್ಟೇ ದೊಡ್ಡದಾಗಿರಲಿ, ಅವುಗಳ ನಡುವಣ ಸಮಸ್ಯೆಗಳು ಅದೆಷ್ಟೇ ಕ್ಲಿಷ್ಟತರವಾಗಿರಲಿ, ಇಂದಿನ ಆಧುನಿಕ ಜಗತ್ತಿನಲ್ಲಿ ಭಿನ್ನಭಿನ್ನ ರಾಜ್ಯಗಳು ಶಾಂತಿಯಿಂದಲೇ ಬಾಳಬೇಕು ಮತ್ತು ವೃತ್ತಿಗಾಗಿ ಹಂಬಲಿಸಬೇಕು ಎಂಬುದೇ ಈ ಸಿದ್ಧಾಂತದ ಸತ್ವ. ಬಲಪ್ರಯೋಗವು ಸಮಸ್ಯೆಗಳನ್ನು ಬಿಡಿಸುವ ಬದಲು ನಿರ್ಮಿಸುತ್ತದೆ ಅಥವಾ ತೀಕ್ಷ್ಣಗೊಳಿಸುತ್ತದೆಯೆಂಬುದೇ ಚರಿತ್ರೆಯ ಪಾಠವಾಗಿವಾಗ ಎಲ್ಲ ರಾಜ್ಯಗಳೂ ಲಷ್ಕರೀ ಸಾಹಸಗಳನ್ನು ಕೈಬಿಟ್ಟು, ಕೇವಲ ಶಾಂತಿಯುತವಾದ ವಿಧಾನಗಳಿಂದ ಮಾತ್ರವೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕಲಿತುಕೊಳ್ಳಬೇಕಾಗಿದೆ. ಭಾರತ ಮತ್ತು ಪಾಕಿಸ್ತಾನಗಳಂಥ ದೇಶಗಳಿಗಂತೂ ಇದು ವಿಶೇಷ ರೀತಿಯಲ್ಲಿ ಅಗತ್ಯವಾಗಿದೆ. ಯಾಕೆಂದರೆ ಇವುಗಳ ನಡುವೆ, ಇವುಗಳ ಇತಿಹಾಸವೇ ಒದಗಿಸಿಕೊಟ್ಟಿರುವಂಥ ಅತೀ ನಿಕಟ ಸಹಕಾರದ ಶಕ್ತಿವತ್ತಾದ ಆಧಾರ ಮಾತ್ರವೇ ಇಲ್ಲ, ಇವುಗಳ ಸಾಮಾನ್ಯ ಹಗೆಯಾದ ಬಡತನದ ವಿರುದ್ಧ ಸಹಕರಿಸುವಂಥ ಉಭಯ ಹಿತಾವಕಾಶವೂ ಇದೆ.

ಈಗ ಗತಿಸಿದ ವರ್ಷದಲ್ಲಿ ತಾಷ್ಕೆಂಟ್ ಘೋಷಣೆಯು ನೀಡಿದ ಭರವಸೆಗಳೆಲ್ಲ ಈಡೇರಿಲ್ಲ. ಘರ್ಷಣೆಯ ಕಸಕೂಚ್ಚಗಳನ್ನು ತೆಗೆದು ಸ್ವಚ್ಛಗೊಳಿಸುವಂಥ ಕಾರ್ಯಾರಂಭದಲ್ಲಿ ಮಾಡಬೇಕಾಗಿರುವಂಥದು ಇನ್ನೂ ಬೇಕಾದಷ್ಟು ಉಳಿದಿದೆ. ರಾಜ್ಯ ತಾಂತ್ರಿಕ ಸಂಬಂಧಗಳು ಪೂರ್ಣವಾಗಿ ಪುನಃ ಸ್ಥಾಪಿಸಲ್ಪಟ್ಟವೆ. ಸರೆಯಾಳುಗಳ ವಿನಿಮಯವಾಗಿದೆ, ಸೇನಾಶಕ್ತಿಗಳೂ ಹಿಂದೆ ತೆಗೆದುಕೊಳ್ಳಲ್ಪಟ್ಟವೆ, ಸ್ವಲ್ಪ ಮಟ್ಟಿಗೆ ಸಂಪರ್ಕ ಸ್ಥಾಪನೆಯೂ ನಡೆದಿದೆ, ಎರಡು ದೇಶಗಳ ನಡುವೆ ರಸ್ತೆ ಮತ್ತು ರೇಲುವೆ ಸಾಗಾಟವನ್ನು ಮುಕ್ತಗೊಳಿಸುವುದಾಗಿ ಮತ್ತು ಭಾರತ ಹಾಗೂ ಪಾಕಿಸ್ತಾನಗಳ ಜನತೆ ನಡುವೆ ಉತ್ತಮ ತಿಳುವಳಿಕೆ ನ್ಮು ಮೈತ್ರಿಯನ್ನು ಸಾಧ್ಯಗೊಳಿಸುವಂಥ ಜನಸಂಚಾರಂಕ್ಕೆ ಉತ್ತೇಜನ ನೀಡುವುದಾಗಿಯೂ ಭಾರತವು ಒದೇ ಪದೇ ಹೇಳಿದೆ. ಭಾರತವು ಸಾಂಸ್ಕೃತಿಕ ಹಾಗೂ ವ್ಯಾಪಾರ—ವಾಣಿಜ್ಯದ ನಿಯೋಗಗಳ ವಿನಿಮಯವನ್ನೂ ಉಭಯ ದೇಶಗಳ ಹಿತದೃಷ್ಟಿಯ ಆರ್ಥಿಕ ಸಹಕಾರ ವಿಷಯದ ಚರ್ಚೆಯನ್ನೂ ಸ್ವಾಗತಿಸುತ್ತದೆ. ಯಾವೊಂದು ಪಕ್ಷದಿಂದಲೂ ಪೂರ್ವ ಷರತ್ತುಗಳಿಲ್ಲದೆ ಮತ್ತು ಮೈತ್ರಿ ಹಾಗೂ ಸದ್ಭಾವನೆಯಿಂದ ಭಾರತ ಸರಕಾರವು ಎಲ್ಲ ಭಾರೀ ಸಮಸ್ಯೆಗಳನ್ನೂ ಪಾಕಿಸ್ತಾನದೊಂದಿಗೆ ಚರ್ಚಿಸಲು ತಾನು ಸಿದ್ಧವೆಂದೂ ಹೇಳಿದೆ. ಹೀಗಾದರೆ ಎರಡು ದೇಶಗಳೂ ಕ್ರಮೇಣ ಭಿನ್ನತೆಗಳನ್ನು ಬಗೆಹರಿಸಿಕೊಂಡು ಅತ್ಯುತ್ತಮ ನೆರೆಹೊರೆಗಳನ್ನು ಸ್ಥಾಪಿಸಿಕೊಳ್ಳಬಹುದು.

ಈ ಎಲ್ಲ ಸೂಚನೆಗಳು ತಾಷ್ಕೆಂಟ್ ಘೋಷಣೆಗೆ ಅನುಗುಣವಾಗಿ ಪಾಕಿಸ್ತಾನದೊಡನೆ ಸಂಬಂಧಗಳನ್ನು ಸಹಜಗೊಳಿಸಿಕೊಳ್ಳಬೇಕೆಂಬ ಭಾರತದ ಆಕಾಂಕ್ಷೆಯ ಭಾಗವಾಗಿದ್ದು ಇದೇ ಕಾಲಕ್ಕೆ ಭಾರತವು ದೀರ್ಘಕಾಲದ ಬಹುದೊಡ್ಡ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಪ್ರಯತ್ನಗಳ ಮೂಲಕ ಹಾಗೂ ಎರಡೂ ದೇಶಗಳು ಹಿತಪಡೆಯಬಹುದಾದಂಥ ಕ್ಷೇತ್ರಗಳಲ್ಲಿ ಹಕರಿಸುವ ಮೂಲಕ ಕಾರ್ಯ ಮಾಡುತ್ತದೆ. ತಮ್ಮ ಸಾಮಾನ್ಯ ಹಿತದ ಮೇಲೆ ಬಹಳಷ್ಟನ್ನು ಕಟ್ಟಬೇಕಾಗಿರುವಂಥ ಭಾರತ—ಪಾಕಿಸ್ತಾನಗಳನ್ನು ಬಿಟ್ಟರೆ ಬೇರೆ ಯಾವ ಎರಡು ದೇಶಗಳಿಗೂ ಇಲ್ಲ. ಈ ಜಗತ್ತಿನಲ್ಲೇ ಪರಮೋತ್ಕೃಷ್ಟವಾದಂಥ ಕೆಲವೊಂದು ಸಾಹಿತ್ಯ, ಕಲೆ,

ಮರುಕೊಳಿಸುವ
ತಾಷ್ಕೆಂಟ್ ಜಗತ್ ಸಂದೇಶ

ತಾಷ್ಕೆಂಟ್ ಘೋಷಣೆಯಾಗಿ ಇದೇ ೧೦ಕ್ಕೆ ಒಂದು ವರ್ಷ ಮುಗಿಯಿತು. ಈ ಘೋಷಣೆ ಕೇವಲ ಭಾರತ ಮತ್ತು ಪಾಕಿಸ್ತಾನ ದೇಶಗಳ ಸಂಬಂಧಕ್ಕೆ ಮಾತ್ರ ಮೀಸಲಾಗಿರದೆ ಇತರತ್ರದಲ್ಲೂ ಮಹತ್ವದ ಘೋಷಣೆ ಎನಿಸಿದೆ. ಸಮಸ್ಯೆಗಳನ್ನು ಬಿಡಿಸಲಿಚ್ಛಿಸುವ ಸದ್‌ಭಾವನೆಯುಳ್ಳ ಶಾಂತಸ್ವಭಾವದ ಜನರು, ಅಂತರ್‌ರಾಷ್ಟ್ರೀಯ ಸಮಸ್ಯೆಗಳು ಎಷ್ಟೇ ಗಂಭೀರ ಸ್ವರೂಪವಿದ್ದರೂ ಅವುಗಳನ್ನು ಶಾಂತರೀತಿಯಲ್ಲಿ ಬಿಡಿಸಲು ಶಕ್ತರಾಗಲಿಲ್ಲವೆಂಬ ಮಾತನ್ನು ತಾಷ್ಕೆಂಟ್ ಸಮಸ್ತ ಪ್ರಪಂಚಕ್ಕೆ ನೆನಪು ಮಾಡಿಕೊಡುತ್ತದೆ.

ದಿವಂಗತ ಪ್ರಧಾನಿ ಲಾಲಬಹದ್ದೂರ್ ಶಾಸ್ತ್ರೀಜಿಯವರು ಮತ್ತು ಪಾಕಿಸ್ತಾನದ ಅಧ್ಯಕ್ಷ ಅಯೂಬಖಾನ್ ಅವರು ತಾಷ್ಕೆಂಟ್ ಘೋಷಣೆಗೆ ಅಂಕಿತ ಹಾಕಿ ಒಂದು ವರ್ಷ ಕಳೆಯಿತು. ಈ ಮಧ್ಯೆ ಭಾರತ ಪಾಕಿಸ್ತಾನದ ಬಾಂಧವ್ಯದ ವಿಷಯದಲ್ಲಿ ಹೇಳಿಕೊಳ್ಳುವಂತಹ ಸಾಧನೆಗಳೇನೂ ಸಂಭವಿಸಲಿಲ್ಲ, ನಿಜ. ಆದರೆ ಇಂತಹ ಒಪ್ಪಂದದ ಬೆಲೆ ಕಟ್ಟುವಾಗ ಆದರ ೪೦೦೦ ಪಾರ್ ಶಬ್ದ ರಚನೆಗೇನೇ ಮಹತ್ವ ಕೊಡಬೇಕಾದುದೇನೂ ಇಲ್ಲ.

ಎರಡು ದೇಶಗಳ ಗಡುಜಿನ ಸಮಸ್ಯೆಗಳನ್ನು ಬಿಡಿಸಲು ಸಾಧ್ಯ ಮಾಡುವದು ಎಂದಾಗಲೀ ಅಥವಾ ಈ ಘೋಷಣೆಗೆ ರಷಿಯವು ಬಹಳ ಮಹತ್ವದ ಭಾಗವಹಿಸಿತೆಂದಾಗಲೀ ಮಾತ್ರ ಭಾರತವು ತಾಷ್ಕೆಂಟಿಗೆ ಅಂಟಿಕೊಂಡು ಕೂತಿಲ್ಲ. ಆದರೆ ಭಾರತವು ತಾಷ್ಕೆಂಟ್ ಘೋಷಣೆಗೆ ಮಹತ್ವ ಕೊಡುವ ಕಾರಣವೇನೆಂದರೆ, ಅಂತರ್‌ರಾಷ್ಟ್ರೀಯ ರಂಗದಲ್ಲಿ ಸಾಮಾನ್ಯವಾಗಿ ಎಂತಹ ಮಾರ್ಗದರ್ಶಕ — ತತ್ವಗಳನ್ನು ಪ್ರಯೋಗಿಸಬೇಕೆಂಬುದನ್ನು ಭಾರತವು ಪ್ರತಿಪಾದಿಸುತ್ತ ಬಂದಿದೆಯೋ, ಅದನ್ನೇ ಈ ಘೋಷಣೆಯು ಪ್ರತಿಬಿಂಬಿಸುತ್ತದೆ. ಎಲ್ಲ ಅಂತರ್‌ರಾಷ್ಟ್ರೀಯ ಸಮಸ್ಯೆಗಳೂ ಶಾಂತಿ ಮಾರ್ಗದಿಂದ ಇತ್ಯರ್ಥಗೊಳ್ಳಬೇಬೇಕು. ಒಂದು ದೃಷ್ಟಿಯಿಂದ ನೋಡಿದರೆ, ಯಾವ ತತ್ವವನ್ನು ವಿಶ್ವಸಂಸ್ಥೆ ಸಾರಿ ಹೇಳುತ್ತಿದೆಯೋ ಆ ತತ್ವವನ್ನೇ — ಅಂದರೆ, 'ಅಂತರ್‌ರಾಷ್ಟ್ರೀಯ ಸಮಸ್ಯೆಗಳು ಶಾಂತಿ—ಸಂಧಾನಗಳಿಂದ ಮಾತ್ರ ಪರಿಹರಿಸಬೇಕು'—ತಾಷ್ಕೆಂಟ್ ಪುನರುಚ್ಚರಿಸುತ್ತದೆ.

ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ಯುದ್ಧಕ್ಕೆ ಇಳಿಯದಲೆ ತಮ್ಮ ನಡುವಣ ಸಮಸ್ಯೆಗಳನ್ನು ಶಾಂತಿ ಮಾರ್ಗದಿಂದ ಬಿಡಿಸಿಕೊಳ್ಳಬೇಕು. ಎಂಬುದೂ ತಾಷ್ಕೆಂಟ್ ಘೋಷಣೆಯ ಮುಖ್ಯ ತತ್ವವಾಗಿದೆ. ಇದು ಭಾರತವು ಪಾಕಿಸ್ತಾನಕ್ಕೆ ಕಾಲಕಾಲಕ್ಕೆ "ಯುದ್ಧ ನಿಷೇಧ' ಒಪ್ಪಂದ ಬಗ್ಗೆ ಇತ್ತ ಕರೆಯ ಮರುಧ್ವನಿ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಹಜೀವನವನ್ನು ಅನುಷ್ಠಾನಕ್ಕೆ ತರಲು ಭಾರತದ ಯತ್ನಗಳಲ್ಲಿ ಒಂದು.

ಯುದ್ಧಕ್ಕೆ ಇಳಿಯದೆ ಸಮಸ್ಯೆಗಳನ್ನು ಬಿಡಿಸಲು ಭಾರತವು ಎಂದಿನಿಂದಲೂ ಪ್ರಯತ್ನಿಸುತ್ತಿದೆ. ೧೯೪೯ ಡಿಸೆಂಬರ್ ೨೨ರಂದು ಯುದ್ಧ ನಿಷೇಧದ ದಾರಿಯಲ್ಲಿ ಘೋಷಣೆಯೊಂದನ್ನು ಮಾಡಿತು. ಈ ಸಂದರ್ಭದಲ್ಲಿ ಪಾಕಿಸ್ತಾನದ ಪ್ರಧಾನಿಗೆ ಪತ್ರ ಬರೆಯುತ್ತ ದಿವಂಗತ ಶ್ರೀ ಜವಾಹರಲಾಲ ನೆಹರೂಜಿಯವರು ಹೀಗೆ ಹೇಳಿದ್ದಾರೆ.

"ನಮ್ಮ ನಡುವಣ ಭೇದಗಳನ್ನು ಶಾಂತಿ ಮಾರ್ಗದಲ್ಲಿ ಬಿಡಿಸಿಕೊಳ್ಳೋಣ ಎಂಬ ಘೋಷಣೆ ಕೂಡಾ ಎರಡೂ ದೇಶಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಿದೆ. ಏಕೆಂದರೆ ಇದರಿಂದಾಗಿ ಜನರ ಮನದಲ್ಲಿಯ ಯುದ್ಧದ ಭಯವು ಇಲ್ಲದಂತಾಗುವದು.'

೧೯೫೬ರಲ್ಲಿ ದಿವಂಗತ ಜವಾಹರಲಾಲ ನೆಹರೂಜಿಯವರು ಮತ್ತೊಮ್ಮೆ ಇದೇ ರೀತಿ ಮನವಿ ಮಾಡಿಕೊಂಡರು.

ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಇಂತಹ ಒಪ್ಪಂದಕ್ಕೆ ವ್ಯಾವಹಾರಿಕ ಸ್ವರೂಪ ಕೊಡಲೆಂದೇ ತಾಷ್ಕೆಂಟಿಗೆ ಹೋದದ್ದು. ತಾಷ್ಕೆಂಟಿಗೆ ತೆರಳುವ ಮುನ್ನ, ದಿವಂಗತ ಶಾಸ್ತ್ರೀಜೀಯವರು ಹೇಳಿದರು, "ಆದಷ್ಟು ಬೇಗ ಎರಡೂ ದೇಶಗಳು ಉತ್ತಮ ನೆರೆಹೊರೆಯವರಾಗಿ ಬಾಳಲೇ ಬೇಕಾಗಿದೆ ಎಂಬುದನ್ನು ಗುರುತಿಸಿದಷ್ಟೂ ಒಳ್ಳೆಯದು. ನಾವು ನಮ್ಮ ದೇಶಗಳ ಪುನರ್ ನಿರ್ಮಾಣಕ್ಕೆ ನಮ್ಮನ್ನು ಅರ್ಪಿಸಿಕೊಂಡರೆ ಇನ್ನೂ ಉತ್ತಮ ಬದುಕನ್ನು ಬಾಳಬಹುದು. ಅಂತೆಯೇ ಪಾಕಿಸ್ತಾನದೊಂದಿಗೆ ಸ್ನೇಹದಿಂದ ಬಾಳುವ ಹೊಸ ಮನ್ವಂತರ ಸ್ಥಾಪನೆಗೆ ಶ್ರೀ ಶಾಸ್ತ್ರೀಜಿ ತಾಷ್ಕೆಂಟಿಗೆ ಧಾವಿಸಿದರು.

ತಾಷ್ಕೆಂಟನಲ್ಲಿ ಶೃಂಗ್ ಸಭೆ ನಡೆದಾಗ ಶಾಸ್ತ್ರೀಜಿಯವರು ಒಮ್ಮೆ ವಿವಾದಗಳ ಇತ್ಯರ್ಥಕ್ಕೆ ಬಲಪ್ರಯೋಗವನ್ನು ನಿಷೇಧಿಸಿದಲ್ಲಿ, ಎರಡೂ ದೇಶಗಳ ಜನತೆಯು ನೆಮ್ಮದಿಯಿಂದ ಬಾಳಿ ಬಾಂಧವ್ಯದ ಹೊಸ ಅಧ್ಯಾಯವೊಂದನ್ನು ಪ್ರಾರಂಭಿಸಬಹುದು" ಎಂದು ನುಡಿದಿದ್ದಾರೆ.

ಬಲ ಪ್ರಯೋಗದ ವಿರುದ್ಧ ಭಾರತವು ಪ್ರತಿಪಾದಿಸಿದೆ. ಈ ತತ್ವವೇ ತಾಷ್ಕೆಂಟ್ ಘೋಷಣೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಉಭಯತರೂ ಗಡಿಗುಂಟ ಸೈನ್ಯದ ಚಲನವಲನವನ್ನು ಕಡಿಮೆ ಮಾಡುವದು, ಶಾಂತಿ ಸಂಧಾನಕ್ಕೆ ಉತ್ತಮ ವಾತಾವರಣವನ್ನು ನಿರ್ಮಿಸುವದು, ಯುದ್ಧ ಕೈದಿಗಳ ವಿನಿಮಯ, ಶಾಂತ ವಾತಾವರಣ ಸ್ಥಾಪನೆ, ಎರಡೂ ದೇಶಗಳ ಆರ್ಥಿಕ ವಿಷಯಗಳ ಬಗ್ಗೆ ಸಹಕಾರ— ಆರ್ಥಿಕ ವಿಷಯಗಳ ಬಗ್ಗೆ ಸಹಕಾರ— 'ಮುಂತಾದವು ತಾಷ್ಕೆಂಟ್ ಒಪ್ಪಂದದ ಇತರ ಪ್ರಯೋಜನದ ವಿಷಯಗಳು.

ತಾಷ್ಕೆಂಟ್ ಘೋಷಣೆ ಸೀಮಿತ ಮ

(ಒಂಭತ್ತನೇ ಪುಟ ನೋಡಿ)

ಕರ್ನಾಟಕದ ಹಳ್ಳಿಯೊಂದರ ಸುಂದರ ರಸ್ತೆ.

ವಾಸ್ತುಶಿಲ್ಪ ಮತ್ತು ಸಂಗೀತ ಕೃತಿಗಳನ್ನು ನಿರ್ಮಿಸಿ ನೀಡಿದಂಥ ಸಾಂಸ್ಕೃತಿಕ ಪರಂಪರೆಯು, ಪ್ರಭಾವಗಳ ಸಂಮಿಶ್ರಣದ ಉತ್ತಮ ದೃಷ್ಟಾಂತವಾಗಿದೆ. ಈ ಎಲ್ಲ ರಂಗಗಳ ಹಿತದ ದೃಷ್ಟಿಯಿಂದ, ಮತ್ತು ದುರದೃಷ್ಟವಶಾತ್ ಸಂಬಂಧಗಳು ಕೃತ್ರಿಮವಾಗಿ ಕಡಿದು ಹೋದ ಈ ಎರಡು ಜನತೆಗಳ ಸಂತೋಷಾರ್ಥ ಸಾಂಸ್ಕೃತಿಕ ವಿನಿಮಯಗಳನ್ನು ಪುನರುಜ್ಜೀವನಗೊಳಿಸುವುದು ಆಗತ್ಯವಾಗಿದೆ. ವಾಣಿಜ್ಯ ಮತ್ತು ಆರ್ಥಿಕ ಸಹಕಾರದ ಕ್ಷೇತ್ರಗಳಲ್ಲೂ ಇದೇ ರೀತಿ ಫಲಪ್ರದ ವಿನಿಮಯದ ಪುನರಾರಂಭವಾಗಬೇಕು. ಎರಡು ದೇಶಗಳೂ ತಮ್ಮ ಜನರ ಜೀವನಗಳನ್ನು ಉತ್ತಮಪಡಿಸುವುದಕ್ಕಾಗಿ ಒಂದೇ ಬಗೆಯ ನಾನಾ ಮಾರ್ಗಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಅವು ಪರಸ್ಪರ ತಿಳಿದುಕೊಳ್ಳಬಹುದಾದಂಥದೂ, ಚರ್ಚಿಸಬಹುದಾದಂಥದೂ ಬೇಕಾದಷ್ಟಿದೆ. ದುರಾದೃಷ್ಟವಶಾತ್ ಈ ದಿಸೆಯಲ್ಲಿ ಪ್ರಯತ್ನಗಳೆಲ್ಲ ಯಶಸ್ವಿಯಾಗದಿರುವುದು ಎರಡು ಜನತೆಗಳಿಗೂ ಹಿತವಲ್ಲ. ಸಾಧ್ಯವಾದಾಗ ಎಲ್ಲ ರಂಗಗಳಲ್ಲೂ ಸಂಬಂಧಗಳ ಸುಧಾರಣೆಯನ್ನು ಒದಗಿಸಿಕೊಡುವ ತಷ್ಕೆಂಟ್ ಘೋಷಣೆಯ ಅರ್ಥ ಭಾವಗಳೆರಡಕ್ಕೂ ಭಾರತ ಸರ್ಕಾರವು ಬದ್ಧವಾಗಿದೆ. ಗುರಿಸಾಧನೆಗೆ ಅದು ಘೋಷಣೆಯ ಪ್ರಕಾರ ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿದೆ. ಈ ದಿಸೆಯಲ್ಲಿ ಅದು ದೃಢವಾಗಿ ನಿಂತಿದೆ ಮತ್ತು ಈಗ ಒಂದು ವರ್ಷದ ಹಿಂದೆ ಸೋವಿಯೆತ್ ಭೂಮಿಯ ಮೇಲೆ ಆರಂಭವಾದ ಭಾರತ – ಪಾಕಿಸ್ತಾನಗಳ ಸಂಬಂಧವನ್ನು, ಪಾಕಿಸ್ತಾನ್ ಸರ್ಕಾರದ ಸಹಕಾರದೊಂದಿಗೆ ಫಲಪ್ರದವಾಗಿ ನೂತನವಾಗಿ ನಿರ್ಮಿಸುವ ಕಾರ್ಯ ಈಡೇರುತ್ತದೆಯೆಂಬ ಆಶೆಯನ್ನೂ ಮುಂದುವರಿಸಿಕೊಂಡಿದೆ.

ಭಾರತ——ಪಾಕಿಸ್ತಾನಗಳ ನಡುವಣ ಸಂಬಂಧಗಳ ಸುಧಾರಣೆಯಾಗಬೇಕೆಂಬುದು ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಅತ್ಯಂತ ಕಳಕಳಿಯ ಆಶಯವಾಗಿದ್ದು ತಷ್ಕೆಂಟ್ ಒಡಂಬಡಿಕೆಗೆ ಭಾರತವು ದೃಢವಾಗಿ ಅಂಟಿಕೊಂಡಿದೆಯೆಂಬುದನ್ನು ಪದೇ ಪದೇ ವ್ಯಕ್ತಪಡಿಸಿದ್ದಾರೆ. ೧೯೬೬, ಜುಲೈ ೭ರಂದು ರಾಷ್ಟ್ರವನ್ನುದ್ದೇಶಿಸಿ ಬಾನುಲಿ ಭಾಷಣ ಮಾಡುತ್ತ ಪ್ರಧಾನಿಗಳು ಹೀಗೆಂದರು: "ತಷ್ಕೆಂಟ್ ಘೋಷಣೆಯನ್ನು ಮತ್ತಷ್ಟು ಮುಂದೆ ಹಾಗೂ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸುವ ವಿಷಯವನ್ನು ಯಾವದೇ ಮಟ್ಟದಲ್ಲಿ ಚರ್ಚಿಸುವ ಆಶಯವನ್ನೂ, ತಷ್ಕೆಂಟ್ ಭಾವನೆಯನ್ನು ಪುನಃಸ್ಥಾಪಿಸುವ ಆಶಯವನ್ನೂ ನಾವು ವ್ಯಕ್ತಪಡಿಸಿದ್ದೇವೆ. ನಮ್ಮ ಗಡಿಗಳಲ್ಲಿ ಜನರ ವಿಮುಕ್ತ ಸಂಚಾರವೂ, ಸಮಾಚಾರ ಪ್ರಸಾರವೂ ಮತ್ತಷ್ಟು ಹೆಚ್ಚಲಿ. ಆರ್ಥಿಕ ಸಹಕಾರದ ಕ್ಷೇತ್ರಗಳನ್ನು ಕಂಡು ವಿಸ್ತರಿಸಿಕೊಳ್ಳೋಣ. ಬಹುದೊಡ್ಡ ಗಡಿಪ್ರಶ್ನೆಗಳೆಂದು ಉಳಿದಿರುವಂಥ ವಿಷಯಗಳನ್ನು ತೀವ್ರವಾಗಿ ಪರಿಹರಿಸೋಣ. ಪೂರ್ವ ಪ್ರದೇಶದಲ್ಲಿ ಗುಳೇ ಬರುತ್ತಿರುವವರ ಮಾನವೀಯ ಸಮಸ್ಯೆಗಳನ್ನು ಬಿಡಿಸಲಿಕ್ಕಾಗುತ್ತದೆಯೋ ಇಲ್ಲವೋ ಎಂಬುದನ್ನು ನೋಡೋಣ. ಸರಿಯಾದ ಮಾರ್ಗದಲ್ಲಿ ನಾವು ಈ ವಿಷಯಗಳ ಪರಿಹಾರ ಕಂಡುಕೊಂಡರೆ ನಮ್ಮ ಎಲ್ಲ ವ್ಯತ್ಯಾಸಗಳೂ ನ್ಯಾಯವಾಗಿ, ಉಚಿತವಾಗಿ ಮತ್ತು ಆತಿನವಾಗಿ ಇತ್ಯರ್ಥಗೊಳ್ಳುತ್ತವೆಯೆಂಬ ಭರವಸೆ ನನಗಿದೆ.

— —

ಪರಿಚಯ

ಕಂಪು ಬೀರುವ ಕಸ್ತೂರಿ

ಬರೆದವರು: ಶ್ರೀ ಸ. ನಾರಾಯಣ

'ಕಸ್ತೂರಿ ತಿಲಕಂ ಲಲಾಟ ಫಲಕೇ ವಕ್ಷಃಸ್ಥಲೇ ಕೌಸ್ತುಭಂ"—ಎಂದು ತ್ರಿಭುವನ ಮೋಹನ ಬಾಲ ಗೋಪಾಲನನ್ನು ಕವಿ ಲೀಲಾ ಶುಕ ಭಕ್ತಿಯಿಂದ ವರ್ಣಿಸುತ್ತಾನೆ. ಅಂದರೆ ಶ್ರೀ ಕೃಷ್ಣನ ಹಣೆಯಲ್ಲಿ ಕಸ್ತೂರಿ ತಿಲಕವಿತ್ತು. ಆದ ಕಾರಣ ಕಸ್ತೂರಿಯ ಪವಿತ್ರತೆ ಹಿರಿದು ಎಂದು ಗೊತ್ತಾಗುತ್ತದೆ.

ಭಾರತೀಯ ಪ್ರಾಚೀನ ಗ್ರಂಥಗಳಲ್ಲಿಯೂ ಕಸ್ತೂರಿಯ ಪ್ರಸ್ತಾಪವಿದೆ. ಮಂಗಳ ದ್ರವ್ಯಗಳಲ್ಲಿ ಅದಕ್ಕೆ ಹಿರಿಯ ಸ್ಥಾನ. ಕಸ್ತೂರಿ ಪ್ರಾಚೀನ ಶೃಂಗಾರ ಸಾಧನಗಳಲ್ಲಿ ಪ್ರಸಿದ್ಧವಾದುದು. ವಾತ್ಸ್ಯಾಯನನ 'ಕಾಮಸೂತ್ರ'ದಲ್ಲಿಯೂ ಕಸ್ತೂರಿಯ ಪ್ರಸ್ತಾಪವಿದೆ. ಕಸ್ತೂರಿ ಕೇವಲ ಶೃಂಗಾರ ಸಾಧನ ಮಾತ್ರವಲ್ಲದೆ ಶಕ್ತಿವರ್ಧಕ ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿಯೂ ಪ್ರಮುಖವಾದುದು. ಭಾರತದಲ್ಲಿ ಕಸ್ತೂರಿಗೆ ಪ್ರಾಚೀನ ಕಾಲದಿಂದಲೂ ಮಹತ್ವವಿತ್ತು ಎಂಬ ಸಂಗತಿ ಆಯುರ್ವೇದಗಳಿಂದ, ಹಲವಾರು ಗ್ರಂಥಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಶರದುತ್ಸವ ಎಂಬ ಹಬ್ಬವೊಂದು ಮಂಚೂರಿಯಾದಲ್ಲಿ ವೈಭವದಿಂದ ಆಚರಿಸಲ್ಪಡುವುದು. ಆ ಕಾಲದಲ್ಲಿ ಧನಾಧಿಪತಿಯನ್ನು ಕಸ್ತೂರಿಯ ರೂಪದಲ್ಲಿ ಪೂಜಿಸುವರು. ಆಗ ಪೂಜೆ, ನೃತ್ಯ, ಸಂಗೀತ, ಭೋಜನ ಕೂಟಗಳಲ್ಲಿ ಕಸ್ತೂರಿಗೆ ವಿಶೇಷ ಪ್ರಾಧಾನ್ಯ ದೊರೆಯುತ್ತದೆ. ಈ ಉತ್ಸವಕ್ಕೆ "ಕಸ್ತೂರಿ ಉತ್ಸವ" ಎಂಬ ಹೆಸರೂ ವಾಡಿಕೆಯಲ್ಲಿದೆ.

ಈ ಉತ್ಸವದ ಆರಂಭದಲ್ಲಿ ಸ್ತ್ರೀ, ಪುರುಷರೆಲ್ಲರೂ ಶುಚಿರ್ಭೂತರಾಗಿ ನೂತನ ವಸ್ತ್ರಾಲಂಕಾರ ಭೂಷಿತರಾಗಿ ವಾದ್ಯ ಘೋಷಗಳೊಡನೆ ಕಸ್ತೂರಿ ಮೃಗದ ಶೋಧಕ್ಕಾಗಿ ತೆರಳುತ್ತಾರೆ. ಪ್ರಧಾನ ಪುರೋಹಿತ ಕಸ್ತೂರಿ ಮೃಗವನ್ನು ತನ್ನ ಮನೆಯಲ್ಲಿ ಬಂಧಿಸಿರುತ್ತಾನೆ. ಶೋಧಕ್ಕೆ ಹೊರಟ ಜನ ಪುರೋಹಿತನ ಮನೆಗೆ ಬಂದು ಆ ಮೃಗವನ್ನು ಪಡೆದು ಮೆರವಣಿಗೆಯಲ್ಲಿ ನಿಯೋಜಿತ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಕಸ್ತೂರಿ ಮೃಗಕ್ಕೆ ಸಾಮೂಹಿಕ ಪೂಜೆ ನೆರವೇರುತ್ತದೆ. ಅದಕ್ಕೆ ರುಚಿಕರ ಭಕ್ಷ್ಯ ಭೋಜ್ಯಗಳು ದೊರೆಯುತ್ತವೆ. ಅನಂತರ ಕಸ್ತೂರಿ ಮೃಗವನ್ನು ಸಂಗೀತ ನೃತ್ಯಗಳೊಂದಿಗೆ ಮನೆ ಮನೆಗೂ ಕರೆದೊಯ್ಯಲಾಗುವುದು ಅದಕ್ಕೆ ಪೂಜೆ—ಆಹಾರ ಮತ್ತು ಪುರೋಹಿತರಿಗೆ ದಕ್ಷಿಣೆ ದೊರೆಯುವುದು.

ಚೀನಾ ದೇಶದಲ್ಲಿಯೂ ಹಿಂದೆ ಕಸ್ತೂರಿ ಮೃಗಕ್ಕೆ ವಿಶೇಷ ಪ್ರಾಶಸ್ತ್ಯವಿತ್ತು. ಅದು ಈಶ್ವರೀಯ ಜ್ಯೋತಿಯ ಪ್ರತೀಕವೆಂದು ಜನ ಭಾವಿಸಿದ್ದರು. ಚೀನಾದಲ್ಲಿ ಹಿಂದೆ ಕಸ್ತೂರಿ ಮೃಗದ ಬೇಟೆಯನ್ನು ನಿಷೇಧಿಸಿದ್ದರು. ತಾವೋ ಸಂಪ್ರದಾಯಗಳು ಮೃಗದ ಬೇಟೆಯನ್ನು ಬಳಕೆಗೆ ತಂದರು. ಈಗಲೂ ಕಸ್ತೂರಿ ಮೃಗದ ಬಗೆಗೆ ಪವಿತ್ರ ಭಾವನೆ ಇರುವ ಜನರುಂಟು.

ಟಿಬೆಟಿನಲ್ಲಿ ಕಸ್ತೂರಿ ಮೃಗದ ದರ್ಶನ ಭಗವಾನ್ ಬುದ್ಧ ದೇವನ ಆಶೀರ್ವಾದದಂತೆ ಶುಭದಾಯಕ ಎಂಬ ಭಾವನೆ ಇತ್ತು. ಅಲ್ಲಿಯ ಜನತೆ ಪುರಾತನ ಕಾಲದಿಂದಲೂ ಕಸ್ತೂರಿ ಮಿಶ್ರಿತ ಧೂಪವನ್ನು ಉರಿಸುತ್ತಿದ್ದರು. ಟಿಬೇಟಿನ ಲಾಮಾ (ಬೌದ್ಧ ಗುರುಗಳು) ಗಳು ಕಸ್ತೂರಿಯಿಂದ ಪ್ರಭಾವಶಾಲಿ ಔಷಧಿಗಳ ತಯಾರಿಕೆಯನ್ನು ಅರಿತಿದ್ದರು. ಕಸ್ತೂರಿಯಿಂದ ನಿರ್ಮಿತವಾದ ಔಷಧಿಯ ಸೇವನೆಯಿಂದ ಅಕ್ಷಯ ಯೌವನ ಸಿದ್ಧಿಸುವುದೆಂಬ ನಂಬಿಕೆ ಕೆಲ ಜನರಿಗಿತ್ತು ಎಂಬ ಸಂಗತಿಯು ತಿಳಿದು ಬರುತ್ತದೆ.

ಕಸ್ತೂರಿ ಮೃಗವು ಆಕಾರದಲ್ಲಿ ದಷ್ಟಪುಷ್ಟ ನೋಟದಂತಿರುತ್ತದೆ. ಅದರ ಹಿಂಭಾಗ ಮುಂಭಾಗಕ್ಕಿಂತ ಎತ್ತರವಾಗಿರುತ್ತದೆ. ಅದರ ಗೊರಸು ಬಲವಾಗಿರುತ್ತವೆ. ಅದರ ನಾಲ್ಕು ಕಾಲುಗಳೂ ನೆಲದ ಮೇಲೆ ಊರಿಕೊಳ್ಳುತ್ತವೆ. ಮೊಂಡದಿಂದ ಕುಂಬಿದ ಅದರ ಬಾಲದ ತುದಿಗೆ ರೋಮ ಗುಚ್ಛ (ಕೂದಲ ಗುಂಪು) ಇದೆ. ಕಸ್ತೂರಿ ಮೃಗಕ್ಕೆ ಕೊಂಬುಗಳು ಇರುವುದಿಲ್ಲ. ಆದರೆ ಬಾಯಿಯ ಹಲ್ಲುಗಳು (ತೀಕ್ಷ್ಣ) ತೀಕ್ಷ್ಣವಾಗಿರುತ್ತವೆ. ಚೀನಾ ದೇಶದ ನದೀ ಪ್ರದೇಶದಲ್ಲಿ ವಾಸಿಸುವ ಕಸ್ತೂರಿ ಮೃಗಗಳ ಹಲ್ಲು ಚೂಪಾಗಿರುವುದಿಲ್ಲ. ಬೂದು ಬಣ್ಣದ ದೇಹದ ಪ್ರಾಣಿಗೆ ಅನೇಕ ವೇಳೆ ಮೈಮೇಲೆ ಚುಕ್ಕಿಗಳೂ ಇರುವುದುಂಟು.

ಕಸ್ತೂರಿ ಮೃಗದ ನಾಭಿಗೆ ಸೇರಿದ ಗ್ರಂಥಿ (ರಂಧ್ರ)ಯಲ್ಲಿ 'ಕಸ್ತೂರಿ' ಯಲ್ಲಿ ಸಂಚಿತವಾಗಿರುತ್ತದೆ. ಈ ಕಸ್ತೂರಿಗಾಗಿಯೇ ವರ್ಷವೂ ಅಸಂಖ್ಯಾತ ಕಸ್ತೂರಿ ಮೃಗಗಳ ವಧೆ ನಡೆಯುತ್ತಿರುತ್ತದೆ.

ಹಿಮಾಲಯದ ೪೦೦೦ ದಿಂದ ೧೨೦೦೦ ಅಡಿಗಳು ಎತ್ತರದ ವರೆಗಿನ ಪ್ರದೇಶದಲ್ಲಿ ಕಸ್ತೂರಿ ಮೃಗ ವಾಸ ಮಾಡುತ್ತದೆ. ಹಿಮಾಲಯದಲ್ಲಿ ಮಾತ್ರವಲ್ಲದೆ ಗಿಲಗಿಟ್ (ಗಿಲ್ಗಿಟ್) ಮಧ್ಯ ಏಷ್ಯ ಮತ್ತು ಸೈಬೀರಿಯಾಗಳಲ್ಲಿಯೂ ಕಸ್ತೂರಿ ಮೃಗಗಳು ವಿಶೇಷವಾಗಿವೆ.

ಕಸ್ತೂರಿ ಮೃಗ ಏಕಾಂತಪ್ರಿಯ—ವಾಸಿ ಪ್ರಾಣಿ. ಗರ್ಭದಾನದ ದಿನಗಳಲ್ಲಿ ಮಾತ್ರ ಗಂಡು ಹೆಣ್ಣು ಮೃಗಗಳು ಜೊತೆಯಾಗಿ ಸಂಚರಿಸುತ್ತವೆ. ಚಿಗುರೆಲೆ ಮತ್ತು ಹಸಿರು ಗರಿಕೆ ಈ ಮೃಗಗಳ ಪ್ರಿಯವಾದ ಆಹಾರ.

ಪ್ರಾಣಿ ಶಾಸ್ತ್ರಜ್ಞರ ಸಂಶೋಧನೆ ಮತ್ತು ಹೇಳಿಕೆಗಳ ಮೇರೆಗೆ ಕಸ್ತೂರಿ ಮೃಗಗಳ ಗರ್ಭದಾನವು ವಿಶೇಷವಾಗಿ ಜನವರಿ ತಿಂಗಳಲ್ಲಿ ನಡೆಯುವುದೆಂದು ತಿಳಿದು ಬರುತ್ತದೆ. ಗರ್ಭದಾನ ನಡೆದ ೧೫೦—೧೮೦ ದಿನಗಳ ತರುವಾಯ ಹೆಣ್ಣು ಕಸ್ತೂರಿ ಮೃಗ ಮರಿ ಇಡುತ್ತದೆ. ಎರಡು ವರ್ಷ ವಯಸ್ಸಿನ ಕಸ್ತೂರಿ ಮರಿಯಿಂದಲೂ ಕಸ್ತೂರಿ ದೊರೆಯುತ್ತದೆ. ಮರಿಯ ಎರಡನೆ ವಯಸ್ಸಿನಿಂದಲೇ ಅದರ ನಾಭಿಯ ಕೆಳಗಿನ ಗ್ರಂಥಿಯಲ್ಲಿ ಕಸ್ತೂರಿ ದ್ರವ ರೂಪದಲ್ಲಿ ಶೇಖರವಾಗುವುದು. ಪ್ರತಿ ಕಸ್ತೂರಿ ಮೃಗದಿಂದಲೂ ಸುಮಾರು ೧೫ ಔನ್ಸು ಕಸ್ತೂರಿ ದೊರೆಯುವುದು.

ಅಮೂಲ್ಯ ಕಸ್ತೂರಿಯ ಸಲುವಾಗಿ ಅಸಂಖ್ಯಾತ ಕಸ್ತೂರಿ ಮೃಗಗಳ ಕೊಲೆ ನಡೆಯುತ್ತವೆ. ದಿನ ದಿನಕ್ಕೆ ಈ ಮೃಗಗಳ ಸಂಖ್ಯೆ ಕ್ಷೀಣಿಸುತ್ತಿದೆ. ಇತ್ತೀಚಿನ ಸಮೀಕ್ಷೆ ಮತ್ತು ವರದಿಗಳ ಆಧಾರದ ಮೇರೆಗೆ—'ಈಗಿನಂತೆಯೇ ಕಸ್ತೂರಿ ಮೃಗಗಳ ಬೇಟೆ ಮುಂದುವರಿದರೆ ಇನ್ನು ಹತ್ತು ವರ್ಷಗಳಲ್ಲಿ ಈ ಮೃಗದ ಸಂತತಿಯೇ ಇಲ್ಲವಾಗಬಹುದು" ಎಂದು ಗೊತ್ತಾಗುತ್ತದೆ.

ಕಸ್ತೂರಿ ಮೃಗಗಳ ರಕ್ಷಣೆಗೆ ಅವುಗಳ ಬೇಟೆಗೆ ಸೂಕ್ತ ಕ್ರಮ, ರಕ್ಷಣಾ ವ್ಯವಸ್ಥೆ ಕೈಗೊಳ್ಳಬೇಕಾದುದು ಅಗತ್ಯ.

ಭಾರತದಲ್ಲಿ ಮಾತ್ರವೇ ಅಲ್ಲದೆ ಕಸ್ತೂರಿ ಮೃಗಗಳ ಇನ್ನಿತರ ನೆಲೆಗಳಾದ ಮಂಚೂರಿಯಾ, ಚೀನಾ, ಕೋರಿಯಾ, ಸೈಬೀರಿಯಾ, ಮತ್ತಿತರ ರಾಷ್ಟ್ರಗಳಲ್ಲೂ ಕಸ್ತೂರಿ ಮೃಗಗಳ ಸಂಖ್ಯೆ ಬೇಟೆಯ ಕಾರಣದಿಂದ ದಿನ ದಿನಕ್ಕೆ ಕ್ಷೀಣಿಸುತ್ತಿದೆ. ಚೀನಾ ಮತ್ತು ಟಿಬೆಟುಗಳಲ್ಲಿ ಕಸ್ತೂರಿಯ ಸಲುವಾಗಿ ೧೦,೦೦೦ ಕ್ಕೂ ಹೆಚ್ಚು ಮೃಗಗಳನ್ನು ಪ್ರತಿ ವರ್ಷವೂ ವಧೆಗೈಯಲಾಗುತ್ತಿದೆ ಎಂಬ ಸಂಗತಿ ತಿಳಿದು ಬರುತ್ತಿದೆ. ಕಸ್ತೂರಿಯ ಪರಿಮಳ ಪ್ರಸಿದ್ಧವಾದುದು—ಪ್ರಾಚೀನವಾದುದು. ಭಾರತೀಯರಿಗೆ ಪವಿತ್ರ ಮಂಗಳ ದ್ರವ್ಯ. ಆದರೆ! ಕಸ್ತೂರಿಯ ಸಲುವಾಗಿ ಮೃಗಗಳ ಬೇಟೆ! ಹಣ್ಣು—ಹೂಪಿಗಾಗಿ ಗಿಡವ ಬುಡಕ್ಕೇ ಕೊಡಲಿ!!! ಪ್ರಕೃತಿಯ ಈ ಅಮೂಲ್ಯ ಪ್ರಸಿದ್ಧ ಪ್ರಾಣಿಯ ಸಂರಕ್ಷಣೆ ಎಲ್ಲ ರಾಷ್ಟ್ರಗಳ ಹಿರಿಯ ಕರ್ತವ್ಯ.

ಸ್ವಾಭಿಮಾನದ ಸಿಂಹ ಸತ್ತಿಲ್ಲ

(ಐದನೇ ಪುಟದಿಂದ)

'ನಿನ್ನ ತಾಯಿಯ ಹೆಸರೇನು?' 'ಭಾರತಮಾತೆ."

"ಸ್ಸೊ.... ಮಗನ ಮನೆ ಹಾಳಾಗ. ಹೊಡೆಯಿರಿ, ಬಡಿಯಿರಿ..." ದಬ್ಬಾಳಿಕೆ ನಡೆಸುತ್ತಿದ್ದ ಆಂಗ್ಲ ಅಧಿಕಾರಿ ಬಾಲಕನಿಗಿತ್ತ ಶಿಕ್ಷೆಯಿದು. ಅದಕ್ಕೂ ಅಂಜದೆ ಅಳುಕದೆ ತನ್ನ ಕಾರ್ಯಪಥದಲ್ಲಿ ಮುನ್ನಡೆದ ಆ ಕ್ರಾಂತಿಕಾರ ಶಿರೋಮಣಿ ಚಂದ್ರಶೇಖರ ಆಝಾದ್.

ಅಲ್ಲಿ ರಾಜಸ್ಥಾನದ ಕಲ್ಲುಗಳೂ ಹೇಳುತ್ತಿರುವ ಕಥೆಗಳು, ಬೀಯಾಸ್ ಬೋರ್ಗರೆಯುತ್ತಿರುವ ಕರುಣಾಜನಕ ಕಥೆ, ಅನ್ಯ ದೇಶದ ಚರಿತ್ರಕಾರರು ಹಾಗೂ ಯಾತ್ರಿಕರು ಬರೆದಿಟ್ಟಿರುವ ವಿಷಯಗಳು........

ಇವ, ಇವೆ ಬೇಕಾದಷ್ಟಿವೆ. ಭಾರತದ ಕಣಕಣವೂ ನನ್ನ ಗೌರವದ, ಹೆಮ್ಮೆಯ ಗಾನವನ್ನು ಮಾಡುತ್ತಿದೆ. ಸ್ವಾಭಿಮಾನದ ಸೂರ್ಯ ಇಲ್ಲಿ ಕಂತುವುದೇ ಇಲ್ಲ. ಸ್ವಾಭಿಮಾನದ ಸಿಂಹ ಸತ್ತಿರುವದಿಲ್ಲ. ಇದನ್ನು ನಾವು ಕಂಡುಕೊಳ್ಳಬೇಕಾಗಿದೆ. ಈ ಮಹಾನ್ ಪೂರ್ವಜರ ವೀರ ಪರಂಪರೆಯವರು ನಾವೆಂಬ ಅಭಿಮಾನ ಒಂದೇ ನಮಗಿಂದುಳಿದಿರುವದು. ಅದೂ ಮಸುಕು ಮಸುಕಾಗಿ. ಆ ದೀಪವನ್ನು ನಾವು ಬೆಳಗಬೇಕಾಗಿದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 429/60. O. S. 393/60.

ಅರ್ಜಿದಾರ— ಅಣ್ಣಯ್ಯ ಪೂಜಾರಿ.

ಎದುರು— ಜೂಜ ಸಿಂ ದಾಲ್ಮೇದಿ [ಪ್ರೋಟೆ] ಸಹಾ. ಉಡುಪಿ ತಾಲ್ಲೂಕು ಕಟ್ಪಾಡಿ ಗ್ರಾಮದ ಹಾಲಿ ಕೋಟೆಯಲ್ಲಿರುವ ಜೂಜೆ ಮರಿ ದಾಲ್ಮೇದಿರ ಮಕ್ಕಳ. 4ನೇ ಎದುರು ಸಾವೇರ ದಾಲ್ಮೇದ, 6ನೇ ಪರ್ಮೀನಾ ಬಾಯಿ, 6ನೆ ಅಂತೋನಿ ದಾಲ್ಮೇದ, 7ನೇ ಅಬ್ರಾಂ ದಾಲ್ಮೇದಿ, 8ನೇ ಫಿಲೋಮಿನಾ ಬಾಯಿ, 9ನೇ ಎದುರು ಫಿಲಿಫ್ ದಾಲ್ಮೇದಿ ಕೂಡ. 6 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಅರ್ಜಿದಾರನು, ಸ್ಥಿರ ಆಸ್ತಿ ಏಲ್ಲಂ ಯಾದ ಬಗ್ಗೆ ಮೇಲಿನ ಅಮ್ಲುಜಾರಿ ದಾಖಲು ಮಾಡಿರುತ್ತಾನ. ಸದ್ರಿ ಅಮ್ಲುಜಾರಿಯಲ್ಲಿ ಹಾಜರಾಗಿ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 10—2—67ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ಸದ್ರಿ ಅಮ್ಲುಜಾರಿ ತನಿಖೆಗೆ ಇಡಲಾಗಿದೆ. ಆಕ್ಷೇಪವಿದ್ದರೆ ಸದ್ರಿ ದಿನ ಹಾಜರಾಗಿ ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

B. S. Shetty
B. A., B. L.
Vakil for Petitioner
Coondapoor, 10—1—67.

ಕವಲುದಾರಿ —ಕೆಂಪುದೀಪ

ಧರ್ಮದ ಹೆಸರಲ್ಲಿ ಆಗ್ರಹವೆ?

ಗೋಹತ್ಯಾ ನಿರೋಧ—

ಇದು ಜಾತೀಯ ಪ್ರಶ್ನೆಯಲ್ಲ; ಒಂದು ರಾಷ್ಟ್ರೀಯ ಪ್ರಶ್ನೆ. ಭಾರತದಂತಹ ಅಹಿಂಸಾಪರ ರಾಷ್ಟ್ರದಲ್ಲಿ ದಯೆಯ ಅಡಿಗಲ್ಲಿನ ಮೇಲೆಯೇ ಧರ್ಮ ಗೃಹಕಟ್ಟಿದ ದೇಶದಲ್ಲಿ, ಗಾವೋ ವಿಶ್ವಸ್ಯ ಮಾತರ: ಎಂದು ಹಾಡಿ ನಲಿದ ನಾಡಿನಲ್ಲಿ ಗೋಹತ್ಯೆಯ ಮೇಲೆ ಪ್ರತಿಬಂಧ ಹೇರುವುದು ಸಾಧು, ಸಾಧು.

ಇದನ್ನೇ ಮುಖ್ಯ ಪ್ರಶ್ನೆಯಾಗಿಟ್ಟು ಗೋವರ್ಧನ ಮಠದ ಶ್ರೀ ಶಂಕರಾಚಾರ್ಯರು ಉಪವಾಸ ಆರಂಭಿಸಿ ಐವತ್ತಕ್ಕೂ ಮಿಕ್ಕಿ ದಿನಗಳು ಗತಿಸಿದುವು. ಅವರ ಪ್ರಾಣಪಕ್ಷಿ ಯಾವ ಸಮಯದಲ್ಲೂ ಶರೀರ ಪಂಜರವನ್ನು ಬಿಟ್ಟು ಹಾರಿಹೋಗಬಹುದು.

ಶ್ರೀ ಆಚಾರ್ಯರು ಆರಂಭಿಸಿದ ಉಪವಾಸ ಇಂದು ಹಿಂದಿನ ಸ್ಥಾನಮಾನವನ್ನು ಉಳಿಸಿಕೊಂಡಿಲ್ಲ. ಗೋಹತ್ಯಾ ನಿಷೇಧದ ಬಗ್ಗೆ ಹಲವು ರಾಜ್ಯಗಳಲ್ಲಿ ಕಾನೂನು ಇದೆ. ಇನ್ನು ಕೆಲವು ರಾಜ್ಯಗಳು ಆ ಸಂಬಂಧದ ಕಾನೂನು ಮಾಡಲು ಯೋಚಿಸುತ್ತಿವೆ. ಕೇಂದ್ರ ಸರಕಾರವೂ ಅದರ ಮಂತ್ರಿಗಳೂ ಒಂದಲ್ಲ ಹಲವು ಬಾರಿ ಉಪವಾಸ ನಿಲ್ಲಿಸಲು ವಿನಂತಿಸಿಕೊಂಡರು, ಜಗದ್ಗುರುಗಳನ್ನು ರಾಷ್ಟ್ರಪತಿಯವರು ಸಹಾ ಕಳಕಳಿಯಿಂದ ಪ್ರಾರ್ಥಿಸಿದರು. ಈಗ ಅನೇಕ ಹಿಂದೂ ಧರ್ಮ ಪೀಠಾಧಿಪತಿಗಳೂ ವಿನಂತಿಸಿಕೊಳ್ಳ ಹತ್ತಿದ್ದಾರೆ.

ಆದರೆ, ಜಗದ್ಗುರುಗಳ ಈಗಿನ ಹೇಳಿಕೆಯೊಂದೇ—ಉಪವಾಸ ನಿಲ್ಲಿಸಬೇಕಾದರೆ, ಗೋಹತ್ಯಾ ನಿಷೇಧವನ್ನು ಕೇಂದ್ರ ಸರಕಾರ ತಾತ್ವಿಕವಾಗಿ ಒಪ್ಪಬೇಕು.

ಇಂತಹ ಶರ್ತದ ಮುಂದೆ ತಲೆ ಬಾಗಲು ಕೇಂದ್ರ ಸರಕಾರ ಸಿದ್ಧವಿದೆಯೆ?

ಅದು ಹೇಳಿದೆ—ಪರಿಶೀಲಿಸಲು ಸಮಿತಿಯನ್ನು ನೇಮಿಸಲು ಸಿದ್ಧವಿದೆಯೆಂದು ಸಂಪೂರ್ಣ ಗೋಹತ್ಯಾ ನಿಷೇಧ ಸಂವಿಧಾನಾತ್ಮಕ ತಿದ್ದುಪಡಿಯಿಂದ ಮಾತ್ರ ಸಾಧ್ಯ. ಜಾತ್ಯತೀತ ರಾಷ್ಟ್ರ ಭಾರತದಲ್ಲಿ ಇದನ್ನು ರಾಷ್ಟ್ರೀಯ ಪ್ರಶ್ನೆಯಾಗಿಟ್ಟುಕೊಂಡು ತಿದ್ದುಪಡಿ ಮಾಡಿದರೂ ಮಾಡಬಹುದು.

ಆದರೆ, ಶಾಸನ ಮಾಡಿದ ಮಾತ್ರಕ್ಕೆ ಸಾಕೆ?

ಜಗದ್ಗುರುಗಳು ಬರಿಯ ಶಾಸನವನ್ನು ಮಾಡಬೇಕೆಂದು ಬಯಸುವುದು ಮೂಢತನ.

ಹೃದಯದ ಗೆಲವೇ ನಿಜವಾದ ಗೆಲವು ರಾಜಸತ್ತೆಯು ಹೃದಯ ಸತ್ತೆಯ ಮುಂದೆ ತಲೆಬಾಗಲೇಬೇಕು,

ಪ್ರಭು ಸಮ್ಮತಿಗಿಂತ ಜನತಾ ಸಮ್ಮತಿ ಲೇಸು.

ಅನುಷ್ಠಾನಕ್ಕೆ ಶಾಸನವೇಕೆ ಬೇಕ ?

ಜಗದ್ಗುರುಗಳು ಇದನ್ನು ಅರಿತುಕೊಳ್ಳಬೇಕಿತ್ತು. ಭಾರತದಂತಹ ಸರ್ವ ಧರ್ಮೀಯ ರಾಷ್ಟ್ರದಲ್ಲಿ ಇಂತಹ ಶಾಸನವೊಂದನ್ನು ನಿಂತಕಾಲಲ್ಲೇ ತರುವಂತೆ ಸರಕಾರದ ಮೇಲೆ ಒತ್ತಾಯ ಹೇರುವ ಈ ಹಮ್ಮಾಸ ಅವರಿಗೆ ಬೇಡವಿತ್ತು.

ಸರಕಾರದ ಗಮನವನ್ನವರು ಸೆಳೆದಿದ್ದಾರೆ; ಸರಕಾರವೂ ಆ ಬಗ್ಗೆ ಪರಿಶೀಲಿಸಲು ಮುಂದಾಗಿದೆ, ಅದರ ಕಾರ್ಯ ಸುಗಮವಾಗುವಂತೆ ಅನುಕೂಲ ವಾತಾವರಣ ನಿರ್ಮಿಸಬೇಕು; ಜಗದ್ಗುರುಗಳು ಅವರೇ ಬಲಾತ್ಕಾರ—ಆಗ್ರಹ ತೊಟ್ಟು, ತಮ್ಮ ದೀರ್ಘ ಹಾರ್ಶಣೆ ಮಾಡುವುದೆಂದರೆ, ತನ್ನ ಶಿಷ್ಯಮಂಡಳಿಗೆ ಧರ್ಮಪಾಠ ಹೇಳಿಕೊಟ್ಟಂತಾಗಲಿಲ್ಲ; ಅಧರ್ಮವನ್ನೇ ಸಾರಿದಂತಾಗಲಾರದೆ?

ಶ್ರೀ ಜಗದ್ಗುರುಗಳು ಇನ್ನೂ ತಮ್ಮ ಉಪವಾಸವನ್ನು ಬಿಟ್ಟು ಕೊಡಲಿಲ್ಲವೆಂದರೆ, ಸ್ವಧರ್ಮ ಬಾಂಧವರ, ಸ್ವದೇಶೀ ಸರಕಾರದ ವಿನಂತಿಯನ್ನು, ಕಳಕಳಿಯ ಪ್ರಾರ್ಥನೆಯನ್ನು ಅಲ್ಲಗಳೆದರೆ, ಏನನ್ನೂ ಸಾಧಿಸಲಾರರು. ಅವರು ಇದುವರೆಗೆ ಮಾಡಿದ ಸುದೀರ್ಘ ಉಪವಾಸದ ಫಲ ಸಂಪೂರ್ಣ ನೆಲಸಮವೇ ಆಗುವುದು.

ಏಕೆಂದರೆ, ಇಂದು ಎಲ್ಲರೂ ಜಗದ್ಗುರುಗಳು ಉಪವಾಸ ನಿಲ್ಲಿಸಬೇಕೆಂದೇ ಹೇಳುತಿದ್ದಾರೆ.

ಸರಕಾರದ ತಲೆಯನ್ನು ಬಗ್ಗಿಸಿಯೇ ಬಿಡಬೇಕೆಂಬ ಕೆಲವು ಕುತಂತ್ರಿಗಳ ಕೈಗೊಂಬೆಯಾಗಿದ್ದಾರೆಯೇ ಜಗದ್ಗುರುಗಳು ಎಂದೂ ಸಂದೇಹಿಸುವವರುಂಟು.

ಈ ಪರಿಸ್ಥಿತಿಯಲ್ಲಿ ಅಂತಹ ಸಂದೇಹ ಬರುವುದೂ ತಪ್ಪಲ್ಲ.

ಜಗದ್ಗುರುಗಳೂ ಅವರನ್ನು ಅನುಸರಿಸಿದವರೂ ತಮ್ಮ ಉಪವಾಸವನ್ನು ನಿಶ್ಶರ್ತವಾಗಿ ಇನ್ನಾದರೂ ನಿಲ್ಲಿಸಿ ದೇಶದ ಕರೆಯನ್ನು ಪಾಲಿಸಬೇಕು— ಸರಕಾರಕ್ಕೊಂದು ಅವಕಾಶ ನೀಡಬೇಕು, ವೃಥಾ ಗೊಂದಲಕ್ಕೆ—ಅಧರ್ಮಕ್ಕೆ— ಅವಕಾಶ ಮಾಡಿಕೊಡಬಾರದು.

ವಿಜ್ಞಾಪನೆ

॥ ಶ್ರೀ ಲಕ್ಷ್ಮೀ ವೆಂಕಟೇಶ ಪ್ರಸನ್ನ ॥

ಕಟಪಾಡಿ ಪೇಟೆಯ ಗೌಡಸಾರಸ್ವತ ಬ್ರಾಹ್ಮಣ ವೃಂದದವರು ಭಜಿಸಿಕೊಂಡು ಬರುವ ಶ್ರೀ ವೆಂಕಟರಮಣ ದೇವರ ಭಂಡಾರದ ಆಡಳಿತೆಗೆ ವ ಅಧಿಕಾರಕ್ಕೆ ಒಳಪಟ್ಟ ಪಾಂಗಾಳ ಆಲಾಡೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ ವ ಅದಕ್ಕೆ ಸಂಬಂಧಪಟ್ಟ ಇತರ ದೈವದ ಗುಡಿಗಳು ವ ಭಂಡಾರಮನೆ ಇತ್ಯಾದಿಗಳ ಜೀರ್ಣೋದ್ಧಾರದ ಕೆಲಸಗಳನ್ನೂ ನಿರ್ವಹಿಸಿ ಪೂರೈಸುವ ಬಗ್ಗೆ 'ಪಾಂಗಾಳ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ'ಯೊಂದನ್ನು ಕಟಪಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಚಿಸಿರುತ್ತದೆ.

ಈಗಾಗಲೇ ಈ ಸಮಿತಿಯವರು ಭೂತರಾಜ ಗುಡಿಯನ್ನು ಹೊಸತಾಗಿ ಕಟ್ಟಿಸುವ ವ ಇತರ ಕೆಲವು ರಿಪೇರಿ ಕೆಲಸ ವಗೈರೆ ಪ್ರಾರಂಭಿಸಿದ್ದು ಈ ವರ್ಷದ "ಆಲಾಡೆ ಅಯನ ಉತ್ಸವ" ಮುಗಿದ ಮೇಲೆ ಶ್ರೀ ಬ್ರಹ್ಮದೇವರ ಗರ್ಭಗೃಹದ ವ ಇತರ ಜೀರ್ಣೋದ್ಧಾರದ ಕೆಲಸವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿರುತ್ತದೆ. ಆ ಪ್ರಯುಕ್ತ ಈ ಜೀರ್ಣೋದ್ಧಾರದ ಮಹತ್ಕಾರ್ಯದಲ್ಲಿ ನೆರವು ನೀಡಿ ಪುಣ್ಯ ಭಾಗಿಗಳಾಗ ಬೇಕೆಂಬ ಸದ್ಬುದ್ಧಿಯುಳ್ಳ ಆದಿಯವರೂ ಊರ ಪರವೂರ ಸಮಸ್ತ ಭಕ್ತ ಮಹಾಜನರು ಸಹಾ ತಮ್ಮ ತಮ್ಮ ಶಕ್ತ್ಯಾನುಸಾರ ತನು ಮನ ಧನಗಳಿಂದ ಸಹಾಯ ಮಾಡಿ ಶ್ರೀ ದೇವರ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಸಹಾಯಧನ ಕಳುಹಿಸಲಿಚ್ಛಿಸುವವರು ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ, ಯಾ ಕೋಶಾಧಿಕಾರಿಗಳಿಗೆ ಕಳಿಸಿಕೊಟ್ಟಲ್ಲಿ ಈ ಮಹತ್ಕಾರ್ಯಕ್ಕೆ ವಿನಿಯೋಗಿಸಲ್ಪಡುತ್ತದೆ.

ಇತಿ

ಕಟಪಾಡಿ
ತಾ. 14—1—1967

ಪಾಂಗಾಳ ಬ್ರಹ್ಮಲಿಂಗೇಶ್ವರ ದೇವಸ್ಥಾನದ
ಜೀರ್ಣೋದ್ಧಾರದ ಸಮಿತಿಯ ಸದಸ್ಯರು.
ಕಟಪಾಡಿ ಶ್ರೀ ವೆಂಕಟರಮಣ ದೇವಸ್ಥಾನ
ಕಟಪಾಡಿ [ದ. ಕ.] P. O.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ

ನವಯುಗ ಪ್ರೆಸ್, ಉಡುಪಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. S No. 377/1966.

ಶಿವಪುರ ಸೂರ್ಯಣ ಶೆಟ್ಟಿ ಕಜನೆ ಮಹಲಿಂಗ ಸೆಟ್ರ ಮಗ, ಶಿವಪುರ ಗ್ರಾಮಸ್ತ—

— ವಾದಿ.

ಮತ್ತು

1. ಮಹಬಲ ಸೆಟ್ಟಿ, 2. ನಾರಾಯಣ ಸೆಟ್ಟಿ, 3. ಮುದ್ದಣ ಸೆಟ್ಟಿ, 4. ದಾರಮ್ಮ ಸೆಡ್ತಿ, 5. ಸಂಜೀವ ಸೆಟ್ಟಿ, 6. ಕಿಟ್ಟಸೆಡ್ತಿ—

—ಪ್ರತಿವಾದಿರು.

ಸದರಿ ದಾವೆಯ 1ನೇ ಪ್ರತಿವಾದಿ ಮಹಾಬಲ ಸೆಟ್ಟಿ, 2ನೇ ಪ್ರತಿವಾದಿ ನಾರಾಯಣಸೆಟ್ಟಿ ಇವರ್ಗಳು ಪುಂಗಮ್ಮ ಸೆಡ್ತಿ ಮಕ್ಕಳು. ಶಿವಪುರ ಗ್ರಾಮಸ್ತರು ಇವರಿಗೆ—

ವಾದಿರು ನಿಮ್ಮ ಮೇಲೆ ಕೂಡಾ ಬಾಲಗೇಣಿ ಬಾಕಿ ರೂಪಾಯಿ 325/92ಕ್ಕೆ ಮಾಡಿ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಖು 8—2—67ನೇ ಬೆಳಿ 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವದರಿಂದ ಆ ವಿಷಯದಲ್ಲಿ ನಿಮ್ಮ ಉದಾಹರಣೆಯಿರುವಲ್ಲಿ ನೀವು ಸದರಿ ತಾರೀಕಿನಲ್ಲು ಸ್ವತಹಾ ಇದ್ದರೂ ವಕೀಲರಮುಖಾಂತ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದರೆ ಸದರಿದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂತಾಯೂ ಈ ಮೂಲಕ ನಿಮಗೆ ಕೋರ್ಟು ಹುಕುಮು ಪ್ರಕಾರ ತಿಳಿಯಪಡಿಸಲಾಗುತ್ತದೆ.

S. Rajagopal Achar

Advocate for Plaintiff

Karkal, 12—1—67.

ತಾಷ್ಕೆಂಟ್ ಜಗತ್ ಸಂದೇಶ

(ಏಳನೇ ಪುಟದಿಂದ)

ಹೆತ್ತದ ವಿಷಯವಲ್ಲ ಪ್ರಪಂಚದ ಇತರ ಭಾಗಗಳಿಗೂ ಅದು ಸಂದೇಶವೊಂದನ್ನು ನೀಡುತ್ತದೆ. ಬೇರೆ ದೇಶಗಳೂ ತಮ್ಮ ಸಮಸ್ಯಾ ಪರಿಹಾರಕ್ಕೆ ಭಾರತ—ಪಾಕಿಸ್ತಾನಗಳ ಮಾದರಿಯಲ್ಲಿ ಒಪ್ಪಂದಕ್ಕೆ ಬರಲು ಸಾಧ್ಯ ಎಂಬ ಮಾತನ್ನು ತಾಷ್ಕೆಂಟ್ ಸೂಚಿಸುತ್ತದೆ. ಈ ಮಹತ್ವದ ಮೂಲಕವಾಗಿಯೇ ತಾಷ್ಕೆಂಟ್ ಸೂತ್ರವು ಅನೇಕ ದೇಶಗಳನ್ನು ತನ್ನೆಡೆಗೆ ಆಕರ್ಷಿಸಿದೆ.

ತಾಷ್ಕೆಂಟ್ ಘೋಷಣೆಯಾದ ಒಂದು ವರುಷದ ಅವಧಿಯಲ್ಲಿ ಅದರ ಪೂರ್ತಿ ಅನುಷ್ಠಾನದ ಯಶಸ್ವಿಯಾಗಿರಲಿಕ್ಕಿಲ್ಲ. ಆದರೆ ಆ ಘೋಷಣೆಯ ಸಂದೇಶದ ಸತ್ಯವನ್ನು ಯಾರೂ ಅಲ್ಲಗಳೆದಿಲ್ಲ. ಮತ್ತು ಘೋಷಣೆಯ ಸೂತ್ರ ಎಷ್ಟೇ ನಿಧಾನವಾಗಿದ್ದರೂ ಆಶಾದಾಯಕವಿದೆ ಮತ್ತು ಅಂತರ್‌ರಾಷ್ಟ್ರೀಯ ಸಂಬಂಧನಲ್ಲಿ ಒಂದು ಮಾದರಿಯ ಸಂದೇಶವಾಗಿಯೇ ಉಳಿಯುತ್ತದೆ.

ಎರಡು ದೊಡ್ಡ ನೆರೆ ಹೊರೆಯ ರಾಷ್ಟ್ರಗಳು ಪರಸ್ಪರ ಸಶಂಕ ದೃಷ್ಟಿಯಿಂದ ನೋಡಿದಾಗ ಅವುಗಳ ನಡುವಿನ ಸಮಸ್ಯೆಗೆ ಪರಿಹಾರವೊದಗಿಸುವ ಸೌಹಾರ್ದ ತೋರಿಸಿದ ಶ್ರೇಯಸ್ಸು ಪ್ರಪಂಚದ ಬಲಿಷ್ಠ ರಾಷ್ಟ್ರಗಳು ಪಡೆಯಬಲ್ಲವು; ಎಂಬುದನ್ನು ತಾಷ್ಕೆಂಟ್ ಘೋಷಣೆಗೆ ಕಾರಣಕರ್ತ ರಾಷ್ಟ್ರವಾದ ರಷ್ಯಾವು ಜಗತ್ತಿಗೆ ತೋರಿಸಿಕೊಟ್ಟಿದೆ!

READ &

ADVERTISE IN

NAVAYUGA WEEKLY

ಎಲ್ಲೆಲ್ಲಿ ಏನೇನು?

"ವಿಜ್ಞಾನ ಮತ್ತು ಸಾಹಿತ್ಯ"

"ವಿಜ್ಞಾನವು ಸಾಹಿತ್ಯದ ಮೇಲೆ ಪರಿಣಾಮ ಬೀರುತ್ತದೆ; ಪ್ರಖ್ಯಾತ ಸಾಹಿತಿಗಳು ಪ್ರಸಿದ್ಧ ವಿಜ್ಞಾನಿಗಳೂ ಆಗಿರುತ್ತಾರೆ" ಎಂದು ಮಂಗಳೂರಿನ ಸರಕಾರಿ ಕೋಲೇಜಿನ ಪ್ರಿನ್ಸಿಪಾಲ ಪ್ರೊ| ಬಿ. ಸಿ. ಪೆನ್ಸ್ಲಿ, ಅವರು ಮೂಲ್ಕಿ ವಿಜಯ ಕೋಲೇಜಿನ ಇಂಗ್ಲೀಷ್ ಸಂಘದ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ 'ವಿಜ್ಞಾನ ಮತ್ತು ಸಾಹಿತ್ಯ'ದ ಕುರಿತಾಗಿ ಮಾತನಾಡುತ್ತಾ ಅಭಿಪ್ರಾಯಪಟ್ಟರು. ಅರಿಸ್ಟೋಟಲ್‌ನಿಂದಾಗಿ ವೈಜ್ಞಾನಿಕ ಪ್ರಗತಿಯು ಹೇಗೆ ಎರಡು ಸಾವಿರ ವರ್ಷಗಳಷ್ಟು ಹಿಂದುಳಿಯಿತು—ಎಂಬುದಾಗಿ ವಿವರಿಸಿದರು. ಅವರು ಮುಂದುವರಿಯುತ್ತಾ ಪ್ರಸಿದ್ಧ ವಿಜ್ಞಾನಿಗಳಾದ ಬೇಕನ್, ಕೋಪರ್‌ನಿಕಸ್, ಗೆಲಿಲಿಯೋ ಮತ್ತು ನ್ಯೂಟನ್—ಇವರು ಆಯಾ ಕಾಲದ ಸಾಹಿತ್ಯದ ಮೇಲೆ ಯಾವ ರೀತಿಯ ಪ್ರಭಾವಗಳನ್ನು ಪರೋಕ್ಷವಾಗಿ ಬೀರಿದರು ಎಂಬುದನ್ನು ಉದಾಹರಣೆಗಳ ಮೂಲಕ ಸ್ಪಷ್ಟೀಕರಿಸಿದರು. ಮಾತ್ರವಲ್ಲದೆ, ಥೋಮಸ್ ಹಾರ್ಡಿ, ಫಿಡ್ಜ್‌ರಾಲ್ಡ್, ಮೇಥ್ಯೂ ಆರ್ನಾಲ್ಡ್—ಮೊದಲಾದ ಬರೆಹಗಾರರು ಬದುಕಿನ ಕುರಿತಾಗಿ ನಿರಾಶೆ ತಾಳಿದುದಕ್ಕೆ, ಅವರ ಕಾಲದಲ್ಲಿ ಮೂಡಿ ಬಂದ ಹಳೆ—ಹೊಸ ವೈಜ್ಞಾನಿಕ ದೃಷ್ಟಿಗಳ ತಿಕ್ಕಾಟಗಳೇ ಕಾರಣವೆಂದರು.

ಮೊದಲಾಗಿ, ಶ್ರೀ ಬಿ. ವೆಂಕಟ ರಾವ್, ಇವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಅಧ್ಯಕ್ಷ ಸ್ಥಾನ ವಹಿಸಿದ್ದ ಪ್ರೊ| ಕೆ. ಜಿ. ಶೆಟ್ಟಿಯವರು, ತಮ್ಮ ಪ್ರಾರಂಭಿಕ ಮಾತುಗಳಲ್ಲಿ ದಿವಂಗತ ಲಾಲಾ ಬಹದ್ದೂರ್ ಶಾಸ್ತ್ರಿಯವರ ತ್ಯಾಗ, ಕರ್ತವ್ಯ ಶೀಲತೆಗಳ ಕುರಿತಾಗಿ ಹೇಳಿದ್ದರು. ಇಂಗ್ಲೀಷ್ ಸಂಘದ ಕಾರ್ಯದರ್ಶಿ ಶ್ರೀ ವಿಠಲದಾಸ್ ಶೆಣೈಯವರು ಧನ್ಯವಾದಗಳನ್ನು ಅರ್ಪಿಸಿದರು.

"ಸಾಂಸ್ಕೃತಿಕ ಕಾರ್ಯಕ್ರಮ"

ಸುಳ್ಯ ತಾಲೂಕಿನ ಜಾಲ್ಸೂರು ಕೇಂದ್ರದಲ್ಲಿ ಶ್ರೀ ಅಡ್ಕಾರು ರಾಮಣ್ಣ ಗೌಡರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ, ಹರಿಕಥಾ ಕಾಲಕ್ಷೇಪವೂ, ಯಕ್ಷಗಾನ ತಾಳಮದ್ದಳೆಯೂ 'ಶ್ರೀ ನಿಲಯ ಸಾಹಿತ್ಯ ನಿಲಯ' 'ಗೆಳೆಯರಬಳಗ ಜಾಲ್ಸೂರು' ಇವರ ವತಿಯಿಂದ ಜರಗಿಸಲ್ಪಟ್ಟಿತು.

ದ. ಕ. ಜಿಲ್ಲೆಯ ಹಿರಿಯ ಭಾಗವತ—ಯಕ್ಷಗಾನ ಕಲಾತಪಸ್ವಿ ಶ್ರೀ ಬಲಿಪ ನಾರಾಯಣ ಭಾಗವತರ ನಿಧನಕ್ಕಾಗಿ ಸಂತಾಪ ಸೂಚಿಸಲ್ಪಟ್ಟಿತು. ಶ್ರೀ ವಿಠಲದಾಸ ಶೆಣೈಯವರಿಂದ ಸ್ವಾಗತ, ಶ್ರೀನಿಲಯ ಸಾಹಿತ್ಯ ನಿಲಯದ ಅಧ್ಯಕ್ಷರಿಂದ ವರದಿವಾಚನವಾದ ಮೇಲೆ ಕುಮಾರಿ ಬೆಳ್ಳಿಪ್ಪಾಡಿ ಮಾತಾಮ್ಮಣಿ, ಶ್ರೀ ಮಲ್ಲಿಕಾರ್ಜುನರಿಂದ ಕಾವ್ಯವಾಚನಗಳಾದುವು. ಶ್ರೀ ಕೊಳಂಬೆ ಪುಟ್ಟಣ್ಣ ಗೌಡ ಅವರು "ಸಾಹಿತ್ಯಗಳ ಸವಿ" ಉಣಬಡಿಸಿದರು.

ಅನಂತರ ನಡೆದ "ಶ್ರೀಕೃಷ್ಣ ರಾಯಭಾರ" ಯಕ್ಷಗಾನ ತಾಳಮದ್ದಳೆಯಲ್ಲಿ ಪ್ರಸಿದ್ಧರನೇಕರು ಭಾಗವಹಿಸಿದ್ದರು. ಶ್ರೀ ಭದ್ರಗಿರಿ ಅಚ್ಯುತದಾಸರವರಿಂದ "ದಾನಶೂರಕರ್ಣ" ಎಂಬ ಹರಿಕಥೆ ನಡೆಯಿತು.

ಶ್ರೀ ನಾಮದೇವ ಶೆಣೈಯವರು ಕೊನೆಯಲ್ಲಿ ಧನ್ಯವಾದವಿತ್ತರು.

ವಿದ್ಯಾರ್ಥಿಗಳು ವಾಸ್ತವವಾದಿಗಳಾಗಬೇಕು

ಜನವರಿ, ೧೧, ‹ದೇಶದ ಪ್ರಕೃತ, ವಿಕೃತ ಸನ್ನಿವೇಶವನ್ನು ಸಾಕ್ಷ್ಯವಾಗಿ ಅಭ್ಯಾಸ ಮಾಡಿ ವಿದ್ಯಾರ್ಥಿಗಳು ಸ್ವಾವಲಂಬಿ ಜೀವನವನ್ನು ನಡೆಸಬಲ್ಲ ವಾಸ್ತವವಾದೀ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂದು 'ಶ್ರೀ ಟಿ. ಎ. ಪೈ ಅವರು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಾರ್ಷಿಕೋತ್ಸವ ಪೀಠದಿಂದ ಕರೆಯಿತ್ತರು. ನಾಡಿನ ಜನ ಸಂಖ್ಯೆಯ ದೆಸೆಯಿಂದಲೂ ಮನುಷ್ಯ ನಿರ್ಮಿತವಿಘ್ನಗಳ ದೆಸೆಯಿಂದಲೂ ಉಲ್ಬಣವಾಗುತ್ತಿರುವ ಆಹಾರ ಸಮಸ್ಯೆಗೆ ಸಕಾಲದಲ್ಲಿ ಸರಿಯಾದ ಉಪಾಯವನ್ನು ಸ್ವೀಕರಿಸದಿದ್ದಲ್ಲಿ ನಾವು ವಿಪತ್ತಿಗೆ ತುತ್ತಾಗದಿರಲಾರೆವೆಂದು ಅವರು ಎಚ್ಚರಿಕೆಯನ್ನು ನೀಡಿದರು. ಕಾಲೇಜಿನ ವಾರ್ಷಿಕ ವರದಿಯಲ್ಲಿ ಪ್ರಿನ್ಸಿಪಾಲ ಕು. ಶಿ. ಹರಿದಾಸ ಭಟ್ಟರು ಕಾಲೇಜು ಗತವರ್ಷದಲ್ಲಿ ಸಾಧಿಸಿದ ಪ್ರಗತಿಯ ಸ್ಥೂಲಪರಿಚಯವನ್ನು ಮಾಡಿಸಿದರು. ಒಂದು ಸಾವಿರದ ಗೆರೆಯನ್ನು ಈ ವರ್ಷ ದಾಟಿದ ಈ ಸಂಸ್ಥೆಯಲ್ಲಿ ೨೧೨ ವಿದ್ಯಾರ್ಥಿನಿಯರೂ ಸೇರಿರುವುದು ಹರ್ಷದಾಯಕ ವಿಚಾರವಾಗಿದೆ. ಬಿ. ಎಸ್. ಸಿ. ಡಿಗ್ರಿಯ ಅಂತಿಮ ಪರೀಕ್ಷೆಗಳೂ ವಿಶ್ವವಿದ್ಯಾನಿಲಯದಲ್ಲಿಯೇ ಪ್ರಥಮ ಮತ್ತು ದಶಮಸ್ಥಾನವನ್ನು ಗಳಿಸಿದ ಇಬ್ಬರು ವಿದ್ಯಾರ್ಥಿಗಳನ್ನೂ (ಸಾಧಾಳೆರೆ ಭಂಡಾರಿ, ಗೋಪಾಲ ಪೂಜಾರಿ) ಬಿ. ಎಸ್. ಸಿ. ಪ್ರಥಮ ಪರೀಕ್ಷೆಯಲ್ಲಿ ನಾಲ್ಕರಲ್ಲಿ ಮೂರು ವಿಭಾಗಗಳಲ್ಲಿ ರ್‍ಯಾಂಕ್ ಗಳಿಸಿದ ರೂಪರ್ಟ ರೋಸಾರಿಯೋ ಅಂಥ ಪ್ರತಿಭಾಶಾಲಿ ವಿದ್ಯಾರ್ಥಿಗಳನ್ನು ಈ ಸಂಸ್ಥೆ ಹೊಂದಿದೆ. ಸುಮಾರು 900 ಮಂದಿಗೆ ಒಂದಲ್ಲ ಒಂದು ಬಗೆಯ ವಿದ್ಯಾರ್ಥಿವೇತನ ದೊರೆಯುತ್ತಿದೆ. ಕಾಲೇಜಿನ ಆಡಳಿತ ಮಂಡಳಿವು ಇದುವರೆಗೆ ಸುಮಾರು 90,000 ದಷ್ಟು ಆರ್ಥಿಕ ನೆರವನ್ನು ವಿದ್ಯಾರ್ಥಿಗಳಿಗೆ ಸಾಲದ ರೂಪದಲ್ಲಿ ನೀಡಿರುವುದು ಖಾಸಗೀ ಕಾಲೇಜುಗಳ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ. ಆಟದ ಬಯಲು, ಪಾಠದ ಕೋಣೆ, ಪ್ರಯೋಗ ಶಾಲೆಗಳು—ಎಲ್ಲವನ್ನು ವರ್ಷ ವರ್ಷ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಅಭಿವರ್ಧಿಸುವ ಕಾರ್ಯಕ್ರಮವನ್ನೇ ಸಂಸ್ಥೆ ಇರಿಸಿಕೊಂಡಿದೆ. ನಾಲ್ಕು ವಿದ್ಯಾರ್ಥಿಗಳು 'ದುಡಿಯುತ್ತ ಕಲಿ' (Earn and Learn) ಸೂತ್ರದಂತೆ ಕಾಲೇಜಿನಲ್ಲಿ ಕೆಲಸ ಮಾಡಿಕೊಂಡು ಓದುತ್ತಿದ್ದಾರೆ. 'ಗೋವಿಂದ ಪೈ ಸಂಶೋಧನ ಕೇಂದ್ರ'ದ ಪ್ರಯೋಜನವನ್ನು ಕನ್ನಡ ನಾಡಿನ ವಿದ್ವಾಂಸರೂ ಪಡೆಯುವಂತೆ ಸೌಕರ್ಯವನ್ನು ಕಲ್ಪಿಸಲಾಗಿದೆ. ಗೋವಿಂದ ಪೈ ವಾಙ್ಮಯದ ಸಮಗ್ರ ದರ್ಶನವನ್ನು ಮಾಡಿಸುವ ಅಪೂರ್ವ ಕೃತಿ ಈ ವರ್ಷ ಪ್ರಕಟವಾಗಿದೆ. ಶಿಕ್ಷಣ ಕ್ಷೇತ್ರದ ಆಮೂಲಾಗ್ರ ಪರಿವರ್ತನೆಯನ್ನು ಸೂಚಿಸಿರುವ ಕೊಠಾರಿ ಸಮಿತಿಯ ವರದಿಯನ್ನು ಕಾರ್ಯಗತಗೊಳಿಸುವ ಧೈರ್ಯ ಮತ್ತು ಆರ್ಥಿಕ ಬಲ ನಮಗಿದ್ದರೆ [illegible]ತ್ರ ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಜೀವನದ ಶಾಂತಿ, ಅಭ್ಯುದಯಗಳಿಗೆ ನೆರವಾಗಬಲ್ಲ ವಾತಾವರಣವನ್ನು ನಿರ್ಮಿಸಿಕೊಳ್ಳಬಲ್ಲುದು. ಎಂದು ಮುಂತಾಗಿ ವರದಿಯಲ್ಲಿ ಸೂಚಿಸಿದರು. ವಿದ್ಯಾರ್ಥಿ ರೂಪರ್ಟರೊಸಾರಿಯೋರ ಧನ್ಯವಾದ ಮತ್ತು ವಿದ್ಯಾರ್ಥಿ ವಿನೋದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಉದ್ಘಾಟನೆ

ಬ್ರಹ್ಮಾವರ ಮತದಾರ ಕ್ಷೇತ್ರದ ವಿಧಾನ ಸಭಾ ಕಾಂಗ್ರೆಸ್ ಹುರಿಯಾಳು ಶ್ರೀ ಎಫ್. ಎಕ್ಸ್. ಡಿ. ಪಿಂಟೋ ಇವರು ಚುನಾವಣಾ ಕಾರ್ಯಾಲಯದ ಉದ್ಘಾಟನೆಯನ್ನು ಮಾಜಿ ವಿಧಾನಸಭಾ ಸದಸ್ಯ ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. ೪ರಂದು ನೆರವೇರಿಸಲಾಯಿತು. ಶ್ರೀಗಳಾದ ಪಿ. ಶಿವಾಜಿ ಶೆಟ್ಟಿ, ಬಿ. ರಾಜೀವ ಶೆಟ್ಟಿ, ರಾಜಗೋಪಾಲ ಶೆಟ್ಟಿ, ಬಚ್ಚ ಪೂಜಾರಿ, ಮಹಾಲಿಂಗ ಪೂಜಾರಿ, ಹರಿಯ ಕುಂದರ್ ಮೊದಲಾದವರಿಂದ ಕಾಂಗ್ರೆಸ್ಸನ್ನು ಇನ್ನಷ್ಟು ಬಲಗೊಳಿಸಿ ಕಾಂಗ್ರೆಸ್ಸಿಗೇನೇ ಮತದಾನ ಮಾಡಬೇಕೆಂದು ಭಾಷಣಗಳಾದುವು.

(ಮೂರನೇ ಪುಟದಿಂದ)

ಳ್ಳಲು ಚೌ ಮತ್ತು ಕಂಪೆನಿಯವರು ಪ್ರಯತ್ನ ನಿರತರಾಗಿದ್ದಾರೆ. ಇದರ ಇನ್ನೊಂದು ಹೆಸರು ‹ಮಿಲಿಟರಿ ಪುನರ್ಘಟನೆ" ಇದಾಗ, ಬೇಕಾದರೆ ಕೆಲವೆಡೆ ಸಶಸ್ತ್ರ ಹೋರಾಟವೂ ನಡೆಯ ಬೇಕಾಯಿತು. ಪುನರ್ಘಟನೆಯು ಹೇಗೆ ಸಾಗುತ್ತದೆ, ಯಾವ ಪ್ರಮಾಣದಲ್ಲಿ ಯಶಗಳಿಸುತ್ತದೆ—ಎಂದು ಮುಂತಾಗಿ ಹೇಳುವುದು ಈಗ ಸಾಧ್ಯವಿಲ್ಲ, ಭಾರತದ ಭಾವಿ ಪ್ರಧಾನಿಯಾರಾಗಬಹುದೆಂದಾದರೂ ಹೇಳಬಹುದು; ಆದರೆ, ಕೆಂಪು ಚೀನಾದ ಪರಿಸ್ಥಿತಿ ಹೇಗೆ ನಿಂತೀತೆಂದು ಊಹಿಸುವುದೂ ಸಾಧ್ಯವಿಲ್ಲ. ಇದರಿಂದ ನಾವೇನೂ ಸಮಾಧಾನಪಟ್ಟುಕೊಳ್ಳುವಂತಿಲ್ಲ. ಕೆಂಪು ಚೀನಾದಲ್ಲಿ ಇಂದೀಗ ಆಂತರಿಕ ಸಂಘರ್ಷದ ಕುರುಹುಗಳು ಕಾಣುತ್ತಿವೆ ನಿಜ; ಇದರ ಕಿಡಿಯೆಲ್ಲಿಯೂ ಹಾರಬಹುದು. ನಮ್ಮ ದೇಶದಲ್ಲಿಯೇ ಕೆಂಪು ಚೀನೀ ನಿಷ್ಠರು ಇದ್ದಾರೆ. ಅವರು ಅಲ್ಲಿ ಉತ್ಪಾತವೆಬ್ಬಿಸುವಾಗ ಇವರು ಇಲ್ಲಿ ಏನು ಕುತಂತ್ರ ನಡೆಸುತ್ತಾರೆ? ಯಾರಿಗೆ ಗೊತ್ತು? ಮೈಯೆಲ್ಲ ಕಣ್ಣಾಗಿ ಎಚ್ಚರಬೇಕಾದ ಕಾಲವಿದು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 261/1966.

ವಾದಿ— ನಾರಾಯಣ ಪ್ರಭು
ಪ್ರತಿವಾದಿರು—ಲಚ್ಚಮ್ಮ ಸೆಡ್ತಿ
ಕೂಡಾ

ಈ ದಾವೆಯ 6ನೇ ಪ್ರತಿವಾದಿಳು ರಾಧಮ್ಮ ಸೆಟ್ತಿ ಬಚ್ಚಸೆಟ್ತಿ ಮಗಳು, ಕುಂದಾಪುರ ತಾಲ್ಕು ಕಾಳಾವರ ಗ್ರಾಮದ ಸಳುವಾಡಿಯಲ್ಲಿರುವವಳು ಇವಳಿಗೆ ತಿಳಿಯಪಡಿಸುವದೇನೆಂದ್ರೆ—

ನೀವು ವಗ್ಯೆರೇರೆಯಿಂದ ಬಹ ಮೂಲಗೇಣಿ ಬಾಕಿ ಬಗ್ಗೆ ವಾದಿಯು ದಾಖ್ಲು ಮಾಡಿದ ಮೇಲಿನ ದಾವೆಯ ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 7—2—67ನೇ ದಿವ್ಸ ಬೆಳಿಗ್ಯೆ ಗಂಟೆ 11ಕ್ಕೆ ತನ್ನಿಗೆ ಇಟ್ಟಿರುತ್ತಾರೆ. ನೀವು ಸ್ವತಹ ಯಾ ವಕೀಲರ ಮೂಲಕವಾಗಲೀ ಹಾಜರಾಗದಿದ್ದಲ್ಲಿ, ನಿಮ್ಮನ್ನು ಎಕ್ಸಪಾರ್ಟಿಯಂತೆ ತೀರ್ಮಾನ ಮಾಡಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

K. R. Shenai
Advocate for Plff.

ತಾರೀಖು 7—1—1967,
ಮೊಕ್ಕಾಂ: ಕುಂದಾಪುರ.

ಕ್ಷಯರೋಗಿಗಳನ್ನೆಲ್ಲಾ ಕ್ಷಯ ಆಸ್ಪತ್ರೆಗೆ ಸೇರಿಸುವುದು ಈಗ ಅಗತ್ಯವಿಲ್ಲ. ಹೆಚ್ಚಿನ ರೋಗಿಗಳ ಚಿಕಿತ್ಸೆಯನ್ನು ಅವರ ಮನೆಗಳಲ್ಲಿಯೇ 'ಕ್ಷಯ ಚಿಕಿತ್ಸಾಲಯಗಳ ಮೂಲಕ ನಡೆಸಬಹುದು.



ಕ್ಷಯ ಚಿಕಿತ್ಸಾಲಯಗಳನ್ನು ಬಲಗೊಳಿಸಲಿಕ್ಕೆ ನಿಮ್ಮ ಸಹಾಯ ಬೇಕಾಗಿದೆ. ಪ್ರಚಲಿತ ಟಿಬಿ ಮುದ್ರೆಮಾರಾಟ ಚಳವಳವು 1967ನೇ ಜನವರಿ 26ಕ್ಕೆ ಮುಗಿಯುವುದು. ಟಿಬಿ ಮುದ್ರೆಗಳನ್ನು ಅಗತ್ಯ ಖರೀದಿಸಿರಿ. ಒಂದು ಟಿಬಿ ಮುದ್ರೆಯ ಬೆಲೆ ಬರೇ 10 ಪೈಸೆ ಮಾತ್ರ.

ಟಿಬಿ ಮುದ್ರೆಗಳು ದಕ್ಷಿಣ ಕನ್ನಡ ಜಿಲ್ಲಾ ಟಿಬಿ ಸಮಿತಿ, ಮಂಗಳೂರು ಮತ್ತು ಅದರ ಏಜನ್ಸಿಗಳಲ್ಲಿ ಮಾರಾಟಕ್ಕೆ ಸಿಗುತ್ತವೆ.

ನಕಾಶೆಗಳು ಬೇಕಾಗಿವೆ: 18ನೇ ಟಿಬಿ ಮೊಹರು ಮಾರಾಟ ಚಳವಳಕ್ಕೆ ಆಕರ್ಷಣೀಯವೂ ಸರಳವೂ ಆದ ನಕಾಶೆಗಳನ್ನು ಆಮಂತ್ರಿಸಲಾಗಿದೆ. ಉತ್ತಮ ನಕಾಶೆಗೆ ರೂ. 500/- ಬಹುಮಾನ ಕೊಡಲಾಗುವುದು. ವಿವರಗಳಿಗೆ ಬರೆಯಿರಿ:— ಸೆಕ್ರೆಟರಿ-ಜನರಲ್, ಟಿಬಿ ಎಸೋಸಿಯೇಶನ್ ಆಫ್ ಇಂಡಿಯಾ, 3 ರೆಡ್ ಕ್ರೋಸ್ ರೋಡು, ನ್ಯೂ ಡೆಲ್ಲಿ.

17ನೇ ಟಿಬಿ ಮೊಹರು ಮಾರಾಟ ಚಳವಳಿ

(ನವದೆಹಲಿಯ ಭಾರತದ ಟಿ ಬಿ ಸಂಘದಿಂದ ಸಂಘಟಿತವಾದುದು)

ಈ ಸ್ಥಳದ ದಾತೃಗಳು

Industrial Machinery and Tools Corporation, Bombay

ನಿರೀಕ್ಷಿಸಿರಿ!
ಬರುವ ವಾರ
ನವಯುಗ
ಪ್ರಜಾರಾಜ್ಯ ವಿಶೇಷಾಂಕ
ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.
ಬೆಲೆ 0 – 50 ಪೈಸೆ

ತಯಾರಾಗಿದೆ—
ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಎಂಬ ಭಗವದ್ಗೀತೆಯ ಸಮೂಲ ಭಾಷಾಂತರದ ಹೊಸ ಮುದ್ರಣ
ಆಕರ್ಷಕ ಮುಖ ಪತ್ರ 450 ಪುಟಗಳು
ಬೆಲೆ ರೂ. 1–50 [ಟ. ಖ. ಪ್ರತ್ಯೇಕ]
ರಖಂ ಪ್ರತಿಗಳಿಗೆ ರಿಯಾಯತಿ ದರ.
ತ್ವರೆ ಮಾಡಿರಿ!
ನವಯುಗ ಪ್ರೆಸ್, ಉಡುಪಿ.

ನೀತಿ ಕತೆಗಳು

ಒಮ್ಮೊಮ್ಮೆ ನಿಜವಾದ ಪ್ರೇಮವು ಆಕಸ್ಮಿಕವಾದ ಭೇಟಿಯಿಂದಲೇ ಪ್ರಾರಂಭವಾಗುತ್ತದೆ. ಒಮ್ಮೆ ಒಂದು ಕುರಿಯು ಅಕಸ್ಮಾತ್ ಒಂದು ತೋಳವನ್ನು ಸಂಧಿಸಿತು.......

ಇಂತಹ ಆಕಸ್ಮಿಕ ಭೇಟಿಗಳನ್ನು ತಪ್ಪಿಸಿಕೊಳ್ಳಿ.

o o o

"ನನ್ನ ಹೆಂಡತಿ ಭಯಂಕರಳು"—ಎಂದಿತು ಮೊಲ.

"ಹಾಗೇನೂ ಇಲ್ಲ. ತುಂಬ ಮಧುರವಾಗಿ, ಮೃದುವಾಗಿ ಇದ್ದಳು—ಎಂದು ವಾದಿಸಿತು ತೋಳ.

ಲೋಕೋಭಿನ್ನ ರುಚಿಃ!

o o o

ಮೊಲವು ತೋಳದೊಡನೆ ಓಟದ ಪಂದ್ಯ ಕಟ್ಟಿತು. ಗೆದ್ದಿತು ಕೂಡ.

ತೋಳವು ಅದಕ್ಕೆ ಬದಲಾಗಿ...ಮಾತಿನ ಪಂದ್ಯದ ಸವಾಲು ಹಾಕಿತು.

"ನಾನು ನಿನ್ನನ್ನು ತಿನ್ನುವುದಿಲ್ಲ ಎಂದು ನಿನಗೆ ಖಾತರಿ ಇದೆಯೇ?"

"ಇ....ಲ್....ಲ್ಲಾ....... ಹಾಗೇನೂ ಇಲ್ಲಲ್ಲಾ!"

"ನಿನ್ನ ಮಾತು ನಿಜ."

ಆ ಮೇಲೆ ಮೊಲವೇನೂ ಉಳಿಯಲಿಲ್ಲ.

ಭರವಸೆಯಿಲ್ಲದಿರುವಾಗ ತಲೆ ಮೇಲೆತ್ತಬಾರದು.

o o o

"ಸದ್ದು ಮಾಡಬಾರದು. ಮೂಕಾಭಿನಯ ಪ್ರಯೋಗ ನಡೆಯುತ್ತಿದೆ"

ನಾಟಕಶಾಲೆಯ ಉಪಾಹಾರದ ಕೋಣೆಯ ಬಾಗಿಲಲ್ಲಿ ಈ ಫಲಕವನ್ನು ತೂಗಹಾಕಲಾಗಿತ್ತು.

ಇಲಿಯು ಒಳಹೊಕ್ಕು ನೋಡಿದಾಗ, ಅಲ್ಲಿ ಒಂದು ಬೆಕ್ಕು ಭಕ್ಷ್ಯವನ್ನು ತಿನ್ನುತ್ತಿತ್ತು.

o o o

ಸಿಹಿ ನೀರಿನ ಕೊಳದ ಮೀನು ತಾನಾಗಿಯೇ ಸಾರಿನಲ್ಲಿ ಸೇರಿಕೊಂಡಿತು.

ನಿಮಗೆ ನಂಬಿಕೆಯಾಗಲಿಲ್ಲವಲ್ಲವೇ?

ಯಾರಿಗೆ ತಾನೇ ಆದೀತು?

o o o

"ಜೀವನವೇ ಒಂದು ದೊಡ್ಡ ಉತ್ಸವದಿನ"—ಎಂದಿತು ಒಂದೇ ದಿನ ಜೀವಿಸುವ ಚಿಟ್ಟೆ.

ಅದರ ಅದೃಷ್ಟ ಚೆನ್ನಾಗಿತ್ತು, ಅದು ಹುಟ್ಟಿದುದೇ ಭಾನುವಾರ ಬೆಳಗ್ಗೆ.

o o o

ಗಣಿತ ಶಾಸ್ತ್ರಜ್ಞರು ಊರುಗೋಲಿನಿಂದ ಮರಳ ಮೇಲೆ ಏನೋ ಬರೆದರು. ಸಮಸ್ಯೆಯೊಂದನ್ನು ಅವರು ಬಿಡಿಸುತ್ತಿದ್ದರು. ಹತ್ತಿರದಲ್ಲೇ ಒಂದು ನಾಯಿಮರಿ ಏನೋ ಹುಡುಕುತ್ತಿತ್ತು.

"ಸಿಕ್ಕಿತೆ"..ನಿಮಗೆ ಸಿಕ್ಕಿತೆ?"—ಎಂದು ನಾಯಿ ಮರಿ ಕೇಳಿತು.

"ಇಲ್ಲ ಸಿಕ್ಕಲಿಲ್ಲ" ಎಂದರು ಗಣಿತ ಶಾಸ್ತ್ರಜ್ಞರು ನಿರಾಸೆಯಿಂದ.

'ನನಗಂತೂ ಸಿಕ್ಕಿತು!.......ಕಡಿಯ ಚೂರು!'

o o o

ತಾಯಿ 'ಕಾಂಗರೂ' ಪ್ರಾಣಿಯು ತನ್ನ ಮರಿಯೊಟ್ಟಿಗೆ ತಾಜಾಗಾಳಿ ಸೇವಿಸುತ್ತಿತ್ತು. ಒಡನೆಯೇ ಅದಕ್ಕೆ ಅಪಾಯದ ಅರಿವುಂಟಾಯಿತು

'ನಾವು ಓಡಬೇಕು! ಬೇಗ ಚೀಲದೊಳಗೆ ಸೇರಿಕೋ!' ಎಂದು ಕೂಗಿತು ತಾಯಿ.

'ಊ....ಹುಂ! ಆಗದು. ಅದು ಹಳೆಯ ಕಾಲದ ಪದ್ಧತಿ'—ಎಂದಿತು ಮರಿ.

o o o o

ಒಂದು ತುಂಡು ಗಟ್ಟಿ ಬೆಣ್ಣೆ ಇಲಿಯ ಬಿಲದ ಬಳಿಗುರುಳಿ ಬಂದು ಅಡ್ಡ ನಿಂತಿತು.

'ಸದ್ದು ಮಾಡಬೇಡ! ಈ ತುಂಡನ್ನು ಮೊದಲು ತಿಂದುಹಾಕೋಣ. ಆ ಮೇಲೆ ಹೊರಗೆ ಹೋಗೋಣ'—ಎಂದಿತು ಮರಿ.

"ಅಬ್ಬಾ, ಸರಿ, ಆದರೆ, ಗಟ್ಟಿ ಬೆಣ್ಣೆಯು ಮುಗಿಯುವದರಲ್ಲೊಂದು ನನ್ನ ಆಸೆ"—ಎಂದಿತು ಅದರ ಅಜ್ಜ—ಇಲಿ.

ಕನಸು ಕಾಣುವುದು ಯೌವನದ ಗುಣವಷ್ಟೇ ಎಂದು ಹೇಳುವುದೂ ಉಂಟು ...

['ಯುನೆಸ್ಕೋ' ಪತ್ರಿಕೆಯಿಂದ]

ಕಳ್ಳನ ಕುಮಾರ

(ಎರಡನೇ ಪುಟದಿಂದ)

ರಾತ್ರಿಯೂ ಹಗಲೂ ಕೊಚ್ಚನ್ನಿಯ ತಾಯಿಯು ತೆಂಗಿನ ಕಾಯಿಗಳ ಸಿಪ್ಪೆ ಸುಲಿದು! ಹುರಿಹಗ್ಗ ಮಾಡುವ ಕೆಲಸದಲ್ಲೇ ನಿರತಳಾಗಿರುವಳು. ಇದುವೇ ಕೊಚ್ಚನ್ನಿಗೆ ವ್ಯಸನಕ್ಕೆ ಕಾರಣವಾಯಿತು. ದಿನಗಳೆದಂತೆ ಇದು ಅಭ್ಯಾಸವೇ ಆಯಿತು. ಇತ್ತ ತಂದೆಯ ಯೋಚನೆ, ನಿರಾಶೆ, ಹಸಿವು—ಇತ್ಯಾದಿಗಳಿಂದ ನೊಂದು ಅತ್ತನು, ಅತ್ತನು. ಬಳಲಿದನು - ಬಳಲಿದನು. ತಾಯಿಯೂ ಮರುಗಿದಳು—ಕೊರಗಿದಳು.

o o o o

ಆ ದಿನವೂ ಬಂದಿತು. ಅಂದು ಅವನ ತಂದೆಯು ಜೈಲಿನಿಂದ ಬಿಡುಗಡೆ ಹೊಂದುವ ದಿನ. ಇತ್ತ ಕೊಚ್ಚನ್ನಿಗೆ ಸಂತೋಷವೇ ಸಂತೋಷ. ಮನೆಯ ಮುಂದೆ ಗೇಟಿನಲ್ಲಿ ಅಂದು ತಂದೆಗಾಗಿ ಕಾಯತೊಡಗಿದನು. ಅಂದು ಇತರ ದಿನಗಳಂತೆ ಸ್ವಲ್ಪ ವಿಶೇಷ ಅಡುಗೆ ತಯಾರಾಗಿತ್ತು.

ಆದರೆ ಆ ದಿನವಿಡೀ ಕಳೆದರೂ ನೀಲಕಂಠನ ಸುಳಿವಿಲ್ಲ. ರಾತ್ರಿಯಿಡೀ ನಿದ್ರೆಯಲ್ಲಿ ಕೊಚ್ಚುನ್ನಿಗೆ ತಂದೆಯದೇ ಯೋಚನೆ. ಹೀಗೆ ಮೂರು ನಾಲ್ಕು ದಿನಗಳು ಕಳೆದುವು. ಕೊಚ್ಚನ್ನಿಯು ನಿರಾಶೆಯಿಂದಲೇ ಹೇಳಿದನು: "ತಂದೆಯಿನ್ನು ಬರಲಾರರು!" ಎಂದು.

ತಂದೆ ಬಂದಂತೆಯೂ, ತನ್ನನ್ನು ಮುದ್ದಿಸಿದಂತೆಯೂ, ಮಾತನಾಡಿದಂತೆಯೂ ಬಗೆಬಗೆಯ ಕನಸನ್ನೇ ಕಂಡನು.

o o o

ಮರುದಿನ ಬಿಸಿಬಿಸಿ ವಾರ್ತೆ ಹರಡಿತ್ತು. ಮಧುರಾಯರ ಮನೆಯಲ್ಲಿದ್ದ ಹಲವಾರು ಬೆಲೆ ಬಾಳುವ ಒಡವೆ ವಸ್ತುಗಳು ಕಳವಾಗಿತ್ತೆಂದು ಎಲ್ಲೆಲ್ಲೂ ಮಾತೇ ಮಾತು! ಪೋಲೀಸರು ನೀಲಕಂಠನ ಮನೆಗೆ ಬಂದು ವಿಚಾರಿಸಿದರು, ಆದರೆ ಆತನು ಬಂದೇ ಇಲ್ಲವೆಂದು ತಿಳಿದು ಪೋಲೀಸರು ನಿರಾಶರಾದರು. ಅಲ್ಲಲ್ಲಿ ಗುಪ್ತದಳ (ಪೋಲೀಸ್ ಅಧಿಕಾರಿಗಳು)ಗಳು ಶೋಧನೆ ನಡೆಯಿಸಿ ಹತಾಶರಾದರು.

ಇದಾಗಿ ಹಲವು ದಿನಗಳುರುಳಿದವು ಅಂದು ಹನ್ನೆರಡು ಗಂಟೆಯ ರಾತ್ರಿ ಕೊಚ್ಚನ್ನಿಯ ಮನೆಯ ಬಾಗಿಲು ಯಾರೋ ತಟ್ಟುತ್ತಿರುವಂತೆ ಸದ್ದಾಯಿತು. ನೀಲಕಂಠನ ಹೆಂಡತಿಯು ಲಾಂದರವನ್ನು ದೊಡ್ಡದು ಮಾಡಿ ಬಾಗಿಲು ತೆಗೆದಳು. ನೋಡುವುದೇನು? ಗಡ್ಡ, ಮೀಸೆಗಳಿಂದ ಕೂಡಿದ ತನ್ನ ಗಂಡನ ಭಯಾನಕ ಮೂರ್ತಿಯನ್ನು ಕಂಡಳು. ಹೆಂಡತಿಗೆ ಗಂಡನು ಕಳ್ಳನಾದರೂ ಪ್ರೀತಿಯಿರುತ್ತದೆ. ಅಂತೆಯೇ ಅವಳಿಗೆ ಸಂತೋಷವಾಯಿತು. ಕೊಚ್ಚನ್ನಿಗೂ ಎಚ್ಚರವಾಯಿತು, ಎದುರಿಗೆ ನಿಂತಿರುವುದು ತನ್ನ ಅಪ್ಪನೆಂದು ತಿಳಿದು 'ಅಪ್ಪಾ' ಎನ್ನುತ್ತಾ ತಂದೆಯನ್ನು ಬಿಗಿದಪ್ಪಿದನು. 'ಇನ್ನು ಕಳ್ಳತನ ಮಾಡುವುದಿಲ್ಲವೆಂದು ನನಗೆ ಭಾಷೆಕೊಡಬೇಕು, ಅಪ್ಪಾ' ಎಂದು ಹುಡುಗನು ಕೂಡಲೇ ಹೇಳಿದನು. 'ಹಸಿವಿನಿಂದ ಸತ್ತರೂ ಚಿಂತಿಲ್ಲ ದುಡಿದು ಉಣ್ಣುವುದು ಲೇಸು, ನಾನಿನ್ನು ಕಳ್ಳತನ ಬಿಟ್ಟೇ ಬಿಟ್ಟೆನು' ಎನ್ನುತ್ತಾ ಭಾಷೆಕೊಟ್ಟನು.

ಮೂರನೆಯ ದಿನ ಆ ಮನೆಯು ಬರಿದಾಗಿತ್ತು. ಆ ಸಂಸಾರವು ಪರಾರಿಯಾಗಿ ಅದೆಲ್ಲೋ ಒಂದು ಕಡೆ ಶಾಂತ ಜೀವನವನ್ನು ನಡೆಯಿಸಲು ಉಪಕ್ರಮಿಸಿತೋ ಏನೋ...

"ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ......"

(ಅಂಗ್ಲ ಕಥೆಯನ್ನಾಧರಿಸಿ)

ಯಕ್ಷಗಾನ "ಭೇತಾಳ ಗರ್ವಭಂಗ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ದಿನಾಂಕ 31ನೇ ಶನಿವಾರ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಅವರಿಂದ ರಚಿಸಲ್ಪಟ್ಟ 'ಬೇತಾಳ ಗರ್ವಭಂಗ' ಎಂಬ ನೂತನ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ಜರಗಲ್ಪಟ್ಟಿತು.

ಆರಂಭದಲ್ಲಿ ಶ್ರೀ ಯು. ಬಿ. ಗೋವಿಂದ ಭಟ್ಟರು ಸ್ವಾಗತಿಸಿ ಪಾತ್ರಪರಿಚಯ ಮಾಡಿಕೊಟ್ಟರು. ಶ್ರೀ ಬಾಬುರೈಗಳು ಕೊನೆಗೆ ಧನ್ಯವಾದವಿತ್ತರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 421/1958
R. E. P. 286/1966.

ಅರ್ಜಿದಾರ— ರಾಮಚಂದ್ರ ಕಾಮತ.
ಎದುರು— ಕೃಷ್ಣಪ್ಪ ಸೆಟ್ಟಿ ಕೂಡಾ.

ಮೇಲಿನ ಅಮಲ್ಜಾರಿಯಲ್ಲಿ 2ನೇ ಎದುರು ನಂಜಯ್ಯ ಸೆಟ್ಟಿ 3 ನಾರಾಯಣ ಸೆಟ್ಟಿ 4 ನಾಗಮ್ಮ ಸೆಟ್ತಿ 5 ಪಾರ್ವತಿ ಸೆಟ್ತಿ—ಗೋವಿಂದ ಸೆಟ್ಟರ ಮಕ್ಕಳು, ಕುಂದಾಪುರ ತಾಲ್ಲೂಕು ಕೆರಾಡಿ ಗ್ರಾಮದಲ್ಲಿರುವವರು ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ನಿಮ್ಮೆಲ್ಲರ ಮೇಲೆ ವಾದಿಯು ಪಡೆದ ಮೇಲಿನ O.S. 421/1958 ನೇ ಡಿಕ್ರಿ ಸಮಾಧಾನದ ಬಗ್ಗೆ ನಡೆದ ಮೇಲಿನ ಅಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಜವಾಬುದಾರಿಯಾದ ನಿಮ್ಮ ಹಕ್ಕಿನ ಆಸ್ತಿಯ ಏಲಂ [illegible] ನಿರ್ಣಯಿಸುವದಕ್ಕೆ ಮೇಲಿನ ಕೋರ್ಟಿನಲ್ಲಿ ತಾರೀಕು 6—2—67ನೇ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ನಿಶ್ಚಯಿಸಲ್ಪಟ್ಟಿರುತ್ತದೆ. [illegible] ಮೇಲಿನ ಮುಹೂರ್ತಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

K. R. Shenai
Advocate for Petitioner

ತಾರೀಕು. 7—1—1967,
ಮೊಕ್ಕಾಂ: ಕುಂದಾಪುರ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 160/66

ಗಾಣಿಗ ಮಂಜಿ ಹೆಂಗಸು - ವಾದಿಳು.
M.H. ಅಮಿದೀನ್ ಸಾಹೇಬ ಸಹಾ ಪ್ರ.ರು

ಪ್ರತಿವಾದಿಗಳ ಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದರೆ—

7 ನೇ ಪ್ರತಿವಾದಿ [illegible]—M. H. ಶಂಷುದ್ದೀನ್ ಸಾಹೇಬರ ಮಗ ಗಾರ್ಡಿಯನ್ ತ್ಯಾಬೀಬಿ ರಹಿಮ... ನದಿ ಶಂಷುದ್ದೀನ್ ಸ್ಸಾಬರ ವಿಧವೆ, ಗಂಗೊಳ್ಳಿ ಗ್ರಾಮ.

ದಾವಾ ಆಸ್ತಿ ಜಪ್ತಿದಾರಿಯಿಂದ ವಾದಿನಿಗೆ ಭೋಗ್ಯಕ್ಕೆ ಕ್ರೋಧಿ ಮತ್ತು ವಿಶ್ವಾವಸು ಸಂವತ್ಸರಗಳ ಅರ್ಥನಾತ್ರ ರೂ. 469-56 ಬರಮಾಡಿಕೊಳ್ಳುವದೆ ವಾದಿಳು ಮಾಡಿದ ದಾವೆಯು 6—2—67ಕ್ಕೆ ಅಷ್ಟೈರಿ ತನ್ನಿಗೆಯಿಟ್ಟಿದೆ. ಆ ಕಾಲಕ್ಕೆ ನಿಮ್ಮ ಉದಾಸಚಯಿದ್ದ ನಿದ್ರಿ ದಿವಸ ಹಗಲು 11 ಗಂಟೆಗೆ ಕೋರ್ಟ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗತಿ ವಾದಿಳ ಕಡೆಯಿಂದ ತಿಳಿಯಪಡಿಸಿದೆ.

M. M. Hebbar
Advocate for Plff.
Kundapur, Date 10—1—67.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ಪರ್ಜಿನ್ ಕ್ರೂಡ್ ಆಯಿಲ್
. H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:-
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಸಪ್ತ ಸೂತ್ರಗಳು ಸದ್ವರ್ತನೆಯ ಸಾಧನೆಗೆ..

ಕನ್ನಡಿಸಿದವರು:
ಶ್ರೀ ಮ. ಗೋ. ರಾವ್.

ಮನುಷ್ಯ ತನ್ನ ಸಚ್ಚರಿತ್ರೆಯ ದೆಸೆಯಿಂದ ಸಮಾಜದಲ್ಲಿ ಗೌರವಿಸಲ್ಪಡುತ್ತಾನೆ. ಅವನಿಗೆ ಗೌರವ ಆತನ ಪದವಿ ಮತ್ತು ಸಂಪತ್ತು ಇವುಗಳಿಂದಲೂ ಸಿಗುತ್ತದೆ. ಆದರೆ ಈ ರೀತಿಯ ಗೌರವವು ಸ್ಥಾಯಿಯಲ್ಲ. ಸಜ್ಜನರು ವಿದ್ವಾಂಸರ ಆದರವನ್ನು ಎಂದು ಮಾಡುತ್ತಾರೋ ಅಂದವರು ಸಚ್ಚರಿತ್ರವಂತರಾಗುತ್ತಾರೆ.

ಉದಾಹರಣೆಗೆ ರಾಮಾಯಣದಲ್ಲಿ ರಾವಣನು ಮಹಾ ವಿದ್ವಾಂಸನಾಗಿದ್ದ. ಆದರೆ ಆತನ ದುಷ್ಟ ಕಾರ್ಯಗಳ ಮೂಲಕ ಜನರು ಆತನ ನಿಂದನೆಗೆ ತೊಡಗಿದರು ಮತ್ತು ರಾಕ್ಷಸ ಎಂದು ಕರೆದರು. ಅಂತೆಯೇ ಬರೇ ಓದು ಬರಹದಲ್ಲಿ ಪಾಂಡಿತ್ಯ ಹೊಂದಿದವ ಆದರೆ ದುರ್ವರ್ತನೆಯನ್ನು ಗೈಯುವವ ಆದರಣೀಯನಾಗಲಾರನು. ಮನುಷ್ಯನ ನಡವಳಿಕೆಯ ಮೂಲಕ ಆತನ ಆತ್ಮಶಕ್ತಿಯ ಪರಿಚಯ ಸ್ಪಷ್ಟವಾಗುತ್ತದೆ. ಮಾತ್ರವಲ್ಲ ಈ ನಡವಳಿಕೆಯೇ ಆತನ ಯೋಗ್ಯತೆಯನ್ನು ಹೇಳುತ್ತದೆ.

ಸದ್ವರ್ತನೆಯಲ್ಲಿ ಈ ಗುಣಗಳು ಬರುತ್ತವೆ. ವಿನಯ, ಉದಾರತೆ, ಲಾಲಸೆಯಿಂದ ಮುಕ್ತನಾಗಿರುವುದು; ಧೈರ್ಯ, ಸತ್ಯಸಂಧತೆ, ವಚನಪರಿಪಾಲನ ಮತ್ತು ಕರ್ತವ್ಯ ಪರಾಯಣತೆ. ಇವುಗಳನ್ನು ಬಾಲ್ಯದಿಂದಲೇ ಅಭ್ಯಾಸಗೈದರೆ ಅಧಿಕ ಪ್ರಭಾವ ಉಂಟಾಗುತ್ತದೆ. ಏಕೆಂದರೆ ಬಾಲ್ಯಾವಸ್ಥೆಯಲ್ಲಿ ಬಾಲಕ ಯಾವುದೇ ಸಂಗತಿಯನ್ನು ಯಾ ವಿಷಯವನ್ನು ಬೇಗನೆ ತಿಳಿದುಬಿಡುತ್ತಾನೆ. ಬೆಳೆದ ಯುವಕರಲ್ಲಿ ಅನ್ಯ ವಸ್ತುಗಳು ಪ್ರಭಾವ ಬೀರುವುದರಿಂದ ಯಾವ ವಿಷಯವನ್ನೂ ಶೀಘ್ರ ಕಲಿಯಲು ಸಾಧ್ಯವಾಗ ಬಹುದು. ಬಾಲ್ಯಾವಸ್ಥೆ ಜೀವನದ ಆರಂಭಿಕ ಕಾಲ. ವಿದ್ಯಾರ್ಥಿ ಜೀವನದಲ್ಲಿ ಕೇವಲ ಜ್ಞಾನಾರ್ಜನೆಗಾಗಿರುವುದಲ್ಲ ಜೊತೆಗೆ ಸದ್ವರ್ತನ ಅರ್ಥಾತ್ ಉತ್ತಮ ನಡವಳಿಕೆಯನ್ನೂ ತಿಳಿದುಕೊಳ್ಳಬೇಕು.

'ವಿನಯ'ವಿರುವ ವ್ಯಕ್ತಿಯಲ್ಲಿ ವಿದ್ಯೆಯ ಶೋಭೆಯು ಮತ್ತಷ್ಟು ಪ್ರಕಾಶಿಸಲ್ಪಡಬಹುದು. ಗೀತೆಯಲ್ಲಿ ಬ್ರಾಹ್ಮಣನನ್ನು 'ವಿದ್ಯಾವಿನಯ ಸಂಪನ್ನ' ಎಂದು ಹೇಳಿದ್ದಾರೆ. ಪರಿಶುದ್ಧ ಹೃದಯದಿಂದ ವಿನಯಪೂರ್ಣ ವ್ಯವಹಾರ ಮಾಡುವುದರಿಂದ ಆತ್ಮ ಪಾವಿತ್ರ್ಯತೆಯ ದಡಮುಟ್ಟುತ್ತದೆ. ಶಾಂತಿಯು ನೆಲಗೊಂಡು ಪ್ರೇಮದ ಹೊನಲು ಹರಿಯುತ್ತದೆ.

ವಿನಯಶೀಲಮನುಷ್ಯನಿಗೆ ಅಪಮಾನದ ಸಂದರ್ಭ ಬಹು ಅಪರೂಪವಾಗುತ್ತದೆ. ಇದು ಬಹಳ ಖೇದಕರ ವಿಷಯ ಏನೆಂದರೆ ಈ ದಿನಗಳಲ್ಲಿ ನಾವು ನಮ್ಮ ಹಿರಿಯರೆದುರು ವಿನಯಪೂರ್ಣ ವ್ಯವಹಾರ ಮಾಡುತ್ತಿಲ್ಲ. ವಿನಯ ಪಾಲನೆಯಿಂದ ಆದರ ಮತ್ತು ಸಹನಶೀಲತೆಯ ಗುಣ ತಾನೇ ತಾನಾಗಿ ಬಂದು ಬಿಡುತ್ತದೆ.

'ಉದಾರತೆ'ಯು ಮತ್ತೊಂದು ಶ್ರೇಷ್ಠ ಗುಣ. ಯಾವ ಮನುಷ್ಯನ ಸ್ವಭಾವವು ಉದಾರದಿಂದ ಕೂಡಿದೆಯೋ ಆತನು ಪ್ರತಿಯೊಂದು ವಿಚಾರದ ಕಡೆಗೂ ಆದರ ಭಾವವಿರಿಸುತ್ತಾನೆ. ಇಡಿಯ ಜಗತ್ತನ್ನು ಒಂದು ಕುಟುಂಬವೆಂದು ತಿಳಿಯುತ್ತಾನೆ. ಆತನ ಹೃದಯ ಪ್ರೇಮ ಮತ್ತು ಸೇವೆಯ ಭಾವದಿಂದ ತುಂಬಿ ತುಳುಕುತ್ತದೆ. ಬಹಳ ಜನರು ಧನಮದದ ಪರಿಣಾಮವಾಗಿ ಗೌರವ ಹೀನತೆಯ ಅನುಭವವನ್ನು ಹೊಂದುತ್ತಾರೆ. ಆದರೆ ಅವರು ಕೂಡಾ ಉದಾರಪೂರ್ಣ ವ್ಯವಹಾರ ಗೈಯಲು ಇಚ್ಛಿಸುತ್ತಾರೆ. ಪ್ರಾಮಾಣಿಕ ವ್ಯಕ್ತಿ ಅಪ್ರಾಮಾಣಿಕ ಧನಾಢ್ಯನಿಗಿಂತ ಯಾವಾಗಲೂ ಶ್ರೇಷ್ಠ ಸ್ಥಾನವನ್ನಲಂಕರಿಸುತ್ತಾನೆ.

ಪರಿಶ್ರಮಿ ಮನುಷ್ಯನಲ್ಲಿ ದೈವೀ ಪ್ರಭಾವ ಉಂಟಾಗುತ್ತದೆ. "ಲಾಲಸೆ"ಯು ಯಾವುದಾದರೂ ವಸ್ತುವನ್ನು ಪಡೆಯಲೋಸುಗ ಉಂಟಾಗುತ್ತದೆ. ಪ್ರಲೋಭನದಿಂದ ತುಂಬಿದ ಮನುಷ್ಯ ಕರ್ತವ್ಯ ಪಥದಿಂದ ವಿಮುಖನಾಗುತ್ತಾನೆ ಈ ರೀತಿಯ ಲಾಲಸೆಯಿಂದ ಬೇರೆ ಯಾವ ವ್ಯಕ್ತಿ ಮಹಾ ವ್ಯಕ್ತಿ ಎನ್ನಿಸುತ್ತಾನೆ.

ಜೀವನದಲ್ಲಿ ಅನೇಕ ಕಠಿಣ ಪ್ರಸಂಗಗಳು ಬರುವುದು ಸ್ವಾಭಾವಿಕ. ಅಂತಹ ಸಂದರ್ಭಗಳನ್ನು ಶಾಂತ ರೀತಿಯಲ್ಲಿ ಎದುರಿಸಿದ ವ್ಯಕ್ತಿ ಧೈರ್ಯವಂತ ಎಂದು ಕರೆಯಲ್ಪಡುತ್ತಾನೆ. ಜ್ಞಾನಿಗಳು ತಮಗೆ ಬರುವ ಬಾಧೆಗಳನ್ನು ಸಂತೋಷದಿಂದ ಇದಿರಿಸಿ ಅದರಲ್ಲೇ ಒಂದು ರೀತಿಯ ಆತ್ಮ ಸುಖವನ್ನು ಕಾಣುತ್ತಾರೆ. ಮಹಾಮಹಾ ವಿಪತ್ತುಗಳು ಬಂದಾಗಲೂ ಅಂತಹವರು ಪ್ರಸನ್ನ ಮತ್ತು ಶಾಂತ ಚಿತ್ತದಿಂದಿರುತ್ತಾರೆ. ಕಷ್ಟಕರ ಸಂದರ್ಭಗಳಲ್ಲಿ ವಿಜಯ ದುಂದುಭಿ ಮೊಳಗುವವನ ಶಕ್ತಿಯ ವಿಕಾಸವಾಗುತ್ತದೆ.

ಮನುಷ್ಯ ಸಾಮಾಜಿಕ ಪ್ರಾಣಿ. ಬೇರೆಯವರ ಸಹಕಾರವಿಲ್ಲದೆ ಜಗತ್ತಿನಲ್ಲಿ ತನ್ನ ಕರ್ತವ್ಯವೆಸಗುವುದು ದುಸ್ಸಾಧ್ಯ. 'ಸಹಕಾರ ತತ್ವ'ದಿಂದಲೇ ಸಮಾಜದಲ್ಲಿ ಏಕತೆಯ ಸ್ಥಾಪನೆಯಾಗುತ್ತದೆ.

"ಸತ್ಯ ಹೇಳುವುದು' ಎಲ್ಲಕ್ಕಿಂತ ಸುಲಭದ ಕೆಲಸ. ಇದಕ್ಕೋಸ್ಕರ ಆತ್ಮ ಬಲದ ಅವಶ್ಯ ಇದೆ. ಮನಸ್ಸಿನಲ್ಲಿ, ವಚನದಲ್ಲಿ ಮತ್ತು ಕಾರ್ಯದಲ್ಲಿ ಸತ್ಯ ಪಾಲನೆಯು ಸರ್ವಶ್ರೇಷ್ಠ ಗುಣವಾಗಿದೆ. 'ಸತ್ಯಮೇವ ಜಯತೇ ನಾನೃತಂ" ಆದುದರಿಂದ ಸತ್ಯಕ್ಕೆ ಎಂದೆಂದಿಗೂ ಜಯ, ಸುಳ್ಳಿಗೆ ಅಪಜಯ ಕಟ್ಟಿಟ್ಟದ್ದೇ.

ಪ್ರಾಯಶಃ ಎಲ್ಲರೂ ತಮ್ಮ ತಮ್ಮ 'ಕರ್ತವ್ಯ'ಗಳನ್ನು ತಿಳಿದಿರುತ್ತಾರೆ. ಯಾವ ಕಾರ್ಯ ಮಾಡುವಾಗ ಅಡೆತಡೆಗಳು ಬಂದರೂ ಎದೆಗುಂದದೆ ಧೈರ್ಯದಿಂದ ಮಾಡಿ ಮುಗಿಸುವುದೇ ಕರ್ತವ್ಯ ಪಾಲನೆ ಎಂದೆನಿಸುವುದು. ಪರಿಸ್ಥಿತಿಗೆ ತಕ್ಕಂತೆ ಮನುಷ್ಯ ತನ್ನ ಕರ್ತವ್ಯ ಅಕರ್ತವ್ಯಗಳನ್ನು ಸ್ವಯಂ ನಿಶ್ಚಯ ಮಾಡಿಕೊಂಡು ತನ್ನ ಕರ್ತವ್ಯಕ್ಕಿಂತ ಅಧಿಕ ಕರ್ತವ್ಯದಲ್ಲಿ ತೊಡಗುವುದು ಆತನ ಪರಮ ಧರ್ಮವಾಗಿದೆ. ಈ ರೀತಿಯ ಕರ್ತವ್ಯ ಪಾರಾಯಣತೆಯಿಂದ ಜಗತ್ತಿನಲ್ಲಿ ಮನುಷ್ಯನ ಗೌರವವು ಹೆಚ್ಚಾಗುತ್ತದೆ.

(ಹಿಂದಿಯಿಂದ)

ವಿಶೇಷ ರಿಯಾಯಿತಿ

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ
ಕಾಣಿಕೆ ಕೊಡುವವರಿಗೆ

■ ಅಂಚೆ
ನಿಧಿಗೆ ಕಳುಹಿಸುವ ಕಾಣಿಕೆಗಳ ಬಗ್ಗೆ ಮನಿ ಆರ್ಡರ್ ಚಾರ್ಜು, ಅಂಚೆ ವೆಚ್ಚ ಅಥವಾ ರಿಜಿಸ್ಟ್ರೇಶನ್ ಶುಲ್ಕ ಕೊಡಬೇಕಾಗಿಲ್ಲ.

■ ವರಮಾನ ತೆರಿಗೆ
ನಿಧಿಗೆ ಕೊಡುವ ನಗದು ಹಣದ ಬಗ್ಗೆ ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಯ ಬೇಡಿಕೆಗಳನ್ನು ಸಾದರ ಪಡಿಸಿದರೆ, ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡುವ ಹಣಕ್ಕೆ ದೊರೆಯುವಂತೆ ವರಮಾನ ತೆರಿಗೆ ರಿಯಾಯಿತಿ ಲಭಿಸುತ್ತದೆ.

■ ರೈಲು ಸಾಗಾಟದ ಖರ್ಚು
ಅನಾವೃಷ್ಟಿ ಪೀಡಿತ ಪ್ರದೇಶಗಳ ಜನರಿಗೆ ಹಂಚಲೆಂದು ಕಳುಹಿಸುವ ಔಷಧಿಗಳು, ವಿಟಮಿನ್ ಮಾತ್ರೆಗಳು, ಆಹಾರ ವಸ್ತುಗಳು, ಬಟ್ಟೆಬರೆಗಳು ಮತ್ತು ಕಂಬಳಿಗಳ ಬಗ್ಗೆ ಗೂಡ್ಸ್ ಗಾಡಿಯಲ್ಲಾಗಲಿ, ಪ್ಯಾಸೆಂಜರ್ ಗಾಡಿಯಲ್ಲಾಗಲಿ ಸಾಗಾಟದ ಖರ್ಚು ಕೊಡಬೇಕಾಗಿಲ್ಲ.

■ ಮನರಂಜನ ತೆರಿಗೆ
ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಯ ಬಗ್ಗೆ ಮನೋರಂಜನ ಕಾರ್ಯಕ್ರಮಗಳನ್ನು ಪ್ರದರ್ಶಿಸಬಯಸುವವರು ಮನರಂಜನ ತೆರಿಗೆ ವಿನಾಯಿತಿಯ ಬಗ್ಗೆ ಆಯಾ ರಾಜ್ಯ ಸರಕಾರಗಳೊಡನೆ ವ್ಯವಹರಿಸಬಹುದು.

■ ಸುಂಕ
ವಿದೇಶಗಳಿಂದ ಕಳುಹಿಸುವ ಕೊಡುಗೆಗಳ ಮೇಲೆ ಸುಂಕ ಕೊಡಬೇಕಾಗಿಲ್ಲ.

■ ಚೆಕ್ಕುಗಳನ್ನು
ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡಿನ ಹೆಸರಿನಲ್ಲಿ ಕಳುಹಿಸಿರಿ.

ಆಹಾರ ಪದಾರ್ಥಗಳು, ಡಬ್ಬಿಗಳಲ್ಲಿ ತುಂಬಿಸಿದ ಆಹಾರಗಳು, ಹಾಲಿನ ಪುಡಿ, ಬಿಸ್ಕೀಟು, ವಿಟಮಿನ್ ಮಾತ್ರೆಗಳು, ಔಷಧಿಗಳು, ಬಟ್ಟೆಬರೆಗಳು ಮತ್ತು ಕಂಬಳಿಗಳು ಅತ್ಯಂತ ಅಗತ್ಯವಾಗಿ ಬೇಕಾಗಿವೆ. ಇವುಗಳನ್ನು ಇಲ್ಲಿಗೆ ಕಳುಹಿಸಿರಿ: ಬಿಹಾರ ರಿಲೀಫ್ ಕಮಿಟಿ, ಪಾಟ್ನಾ ಅಥವಾ ಉತ್ತರ ಪ್ರದೇಶ ರಿಲೀಫ್ ಕಮಿಟಿ, ಲಕ್ನೌ, ಅಥವಾ ಸಿಟಿಜನ್ಸ್ ಕೌನ್ಸಿಲಿನ ಸ್ಥಳೀಯ ಶಾಖೆ, ರೆಡ್ ಕ್ರಾಸ್ ಸೊಸೈಟಿ ಇಲ್ಲವೆ ಸೆಂಟ್ರಲ್ ರಿಲೀಫ್ ಕಮಿಟಿ, ನ್ಯೂ ಡಿಲ್ಲಿ.

ಅನಾವೃಷ್ಟಿಯ ವಿರುದ್ಧ ಹೋರಾಡಲು ನೆರವಾಗಿರಿ

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೬೬



NAVAYUGA

REPUBLIC DAY SPECIAL 1966

50 P



ಭವಿಷ್ಯತ್ತಿನಲ್ಲಿ ಭರವಸೆ ಕೊಡುವ ನಿಯತವಾದ ಉಳಿತಾಯ ಮಾತ್ರವೇ
ನಿಮ್ಮ ಬಾಳಿನ ಬಯಕೆಗಳನ್ನು ಪೂರಯಿಸುವಲ್ಲಿ ಹೆಚ್ಚು ಯಶಸ್ವಿಯಾಗಲು ಸಾಧ್ಯ.

ಕ್ಯುಮುಲೇಟಿವ್ ಠೇವಣಿ ಮೂಲಕ
ಹೆಚ್ಚು ಹೆಚ್ಚು ಉಳಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಣಿಪಾಲ

200 ಕ್ಕೂ ಹೆಚ್ಚು ಶಾಖೆಗಳು... 70 ಕೋಟಿಗೂ ಮಿಕ್ಕಿದ ಸಾಧನಸಂಪತ್ತು

Edited Printed & Published by K. H. Shetty at the Navayuga Press, Udipi, S. India.

ಪ್ರಜಾರಾಜ್ಯ ಸಂಚಿಕೆ ೧೯೬೬
ಟೆಲಿಫೋನ್: 226
ಸಂಪುಟ ೪೫
ಸಂಚಿಕೆ ೨೦

ನವಯುಗ

ಸ್ಥಾಪಕರು:
ದಿ। ಎ. ಬಿ. ಶೆಟ್ಟರು

ಸಂಚಾಲಕ ಸಂಪಾದಕ:
ಕ ಹೊನ್ನಯ್ಯ ಶೆಟ್ಟಿ

ಸ್ಥಿರ ಪ್ರಜಾಪ್ರಭುತ್ವ-ಭಾರತ

ಭಾರತೀಯ ಪ್ರಜಾಸತ್ತೆಯ ಇತಿಹಾಸದಲ್ಲಿ ಕಳೆದ ಆರು ತಿಂಗಳುಗಳು ಅವಿಸ್ಮರಣೀಯ ದಿನಗಳು. ಶಾಂತಿ—ಸಮಾಧಾನ—ತಾಟಸ್ಥ್ಯ ನೀತಿ ಎಂದು ಸಾರುವ ಭಾರತವು ದುರ್ಬಲವಾಗಿದೆ, ಅದನ್ನು ಯಾರಾದರೂ ಎಂದು ಬೇಕಾದರೂ ಬಗ್ಗು ಬಡೆಯಬಹುದು ಎಂದು ಅಚಲ ವಿಶ್ವಾಸ ಪಾಕಿಸ್ತಾನದ ಸರ್ವಾಧಿಕಾರಿಗಳಲ್ಲಿ ತುಂಬಿತ್ತು. ತಾವು ಅಧಿಕ ಪ್ರಮಾಣದಲ್ಲಿ ಪೂರೈಸಿರುವ ಅತ್ಯಾಧುನಿಕ ಮಾದರಿಯ ಶಸ್ತ್ರಾಸ್ತ್ರಗಳು, ಸಮರ ವಿಮಾನಗಳು, ಪ್ಯಾಟನ್ ಟ್ಯಾಂಕ್‌ಗಳು ಅಭೇದ್ಯವೆಂಬ ದೃಢ ವಿಶ್ವಾಸ ಅಮೆರಿಕೆ—ಬ್ರಿಟನ್‌ಗಳಲ್ಲಿತ್ತು. ಯಾವ ಸೈನಿಕ ಒಡಂಬಡಿಕೆಯಲ್ಲೂ ಸೇರದ ಏಕೈಕವಾಗಿ ನಿಂತ ಭಾರತವನ್ನು ಒದೆದಾದರೂ ಕಾಶ್ಮೀರವನ್ನು ಕಬಳಿಸಬೇಕೆಂದು ಆಯ್ಯೂಬ್‌ಖಾನ್ ದಂಡಯಾತ್ರೆಗೆ ಹೊರಟ ಸಮಯದಲ್ಲಿ, ಎಲ್ಲರ ನಿರೀಕ್ಷೆಯನ್ನೂ ಸುಳ್ಳಾಗಿಸಿದ ಭಾರತೀಯ ವೀರ—ತಾನು ದುರ್ಬಲನಲ್ಲ, ಶಾಂತಿ ನೀತಿ ದೌರ್ಬಲ್ಯದ ದ್ಯೋತಕವಲ್ಲ ಎಂಬುದನ್ನು ಸಾರಿ ಹೇಳಿದ—ತನ್ನ ಪ್ರಾಣವನ್ನು ಸರ್ವಸ್ವವನ್ನು ಮಾತೃಭೂಮಿಯ ಸಂರಕ್ಷಣೆಗಾಗಿ ಮುಡಿಪಿಟ್ಟ. ಪಕ್ಷ ಪಂಗಡ ತೊರೆದು ನಾವೆಲ್ಲರೊಂದಾಗಿ ಬಂದಿರುವ ಕುತ್ತು ಕಳೆಯಲು ಸನ್ನದ್ಧನಾಗಿ ಒಮ್ಮನಸಿನಿಂ ದುಡಿದು ಹೋರಾಡಿ ಯಶಗಳಿಸಿ ಭಾರತಮಾತೆಯ ಮುಕುಟವಿಡದೆ ರಕ್ಷಿಸಿದ.

ಭಾರತೀಯ ಐಕ್ಯ, ಭಾರತೀಯ ಮಾತೃಭೂಮಿ ಪ್ರೇಮ,—ನುಗ್ಗಲವೂ ಉಳಿಯಲಿ. ಭಾರತೀಯ ವೀರ ಜವಾನ-ಕಿಸಾನರಲ್ಲೆಲ್ಲೂ ವೀರ ತುಂಬಿ ಒರಲಿ

ಭಾರತದ ಮಿತ್ರ ಸೋವಿಯತ್ ಪ್ರಧಾನಿ ಕೋಸಿಗಿನ್‌ರವರ ಇಚ್ಛೆಯಂತೆ ಭಾರತ—ಪಾಕಿಸ್ತಾನಗಳ ನಡುವೆ ಸಾಮರಸ್ಯ ಏರ್ಪಡಲು ಸೂತ್ತ ಮಾತುಕತೆ ನಡೆಸಲು ಪ್ರಧಾನಿ ಲಾಲಬಹದೂರ್ ಶಾಸ್ತ್ರಿ ತಾಷ್ಕೆಂಟಿಗೆ ತೆರಳಿದರು. ಜನವರಿಯ ಮೊದಲ ದಿನಗಳ ಕಲ್ಪನಾತೀತ ಚಳಿಯನ್ನೂ ರಾಷ್ಟ್ರ ಹಿತದೆದುರು ಅವರು ಕಡೆಗಣಿಸಿದರು. ಪಾಕ್ ಅಧ್ಯಕ್ಷ ಆಯ್ಯೂಬಖಾನರೊಂದಿಗೆ ಒಂದು ವಾರ ಬೇಕಷ್ಟು ಮಾತನಾಡಿದರು. ಯಾವ ವಿಷಯವಾಗಿಯೂ ಒಮ್ಮತವು ಅಸಾಧ್ಯವೆಂದು ಜಗತ್ತೇ ಸಂದೇಹಿಸುತಿದ್ದಾಗ, ಒಂದಲ್ಲ ಒಂಭತ್ತು ಸಂಗತಿಗಳಲ್ಲಿ ಹೊಂದಾಣಿಕೆಯ ಸೂತ್ರ ರಚನೆಯಾಯಿತು. ಕೋಸಿಗಿನ್‌ರನ್ನು ಸಾಕ್ಷಿಯಿರಿಸಿ ಇಬ್ಬರೂ ಒಪ್ಪಿಗೆಯ ಸಹಿ ಹಾಕಿದರು—ತಾಷ್ಕೆಂಟ್ ಘೋಷಣೆಯು ಹೊರಬಿತ್ತು. ಭಾರತ ಪಾಕ್ ಸ್ನೇಹ ಶಮನಕ್ಕೆ ಇದು ನಾಂದಿಯೆನ್ನುವ ಅಭಿಪ್ರಾಯ ಎಲ್ಲೆಡೆಯೂ ವ್ಯಕ್ತವಾಯಿತ್ತು. ಶಾಂತಿ ಸಂಧಾನಕ್ಕೆ ತೆರಳಿದ ಶಾಸ್ತ್ರಿಯವರ ಮುತ್ಸದ್ದಿತನವನ್ನು ಕೊಂಡಾಡ ತೊಡಗಿದರು. ಆದರೆ, ಕೆಲವೇ ಕ್ಷಣವಲ್ಲಿ ಈ ಶಾಂತಿದೂತ, ಚತುರ ಸಂಧಾನಕಾರ ಲಾಲಬಹದ್ದೂರ್ ಶಾಸ್ತ್ರಿ ಲೋಕವನ್ನೇ ತ್ಯಜಿಸಿ ಹೋದರು—ಈ ಬರ ಸಿಡಿಲು ಭಾರತದ ಮೇಲೆ ಮಾತ್ರವಲ್ಲ ಇಡಿಯ ವಿಶ್ವದ ಮೇಲೆ ಒರಿಯೆಳೆಯಿತು. ತ್ಯಾಗ ಮತ್ತು ಸೇವೆಗಳಲ್ಲಿಯೇ ತೊಡಗಿದ್ದ ಶಾಸ್ತ್ರಿಯವರು ತಮ್ಮ ಬಲಿದಾನವನ್ನೂ ದೇಶಕ್ಕಾಗಿ ಮಾಡಿದರು. ದಿ। ಪ್ರಧಾನಿಯವರು ನಮ್ಮ ಅಣ್ಣ ಸರಳ, ಆದರೆ, ಗಂಭೀರ, ಅವರು ಏನನ್ನೂ ಬಯಸಿದವರಲ್ಲ; ಆದರೆ ಎಲ್ಲವೂ ಅವರನ್ನು ಅರಸಿಕೊಂಡೇ ಬಂದುವು 'ಭಾರತ ರತ್ನ'ದ ಸರ್ವೋಚ್ಚ ಬಿರುದು ಅವರನ್ನು ಅರಸಿಕೊಂಡು ಸ್ವರ್ಗಕ್ಕೂ ತೆರಳಿ ಅವರನ್ನು ಅಲಂಕರಿಸಿತು. ಈ ಭಾರತ ರತ್ನದ ಆತ್ಮಕ್ಕೆ ಶಾಂತಿಯನ್ನು ಕೋರುವುದರೊಡನೆ ಅವರ ಚಿರಸ್ಮಾರಕ ತಾಷ್ಕೆಂಟ್ ಘೋಷಣೆ ಸಮರ್ಪಕವಾಗಿ ಅನುಷ್ಠಾನಗೊಳ್ಳುವಂತೆ ಎಚ್ಚರಿರಬೇಡವೆ?

ಲಾಲ್‌ಬಹದೂರರ ಬಹದೂರ್ ಆತ್ಮದ ವಿಶ್ವರೂಪದ ಪರಿಚಯ ಪಡೆದ ನಾವು ಅದಕ್ಕೆ ಶ್ರದ್ಧಾಂಜಲಿಯರ್ಪಿಸೋಣ.

ಮುಂದಿನ ನಾಯಕನ ಆಯ್ಕೆಯ ಬಗ್ಗೆ ಊಹಾಪೋಹಗಳ ಆರಂಭ! ಎಲ್ಲೆಲೂ ಕುತೂಹಲ - ಶ್ರೀಮತಿ ಇಂದಿರಾ ಗಾಂಧಿಗೆ ಪ್ರಚಂಡ ಬಹುಮತ. ಹಿಂದೆ ಶಾಸ್ತ್ರಿ ಆಯ್ಕೆ ಅವಿರೋಧ, ಇಂದು ಗಾಂಧಿ ಆಯ್ಕೆ ಚುನಾವಣೆಯಿಂದ—ಪ್ರಜಾಪ್ರಭುತ್ವಕ್ಕೆ ಒಪ್ಪುವ ರೀತಿಯಿಂದ. ಅಂದು ಅದೇ ಉತ್ತಮವಿತ್ತು, ಇಂದಿಗೆ ಇದೇ ಉತ್ತಮವಾಯ್ತು. ೪೯ ವರ್ಷಕ್ಕೆ ಹತ್ತಿರದ ಇಂದಿರಾ ೪೫ ಕೋಟಿಗೆ ಹತ್ತಿರವಿರುವ ಭಾರತೀಯರ ಪ್ರಧಾನಿ—ಅತಿ ದೊಡ್ಡ ಪ್ರಜಾಪ್ರಭುತ್ವದ ಮಹಿಳಾ ಪ್ರಧಾನಿ. ಭಾರತವು ಸರ್ವ ಪ್ರಕಾರದಲ್ಲೂ ಪ್ರಜಾಸತ್ತಾತ್ಮಕ ರಾಷ್ಟ್ರ. ಜಾತಿ ಮತ — ಧರ್ಮ — ಸಂಪ್ರದಾಯ — ಲಿಂಗ — ಅಭಿಪ್ರಾಯ — ಯಾವ ಭೇದವೂ ಇಲ್ಲಿ ಇಲ್ಲ. ಒಂದಾಗಿ ದೇಶ ಹಿತಸಾಧನೆಗೆ ದುಡಿಯುವುದೊಂದೇ ನಮ್ಮೆಲ್ಲರ ಗುರಿ. ಈ ಗುರಿಯತ್ತ ಶ್ರೀಮತಿ ಗಾಂಧಿ ನಮ್ಮನ್ನು ಕರೆದೊಯ್ಯಬೇಕಾಗಿದೆ ಮಹಾತ್ಮಾಜಿ, ಚಾಚಾಜಿ, ಶಾಸ್ತ್ರೀಜಿಯವರ ಗರಡಿಯಲ್ಲಿ ಪಳಗಿದ ಈ 'ಶಾಕೀಜಿ' ಅವರೆಲ್ಲರ ಸದ್ಗುಣಗಳನ್ನು ಒಳ್ಳವರು, ಅವರ ದಾರಿಯಲ್ಲಿ ನಡೆದು ಗುರಿಸೇರ ಬಲ್ಲವರು

ಶ್ರೀಮತಿಯವರನ್ನು ಅಭಿನಂದಿಸುವುದು, ಜತೆಗೆ ಅವರ ಮೂಲಕ ನಮ್ಮ ಪ್ರಗತಿಗಾಗಿ ಪ್ರಾರ್ಥಿಸುವುದು ಜಗತ್ತು.

ಭಾರತದ ಪ್ರಜಾಪ್ರಭುತ್ವ ಸ್ಥಿರವಾಗಿದೆ—
ಇದು ತನಕವದು ದೃಢ ಪಟ್ಟಿದೆ.
ಮುಂದೆಯೂ ಅದು ಅಚಲವೆನಿಸಲಿ.
ಭಾರತೀಯ ಪ್ರಜಾಸತ್ತೆ ಚಿರಾಯುವಾಗಲಿ.

ಅಭಿನಂದನೆ

ಈ 'ವಿಶೇಷ ಸಂಚಿಕೆ'ಯ ತಯಾರಿಯಲ್ಲಿ ಸಹಕರಿಸಿದ ನಿವಗೆಲ್ಲರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು. ಈ ವಿಧದ ಸಹಕಾರ ಮುಂದೆಯೂ ಉಳಿಯಲಿ ಎಂದು ಪ್ರಾರ್ಥನೆಗಳು

ರೋಗವರಿಯದೆ ಮದ್ದೇಕೆ?

ಆಹಾರ ಸಮಸ್ಯಾ ಪರಿಹಾರದ ಕುರಿತು ಶ್ರೀ ಟಿ ಎ. ಪೈಯವರ ಅನುಭವದಿಂದ ಹೊರಟ ಉದ್ಗಾರ.

'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ನಮ್ಮ ನಾಡಿನಲ್ಲಿ ನಾವೆಲ್ಲರೂ ಕೃಷಿಯನ್ನೇ ಕಡೆಗಣಿಸಿದ್ದೇವೆ ಕೃಷಿಯನ್ನು ಅವಲಂಬಿಸುವುದು ಅತೀವ ಹೀನವೆಂಬ ದುರ್ಭಾವನೆ ನಮ್ಮಲ್ಲಿ ಬೇರೂರಿದೆ. ರೈತರಲ್ಲಿ ಆತ್ಮ ವಿಶ್ವಾಸವೇ ಉಳಿದಿಲ್ಲವೆಂಬ ದುರವಸ್ಥೆಯೊಗ ತಲೆದೋರಿದೆ. ನಾವಿಂದು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗುವ ಹೇರಾಸೆಯಿಟ್ಟು ಕೊಂಡಿದ್ದೇವೆ. ಇದು ಈಡೇರ ಬೇಕಾದರೆ, ನಮ್ಮ ಅಶಕ್ತತೆಗಳು, ದೌರ್ಬಲ್ಯಗಳು ದೂರವಾಗಬೇಕು.



ನಾವಿಂದು ಕಡಿಮೆಯಾದ ಆಹಾರವನ್ನು ಪರದೇಶಗಳಿಂದ ತರಿಸುತ್ತೇವೆ. ಇದರಿಂದ ನಮ್ಮ ಸಂಪತ್ತು ವಿದೇಶಗಳಿಗೆ ಹರಿದು ಹೋಗುತ್ತಿದೆ. ಹಾಗಿದ್ದರೂ ಉಪವಾಸ ಬೀಳುವ ಪ್ರಜೆಗಳಿಗೆ ಅನ್ನ ಪೂರೈಸಿ ಮಹೋಪಕಾರ ಮಾಡುತಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಅವರೊಡನೆ ಇನ್ನು ಕೆಲವರು ಇದು ನಮ್ಮ ಅತ್ಮಾಭಿಮಾನಕ್ಕೆ ಕುಂದು ಎಂದು ಟೀಕಾಸ್ತ್ರ ಬಿಡುತ್ತಾರೆ ಈ ಎರಡೂ ಪಂಗಡಗಳವರೂ ಒಂದು ದೊಡ್ಡ ತಪ್ಪು ಮಾಡುತ್ತಾರೆ. ವಿದೇಶಗಳಿಗೆ ಶರಣು ಹೋಗದೇನೇ ಆಹಾರದಲ್ಲಿ ನಾವು ಸ್ವಾವಲಂಬಿಗಳಾಗಬಹುದು ಎಂಬ ಸತ್ಯವನ್ನವರು ಕಂಡುಕೊಂಡಿರುವುದಿಲ್ಲ, ಇದರ ಕಲ್ಪನೆಯೂ ಅವರಿಗಿಲ್ಲ. ಆದರೆ, ನಾವಿಂದು ಮಾಡುವ ಕೆಲಸವೊಂದೇ! "ಹೆಚ್ಚು ಆಹಾರ ಬೆಳೆಯಿರಿ; ಸ್ವಾವಲಂಬನೆಯನ್ನು ಸಾಧಿಸಿರಿ" ಎಂದು ಘೋಷಿಸುತ್ತೇವೆ. ಆದರೆ, "ಹೇಗೆ" ಎಂಬತ್ತ ಘೋಷಕರ ಮನಸ್ಸು ಹರಿಯದಿರುವುದೇ ಎನ್ನುವುದು ಕಷ್ಟ. ಪ್ರಾಮಾಣಿಕವಾಗಿ ದುಡಿಯುವ ವ್ಯಕ್ತಿಗಳು ನಮ್ಮಲ್ಲೆಷ್ಟು ಜನ ಇದ್ದಾರೆ?

ಕೃಷಿ ಸುಧಾರಣೆಯತ್ತ ಕೃಷಿ ಮಂತ್ರಿ ಶಾಖೆ ಗಮನ ಹರಿಸಿದೆ. ಕೃಷಿ ಉತ್ಪನ್ನವನ್ನು ಹೆಚ್ಚಿಸಬೇಕೆಂಬ ಗುರಿಯೂ ಕಾಗದಪತ್ರಗಳಲ್ಲಿ ಬೆಳೆಯಿವೆ. ಆದರೆ, ಇಷ್ಟರಿಂದಲೇ ಹೆಚ್ಚಿನ ಸಾಧಿಸುವುದು ಸಾಧ್ಯವಿಲ್ಲ. ಈ ಇಲಾಖೆಯ ಅಧಿಕಾರಿಗಳು ಮತ್ತವರ ಕಾರ್ಯಕ್ರಮಗಳು ಯಾವ ಮೂಲೆಗೂ ಸಲ್ಲವು. ಇವುಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು;

ಆಹಾರದ ಪ್ರಶ್ನೆ ಜನತೆಯ ಪ್ರಶ್ನೆ. ಜನರ ಆಡಳಿತೆ ನಡೆಸುವ ಸರಕಾರ ಮತ್ತು ಜನತೆ—ಎರಡರ ಸಮ್ಮಿಲಿತ ಪ್ರಯತ್ನ—ಆಸಕ್ತಿಯುತ ಕಾರ್ಯಕ್ರಮಗಳಿಂದಲೇ ನಮ್ಮ ಈ ಜಟಿಲ ಪ್ರಶ್ನೆ ಪರಿಹಾರವಾಗಬಲ್ಲದು. ನಮ್ಮ ಜನಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಜನವೃದ್ಧಿ ಮತ್ತು ಆಹಾರೋತ್ಪಾದನೆಗಳು ಇಂದಿನ ಗತಿಯಲ್ಲೇ ಮುಂದುವರಿದರೆ ಗಂಭೀರ ಹೊತ್ತಿನಲ್ಲಿ ಪರಿಸ್ಥಿತಿ ಇಂದಿಗಿಂತಲೂ ಭೀಕರವಾಗಬಹುದು. (ಮೂವತ್ತೆರಡನೇ ಪುಟ ನೋಡಿರಿ)

Telegram · 'CORONET' MALPE.

Telephone · MALPE 33, 34, 45

With best compliments from:

M. MADHVA RAJ, M. L. A.,

Proprietor:

CORONET CANNING COMPANY,

MALPE

&

KARNATAKA FISHERIES CORPN.,

MANGALORE.

Approved Contractors to the Government of India Department of Food, Army purchase organisation

AND

CANTEEN STORES DEPARTMENT (INDIA)

'ಖೀರಾ' ಉಕ್ಕಿನ ಫರ್ನಿಚರುಗಳು ನಿಮ್ಮ ಮನೆ-ಆಫೀಸುಗಳಿಗೆ ಒಂದು ಶೋಭೆ

ARROW *Steel* SOFA·CUM·BED

With chromium handle

ಇಬ್ಬಗೆಯ ಉಪಯೋಗಕ್ಕೆ
ಸೋಫಾ-ಕಂ-ಬೆಡ್



ಸೋಫಾವನ್ನು ರಾತ್ರಿಯಲ್ಲಿ ಬೆಡ್
ಆಗಿ ಉಪಯೋಗಿಸಬಹುದು



ARROW STEEL INDUSTRIES.



ಫೋನ್ ರೆಸ್ಟ್

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಕಪಾಟು, ಕುರ್ಚಿ, ಮೇಜು, ಮೊದಲಾದ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಚಿತ್ರದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ರೂಫ್ ಟ್ರಸ್ಸಸ್, ಉಕ್ಕಿನ ಕಿಟಿಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ.

ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

Phone: 3788
Grams Shastrico'

ಸಂದರ್ಶಿಸಿರಿ:

ಶಾಸ್ತ್ರಿ ಅಂಡ್ ಕಂಪೆನಿ, ಹಂಪನಕಟ್ಟೆ, ಮಂಗಳೂರು-1

Edited, Printed & Published by K. H. Shetty at the Navayuga Press, Udipi, S. India.

ನಮಗೀಗ ಆಂತರಿಕ 'ಕ್ರಾಂತಿ' ಬೇಕು

ಶ್ರೀ ಜಿ. ಆರ್ ಪಾಂಡೇಶ್ವರ್

ಸ್ವಾತಂತ್ರ್ಯ ಪೂರ್ವದ ಕನಸುಗಳು ಸ್ವಾತಂತ್ರ್ಯೋತ್ತರ ಯುಗದಲ್ಲಿ ಬರಿಯ ನೆನಪುಗಳಾಗಿಯೇ ಉಳಿಯುತ್ತಿವೆ. ಇದಕ್ಕೆ ಆಡಳಿತದ ಅವ್ಯವಸ್ಥೆಯೇ ಕಾರಣ. ದೇಶದ ಆಡಳಿತದಲ್ಲಿ ಕ್ರಾಂತಿಕಾರಕ ಸುಧಾರಣೆಗಳು ನಡೆಯದೆ ಹೋದರೆ ನಮ್ಮ ಹಣವೆಲ್ಲ ಕೆಲವೇ ವ್ಯಕ್ತಿಗಳ ಭೋಗ-ವಿಲಾಸದ ಸಾಧನವಾಗುವುದಕ್ಕೆ ಹೊರತು, ಜನಸಾಮಾನ್ಯನಿಗೆ ಅದರ ಲಾಭ ತಿಲಾಂಶವೂ ದೊರೆಯುವುದಿಲ್ಲ.

For forms of Government
let fools contest
For, whatever is best
administered, is best—

ಎಂದು ಆಂಗ್ಲ ವಿಡಂಬನ ಕವಿ ಅಲೆಕ್ಸಾಂಡರ್ ಪೋಪ್ ಹೇಳಿದಂತೆ, ನಮಗೆ ಪ್ರಾಣಸತ್ವ ಮುಖ್ಯವೇ ಹೊರತು, ದೇಹದ ಅಲಂಕರಣ ಮುಖ್ಯವಲ್ಲ. ಪ್ರಾಣ ಇಲ್ಲದ ದೇಹಕ್ಕೆ ಏನು ತೊಡಿಸಿದರೇನು? ನಮ್ಮದು 'ಪ್ರಜಾರಾಜ್ಯ', ಅದರಲ್ಲಿಯೂ, ಸರ್ವಸುಖೀ ರಾಜ್ಯ (Welfare state) ಪ್ರಾಯ ಪ್ರಬುದ್ಧ, ಪ್ರತಿವ್ಯಕ್ತಿಗೂ ಒಂದೊಂದು ಮತ (Vote) ಇರುವ, ಸರ್ವರಿಗೂ ಸಮಾನಾವಕಾಶ ಇರುವ, ಹಾಗೂ ಅದರ ಮೂಲಕ ಸರ್ವರಿಗೂ ಸುಖಶಾಂತಿ ಸಮೃದ್ಧಿಗಳನ್ನುಂಟು ಮಾಡಿಕೊಡುವ ಸುರಾಜ್ಯ ನಿರ್ಮಾಣವೇ ನಮ್ಮ ಗುರಿ. ಇದನ್ನು ಸಾಧಿಸಲಿಕ್ಕೆ ಅಸಮರ್ಥವಾದ ಸರಕಾರ ಅದವಾ ಮಂತ್ರಿಮಂಡಲ ಇದ್ದೇನು ಪ್ರಯೋಜನ? ಕಳೆದ ೧೬ ವರ್ಷಗಳ ಅವಧಿಯಲ್ಲಿ ನಾವು ಸಾಧಿಸಿದ ಸುಖಶಾಂತಿ ಸಮೃದ್ಧಿಯ ಪ್ರಗತಿಯನ್ನು ಅಳೆದು ನೋಡಿದರೆ, ನಮಗೆ ಚಿಂತೆಯುಂಟಾಗದೇ ಇರದು. ಜನಾಂಗದ ಮೂಲಭೂತ ಆವಶ್ಯಕತೆಯಾಗಿರುವ ಅನ್ನ-ವಸ್ತ್ರದ ವಿಷಯದಲ್ಲಿಯೂ ಸಹ ನಾವಿನ್ನೂ ಪರಾವಲಂಬಿಗಳಾಗಿದ್ದೇವೆ! ವರ್ಷೇ ವರ್ಷೇ ನಮ್ಮಲ್ಲಿ ಪ್ರಜಾವೃದ್ಧಿ ಆಗುತ್ತಿದೆಯೇ ಹೊರತು, ಅದಕ್ಕನುಗುಣವಾಗಿ ಇತರ ಯಾವ ವಸ್ತು ಒಡವೆಗಳ ಅಭಿವೃದ್ಧಿಯೂ ನಡೆಯುತ್ತಲಿಲ್ಲ. ಇದು ತೀರ ನಾಚಿಕೆಗೇಡು! (1) ಕಳ್ಳಪೇಟೆ (2) ಲಂಚರುಷವತ್ತು (೩) ಜಾತಿ—ಒಳಜಾತೀಯತೆ (4) ನನ್ನ ಜಾತಿ ಮೇಲೆ—ಎಂಬ ದುರಹಂಕಾರ, (5) ಕಳ್ಳಬಟ್ಟಿ ಸರಾಯಿ ವಿತರಣ, (6) ಯೇನ ಕೇನ ಪ್ರಕಾರೇಣ ದ್ರವ್ಯದಿಕಾರಗಳಿಸಬೇಕೆಂಬ ರಾಕ್ಷಸೀ ಆಕಾಂಕ್ಷೆ— ಇವೇ ಮೊದಲಾದ ಅನೈತಿಕತೆಗಳು ಅಭಿವೃದ್ಧಿಗೊಂಡಿವೆ. ದಿನೇ ದಿನೇ ಶಿಕ್ಷಣ ಪ್ರಸಾರ, ಧರ್ಮ ಪ್ರಸಾರ, ಕೈಗಾರಿಕೆ ಅಭಿವೃದ್ಧಿ ಮೊದಲಾದ ದೊಡ್ಡ ದೊಡ್ಡ ಹೆಸರಿನ ಅಡಿಯಲ್ಲಿ ಈ ಅನೈತಿಕತೆಯ ಅಸುರೀ ಪ್ರವೃತ್ತಿ ಹಬ್ಬುತ್ತಲೇ ಹೋಗಿ ಮೂರು ಯೋಜನೆಗಳ ಹೆಸರಿನಲ್ಲಿ —ಂ ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಿಯೂ ನಾವು ಇನ್ನು ದರಿದ್ರತೆಯಲ್ಲೇ ಇದ್ದೇವೆ, Mountain producing mouse (ಪರ್ವತ ಪ್ರಸವ) ಎಂಬ ಆಂಗ್ಲ ಗಾದೆಯಂತೆ, ಇಡೀ ಬೆಟ್ಟವನ್ನು ಅಗೆದು ನಾವು ಪಡೆದದ್ದೇನೆಂದರೆ ಒಂದು ಸಣ್ಣ ಇಲಿ ಮರಿ! ಸ್ವರಾಜ್ಯವನ್ನು ತಂದುಕೊಟ್ಟ, ಹಾಗೂ ಸರ್ವಸುಖದ ರಾಮರಾಜ್ಯವನ್ನು ಕಟ್ಟಬೇಕೆಂಬ ಸಂಕಲ್ಪವನ್ನಿಟ್ಟುಕೊಂಡಿದ್ದ ಗಾಂಧೀಜಿ ಈಗಿರುತ್ತಿದ್ದರೆ, 'ಮಾಡಿದ ಗಣಪತಿ ಮಂಗನಾಯ್ತಲ್ಲಾ' ಎಂದು ಪಶ್ಚಾತ್ತಾಪ ಪಡುತ್ತಿದ್ದರು!

ಪ್ರತಿಯೊಂದು ರಾಜ್ಯ ವಿಧಾನ ಸಭೆಯಲ್ಲೂ ಇಂದು ದ್ರವ್ಯಾಧಿಕಾರ ಲಾಲಸಿಗಳೇ ಕಾಂಗ್ರೆಸ್ಸಿನ ಹೆಸರು ಹೇಳಿಕೊಂಡು ಆರಿಸಿ, ಒಮ್ಮತ ವಮವಿದ್ವಾರೆ ... ಧರು, ಪರಜಾತಿ ದ್ವೇಷಗಳು ಮತ್ತು ಭೌತಿಕ ದ್ರವ್ಯ ಸುಖ ಲಂಪಟರ, ಮತದಾರರಲ್ಲಿ ಜಾತೀಯತೆ, ಪ್ರಾದೇಶೀಯತೆ, ಮೊದಲಾದ ಅರಾಷ್ಟ್ರೀಯ ಭಾವನೆಗಳನ್ನು ಹಬ್ಬಿಸಿ, "ನಿಮಗೆ ಅದನ್ನು ಮಾಡಿಸಿ ಕೊಡುತ್ತೇನೆ, ಇದನ್ನು ಮಾಡಿಸಿ ಕೊಡುತ್ತೇನೆ" ಎಂಬ "ಲಂಚಭಾವ" ಹುಟ್ಟಿಸಿ, ಮಂತ್ರಿ/ಶಾಸಕರಾಗಿ ಬಹುಮತ ಪಡೆದು ಚುನಾವಣೆಯಲ್ಲಿ ಗೆಲ್ಲುತ್ತಾ, ಅಲ್ಲಿ ಮತ್ತೆ ತಮ್ಮ ತಮ್ಮ ವೈಯಕ್ತಿಕ ಆಸ್ತಿಪಾಸ್ತಿ ವಿಲಾಸಗಳನ್ನು ಹೆಚ್ಚಿಸಿಕೊಂಡು, ಸರಕಾರದ ಹಸರಿನಲ್ಲಿ ವಿದೇಶ ಸಂಚಾರ ಮಾಡಿ, ಇಂದ್ರಲೋಕಕ್ಕೆ ಹೋಗಿ ಬಂದವರಂತೆ, ಹೆಮ್ಮೆಯಿಂದ ಕುಣಿದಾಡುತ್ತಾರೆ! ಇಂತಹ ಪರಿಸ್ಥಿತಿಯೇ ನಮ್ಮ ದೇಶದ ಇಂದಿನ ಆಂತರಿಕ ಮತ್ತು ಬಾಹ್ಯ ದುಃಖದ ಪ್ರಮಾನಗಳಿಗೆ ಕಾರಣವಾಗಿದೆ. ಅದನು ಹೋಗಲಾಡಿಸಿ, ಜನತೆಯಲ್ಲಿ ನಿಜವಾದ ಪ್ರಜಾಸತ್ತೆಯ ಧೈರ್ಯ ಸಾಹಸ, ಸತ್ಯಪ್ರೀತಿ ಮೊದಲಾದ ಉದಾತ್ತ ಭಾವನೆಗಳನ್ನುಂಟು ಮಾಡುವ ಮಹಾಕ್ರಾಂತಿ ನಮಗಿಂದು ಬೇಕಾಗಿದೆ. ಅಂತಹ ಕ್ರಾಂತ ದೃಷ್ಟಿಯ, ಕ್ರಾಂತ ಮನೋಭಾವದ ಮುಖಂಡರ ತಂಡದಿಂದಲೇ ನವರಾಷ್ಟ್ರ ನಿರ್ಮಾಣ ಸಾಧ್ಯ. ಹೇಗೆ, ಸ್ವರಾಜ್ಯ ಸಾಧನೆಯ ಹೋರಾಟದ ದಿನಗಳಲ್ಲಿ ಜೈಲು ... ಫಾಸೀ ಶಿಕ್ಷೆಗೂ ಹೆದರದ, ಸಮಾಪರ್ಣ ಬುದ್ಧಿಯಿಂದ ಹೋರಾಡಿದ ವೀರ

(ಮೂವತ್ತನೇ ಪುಟ ನೋಡಿರಿ)

MODERN GARAGE
UDIPI
With
Service Station
attached
Undertakes
Spray painting and
Overhauling of all
types of cars and trucks.
Body building &
Service of Benz vehicles
By technically qualified
staff and Benz expert.
Phone 65 / 234 — Residence 180

ಪ್ರಜಾರಾಜ್ಯ ದಿನದ ಶುಭಾಶಯಗಳು!
ಸುಂದರ ಮಂದಿರ! ಸುಖಕರ ವಾತಾವರಣ!



ಹೊಟೆಲ್
ಶಿವ ಪ್ರಸಾದ
ಕುಂದಾಪುರ, ದ. ಕ.
ಅತ್ಯಾಧುನಿಕ ಸಲಕರಣೆ ಸೌಕರ್ಯಗಳಿಂದ ಕೂಡಿದ
ಊಟ, ಉಪಾಹಾರ ಮತ್ತು ವಸತಿ ಗೃಹ

ಸೌಂದರ್ಯದ ಅನುಭೂತಿಗೆ

ಮತ್ತು

ಅತ್ಯುತ್ತಮವಾದ ಕೋರಿಕೆಗೆ...

ಮೈಸೂರು ಸರಕಾರದ

ನೂರಕ್ಕೆ ನೂರರಷ್ಟು ಶುದ್ಧವಾದ

ಸಿಲ್ಕ್ ಸೀರೆಗಳನ್ನೇ ಆರಿಸಿಕೊಳ್ಳಿ

ಆಧುನಿಕ ಫ್ಯಾಶನ್ನಿನಲ್ಲಿ ಕಂಗೊಳಿಸಿರಿ—

ಅವು ನಯವಾಗಿಯೂ,
ಬಾಳಿಕೆಗೂ, ಶ್ರೇಷ್ಠತೆಗೂ
ಹೆಸರಾಗಿವೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು - 4

ಷೋರೂಮುಗಳು—

1 ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು-4.

2 ಗುಪ್ತ ಮಾರ್ಕೆಟ್, ಕೆಂಪೇಗೌಡ ರೋಡ್, ಬೆಂಗಳೂರು-9.

3 ಮೈಸೂರು ಸಿಲ್ಕ್ ಪ್ಯಾಲೇಸ್, ಲಜ್‌ಕಾರ್ನ್ನರ್, 92, ರಾಯಪೇಟಾ ಹೈರೋಡ್, ಮದರಾಸ್- 4.

Issued, Printed & Published by K. H. Shetty at the Navayuga Press, Udipi, S. India.

ಡಾ। ಯಂ. ಯಸ್. ಎ. ಶರ್ಮಾ

ಗಾಂಧೀ ತತ್ವ ಪ್ರಚಾರ

ದೇಶ ಜನಹಿತ ಸಾಧನೆಯಲ್ಲಿ ಗಾಂಧೀ ತತ್ವಗಳ ಸ್ಥಾನ ಅಗ್ರಗಣ್ಯ. ಆದರೆ, ಇಂದು ಗಾಂಧೀಜಿಯವರ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯ—ಅನಾಚಾರಗಳಿಂದ ನೊಂದ ಲೇಖಕರು ಗಾಂಧೀ ತತ್ವಪ್ರಚಾರ ಕಾರ್ಯದಲ್ಲಿ ಹೊಸ ಪ್ರಾಣ ಪ್ರತಿಷ್ಠೆಯಾಗಬೇಕು ಎನ್ನುತ್ತಾರೆ. ಇದಕ್ಕಾಗಿಯೇ ಅವರು ಚತುರ್ದಶ ಸೂತ್ರಗಳನ್ನು ಗಾಂಧೀವಾದಿಗಳ ಮುಂದಿಟ್ಟಿದ್ದಾರೆ.

(1) ಶ್ರೀ ಗಾಂಧೀ [illegible] "[illegible]" ಸಾರ್ವಜನಿಕ ಪ್ರಾರ್ಥನೆಯನ್ನು ಮಾಡದೆ ಯಾವ [illegible] ಮುಂದುವರಿಸುತ್ತಿರಲಿಲ್ಲ. [illegible] ಬಲವನ್ನು [illegible] ಕರ್ತವ್ಯವ[illegible] [illegible] ರಾಜಕಾರಣಿ[illegible] [illegible] ಮಾನವನವರಿಗೂ ಅನುಕರಿಸುವಂತೆ ಮಾಡಬೇಕು.

(2) ಜಾತಿ, ಮತ, ಪಂಥ, ಪಕ್ಷ ಪಂಗಡಗಳೆಂಬ ಭೇದಗಳನ್ನು ಇಟ್ಟುಕೊಳ್ಳದೆ ಸರ್ವಚರಾಚರಗಳಿಗೂ ಸೃಷ್ಟಿಕರ್ತನೊಬ್ಬನೇ ದೇವರು, ಅವನೇ ಅನೇಕ ಹೆಸರುಗಳಿಂದ ಕರೆಯಲ್ಪಡು[ತ್ತಾನೆ]. ಪ್ರಪಂಚದಲ್ಲಿರುವ ಮತ ಭೇದಗಳು ಮಾನವ ನಿರ್ಮಿತವೆಂದೂ ನಾವೆಲ್ಲರೂ ಒಂದೇ ಭೂಮಿಯಲ್ಲಿ ಜನಿಸಿ ಅದರಲ್ಲಿ ಬೆಳೆದ ಅನ್ನವನ್ನು ತಿಂದು ಆ ಭೂಮಿಯಲ್ಲಿ ಅಂತ್ಯಕ್ಕೆ ಮಣ್ಣಾಗುವವರು ಎಂಬುದನ್ನು ಅರಿತುಕೊಂಡು ಅಣ್ಣ ತಮ್ಮಂದಿರಂತೆ ಪ್ರೀತಿಯಿಂದ ನಮ್ಮ ಜೀವನವನ್ನು ನಡೆಸುವಂತೆ ಜನತೆಯಲ್ಲಿ ಬೋಧಿಸಿ ಜಾತಿ, [ನೀ]ತಿಗಳೊಳಗೆ ಇರುವ ವೈಮನಸ್ಸನ್ನು ತೊಡೆದು ಹಾಕಲು ಪ್ರಯತ್ನಿಸಬೇಕು.

(3) ಗಾಂಧೀ ತತ್ವಾನುಯಾಯಿಗಳು ಬಡಜನರಲ್ಲಿ ಸಂಪರ್ಕವನ್ನು ಇಟ್ಟುಕೊಂಡು ಅವರ ಕಷ್ಟ ಸುಖಗಳನ್ನು ವಿಚಾರಿಸಿ ಅವರ ಮುಟ್ಟದ ಸರಳ ಜೀವನವನ್ನು ಅನುಸರಿಸಿ ಬಡಜನರ ಸಂಕಷ್ಟ ನಿವಾರಣೆಗೆ ಪ್ರಯತ್ನಿಸಬೇಕು. ಬರೇ ಖಾದಿ ಬಟ್ಟೆ, ಖಾದಿ ಟೊಪ್ಪಿ ಧರಿಸಿದ್ದರಿಂದ ಗಾಂಧೀ ತತ್ವಾನುಯಾಯಿಗಳಾಗಲು ಸಾಧ್ಯವಿಲ್ಲವೆಂದು ಜನತೆಗೆ ಬೋಧಿಸಬೇಕು.

(4) ಸತ್ಯಾಗ್ರಹವೆಂದರೇನು? ಅಹಿಂಸಾ ಎಂದರೇನು? ಇವುಗಳನ್ನು ಜನತೆಗೆ ವಿವರಿಸಿ ಅವರ ಫಲಿತಾಂಶ ಒಳ್ಳೆಯದಾಗಬೇಕಾದರೆ ಅವುಗಳನ್ನು ಎಲ್ಲಿ, ಯಾವ ಸಂದರ್ಭದಲ್ಲಿ, ಯಾಕೆ, ಹೇಗೆ ಉಪಯೋಗಿಸಬೇಕು ಎಂಬುದನ್ನೂ ಗಾಂಧೀಜಿಯವರ ತತ್ವವನ್ನು ಅನುಸರಿಸಿ ಜನತೆಯಲ್ಲಿ ಪ್ರಚಾರ ಮಾಡಬೇಕು. ಪ್ರತಿ ವಿಷಯದಲ್ಲೂ ಸತ್ಯಾಗ್ರಹ, ಉಪವಾಸ ಮುಷ್ಕರಗಳನ್ನು ಕೈಗೊಳ್ಳುವಂತೆ ಜನತೆಗೆ ಬೋಧಿಸಬೇಕು.

5) ಜನತೆ ಮತ್ತು ದೇಶದ ಗೌರವವೇ ತಮ್ಮ ಗೌರವವೆಂದು ಗ್ರಹಿಸಿ ತನ್ನ ಮೇಲೆ ಜನತೆ ತಪ್ಪುಗಳನ್ನು ಹೊರಿಸಿದರೆ, ಹಾಗಾದರೆ ತಾನು ಒಪ್ಪಿಕೊಂಡು ತಮ್ಮ ಸ್ಥಾನದಿಂದ ಹೊರಬರಬೇಕು. ತಪ್ಪುಗಳು ನಿರಾಧಾರಗಳೆಂದು ನಿಶ್ಚಯವಿದ್ದರೆ ನ್ಯಾಯ ಸ್ಥಾನದ ಮುಖಾಂತರ ತಾನು ತಪ್ಪಿತಸ್ಥನಲ್ಲವೆಂದು ರುಜುಪಡಿಸಿ ತನ್ನ ಸತ್ಯತೆಯನ್ನು ಶ್ರೀ ಕೃಷ್ಣ ಪರಮಾತ್ಮನು ಶ್ಯಮಂತಕಮಣಿಯ ವಿಷಯದಲ್ಲಿ ಬಂದ ಅಪವಾದವನ್ನು ಸರಿಪಡಿಸಿಕೊಂಡಂತೆ ಜನತೆಗೆ ತೋರಿಸುವ ಮನೋವೃತ್ತಿಯು ನಮ್ಮ ರಾಜಕಾರಣಿಗಳಲ್ಲಿ ಉಂಟಾಗುವಂತೆ ಮಾಡಬೇಕು.

6) ನಮ್ಮ ರಾಜಕಾರಣಿಗಳು ದೇಶದ ಮತ್ತು ಜನತೆಯ ಕಲ್ಯಾಣಕ್ಕಾಗಿ ಪಕ್ಷಭೇದಗಳನ್ನು ತೊರೆದು ತಮ್ಮ ಮಾತೇ ಮೇಲೆಂಬ ದುರಭಿಮಾನವನ್ನು ಬಿಟ್ಟು ಒಬ್ಬ ಅಲ್ಪ ಮಾನವನು ಕೊಟ್ಟ ಉತ್ತಮ ಸಲಹೆಗಳನ್ನು ಕೂಡ ಸ್ವೀಕರಿಸಿ ಜನತೆಯ ಕಲ್ಯಾಣವನ್ನೂ ಬಯಸುವಂತಹರಾಗುವಂತೆ ಮಾಡಬೇಕು.

7) ರಾಜಕಾರಣದಲ್ಲಿ ಪ್ರವೇಶಿಸಿದವರ ಸರ್ವದಾ ತಾನೇ ಅಸ್ಥಾನಾಧಿಪತಿಯಾಗಿದ್ದು ಎಲ್ಲರಿಗೂ ಶಾಸಕನಾಗಿರಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಬಿಟ್ಟು ಸ್ಪಷ್ಟ [illegible] ಸತ್ಯ ನಿಷ್ಠೆಯಿಂದ ಕರ್ತವ್ಯವನ್ನು ಮಾಡಿ ಅದನ್ನು ಪೂರ್ಣಗೊಳಿಸಿ[illegible]

(ಇಪ್ಪತ್ತೆಂಟನೇ ಪುಟ ನೋಡಿರಿ)

ನಮ್ಮ ವಜ್ರಮಹೋತ್ಸವದ ವರುಷ:

ಕ್ಯೂಮ್ಯುಲೆಟಿವ್ ಡಿಪಾಸಿಟ್ ಯೋಜನೆ

ಅತ್ಯಾಕರ್ಷಕ ಬಡ್ಡಿ ದರ — ಸಾಲಿಯಾನ್ ಶೇಕಡಾ **7.54**ರ ವರೆಗೆ.

ಈ ಠೇವಣಿಗಳನ್ನು ತಿಂಗಳೊಂದರ ರೂಪಾಯಿ ಒಂದರಂತೆ ಅಥವಾ ಅದರಿಂದ ಗುಣಿಸಲ್ಪಡುವ ಯಾವುದೇ ಮೊತ್ತದ ಸಂಖ್ಯೆಯಲ್ಲಿ 12, 24, 36 48 ಮತ್ತು 60 ತಿಂಗಳ ಅವಧಿಗಳಿಗೆ ಸ್ವೀಕರಿಸಲಾಗುವುದು.

ಈ ಉಳಿತಾಯ ಯೋಜನೆ ಮಾಸಿಕ ಆದಾಯದ ವೇತನ ಪಡೆಯುವವರಿಗೆ ವಿಶೇಷ ಅನುಕೂಲವಾಗಿದೆ. ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ನಮ್ಮ ಯಾವ ಶಾಖೆಯಲ್ಲಿಯೂ ವಿಚಾರಿಸಬಹುದು.

ಪ್ರತಿ ತಿಂಗಳು ತೆರುವ [illegible]	12 ತಿಂಗಳ	24 ತಿಂಗಳ	36 ತಿಂಗಳ	48 ತಿಂಗಳ	60 ತಿಂಗಳ
	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಹಿಂಪಕ್ಕೆ ಪಡೆಯುವ ಮೊತ್ತ				
ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ	ರೂಪಾಯಿ
10—	123—50	255—00	395—00	545—00	715—00
2[illegible]	308—75	637—00	987—50	1,362—50	1,787—50
[illegible]	617—50	1,275—00	1,975—00	2,725—00	3,575—00
100—00	1,2[illegible]—00	2,55[illegible]—00	3,950—00	5,450—00	7,150—00
200—00	2 470—00	5,100—00	7,900—00	10,900—00	14 300—00

ದಿ. ಕೆನರಾ ಬ್ಯಾಂಕಿಂಗ್ ಕೊಪೊರೇಶನ್ ಲಿ.,

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: **ಉಡುಪಿ**

ಕೆ. ರಾಮದಾಸ್ ನಾಯಕ್, ಎಂ. ಎ.,
ಜನರಲ್ ಮೆನೇಜರ್.

ಆಡಳಿತ ಆಫೀಸು: **ಮಂಗಳೂರು.**

ಶ್ರೀ ಸಿರ್ತಾಡಿ ವಿಲಿಯಂ ಪಿಂಟೋ

ಪ್ರಜಾಸತ್ತಾತ್ಮಕ ಸಮಾಜವಾದ

ಲೇಖಕರು

ದಿವಂಗತ ಪ್ರಧಾನಿಗಳಾದ ಪಂ. ಜವಾಹರಲಾಲರು ಮತ್ತು ಲಾಲಬಹದ್ದೂರ್ ಶಾಸ್ತ್ರಿಗಳು ಪ್ರಜಾಸತ್ತಾತ್ಮಕ ಸಮಾಜವಾದದಲ್ಲಿ ಅಚಲ ವಿಶ್ವಾಸವನ್ನಿಟ್ಟಿದ್ದರು; ಅದನ್ನು ಕಾರ್ಯಾಚರಣೆಯಲ್ಲಿ ತರುವುದರಲ್ಲಿಯೇ ತಮ್ಮ ಜೀವನವನ್ನು ತೇದರು. ಇವರು ಕಂಡ ಕನಸು ನನಸಾಗಬೇಕಾದರೆ, ದೇಶದ ಉದ್ಧಾರವಾಗಬೇಕಾದರೆ, ಜನತೆಯ ಪಾತ್ರವೂ ಸರಿಯಾಗಿ ನಿರ್ವಹಿತವಾಗಬೇಕು, ಜನ ಕಣ್ಣು ತೆರೆಯಬೇಕು.

ಮನುಷ್ಯ ಮನುಷ್ಯನನ್ನು ಹಿಡಿದು ತಿನ್ನುವ ಕಾಲವು ಒಂದಿತ್ತು. ಬಲಶಾಲಿಯು ನಿರ್ಬಲನನ್ನು ತನ್ನ ಗುಲಾಮನನ್ನಾಗಿಸಿಕೊಂಡು ಪಶುವಿಗಿಂತ ಕಡೆಯಾಗಿ ದುಡಿಸಿಕೊಳ್ಳುತ್ತಿದ್ದ ಕಾಲ ಕೂಡಾ ಒಂದಿತ್ತು. ಕೈಗಾರಿಕಾ ಕ್ರಾಂತಿ ಮತ್ತು ವಿಜ್ಞಾನದ ಪ್ರಗತಿಯಿಂದಾಗಿ ಮಾನವನ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳುಂಟಾದವು. ಆತನ ಭಾಗ್ಯಕ್ಕೆ ತುದಿ ಬುಡವೇ ಇಲ್ಲದಂತಾದರೂ ಕೈಗಾರಿಕಾ ಕ್ರಾಂತಿಯಿಂದಾಗಿ ಬಡವ—ಶ್ರೀಮಂತರೊಳಗೆ ಅಂತರ, ದಿನೇ ದಿನೇ ಹೆಚ್ಚುತ್ತಲಿದ್ದು, ಕೈಗೆ ಬಂದ ತುತ್ತು ಬಾಯಿಗೆ ಸಿಗುತ್ತಿಲ್ಲ ಎಂಬ ಸ್ಥಿತಿ ದೀನದಲಿತರಿಗೊದಗಿದೆ. ಕೈಗಾರಿಕಾ ಮಾಲಿಕರು 'ನಾವು ಬಂಡವಾಳ ಹಾಕಿದ್ದೇವೆ—ಲಾಭ ಪಡೆಯುತ್ತೇವೆ—ನಿಮಗೇನು ಮತ್ಸರ? ಕೂಲಿಗಾರರೂ ಕಾರ್ಮಿಕ ವರ್ಗದವರೂ, ಸರಿಯಾಗಿ ದುಡಿಯಲಿ, ಅವರು ಮಾಡಿದ ಪೂರ್ವ ಜನ್ಮದ ಕರ್ಮದ ಫಲದಿಂದಾಗಿ ಕಷ್ಟಪಡುತ್ತಿದ್ದಾರೆ—ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆಯೇ" ಎನ್ನುತ್ತಾರೆ.

ಆದರೆ ಮಾನವ ಬುದ್ಧಿಜೀವಿ. ತನ್ನ ಹೊಟ್ಟೆಗೆ ಬೆಂಕಿ ಬಿದ್ದಾಗ ಗೌರವಕ್ಕೆ ಚ್ಯುತಿ ಬಂದಾಗ ಆತ ಕೂಡಾ ಕೆರಳಿ ಸಿಂಹದಂತಾಗುತ್ತಾನೆ. ವಿಕಾಸ ಹಾಗೂ ಕ್ರಾಂತಿಯ ಮಾರ್ಗಗಳಲ್ಲಿ ಏಳುತ್ತಾ ಬೀಳುತ್ತಾ ಸಾಗುತ್ತಾನೆ. ಹುಟ್ಟಿನಿಂದ ಎಲ್ಲರೂ ಸ್ವತಂತ್ರರು ಮತ್ತು ಸಮಾನರು ಎಂಬ ಸತ್ಯವನ್ನು ಮನುಷ್ಯನು ಇಂದು ಕಂಡುಕೊಂಡಿದ್ದಾನೆ.

ಈ ಹಕ್ಕುಗಳ ಪ್ರತಿಪಾದನೆಗೆ ಹಲವರು ಜೀವ ಬಿಟ್ಟಿದ್ದಾರೆ. ಸೆರೆಮನೆಯಲ್ಲಿ ನರಳಿದ್ದಾರೆ. ಮನೆಮಾರನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಅಂತಹ ಶ್ರೇಷ್ಠ ವೀರಮಣಿಗಳಿಂದಾಗಿ ದೀನದಲಿತರಿಗೂ ಪ್ರಾಧಾನ್ಯ ಬಂದಿದೆ. ಗೌರವ ಸಹಾನುಭೂತಿ ಸಿಕ್ಕಿದೆ. ಇನ್ನು ಕೂಡಾ ಆ ಹಕ್ಕುಗಳ ಫಲ ಎಲ್ಲ ಬಡವರಿಗೆ ಸಿಗದಂತೆ ಮಾಡಲು ಸ್ಥಾಪಿತ ಹಿತಾಸಕ್ತಿಗಳು ಶಕ್ತಿಮೀರಿ ಒದ್ದಾಡುತ್ತಿವೆ.

ಪುರಾತನ ಕಾಲದಲ್ಲಿ ರಾಜಕೀಯದಲ್ಲಿ 'ದೈವೀ ನಿಯಮದ ಕೈವಾಡದ" ಭಾವನೆ ತೊಲಗಿ ರಾಜ, ಪಾಳೆಗಾರ, ಸರ್ವಾಧಿಕಾರಿಗಳ ಅಧಿಕಾರ ಕೂಡಾ ಸ್ವಲ್ಪ ಕಾಲ ನಡೆದು—ಜನರು ಈ ಆದಳಿತಗಳಿಂದ ರೋಸಿಗೆದ್ದು ಫ್ರಾನ್ಸಿನಲ್ಲಿ ಇಂಗ್ಲೆಂಡಲ್ಲಿ ಮಹಾಕ್ರಾಂತಿ ನಡೆದು ಪ್ರಜಾಪ್ರಭುತ್ವದ ಉದಯವಾಯಿತು.

ಪ್ರಜಾಪ್ರಭುತ್ವ ಒಂದು ರಾಜಕೀಯ ತತ್ವ. ಆಳುವ ಕಲೆಯಾಗಿ, ರಾಜಕೀಯ ವಿಜ್ಞಾನವಾಗಿ ಆಧುನಿಕ ಜಗತ್ತಿನ ಮಾನ್ಯತೆ ಪಡೆದಿರುವ ಸೂತ್ರ. ಪ್ರಜೆಗಳು, ಪ್ರಜೆಗಳಿಗೋಸ್ಕರ, ತಮ್ಮಿಂದಲೇ ಸಾರ್ವತ್ರಿಕ ಚುನಾವಣೆಯಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳ ಮೂಲಕ ರಾಜ್ಯಭಾರ ನಡೆಸುವುದೇ ಪ್ರಜಾಪ್ರಭುತ್ವ. ಆದರೆ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಎಂಬ ಹೆಸರಿಗಾದಷ್ಟು ಅವಮಾನ ಇನ್ನೊಂದಕ್ಕಾಗಿರಲಿಕ್ಕಿಲ್ಲ. ಹಿಟ್ಲರ್, ಮುಸೊಲಿನಿಗಳು ಕೂಡಾ ತಮ್ಮ 'ಫ್ಯಾಸಿಸ್ಟ್', ಸರ್ವಾಧಿಕಾರವನ್ನು ಮೇಲ್ತರಗತಿಯ ಪ್ರಜಾಪ್ರಭುತ್ವ ಎಂದು ಬಣ್ಣಿಸಿದರು. ಅರ್ಜೆಂಟೈನಾದ ಹಿಂದಿನ ಸರ್ವಾಧಿಕಾರಿ ಪೆರಾನ್ ತನ್ನ ಆಳ್ವಿಕೆಯನ್ನ 'ನಿರ್ದೇಶಿತ ಪ್ರಜಾಪ್ರಭುತ್ವ" ಎಂದಿದ್ದರೆ, ಸೈನಿಕದೊರೆ ಫ್ರಾಂಕೋ 'ದೈವಿಕ ಪ್ರಜಾಪ್ರಭುತ್ವ" ಎಂದೂ, ಸ್ಟಾಲಿನ್ ತನ್ನದು "ಸಂಪೂರ್ಣ ಪ್ರಜಾಸತ್ತಾತ್ಮಕ" ಎಂದು ಸಮರ್ಥಿಸಿ ಕೊಂಡಿದ್ದಾರೆ. ಅಯೂಬ್, ಸುಕರ್ಣೋ, ಟಿಟೋ, ನಾಸೆರ್, ನೆವಿನ್, ಎಲ್ಲರೂ ತಾವು "ಪ್ರಜಾಪ್ರಭುತ್ವದ ಆರಾಧಕ"ರೆಂದು ಹೆಗ್ಗಳಿಗೆ ಕೊಚ್ಚಿಕೊಂಡಿದ್ದಾರೆ.

ಸಮಾಜವಾದವು ಒಂದು ಆರ್ಥಿಕ ಸಿದ್ಧಾಂತ. ಸಮಾಜಕ್ಕೆ ಬಲವಾದ ಅಸ್ತಿವಾರ ಹಾಕಿ ಜನರೊಳಗೆ ಅನ್ಯೋನ್ಯತೆ, ಸಹೋದರತೆ ಹುಟ್ಟಿಸಬಲ್ಲಂತಹ ವಿಸ್ಮಯಕಾರಕ ಸೂತ್ರ. ಯಾರು ಏನು ಬೇಕಾದರೂ ಮಾಡಿ ಹಣ ಆಸ್ತಿ ಸಂಪಾದಿಸಿ ಮನಬಂದಂತೆ ಅದನ್ನು ವಿನಿಯೋಗಿಸಬಹುದು—ಎಂಬ—ಬಂಡವಾಳ ಶಾಹಿ "ಲೇಝಜ್ ಫೇರ್"—ಆರ್ಥಿಕ ವ್ಯವಸ್ಥೆಯು

(ಇಪ್ಪತ್ತೇಳನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು.

ಶೆಣೈಯವರ

ಮಂಗಳೂರು ನಶ್ಯ

ಸುದೀರ್ಘವಾದ ಬಾಳಿಕೆಯು ಇದರ ಗುಣ.

ಸ್ವರ್ಣ ವರ್ಣಯುಕ್ತ ಹಾಗೂ ಶಕ್ತಿದಾಯಕವಾದುದು.

Well-known for:

LONG STANDING QUALITY, GOLDEN COLOUR & STRENGTH

SHENOY'S

Mangalore Snuff

Trade enquiries to Manufacturers:—

M/s. H. VENKATRAYA SHENOY,

HALEANGADY, S. KANARA.

ಪ್ರಜಾರಾಜ್ಯ ದಿನದ ಶುಭಾಶಯಗಳು!

ಜಯಂತಿ

ಟೈಲ್ ಫೇಕ್ಟರಿ

ಕಲ್ಯಾಣಪುರ, ದ. ಕನ್ನಡ.

ಉತ್ತಮ ತರದ ಬೈಸನ್ ಬ್ರಾಂಡ್ ಹಂಚು ತಯಾರಕರು

ಜಯಂತಿ ಟ್ರೇಡರ್ಸ್

ಪಾರ್ಟ್ನರ್ಸ್

With best compliments from:

JAYANTHI

TILE FACTORY

KALLIANPUR, S. K.

MANUFACTURERS OF

BISON BRAND MANGALORE TILES

JAYANTHI TRADERS

PARTNERS

Edited, Printed & Published by K. H. Shetty at the Navayuga Press, Udipi, S. India.

ಸರಳ ವೈಜ್ಞಾನಿಕ ಲೇಖನ

ಭಾರತದಲ್ಲಿ ಅಣುಶಕ್ತಿಯ ಉತ್ಪಾದನೆ

ಇಂದು ಅಣುಶಕ್ತಿಯ ಬಗ್ಗೆ ವಿವಿಧ ಚರ್ಚೆ ನಡೆಯುತ್ತಿದೆ. ಭಾರತವೂ ಅಣುಶಕ್ತಿ ಯುಗದಲ್ಲಿ ಪಾದಾರ್ಪಣ ಮಾಡಿದೆ; ಆದರೆ, ಕ್ರಾಂತಿಕಾರಿ ಶಸ್ತ್ರಾಸ್ತ್ರಗಳ ಉತ್ಪಾದನೆಗಲ್ಲ; ಶಾಂತಿಕಾರಿ ಸಾಧನೆಗಾಗಿ. ಭಾರತದ ಅಣುಶಕ್ತಿ ಉತ್ಪಾದನಾ ಸಾಮರ್ಥ್ಯ ಉಳಿದ ಅಣುಶಕ್ತಿ ಹೊಂದಿದ ದೇಶಗಳಿಗಿಂತ ಬಹಳ ಕಡಿಮೆಯೇನೂ ಇಲ್ಲ, ಇದು ಗಮನೀಯ.

ಪ್ರೊ| ಎಂ. ಎಸ್. ಎಸ್. ರಾವ್.

ಭಾರತದಲ್ಲಿ ಅಣುಶಕ್ತಿ ಮಂಡಳಿಯು ಒಂದು ಬಂದಿದೆ. ಅಣುಶಕ್ತಿ [illegible]ಗಳನ್ನೆ, ಅವುಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಶೋಧ ಹಾಗೂ ನಿರ್ವಹಣೆ ಕಾರ್ಯ. ಅವುಗಳ ಪರೀಕ್ಷೆ ಇವೇ ಮೊದಲಾದವು ಆ ಮಂಡಳಿಯ ಉದ್ದೇಶಗಳಲ್ಲಿ ಹಲವು ಮುಖ್ಯವಾದುವು. ಆದರೆ ಇದರ ಕಾರ್ಯಕ್ರಮಗಳಲ್ಲಿ ಅಣ್ವಸ್ತ್ರಗಳ ಉತ್ಪಾದನೆಗೆ ಅವಕಾಶವಿಲ್ಲ. ಭಾರತವು ಯುದ್ಧ ಕಾರ್ಯೋದ್ದೇಶಗಳಿಗಾಗಿ ಅಣುಶಕ್ತಿಯ ಸಂಶೋಧನೆಗಳನ್ನು ಕೈಕೊಳ್ಳುವುದಿಲ್ಲವೆಂದು ಹಿಂದಿನಿಂದ ಮೇಲೆ ಸಾರಿ ಸಾರಿ ಹೇಳುತ್ತ ಬಂದಿದೆ. ಕೇವಲ ಶಾಂತಿಯುತ ಉದ್ದೇಶಗಳಿಗಾಗಿಯೇ ಅಣುಶಕ್ತಿಯನ್ನು ಉತ್ಪಾದಿಸಬೇಕೆಂಬುದು ಭಾರತದ ಹಂಬಲ ಮತ್ತು ಧ್ಯೇಯ.

ಏಷಿಯದ ಆಗ್ನೇಯ ರಾಷ್ಟ್ರಗಳ ಪೈಕಿ ಅಣುಶಕ್ತಿಯನ್ನು ಉತ್ಪಾದಿಸುವುದರಲ್ಲಿ ಭಾರತವೊಂದೇ ಮುಂದಿರುವ ರಾಷ್ಟ್ರ. ಈ ಅಣುಶಕ್ತಿಯ ಉತ್ಪಾದನಾ ರಂಗದಲ್ಲಿ ಭಾರತವು ಪಡೆದಿರುವ ಮಹತ್ವ ಸ್ಥಾನದಿಂದಾಗಿಯೇ, ಅದು [illegible] ಅಂತರ ರಾಷ್ಟ್ರೀಯ ಅಣುಶಕ್ತಿ ಕೇಂದ್ರದ ಸದಸ್ಯತ್ವವನ್ನೂ ಪಡೆದಿದೆ. ಈ ಕೇಂದ್ರದ ಉದ್ದೇಶವಾದರೂ ಜಗತ್ತಿನಾದ್ಯಂತ ಶಾಂತಿ, ಆರೋಗ್ಯ ಮತ್ತು ಸಂಪತ್ಸಮೃದ್ಧಿಯನ್ನುಂಟು ಮಾಡಲು, ಅಣುಶಕ್ತಿಯ ಉತ್ಪಾದನೆಯ ಸ್ಥಳಗಳನ್ನು ತೀವ್ರಗೊಳಿಸಿ ವಿಸ್ತರಿಸುವುದೇ ಆಗಿದೆ. ಭಾರತವು [illegible] ಇಂತಹ ಉದ್ದೇಶಗಳಲ್ಲಿ [illegible]ದಿಂದ ಹಾಗೂ [illegible], [illegible]ನಾ ದುಡಿಯುವ ಸದಸ್ಯ ರಾಷ್ಟ್ರ.

ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಅಣುವಿಕಿರಣ ಹೊಂದುವ ಐಸೋಟೋಪುಗಳ ಉತ್ಪಾದನೆ, ಇವೆರಡೂ ಭಾರತದ ಅಣುಶಕ್ತಿಯ ಅಭಿವೃದ್ಧಿಯಲ್ಲಿ ಮಹತ್ವದ ಆಕಾಂಕ್ಷೆಗಳು. ಮೊಟ್ಟಮೊದಲಿಗೆ 1956ರಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಾಪಿತವಾದ 'ಅಣು ರಿಯಾಕ್ಟರ್' ಎಂಬ ಉತ್ಪಾದನಾ ಕೇಂದ್ರಕ್ಕೆ 'ಅಪ್ಸರಾ" ಎಂದು ಹೆಸರಿಡಲಾಯಿತು. ಇದರಿಂದ ಬೃಹತ್ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯೇನೂ ಒದಗುವುದಿಲ್ಲ. ಬದಲು ಅದರ ಮುಖ್ಯ ಉದ್ದೇಶ ಅಣುಶಕ್ತಿಯ ಉತ್ಪಾದಿಸುವ ಯಂತ್ರೋಪಕರಣಗಳೊಡನೆ ಕಾರ್ಯ ಮಾಡುವ ಕೆಲವು ಅವಕಾಶಗಳನ್ನು ಮತ್ತು ಅನುಭವವನ್ನು ನಮ್ಮ ತಜ್ಞ ಹಾಗೂ ಕುಶಲ ಕಾರ್ಮಿಕರಿಗೆ ಒದಗಿಸುವುದೇ ಆಗಿತ್ತು. ಈ ಕೇಂದ್ರದಲ್ಲಿ ಉತ್ಪಾದಿಸಲಾದ 'ಐಸೋಟೋಪುಗಳು" ವಿವಿಧ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಹಾಗೂ ವೈದ್ಯಕೀಯ ಜೀವಶಾಸ್ತ್ರ ಕೃಷಿ ಮತ್ತು ಉದ್ಯಮ ರಂಗಗಳಲ್ಲಿ ಕಾರ್ಯ ಮಾಡುವ ಸಂಶೋಧಕರಿಂದ ಅತ್ಯಂತ ಉಪಯುಕ್ತವಾದ ರೀತಿಯಲ್ಲಿ ಬಳಸಲ್ಪಡುತ್ತಿದೆ.

1961ರ ಜನೇವರಿ ತಿಂಗಳಲ್ಲಿ ಭಾರತದ ಎರಡನೆಯ 'ಅಣು ರಿಯಾಕ್ಟರ್' ಎಂಬ ಉತ್ಪಾದನಾ ಕೇಂದ್ರ 'ಜೆರ್ಲಿನಾ' ಎಂಬ ಹೆಸರಿನಿಂದ ಪ್ರಾರಂಭವಾಯಿತು. 1961ರ ಜುಲೈ ತಿಂಗಳಲ್ಲಿ 'ಕೆನಡಾ—ಭಾರತ ರಿಯಾಕ್ಟರ್' ಎಂಬ ಮತ್ತೊಂದು ಕೇಂದ್ರವು ಅಸ್ತಿತ್ವಕ್ಕೆ ಬಂದಿತು. ಇದು ಕೆನಡ ಮತ್ತು ಭಾರತ ದೇಶಗಳ ಸಂಯುಕ್ತ ಸರಕಾರ ಹಾಗೂ ಸಾಹಸಗಳ ಫಲವಾಗಿದೆ. ಜಗತ್ತಿನಲ್ಲಿ ಐಸೋಟೋಪುಗಳನ್ನು ತಯಾರಿಸುವ ಹಲವಾರು ದೊಡ್ಡ ಕೇಂದ್ರಗಳಲ್ಲಿ ಇದೂ ಒಂದಾಗಿದೆ. ಇಲ್ಲಿ ಇಂಜಿನಿಯರಿಂಗ ಮತ್ತು ಮುಂದೆ ಸ್ಥಾಪಿಸಬಹುದಾದ ಅಣುಶಕ್ತಿ ಚಾಲಿತ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಬೇಕಾದ ನಕ್ಷೆ, ನಕಾಶೆ, ರೂಪರೇಷೆಗಳನ್ನು ನಿರ್ಧರಿಸಲು ಪ್ರೇರಕವಾದ ಕೆಲವು ಪ್ರಯೋಗಗಳು, ಮತ್ತು ಅಲ್ಲಿ ಬಳಸಲಾಗುವ ಕೆಲವು ವಸ್ತುಗಳನ್ನು ಪರೀಕ್ಷೆಗೆ ಒಳಪಡಿಸುವುದು ಮುಂತಾದ ಹಲವಾರು ಉದ್ದೇಶಗಳಿಂದ ಕಾರ್ಯಾರಂಭವಾಗಿದೆ.

1963ರ ಜುಲೈ ತಿಂಗಳಲ್ಲಿ ಹೊಸದಿಲ್ಲಿಯಲ್ಲಿ ಕೆಲವು ಕಠಿಣ ಹಾಗೂ ಭೀಕರವಾದ ರೋಗರುಜಿನಗಳನ್ನು ನಿವಾರಿಸಲು ಮತ್ತು ಗುಣಪಡಿಸಲು ಅಣುಶಕ್ತಿ ಚಾಲಿತ ಹೊಸ ಬಗೆಯ ಚಿಕಿತ್ಸೆಯನ್ನು ಪ್ರಾರಂಭಿಸಲು 'ಇನ ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ "ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್' ಎಂಬ ಒಂದು ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯಲ್ಲಿ ಈಗ ಕೆಲವು ಹೃದಯ ರೋಗ ಹಾಗೂ ಕ್ಯಾನ್ಸರ್ ರೋಗಗಳಿಗೆ (Hyper thyroidism. Intractable Cordiac and blood cancers)) ಚಿಕಿತ್ಸೆ ನೀಡಲಾಗುತ್ತಿದೆ. ಟ್ರಾಂಬೆಯಲ್ಲಿರುವ ಅಣುಶಕ್ತಿ ಮಂಡಳಿಯ ಘಟಕವು ಆ ಕೇಂದ್ರಕ್ಕೆ ಕೆಲವು ವಿಶಿಷ್ಟ ಬಗೆಯ ಐಸೋಟೋಪುಗಳನ್ನು ಒದಗಿಸುತ್ತದೆ. ಕೆಲವು ಕ್ಲಿಷ್ಟ ಬಗೆಯ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲು ದಿಲ್ಲಿಯ ಸಫ್ದರ್‌ಜಂಗ್ ಆಸ್ಪತ್ರೆಯ ಮತ್ತೊಂದು ಘಟಕವು (Cobalt 6) Tele-therapy unit) ಮೇಲೆ ಹೇಳಿದ ಕೇಂದ್ರದೊಡನೆ ಸಹಕರಿಸಿ ಕಾರ್ಯ ಮಾಡುತ್ತದೆ. 'ರೇಡಿಯೋ ಆಕ್ಟಿವ್' ಗುಣಗಳುಳ್ಳ ಕೆಲವು ಔಷಧಗಳನ್ನು, ಶರೀರವು ಒಮ್ಮೆಲೆ [illegible], ನಿಯಂತ್ರಣ ಮೀರಿ ನಡುಗುವುದು ಮುಂತಾದ ಕೆಲವು ಕಠಿಣ ಹಾಗೂ ತೊಡಕಾದ ವಿಶಿಷ್ಟ ರೋಗಗಳ (Parkinsonism) ಚಿಕಿತ್ಸೆಗಾಗಿ ಬಳಸಲಾಗುತ್ತದೆ. ಅಷ್ಟೇ ಅಲ್ಲದೆ ಆ ಕೇಂದ್ರದಲ್ಲಿ ರಕ್ತಹೀನತೆ, ರಕ್ತದ ಘನ ಪರಿಮಾಣ ಮುಂತಾದ ಸಮಸ್ಯೆಗಳನ್ನು ರೇಡಿಯೋ ಐಸೋಟೋಪು"ಗಳ ಸಹಾಯದಿಂದ ಪರಿಶೀಲಿಸಲು ಉಚ್ಚಮಟ್ಟದ ಸಂಶೋಧನೆಗಳು ನಡೆಯುತ್ತಿವೆ.

ಇನ್ನು ದೇಶದ ವಿವಿಧ ಭಾಗಗಳಲ್ಲಿ ಅಣುಶಕ್ತಿ ಚಾಲಿತ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವುದು ಭಾರತದ ಮುಖ್ಯ ಉದ್ದೇಶವಾಗಿದೆ. ಮೊಟ್ಟಮೊದಲಿನ ಅಣುಶಕ್ತಿ ಚಾಲಿತ ವಿದ್ಯುತ್ ಉತ್ಪಾದನಾ ಕೇಂದ್ರವು ಮುಂಬೈಗೆ ೬೨ ಮೈಲಿಗಳ ದೂರದಲ್ಲಿರುವ 'ತಾರಾಪೋರ" ಎಂಬ ಸ್ಥಳದಲ್ಲಿ ಸ್ಥಾಪಿತವಾಗುತ್ತಿದೆ. ಎರಡನೆಯ ಕೇಂದ್ರವು ರಾಜಸ್ಥಾನದಲ್ಲಿಯೂ, ಮೂರನೆಯ ಕೇಂದ್ರವು ಮದ್ರಾಸ್ ರಾಜ್ಯದಲ್ಲಿಯೂ ಸ್ಥಾಪನೆಗೊಳ್ಳುವ ಯೋಜನೆ ಹಾಗೂ ಸಿದ್ಧತೆಗಳು ಭರದಿಂದ ನಡೆದಿವೆ. ತಾರಾಪೋರ ವಿದ್ಯುತ್ ಕೇಂದ್ರಕ್ಕೆ [illegible] ಮಿಲಿಯನ್ ಡಾಲರುಗಳಷ್ಟು ವಿದೇಶ ವಿನಿಮಯ ಸಾಲವನ್ನು ಅಮೆರಿಕೆಯು ಒದಗಿಸಿದೆ. ಇದರ ಜತೆಗೆ ಪ್ರಾರಂಭಕ್ಕೆ ಬೇಕಾಗುವ ಯುರೇನಿಯಂ ಮತ್ತು ಉರುವಲಿನ [illegible] ಒದಗಿಸಲು ಅಮೆರಿಕೆಯು ಒಪ್ಪಿಕೊಂಡಿದೆ. ಈ [illegible] ಕೇಂದ್ರ [illegible]ಗಳನ್ನು, ಇಪ್ಪತ್ತು ವರ್ಷಗಳ ವರೆಗೆ ಈ [illegible] ಪೂರೈಸಲ್ಪಡುತ್ತದೆ. ತಾರಾಪೋರ ಕೇಂದ್ರವನ್ನು ಪ್ರಾರಂಭಿಸಬೇಕೆಂಬ ಸೂಚನೆ ಬಂದಾಗ, ಅದರಿಂದ ಉತ್ಪಾದನೆಗೊಳ್ಳುವ ವಿದ್ಯುತ್ತಿನ ಯೂನಿಟ್ ದರವು ಜಲವಿದ್ಯುಚ್ಛಕ್ತಿ ಕೇಂದ್ರಗಳಿಂದ ಇಲ್ಲವೇ ಥರ್ಮಲ್ ಕೇಂದ್ರಗಳಿಂದ ಉತ್ಪಾದಿಸುವ ವಿದ್ಯುತ್ತಿನ ದರಕ್ಕಿಂತಲೂ ಬಹು ಹೆಚ್ಚಿನದಾಗಬಹುದೆಂದು ಕೆಲವು ತಜ್ಞರು ಅಭಿಪ್ರಾಯಪಟ್ಟು ಅದಕ್ಕೆ ಅಸಮ್ಮತಿ ವ್ಯಕ್ತಪಡಿಸಿದ್ದುಂಟು. ಆದರೆ ಈ ತರನಾದ ಶಂಕೆ ಅಥವಾ ನಿರಾಶಾಭಾವನೆಗಳು ಈಗ ದೂರಾಗಿ ಅಣುಶಕ್ತಿ ಚಾಲಿತ ವಿದ್ಯುತ್

(ಇಪ್ಪತ್ತಾರನೇ ಪುಟ ನೋಡಿರಿ)

ಫೋನ: 4203 ತಂತಿ: 'ಕೃಷಿ'

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘ

ನಿಯಮಿತ; ಮಂಗಳೂರು-3

'ಅಧಿಕ ಆಹಾರ ಉತ್ಪಾದನೆಗೆ' :—

ಎಲ್ಲಾ ತರದ ವಿದ್ಯುತ್, ಡೀಸಿಲ್, ಚಿಮಿಣಿ ಎಣ್ಣೆ ಮತ್ತು ಪೆಟ್ರೋಲ್ ಚಾಲಿತ ಪಂಪು ಸೆಟ್ಟುಗಳು ಸಲಕರಣೆಗಳ ಜೊತೆಗೆ ನಮ್ಮಲ್ಲಿ ದೊರೆಯುವುದು. ಸಾಲ ಮತ್ತು ನಗದಿ ರೂಪದಲ್ಲಿ ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.

ಟಿ. ಎ. ಪೈ
ಅಧ್ಯಕ್ಷ

ಬಿ. ನಾರಾಯಣ ನಾಯಕ್
ಉಪಾಧ್ಯಕ್ಷ

ಯಂ. ಜನಾರ್ದನ ರಾವ್
ಕಾರ್ಯದರ್ಶಿ

ಕನ್ನಡ ಸಾಹಿತ್ಯದಲ್ಲಿ ರಾಮಾಯಣಗಳು

ಯು. ನಾ. ಉಡುಪ, ಕೋಟೇಶ್ವರ

"ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ' ಎಂದು ಉದ್ಗರಿಸಿ ಕುಮಾರವ್ಯಾಸ ಮಹಾಭಾರತ ರಚನೆಗೆ ಕೈಹಾಕಿದ. ರಾಮಾಯಣದ ಬಗೆಗೆ ನೂರಾರು ಕಾವ್ಯಗಳು ರಚಿತವಾಗಿವೆಯೆಂದರೆ, ಅದರ ಜನಪ್ರಿಯತೆ, ಜನಹಿತಸಾಧಕ ಗುಣಗಳ ಪರಿಚಯವಾಗುವುದು. ಕನ್ನಡದಲ್ಲಿಯೂ ಹಲವು 'ರಾಮಾಯಣ'ಗಳಿವೆ. ಅವುಗಳ ಅಲ್ಪ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಪ್ರಪಂಚದ ಕಾವ್ಯಗಳಲ್ಲೇ ವಾಲ್ಮೀಕಿ ರಾಮಾಯಣದ ಸ್ಥಾನವು ಹಿರಿದಾದುದು ಅದ್ವಿತೀಯವಾದುದು. ಜಗತ್ತಿನಲ್ಲೇ ಇದು ಆದಿಕಾವ್ಯ. ಆದುದರಿಂದಲೇ ಈ ಮಹಾಕಾವ್ಯವು ಇಂಗ್ಲಿಷ್, ಫ್ರೆಂಚ್, ಜರ್ಮನ್, ಇಟಾಲಿಯನ್, ಲ್ಯಾಟಿನ್, ರಷ್ಯನ್ ಮೊದಲಾದ ಪಾಶ್ಚಾತ್ಯ ಮಹಾ ಭಾಷೆಗಳಿಗೆ ಪರಿವರ್ತನಗೊಂಡಿದೆ. ಪಾಶ್ಚಾತ್ಯರ ಮಹಾ ಸಾಹಿತ್ಯ ಸಂಪತ್ತೆನಿಸಿದ ಹೋಮರನ ಇಲಿಯಡ್ ಮಹಾಕಾವ್ಯವೇ ರಾಮಾಯಣದ ಯಥಾ ನಕಲೆಂದು ಸಾಧಿಸುವವರು ಹಲವರಿದ್ದಾರೆ. ಇಲಿಯಡ್ ಕಾವ್ಯದ ಟ್ರಾಯ್ ಪಟ್ಟಣವೇ ನಮ್ಮ ರಾಮಾಯಣದ ಲಂಕೆ; ಸ್ಪಾರ್ಟಾ ನಗರವೇ ಅಯೋಧ್ಯೆ; ಮೆನೆಲಾಸನೇ ಶ್ರೀರಾಮ; ಪ್ಯಾರಿಸನು ಖಳನಾಯಕನಾದ ರಾವಣ. ಹೀಗಿದ್ದರೂ ಕಾವ್ಯ ಗುಣ ಮತ್ತು ನೀತಿ ಧರ್ಮಗಳ ಸೌಂದರ್ಯ ಸಮಾಸನಗಳು ಶ್ರೀ ಮದ್ರಾಮಾಯಣದಲ್ಲೇ ಅಧಿಕವೆಂದು ಹೇಳುತ್ತಾರೆ.

ಭರತ ಖಂಡದಲ್ಲಂತೂ ರಾಮಾಯಣಕ್ಕೆ ವೇದದಷ್ಟೇ ಪೂಜ್ಯತೆ ಮತ್ತು ಗೌರವ ಸಲ್ಲುತ್ತಿದೆ. ವೇದಗಳಲ್ಲಿ ಸ್ತುತಿಪಾಡಿರುವ ಪರಮ ಪುರುಷನೇ ದಶರಥ ರಾಮನಾಗಿಯೂ, ಪ್ರಚೇತಸನ ಮಗನಾದ ವಾಲ್ಮೀಕಿಯಿಂದ ವೇದಗಳೇ ಶ್ರೀಮದ್ರಾಮಾಯಣವಾಗಿಯೂ ಅವತರಿಸಿದುವೇ ಇದಕ್ಕೆ ಪ್ರಬಲ ಕಾರಣ. ರಾಮಾಯಣದ ಇಕ್ಷ್ವಾಕು, ದಶರಥ, ರಾಮರ ಹೆಸರು ಋಗ್ವೇದದಲ್ಲಿದೆ; ಸಮಗ್ರ ರಾಮಾಯಣದ ಕಥೆಯೇ ವೇದದಲ್ಲಿದೆಯೆಂದು ಕೆಲವರು ಹೇಳುತ್ತಾರೆ!

ಈ ಪುಣ್ಯ ಕಾವ್ಯವು ಭಾರತೀಯರ ಎಲ್ಲಾ ಪ್ರಮುಖ ಭಾಷೆಗಳಿಗೂ ಪರಿವರ್ತಿತವಾಗಿದೆ, ಹಿಂದಿಯಲ್ಲಿ ತುಲಸೀ ರಾಮಾಯಣ, ಬಂಗಾಳಿಯಲ್ಲಿ ಕೃತ್ತಿವಾಸನ ರಾಮಾಯಣ, ಮರಾಠಿಯಲ್ಲಿ ಶ್ರೀಧರ ರಾಮಾಯಣ, ತೆಲುಗಿನಲ್ಲಿ ರಂಗನಾಥ ಮತ್ತು ಭಾಸ್ಕರ ರಾಮಾಯಣ, ತಮಿಳಿನಲ್ಲಿ ಕಂಬ ರಾಮಾಯಣವು ವಾಲ್ಮೀಕಿ ರಾಮಾಯಣದ ವಿವಿಧ ಮುಖಗಳನ್ನಿತ್ತಿವೆ. ಕನ್ನಡದಲ್ಲಿ ಹಾಗೆಯೇ ಪಂಪರಾಮಾಯಣವು ಪಂಡಿತ ಮಾನ್ಯ ಗ್ರಂಥವಾಗಿದ್ದರೆ, ತೊರವೆ ರಾಮಾಯಣವು ಕನ್ನಡಿಗರ ಹೃದಯದ ನಂದಾದೀಪವೆನ್ನಿಸಿದೆ!

ಒಂದು ಗಳಿಗೆ ರಾಮಾಯಣವು ಪ್ರಾತಃಸ್ಮರಣೀಯ ಗ್ರಂಥ. ಏಕೆಂದರೆ ಶ್ರೀ ರಾಮ ಎಂಬ ಪದವೇ ಭಾರತೀಯರ ನಾಲಿಗೆಯಲ್ಲಿ ಅತ್ಯಂತ ಪವಿತ್ರವಾದ ಉದಾತ್ತವಾದ ಅರ್ಥವನ್ನು ಪಡೆದುದು ಮುಖ್ಯ ಕಾರಣ. ಶ್ರೀರಾಮನ ಮಹಿಮೆ ತುಳುಕಾಡಿಸಿದ ರಾಮತಾಪಿನೀ ಉಪನಿಷತ್ತೆಂಬುದಿದೆ. ವಾಲ್ಮೀಕಿಯೂ ತನ್ನ ಕಾವ್ಯದಲ್ಲಿ 'ರಾಮೋ ರಾಮೋ ರಾಮ ಇತಿ' ಎಂದು ಪುನಃ ಪುನಃ ಉಚ್ಚರಿಸುತ್ತಿದ್ದುದೂ, "ರಮಂತೇ ಯೋಗಿನೋ ಅಸ್ಮಿನ್ ರಾಮಃ" ಎಂಬ ಇನ್ನೊಂದು ಪ್ರಸಿದ್ಧವಾದ ವ್ಯುತ್ಪತ್ತಿಯೂ ರಾಮನಾಮವು ಜನರಿಗೆ ತಾರಕ ಮಂತ್ರವಾಗಲು ಇನ್ನೊಂದು ಕಾರಣ. ಇನ್ನು ಅಯನ ಶಬ್ದಕ್ಕೆ ಚರಿತ್ರೆ, ಗತಿ, ಸ್ಥಾನ ಎಂಬ ಅರ್ಥಗಳಿವೆ. ಹೀಗೆ ಅರ್ಥವತ್ತಾದ ಎರಡು ಪದಗಳನ್ನು ಸೇರಿಸಿ ಶ್ರೀ ರಾಮ ಚರಿತ್ರೆಗೆ ವಾಲ್ಮೀಕಿ ಮುನಿಯು ರಾಮಾಯಣವೆಂಬ ಸುಂದರವಾದ ನಾಮಕರಣವನ್ನು ಮಾಡಿದ್ದಾನೆ. ಇದನ್ನು ಸರ್ವರೂ ಪಠನ ಪ್ರವಚನಾದಿಗಳಿಂದ ಪುರಸ್ಕರಿಸುತ್ತಿರುವುದನ್ನು ಕಂಡು ಸಂಸ್ಕೃತದಲ್ಲೇ ಅನೇಕ ರಾಮಾಯಣಗಳು ಜನ್ಮವೆತ್ತಿದುವು. ಅನ್ಯಮತೀಯರೂ ಈ ಗ್ರಂಥದಿಂದ ಆಕೃಷ್ಟರಾಗಿ ತಾವೂ ಕೆಲವು ರಾಮಾಯಣಗಳನ್ನು ರಚಿಸಿದರು. ಬೌದ್ಧರ ದಶರಥ ಜಾತಕವೂ, ಜೈನರ ಪದ್ಮಪುರಾಣವೂ ರಚಿತವಾದುವು. [illegible] ಚೀನಿ ಭಾಷೆಗಳ, ಟಿಬೆಟ್ ದೇಶದ ಪ್ರತಿಯೊಬ್ಬನು ತನ್ನ ಮಾತೃ ಭಾಷೆಯಲ್ಲೂ ರಾಮಚರಿತೆಯನ್ನು ಬರೆದಿದ್ದಾನೆ.

o o o o

ಸಂಸ್ಕೃತ ರಾಮಾಯಣವು ಇಂದಿನ ರೂಪವನ್ನು ಕ್ರಿ. ಶ. ಸು. ಎರಡನೆಯ ಶತಮಾನದಲ್ಲೇ ಪಡೆಯಿತೆನ್ನುತ್ತಾರೆ.

ಜಾನ ಬೆಳಕಿನಲ್ಲಿ

ಹೀಗೆ ಹಲವು ಭಾಷೆಗಳಲ್ಲಿ ರಾಮಾಯಣವು ಪರಿವರ್ತನೆ ಹೊಂದಿ ಜನತೆಯ ಹೃದಯದಲ್ಲಿ ನೆಲೆಸಿ ಜನಜೀವನವನ್ನು ರೂಪಿಸುತ್ತಿದ್ದಾಗ ಕನ್ನಡಿಗರು ಮುಸುಕೆಳೆದುಕೊಂಡು ನಿದ್ರಿಸಿದ್ದರೆ? ಅವರಿಗೂ ಶ್ರೀಮದ್ರಾಮಾಯಣವು ಆದರ್ಶ ಕಾವ್ಯವಾಗಿ ಕಾಣಿಸಲಿಲ್ಲವೆ? ಸು. ಎರಡು ಸಾವಿರ ವರ್ಷಕ್ಕಿಂತ ಪೂರ್ವದ ಸಾಹಿತ್ಯ ಪರಂಪರೆಯುಳ್ಳ ಕನ್ನಡಿಗರಿಗೆ ತಮ್ಮ ಸ್ವಭಾಷೆಯಲ್ಲಿ ರಾಮಾಯಣವನ್ನು ರಚಿಸಿಕೊಳ್ಳುವ ಆತುರವುಂಟಾಗಲಿಲ್ಲವೆ? ರಾಮಾಯಣದ ಪ್ರಮುಖ ನಾಯಕರಾದ ಸುಗ್ರೀವ ಹನುಮದಾದಿಗಳು ಕನ್ನಡಿಗರಲ್ಲವೆ? ಅವರು ಹನ್ನೆರಡನೆಯ ಶತಮಾನದ ವರೆಗೆ ಕನ್ನಡ ನುಡಿಯಲ್ಲಿ ಶ್ರೀಮದ್ರಾಮಾಯಣ ಕಾವ್ಯವನ್ನು ನಿರೀಕ್ಷಿಸುತ್ತಾ ಹಂಬಲಿಸುತ್ತಿರಬೇಕಾಗಿ ಇದ್ದಿರಬಹುದೆ? ಇದು ಸುತರಾಂ ಅಸಾಧ್ಯ. 'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂಥಿಣಿಯು ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ' ಎಂದು ಕುಮಾರವ್ಯಾಸನು ಘೋಷಿಸಿದುದರ ಅರ್ಥವೇನು? ಆ ಕಾಲದಲ್ಲಿ ವಿಪುಲ ರಾಮಾಯಣಗಳು ಕನ್ನಡ ನುಡಿಯಲ್ಲಿದ್ದುವು ಎಂದಲ್ಲವೆ? ಈಗ ಅವು ಕಣ್ಣುಮುಚ್ಚಾಲೆ ಆಡುತ್ತಿವೆಯೆ? ಹೇಗೆಂದರೂ ಇರಲಾರದು. ಕುಮಾರವ್ಯಾಸನು ಅನೃತವಾದಿಯಾಗಿ ಎಂದೂ ಇರಲಿಕ್ಕಿಲ್ಲ. ಆ ಪದ್ಯವು ಅನ್ಯಕರ್ತೃಕವಾಗಿ ಕಾಣಿಸುವುದೂ ಇಲ್ಲ. ಬಹುಶಃ ಕುಮಾರವ್ಯಾಸನ ಕಾಲಾನಂತರ ಮುಸ್ಲಿಂರ ಕನ್ನಡ ನಾಡಿನ ಮೇಲೆ ಆಕ್ರಮಣದಿಂದ ಕನ್ನಡ ಸಾಹಿತ್ಯದ ಮೇಲೂ, ಅಸಂಖ್ಯ ದಾಳಿಗಳಾಗಿರಬೇಕು. ಆಗ ಕನ್ನಡಿಗರ ವಾಙ್ಮಯ ಸಂಪತ್ತೆನಿಸಿದ್ದ ಹಲವು ರಾಮಾಯಣಗಳ ಪ್ರತಿಗಳು ದ ಜೀವಂತ ಸಮಾಧಿಗೊಳಿಸಲ್ಪಟ್ಟಿರಬೇಕು. ವಂಚಕನಾದ ಕಾಲನೇ, ನೀನೂ ಕನ್ನಡಿಗರ ಮೇಲೆ ನಿರ್ದಯನಾಗಬಹುದೆ!

ಇಂದು ಗೋಮಟೇಶ್ವರ ವಿಗ್ರಹ ಸ್ಥಾಪಕನೂ, ಗಂಗರ ಪ್ರಸಿದ್ಧ ದಳವಾಯಿಯೂ ಆಗಿದ್ದ ಚಾವುಂಡರಾಯನು ಜಿನಸೇನಾಚಾರ್ಯರ ಮತ್ತು ಗುಣಭದ್ರಾಚಾರ್ಯರ ಮಹಾಪುರಾಣದ ಆಧಾರದಿಂದ ಕ್ರಿ. ಶ. ೯೭೮ರಲ್ಲಿ ರಚಿಸಿದ ಚಾವುಂಡರಾಯ ಪುರಾಣವೇ ಇಂದಿನ ಪಟ್ಟಿಗೆ ಕನ್ನಡದಲ್ಲಿ ದೊರೆಯುವ ಮೊತ್ತ ಮೊದಲಿನ ರಾಮಾಯಣ ಗ್ರಂಥ! ಇದಕ್ಕಿಂತ ಪೂರ್ವದಲ್ಲಿ ಅಂದರೆ ಒಂಬತ್ತನೆಯ ಶತಮಾನದ ನೃಪತುಂಗನ ಕವಿರಾಜಮಾರ್ಗವೆಂಬ ಲಕ್ಷಣ ಗ್ರಂಥದ ದ್ವಿತೀಯ ಪರಿಚ್ಛೇದದ ೪೮ ಮತ್ತು ೫೦ನೆಯ ಪದ್ಯಗಳು, ಮೂರನೆಯ ಪರಿಚ್ಛೇದದ ೧೯೦ ಮತ್ತು ೧೯೫ನೆಯ ಪದ್ಯಗಳು ಯಾವುದೋ ಒಂದು ರಾಮಾಯಣದ್ದಂತೆ ತೋರುತ್ತದೆ. ಆದರೆ ಆ ರಾಮಾಯಣಗಳ ಕುರಿತು ಇಂದು ಏನೂ ಹೇಳುವಂತಿಲ್ಲ.

ಚಾವುಂಡರಾಯ ಪುರಾಣದ ಅನಂತರ ಸು. ೧೧೦೦ರಲ್ಲಿದ್ದ ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಅಥವಾ ಪಂಪರಾಮಾಯಣವೇ ಕನ್ನಡ ಸಾಹಿತ್ಯವನ್ನು ಅಲಂಕರಿಸುವ ದ್ವಿತೀಯ ರಾಮಾಯಣ. ಇದು ಕಾಲದ ದೃಷ್ಟಿಯಿಂದ ಎರಡನೆಯದಾದರೂ ಕಾವ್ಯದ ದೃಷ್ಟಿಯಿಂದ ಮೊದಲನೆಯದು. ಇದನ್ನು ಬರೆದ ನಾಗಚಂದ್ರನು ಉದ್ದಾಮ ಕವೀಶ್ವರನು ಪಂಪ ಪೊನ್ನ ರನ್ನರಂತೆ ಎರಡು ಕಾವ್ಯಗಳನ್ನು

(ಇಪ್ಪತ್ತೈದನೇ ಪುಟ ನೋಡಿರಿ)

ಜಾಹೀರಾತು

ದಕ್ಷಿಣ ಕನ್ನಡ ವ ಇನ್ನಿತರ
ಮಹಾ ಮೈಸೂರು ಪ್ರಾಂತ್ಯದಲ್ಲಿರುವ
ಪ್ರೇಕ್ಷಣೀಯ ಸ್ಥಳ
ಸಂದರ್ಶನ ಮಾಡುವವರಿಗೆ
ನಿಮಗೆ ಸಹಾಯಕ್ಕಾಗಿ
ನಮ್ಮ ಬಸ್ಸುಗಳು ಸದಾ ಸಿದ್ಧವಿವೆ.

ದಿ. ಹನುಮಾನ್
ಟ್ರಾನ್ಸ್‌ಪೋರ್ಟ್ ಕಂಪೆನಿ ಪ್ರೈವೇಟು ಲಿಮಿಟೆಡ್
ಉಡುಪಿ, ದ. ಕ. ಜಿಲ್ಲೆ.

ಟೆಲಿಫೋನು:
ಮೆನೇಜಿಂಗ್ ಡೈರೆಕ್ಟರ್ 19
ಡೈರೆಕ್ಟರ್ ಇನ್ ಚಾರ್ಜ್ ಆಫ್ ವರ್ಕ್ಸ್ 194

ಟೆಲಿಗ್ರಾಮ್:
"ಹನುಮಾನ್ ಕೊ"

ಶ್ರೀ ಸ. ನಾರಾಯಣ

ಅಜಂತಾ ಮತ್ತು ಎಲ್ಲೋರಾ

೧

ಕಲೆಯ ಬೀಡು ಅಜಂತಾ ಮತ್ತು ಎಲ್ಲೋರಾಗಳ ಹೆಸರೇನೋ ಎಲ್ಲರಿಗೂ ಗೊತ್ತು. ಆದರೆ, ಕಲೆಯ ಸವಿ ನೋಡದವರಿಗೆ ಅದರ ಬಗ್ಗೆ ಏನು ಗೊತ್ತು? ಉಂಡವರ ಬಾಯಿಂದಾದರೂ ಕೇಳಿ, ನಾಲಗೆ ಚಪ್ಪರಿಸಿಕೊಳ್ಳ ಬಾರದೇಕೆ? ಹರಿವ ನೀರಿಗೆ ದೊಣೆನಾಯಕನ ಅಪ್ಪಣೆ ಬೇಕೆ?

ಪ್ರಾಚೀನ ಭಾರತೀಯ ವರ್ಣಚಿತ್ರ ಕಲೆ ಮತ್ತು ವಾಸ್ತು ಶಿಲ್ಪ ಕಲೆಗೆ ಎರಡು ಮುಖ್ಯ ಕೇಂದ್ರಗಳು. ಆಧುನಿಕ ಯುಗದ ಕಲಾವಿದರ, ಪಾಶ್ಚಾತ್ಯ ಪಂಡಿತರ ಮೆಚ್ಚುಗೆಗೆ ಪಾತ್ರವಾದ ಎರಡು ಮುಖ್ಯ ಕಲಾ ಕೇಂದ್ರಗಳು—ಅಜಂತ ಮತ್ತು ಎಲ್ಲೋರ.

ಔರಂಗಾಬಾದಿಗೆ ಸಮೀಪದಲ್ಲಿರುವ ಬೆಟ್ಟದ ಶ್ರೇಣಿಗಳಲ್ಲಿ ಮನೋಹರ ರುದ್ರ ರಮಣೀಯ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಈ ಗುಹೆಗಳು ಇವೆ. ಬೆಟ್ಟಗಳ ನೈರುತ್ಯ ದಿಕ್ಕಿಗೆ ಎಲ್ಲೋರವೂ ವಾಯುವ್ಯ ಮೂಲೆಯಲ್ಲಿ ಅಜಂತೆಯೂ ಇವೆ.

ಜನ ಸಂಚಾರವಿಲ್ಲದ ದಟ್ಟಡವಿಗಳಲ್ಲಿ ಮರೆಯಾಗಿದ್ದ ಈ ಕಲಾ ಮಂದಿರಗಳನ್ನು ಮೊದಲಿಗೆ ಕಂಡವರು ಕೆಲವು ನಿರಕ್ಷರ ಕುಕ್ಷಿಗಳಾದ, ಕಲೆಯ ಪರಿಚಯವಿಲ್ಲದ ದನ—ಕರುಗಳನ್ನು ಮೇಯಿಸಲು ಕಾಡಿಗೆ ಬಂದ ಹುಡುಗರು. ಅದು ವರೆವಿಗೆ ಆಧುನಿಕ ಲೋಕಕ್ಕೆ ಪರಿಚಯವಿಲ್ಲದ ಈ ಕಲಾಮಯ ಮಂದಿರಗಳು ಕಲಾಪ್ರಿಯರ ತೌರು ಮನೆಗಳಾದುವು. ಪ್ರಾಚ್ಯ ವಸ್ತು ಸಂಶೋಧನಾ ಶಾಖೆಯವರು ನಡೆಸಿದ ಸಂಶೋಧನೆಗಳಿಂದ ಹಲವಾರು ಸಂಗತಿಗಳು ಬೆಳಕಿಗೆ ಬಂದವು. ಈ ಪುರಾತನ ಚಿತ್ರ ಶಿಲ್ಪ ಕಲಾ ಕೇಂದ್ರಗಳ ರಕ್ಷಣೆಗೆ, ಅಭಿವೃದ್ಧಿಗೆ ಸಂದರ್ಶಕರ ಅನುಕೂಲಕ್ಕೆ ಸರ್ಕಾರ ನಡೆಸಿರುವ ಪ್ರಯತ್ನ ಶ್ಲಾಘನೀಯ.

ಗಿರಿ ಶ್ರೇಣಿಯಲ್ಲಿ ಹುಟ್ಟಿದ ವಾಘೋರ ಎಂಬ ಹೊಳೆಯ ಇಕ್ಕೆಲಗಳಲ್ಲಿ ಕಾಣುವ ವನಶ್ರೀಯ ರಮ್ಯ ಸೌಂದರ್ಯ. ಇದೇ ಸ್ಥಳದಲ್ಲಿ ಮಾನವ ನಿರ್ಮಿತ ಕಲಾ ಸೌಂದರ್ಯಕ್ಕೆ ಸ್ಪರ್ಧೆ ನಡೆದು ಮಾನವನ ಮನಸ್ಸನ್ನು ಮೂಕಗೊಳಿಸುತ್ತದೆ. ಈ ಗುಡ್ಡಗಳಿಗೆ ಈಶಾನ್ಯದಲ್ಲಿ ಸುಮಾರು ಒಂದೂವರೆ ಸಾವಿರ ವರ್ಷಗಳ ಕೆಳಗೆ ವಿಧರ್ಭ ರಾಜ್ಯಕ್ಕೆ ಸೇರಿದ ಇಂದುಕಾಂತ ಎಂಬ ನಗರವಿತ್ತೆಂದು ಸಂಶೋಧಕರ ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಇಂದುಕಾಂತನಗರ ಮತ್ತು ಸುತ್ತ ಮುತ್ತಲ ಪ್ರದೇಶದಲ್ಲಿ ಬೌದ್ಧಮತ ಪ್ರಬಲವಾದಾಗ ಲೌಕಿಕ ಆಕರ್ಷಣೆಯಿಂದ ದೂರವಿರಲು ಆಶಿಸಿದ ವಿರಾಗಿಗಳು ಅಂದರೆ ಬೌದ್ಧ ಸನ್ಯಾಸಿಗಳು ಪ್ರಶಾಂತ ನೆಲೆಯಾದ ವಾಘೋರ ಹೊಳೆಯ ಎಡಬದಿಯ ಗುಹೆಗಳನ್ನು ತಮ್ಮ ಧ್ಯಾನಕ್ಕೆ—ವಾಸಕ್ಕೆ ಬಳಸಿಕೊಂಡರೆಂದು ತೋರುತ್ತದೆ. ಸನ್ಯಾಸಿಗಳ ಸಂಖ್ಯೆ ಅಧಿಕವಾದಂತೆ ಗುಹೆಗಳು ಬೆಳೆಯಬೇಕಾಯಿತು. ಪ್ರಕೃತಿಯಲ್ಲಿ ರೂಪುಗೊಂಡಿದ್ದ ಗುಹೆಗಳ ಸಂಖ್ಯೆ ಕಡಿಮೆಯಾದಾಗ ಸ್ಥಳದ ಆಕರ್ಷಣೆಗೆ, ಪ್ರಶಾಂತತೆಗೆ ಒಳಗಾಗಿ ಆಗಮಿಸಿದ ಬೌದ್ಧ ಸನ್ಯಾಸಿಗಳ ಸಂಖ್ಯೆ ಅಧಿಕವಾದಾಗ ಬಂಡೆಗಳನ್ನು ಕೊರೆದು ಗುಹೆಗಳನ್ನು ನಿರ್ಮಿಸಿದರೆಂದು ತೋರುತ್ತದೆ. ಬರಿಯ ಕಲ್ಲುಗುಡ್ಡಗಳ ಗುಹೆ ಏನು ಚನ್ನ! ಗುಹೆಗಳು ಸೌಂದರ್ಯದಿಂದ ಕೂಡಿದ್ದರೆ ಚೇತೋಹಾರಿ ಅಲ್ಲವೆ? ಅಲ್ಲದೆ ಭಾರತೀಯರ ಹೃದಯಗಳು ಕಲೆಗೆ ಮಾರುಹೋದ ಹೃದಯಗಳು, ತಮ್ಮ ಧಾರ್ಮಿಕ ಚಿಂತನೆ, ತಪಸ್ಸಿಗೆ ಅವರ ಹೃದಯ ಹಂಬಲಿಸಿದಂತೆ ಉನ್ನತ ಕಲಾಕೃತಿಗಳ ನಿರ್ಮಾಣದ ಕಡೆಗೂ ಅವರ ಗಮನ ಹರಿಯಿತು. ಹೀಗೆ ಅಜಂತೆಯಲ್ಲಿ ೨೯ ಗವಿಗಳು ಮಾನವರಿಂದ ಕೊರೆಯಲ್ಪಟ್ಟಿವೆ.

ದಕ್ಷಿಣಭಾರತದಲ್ಲಿ ಕ್ರಿ. ಪೂ. ಸು. ೨೦೦ರಿಂದ ಕ್ರಿ. ಶ. ಸು. ೮೦೦ರ ವರೆಗೆ ಅಂದರೆ ಸಾವಿರ ವರ್ಷಗಳ ಕಾಲ ಗವಿ ಶಿಲ್ಪ ರೂಪುಗೊಂಡಿತೆಂದು ಹೇಳಬಹುದು. ಹೀಗೆ ರೂಪುಗೊಂಡ ಗವಿಗಳು ಬೌದ್ಧ, ಜೈನ, ಶೈವ, ವೈಷ್ಣವ ಎಂದು ನಾಲ್ಕು ಬಗೆಯಾಗಿ ಆಯಾ ಧರ್ಮಗಳ ಹಿರಿಮೆಯನ್ನು ಎತ್ತಿ ಸಾರುತ್ತಿವೆ. ಇಂತಹ ಗವಿಗಳ ಸಾಲುಗಳು ಗ್ವಾಲಿಯರಿನ ಬಾಗ್, ಇಂದೂರಿನ ಉದಯಗಿರಿ, ಓಢ್ರದ ಉದಯಗಿರಿ, ಮುಂಬಯಿ ಪ್ರಾಂತ್ಯದ ಕನ್ಹೇರಿ, ಕಾರ್ಲಾ, ಭಾಜ, ನಾಸಿಕ, ಎಲಿಫೆಂಟಾ, ಎಲ್ಲೋರ, ಅಜಂತ, ಕರ್ನಾಟಕದ ಬಾದಾಮಿ ಈ ಸ್ಥಳಗಳಲ್ಲಿ ಕಾಣಬಹುದು. ಇವುಗಳಲ್ಲಿ ಬೌದ್ಧ ಗವಿಗಳೇ ಅತಿ ಪ್ರಾಚೀನವಾದುವು ಎಂಬ ಅಂಶ ತಿಳಿದು ಬರುತ್ತದೆ. ಅಜಂತೆಯ ಗುಹೆಗಳಲ್ಲಿ ಕಾಣಬರುವ ಚಿತ್ರಗಳಲ್ಲಿ ಬೌದ್ಧ ಧರ್ಮ ಹಾಗೂ ಬುದ್ಧನ ಮತ್ತು ಜಾತಕ ಕಥೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗಮನಿಸಿದಾಗ ಆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬೌದ್ಧ ಮತಕ್ಕೆ ವಿಶೇಷ ಪ್ರಾಶಸ್ತ್ಯವಿತ್ತು ಎಂಬ ವಿಷಯ ತಿಳಿದು ಬರುತ್ತದೆ.

ಭಾರತೀಯರಿಗೆ ಚಿತ್ರಕಲೆ ಹೊಸತಲ್ಲ ಎಂಬ ಸಂಗತಿ ಮಧ್ಯ ಪ್ರಾಂತದ ರಾಯಗಢ ಪ್ರದೇಶದ ಸಿಂಗನಪುರ ಗ್ರಾಮದ ಬಳಿ ಶಿಲಾಯುಗದ ಜನರು ಚಿತ್ರಿಸಿದ ಚಿತ್ರ ಮಾಲೆಗಳಿಂದ ತಿಳಿದು ಬರುತ್ತದೆ.

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

With Best Compliments from:

The United Trading Corporation & Workshop (Private) Limited,

Attavar, Nandigudde Road,

MANGALORE.

Dealers for

Hindustan Ambassador Cars.

ನೆಹರೂ ಜೀವನದ ಕೆಲವು ಘಟನೆಗಳು

ಸ್ವತಂತ್ರ ಭಾರತದ ಶಿಲ್ಪಿ ನೆಹರೂ ಇಂದಿಲ್ಲ. ಆದರೆ ಭಾರತೀಯರ ಪಾಲಿಗೆ ಅವರು ಅಮರರು. ಭಾರತೀಯರ ಜನ ಜೀವನದಲ್ಲಿ ಅವರು ಹಾಸುಹೊಕ್ಕಾಗಿ ಬೆರೆತು ಅಪಾರ ಜನಪ್ರಿಯತೆಗಳಿಸಿದ್ದ ನಾಯಕ. ಅವರು ರಾಜಕಾರಣಿ, ಸಾಹಿತಿ ಹಾಗೂ ಅಮೋಘ ಭಾಷಣಕಾರರು. ಜನ ನೆಹರೂರವರಿಗೆ ಮರುಳಾದಷ್ಟು ಇನ್ನಾವ ನಾಯಕನಿಗೂ ಆಗಿಲ್ಲ. ಅವರ ಜೀವನದ ಕೆಲವು ಘಟನೆಗಳು ಅವರ ಅಪ್ರತಿಮ ವ್ಯಕ್ತಿತ್ವಕ್ಕೆ ಸಾಕ್ಷಿ ಹೇಳುತ್ತಿವೆ. ಪ್ರಜಾರಾಜ್ಯದ ಈ ಸಂದರ್ಭ ಅಗಲಿದ ಮಹಾ ನಾಯಕನ ಜೀವನದಿಂದ ನಾವು ಸ್ಫೂರ್ತಿ ಪಡೆದು ಸಾಗಬೇಕಾಗಿದೆ. ಅವರ ಜೀವನದ ಕೆಲವು ಸ್ಮರಣೀಯ ಘಟನೆಗಳ ಉಲ್ಲೇಖ ಇಲ್ಲಿದೆ.

ಶ್ರೀ ತಿಮ್ಮಂಜೆ ಪರಾರಿ, ಮುಂಬಯಿ.

ರಾಜಾ ನೆಹರೂ ಅವರ ತಂದೆ ಪಂಡಿತ ಮೋತೀಲಾಲ ನೆಹರೂ ಅವರು ಬಹಳೇ ಆಡಂಬರ ಪ್ರಿಯ ಉತ್ಸಾಹೀ ಮನುಷ್ಯರಾಗಿದ್ದರು. ಅವರು ತನ್ನ ಮನೆ ಆನಂದ ಭವನದ ಪಕ್ಕದಲ್ಲೇ ಒಂದು ಸುಂದರ ಕೆರೆ ತೋಡಿಸಿದ್ದರು. ಜಾಜಾ ನೆಹರೂ ಅವರು ಇದೇ ಕೆರೆಯಲ್ಲಿ ಬಾಲ್ಯದಲ್ಲಿ ಸ್ನಾನ ಮಾಡುತ್ತ ಈಜಲು ಕಲಿತಿದ್ದರು.

ಆ ಸಮಯದಲ್ಲಿ ಅಲಹಾಬಾದಿನ ಹಿರಿಹಿರಿಯ ಮನುಷ್ಯರೆಲ್ಲಾ ಈ ಕೆರೆಯಲ್ಲಿ ಸ್ನಾನ ಮಾಡಲು ಬರುತ್ತಿದ್ದರು. ಇಂತವರಲ್ಲಿ ಸರ್ ತೇಜ ಬಹಾದುರ್ ಸಪ್ರೂ ಅವರೂ ಒಬ್ಬರು. ಅವರು ಕಾನೂನಿನ ಅತಿ ಹಿರಿಯ ಪಂಡಿತರಾಗಿದ್ದರು. ಹಾಗೂ, ಅಲಹಾಬಾದಿನ ಮಹಾ ವಕೀಲರಾಗಿದ್ದರು. ಜನತೆ ಅವರನ್ನು ಬಹಳ ಗೌರವದಿಂದ ಕಾಣುತ್ತಿತ್ತು ಹಾಗೂ ಪಂ. ಮೋತೀಲಾಲ ನೆಹರೂ ಅವರ ಘನಿಷ್ಟ ಮಿತ್ರರಾಗಿದ್ದರು.

ಸರ್ ಸಪ್ರೂ ಅವರಿಗೆ ಕೆರೆಯಲ್ಲಿ ಮಿಂಯುವ ಆಸೆಯೇನೋ ತುಂಬ ಇತ್ತು, ಆದರೆ ಈಜಲು ಬರುತ್ತಿದ್ದಿಲ್ಲ. ಅವರು ಆ ಕೆರೆಗೆ ಇಳಿಯಲು ಹೆದರುತ್ತಿದ್ದರು. ಆದುದರಿಂದ ಅವರು ಯಾವಾಗ ಬಂದರೂ ಕರೆಯ ಮೇಲಿನ ದಂಡೆಯಲ್ಲಿ ನಿಂತುಕೊಂಡೇ ಸ್ನಾನ ಮುಗಿಸುತ್ತಿದ್ದರು. ಒಂದು ದಿನ ಅವರು ಕೆರೆಯ ದಂಡೆಯಲ್ಲಿ ಕಳಿತು ಕೆರೆಯೊಳಗೆ ಕಾಲನ್ನಿಳಿಬಿಟ್ಟು ಮೀಯುವ ಆಸೆಯ ಬಗ್ಗೆ ಯೋಚಿಸುತ್ತಾ ಇದ್ದರೋ ಏನೋ.

ಅಂದು ಎಳೆಯ ಜವಾಹರಲಾಲ ನೆಹರೂ ಕೂಡಾ ಕೆರೆಯಲ್ಲಿ ಈಜುತ್ತಾ ಸಂತೋಷ ಪಡುತ್ತಿದ್ದರು. ಎಲ್ಲಾ ಹುಡುಗರಂತೆ ಅವರೂ ಬಹಳ ಚಂಚಲರಾಗಿದ್ದರು. ಅವರು ಕೂಡಲೇ ನೀರಿನಡಿಯಿಂದಲೇ ಈಜುತ್ತಾ ಬಂದು ಇಳಿಬಿಟ್ಟಿದ್ದ ಸಪ್ರೂ ಅವರ ಕಾಲನ್ನು ಹಿಡಿದು ಎಳೆದುಕೊಂಡು ಕೆರೆಯ ಮಧ್ಯಕ್ಕೆ ಹೋಗಿ ಬಿಟ್ಟಿದ್ದರು. ಗಾಬರಿಗೊಂಡ ಸಪ್ರೂ ಅವರು ಎರಡ ಮೂರು ಗುಟುಕ ನೀರು ಕುಡಿದು ಬಿಟ್ಟು 'ಸತ್ತೇ ಸತ್ತೇ' ಎಂದು ಕಿರುಚಿ ಕೊಂಡರು.

ತುಸು ಹೊತ್ತಿನಲ್ಲಿ ಸಪ್ರು ಅವರು ಸಾವಧಾನರಾದರು. ಗಾಬರಿ ಮಾಯವಾಯ್ತು. ನೀರ ಮೇಲೆ ಬಂದ ತಕ್ಷಣ ಬಾಲಕ ಜವಾಹರರನ್ನು ಹಿಡಿದು ಅವರು ಗದರಿಸಲಾರಂಭಿಸಿದರು. ಆದರೆ ತುಂಟ ಜವಾಹರ ಬಿದ್ದು ಬಿದ್ದು ನಗುತ್ತಲೇ ಇದ್ದ.

○ ○ ○

ನೆಹರೂ ಅವರಿಗೆ ಪುಸ್ತಕಗಳ ಮೇಲೆ ತುಂಬ ಪ್ರೀತಿ ಇತ್ತು. ಆದರ ಅಭಿಮಾನಗಳೊಂದಿಗೆ ಅವರು ಪುಸ್ತಕವನ್ನು ಕಾಣುತಿದ್ದರು. ಆದರೆ ಅವರೆಂದೂ ಬೇರೆಯವರಿಂದ ಪುಸ್ತಕ ಬೇಡುತ್ತಿರಲಿಲ್ಲ. ತನ್ನ ಕಿಸೆಯಿಂದ ಹಣಕೊಟ್ಟು ಪುಸ್ತಕ ತೆಗೆದುಕೊಂಡು ಓದುತ್ತಿದ್ದರು. ಅನಂತರ ಜತನದಿಂದ ಅವುಗಳನ್ನು ಕಾಯ್ದಿಡುತ್ತಿದ್ದರು— ಹಾಗೂ ಸಮಯ ಸಿಕ್ಕಿದಾಗ ಅವನ್ನು ಪುನಃ ಪುನಃ ಓದುತಿದ್ದರು.

ಮೂವತ್ತಾರು ವರ್ಷಗಳ ಹಿಂದಿನದೊಂದು ಘಟನೆ ಆಗ ನೆಹರೂ ಅವರು ಉ. ಪ್ರದೇಶದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಒಮ್ಮೆ ಕಾಂಗ್ರೆಸಿನ ಯಾವುದೋ ಒಂದು ಕೆಲಸಕ್ಕಾಗಿ ಲಖನೌಗೆ ಹೋಗಿದ್ದಾಗ ಅವರು ಅಮೀನುದ್ದೌಲಾ ಪಾರ್ಕಿನಲ್ಲಿರುವ ತನ್ನ ಸಹಯೋಗಿ ಮತ್ತು ಮಿತ್ರ ಶ್ರೀಯುತ ಮೋಹನ್ ಲಾಲ್ ಸಕ್ಸೇನಾ ಅವರ ಮನೆಯಲ್ಲಿಳಿದಿದ್ದರು.

ಶ್ರೀ ಸಕ್ಸೇನಾ ಅವರೂ ಬಹುದೊಡ್ಡ ಪುಸ್ತಕ ಪ್ರೇಮಿಯಾಗಿದ್ದರು. ಆದರೆ ಅವರೆಂದೂ ಪುಸ್ತಕಗಳನ್ನು ಜೋಕೆಯಿಂದ ತೆಗೆದಿಡುತ್ತಿರಲಿಲ್ಲ. ಒಂದು ಕವಾಟಿನಲ್ಲಿ ಹೇಗೆ ಹೇಗೋ ಆ ಪುಸ್ತಕಗಳಿರುತ್ತಿದ್ದುವು. ಆದರತ್ತ ಸಕ್ಸೇನಾ ಅವರ ಗಮನವೆಂದೂ ಹರಿಯುತ್ತಿರಲಿಲ್ಲ. ಒಂದು ದಿನ ನೆಹರೂ ಅವರು ಆ ಕವಾಟಿನ ಬಾಗಿಲು ತೆರೆದರು— ಪುಸ್ತಕಗಳೆಲ್ಲಾ ಅಡ್ಡಾದಿಡ್ಡಿಯಾಗಿ ಬಿದ್ದಿದ್ದುವು. ಆದರಲ್ಲೂ ಒಂದ ಪುಸ್ತಕವಂತೂ ಕೊಳೆ ಧೂಳುಗಳಿಂದ ಮುಚ್ಚಿ ಹೋಗಿತ್ತು. ಅದರ ಅವಸ್ಥೆ ವಿಚಿತ್ರವಾಗಿತ್ತು.

ನೋಡಿದರೆ ಆ ಪುಸ್ತಕ ನೆಹರೂ ಅವರದೆ. ಎಂದೋ ಒಂದ ದಿನ ಸಕ್ಸೇನಾ ಅವರು ಓದಲಿಕ್ಕಾಗಿ ಜವಾಹರರಿಂದ ಕೇಳಿ ತಂದಿದ್ದರು. ಪುಸ್ತಕದ ಅವಸ್ಥೆಯನ್ನು ಕಂಡು ಜಾಜಾಜೀಗೆ ಬಹಳ ತಳಮಳವಾಯ್ತು. ಪುಸ್ತಕವನ್ನು ತೆಗೆದು ಒರೆಸಿ ಸ್ವಚ್ಛಮಾಡಿದರು. ಅನಂತರ ಕ್ರುದ್ಧ ಸ್ವರದಲ್ಲಿ—"ಮೋಹನ್, ಪುಸ್ತಕವೂ ಒಂದು ಜೀವಿತ ವಸ್ತು ಎಂಬುದು ನಿನಗೆ ಗೊತ್ತಿಲ್ಲವೇ? ಅದನ್ನು ಆದರ ಸಂಮಾನಗಳಿಂದ ಕಾಣಬೇಕೆಂದೂ ತಿಳಿಯದೇ? ಇದು ಅನುಚಿತ-ತುಂಬ ಅನುಚಿತ ವ್ಯವಹಾರ' ಎಂದರು.

"ಹೌದ, ತಪ್ಪಾಯ್ತು." ಎಂದು ಮೋಹನ್‌ಲಾಲ್ ಸಕ್ಸೇನಾ ಅವರು ತಲೆ ಬಾಗಿಸಿದರು.

○ ○ ○ ○

ಪಂ. ಮೋತೀಲಾಲ್ ನೆಹರೂ ಅವರು ತಿಂಗಳಿಗೆ ಸಾವಿರಾರು ರೂಪಾಯಿಗಳಿಸುತ್ತಿದ್ದರು. ಹಾಗೇ ನಾಳೆಯ ವಿಚಾರವಿಲ್ಲದೇ ಎಲ್ಲವನ್ನೂ ಖರ್ಚು ಮಾಡುತ್ತಿದ್ದರು. ಆದುದರಿಂದ ಜವಾಹರರ ಬಾಲ್ಯ ಬಹಳೇ ಆಡಂಬರದಲ್ಲಿಯೇ ವ್ಯತೀತವಾಯ್ತು. ಅತ್ಯುತ್ತಮ ಊಟ ತಿಂಡಿ ತಿನ್ನುತ್ತಿದ್ದರು—ಅತ್ಯುತ್ತಮ ಬಟ್ಟೆ ಬರೆ ಉಪಯೋಗಿಸುತ್ತಿದ್ದರು.

ಆದರೆ ತುಂಬು ಯೌವನದ ಸಮಯದಲ್ಲಿ ಜವಾಹರರು ದೇಶ ಸೇವೆಯ ದೀಕ್ಷೆ ತೊಟ್ಟು ಒಳ್ಳೆಯ ಊಟ ತಿಂಡಿ ಬಟ್ಟೆ ಬರೆ ಎಲ್ಲವನ್ನೂ ತ್ಯಜಿಸಿದರು. ಅವುಗಳೊಡನೆ ಪುನಃ ಎಂದೂ ಸಂಬಂಧ ಬೆಳೆಸಲಿಲ್ಲ ಬರೇ ಸಾಮಾನ್ಯರಂತೆ ಊಟ ತಿಂಡಿ ಉಡುಗೆ ತೊಡುಗೆಗಳನ್ನುಪಯೋಗಿಸಲಾರಂಭಿಸಿದರು.

ಮೆಲ್ಲ ಮೆಲ್ಲಗೆ ಕಾಲ ಬದಲಾಗುತ್ತಾ ಹೋಯ್ತು. ಕ್ರಮೇಣ ದೇಶದ ಹಣ ವ್ಯರ್ಥವಾಗುವುದನ್ನು ಅವರಿಂದ ಸಹಿಸಲಾಗುತ್ತಿರಲಿಲ್ಲ. ಎಷ್ಟೋ ಸಲ ಬಂದ ಗೆಳೆಯರು ಅಥವಾ ಆಮಂತ್ರಿತರು ಹೊರಟು ಹೋದ ಕೂಡಲೇ ಅವರು ಕೈಯಾರೆ ದೀಪ ಆರಿಸಿ ಫೇನ್ (Fan) ನಿಲ್ಲಿಸುತ್ತಿದ್ದರು. ಏಕೆಂದರೆ ಅನಾವಶ್ಯಕವಾಗಿ ವಿದ್ಯುಚ್ಛಕ್ತಿ ಏಕೆ ವ್ಯಯವಾಗಬೇಕು ಎಂಬುದು ಅವರ ಭಾವನೆಯಾಗಿತ್ತು. "ಚಳಿಯ ಸಮಯದಲ್ಲಿ ಬೆಚ್ಚಗಿನ ಗಾಳಿ, ಬೇಸಿಗೆ ಕಾಲದಲ್ಲಿ ತಂಪು ಹವೆಯನ್ನು ಬೀಸುವ ಏರ್ ಕಂಡೀಷನ್ಡ್ ಯಂತ್ರವನ್ನು ತನ್ನ ಕೊಠಡಿಯಲ್ಲಿಡಬಾರದು'' ಎಂದು ಅವರು ಅನ್ನುತ್ತಿದ್ದರು ಎಂದು ಅವರ ಕೆಲಸದಾಳುಗಳೇ ಹೇಳುತ್ತಾರೆ. ಸೆಕೆಗಾಲದಲ್ಲಿ ರಾಮಿನೊಳಗ

(ಇಪ್ಪತ್ತಮೂರನೇ ಪುಟ ನೋಡಿರಿ)

"ಬಿಕ್ಕೊ" ಆಹಾರ ತಯಾರಿಕೆಗಳು ತೋಟ ತಾಜಾ ಮತ್ತು ಮಿತವ್ಯಯ

BICCO
REGD TRADE MARK

ಅತಿಥಿಗಳ ಪ್ರಥಮ ಸತ್ಕಾರಕ್ಕೆ ಅತ್ಯನುಕೂಲ

BICCO
ನಿಮ್ಮ ಫಲಾಹಾರವನ್ನು ರುಚಿಯಾಗಿ ಮತ್ತು ಆರೋಗ್ಯಕರವಾಗಿ ಮಾಡುತ್ತದೆ

ಸ್ಕ್ವಾಷ್, ಸಿರಪ್, ಕ್ಯಾನ್ಡ್ ಫ್ರುಟ್ಸ್ ಸ್ಲಾಯಿಸೆಸ್, ಪಲ್ಪ್, ಜ್ಯೂಸ್, ಶುಂಠಿ ಮುರಬ್ಬ, ಉಪ್ಪಿನಕಾಯಿ, ಪೆಪ್ಪರ್‌ಮಿಠಾಯಿಗಳು ಇತ್ಯಾದಿ ಸಹ ದೊರೆಯುತ್ತವೆ.

ತಯಾರಕರು: ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂ. ಲಿಮಿಟೆಡ್

ತಂತಿ: ಬಿಕ್ಕೊ. ಕಾಪು, ದ. ಕ. ಫೋನ್: 29

Edited, Printed & Published by K. H. Shetty at the Navayuga Press, Udipi, S. India.

ಮುದ್ದು ಗೆಳತಿ

ಶ್ರೀ ಯನ್. ಕೃಷ್ಣ ಮುಕಾರಿ, ಮಂಗಳೂರು.

ಜೀವನದ ನಂದನದಿ ಹೃದಯ ತಿಳಿಗೊಳದಲ್ಲಿ
ಭಾವ ರಸವೊಸರು ತಿರೆ ಜುಳು-ಜುಳೆನುತ
ಆದರ ಮಧ್ಯದಲಿ ಸ್ನೇಹ ಕಂಪಿನ ದಳವ
ಬಿರಿಯುತ್ತ ಬಂದಿರುವೆ! ಮುದ್ದು ಗೆಳತಿ! ॥ ೧ ॥

ತಮ ಸುತ್ತು! ಕಾರ್ ಅತ್ತು, ಸಿಡಿಲುಗಳು ಒತ್ತೊತ್ತಿ
ಗುಡುಗುಡಿಸೆ, ನಿನ್ನ ಮೆಲು ತೆಕ್ಕೆಯಲ್ಲಿ
ಮೌನ ವೀಣೆಯ ಮೀಟಿ, ಅವ್ಯಕ್ತರಾಗದಲಿ
ಜೋಗುಳಿಸಿ ತಟ್ಟುವೆಯ! ಮುದ್ದು ಗೆಳತಿ! ॥ ೨ ॥

ನಾ ಶಿಶುವಿನಂದಲಿ ಮೈಮರೆತು ಮಲಗಿರಲು
ಸ್ವಪ್ನ ಸಾಮ್ರಾಜ್ಯದಲಿ ವಿಹರಿಸಿರಲು,
ಮುಂಗುರುಳ ಭಾಳದಲಿ ಚೆನ್ನಾಟವಾಡಲದ—
ನವಿರಾಗಿ ಸರಿಸುವೆಯ! ಮುದ್ದು ಗೆಳತಿ! ॥ ೩ ॥

ದೀವಳಿಗೆ ಬಂತೆಂದು ಪ್ರೇಮದಾರದೊಳೆಳೆದು
ಸಾಲು ದೀಪಕೆ ಕಣ್ಣ ಕಿರಣ ಸುರಿದು!
ಕೆನ್ನೆ ಕುಂಕುಮವಿರಲು, ಮಂದಸ್ಮಿತದ ಬೆಳಕ
ಎತ್ತುತಿರುವೆಯ! ನನ್ನ ಮುದ್ದು ಗೆಳತಿ! ॥ ೪ ॥

ಮೇಲೆ ಚಂದ್ರಮ ತನ್ನ ಮೊಗತುಂಬ ನಗುತಿರಲು
ತೆರೆಯಲ್ಲಿ ಹಾಲು ಹೊಳೆ ಹರಿಯುತಿರಲು
ತುಂಟತನದಲಿ ನಿನ್ನ ಜಡೆಯೊಡನೆ ಬೆರಳಾಟ
ಆಡೆ, ಕೆನ್ನೆಗೆ ಪೆಟ್ಟೆ? ಮುದ್ದು ಗೆಳತಿ! ॥ ೫ ॥

ನಾ ಮಗುವಿನೋಲ್ ಹಟದಿ ಬಿಮ್ಮೆಂದು ಕುಳಿತಿರಲು
ತಾಯ್ ತೆರದಿಂ ಬಂದು ಮನವಸವರಿ।
'ಹಟ ಮಾಡದಿರು ಕಂದ!' ಎಂದ ಮಾತಿನ ಅಂದ
ನಾನೆಂತು ಮರೆತೇನು ಮುದ್ದು ಗೆಳತಿ! ॥ ೬ ॥

ಉದಯ ರಾಗದೊಳೆದ್ದು ಖಗ ಕುಲದ ಮಂಜುಳವ
ಸ್ವನದೊಡನೆ ಸ್ವರ ಬೆರಸಿ, ಹೊದಿಕೆ ಸರಿಸಿ
'ಏಳೇಳು ಬೆಳಕಾಯ್ತು!' ಎಂಬ ನುಡಿಗಳ ಮೋಡಿ
ಕೆಬ್ಬೆಳಗೆ ಹೊಂದಿತ್ತು; ಮುದ್ದು ಗೆಳತಿ! ॥ ೭ ॥

ರಂಭೆ ಊರ್ವಶಿ ಸೊಲ್ಲು ನಿನ್ನೆದುರು ಬರಿ ಹುಲ್ಲು!
ಕವನ—ಕನ್ನಡಿಯೊಳಗೆ ಮಿಥ್ಯ ನೆರಳು!
ಒಲಿವ ಲತೆ ಕುಡಿಯಲ್ಲಿ ಹೂವಾಗಿ ನಲಿವ ನಿನ—
ಗೆಂತವರು ಸಮ ಹೇಳು! ಮುದ್ದು ಗೆಳತಿ! ॥ ೮ ॥

ನೀ ಭಾವ ಕನ್ನಿಕೆಯು ಎನ್ನ ಭಾವದ ಗೆಳತಿ
ಪ್ರಕೃತಿ ಸೌಂದರ್ಯವೇ ನಿನ್ನತವರು!
ಕಡಲ ದಂಡೆಯ ಮಳಲ ನಿನ್ನ ಮೃದು ತೊಡೆಗಳು
ಹಂಸ ತಲ್ಪದ ಸೊಗವು! ಮುದ್ದು ಗೆಳತಿ! ॥ ೯ ॥

ನಿನ್ನ ಸರಸವ ಬಿಟ್ಟು ಭಾರ ಹೆಜ್ಜೆಯನಿಟ್ಟು
ನಾ ಸರಿಯೆ; ಮುಚ್ಚಿದ್ದ ಕದವ ತಟ್ಟಿ
ಗೆಜ್ಜೆ ಗೆಜ್ಜೆಯನಿಟ್ಟು, ನಗುವೊಳಣಕವ ನೆಟ್ಟು
ಮತ್ತೆ ನೀನೆದುರಿರುವೆ! ಮುದ್ದು ಗೆಳತಿ! ॥ ೧೦ ॥

In the tradition of the famous "CANARA" Springs
now another excellent product:

'CANARA' BRAKE DRUMS

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE-3.

ಶ್ರೀ ಮೂಡರಬೆಟ್ಟು ರಂಗ ರಾವ್

ಸಾಹಿತ್ಯ ಸಂಬಂಧಿಕಗಳು

ಲಿಪಿಬದ್ಧವಾದುದೆಲ್ಲಾ ಸಾಹಿತ್ಯ; ಲಿಪಿಬದ್ಧಗೊಳಿಸಬಲ್ಲವ ಸಾಹಿತ್ಯಿಕನೆನಿಸುವ ಕಾಲ ಬರಿತೇನೋ ಎನ್ನಿಸುತ್ತದೆ ಒಮ್ಮೊಮ್ಮೆ; ಆಗ ಹಾಗೆ ಅನ್ನಿಸುವುದೂ ಉಂಟು. ಹಳತಿನಿಂದ ಪೋಷಣೆಗೊಂಡು ಹೊಸತಿನಿಂದ ಶೋಭೆ ಪಡೆದು ನಮ್ಮ ಬರಹ ರೂಪುಗೊಳ್ಳಬೇಕು— ಅದೇ ಸಾಹಿತ್ಯ; ಅದನ್ನು ರೂಪಿಸುವವನೇ ಸಾಹಿತ್ಯಿಕ.

ಎರಡು ಬಗೆಗಳು

ಜನತೆಗೆ ಹಿತವನ್ನುಂಟು ಮಾಡುವ ಲೇಖನ ಸಮುದಾಯಕ್ಕೆಲ್ಲಾ "ಸಾಹಿತ್ಯ" ಎಂಬ ಸಾರ್ಥಕವಾದ ಹೆಸರು ಬಂದಿದೆ. "ಹಿತೇನ ಸಹಿತಂ ಸಾಹಿತ್ಯಂ" ಎಂದು ಅಲಂಕಾರಿಕರು ಹೇಳಿದ್ದಾರೆ. ಹೀಗೆ ದಿವ್ಯವಾದ ಉದ್ದೇಶದಿಂದ ಉತ್ತಮ ಸಂದೇಶಗಳನ್ನು ಜನ ಸಮುದಾಯಕ್ಕೆ ಒಪ್ಪಿಸುವ ಕೈಂಕರ್ಯವು ಸಾಹಿತ್ಯದ್ದು. ಇಂತಹ ಪೂಜ್ಯವಾದ ಸಾರಸ್ವತ ಸೇವೆಗೆ ಒಂದು ಬಗೆಯ ತಪಸ್ಸು ಬೇಕು; ತನ್ಮಯತೆ ಬೇಕು; ಕ್ರಿಯಾಶಕ್ತಿ ಬೇಕು; ಅಧ್ಯಯನ ಬೇಕು. ಲೋಕಾನುಭವ, ಆತ್ಮಾನುಭವಗಳೂ ಇರಬೇಕು.

ಇವೆಲ್ಲ ಯೋಗ್ಯತೆಯುಳ್ಳವರ ಕ್ರಿಯಾಶೀಲತೆಯಿಂದ ಉಂಟಾಗುವ ಗದ್ಯಪದ್ಯಾತ್ಮಕವಾದ ಒಟ್ಟು ಲೇಖನ ಸಮೂಹವು 'ಸಾಹಿತ್ಯ' ಎನಿಸುತ್ತದೆ. ಈ ಸಾಹಿತ್ಯದಲ್ಲಿ "ರಸಾತ್ಮಕ" ಎಂದೂ "ಬೋಧಾತ್ಮಕ" ಎಂದೂ ಭಾಗಗಳನ್ನು ನಾವು ಮಾಡಬಹುದು.

ಶ್ರುತಿ ಸ್ಮೃತಿ ಧರ್ಮ ಶಾಸ್ತ್ರಾದಿಗಳೂ, ಪ್ರಬಂಧ ನಿಬಂಧ ಚರಿತ್ರೆ ಉಪನ್ಯಾಸಾದಿಗಳೂ ಬೋಧಾತ್ಮಕವೆನಿಸುತ್ತವೆ. ಅವುಗಳಲ್ಲಿ ಕುತೂಹಲಕಾರಿಗಳಾದ ರಸ ರುಚಿಗಳು ಮುಖ್ಯವಲ್ಲ; ಆಯಾ ಬೋಧನೆಗಳು ವಾಚಕರ ಮನಸ್ಸಿಗೆ ಹತ್ತುವಂತೆ ಮಾಡುವ ಯುಕ್ತಿಯುಕ್ತವಾದ ಮಾತುಗಳೂ, ಪ್ರಮಾಣ ಪೂರ್ವಕವಾದ ಉದಾಹರಣೆಗಳನ್ನೀಯುವ ಚಾತುರ್ಯವೂ ಅವುಗಳಲ್ಲಿದ್ದರೆ ಸಾಕು. ಅದರೊಂದಿಗೆ ಆಯಾ ವಿಷಯಗಳಲ್ಲಿ ಒಳ್ಳೆಯ ಅನುಭವವೂ, ಅದನ್ನು ಬಿಡಿ ಬಿಡಿಯಾಗಿ ತಿಳಿಯಪಡಿಸುವ ಉತ್ತಮ ನಿರೂಪಣ ಶೈಲಿಯೂ ಕೈಗೂಡಿತೆಂದರೆ ಬೋಧಾತ್ಮಕ ಸಾಹಿತ್ಯದಲ್ಲಿಯೂ ರಸವು ತಾನೇ ತಾನಾಗಿ ಒಸರಬಲ್ಲದು. ಆದರೆ ಜನರನ್ನು ರಂಜಿಸಿ ಸಂತೋಷಗೊಳಿಸುವುದಕ್ಕಾಗಿ ಅವುಗಳ ನಿರ್ಮಾಣವಲ್ಲ. ಅವುಗಳು ಬೋಧನಾ ಶಕ್ತಿಯುಳ್ಳ ಗುರುಜನರಿಂದಲೇ ಬರೆಯಲ್ಪಡುತ್ತವೆ. ಆ ಬಗೆಯ ಗ್ರಂಥಗಳನ್ನೋದುವಾಗ, ಓದುಗರಿಗೆ ಆ ಗ್ರಂಥಕರ್ತನ ಮೇಲೆ ಗುರುಭಾವನೆಯು ಗೌರವವುಂಟಾಗುತ್ತದೆಯೇ ಹೊರತು, ಅವನ ಹೃದಯದೊಂದಿಗೆ ಇವನ ಹೃದಯದ ಸಾಮರಸ್ಯವುಂಟಾಗಲಾರದು. ಅಂತೆಯೇ ಬೋಧಾತ್ಮಕ ಗ್ರಂಥಗಳ ಮೇಲೆ ಸಾರ್ವಜನಿಕರ ಆದರಣೆ ಬಹಳ ಕಡಿಮೆ. ಮಹಾಭಾರತದ ಕಥೆಯೊಳಗೆ ಜನರು ತೋರಿಸುವಷ್ಟು ಆದರಣೆಯನ್ನು ಅದರೊಳಗಿನ ಬೋಧಾತ್ಮಕವಾದ ಭಗವದ್ಗೀತೆಗೆ ಜನರು ತೋರಿಸುವುದಿಲ್ಲವೆಂಬುದನ್ನು ಇಲ್ಲಿ ನೆನೆಯಬಹುದು.

ರಸಾತ್ಮಕ ಸಾಹಿತ್ಯ

ಹೌದು. ರಸಾತ್ಮಕ ಸಾಹಿತ್ಯವನ್ನು ರಾಮಾಯಣ ಭಾರತಾದಿ ಪುರಾಣ ಕಥೆಗಳಿಂದಲೇ ನಾವು ಪ್ರಾರಂಭಿಸಬೇಕಾಗಿದೆ. ಆ ಬಗೆಯ ಪುರಾಣ ಕಥೆಗಳೂ, ಕಾದಂಬರಿಗಳೂ, ಕಾವ್ಯಗಳೂ, ನಾಟಕಗಳೂ, ಚರಿತ್ರೆ–ಜೀವನ ಚರಿತ್ರೆಗಳೂ ಮೊದಲಾದುವೆಲ್ಲಾ ರಸಾತ್ಮಕ ಸಾಹಿತ್ಯಕ್ಕೆ ಸೇರುತ್ತವೆ. ಆದರೆ ಬೋಧಾತ್ಮಕ ಲೇಖಕರು ಗುರುಸ್ಥಾನದಲ್ಲಿದ್ದು "ಹೀಗೆ ಮಾಡು, ಹಾಗೆ ಮಾಡು" ಎಂದು ಶಾಸನ ಮಾಡಿದರೆ, ರಸಾತ್ಮಕ ಲೇಖಕನು ಅದೇ ನೀತಿಗಳ ಕಥಾ ಪಾತ್ರಗಳನ್ನಾಡಿಸಿ ಅದೇ ನೀತಿ ಬೋಧೆಗಳನ್ನೇ ಹುಟ್ಟಿಸುತ್ತಾನೆ. ಇದೇ ರಸಾತ್ಮಕ ಸಾಹಿತಿಯ ವೈಶಿಷ್ಟ್ಯ. ಇದರಲ್ಲಿ ಬೋಧನೆಗಳೆಲ್ಲ ಹಿನ್ನೆಲೆಯಲ್ಲಿ ಅಡಗಿರುತ್ತವೆ. ಅವು ತನ್ನಂತಾನೇ ಓದುಗರ ಹೃದಯದೊಳಗೆ ಮೂಡಿಕೊಳ್ಳುತ್ತವೆ. ಮುನ್ನೆಲೆಯಲ್ಲಿರುವುವೆಲ್ಲವೂ ರಸ ಬುಗ್ಗೆಗಳೇ, ಕಾಲ್ಪನಿಕ ಕಥಾ ವೀಥಿಗಳೇ. ಓದುಗನು ಆಯಾ ಪಾತ್ರದ ಗುಣದೋಷಗಳನ್ನು ಸ್ವಾದಿಷ್ಟವಾಗಿ ಅನುಭವಿಸಿಕೊಳ್ಳುತ್ತ, ತನಗಿಷ್ಟವಾದ ಪಾತ್ರಗಳೊಂದಿಗೆ ಸಮರಸನಾಗುತ್ತ, ರೋಷದಿಂದ ಹಲ್ಲು ಕಚ್ಚುತ್ತ, ಕಣ್ಣೀರಿಳಿಸುತ್ತ, ನಗುತ್ತ, ಪಶ್ಚಾತ್ತಾಪ ಪಡುತ್ತ ಮೊತ್ತದಲ್ಲಿ ಅಡಿಗಡಿಗೂ ಆನಂದಿತನಾಗುತ್ತ ಓದುತ್ತಾನೆ. ಬೋಧಪ್ರದ ಗ್ರಂಥಗಳನ್ನು ಏನೋ ಒಂದು ನಿರ್ಬಂಧದಿಂದ ಓದಲೆಳಸಿದರೂ ರಸಾತ್ಮಕಗಳಷ್ಟು ಹೆಚ್ಚು ಓದಲಿಕ್ಕಾಗುವುದಿಲ್ಲ. ತಲೆ ನೋವು ಬಂದರೂ ಆಶ್ಚರ್ಯವಿಲ್ಲ.

ಓದುತ್ತಿದ್ದಂತೆ ಮನಸ್ಸಿಗೆ ರಂಜನೆಯೂ ಗುತ್ತಾ ಹೋಗುವುದರಿಂದಲೇ ಸಾಮಾನ್ಯವಾಗಿ ಪ್ರಪಂಚವು ಇಂತಹ ರಸಾತ್ಮಕ ಸಾಹಿತ್ಯವನ್ನೆ ಬಯಸಿಕೊಂಡಿದೆ. ಅಂತೆಯೇ ಅವುಗಳ ರಚನೆಗಳೂ ಬಹಳವಾಗಿ ಆಗುತ್ತಿವೆ.

ಆದರೆ ಈ ರಸಾತ್ಮಕ ರಚನೆಗಳು ಸುಲಭವೆ? ಎಲ್ಲರಿಗೂ ಸಾಧ್ಯವೆ? ಪ್ರಯತ್ನಿಸಿ ಕಲಿಯಬಹುದೆ?

ಕವಿತಾವಾಸನೆ

ಸಾಧ್ಯವಿಲ್ಲ. ಅದಕ್ಕೆ ಮೂಲದಲ್ಲಿ ಪೂರ್ವ ಜನ್ಮ ಸಂಬಂಧವಾದ "ಕವಿತಾವಾಸನೆ" ಇರಬೇಕು. ಒಂದೇ ಜನ್ಮದಲ್ಲಿ [illegible]ತು ಪಂಡಿತನಾಗಬಹುದು; ಬೋಧಕನಾಗಬಹುದು. ಅಭ್ಯಾಸದಿಂದ ಗ್ರಂಥ ರಚನೆಯ ಶಕ್ತಿಯನ್ನೂ ಪಡೆಯಬಹುದು. ಆದರೆ ಕವಿಯಾಗಲು ಸಾಧ್ಯವಿಲ್ಲ.

ಕವಿಯಾಗಬೇಕಾದರೆ ಪ್ರಾಚೀನ ಮಹಾ ಕವಿಗಳ ಮೇಲೆ ಭಕ್ತಿಯುಂಟಾಗಬೇಕು; ಸಮಕಾಲೀನ ಕವಿಗಳ ಮೇಲೆ ಪ್ರೇಮವೂ ಸಹಾನುಭೂತಿಯೂ ಬರಬೇಕು; ತಾನೂ ಕವಿಯಾಗಬೇಕೆಂಬ ಮಹತ್ವಾಕಾಂಕ್ಷೆಯೂ ಇರಬೇಕು. ಇಷ್ಟಿದ್ದವನು ಅನುಕರಣಶೀಲನಾಗಿ, ಬಲವಂತದ ಕವಿಯೆನಿಸಿಯಾನೇ ಹೊರತು, ಸ್ವತಂತ್ರ ಪ್ರತಿಭಾನ್ವಿತ ಕವಿಯಾಗಲಾರ. ಇವೆಲ್ಲ ಇದ್ದರೂ ಮೂಲದಲ್ಲಿ ಹೇಳಿದಂತೆ "ಕವಿತಾವಾಸನೆ" ಇದ್ದರೇನೇ, ಅವನು [illegible] ಸ್ವತಂತ್ರ ಪ್ರತಿಭಾನ್ವಿತ ಕವಿಯಾಗುತ್ತಾನೆ. [illegible] ಅಥವಾ [illegible] ವೇಳೆಯೇ; ಅವನು ಸಫಲನಾದ ಉತ್ತಮ ಕವಿಯಾಗಬಲ್ಲನು.

ಇಂತಹ ಕವಿತಾವಾಸನೆಗೆ ಕಾರಣವಾದ ಅಭ್ಯಾಸವು ತ್ರಿಕಾಲಗಳಲ್ಲಿಯೂ ನಡೆಯುತ್ತ ಇರುವ ಒಂದು ಪ್ರಕೃತಿಧರ್ಮವೇ ಆಗಿದೆ. ಪ್ರಕೃತಿಯೊಂದಿಗೆ ಬೆರೆತುಕೊಂಡಿರುವ ಮಾನವನು ತನ್ನ [illegible] ಅನುಭೂತಿಗಳನ್ನು ಇನ್ನೊಬ್ಬರೊಡನೆ ಹೇಳ[illegible] ತನ್ನದನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಾನೆ. ಒಬ್ಬರು ಇನ್ನೊಬ್ಬರೊಡನೆ [illegible] ಇಂತಹ ಬಗೆ[illegible]. ಇದೂ ಒಂದು ಬಗೆಯ ಕವಿತ್ವವೇ ಹೌದು.

ತನ್ನ ಸಂತಸವನ್ನು ಸುಂದರವಾದ ಕಲ್ಪನೆಯ ಸಿರಿಯಿಂದ ಕಲೆಯಾಗಿ ಚಿತ್ರಿಸಿ ಇತರರಿಗೆ ತೋರಿಸಿ ಅವರನ್ನು ಸಂತೋಷಗೊಳಿಸಲೆತ್ನಿಸುವ ಒಂದು ವಿಶಿಷ್ಟ ಬಗೆಯ ಜನತಾ ಜನಾರ್ದನನ ಸೇವೆಯೇ ಕೃತಿರಚನೆ. ಈ ಸೇವಾಭಾವನೆಯು [illegible] ಎಲ್ಲಾ ಮಾನವರಲ್ಲಿಯೂ [illegible]ತ್ತದೆ. ಚಿಕ್ಕ ಮಕ್ಕಳನ್ನು ನೋಡಿರಿ. ದೊಡ್ಡವರು ಮಾಡುವುದನ್ನು ನೋಡಿ ಅದರಂತೆ ತಾವೂ ಮಾಡಲೆಳಸುತ್ತಾರೆ; [illegible] ಚಿಕ್ಕ ಹಕ್ಕಿ, ಹೂವು, ಗಿಡ, ಮರಗಳನ್ನು ನೋಡಿ ಏನೇನೋ ಕಲ್ಪಿಸಿಕೊಂಡು ಸಂತೋಷಿಸುತ್ತಾರೆ ಮಕ್ಕಳು. ಅದು ಹಾಗೇಕಿರಬಾರದು? ಹೀಗೇಕಿದೆ? ಎಂದು ತಮ್ಮೊಳಗೇ ಕೇಳಿಕೊಳ್ಳುತ್ತಾರೆ. ಮಕ್ಕಳ ಬಾಯಿಯಿಂದ ಹೊರಡುವ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲು ದೊಡ್ಡವರಿಗೆ ಕೂಡಾ ಆಗುವುದಿಲ್ಲ. ಮಕ್ಕಳ ಜೀವನವೇ ಮೂಲ ಕಾವ್ಯವೆನ್ನಬಹುದು.

ಆದರೆ ಮಕ್ಕಳಲ್ಲಿಯೂ ಸಾಮಾನ್ಯ ಜನತೆಯಲ್ಲಿಯೂ ಅಡಗಿರುವ ಕವಿತ್ವಶಕ್ತಿ ತೀರ ಅಲ್ಪ ಪ್ರಮಾಣದ್ದು, ಇನ್ನೊಂದು ಜನ್ಮದಲ್ಲಿ [illegible]ಕಂಥಾದ್ದು. ಕೇಳಿ ಮರೆಯುವಂಥಾದ್ದು; ನೀರಸವಾದದ್ದು. ಆದರೆ ಕವಿತಾವಾಸನೆ

(ಇಪ್ಪತ್ತೊಂದನೇ ಪುಟ ನೋಡಿರಿ)

WITH THE
BEST COMPLIMENTS
OF THE SEASON

From

JYOTHI TALKIES

MANGALORE

... Printed & Published by K. H. Shetty at the Navayuga Press, Udipi. S. India.

ಶ್ರೀ ಶಿವಶಂಕರ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ

ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಯನ್ನು ಆರಿಸಿ ಕಳಿಸುವುದಷ್ಟೇ ಪ್ರಜೆಗಳ ಕರ್ತವ್ಯವಲ್ಲ. ವಿಶುದ್ಧ ರಾಷ್ಟ್ರೀಯ ವಾದಿಗಳಾಗಿ ತಮ್ಮ ಪ್ರತಿನಿಧಿ ಸರಕಾರದ ಪಾದಗಳು ಸರಿದಾರಿಯಲ್ಲೇ ರಾಷ್ಟ್ರೋಚಿತ ಪ್ರಜಾ ಸಮ್ಮತ ರೀತಿಯಲ್ಲೇ ನಡೆಯುವಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ. ಈ ಕರ್ತವ್ಯವನ್ನು ಪ್ರಜೆಗಳು ಪೂರೈಸಿದರೆ, ಪ್ರಜಾಸತ್ತೆ ನಿಜವಾಗಿ ಪ್ರಜಾಪ್ರಭುತ್ವವಾಗುವುದು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವೇನೆಂದು ಯಾರಾದರೂ ನಮ್ಮ ಬಳಿ ಕೇಳಿದಲ್ಲಿ, ಕೇಳಿದವರಿಗೆ ಏನಾಗಿದೆಂದು ನಾವು ಅವರ ಮುಖವನ್ನೇ ಪಿಳಿಪಿಳಿ ನೋಡುತ್ತೇವಲ್ಲವೇ? ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವಲ್ಲದೆ ಇನ್ನಾರ ಪಾತ್ರವಿರಲು ಸಾಧ್ಯವೆಂಬ ಆಲೋಚನೆಯಿಂದ ನಾವಿರುವದೇ ಅದಕ್ಕೆ ಕಾರಣ. ವಿವಾಹದಲ್ಲಿ ವರನ ಅಥವಾ ವಧುವಿನ ಪಾತ್ರವೇನೆಂದು ಕೇಳಿದರೆ ಹೇಗಾದೀತು? ವಧು ಹಾಗೂ ವರವಿಲ್ಲದಿದ್ದಲ್ಲಿ ಮದುವೆ ನಡೆಯಲು ಸಾಧ್ಯವೇನು? ಹಾಗೆನೇ ಪ್ರಜೆಗಳ ಪಾತ್ರವಿಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ಇರಲು ಸಾಧ್ಯವೇನು? ಹೋಲಿಕೆಯ ದೃಷ್ಟಿಯಲ್ಲಿ ಹೀಗಿರಲು ಸಾಧ್ಯವಾದರೂ ನಾವು ನೈಜಲೋಕಕ್ಕೆ ಬರೋಣ.

ಅಭ್ಯರ್ಥಿಗಳಿಗೆ ಮತದಾನ ಮಾಡಿದೊಡನೆ ಪ್ರಜೆಗಳ ಪಾತ್ರ ಮುಗಿಯಿತೇನು? ಅಧಿಕ ಮತ ಗಿಟ್ಟಿಸಿಕೊಂಡವ ಪ್ರತಿನಿಧಿಯಾಗಿ ಹೋಗುತ್ತಾನೆ. ಅನಂತರ ಅವನಾರಂಭಿಸುತ್ತಾನೆ ತನ್ನ ಕಾರ್ಯಕ್ಕೆ. ಹೀಗೆ ಹಲವಾರು ರಂಗಗಳಿಂದ ಹಲವಾರು ಬಣ್ಣಗಳ ಪ್ರತಿನಿಧಿಗಳು ಬರುತ್ತಾರೆ. ಹೀಗೆ ಬಂದವರಿಗೆ ಮುಂದೆ ನಿಶ್ಚಿತ ಅವಧಿಯವರೆಗೆ ಅದೇನೂ ಭಯವಿಲ್ಲವೆಂಬ ಧೈರ್ಯವಿರುತ್ತದೆ. ಆದರಲ್ಲೂ ಅವರು ಆಳುವ ಪಕ್ಷಕ್ಕೆ ಸೇರಿದವರಾದರೆ ಮುಗಿಯಿತು. ಎದುರು ಪಕ್ಷದವರು ಕೂಡಾ ಅಷ್ಟೆ. ಅವರಿಗೆ ಕಣ್ಣಿರುವದು ಪ್ರಜೆಗಳ ಮತದ ಮೇಲೆ; ಪ್ರಜೆಗಳ ಹಿತ ಮುಂತಾದುವೆಲ್ಲಾ ಅನಂತರದ ವಿಷಯಗಳು. ಅಲಿಘಡ ಮುಸ್ಲಿಂ ಯುನಿವರ್ಸಿಟಿಯಲ್ಲಿ ನಡೆದ ಕೋಲಾಹಲದ ಸಮಯ ಇದನ್ನಲ್ಲವೇ ನಾವು ಕಂಡದ್ದು? ಅವರ ಅಕ್ಕ-ಪಕ್ಕ, ಸುತ್ತಮುತ್ತಲಿರುವವರಲ್ಲಿ ಮಹಮ್ಮದೀಯರ ಸಂಖ್ಯೆಯೇ ಜಾಸ್ತಿ. ವಿಶ್ವವಿದ್ಯಾಲಯದೊಳಗೆ ಜಗಳವೆದ್ದದ್ದೂ ಅವರ ನಡುವೆ, ಅದೂ ಮುಸ್ಲಿಮೇತರರನ್ನು ಹೇಗೆ ಕಾಣಬೇಕೆಂಬ ವಿಷಯದ ಮೇಲೆ, ಮುಸ್ಲಿಮೇತರರ ಮೇಲೆ ಹಲ್ಲೆ ನಡೆಸಿದವರೂ ಅವರೇ. ಹಾಗಿದ್ದರೂ ಅಲ್ಲಿಂದ ಆರಿಸಲ್ಪಟ್ಟರುವ ಪ್ರತಿನಿಧಿ ಹೇಳಿದ್ದೇನು? ಈ ಪ್ರತಿನಿಧಿಯಂತೂ ಆಳುವ ಪಕ್ಷಕ್ಕೆ ಸೇರಿದವರಲ್ಲ, ಎದುರು ಪಕ್ಷದವರಿದ್ದಾರೆ. ಅವರು ಮುಸ್ಲಿಮೇತರರ ಮೇಲೆ ಅಥವಾ ಸ್ಪಷ್ಟವಾಗಿ ಹೇಳುವದಿದ್ದಲ್ಲಿ ಹಿಂದೂಗಳೇ ಗಲಾಟೆಗೆ ಕಾರಣವೆಂದು ಹೇಳಿ ಅವರ ಮೇಲೆಯೇ ಹೊರೆಯನ್ನು ಹಾಕಿದರು ಇದಕ್ಕೆ ಕಾರಣವೇನು? ಅವರಿಗೆ ಬೇಕಾಗಿರುವದು ನ್ಯಾಯ-ಅನ್ಯಾಯದ ಪ್ರಶ್ನೆಯಲ್ಲ, ಅವರಿಗೆ ಅಗತ್ಯವಿರುವದು ಅಲ್ಲಿಯ ಜನರ ಮತ. ಎದುರು ಪಕ್ಷಗಳವರಿಗೆ ಮಾತ್ರ ಈ ದುರ್ಭಾಗ್ಯ ತಗಲಿರುವದಲ್ಲ. ಅಧಿಕಾರ ರೂಢ ಪಕ್ಷದವರು ಇದಕ್ಕೆ ಹೊರತಾದವರಲ್ಲ.

ಧಾರ್ಮಿಕ ವಿಶ್ವವಿಜೇತ ಸ್ವಾಮೀ ವಿವೇಕಾನಂದರಿಗೆ ಅದಕ್ಕೆ ಪ್ರಚೋದನೆಯನ್ನೀಡಿ, ವಾತ್ಸಲ್ಯಮಯೀ ಪವಿತ್ರ ಮಾತೃಭೂಮಿಯ [illegible] ಮಾಡಿಸಿದ ನಿಸ್ವಾರ್ಥಿ ಹಾಗೂ ಅಚಲ ಬಂಡೆಗಲ್ಲು ಭಾರತದ ದಕ್ಷಿಣದ ತುದಿಯಲ್ಲಿದೆ. ನಿಶಾದೇವಿ ಮರೆಯಾಗಿ ಉಷಾದೇವಿ ಉದಯಿಸುವ ಮುಂಚೆಯೇ ಆ ವಿಶಾಲ ಪಾಷಾಣ ಹೃದಯದ ಮೇಲೆಯೇ ಶಿಲುಬೆಯೊಂದು ಕಂಡು ಬರಲಿಲ್ಲವೇ? ಅಷ್ಟೇ ಅಲ್ಲ, ಸೂಜಿ ಮೊನೆಯೂರುವಷ್ಟೂ ಸ್ಥಳ ಬಿಟ್ಟುಕೊಡೆನೆಂದು ಕೌರವರು ಕೂಗಾಡಿದ ಧಾಟಿಯಲ್ಲಿ, ಶಿಲುಬೆಯ ಹಿಂಬಾಲಕರು ವಿವೇಕ ಶೂನ್ಯರಾಗಿ ಸ್ವಾಮಿ ವಿವೇಕಾನಂದರ ಸ್ಮಾರಕಾರ್ಥವಾಗಿ ಅಲ್ಲೇನೂ ರಚಿಸಲು ಸ್ಥಳ ಬಿಟ್ಟು ಕೊಡಲಾರೆವೆಂದು ಕಾಲು ಕೆದರಿ ಜಗಳ ಕರೆದರು. ಕೇಂದ್ರದ ಮಂತ್ರಿ ಹುಮಾಯೂನ ಕಬೀರರಂತಹವರೂ ಅವರಿಗೇನೇ 'ಶಹಭಾನ್' ಎಂದು ಬಿಟ್ಟರು. ಕ್ರಿಶ್ಚಿಯನರ ಸಂಸ್ಥೆಗಳು, ಮುಸ್ಲಿಂಲೀಗು, ಕಮ್ಯೂನಿಸ್ಟ ಪಕ್ಷಗಳು ಅಲ್ಲದೆ ಅನೇಕ ಕಾಂಗ್ರೆಸಿಗರೂ ವಿವೇಕಾನಂದ ಬಂಗಾಲದಲ್ಲಿಯೇ ಇರಲಿ ಎಂದು ಬಿಟ್ಟರು ಯಾಕೆ?—ಈ ಕ್ರಿಸ್ತೀಯರ ಮತಗಳಿಗಾಗಿ ಓಡಾಟವೇ ನಡೆದು ಹೋಯ್ತು. ಸರಕಾರವೇ ತೆಪ್ಪಗಾಯ್ತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಾಗೂ ಪ್ರಜಾಪ್ರತಿನಿಧಿಗಳ ಪಾತ್ರ ಇದೇ ಏನು?

ಕಳೆದ ವರ್ಷ ಇದೇ ಸಮಯ ತಮಿಳುನಾಡಿನಲ್ಲಿ ನಡೆದುದೇನು? ಅಬ್ಬಾ! ನಡೆದ ಪ್ರಾಣಹಾನಿಯೇ, ನಷ್ಟ-ಕಷ್ಟ, ಎಲ್ಲದಕ್ಕಿಂತಲೂ ರಾಷ್ಟ್ರೀಯ ಅಭಿಮಾನದ ಬುಡಕ್ಕೇನೇ ಇಟ್ಟ ಸುರಂಗ! ದ್ರಾವಿಡ ಮುನ್ನೇಟ್ರ ಕಳಗಂ, ಮುಸ್ಲಿಂಲೀಗು ಮತ್ತು ಸ್ವತಂತ್ರ ಪಾರ್ಟಿಯವರೊಂದಿಗೆ ಕಮ್ಯೂನಿಸ್ಟರು ಹಾಗೂ ಕೆಲ ಕಾಂಗ್ರೆಸಿಗರು ಸೇರಿಕೊಂಡು ನಡೆಸಿದ ಅಟ್ಟಹಾಸವನ್ನು ಕಂಡೂ ಕಾಂಗ್ರೆಸ್ ಸರಕಾರ ಮಂದಹಾಸ ಬೀರಿತ್ತು. ಕಾರಣ?—ಮತದ ಮೇಲಿನ ಮೋಹ.

ನಾಗಾಲೇಂಡಿನಲ್ಲಿ ನಡೆಯುತ್ತಿರುವ ನಗೆಗೇಡಿನ ನಾಟಕವಾದರೂ ಯಾವ ರೀತಿಯದ್ದು? ಬ್ರಿಟನಿನಿಂದ ಪಾದ್ರಿಯೊಬ್ಬ ಬಂದು ಬೀಡು ಬಿಡಬೇಕಾಗಿದೆ ಸಂಧಾನದ ಹೆಸರಿನಲ್ಲಿ, ಅವನಿಗೆ ಜಯಪ್ರಕಾಶ ನಾರಾಯಣರಂತಹವರಿಂದ ಜಯಜಯಕಾರವಾಗುತ್ತಿದೆ. ಹಾಗಾದರೆ ಎಲ್ಲಾ ನಾಗಾಗಳು ಸೇರಿ ಪ್ರತ್ಯೇಕ ನಾಗಾಲೇಂಡ್ ಕೇಳುತ್ತಿದ್ದಾರೆಯೇ? ಕಾಂಗ್ರೆಸ್ ಪಕ್ಷ ಹಾಗೂ ಸ್ವತಂತ್ರ ಪಾರ್ಟಿ ಅವರಿಗೇತಕ್ಕೆ ಅಷ್ಟು ಸಲುಗೆ ತೋರಿಸುತ್ತಿವೆ? ಚುನಾವಣೆಯ ಮೇಲೆಯೇ ಚಕ್ಷುಗಳಿರುವವರು ಇನ್ನೇನು ತಾನೇ ಮಾಡಿಯಾರು?

ಪಂಜಾಬಿ ಸುಬಾದ ಪಡಪಡವೂ ಅಷ್ಟೇ. ಪಂಜಾಬ್ ಪ್ರಾಂತ್ಯ ಈಗಲೂ ಇಲ್ಲವೇ? ಪಾಕಿಸ್ತಾನದಲ್ಲಿರುವ ಪಂಜಾಬ್ ಪ್ರದೇಶವೂ ಈ ಪಂಜಾಬಿನೊಂದಿಗೆ ಸೇರಬೇಕೆಂದು ಯಾರಾದರೂ ಚಳುವಳಿ ನಡೆಸಿದಲ್ಲಿ ಅದಕ್ಕೆ ಅರ್ಥವಿದೆ ಎನ್ನಬಹುದು. ಇನ್ನಷ್ಟು ಚಿಕ್ಕದಾಗುತ್ತೇವೆನ್ನುವ ಕುಬ್ಜರ ಪರ ವಾದಿಸುವ ನ್ಯಾಯವಾದಿಗಳು ನಮ್ಮಲ್ಲಿದ್ದಾರೆ. ಇಲ್ಲಿ ಹಾಗೆಯೇ ಸ್ವತಂತ್ರ ಹಾಗೂ ಕಮ್ಯೂನಿಸ್ಟ್ ಪಾರ್ಟಿಗಳು ಪ್ರತ್ಯೇಕ ಪಂಜಾಬಿ ಸುಬಾ ಆಗಬೇಕನ್ನುತ್ತಿವೆ. ಕಾಂಗ್ರೆಸ್ಸಿನ ಅವಸ್ಥೆ ಹೇಳತೀರದು. ಏನು ಮಾಡಬೇಕೆಂಬುದೇ ಅವರಿಗೆ ಗೊತ್ತಿಲ್ಲ. ಭಾರತೀಯ ಜನಸಂಘವೇನೋ ಬಹಳ ಧೈರ್ಯದಿಂದ ಪ್ರತ್ಯೇಕತಾ ಪಿಶಾಚಿಯ ತಲೆಗೆ ಪ್ರಹಾರ ಕೊಡುತ್ತಿದೆ.

ಹೀಗೆ ಭಾಷೆ, ಪ್ರಾಂತ್ಯ, ಮತ, ಪ್ರತ್ಯೇಕತೆ ಮುಂತಾದ ಹಲವಾರು ರಂಗಗಳಲ್ಲಿಯೂ ಪ್ರಜೆಗಳ ಪಾತ್ರವೇನೆಂದು ನೋಡಬಹುದು. ಹಳೆಯ ತುಷ್ಟೀಕರಣ ನೀತಿಯನ್ನು ನಾವಿನ್ನು ತೊರೆದಿರುವದಿಲ್ಲ. ಅಲಿಘಡದಲ್ಲಿ ಮುಸ್ಲಿಮರ, ಕನ್ಯಾಕುಮಾರಿಯಲ್ಲಿ ಹಾಗೂ ನಾಗಾಲೇಂಡಿನಲ್ಲಿ ಕ್ರಿಸ್ತೀಯರ, ಪಂಜಾಬಿನಲ್ಲಿ ಅಕಾಲಿಗಳ ಮತ್ತು ತಮಿಳು ನಾಡಿನಲ್ಲಿ ಹಿಂದೀ-ವಿರೋಧಿಗಳ ಅಥವಾ ಆಂಗ್ಲ ಭಾಷಾರಾಧಕರ ಸಂಖ್ಯೆ ಅಗಣ್ಯವಿರುವದಿಲ್ಲ. ಹಲವೆಡೆಗಳಲ್ಲಿ ಅಧಿಕಾಂಶ ಅವರ ಸಂಖ್ಯೆ ಇರಲಿಕ್ಕಿಲ್ಲ. ಅವರೂ ನಿರ್ಲಕ್ಷ್ಯಿಸಲ್ಪಡುವಂತಹದ್ದಲ್ಲ. ಹಾಗಿರುವಾಗ ಚುನಾವಣೆಯ ಮೇಲೆಯೇ ಗೃಧ್ರ ದೃಷ್ಟಿ ಇಟ್ಟುಕೊಂಡಿರುವ ರಾಜಕೀಯ ಪಕ್ಷಗಳು ಇಂತಹ ಸಂದರ್ಭಗಳನ್ನು ಸುಮ್ಮಗೆ ಬಿಟ್ಟಾವೆ? ಅವರಲ್ಲೂ ಅಲಿಘಡ ವಿಶ್ವ ವಿದ್ಯಾಲಯದ ಆಸುಪಾಸಿನಲ್ಲಿರುವವರು ಮಹಮ್ಮದೀಯರೆಂದರೆ ಕೇಳಬೇಕೇ? ಅಲ್ಲಿ ನಡೆದದ್ದು ವಿಶ್ವವಿದ್ಯಾಲಯದ ಅಧಿಕಾರಿಗಳ ನಡುವೆ ಘರ್ಷಣೆ. ಮೊಸರು ಕದ್ದು ತಿಂದು ಕೈಯನ್ನು ಮೇಕೆಯ ಮುಖಕ್ಕೆ ಸರಿ ಸವರಿ ಬಿಟ್ಟಂತೆ ಗಲಾಟೆ ಕೋರರು ಪಾಪದ ಹಿಂದೂಗಳತ್ತ ಕೈ ತೋರಿಸಿಬಿಟ್ಟರು; ಮತೀಯ ಜ್ವಾಲೆ ಫಲಿಸಿತು. ನೈಜ ಪರಿಸ್ಥಿತಿಯತ್ತ ಅನ್ಯ ರಾಜಕೀಯ ಪಕ್ಷಗಳು ಅಷ್ಟು ಗಮನ ಕೊಡಲೇ ಇಲ್ಲ. ಇಂತಹದ್ದೇ ಪರಿಸ್ಥಿತಿ ಕನ್ಯಾಕುಮಾರಿಯಲ್ಲಿ ಕೂಡಾ. ನ್ಯಾಯ-ಅನ್ಯಾಯ, ಮಾನಾಪಮಾನದ ಪರಿವೆಯೂ ಅವುಗಳಿಗಿಲ್ಲ. ಅವುಗಳಿಗೆ ಬೇಕಾಗಿರುವದು ಕೇವಲ ಮತ,ಮತ, ಮತ. ಹೇಗಾದರೂ ತಮ್ಮ ಅಭ್ಯರ್ಥಿಗಳು ಆರಿಸಲ್ಪಡಬೇಕು; ದಿಲ್ಲಿ ಗದ್ದುಗೆಯನ್ನು ಹಿಡಿಯಬೇಕು ಅದಕ್ಕಾಗಿ ಅದೆಷ್ಟು ಕೆಳಮಟ್ಟಕ್ಕೆ ಬರಲೂ ಸದಾ ಸಿದ್ಧ! ಈ ರೀತಿ ರಾಜಕೀಯ [illegible]ದಿಯಲ್ಲಿ ರಾರಾಜಿಸುತ್ತಿರುವ ರಾಜಕೀಯ ಪುಢಾರಿಗಳಿಗೆ ಮತದಾನ ಮಾಡಿ ಕೈಕಟ್ಟಿ ಕುಳಿತು ಕೊಳ್ಳುವದೇ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರವೇನು? ಅಲ್ಲ, ಬೇರಿನ್ನೇನು ಮಾಡಲು ಸಾಧ್ಯ? ಒಂದು ಸಲ ಮತದಾನ ಮಾಡಿದೆವೆಂದರೆ ಮುಗಿಯಿತು ಕಥೆ, ಮತ್ತೆ ನಿಶ್ಚಿತ ಅವಧಿ ಮುಗಿಯುವ ತನಕ ಏನೂ ಮಾಡಲೂ ಸಾಧ್ಯ ಇರುವದಿಲ್ಲ. ಎಲ್ಲವನ್ನೂ ಸಹಿಸಿ ನುಂಗಿ ನೀರು ಕುಡಿಯುತ್ತಿರಬೇಕು

ಇದು ನಾಣ್ಯದ ಒಂದು ಮುಖವಿದೆ. ಅದಕ್ಕೆ ಇನ್ನೊಂದು ಮುಖವೂ ಇದೆ. ಇಲ್ಲಿ ಪ್ರಜಾಪ್ರತಿನಿಧಿಗಳತ್ತವೇ ಎಲ್ಲಾದಕ್ಕೂ ಪ್ರಜೆಗಳು ನೋಡುತ್ತ ಕಾಯುತ್ತಿರುವದಿಲ್ಲ. ಅವರು ಅದೆಂತಹ ಅಗ್ನಿಪರೀಕ್ಷೆಗೂ ಅಂಜುವದಿಲ್ಲ; ಅದಿನಿತರ ಅಳು

(ಇಪ್ಪತ್ತನೇ ಪುಟ ನೋಡಿರಿ)

ಕೆ. ವೆಂಕಟ್ರಾಯಾಚಾರ್ಯ

ಪರ್ಯಾಯ ಮಹೋತ್ಸವ

(ಕೆಲವು ವಿಚಾರಗಳು)

ಉಡುಪಿಯ ಪರ್ಯಾಯೋತ್ಸವ ಆಕರ್ಷಣೀಯವಾದುದು. ಯಾತ್ರಾರ್ಥಿಗಳ ನಯನಾರಾಮವಾದುದು. ಈ ಹೆಸರಾಂತ ಉತ್ಸವದ ಬಗ್ಗೆ ಕೆಲವು ವಿಚಾರಗಳನ್ನು ನೀವು ಅವಶ್ಯ ತಿಳಿದುಕೊಳ್ಳಬೇಕು.

ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಪೂಜೆಯ ಬಗ್ಗೆ ಅಷ್ಟಮಠಗಳ ಸ್ವಾಮಿಗಳ ಪರ್ಯಾಯ ಮಹೋತ್ಸವವು 2 ವರ್ಷಗಳಿಗೊಮ್ಮೆ ನೆರವೇರುತ್ತದೆ. ಈ ಬಗೆಗೆ ಇಲ್ಲಿ ಕೆಲವು ವಿಚಾರಗಳು ಸಂಕಲಿತವಾಗಿವೆ.

ಸ್ಥಳ—ನಾಮ—ವಿಚಾರ— ದಕ್ಷಿಣಾಪಥದಲ್ಲಿ 'ರಜತ ಪೀಠಪುರ'ವೆಂದು ಪ್ರಸಿದ್ಧವಾಗಿ ಈ ಉಡುಪಿ ಕ್ಷೇತ್ರವು ರಾರಾಜಿಸುತ್ತಿದೆ. ಮಂಗಳೂರಿಂದ ಉತ್ತರಕ್ಕೆ 37 ಮೈಲು ದೂರದಲ್ಲಿಯ ಪ್ರಾಕೃತಿಕ ಸೌಂದರ್ಯಾನ್ವಿತವಾದ ಈ ಪುಣ್ಯ ಕ್ಷೇತ್ರವು ಭಾರತೀಯರಿಗೆ ಮಾತ್ರವಲ್ಲ ವಿದೇಶೀಯರಿಗೂ ವಿದಿತವಾದುದೇ ಆಗಿದೆ: ಪಶ್ಚಿಮಕ್ಕೆ ಸಮುದ್ರ ತೀರದಲ್ಲಿ 'ಮಲ್ಪೆ' ಎಂಬಲ್ಲಿ ನೌಕಾ ನಿಲ್ದಾಣ (ಬಂದರು); ಈಶಾನ್ಯದಲ್ಲಿ 'ಮಣಿಪಾಲ'ವೆಂಬಲ್ಲಿ ಅನೇಕ ವಿದ್ಯಾಲಯಗಳು (ವೈದ್ಯಕೀಯ ಕಲಾ ಶಾಲಾದಿಗಳು); ದಕ್ಷಿಣಕ್ಕೆ 'ಉದಯಪುರ (ಉದ್ಯಾವರ)' ಹಾಗೂ ಉತ್ತರಕ್ಕೆ 'ಬಾರಕೂರ್' ಎಂಬ ಚಾರಿತ್ರಿಕ ಪ್ರಸಿದ್ಧಗಳಾದ ರಾಜಧಾನೀ ಸ್ಥಳಗಳೂ ಈ ಕ್ಷೇತ್ರಕ್ಕೆ ಅನನ್ಯಾಪಹವಾದ ಶೋಭೆಯನ್ನೂ ಪೂಜ್ಯತೆಯನ್ನೂ ಒದಗಿಸುತ್ತವೆಯೆಂಬುದು ನಮಗೆ ಸಂತೋಷಾಸ್ಪದವು!

ರಜತ ಪೀಠಪುರವೆಂಬ ಹೆಸರಿನ ನಿರುಕ್ತವು ಪೌರಾಣಿಕ ಕಥಾ ರೀತಿಯಲ್ಲಿ ಪ್ರಚಲಿತವಾಗಿದೆ. "ಉಡುಪಿ" ಯೆಂಬ ಹೆಸರಿನ ನಿರ್ವಚನದ ಬಗ್ಗೆ ಕೆಲವರು ಸಂಸ್ಕೃತ ಭಾಷಾ ರೀತಿಯಲ್ಲಿ ಹೇಳುವರು, "ಉಡುಪನ (ಚಂದ್ರನ) ತಪೋಭೂಮಿ" ಯೆಂದು! ಪರಂತು, 'ಉಡುಪು' ಎಂಬ ಶಬ್ದದ ಷಷ್ಠೀ ವಿಭಕ್ತಿ ರೂಪವಾಗಿ 'ಉಡುಪಿನ' ಎಂದು ಕರ್ನಾಟಕ ಭಾಷೆಯ ಶಿಲಾಶಾಸನಗಳಲ್ಲೂ ಪ್ರಾಚೀನ ಪತ್ರಗಳಲ್ಲೂ ಹೇಳಿದುದರಿಂದಲೂ; 'ಒಡಿಪು' ಇತ್ಯಪಭ್ರಷ್ಟ (ತದ್ಭವ) ಭಾಷೆಯಲ್ಲಿ ಹೇಳುವುದೆಂಬ 'ಮಧ್ವವಿಜಯ' ಗ್ರಂಥಕಾರನಿಂದ ಬರೆಯಲ್ಪಟ್ಟ 'ಭಾವಪ್ರಕಾಶಿಕೆ'ಯಲ್ಲಿರುವುದರಿಂದಲೂ, ಈ ಕ್ಷೇತ್ರ—ಸ್ಥಳನಾಮಗಳು ಮೌಲಿಕವಾಗಿ ತೌಳವ ಪ್ರಾದೇಶಿಕ—ಭಾಷಾತ್ಮಕವೆಂದು ಸ್ಪಷ್ಟವಾಗಿ ಕಂಗೊಳಿಸುತ್ತವೆ.

ಇಲ್ಲಿರುವ ಪ್ರಾಚೀನತಮಗಳಾದ, ಅನಂತನಾಥ ಚಂದ್ರನಾಥಾಲಯಗಳು ಜೈನ ಮಠೀಯಗಳಾಗಿವೆ. ಇವುಗಳ ಶಿಲ್ಪ ವೈಚಿತ್ರ್ಯ, ಹಾಗೂ ಅನಂತನಾಥಾಲಯದ ಮುಂಗಡೆಯ ಮಾನಸ್ತಂಭವೂ 'ಇವೆರಡೂ ಜೈನಾಲಯ'ಗಳೆಂದು ನಿರ್ದೇಶಿಸುತ್ತವೆ. ಇವು ಕಾಲಕ್ರಮದಲ್ಲಿ ಶೈವ ದೇವಾಲಯಗಳಾಗಿ ಪರಿವರ್ತಿತಗಳಾಗಿ "ಅನಂತೇಶ್ವರ—ಚಂದ್ರೇಶ್ವರ"ಗಳೆಂಬ ಹೆಸರಿಂದಲೇ ಈಗಲೂ ಪ್ರಸಿದ್ಧಗಳಾಗಿವೆ; ಹಾಗೆಯೇ ಶ್ರೀ ಮಧ್ವಾಚಾರ್ಯರ ಜೀವನ ಕಾಲದ ಬಳಿಕ ಮಾಧ್ವ ದೇವಾಲಯಗಳೆಂದು ವ್ಯವಸ್ಥಿತಗಳಾದುವೆಂದು ತಿಳಿಯುತ್ತವೆ (ಶ್ರೀ ವಾದಿರಾಜ ಸ್ವಾಮಿಗಳ 'ತೀರ್ಥ ಪ್ರಬಂಧ" ನೋಡಿರಿ). ಒಟ್ಟಿನಲ್ಲಿ, ಈ ಕ್ಷೇತ್ರದ—ದೇವಾಲಯಗಳ ನಾಮಗಳ ಪರ್ಯಾಯವು (ಪರಿವರ್ತನವು) ಕಾಲಾಂತರದಲ್ಲಿ ನಡೆದುದೆಂದು ಹೊಳೆಯುತ್ತದೆ.

ಶ್ರೀ ಮಧ್ವಾಚಾರ್ಯಾವತಾರ ವಿಚಾರ— ಉಡುಪಿ ಕ್ಷೇತ್ರದ ಅನತಿ ದೂರದ ಪಾಜಕ ಗ್ರಾಮದಲ್ಲಿ ವಾಯು ದೇವನು ಶ್ರೀ ಮಧ್ವಾಚಾರ್ಯ ರೂಪದಿಂದ ಅವತರಿಸಿ, ಅನೇಕ ಹಿಮಾಚಲ ಭಾರತದಲ್ಲಿ ಅನೇಕಶಃ ಸಂಚರಿಸಿ, 'ದ್ವೈತ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ'ನೆಂದು ಹೆಸರುಗೊಂಡು, ಆಸ್ತಿಕರಿಗೂ ಭಾವುಕರಿಗೂ ಉಪಕರಿಸಿದನೆಂದು ಪೌರಾಣಿಕರೂ ಚಾರಿತ್ರಿಕರೂ ಒಪ್ಪಿದ್ದಾರೆ. ಮಹಾತ್ಮರೆಲ್ಲರೂ ದೇವರ ಅವತಾರವೆಂದು ದೇಶ ವಿದೇಶಗಳಲ್ಲಿ ಪ್ರಾಚೀನಾರ್ವಾಚೀನ ಗ್ರಂಥಗಳಲ್ಲಿ ಹೇಳಲಾಗಿದೆ. ಉದಾಹರಣವಾಗಿ ಶ್ರೀರಾಮ ಭಕ್ತಾಗ್ರೇಸರನಾದ ಹನುಮಂತನೂ, ಶ್ರೀ ಕೃಷ್ಣ ಭಕ್ತಾಗ್ರೇಸರನಾದ ಭೀಮಸೇನನೂ, ಶ್ರೀ ವೇದವ್ಯಾಸ ಭಕ್ತಾಗ್ರೇಸರರಾದ ಶ್ರೀಮಧ್ವಾಚಾರ್ಯರೂ ವಾಯುದೇವನ ಅವತಾರಗಳೆಂದು ತಿಳಿಯಲಾಗಿವೆ.

ಶ್ರೀ ಮಧ್ವಾಚಾರ್ಯ ಜೀವನ ಕಾಲ ವಿಚಾರ

ಶ್ರೀ ಪೂರ್ಣಪ್ರಜ್ಞನೆಂದು, ಆನಂದ ತೀರ್ಥನೆಂದು ಹೆಸರಿಂದ ಶ್ರೀ ಮಧ್ವಾಚಾರ್ಯರು ಪ್ರಸಿದ್ಧರಾಗಿದ್ದಾರೆ. ಇವರ ಜೀವನ ಕಾಲವಿಚಾರ ಬೇರಡೆ ನನ್ನ ಲೇಖದಲ್ಲಿ ಬಂದಿದೆ. ಶಾಲಿವಾಹನ ಶಕ 1121ರಲ್ಲಿ (ಇಸವಿ. 1199-1200) ಇವರು ಹುಟ್ಟಿ, ಶಾ. ಶ. 1200 (ಇಸ್ವಿ 1278-9)ರಲ್ಲಿ ನಿರ್ಯಾಣರಾದರೆಂದು (ಪುಣೆಯ ಡಾ. ಪಿ. ಕೆ. ಗೋಡೆಯವರ ಸಂಭಾವನಾ ಗ್ರಂಥ ಹಾಗೂ 'ಸಾಹಿತ್ಯದ ಹಿನ್ನೆಲೆ' ಯೆಂಬ ನನ್ನ ಗ್ರಂಥದಲ್ಲಿ ನೋಡಿರಿ).

ಉಡುಪಿ ಕ್ಷೇತ್ರದ ಅಷ್ಟ ಮಠಗಳಲ್ಲಿ ಒಂದಾದ ಪೇಜಾವರ ಮಠದ ಕೈಫಿಯತ್ತಿನಲ್ಲಿ ಶ್ರೀ ಮಧ್ವಾಚಾರ್ಯ ಜೀವನ ಕಾಲಾದಿ ವಿಚಾರವಿದೆ. (ಮದ್ರಾಸಿನ ಪ್ರಾಚೀನ ಹಸ್ತಾಕ್ಷರ ಗ್ರಂಥಾಲಯ. ಡಿ. 1827).

ಶಾ.ಶ. 1121 (ಇ. 1199-1200) ಕಾಲಯುಕ್ತಾಕ್ಷಿ ಸಂವತ್ಸರದ ಮಾಘ ಶುಕ್ಲ ಸಪ್ತಮಿಯಂದು ಶ್ರೀ ಮಧ್ವಾಚಾರ್ಯರ ಅವತಾರವಾದುದು.

ಶಾ. ಶ. 1128 (ಇ. 1206-7) ಕ್ರೋಧನ ಪುಷ್ಯ ಶುದ್ಧ ಪಂಚಮಿಯಂದು ಇವರ ಉಪನಯನವಾದುದು.

ಶಾ. ಶ. 1130 (ಇ. 1208) ಪ್ರಭವ ವೈಶಾಖ ಶುದ್ಧ ತೃತೀಯೆಯಂದು ಸನ್ಯಾಸಾಶ್ರಮ ಸ್ವೀಕಾರವಾದುದು.

ಶಾ. ಶ. 1160 (ಇ.1238—9) ಹೇವಿಳಂಬಿ ಮಾಘ ಶುದ್ಧತೃತೀಯೆಯಂದು "ಉಡುಪಿ" ಕ್ಷೇತ್ರದಲ್ಲಿ ಶ್ರೀ ಕೃಷ್ಣನ ಪ್ರತಿಷ್ಠೆಯಾದುದು.

ಶಾ. ಶ. 1180 (ಇ. 1258) ಪಿಂಗಲ ವೈಶಾಖ ಶುದ್ಧ ಸಪ್ತಮಿಗೆ ಉಡುಪಿಯ 8 ಮಠಗಳ ಸ್ವಾಮಿಗಳಿಗೂ, ಉತ್ತರಾದಿ ಮಠದ ಪದ್ಮನಾಭ ತೀರ್ಥರಿಗೂ ಸನ್ಯಾಸಾಶ್ರಮ ದಾನವು.

ಶಾ. ಶ. 1200 (ಇ. 1278-9) ಈಶ್ವರ ಮಾಘ ಶುದ್ಧ ನವಮಿಗೆ ಶ್ರೀ ಮಧ್ವಾಚಾರ್ಯರ ನಿರ್ಯಾಣವೆಂದಿದೆ.

ಈ ಘಟನೆಗಳಲ್ಲಿ ಶ್ರೀ ಕೃಷ್ಣ ಪ್ರತಿಷ್ಠಾಪನೆಗೂ ಉಡುಪಿ ಅಷ್ಟಮಠಗಳ ಮೂಲ ಸ್ವಾಮಿಗಳಿಗೆ ಆಶ್ರಮದಾನಕ್ಕೂ ಇಪ್ಪತ್ತು ವರುಷಗಳ (ಶಾ. ಶ. 1160—1180 ಇಸವಿ 1238—9ರಿಂದ 1258ರತನಕ) ಅಂತರವಿದೆ. ಆದುದರಿಂದ ಈ ಮಧ್ಯವರ್ತಿ ಕಾಲದಲ್ಲಿ ಶ್ರೀ ಮಧ್ವಾಚಾರ್ಯರೇ ಉಡುಪಿ ಕ್ಷೇತ್ರದಲ್ಲಿ ಶ್ರೀ ಕೃಷ್ಣ ಪೂಜೆಯನ್ನು ಮಾಡುತ್ತಿದ್ದರೆಂದು ಕಾಣುತ್ತದೆ. ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದಾ ಮಠದ ಮೂಲಸ್ವಾಮಿಯೂ, ತನ್ನ ತಮ್ಮನೂ ಆದ ವಿಷ್ಣುತೀರ್ಥರಿಗೆ ಹಾಗೂ ಉತ್ತರಾದಿ ಮಠದ ಪದ್ಮನಾಭ ತೀರ್ಥರಿಗೆ ಆಶ್ರಮದಾನಕ್ಕಿಂತ ಮೊದಲಲ್ಲೂ ಅನಂತರದಲ್ಲೂ ಶ್ರೀ ಮಧ್ವಾಚಾರ್ಯರಿಂದ ಹಲವು ಶಿಷ್ಯರಿಗೆ ಆಶ್ರಮದಾನವಾದುದೆಂದು ಶ್ರೀ ಮಧ್ವ ವಿಜಯ ಗ್ರಂಥದಿಂದ ತಿಳಿಯುವುದರಿಂದ ("ಅನಯೋಃ ಪ್ರಥಮೋ ಶಿಷ್ಯಾಃ ಚರಮೋ ಚಾಭವನ್ನಿಹ" ಮಧ್ವವಿ. 15—127), ಅಷ್ಟಮಠಗಳ ಸ್ವಾಮಿಗಳಿಗೂ ಉತ್ತರಾದಿ ಮಠದ ಸ್ವಾಮಿಗಳಿಗೂ ಒಮ್ಮೆಲೆ ಆಶ್ರಮದಾನವಾದುದೆಂಬ ಪ್ರಚಲಿತ ವಾರ್ತಾನುಸಾರ ಹಾಗೂ ಈ ಮೇಲೆ ಬರೆದ ಹಸ್ತಾಕ್ಷರ ಗ್ರಂಥಾನುಸಾರ ಹೇಳಿಕೆಯು ಇದರಿಂದಾಗಿ ಬಿಡಬಹುದು. ಈ ಮೇಲಿಂದ ಇಪ್ಪತ್ತು ವರ್ಷಗಳ ಅಂತರದಲ್ಲಿ ಶ್ರೀ ಮಧ್ವಾಚಾರ್ಯರೂ, ಅವರ ಕೆಲವು ಮಂದಿ ಶಿಷ್ಯರೂ (?) ಉಡುಪಿನ ಶ್ರೀ ಕೃಷ್ಣನ ಪೂಜಾಕ್ರಮವನ್ನು ನೆರವೇರಿಸುತ್ತಿದ್ದರೆಂದು ತಿಳಿಯಲಾಗುತ್ತದೆ. ಅಷ್ಟಮಠಗಳ ಸ್ವಾಮಿಗಳಲ್ಲಿ ಪ್ರತಿಯೊಬ್ಬರು ಪ್ರತ್ಯೇಕಶಃ ಎರಡು ವರ್ಷ ಶ್ರೀ ಕೃಷ್ಣಪೂಜೆಯನ್ನು ಪರ್ಯಾಯತಃ ಪೂರೈಸಿ, ಉಳಿದ ಹದಿನಾಲ್ಕು ವರ್ಷ ದ್ವೈತ ಸಿದ್ಧಾಂತ ಪ್ರಸಾರಣಕ್ಕೂ, ವಿಷ್ಣ್ವನುಗ್ರಹಕ್ಕೂ, ಅರ್ಥಸಂಚಯನಕ್ಕೂ

(ಹತ್ತೊಂಭತ್ತನೇ ಪುಟ ನೋಡಿರಿ)

Tel: 'BLUEYAGAR'. —— ಚಿನ್ನ ಮುತ್ತು ವಜ್ರಗಳ ಆಧುನಿಕ ತವರುಮನೆ —— Phone: 4774.

(ಮೈಸೂರು, ಮದ್ರಾಸು ಸಂಸ್ಥಾನಗಳಲ್ಲಿ 'ಸುವರ್ಣ ಪದಕ' ಪಡೆದಿರುವ ಹೆಸರಾಂತ ಸುವರ್ಣ ಗೃಹ)

ಕೆ. ಆರ್. ಕೆ. ಶೇಟ್ ಡಯಮಂಡ್ ಮಾರ್ಟ್,

ಚಿನ್ನ ಮುತ್ತು ವಜ್ರದ ವ್ಯಾಪಾರಿಗಳು (ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ) ಮಂಗಳೂರು-1.

ತಾಜಾ ಎಂಟ್ವರ್ಪ್ ಬ್ಲೂಟೆಂಟ್ ವಜ್ರ, ಚಿನ್ನಾಭರಣ (14 ct.) ಮಧು ವರ್ಗಕ್ಕೆ ಬೇಕಾದ ಬೆಳ್ಳಿ ಸಾಮಾನುಗಳು ಸದಾ ಮಾರಾಟಕ್ಕೆ ಸಿದ್ಧವಾಗಿವೆ.

ಅವಿರತವಾಗಿ ಸುಮಾರು ೫೬ ವರ್ಷಗಳಿಂದ ಜನಸೇವೆ ಮಾಡುತ್ತಿರುವ ಪ್ರಪ್ರಥಮ ವಜ್ರ ವ್ಯಾಪಾರಿಗಳು

ಸ್ಥಾಪನೆ: 1919 ಮಾಲಿಕ: ಕೆ. ಕೆ. ಆರ್. ಶೇಟ್.

They're here!

The '1210' Series
TATA MERCEDES - BENZ VEHICLES

Authorised Dealers:

ARVIND MOTORS
BALMATTA ROAD, MANGALORE.

Telephone. 4762

Telegram: 'ARVIND'

ದಿ ಶಂಕರ್ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್
ಮಂಗಳೂರು
(ದಕ್ಷಿಣ ಕನ್ನಡ ಜಿಲ್ಲೆ)

ಹದಿನೇಳನೆಯ ಗಣರಾಜ್ಯದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED
MANGALORE

ಮನಸ್ಸು ಬು

ಪರಮ ಪವಿತ್ರ ತೀರ್ಥಕ್ಷೇತ್ರ

ಆಧ್ಯಾತ್ಮಿಕತೆಯೊಡನೆ ಬಂಗಾರಕ್ಕೆ ಪ

ಶ್ರೀ ಸುಬ್ರಹ್ಮಣ್ಯನ ದರ್ಶನ ಪಡೆಯದವರು ವಿರಳ, ಆತನ ಹೆಸರು ಕೇಳದವರು ಮತ್ತೂ ವಿರಳ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕುಮಾರ ಪರ್ವತದ ಪಾದತಲದಲ್ಲಿ ವಿರಾಜಿಸುವ ಈ ಕ್ಷೇತ್ರದ ಹಿಂದೆ ಪೌರಾಣಿಕತೆ ತುಂಬ ಅಡಗಿದೆ. ಇಲ್ಲಿ ವಾಸುಕಿಯು ಕುಮಾರ ಸ್ವಾಮಿಯ ಕಲಾಂಶಭೂತನಾಗಿ ನೆಲಸಿರುವನೆಂದು ಐತಿಹ್ಯ ಸಾರುತ್ತದೆ. ಈತನನ್ನೇ 'ಸುಬ್ರಹ್ಮಣ್ಯ" ಎಂದು ಕರೆಯುತ್ತಾರೆ.

• ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರಹ ಅಪಾರ. ಆತನ ಕೃಪಾಕಟಾಕ್ಷದಿಂದಲೇ ಅಪಸ್ಮಾರ, ಚರ್ಮವ್ಯಾಧಿ ಮೊದಲಾದ ಭಯಾನಕ ರೋಗಗಳು ದೂರವಾಗುವುವು; ಇಲ್ಲಿನ ತೀರ್ಥದಲ್ಲಿ ಮಿಂದರೆ, ಪಾಪ ವಿಮೋಚನೆಯಾಗುವುದು—ಇವೆಲ್ಲ ಭಕ್ತ ಮಹಾನುಭಾವರ ಸ್ವಾನುಭವಗಳು. ಪರಶುರಾಮ, ಸಾಂಬ, ಅದಿತಿ ಮೊದಲಾದ ಪೌರಾಣಿಕ ಮಹಾ ವ್ಯಕ್ತಿಗಳು ತಾವು ಮಾಡಿದ ಪಾಪವನ್ನು ಕಳೆಯಲು ಶ್ರೀ ಸುಬ್ರಹ್ಮಣ್ಯ ದರ್ಶನ ಲಾಭ ಪಡೆದರು ಎಂದು ಶ್ರೀ ಕ್ಷೇತ್ರದ ಇತಿಹಾಸ ಸಾರುತ್ತದೆ.

ನಿಸರ್ಗದ ಮಡಿಲಲ್ಲಿ ಬೆಳೆದು ಬಂದಿರುವ ಸುಬ್ರಹ್ಮಣ್ಯ ಪ್ರಕೃತಿ ಪ್ರೇಮಿಗಳ ಆಡುಂಬೊಲವಾಗಬಹುದು; ಅಂತೆಯೇ ಭಕ್ತ ಸಮುದಾಯದ ಇಷ್ಟಾರ್ಥ ಸಿದ್ಧಿಯಾಗುವ ಪರಮ ಪಾವನ ಪುಣ್ಯ ಭೂಮಿ. ಅನೇಕರು ಶ್ರೀ ಕ್ಷೇತ್ರ ದರ್ಶನ ಮಾತ್ರದಿಂದಲೇ ನಿರೋಗಿಗಳಾದರು; ಕೆಲವರು ಮಂತ್ರಸಿದ್ಧಿ, ತಪಸ್ಸಿದ್ಧಿಯನ್ನು ಹೊಂದಿದರು; ಸ್ವಾಮಿಯ ಸೇವಾಫಲವಾಗಿ ಸಕಲಾಭೀಷ್ಟ ಸಿದ್ಧರಾಗಿರುವರು; ಶಾಪ ಪೀಡಿತರು ಶಾಪಮುಕ್ತರಾಗಿರುವರು. ಇಂತಹ ಹಲವು ನಿದರ್ಶನಗಳು ಇಂದಿಗೂ ಗೋಚರಿಸುತ್ತಿವೆ.



ಭಕ್ತರ ಕಣ್ಣುಗಳಿಗೆ ತಂಪು ನೀಡುವ ಮಯೂರ ವಾಹನೋತ್ಸವ.

ದೇವಾಲಯದಲ್ಲಿ ನಾನಾ ಬಗೆಯ ಸೇವೆಗಳು ನಡೆಯುತ್ತವೆ. ವರ್ಷಾವಧಿ ಜಾತ್ರೆಯ ವೇಳೆ (ಚಂಪಾ ಷಷ್ಠಿ) ಮಾಡುವ ವಿಚಿತ್ರ ರೀತಿಯ 'ಮಡೆ ಸ್ನಾನ' (ಎಂಜಲೆಲೆಯ ಮೇಲೆ ಹೊರಳಾಡಿಕೊಂಡು ಹೋಗುವುದು) ವು ಒಂದು. ಸುಮಾರು ಒಂದು ಮೈಲು ದೂರದ ಮತ್ಸ್ಯತೀರ್ಥದಿಂದ ದರ್ಪಣತೀರ್ಥದ ವರೆಗೆ ಈ ವಿಚಿತ್ರ ಸೇವೆ ಮಾಡುವುದು ಅನನ್ಯ ಭಕ್ತಿಯ ಸಂಕೇತವಲ್ಲದೆ ಮತ್ತೇನು? ಇದೊಂದರಿಂದಲೇ ಶ್ರೀ ಕ್ಷೇತ್ರದ ಮಹಿಮಾತಿಶಯವನ್ನು ಊಹಿಸಿ ತಿಳಿದುಕೊಳ್ಳಬಹುದು.

ಶ್ರೀ ಸುಬ್ರಹ್ಮಣ್ಯನ ಮಹಿಮೆಯೊಂದಿಗೆ ಇನ್ನಿತರ ಪ್ರೇಕ್ಷಣೀಯ ಸ್ಥಳಗಳೂ ಇಲ್ಲಿವೆ. ದೇವಾಲಯದ ಪಕ್ಕದಲ್ಲೇ ತಲೆಯೆತ್ತಿ ನಿಂತಿದೆ ಏಳು ಹೆಡೆಯ ಹಾವಿನಂತಿರುವ ಬೃಹತ್ ಪರ್ವತಶ್ರೇಣಿ. ಇದು ಅರಣ್ಯಮಯ ಜತೆಗೆ ದುರ್ಗಮ. ಶ್ರೀ ಕುಮಾರ ಸ್ವಾಮಿಯು ನರಕಾಸುರ ಸಂಹಾರಕ್ಕಾಗಿ ಸೇನಾಧಿಪತ್ಯ ವಹಿಸಿದ ಉನ್ನತ ಪೀಠವಿದು. ಕುಮಾರ ಧಾರಾನದಿ ಇಲ್ಲಿಂದಲೇ ಹುಟ್ಟುತ್ತದೆ. ಕ್ಷೇತ್ರದ ಪುರಾಣಕ್ಕೆ ಸಂಬಂಧಿಸಿದ ಆದಿ ಸುಬ್ರಹ್ಮಣ್ಯ ಬಿಲದ್ವಾರ, ಕುಮಾರ ಧಾರೆ, ಮತ್ಸ್ಯತೀರ್ಥ, ದರ್ಪಣ ತೀರ್ಥ ಇತ್ಯಾದಿ ದೇವಳದ ಬಾಹ್ಯದಲ್ಲಿವೆ; ಒಳಗಡೆ ಭೈರವ, ಉಮಾ ಮಹೇಶ್ವರ, ಸಂಪುಟ ನರಸಿಂಹ ಹೊಸಳಿಗಮ್ಮ ದೇವರೂ ಇದ್ದಾರೆ.

ದೇವಾಲಯದಲ್ಲಿ ನಡೆಯುವ ಕಾಲಾವಧಿ ಉತ್ಸವಗಳು ವೈಭವದಿಂದ ನೆರವೇರುತ್ತವೆ. ಶೇಷವಾಹನ, ಅಶ್ವವಾಹನ, ಮಯೂರ ವಾಹನ ಪುಷ್ಪರಥ, ಭಂಡಿ, ಪಾಲಕಿಗಳಲ್ಲಿಯೂ ಅಲಂಕೃತ ರಥಗಳಲ್ಲಿಯೂ ಉತ್ಸವಗಳು ನಡೆಯುವುವು—ಇವು ನಯನ ಮನೋಹರ ಮಾತ್ರವಲ್ಲ; ಭಕ್ತಿ ಪ್ರೇರಕವೂ ಆಗಿರುವುವು. ಆದುದರಿಂದಲೇ ಶ್ರೀಕ್ಷೇತ್ರಸಂದರ್ಶಿಸುತ್ತಿರುವ ಯಾತ್ರಾರ್ಥಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತದೆ.

ಕ್ಷೇತ್ರದ ಪೌರಾಣಿಕ ಹಿನ್ನಲೆಯಿದ್ದ ಮಾತ್ರಕ್ಕೆ ಅದು ಹೆಸರು ಪಡೆಯುವುದು ಸಾಧ್ಯವಿಲ್ಲ. ವ್ಯಾವಹಾರಿಕ ಮತ್ತು ಸಾಮಾಜಿಕ ರಂಗದಲ್ಲಿಯೂ, ದೇಗುಲಗಳು ವಹಿಸುವ ಪಾತ್ರವನ್ನೂ ಅದು ಅವಲಂಬ

ಭಕ್ತ ಜನರ ಸಹಾಯದಿಂದ ಕಟ್ಟಿಸಲಾದ ಛತ್ರಗಳ ಬೃಹತ್ ಶ್ರೇಣಿ.

ಅವಭೃಥೋತ್ಸವ. ಬೇ
ಮೆನೇಜರ್ ಶ್ರೀ ಎ

Edited, Printed & Published by K. H. Shetty at the Navayuga Press, Udipi, S. India.

ಳನ್ನು ತಣಿಸುವ

- ಶ್ರೀ ಸುಬ್ರಹ್ಮಣ್ಯ

ರಿಕತೆಯು ಸಮ್ಮಿಳನವಾದರೆ ಬಂದಂತಾಗುವುದು.

ಸಿದೆ. ಆಧ್ಯಾತ್ಮಿಕ ಮತ್ತು ವ್ಯಾವಹಾರಿಕತೆಯ ಯಶಸ್ವೀ ಸಮ್ಮಿಳನದಿಂದ ಮಾತ್ರವೇ ಅವುಗಳ ಮಹಿಮೆ ಇಂದು ಬೆಳೆಯುವುದು ಸಾಧ್ಯ. ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಧರ್ಮದರ್ಶಿಗಳು ಈ ದಿಸೆಯಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದಾರೆ.

ಒಂದು ಕಾಲದಲ್ಲಿ ಸುಖಸಂವೃದ್ಧಿಯಿಂದ ತುಂಬಿ ತುಳುಕಾಡುತ್ತಿದ್ದ ಶ್ರೀ ಕ್ಷೇತ್ರವು ದುರಾಡಳಿತೆ, ಅವ್ಯವಸ್ಥೆ, ರೋಗರುಜಿನ ಮೊದಲಾದುವುಗಳಿಂದ ದುಃಖದ ಬೀಡಾಯಿತು, ಮಲೆನಾಡಿನ ಕೊಂಪೆಯಾಯಿತು ಆದರೆ, ಶ್ರೀ ಕ್ಷೇತ್ರದ ಮಹಿಮಾತಿಶಯದಿಂದಾಗಿ ಅದು ಮತ್ತೆ ಇಂದು ಜಾಗ್ರತವಾಗಿದೆ. ಕಳೆದ ಮೂವತ್ತು ವರ್ಷಗಳಿಂದ ದೇವಾಲಯದ ಜೀರ್ಣೋದ್ಧಾರದ ಕಾರ್ಯ ರಭಸದಿಂದ ಸಾಗುತ್ತಿದೆ.

ಪ್ರತಿನಿತ್ಯ ಶ್ರೀ ಸ್ವಾಮಿಯ ದರ್ಶನ ಲಾಭಕ್ಕಾಗಿ ಬರುವ ಯಾತ್ರಿಕರಿಗೆ ಅವಶ್ಯಕ ಸೌಕರ್ಯವೊದಗಿಸುವುದು ಆಗತ್ಯವಾಗಿತ್ತು. ಇದಕ್ಕಾಗಿಯೇ ಅನೇಕ ದರ್ಮಭೀರುಗಳ ಸಹಕಾರದಿಂದ ತಲೆಯೆತ್ತಿ ನಿಂತಿದೆ ಛತ್ರಗಳ ಸಾಲು. ಈಗ ಯಾತ್ರಿಗಳು ಯಾವ ಸಂಕೋಚವೂ ಇಲ್ಲದೆ ಈ ಛತ್ರಗಳಲ್ಲಿ ಉಳಕೊಳ್ಳುತ್ತಾರೆ. ಆದರೆ ಯಾತ್ರಿಕ ಸಂಖ್ಯೆಯೊಡನೆ ಛತ್ರಗಳ ವಿಸ್ತಾರವೂ ಹೆಚ್ಚುವುದು ಅಗತ್ಯವಾಗಿದೆ.

ಹಳೆಯ ದೇವಾಲಯದ ಜೀರ್ಣೋದ್ಧಾರದ ಕಾರ್ಯವು ಅತ್ಯಗತ್ಯವಾಗಿತ್ತು. ಆದಿ ಸುಬ್ರಹ್ಮಣ್ಯ ಗುಡಿಯ ಪುನಾರಚನೆಯಿಂದ ಇದು ಆರಂಭವಾಯಿತು. ಇಂದು ಈ ಗುಡಿಯು ಸುವ್ಯವಸ್ಥಿತವಾಗಿದೆ. ಹೋಗುವ ದಾರಿಯು ತೋಡಿಗೂ ಸಂಕ ಕಟ್ಟಲಾಗಿದೆ. ದೇವಾಲಯದ ಹೊರ-ಒಳ ವಠಾರಗಳ ನೈರ್ಮಲ್ಯ, ಪಾವಿತ್ರ್ಯಗಳನ್ನು ಉಳಿಸಿಕೊಳ್ಳುವ ಸಾಹಸದಲ್ಲಿ ಧರ್ಮದರ್ಶಿಗಳು ಯಶಗಳಿಸಿದ್ದಾರೆ, ದೇಗುಲದ ಆಕರ್ಷಣೀಯತೆಯನ್ನು ಹೆಚ್ಚಿಸಿದ್ದಾರೆ. ಕಾಶಿಕಟ್ಟೆಯ ಪುನಾರಚನೆ, ಮತ್ಸ್ಯ ತೀರ್ಥದಿಂದ ದರ್ಪಣ ತೀರ್ಥದ ವರೆಗಿನ ಮಾರ್ಗವನ್ನು ಸುವಿಸ್ತೃತಗೊಳಿಸುವುದು, ಆಸ್ಪತ್ರೆಯ ಸ್ಥಾಪನ, ಶಾಲೆ, ಮತ್ತು ಹೈಸ್ಕೂಲುಗಳು—ಮೊದಲಾದುವು ಇತ್ತೀಚಗಿನ ವರ್ಷದಲ್ಲಿ ಆದ ಸುಧಾರಣೆಗಳು. ದೂರದೂರದ ಊರುಗಳಿಂದ ಬರುವ ಭಕ್ತರಿಗೆ ಹೆಚ್ಚಿನ ಅನುಕೂಲವೊದಗಿಸುವುದು ಅಗತ್ಯವಾಗಿದೆ. ಆದಕ್ಕೆಂದೇ ನಳ್ಳಿನೀರಿನ ಯೋಜನೆಯೊಂದು ಸಿದ್ಧವಾಗಿದೆ, ಕಾರ್ಯರೂಪಕ್ಕೆ ಬರುತ್ತಿದೆ

ದೇವಾಲಯದ ಉತ್ಪಾದನೆಯನ್ನು ಹೆಚ್ಚಿಸುವುದರೊಡನೆ ದೇಶದ ಸಂಪತ್ತನ್ನೂ ಬೆಳೆಸುವ ಹೊಸ ಮಾರ್ಗವೊಂದನ್ನು ಧರ್ಮದರ್ಶಿಗಳು ಹಿಡಿದಿದ್ದಾರೆ. ದೇವಳದ ಹೆಸರಲ್ಲಿ ಜಮೀನನ್ನು ಕೊಂಡು ಅದರಲ್ಲಿ ಕೃಷಿಯನ್ನು ಬೆಳೆಸುವತ್ತ ಇವರು ಗಮನ ಹರಿಸಿದ್ದಾರೆ ಕಂಗು—ಬಾಳೆ ಮೊದಲಾದುವುಗಳ ಎತ್ತರೆತ್ತರದ ತೋಟಗಳು ನಮ್ಮ ಕಣ್ಣನ್ನು ತಣಿಸುತ್ತವೆ. ಇವು ದೇಶಾಭಿವೃದ್ಧಿಯ ಸಾಧನಗಳೂ ಹೌದು—ಈ ಉಪಕ್ರಮವನ್ನು ಉಳಿದ ಮುರ—ದೇಗುಲಗಳೂ ಅನುಕರಿಸುವಂತಾದರೆ, ದೇಶಾಭಿವೃದ್ಧಿಯಲ್ಲಿ ಮಹತ್ವದ ಹ್ಯೆಲುಗಲ್ಲೊಂದನ್ನು ಮುಟ್ಟಿದಂತಾಗುವುದು.

ಭಕ್ತ ದಾನಿಗಳ ನೆರವಿಂದ ದೇಗುಲದ ಆಸುಪಾಸಿನ ಅಭಿವೃದ್ಧಿ ಸಾಧಿತವಾದರೆ, ಸರಕಾರದ ಸಹಾಯದಿಂದ ನಾಡಿನ ಬೇರೆ ಬೇರೆಡೆಯಿಂದ ಬರುವ ಮಾರ್ಗಗಳ ಪುನಾರಚನೆಯು ಸಾಧ್ಯವಾಯಿತು. ಮಡಿಕೇರಿ–ಪುತ್ತೂರು-ಸುಬ್ರಹ್ಮಣ್ಯ, ಮಂಗಳೂರು–ಸುಬ್ರಹ್ಮಣ್ಯ–ಸಕಲೇಶ್‌ಪುರ—ಬಿಸಲೆ—ಸುಬ್ರಹ್ಮಣ್ಯ-ಹೀಗೆ ಈಗಿರುವ ಎಲ್ಲದಾರಿಗಳೂ ಸುವ್ಯವಸ್ಥಿತವಾಗಿವೆ. ಅಡ್ಡ ಬಂದಿರುವ ಹೊಳೆತೋಡುಗಳಿಗೆಲ್ಲಾ ಸಂಕವಾಗಿವೆ. ಯಾತ್ರಿಗಳ ಸುಖಪ್ರಯಾಣವೆಂದು ಸಾಧ್ಯವೆನಿಸಿದೆ. ಹಾಸನ–ಮಂಗಳೂರು ರೈಲ್ವೆ ದಾರಿಯು ಪೂರ್ಣಗೊಂಡಾಗಲೇ ಇಲ್ಲಿಗೆ ಎರಡು ಮೈಲು ದೂರದ ಕುಳುಕುಂದದಲ್ಲಿ ರೈಲ್ವೇ ನಿಲ್ದಾಣವಿರುವುದು ಈ ಪ್ರಮುಖ ಮಾರ್ಗಗಳಲ್ಲದೆ, ಇನ್ನಿತರ ಕೆಲವು ಹೊಸ ಮಾರ್ಗಗಳ ರಚನೆಯತ್ತ ಸರಕಾರದ ಗಮನ ಸೆಳೆಯುವ ಪ್ರಯತ್ನ ನಡೆದಿದೆ. ಇವೆಲ್ಲವೂ ಯಶಸ್ವಿಯಾದ ನಂತರ ಅತಿ ಸಮೀಪದ ದಾರಿಯಲ್ಲೇ ಶ್ರೀ ಕ್ಷೇತ್ರವನ್ನು ಸೇರುವುದು ಸಾಧ್ಯ. ಈಗ ಇರುವ ಮಾರ್ಗಗಳಲ್ಲಿ ಆಧಿಕ ಸಂಖ್ಯೆಯಲ್ಲಿ ಬಸ್ಸುಗಳು ಓಡಾಡುತ್ತಿರುವುದರಿಂದ ಯಾತ್ರಿಕರು ತಾ



ಶ್ರೀ ಕ್ಷೇತ್ರದ ಬ್ರಹ್ಮರಥ. ಇದೀಗ ಜೀರ್ಣಾವಸ್ಥೆಯಲ್ಲಿದೆ.



ಶ್ರೀ ಆದಿ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿ ಹಿನ್ನೆಲೆಯಲ್ಲಿ ಪುನಾರಚಿತ ಗುಡಿಯಿದೆ.

ಶ್ರೀ ದೇವಾಲಯದ ಕಾರ್ಯದಕ್ಷಿ ಭಟ್ಟರನ್ನೂ ಕಾಣಬಹುದು.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ



ಕೆ. ಸುಬ್ರಹ್ಮಣ್ಯ ಗೌಡ,
ಬಿ. ಎ., ಎಲ್ ಎಲ್. ಬಿ., ಎಡ್ವೋಕೇಟ್,
ಪುತ್ತೂರು—ಚೇರ್ ಮೇನ್,

ಪತ್ರೆಯು ಪಡಬೇಕಾಗಿ ಬರುವುದಿಲ್ಲ.

ಭಾರತವು ಅನೇಕ ಧರ್ಮವಂದಿಗರ ನೆಲೆವೀಡು. ಹಲವಾರು ಧರ್ಮ ಸಂಸ್ಥಾಪಕರು ಇಲ್ಲಿಯೇ ಹುಟ್ಟಿ, ಬೆಳಗು ತಮ್ಮ ಜ್ಞಾನ ಪ್ರಕಾಶವನ್ನು ಲೋಕದಲ್ಲಿ ಬೀರಿದರು. ಆಂತರಿಕವಾಗಿ ಇವೆಲ್ಲವೂ ಒಂದೇ ಧರ್ಮ— ಭಾರತೀಯ ಧರ್ಮ. ಜಾತ್ಯತೀತ ರಾಷ್ಟ್ರದಲ್ಲಿ ಪ್ರತಿ ನಾಗರಿಕನಿಗೂ ಸರ್ವಧರ್ಮಗಳ ಸಾಮರಸ್ಯ ಪ್ರವೃತ್ತಿಗಳ ಅರಿವಿರಬೇಕು. ಇದಕ್ಕೆಂದೇ ಶ್ರೀ ಕ್ಷೇತ್ರದಲ್ಲಿ ಇತ್ತೀಚಿಗಿನ ಕೆಲವು ವರ್ಷಗಳಿಂದ ಕಿರುಷಷ್ಠಿ ಉತ್ಸವದ ವೇಳೆಯಲ್ಲಿ ಸರ್ವಧರ್ಮ ಸಮ್ಮೇಳನವೂ ನಡೆದು ಬರುತ್ತಿದೆ. ಭಕ್ತರ ಮನೋವಿಕಾಸಕ್ಕೆ ಇದು ನೆರವಾಗಿದೆ.

ದೇವಾಲಯದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ಮತ್ತು ಇತರ ದೇವರಿಗೆ ನಾನಾ



ಬಿ. ನಾರಾಯಣ ಶೇಕ, ವರ್ಗದಾರ,
ಸಾಳ್ಯೋಡಿ ಹೌಸ್, ಸಾವೂರು ಗ್ರಾಮ,
ಬಂಗಾಡಿ, ದ. ಕ.

ವಿಧದ ಸೇವೆಗಳನ್ನ ಭಕ್ತರು ತಮ್ಮ ಶಕ್ತಿಗನುಸಾರವಾಗಿ ನಡೆಸಬಹುದು. ಶ್ರೀ ಸನ್ನಿಧಿಯಲ್ಲಿ ಹಾಜರಿರಲು ಅಸಾಧ್ಯವೆನಿಸಿದರೆ, ಆ ಪರಿಸ್ಥಿತಿಯಲ್ಲಿಯೂ ಸೇವೆಯನ್ನು ಸಲ್ಲಿಸಿ ಪ್ರಸಾದ ಕಳಿಸುವ ವ್ಯವಸ್ಥೆಯು ಇರುವುದು. ಇನ್ನು, ತಮ್ಮ ಹೆಸರಿನಲ್ಲಿ ಪ್ರತಿದಿನವೂ ಸೇವೆ ನಡೆಯಬೇಕೆಂದು ಭಕ್ತರು ಬಯಸುವುದಾದರೆ, ಅದಕ್ಕೆ ತಕ್ಕಂತೆ ಮೂಲ ಧನವನ್ನು ಠೇವಣಿಯಿಡುವ ಸೌಲಭ್ಯವಿದೆ. ಸರ್ವಪ್ರಕಾರದಲ್ಲೂ ಭಕ್ತ ಜನರ ಶಕ್ತಿ-ಸಾಮರ್ಥ್ಯ ಮತ್ತು ಇಚ್ಛೆಗಳನ್ನು ಹೊಂದಿಕೊಂಡು ಸೇವೆ ಮಾಡಿಸುವ ಅವಕಾಶವಿದೆ. ಈ ಸದವಕಾಶವನ್ನು ಭಕ್ತಬಾಂಧವರು ಕಳೆದುಕೊಳ್ಳಬಾರದು.

ಶ್ರೀ ಕ್ಷೇತ್ರದ ಧರ್ಮದರ್ಶಿಗಳ ಧ್ಯೇಯ ಬಹುಮುಖವಾದುದು. ಅವರ ಆಕಾಂಕ್ಷೆಗಳೂ ಬಹು ವಿದದವು. ಆಧ್ಯಾತ್ಮಿಕ ಹಿನ್ನಲೆಯಲ್ಲಿ ಲೌಕಿಕತೆಯನ್ನೂ ತೂಗಿಸಿಕೊಂಡು ಹೋಗುವ ಹೆಗ್ಗುರಿ ಅವರದ್ದು. ತೇರು ಬೀದಿಯಿಂದ ದೇಗುಲ ಪ್ರವೇಶಿಸುವಲ್ಲಿ ಶಾಶ್ವತ ಗೋಪುರ ರಚನೆಯಾಗಬೇಕು— ಇದರಿಂದ ದೇವಾಲಯದ



ಎಚ್. ಎನ್ ಎ. ಗೌಡ,
Retd. Dy. S P.,
ಹೆತ್ತೂರು, ಹಾಸನ ಜಿಲ್ಲೆ.



ಬಿ ಬಾಲಕೃಷ್ಣ ರೈ, ತಾಲೂಕು ಬೋರ್ಡ
ಮೆಂಬರ್, ಉಪ್ಪಿನಂಗಡಿ, ದ. ಕ.

ಸೌಂದರ್ಯ ದ್ವಿಗುಣಿಸುವುದು. ಬಾವನಕುಮಾರ ಪರ್ವತಕ್ಕೆ ಹೋಗುವ ದಾರಿಯನ್ನು ಸರಿಗೊಳಿಸಬೇಕು. ಯಾತ್ರಿಕರ ಸಂಖ್ಯೆಗನುಸಾರವಾಗಿ ಧರ್ಮಛತ್ರಗಳ ನಿರ್ಮಾಣವು ಅಗತ್ಯ. ಅದೇ ರೀತಿಯಲ್ಲಿ ಯಾತ್ರಿಗಳಿಗೆ ಎಲ್ಲಾ ಬಗೆಯ ಸೌಕರ್ಯಗಳೂ ಒದಗುವಂತಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ದಾನವಾಗಿ ನೀಡಲಾಗಿದ್ದ ಬ್ರಹ್ಮರಥವೀಗ ಜೀರ್ಣವಾಗಿದ್ದು ಅದರ ಸ್ಥಾನದಲ್ಲಿ ಹೊಸತೊಂದರ ನಿರ್ಮಾಣವಾಗಬೇಕು. ಈ ಎಲ್ಲಾ ಉದ್ದೇಶಗಳು ಕೈಗೂಡಬೇಕಾದರೆ, ಭಕ್ತ ಜನರ ಉದಾರ ನೆಂವು ಬೇಕೇಬೇಕು.

ಭಕ್ತ ಜನ ಮನೋಭೀಷ್ಟಗಳನ್ನು ಸಿದ್ಧಿಸಿಕೊಡುವ ಶ್ರೀ ಸುಬ್ರಹ್ಮಣ್ಯನ ಕುಕ್ಕೆ ಸುಬ್ರಹ್ಮಣ್ಯವು ಪುಣ್ಯಭೂಮಿ, ಪುರಾಣ ಸಂಕೀರ್ತಿತ ತಪೋಭೂಮಿ. ಧರ್ಮದರ್ಶಿಗಳ ಧರ್ಮನಿಷ್ಠೆ, ದೇವಳದ ಮೆನೇಜರರ ದಕ್ಷತೆ ಮತ್ತು ನೌಕರ ವರ್ಗದವರ ಕರ್ತವ್ಯ ಪರಿಪಾಲನಾ ಬುದ್ಧಿಗಳಿಂದ ದೇವಳ ಅಭಿವೃದ್ಧಿಕಾರ್ಯ ತ್ವರಿತಗತಿಯಿಂದ ಸಾಗುತ್ತಿದೆ. ಇವೆಲ್ಲರ ಉತ್ಸಾಹ ಜತೆಗೆ ಭಕ್ತರು ದಾನದೀಕ್ಷೆ ತೊಡುತ್ತ ಬಂದಲ್ಲಿ ಶ್ರೀ ಸುಬ್ರಹ್ಮಣ್ಯದ ಅಪಾರ ಕೃಪೆಯುಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ಸುಬ್ರಹ್ಮಣ್ಯನ ದರ್ಶನಲಾಭ ಪ



ಡಿ. ಕೃಷ್ಣ ಹೆಬ್ಬಾರ್, ಟಿಂಬರ್
ಕಂಟ್ರಾಕ್ಟರ್. ಪುತ್ತೂರು ದ. ಕ.

ಡೆದು ಅನುಗೃಹೀತರಾಗಿರಿ, ನಿಮ್ಮ ಮನ ಕಲ್ಮಶವನ್ನು ತೊಳೆದುಕೊಳ್ಳಿರಿ. ಒಳ್ಳೆಯ ಕೆಲಸಗಳು ಧನಾಭಾವದಿಂದ ನಿಲ್ಲುವುದಿಲ್ಲವೆಂಬ ಧರ್ಮದರ್ಶಿಗಳ ವಿಶ್ವಾಸವನ್ನು ಉಳಿಸಿಕೊಡಿರಿ.

ಶ್ರೀ ಮಂಜುನಾಥ ಮೋಟಾರ್ ಸರ್ವಿಸ್,
ಉಡುಪಿ

ಮಂಗಳೂರು-ಉಡುಪಿ-ಮುಂಬಯಿ
ಲಗ್ಷುರಿ ಟೂರಿಸ್ಟ್ ಸರ್ವಿಸ್

• ಪ್ರತಿ ಆದಿತ್ಯವಾರ ಬೆಳಿಗ್ಯೆ ಮಂಗಳೂರಿನಿಂದ 6 ಗಂಟೆಗೆ ಹೊರಟು ಮೂಲ್ಕಿ, ಉಡುಪಿ, ಕುಂದಾಪುರ, ಶಿವಮೊಗ್ಗ, ಹರಿಹರ, ಬೆಳಗಾಂವಿಗಾಗಿ ಮರುದಿನ ಮುಂಬಯಿ ತಲಪುವುದು.

ಈ ಕೆಳಗಿನ ಸ್ಥಳಗಳಲ್ಲಿ ನಮ್ಮ ಬುಕ್ಕಿಂಗ್ ಏಜಂಟರಿಂದ ಟಿಕೆಟುಗಳನ್ನು ಪಡೆಯಬಹುದಾಗಿ ಅಪೇಕ್ಷಿಸುತ್ತೇವೆ.

ಮಂಗಳೂರು, ಮುಲ್ಕಿ ಕಿನ್ನಿಗೋಳಿ, ಪಡುಬಿದ್ರೆ
ಬೆಳ್ಮಣ್ಣು ಮುಂಡ್ಕೂರು, ಕಾಪು, ಮಂಚಕಲ್,
ಕಟಪಾಡಿ, ಉಡುಪಿ ಮತ್ತು ಕುಂದಾಪುರ

ಮುಂಬಯಿಯಿಂದ ಪ್ರತಿ ಬುಧವಾರ ಹೊರಟು, ಮರುದಿನ ಹಿಂದೆ ಬಂದು ತಲಪುತ್ತದೆ.

ಹೋಗುವಾಗಲೂ ಬರುವಾಗಲೂ ಬೆಳಗಾಂವಿನಲ್ಲಿ ಉಚಿತವಾಗಿ
ಉಳಕೊಳ್ಳುವ ವ್ಯವಸ್ಥೆ ಇದೆ.

ಮುಂಬಯಿಯಿಂದ ಬರತಕ್ಕವರು ಈ ಕೆಳಗಿನ ವಿಳಾಸದಲ್ಲಿ ವ್ಯವಹರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಶ್ರೀ ಕೃಷ್ಣ ಲಾಡ್ಜು, ಲೆಮಿಂಗ್‌ಟನ್ ರೋಡ್, ಮುಂಬಯಿ

ಫೋನ್ : 353288

Sri Manjunatha Motor Service, UDIPI

Phone · 82

ನಿಸರ್ಗ ಸುಂದರ ಸುಬ್ರಹ್ಮಣ್ಯ ಕ್ಷೇತ್ರವನ್ನು ಸಂದರ್ಶಿಸಿ ಪುಣ್ಯಭಾಗಿಗಳಾಗಿರಿ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S. No 385/1965.

P. N ಸದಾನಂದ ರಾವ್ ಕಡಾ- ವಾದಿರು
ಮತ್ತು
ನೆಲ್ಲಿ ಡಿಸೋಜ ಕೂಡಾ —ಪ್ರತಿವಾದಿರು.

5ನೆ ಪ್ರತಿವಾದಿ ಪೀಯೂಸ್ ಮಸ್ಕರೇಂಜ್ಸ್—ಡೇನಿಯಲ್ ಯಾನೆ ದಣ್ಣು ಮಸ್ಕರೇಂಜ್ಸರ ಮಗ—ಉಡುಪಿ ತಾಲ್ಲೂಕ ಶಿವಳ್ಳಿ ಗ್ರಾಮದ ಪೆರಂಪಳ್ಳಿ—ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ವಾದಿರಿಗೆ ಪ್ರತಿವಾದಿಇಂದ, ತಾ 26—7—1948ರಲ್ಲಾದ ಮೂಲಗೇಣಿ ಚೀಟು ಪ್ರಕಾರ ಬಾಕಿಯಿರುವ ಗೇಣಿ, ಬಡ್ಡಿ ವಗೈರೆಗೆ ಮೋಕ್ಕಂ ದಾವೆ ಹಾಕಲ್ಲ ಮಾಡಿರುವದ್ರಿಂದ ಆ ಬಾಬ್ತು 5ನೆ ಪ್ರತಿವಾದಿಗೇನಾದರೂ ಆಕ್ಷೇಪಣೆ ಇರುವಲ್ಲಿ ಅದನ್ನು ತಾರೀಕು 17—2—1966 ಬೆಳಿಗ್ಗೆ ಘಂ. ೧೧ಕ್ಕೆ ಹಾಜರಾಗಿ ಜ್ಯಾಹೀರು ಮಾಡ ಕೊಳ್ಳದಿದ್ರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. N. Madhava Rao
Vakil for Plaintiffs

ಉಡುಪಿ, 19—1—1966.

Printed & Published by K. H. Shetty at the Navayuga Press, Udipi, S. India.

ಪರ್ಯಾಯ ಮಹೋತ್ಸವ

(ಹದಿನಾಲ್ಕನೇ ಪುಟದಿಂದ)

ದೇಶಾಂತರ ಸಂಚಾರಮಾಡುತ್ತಿರಬೇಕೆಂದು ಶ್ರೀ ಮಧ್ವಾಚಾರ್ಯರೇ ಶಾಸನ ಮಾಡಿದ್ದಾರೆಂದು ಈ ಹಸ್ತಾಕ್ಷರ ಗ್ರಂಥದಲ್ಲಿ ಹೇಳಿದೆ. ಆದುದರಿಂದ ಶ್ರೀಮಧ್ವಾಚಾರ್ಯರ ಕಾಲದಿಂದಲೂ ಎರಡು ತಿಂಗಳು ಮಾತ್ರ ಪರ್ಯಾಯ ಪೂಜಾಕ್ರಮವಿದ್ದು, ಶ್ರೀ ವಾದಿರಾಜ ಸ್ವಾಮಿಗಳು ಪರ್ಯಾಯ ಕ್ರಮದಲ್ಲಿ ಎರಡು ವರ್ಷಾವಧಿ ಮಾಡಿದರೆಂಬ ಕೆಲವರ ಹೇಳಿಕೆಗೆ ಆಧಾರವಿಲ್ಲೆಂದು ತಿಳಿಯುತ್ತದೆ. (ಶ್ರೀ ಆಡ್ಡೆ ವೇದವ್ಯಾಸಾಚಾರ್ಯರು ಬರೆದ "ಶ್ರೀ ಮಧ್ವಾದಿರಾಜ ಗುರುಸಾರ್ವಭೌಮರು' ಎಂಬ ಕರ್ನಾಟಕ ಭಾಷಾತ್ಮಕ ಗ್ರಂಥದಲ್ಲಿ ಪುಟ 160—5ರಲ್ಲಿ ಈ ಹೇಳಿಕೆ ವಿವರಿಸಲಾಗಿದೆ.)

ಪರ್ಯಾಯ ಮಹೋತ್ಸವದ ವಿಚಾರ. ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಪೂಜೆಗಾಗಿ ಸ್ವಾಮಿಗಳ ಪರ್ಯಾಯ ಮಹೋತ್ಸವದ ವಿಶೇಷವೇನೆಂದು ಬರೆಯುವ ಮೊದಲು ಶ್ರೀ ಮಧ್ವಾಚಾರ್ಯಕೃತ ಕೃಷ್ಣ ಪ್ರತಿಷ್ಠಾಪನಾ ವಿಚಾರದ ಒಂದು ಜಿಜ್ಞಾಸ ಉಲ್ಲೇಖಿಸುವುದು ಪ್ರಕೃತೋಚಿತವಿದೆ.

ಉಡುಪಿಯಲ್ಲಿ ಅನಂತನಾಥ— ಚಂದ್ರನಾಥಾಲಯಗಳ ತುಸ ಉತ್ತರಕ್ಕೆ ಶ್ರೀ ಮಧ್ವ ಪ್ರತಿಷ್ಠಾಪಿತ ಶ್ರೀ ಕೃಷ್ಣ ದೇವಾಲಯವು ಕಂಗೊಳಿಸುತ್ತದೆ. ಈ ಶ್ರೀ ಕೃಷ್ಣ ಪ್ರತಿಮೆಯು (ಬಲರಾಮ ವಿಗ್ರಹವೂ) ಶ್ರೀ ಮಧ್ವಾಚಾರ್ಯರಿಗೆ—ತನಗೆ ಅಭಯ ದಾನವಿತ್ತ ಬಗ್ಗೆ-ಆದೊಬ್ಬ ನಾವಿಕನಿಂದ ಚಂದನದಲ್ಲಿ ಕೊಡಲ್ಪಟ್ಟಿತೆಂದು ಪ್ರಚಲಿತ ಕಥೆಯಿದೆ. (ಶ್ರೀ ವಾದಿರಾಜ ಲಿಖಿತವಾದ ಕರ್ನಾಟಭಾಷಾತ್ಮಕ ಪದ್ಯಗಳಲ್ಲಿ ಈ ಕತೆ ವಿಸ್ತಾರವಾಗಿ ಕೇಳಿಬರುತ್ತದೆ). ಪರಂತು, ಶ್ರೀ ಮಧ್ವ ವಿಜಯದಲ್ಲಿ ನಾವಿಕನು ಕೊಟ್ಟುದೆಂಬ ಸಂಗತಿ ಹೇಳಿಲ್ಲ (ಗೋಪಿಕಾಪ್ರಣಯಿನಃ ಪ್ರಿಯಃಪತೇಃ-9-41)(ಅಂತ ಶ್ರೀ ಮಧ್ವರು ತಮಗ ದೊರಕಿದ ಬಲರಾಮ ವಿಗ್ರಹವನ್ನು 'ವಡಭಾಂಡೇಶ್ವರಾಲಯ'ದಲ್ಲಿ ಸ್ಥಾಪಿಸಿದರೆಂದು ಉಡುಪಿ ಕ್ಷೇತ್ರ ಮಹಾತ್ಮ್ಯಗಳಲ್ಲಿ ಹೇಳುತ್ತದೆ. ಪರಂತು, ವಡಭಾಂಡೇಶ್ವರಾಲಯದ ಮುಂಗಡೆ ಕುಕ್ಕುಟ ಚಿಹ್ನಾಂಕಿತ ಧ್ವಜಸ್ತಂಭವಿದೆ; ಅಲ್ಲಿ ಸುಬ್ರಹ್ಮಣ್ಯನ ಪೂಜೆ ದಿಗಳು ನಡೆಯುತ್ತಿವೆಂದು ಬೇರೆ ಕೇಳುತ್ತದೆ.)

ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀ ಕೃಷ್ಣಪ್ರತಿಷ್ಠೆಯನ್ನು ಪೂರ್ವಾಭಿಮುಖವಾಗಿ ನಡಸಿದ್ದರು. ಅದಕ್ಕೆ ಇದಿರಾಗಿ "ಮಧ್ವಸರೋವರ' ವಿದೆ. ಶ್ರೀ ವಾದಿರಾಜ ಸ್ವಾಮಿಗಳ ಕಾಲದಲ್ಲಿ ಕನ್ನಡದ ಹರಿಭಕ್ತಾಗ್ರೇಸರನೂ ವಿಜಾತೀಯನೂ ಆದ ಕನಕದಾಸನು ಉಡುಪಿಗೆ ಬಂದನೆಂದೂ, ಆವನ ಭಕ್ತಿಸ್ತೋತ್ರದಿಂದ ಶ್ರೀ ಕೃಷ್ಣ ವಿಗ್ರಹವು ತಾನಾಗಿ ತಿರುಗಿ ಪಶ್ಚಿಮಾಭಿಮುಖವಾಗಿತ್ತೆಂದು [illegible]. ಪರಂತು, ವಾದಿರಾಜ ಸ್ವಾಮಿಗಳು ಕನಕದಾಸನಂತ ಇತರ ವಿಜಾತೀಯರಾದ ಕೃಷ್ಣಭಕ್ತರಿಗೂ ದೇವಾಲಯ ಪ್ರವೇಶ— ದೇವದರ್ಶನ— ಪ್ರದಕ್ಷಿಣಾದಿಗಳ ಅನುಕೂಲಕ್ಕಿದ್ದುದರಿಂದ, ಆ ನಲುವಾಗಿ ಶ್ರೀ ಕೃಷ್ಣಮೂರ್ತಿಯನ್ನು ಪಶ್ಚಿಮಾಭಿಮುಖವಾಗಿ ಪುನಃ ಪ್ರತಿಷ್ಠಾಪನೆಗೈಸಿದರೆಂಬುದು ಸಮಾದರಣೀಯವಾಗಿದೆ.

ಪರ್ಯಾಯ ಮಹೋತ್ಸವ. ಅಷ್ಟಮಠೀಯ ಸ್ವಾಮಿಗಳನ್ನು ಕುರಿತು ಶ್ರೀ ಕೃಷ್ಣನ "ಅಷ್ಟಮಹಿಷಿ"ಯರೆಂಬ ಉಲ್ಲೇಖವು ಶಿಲಾಶಾಸನಗಳಲ್ಲಿದೆ. ಶ್ರೀ ಮಧ್ವವಿಜಯದಲ್ಲಿ ಅಷ್ಟಮಠಗಳ ಮೂಲಸ್ವಾಮಿಗಳ ಹೆಸರಿದೆ: "ವಶೀಕೃತ ಹೃಷೀಕಾಶ್ಚ ಜನನಾದ್ಯುಪಮರ್ದಿನಃ", ಇ. (15—128).

ಅನಂತೇಶ್ವರ- ಚಂದ್ರೇಶ್ವರ ದೇವಾಲಯಗಳ ಹೊರವಲಯದ ಅಂಗಳದಲ್ಲಿ ಸುತ್ತಲೂ ಪ್ರತ್ಯೇಕಶಃ ಅಷ್ಟಮಠಗಳು ಕಂಗೊಳಿಸುತ್ತವೆ. ಈ ಸ್ವಾಮಿಗಳಿಗೆ ಕಾಲಾಂತರದಲ್ಲಿ ಗ್ರಾಮಾಂತರಗಳಲ್ಲಿ ದತ್ತಿಗಳು ದೊರೆತುದರಿಂದ, ಆಯಾ ಗ್ರಾಮ ನಾಮಗಳಿಂದಲೇ ಈ ಅಷ್ಟಮಠಗಳ ಹೆಸರಿಕೆಯು ತೊಡಗಿದೆ: ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶೀರೂರು, ಸೋದೆ, ಕಾಣಿಯೂರು ಪೇಜಾವರಗಳೆಂದು ಹೆಸರಿಕೆಯು ಗ್ರಾಮಗಳು ದ. ಕ. ಜಿಲ್ಲೆಯಲ್ಲಿವೆ (ಸೋದೆಯು ಉತ್ತರ ಕನ್ನಡ ಜಿಲ್ಲೆಯೆಂದು ಕಳೆದ ಶತಕದಿಂದ ವಿಭಾಗಗೊಂಡಿದೆ). ಉತ್ತರಾದಿ ಮಠದ ಮೂಲಸೀತಾರಾಮ ವಿಗ್ರಹ ಕೂಡಿ ಮೊದಲಲ್ಲಿ ಲೆಕ್ಕಿಸಿ, ಈ ಅಷ್ಟಮಠಗಳ ಮೂಲದೇವರ ಹೆಸರುಗಳು ಹೀಗಿವೆ: "ರಘುಪತಿ ಕಾಲೀಯಮರ್ಧನೌ ಪುನಿರ್ವಿಠ್ಠಲೌ ಸೂಕರಂ ನೃಸಿಂಹಂ ಚ। ಅನ್ಯಂ ವಿಠ್ಠಲಮಗಣಿತಮತಿಭಿಸ್ತೈಃ ಪೂಜಿತಾನ್ ನಮಾಮಿ ಸದಾ."

ಶ್ರೀ ಮಧ್ವಾನು ಶಾಸನದ ಮೇರೆಗೆ ಪಲಿಮಾರು ಮೊದಲಾದ ಅಷ್ಟಮಠೀಯ ಸ್ವಾಮಿಗಳು ಉಡುಪಿ ಕ್ಷೇತ್ರದಲ್ಲಿ ಪರ್ಯಾಯ ಕ್ರಮದಿಂದ ಎರಡು ವರ್ಷಗಳ ಅವಧಿಯಲ್ಲಿ ಶ್ರೀ ಕೃಷ್ಣಪೂಜೆಯನ್ನು ನೆರವೇರಿಸುತ್ತಿದ್ದಾರೆ. ಪರ್ಯಾಯದ ಪೂರ್ವಸನ್ನಾಹಗಳು 1 ವರ್ಷಕ್ಕಿಂತ ಮುಂಚೆ ತೊಡಗುತ್ತವೆ; ಅವುಗಳಲ್ಲಿ ಮುಖ್ಯವಾದ ನಾಲ್ಕು ವಿಷಯಗಳಿವು ಉಲ್ಲೇಖಾರ್ಹಗಳಾಗಿವೆ. ಪರ್ಯಾಯವು ಉತ್ತರಾಯಣ ಸಂಕ್ರಾಂತಿಯಾದ ಮೇಲೆ ನಾಲ್ಕನೆಯ ದಿನದಂದು ನಡೆಯುತ್ತದೆ. ಅಂದಿನಿಂದ ಎರಡು ವರ್ಷ ಆದೊಬ್ಬರು ಸ್ವಾಮಿಗಳೇ ಶ್ರೀ ಕೃಷ್ಣನ ಪೂಜೆ ನಡೆಸುತ್ತಾರೆ. ಆ ಮುಂದಿನ ವೃಶ್ಚಿಕ ಮಾಸದಲ್ಲಿ ಮುಂದಿನ ಸಲ ಪರ್ಯಾಯಕ್ಕೆಳಸುವವರು ಪೂರ್ವಸನ್ನಾಹವಾಗಿ ಪ್ರಥಮತಃ 'ಬಾಳೆ ಮುಹೂರ್ತ'ವೆಂದು ಬಾಳೆತೋಟ ಹಾಗೂ ತುಳಸಿ ತೋಟಗಳನ್ನು ಮಾಡಿಸುತ್ತಾರೆ ಮತ್ತೆ ಮಕರಮಾಸದಲ್ಲಿ ಅಕ್ಕಿಯ ಸಂಗ್ರಹದ ಮುಹೂರ್ತ ನಡೆಯುತ್ತದೆ ಮುಂದಿನ ಮಿಥುನ ಮಾಸದಲ್ಲಿ ಕಟ್ಟಿಗೆಯ ಸಂಗ್ರಹದ ಮುಹೂರ್ತವೂ, ಮತ್ತೆ ವೃಶ್ಚಿಕ ಮಾಸದಲ್ಲಿ ಬತ್ತದ ಸಂಗ್ರಹದ ಮುಹೂರ್ತವೂ ನೆರವೇರುತ್ತವೆ. ಅನಂತರ ಪರ್ಯಾಯಕ್ಕೆ ಸಿದ್ಧರಾಗುವ ಸ್ವಾಮಿಗಳು ತೀರ್ಥಯಾತ್ರೆ ಮಾಡಿ ಧನುರ್ಮಾಸದಲ್ಲಿ ಉಡುಪಿಗೆ ಬಿಜಯ ಮಾಡುತ್ತಾರೆ. ಪರ್ಯಾಯ ದಿನದ ಬೆಳಗಿನ ಹೊತ್ತು ಶ್ರೀ ಮಧ್ವಾಚಾರ್ಯರು ನಿರ್ಮಿಸಿದ, ಉಡುಪಿಗೆ ಅನತಿ ದೂರದ 'ದಂಡತೀರ್ಥ"ದಲ್ಲಿ ಮಿಂದು, ಬಗನೆಮರದ ಜೋಡು ಕಟ್ಟಿಗೆ ಬಂದು ತಂಗುತ್ತಾರೆ. ಪರ್ಯಾಯ ಪೀಠಸ್ಥ ಸ್ವಾಮಿಗಳು ಹೊರತು ಇತರ ಸ್ವಾಮಿಗಳು ಕೂಡಿ ಹೋಗಿ ಅವರನ್ನು ಮೆರವಣಿಗೆಯಲ್ಲಿ ಉಡುಪಿಗೆ ಕರೆಯಿಸಿಕೊಂಡು, ದೇವ ಸಂದರ್ಶನಾದಿಗಳಾದ ಬಳಿಕ, ಶ್ರೀ ಮಧ್ವಾಚಾರ್ಯರ ಮೂಲ ಪೀಠಕ್ಕೆ ಸಾಗುತ್ತಾರೆ. ಆದಾಗಲೇ ಪರ್ಯಾಯ ಪೀಠಾಧಿರೂಢರಾಗಿದ್ದ ಸ್ವಾಮಿಗಳು ಆ ಪೀಠದಲ್ಲಿ ಮುಂದಿನ ಪರ್ಯಾಯಕ್ಕೆಳಸುವ ಸ್ವಾಮಿಗಳನ್ನು ಕೂರಿಸುತ್ತಾರೆ. ಮತ್ತೆ ಶ್ರೀಕೃಷ್ಣನ ಸಮ್ಮುಖಕ್ಕೆ ಬಂದು ಅಕ್ಷಯ ಪಾತ್ರೆ ಹಾಗೂ ಕೃಷ್ಣದೇವಾಲಯದ ಬೀಗದ ಕೈಗಳನ್ನು ಭಾವೀ ಪರ್ಯಾಯ ಪೀಠಸ್ಥರಿಗೆ ಒಪ್ಪಿಸುತ್ತಾರೆ. ಹಿಂದಿನ ಪರ್ಯಾಯ ಪೀಠಸ್ಥ ಸ್ವಾಮಿಗಳನ್ನು ಮೆರವಣಿಗೆಯಿಂದ ಅವರ ಶ್ರೀಮಠಕ್ಕೆ ಕಳುಹಿಸುತ್ತಾರೆ

ಪೂರ್ವ ಪರ್ಯಾಯ ಪೀಠಾಧಿರೂಢರ ಪರ್ಯಾಯ ಕಾಲದ ಕೊನೆಯ ದಿನದಲ್ಲೂ, ಭಾವೀ ಪರ್ಯಾಯ ಪೀಠಾಧಿರೂಢರ ತಮ್ಮ ಪರ್ಯಾಯ ಕಾಲದ ಮೊದಲ ದಿನದಲ್ಲೂ (ಎರಡು ದಿನಗಳಲ್ಲೂ) ಅನೇಕ ಸಹಸ್ರ ಜನರಿಗೆ ಶ್ರೀಕೃಷ್ಣನ ತೀರ್ಥ ಪ್ರಸಾದ ಹಾಗೂ ಅನ್ನಸಂತರ್ಪಣ ಮತ್ತು ದಾನದಕ್ಷಿಣೆಗಳು ಸಲ್ಲುತ್ತವೆ.

ಉಡುಪಿಯಲ್ಲಿ ಶ್ರೀಕೃಷ್ಣನಿಗೆ ಪ್ರತಿದಿನವೂ ಒಂಬತ್ತು ಪೂಜೆಗಳು ಸಲ್ಲುತ್ತವೆ. ನಿರ್ಮಾಲ್ಯ ವಿಸರ್ಜನ ಪೂಜೆ, ಉಷಃಕಾಲ ಪೂಜೆ, ಪಂಚಾಮೃತಾಭಿಷೇಕ ಪೂಜೆ, ಉದ್ವರ್ತನ ಪೂಜೆ, ತೀರ್ಥ ಪೂಜೆ, ಅಲಂಕಾರ ಪೂಜೆ, ಸನಕಾದಿ ಪೂಜೆ, ಮಹಾ ಪೂಜೆಗಳು ಮಧ್ಯಾಹ್ನಕ್ಕಿಂತ ಮೊದಲಲ್ಲೂ; ರಾತ್ರಿಗೆ ರಾತ್ರಿಪೂಜೆಯೂ ನೆರವೇರುತ್ತವೆ. ಹಸ್ತೆಯಲ್ಲಿ ಪ್ರತಿದಿನವೂ ಶ್ರೀ ಕೃಷ್ಣನಿಗೆ ಪ್ರತ್ಯೇಕರೂಪವು ಕಾಣುವಂತೆ ವಿವಿಧಾಲಂಕಾರ ಕರಣವೂ ಇಲ್ಲಿ ವಿಶಿಷ್ಟತಮವಾಗಿದೆ "ನವ ನವಪೂಜೆಯ ವಿವಿಧಾಲಂಕಾರವ ನವನಿಸಿಕೊಳುತಿರುವ" ಎಂದು ಹರಿದಾಸರಲ್ಲೊಬ್ಬನಾದ ಶ್ರೀ ಕಮಲೇಶ ವಿಠ್ಠಲನ ಪದ್ಯದಲ್ಲಿ ಇದು ಸೂಚಿತವಾಗಿದೆ. ಉಡುಪಿಗೆ ಶ್ರೀ ಕೃಷ್ಣ ಭಕ್ತರು ದೇಶಾಂತರಗಳಿಂದ ಪ್ರತಿದಿನವೂ ಬರುತ್ತಿದ್ದು, ಪರ್ಯಾಯಪೀಠಾಧಿರೂಢ ಸ್ವಾಮಿಗಳ ಮೂಲಕ 'ಪೂರ್ಣಸಪ್ತರಾತ್ರಿ ಮಹೋತ್ಸವ' ಮೊದಲಾದ ವಿವಿಧ ಸೇವೆಗಳನ್ನು ಸಲ್ಲಿಸಲು, ಹಲವಾರು ರುಪಾಯಿಗಳನ್ನು ಕಾಣಿಕೆಗೊಡುತ್ತಾರೆ; ಧನ್ಯರಾಗುತ್ತಾರೆ

ವಿ. ಸೂ. ಶ್ರೀ ಮಧ್ವಾಚಾರ್ಯರ ಜೀವನ ಚರಿತ ಹಾಗೂ ಗ್ರಂಥಾದಿಗಳ ಬಗ್ಗೆ ನೋಡತಕ್ಕ ಗ್ರಂಥಗಳು ಶ್ರೀ ಸಿ. ಎಂ. ಪದ್ಮನಾಭಾಚಾರ್ಯರು ಬರೆದ ಆಂಗ್ಲ ಗ್ರಂಥ, ಶ್ರೀ ನಾ. ಶ್ರೀ. ರಾಜಪುರೋಹಿತರ ಕನ್ನಡ ಪುಸ್ತಕ, ಪುಣೆಯ ಶ್ರೀ ಆರ್. ಬಿ. ಅವಧಾನಿಯವರ ಮರಾಠಿ ಗ್ರಂಥ ಇತ್ಯಾದಿ.

"ದ್ವಾರಾವತೀಂ ಸಕಲಭಾಗ್ಯವತೀ ಮುಪೇಕ್ಷ್ಯ।
ಗೋಪಾಲಬಾಲ ಲಲನಾಕರ ಸೋಜನಂ ಚ॥
ಪಾರ್ಥಿಂ ವಧೂಗೃಹಮತೀತ್ಯ ಸ ಮಧ್ವನಾಥೋ।
ಯತ್ರಾಪ್ಯಸ್ತಿ, ತದ್ರಜತಪೀಠಪುರಂ ಗರೀಯಃ॥"

With the Season's Greetings

To all our Patrons & Well-wishers

From.—



K. VASUDEVA KINI

Proprietor

SHARADA INDUSTRIES

RICE, OIL, FLOUR & SAW MILLS

KATAPADI, S KANARA.

Phone 132.

ಶ್ರೀ ತಪ್ಪಲಸೆ ವಿಶ್ವೇಶ್ವರ ಶರ್ಮಾ

ದಾಸಶಿರೋಮಣಿ ಶ್ರೀ ಪುರಂದರದಾಸರು

ಹರಿದಾಸ ಶಿರೋಮಣಿ ಪುರಂದರದಾಸರು ತನ್ನ ಭಕ್ತಿ ಸಾಧನೆಯಿಂದ ಭಗವಂತನ ಸಾಕ್ಷಾತ್ಕಾರ ಹೊಂದಿದವರು. ಅವರ ಭಕ್ತಿ ಭಾವನೆಯಸ್ವಲ್ಪ ಪರಿಚಯದಿಂದಲೇ ಪುರಂದರ ಗುರುವಿನ ಅನನ್ಯ ವ್ಯಕ್ತಿತ್ವದ ಅರಿವಾಗುವುದು.

ಮಹಾತ್ಮರ ಜೀವನ ದೇಶಕ್ಕೆ ಮಾರ್ಗದರ್ಶನ ಮಾಡಿಸುತ್ತದೆ. ಆಗಾಗ ದೇಶದಲ್ಲಿ ಉದ್ಭವಿಸಿದ ಅಸಿಷ್ಟ ಮುಖಗಳನ್ನು ತಿದ್ದುವುದಕ್ಕೂ ದೇಶಕ್ಕೆ ಬೇಕಾದ ಜ್ಞಾನದೀವಿಗೆಗಳನ್ನು ಬೆಳಗಿಸುವುದಕ್ಕೂ ಅನುಸಹಾಯಕವಾಗುತ್ತದೆಂಬುದನ್ನು ತಿಳಿಯಬಹುದಾಗಿದೆ. ಇದಕ್ಕೆ ಹಿಂದಿನ ಅನೇಕ ಮಹನೀಯರ ದಿವ್ಯ ಜೀವನವೇ ಭವ್ಯ ಸಾಕ್ಷಿಯಾಗಿದೆ.

ಈ ಸಾಕ್ಷಿಗಳ ಸಾಲಿಕೆಯಲ್ಲಿ ಶ್ರೀ ಪುರಂದರದಾಸರೂ ಒಬ್ಬರು. ಅವರು ದಾಸಪಂಥವನ್ನು ಹೆಚ್ಚಾಗಿ ಬೆಳೆಸಿದವರು. ಈ ದಾಸ ಪಂಥ ಎಂದಿನಿಂದ ಬೆಳೆಯಿತೆಂಬುದು ತಿಳಿಯದಿದ್ದರೂ ಶ್ರೀ ಪುರಂದರ ದಾಸರೇ ಹೆಚ್ಚಾಗಿ ಬೆಳಸಿದವರಲ್ಲಿ ಮುಖ್ಯರೆಂದು ತಿಳಿಯಲಡ್ಡಿ ಇಲ್ಲ. ಶ್ರೀ ವ್ಯಾಸರಾಯರೇ ಶ್ರೀ ಪುರಂದರ ದಾಸರ ಬಗೆಗೆ ಹೇಳುವಾಗ "ದಾಸರೆಂದರೆ ಪುರಂದರ ದಾಸರಯ್ಯಾ" ಎಂದಿದ್ದಾರೆ. ಅಂದಾಗ ಇವರ ಶಕ್ತಿ ಪ್ರಭಾವ ಎಷ್ಟಿರಬಹುದು?

ಭಕ್ತಿ-ಜ್ಞಾನ-ವೈರಾಗ್ಯಗಳನ್ನು ವಿಕಾಸಗೊಳಿಸಿ ಸರ್ವಾರ್ಪಣ ಭಾವದಿಂದ ಭಗವಂತನಿಗೆ ಶರಣು ಹೋಗುವುದು, ಅವನನ್ನು ಅನೇಕ ನಾಮ-ರೂಪ ಕ್ರಿಯೆಗಳಿಂದ ಆರಾಧಿಸುವುದು, ಸ್ಮರಣ-ಕೀರ್ತನೆ-ಭಜನೆಗಳಿಂದ—ಭಕ್ತಿ ಭಾವದಿಂದ—ಹಾಡಿ—ನಲಿದಾಡಿ—ಕುಣಿದಾಡಿ-ಭಗವಂತನ ಸಾಕ್ಷಾತ್ಕಾರ ಪಡೆಯುವುದು ಇವು ದಾಸ ಪಂಥದ ಮುಖ್ಯ ತತ್ವಗಳಾಗಿವೆ. ಇವನ್ನು ಅನುಷ್ಠಾನದಲ್ಲಿ ತಂದು ಹೆಚ್ಚು ಪ್ರಚಾರಗೊಳಿಸಿದವರು ಶ್ರೀ ಪುರಂದರ ದಾಸರು.

ದಾಸರ ಊರು ಪುರಂದರ ಗಡ. ಅವರ ತಂದೆಯ ಹೆಸರು ವರದಪ್ಪ ನಾಯಕರೆಂದು. ದಾಸರ ಹಿಂದಿನ ಹೆಸರು ಶ್ರೀನಿವಾಸ ನಾಯಕರೆಂದಿದ್ದಿತು. ಅವರಿಗೆ ಸರಸ್ವತೀಬಾಯಿಯೆಂಬ ಹೆಂಡತಿ ಇದ್ದಳು. ರತ್ನಗಳ ವ್ಯಾಪಾರದಿಂದ ಅಪಾರ ಧನ ಸಂಪತ್ತು ಇದ್ದರೂ ತೀರಾ ಕೃಪಣರಾಗಿದ್ದರು.

ಒಮ್ಮೆ ಒಬ್ಬ ಬ್ರಾಹ್ಮಣರು ತಮ್ಮ ಮಗನ ಉಪನಯನಕ್ಕಾಗಿ ಧನ ಸಹಾಯ ಬೇಡಿದರು. ಆದರೆ ನಾಯಕರು "ಇಂದು ಇಲ್ಲ, ನಾಳೆ...." ಹೀಗೆಯೇ ಹೇಳಿ ಕಳಿಸುತ್ತಿದ್ದರು. ಇದನ್ನು ಬಹುದಿನಗಳ ವರೆಗೆ ನೋಡಿದ ಇವರ ಹೆಂಡತಿ ತಮ್ಮ ಮೂಗುತಿಯನ್ನೇ ಕೊಟ್ಟಳು. ಇದನ್ನು ತಿಳಿದ ನಾಯಕರು ತಮ್ಮ ಹೆಂಡತಿಯನ್ನು ದಂಡಿಸಿದಾಗ—ವಿಷ ಕುಡಿದು ಪ್ರಾಣಬಿಡಬೇಕೆಂದು ನಿಶ್ಚೈಸಿ ವಿಷದ ಬಟ್ಟಲು ಹಿಡಿದಾಗ ಅದರಲ್ಲಿ ಮೂಗುತಿ ಕಾಣಿಸಿತಂತೆ. ಇದು ನಾಯಕರಿಗೂ ತಿಳಿದಾಗ ಅವರಿಗೆ "ಇದು ದೇವರ ಮಾಯೆಯೇ ಸರಿ" ಎಂದು ಜ್ಞಾನೋದಯವಾಯಿತು. ಅಂದಿನಿಂದಲೇ ತಮ್ಮ ಎಲ್ಲ ವಿತ್ತ ಸೊತ್ತುಗಳನ್ನು ದೇವರಿಗೆ ಅರ್ಪಿಸಿ ದಾಸರಾದರು. ಅವರ ಊರು ಪುರಂದರಗಡವಾದುದರಿಂದ ಪುರಂದರದಾಸರೆಂಬ ಹೆಸರು ಖ್ಯಾತವಾಯಿತು.

ದಾಸರು ತಮ್ಮ ಕೀರ್ತನೆಗಳಲ್ಲಿ ತಮ್ಮದೇ ಬಾಳಬವಣೆಯಲ್ಲಿ ಕಂಡುಂಡ ಅನುಭವಗಳನ್ನು ಬಳಸಿದ್ದಾರೆ. ಹಣದ ದುರಾಶೆಯಿಂದ-ಹೆಂಡತಿ ಮಕ್ಕಳ ವ್ಯಾಮೋಹ ಇವುಗಳಿಂದ ವೃಥಾ ಜೀವನ ಕಳದೆನೆಂಬ ಭಾವದಿಂದ-"ವಿತ್ತದೊಳು ಮನವಿಟ್ಟು ನಿನ್ನ ಉತ್ತಮ ನಾಮದ ಸ್ಮರಣೆಯ ಬಿಟ್ಟು ಮತ್ತನಾದೆ ಮತಿಗೆಟ್ಟು" ಎಂದು ಮರುಗುತ್ತಾರೆ. "ಲೊಟಿ ಲೊಟಿ ಸಂಸಾರ ದೊಳಗೆ ಸಿಲುಕಿ ನಾ! ವಿಠ್ಠಲ ನಿನ್ನ ಧ್ಯಾನವ ಮರತೆನಯ್ಯಾ" ಎಂದು ಕಳವಳ ಪಡುತ್ತಾರೆ. ತಮ್ಮ ಹಿಂದಿನ ದಿನಗಳಲ್ಲಿ ಅನ್ನದಾನ ಮಾಡಲಿಲ್ಲ, ಸ್ವರ್ಣದಾನ ಮಾಡಲಿಲ್ಲ ಎಂದು ಗೋಗರೆದು-"ಅನ್ಯಾಯ ಮಾಡಿ ಹರಿ ನಿನ್ನ ಮರೆಹೊಕ್ಕೆ" ಎಂದು ಸರ್ವಾರ್ಪಣಾ ಬುದ್ಧಿಯಿಂದ ಬೇಡಿಕೊಳ್ಳುತ್ತಾರೆ. ಕೊನೆಗೆ ತಮ್ಮ ಎಲ್ಲ ಅಪರಾಧಗಳ ನೆರವುಂಟಾಗಿ "ಸರ್ವಾಪರಾಧವ ಕ್ಷಮಿಸಯ್ಯಾ" ಎಂದು ಪ್ರಾರ್ಥಿಸುತ್ತಾರೆ.

ಪ್ರಪಂಚದಲ್ಲಿ ಶ್ರೀ ಹರಿಯನ್ನು ಬಿಟ್ಟು ಯಾರೂ ಗತಿಯಿಲ್ಲವೆಂದು ಅನ್ನಿಸಿದಾಗ—"ಯಾರಿದ್ದರೇನಯ್ಯಾ ನೀನಿಲ್ಲದೆನಗಿಲ್ಲ ಕಾರುಣ್ಯನಿಧಿ ಹರಿಯೇ ಕೈಯ ಬಿಡಬೇಡ" ಎಂದು ಹೇಳಿ ಪರಮಾತ್ಮ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಾರೆ. ಆದರೆ ಮೊದಲಿಗೆ ಪರಮಾತ್ಮ ದರ್ಶನವಾಗದಿರಲು "ಏಕೆ ನಿರ್ದಯನಾಗುವೆ, ರಂಗಯ್ಯ" ಎಂದು ಅಂಗಲಾಚಿ ಬೇಡಿಕೊಳ್ಳುವರು. "ನಾನೇನ ಮಾಡಿದೆನೋ ಕೃಷ್ಣಯ್ಯಾ ನೀ ನನ್ನ ಸಲಹಬೇಕು" ಎಂದು ಬೇಡಿದ್ದಲ್ಲದೇ ಕೊನೆಗೆ—"ಭಕ್ತ ವತ್ಸಲನೆಂಬ ಬಿರುದ ಪೊತ್ತ ಮೇಲೆ ಭಕ್ತಾರಾಧೀನನಾಗಿರ ಬೇಡವೇ" ಎಂದು ಕೇಳುವರು.

ಇಷ್ಟೆಲ್ಲ ಪ್ರಾರ್ಥಿಸಿದ ಮೇಲೆ ಬಹುಶಃ ಅವರಿಗೆ ಕನಸಿನಲ್ಲಿ ಹರಿಯ ದರ್ಶನವಾಗಿರಬೇಕು. ಆಗ ಅವರು—"ಕಂಡೆನಾ ಕನಸಿನಲಿ ಗೋವಿಂದನ" ಎಂದು ಹಾಡಿದ್ದಾರೆ. "ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಂತಿದೆ" ಎಂದು ಆನಂದದಿಂದ ಹಿಗ್ಗುತ್ತಾರೆ. "ಕಣ್ಣಿನೊಳಗೆ ನೋಡು—ಒಳಗಣ್ಣಿನಿಂದಲಿ ನೋಡು ಮೂಜಗ ದೊರೆಯು" ಎಂದು ಭಗವಂತನ ಸಾಕ್ಷಾತ್ಕಾರಕ್ಕಾಗಿ ಪರಿತಪಿಸಿ ಕೊನೆಗೆ ಅವರ ಸಾಧನೆ ಸಿದ್ಧಿಯಾಗಲು "ಬದುಕಿದೆನು ಬದುಕಿದೆನು, ಭವಹಿಂಗಿತು, ಪದುಮನಾಭನ ಪಾದದೊಲುಮೆ ಎನಗಾಯಿತು" ಎಂದು ಪರಮಾತ್ಮ ಸಾಕ್ಷಾತ್ಕಾರವನ್ನು ಹೇಳಿ "ನಿನ್ನ ನೋಡಿ ಧನ್ಯನಾದೆನೋ" ಎಂದು ತೃಪ್ತರಾಗುತ್ತಾರೆ.

ಪ್ರತಿಯೊಂದು ಪದ್ಯದಲ್ಲಿಯೂ ದಾಸರ ಜೀವನದ ಹಿನ್ನೆಲೆಯ ಸೂಕ್ಷ್ಮ ಚಿತ್ರ ನಮಗೆ ದೊರೆಯುತ್ತದೆ. ಆ ಪದ್ಯಗಳೆಲ್ಲಿ ಅವರ ಹೃದಯದಿಂದ ಹೊರ ಹೊಮ್ಮಿದವುಗಳಾದುದರಿಂದ ನಮ್ಮ ಹೃದಯಕ್ಕೆ ನೇರವಾಗಿ ಮುಟ್ಟುತ್ತವೆ. ಇದೇ ರೀತಿಯಾಗಿ ಅವರು ನಾಲ್ಕು ಲಕ್ಷದಷ್ಟು ಕೀರ್ತನೆಗಳನ್ನು ರಚಿಸಿದ್ದಾರೆಂದು ಹೇಳುತ್ತಾರೆ. ಅವುಗಳಲ್ಲಿ ಸಾವಿರ ಕೀರ್ತನೆಗಳು ಅಚ್ಚಾಗಿವೆಯೆಂದು ತಿಳಿಯಲಾಗಿದೆ.

ವೇದೋಪನಿಷತ್ತುಗಳ ಸಾರಸತ್ವಗಳನ್ನು ಪಡೆದ ಅವರ ಕೀರ್ತನೆಗಳಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ ಎಲ್ಲರಿಗೂ ಹಿಡಿಸುವಂತಹ ರೀತಿ. ಅಂಥ ಸೊಗಸು ಸೌಂದರ್ಯಗಳನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಪ್ರಪಂಚದ ಎಲ್ಲ ವಸ್ತು ವ್ಯವಹಾರಗಳಲ್ಲೂ ಹರಿದರ್ಶನ ಮಾಡಿದ್ದರಿಂದ ಎಲ್ಲಕ್ಕೂ ಅದನ್ನೇ ಅನ್ವಯಿಸುತ್ತಾರೆ. ಡೊಂಗುರ ಹೊಯ್ಯುವವನನ್ನು ಕಂಡು—"ಹೊಯ್ಯೋ, ಡಂಗುರವ, ಜಗದಯ್ಯನಯ್ಯಾ, ಶ್ರೀ ಹರಿಯಿಲ್ಲದಿಲ್ಲವೆಂದು" ಹೇಳಿದರೆ ಗಂಟೆಯ ಶಬ್ದ ಕೇಳಿ "ತುಸು ಬಾರಿಸುತಿದೆ ಕೇಳಿ ಶ್ರೀ ಹರಿದಾಸರಿಲ್ಲ' ಎನ್ನುವರು, ಓಲೆಯ ಹಂಚುವನನ್ನು ಕಂಡು— "ಕಾಗದ ಬಂದಿದೆ, ನಮ್ಮ ಕಮಲನಾಭನದು" ಹೀಗೆ ಅನೇಕ ಬಗೆಯ ಕೀರ್ತನೆಗಳಿಂದ ನಮ್ಮ ಮನಸ್ಸು ಭಕ್ತಿ-ಜ್ಞಾನ-ವೈರಾಗ್ಯಗಳಿಂದ ವಿಕಾಸಗೊಳ್ಳುವಂತೆ ಮಾಡಿದ್ದಾರೆ. ತಾವು ಪಡೆದ ಅನುಭವ—ಆನಂದಗಳನ್ನು ಜಗಕ್ಕೆಲ್ಲ—ಜನಕ್ಕೆಲ್ಲ ನೀಡಿದ್ದಾರೆ.

ಪರಮಾತ್ಮನ ತತ್ವವನ್ನು ಸುಲಭವಾಗಿ ತಿಳಿಗನ್ನಡದಲ್ಲಿ ತಿಳಿಯುವಂತೆ ಶ್ರೀ ಪುರಂದರ ದಾಸರು ನಮಗೆ ಮಹದುಪಕಾರ ಮಾಡಿದ್ದಾರೆ. ಅವರ ದಾಸ ಸಾಹಿತ್ಯ ನಮ್ಮ ವಿವೇಕ—ವಿಚಾರದ ವಿಕಾಸಕ್ಕೆ ಅಮೂಲ್ಯ ಸಾಧನ ಸಾಹಿತ್ಯವೇ ಆಗಿದೆ.

(ಹದಿಮೂರನೇ ಪುಟದಿಂದ)

ಕುವದಿಲ್ಲ; ಮುಗುಳ್ನಗುತ್ತ ಮುಂದಾಗುತ್ತಾರೆ. ದೇಶದ ಜನತೆ ಮತ, ಭಾಷೆ, ಪ್ರಾಂತ್ಯ ವಗೈರೆ ಭಿನ್ನಬೇಧವನ್ನು ಸಂಪೂರ್ಣ ತೊರೆದು ಪ್ರಿಯಭಾರತ ಮಾತೆಯ ಜಯ ಜಯಕಾರಕ್ಕೆ ಒಕ್ಕೊರಲಿನಿಂದ ಒಂದಾಗಬೇಕು. ಜನತೆ ತನ್ನ ವಿರಾಟರೂಪದ ಪರಿಚಯವನ್ನು ಪ್ರಜಾಪ್ರತಿನಿಧಿಗಳಿಗೆ ಮಾಡಿಕೊಡಬೇಕು. ಧಗಧಗಿಸುತ್ತಿರುವ ರಾಷ್ಟ್ರೀಯತೆಯ ಮಹಾ ಯಜ್ಞ ಕುಂಡದ ಜ್ವಾಜ್ವಲ್ಯಮಾನ ಪವಿತ್ರಾಗ್ನಿಗಿಂತ ತಮ್ಮ ಹೃದಯಗೂಡಿನಲ್ಲಿರುವ ಮಿಣ್-ಮಿಣಿ ರಾಷ್ಟ್ರೀಯತೆಯ ಕಿಡಿ ಭಿನ್ನವಾಗಿರಲು ಸಾಧ್ಯವಿಲ್ಲವೆಂಬ ಸತ್ಯದ ಅರಿವು ದಿಲ್ಲೀಶ್ವರರಿಗಾಗಬೇಕು.

ಇದು ಪ್ರಜಾಪ್ರಭುತ್ವ. ಅಂದರೆ ಪ್ರಜೆಗಳು ಉಮೇದ್ವಾರರಲ್ಲಿ ಬಹುಮತ ಪಡೆದವರನ್ನು ಪ್ರತಿನಿಧಿಗಳೆಂದು ಚುನಾಯಿಸಿ ಆಡಳಿತ ಲಗಾಮವನ್ನು ಹಿಡಿಯಲು ಅವರನ್ನು ಕಳುಹಿಸಿ ಬಿಟ್ಟು, ತಮ್ಮ ಕೆಲಸ ಅಲ್ಲಿಗೆ ಮುಗಿಯಿತೆಂದು ಸುಮ್ಮಗುಳಿಯುವದೇನು? ಪ್ರಜಾಪ್ರತಿನಿಧಿಗಳೇ ಎಲ್ಲಾ ಕೆಲಸ ಮಾಡುತ್ತಾರೆಂದು ಜನತೆ ಸುಮ್ಮನೆ ಇರುವದು ನ್ಯಾಯವೇನು? ಜನತಾ ಜನಾರ್ಧನ ತನ್ನ ವಿರಾಟರೂಪದ ದರ್ಶನ ಮಾಡಿಸದೇ ಉಳಿದರೆ ಜನತಾ ಪ್ರತಿನಿಧಿಗಳು ಪ್ರಜ್ಞಾವಂತರಾಗುತ್ತಿದ್ದರೇ? ಇಲ್ಲಿ ಸೂಚಿಸಿರುವ ಘಟನೆಗಳು ಕೇವಲ ಉದಾಹರಣೆಗಳು ಅಷ್ಟೇ. ಪ್ರತಿನಿಧಿಗಳೇ ಎಲ್ಲಾ ಮಾಡುತ್ತಾರೆಂದು ಜನತೆ ಸುಮ್ಮಗುಳಿಯುತ್ತಿದ್ದಲ್ಲಿ ಪ್ರವಾಹದ ದಿಕ್ಕೇ ಬದಲಾಗುತ್ತಿತ್ತು. ಅಲಿಘಡದಲ್ಲಿ ಒಂದು ಹಿಂದೂ ಪಿಳ್ಳೆಯೂ ನೋಡಲಿಕ್ಕೆ ಸಿಗುತ್ತಿರಲಿಕ್ಕಿಲ್ಲ. ಕನ್ಯಾಕುಮಾರಿಯತ್ತ ತಪ್ಪಿಯೂ ಹಿಂದೂಗಳು ಕಾಲಿಡಲು ಸಾಧ್ಯ ಇರಲಿಲ್ಲ. ತಮಿಳು ನಾಡಿನಲ್ಲಿ ಎಚ್ಚರ ತಪ್ಪಿಯೂ ಹಿಂದಿ ಶಬ್ದವನ್ನಾಡುವಂತಿರಲಿಲ್ಲ. ನಾಗಾಲೇಂಡು ನಮ್ಮದೆಂದ ಕರ್ಣಾಟಕದವನೊಬ್ಬ ಕತ್ತೆತ್ತಿ ಹೇಳುವಂತಿರಲಿಲ್ಲ. ತುಟಿ ಕಚ್ಚಿಕೊಂಡೇ ಕಚ್ಛೆಂದು ಭಾರತೀಯರು ಹೇಳಬೇಕಾಗುತ್ತಿತ್ತು. ಪಂಜಾಬಿಗಳಲ್ಲದವರು ಪಂಜಾಬಿನಿಂದ ಪಲಾಯನ ಮಾಡಬೇಕಾಗುತ್ತಿತ್ತು.

ಉತ್ತಮ ಪ್ರತಿನಿಧಿಯನ್ನೇ ಆರಿಸಿಕಳುಹಿಸುವದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರಮುಖ ಪಾತ್ರವಿರುವಂತೆ ಪ್ರತಿಯೊಂದಕ್ಕೂ ಪ್ರತಿನಿಧಿಗಳ ಮುಖವನ್ನೇ ಪಿಳಪಿಳನೆ ನೋಡುತ್ತ ಕುಳಿತುಕೊಳ್ಳುವದಕ್ಕಿಂತ ತಮ್ಮ ಪ್ರಭಾವದ ಪರಿಚಯವನ್ನು ಸಂದರ್ಭಕ್ಕನುಸಾರವಾಗಿ ಮಾಡಿಸಿಕೊಡುವದೂ ಪ್ರಜೆಗಳ ಪ್ರಮುಖ ಪಾತ್ರವಿದೆ, ಆದ್ಯ ಕರ್ತವ್ಯವಿದೆ.

ಇದೀಗ ಪ್ರಕಟವಾಗಿದೆ-

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎಸ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ............................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ —

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

...ted, Printed & Published by K. H. Shetty at the Navayuga Press

ಸಾಹಿತ್ಯ ಸಂಬಂಧಿಕಗಳು

(ಹನ್ನೆರಡನೇ ಪುಟದಿಂದ)

ಯುಳ್ಳವರಲ್ಲಿ ಅದು ಮುಂದುವರಿಯುತ್ತಾ ಹೋಗುತ್ತದೆ. ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಕನಿಷ್ಠವು ಸೇರಿ ಸೇರಿದಂತೆ, ಅದರಿಂದಾಗುವ ಪರಿಣಾಮವೂ ಹೆಚ್ಚುತ್ತಾ ಹೋಗುತ್ತದೆ; ಬರಿಬರೀ ಯೋಗ್ಯವೆನಿಸುತ್ತದೆ ನಾಲ್ಕು ಮಂದಿ ಓದಿ ಮೆಚ್ಚಿಕೊಳ್ಳಲೂ ತಕ್ಕುದಾಗುತ್ತದೆ ಇಂತಹ ಕೃತಿಗಳ ಸಾಹಿತ್ಯ ಹೀಗೆಯೇ ಸಾಗುತ್ತಿದೆ. ಸಾಹಿತ್ಯ ಪ್ರಪಂಚದ ಗತಿ

ಪದ್ಯ ಗದ್ಯ ಸಾಹಿತ್ಯ

ಕವಿ, ಕವಿತೆ ಎಂದ ದರಿಂದ ಇದುವರೆಗೆ ಪದ್ಯ ಕಾವ್ಯಗಳನ್ನಷ್ಟೇ ಗುರಿಯಿಟ್ಟುಕೊಂಡು ಹೇಳಿದುದೆಂದು ತಿಳಿಯಬಾರದು. [illegible] ಕಾವ್ಯವನ್ನಷ್ಟೇ ಬರೆಯುವವನೆಂದರ್ಥವಲ್ಲ. ಕಾವ್ಯ ಬರೆಯುವವನೇ ಕವಿಯೆಂಬ ಮಾತು ಸ್ಥೂಲ ದೃಷ್ಟಿಯಲ್ಲಿ ಬಳಕೆಯಲ್ಲಿದ್ದರೂ ಕವಿ ಶಬ್ದದ ಅರ್ಥವು ಬಹು ದೊಡ್ಡದು. ಸಂಸ್ಕೃತ [illegible] ಬ್ರಹ್ಮನಿಗೇ "ಕವಿ" ಎಂಬ ಹೆಸರುಂಟು. 'ಕವಿ ಬ್ರಹ್ಮನಿಗಿಂತ ಏನು ಕಡಮೆ?' [illegible] ಎಂಬ [illegible] ಶಕ್ತಿ ಬೇಕು [illegible] ಮಾರ್ಗಗಳಿಂದ ಒಂದು ಪುಸ್ತಕದ [illegible] ಪದ್ಯ ಕವಿ [illegible] ಹೇಳಿ ಒಡಬಲ್ಲನು. ಆದು ಅನನ್ಯಸಾಧಾರಣ ವಿಸ್ತಾರ ಸಾಮರ್ಥ್ಯ, [illegible]. ಆದರೆ ಅದು ಎಲ್ಲ ಕವಿಗಳಿಂದಲೂ ಸಾಧ್ಯವಾಗುವ ಮಾತಲ್ಲ. ಅದನ್ನು ತಿಳಿಯದವರಿಗೆ ವ್ಯಾಖ್ಯಾನಿಸಿ ಹೇಳಲು ತಿಳಿದವರಾದವರೂ ಬೇಕಾಗುತ್ತಾರೆ. ಅದು ಸುಲಭಗ್ರಾಹ್ಯವಾಗಬೇಕಾದರೆ ಎಷ್ಟೋ ಒಬ್ಬೊಬ್ಬರು ಸರ್ವಜ್ಞನಂತೆ, ಪುರಂದರದಾಸರಂತೆ ಬೇಂದ್ರೆಯಂತೆ ಜನಪದ ಕವಿ ಆಗಿರಬೇಕು. ನಿರಕ್ಷರ ಕುಕ್ಷಿಗಳಾದ ಹೆಂಗಸರ ಬಾಯಿಯಿಂದ ಹೊರಟ ರಸ ಬುಗ್ಗೆಗಳಂತಹ ಜನಪದ ಹಾಡುಗಳು ಸಾಮಾನ್ಯವಾದುವೇನಲ್ಲ. ಅವು ಅವರ [illegible] ಪ್ರತೀಕವಾದುವು. ಈ ಅನುಭವ [illegible] ಗಿದವ [illegible] ಅವನು ಉತ್ತಮ ಕವಿ ಎನಿಸುತ್ತಾನೆ. ಇಲ್ಲವೇ ಪಾಂಡಿತ್ಯ ಪ್ರದರ್ಶನ ಮಾಡುತ್ತಾನೆ. ಒಟ್ಟಿನ ಮೇಲೆ ಜನ [illegible] ಣೀಯವಾದ ಪದ್ಯ ಕವಿಗಳು, ಕವನ ಅಂತಹುದೇ ಪದ್ಯ ಸಾಹಿತ್ಯದ ಮೇಲೆ ನಾವು ಅನೇಕರ ಆದರವೂ ಕಡಿಮೆ. ಅದಕ್ಕೆ ಒಳ್ಳೆಯ ಕಂಠ ಸ್ವರವೂ ಬೇಕಾಗುತ್ತದೆ. ಅಂಥ ಪ್ರತಿಭೆ ಮಾಧುರ್ಯತೆ ಎಲ್ಲರಿಗೂ ಇಲ್ಲವಲ್ಲ.

ಆದುದರಿಂದ [illegible] ಎಲ್ಲರಿಗೂ ಸುಲಭವಾದ ಗದ್ಯ ಸಾಹಿತ್ಯವೇ ಹೆಚ್ಚುತ್ತ ಬಂತು. ಅದರ ರಚನೆಯೂ ಹೆಚ್ಚುತ್ತ ಬಂತು. ಇದು ಸಹಜ, ಮತ್ತು ಅನಿವಾರ್ಯ. ತಪ್ಪೆನ್ನುವಂತಿಲ್ಲ. ಹೀಗಾದುದರಿಂದ ಪದ್ಯ ಸಾಹಿತ್ಯವು ಅಳಿದು ಹೋಗುತ್ತದೋ ಎಂದು ಯಾರೂ ಹೆದರಬೇಕಾಗಿಲ್ಲ. ಅದರ ಮಿತಿಯಲ್ಲಿ ಅದು ತನ್ನಿರುವಿಕೆಯನ್ನು ಉಳಿಸಿಕೊಂಡೇ ಬಂದಿತು. ಕಾಲಕ್ಕೆ ತಕ್ಕ ಹೊಸ ಮಾರ್ಪಾಟಿನೊಂದಿಗೆ ಸಾಗೀತು.

ಸರಿ. ನಾಲ್ಕು ಮಾತಿನಲ್ಲಿ ಹೇಳುವ ಕವಿತೆಗಿಂತ ಪುಟ ತುಂಬ ಬರೆಯಬೇಕಾಗುವ ಗದ್ಯ ಸಾಹಿತ್ಯವನ್ನು ಕವಿತೆಗಿಂತ ಕೆಳಗಿನ ಮಟ್ಟವೆಂದು ಹೇಳಲಾದೀತೇ ಎಂದಿಗೂ ಕೂಡದು. ನಾಲ್ಕು ಸಾಲುಗಳಲ್ಲಿ ತುಂಬಿಸುವಂಥ ಧ್ವನಿಯನ್ನು ಪುಟತುಂಬ ಬರೆಯಲಿಕ್ಕೂ ಕವಿತಾ ಶಕ್ತಿ ಬೇಕು. ಪದ್ಯಗಳಿಗೆ ಯತಿ, ಗಣ, ಪ್ರಾಸ ಮೊದಲಾದ ನಿಯಮಗಳಿರುವಂತೆಯೇ ವಾಚನಕ್ಕೂ ತೂಕವಿದೆ ಛಂದವಿದೆ, ಅರ್ಥವತ್ತಾದ ಶಬ್ದಗಳ ಜೋಡಣೆಯಿದೆ, ಶೈಲಿಯ ಪ್ರವಾಹಗತಿಯೂ ಇದೆ. ವ್ಯರ್ಥ ಪದಪುಂಜಗಳಿದ್ದರೆ ಗದ್ಯವೂ ಶುಷ್ಕವಾದೀತು.

ನಿಜವಾದ ಸಂಗತಿಗಳು

ಇತ್ತೀಚಿನ ವರ್ಷಗಳಲ್ಲಿ ಜನತೆಯಲ್ಲಿ ಕಾವ್ಯ ವಾಚನಾಸಕ್ತಿ ತಗ್ಗುತ್ತಾ ಬಂದು, ಗದ್ಯ ವಾಚನಾಸಕ್ತಿ ಹೆಚ್ಚುತ್ತಾ ಬರಲು ಕಾರಣ ಗದ್ಯವು ಸುಲಭ ಗ್ರಾಹ್ಯವಾದುದರಿಂದಲೇ. ಅಂತೆಯೇ ಆಧುನಿಕ ಕವಿಗಳು ಕೂಡ ಗದ್ಯ ಸಾಹಿತ್ಯವನ್ನೇ ಹೆಚ್ಚಾಗಿ ಬೆಳಸಿದರು.

ಹೀಗೆ ರಸಾತ್ಮಕವಾದ ಲಲಿತ ಸಾಹಿತ್ಯವನ್ನು ರೂಪಿಸುವವರಿಗೆಲ್ಲಾ ಒಟ್ಟಾಗಿ "ಸಾಹಿತಿಗಳು" ಎನ್ನುತ್ತೇವಷ್ಟೆ! ಈ ಸಾಹಿತಿಗಳೆಲ್ಲರೂ ಉತ್ಕೃಷ್ಟ ಪ್ರತಿಭಾನ್ವಿತ ಸಾಹಿತಿಗಳಲ್ಲ; ಜೊಳ್ಳು ಸಾಹಿತಿಗಳೆಷ್ಟೋ ಮಂದಿ ಇದ್ದಾರೆ. ಈ ಜೊಳ್ಳಿನವರ ವಿವರಣೆಯನ್ನು ಪ್ರತ್ಯೇಕವಾಗಿ ಹೇಳುವುದರ ಬದಲಿಗೆ, ನಿಜವಾದ ಸಾಹಿತಿಗಳನ್ನಿಷ್ಟು ಪರಿಶೀಲಿಸಿದರೆ, ಇದಕ್ಕೆ ಹೊರತಾದವರೆಲ್ಲ ಜೊಳ್ಳಿನವರೆಂದೇ ಆಗುತ್ತದೆ.

ಸಾಹಿತಿಗಳು ಏತಕ್ಕಾಗಿ ಕೃತಿಗಳನ್ನು ರಚಿಸುತ್ತಾರೆ? ಹಣ ಸಂಪಾದಿಸಲಿಕ್ಕಾಗಿಯೊ? ಬರಿಯ ಹೊಗಳಿಕೆಗಾಗಿಯೋ? ಜನಹಿತಕ್ಕಾಗಿಯೊ? ಮತ್ತೇತಕ್ಕಾಗಿ?

ಜನಹಿತವು ಸಾಹಿತ್ಯದ ಉದ್ದೇಶವಾಗಿದ್ದರೂ, ಅದರಲ್ಲಿ ಅವನ ಹಿತವೂ ಅಡಗಿದೆ ಎಂಬುದನ್ನು ನೆನೆಯಬೇಕಾಗಿದೆ. ಮೇಲಿನ ಪ್ರಶ್ನೆಗಳೇಳುತ್ತವೆ. ಕವಿಗೆ ಸಾಹಿತ್ಯ ರಚನ ಪ್ರಕೃತಿ ಸಹಜವಾದ ಸ್ವಭಾವವೆಂದೂ ಮೇಲೆ ಸೂಚಿಸಲಾಗಿದೆ. ಅದು ಅವನ ಮಟ್ಟಿಗೆ ಪರಿಮಿತವಾಗಿದ್ದರೆ ಅಲ್ಲಿಗೇ ಬಿಡಬಹುದಿತ್ತು. ಆದರೆ ಸಾಹಿತ್ಯದ ಸೃಷ್ಟಿಯ ಪರಿಣಾಮ ಸಮಾಜದ ಮೇಲೆ ಆಗುವುದರಿಂದಲೇ, ಅದನ್ನು ಇನ್ನಿಷ್ಟು ವಿವರಿಸಬೇಕಾಗುತ್ತದೆ.

ಹೊಗಳಿಕೆಯೂ ಹಣವೂ ಅವನ ಕೃತಿಯ ಯೋಗ್ಯತಾನುಸಾರವಾಗಿ ತನ್ನಂತೆ ಬರುವಂತಹದದರಿಂದ, ನಿಜವಾದ ಸಾಹಿತಿ ಅದಕ್ಕಾಗಿಯೇ ಬರೆಯುವನೆಂದು ಹೇಳಲಾಗುವುದಿಲ್ಲ ಅವನು ತನ್ನ ಕೃತಿಯನ್ನು ಪ್ರಚಾರ ಪಡಿಸುವುದಕ್ಕಿಂತ ಎಷ್ಟೋ ವರ್ಷಗಳ ಪೂರ್ವದಿಂದಲೇ ಬರೆಯುವ ಅಭ್ಯಾಸವನ್ನಿಟ್ಟುಕೊಂಡಿರುತ್ತಾನೆ ಎಷ್ಟೋ ಬರೆದು, ಎಷ್ಟೋ ಹರಿದು ಎಷ್ಟೋ ತಿದ್ದಿ, ಅಭ್ಯಾಸವು ಪಕ್ವ ಸ್ಥಿತಿಗೆ ಬಂದ ನಂತರವೇ ಅವನ ಕೃತಿ ಪ್ರಚಾರ ಯೋಗ್ಯವಾಗುತ್ತದಷ್ಟೇ ಹಾಗೆಯೇ ಆಗಲೂ ಬೇಕು. ಹೀಗೆ ಪ್ರಚಾರವಾದರೂ ಎಷ್ಟೋ ಬಿಸಿಯೇಟುಗಳಿಗೆ ಗುರಿಯಾಗಿಯೇ ಅವನು ಚೆನ್ನಾಗಿ ಮಾಗಬೇಕಾಗುತ್ತದೆ. ಹೀಗೆ ಅವನು ಲೇಖನ ವ್ಯಸನಾಯುದಲ್ಲಿ [illegible] ಜನರು ನೋಡಿ ಒಪ್ಪಿಕೊಟ್ಟು ಪ್ರೋತ್ಸಾಹಪಡಿಸುವಾಗಲೇ ಅವನಿಗೆ ಪ್ರಕಟಿಸುವ ಇಚ್ಛೆಯುಂಟಾಗುತ್ತದೆ ಅದರಿಂದಿಗೆ ಹೊಗಳಿಕೆಯ ಬಯಕೆ ಇದ್ದರೂ ಇದ್ದೀತು. ಅಥವಾ 'ಎಂತೆಂತಹ ಮಹಾ ಸಾಹಿತಿಗಳ ಮುಂದೆ ನನ್ನದೇನು ಕಸವೋ' ಎಂಬ ಭಾವನೆ ಬಂದರೂ ಬಂದೀತು—ಆತ್ಮವಿಶ್ವಾಸ ಪರಿಪಕ್ವನಾಗಿರದಿದ್ದರೆ.

ಹಣವೂ ಹಾಗೆಯೇ, ತನ್ನ ಕೃತಿಗೆ ಬೆಲೆ ಬರುವಾಗ ಅವನೂ ಅದರಲ್ಲಿ ಆಸೆಪಟ್ಟರೆ ತಪ್ಪಲ್ಲ. ಆದರೆ ಹಣಕ್ಕಾಗಿಯೇ ಗ್ರಂಥ ರಚನೆ ಮಾಡುವುದಾದರೆ ಗ್ರಂಥ ರಚನೆಯೊಂದು ಹೊಟ್ಟೆ ಹೊರೆಯುವ ಉದ್ಯೋಗವೆನಿಸಬೇಕಿತ್ತು. ಪ್ರತಿಭಾವಂತರಿಗೆ ಈ ಉದ್ಯೋಗ ಸಹಜವಾಗಿಯೇ ಪ್ರಾಪ್ತವಾಗುವುದಾದರೂ, ನಮ್ಮ ದೇಶದಲ್ಲಿ ಸಾಗುತ್ತಿರುವ [illegible]. ಪತ್ರಿಕೆಗಳೂ [illegible] ಉದ್ಯೋಗವೆನಿಸುವುದೇ ಕಡಿಮೆ, ಗ್ರಂಥರಚನೆಗೆ ಆ ಯೋಗ್ಯತೆ [illegible] ನಮ್ಮ ದೇಶದಲ್ಲಿ [illegible]. ಹಾಗಾಗಿ ಸಾಹಿತಿಗಳೆಲ್ಲ ಹೊಟ್ಟೆ ಹೊರೆಯುವ ಬೇರೊಂದು ಉದ್ಯೋಗದಲ್ಲೇ ಇರುತ್ತಾರೆ.

ಅಂತೆಯೇ ಸಾಹಿತ್ಯ ರಚನೆ ಸಾಹಿತಿಯ ಒಂದು ಚಟವೆನಿಸುತ್ತದೆ. ಅಭ್ಯಾಸದಿಂದ ಪರಿಪಕ್ವವಾಗಿ ಆ ಮೇಲೆ ಪ್ರಕಟವಾದರೇನೇ ಚೆನ್ನು [illegible] ಗುಣಾವಗುಣಗಳಿಗೆ ತಕ್ಕಹಾಗೆ, ಅವನಿಗೆ ಹಣವೂ ಹೊಗಳಿಕೆಯೂ ಬರುತ್ತವೆಯೇ ಹೊರತು, ಹಣವೂ ಹೊಗಳಿಕೆಯೂ ಅವನ ಕೃತಿ ರಚನೆಗೆ ಕಾರಣಗಳೆನಿಸುವುದಿಲ್ಲ.

ಒತ್ತಾಯದ ಬರೆವಣಿಗೆ

ಹೀಗಿದ್ದೂ ಕೆಲವು ನಿಜವಾದ ಸಾಹಿತಿಗಳಿಂದ ಕೂಡ ಕೆಲವು ನೀರಸಗ್ರಂಥಗಳು ಬರುವುದುಂಟು ಅದಕ್ಕೆ ಪ್ರಕಾಶಕರೇ ಕಾರಣ ಎನ್ನಬಹುದು. ಕೆಲವಾರು ಉತ್ತಮ ಪುಸ್ತಕಗಳನು ಬರೆದು ಜನತೆಯ ಪ್ರೀತಿಗಳಿಸಿದ ಸಾಹಿತಿಗಳಿಂದಲೇ ಮತ್ತೆ ಮತ್ತೆ ಗ್ರಂಥಗಳನ್ನು ಕೋರುತ್ತಾರೆ ಪ್ರಕಾಶಕರು ಇಂಥ ವಿಷಯದ ಮೇಲೆ ಪುಸ್ತಕ ಬರೆದುಕೊಡಿ ಎಂತಲೂ ಕೇಳುತ್ತಾರೆ. ಇಂತಿಷ್ಟು ಪುಟಗಳಿರಬೇಕೆಂಬ ನಿರ್ಬಂಧವನ್ನು ಹಾಕುತ್ತಾರೆ. ಹೀಗೆ ಪ್ರತಿಫಲದ ಆಸೆ, ಕಟ್ಟುನಿಟ್ಟು, ಒತ್ತಾಯಗಳಿಗೊಳಗಾಗಿ ಬರೆಯಲ್ಪಟ್ಟ ಗ್ರಂಥವು ಸಹಜ ಪ್ರೇರಣೆ

ಗೀತಾ
ಅಗರಬತ್ತಿಗಳು

ಮನಮೋಹಕ ಸುವಾಸನೆಯಿಂದ
ಮಿತವಾದ ಬೆಲೆಯಿಂದ
ಜನಪ್ರೀತವಾಗಿ
ಮನೆಮನೆಗಳಲ್ಲಿಯೂ ಸ್ವಾಗತ ಪಡೆದಿರುವ
ಅಗರಬತ್ತಿ

ಗೋಲ್ಡನ್ ಸ್ಟಾರ್ ಮೊದಲಾದ ವಿವಿಧ ಅಗರಬತ್ತಿಗಳು ಎಲ್ಲೆಲ್ಲೂ ದೊರೆಯುತ್ತವೆ.

ಫೋನ್ 3875 ಗ್ರಾಮ್ಸ್: ಬ್ಲೂ ಸ್ಟಾರ್

ರಮೇಶ ಪರ್‌ಫ್ಯೂಮರಿ ವರ್ಕ್ಸ್ (ರಿ.)
ತಯಾರಕರು ಹಾಗೂ ಆಮದು ಮತ್ತು ರಫ್ತುಗಾರರು
ಕದ್ರಿ ಮಂಗಳೂರು-2 : : ಮೈಸೂರು ರಾಜ್ಯ.

ಯಿಂದ ಬರೆದ ಪುಸ್ತಕದ ಹಾಗಿದ್ದೀತೆ? ಇರಲು ಸಾಧ್ಯವಿಲ್ಲ.

ಬೇಸರತರಿಸುವ ವರ್ಣನೆಗಳೂ, ವರ್ಣನೆಗಳೇ ಇಲ್ಲದ ವರದಿಯಂಥವೂ, ವಿಪುಲಾಕ್ಷರಗಳಿಂದ ತುಂಬಿ ಕಣ್ಣಿಗೆ ಶ್ರಮ ವೀಯುವಂಥವೂ, ಹೆಚ್ಚು ಪುಟಗಳನ್ನು ತೋರಿಸಲು ಅಡಿಗಡಿಗೂ ಪ್ಯಾರಾ ಒಡೆದಿಟ್ಟಿರುವ ಪುಸ್ತಕಗಳೂ ಮೇಲೆಹೇಳಿದ ಏನೋ ಒಂದು ಕೃತಕತೆಯನ್ನೇ ವಾಚಕರಲ್ಲಿ ಒಡಮೂಡಿಸಿಯಾವು.

ನಿಜವಾದ ಸಾಹಿತಿಯ ಸ್ವಭಾವವೆಂದರೆ, ತಾನು ಅನುಭವಿಸಿದ ಅನುಭೂತಿಗಳನ್ನು ತನ್ನಂತಿರುವ ಅನ್ಯರಿಗೂ ರೂಪಿಸಿಕೊಡುವುದೇ ಉದಾತ್ತವೂ ಸೂಕ್ಷ್ಮವೂ ಆದ ಈ ಉದ್ದೇಶವು ಎಲ್ಲರಿಗೂ ಇದೆಯೆಂದು ಮೇಲೆ ಸೂಚಿಸಲಾಗಿದ್ದರೂ, ಎಲ್ಲರಿಂದಲೂ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಾದುದರಿಂದಲೆ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲದುದರಿಂದಲೇ, ಸಾಹಿತಿಗಳು ರೂಪಿಸಿ ಕೊಟ್ಟದ್ದಕ್ಕೆ ಜನತೆ ಸ್ವಾಗತ ನೀಡುತ್ತದೆ.

ಸಾಹಿತಿ ಸ್ವಯಂ ಆನಂದದಿಂದ, ತನ್ನಂ ತಾನೇ ಪ್ರೋತ್ಸಾಹಿಸಿಕೊಂಡು ಕೃತಿರಚನೆ ಮಾಡಿ ಜನತೆಯ ಮುಂದಿಡಿಸಿದಾಗ, ಜನತೆ ಪ್ರೋತ್ಸಾಹಿಸಿದಾಗ, ಆದರಭಾವದಿಂದ ಕುಂದುಕೊರತೆಗಳನ್ನು ಅವನಿಗೆ ತಿಳಿಸಿದಾಗ, ನಿಜವಾದ ಸಾಹಿತಿ ಅದರಿಂದ ನಿರುತ್ಸಾಹಿಯಾಗುವುದಿಲ್ಲ. ಕೋಪಗೊಳ್ಳುವುದೂ ಇಲ್ಲ. ಬದಲಾಗಿ ಇನ್ನಷ್ಟು ಕಳೆಗೊಳ್ಳುತ್ತಾನೆ.

ಹೀಗೆ ಸಾಹಿತಿ ಸ್ವಸಂತೋಷದಿಂದಲೇ ಕೃತಿ ರಚನೆ ಮಾಡುವನೆಂದಾಯಿತು. ಅದನ್ನು ಜನತೆಯ ಮುಂದಿಡುವುದಾದರೂ ಅವನ ಸ್ವಭಾವವೆಂದೂ ಹೇಳಿದ್ದಾಯಿತು. ಜನತೆಯೇ ಅವನನ್ನು ತನ್ನೆಡೆಗೆ ಎಳೆದುಕೊಳ್ಳುವುದೂ ತಪ್ಪಲ್ಲ. ಕೋಗಿಲೆ ಊರೊಳಗೇ ಹಾಡಿದಾಗ ನಾವೆಲ್ಲಾ ಅದನ್ನು ಕೇಳಿ ಆನಂದಿಸುತ್ತೇವೆ. ನಾವು ಆನಂದಿಸುತ್ತೇವೆಂಬುದಕ್ಕಾಗಿಯೇ ಅದು ತನ್ನ ಹಾಡಿನಲ್ಲಿ ಯಾವೊಂದು ಹೆಚ್ಚು ಕಡಮೆ ಮಾರ್ಪಾಡನ್ನೂ ಮಾಡುವುದಿಲ್ಲ. ಮಾಡಲು ಸಾಧ್ಯವೂ ಇಲ್ಲ. ಆದರೆ ಮಾನವರು ಪಕ್ಷಿಗಳಲ್ಲ. ಒಳ್ಳೆಯ ಮಾರ್ಪಾಡುಗಳನ್ನು ಮಾಡಿಕೊಳ್ಳಲು ತಕ್ಕ ಬುದ್ಧಿ ಅವರಿಗಿದೆ, ಅಂತೆಯೇ ಜನತೆಯಿಂದ ಹೆಚ್ಚಾಗಿ ಆಕರ್ಷಿಸಲ್ಪಡುವ ಸಾಹಿತಿಗಳು ಕಟ್ಟುನಿಟ್ಟಿಗೆ ಬೀಳದೆ ತಮ್ಮ ಸಹಜ ನೆಲೆಯಲ್ಲಿಯೇ ತಮ್ಮ ಮಹತ್ತ್ವವನ್ನು ಬೆಳೆಸಿಕೊಂಡು ಹೋಗಬೇಕು.

ಸಣ್ಣ ಕತೆಗಳು, ಪತ್ರಿಕೆಗಳು

ಈಗ ಮುದ್ರಾಲಯಗಳೂ, ಪತ್ರಿಕೆಗಳೂ, ಪ್ರಕಾಶನ ಸಂಸ್ಥೆಗಳೂ ಹೆಚ್ಚಾಗಿವೆ ಅಂತೆಯೇ ಸಾಹಿತ್ಯದ ಓಘಕ್ಕೂ ಜೋರು ಬಂದಿದೆ. ವ್ಯಾಪಾರ ಸ್ವರೂಪವು ಪಾರ್ಪಟ್ಟಿದೆ. ಸ್ಪರ್ಧೆಯುಂಟಾಗಿದೆ. ವಾಚನಾಭಿರುಚಿ ಹೆಚ್ಚಿದೆ, ಪತ್ರಿಕೆಗಳೂ ಹೆಚ್ಚುತ್ತಿವೆ. ಸಣ್ಣ ಕತೆಗಳಿಲ್ಲದ ಪತ್ರಿಕೆಗಳೇ ಇಲ್ಲ.

ಪತ್ರಿಕೆಯನ್ನುವಾಗ ತುಸು ಹೇಳಿ ಬಿಡೋಣವೆನ್ನಿಸುತ್ತದೆ. ವಿವಿಧ ವಿಚಾರ ಧಾರೆಗಳಿರುವ ಪತ್ರಿಕೆಗಳಲ್ಲಿ ರಸಾತ್ಮಕವಾದ ಸಣ್ಣ ಕತೆ ಒಂದಾದರೂ ಇಲ್ಲದೆ ಹೋದರೆ ಅದು ಶೋಭಿಸುವುದಿಲ್ಲ; ವಾಚಕರೂ ಕಡಮೆ ಯಾಗುತ್ತಾರೆಂದು ಪತ್ರಿಕೆಗಳೂ ಕಂಡು ಹಿಡಿದಿವೆ.

ಕ್ರಮವಾಗಿ ಹೊರಡಲೇಬೇಕೆಂಬ ನಿಯಮಕ್ಕೊಳಗಾದ ಪತ್ರಿಕೆಗಳು ತಮ್ಮ ಆಕರ್ಷಣ ಶಕ್ತಿಯಿಂದ ಎಲ್ಲ ಬಗೆಯ ಲೇಖಕರನ್ನೂ ಒಂದು ಬಗೆಯ ಒತ್ತಾಯಕ್ಕೆ ಒಳಪಡಿಸಿ ಬಿಡುತ್ತದೆ. ಅಸಲು ಈ ಇಪ್ಪತ್ತನೆಯ ಶತಮಾನದಲ್ಲಿ ಸಾಹಿತಿಗಳನ್ನು ಬೆಳಕಿಗೆ ತಂದು ತೋರಿಸುವುದೇ ಪತ್ರಿಕೆಗಳು ತಾನೆ?

ಪತ್ರಿಕೆಗಳಿಂದಾಗುವ ಅನಿರ್ವಚನೀಯವಾದ ಒತ್ತಾಯಕ್ಕೆ ಕಟ್ಟುಬಿದ್ದು ಕತೆಗಳನ್ನು ಬರೆದು ಬರೆದು, ಪತ್ರಿಕೆಗೆ ಕಳುಹಿಸುತ್ತಾರೆ. ಈ ಬಗೆಯ ಒತ್ತಾಯದ ಲೇಖನಗಳೂ, ಪ್ರಾರಂಭದ ರಚನೆಗಳೂ ಸುರಸವಾಗಿ ತುಂಬಿ ಬರುವುದು ಬಹಳ ಕಡಮೆ. ಓದಿ ಮೂಲೆಗೆ ಹಾಕುವಂತಹ ಪತ್ರಿಕೆಗಳಿಗೆ ಅಂತಹ ಕತೆಗಳೂ ಸಾಕಾಗುತ್ತವನ್ನಿ. ಕ್ರಮವಾಗಿ ಹೊರಡಲೇ ಬೇಕೆಂಬ ನಿಯಮಕ್ಕೊಳಗಾದ ಪತ್ರಿಕೆಗಳಿಗೆ ಅನೇಕ ನಿರ್ಬಂಧಗಳಿರುತ್ತವೆ. ಅವು ವಿಷಯ ವೈವಿಧ್ಯತೆಯನ್ನು ಕಾಪಾಡಿಕೊಳ್ಳಬೇಕು; ಇಂತಿಷ್ಟು ಪುಟಗಳಿರಬೇಕು. ಹೀಗಾಗಿ ಸಂಪಾದಕರು ನಿರ್ದಯರಾಗಿ ಕತ್ತರೀ ಪ್ರಯೋಗ ಮಾಡಬೇಕಾಗುತ್ತದೆ. ಸಾಹಿತಿ ಸ್ವತಂತ್ರನಾಗಿ ಬರೆಯುವಾಗ, ಆಗುವಷ್ಟು ದೊಡ್ಡ ಲೇಖನವು, ಪತ್ರಿಕೆಯ ನಿಯಮ ನಿಬಂಧಗಳ ಭಯದಿಂದ ರಸಘಟ್ಟಿಸಿಕೊಂಡು, ಗಿಡ್ಡಾಗಿಯೋ, ಅಥವಾ ವ್ಯರ್ಥ ಪ್ರಲಾಪದಿಂದ ಉದ್ದವಾಗಿಯೋ ಸಿದ್ಧವಾಗುತ್ತದೆ. ನೀರಸವೆಂದೂ ಸಪ್ಪೆಯೆಂದೂ ತಿಳಿದಿದ್ದರೂ, ಕಾಲಕಾಲಕ್ಕೆ ಪ್ರಕಟವಾಗಲೇ ಬೇಕಾದ ಪತ್ರಿಕೆಗೆ ಒಂದು ಕತೆಯಾಯಿತಲ್ಲ, ಎಂದು ಕೊಂಡು ಸಂಪಾದಕರು ಅದನ್ನು ಪ್ರಕಟಿಸಿಯೂ ಬಿಡುತ್ತಾರೆ.

ಹೀಗೆಂದುದರಿಂದ ಪತ್ರಿಕೆಗಳನ್ನು ದೂರಿದುದಾಗಿ ಅರ್ಥವಲ್ಲ. ತಿರುಗಿ ಕೇಳಿದರೆ ಪತ್ರಿಕೆಗಳ ಉಪಕಾರವನ್ನೇ ಹೇಳುವುದಾಗಿ ತಿಳಿಯಬೇಕು. ಏಕೆಂದರೆ, ಪತ್ರಿಕೆಯಲ್ಲಿ ತನ್ನ ಕತೆ ಬಂದ ಕೂಡಲೇ ಲೇಖಕನ ಮುಖ ಇಷ್ಟಗಲವಾಗುತ್ತದೆ ಅಂತೆಯೇ ಇದು ಲೇಖಕನಿಗೊಂದು ಪ್ರೋತ್ಸಾಹವಾಗುತ್ತದೆ, ಆದರೆ ಲೇಖಕನೇ ಆ ಕತೆಯ ಸಾರಾಸಾರತೆಯನ್ನು ಕುರಿತು, ತನಗೆ ತಾನೇ ವಿಮರ್ಶಿಸಿ ಕೊಳ್ಳುವವನಾದರೇನೇ, ಅವನಿಗೆ ಒಳ್ಳೆಯ ಭವಿಷ್ಯವುಂಟಾದೀತು.

ಅದು ಹೇಗಿದ್ದರೂ ಸಾಹಿತಿಗಳನ್ನು ಜನತೆಯ ಮುಂದೆ ತೋರಿಸುವ ಸಾಧನಗಳೇನೋ ಪತ್ರಿಕೆಗಳೇ ಆಗಿವೆ ಪ್ರತಿಭೆ ಎಂಬ ಅಕ್ಷಯ ಪಾತ್ರವನ್ನು ಹೃದಯದಲ್ಲಿರಿಸಿಕೊಂಡಿರುವ ಕವಿ, ಸಣ್ಣದೊಂದು ಘಟನೆಯನ್ನು ಸುರಸ ಕತೆಯಾಗಿ ರೂಪಿಸಿದಾಗ, ಅದನ್ನು ಪ್ರಕಟಿಸುವ ಸುಲಭ ಸಾಧನಗಳಾಗಿ ಪತ್ರಿಕೆಗಳಿವೆ.

ಪತ್ರಿಕಾ ಕರ್ತರೂ ಪುಸ್ತಕ-ಪ್ರಕಾಶಕರೂ ಸಾಹಿತಿಗಳಿಗೆ ಪ್ರೋತ್ಸಾಹ ಕೊಡಬೇಕು ನಿಜ; ಒಂದು ವೇಳೆ ಅಂತಹ ಪ್ರೋತ್ಸಾಹಾದರಗಳಿಲ್ಲದಿದ್ದರೂ, ನಿಜವಾದ ಕವಿ ಸ್ವಯಂ ಪ್ರೋತ್ಸಾಹಿಯೇ ಆದುದರಿಂದ, ಅವನ ಕಾರ್ಯಕ್ಕೇನೂ ಬಾಧಕ ಬರುವುದಿಲ್ಲ. ಅಡವೀ ಹಕ್ಕಿಗಳಂತೆ ತಮ್ಮ ಕೃತಿಗಳನ್ನು ಬಹಿರಂಗ ಪಡಿಸಲು ಅವಕಾಶವಿಲ್ಲದೆ, ಅಡಗಿರುವ ಸಾಹಿತಿಗಳೂ ಎಷ್ಟೋ ಮಂದಿ ಇದ್ದಾರೆ. ಇದನ್ನು ಪತ್ರಿಕಾ ಕರ್ತರೂ, ಪ್ರಕಾಶಕರೂ ಜ್ಞಾಪಿಸಿಕೊಂಡಿರಬೇಕು ಹಾಗೆಯೇ ಅಡಗಿರುವ ಸಾಹಿತಿಗಳೂ ಶಂಕಿಸಿಕೊಂಡಿರಬಾರದು ನೀವು ಜನತೆಯ ಮುಂದೆ ಬಂದು ಪ್ರಕಾಶಿಸಲೆತ್ನಿಸಿರಿ. ಅದೇನೂ ತಪ್ಪಲ್ಲ. ಜನತೆಯೇ ನಿಮ್ಮನ್ನೆಳೆದುಕೊಂಡರೂ ತಪ್ಪೇನಿಲ್ಲ. ಬೆಳಕಿಗೂ ಕಣ್ಣಿಗೂ, ಪ್ರಪಂಚಕ್ಕೂ ಜನತೆಗೂ ಸಂಬಂಧವಿರುವಂತೆಯೇ, ಸಾಹಿತಿಗೂ ಜನತೆಗೂ ಸಂಬಂಧವುಂಟು. ಜನ ಜೀವನದ ಕನ್ನಡಿಯೇ ಕಲೆಯಾದುದರಿಂದ, ಜೀವನಕ್ಕಾಗಿ ಕಲೆ ಎಂಬ ತತ್ವದಲ್ಲಿ ಜನತೆ ಕಲೆಯಿಂದ ಪ್ರಯೋಜನವನ್ನು ಕಾಣುತ್ತದೆ. ಆದರೆ ಕವಿ- ಸಾಹಿತಿಗಳಿಗೆ ಕಲೆಗಾಗಿಯೆ ಇದೆ ಎನ್ನಬಹುದು.

ಹಳೆಯ ಸಾಹಿತ್ಯ

'ಇದೀಗ ವಿಜ್ಞಾನಯುಗ, ಇದಕ್ಕನುಗುಣವಾದ ಸಾಹಿತ್ಯವೇ ನಿಜವಾದ ಸಾಹಿತ್ಯ. ಹಿಂದಿನದೆಲ್ಲ ಅಜ್ಞಾನ ಮಯ; ಮೂಢಾತ್ಮಕ, ಅತಿಶಯೋದ್ಯೋತಕ, ಆಡಂಬರ ಯುಕ್ತ ಹೀಗೆಲ್ಲಾ ಏನೇನೋ ಇರುವ ಸಾಹಿತ್ಯ" ಎಂಬೊಂದು ತಾತ್ಸಾರ ಭಾವನೆ ಮೆಲ್ಲಮೆಲ್ಲನೆ ಹರಡುತ್ತಾ ಇದೆ, ಜನತೆಯಲ್ಲಿ ಮಾತ್ರವಲ್ಲ ಸಾಹಿತ್ಯದಲ್ಲಿಯೂ ಹರಡುತ್ತಿದೆ. ಇದು ಎಷ್ಟು ಮಾತ್ರಕ್ಕೂ ಶ್ರೇಯಸ್ಕರವಲ್ಲ. ಆಳವಾದ ಅಭ್ಯಾಸವಿದ್ದರೆ ಅಂತಹ ಭಾವನೆಗೆ ಎಡೆಯಿಲ್ಲ. ಮುಖ್ಯವಾಗಿ ಹಿಂದಿನಕಾಲದ ಸಾಹಿತ್ಯದ ಅಭ್ಯಾಸಕ್ಕೆ ಸೌಕರ್ಯವಿಲ್ಲದೆ, ತಕ್ಕಷ್ಟು ಪ್ರಚಾರವಿಲ್ಲದೆ ತಾತ್ಸಾರ ಭಾವನೆಗೆ ಕಾರಣವಾಯಿತು. ಅದು ಕೇವಲ ಪಂಡಿತರ ಸೊತ್ತಾಯಿತು.

ನಿಜಕ್ಕೂ ಹಿಂದಿನಕಾಲದ ಸಾಹಿತ್ಯವು ಮಹತ್ವವಾದುದು ಪ್ರಾಚೀನ ಕಾಲದ ಚರಿತ್ರೆ ಅದಕ್ಕಿದೆ. ಪದ್ಯ ಕಾವ್ಯಗಳು, ಪದ್ಯ ಗದ್ಯಾತ್ಮಕವಾದ ಚಂಪೂ ಗ್ರಂಥಗಳು, ಕೀರ್ತನೆಗಳು, ಹಳ್ಳಿ ಹಾಡುಗಳು, ಜಾನಪದ ಗೀತಗಳು, ತ್ರಿಪದಿಗಳು, ಷಟ್ಪದಿಗಳು, ವಚನ ಮಣಿಗಳು, ಯಕ್ಷಗಾನಗಳು ಹೀಗೆಷ್ಟೋ ಇವೆ. ಎಲ್ಲವೂ ಎಷ್ಟು ಘಟ್ಟಿ..ಳಾಗಿವೆ. ಇಂತಹವುಗಳ ರಸ ಗ್ರಹಣ ಮಾಡುವ ಶಕ್ತಿಯನ್ನು ನಾವು ಕಳೆದುಕೊಳ್ಳಬಹುದೆ? ಅದು ಕೆಲವಾರು ಪಂಡಿತರ ಸೊತ್ತು ಮಾತ್ರವೇ ಆಗಬಹುದೆ?

ಹಳೆಯದೆಂದು ಮೂಲೆಗೆ ಹಾಕಿ ಬಿಡುವುದೂ, ಹಳೆಯ ಸಾಹಿತಿಗಳನ್ನೂ ಕವಿಗಳನ್ನೂ ಮರೆಯುವುದೂ, ಸಾಹಿತ್ಯದ ಬೆಳವಣಿಗೆಗೆ ಒಳ್ಳೆಯದಲ್ಲ. ಅವರ ಸ್ಮಾರಕಗಳನ್ನಾಚರಿಸುವುದರಿಂದಲೂ, ಅವರ ಸಾಹಿತ್ಯವನ್ನು ಪ್ರಚಾರಿಸುವುದರಿಂದಲೂ ಸಾಹಿತ್ಯಕ್ಕೆ ಹೊಸ ಬಲವೂ ಹೊಸ ಬೆಳಕೂ ಬಂದೀತು. "ಅಪ್ಪ ಕಟ್ಟಿದ ಗುಡಿಗೆ ಮಗ ಕಳಸವಿಟ್ಟ" ಎಂಬ ಹಾಗೆ, ನಮ್ಮ ಸಾಹಿತ್ಯವು ಹಿಂದಿನವರ ಮೇಲಿನ ಕೃತಜ್ಞತಾ ಭಾವದಿಂದಲೇ ಪೋಷಣೆಗೊಂಡು, ಆಧುನಿಕ ಶೋಧೆಯಿಂದ ಮೆರೆಯಬೇಕು.

ಆಧುನಿಕ ಸಮಾಜದಲ್ಲಿ ನಮ್ಮ ಹೊರನೋಟವು ನಮಗೆ ಗೌರವ ತರುತ್ತದೆ. ಉತ್ತಮ ಕೋಟು, ಧರಿಸಿದ ಓರ್ವನಿಗೆ ಅಂಥಾ ಕೋಟಿಲ್ಲದವನಿಗಿಂಥಾ ಹೆಚ್ಚಿನ ಗೌರವ ದೊರೆಯುತ್ತದೆ. ಹೊರ ಉಡಿಗೆಯಲ್ಲಿ ಏನಿದೆಯೆಂದು ಇಂದು ಪ್ರಶ್ನಿಸಿ ಫಲ್ಲವಿಲ್ಲ; ಏಕೆಂದರೆ ಇಂದಿನ ಸಮಾಜವೇ ಹಾಗೆ!

—ಜಾನ್ಸನ್.

o o o

ಮೃತ್ಯು ಯಾವಾಗ ಬರುತ್ತದೆಂಬುದು ಸ್ಪಷ್ಟವಲ್ಲದಿದ್ದರೂ ಅದು ಬಂದೇ ಬರುತ್ತದೆಂಬುದು ಸಿದ್ಧ. ಆದ್ದರಿಂದ ಮೃತ್ಯು ಸನಿಯದಲ್ಲೇ ಇದೆಯೆಂದು ತಿಳಿದು ವರ್ತಿಸುವವನು ಹೆಚ್ಚು ಸ್ವಾರ್ಥಿಯೂ, ಹೆಚ್ಚು ಪಾಪಿಯೂ ಆಗಿರಲಾರ.

o o o

ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಸುಳ್ಳಿನ ಗುಳಿಗೆಗಳಿಂದಲೇ ಉಸಿರು ಕಟ್ಟಿ ಸಾಯುತ್ತವೆ.

o o o

ತಮ್ಮ ಹಿರಿಯರ ಹಿನ್ನೆಲೆಯನ್ನು ಅರಿಯದ ಜನ ತಮ್ಮ ಮುಂದಿನವರ ಭವಿಷ್ಯವನ್ನು ನೋಡಲಾರರು.

Phone: 4394

ಅತ್ಯುತ್ತಮ ಕೈಮಗ್ಗದ ಮಂಗಳೂರು ಸೀರೆಗಳಿಗೆ

ಪೂರ್ಣಿಮಾ ಸ್ಟೋರ್ಸ್

ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ

ಪೊಪ್ಯುಲರ್ ಇನ್ಶೂರೆನ್ಸ್ ಕಟ್ಟಡ, ಮಂಗಳೂರು-1.

ಮೈಸೂರು ದಸರ ವಸ್ತು ಪ್ರದರ್ಶನದಲ್ಲಿ 1962, 1963, 1964ರಲ್ಲಿ ಬಂಗಾರದ ಪದಕ ಪಡೆದ ನಮ್ಮ ಪೂರ್ಣಿಮಾ ಮಂಗಳೂರು ಸೀರೆಗಳನ್ನೇ ಉಪಯೋಗಿಸಿರಿ.

Edited, Printed & Published by K. H. Shetty at the Navayuga Press, Udipi, S. India.

ನೆಹರೂ ಜೀವನದ ಕೆಲವು ಘಟನೆಗಳು

(ಹತ್ತನೇ ಪುಟದಿಂದ)

ಅವರ ಹಾಸಿಗೆ ಹಾಸಿದರೆ— ಬೇಡ ಯ್ಯಾ ನಾನು ಹೊರಗೆ ವರಾಂಡದಲ್ಲಿ ಮಲಗುತ್ತೇನೆ. ಏಕೆ ಅನಾವಶ್ಯವಾಗಿ ಫ್ಯಾನ್ ತಿರುಗಿಸಬೇಕು ಎನ್ನುತ್ತಿದ್ದರಂತೆ

ಸಂಪೂರ್ಣವಾಗಿ ನಿರುಪಯುಕ್ತವೆನಿಸುವ ತನಕವೂ ಅವರು ತನ್ನ ವಸ್ತ್ರಗಳನ್ನೆಂದೂ ಎಸೆಯುತ್ತಿರಲಿಲ್ಲ.

೦ ೦ ೦

1910ರ ಜನವರಿ ತಿಂಗಳ ಒಂದು ದಿನ ಚಾಚಾ ನೆಹರೂ ಅವರು ಮೋರತ್ತಿನಿಂದ ಮುಜಾಫರ್‌ಪುರ, ಸಹರಾನ್‌ಪುರ ಮುಂತಾದ ಜಿಲ್ಲೆಗಳ ಪ್ರವಾಸಕ್ಕೆ ಹೊರಟಿದ್ದರು. ಮೋಟಾರು ಹೊರಟಿತು. ಜನವರಿ ತಿಂಗಳ ಚಳಿಯದು, ಮುಂಜಾನೆಯ ಹೊತ್ತು ಬೇರೆ. 'ಸುಂಯ್' ಎಂದು ಬೀಸುತ್ತಿರುವ ಹಿಮಗಾಳಿ. ಸ್ವೆಟ್ಟರನ್ನು ತೊಟ್ಟುಕೊಂಡಿದ್ದರೂ ನೆಹರೂ ಚಳಿಯಿಂದ ನಡುಗುತ್ತಿದ್ದರೂ ಈ ಅವಸ್ಥೆಯಲ್ಲಿಯೇ ಜೊತೆಗಾರರೊಂದಿಗೆ ಜವಾಹರರ ಮೋಟಾರು ಮೋರತ್ತಿನಿಂದ ಹೊರಟು ಖಾತೋಲೀ ಎಂಬ ಹಳ್ಳಿಯನ್ನು ಬಂದು ಸೇರಿತು

ಕೂಡಲೇ ಹಳ್ಳಿಯ ಜನರೆಲ್ಲ ಒಟ್ಟುಸೇರಿ 'ಚಾಚಾ ನೆಹರೂ ಜಿಂದಾಬಾದ್' ಎಂದು ಜಯಘೋಷ ಗೈಯುತ್ತಾ ಅವರನ್ನು ಮುತ್ತಿಕೊಂಡರು. ಅನಂತರ ಅವರೆಲ್ಲ ಒಟ್ಟು ಸೇರಿ ಹೂ ಬಾಳೆಗಳಿಂದ ಬಾರದೆಂದು ಸೇರು ಸಿಂಗಡಿಸಿದ್ದ ದೊಡ್ಡ ದೊಡ್ಡ ಹಾರಗಳನ್ನು ತಂದ ನೆಹರೂ ಅವರಿಗೆ ತೊಡಿಸಿದರು ಮಾತ್ರವಲ್ಲ ಬಿಡಿ ಹೂಗಳನ್ನು ಅವರ ಮೇಲೆರಚುತ್ತಾ ಜಯಘೋಷ ಗೈಯಲಾರಂಭಿಸಿದರು. ಅವರಿದನ್ನೆಲ್ಲಾ ಪ್ರೀತಿಯಿಂದಲೇ ಮಾಡಿದ್ದರಾದರೂ ನೆಹರೂ ಅವರಿಗೆ ತುಂಬ ಸಂಕಟವಾಗುತಿತ್ತು. ಕೊನೆಗೆ ಅವರು ನಗುತ್ತಾ ಜನರೊಡನೆ—"ಅರೇ! ನಿಮ್ಮ ಪ್ರೀತಿಯ ಧಾರೆಯಲ್ಲಿ ನಾನು ಅಡಿಯಿಂದ ಮುಡಿಯ ತನಕ ಒದ್ದೆಯಾಗಿ ಬಿಟ್ಟಿದ್ದೇನಲ್ಲಾ. ಅಲ್ಲಾ ನೀವು ಹೀಗೆ ಪ್ರೀತಿ ಮಾಡಿದರೆ—ಅದೂ ಇಂತಹ ಚಳಿಯಲ್ಲಿ, ನಾನಂತೂ ಸತ್ತೇ ಹೋಗುತ್ತೇನೆ' ಎಂದು ಬಿಟ್ಟರು.

ಪಾಪ, ಹಳ್ಳಿಗರಿಗೆ ಈಗ ತಮ್ಮ ತಪ್ಪಿನ ಅರಿವಾಯ್ತು. ಕೂಡಲೇ ಅವರು ಹೂ ಎಸೆಯುವುದನ್ನು ನಿಲ್ಲಿಸಿ ಕೊರಳಿನಿಂದ ಹಾರ ತೆಗೆದರು. ಅನಂತರ—"ಬಸ್ ಭಗವನ್ ಅಬ್ ಅಪ್ನಾ ಭಾಷಣ್ ಶುರು ಕೀಜೀಯೇ" (ಸರಿ ದೇವರೇ, ಇನ್ನು ನೀವು ಭಾಷಣ ಆರಂಭಿಸಿರಿ.) ಎಂದು ಪ್ರಾರ್ಥಿಸಿ ಕೊಂಡರಂತೆ.

(ಮೂಲ ಜಹೂರ್ ಬಖ್ಶ್)

ಕಲಾದೇವಿಗೆ...!

(ಶಾ॥ ವಿಕ್ರೀಡಿತಂ)

ಶ್ರೀನಾಟ್ಯೇಶ್ವರಿ ನಾದ ಲೋಲೆ ನಟರಿಂಗಾರಾಧ್ಯ ದೇವೀ ಸ್ವಯಂ
ಶ್ರೀರಾಗಾಭಿನಯಾಂಗಳಿಂದ ಸತತಂ ಸಂಪ್ರೀತೆ ಸನ್ಮಂಗಳೇ,
ಶ್ರೀಲೋಲೇ ರಸರಾಗ ರಂಜಿತಳೆ ನೀನಾನಂದ ಲಕ್ಷ್ಮೀ ಸ್ವಯಂ
ಶ್ರೀಕಾರಾವೃತೆ ಶ್ರೀಕಲಾಬ್ಧಿ ಕಮಲೇ ಕಾವ್ಯೇಶ್ವರೀ ಪಾಹಿಮಾಂ ॥ ೧ ॥

ಲಾವಣ್ಯೋಜ್ವಲೆ ಪೂರ್ಣ ಚಂದ್ರವದನೇ, ಜ್ಯೋತಿರ್ಮಹಾಲೋಚನೇ,
ಕಾವ್ಯಾ ಭೂಷಣ ಭಾವ ವಸ್ತ್ರ ರಸಪುಷ್ಪಾಲಂಕೃತೇ ಶೋಭಿತೇ,
ಸದ್ಭಾವಾಭಿನಯೋಜ್ವಲಾಂಗಲಸಿತೇ, ಸತ್ಪ್ರೇಮ ಸನ್ಮೋಹಿತೇ,
ಭಾವೋದ್ಯಾನ ಕಲಾವಿಹಾರ ಚತುರೇ, ಶ್ರೀನೀಲಕಂಠೇಶ್ವರಾ ॥ ೨ ॥

(ಮ॥ ವಿಕ್ರೀಡಿತಂ)

ರಸಮೇಂ ಭಾವಮನೇಂ ಮಹಾಭಿನಯಮೇಂ ಕಾವ್ಯಂಗಳುಂ ನಿನ್ನೊಳಂ
ಪ್ರಾಸ ಸಿಂಗಾರದಿ ರಂಜಿಸುತ್ತಿರಲುಂ ಲೋಕಕ್ಕದೇ ಜೀವನಂ
ತೃಷೆಯಿಂದಂ ರಸಪಾನ ಗೈವ ರಸಿಕರ್ಗಾನಂದಮಂ ನೀಡುವೈ
ರಸವಾಣೀ ರಸನಾಗ್ರದೊಳ್ ನೆಲಸುನೀಂ ಶ್ರೀನೀಲಕಂಠೇಶ್ವರಾ ॥ ೩ ॥

(ಶಾ॥ ವಿಕ್ರೀಡಿತಂ)

ಗೀತಂ ವಾಙ್ಮಯವೆಲ್ಲ ನಿನ್ನೆದೆಯೊಳಂ ತುಂಬಿರ್ಪುದೈ ದುಗ್ಧದೋಲ್
ಗೀತಾಭ್ಯಾಸಿ ಕಲಾವಿನೋದಿಗಳಿಗಂ ನೀನೂಡುವೈ ಕ್ಷೀರಮಂ
ಮಾತೃಸ್ಥಾನದೆ ನಿನ್ನ ಗೌರವಮಂತಂತಿಂ ಧನ್ಯರಾಗಿರ್ಪರೈ
ಮಾತೇ, ಹೇ, ಪ್ರತಿಭಾಸ್ಮಿತೇ, ಜಯ ನಮೋ ಶ್ರೀನೀಲಕಂಠೇಶ್ವರಾ ॥ ೪ ॥

ವಾಣೀ, ಬ್ರಹ್ಮನ ವಾಣಿ ಶಕ್ತಿ ಶಿವನಿಂಗಾ ವಿಷ್ಣುಗಂ ಮಾಯೆನೀಂ
ರಾಣೀ, ವಿಶ್ವದ ರಾಜ್ಞಿ ನೀನಿರದಿರಲ್ ಶೂನ್ಯಂ ಜಗಂ ನಿರ್ಬಲಂ
ನಿನ್ನಾನಾಮಗಳೇನನೇಕ ಮಿರಲೇಂ ನೀನೊರ್ವಳೇ ವಾಣಿತಾಂ
ನಿನ್ನಾ ಸ್ಥಾನಕೆ ಗೌರವಕ್ಕೆಣೆಯದೇಂ ಶ್ರೀನೀಲಕಂಠೇಶ್ವರಾ ॥ ೫ ॥

ಕೆ. ಎನ್. ಭಟ್, ಶಿರಾಡಿಪಾಲ್.

ತನ್ನ ತೃಪ್ತಿಗಾಗಿ ತಾನು ಊಟ ಮಾಡಬೇಕು. ಇತರರ ತೃಪ್ತಿಗಾಗಿ ತಾನು ಬಟ್ಟೆ ಉಡಬೇಕು.

—ಫ್ರಾಂಕ್ಲಿನ್.

೦ ೦ ೦

ಉತ್ತಮವಾದ ಉಡಿಗೆಗೆ ಮೂರು ಗುಣಗಳಿರುತ್ತವೆ. ಉಡಲು ಅನುಕೂಲ, ಕೊಳ್ಳಲು ಕಡಿಮೆ ದರ ಮತ್ತು ನೋಡಲು ಸುಂದರ!

—ಬೊವೀ.

೦ ೦ ೦

ಸರಳ ಉಡುಪು ಸೌಂದರ್ಯಕ್ಕೆ ಹೆಚ್ಚು ಒಪ್ಪ ಕೊಡುತ್ತದೆ. ಸದ್ಗುಣವು ಸರ್ವ ಸುಂದರ ಆಭರಣವಾಗುತ್ತದೆ. ಸಭ್ಯತೆಯು ರಾಜ ಸಭೆಗೂ ಅರ್ಹತೆಯನ್ನೀಯುತ್ತದೆ.

—ಸೆವಿಲೆ.

೦ ೦ ೦

ಉಡುಗೆಯ ಬಗ್ಗೆ ಗಮನವೇ ಇಲ್ಲದಿರೋಣ, ಹಾಗೂ ಉಡುಗೆಯೇ ಜೀವನದ ಅಮೂಲ್ಯವೆಂದು ತಿಳಿಯೋಣ ಈ ಎರಡು ದೃಷ್ಟಿಯೂ ಕೂಡ ವೃದ್ಧಾಪ್ಯದೆಗೆರಗಳನ್ನು ಮುಖದಲ್ಲಿ ಹೆಚ್ಚಾಗಿಸಿ, ಸೌಂದರ್ಯದ ಅವನತಿಯನ್ನು ಎತ್ತಿ ಹೇಳುವುವು.

—ಬ್ರ್ಯಾಯೂರ್

ಶ್ರೇಷ್ಠತೆಗೆ, ಭದ್ರತೆಗೆ ನೀರು ಹಾಯಿಸುವ



ಪಂಪು ಸೆಟ್ಟುಗಳು

ಎಂದರೆ "ಕಿರ್ಲೋಸ್ಕರ್" ಎಂಬುದು ಮನೆ ಮಾತಾಗಿದೆ

ಏಕೆ ಬಲ್ಲಿರಾ ?

೧. ಯಂತ್ರದ ತೊಂದರೆ ಇರುವುದಿಲ್ಲ
೨. ಮೇಲ್ಮಟ್ಟದ ತಯಾರಿಕೆಯಿಂದ ಕೂಡಿರುತ್ತದೆ
೩. ನೀರು ಧಾರಾಕಾರವಾಗಿ ಉಪಯೋಗಿಸಬಹುದು

ನಿಮ್ಮ ಹತ್ತಿರದ ಡಿಸ್ಟ್ರಿಬ್ಯೂಟರ್ಸ್:

ಕರ್ಕೇರ ಸನ್ಸ್ & ಕೊ.,

ಮೈದಾನ್ ವೆಸ್ಟ್ ರೋಡ್,
ಮಂಗಳೂರು–೧.

Phone No. 3967.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ನೋಡಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎನ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಅಜಂತಾ ಮತ್ತು ಎಲ್ಲೋರಾ

(ಐಂಭತ್ತನೇ ಪುಟದಿಂದ)

ಅಜಂತೆಯ ಚಿತ್ರಕಾರರು ಕಲ್ಲಿನ ಗೋಡೆಗಳ ಮೇಲೆ ಬರೆದಿರುವ ಚಿತ್ರಗಳು ಅಂದವಾದ—ಅಪುರೂಪ ಚಿತ್ರಗಳು. ಚಿತ್ರಗಳಲ್ಲಿ ಭಾವಪರಿಪೂರ್ಣತೆ ತುಂಬಿದೆ. ಚಿತ್ರದ ರೀತಿನೀತಿ ಹಾವಭಾವಗಳನ್ನು ರೂಪಿಸಿಕೊಂಡ ಚಿತ್ರಗಾರರು ಗೋಡೆಯ ಮೇಲೆ ರೂಪಿಸಿದಾಗ ಮತ್ತಷ್ಟು ತಿದ್ದಿದಂತೆ—ಅಂದ ಕೆಡದಂತೆ ಚಿತ್ರಿಸಿದ್ದಾರೆ. ಚಿತ್ರಗಳಲ್ಲಿ ಕಾಣುವುದು ಬರಿಯ ರೇಖೆ-ವರ್ಣಗಳಲ್ಲ, ಸಜೀವ ಸುಂದರ ಪ್ರಪಂಚ. ಗಿಡ, ಬಳ್ಳಿ, ವೃಕ್ಷ, ಪಕ್ಷಿ, ಹುಲ್ಲೆ, ಅಲಂಕೃತ ಮಂಟಪ, ಗೃಹ, ಮಹಾದ್ವಾರ, ಅರಮನೆ, ಸ್ತ್ರೀ, ಪುರುಷರ, ಮಕ್ಕಳ ಅನುಭವದ ಪ್ರತ್ಯಕ್ಷ ಲೋಕ. ಇವುಗಳೆಲ್ಲವುಗಳ ಜೊತೆಗೆ ದಯಾಪೂರ್ಣ, ಧ್ಯಾನಾಸಕ್ತ ಬುದ್ಧದೇವ. ಅಜಂತೆಯ ವರ್ಣಚಿತ್ರಗಳ ಮಾಲೆ-ಗುಹೆಗಳು ರಮ್ಯದೃಶ್ಯದ ತೆರ ಇದ್ದಂತೆ.

ಅಜಂತೆಯ ಚಿತ್ರಗಳಲ್ಲಿ ಕಾಣುವ ವ್ಯಕ್ತಿಗಳ ನೋಟ, ಭಾವಗಳು ಅಸದೃಶ. ಲೋಕದ ಕಷ್ಟವನ್ನು ಕಂಡು, ಮರುಗಿ, ಮೂರು ದೃಶ್ಯಗಳನ್ನು ಕಂಡು ಬುದ್ಧನಾಗಲು ಹೊರಟ ಸಿದ್ಧಾರ್ಥನ ಮನೋಭಾವ, ಕಣ್ಣಲ್ಲಿ ತುಂಬಿರುವ ಕರುಣೆ—ಕಾತುರತೆ ಬರಹಗಳಲ್ಲಿ ಮೂಡಿಸಲು ಸಾಧ್ಯವಿಲ್ಲ. ಆದರೆ ಆ ಕಲಾವಿದ ತನ್ನ ಕುಂಚದಿಂದ ಸಿದ್ಧಾರ್ಥನ ಹೃದಯವನ್ನೇ ಒಜ್ಜಿ ತೋರಿಸಿದ್ದಾನೆ, ಚಿತ್ರದಲ್ಲಿ.

ಅಜಂತೆಯ ಚಿತ್ರಗಳ ಪಟ್ಟಿಯಲ್ಲಿ ಕರ್ನಾಟಕದ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ದರ್ಬಾರು ಮತ್ತು ಇರಾನ್ ರಾಯಭಾರಿಯ ಭೇಟಿಯ ಚಿತ್ರವೂ ಕನ್ನಡಿಗನೂ ಮರೆಯಲಾಗದಂತಹ ಭವ್ಯ ಚಿತ್ರ. ಅಲ್ಲದೆ ಈ ಎಲ್ಲ ಚಿತ್ರಗಳ ಪೈಕಿ ಬುದ್ಧನನ್ನು ಭೇಟಿ ಮಾಡಲು ಹೊರಟ ಯಶೋಧರೆ ರಾಹುಲ ಇವರ ಚಿತ್ರ, ಪದ್ಮಪಾಣಿ ಇವರ ಚಿತ್ರ ಅಂದ ಕೆಡದ ಆನಂದ ನೀಡುವ ರಮ್ಯ ಚಿತ್ರಗಳು.

ಪ್ರಾಚೀನ ಪರಂಪರೆಯಲ್ಲಿ ಜನತೆಯ ಅಭಿರುಚಿ ಉಡಿಗೆ, ತೊಡಿಗೆ, ಅಲಂಕಾರ, ವ್ಯಕ್ತಿತ್ವ, ಅದರ ವೈಭವಯುತ ಜೀವನಗಳನ್ನು ಮತ್ತೊಮ್ಮೆ ನಾವಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಹಲವುಗಳು ಅಂದ ಚಂದದ ಅಲಂಕಾರಗಳನ್ನು ಇಂದು ಅಲ್ಲಿ ಕಾಣಬಲ್ಲೆವಷ್ಟೆ. ಆದರೆ ಇಂದು ಅವುಗಳನ್ನು ಅನುಸರಿಸುವುದು ಪ್ರಯೋಜನಕರ ಎಂದು ಸಂಕೋಚವಿಲ್ಲದೆ ಹೇಳಬಹುದು.

ಅಜಂತೆಯಲ್ಲಿ ಬುದ್ಧನ ಜೀವನ, ಜಾತಕ ಕಥೆ ಮತ್ತು ಕಥೆಗಳನ್ನು ಅನುಸರಿಸಿ ಬರೆದ ಚಿತ್ರಗಳಿವೆ. ಎಲ್ಲ ಚಿತ್ರಗಳ ಕೇಂದ್ರ ಬುದ್ಧ. ಬುದ್ಧನ ಅಂತಃಕರಣ ಪೂರ್ಣ ಅಂತರಂಗ, ಧ್ಯಾನ, ಯೋಗಸ್ಥಿತಿಗಳ ಗತಿಯನ್ನೂ ಅರಿತ. ಚತುರ ಚಿತ್ರಗಾರ ಅಂದವಾಗಿ ಚಿತ್ರಗಳನ್ನು ಬಿಡಿಸಿದ್ದಾನೆ.

ಶತಮಾನಗಳು ಗತಿಸಿಹೋದರೂ ತನ್ನ ಭವ್ಯತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬದುಕಿರುವ ಅಜಂತೆಯ ಈ ವರ್ಣ ಚಿತ್ರಗಳು ಆಧುನಿಕ ಕಲಾಕೋವಿದರ ಪಂಡಿತರ ಕಲಾ ಶಕ್ತಿಗೆ ಸವಾಲು ಹಾಕಲೂ ಸಿದ್ಧವಿವೆ. ಲೋಕದ ಕಲ್ಲಿಗೆ ಇದ್ದು ಇಲ್ಲದೆ ಮರೆಯಾಗಿದ್ದು ಈ ಕೇಂದ್ರ ಭಾರತೀಯರ ಸಂಸ್ಕೃತಿ ಕಲೆಗಳ ಮೇಲೆ ಬೀರಿದ ಪ್ರಭಾವ ಅಲ್ಪವಲ್ಲ.

ಕಲಾ ಲೋಕದಲ್ಲಿ ವರ್ಣ ಚಿತ್ರಗಳ ದೆಸೆಯಿಂದ ಅಜಂತೆಗೆ ಪ್ರಾಮುಖ್ಯತೆ ಬಂದಿರುವಂತೆ ವಾಸ್ತು ಶಿಲ್ಪದಿಂದ ಎಲ್ಲೋರಕ್ಕೆ ಹಿರಿಮೆ ಒದಗಿಬಂದಿದೆ. ಎಲ್ಲೋರ ವೇರೂಳ,ಎಲ್ಲೂರುಎಂಬ ಹೆಸರಿನಿಂದಲೂ ಪರಿಚಿತ.

ಎಲ್ಲೋರದ ಗವಿಗಳು ದೇವಗಿರಿ ಕೋಟೆಯಿಂದ ಆರು ಮೈಲಿ ದೂರದಲ್ಲಿವೆ. ಎಲ್ಲೋರ ಗ್ರಾಮದ ಬಳಿ ಸುಮಾರು ೩೦೦ ಅಡಿ ಎತ್ತರವಾಗಿ ಪಶ್ಚಿಮಾಭಿಮುಖವಾಗಿ ಎದ್ದು ನಿಂತಿರುವ ಘಟ್ಟಗಳ ಹುಟ್ಟು ಬಂಡೆಯಲ್ಲಿ ಸುಮಾರು ಒಂದೂವರೆ ಮೈಲಿ ಉದ್ದಕ್ಕೂ ೩೪ ಗವಿಗಳು ಕೊರೆಯಲ್ಪಟ್ಟವೆ. ಔರಂಗಾಬಾದಿನಿಂದ ಎಲ್ಲೋರದ ಗವಿಗಳ ವರೆಗೂ ಬಸ್ಸಿನಲ್ಲಿ ಬರಬಹುದು.

ಎಲ್ಲೋರದ ಗವಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ೧೨ ಗವಿಗಳು ಬೌದ್ಧ ಮತಕ್ಕೆ ಸೇರಿದಂತಹವು. ೧೭ ಗುಹೆಗಳು ಪೌರಾಣಿಕ ಸಂಗತಿಗಳಿಗೆ ಸಂಬಂಧಪಟ್ಟವು ಮತ್ತು ೫ ಜೈನ ಗವಿಗಳು. ಮೊದಲು ಬೌದ್ಧ ಗವಿಗಳು. ಅನಂತರ ಪೌರಾಣಿಕ ಗವಿಗಳು. ಕೊನೆಯದಾಗಿ ಜೈನ ಗವಿಗಳು ಕೊರೆಯಲ್ಪಟ್ಟಿರಬೇಕೆಂದು ಪಂಡಿತರ ಅಭಿಪ್ರಾಯ. ಕ್ರಿ.ಶ. ೪೦೦ರಿಂದ ೬೦೦ರ ವರೆಗೆ ಬೌದ್ಧ ಗವಿಗಳೂ, ೬೦೦ರಿಂದ ೮೦೦ರ ವರೆಗೆ ಪೌರಾಣಿಕ ಗವಿಗಳು, ಅನಂತರ ೮೦೦ರಿಂದ ೧೦೦೦ರ ವರೆಗೆ ಜೈನ ಗವಿಗಳನ್ನು ಕೊರೆದಂತೆ ತೋರುವುದೆಂದು ಸಂಶೋಧಕರ ಅಭಿಪ್ರಾಯ. ಎಲ್ಲೋರದ ಗವಿಗಳಿರುವ ತಾಲ್ಲೂಕಿಗೆ ಇಂದಿಗೂ ಕನ್ನಡ ಕಸ್ಸೇಲ್ ಎಂಬ ಹೆಸರಿದೆ ಎಂದರೆ ಈ ಗುಹೆಗಳು ಆ ಕಾಲದಲ್ಲಿ ಕರ್ನಾಟಕದ ಮುಖ್ಯ ಅರಸು ಮನೆತನಗಳಾದ ಬಾದಾಮಿ ಚಾಲುಕ್ಯ, ಮಾನ್ಯಖೇಡದ ರಾಷ್ಟ್ರಕೂಟ ಅರಸರ ಕಾಲದಲ್ಲಿ ರೂಪುಗೊಂಡವೆಂದು ಹೇಳಲು ಆಧಾರ ದೊರೆಯುತ್ತದೆ. ಎಲ್ಲೋರದ ಜೈನ ಶಿಲ್ಪಕ್ಕೂ ಶ್ರವಣ ಬೆಳಗೊಳದ ಕಟ್ಟಡಗಳ ಶೈಲಿಗೂ ಸೌಮ್ಯವಿರುವುದು ಗಮನೀಯ ಸಂಗತಿ.

ಎಲ್ಲೋರದ ಬೌದ್ಧ ಗುಹೆಗಳು ಎಂದಿನಂತೆಯೇ ಬೌದ್ಧ ಧರ್ಮ ಮತ್ತು ಬುದ್ಧನ ಯೋಗ, ಜ್ಞಾನ, ಸಮಾಧಿಯ ಶಿಲ್ಪಗಳಿಂದ ಕೂಡಿವೆ. ಆದರೆ ಒಂದೊಂದು ಗುಹೆಯ ಶಿಲ್ಪ, ರಚನಾ ಶೈಲಿ, ಕುಸುರಿ ಕೆಲಸದಲ್ಲಿ ಅಂತರವಿದೆ. ಬೌದ್ಧ ಗವಿಗಳಲ್ಲಿ ಐದನೆಯ ಗವಿ ಬಹು ದೊಡ್ಡದು. ೧೧೭ ಅಡಿ ಉದ್ದ ೮ ಅಡಿ ಅಗಲ ಇರುವ ಈ ಗುಹೆ ಸಹಾರಗಳಲ್ಲೆಲ್ಲಾ ಅತ್ಯಂತ ಹಿರಿದು. ಇದು ಥೇಡರ ಗವಿ ಎಂದು ಪರಿಚಿತ. ಈ ಗವಿ ಯತಿಗಳ ಮಹಾಸಭೆಯ ಕೇಂದ್ರ ಸ್ಥಾನವಾಗಿತ್ತೆಂದು ಊಹಿಸಬಹುದಾಗಿದೆ. ಹತ್ತನೆಯ ಗುಹೆ ವಿಶ್ವಕರ್ಮ ಗುಹೆ ಎಂಬ ಹೆಸರಿನಿಂದ ಅತಿ ಸುಂದರವಾಗಿ ರೂಪುಗೊಂಡಿದೆ.

ಪೌರಾಣಿಕ ಗವಿಗಳ ಪೈಕಿ ರಾವಣನ ಗವಿ ಎಲ್ಲ ಗವಿಗಳಿಗಿಂತಲೂ ಭಿನ್ನ ಸ್ವರೂಪ ತಾಳಿದೆ. ಇಲ್ಲಿಯ ಕೆತ್ತನೆಯ ಕೆಲಸ ಅಮೋಘವಾಗಿದೆ. ಮಹಿಷಾಸುರ ವಧೆ, ಶಿವ ತಾಂಡವ ನೃತ್ಯ, ರಾವಣ ಕೈಲಾಸ ಎತ್ತುವುದು ಭೈರವ ಮೂರ್ತಿ. ಮನೋಹರವಾಗಿವೆ. ಶಿವಪಾರ್ವತಿ ಚದುರಂಗ, ದುರ್ಗಿ, ಲಕ್ಷ್ಮಿ, ವರಾಹಾವತಾರ, ಚತುರ್ಭುಜ ವಿಷ್ಣು, ಬ್ರಾಹ್ಮಿ, ಮಹೇಶ್ವರಿ, ವಾಹನ ಯುಕ್ತ ಸಪ್ತ ಮಾತೃಕೆಯರ ಶಿಲ್ಪಗಳು ಅಂದವಾಗಿವೆ. ದಶಾವತಾರದ ಗವಿಯಲ್ಲಿ ಉಮಾ ಮಹೇಶ್ವರ ವಿವಾಹ, ಲಿಂಗೋದ್ಭವ ಶಿವ, ಅನಂತಶಯನ, ಗಜಲಕ್ಷ್ಮಿ, ನರಸಿಂಹ, ವಾಮನ ಮೂರ್ತಿಗಳು ಅಂದವಾಗಿವೆ.

ಎಲ್ಲೋರದ ಗವಿಗಳ ಕೀರ್ತಿ ಕಳಶದಂತೆ ಹದಿನಾರನೆಯ ಕೈಲಾಸ ದೇವಾಲಯ ರಮಣೀಯವಾಗಿದೆ. ಇದೊಂದು ವಿಚಿತ್ರ ವಾಸ್ತು ಶಿಲ್ಪಕ್ಕೆ ಮಾದರಿ. ಒಂದೇ ಬಂಡೆಯಿಂದ ದೇವಾಲಯದ ಸಮಸ್ತ ಮೂರ್ತಿಗಳನ್ನೂ—ಪ್ರಾಕಾರಾದಿಗಳನ್ನು ರೂಪಿಸಲಾಗಿದೆ. ಇದು ದ್ರಾವಿಡ ಶೈಲಿಯ ದೇವಾಲಯ; ಎರಡು ಅಂತಸ್ತುಗಳಿಂದ ಕೂಡಿದೆ. ೧೬೪ ಅಡಿ ಉದ್ದ, ೧೦೯ ಅಡಿ ಅಗಲ, ೯೬ ಅಡಿ ಎತ್ತರ ಶಿವಾಲಯವನ್ನು ಒಂದು ನೂರು ಅಡಿ ಆಳಕ್ಕೆ ಹೆಚ್ಚಿನ ಕಲ್ಲನ್ನು ಕೊರೆದು ನಿರ್ಮಿಸಿದ್ದಾರೆ. ದೇವಾಲಯದ ಮಹಾದ್ವಾರದ ಎರಡು ಕಡೆಗಳಲ್ಲಿ ಶಿವಲೀಲೆ,ದಶಾವತಾರ ಮತ್ತು ದಿಕ್ಪಾಲಕರಿಗೆ ಸಂಬಂಧಿಸಿದ ದೃಶ್ಯಗಳು ಕೆತ್ತಲ್ಪಟ್ಟಿವೆ. ಮಹದ್ವಾರದ ಎದುರಿನಲ್ಲಿ ೫೫ ಅಡಿ ಚದುರವುಳ್ಳ ೧೬ ಖಚಿತ ಕಂಬಗಳಿಂದ ಕೂಡಿದ ರಂಗ ಶಾಲೆ ಇದೆ. ದೇವಾಲಯದ ವಿಮಾನದಲ್ಲಿ ಕೆತ್ತಿರುವ ಶಿವ ಮತ್ತು ವಿಷ್ಣುವಿನ ಮೂರ್ತಿಗಳು ಮನೋಹರವಾಗಿದೆ. ಗಂಧರ್ವ ವ್ಯಕ್ತಿಗಳ ಮತ್ತು ದೇವಾಲಯದ ಹೊರವಲಯದಲ್ಲಿ ಕೆತ್ತಿರುವ ಪೌರಾಣಿಕ ಸಂಗತಿಗಳ ಶಿಲ್ಪಗಳು ಅಂದವಾಗಿವೆ.

ದೊಡ್ಡ ದೇವಾಲಯದಲ್ಲಿ ಆನೆಗಳ ಅನೇಕ ರೂಪಗಳು. ಸಿಂಹ ಮೊದಲಾದುವು, ನಂದಿಮಂಟಪ, ಮುಖ ಮಂಟಪದ ಬಳಿಯ ರಾಮಾಯಣದ ಕಥೆಯ ಕೆತ್ತನೆ, ರಾವಣ ಕೈಲಾಸ ಪರ್ವತ ಎತ್ತುವ ಚಿತ್ರ, ಪಾರ್ವತಿ ಶಿವನನ್ನು ಅಪ್ಪಿಕೊಳ್ಳುವುದು, ಯುದ್ಧಕ್ಕೆ ಹೊರಟ ಸೈನ್ಯ, ಈ ಮೂರ್ತಿಗಳು ದರ್ಶನೀಯವಾಗಿವೆ.

ದೇವಾಲಯದ ದಕ್ಷಿಣಭಾಗ ಉತ್ತರ ಭಾಗ ಮತ್ತು ಹಿಂಬದಿಯ ಕೈಸಾಲೆಗಳಲ್ಲಿ ಅನೇಕ ಅಂದವಾದ ವಿಗ್ರಹಗಳನ್ನೂ ಕೆತ್ತಿದ್ದಾರೆ. ಅನ್ನಪೂರ್ಣಾ ಹರಿಹರ, ಕಾಳಿಂಗ ಮರ್ದನ, ಭೂವರಾಹ, ಗರುಡವಾಹನ, ತ್ರಿವಿಕ್ರಮ ನರಸಿಂಹ, ಶಿವ, ಅರ್ಧನಾರೀಶ್ವರ, ಶಿವ ಪಾರ್ವತಿ ಚದುರಂಗ, ನಾರದ ಸಂಗೀತ, ಶಿವಪಾರ್ವತಿ, ಉಮಾ ಮಹೇಶ್ವರ, ರಾವಣ ಯಜ್ಞ—ಒಂಬತ್ತು ತಲೆ ಅರ್ಪಿಸಿ ಹತ್ತನೆಯ ತಲೆ ಕಡಿಯಲು ಹೊರಟಾಗ ಶಿವ ಪ್ರತ್ಯಕ್ಷನಾಗುವ ದೃಶ್ಯ, ಕಾಲ ಭೈರವ, ಕಪಾಲ ಭೈರವ, ಶಿವ, ಗಂಗಾಧರ ಲಿಂಗೋದ್ಭವ, ವೀರಭದ್ರ, ಗಿರಿಜಾ ಕಲ್ಯಾಣ ಹೀಗೆ ನೂರಾರು ಶಿಲಾಮೂರ್ತಿಗಳು ಭವ್ಯವಾಗಿ ತಮ್ಮ ಭಾವ ಭವ್ಯತೆಯನ್ನು ಮೆರೆಸುತ್ತಾ ನಿಂತಿವೆ. ಒಂದೊಂದು ಶಿಲ್ಪವೂ ರೂವಾರಿಯ ಜಾಣ್ಮೆ ಕಲಾಕೌಶಲವನ್ನು ಎತ್ತಿ ಸಾರುತ್ತದೆ.

ಕೈಲಾಸ ದೇವಾಲಯ ಎಲ್ಲೋರದ ಗುಹೆಗಳ ಸಾಲಿನಲ್ಲಿ ಕಂಗೊಳಿಸುವ ಏಕಮಾತ್ರ ಭವ್ಯ- ಸುಂದರ ಶಿಲ್ಪ ಕಲಾಮಂದಿರ, ಇದರ ರಚನೆ ಅಗಾಧ. ಅದ್ಭುತ. ಈ ದೇವಾಲಯ ಬಿಜಾಪುರ ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಶಿವಾಲಯವನ್ನು ಹೋಲುತ್ತಿರುವುದು ಮತ್ತೊಂದು ವೈಶಿಷ್ಟ್ಯ. ಎರಡರ ಮಾದರಿಯೂ ಒಂದೇ ಎಂದು ಹೇಳಬಹುದಾಗಿದೆ.

ಎಲ್ಲೋರದ ಕೈಲಾಸ ದೇವಾಲಯದ ವಾಸ್ತು ಶಿಲ್ಪ ರಚನೆ ಪಲ್ಲವರ ಕಾಲದ ಪ್ರಾಚೀನ ದ್ರಾವಿಡ ಶೈಲಿಯ ಪ್ರಭೇದವಾಗಿದೆ. ಕನ್ನಡ ದೇಶದ ಕೀರ್ತಿಯನ್ನು ಮೆರೆಸಿ, ಆದರ್ಶ ಪ್ರಭುಗಳಾಗಿ ಬಾಳಿದ ರಾಷ್ಟ್ರಕೂಟ ಅರಸು ಮನೆತನದ ಮೊದಲನೆಯ ಕೃಷ್ಣರಾಜ ಎಲ್ಲೋರದ ಕೈಲಾಸ ದೇವಾಲಯವನ್ನು ಕೆತ್ತಿಸಿದ ಎಂಬ ಸಂಗತಿಯನ್ನು ಇಲ್ಲೊಂದು ಗವಿಯಲ್ಲಿರುವ ಶಾಸನ ತಿಳಿಸುತ್ತದೆ. ಇದು ಗಮನಾರ್ಹ ಸಂಗತಿಯಷ್ಟೇ ಅಲ್ಲ; ಹೆಮ್ಮೆಯ ಸಂಗತಿ.

ಎಲ್ಲೋರದ ಜೈನ ಗವಿಗಳಲ್ಲಿ ತೀರ್ಥಂಕರರ ಭವ್ಯ ವಿಗ್ರಹಗಳು, ಜೈನ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳೂ, ಕೆತ್ತನೆಗಳೂ ಇವೆ. ಇಂದ್ರಾಣಿ ಸುರ ವಿದ್ಯಾಧರರ ಹಲವಾರು ಅಂದವಾದ ವಿಗ್ರಹಗಳಿವೆ. ಕೈಲಾಸ ಮಂದಿರವನ್ನು ಹೋಲುವ ಚಿಕ್ಕ ಕೈಲಾಸ ಜೈನ ಗವಿಗಳಲ್ಲೆಲ್ಲ ಸುಂದರವಾದುದು. ಗೋಮಟೇಶ್ವರ, ಪಾರ್ಶ್ವನಾಥ, ಮಹಾವೀರರ ಆಲಯಗಳು ಅಂದವಾಗಿ ರೂಪುಗೊಂಡಿವೆ. ಇಂದ್ರಸಭೆ ಮತ್ತು ಜಗನ್ನಾಥ ಸಭೆ ಎಂಬ ಗವಿಗಳ ಕೆತ್ತನೆ ಸ್ವರೂಪ ಮನೋಹರವಾಗಿದೆ. ಹಲವಾರು ತೀರ್ಥಂಕರರ ಮೂರ್ತಿಗಳು ಇಲ್ಲಿವೆ. ಜೈನ ಗವಿಗಳು ಗುಡ್ಡದ ಮೇಲೆ ಬಂಡೆಯಲ್ಲಿ ಕೊರೆದ ೧೬ ಅಡಿ ಎತ್ತರದ ಪಾರ್ಶ್ವನಾಥ ಮೂರ್ತಿಯ ನೋಟ ಶ್ರವಣಬೆಳಗೊಳದ ಗೋಮಟೇಶ್ವರನನ್ನು ನೆನಪಿಗೆ ತರುತ್ತದೆ.

ದಕ್ಷಿಣದಲ್ಲಿ ಬೆಳೆದ ವರ್ಣ, ಚಿತ್ರಕಲೆ, ಶಿಲ್ಪ ಕಲೆಗಳ ಕೇಂದ್ರವಾಗಿ ಮೆರೆದ ಅಜಂತೆ ಮತ್ತು ಎಲ್ಲೋರದ ಇತಿಹಾಸ—ವೈಭವ ಚಿರಸ್ಮರಣೀಯ. ಅಜಂತೆ ಮತ್ತು ಎಲ್ಲೋರಗಳು ಇಂದು ಕನ್ನಡ ನಾಡಿನಲ್ಲಿಲ್ಲದೆ ನೆರೆಯ ರಾಜ್ಯಗಳಲ್ಲಿ ಇರಬಹುದು. ಆದರೆ ಈ ಕಲಾ ಕೇಂದ್ರಗಳು ಕನ್ನಡ ನಾಡಿನಲ್ಲಿದ್ದು, ಕನ್ನಡ ಜನತೆಯ —ಕಲಾವಿದರ ಭವ್ಯ ಕ್ಷೇತ್ರಗಳಾಗಿ ಮೆರೆದು, ಅವರ ಕೀರ್ತಿಯನ್ನು ಹೆಚ್ಚಿಸಿದ ಸ್ಥಳಗಳೆಂಬುದನ್ನು ಯಾರೂ ಮರೆಯುವಂತಿಲ್ಲ. ಅಮರ ಕಲೆಯ ಪ್ರತೀಕವಾಗಿ ಉಳಿದಿರುವ ಅಜಂತೆ ಮತ್ತು ಎಲ್ಲೋರದ ಹಿರಿಮೆಯನ್ನು ಅಂದರೆ ಕನ್ನಡಿಗರು ತಮ್ಮ ಗತ ವೈಭವಯುತ ಭವ್ಯ ಕಲಾ ಶಕ್ತಿಯನ್ನು ಮತ್ತೊಮ್ಮೆ ಸ್ಮರಿಸಿಕೊಂಡರೆ ಉಚಿತವಲ್ಲವೆ?

Edited, Printed & Published by K. H. Shetty at the Navayuga Press, Udipi. S. India.

ಕನ್ನಡ ಸಾಹಿತ್ಯದಲ್ಲಿ ರಾಮಾಯಣಗಳು

(ಎಂಟನೇ ಪುಟದಿಂದ)

ಬರೆದಿದ್ದರೂ ರಾಮಾಯಣವೇ ಈತನಿಗೆ ಅಮರ ಯಶಸ್ಸನ್ನು ತಂದಿತು! ಈ ಕಾವ್ಯದಿಂದಲೇ ಇವನು ಅಭಿನವ ಪಂಪನಾದನು. ಬೇಂದ್ರೆಯವರು ಹೇಳಿದಂತೆ, ಈತನ ಮಲ್ಲಿನಾಥ ಪುರಾಣವು ಹತ್ತೆಂಟು ಎಸಳಿನ ಹೂ; ರಾಮಾಯಣವು ಅಮರ ಶಿಲ್ಪಿಯ ಸಾವಿರಕಂಬದ ಬಸದಿ!

ಪಂಪ ರಾಮಾಯಣವೊಂದು ಜೈನ ರಾಮಾಯಣ. ಇದರಲ್ಲಿ ದೇಸಿ ಮತ್ತು ಮಾರ್ಗಗಳ ಸುಂದರ ಮಿಲನವುಂಟು ರಸಪುಷ್ಟಿಯಿಂದ ಇದು ಅಗ್ರಗಣ್ಯ ಕಾವ್ಯ. ಇದರಲ್ಲಿದ್ದ ಜೈನ ಸಂಪ್ರದಾಯಗಳೇ ಉಳಿದವರಿಗೆ ಅಷ್ಟು ಆಕರ್ಷಕವಾಗಿಲ್ಲ. ಇದರಲ್ಲಿ ಶ್ರೀ ರಾಮನು ಧರ್ಮನಾಯಕ; ಲಕ್ಷ್ಮಣನು ವೀರನಾಯಕ. ಈತನೇ ರಾವಣನನ್ನು ಕೊಂದವನು. ಸೀತೆ ಇದರಲ್ಲಿ ಭೂಮಿಜೆಯಲ್ಲ ಜನಕನ ಔರಸಪುತ್ರಿ. ಶ್ರೀ ರಾಮನ ತಾಯಿ ಅಪರಾಜಿತೆ; ಶತ್ರುಘ್ನನ ತಾಯಿ ಸುಪ್ರಭೆ; ಸುಮಿತ್ರೆಗೆ ಲಕ್ಷ್ಮಣನೊಬ್ಬನೇ ಮಗ. ಈ ಕಾವ್ಯದಲ್ಲಿ ಭರತನು ಭ್ರಾತೃಪ್ರೇಮವುಳ್ಳವನಲ್ಲ; ಮತ್ತು ರಾವಣನು ಋಷಿ ಕುಲದವನಲ್ಲ; ಖೇಚರ ರಾಕ್ಷಸರ ವಂಶದವನು. ವಾಲಿಸುಗ್ರೀವ ಹನುಮದಾದಿಗಳು ಕಪಿಗಳಲ್ಲ; ಕಪಿಧ್ವಜರು. ಇದರಲ್ಲಿ ಮಂಥರೆ, ತಾಟಕಿಯರ ಸುದ್ದಿಯೇ ಇಲ್ಲ; ವಾಲಿವಧೆಯ ಪ್ರಸ್ತಾಪವಿಲ್ಲ. ಹನುಮಂತನು ಶ್ರೀ ರಾಮಭಂಟನಲ್ಲ; ರಾವಣನ ತಂಗಿಯ ಅಳಿಯ ಇವನು ರಾವಣನ ದುಷ್ಕೃತ್ಯಕ್ಕೆ ಹೇಸಿ ರಾಮನ ಪಕ್ಷ ಸೇರಿದವನು. ಇದರಲ್ಲಿ ಪ್ರತಿನಾಯಕನಾದ ರಾವಣನು ವಾಲ್ಮೀಕಿಯ ರಾವಣನಂತಿಲ್ಲ. ಇವನು ರನ್ನನ ಕೌರವನಂತೆ ಅಭಿಮಾನಧನನು! ಇವನು ಸೀತಾಪಹರಣದ ದುರ್ಘಟನೆಗಾಗಿ ಪಶ್ಚಾತ್ತಾಪ ಪಟ್ಟರೂ, ಸೀತೆಯನ್ನು ಹೇಡಿಯಾಗಿ ರಾಮನಿಗೆ ಒಪ್ಪಿಸುವ ಮನಸ್ಸು ಮಾಡುವುದಿಲ್ಲ. ರಾಮ ಲಕ್ಷ್ಮಣರನ್ನು ಯುದ್ಧರಂಗದಲ್ಲಿ ವಿರಥರನ್ನಾಗಿ ಮಾಡಿತಂದು ಸೀತೆಯನ್ನು ಅವರಿಗೊಪ್ಪಿಸುವುದಕ್ಕಾಗಿಯೇ ಯುದ್ಧವನ್ನು ಮುನ್ನಡೆಸುವನು. ರನ್ನನ ದುರ್ಯೋಧನನಿಂದ ನಾಗಚಂದ್ರನು ಪ್ರಭಾವಿತನಾಗಿದ್ದಾನೆ!

ವಾಲ್ಮೀಕಿ ರಾಮಾಯಣದಲ್ಲಿ ವೀರ, ಕರುಣ, ವಿಪ್ರಲಂಭ ಶೃಂಗಾರಗಳಲ್ಲೊಂದು ರಸ ಪ್ರಧಾನವೆನ್ನುವಂತುಂಟು. ಈ ರಾಮಾಯಣದಿಂದ ವಿಪ್ರಲಂಭ ಶೃಂಗಾರವೊಂದನ್ನು ಕಿತ್ತು ಆ ಸ್ಥಾನದಲ್ಲಿ ಶಾಂತರಸವನ್ನು ಹಚ್ಚಿದರೆ ಅವು ಪಂಪ ರಾಮಾಯಣದ ಪ್ರಧಾನ ರಸಗಳಾಗುವುವು.

ಪಂಪ ರಾಮಾಯಣವು ವೈದರ್ಭೀ ರೀತಿಯ ದ್ರಾಕ್ಷಾಪಾಕದ ಕಾವ್ಯ. ಇದರಲ್ಲಿ ಹಲವು ಅಪರೂಪ ಕನ್ನಡ ಪದಗಳು ಗೋಚರಿಸುತ್ತವೆ; ಹತ್ತು ಸಂಸ್ಕೃತ ಪದಗಳಿಗೆ ಒಂದರಂತೆ ಕನ್ನಡ ಪದಗಳ ಪ್ರಯೋಗವಿದೆ. ಪ್ರಾಯಶಃ ಇದು ವೃತ್ತಗಳಲ್ಲಿ ಸಂಸ್ಕೃತ ಪದಗಳ ಹಾವಳಿಯಿದ್ದರೂ ಕಂದಪದ್ಯಗಳಲ್ಲಿ ಕನ್ನಡ ಪದಗಳ ನಲಿದಾಟವಿದೆ. ವಾಲ್ಮೀಕಿ ರಾಮಾಯಣದಂತೆ ಪಂಪ ರಾಮಾಯಣದಲ್ಲಿ ಶಬ್ದಾಲಂಕಾರಗಳು ಕಡಿಮೆ ಇದ್ದು, ಅರ್ಥಾಲಂಕಾರಗಳು ವಿಪುಲವಾಗಿವೆ. ಉಪಮೋತ್ಪ್ರೇಕ್ಷೆಗಳು ನಾಗಚಂದ್ರನ ಮೆಚ್ಚಿನ ಅಲಂಕಾರಗಳು. ಚಂದ್ರನಖಿಯು 'ಕಟಿಸ್ಥಿತಿಪ್ರೊಲಾಕಾಶಕ್ಕೆ ನೆಗೆದು ಪಾರಿದಳಂ'ತೆ! ಚಿತ್ತವು 'ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದಂ'ತೆ! ಕುಂಜದ್ವೀಪದಲ್ಲಿ ಬಿದ್ದುಕೊಂಡ ರತ್ನಜಟಿಯು 'ಎರಕೆ ಮುರಿದ ಪಕ್ಷಿ ಪೊಲಿರ್ದನಂ'ತೆ! ಉತ್ಪ್ರೇಕ್ಷೆಗಳು ಈ ಕಾವ್ಯದಲ್ಲಿ ಸೀತಿಚೋದಕಗಳಾಗಿವೆ. (IX, ೭೫, ೧೦೨, ೧೫೧, ೧೮೭; XIV ೧೭೫). ನಾಗಚಂದ್ರನಿಗೆ ಅರ್ಥಾಂತರನ್ಯಾಸಾಲಂಕಾರದಲ್ಲಿ ತುಂಬಾ ಇಷ್ಟ; ಶ್ಲೇಷ, ದೃಷ್ಟಾಂತ, ಕಾವ್ಯಲಿಂಗ, ವಿಭಾವನಾದಿ ಪ್ರಸಿದ್ಧ ಅಲಂಕಾರಗಳೂ ಈ ಕಾವ್ಯದಲ್ಲಿ ಹಿತಮಿತವಾಗಿ ಬಂದಿವೆ.

ವ್ಯಾಕರಣ ದೃಷ್ಟಿಯಿಂದ ಈ ರಾಮಾಯಣವು ಪ್ರಾಯಶಃ ನಿರ್ದುಷ್ಟವಾಗಿದ್ದುದರಿಂದಲೇ ಕನ್ನಡದ ಪ್ರಸಿದ್ಧ ವೈಯಾಕರಣಿಗಳಾದ ಎರಡನೆಯ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕರು ತಮ್ಮ ವ್ಯಾಕರಣಗಳಲ್ಲಿ ಇವನ ಪದ್ಯಗಳನ್ನು ಲಕ್ಷ್ಯಗಳನ್ನಾಗಿ ಪರಿಗ್ರಹಿಸಿರುವರು.

ಕುಮಾರ ವಾಲ್ಮೀಕಿಯ ತೊರವೆ ರಾಮಾಯಣವು (ಶ. ೧೫೦೦) ಬ್ರಾಹ್ಮಣ ಕವಿಗಳು ಬರೆದ ರಾಮಾಯಣಗಳಲ್ಲಿ ಮೊತ್ತಮೊದಲನೆಯದು. ಇದರ ಹಸ್ತಪ್ರತಿಗಳು ಕರ್ನಾಟಕದ ಪ್ರತಿ ಹಳ್ಳಿಯಲ್ಲೂ ದೊರೆಯುತ್ತಿರುವುದರಿಂದ ಇದರ ಜನಪ್ರಿಯತೆಯನ್ನು ಊಹಿಸಲು ಸಾಧ್ಯವಿದೆ.

ಪಂಪನ ಭಾರತ ಕಾವ್ಯಗಳು ನಾಗಚಂದ್ರನನ್ನು ಅಭಿನವ ಪಂಪನನ್ನಾಗಿ ರೂಪಿಸಿದಂತೆ, ಕುಮಾರವ್ಯಾಸನ ಭಾರತವು ತೊರವೆಯ ನರಹರಿಯನ್ನು ಕುಮಾರ ವಾಲ್ಮೀಕಿಯನ್ನಾಗಿ ಪ್ರಚೋದಿಸಿತು! ಆದರೂ ಅಭಿನವ ಪಂಪ, ಕುಮಾರ ವಾಲ್ಮೀಕಿಗಳು ತಮ್ಮ ಆದರ್ಶ ವ್ಯಕ್ತಿಗಳ ನೆರಳಾಗಲಿಲ್ಲ; ಆಗಲು ಸಾಧ್ಯವಾಗಲಿಲ್ಲ!

ಕುಮಾರ ವಾಲ್ಮೀಕಿಯು ವಾಲ್ಮೀಕಿಯ ರಾಮಾಯಣದ ಆರು ಕಾಂಡಗಳನ್ನು ಮಾತ್ರ ಕನ್ನಡದಲ್ಲಿ ಭಾಮಿನಿಯ ಛಂದಸ್ಸಿನಲ್ಲಿ ಬಟ್ಟಿ ಇಳಿಸಿದ್ದಾನೆ; ಉತ್ತರ ಕಾಂಡವು ವಾಲ್ಮೀಕಿ ಕೃತವೆಂಬುದರಲ್ಲೇ ಅವನಿಗೆ ಸಂದೇಹ ತೋರಿರಬೇಕು. ಈ ಕವಿಯ ಕಥನ ಶೈಲಿಯಲ್ಲಿ ಓಟವೂ ಇದೆ; ಮಾಟವೂ ಇದೆ. ಇವನ ರಾಮಾಯಣದ ಯುದ್ಧಕಾಂಡವು ಉಳಿದ ಐದು ಕಾಂಡಗಳಷ್ಟು ಹಿರಿದಾಗಿರುವುದು ಕುತೂಹಲದಾಯಕವಾಗಿದೆ. ರಕ್ಕಸತಂಗಡಿ ಯುದ್ಧದಲ್ಲಿ ಸರ್ವಸತ್ವವನ್ನೂ ಕಳೆದುಕೊಂಡ ಕನ್ನಡಿಗರನ್ನು ವೀರನರಸಿಂಹರನ್ನಾಗಿ ಪ್ರಚೋದಿಸುವುದು ಕವಿಯ ಉದ್ದೇಶವೆಂದು ತೋರುತ್ತದೆ. ಈತನ ರಾಮಾಯಣದಲ್ಲಿ ವಾಲ್ಮೀಕಿಯು ಒರೆಯದ— ಲಂಕೆಗೆ ಹಾರಿದ ಹನುಮಂತನು ತ್ರಣಬಿಂದು ಮಹರ್ಷಿಯ ಸಂದರ್ಶನವನ್ನು ಮಾಡಿದ ವಿಚಾರವಿದೆ. ಪವ್ರಾಂಗ ಬಲಿಯಾದ ರಾಮನನ್ನು ಇಂದ್ರಜಿತುವಿನ ಬ್ರಹ್ಮಾಸ್ತ್ರವು ಏನೂ ಮಾಡಲಾರದೇ ಹೋಯಿತೆಂದು ಕವಿಯು ನಾಟಕವನ್ನು ರೋಮಾಂಚನಗೊಳಿಸಿದ್ದಾನೆ! ಶ್ರೀರಾಮ ಭಕ್ತನ ಸಾಹಸವು ಇವನಲ್ಲಿ ಮುಗಿಲು ಮುಟ್ಟಿದೆ!

ಕುಮಾರ ವಾಲ್ಮೀಕಿಯ ರಾವಣನೂ ವಾಲ್ಮೀಕಿಯ ರಾವಣನಂತಿಲ್ಲ. ಅವನನ್ನು ಕವಿಯು ದುರಂತ ವ್ಯಕ್ತಿಯಾಗಿ ಚಿತ್ರಿಸಿದ್ದಾನೆ. 'ರಘುನಾಥನು ಲಕ್ಷ್ಮೀವಲ್ಲಭನೆಂಬುದನ್ನು ಬಲ್ಲೆನು. ರಣಮುಖದಲ್ಲಿ ರಾಮನ ಕೂಡುವುದೆ ತನಗೆ ಸಂಕಲ್ಪ' ಎನ್ನುತ್ತಾನೆ. ಇಂತಹ ರಾವಣನನ್ನು ಸಂಸ್ಕೃತ ರಾಮಾಯಣಗಳಲ್ಲಿ ಕಾಣಲಾರೆವು.

ಉತ್ತರ ರಾಮಾಯಣವನ್ನು ತಿರುಮಲೆ ವೈದ್ಯನು (ಶ. ೧೬೫೦) ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದಾನೆ. ಇದು ಸಂಸ್ಕೃತ ಉತ್ತರ ಕಾಂಡ ರಾಮಾಯಣದ ಕನ್ನಡ ಪದ್ಯ ರೂಪದ ಭಾಷಾಂತರ. ಇವನು ಕುಮಾರ ವಾಲ್ಮೀಕಿಯ ಹೆಸರನ್ನೂ ಹೇಳಿಲ್ಲ. ತೊರವೆ ರಾಮಾಯಣದಲ್ಲಿರುವ ಸಮಸ್ತ ಪದಗಳಲ್ಲಿರುವ ವ್ಯಾಕರಣ ದೋಷಗಳೂ ಪ್ರಾಸ ದೋಷಗಳೂ ಈ ಕಾವ್ಯದಲ್ಲಿ ಕಂಡುಬರುವುದಿಲ್ಲ. ಈತನ ಶೈಲಿಯು ಸರಳ ಮತ್ತು ಉತ್ಕೃಷ್ಟವಾಗಿದೆ. ನಾರಾಯಣ ಕವಿಯ (ಶ. ೧೮೦೦) ಉತ್ತರ ರಾಮಕಥೆಯು ಭಾಮಿನೀ ಷಟ್ಪದಿಯ ಸುಂದರ ಕಾವ್ಯ. ಈ ಕಾವ್ಯದ ಕುರಿತು ಉಗ್ರಾಣ ಮಂಗೇಶರಾಯರು—'ಕುಮಾರವ್ಯಾಸ ಮತ್ತು ಕುಮಾರ ವಾಲ್ಮೀಕಿಯ ಸದ್ಗ್ರಂಥಗಳ ಸಾಲಿನಲ್ಲೇ ಈ ಕಾವ್ಯಕ್ಕೂ ಸ್ಥಾನ ಕೊಡುವುದಲ್ಲದೆ ಮುಖ್ಯವಾಗಿ ವರ್ಣನಾ ವಿಭಾಗದಲ್ಲಿ ಆ ಕವಿಗಳನ್ನೂ ಈತನು ಮಿಗಿಸಿರುವನು' ಎಂದಿದ್ದಾರೆ. ಇದರಲ್ಲಿ ಅಲ್ಲಲ್ಲಿ ಹೆರಲಾರದ ವಿಶೇಷಣಗಳ ಮಾಲಿಕೆಗಳು (೭೧—೧) "......ಧೂಮ್ರಾಕ್ಷ ಮೊದಲ ದ್ರಮಿಳ ದಾನವರು(೩೯—೧೧)—ಮೊದಲಾದ ಕೆಲಕೆಲವು ಅಬದ್ಧ ಪ್ರಯೋಗಗಳೂ ಇವೆ.

ಅದ್ಭುತ ರಾಮಾಯಣವು ಪದಲಾಲಿತ್ಯಕ್ಕೂ ಭಾಷಾ ಸರಳತೆಗೂ ಹೆಸರಾದ ಹಳೆಗನ್ನಡ ಗದ್ಯ ಗ್ರಂಥ. ಇದೊಂದು ಶಾಕ್ತೇಯ ರಾಮಾಯಣ; ಬರೆದವರು ನಂದಳಿಕೆ ಲಕ್ಷ್ಮೀನಾರಣಪ್ಪ(೧೮೭೪)ನವರು. ಈ ಕವಿಯ ವರ್ಣನಾಶಕ್ತಿ ಮತ್ತು ಕಲಾಕೌಶಲವು ಶ್ಲಾಘ್ಯವಾದುದು. ಕನ್ನಡ ಸಾಹಿತ್ಯದಲ್ಲಿ ಮೂಲಕ್ಕಿಂತ ಸರಸವಾದ ಗ್ರಂಥವು ಲಕ್ಷ್ಮೀಶನ ಜೈಮಿನಿ ಭಾರತವೊಂದೇ ಎಂದಿರುವಾಗ, ನಂದಳಿಕೆ ಕವಿಯ ಶ್ರೀರಾಮ ಪಟ್ಟಾಭಿಷೇಕ ಮತ್ತು ರಾಮಾಶ್ವಮೇಧ ಕಾವ್ಯಗಳು ಕಾವ್ಯದೃಷ್ಟಿಯಿಂದ ಮೂಲ ಗ್ರಂಥವನ್ನು ಮೀರಿರುವುದು ಸ್ವಾರಸ್ಯಪೂರ್ಣವಾದ ವಿಚಾರ. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಮುದ್ದಣನು ಕಾಳಿದಾಸ ಮತ್ತು ಷೇಕ್ಸ್‌ಪಿಯರರಿಗಿಂತ ಕಡಿಮೆಯವನಲ್ಲ!

ದೇವಶಿಖಾಮಣಿ ಅಳಸಿಂಗರಾಚಾರ್ಯರ ಕನ್ನಡ ವಾಲ್ಮೀಕಿ ರಾಮಾಯಣದ ಸಂಪುಟಗಳು ಕನ್ನಡ ಸಾಹಿತ್ಯದ ಮೇರು ಕೃತಿಗಳು. ಕುವೆಂಪುರವರ ರಾಮಾಯಣ ದರ್ಶನ ಕಾವ್ಯವು ತನ್ನ ಅಂಗಾಂಗಗಳ ಸೌಂದರ್ಯದಿಂದ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ನೆನಪಿಗೆ ತರುತ್ತಿದೆ. ಕಾವ್ಯವು ಕಲಾನಂದದಿಂದ ಪೂರ್ಣತ್ವವನ್ನು ಪಡೆದಿದೆ. ಇದರಲ್ಲಿ ಭರತನ ಮಾತೆ, ಮಂಥರೆಯ ಅಂತರಂಗ, ವಾಲಿಯ ಕೊನೆ, ಧಾನ್ಯಮಾಲಿನಿಯ ಪಾತಿವ್ರತ್ಯ, ಅನಲೆಯ ಭಕ್ತಿ ಸತ್ಯ ನಿಷ್ಠೆಗಳು, ಸ್ವಪ್ನದೇವಿ-ತಪೋಲಕ್ಷ್ಮಿಗಳ ಸಂಭಾಷಣೆ, ಮಹಾಪಾರ್ಶ್ವನ ದೃಢತೆ, ಸಂಬಂಧಿ ಸೋದರ ಕುಂಭಕರ್ಣ, ತ್ರಿಜಟೆಯ ತ್ಯಾಗ, ರಾಮ ಸೀತೆಯರ ಸಂವಾದಗಳಲ್ಲೆಲ್ಲ ಒಂದು ಅನುಭವ. ಸೌಂದರ್ಯ ಸೃಷ್ಟಿಯಲ್ಲಿ ಅದರ ಶಕ್ತಿ ಪೂರ್ಣವಾಗಿದೆ. ಈ ಮಹಾಕಾವ್ಯ ವಿಶ್ವಸತ್ಯದ ವಿವಿಧ ಮುಖಗಳನ್ನು ಚಿತ್ರಿಸುತ್ತದೆ. ಜನಪ್ರಿಯ ರಾಮಾಯಣವೂ ಒಂದು ಸುಂದರ ರಾಮಾಯಣ.

ತೆರೆಯ ಮರೆಯಲ್ಲಿ

ಕುಮುದೇಂದುವು (ಶ. ೧೨೭೫) ಒಂದು ಜೈನ ರಾಮಾಯಣವನ್ನು ಬರೆದಿದ್ದಾನೆ. ಇದರಲ್ಲಿ ಎಲ್ಲಾ ವಿಧದ ಷಟ್ಪದಿಗಳಿವೆ. ಅಲ್ಲಲ್ಲಿ ಕೆಲವು ರಗಳೆಗಳೂ ಇವೆ. ಇವನ ಬಂಧ ಲಲಿತವಾಗಿದ್ದು ವರ್ಣನಾ

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ರಾಷ್ಟ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳೆದೃಷ್ಟಿಯ ನಿವಾರಣೆ— ಅಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಭಾಗ ಮತ್ತು ಕಥಾ ಭಾಗಗಳು ಸಂಪ ರಾಮಾಯಣದಂತಿವೆ.

ಬತ್ತಲೇಶ್ವರನು (ಸು. ೧೫೫೦) ಒಂದು ರಾಮಾಯಣವನ್ನು ಬರೆದಿದ್ದಾನೆ. ಮೂಲಕ ರಾಮಾಯಣ (ಸು. ೧೬೦೦) ಮತ್ತು ಪಿಟ್ಟಲನ (೧೬೫೧) ವಂದ ವಿಟ್ಟಲ ರಾಮಾಯಣದಲ್ಲಿ ಮೂಲಕಾಸುರನ ವಿಜಯ ಮತ್ತು ಸಂಹಾರವಿದೆ. ಯೋಗೀಂದ್ರ ಕವಿಯದ್ದು (ಸು. ೧೬೫೦) ಕುಸುಮ ಷಟ್ಪದಿಯ ಉತ್ತರ ರಾಮಾಯಣವು ಉತ್ತರರಾಮ ಚರಿತೆ, ಅಧ್ಯಾತ್ಮ ರಾಮಾಯಣ, ರಾಮಾಯಣ ಕಥಾ ಕಲ್ಪವೃಕ್ಷವು ಮುಮ್ಮಡಿ ಕೃಷ್ಣರಾಜರಿಂದ (೧೭೯೪—೧೮೬೮) ಬರೆಯಲ್ಪಟ್ಟಿದೆ. ಇವುಗಳಲ್ಲಿ ಕೊನೆಯದು ರಾಮ ಕಥೆಗಳ ಸಂಗ್ರಹ. ಇದರಲ್ಲಿ ಶ್ರೀ ಮದ್ರಾಮಾಯಣ, ಪದ್ಮಪುರಾಣ, ಪಾದ್ಮಪುರಾಣ ಕೂರ್ಮಪುರಾಣ, ಅಧ್ಯಾತ್ಮರಾಮಾಯಣ, ಶಿವಧರ್ಮೋತ್ತರ ವಿಷ್ಣುಧರ್ಮೋತ್ತರ, ಜೈಮಿನ್ಯಾದಿ ಗ್ರಂಥಗಳಲ್ಲಿ ಹೇಳಿದ ರಾಮ ಕಥೆಯನ್ನು ಸಂಗ್ರಹಿಸಿ ಹೇಳಿದ್ದಾರೆ. ಮಾರ್ಕಂಡೇಯ ರಾಮಾಯಣವು ವಾರ್ಧಕ ಷಟ್ಪದಿಯಲ್ಲಿದ್ದು ತಿಮ್ಮರಸನು (ಸು. ೧೬೫೦) ಬರೆದನು. ನಿಜಗುಣಾರ್ಯನ (ಸ. ೧೬೫೦) ಅದ್ವೈತ ರಾಮಾಯಣವು ವಚನದಲ್ಲಿದ್ದು, ಇದರಲ್ಲಿ ರಾಮಾಯಣಕ್ಕೆ ಅದ್ವೈತ ಪರವಾದ ಗೂಢಾರ್ಥವನ್ನು ಹೇಳಿದೆ. ಅಧ್ಯಾತ್ಮ ರಾಮಾಯಣದ ಉತ್ತರ ಕಾಂಡದ ಕರ್ತೃ ಶಾಲ್ಯದ ಕೃಷ್ಣರಾಜ (೧೬೪೫). ಭಾಮಿನಿ ಷಟ್ಪದಿಯ ಆನಂದ ರಾಮಾಯಣವು ತಿಮ್ಮಾಮಾತ್ಯ (ಸು. ೧೬೫೦) ನದು. ಇದು ಸಪ್ತಕಾಂಡ ರಾಮಾಯಣ. ದಶಕಂಠ ರಾಮಾಯಣವನ್ನು (೧೬೫೦) ಬರೆದ ಕವಿಯಾರೋ ಗೊತ್ತಿಲ್ಲ. ಇದರಲ್ಲಿ ಕುಮಾರ ವಾಲ್ಮೀಕಿಯ ರಾಮಾಯಣದ ಯುದ್ಧಕಾಂಡದ ವ್ಯಾನುವಾದವಿದೆ. ಶತಕಂಠ ರಾಮಾಯಣವನ್ನು (೧೯ನೆಯ ಶತಮಾನ) ಕಂ. ಟಿ. ಶ್ರೀನಿವಾಸರಾಯರು ಬರೆದರು. ಶಂಕರ ರಾಮಾಯಣವು (ಸು. ೧೭೦೦) ಭಾಮಿನಿ ಷಟ್ಪದಿಯಲ್ಲಿದೆ. ಹರಿದಾಸ ಕವಿಯ (೧೬೫೦) ಮೂಲ ಬಲರಾಮಾಯಣದಲ್ಲಿ ರಾವಣ ಕುಂಭಕರ್ಣರ ಮೂಲಬಲವನ್ನು ಶ್ರೀರಾಮನು ಸಂಹರಿಸಿದ ಕಥೆ ಹೇಳಿದೆ. ಅಚ್ಚಕನ್ನಡ ರಾಮಾಯಣವು ಕಾವ್ಯರೂಪವಾಗಿ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ (೧೮೫೦—೧೯೦೦) ಬರೆಯಲ್ಪಟ್ಟಿತು. ನ್ಯಾಪತಿ ಲಕ್ಷ್ಮೀನರಸಿಂಹನ (೧೮೬೦) ರಾಮಕಥಾರಂಜನವು ವೃತ್ತ, ಗೀತ, ಸೀಸಪದ್ಯ, ಕಂದಗಳ ಕಲಸು ಮೇಲೋಗರ. ದೇವಚಂದ್ರನ ರಾಮ ಕಥಾವತಾರವು (೧೭೭೦—೧೮೪೧) ಒಂದು ಚಂಪೂ ಕಾವ್ಯ. ರಾಮಚಂದ್ರ ಚಾರಿತ್ರವು ಸಾಂಗತ್ಯ ರಾಮಾಯಣ. ಇದರ ೧೬ ಸಂಧಿಗಳನ್ನು ಚಂದ್ರಶೇಖರ ಕವಿಯೂ, ೧೭ರಿಂದ ಮುಂದೆ ಪದ್ಮನಾಭನೂ (ಸು. ೧೭೫೦) ಬರೆದರು. ಲಿಂಗರಾಜರು (೧೮೨೩—೧೮೭೪) ವನವಾಸ ರಾಮಾಯಣ ಮತ್ತು ಭಾಮಿನಿ ಷಟ್ಪದಿಯಲ್ಲಿ ಕರ್ನಾಟಕ ರಾಮಾಯಣ ಸಂಗ್ರಹವನ್ನು ಬರೆದಿದ್ದಾರೆ. ವಾಸಿಷ್ಠ ರಾಮಾಯಣದ ಕವಿ ಬಾಗಲೂರು ರಾಮಸ್ವಾಮಿ (೧೯ನೆಯ ಶತಮಾನ)ಯವರು. ಇದೂ ವೃತ್ತ, ಷಟ್ಪದಿ, ಗೀತ, ವಚನಗಳ ಮಿಶ್ರಕಾವ್ಯ.

ಸುಬ್ರಹ್ಮಣ್ಯ ಕವಿ (ಸು ೧೭೫೦, ಯು ಹನುಮದ್ರಾಮಾಯಣವನ್ನು ಕಂದ ಪದ್ಯರೂಪದಲ್ಲಿ ಬರೆದಿದ್ದಾನೆ. ಕಂದ ಪದ್ಯಗಳನ್ನು ಇವನಂತೆ ಸುಲಭವಾಗಿ ಬರೆದವರು ಕನ್ನಡ ಸಾಹಿತ್ಯ ಪ್ರಪಂಚದಲ್ಲೇ ಇಲ್ಲ. ಆತ್ಮ ರಾಮಾಯಣ ಮತ್ತು ಹರಿ ಕಥಾ ರಾಮಾಯಣಗಳನ್ನು ಕಾರುಪಲ್ಲಿ ಶಿವರಾಮದಾಸರು (೧೮೯೩) ಬರೆದರು. ಗಳಗನಾಥರ (೧೮೬೯—೧೯೪೨) ಆನಂದ ರಾಮಾಯಣ ಮತ್ತು ತುಳಸೀ ರಾಮಾಯಣಗಳು ವಾಚಕರಿಗೆ ವಾಚನಾಭಿರುಚಿಯನ್ನು ಹೆಚ್ಚಿಸಿವೆ. ಕೆ. ರಾಮಸ್ವಾಮಿ ಅಯ್ಯಂಗಾರರ (೧೮೬೦-೧೯೨೫) ಕನ್ನಡ ಬಾಲರಾಮಾಯಣವೂ, ಎಂ. ಎನ್. ಕಾಮತರ (೧೮೮೩-೧೯೪೦) ಬಾಲಕರ ರಾಮಾಯಣವೂ, ಕೃಷ್ಣರಾಯರ (೧೮೫೦-೧೯೩೬) ಮತ್ತು ಗದಿಗೆಯ್ಯ ಹುಚ್ಚಯ್ಯ ಹೊಸ್ಕೂರ ಮಠದವರ (೧೮೭೦-೧೯೩೩), ಅಲ್ಲದೆ ಮೈಸೂರು ಸೀತಾರಾಮ ಶಾಸ್ತ್ರಿಗಳ (೧೮೬೫—೧೯೩೩) ಬಾಲರಾಮಾಯಣವೂ ಮಕ್ಕಳಿಗಾಗಿ ಬರೆದದ್ದು. ಸಂಕ್ಷಿಪ್ತ ರಾಮಾಯಣ ಮತ್ತು ಶ್ರೀ ರಾಮ ಚರಿತ್ರೆಯನ್ನು ಸಜ್ಜೀಸ ರಾಮಕೃಷ್ಣಯ್ಯನವರು (೧೮೪೩—೧೯೧೫) ಬರೆದರು. ನವಶೀತ ರಾಮಾಯಣವು ಮುಳಿಯ ತಿಮ್ಮಪ್ಪಯ್ಯ (೧೮೮೧—೧೯೫೦) ನವರ ಪದ್ಯ ಕಾವ್ಯ. ಐರೋಡಿ ಶಿವರಾಮಯ್ಯನವರ (೧೯೨೪) ಸಂಕ್ಷಿಪ್ತ ವಾಲ್ಮೀಕಿ ರಾಮಾಯಣವು ಸಂಸ್ಕೃತ ವಾಲ್ಮೀಕಿ ರಾಮಾಯಣದ ಸಾರ ಸಂಗ್ರಹ. ರಂಗನಾಥರಾಮಾಯಣವು ಕೆ. ರಾಮಸ್ವಾಮಿ ಅಯ್ಯಂಗಾರರ ಪದ್ಯಕಾವ್ಯ. ಸ ಭೋದ ರಾಮರಾಯರ ರಾಮಾಯಣ ಕಥಾಸಾರವು ಕನ್ನಡ ವಾಚಕ ಪ್ರಪಂಚಕ್ಕೆ ಉಪರಿತ್ತ ಕೊಡುಗೆ. ರಾಮಾಯಣ ಸಂಗ್ರಹದ ಕರ್ತೃ ಗೋವಿಂದ ರಾಜ ಅಯ್ಯಂಗಾರರು (೧೯೩೬). ದತ್ತಾತ್ರೇಯ ಕೃಷ್ಣ ಭಾರದ್ವಾಜರ (೧೯೩೮) ಶ್ರೀ ತುಲಸೀ ರಾಮಾಯಣವು ಹಿಂದಿಯರಿಯದ ಕನ್ನಡಿಗರಿಗಾಗಿ ಬರೆದ ಗ್ರಂಥ. ಶ್ರೀಮದ್ವಾಲ್ಮೀಕಿ ರಾಮಾಯಣ ಸಂಗ್ರಹವನ್ನು ಭಾರತಿ ಸಂಪಂಗಿ ರಾಮಯ್ಯನವರು (೧೯೪೦) ಬರೆದರು. ಚಾಮರಾಜೋಕ್ತಿ ವಿಲಾಸ ರಾಮಾಯಣವು ಸಂಸ್ಕೃತ ವಾಲ್ಮೀಕಿ ರಾಮಾಯಣದ ಸುಂದರವಾದ ಕನ್ನಡ ಭಾಷಾಂತರ. ಈ ರಾಮಾಯಣಗಳೆಲ್ಲ 'ಯತೋ ಧರ್ಮ ಸ್ತತೋ ಜಯಃ' ಎಂಬುದನ್ನು ಸಾರುವುದಕ್ಕಾಗಿಯೇ ಜನ್ಮವೆತ್ತಿದುವು. ಇಂತಹ ಪರಮ ಧಾರ್ಮಿಕ ಗ್ರಂಥಗಳ ಸಂಖ್ಯೆ ತೆಯಿಂದ ಗಣರಾಯನು ತಿಣುಕಬಲ್ಲನೆ? ವೀರ ನಾರಾಯಣನ ಸದ್ಭಕ್ತನಾದ ಕುಮಾರ ವ್ಯಾಸನು ತನ್ನ ಭಾರತದಲ್ಲಿ ಈ ವಾಕ್ಯವೊಂದನ್ನು ಹೇಳಬಾರದಿತ್ತು!

ಭಾರತದಲ್ಲಿ ಅಣುಶಕ್ತಿಯ ಉತ್ಪಾದನೆ

(ಏಳನೇ ಪುಟದಿಂದ)

ಕೇಂದ್ರಗಳ ಯೂನಿಟ್ ದರವು ಇತರ ಮೂಲಗಳಿಂದ ಉತ್ಪಾದಿಸುವ ಯೂನಿಟ್ ದರಗಳಿಗಿಂತ ಹೆಚ್ಚೇನೂ ಆಗುವುದಿಲ್ಲವೆಂದು ಸಿದ್ಧಾಂತಕ್ಕೆ ಬರಲಾಗಿದೆ. ಆ ಕೇಂದ್ರದಲ್ಲಿ ಅಣುವಿಕಿರಣ ಹೊಂದುವ ಕಚ್ಚಾ ಸಾಮಗ್ರಿಗಳು ಕ್ಷಚಿತ್ತಾಗಿ ಅಥವಾ ಆಕಸ್ಮಾತ್ತಾಗಿ ಅಣ್ವಸ್ತ್ರಗಳ ಉತ್ಪಾದನೆಗೆ ದುರುಪಯೋಗವಾಗಬಾರದೆಂದು ನೋಡಿಕೊಳ್ಳಲು ಎಲ್ಲ ಮುಂಜಾಗರೂಕತೆಯ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಈ ತಾರಾಪೋರ್ ಕೇಂದ್ರವು ಭಾರತದ ಅಣುಶಕ್ತಿ ಮಂಡಳದ ಆಶ್ರಯದಲ್ಲಿ ನಡೆಯುತ್ತಿದ್ದು, 380,000 ಕಿಲೊ ವ್ಯಾಟುಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದೆ. 1967ರ ವೇಳೆಗೆ ಅದು ಪೂರ್ತಿಯಾದಾಗ, ಅದು ಜಗತ್ತಿನಲ್ಲಿಯೇ ಎರಡು ಅತ್ಯಂತ ದೊಡ್ಡ ಅಣುಶಕ್ತಿ ಚಾಲಿತ ವಿದ್ಯುತ್ ಕೇಂದ್ರಗಳಲ್ಲಿ ಒಂದಾಗುತ್ತದೆ. ಈ ಕೇಂದ್ರದಿಂದ ಮಹಾರಾಷ್ಟ್ರ ಮತ್ತು ಗುಜರಾತ್ ಇವೆರಡೂ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ವಿದ್ಯುತ್ ಕೇಂದ್ರಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗುತ್ತದೆ. ಆ ಕೇಂದ್ರದಲ್ಲಿ 190,000 ಕಿಲೊ ವ್ಯಾಟುಗಳಷ್ಟು, ಕುದಿಯುವ ನೀರಿನ, 2 ಟ್ಯಾಂಕುಗಳ ರೂಪದಲ್ಲಿ "ನ್ಯೂಕ್ಲಿಯರ್ ರಿಯಾಕ್ಟರ್"ಗಳಿವೆ. ಅದಕ್ಕೆ ಪೋಷಕವಾದ ವಿದ್ಯುತ್ ಉಪಕರಣಗಳು, ಭಾಷ್ಪೀಭವನಗೊಳಿಸುವ ವ್ಯವಸ್ಥೆ, ನಿರುಪಯೋಗ ವಸ್ತುಗಳ ವಿಸರ್ಜನ, ಮತ್ತು ಅಶುದ್ಧ ಹೊಂದದಿರುವಂತಹ ಸೌಕರ್ಯಗಳು ಇವೇ ಮೊದಲಾದುವು ಇರುತ್ತವೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ಪರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವೈಷ್ಣವ ಶಿರೋಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ
ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯ
ಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ
0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿ
ಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ದಯಮಾಡಿ ಪ್ರತಿಗಳಿಗೆ ವಿಚಾರಿಸಿರಿ :-
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ಪ್ರಜಾಸತ್ತಾತ್ಮಕ ಸಮಾಜವಾದ

(ಆರನೇ ಪುಟದಿಂದ)

ಗರ್ಭದಿಂದ ಹೊರಬಂದ ಇವುಗಳಿಗೆ ವಿರುದ್ಧವಾದ ಆರ್ಥಿಕ ಸಿದ್ಧಾಂತ ಸಮಾಜವಾದ. 'ಎಲ್ಲರೂ ಕೈಲಾದಷ್ಟು ದುಡಿಯಬೇಕು. ಹೊಟ್ಟೆ ಹಿಡಿದಷ್ಟು ಉಣ್ಣಬೇಕು' ಎಂಬ ಸಮಾನತೆಯ ದರ್ಶನ ಸಮಾಜವಾದ. ಯುದ್ಧಗಳು, ಉತ್ಪಾದನೆಯ ಯಾಂತ್ರೀಕರಣ, ಸಂಪತ್ತಿನ ಕೇಂದ್ರೀಕರಣ, ಸ್ವಾರ್ಥ, ಸ್ಪರ್ಧೆ, ಇವುಗಳಿಂದಾದ ಎಲ್ಲೆಲ್ಲೂ, ಉಳ್ಳವರು, ಇಲ್ಲದವರು, ಶ್ರೀಮಂತರು, ಬಡವರು, ಮಾಲಿಕರು– ಕಾರ್ಮಿಕರು, ಭೂಸ್ವಾಮಿಗಳು— ಗೇಣಿಗಾರರು, ಸಾಹುಕಾರರು—ಸಾಲಗಾರರು— ಮುಂತಾಗಿ ಸಮಾಜವು ವರ್ಗಗಳ ಅಸಮಾನತೆಯಿಂದಾಗಿ ದಾರಿದ್ರ್ಯ ಬಡತನಗಳಿಗೆ ಬಲಿಯಾಗಿದೆ. ರಾಜ್ಯಾಧಿಕಾರವು ಬಂಡವಾಳಶಾಹಿಗಳಿಗೆ ಸಾಮ್ರಾಜ್ಯ ವಿಸ್ತರಣೆಗೆ ಉತ್ತೇಜಕವಾಗಿದೆ.

ಪ್ರಜಾಪ್ರಭುತ್ವ ಮತ್ತು ಸಮಾಜವಾದ ತತ್ವಗಳು ಕೆಲವರು ವಾದಿಸುವಂತೆ ಪರಸ್ಪರ ಮಾರಕ ಸಿದ್ಧಾಂತಗಳಲ್ಲ, ಪೂರಕಗಳು. ಪ್ರಜಾಪ್ರಭುತ್ವವು, ರಾಜ್ಯ ಮತ್ತು ವ್ಯಕ್ತಿ ಪ್ರತಿನಿಧಿಗಳು ಮತ್ತು ಜನತೆ-ಇವರೀರ್ವರ ನಡುವಣ, ರಾಜಕೀಯ ಸಂಬಂಧಗಳು, ಮತ್ತು ಕಾಲ ಕಾಲಕ್ಕೂ ಜನತೆಯಲ್ಲಿ ಉದ್ಭವಿಸಬಹುದಾದ ರಾಜಕೀಯ ಭಿನ್ನಾಭಿಪ್ರಾಯಗಳನ್ನು ರಾಜ್ಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಇತಿಮಿತಿಗಳಿಗೊಳಪಟ್ಟ ಕಾನೂನು ಮತ್ತು ಜನಮತದನ್ವಯ ಶಾಂತಿಯುತವಾದ ಮಾರ್ಗಗಳಿಂದ ನಿಬಂಧನೆಗೊಳಿಸುವುದು, ಸಮಾಜವಾದವು ಸಮಾಜಕ್ಕೆ ಆವಶ್ಯಕವಾದ, ಅನ್ನ, ಒಟ್ಟೆ, ವಸತಿ, ವಿದ್ಯೆ, ಔಷಧಿಗಳನ್ನು ಪೂರೈಸಲು ಯೋಗ್ಯ ಕಾರ್ಯಕ್ರಮಗಳನ್ನು ಸರ್ಕಾರ ನಿರ್ವಹಿಸಬೇಕೆಂದೂ, ಅದಕ್ಕಾಗಿ ಉತ್ಪತ್ತಿಯ ಸಾಧನಗಳು ಮತ್ತು ನೈಸರ್ಗಿಕ ಸಂಪತ್ತುಗಳು, ಹಂಚುವಿಕೆಯ ಮತ್ತು ವಿನಿಮಯ ಸಾಧನಗಳು, ಖಾಸಗಿ ಬಂಡವಾಳ ಶಾಹಿ ವ್ಯವಸ್ಥೆಯ ರಾಷ್ಟ್ರೀಕರಣ ಹಾಗೂ ಸಾಮಾಜೀಕರಣ ಮಾಡುವ ಮೂಲಕ ಸಾರ್ವಜನಿಕವಾಗಿಯೇ ನಡೆಯಬೇಕೆಂಬ ಸಮಾನತೆಯ ಆರ್ಥಿಕ ಸಿದ್ಧಾಂತ, ಕಳೆದ ೪-೫ ಶತಮಾನಗಳಿಂದ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಸಿದ್ಧಾಂತಗಳ ಸಾಕ್ಷಾತ್ಕಾರಕ್ಕಾಗಿ ಸರ್ವ ಪ್ರಯತ್ನಗಳು ನಡೆಯುತ್ತಿದ್ದು, ಇಂದು ವಿಶ್ವವೇ ಹೊಸ ಸಮಾಜ ಸೃಷ್ಟಿಯಲ್ಲಿದೆ. ಅಮೇರಿಕಾ ಸ್ವತಂತ್ರ ಜನತ್ತಿನ 'ರಕ್ಷಣೆಯ ಹೆಸರಿನಲ್ಲಿ ಬಂಡವಾಳ ಶಾಹಿ ಸಾಮ್ರಾಜ್ಯದ ವಿಸ್ತರಣೆ ಮತ್ತು ರಕ್ಷಣೆಯನ್ನೂ ಸಮಾಜದ ಪ್ರಗತಿಗೆ ಧಕ್ಕೆಯನ್ನೂ ತರುತ್ತಿದೆ. ರಶ್ಯಾ, ಚೀನಾ ಮತ್ತು ಪೂ. ಯುರೋಪಿನ ಕಮ್ಯೂನಿಸ್ಟ್ ರಾಷ್ಟ್ರಗಳು ತಮ್ಮ ರಕ್ಷಣೆ ಮತ್ತು ಸಮಾಜವಾದ ಪ[illegible]ಯಲ್ಲಿ, ಪ್ರಜಾಪ್ರಭುತ್ವ ತತ್ವಗಳನ್ನು ಅಲ್ಲಗಳೆದು, ಸಮಾಜವಾದ, ಪ್ರಜಾಪ್ರಭುತ್ವಗಳ ವಿಕಾಸಕ್ಕೆ ಅಡ್ಡಿಯನ್ನುಂಟು ಮಾಡುತ್ತಿವೆ. ಈ ಜಾಗತಿಕ ಹಿನ್ನೆಲೆಯಲ್ಲಿ, ಭಾರತ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದಿರುವದು.

ಭಾರತದ ಚರಿತ್ರೆಯಲ್ಲಿ 'ಆವಡಿ ಕಾಂಗ್ರೆಸ್ ಅಧಿವೇಶನ' ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ ದಿನ. ಆದರಲ್ಲಿ ಸಮಾಜವಾದಿ ಮಾದರಿ ಸಮಾಜ ಸ್ಥಾಪನೆ ತಮ್ಮ ಗುರಿ ಎಂದು ಕಾಂಗ್ರೆಸ್ ಸಾರಿತು. ಭುವನೇಶ್ವರ ಅಧಿವೇಶನದಲ್ಲೂ ಇದೇ ತನ್ನ ಗುರಿ ಎಂದು ಮತ್ತೊಮ್ಮೆ ದೃಢಪಡಿಸಿತು. ಸ್ವಾತಂತ್ರ್ಯಾನಂತರದ ೧೮ ವರ್ಷಗಳಲ್ಲಿ ಜೀವ ವಿಮಾ ಕಂಪೆನಿಗಳು, ಕೋಲಾರದ ಚಿನ್ನದ ಗಣಿಗಳು, ವಿಮಾನ ಮಾರ್ಗಗಳು ರಾಷ್ಟ್ರೀಕೃತವಾಗಿವೆ. ರಾಷ್ಟ್ರದ ಅತ್ಯಾವಶ್ಯಕ ಸಂರಕ್ಷಕ ಉಪಕರಣಗಳನ್ನು ತಯಾರಿಸುವ ಕಾರಖಾನೆಗಳನ್ನು ಸರಕಾರವೇ ನಡೆಸುತ್ತಿದೆ.

ಭಾರತ ಸಮಾಜವಾದ ತತ್ವದ ಹೊರತು ಬದುಕದು ಎಂಬ ಸತ್ಯವನ್ನು ಮನಗಂಡೇ ಪಂ. ಜವಾಹರಲಾಲ್ ನೆಹರೂರವರೂ, ಲಾಲ್ ಬಹದೂರ ಶಾಸ್ತ್ರಿಗಳೂ ಈ ತತ್ವವನ್ನ ಅನುಷ್ಠಾನಕ್ಕೆ ತರಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಭಾರತದ ಜನಸಂಖ್ಯೆಯಲ್ಲಿ ಅವಿದ್ಯಾವಂತ, ಹೊಟ್ಟೆಗೆ ಒಪ್ಪತ್ತು ಊಟಕ್ಕಿಲ್ಲದ, ನಿಲ್ಲಲು ವಸತಿಯಿಲ್ಲದ, ರೋಗರುಜಿಗಳಿಂದ ನರಳುವವರ ಸಂಖ್ಯೆ ಬಹುಭಾಗವಿದೆ. ಈ ಜನರ ಸಂಕಷ್ಟಗಳು ನಿವಾರಣೆಯಾಗದೆ ನಮಗೆ ಬಂದ ಸ್ವಾತಂತ್ರ್ಯ ಸಾರ್ಥಕವಾಗದು. ದೀನದಲಿತರು ಕೂಡಾ ಸ್ವಾತಂತ್ರ್ಯದ ಸವಿ ಉಣ್ಣಬೇಕಾದರೆ ಬಡವ ಶ್ರೀಮಂತರೊಳಗಿನ ಬೃಹತ್ ತಾರತಮ್ಯಗಳನ್ನೇ ಕಡಿಮೆಗೊಳಿಸಬೇಕಾದ ಸಾಧನವೇ ಸಮಾಜವಾದ. ಈ ೧೮ ವರ್ಷಗಳಲ್ಲಿ ಗಿರಣಿ ಮಾಲಿಕರು, ಕಂಟ್ರಾಕ್ಟುದಾರರು, ದಲ್ಲಾಲಿಗಳು, ಭ್ರಷ್ಟ ಅಧಿಕಾರಿಗಳ ಸಂಖ್ಯೆ ಮಿತಿ ಮೀರಿ ಬೆಳೆದು ಧನಕನಕ ಅವರ ಸೊತ್ತಾಗಿದ್ದು, ಬಡ ಬೋರೇಗೌಡ ಅವರ ಕಣ್ಣೆದುರಿನಲ್ಲಿ ನರಳಿ, ನರಳಿ ಸಾಯುವ ಸ್ಥಿತಿಯಲ್ಲಿದ್ದಾನೆ.

ಪ್ರಜಾಸತ್ತಾತ್ಮಕ ಸರಕಾರ ಉಳಿಯಬೇಕಾದರೆ ಈ ಆರ್ಥಿಕ ಸಾಮಾಜಿಕ ಭೇದಗಳು ನೆಲಸಮವಾಗಬೇಕು—ಸಮಾನತೆಯ ದೃಷ್ಟಿಯಲ್ಲಿ ಸರಕಾರ ಕ್ಷಿಪ್ರವಾಗಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಬೇಕು. ಶತಮಾನಗಳ ಪರಕೀಯರ ದಾಳಿ, ದಬ್ಬಾಳಿಕೆ ಶೋಷಣೆಗಳಿಗೆ ತುತ್ತಾಗಿ ಜಗತ್ತಿನಲ್ಲಿಯೇ ಅತ್ಯಂತ ಬಡವರ, ದರಿದ್ರರ, ಹಿಂದುಳಿದ ಭಾರತ ದೇಶವನ್ನು ನಾಗರಿಕ, ಆಧುನಿಕ, ಸಮೃದ್ಧ, ದೇಶವನ್ನಾಗಿ ಕಟ್ಟಬೇಕಾದರೆ ಕೆಲವು ತೀವ್ರ ಮೂಲಭೂತ ಆರ್ಥಿಕ ಸಾಮಾಜಿಕ ಬದಲಾವಣೆಗಳನ್ನು ಸಮಾಜವಾದಿ ತತ್ವದ ಅಸ್ತಿವಾರದ ಮೇಲೆ ಜ್ಯಾರಿಗೆ ತರಲೇಬೇಕು. ಬ್ರಿಟಿಷ್ ಸಾಮ್ರಾಜ್ಯಶಾಹಿ ಶೋಷಣೆಯಿಂದ ಮುಕ್ತವಾದಾಗ ತಮ್ಮ ಬಾಳು ಹಸನಾಗುವದೆಂದು ಕನಸು ಕಟ್ಟಿಕೊಂಡಿದ್ದ ಭಾರತದ ಗೋಟ್ಯನು ಕೋಟಿ ರೈತ, ಕಾರ್ಮಿಕ ಮತ್ತು ಸಾಮಾನ್ಯ ಜನಂಗೆ ಅನಂತರದ ಆಡಳಿತೆಯಿಂದ ಆಶಾಭಂಗವಾಗುವದರಲ್ಲಿದೆ. ಸೇಕಡಾ ಒಂದರಷ್ಟು ಶ್ರೀಮಂತ ವರ್ಗ ರಾಷ್ಟ್ರೀಯ ಆದಾಯದ, ಸೇಕಡಾ ಇಪ್ಪತ್ತೈದರಷ್ಟು ಕಬಳಿಸುತ್ತಿದ್ದೆ.

ಇಪ್ಪತ್ತೇಳು ಕೋಟಿ ಜನ ಗ್ರಾಮೀಣ ರೈತ ಕುಟುಂಬಗಳ ಆದಾಯ ೩೫ ಪೈಸೆಗಳಿಗಿಂತಲೂ ಕಡಿಮೆಯಾಗಿದ್ದು ತಮ್ಮ ಕಷ್ಟಗಳಿಂದ ನಿರುತ್ಸಾಹಿಗಳಾಗಿ 'ನಮ್ಮ ಜೀವನದಲ್ಲಿ ಸಂತೋಷದ ದಿನ ಎಂದಿಗೂ ಬರಲಾರದು" ಎಂದು ಗೋಳಿಡುವ ಆರ್ತನಾದ ಕೇಳ ಸಿಗುತ್ತಿದೆ. ಈ ಬೇಧ ಕೊನೆಗಾಣದ ಪಕ್ಷದಲ್ಲಿ ದಿನದಿಂದ ದಿನಕ್ಕೆ ಶ್ರೀಮಂತರು ಕೋಟ್ಯಧಿಪತಿಗಳಾಗಿ, ಬಡವ ಇನ್ನೂ ಕಡು ಬಡವನಾಗುತ್ತಾ ಮುಂದುವರಿದಲ್ಲಿ ಸಾಮಾನ್ಯ ವರ್ಗದ ಜನತೆಗೆ ಪ್ರಜಾಸತ್ತೆಯಲ್ಲಿ ತಾತ್ಸಾರ, ಜಿಗುಪ್ಸೆ ಬಂದೀತು. ಈ ನಿರಾಶಾಭಾವನೆ, ಅಸಂತುಷ್ಟಿ. ಬಡಕೂಲಿಗಾರ ರೈತಾಪಿ ಜನರಲ್ಲಿ ಕ್ರಾಂತಿಕಾರಕ ಪಕ್ಷಗಳ ದವಡೆಗೆ ತಳ್ಳಿಬಿಟ್ಟೀತು. ಒಮ್ಮೆ ಭಾರತದ ಜನ ತನ್ನ ಹಕ್ಕುಗಳನ್ನು ತಿಳಿದು ನಿದ್ದೆಗಣ್ಣಿನಿಂದ ಎಚ್ಚತ್ತರೆ ಅವರನ್ನು ತಡೆಯುವ ಶಕ್ತಿ ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಹಿಮಾಲಯದ ವರೆಗೆ ಖಂಡಿತಕ್ಕೂ ಸಿಕ್ಕದು. ತಡೆಯಿರಿ! ಸುಧಾರಣೆಗಳನ್ನು ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಮಂಡಿಸುತ್ತೇವೆ. ಸಿಲೆಕ್ಟ್ ಕಮಿಟಿಯ ರಿಪೋರ್ಟ್ ಕಾಯುತ್ತಿದ್ದೇವೆ ಎಂಬ ಆಶ್ವಾಸನೆಗಳು ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಏನೂ ಪ್ರಯೋಜನಕ್ಕೆ ಬರಲಿಕ್ಕಿಲ್ಲ. ಆದ್ದರಿಂದ ಮುಂದೆ ನಮ್ಮ ಪ್ರಜಾಪ್ರಭುತ್ವಕ್ಕೆ ಬರಬಹುದಾದ ಗಂಡಾಂತರದಿಂದ, ವಿನಾಶದಿಂದ, ಭಾರತವನ್ನು ತಪ್ಪಿಸಬಹುದಾದ ಸಂಜೀವಿನಿ ಪ್ರಜಾಸತ್ತಾತ್ಮಕ ಸಮಾಜವಾದ.

ಸಮಾಜವಾದೀ ಚಳವಳಿಯ ಯಶಸ್ಸಿಗಾಗಿ ದುಡಿಯತಕ್ಕ ಯೋಧ, ಗೆಲುವಿನಿಂದ ಹಿಗ್ಗದೆ, ಸೋಲಿನಿಂದ ಕುಗ್ಗದೆ, ಜಯಾಪಜಯಗಳನ್ನು ಸಮದೃಷ್ಟಿಯಿಂದ ಕಂಡು ಸತ್ಯ, ದೃಢತೆ, ಸಂಯಮದಿಂದ ಕೂಡಿ ಸಮಾಜಕ್ಕಾಗಿ ದುಡಿದರೆ ಮಾತ್ರ ಸಮಾಜವಾದೀ ಮಾದರಿಯ ಸಮಾಜದ ಸ್ಥಾಪನೆಯಾಗಿ ಸಮಾಜೋನ್ನತಿಯಾಗುವದು. ಒಂದು ದೇಶವು ಉದ್ಧಾರವಾಗಿ ನೆಮ್ಮದಿಯಿಂದ ಬಾಳುವದರಲ್ಲಿ ಸಮಸ್ತ ಪ್ರಜೆಗಳಿಗೂ ಸಾಧ್ಯವಾದೀತು. ಸಮಾಜವಾದದಲ್ಲಿ ನಿಷ್ಠೆಯಿರುವ-ವಿಶ್ವಾಸವಿರುವ ಮುಖಂಡರನ್ನೇ ನಾವು ಆರಿಸಿ, ವಿಧಾನಸಭೆ—ಪಾರ್ಲಿಮೆಂಟುಗಳಿಗೆ ಕಳುಹಿಸಿ ಕೊಟ್ಟರೆ ಮಾತ್ರ ಪ್ರಜಾಸತ್ತಾತ್ಮಕ ಸಮಾಜವಾದ ಅತಿ ಬೇಗನೇ ಜ್ಯಾರಿಗೆ ಬರುವದು. ಇದರ ಬದಲು ಕೇವಲ ಬಾಯಿಯಲ್ಲಿ ಸಮಾಜವಾದ ಎಂದು ಕೂಗುವ ಕಪಟ ನಾಯಕರುಗಳಿಂದ ಬಡ ಜನತೆಯ ಏಳಿಗೆ, ಪುರೋಭಿವೃದ್ಧಿ ಎಂದಿಗೂ ಆಗದು. ಪ್ರಜೆಗಳು ಬರೇ ಬಾಯಲ್ಲಿ ಸಮಾಜವಾದ ಎಂದು ಮಾತನಾಡಿದರೆ ಪ್ರಯೋಜನವಿಲ್ಲ ಕಾರ್ಯದಲ್ಲಿ ಕೂಡಾ ಸರಕಾರ ಈ ದಿಸೆಯಲ್ಲಿ ತರಬಹುದಾದ ಸುಧಾರಣೆಗಳಿಗೆ ಸಂಪೂರ್ಣ ಬೆಂಬಲವಿತ್ತು ನಮ್ಮ ರಾಷ್ಟ್ರನಾಯಕರುಗಳ ಕನಸು ನನಸಾಗುವಂತೆ ಮಾಡಬೇಕು.

ಭಾರತ್ ಇಂಡಸ್ಟ್ರೀಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,

ಕಾಪು, ದ. ಕ.

ತಾ. 30—12—65ರಲ್ಲಿ ಜರಗಿದ ಕಂಪೆನಿಯ ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ವಿಶೇಷ ಠರಾವು ಮಂಜೂರಾಗಿರುವುದೆಂಬುದನ್ನು ಈ ಮೂಲಕ ಜಾಹೀರು ಪಡಿಸಲಾಗಿದೆ.

ಕಂಪೆನಿಯ ಮೆನೇಜಿಂಗ್ ಏಜಂಟರಾಗಿದ್ದ ವಿವೇಕಾನಂದ ಕಮರ್ಶಿಯಲ್ ಕೊರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ ಇವರು ತಾ. 15—8—65ರಿಂದ ರಾಜಿನಾಮೆ ಸಲ್ಲಿಸಿರುವ ಕಾರಣ ಕಂಪೆನಿಯ ಕಾರ್ಯಕಲಾಪಗಳನ್ನು ನಿರ್ವಹಿಸುವರೇ ಶ್ರೀ. ಕೆ. ಗೋವಿಂದ ಶೆಟ್ರವರನ್ನು ತಿಂಗಳೊಂದರ ರೂಪಾಯಿ 500/- ರ ವೇತನದಲ್ಲಿ 16—8—65ರಿಂದ ಐದು ವರುಷಗಳ ತನಕ ಮೆನೇಜಿಂಗ್ ಡೈರೆಕ್ಟರರನ್ನಾಗಿ ನೇಮಿಸಲಾಗಿದೆ.

ಈ ನೇಮಕದ ಮಂಜೂರಾತಿಗಾಗಿ ಕೇಂದ್ರ ಸರಕಾರಕ್ಕೆ ಕಂಪೆನಿಯಿಂದ ಅರ್ಜಿ ಮಾಡಲ್ಪಟ್ಟಿದೆ.

ಸಹಿ: ಕೆ. ಸಂಜೀವ ಶೆಟ್ಟಿ
ಚೇರ್ ಮೆನ್.

ಗಾಂಧೀ ತತ್ವ ಪ್ರಚಾರ

(ಐದನೇ ಪುಟದಿಂದ)

ಯಂತೆ ಇಟ್ಟುಕೊಂಡು ನಡೆಸುವಂತೆ ತನ್ನ ಸ್ಥಾನವನ್ನು ಇತರರಿಗೆ ಬಿಟ್ಟುಕೊಡಬೇಕು. ತಾನು ತನ್ನ ಅಂತಿಮ ಜೀವಿತವನ್ನು ಗಾಂಧೀತತ್ವಾನುಯಾಯಿಯಾಗಿ ಪ್ರವಾದಿಯಂತೆ ಸರಳ ಜೀವನದಿಂದ ಜನತೆಯ ಹಿತ ಸಾಧನೆಯಲ್ಲಿ ಕಳೆಯಬೇಕು.

(8) ರಾಜಕಾರಣಿಗಳು ತಮ್ಮ ಪಕ್ಷದ ಹಿತದ ಮತ್ತು ತನ್ನ ಸ್ಥಾನದ ಮುಂದೆಯೂ ತನಗೇ ಸಿಗಬೇಕೆಂಬ ಸ್ವಾರ್ಥವನ್ನು ಇಟ್ಟುಕೊಳ್ಳದೆ ದೇಶದ ಮತ್ತು ಜನರ ಹಿತವನ್ನು ಮುಂದಿಟ್ಟುಕೊಂಡು ಸತ್ಯನ್ಯಾಯ ರೀತಿಯಿಂದ ದೇಶದ ಕಾನೂನುಗಳಿಗೆ ಒಳಪಟ್ಟು ದೇಶದ ಹಿತವನ್ನು ಬಯಸುವವರಾಗಬೇಕು. ಅವರ ಮುಂದಿನ ಸ್ಥಾನವನ್ನು ಅವರ ನಿಸ್ವಾರ್ಥ ಸೇವೆಯಿಂದಲೇ ಉಳಿಸಿಕೊಳ್ಳಬೇಕು.

(9) ರಾಜಕಾರಣಿಗಳು ದೇಶದಲ್ಲಿ ಜನರಿಗೆ ಒಪ್ಪಿಗೆಯಾಗುವಂತಹ ಮತ್ತು ಜನರಿಂದ ಅನುಷ್ಠಿಸಲು ಸಾಧ್ಯವಾಗುವಂತಹ ಕಾನೂನುಗಳನ್ನೆ ತರಬೇಕು. ಅವುಗಳನ್ನು ನೂರರಲ್ಲಿ 99 ಜನರಾದರೂ ನಿಷ್ಠೆಯಿಂದ ಪಾಲಿಸುವಂತಾಗಬೇಕು. ಹಾಗಿಲ್ಲದಿದ್ದರೆ ತಂದ ಕಾನೂನುಗಳನ್ನು ಹಿಂತೆಗೆದುಕೊಳ್ಳುವ ಮನೋವೃತ್ತಿ ಉಳ್ಳವರಾಗಬೇಕು. ಅಲ್ಲದ ಕಾನೂನು ತಂದವರೇ ಅದನ್ನು ಮುರಿಯುವಂತಹರಾಗಬಾರದು.

(10) ರಾಜಕಾರಣಿಗಳು ಲೋಕಾಪವಾದಕ್ಕೆ ಹೆದರುವ ಮನೋವೃತ್ತಿ ಉಳ್ಳವರಾಗಿ ಮನಸ್ಸಿನಲ್ಲಿ ನೆನೆಸಿದ್ದನ್ನೇ ಬಾಯಲ್ಲಿ ಹೇಳಿ ಕರ್ತವ್ಯದಲ್ಲೂ ಒಂದೇ ರೀತಿ ಮಾಡಿ ತೋರಿಸುವ ಗುಣ ಉಳ್ಳವರಾಗಬೇಕು.

(11) ಆಹಾರ ವಸ್ತುಗಳ ಬೆಲೆ ಏರಿಕೆಯ ಈ ಸಮಯದಲ್ಲಿ ನಮ್ಮ ರಾಜಕಾರಣಿಗಳು ಜನರ ಮೇಲೆ ತೆರಿಗೆ ತೆರಿಗೆಗಳನ್ನು ಹಾಕುವುದು ಮಾತ್ರವಲ್ಲದ ಪೋಸ್ಟಲ್ ರಿಜಿಸ್ಟ್ರೀ, ನ್ಯಾಯಾಂಗಕ್ಕೆ ಸಂಬಂಧಪಟ್ಟ ಚೀಟಿಗಳು ಮೊದಲಾದವುಗಳ ಬೆಲೆಗಳನ್ನು ಅಗಾಗ್ಗೆ ಏರಿಸುವುದು ಗಾಂಧಿಜೀಯವರ ತತ್ವಕ್ಕೆ ವಿರುದ್ಧ ವಿರೋಧವಾಗಿದೆ. ಸರಕಾರವು ಜನರ ಹಿತಕ್ಕಾಗಿ ಇರುವುದಲ್ಲದೆ ಆಗಾಗ್ಗೆ ತೆರಿಗೆಗಳನ್ನು ಏರಿಸುತ್ತಾ ಜನರ ಮೇಲೆ ಕಾನೂನುಗಳ ಹೊರೆಗಳನ್ನು ಹಾಕುತ್ತಾ ಜನಜೀವನವನ್ನು ಕಷ್ಟಕ್ಕೆ ಗುರಿಪಡಿಸುವುದಕ್ಕಲ್ಲ—ಎಂಬುದನ್ನು ರಾಜಕಾರಣಿಗಳಿಗೆ ಅರಿವಾಗುವಂತೆ ಮಾಡಬೇಕು.

(12) ಜನರಿಂದ ಸಂಗ್ರಹಿಸಿದ ತೆರಿಗೆ ಮತ್ತು ಇತರ ರೂಪದಿಂದ ಸಂಗ್ರಹಿಸುವ ದೇಶದ ಹಣವನ್ನು ಉಚಿತ ರೀತಿಯಲ್ಲಿ ಬಳಸಬೇಕು. ಖಾದಿ ಟೋಪಿ, ಖಾದಿಬಟ್ಟೆಗಳನ್ನು ಧರಿಸಿಕೊಂಡು ಇದರಿಂದಾಗಿ ನಾವು ಗಾಂಧೀವಾದಿಗಳೆಂದು ಜನತೆಗೆ ತೋರಿಸುತ್ತಾ ಪ್ರಜಾಪ್ರಭುತ್ವದ ನೆವನದಿಂದ ತಾವು ಲೋಕ ಸೇವಾ ನಿರತರೆಂದು ತೋರಿಸುವುದಕ್ಕೋಸ್ಕರ, ದೇಶಾದ್ಯಂತ ಮತ್ತು ಹೊರ ದೇಶಗಳಿಗೂ, ದೇಶದ ಜನತೆಗೂ,ದೇಶಕ್ಕೂ ಏನೂ ಪ್ರಯೋಜನವಿಲ್ಲದ ಕಾರಣಗಳನ್ನು ಕಲ್ಪಿಸಿಕೊಂಡು ಸಂಚಾರ ಮಾಡಿ ತಮ್ಮ ಗೌರವ ಪ್ರದರ್ಶನ ಮಾಡುವುದು ನಿಲ್ಲಬೇಕು. ಕೋಟಿಗಟ್ಟಲೆ ಹಣವನ್ನು ಪಂಚವಾರ್ಷಿಕ ಯೋಜನೆಗೆ ಕಾರಣವನ್ನು ತೋರಿಸಿ ಕೊಟ್ಟು ಆ ಕರ್ತವ್ಯಕ್ಕಾಗಿ ತೆರಯುವ ಮತ್ತು ಕಲ್ಲು ಹಾಕುವ ಇತ್ಯಾದಿ ಸಂದರ್ಭಗಳನ್ನು ಕಲ್ಪಿಸಿಕೊಳ್ಳುವುದು ತಪ್ಪಬೇಕು. ಜನರ ಕಷ್ಟದ ಹಣವನ್ನು ತಮ್ಮ ಸ್ವಾರ್ಥಕ್ಕಾಗಿ ಖರ್ಚು ಮಾಡುವುದು, ಅದರೊಂದಿಗೆ ತೆರಬೇಕಾದ ಹೊರಗಿನ ಸಾಲಗಳನ್ನು ಹೆಚ್ಚಿಸುವುದು ತಪ್ಪು. ದೇಶದ ಹಣ ದುರ್ವ್ಯಯವಾಗದಂತೆ ನೋಡಿಕೊಳ್ಳುವವರನ್ನು ರಾಜಕಾರಣಿಗಳನ್ನಾಗಿ ಮಾಡುವಂತ ಪ್ರಯತ್ನಿಸಬೇಕು.

(13) ಸರಕಾರವು ದೇಶದ ರಕ್ಷಣೆ, ಶಿಸ್ತು, ವಿದ್ಯೆ, ಆರೋಗ್ಯ, ಅಂಚೆ ಮೊದಲಾದ ಅತಿ ಮುಖ್ಯ ವಿಷಯಗಳನ್ನು ಮಾತ್ರ ತನ್ನ ವಶ ತೆಗೆದುಕೊಂಡು ಕರ್ತವ್ಯ ನಡೆಸಬೇಕಲ್ಲದೆ ಹೊರತು ಜನರಿಗೆ ಸಂಬಂಧಪಟ್ಟ ದೇಶದ ಸರ್ವ ವ್ಯವಹಾರಕ್ಕೂ ಸರಕಾರವೇ ಇಳಿದು ಜನರ ಉದ್ಯೋಗಗಳನ್ನು ತಾವು ಕಸಿದುಕೊಂಡ ಜನರಲ್ಲಿ ಮತ್ತು ಸರಕಾರಿ ನೌಕರರಲ್ಲಿ ಭ್ರಷ್ಟಾಚಾರಗಳನ್ನು ಹಬ್ಬಿಸುವ ಪ್ರವೃತ್ತಿಯು ತರಬಾರದು. ಜನರಿಂದಲೇ ಸ್ವದೇಶೀಯ ವ್ಯವಹಾರಗಳನ್ನು ಕಲ್ಪಿಸಿ ಜನರ ಜೀವನದ ವಸ್ತುಗಳ ಬೆಲೆಯನ್ನು ಕಳೆದು ತರುವಂತೆ ಮಾಡಿ ಜನಜೀವನವನ್ನು ಸುಗಮಗೊಳಿಸುವಂತೆ ಮಾಡಬೇಕು.

(14) ಈಗಿನ ಆಳುವ ಪಕ್ಷವಾದ ಕಾಂಗ್ರೆಸು ಮೇಲೆ ವಿವರಿಸಿದ ಗಾಂಧಿಜಿಯವರ ತತ್ವಗಳನ್ನು ಆದರ್ಶ ನಡಸಿದರೆ ಮಾತ್ರ ಗಾಂಧೀಜಿಯವರ ಹೆಸರನ್ನು ಅವರ ಕರ್ತವ್ಯಕ್ಕೆ ಉಪಯೋಗಿಸಬೇಕು ಈಗ ಸಾಧ್ಯವಿಲ್ಲವೆಂದರೆ ಗಾಂಧಿಜಿಯವರ ಹೆಸರನ್ನು ಉಪಯೋಗಿಸಕೂಡದು.

ಈ ಮೇಲೆ ವಿವರಿಸಿದ ಗುಣತತ್ವಗಳನ್ನು ನಮ್ಮ ಗಾಂಧೀ ತತ್ವ ಪ್ರಚಾರ ಸಮಿತಿಯವರು ತಮ್ಮ ಪ್ರಬಲ ಪ್ರಚಾರದಿಂದ ದೇಶದ ಜನತೆಯನ್ನೂ ನಮ್ಮ ರಾಜಕಾರಣಿ ಮುಖಂಡರನ್ನೂ ಜಾಗ್ರತೆಗೊಳಿಸಿ ಗಾಂಧಿಜೀಯವರು ಕನಸು ಕಂಡ ರಾಮರಾಜ್ಯ ಸ್ಥಾಪನೆಗಾಗಿ ಪ್ರಯತ್ನಿಸಬೇಕು. ಈಗಿನ ರಾಜಕಾರಣಿಗಳು ಇದಕ್ಕೆ ಮಣಿಯದಿದ್ದಲ್ಲಿ ಗಾಂಧಿಜಿಯವರ ತತ್ವವಾದ ಸನಾತನ ತತ್ವವನ್ನು ಕೆಲವರಾದರೂ ಕಾಪಾಡಿಕೊಂಡು ಕಾಲವು ಪಕ್ವವಾಗುವಾಗ ಅದನ್ನು ಹೊರಗೆಡವಿ ದೇಶವನ್ನು ಉತ್ತಮ ರೀತಿಗೆ ಬರುವಂತೆ ಪ್ರಯತ್ನಿಸಬೇಕು— ಅಷ್ಟರವರೆಗೆ ನಿಷ್ಠಾವಂತ ಗಾಂಧೀ ತತ್ವಾನುಯಾಯಿಗಳನ್ನು ಕೂಡಿಸಿ ಪ್ರಚಾರ ಸಮಿತಿಯನ್ನು ಬಲಪಡಿಸಬೇಕು. ಬರೇ ಸಭೆಗಳನ್ನು ಜಯಂತಿಗಳನ್ನು ಮಾಡಿದರೆ ಗಾಂಧಿಜೀಯವರಿಗೆ ತೃಪ್ತಿಯಾಗಲಾರದು. ಅವರ ತತ್ವಗಳನ್ನು ನಿಷ್ಠೆಯಿಂದ ಅನುಕರಿಸುವುದೇ ಅವರಿಗೆ ತೃಪ್ತಿ. ಅಡಂಭರ ಮನೋಭಾವದ ಕರ್ತವ್ಯಗಳಲ್ಲಿ ಅವರಿಗೆ ತೃಪ್ತಿ ಇಲ್ಲ. ಗಾಂಧಿಜೀಯವರು ಜೀವಂತರಿರುತ್ತಿದ್ದರೆ ಈಗ ದೇಶದಲ್ಲಿ ನಡೆಯುವ ಈಗಿನ ರೀತಿಯ ದಂಪುಗರೆಯನ್ನು ತಪ್ಪಿಸಲು ತನ್ನ ಪ್ರಾಣವನ್ನು ಅರ್ಪಿಸುತ್ತಿದ್ದರು— ಮಮ ಪ್ರಾಣಾಹಿ ಪಾಂಡವಾ" ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದಂತೆ ಗಾಂಧಿಜೀಯವರು ದೇಶದ ಪ್ರಾಣವೆ ಆಗಿದ್ದರು ಎಂಬುದನ್ನು ಎಲ್ಲರೂ ತಿಳಿಯತಕ್ಕದಾಗಿದೆ.

ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಪ್ಪಾಂಗಡಿ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Phone 3242
Res 3272
ಸ್ಥಾಪನೆ: 1947
Tel. GOLDKING

ತಾಜಾ ಬ್ಲೂ ಯಾಗರ್
ವಜ್ರಗಳಿಗೂ ಮತ್ತು
ಅತ್ಯಾಧುನಿಕ ಫೇಶನಿನ
14 ct. ಚಿನ್ನಾಭರಣಗಳಿಗೂ,
ಬೆಳ್ಳಿಯ ಉಡುಗೊರೆ
ವಸ್ತುಗಳಿಗೂ
ಪ್ರಖ್ಯಾತಿಯಾದ



Prop. S. L. SHET

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್
ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ
ಮತ್ತು ಫೇನ್ಸಿ ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್
ಮತ್ತು ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ
ಐಡಿಯಲ್ ಫೋಟೋ ಹೌಸ್
Phone 3131
ಗೆವರ್ಟ್, ಅಗ್ಫಾ, ಕೊಡಕ್ ಮತ್ತು ಇಲ್‌ಫೋರ್ಡ್
ಇವುಗಳ ಅಧಿಕೃತ ಡೀಲರ್ಸ್.
ಕಾರ್ನಾಡ್ ಸದಾಶಿವರಾವ್ ರೋಡ್, ಹಂಪನಕಟ್ಟಾ,
ಮಂಗಳೂರು-1.

ಕೀರ್ತಿ ಶಪ ಹಿಡಿದವನು ಉಪ್ಪು ಮಿಶ್ರಿತ ನೀರು ಕುಡಿದವನಂತೆ-ಕುಡಿದಷ್ಟೂ ಬಾಯಾರಿಕೆ ಹೆಚ್ಚು.

—ಎಬಟ್ಸ್.

o o o o

ಕೀರ್ತಿಯನ್ನು ಪ್ರೀತಿಸಿ ದೂರವಿಡುವವನು ಕ್ರಮಶಃ ಅದನ್ನು ಗಳಿಸಲು ಬೇಕಾದ ಯೋಗ್ಯತೆಯನ್ನೂ ಕಳೆದುಕೊಳ್ಳುವನು.

—ನೋಲೆಟ್.

o o o

ಆತ್ಮಸ್ವಭಾವದದನ್ನು ವ್ಯಕ್ತಿಯಿಂದ ಹೊರಗೆಳೆಯುವುದೇ ನಿಜವಾದ ವಿದ್ಯೆ. ಈ ದೃಷ್ಟಿಯಿಂದ ಮಾನವ ಕೋಟಿಗಿಂಥಾ ಹಿರಿಯ ಪುಸ್ತಕ ದೊರಕಲಾರದು.

—ಗಾಂಧಿ

o o o

ಹಿರಿಯರ ಮಮತೆಯ ಆಡಳಿತ, ಕಿರಿಯರ ವಿನೀತ ವಿನಯ ಇವುಗಳಿಂದ ಕೂಡಿದ ಕುಟುಂಬವನ್ನು ಸ್ವರ್ಗವೆನ್ನಬಹುದು.

ಬೇಕನ್.

o o o

ಒಳಗೇಡಿಯಾದ ವಿಶ್ವಾಸಪೂರಿತವಾದ ಘಸಿಂದ ಆಗುವ ಕೇಡು ೨೦ ಜನ ಕಿಡಿಗೇಡಿಗಳಿಗಿಂತ ಹೆಚ್ಚು.

ಗ್ರೀಮ್.

o o o

ತಾವು ದೊಡ್ಡ ತಪ್ಪು ಮಾಡಿ ಪಾರಾಗುವ ದೃಷ್ಟಿಯಿಂದ ಚಿಕ್ಕ ತಪ್ಪುಗಳನ್ನು ನಮ್ಮದೆಂದು ಒಪ್ಪಿಕೊಳ್ಳುತ್ತೇವೆ.

—ರೋಚಫೌಕಾಲ್ಡ್.

Printed & Published by K. H. Shetty at the No...

ಕಾಣಿಯೂರು ಮಠದ

ಶ್ರೀಶ್ರೀ ವಿದ್ಯಾವಾರಿನಿಧಿ ತೀರ್ಥರ ಪರ್ಯಾಯ ಸಮಾರಂಭ

ಕಾಣಿಯೂರು ಮಠದ
ಶ್ರೀಶ್ರೀ ವಿದ್ಯಾವಾರಿನಿಧಿ ತೀರ್ಥರು

ಶ್ರೀಕೃಷ್ಣನ ಉಡುಪಿಯಲ್ಲಿ ಈ ತಿಂಗಳ ೧೭ನೆಯ ತಾರೀಕು ಪರ್ಯಾಯ ಸಮಾರಂಭ ನೆರವೇರಿತು. ಶ್ರೀಕೃಷ್ಣನ ಪೂಜಾದಿಗಳನ್ನು ಮಾಡುವ ಹೊಣೆಗಾರಿಕೆ ಒಂದು ಮಠದಿಂದ ಇನ್ನೊಂದು ಮಠವನ್ನು ಸೇರುವುದು ಪರ್ಯಾಯ. ಇದು ನಡೆಯುವುದು ಎರಡು ವರ್ಷಗಳಿಗೊಮ್ಮೆ. ಈ ಬಾರಿ ಶ್ರೀ ಸೋದೆ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು ತಮ್ಮ ಎರಡು ವರ್ಷಗಳ ಪರ್ಯಾಯಾವಧಿಯನ್ನು ನಿರಾತಂಕವಾಗಿ ಮುಕ್ತಾಯಗೊಳಿಸಿ ಶ್ರೀ ಕಾಣಿಯೂರು ಮಠದ ಶ್ರೀ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರಿಗೆ ಅಧಿಕಾರ ಒಪ್ಪಿಸಿದರು ಈ ಸಮಾರಂಭದ ವೇಳೆ, ವಿಧ್ಯುಕ್ತ ಕಾರ್ಯಕ್ರಮಗಳೊಡನೆ ಧಾರ್ಮಿಕ ಮತ್ತು ಲೌಕಿಕ ಸಮಾವೇಶಗಳೂ ಸೇರಿದ್ದು, ಪರ್ಯಾಯಕ್ಕೆ ವಿಶೇಷ ಕಳೆಯನ್ನು ತಂದಿದ್ದವು.

ಪ್ರಾತಃಕಾಲದಲ್ಲಿ ಜೋಡುಕಟ್ಟೆಯಿಂದ ರಥಬೀದಿಗೆ ಪರ್ಯಾಯ ಕೂತುಕೊಳ್ಳುವ ಸ್ವಾಮಿಯವರು ಅಷ್ಟಮಠದ ಶ್ರೀಪಾದಂಗಳವರೊಡನೆ ರಾಜ ವೈಭವೋಪೇತ ಮೆರವಣಿಗೆಯಲ್ಲಿ ಪಟ್ಟದ ನೃಸಿಂಹ ದೇವರನ್ನು ಮುಂದಿಟ್ಟುಕೊಂಡು ಬಂದರು. ಕನಕನ ಕಿಂಡಿಯಲ್ಲಿ ಶ್ರೀಕೃಷ್ಣ ದರ್ಶನ, ಅನಂತೇಶ್ವರ, ಚಂದ್ರೇಶ್ವರ ದರ್ಶನಾದಿಗಳನ್ನು ಮುಗಿಸಿ ಶ್ರೀಕೃಷ್ಣ ಮಠಕ್ಕೆ ಬರುವಾಗ ಅವರನ್ನು ನಿವೃತ್ತರಾಗುವ ಶ್ರೀ ಸೋದೆ ಶ್ರೀ ಶ್ರೀಯವರು ಸ್ವಾಗತಿಸಿ ಮಠದೊಳಗೆ ಕರೆದೊಯ್ದರು. ಅಲ್ಲಿ ವಿಧ್ಯುಕ್ತವಾಗಿ ಶ್ರೀ ಮಧ್ವಾಚಾರ್ಯರ ಸರ್ವಜ್ಞ ಪೀಠಾರೋಹಣ ಮಾಡಿ, ಬಡಗುಮಾಳಿಗೆಯಲ್ಲಿ ಸರ್ವಾಧಿಕಾರವನ್ನು ಮುಂದಿನೆರಡು ವರ್ಷಗಳ ತನಕ ನಿರ್ವಹಿಸುವ ಹೊಣೆ ಹೊತ್ತು, ಸಭಾ ಭವನಕ್ಕೆ ಬಂದರು.

ಶ್ರೀ ಮಠದ ರಾಜಾಂಗಣದಲ್ಲಿ ಸಭಾಂಗಣವು ನಿರ್ಮಿತ[illegible]. ಈ ಸಭೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ಉದ್ಘಾಟಿಸಿದರು.

'ಧರ್ಮ ಕೇಂದ್ರಗಳ ಅಧಿಪರುಗಳು ಒಂದಾಗಿ ಧರ್ಮ ಸಂರಕ್ಷಣೆಯ ಭಾರವ

ಉತ್ಸಾಹಿ ಶ್ರೀಶ್ರೀಗಳವರಿಂದ ಸಮಾಜ ಹಿತ ಸಾಧನೆಯ ಆಶೆ ಸಫಲವಾಗುವ ನಿರೀಕ್ಷೆ

ನ್ನು ಹೊರುವುದು ಆಗತ್ಯ. ಭಾರತೀಯರೆಲ್ಲರೂ ಭಾವೈಕ್ಯಹೊಂದುವುದರಿಂದಲೇ ಭಾರತದ ಐಕ್ಯ ಸಾಧ್ಯ. ಆದುದರಿಂದ ನಮ್ಮ ನಮ್ಮ ಧರ್ಮ ಸಂಪ್ರದಾಯಗಳನ್ನು ಬಿಡದೆ ವಿಶಾಲ ಮನೋಭಾವನೆಯಿಂದ ಒಗ್ಗಟ್ಟಾಗಿ ಬಾಳೋಣ. ಧರ್ಮ ಸಮನ್ವಯದಿಂದಲೇ ಜಗತ್ತಿಗೆ ಶಾಂತಿಯ ದಾರಿಯನ್ನು ತೋರೋಣ' ಎಂದು ಶ್ರೀ ಹೆಗ್ಗಡೆಯವರು ನುಡಿದರು.



ಶ್ರೀ ಡಿ ರತ್ನವರ್ಮ ಹೆಗ್ಡೆ

ಈ ಸಂದರ್ಭದಲ್ಲಿ ಪರ್ಯಾಯ ಕಾಣಿಯೂರು ಶ್ರೀ ಶ್ರೀಯವರು ಮಾತನಾಡುತ್ತ, 'ಮನಸ್ಸನ್ನು ಗುಣಶೀಲ ಕರ್ತವ್ಯಗಳಿಂದ ಹದಗೊಳಿಸಿ, ಆತ್ಮನನ್ನು ಬೆಳಗಿಸಿ, ದುಃಖ ಮುಕ್ತನಾಗುವುದೇ ಬದುಕು. ದಾರಿದ್ರ್ಯ, ಹಸಿವು ಮತ್ತು ಅಜ್ಞಾನಾಲಸ್ಯಗಳಿಂದ ಜಗತ್ತು ದೂರವಾಗಬೇಕು, ಈ ದಿಸೆಯಲ್ಲೇ ಅದು ಮುಂದುವರಿಯಬೇಕು. ಅಂತರಾತ್ಮನ ಸತ್‌ಪ್ರೇರಣೆಯಿಂದ ಮಾತ್ರ ಇದು ಸಾಧ್ಯ' ಎಂದು ಹೇಳಿ ಶ್ರೀ ರತ್ನವರ್ಮ ಹೆಗ್ಗಡೆಯವರ ಧಾರ್ಮಿಕ ಭಾವನೆಯನ್ನು ತಾನು ಮೆಚ್ಚುವೆನೆಂದರು ಪರ್ಯಾಯದ ಶುಭಾವಸರದಲ್ಲಿ ಉಡುಪಿಯ ಕೀರ್ತಿಗೆ ಕಲಶಪ್ರಾಯರಾದ ಎಲ್ಲರು ಸುಪುತ್ರರನ್ನು ಪ್ರಶಸ್ತಿಯಿತ್ತು ಗೌರವಿಸುವುದರ ಔಚಿತ್ಯವನ್ನೂ ಅವರು ವಿವರಿಸಿದರು.

ಅನಂತರ ಪರ್ಯಾಯ ನಿವೃತ್ತರಾದ ಶ್ರೀ ಸೋದೆ ಶ್ರೀ ಶ್ರೀಗಳವರು ತಮ್ಮ ಪರ್ಯಾಯಾವಧಿಯಲ್ಲಿ ನೆರವಾದ ಸಮಸ್ತರಿಗೂ ಕೃತಜ್ಞತೆಯರ್ಪಿಸಿ, ಏನಾದರೂ ನ್ಯೂನಾತಿರೇಕಗಳು ನಡೆದಿದ್ದರೆ, ಮನ್ನಿಸುವಂತೆ ಕೇಳಿಕೊಂಡರು. ಶ್ರೀ ಕಾಣಿಯೂರು ಶ್ರೀ ಶ್ರೀಯವರ ಕುರಿತು ಮಾತಾಡುತ್ತ ಶ್ರೀ ಶ್ರೀ ಯವರು ಅಪಾರ ಅನುಭವಿಗಳು. ಅವರ ಕಾಲವು ಸುಧಾರಣಾ ಪಥದಲ್ಲಿ ನಡೆಯಲಿ, ಯಾತ್ರಿಕರಿಗೆ ಹೆಚ್ಚಿನ ಸೌಲಭ್ಯ ದೊರಕಲಿ, ಯಶಸ್ವಿಯಾಗಿ ನೆರವೇರಲಿ ಎಂದು ಹಾರೈಸಿದರು.

ನ್ಯಾಯ ವೇದಾಂತದ ಪ್ರಾಧ್ಯಾಪಕರಾಗಿದ್ದ ಸರ್ವ ಶ್ರೇಷ್ಠ ಪಂಡಿತ ಶ್ರೀ ಪಡವನ್ನೂರು ನಾರಾಯಣಾಚಾರ್ಯರಿಗೆ 'ಪಂಡಿತ ಚಕ್ರವರ್ತಿ', ದ್ವೈತವೇದಾಂತದ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಮಧ್ವಾಚಾರ್ಯರ ಸರ್ವ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿದ ಶ್ರೀ ಅಗ್ರಹಾರ ನಾರಾಯಣ ತಂತ್ರಿಯವರಿಗೆ 'ವೇದಾಂತ ವಾಚಸ್ಪತಿ', ತರ್ಕ ಪ್ರಾಧ್ಯಾಪಕರಾಗಿ ವಿದ್ವತ್ ಸಭೆಗಳಲ್ಲಿ ಅಗ್ರಮಾನ್ಯರಾದ ಶ್ರೀ ಸಗ್ರಿ ಹಯಗ್ರೀವಾಚಾರ್ಯರಿಗೆ 'ತರ್ಕ ವಾಚಸ್ಪತಿ" ಎಂಬ ಪ್ರಶಸ್ತಿಗಳನ್ನು ನೀಡಲಾಯಿತು. ಅನಂತರ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ರಿಜಿಸ್ಟ್ರಾರು ಶ್ರೀ ಡಾ| ಮಾಧವ ಪೈಯವರಿಗೆ 'ವಿದ್ಯಾಸಾಗರ' ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ "ಧರ್ಮವೀರ" ಮದ್ರಾಸಿನ ದಾಸಪ್ರಕಾಶದ ಶ್ರೀ ಕುತ್ತತ್ತೂರು ಸೀತಾರಾಮ ರಾಯರಿಗೆ 'ಹರಿ ಭಕ್ತ ಶಿಖಾಮಣಿ', ಮೌನವಾಗಿ ಸೇವಾ ನಿರತರಾಗಿರುವ ಮದ್ರಾಸದ ಕಡಂದಲೆ ಕೃಷ್ಣ ಭಟ್ಟರಿಗೆ "ಶ್ರೀ ಕೃಷ್ಣ ಸೇವಾ ಪರಾಯಣ" ಎಂಬ ಬಿರುದನ್ನೂ ನೀಡಲಾಯಿತು.

ಅನಂತರ ಡಾ| ಮಾಧವ ಪೈ ಮೊದಲಾದವರು ಮಾತನಾಡಿ ಭಕ್ತಿ ಮಾರ್ಗಕ್ಕೆ

ಡಾ| ಟಿ. ಮಾಧವ ಪೈ

ಜನತೆಯನ್ನು ಒಯ್ಯುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಪರವಾಗಿ ಪಟ್ಟಕಾಣಿಕೆಗಳು ಪರ್ಯಾಯ ಶ್ರೀ ಶ್ರೀ ಯವರಿಗೆ ಅರ್ಪಿತವಾದ ಬಳಿಕ ಇತರರೂ ಅರ್ಪಿಸಿ

(ಮೂವತ್ತೊಂದನೇ ಪುಟ ನೋಡಿರಿ)

ಹೆಗ್ರ್ ಸಹಕಾರಿ ವ್ಯವಸಾಯಿಕ ಬೇಂಕ್ ಲಿಮಿಟೆಡ್ ಪರ್ಕಳ, ದ. ಕ.

ಈ ಬೇಂಕಿನ ಸ್ವಂತ ಹೊಸ ಕಟ್ಟಡದ ಉದ್ಘಾಟನೆಯು ತಾ 24 1-66ರಂದು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈ ಇವರಿಂದ ಸೆಂಟ್ರಲ್ ಸಹಕಾರಿ ಬೇಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಇದೇ ಸಂದರ್ಭದಲ್ಲಿ ಬೇಂಕಿನ ಸ್ಥಾಪಕ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಭಾವಚಿತ್ರವನ್ನು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಎ. ಜಿ. ಆಳ್ವರವರು ಅನಾವರಣ ಗೈದರು.



ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು. ಉಡುಪಿ ತಾಲೂಕಿನಲ್ಲಿ ಕಾಂಗ್ರೆಸ್ ಗಾಳಿ ಹರಡಿದವರಲ್ಲಿ ಒಬ್ಬರು ಅಂದಿನಿಂದ ಅವರು ಕಾಂಗ್ರೆಸಿನ ಹಲವಾರು ಪದಗಳಲ್ಲಿದ್ದು ಹೊಸ ರಕ್ತದವರಿಗೆ ಪ್ರೇರಕ ಶಕ್ತಿಯಾಗಿ ಕಾಂಗ್ರೆಸ್ ತತ್ವಗಳನ್ನು ಕಟ್ಟುನಿಟ್ಟಾಗಿ ನಂಬುವ ಆಚರಿಸುವ ಶ್ರೀ ಹೆಗ್ಡೆಯವರು ತಾನೊಬ್ಬ ವಿನೀತ ಕಾಂಗ್ರೆಸ್ ಸೇವಕ ಎನ್ನುತ್ತಾರೆ. ಅವರು ಯಾವ ಸ್ಥಾನಮಾನವನ್ನೂ ಬಯಸಿದವರಲ್ಲ ಒಂದು ವೇಳೆ ಬಯಸುತ್ತಿದ್ದರೆ, ಉಚ್ಚ ಸ್ಥಾನವನ್ನೂ ಗಳಿಸುತ್ತಿದ್ದರು ದೇಶದ ಪ್ರಜಾಪ್ರಭುತ್ವವನ್ನು ಉಳಿಸುವ ಹೊಣೆ ಹೊತ್ತ ಕಾಂಗ್ರೆಸ್ ಶಿಸ್ತು, ತ್ಯಾಗ, ಸೇವೆಗಳ ಮೂಲಕ ಬೆಳೆಯಬೇಕೆನ್ನುವವರು ಇವರು. ಅಧಿಕಾರದ ಆಮಿಷದಿಂದ ಪ್ರಮತ್ತರಾದರೆ, ಶಾಸಕರು ಜನಹಿತವನ್ನು ಹೇಗೆ ಸಾಧಿಸಿಯಾರು ಎಂದು ಕೇಳುತ್ತಾರೆ ಇವರು. ಹಳ್ಳಿಯಿಂದ ಡಿಲ್ಲಿಗೆ ಆಡಳಿತಾ ವಿಧಾನ ಹೋಗಬೇಕು, ಡಿಲ್ಲಿಯಿಂದ ಹಳ್ಳಿಗಲ್ಲ—ಎನ್ನುವ ಇವರು ಬಾಪೂಜಿಯ ರಾಮರಾಜ್ಯ, ವಿನೋಬಾನ ಗ್ರಾಮರಾಜ್ಯ ಸ್ಥಾಪನೆ ಈ ವಿಧಾನದಿಂದಲೇ ಸಾಧ್ಯ ಎನ್ನುತ್ತಾರೆ.

ಹೆಗ್ರ್ ಗ್ರಾಮದ ಕೃಷಿ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಇವರು 'ಜೈಕಿಸಾನ್' ಮಂತ್ರದ ಬಗ್ಗೆ ತುಂಬ ಆಲೋಚಿಸುತಿದ್ದಾರೆ, ಆಲೋಚನೆಯನ್ನು ಕಾರ್ಯಗತ ಮಾಡುತ್ತಿದ್ದಾರೆ.

ನಮಗೀಗ ಆಂತರಿಕ 'ಕ್ರಾಂತಿ' ಬೇಕು

(ಮೂರನೇ ಪುಟದಿಂದ)

ರಿದ್ದರೋ ಹಾಗೆ, ನಮಗಿಂದು ಅಂತಹ ವೀರರ ತಂಡಗಳು ಬೇಕಾಗಿವೆ. ಅವರ ಶಕ್ತಿಯನ್ನು ಬಲಿಸುವಂತೆ ಬರೆಯುವ, ಮತ್ತು ಬೆಂಬಲವನ್ನು ನೀಡುವ ಪತ್ರಿಕೋದ್ಯಮವು ಆವಶ್ಯವಾಗಿದೆ. ನಿಜವಾಗಿ ನೋಡಿದರೆ ನಮ್ಮ ಕಾರ್ಯವು ಸ್ವರಾಜ್ಯ ಬಂದ ಮೇಲೆಯೇ ಸುರುವಾಗಿದೆ. ಹೊಸ ರಾಷ್ಟ್ರವನ್ನು ರಚಿಸುವ ಅತ್ಯಂತ ಗುರುತರವಾದ ಆ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಮರ್ಥ್ಯನಂತರ ಸಂಖ್ಯೆ ತೀರ ವಿರಳವಾಗಿಬಿಟ್ಟಿದೆ. ಹಾಗಾಗಿ, ಯಾವ ಅಡೆತಡೆಯೂ ಇಲ್ಲದೆ, ಬೆಳೆಯನ್ನು ಮೇಯುವ ಕಳ್ಳದನಗಳಂತೆ, ಜನತೆಯು ದಾರಿದ್ರ್ಯ, ಅಜ್ಞಾನಗಳ ದುರ್ಲಾಭ ಪಡೆದು ಮೆರದಾಡುವ ಪುಢಾರಿಗಳ ತಂಡವೇ ಇಂದು ಪ್ರಬಲವಾಗಿಬಿಟ್ಟಿದೆ. 'ಕುಂಯು ವೇಷದಿಂದ ತೋಳ ಕುರಿಮಂದೆಯ ಮುಕ್ಕಿತು' ಎಂಬಂತಾಗಿದ ನಮ್ಮ ಜನಾಂಗದ ಸ್ಥಿತಿ.

ಜಾಗತಿಕ ಬ್ಯಾಂಕಿನ ಭೂ ವ್ಯವಸಾಯ ನಿರೀಕ್ಷಣ ಮಂಡಳದವರು ಭಾರತಕ್ಕೆ ಬಂದು ಇಲ್ಲಿಯ ವಿವಿಧ ರಾಜ್ಯಗಳಲ್ಲಿ ಸಂಚಾರ ಮತ್ತು ಪರಿಶೀಲನ ಮಾಡಿ, "ವ್ಯವಸಾಯದ ಉತ್ಪತ್ತಿಯಲ್ಲಿ ಹೆಚ್ಚಳವಾಗದಿದ್ದುದಕ್ಕೆ ಅಧಿಕಾರಿ ವರ್ಗದ ಅಸ್ತವ್ಯಸ್ತ ಆಡಳಿತವೇ ಕಾರಣ" ಎಂಬ ವರ್ಣನವನ್ನು ಹೊರಗೆಡಹಿತು. ಸ೧೫ ವರ್ಷಕಾಲ ನಮ್ಮ ಸರಕಾರಗಳು—ರಾಜ್ಯ ಮತ್ತು ಕೇಂದ್ರ-ಪರದೇಶಗಳಿಂದ ಪಡೆದ ಸಾಲವನ್ನು ಉಪಯೋಗಿಸಿದ ರೀತಿಗೆ ಇದೊಂದು ಸ್ಪಷ್ಟ ನಿದರ್ಶನ! ಇದನ್ನು ಕಂಡು ಅಮೇರಿಕದ ಅಧ್ಯಕ್ಷರಿಗೆ ವಿಸ್ಮಯವಾಯಿತು. ಭಾರತವು ಪ್ರತಿ ವರ್ಷವೂ "ಇನ್ನಷ್ಟು ಧಾನ್ಯಕೊಡಿ" ಎಂದು ಬೇಡುತ್ತಿರುವುದನ್ನು ಕಂಡು ಯಾರಿಗೆ ತಾನೇ ಅಶ್ಚರ್ಯವಾಗದು? ಪಡೆದ ಸಾಲವನ್ನು ಮೂಲಭೂತ ವಸ್ತುವಿನ ಹುಟ್ಟುವಳಿಗಾಗಿ ವೆಚ್ಚ ಮಾಡದೇ, ಅದರ ಹೆಸರಿನಲ್ಲಿ ಅಪಾರ ಹಣವನ್ನು ಸಿಕ್ಕ ಸಿಕ್ಕವಕ್ಕೆಲ್ಲ ಮುಕ್ಕುವಂತೆ ಮಾಡಿದ ಸರಕಾರದ ಆಡಳಿತ ಯಂತ್ರಕ್ಕೇನೆನ್ನಬೇಕು? ಹಿರಿಯ ಧುರೀಣರಾದ ಶ್ರೀ ರಾಜಗೋಪಾಲಾಚಾರಿ, ಕೃಪಲಾನಿ ಮೊದಲಾದವರು ಈ ಬಗೆಯ ದುಂದುಗಾರಿಕೆಯನ್ನು ಸಹಿಸಲಾರದೆ, "ಮೊದಲು ನೀವು ತೊಲಗಿರಿ" ಎಂದು ಈಗಿನ ಮಂತ್ರಿಮಂಡಳಗಳಿಗೆ ಆಹ್ವಾನ ನೀಡುತ್ತಿದ್ದಾರೆ. ಗಾಂಧಿಜಿಯವರು ಇಂಗ್ಲಿಷ್ ಸರಕಾರಕ್ಕೆ ಅದೇ ಮಾತನ್ನೇ—ನೀವು ತೊಲಗಿರಿ ಹೇಳಿದ್ದರಲ್ಲವೆ? ಆದರೆ, ಇಂದು, ನಾನಾ ರೀತಿಯ ಸ್ವಾರ್ಥಸಾಧಕ ವ್ಯಕ್ತಿ—ಶಕ್ತಿಗಳು ಸಾಮಾನ್ಯ ಜನತೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು, ಬಹುಮತವನ್ನು ಪಡೆದು ಆಡಳಿತ ಯಂತ್ರವನ್ನೇ ತಮ್ಮ "ಖಾಸಗಿ ಸ್ವತ್ತಿ"ನಂತೆ ಉಪಯೋಗಿಸಿ ಕೊಳ್ಳುತ್ತಿವೆ. ಮೇಲೆ ಮಂತ್ರಿಯಿಂದ ಹಿಡಿದು ಕೆಳಗೆ ಗ್ರಾಮ ಪಂಚಾಯತದ ನೌಕರರ ವರೆಗೆ ಎಲ್ಲರೂ ಬಾಯಲ್ಲಿ ದೊಡ್ಡ ದೊಡ್ಡ ಮಾತಾಡುತ್ತ ಕೃತಿಯಲ್ಲಿ ದುಷ್ಟ ಸ್ವಾರ್ಥ ಸಾಧನೆಗಾಗಿ ಯಾವುದನ್ನು ಮಾಡಲೂ ಹೇಸುವುದಿಲ್ಲವಾಗಿದೆ.

ಇಂತಹ ಹೇಯ ಮು ಖಂಡತ್ವವನ್ನು ಇದಿರಿಸಿ, ನವಸಮಾಜ ನಿರ್ಮಾಣ ಮಾಡಲು ಕಟಿಬದ್ಧವಾದ ಯುವಕ ವೀರರ ತಂಡಗಳು ಜಿಲ್ಲೆ ಜಿಲ್ಲೆಗೂ ಬೇಕಾಗಿದೆ. ಒಂದಡೆ ಸಾಮಾಜಿಕ ಸ್ನೇಹ—ಸಮಾನತೆಯ ಬಗ್ಗೆ ಪ್ರಚಂಡ ಚಳವಳಿಯನ್ನು ನಡೆಸುತ್ತ ಮತ್ತೊಂದೆಡೆ ನಿಜವಾದ ಪ್ರಜಾಸತ್ತೆಯ ರಾಜ್ಯಕೀಯ ಪರಿಜ್ಞಾನವನ್ನೂ, ಪೌರ ನೀತಿಯ ಉದಾತ್ತ ವಿಚಾರವನ್ನು ಪ್ರಚಾರ ಮಾಡುವ ಇಬ್ಬಗೆಯ ಕಾರ್ಯ ಕುಶಲರ ಆವಶ್ಯಕತೆ ಇಂದಿನ ಬಹುಮಹತ್ವದ ರಚನಾತ್ಮಕ ಕಾರ್ಯವಾಗಿದೆ. ಅದನ್ನು ಕೈಗೊಳ್ಳಲು ವಿಳಂಬಿಸಿದರೆ, ದೇಶದೊಳಗಿನ ಅಸಮಾಧಾನ ಮತ್ತು ಅಸಹಾಯಕ ಪರಿಸ್ಥಿತಿಯು ಬೆಳೆದು, ಅನಪೇಕ್ಷಿತವಾದ ಹಿಂಸಾಮಯ ಕ್ರಾಂತಿಗೆ ಎಡೆಯುಂಟಾಗುವುದು.

ಬರೆಯ ಮೇಲೆ ಬರೆ

ವಿಧಿಯೆಳೆದ ಬರೆಯೆಮಗೆ
ಇದುವರೆಗೆ ಮಾಸಿಲ್ಲ
ಮತ್ತೊಂದು ಬರೆಯೀಗ ಎಳೆದ
ರಯ್ಯೊ !

ಶಾಂತಿ ದೂತನು ಆಗಲಿ
ವರುಷವೆರಡಾಗಿಲ್ಲ
ಶಾಂತಿಪ್ರಿಯ ನೀನೀಗ ಹೋದೆ
ಯಯ್ಯೊ !

ಉತ್ತರದಿ ಗಡಿ ನುಗ್ಗಿ
ವೈರಿ ಬಂದಿರಲಾಗ
ಮಿತ್ರ ಹಿತವಚನವನು ನೀನು
ಕೊಟ್ಟೆ !

ಸುತ್ತಮುತ್ತಲ ವೈರಿ
ಮೈತ್ರತ್ವ ಧಿಃಕ್ಕರಿಸಿ
ನಣನಾಡುತಿರಲಾಗ ಧೈರ್ಯಕೊಟ್ಟೆ !
ಸಹಜ ನಂತರಡಮ್ಮ
ನಾಯಕನು ನೀನೆಂದು
ಹದಿನಂಟು ಮಾಸದಲೆ ತೋರಗೊಟ್ಟೆ!

ಕನಸುಮನಸಿನಲಿ ನಿನ್ನ
ನಂತರದಿಯಾರಂದು
ಯೋಚಿಸದ ತರದಲ್ಲಿ ಪೊರಟುಬಿಟ್ಟೆ !
ನಡೆ ಮುಂದೆ ನಡೆ ಮುಂದೆ
ಎಂದೆನುತ ನೀನಮ್ಮ
ಶಾಂತಿಪಥವನು ಬಳಸಿ ಮುಂದ
ಕೊಯ್ದೆ !

ಮುನ್ನಡೆದು ಮುನ್ನಡದು
ನೀನಿನ್ನ ದೇಹವನು
ಅನುದಿನವು ಸೃಜಿಸುತಲಿ ಸಗ್ಗ ಕೊಯ್ದೆ !

—ಮಾಮಾ ಪನಾಸಕರ್.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ
ಎಲ್ಲ ಪಾತ್ರೆಗಳಿಗೆ—
ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್
ಎಲ್ಲ ಪಾತ್ರೆಗಳಿಗೆ- ನಮ್ಮಲ್ಲಿಗೆ ಬನ್ನಿ.
ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - - ಉಡುಪಿ

ಟೆಲಿಗ್ರಾಂ. 'ಸುದರ್ಶನ'. ಸ್ಥಾಪನೆ 1914 ಫೋನ್ ನಂಬ್ರ. 3428
ಜಗತ್ಪಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ
ತಯಾರಕರು. ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಕರ್ನಾಟಕ ಇಂಡಸ್ಟ್ರೀಸ್
ಚಿಕ್ಕನಸಾಲ ರಸ್ತೆ
ಕುಂದಾಪುರ ದ. ಕ.

ಜೋಡೆತ್ತು ಮಾರ್ಕಿನ
ಮಂಗಳೂರು
ಹಂಚುಗಳನ್ನು
ಉಪಯೋಗಿಸಿರಿ.



Edited, Printed & Published by K. H. Shetty at the Navayuga Press. Udipi. S. India.

ಪರ್ಯಾಯ ಸಮಾರಂಭ

(ಇಪ್ಪತ್ತೊಂಭತ್ತನೇ ಪುಟದಿಂದ)

ದರು. ಫಲಿಮಾರು ಮಠದ ಶ್ರೀಶ್ರೀ ರಘುವಲ್ಲಭ ತೀರ್ಥ ಶ್ರೀಗಳು ಸಮಾರೋಪ ಭಾಷಣ ಮಾಡಿದರು.

ಪರ್ಯಾಯ ನಿವೃತ್ತ ಶ್ರೀಶ್ರೀಯವರನ್ನು ಗೌರವದಿಂದ ಅವರ ಮಠಕ್ಕೆ ಕಳಿಸಿ ಕೊಡಲಾಯಿತು.

ಸಂಜೆ ಧಾರ್ಮಿಕ ಮಹಾ ಸಭೆಯು ಸೇರಿತು. ಶ್ರೀ ಅದಮಾರು ಮಠದ ಶ್ರೀ ಶ್ರೀ ವಿಬುಧೇಶ ತೀರ್ಥಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದು ರಾಜ್ಯದ ಪಂಚಾಯತ್ ರಾಜ್ಯ ಅಭಿವೃದ್ಧಿ ಶಾಖೆಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ಉದ್ಘಾಟಿಸಿದರು.

ಸಚಿವರು ಮಾತನಾಡುತ್ತ 'ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತವು ದರ್ಶನ ಪರಂಪರೆಯಲ್ಲಿ ಶ್ರೇಷ್ಠವಾದುದು. ಅವರ ದರ್ಶನ ಕೇಂದ್ರ ಉಡುಪಿ ಕರ್ನಾಟಕಕ್ಕೆ ಪವಿತ್ರವೂ ಪೂಜನೀಯವೂ ಆಗಿದೆ' ಎಂದು ಉದ್ಗರಿಸಿದರು. ಅವರು ಮುಂದುವರಿಯುತ್ತ, ಜನ ಸಾಮಾನ್ಯರನ್ನು ಧರ್ಮ ಬೋಧನೆ, ಸನ್ಮಾರ್ಗ ದರ್ಶನದ ಮೂಲಕ ಧರ್ಮ ಮಾರ್ಗದಲ್ಲಿ ನಡೆಸುವ ಹೊಣೆ ಮಠ—ದೇಗುಲಗಳವರದ್ದು. ಉತ್ತಮ ಮನಸ್ಸು, ಉತ್ತಮ ನಡತೆ ಮತ್ತು ಉತ್ತಮ ಕಾರ್ಯಾಚರಣೆ—ಇವು ಉತ್ಕೃಷ್ಟ ಜೀವನ ತತ್ವಗಳು ಎಲ್ಲಾ ಧರ್ಮಗಳು ಬೋಧಿಸಿರುವುದು ಇದನ್ನೇ. ವಿಶ್ವಮಾನವ ಕಲ್ಯಾಣವು ಧರ್ಮದ ಗುರಿಯಾಗಬೇಕು. ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ನಾವು ನಮ್ಮ ಹಿರಿಯರ ಪರಂಪರೆಯನ್ನು ಉಳಿಸಿಕೊಳ್ಳಬೇಕು—ಎಂದರು.

ಪರ್ಯಾಯ ಶ್ರೀಶ್ರೀಯವರು ಪ್ರಾಸ್ತಾವಿಕ ಭಾಷಣ ಮಾಡಿ, ಶ್ರೀಮಧ್ವಾಚಾರ್ಯರು ದ್ವೈತ ತತ್ವವನ್ನು ಕಂಡುಕೊಂಡು ಭಾರತದಲ್ಲಿ ಧರ್ಮ—ಸಂಸ್ಕೃತಿಗಳ ಪ್ರಚಾರ ಮಾಡಿದರು ಅವರ ಶಿಷ್ಯ ಪರಂಪರೆಯೂ ಇದೇ ಕಾರ್ಯ ನಿರತವಾಗಿದೆ. ಜನತಾ ಕಲ್ಯಾಣ, ಶಾಂತಿ ಮತ್ತು ಸುವ್ಯವಸ್ಥೆಗಳಿಗೆ ಧರ್ಮ ಪ್ರಚಾರ ಅತ್ಯಗತ್ಯ ಎಂದರು. ಮಾನ್ಯ ಸಚಿವರಿಗೊಂದು ಮಾನಪತ್ರ ಸಮರ್ಪಿಸಿ, ಉಡುಪಿಯನ್ನು ಪ್ರವಾಸಿ ಕೇಂದ್ರವಾಗಿ ಘೋಷಿಸಿ ಯಾತ್ರಿಕರಿಗೆ ಸಕಲ ಸೌಕರ್ಯ ಒದಗುವಂತೆ ಮಾಡಬೇಕೆಂದು ಕೇಳಿಕೊಳ್ಳಲಾಯಿತು.

ಅನಂತರ ಪ್ರಿನ್ಸಿಪಲ್ ಕು. ಶಿ. ಹರಿದಾಸ ಭಟ್ಟರು ಧರ್ಮದ ಬಗ್ಗೆ ಮಾತನಾಡಿ, ಧರ್ಮದ ಬಗ್ಗೆ ಚರ್ಚೆ ಬಹುಕಾಲದಿಂದ ನಡೆಯುತ್ತ ಬಂದಿದ್ದರೂ ಇನ್ನೂ ಯಾರೂ ಗುರಿಮುಟ್ಟಿಲ್ಲ. ನಮ್ಮ ಭಾರತದಲ್ಲಿ ವ್ಯಕ್ತಿ ತನ್ನ ಅಭ್ಯುದಯ ಸಾಧನೆಯಲ್ಲಿ ತೊಡಗುವಾಗ ಸಮಾಜವನ್ನೂ ದೇಶವನ್ನೂ ಮರೆಯುತ್ತಾನೆ. ದೇಶ ಉಳಿಯ ಬೇಕಾದರೆ, ನಮ್ಮಲ್ಲಿ ಸಮರಸ ಚೇತನ ಮೂಡಬೇಕು. ನ್ಯಾಯದ ಬಗ್ಗೆ ನಿಷ್ಠುರವಾಗಿ ನುಡಿಯುವ ಗಂಡಸುತನ ಇರಬೇಕು. ಸಮಾಜದ ಅಂಗಾಂಗವನ್ನು ಧರ್ಮ ಹುದುಗಿರಬೇಕು. ಆದರ್ಶದ ಹೆಗ್ಗಳಿಕೆಯಿಂದ ರೀತಿಯಲ್ಲ ಧರ್ಮ ಕಾರ್ಯಾಚರಣೆಯಲ್ಲಿ ಬರಬೇಕು ಎಂದರು.

ಶ್ರೀ ಸುರತ್ಕಲ್ಲು ವೆಂಕಟರಾಯಾಚಾರ್ಯರು ಮಾತನಾಡಿ ಭಕ್ತಿಯೇ ಸುಲಭ ಮಾರ್ಗವೆಂದು ಉಲ್ಲೇಖಿಸಿ ಧಾರ್ಮಿಕ ಸಭೆಗಳ ಪ್ರಯೋಜನವನ್ನು ವಿವರಿಸಿದರು.

ಅಧ್ಯಕ್ಷ ಶ್ರೀಶ್ರೀಯವರು ಭಾಷಣ ಮಾಡಿ, ಹಿಂದಿನ ಕಾಲದಲ್ಲಿ ಯತಿಗಳು ಧರ್ಮವನ್ನು ರಾಜದಂಡದ ಮೂಲಕ ಜನಕ್ಕೆ ಮುಟ್ಟಿಸುತಿದ್ದರು. ಆದರೆ, ಇಂದು ಇದು ಅಸಾಧ್ಯ ಎಂದು ಉದ್ಗರಿಸಿದರು.

ಪರ್ಯಾಯದ ದಿನವೇ 'ಸುಪ್ರಭಾತ' ವೆಂಬ ದೈನಂದಿನ ಕಾರ್ಯಕ್ರಮವೂ ಉದ್ಘಾಟಿತವಾಯಿತು. ಅಂದಿನಿಂದ ಪ್ರತಿದಿನವೂ ಪ್ರಭಾತದಲ್ಲಿ ಈ ಕಾರ್ಯಕ್ರಮವು ನಡೆಯ ತೊಡಗಿದೆ. ಶ್ರೀಮತಿ ಪಾಪಾ ಚೂಡಾಮಣಿ ಮತ್ತಿತರರ ಸಂಗೀತ ಕಾರ್ಯಕ್ರಮ ಮುಂಜಾವದಿಂದ ಸಂಜೆಯವರೆಗೆ ಕಾರ್ಯಕ್ರಮಗಳೊಂದಿಗೆ ಪರ್ಯಾಯದ ದಿನ ಭಕ್ತಜನರನ್ನು ಆಕರ್ಷಿಸಿತ್ತು.

ಶ್ರೀ ಕಾಣಿಯೂರು ಮಠದ ಶ್ರೀ ಶ್ರೀಯವರು ತುಂಬಿದ ಉತ್ಸಾಹಿಗಳು. ಸುಧಾರಣಾ ಪ್ರಿಯರು. ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ, ಧರ್ಮಪ್ರಚಾರಕ್ಕಾಗಿ, ಹಲವಾರು ಯೋಜನೆಗಳನ್ನು ಅವರು ಈಗಾಗಲೇ ಯೋಜಿಸಿದ್ದಾರೆ. ಅವನ್ನು ಕಾರ್ಯರೂಪಕ್ಕೂ ತರತೊಡಗಿದ್ದಾರೆ. ಶ್ರೀಕೃಷ್ಣ ಮಠದ ಆವರಣದಲ್ಲಿ ಹಣ್ಣುಕಾಯಿಯ ಅಂಗಡಿಯೊಂದು ಮಠದ ಕಡೆಯಿಂದಲೇ ತೆರೆಯಲಾಗಿದೆ. ಮಠದ ನೌಕರ ವರ್ಗದವರಿಗೆ ಸೂಕ್ತ ಕ್ರಮದಲ್ಲಿ ಆಧುನಿಕ ಪದ್ಧತಿಯಂತೆ ವೇತನ ನೀಡುವ ವ್ಯವಸ್ಥೆಯಿದೆಯೆಂದು ಕೇಳುತ್ತೇವೆ. ಶ್ರೀ ಮಠದಲ್ಲಿ ಪ್ರತಿನಿತ್ಯವೂ ಕಲವೊಂದು ಧಾರ್ಮಿಕ ಕಾರ್ಯಕ್ರಮಗಳು ನಡೆಯ

ಮಣಿಪಾಲ ಆಸ್ಪತ್ರೆಯಲ್ಲಿ

ಶ್ರೀ ಆರೂರರ ಹೆಸರಿನಲ್ಲಿ ಬ್ಲಾಕ್

ಮಂಗಳೂರಿನ ದಿ ಶಂಕರ್ ವಿಟ್ಠಲ್ ಮೋಟಾರ್ ಕಂಪೆನಿ, ಲಿಮಿಟೆಡ್‌ನ ಡೈರೆಕ್ಟರರೂ ಕಂಪೆನಿಯ ಬಹುಮುಖದ ಅಭಿವೃದ್ಧಿ, ಬೆಳವಣಿಗೆಗಳಿಗೆ ಕಾರಣ ಪುರುಷರೂ ಆದವರು ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಅವರು. ಶ್ರೀ ರಾಯರು ಕಂಪೆನಿಗೆ ಸಲ್ಲಿಸಿದ ಆತ್ಮಪೂರ್ವ ಸೇವೆಯ ಸವಿನೆನಪಿಗಾಗಿ ಕಂಪೆನಿಯು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ೮೦ ಹಾಸಿಗೆಗಳುಳ್ಳ ಒಂದು ಬ್ಲಾಕನ್ನು ೫೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿಕೊಟ್ಟರು. ಇದರ ಉದ್ಘಾಟನೆಯು ತಾ. ೧೧-೧-೧೯೬೩ರಂದು ಆಹಾರ ಮಂತ್ರಿ ಶ್ರೀ ಬಿ.ಡಿ. ಜತ್ತಿಯವರಿಂದ ನಡೆಯಿತು.

ಶ್ರೀ ಎ. ಎಲ್. ಎನ್. ರಾವ್

ಮಣಿಪಾಲದ ಎಕೆಡೆಮಿ ಆವ್ ಜನರಲ್ ಎಜುಕೇಶನಿನ ಅಮೋಘ ಸಾಧನೆಗಳಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಒಂದು. ಈ ಕಾಲೇಜಿನ ಸ್ಥಾಪನೆಯಿಂದಾಗಿ ಬೃಹತ್ ಆಸ್ಪತ್ರೆಯೊಂದರ ಆವಶ್ಯಕತೆಯೂ ಹೆಚ್ಚಿ ಕಸ್ತೂರ್ಬಾ ಜನರಲ್ ಆಸ್ಪತ್ರೆಯು ತಲೆಯೆತ್ತಿತು.

೧೯೪೨ರಲ್ಲಿ ಸ್ಥಾಪಿತವಾದ ಎಕೆಡೆಮಿಯ ಪ್ರಾರಂಭದ ದಿನಗಳಲ್ಲಿ ಶ್ರೀ ಆರೂರರು ಅದರ ಉಪಾಧ್ಯಕ್ಷರಾಗಿದ್ದರು. ಮಾನಸಿಕ ಕ್ಷೇತ್ರದ ಶೈವಾಡವನ್ನು ಸ್ವಾಗತಿಸುವ ಇವರು ಇವರಲ್ಲಿಯೇ ಮಡಿದರು. ಇಂದಿಗೂ ಎಕೆಡೆಮಿಯ ಆಧಾರ ಸ್ತಂಭಗಳಲ್ಲಿ ಇವರೂ ಒಬ್ಬರು.

"ಡಾ। ಪೈಯವರು ಏಕನಿ ರಂಗದ ಅಚಲ ವಿಶ್ವಾಸಿಗಳು. ಸರಕಾರವು ಬಾಳಿಗೆ ರಂಗದ ಸಾಧನೆಯನ್ನು ಪ್ರೋತ್ಸಾಹಿಸಬೇಕೆನ್ನುವವರು, ಸರಕಾರವು ಈ ನಡುವೆ ಪ್ರವೇಶಿಸುತ್ತ ಬಂದರೆ, ರಂಗವು ಕೆಡುವುದು. ಸರಕಾರವು ತೀವ್ರ ವೃಷ್ಟಿ ಹರಿಸುತ್ತ ಬಂದಲ್ಲಿ ಖಾಸಗಿ ರಂಗವು ಕುಂಠಿತವಾಗುವುದು. ಸ್ವಾತಂತ್ರ್ಯವು ತನ್ನ ಮಗುವಿಗೆ ತನ್ನ ನೆಚ್ಚಿನದಲ್ಲಿ ಶಿಕ್ಷಣ ಕೊಡುವುದರಿಂದ ಪೆತ್ತವನನ್ನು ಪಡೆಯಬಾರದು' ಎನ್ನುತ್ತಾರೆ ಶ್ರೀ ಆರೂರರು.

ಶ್ರೀಯುತರು ಇಂದು ಇಳಿವಯಸ್ಸಿನವರು, ಆದರೂ ಅವರ ಉದಾತ್ತ ಸೇವಾ ಭಾವನೆ, ಕರ್ತವ್ಯ ಬುದ್ಧಿಗಳು ಇಳಿದಿಲ್ಲ ಎಂಬ ಪರಿಯದಲ್ಲಿಯೇ ಉಡುಪಿ ನಗರಸಭೆ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡುಗಳ ಅಧ್ಯಕ್ಷರಾಗಿ ಜನತೆಯ ಕಷ್ಟ ಕಾರ್ಪಣ್ಯಗಳನ್ನು ಸರಿಯಾಗಿ ಕಂಡುಕೊಂಡವರು ಇವರು ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಅಜರಾಮರನಾಗಿ ಉಳಿಯುವ ಶ್ರೀ ಎ. ಎಲ್. ಎನ್. ರಾವ್ ಬ್ಲಾಕ್ ಶ್ರೀ ರಾಯರ ಸೇವಾಬುದ್ಧಿಯನ್ನೂ ಬ್ಲಾಕನ್ನು ಒದಗಿಸಿದ ಶಂಕರ ವಿಟ್ಠಲ್ ಕಂಪೆನಿಯ ಉದಾರತೆಯನ್ನೂ ಸದಾ ಪ್ರತಿನಿಧೀಕರಿಸುತ್ತದೆ.

ಈ ಮೊದಲ ಹಲವು ವರ್ಷಗಳಿಂದ ನಡೆದು ಬಂದಂತೆ ವಿದ್ಯಾರ್ಥಿಗಳಿಗೆ ಉಚಿತ ಭೋಜನ ವ್ಯವಸ್ಥೆಯನ್ನು ತಾವೂ ಮುಂದುವರಿಸುವುದಾಗಿ ಶ್ರೀ ಪರ್ಯಾಯ ಶ್ರೀ ಶ್ರೀಯವರು ಹೇಳಿದ್ದಾರೆ.

ಲಿಪಯೆಂದೂ ಇವುಗಳಲ್ಲಿ ಶ್ರೀ ಮಠದಲ್ಲಿ ಭೋಜನ ಸೌಲಭ್ಯ ಪಡೆಯುವವರು ಭಾಗವಹಿಸ ಬೇಕೆಂದೂ ಕೇಳಿ ಒಲಿದಿದೆ.

ಧರ್ಮ ಪ್ರಚಾರ, ವಿದ್ಯಾ ಪ್ರಚಾರ, ಭಕ್ತಿ ಮಾರ್ಗದ ಪ್ರಚಾರ—ಇವು ಇಂದು ನಮ್ಮ ವೈಚಾರಿಕ ಯುಗದ ಆವಶ್ಯಕತೆಗಳು. ಇವನ್ನು ಬಿಡದೆ ಸೂಕ್ತ ವಿಧಾನದಲ್ಲಿ ಆಧುನಿಕ ಮತ್ತು ಪ್ರಾಚೀನ ಸಂಪ್ರದಾಯಗಳ ಸಮನ್ವಯದೊಡನೆ ಪ್ರಚಲಿತ ಪರ್ಯಾಯಾವಧಿ ಯಶಗಳಿಸುವುದೆಂದು ಎಲ್ಲರೂ ಹಾರೈಸಿದ್ದಾರೆ.

ವಿಹಾರಕ್ಕಾಗಿ ವ್ಯವಹಾರಕ್ಕಾಗಿ ಉಡುಪಿಗೆ ಬಂದಾಗ
ಉಳಕೊಳ್ಳುವ ಚಿಂತೆ ಬೇಡ
ಏರ್ ಕಂಡಿಶನ್ಡ್ ಕೋಣೆಗಳಿಂದ ಸುಸಜ್ಜಿತವಾದ
ಅತ್ಯಾಧುನಿಕ ವಸತಿ ಗೃಹ

'ಕಲ್ಪನಾ ಲೋಜಿಂಗ್ ಹೌಸ್'



ನೀವೂ ನಿಮ್ಮ ಪರಿವಾರದವರೂ ಒಮ್ಮೆ ಬಂದರೆ ಎಂದೆಂದೂ
ನಮ್ಮ ಸಂದರ್ಶಕ ಮಿತ್ರರಾಗುವಿರಿ.
ಸತ್ಕಾರ ಸಮಾರಂಭ ವಿಹಾರ ಪ್ರವಾಸಿಗಳಿಗೆ, ಯಾತ್ರಾರ್ಥಿಗಳಿಗೆ
ಸಕಲ ವ್ಯವಸ್ಥೆಯ "ಟೂರಿಸ್ಟ್ ಹಾಲ್" ನಮ್ಮ ಇನ್ನೊಂದು ವೈಶಿಷ್ಟ್ಯ.

'ಕಲ್ಪನಾ'

ಊಟ, ಉಪಹಾರ ಮತ್ತು ವಸತಿಗೃಹ.
ಉಪೇಂದ್ರಬಾಗ್, ಉಡುಪಿ ದ. ಕ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ:-

ವರ್ಜಿನ್

ಕ್ರೂಡ್ ಆಯಿಲ್
ಪಂಪು ಸೆಟ್ಟುಗಳು..........

- 3. H. P.
- ಸುದೃಢವಾದ ರಚನೆ
- ಕ್ರೂಡ್ ಆಯಿಲಿನಿಂದಾಗಿ ಅತೀ ಕಡಿಮೆ ಖರ್ಚು
- ವರ್ಷ ಪರಿಯಂತ ಕಿರುಕುಳ ರಹಿತ ಸೇವೆ
- ಸುಲಭದಲ್ಲಿ ಒಯ್ಯಲು ಅನುಕೂಲವಾಗುವಂತೆ ನಾಲ್ಕು ಗಾಲಿಗಳ ಮೇಲೆ ಅಳವಡಿಸಲಾಗಿದೆ

++ ++ ++ ++ ++

ಧನ

ಇಲೆಕ್ಟ್ರಿಕ್ ಮೋಟಾರು ಮತ್ತು
ಪಂಪು ಸೆಟ್ಟುಗಳು

- ಸ್ಕ್ರೀನ್ ಪ್ರೊಟೆಕ್ಟೆಡ್ ಮೋಟಾರುಗಳು
- ಟೋಟಲಿ ಏನ್‌ಕ್ಲೋಸ್ಡ್ ಮೋಟಾರುಗಳು,
- ಇಬ್ಬಗೆಯ ವೇಗದ ಮೋಟಾರುಗಳು.

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿ
ಕಾರ್ಕಳ (ದ. ಕ.)

ರೋಗವರಿಯದೆ ಮದ್ದೇಕೆ? (ಒಂದನೇ ಪುಟದಿಂದ)

ನಮ್ಮ ರೈತರು ಇತರ ದೇಶಗಳ ರೈತರಿಗಿಂತ ಬುದ್ಧಿಶಕ್ತಿಯಲ್ಲಿ ಪರಿಶ್ರಮ, ಪಟುತ್ವದಲ್ಲಿ ಕಡಿಮೆಯವರೇನೂ ಅಲ್ಲ. ಆದರೆ, ನಮ್ಮ ರೈತರಿಗೂ ವಿದೇಶೀ ರೈತರಿಗೂ ಅಜಗಜಾಂತರವಿದೆ. ಅವರ ಸಮಸ್ಯೆಗಳೂ ಭಿನ್ನ ಭಿನ್ನವಾಗಿವೆ. ನಾವಿಂದು ಮಾಡಬೇಕಾದ ಮೊತ್ತಮೊದಲ ಕೆಲಸವೆಂದರೆ, ರೈತನನ್ನು, ಭೂಮಿಯ ಮಗನನ್ನು ಗೌರವಿಸುವುದು; ಆತನ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿತುಕೊಂಡು ಅವನ್ನು ನಿಷ್ಠೆಯಿಂದ ಪರಿಹರಿಸಲು ಹಣಗುವುದು; ರೈತರಿಗೆ ಆರ್ಥಿಕ ನೆರವನ್ನು ಉದಾರವಾಗಿ ನೀಡಿ, ಅವರ ಕಾರ್ಯದಲ್ಲಿ ಉತ್ತೇಜನವನ್ನು ಈಯುವುದು.

ಜೀವನಾವಶ್ಯಕವಾದ ಎಲ್ಲ ವಸ್ತುಗಳೂ ನ್ಯಾಯ ಬೆಲೆಗೆ ದೊರೆಯುವಂತೆ ಮಾಡದೆ ಕೃಷಿ ಉತ್ಪನ್ನದ ಮೇಲೆ ಮಾತ್ರ ಬೆಲೆ ನಿಯಂತ್ರಣ ತರುವುದು ನ್ಯಾಯವಲ್ಲ. ಕೃಷಿಯೂ ಒಂದು ಉದ್ಯಮ, ಅದರಲ್ಲಿಯೂ ಆಸಕ್ತಿ—ವಿಶ್ವಾಸ ಬೆಳೆಯಬೇಕು. ಇದಕ್ಕಾಗಿ ಕೃಷಿಕನಿಗೂ ತನ್ನ ಉತ್ಪನ್ನಕ್ಕೆ ಯೋಗ್ಯ ಬೆಲೆಯು ದೊರೆಯುವಂತಾಗಬೇಕು.

ದೇಶದ ಆಹಾರ ಉತ್ಪಾದನಾ ಸಾಮರ್ಥ್ಯ ಎಲ್ಲ ರಾಜ್ಯಗಳಲ್ಲೂ ಸರಿಯಾಗಿ ಹಂಚಿರುವುದಿಲ್ಲ. ಮಿಗಿತೆಯ ರಾಜ್ಯಗಳು ಕೊರತೆಯ ರಾಜ್ಯಗಳಿಗೆ ಆಹಾರವನ್ನು ಪೂರೈಸುವುದನ್ನು ತಮ್ಮ ಧರ್ಮವೆಂದು ತಿಳಿಯಬೇಕು. ಕೃಷಿಯ ಮತ್ತು ಕೃಷ್ಯುತ್ಪನ್ನಗಳ ಬಗ್ಗೆ ಕಾಗದದ ಮೇಲಿನ ಯಾವ ಯೋಜನೆಯೂ ಪ್ರಯೋಜನವಿಲ್ಲ. ವಿಶಾಲ ದೇಶದಲ್ಲಿ ಯಾವುದೇ ಒಂದು ಯೋಜನೆಯೂ ಅನುಕೂಲ ಫಲಕಾರಿಯಾಗುವುದಿಲ್ಲ. ಕೃಷಿಕ್ಷೇತ್ರದಲ್ಲಿ ಕೃಷಿಕನ ಮೂಲಭೂತ ಸಮಸ್ಯೆಗಳು ಏನು ಎಂಬುದನ್ನು ಅರಿತುಕೊಂಡು ಅವುಗಳ ನಿವಾರಣೆಗಾಗಿ ಸೊಂಟಕಟ್ಟಬೇಕು.

ನಾನು ಫುಡ್ ಕಾರ್ಪೊರೇಶನ್ನಿನ ಅಧ್ಯಕ್ಷನಾಗಿ ಕೃಷಿ ಸಮಸ್ಯೆಯ ಮೂಲದ ಕುರಿತು ಮಾತಾಡಿದ್ದೇನೆ. ಈ ವಿಷಯದಲ್ಲಿ ಜನಜಾಗೃತಿಯನ್ನುಂಟುಮಾಡಿ ಜನರಿಗೆ ಆಹಾರ ವಿಷಯವು ಬಹಳ ಮುಖ್ಯವಾಗಿದೆಯೆಂದು ಮುಂದಿಟ್ಟು ಮಾಡಿದ್ದೇನೆ. ನಮ್ಮ ದೇಶದಲ್ಲಿ ದೇವರು ಇಂತಹ ಭೀಕರ ಆಹಾರ ಪರಿಸ್ಥಿತಿಯನ್ನು ನಿರ್ಮಿಸಿ ನಮ್ಮ ತಿಳಿವಿನ ಕಣ್ಣು ತೆರೆಸಿದ್ದಾನೆ. ಜನತೆ ಇನ್ನಾದರೂ ಮುಂದೆ ಬಂದು ಆಹಾರ ಸ್ವಾವಲಂಬನೆಯನ್ನು ಸಾಧಿಸಲಿ.

(ಶ್ರೀ ಟಿ. ಎ. ಪೈ ಅವರು ಉಡುಪಿಯಲ್ಲಿ ಜಾ. ೧ರಂದು ಸತ್ಕಾರ ಸಮಾರಂಭದಲ್ಲಿ ಮಾಡಿದ ಭಾಷಣದ ಆಧಾರದಿಂದ)

ಪ್ರಜಾರಾಜ್ಯ ದಿನದ ಶುಭಾಶಯಗಳು!

ಶ್ರೇಷ್ಠತೆಯ ಹೆಗ್ಗುರುತು—

ಉಡುಪಿ ಶ್ರೀ ಕೃಷ್ಣ ವಿಲಾಸ

ಕಾರವಾರ (ಉತ್ತರ ಕನ್ನಡ)

ವಿನಯಶೀಲ ಉಪಚಾರ
ಶುಚಿ—ರುಚಿ ಉಪಾಹಾರ

ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಕೆ. ಸಂಜೀವ ರಾವ್
ಪ್ರೊಪ್ರೈಟರ್.

ಪ್ರಥಮ ಬಹುಮಾನ ರೂ. 1,15,000 ಗೆಲ್ಲಿರಿ!!
ಇಂದೇ ನಿಮ್ಮ ಟಿಕೆಟ್ಟನ್ನು ಪಡೆಯಿರಿ!

	ಒಂದು ಟಿಕೆಟ್ಟಿಗೆ	ಡ್ರಾಯಿಂಗ್
1) ಬಾರಾಬತಿ ಕ್ಯಾನಲ್, ಕಟಕ್—	ರೂ. 1=00	13—2—66
2) ಕೆ. ಸಿ. ಚಾರಿಟೀಸ್ ಫಂಡ್, ಬರ್ಹಾಂಪುರ—	ರೂ. 1=00	30—4—66
3) ಡಿ. ಬಿ. ಚಾರಿಟೀಸ್ ಫಂಡ್, ಕಲ್ಕತ್ತ—	ರೂ. 2=00	29—4—66

ಟಿಕೆಟ್ಟು ಬೇಕಾದವರು ಈ ಕೆಳಗಿನವರಿಗೆ ಹಣವನ್ನು M. O. ಮಾಡಿರಿ.
(ಪೋಸ್ಟೇಜ್ 0=15 ಸಹಿತ)

ಸಿ. ರಾಜಶೇಖರಯ್ಯ,
ಅಧಿಕೃತ ಟಿಕೆಟ್ ವಿತರಣೆಗಾರರು,
ಶಿವಬಾಗ್ ಕಾಂಪೌಂಡ್, ಶಿರಿಬೀಡು, ಉಡುಪಿ (ದ. ಕ.)

ಪ್ರಜಾರಾಜ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ
ಮೇಲ್ದರಗತಿಯ ಪ್ರಪ್ರಥಮ
ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ವ್ಯಾವಸ್ಥಾಪಕರು

ROYAL MAHAL
Up-to-date Boarding & Lodging
UDIPI, S. K.

ಉದಯ, Printed & Published by K. H. Shetty at the Navayuga Press, Udipi, S. India.

ಪ್ರಜಾಪ್ರಭುತ್ವದಿನದ ಶುಭಾಶಯಗಳು!

ಸೌಜನ್ಯ, ಸೌಲಭ್ಯ ಹಾಗೂ ಭದ್ರತೆಗಳ ಹೆಗ್ಗುರುತು–

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬ್ಯಾಂಕ್)



ವಿವಿಧ ಬ್ಯಾಂಕಿಂಗ್ ಸೌಕರ್ಯಗಳು:

ಕರೆ, ಚಿಕ್ಕ ವಾಯಿದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು.

ಬಡ್ಡಿ ಸೇಕಡಾ **8**ರ ವರೆಗೆ

ಚಲಾವಣಾ ಭಂಡವಾಳ ರೂ. **2·25** ಕೋಟಿಗೂ ಮಿಕ್ಕಿದೆ.

ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತಿರುವ **ನಾಯಕ್ ಬ್ಯಾಂಕ್ ಪ್ರತಿಯೊಬ್ಬರಿಗೂ**

ಏಕಪ್ರಕಾರದ ಸೌಜನ್ಯದ ಸೇವೆ ಸಲ್ಲಿಸಲು ಸಿದ್ಧವಿದೆ.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಶಾಖಾ ಕಛೇರಿಯನ್ನು ಸಂದರ್ಶಿಸಿರಿ.

ನಮ್ಮ ಶಾಖಾ ಸಮುದಾಯ

ಮೈಸೂರು ರಾಜ್ಯದಲ್ಲಿ— ಉಡುಪಿ ಟೌನ್, ಮಂಗಳೂರು—ಬಂದರ್, ಮಂಗಳೂರು—ಹಂಪನಕಟ್ಟೆ, ಬೆಂಗಳೂರು, ಶಿವಮೊಗ್ಗಾ, ಬೇಲೂರು, ತುಮಕೂರು, ಕಟಪಾಡಿ, ಸುರತ್ಕಲ್, ಕುಣಿಗಲ್, ಕಿನ್ನಿಗೋಳಿ, ಶಂಕರಪುರ, ಹಳೆಯಂಗಡಿ, ಮುದರಂಗಡಿ, ಬೆಳ್ಳೆ, ಭದ್ರಾವತಿ, ನಾಗಮಂಗಲ, ಚಿಕ್ಕನಾಯಕನ ಹಳ್ಳಿ.

ಕೇರಳ ರಾಜ್ಯದಲ್ಲಿ— ಕಾಂಞಂಗಾಡ್, ನೀಲೇಶ್ವರ, ಕಾಸರಗೋಡ್.

THE PANGAL NAYAK BANK LTD.

(SCHEDULED BANK)

ESTD: 1920

Regd. Office: UDIPI, S. Kanara.

REGD. No. B. G. 176
LICENCE No. 31
Licensed to Post without Prepayment

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!



ಡೈರೆಕ್ಟರರ ಮಂಡಳಿ:—

1. ಶ್ರೀ. ಯಂ. ಸುಂದರ್‌ರಾಮ ಶೆಟ್ಟಿ, ಬೆಂಗಳೂರು (ಚೆಯರ್‌ಮೇನ್).
2. „ ಬಿ. ಮಂಜಯ್ಯ ಹೆಗ್ಡೆ, ಮಂಗಳೂರು.
3. „ ಕೆ. ಸುಂದರರಾಮ ಶೆಟ್ಟಿ, ಮಂಗಳೂರು.
4. „ ಬಿ. ರಾಜೀವ ಶೆಟ್ಟಿ, ಮಂಗಳೂರು.
5. „ ಕೆ. ಯಲ್. ಭಂಡಾರಿ, ಮೈಸೂರು.
6. „ ಕೆ. ಪಿ. ಭವಾನಿಶಂಕರ ಶೆಟ್ಟಿ, ಮಂಗಳೂರು.
7. ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.
8. ಡಾ. ಕೆ. ವಿಠಲ ಶೆಟ್ಟಿ, ಕಾಪು.
9. ಡಾ. ಕೆ. ಬಾಲಪ್ಪ ಶೆಟ್ಟಿ, ಮಂಗಳೂರು.
10. ಶ್ರೀ ಬಿ. ಟಿ. ರವೀಂದ್ರನಾಥ ಪೂಂಜ, ಬೆಂಗಳೂರು.
11. „ ಬಿ. ಜಿ. ವೀರಣ್ಣ, ಬೆಂಗಳೂರು.
12. „ ಕೆ. ಸಿ. ಪುಟ್ಟಯ್ಯ, ದೊಡ್ಡಬಳ್ಳಾಪುರ.
13. „ ಯಚ್. ಟಿ. ಭಂಡಾರಿ, ಮುಂಬಾಯಿ.

ಅಡಿಟರ್—
ಶ್ರೀ ಪಿ. ಯಂ. ಹೆಗ್ಡೆ.

ಸೆಕ್ರಿಟರಿ—
ಶ್ರೀ ಪಿ. ಜಯರಾಮ ಶೆಟ್ಟಿ.

ಡೆಪ್ಯೂಟಿ ಸೆಕ್ರಿಟರಿ—
ಶ್ರೀ ಯಚ್. ವಿಠಲ ಶೆಟ್ಟಿ.

ನಮ್ಮ ಶಾಖೆಗಳು: –

ಮೈಸೂರು ರಾಜ್ಯದಲ್ಲಿ— ಬೆಂಗಳೂರು—ಕೆ. ಜಿ. ರೋಡ್, ಮಲ್ಲೇಶ್ವರಂ ಮತ್ತು ಅಲ್ಸೂರ್, ಮೈಸೂರು ಸಿಟಿ, ಚಾಮರಾಜನಗರ, ನಂಜನಗೂಡು, ಕೃಷ್ಣರಾಜಪೇಟೆ, ಕೊಳ್ಳೇಗಾಲ್, ಕೋಲಾರ, ದೊಡ್ಡಬಳ್ಳಾಪುರ, ನೆಲಮಂಗಲ, ಮದ್ದೂರ್, ಮಾಗಡಿ, ಮಳವಳ್ಳಿ, ಹುಬ್ಬಳ್ಳಿ, ಧಾರವಾಡ, ಗದಗ, ಕನಕಪುರ, ರಾಮನಗರಂ, ಚೆನ್ನಪಟ್ಣ, ಮೂಡಿಗೆರೆ, ಗೋಣಿಕೊಪ್ಪಲ್, ಮಡಿಕೇರಿ, ಪುತ್ತೂರು, ಕಾರ್ಕಳ, ಮಂಗಳೂರು-3—ಮಂಗಳೂರು ಸಿಟಿ, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಭಟ್ಕಳ ಮತ್ತು ಪಾಂಡವಪುರ.

ಕೇರಳ ರಾಜ್ಯದಲ್ಲಿ — ಕಾಸರಗೋಡು, ಕಾಂಞಂಗಾಡು, ತಾಳಿಪರಂಬ, ಕುತ್ತುಪರಂಬ, ತಲಿಚೇರಿ, ಕಲ್ಲೈ (ನ್ಯೂ ಮಾಹೆ), ಕಲ್ಲಿಕೋಟೆ-ಚಾಲಾಪುರಂ, ತೀರೂರು, ಮಂಜೇರಿ, ಮನ್ನಾರ್‌ಘಾಟ್, ಪೊನ್ನಾನಿ, ಪೆರಿಂತಲಮನ್ನ, ಕಲ್ಪೆಟ್ಟಾ, ಕೊಟ್ಟಾಕಲ್, ತ್ರಿಚೂರ್, ಎರ್ನಾಕುಳಂ, ಕೊಚ್ಚಿನ್-2 ಮತ್ತು ತ್ರಿಪುಣಿತ್ತುರೈ.

ಮಹಾರಾಷ್ಟ್ರ ರಾಜ್ಯದಲ್ಲಿ— ಪಾರ್ಸೀ ಬಜಾರ್ ಸ್ಟ್ರೀಟ್, ಮುಂಬಾಯಿ-1.

ಮದ್ರಾಸ್ ರಾಜ್ಯದಲ್ಲಿ — ಕೂನೂರು ಮತ್ತು ಕೋಟಗಿರಿ (ನೀಲಗಿರಿ ಜಿಲ್ಲೆ).

ಸದ್ಯದಲ್ಲಿಯೇ ನಮ್ಮ ಹೊಸ ಶಾಖೆಗಳನ್ನು ಮದ್ರಾಸು, ಕೊಯಮುತ್ತೂರ್, ಗಾಂದೇವಿ (ಮುಂಬಾಯಿ) ಇತ್ಯಾದಿ ಕಡೆಗಳಲ್ಲಿ ತೆರೆಯಲಿದ್ದೇವೆ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು— "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.

ಸ್ಥಾಪನೆ:- 1931
ಫೋನ್ ನಂಬ್ರ— 4640

Edited, Printed & Published by K. H. Shetty at the Navayuga Press, Udipi, S. India.

Edited Printed & Published by K. H. Shetty at the N...

ನವಯುಗ

2—2—[illegible]

NAVAYUGA

೨೦ ಪೈಸೆ

ಆತ್ಮತ್ಯಾಗ

ಅನುವಾದ: ಶ್ರೀ ಬೇಕಲ್ ನರಸಿಂಗ ರಾವ್.

ಅಂದು ಸಂಪೂರ್ಣ ದಿಲ್ಲಿ ನಗರವೇ ಆನಂದ ಸಾಗರದಲ್ಲೋಲಾಡುತಿತ್ತು. ನಗರವಿಡೀ ಧ್ವಜ ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ವೃದ್ಧರು, ತರುಣರು, ಬಾಲಕರು—ಎಲ್ಲರೂ ಹರ್ಷಚಿತ್ತರಾಗಿ ಕೇಕೆ ಹಾಕುತಿದ್ದರು. ಎಲ್ಲಿ ನೋಡಿದರಲ್ಲೂ ಒಂದೇ ಹಾಡು—ದಿಲ್ಲೀಪತಿ ಪೃಥ್ವೀರಾಜನ ಜಯಗಾನ. ಅಂದು ಪೃಥ್ವೀ ರಾಜನು ಆಕ್ರಮಣಕಾರಿ ಶಹಬುದ್ದೀನನನ್ನು ಸೋಲಿಸಿ ತಲೆಯೆತ್ತದಂತೆ ಮಾಡಿದ್ದನು. ನಗರದ ಮನೆ—ಮನೆಯಲ್ಲೂ ಆನಂದವಾಹಿನಿಯೆ ಹರಿಯುತಿದ್ದಿತು; ಪೃಥ್ವೀರಾಜನು ಶತಾಯುಷಿಯಾಗಲೆಂದು ಜನರು ಪ್ರಾರ್ಥಿಸುತಿದ್ದರು. ಇತ್ತ ಆಸ್ಥಾನದಲ್ಲಿ ವೀರ ಸೈನಿಕರಿಗೆ ಪುರಸ್ಕಾರದ ಹಂಚೋಣವಾಗುತ್ತಲಿತ್ತು! ಎಷ್ಟೊಂದು ಸಂತಸ! ಏನೊಂದು ಸಂತೃಪ್ತಿ!!

ಮಹಾರಾಜಾ ಪೃಥ್ವೀ ರಾಜರು ರಾಜಸಿಂಹಾಸನದಲ್ಲಿ ಮೆರೆಯುತಿದ್ದರು. ಶಾಹಬುದ್ದೀನನಿಗೆ ಭಾರತೀಯ ವೀರತ್ವದ ಪರಿಚಯವನ್ನಿತ್ತ ಪೃಥ್ವೀರಾಜನ ವೀರ ಸೈನಿಕರು ತಮ್ಮ—ತಮ್ಮ ಆಸನದಲ್ಲಿ ವಿರಾಜಿಸುತಿದ್ದರು. ಯುದ್ಧದ ನೇತೃತ್ವವನ್ನು ವಹಿಸಿಕೊಂಡ ವೀರ ಕೈಮಾಸನು ಅನುಕ್ರಮವಾಗಿ ಸೈನಿಕರ ಹೆಸರನ್ನು ಓದುತ್ತಾ ಹೇಳುತಿದ್ದನು ಪೃಥ್ವೀರಾಜನಿಗೆ. ಪೃಥ್ವೀರಾಜನು ಅವರಿಗೆಲ್ಲಾ ಸಾಹಸೋಚಿತ ಬಹುಮಾನವನ್ನೀಯುತಿದ್ದನು. ಅಷ್ಟರಲ್ಲಿ ದೂತನೊಬ್ಬನು ದರಬಾರನ್ನು ಪ್ರವೇಶಿಸಿ ಪೃಥ್ವೀರಾಜನನ್ನು ವಂದಿಸಿದನು. ರಾಜನು ಮುಂದರಿಯುತ್ತಿರುವ ಕಾರ್ಯಪ್ರಣಾಲಿಯನ್ನಷ್ಟಕ್ಕೆ ತಡೆದು ಕೇಳಿದನು—"ಏನು ಸಮಾಚಾರ ದೂತ?"

"ಮಹಾರಾಜಾ! ಮಹೋಬೆಯ ರಾಜ ಪರಿಮಳನು ನಮ್ಮ ಸೈನಿಕರನೇಕರನ್ನು ಕೊಂದು ಹಲವರನ್ನು, ಬಂಧಿಸಿರುವನು.' ದೂತನು ತಲೆಬಾಗಿಸಿ ನಿವೇದಿಸಿಕೊಂಡನು.

"ಮಹೋಬೆಯ ರಾಜ ಪರಿಮಳನೊ!' ಪೃಥ್ವೀರಾಜನನು ಆಶ್ಚರ್ಯಪೂರಿತವಾಗಿ ಕೇಳಿದನು—'ಭಾರತೀಯ ರಾಜರುಗಳನ್ನು ಏಕಸೂತ್ರದಲ್ಲಿ ಬಿಗಿಯ ಬೇಕಾಗಿರುವ ಈ ಸಂದರ್ಭದಲ್ಲಿ ಪರಿಮಳನ ಈ ದುಡುಕುವಿಕೆಯ?"

'ವಿದೇಶೀ ಗುಪ್ತಚರರು ಭಾರತದಲ್ಲೆಲ್ಲಾ ಹರಡಿರುವರು ಮಹಾರಾಜಾ!" ಕೈಮಾಸನೆಂದನು- "ಬಹುಶ ಈ ಪರಿಮಳನೂ ಅವರ ಷಡ್ಯಂತ್ರಕ್ಕೆ ಸಿಲುಕಿರಬಹುದೆಂದು ತೋರುತ್ತಿ

ಮಹಾರಾಜ ಪೃಥ್ವೀಯು ವಿಚಾರಮಗ್ನನಾದನು. ಕೊಂಚ ಸಮಯದ ವರೆಗೆ ಮನಸ್ಸಿನಲ್ಲೆ ಯೋಚಿಸಿನು. ಕೊನೆಗೆ ಮಂತ್ರಿ ಕೈಮಾಸನೊಡನೆಂದನು—' ತಾವು ಆ ಪರಿಮಳನಿಗೆ ಬುದ್ಧಿವಾದ ಹೇಳಿ ಸಮಾಧಾನ ಪಡಿಸಿ ಬನ್ನಿ. ಆಗಲೂ ಆತನು ಸರಿದಾರಿಗೆ ಬಾರದಿದ್ದಲ್ಲಿ ಆಕ್ರಮಣಕ್ಕೆ ಸಿದ್ಧವಾಗ ಬೇಕಾಗುವುದು ತಿಳಿಯಿತೆ!"

ಸಮ್ರಾಟನ ಆದೇಶ! ವೀರ ಕೈಮಾಸನು ಪರಿಮಳನಿಗೆ ಪತ್ರಬರೆದನು. ಆದರೆ ಭಾರತದ ದುರ್ಭಾಗ್ಯವು ರೆಕ್ಕೆ ಬಡಿದು ಹಾರುತ್ತಲಿತ್ತು. ಪರಿಮಳನು ಪತ್ರದಲ್ಲಿ ಬರೆದಂತೆ ನಡೆಯಲೂ ಇಲ್ಲ; ಸೆರೆ ಹಿಡಿದ ಸೈನಿಕರನ್ನು ಬಿಡುಗಡೆ ಮಾಡಲೂ ಇಲ್ಲ. ಪರಿಣಾಮವಾಗಿ ಭಾರತದಲ್ಲೇ ಆಂತರಿಕ ಯುದ್ಧವಾಗುವ ಸಂಭವವುಂಟಾಯಿತು. ಯಾವ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತಕ್ಕೆ ತನ್ನ ವೀರ ಸೈನಿಕರನ್ನು ಕೃಪಣನಂತೆ ಸುರಕ್ಷಿತವಾಗಿಡಬೇಕಿತ್ತೋ ಆಗಲೇ ಈ ಭೀಕರ ಯುದ್ಧಕ್ಕೆ ಅಣಿಯಾಯಿತು.

ಇತ್ತಂಡಗಳಲ್ಲೂ ಭಾರತದ ಶ್ರೇಷ್ಠರಾದ ಯೋಧರು ರಣರಂಗದಲ್ಲಿ ಬಂದು ಸೇರಿದ್ದರು. ಭಾರತ ವರ್ಷದ ದುರ್ಭಾಗ್ಯವೇ ಈ ವೀರ ಸೈನಿಕರನ್ನು ಚುನಾಯಿಸಿದಂತಿತ್ತು; ಆರಿಸಿ ತೆಗೆದಂತಿತ್ತು, ಸ್ವಯಂ ಪೃಥ್ವೀರಾಜನೇ ರಣರಂಗವನ್ನು ಸೇರಿದ್ದನು. ಯುದ್ಧದ ಶಂಖವೂದಲಾಯಿತು. ಇತ್ತಂಡಗಳೂ ಕಾದಾಟಕ್ಕಿಳಿದುವು, ರಕ್ತದ ಧಾರೆಯು ಕಟ್ಟೆಯೊಡೆದು ಹರಿಯಿತು. ಸಂಪೂರ್ಣ ಭೂಮಾತೆಯೇ ರಕ್ತದಿಂದ ಕೆಂಪೇರಿ ಮಹಾಕಾಳಿಯಂತಾಗಿದ್ದಳು. ಪೃಥ್ವೀರಾಜರು ವಿಜಯಿಗಳಾದರೂ ವಿಜಯಕ್ಕಾಗಿ ಅತ್ಯಧಿಕ ಮೌಲ್ಯವನ್ನವರು ವ್ಯಯಿಸಿದ್ದರು. ಸೇನೆಯ ಅಧಿಕಾಧಿಕ ಭಾಗವು ಯುದ್ಧಾಗ್ನಿಯಲ್ಲಿ ಬೆಂದು ಹೋಗಿತ್ತಷ್ಟೇ ಅಲ್ಲ, ಸ್ವಯಂ ಪೃಥ್ವೀರಾಜರೇ ಆಹತರಾಗಿ ರಣರಂಗದಲ್ಲಿ ನರಳುತ್ತಾ ಬಿದ್ದಿದ್ದರು.

ಸೂರ್ಯಾಸ್ತವಾಗಲು ಇನ್ನೂ ಹೊತ್ತಿತ್ತು. ಸಮಸ್ತ ರಣರಂಗವು ಮೃತ ಶರೀರಗಳಿಂದಲೂ, ನರಳಾಡುವ ಆರೆಸತ್ತ ಸೈನಿಕರ ಚೀತ್ಕಾರಗಳಿಂದಲೂ ತುಂಬಿತ್ತು. ರಣಹದ್ದುಗಳೂ, ನರಿ—ತೋಳಗಳೂ ಔತಣಕ್ಕಾಗಿ ಅಲ್ಲಿ ಬಂದು ಸೇರಿದ್ದುವು. ಈ ಮಾಂಸಾಹಾರಿ ಪ್ರಾಣಿಗಳಿಗೆ ರಕ್ತಪಾನಕ್ಕೂ, ನರ ಮಾಂಸ ಭಕ್ಷಣೆಗೂ ಸುಸಮಯವಾಗಿತ್ತದು. ಅಲ್ಲಲ್ಲಿ ರಣಹದ್ದುಗಳೂ, ಗಿಡುಗಗಳೂ ಸಾಯುತ್ತಲಿರುವ ನಿರುಪಾಯ ಸೈನಿಕರ ಮಾಂಸವನ್ನು ಕೊಚ್ಚಿ ತಿನ್ನುತ್ತಾ ಅವರನ್ನು ಇನ್ನೂ ಕಷ್ಟಕ್ಕೀಡು ಮಾಡುತಿದ್ದುವು. ಅದ್ಭುತ ಹೃದಯ ವಿದ್ರಾವಕ ದೃಶ್ಯವಾಗಿತ್ತದು!

ಮಹಾರಾಜ ಪೃಥ್ವೀರಾಜರೂ ಈ ಆಹತರಲ್ಲೊಬ್ಬರಾಗಿ ಬಿದ್ದಿದ್ದರು. ರಣರಂಗದಲ್ಲಿ ಉಪಾಯ ಶೂನ್ಯರಾಗಿ ಬಿದ್ದು ಈ ಭೀಕರ ದೃಶ್ಯವನ್ನು ಕಣ್ಣಾರೆಕಂಡು ಮರುಗುತಿದ್ದರು ಅವರು. ಹಲವು ಬಾರಿ ಅವರು ಅಲ್ಲಿಂದ ಎದ್ದೇಳಲು ಪ್ರಯತ್ನಿಸಿದ್ದರೂ ಅಲುಗಾಡಲೂ ಆಗುತ್ತಿರಲಿಲ್ಲ ಅವರಿಂದ. ವಿವಶರಾಗಿ ಅವರು ಆ ಶವಗಳ ನಡುವೆ ಜೀವಚ್ಛವವಾಗಿ ನರಳುತ್ತಾ ಬಿದ್ದಿದ್ದರು. ನರಳುತ್ತಿರುವ ಇತರ ಸೈನಿಕರ ದೇಹದಿಂದ ಮಾಂಸವನ್ನು ಕೀಳುತ್ತಿರುವ ಆ ಹದ್ದುಗಳನ್ನು ಕಾಣುತ್ತಲೆ ಅವರ ಮನಸ್ಸಿಗೆ ತೋಚುತಿತ್ತು, ಇದೇ ಹದ್ದುಗಳು ನನ್ನ ಶರೀರವನ್ನು ನಾಶ ಮಾಡಲೂ ಬಹುದು. ಇದನ್ನೇ ಕುರಿತು ಚಿಂತಿಸುತಿದ್ದರಷ್ಟೆ, ಅಷ್ಟರಲ್ಲೆ ಗಿಡುಗಗಳ ಗುಂಪೊಂದು ಅವರನ್ನು ಮುತ್ತಿತು ಮತ್ತು ಆಕ್ರಮಣ ನಡೆಸಲು ಸಿದ್ಧವಾಯಿತು.

ಪೃಥ್ವೀರಾಜರು ನಿರುಪಾಯರಾಗಿದ್ದರು. ಅವರಿಂದ ಕೊಂಚ ದೂರದಲ್ಲೆ ಬಿದ್ದು, ಅವರಂತೆಯೇ ನರಳುತಿದ್ದ ಆಹತ ಸೈನಿಕನೊಬ್ಬನಿದನ್ನು ಕಂಡನು. ಈತನೇ ವೀರ ಸಂಯಮರಾಯನಾಗಿದ್ದನು. ಸಂಯಮರಾಯನು ಪೃಥ್ವೀರಾಜನನ್ನು ಗಿಡುಗಗಳು ಮುತ್ತಿದುದನ್ನು ಕಂಡು ಕಂಗೆಟ್ಟನು. ಆತನು ಮನಸ್ಸಿನಲ್ಲೇ ಯೋಚಿಸಿದನು, ಭಾರತದ ಸೂರ್ಯನಿಂದು ಇದೇ ರಣರಂಗದಲ್ಲಿ ಎಂದೆಂದಿಗೂ ಅಸ್ತಮಾನನಾಗುವನೇ? ಇಲ್ಲ ಇಲ್ಲ, ನಾನು ಈ ಭಾರತದ ಸೂರ್ಯನನ್ನಸ್ತಮಿತನಾಗಗೊಡಲಾರೆ. ನನ್ನ ಪ್ರಾಣವನ್ನಾದರೂ ಸಮರ್ಪಿಸಿ ಆತನನ್ನು ಉಳಿಸಿಯೇ ತೀರುವೆನು, ಮಾತೃಭೂಮಿಯ ರಕ್ಷಣೆಯೆದುರು ಈ ಕ್ಷುಲ್ಲಕ ದೇಹವು ತುಚ್ಛವಲ್ಲದೆ ಇನ್ನೇನು!

ಸಂಯಮರಾಯನು ಸುತ್ತಲೂ ನೋಡಿದನು, ಹತ್ತಿರದಲ್ಲೆ ಒಂದು ಚಿಕ್ಕ ಖಡ್ಗವೊಂದು ಬಿದ್ದಿತ್ತು. ಸಂಯಮರಾಯನು ಹೇಗಾದರೂ ಹೊರಳಿಕೊಂಡು ಆ ಖಡ್ಗವನ್ನು ಕೈಗೆತ್ತಿಕೊಂಡನು. ಆತನ ದೇಹದಲ್ಲೇನೋ ಒಂದು ತರದ ವಿದ್ಯುತ್ಸಂಚಾರವಾದಂತಾಯಿತು, ಮಾತೃ ಭೂಮಿಗಾಗಿ ದೇಹವನ್ನರ್ಪಿಸಲು ಸಿದ್ಧನಾಗಿದ್ದನಾತ.

ಸಂಯಮ ರಾಯನು ಪುನಃ ಪೃಥ್ವೀರಾಜನೆಡೆ ನೋಡಿದನು. ಗಿಡುಗಗಳ ದಳವು ಅವರ ಶರೀರವನ್ನಾಕ್ರಮಿಸಲು ನಿರ್ಧರಿಸಿ ಮುಂದಕ್ಕೆ ಸರಿಯುತ್ತಿತು. ಸಂಯಮ ರಾಯನು ವಿರಮಿಸದೆ ತನ್ನ ಕಾಲುಗಳಿಂದ ಮಾಂಸವನ್ನು ಕಡಿದು—ಕಡಿದು ಅತ್ತ ಕಡೆ ಎಸೆದನು ಗಿಡುಗಗಳು ಆ ಕೂಡಲೆ ಪೃಥ್ವೀರಾಜನ ದೇಹವನ್ನು ತ್ಯಜಿಸಿ ಇತ್ತ ಸಂಯಮ ರಾಯನ ಮಾಂಸ ಭಕ್ಷಣೆಗೆ ಚಿತ್ತೈಸಿದುವು. ಸಂಯಮ ರಾಯನು ಒಂದೇ ಸಮನೆ ದೇಹವನ್ನು ಕಡಿಯುತ್ತಾ ಗಿಡುಗಗಳನ್ನ ತೃಪ್ತಿಪಡಿಸುತಿದ್ದನು; ಅಲ್ಲ! ತನ್ನ ಸ್ವಾಮಿಗಾಗಿ ಆತ್ಮಾಹುತಿ'ಮಾಡುತಿದ್ದನು !!

ಪೃಥ್ವೀರಾಜನ ಆಶ್ಚರ್ಯಕ್ಕೆಣೆಯೇ ಇರಲಿಲ್ಲ. ಯಾರಿರಬಹುದು ಆತನ ರಕ್ಷಣೆಗೆಂದು ತಮ್ಮ ಶರೀರದ ಮಾಂಸ ಕಡಿದು ಅತ್ತ ಚೆಲ್ಲುವವರು? ಪೃಥ್ವೀರಾಜರು ಕಣ್ಣನ್ನು ಅತ್ತ ಹೊರಳಿಸಿ ನೋಡಿದರು ಕಷ್ಟದಿಂದ. ಅವರ ಆಶ್ಚರ್ಯಕ್ಕೆ, ಸಂಯಮ ರಾಯನು ಅತ್ತ ತನ್ನ ದೇಹವನ್ನು ಕಡಿದು ಗಿಡುಗಗಳನ್ನು ತಪ್ತಿ ಪಡಿಸುತಿದ್ದನು. ಪೃಥ್ವೀರಾಜರ ಹೃದಯವು ಸಂಯಮರಾಯನ ಸ್ವಾಮಿ ಭಕ್ತಿಯನ್ನು ಕಂಡು ಗೌರವಾದರಗಳಿಂದ ಉಕ್ಕಿ ಹರಿಯಿತು ಆತನೆಡೆ ಗೌರವಾದರ ಭಾವದಿಂದ ನೋಡುತ್ತಾ, ಮಾತಾಡಲಾಗದಿದ್ದ

(ಹತ್ತನೇ ಪುಟ ನೋಡಿರಿ)

ನಿಮ್ಮ ಮಾರ್ಗದರ್ಶಿ ....

ಬಾಲ್ಯದಿಂದ ವೃದ್ಧಾಪ್ಯದ ವರೆಗಿನ ಪ್ರತಿ ಹಂತದಲ್ಲೂ ನಮಗೆ ತಿಳಿವನ್ನು ನೀಡಿ, ನಮ್ಮ ದಾರಿಯನ್ನು ತಿದ್ದಬಲ್ಲ ಎಷ್ಟು ಮಾರ್ಗದರ್ಶಿಗಳು ನಮ್ಮ ಪಾಲಿಗೆ ದೊರಕಬಲ್ಲರು!

ಮಾರ್ಗದರ್ಶಿಯೇ ನಮ್ಮನ್ನು ಸರಿದಾರಿಗೆ ಹಚ್ಚಬಲ್ಲ ಬಂಧು. ಬಾಲಕನಿಗೆ ತಾಯಿಯೇ ಮಾರ್ಗದರ್ಶಿಯಾದರೆ, ವಿದ್ಯಾರ್ಥಿಗಳಿಗೆ ಅಧ್ಯಾಪಕರೇ ವಿದ್ಯಾ ಜೀವನದ ಮಾರ್ಗದರ್ಶಿಗಳು.

ಉದ್ಯೋಗ, ನೌಕರಿಯಲ್ಲಿರುವಾಗ ಸುಗಮವಾದ ಬಾಳನ್ನು ನಡೆಸಲು ನೆರವಾಗುವುದು ನೀವು ಕೂಡಿಟ್ಟ ಸಂಪತ್ತು ಮಾತ್ರ. ಈ ಸಂಪತ್ತು ಉಳಿತಾಯದಿಂದ ರೂಪುಗೊಳ್ಳುವುದು. ಉಳಿತಾಯದ ಪಾಠವನ್ನು ತಿಳಿಹೇಳಿ, ಅದರ ಪರಿಪಾಠವನ್ನು ನಿಮ್ಮಲ್ಲಿ ಬೆಳೆಸಿ, ನಿಮ್ಮ ಸಂಪತ್ತನ್ನು ಹಿಗ್ಗಿಸಬಲ್ಲ ಸಿಂಡಿಕೇಟ್ ಬ್ಯಾಂಕು ನಿಮ್ಮ ಸುಗಮವಾದ ಬದುಕಿನ ಮಾರ್ಗದರ್ಶಿಯಾಗಬಲ್ಲುದು.

ಸಂಪತ್ತನ್ನು ಬೆಳೆಸಬಲ್ಲ ಮಾರ್ಗದರ್ಶಿಯನ್ನು
ಆರಿಸಿ ನಿಮ್ಮ ಬದುಕನ್ನು ಅರಳಿಸಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೩	೨—೩—೧೯೬೭	No. 23

Estd. 1921

NAVAYUGA

Leading Kannada Weekly

UDIPI, S. Kanara

ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುತ್ತದೆ.

ಮುಖಪತ್ರದಲ್ಲಿ:

ಪ್ರಖ್ಯಾತ ನೇತ್ರದಾನಿ ಡಾ| ಎಂ. ಸಿ. ಮೋದಿಯವರು ಇತ್ತೀಚೆಗೆ ಬಾಗಲಕೋಟೆಯಲ್ಲಿ ಏರ್ಪಡಿಸಲಾದ ನೇತ್ರ ಚಿಕಿತ್ಸಾ ಶಿಬಿರದಲ್ಲಿ ರೋಗಿಗಳನ್ನು ಪರೀಕ್ಷಿಸುತ್ತಿದ್ದಾರೆ. 1943ರಲ್ಲಿ ಡಾ| ಮೋದಿಯವರು ಗುಜರಾತದಲ್ಲಿ ಪ್ರಥಮ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಪ್ರಾರಂಭಿಸಿದ ಬಳಿಕ ಎರಡು ಮಿಲಿಯ ರೋಗಿಗಳಿಗೆ ಚಿಕಿತ್ಸೆ ಮಾಡಿರುವರಲ್ಲದೆ 1,50,000 ಶಸ್ತ್ರ ಚಿಕಿತ್ಸೆ ನಡೆಸಿದ್ದಾರೆ. ಈ ಉತ್ತಮ ಸೇವಾಕಾರ್ಯಕ್ಕಾಗಿ ಅಮೇರಿಕವು ಕಳೆದ ಜುಲೈಯಲ್ಲಿ ಅವರು ಅಲ್ಲಿಗೆ ಭೇಟಿಯಿತ್ತಾಗ ಅವರಿಗೆ ಗೌರವ ನಾಗರಿಕ ಮನ್ನಣೆಯಿತ್ತು ಗೌರವಿಸಿರುತ್ತದೆ.

ಇತಿಹಾಸದ ಅವಜ್ಞೆಯೇಕೆ?

ಗೋವ, ದಮನ ಮತ್ತು ದೀವಿಗಳು ಪೋರ್ಚುಗೀಸರ ಕಪಿಮುಷ್ಟಿಯಿಂದ ಮುಕ್ತಿ ಹೊಂದಿ, ಭಾರತದ ಒಕ್ಕೂಟದಲ್ಲಿ ಲೀನವಾಗಿ ವರುಷವೈದು ಕಳೆದವು. ಸಂಯುಕ್ತ ರಾಷ್ಟ್ರಸಂಘವೂ ಒಂದು ಗೊತ್ತುವಳಿಯ ಮೂಲಕ ಇದನ್ನು ನಾಲ್ಕು ವರ್ಷಗಳಿಗೆ ಮೊದಲು ಮಾನ್ಯ ಮಾಡಿತು. ಇಂದು ಗೋವೆಯು ಭಾರತದ ಒಂದು ಭಾಗ. ಇದರ ಮೇಲೆ ಪರಕೀಯರಿಗೆ ಯಾವುದೇ ವಿಧದ ಅಧಿಕಾರವಿಲ್ಲ. ಗೋವೆಯು ನೆರೆಯ ರಾಜ್ಯದಲ್ಲಿ ವಿಲೀನವಾಗಬೇಕು— ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಮೂಡಿದ್ದರಿಂದ ಅಲ್ಲಿ ಜನಮತಗಣನೆಯು ನಡೆಯಿತು. ಲೋಕದಲ್ಲಿಯೇ ಮೊತ್ತಮೊದಲನೆಯದೆನ್ನಬಹುದಾದ ಈ ಮಾದರಿಯ ಮತಗಣನೆಯು ವಿಲಯನವಾದಿಗಳಿಗೆ ವಿರುದ್ಧ ತೀರ್ಪನ್ನು ನೀಡಿ, ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಿತು. ಗೋವೆಯು ಮಹಾರಾಷ್ಟ್ರದಲ್ಲಿ, ದಮನ ಮತ್ತು ದೀವಿಗಳು ಗುಜರಾತದಲ್ಲಿ ವಿಲೀನವಾಗಬೇಕೇ ಅಥವಾ ಕೇಂದ್ರಾಧೀನವಾಗಿಯೇ ಉಳಿಯಬೇಕೇ— ಎಂಬೆರಡು ಸವಾಲುಗಳು ಕೇಳಲ್ಪಟ್ಟಿದ್ದುವು. ಈ ಪ್ರಶ್ನೆಗಳಲ್ಲಿ ಅರಾಷ್ಟ್ರೀಯವಾದುದೇನೂ ಇರುವುದಿಲ್ಲ.

ಗೋಮಂತಕರ ಜಾಣತನದ ನಿರ್ಧಾರದಿಂದ ಮಹಾರಾಷ್ಟ್ರೀಯರ ಮಹತ್ವಾಕಾಂಕ್ಷೆಯ ಬಳ್ಳಿ ಮುರುಟಿತು. ತಮ್ಮ ಕಡೆಗೆ ಜನಮತ ಪಡೆಯಲು ಅವರು ಒಂದಲ್ಲ, ಹಲವು ತಂತ್ರಗಳನ್ನೂ ಅಳವಡಿಸಿದ್ದರು. ಆದರೆ, ಸ್ವಯಂ ಪ್ರಜ್ಞಾಶೀಲರಾದ ಗೋಮಂತಕರು ತಮ್ಮ ಉನ್ನತಿ-ಉದ್ಧಾರಗಳು ಕೇಂದ್ರಾಧೀನವಿರುವುದರಿಂದಲೇ ಸಾಧ್ಯವೆಂದು ಒಪ್ಪಿಕೊಂಡರು. ಮಂತ್ರಿಗಳ ಜನಮತಗಣನೆಯ ಷಡ್ಯಂತ್ರ ಅವರ ಕೊರಳಿಗೇನೇ ಉರುಳಾಗಿ ಪರಿಣಮಿಸಿತು. ಅದೇನೇ ಇರಲಿ; ಈಗ ಮತ್ತೊಬ್ಬ ಮಹಾಶಯರ ದೃಷ್ಟಿ ಗೋವೆಯತ್ತ ಸರಿದಿದೆ. ಅವರೇ ಪೋರ್ಚುಗಾಲದ ಮಹಾಧಿಕಾರಿ—ಸಾಲಝಾರ ದೊರೆ. ಗೋವೆಯಲ್ಲಿ ನಡೆದ ಮತಗಣನೆಗೆ ತನ್ನದೇ ಅರ್ಥವನ್ನು ಈತ ಕಟ್ಟಿಕೊಂಡಿದ್ದಾರೆ— ಗೋವೆಯು ಭಾರತದ ಒಕ್ಕೂಟದಲ್ಲಿರಲು ನಿರಾಕರಿಸಿದೆಯಂತೆ, ದಬ್ಬಾಳಿಕೆಗೆ ಒಳಗಾಗಿರುವ ಗೋಮಂತಕರನ್ನು, ಸ್ವಾಯತ್ತ ಆಡಳಿತೆಯಿಂದ ವಂಚಿತರಾಗುತ್ತಿರುವವರನ್ನು ಉದ್ಧರಿಸಲು ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಗಳ ಹಸ್ತಕ್ಷೇಪವನ್ನು ಈ ದೊರೆ ಬಯಸುತ್ತಾರೆ. ಗೋವೆಯು ಭಾರತದಲ್ಲಿ ವಿಲೀನಗೊಂಡುದು, ಅದು ಕೇಂದ್ರಾಧೀನ ಪ್ರದೇಶವಾಗಿರುವುದು, ಅಲ್ಲಿ ಪ್ರಜಾತಂತ್ರಕ್ಕನುಸಾರವಾಗಿ ಸಾರ್ವತ್ರಿಕ ಚುನಾವಣೆಗಳು ನಡೆದುದು, ಕೇಂದ್ರಾಧೀನವಾಗಿಯೇ ಮುಂದುವರಿಯಬೇಕೇ, ನೆರೆಯ ರಾಜ್ಯಗಳಲ್ಲಿ ವಿಲೀನವಾಗಬೇಕೇ ಎಂಬುದಕ್ಕೆ ಮತಗಣನೆ ನಡೆದುದು – ಈ ಮೊದಲಾದ ಐತಿಹಾಸಿಕ ಸತ್ಯಗಳನ್ನು ಈ ಹುಚ್ಚು ಮುದಿ ದೊರೆ ಮರೆತು ಬಿಡುವುದು ಎಷ್ಟೊತ್ತರ ಮರವೇ. ಇಂತಹ ದೊರೆ ಅಧಿಕಾರದಲ್ಲಿ ಉಳಿಯಲು ಅರ್ಹರೋ ಅನರ್ಹರೋ ಎಂಬುದನ್ನು ಪೋರ್ಚುಗೀಸರೇ ನಿರ್ಧರಿಸಬೇಕು.

ಅವಹೇಳನ ಅಥವಾ ಅವಜ್ಞೆಗಳಿಂದ ಇತಿಹಾಸ ಮರೆಯಾಗುವುದಿಲ್ಲ. ಭಾರತದ ಒಂದು ರಾಜ್ಯ ಕಾಶ್ಮೀರದ ಮೇಲಣ ಆಸೆಯನ್ನು ಪಾಕಿಸ್ತಾನಿ ಸರ್ವಾಧಿಕಾರಿಗಳು, ಗೋವೆಯ ಮೇಲಿನ ಮೋಹವನ್ನು ಪೋರ್ಚುಗೀಸ ದೊರೆಗಳು ಕಳೆದುಕೊಳ್ಳದಿರುವುದು ಇತಿಹಾಸಕ್ಕೆ ಅವರು ನೀಡುತ್ತಿರುವ ಆಹ್ವಾನ. ಸಾಗುವ ಆನೆಯನ್ನು ಕಂಡು ನಾಯಿ ಬೊಗಳಿದರೇನು? ಇತಿಹಾಸದ ಹಾಳೆಗಳು ತನಗೆ ತಾನಾಗಿಯೇ ಪಲ್ಲಟವಾಗುತ್ತಿವೆ. ಸೋಜಿಗವೆಂದರೆ, ತಮ್ಮ ರಾಷ್ಟ್ರದಲ್ಲಿ ಒಂದೇ ಒಂದು ಬಾರಿಯೂ ನೇರ ಚುನಾವಣೆ ನಡೆಸದ ಪಾಕಿಸ್ತಾನ ಕಾಶ್ಮೀರದಲ್ಲಿ ಜನಮತಗಣನೆಯನ್ನು ಬಯಸುತ್ತದೆ. (ಕಾಶ್ಮೀರವು ಭಾರತದ ಒಂದು ರಾಜ್ಯವಾದುದರಿಂದ ಅದು ಭಾರತದಲ್ಲಿ ಉಳಿಯಬೇಕೇ ಬೇಡವೇ ಎಂಬ ಪ್ರಶ್ನೆಯೇ ಉದ್ಭೂತವಾಗುವುದಿಲ್ಲ—ಇದನ್ನು ತಿಳಿದುಕೊಳ್ಳುವಷ್ಟು ವಿವೇಕ ಅಸೆ ಬುರುಕ ನರಿಗಳಿಗಿಲ್ಲ.) ಆಫ್ರಿಕೆಯ ಮೊಜಾಂಬಿಕ್—ಅಂಗೋಲಾಗಳಲ್ಲಿ ವಸಾಹತು ಶಾಹಿಯ ದಬ್ಬಾಳಿಕೆಯಿಂದ ಹೊರಬೀಳಲು ಹಾತೊರೆಯುತ್ತಿರುವ ಪ್ರಜಾಜನರ ನೆರವಿಗೆ ಸಂಯುಕ್ತ ರಾಷ್ಟ್ರ ಸಂಘವು ಹೋಗಬೇಕಾದೀತು. ಏಕೆಂದರೆ, ಸಂ. ರಾ. ಸಂಘದ ಎಲ್ಲ ಮನವಿಗಳನ್ನೂ ಕಿಳಗಿರಿಗೇರಿದ ಮಿಹಾಕಿವುದರಲ್ಲಿ ಸಾಲಜಾರ ದೊರೆ ಅಗ್ರಗಣ್ಯ: ದಕ್ಷಿಣ ಆಫ್ರಿಕೆ ಪೋರ್ಚುಗಲ್ಲದ ತಮ್ಮ ಇತಿಹಾಸವನ್ನು ಇನ್ನಾದರೂ ಒಪ್ಪಿ ಸತ್ಯದ ಮುಂದೆ ತಲೆ ಬಾಗುವುದನ್ನು ಜಗತ್ತು ಎಷ್ಟು ಬೇಗ ಕಲಿತುಕೊಳ್ಳುತ್ತದೆಯೋ ಅಷ್ಟು ಬೇಗ ಜಾಗತಿಕ ಶಾಂತಿ ಸ್ಥಾಪನೆಯಾಗುವುದು.

ಹೊಸ ಹಾಡಿಗೆ ನಾಂದಿ

ಭಾರತದ ವಿದೇಶಮಂತ್ರಿ ಛಗಲಾರವರು ಆಗ್ನೇಯ ಏಶ್ಯಾದ ಕೆಲವು ರಾಷ್ಟ್ರಗಳಲ್ಲಿ ಸದಿಚ್ಛಾ ಸಂಚಾರವನ್ನು ಕೈಕೊಂಡು ಮರಳಿ ಬಂದರು. ಇವರು ಸಂಚರಿಸಿದ ದೇಶಗಳಲ್ಲಿ ಇತ್ತೀಚೆಗೆ ಪರಿವರ್ತನಾತ್ಮಕ ಘಟನೆಗಳಿಗೆ ಗುರಿಯಾದ ಇಂಡೋನೇಶ್ಯವೂ ಒಂದು. ಅಲ್ಲಿನ ಅಧ್ಯಕ್ಷರಾಗಿದ್ದ ಸುಕರ್ಣರು ತನ್ನ ಜನಪ್ರಿಯತೆಯನ್ನು ದುರುಪಯೋಗ ಪಡಿಸಿ ಒಂದಲ್ಲ ಅನೇಕ ತಪ್ಪು ಹೆಜ್ಜೆಗಳನ್ನಿಟ್ಟಿದ್ದರು. ಮುಂದಲ್ಲಿ ಕ್ರಾಂತಿಯೊದ್ದು ಇಂದು ಸುಕರ್ಣರು ನಾಮಮಾತ್ರಕ್ಕೆ ಅಧ್ಯಕ್ಷರಾಗಿರುವರಾದರೂ ಗದ್ದುಗೆಯಿಂದ ಇಳಿಯಬೇಕು ಎಂಬ ಬೇಡಿಕೆ ಅಲ್ಲಿದೆ. ಇಂಡೋನೇಶ್ಯವು ಹಿಂದೆ ಮಾಡಿದ್ದ, ಎರಡು ವರ್ಷಗಳಿಂದೀಚೆಗೆ, ಒಂದೊಂದೇ ಅಪರಾಧಗಳನ್ನು ಇಂದಿನ ಸರಕಾರವು ತೊಳೆದುಕೊಳ್ಳುತ್ತಿದೆ. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಮತ್ತೆ ಪಡೆಯಲು ಇಚ್ಛಿಸಿದುದರಿಂದ ಇದು ಆರಂಭವಾಯಿತು. ಇದೀಗ ಹೊರಟ ಹೇಳಿಕೆಯಂತೆ ಪಾಕಿಸ್ತಾನದೊಂದಿಗಿರುವ ಸೈನಿಕ ಒಡಂಬಡಿಕೆಯನ್ನು ಇಂಡೋನೇಶ್ಯಾ ರದ್ದು ಮಾಡಿದೆ. ಭಾರತ—ಪಾಕಿಸ್ತಾನ ಹೋರಾಟದ ವೇಳೆ ಪಾಕಿಸ್ತಾನಕ್ಕೆ ಸೈನಿಕ ನೆರವು ನೀಡುವುದರಲ್ಲಿ ಮುಂದಾದವರು ಇರಾಣದ ಶಹ ಮತ್ತು ಇಂಡೋನೇಶ್ಯಾದ ಸುಕರ್ಣರು ಗಣನೀಯರು ಎಂಬುದನ್ನು ನಾವು ಮರೆಯುವಂತಿಲ್ಲ. ಬಾಡುಂಗ ಸ್ಫೂರ್ತಿಯ ನೆಲೆ ಇಂಡೋನೇಶ್ಯಾದೊಡನೆ ಭಾರತದ ಸಂಬಂಧ ಮಧ್ಯಾವಧಿಯಲ್ಲಿ ಕೆಟ್ಟು ಹೋದರೂ ಮುಂದೆ ಅದು ಸರಿಯಾಗುವುದೆಂದು ಆಶಿಸಬಹುದು.

ವಚನ ಸುಧೆ

ನ ವೃದ್ಧಿರ್ಬಹು ಮಂತವ್ಯಾ
ಯಾ ವೃದ್ಧಿ: ಕ್ಷಯಮಾವಹೇತ್
ಕ್ಷಯೋಽಪಿ ಬಹು ಮಂತವ್ಯೋ
ಯ: ಕ್ಷಯೋ ವೃದ್ಧಿಮಾವಹೇತ್||

ಭವಿಷ್ಯದಲ್ಲಿ ನಾಶಕ್ಕೆ ಕಾರಣವಾಗಬಹುದಾದ ವರ್ತಮಾನದ ವೃದ್ಧಿಯತ್ತ ಅಧಿಕ ಮಹತ್ವ ನೀಡಬಾರದು. ಮುಂದೆ ಅಭ್ಯುದಯಕಾರಣವಾಗಬಲ್ಲ ಇಂದಿನ ಕ್ಷಯವನ್ನಾದರೂ ಹೆಚ್ಚಾಗಿ ಆದರಿಸಬೇಕು.

ಚಂದಾದಾರರಲ್ಲಿ ವಿನಂತಿ

ಇನ್ನೂ ತಮ್ಮ ಬಾಕಿ ಚಂದಾಹಣವನ್ನು ಕಳುಹಿಸದ ನಮ್ಮ ಚಂದಾದಾರ ಬಂಧುಗಳು ದಯಮಾಡಿ ಅದನ್ನು ಬೇಗನೆ ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ.

ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದರೆ ನಾವು ಅನಿವಾರ್ಯವಾಗಿ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ.

ಸರಸಣ್ಣನ ಸರಸ

"ಬಡತನ ನಿವಾರಣೆಯನ್ನೇ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಗುರಿಯನ್ನಾಗಿ ಸಾರುವಾಗ ಬಡತನ ಸಂಪಾದನೆಯನ್ನೇ ನೀವೇಕೆ ಗುರಿಯೆಂದು ಸಾರಬಾರದು?—ಸತ್ಯಕ್ಕೆ ಸಿಕ್ಕ, ಹೊಸತಿಗೆ ಹೊಸತು...."

ಶ್ರೀಕರ

ಗೃಹ ರಾಜ್ಯದಲ್ಲಿ

ಗಂಟಲಲ್ಲಿ ಸುರುವಿದ ಬಿಸಿತುಪ್ಪ

"ಏನಂತೆ, ದೇವಿಯವರು ಗಾಢ ಚಿಂತಾಪರರಾದಂತೆ ದೃಷ್ಟಿಗೋಚರವಾಗುತ್ತಿದೆ.'

'. ... ."

"ಏನು ಶೀರ ಮೈಮರೆತು ಬಿಟ್ಟಿರಾ?"

"ಹ್ಞಾಂ . ಯಾರು? ಓ ನೀವಾ...'

"ಅಲ್ಲಾ, ಬಂದು ಕೂಗಿ ಕೂಗಿ ಸಾಕಾಗಿ ಹೋಯ್ತು. ಮತ್ತೂ ಯಾರು ನೀವಾ ಅಂತರಾಗವೆಳೆದ ಮಾತ್ರಕ್ಕೆ ಅರಿದ ಗಂಟಲು ತಣಿಯುತ್ತೇನು?'

'ಅಲ್ರಿ, ಏನೋ ಆಲೋಚನ ಮಾಡ್ತಾ ಇದ್ದೆ. ನೀವು ಬಂದದ್ದು ತಿಳಿಯಲಿಲ್ಲ.'

"ನೋಡು, ಹಿಂದಿನ ಕಾಲದಲ್ಲಿ ತಪಸ್ವಿಗಳು ತಪಸ್ಸು ಮಾಡುತಿದ್ದರಂತೆ, ಆದಕ್ಕಾಗಿ ಸಮಾಧಿಸ್ಥರಾಗುತಿದ್ದರಂತೆ. ಆದರೇನು? ಸುಂದರ ಹೆಣ್ಣು ಮುಂದೆ ಬಂದೊಡನೆಯೇ ತಮ್ಮ ಸಮಾಧಿಗೆ ಬುದ್ಧಿ ಹೇಳುತಿದ್ದರಂತೆ.."

"ಅಲ್ವೆ ಮತ್ತೆ? ನಿಮ್ಮ ವಿಶ್ವಾಮಿತ್ರರೂ ಇದ್ದೇನು? ಮೇನಕೆ ಬಂದದ್ದೆ ತಡ, ಅವರಿಗೆ ಗಾಯತ್ರಿ ದೇವಿಯ ಧ್ಯಾನವೇ ಮರೆತು ಹೋಯಿತು..."

'ಮತ್ತೆ ನೀವು ಹೆಂಗಸ್ರು ಇರುವುದೂ ಅದಕ್ಕೇ ತಾನೆ?"

"ಯಾವುದಕ್ಕೆ?'

"ಗಂಡಸ್ರು ಏನಾದ್ರೂ ಶಿವ ಪೂಜೆಗೆ ತೊಡಗಿದ್ರೆ ಕರಡಿ ಬಿಡುವುದಕ್ಕೆ..."

'ಆಹಹ....ಏನ್ರೀ ಇದು ಮಾತು? ಐದೂವರೆ ಅಡಿ ಎತ್ತರದ ಒಬ್ಬ ಹುಡುಗಿಯನ್ನು ಕಂಡೊಡನೆಯೇ ತನ್ನ ಕೆಲಸ ಬಿಟ್ಟು ಅಕೆಯ ಹಿಂದೆ ಓಡಿ ಬರೋ ಹುಡುಗರು ಮೂರ್ಖರಲ್ಲ, ನಾವು ಮಾತ್ರ..'

"ನಿಮ್ಮಲ್ಲಿ ಅಂತಹ ಆಕರ್ಷಣೆಯಿಟ್ಟಂತಹ ದೇವ್ರದ್ದೇ ತಪ್ಪು ಅಲ್ಲವೆ?'

"ನಿಮ್ಮಲ್ಲಿ ಇಲ್ಲ ಅಲ್ವೆ? ಪುಷ್ಪದಲ್ಲಿ ಪರಾಗವಿದೆ, ಭ್ರಮರಕ್ಕೆ ಅದರ ಸವಿಬೇಕಾಗುತ್ತದೆ. ಭ್ರಮರ ಪುಷ್ಪದ ಬಳಿ ಹಾರಿದರೆ, ಪುಷ್ಪ ತನ್ನ ಸುಗಂಧದಿಂದ ಅದನ್ನು ಕರೆದು ಸ್ವಾಗತಿಸಿದರೆ, ಅಪರಾಧವೇನು ಬಂತು?'

'ಸರೀನ್ನು, ಅದು ಪ್ರಕೃತಿ ನಿಯಮ? 'ಮತ್ತೆ ನಮ್ಮನ್ನು ಅವಹೇಳನ ಮಾಡುತ್ತಿರಲ್ಲಾ ..?'

'ಏನು ಅವಹೇಳನ ಬಂತೆ? ಸಮಾಧಿಸ್ಥ ವ್ರತಿಗಿಂತಲೂ ಗಾಢವಾದ...'

"ಆದಿರಲಿ....ಬನ್ನಿ..ಕಾಫಿ ಇಡಲಾ?

'ಬೇಡ ಬೇಡ, ಮೊತ್ತ ಮೊದಲು ಒಂದು ಲೋಟ ನೀರು...'

'ಶರಬತ್ತು...."

'ಹ್ಞಾಂ ..ಅದೂ ಆಗ ಬಹುದೂನ್ನು'

'ತಾಳಿ....ಒಂದು ನಿಮಿಷ ..."

'ಏ . .. ."

"ಬಂದೇ...."

"ಎಲ್ಲಿ?"

ಇಲ್ಲಿ...'

'ನಿನ್ನ ಶರಬತ್ತು ಬರುವಾಗ ದೊಂಡೆ ಕರಟಿ ಹೋಗುತ್ತೆ "

'ಬಂದೇಂದೆನಲ್ಲಾ. . ಇಗೊಳ್ಳಿ .."

"ಭಾರಿ ಸವಿಯಾಗಿದೆ ಕಣೆ?"

'ಏನು?"

"ಒಂದರ ಮೇಲೊಂದು ಭಾರೀ ಸುದ್ದಿಗಳು .."

"ಏನಂತೆ?"

"ರಾಜ್ಯ ಸರಕಾರಿ ನೌಕರರಿಗೆ ಕೇಂದ್ರದವರಷ್ಟೆ ತುಟ್ಟಿ ಭತ್ತೆ ನೀಡುತ್ತದಂತೆ ಸರಕಾರ...'

"ಸದ್ಯ ಅಷ್ಟಾದ್ರೂ ಬಂತಲ್ಲಾ ...'

'ತಮಾಷೆ ಅದಲ್ಲವೆ...."

"ಮತ್ತೆ?'

"ಬೇಡಿಕೆ ಮುಂದಿಟ್ಟದ್ದು, ಸಂಪು ಮಾಡಿದ್ದು, ಬೊಂಬಡಿ ಬಾರಿಸಿದ್ದು, ಇನ್ನು ಸರಕಾರದ ನೋಟೀಸುಗಳಿಗೆ ಉತ್ತರಿಸುವುದು ಪಾಡು ಪಡುವವ್ರು ಎಲ್ಲಾ ಎನ್‌ಜಿ ವೊಗಳು ಇದರ ಲಾಭವನ್ನು ಅತ್ಯಧಿಕವಾಗಿ ಪಡೆದು ಕೊಳ್ಳುವವರು ಜಿ ವೊಗಳು...."

"ಅಂದರೆ?"

"ಅಂದರೆ ಇಂದು ೯೦ಕ್ಕಿಂತ ಕಡಿಮೆ ವೇತನ ಪಡೆಯುವವರು ೯ ರೂಪಾಯಿ ಹೆಚ್ಚು ಪಡೆದರೆ, ರೂ. ೬೦೦ ವೇತನ ಪಡೆಯುವವರು ರೂ. ೩೦೮ ಹೆಚ್ಚಳ ಹೊಂದುತ್ತಾರೆ. ಇನ್ನು ರೂ. ೧೦೦೦ದವರು ರೂ. ೧೦೦."

"ಏನಾಯ್ತು? ಇದೂ ಸರೀನ್ನಿ. ಸಾಮಾನ್ಯವಾಗಿ ಹತ್ತಕ್ಕೆ ಒಂದು ರೂಪಾಯಿ ಹೆಚ್ಚಿದಂತಾಯ್ತು...."

'ಅದು ಸರಿಯೇ. ಹತ್ತು ಪೈಸೆ ತಿಂಡಿಗೆ ಹದಿಮೂರು ಪೈಸೆ ಮಾಡಿ ತಿಂಗಳು ಆರಾಯ್ತು...."

'ಅದು ಬಿಡಿ. ಮತ್ತೇನಂತೆ?"

'ಮತ್ತೆ? ನಮ್ಮ ಶಿವರಾಯರಿಗೆ ರಾಷ್ಟ್ರಪತಿಗಳು ಪದ್ಮಭೂಷಣ ಪ್ರಶಸ್ತಿ ನೀಡಿದರಂತೆ...'

"ಯಾವ ಶಿವರಾಯರೊಂದ್ರೆ?"

"ಅವ್ರೆ...ಬೆನೆಗಲ್ ಶಿವರಾಯರು....ಮಾಜಿ ಎಂ. ಪಿ.ಗಳು. ಪ್ರಸಿದ್ಧ ಪತ್ರಿಕೋದ್ಯಮಿಗಳು...."

"ಓ, ತಿಳಿಯಿತು ತಿಳಿಯಿತು. ಹ್ಞಾಂ ಮತ್ತೆ ಏನಂತೆ?'

'ಇನ್ನು ನೋಡು, ರಾಷ್ಟ್ರಪತಿಗಳು ದೇಶವಾಸಿಗಳಿಗೆ ನೀಡಿದ ಸಂದೇಶ ಕೇಳಿದ್ದಿಯಲ್ಲಾ...'

'ಕೇಳದೆ ಉಂಟೆ? ಇಂದಿನ ಸಮಯಕ್ಕೆ ತಕ್ಕ ಎಚ್ಚರಿಕೆಯನ್ನೇ ಅವರು ನೀಡಿದ್ದಾರೆ."

'ದೇಶದಲ್ಲಿ ಅಸಭ್ಯ ವರ್ತನೆ, ಉಪವಾಸ ಮತ್ತು ಹಿಂಸೆ ಕೊನೆಗೊಳ್ಳದಿದ್ದರೆ, ಕ್ರಾಂತಿಯೇಳುವುದು ಅನಿವಾರ್ಯವಾಗ

(ಹದಿಮೂರನೇ ಪುಟ ನೋಡಿರಿ)

ಪುತ್ತೂರು II nd A ಮುನ್ಸಿಫ್ ಕೋರ್ಟಿನಲ್ಲಿ

R. E. P. 536/1966.

O. S. 177/65.

ಕುಮಾರಿ ಲೂಸಿ ಡಿ ಸೋಜ — Petitioner.

ಭವಾನಿ ಹೆಂಗ್ಸು ಕೂಡಾ — Respondents.

೭ನೇ ಎದ್ರಿ ವಿಷ್ಣು ಭಟ್ಟ, ಕುಂಟಿಕಾನ ಮಹಾದೇವ ಭಟ್ರ ಮಗ, ಕಾಸ್ರಗೋಡು ತಾಲ್ಲೂಕು ಪಟ್ರೆ ಗ್ರಾಮದ ಪಂಚಿಕಲ್ಲು ನೇಜಿಕಾರು ಎಂಬಲ್ಲಿ.

ಸದ್ರಿ ೭ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲಿನ ಅರ್ಜಿದಾರಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿರುತ್ತಾಳೆ. ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1967ನೇ ಇಸ್ವಿ ಫೆಬ್ರವರಿ ತಿಂಗಳು 7ನೇ ತಾರೀಖು ನಿಶ್ಚೈಸೋಣವಾಗಿಯದೆಯೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

[ಕೋರ್ಟ್ ಹುಕುಂ ಪ್ರಕಾರ]

P. A Ariga.
Advocate for petitioner.

Puttur, 11—1—1967.



ಕೇರಳದ ಹೆವಿ ಇಲೆಕ್ಟ್ರಿಕಲ್ಸ್

ಸ್ಥಾಪನೆಗೆ ಸಹಕಾರ ನೀಡಿದ

ಜಪಾನಿನ "ಹಿತಾಚಿ"

ಸಂಗ್ರಹ:—ಶ್ರೀ ಎಚ್. ಎಂ. ಎನ್. ಭಟ್.

ಕೇರಳದಲ್ಲಿ ಅಂಗಮಾಲಿ ರೇಲ್ವೆ ನಿಲ್ದಾಣದ ಬಳಿ ಟ್ರಾನ್ಸ್‌ಫೋರ್ಮರ್ ಮತ್ತು ಇಲೆಕ್ಟ್ರಿಕಲ್ ಕಂಪೆನಿ ಎಂಬ ಒಂದು ಬೋರ್ಡ್ ಆ ದಾರಿಯಾಗಿ ಹೋಗುವವರನ್ನು ಆಕರ್ಷಿಸದಿರದು. ಜಪಾನಿನ ಒಂದು ಪ್ರಸಿದ್ಧ ಸಂಸ್ಥೆ ಹಿತಾಚಿ (Hitachi)ಯ ಸಾಂಪತ್ತಿಕ ಮತ್ತು ಸಾಂಕೇತಿಕ ಸಹಕಾರದಿಂದ ಘನ ವಿದ್ಯುತ್ ಸಾಧನಗಳನ್ನು ಉತ್ಪಾದಿಸಲಿರುವ ಸಂಸ್ಥೆಯೇ 'ಕೇರಳ ಹೆವಿ ಇಲೆಕ್ಟ್ರಿಕಲ್ಸ್". ಭಾರತದಲ್ಲಿನ ಮೂರು ಘನ ವಿದ್ಯುತ್ ಕೈಗಾರಿಕಾ ಕೇಂದ್ರಗಳ ಪೈಕಿ ಇದು ಒಂದಾಗಿದೆ. ಭೋಪಾಲದಲ್ಲಿನ ಬ್ರಿಟನ್ನಿನ ಎಸೋಸಿಯೇಟೆಡ್ ಇಲೆಕ್ಟ್ರಿಕಲ್ ಇಂಡಸ್ಟ್ರೀಸ್‌ನ ಸಹಕಾರದಿಂದ ಸ್ಥಾಪಿಸಲಾದ ಮತ್ತು ಹೃಷೀಕೇಶದ ಬಳಿ ರಷ್ಯನ್ ಸಹಕಾರದಿಂದ ಸ್ಥಾಪಿಸಲಾದ ಜಲವಿದ್ಯುತ್ ಯಂತ್ರೋತ್ಪಾದನಾ ಕೇಂದ್ರ— ಹೀಗೆ ಬೇರೆ ಎರಡು ಸಂಸ್ಥೆಗಳಿವೆ.

ಮೂರನೇ ಸಂಸ್ಥೆಯು ಎರಡು ವಿಭಾಗಗಳಾಗಿ ಸ್ಥಾಪಿಸಲ್ಪಟ್ಟಿದೆ ತಿರುಚಿರಪಳ್ಳಿ ವಿಭಾಗದಲ್ಲಿ ಬೋಯ್ಲರ್ ನಿರ್ಮಾಣವೂ ಹೈದರಾಬಾದು ವಿಭಾಗದಲ್ಲಿ ಥರ್ಮಲ್ ಸ್ಟೇಶನ್‌ಗಳಿಗೆ ಅಗತ್ಯ ಬೇಕುವ ಟರ್ಬೈನುಗಳನ್ನೂ ಜನರೇಟರ್‌ಗಳನ್ನೂ ನಿರ್ಮಿಸಲಾಗುತ್ತಿದೆ. ಈ ಎರಡೂ ವಿಭಾಗಗಳು ಜೆಕೊಸ್ಲೋವೇಕಿಯಾದ ಸಹಕಾರದಿಂದ ಸ್ಥಾಪಿಸಲ್ಪಟ್ಟವು. ಭೋಪಾಲ, ಹೃಷೀಕೇಶ, ಹೈದರಾಬಾದ್, ಮತ್ತು ತಿರುಚಿರಪಳ್ಳಿ, ಬೃಹತ್ ಕಾರ್ಖಾನೆಗಳೆಲ್ಲವನ್ನೂ ಕೇಂದ್ರ ಸರಕಾರದ ಆಡಳಿತೆಗೊಳಪಟ್ಟ "ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್" ಎಂದು ಕರೆಯಲಾಗುತ್ತಿದೆ.

ಅಂಗಮಾಲಿಯ ಕಾರ್ಖಾನೆಯಲ್ಲಿ ಕೇಂದ್ರದ ಭಂಡವಾಳವಿಲ್ಲ. ಕೇರಳ ಸರಕಾರ—ಹಿತಾಚಿ - ಖಾಸಗಿ ವಿಭಾಗಗಳು ಸಹಕರಿಸುವ ಕಂಪೆನಿಯದು.

ಹಿತಾಚಿಯ ಆರಂಭ

ಒಂದು ಮೈನಿಂಗ್ ಕಂಪೆನಿಯ ವರ್ಕ್ ಶಾಪ್ ಆಗಿ ಪ್ರಾರಂಭಿಸಲ್ಪಟ್ಟು ೧೯೧೦ರಲ್ಲಿ ಅದರ ಸ್ಥಾಪಕನಾದ ಒಡಾಯಿರಾ [N. ODIRA] ಅದನ್ನು ಪ್ರತ್ಯೇಕಿಸಿ ೧೯೨೦ರಲ್ಲಿ ಅದು ಒಂದು ಲಿಮಿಟೆಡ್ ಕಂಪೆನಿಯಾಯಿತು. ಅಂದು ಅದರ ಮೂಲಧನ ರೂ. ೨೫೦ ಲಕ್ಷವಾಗಿತ್ತು.

ದ್ವಿತೀಯ ಮಹಾಯುದ್ಧವು ಈ ಕಂಪೆನಿಯನ್ನು ಬಾಧಿಸಿತ್ತಾದರೂ ಆ ನಂತರದ ... ಗೆ ಈ ಕಂಪೆನಿಯು ಮಟ್ಟಿಗೆ ಅದ್ಭುತಕರವೆನ್ನಲಡ್ಡಿಯಿಲ್ಲ. ೧೯೬೩ರಲ್ಲಿ ಈ ಕಂಪೆನಿಯ ಮೂಲಧನ ರೂ. ೧೧೦ ಕೋಟಿ. ಕಂಪೆನಿಗೆ ಈಗ ರೂ. ೬೦೦೦ ಕೋಟಿಗೂ ಮಿಕ್ಕಿ ಸೊತ್ತುಗಳಿವೆಯಂತೆ ೨೦ ಕಾರ್ಖಾನೆಗಳೂ ಕೆಲವು ಪ್ರಯೋಗ ಶಾಲೆಗಳೂ ಒಂಬತ್ತು ಮಿಕ್ಕಿ 'ಸಬ್ಸಿಡಿಯರಿ" ಕಂಪೆನಿಗಳು!

ದ್ವಿತೀಯ ಮಹಾ ಯುದ್ಧದ ವೇಳೆ ಈ ಕಂಪೆನಿಯ ಮೇಲೆ ಸುಮಾರು ೬೦೦ ಬಾಂಬುಗಳು ಬಿದ್ದಿದ್ದವೆನ್ನಲಾಗಿದೆ. ಅದೇ ಹಿತಾಚಿ ಗ್ರಾಮದ ಹೆಸರು ಈ ಕಂಪೆನಿಯದು.

ವಿದ್ಯುತ್ ಉತ್ಪಾದನಾ ಯಂತ್ರೋಪಕರಣಗಳು, ರೇಲ್ವೆ ರೋಲಿಂಗ್ ಸ್ಟೋಕ್ ಕೈಗಾರಿಕಾ ಯಂತ್ರಗಳು, ಟ್ರಾನ್ಸಿಸ್ಟರ್ ಟ್ಯೂಬ್‌ಗಳು, ಟೆಲಿವಿಶನ್ ಯಂತ್ರಗಳು, ಮುಂತಾದವುಗಳೆಲ್ಲವೂ 'ಹಿತಾಚಿ'ಯಲ್ಲಿ ನಿರ್ಮಿಸಲಾಗುತ್ತಿವೆ

೧೯೬೨ನೇ ವರ್ಷದ ಪೂರ್ವಾರ್ಧದಲ್ಲಿ ರೂ. ೨೩ ಕೋಟಿಯ ವ್ಯವಹಾರ ನಡೆಸಿದ ಈ ಕಂಪೆನಿಗೆ ಅದೇ ಅವಧಿಯಲ್ಲಿ ರೂ. ೧೮ ಕೋಟಿ ಲಾಭವಾಗಿತ್ತೆನ್ನಲಾಗಿದೆ.

ಈ ಕಂಪೆನಿಯ ಉದ್ಯೋಗಾರ್ಥಿಗಳಿಗಾಗಿ ವಿಶಿಷ್ಟ ವಿಧಾನದ ತರಬೇತಿ ಶಾಲೆಯಲ್ಲಿ ಪ್ರತಿ ವರ್ಷವೂ ೪೦೦೦ರಂತೆ ಮಂದಿ ತರಬೇತಿ ಹೊಂದುವರು. ಈ ತರಬೇತಿಗಾಗಿ ಆಯ್ಕೆ ಹೊಂದುವವರು ಇಂಜಿನಿಯರರು.

ಆಡಳಿತದಲ್ಲಿ ತರಬೇತಿ

ಆಡಳಿತೆ—ವ್ಯವಹಾರಗಳಿಗೆ ಸಂಬಂಧಿಸಿ ವಿಶಿಷ್ಟ ತರಬೇತಿ ನೀಡುವ ಬಗ್ಗೆ ಸ್ಥಾಪಿಸಲಾದ ಇನ್ಸ್‌ಟಿಟ್ಯೂಟ್‌ನಲ್ಲಿ ಸುಮಾರು ೩೦೦ ತಜ್ಞರು ತರಬೇತಿ ನೀಡುವರೆನ್ನಲಾಗಿದೆ.

ಯೋಗ್ಯ ಸಿಬಂದಿಯ ಆಯ್ಕೆ, ವಿಶಿಷ್ಟ ತರಬೇತಿ; ಉತ್ತಮ ಸೇವಾ ವ್ಯವಸ್ಥೆ ಮುಂತಾದವುಗಳೇ ಈ ಕಂಪೆನಿಯ ಬೆಳವಣಿಗೆಗೂ ಪ್ರಖ್ಯಾತಿಗೂ ಕಾರಣ.

ಜಪಾನಿನ ಸಂಸ್ಥೆಗಳು ಸಾಮಾನ್ಯವಾಗಿ ವಿದೇಶಗಳಲ್ಲಿ ಭಂಡವಾಳ ನಿಕ್ಷೇಪಿಸುವುದಿಲ್ಲ. ಆದರೆ ಹಿತಾಚಿಯ ಧೋರಣೆ

(ಹನ್ನೆರಡನೇ ಪುಟ ನೋಡಿರಿ)



ಪ್ರೊ| ಪಿ. ಗುರುರಾಜ ಭಟ್ಟ

ತುಳುನಾಡಿನ ದೇವಾಲಯಗಳ ಸಂಕ್ಷಿಪ್ತ ಐತಿಹಾಸಿಕ ಪರಿಚಯ

(An Introduction to the Systematic Study of Temple Architecture of Tulunad)

●

ತುಳುನಾಡು ದೇವದೇವಿಯರ ಗುಡಿಗಳ ಬೀಡು. ಇವುಗಳಲ್ಲಿ ಪ್ರಾಚೀನತೆ—ನವೀನತೆಗಳ ಜಿಂಗಡಣೆ ಮಾಡಿ ಐತಿಹಾಸಿಕ ದೃಷ್ಟಿಕೋಣದಿಂದ ಸಂಶೋಧನೆ ನಡೆಸಿದರೆ, ಮೊಸರಿಂದ ಬೆಣ್ಣೆ ಕಡೆದಂತಾಗುತ್ತದೆ. ತುಳುನಾಡಿನ ಇತಿಹಾಸದ ಅಧ್ಯಯನದಲ್ಲೇ ಹಲವು ವರ್ಷಗಳಿಂದ ನಿರತರಾದ ಪ್ರೊ| ಭಟ್ಟರು ಇಲ್ಲಿ ಈ ಬಗೆಯ ಅಧ್ಯಯನಕ್ಕೆ ಪಂಚಾಂಗ ಹಾಕಿದ್ದಾರೆ.

ಇತಿಹಾಸವೆಂಬ ಪದವು ಭಾರತೀಯ ಸಂಸ್ಕೃತಿಯಲ್ಲಿ ಸುಮಾರು 3000 ವರ್ಷಗಳಷ್ಟು ಪ್ರಾಚೀನವಾಗಿದೆ. "ಬ್ರಾಹ್ಮಣಾನೀತಿಹಾಸಾನ್ ಪುರಾಣಾನಿ ಕಲ್ಪಾನ್ ಗಾಥಾನಾರಾಶಂಸೀರಿತಿ" (ಬ್ರಾಹ್ಮಣ ಮತ್ತು ಸೂತ್ರ) ಅಂದರೆ ಐತರೇಯ, ಶತಪಥ, ಸಾಮ ಮತ್ತು ಗೋಪಥವೆಂಬ ನಾಲ್ಕು ಬ್ರಾಹ್ಮಣ ಗ್ರಂಥಗಳು ಇತಿಹಾಸ, ಪುರಾಣ, ಕಲ್ಪ ಮತ್ತು ನಾರಾಶಂಸೀ ಎಂಬ ಹೆಸರುಗಳನ್ನಿರುತ್ತವೆ. ಆದರೆ ಯಾವುದು ಭೂತಕಾಲದಲ್ಲಿ ಘಟನಾತ್ಮಕವಾಗಿ ಆಗಿಹೋಗಿದೆಯೋ ಅದನ್ನೇ ನಾವು ಈಗ ಇತಿಹಾಸವೆನ್ನುತ್ತೇವೆ.

ಇತಿಹಾಸಕ್ಕೆ ಎರಡು ಕಣ್ಣುಗಳು, ಭೂಗೋಲ ಮತ್ತು ಕಾಲಗಣನೆ (Geography and Chronology) ಇವೆರಡರಲ್ಲೂ ಕಾಲಗಣನೆ ಅತಿ ಮುಖ್ಯವಾಗಿದೆ. ಕಾರಣ ಇದಿಲ್ಲದೆ ಅಥವಾ ಇದನ್ನು ಕಡೆಗಣಿಸಿ ಬರೆದ ಇತಿಹಾಸವು ಹಾಸ್ಯಾಸ್ಪದವೇ ಆದೀತು. ಹೊರತು ಚರಿತ್ರೆಯಾಗಲಾರದು. ಕಾಲಮಾನದ ಸಹಾಯದಿಂದ ಆಗಿ ಹೋದ ಘಟನೆಗಳನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ಗುರುತಿಸಿ ಅವುಗಳ ಪರಿಚಯವನ್ನು ಮಾಡಿಕೊಂಡರೆ ಈ ಐತಿಹಾಸಿಕ ಘಟನೆಗಳು ಅರ್ಥಪೂರ್ಣವಾಗಿ ನಮ್ಮ ಜೀವನದ ಹಾಸುಹೊಕ್ಕಾಗಿ ಸಜೀವ ಜ್ಞಾನವಾಗಬಹುದು. ವ್ಯಕ್ತಿಗೆ ಸ್ಮರಣೆ ಹೇಗೋ ಮಾನವನಿಗೆ ಇಂತಹ ಇತಿಹಾಸ (What is memory to man, History is to mankind)

ಚರಿತ್ರೆಯಲ್ಲಿ ರಾಜಕೀಯ, ಸಾಮಾಜಿಕ ಜ್ಞಾನ, ಆರ್ಥಿಕ ಸಂಜ್ಞಾನ, ನೀತಿಶಾಸ್ತ್ರ, ತತ್ವವಿಚಾರ ಹಾಗೂ ಧರ್ಮಶಾಸ್ತ್ರಗಳ ಪರಿಚಯವೂ ಆಗುತ್ತದೆ. ಧಾರ್ಮಿಕ ಭಾವನೆ ಮತ್ತು ಅಭಿಪ್ರಾಯಗಳ ಕಾಲ ಕಾಲದ ಬೆಳವಣಿಗೆಯ ಅಭ್ಯಾಸವು ಚರಿತ್ರೆಯ ಅಭ್ಯಾಸದ ಒಂದು ಪ್ರಧಾನ ಅಂಗವಾಗಿರುತ್ತದೆ. ಧರ್ಮ ವಿಚಾರದಲ್ಲಿ ದೇವಾಲಯಗಳ ಪರಿಚಯವು ಅಪ್ರಾಸಂಗಿಕವಾಗಲಾರದು. ಕಾರಣ ಯಾವುದೇ ಒಂದು ದೇವಾಲಯದ ನಿರ್ಮಾಣಕ್ಕೆ ಒಂದು ಕಾರಣವಿದೆ; ಒಂದು ಹಿನ್ನೆಲೆ ಇದೆ ಮತ್ತು ಅದಕ್ಕೆ ಒಂದು ಬೆಳವಣಿಗೆ ಇದೆ. ಮನುಷ್ಯನ ಆಗು ಹೋಗುಗಳಲ್ಲಿ ಕಂಡು ಬರುವ ಅಭ್ಯುದಯ ಮತ್ತು ಪತನ—ಈ ಎರಡರ ಎಂಳಿತಗಳು ದೇಗುಲಗಳಲ್ಲೂ ಕಂಡು ಬರುತ್ತವೆ. ಇದಕ್ಕೆ ಕಾರಣ ನಿರ್ಮಾಣ ಮಾಡಿದ ವ್ಯಕ್ತಿ ಅಥವಾ ಸಮಾಜ—ಇವುಗಳ ಆರ್ಥಿಕ ಸಾಮರ್ಥ್ಯವನ್ನು ಹೊಂದಿಕೊಂಡು ದೇವಾಲಯಗಳ ಏರಿಳಿತ. ಶಿಲ್ಪ ಬದಲಾವಣೆಯನ್ನು ಹೊಂದಿದ ಸಮಾಜದಲ್ಲಿ ದೇವಾಲಯಗಳ ರೂಪವೂ ವ್ಯತ್ಯಾಸ ಹೊಂದುವುದಿದೆ. ಅವುಗಳಲ್ಲಿ ನಡೆಯುವ ವಿನಿಯೋಗಾದಿಗಳು ವ್ಯತ್ಯಾಸವನ್ನು ಹೊಂದುವುದು ಕಂಡು ಬರುತ್ತದೆ. ದೇವಾಲಯಗಳಲ್ಲಿರುವ ದೇವತೆಗಳ ಹೆಸರುಗಳು ಸಹ ಬದಲಾಯಿಸಲ್ಪಡುತ್ತವೆ.

ತುಳುನಾಡಿನಲ್ಲಿ (ಈ ಲೇಖನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಮಿತಿಯನ್ನಷ್ಟೇ ಸ್ವೀಕರಿಸಿಕೊಂಡಿದ್ದೇ) ಸುಮಾರು 6—7 ನೇ ಶತಕಗಳಿಂದ ಆರಂಭವಾಗಿ 17 ನೇ ಶತಕದ ವರೆಗೆ ನಿರ್ಮಿತವಾದ ದೇವಾಲಯಗಳಿವೆ. ಕೆಲವು ಪ್ರಾಚೀನ ದೇವಾಲಯಗಳ ಕುರುಹುಗಳೂ ತೋರಿಬರುತ್ತವೆ. ಈ ಎಲ್ಲಾ ದೇವಾಲಯಗಳು ಶೈವಾಗಮ ರೀತಿ ನಿರ್ಮಾಣ ಮಾಡಲ್ಪಟ್ಟವುಗಳಾಗಿವೆ. ಆರಾಧನೆ ಮಾಡುವ ದೇವತೆಯನ್ನು ಅನುಸರಿಸಿ ಏಳು ತರನಾದ ದೇಗುಲಗಳಿವೆ. ಶಿವ (ಈಶ್ವರ), ವಿಷ್ಣು, ಶಕ್ತಿ (ದುರ್ಗಾ, ಅಂಬಿಕಾ), ಆದಿತ್ಯ (ಸೂರ್ಯ), ಗಣಪತಿ (ವಿಘ್ನೇಶ್ವರ), ಸುಬ್ರಹ್ಮಣ್ಯ (ಸ್ಕಂದ, ಕಾರ್ತಿಕೇಯ) ಶಂಕರ ನಾರಾಯಣ (ಹರಿಹರ) ಮತ್ತು ಶಾಸ್ತಾರ (ಹರಿಹರ ಪುತ್ರ)— ಈ ದೇವತೆಗಳಿಗೆ ಸಂಬಂಧಿಸಿದ ದೇವ ಗೃಹಗಳು. ಈ ದೇವತೆಗಳನ್ನು ಸ್ಥೂಲವಾಗಿ ಶೈವ ಸಂಬಂಧವಾದ ಮತ್ತು ವೈಷ್ಣವ ಸಂಬಂಧವಾದ ದೇವತೆಗಳೆಂದು ಎರಡು ರೀತಿಯ ವಿಭಾಗಗಳನ್ನು ಮಾಡಬಹುದು. ಇವುಗಳಲ್ಲಿ ಶೈವ ಸಂಬಂಧವಾದ ಎಂದರೆ ಶಿವ, ಶಕ್ತಿ, ಗಣಪತಿ, ಸುಬ್ರಹ್ಮಣ್ಯ, ಶಾಸ್ತಾರ ಮತ್ತು ಶಂಕರನಾರಾಯಣ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇದು ಶೈವ ಶಾಖೆಯ ಪ್ರಾಬಲ್ಯವನ್ನು ಸೂಚಿಸುತ್ತದೆ. ಆದರೆ ಸಂಖ್ಯೆಯಲ್ಲಿ ವಿಷ್ಣು ಸಂಬಂಧವಾದ ದೇವಗೃಹಗಳು ಕಡಿಮೆಯಾದರೂ ಹಲಕೆಲವು ಶ್ರೇಷ್ಠ ದೇವಾಲಯಗಳು ವೈಷ್ಣವ ಸಂಬಂಧಗಳಾಗಿವೆ. ತುಳುನಾಡಿನಲ್ಲಿ ಮಹಾದೇವನನ್ನು ಮಹಲಿಂಗ ದೇವ (ಮಹಾಲಿಂಗೇಶ್ವರ) ವೆಂಬ ಹೆಸರಿನಿಂದ ಸುಮಾರು ಕ್ರಿ.ಶ. 15ನೇ ಶತಮಾನದಿಂದ ಸಾರ್ವಜನಿಕವಾಗಿ ಕರೆಯುವ ಸಂಪ್ರದಾಯ ಬಳಕೆಗೆ ಬಂದಂತೆ ಕಂಡುಬರುವುದು. ವಿಷ್ಣುವನ್ನು ಮುಖ್ಯವಾಗಿ ಜನಾರ್ದನ ಮತ್ತು ಕೃಷ್ಣ (ಗೋಪೀನಾಥ)— ರೂಪಗಳಲ್ಲಿಯೂ ಅಪೂರ್ವವಾಗಿ ಅನಂತಪದ್ಮನಾಭ (ಪರವಾಸುದೇವ)ನ ರೂಪದಲ್ಲಿಯೂ ಆರಾಧನೆ ಮಾಡುತ್ತಾರೆ. ಪ್ರಸಿದ್ಧ ಬರಹಗಾರರಿಗೆ ತಿಳಿಯದಿದ್ದರೂ ನಮ್ಮ ನಾಡಿನಲ್ಲಿ ಮೂಲಸ್ಥಾನ ದೇವತೆಯಾಗಿರುವ ಏಳು ಸೂರ್ಯ ದೇವಾಲಯಗಳಿವೆ. ಸೂರ್ಯನನ್ನು ಶಿವಸೂರ್ಯನೆಂದೂ ಕರೆದುದುಂಟು. ದೇವಿಯ ಶಕ್ತಿಯ ಆರಾಧನೆಯು ಪ್ರಮುಖವಾಗಿ ಮಹಿಷಮರ್ದಿನಿ ಮತ್ತು ಮಹಿಷಾಸುರ ಮರ್ದಿನಿ ರೂಪದಲ್ಲಿ ಕಂಡು ಬರುತ್ತದೆ. ಕಾಳಿಯ ರೂಪದಲ್ಲಿ ಆರಾಧನೆಯು ವಿರಳವಾಗಿದೆ. ಮಾರಿಯಮ್ಮನ ಅರ್ಚನೆಯು ಬಹಳ ಪ್ರಾಚೀನವಾದುದಲ್ಲ. ಗಣಪತಿ ಮತ್ತು ಸುಬ್ರಹ್ಮಣ್ಯ ಆರಾಧನೆಯಲ್ಲಿ ವೈವಿಧ್ಯವೂ ಶ್ರೇಷ್ಠತೆಯೂ ಇದ್ದಂತೆ ಕಂಡು ಬರುತ್ತದೆ. ದೇವಿ ಮತ್ತು ಹರಿಹರ ದೇವತೆಗಳ ಅರ್ಚನೆಯು ಲಿಂಗದ ರೂಪದಲ್ಲಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ರಚನೆಯ ಕ್ರಮವನ್ನನುಸರಿಸಿ ಈ ದೇವಾಲಯಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

(1) ಗಜಪೃಷ್ಠ ಆಕಾರದ ದೇವಾಲಯಗಳು (apsidal).

(2) ಚತುರಶ್ರ ಆಕಾರದ ದೇವಾಲಯಗಳು (square).

(3) ದೀರ್ಘ ಚತುರಶ್ರ ಆಕಾರದ ದೇವಾಲಯಗಳು (rectangular).

4. ಮಂಡಲಾಕಾರದ ದೇವಾಲಯಗಳು (circular)

ಇವುಗಳಲ್ಲಿ ಎರಡನೇ ವರ್ಗದ ದೇವಾಲಯಗಳು ಬಹು ಸಂಖ್ಯೆಯಲ್ಲಿ ಕಂಡುಬರುತ್ತವೆ. ಮೂರನೇ ಮತ್ತು ನಾಲ್ಕನೇ ವರ್ಗದವು ವಿರಳ. ಗಜಪೃಷ್ಠಾಕಾರದ ದೇವಗೃಹಗಳು ಬಹಳ ಅಪೂರ್ವವೆಂದು ಸಾಮಾನ್ಯವಾಗಿ ತಿಳಿಯಲ್ಪಟ್ಟರೂ ನಮ್ಮ ನಾಡಿನಲ್ಲೇ 20—25 ದೇವಾಲಯಗಳು ಈ ವರ್ಗಕ್ಕೆ ಸೇರುತ್ತವೆ. ಯೋಗ್ಯವಾದ ಚಾರಿತ್ರಿಕ ಅನ್ವೇಷಣೆ ನಡೆಯದುದರಿಂದ ನಾವು ಜ್ಞಾನರಹಿತರಾಗಿದ್ದೇವೆ.

ಗಜಪೃಷ್ಠಾಕಾರದ ಎಂದರೆ ಆನೆಯ ಬೆನ್ನಿನಾಕಾರದ ದೇವಾಲಯಗಳು ಪ್ರಾಚೀನವೆನ್ನಬೇಕು. ಸುಮಾರು ಕ್ರಿ. ಶ. ಎರಡನೇ ಶತಕದಿಂದ ಕ್ರಿ. ಶ. 12ನೇ ಶತಮಾನದ ವರೆಗೆ ಕೆಲವು ಪ್ರಾಮುಖ್ಯ ದೇವಗೃಹಗಳು ಈ ರೀತಿಯಾಗಿ ನಿರ್ಮಿಸಲ್ಪಟ್ಟವು. ಈ ಶೈಲಿಯನ್ನು ಬೌದ್ಧ ಗೃಹ ನಿರ್ಮಾಣ ಕ್ರಮದಿಂದ ನಾವು ಎರವಲಾಗಿ ಪಡೆದೆವೆಂದು ವಿದ್ವಾಂಸರು ಹೇಳುತ್ತಾರೆ. ಪರಿಶೀಲಿಸಿ ನೋಡಿದರೆ ಶೈವ ಸಂಬಂಧವಾದ, ಅದರಲ್ಲೂ ಶಿವ ಮತ್ತು ಶಕ್ತಿ ದೇವಾಲಯಗಳು ಮಾತ್ರ ಗಜಪೃಷ್ಠಾಕಾರದಲ್ಲಿದ್ದುದು ತಿಳಿದು ಬರುತ್ತದೆ. ವೈಷ್ಣವ ಸಂಬಂಧಿಯಾದ ದೇವಾಲಯಗಳು ಈ ಕ್ರಮದಲ್ಲಿದ್ದುದು ಗೋಚರವಾಗುವುದಿಲ್ಲ.

ಉಡುಪಿ ಶ್ರೀ ಮಹಾದೇವ (ಅನಂತೇಶ್ವರ)ನ ದೇವಾಲಯ, ಬ್ರಹ್ಮಾವರದ ಮಹತೋಭಾರ ಮಹಾಲಿಂಗ ದೇವಾಲಯ, ಕೋಟದ ಹಿರಿಯ ದೇವಾಲಯ (ಈಶ್ವರ ದೇವಸ್ಥಾನ), ಬಾರಕೂರಿನ ಪಂಚಲಿಂಗೇಶ್ವರ ಯಾ ಮಾರ್ಕಂಡೇಶ್ವರ ದೇವಾಲಯ, ಪುತ್ತೂರಿನ ಮಹಾದೇವನ ದೇವಾಲಯ, ಕಾಸರಗೋಡು ಅಡೂರಿನ ಮಹಾದೇವನ ದೇವಾಲಯ, ಮಧೂರಿನ ಈಶ್ವರ ದೇವಾಲಯ (ಇಲ್ಲಿ ಶ್ರೀ ಗಣೇಶನು ಉಪಸ್ಥಾನ ದೇವತೆ) ಮತ್ತು ಮೂಡಬಿದರೆಯ ದುರ್ಗಾದೇವಿಯ ದೇವಾಲಯ ಹಾಗೂ ಸುರತ್ಕಲ್ಲಿನ ಸದಾಶಿವ ದೇವಾಲಯಗಳು ಗಜ ಪೃಷ್ಠಾಕಾರದ ದೇವಾಲಯಗಳಲ್ಲಿ ಶ್ರೇಷ್ಠವಾಗಿದ್ದು ಸುಮಾರು 8ನೇ ಶತಕದಿಂದ 10–11 ನೇ ಶತಕದ ಅವಧಿಯಲ್ಲಿ ನಿರ್ಮಿಸಲ್ಪಟ್ಟವುಗಳೆನ್ನಬಹುದು.

ಪ್ರಾಯಶಃ ನಮ್ಮ ತುಳುನಾಡಿನಲ್ಲೇ ಶ್ರೇಷ್ಠ ಚಾರಿತ್ರಿಕ ಸ್ಥಳವಾದ ಉಡುಪಿಯ ಸಮೀಪವಿರುವ ಉದಿಯಾವರದ (ಉದಯಪುರ) ಒಂದು ಬಂಡೆಯ ಮೇಲೆ ನಿರ್ಮಿಸಲ್ಪಟ್ಟ "ಶಂಭುಕಲ್ಲು" (ಸಮ್ಮು ಕಲ್ಲು, ಚಮ್ಮು ಕಲ್ಲು) ದೇವಾಲಯವು 6—7ನೇ ಶತಕದಷ್ಟು ಪ್ರಾಚೀನವಾಗಿದ್ದು ಗಜಪೃಷ್ಠಾಕಾರದಲ್ಲಿದ್ದ ಕುರುಹು ಕಂಡು ಬರುತ್ತದೆ. ಈ ದೇವಾಲಯವು ಈಗ ಸಂಪೂರ್ಣ ಜೀರ್ಣವಾಗಿ ಸೂರ್ಯ, ಚಂದ್ರರ ವಶವಿದೆ. ಇತ್ತಲಾಗೆ ನನಗೆ ದೊರಕಿದ ಎರಡು ಶಾಸನಗಳಲ್ಲಿ ಒಂದು 7—8ನೇ ಶತಕಕ್ಕೆ ಅನ್ವಯಿಸುವ ಬರಹ

(ಹನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 63 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವಿವೇಚನೆ

ಗೋವಿನ ಗೋಳು-ದೇಶದ ದುರದೃಷ್ಟ

ಬರೆದವರು: ಶ್ರೀ ಶಿವಶಂಕರ.

ತನ್ನ ಕರುವಿನ ಮೇಲೆ ರಾಜಕುಮಾರನು ರಥವನ್ನೋಡಿಸಿದಾಗ, ತಾಯಿ ದನವು ಚೋಳರಾಜನ ಬಳಿ ನ್ಯಾಯ ಕೇಳಿತು. ವಿಷಯವನ್ನು ತಿಳಿದುಕೊಂಡ ರಾಜನು ತನ್ನ ಮಗನ ಮೇಲೆಯೇ ತೇರನ್ನೋಡಿಸಿದನು. ನ್ಯಾಯ ಪಕ್ಷಪಾತಿ ಚೋಳರಾಜನನ್ನು—ಮನುನೀತಿ ಚೋಳನನ್ನು ಭಾರತವು ಅದರಲ್ಲೂ ತಮಿಳು ಪ್ರಾಂತ್ಯವು ಇನ್ನೂ ಮರತಿಲ್ಲ.

ಗೋನಾಶಕ ಮಹಮ್ಮದೀಯರನ್ನು ನಾಶಗೊಳಿಸಿ, ಗೋಮಾತೆಯ ಕಣ್ಣೀರನ್ನು ಒಜ್ಜುತ್ತೇನೆಂದು ಗುರುಗೋವಿಂದಸಿಂಘ ಖಡ್ಗಧಾರಿಗಳಾದರು.

ಗೋಪರಿಪಾಲನಾರ್ಥವಾಗಿ, ಗೋನಾಶಕ ಮಹಮ್ಮದೀಯರನ್ನು ಗೋರಿಗೆ ಕಳುಹಿಸಿ ಶಿವಾಜಿಯು ಛತ್ರಪತಿ ಶಿವಾಜಿ ಮಹಾರಾಜರಾದರು.

ತೋಟಿಗೆ ಬೇಕಾಗುವ ಕೊಬ್ಬಿಗಾಗಿ ಗೋವಂಶದ ನಾಶಗೈಯ್ಯುತ್ತಿರುವರೆಂಬ ಕಾರಣದಿಂದಾಗಿ ಆಂಗ್ಲೇಯರನ್ನು ಹೊಡೆದಟ್ಟಲು ಝಾನ್ಸಿರಾಣಿ ಲಕ್ಷ್ಮೀಬಾಯಿಯು ಕೆಣಕಿದ ಸಿಂಹಿಣಿಯಂತೆ ಸಿಡಿದೆದ್ದು ನಿಂತಳು.

ಸ್ವಾತಂತ್ರ್ಯಕ್ಕಿಂತಲೂ ಗೋವಧಾ ನಿಷೇಧ ಕಾನೂನು ಮುಖ್ಯ... ಸ್ವಾತಂತ್ರ್ಯ ಸಿಕ್ಕಿದ ಐದು ನಿಮಿಷಗಳಿಗೆನೇ ಗೋವಧಾ ನಿಷೇಧ ಕಾನೂನನ್ನು ತರುವದಾಗಿ ಸ್ವಾತಂತ್ರ್ಯ ಪೂರ್ವದ ನೇತಾರರು ನುಡಿದಿದ್ದರೂ ಸ್ವಾತಂತ್ರ್ಯದೇವಿಯೊಲಿದು ಇಪ್ಪತ್ತು ವರ್ಷಗಳಾಗುತ್ತ ಬಂದರೂ ಕಾನೂನು ಗೌರವ ಶಾಸನದಿಂದ ಹೊರಗೆ ಬಾರದಿರುವದನ್ನು ಕಂಡ ಸಂತ ಪ್ರಭುದತ್ತ ಬ್ರಹ್ಮಚಾರಿಯವರು ತನ್ನ ನಲ್ವತ್ತು ವರ್ಷಗಳ ಮೌನ ವ್ರತವನ್ನು ಮೂಲೆಗೊತ್ತಿ ದಿಲ್ಲಿ ಪ್ರಭುಗಳ ಬಳಿ ಗೋವಂಶಕ್ಕೆ ನ್ಯಾಯ ಸಿಗಬೇಕೆಂದು ಕೇಳಿಕೊಳ್ಳುತ್ತಿದ್ದಾರೆ.

ಗೋವರ್ಧನ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮೀಜೀಯವರು ಗೋವಿನ ಗೋಳು ಪರಿಹಾರವಾಗುವಂತೆ, ಗೋವರ್ಧನಗಿರಿಧರನು, ಗೋಪಾಲಕೃಷ್ಣನು, ವೇಣುಗೋಪಾಲನು, ಗೋವಿಂದನು ಸದ್ಬುದ್ಧಿಯನ್ನೀಯಲೆಂದು ಅವನ ಬಳಿಯೇ ನಿರಶನವ್ರತದ ಮೂಲಕ ಬೇಡಿಕೊಳ್ಳುತ್ತಿದ್ದಾರೆ.

ಪರಿಸ್ಥಿತಿ ಇಲ್ಲಿಯವರೆಗೆ ಬಂದಿದೆಯಾದರೂ ಗೋಹತ್ಯೆಯ ಘೋರಪಾಪವನ್ನು ಕಳೆದುಕೊಳ್ಳಲು ಬಲರಾಮನು ತೀರ್ಥಯಾತ್ರೆಗೆ ಹೋದಂತೆ, ಪ್ರಚಲಿತ ಆಸನಾಧೀಶರು ಹೋಗುವದಂತಿರಲಿ, ಇರುವ ಸ್ಥಳದಿಂದ ಅದಿನಿತೂ ಅಲುಗಾಡುವ ಲಕ್ಷಣವೂ ಕಂಡು ಬರುತ್ತಿಲ್ಲ.

ಇದು ಗೋವಿನ ಗೋಳು, ಅಂತೆಯೇ ದೇಶದ ದುರಾದೃಷ್ಟ.

ಇಂದು ಮನುವೂ ಇಲ್ಲ, ನೀತಿಯೂ ಇಲ್ಲ. ಇಂತಹ ನಾಲ್ಕು ಐದು ವರ್ಷಗಳು ಮುಗಿಯುತ್ತ ಬಂದರೂ ಅಂದು ಅಬ್ಬರಿಸಿರುವ ಪಕ್ಷದ ಅಧ್ವರ್ಯುಗಳೂ ನಾಲಾಯಕ್ಕು ರೀತಿಯಲ್ಲಿ ಇಂದು ವರ್ತಿಸುತ್ತಿದ್ದಾರೆ. ಸಂವಿಧಾನದಲ್ಲಿ ಗೋಹತ್ಯೆ ನಿಷೇಧದ ಸಂಬಂಧ ಉಲ್ಲೇಖವಿದೆಯಾದರೂ, ಉಲ್ಲೇಖ ಸಂವಿಧಾನದ ಮಟ್ಟಿಗೆನೇ ಸೀಮಿತವಾಗಿದೆ !

ಅಂದು ವ್ಯಾವಹಾರಿಕ ಭಾಷೆಯ ಸಂಬಂಧವಾಗಿ ವಿಷವಾಯು ಹರಡಿದಾಗ ಘಟನೆಯ ಕುರಿತು ಗಡಬಡಿಸಿರುವ ರಾಜ ಇಂದು ಗೋಹತ್ಯಾ ನಿಬಂಧದ ವಿಷಯದಲ್ಲಿ ಕಾಂಗ್ರೆಸ್ಸ್ ಪಕ್ಷದ ಅಧ್ಯಕ್ಷ ತಿರು ಕಾಮರಾಜ ಹಾಗೂ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧೀಜಿಯವರೊಳಗೆ ನವದೆಹಲಿಯಲ್ಲಿ ಮಾತುಕತೆ ನಡೆದಾಗ ತನ್ನ ಹೃದಯದ ಇಂಗಿತವನ್ನು ಸ್ಪಷ್ಟ ರೀತಿಯಲ್ಲಿ ಸೂಚಿಸಿದ್ದಾರೆ. ತನ್ನ ತಾಯಿ ರಾಜ್ಯದಲ್ಲಿ [ತಮಿಳು ನಾಡಿನಲ್ಲಿ] ಗೋಹತ್ಯಾ ನಿರ್ಬಂಧಕಾಜ್ಞೆಯನ್ನು ಅಮಲಿಗೆ ತರಲು ಸಾಧ್ಯವೇ ಇಲ್ಲವೆಂದು ತಿರು ಕಾಮರಾಜರವರು ಖಂಡಾತುಂಡಿತವಾಗಿ ಹೇಳಿದ್ದಾರೆ. ಆಡಳಿತಗಾರರ ಗಾಡಿಯಲ್ಲಿ ಇಂತಹ ದ್ವಂದ್ವ ನಡೆಯುತ್ತಿದನ್ನುವದು ಬಹಳ ಮುಖ್ಯ. ತಮಿಳುನಾಡಿಗೂ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಇರುವ ವಿಶೇಷ ಕೊಂಡಿಯಾದರೂ ಏನು? ಆಲ್ ಇಂಡಿಯಾ ಕಾಂಗ್ರೆಸ್ಸಿನ ಅಧ್ಯಕ್ಷರು ಇಂದಿರಾಜಿಗೊಂದು ಬೇರೆ, ಶ್ರೀ ಭಕ್ತವತ್ಸಲಮಿಗೊಂದು ಬೇರೆಯೇ? ಕುಂಚಾಬನಲ್ಲ ಪಥಭ್ರಷ್ಟರಾದ ಪ್ರಧಾನಿ, ಅಸ್ಸಾಮಿನ ನಾಗಾ—ಮಿಝೋಗಳಿಗೆ ನಡುಗಿ ಮೃದುವಾದ ಪ್ರಧಾನಿಯವರು, ದ್ರಾವಿಡನಾಡಿನ (ಪ್ರತ್ಯೇಕ ತಮಿಳುನಾಡಿನ) ಕೂಗು ಕೇಳಿ ಬರುತ್ತಿರುವ ಮದ್ರಾಸಿನ ಕಾಮರಾಜ ಕೈಯಲ್ಲಿ ದ್ರವವಾಗಿ ಬಿಡುವರೇ? ತಿರುಕಾಮರಾಜರ ಮಾತಿನ ಮರ್ಮವಾದರೂ ಏನು? ಕಣಕ್ಕಿಳಿದಿರುವದಾದರೂ ಏತಕ್ಕೆ? ಪೂರ್ವ, ಪಶ್ಚಿಮ, ಉತ್ತರದಲ್ಲಿ ಆದಾಗಲೇ ಬಿಟ್ಟುಕೊಟ್ಟಿರುವ ಕಾಂಗ್ರೆಸ್ಸ್ ಕಾರುಭಾರು ದಕ್ಷಿಣದಲ್ಲಿನ್ನು ಮಾಡುವದಾದರೂ ಏನನ್ನು? ಹುಟ್ಟು ಗುಣ ಸುಟ್ಟರೂ ಹೋದೀತೇ? ಇದು ಸಾಮಾನ್ಯ ಬದುಕಿಗೆ ಇರುವದಿಲ್ಲ. ತಿರುಕಾಮರಾಜರು ರಾಜಕೀಯದಲ್ಲಿ ಕಾಮರಾಜರೇ ಹೌದು. ಅವರು ಒಂದೇ ಕಲ್ಲಿನಲ್ಲಿ ಹಲವಾರು ಹಕ್ಕಿಗಳನ್ನುರುಳಿಸಲು ಹೊಂಚು ಹಾಕುತ್ತಿದ್ದಾರೆ. ಕಾಂಗ್ರೆಸ್ಸಿನ ಅಧ್ಯಕ್ಷ ತಿರುಕಾಮರಾಜರೇ ಶ್ರೀಮತಿ ಇಂದಿರಾ ಗಾಂಧಿಯವರನ್ನು ಪ್ರಧಾನಿ ಪಟ್ಟದಲ್ಲಿ ಕುಳ್ಳಿಸಿದವರಾದರೂ ಅವರಿಬ್ಬರ ನಡುವೆ ಏನೋ ಉಂಟಾಗಿರುವ ಕಾರಣ ಬಹಳ ನಾಜೂಕಾಗಿ ಇಂದಿರಾಜೀಯವರನ್ನು ರಾಜಕೀಯದಂಗಣದಿಂದ ಬಹಳಷ್ಟು ದೂರ ಓಡಿಸಲು ಅವರು ಸಮಯ ಕಾಯುತ್ತಿದ್ದಾರೆ. ಇದೊಂದು ಅವರಿಗೆ ಒಳ್ಳೆಯ ಸಮಯವೇ ಇದೆ. ಗೋಹತ್ಯಾ ನಿಷೇಧ ಕಾನೂನನ್ನು ತಂದು ಎದುರಿಸುವೆನೆಂಬ ಬೆದರಿಕೆಯನ್ನು ಹಾಕಿದಲ್ಲಿ ಇಂದಿರಾಜೀ ಕಾನೂನು ತರಲು ಕಾಲು ಮುಂದಿಕ್ಕುವದಿಲ್ಲ. ಅಂದರೆ ಮುಂದಿನ ಚುನಾವಣೆಯಲ್ಲಿ ಅವರ ಅಧಃಪತನ ಅಷ್ಟು ಸ್ಪಷ್ಟವನ್ನುವದು. ಆರಿಸಿ ಬಾರದಿದ್ದಲ್ಲಿ ತಾನಾಗಿಯೇ ಅವರು ರಾಜಕೀಯ ಸನ್ಯಾಸಿನಿಯಾಗಲೇ ಬೇಕು. ಇತ್ತ ದೇವಸ್ಥಾನದಿಂದ ದೇವಸ್ಥಾನಕ್ಕೆ ಧಾವಿಸುತ್ತಿರುವ ಭಕ್ತವತ್ಸಲಂರವರು ಮುಂದಿನ ಸಂಪುಟದಲ್ಲಿ ಮುಖ್ಯಮಂತ್ರಿಗಳಾಗಿರುವದಿಲ್ಲವೆಂಬುದು ಶ್ರೀ ಕಾಮರಾಜ್ ಹೇಳಿರುವರಲ್ಲದೆ ತಾವೂ ಸಂಧ್ಯಕ್ಕಿಳಿದಿರುವರು. ಹೀಗೆ ಭಕ್ತವತ್ಸಲಂರವರೂ ಕಾನೂನನ್ನು ತಾರದೆ ಮನುನೀತಿ ಚೋಳ, ಕಣ್ಣಗಿಯವರ ವಂಶಜ ಭಾರತೀಯರ ಅದರಲ್ಲೂ ತಮಿಳರ ಕ್ರೋಧಕ್ಕೊಳಗಾಗುತ್ತಾರೆ. ಅಂದರೆ ತನ್ನ ದಾಳಕ್ಕೆ ಅಡ್ಡಿಯೇ ಇಲ್ಲ. ಇದು ಕಾಮರಾಜಯೋಜನೆ. ಇದು ಗೋವಿನ ಗೋಳು. ಇದು ದೇಶದ ದುರಾದೃಷ್ಟ.

ತಿರುಕಾಮರಾಜರ ಕಾರುಭಾರ ಹೀಗಿದೆಯಾದಲ್ಲಿ ಅತ್ತ ರಾಜ್ಯ ಸರ್ಕಾರವು ಆದಷ್ಟು ಬೇಗನೆ ಗೋಹತ್ಯಾ ನಿಷೇಧ ಕಾನೂನನ್ನು ಜ್ಯಾರಿಗೆ ತರುವದಾಗಿ ಆಶ್ವಾಸನೆ ಇತ್ತಿದೆ. ಆದರೆ ಅದಕ್ಕೂ ತಿರುಕಾಮರಾಜರ ಕೋಪಾಟೋಪಕ್ಕೆ ಬಲಿಯಾಗಲು ಇಷ್ಟವಿಲ್ಲದಿರುವ ಕಾರಣ ತಮ್ಮ ಆಶ್ವಾಸನೆಗೆ ಕೆಲ ಕೊಂಡಿಗಳನ್ನು ಹಾಕಲು ಆ ಸರ್ಕಾರ ಪ್ರಯತ್ನಿಸುತ್ತಿದೆ. ಇತ್ತ ಶ್ರೀ ಭಕ್ತವತ್ಸಲಂರವರ ಬವಣೆ ಹೇಳತೀರದು. ಗೋಹತ್ಯಾ ನಿರೋಧ ಸಮಿತಿಯ ಪ್ರಮುಖರು ಮದ್ರಾಸಿನ (ತಮಿಳುನಾಡಿನ) ಮುಖ್ಯಮಂತ್ರಿಯವರನ್ನು ಕಂಡು, ವಿಷಯವನ್ನು ವಿವರಿಸಿ ಹೇಳಿದಾಗ, ವಿಷಯವೇನೋ ಒಳ್ಳೆಯದೇ, ಆದರೆ ಮುದಿಯಾಗಿಯೂ ಗೊಡ್ಡು ಗೋಸಂಪತ್ತಿನ ಆರೈಕೆಗೇನು ಮಾಡುವದೆಂದು ಕೇಳಿದ್ದರು. ಆದಕ್ಕೆ ಉತ್ತರವೋ ಎಂಬಂತೆ ಕಾಂಚಿ ಕಾಮಕೋಟಿ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯಸ್ವಾಮೀಜೀಯವರ, ಗೊಡ್ಡು ಗೋಸಂಪತ್ತನ್ನು ಸಾಕಲು ಸಾಧ್ಯವಿಲ್ಲದವರು ತಮ್ಮ ಪೀಠದ ಆಶ್ರಯದಲ್ಲಿರುವ ಸೇವಾಶ್ರಮಕ್ಕೆ ಕಳುಹಿಸಿಕೊಡಬೇಕಾಗಿ ಅಂದೇ ಪತ್ರಿಕೆಗಳ ಮೂಲಕ ತಿಳಿಸಿದರು. ಆನಂತರ ಭಾರತ ಸಾಧು ಸಮಾಜದ ಸ್ವಾಮೀಜೀ ಆನಂದರವರು ಶ್ರೀ ಭಕ್ತವತ್ಸಲಂರವರನ್ನು ಭೇಟಿಯಾಗಿ ಕಾನೂನನ್ನು ತರುವ ಕುರಿತು ಮಾತುಕತೆ ನಡೆಸಿದಾಗ ಅವರು ಪ್ರತೀ ಊರಿನಲ್ಲೂ ಗೋಸದನಗಳನ್ನು ತೆರೆದು ಪ್ರಯೋಜನಕ್ಕೆ ಬಾರದ ಗೋವಂಶವನ್ನು ಕಾಪಾಡುವದಕ್ಕೆ ತಕ್ಕ ವ್ಯವಸ್ಥೆ ಮಾಡಿದಲ್ಲಿ ಅನಂತರ ಕಾನೂನು ತರುವದಾಗಿ ಭರವಸ ಇತ್ತಿದ್ದಾರೆ. ಆದರಂತೆ ಸ್ವಾಮೀಜೀಯವರೀಗ ಗೋಸದನಗಳಿಗಾಗಿ ಪ್ರಯತ್ನಿಸುತ್ತಿದ್ದಾರೆ. ಪರಿಸ್ಥಿತಿ ಇಲ್ಲಿಗೆ ಬಂದಿರುವಾಗ ಮಹಾಚುನಾವಣೆಯ ನಂತರ ಶ್ರೀ ಭಕ್ತವತ್ಸಲಂ ಮುಖ್ಯಮಂತ್ರಿಯಾಗಿರುವದಿಲ್ಲವೆಂದು ತಿರು ಕಾಮರಾಜರು ಈಗಲೇ ಘೋಷಿಸಿರುವರು. ಇದು ತಮಿಳುನಾಡಿನ ಗೋವಂಶದ ಗೋಳು.

ಇವರೆಲ್ಲರಿಗಿಂತಲೂ ಸಹಜವಾಗಿ ಒಂದು ಮುಷ್ಟಿ ಎತ್ತರಕ್ಕಿರಬೇಕೆಂದು ಮೈಸೂರಿನ (ಕರ್ನಾಟಕದ) ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಸಾಧುಸಂತರೆಲ್ಲಾ ತಮ್ಮ ಉಪವಾಸಾದಿಗಳನ್ನು ಬಿಟ್ಟು ಬಂದು ಮುಖ್ಯಮಂತ್ರಿಗಳ ಬಳಿ ಬೇಡಿದಲ್ಲಿ ಅವರೆಲ್ಲರಿಗೂ ಒಂದೊಂದು ದನವನ್ನು ಸಾಕಲು ಕೊಡುವದಾಗಿ ಸಾರಿದ್ದಾರೆ. ಹಿಂದೆ ಓರ್ವ ಸನ್ಯಾಸಿ ಇಲಿಯ ಕಾಟ ತಪ್ಪಿಸಲು ಬೆಕ್ಕನ್ನು ಸಾಕಲಾರಂಭಿಸಿದಂತೆ ಈ ಸನ್ಯಾಸಿಗಳೂ ಆರಂಭಿಸಬೇಕು! ಆದರೆ ಅದಕ್ಕಿಂತ ಮುಂಚಿತ ಈ ಸನ್ಯಾಸಿಗಳು 'ಕುಟುಂಬ ಯೋಜನೆ'ಗೊಳಗಾಗಬೇಕು! ಅಲ್ಲಗ

(ಹತ್ತನೇ ಪುಟ ನೋಡಿರಿ)

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು "ವಿಜಯ ಬ್ಯಾಂಕ್ ಬಿಲ್ಡಿಂಗ್"

ಲೈಟ್ ಹೌಸ್ ಹಿಲ್ ರೋಡು,

ಮಂಗಳೂರು—3

ಇವರು ತಮ್ಮ

64ನೇ ಶಾಖೆಯನ್ನು

ಬಿ. ಸಿ. ರೋಡು (ಬಂಟವಾಳ ತಾಲೂಕು)

ದಕ್ಷಿಣ ಕನ್ನಡ ಜಿಲ್ಲೆ (ಮೈಸೂರು ರಾಜ್ಯ)

ಎಂಬಲ್ಲಿ

1967ನೇ ಜನವರಿ 28ನೇ ಶನಿವಾರ

ತೆರೆದಿರುತ್ತಾರಾಗಿ ತಿಳಿಸಲು

ಸಂತೋಷ ಪಡುತ್ತಾರೆ.

ನಾವು ನಡೆದ ದಾರಿ

ರಾಷ್ಟ್ರೀಕೃತ ಜೀವವಿಮೆ

ಜನತೆಯ ವಿಶ್ವಾಸಕ್ಕೆ ಪಾತ್ರವಾದ ಈ ಸಂಸ್ಥೆಯ ಒಂದು ದಶಕದ ಪ್ರಗತಿ ಸಮಾಧಾನಕರವಿದೆ

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ೧೦ನೇ ವಾರ್ಷಿಕೋತ್ಸವವನ್ನು ನೆರವೇರಿಸಿದ ಭಾರತದ ಜೀವವಿಮಾ ಕಾರ್ಪೊರೇಷನ್, "ಯೋಗ ಕ್ಷೇಮ, ವಹಾಮ್ಯಹಮ್" ಎಂದರೆ "ನಿನ್ನ ಕ್ಷೇಮದ ಜವಾಬ್ದಾರಿ ನನ್ನದಾಗಿದೆ" ಎನ್ನುವ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ನಡೆದಿದೆ ಎಂದು ಹೇಳಬಹುದು.

ಜೀವವಿಮೆಯು ರಾಷ್ಟ್ರೀಕರಣವಾದಂತೆ, ಕಾರ್ಪೊರೇಷನ್ ಜನ್ಮತಾಳಿತು ಅದು ತತ್‌ಕ್ಷಣವೇ ವಿವಿಧ ಗಾತ್ರದ ಮತ್ತು ವಿವಿಧ ರಚನೆಯ ೨೪೫ ಜೀವವಿಮಾ ಕಂಪೆನಿಗಳ ಸಂಘಟನಾ ಸಂಸ್ಥೆಯಾಗಿ ರೂಪುಗೊಳ್ಳುವ ಭಾರಿ ಸಮಸ್ಯೆಯನ್ನು ಎದುರಿಸಿತು ಪ್ರತಿಯೊಂದು ಕಂಪೆನಿಯೂ ತನ್ನದೇ ಆದ ಮಟ್ಟದಲ್ಲಿ ಆರ್ಥಿಕ ಭದ್ರತೆ ಮತ್ತು ಸಾಲತೀರಿಸುವ ಶಕ್ತಿಯನ್ನು ಹೊಂದಿದ್ದಿತು. ಜಾರಿಯಲ್ಲಿದ್ದ ಲಕ್ಷಾಂತರ ಪಾಲಿಸಿಗಳನ್ನು ನಡೆಸುವುದು, ಹೊಸ ಪಾಲಿಸಿಗಳನ್ನು ವಹಿವಾಟು ಮಾಡುವುದು ಮತ್ತು ಸಂಯೋಜಿತ ಕಾರ್ಯ ಪದ್ಧತಿಯನ್ನು ಸ್ಥಾಪಿಸುವುದು ಆಗತ್ಯವಾಯಿತು ಕಾರ್ಪೊರೇಷನ್ ತನ್ನ ಹತ್ತು ವರ್ಷಗಳಲ್ಲಿ ಭದ್ರವಾದ ಹಾಗೂ ಪ್ರಬಲವಾದ ಸಂಸ್ಥೆಯಾಗಿ, ತನ್ನದೇ ಆದ ವ್ಯಕ್ತಿತ್ವ ಮತ್ತು ವೈಯಕ್ತಿಕ ಲಕ್ಷಣವನ್ನು ಹೊಂದಿ ಮೆರಗುತ್ತಿದೆ.

ಎಲ್ಲಾ ಪಾಲಿಸಿಗಳಿಗೆ ಸರಕಾರವು ಹೊಣೆ ನಿಂತು, ಹಣವನ್ನು ನೀಡುವ ಜವಾಬ್ದಾರಿಯನ್ನು ಹೊತ್ತದ್ದು ಕಾರ್ಪೊರೇಷನ್‌ಗೆ ಆರಂಭ ಕಾಲದಲ್ಲಿ ಒಂದು ಶಕ್ತಿಯಾಗಿ ಪರಿಣಮಿಸಿತು. ಕುಟುಂಬದ ರಕ್ಷಣೆಗಾಗಿ ಜೀವ ವಿಮಾ ಮೂಲಕ ಹಣವನ್ನು ಕೂಡಿಡ ಬೇಕೆಂಬ ಭಾವನೆ ಜನತೆಯಲ್ಲಿ ಬೆಳೆಯುತ್ತಿದೆ. ಈ ಉಳಿತಾಯ ಹಣವು ರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಅತ್ಯುತ್ತಮ ಪಾತ್ರ ವಹಿಸುತ್ತಿದೆ ಎಂಬುದು ತೃಪ್ತಿತರುವಂತ ವಿಚಾರವಾಗಿದೆ

ಜನತೆಯಲ್ಲಿ ವಿಮೆಯ ಪ್ರಜ್ಞೆಯನ್ನು ಮೂಡಿಸಲು ಕಾರ್ಪೊರೇಷನ್ ಏಕ ಮನಸ್ಸಿನಿಂದ ದುಡಿಯುತ್ತಿದೆ. ಹತ್ತು ವರ್ಷಗಳ ಇಷ್ಟದ ಬೆಳವಣಿಗೆ ಮೂಲಕ ಕಾರ್ಪೊರೇಷನ್ ಇಂದು ಪ್ರಜಾಪ್ರಭುತ್ವವುಳ್ಳ ವಿಶ್ವದಲ್ಲಿ ಅತಿ ದೊಡ್ಡ ರಾಷ್ಟ್ರೀಕರಣವಾಗಿರುವ ಜೀವ ವಿಮಾ ಸಂಸ್ಥೆಯಾಗಿ ಬೆಳೆಗಿದೆ. ರಾಷ್ಟ್ರವು ಆರ್ಥಿಕ ಕ್ಲೇಶದಲ್ಲಿದ್ದರೂ ಉತ್ತಮ ಬೆಳವಣಿಗೆಯ ಹೆಚ್ಚಿನದಲ್ಲ ಕಾರ್ಪೊರೇಷನ್ ತನ್ನ ದೃಢ ಹೆಜ್ಜೆಗಳನ್ನಿಟ್ಟಿದೆ.

ರಾಷ್ಟ್ರೀಕರಣವಾದಾಗ, ಜೀವ ವಿಮಾ ಕಂಪೆನಿಗಳ ಸಾಲಸೋಲಗಳು ಅವುಗಳ ಆಸ್ತಿಪಾಸ್ತಿಗಳಿಗಿಂತ ಹೆಚ್ಚಾಗಿದ್ದು, ಕಂಪನಿಗಳ ಪಾಲುದಾರರು ಕಳವಳಕ್ಕೊಳಗಾಗಿದ್ದರು. ಈ ಪಾಲುದಾರರಿಗೆ ಪರಿಹಾರ ಕೊಡಲು ಕಾರ್ಪೊರೇಷನ್ನಿಗೆ ಸರ್ಕಾರವು ೫೦ ಲಕ್ಷ ರೂ.ಗಳನ್ನು ನೀಡಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನತೆಯಲ್ಲಿ ವಿಮೆಯ ಬಗ್ಗೆ ಮನದಟ್ಟು ಮಾಡಿ ಕೊಡಲು ಕಾರ್ಪೊರೇಷನ್ನಿಗೆ ತಮ್ಮ ಎಲ್ಲಾ ಸಹಕಾರವನ್ನು ನೀಡಿದವು. ಯೋಜಿತ ಮಾರ್ಗದ ಮೂಲಕ, ವಿಕೇಂದ್ರೀಕೃತ ಅಧಿಕಾರದ ಮೂಲಕ ಮತ್ತು ಕ್ರಮವರಿತ ವಿಸ್ತಾರಣೆಯ ಮೂಲಕ, ಕಾರ್ಪೊರೇಷನ್ ವಿಮೆಯ ಪರಂಪರೆಯಲ್ಲಿ ಅತ್ಯುತ್ತಮವಾಗಿ ಬೆಳೆದು ಬಂದಿದೆ.

ಅಧಿಕ ವಹಿವಾಟು

ವಹಿವಾಟು ಸಹ ಉಚ್ಛಮಟ್ಟವನ್ನು ಮುಟ್ಟಿದೆ. ೧೦ ವರ್ಷಗಳಲ್ಲಿ ವಿಮೆ ಪಾಲಿಸಿಗಳ ಸಂಖ್ಯೆ ಎರಡರಷ್ಟಾಗಿದೆ. ವಿಮೆ ಮಾಡಿರುವ ಹಣವೂ, ಬೋನಸ್ ಸೇರಿ ಮೂರರಷ್ಟಾಗಿದೆ. ರಾಷ್ಟ್ರೀಕರಣದ ಮುನ್ನ ಎಲ್ಲಾ ಕಂಪೆನಿಗಳ ವಹಿವಾಟು ಒಟ್ಟು ೨೮೦ ಕೋಟಿ ರೂ ಗಳಾಗಿತ್ತು. ೧೯೬೧ರ ಕೊನೆಯ ಹೊತ್ತಿಗೆ ಇದು ಎರಡರಷ್ಟಾಯಿತು ಕ್ರಮವರಿತು ಈ ವಹಿವಾಟು ಮುಂದಿನ ಮೂರು ವರ್ಷಗಳು ಏರುತ್ತಾ ೬೦೦ ಕೋಟಿ ರೂ. ಗಳಿಗೆ ಮುಟ್ಟಿ, ೧೯೬೫-೬೬ ರಲ್ಲಿ ೮೦೦ ಕೋಟಿ ರೂ. ಗಳಿಗೆ ಮುಟ್ಟಿತು ಕಳೆದ ಕಲವು ವರ್ಷಗಳಲ್ಲಿ ತೊಡಗಿರುವ ಪಾಲಿಸಿಗಳು ಶೇಕಡ ೫೦ ರಷ್ಟಾಗಿದ್ದು, ಅದರ ಮೊತ್ತವು ಒಟ್ಟು ಮೊತ್ತದಲ್ಲಿ ಶೇಕಡ ೩೦ರಷ್ಟಾಗಿದೆ. ಇನ್ನೊಂದು ಮುಖ್ಯ ಅಂಶವೆಂದರೆ, ಮೂರನೇ ಒಂದು ಭಾಗದಷ್ಟು ಪಾಲಿಸಿಗಳನ್ನು ಗ್ರಾಮಾಂತರದಲ್ಲಿ ಮಾಡಲಾಗಿದ್ದು ಅದು ಒಟ್ಟು ವಿಮಾ ಹಣದ ಶೇಕಡ ೩೦ರಷ್ಟಾಗುತ್ತದೆ.

೧೯೫೭ರಲ್ಲಿ ಒಟ್ಟು ವಹಿವಾಟು ೧೨೩೦ ಕೋಟಿ ರೂ ಗಳಿದ್ದುವು ೧೯೬೬ರ ಹೊತ್ತಿಗೆ ಒಟ್ಟು ವಹಿವಾಟು ೪,೩೮೭ ಕೋಟಿ ರೂ. ಗಳಿಗೆ ಮುಟ್ಟಿತು. ಹಾಗೆಯೇ ವಿಮೆಗಳ ಸಂಖ್ಯೆಯು ೫೦ ಲಕ್ಷ ಇದ್ದುದು ೧೧೫.೪೨ ಲಕ್ಷಗಳಿಗೆ ಏರಿತು. ವಹಿವಾಟು ಏರಿದ ಹಾಗೆ, ಕಾರ್ಪೊರೇಷನ್ ಆದಾಯವೂ ಕ್ರಮವಾಗಿ ಏರಿದೆ.

ವಿಸ್ತರಣೆ

ರಾಷ್ಟ್ರೀಕರಣವಾಗುವ ಮುನ್ನ ಗ್ರಾಮಾಂತರದ ಮೂಲೆ ಪ್ರದೇಶಗಳಿಗೆ ವಿಮೆಯ ಬಗ್ಗೆ ಸಂದೇಶವನ್ನು ಪ್ರಸಾರ ಮಾಡುವ ಕೆಲಸ ನಡೆಯುತ್ತಿರಲಿಲ್ಲ ದುಸ್ತರವಾದ ಸಂಪರ್ಕಗಳು ಹಾಗೂ ಅನಕ್ಷರತೆಯ ಕಾರಣವಾಗಿ ಸಾಮಾನ್ಯವಾಗಿ ಕಂಪೆನಿಗಳಿಗೆ ತಮ್ಮ ವಹಿವಾಟನ್ನು ಹಳ್ಳಿಗಳಿಗೆ ವಿಸ್ತರಿಸಲು ಸಾಧ್ಯವಾಗಿರಲಿಲ್ಲ ಈಗ ಜೀವವಿಮಾ ಕಾರ್ಪೊರೇಷನ್ ತೀವ್ರ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಿದೆ. ಅದರ ಏಜೆಂಟರು ಮತ್ತು ಅಭಿವೃದ್ಧಿ ಅಧಿಕಾರಿಗಳು ಮೂಲೆ ಮೂಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೊಸ ಬ್ರಾಂಚ್ ಮತ್ತು ಸಬ್ ಕಚೇರಿಗಳನ್ನು ತೆರೆಯಲಾಗಿದೆ.೧೫೬ ಅಭಿವೃದ್ಧಿ ಕೇಂದ್ರಗಳನ್ನು ಸಹಾ ಪ್ರಾರಂಭಿಸಲಾಗಿದೆ. ಬ್ಲಾಕ್ ಅಭಿವೃದ್ಧಿ ಕೇಂದ್ರಗಳು, ಜಿಲ್ಲಾಪರಿಷತ್‌ಗಳು ಮತ್ತು ಪಂಚಾಯತಿಗಳ ಮೂಲಕ ಗ್ರಾಮಾಂತರಗಳಲ್ಲಿ ದೃಢ ಸಂಪರ್ಕವನ್ನು ಬೆಳೆಸಲಾಗಿದೆ.

ವಿಶೇಷ ಸೌಲಭ್ಯಗಳು

ಗ್ರಾಮಾಂತರಗಳಲ್ಲ ವೈದ್ಯಕೀಯ ಪರೀಕ್ಷಕರ ಅಭಾವದ ಕಾರಣ, ವೈದ್ಯಕೀಯ ರಹಿತ ಕಾರ್ಯಕ್ರಮವನ್ನು ಜಾರಿಗೆ ತರಲಾಗಿ ಅದು ಯಶಸ್ವಿಯಾಗಿ ಪರಿಣಮಿಸಿದೆ. ಆಯುಸ್ಸಿನ ಪ್ರಮಾಣ ತೋರಿಸಲು ವಿಶೇಷ ರಿಯಾಯಿತಿಗಳನ್ನು ಕೊಡಲಾಗಿದೆ. ದೇಶದಲ್ಲಿಯ ಬಹುತೇಕ ಅಂಚೆ ಕಚೇರಿಗಳ ಮೂಲಕ ಸುಲಭವಾಗಿ ಹಣ ಸಂದಾಯ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಕೈಗಾರಿಕಾ ಕ್ಷೇತ್ರಗಳಲ್ಲಿ ಸಂಬಳ ಉಳಿತಾಯ ಕಾರ್ಯಕ್ರಮ ಬಹು ಜನಪ್ರಿಯವಾಗಿದೆ.

ಬರಗಾಲ ಪೀಡಿತರಿಗೆ ಆರ್ಥಿಕಾದಿ ನೆರವನ್ನು ನೀಡುತ್ತಿದೆ ಜನತಾ ಸರಕಾರ. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಇಂತಹ ಸಹಾಯವನ್ನು ನೀಡಲಾಯಿತು.

ಬರಗಾಲ ಕಾಮಗಾರಿಗಳನ್ನು ಆರಂಭಿಸುವುದೂ ಅದನ್ನೆದುರಿಸುವ ಒಂದು ವಿಧಾನ ದುಡಿಯಬಲ್ಲ ನವಯುವಕ-ಯುವತಿಯರು ಈ ಕಾಮಗಾರಿಗಳಲ್ಲಿ ಉತ್ಸಾಹದಿಂದ ದುಡಿಯುತ್ತಾರೆ.

ಸಾಮಾನ್ಯ ವಿಮೆ

೧೯೬೪ನೇ ಏಪ್ರಿಲ್ ೧ರಿಂದ ಕಾರ್ಪೊರೇಷನ್ ಸಾಮಾನ್ಯ ವಿಮಾ ಕಾರ್ಯಕ್ರಮವನ್ನು ಆರಂಭಿಸಿತು. ಕಾರ್ಪೊರೇಷನ್ ಬಂಡವಾಳ ಹೂಡುವುದರಲ್ಲೂ ಮುಂದಾಳಾಗಿದೆ. ೧೯೫೬ ಸೆಪ್ಟೆಂಬರ್ ೧ರಂದು, ಅದು ೩೪೪ ಕೋಟಿ ರೂ.ಗಳಷ್ಟನ್ನು ಬಂಡವಾಳ ಹೂಡಿದ್ದಿತು. ಕಳೆದ ಆರ್ಥಿಕ ಸಾಲಿನ ಕೊನೆಯ ಹೊತ್ತಿಗೆ ಹೂಡಿದ ಬಂಡವಾಳವು ೯೬೪.೭೩ ಕೋಟಿ ರೂ.ಗಳಿಗೆ ಏರಿತು. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಸರಕಾರಿ ವಲಯದಲ್ಲಿ ಹೂಡಲಾಗಿದೆ. ಮಿಕ್ಕಿದ್ದನ್ನು ಆಸ್ತಿಪಾಸ್ತಿಗಳ ಮೇಲೆ, ಮನೆಗಳು ಮತ್ತು ಷೇರುಗಳ ಮೇಲೆ ಮಾರ್ಟ್‌ಗೇಜ್ ಮೂಲಕ ಸಾಲ ನೀಡಲು ಉಪಯೋಗಿಸಲಾಗಿದೆ.

ಗೃಹರಚನೆ ಕಾರ್ಯಕ್ರಮ

ಆಸ್ತಿಗಳನ್ನು ಮಾರ್ಟ್‌ಗೇಜ್ ಮಾಡಿ ಸಾಲ ಕೊಡುವ ಕಾರ್ಯಕ್ರಮದ ಮೂಲಕ, ಕಾರ್ಪೊರೇಷನ್ನಿನ ಗೃಹ ರಚನೆಯ ಕಾರ್ಯಕ್ರಮಕ್ಕೆ ಪ್ರೋತ್ಸಾಹ ದೊರೆತಿದೆ. ೧೧೧ ಕೇಂದ್ರಗಳಲ್ಲಿ 'ಸ್ವಂತ ಮನೆ ಪಡೆದು ಕೊಳ್ಳಿ" ಕಾರ್ಯಕ್ರಮಗಳೂ ಇದರ ಪರಿಣಾಮವಾಗಿ ಜಾರಿಯಾಗಿವೆ. ಪೌರಸಭೆಗಳಿಗೆ ಅಧಿಕ ಪೌರ ಸೌಲಭ್ಯಗಳನ್ನು ನೀಡಲು ನೆರವಾಗುವಂತೆ ಸಾಲಗಳನ್ನೂ ಕಾರ್ಪೊರೇಷನ್ ಕೊಡುತ್ತಿದೆ. ಈ ಮೂಲಕ ಕಾರ್ಪೊರೇಷನ್ ದೇಶದ ಆರ್ಥಿಕಾಭಿವೃದ್ಧಿ ಮತ್ತು ಸಾಮಾಜಿಕಾಭಿವೃದ್ಧಿಗೆ ಪ್ರಯೋಜನಕಾರಿಯಾಗಿ ಕೆಲಸಮಾಡುತ್ತಿದೆ.

ಜೀವ ವಿಮಾ ಕಾರ್ಪೊರೇಷನ್, ಜನತಾ ಸಂಸ್ಥೆಯಾಗಿದೆ. ಜನತೆಗೆ ಅದರ ಕುಟುಂಬಗಳಿಗೆ, ಅದರ ಆಸ್ತಿಪಾಸ್ತಿಗಳಿಗೆ ರಕ್ಷಣೆಯನ್ನು ನೀಡುತ್ತದೆ. ಲಕ್ಷಾಂತರ ವಿಮಾದಾರರಿಂದ ಬರುವ ಹಣವನ್ನು ನಿಧಿಯನ್ನಾಗಿ ಜೀವ ವಿಮಾ ಕಾರ್ಪೊರೇಷನ್ ಪರಿಗಣಿಸುತ್ತದೆ: ವ್ಯಕ್ತಿ ಹಾಗೂ ರಾಷ್ಟ್ರದ ಹಿತಕ್ಕಾಗಿ ಆ ಹಣವನ್ನು ಸಂದಾಯ ಮಾಡುತ್ತದೆ. ಜನತೆಯಲ್ಲಿ ಈ ವಾಸ್ತವ ಪ್ರಜ್ಞೆಯು ಈಗಾಗಲೇ ಅಧಿಕವಾಗಿ ಮೂಡುತ್ತಿದೆ.

ಯೋಚಿಸಿ ನೋಡಿ
ಸತ್ವಯುತ ವಿದೇಶನೀತಿ

ಬರೆದವರು : ಓರ್ವ ಭಾರತೀಯ

ಭಾರತವು ಸ್ವತಂತ್ರವಾಗಿ ೧೯ ವರ್ಷಗಳಾಗಿವೆ. ವಿದೇಶ ನೀತಿಯ ಜನಕನೆಹರೂಜಿ ನಿಧನಹೊಂದಿ ಎರಡು ವರ್ಷಗಳಾದವು. ಈಗ ಒಂದು ಪ್ರಶ್ನೆ ಉದ್ಭವಿಸಿದೆ. ಭಾರತವು ತನ್ನ ವಿದೇಶ ನೀತಿಯನ್ನು ಬದಲಿಸಿದೆಯೇ?

ಕಳೆದ ೧೯ ವರ್ಷಗಳಲ್ಲಿ ಏನು ಸಂಭವಿಸಿಲ್ಲ? ನಾವು ಮಿತ್ರರೆಂದು ಭಾವಿಸಿದ ಚೀಣೀಯರು ನಮ್ಮ ಮೇಲೆ, ಧಾಳಿ ಮಾಡಿದ್ದಾರೆ. ಕಳೆದ ವರ್ಷ ತಾನೇ ನೆರೆಯ ಪಾಕಿಸ್ತಾನಿಗಳು ನಮ್ಮನ್ನು ಯುದ್ಧಕ್ಕೆ ಎಳೆದರು. ರಕ್ತಪಾತ ನಡೆಯಿತು. ಹೀಗಿದ್ದಾಗ ಈ ಪ್ರಶ್ನೆ ಸಹಜವೇ!

ಸ್ವತಂತ್ರ ಭಾರತದ ವಿದೇಶ ನೀತಿಯು, ದೇಶವು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದಿಂದಲೇ ರೂಪುಗೊಂಡಿದೆ. ಈ ಹೋರಾಟದ ತತ್ವ ಮತ್ತು ಸತ್ವದಿಂದ ಸ್ಫೂರ್ತಿ ಪಡೆದಿದೆ.

ದ್ವೇಷರಹಿತವಾದ ಹೋರಾಟ ಆರಂಭವಾದದ್ದು ವಿಶ್ವದ ಇತಿಹಾಸದಲ್ಲೇ ಮೊದಲು ಎನ್ನಬೇಕು. ಭಾರತವು ಆರಂಭಿಸಿದ ಈ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜೀ ನಾಯಕರಾಗಿದ್ದರು. ಅಹಿಂಸೆ ಮತ್ತು ದ್ವೇಷರಹಿತ ವರ್ತನೆಯೇ ಈ ಹೋರಾಟದ ಅಡಿಪಾಯ. ಭಾರತದ ಜನಮನದಲ್ಲಿ ಈ ಶ್ರೇಷ್ಠ ತತ್ವವು ಸಮರಸಗೊಂಡು ಪುಷ್ಟಿಪಡೆಯಿತು.

ನಾವು ಕೆಡುಕನ್ನು ತಿರಸ್ಕರಿಸಬೇಕೇ ವಿನ: ಕೆಡುಕು ಮಾಡುವವನನ್ನಲ್ಲ" ಎಂದು ಗಾಂಧೀಜಿ ಹೇಳುತ್ತಿದ್ದರು. ಅಹಿಂಸೆಯಿಂದ ಹಾಗೂ ಮನವೊಲಿಸುವ ಮಾರ್ಗದಿಂದ ಇತರರ ಪರಿವರ್ತನೆ ಮಾಡುವುದು ಸಾಧ್ಯವೆಂದು ಗಾಂಧೀಜಿ ದೃಢವಾಗಿ ನಂಬಿದ್ದರು. ಜವಾಹರ್‌ಲಾಲ್ ನೆಹರೂ ಅವರು ಗಾಂಧೀಜಿಯವರ ಈ ನಂಬುಗೆಯನ್ನೇ ಸ್ವತಂತ್ರ ಭಾರತದ ವಿದೇಶಾಂಗ ನೀತಿಯ ತಿರುಳನ್ನಾಗಿ ಸ್ವೀಕರಿಸಿದರು. ೧೯೫೪ರಲ್ಲಿ ಪಂಚಶೀಲಗಳನ್ನು ಘೋಷಿಸಿದರು.

ಪರಸ್ಪರ ಪ್ರಾದೇಶಿಕ ಸಮಗ್ರತೆಯನ್ನು ಮತ್ತು ಪರಮಾಧಿಕಾರವನ್ನು ಗೌರವಿಸುವುದು, ಅನಾಕ್ರಮಣ, ಇತರರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪಣೆ ಮಾಡದಿರುವುದು, ಸಮಾನತೆ ಮತ್ತು ಪರಸ್ಪರ ಪ್ರಯೋಜನ, ಹಾಗೂ ಸಹಜೀವನ ಇವೇ ಆ ಐದು ತತ್ವಗಳು.

ಇವೇ ಈಗಲೂ ಭಾರತದ ವಿದೇಶಾಂಗ ನೀತಿಯ ಪ್ರಧಾನ ತತ್ವಗಳಾಗಿವೆ. ಪ್ರತಿಯೊಂದು ಸತ್ವ ಪರೀಕ್ಷಾ ಪ್ರಸಂಗವೂ, ಭಾರತವು ಈ ತತ್ವಗಳಿಗೆ ದೃಢವಾಗಿ ಅಂಟಿಕೊಳ್ಳುವಂತೆ ಮಾಡಿದೆ; ನಮ್ಮ ವಿದೇಶ ನೀತಿಯನ್ನು ಮೊದಲಿಗಿಂತಲೂ ಹೆಚ್ಚು ಸತ್ವಪೂರ್ಣವಾಗಿ ಮಾಡಿದೆ.

ಅಮೇರಿಕದ ವಿದೇಶಾಂಗ ಕಾರ್ಯದರ್ಶಿಗಳಾಗಿದ್ದ, ದಲೇಸ್ ಮತ್ತು ಮಿಲಿಟರಿ ಕೂಟಕ್ಕೆ ಸೇರಿದ ಇತರ ಅನೇಕರು ಅಲಿಪ್ತ ನೀತಿಯನ್ನು ಟೀಕಿಸಿದ್ದರು. ಈಗ ಈ ಕಾರ್ಯನೀತಿಯೇ ಹೊಸದಾಗಿ ಸ್ವತಂತ್ರವಾಗಿರುವ ರಾಷ್ಟ್ರಗಳ ಜೀವಾಳವಾಗಿದೆ.

ಶತಮಾನಗಳ ಗುಲಾಮಗಿರಿಯಿಂದ ಇದೀಗ ಮುಕ್ತವಾಗಿರುವ ಸ್ವತಂತ್ರ ರಾಷ್ಟ್ರಗಳು ಈ ಬಣಗಳಿಂದ ದೂರವಿದ್ದು ಕ್ಷೇಮಕರವೆಂದು ಭಾರತವು ಆಗಾಗ್ಗೆ ಸ್ಪಷ್ಟಪಡಿಸಿದೆ. ಹೊಸದಾಗಿ ಸ್ವತಂತ್ರವಾದ ರಾಷ್ಟ್ರಗಳು ತಮ್ಮ ರಕ್ಷಣಾ ವ್ಯವಸ್ಥೆಯನ್ನು ಕಡೆಗಣಿಸಬೇಕೆಂದೇನೂ ಇದರ ಅರ್ಥವಲ್ಲ. ಆದರೆ, ವಿದೇಶಾಂಗ ನೀತಿಯಲ್ಲಿ ಬಲಪ್ರಯೋಗವನ್ನು ತ್ಯಜಿಸಬೇಕೆಂಬುದೇ ಇದರ ಅರ್ಥ.

ಭಾರತವು ಸ್ವತಃ ಯಾವ ಮಿಲಿಟರಿ ಗುಂಪುಗಳಿಗೆ ಸೇರಿಲ್ಲ. ಆದರೂ ಬೃಹತ್ ರಾಷ್ಟ್ರಗಳಿಂದ ಬರುವ ರಚನಾತ್ಮಕ ತಾಂತ್ರಿಕ ಹಾಗೂ ಆರ್ಥಿಕ ನೆರವನ್ನು—ಅದು ನಿರ್ಬಂಧರಹಿತವಾಗಿದ್ದರೆ—ಸ್ವಾಗತಿಸುತ್ತದೆ.

೧೯೪೭ರಿಂದಲೂ ನಾವು ವಸಾಹತುಶಾಹಿಯ ದಬ್ಬಾಳಿಕೆಯಿಂದ ಇತರ ರಾಷ್ಟ್ರಗಳನ್ನು ಪಾರುಮಾಡಲು ನೆರವಾಗುತ್ತ ಬಂದಿದ್ದೇವೆ. ವಿಶ್ವಸಂಸ್ಥೆಯಲ್ಲಿ ಅಥವಾ ಇತರ ಕಡೆಗಳಲ್ಲಿ ನಾವು ಈ ಬಗ್ಗೆ ಹೋರಾಡುತ್ತಿದ್ದೇವೆ.

ಭಾರತವು ಸ್ವತಂತ್ರವಾದಂದಿನಿಂದ ಇದುವರೆಗೆ ಪಾಕಿಸ್ತಾನವು ಮೂರು ಸಲ ಹಾಗೂ ಚೀನಾವು ಒಂದು ಸಲ ಭಾರತದ ಮೇಲೆ ಆಕ್ರಮಣ ಮಾಡಿವೆ. ಭಾರತವು ಅನುಸರಿಸುತ್ತಿರುವ ಶಾಂತಿಯುತ ನೀತಿಯು, ಬೇಕಾಗಿ ಆರಿಸಿಕೊಂಡ ನೀತಿಯಲ್ಲ ಅಥವಾ ತಾತ್ಕಾಲಿಕವಾದ ನೀತಿಯೂ ಅಲ್ಲ. ಅದು ಭಾರತದ ಜನತೆಯ ಜೀವನ ವಿಧಾನವಾಗಿದೆ. ಶಾಂತಿ ನಮ್ಮ ರಕ್ತದಲ್ಲಿ ಬೆರೆತು ಸಮರಸಗೊಂಡಿದೆ. ಶಾಂತಿ ಮಾರ್ಗದಲ್ಲೇ ವಿಶ್ವಕಲ್ಯಾಣವಿದೆಯೆಂದು ನಾವು ದೃಢವಾಗಿ ನಂಬಿದ್ದೇವೆ.

ಕಳೆದ ೧೯ ವರ್ಷಗಳಲ್ಲಿ ನಿಶಸ್ತ್ರೀಕರಣ ಸಾಧನೆಗೆ ನಡೆದ ಯತ್ನಗಳು ಫಲಪ್ರದವಾಗಿಲ್ಲವಾದರೂ ಭಾರತವು ಈ ದಿಶೆಯಲ್ಲಿ ತನ್ನ ಯತ್ನಗಳನ್ನು ಮುಂದುವರಿಸಿದೆ. ಪರಿಣಾಮಕಾರಿಯಾದ ಅಂತಾರಾಷ್ಟ್ರೀಯ ಹತೋಟಿಯಲ್ಲಿ ನಿಶಸ್ತ್ರೀಕರಣ ಸಾಧನೆಗೆ ಯತ್ನಿಸುತ್ತಿದೆ. ಅಣ್ವಸ್ತ್ರ ಪ್ರಯೋಗಗಳನ್ನು ಭಾಗಶಃ ನಿಷೇಧಿಸಲು ಮಾಸ್ಕೋದಲ್ಲಿ ಒಪ್ಪಂದ ಏರ್ಪಟ್ಟಾಗ ಆ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳಲ್ಲಿ ಭಾರತವೇ ಮೊದಲನೆಯದು.

ವಿಶ್ವದ ಅಭ್ಯುದಯಕ್ಕಾಗಿ ಅಣುಶಕ್ತಿಯ ಬಳಕೆಯಾಗಬೇಕೆಂದು ಭಾರತವು ಪ್ರತಿಪಾದಿಸುತ್ತಿದೆ. ಭಾರತವು ಮನಸ್ಸು ಮಾಡಿದರೆ, ಅಣುಬಾಂಬನ್ನು ತಯಾರಿಸಬಲ್ಲದು. ಅದು ಅಷ್ಟು ಕಷ್ಟದ ಕೆಲಸವಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದ ರಾಷ್ಟ್ರ ಬೇಗಾ ಈ ಬಗೆಯ ವಿನಾಶಕಾರಿ ಅಸ್ತ್ರಗಳನ್ನು ತಯಾರಿಸುತ್ತದೆಯಲ್ಲದೆ, ಸ್ಫೋಟಗೊಳಿಸಿ ಬೆದರಿಕೆ ಹಾಕುತ್ತದೆ.

(ಹದಿಮೂರನೇ ಪುಟ ನೋಡಿರಿ)

ಸರಕಾರಿ ಕೃಷಿ ಶಾಲೆಯ ವಿದ್ಯಾರ್ಥಿಗಳು ಸ್ವಯಂಸ್ಫೂರ್ತಿಯಿಂದ ಗೋರಖಪುರದ ಬಳಿ ಬಾವಿಯೊಂದನ್ನು ತೋಡುವುದರಲ್ಲಿ ನೈಮರೆತಿದ್ದಾರೆ. ಅವರ ಉತ್ಸಾಹ ಇತರರಿಗೆ ಮಾರ್ಗದರ್ಶಕ.

ಬಿಹಾರದ ಈ ಹಳ್ಳಿಯಲ್ಲಿ ಬರಗಾಲ ಕಂಡಾವಳಿ ತಾಳಿದೆ. ಒಣಗಿ ಕಡ್ಡಿಯಾದ ತನ್ನ ಗದ್ದೆಯನ್ನು ಹಳ್ಳಿಗ ಕಂಡು ಕಣ್ಣೀರು ಮಿಡಿಯುತ್ತಿದ್ದಾನೆ.

ಆತ್ಮ ತ್ಯಾಗ

(ಎರಡನೇ ಪುಟದಿಂದ)

ರೂ ಒದಗುತ್ತ ನಡುಗುವ ಸ್ವರದಲ್ಲಿ ಅವರೆಂದರು— 'ಸಂಯಮರಾಯ್!'

'ಏನಿಲ್ಲ ಮಹಾರಾಜ್!' ಸಂಯಮರಾಯನು ಪ್ರತ್ಯುತ್ತರ ನೀಡುತ್ತಾ ಹೇಳಿದನು— 'ಶರೀರದ ಅಂತಿಮ ಗಳಿಗೆಯನ್ನಾದರೂ ತಾವು ಸುಖದಲ್ಲಿ ಕಳೆಯಲಿ ಎಂದು ಈ...'

ಪೃಥ್ವೀರಾಜನು ಮೂಕನಾಗಿದ್ದನು. ಸಂಯಮರಾಯನ ಈ ಆತ್ಮತ್ಯಾಗದಿಂದೊಡಗೂಡಿದ ಮಾತನ್ನು ಕೇಳುತ್ತಲೆ ಹೃದಯವು ಉಕ್ಕಿ ಚೆಲ್ಲುತ್ತಲೇ ಅವರ ಅಶಕ್ತ ಶರೀರವು ಈ ತಮ್ಮ ಸೈನಿಕನೊಬ್ಬನ ತ್ಯಾಗಭಾರವನ್ನು ಸಹಿಸಲಾರದೇ ಹೋಯಿತು. ಪೃಥ್ವೀರಾಜರು ಈ ದೃಶ್ಯವನ್ನು ಕಂಡು ಸಹಿಸಲಾರದೇ ಭಾವೋದ್ವೇಗಗೊಂಡು ಮೂರ್ಛಿತರಾದರು. ಆದರೆ ಅವರು ಕಣ್ತೆರೆಯುತ್ತಲೆ ತಮ್ಮ ಶಿಬಿರದಲ್ಲಿರುವುದನ್ನು ಕಂಡರು. ಅವರು ಒಮ್ಮೆಲೆ ವಿಸ್ಮಯಪೂರ್ವಕವಾಗಿ ಅತ್ತಿತ್ತ ಕಣ್ಣೊರಳಿಸಿ ನೋಡುತ್ತಾ ಬೊಬ್ಬಿಟ್ಟರು — "ಸಂಯಮರಾಯ್!"

ಪೃಥ್ವೀರಾಜರ ಸಮೀಪದಲ್ಲೇ ಚಂದಬರದಾಯೀ, ಗುರುರಾಮ ಮತ್ತು ಮಂತ್ರಿ ಕೈಮಾಸ ಮೊದಲಾದವರು ಉಪಸ್ಥಿತರಿದ್ದರು. 'ಯಾರೂ ಪೃಥ್ವೀರಾಜರ ಮಾತಿಗೆ ಉತ್ತರವೀಯಲಿಲ್ಲ. ನೆರೆದವರೆಲ್ಲರ ಕಣ್ಣಲಿ 'ಸಂಯಮರಾಯ'!' ಎನ್ನುತ್ತಲೆ ಕಣ್ಣೀರು ಮಾತ್ರವೇ ಹರಿಯುತಿದ್ದುದು ಕಂಡು ಬಂತು. ಪೃಥ್ವೀರಾಜರ ಕಣ್ಗಳಿಂದಲೂ ಎರಡು ಹನಿ ಬಿಸಿಯಾದ ಅಶ್ರುಗಳು ಹರಿದುವು. ಕಣ್ಣಿಂದ ಬಿದ್ದ ಆ ಎರಡು ಬಿಂದುಗಳಲ್ಲಿ ಸಂಯಮರಾಯನ ಕುರಿತಾದ ಗೌರವಾದರವೇ ತುಂಬಿತ್ತು! ಎಷ್ಟೆಂದು ಯಾರು ಹೇಳಬಲ್ಲರು!!

ಪೃಥ್ವೀರಾಜನು ಕೊನೆಗೆ ಸಂಯಮರಾಯನ ವಂಶಜರಿಗೆ ಸಾವಿರ ಪೀಳಿಗೆಗೆ ಬೇಕಾಗುವಷ್ಟು ಧನ ದಾನವಿತ್ತರೆಂದು ತಿಳಿದು ಬರುತ್ತದೆ. ಆದರೆ ಸಂಯಮರಾಯನ "ಆತ್ಮತ್ಯಾಗ"ದೆದುರು, ಸ್ವಾಮಿ—ಭಕ್ತಿ'ಯ ಎದುರು ದಾನವಿತ್ತರೂ ಅದು ತುಚ್ಛವೇ!

(ಹಿಂದೀ ಕಥೆಯೊಂದರ ಅನುವಾದ)

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 550/66.

ಶ್ರೀಧರ ಭಟ್ಟ —ವಾದಿ.

vs

ರಾಮಣ್ಣ ಗೌಡ ಸಹಾ—ಪ್ರತಿವಾದಿಗಳು.

೫. ಅನಂತ, ರಾಮಣ್ಣ ಗೌಡರ ಮಗ, ಬಂಟ್ವಾಳ ತಾಲ್ಲೂಕು ವಿಟ್ಲಮುಡ್ನೂರು ಗ್ರಾಮದ ಡೆಚ್ಚಾರು.

ಇವರಿಗೆ—

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ನಿಂಸು ಹಾಜರಾತಿ ಬಗ್ಗೆ ತಾರೀಖು 15—2—1967ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಹ ವಕೀಲರ ದ್ವಾರಾ ಹಾಜರಾಗಿ ಉತ್ತರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order,

Sd/- K. Rama Bhat.

Advocate for plaintiff.

ಪುತ್ತೂರು, ತಾ. 19—1—1967.

ಗೋವಿನ ಗೋಳು—ದೇಶದ ದುರದೃಷ್ಟ

(ಏಳನೇ ಪುಟದಿಂದ)

ನೇ ನಿಲ್ಲದೆ ತಮ್ಮ ಆಹಾರಮಂತ್ರಿಯವರು (ಹೆಸರು—ಕೃಷ್ಣಪ್ಪ!) ಗೋಮಾಂಸವನ್ನು ತಿನ್ನಲು ಜನತೆಗೆ ಕರೆ ಇತ್ತಿರುವದನ್ನು ಬೆಂಬಲಿಸುತ್ತ, ಗೋಮಾಂಸವನ್ನು ತಿನ್ನಲು ವೇದಗಳೇ ಹೇಳುತ್ತಿವೆಯೆಂದು, ಆಧುನಿಕ ವೇದವ್ಯಾಸರೇ ತಾವು ಎಂಬಂತೆ ಹೇಳಿರುವರು. ಕಪೋಲ ಕಲ್ಪಿತ ವೇದ ಪಂಡಿತರ ವೇದಿಕೆಯನ್ನೇ ಇವರೂ ಏರಿರುವರು. ವೇದಗಳಲ್ಲೆಲ್ಲೂ ಗೋವಧೆ ನಡೆಸಬೇಕೆಂದು ಹೇಳಿರುವದಿಲ್ಲ. ಅದರ ಬದಲು ಗೋಹತ್ಯೆಯನ್ನು ಮಹಾಘೋರ ಪಾತಕಗಳಲ್ಲಿ ಒಂದೆಂದು ತಿಳಿಸಲಾಗಿರುತ್ತದೆ.

ಗೋವಧೆಯನ್ನು ಪ್ರತಿಬಂಧಿಸಲು ಒಪ್ಪದಿರುವ ಪ್ರಾಂತ್ಯಗಳಲ್ಲಿ ಬಂಗಾಲವೂ ಒಂದು. ಅಲ್ಲಿ ಹಿಂದೊಮ್ಮೆ ಆಚಾರ್ಯ ಪ್ರಫುಲ್ಲಚಂದ್ರರವರು ಮಹಾತ್ಮ ಮೋಹನದಾಸ ಕರಂಚಂದರವರ ಬಳಿ "ಪ್ರಯೋಜನಕ್ಕೆ ಬಾರದ ಗೋವಂಶ'ದ ಹಾಗೂ ವೇದಗಳಲ್ಲಿ ಗೋಮಾಂಸ ಭಕ್ಷಣದ ಕುರಿತು ಹೇಳಿದಾಗ ಮಹಾತ್ಮ ಗಾಂಧೀಜೀಯವರು ಕಕ್ಕಂತೆ ಉತ್ತರವಿತ್ತರು. ಒಂದು ವೇಳೆ ವೇದಗಳು ಗೋವಧೆಯನ್ನು ಒಪ್ಪಿದ್ದರೂ ಕೂಡಾ ನಂತರದ ಋಷಿಗಳು ಗೋಮಾಂಸ ಭಕ್ಷಣ ಯೋಗ್ಯವಲ್ಲವೆಂಬುದನ್ನು ಕಂಡುಕೊಂಡು ಪುರಾಣಗಳ ಮೂಲಕ ಗೋವಧೆಯು ನಿಷೇಧಾರ್ಹವೆಂದು ತಿಳಿಸಿರುವರೆಂದು ಮಹಾತ್ಮ ಗಾಂಧೀಜೀಯವರು ಆಚಾರ್ಯ ಪ್ರಫುಲ್ಲ ಚಂದ್ರರವರಿಗೆ ಹೇಳಿ, ಗೋವಧೆ ಹಾಗೂ ನರಹತ್ಯೆಯಲ್ಲಿ ವ್ಯತ್ಯಾಸವೇ ಇಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಗಾಂಧೀ ಭಕ್ತರೆಂದು ಹೇಳಿಕೊಳ್ಳುತ್ತಿರುವ ಶ್ರೀ ನಿಜಲಿಂಗಪ್ಪ ಹಾಗೂ ಚಂದ್ರಹಾಸರೆಲ್ಲರೂ ಗಾಂಧೀಜಿಯವರ ಮಾತಿಗೆ ಕಿಂಚಿತ್ತು ಬೆಲೆಕೊಡದೆ ಅದಕ್ಕೆ ವಿರುದ್ಧವಾಗಿ ನಡೆಯುತ್ತಿರುವದು ದೇಶದ ದುರ್ದೈವವೇ ಸರಿ.

ಗೋವಿನ ಗೋಳನ್ನು ಸಹಿಸಲಾರದೆ ಗುಬ್ಬಚ್ಚಿಗಳನ್ನು ಗಿಡುಗಗಳನ್ನಾಗಿ ಗುರು ಗೋವಿಂದ ಸಿಂಘರು ಪರಿವರ್ತಿಸಿದ್ದಲ್ಲಿ, ಇಂದು ಅವರ ಹೆಸರನ್ನು ಹೇಳಿಕೊಂಡು ಮತೀಯ ಮಾರಾಮಾರಿಗೆ ಮುಂದಾಳಾಗಿರುವ ಮಾಸ್ಟರ್ ತಾರಾಸಿಂಘರು ಗೋವಧೆಯನ್ನು ನಿಷೇಧಿಸಬೇಕೆಂದು ಪ್ರಚಾರ ನಡೆಸುತ್ತಿರುವರೆ. ರಾಜಕೀಯದ ರಾಡಿಯಲ್ಲಿ ತೊಳಲಾಡುತ್ತಿರುವ ಮಾಸ್ಟರ್ ತಾರಾಸಿಂಘರ ಕಿವಿಗಳಿಗೆ ಗೋವಿನ ಗೋಳು ಬಿದ್ದಿಲ್ಲವೆಂದು ಕಾಣುತ್ತದೆ.

ಶ್ರೀ ರಂಗಾ, ಶ್ರೀ ಮಸಾನಿ ಹಾಗೂ ಗುಜರಾಥಿನ ಸ್ವತಂತ್ರ ಪಾರ್ಟಿ ಗೋವಧಾ ನಿಷೇಧ ಕಾನೂನನ್ನು ತಾವು ಅಧಿಕಾರಕ್ಕೆ ಬಂದೊಡನೆ ತರುವದಾಗಿ ಹಿಂದ ಕಾಂಗ್ರೆಸ್ ಹೇಳುತ್ತಿದ್ದಂತೆ ಹೇಳುತ್ತಿರುವರಾದರೂ ಸ್ವತಂತ್ರ ಪಾರ್ಟಿಯ ಚಕ್ರವರ್ತಿ ಮ.ಹುಲೆಯುರು ಕಾನೂನು ತರಕೂಡದೆಂದು ತಂಟೆ ತೆಗೆಯುತ್ತಿದ್ದಾರೆ!

ರಾಜಕೀಯ ರಂಗಭೂಮಿಯ ನಾಯಕರು ತಂದಿಗೆ ತಮಗೆ ಸರಿ ತೋರಿದ ಸರಿ ಇದ್ದಿತೆಂದು ಹೇಳುತ್ತ ತಮ್ಮ ತಮ್ಮ ಪಾತ್ರಗಳ ಭದ್ರತೆಗಾಗಿ ಬಡಿದಾಡಿಕೊಳ್ಳುತ್ತಿರುವಾಗ, ಗೋವಂಶದ ಗೋಳನ್ನು ಸಹಿಸಿಕೊಳ್ಳಲಾರದ ಸಾಧು ಸಂತರು ಹಾಗೂ ಅನ್ಯಾನ್ಯ ಗೋಭಕ್ತರು ಪವಿತ್ರ ಪ್ರಯಾಗ ಕ್ಷೇತ್ರದಲ್ಲಿ ಒಂದಾಗಿ ಸೇರಿ ಗೋಹತ್ಯೆಯನ್ನು ನಿಲ್ಲಿಸುವ ಸಲುವಾಗಿ ತೀರ್ಮಾನಿಸಿಕೊಂಡರು, ಕಾರ್ಯಪ್ರವೃತ್ತರಾದರು. ಆಗಿನ ಗೃಹಮಂತ್ರಿ ಶ್ರೀ ಗುಲ್ಜಾರೀಲಾಲ್ ನಂದಾರವರನ್ನು ಮನೆಗೆ ಕಳುಹಿಸಲು ಹೊಂಚು ಹಾಕುತ್ತಿದ್ದ ಗುಂಪು ರಾಜಕೀಯ ಗಡಂಗಿನ ಖದೀಮರಿಗೆ ದೊಂದು ಸುವರ್ಣ ಸಮಯ ಸಿಕ್ಕಿತು. ಅವರ ಕೈ ಮೇಲಾಯ್ತು. ನಾಯಕರು ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಸಾಯುತ್ತಿರುವ ದನಕರುಗಳನ್ನುಳಿಸಲು ಪ್ರಯತ್ನಿಸಬೇಕೆಂದೂ ಉಪದೇಶ ಮಾಡಲಾರಂಭಿಸಿದರು. ಗೋಹತ್ಯಾ ನಿಷೇಧ ಕಾನೂನು ತರಲು ತಾನು ಪೂರ್ಣ ಮನಸ್ಸಿನಿಂದ ಪ್ರಯತ್ನಿಸುವೆನೆಂದು ಶ್ರೀ ಸದೋಬಾ ಪಾಟೀಲರು ಹೇಳಿರುವರಾದರೂ ಶ್ರೀಮತಿ ಇಂದಿರಾ ಹಾಗೂ ಶ್ರೀ ಯಶವಂತ ಚವ್ಹಾಣರು ಇನ್ನೇನೇನೋ ಚಡಪಡಿಸುತ್ತಿದ್ದಾರೆ.

ನಡುಗುತ್ತಿರುವ ತಮ್ಮ ಕಾಲುಗಳ ಭದ್ರತೆಗಾಗಿ ಗೋಹತ್ಯಾ ಉನ್ಮತ್ತರು ವೇದಗಳತ್ತವೂ, ತಕ್ಕ ಬದಲಿತ್ತರು. ವೇದಗಳು ಗೋಹತ್ಯೆಯನ್ನು ನಿಷೇಧಿಸಿದ್ದು, ಗೋಹಂತಕರನ್ನು ಯಮಾಲಯಕ್ಕೆ ಕಳುಹಿಸಲು ಆದೇಶಿಸುತ್ತಿದೆಯೆಂದೂ, ದನವು ನಿಷ್ಪ್ರಯೋಜಕವೆಂದು ಪರಿಗಣಿಸುವವರನ್ನು ಹಾಗೂ ದನದ ಮಾಂಸವನ್ನು ಅಡುಗೆ ಮಾಡಿದವರನ್ನೂ, ಅವರ ವಂಶಜರನ್ನೂ ಭಗವಂತನು ಭಿಕ್ಷುಕರನ್ನಾಗಿಸುತ್ತಾನೆಂದು ಅಥರ್ವ ವೇದ ಅರುಹುತ್ತಿರುವದನ್ನೂ, ಯಾವ ದೇಶದಲ್ಲಿ ಗೋವಿನ ರಕ್ತ ಬೀಳುತ್ತದೋ ಅಲ್ಲಿ ಬರಗಾಲ, ಕ್ಷಾಮ-ಡಾಮರ, ಬಡತನ, ರೋಗರುಜನ, ಮಾನಸಿಕ ಅಶಾಂತಿ, ಯಾದವೀ ಕಲಹಾದಿಗಳು ತಪ್ಪುವದಿಲ್ಲವೆಂದು ವೇದಗಳು ವಿವರಿಸುತ್ತವೆಯೆಂಬುದನ್ನು ಅವರು ಸ್ಪಷ್ಟ ರೀತಿಯಲ್ಲಿ ಗೋಹತ್ಯಾಪ್ರೇಮಿಗಳಿಗೆ ತಿಳಿಸಿದರು. ಆದರೇನು ಫಲ! ಬಂಡೆಯ ಮೇಲೆ ಹಾಲಿನ ಮಳೆ ಯಾವ ಪುರುಷಾರ್ಥ ಪ್ರಯೋಜನ ಇದೆಯೋ!

ಇವೆಲ್ಲ ಗೋಹತ್ಯಾ ಪ್ರೋತ್ಸಾಹಕರ ಶಿಬಿರದಲ್ಲಿ ನಡೆಯುತ್ತಿರುವದು. ಇತ್ತ ಗೋಹತ್ಯಾ ವಿರೋಧಿಗಳ ಶಿಬಿರದಲ್ಲಿ ನಡೆಯುತ್ತಿರುವದಾದರೂ ಏನು? ಗೋವರ್ಧನ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯ ನಿರಶನ ವ್ರತಕ್ಕೆ ಜಯವಾಗಲೆಂದು ಹಾರೈಸಿದ್ದ ಅನ್ಯಾನ್ಯ ಮಠಾಧೀಶರೆಂದು ನಿರಶನ ವ್ರತವನ್ನು ನಿಲ್ಲಿಸಿರೆಂದು ನಿವೇದನೆ ಮಾಡಿದರಾಗಿ ತಂತಿ ಕಳುಹಿಸಲಾರಂಭಿಸಿರುವರು. ಗೋರಕ್ಷಾ ಅಭಿಯಾನ ಸಮಿತಿಯು ನಿರ್ಣಯಿಸಿದ್ದ ಸಮಿತಿಯ ನಿಧಿಯೊಳಗಿನ ಧನಾಪಹಾರವಾಯಿತೆಂದು ಪತ್ರಿಕೆಗಳು ದಪ್ಪಕ್ಷರಗಳಲ್ಲಿ ಪ್ರಕಟಿಸುತ್ತಿವೆ. [ಧನಾಪಹಾರವಾಯಿತೆಂದು ಮುನಿ ಸುಶೀಲಕುಮಾರ ಜೈನರು ಸ್ಪಷ್ಟವಾಗಿ ಸೂಚಿಸಿರುವರು.] ಅಷ್ಟೇ ಅಲ್ಲ ಪುರಿ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರ ಹೆಸರನ್ನು ಹೇಳುತ್ತ ರಾಜಕೀಯ ಬಂಡವಾಳವನ್ನು ಬೆಳೆಸಿಕೊಳ್ಳಲು ಕೆಲ ರಾಜಕೀಯ ಪಕ್ಷಗಳು ಪ್ರಯತ್ನಿಸುತ್ತಿವೆ. ಚುನಾವಣೆಯ ಚಂಡಮಾರುತ ಬೀಸುತ್ತಿರುವಾಗ ಗೋವಿನ ಗೋಳು ಬೀಳುವದಾದರೂ ಯಾರ ಕಿವಿಗೆ?

ಹಾಗಿದ್ದರೂ, ರಾಜಕೀಯ ಅಂಧಕಾರ ಆವರಿಸಿದೆಯಾದರೂ, ಅಲ್ಲೊಂದು ಇಲ್ಲೊಂದು ದಾರಿದೀಪ ದಾರಿ ತೋರಿಗೆ ಧೈರ್ಯವೀಯುತ್ತಿವೆ. ಜಯಪ್ರಕಾಶ ನಾರಾಯಣ, ವಿನೋಬಾ, ಸೇಠ್ ಗೋವಿಂದದಾಸ್, ಗುಲ್ಜಾರೀಲಾಲ್ ನಂದಾ, ಥೇಬರ್, ಕಮಲನಯನ ಬಜಾಜ್, ಪ್ರಕಾಶವೀರ ಶಾಸ್ತ್ರಿ, ಅಣೆ, ರಂಗಾ ಮಸಾನಿ, ಯಚ್. ವಿ. ಕಾಮತ್, ಮಣಿರಾಂ ಬಾಗ್ರಿ....ಹೀಗೆ ಅನ್ಯಾನ್ಯ ಪಕ್ಷಗಳಲ್ಲಿರುವವರೂ, ಪಕ್ಷೇತರರೂ (ಆದಕ್ಕಿಂತಲೂ ಗೋಭಕ್ತರು) ಗೋಹತ್ಯೆಯನ್ನು ತಡೆಯುವದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಗೋವಿನ ಗೋಳು ಅವರ ಕಿವಿಯ ಮೇಲೆ ಬಿದ್ದಿರುತ್ತದೆ. ಆಲ್ಲಿ, ಪ್ರಜಾಪ್ರಭುತ್ವದಲ್ಲಿರುವ ಪಾಮರ ಪ್ರಜೆಗೇನೂ ಹೊಣೆ ಇಲ್ಲವೆ? ಗೋವಿನ ಗೋಳನ್ನು ನಿಲ್ಲಿಸಲು, ಗೋಮಾತೆಯ ಕಣ್ಣೀರೊರೆಸಲು ಅವನೇನು ಮಾಡಲು ಸಾಧ್ಯ! ದೇಶದ ಅದೃಷ್ಟವನ್ನು ಬದಲಾಯಿಸಲು ಅವನೇನು ಮಾಡಬಹುದು? ಮತದಾನದ ಮಹಾನ್ ಹಕ್ಕಿರುವ ಪ್ರತಿಯೊರ್ವ ಗೋಭಕ್ತನೂ ಮತಾಪೇಕ್ಷಿಗಳ ಬಳಿ ಖಡಾಖಂಡಿಯಾಗಿ ಒಂದು ವಿಷಯವನ್ನು ಕೇಳಬೇಕು ಆರಿಸಿ ಬಂದಲ್ಲಿ ಗೋಹತ್ಯಾ ನಿರೋಧಕಾನೂನು ಬರುವಂತೆ ನಮ್ಮೆಲ್ಲರ ಪರವಾಗಿ (ವಿಧಾನ ಸಭೆ ಅಥವಾ, ಲೋಕ ಸಭೆಯಲ್ಲಿ) ಪ್ರಯತ್ನಿಸುವೆಯಾ? ಹೌದೆಂದು ಅಂತಃರಾಳದಿಂದ ಪೂರ್ಣ ಮನಸ್ಸಿನಿಂದ ಮಾತು ಕೊಡುವವರಿಗೇನೇ ನಮ್ಮ ಮತವೀಯಲಾಗಬೇಕು ಎನ್ನುತ್ತಾರೆ ಶ್ರೀ ಗುರೂಜಿ. ಪಕ್ಷಭೇದವು ನಮ್ಮ ಧ್ಯೇಯವನ್ನು ಬೇಧಿಸದಿರಲಿ. ಗೋಹತ್ಯೆಯ ಪ್ರಶ್ನೆಯು ದೇಶದ ಸ್ವಾಭಿಮಾನ ಹಾಗೂ ಆತ್ಮಗೌರವದ ವಿಷಯವೇ ಇರುವದರಿಂದ ಗೋಭಕ್ತ ಅಭ್ಯರ್ಥಿಗಳು ಯಾವ ಪಕ್ಷದವರೇ ಇರಲಿ ಅವರಿಗೆ ಮತದಾನ ಮಾಡುವದೆಂದರೆ ನಮ್ಮ ಆತ್ಮಗೌರವವನ್ನು ಹೆಚ್ಚಿಸಿಕೊಳ್ಳುವದೇ ಇದೆ.

ಜೋಡೆತ್ತಿನ ಚಿನ್ಹೆಯನ್ನಿಟ್ಟುಕೊಂಡಿರುವ ಕಾಂಗ್ರೆಸ್ಸು ಇನ್ನೂ ಗೋಹತ್ಯಾ ನಿರೋಧ ಕಾನೂನನ್ನು ಪ್ರಯೋಗಕ್ಕೆ ತಂದಿಲ್ಲವೆಂದಲ್ಲ, ಅದು ಎತ್ತುಗಳ ಕುತ್ತಿಗೆಯ ಮೇಲೆ ನೊಗವನ್ನಿಟ್ಟಿರುವದಲ್ಲ ಕತ್ತಿಯನ್ನೇ ಇಟ್ಟಿರುತ್ತದೆನ್ನಲೇ ಬೇಕಾಗುತ್ತದೆ. ಮಧ್ಯಪ್ರದೇಶದ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ತಂದಿರುವಂತೆ ಈಗಾದರೂ ಭಾರತದ ರಾಷ್ಟ್ರಾಧ್ಯಕ್ಷರು ಸುಗ್ರೀವಾಜ್ಞೆಯನ್ನು ತಂದು ಭಾರತದ ಆತ್ಮಗೌರವವನ್ನು ಸಂಧುಸಂತರ ಪ್ರಾಣಗಳನ್ನೂ ಉಳಿಸಬೇಕು. ಅಂದರೆ ಕಾಂಗ್ರೆಸ್ಸಿನ ಕಾಲನ್ನೇ ಆದು ಭದ್ರಗೊಳಿಸುವದಿದೆ. ಅದೃಷ್ಟಯೆಂದಲೂ ಸುಗ್ರೀವಾಜ್ಞಾ ಅತ್ಯಾವಶ್ಯಕ. ಏನೇ ಇರಲಿ, ಗೋವಿನ ಗೋಳನ್ನು ಪರಿಹರಿಸಿ, ದೇಶದ ಅದೃಷ್ಟವನ್ನು ಬದಲಾಯಿಸಲೇಬೇಕು.

READ &
ADVERTISE IN
NAVAYUGA WEEKLY

ತುಳುನಾಡಿನ ದೇವಾಲಯಗಳ ಸಂಕ್ಷಿಪ್ತ ಐತಿಹಾಸಿಕ ಪರಿಚಯ

(ಆರನೇ ಪುಟದಿಂದ)

ವನ್ನೊಳಗೊಂಡಿವೆ. ಇದರಿಂದ ಈ ದೇವತೆವು 'ಈಶ್ವರ' (ಸ್ವಸ್ತಿ ಶ್ರೀ ಈಶ್ವರನ್) ಎಂಬುದಾಗಿ ಸ್ಪಷ್ಟವಾಗುತ್ತದೆ.

ಚತುರಸ್ರ ದೇವಾಲಯಗಳು ಬಹಳವಾಗಿವೆ. ಇವುಗಳಲ್ಲಿ ವೈಶಿಷ್ಟ್ಯವೇನೂ ಕಂಡು ಬರುವುದಿಲ್ಲ. ಆದರೆ ಈ ತೆರನಾದ ಎಲ್ಲಾ ದೇವಾಲಯಗಳಲ್ಲಿ ಗರ್ಭಗೃಹದ (Sanctum santorum) ಒಂದು ಕತ್ತಲೆ ಪ್ರದಕ್ಷಿಣ ಪಥ (dark circum-ambulatory passage) ಇದ್ದೇ ಇದೆ. ನಾನು ನಿರ್ಧರಿಸಿದ ಪ್ರಕಾರ ಕಾಲಕ್ರಮವಾಗಿ ಈ ಕೆಳಗಿನ ದೇವಗೃಹಗಳು ಪ್ರಾಮುಖ್ಯತೆಯನ್ನು ಪಡೆದಿವೆ. ವಡ್ಡರ್ಸೆ ಮಹಾದೇವನ ದೇವಾಲಯ (ಸು. 8ನೇ ಶತಕ) ಉಳ್ಳಾಳ ಶ್ರೀ ಸೋಮನಾಥೇಶ್ವರ ದೇವಾಲಯ (ಸು. 9—10ನೇ ಶತಕ), ಕುಂಬಳೆಯ ಅನಂತಪುರ ಶ್ರೀ ಅನಂತಪದ್ಮನಾಭ ದೇವಾಲಯ (ಸು. 10ನೇ ಶತಕ), ನೀಲಾವರ ಶ್ರೀ ದುರ್ಗಾ ಭಗವತೀ ದೇವಾಲಯ (ಸು. 10—11ನೇ ಶತಕ), ಮಂಗಳೂರಿನ ಮಂಗಳಾದೇವಿ ದೇವಸ್ಥಾನ (ಸು. 10ನೇ ಶತಕ), ಕದ್ರಿ ಶ್ರೀ ಮಂಜುನಾಥ ದೇವಾಲಯ (ಸು. 10—11ನೇ ಶತಕ); ಕುಂಬಳೆ ಶ್ರೀ ಗೋಪಾಲಕೃಷ್ಣ ದೇವಾಲಯ (ಸು. 10—11ನೇ ಶತಕ), ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಾಲಯ (ಸು. 10—11ನೇ ಶತಕ), ಕುಂಜೂರು ಶ್ರೀ ಮಹಿಷ ಮರ್ದಿನಿ ದೇವಸ್ಥಾನ (ಸು. 10ನೇ ಶತಕ). ಉಡುಪಿಯ ಸಮೀಪ ಕೊಡವೂರು ಎಂಬಲ್ಲಿಯ ಶ್ರೀ ಶಂಕರ ನಾರಾಯಣ ದೇವಾಲಯ (ಸು. 10—11 ನೇ ಶತಕ), ಮೂಲ್ಕಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ (ಸು. 10—11ನೇ ಶತಕ); ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯ (ಸು 10—11ನೇ ಶತಕ), ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಾಲಯ (ಸು. 10—11ನೇ ಶತಕ), ಅಂಬಲಪಾಡಿಯ ಶ್ರೀ ಜನಾರ್ದನ ದೇವಾಲಯ (ಸು. 11—12ನೇ ಶತಕ) ಕುಂಜಾರಿನ ಶ್ರೀ ಮಹಿಷಮರ್ದನ ದೇವಾಲಯ [ಸು. 11—12ನೇ ಶತಕ], ಬಾರ್ಕೂರು ಶ್ರೀ ಪಂಚಲಿಂಗೇಶ್ವರ ದೇವಾಲಯ (ಸು. 11-12ನೇ ಶತಕ), ಬಸರೂರಿನ ಶ್ರೀ ನಖರೇಶ್ವರ ದೇವಾಲಯ [ಸು. 11-12ನೇ ಶತಕ), ಕಾಂತಾವರದ ಶ್ರೀ ಕಾಂತೇಶ್ವರ ದೇವಾಲಯ (ಸು. 11—12ನೇ ಶತಕ) ಎರ್ಮಾಳು, ಕಾಪು ಶ್ರೀ ಜನಾರ್ದನ ದೇವಾಲಯಗಳು, ಕುಂದಾಪುರದ ಕುಂದೇಶ್ವರ ದೇವಾಲಯ (ಸು. 12ನೇ ಶತಕ), ಬಾರ್ಕೂರಿನ ಮೂಡುಕೇರಿಯ ಶ್ರೀ ಮಹಾಲಿಂಗೇಶ್ವರ ದೇವಾಲಯ (ಸು. 11—12ನೇ ಶತಕ), ಮಯ್ಯೂರಿನ ಶ್ರೀ ಮಹಾದೇವನ ದೇವಾಲಯ (ಸು. 12ನೇ ಶತಕ) — ಈ ದೇವಾಲಯಗಳು ಚತುರಸ್ರ ಆಕಾರದವುಗಳಾಗಿವೆ, ಇಲ್ಲಿ ಕೆಲವನ್ನೇ ಆರಿಸಿ ಉದಾಹರಿಸಿದ್ದೇನೆ. ಇವೆಲ್ಲ 8—9ನೇ ಶತಕದಿಂದ 11—12ನೇ ಶತಕದ ಅವಧಿಯಲ್ಲಿ ನಿರ್ಮಿತವಾದುವುಗಳೆನ್ನಬಹುದು. ಕೆಲವು ದೇವಾಲಯಗಳು ಸ್ವಲ್ಪ ಅಥವಾ ಸಂಪೂರ್ಣ ಪುನರ್ನಿರ್ಮಾಣ ಹೊಂದಿವೆ.

ದೀರ್ಘ ಚತುರಸ್ರ ದೇವಾಲಯಗಳು ಬಹಳ ಕಡಿಮೆ. ಶಂಕರನಾರಾಯಣದ ಶ್ರೀ ಹರಿಹರ ದೇವಾಲಯ (ಸು. 12-13ನೇ ಶತಕ), ಉಡುಪಿ ಬೈಲೂರಿನ ಶ್ರೀ ಮಹಿಷಾಸುರಮರ್ದಿನಿ ದೇವಾಲಯ (ಸು. 12—13ನೇ ಶತಕ), ಉದ್ಯಾವರದ ಶ್ರೀ ಗಣೇಶನ ದೇವಾಲಯ (14—15ನೇ ಶತಮಾನ), ಮಂಗಳೂರಿನ ಅತ್ತಾವರದ ಶ್ರೀ ಗೋಪೀನಾಥ ದೇವಾಲಯ (ಸು. 11—12ನೇ ಶತಕ)— ಈ ದೇವಾಲಯಗಳು ದೀರ್ಘ ಚತುರಸ್ರ ವರ್ಗಕ್ಕೇ ಸೇರುತ್ತವೆ. ಈ ರೀತಿಯ ದೇವಗೃಹಗಳಲ್ಲಿ ಕತ್ತಲೆ ಪ್ರದಕ್ಷಿಣ ಪಥವಿದ್ದಂತೆ ಕಂಡು ಬರುವುದಿಲ್ಲ.

ಮಂಡಲಾಕಾರದ ದೇವಗೃಹಗಳೂ ಅತಿ ವಿರಳ. ನನಗ ತಿಳಿದ ಮಟ್ಟಿಗೆ ಫಲಿಮಾರಿನಲ್ಲಿ ಶ್ರೀ ಜನಾರ್ದನ ದೇವಾಲಯ (ವ್ಯವಹಾರದಲ್ಲಿ ವಿಷ್ಣುಮೂರ್ತಿ ಎನ್ನುತ್ತಾರೆ). ಎಡಪ್ಪದವು ಶ್ರೀ ವಿಷ್ಣುಮೂರ್ತಿ ದೇವಾಲಯ ಹಾಗೂ ಉಡುಪಿಯ ಸಮೀಪವಿರುವ ಬೆಳ್ಳೆ ಗ್ರಾಮದಲ್ಲಿರುವ ಶಿವಾಲಯದ ಉಪಗೃಹವಾದ ಶ್ರೀ ಸೂರ್ಯ ದೇವಾಲಯ—ಇವೇ ಎನ್ನಬಹುದು. ಫಲಿಮಾರಿನ ದೇವಾಲಯವು ಬಹಳ ದುಸ್ಥಿತಿಯಲ್ಲಿದೆ. ಇದರಲ್ಲಿರುವ ಜನಾರ್ದನ ಮೂರ್ತಿಯು ಬಹಳ ಸುಂದರವಾಗಿದ್ದು ಸುಮಾರು 800 ವರ್ಷಗಳ ಹಿಂದಿನ ಶಿಲ್ಪವನ್ನು ತೋರಿಸುತ್ತದೆ.

ಒಂದೆರಡು ವಿಶಿಷ್ಟ ವೈಶಿಷ್ಟ್ಯವುಳ್ಳ ದೇವಗೃಹಗಳ ಉಲ್ಲೇಖವನ್ನಿಲ್ಲಿ ಮಾಡಬೇಕು. ಕುಂದಾಪುರ ತಾಲೂಕಿನ ಬೈಂದೂರಿನ ಸೇನೇಶ್ವರ ದೇವಾಲಯವು ಚಿಕ್ಕದಾಗಿದ್ದರೂ ಶಿಲ್ಪದಲ್ಲಿ ಹಳೇಬೀಡು, ಬೇಲೂರಿನ ಶಿಲ್ಪವನ್ನು ಸರಿ ಹೋಲುವಂತಿದೆ ಎಂದರೆ ವಸ್ತು ಸ್ಥಿತಿಯನ್ನೇ ಹೇಳಿದಂತಾಗುತ್ತದೆ. ಆದರೆ ಈ ದೇವಾಲಯಕ್ಕೆ ಪ್ರಚಾರ ಕಡಿಮೆ, ಉತ್ತಮ ರೀತಿಯ ಒಂದು ಪುಸ್ತಕವನ್ನು ಛಾಯಾ ಚಿತ್ರಗಳ ಸಹಿತ ಬರೆದು ಪ್ರಕಟಿಸಿದರೆ ಪ್ರಾಮುಖ್ಯತೆ ಜನರಿಗೆ ತಿಳಿದೀತು. ಈ ದೇವಾಲಯದ ಸ್ಥಳ ವಿನ್ಯಾಸ ಹಾಗೂ ಶಿಲ್ಪದ ಶೈಲಿಯು ಹೊಯ್ಸಳರ ಕಾಲಕ್ಕಿಂತ ಪೂರ್ವದ್ದೆನ್ನಬಹುದು ಎಂದರೆ ಚಾಲುಕ್ಯರ ಕಾಲದ ಶೈಲಿ. ಈ ದೇವ ಗೃಹವು ಸುಮಾರು 11ನೇ ಶತಕದಲ್ಲಿ ರಚಿಸಲ್ಪಟ್ಟಿರಬೇಕು. ಪ್ರಾಯಶಃ ಸೇನವರ ಎಂಬ ಒಂದು ಅರಸು ಮನೆತನದಿಂದ ನಿರ್ಮಿಸಲ್ಪಟ್ಟಿರಬೇಕು. ಈ ದೇವಾಲಯವು ಬಹು ಜೀರ್ಣಾವಸ್ಥೆಯಲ್ಲಿದೆ. ಇದರಲ್ಲಿ ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳು ಕ್ರಮಪ್ರಕಾರವಿದ್ದು ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದ್ವಾರಗಳಿವೆ. ನವರಂಗದಲ್ಲಿ ಒಂಭತ್ತು ಗೂಡುಗಳಿದ್ದು (niches) ಅವುಗಳಲ್ಲಿ ಭವ್ಯವಾದ ಮಹಿಷಮರ್ದಿನಿ, ಷಣ್ಮುಖ, ಕೇಶವ, ಲಕ್ಷ್ಮೀನಾರಾಯಣ, ಪಾರ್ವತಿ ಪರಮೇಶ್ವರ, ಸೂರ್ಯನಾರಾಯಣ, ಶಂಕರನಾರಾಯಣ, ಸಪ್ತಮಾತೃಕಾ ಮತ್ತು ಗಣೇಶನ ವಿಗ್ರಹಗಳಿವೆ. ನವರಂಗದ ಮೇಲಿನ ಸಿಲಿಂಗಿನಲ್ಲಿ ಅಷ್ಟದಿಕ್ಪಾಲಕರ ಅತಿ ಮನೋಹರವಾದ ಕೆತ್ತನೆ ಕೆಲಸವಿದೆ. ತೀರ್ಥ ಮಂಟಪದಲ್ಲಿರುವ ನಂದಿಯು ಶಿಲ್ಪವನ್ನು ಆದರ್ಶತೆಗೆ ಕೊಂಡೊಯ್ದಂತಿದೆ. ದೇವಾಲಯದ ಹೊರ ಭಾಗದಲ್ಲಿ ಭೈರವ, ದತ್ತಾತ್ರೇಯ ಮತ್ತು ಚಾಮುಂಡಾಗಳ ಶಿಲ್ಪ ವೈಚಿತ್ರ್ಯವನ್ನು ತೋರಿಸುವ ಮೂರ್ತಿಗಳಿವೆ. ದೇವಾಲಯದ ಗೋಪುರವು 'ಹಂತಗಳ ಗೋಪುರ'ದಂತಿದೆ (steqqed tower) ಶಂಕರನಾರಾಯಣದ ದೇವಸ್ಥಾನವು ಚಿಕ್ಕದಾಗಿದ್ದರೂ ಅದರ ಗರ್ಭಗೃಹದ ಮೇಲಿರುವ ಗೋಪುರವು ಹೊಯ್ಸಳರ ಕಾಲದ ಶಿಲ್ಪದ ಪ್ರತಿಫಲನದಂತಿದೆ. ಉಡುಪಿ ಅನಂತೇಶ್ವರ ದೇವಾಲಯವು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಂದು ಸ್ಥಾನವನ್ನು ಪಡೆದಂತಹ ಕಟ್ಟಡ. ಅಂತೆಯೇ ಕಾರ್ಕಳದ ಅನಂತಪದ್ಮನಾಭನ ದೇವಾಲಯ ಪ್ರಾಯಃ ದಕ್ಷಿಣ ಭಾರತದಲ್ಲೇ ಅಪೂರ್ವವಾದ 'ವ್ಯೂಹ' ರೀತಿಯ ಕಟ್ಟಡ. ಅನಂತಪದ್ಮನಾಭನು ವಾಸುದೇವನಾಗಿಯೂ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರುಗಳು ಮೂಲ ಮೂರ್ತಿಯ ಮೂರು ದಿಕ್ಕುಗಳಲ್ಲಿದ್ದು ಅಧ್ಯಯನ ದೃಷ್ಟಿಯಿಂದ ಪ್ರಾಮುಖ್ಯತೆಯುಳ್ಳ ದೇವಗೃಹ. ಅಂತೆಯೇ ಕುಂಭಾಶಿಯ ಮಹಾದೇವನ ದೇವಾಲಯ, ಅನಂತಪುರದ ಅನಂತಪದ್ಮನಾಭನ ದೇವಾಲಯಗಳು ಕೆರೆಯ ಮಧ್ಯೆ ನಿರ್ಮಿಸಲ್ಪಟ್ಟವುಗಳು.

ಆರಾಧನೆಯ ಬೆಳವಣಿಗೆಯ ದೃಷ್ಟಿಯಿಂದ ಪೊಳಲಿ ಶ್ರೀ ಭಟ್ಟಾರಕಿಯ (ರಾಜರಾಜೇಶ್ವರಿ) ದೇವಾಲಯವೂ ಉಡುಪಿಯ ಉದ್ಯಾವರದಲ್ಲಿರುವ ಗಾಯತ್ರಿ, ಸಾವಿತ್ರಿ, ಸರಸ್ವತಿ ಎಂದು ತಪ್ಪಾಗಿ ತಿಳಿದು ಕೊಂಡಿರುವ ಸಪ್ತ ಮಾತೃಕಾ ದೇವಾಲಯವೂ ಕುಂದಾಪುರದ ಪುರವಂತೆ ಎಂಬಲ್ಲಿರುವ ಶ್ರೀ ವರಾಹ ಸ್ವಾಮಿ ದೇವಾಲಯವೂ ಬಾರಕೂರಿನ ಹಾಗೂ ಪುತ್ತೂರು ಬಂಗವಾಡಿಯಲ್ಲಿರುವ ಪಂಚಲಿಂಗೇಶ್ವರ ದೇವಾಲಯಗಳೂ ಪ್ರಾಮುಖ್ಯತೆಯುಳ್ಳದಾಗಿವೆ. ಅಂತೆಯೇ ಕದ್ರಿ ಶ್ರೀ ಮಂಜುನಾಥ ದೇವಾಲಯ, ಶಂಕರ ನಾರಾಯಣ ಹಾಗೂ ಉಡುಪಿ ಸಮೀಪವಿರುವ ಕೊಡವೂರು ಹರಿಹರ ದೇವಾಲಯಗಳೂ ಲಿಂಗಾಕಾರದಲ್ಲಿ ದೇವಿಯನ್ನು ಆರಾಧಿಸುವ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ತೆರನಾದ ದೇವಗೃಹಗಳೂ ಪಡುಪಣಂಬೂರು ಶ್ರೀ ಉಮಾಮಹೇಶ್ವರ ದೇವಾಲಯವೂ ಕಡಬ ಮತ್ತು ಬಾರಕೂರುಗಳಲ್ಲಿರುವ ಈಶ್ವರ ಮತ್ತು ಗಣಪತಿಯ ಅವಳಿಜವಳಿ ದೇವಾಲಯಗಳೂ ಗಣನೀಯವಾಗಿವೆ.

ವಿಗ್ರಹಗಳ ಶೈಲಿ ಮತ್ತು ಪ್ರಾಚೀನತೆಯನ್ನಾಧರಿಸಿ ಈ ಕೆಳಗಿನ ವಿಗ್ರಹಗಳು ವಿದ್ವಾಂಸರ ಪರಿಶೀಲನೆಗೆ ಅರ್ಹವಾಗಿವೆ.

1. ಬಾರಕೂರಿನ ಚೌಳಕೇರಿ ಶ್ರೀ ಗಣಪತಿ.
2. ಸಾಲಿಗ್ರಾಮದ ಶ್ರೀ ಗುರುನರಸಿಂಹ.
3. ಕಡಿಯಾಳಿಯ ಶ್ರೀ ಮಹಿಷಮರ್ದಿನಿ.
4. ನೀಲಾವರದ ಶ್ರೀ ದುರ್ಗಾ ಭಗವತಿ.
5. ಪುತ್ತೂರಿನ ಮಾಣಿಬೆಟ್ಟಿನ ಮಹಿಷಮರ್ದಿನಿ.
6. ಉಡುಪಿಯ ಶ್ರೀಕೃಷ್ಣ ವಿಗ್ರಹಗಳು.
7. ಮೂಡಬಿದರೆಯ ಶ್ರೀ ದುರ್ಗಾದೇವಿ.
8. ಮೂಳೂರಿನ ಶ್ರೀ ಬುದ್ಧ.
9. ಶಂಕರಪುರದ ಶ್ರೀ ಸುಬ್ರಹ್ಮಣ್ಯ.
10. ಒಡಭಾಂಡೇಶ್ವರ, ಕುಮಾರಮಂಗಿಲಗಳ ಶ್ರೀ ಸುಬ್ರಹ್ಮಣ್ಯ.
11. ಪುಜೂರು, ಕಾಪು, ಅಂಬಲಪಾಡಿ, ಎರ್ಮಾಳು, ಶಿವಂತೂರು, ಕುಲಶೇಖರಗಳ ಶ್ರೀ ಜನಾರ್ದನ.
12. ಅತ್ತಾವರದ ಶ್ರೀ ಚಕ್ರಪಾಣಿ (ಗೋಪೀನಾಥ).
13. ಕದ್ರಿಯ ಶ್ರೀ ಮಂಜುನಾಥ ದೇವಾಲಯದ ಪಂಚಲೋಹದ ಮೂರ್ತಿಗಳು.
14. ಪೊಳಲಿ, ಉದ್ಯಾವರ, ಬಾರಕೂರು, ಅನಂತಪುರಗಳ ಪ್ಲಾಸ್ಟರಿನ (Stucco) ಮೂರ್ತಿಗಳು.
15. ಕಡಬದ ಸಮೀಪವಿರುವ ಮತ್ತು ಸಾಸ್ತಾನ ಪಾಂಡೇಶ್ವರಗಳ ಹರಿಹರ ಮೂರ್ತಿಗಳು.
16. ಉಡುಪಿಯ ಸಮೀಪದ ಪಣಿಯೂಡಿಯ ಅನಂತಪದ್ಮನಾಭ ಮತ್ತು ಅನಂತಶಯನದ ಅನಂತಪದ್ಮನಾಭ.
17. ಪಡುಪಣಂಬೂರಿನ ಉಮಾಮಹೇಶ್ವರ.

ಪ್ರಧಾನ ಮಂತ್ರಿಯವರ
ಕ್ಷಾಮ ಪರಿಹಾರ ನಿಧಿಗೆ
ಕಾಣಿಕೆ
ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ, ರೈಲ್ವೆ ಮತ್ತು ವಿಮಾನದಲ್ಲಿ ರವಾನೆ ಖರ್ಚು, ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯಿತಿ ದೊರೆಯುತ್ತದೆ.

18. ತುಳುನಾಡಿನ ದೇವಾಲಯಗಳಲ್ಲಿರುವ ಎಲ್ಲಾ ಗಣೇಶನ ಮೂರ್ತಿಗಳು.

19. ಉಳ್ಳಾಲದ ಸೋಮನಾಥೇಶ್ವರ ಮತ್ತು ಕುಂದಾಪುರದ ಸಮೀಪವಿರುವ ಕೋಟೇಶ್ವರದ ಸಪ್ತ ಮಾತೃಕಾ ವಿಗ್ರಹಗಳು.

20. ಕೊಲ್ಲೂರಿನ ಪಂಚಲೋಹದ ಶ್ರೀ ಮೂಕಾಂಬಿಕಾ.

21. ಕುಂಜೂರು ನಂದಿಕೂರು ಮತ್ತು ಪೊಳಲಿಯ ಮಹಿಷಮರ್ದಿನಿಯ ವಿಗ್ರಹಗಳು

22. ಒಳ್ಪದ ಶ್ರೀ ತ್ರಿಶೂಲಿನಿ.

23. ನಾರಾವಿ, ಮರೋಳಿ, ಕಾರ್ಕಳ, ಕುಂಬಳಾತಿ, ಬಾರಕೂರು ಮತ್ತು ಬೆಳ್ಳಿ, ಗಳಲ್ಲಿರುವ ಸೂರ್ಯನ ವಿಗ್ರಹಗಳು, ಕೆಲ್ಲಿಪುತ್ತಿಗೆಯ ಸೂರ್ಯನಾರಾಯಣ.

24. ಮಂಗಳೂರಿನ ಕಾಳಿಕಾಂಬ ಮತ್ತು ಮಂಗಳಾದೇವಿ.

25. ಪೆರಡೂರಿನ ಶ್ರೀ ಅನಂತಪದ್ಮನಾಭ.

26. ಬಾರಕೂರಿನ ಸಮೀಪವಿರುವ ಮಕ್ಕಕಟ್ಟು ಎಂಬಲ್ಲಿರುವ ಮರದ ಮೂರ್ತಿಗಳು.

27. ಮೂಡಬಿದರೆಯ ಲಾಡಿ ಬ್ರಹ್ಮ.

28. ಉಡುಪಿ ಅನಂತೇಶ್ವರದ ಉಪಸ್ಥಾನ ದೇವತವಾದ ನಾಸ್ತ್ಯಾರ.

ತುಳುನಾಡಿನ ಪ್ರತಿಗ್ರಾಮಕ್ಕೂ ಒಂದು ದೇವಾಲಯವಿದ್ದಂತೆ ತಿಳಿದು ಬರುತ್ತದೆ. ಈ ದೇವಾಲಯವು ಆಗಮ ದೇವಾಲಯ. ಇದರ ಆಡಳಿತೆಯು ಸಾಮಾನ್ಯವಾಗಿ ಸ್ಥಾನಿಕನ ಕೈಯ್ಯಲ್ಲೂ ಪೂಜೆಯು ಅಡಿಗ ಯಾ ಅಸ್ರಣನೆಂಬ ಮೇಲು ಶಾಂತಿಯವನ ಕೈಯಲ್ಲಿಯೂ ಲೆಕ್ಕಪತ್ರವು ಶ್ಯಾನುಭಾಗನ ಕೈಯಲ್ಲೂ ಇತ್ತು. ಪಾರಾಳ ಎಂಬವನು ಸಾಮಾನ್ಯ ವ್ಯವಹಾರವನ್ನೂ ಭಂಡಾರಿಯು ಕೋಶಾಧಿಕಾರಿಯೂಗಿಯೂ ಪರಿಚಾರಕ ಸೇವಾವೃತ್ತಿಯು ದೇವಾಡಿಗ ಹಾಗೂ ಮ್ಯೊಲಿಕ್ಕೆಯಲ್ಲಿಯೂ ಇದ್ದುದು ಕಂಡುಬರುತ್ತದೆ. ಆಗಮದೇವ ಗೃಹಗಳಲ್ಲದೆ ದೈವಗೃಹಗಳಿವೆ. ಇವುಗಳಿಗೆ ಭೂತಸ್ಥಾನವೆನ್ನುತ್ತಾರೆ. ಪಂಚದೈವಗಳ (ನಾಗ, ಬ್ರಹ್ಮ, ನಂದಿಗೋಣ, ಲೆಕ್ಕೆಸಿರಿ ಮತ್ತು ಕ್ಷೇತ್ರಪಾಲ) ಆರಾಧನಾ ಸ್ಥಳವಾದ 'ಆಲಡೆ' ಗಳೂ (ಬ್ರಹ್ಮಸ್ಥಾನ) ಇವೆ. ಕುಂಬ್ಳೆಯ ಸಮೀಪವಿರುವ 'ಕವತ್ತಾರು' ಎಂಬುದು ಇಂತಹ 'ಆಲಡೆ' ಗಳಲ್ಲಿ ಪ್ರಾಮುಖ್ಯವಾದುದು. ಇವಲ್ಲದೆ ಗರಡಿಗಳಿವೆ, ನಾಗ ಬನಗಳಿವೆ. ಇವುಗಳ ಸಂಪೂರ್ಣ ಸಂಶೋಧನೆ ಮತ್ತು ಪರಿಚಯ್ಯ ಮಾಡಿಕೊಂಡು ಸಂಪ್ರದಾಯಗಳನ್ನು ಪರಿಶೀಲಿಸಿ, ಅವುಗಳನ್ನು ಪ್ರಾಚೀನ ಅರ್ವಾಚೀನಗಳನ್ನಾಗಿ ವಿಂಗಡಿಸಿ ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಲಗಣನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನಿತ್ತು ಇತಿಹಾಸವನ್ನು ಬರೆದರೆ ಅದು ಅಧಿಕೃತವಾದ ಇತಿಹಾಸವಾಗಬಹುದು. ನಿಖರ ಪರಿಶೀಲನೆ ಇಲ್ಲದೆ ಬರೆದ ಇತಿಹಾಸವು ಕಮಲಾ ದೇವಿ ಚಟ್ಟೋಪಾಧ್ಯಾಯರು ಬರೆದ 'Devil cult' ಎಂಬ ಲೇಖನದಂತಹ 'ಮರುಳು' ಸಾಹಿತ್ಯದಂತಾಗಬಹುದು. (Illustrated Weekly 11—12—1966) ಇಂದಿಗೂ ಶ್ರವಣಬೆಳಗೊಳವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ ಎಂದೂ 'ಕಲ್ಲುಕುಟ' ಎಂಬುದರ ಮೂಲಾರ್ಥ 'ನಾಗುವಳ್ಳಿ' ಮಾಡುವುದು ಎಂದೂ ಸುಖವಾಗಿ ಬೊಂಬಾಯಿಯಿಂದ ಬರೆಯುವವರಿದ್ದಾರೆ.

ಸಮಾಜವು ಬಯಸಿದರೆ ಪ್ರೋತ್ಸಾಹಿಸಿದರೆ ಇಂತಹ ಉತ್ತಮ ಮತ್ತು ಅಗತ್ಯವಾದ ಸಾಹಿತ್ಯ ಹೊರಬರಲು ಸಾಧ್ಯವಿದ ಎನ್ನುವುದು ನಮ್ಮ ಭರವಸೆ. 'Books must be few and chosen well"

[ಕೃತಜ್ಞತೆಗಳು. ಈ ಲೇಖನವನ್ನು ಬರೆಯುವುದರಲ್ಲಿ ಸಹಾಯಕರಾದ ನನ್ನ ಶಿಷ್ಯರಾದ ಹಾಗೂ ಈಗ ನನ್ನ ಸಹೋದ್ಯೋಗಿಯಾದ ಶ್ರೀ ಯನ್. ತಿರುಮಲೇಶ್ವರ ಭಟ್ಟರಿಗೂ ನನ್ನ ಜ್ಞಾನಾರ್ಜನೆಗೆ ಕಳೆದ 6 ವರ್ಷಗಳಿಂದ ನನಗೆ ಸಹಾಯಕರಾದ ಮಂಗಳೂರಿನ ಶ್ರೀ ಯಂ. ಯಂ. ಪ್ರಭುಗಳಿಗೂ ಶ್ರೀ ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರದ ಡೈರೆಕ್ಟರರಾದ ಶ್ರೀ ಕು. ಶಿ. ಹರಿದಾಸ ಭಟ್ಟರಿಗೂ ನನ್ನ ಕೃತಜ್ಞತೆಗಳು.]

[ವಿಶೇಷ ಸಂಚಿಕೆಗೆ ತರಿಸಿಕೊಂಡ ಲೇಖನವಿದು]

ಅಮರ ಶ್ರೀ ಲಾಲ್‌ಬಹದೂರ್ ಶಾಸ್ತ್ರಿ

ಲಾಲ ಬಹಾದ್ದೂರ್ ಶಾಸ್ತ್ರಿ ಅವರು ಕೀರ್ತಿ ಶಿಖರದ ತುತ್ತ ತುದಿಯನ್ನೇರಿದ ದಿನ 1966ರ ಜನವರಿ 11ರಂದು ತಾಷ್ಕೆಂಟ್‌ನಲ್ಲಿ ಸ್ವರ್ಗಸ್ಥರಾದರು. ಅವರು ಅತ್ಯಂತ ಮೃದುಭಾಷಿಗಳು, ಸರಳತೆಯ ಮೂರ್ತಿಗಳು. ಶಾಸ್ತ್ರೀಜಿ ಜೀವಮಾನ ಪರ್ಯಂತ ಸಾದಾ ರೀತಿಯಲ್ಲೇ ಬಾಳಿದರು. ಅವರ ಸೌಜನ್ಯವೆಂದೂ ದೌರ್ಬಲ್ಯದ ಚಿಹ್ನೆಯಾಗಿರಲಿಲ್ಲ.

1956ರ ರೈಲು ದುರ್ಘಟನೆಸಂಬಂಧದಲ್ಲಿ ಅವರು ತಮ್ಮ ಮಂತ್ರಿಪದಕ್ಕೆ ರಾಜಿನಾಮೆ ಸಲ್ಲಿಸಿದರು. ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಹೀಗೆ ಹೇಳಿದರು:

"ಜನರು ನನ್ನ ಕುಳ್ಳಗಿನ ದೇಹ ಹಾಗೂ ಮೃದು ಮಾತುಗಳಿಂದ ನಾನು ಕಠಿಣನಲ್ಲ ಎಂದು ಭಾವಿಸಬಹುದು. ನಾನು ದೈಹಿಕವಾಗಿ ಸದೃಢವಾಗಿಲ್ಲ, ಆದರೆ ಆಂತರಿಕವಾಗಿ ಸದೃಢವಾಗಿದ್ದೇನೆ"

ಆಡಂಬರವನ್ನು ಅವರೆಂದೂ ಮೆಚ್ಚುತ್ತಿರಲಿಲ್ಲ. ವೈಭವಪೂರ್ಣ ಅತಿಥಿ ಗೃಹಗಳ ಬದಲಾಗಿ ಸಾದಾ ವಸತಿ ಗೃಹಗಳಲ್ಲಿ ವಾಸಿಸಲು ಬಯಸುತ್ತಿದ್ದರು. ಅಲಹಾಬಾದಿಗೆ ಹೋದಾಗಲೆಲ್ಲ ಅವರು ರಾಜಭವನದಲ್ಲಿ ಉಳಿದುಕೊಳ್ಳದೇ ತಮ್ಮ ಬಾಡಿಗೆಯ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದರು.

ಸಾರ್ವಜನಿಕ ಜೀವನದಲ್ಲಿ, ಸರಳ ಜೀವನ, ಉಚ್ಚ ಆದರ್ಶ, ಪ್ರಾಮಾಣಿಕತೆಯು ಅವರಿಗೆ ಪ್ರಿಯವಾಗಿದ್ದುವು. ತಮ್ಮ ವರದಲ್ಲೂ ಅವರು ಈ ಆದರ್ಶಗಳನ್ನು ಪಾಲಿಸಿದರು.

ತ್ರಿವರ್ಣ ಧ್ವಜವನ್ನು ಎಲ್ಲಕಡೆಗಳಲ್ಲೂ ಹಾರಿಸುವುದು ಅಪರಾಧವೆಂದು ಪರಿಗಣಿಸುತ್ತಿದ್ದ ದಿನಗಳವು. ಅಲಹಾಬಾದಿನ ಗಡಿಯಾರದ ಗೋಪುರದ ಮೇಲೆ ಕಾಂಗ್ರೆಸ್ ಧ್ವಜ ಹಾರುತ್ತಿದ್ದನ್ನು ಜನರು ಗಮನಿಸಿದರು. ಪೋಲೀಸ್ ಅಧಿಕಾರಿಗಳಿಗೆ ಆಶ್ಚರ್ಯವಾಯಿತು.

ಅಷ್ಟರಲ್ಲೇ ಕುಳ್ಳಗಿನ ತೆಳ್ಳಗಿನ ವ್ಯಕ್ತಿಯೊಂದು ಅವರೆದುರಿಗೆ ಬಂದು ನಿಂತು ಹೀಗೆ ನುಡಿಯಿತು, 'ನನ್ನ ಹೆಸರು ಲಾಲ ಬಹಾದ್ದೂರ್ ಶಾಸ್ತ್ರಿ. ತ್ರಿವರ್ಣ ಧ್ವಜವನ್ನು ಹಾರಿಸಿದವನು ನಾನೇ"

ರೈಲ್ವೆ ಮಂತ್ರಿ ಪದಕ್ಕೆ ರಾಜಿನಾಮೆ ಸಲ್ಲಿಸಿ ಪಾರ್ಲಿಮೆಂಟ್ ಭವನಕ್ಕೆ ಹಿಂದಿರುಗಿದ ದಿನ ಅವರನ್ನು ಮನೆಗೆ ಕರೆದೊಯ್ಯಲು ಸರ್ಕಾರಿ ವಾಹನ ಸಿದ್ಧವಾಗಿ ನಿಂತಿತ್ತು. ಶಾಸ್ತ್ರೀಜಿ ಈ ವಾಹನವನ್ನೇರದೇ ಬಸ್ಸಿನಲ್ಲೇ ಪ್ರಯಾಣ ಮಾಡಿದರು.

ಪಾಕಿಸ್ತಾನದೊಂದಿಗೆ ಯುದ್ಧ ನಡೆದ ಕಾಲದಲ್ಲಿ, ಅವರ ಕೆಚ್ಚು ಪ್ರಕಟಗೊಂಡಿತು. ದೇಶವು ದೃಢ ನಿರ್ಧಾರದ ನಾಯಕನೆಂದು ಲಾಲಬಹಾದ್ದೂರ್ ಶಾಸ್ತ್ರಿಗಳನ್ನು ಗುರುತಿಸಿತು.

ಭಾರತ—ಪಾಕ್ ಯುದ್ಧದ ದುರ್ದಿನಗಳಲ್ಲಿ ಅವರು ಶಾಂತಿಕ್ಕೆ ತೋರಿದ ಮಾರ್ಗದರ್ಶನ ವಿಶ್ವದಲ್ಲಿ ಎಲ್ಲರಿಂದಲೂ ಪ್ರಶಂಸೆ ಪಡೆಯಿತು. ಯುದ್ಧಕಾಲದಲ್ಲಿ ಮಹಾವ್ಯಕ್ತಿಯೆಂದು ಹೆಸರುಗಳಿಸಿದ ಶ್ರೀ ಲಾಲಬಹಾದ್ದೂರ್ ಶಾಸ್ತ್ರಿ ತಾಷ್ಕೆಂಟ್‌ನಲ್ಲಿ ಶಾಂತಿ ಪ್ರಿಯ ನಾಯಕನೆಂದು ಖ್ಯಾತರಾದರು. ದೇಶದ ಸೇವೆಯಲ್ಲಿ ತೊಡಗಿರುವಾಗಲೇ ಅವರು ನಿಧನ ಹೊಂದಿದರು.

(ಐದನೇ ಪುಟದಿಂದ ಮುಂದುವರಿದುದು)
ಯೇ ಬೇರೆ. ಇದಕ್ಕೆ "ಕೇರಳ ಹೆವಿ ಇಲೆಕ್ಟ್ರಿಕಲ್ಸ್' ಒಂದು ನಿದರ್ಶನ ವಿದೇಶೀ ಸಂಸ್ಥೆಗಳ ಸಹಕಾರದಿಂದ ಬೆಳೆಯುವ ಅನೇಕ ಯಂತ್ರೋಪಕರಣ ಕೈಗಾರಿಕಾ ಸಂಸ್ಥೆಗಳು ಜಪಾನಿನಲ್ಲಿವೆ. ಆದರೂ ಹಿತಾಚಿ ಸ್ವಂತ ಬಲದಿಂದಲೇ ಬೆಳೆಯುತ್ತಿದೆ.

ವ್ಯತ್ಯಾಸವೇನು ?

ಅಧ್ಯಾಪಕ— "ರಾಮು! ಇಟಲಿಯವರಿಗೂ, ಅಮೇರಿಕನರಿಗೂ, ಬ್ರಿಟನರಿಗೂ ಆಫ್ರಿಕನರಿಗೂ, ಇಂಡೋನೇಶಿಯನರಿಗೂ, ರಷ್ಯನರಿಗೂ ಏನು ವ್ಯತ್ಯಾಸ?

ರಾಮು— "ಈ ನರಿಗಳ ಕುರಿತು ನಮಗೆ ಮೊದಲಿನ ಟೀಚರ್ ಏನೂ ಹೇಳಲಿಲ್ಲ, ಸಾರ್... ಕಂಕನರಿ, ಗುಳ್ಳನರಿ, ಮಿಶನರಿ, ಡಿಕ್ಷನರಿ, ಸ್ಟೇಶನರಿ,...ಇತ್ಯಾದಿ ಹೆಸರು ಮಾತ್ರ ನಾನು ಕೇಳಿದ್ದ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಒಡೆಕ್ಕಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ

ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್-77 ಕುಂದಾಪುರ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಗಂಟಲಲ್ಲಿ ಸುರುವಿದ ಬಿಸಿ ತುಪ್ಪ

(ನಾಲ್ಕನೇ ಪುಟದಿಂದ)

ಬಹುದು ಎಂದವರು ಸೂಚನೆಯಿತ್ತಿದ್ದಾರೆ."

'ಮಾತ್ರವಲ್ಲ, ಸಣ್ಣ ಪುಟ್ಟ ಕಂಟಗಳನ್ನೇ ರಾಷ್ಟ್ರೀಯ ಸಮಸ್ಯೆಗಳನ್ನಾಗಿ ಮಾಡಿ ಅವುಗಳಿಗೆ ತಾವು ಸೂಚಿಸುವ ಪರಿಹಾರವನ್ನೇ ಒಪ್ಪಿಕೊಳ್ಳಬೇಕೆಂದು ಪ್ರತಿಯೊಂದು ಗುಂಪೂ ಪಟ್ಟು ಹಿಡಿದರೆ, ಸರಕಾರವು ದುರ್ಬಲಗೊಳ್ಳುವುದು ಎಂದೂ ಹೇಳಿದ್ದಾರೆ...."

"ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಪ್ರಶ್ನೆಗಳನ್ನು ನ್ಯಾಯ ಮತ್ತು ಸಮಾನತೆಯ ತತ್ವವನ್ನಾಧರಿಸಿ ನಿರ್ಧರಿಸಬೇಕೆಂದೂ ಒತ್ತಾಯದ ರಾಜಕೀಯ ಹಾಗೂ ಮತ್ತಿತರ ಬೆದರಿಕೆಯ ವಿಧಾನಗಳಿಗೆ ಮಣಿದು ನಿರ್ಧರಿಸಬಾರದು ಎಂದೂ ಅವರು ಕರೆ ನೀಡಿದ್ದಾರೆ...."

"ಅಲ್ಲವೇ ಮತ್ತೆ? ಬಹುಮತದ ಮುಂದೆ ಅಲ್ಪ ಮತವು ತಲೆಬಾಗಲೇ ಬೇಕು."

"ಪ್ರಜಾಪ್ರಭುತ್ವ ಅಂದರೆ ಇದೇ ಅಲ್ಲವೆ?"

"ಅಲ್ರಿ, ನೋಡಿ, ಒಬ್ಬೊಬ್ಬರೂ ತಮ್ಮ ತಮ್ಮ ಹಠಗಳಿಗೆ ಅಂಟಿ ಕುಳಿತರೆ ಹೇಗೆ?"

"ಹೌದು....ನೋಡು, ಪುರಿಯ ಜಗದ್ಗುರುಗಳು ಪ್ರಭುದತ್ತ ಬ್ರಹ್ಮಚಾರಿಯವರು ಪಡುವ ಗೋಳು....'

'ಸರಿಯೇ, ಯಾರು ಕೇಳಿ ಕೊಂಡರೂ ಉಪವಾಸ ನಿಲ್ಲಿಸದ ಇವರು 'ಪವಿತ್ರ ಉದ್ದೇಶ'ದ ಹೆಸರಲ್ಲಿ ಆತ್ಮಾರ್ಪಣೆ ಮಾಡಿ ಆ ಉದ್ದೇಶದ ಮುಖಕ್ಕೆ ಮಸಿ ಬಳಿಯುತ್ತಾರೆ...."

"ಅದೂ ಒಂದು ಅಭಿಪ್ರಾಯ...ಇರಲಿ, ಬಿಡು. ಮುಂದೇನೆಂದು ಕಾದು ನೋಡೋಣ'.

"ಅದೂ ಸರೀನ್ನಿ. ಅಲ್ರಿ, ಶ್ರೀ ಶಂಕರಾಚಾರ್ಯರ ಮೇಲೆ ಅವರ ಹಿಂದಿನ ಕಾರ್ಯದರ್ಶಿಗಳೂ ದೀರ್ಘ ಕಾಲದ ವರೆಗೆ ಅವರನಿಕಟಾನುಯಾಯಿಗಳೂ ಆಗಿದ್ದ ಶ್ರೀ ಶಾಂತ ಪ್ರಕಾಶ ಬ್ರಹ್ಮಚಾರಿಯವರುದೂರ ಆರೋಪ ಹೊರಿಸಿದ್ದಾರಲ್ಲಾ...'

'ಹ್ಞಾಂ....ಶ್ರೀ ಪೀಠವನ್ನು ರಾಜಕಾರಣದ ಕೇಂದ್ರವನ್ನಾಗಿ ಮಾಡಿರುವರೆಂದೂ ಉಪವಾಸ ಮುಂದುವರಿಸಲು ವಿವಿಧ ತಂತ್ರಗಳನ್ನು ಅನುಸರಿಸುತ್ತಿರುವರೆಂದೂ ದೂರುತ್ತಾರೆ....'

'ಮತ್ತೆಂಥದು? ಈಗ ಗೋರಕ್ಷಾ ಅಭಿಯಾನ ಸಮಿತಿಯೂ ತಾನು ಕೈತೊಳೆದುಕೊಂಡಿದೆ...'

'ಈ ಕುತಂತ್ರ ತಿಳಿದೇ ಇರಬೇಕು; ಸರಕಾರ ತನ್ನ ನಿಲುಮೆಯಿಂದ ಚಲಿಸುವುದಿಲ್ಲ...'

"ಹ್ಞಾಂ....ಅಲ್ರಿ, ಚೀನಾದ ಕಥೆಯೇನೂಂತ?'

'ಅದೂ ಹೌದು, ನಡೆಯುತ್ತದೆ ಹೋರಾಟ. ಮಾವೊತ್ಸೆ ತುಂಗರ ವಿರೋಧ ಹೆಚ್ಚುತ್ತದೆ.. ಅವರ ವಿರೋಧಿಗಳ ಕೈವಾಡ ಮಿತಿಮೀರುತ್ತಿದೆಯಂತೆ.'

"ಅಂದರೆ, ಆಂತರಿಕ ಸಂಘರ್ಷ ತೀವ್ರವಾಗಿದೆ,...'

"ಅದೆಲ್ಲಾ ಹೇಗೆ ಗೊತ್ತಾಗಬೇಕು? ಒಟ್ಟಿನಲ್ಲಿ ಒಂದು ಸುದ್ದಿ — ನಮ್ಮ ದೇಶದಲ್ಲ ಇರುವ ಪಕ್ಷವನ್ನು ಹರಿಯಾರೂಡನೆ 'ಮತಭೇದ' ಬಂದೊಡನೆಯೇ ತ್ಯಜಿಸಿ ಹೊರಬಂದು ಹೊಸ ಪಕ್ಷ ಕಟ್ಟುವುದು—'

"ಹೌದು, ನಮ್ಮವರು ಮಾಡುತ್ತಿರುವುದು ಅದನ್ನೇ...."

"ಅದ್ರೆ ಚೀನಾದ ಕಥೆ ಬೇರೆ....'

'ಏನು?'

"ಈಗ ಕಮ್ಯೂನಿಸ್ಟರಲ್ಲಿ ಮಾವೊ ಸಿದ್ಧಾಂತದ ಬಗ್ಗೆ ಆಸ್ತೆ ಕಡಿಮೆಯಾದುದರಿಂದ—ವಿರೋಧ ಹೆಚ್ಚಿದುದರಿಂದ, ತಾವೇ ತನ್ನ ಸಿದ್ಧಾಂತಕ್ಕನುವಾದ ಹೊಸ ಕಮ್ಯುನಿಸ್ಟ ಪಕ್ಷ ಕಟ್ಟುತ್ತಾರೆ ...'

"ಓಹೋ....'

"ಆವಶ್ಯ ಕಂಡರೆ, ಈ ಹೊಸ ಪಕ್ಷವು ಹಳೆ ಕಮ್ಯುನಿಸ್ಟ ಪಕ್ಷದ ವಿರೋಧಿ ಪಕ್ಷವೂ ಆಗುವುದು....'

"ಹ್ಞಾಂ....ಅಲ್ಲಿಯೂ ಎಡ — ಬಲ ಆದಂತಾಯಿತ.....'

'ನೋಡೋಣ, ಭವಿಷ್ಯ ಹೇಗೆ ನಡೆಯುತ್ತದೇಂತ....ಸರಿ. ಇನ್ನು ನಿನ್ನ ಸುದ್ದಿಯೇನಾದ್ರೂ...'

'ಅಯ್ಯೋ ಪಾಪ, ನನ್ನ ಸುದ್ದಿ ಕೇಳಬೇಕು, ಇದೂ ನೀವು..."

"ಯಾಕೆ?'

"ಅಲ್ಲ, ಹೂವಿನ ಪರಿಚಯವನ್ನು ದುಂಬಿಗ ಮಾಡಿಕೊಡಬೇಕೇನು?"

'........."

'ಹ್ಞಾಂ....ನೋಡಿ, ನಮ್ಮ ಇಂದಿರಾಜಿಯು ಒಂದು ವರ್ಷದ ಆಡಳಿತೆಯಲ್ಲಿ ಆಕೆ ಸಾಧಿಸಿದ ಮಹತ್ಸಾಧನೆಯೇನೂಂತ ಕೇಳಿದ್ರಂತೆ....'

'ಪಾಪ, ಏನೂಂತ ಉತ್ತರಿಸೋದು?'

'ಸಾಕು ಬಿಡೀಂದ್ರೆ__ ಆಕೆಯೇನು ಕಡಿಮೆಯೆ? ಅಂದೇ ಬಿಟ್ಟಳು....'

"ಏನೂಂತ?'

"ಹಸಿವಿನಿಂದ ಮರಣ ಸಂಭವಿಸುವುದನ್ನು ತಪ್ಪಿಸಿರುವುದು ಮಹತ್ಸಾಧನೆಯಂತೆ...'

"ಅದೂ ಹೌದೂನ್ನು ಎಷ್ಟಾದ್ರೂ ಮಾತೃ ಹೃದಯವಲ್ಲವೆ? ಅದು ಮಗು ಉಪವಾಸ ಸಾಯುವುದನ್ನು ಹೇಗೆ ಕಂಡೀತು? ಆಗ....'

"ಅಯ್ಯೋ ಪಾಪವೇ.... ಬನ್ನಿ ಬನ್ನಿ ...ಹೊಟ್ಟೆ ಬೆನ್ನಿಗೆ ಅಂಟಿ ಹೋಗಿದೆ. ಇಂಪಾರ್ಟೆಡ್ ದೇಶದ ಹೊಟ್ಟೆ ತುಂಬಿಸುವಾಗ ನಾನು....'

"ಒಲಿದರೆ ನಾರಿ ಅನ್ನೋದು ಅದಕ್ಕೇ."

"ಅಯ್ಯೋ...ನಿಮ್ಮ....'

"ಹ ಗೆಲ್ಲಾ ಅನ್ನಬಾರದು...."

'ಅನ್ನದೆ ಇರಲೂ ಬಾರದು....?

'ಅಂತೂ ಉಭಯ ಸಂಕಟ....'

'ಗಂಟಲಲ್ಲಿ ಸುರುವಿದ ಬಿಸಿ ತುಪ್ಪ..."

'ಆರುತ್ತೆ....ತುಸು....ತಾಳಿಕೋ...."

—ಗೋರಾ.

ಸತ್ವಯುತ ವಿದೇಶನೀತಿ

(ಒಂಭತ್ತನೇ ಪುಟದಿಂದ)

ಇತ್ತೀಚೆಗೆ ೧೮ ರಾಷ್ಟ್ರಗಳ ನಿಶಸ್ತ್ರೀಕರಣ ಸಮಿತಿಯು ಜಿನೀವಾದಲ್ಲಿ ಸಭೆ ಸೇರಿತ್ತು. ಆಗ ಭಾರತವು, ಶಾಷ್ಕೆಂಟ್ ಸ್ಫೂರ್ತಿಗೆ ಅನುಗುಣವಾದ ರೀತಿಯಲ್ಲಿ ವರ್ತಿಸಿತು. ರಾಷ್ಟ್ರ ರಾಷ್ಟ್ರಗಳ ವಿವಾದಗಳನ್ನು ಬಗೆಹರಿಸುವಲ್ಲಿ ಬಲಪ್ರಯೋಗವನ್ನು ತ್ಯಜಿಸಬೇಕೆಂದು ಒತ್ತಿಹೇಳಿತು.

ಗಾಢಿಸರಲ್ಲಿ ನಡೆದ ಭಾಗಶಃ ಅಣ್ವಸ್ತ್ರ ಸ್ಫೋಟಪ್ರಯೋಗನಿಷೇಧ ಒಪ್ಪಂದದ ಬದಲಾಗಿ ಈ ಅಣ್ವಸ್ತ್ರ ಪ್ರಯೋಗಗಳ ಸಂಪೂರ್ಣ ನಿಷೇಧಕ್ಕಾಗಿ ಒಪ್ಪಂದ ಏರ್ಪಡಬೇಕು. ನೆಲ—ಜಲ ಅಥವಾ ಆಕಾಶ, ಎಲ್ಲಿಯೇ ಆಗಲಿ ಈ ಸ್ಫೋಟ ಪ್ರಯೋಗಗಳು ನಡೆಯಕೂಡದೆಂದು ಅಭಿಪ್ರಾಯಪಟ್ಟಿದೆ.

ಶಸ್ತ್ರಾಸ್ತ್ರ ಬಲದಿಂದ ವಿಶ್ವಶಾಂತಿ ಸ್ಥಾಪನೆ ಸಾಧ್ಯವಿಲ್ಲ. ಅದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಜನರ ಮಾನಸಿಕ ಐಕ್ಯದಿಂದ ಮಾತ್ರ ವಿಶ್ವದ ವಿನಾಶವನ್ನು ತಪ್ಪಿಸಲು ಸಾಧ್ಯವಾಗಬಲ್ಲದು.

ಕರ್ನಾಟಕ ಸಂಘದ ಕಟ್ಟಡ ನಿಧಿಗಾಗಿ ಏರ್ಪಡಿಸಿದ ವಿವಿದ ವಿನೋದ ಕಾಲಕ್ಷೇಪಕ್ಕೆ

ಹೊರನಾಡ ಕನ್ನಡಿಗರ ಕೂಟವೊಂದು ಮದ್ರಾಸಿನ ಕರ್ನಾಟಕ ಸಂಘದಲ್ಲಿ ತಾರೀಕು 8—1—1967ರಂದು ಸೇರಿತ್ತು. ವಿವಿಧ ಆಟಪಾಟಗಳೂ ಮನರಂಜನಾ ನೋಟಗಳಲ್ಲದೆ ಮಕ್ಕಳಿಗೂ ದೊಡ್ಡವರಿಗೂ ಉಪಯೋಗವಾಗುವಂಥಹ ವಿಧವಿಧವಾದ ಉಡುಪುಗಳೂ, ಕರವಸ್ತ್ರಗಳೂ, ತಿಂಡಿತಿನಸುಗಳೂ ಮಾರಾಟಕ್ಕಿದ್ದುವು. ಉಡುಪಿಯ ಕಡಗೋಲು, ಬುಟ್ಟಿ, ಬತ್ತಿ, ಲಟ್ಟಣಿಗೆ ಮಾತ್ರವಲ್ಲ ಮಿಡಿ ಉಪ್ಪಿನಕಾಯಿ, ತೊಕ್ಕು, ಪುಡಿಗಳೂ ಇದ್ದುವು. ಅದೃಷ್ಟ ಬಹುಮಾನ ಅದೃಷ್ಟ ಪರೀಕ್ಷೆ, ಅದೃಷ್ಟ ಕೊಡುಗೆ ಮೊದಲಾದ ಅದೃಷ್ಟ ಪರೀಕ್ಷೆಯ ವ್ಯವಸ್ಥೆಯು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲಾಗಿತ್ತು.

ಮಾರಾಟದ ವಿಭಾಗ ಸ್ತ್ರೀಯರೂ, ಆಟದ ವಿಭಾಗವನ್ನು ಪುರುಷರೂ ನೋಡಿಕೊಳ್ಳುತ್ತಿದ್ದರು. ಮಕ್ಕಳಿಗಂತೂ ದೊಡ್ಡ ಸಂಭ್ರಮ. ಜೀವಂತ ಕುದುರೆ ಸವಾರಿ ಒಂದು ಕಡೆಯಾದರೆ ತಿರುಗುವ ಮರದ ಮೃಗಗಳ ಮೇಲೆ ಸಾಗುವುದು ಇನ್ನೊಂದು ಕಡೆ. ಬಾಯೂರಿದರೆ ಡ್ರಿಂಕು, ಹಸಿದರೆ ಹೋಳಿಗೆಯಿಂದ ಹಿಡಿದು ಚಾ ಚಾ, ಚಕ್ಕುಲಿ ಮೊದಲಾದ ತಿಂಡಿಗಳು ಮಾತಾಪಿತೃಗಳ ಜೇಬುಗಳನ್ನು ಖಾಲಿ ಮಾಡಿಸುತ್ತಿದ್ದುವು. ಸಾಯಂಕಾಲ ಅಮೇರಿಕ ಹರಾಜು ಮೊದಲಾದ ವಿಶೇಷ ಆಕರ್ಷಣೀಯವಾಗಿತ್ತು.

ಅಭಿನಯ ಸರಸ್ವತಿ ಕುಮಾರಿ ಬಿ. ಸರೋಜ ದೇವಿಯವರ ಹಸ್ತದಿಂದ ಅದೃಷ್ಟ ಸಂಖ್ಯೆಯ ಎತ್ತು ವಿಕೆಯು ನಡೆದು 10 ಮಂದಿಗೆ ಬಹುಮಾನ ವಿತರಣೆ ನಡೆಯಿತು. ಅಧ್ಯಕ್ಷರು ಅವರನ್ನು ಸ್ವಾಗತಿಸಿ ಮಾತನಾಡಿ ಪುಷ್ಪಹಾರವನ್ನರ್ಪಿಸಿದರು.

ಕುಮಾರಿಯವರು ಮಾತನಾಡುತ್ತಾ ತಾನು ಇಂಥಹ ಸಾಮಾಜಿಕ ಕೂಟಗಳಲ್ಲಿ ಭಾಗವಹಿಸುವುದು ಇದೇ ಮೊದಲನೆಯ ಬಾರಿ ಎಂದೂ ತನಗೆ ಕನ್ನಡಿಗರ ಮಧ್ಯೆ ಇರುವುದಕ್ಕೆ ಬಹಳ ಸಂತೋಷವೆಂದೂ ಹೇಳಿ ಕರ್ನಾಟಕ ಸಂಘಕ್ಕೆ ತನ್ನ ಶುಭಾಶಯಗಳನ್ನು ಕೋರಿದರು. ಕೂನೆಗೆ ಕಾರ್ಯದರ್ಶಿಯವರು ವಂದನಾರ್ಪಣೆ ಮಾಡಿದರು. ಇಷ್ಟರಲ್ಲೇ ಸರೋಜದೇವಿಯವರ ಹಸ್ತಾಕ್ಷರವನ್ನು ಪಡೆಯಲು ಕೆಲವು ಯುವಕ ಯುವತಿಯರು ಮುಂದಾಗಲು ಸಂತೋಷದಿಂದ ನಗು ಮುಖದಿಂದ ಹಸ್ತಾಕ್ಷರವನ್ನು ಕೊಟ್ಟರು. ಆ ಮೇಲೆ ಸಾಕು ನಾಗಲಾಟವಲ್ಲೀ ಮಹಿಳಾ ವಿಭಾಗವನ್ನು ಸಂದರ್ಶಿಸಿ ನಿರ್ಗಮಿಸಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 82/66.

ವೀರಯ್ಯ ಪೂಜಾರಿ —ವಾದಿ

ಮತ್ತು

1. ಮೋನಮ್ಮ, 2. ಶಿವಪ್ಪ ಪೂಜಾರಿ —ಪ್ರತಿವಾದಿಯು

ಬೆಳ್ತಂಗಡಿ ತಾಲ್ಲೂಕು ತೆಂಕಕಾರಂದೂರು ಗ್ರಾಮ ಮೇಗಿನ ಮುಂಡಾಲು ಎಂಬಲ್ಲಿರುವ ಪೆರ್ನ ಪೂಜಾರಿಯ ಮಗಳು 1 ನೇ ಪ್ರತಿವಾದಿ ಮೋನಮ್ಮಳಿಗೆ—

ವಾದಿಯು ನೋಟಿನಬಗ್ಗೆ ಹಣ ಬರುವರೇ ನಿಮ್ಮ ಮೇಲೆ ಮಾಡಿದ ದಾವೆಯು ತಾರೀಕು 16—2—1967ಕ್ಕೆ ಮೇಲಿನ ಕೋರ್ಟಿನಲ್ಲಿ ನಿಮ್ಮ ಹಾಜರಾತಿ [illegible] ಅದರ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ವಕೀಲರ ದ್ವಾರವಾಗಲೀ ಸ್ವತಹಾ ಹಾಜರಾಗ ತಕ್ಕದ್ದು. ತಪ್ಪಿದ್ದಲ್ಲಿ ದಾವೆಯನ್ನು ಮುಂದುವರಿಸಲಾಗುವುದು.

By court order.

Sd/- N. J. Kadamba

Advocate for Plaintiff.

ಬೆಳ್ತಂಗಡಿ, 22—1—67.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.......

ಧನ (¼ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು.......

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ಕ್ಷಯ ರೋಗ ನಿವಾರಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮಹತ್ವಪೂರ್ಣ ಪಾತ್ರ

ಮಂಗಳೂರು, ಮೈಸೂರು ರಾಜ್ಯ ಕ್ಷಯ ರೋಗ ನಿವಾರಣಾ ಕಾರ್ಯಕರ್ತರ ದ್ವಿತೀಯ ಸಮ್ಮೇಲನದ ಉದ್ಘಾಟನಾ ಸಮಾರಂಭವು ಕಳೆದ ತಾ. 14ರಂದು ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರವರಿಂದ ಡಾ| ಬಿ. ಡಿ. ವೇಲಿಯರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷ ಡಾ|| ಎಂ. ವಿ. ಬಾರಿಯವರು ಸ್ವಾಗತಿಸಿದರು. ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಡಾ|| ಪಿ. ಎನ್. ಆರಿಗರವರು ಓದಿ ಹೇಳಿದರು. ಭಾರತ ಕ್ಷಯರೋಗ ನಿವಾರಣಾ ಸಂಘದ ಕಾರ್ಯದರ್ಶಿ ಶ್ರೀ ಬಿ. ಎಂ. ಕರಿಯಪ್ಪನವರು ಮಾತನಾಡುತ್ತಾ ಕ್ಷಯರೋಗ ನಿವಾರಣೆಯಲ್ಲಿ ಸರಕಾರಿ ಸಂಘಗಳಿಗಿಂತಲೂ ಹೆಚ್ಚಿನ ಹೊಣೆಗಾರಿಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಇವೆಯೆಂದು ನುಡಿದರು. ಅವರು ರಾಜ್ಯ ಹಾಗೂ ಜಿಲ್ಲಾ ಕ್ಷಯರೋಗ ನಿವಾರಣಾ ಸಂಘದ ಕಾರ್ಯದಕ್ಷತೆಯನ್ನು ಪ್ರಶಂಸಿಸಿದರು. ರಾಜ್ಯ ಕ್ಷಯರೋಗ ಸಂಘದ ವಾರ್ಷಿಕ ವರದಿಯನ್ನು ಸಂಘದ ಖಜಾಂಚಿ ಶ್ರೀ ಶ್ಯಾಮ ಸಿಂಗ್‌ರವರು ಓದಿದರು.

ಡಾ|| ಆಳ್ವರು ಉದ್ಘಾಟಿಸುತ್ತಾ, ಕ್ಷಯರೋಗದಂಥಾ ಭೀಕರ ವ್ಯಾಧಿಯ ನಿವಾರಣೆಗೈಯಲು ಸರಕಾರ ಆರ್ಥಿಕವಾಗಿ ಸಹಾಯ ನೀಡ ಬಲ್ಲುದಾದರೂ, ಸ್ವಯಂ ಸೇವಾ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸದಿದ್ದಲ್ಲಿ ಕ್ಷಯರೋಗ ನಿರ್ಮೂಲನಾ ಕಾರ್ಯ ಯಶಸ್ವಿಯಾಗದು ಎಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸಾರ್ವಜನಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಯ ಅಗತ್ಯವನ್ನು ಒತ್ತಿ ಹೇಳಿದರು. ಕೊನೆಯಲ್ಲಿ ಶ್ರೀ ಡಿ. ಮೋಹನ್ ರಾವ್ ಧನ್ಯವಾದ ಸಮರ್ಪಿಸಿದರು.

ಈ ಸಮ್ಮೇಲನದ ಸಮಾರೋಪ ಸಮಾರಂಭವು ತಾ. 16ರಂದು ಕಾರ್ಡಿನಲ್ ಗ್ರೇಸಿಯಸ್‌ರವರಿಂದ ನೆರವೇರಿತು. ಅವರು ಮಾತನಾಡುತ್ತಾ ಕ್ಷಯರೋಗದಂತಹ ಭೀಕರ ವ್ಯಾಧಿಯನ್ನು ತಡೆಗಟ್ಟುವ ಪುಣ್ಯಕಾರ್ಯದಲ್ಲಿ ಭಾಗವಹಿಸಲು ಸಮಾಜ ಸೇವಾ ಸಕ್ರಿಯಿಂದ ಮುಂದೆ ಬರುವಂತೆ ಡಾಕ್ಟರುಗಳಿಗೆ ಕರೆನೀಡಿದರು. ಹಾಗೂ ಸಮ್ಮೇಲನವನ್ನು ಏರ್ಪಡಿಸಿದವರನ್ನೂ ಭಾಗವಹಿಸಿದ ಪ್ರತಿನಿಧಿಗಳನ್ನೂ ಅಭಿನಂದಿಸಿದರು. ಈ ಸಮಾರೋಪ ಸಮಾರಂಭದ ಆದಿಯಲ್ಲಿ ಡಾ|| ಎಂ. ಎ. ಬಾರಿಯವರು ಸ್ವಾಗತಿಸಿದರು. ಡಾ| ಟಿ. ಎಂ. ಎ. ಪೈಯವರು ಅಧ್ಯಕ್ಷತೆ ವಹಿಸಿದ್ದರಲ್ಲದೆ ಸಂಸ್ಮರಣ ಸಂಚಿಕೆಯನ್ನು ಉದ್ಘಾಟಿಸಿದರು. ಕಾರ್ಯದರ್ಶಿ ಡಾ| ಎಂ. ಉಮೇಶ ರಾವ್‌ರವರು ವಂದನಾರ್ಪಣೆಗೈದರು.

ಶಾಲಾ ವರ್ಧಂತ್ಯುತ್ಸವ

ರಾಮಕುಂಜ, ಇಲ್ಲಿಯ ಶ್ರೀ ರಾಮಕುಂಜೇಶ್ವರ ಹೈಸ್ಕೂಲಿನ ಮತ್ತು ರಾಮಕುಂಜ ಸಂಸ್ಕೃತ ಹಯರ್ ಎಲಿಮೆಂಟರಿ ಶಾಲೆಯ ಸಂಯುಕ್ತ ವರ್ಧಂತ್ಯುತ್ಸವವು ತಾ. 21—1—67ರಂದು ಸೌತ್ ಡಿಸ್ಟ್ರಿಕ್ಟ್ ಎಜ್ಯುಕೇಶನ್ ಫಾರ್ಮಿನ ಸೂಪರಿಂಟೆಂಡೆಂಟರಾದ ಶ್ರೀ ಎಸ್. ಪಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರಗಿತು. ಹೈಸ್ಕೂಲಿನ ಪ್ರಧಾನೋಪಾಧ್ಯಾಯರ ಶ್ರೀ ಎಸ್. ಚಂದ್ರನಾದರಾಯರು ವರದಿ ವಾಚನ ಮತ್ತು ಸಂದೇಶಗಳ ವಾಚನಮಾಡಿದರು. ಆಟಪಾಠಗಳಲ್ಲಿ ಯಶಸ್ವಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ಶಾಲೋಚಿತವಾದ ವಿದ್ಯಾಭ್ಯಾಸದ ಅವಶ್ಯಕತೆಯನ್ನು ವಿವರಿಸಿದರು. ವಿದ್ಯಾರ್ಥಿಗಳಿಂದ ಎರಡು ವಿದ್ಯಾರ್ಥಿನಿಯರಿಂದ ಒಂದು ನಾಟಕದ ಅಭಿನಯ ಮತ್ತು ಹಳೆ ವಿದ್ಯಾರ್ಥಿಗಳಿಂದ ಸಂಗೀತ ಮತ್ತು ಯಕ್ಷಗಾನ ನಾಟಕಾಭಿನಯಗಳಾದುವು. ಸಭಾಂತ್ಯದಲ್ಲಿ ಶ್ರೀ ಎಮ್. ಕೆ. ಆಚಾರ್ಯರು ಮತ್ತು ವಿವಿಧ ವಿನೋದಾವಳಿಗಳ ಅಂತ್ಯದಲ್ಲಿ ಶ್ರೀ ಎಸ್. ಎನ್. ಕಲ್ಲೂರಾಯರು ಧನ್ಯವಾದಾರ್ಪಣೆ ಮಾಡಿದರು.

ಮಣಿಪಾಲದಲ್ಲಿ ಚರ್ಚ್ ಉದ್ಘಾಟನೆ

ಜನವರಿ 17. ಮಣಿಪಾಲದಲ್ಲಿ ನೂತನವಾಗಿ ರಚಿಸಲ್ಪಟ್ಟ 'ಕ್ರಿಸ್ತ ಚರ್ಚ್'ನ ಉದ್ಘಾಟನಾ ಸಮಾರಂಭದ ವೇಳೆ ಆಶೀರ್ವಚನ ರೂಪದ ಭಾಷಣ ಮಾಡುತ್ತಾ ಮುಂಬಯಿಯ ವೆಲೇರಿಯನ್ ಕಾರ್ಡಿನಲ್ ಗ್ರೇಶಿಯಸ್‌ರವರು "ಹಿಂದಿನ ಸಂಸ್ಕೃತಿ ಪರಂಪರೆಗಳನ್ನು ತೊರೆಯದೆ ಇಂದಿನದಕ್ಕೆ ಹೊಂದಿ ಹೋಗಬೇಕೆ"ಂದು ಹೇಳಿದರು. ಅವರು ಇಂದಿನ ಶಿಕ್ಷಣ ಪದ್ಧತಿಯ ಕುರಿತು ಪ್ರಸ್ತಾಪಿಸುತ್ತಾ ವಿದ್ಯಾರ್ಥಿಗಳನ್ನು ನೈತಿಕವಾಗಿ ಮೇಲೆತ್ತಲು ಧರ್ಮಭಾವನೆಯ ಶಿಕ್ಷಣವು ಅವರಿಗೆ ಅವಶ್ಯವಾಗಿದೆಯೆಂದರು.

ಡಾ|| ಮಾಧವ ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳ ಜೀವನವು ಸಫಲ ಪರಿಪೂರ್ಣವಾಗಬೇಕಿದ್ದರೆ ಆಧ್ಯಾತ್ಮಿಕ ತಿಳುವಳಿಕೆ, ಧರ್ಮಭಾವನೆ ಅವಶ್ಯವಾಗಿದೆ'ಯೆಂದರು. ನಾವೆಲ್ಲ ಬೇರೆಬೇರೆ ಮತದವರಾದರೂ ದೇವರ ಸಾನ್ನಿಧ್ಯವನ್ನು ಸೇರಬೇಕಾದ ಗುರಿ ಒಂದೇ ಆಗಿದೆ ಎಂದರು.

ಈ ಸಮಾರಂಭ ಕಾಲದಲ್ಲಿ ಪ್ರಕಟಿಸಿದ ಸ್ಮಾರಕ ಸಂಚಿಕೆಯನ್ನು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್. ಡಾ|| ಎ. ಕೃಷ್ಣರಾಯರು ಉದ್ಘಾಟಿಸಿದರು. ಮಂಗಳೂರಿನ ಬಿಶಪರಾದ ರೆ|| ಫಾ|| ಬ್ರೆಸಿಲ್ ಡಿಸೋಜಾರವರು ಭಾಷಣ ಮಾಡುತ್ತಾ ಕ್ರಿಸ್ತ ಜೀವನದಲ್ಲಿ ಏನಾಗಿದ್ದನೋ, ಏನೆಲ್ಲಾ ಬೋಧಿಸಿದನೋ, ಅವೆಲ್ಲ ಇಲ್ಲಿವೆಯೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಪಿ. ವೆಂಕಟ್ರಮಣ ಭಟ್ಟರು ತಮ್ಮ ಭಾಷಣದಲ್ಲಿ ಈ ಚರ್ಚ್ ಪ್ರಾರ್ಥನೆಗಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಆಶ್ರಯ ನೀಡುವಂತಾಗಲಿ ಎಂದರು.

ಆರಂಭದಲ್ಲಿ ರೆ|| ಫಾ|| ಸಿಲ್ವೆಸ್ಟರ್ ಡಿಸೋಜಾರವರು ಸ್ವಾಗತಭಾಷಣ ಮಾಡುತ್ತಾ ಚರ್ಚಿನ ಸ್ಥಾಪನೆಗೆ ಹಸಿಕಾರ ನೀಡಿದವರನ್ನೂ ಸ್ಮರಿಸಿದರು. ಪೋಪ್ ಗುರುಗಳಿಂದ ರೆ|| ಫಾ|| ಸಿಲ್ವೆಸ್ಟರ್ ಡಿಸೋಜಾರವರಿಗೆ ಬಂದ ಆಶೀರ್ವಾದ ರೂಪದ ಪ್ರಶಸ್ತಿಯನ್ನು ವೆಲೇರಿಯನ್ ಗ್ರೇಶಿಯಸ್ ನುಡಿದರು.

ಶ್ರೀ ರೂಪರ್ಟ್ ರುಜಾರಿಯೋರವರು ಸಮಾರಂಭಕ್ಕೆ ಶುಭಕೋರಿ ಪೋಪ್‌ಗುರುಗಳು ಮತ್ತು ಇತರರಿಂದ ಬಂದ ಸಂದೇಶಗಳನ್ನು ಓದಿದರು. ಶ್ರೀ ಜೆರೋಲ್ ಪಿಂಟೋರವರು ಧನ್ಯವಾದ ಸಮರ್ಪಿಸಿದರು. ಅನಂತರ ಮನರಂಜನಾ ಕಾರ್ಯಕ್ರಮಗಳಾದುವು.

ಫೆಬ್ರವರಿ 15 ಮತ್ತು 19ಕ್ಕೆ ನಡೆವ ಮತದಾನದ ವ್ಯವಸ್ಥೆ ಬಗ್ಗೆ ವಿವರ

ಮಂಗಳೂರು, ಜನವರಿ 24. ಮಹಾ ಚುನಾವಣೆಯ ಅಂಗವಾಗಿ ಈ ಬಾರಿಯ ಮತದಾನವು ಜಿಲ್ಲೆಯ ಸುರತ್ಕಲ್, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಕಾರ್ಕಳ ಮತ್ತು ಮೂಡಬಿದ್ರೆ ಮತದಾರ ಕ್ಷೇತ್ರಗಳಲ್ಲಿ ಫೆಬ್ರವರಿ ತಾ. 15ರಂದೂ, ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಮಂಗಳೂರು—1 ಮತ್ತು ಮಂಗಳೂರು—2 ಮತದಾರ ಕ್ಷೇತ್ರಗಳಲ್ಲಿ ಫೆಬ್ರವರಿ 19ರಂದೂ ಬೆಳಿಗ್ಗೆ ಗಂಟೆ 8 ರಿಂದ ಸಂಜೆ 5ರ ತನಕ ನಡೆಯುವುದು.

ಜಿಲ್ಲಾ ಚುನಾವಣಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಪತ್ರಿಕಾಗೋಷ್ಠಿಯೊಂದರಲ್ಲಿ ವಿವರಿಸುತ್ತಾ, ಫೆಬ್ರವರಿ 23ಕ್ಕೆ ಎಲ್ಲಾ ಮತದಾರ ಕ್ಷೇತ್ರಗಳ ಫಲಿತಾಂಶವನ್ನು ಪ್ರಕಟಪಡಿಸುವ ನಿರೀಕ್ಷೆಯಿದೆಯೆಂದರು.

ಲೋಕಸಭೆ (ಪಾರ್ಲಿಮೆಂಟ್) ಹಾಗೂ ವಿಧಾನ ಸಭೆ (ಎಸೆಂಬ್ಲಿ) ಎರಡಕ್ಕೂ ಒಂದೇ ಪೆಟ್ಟಿಗೆಯನ್ನು ಇರಿಸಲಾಗುವುದು. ಲೋಕಸಭೆಗೆ ಬಿಳಿ ಬಣ್ಣದ ಮತಪತ್ರ ಹಾಗೂ ವಿಧಾನಸಭೆಗೆ ನಸುಗೆಂಪು ಬಣ್ಣದ ಮತಪತ್ರಗಳನ್ನು ಚಲಾಯಿಸಲಾಗುವುದು.

ಫೆಬ್ರವರಿ 13ರ ಸಂಜೆ 5ಗಂಟೆಯಿಂದ ತಾ. 15ರ ಸಂಜೆ 5ಗಂಟೆಯ ತನಕವೂ, ಫೆಬ್ರವರಿ ತಾ. 17ರ ಸಂಜೆ 5ಗಂಟೆಯಿಂದ ತಾ. 19ರ ಸಂಜೆ 5ಗಂಟೆಯ ತನಕವೂ ಜಿಲ್ಲೆಯಲ್ಲಿ ಯಾವೆಡೆಯಲ್ಲೂ ಸಾರ್ವಜನಿಕ ಸಭೆಯನ್ನು ನಡೆಸದಂತೆ ನಿರ್ಬಂಧವನ್ನು ಹೇರಲಾಗಿದೆ ಎಂದೂ ಚುನಾವಣಾಧಿಕಾರಿಗಳು ತಿಳಿಯಪಡಿಸಿದರು.

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆಲ್ಲಾ ಚುನಾವಣಾ ಚಿಹ್ನೆಗಳನ್ನು ನೀಡಲಾಗಿದೆ.

ಉಡುಪಿಯಲ್ಲಿ ಮಧ್ವನವಮಿ ಸಮಾರಂಭ

ತಾ. 18, 19 ಮತ್ತು 20ರಂದು ಶ್ರೀ ಮಧ್ವನವಮಿ ಸಮಾರಂಭವು ಉಡುಪಿಯಲ್ಲಿ ಶ್ರೀ ಕಾಣಿಯೂರು ಮಠಾಧೀಶರ ನೇತೃತ್ವದಲ್ಲಿ ಶ್ರೀ ಭಂಡಾರಕೇರಿ ಶ್ರೀ ಪಾದಂಗಳವರ ಸಹಕಾರದೊಂದಿಗೆ ಜರಗಿತು. ಈ ಸಮಾರಂಭಕ್ಕೆ ಬೇರೆ ಬೇರೆ ಕಡೆಗಳಿಂದ ವಿದ್ವಾಂಸರುಗಳೂ ಪಂಡಿತರುಗಳೂ ಆಗಮಿಸಿದ್ದು ಅನೇಕ ವೇದಾಂತ ಗ್ರಂಥಗಳಲ್ಲಿ ಪರೀಕ್ಷೆ ಮತ್ತು ಸಂಭಾಷನೆ, ಧಾರ್ಮಿಕ ವಿಚಾರಗೋಷ್ಠಿಗಳು ನಡೆದುವು.

ತಾ. 19ರಂದು ಸಂಜೆ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರನ್ನು ಭವ್ಯ ಮೆರವಣಿಗೆಯ ಮೂಲಕ ಸ್ವಾಗತಿಸಲಾಯಿತು. ಅವರು ಶ್ರೀ ಕೃಷ್ಣ ಮಠವನ್ನು ಸಂದರ್ಶಿಸಿ ಮಹಾಯಾಗವನ್ನು ವೀಕ್ಷಿಸಿದರು.

ತಾ. 20ರಂದು ಸಮಾರಂಭದ ಮುಕ್ತಾಯ ಹಾಗೂ ವಿದ್ವಜ್ಜನರ ಮಹಾ ಸಭೆಯು ಸರ್ವಜ್ಞ ಮಂಟಪದಲ್ಲಿ ಪರ್ಯಾಯ ಶ್ರೀಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಶ್ರೀ ಆರ್. ನರಸಿಂಹ ಪಾಂಗಣ್ಣಾಯರು ಸ್ವಾಗತಿಸಿದರು. ಅನಂತರ ಶ್ರೀ ಮಧ್ವಾಚಾರ್ಯರ ದ್ವೈತ ಮತದ ಕುರಿತು ಶ್ರೀ ಜಿ. ಬಿ. ಜೋಶಿಯವರು, ಶ್ರೀ ಆರ್. ಎಚ್. ಸುಬ್ಬರಾಯರು ಮತ್ತು ಪಂಡಿತ ಗಲಗಲಿ ಪಂಢರಿನಾಥಾಚಾರ್ಯರು ಮಾತನಾಡಿದರು.

ಅನಂತರ ಮಠಾಧೀಶರುಗಳು ಮಾಧ್ವತತ್ವದ ಕುರಿತು ಮಾತನಾಡಿದ ತರುವಾಯ ಕಾರಂಜೆ ಸುಬ್ರಾಯ ಉಪಾಧ್ಯಾಯರು ಶ್ರೀ ವಿಶ್ವಸಮುದ್ರ ತೀರ್ಥ ಸ್ಮಾರಕ ವೇದ ಪಾಠ ಶಾಲೆಯ ಕಾರ್ಯಕಲಾಪಗಳ ಕುರಿತು ವರದಿಯೊಪ್ಪಿಸಿದರು.

ಪರ್ಯಾಯ ಶ್ರೀಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಜನತೆಯಲ್ಲಿ ಧರ್ಮಭಾವನೆ ಹುಟ್ಟಿಸಲೂ, ಶ್ರೀ ಮಧ್ವಾಚಾರ್ಯರ ಸಂದೇಶಗಳೇನೆಂಬುದನ್ನು ಜನತೆಗೆ ತಿಳಿಸಲೂ, ಇಂಥ ವಿದ್ವಾಂಸರ ಮಹಾ ಸಭೆಯನ್ನು ತಾವು ಏರ್ಪಡಿಸಿದ್ದು ಅದಕ್ಕೆ ತಕ್ಕಂತೆ ಪ್ರೋತ್ಸಾಹ ದೊರಕುತ್ತಿರುವುದು ಸಂತೋಷದ ಸಂಗತಿ' ಎಂದರು.

ಪಂಡಿತರಿಗೆ ಸಂಭಾವನೆ ವಿತರಣೆಯಾದ ಬಳಿಕ ಸಮಾರಂಭ ಮುಕ್ತಾಯಗೊಂಡಿತು. ರಾತ್ರಿ ವಿಶೇಷ ಉತ್ಸವ ಜರಗಿತು.

ನಿಧನ ವಾರ್ತೆಗಳು

ಕುರುಕಾಲು, ಸಾತ್ವಿಕರೂ, ದೈವಭಕ್ತರೂ, ಆಗಿದ್ದ ಶ್ರೀ ಕುರುಕಾಲು ವಿಷ್ಣುಮೂರ್ತಿ ಭಟ್ಟರು (ಉಡುಪಿಯ ರೋಯಲ್ ಮಹಾಲಿನ ಮಾಲಕ ಶ್ರೀ ಕೆ. ವೆಂಕಟ್ರಮಣ ಭಟ್ಟ ತೀರ್ಥರೂಪರು) ತಾ. 18—1—67 ರಂದು ತಮ್ಮ 103ನೇ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ಇಚ್ಛಾಮರಣಿಗಳೂ, ಜನಪ್ರಿಯರೂ ಆಗಿದ್ದರು.

ಶಿರೂರು, ಉಡುಪಿ ತಾಲೂಕು ಶಿರೂರು ಬೈಲುಮನೆ ಕಾವೇರಿ ಶೆಡ್ತಿಯವರು ತಾ. 9—1—67ರಂದು 95ನೇ ವರ್ಷದಲ್ಲಿ ಸ್ವರ್ಗಸ್ಥರಾದರು. ಇವರು ದೊಡ್ಡ ಕುಟುಂಬದ ಹಿರೇಯಜಮಾನತಿಯಾಗಿದ್ದು ದೈವಭಕ್ತೆಯೂ ದೀನ ದಯಾಳುವೂ ಆಗಿದ್ದರು.

ಕಟಪಾಡಿ, ಶಾಲೆಯೇ ಇಲ್ಲದ ಕಾಲದಲ್ಲಿ ಎಲಿಮೆಂಟರಿ ಶಾಲೆಯನ್ನು ತೆರೆದು ಸ್ವತಹ ಉಪಾಧ್ಯಾಯರಾಗಿ ದುಡಿದು ವಿದ್ಯಾ ಪ್ರಸಾರ ಮಾಡಿದವರೂ, ಜನಪ್ರಿಯರೂ, ಆಗಿದ್ದ ಶ್ರೀ ಚರಡಪ್ಪ ಸುಬ್ರಾಯ ಶ್ಯಾನುಭಾಗರು ತಾ. 5—1—67ರಂದು ತಮ್ಮ 98ನೇ ವರ್ಷದಲ್ಲಿ ನಿಧನರಾದರು. ದಿವಂಗತರಿಗೆ ಅಪಾರ ಶಿಷ್ಯವೃಂದವಿದ್ದು ಸರ್ವರಿಂದಲೂ ಗೌರವಿಸಲ್ಪಡುತ್ತಿದ್ದರು. ಇವರಿಗೆ ಮೂರು ಗಂಡು ಆರು ಹೆಣ್ಣು ಮಕ್ಕಳಿದ್ದು ಮೊಮ್ಮಕ್ಕಳು, ಮರಿಮಕ್ಕಳು ಎಲ್ಲಾ ಸೇರಿ 230 ಜನರಿದ್ದಾರೆಂದು ತಿಳಿದು ಬಂದಿದೆ.

ಧರ್ಮ ಸಮ್ಮೇಲನ

ಸುಬ್ರಹ್ಮಣ್ಯ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ತಾ. 16—1—67ರಂದು ಕಿರುಷಷ್ಠಿ ಮಹೋತ್ಸವದ ಅಂಗವಾಗಿ ವಾಡಿಕೆಯಂತೆ ಧರ್ಮ ಸಮ್ಮೇಲನವು ಪೆರ್ಡಾಲ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಶಾಮ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮೆನೇಜಿಂಗ್ ಟ್ರಸ್ಟಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತ ಭಾಷಣ ಮಾಡಿದರು. ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ಟರು ವರದಿ ವಾಚನ ಗೈದರು. ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಪಿ. ನಾರಾಯಣ ಶೇಟರು ಉದ್ಘಾಟಕರಾದ ಶ್ರೀ ಎಡನೀರು ಮಠದ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳಿಗೆ ಮಾನಪತ್ರವನ್ನು ಓದಿ ಅರ್ಪಿಸಿದರು. ಉದ್ಘಾಟನಾ ಭಾಷಣದ ಬಳಿಕ ಮುಖ್ಯ ಅತಿಥಿಗಳಾದ ಶ್ರೀ ಎಂ. ಆರ್. ಗಜೇಂದ್ರಗಡ್, ಶ್ರೀ ಎಚ್. ಎಲ್. ಸುಬ್ರಹ್ಮಣ್ಯರು ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಮೆನೇಜರಿಂದ ಧನ್ಯವಾದ ಸಮರ್ಪಣೆ ನಡೆಯಿತು.

ರಾತ್ರಿ ದೇವರ ಉತ್ಸವಾದಿಗಳ ನಂತರ ಪ್ರಸಿದ್ಧ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ ಯಕ್ಷಗಾನ ಕೂಟ ಜರಗಿತು.

ಮುಂಚಿನ ದಿನ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳಿಂದ ರಾಮಾಯಣ ವಾಚನವೂ ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರಿಂದ ಹರಿಕಥೆಯೂ ನೆರವೇರಿತು.

ಕನಲುದಾರಿ — ಕೆಂಪುದೀಪ

ಯಾರು ಹಿತವರು ನಿಮಗೆ?

ಯಾರು ಹಿತವರು ನಿಮಗೆ?

ಸಾರ್ವತ್ರಿಕ ಚುನಾವಣೆಗಳಿಗೆ ಇನ್ನುಳಿದಿರುವುದು ಒಂದೇ ಪಕ್ಷ.

ಅದೂ ನಾವೆಲ್ಲರೂ ನೋಡು ನೋಡುತ್ತಿರುವಂತೆಯೇ ಸರಿದು ಹೋಗುತ್ತದೆ, ಚುನಾವಣೆಯೂ ಮುಗಿದು ಹೋಗುತ್ತದೆ.

ಈ ಬಾರಿಯ ಚುನಾವಣೆಗಳ ವೈಶಿಷ್ಟ್ಯವೇನು?

ಟಿಕೇಟು ದೊರೆಯದ್ದರಿಂದ ಪಕ್ಷತ್ಯಾಗ ಮಾಡುವ ದುಶ್ಚಟ ಕಾಂಗ್ರೆಸಿಗರಲ್ಲಿ ಅಂಟಿಕೊಂಡುದು ಗೋಚರವಾಯ್ತು; ಕೃಷ್ಣಮೆನನ್, ಎಸ್. ಕೆ. ಡೇ, ವೀರಣ್ಣಗೌಡ ಮೊದಲಾದವರೂ ಈ ಚಟದಿಂದ ದೂರವುಳಿಯದಾದರು.

ಕಾಂಗ್ರೆಸ್ ಸಂಸ್ಥೆಯಲ್ಲಿಯೂ ಬಿರುಗಾಳಿಯೆದ್ದಿತು; ಕೆಲವು ಶಾಖೋಪಶಾಖೆಗಳು ಮುರಿದುರುಳಿದುವು. ಆದರೆ, ಸಬಲ ಮೂಲವುಳ್ಳ ಕಾಂಗ್ರೆಸ್ಸನ್ನು ಉರುಳಿಸಲು ಬಿರುಗಾಳಿಗಾದರೂ ಶಕ್ತಿ ಕಡಿಮೆಯೇ.

ಪಕ್ಷದೊಳಗಿನ ಕಚ್ಚಾಟ ಸದ್ಯಸ್ಪಷ್ಟ ನಿಷ್ಠೆಯಿಲ್ಲದವರ ಪಕ್ಷದಿಂದ ಹೊರಸಡಯಲು ಕಾಮರಾಜರು ದ್ವಾರವನ್ನು ಮುಕ್ತಗೊಳಿಸಿದ್ದಾರೆ— ಪಂ. ನೆಹರುರವರೂ ಹೀಗೆಯೇ ನುಡಿದಿದ್ದರು.

ಅಂದು, ಹೊರ ಹೋಗುವವರು ನೂರು ಬಾರಿ ಯೋಚಿಸುತಿದ್ದರು; ಇಂದು, ಒಳಗುಳಿಯುವವರು ಅಷ್ಟೇ ಯೋಚಿಸುತ್ತಾರೆ.

ಇದರಿಂದ ಕಾಂಗ್ರೆಸಿನ ಭವ್ಯತೆಗೆ, ಭದ್ರತೆಗೆ ಯಾವ ತಡೆಯೂ ಇಲ್ಲ. ಭದ್ರ ಪಂಚಾಗದ ಮೇಲೆ ಭದ್ರವಾಗಿಯೇ ಕಟ್ಟಲ್ಪಟ್ಟ ಅಟ್ಟಳಿಗೆ ಕಾಂಗ್ರೆಸ್ಸು. ಇದೀಗ ಉಪ್ಪರಿಗೆಯಲ್ಲಿ ವಿಲಾಸ-ಭೋಗಗಳು ಮನೆ ಮಾಡಿವೆಯಾದರೂ ಅದು ಫಕ್ಕನೆ ಮುರಿಯುವುದು ಸಾಧ್ಯವಿಲ್ಲ.

ಎಂದಿಗಿಂತ ಹೆಚ್ಚಿನ ಪ್ರತಿರೋಧವನ್ನು ಕಾಂಗ್ರೆಸ್ಸು ಇಂದು ಚುನಾವಣೆಗಳಲ್ಲಿ ಎದುರಿಸಬೇಕಾಗಿದೆ.

ವಿರೋಧೀ ಪಕ್ಷಗಳು ಸಂಯುಕ್ತ ಪ್ರತಿರೋಧ ನೀಡುವ ಪ್ರಯತ್ನವನ್ನು ಮಾಡಿದುವು—ಅಲ್ಲಿ ಇಲ್ಲಿ ಅದು ಯಶಗಳಿಸಿದರೂ ಗಳಿಸಬಹುದು. ಕೆಲವೆಡೆ ಕಾಂಗ್ರೆಸ್ಸನ್ನು ಎರಡು—ಮೂರು—ನಾಲ್ಕು ವಿರೋಧ ಪಕ್ಷಗಳೂ ಎದುರಿಸುತ್ತಿದೆ.

ಈ ಬಾರಿಯ ಇನ್ನೊಂದು ವೈಶಿಷ್ಟ್ಯ-ಚುನಾವಣೆಗಳಲ್ಲಿನ ಉಮೇದ್ವಾರರ ಸಂಖ್ಯೆಯಲ್ಲಿ ಹೆಚ್ಚಳ. ಒಂದು ಸ್ಥಾನಕ್ಕೆ ಎರಡು ಅಭ್ಯರ್ಥಿಗಳಿರುವ ಚುನಾವಣಾ ಕ್ಷೇತ್ರಗಳು ಕಡಿಮೆ. ಮೂರರಿಂದ ಹಿಡಿದು ಎಂಟು—ಒಂಭತ್ತರ ವರೆಗೂ ಈ ಸಂಖ್ಯೆ ಹೋಗುತ್ತದೆ.

ಅಂದರೇನು?

ಜನತೆಯಲ್ಲಿ ಪ್ರಜಾಪ್ರಭುತ್ವದ ಬೇರು ಚೆನ್ನಾಗಿ ಬಿಟ್ಟದೆಯೆಂದೆ?

ರಾಜಕೀಯದ ಅಮಲು ಹೆಚ್ಚಿನವರಿಗೆ ಅಂಟಿಕೊಂಡಿತೆಂದೆ?

ಏನೇ ಇರಲಿ, ಈ ಸಂಖ್ಯೆಗಳು ಪ್ರಬಲ ವಿರೋಧೀ ಪಕ್ಷರಚನೆಗೆ ಎಂದಿಗೂ ಬೆಂಬಲವಿಲ್ಲ. ಏಕೆಂದರೆ, ರಾಜಕೀಯ ಪಕ್ಷಗಳ ಉಮೇದ್ವಾರರು ಒಬ್ಬೊಬ್ಬರಾದರೆ, ಪಕ್ಷಾತೀತರು ನಾಲ್ಕಾರು ಮಂದಿಯಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪಕ್ಷೀಯ ಪದ್ಧತಿಯ ಆಡಳಿತದಲ್ಲಿ ಈ ಪಕ್ಷಾತೀತರಿಗೆ ಯಾವ ಸ್ಥಾನವೂ ಇಲ್ಲ; ಹಾಗಿದ್ದರೂ ಇಂಥವರ ಸಂಖ್ಯೆಯೇ ಹೆಚ್ಚು. ಇಲ್ಲಿಯೂ ಇವರು ತಮ್ಮ ಆಟ ಆಡಿಯೇ ಬಿಡುತ್ತಾರೆ.

ಮತದಾರರನ್ನು ವಂಚಿಸಲು ಈ ಪಕ್ಷಾತೀತರನ್ನು ಉಪಯೋಗಿಸಿಕೊಳ್ಳುವುದುಂಟು. ಒಂದು ವೇಳೆ ಗೆದ್ದರೆಂದರೆ, ಬಹುಮತ ಗಳಿಸುವ ಇರಾದೆಯಿಂದ ಇವರ ಸಹಾಯಕ್ಕೆ ಬೆಲೆ ಬರುವುದೂ ಉಂಟು. ನ್ಯಾಯಬಾಗಿ ಈ ಪಕ್ಷಾತೀತರು ಏನೂ ಮಾಡಲಾರರು.

ಹಾಗಾದರೆ, ಪಕ್ಷಾತೀತರಾಗಿ ಸ್ಪರ್ಧಿಸುವ ಅವಕಾಶವೇಕೆ?

ಯಾವುದೇ ರಾಜಕೀಯ ಪಕ್ಷದಲ್ಲಿ ಸೇರಿಕೊಳ್ಳ ಬಯಸದ ಬುದ್ಧಿ ಜೀವಿಗಳೂ ಕೆಲವರಿರುವುದಿಲ್ಲವೆ? ಇಂಥವರ ಸೇವೆ—ಜನತೆಗೆ ದೊರೆಯಲು ಅನುಕೂಲವಾಗಲೆಂದಿರ ಬೇಕು.

ಆದರೆ, ಇಂದು ನಡೆಯುತ್ತಿರುವುದು ಈ ಸದವಕಾಶದ ದುರುಪಯೋಗ.

ಅತ್ತಿಂದ ಹತ್ತು ಸಾವಿರ, ಇತ್ತಿಂದ ಹತ್ತು ಸಾವಿರ ಕಬಳಿಸಿ ಮುಂದಿನ ಚುನಾವಣೆಗಳ ತನಕ ದಿನಯಾಪನೆಯ ಮಾರ್ಗವನ್ನು ಸುಗಮಗೊಳಿಸುವ ಗೋಮುಖ ವ್ಯಾಘ್ರಗಳೇ ಇಂದು ಪಕ್ಷಾತೀತರಲ್ಲಿ ತುಂಬಿ ಹೋಗಿವೆ.

ಜನತೆ ಇದರಿಂದ ಮರುಳಾಗದು. ತಮ್ಮ ಹಿತ ಬಯಸುವವರು ಯಾರು—ಇಲ್ಲಿ ವ್ಯಕ್ತಿಗಿಂತ ಪಕ್ಷದ ಸ್ಥಾನವೇ ಹಿರಿದು; ಏಕೆಂದರೆ, ಸಮಷ್ಟಿಯಲ್ಲಿ ವ್ಯಷ್ಟಿಗೆ ಬೆಲೆಯೆಂಬುದೇ ಇರುವುದಿಲ್ಲ—ಎಂಬುದನ್ನು ಮತದಾರರು ಚೆನ್ನಾಗಿ ಅರಿತುಕೊಂಡಿದ್ದಾರೆ, ತಮ್ಮ ಮತವನ್ನು ಚಲಾಯಿಸುತ್ತಾರೆ.

ಕಾಂಗ್ರೆಸ್ ಕೇಂದ್ರದಲ್ಲೂ ರಾಜ್ಯಗಳಲ್ಲೂ ಕೇಂದ್ರಾಧೀನ ಪ್ರದೇಶಗಳಲ್ಲೂ ಸರಕಾರ ರಚಿಸಲು, ಆಡಳಿತ ನಿರ್ವಹಿಸಲು ಸರ್ವ ಸಮರ್ಥ ಪಕ್ಷ. ಉಳಿದುವೆಲ್ಲವೂ ಅಲ್ಪ ಸಂಖ್ಯೆಯ ಸ್ಥಾನ ಪಡೆಯಬಲ್ಲವು ಮಾತ್ರ.

ದೇಶದ ಸುಭಿಕ್ಷೆಗಾಗಿ, ಭದ್ರತೆಗಾಗಿ ಮತ್ತು ಜನಹಿತಕ್ಕಾಗಿ ಭದ್ರ ಸರಕಾರದ ಆವಶ್ಯಕತೆ ನಮ್ಮದು. ಆದಕ್ಕಾಗಿ ಕಾಂಗ್ರೆಸ್ಸನ್ನೇ ಬೆಂಬಲಿಸಿ ಅದನ್ನೇ ಆರಿಸಿಕೊಳ್ಳುವ ಕರ್ತವ್ಯ ನಮ್ಮದು, ಮತದಾರರದು.



(ಹೊಸ ಮುದ್ರಣ)

ವೇದವು ಸಾರುತ್ತಿದೆ:

"ಏಳಿ; ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾದ್ದಿಲ್ಲ. ತಿಳಿದವ ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ

ಗೀತೆಯ ಸಮೂಲ ಭಾಷಾಂತರವು

ಗೀತೆಯ ಕೈಗನ್ನಡಿಯಾಗಿ

ಹೊಸ ಆವೃತ್ತಿಯಾಗಿ ಪ್ರಕಟವಾಗಿದೆ

ಅದನ್ನು ಎಲ್ಲರೂ ಓದಬೇಕಾಗಿದೆ.

—"ಬೇರೆ ಶಾಸ್ತ್ರಗಳನ್ನೆಷ್ಟು ಓದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೀ ಒಂದೂವರೆ ರೂಪಾಯಿ

2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

NAVAYUGA 2—2—1967
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಅಭಿಪ್ರಾಯ

ಬೇಂಕುಗಳ ರಾಷ್ಟ್ರೀಕರಣ ಬೇಡ

ತಿಳಿಸಿದವರು
ಶ್ರೀ ಮುಂಡೋಡು ನಾರಾಯಣ ಭಟ್ಟ.

ಇಂದು ಸ್ವತಂತ್ರ ಭಾರತವು ಎದುರಿಸುತ್ತಿರುವ ಪ್ರಧಾನ ಸಮಸ್ಯೆಗಳಲ್ಲಿ ಬೇಂಕುಗಳ ರಾಷ್ಟ್ರೀಕರಣವೂ ಒಂದು. ಈ ಸಮಸ್ಯೆ ನಮ್ಮ ದೇಶದ ರಾಜಕಾರಣಿಗಳಿಗೆ ಮಾತ್ರವಲ್ಲ ಅರ್ಥ ಶಾಸ್ತ್ರಜ್ಞರಿಗೂ ತಲೆನೋವನ್ನುಂಟು ಮಾಡಿದೆ. ಬೇಂಕುಗಳ ರಾಷ್ಟ್ರೀಕರಣದ ಗಾಳಿ ಇಂಗ್ಲೆಂಡಿನಿಂದ ನಮ್ಮ ದೇಶದತ್ತ ಬೀಸ ತೊಡಗಿದೊಡನೆ ಅದು ಪತ್ರಿಕೆಗಳಲ್ಲಿ ಶಿರೋನಾಮೆಯನ್ನು ತಾಳುವಂತಾಯಿತು. ಕೆಲವರು ಅರ್ಥಶಾಸ್ತ್ರಜ್ಞರು ಹಾಗೂ ರಾಜಕಾರಣಿಗಳು ಬೇಂಕುಗಳ ರಾಷ್ಟ್ರೀಕರಣವು ಅಪಾಯಕಾರಿ ಎಂದು ಅಭಿಪ್ರಾಯಪಟ್ಟರೆ ಇನ್ನು ಕೆಲವರು ಅವರ ಅಭಿಪ್ರಾಯವನ್ನು ವಿರೋಧಿಸಲೋ ಅಥವಾ ನಿಜವಾದ ತಿಳುವಳಿಕೆಯಿಂದಲೋ ಬೇಂಕುಗಳನ್ನು ರಾಷ್ಟ್ರೀಕರಿಸಬೇಕೆನ್ನುವರು.

ಎಲ್ಲಾ ಬೇಂಕುಗಳನ್ನು—ಅದರಲ್ಲೂ ಮುಖ್ಯವಾಗಿ ವಾಣಿಜ್ಯ ವಿಭಾಗದ ಬೇಂಕುಗಳನ್ನು—ರಾಷ್ಟ್ರೀಕರಿಸಬೇಕು ಎನ್ನುವುದು ಕೆಲವರ ಅಭಿಪ್ರಾಯ. ಇಂದು ಕೆಲವು ಸಮಾಜವಾದೀ ರಾಷ್ಟ್ರಗಳು ಬೇಂಕುಗಳನ್ನು ರಾಷ್ಟ್ರೀಕರಿಸಿವೆ. ದಿ ಬೇಂಕ್ ಓಫ್ ಇಂಗ್ಲೆಂಡ್, ದಿ ಬೇಂಕ್ ಒಫ್ ಫ್ರಾನ್ಸ್, ನೇಶನಲ್ ಬೇಂಕ್ ಒಫ್ ಡೆನ್‌ಮಾರ್ಕ್, ಸ್ಟೇಟ್ ಬೇಂಕ್ ಓಫ್ ಇಂಡಿಯಾ—ಇವು ರಾಷ್ಟ್ರೀಕರಿಸಲ್ಪಟ್ಟ ಕೆಲವು ಬೇಂಕುಗಳಿಗೆ ಉದಾಹರಣೆಗಳು.

ನಮ್ಮ ದೇಶದ ಆರ್ಥಿಕ ನೀತಿಯು ಸಮಾಜವಾದದತ್ತ ಬಾಗಿರುವುದರಿಂದ, ಭಂಡವಾಳಗಾರರನ್ನು ದೂರೀಕರಿಸಲೋಸುಗ ಬೇಂಕುಗಳನ್ನು ರಾಷ್ಟ್ರೀಕರಿಸಬೇಕು ಎನ್ನುವುದು ಕೆಲವರವಾದ. ಬೇಂಕುಗಳು ಕೆಲವರು ಭಂಡವಾಳಗಾರರ ಕೈಯಲ್ಲಿ ಕೇಂದ್ರೀಕೃತವಾದಲ್ಲಿ ಅದರಿಂದ ಜನರಿಗೆ ಹೆಚ್ಚಿನ ಅಪಾಯವಿದೆ. ಮಾತ್ರವಲ್ಲ ಅಂತಹ ಬೇಂಕುಗಳು, ಅವು ನೀಡುವ ಸಾಲಗಳ ಮೇಲೆ ಹೆಚ್ಚಿನ ಬಡ್ಡಿಯ ದರಗಳನ್ನು ಹೇರುವುವು ಎನ್ನುವುದೇ ಇದಕ್ಕೆ ಕಾರಣ. ಆದರೆ ಇಂದು ಆರ್ಥಿಕ ಕ್ಷೇತ್ರದಲ್ಲೂ ಪೈಪೋಟಿಯು ಕಂಡುಬರುತ್ತಿದೆ. ಪ್ರತಿಯೊಂದು ಬೇಂಕೂ ಸಾಧ್ಯವಾದಷ್ಟು ಜನರನ್ನು ತನ್ನೆಡೆಗೆ ಆಕರ್ಷಿಸಲು ಪ್ರಯತ್ನಿಸುತ್ತದೆ. ಆದುದರಿಂದ ಬಡ್ಡಿಯ ದರಗಳು ಹೆಚ್ಚಾಗಲಾರವು.

ಒಂದು ದೇಶದ ಕೈಗಾರಿಕಾಭಿವೃದ್ಧಿಯಲ್ಲಿ ಬೇಂಕುಗಳ ಪಾತ್ರ ಹಿರಿದು. ಈ ಬೇಂಕುಗಳು ಕೈಗಾರಿಕೆಗಳಿಗೆ ಅಗತ್ಯವಿರುವ ಸಾಂಪತ್ತಿಕ ನೆರವನ್ನು ನೀಡಿದಲ್ಲಿ ಮಾತ್ರ ದೇಶದ ಪ್ರಗತಿ ಸಾಧ್ಯ. ಇಂದು ವಾಣಿಜ್ಯ ವಿಭಾಗದ ಬೇಂಕುಗಳೂ ಕೈಗಾರಿಕೆಗಳಿಗೆ ಧನಸಹಾಯ ಮಾಡಲು ಹಿಂಜರಿಯುತ್ತವೆ. ಆದುದರಿಂದ ರಾಷ್ಟ್ರೀಕರಣವೊಂದೇ ಉಳಿದ ಮಾರ್ಗ ಎನ್ನುವುದು ಕೆಲವರ ವಾದ. ಆದರೆ ಇದು ಸುತ್ತುಬಳಸಿನ ಮಾರ್ಗ. ಕೈಗಾರಿಕೆಗಳನ್ನು ಸರಕಾರವೇ ಸ್ಥಾಪಿಸಬೇಕು. ಅದರೊಂದಿಗೆ ಇತರ ಕೈಗಾರಿಕೆಗಳಿಗೆ ಬೇಂಕುಗಳು ಕೊಡುವ ಸಾಲಗಳನ್ನು ಮರಳಿ ಪಡೆಯುವ ಆಶ್ವಾಸನೆಯನ್ನು ಸರಕಾರವು ನೀಡಬೇಕು. ಬೆಳವಣಿಗೆಯ ಹಂತದಲ್ಲಿರುವ ದೇಶದಲ್ಲಿ, ಹೆಚ್ಚಿನ ಭಂಡವಾಳವಿರುವ ದೊಡ್ಡ ಉದ್ದಿಮೆಗಳ ಬದಲು ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು. ಇಂತಹ ಗುಡಿಕೈಗಾರಿಕೆಗಳಿಗೆ ಬೇಕಾಗುವ ಭಂಡವಾಳ ಬಹಳ ಕಡಿಮೆ. ಆದುದರಿಂದ ರಾಷ್ಟ್ರೀಕರಣದಿಂದುಂಟಾಗುವ ಕಹಿ ಪರಿಣಾಮಗಳನ್ನು ಕಡೆಗಣಿಸಿ ಬೇಂಕುಗಳನ್ನು ರಾಷ್ಟ್ರೀಕರಿಸುವುದು ಆರ್ಥಿಕ ದೃಷ್ಟಿಯಿಂದ ಒಳಿತಲ್ಲ.

ಬೇಂಕುಗಳನ್ನು ರಾಷ್ಟ್ರೀಕರಿಸಿದಲ್ಲಿ ಅದರಿಂದಾಗುವ ಪರಿಣಾಮ ಅಷ್ಟಿಷ್ಟಲ್ಲ. ಸಾಮಾನ್ಯವಾಗಿ ರಾಷ್ಟ್ರೀಕರಿಸಲ್ಪಡದಬೇಂಕುಗಳು ಜನರಿಗೆ ಉತ್ತಮ ತರದ ಬಡ್ಡಿಯನ್ನೀಯುವುವು. ಈ ಕ್ಷೇತ್ರದಲ್ಲಿರುವ ಪೈಪೋಟಿಯೇ ಇದಕ್ಕೆ ಕಾರಣ. ಪರಿಣಾಮವಾಗಿ ಉಳಿತಾಯ ಹೆಚ್ಚಾಗುವುದು. ಉಳಿತಾಯ ಹೆಚ್ಚಿಸಿದರೆ, ಪರೋಕ್ಷವಾಗಿ ಬೆಲೆಯೇರಿಕೆಯನ್ನು ತಡೆಹಿಡಿದಂತೆಯೇ. ಬೇಂಕುಗಳು, ರಾಷ್ಟ್ರೀಕರಿಸಲ್ಪಟ್ಟಲ್ಲಿ ಇದು ಕಷ್ಟಸಾಧ್ಯ.

ನಮ್ಮ ದೇಶದಲ್ಲಿ ಇಂದು ಖಾಸಗೀ ಸಂಸ್ಥೆಗಳೇ ಹೆಚ್ಚಿನ ಲಾಭವನ್ನು ಪಡೆಯುವವಲ್ಲದೆ, ಸರಕಾರೀ ಸಂಸ್ಥೆಗಳಲ್ಲ—ಇದು ಪ್ರತಿಯೊಬ್ಬನಿಗೆ ತಿಳಿದಿರುವ ವಿಚಾರ. ನಗ್ನ ಸತ್ಯ. ಬೇಂಕುಗಳು ಖಾಸಗೀ ಸಂಸ್ಥೆಗಳಾಗಿಯೇ ಉಳಿದರೆ. ಒಳಿತು ಭಂಡವಾಳಗಾರರಿಗೆ ತಮ್ಮ ಸಂಸ್ಥೆಯಲ್ಲಿ ಹೆಚ್ಚಿನ ಆಸಕ್ತಿಯಿರುವುದು. ಹೆಚ್ಚು ಲಾಭವನ್ನು ಪಡೆಯಬೇಕೆನ್ನುವ ಆಕಾಂಕ್ಷೆಯಿರುವುದರಿಂದ ಖಾಸಗಿ ವಿಭಾಗದ ಬೇಂಕುಗಳು ತಮ್ಮ ಕ್ರಿಯೆಗಳನ್ನು ಚೆನ್ನಾಗಿ ನಿರ್ವಹಿಸಬಲ್ಲುವು. ಆದರೆ ಬೇಂಕುಗಳು ರಾಷ್ಟ್ರೀಕರಿಸಲ್ಪಟ್ಟರೆ, ಅವುಗಳು ತಾವು ನಿರ್ವಹಿಸಬೇಕಾದ ಕಾರ್ಯಗಳನ್ನು ಮರೆಯಬಹುದು.

ವಾಣಿಜ್ಯ ಸಂಸ್ಥೆಗಳಲ್ಲಿ ಯಾವುದನ್ನಾದರೂ ಉದಾಹರಣೆಗಾಗಿ ತೆಗೆದುಕೊಳ್ಳೋಣ—ಬಸ್ ಕಂಪೆನಿಗಳು—ಅವು ಸರಕಾರೀ ಸಂಸ್ಥೆಗಳಾಗಿದ್ದಲ್ಲಿ ಸಹಿಸಲಾರದಷ್ಟು ನಷ್ಟವನ್ನನುಭವಿಸುವುದನ್ನು ಕಾಣಬಹುದು. ಈ ಸಂಸ್ಥೆಗಳು ಖಾಸಗೀ ಸಂಸ್ಥೆಗಳಾಗಿಯೇ ಉಳಿದಲ್ಲಿ ಅವುಗಳು ಹೇರಳವಾದ ಲಾಭವನ್ನುಂಟು ಮಾಡುವುದನ್ನು ಕಾಣಬಹುದು. ಇದನ್ನು ಪರಿಶೀಲಿಸಿದರೆ ಬೇಂಕುಗಳ ರಾಷ್ಟ್ರೀಕರಣ ಅನಾವಶ್ಯಕ—ನಷ್ಟಕ್ಕೆ ಕಾರಣ.

ಬೇಂಕುಗಳ ರಾಷ್ಟ್ರೀಕರಣವಾದರೆ ಆ ಬೇಂಕುಗಳು ಸಾಮಾನ್ಯ ಜನರಿಗೆ ಸಲ್ಲಿಸಬೇಕಾದ ಸೇವೆಯಲ್ಲಿ ಅನಾವಶ್ಯಕವಾದ ವಿಳಂಬವನ್ನು ಮಾಡಬೇಕಾಗುವುದು. ನೌಕರರು ತಮ್ಮ ಕರ್ತವ್ಯವನ್ನು ಮರೆಯಲೂ ಬಹುದು. ಸರಕಾರೀ ನೌಕರರಿಗೆ ತಮ್ಮದಲ್ಲದ ಆ ಸಂಸ್ಥೆಯಲ್ಲಿ ಅಭಿರುಚಿ ಕಡಿಮೆಯಾಗುವುದು ಸಹಜ. ಬೇಂಕಿಗೆ ಹೋದ ಯಾವುದೇ ವ್ಯಕ್ತಿಯನ್ನಾದರೂ ಸರಕಾರೀ ನೌಕರರು ತಿರಸ್ಕಾರ ಭಾವದಿಂದ ನೋಡುವುದೂ ತೀರ ಸ್ವಾಭಾವಿಕ.

ಬೇಂಕುಗಳನ್ನು ರಾಷ್ಟ್ರೀಕರಿಸಿದರೆ, ಅದು ಭ್ರಷ್ಟಾಚಾರದ ಕಿಚ್ಚಿಗೆ ತೈಲವನ್ನೆರೆದಂತೆ. ಸರಕಾರೀ ಬೇಂಕುಗಳ ನೌಕರರು ಲಂಚ ತೆಗೆದು ಕಾನೂನಿಗೆ ವಿರುದ್ಧವಾಗಿ ವರ್ತಿಸಿ ಆ ಬೇಂಕುಗಳಿಗೆ ಸಂಪೂರ್ಣ ನಷ್ಟವನ್ನುಂಟುಮಾಡಬಹುದು. ಬೇಂಕುಗಳು ಖಾಸಗಿ ಸಂಸ್ಥೆಗಳಾಗಿಯೇ ಉಳಿದರೆ ಇಂತಹ ಅನಾಹುತಗಳಿಂದ ಪಾರಾಗಬಹುದು.

ರಿಸರ್ವ್ ಬೇಂಕಿಗೆ ಇತರ ಬೇಂಕುಗಳ ಮೇಲೆ ಸರಿಯಾದ ಹಿಡಿತವಿದೆ. ಈ ಬೇಂಕುಗಳು ತಮಗಿಷ್ಟ ಬಂದಂತೆ ಬಡ್ಡಿಯ ದರಗಳನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಸಾಧ್ಯವಿಲ್ಲ. ಬೇಂಕುಗಳು ಕಾನೂನನ್ನು ಅನುಸರಿಸದಿದ್ದಲ್ಲಿ, ಕಷ್ಟದ ಕಾಲದಲ್ಲಿ ಅಂತಹ ಬೇಂಕುಗಳಿಗೆ ರಿಸರ್ವ್ ಬೇಂಕು ಸಹಾಯ ಮಾಡಲಾರದು. ಆದುದರಿಂದ ಬೇಂಕುಗಳು ಸಮಾಜಕ್ಕೆ ಹಿತಕರವಲ್ಲದ ರೀತಿಯಲ್ಲಿ ವರ್ತಿಸುವುದು ಅಸಾಧ್ಯ. ಇದಕ್ಕಾಗಿ ಬೇಂಕುಗಳ ರಾಷ್ಟ್ರೀಕರಣ ಅನಗತ್ಯ ಎಂಬುದು ಕೆಲವರ ಅಭಿಪ್ರಾಯ.

ನಮ್ಮ ದೇಶದಲ್ಲಿ ಇಂದು ೭೫೦ಕ್ಕೂ ಹೆಚ್ಚಿನ ಬೇಂಕುಗಳಿವೆ. (ಫ್ರಾನ್ಸ್, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳಲ್ಲಿ ಕೇವಲ ಎಳೆಂಟು ದೊಡ್ಡ ಬೇಂಕುಗಳಿವೆಯಷ್ಟೆ!) ಆದುದರಿಂದ ಈ ಬೇಂಕುಗಳನ್ನು ರಾಷ್ಟ್ರೀಕರಿಸುವಾಗ ಕೊಡಬೇಕಾದ ಪರಿಹಾರ ಧನವು ನಮ್ಮ ದೇಶದ ರಾಷ್ಟ್ರೀಯ ಆದಾಯವನ್ನು ಮೀರಬಹುದು.

ನಮ್ಮ ದೇಶದ ಬೇಂಕುಗಳು ಇನ್ನೂ ಬೆಳವಣಿಗೆಯ ಹಂತದಲ್ಲಿವೆ. ಈ ಹಸುಗೂಸುಗಳನ್ನು ರಾಷ್ಟ್ರೀಕರಿಸಿದರೆ ಶಿಶುಹತ್ಯೆ ಗೈದಂತಾದೀತು. ಬೇಂಕುಗಳನ್ನು ರಾಷ್ಟ್ರೀಕರಿಸಬೇಕಾದರೆ ದೇಶದ ಜನರೂ ವಿದ್ಯಾವಂತರಿರಬೇಕು. ಸರಕಾರೀ ನೌಕರರಿಗೆ ಕರ್ತವ್ಯನಿಷ್ಠೆಯ ಪರಿಜ್ಞಾನವಿರಬೇಕು. ಇದಕ್ಕಾಗಿ ದೇಶದ ಜನರಿಗೆ ಉತ್ತಮ "ವಿದ್ಯಾಭ್ಯಾಸ"ವನ್ನೊದಗಿಸಬೇಕಾಗಿದೆ.

ರಾಷ್ಟ್ರೀಕರಣದ ದುಷ್ಪರಿಣಾಮಗಳನ್ನು ಗಮನಿಸದೆ ಬೇಂಕುಗಳನ್ನು ರಾಷ್ಟ್ರೀಕರಿಸಿದಲ್ಲಿ ಮುಂದಕ್ಕೆ ಕಷ್ಟಪಡಬೇಕಾದೀತು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವರಂಗ

9—2—1967

೨೦
ಪೈಸೆ

ಕಥಾ ಪ್ರಪಂಚ

ಪ್ರೀತಿಯ ಮೂಕ ಪ್ರೇಮ

ಕಥೆಗಾರರು :
ಶ್ರೀ ಎಚ್. ಎಂ. ನಾರಾಯಣ ಭಟ್.

[ದಕ್ಷಿಣ ಕೇರಳದಲ್ಲಿ ತುಳುನಾಡಿನಿಂದ ಬಂದು ನೆಲಸಿದ್ದ ಬ್ರಾಹ್ಮಣ ಕುಟುಂಬವೊಂದಕ್ಕೆ ಭಗವತೀ ಕ್ಷೇತ್ರದ ಪ್ರಧಾನ ಅರ್ಚಕ (ಶಾಂತಿಕ್ಕಾರನ್)ನೆಂದರ "ಮೇಲ್ ಶಾಂತಿ"ತನ ಆನುಭವಿಕವಾಗಿತ್ತು. ಕುಟುಂಬ ಪೋಷಣೆಗೆ ಸುಲಭವಿತ್ತು. ಸಮಾಜದಲ್ಲಿಯೂ ಆಗಿನ ಕಾಲದಲ್ಲಿ ಸ್ಥಾನಮಾನಗಳಿದ್ದವು. ಅದೇ ಕುಟುಂಬದ ಓರ್ವ ತರುಣ ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಜ್ವರ ಪೀಡಿತನಾಗಿ ಮೂಕನಾದರೂ ಪ್ರಧಾನ ಅರ್ಚಕ ಪದವಿಯಲ್ಲಿದ್ದ. ಸ್ವರೂಪಿಯಾಗಿದ್ದರೂ ಆತನ ಪ್ರೇಮ ಜೀವನವೊಂದು ದುರಂತ ನಾಟಕದಲ್ಲಿ ಕೊನೆಗೊಂಡಿತು.]

ಅಂದೂ ವಾಡಿಕೆಯಂತೆ ಸ್ನಾನ ತೀರಿಸಿದ ಶಂಕರನ್ ಪೋತಿಯು ದೇವಾಲದ ಗರ್ಭಗುಡಿಯೆದುರ ಮಂಟಪದಲ್ಲಿ ಪೂರ್ವಾಭಿಮುಖವಾಗಿ ಕುಳಿತಿದ್ದನು. ಹಲವರು ದೇವೀ ದರ್ಶನಕ್ಕಾಗಿ ಬರುವರು, ಬರುವವರು ತಂತಮ್ಮ ಶಕ್ತಿ ಭಕ್ತಿಗಳಿಗನುಗುಣವಾದ ಕಾಣಿಕೆ— ಹಣ್ಣು, ಕಾಯಿ, ಹೂ ಇತ್ಯಾದಿಗಳನ್ನು ತಂದು ಅರ್ಪಿಸುವರು, ಭಗವತಿಯನ್ನು ಸ್ತುತಿಸುವರು; ವಿಗ್ರಹಕ್ಕೆಂದು ಗರ್ಭ ಗುಡಿಯತ್ತ ವಂದಿಸುವರು; ಪ್ರದಕ್ಷಿಣೆ ಬರುವರು, ತಪ್ಪುಗೆ ಕಾಣಿಕೆ ಮಾಡುವರು; ಹರಕೆ ಸಮರ್ಪಿಸುವರು; ಪ್ರಾರ್ಥನೆ ಮಾಡುವರು 'ಶಾಂತಿಕಾರ' (ಪೂಜಾರಿ—ಅರ್ಚಕ) ನಿಗೆ ಏನಾದರೂ ದಕ್ಷಿಣೆ ಯಿತ್ತು ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥರಾದವರಂತೆ ಹಿಂತಿರುಗುವರು. ಈ ಮಂದಿಯಲ್ಲಿ ಎಲ್ಲರ ಬಗ್ಗೆ ಪೋತಿಯು ಶ್ರದ್ಧೆ ಹರಿಸಿಲ್ಲ. ಪೋತಿಯು ಏಕಾಕ್ತನಾದ ಮಾತೆ ಭಗವತಿಯಲ್ಲಿಯೇ ವಿಲೀನವಾದ ಹೃದಯದಿಂದ ಭಾವನಾಪರವಶನಾಗಿ— ಧ್ಯಾನಮಗ್ನನಾಗಿ ಬ್ರಹ್ಮಾನಂದ ಸುಧೆಯನ್ನು ಹೀರುವಂತೆ ಏಕಾಗ್ರತೆಯಿಂದ ಮಂಟಪದಲ್ಲಿಯೇ ಭದ್ರಾಸನದಲ್ಲಿದ್ದನು.

ಭಗವತೀ ದರ್ಶನಕ್ಕಾಗಿ ಬಂದವರಲ್ಲಿ ಅನೇಕ ದೇವಕನ್ಯೆಯರನ್ನೂ ಮೀರುವ ಚೆಲುವೆಯರಾಗಿದ್ದರು. ಆದರೂ ಒಬ್ಬಾಕೆ—ಮೋಹಕ ಆ ತನಕವೂ ಪ್ರತ್ಯಕ್ಷವಾಗಿರಲಿಲ್ಲ. ಆಕೆಯೂ ಬಂದಳು. ಸ್ನಾನ ತೀರಿಸಿ ಒದ್ದೆ ಬಟ್ಟೆಗಳನ್ನು ಬದಲಾಯಿಸದೆ ಬೆಳ್ಳಗಿನ ತೆಳು ಬಟ್ಟೆ ಮತ್ತು ಬಿಳಿಯದ ತೆಳ್ಳಗಿನ ಜಂಪರ್ ಧರಿಸಿ, ಕೇಶರಾಶಿಯು ಹಿಂಭಾಗಕ್ಕೆ ಸಮತೂಕವಾಗುವಂತೆ ತಲೆಬಾಗಿ ಯೌವ್ವನದ ಪ್ರಾಕೃತಿಕ ಲಕ್ಷಣಗಳಿಂದ ಪ್ರಸನ್ನವದನೆಯಾಗಿ ಪ್ರವೇಶಿಸಿದ ದೃಶ್ಯವು ಪೋತಿಯನ್ನಾಕರ್ಷಿಸಿ ಹೃದಯವನ್ನು ಸೆಳೆಯಿತು. ಇಬ್ಬರ ಕಣ್ಣುಗಳೂ ಒಂದಾಗಲಿಲ್ಲ. ಸುಮಾರು ಹದಿನೇಳು ವಯಸ್ಸು ದಾಟಿರಬಹುದು, ತುಂಬು ಯೌವ್ವನ ಸ್ವರೂಪ. ಕೊರಳಿನಲ್ಲೊಂದು ಬಂಗಾರದ ಸರ. ಸರದಲ್ಲಿ ವಕ್ಷಸ್ಥಲಗಳ ನಡುವೆ ಜೋತಾಡುವ ವಜ್ರವಿರಿಸಿದ್ದ ಬಂಗಾರದ ಪದಕ. ಉಲ್ಲಾಸಭರಿತ ಮತ್ತು ಕಾಂತಿಯುಕ್ತ ವದನ. ಪ್ರೇಮ ಜ್ಯೋತಿ ಬೀರುವ ವಿಶಾಲವೂ ಪ್ರಕಾಶವೂ ಇರುವ ಕಣ್ಣುಗಳು. ಕೈಗಳಲ್ಲಿನ ಬಳೆಗಳು ಕಿಲಕಿಲನೆ ನಗುವಂತೆ ತೋರುತ್ತಿದ್ದವು.

ಅರಳಿದ್ದ ಪೋತಿ ಇಡೀ ಕಣ್ಣು ಅರಳಿ ಮತ್ತೆ ಅವನ್ನು ಮುಚ್ಚಲೇ ಆಗದಂತಾಯಿತು. ಹೃದಯ ಗಾನ ಅಸ್ಪಷ್ಟ ಆಲಾಪನೆಗಳಿಂದ ತುಂಬಿತ್ತು. ಕಣ್ಣು ತುಂಬ ನೋಡಬೇಕೆಂಬ ಲವಲವಿಕೆ ಉಕ್ಕಿದಂತೆಯೇ ಆಕೆ ಮುಗುಳು ನಗೆ ಬೀರುತ್ತಾ ಭಗವತಿಯ ದರ್ಶನಕ್ಕಾಗಿ ಗರ್ಭಗುಡಿಯತ್ತ ಸಾಗಿದಳು.

ಪೋತಿಯ ಮನಸ್ಸು ಪ್ರಯಾಣಕ್ಕೆ ಅನುಕೂಲವಾಗಿ ಪರಿಣಮಿಸಿತು. ಆ ಕಾಮನ ಕಣ್ಣುಗಳು ಪೋತಿಯ ಕಡೆಗೆ ಅಸ್ತ್ರ ಪ್ರಯೋಗ ಮಾಡಿದ ವಿಧಾನವನ್ನು ನೆನೆಸಿ ಆಕೆ ಕಾಮಾಕ್ಷಿಯಾಗಿರಬಹುದೆಂದೂ; ಕೇಶರಾಶಿಯ ಲಾವಣ್ಯದಿಂದಾಗಿ ಆಕೆ ಶಕುಂತಳೆಯಾಗಿರಬಹುದೆಂದೂ, ನೈಸರ್ಗಿಕ ಮತ್ತು ಮಲ್ಲಿಗೆಯ ಸೊಬಗಿನಿಂದಾಗಿ ರಂಭೆಯಾಗಿರಬಹುದೆಂದೂ ಆಕೆಯ ನಾಮಧೇಯದ ಬಗ್ಗೆ ಊಹೆಗಳು ಒಂದರ ಹಿಂದೆ ಒಂದಾಗಿ ಎದ್ದವು.

ಆ ಮನಮೋಹಿನಿ ಯಾರ ಮಗಳೋ? ... ಹೆಸರೇನೋ?....ವಿವಾಹವೂ ಆಗಿರಬಹುದೇ?....ಇತ್ಯಾದಿ ಪ್ರಶ್ನೆ ಸೂಚಕ ಅಲೆಗಳು ಹೃದಯ ಸಾಗರದಲ್ಲಿ ಭಾವನಾ ಶಕ್ತಿಯ ಪ್ರಭಾವದಿಂದೆದ್ದು ಕೆಣಕಿದವು. ಆತುರವೂ ಕುತೂಹಲವೂ ಹೆಚ್ಚಿತು. ಮನಸ್ಸಿಗೆ ನೆಮ್ಮದಿಯಿಲ್ಲ. ಯಾರಲ್ಲಿ ವಿಚಾರಿಸಲಿ? ಈ ಸಮಯ—ಸನ್ನಿವೇಶದಲ್ಲಿ ಯಾರಾದರೂ ಶ್ರದ್ಧೆ ಹರಿಸಿ ಗೇಲಿ ಮಾಡಿದರೆ? ತಾನು ಯಾರು? ಅವಳು ಯಾರು? ಏನಾದರೂ ಆಪತ್ತು ಉದ್ಭವಿಸಿದರೆ?.... ಹೀಗೆಲ್ಲಾ ಯೋಚಿಸುತ್ತಾ ಒಮ್ಮೆ ಸಿಟ್ಟು ಸಿಡುಕು ಮಾಡಿದೇವಿ" ಎಂಬ ಶಬ್ದ ಮಾತ್ರವೇ ಆತನ ತುಟಿ ಯ ನಿಯಂತ್ರಣಕ್ಕೆ ಅಧೀನವಾಗದ ಯಾರಿಕ್ಕೆ ಪ್ರವಹಿಸಿತು.

ತೀರ್ಥ ಪ್ರಸಾದಗಳನ್ನು ಹೊಂದಿ ಪ್ರದಕ್ಷಿಣೆಯನಂತರ ಆ ಕನ್ಯೆ ಮರಳಿದಳು. ಶ್ರೀಗಂಧವು ಆಕೆಯ ಮುಖವನ್ನೂ ಗುಲಾಬಿ ಹೂ (ಪ್ರಸಾದ) ತಲೆ ಕೂದಲನ್ನೂ ಮತ್ತಷ್ಟು ಶೋಭಾಯಮಾನವಾಗಿಸಿದ. ಆಗ ತೀರ್ಥ ಪ್ರಸಾದ ಕೊಡುವ ಸುಯೋಗ ನನಗೆ ಲಭಿಸಿದ್ದರೆ ಪ್ರಸಾದದೊಂದಿಗೆ ಒಂದೆರಡು ಹೂ ಬಾಳೆಹಣ್ಣುಗಳನ್ನೂ ತಂಗಿನ ಕಾಯಿ ಚೂರುಗಳನ್ನೂ ಒಂದು ಮಾಲೆ ಮಲ್ಲಿಗೆ—ಸೇವಂತಿಗೆ ಹೂವನ್ನೂ ಕೊಡುತ್ತಿದ್ದೆ. ಆಗ ಆಕೆಗಾಗುವ ಆನಂದವನ್ನು ನೋಡಿ ಮನತುಂಬ ಸಂತೋಷಪಡುತ್ತಿದ್ದೆ.... ಒಂದು ಸಂದರ್ಭವನ್ನು ಏನೆ ಕಾಣುವೆಗೆ ತಾಕೊಂಡೆನೆಂದು ಪೋತಿ ಪಶ್ಚಾತ್ತಾಪಪಟ್ಟ.

ಪೋತಿ ಎತ್ತ ನೋಡಿದರೂ ಆತನಿಗೆ ಕಾಣುವುದು ಆ ಕನ್ಯೆಯ ಮುಗುಳ್ನಗೆಯ ಮುಂದಿಯಿಸದ ಮುಖ. ಎಲ್ಲೆಲ್ಲೂ ಹೂನಗೆಯ ಮಳೆ!

ಪೂಜೆಗೆ ಹೊತ್ತಾಯಿತು. ಪೋತಿಯು ಆ ಕ್ಷೇತ್ರದ ಪ್ರಧಾನ ಅರ್ಚಕ, ಗರ್ಭ ಗುಡಿಯೊಳಗೆ ಪ್ರವೇಶಿಸಿ ಭಗವತಿಯ ವಿಗ್ರಹವನ್ನು ಹೂಗಳಿಂದ ಅಲಂಕರಿಸಿ ಚಿನ್ನಾಭರಣಗಳನ್ನು ತೊಡಿಸಿದನಾದರೂ ಭದ್ರ ದೀಪದಲ್ಲಿಯೂ ನೈವೇದ್ಯ ಸಾಧನಗಳಲ್ಲಿಯೂ ಅನೇಕ ಕಂಡು ದು ಹೂ ನಗೆಯನ್ನು! ಎಷ್ಟೇ ಶ್ರಮಿಸಿದರೂ ಆಕೆಯ ರೂಪನ್ನು ಮರೆಯಲು ಸಾಧ್ಯವಾಗದಿತ್ತು.

ಮಹಾಪೂಜೆ ಕಳೆದು ಹೆಚ್ಚು ಸಮಯ ಪೋತಿ ಅಲ್ಲಿರಲಿಲ್ಲ. ದೃಷ್ಟಿಗೆ ಗೋಚರವಾಗುವಷ್ಟು ದೂರಕ್ಕೆ ರಸ್ತೆಯತ್ತ ಹಿಡುನೋಟ ಬೀರಿ ಆ ಕನಕಾಂಗಿಯ ನಡಿಗೆಯನ್ನು ಹಿಂದಿನಿಂದ ಗುರುತಿಸಲು ಹೇಗೋ ಸಾಧ್ಯವಾಯ್ತು. ಹೃದಯದ ಗರ್ಭಗುಡಿಯಿಂದ ಹಲವು ಆಶಾಂಕುರಗಳೂ ಹೊರಹೊಮ್ಮುವ ಯತ್ನದಲ್ಲಿವೆ. ಭಗವತೀ ಕ್ಷೇತ್ರದ ಗರ್ಭಗುಡಿಯ ಬಾಗಿಲನ್ನು ಸಹಅರ್ಚಕರು ಮುಚ್ಚುವ ಸದ್ದೂ ಕೇಳಿಸಿತು.

ತನ್ನನ್ನು ಹಿಂದಿಕ್ಕಿ ಮುಂದೆ ಸಾಗುವ ಆ ಕನ್ಯೆ ಯಾರೆಂದು ಮೂಕತನದಿಂದಲೇ ಆತ ರಸ್ತೆಯ ಮೇಲಿದ್ದ ಕೆಲವರನ್ನು ವಿಚಾರಿಸಿದ್ದಾಯ್ತು. ಸಮರ್ಪಕವಾದ ಜವಾಬು ಯಾರಿಂದಲೂ ಬರಲಿಲ್ಲ.

ಇಷ್ಟೂ ತಿಳಿಯದವರ ತಲೆಗೆ ಸಿಡಿಲೂ ಎರಗುವುದಿಲ್ಲವೇಕೆಂದು ಮನಸಾರೆ ಶಪಿಸಿ ಪೋತಿ ಹಿಂತಿರುಗಿದ.

° ° °

ಮರುದಿನ ಆದೇ ಹೊತ್ತಿಗೆ ಪೋತಿ ದಾರಿಯಲ್ಲಿ ಕಾದಿದ್ದು ಆಕೆ ಹರಿವಾಣದಲ್ಲಿ ತರುತ್ತಿದ್ದ ಹೂಗಳ ಪೈಕಿ ಒಂದನ್ನು ಅಪೇಕ್ಷಿಸಿದ.

"ಇದು ಭಗವತಿಗೆ, ಸ್ವಾಮೀ!"...... ಎಂದು ಆಕೆ ನಗೆ ಹೂವನ್ನು ಮಾತ್ರವೇ ನೀಡಿ ನಡೆದಳು.

'ಛೆ! ದೇವೀ ಪೂಜೆಗೆಂದು ಹೋಗುತ್ತಿದ್ದ ಹೂವನ್ನು ನಾನೇಕೆ ಕೇಳಿದೆ?...ಇರಲಿ, ನಿನ್ನ ಹೆಸರೇನು?....' ಎಂದು ಕೈಸನ್ನೆಯಿಂದಲೇ ವಿಚಾರಿಸಿದ.

ಈ ಶಬ್ದಗಳ ಲೋಕದಲ್ಲಿ ಒಂದು ಶಬ್ದವನ್ನಾದರೂ ಇಚ್ಛಾನುಸಾರ ಉಚ್ಚರಿಸಲು ಸಾಧ್ಯವಿಲ್ಲದ ಪೋತಿ ನಿಸ್ಸಹಾಯಕನಾಗಿ ತನ್ನ ದುಸ್ಥಿತಿ ಬಗ್ಗೆ ತಾನೇ ಮರುಗಿದ. ಆತನ ಕಣ್ಣುಗಳು ತುಂಬಿ ಬಂದವು. ಹೃದಯದಿಂದ ಪ್ರೇಮವು ಉಕ್ಕಿ ಪ್ರವಹಿಸಬೇಕು, ತನ್ನ ವ್ಯಾಮೋಹ ಕೇವಲ ಭಾವನೆಯದಾಗಿರುವ ಬದಲು ಶಬ್ದಗಳ ಮೂಲಕವೂ ಸಾಧ್ಯವಾಗದೇ?

ಕ್ಯಾನ್ವಾಸ್ ಇಲ್ಲದ ಚಿತ್ರಕಲಾವಿದನಾದ ಪೋತಿಯದು.

ಯಾವ ತರದ ಸಂಕೋಚವನ್ನೂ ಪ್ರದರ್ಶಿಸದೆ ಸ್ವಲ್ಪ ಮುಗುಳುನಗೆ ಬೀರಿ ಆಕೆ ಗರ್ಭಗುಡಿಯತ್ತ ನಡೆದಳು.

ಜಯ ಘಂಟೆಗಳು, ಶಂಖಗಳು, ವಿವಿಧ ವಾದ್ಯಗಳು ಘೋಷಿಸಲಾರಂಭಿಸಿದವು. ದೀಪಾರಾಧನೆಯಾಯ್ತು. ಪ್ರಸಾದ ವಿತರಣೆಯಾದಂತೆ ಭಕ್ತ ವರ್ಗದವರೂ ಹಿಂತಿರುಗುತ್ತಿದ್ದರು. ಆ ಮನಮೋಹಿನಿಯೂ ಮನೆ ಕಡೆ ನಡೆದಳು. ಸ್ವಲ್ಪ ಹಿಂದಿನ ನೆರಳಿನಂತೆ ಪೋತಿಯೂ ಹಿಂಬಾಲಿಸಿದನು.

ಸ್ವಲ್ಪ ದೂರ ನಡೆದು ಆಕೆ ಒಂದು ಮನೆಯನ್ನು ಪ್ರವೇಶಿಸಿದಳು. ಪೋತಿ ನಿಂತಲ್ಲೇ ಸ್ತಬ್ಧನಾದ. ಆ ಮನೆ ಮದುವೆ ಮನೆಯಾಗಿರಬೇಕು. ಅಷ್ಟು ಚಪ್ಪರ ಭವ್ಯ ಸಮಾರಂಭಕ್ಕಲ್ಲದೆ ಏನ ವರಾರವನ್ನು ಹಾಗೆ ವಿಶಿಷ್ಟ ರೀತಿಯಲ್ಲಿ ಸಿಂಗ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ
ಫೋನ್: 77
ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕೆಲ ವರ್ಷಗಳ ಹಿಂದೆ ಜಾನ್ಸನ್ ಭಾರತಕ್ಕೆ ಸಂದರ್ಶನವಿತ್ತ ಸಂದರ್ಭದ ಚಿತ್ರವೊಂದು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೪	೯—೨—೧೯೬೨	No. 24

ಕಾಂಗ್ರೆಸ್ಸಿಗೆ ಮತ ನೀಡಿರಿ

ಇನ್ನೇನು, ಚುನಾವಣೆಯ ದಿನ ಬಂತು. ಪ್ರಜಾಪ್ರಭುತ್ವ ಭಾರತದ ಪ್ರಜೆಗಳು ತಮ್ಮ ಪ್ರತಿನಿಧಿಯನ್ನು ಆಯ್ದುಕೊಳ್ಳುವ ಮಹತ್ವಪೂರ್ಣ ದಿನ ಬಂತು. ಈ ದಿನ ಆಯಲಾದ ಪ್ರತಿನಿಧಿಗಳು ರಾಜ್ಯದ, ದೇಶದ ಶಾಸಕರಾಗಿ ಮುಂದಿನ ಐದು ವರ್ಷಗಳ ಕಾಲವುಳಿಯಲಿರುವರು. ಆದುದರಿಂದ ಮತದಾರರ ಜವಾಬುದಾರಿ ಅಪರಿಮಿತವಾದುದು. ಈ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಅವರು ತುಸುವಾದರೂ ಅಜಾಗರೂಕತೆ ತೋರಿಸಿದರೆ ತಮ್ಮ ಭವಿಷ್ಯ ರೂಪಿಸುವಲ್ಲಿ ಜಾರಿ ಹೋದಂತೆಯೇ ಸರಿ. ಹೀಗಾಗಿ ಸೂಕ್ತ ಉಮೇದ್ವಾರರನ್ನೇ ಆರಿಸಿ, ಮತದಾನದ ಪವಿತ್ರ ಹಕ್ಕನ್ನು ಚಲಾಯಿಸಿ ದೇಶದ ಆಡಳಿತ ಸೂತ್ರವನ್ನು ಸಮರ್ಥರ ಕೈಗಳಿಗೊಪ್ಪಿಸುವುದು ಜಾಣತನ.

ದೇಶದಲ್ಲಿ ಕಾಂಗ್ರೆಸ್ಸು ಅತಿದೊಡ್ಡ ರಾಜಕೀಯ ಪಕ್ಷ. ಅದನ್ನು ಎದುರಿಸಬಲ್ಲ ಪಕ್ಷವೊಂದು ಇನ್ನೂ ಬೆಳೆದು ಬಂದಿಲ್ಲ. ಈ ಬಾರಿಯ ಚುನಾವಣೆಗಳಲ್ಲಿ ವಿರೋಧಿ ಪಕ್ಷಗಳೆಲ್ಲವೂ ಒಂದು ಒಡಂಬಡಿಕೆಯನ್ನು ಸಾಧಿಸಿ ಒಮ್ಮುಖವಾಗಿ ಕಾಂಗ್ರೆಸ್ಸನ್ನು ಎದುರಿಸುವ ನಿರೀಕ್ಷೆಯಿತ್ತು. ಆದರೆ, ಕೆಲವೆಡೆ ಇದು ಕಾರ್ಯಗತವಾದರೂ ಹೆಚ್ಚಿನೆಡೆ ಆಗಲಿಲ್ಲ. ಹಾಗಾಗಿ ಕಾಂಗ್ರೆಸ್ಸು ನೇರಸ್ಪರ್ಧೆಯನ್ನೆದುರಿಸಬೇಕಾಗಿ ಬಂದ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಯಿತು. ಪಕ್ಷಾತೀತರ ದೊಡ್ಡ ಸೇನೆಯೊಂದು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದು. ಈ ಸೇನೆಯು ಸ್ವತಂತ್ರ ಬುದ್ಧಿ ಪ್ರೇರಿತವಾದುದೋ, ಇನ್ನಿತರ ಪ್ರಲೋಭನವಶ ಸನ್ನದ್ಧವಾದುದೋ ಹೇಳ ಬರುವುದಿಲ್ಲ. ಪಕ್ಷೀಯ ಪದ್ಧತಿಯಲ್ಲಿ ಪ್ರಶಾಸನ ನಡೆಯುವ ಪ್ರಜಾಸತ್ತೆ ಭಾರತದಲ್ಲಿ ಸ್ವತಂತ್ರರಿಗೆ ಯಾವ ಸ್ಥಾನಮಾನವೂ ಇಲ್ಲ. ಅವರು ಗೆದ್ದು ಬಂದರೂ ಸ್ವತಂತ್ರವಾಗಿಯೇನೂ ಮಾಡಲಾರರು. ಆದುದರಿಂದ ಅವರಿಗೆ ನೀಡುವ ಮತ ವ್ಯರ್ಥ. ವೈಯಕ್ತಿಕವಾಗಿ ಒಬ್ಬನು ಸಮರ್ಥನೂ ಯೋಗ್ಯನೂ ಇರಬಹುದು. ಆದರೆ, ಅಂತಹ ಸಾಮರ್ಥ್ಯ ಮತ್ತು ಯೋಗ್ಯತೆಗಳ ಪೂರ್ಣ ಪ್ರಯೋಜನ ಜನತೆಗೆ ದೊರೆಯುವುದು ಅತನ ಪಕ್ಷಾತೀತತೆಯಿಂದಾಗಿ ಸಾಧ್ಯವಾಗುವುದಿಲ್ಲ. ಚುನಾವಣೆಗಳಲ್ಲಿ ಮತಗಳಿಸಲು ಪಕ್ಷಾತೀತರಾಗಿ ನಿಂತು, ಗೆದ್ದು ಬಂದರೆ ಮುಂದೆ ಯಾವುದಾದರೂ ಪಕ್ಷವನ್ನು ಸೇರಿಕೊಳ್ಳಲೂ ಇವರು ಸ್ವತಂತ್ರರೇ. ಆದುದರಿಂದ ಬಣ್ಣ ಬದಲಿಸುವ ಪಕ್ಷಾತೀತರನ್ನು ಬೆಂಬಲಿಸುವುದು ಉಚಿತವಲ್ಲ.

ಮತದಾರರ ಮತಗಳನ್ನು ಪಡೆಯಲು ಹಲವು ತಂತ್ರಗಳು ಈ ಬಾರಿ ನಡೆದಿವೆ. ವಿರುದ್ಧ ಪಕ್ಷಗಳಲ್ಲಿನ ಒಡಂಬಡಿಕೆಯೂ ಇವುಗಳಲ್ಲಿ ಒಂದು. ಒಂದು ಪಕ್ಷವು ಒಂದು ಕ್ಷೇತ್ರದಲ್ಲಿ ಒಂದು ಪಕ್ಷದ ಉಮೇದ್ವಾರಿಗೆ ಬೆಂಬಲ ನೀಡಿದರೆ ಇನ್ನೊಂದು ಕ್ಷೇತ್ರದಲ್ಲಿ ಮತ್ತೊಂದು ಪಕ್ಷವನ್ನು ಬೆಂಬಲಿಸುವುದು. ಅಂದರೆ ನೀತಿಯ ಅಸ್ಥಿರತೆ. ಇದರ ಹಿಂದೆ ಏನೇ ಗೋಪನವಿರಲಿ, ಮತದಾರರು ಈ ಜಾಲದಲ್ಲಿ ಸಿಕ್ಕಿ ಬೀಳಬಾರದು. ಸ್ವತಂತ್ರ ಸಾಮಾನ್ಯ ನೀತಿಯಿಲ್ಲದ ರಾಜಕೀಯ ಪಕ್ಷಗಳು ದೇಶಹಿತವನ್ನು ಸಾಧಿಸುವುದು ಸಾಧ್ಯವೇ ಇಲ್ಲ. ಆರಂಭದಲ್ಲೇ ಬೆಂಬಲ ನೀಡುವುದರಲ್ಲಿ, ಪಡೆಯುವುದರಲ್ಲಿ ಭಿನ್ನ ನೀತಿಯ ಪಂಚಾಂಗವನ್ನೇ ನಿರ್ಮಿಸಿದ ಈ ವಿರೋಧ ಪಕ್ಷಗಳು ಒಂದು ವೇಳೆ ಗೆದ್ದು ಬಹುಮತ ಪಡೆದರೂ ಅವರ ಆಡಳಿತೆಯಲ್ಲಿ— ನೀತಿಯಲ್ಲಿ ಅಸ್ಥಿರತೆಯಿರುವುದು ಖಂಡಿತ. ಜನತೆಗಿಂದು ಬೇಕು— ಭದ್ರತೆ, ನೆಮ್ಮದಿ, ಸ್ಥಿರತೆ, ಸಂರಕ್ಷಣೆ. ಈ ಎಲ್ಲವುಗಳಿಗಾಗಿ ದುಡಿದ ದುಡಿಯುತ್ತಿರುವ ಏಕಮೇವ ಪಕ್ಷವೆಂದರೆ,ಕಾಂಗ್ರೆಸ್ ಮಾತ್ರ.

ಇಂದು ಕಾಂಗ್ರೆಸ್ ಆಡಳಿತೆಯ ಮೇಲೆ ಹಲವು ತರದ ಆರೋಪ ಜನತೆಯಿಂದ ಕೇಳಿ ಬರುತ್ತವೆ. ತೆರಿಗೆಗಳ ಹೆಚ್ಚಳ ಲೆವಿ ಪದ್ಧತಿ, ಲಂಚಗುಳಿತನ, ಅಧಿಕಾರ ಮೋಹ ಇತ್ಯಾದಿ ಇತ್ಯಾದಿ. ಅಧಿಕಾರದ ಮೇಲೆ ಮೋಹವಿಲ್ಲದವರು ತಮ್ಮ ಕಾಲಬಳಿಗೆ ಅದು ಬಂದರೂ ಒದ್ದೆಸೆಯುತ್ತಾರೆ. ಇಂದು ವಿರೋಧಿ ಪಕ್ಷಗಳೆಲ್ಲವೂ 'ಸಂಯುಕ್ತ ರಂಗದ ಕಪಟ ನಾಟಕ ಹೂಡಿದ್ದಾದರೂ, ಕಾಂಗ್ರೆಸನ್ನು ಸೋಲಿಸಿ ಅಧಿಕಾರ ಸೆಳೆಯುವುದಕ್ಕೆ—ಇವಕ್ಕೆ ಏನನ್ನೋಣ? ಇದು ಅಧಿಕಾರ ಮೋಹವಲ್ಲದಿದ್ದರೆ ಮತ್ತೇನು? ಲಂಚಗುಳಿತನ-ಭ್ರಷ್ಟಾಚಾರ ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಇದೆ. ಪರಂಪರೆಯಿಂದ ಬಂದಿರುವ ಈ ಜಾಡ್ಯ ದೂರ ಮಾಡುವಲ್ಲಿ ಕಾಂಗ್ರೆಸ್‌ನ ಕರ್ತವ್ಯವಿರುವಂತೆಯೇ ಉಳಿದ ಪರರ ಕರ್ತವ್ಯವೂ ಇದೆ. ಕಾಂಗ್ರೆಸ್ಸನ್ನು ಸೋಲಿಸಲು ನಾನಾ 'ತಂತ್ರ'ಗಳನ್ನು ಹೂಡಿರುವ ವಿರೋಧ ಪಕ್ಷಗಳೂ ಭ್ರಷ್ಟಾಚಾರದಿಂದ ವಿಮುಕ್ತವೆಂದು ಹೇಳ ಬರುವುದಿಲ್ಲ. ಆಡಳಿತದಲ್ಲಿ ನೂರಾರು ಯೋಜನೆಗಳು ನಡೆಯುವಾಗ ಕೆಲವೆಡೆ ಸೋರಿ ಹೋದರೆ, ಅದನ್ನೇ ಬ್ರಹ್ಮಾಂಡ ಮಾಡುವುದು ಸರಿಯಲ್ಲ. ಹಾಗಾಗದಂತೆ ತಡೆಯುವಲ್ಲಿ ರಚನಾತ್ಮಕ ಸಲಹೆ ಸೂಚನ ನೀಡಬೇಕು. ಕಾಂಗ್ರೆಸ್ಸು ಭ್ರಷ್ಟಾಚಾರ ನಿರ್ಮೂಲನೆಗೆ ಪ್ರಯತ್ನಿಸುತ್ತಿದೆ. ಇನ್ನು ತೆರಿಗೆಗಳ ಹೆಚ್ಚಳ— ಮತ್ತಿತರ ಸಮಸ್ಯೆಗಳು — ಇವುಗಳ ಉತ್ತರ ಸರಳ. ದೇಶದಲ್ಲಿ, ರಾಜ್ಯದಲ್ಲಿ ಯಾವ ಪಕ್ಷದ ಸರಕಾರವೇ ಇದ್ದರೂ ಜನರುತಕ್ಕೆ ಅಳಶದಿಂದ ಹಣಸುರಿಯುವುದಿಲ್ಲ. ನೌಕರರ ವೇತನ ಹೆಚ್ಚಿಸಲು ಕೇಳಿಕೊಳ್ಳುವ ವಿರೋಧಿ ಪಕ್ಷಗಳು ತೆರಿಗೆ ಹೆಚ್ಚಳಕ್ಕೆ ವಿರೋಧವಿದ್ದಾರೆ— ವಿದೇಶೀಯ ಆಕ್ರಮಣ, ಆಹಾರಾಭಾವ ಮೊದಲಾದ ಮಹಾ ಸಮಸ್ಯೆಗಳು ತಲೆದೋರಿದರೆ ಯಾವ ಸರಕಾರವಾದರೂ ಏನು ಮಾಡೀತು? ವಿರೋಧಿ ಪಕ್ಷದ ಸರಕಾರವಿದ್ದ ಮಾತ್ರಕ್ಕೆ ಮಳೆರಾಯನ ಅನುಗ್ರಹ ದೊರೆಯಲಾರದು, ಸಂರಕ್ಷಣೆ ಅನಗತ್ಯವಾಗಲಾರದು. ನಮ್ಮ ಅವಶ್ಯಕತೆಗಳನ್ನು ಹೊರಗಿನವರಾರೂ ಪೂರಯ್ಸಲಾರರು. ಯಾರು ಅಧಿಕಾರದಲ್ಲಿದ್ದರೂ ಇಂತಹ ವೇಳೆಯಲ್ಲಿ ಜನತೆಯ ಮೇಲೆಯೇ ಕರಭಾರ ಹೇರುವುದು ಅನಿವಾರ್ಯವೇ. 'ತೆರಿಗೆಗಳ ರಾಜ್ಯ'ವೆಂದು ಅಪಹಾಸ್ಯ ಮಾಡುವ ರಾಜಾಜಿಯವರೇ ಸೇಲ್ಸ್ ಟ್ಯಾಕ್ಸಿನ ಜನ್ಮದಾತರೆಂಬುದನ್ನು ಮರೆಯುವುದು ಸಾಧ್ಯವಿದೆಯೆ?

ಕಾಂಗ್ರೆಸ್ಸು ದೊಡ್ಡ ಪಕ್ಷ. ಭದ್ರ ಸರಕಾರ ರಚನೆ ಮಾಡಬಲ್ಲ ಪಕ್ಷ; ಆಡಳಿತದ ಅನುಭವವೂ ಇದಕ್ಕೆ ಇದೆ. ಹೊಸವೈದ್ಯನ ಕೈಯಲ್ಲಿ ತನ್ನನ್ನು ಒಪ್ಪಿಸಿಕೊಳ್ಳಲು ಪರಿಪಕ್ವಕಾಲವೂ ಇದಲ್ಲ. ಕಾಂಗ್ರೆಸ್ಸು ನಿರ್ದೋಷಿಯೆಂದು ಹೇಳುವುದು ಸಾಧ್ಯವಿಲ್ಲ. ಆದರೆ, ಉಳಿದ ವಿರೋಧೀ ಪಕ್ಷಗಳು ಮಾಡುತ್ತಿರುವ, ಮಾಡಬಹುದಾದ ಪ್ರಮಾಣದಲ್ಲಿ ದೋಷವನ್ನು ಕಾಂಗ್ರೆಸ್ಸು ಮಾಡಲಾರದು.

ಈ ಬಾರಿಯ ಚುನಾವಣೆಗಳಲ್ಲಿ ಹಲವೆಡೆ ಜಾತೀಯತೆಯ ಪ್ರಶ್ನೆ ಮುಂದೆ ಬಂದಂತೆ ಭಾಸವಾಗುತ್ತಿದೆ. ಜಾತ್ಯತೀತತೆಯನ್ನೇ ತನ್ನ ಆದರ್ಶವಾಗಿಟ್ಟು ಕೊಂಡು ಜಗತ್ತಿನಲ್ಲಿ ಹಿರಿಯ ಸ್ಥಾನವನ್ನು ಪಡೆದಿರುವಭಾರತದಲ್ಲಿ ಜಾತೀಯತೆಯ ಪ್ರಶ್ನೆಯನ್ನುಮತ್ತೂ ಮತ್ತೂ ಕೆದಕುವುದರಿಂದ ಸುಭಿಕ್ಷವಾಗಲಾರದು. ಜಾತೀಯ ಸೌಹಾರ್ದದಿಂದ ಬಾಳಿ ಸಮಾಜವಾದ ಮಾ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



'ಅತ್ತೆಗೊಂದು ಕಾಲಸಿದ್ದಂತೆ ಸೊಸೆಗೂ ಒಂದು ಕಾಲವಿರ ಬೇಡವೆ?—'

'ಸೊಸೆಯ ದುಡುಕಿಗಿಂತ ಅತ್ತೆಯ ಸಿಟ್ಟೇ ವಾಸಿ...'

ಭೂಮಿಪುತ್ರ

ಗೋಹ ರಾಜ್ಯದಲ್ಲಿ

ಇಲೆಕ್ಷನ್ ವಿಷಮ ಶೀತಜ್ವರ

‘ಏ, ತುಸ ಬಾಗಿಲು ತೆರೆಯ ಬಾರದೆ?’

‘…………………’

‘ತೆಗೆಯೋ ಬೇಗ…ಏನು ಈ ಮುಚ್ಚುಂಡೆಯಲ್ಲೂ ಕುಂಭಕರ್ಣನ ನಿದ್ರೆಯೆ?’

‘…ಓ…ಬಂದು ಬಿಟ್ರಿರಾ….’

‘ಮತ್ತೆ ಬರಬಾರದಾಗಿತ್ತೇನು?’

‘ಅಲ್ಲ, ಎಂಥ ಮಾತನ್ನಾಡುತ್ತೀರೀಂತ?’

‘ಮತ್ತೆಂಥದೆ?’

‘ಇಷ್ಟು ಬೇಗ ನೀವು ಬರ್ತೀರೀಂತ ಯೋಚಿಸಿರ್ಲಿಲ್ಲ. ಅಲ್ಲೇ ಜೋಂಪ ಹರಿದಿತ್ತು ಅಷ್ಟೆ….”

“ಬರೋ ಹೋಗೋ ಹೊತ್ತನ್ನೆಲ್ಲಾ ನಿಂಗೆ ಒಪ್ಪಿಸಿ ಮನೆ ಬಿಡ್ಬೇಕೂಂತೀಯಾ ಏನು?”

“ಏನೂ ಇಲ್ಲ……ಏನೂ ಇಲ್ಲ, ಸದ್ಯ ಆ ಮಾತು ತರ್ರೀ ಬೇಡಿ.”

“ತೆರೆದ ಬಾಗಿಲು ಮೊದಲಿಗೆ ಮುಚ್ಚು; ಥಂಡಿ ಗಾಳಿ ಬೀಸಿಕೋತಾ ಇದೆ…”

“ಎಂಥ ಥಂಡಿಗಾಳೀರೀ ಇದು?”

“ಮೊದಲೇ ಫೆಬ್ರವರಿ ತಿಂಗಳು-ಪುಷ್ಯಮಾಸ. ಅದ್ರ ಮೇಲೆ ಇಲೆಕ್ಷನ್‌ನ ಥಂಡಿ ಹರಿದು ಬಾಯುತ್ತಿದೆ ಕಣೇ…”

“ಅಲ್ರಿ, ಇಲೆಕ್ಷನ ಗಾಳಿ ಬಿಸಿ ಅಂತ ಇದುವರೆಗೆ ಹೇಳುತಿದ್ದವ್ರಿಗೆ ಇದೀಗ ಅದು ಒಮ್ಮಿಂದೊಮ್ಮೆಗೆ ಥಂಡಿ ಆಯ್ತು ಹೇಗೇಂತ?’

‘ಅಯ್ಯೋ, ಅಡುಗೆ ಮನೆಯೊಳಗೆ ಕ್ಕುಳಿತವ್ಳು ನೀನೇನೇ ನಿಜಾನ್ನು. ಆದ್ರೂ ಕಾಮನ್ ಸೆನ್ಸ್ ಇದ್ದವಳು ಅಲ್ವೆ?’

“ಎಂಥ ಸೆನ್ಸುರಿ ಅದು? ನಾನೇನು ನಿಮ್ಮ ಹಾಗೆ ಓದಿದ್ದೇನೆಯೆ?”

“ಆ ಓದಿಗೊಂದಿಷ್ಟು ಬೂದಿ ಹಾಕು. ಕೇಳು, ನನ್ನಷ್ಟು ಕಲ್ತದ್ದು ಎಂಟನೇ ಕ್ಲಾಸಂತೆ. ಅವ್ರು ಮಾಡಿದ ಕಾರ್ಬಾರು ನಾನು ಬಿಡು-ಇವತ್ತಿನ ನಾಲ್ಕು ಎಂ. ಎ. ಎಂಟು ಪಿ. ಎಚ್. ಡಿ. ಕಟ್ಟಿಕೊಂಡು ಕೊರಳಲ್ಲಿ ಹೊತ್ತುಕೊಂಡವ್ರು ಮಾಡಲಾರರು. ತಿಳಿಯಿತೆ?’

“ಅದು ಆ ಕಾಲ. ನಿಮ್ಮಪ್ಪನ ಕಾಲಕಳ್ದು ನಿಮ್ಮ ಕಾಲ ಬಂದಿದ ಅಂದಿನ ರಾಜಕಾಲ ಹೋಗಿ ಸ್ವತಂತ್ರಕಾಲ ಬಂದದ’

“ನೋಡು, ಇದನ್ನೇ ಕಾಮನ್ ಸೆನ್ಸ್ ಅನ್ನೋದು. ಸದ್ಯ ನಿನಗೆ ಅಷ್ಟಾದ್ರೂ ಇದೆ.’

‘ಇದೆ…ಇದೆ..ಇಲ್ದೆ ಇದ್ರೆ ಆಗುತ್ಯೆ?”

‘ಹ್ಞಾಂ…ಅಂಥದ್ದೇನ ತಿಳೀಲಿಲ್ಲ ಅಂದ್ರೆ….?”

“ಇಲ್ಲನ್ನಿ. ಥಂಡೀ ಹೇಗೇಂತ?”

‘ನೋಡು, ಇಲೆಕ್ಷನ್ನು ಕಳೆದ ಮೂರು ಬಾರಿಯೂ ಬರೀ ಬಿಸಿ ಇತ್ತು. ಆದ್ರಿಂದ್ಲೇ ‘ಚುನಾವಣಾ ಜ್ವರ’ ಅಂತ ಅದಕ್ಕೆ ಹೆಸರು ಬಂದಿತ್ತು. ಆದ್ರೆ ಈ ಬಾರಿ ಈ ಜ್ವರಕ್ಕಿಂತಲೂ ಚಳಿಹೆಚ್ಚಾಗಿ ಶೀತಜ್ವರವಾಗಿ ಬಿಟ್ಟಿದೆ…’

“ಮುಖ್ಯಕ್ಕೆ ವಿಷಮ ಶೀತ ಜ್ವರ ಆಗದಿದ್ರೆ ಸಾಕು….’

“ಕೆಲವೆಡೆ ಹಾಗೂ ಆಗಿದೆ, ಕಣೇ. ಪ್ರಚಾರ ವೇದಿಕೆಗಳಲ್ಲಿ ಚಪ್ಪಲಿಗಳ ತೂರಾಟ, ಕೋಳಿ ಮೊಟ್ಟೆಗಳ ಎಸೆತ; ಕಲ್ಲುಗಳ ಚೆಂಡಾಟ …ನೋವು—ಇವೆಲ್ಲವೂ ನಡೆದಿದೆ ತಾನೆ?”

‘ಹೌದ್ರಿ, ಮೊನ್ನೆ ನಮ್ಮೂರಲ್ಲೇ ನಡೆಯಿತಲ್ಲಾ? ದೂರ ಯಾಕೆ ಹೋಗಬೇಕು? ಅಲ್ರಿ, ಇದೆಲ್ಲಾ ಯಾಕೆ ಅಂತ?”

‘ಯಾಕೆ ಅಂದ್ರೆ, ಮನವನು ಮೆಚ್ಚಿಸಿ ನಡೆಯಲು ಬಹುದು; ಜನವನು ಮೆಚ್ಚಿಸಿ ನಡೆಯಲಾಗದು ಅನ್ನುತ್ತಾರೆ….”

“ಅಂದರೆ?”

‘ಅಂದರೆ ಏನು? ಊರ ಬಾಗಿಲನು, ಮುಚ್ಚಬಹುದು; ದೂರುವ ಬಾಯನು ಮುಚ್ಚಲಾಗದು.’

“ಆದ್ರೆ ಮತ್ತೂ ಹೇಳಿದ್ದಾರೆ ನೋಡಿ ….ಯಾರ ತಾಳಕಾದರು ಕುಣಿಯಬಹುದು ಕುಂಬಾರನ ತಾಳಕ್ಕೆ ಆಗದು, ಅಂತ…. ಇನ್ನೂ….ಹ್ಞಾಂ….ಮಡಕೆಯ ಬಾಯನು ಕಟ್ಟಲುಬಹುದು ಮನುಜನ ಬಾಯನು ಕಟ್ಟಲಾಗದು….”

‘ಹೌದೇ. ಅದ್ರಿಂದ್ಲೇ ಇಲೆಕ್ಷನ್ ಜ್ವರ ಶೀತ ಜ್ವರ—ವಿಷಮ ಶೀತಜ್ವರವಾಗಿ ಪರಿವರ್ತನೆಯಾಗುತ್ತಿದೆ….’

‘ಅಲ್ರಿ, ಹೀಗ ಯಾಕ ಆಗುತ್ತೆಂತ?”

‘ಏಕೆ ಅಂದ್ರೆ? ಅಂದಿದ್ದನಲ್ಲಾ… ಜನರು ತಮ್ಮ ಅಸಹನೆಯನ್ನು ಈ ರೀತಿ ತೋರಿಸುತ್ತಾರೆ….”

“ಅಸಹನೆಯಾದರೂ ಯಾವುದಕ್ಕೆ? ಅದನ್ನು ತೋರಿಸುವ ಈ ವಿಧಾನ ಸರಿಯಾದುದೆ?”

‘ಅಸಹನೆ ಯಾಕೇಂತ ತಾನೆ? ಕಾಂಗ್ರೆಸ್ಸಿನ ದುರಾಡಳಿತೆ, ಲಂಚಗುಳಿತನ, ಸ್ವಾರ್ಥಪ್ರಿಯತೆ, ಶೋಷಣಾಶೀಲತೆ, ಭಿನ್ನಮತೀಯತೆ ಮೊದಲಾದ ದುರ್ಗುಣಗಳಿಂದ ‘ಒಂದು ತಂಡ’ದಲ್ಲಿ ಅಸಹನೆ ಮೂಡಿದೆ ಎನ್ನುತ್ತಾರೆ. ಇನ್ನು ಅದನ್ನು ತೋರಿಸುವ ರೀತಿ ಸರಿಯೇ ಅಂತ ತಾನೇ ನಿನ್ನ ಪ್ರಶ್ನೆ?’

“ಹೌದು…”

‘ಮತ್ತೆ ಮಾಡುವುದೇನು? ಮುಂದಿನ ಬಾಗಿಲಲ್ಲಿ ಹೊಗಲಾರದವರನು ಹಿಂದಿನ ಬಾಗಿಲಲ್ಲಿ ಹೊಗುವ ಪ್ರಯತ್ನ ಮಾಡಿದರೆ ತಪ್ಪೇನು?’

“ಅಂದ್ರೆ, ನೇರವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಜಯಗಳಿಸಲಾರದವರು ಹಿಂಸಾತ್ಮಕ ಪ್ರವೃತ್ತಿಗೆ ಇಳಿಯುತ್ತಾರೆ ಎಂದು ಕಾನೂನು ನೀವೆನ್ನುವುದು?’

‘ನನ್ನ ವ್ಯಾಖ್ಯೆ ಸ್ವಲ್ಪ ಮಟ್ಟಿಗೆ ನಿಜಾನ್ನು, ತಮಗೆ ಕಾರಣಾಂತರಗಳಿಂದ ಇರುವ ಅಸಮಾಧಾನವನ್ನು ಪುಂಡಾಟಿಕೆಯ ಮೂಲಕ ಪ್ರದರ್ಶಿಸುತ್ತಾರೆ. ಆದರೆ ದುಃಖವೆಂದರೆ, ಪ್ರಜಾಪ್ರಭುತ್ವಕ್ಕೆ ಇದು ಒಪ್ಪತಕ್ಕದ್ದೆ? ಅಂತ.”

‘ಜನ ತನ್ನ ಅಭಿಪ್ರಾಯವನ್ನು ಚುನಾವಣೆಗಳ ಮೂಲಕ ಪ್ರಕಟಿಸುವ ಈ ಸಮಯದಲ್ಲಿ ಹಿಂಸೆಗೆ ಯಾರೇ ಆಗಲೀ ಯಾಕೇ ಆಗಲೀ ಪ್ರಚೋದನೆ ನೀಡುವುದು ಚುನಾವಣೆಗಳಿಗೆ ಆತಂಕವೊಡ್ಡಿದಂತಾಗುವುದಿಲ್ಲವೆ?”

“ಮತ್ತೆಂಥದು? ಪಣಕಟ್ಟುವನೊಳು ಹೆಣಗಲು ಬಹುದು; ಹಗೆ ಕಟ್ಟುವನೊಳು ಹೆಣಗಲಾಗದು……..ಹಾಗೆ ಆಯ್ತು ನೋಡು.”

“ಹೌದ್ರಿ….ಸುಮ್ಮ ಸುಮ್ಮನೆ ಪುಂಡಾಟಕೆ…’

‘ಛೆ….ಛೆ….ಇಂತ ಕ್ರೂರ ಶಬ್ದಗಳಿಂದ ಕರೆಯಬೇಡ….ಇದು ಜನ ಪ್ರತಿಭಟನೆ, ವಿರೋಧ ವ್ಯಕ್ತ ಪಡಿಸುವ ಸೌಮ್ಯರೂಪ….”

“ಅಲ್ರಿ, ಅದನ್ನು ಸೌಮ್ಯವೆನ್ನಿ, ಕಠೋರವೆನ್ನಿ, ತಂಟೆ ತಂಟೆಯೇ ತಾನೆ? ಪಾವಿತ್ರ್ಯ—ಮಾನವತೆಗಳನ್ನು ಗಂಗೆಯಲ್ಲೇ ತೊಳೆದು ಬಂದಂತಲ್ಲಾ….”

“ಹ್ಞಾಂ…. ಸದ್ಯ ಶಂಕರಾಚಾರ್ಯರೂ ಪ್ರಭುದತ್ತ ಬ್ರಹ್ಮಚಾರಿಯವರೂ ಉಪವಾಸ ನಿಲ್ಲಿಸಿದರು…’

‘ನೋಡಿ, ನಮ್ಮ ಇಂದಿರಾ ಗಾಂಧಿಯವರು ಸುಮ್ಮನೆಯೆ? ಯಾವ ಹೆಚ್ಚಿನ ಭರವಸೆಯೂ ಇಲ್ಲದೆ ಹೇಗೆ ನಿಲ್ಲಿಸಿದರು?’

‘ಯಾರನ್ನ?”

“ಉಪವಾಸವನ್ನು….’

‘ಹಾಗೆ… ಶ್ರೀಮದಾಚಾರ್ಯರು ಉಪವಾಸ ನಿಲ್ಲಿಸಿದ್ದು ಏಕೆ ಗೊತ್ತೆ?”

‘ಏಕೆ?’

“ಪ್ರಧಾನಿ ಗಾಂಧಿ, ರಾಷ್ಟ್ರಪತಿ ರಾಧಾಕೃಷ್ಣನ’, ಜಯಪ್ರಕಾಶ ನಾರಾಯಣ್ ಮತ್ತನೇಕರು ಕೇಳಿಕೊಂಡ್ರಂತೆ….’

‘ಅಲ್ರಿ, ಇವ್ರೆಲ್ಲಾ ಯಾವಾಗ ಕೇಳಿಕೊಂಡದ್ದು? ಉಪವಾಸ ಆರಂಭವಾಗುವಾಗಲೇ ಬೇಡಾಂತ ಅನ್ನಲಿಲ್ವೆ?’

“ಅವ್ರೆಲ್ಲರ ಮಾತನ್ನು ಮೀರಿದರ್‍ನ್ದೇವರ ವಾಕ್ಯವನ್ನು ಮೀರಿದಂತೆ… ಆದುದರಿಂದ….”

“ಓಯ್…. ಜನ ದೇವ್ರ ಅವತಾರ,. ಜನರ ಪ್ರಾರ್ಥನೆ ದೇವರ ವಾಣಿ ಎಂಬುದು ಶ್ರೀಮದಾಚಾರ್ಯರಿಗೆ ಮನವರಿಕೆಯಾಗಬೇಕಾದ್ರೆ ಎಷ್ಟು ಎಂಡೂವರೆ ತಿಂಗಳು ಕಳೆಯ ಬೇಕಾಯ್ತು….’

“ಹ್ಞಾಂ..ಉಪವಾಸ ಮಾಡಿದ್ದರಿಂದ ದೈಹಿಕ ಶಕ್ತಿಯೊಡನೆ ಮಾನಸಿಕ ಶಕ್ತಿಯೂ ತುಸು ಕುಂಠಿತವಾಗಿರಲೂ ಬಹುದು….”

“ಅಲ್ರಿ, ಅದ್ರ ಗುಟ್ಟು ಬೇರೆ…”

“ಏನು?’

“ದೇಶದಲ್ಲಿ ಅವರ ಉಪವಾಸದ ಪ್ರಭಾವ ಕಡಿಮೆಯಾಗುತ್ತ ಬಂದು….ಮೊದಲಿಗೆ ಜನರಲ್ಲಿದ್ದ ಹುಮ್ಮಸ್ಸು ಮತ್ತೆ ಉಳಿಯಲಿಲ್ಲ. ಆಚಾರ್ಯರು ಹೇಗಿದ್ದಾರೆ ಎಂಬುದನ್ನೂ ವಿಚಾರಿಸುವವರು ಕಡಿಮೆಯಾದರ….”

“ಹ್ಞಾಂ… ಇರಬಹುದು…ಏನೇ ಇರಲಿ, ಎಲ್ಲರ ಕೋಡುಗೆಯನ್ನೂ ವಿನಂತಿಯನ್ನೂ ತಿರಸ್ಕರಿಸಿ ತೀವ್ರ ಕ್ರಮವನ್ನೂ ಕೈಕೊಂಡು ಸರಕಾರವನ್ನು ಬಗ್ಗಿಸಿಯೇ ಬಿಡಬೇಕೆಂದಿದ್ದ ಆಚಾರ್ಯರಿಗೆ ಮರುದಿನವೇ ಜನತಾವಾಣಿಯಲ್ಲಿ ಜನಾರ್ದನನ ವಾಣಿಯ ಪ್ರೇರಣೆಯಾದುದು ವಿಚಿತ್ರವಲ್ಲವೆ?”

“ಹ್ಞಾಂ…. ಸರೀನ್ನಿ. ಆದ್ರೆ ಒಂದು ……”

“ಏನು?”

“ಇದೇ ಈಗ ಮಾಡಿದ ಕೆಲಸವನ್ನು ಅವರು ಎರಡು ತಿಂಗಳು ಹಿಂದೆಯೇ ಮಾಡುತಿದ್ದರೆ? ಮಾನ—ಪ್ರತಿಷ್ಠೆ ಎಲ್ಲವೂ ಉಳಿಯುತಿತ್ತು. ಮುಂದೆ ಸರಕಾರಕ್ಕೆ ಆಹ್ವಾನ ನೀಡುವ ನೈತಿಕ ಬಲವೂ ಇರುತಿತ್ತು…. ಈಗ….”

“ಏನು? ಹೇಳಿಬಿಡು…’

“ಗೋರಕ್ಷಣೆಗಾಗಿ ತಮ್ಮ ಆತ್ಮಾರ್ಪಣೆ ಮಾಡಿದ್ದರೆ, ಅದರಿಂದ ಕೆಲವಂಗಾದರೂ ತೃಪ್ತಿಯಾಗುತಿತ್ತೋ ಏನೋ…”

‘ಯಾಕೆ?’

“ಪೊಟ್ಟಿ ಶ್ರೀ ರಾಮುಲು ಸತ್ತು, ಆಂ

(ಒಂಭತ್ತನೇ ಪುಟ ನೋಡಿರಿ)

THE GENERAL INVESTMENT TRUST LTD.
Regd. Office: Upendra Baug, P. B. No. 25,
UDIPI, S. India.

—x—

NOTICE.

NOTICE is hereby given that the Share Transfer Books and Register of Members of the Company will be closed from Thursday the 16th February 1967 to Tuesday the 21st February 1967 both days inclusive.

(By order of the Board)

Upendra Baug, Udipi, 3rd Feb., 1967. — T. Mohandas Pai, Executive Director.

ಸ್ಪಷ್ಟೀಕರಣ

ತಾ. 28—1—1967ರ ನವಭಾರತ ದೈನಿಕ ಪತ್ರಿಕೆಯಲ್ಲಿ ಪ್ರಕಟವಾದ ‘ನಮ್ಮ ಟೂರಿಸ್ಟ್ ಬಸ್ಸು ಹೊರಡುವುದಿಲ್ಲ, ಆರ್. ಟಿ. ಓ. ಆಫೀಸಿನ ರಾತ್ರಿಯ ಜುಳುಮು’ ಎಂಬ ಶೀರ್ಷಿಕೆಯಲ್ಲಿ ಪ್ರಕಟಿತವಾದ ಪ್ರಕಟನೆಯ ಕುರಿತು ವಿವರಣೆ.

o o o

ತಾ. 16—1—1967ರಂದು ಜರಗಿದ ರೀಜನಲ್ ಟ್ರಾನ್ಸಪೋರ್ಟ್ ಅಥಾರಿಟಿಯ ಮೀಟಿಂಗ್‌ನಲ್ಲಿ ಸ್ಪೆಷಲ್‌ಸರ್ವಿಸ್ ವಾಹನಗಳಿಗೆ ಕೊಡುವಂತಹಸ್ಪೆಷಲ್ ಪರ್ಮಿಟ್‌ಗಳನ್ನು ಆವಶ್ಯಕವಾದ ತನಿಖೆ ಮಾಡಿದ ನಂತರ ನೀಡಬೇಕೆಂದು ನಿರ್ಣಯಿಸಿದಂತೆ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂ. ಲಿ. ಅವರು ತಮ್ಮ ಬಸ್ಸುಗಳಿಗೆ ಜನವರಿ ತಾ. 28 ಮತ್ತು 29ಕ್ಕೆ ಸ್ಪೆಷಲ್ ಪರ್ಮಿಟ್‌ಗಳನ್ನು ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯ ಕಾರ್ಯದರ್ಶಿಯಾದ ನನಗೆ ತನಿಖೆ ಶಿಫಾರ್ಸು ಕೊಡಲಾಗಲಿಲ್ಲ. ತನಿಖೆ ಮಾಡಿದ ನಂತರ ನಿಯಮಗಳಿಗೆ ಅನುಸರಿಸಿ ಕೊಡಲು ಯಾವ ಅಭ್ಯಂತರವೂ ಇಲ್ಲ. ಈ ವಿಚಾರವನ್ನು ಅರ್ಜಿದಾರರಿಗೆ ಬರೆದ ಪತ್ರದಲ್ಲಿ ಸ್ಪಷ್ಟ ಪಡಿಸಿದೆ. ಹೀಗಿದ್ದರೂ ತಾ. 28—1—67ರ ನವಭಾರತದಲ್ಲಿ ಪ್ರಕಟವಾದ ವದಂತಿಯಂತೆ ಆರ್. ಟಿ.ಓ. ಚೆಯರ್ಮೆನ್ ಮತ್ತು ದ. ಕ. ಜಿಲ್ಲಾಧಿಕಾರಿ ಶ್ರೀ ನಾಗೇಗೌಡರು ಪರ್ಮಿಟುಗಳನ್ನು ನಿರಾಕರಿಸ ಬೇಕೆಂದು ಬಾಯ್ದೆರೆಯಾಗಿ ನನಗೆ ಹೇಳಿದರೆಂದೂ ಮತ್ತು ಆ ರೀತಿ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಅವರಿಗೆ ನಾನು ತಿಳಿಸಿರುವೆನೆಂಬುದೂ ನಿಜವಲ್ಲ.

V. M. Tadkod
ಕಾರ್ಯದರ್ಶಿ
ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ
ಮಂಗಳೂರು, ದ. ಕ.

ಯಕ್ಷಗಾನ ಕಲಾ ತಪಸ್ವಿ

ದಿ| ಬಲಿಪ ನಾರಾಯಣ ಭಾಗವತರು

ಲೇಖಕರು: ಶ್ರೀ ಎಸ್. ಬಾಲಸುಬ್ರಹ್ಮಣ್ಯಂ.

ಸುಮಾರು ಮೂವತ್ತು ವರ್ಷಗಳ ಹಿಂದಿನ ಒಂದು ಸವಿ ನೆನಪು. ಅಂದು ಯಕ್ಷಗಾನ ಬಯಲಾಟಗಳು ಇಂದಿನಂತೆ ಸುಧಾರಣೆ ಹೊಂದಿರದ ಕಾಲವಾಗಿತ್ತು. ಅಂತಹ ಕಾಲದಲ್ಲಿ ಒಂದು ಬಯಲಾಟ ಪ್ರದರ್ಶನಕ್ಕೆ ಇಪ್ಪತ್ತು ಸಾವಿರಕ್ಕೂ ಮಿಕ್ಕಿ ಜನ ಸೇರುವುದೆಂದರೆ ಅದೊಂದು ಅಚ್ಚರಿಯೇ ಸರಿ. ಅಂತಹ ಅಚ್ಚರಿಯ ಒಂದು ಬಯಲಾಟ ಪ್ರದರ್ಶನ— ಅಂದು ನಡೆದುದು ಮಂಗಳೂರು ಬಂಟವಾಳಗಳ ನಡುವೆ ಇರುವ ಒಳವೂರಿನಲ್ಲಿ. ಅಲ್ಲೀಗ ಮಂಗಳೂರು ನಗರಕ್ಕೆ ನೀರು ಸರಬರಾಯಿಯಾಗುವ ತಿಳಿನೀರಿನ ಸಮುದ್ರದಂತಿರುವ ದೊಡ್ಡ ಜಲಾಶಯ ರೂಪುಗೊಂಡಿದೆ.

ಈ ಸ್ಥಳದಲ್ಲಿಯೇ ಮೂವತ್ತು ವರ್ಷಗಳಿಗಿಂತ ಹಿಂದೆ ನಡೆದ ಅಚ್ಚರಿಯ ಬಯಲಾಟ. ಅದು ಮೂರು ಮೇಳಗಳ ಕೂಡುವಿಕೆಯಿಂದ ನಡೆದ "ಸಮುದ್ರ ಮಥನ." ಆಗಿನ ಕಾಲದಲ್ಲಿ ಅಷ್ಟು ದೊಡ್ಡ ಜನಸ್ತೋಮ ಕೂಡಿದ ಆಟವೆಂದರೆ ಅದೇ ಮೊತ್ತ ಮೊದಲಿನದು. ಅನಂತರ ಬಳಿಕವೂ ಅಂತಹ ಆಟ ನಡೆದುದು ಅಪೂರ್ವವೆಂದೇ ಹೇಳಬೇಕು. ಈ ಬಯಲಾಟಕ್ಕೆ ಸುಮಾರು ಮೂವತ್ತು ಮೈಲಿಗಳ ದೂರದಿಂದಲೂ ಜನರು ಕಾಲ್ನಡಿಯಿಂದಲೋ ವಾಹನಗಳ ಮೂಲಕವೋ ನೋಡುವ ಕುತೂಹಲದಿಂದ ಆಗಮಿಸಿದ್ದರು. ಆ ದಿನ ಅಪರಾಹ್ನ ಗಂಟೆ ಮೂರರಿಂದಲೇ ಜನ ಸೇರಲು ಪ್ರಾರಂಭವಾಗಿತ್ತು. ಕತ್ತಲಾಗುವಾಗ ಹತ್ತು ಸಾವಿರಕ್ಕೂ ಮಿಕ್ಕಿ ಜನ ಸೇರಿತ್ತು. ಮತ್ತೂ ಜನ ಬರುತ್ತಲೇ ಇತ್ತು. ಸಮುದ್ರ ಮಥನ ಬಯಲಾಟ ನೋಡಲು ಜನ ಸಮುದ್ರವೇ ಅಲ್ಲಿ ನೆರೆದಿತ್ತು. ಆ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಕಣ್ಣಿಟಕದಷ್ಟು ದೂರಕ್ಕೂ ಜನರೇ ಜನರು. ನೆಲದ ಮೇಲೂ ಸುತ್ತಮುತ್ತಲಿನ ಮರಗಳ ಮೇಲೂ ಎಲ್ಲೆಲ್ಲೂ ಜನ. ರಂಗಮಂಟಪದ ಮುಂಭಾಗದಲ್ಲಿ ಸ್ವಲ್ಪ ದೂರದ ವರೆಗೆ ಕುಳಿತವರಿಗೆ ಮಾತ್ರ ಬಯಲಾಟ ಸರಿಯಾಗಿ ಕಾಣುತ್ತಿದ್ದುದು ಮತ್ತು ಕೇಳುತ್ತಿದ್ದುದು.

ಇಂದಿನಂತೆ ಆಗ ಧ್ವನಿವರ್ಧಕಗಳ ವ್ಯವಸ್ಥೆ ಇರಲಿಲ್ಲ. ಆದುದರಿಂದ ಅಷ್ಟು ದೊಡ್ಡ ಜನರ ಸಭೆಗೆ ರಂಗಸ್ಥಳದಲ್ಲಿ ವೇಷಧಾರಿಗಳು ಹೇಳುವ ಅರ್ಥ ಕೇಳುವುದಾದರೂ ಹೇಗೆ? ದೂರದಲ್ಲಿ, ಬಹು ದೂರದಲ್ಲಿ ನಿಂತವರಿಗಂತೂ ವೇಷಧಾರಿಗಳು ಗೊಂಬೆಗಳಂತೆ ಕುಣಿದಾಡಿಸುವುದು ಮಾತ್ರ ಅಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ಭಾಗವತರ ಹಾಡುಗಾರಿಕೆ ಮಾತ್ರ ಅಷ್ಟು ದೂರದ ವರೆಗೂ ಬಹು ದೊಡ್ಡ ಸಭೆಯ ಹೊರಗೂ ಸುಸ್ಪಷ್ಟವಾಗಿ, ಸುಶ್ರಾವ್ಯವಾಗಿ ಕೇಳಿಸುತ್ತಿತ್ತೆಂದರೆ ಅದೊಂದು ಮರೆಯಲಾರದ ಸವಿ ನೆನಪು. ಹಾಗೆ ತಾರಸ್ವರದಿಂದ ಬಹು ದೂರದ ವರೆಗೂ ಕೇಳಿಸುವಂತೆ ಅಂದು ಹಾಡಿದವರು ಶ್ರೀ ಬಲಿಪ ನಾರಾಯಣ ಭಾಗವತರು. ಹಾಗೆ ಹಾಡಿ ಜನರ ಮನಸ್ಸೂರೆಗೊಳಿಸಿದ ಆ ಕಲಾವಿದ ಇಂದೀಗ ಯಕ್ಷಗಾನ ರಂಗದಲ್ಲಿ ಕಣ್ಮರೆಯಾದುದು ಯಕ್ಷಗಾನ ರಂಗಕ್ಕೇ ಪ್ರಧಾನ ಅಂಗವನ್ನು ಕಳೆದುಕೊಂಡಷ್ಟು ದೊಡ್ಡ ನಷ್ಟವಾಗಿದೆ.

ದಿ| ಬಲಿಪ ನಾರಾಯಣ ಭಾಗವತರು ಇಂದಿಗೆ ಎಪ್ಪತ್ತಾರು ವರ್ಷಗಳ ಹಿಂದೆ ಇಂದೀಗ ಕೇರಳಕ್ಕೆ ಬಲಿಯಾದ ಕಾಸರಗೋಡು ತಾಲೂಕಿನ ಪಡ್ರೆ ಗ್ರಾಮದ 'ಬಲಿಪರ ಜಾಲು' ಎಂಬ ಮನೆಯಲ್ಲಿ ಬಲಿಪ ಮಹಾದೇವಭಟ್ಟ ಮತ್ತು ದುಗ್ಗಮ್ಮ ಎಂಬ ದಂಪತಿಗಳಿಗೆ ಮಗನಾಗಿ ಜನ್ಮವೆತ್ತಿದರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಕರ್ಹಾಡ ಬ್ರಾಹ್ಮಣ ವರ್ಗಕ್ಕೆ ಸೇರಿದವರು. ಬಲಿಪ ಎಂಬುದು ಈ ಬ್ರಾಹ್ಮಣ ವರ್ಗದ ಒಂದು ಮನೆತನದ ಹೆಸರು. ಇವರ ಬಾಳು ಕಾಸರಗೋಡು ತಾಲೂಕಿನಲ್ಲಿ ಕಳೆದರೂ ಮುಂದಿನ ಬಾಳು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸೀಮೆಯಲ್ಲಿ ಸಾಗಿದೆ. ದೈವ ದತ್ತವಾದ ಸುಮಧುರ ಕಂಠವಿದ್ದ ಇವರು ಚಿಕ್ಕಂದಿನಲ್ಲಿ ಯಕ್ಷಗಾನ ಪ್ರಸಂಗಗಳನ್ನು ತಾಳಬದ್ಧವಾಗಿ ಗುರುಮುಖದಿಂದ ಹಾಡಲು ಕಲಿತು ಕೆಲವೇ ಸಮಯದಲ್ಲಿ ಭಾಗವತರೆಂಬ ಹೆಸರಿಗೆ ಪಾತ್ರರಾದರು. ಇವರು ಸಂಗೀತ ಕಲಾವಿದರಾದ ಶ್ರೀ ಕೂಡ್ಲು ಸುಬ್ರಾಯ ಶಾನುಭಾಗರ ಶಿಷ್ಯರೆನಿಸಿ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದರು.

ಇವರ ಹೆಸರು ನಾರಾಯಣ ಎಂದಿದ್ದರೂ ಸಾಮಾನ್ಯವಾಗಿ ಜನರು ಇವರನ್ನು ಮನೆತನದ ಹೆಸರಿನಿಂದ ಬಲಿಪ ಭಾಗವತರೆಂದೇ ಕರೆಯತೊಡಗಿದರು. ಹೀಗೆ ಶ್ರೀ ಬಲಿಪ ಭಾಗವತರು ತಾರುಣ್ಯಕ್ಕೆ ಕಾಲಿಟ್ಟಾಗ ಅಂದು ಬೆಳಕು ಕಂಡಿದ್ದ ಸಂಚಾರೀ ದಶಾವತಾರ ಮೇಳಗಳಲ್ಲಿ ಭಾಗವತರಾಗಿ ಭಾಗವಹಿಸಿ ತನ್ನ ಸುಶ್ರಾವ್ಯವಾದ ಹಾಡುಗಾರಿಕೆಯಿಂದ ಜನ ಮನವನ್ನು ಸೂರೆಗೊಂಡು ಬಲುಬೇಗನೆ ವಿಖ್ಯಾತ ಭಾಗವತರೆನಿಸಿದರು.

ಸುಮಾರು ಐವತ್ತು ವರ್ಷಗಳ ಹಿಂದೆ ಬಯಲಾಟಗಳೆಂದರೆ ಕೇವಲ ಹಳ್ಳಿಯ ಪಾಮರ ಜನರ ಮನೋರಂಜನೆಯ ಸಾಧನವಾಗಿತ್ತು. ಆ ಕಾಲದಲ್ಲಿ ಬಯಲಾಟಗಳ ಹಾಡುಗಾರಿಕೆಯೂ ಅಷ್ಟೇ, ಅರ್ಥಗಾರಿಕೆಯೂ ಅಷ್ಟೇ. ಹಾಗಿದ್ದ ಆ ಕಾಲದಲ್ಲಿ ಅಪೂರ್ವವಾದ ಸುಶ್ರಾವ್ಯ ಹಾಗೂ ಸುಮಧುರವಾದ ತನ್ನ ಹಾಡುಗಾರಿಕೆಯಿಂದ ಪಾಮರರನ್ನಲ್ಲದೆ ಪಂಡಿತರಾದ ಯಕ್ಷಗಾನ ಕಲಾಭಿಮಾನಿಗಳನ್ನು ಕೂಡಾ ತಲೆದೂಗಿಸಿದ ಖ್ಯಾತಿ ಶ್ರೀ ಬಲಿಪ ಭಾಗವತರದು. ಇವರು ತನ್ನ ಕಂಚಿನ ಕಂಠದಿಂದ ಹಾಡಿದರೆಂದರೆ ಮಧ್ಯರಾತ್ರಿಯ ವೇಳೆ ನೀರವ ನಿಶಾ ಸಾಮ್ರಾಜ್ಯದಲ್ಲಿ ಇವರ ಹಾಡು ಮೂರು ಮೈಲುಗಳ ದೂರದ ವರೆಗೂ ಕೇಳಿಸುವಂತಿತ್ತು. ದೈವದತ್ತವಾದ ಈ ಅಪೂರ್ವ ಕಂಠ ಇವರದೊಂದು ವೈಶಿಷ್ಟ್ಯ, ಆಗಿನ ಕಾಲದಲ್ಲಿ ಯಕ್ಷಗಾನ ಪ್ರಸಂಗಗಳ ಹಾಡುಗಾರಿಕೆಯಲ್ಲಿ ಶಾಸ್ತ್ರೀಯ ಪದ್ಧತಿ ಬಿಡದೆ ನಾವೀನ್ಯವನ್ನು ಅಳವಡಿಸಿಕೊಂಡು ಒಂದು ರೀತಿಯ ಸುಧಾರಣೆಯನ್ನು ತಂದವರು ಶ್ರೀ ಬಲಿಪ ಭಾಗವತರು. ಇವರ ಹಾಡುಗಾರಿಕೆ ಶಾಸ್ತ್ರೀಯ ಯಕ್ಷಗಾನ ಪದ್ಧತಿಯಲ್ಲದೆ ಸಂಗೀತ ಸಂಯುಕ್ತ ಮಿಶ್ರ ಪದ್ಧತಿಯಲ್ಲ. ರಂಗಮಂಟಪದ ಹಿಂಬದಿಯಲ್ಲಿ ಭಾಗವತರು ನಿಂತು ಹಾಡುತ್ತಿದ್ದ ಆ ಕಾಲದಲ್ಲಿ ಹಿಂಬದಿಯಲ್ಲಿರಿಸಿದ ರಥದಲ್ಲಿ ಕುಳಿತು ಹಾಡುವ ರೂಢಿಯನ್ನು ಬಳಕೆಗೆ ತಂದವರು ಇವರೇ. ಪ್ರಸಂಗ ಪೀಠಿಕೆಯಿಂದಾರಂಭಿಸಿ ಬೆಳಗಿನ ವರೆಗೂ ಆಯಾ ರಸಕ್ಕೆ ತಕ್ಕಂತೆ ತಾರ ಸ್ವರದಿಂದ ಹಾಡಿದರೂ ಕುಗ್ಗದ ಕಂಠ ಇವರದು. ಶೃಂಗಾರ ರಸದ ಪದ್ಯಗಳನ್ನು ಮೋಹನ, ಕಲ್ಯಾಣಿ ಮೊದಲಾದ ರಾಗಗಳಲ್ಲಿಯೂ, ವೀರ ರಸದ ಪದ್ಯಗಳನ್ನು ಮಾರವಿ, ಭೈರವಿ ಮೊದಲಾದ ರಾಗಗಳಲ್ಲಿಯೂ ಇವರು ಹಾಡಿದರೆಂದರೆ ರಸ ಹೊನಲಾಗಿ ಹರಿದಂತೆ. ಹಾಗೆ ಹಾಡುವಾಗ ಒಮ್ಮೊಮ್ಮೆ ವೇಷಧಾರಿಗಳು ಮೈಮರೆತು ಬಿಡುವುದೂ ಇತ್ತಂತೆ. ಇವರ ಹಾಡುಗಾರಿಕೆ ವೇಷಧಾರಿಗಳಲ್ಲಿ ರಸೋದಯವನ್ನುಂಟು ಮಾಡಿ ಅವರ ಅರ್ಥಗಾರಿಕೆಯಿಂದ ಪ್ರೇಕ್ಷಕ ವರ್ಗದಲ್ಲಿಯೂ ಕಲಾಭಿಜ್ಞರಲ್ಲಿಯೂ ರಸಾವಿರ್ಭಾವವನ್ನು ಉಂಟುಮಾಡುವಂತಹದಾಗಿತ್ತು. ಆದುದರಿಂದಲೇ ಶ್ರೀ ಬಲಿಪ ಭಾಗವತರ ಹಾಡುಗಾರಿಕೆಯೆಂದರೆ ಆ ಬಯಲಾಟ ಪ್ರದರ್ಶನಕ್ಕೆ ಜನರು ತಪ್ಪದೆ ಬರುತ್ತಿದ್ದರು.

ಶ್ರೀ ಬಲಿಪ ಭಾಗವತರು ಯಕ್ಷಗಾನ ಬಯಲಾಟ ದಶಾವತಾರ ಮೇಳಗಳಲ್ಲಿ ಸೇರಿ ಬಯಲಾಟಗಳನ್ನು ಆಡಿಸಿದವರಲ್ಲದೆ ಅನೇಕ ಪ್ರಸಿದ್ಧ ತಾಳಮದ್ದಳೆ ಕೂಟಗಳಲ್ಲಿಯೂ ಭಾಗವಹಿಸಿ ಪ್ರಶಸ್ತಿ ಪಡೆದಿರುವರು. ಇವರ ಅಪೂರ್ವ ಹಾಡುಗಾರಿಕೆಯಿಂದಲಾಗಿ ಇವರಿಂದ ದಶಾವತಾರ ಮೇಳಗಳು ಖ್ಯಾತಿ ಗಳಿಸಿದ್ದವು. ರಂಗಮಂಟಪದ ಮೇಲೆ ವೇಷಧಾರಿಗಳನ್ನು ಕುಣಿಸಿ ಬಯಲಾಟ ಯಶಸ್ವಿಯಾಗುವಂತೆ ಮಾಡುವ ಅದೊಂದು ಕುಶಲ ಕಲೆ ಅವರ ಕರಗತವಾಗಿತ್ತು. ಜೋಡಾಟ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸುವುದರಲ್ಲಿಯೂ ಇವರು ಸಿದ್ಧಹಸ್ತರು.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ವಿಟ್ಲದಲ್ಲಿ ಕದ್ರಿ ದಶಾವತಾರ ಮೇಳ ಮತ್ತು ಇರ ಸೋಮನಾಥೇಶ್ವರ ಮೇಳ, ಈ ಎರಡು ಮೇಳಗಳೊಳಗೆ ನಡೆದ ಪ್ರಚಂಡ ಸ್ಪರ್ಧೆಯ ಜೋಡಾಟ ಪ್ರದರ್ಶನದಲ್ಲಿ ಇರ ಸೋಮನಾಥೇಶ್ವರ ಮೇಳದ ವಿಜಯಕ್ಕೆ ಕಾರಣರಾದವರು ಆ ಮೇಳದಲ್ಲಿ ಭಾಗವತರಾಗಿದ್ದ ಶ್ರೀ ಬಲಿಪ ಭಾಗವತರೇ. ಕದ್ರಿ ಮೇಳದ ಸಾಹಿತ್ಯ ಸಾಮ

(ಎಂಟನೇ ಪುಟ ನೋಡಿರಿ)

ಪುತ್ತೂರು ಶಾಸನ ಸಭಾ ಕ್ಷೇತ್ರದ ಮತದಾರರಲ್ಲಿ

ನಮ್ರ ವಿನಂತಿ

ಬಂಧುಭಗಿನಿಯರೇ,

ದೇಶವನ್ನು ದಿನದಿಂದ ದಿನಕ್ಕೆ ಅಧಃಪತನಕ್ಕೆ ಒಯ್ಯುತ್ತಿರುವ ಕಾಂಗ್ರೆಸು ದುರಾಡಳಿತೆಯನ್ನು ಸಮರ್ಥವಾಗಿ ವಿರೋಧಿಸಿ, ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ನಿರ್ಭೀತಿಯಿಂದ ಶಾಸನ ಸಭೆಯಲ್ಲಿ ವ್ಯಕ್ತಪಡಿಸಲು ಮುಂಬರುವ ಚುನಾವಣೆಯಲ್ಲಿ ಮೈಸೂರು ವಿಧಾನ ಸಭೆಗೆ

ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ

ಇವರಿಗೇನೇ

ಬೆಂಬಲ ಕೊಡಬೇಕಾಗಿ
ಕೋರುತ್ತೇವೆ.

ಚುನಾವಣಾ ಚಿಹ್ನೆ :

ಸಿಂಹ

ಬಿ. ಪ್ರಭಾಕರ್ ರಾವ್, ಪುತ್ತೂರು
ಕೆ. ಉಗ್ಗಪ್ಪ ಶೆಟ್ಟಿ, ಎಡ್ವಕೇಟ್, ಮಂಗಳೂರು
ಡಾ| ಶಿವರಾಮ ಕಾರಂತ್, ಪುತ್ತೂರು
ಎಮ್. ಸೀತಾರಾಮ ರೈ, ಎಡ್ವಕೇಟ್, ಪುತ್ತೂರು
ಡಾ| ಬಿ. ರಾಮ ಭಟ್, ಪುತ್ತೂರು
ವಾರಣಾಸಿ ಸುಬ್ರಾಯ ಭಟ್, ಅಡ್ಯನಡ್ಕ
ಪಿ. ಅನಂತರಾಜ ಅರಿಗ, ಎಡ್ವಕೇಟ್, ಪುತ್ತೂರು
ಬಿ. ಟಿ. ರೈ, ಎಡ್ವಕೇಟ್, ಪುತ್ತೂರು
ಸಿ. ಎಸ್. ಶಾಸ್ತ್ರಿ, ವಕೀಲ್, ಪುತ್ತೂರು
ಡಾ| ಬಿ. ಕೃಷ್ಣಭಟ್, ಎಮ್. ಬಿ. ಬಿ. ಎಸ್., ಪುತ್ತೂರು

ಸಾರ್ವತ್ರಿಕ ಚುನಾವಣೆ

ಮತ ಹೇಗೆ ಚಲಾಯಿಸಬೇಕು?

ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಅವಧಿ ಮುಗಿದು, ನಾಲ್ಕನೆಯ ಸಾರ್ವತ್ರಿಕ ಚುನಾವಣೆಗೆ ಈಗ ಬಿರುಸಿನ ಸಿದ್ಧತೆಗಳು ನಡೆದಿವೆ. ಇನ್ನೇನು ಎರಡು ವಾರಗಳಲ್ಲೇ ಮತದಾನವೂ ಆರಂಭವಾಗಲಿದೆ.

ಮತದಾನದ ದಿನ ರಜಾದಿನವಾಗಿದೆ. ಮತದಾರನು ಅಂದು ಬೇಗ ಮತದಾನ ಕೇಂದ್ರಕ್ಕೆ ಹೋಗಬೇಕು. ಸ್ವಂತ ವಾಹನವಿದ್ದರೆ, ಇದರಲ್ಲಿ ಹೋಗಬೇಕು. ಇಲ್ಲವೇ ನಡೆದು ಹೋಗಬೇಕು. ಚುನಾವಣೆ ಸ್ಪರ್ಧಿಸಿದ ಅಭ್ಯರ್ಥಿಯ ವಾಹನದಲ್ಲಾಗಲಿ ಅಥವಾ ಅವನ ಪ್ರತಿನಿಧಿಯ (ಏಜೆಂಟ್) ವಾಹನದಲ್ಲಾಗಲಿ ಕುಳಿತು ಮತದಾನ ಕೇಂದ್ರಕ್ಕೆ ಹೋಗುವಂತಿಲ್ಲ.

ಮತದಾರನು ಮತದಾನ ಕೇಂದ್ರವನ್ನು ಮುಟ್ಟಿದ ಬಳಿಕ ಮಾಡಬೇಕಾದ ಮೊದಲನೆಯ ಕೆಲಸ ಅಲ್ಲಿರುವ ಚುನಾವಣಾ ಅಧಿಕಾರಿಗಳನ್ನು ಭೇಟಿಯಾಗಬೇಕು. ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಕಂಡು ಹಿಡಿಯಬೇಕು.

ಮತದಾರನನ್ನು ಗುರುತಿಸಲು ಎರಡು ವಿಷಯಗಳನ್ನು ಗಮನಿಸಬೇಕು. 1) ಮತದಾರರ ಪಟ್ಟಿಯಲ್ಲಿ ಮತದಾರನ ಅಥವಾ ಮತದಾರರ ಅನುಕ್ರಮ ಸಂಖ್ಯೆ 2) ಪಟ್ಟಿಯಲ್ಲಿ ಅದು ಮುದ್ರಿತವಾಗಿರುವ ಭಾಗದ ಸಂಖ್ಯೆ. ಇವೇ ಆ ಎರಡು ವಿಷಯಗಳು. ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳೇ ಅನೇಕ ಸಲ ಮತದಾರರಿಗೆ ಈ ಮಾಹಿತಿಯ ಕಾಗದಗಳನ್ನು ಕೊಡುತ್ತಾರೆ. ಇದರಿಂದ ಮತದಾರರ ಪಟ್ಟಿಯಲ್ಲಿ ಅವರ ಹೆಸರನ್ನು ಹುಡುಕುವ ಕಾರ್ಯ ಸುಲಭವಾಗುತ್ತದೆ.

ಮತದಾರರ ಪಟ್ಟಿಯಲ್ಲಿ ಮತದಾರನ ಹೆಸರನ್ನು ಹುಡುಕಿದ ನಂತರ ಚುನಾವಣಾಧಿಕಾರಿಗಳು ಮತದಾರನ ಎಡತೋರು ಬೆರಳಿನ ಮೇಲೆ, ಮಸಿಯ ಚುಕ್ಕೆಯನ್ನಿಡುತ್ತಾರೆ. ಅದು ಬೇಗ ಅಳಿಸಿ ಹೋಗುವುದಿಲ್ಲ. ಒಮ್ಮೆ ಮತ ನೀಡಿದ ವ್ಯಕ್ತಿ ಮತ್ತೊಮ್ಮೆ ನೀಡದಂತೆ ನೋಡಿಕೊಳ್ಳಲು ಹಾಗೆ ಮಾಡಲಾಗುತ್ತದೆ. ಬಳಿಕ ಮತದಾರನಿಗೆ ಎರಡು ಮತ ಪತ್ರಗಳನ್ನು (ಬ್ಯಾಲಟ್ ಪೇಪರ್ಸ್) ಕೊಡುತ್ತಾರೆ. ಇವುಗಳಲ್ಲಿ ಗುಲಾಬಿ ಬಣ್ಣದ ಕಾಗದವು ವಿಧಾನ ಸಭೆಯ ಸ್ಥಾನವನ್ನೂ ಬಿಳಿಯ ಬಣ್ಣದ ಕಾಗದವು ಲೋಕ ಸಭೆಯನ್ನೂ ಸೂಚಿಸುತ್ತದೆ. ಪ್ರತಿಯೊಂದು ಕಾಗದದಲ್ಲೂ ಅಭ್ಯರ್ಥಿಗಳ ಹೆಸರು ಅವರು ಸ್ಪರ್ಧಿಸಿದ ಕ್ಷೇತ್ರ, ಹಾಗೂ ಅವರ ಚುನಾವಣಾ ಸಂಕೇತಗಳನ್ನು ನಮೂದಿಸಲಾಗಿರುತ್ತದೆ. ಚುನಾವಣಾ ಆಯೋಗದವರು ಈಗಾಗಲೇ ವಿವಿಧ ರಾಜಕೀಯ ಪಕ್ಷಗಳಿಗೆ ನೀಡಿರುವ ಚುನಾವಣಾ ಸಂಕೇತಗಳನ್ನು ತಿಳಿಯಪಡಿಸಿದ್ದಾರೆ.

ಮತದಾರನು ಹೀಗೆ ಚುನಾವಣಾ ಅಧಿಕಾರಿಗಳಿಂದ ಪಡೆದ ಎರಡು ಮತ ಪತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲಿಯೇ ಮುಂದಿರುವ ಇನ್ನೊಂದು ಮೇಜಿನತ್ತ ಹೋಗಬೇಕು. ಆಗ, ಇನ್ನೊಬ್ಬ ಚುನಾವಣಾಧಿಕಾರಿಗಳು ಅವನಿಂದ ಆ ಎರಡು ಕಾಗದಗಳನ್ನು ಇಸಿದುಕೊಳ್ಳುತ್ತಾರೆ. ಮತದಾರನು ಸಂಬಂಧಿಸಿದ ಕಾಗದಗಳ ಮೇಲೆ ಮತವನ್ನು ಯಾವ ರೀತಿ ಮುದ್ರಿಸಬೇಕು ಎಂಬುದನ್ನು ವಿವರಿಸಿದ ಬಳಿಕ ಅವುಗಳಲ್ಲಿ ಗುಲಾಬಿ ಬಣ್ಣದ ವಿಧಾನ ಸಭಾ ಮತಪತ್ರವನ್ನೂ ಮಸಿಯಲ್ಲಿ ಅದ್ದಿದ ರಬ್ಬರ್ ಸ್ಟ್ಯಾಂಪನ್ನು ಕೊಡುವರು. ರಬ್ಬರ್ ಸ್ಟ್ಯಾಂಪನ್ನು ಮತ ಪತ್ರದ ಮೇಲೆ ಒತ್ತಿದಾಗ ವರ್ತುಲದಿಂದ ಸುತ್ತುವರಿದ ಅಧಿಕ ಚಿನ್ಹೆ ಮುದ್ರಿತವಾಗುತ್ತದೆ.

ಮತಪತ್ರವನ್ನು ರಬ್ಬರ್ ಸ್ಟ್ಯಾಂಪನ್ನು ತೆಗೆದುಕೊಂಡು ವಿಧಾನ ಸಭಾ ಅಭ್ಯರ್ಥಿಗಳಿಗೆ ಮತನೀಡಬೇಕಾದ ಕೋಣೆಗೆ ಹೋಗಬೇಕು. ಒಂದು ಮತ ಕ್ಷೇತ್ರದಿಂದ ಅನೇಕ ಜನ ಅಭ್ಯರ್ಥಿಗಳು ಸ್ಪರ್ಧಿಸಿರುತ್ತಾರೆ. ಅವರಲ್ಲಿ ಒಬ್ಬರನ್ನೇ ಆರಿಸಬೇಕು. ಮತದಾರನು ತನಗೆ ಯಾರನ್ನು ಆರಿಸಬೇಕೆಂದು ಇಷ್ಟವಿದೆಯೋ ಅವರ ಹೆಸರಿನ ಮುಂದಿರುವ ಚುನಾವಣಾ ಚಿಹ್ನೆಯ ಮೇಲೆ ರಬ್ಬರ್ ಸ್ಟ್ಯಾಂಪಿನಿಂದ ಒತ್ತಬೇಕು.

ಹೀಗೆ ಒತ್ತಿದ ನಂತರ ಅದನ್ನು ಮೊದಲು ಯಾವ ರೀತಿ ಮಡಿಕೆ ಮಾಡಲಾಗಿತ್ತೋ ಅದೇ ರೀತಿ ಮಡಿಕೆ ಮಾಡಬೇಕು. ಬಳಿಕ ಕೋಣೆಯಿಂದ ಹೊರ ಬಂದು ಮೇಜಿನ ಮೇಲೆ ಇಟ್ಟ ಮತ ಪೆಟ್ಟಿಗೆಯಲ್ಲಿ ಅದನ್ನು ಹಾಕಬೇಕು. ಇದಾದ ನಂತರ ರಬ್ಬರ್ ಸ್ಟ್ಯಾಂಪನ್ನು ಅಲ್ಲಿಯೆ ಕುಳಿತ ಚುನಾವಣಾಧಿಕಾರಿಗಳಿಗೆ ವಾಪಸು ಕೊಡಬೇಕು.

ಬಳಿಕ ಮತದಾರನಿಗೆ ಲೋಕ ಸಭೆಗೆ ಅಭ್ಯರ್ಥಿಯನ್ನು ಆರಿಸಲು ಬಿಳಿಯ ಬಣ್ಣದ ಮತಪತ್ರವನ್ನು ಕೊಡುತ್ತಾರೆ. ಮತಪತ್ರವನ್ನು ಮತ್ತು ಮಸಿಯಲ್ಲಿ ಅದ್ದಿದ ರಬ್ಬರ್ ಸ್ಟ್ಯಾಂಪನ್ನು ತೆಗೆದುಕೊಂಡು ಅವನು ಎರಡನೆಯ ವಿಭಾಗಕ್ಕೆ ಹೋಗಬೇಕು.

ಅಲ್ಲಿ ತನಗೆ ಇಷ್ಟಬಂದ ಲೋಕ ಸಭಾ ಅಭ್ಯರ್ಥಿಯ ಹೆಸರಿನ ಮುಂದಿರುವ



ಪ್ರಸಿದ್ಧ ಪುಣ್ಯಕ್ಷೇತ್ರ—ಮಂದಾರ್ತಿಯ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರು. ಈ ವರ್ಷ ಇಲ್ಲಿ ತಾ. 13-2-67ರಿಂದ ತಾ. 15ರ ತನಕ ರಥೋತ್ಸವ ಜರಗಲಿದೆ.

ನಿಮ್ಮ ಮತಪೆಟ್ಟಿಗೆ ಯಾವುದು?



- ದೈನಿಕ ಆದಾಯವಿರುವ ಮಂದಿ ಮತ ನೀಡಬಹುದಾದ ಖಾತೆ— ಪಿಗ್ಮಿ
- ವರಮಾನ ಗಳಿಸಲು ನಿಶ್ಚಿತ ಅವಧಿಯಿಲ್ಲದ ಮಂದಿ ಆರಿಸಬಹುದಾದ ಖಾತೆ— ಸೇವಿಂಗ್ಸ್ ಬ್ಯಾಂಕ್
- ಮಾಸಿಕ ವರಮಾನವಿರುವ ಮಂದಿ ಚುನಾಯಿಸಬಹುದಾದ ಖಾತೆ — ಕ್ಯುಮ್ಯುಲೇಟಿವ್ ಡಿಪಾಸಿಟ್
- ವರಮಾನದಲ್ಲಿ ಒಗದಿಯಾಗಿ ಉಳಿಸಿಕೊಳ್ಳಬಲ್ಲ ಮಂದಿಯ ಆಯ್ಕೆಗೆ ಪಾತ್ರವಾದ ಖಾತೆ— ಫಿಕ್ಸೆಡ್ ಡಿಪಾಸಿಟ್

ನಿಮ್ಮ ಆಯ್ಕೆಯ ಖಾತೆ ಯಾವುದೇ ಇರಲಿ ಬದುಕಿನ ರಂಗದಲ್ಲಿ ಯಶಸ್ವೀ ಹುರಿಯಾಳುಗಳಾಗುವವರು ಕೊನೆಗೆ ನೀವೇ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ, ಮೈಸೂರು ರಾಜ್ಯ.

ಜಾನಪದ ಕಲೆಯಲ್ಲಿ

ಹೊಸ ಪ್ರಾಣ ಪ್ರತಿಷ್ಠೆ

ಬಲ್ಗೇರಿಯಾದಲ್ಲಿ ೧೯೫೧ರಲ್ಲಿ ಜಾನಪದ ಗೀತೆಗಳು ಮತ್ತು ಜಾನಪದ ನೃತ್ಯ ಕಲೆಯ ಅಭಿವೃದ್ಧಿ ಸಾಧನೆಗಾಗಿ ಒಂದು ಸಂಸ್ಥೆಯನ್ನು ಆರಂಭಿಸಲಾಯಿತು. ಕಲ್ಪನೆಗೂ ನಿಲುಕದಷ್ಟು ಪ್ರಗತಿಯನ್ನು ಇಂದು ಈ ಸಂಸ್ಥೆ ಸಾಧಿಸಿ, ಬಲ್ಗೇರಿಯಾ ಜನತೆಯ ಸಾಂಸ್ಕೃತಿಕ ದಾರಿಯಲ್ಲಿ ಮರೆಯಲಾಗದ ಮೈಲುಗಲ್ಲಾಗಿದೆ. ದೇಶದಲ್ಲಿ ಸಂಗೀತದ ಮಟ್ಟವನ್ನು ಎತ್ತರಿಸುವಲ್ಲಿಯೂ ಜಗತ್ತಿನಲ್ಲಿ ಬಲ್ಗೇರಿಯಾದ ರಾಷ್ಟ್ರೀಯ ಸಂಸ್ಕೃತಿಯನ್ನು ಹರಡಿಸುವುದರಲ್ಲಿಯೂ ಈ ಸಂಸ್ಥೆ ಮಹತ್ವಪೂರ್ಣವಾದ ಸೇವೆ ಸಲ್ಲಿಸುತ್ತದೆ.

ಜಾನಪದ ಗೀತೆಯಲ್ಲಿ ನಿಷ್ಣಾತರಾದ ಜನತಾ ಕಲಾವಿದ ಪಿಲಿಪ್ ಕುಟೇವರು ಈ ಸಂಸ್ಥೆಯ ಮುಖ್ಯ ಸ್ಥಾನಪತಿಯಾಗಿದ್ದಾರೆ. ಗೌರವಾನ್ವಿತ ನೃತ್ಯ ಕಲಾವಿದೆ ಮಾರ್ಗರೀತಾ ಡಿಕೋವಾ ನೃತ್ಯಕಲೆಯ ವಿಭಾಗದ ಮುಖ್ಯಸ್ಥೆ. ಇವರಿಗೆ ಅನೇಕ ಕಲಾವಿದರ ಸಹಾಯ ಸದಾ ಸಿಗುತ್ತಿದೆ. ಹಾಗಾಗಿ ಸಂಸ್ಥೆಯು ಪ್ರಗತಿ ಸಾಧಿಸುವಲ್ಲಿ ಹಿಂದುಳಿದಿಲ್ಲ.

ಈ ಸಂಸ್ಥೆಗೆ ಕಲಾವಿದರನ್ನು ಆಯ್ದುಕೊಳ್ಳುವ ಕ್ರಮವು ವಿಲಕ್ಷಣವಾದುದು. ದೇಶದಲ್ಲಿ ಅಲ್ಲಲ್ಲಿ ಸ್ಪರ್ಧೆಗಳನ್ನೂ ಪೂರ್ವ ಸಂದರ್ಶನವನ್ನೂ ಏರ್ಪಡಿಸಿ, ಅವುಗಳಲ್ಲಿ ಯೋಗ್ಯರೂ ಸಮರ್ಥರೂ ಆದವರನ್ನೇ ಆರಿಸಲಾಗುವುದು. ಹಾಗಾಗಿ ಉತ್ತಮ ಕಲಾವಿದರ ನಿರಂತರ ಸೇವೆ ಈ ಸಂಸ್ಥೆಗೆ ದೊರೆಯುವುದು ಸಾಧ್ಯವಾಗಿದೆ.

ಜಾನಪದ ನೃತ್ಯಕಲಾಭಿವೃದ್ಧಿ ಸಂಸ್ಥೆಯು ಆರಂಭದ ದಿನಗಳಲ್ಲಿ ತುಂಬ ಪರಿಶ್ರಮ ಪಡಬೇಕಾಯಿತು. ದೇಶದ ಜಾನಪದ ಗೀತೆಗಳನ್ನು ಹಾಡುವ ಪದ್ಧತಿ, ನೃತ್ಯಪದ್ಧತಿ ಮತ್ತು ಹಿಮ್ಮೇಳ— ಎಲ್ಲವೂ ಪ್ರಾಚೀನ ತರಹವಾಗಿದ್ದುವು. ಇವುಗಳಲ್ಲಿ ಇಂದು ಸಾಕಷ್ಟು ಸುಧಾರಣೆಗಳನ್ನು ಸಾಧಿಸಲಾಗಿದೆ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಬಲ್ಗೇರಿಯನ್ ಜಾನಪದ ನೃತ್ಯಕ್ಕೆ ಬಗ್ಗೆ ತುಂಬ ಪ್ರಶಂಸೆ ದೊರಕಿದೆ. ಬಲ್ಗೇರಿಯನ್ ನೃತ್ಯ ಕಲಾವಿದರು ಜಾಗತಿಕ ನೃತ್ಯಕಾರರಲ್ಲಿ ಸರ್ವೋತ್ಕೃಷ್ಟರು ಎಂದು ಹಲವು ವಿದೇಶೀ ಪತ್ರಿಕೆಗಳು ಬರೆದಿವೆ.

ಪಿಲಿಪ್ ಕುಟೋವಾರವರ ಅವಿಶ್ರಾಂತ ದುಡಿಮೆಯ ಪರಿಣಾಮವನ್ನು ನಾವಿಂದು ಬಲ್ಗೇರಿಯನ್ ಜಾನಪದ ಕಲೆಯಲ್ಲಿ ಕಾಣುತ್ತೇವೆ. ನುರಿತ ಹಾಡುಗಾರರು ನೃತ್ಯಕಾರರು, ಕುನ್ನಲೆಗಾರರು— ಮೊದಲಾದವರ ಸಂಪೂರ್ಣ ಸಹಯೋಗವನ್ನು ಕುಟೋವರು ಪಡೆಯುವುದರಲ್ಲಿ ಯಶಸ್ವಿಯಾದರು. ತಮ್ಮ ಅನುಭವ— ಪಾಂಡಿತ್ಯಗಳಲ್ಲಿ ಅವನ್ನು ಎರಕ ಹೊಯ್ದರು. ವಿದೇಶೀಯ ಪ್ರಣಾಳಿಯ ರಂಗಿತ್ತು, ಬಲ್ಗೇರಿಯಾದ ಜೀರ್ಣಜಾನಪದಕಲೆಯಲ್ಲಿ ಹೊಸ ಪ್ರಾಣ ಪ್ರತಿಷ್ಠೆ ಮಾಡಿದರು. ದೇಶ ವಿದೇಶಗಳಲ್ಲಿ ಈ ನೂತನ ಸಂಸ್ಥೆಯ ಕಲಾವಿದರು ಸಂಚರಿಸಿ, ತಮ್ಮ ಕಲೆಯನ್ನು ಬೆಳಗಿಸಿ ಯಶೋದುಂದುಭಿಯನ್ನು ಬಾರಿಸಿದ್ದಾರೆ.

ಕುಟೋವಾರು ಸ್ವಯಂ ಕಲಾಸಂಯೋಜಕರು. ಇವರೂ ಹಲವು ನೃತ್ಯಗಳನ್ನು ಸಂಯೋಜಿಸಿದ್ದಾರೆ. ಪ್ರಾಚೀನ ಬಲ್ಗೇರಿಯನ್ ನೃತ್ಯ— ಸಂಗೀತಗಳ ಮೇಲೆ ಆಧುನಿಕ ಮೆರುಗನ್ನು ನಾವಿಲ್ಲಿ ಗಮನಿಸಬಹುದು. ಕೊಳಲು, ತಂಬೂರಿ, ನಗಾರಿ, ಮೊದಲಾದುವುಗಳ ಮೂಲಕ ಈ ಹಾಡನ್ನು ಹಾಡುವಾಗ ಹೃದಯ ತಲ್ಲೀನವಾಗುವುದು. "ನೊಲಗಳ ದಾರಿಯಲ್ಲಿ", 'ಗೊಂಬೆಗಳು", "ಶಾಕೇರಿ" ಮೊದಲಾದುವು ಮಹಿಳೆಯರೇ ಪ್ರದರ್ಶಿಸಬಲ್ಲ ಜಾನಪದ ನೃತ್ಯಗಳು.

ಬಲ್ಗೇರಿಯಾದ ಈ ಸಂಸ್ಥೆಯು ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ. 'ಥ್ರಾಸಿಯನ್' ನೃತ್ಯ ಥ್ರಾಸ್ ಪ್ರಾಂತ ಪ್ರದೇಶದ ಜಾನಪದ ಕಲೆಯ ವಿಕಸಿತರೂಪ. ಇದರಲ್ಲಿನ ಅಭಿನಯ-ಮಾರ್ದವತೆಯನ್ನು ಮೆಚ್ಚದವರು ಯಾರು? 'ರೊಡೇಪಿಯನ್' ನೃತ್ಯ ಮಹಿಳೆಯರದೇ, ಇದರಲ್ಲಿನ ಶೃಂಗಾರಿಕ ಭಾವನೆಯು ಅವರ್ಣನೀಯವಾದುದು. ಭಾವ ಪ್ರಧಾನವಾದ 'ಡೊಬ್ರೋಜಾ ನೃತ್ಯ'ವು ಡೊಬ್ರೋಜಾ ಮತ್ತು ಪಿರಿನ್ ಪರ್ವತ ಪ್ರದೇಶದಲ್ಲಿನ ಜನಪ್ರಿಯ ನೃತ್ಯ.

ಬಲ್ಗೇರಿಯಾದ ಜಾನಪದ ನೃತ್ಯಕಲೆಯಲ್ಲಿ ಇಂದು ಹೊಸ ಪ್ರಾಣಪ್ರತಿಷ್ಠೆಯಾಗಿದೆ. ಅಮೆರಿಕ, ಕೆನಡಾ, ಚೀನಾ, ವಿಯತ್ನಾಮ ಮೊದಲಾದ ವಿದೇಶಗಳಲ್ಲಿ ಈ ನೃತ್ಯ ತಂಡಗಳು ತಮ್ಮ ಪ್ರದರ್ಶನವನ್ನು



ರೊಡೇಪಿಯನ್ ನೃತ್ಯಕಾರರು. —ಶೃಂಗಾರ ಪ್ರಧಾನ

ಏರ್ಪಡಿಸಿದ್ದು, ಪ್ರಶಂಸೆಯನ್ನು ಪಡೆದಿವೆ. 'ನಿಮಗೆ ಸದಾ ಸ್ವಾಗತ' ಎಂಬ ಹಾರ್ದಿಕ ವಿಮರ್ಶೆಯನ್ನು ಸರ್ವತ್ರ ಪಡೆದುವು. ಹೀಗೆ ಸ್ವತಂತ್ರವಾದ ಬಳಿಕ ತನ್ನ ಸಾಂಸ್ಕೃತಿಕೋನ್ನತಿಯ ಸಾಧನೆಯಲ್ಲಿ ಬಲ್ಗೇರಿಯಾ ತೀವ್ರವಾಗಿ ಯಶೋದುಂದುಭಿಯನ್ನು ಬಾರಿಸುತ್ತಿದೆ.

ಚುನಾವಣಾ ಸಂಕೇತದ ಮೇಲೆ ರಬ್ಬರ್ ಸ್ಟಾಂಪಿನಿಂದ ಮುದ್ರೆ ಹಾಕಬೇಕು. ಬಳಿಕ ಅದನ್ನು ಮೊದಲಿನಂತೆ ಮಡಿಕೆ ಮಾಡಿ ವಿಭಾಗದಿಂದ ಹೊರಗೆ ಬರಬೇಕು. ನಂತರ ಅದೇ ಮತ ಪೆಟ್ಟಿಗೆಯಲ್ಲಿ ಆ ಮತಪತ್ರವನ್ನು ಹಾಕಬೇಕು. ರಬ್ಬರ್ ಸ್ಟಾಂಪನ್ನು ಚುನಾವಣಾಧಿಕಾರಿಗಳಿಗೆ ಹಿಂತಿರುಗಿಸಲು ಮರೆಯಬಾರದು.

ಪಾಲಿಸಬೇಕಾದ ನಿಯಮಗಳು

ಮತದಾರನು ತಾನು ಆರಿಸಬೇಕೆಂದಿರುವ ಅಭ್ಯರ್ಥಿಯ ಚುನಾವಣಾ ಗುರುತಿನ ಮೇಲೆ ಸ್ಪಷ್ಟವಾಗಿ ಒಂದೇ ಒಂದು ಮುದ್ರೆಯನ್ನು ಹಾಕಬೇಕು. ಚುನಾವಣಾಧಿಕಾರಿಗಳು ನೀಡಿದ ರಬ್ಬರ್ ಸ್ಟಾಂಪಿನಿಂದಲೇ ಈ ಮುದ್ರೆ ಒತ್ತಬೇಕು.

ಮತಪತ್ರವು ಹೊಲಸಾದರೆ, ಅದನ್ನೇ ಹಾಕುವ ಅಗತ್ಯವಿಲ್ಲ. ಪ್ರಿಸೈಡಿಂಗ್ ಆಫೀಸರರಿಂದ ಇನ್ನೊಂದು ಮತಪತ್ರವನ್ನು ಪಡೆಯಬೇಕು. ಹೊಲಸಾದ ಮತಪತ್ರವನು ಆದರ ಇನ್ನೊಂದು ಪ್ರತಿಯನ್ನು ಪ್ರಿಸೈಡಿಂಗ್' ಆಫೀಸರರು ರದ್ದುಗೊಳಿಸುತ್ತಾರೆ. ಮತಪತ್ರದಲ್ಲಿ ಚುನಾವಣೆ ಗುರುತಿನ ಬೇರಾವುದೇ ಗುರುತನ್ನು ಹಾಕುವುದು, ಅಥವಾ ಮತಪತ್ರದ ಯಾವುದೇ ಭಾಗದಲ್ಲೇ ಆಗಲಿ ಹೆಬ್ಬೆರಳಿನ ಗುರುತು ಹಾಕಿದರೆ, ಸಹಿ ಮಾಡಿದರೆ ಮತಪತ್ರವು ರದ್ದಾಗುತ್ತದೆ.

ಅಭಿಪ್ರಾಯ

ಚುನಾವಣೆಯಲ್ಲಿ ಮಹತ್ವಕೊಡಬೇಕಾದ್ದು ಪಕ್ಷಕ್ಕೋ? ವ್ಯಕ್ತಿಗೋ?

ಲೇಖಕರು— ಮಹಾತ್ಮಾ ಗಾಂಧಿ

ಮತದಾರರು ಉಮೇದುವಾರರ ಅಭಿಪ್ರಾಯಗಳನ್ನಷ್ಟೇ ನೋಡಬೇಕು. ಪಕ್ಷವನ್ನು ನೋಡಬಾರದು. ಇಷ್ಟೇ ಅಲ್ಲ, ಉಮೇದುವಾರರ ಅಭಿಪ್ರಾಯಗಳಿಗಿಂತ ಅವರ ಗುಣಗಳಿಗೇ ಹೆಚ್ಚಿನ ಮಹತ್ವ ಕೊಡಬೇಕು. ಚಾರಿತ್ರ್ಯ ಸಂಪನ್ನರಿದ್ದವರಿಗೆ ಯಾವದೇ ಸ್ಥಾನ ಕೊಟ್ಟರೂ ಅವರು ತಮ್ಮ ಯೋಗ್ಯತೆಯನ್ನು ತೋರಿಸುತ್ತಾರೆ. ಅಂಥವರು ತಪ್ಪು ಮಾಡಿದರೂ ಚಿಂತೆ ಇಲ್ಲ. ಚಾರಿತ್ರ್ಯವಿಲ್ಲದವರು ಶ್ರೇಷ್ಠ ಮಟ್ಟದ ರಾಷ್ಟ್ರ ಸೇವೆ ಮಾಡುವದು ಅಶಕ್ಯವೆಂದೇ ನನಗೆ ಅನಿಸುತ್ತದೆ. ಆದ್ದರಿಂದ ನಾನು ಮತದಾರನಿದ್ದರೆ ಉಮೇದುವಾರರ ಪಟ್ಟಿಯಲ್ಲಿ ಚಾರಿತ್ರ್ಯ ಸಂಪನ್ನರು ಯಾರು ಎಂಬುದನ್ನು ಆರಿಸಿ ತೆಗೆಯುವೆನು. ಮತ್ತು ಆನಂತರವೇ ಅವರ ಅಭಿಪ್ರಾಯಗಳನ್ನೂ ತಿಳಿದುಕೊಳ್ಳುವೆನು. ಮತದಾರರಿಗೆ ತಮಗೆ ಒಪ್ಪಿಗೆಯಾಗುವಂಥ ಉಮೇದುವಾರನು ದೊರೆಯದೇ ಇದ್ದರೆ ಮತವನ್ನೇ ಹಾಕಬಾರದು. ಇಂಥ ಸಂದರ್ಭದಲ್ಲಿ ಮತ ಹಾಕದಿರುವದೇ ಮತದಾರರ ಕರ್ತವ್ಯ. ಇನ್ನು ಇದಕ್ಕೆ ಕೆಲವರು ಆಕ್ಷೇಪಿಸಬಹುದು. "ಒಳ್ಳೆಯ ಮತದಾರರು ತಮ್ಮ ಮತವನ್ನೇ ಹಾಕದಿದ್ದರೆ, ಕೆಟ್ಟ ಮತದಾರರು ಅತ್ಯಂತ ಕೆಟ್ಟ ಉಮೇದುವಾರರನ್ನೇ ಆರಿಸಿ ತರುವರು" ಎಂದು. ಕೆಲವುಸಲ ಇದು ನಿಜವೂ ಇದೆ. ಆದರೆ ಉಪಾಯವೇನು? ಒಂದು ಸ್ಥಾನಕ್ಕೆ ನಿಂತುಕೊಂಡ ಉಮೇದುವಾರರಲ್ಲಿ ಒಬ್ಬರೂ ಅರ್ಹರಲ್ಲದೇ ಆಗಿದ್ದ ಕಾಲದಲ್ಲಿ ಒಳ್ಳೇ ಮತದಾರರು ಮತದಾನವನ್ನೇ ಮಾಡಲಿಲ್ಲ. ಮತ್ತು ಉಮೇದುವಾರರು ತಮ್ಮಂತೆಯೇ ಗುಣಶೀಲಗಳಿರುವ ಮತದಾರರಿಂದ ಮತ ಪಡೆದರು ಎಂದು ಇಟ್ಟುಕೊಳ್ಳುವಾ. ಕಾಯದೆ ಮಂಡಳಿಗಳಲ್ಲಿ ಅಂಥವರ ಪ್ರಭಾವವೇನಾದರೂ ಬಿದ್ದೀತೇ? ಸಂಖ್ಯೆಯ ದೃಷ್ಟಿಯಿಂದ ಅವರ ಮತಗಳಿಗೆ ಬೆಲೆ ಇದೆ ಎಂಬುದೇನೋ ನಿಜ. ಆದರೆ ಕಾಯದೆ ಮಂಡಳಿಗಳಲ್ಲಿ ಅವರ ಭಾಷಣಗಳಿಂದ ಹಾಗೂ ಅವರ ದೃಷ್ಟಿಕೋನದಿಂದ ಯಾವದೇ ಪರಿಣಾಮವಾಗಲಾರದು. ಮೇಲಾಗಿ ವಿಚಾರ ಪೂರ್ವಕ ಮತದಾನ ಮಾಡದಿದ್ದರೆ ಅದರ ಪರಿಣಾಮವೂ ಆಗದೆ ಇರುವುದಿಲ್ಲ. ಮತದಾರರಿಗೆ ಯೋಗ್ಯ ಉಮೇದುವಾರನು ದೊರೆಯದೇ ಇದ್ದರೆ ಅವರು ಮುಂದಿನ ಸಲ ಯೋಗ್ಯ ಉಮೇದುವಾರರನ್ನು ಆರಿಸಿ ನಿಲ್ಲಿಸಲಿಕ್ಕೆ ಪ್ರಯತ್ನ ಮಾಡುವರು ಮತ್ತು ಅಂಥವರನ್ನು ಆರಿಸಿ ತರುವರು. ಮತ್ತು ಈ ರೀತಿಯಲ್ಲಿ ಅವರು ತಮ್ಮ ಮತದಾರ ಸಂಘದ ಮಟ್ಟವನ್ನು ಎತ್ತರಿಸುವರು. ಬೆಳೆಯುತ್ತಿರುವ ರಾಷ್ಟ್ರದಲ್ಲಿಯ ಜನರಿಗ ರಾಷ್ಟ್ರೀಯ ಸಂಗತಿ ತಿಳಿಯುತ್ತವೆ. ಅವರು ತಮ್ಮ ಕ್ಷೇತ್ರದಲ್ಲಿಯ ರಾಜಕೀಯ ವಾತಾವರಣವನ್ನು ಶುದ್ಧ ಪಡಿಸಬೇಕು. ಮತ್ತು ಅಂಥ ಶುದ್ಧಿಯನ್ನು ಕಾದಿರಿಸಬೇಕು, ಎಂದು ನಿರೀಕ್ಷಿಸಲಾಗುತ್ತದೆ. ಸುಶಿಕ್ಷಿತರೂ ವಿಚಾರವಂತರೂ ಆಗಿರುವ ಮತದಾರರು ತಾವು ಮತದಾನವನ್ನು ಬುದ್ಧಿಪುರಸ್ಸರವಾಗಿ ಬಹಿಷ್ಕರಿಸಲೇ ಬೇಕಾಗುವಂಥ ಒಂದೊಂದು ಸಂದರ್ಭ ಬರುತ್ತಿರುತ್ತದೆ ಎಂಬುದನ್ನೂ ಲಕ್ಷ್ಯದಲ್ಲಿ ಇರಿಸಬೇಕು.

(ಹರಿಜನ)

ದಿ! ಬಲಿಪ ನಾರಾಯಣ ಭಾಗವತರು

(ಐದನೇ ಪುಟದಿಂದ)

ಗ್ರಿಗಳ ಸಿದ್ಧತೆಯಿಂದ ಕದ್ರಿಮೇಳಕ್ಕೆ ಜಯ ಕಟ್ಟಿಟ್ಟ ಗಂಟು ಎಂದು ಜನರಾಡಿಕೊಂಡಿದ್ದರೂ ತನ್ನ ಕುಶಲಗಾರಿಕೆಯಿಂದಲಾಗಿ ಶ್ರೀ ಬಲಿಪ ಭಾಗವತರು ಇರ ಸೋಮನಾಥೇಶ್ವರ ಮೇಳದ ಆಟವಂತೂ ಜನರು ಸೈ ಸೈ ಎನ್ನುವಂತೆ ಮಾಡಿದರು. ಇವರು ಹಾಡುಗಾರಿಕೆಯಲ್ಲಿ ಸುಪ್ರಸಿದ್ಧರಾಗಿದ್ದವರು ಮಾತ್ರವಲ್ಲದೆ ಆಯಾ ಪ್ರಸಂಗಗಳಿಗೆ ಬೇಕಾದ ಪುರಾಣಗಗಳ ಅನುಭವವೂ ಇವರಲ್ಲಿ ಚೆನ್ನಾಗಿತ್ತು. ಇದರಿಂದಾಗಿ ಇವರು ಬಯಲಾಟಗಳನ್ನು ಜನ ಮೆಚ್ಚುವಂತೆ ಕಲಾಭಿಜ್ಞರು ತಲೆದೂಗುವಂತೆ ಬಲು ಚೆನ್ನಾಗಿ ಆಡಿಸುತ್ತಿದ್ದರು.

ಶ್ರೀ ಬಲಿಪ ಭಾಗವತರು ಸುಪ್ರಸಿದ್ಧ ಭಾಗವತರಾಗಿದ್ದುದಲ್ಲದೆ ಸ್ವತಃ ಯಕ್ಷಗಾನ ಕವಿಗಳೂ ಆಗಿ ಅಹಲ್ಯಾ ಶಾಪ ಮೊದಲಾದ ಸರಸ ಪ್ರಸಂಗಗಳನ್ನು ರಚಿಸಿದ್ದರು. ಇವರ ತಾರುಣ್ಯದ ಕಾಲದಲ್ಲಿ ಇವರು ಶೃಂಗಾರ ರಸಭರಿತ ಪದ್ಯಗಳ ಹಾಡುಗಾರಿಕೆಗೆ ಜನರು ಮರುಳಾಗಿದ್ದರು. ಆಗ ಹೆಚ್ಚಾಗಿ ಕುಮಾರ ವಿಜಯದ ದುರ್ವಾಸ—ಮಾಯ ಅಜಮುಖಿ, ಅಹಲ್ಯಾ ಶಾಪದ ಅಹಲ್ಯಾ ಗೌತಮ ಈ ಭಾಗಗಳು ಬಹಳವಾಗಿ ಜನರನ್ನು ಆಕರ್ಷಿಸಿದ್ದುದು. ಇಷ್ಟಲ್ಲದೆ ಇನ್ನೆಷ್ಟೋ ಶೃಂಗಾರ ಹಾಗೂ ವೀರ ರಸದ ಪ್ರಸಂಗಗಳನ್ನು ತನ್ನ ಹಾಡುಗಾರಿಕೆಯಿಂದ ಯಕ್ಷಗಾನಾಭಿಮಾನಿಗಳು ತಲೆದೂಗುವಂತೆ ಹಾಡಿ ಆಡಿಸಿದವರೆಂದರೆ ಶ್ರೀ ಬಲಿಪ ಭಾಗವತರು. ಹೀಗೆ ಸುಮಾರು ನಾಲ್ಕು ದಶಕಗಳಿಗೂ ಹೆಚ್ಚಿನ ತನ್ನ ಜೀವಿತದ ಕಾಲವನ್ನು ಯಕ್ಷಗಾನ ರಂಗಭೂಮಿಯ ಸೇವೆಗಾಗಿ ಮೀಸಲಿರಿಸಿ ಮುಪ್ಪು ಕಾಲಿಟ್ಟಾಗ ನಿವೃತ್ತ ಕಲಾವಿದರಾಗಿ ಮೈಸೂರು ಸರಕಾರದಿಂದ ನಿವೃತ್ತಿ ವೇತನವನ್ನು ಪಡೆದ ಈ ಕಲಾವಿದರನ್ನು ದಕ್ಷಿಣ ಕನ್ನಡ ತೆಂಕಣ ಸೀಮೆಯ ಕನ್ನಡ ಯಕ್ಷಗಾನ ಸಂಘ ಸಂಸ್ಥೆಗಳು ಕೂಡಾ ಕರೆಸಿ ಗೌರವಿಸಿದ್ದುವು. ಕಳೆದ ೧೯೬೫ರ ಎಪ್ರಿಲ್ ತಿಂಗಳ ಮೊದಲನೆಯ ವಾರದಲ್ಲಿ ಕಾಸರಗೋಡು ತಾಲೂಕಿನ ಶ್ರೀ ಮಧುಪುರ ಕ್ಷೇತ್ರದಲ್ಲಿ ನಡೆದ ಕೋಟಿ ಸಹಸ್ರ ನಾಮಾರ್ಚನಾ ಮಹೋತ್ಸವದ ಅಂಗವಾಗಿ ಜರಗಿಸಲಾದ ವಿದ್ವತ್ ಸಂಭಾವನಾ ಸಮಾರಂಭದಲ್ಲಿ ಶ್ರೀಶ್ರೀ ಶೃಂಗೇರಿ ಜಗದ್ಗುರುಗಳು ತಮ್ಮ ಪವಿತ್ರ ಹಸ್ತದಿಂದ ರಜತ ಪಾತ್ರೆ ಮತ್ತು ಕೌಶೇಯ ವಸನಗಳನ್ನಿತ್ತು ಇವರನ್ನು ಪುರಸ್ಕರಿಸಿ ಹರಸಿದ್ದರು. ಹೀಗೆ ವಿಖ್ಯಾತರಾದ ಇವರು ಮೊನ್ನೆ ಮೊನ್ನೆ ಎಂಬಂತೆ ಕೆಲ ತಿಂಗಳು ಹಿಂದೆ ಬಂಟವಾಳ ತಾಲೂಕಿನ ಕುನಾರ್ಡು—ಮುಡಿಪು ಎಂಬಲ್ಲಿ ನಡೆದ ಇರ ಸೋಮನಾಥೇಶ್ವರ ಕೃಪಾಪೋಷಿತ ಯಕ್ಷಗಾನ ನಾಟಕ ಮಂಡಳಿಯವರ ಈ ವರ್ಷದ ಪ್ರಪ್ರಥಮ ಬಯಲಾಟ ಪ್ರದರ್ಶನದಲ್ಲಿ ವಿಶೇಷ ಆಮಂತ್ರಣದ ಮೇರೆಗೆ ಭಾಗವತರಾಗಿ ಭಾಗವಹಿಸಿ ತಮ್ಮ ಹಾಡುಗಾರಿಕೆಯಿಂದ ತಲೆದೂಗಿಸಿದ್ದರು. ವರ್ಷ ಎಪ್ಪತ್ತಾರು ಆದರೂ ಸ್ವರ ಇದೇ ಮೂವತ್ತಾರರದು ಎಂದು ಅಂದಿನ ಸಭೆಯಲ್ಲಿ ಸೇರಿದ ಜನರು ಆಡಿಕೊಂಡಿದ್ದರು. ಇದು ಅವರ ಜೀವಮಾನದ ಯಕ್ಷಗಾನ ರಂಗಭೂಮಿಯಲ್ಲಿ ಹಾಡಿದ ಕೊನೆಯ ಹಾಡು. ಇದೇ ಅವರ ಬಾಳಿನ ಕೊನೆಯ ಹಾಡಾಗಿಯೂ ಪರಿಣಮಿಸಿತು. "ವಿಧಿ ಲೀಲೆಯನ್ನು ಮೀರುವವರಾರು."

ಹೀಗೆ ನಿವೃತ್ತ ಕಲಾವಿದರಾದ ಶ್ರೀ ಬಲಿಪ ನಾರಾಯಣ ಭಾಗವತರು ತಮ್ಮ ವೃದ್ಧಾಪ್ಯದ ಕಾಲದಲ್ಲಿಯೂ ಯಕ್ಷಗಾನ ಕಲಾರಂಗಕ್ಕೆ ತನ್ನ ಕೈಲಾದ ಸೇವೆಯನ್ನು ಸಲ್ಲಿಸಿ ತನ್ನ ಎಪ್ಪತ್ತಾರನೆಯ ವಯಸ್ಸಿನಲ್ಲಿ ಕಾಯ ಬಿಟ್ಟು ಕೈಲಾಸಕ್ಕೆ ತೆರಳಿದರು. ಇಂತಹ ಸುಪ್ರಸಿದ್ಧ ಭಾಗವತರೋರ್ವರನ್ನು ಕಳೆದುಕೊಂಡ ತೆಂಕನಾಡಿನ ಯಕ್ಷಗಾನ ರಂಗಭೂಮಿಯು ಇಂದು ತುಂಬಲಾರದ ನಷ್ಟಕ್ಕೆ ಗುರಿಯಾಗಿದೆ. ಶ್ರೀ ಬಲಿಪ ಭಾಗವತರು ಇಂದು ನಮ್ಮನ್ನು ಅಗಲಿ ಹೋದರೂ ಅವರ ಆ ಸುಶ್ರಾವ್ಯ ಸುಮಧುರ ಕಂಚಿನ ಕಂಠದ ಮಧುರ ಗಾನ ಮಾತ್ರ ಕಿವಿಗೆ ಕೇಳಿಸಿದಂತಾಗುತ್ತದೆ. ಕಣ್ಮರೆಯಾದ ಈ ಕಲಾ ತಪಸ್ವಿಯೊಬ್ಬರನ್ನು ಕಳೆದುಕೊಂಡ ತೆಂಕ ಕನ್ನಡ ನಾಡಿನ ಯಕ್ಷಗಾನ ಕಲಾಭಿಮಾನಿಗಳು ಅವರ ಕುರಿತಾಗಿ ಯಾವುದಾದರೊಂದು ರೀತಿಯ ಸ್ಮಾರಕವನ್ನು ರಚಿಸಿ ದಿವಂಗತರನ್ನು ಗೌರವಿಸುವುದು ಮುಖ್ಯ ಕರ್ತವ್ಯವಾಗಿದೆ. ಈ ಕುರಿತಾಗಿ ಯಕ್ಷಗಾನ ಕಲಾಭಿಮಾನಿಗಳು ಶೀಘ್ರದಲ್ಲೇ ಕಾರ್ಯಪ್ರವೃತ್ತರಾಗಲೆಂದು ಹಾರೈಸುತ್ತೇನೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 616/1966

ಗಣಪತಿ ಶೇರಿಗಾರ —ವಾದಿ

ಪಟ್ಟು ನ್ಯಾಕ ಸಹಾ —ಪ್ರತಿವಾದಿರು

8. ಬಾಬು ನ್ಯಾಕ, ಪಟ್ಟು ನ್ಯಾಕರ ಮಗ 9. ಮಂಜುನಾಥ, 10. ವಾಸುದೇವ—ಬಾಬು ನ್ಯಾಕರ ಪ್ರಾಯನರ ಮಕ್ಕಳು. ಗಾರ್ಡಿಯಾನ ತಂದೆ 8ನೇ ಪ್ರತಿವಾದಿ ಬಾಬು ನ್ಯಾಕ.

ಕಾರ್ಕಳ ತಾಲ್ಲೂಕ ನಲ್ಲೂರು ಗ್ರಾಮದ ರಾಂಬೆಟ್ಟು ಎಂಬಲ್ಲಿರುವವರು.

ಸದ್ರಿ 8, 9, 10ನೇ ಪ್ರತಿವಾದಿಗಳಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ನೀವು ಮತ್ತು ಮಿಕ್ಕ ಪ್ರತಿವಾದಿರು ವಾದಿಗೆ ತಾರೀಕು 4—8—1964ರಲ್ಲಿ ರಜಿಸ್ಟ್ರ ನಿತಿ ರೂಪಾಯಿ 2,000/—ಕ್ಕೆ ಬರಸಿ ಕೊಟ್ಟ ಸ್ಥಿರಾಸ್ತಿ ಆಡವಿನ ಬಾಬ್ತು ವಾದಿಗೆ ತಾರೀಕು 4—8—1965 ಮತ್ತು 4—8—1966ಕ್ಕೆ ಬರತಕ್ಕ ಎರಡು ವರುಷಗಳ ಬಾಕಿ ಬಡ್ಡಿ ರಜಿಸ್ಟ್ರ ನೋಟೀಸಿನ ಖರ್ಚು ಸೇರಿ ರೂ 146—77ಕ್ಕೆ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 14—3—1967ಕ್ಕೆ ನಿಮಗೆ ಅಕ್ಕೈರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದ ನೀವು ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ನಿಮಗೆ ತಿಳಿಸಿಯದೆ.

K. S. Kamath.

Advocate for Plaintiff.

Karkala, 27—1—67.

ಚುನಾವಣಾ ಉಮೇದ್ವಾರರು

ಜಿಲ್ಲೆಯ ೧೪ ವಿಧಾನ ಸಭಾ ಸ್ಥಾನಗಳಿಗೆ ೫೬, ಲೋಕಸಭೆಯ ೨ ಸ್ಥಾನಗಳಿಗೆ ೮ ಮಂದಿ ಅಭ್ಯರ್ಥಿಗಳು.

ದ. ಕ. ಜಿಲ್ಲೆಯ ೧೪ ವಿಧಾನ ಸಭಾ ಸ್ಥಾನಗಳಿಗೂ ಕೊಡಗನ್ನೊಳಗೊಂಡ ೨ ಲೋಕ ಸಭಾಸ್ಥಾನಗಳಿಗೂ ಒಟ್ಟು ೧೧೧ ನಾಮಪತ್ರಗಳು ಹಾಕಲ್ಪಟ್ಟಿದ್ದವು. ಕೆಲವರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುದರಿಂದ ಈಗ ಚುನಾವಣಾ ರಂಗದಲ್ಲಿ ವಿಧಾನ ಸಭೆಗೆ ೫೬, ಲೋಕ ಸಭೆಗೆ ೮ ಜನರು ಮಾತ್ರ ಉಮೇದ್ವಾರರಾಗಿ ಉಳಿದಿರುವರು. ಅವರ ಹೆಸರುಗಳನ್ನು ಕೆಳಗಡೆ ಕೊಡಲಾಗಿದೆ.

ವಿಧಾನ ಸಭಾಕ್ಷೇತ್ರಗಳಿಗೆ

ಬೈಂದೂರು: ಹಳ್ಳನಾಡು ಸುಬ್ಬರಾವ್ (ಪ್ರ. ಸ.) ಎಸ್. ಜಿ. ನರಸಿಂಹಯ್ಯ (ಪ) ಎ. ಜಿ. ಕೊಡ್ಗಿ (ಕಾಂ) ಜಯರಾಮ ಹೆಗ್ಡೆ (ಸ್ವ) ಕೃಷ್ಣ ಶೇಟ್ (ಪ).

ಕುಂದಾಪುರ: ಶ್ರೀಮತಿ ವಿನಿಫ್ರೆಡ್ ಫೆರ್ನಾಂಡಿಸ್ (ಪ್ರ. ಸ.) ಎಂ.ಎಂ. ಹೆಗ್ಡೆ (ಕಾಂ) ಶಂಕರನಾರಾಯಣ ಅಡಿಗ (ಪ).

ಬ್ರಹ್ಮಾವರ: ಎಫ್. ಎಕ್ಸ್. ಡಿ. ಪಿಂಟೋ (ಕಾಂ) ಜಯಪ್ರಕಾಶ ಶೆಟ್ಟಿ (ಪ) ಬಿ. ಎಸ್ ಲೂವಿಸ್ (ಪ್ರ. ಸ.) ಪ್ರಭಾಕರ ಹಾಲಂಬಿ (ಪ).

ಉಡುಪಿ: ಯು. ಎಲ್. ಭಟ್, (ಪ) ಪಿ. ಸದಾಶಿವ ಭಟ್ (ಸ್ವ) ಯು. ಎಸ್. ನಾಯಕ್ (ಪ) ಸೀತಾರಾಮ ಕೆ. ಅಮೀನ್ (ಕಾಂ) ಕೆ. ಮುದ್ದು ಸುವರ್ಣ (ಪ).

ಕಾಪು. ಬಿ. ಭಾಸ್ಕರ ಶೆಟ್ಟಿ (ಪ್ರ. ಸ.) ಜೆ. ಎಂ. ಲೋಬೋ ಪ್ರಭು (ಸ್ವ) ಡಿ. ರತ್ನವರ್ಮ ಹೆಗ್ಡೆ (ಕಾಂ).

ಕಾರ್ಕಳ: ವಾಸುದೇವ ಕಿಣಿ ಎಚ್. (ಪ) ಎ. ನಾರಾಯಣ ಹೆಗ್ಡೆ (ಕಾಂ) ಬೋಳ ರಘುರಾಮ ಶೆಟ್ಟಿ (ಜ).

ಮೂಡಬಿದ್ರಿ: ಕಟ್ಟೆಮಾರ್ ರತ್ನಕುಮಾರ್ ಶೆಟ್ಟಿ (ಸ್ವ) ಬಿ. ಗಂಗಾಧರದಾಸ (ಕಾಂ) ಡಾ| ಸಂಜೀವನಾಥ ಐಕಳ (ಪ್ರ. ಸ).

ಸುರತ್ಕಲ್: ಕೆ. ವೆಂಕಟರಮಣ ಐತಾಳ (ಪ್ರ. ಸ.) ಡಾ| ಕೆ. ನಾಗಪ್ಪ ಆಳ್ವ (ಕಾಂ).

ಮಂಗಳೂರು I: ಡಿ. ಮೋಹನರಾವ್ (ಪ), ಶ್ರೀಮತಿ ಮೇಬಲ್ ಬ್ರಿಟೊ (ಪ), ಸಿ. ಗೋಪಾಲಕೃಷ್ಣ ಕಾಮತ್ (ಜ), ಮಣೇಲ್ ಶ್ರೀನಿವಾಸ ನಾಯ್ಕ (ಕಾಂ), ಎ. ಶಾಂತರಾಮ ಪೈ (ಕ), ವಾಮನ ರಾವ್ ಶೇಟ್ (ಪ), ಅಬ್ದುಲ್ ರಹಿಮಾನ್ ಅಹಮದ್ (ಪ), ಎಸ್. ಎನ್. ವಾಸುದೇವ ರಾವ್ (ಪ).

ಮಂಗಳೂರು II: ಎ. ಕೃಷ್ಣ ಶೆಟ್ಟಿ (ಕ), ಜೋಸೆಫ್ ಎ. ಬ್ರಿಟೊ (ಪ), ಬಿ. ಎಮ್. ಇದಿನಬ್ಬ (ಕಾಂ), ಎಚ್. ಮಹಾಬಲ ರೈ (ಪ).

ಬಂಟ್ವಾಳ: ಎಂ. ಎಚ್. ಕೃಷ್ಣಪ್ಪ (ಕ). ಶ್ರೀಮತಿ ಕೆ. ಲೀಲಾವತಿ ರೈ (ಕಾಂ), ಅನಂತ ಸೋಮಯಾಜಿ (ಪ), ಕೆ. ಎಸ್. ಲಿಂಗಪ್ಪ ಬಂಗೇರ (ಪ).

ಪುತ್ತೂರು: ಕೆ. ರಾಮ ಭಟ್ (ಜ), ಬಿ. ವಿಠಲದಾಸ ಶೆಟ್ಟಿ (ಕಾಂ), ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ (ಪ), ನೇಮಿರಾಜ್ (ಪ).

ಸುಳ್ಯ: (ಪರಿಶಿಷ್ಟ ಜಾತಿ ರಿಸರ್ವ್)— ಎ. ರಾಮಚಂದ್ರ (ಸ್ವ), ಕೆ. ಬಾಲಕೃಷ್ಣ ನಾಯಕ (ಕಾಂ), ಕೆ. ಬಾಬು ಮೋಹನದಾಸ (ಪ).

ಬೆಳ್ತಂಗಡಿ:— ಬಿ. ವೈಕುಂಠ ಬಾಳಿಗ (ಕಾ) ಎ. ರಾಮನಾಯಕ (ಪ), ಜೋನ್ ಬೆಪ್ಟಿಸ್ಟ್ ಪಿರೇರಾ (ಸ್ವ). ಕೆ. ವೀರಸಿಂಹ ನಾಯ್ಕ (ಜ).

ಲೋಕಸಭಾ ಸ್ಥಾನಗಳು

ಮಂಗಳೂರು ಲೋಕಸಭಾ ಕ್ಷೇತ್ರ: ಶ್ರೀಗಳಾದ ಬಿ. ಎನ್. ಕುಟ್ಟಪ್ಪ (ಕ), ಸಿ. ಎಂ. ಪೂಣಚ್ಚ (ಕಾಂ), ಕೆ. ಆರ್. ಕಾರಂತ (ಪ), ಉಳ್ಳಾಲ ಲಕ್ಷ್ಮಣ ಕಿಣಿ (ಪ).

ಉಡುಪಿ ಲೋಕಸಭಾ ಕ್ಷೇತ್ರ: ಎಸ್. ಎಸ್. ಕೊಳ್ಕೆಬೈಲ್ (ಕಾಂ), ಜೆ. ಎಮ್. ಲೋಬೋ ಪ್ರಭು (ಸ್ವ) ಎ. ಶ್ರೀನಿವಾಸ ಶೆಟ್ಟಿ (ಪ್ರ. ಸ.), ಗಣಪಯ್ಯ ಉಪಾಧ್ಯಾಯ (ಪ).

(ಪ. ಸೂ. ಕಾಂ.—ಕಾಂಗ್ರೆಸ್, ಪ—ಪಕ್ಷರಹಿತ ಸ್ವತಂತ್ರ, ಪ್ರ. ಸ.—ಪ್ರಜಾ ಸಮಾಜವಾದಿ, ಕ—ಕಮ್ಯೂನಿಸ್ಟ್, ಸ್ವ—ಸ್ವತಂತ್ರ ಪಕ್ಷ, ಜ—ಜನಸಂಘ).

ಚುಟುಕ

ರಸ್ತೆಗಳು ಡಾಮರು ಹಾಕಿರುವುದೇಕೆ?
ಪಕ್ಷಗಳ ತುಂಬು ಘೋಷಣೆಯ ಬರೆವುದಕೆ!
ನಂಬಿಸಲು ಘೋಷಣೆಯು ಬೆಂಬಲವದೇಕೆ?
ನಂಬಿ ಬೆಂಬಲಿಸುವವರಿರುವರೆನ್ನಲಿಕೆ!

ಎಚ್. ಎಂ. ನಾರಾಯಣ ಭಟ್.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 64 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಮತದಾರರಿಗೆ ಪ್ರಾರ್ಥನೆ

ನಿಮ್ಮ ಮತ ಅವಶ್ಯ ನೀಡಿರಿ

ಬರೆದವರು
ಕುಮಾರಿ ಅಚಲ ಮೌಲಿಕ್

ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯನ್ನು ಆಚರಣೆಗೆ ತಂದಾಗ, ಅದು ನಮ್ಮ ರಾಜಕೀಯ ವಿಕಾಸದಲ್ಲಿ ಒಂದು ಭವ್ಯವಾದ, ನೂತನ ಪ್ರಯೋಗವೇ ಆಯಿತು. ಹೊಸದಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಂಡು, ಇಂಥ ಪ್ರಯೋಗದಲ್ಲಿ ತೊಡಗಿದ್ದ ಈ ರಾಷ್ಟ್ರದ ಕಡೆಗೆ, ಜಗತ್ತಿನ ವಿವಿಧ ಭಾಗಗಳ ಪತ್ರಿಕಾಕರ್ತರ, ಹಾಗೂ ರಾಜಕೀಯ ಸಮೀಕ್ಷಕರ ಕುತೂಹಲ ದೃಷ್ಟಿ ತಿರುಗಿತು.

ನಿಜ; ಅದರ ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಿದರೆ, ಈ ಪ್ರಯೋಗ ಪೂರ್ಣವಾಗಿ ಹೊಸದೇನಲ್ಲ. ಗಣರಾಜ್ಯ ಸ್ವರೂಪದ ಆಡಳಿತ ನಮ್ಮಲ್ಲಿ ಇತ್ತೆಂಬುದಕ್ಕೆ ಪ್ರಾಚೀನ ಬೌದ್ಧ ಸಾಹಿತ್ಯದಲ್ಲಿ ಅನೇಕ ಉಲ್ಲೇಖಗಳು ದೊರೆಯುತ್ತವೆ. ವಿಶ್ವವಿಜೇತ ಅಲೆಕ್ಸಾಂಡರ್ ಕ್ರಿ. ಪೂ. ೪ನೇ ಶತಮಾನದಲ್ಲಿ ನಮ್ಮ ರಾಷ್ಟ್ರದ ಮೇಲೆ ಧಾಳಿ ಮಾಡಿದಾಗ, ಕ್ಷುದ್ರಕ ಮಲ್ಲ ಸಂಘವೆಂಬ ಗಣರಾಜ್ಯ ಕೂಟ ಅವನನ್ನು ತೀವ್ರವಾಗಿ ವಿರೋಧಿಸಿ ಹೋರಾಡಿತು. ಸಾರ್ವಜನಿಕ ಕಾರ್ಯನೀತಿಗಳನ್ನು ನಿರ್ಧರಿಸುವ ಸಭೆಗಳಲ್ಲಿ ಭಾಗವಹಿಸಲೂ, ಮತಕೊಡಲೂ ಪ್ರತಿ ಮನುಷ್ಯ ಪುರುಷನಿಗೂ ಅಧಿಕಾರವಿದ್ದ ಭಾರತದ ಗಣರಾಜ್ಯಗಳ ಉಲ್ಲೇಖವನ್ನು ಗ್ರೀಕರ ಬರೆಹಗಳಲ್ಲಿ ಕಾಣಬಹುದಾಗಿದೆ.

ಜಟಿಲ ಸಾಮಾಜಿಕ ಪರಿಸ್ಥಿತಿಗಳಿಂದಾಗಿ ಪ್ರತಿವ್ಯಕ್ತಿಯೂ ನೇರವಾಗಿ ಇಂಥ ಸಭೆಗಳಲ್ಲಿ ಭಾಗವಹಿಸುವುದು ಸಾಧ್ಯವಿಲ್ಲದಂತೆ ಆದಾಗ, ಪ್ರತಿನಿಧಿಗಳ ಮೂಲಕ ಈ ಕಾರ್ಯವನ್ನು ಸಾಧಿಸುವ ಪದ್ಧತಿಯು ರೂಪುಗೊಂಡಿತು. ಬೌದ್ಧ ಯುಗದಲ್ಲೇ ಚುನಾವಣೆ, ಪ್ರಜಾಭಿಪ್ರಾಯ ಸಂಗ್ರಹಣೆ, ಮತದಾನ ವಿಧಾನ ಇವು ಆಚರಣೆಯಲ್ಲಿ ಇದ್ದುವೆಂಬುದಕ್ಕೆ ಆಧಾರಗಳು ದೊರೆಯುತ್ತವೆ. ಸ್ವತಂತ್ರ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಆಡಳಿತವಿದ್ದುದರ ಜೊತೆ ಜೊತೆಯಲ್ಲೇ ಸ್ವತಂತ್ರವೂ ಸ್ವಶಕ್ತಿ ಆಧಾರಿತವೂ ಆದ ಗ್ರಾಮಾಡಳಿತ ಪದ್ಧತಿಯೂ ಇತ್ತು ನಮ್ಮಲ್ಲಿ—ಪ್ರಾಚೀನ ಕಾಲದಿಂದಲೂ.

ನಮ್ಮಲ್ಲಿ ಬ್ರಿಟಿಷರ ಆಡಳಿತ ಸ್ಥಿರಗೊಂಡು, ಆಡಳಿತಶಕ್ತಿ ಕೇಂದ್ರೀಕೃತವಾಗುವವರೆಗೂ ಈ ಪದ್ಧತಿ ನಡೆದುಕೊಂಡೇ ಬಂತು. ಬ್ರಿಟಿಷರ ಕಾಲದಲ್ಲಿ ವ್ಯಕ್ತಿಯ ಆಸ್ತಿಯ ಮೇಲೆ ಆಧಾರಪಟ್ಟ ಮಿತಸ್ವರೂಪದ ಮತದಾನ ವ್ಯವಸ್ಥೆ ಏರ್ಪಟ್ಟಿತು—ವಿದೇಶಿ ಆಳರಸರ ಆಶೋತ್ತರಗಳ ಸಾಧನೆಗೆ ಸಹಾಯಕವಾಗುವಂತೆ.

ನಮ್ಮ ರಾಷ್ಟ್ರದಲ್ಲಿ ವಯಸ್ಕರ ಮತದಾನ ಪದ್ಧತಿಯನ್ನು ಆಚರಣೆಗೆ ತರಲು ನಿರ್ಧರಿಸಿದ್ದರಿಂದ, ನಮ್ಮಲ್ಲಿ ಹಿಂದೆ ಇದ್ದು ಅನಂತರ ಶಿಥಿಲವಾಗಿದ್ದ ರಾಜಕೀಯ ಪದ್ಧತಿಯು ಅಂಶವೊಂದನ್ನು ಮತ್ತೆ ಆಚರಣೆಗೆ ತಂದಂತಾಯಿತು, ಅಷ್ಟೆ; ಭಾರತೀಯರಲ್ಲಿ ಅಂತರ್ಗತವಾಗಿದ್ದ ಸಹಜ ವಿವೇಕ ಮತ್ತು ಕಾರ್ಯ ಸಾಧನಾ ಚಾತುರ್ಯದಲ್ಲಿದ್ದ ನಂಬಿಕೆಯ ಪುನರುಚ್ಚಾರಣೆ ಇದು ಎನ್ನಬಹುದು. ವಯಸ್ಕರ ಮತದಾನ ಪದ್ಧತಿ, ಆಚರಣೆಯಲ್ಲಿ ಯಶಸ್ವಿಯಾಗಬೇಕೆಂದಲ್ಲಿ ಆವಶ್ಯಕವಾಗಿ ಇರಬೇಕಾದ ಮೂಲ ಲಕ್ಷಣ— ಜನರ ಅಕ್ಷರ ವಿದ್ಯೆಗಿಂತ ಹೆಚ್ಚಾಗಿ ಅವರ ರಾಜಕೀಯ ಪರಿಣತಿ. ಅಭಿವೃದ್ಧಿ ಶೀಲವಾದಂಥ ನಮ್ಮ ರಾಷ್ಟ್ರದಲ್ಲಿ ಸಾಮಾನ್ಯ ಪ್ರಜೆ ಆರ್ಥಿಕವಾಗಿ ಮತ್ತು ಇನ್ನಿತರ ರೀತಿಯಲ್ಲಿ ಹಿಂದೆ ಬಿದ್ದಿದ್ದರೂ, ತನ್ನ ಹಿತ ಸಾಧಕವಾದದ್ದು, ಯಾವುದು ಎಂಬುದನ್ನರಿತು, ಸ್ವಾಭಿಲಾಷೆಗೆ ಅನುಸಾರವಾಗಿ ತನ್ನ ಪ್ರತಿನಿಧಿಯನ್ನು ಆರಿಸುವ ಲೌಕಿಕಜ್ಞಾನ ಅವನಿಗಿದೆಯೆಂದು ಧಾರಾಳವಾಗಿ ಹೇಳಬಹುದು. ಪ್ರಜಾಸತ್ತೆಯ ಆಧಾರಸ್ತಂಭಗಳಾದ ಪ್ರಜೆಗಳ ತಿಳುವಳಿಕೆಯನ್ನು ಬೆಳೆಸುವುದರಲ್ಲಿ ವೃತ್ತಪತ್ರಿಕೆಗಳ ಪಾತ್ರ ಹಿರಿದಾದದ್ದು. ನಮ್ಮ ರಾಷ್ಟ್ರದ ವೃತ್ತಪತ್ರಿಕೆಗಳು ರಾಜಕೀಯ ತಿಳುವಳಿಕೆಯನ್ನು ಹರಡುವುದರಲ್ಲಿ ಪ್ರಮುಖ ಉಪಕರಣಗಳಾಗಿದ್ದು—ಈಗಲೂ ಆ ಪಾತ್ರವನ್ನು ಅವು ನಿರ್ವಹಿಸುತ್ತಿವೆ. ಪ್ರಾದೇಶಿಕ ಭಾಷಾ ವೃತ್ತಪತ್ರಿಕೆಗಳ ಸೇವೆಯಿಂದಾಗಿ ರಾಜಕೀಯ ಮತ್ತು ರಾಷ್ಟ್ರೀಯ ವಿಚಾರಗಳಲ್ಲಿ ಜನರ ಪ್ರಜ್ಞೆ ಬೆಳೆದಿದೆ.

ರಾಷ್ಟ್ರದ ಪ್ರತಿಪ್ರಜೆಯೂ, ಆ ರಾಷ್ಟ್ರದ ರಾಜಕೀಯದಲ್ಲಿ ಸಹಜವಾಗಿ ಆಸಕ್ತಿಯುಳ್ಳವನಾಗಿರುವನೆಂಬುದು ಪ್ರಜಾಸತ್ತೆಯ ಸಿದ್ಧಾಂತ. ರಾಷ್ಟ್ರ ಜೀವನದ ಮುಖ್ಯ ಘಟನೆಯಾದ ಚುನಾವಣೆಗಳಲ್ಲಿ ಅವನು ಭಾಗವಹಿಸಬೇಕೆಂದು ನಿರೀಕ್ಷೆ. ಅವನು ಹೀಗೆ ಭಾಗವಹಿಸುವುದರ ಅರ್ಥ, ಅವನಿಗೆ ರಾಷ್ಟ್ರದ ರಾಜಕೀಯ ಪರಿಸ್ಥಿತಿಯ ತಿಳುವಳಿಕೆಯಿದ್ದು, ಅವನು ಸ್ವಾಭಿಲಾಷೆಯಿಂದ ಚುನಾವಣೆಗಳಲ್ಲಿ ಭಾಗವಹಿಸುತ್ತಿದ್ದಾನೆಂಬುದು; ಜನತೆಯ ಪುರಸ್ಕಾರ ಪಡೆಯಲು ಸ್ಪರ್ಧಿಸಿರುವ ರಾಜಕೀಯ ಪಕ್ಷಗಳ ನಿಲುವನ್ನು ವಿವೇಚಿಸಿ, ವರ್ತಿಸುವ ವಿವೇಕ ಅವನಿಗೆ ಇದೆಯೆಂಬುದು.

ಆದರ್ಶ ಮತ್ತು ವ್ಯಾವಹಾರಿಕ ಕೃತಿ ಇವೆರಡೂ ಯಾವಾಗಲೂ ಒಂದೇ ಆಗಿರುವುದಿಲ್ಲ. ಅನೇಕ ವೇಳೆ, ಮತದಾನ, ಮನೆಯ ಯಜಮಾನ, ಸಾಮಾಜಿಕ ಅಥವಾ ಧಾರ್ಮಿಕ ನಾಯಕರ ಸೂಚನೆಗಳನ್ನು ಅನುಸರಿಸಿ ನಡೆಯುತ್ತದೆ. ಇಂಥ ವ್ಯವಹಾರ ನಮ್ಮ ರಾಷ್ಟ್ರಕ್ಕೆ ಮಾತ್ರ ಮೀಸಲು ಎಂದಲ್ಲ. ರಾಜಕೀಯ ಪ್ರಜ್ಞೆ ಬೆಳೆದಿರುವ ರಾಷ್ಟ್ರಗಳಲ್ಲಿ ಪರಿಸ್ಥಿತಿಯನ್ನರಿತು, ಸ್ವವಿವೇಕದಿಂದ ಮತದಾನ ಮಾಡಬೇಕು ಎಂಬ ಆದರ್ಶ ಸ್ಥಿತಿಯನ್ನು ಉದಯೋನ್ಮುಖ ಪ್ರಜಾಸತ್ತೆಯಾಗಿರುವ ನಮ್ಮ ರಾಷ್ಟ್ರದಲ್ಲಿ ನಿರೀಕ್ಷಿಸಲೂ ಬಾರದು. ಇಂಥ ಆದರ್ಶ ಸ್ಥಿತಿಯನ್ನು ನಾವು ಎಲ್ಲೂ ಕಾಣಲಾರೆವು. ನಮ್ಮಲ್ಲನೇಕರಿಗೆ ಪಕ್ಷ ಪಂಗಡಗಳ ನಿಷ್ಠೆ ಇದೆ. ಇನ್ನು ಮುಂದೆಯೂ ಇಂಥ ನಿಷ್ಠೆ ಇರುತ್ತದೆ. ಯಾವುದೇ ಪಕ್ಷದ ಸಮಕಾಲೀನ ಸಾಧನೆಗಳನ್ನು ಗಮನಿಸಿ, ತಮ್ಮ ಮತದಾನ ಮಾಡುವವರ ಸಂಖ್ಯೆ ವಿರಳ. ಆದರೂ ಅವರು ಇತರರಿಗಿಂತ ಹೆಚ್ಚು ನಿಷ್ಪಕ್ಷಪಾತ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎನ್ನಬಹುದು.

ಮತದಾನದ ಅಧಿಕಾರ, ಸಂವಿಧಾನದ ರೀತ್ಯಾ ಪ್ರತಿ ಪ್ರಜೆಗೂ ಲಭಿಸಿದೆ. ಇಪ್ಪತ್ತೊಂದು ವರ್ಷ ವಯಸ್ಸಾದ ಭಾರತದ ಪ್ರತಿ ಪ್ರಜೆಗೂ ವೋಟು ಮಾಡುವ ಅಧಿಕಾರವಿದೆ. ಜಾತಿ, ಮತ, ಪಂಥಾದಿಗಳ ಆಧಾರದ ಮೇಲೆ ಯಾರನ್ನೂ ಮತದಾನ ಪಟ್ಟಿಯಿಂದ ತೆಗೆದುಹಾಕುವಂತಿಲ್ಲ. ಮತದಾನ ಕ್ಷೇತ್ರದಲ್ಲಿ ವಾಸಿಸದೆ ಇದ್ದಲ್ಲಿ, ಬುದ್ಧಿ ಭ್ರಮಣೆ ಆಗಿದ್ದಲ್ಲಿ, ದುಷ್ಕಾರ್ಯ, ಭ್ರಷ್ಟಾಚಾರ ಕಾನೂನು ಬಾಹಿರ ಕಾರ್ಯಗಳನ್ನು ನಡೆಸಿದ್ದಲ್ಲಿ ಅಂಥವರನ್ನು ಮತದಾನ ಪಟ್ಟಿಯಿಂದ ತೆಗೆದುಹಾಕಬಹುದಾಗಿದೆ. ಯಾರೇ ಆಗಲಿ, ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಅಥವಾ ಒಂದೇ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತದಾರನಾಗಿ ರಜಿಸ್ಟರ್ ಮಾಡಿಸಿಕೊಳ್ಳುವಂತಿಲ್ಲ. ತಾತ್ಕಾಲಿಕವಾಗಿ ಒಂದು ಮತದಾನ ಕ್ಷೇತ್ರದಲ್ಲಿ ವಾಸಿಸದೆ ಇದ್ದ ಮಾತ್ರಕ್ಕೆ ಅಂಥ ವ್ಯಕ್ತಿಯನ್ನು ಆ ಕ್ಷೇತ್ರದ ವಾಸಸ್ಥನಲ್ಲ ಎಂದು ಗಣಿಸುವುದಿಲ್ಲ. ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳ ಸದಸ್ಯರು ಅವರ ಸದಸ್ಯತ್ವದ ಅವಧಿಯುದ್ದಕ್ಕೂ ಆವರು ಮತದಾರರಾಗಿ ದಾಖಲು ಮಾಡಿಸಿಕೊಂಡಿರುವ ಚುನಾವಣಾ ಕ್ಷೇತ್ರದ ವಾಸಸ್ಥರೆಂದು ಸಾಮಾನ್ಯವಾಗಿ ಪರಿಗಣಿಸಲ್ಪಡುತ್ತಾರೆ.

ಪ್ರತಿಯೊಂದು ಚುನಾವಣಾ ಕ್ಷೇತ್ರದ ಮತದಾರ ಪಟ್ಟಿಯನ್ನು ನಿರ್ಧಾರಿತ ದಿನಾಂಕ ಮತ್ತು ಕ್ರಮಗಳನ್ನು ಅನುಸರಿಸಿ ಸಿದ್ಧಗೊಳಿಸಲಾಗುತ್ತದೆ. ಪ್ರಜೆಗಳ ಪ್ರಾತಿನಿಧ್ಯ ಮಸೂದೆಯ ನಿಯಮಗಳ ಅನುಸಾರ ಅವನ್ನು ಅಂತಿಮವಾಗಿ ಪ್ರಕಟಿಸಿದೊಡನೆಯೇ ಅದು ಆಚರಣೆಗೆ ಬರುತ್ತದೆ.

ನಾಲ್ಕು ವರ್ಗದ ವಿಶಿಷ್ಟ ಮತದಾರರೂ ಇದ್ದಾರೆ— ಮೊದಲನೆಯದಾಗಿ—ಘೋಷಿತ ಅಧಿಕಾರಸ್ಥಾನದಲ್ಲಿರುವವರು; ಇವರು ಭಾರತದ ಯಾವುದೇ ಮತದಾರ ಕ್ಷೇತ್ರದಲ್ಲೇ ಆಗಲಿ ತಮ್ಮ ಹೆಸರನ್ನು ಸೇರಿಸಿಕೊಳ್ಳಬಹುದಾಗಿದೆ. ರಾಷ್ಟ್ರಪತಿಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಇತರ ಕೆಲವರು ಈ ವರ್ಗದಲ್ಲಿ ಬರುತ್ತಾರೆ.

ಎರಡನೆಯ ವರ್ಗದವರು ರಕ್ಷಣಾ ಬಲಗಳಿಗೆ ಸೇರಿದವರು:—ಇದು ತಮ್ಮ ಕೆಲಸಕ್ಕೆ ಸೇರುವ ಮುನ್ನ ಸಾಮಾನ್ಯವಾಗಿ ವಾಸಿಸುತ್ತಿದ್ದ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಸೇರಿಸಿಕೊಳ್ಳಬಹುದು.

ಮೂರನೆಯದಾಗಿ, ತಮ್ಮ ರಾಜ್ಯದಿಂದ ಹೊರಗಿರುವ ಪೋಲೀಸರು ನಾಲ್ಕನೆಯದಾಗಿ ವಿದೇಶಗಳಲ್ಲಿ ಸೇವೆಯಲ್ಲಿರುವವರು.

ದಿವಂಗತ ಪ್ರೊಫೆಸರ್ ಹೆರಾಲ್ಡ್ ಲಾಸ್ಕಿಯವರು ಹೇಳಿದಂತೆ, ಹಕ್ಕುಗಳ ಜೊತೆಯಲ್ಲಿ ಜವಾಬುದಾರಿಯೂ ಇರುತ್ತದೆ. ಮತದಾನ ಪ್ರಜೆಯ ಹಕ್ಕು. ಒಂದು ರೀತಿಯಲ್ಲಿ ಜವಾಬುದಾರಿ ಸಹ. ಯಾರೇ ಆಗಲಿ ಮತದಾನ ಮಾಡಬೇಕೆಂಬ ಒತ್ತಾಯವಿಲ್ಲವಾದರೂ, ಮತದಾನ ಮಾಡುವ ಅಧಿಕಾರ ಉಳ್ಳವರೆಲ್ಲರೂ ತಮ್ಮ ಈ ಅಧಿಕಾರವನ್ನು ಚಲಾಯಿಸುವುದು ಒಳ್ಳೆಯದು. ಏಕೆಂದರೆ ಪ್ರತಿಯೊಬ್ಬ ವಯಸ್ಕ ಪ್ರಜೆಯೂ ತನ್ನ ರಾಜ್ಯಾಧಿಕಾರ ನಡೆಸುವವರನ್ನು ಆರಿಸುವ ಕೆಲಸದಲ್ಲಿ ಭಾಗವಹಿಸಿದಾಗ ಮಾತ್ರ, ನಮ್ಮ ಪ್ರಜಾಸತ್ತೆ ವಾಸ್ತವವಾದದ್ದು, ಕೇವಲ ಕಲ್ಪನೆಯಲ್ಲ ಎಂಬ ಭಾವನೆ ಬರುತ್ತದೆ.

ಮತ ಕೊಡಲು ಅರ್ಹರಾಗಿದ್ದರೂ ಮತದಾನ ಅಪೇಕ್ಷಿಸದ ಕೆಲವು ಜನರೂ ಇದ್ದಾರೆ. ಇಂಥ ವರ್ಗ ಏರ್ಪಟ್ಟದ್ದು ಹೇಗೆ ಎಂಬುದು ವಿಚಾರಾರ್ಹವಾದ ಅಂಶ. ಜಡತೆ, ರಾಜಕೀಯದಲ್ಲಿ ನಿರಾಸಕ್ತಿ, ನನ್ನೊಬ್ಬನ ಓಟು ಇತಿಹಾಸ ಮಾರ್ಗವನ್ನು ಬದಲಾಯಿಸಲಾರದು ಎಂಬ ಭಾವನೆ ಇವೆಲ್ಲಾ ಇದಕ್ಕೆ ಕಾರಣವಿರಬಹುದು. ಒಂದು ಓಟಿನಿಂದ ಇತಿಹಾಸದ ಮಾರ್ಗ ಬದಲಾಯಿಸುವುದಿಲ್ಲ. ಆದರೆ, ಮತದಾರರಲ್ಲಿ ಬಹು ಸಂಖ್ಯಾತರು ಹೀಗೆ ಭಾವಿಸಿದರೆ, ಚುನಾವಣೆಗಳ ಪರಿಣಾಮದಲ್ಲಿ ಗಣನೀಯ ಬದಲಾವಣೆಗಳಾದಾವು. ಸಮಾಜದ ಇನ್ನು ಕೆಲವು ಸುಶಿಕ್ಷಿತ ವ್ಯಕ್ತಿಗಳು, ನಿರಾಶಾಭಂಗದಿಂದಲೋ ಇಲ್ಲವೇ ನಿರಾಸಕ್ತಿಯಿಂದಲೋ ರಾಷ್ಟ್ರಜೀವನದಿಂದ ದೂರವಾಗಿರುವ ಪ್ರವೃತ್ತಿಯನ್ನು ಬೆಳಸಿಕೊಂಡಿರುತ್ತಾರೆ. ಇ

ಇಲೆಕ್ಷನ್ ವಿಷಮ ಶೀತಜ್ವರ

(ನಾಲ್ಕನೇ ಪುಟದಿಂದ)

ಧ್ಯ ರಚನೆಯಾಗಲಿಲ್ಲ! ಭಾಷಾವಾರು ರಾಜ್ಯ ವಿಂಗಡಣೆಗೆ ಮೊದಲಾಗಲಿಲ್ಲ? ಹಾಗೆ...."

"ನೋಡಮ್ಮ, ಯಾರನ್ನಾದರೂ ಯಾಕಾದರೂ ಗೇಲಿ ಮಾಡುವುದು ಒಳ್ಳೆಯದಲ್ಲ. ಕೊನೆಗಾದರೂ ಶ್ರೀ ಆಚಾರ್ಯರು ಉಚಿತ ನಿರ್ಧಾರಕ್ಕೆ ಬಂದರಲ್ಲಾ, ಅದಕ್ಕೆ ಅವರಿಗೆ ಕೃತಜ್ಞತೆಯರ್ಪಿಸಬೇಕು...."

'ನೀವು ಹೀಗೇ.... ಕನಸಿನಲ್ಲಿಯೂ ಒಳ್ಳೆ ಕಾಣಬೇಕು, ದುಃಸ್ವಪ್ನದಲ್ಲಿಯೂ ಶಿಷ್ಟತೆಯರಿಸಬೇಕು ....ಹಾಗೆ, ಹೇಗೆ....ಅದು ನಿಮಗೆ ಮಾತ್ರ ಸಾಧ್ಯವಾದೀತು ಎಲ್ಲರಿಗೂ ಹೇಗೆ....?"

'ಸಾಧನೆಯಿಂದ ಎಲ್ಲವೂ ಸಾಧ್ಯ. ಸದ್ಯ ನಿನ್ನನ್ನೇ ನೀನು ನೋಡು..."

'ಹ್ಞಾಂ...ನೀವೆನ್ನುವುದು ಸರಿ ಆದರೆ, ತನ್ನನ್ನೇ ತಾನು ನೋಡಿಕೊಳ್ಳುವ ಅದ್ಭುತ ಶಕ್ತಿ ಎಷ್ಟು ಜನರಲ್ಲಿದೆ?'

'ಬೆಳೆಸಿಕೋ ಬೇಕು, ಬೆಳೆಸಿಕೋಬೇಕು.. ಒಳ್ಳೆಯದನ್ನು ಕಾಣುವುದು, ಒಳ್ಳೆಯದನ್ನು ಕೇಳುವುದು, ಒಳ್ಳೆಯದನ್ನು ಆಡುವುದು—ಇದು ಮಾನವನ ಕರ್ತವ್ಯವಾಗಬೇಕು..."

'ಹ್ಞಾಂ...ಪಾಠ ಶುರು ಸದ್ಯ...ಮತ್ತು ಭಾರಿಯಾಯಿತು....ಬಸ್ಸು...ಬಿಟ್ಟುಬಿಡುತ್ತೇನೆ..."

"ಹ್ಞಾಂ...

—ಗೋರಾ.

ದು ನಿಜವಾಗಿ ಖೇದಪ್ರದವಾದದ್ದು. ಏಕೆಂದರೆ, ವಿದ್ಯಾಭ್ಯಾಸ ಹಲವಾರು ಮಿತಿಗಳಿಗೆ ಒಳಪಟ್ಟಿರುವ ನಮ್ಮ ರಾಷ್ಟ್ರದಲ್ಲಿ ಬುದ್ಧಿವಂತರೂ ವಿದ್ಯಾವಂತರೂ ಆದವರು, ಅಷ್ಟು ವಿದ್ಯಾವಂತರಲ್ಲದ ಜನರಲ್ಲಿ ತಿಳಿವನ್ನು ಹರಡುವುದರಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬೇಕು.

ಈ ಹಿಂದಿನ ಮಹಾ ಚುನಾವಣೆಗಳ ಫಲಿತಾಂಶಗಳನ್ನು ಪರಿಶೀಲಿಸಿದರೆ — ಕೆಲವು ಅಂಶಗಳು ಎದ್ದು ಕಾಣುತ್ತವೆ.

೧೯೫೭ರಲ್ಲಿ ನಡೆದ ಎರಡನೆಯ ಮಹಾಚುನಾವಣೆಗಳಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು ಒಂದು ಕೋಟಿ ಮತದಾರರಿದ್ದರು. ಇವರಲ್ಲಿ ಸುಮಾರು ಅರುವತ್ತು ಲಕ್ಷ ಮತದಾರರು ಮಾತ್ರ ಮತದಾನ ಮಾಡಿದರು. ಭಾರತದ ಒಟ್ಟು ಮತದಾರರ ಸಂಖ್ಯೆ ಸುಮಾರು ಹತ್ತೊಂಭತ್ತು ಕೋಟಿ ಇದ್ದು ಹನ್ನೆರಡು ಕೋಟಿಹತ್ತೊಂಬತ್ತುಲಕ್ಷ ಮತದಾರರು ಮಾತ್ರ ಓಟು ಮಾಡಿದರು.

೧೯೬೨ರ ಮಹಾಚುನಾವಣೆಯಲ್ಲಿ, ಮೈಸೂರು ರಾಜ್ಯದಲ್ಲಿ ಸುಮಾರು ಒಂದು ಕೋಟಿ ಹದಿಮೂರು ಲಕ್ಷ ಮತದಾರರಿದ್ದು ಅರವತ್ತೈದು ಲಕ್ಷ ಜನರು ಮತದಾನ ಮಾಡಿದರು.

ಭಾರತದ ಒಟ್ಟು ಮತದಾರರ ಸಂಖ್ಯೆ ೨೧ ಕೋಟಿ ೬೩ ಲಕ್ಷ ಇದ್ದು, ಸುಮಾರು ೧೨ ಕೋಟಿ ಮತದಾನ ಮಾಡಿದರು.

ಇದರಿಂದ ಐದು ವರ್ಷಗಳ ಅವಧಿಯಲ್ಲಿ ಮತದಾನ ಮಾಡುವವರ ಪ್ರಮಾಣ ಹೆಚ್ಚಿತೆಂಬುದು ವ್ಯಕ್ತವಾಗುತ್ತದೆ. ಇದೇ ರೀತಿ ಈ ಬಾರಿ ಕೂಡ ಮತದಾನ ಮಾಡುವವರ ಪ್ರಮಾಣ ಇನ್ನೂ ಹೆಚ್ಚುವುದೆಂದು ನಾವು ಅಪೇಕ್ಷಿಸಬಹುದಾಗಿದೆ. ಮುಂಬರುವ ಮಹಾಚುನಾವಣೆಯಲ್ಲಿ ಪ್ರತಿ ಪ್ರಜೆಯೂ ತೀವ್ರ ಆಸಕ್ತಿ ವಹಿಸುವನೆಂದು ನಾವು ಆಶಿಸುತ್ತೇವೆ. ಪ್ರತಿ ಪ್ರಜೆಯ ಮತದಾನವೂ ಅಮೂಲ್ಯವಾದದ್ದು. ಪ್ರಜೆ ನಿರ್ಪಕ್ಷಪಾತಭಾವದಿಂದ ಸೂಕ್ಷ್ಮವಾಗಿ ವಿವೇಚಿಸಿ, ತನ್ನ ಪ್ರತಿನಿಧಿಯನ್ನು ಆರಿಸುವುದರಿಂದ, ಭಾರತ ಸಂವಿಧಾನದ ಆಧಾರವಾದ ಪ್ರಜಾಸತ್ತಾತ್ಮಕ ಆದರ್ಶವನ್ನು ಮುಂದುವರಿಸಿಕೊಂಡು ಹೋಗಲು ಸಹಾಯವಾಗುತ್ತದೆ.

[ಆಕಾಶವಾಣಿ ಕೃಪೆಯಿಂದ]

(ಮೂರನೇ ಪುಟದಿಂದ)

ದರಿಂ. ಸಮಾಜರಚನೆಯ ಧ್ಯೇಯದತ್ತ ನಡೆಯುವ ದೇಶವಾದ ಭಾರತಕ್ಕೆ ಜಾತೀಯತೆಯೆಂದೂ ಅಶೋಭನೀಯ; ವಿಭಿನ್ನ—ಪಂಥ, ಭಾಷೆಗಳ ವಿಶಾಲದೇಶವಾದ ಭಾರತದಲ್ಲಿ ಮತದಾರರು ಎಚ್ಚರಿಕೆಯಿಂದಿರಬೇಕಾಗುತ್ತದೆ. ಜಾತೀಯತೆಯಂತಹ ಕ್ಷುಲ್ಲಕ ಪ್ರಶ್ನೆಗಳನ್ನು ಎತ್ತದೆ, ಅಂತಹ ಜಾಲದಲ್ಲಿ ಸಿಲುಕದೆ ತಮ್ಮ ಹಿತ ಸಾಧಿಸಬಲ್ಲುದೆಂಬ ವಿಶ್ವಾಸ ಪಾತ್ರ ಪಕ್ಷವನ್ನು ಬೆಂಬಲಿಸುವುದು ಅಗತ್ಯವಾಗಿದೆ.

ಕಾಂಗ್ರೆಸಿಗೆ ನೀಡುವ ಮತ—ದೇಶಕ್ಕೆ ತರಬಲ್ಲುದು ಹಿತ. ಕಾಂಗ್ರೆಸ್ಸಿನ ಚಿಹ್ನೆ—ಜೋಡೆತ್ತು.

ಯಾರು ಹೇಳುತ್ತಾರೆ?

ಚೀನೀಯ ಆಂತರಿಕ ಕಲಹವು ಚಕಮಕಿಯಿಂದ ಆರಂಭವಾಗಿ ಸಶಸ್ತ್ರ ಹೋರಾಟದ ರೂಪವನ್ನಿಂದು ಪಡೆದಿದೆ. ಮಾವೋರವರು ಇಡಿಯ ಚೀನಾ ತನ್ನ ನಿಯಂತ್ರಣದಲ್ಲಿದೆಯೆಂದು ಗುಡುಗುತ್ತಿರುವರಾದರೂ ವಸ್ತುಸ್ಥಿತಿ ಹೀಗೆಯೇ ಇದೆಯೆಂದು ಹೇಳುವಂತಿಲ್ಲ. ಸೋವಿಯತ್ ದೂತಾವಾಸದ ಸಿಬ್ಬಂದಿ ಪರಿವಾರವೂ ರಕ್ಷಿತ ಯಾತ್ರೆ ಮಾಡಿದ್ದು, ಆದಕ್ಕೆ ರೆಡ್‌ಗಾರ್ಡ್‌ಗಳು ಆತಂಕವೊಡ್ಡಿದ್ದು—ಎಲ್ಲವೂ ಮಾವೋರವರ ಸಂದಿಗ್ಧತೆಯನ್ನೇ ಜಾಹೀರು ಮಾಡುತ್ತವೆ. ಮಾವೋರವರು ವಿಜಯದ ದಾರಿಯಲ್ಲಿರಬಹುದು—ಆದರೆ, ಚೀನೀಯರಲ್ಲಿ ಹುಟ್ಟಿದ ವಿರೋಧ ಭಾವನೆಯನ್ನು ಸಂಪೂರ್ಣ ಕಿತ್ತು ಹಾಕಲು ಮಾವೋ ಶಕ್ಯರಾಗುವುದಿಲ್ಲ. ಇಂದಿನ ಅಸಮಾಧಾನವೇ ಒಂದು ದಿನ ಮಾವೋ ಸಮಾಧಿಯನ್ನೂ ಕಟ್ಟುವುದು. ಆ ದಿನವೆಷ್ಟು ದೂರವಿದೆ ಎಂದು ಹೇಳ ಬಲ್ಲವರಾರು?

ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವಗಳು

ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜ್ ವರ್ಧಂತ್ಯುತ್ಸವ ಸಮಾರಂಭವು ಕಳೆದ ತಾ. ೨೪ರಂದು, ಕಾಲೇಜಿನ ಬಯಲು ರಂಗಭೂಮಿಯಲ್ಲಿ, ಪ್ರೊ|| ವಿ. ಸೀತಾರಾಮಯ್ಯ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರಿನ್ಸಿಪಾಲ್ ಶ್ರೀ ವಿ.ಎಂ. ಇನಾಂದಾರ್‌ರವರು ಅಧ್ಯಕ್ಷರನ್ನು ಸ್ವಾಗತಿಸುತ್ತಾ ಅವರ ಪರಿಚಯ ಮಾಡಿಕೊಟ್ಟು, ಕಾಲೇಜಿನ ವಾರ್ಷಿಕ ವರದಿಯನ್ನೋದಿದರು. ಶ್ರೀ ಅದಮಾರು ಮಠದ ಶ್ರೀ ಸ್ವಾಮೀಜಿಯವರು ವಿದ್ಯಾರ್ಥಿಗಳಲ್ಲಿ ಶಿಸ್ತು ಎಂಬ ವಿಷಯವಾಗಿ ಮಾತನಾಡಿದರು. ಅಧ್ಯಕ್ಷರು ಬಹುಮಾನ ವಿತರಣೆಗೈದ ಬಳಿಕ ತಮ್ಮ ರಸವತ್ತಾದ ಭಾಷಣದಿಂದ ಸಭಿಕರನ್ನು ಆನಂದಗೊಳಿಸಿದರು. ಕೊನೆಯಲ್ಲಿ ಶ್ರೀ ಎಚ್. ಶ್ರೀಧರ ರಾಯರು ವಂದನಾರ್ಪಣೆಗೈದರು.

ಸಮಾರಂಭದ ಅಂಗವಾಗಿ ವಿವಿಧ ಮನೋರಂಜನಾ ಕಾರ್ಯಕ್ರಮಗಳಾದವು.

ತಾ. 25 ರಂದು ಬೆಳಗ್ಗೆ ಪ್ರೊ|| ವಿ. ಸೀತಾರಾಮಯ್ಯನವರು ಕಾಲೇಜಿನ ಪ್ರಕಾಶನ ಸಮಿತಿಯ ಪ್ರಥಮ ಪ್ರಕಟನೆಯಾದ ಶ್ರೀ ಎಂ. ರಾಜಗೋಪಾಲಾಚಾರ್ಯರ "ಕಾಳಿದಾಸನ ಉಪಮೆಗಳು" ಎಂಬ ಕಿರುಹೊತ್ತಗೆಯ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ವಿ. ಎಂ. ಇನಾಂದಾರರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ವಿ. ಸೀಯವರನ್ನೂ, ಅಂದಿನ ಪ್ರಮುಖ ಭಾಷಣಗಾರರಾಗಿ ಆಗಮಿಸಿದ್ದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟ, ಮತ್ತು ಶ್ರೀ ಕೆ. ವೆಂಕಟರಾಮಪ್ಪ ಇವರನ್ನೂ ಸಭಿಕರಿಗೆ ಪರಿಚಯ ಮಾಡಿದರು.

ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಕಾಳಿದಾಸನ 'ಮೇಘ ಸಂದೇಶ'ದ ಮೇಲೆ ರಸವತ್ತಾದ ಭಾಷಣ ಮಾಡಿದರು. ಶ್ರೀ ಕೆ. ವೆಂಕಟರಾಮಪ್ಪನವರು ಕಾಳಿದಾಸನ ಮೇಲ್ಮೆಯ ಕುರಿತು ಮಾತನಾಡಿದರು. ಬಳಿಕ ವಿ. ಸೀ. ಯವರು ಕಾಳಿದಾಸ ಉಪಮೆಗಳ ಮೇಲೆ ಉಪನ್ಯಾಸವನ್ನಿತ್ತರು. ಕೊನೆಯಲ್ಲಿ ಪ್ರಕಾಶನ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಬಿ. ರಾಜಪುರೋಹಿತರು ವಂದನಾರ್ಪಣೆಗೈದರು.

ಅದೇ ದಿನ ಸಂಜೆ ಕಾಲೇಜಿನ "ಯೂನಿಯನ್ ಡೇ" ಸಮಾರಂಭವು, ಮಂಗಳೂರಿನ ಸರಕಾರೀ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಬಿ. ಸಿ. ವಸ್ಲಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನಾನಂತರ ಶ್ರೀ ವಿ. ಎಂ. ಇನಾಂದಾರರು ಸ್ವಾಗತಿಸುತ್ತಾ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಕಾಲೇಜು ಯೂನಿಯನ್‌ನ ಜತೆ ಕಾರ್ಯದರ್ಶಿ ಶುಭಕೋರಿ ಬಂದ ಸಂದೇಶಗಳನ್ನೋದಿದ ಬಳಿಕ ವಿವಿಧ ಸಂಘಗಳ ಕಾರ್ಯದರ್ಶಿಗಳು ತಮ್ಮ ಸಂಘದ ವಾರ್ಷಿಕ ವರದಿಯನ್ನೋದಿದರು. ಕಾಲೇಜಿನ ಹಳೆ ವಿದ್ಯಾರ್ಥಿ ಶ್ರೀ ಅಪ್ಪು ಶೆಟ್ಟರು ಈ ಸಂದರ್ಭದಲ್ಲಿ ತಮ್ಮ ವಿದ್ಯಾರ್ಥಿ ಜೀವನದ ಶುಭ ನೆನಪುಗಳನ್ನು ನೆನಸಿ ಸಭಿಕರ ಮುಂದಿಟ್ಟರು. ಇದಕ್ಕೆ ಉತ್ತರ ರೂಪವಾಗಿ ಯೂನಿಯನ್ನಿನ ಕಾರ್ಯದರ್ಶಿ ಶ್ರೀ ವಿಜಯಕುಮಾರ ಹೆಗ್ಡೆಯವರು ಮಾತನಾಡಿದರು. ಅಧ್ಯಕ್ಷರ ಪ್ರಭಾವಯುತ ಭಾಷಣವಾದ ಬಳಿಕ ಕಾಲೇಜು ಯೂನಿಯನ್ನಿನ ಉಪಾಧ್ಯಕ್ಷ ಶ್ರೀ ಎಚ್. ಶ್ರೀಧರ ರಾಯರು ಧನ್ಯವಾದ ಸಮರ್ಪಿಸಿದರು. ಕೊನೆಯಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳು ನೆರವೇರಿದವು.

ವಾರ್ಷಿಕೋತ್ಸವ

ಉಡುಪಿ, ಬುಡ್ನಾರು ಸ್ವತಂತ್ರ ಭಾರತ ಮಾತಾ ಭಜನಾ ಮಂದಿರದ ವಾರ್ಷಿಕೋತ್ಸವವು ತಾ. 17—1—67ರಿಂದ 28—1—67ರ ತನಕ ಜರಗಿತು. ತಾ. 28—1—67ನೇ ರಾತ್ರಿ ಭಕ್ತಾದಿಗಳ ಕೂಡುವಿಕೆಯಿಂದ ಭಜನಾ ಮಂಗಲೋತ್ಸವವು ನಡೆಯಿತು.



ಪ್ರೋತಿಯ ಮೂಕ ಪ್ರೇಮ

(ಎರಡನೇ ಪುಟದಿಂದ)

ಗಿಸುತ್ತಿದ್ದಿಲ್ಲ. ಜನ ಸಂದಣಿ — ವಾದ್ಯ ಘೋಷ—ಧ್ವನಿವರ್ಧಕ ಯಂತ್ರದ ಮೂಲಕ ರಿಕಾರ್ಡು ಸಂಗೀತ; ಆನಂದದ ಸುಗ್ಗಿ. ಎಲ್ಲರಿಗೂ ಸ್ವಾಗತ. ಆದರೂ ಪ್ರೋತಿಯು ತನ್ನ ಕಾಲುಗಳನ್ನು ತಾನರಿಯದೆಯೇ ಹಿಂದಕ್ಕೆಳೆದ.

ಮೂಕ ಪ್ರೋತಿಗೆ ಅಂತಹ ಕನ್ನೆಯನ್ನು ಪತ್ನಿಯಾಗಿ ಹೊಂದುವ ಭಾಗ್ಯವಿರದೆಂದು ತಾನಾಗಿಯೇ ಆತನ ಮಿದುಳಿಗೆ ದಿವ್ಯಜ್ಞಾನ ಬಂತು. ಮನಸ್ಸಿಲ್ಲದ ಮನಸ್ಸಿನಿಂದ ನಿರಾಶನಾಗಿ ಹಿಂದಿರುಗುವಾಗ ಭೂಮಿಯ ತಿರುಗುವಿಕೆಯ ಸತ್ಯ ಮನದಟ್ಟಾಗಿತ್ತು.

"ಸ್ವಾಮೀ!........" ಎಂದು ಹಿಂದಿನಿಂದ ಚಪ್ಪಾಳೆ ಹೊಡೆದು ಕರೆದುದು ತಹಶೀಲ್ದಾರ್ ಗೋಪಾಲ ಪಿಳ್ಳೆ.

ಪ್ರೋತಿ ಹಿಂದಿರುಗಿ ನೋಡಿದ.

'ತಮ್ಮನ್ನು ಆಮಂತ್ರಿಸ ಬಂದಿದ್ದೆ... ವಿವರ ತಿಳಿದಿರ ಬಹುದು.... ತಾವು ಆಲ್ಲಿರಲಿಲ್ಲ...."— ಪಿಳ್ಳೆ.

'ಊಂ....?....' ಏನು ವಿಶೇಷವೆಂದು ಕೈಸನ್ನೆಯಿಂದಲೇ ಪ್ರಶ್ನೆ.

'ನನ್ನ ಮಗಳ ವಿವಾಹ...ಇದೇ ನಮ್ಮ ಮನೆ.... ಈ ತನಕವೂ ಆಕೆ ಮಾವನ ಮನೆಯಿಂದ ಕಾಲೇಜಿಗೆ ಹೋಗುತ್ತಿದ್ದಳು...ವರನೋರ್ವ ಐ. ಎ. ಎಸ್. ಆಫೀಸರ್... ತಾವು ಚಿತ್ತೈಸಿ ಆಶೀರ್ವದಿಸಬೇಕು.".

ತನ್ನ ಮನದ ಇಷ್ಟ ದೇವತೆ—ಆ ವನ ದೇವತೆ ಯಾರೆಂದೀಗ ಪ್ರೋತಿಗೆ ಸ್ಪಷ್ಟವಾಯಿತು.

"ಬನ್ನಿ, ಹೋಗೋಣ. ತಾವಿಂದು ದಕ್ಷಿಣೆ ಸ್ವೀಕರಿಸಬೇಕು. ನಾಳೆ ವಧೂವರರು ದೇವಾಲಯಕ್ಕೆ ಬರುವರು. ಭಗವತಿಗೆ ವಿಶೇಷ ಸೇವೆಯಿದೆ....'

ಪ್ರೋತಿಯ ಸ್ವಪ್ನ ಸಾಮ್ರಾಜ್ಯ ಉರುಳಿತು, ಆಶಾ ಸೌಧದ ಅಡಿಗಲ್ಲೇ ಕುಸಿದಿದೆ. ಸೂರ್ಯನ ಪ್ರಕಾಶವೂ ಆಗ ಪ್ರೋತಿಗ ಬೇಕಾದಷ್ಟು ಬೆಳಕನ್ನು ನೀಡಲು ಸಾಧ್ಯವಾಗಲಿಲ್ಲ. ಕತ್ತಲೆಯಾದಂತೆ ಪ್ರೋತಿಗೆ ತೋರಿತು. ಎಂತಹ ಪೇಚಿನಲ್ಲಿ ಸಿಲುಕಿದೆನೆಂದು ಅಸಹ್ಯವಾಯಿತಾದರೂ ತನ್ನ ಆಕಾಂಕ್ಷಿಣಿಯನ್ನು ವಿವಾಹ ಕನ್ಯೆಯ ಶೃಂಗಾರದಲ್ಲಿ ಕಂಡಾದರೂ ಆನಂದಿಸಬಹುದೆಂದೂ ಆಕೆಯಿಂದ ದಕ್ಷಿಣೆಯನ್ನಾದರೂ ಸ್ವೀಕರಿಸಬಹುದೆಂದೂ ನಿರ್ಧರಿಸಿದ ಪ್ರೋತಿಯು ಚಲಿಸುವ ಪ್ರತಿಮೆಯಂತೆ ತಹಶೀಲ್ದಾರರನ್ನು ಹಿಂಬಾಲಿಸಿದ. ಬಳಿಕ ವಿವಾಹ ಮಂಟಪದ ಬಳಿಯ ಆಸನವೊಂದನ್ನು ಅಲಂಕರಿಸಿದ್ದಾಯ್ತು.

ವಧುವು ದಕ್ಷಿಣೆಯಿತ್ತು ತಲೆಬಾಗಿ ವಂದಿಸಿದಾಗ ಪ್ರೋತಿಯು ಎದ್ದು ನಿಂತು ಯಾವುದೋ ಆಶೀರ್ವಾದ ಮಂತ್ರವನ್ನುಚ್ಚರಿಸುತ್ತಾ ಎರಡು ಕೈಗಳಿಂದಲೂ ಅನುಗ್ರಹಿಸುತ್ತಿದ್ದಾಗ ಆತನ ಕಣ್ಣೀರ ಬಿಂದುಗಳು ವಧುವಿನ ತಲೆಯ ಮೇಲೆ ಬಿದ್ದು ಕೂದಲುಗಳೆಡೆಯಲ್ಲಿ ಅಡಗಿ ಹೋದುದನ್ನು ಬೇರೆ ಯಾರೂ ಗಮನಿಸಿರಲಿಕ್ಕಿಲ್ಲ.

ಪ್ರೋತಿಯು ಹಿಂತೆರಳುತ್ತಿದ್ದಾಗಲೂ ನಾಗಸ್ವರ ಸಂಗೀತ ಧ್ವನಿಯು ಸುತ್ತುಮುತ್ತಲ ವಾತಾವರಣವನ್ನು ಕವಿದಿತ್ತು. ತಾನೆಲ್ಲಿ? ಆ ಐ. ಎ. ಎಸ್. ಯುವಕನೆಲ್ಲಿ? ಯೋಗ್ಯನಾದ ವರನೇ ಆಕೆಗೆ ಲಭಿಸಿದ. ತಾನೂ ಆತನಂತೆ ಅಧವಾ ಆದಕ್ಕೂ ಮಿಕ್ಕಿದ ಯೋಗ್ಯತೆಯುಳ್ಳವನಾಗಿದ್ದರೆ....?

ಹಾಳು ವಿಧಿ ಬಿಡಲಿಲ್ಲ; ಹ್ಯಾಸ್ಕೂಲು ಶಿಕ್ಷಣದ ಕೊನೆಯ ಹಂತದಲ್ಲೇ ವಿಷಮ ಜ್ವರ ಬಾಧಿಸಿತು. ಆ ತನಕ ಇದ್ದ ವಾಕ್ ಶಕ್ತಿ ಮೂಕವಾಯಿತು. ಕಿವಿ ಕಿವುಡಾಗದಿದ್ದುದೂ ಕಣ್ಣು ಕುರುಡಾಗದಿದ್ದುದೂ ಭಾಗ್ಯ.

ಏನೆಲ್ಲಾ ವಿಧವಿಂದ ಸಂತೈಸಿಕೊಳ್ಳಲು ಯತ್ನಿಸಿದರೂ ಪ್ರಯೋಜನ ತೋರಲಿಲ್ಲ. ತನ್ನ ಬಯಕೆ ಕೇವಲ ತಿಳಿಗೇಡಿತನದ್ದಾದರೂ ಪ್ರಕರಣವನ್ನು ಅಷ್ಟಕ್ಕೇ ಕೊನೆಗೊಳಿಸಲು ಆತನಿಗೆ ಸಾಧ್ಯವಾಗಲಿಲ್ಲ. ಒಮ್ಮೆ ಗಟ್ಟಿಯಾಗಿ ಅತ್ತು ಕಣ್ಣೀರು ಸುರಿಸಿದರೆ ಸ್ವಲ್ಪವಾದರೂ ಮನೋವೇದನೆ ಶಮನವಾಗುವುದೋ ಶಂಕಿಸಿದ....ಗಟ್ಟಿಯಾಗಿ ಅಳುವುದಾದರೂ ಹೇಗೆ? ಶಬ್ದವೇ ಹೊರಡದು....ಹೃದಯ ಅಳಲು ಪ್ರಾರಂಭಿಸಿ ಹೆಚ್ಚು ಸಮಯವಾಗಿದೆ. ಪ್ರೋತಿಗೆ ಹೊರತು ಬೇರಾರಿಗೂ ಅದು ಕೇಳಿಸಲಿಲ್ಲ. ಕಣ್ಣುಗಳೂ ಕೊರಳೂ ಅಳುತ್ತವೆ.... ಹಾಳು ಸ್ವರ ಮಾತ್ರ ಹೊರಬಾರದು. ಅಯ್ಯೋ...!

ಪ್ರೋತಿಯ ಮನೆಯೊಳಕ್ಕೂ—ಹೊರಕ್ಕೂ ಹೋಗಲು ಸಂದಣಿ ಮಲಕೊಂಡಲ್ಲಿಗೂ ಕಿವಿಗಳನ್ನು ಗಾಬರಿಗೊಳಿಸುವಂತೆ ಅಷ್ಟು ಸಂಭ್ರಮಯುಕ್ತ ನಾಗಸ್ವರದ ಧ್ವನಿಯನ್ನು ಸ್ವಲ್ಪವಾದರೂ ನಿಯಂತ್ರಿಸಲು 'ಧ್ವನಿವರ್ಧಕ' ಯಂತ್ರಕ್ಕೂ ದಯೆಯಿಲ್ಲ. ಧ್ವನಿವರ್ಧಕದ ಸದ್ದು ಕೇಳದೆ ಎಲ್ಲಿಗಾದರೂ ಹೋಗುವುದೇ ಈಗ ಪ್ರೋತಿಗೆ ಪರಿಹಾರ ಮಾರ್ಗ. ಪ್ರೋತಿಯ ವೇಗವೂ ದ್ವಿಗುಣಗೊಂಡಿತು. ಪ್ರೋತಿಯ ಹಿಂದೆಯೇ ಕತ್ತಲೂ ಬಂತು. ಕರಾಳ ರಾತ್ರಿ ಕವಿಯಿತು, ಮತ್ತೆ ಆ ಯುವಕನನ್ನು ಯಾರೂ ಜೀವಂತ ಕಂಡಿಲ್ಲ.

ವಿದ್ಯುತ್ ರೈಲುಗಾಡಿಯ ಜನಕ

ವರ್ನರ್ ವಾನ್ ಸೀಮನ್ಸ್

ವರ್ನರ್ ವಾನ್ ಸೀಮನ್ಸ್ ವಿಶ್ವದ ಪ್ರಥಮ ವಿದ್ಯುತ್ ರೈಲುಗಾಡಿಯ ಸಂಶೋಧಕ. ಅವರ ಡೈನಮೊ—ವಿದ್ಯುತ್ ಸಿದ್ಧಾಂತ ಕೈಗಾರಿಕೆಗಳಿಗೆ ಅತ್ಯವಶ್ಯ. ವಿಜ್ಞಾನ, ತಾಂತ್ರಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿರುವ ಸೀಮನ್ಸ್‌ರ ಸಿದ್ಧಾಂತ, ಸಂಶೋಧನೆಗಳು ಜರ್ಮನಿಯ ಅಮರ ಸಂಶೋಧಕರ ಗುಂಪಿನಲ್ಲಿ ಅವರನ್ನೂ ಸೇರಿಸಿದೆ.

ಪ. ಜರ್ಮನಿಯ ಭಾರಿ ಕೈಗಾರಿಕಾ ಸಂಸ್ಥೆಯೊಂದು ಇತ್ತೀಚೆಗೆ ಎರಡು ವಾರ್ಷಿಕೋತ್ಸವಗಳನ್ನು ನೆರವೇರಿಸಿತು—ಒಂದು ಅದರ ಸ್ಥಾಪಕ ವರ್ನರ್ ವಾನ್ ಸೀಮನ್ಸ್‌ರ ಜನ್ಮ ದಿನಕ್ಕೆ ಸಂಬಂಧಿಸಿದ್ದು; ಮತ್ತೊಂದು, ಅವರು ೧೦೦ ವರ್ಷಗಳ ಹಿಂದೆ ನಿರ್ಮಿಸಿದ ವಿಶ್ವದ ಪ್ರಥಮ ವಿದ್ಯುತ್ ರೈಲು ಗಾಡಿಗೆ ಸಂಬಂಧಿಸಿದ್ದು. ಸೀಮನ್ಸ್‌ರ ಹೆಸರು ಕೈಗಾರಿಕಾ ಅಭಿವೃದ್ಧಿಯ ಸೂಚಕವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಈ ವಿಜ್ಞಾನಿ, ಸಂಶೋಧಕ ವಾಸಿಸಿದುದು ಬರ್ಲಿನ್‌ನಲ್ಲಿ; ತಮ್ಮ ಕೈಗಾರಿಕಾ ಸಂಸ್ಥೆ ಸ್ಥಾಪಿಸಿದುದೂ ಅದೇ ನಗರದಲ್ಲಿಯೇ.

ಸೀಮನ್ಸ್‌ರು ಹುಟ್ಟಿದುದು ಹ್ಯಾನೊವರ್‌ನಲ್ಲಿ—೧೮೧೬ರ ಡಿಸಂಬರ್‌ನಲ್ಲಿ. ಅವರ ತಂದೆಯವರದ್ದೋ ೧೪ ಮಕ್ಕಳ ದೊಡ್ಡ ಕುಟುಂಬ. ಸೀಮನ್ಸ್‌ರಿಗೆ ಬೇಕಾಗಿದ್ದ ತಾಂತ್ರಿಕ ಶಿಕ್ಷಣ ಕೊಡಿಸುವುದು ಆತನಿಗೆ ಸಾಧ್ಯವಿರಲಿಲ್ಲ. ಸೇನೆಗೆ ಸೇರಿದ ನಂತರವೇ ಬರ್ಲಿನ ಆರ್ಟಿಲರಿ ಮತ್ತು ಎಂಜಿನಿಯರಿಂಗ್ ಶಾಲೆಯಲ್ಲಿ ಸೀಮನ್ಸ್‌ರಿಗೆ ತಾಂತ್ರಿಕ ತರಬೇತಿ ದೊರೆತುದು.

ಸ್ವಲ್ಪ ಕಾಲದ ನಂತರ ಇಂಗ್ಲೇಂಡಿನ ವ್ಹೀಟ್ ಸ್ಟನ್ ನಿರ್ಮಿಸಿದ್ದ "ಪಾಯಿಂಟರ್ ಟೆಲಿಗ್ರಾಫ್"ನ್ನೂ ಉತ್ತಮಗೊಳಿಸಿ ಅದರ ತಯಾರಿಕೆಗೊಂದು ಕಾರ್ಖಾನೆ ಸ್ಥಾಪಿಸಿದರು. ಇದಕ್ಕಾಗಿ ಇವರು ಸಾಲವೂ ಪಡೆಯಬೇಕಾದರೂ ಸಾಲದ ಹಣ ಬೇಗ ತೀರಿಹೋಯಿತು. ಇದಲ್ಲದೆ ಮೊದಲನೆ ಟೆಲಿಗ್ರಾಫ್ (೧೮೭೦ರಲ್ಲಿ) ಭಾರತದ ಕಲ್ಕತ್ತಕ್ಕೂ ಸಹ ಲಂಡನ್ನಿನಿಂದ ತಲುಪುವಂತಾಯಿತು—ಸೀಮನ್ಸ್‌ರ ಕೈಗಾರಿಕಾ ಸಂಸ್ಥೆಯಲ್ಲಿ ತಯಾರಾದ ತಂತಿಗಳ ಮೂಲಕ.

ಡೈನಮೊ—ವಿದ್ಯುತ್ ಸಿದ್ಧಾಂತದಿಂದ ಸೀಮನ್ಸ್‌ರ ಪ್ರಸಿದ್ಧಿ ಹೆಚ್ಚಿತು. ಸೀಮನ್ಸ್ ಕಿಲೊವ್ಯಾಟ್ ಶಕ್ತಿಯ ಡೈನಮೊಗಳನ್ನು ತಯಾರಿಸಿದರು. ಈಗ ೩೦೦,೦೦೦ ವ್ಯಾಟ್ ಶಕ್ತಿಯ ವಿದ್ಯುತ್ತನ್ನು ತಯಾರಿಸುವ ಬೃಹತ್ ಡೈನಮೊ ಯಂತ್ರಗಳನ್ನು ತಯಾರಿಸಿದರೂ ಅದು ಸೀಮನ್ಸ್ ಸಿದ್ಧಾಂತವನ್ನವಲಂಬಿಸಿಯೇ ಇದೆ.

೧೮೭೯ರಲ್ಲಿ ಸೀಮನ್ಸ್ ವಿಶ್ವದ ಪ್ರಥಮ ವಿದ್ಯುತ್ ರೈಲುಗಾಡಿಯನ್ನು ತಯಾರಿಸಿ ಅದನ್ನು ಬರ್ಲಿನ್ನಿನ ಕೈಗಾರಿಕಾ ಪ್ರದರ್ಶನದಲ್ಲಿಟ್ಟರು. ಎರಡು ವರ್ಷಗಳ ನಂತರ ಬರ್ಲಿನ್‌ನಲ್ಲಿ ವಿದ್ಯುತ್ ರೈಲುಗಳ ಸಂಚಾರಕ್ಕಾರಂಭವಾಯಿತು. ಸೀಮನ್ಸ್‌ರು ೭೫ ವಯಸ್ಸಿನಲ್ಲಿ ಮರಣ ಹೊಂದುವ ವೇಳೆಗೆ ಭಾರಿ ಕೈಗಾರಿಕಾ ಸಂಸ್ಥೆಯೊಂದನ್ನು ಸ್ಥಾಪಿಸಿದ್ದರು.

ಸೀಮನ್ಸ್‌ರ ಕೈಗಾರಿಕಾ ಸಂಸ್ಥೆಗಳು ಇಂದು ಜರ್ಮನಿಯಲ್ಲಿ ಮಾತ್ರವಲ್ಲ ಇಡೀ ಪ್ರಪಂಚದಲ್ಲಿಯೇ ಪ್ರಸಿದ್ಧಿಯಾಗಿವೆ.

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಗಳು ಕೆರೆಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ಪರಿಹಾರೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಸಂಸ್ಮರಣೆ

ಭಾರತದ ಗಾಂಭೀರ್ಯ ಸಂಕೇತ— ಗಾಂಧೀಜಿ

ಸ್ನೇಹ ಮತ್ತು ಪರಸ್ಪರ ತಿಳುವಳಿಕೆಯ ನಿಕಟ ಸಂಬಂಧಗಳು ಸೋವಿಯೆತ್ ಒಕ್ಕೂಟ ಹಾಗೂ ಭಾರತಗಳನ್ನು ಹತ್ತಿರಗೊಳಿಸಿವೆ. ರಾಷ್ಟ್ರೀಯ ವಿಮೋಚನಾ ಹೋರಾಟಗಳ ಬೆಳವಣಿಗೆಯ ಹೊಸ ಘಟ್ಟದಲ್ಲಿ ಉದಯವಾದ ೧೯೧೭ರ ಮಹಾನ್ ಅಕ್ಟೋಬರ್ ಕ್ರಾಂತಿಯ ಕಾಲದಿಂದಲೂ ಸೋವಿಯೆತ್ ಜನರು, ವಸಾಹತು ದಾಸ್ಯಕ್ಕೆ ಇದಿರಾಗಿ ಭಾರತೀಯರು ನಡೆಸುತ್ತಿದ್ದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ಭಾರತದ ಬಗ್ಗೆ ಗಮನ ಕೊಟ್ಟು ಗಾಢವಾದ ಸಹಾನುಭೂತಿಯನ್ನು ಇಟ್ಟುಕೊಂಡು ಬಂದಿದ್ದಾರೆ.

ಭಾರತದ ಜನ ಸ್ವಾತಂತ್ರ್ಯಕ್ಕಾಗಿ ನಿರಂತರವಾಗಿ ನಡೆಸಿದ ಸಂಘರ್ಷವು ೧೯೪೭ ಐತಿಹಾಸಿಕ ವಿಜಯ ಘಟ್ಟವನ್ನು ತಲುಪಿದಾಗ ಸೋವಿಯೆತ್ ಜನರು ಹೃತ್ಪೂರ್ವಕವಾದ ಕೃಪ್ತಿ ಹಾಗೂ ಸಂತಸಗಳಿಂದ ಅದನ್ನು ಸ್ವಾಗತಿಸಿದರು.

ಅಂದಿನಿಂದ ಭಾರತ ಗಣರಾಜ್ಯದ ಇದಿರು ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಯ ಹಾಗೂ ಅದರ ಆರ್ಷೇಯ ಸಂಸ್ಕೃತಿಯ ಪುನರುತ್ಥಾನದ ಅವಕಾಶಗಳ ವಿಸ್ತೃತ ಪ್ರತೀಕ್ಷೆಗಳು ತೆರೆದುವು.

ಸೋವಿಯೆತ್ ಒಕ್ಕೂಟ ಹಾಗೂ ಇತರ ಶಾಂತಿಪ್ರಿಯ ದೇಶಗಳೊಡನೆ ಭಾರತವು ಅಂತಾರಾಷ್ಟ್ರೀಯ ಪ್ರಕ್ಷುಬ್ಧತೆಯು ಸಡಿಲುಗೊಳ್ಳುವುದಕ್ಕೂ ವಿಯೆತ್ನಾಮಿನಲ್ಲಿಯ ಸಾಮ್ರಾಜ್ಯವಾದೀ ಆಕ್ರಮಣಕ್ಕಿದಿರಾಗಿಯೂ, ರಾಷ್ಟ್ರಗಳ ಮಧ್ಯೆ ಶಾಂತಿಯನ್ನು ಬಲಪಡಿಸುವುದಕ್ಕಾಗಿಯೂ ಹೋರಾಡುತ್ತಿದೆ. ಯಾಕೆಂದರೆ ಶಾಂತಿಯು ಭಾರತದ ರಾಷ್ಟ್ರೀಯ ಸಾಂಪತ್ತಿಕತೆಯ ಅಭಿವೃದ್ಧಿಗೂ, ಜನರ ಜೀವನ ಸುಧಾರಣೆಗೂ ಅಷ್ಟೇ ಅವಶ್ಯಕವಾಗಿದೆ.

ಭಾರತದ ರಾಷ್ಟ್ರೀಯ ವಿಮೋಚನಾ ಹೋರಾಟದ ಗಣ್ಯ ನಾಯಕರೂ, ಚಿಂತಕರೂ, ಮಾನವತಾವಾದಿಗಳೂ ಆದ ಮೋಹನದಾಸ್ ಕರಮ್‌ಚಂದ್ ಗಾಂಧಿಯವರು ತಮ್ಮ ಜೀವನದ ಐವತ್ತಕ್ಕಿಂತಲೂ ಹೆಚ್ಚು ವರ್ಷಗಳನ್ನು ಜನರ ನಿಸ್ವಾರ್ಥ ಸೇವೆಯಲ್ಲೂ, ಜನರ ರಾಷ್ಟ್ರೀಯ ಮತ್ತು ಸಾಮಾಜಿಕ ಮೋಕ್ಷದ ಸಂಘರ್ಷದಲ್ಲೂ ಕಳೆದರು. ಗಾಂಧೀಜಿಯವರು, ರಷ್ಯದ ಹಿರಿಯ ಲೇಖಕರಾದ ಲಿಯೊ ತೋಲ್‌ಸ್ತೋಯ್‌ರವರನ್ನೊಳಗೊಂಡು ಅನೇಕ ದೇಶಗಳ ಪ್ರಗತಿಗಾಮಿ ಜನರ ಗಮನ ಸೆಳೆದರು. ಆಗ ಗಾಂಧೀಜಿಯವರು ಇನ್ನೂ ದಕ್ಷಿಣ ಆಫ್ರಿಕೆಯಲ್ಲಿದ್ದುಕೊಂಡು ಭಾರತೀಯ ವಲಸಿಗರ ಮಾನವೀಯ ಹಕ್ಕುಗಳಿಗೂ, ವರ್ಣಭೇದದ ಕ್ರೂರ ದಬ್ಬಾಳಿಕೆಯ ವಿರುದ್ಧವೂ ಆಂದೋಳನ ನಡೆಸುತ್ತಿದ್ದರು. ಗಾಂಧೀಜಿಯವರು ೧೯೧೫ರಲ್ಲಿ ತಾಯ್ನಾಡಿಗೆ ಮರಳಿ ಇನ್ನೂ ಐದು ವರ್ಷಗಳು ಕಳೆದಿರಲಿಲ್ಲ, ಅವರ ಹೆಸರು ಭಾರತೀಯ ಜನರ ಸ್ವಾತಂತ್ರ್ಯ ಸಂಪಾದನೆಯ ದೃಢ ಸಂಕಲ್ಪದ ಹೆಸರಾಯಿತು. ಅವರ ನಾಯಕತ್ವದಲ್ಲಿಯ ಸತ್ಯಾಗ್ರಹ ಚಳವಳಿಗಳು ಮಹಾತ್ಮ ಎಂಬ ಹೆಸರನ್ನು ಅವರಿಗೆ ತಂದು ಜಗತ್ತಿನ ಪುರೋಗಾಮಿ ಸಾರ್ವಜನಿಕ ಅಭಿಪ್ರಾಯದ ಮೆಚ್ಚುಗೆಗೆ ಅವರು ಪಾತ್ರರಾದರು. ೧೯೨೪ರಷ್ಟು ಹಿಂದೆಯೇ ಮಹಾನ್ ಫ್ರೆಂಚ್ ಲೇಖಕರೂ ಮಾನವತಾವಾದಿಯೂ ಆದ ರೋಮೆ ರೋಲಾ ಅವರು ತಮ್ಮ ಸ್ಫೂರ್ತಿದಾಯಕ ಕೃತಿಯಿಂದ ಗಾಂಧೀಜಿಯವರ ಹೆಸರನ್ನು ಜಗದ್ವಿಖ್ಯಾತಗೊಳಿಸಿದ್ದರು.

ಭಾರತ ಸ್ವಾತಂತ್ರ್ಯ ಹೋರಾಟಗಾರರಾಗಿ ಗಾಂಧೀಜಿಯವರದು ಜನರಲ್ಲೂ, ಜನರ ಅಕ್ಷಯ ಕ್ರಿಯಾಶಕ್ತಿಯಲ್ಲೂ, ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆದೇ ತೀರುವಂಥ ಮಲಯುದ ಜನರ ವೀರ ಸಂಕಲ್ಪದಲ್ಲೂ ಅಚಲ ವಿಶ್ವಾಸ ತಳೆದಿದ್ದರು. ಸಾಮ್ರಾಜ್ಯಶಾಹೀ ವಿರೋಧೀ ಸಂಘರ್ಷದಲ್ಲಿ ಜನಸಮುದಾಯವೇ ನಿರ್ಣಾಯಕ ಪಾತ್ರವನ್ನಾಡಬಲ್ಲುದೆಂಬುದನ್ನು ತುಂಬ ಚೆನ್ನಾಗಿಯೇ ತಿಳಿದುಕೊಂಡಿದ್ದರು. ಗಾಂಧೀಜಿಯವರ ಎಲ್ಲ ರಾಜಕೀಯ ಚಟುವಟಿಕೆಗಳಲ್ಲೂ ಜನಸಮುದಾಯಗಳನ್ನು ತಮ್ಮ ದೇಶದ ಸ್ವಾತಂತ್ರ್ಯ ಸಂಘರ್ಷದಲ್ಲಿ ಏಕಪ್ರಕಾರವಾಗಿ ಸಂಘಟಿಸುತ್ತಿದ್ದುದೇ ಕಂಡು ಬರುತ್ತದೆ. ಈ ಕಾರಣದಿಂದಲೇ ಅವರು ತಮ್ಮ ಜೀವನ ಪರ್ಯಂತವೂ ಜನರ ಮಧ್ಯದಲ್ಲೇ ಇದ್ದರು, ದಣಿವರಿಯದೆ ಭಾರತದ ಹಳ್ಳಿ ಪಟ್ಟಣಗಳನ್ನು ಸುತ್ತಿದರು, ಸಹಸ್ರ ಸಹಸ್ರ ಸರಳ ಸಾಚಾ ಜನರ ಮಧ್ಯದಲ್ಲೇ ಪ್ರತ್ಯಕ್ಷವಾಗಿ ಸಾಗಿದರು, ರಾಷ್ಟ್ರೀಯ ವಿಮೋಚನಾ ಹೋರಾಟದ ಕಾರ್ಯಕ್ರಮಗಳನ್ನೂ ರೀತಿ ಬಗೆಗಳನ್ನೂ, ಸತ್ಯಾಗ್ರಹದ ಸೂತ್ರಗಳನ್ನೂ ವಿವರಿಸಿದರು.

ಜನತೆಯ ಐಕಮತ್ಯಕ್ಕಾಗಿ ಗಾಂಧಿಯವರು ವಸಾಹತು ಶಾಹಿಗಳು ಪ್ರೇರೇಪಿಸಿದ್ದ ಹಿಂದೂ—ಮುಸ್ಲಿಂ ಘರ್ಷಣೆಯನ್ನು ದೃಢವಾಗಿ ಖಂಡಿಸಿದರು. ಅವರು ಜಾತೀಯ ವ್ಯವಸ್ಥೆಯನ್ನು ವಿರೋಧಿಸಿದರು, ಅದರಲ್ಲೂ ಅಸ್ಪೃಶ್ಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಕಂಡು ತೀವ್ರರೀತಿಯಲ್ಲಿ ಕುಪಿತರಾಗಿದ್ದರು. ಅವರು ತಮ್ಮ ಜೀವನದ ಉದ್ದಕ್ಕೂ ಹರಿಜನರ ರಕ್ಷಕರಾಗಿದ್ದರು; ಮಿತ್ರರಾಗಿದ್ದರು ಮತ್ತು ನಾಯಕರಾಗಿದ್ದರು. ಮಹಿಳೆಯರ ಸಾಮಾಜಿಕ ವಿಮುಕ್ತಿಯನ್ನೂ, ಮಹಿಳೆಯರು ರಾಷ್ಟ್ರೀಯ ಸಂಘರ್ಷದಲ್ಲಿ ಭಾಗವಹಿಸುವುದನ್ನೂ ಗಾಂಧೀಜಿ ಪ್ರೋತ್ಸಾಹಿಸಿದರು. ಗ್ರಾಮೋದ್ಧಾರ, ಸ್ವಾವಲಂಬನೆಯ ಬಗ್ಗೆ ಒತ್ತಾಸೆ, ಖಾದೀ ಮತ್ತು ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನೆ ಮೊದಲಾದವು ಸಾಮ್ರಾಜ್ಯವಾದದ ವಿರೋಧಿ ಹೋರಾಟದಲ್ಲಿ ಜನರನ್ನು ಒಂದುಗೂಡಿಸುವಂಥ ಉದ್ದೇಶವನ್ನೇ ಹೊಂದಿದ್ದುವು. ಈ ಚಳವಳಿವು ರೈತರಲ್ಲೂ, ಕೈಕಸುಬುಗಾರರಲ್ಲೂ, ಕೂಲಿಕಾರರಲ್ಲೂ ಸ್ವಾಭಿಮಾನ ಮತ್ತು ಸ್ವಾವಲಂಬನೆ ಭಾವನೆಯನ್ನು ತುಂಬುತ್ತದೆಯೆಂದೂ, ಭಾರತದ ಭವ್ಯ ಭವಿಷ್ಯಕ್ಕೆ ಹೋರಾಡಲು ಅವರನ್ನು ಸಿದ್ಧಗೊಳಿಸುತ್ತದೆಯೆಂದೂ ಗಾಂಧೀಜಿ ನಿಶ್ಚಯವಾಗಿಯೆ ನಂಬಿದ್ದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. No. 131/1966.

ಯು. ಗೋಪಾಲ ಪೈ —ವಾದಿ

ಎದುರು

ಅಬ್ಬು ಹೆಂಗ್ಸು ಕೂಡಾ — ಪ್ರತಿವಾದಿರು

ಸಪ್ಲಿಮೆಂಟ್ ಪ್ರತಿವಾದಿರು:

3. ನಾಗಿ. 4, ಸೋಮು. 5. ಯಂಕ್ರು 6. ಕರಿಯ ಹೆಂಗ್ಸು— ಮೃತ 1ನೇ ಪ್ರತಿವಾದಿ ಅಬ್ಬು ಹೆಂಗ್ಸಿನ ಮಕ್ಕಳು. ಉಪ್ಪಿನಕುದ್ರು ಗ್ರಾಮದಲ್ಲಿರುವವರು —ಇವರಿಗೆ

ವಾದಿಗೆ ಪ್ರತಿವಾದಿರಿಂದ ಬರತಕ್ಕ ಕಳೆದ ಶುಭಕೃತು, ಶೋಭಕೃತು ಮತ್ತು ಕ್ರೋಧಿ ಸಂವತ್ಸರಗಳ ಚಾಲಗೇಣಿ ವಸೂಲಿ ಬಗ್ಗೆ ಹೂಡಿದ ಮೇಲಿನ ದಾವೆಯು 1967ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 28ನೇ ದಿನ ಪೂರ್ವಾಹ್ನ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ಆದುದರಿಂದ ಆ ಸಮಯ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಿಯಾಗಲೀ ಹಾಜರಾಗಿ ನಿಮ್ಮ ಉದಾಹರಣೆ ಇದ್ದರೆ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ವಿಚಾರಣೆ ನಡಿಸಿ ತೀರ್ಮಾನಿಸಲಾದೀತು ಎಂತ ಈ ಮೂಲಕ ನಿಮಗೆ ಕೋರ್ಟು ಅಪ್ಪಣೆ ಮೇರೆಗೆ ತಿಳಿಸಲಾಗಿದೆ. ತಿಳಿದಿರುವುದು.

K. R. Shanbhogue.

ವಾದಿಯ ಎಡ್ವೋಕೇಟ್

ಕುಂದಾಪುರ, 29—1—1967.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. 1002/1966

O. S. 747/1965

ಚಾರ್ಲ್ಸ ಜೋಕಿಮ ಪಿಂಟೋ —ಅರ್ಜಿದಾರ

ಗೋವಿಂದ ಯಾನೆ ಈಶ್ವರ ಶೆಟ್ಟಿಗಾರ, ಸೇಸು ಯಾನೆ ದೊಂಬ ಶೆಟ್ಟಿಗಾರನ ಮಗ, ಮಂಗಳೂರು ತಾಲ್ಲೂಕು ಕಿಲ್ಪಾಡಿ ಗ್ರಾಮದ ಕೆಂಚನಕೆರೆ ಎಂಬಲ್ಲಿರುವವ —ಎದುರು

ಎದುರಿಯಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ, ಸದ್ರಿ ದಾವೆಯಲ್ಲಿ ವಾದಿ ಗುಣಕ್ಕೆ ಆದ ಪ್ರಿಲಿಮಿನರಿ ಡಿಕ್ರಿಯನ್ನು absolute ಮಾಡಿ ಸ್ಥಿರಾಸ್ತಿ ಯೇಲಂ ಬಗ್ಗೆ ಅರ್ಜಿದಾರನ ಗುಣಕ್ಕೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖ್ಲು ಮಾಡಿದ ಸದ್ರಿ ಅರ್ಜಿಯು ತಾ. 14—2—67ಕ್ಕೆ ನಿಮಗೆ ಅಕ್ಷೇಪ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath.

Advocate for Petitioner.

Karkala, 30—1—67.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

16—2—1967

೨೦
ಪೈಸೆ

ಕಥಾ ಪ್ರಪಂಚ

ನಿರ್ಭಾಗ್ಯ

ಕಥೆಗಾರರು : ಶ್ರೀ ಸ. ನಾರಾಯಣ.

ಆಚಾರ್ಯರು ಎರಡು ಜಾತಕಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದರು. ಅವರು ಏನು ಹೇಳುವರೆಂಬುದನ್ನು ನಿರೀಕ್ಷಿಸುತ್ತಾ ಕುಳಿತಿದ್ದರು ವೇದಮ್ಮ. ಆಚಾರ್ಯರು ಗುಣಿಸಿ; ಬೆರಳುಗಳನ್ನು ಎಣಿಸಿ ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ನಿಟ್ಟುಸಿರು ಬಿಟ್ಟರು.

ವೇದಮ್ಮ ಕಾತುರತೆಯಿಂದ "ಜಾತಕ ಕೂಡಿ ಬರುವುದೇ ಆಚಾರ್ಯರೇ" ಎಂದರು.)

"ಗಂಡು ಮತ್ತು ಹೆಣ್ಣಿನ ಜಾತಕಕ್ಕೆ ಹೊಂದಾಣಿಕೆಯೇ ಇಲ್ಲ ತಾಯಿ. ನಿಮ್ಮ ಮಗಳಿಗೆ ಬೇರೆ ವರನನ್ನು ಹುಡುಕುವುದು ಒಳ್ಳೆಯದು" ಎಂದರು ಆಚಾರ್ಯರು.

'ಸರಿಯಾಗಿ ನೋಡಿ ಹೇಳಿ."

'ನನಗೆ ಎರಡು ಮಾತು ಹೇಳಿ ಅಭ್ಯಾಸವಿಲ್ಲಮ್ಮ."

"ಹಾಗಾದರೆ ನನ್ನ ತಮ್ಮನಿಗೆ .'

"ನಿಮ್ಮ ತಮ್ಮನ ಬಗ್ಗೆ ನಿಮಗೆ ಅಪಾರವಾದ ಪ್ರೀತಿ ವಿಶ್ವಾಸವಿದೆ. ಅದಕ್ಕಾಗಿ ಮಗಳನ್ನು ಧಾರೆ ಎರೆದು ಕೊಡಲು ಕಾತುರರಾಗಿದ್ದೀರಿ.... ಆದರೆ ಜಾತಕಗಳು ಕೂಡಿ ಬರುವುದಿಲ್ಲವಲ್ಲಮ್ಮ."

'ತುಂಬ ಆಸೆ ಇಟ್ಟುಕೊಂಡಿದ್ದೆನಲ್ಲ ಆಚಾರ್ಯರೇ.'

'ಋಣಾನುಬಂಧ ಬೇಕಲ್ಲ ತಾಯಿ' ಎಂದು ಆಚಾರ್ಯರು ಎರಡು ಜಾತಕಗಳನ್ನು ವೇದಮ್ಮನವರ ಮುಂದಕ್ಕಿಟ್ಟರು. ವೇದಮ್ಮ ಜಾತಕಗಳನ್ನು ಕೈಗೆತ್ತಿಕೊಂಡು ಆಚಾರ್ಯರಿಗೆ ನಮಸ್ಕರಿಸಿದರು.

ಆಚಾರ್ಯರು 'ದೀರ್ಘ ಸುಮಂಗಲೀ ಭವ" ಎಂದು ಆಶೀರ್ವದಿಸಿ— 'ನನ್ನದು ದಾಕ್ಷಿಣ್ಯದ ಪ್ರವೃತ್ತಿಯಲ್ಲ ತಾಯಿ. ಬಿಡಿಸಿ ಹೇಳಿದ್ದೇನೆ, ಬೇಸರ ಪಟ್ಟುಕೊಳ್ಳಬೇಡಿ, ನಿಮ್ಮ ಮಗಳಿಗೆ ಬೇರೆ ಗಂಡು ನೋಡಿ ಮದುವೆ ಮಾಡಿ. ಹಾಗೆಯೇ ನಿಮ್ಮ ತಮ್ಮನಿಗೆ ಬೇರೆ ಹೆಣ್ಣು ತಂದು ವಿವಾಹ ಮಾಡಿ' ಎಂದರು.

'ಬೇರೆ ದಾರಿಯೇ ಇಲ್ವಲ್ಲ' ಎಂದು ವೇದಮ್ಮ ಆಚಾರ್ಯರ ಅನುಮತಿ ಪಡೆದು ಮನೆಯ ದಾರಿ ಹಿಡಿದರು.

೨

ವೇದಮ್ಮ ಹೇಳುವುದನ್ನೆಲ್ಲಾ ಸಾವಕಾಶವಾಗಿ ಆಲಿಸಿದ ನಾರಾಯಣ ಸ್ವಾಮಿ 'ಈಗ ಏನು ಮಾಡೋಣ ವೇದ. ಲಕ್ಷ್ಮೀನ ಶ್ರೀಧರನಿಗೆ ಧಾರೆ ಎರೆದು ಕೊಟ್ಟರೆ ಮುಗಿಯಿತು ಅಂದುಕೊಂಡಿದ್ದೆವು. ಎಲ್ಲ ಏರುಪೇರಾಯ್ತು' ಎಂದರು.

"ಮುಂದೆ ಏನ್ಮಾಡೋದು ಹೇಳಿ'

'ದೇವರಿದ್ದಾನೆ ಕಣೆ "ಎಂದು ಹೆಂಡತಿಗೆ ವೇದಾಂತ ಉಪದೇಶಿಸಿದರು ನಾರಾಯಣ ಮೂರ್ತಿ.

ಶ್ರೀಧರ ವೇದಮ್ಮನವರ ಒಬ್ಬನೇ ತಮ್ಮ. ಶ್ರೀಧರ ಎಂಟು ವರ್ಷದವನಿರುವಾಗ ಅವನ ತಾಯಿ ಬಾರದ ಊರಿಗೆ ತೆರಳಿದರು. ಮರು-ಮದುವೆ ಮಾಡಿಕೊಂಡ ನಂತರ ವೇದಮ್ಮ ಮತ್ತು ಶ್ರೀಧರ ತಂದೆಯ ಸ್ಮೃತಿಯಿಂದ ಮರೆಯಾದರು.

ವೇದಮ್ಮ ನಾರಾಯಣ ಮೂರ್ತಿಯ ಕೈ ಹಿಡಿದು ಅವರ ಮನೆಸೇರಿದ ತರುವಾಯ ಶ್ರೀಧರನೂ ಅಕ್ಕನನ್ನು ಅನುಸರಿಸಿ ಬಂದ.

ಶ್ರೀಧರನ ಪಾಲಿಗೆ ಅಕ್ಕ ಭಾವ ತಾಯಿ ತಂದೆಯರಾದರು.

ಶ್ರೀಧರ ಎಂ ಎ ಪದವೀಧರನಾದ ತರುವಾಯ ಪ್ರಮುಖ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದ. ತನ್ನ ಪ್ರತಿಭೆ, ಸೌಜನ್ಯ, ಸ್ನೇಹಪೂರ್ಣ ನಡವಳಿಕೆಗಳಿಂದ ಕೆಲವರ್ಷಗಳಲ್ಲಿಯೇ ಕಂಪೆನಿಯ ಮ್ಯಾನೇಜರಾದ

"ಲಕ್ಷ್ಮಿ ಬಿ. ಎ. ಪದವೀಧರೆಯಾಗುವ ವರೆಗ ಅವಳ ವಿವಾಹದ ಯೋಚನೆ ಬೇಡವೆಂದು" ತಿಳಿಸಿದ್ದರು ನಾರಾಯಣ ಮೂರ್ತಿ.

ಗಂಡ ಹೆಂಡತಿಯರಿಬ್ಬರಿಗೂ ಲಕ್ಷ್ಮಿ ಶ್ರೀಧರನ ಮಡದಿಯಾಗಲಿ ಎಂಬ ಬಯಕೆ ಬಹಳವಾಗಿತ್ತು. ಕನಸು ಕಟ್ಟಿದ್ದರು. ಆದರೆ ಆಚಾರ್ಯರು ಜಾತಕಗಳನ್ನು ಪರೀಕ್ಷಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದಾಗ ಅವರ ಆಶಾಗೋಪುರ ಭಗ್ನವಾಗಿತ್ತು.

ಚಿಕ್ಕ ವಯಸ್ಸಿನಿಂದಲೂ ಒಟ್ಟಾಗಿ ಬೆಳೆದಿದ್ದುದರಿಂದ ಲಕ್ಷ್ಮಿ ಶ್ರೀಧರರಲ್ಲಿ ಯಾವ ಬಗೆಯ ಸಂಕೋಚಕ್ಕೂ ಅವಕಾಶವೇ ಇರಲಿಲ್ಲ ಇಬ್ಬರದೂ ಅನ್ಯೋನ್ಯ ಒಡನಾಟ. ಲಕ್ಷ್ಮಿಯಂತೂ ಅವನನ್ನು ಪೀಡಿಸುತ್ತಿದ್ದಳು.

ಶ್ರೀಧರನಿಗೆ ಸಮ ವಯಸ್ಸಿನ ಅಕ್ಕ-ತಂಗಿ, ಅಣ್ಣ-ತಮ್ಮ ಇಲ್ಲವಾದುದರಿಂದ ಲಕ್ಷ್ಮಿಯನ್ನು ತಂಗಿಯಂತೆ ಭಾವಿಸಿದ್ದ. ವಯಸ್ಸು ಬೆಳೆದು ಅವನ ಮನಸ್ಸು ದೊಡ್ಡದಾಗಿದ್ದರೂ ಎಂದೂ ಲಕ್ಷ್ಮಿಯನ್ನು ಕೆಟ್ಟ ದೃಷ್ಟಿಯಿಂದ ನೋಡಿರಲಿಲ್ಲ.

ಒಂದುದಿನ ತಮ್ಮ ಕೊಟ್ಟ ಉತ್ತರ ವೇದಮ್ಮನವರನ್ನು ಆಶ್ಚರ್ಯಗೊಳಿಸಿತ್ತು.

"ಶ್ರೀಧರ ನೀನು ಈಗಿನಿಂದಲೂ ಹಾಗೇ ಅವಳಿಗೆ ಸಲುಗೆ ಕೊಟ್ಟು ಬಿಟ್ಟರೆ ಮುಂದೆ ನಿನ್ನ ಮೂರಾಟೆ ಮಾಡಿ ಬಿಡುತ್ತಾಳೆ ಕಣೋ. ಗಂಡ ಎನ್ನುವ ಭಯ ಸ್ವಲ್ಪವೂ ಇಲ್ಲ"

"ಏನಕ್ಕಾ ನೀನು ಹೇಳೋದು"

"ಲಕ್ಷ್ಮಿ ನಿನ್ನ ಹೆಂಡತಿ ಆಗುವ ಹುಡುಗಿ ಕಣೋ. ನೀನು ಅವಳ ಗಂಡ"

"ಚೆನ್ನಾಗಿದೆಯಕ್ಕಾ ನಿನ್ನ ಯೋಚನೆ. ಲಕ್ಷ್ಮಿನ ಖರ್ಚಿಲ್ಲದೆ ಮದುವೆ ಮಾಡಬೇಕು ಅನ್ಕೊತ್ತೀಯಾ.... ನಾನಂತೂ ಅವಳನ್ನು ಖಂಡಿತ ಮದುವೆಯಾಗೋಲ್ಲ"

"ಅದ್ಯಾಕೋ ಅವಳು ಕುಂಟೆನ, ಕುರುಡೀನೇ, ರೂಪ ಇಲ್ವೆ, ಗುಣ ಇಲ್ವೆ"

"ಎಲ್ಲ ಇದೆ ನನಗ ಒಪ್ಪಿಗೆ ಇಲ್ಲ"

"ಅದೇಕೋ?"

"ನಾನು ಅವಳನ್ನು ಎತ್ತಿ ಆಡಿಸಿದ್ದೇನೆ. ಅವಳು ನನ್ನ ತಂಗಿಯೆಂದು ಭಾವಿಸಿದ್ದೇನೆ...ಇಂದಿಗೂ ನಾನು ಒಂದು ದಿನವೂ ಅವಳನ್ನ ಹೆಣ್ಣು ಎನ್ನುವ ದೃಷ್ಟಿಯಿಂದ ನೋಡಿಲ್ಲ. ನೀನು ಒಡಹುಟ್ಟಿದ ಅಕ್ಕ ಅವಳು ತಂಗಿ" ಎಂದ ಶ್ರೀಧರ.

ವೇದಮ್ಮ ಗರ ಬಡಿದವರಂತೆ ಕುಳಿತಿದ್ದರು.

"ಶ್ರೀಧರ ಹೇಳಿದ ಮಾತು ನಿಜ ಕಣಮ್ಮ" ಎಂದಳು ಲಕ್ಷ್ಮಿ.

'ಸಾರ್ಥಕವಾಯ್ತಮ್ಮ" ಎಂದು ವೇದಮ್ಮ ಕುಳಿತಲ್ಲಿಂದ ಎದ್ದರು.

೩

ನಾರಾಯಣ ಮೂರ್ತಿ ಮಗಳಿಗೆ ಗಂಡು ಹುಡುಕಲು ಮುಂದಾದರು. ಎಲ್ಲ ಪ್ರಯತ್ನಗಳೂ ಒಂದೊಂದು ವಿಧದಲ್ಲಿ ವಿಫಲವಾಗುತ್ತಾ ಬಂದವು

ಲಕ್ಷ್ಮಿಯ ಮದುವೆ ನಾರಾಯಣ ಮೂರ್ತಿ ವೇದಮ್ಮನವರಿಗೆ ದೊಡ್ಡ ಸಮಸ್ಯೆಯಾಯಿತು.

ಜೀವನದಲ್ಲಿ ಒಮ್ಮೆಯೂ ಮಗನನ್ನು ನೋಡಬಯಸದ ಶ್ರೀಧರನ ತಂದೆ ತಾವಾಗಿಯೇ ಮಗನ ಬಳಿಗೆ ಬಂದರು. ತಂದೆ ಬಂದ ಉದ್ದೇಶ್ಯ ವೇದಮ್ಮನವರಿಗೆ ಮೊದಲೇ ತಿಳಿದಿತ್ತು.

ಶ್ರೀಧರನಿಗೆ ತಮ್ಮೆಲ್ಲ ಸಂಗತಿಯನ್ನು ತಿಳಿಸಿದ ಅವನ ತಂದೆ ತಾವು ಬಂದ ಉದ್ದೇಶ್ಯವನ್ನು ತಿಳಿಸಿದರು.

'ನಾನು ಕಂಪೆನಿ ಮ್ಯಾನೇಜರಷ್ಟೆ, ಮಾಲೀಕನಲ್ಲ' ಎಂದ ಶ್ರೀಧರ.

'ಈ ಹುಡುಗನ ಬಾಳು ಹಾಳಾಗಬಾರದು ಅಲ್ಲದೆ ಸಮೀಪದ ಬಂಧು ಬೇರೆ ಅವನನ್ನು ಈ ಸಂದರ್ಭದಲ್ಲಿ ಕೈಹಿಡಿದು ಕಾಪಾಡಲೇ ಬೇಕು. ಬ್ಯಾಂಕಿನವರು ಅವನನ್ನು ಹಿಡಿದು ಜೈಲಿಗೆ ಕಳುಹಿಸುವ ಮುಂಚೆ ಹಣಕಟ್ಟಿ ಅವನನ್ನು ಪಾರು ಮಾಡಿದ್ದೇನೆ. ನೀನು ಅವನಿಗೆ ಕೆಲಸಕೊಡಿಸಿ ಅವನಿಗೆ ಬದುಕುವ ಹಾದಿ ತೋರಿಸು" ಎಂದರು.

"ಪ್ರಯತ್ನಿಸುತ್ತೇನೆ" ಎಂದ ಶ್ರೀಧರ.

"ನೀನು ಹೀಗ ಕೀರ್ತಿ ಗಳಿಸಿದ್ದು ಸಂತೋಷ ಶ್ರೀಧರ. ನೀನು ವೇದ ಸುಖವಾಗಿರುವುದನ್ನು ಕಂಡು ಆನಂದವಾಯ್ತು. ಬದುಕಿನುದಕ್ಕೂ ಸಾರ್ಥಕ... ನಿಮ್ಮಮ್ಮ ಬದುಕಿದ್ದಿದ್ದರೆ ಎಷ್ಟು ಆನಂದಿಸುತ್ತಿದ್ದಳೋ...." ಎಂದು ವಾತ್ಸಲ್ಯಧಾರೆ ಹರಿಸಿದರು ಅವನ ತಂದೆ.

ವೇಣು ಶ್ರೀಧರನ ತಂದೆಯ ಮೈದುನ. ಬ್ಯಾಂಕೊಂದರಲ್ಲಿ ನೌಕರನಾಗಿದ್ದ. ಹಣ ದುರುಪಯೋಗ ಪಡಿಸಿಕೊಂಡು ಜೈಲು ಸೇರುವ ಗತಿ ಬಂದಾಗ ಅವನ ಭಾವ ಅವನನ್ನು ರಕ್ಷಿಸಿದರು. ಅನ್ನದ ದಾರಿ ಹುಡುಕುತ್ತಾ ಬಂದ.

ಶ್ರೀಧರನ ಸೂಚನೆಯಂತೆ ವೇಣುವಿಗೆ ಕಂಪೆನಿಯಲ್ಲಿ ಕೆಲಸ ದೊರೆಯಿತು.

ವೇಣುವಿನದು ಸ್ಥಿಮಿತವಾದ ಮನಸಲ್ಲ. ಹತ್ತು ಕಡೆಗೆ ಹರಿದು ಹಂಚಿತ್ತು ಅವನ ಚಿತ್ತ. ಆಸೆ, ಮುಂಗೋಪ ಹೇರಳವಾಗಿಯೇ ಇದ್ದುವು. ಬೇರೆಯವರ ಹೊಗಳಿಕೆಗೆ ಹಿಗ್ಗಿ ಮೆರೆಯುತ್ತಿದ್ದ ವೇಣು ಕೆಲವು ಬಾರಿ ವಿವೇಕಶೂನ್ಯನಂತೆಯೂ ವರ್ತಿಸುತ್ತಿದ್ದ.

ವೇಣು ಶ್ರೀಧರನ ಗೆಳೆತನವನ್ನು ವಿಶೇಷವಾಗಿ ಬಯಸುತ್ತಿದ್ದ. ಅವನಗುಣವನ್ನು ಅರಿತಿದ್ದ ಶ್ರೀಧರ ದೂರವಾಗಿಯೇ ಇದ್ದ. ಕ್ರಮೇಣ ವೇಣುವಿನ ನಡತೆ, ಗುಣ ಬದಲಾಯಿತು. ವಿಧೇಯತೆ ಮತ್ತು ಆನ್ಯೋನ್ಯತೆಯಿಂದ ವರ್ತಿಸುತ್ತಿದ್ದ. ಶ್ರೀಧರ ತಾನಾಗಿಯೇ ಸ್ನೇಹಹಸ್ತ ನೀಡಿದ.

ವೇಣು ಶ್ರೀಧರನನ್ನು ಹುಡುಕಿಕೊಂಡು ಮನೆಗೆ ಬರುವುದು ವಿಶೇಷವಾಯಿತು. ವೇಣುವಿನ ಹೃದಯ ಶ್ರೀಧರನಿಗಿಂತಲೂ ಅವನ ಅಕ್ಕನ ಮಗಳು ಲಕ್ಷ್ಮಿಯ ಕಾಣಲು ಸದಾ ಬಯಸುತ್ತಿತ್ತು.

ವೇಣುವಿನ ಅಂತರಂಗದ ಭಾವನೆ, ಆಸೆ ಮನೆಯವರಿಗೆ ತಿಳಿಯಲು ತಡವಾಗಲಿಲ್ಲ. ಲಕ್ಷ್ಮಿ ವೇಣುವನ್ನು ಕಂಡಾಗ ನಾಚಿ ನಿಲ್ಲುತ್ತಿದ್ದಳು. ಅವಳ ಮುಖ ಕೆಂಪಾಗುತ್ತಿತ್ತು.

'ಅಕ್ಕಾ ಸಮುಹೂರ್ತ ಸಾವಧಾನ'

'ಏನೋ ಹಾಗಂದ್ರೆ..."

'ಲಕ್ಷ್ಮಿಗೆ ಗಂಡು ನೋಡಿದ್ದೇನೆ..."

"ನೀನಿನ್ನು ಹುಡುಗಾಟ ಬಿಡಲಿಲ್ಲವಲ್ಲೋ ಶ್ರೀಧರ, ಲಕ್ಷ್ಮಿಗೆ ತಕ್ಕ ಗಂಡು

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಫೋನ್ ೧೧ ಕುಂದಾಪುರ, ದ. ಕ

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಸಂದರ್ಭದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಬಲ್ಗೇರಿಯಾದ ಅಭಿನಯ ಪ್ರಧಾನವಾದ ಥ್ರಾಸಿಯನ್ ಜಾನಪದ ನೃತ್ಯ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೫	೧೬—೨—೧೯೬೭	No. 25

ವಚನ ಸುಧೆ

ರಥಃ ಶರೀರಂ ಪುರುಷಸ್ಯ ರಾಜ—
ನ್ನಾತ್ಮಾ ನಿಯಂತೇಂದ್ರಿಯಾಣ್ಯಸ್ಯ ಚಾಶ್ವಾಃ।
ತೈರಪ್ರಮತ್ತಃ ಕುಶಲೀ ಸದಶ್ವೈ
ರ್ದಾಂತೈಃ ಸುಖಂ ಯಾತಿ ರಥೀವ ಧೀರಃ॥

ಮಾನವ ಶರೀರವೊಂದು ರಥ. ಅದರ ಸಾರಥಿ ಬುದ್ಧಿ, ಇಂದ್ರಿಯಗಳೇ ಕುದುರೆಗಳು. ಇವನ್ನು ವಶದಲ್ಲಿಟ್ಟುಕೊಳ್ಳಬಲ್ಲ ಚತುರ ಮತ್ತು ಧೀರನು ಮಾತ್ರ ರಥಿಕನಂತೆ ಸುಖಪೂರ್ವಕ ಯಾತ್ರೆ ಮಾಡಬಲ್ಲನು.

ಚುನಾವಣೆಯ ಮಾರುದಿನ....

ಮೂರು ಚುನಾವಣೆಗಳ ವೇಳೆ ಸಂಯಮವನ್ನು ಸಂರಕ್ಷಿಸಿಕೊಂಡು ಬಂದ ಭಾರತೀಯರು ನಾಲ್ಕನೆಯ ಬಾರಿಗೆ ತುಸು ಅಸಮಾಧಾನವನ್ನು ವ್ಯಕ್ತಪಡಿಸಿರುವುದು ಇಡಿಯ ದೇಶವನ್ನೂ ನಮ್ಮ ಪ್ರಜಾಸತ್ತೆಯ ಪಂಚಾಂಗವನ್ನೂ ಅಲುಗಾಡಿಸಿ ತುಸು ಗೊಂದಲಕ್ಕೆ ಕಾರಣವಾಗಿದೆ. ಕೇಂದ್ರದಲ್ಲೂ ರಾಜ್ಯಗಳಲ್ಲೂ ಶಾಸನ ಸೂತ್ರ ಹಿಡಿದಿರುವ ಕಾಂಗ್ರೆಸ್‌ನ ಆಡಳಿತೆಯಿಂದ ನೊಂದವರು ಎಂದು ಹೇಳಿಕೊಳ್ಳುವ ಕೆಲವರು ಅದನ್ನು ಅಧಿಕಾರದಿಂದ ಕಿತ್ತೊಗೆಯಲು ಶತ ಪ್ರಯತ್ನ ಮಾಡಿದರು— ಸಂಯುಕ್ತರಂಗ ರಚಿಸಿಕೊಂಡರು. ವಿವಿಧ ರಾಜಕೀಯ ಪಕ್ಷಗಳ ಅಥವಾ ವ್ಯಕ್ತಿಗಳ ಅಭಿಪ್ರಾಯ—ಧ್ಯೇಯ, ಗುರಿ ಸಾಧನೆಯ ಮಾರ್ಗ, ಮೊದಲಾದುವುಗಳಲ್ಲಿ ಯಾವುದೇ ಭಿನ್ನತೆಯಿದ್ದರೂ ಕಾಂಗ್ರೆಸನ್ನು ಸೋಲಿಸುವ 'ಸಾಮಾನ್ಯ ನೀತಿ'ಯಿಂದ ಅವರು ಒಂದಾಗಿ ಹೋರಾಟವೆತ್ತಿದ್ದಾರೆ. ಅವರ ಈ ಬಗೆಯ ಸಂಯುಕ್ತ ಹೋರಾಟದ ಪರಿಣಾಮ ಕಾದು ನೋಡಬೇಕು. ಆದರೂ ಸಂಯುಕ್ತ ರಂಗ ರಚಿಸಿಕೊಳ್ಳುವಲ್ಲಿಯೂ ಅದರ ಹುರಿಯಾಳುಗಳನ್ನು ಆರಿಸುವುದರಲ್ಲಿಯೂ ಭಿನ್ನಾಭಿಪ್ರಾಯ ತಲೆದೋರಿತ್ತು. ಇದೀಗ ಅದು ಶಾಂತವಾದರೂ ಫಲಿತಾಂಶ ಪ್ರಕಟಣೆಯ ನಂತರದ ಪರಿಸ್ಥಿತಿಗಳಿಂದ ಇದು ಮತ್ತೆ ಉಲ್ಬಣಿಸುವ ಸಂಭವವೇ ಹೆಚ್ಚು.

ಈ ಬಾರಿಯ ಪ್ರಚಾರ ವೈಖರಿ ವಿಲಕ್ಷಣವಾದುದು. ಸಾಮೂಹಿಕ ಸಭೆ—ಸಮಾರಂಭ, ಭಾಷಣಗಳ ಜಡಿಮಳೆ ತೀರ ಕಡಿಮೆ. ಕೆಲವೆಡೆ ಏರ್ಪಟ್ಟ ಮಾತಿನ ಮಳೆಯು ಕಲ್ಲು—ಚಪ್ಪಲಿ—ಗುಂಡುಗಳ ಮಳೆಯಾಗಿ ಪರಿಣಮಿಸಿದುದು ದುರ್ದೈವ, ಶೋಚನೀಯ—ಅನಪೇಕ್ಷಣೀಯ ಕೂಡ. ಇದಕ್ಕೇನು ಕಾರಣವೆಂಬುದನ್ನು ಗಂಭೀರವಾಗಿ ಪರಿಶೀಲಿಸುವುದು ಅಗತ್ಯ. ಇದುವರೆಗೆ ಮಾತಿಗೆ ಮರುಳಾಗಿಯೇ ಜನತೆ ಮತದಾನ ಮಾಡುತಿತ್ತೆ? ಅಥವಾ ಪಕ್ಷದಮೇಲಿನ ನಿಷ್ಠೆ ಮತ್ತು ವಿಶ್ವಾಸದಿಂದ ಮತದಾನ ಮಾಡುತಿತ್ತೆ? ಮೊದಲನೆಯ ಕಾರಣವಾದರೆ, ನಮ್ಮ ನಾಯಕರಲ್ಲಿ ಎಲ್ಲರನ್ನು ಮರುಳುಮಾಡುವಂತೆ ಮಾತನಾಡಬಲ್ಲವರು ಈ ಬಾರಿ ಕಡಿಮೆಯಾಗಿದ್ದಾರೆಯೆ? ಎರಡನೆಯದರೆ, ಪಕ್ಷನಿಷ್ಠೆ ಕಡಿಮೆಯಾಗಲು ಕಾರಣವೇನು? ಇದು ಪರ್ಯಾಲೋಚನಾರ್ಹವಾದುದು. ನುಡಿದಂತೆ ನಡೆಯುವ ನಾಯಕರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದನ್ನು ಒಪ್ಪಬೇಕು. ಕಳೆದ ಮೂರು ಸಾರ್ವತ್ರಿಕ ಚುನಾವಣೆಗಳ ಕಾಲದಲ್ಲಿಯೂ ಕಾಂಗ್ರೆಸ್ಸು ಜನತೆಗೆ ನೀಡಿದ ಕೆಲವೊಂದು ಆಶ್ವಾಸನೆಗಳು ಇನ್ನೂ ಕಾರ್ಯಾಚರಣೆಗಿಳಿಯಲಿಲ್ಲ; ನಿಜ ಆಡಳಿತಗಾರರು ಹಲವು ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ—ಅವರ ಕಲ್ಪನೆಯು ಕಾರ್ಯರೂಪಕ್ಕೆ ಬರುವಾಗ ಅದು ತಲೆ ಕೆಳಗಾಗುತ್ತದೆ— ಇದು ಸ್ವಲ್ಪ ಮಟ್ಟಿಗೆ ಒಪ್ಪಬಹುದಾದುದಾದರೂ ಜನತೆಯ ಅತೃಪ್ತಿಗೆ ಸರಕಾರಗಳ ನೀತಿಗಳು ಕೆಲವೊಮ್ಮೆ ತಲೆಕೆಳಗು ವ್ಯಾಪಾರವಾಗುತ್ತಿರುವುದೇ ಕಾರಣ. ಸರಕಾರದ ನೀತಿಯಲ್ಲಿ ಸ್ಥಿರತೆಯೆಂಬುದೇ ಇಲ್ಲ—ಇದು ಜನತೆಯ ಸಾಮಾನ್ಯಾಭಿಪ್ರಾಯ. ಇಂತಹ ಪರಿಸ್ಥಿತಿಯಲ್ಲಿಯೂ ಕಾಂಗ್ರೆಸ್ಸು ಬಹುಮತ ಗಳಿಸಿ ಸರಕಾರ ರಚಿಸಬಹುದು; ಅದು ಐದು ವರ್ಷಗಳ ಕಾಲ ಬದುಕಲೂ ಬಹುದು. ಆದರೆ, ಅದು ಸ್ಥಿರ ನೀತಿಯನ್ನನುಸರಿಸುವುದೆಂಬ ಧೈರ್ಯವಿಲ್ಲ. ಹಾಗಾಗಿ ಕಾಂಗ್ರೆಸ್ ವಿರೋಧಿಗಳಿಗೆ ಅನುಕೂಲ ವಾತಾವರಣವೇರ್ಪಟ್ಟಿತು. ಬದಲಾವಣೆ ಬೇಕೆಂದು ಅವರು ವಾದಿಸುವಾಗ ಯಾಕಾಗಬಾರದು ಎಂದೂ ಜನ ಯೋಚಿಸುವುದು ಅಸ್ವಾಭಾವಿಕವಲ್ಲ. ಕಾಂಗ್ರೆಸ್ ಮೇಲಿರುವ, ಅದರ ಸೂತ್ರಧಾರರ ಮೇಲಿನ ವೈಯಕ್ತಿಕ ಅಸಮಾಧಾನವನ್ನು ತೋರ್ಪಡಿಸಲು ಇರುವ ಸಾಧನ—ಚುನಾವಣೆ! ಜನ ತಮಗೆ ಬೇಕಾದವರನ್ನು ಆರಿಸಲು ಸ್ವತಂತ್ರವಿದೆ. ಚುನಾವಣೆಗಳು ಶಾಂತ ರೀತಿಯಲ್ಲಿ ನಡೆದು, ಜನ ಸ್ವತಂತ್ರವಾಗಿ ಮತ ಚಲಾಯಿಸಲು ಅನುಕೂಲವಾತಾವರಣವನ್ನುಂಟು ಮಾಡುವ ಸಭ್ಯದಾರಿಯನ್ನು ಬಿಟ್ಟು ಪ್ರದರ್ಶನ—ಗುಲ್ಲ—ಗಲಬೆ—ಕಲ್ಲು ಸುರಿಮಳೆ ಮೊದಲಾದ ಅಸಭ್ಯ ವಿಧಾನಗಳನ್ನೂ ನಾವು ಈ ಬಾರಿ ಉಪಯೋಗಿಸಿಕೊಂಡೆವು. ಗಾಡಿ ಎಳೆಯಲಾರದ ಹೋರಿ ಮಣಿಯ ಮೇಲೆ ಬೀಳುವಂತೆ ಚುನಾವಣೆಗಳಲ್ಲಿ ಜಯಗಳಿಸಲಾರದ ಕೆಲ ಹೇಡಿಗಳು ಇಂತ ವಾಮಮಾರ್ಗವನ್ನೂ ಅನುಸರಿಸಿದರು— ಇದು ನಮಗೆ— ಭಾರತೀಯರಿಗೊಂದು ಕಳಂಕ. ಇಂತಹ ಕೆಲವು ಘಟನೆಗಳನ್ನು ಎತ್ತಿಕೊಂಡು 'ಲಂಡನ್ ಟಾಯಿಮ್ಸ್' ಪತ್ರಿಕೆ ಭಾರತೀಯರು ಪ್ರಜಾಪ್ರಭುತ್ವದ ಆಡಳಿತೆಗೆ ಅನರ್ಹರು ಎಂಬ ರೀತಿಯಲ್ಲಿ ಅಗ್ರಲೇಖನ ಬರೆವಷ್ಟು ಮುಂದುವರಿದಿದೆ - ಜಾಗತಿಕ ಸ್ಥಾನಮಾನವಿರುವ ಈ ಪತ್ರಿಕೆಯ ಈ ಬಗೆಯ ಅಪಪ್ರಚಾರದ ಪರಿಣಾಮ ವಿದೇಶಗಳಲ್ಲಿಯೂ ಆಗದುಳಿದೀತೆ? ಗೊಂದಲಗಾರರು ಕುಚೇಷ್ಟೆಗೆಂದು ವಾಮಪಂಥಿಯರಾಗಿರಬಹುದು. ಆದರೆ, ಅದರ ಪರಿಣಾಮ? ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಭಾರತದ ಪ್ರಧಾನ ಮಂತ್ರಿಯೂ ಆ ಕಲ್ಲೇಟಿಗೆ ಗುರಿಯಾದಾಗ ನಮ್ಮ ಸಭ್ಯತೆ, ನಾಗರಿಕತೆಯೆಲ್ಲ ನೀರಲ್ಲಿ ತೊಳೆದ ಹುಣಸೆ ಹಣ್ಣಾಗಲಿಲ್ಲವೆ? ಇದನ್ನು ಲಕ್ಷಿಸಬೇಕು. ಶಾಂತಿ— ಸಮಾಧಾನ— ಸಂಯಮಗಳೇ ಚುನಾವಣೆಗಳ ಬೀಜಮಂತ್ರವಾಗಬೇಕು.

ಚುನಾವಣೆಗಳು ಕೆಲವೆಡೆ ಮುಗಿದುವು; ಕೆಲವೆಡೆ ಮುಗಿಯುತ್ತಿವೆ— ಕೆಲವೇ ದಿನಗಳಲ್ಲಿ ಫಲಿತಾಂಶಗಳ ಪ್ರಕಟಣೆಯಾಗುತ್ತದೆ. ಏನು ಹೇಗೆ ಎಂಬ ರಾಜಕೀಯ ಭವಿಷ್ಯವಾದಿಗಳ ಭವಿಷ್ಯವನ್ನೇ ನಡೆಯಗೊಡದೆ ಅನಿರೀಕ್ಷಿತ ಪರಿಣಾಮಗಳು ಈ ಬಾರಿ ದೊರೆಯುವುವು. ಒಟ್ಟಿನಲ್ಲಿ ಆಳುವ ಪಕ್ಷ ಎಲ್ಲ ರಾಜ್ಯಗಳಲ್ಲೂ ಬಹುಮತ ಪಡೆಯಬಹುದು; ಒಂದೆರಡು ಕೈ ಜಾರುವುದೂ ಅಸಂಭವವಲ್ಲ. ರಾಜಾಜಿ ಹೇಳಿರುವಂತೆ ಬಹುಮತ ಪಡೆವಲ್ಲಿ ಸರಕಾರ ರಚಿಸುವಲ್ಲಿ ಪ್ರತಿನಿಧಿಗಳು ಅಸಮರ್ಥರಾದರೆ, ಮುಂದಿನ ಕ್ರಮ ಚಿಂತಿಸಲು ರಾಷ್ಟ್ರಪತಿಗಳಿದ್ದಾರೆ. ಅಂದರೆ, ಜನ ಕಣ್ಣು ಮುಚ್ಚಿ ಮತಕೊಡಬೇಕು, ಒಂದು ವೇಳೆ ಅದರಿಂದ ಅನಾಹುತ ಸಂಭವಿಸಿದರೆ, ರಾಷ್ಟ್ರಪತಿಗಳು ನೆರವಿಗಿದ್ದಾರೆ. ಸವ್ಯಸಾಚಿ ಅರ್ಜುನನ ನೆರವಿಗೆ ಕೃಷ್ಣ ಬರುತಿದ್ದಂತೆ—ಹಾಗೆ. ಇಂತಹ ದುರವಸ್ಥೆ ಕೆಲವೆಡೆ ತಲೆದೋರಲೂಬಹುದು. ಅದೇನೇ ಇರಲಿ, ಈ ಬಾರಿಯ ಚುನಾವಣಾ ವೇಳೆಯ ಕ್ರಿಯೆ—ಪ್ರತಿಕ್ರಿಯೆಗಳಿಂದ ನಮ್ಮ ರಾಜಕೀಯ ನೇತಾರರು — ಮುಖ್ಯವಾಗಿ ಕಾಂಗ್ರೆಸಿಗರು ಒಂದು ಮಾತನ್ನು ಅವಶ್ಯ ಗಮನಿಸಬೇಕು— ಈ ನಾಯಕೋತ್ತಮರು ಸಹಜವಾಗಿಯೋ ಕೋಪೋದ್ರಿಕ್ತರಾಗಿಯೋ, ಚಟಾಸಕ್ತರಾಗಿಯೋ ಯದ್ವಾತದ್ವಾ ಮಾತಾಡುತ್ತಾರೆ. ಇಂತಹ ಮಾತುಗಳಿಂದ ರೋಸಿಹೋದ ಜನತೆಯಿಂದು ಕೃತಿಯನ್ನೇ ಬಯಸುತ್ತದೆ. ಮಾತಿನ ಮಲ್ಲರ ಬದಲು ಕೃತಿಶೀಲರು ಯಾರಾದರೂ ದೊರೆತಾ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ

"ನನ್ನೊಬ್ಬನ ಓಟಿನಿಂದಾಗಿ ತಾವು ಗೆಲ್ಲೋದೂ ಬೇಡ, ನಾನು ಓಟು ಕೊಡೋದೂ ಇಲ್ಲ..."

ಗೇಹ ರಾಜ್ಯದಲ್ಲಿ

ಪಕ್ಷ ಕಟ್ಟೋಕೆ ನೀತಿ ಬೇಕೆ?

"ಏ, ಏನೇ ಇದು? ಗರ ಹೊಡೆದವ ರ್ಹಾಗೆ ಭಿಮ್ಮನೆ ಕೂತಿದ್ದೀಯೊ?'

"ಏನೂ ಇಲ್ಲಾನ್ರಿ. ಆದ್ರೂ ನನ್ನ ತಲೆಯಲ್ಲಿ ಒಂದೇ ವಿಚಾರ ಸುಳೀತಾ ಇದೆ...'

"ಅದು ನಿನ್ನ ಮುಖಾವಲೋಕನದಿಂದ್ಲೇ ತಿಳಿಯುತ್ತೆ ಬಿಡು. ಆದ್ರೂ ಅದ್ಯಾವ ಯೋಚನೇಂತ....ತಿಳೀಬಹುದೆ?"

"ತಿಳಿದುಕೊಳ್ಳಬಾರದಂಥ ರಹಸ್ಯವೇನಿದೆ ಅದ್ರಲ್ಲಿ? ಮತ್ತೇಂಥದು? ಈ ಬಾರಿಯ ಚುನಾವಣೆಗಳು ನಡೆದವ್ವೂನ್ರಿ. ಯಾರು ಗೆಲ್ಲಬಹುದೂಂತ?'

"ನಂದಾರಾಯರ ಸಂಪತ್ತು ನೂರು ಪಾಲೂಂತ ಅಂತಾರಲ್ಲಾ? ಹಾಗೆ ಕಾಂಗ್ರೆಸ್ ವಿರೋಧಿಗಳ ಮತ ಹರಿಹಂಚಿ ಹೋಗುವುದು ಖಂಡಿತ...."

"ಅಂದ್ರೆ, ಕಾಂಗ್ರೆಸ್ಸು ಪ್ರಚಂಡ ಜಯಭೇರಿ ಬಾರಿಸುತ್ತೆ ಅಂತ ತಾನೇ ನೀವ ನ್ನೋದು?"

'ಪ್ರಚಂಡವಲ್ಲದೆ ಹೋದರೂ ಭೇರಿ ಬಾರಿಸೋದಂತೂ ಖಂಡಿತ....'

"ಅಯ್ಯೋ, ಭೇರಿ ಕಾಂಗ್ರೆಸ್ಸೊಂತೇನು ಎಲ್ಲರೂ ಬಾರಿಸುತ್ತಾರೆ. ಅದ್ರಲ್ಲಿ ವಿಶೇಷವೇನೂಂತ?'

"ತಪ್ಪಿದೆ.....ಕಾಂಗ್ರೆಸ್ಸು ಜಯಭೇರಿ ಬಾರಿಸುತ್ತೆ; ಉಳಿದವ್ರು ಬರಿಯ ಬೇರಿ ಬಾರಿಸುತ್ತಾರೆ..."

'ಹ್ಞಾಂ....ನಿಮಗಂತೂ ಅಷ್ಟು ವಿಶ್ವಾಸ.'

'ನನಗೆ ಅಂತ ಏನು? ಎಲ್ಲಿಯ ವರೆಗೆ ಸರಕಾರ ರಚಿಸಬಲ್ಲ ಒಂದು ವಿರೋಧ ಪಕ್ಷ ಬೆಳೆಯುವುದಿಲ್ಲವೋ ಅಲ್ಲಿಯ ವರೆಗೆ ಭಾರತಕ್ಕೆ ಒಂದು ಪಕ್ಷವೇ ಗತಿ."

'ಅಂದ್ರೆ ವಿರೋಧೀ ಪಕ್ಷ ಬೆಳೆದು ಬರಬೇಕೂಂತ ಅಂದ ಹಾಗಾಯ್ತು...."

'ಹ್ಞಾಂ....ಸರಿಯೇ..."

'ನೋಡಿ,ಮೊನ್ನೆ ನಮ್ಮ ಶೋಭಮ್ಮ ಬಂದಿದ್ರು. ಅದೆಂತದು ತಕ್ಕಡಿಯೋ ಮನೆಯೋ ಅವ್ರ ಗುರ್ತ ಅಂತ......ಅವ್ರು ಒಂದು ಕಥೆ ಹೇಳಿದ್ರು....'

'ಹ್ಞಾಂ....ಏನಂತ?'

'ಹೀಗೇ ಕೆನ್ನಾಪಿಗೆ ಹೋದಾಗ ಒಬ್ರು ಅಂದ್ರಂತೆ—ದೇಶದಲ್ಲಿ ವಿರೋಧೀ ಪಕ್ಷ ಬೆಳೆಯ ಬೇಕೂಂತ...'

'ಸರಿಯೇ. ನ್ಯಾಯವಾದುದನ್ನೇ ಅಂದ್ರೂನ್ನು....'

'ಆಗ ಇವ್ರು ಹೇಳಿದ್ರಂತ—ಹೌದು ಸ್ವಾಮೀ, ಅದಕ್ಕಾಗಿ ನಮಗೇ ಓಟು ಕೊಡಿ ಅಂತ...'

'ಮತ್ತೆ?'

'ಆಗ ಅವ್ರು ಅಂದ್ರಂತೆ—ಅದು ಹೇಗೆ ಸಾಧ್ಯ? ನಾವಂತೂ ಕಾಂಗ್ರೆಸ್ಸು...'

'ಹ್ಞಾಂ.... ಇದ್ರಲ್ಲಿ ಏನು ವಿಶೇಷ?'

'ವಿಶೇಷವಿಷ್ಟೆ. ಎಲ್ಲರೂ ಹೇಳುವುದು ಒಂದೇ ಮಾತು. ವಿರೋಧಿ ಪಕ್ಷ ಬೆಳೆಯಬೇಕೆಂನೋ ನಿಜ; ಆದ್ರೆ ನಾವು ಮಾತ್ರ ಕಾಂಗ್ರೆಸ್ಸು ಅನ್ನೋ ವಿಚಾರ. ಹೀಗಿರುವಾಗ ಎಲ್ಲರೂ ಕಾಂಗ್ರೆಸ್ಸಾದ್ರೆ ವಿರೋಧಿ ಪಕ್ಷ ಬೆಳೆಯೋದು ಹೇಗೇಂತ ಕೇಳ್ತಾರೆ ಶೋಭಾಮ್ಮ...."

"ಅದೂ ಸರಿಯೇ ಅನ್ನು. ಶೋಭಾಮ್ಮ ಮಾತ್ರವಲ್ಲ ಎಲ್ಲರೂ ಇದೇ ಸವಾಲು ಹಾಕ್ತಾರೆ...'

'ಸರಿ, ಇದಕ್ಕೇನು ಬಾಣವಿದೆ ನಿಮ್ಮ ಬತ್ತಳಿಕೆಯಲ್ಲಿ?'

"ಇದೇನನ್ನು ನೂರಾರು..."

"ನೋಡೋಣ ಒಂದು ಯಾವುದೂಂತ?'

'ಮತ್ತೇಂಥದು? ನಾನಾದ್ರೆ ಆದ್ಕೆ ಹೇಳ್ತಿದ್ದೆ—ಕಾಂಗ್ರೆಸ್ಸನ್ನು ನಾವು ಕಟ್ಟಿದ್ದೇವೆ, ಬೆಳೆಸಿದ್ದೇವೆ; ಉಳಿಸಿದ್ದೇವೆ, ಉಳಿಸುತ್ತೇವೆ. ವಿರೋಧೀ ಪಕ್ಷವನ್ನು ನೀವು ಕಟ್ಟಿದ್ದೀರಿ, ಅದನ್ನು ಬೆಳೆಸಿ, ಉಳಿಸಿಕೊಳ್ಳುವ ಕೆಲಸ ನೀವು ಮಾಡಬೇಕು. ಎರಡೂ ಕೆಲಸವನ್ನೂ ಒಬ್ಬನೇ ಮಾಡಬೇಕೆಂದಿದೆಯೆ? ಮಾಡುವುದು ಸಮುಚಿತವೂ ಅಲ್ಲ. ಇನ್ನು ವಿರೋಧಿ ಪಕ್ಷದ ಉಳಿವು ಜನತೆಗೆ ಬೇಡವಾದರೆ, ಅವೇಕೆ ಬದುಕ ಬೇಕು?'

'ಅಂದರೆ?'

'ನೋಡು, ನಮ್ಮ ರಾಜಕೀಯ ಪಕ್ಷಗಳು ಜೀವವಾಗುವುದು ಸಾಮಾನ್ಯವಾಗಿ ಚುನಾವಣೆಗಳ ವೇಳೆಯಲ್ಲಿ. ಸುಮಾರು ೨೪ ಕೋಟಿ ಮತದಾರರಿರುವ ಭಾರತದಲ್ಲಿ ಯಾವುದಾದರೊಂದು ರಾಜಕೀಯ ಪಕ್ಷದ ಸದಸ್ಯರಾಗಿರುವವರೆಷ್ಟು ಮಂದಿ?'

'ಆದುದರಿಂದಲೇ ನಮ್ಮಲ್ಲಿ ಪಕ್ಷ ನಿಷ್ಠೆಯಿಂದ ವ್ಯಕ್ತಿ ನಿಷ್ಠೆ ಬಳೆದು ನಿಂತಿದೆ..."

'ಹ್ಞಾಂ, ಇದ್ದರೂ ಇರಬಹುದು'

'ಹಾಗಾದರೆ ವಿರೋಧಿ ಪಕ್ಷ ಬೆಳೆಯುವುದು ಹೇಗೆ?"

"ನೋಡಮ್ಮ ವಿಧಾನ ಸಭೆಯಲ್ಲೋ ಲೋಕಸಭೆಯಲ್ಲೋ ಒಂದಷ್ಟು ಸ್ಥಾನ ಪಡೆದ ಮಾತ್ರಕ್ಕೆ ಪಕ್ಷ ಬೆಳೆದು ಬಂತೆಂದು ಹೇಳುವುದು ಉಚಿತವಾಗದು. ಪಕ್ಷದ ನೀತಿ ಜನತೆಗೆ ಮೆಚ್ಚುಗೆಯಾಗಬೇಕು. ಜನತೆಯ ಸುಖ ದುಃಖಗಳಲ್ಲಿ ಅದು ಭಾಗಿಯಾಗ ಬೇಕು. ಮಳೆಗಾಲ ಕಾಲಿಟ್ಟೊಡನೆ ಹುಟ್ಟಿಕೊಳ್ಳುವ ಅಣಬೆಗಳಂತೆ ಪಕ್ಷಗಳೂ ಉಮೇದ್ವಾರರೂ ಜಾತ್ರೆ ಹೊರಟರೆ, ಜನತೆಗೇನೂ ಗೊತ್ತಾದೀತು?

"ಅದು ಹೌದೂನ್ರಿ" "ಮತ್ತೆ ನೋಡು ನಮ್ಮಲ್ಲಿರವ ರಾಜಕೀಯ ಪಕ್ಷಗಳ ಸಂಖ್ಯೆ ನೋಡು ಒಂದು ವಿಜಯ ನಗರ ಸಾಮ್ರಾಜ್ಯವನ್ನು ಐವರು ಬಾಹಮನಿ ಸುಲ್ತಾನರು ಒಂದಾಗಿ ಕೆಡಹಲು ಬಹುಕಾಲ ಹಿಡಿಯಿತು. ಮತ್ತೆ ಡಜನ್ ಗಟ್ಟಲೆಯ ವಿರೋಧಿ ಪಕ್ಷಗಳು ಕಾಂಗ್ರೆಸ್ಸನ್ನು ಒಂದಾಗಿ ಸೋಲಿಸುವುದು ಕನಸಿನ ಗಂಟು ಮಾತ್ರ....'

"ಹಾಗಾದರೆ?'

'ಹಾಗಾದರೆ ಏನು? ವಿರೋಧೀ ಪಕ್ಷಗಳ ಸಂಖ್ಯೆ ಕಡಮೆ ಯಾಗಬೇಕು."

'ಅದು ಹೇಗೆ ಸಾಧ್ಯ? ವಿರೋಧೀ ಪಕ್ಷವೊಂದನ್ನು ಕಟ್ಟಿದರೆ ಅದರ ಅಧ್ಯಕ್ಷಂಗೋ ಯಾರಿಗೋ ಡಿಲ್ಲಿಯಲ್ಲಿ ಮನೆ ಸಿಗುತ್ತದಂತಲ್ಲಾ?'

"ಹ್ಞ ಹ್ಞ ಹ್ಞ ....ಭಾರಿ ಚಲೋದೇ.. ಹಾಗಾದರೆ, ನಾವೂ ಒಂದು ಕೆಲಸ ಮಾಡೋಣ...."

'ಏನು?'

'ನಾವೂ ಒಂದು ಪಾರ್ಟಿ ಕಟ್ಟೋದು'

'ಒಳ್ಳೆ ಆಲೋಚನೆ. ಇದಕ್ಕೆ ಅಧ್ಯಕ್ಷರು?

'ಅಧ್ಯಕ್ಷ ನೀನು, ಕಾರ್ಯದರ್ಶಿ ನಾನು....?"

"ಹ್ಞಾಂ.... ಕಾರ್ಯಾಲಯ?"

'ಕಾರ್ಯಾಲಯ ಡಿಲ್ಲಿಯಲ್ಲಿ ಮನೆ ಸಿಗುತ್ತಲ್ಲಾ... ಬಾಡಿಗೆಗ ಕೊಡೋ ಒಂದ್ಯೆವತ್ತು ರೂಪಾಯಿಯಾದರೂ ಉಳಿಯುತ್ತೆ....'

'ಅಷ್ಟು ಸುಲಭದಲ್ಲಿ ಮನೆ ಕೊಡ್ತಾರೆಯೇ? ಅದಕ್ಕೂ ನಿಯಮ ಇಂಬಹುದು....'

"ಏನಿದ್ದರೇನಂತೆ ಏನಾದರೂ ಮಾಡಬಹುದೂನ್ನು. ಸದ್ಯ ಒಂದೇ ಚಿಂತೆ...."

"ಏನು?'

"ನಮ್ಮೂರಿಂದ ಡಿಲ್ಲಿಗೆ ಹೋಗಬೇಕಾದರೆ ಒಬ್ರಿಗ ಒಂದುನೂರ ಹದಿನೈದು ರೂಪಾಯಿ ಟಿಕೇಟು ಆಗುತ್ತೆ....'

"ಟಿಕೇಟಿಲ್ಲದ ಯಾತ್ರೆ...."

"ರೈಲನಲ್ಲ ಹಾಗೂ ಆಗುತ್ತೇನ್ನು. ಆದರೆ, ಇಲ್ಲಿಂದ ಶಿವಮೊಗ್ಗಕ್ಕೋ ಮಂಗಳೂರಿಗೋ ಹೋಗಬೇಕಲ್ಲಾ? ಮತ್ತೆ ದಾರಿ ಕರ್ಚು...."

"ಅದು ಏನಾದರೂ ಮಾಡೋಣ.... ನೀವು ಹೋಗೋ ದೃಢ ಮಾಡಿ...."

"ನೀನು?'

"ಅಧ್ಯಕ್ಷರು ಹಾಗೆಲ್ಲೊ ಹೋಗೋಕಿಲ್ಲ ಕಾರ್ಯದರ್ಶಿಯೇ ಕೆಲಸ ಮಾಡಬೇಕು."

"ಕಾರ್ಯದರ್ಶಿ ಅಧ್ಯಕ್ಷರ ಹಿಂದೆ ತಾನೆ?'

'ಈ ಅಧ್ಯಕ್ಷ ಹಳ್ಳಿ ಬಿಟ್ಟು ಎಲ್ಲಿಗೂ ಹೋಗೋಕಿಲ್ಲ. ಇದ್ರೂ ಸತ್ರೂ ಇಲ್ಲೇ'

"ಅಯ್ಯೋ, ಬಿಟ್ಟ ಮನ ಮಾಡಿಕೊಳ್ಳೋ ಣಾಂತಿದ್ರೆ ನೀನು ಹಠಮಾರಿ...'

'ನಾಕು ಬೇಡೀಂದ್ರೆ.... ಎಲ್ಲ ಹುಚ್ಚು'

'ಮತ್ತೇಂಥದು?'

'ಹ್ಞಾಂ... ಇನ್ನಾದ್ರೂ ಡಿಲ್ಲಿಯೋಚನೆ ಬಿಟ್ಟು ಹಳ್ಳಿಯೋಚ್ನೆ ಮಾಡಿ....'

'ಹ್ಞಾಂ ನೀನಂದ ಮೇಲೆ...'

'ಅಯ್ಯೋ....'

ಗೋರಾ.

Working Results of the Canara Bank Ltd., for the year 1966.

SUSTAINED PROGRESS DURING THE DIAMOND JUBILEE YEAR

1966 which marked the Diamond Jubilee year was a year of continued progress for the bank. Deposits showed a Rs. 15·06 crore increase to reach Rs. 114·04 crores as against Rs. 98·98 crores at the end of the previous year. Advances increased by Rs. 6·82 crores to Rs. 66·39 crores.

The working results of the bank for 1966, after usual and necessary provisions, reveal a slightly lower net profit of Rs. 35·67 lakhs as against Rs. 35·95 lakhs for the previous year, reflecting the impact of increased working costs witnessed by the banking industry.

Out of the profits for the current year, a sum of Rs. 7·35 lakhs has been appropriated towards Reserve Fund as against Rs. 7·25 lakhs last year. During the year, a special dividend of 3 per cent on equity shares had been declared and paid to mark the bank's diamond Jubilee. This amounted to Rs. 3·33 lakhs. The balance amount of Rs. 24,98,551·61 will be transferred to the special reserve out of which dividends will be paid, and the balance thereafter will be utilized towards payment of bonus to staff.

The Directors have recommended a dividend of 15% on equity capital (same as last year) on the increased capital which together with dividend of 5·56% on preference shares, will absorb Rs. 17,23,380 as against Rs. 13,48,380 last year.

During 1966, the bank opened 6 new branches. The Bank has now a net-work of 241 branches.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಸಂಭಾವಿತನ ಸೋಗು

ಜರಿತಾರಿಯಂಬರವ ನಲಿಯೊಳ್ಲಿ ಸುತ್ತಿ
ಮರಿಯಾನೆಯದ ಬೆನಲಿ ಹೆಜ್ಜೆಯನು ಒತ್ತಿ
ಕಚ್ಚೆ ಕಾಲಡಿ ವರೆಗೆ ಜೋಲುತಿದೆ ಮುಂದೆ
ತುಚ್ಛನಿವನ್ನೆ ಎಂದು ಹೇಳಿವರು ಹಿಂದೆ.

ಮ. ಗೋ. ರಾವ್,
ಮಾಳ್ಕೆ

ಶ್ರೀ ನಾಗೇ ಗೌಡರ

ಕಿರಿದರಲ್ಲಿ ಹಿರಿದರ್ಥವನ್ನರಸುವ ಕವನ

ಲೇಖಕರು

ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

(ಪಿ. ಸೂ. ಶ್ರೀ ನಾಗೇಗೌಡರ ಕವನದ ಬಗ್ಗೆ ಕೆಲವು ಲೇಖನಗಳೂ ಪತ್ರಗಳೂ ನಮ್ಮ ಕೈಸೇರಿವೆ. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಶ್ರೀ ಕೆ ವೆಂಕಟರಾಯಾಚಾರ್ಯರ ಬರಹಗಳೂ ಬಂದಿವೆ ಅವುಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಪ್ರಕೃತ ಲೇಖನದಲ್ಲೇ ವ್ಯಕ್ತವಾಗಿರುವುದರಿಂದ ಅವನ್ನು ಪ್ರಕಟಿಸುವುದು ಅನವಶ್ಯಕ) ಸಂ. ಸ

ನಮ್ಮ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ನಾಗೇ ಗೌಡರು ಹದಿನೆಂಟನೇ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನಕ್ಕೆಂದು "ತುಳುನಾಡಿಗೆ ಸ್ವಾಗತ"ವೆಂಬ ಕವನವನ್ನು ಬರೆದಿರುವರು ಇದರ ಕುರಿತು ಕರ್ನಾಟಕದ ಪ್ರಸಿದ್ಧ ಕವಿಗಳೂ, ಲೇಖಕರೂ, ಕನ್ನಡ ಅಧ್ಯಾಪಕರೂ ಆಗಿರುವ ಕೆಕ್ಕಂಜೆ ಗೋಪಾಲಕೃಷ್ಣ ಭಟ್ಟರು — ತಮ್ಮ ಮನಸ್ಸಿನ ಮೇಲಾದ ಪರಿಣಾಮವನ್ನು ದಿನಾಂಕ 1-1-1967 ನೆಯ "ನವಭಾರತ" ದಿನ ಪತ್ರಿಕೆಯಲ್ಲಿ ವಿವರಿಸಿರುತ್ತಾರೆ. ಅದರಲ್ಲಿ ತಿಳಿಸಿದ ಆ "ಹದ್ದಿನ ಕಣ್ಣು" ಎಂಬ ವಿಚಾರಗಳು ತಪ್ಪೆಂದು ನಾನು ಹೇಳಲಾರೆ. ಆದರೆ ಅದುವೇ ಸರಿಯೆಂದು ನಾನು ತಲೆದೂಗಲಾರೆ. ಒಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಚಿಕ್ಕದೂ, ಸರಳವೂ ಆದ ಆ ಕವನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಂಪೂರ್ಣ ನೈಜ ಚಿತ್ರವನ್ನೇ ಕೊಟ್ಟಿರುತ್ತಾರೆನ್ನಬಹುದು.

ನಮ್ಮ ಪವಿತ್ರ ಗ್ರಂಥವಾದ ಭಗವದ್ಗೀತೆಯನ್ನು ಓದುವಾಗ ವಿವಿಧ ಅರ್ಥಗಳು ಕಲ್ಪಿತವಾಗುತ್ತದೆ. ಅದರಂತೆ ನಾಗೇ ಗೌಡರ ಕವನವೂ ವಿವಿಧಾರ್ಥಗಳನ್ನು ಕೊಡುತ್ತದೆಂದರೂ ತಪ್ಪಲ್ಲ.

ಎತ್ತ ನೋಡೆ ತೆಂಗು
ಮತ್ತೆ ಅಲ್ಲಲ್ಲಿ ಕಂಗು
ಅಲ್ಲೊಂದು ಮನೆ
ಇಲ್ಲೊಂದು ಮನೆ

ಇದು ಈ ಜನರ ಸ್ವಾತಂತ್ರ್ಯಕೆ ಕೊನೆ

ಹಳ್ಳಿಗಳ ಜಿಲ್ಲೆಯಾದ ನಮ್ಮ ನಾಡಿನಲ್ಲಿ ತೆಂಗಿನ ತೋಟ, ಕಂಗಿನ ತೋಟಗಳು ತುಂಬಿದ್ದು, ಅವುಗಳ ನಡುವೆ ಅಲ್ಲೊಂದು — ಇಲ್ಲೊಂದು ಮನೆಗಳು ರಾರಂಜಿಸುತ್ತಿದ್ದು ಸ್ವಾತಂತ್ರ್ಯದ ತುತ್ತತುದಿಯಲ್ಲಿದ್ದು, ಸಂತೋಷದ ಜೀವನವನ್ನು ನಡೆಸುತ್ತಿದ್ದಾರೆಂಬುದನ್ನು ಚಾಣಾಕ್ಷತನದಿಂದ ತಿಳಿಸಿದ ಗೌಡರು ಚಿಕ್ಕಮಕ್ಕಳು ನಗುವುದಕ್ಕಾಗಿ ಹಾಸ್ಯ ರಸವನ್ನೇ ಕೆಳಗಿನ ಪದ್ಯದಲ್ಲಿ ಕೊಟ್ಟಿರುತ್ತಾರೆ-

ಇಲ್ಲಿ ಬೆಳೆವ ಮಲ್ಲಿಗೆ
ಬಹು ಸುವಾಸನೆ
ಇಲ್ಲಿ ಸಿಗುವ ಮೀನು
ಅಷ್ಟು ದುರ್ವಾಸನೆ
ಆದರೆ ತಿನ್ನುವ ಮೂಗಿಗೆ
ಓಹೋಹೋ ತರತರದ ಸಂಡಿಗೆ

ಮಲ್ಲಿಗೆ; ಅದೂ ಕೂಡಾ ಮಂಗಳೂರು ಮಲ್ಲಿಗೆ ಶ್ರೇಷ್ಠವಾದುದು. ಅಂದ ಮೇಲೆ — ಸುವಾಸನೆಯುಳ್ಳದೆ, ದುರ್ವಾಸನೆಯಿಂದ ಇರಲಾರದು! ಮೀನು ನಮ್ಮಲ್ಲಿ ಮಾತ್ರ ಸಿಗುವದಲ್ಲ.ಎಲ್ಲಾ ಕಡೆಗಳಲ್ಲೂ ನೀರಿರುವಲ್ಲಿ ಸಿಗುತ್ತದೆ. 'ಇಲ್ಲಿ ಸಿಗುವ ಮೀನು'—ಎಂದು ಅವರು ಉದ್ದೇಶ ಪೂರ್ವಕವಾಗಿಯೇ ತಿಳಿಸಿ ಮಕ್ಕಳನ್ನು ನಗಿಸಲು ಪ್ರಯತ್ನ ಮಾಡಿದ್ದಾರೆ. ಆ ಮೀನು ದುರ್ವಾಸನೆಯುಳ್ಳದೆ ಸುವಾಸನೆಯಿಂದ ಕೂಡಿರಲಾರದು! ಆದರೂ ಕೂಡಾ ಮೀನು ಪೌಷ್ಟಿಕ ಆಹಾರ, ಅದಕ್ಕಾಗಿ ಹೆಚ್ಚಿನ ಜನರು ಮೀನು ತಿನ್ನುತ್ತಾರೆ.

ಇಲ್ಲಿಯ ಜನ
ಉಂಡು ಗಂಜೀನ
ನೆಂಚಿ ಮೀನ
ಕುಡಿದು ಓ ಜೋನ
ಇರುವರೆಷ್ಟು ಚಂದ!
ಬ್ರಹ್ಮನಿಗೇ ಬಲು ಆನಂದ!

ಇಲ್ಲಿ ಸರಳ ಜೀವನವನ್ನು ನಡೆಸುವವರಿಗೂ ಕಡಿಮೆಯಿಲ್ಲ ಒಣ ಮೀನನ್ನು ಸೇವಿಸಿ, ಗಂಜಿ ಉಂಡು ಜೀವನ ನಿರ್ವಹಿಸುವವರಿದ್ದಾರೆ. ಕುಡಿದು ಮತ್ತರಾಗಿ (ಓಜೋನ) ತೂರಾಡುವವರಿಗೂ ಕಡಿಮೆಯಿಲ್ಲ ಆದರೂ ಚಂದದಿಂದ ಇದ್ದಾರೆ. ಇದನ್ನು ನೋಡಲು ದೇವರಿಗೇ ಆನಂದವಲ್ಲವೇ?

ಬಣ್ಣದ ಸೀರೆಯುಟ್ಟು—
ಮುಡಿಗೆ ಹೂವನ್ನಿಟ್ಟು
ಸಲ್ಲದ ನಾಚಿಕೆ ಬಿಟ್ಟು
ದಿಟ್ಟ ನಡಿಗೆಯನಿಟ್ಟು
ನಡೆದಳೆಂದರೆ ಅಬ್ಬಕ್ಕ!
ಕುಣಿಯ ಬೇಕು ತಕ್ಕ ತಕ್ಕ!

ಇದೂ ಏನೂ ದೊಡ್ಡ ವಿಷಯವಲ್ಲ. ಎಲ್ಲಾ ಕಡೆಗಳಲ್ಲಿರುವಂತೆಯೇ ಇಲ್ಲಿಯೂ ಬಣ್ಣದ ಸೀರೆಯನ್ನುಟ್ಟು, ಮುಡಿಗೆ ಹೂವನ್ನಿಟ್ಟು ಸ್ತ್ರೀ ಸಹಜವಾದ ಹೆಚ್ಚಿನ ನಾಚಿಕೆಯನ್ನು ಬಿಟ್ಟು! ದಿಟ್ಟತನದ ಹೆಜ್ಜೆಯನ್ನಿಟ್ಟು ಒಂದುವೇಳೆ ನಡೆದಳೆಂದಾದರೆ, ಅವಳನ್ನು ಕಂಡ ಯಾರು ಕೂಡಾ ಕುಣಿಯಲೇ ಬೇಕು! ಆದರೆ ಇಲ್ಲಿನ ಸ್ತ್ರೀಯರು ನಾಚಿಕೆಯಿಂದ ಹಾಗೆ ನಡೆಯುತ್ತಿಲ್ಲ ಮಾನವಂತೆಯರು ಎಂಬುದೇ ಮಾನ್ಯ ಕವಿಗಳ ಅಭಿಪ್ರಾಯವೆನ್ನಲು ಸಂಶಯವೇ ಇಲ್ಲ

ಒಂದು ವೇಳೆ ಗೌಡರು ಕೆಟ್ಟ ಅರ್ಥದಲ್ಲಿ ಹೇಳಿದ್ದರೂ — ಫ್ಯಾಷನ್ ಯುಗವೆನ್ನಿಸಿದ ಈಗ ನಮ್ಮ ಹಳ್ಳಿಯೂ ಈ ವಿಚಾರದಲ್ಲಿ ಹಿಂದುಳಿದಿಲ್ಲವೆನ್ನಿ! ಇದನ್ನು ಶ್ರೀ ನಾಗೇ ಗೌಡರು ಮಕ್ಕಳ ಕವನದಲ್ಲಿ ತಮಾಷೆಯ ರೂಪದಲ್ಲಿ ಹಾರಿಸಿದ್ದಾರೆನ್ನಬಹುದು.

ಬಲ್ಲೆ ಬಲ್ಲೆ, ಕುಳ್ಳಿ ಕುಳ್ಳಿ
ಎಂಬ ತುಳುವನು
ಯೋರಿ ಯೋರೆ, ಬೈಸಿರೆ ಬೈಸಿರೆ,
ಎಂಬ ಕೊಂಕಣಿಯವನು
ಅಪ್ಪ ಹೋತ ನೀನು ಆಡು
ಎಂಬ ಕುಂದಾಪುರದ ಕನ್ನಡ ..

ಮೇಲಿನ ಪದ್ಯವನ್ನು ಓದುವಾಗ ಯಾರೂ ನಗಲೇ ಬೇಕು ಮೇಲಿನ ಕವನದಲ್ಲೂ ಏನೊಂದೂ ತೊಂದರೆ ಬಂದಿಲ್ಲ, ಹಲವು ಭಾಷೆಗಳನ್ನಾಡುವವರು ನಮ್ಮಲ್ಲಿದ್ದಾರೆಂದಂತಾಯಿತು ಮಕ್ಕಳನ್ನು ನಗಿಸುವುದರೊಂದಿಗೆ—ನಮ್ಮ ಜಿಲ್ಲೆಯಲ್ಲಿ ಎಷ್ಟು ಭಾಷೆಗಳನ್ನಾಡುವ ಜನರಿದ್ದಾರೆಂಬುದನ್ನೂ ವಿವರಿಸಿದ್ದಾರೆ!

ಇಲ್ಲಿಯ ಕೋಣಗಳೇ?
ಕುದುರೆಯಷ್ಟೇ ಚುರುಕು
ಇಂತಿರೆ ಜನಗಳೋ!
ಓಹೋಹೋ ಬಲು ಚುರುಕು!
ಸರಸತಿಯ ಮುರುಕು!

ಕೋಣಗಳನ್ನು ಕಂಬಳಗಳಲ್ಲಿ ಓಡಿಸುವುದನ್ನು ಕಂಡರೆ ಯಾರೂ ಹೇಳಬೇಕು— "ಇಲ್ಲಿನ ಕೋಣಗಳೋ ಕುದುರೆಯಷ್ಟೇ ಚುರುಕು!" ಎಂಬುವುದಾಗಿ ಹಾಗಿರಲು ಜನರಾದರೋ ಬಲು ಚುರುಕು! (ಸರಸತಿಯ ಮುರುಕು!) ದಿನಾಂಕ 6-2-67 ರ "ನವಭಾರತ"ದಲ್ಲಿ ನಾಗೇಗೌಡರು "ಸರಸತಿಯ ಮುರುಕು" ಎಂದರೆ ಸರಸ್ವತಿಯ ಬೆಡಗು ಎಂದು ತಿಳಿಸಿರುವುದರಿಂದ ನಮ್ಮ ನಾಡು ವಿದ್ಯಾವಂತರ ನೆಲೆವೀಡು ಎಂದಂತಾಯಿತು.

ಕಂಡಿರಬೇಕು ಮಕ್ಕಳೇ
ಇಲ್ಲಿ ನೀವೊಂದಚ್ಚರಿಯ!
ಕಲವರ ಕಾಲೇಕೆ ಇಷ್ಟು
"ಸಣ್ಣ" ಎಂಬ ಪರಿಚಯ
ಅಹುದು, ಎಲ್ಲ ಚಂದ ಇಲ್ಲಿ
ಆದರೆ ಕೊರತೆ ಕಾಲಲ್ಲಿ!

ಅದೂ ಸರಿಯೇ. ಇದ್ದುದನ್ನೇ ತಿಳಿಸಿದ್ದಾರೆ! ಮಂಗಳೂರು "ಆನೆಕಾಲು ರೋಗ"ಕ್ಕೆ ಸುಪ್ರಸಿದ್ಧವಾಗಿದೆ. ಅದನ್ನು ತಿಳಿಸಿದ್ದು ಆರೋಗ್ಯ ಇಲಾಖೆಗೇ ನೆನಪು ಮಾಡಿ ಕೊಟ್ಟಂತಾಗಿದೆಯೆಂದರೆ ತಪ್ಪಲ್ಲವಷ್ಟೆ?

ನೆಹರು ಗಾಂಧಿಯರುಂಟು
.... ,ಉಂಟು
ಎಲ್ಲ ಉಂಟು, ಉಂಟು
... .ಆದರೊಂದಿಲ್ಲ
ಮನಸಿನಂತೆ ನುಡಿವ
ನುಡಿದಂತೆ ನಡೆವ
ಬುದ್ಧಿ ಒಂದಿಲ್ಲ

ಹಾಗ ನಡೆವರಿಗೆ ಮನ್ನಣೆಯೂ ಇಲ್ಲ. ನಮ್ಮಲ್ಲಿ ಒಳ್ಳೆಯವರಿಗೂ ಕೊರತೆಯಿಲ್ಲ ಆದರೆ ನುಡಿದಂತೆ ನಡೆವವರೂ ಕಡಿಮೆ. ಹಾಗೆ ನುಡಿದಂತೆ ನಡೆದವರಿಗೆ ನಮ್ಮಲ್ಲಿ ಮನ್ನಣೆಯೂ ಇಲ್ಲ. ಅಥವಾ ನುಡಿದಂತೆ ನಡೆಯದವರಿಗೆ ಮನ್ನಣೆಯೂ ಇಲ್ಲ—ಎನ್ನಲೇ? ಅಂತೂ ಜಿಲ್ಲಾಧಿಕಾರಿಗಳಾದ ಶ್ರೀ ನಾಗೇ ಗೌಡರು ಸರಳವಾಗಿ ನಮ್ಮ ನಾಡಿನ ಪರಿಚಯವನ್ನು ಚಿಕ್ಕ ಮಕ್ಕಳ ಸರಳ ಕವನದಲ್ಲಿ ಸಾರಿದ್ದಾರೆ — ಎನ್ನಬಹುದು.

ಸುರಕ್ಷಿತ ಆಸರೆಯಲ್ಲಿ



ಬದುಕಿನುದ್ದಕ್ಕೂ ದುಡಿದು, ಗಳಿಸಿ, ಗಳಿಸಿದುದರಲ್ಲಿ ಸಾಕಷ್ಟು ಉಳಿಸಿದ ಜೀವ ವೃದ್ಧಾಪ್ಯಕ್ಕಾಗಿ ಅಂಜಬೇಕಾಗಿಲ್ಲ. ಕ್ರಮವಾಗಿ ಉಳಿಸಿದ ಸಂಪತ್ತು ವೃದ್ಧಾಪ್ಯದ ಬದುಕಿಗೆ ಊರುಗೋಲಿನಷ್ಟೇ ನೆರವನ್ನು ನೀಡುವುದರೊಂದಿಗೆ ಮುಂದಿನ ಪೀಳಿಗೆಯವರ ಬದುಕಿಗೆ ಆಸರೆಯನ್ನೀಯುವ ಸಂತಸವನ್ನು ಕೊಡುವುದು. ಎಂತಲೇ ಮಗುವಿನ ಸಂತೃಪ್ತಿಯ ನಗು ಅದಕ್ಕೆ ಸುರಕ್ಷಿತ ಆಸರೆ ನೀಡಿದ ಹಿರಿಯ ವೃದ್ಧನ ಮುಖದಲ್ಲಿ ಪ್ರತಿಫಲಿಸಿದೆ.

ಕ್ರಮವಾಗಿ ಉಳಿತಾಯವನ್ನು ಸಾಧಿಸಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಪಿಗ್ಮಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಡಿಪಾಸಿಟ್, ಜಯಂಟ್ ಕ್ಯಾಶ್ ಸರ್ಟಿಫಿಕೇಟ್ ... . ಮೊದಲಾದ ಉಳಿತಾಯ ಯೋಜನೆಗಳಿವೆ. ನಿಮಗೆ ಅನುಕೂಲವೆನಿಸುವ ಉಳಿತಾಯ ಖಾತೆಯನ್ನು ತೆರೆದು, ಕ್ರಮವಾಗಿ ಉಳಿಸಿ, ನಿಮ್ಮ ಮತ್ತು ನಿಮ್ಮನ್ನು ಅವಲಂಬಿಸಿಕೊಂಡ ಮಂದಿಯ ಬದುಕಿಗೆ ಸುರಕ್ಷಿತ ಆಸರೆಯನ್ನು ನೀಡುವವರಾಗಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ.

ಇಂದಿರಾಜಿಯು ಗಾಂ

. ಭಾರತ ಪ್ರಜಾಪ್ರಭುತ್ವದ ರಾಷ್ಟ್ರ. ಅಂದರೆ ರಾಷ್ಟ್ರದ ಎಲ್ಲಾ ಆಗು ಹೋಗುಗಳ ಭಾಗ್ಯ ರೇಖೆಗಳನ್ನೆಳೆಯುವವರು ಅವರೇ ಇರುವದಿಲ್ಲ. ಅಧಿಕ ಮತಗಳನ್ನು ಪಡೆದು, ಅಥವಾ ಸಂಸತ್ತಿನಲ್ಲಿ ಸ್ಥಾನ ಪಡೆದುಕೊಂಡ ಜನರು ಅರ್ಥಾತ್ ಪ್ರಜಾ ಪ್ರತಿನಿಧಿಗಳಿದ್ದಾರೆ. ಈಗಿನ ಕಾಲದಲ್ಲಂತೂ ನೂರರಲ್ಲಿ ಐವತ್ತೊಂದಾದರೂ ಶನಿಷ್ಟ ಮತ ಪಡೆದು ಪ್ರಜಾಪ್ರತಿನಿಧಿಗಳೆನಿಸಿಕೊಳ್ಳುವವರು ಇಲ್ಲವೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಹಾಗಿರುವಾಗ ಆರಿಸಿ ಬಂದವರು ಕೇವಲ ಅವರ ಪಕ್ಷದ ಪ್ರತಿನಿಧಿಗಳರಡೆ ನಿಷ್ಪಕ್ಷಪಾತತನದಿಂದ ವರ್ತಿಸಬೇಕಾಗಿರುವ ಪ್ರತಿನಿಧಿಗಳಾಗುತ್ತಾರೆ. ಅವರ ಹೊಣೆ ಹಿರಿದು, ಅದರಲ್ಲೂ ಪ್ರಧಾನಿಯವರ ಹೊಣೆ ಹೇಳಬೇಕಾಗಿರುವದಿಲ್ಲ. ಅವರ ಬಾಯಿಯಿಂದ ಹೊರಬಂದ ಮಾತುಗಳಿಗೆಲ್ಲಾ ಬಹಳ ಮಹತ್ವ ಇರುತ್ತದೆ. ಹಾಗಿರುವದರಿಂದ ಅವರು ಅದನಿತೂ ಯದ್ವಾತದ್ವಾ ಆಡುವಂತಿಲ್ಲ. ಆದರೂ ಚುನಾವಣೆಯ ಚಂಡಮಾರುತನ ಪ್ರಬಲ ವೇಗಕ್ಕೆ ಬಲಿಯಾದ ಮರ ಅತ್ತ—ಇತ್ತ ಅಲ್ಲಾಡುವಂತೆ ಪ್ರಧಾನಿ ಪಟ್ಟದಲ್ಲಿರುವವರು ಕೂಡಾ ಏನೇನೋ ಆಡಲಾರಂಭಿಸಿರುವರು.

ರಾಜಸ್ಥಾನಕ್ಕೆ ಲೋಕಸಭೆಯಲ್ಲಿ ಇಪ್ಪತ್ತು ಮೂರು ಸ್ಥಾನಗಳಿವೆ. ಅದರಲ್ಲಿ ಇಪ್ಪತ್ತೆರಡು ಸ್ಥಾನಗಳಿಗೆ ಕಾಂಗ್ರೆಸ್ಸ್ ಅಭ್ಯರ್ಥಿಗಳನ್ನು ನಿಲ್ಲಿಸಿರುತ್ತದೆ. ಅಲ್ಲಿ ಜನಸಂಘ— ಸ್ವತಂತ್ರ ಪಾರ್ಟಿಯು ಹದಿನಾಲ್ಕು ಸ್ಥಾನಗಳಿಗೂ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿವೆ. ಅಲ್ಲಿಯ ವಿಧಾನಸಭೆಯಲ್ಲಿ ಒಂದು ನೂರ ಎಂಭತ್ತನಾಲ್ಕು ಸ್ಥಾನಗಳದ್ದು ಕಾಂಗ್ರೆಸ್ಸು ಒಂದು ನೂರ ಎಂಭತ್ತೆರಡು, ಜನಸಂಘವು ಅರುವತ್ತು ಮೂರು ಹಾಗೂ ಸ್ವತಂತ್ರಪಾರ್ಟಿಯು ಒಂದು ನೂರಎಂಟು ಸ್ಥಾನಗಳಿಗೆ ಕ್ರಮಶಃ ತಮ್ಮ ಅಭ್ಯರ್ಥಿಗಳನ್ನು ನಿಕ್ಕಿಸಿವೆ. ಅಂದರೆ ಅಲ್ಲಿ ಕಾಂಗ್ರೆಸ್ಸಿಗೆ ತೀವ್ರ ಎದುರಿಸುವಿಕೆ ಇದ್ದು ಎಲ್ಲಾ ಸ್ಥಾನಗಳಿಗೂ ಅಭ್ಯರ್ಥಿಗಳನ್ನು ನಿಲ್ಲಿಸಲು ಕಾಂಗ್ರೆಸ್ಸಿಗೂ ಸಾಧ್ಯವಾಗದಿರುವದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಿರುವಾಗ ಅಂತಹ ಸ್ಥಳದಲ್ಲಿ ಪ್ರಧಾನಿ ಇಂದಿರಾಜೀ ಸಿಕ್ಕಿ ಬಿದ್ದರೆಂದರ ಕೇಳಬೇಕೇ? ಅವರಿಗೆ ಕೋಪಬರದಿದ್ದೀತೇ? ಮಾನವನಿಗೆ ಕೋಪಬಂದಾಗ ಅವನು ಅದೇನಾಡಿಯಾನು, ಅದೇನಾಡಲಿಕ್ಕಿಲ್ಲವೆಂಬುದನು ಊಹಿಸಲೂ ಸಾಧ್ಯಇರುವದಿಲ್ಲ. ಆದರೂ ಅವರು ಪ್ರಧಾನಿ ಪಟ್ಟದಲ್ಲಿದ್ದಾರೆಂಬುದನ್ನು ಪ್ರಜೆಗಳಿಗೆ ಮರೆತು ಬಿಡಲು ಸಾಧ್ಯ ಇರುವದಿಲ್ಲ. ಪ್ರಧಾನಿಯವರಿಗೋ ತಮ್ಮ ರಾಷ್ಟ್ರದ ಹಾಗೂ ಪ್ರಜೆಗಳ ಮೇಲೆ ಅತೀವ ಅಭಿಮಾನ ಹಾಗೂ ಹೆಮ್ಮೆ ಇರಬೇಕು. ಅಂತೆಯೇ ಪ್ರಜೆಗಳಿಗೆ ಪ್ರಧಾನಿಗಳ ಮೇಲೆ ಪ್ರಖರ ಭಕ್ತಿ, ಗೌರವ, ಪ್ರೇಮಾದಿಗಳು ಇದ್ದೇ ಇರಬೇಕು. ಈ ಎರಡು ಜೋಡಿಗಳಲ್ಲಿ ಒಂದು ಎರಗೆ ಇನ್ನೊಂದು ನೀರಿಗೆಳೆದರೆ ರಾಷ್ಟ್ರದ ದುರ್ದೈವ.

ಮತ ಬೇಟೆಗನೇ ಇದ್ದರೂ ಜಯಪುರದಲ್ಲಿ ಭಾಷಣಮಾಡುವಾಗ ಪ್ರಧಾನಿಯವರು ತಮ್ಮ ಸಮಾಜ, ಸಂಸ್ಕೃತಿ ಮತ್ತು ಕುರಿತು ಹೆಮ್ಮೆಯಿಂದ ಮಾತಾಡಬೇಕಾಗಿತ್ತು. ಎದುರು ಪಕ್ಷಗಳವರಿಂದಲೂ ಜಯಜಯಕಾರ ಹಾಕಿಸಿಕೊಳ್ಳಬೇಕಾಗಿತ್ತು. ಅದರ ಬದಲು ತನ್ನ ಪ್ರಜೆಗಳನ್ನೇ ಅವರು ಶತ್ರು ಕ್ರಮಾಂಕ ಒಂದೆಂದು ಕೆಲವರನ್ನು ಜರೆದರು. ಆ ಜನರಾದರೋ ಶ್ರೀಮತಿ ಇಂದಿರಾ ಗಾಂಧೀಜಿಯವರ ದೃಷ್ಟಿಯಲ್ಲಿ ಶತ್ರುಗಳಂತೆ ಕಂಡು ಬರಲು ಕಾರಣವೇನು? ಸಂವಿಧಾನದಲ್ಲಿ ಇರುವದನ್ನು ಸಮಾಜದಲ್ಲಿ ಪ್ರಯೋಗತಃ ತೆಗೆದುಕೊಂಡು ಬರಲು ಹೇಳಿದ್ದು. ನಮ್ಮ ಜನತೆ, ಭಾರತಾಂಬೆಯ ಮಕ್ಕಳು. ಅದೇನಾದರೂ ಒಂದು ವೇಳೆ ತಪ್ಪುಮಾಡಿದರೂ ವಾತ್ಸಲ್ಯಮಯಿ ಮಾತೆ ಅವರನ್ನು ತನ್ನ ಶತ್ರುಗಳೆಂದು ತೆಗಳಲಾರಳು. ಆದರ ಬದಲು ತನ್ನನ್ನು ವಿಭಜಿಸಿರುವವರನ್ನು, ತನ್ನ ಮೇಲೆ ಆಕ್ರಮಣ ನಡೆಸುತ್ತಿರುವವರನ್ನು ತನ್ನ ಸಂಸ್ಕೃತಿಯ ಸರ್ವನಾಶಕ್ಕೆಯ್ಯಲು ಬರುತ್ತಿರವವರನ್ನು ಶತ್ರುಗಳೆಂದು ಕರೆದಾಳು. ಹಾಗಿರುವಾಗ ಶ್ರೀಮತಿಜೀಯವರ ಬಾಯಿಯಿಂದ ಇಂತಹ ಮಾತುಗಳು ಬರುತ್ತಿರುವದು ಬಹಳ ಆಶ್ಚರ್ಯವೇ ಇದೆ.

ಅವರು ಭಾಷಣ ಮಾಡುತ್ತಿರುವಾಗ, ಗೋವಧಾ ನಿಷೇಧ ಕಾನೂನನ್ನು ತರಬೇಕೆಂದು ಕೆಲವರು ಕೇಳಿಕೊಂಡರು. ತಮ್ಮ ಕೇಳಿಕೆಗೆ ಅವರು ಕಂಡುಹಿಡಿದಿರುವ ಸ್ಥಳ ಸರಿಯಾದುದಲ್ಲವಿರಬಹುದು. ಆದರೂ ಗೋವಧಾ ನಿಷೇಧ ಕಾನೂನನ್ನು ತರುವದರ ಮೇಲೆ ಭಿನ್ನಾಭಿಪ್ರಾಯಕ್ಕೆ ಅವಕಾಶ ಅದೆಲ್ಲೂ ಇಲ್ಲ. ಹಾಗಿರುವಾಗ ತಮ್ಮ ನಿರ್ಬಲತೆಯನ್ನು ಒಪ್ಪಿಕೊಳ್ಳಬೇಕಾಗಿತ್ತು. ಪ್ರಧಾನಿಯವರು ಪ್ರಜೆಗಳನ್ನು ಬೆದರಿಸಿದರು. ಪ್ರಧಾನಿಯವರು ತಮ್ಮ ಪ್ರಜೆಗಳನ್ನು ಬೈಯ್ಯುವದೆಂದರೆ ಆಕಾಶದತ್ತ ನೋಡಿ ಉಗುಳಿದಂತೆಯೇ ಸರಿ. ಅದು ಬೀಳುವದಾದರೂ ಎಲ್ಲಿ?

'ಗೋವಧೆಯನ್ನು ನಿಷೇಧಿಸಿರಿ' ಕೇಳಿದೊಡನೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಎಲ್ಲಿಲ್ಲದ ಸಿಟ್ಟು ಬಂತಂತೆ. ಒಡನೆ ಅವರ ಬಾಯಿಯಿಂದ ಮಾತುಗಳ ಮಹಾ ಪ್ರವಾಹ ಹರಿಯಿತು. 'ನೀವೇತಕ್ಕೆ ಮೈಸೂರಿಗೆ, ಅಥವಾ ಮದ್ರಾಸಿಗೆ, ಕೇರಳಕ್ಕೆ ಅಥವಾ ಆಂಧ್ರ ಪ್ರದೇಶಕ್ಕೆ ಹೋಗಿ ಗೋಹತ್ಯೆಯನ್ನು ಪ್ರತಿಬಂಧಿಸಲು ಕೇಳಬಾರದು? ನೀವು ರಾಜಸ್ಥಾನ ಅಥವಾ ಉತ್ತರಪ್ರದೇಶ ಅಥವಾ ಮಧ್ಯಪ್ರದೇಶ (ಇಲ್ಲ ನಿಷೇಧ ಕಾನೂನು ಇದೆ) ಏತಕ್ಕೆ ಕೇಳುವಿರಿ?, ಇದು ಶ್ರೀಮತಿ ಇಂದಿರಾ ಗಾಂಧಿಯವರ ಪ್ರಶ್ನೆಯನ್ನುವದು ಪ್ರಧಾನ ಇಂದಿರಾ ಗಾಂಧೀಜೀಯವರ ಪ್ರಶ್ನೆಯನ್ನುವದಕ್ಕಿಂತಲೂ ಸಮರ್ಪಕವೇನರಿ. ಇವರು ಹೇಳುವಂತಹಾ ವಿಶೇಷ ಕಾನೂನು ಮೈಸೂರಿನಲ್ಲೂ ಇದೆಯೆಂಬುದನ್ನು ಸಿಟ್ಟಿನ ಭರದಲ್ಲಿ ಅವರು ಮರೆತು ಬಿಟ್ಟಿರಬಹುದು. ಇನ್ನೂ ರಾಜ್ಯಸ್ಥಾನದಲ್ಲಿ ಅಖಿಲಭಾರತದಲ್ಲೇ ಕಾನೂನು ಇರಬೇಕೆಂದು ಕೇಳುವದು, ಅದೂ ಪ್ರಧಾನಿಯವರ ಬಳಿ, ತಪ್ಪಾದಲ್ಲಿ ಆದಾಗಲೇ ಪ್ರತಿಬಂಧ ಇರುವ ಮೈಸೂರಿನಲ್ಲಿ ಕೇಳುವದು ತಪ್ಪೇನು? ಮೈಸೂರಿನ ಜನತೆಯು ನಾಡಿಬಡಿತದ ಅನುಭವ ಅವರಿಗಿಲ್ಲವೆಂದು ಕಾಣುತ್ತದೆ. ಮೈಸೂರಿನ ಜನತೆ ಪಕ್ಷಭೇಧವನ್ನು ಬದಿಗೊತ್ತಿ ಒಕ್ಕೊರಲಿನಿಂದ ಕಾನೂನು ತರಲು ಕೇಳಿಕೊಂಡಿರುವದು ಅವರಿಗೆ ಗೊತ್ತಿಲ್ಲವೋ, ಸಿಟ್ಟಿನಭರದಲ್ಲಿ ಮರೆತು ಬಿಟ್ಟರೋ ಏನೋ?

ದಿನಾಂಕ ೧೨-೧-೬೬ರ 'ನವಯುಗ' ಸಂಚಿಕೆಯ ಎರಡನೇ ಪುಟದಲ್ಲಿದ್ದ ಜಾಹಿರಾತು: ಈಗ ನಿಮ್ಮ ಸಹಾಯಬೇಕು. "ನಾವು ಒಂದು ದೇಶ. ಒಂದು ಜನ. ಇಂದು ಬಿಹಾರ್, ಉತ್ತರ ಪ್ರದೇಶ ಮತ್ತು ಇತರ ಕ್ಷಾಮ ಪೀಡಿತ ಪ್ರದೇಶಗಳ ಗೋಳು ಇಡೀ ಭಾರತದ ಗೋಳು. ಕ್ಷಾಮದ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗೋಣ, ನಮ್ಮೊಡನೆ ಇರುವದನ್ನು ಹಂಚಿಕೊಳ್ಳೋಣ. ಸುಖಮಯವಾದ ಭವಿಷ್ಯವನ್ನು ನಿರ್ಮಿಸಲು ನಾವು ಒಟ್ಟಾಗಿ ದುಡಿಯೋಣ.' ಇಂದಿರಾ ಗಾಂಧಿ—ಪ್ರಧಾನ ಮಂತ್ರಿ.

ಬಿಹಾರ್, ಉತ್ತರ ಪ್ರದೇಶ ಮತ್ತು ಇತರೆಡೆಗಳಲ್ಲಿ ಕ್ಷಾಮ ಇದೆಯಾದಲ್ಲಿ ಕ್ಷಾಮ ಇಲ್ಲದಿರುವ ಪ್ರದೇಶಗಳಲ್ಲಿ ಪ್ರಧಾನಿಯವರು ಸಹಾಯ ಯಾಚಿಸುವದಾದರೂ ಏತಕ್ಕೆ? ಗೋಹತ್ಯೆ ನಿಷೇಧ ಕಾನೂನು ಇರುವ ರಾಜ್ಯಗಳು ಅಖಿಲ ಭಾರತ ಮಟ್ಟದ ಕಾನೂನು ತರಬೇಕೆಂದು ಕೇಳಿಕೊಂಡಲ್ಲಿ, ಅವು ಪ್ರತಿಬಂಧ ಇಲ್ಲದಿರುವಲ್ಲಿಗೆ ಹೋಗಬೇಕು. ಕ್ಷಾಮ ಇರುವಲ್ಲಿ ತಾನೇ ಪ್ರಚಾರ ಮಾಡ ಇಂದಿರಾಜೀ ಶೇಖರಿಸಬೇಕು. ಆಗ ಮಾತ್ರ ಇಂದಿರಾಜಿಗೇ ದೇಶದ ಜ್ಞಾನಿಕ ಬರುತ್ತದೆ.

ಕ್ಷಾಮಪೀಡಿತ ಪ್ರದೇಶಗಳ ಗೋಳು ಇಡೀ ಭಾರತದ ಗೋಳೆನ್ನುವದು ನಿಜವಾದಲ್ಲಿ ಗೋಹತ್ಯಾ ಪೀಡಿತ ಪ್ರದೇಶಗಳ ಗೋಳು ಇಡೀ ಭಾರತದ ಗೋಳಲ್ಲವೇ? ಗೋಹತ್ಯೆಯ ವಿರುದ್ಧ ಹೋರಾಡಲು ನಾವೆಲ್ಲ ಒಂದಾಗುವದು ಬೇಡವೇ? (ಹೋರಾಡಲಿಕ್ಕೆ ಅಲ್ಲವಾದರೂ ಒಕ್ಕೊರಲಿನಿಂದ ಪ್ರಧಾನಿಯವರ ಬಳಿ ಕೇಳಿಕೊಳ್ಳಲಿಕ್ಕಾದರೂ ಒಂದಾಗುವದು ಬೇಡವೇ!) ಸುಖಮಯವಾದ, ಸಮೃದ್ಧಪೂರ್ಣ, ಸುಸಂಸ್ಕೃತ ರಾಷ್ಟ್ರದ ಪುನರ್ ನಿರ್ಮಾಣಕ್ಕಾಗಿ ನಾವು ಒಟ್ಟಾಗಿ, ಏಕಮನದಿ, ದುಡಿಯುವದು ಬೇಡವೇ? ಸುಖಮಯವಾದ ಭವಿಷ್ಯದ ನಿರ್ಮಾಣಕ್ಕೆ ಗೋಹತ್ಯ ನಿಷೇಧದ ಆವಶ್ಯಕತೆ ಇಲ್ಲವೇನು? ಶ್ರೀಮತಿ ಇಂದಿರಾಜೀಯವರಿಗೆ (ಪ್ರಧಾನ ಮಂತ್ರಿಯವರಿಗೆ) ಜನತೆಯ (ನಿಮ್ಮ) ಸಹಾಯದ ಆವಶ್ಯಕತೆ ಕಂಡು ಬಂದಾಗ ದೇಶ, ಜನ ಒಕ್ಕಟ್ಟು ಸುಖ, ಭವಿಷ್ಯ....ಎಲ್ಲಾ ಕಣ್ಮುಂದೆ ಬರುತ್ತದೆ. ಆವಶ್ಯಕತೆ ಮುಗಿದ ಮೇಲೆ....?

ಶ್ರೀಮತಿಜೀಯವರ ಕದಡಿರುವ ಮನ



ಇದು ಉಪಗ್ರಹವಲ್ಲ; ಉನ್ನತ ಅಂತರಿಕ್ಷದೊಡನೆ ಸಂಪರ್ಕ ಬೆಳೆಸುವ ಸಾಧನವೊಂದು. ಜಗತ್ತಿನ ಪ್ರಭಾವಶಾಲಿ ಸಂಪರ್ಕ ಸಾಧನೆಗಳಲ್ಲಿ ಈ ನೆಟ್ ವರ್ಕ್ ಅಂಟೇನಾ ಒಂದಾಗಿದೆ.

ಇಳಿಯಬೇಕಾದೀತು

ಬರೆದವರು: ಶ್ರೀ ಶಿವಶಂಕರ

ಸ್ಸಿನಲ್ಲಿ ದ್ವಂದ್ವಗಳ ಅಲೆಗಳೇಳುತ್ತಿರುವದರಿಂದಲೇ 'ಸಹಾಯ ಯೋಜನೆ' 'ವಿಶೇಷ ಜಾಹೀರಾತು' ಇಷ್ಟು ತಡವಾಗಿ ಪ್ರಕಟವಾಗಿರುತ್ತದೆ. ಅಲ್ಲಿಯ ಮುಖ್ಯಮಂತ್ರಿಗಳೋ ಅಲ್ಲಿ ಬರಗಾಲವೇ ಇಲ್ಲವೆಂದೂ ಬಡಬಡಿಸಿಕೊಂಡಿದ್ದರೂ ಕೂಡಾ, ಅಲ್ಲಿಯ ದೇಶಭಕ್ತ ಜನತೆ ಭೀಕರ ಪರಿಸ್ಥಿತಿಯನ್ನೆದುರಿಸಲು ಸನ್ನಾಹಗೊಳಿಸಿದ್ದರು. ಅವರು ಶ್ರೀ ಜಯಪ್ರಕಾಶ ನಾರಾಯಣರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸ್ಥಾಪಿಸಿ ದೇಶದ ದಶದಿಕ್ಕುಗಳಿಂದಲೂ 'ಸಹಾಯದ ಪ್ರವಾಹ ಸರಾಗವಾಗಿ ಹರಿದು ಬರಲು ಏರ್ಪಾಡು ಮಾಡಿದ್ದರು.

ಇಂಡಿಯನ್ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ, ನಿನ್ನೆ ಹುಟ್ಟಿದ ಪಕ್ಷದ ಜನಸಂಘದ ಹುಟ್ಟಿನ ಮುಖಂಡರು ಮತ್ತು ಸದಸ್ಯರು ಬ್ರಿಟಿಷರೊಂದಿಗಿದ್ದರು ಸುಮಾರು ಇನ್ನೂರು ವರ್ಷಕಾಲ ತಮಗಿಷ್ಟ ಬಂದಂತೆ ಬ್ರಿಟಿಷರು ವರ್ತಿಸುತ್ತಿದ್ದಾಗ ಜನಸಂಘ ಮುಖಂಡರು ಅಥವಾ ಹಿಂದೂ ಮಹಾಸಭೆಯವರಾಗಲೀ ಗೋಘಾತಕರ ವಿರುದ್ಧ ಒಂದು ಬೆರಳನ್ನೂ ಎತ್ತಿರುವದಿಲ್ಲವೆಂದು ಅದೇ ಕೋಪದಭರದಲ್ಲಿ ಶ್ರೀಮತಿಜೀಯವರು ಹೇಳಿರುವರು. ಶ್ರೀಮತಿಜೀಯವರು ಸೂಚಿಸಿರುವ ಇಂಡಿಯನ್ ಜನರು ಭಾರತೀಯ ಜನರೇ ಇರಬಹುದು. ಈ ಸಂಶಯ ಬರಲು ಕಾರಣವೆಂದರೆ ಜನಸಂಘದವರು 'ಇಂಡಿಯನ್ ಜನರು' ಅಲ್ಲವೆಂಬ ಧ್ವನಿಯಲ್ಲಿ ಶ್ರೀಮತಿ ಇಂದಿರಾ ಗಾಂಧೀಜೀ ಹೇಳಿರುವದೇ ಕಾರಣವಿದೆ. ಜನಸಂಘವೆಂದು ಶ್ರೀಮತಿ ಇಂದಿರಾಜೀ ಹೇಳಿರುವದು ಭಾರತೀಯ ಜನಸಂಘಕ್ಕೇನೇ ಇರಬಹುದು. ಜನಸಂಘದವರು ಇಂಡಿಯನರು ಅಥವಾ ಭಾರತೀಯರು ಹೌದೋ, ಅಲ್ಲವೋ ಎಂಬುದು ಆ ಪಕ್ಷದ ಸದಸ್ಯರಿಗೂ, ಅಧಿಕಾರಸ್ಥಾನದಲ್ಲಿರುವ ಶ್ರೀಮತಿ ಇಂದಿರಾ ಗಾಂಧೀಜಿಯವರಿಗೂ ಗೊತ್ತು. ಆದರೆ, ಅವರನ್ನು ಭಾರತೀಯರಲ್ಲವೆನ್ನುವ "ಧೈರ್ಯ ಶ್ರೀಸಾಮಾನ್ಯನಿಗೆ ಬರುವಂತಿಲ್ಲ. ಹಿಂದೊಮ್ಮೆ ಸಂಸತ್ತಿನಲ್ಲಿ, ಜನಸಂಘದವರು ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿಲ್ಲವೆಂದು ಹೇಳಿರುವದನ್ನೇ, ಅಲ್ಲಿಯೇ ಇದ್ದ, ಅವರ ಅಚ್ಚುಮೆಚ್ಚಿನ ಹಾಗೂ ಜನಪ್ರಿಯ ಪ್ರಮುಖರೊಬ್ಬರು ಖಂಡಿಸಿದಾಗ, ತೆಗಳಿದ ಕಾಂಗ್ರೆಸ್, ಖಾದೀವಾಲರು ಆವರ ವಿಷಯ ಹೇಳಿಲ್ಲವೆಂದೂ ಬೇರೆಯವರ ವಿಷಯ ಹೇಳಿರುವದೆಂದೂ, ಅವರನ್ನು ಇಂದ್ರ—ಚಂದ್ರನೆಂದು ಹೊಗಳಿದರು. ಆದರೂ ಅವರು ವೈಯಕ್ತಿಕ ಹೊಗಳಿಕೆಯ ಗಾಳಿಯಿಂದ ಉಬ್ಬದೆ ಹಿಂದೆ ಬ್ರಿಟಿಷರೊಂದಿಗೆ ಕೈಮಿಲಾಯಿಸಿಕೊಂಡಿದ್ದು ಈಗ ಜನಸಂಘದಲ್ಲಿ ಜಾಗ ಪಡೆದಿರುವದನ್ನು ತೋರಿಸಲು ಆಹ್ವಾನ ಇತ್ತಾಗ ಕಾಂಗ್ರೆಸಿಗರ ಕಾಲು ಕುಸಿಯಿತು. ನಾಲಗೆ ಉಡುಗಿ ಹೋಯಿತು. ಇದೀಗ ಶ್ರೀಮತಿ ಇಂದಿರಾ ಗಾಂಧಿಯವರ ಸರದಿ ಬಂದಿರುತ್ತದೆ. ಭಾರತೀಯ ಜನಸಂಘದ ಅಧ್ಯಕ್ಷರ ಮುಖಂಡರೂ ಬ್ರಿಟಿಷರೊಂದಿಗೆ ಇದ್ದಿರುವ ವಿಷಯ ಅದ್ಯಾವ ಭಾರತೀಯನಿಗೂ ಗೊತ್ತಿರುವುದಿಲ್ಲ. ಅದರ ಬದಲ, ಕ್ರಾಂತಿಕಾರ ಶಿರೋಮಣಿ ಭಗತ್‌ಸಿಂಘ, ಭಾಯಿ ಪರಮಾನಂದ ಮುಂತಾದವರ ಕುಟುಂಬದವರು ಭಾರತೀಯ ಜನಸಂಘದಲ್ಲಿರುವದು ಭಾರತೀಯರ ಮನೆಮಾತೇ ಇದೆ. ಸ್ವಾಮಿ ಶ್ರದ್ಧಾನಂದ, ಪಂಡಿತ ಮದನ ಮೋಹನ ಮಾಲವೀಯ, ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್ ಮುಂತಾದವರು ಹಿಂದೂ ಮಹಾಸಭೆಯ ಮುಖಂಡರೇ ಇದ್ದರು ಇವರು ಗೋಹತ್ಯ ಪ್ರತಿಬಂಧಕ್ಕಾಗಿ ನಡೆಸಿರುವ ಚಳುವಳಿಯ ಕುರಿತು ಗೋಭಕ್ತ ಹಾಗೂ ದೇಶಪ್ರೇಮಿ ಇನ್ನೂ ಮರೆತಿರುವದಿಲ್ಲ. ಸರಿ, ಒಂದು ಕ್ಷಣ ಸತ್ಯ—ಅಸತ್ಯವನ್ನು ಬದಿಗ ಸರಿಸಿ ಶ್ರೀಮತಿ ಇಂದಿರಾ ಗಾಂಧಿಜೀಯವರೊಡನೆ ಸೇರಿ ಅವರ ಮಾತನ್ನೇ ಕೇಳೋಣ, ಗೋಹತ್ಯೆಯ ವಿರುದ್ಧ ಸ್ವಾಮಿ ಶ್ರದ್ಧಾನಂದ, ಪಂಡಿತ ಮದನ ಮೋಹನ ಮಾಲವೀಯ, ಸ್ವಾತಂತ್ರ್ಯ ವೀರ ಸಾವರ್ಕರ್ ಮಾತ್ರ ಹೋರಾಡಿರುವದಲ್ಲ. ಲೋಕಮಾನ್ಯ ಬಾಲಗಂಗಾಧರ ಟಿಳಕ್, ಮೋತಿಲಾಲ್ ನೆಹ್ರೂ, ಮಹಾತ್ಮ ಮೋಹನ್‌ದಾಸ ಕರಮಚಂದ ಗಾಂಧಿಜೀ ಮುಂತಾದವರೂ ಹೋರಾಡಿದ್ದಾರೆ. ಹಿಂದೆ ಕಾಂಗ್ರೆಸ್ಸಿನ ಮಹಾಧಿವೇಶನ ನಡೆಯುತ್ತಿದ್ದಾಗ ಅಲ್ಲೇ ಗೋಸಮ್ಮೇಳನಗಳೂ ನಡೆಯುತಿದ್ದವು. ಅಂದು ಕಾಂಗ್ರೆಸ್ಸ ಒಂದು ಪಕ್ಷವಾಗಿರಲಿಲ್ಲ ಅದು ಪಕ್ಷಗಳ ಪಕ್ಷವಾಗಿತ್ತು. ಏನೇ ಇರಲಿ ಜನಸಂಘ ಹಿಂದೂ ಮಹಾಸಭಾ ಇವು ಬ್ರಿಟಿಷರ ಬಳಿ ಗೋವಧಾ ನಿಷೇಧಾರ್ಥ ಚಳುವಳಿ ನಡೆಸಿಲ್ಲವಾದರೂ "ಈ ಕಾಂಗ್ರೆಸ್ಸ" ಮಹಾ ನಾಯಕರು ಚಳುವಳಿ ನಡೆಸಿದ್ದರೆನ್ನುವದನ್ನು ಶ್ರೀಮತಿ ಇಂದಿರಾ ಗಾಂಧಿ ಅಲ್ಲಗಳೆದಿರುವದಿಲ್ಲ. ಹಾಗಾದರೆ ಆ ಗೋರಕ್ಷೆಗಾಗಿ, ಗಳಿಗೆಯ ಹಿಂದೆ ಹೇಳುತ್ತಿದ್ದುದಕ್ಕೆಲ್ಲಾ ಅನಂತರ, ತಿಲಾಂಜಲಿ ಕೊಟ್ಟು ಬಿಡುವದು ಯಾವ ನ್ಯಾಯ? ಹಾಗೆ ತಿಲಾಂಜಲಿ ಕೊಟ್ಟು ಬಿಟ್ಟಲ್ಲಿ ನೈಜ ಕಾಂಗ್ರೆಸ್ಸಿಗನು ಅದರಲ್ಲುಳಿದಾನೇ? ಸ್ವತಃ ಮಹಾತ್ಮ ಮೋಹನದಾಸ ಗಾಂಧೀಜಿಯವರೇ ಅದರ ಸದಸ್ಯನಾಗಿರಲಿಲ್ಲವೆಂದ ಮೇಲೆ ಸಾಮಾನ್ಯ ಸದಸ್ಯನ ಕುರಿತು ಹೇಳಬೇಕೇ? ಆಗ ರಘುವೀರರಂತಹ ಮೇಧಾವಿಗಳು ಆದರಿಂದ ಹೊರಗ ಬರಲು ಬೇರಿನ್ನೇನು ಕಾರಣ?

ಅದೇ ಸ್ಪಂದದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ರಾಜ-ಮಹಾರಾಜರುಗಳತ್ತಲೂ ಬೆರಳು ತೋರಿಸಿ ಮಾತಾಡಿದ್ದಾರೆ ರಾಜ ಮಹಾರಾಜರುಗಳು ಬ್ರಿಟಿಷರೊಟ್ಟಿಗಿದ್ದು, ಈಗ ಪ್ರಗತಿಗೆ ಅಡ್ಡಿಯಾಗಿದ್ದಾರೆಂದು ಪ್ರಧಾನಿಯವರು ಘೋಷಿಸಿದ್ದಾರೆ. ಈ 'ಸತ್ಯ' ಚುನಾವಣೆಯ ಸಮಯ ಶ್ರೀಮತಿಯವರಿಗೆ ಗೊತ್ತಾದುದೇನು? ಹಿಂದಿನ ಚುನಾವಣೆಗಳಲ್ಲಿ ಈ ರಾಜ-ಮಹಾರಾಜರುಗಳೆಲ್ಲಿದ್ದರು. ಆವರೆಲ್ಲರೂ ಕಾಂಗ್ರೆಸ್ಸ ಕೋಟೆಯೊಳಗನೇ ಇದ್ದರು. ಕೇವಲ ಕೆಲವರು ಅಪವಾದ, ಅಷ್ಟೇ. ಈ ಸಲ ಇಷ್ಟೊಂದು ರಾಜರುಗಳು ಕಾಂಗ್ರೆಸ್ಸಿನ ಹೊರ ಬಂದಿದ್ದಾರೆ ಅವರಲ್ಲಿ ಕೆಲವರು ಭಾರತೀಯ ಜನಸಂಘದ ಚುನಾವಣಾ ಚಿಹ್ನೆಯನ್ನು ಉಪಯೋಗಿಸಿಕೊಂಡಿದ್ದಾರೆ. ಒಂದು ವೇಳೆ ಅವರು ಗದ್ದುಗೆಯಲ್ಲಿ, ಅದ್ಯಾವ ಪಕ್ಷಕ್ಕೆ ಸೇರುವರೋ ಹೇಳಲು ಬರುವಂತಿಲ್ಲ. ಅವರು ಒಂದೋ ಕಾಂಗ್ರೆಸ್ಸಿಗರೇ, ಇಲ್ಲದಿದ್ದಲ್ಲಿ ಸ್ವತಂತ್ರ ಪಾರ್ಟಿಗೆ ಸೇರಿಯಾರು. ಕಾಂಗ್ರೆಸ್ ಅವರಿಗೆ ಮಾರ್ಗದರ್ಶನ ಕೊಡುತ್ತದೆ. ಪ್ರಧಾನಿಯವರೂ ಅದೇ ವಿಷಯವನ್ನು ಹೇಳಿ ಹಂಗಿಸಿರುವರಲ್ಲದ, ಭಯ ತೋರಿಸಿರುವರು. ಈ ಮಾರ್ಗದರ್ಶನವನ್ನು ನಿಲ್ಲಿಸುವ ಧೈರ್ಯವಿಲ್ಲದವರು. ಸ್ವತಂತ್ರ ಪಾರ್ಟಿಯಲ್ಲಾದರೆ ಅವರಿಗೆ ಸ್ವತಂತ್ರ ಸ್ಥಳ ಇದೆ. ಭಾರತೀಯ ಜನಸಂಘವಾದರೋ ಮಾರ್ಗದರ್ಶನವನ್ನು ಸಲ್ಲಿಸಬೇಕೆಂದು ಹೇಳುತ್ತದೆ

ಶ್ರೀಮತಿ ಇಂದಿರಾಜೀ ಜಯಪುರದಲ್ಲಿ ಮಾತ್ರ ಈ ರೀತಿ ಹೇಳಿರುವದಲ್ಲ. ಇತ್ತೀಚೆಗೆ ಹೋಗುತ್ತಿರುವ ಸ್ಥಳಗಳಲ್ಲೆಲ್ಲಾ ಅದೇ ರೀತಿಯಲ್ಲಿ ಮಾತಾಡುತ್ತಿರುವರು. ಹಿಂದೆ ಸ್ವಲ್ಪಮಟ್ಟಿಗೆ, ಅವರ ತಂದೆ ಶ್ರೀ ಜವಾಹರಲಾಲ ನೆಹ್ರೂಜೀಯವರೂ ಹೆಚ್ಚಾಗಿ ಚುನಾವಣಾ ದಿನಗಳಲ್ಲಿ ಇದೇ ರೀತಿ ಮಾತಾಡುತ್ತಿದ್ದರು. ಆದರೆ ಅಂದಿನ ದಿನಗಳು ಇಂದು ಬದಲಾಗಿವೆ, ಜನತೆ ಯಾವದೂ ಸರಿ, ಯಾವದು ತಪ್ಪೆಂಬುದನ್ನು ವಿವೇಚಿಸಿ ನೋಡುತ್ತದೆ. ರಾಜ-ಮಹಾರಾಜರುಗಳಿಗೆ ಬೈಯುತ್ತಿರುವ ರಾಜರೊಬ್ಬರ ಆಶ್ರಯದಲ್ಲಿ ಚುನಾವಣಾ ರಂಗಕ್ಕಿಳಿದಿರುವದು ಜನತೆಗೆ ಗೊತ್ತು. ಹೀಗಾಗಿ, ಇಂದಿರಾಜಿ ಇದಿರಾಡಬೇಕಾದಲ್ಲಿ ರಾಜ— ಮಹಾರಾಜರುಗಳು ಕಾಂಗ್ರೆಸ್ಸಿನಿಂದ ಕಾಲ್ತೆಗೆದಿದ್ದಾರೆಂಬುದು ಖಚಿತವಾಗುತ್ತದೆ. ಆದುದರಿಂದ ಇಂದಿರಾಜೀಯವರು ಜವಾಹರಲಾಲ ನೆಹ್ರೂಜೀಯವರ ರೀತಿಯಲ್ಲಿ ಮಾತಾಡುತ್ತಿಲ್ಲ. ಅದರ ಬದಲು ತಿರು ಕಾಮರಾಜರಿಗಿಂತ ಒಂದು ತೂಕ ಜಾಸ್ತಿಯ ನಿಸಿ ಕೊಳ್ಳಲು ಪ್ರಯತ್ನಿಸುತಿದ್ದಾರೆ. ತಿರು ಕಾಮರಾಜರವರು ಗೋವಧಾ ವಿರೋಧ ಆಂದೋಲನವನ್ನು ಎದುರಿಸಿದ್ದೇ ತಡ, ಇಂದಿರಾಜೀಯು ದ್ವಿತದ್ವಾ ಆಡಲು ಆರಂಭಿಸಿಬಿಟ್ಟರು. ಸ್ವಾತಂತ್ರ್ಯಕ್ಕಿಂತಲೂ ಗೋವಧೆ ನಿಷೇಧ ಕಾನೂನು ತನಗೆ ಮುಖ್ಯವೆಂದು ಮಹಾತ್ಮ ಗಾಂಧೀಜಿಯವರು ಹೇಳಿರುವದನ್ನು ಇಂದಿರಾಜೀ ಗಾಳಿತೂರಿ ಬಿಟ್ಟರು. ಸ್ವಾತಂತ್ರ್ಯ ಬರುವ ಹಿಂದೆಯೂ ಈಗಿನ ಪುರಿ ಜಗದ್ಗುರು ಶಂಕರಾಚಾರ್ಯರು ಗೋವಧೆ ನಿಷೇಧಾರ್ಥ ಚಳುವಳಿ ನಡೆಸಿರುವದು ಜನತೆಗೆ ಜ್ಞಾಪಕ ಇದೆ. ಹಾಗಿರುವದರಿಂದ ಇಂದಿರಾಜೀ ಅದೇನಾದರೂ ಗಡಬಡಿಸಿದಲ್ಲಿ ಜನತೆ ಅದನ್ನು ಗಂಭೀರವಾಗಿ ತಿಳಿದುಕೊಳ್ಳಲಾರದು. ಶ್ರೀ ಸಾಮಾನ್ಯನು ಕೇಳುವದಿಷ್ಟೇ—ಬಸವಣ್ಣನನ್ನು ಚುನಾವಣಾ ಚಿಹ್ನೆಯನ್ನಾಗಿಟ್ಟುಕೊಂಡಿರುವ ಕಾಂಗ್ರೆಸ್ ಪಕ್ಷವು ಬಸವಣ್ಣನ ಕೊಲೆಗೆ ಪ್ರೋತ್ಸಾಹಿಸುತ್ತಿರುವದು ನ್ಯಾಯವೇ? ಅದನ್ನೇತಕ್ಕೆ ತಡೆಯಬಾರದ? ಶ್ರೀಸಾಮಾನ್ಯನ ಈ ಸಾಮಾನ್ಯ ಪ್ರಶ್ನೆಗೆ ಉತ್ತರ ಕೊಡಲಾರದೆ ಶ್ರೀಮತಿ ಇಂದಿರಾ ಗಾಂಧೀಜೀ ಅಲ್ಲಿ ಇಲ್ಲಿ ಅದೇನನ್ನಾದರೂ ಗಡಬಡಿಸಿದಲ್ಲಿ, ತಿರು ಕಾಮರಾಜರಿಗಿಂತ ಒಂದು ಹೆಜ್ಜೆ ಇರಲು ಪ್ರಯತ್ನಿಸಿದಲ್ಲಿ ಅದೇ ತಿರುಕಾಮರಾಜರು ಅವರನ್ನು ಕಾಲು ಜಾರಿಸಿ ಬಿಟ್ಟಾರು. ಶ್ರೀ ರಾಜಾಜಿಯವರನ್ನು ರಾಜಕೀಯ ಆಕಾಶದ ನಕ್ಷತ್ರವನ್ನು ತನ್ನ ಹೋರಿಯ ಕೊಂಬಿನಿಂದ ಹಾಯಿಸಿ ಕೆಳಗುರುಳಿಸಿ ಬಿಟ್ಟಿರುವ ಕಾಮರಾಜ ಅವರಿಗೆ ಇಂದಿರಾಜಿ ಯಾವ ಮೂಲೆಗೆ? ಪ್ರಧಾನಿಯವರು ತನ್ನ ಸ್ಥಾನದ ಮಹತ್ವವನ್ನರಿತು ಕೊಂಡು ಮಾತಾಡಬೇಕು. ಇಲ್ಲದೆ ಇದ್ದಲ್ಲಿ ಪಕ್ಷದ ಪ್ರಚಾರಕ್ಕಾಗಿ ಗಾದಿಯಿಂದ ಇಳಿದು ಬರುವದೊಳ್ಳೆಯದು. ಗಾದಿಯ ಪಾವಿತ್ರ್ಯತೆಗೆ ಭಂಗ ಬಾರದಿರಲಿ.

ಬಳ್ಳೇರಿಯಾದ ಭಾವಪ್ರಭಾವವಾದ ಡೊಬ್ಬ್ರಾಜಾ ನೃತ್ಯ.

ಎಲ್ಲೆಲ್ಲಿ ಏನೇನು?

ಪ್ರಜಾಪ್ರಭುತ್ವ ದಿನಾಚರಣೆ

ಉಡುಪಿ ನಗರ ಸಭೆಯ ವತಿಯಿಂದ ಪ್ರಜಾಪ್ರಭುತ್ವ ದಿನಾಚರಣೆಯು ಸಾಯಂಕಾಲ ಅಜ್ಜರಕಾಡಿನಲ್ಲಿ ಲಾ ಕಾಲೇಜ್ ಪ್ರಿನ್ಸಿಪಾಲ್ ಡಿ. ಜಿ. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಸಭಾಪತಿ ಶ್ರೀ ಕೆ. ಮಂಜುನಾಥ ಮಧ್ಯಸ್ಥರು ಸ್ವಾಗತಿಸಿದರು. ಪ್ರೊ|| ಬಿ. ರಾಜಪುರೋಹಿತ್ ಹಾಗೂ ಶ್ರೀಪತಿ ಆಚಾರ್ಯರು ಭಾಷಣ ಮಾಡಿದರು. ಅಧ್ಯಕ್ಷ ಶ್ರೀ ದೇಶಪಾಂಡೆಯವರು ಇಂದು ನಮ್ಮ ಮುಂದಿರುವ ಸಮಸ್ಯೆ, ಅವುಗಳ ಪರಿಹಾರ ವಿಧಾನಗಳನ್ನು ವಿವರಿಸಿ, ಪ್ರಜಾಪ್ರಭುತ್ವದ ಯಶಸ್ಸಿಗೆ ಪ್ರಾಮಾಣಿಕವಾದ ಪ್ರಯತ್ನ ಅಗತ್ಯವೆಂದರು.

ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಮನರಂಜನೆ, ಛದ್ಮವೇಷ ಸ್ಪರ್ಧೆಗಳ ನಂತರ ರಾಜ್ಯ ಪ್ರಶಸ್ತಿ ಪಡೆದ ಕ್ರೀಡಾಪಟುಗಳಿಗೆ ಅಭಿನಂದನೆ ವ್ಯಕ್ತಪಡಿಸಲಾಯಿತು. ಅನಂತರ ಡಾ|| ಪಿ. ವ್ಯಾಸರಾಯರು ಬಹುಮಾನ ವಿತರಣೆ ಮಾಡಿದರು. ನಗರ ಸಭೆಯ ಉಪಾಧ್ಯಕ್ಷ ಶ್ರೀ ಆರ್. ನರಸಿಂಹಪಾಂಗಣ್ಣಾಯರು ಧನ್ಯವಾದ ಸಮರ್ಪಿಸಿದರು.

ಮುಂಜಾನೆ ಗಾಂಧೀ ಮೈದಾನಿನಲ್ಲಿ ನಗರ ಸಭಾಪತಿಗಳಿಂದ ಧ್ವಜಾರೋಹಣವಾಯಿತು.

ಬರ್ನ್ಸ್ ಸೆಂಟರ್

ಮಣಿಪಾಲ, ಜ. ೨೭ — ಇಲ್ಲಿಯ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಈಚೆಗೆ ಆರಂಭಿಸಲ್ಪಟ್ಟ ಬರ್ನ್ಸ್ ಸೆಂಟರಿನಲ್ಲಿ ಪ್ಲಾಸ್ಟಿಕ್ ಸರ್ಜರಿ ಮತ್ತು ಉದ್ಯೋಗ ನಿರ್ದೇಶನದಂತಹ ಸೌಲಭ್ಯಗಳಿರುತ್ತವೆಂದು ಆಸ್ಪತ್ರೆಯ ಮುಖ್ಯಾಧಿಕಾರಿಗಳು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಮೈ ಸುಟ್ಟುಕೊಂಡಿರುವಂಥವರು ಈ ಸೆಂಟರಿನ ಅಧಿಕಾರಿಗೆ ಬರೆದು ಅಥವಾ ಪ್ರತಿಸೋಮವಾರ ಸ್ವತಃ ಭೇಟಿಯಾಗಿ ತಿಳಿಸಬೇಕೆಂದು ಅವರು ಕೋರಿದ್ದಾರೆ.

ಪ್ರಜಾಪ್ರಭುತ್ವ ದಿನಾಚರಣೆ

ಲೋಕಸೇವಾ ಹೈಸ್ಕೂಲು, ಮತ್ತು ಹಾ. ಪ್ರಾ. ಶಾಲೆಗಳ ಕೂಡುವಿಕೆಯಿಂದ ಹೈಸ್ಕೂಲಿನಲ್ಲಿ ಶ್ರೀ ಬಿ. ನಾರಾಯಣ ರಾವ್‌ರವರ ಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಜರಗಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಭಾಷಣಗಳಾದುವು. ಶ್ರೀ ಯಮ್. ನಾರಾಯಣ ಭಟ್ಟರು ಮಾತಾಡಿ ವಿದ್ಯಾರ್ಥಿಗಳು ಪ್ರಾಮಾಣಿಕತೆ ಮತ್ತು ಕರ್ತವ್ಯ ನಿಷ್ಠೆಯಿಂದ ದೇಶಕ್ಕಾಗಿ ಮುಂದೆ ಬಂದು ದುಡಿಯುವ ಯೋಗ್ಯ ಪ್ರಜೆಗಳಾಗ ಬೇಕೆಂದು ಕರೆಯಿತ್ತರು. ಸಭಾಧ್ಯಕ್ಷರ ಭಾಷಣದ ನಂತರ ಶಾಲಾ ನಾಯಕರು ಧನ್ಯವಾದಗಳನ್ನು ಸಮರ್ಪಿಸಿದರು.

ಗೀತಾಪ್ರವಚನ

ಶ್ರೀ ರಾಮನಾಮ ಪ್ರಚಾರಿಣೀ ಮಂಡಳಿ, ಉಡುಪಿ, ಇದರ ವತಿಯಿಂದ, ನಿರಂತರ ಹದಿನೆರಡು ದಿನಗಳ ತನಕ ಗೀತಾ ಪ್ರವಚನವು ಜರಗಿ, ತಾ. 26—1—67ರಲ್ಲಿ ಮುಕ್ತಾಯ ಗೊಂಡಿತು. ಪ್ರವಚನಕಾರರಾದ ಶ್ರೀ|| ಉ. ಶ್ರೀನಿವಾಸಾಚಾರ್ಯರು ಭಗವದ್ಭಕ್ತರ ನಾಲ್ವತ್ತು ಪ್ರಕಾರದ ಲಕ್ಷಣಗಳನ್ನು ವಿವರಿಸಿದರು. ಶ್ರೀ ಎ. ಲಕ್ಷ್ಮೀನಾರಾಯಣ ಶೆಣೈಯರು ಕೃತಜ್ಞತೆಗಳನ್ನು ಸಮರ್ಪಿಸಿದರು. ಪ್ರವಚನಕಾರ ದಂಪತಿಗಳನ್ನು ಸಂಭಾವನೆ, ಉಡುಗೊರೆಗಳ ಮೂಲಕ ಸತ್ಕರಿಸಲಾಯಿತು.

ರತ್ನ ಪರೀಕ್ಷೆ—1967

1967ನೆಯ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ "ರತ್ನ" ಪರೀಕ್ಷೆಗೆ ಅವೇದನಾ ಪತ್ರಗಳನ್ನೂ ಮತ್ತು ಪರೀಕ್ಷಾ ಶುಲ್ಕವನ್ನೂ ಕಳುಹಿಸಲು ಇನ್ನೂ ಕಾಲಾವಕಾಶ ಕೊಡಬೇಕೆಂದು ನಾಡಿನ ಅನೇಕ ಅಭ್ಯರ್ಥಿಗಳು ಪ್ರಾರ್ಥಿಸಿಕೊಂಡಿರುವ ವಿಚಾರವನ್ನು ಪರಿಶೀಲಿಸಿ, ಅವೇದನಾಪತ್ರವನ್ನೂ ಮತ್ತು ಪರೀಕ್ಷಾ ಶುಲ್ಕವನ್ನೂ ಸಲ್ಲಿಸುವ ಅವಧಿಯನ್ನು ತಾ. 31—1—1967 ರಿಂದ 10—3—1967ರ ವರೆಗೆ ಮುಂದುವರಿಸಲಾಗಿದೆ, ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಗೌ|| ಕಾರ್ಯದರ್ಶಿಗಳು ತಿಳಿಸುತ್ತಾರೆ.

ರಣಮಲ್ಲ ವಿಜಯ,

ದೇಲಂಪಾಡಿ, ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಅವರಿಂದ ರಚಿತವಾದ ರಣಮಲ್ಲವಿಜಯ ಎಂಬ ಐತಿಹಾಸಿಕ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಕಳೆದ ತಾ. 28ರಂದು ನಡೆಸಲ್ಪಟ್ಟಿತು.

ಆರಂಭದಲ್ಲಿ ಶ್ರೀ ನಾರಾಯಣ ನಾಯಕ್ ಮಾಸ್ತರ್ ಅವರು ಸ್ವಾಗತಿಸಿ ಪಾತ್ರ ಪರಿಚಯ ಮಾಡಿಕೊಟ್ಟರು. ಶ್ರೀ ಕೆ. ಬಿ. ರೈಗಳು ಕೊನೆಯಲ್ಲಿ ಧನ್ಯವಾದವಿತ್ತರು.

ಪ್ರಜಾಪ್ರಭುತ್ವ ದಿನಾಚರಣೆ

ಸುರತ್ಕಲ್ ವಿದ್ಯಾದಾಯಿನಿ ಹಯರ್ ಸೆಕೆಂಡರಿ ಶಾಲಾ ಆಟ ಪಂದ್ಯಾಟಗಳ ವಾರ್ಷಿಕೋತ್ಸವ ದಿನಾಚರಣೆ ಹಾಗೂ ಪ್ರಜಾಪ್ರಭುತ್ವ ದಿನಾಚರಣೆಯು ತಾ. 26—1—67ರಂದು ಪಣಂಬೂರಿನ ಸೆಂಟ್ರಲ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀ ಜಿ. ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಇ. ಸೂರ್ಯನಾರಾಯಣರಾಯರಿಂದ ವರದಿ ವಾಚನವಾಗಲು ಅಧ್ಯಕ್ಷರು ಆಟೋಟಗಳಲ್ಲಿ ವಿಜಯಿಗಳಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ಮಾಡಿ ಭಾಷಣ ಮಾಡಿದರು. ಈ ಶಾಲೆಯು ಕಾಲೇಜಾಗಲಿ ಎಂದು ಹರಸಿದರು. ಧನ್ಯವಾದ ಸಮರ್ಪಣೆಯಾಗಲು ಮನರಂಜನಾ ಕಾರ್ಯಕ್ರಮಗಳಾದುವು.

ವಿದ್ಯಾದಾಯಿನೀ ಶಾಲಾ ವರ್ಧಂತ್ಯುತ್ಸವ

ಸುರತ್ಕಲ್ ಜನವರಿ 28, ಇಪತ್ತು ವರ್ಷಗಳ ಹಿಂದೆ ನಾನು ದ. ಕನ್ನಡಕ್ಕೆ ಬಂದಾಗ ಇಲ್ಲಿಯ ಪ್ರಾಕೃತಿಕ ಸನ್ನಿವೇಶ ಇಲ್ಲಿಯ ಸಂಸ್ಕೃತಿ ರಮಣೀಯ ಸಮುದ್ರ ಮೊದಲಾದುವುಗಳಿಂದಾಗುವ ಸಂಪತ್ತು ಇವುಗಳೆಲ್ಲವನ್ನೂ ಕಂಡು ಈ ಭಾಗನೆಲ್ಲಾ ನಮ್ಮ ಮೈಸೂರಿಗೆ ಸೇರಿದಾಗ ಇದೆಷ್ಟು ಉತ್ತಮವಾಗ ಬಹುದು ಎಂದು ಹಂಬಲಿಸಿದ್ದೆ. ಆ ಕನಸು ಈಗ ನನಸಾಗಿ ಇಲ್ಲಿಯೇ ನನಗೆ ಉದ್ಯೋಗ ದೊರಕಿತು ಎಂಬುದು ಅದೇ ದೊಡ್ಡ ಭಾಗ್ಯವಾಗಿದೆ. ಏಕೆಂದರೆ ಇಲ್ಲಿಯ ಗೋವಿಂದ ಪೈ ಮೊದಲಾದವರು ಕನ್ನಡವನ್ನು ಬೆಳಗಿಸಿದರು. ಕನ್ನಡ ಸಾಹಿತ್ಯವು ಎರಡನೇ ಶತಮಾನದಿಂದಲೂ ಅಭಿವೃದ್ಧಿ ಹೊಂದಿರನ್ನ, ರಾಘವಾಂಕ ಮೊದಲಾದ ಕವಿವರ್ಯರಿಂದ ಪೋಷಣೆಗೊಂಡು ಮೆರೆದಾಡುತ್ತಿದೆ. ಶಾಂತಿನಿಕೇತನದಂತಹ ಈ ವಾತಾವರಣದಲ್ಲಿ ಬೆಳೆಯುತ್ತಿರುವ ಮಕ್ಕಳ ಸಾಹಿತ್ಯದಲ್ಲೂ ಮುಂದಿನ ಜೀವನದಲ್ಲೂ ಮುಂದುವರಿದು ನಾಡಿನ ಕೀರ್ತಿಯನ್ನು ಹೆಚ್ಚಿಸಲಿ ಎಂದು ವಿದ್ಯಾದಾಯಿನೀ ಹಯರ್ ಸೆಕೆಂಡರೀ ಶಾಲೆಯ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನದಿಂದ ಜಿಲ್ಲೆಯ ನ್ಯಾಯಾಧೀಶರಾಗಿರುವ ಶ್ರೀ ಎಸ್. ವಿ. ಪಾಪಾರೆಡ್ಡಿ ಇವರು ಭಾಷಣವಿತ್ತರು.

ಬೆಳಿಗ್ಗೆ ಶಾಲಾ ಮುಖ್ಯೋಪಾಧ್ಯಾಯರು ರಾಷ್ಟ್ರಧ್ವಜವನ್ನರಳಿಸಲು ಶಾಲಾ ಎನ್. ಸಿ. ಸಿ. ವಿದ್ಯಾರ್ಥಿಗಳಿಂದ ಪಥಚಲನೆಯು ನಡೆಯಿತು. ಶಾಲಾ ವಿದ್ಯಾರ್ಥಿಗಳ ವೇಷ ಪಲ್ಲಟ ಸ್ಪರ್ಧೆಯು ನಡೆದ ಬಳಿಕ ಶಾಲಾ ಅಚಳಿತ ಕ್ಕೊಳಪಟ್ಟ ಮೂರು ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಸಾಯಂಕಾಲ ಪ್ರಾರ್ಥನೆಯಾಗಲು ಸಂಘದ ಕೋಶಾಧಿಕಾರಿ ಶ್ರೀ ಪಿ. ಶ್ರೀನಿವಾಸರಾವ್ ಇವರು ಸ್ವಾಗತ ಭಾಷಣ ಮಾಡಲು ಹಳೆ ವಿದ್ಯಾರ್ಥಿ ಶ್ರೀ. ಕೆ. ಎನ್. ಹಂಭಟ್ ಇವರು ಶಾಲಾ ಸ್ವಸ್ತಿ ವಾಚನವನ್ನು ಗೈದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಂ. ವಾಸುದೇವರಾಯರು ಶಾಲಾ ವರದಿಯನ್ನೋದಲು ಅಧ್ಯಕ್ಷರಿಂದ ಪಾಠ ಮತ್ತು ಪಾಠೇತರ ಚಟುವಟಿಕೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವನ್ನೂ ಹಂಚಲಾಯಿತು. ಕೊನೆಗೆ ಶಾಲಾ ವಿದ್ಯಾರ್ಥಿಗಳಿಂದ ನೃತ್ಯನಾಟಕಗಳೇ ಮೊದಲಾದ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಸುರತ್ಕಲ್ ವಿದ್ಯಾದಾಯಿನೀ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 29. 1. 1967 ರಂದು ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳಿಗ್ಗೆ ಹಳೆ ವಿದ್ಯಾರ್ಥಿಗಳೊಳಗೆ ಪಂದ್ಯಾಟಗಳು ನಡೆದವು. ಅನಂತರ ಮಹಾ ಸಭೆ ಜರಗಿತು. ಸಂಜೆ ಸಂಘದ ಕಾರ್ಯದರ್ಶಿ ಶ್ರೀ ಎಂ. ವಾಸುದೇವರಾಯರು ಗತ ವರ್ಷದ ವರದಿಯನ್ನೋದಿದರು. ಅಧ್ಯಕ್ಷರು ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವಿತ್ತ ಬಳಿಕ ತಮ್ಮ ಅಧ್ಯಕ್ಷ ಭಾಷಣದಲ್ಲಿ ತಮ್ಮ ಹಿಂದಿನ ವಿದ್ಯಾರ್ಥಿ ಜೀವನ ಹಾಗೂ ತಾವು ಕಲಿತ ಶಾಲೆಯ ಮೇಲಿರುವ ತಮ್ಮ ಅಭಿಮಾನವನ್ನು ವಿವರಿಸಿ ಹಳೆ ವಿದ್ಯಾರ್ಥಿಗಳು ತಮ್ಮ ಮಾತೃ ಸಂಸ್ಥೆಯ ಮೇಲೆ ಇರಿಸಬೇಕಾದ ಭಕ್ತಿ ಹಾಗೂ ಆ ಸಂಸ್ಥೆಗೆ ಮಾಡಬೇಕಾದ ಸಹಾಯ ವಿದ್ಯಾರ್ಥಿಗಳಲ್ಲಿರ ಬೇಕಾದ ಒಳ್ಳೆಯ ಗುಣ ನಾಗರಿಕ ಜೀವನಕ್ಕೆ ಬೇಕಾದ ನೈತಿಕ ಶಿಸ್ತಿನ ಅವಶ್ಯಕತೆ ಇವೇ ಮೊದಲಾದ ವಿಷಯಗಳ ಮೇಲೆ ವಿಚಾರಾತ್ಮಕವಾಗಿ ಮಾತನಾಡಿದರು. ಕೊನೆಗೆ ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆಯಾಗಿ ಹಳೆವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ನಗೆ ನಾಟಕಗಳು ಜರಗಿದವು.

ಶ್ರವಣ ಬೆಳಗೊಳದಲ್ಲಿ ಮಹಾಮಸ್ತಾಭಿಷೇಕ

ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಬಾಹುಬಲಿ ಸ್ವಾಮಿಯ (ಗೋಮಟೇಶ್ವರ ಸ್ವಾಮಿ) ಮಹಾಮಸ್ತಾಭಿಷೇಕವನ್ನು ತಾ. 30—3—67ರಂದು ಆಚರಿಸಲಾಗುವುದು. ಧಾರ್ಮಿಕ ಕಾರ್ಯಗಳ ವಿಧಿಯು ಮುಖ ಕಾರ್ಯಕ್ರಮವಾದ ಮಹಾ ಮಸ್ತಾಭಿಷೇಕದ 1008 'ಕಳಶ'ಗಳನ್ನು ವಿವಿಧ ಮೊತ್ತದ ಹಣಕ್ಕೆ ಭಕ್ತಾದಿಗಳಿಗೆ ನೀಡಲಾಗುವುದು. ಭಕ್ತಾದಿಗಳು ಬೇಕಿದ್ದರೆ ಹಣವನ್ನು ಮೊದಲೇ ವಿಶೇಷ ಅಧಿಕಾರಿಗಳಿಗೆ ಕಳುಹಿಸಿ ಕಳಶಗಳನ್ನು ಕಾಯ್ದಿರಿಸಿಕೊಳ್ಳಬಹುದು.

ಶ್ರವಣ ಬೆಳಗೊಳವನ್ನು ತಲಪಲು ಎಲ್ಲಾ ಕಡೆಯಿಂದಲೂ ವಿಶೇಷ ಬಸ್ ಸೌಕರ್ಯವನ್ನೊದಗಿಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಂಘ ಸಂಸ್ಥೆಗಳಿಗೆ ಅವಕಾಶವಿದೆ.

ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲು ಇಚ್ಛಿಸುವವರು ಕಳಶಗಳನ್ನು ಮತ್ತೆ ಈ ಶೆಡ್ಡುಗಳಲ್ಲಿ ಸ್ಥಳವನ್ನು ಕಾದಿರಿಸುವವರು ಹಾಗೂ ಹೆಚ್ಚಿನ ವಿವರ ಬೇಕಿದ್ದವರು: ವಿಶೇಷ ಅಧಿಕಾರಿಗಳು ಮಹಾಮಸ್ತಾಭಿಷೇಕ ಮಹೋತ್ಸವ, ಶ್ರವಣ ಬೆಳಗೊಳ, ಚನ್ನರಾಯ ಪಟ್ಟಣ ತಾಲೂಕು, ಹಾಸನ ಜಿಲ್ಲೆ ಇವರಿಗೆ ಬರೆಯಲು ಸೂಚಿಸಲಾಗಿದೆ.

ವಾರ್ಷಿಕೋತ್ಸವ

ಉಡುಪಿ ಬೋರ್ಡ್ ಹಾಯರ್ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 28 ರಂದು ಡಾಕ್ಟರ್ ಕೆ. ಮೋಹನ್‌ದಾಸ್ ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮುಂಜಾನೆ ಉಡುಪಿಯ ತಾಲೂಕು ಅಭಿವೃದ್ಧಿ ಬೋರ್ಡಿನ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ಶೀನಪ್ಪ ಶೆಟ್ಟರವರಿಂದ ಧ್ವಜಾರೋಹಣವಾಯಿತು. ಅನಂತರ ಲಘೂಪಹಾರ, ಛದ್ಮವೇಷ ಸ್ಪರ್ಧೆ, ಆಟೋಟಗಳಾದುವು.

ಸಂಜೆ ಪ್ರಾರ್ಥನೆಯಾದ ಮೇಲೆ ಅಧ್ಯಕ್ಷರು ಆಸನ ಸ್ವೀಕರಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಎನ್. ಆಚಾರ್ಯರು ಸ್ವಾಗತಿಸಿ, ವರದಿವಾಚನ ಮಾಡಿದರು. ಬಹುಮಾನ ವಿತರಣೆಯಾದ ಮೇಲೆ ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆಯಾಗಿ, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಪುತ್ತೂರು ಶಾಸನ ಸಭಾ ಕ್ಷೇತ್ರದ ಮತದಾರರಲ್ಲಿ

ನಮ್ರ ವಿನಂತಿ

ಬಂಧುಭಗಿನಿಯರೇ,

ದೇಶವನ್ನು ದಿನದಿಂದ ದಿನಕ್ಕೆ ಅಧಃಪತನಕ್ಕೆ ಒಯ್ಯುತ್ತಿರುವ ಕಾಂಗ್ರೆಸು ದುರಾಡಳಿತೆಯನ್ನು ಸಮರ್ಥವಾಗಿ ವಿರೋಧಿಸಿ, ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ನಿರ್ಭೀತಿಯಿಂದ ಶಾಸನ ಸಭೆಯಲ್ಲಿ ವ್ಯಕ್ತಪಡಿಸಲು ಮುಂಬರುವ ಚುನಾವಣೆಯಲ್ಲಿ ಮೈಸೂರು ವಿಧಾನ ಸಭೆಗೆ

ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ

ಇವರಿಗೇನೇ

ಬೆಂಬಲ ಕೊಡಬೇಕಾಗಿ

ಕೋರುತ್ತೇವೆ.

ಚುನಾವಣಾ ಚಿಹ್ನೆ :

ಸಿಂಹ

ಬಿ. ಪ್ರಭಾಕರ್ ರಾವ್, ಪುತ್ತೂರು
ಕೆ. ಉಗ್ಗಪ್ಪ ಶೆಟ್ಟಿ ಎಡ್ವಕೇಟ್, ಮಂಗಳೂರು
ಡಾ| ಶಿವರಾಮ ಕಾರಂತ್, ಪುತ್ತೂರು
ಎಮ್. ಸೀತಾರಾಮ ರೈ, ಎಡ್ವಕೇಟ್, ಪುತ್ತೂರು
ಡಾ| ಬಿ. ರಾಮ ಭಟ್, ಪುತ್ತೂರು
ಪಾರಹಾಸಿ ಸುಬ್ರಾಯ ಭಟ್, ಅಡ್ಯನಡ್ಕ
ಪಿ. ಅನಂತರಾಜ ಅರಿಗ, ಎಡ್ವಕೇಟ್, ಪುತ್ತೂರು
ಬಿ. ಟಿ. ರೈ, ಎಡ್ವಕೇಟ್, ಪುತ್ತೂರು
ಸಿ. ಎಸ್. ಶಾಸ್ತ್ರಿ, ವಕೀಲ್, ಪುತ್ತೂರು
ಡಾ| ಜಿ. ಕೃಷ್ಣಭಟ್, ಎಮ್. ಬಿ. ಬಿ. ಎಸ್., ಪುತ್ತೂರು

‘ಭಾರತದ ಸೇವೆ ಎಂದರೆ

ಸಂಕಟಪಡುತ್ತಿರುವ ಕೋಟ್ಯಂತರ ಜನರ ಸೇವೆ;
ದಾರಿದ್ರ್ಯ, ರೋಗರುಜಿನ, ಅಜ್ಞಾನ, ಅಸಮಾನತೆ
……………………ಇವೆಲ್ಲದರ ನಿರ್ಮೂಲನ……’

—ನೆಹರೂ ಕಂಡಕನಸು

ಇದನ್ನು ನನಸಾಗಿಸಲು
ನಿರಂತರವಾಗಿ ಶ್ರಮಿಸುತ್ತಿರುವ

ಕಾಂಗ್ರೆಸಿಗೇ

ಬೆಂಬಲ

ನಿಮ್ಮ ಆಯ್ಕೆ→



— ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿ

ನಗೆಬಿಂದು

ತಲೆ ಬೋಳಿಸಿಕೊಂಡು ಬಂದಿದ್ದ ಗಂಡನನ್ನು ನೋಡಿದ ಪತ್ನಿ:—

"ಹೀಗೇಕೆ ಬೋಳು ಮಾಡಿಸಿದ್ದು?"

"ನಿನಗೇನು ಗೊತ್ತು?....ನಾಳೆಯಿಂದ ಕ್ಷೌರದ್ದ ಚಾರ್ಜು ಹೆಚ್ಚುವುದಂತೆ..."

○ ○ ○

ಈರ್ವರು ಗೆಳತಿಯರು ಮಾರುಕಟ್ಟೆಯ ಬಳಿ ಸಂಧಿಸಿದಾಗ ನಡೆದ ಸಂಭಾಷಣೆ—

"ನಿನ್ನ ಗಂಡ ಈ ಬಾರಿ ಚುನಾವಣೆಗೆ ನಿಲ್ಲುವರಂತೆ...ಹೇಗಿದೆ ವಿಜಯ ಸಾಧ್ಯತೆ?..."

"ಓ....ನಿಮಗಿನ್ನೂ ಸಂದೇಹವೆ?....ಅವರು ಬಹು ಸಮರ್ಥರು.... ನಿಲ್ಲದೇ ಗೆಲ್ಲಬಲ್ಲರು...."

○ ○ ○ ○

ಕೆಲವು ವರ್ಷಗಳಿಂದ ಸ್ನೇಹಿತೆ ಕಾಣದಿದ್ದರೂ ಪತ್ರ ವ್ಯವಹಾರ ಸಂಬಂಧವಿರಿಸಿದ್ದ ಈರ್ವರು ತರುಣಿಯರು ಅನಿರೀಕ್ಷಿತವಾಗಿ ರೈಲ್ವೆ ನಿಲ್ದಾಣದಲ್ಲಿ ಸಂಧಿಸಿದಾಗ ಅವರ ಸಂಭಾಷಣೆ ಹಲವು ವಿಚಾರಗಳ ಮೇಲೂ 'ಕ್ಷ ಕಿರಣ' ಬೀರಿತು.

ವಾಸಂತಿಯು ಕೈ ಹಿಡಕೊಂಡಿದ್ದ ಒಂದು ಮಗುವನ್ನು ನೋಡಿ ರಂಜಿನಿ ಹೇಳಿದಳು:—"ವಾಸಂತಿ! ಈ ಮಗು ನಿನ್ನ ಗಂಡನ ನಿಜರೂಪು....ಕಾರ್ಬನ್ ಕೋಪಿ ತೆಗೆದಂತೆ ಕಾಣುತ್ತದಲ್ಲೇನೇ?...."

"ಆದರೆ, ಇದು ನಮ್ಮ ಮಗ್ಗುಲ ಮನೆಯ ಜಯಂತಿಯ ಮಗ...."

○ ○ ○

ಬೋರೇ ಗೌಡರು ಬೆಳಗ್ಗೆ ಚಳಿಕಾಯಲು ಎಳೆ ಬಿಸಿಲಲ್ಲಿ ಕುಳಿತು ತನ್ನ ಎಳೆ ಮಗ ಪತ್ರಿಕೆಯ ವಾರ್ತೆ ಓದುವುದನ್ನು ಕೇಳುತ್ತಿದ್ದರು.

"ಅಪ್ಪಾ!....ರಷ್ಯನರು ನಾಯಿಯಿದ್ದ ಒಂದು ಬಾಣವನ್ನು ಆಕಾಶ ಮಂಡಲಕ್ಕೇರಿಸಿದರಂತೆ...."

"ಅದು ನಿಜವೇ ಆಗಿರಬೇಕು....ನಿನ್ನೆ ರಾತ್ರಿ ಒಂದು ನಾಯಿ ಆಚೇ ಬಯಲಿನಲ್ಲಿ ಎಡೆಬಿಡದೇ ಕೂಗುತ್ತಿತ್ತು...."

○ ○ ○ ○

ಒಬ್ಬಳು ಬೆಣ್ಣೆ ವ್ಯಾಪಾರಿಯಲ್ಲಿಗೆ ಹೋಗಿ,—

'ಒಂದೂ ಕಾಲೂ ಅರೆಕಾಲೂ ಕಿಲೋ ಬೆಣ್ಣೆ ತೂಗಿರಿ....'

'ಅದೇನಮ್ಮಾ! ಒಂದೂವರೆ ಕಿಲೋ ತೂಗುತ್ತೇನೆ...'

'ಹಾಗಾದ್ರೆ ಒಂದೂ ಕಾಲು ಕಿಲೋ ನಾಲದೆ'

'ಊಹೂಂ;....'

ವ್ಯಾಪಾರಿ ಬೆಣ್ಣೆ ತೂಗಿ 'ಪೇಕ್' ಮಾಡಲು ಪ್ರಕಮಿಸಿದಾಗಲೂ 'ಊಹೂಂ' ಎಂದ ಗ್ರಾಹಕಿಯತ್ತ ನೋಡಿ ವ್ಯಾಪಾರಿ ವಿಚಾರಿಸಿದ.

'ಬೆಣ್ಣೆ ನನಗೆ ಬೇಕಾಗಿಲ್ಲ.... ನಿನ್ನೆ ನಮ್ಮ ನೌಕರ ಖರೀದಿಸಿ ತಂದ ಬೆಣ್ಣೆಯಲ್ಲಿ ಒಂದೂ ಕಾಲು ಅರೆಕಾಲೂ ಕಿಲೋ ಬೆಣ್ಣೆ ಕಡಿಮೆಯಿತ್ತು. ಅಷ್ಟು ಬೆಣ್ಣೆಯ ಗಾತ್ರ ತಿಳಿಯುವುದಕ್ಕಾಗಿ ಮಾತ್ರವೇ ತೂಗಿಸಿದೆ...'

ಎಚ್. ಎಂ. ನಾರಾಯಣ ಭಟ್.

ಕುಂದಾಪುರ ಮುನ್ಸಿಪ್ ಕೋರ್ಟಿನಲ್ಲಿ

O. S 502/66

ಪರಮೇಶ್ವರ ಪುರಾಣಿಕ —ವಾದಿ

ಪರಮೇಶ್ವರ ಭಟ್ಟ ಸಹಾ—ಪ್ರತಿವಾದಿರು

ಸದ್ರಿ ವಾದಿ ಕಡೆಯಿಂದ ಈ ಮೂಲ್ಕ ಜಾಹೀರು ಮಾಡಿಕೊಳ್ಳುವುದೇನೆಂದ್ರೆ—

4 ರಾಮಕೃಷ್ಣ ಭಟ್ಟ, 8 ಗಣಪತಿ ಭಟ್ಟ —ಪಟೇಲ್ ಶಂಕರ ಭಟ್ಟ ಮಕ್ಕಳು. ಉಪ್ಪುಂದ ಗ್ರಾಮ.

ವಾದಿಗೆ ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ಬಾಕಿ ರೂ. 513—02 ಬಂದಾದಿ ಕೊಳ್ಳುವರೆ ವಾದಿ ಮಾಡಿದ ದಾವೆಯು ತಾ. 8—3—67ಕ್ಕೆ ಅಖೈರಿ ತನ್ಕಿಗೆ ಇಟ್ಟಿದೆ. ಈ ಕುರಿತು ನಿಮ್ಮ ಉದಾಯಂಜಿಯಿದ್ರೆ ಸದ್ರಿ ದಿವಸ ಹಗ್ಲು 11ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಯ ಪಡ್ಸಿದೆ.

M. M. Hebbar
Advocate for Pltf.

Kundapur, Date 9—2—67.

In the Court of the Munsif of Karkal.

O. S. No. 456/1966.

Between:—

Rukmini Shedthy — Plaintiff

And

1. Shama Shetty,
2. Ramanna Shetty,

children of Sheshi Shedthi Residents of Sulemogru in Kadandale village of Karkala Taluk, S. K. Dt.

—Defendants.

The plaintiff abovenamed has filed the above suit against both of you for recovery of annuity due to her for Rs. 194-08. The above suit is posted to 14-3-1967 for your appearance. Please take notice that if you fail to appear on 14-3-1967 (at 10 o'clok in the forenoon) personally or through a properly authorised vakil and have your say in the matter. In default the suit will be proceeded exparte.

By order of the Court.

N. M. Adyanthaya,
Advocate for plaintiff.

Karkala, 10-2-1967.

(ಮೂರನೇ ಪುಟದಿಂದ)

ರೋ ಎಂದು ಆಸೆಗಣ್ಣುಗಳಿಂದ ನೋಡುತ್ತಿದ್ದಾರೆ. ಅವರ ಆಸೆ ನಿರಾಸೆಯಾದಾಗ ಕಿಡಿಗೇಡಿತನ-ರಾಕ್ಷಸೀ ಪ್ರವೃತ್ತಿ ತಲೆದೋರುತ್ತಿದೆ. ಆದುದರಿಂದ ಈ ಕಡೆಗೆ ಚುನಾಯಿತ ಪ್ರತಿನಿಧಿಗಳೂ ಪಕ್ಷಗಳೂ ಗಮನ ನೀಡಬೇಕು. ಪ್ರಜಾಪ್ರಭುತ್ವದ ಅವಹೇಳನಕ್ಕೆ ಅವಕಾಶ ಮಾಡಿಕೊಡಬಾರದು.

ಗುರಿಗಿಂತ ಸಾಧನೆ ಮುಖ್ಯ

ಕಳೆದೆರಡು ವರ್ಷಗಳಲ್ಲಿ ದೇಶವು ಎದುರಿಸಬೇಕಾಗಿ ಬಂದ ಮುಖ್ಯ ಸಮಸ್ಯೆಗಳಲ್ಲಿ ಆಹಾರದ ಅಭಾವವೂ ಒಂದು. ಉಪವಾಸದಿಂದ ಯಾರೂ ಸತ್ತಿಲ್ಲವೆಂದು ನಾವು ಹೇಳುತ್ತೇವೆ. ಬರಗಾಲ ಪೀಡಿತರ ನೆರವಿಗಾಗಿ ಸೆರಗೊಡ್ಡಿ ಬೇಡುತ್ತೇವೆ. ಇದು ಒಂದು ರೀತಿಯಲ್ಲಿ ವಿರೋಧಾಭಾಸದಂತೆ ತೋರಿದರೂ ನಿಜವಾಗಿ ಪೀಡಿತರ ನೆರವಿಗಾಗಿ ಕೈಮೀರಿ ದುಡಿಯುತ್ತೇವೆ ಎಂಬುದನ್ನು ತೋರಿಸುತ್ತದೆ. ಹಗಲಿನಷ್ಟು ಬೆಳ್ಳಗಾಗಿರುವ ಪ್ರಶ್ನೆಯನ್ನು ಪ್ರಶ್ನೆಯೇ ಅಲ್ಲವೆಂದು ತಿರಸ್ಕರಿಸುವುದು ಹೇಗೆ ತಾನೇ ಸಾಧ್ಯ? ಆಹಾರ ಸಮಸ್ಯೆಯ ಶಾಶ್ವತ ಪರಿಹಾರವೆಂದರೆ ಅಧಿಕೋತ್ಪಾದನೆ ಮಾತ್ರ. ಈ ದಿಸೆಯಲ್ಲಿ ನಾಲ್ಕನೆಯ ಯೋಜನೆಯಲ್ಲಿ ಹೆಚ್ಚಿನ ಸಾಧನೆ ಸಾಧ್ಯವಾಗಬೇಕು; ಚಿಕ್ಕ ನೀರಾವರಿ ಯೋಜನೆಗಳು, ತೀವ್ರತಮ ವ್ಯವಸಾಯ ಮೊದಲಾದುವಕ್ಕೆ ಅಗ್ರ ಪ್ರಾಶಸ್ತ್ಯ ನೀಡಿ ೧೯೭೦—೭೧ರ ಹೊತ್ತಿನಲ್ಲಿ ನಾವು ಈ ವಿಷಯದಲ್ಲಿ ಸ್ವಾವಲಂಬಿಗಳಾಗಬೇಕು— ಇದು ನಮ್ಮ ಇಂದಿನ ಗುರಿ. ಈ ಗುರಿಯ ಸಾಧನೆ ಸಾಧ್ಯವೆನಿಸಿದರೆ, ದೇಶವು ಹಲವು ಸಮಸ್ಯಾಜಾಲದಿಂದ ಬಿಡುಗಡೆಯಾಗಬಲ್ಲುದು. ರಾಜಕೀಯ ಚದುರಂಗದಾಟದಲ್ಲ ತನ್ನ ಡಾಳವನ್ನೂ ಹಾರಿಸಬಲ್ಲುದು. ಆದರೆ, ನಮ್ಮ ಮೊದಲಿನ ಗುರಿಗಳಲ್ಲಿ ಹೆಚ್ಚಿನವು ಕಾಗದ ಪತ್ರಗಳಲ್ಲಿಯೇ ಉಳಿದಿರುವಂತೆ ಇದೂ ಆದರೆ, ಅಥವಾ ಬರಿಯ ಅಂಕೆ—ಸಂಖ್ಯೆಗಳ ಕಂತೆ ಯಾದರೆ ಏನು ಪ್ರಯೋಜನ?

ಹಿರಣ್ಣಯ್ಯ ಮಿತ್ರ ಮಂಡಳಿ, ಮೈಸೂರು

ಇವರ ಈ ವರ್ಷದ ಹೊಸ ಕಾಣಿಕೆ

ಮಂಗಳೂರು ಟೌನ್ ಹಾಲ್‌ನಲ್ಲಿ

ಭ್ರಷ್ಟಾಚಾರ

ಪ್ರತಿದಿನ ರಾತ್ರಿ 9-30ಕ್ಕೆ.

ಪ್ರತಿ ರವಿವಾರ ಸಂಜೆ 6-30ಕ್ಕೆ 1 ನಾಟಕ.

ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯನವರು

ದಫೇದಾರ್ ಮುರಾರಿ ಪಾತ್ರದಲ್ಲಿ.

ಟಿಕೇಟು ದರ: ರೂ. 5, 4, 3, 2, 1.

ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ 1, 2 ಮತ್ತು 3ನೇ ಕ್ಲಾಸು ರಿಜರ್ವೇಶನ್ ಮಾಡಲಾಗುವುದು.



ಕೆಲಂಡರ್ ಸ್ವೀಕಾರ

ಪ್ರಸಿದ್ಧ ಶೆಟ್ಟಿಯವರ ಮಂಗಳೂರು ನಶ್ಯದ ತಯಾರಕರಾದ ಶ್ರೀ ಎಚ್. ವೆಂಕಟ್ರಾಯ ಶೆಟ್ಟಿ, ಹಳೆಅಂಗಡಿ ಇವರ ತ್ರೈವರ್ಣದ ಕೆಲಂಡರನ್ನೂ ಕಿರ್ಲೋಸ್ಕರ ಪಂಪ್ ಸೆಟ್ ಮತ್ತು ಕಿರ್ಲೋಸ್ಕರ ಇತರ ಉತ್ಪಾದನೆಗಳ ವಿತರಣೆಗಾರರಾದ ಕಕೇನಿ ಸನ್ಸ್ ಮತ್ತು ಕಂಪೆನಿ, ಮಂಗಳೂರು ಇವರ ಚಿತ್ತಾಕರ್ಷಕವಾದ ಕೆಲಂಡರನ್ನೂ ಆತ್ಮಾದರದಿಂದ ಸ್ವೀಕರಿಸಿದ್ದೇವೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. 687/1966.
O. S. 434/1965.

ಪಾವ್ಲ ಬೌತೀಸ ಡಿ'ಸೋಜ.— ಅರ್ಜಿದಾರ.

ಒಬ್ಬೇದಿ ಹೆಂಗ್ಸು ಸಹ— ಎದ್ರಿರು.

1] ಒಬ್ಬೇದಿ ಹೆಂಗ್ಸು, ಜಾಕು ಹೆಂಗ್ಸಿನ ಮಗಳು, 3] ನಾರ್ಣಪೂಜಾರಿ, ಒಬ್ಬೇದಿ ಹೆಂಗ್ಸಿನ ಮಗ, ಕಾರ್ಕಳ ತಾಲೂಕ್, ಮೂಡುಮಾರ್ನಾಡು ಗ್ರಾಮದಲ್ಲಿರುವವರು.

4] ರಾಮಣ್ಣ ಶೆಟ್ಟಿ, ತಿಮ್ಮಾಜು ಹೆಂಗ್ಸಿನ ಮಗ, ಕಾರ್ಕಳ ತಾಲೂಕು ಮರ್ನಾಡಿ ಗ್ರಾಮದಲ್ಲಿರುವವನು.

1, 3, 4ನೇ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲಿನ ಅಮಲ್ದಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಏಲಂಗೆ ಅಪೇಕ್ಷಿಸಿ ಅರ್ಜಿದಾರನು ದಾಖಲ್ಲು ಮಾಡಿದ ಏಲಂ ಇಸ್ತಿಹಾರಿನ ಶರ್ತು ನಿರ್ಣಯಿಸುವ ಬಗ್ಗೆ ತಾ. ? ? —67ಕ್ಕೆ ನಿಮಗೆ ಅಕ್ಸೆಂ ನೋಟೀಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅಮಲ್ದಾರಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
ಅರ್ಜಿದಾರನ ಕಡೆ ಎಡ್ವಕೇಟ್

ಕಾರ್ಕಳ, 10—2—67.

ನಿರ್ಭಾಗ್ಯೆ

(ಎರಡನೇ ಪುಟದಿಂದ)

ಎಲ್ಲಿದೆಯಪ್ಪ. ಅಲ್ಲದೆ ಲಕ್ಷ್ಮಿ ಮೊದಲಿಂದಲೂ ಇಲ್ಲೇ ಇದ್ದವಳು....ಅವಳನ್ನು ಈಗ ಬಿಟ್ಟಿರಲಾರೆ...ನಿನ್ನ...."

'ನನ್ನದಿರಲಿಕ್ಕ, ಗಂಡು ಪರಿಚಯದ ವ್ಯಕ್ತಿ. ಚೆನ್ನಾಗಿದ್ದಾನೆ. ವಿದ್ಯಾವಂತ, ಅತ್ತೆ ಮನೆಯಲ್ಲಿಯೇ ಇರುತ್ತಾನೆ ಅಳಿಯ."

"ಯಾರಪ್ಪ ಅದು?"

"ವೇಣು ಕಾಣಮ್ಮ"

"ಅವನು ಹಿಂದೆ..."

'ಹಿಂದಿನ ವಿಷಯ ಬೇಡಕಣ್ರಿ, ಒಪ್ಪಿಕೋ ನಾಳು. ಲಕ್ಷ್ಮಿ ಚೆನ್ನಾಗಿರಬೇಕೆಂದು ಎಲ್ಲರ ಆಸೆ. ವೇಣು ಮದುವೆಯಾದರೆ ಸುಖವಾಗಿರುತ್ತಾಳೆ. ವೇಣು ಅವಳನ್ನು ಒಪ್ಪಿದ್ದಾನೆ. ಲಕ್ಷ್ಮಿಯೂ ಒಪ್ಪಿದ್ದಾಳೆ ಕಣಕ್ರಿ"

"ಏನೊಂಪ್ರೇ....ಕೇಳಿದ್ರಾ ಇವನ ಮಾತು" ಎಂದು ವೇದಮ್ಮ ಪತಿಗೆ ಹೇಳಿದರು.

'ಅವನು ಮನೆಯ ಹಿರಿಯ ಮಗ ಕಣೆ ವೇದಾ' ಎಂದು ಅಭಿಮಾನದಿಂದ ಹೇಳಿದರು ನಾರಾಯಣ ಮೂರ್ತಿ.

ಎಲ್ಲರ ಆಸೆಯೂ ನೆರವೇರಿತು.

ಲಕ್ಷ್ಮಿ ವೇಣುವಿನ ಧರ್ಮ ಪತ್ನಿಯಾದಳು.

೪

ಎರಡು ವರ್ಷ ಕಳೆಯಿತು.

ವೇಣು ಕಂಪೆನಿಯ ಕೆಲಸಗಾರರಿಗೆ ಚಿರಪರಿಚಿತನಾಗಿದ್ದ. ಅವನದಾದ ಒಂದು ಗುಂಪೇ ಸಿದ್ಧವಾಗಿತ್ತು. ದಿನ ಕಳೆದಂತೆ ಶ್ರೀಧರನ ಸ್ನೇಹದಿಂದ ಹಿಂದೆ ಸರಿಯಲಾರಂಭಿಸಿದ ವೇಣು. ಸಹವಾಸ ದೋಷದಿಂದ ಅನೇಕ ದುಶ್ಚಟಗಳನ್ನು ಕಲಿತ.

ತಪ್ಪುಗಳನ್ನು ತಿದ್ದಲು ಹೊರಟ ಶ್ರೀಧರ ಸೋಲೊಪ್ಪಬೇಕಾಯಿತು.

ಶ್ರೀಧರನ ಬುದ್ಧಿ, ಅವನ ಜನಪ್ರಿಯತೆ, ಸಾತ್ವಿಕ ಗುಣಗಳನ್ನು ಕಂಡು ಕರುಬುವವರ ಸಂಖ್ಯೆಯೂ ಕಡಿಮೆ ಇರಲಿಲ್ಲ ಅವನ ಮುಖಭಂಗ ಮಾಡಲು ಹಾತೊರೆಯುತ್ತಿದ್ದರು.

ಸತ್ಯಾಗ್ರಹ ಹೂಡಲು ಹೊರಟ ನೌಕರರ ಗುಂಪನ್ನು ಶ್ರೀಧರ ತನ್ನ ವಾದದಿಂದ ಸಲಹೆಗಳಿಂದ ಅವರ ಕಾರ್ಯಕ್ರಮವನ್ನು ತಡೆದು ಗುಂಪನ್ನು ಚದುರಿಸಿದ. ಗುಂಪಿನ ಮುಖಂಡ ವೇಣು ಹಲ್ಲು ಕಡಿದ. ವಿನಾಕಾರಣವಾಗಿ ವೇಣು ಶ್ರೀಧರನ ಬಗ್ಗೆ ದುರಭಿಪ್ರಾಯ ತಾಳಿ ಸಂಶಯದಿಂದನೋಡಲಾರಂಭಿಸಿದ.

ಯಾವ ಬಗೆಯ ಕೃತ್ರಿಮತೆಯೂ ಇಲ್ಲದೆ ನಿಸ್ಸಂಕೋಚದಿಂದ ಶ್ರೀಧರ ಲಕ್ಷ್ಮಿ ಮಾತನಾಡುತ್ತಿದ್ದುದು, ಒಟ್ಟಿಗೆ ಇರುತ್ತಿದ್ದುದು ವೇಣುವಿಗೆ ಸರಿಬರುತ್ತಿರಲಿಲ್ಲ. ಸಂಶಯದ ಕೀಟ ಅವನ ಮನಸ್ಸನ್ನು ಕೊರೆಯುತ್ತಿತ್ತು.

ಲಕ್ಷ್ಮಿ ಹೆಣ್ಣು ಮಗುವಿನ ತಾಯಿಯಾದಳು. ಮಗುವಿಗೆ ಒಂದು ವರ್ಷವೂ ಕಳೆಯಿತು. ಆ ವೇಳೆಗೆ ಲಕ್ಷ್ಮಿ ಪತಿಯಿಂದ ಸಾಕಷ್ಟು ಕಿರುಕುಳ ಅನುಭವಿಸಿದ್ದಳು. ಯಾರೊಬ್ಬರ ವಿಷಯವೂ ವೇಣುಗೆ ರುಚಿಸಲಿಲ್ಲ.

ಲಕ್ಷ್ಮಿಯ ಮಗು ಶ್ರೀಧರನನ್ನು ಬಹುವಾಗಿ ಆಕರ್ಷಿಸಿತ್ತು. ಶ್ರೀಧರ ಕೆಲಸ ಮುಗಿದೊಡನೆಯೇ ಮನೆ ತಲುಪುತ್ತಿದ್ದ. ಲಕ್ಷ್ಮಿ ವೇದಮ್ಮ ಮತ್ತು ಮಗುವಿನೊಂದಿಗೆ ತಿರುಗಾಟದಲ್ಲಿ ಇಲ್ಲವೇ ಮಾತಿನಲ್ಲಿ ಹೊತ್ತು ಕಳೆಯುತ್ತಿದ್ದ.

ವಿವೇಕ ಶೂನ್ಯನಾದ ವೇಣುವಿಗೆ ಸಂಶಯದ ಪಿಶಾಚಿ ಅಂಟಿಕೊಂಡಿತ್ತು. ಹೆಂಡತಿಯ ಶೀಲವನ್ನು ಶಂಕಿಸಲೂ ಹಿಂಜರಿಯಲಿಲ್ಲ. ಮಗು ತನ್ನದಲ್ಲ ಶ್ರೀಧರನದು ಎಂಬ ನಿರ್ಧಾರಕ್ಕೆ ಬಂದು ಒಂದು ರಾತ್ರಿ ಆ ಮಾತನ್ನಾ ಆಡಿದನವ?

ಶ್ರೀಧರನ ಹೃದಯ ಬಹುವಾಗಿನೊಂದಿತು. ವೇದಮ್ಮ, ನಾರಾಯಣಮೂರ್ತಿ ಮಗಳ ಬಾಳು ಹದಗೆಟ್ಟುದನ್ನು ಕಂಡು ಮರಗಿದರು. ಲಕ್ಷ್ಮಿ ಪತಿಯ ನಿಂದನೆ, ವೇದನೆಗಳನ್ನೆಲ್ಲ ಅನುಭವಿಸಿದಳು. ಅವಳ ಹೃದಯ ಕಲ್ಲಾಗಿತ್ತು.

ಗಂಡ ಹೆಂಡತಿಯ ಮಧ್ಯೆ ತಾನಿದ್ದು ಅವರ ಶಾಂತಿಗೆ ಭಂಗ ತರುವುದು ಬೇಡವೆಂದು ಶ್ರೀಧರ ಮನೆ ಬಿಡಲು ನಿರ್ಧರಿಸಿದ

೫

ವೇಣು ಒಂದು ತಿಂಗಳ ರಜೆ ಪಡೆದು ಮದ್ರಾಸಿಗೆ ಹೋದ, ಜೊತೆಗೆ ಶ್ರೀಧರನ ಹೆಸರನ್ನು ಉಪಯೋಗಿಸಿಕೊಂಡು ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದ. ಶ್ರೀಧರನ ಹೆಸರಿಗೆ ಕಳಂಕ ಬರುವ ಮುಂಚೆ ನಾರಾಯಣಮೂರ್ತಿ ಹಣ ತುಂಬಿದರು.

ವೇಣು ತನ್ನೊಂದಿಗೆ ಪತ್ನಿ ಪುತ್ರಿಯರನ್ನು ಕರೆದೊಯ್ದಿದ್ದ. ಶ್ರೀಧರನೊಂದಿಗೆ ಬಹುವಾಗಿ ಹೊಂದಿಕೊಂಡಿದ್ದ ಮಗು ಶ್ರೀಧರನನ್ನು ಕಾಣದೆ ಕಂಗಾಲಾಯಿತು. ಮದ್ರಾಸಿನ ಹವೆಯ ಕಾರಣದಿಂದ ಮಗುವಿನ ಸ್ಥಿತಿ ಬದಲಾಗಿ ಜ್ವರ ಬರಲಾರಂಭಿಸಿತು.

ಲಕ್ಷ್ಮಿಯ ಸಲಹೆಯನ್ನು ತಿರಸ್ಕರಿಸಿ "ಮಗು ಇದ್ದರೆಷ್ಟು ಸತ್ತರೆಷ್ಟು ಯಾರು ಬರುವುದು ಬೇಡ" ಎಂದ ವೇಣು.

ಮಗು ಒಂದು ದಿನ ಜ್ವರದ ತಾಪದಿಂದ ಬಳಲಿ ಕಣ್ಮುಚ್ಚಿತು. ವೈದ್ಯರ, ಚಿಕಿತ್ಸೆ, ತಾಯಿಯ ಆರೈಕೆ ಫಲಕಾರಿಯಾಗಲಿಲ್ಲ.

ಲಕ್ಷ್ಮಿ ಪತ್ರದ ಮೂಲಕ ತನ್ನ ದುಃಖವನ್ನು ತಾಯಿಗೆ ತೋಡಿಕೊಂಡಿದ್ದಳು.

ನಾರಾಯಣ ಮೂರ್ತಿ ದುಃಖದಿಂದ "ನಿರ್ಭಾಗ್ಯ, ನಿರ್ಭಾಗ್ಯೆ" ಎಂದರು.

ಮಗುವಿನ ಮರಣ ಶ್ರೀಧರನ ಹೃದಯವನ್ನು ಕಲಕಿತು. ಅಕ್ಕ ಮತ್ತು ಭಾವನ ಅಕ್ಕರೆಯ ನುಡಿ ಅವನ ಆತ್ಮಕ್ಕೆ ಶಾಂತಿ ನೀಡಲಿಲ್ಲ. ಜೀವನದ ಎಲ್ಲ ಘಟನೆಗಳೂ ಒಮ್ಮೆ ಅವನ ಮನದಲ್ಲಿ ಸುಳಿದು ಮರೆಯಾದವು.

ಬೆಂಗಳೂರು ಬಿಡುವುದೆಂದು ನಿರ್ಧರಿಸಿ ಶ್ರೀಧರ ತನ್ನ ಆಸೆ ಮತ್ತು ಪರಿಸ್ಥಿತಿಯನ್ನು ಕಂಪೆನಿಯ ಡೈರೆಕ್ಟರರಿಗೆ ತಿಳಿಸಿದ.

ಶ್ರೀಧರ ಬೊಂಬಾಯಿಯಲ್ಲಿದ್ದ ಕಂಪೆನಿಗೆ ವರ್ಗಾಯಿಸಲ್ಪಟ್ಟ. ಅವನ ಮನಸಿಗೆ ಸ್ವಲ್ಪ ನೆಮ್ಮದಿ ದೊರೆತಂತಾಗಿತ್ತು. ಅಗಲುವಿಕೆಯ ನೋವಿನಿಂದ ಪರಿತಪಿಸುತ್ತಿದ್ದ ಅಕ್ಕ ಭಾವನಿಗೆ ಸಮಾಧಾನ ಹೇಳಿ ಶ್ರೀಧರ ವಿಮಾನವೇರಿದ.

ವಿಮಾನ ಬೊಂಬಾಯಿಗೆ ಅಭಿಮುಖವಾಗಿ ಪ್ರಯಾಣ ಬೆಳೆಸಿತು.

೬

ಹಲವು ತಿಂಗಳು ಕಳೆದವು.

ವೇಣು ಪತ್ನಿಯೊಂದಿಗೆ ಮದ್ರಾಸಿನಿಂದ ಮರಳಿ ಕೆಲಸದ ಮೇಲೆ ಹಾಜರಾಗಿದ್ದ. ಶ್ರೀಧರ ಊರು ಬಿಟ್ಟದುದು ಅವನಿಗೆ ಆನಂದದ ಸಂಗತಿಯೇ ಆಗಿತ್ತು.

ಮಗುವನ್ನು ಕಳೆದುಕೊಂಡಿದ್ದ ಲಕ್ಷ್ಮಿಗೆ ಎಲ್ಲವು ಶೂನ್ಯವಾಗಿ ತೋರುತ್ತಿತ್ತು. ಅಪಾರ ವೇದನೆ ಅವಳ ಹೃದಯವನ್ನು ದಹಿಸುತ್ತಿತ್ತು.

ಒಂದುಕಡೆ ಮಗಳವೇದನೆಯಿಲ್ಲದ ದುಃಖ ಇನ್ನೊಂದು ಕಡೆ ದೂರವಾದ ತಮ್ಮನ ಅಂತರಂಗದ ವೇದನೆ ವೇದಮ್ಮನವರನ್ನು ಹಣ್ಣು ಮಾಡಿದ್ದವು.

ಕಲ್ಕತ್ತೆಯಲ್ಲಿದ್ದ ವೇದಮ್ಮನ ಸೋದರ ಸೊಸೆ ಪ್ರಸಾದ್ ತಮ್ಮ ಹೆಂಡತಿ ಮತ್ತು ಮೂವರು ಮಕ್ಕಳೊಂದಿಗೆ ಪ್ರತ್ಯಕ್ಷರಾದರು. ಪ್ರಸಾದ್ ಕಲ್ಕತ್ತೆಯ ಪ್ರಸಿದ್ಧ ವೈದ್ಯರು. ದಕ್ಷಿಣ ಭಾರತದ ಪ್ರವಾಸದಲ್ಲಿದ್ದು ಅವರು ಬೆಂಗಳೂರಿನಲ್ಲಿದ್ದ ತಮ್ಮ ಸೋದರ ಸೊಸೆಯ ಮನೆಯನ್ನಾ ಪತ್ತೆ ಮಾಡಿ ಬಂದಿದ್ದರು.

ಪ್ರಸಾದ್ ವೇದಮ್ಮ ಮತ್ತು ಶ್ರೀಧರರ ತಾಯಿಯ ಅಣ್ಣ.

ವೇದಮ್ಮ ಮಾವ ಮತ್ತು ಅವರ ಕುಟುಂಬದವರನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದರು. ವಿಚಾರ ವಿನಿಮಯ ನಡೆಯಿತು. ವೇದಮ್ಮ ತಮ್ಮ ಶ್ರೀಧರನ ಸಂಗತಿಯನ್ನು ತಿಳಿಸಿದರು.

ಲಕ್ಷ್ಮಿಯ ಸಂಗತಿಯನ್ನು ತಿಳಿದ ತರುವಾಯ ಪ್ರಸಾದರ ಹೃದಯ ಮರುಗಿತು. ಶ್ರೀಧರನನ್ನು ಕಾಣಬಯಸಿದರು.

ತ್ರಿವೇಣಿಯನ್ನು ಕಂಡು ತರುವಾಯ ವೇದಮ್ಮನವರ ಮಾತೃಹೃದಯ ಮತ್ತೆ ಜಾಗೃತವಾಯಿತು. ಶ್ರೀಧರ ಈ ಹುಡುಗಿಯನ್ನಾದರೂ ಒಪ್ಪಿ ಮದುವೆ ಮಾಡಿಕೊಂಡರೆ ನಾನು ಧನ್ಯನಾಗುತ್ತೇನೆ— ಅಂದುಕೊಂಡರು. ತ್ರಿವೇಣಿ ಪ್ರಸಾದರ ಹಿರಿಯ ಮಗಳು. ವಿವಾಹ ವಯಸ್ಕಳಾದ ಯುವತಿ. ಮಗಳನ್ನು ಸೋದರಳಿಯ ಶ್ರೀಧರನಿಗೆ ಕೊಡುವ ಯೋಚನೆಯೂ ಪ್ರಸಾದರಿಗೆ ಮೂಡದಿರಲಿಲ್ಲ.

'ತ್ರಿವೇಣಿಗೆ ಇಪ್ಪತ್ತು ತುಂಬಿತುವೇದ. ಗಂಡು ಹುಡುಕಿ ಹುಡುಕಿ ಸಾಕಾಗಿದೆ. ಅವಳನ್ನು ಕೈ ಹಿಡಿಯುವ ಪುಣ್ಯಾತ್ಮ ಯಾರೋ...."

"ಶ್ರೀಧರನಿಗೆ ಧಾರೆ ಎರೆದು ಬಿಡು ಮಾವ"

"ನಿನ್ನ ತಮ್ಮ ಒಪ್ಪುತ್ತಾನೇನಮ್ಮ"

"ನಾನು ಒಪ್ಪಿಸುತ್ತೇನೆ. ತ್ರಿವೇಣಿ ಕೈ ಹಿಡಿಯಲು ಶ್ರೀಧರ ಪುಣ್ಯ ಮಾಡಿದ್ದ"

"ಇಷ್ಟೊಂದು ಹೊಗಳ ಬೇಡಮ್ಮ..."

"ನನ್ನ ಮಾತಿನಲ್ಲಿ ನಂಬಿಕೆ ಇಲ್ವೆ ಮಾವ. ಶ್ರೀಧರನನ್ನು ಕರೆಯಿಸಿ ಅವನಿಂದಲೇ ಒಪ್ಪಿಸ್ತೇನೆ ಅನ್ನಿಸುತ್ತೇನೆ ಸರಿತಾನೆ"

"ಅವನನ್ನು ನೋಡುವ ಆಸೆ ನನಗೂ ಇದೆ ವೇದಾ"

"ನಿನಗೆ ಆಸೆ ಇಲ್ವೇನೇ ತ್ರಿವೇಣಿ" ಎಂದು ತ್ರಿವೇಣಿಯ ಕೆನ್ನೆ ಹಿಡಿದರು ವೇದಮ್ಮ. ತ್ರಿವೇಣಿಯ ಮುಖ ಕೆಂದಾವರೆಯ ವರ್ಣ ತಾಳಿತ್ತು.

ನಾರಾಯಣ ಮೂರ್ತಿಯ ತಂತಿಯನ್ನು ಕಂಡೊಡನೆಯೇ ಶ್ರೀಧರನಿಗೆ ಗಾಬರಿಯೇ ಆಯಿತು. ಕಂಪೆನಿ ಕಛೇರಿಯ ಮುಖ್ಯಾಧಿಕಾರಿಗಳಿಗೆ ತಿಳಿಸಿ ರಜೆ ಪಡೆದು ನೇರವಾಗಿ ವಿಮಾನ ನಿಲ್ದಾಣಕ್ಕೆ ಬಂದ.

ಬೆಂಗಳೂರಿಗೆ ಹೊರಡುವ ವಿಮಾನ ಸಿದ್ಧವಾಗಿತ್ತು. ಶ್ರೀಧರ ವಿಮಾನವೇರಿದ.

ಎರಡು ಗಂಟೆಯ ವಿಮಾನದಲ್ಲಿ ಹೊರಟಿದ್ದೇನೆ, ಸಂಜೆ ಬೆಂಗಳೂರು ತಲಪುತ್ತೇನೆ ಎಂದು ಶ್ರೀಧರ ಬೊಂಬಾಯಿಯಿಂದ ಕೊಟ್ಟ ತಂತಿ ವೇದಮ್ಮನವರಿಗೆ ತಲುಪಿತು.

ಸಂಜೆ ಆಕಾಶವಾಣಿಯಲ್ಲಿ ಕನ್ನಡ ವಾರ್ತೆ ಕೇಳಿ ಬರುತ್ತಿತ್ತು.

ತ್ರಿವೇಣಿ ರೇಡಿಯೋ ಪಕ್ಕದಲ್ಲಿಯೇ ಕುಳಿತು ವಾರ್ತೆಯನ್ನು ಆಲಿಸುತ್ತಿದ್ದಳು. 'ಇಂದು ಎರಡು ಗಂಟೆಗೆ ಬೊಂಬಾಯಿಂದ ಬೆಂಗಳೂರಿಗೆ ಹೊರಟಿದ್ದ ಭಾರತೀಯ ಸಾರಿಗೆ ವಿಮಾನವೊಂದು ಹುಬ್ಬಳ್ಳಿಯ ಬಳಿ ಉರುಳಿ ಬಿದ್ದಿದೆ. ಯಂತ್ರಕ್ಕೆ ಬೆಂಕಿ ಹತ್ತಿದುದೇ ಅಪಘಾತಕ್ಕೆ ಕಾರಣ. ಚಾಲಕರಾದಿಯಾಗಿ ಪ್ರಯಾಣಿಕರೆಲ್ಲರೂ ಸಾವನ್ನಪ್ಪಿದ್ದಾರೆ."

ತ್ರಿವೇಣಿ "ಅಮ್ಮಾ" ಎಂದು ಗಟ್ಟಿಯಾಗಿ ಚೀರಿದಳು.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್
ಕಾರ್ಕಳ (ದ. ಕ.)

NAVAYUGA 16—2—1967
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ರಾಕ್ಷಸ ಶಕ್ತಿಯಿಂದ ನಿರಂತರ ಅಶಾಂತಿ

ಭಾರತದ ವಿರುದ್ಧ ಪ್ರಚಾರಾಂದೋಲನವನ್ನು ಮಾಡುತ್ತ, ಚೀನಾವು ಅನೈತಿಕ ರಾಜಕೀಯ ತಂತ್ರವನ್ನು ಪ್ರಯೋಗಿಸುತ್ತಲೇ ಇದೆ. ಭಾರತವು ಅದನ್ನು ಪ್ರತಿಭಟಿಸುತ್ತಲೇ ಇದೆ. ಕಳೆದ ವರುಷ ಜುಲೈ ತಿಂಗಳಲ್ಲಿ ನಥುಲಾದಲ್ಲಿ ಧ್ವನಿವರ್ಧಕಗಳನ್ನು ಮುಂಖಾಮುಖಿಯಾಗಿ ಒದರಿಸಿದ್ದೇ ಒದರಿಸಿದ್ದು—ನೆರೆಹೊರೆಯ ರಾಷ್ಟ್ರಗಳಲ್ಲಿ ಸರಕಾರವನ್ನು ಬುಡಮೇಲು ಮಾಡುವ ಹಂಚಿಕೆಯಿಂದ, ಚೀನೀ ಸಾಮ್ರಾಜ್ಯ ವಿಸ್ತರಣಾ ಧೋರಣೆಯ ಸಂಚಿನಿಂದ.

ಸಿಕ್ಕಿಂ—ಟಿಬೇಟ್ ಗಡಿಯಲ್ಲಿಯ ನಥುಲ್ಲಾ ಬಳಿಯಲ್ಲಿ ಅತಿಕ್ರಮಣ ಮಾಡಿ ಪ್ರವೇಶಿಸಿ. ಸಿಕ್ಕಿಂ ದಂಡೆಗುಂಟ ನಂತ ಭಾರತೀಯ ರಕ್ಷಣಾ ಪಡೆಗೆ ಅಭಿಮುಖವಾಗಿ ಧ್ವನಿವರ್ಧಕಗಳನ್ನು ನಿಲ್ಲಿಸಿ ಚೀನೀ ದಂಡುಗಳು ಕಠೋರ, ಹೀನ ಉದ್ರೇಕಕಾರೀ ಭಾಷೆಯನ್ನು ಪ್ರಯೋಗಿಸುತ್ತಿದ್ದಾರೆ. ಚೀನೀ ಆಕಾಶವಾಣಿ ಪ್ರಸಾರಗಳು ಭಾರತ ದೇಶದ ಜನತೆಯನ್ನು ಮತ್ತು ಸರಕಾರವನ್ನು ತೆಗಳಿದ್ದೇ ತೆಗಳಿದ್ದು.

ಈ ಅಪಪ್ರಚಾರದ ಮಧಿತಾರ್ಥ ಇಷ್ಟೇ—ಮತ್ತೊಂದು ರಾಷ್ಟ್ರದ ಸರಕಾರವನ್ನು ಉರುಳಿಸಲು ಪ್ರಯತ್ನ ಮಾಡುವದು ಮತ್ತು ಅನ್ಯ ದೇಶದ ಒಳಾಡಳಿತ ವಿಷಯದಲ್ಲಿ ಹಸ್ತಕ್ಷೇಪ ಮಾಡುವದ. ಚೀನಾದ ಹವಣಿಕೆ. ಭಾರತ ಸಂಕಾರದವರು ಕಾಲಕಾಲಕ್ಕೆ ಪ್ರತಿಭಟನೆಗಳನ್ನು ಕಳುಹಿಸಿ ಚೀಣಿಯರ ರಾಕ್ಷಸ ಮನೋಭಾವವನ್ನು ಬಯಲಿಗೆಳೆದಿದ್ದಾರೆ. ತಾನು ಕೇವಲ ಬಾಂಡುಂಗ ತತ್ವಗಳನ್ನೇ ಅನುಸರಿಸುತ್ತಿದ್ದೇನೆ. ಪಂಚಶೀಲ ತತ್ವಗಳನ್ನು ಕೃತಿಯಲ್ಲಿ ತರುತ್ತಿದ್ದೇನೆ ಎಂಬ ಚೀನದ ಪ್ರಚಾರ ಜಗತ್ತಿನ ಕಣ್ಣಿಗೆ ಮಣ್ಣೆರಚುವ ಸಾಹಸ; ತನ್ನ ಸಾಮ್ರಾಜ್ಯಶಾಹೀ ಧೋರಣೆಯನ್ನು ಮರೆ ಮಾಡುವ ಹವ್ಯಾಸ ಏಷ್ಯದ ಮತ್ತು ಆಫ್ರಿಕೆಯ ಬಹುಷ್ಟು ರಾಷ್ಟ್ರಗಳು ಚೀನಿಯರ ಮೋಸವನ್ನು ಅರಿಯುತ್ತಿವೆ.

ಮತ್ತು "ಏಷ್ಯ ಮತ್ತು ಆಫ್ರಿಕೆಗಳು ಕ್ರಾಂತಿಗೆ ಪಕ್ವವಾಗಿವೆ" ಎಂಬ ಚೀನಿಯರ ಘೋಷಣೆಯು ದುಷ್ಟ ಬುದ್ಧಿಯನ್ನು ಕಂಡುಕೊಂಡಿವೆ.

ಆಶ್ಚರ್ಯದ ಮಾತೆಂದರೆ, ಚೀಣಾವು ತನ್ನ ಸೈನ್ಯಕ್ಕೆ ಆಸಕ್ತ ಪ್ರಚೋದನಾತ್ಮಕ ಅಪಪ್ರಚಾರ ಮಾಡುವ "ಸಾರ್ವಭೌಮ ಹಕ್ಕ"ನ್ನು ಪಡೆದಿದೆ ಎಂದು ಚೀಣಾ ಸಾರುತ್ತಿದೆ. ಅರ್ಥಾತ್ ಇತರ ದೇಶದಲ್ಲಿ ಕಾಯದೇ ಬದ್ಧ ಸರಕಾರವನ್ನು ಉರುಳಿಸುವ ಸಾರ್ವಭೌಮ ಹಕ್ಕನ್ನು ಪಡೆದಿದೆ ಎಂದಾಯಿತು.

ಭಾರತ—ಚೀಣಾಗಳ ನಡುವಿನ ಹೋರಾಟ ಕೇವಲ ಗಡಿ ನಿಷ್ಕರ್ಷೆಯ ಪ್ರಶ್ನೆಯಲ್ಲ. ಅದು ಚೀಣಕ್ಕೆ ಸಹಜೀವನ ತತ್ವದಲ್ಲಿ ನಂಬಿಕೆ ಇಲ್ಲ ಎಂಬ ಮಾತನ್ನು ಮಾತ್ರ ಹೇಳುತ್ತದೆ; ಮತ್ತು ಈ ದೇಶದಲ್ಲಿ ಚೀಣಾವು ತನ್ನ ರಾಜ ನೈತಿಕ ಸಿದ್ಧಾಂತಗಳನ್ನು ಹೇರಲೂ ಪ್ರಯತ್ನಿಸುತ್ತಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಚೀಣಾದ ಈ ಉದ್ಧಟತನ ಇನ್ನು ನಡೆಯಲಾರದು ಎಂಬುದನ್ನು ಚೀಣಾ ಬೇಗ ಗುರುತಿಸಿಕೊಂಡಷ್ಟು ಒಳ್ಳೆಯದು. ಶಾಂತಿಯುತ ಸಹಜೀವನ, ರಾಷ್ಟ್ರಗಳ ಸಾರ್ವಭೌಮತ್ವ, ಏಷ್ಯ—ಆಫ್ರಿಕಾ ರಾಷ್ಟ್ರಗಳ ಸ್ನೇಹ ಸಂವರ್ಧನೆ ಇವುಗಳಿಗೆ ಮಾರಕವಾಗಿರುವ ಚೀಣಿಯರ ಧೋರಣೆ ವೃಥಾ ಪ್ರಲಾಪವಾಗುವುದು—ಎಂಬುದನ್ನು ಚೀಣಾ ಶೀಘ್ರವಾಗಿ ಕಂಡುಕೊಳ್ಳಬೇಕು.

ಗಡಿಗುಂಟ ಚೀಣಿಯ ಸೀಮೋಲ್ಲಂಘನೆ ನಡೆಯುತ್ತಲೇ ಇದೆ. ೧೯೬೭ರ ನೋ 19ರಂದು ಚೀಣೀ ಸೈನಿಕರು ನೇಫಾದ ಅಲುಬರಿ ಪ್ರದೇಶಕ್ಕೆ ಅತಿಕ್ರಮಣ ಮಾಡಿ ಬಂದಿದ್ದರು. ಮತ್ತೆ ಕಳೆದ ವರುಷ ಜುಲೈ ೯ರಂದು ಭಾರತ—ಟಿಬೆಟ್ ಗಡಿಯಲ್ಲಿ ಚೀಣೀ ಸೈನಿಕರು ಭಾರತದ ಪ್ರದೇಶಗಳಲ್ಲಿ ಮೂರು ಮೈಲು ಒಳ ನುಗ್ಗಿ ಬಂದಿದ್ದರು. ಜುಲೈ ೧೬ರಂದು ಪಶ್ಚಿಮ ವಿಭಾಗದ 'ಪ್ರತ್ಯಕ್ಷ ನಿಯಂತ್ರಣರೇಖೆ'ಯನ್ನು ದಾಟಿ ಭಾರತೀಯ ಪ್ರದೇಶದಲ್ಲಿ ಎರಡು ಮೈಲಿ ಒಳಗೆ ಅತಿಕ್ರಮಣ ಮಾಡಿದ್ದರು ಮತ್ತು ಸೈನಿಕ ಮಹತ್ವದ ಗೌಪ್ಯ ವೀಕ್ಷಣೆಯಲ್ಲಿ ತೊಡಗಿದ್ದರು. ಭೂತಾನ ಮತ್ತು ಟಿಬೇಟಿನ ಪರಂಪರಾಗತ ಗಡಿಯ ದಕ್ಷಿಣಕ್ಕಿರುವ ಡೋಕ್ಲಾನ್ ಹುಲ್ಲುಗಾವಲಿಗೆ ಚೀನೀ ಸೈನಿಕರು ಒಳನುಗ್ಗಿ ಬಂದಿದ್ದರು.

ಗಡಿಗುಂಟ ಸೈನಿಕ ಸಂಗ್ರಹಣೆ, ಮೇಲಿಂದ ಮೇಲೆ ಭಾರತದ ಗಡಿಗಳನ್ನು ಉಲ್ಲಂಘಿಸಿ ಒಳನುಗ್ಗಿ ಬರುವುದು, ಧ್ವನಿವರ್ಧಕ ಯಂತ್ರದ ಮೂಲಕ ಭಾರತದ ವಿರುದ್ಧ ಅಪಪ್ರಚಾರ ನಡೆಸುವುದು, ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸುವುದು, ಚೀಣೀ ಅಧಿಕಾರಿಗಳು ಪಾಕಿಸ್ತಾನಿಗಳಿಗೆಲ್ಲಾ ಯುದ್ಧ ತಂತ್ರವನ್ನು ಕಲಿಸುವುದು— ಇವೆಲ್ಲವುಗಳು ಒಂದು ಮಾತನ್ನು ಸಮರ್ಥಿಸುತ್ತವೆ. ಭಾರತದ ವಿರುದ್ಧ ಹಗೆತನ ಸಾಧಿಸುವುದು ಚೀಣಾದ ಶಾಶ್ವತ ಸಿದ್ಧ ಧೋರಣೆಯಾಗಿದ ಎಂಬ ಮಾತನ್ನು.

ಭಾರತದ ಮೇಲೆ ಸೈನಿಕ ಒತ್ತಡವನ್ನು ತಂದು, ರಾಜಕೀಯ ವಿಜಯವನ್ನು ಸಾಧಿಸಬೇಕೆಂಬುದು ಚೀಣಾದ ದುರುದ್ದೇಶ. ಇಷ್ಟಕ್ಕಾಗಿ ಗಡಿ ವಿವಾದ ಪರಿಹಾರ ಬೇಕಿಲ್ಲ.

ಭಾರತವು ಗಡಿ ವಿವಾದವನ್ನು ಇತ್ಯರ್ಥಗೊಳಿಸಲು ಅನೇಕ ಸಲ ಕಳಕಳಿಯಿಂದ ಪ್ರಯತ್ನಿಸಿದ. ಚೀಣಾವು ಅಂತಹ ಪ್ರಯತ್ನಗಳನ್ನೆಲ್ಲ ತಿರಸ್ಕರಿಸಿದೆ. ಚೀಣಾವು ಕೊಲಂಬೋ ಗೊತ್ತುವಳಿಯನ್ನು ಅಲ್ಲಗಳೆದಿದೆ. ಇಷ್ಟೇ ಅಲ್ಲ —'ಗಡಿಗುಂಟ ಶಾಂತಿ ಸ್ಥಾಪನೆಗೆಂದು ಏಕಪಕ್ಷೀಯ ಕ್ರಿಯೆ' ಎಂದು ಚೀಣಾ ಯಾವುದನ್ನು ಉಗ್ಗಡಿಸುತ್ತಿದೆಯೋ ಅಂತಹ ಕ್ರಿಯೆಯನ್ನು ಗೌರವಿಸಲು ಚೀನಾ ಸಿದ್ಧವಿಲ್ಲ. ಚೀಣಾದಲ್ಲಿಯ ಇಂದಿನ ರೆಡ್‌ಗಾರ್ಡ್ಸ್‌ನ ಆಂದೋಳನ, ಚೀನಾ ಸೈನಿಕ ರಾಷ್ಟ್ರವಾಗುವ ಅಂಚಿನಲ್ಲಿದೆ ಎಂಬುದನ್ನೇ ಸಿದ್ಧಪಡಿಸುತ್ತದೆ.

ಗಡಿ ವಿವಾದಗಳ ಇತ್ಯರ್ಥಕ್ಕೆ ಶಾಂತಿಯುತ ಮಾರ್ಗ ಅನುಸರಿಸಬೇಕೆಂದೂ, ಇದಕ್ಕಾಗಿ ಪರಸ್ಪರ ಮಾತುಕತೆಯಿಂದ ಸಮಸ್ಯೆಗಳನ್ನು ಪರಿಹರಿಸಬೇಕೆಂದೂ ಭಾರತವು ಪ್ರತಿಪಾದಿಸುತ್ತಿದೆ. ಚೀಣಾವು ಶಾಂತಿಯುತ ಮಾರ್ಗವನ್ನು ಅನುಸರಿಸಲು ಸಿದ್ಧವಿಲ್ಲದಿದ್ದಾಗ್ಯೂ, ಭಾರತವು ಸಮಸ್ಯೆಯ ಪರಿಹಾರಕ್ಕೆ ಶಾಂತಿಯುತ ವಿಧಾನ ಮಾರ್ಗದಲ್ಲಿಯ ತನ್ನ ನಂಬಿಕೆಯನ್ನು ಕಳೆದುಕೊಂಡಿಲ್ಲ. ತನ್ನ ಪ್ರಾದೇಶಿಕ ಸಾರ್ವಭೌಮತ್ವವನ್ನು ರಕ್ಷಿಸಬೇಕಾದ ಪ್ರಸಂಗಗಳಲ್ಲಿ ಭಾರತವು ಹೋರಾಡಲು ಹೆದರುವುದಿಲ್ಲ.

ಭಾರತದ ರಕ್ಷಣೆಯ ವಿಧಾನಗಳನ್ನು ವಿವರಿಸುತ್ತ ಶ್ರೀ ವೈ. ಬಿ. ಚವಾಣ್ ಇತ್ತೀಚೆಗ ಹೀಗ ಹೇಳಿದ್ದಾರೆ:—

ದೇಶವನ್ನು ಮೂರು ವಿಧವಾಗಿ ರಕ್ಷಿಸಬೇಕು. ಮೊದಲನೆಯದು: ಶತ್ರು ಮುನ್ನುಗ್ಗಿ ಬಂದಾಗ ಅವನನ್ನು ಸದೆ ಬಡಿದು ಸೋಲಿಸಬೇಕು. ಎರಡನೆಯದು: ಶತ್ರುವಿನ ಪ್ರದೇಶದಲ್ಲಿ ಒಳನುಗ್ಗಿ ಅವನ ಯುದ್ಧ ತಂತ್ರವನ್ನು ಗಾಳಿಪಟ ಮಾಡಿ ನಿರಾಶಗೊಳಿಸುವುದು; ಮೂರನೆಯದು: ದೇಶವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಸಮೃದ್ಧಿಪಡಿಸಿ, ಶತ್ರುವು ನಮ್ಮತ್ತ ನೋಡಲೂ ಹೆದರುವಷ್ಟು ಪ್ರಚಂಡ ಸತ್ವದಿಂದ ಸನ್ನದ್ಧರಾಗಿ ಇರುವುದು. ಭಾರತವು ಈ ಮೂರನೇ ವಿಧಾನಕ್ಕೆ ಹೆಚ್ಚು ಮಹತ್ವ, ಪ್ರಾಶಸ್ತ್ಯ ಕೊಟ್ಟಿದೆ.

ಭಾರತದ ಮೇಲೆ ಕಣ್ಣಿಟ್ಟಿರುವ ಚೀನಾ ಈಗ ತನ್ನಲ್ಲೇ ಹೋರಾಡುತ್ತಿದೆಯೆಂದ ಮಾತ್ರಕ್ಕೆ ನಮಗೆ ಅಪಾಯವಿಲ್ಲವೆಂದರ್ಥವಲ್ಲ. ನಾವು ನಮ್ಮ ರಕ್ಷಣೆಗಾಗಿ ಸದಾ ಜಾಗ್ರತರಾಗಿಯೇ ಇರಬೇಕು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೂರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಚಂದಾದಾರರಲ್ಲಿ ವಿನಂತಿ

ಇನ್ನೂ ತಮ್ಮ ಬಾಕಿ ಚಂದಾಹಣವನ್ನು ಕಳುಹಿಸದ ನಮ್ಮ ಚಂದಾದಾರ ಬಂಧುಗಳು ದಯಮಾಡಿ ಅದನ್ನು ಬೇಗನೆ ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ. ಅಂತೂ ... ಚಂದಾ ಬಾರದಿದ್ದರ ನಾವು ಅನಿವಾರ್ಯವಾಗಿ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ಕೇಳಿಕೊಳ್ಳುತ್ತೇವೆ.

ಮ್ಯಾನೇಜರ್, ನವಯುಗ

Edited, Printed & Published by K. H. Shetty at the Navayuga Press, Udipi, S. India.

ನವಯುಗ

23—2—1967

೨೦ ಪೈಸೆ

ಬಲಿದಾನದ ರಹಸ್ಯ

ಬರೆದವರು
ಶ್ರೀ ಪಿ. ವಿ. ಗೂಳೂರ್.

ಕಾಲೇಜಿಲ್ಲದಂದು ಮೊದಲೇ ಸೋಮಾರಿಯಾದ ನನ್ನನ್ನು ಮತ್ತಷ್ಟು ಸೋಮಾರಿಯನ್ನಾಗಿ ಮಾಡಿತ್ತು. ನಿದ್ದೆ—ಊಟ—ನಿದ್ದೆ, ಹೀಗೆ ಕಾಲವನ್ನು ತಳ್ಳುತ್ತಿದ್ದೆ. ನಿದ್ದೆ ಮಾಡಿ ಬೇಸರವಾಗಿ ಸಾಯಂಕಾಲ ಹಾಗೆಯೇ ಅಡ್ಡಾಡಿ ಬರುವ ಎಂದು ಹೊರಟೆ. ಇದರೊಂದಿಗೆ 'ಕಾಲೇಜ್ ಹೀರೋ"ಗಳ ಚುಡಾಯಿಸುವನ್ನು ಮತ್ತೊಂದು ಕಾರ್ಯಕ್ರಮವನ್ನೂ ಸೇರಿಸಿದ್ದೆನೆಂದೇನೂ ಹೇಳಬೇಕಿಲ್ಲವಲ್ಲ? ನಿಧಾನವಾಗಿ ಅವರಿವರ ಹಿಂದೆ ಹೋಗುತ್ತಿರುವ ಹೊತ್ತಿಗೆ ಚಕ್ರಪಾಣಿಯ ಮನೆ ಸಿಕ್ಕಿತು. ಅವನನ್ನೂ ಸೇರಿಸಿಕೊಂಡರೆ 'ಕಂಪೆನಿ' ಸರಿಹೋಗುತ್ತದೆಎಂದು ಅವರಮನೆಗೆ ನುಗ್ಗಿದೆ. ಅವನಿರಲಿಲ್ಲ. ತನ್ನಸ್ನೇಹಿತರಾರೋ ಸುಟ್ಟುಕೊಂಡು ಸತ್ತರೆಂದೂ ಅವನು ಅಲ್ಲಿಗೆ ಹೋಗಿದ್ದಾನೆಂದೂ ಅವರ ತಂದೆ ಹೇಳಿದರು. ಆ ಸ್ನೇಹಿತನಾರಿರಬಹುದೆಂದು ಮೊದಲು ಹೊಳೆಯಲಿಲ್ಲ. ಸ್ವಲ್ಪ ಯೋಚಿಸಿದ ನಂತರ ಇಂತಹವನೇ ಇರಬಹುದೆಂಬ ತೀರ್ಮಾನಕ್ಕೆ ಬಂದೆ. ನನ್ನ 'ರಾಜಹಂಸ'ವನ್ನು ತೆಗೆದುಕೊಂಡು ಅಲ್ಲಿಗೆ ಹೊರಟೆ. ದಾರಿಯಲ್ಲಿ ಇತರ ಸ್ನೇಹಿತರುಗಳಿಂದ ನನ್ನ ತೀರ್ಮಾನವನ್ನು ಖಚಿತಗೊಳಿಸಿಕೊಂಡೆ. ನನ್ನ ಆಪ್ತ ಮಿತ್ರ ಬಲರಾಮನ್ ಸುಟ್ಟುಕೊಂಡು ಸತ್ತಿದ್ದ.

"ಬಡ್ಡೀ ಮಗ, ನನಗೂ ಹೇಳದೆ ಸಾಯುವುದೇ? ಮುಂಚಿತವಾಗಿ ಹೇಳಿದ್ದರೆ ಏನಿವನಪ್ಪನ ಗಂಟು ಹೋಗುತ್ತಿತ್ತು" ಎಂದು ಹಲ್ಲು ಕಡಿದೆ. ನಾನೆಷ್ಟು ಪ್ರಯತ್ನಪಟ್ಟರೂ ನನ್ನ ವಿಮಾನಕ್ಕೆ ವೇಗವನ್ನು ಹೆಚ್ಚಿಸಲು ಸಾಧ್ಯವಾಗಲೇ ಇಲ್ಲ. ರೋಜಿನಾಂಟೆಯ ಇಷ್ಟದಂತೆ ಡಾನ್‌ಕ್ವಿಕ್ಸೋಟನು ಹೇಗೆ ಹೋಗುತ್ತಿದ್ದನೋ ಅದೇ ರೀತಿ ನನ್ನ ಹಂಸೆಯ ಇಷ್ಟದಂತೆ ನಾನು ಹೋಗಬೇಕಾಯಿತು. ಕಡೆಗೂ ರೂಮನ್ನೇನೊ ತಲುಪಿತು. ಆದರೆ ಗಾಯಕ್ಕೆ ಉಪ್ಪು ನೀರು ಹಾಕಿದ ಹಾಗಾಗಿತ್ತು. ಯಾಕೆಂದರೆ, ಅವನು ಇದ್ದಾಗಲೂ ಹಾಕಿರದಷ್ಟು ಗಾತ್ರದ ಬೀಗವನ್ನು ಹಾಕಿದ್ದರು. ಅಕ್ಕ-ಪಕ್ಕದ ಮನೆಯವರನ್ನು ಕೇಳದೆ. ಅವರಿಗೆ ಹೇಳುವುದಕ್ಕೆ ಭಯ. ಕಡೆಗೆ ಯಾರೂ ಗತಿಯಿಲ್ಲದ, ಯಾರ ಜವಾಬ್ದಾರಿಯನ್ನೂ ಹೊರದ, ಯಾವುದೂ ಒಂದು ಅನಾಮಧೇಯ ಪ್ರಾಣಿ ಅವನನ್ನು ಅರ್ಥಾತ್ ಬಲರಾಮನ ಹೆಣವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆಂದು ಹೇಳಿದ. ಅಲ್ಲಿಂದ ಹಟಮಾರಿಯಾದ ನನ್ನ ಹಂಸೆಯನ್ನು ಆಸ್ಪತ್ರೆಯ ಕಡೆ ತಿರುಗಿಸಿದೆ. ನನ್ನ ಆತುರ ಅದಕ್ಕೇನು ಅರ್ಥವಾಗಬೇಕು? ನಿಧಾನವಾಗಿ ಆಸ್ಪತ್ರೆಗೂ ತಂದು ಬಿಟ್ಟಿತು. ಹೆಣ ಪರೀಕ್ಷಕ ಕೋಣೆಯ ಹತ್ತಿರ ನನ್ನ ಸ್ನೇಹಿತರುಗಳ ಗುಂಪನ್ನು ನೋಡಿ ಅಲ್ಲಿಗೆ ಓಡಿದೆ. ಹೆಣ ಪರೀಕ್ಷಕ ಕೋಣೆಯ ವಾತಾವರಣವನ್ನು ನಾನೇನು ಹೇಳಬೇಕಾಗಿಲ್ಲವಲ್ಲ! ಬಲರಾಮನ್‌ನ ತಂದೆಯವರೂ ಆಗ ತಾನೇ ಹಳ್ಳಿಯಿಂದ ಬಂದು ನಿಂತಿದ್ದರು. ಕಳೆಗುಂದಿದ ಅವರ ಮುಖವನ್ನು ನೋಡಲಾಗಲಿಲ್ಲ. ನಾನೂ ಸಹ ಅಲ್ಲಿಗೆ ಹೋಗಿ ಯಥಾ ಪ್ರಕಾರವಾಗಿ ಎರಡು ಧೈರ್ಯದ ನುಡಿಗಳನ್ನು ಹೇಳಿದೆ. ದೊಡ್ಡವರಿಗೆ ನಾನು ಹೇಳುವುದೇನು? ಆದರೂ ಲೋಕ ರೂಢಿಯಂತೆ ಎರಡು ಮಾತುಗಳು ನನ್ನ ಬಾಯಿಂದ ತಾನಾಗಿಯೇ ಬಂದವು. ಅವು ಧೈರ್ಯ ಸೂಚಕ ಪದಗಳಾಗಿದ್ದವೇ ವಿನಃ ನಾನು ಹೇಳಿದ ರೀತಿಯಲ್ಲಿ ಯಾವುದೇ ವಿಧವಾದ ಚೇತನವೂ ಇರಲಿಲ್ಲ. ನಮ್ಮ, ನಮ್ಮಲ್ಲಿ ಅನೇಕ ಗುಸು, ಗುಸು ಮಾತುಗಳಾದವು. ನಾನೂ ಅವುಗಳಲ್ಲಿ ಭಾಗವಹಿಸಿದ್ದರೂ ಅದೊಂದೂ ನನಗೆ ಅರ್ಥವೇ ಆಗಲಿಲ್ಲ. ಅವನು ಪ್ರಾಣವನ್ನು ಕಳೆದುಕೊಂಡ ಕಾರಣ—ಅದನ್ನು ಕಾರ್ಯರೂಪಕ್ಕೆ ತಂದ ರೀತಿ—ಅದರಿಂದ ಅವನ ತಂದೆ ತಾಯಿಗಳಿಗಾದ ನಷ್ಟ—ಅವನಲ್ಲಿದ್ದವೂ ಹಾಗೂ ಇಲ್ಲದವೂ ಆದ ಅನೇಕ ಒಳ್ಳೆಯ ಗುಣಗಳಗಣ—ಅವನು ಬದುಕಿದ್ದ ಪಕ್ಷದಲ್ಲಿ ಮುಂದೆ ಪ್ರಾಯಶಃ ಅವನು ಸಾಧಿಸುತ್ತಿದ್ದ ಅಮೋಘವಾದ ಕಾರ್ಯ— ಈ ವಿಷಯಗಳ ಮೇಲೆ ಅಲ್ಲಿ ಸೇರಿದ್ದ ಒಬ್ಬೊಬ್ಬನೂ ಒಂದೊಂದು ಭಾಷಣವನ್ನು ಮಾಡುತ್ತಿದ್ದನು. ಆದರೆ ನನ್ನ ಮನಸ್ಸು ಬೇರೆಡೆಯಿತ್ತು. ಅವನ ತಂದೆಯವರ ಮುಖವನ್ನು ನೋಡಿ ನನ್ನ ಕಣ್ಣಿನಿಂದ ನೀರು ತಾನಾಗಿಯೇ ಸುರಿಯಿತು. ಜತೆಗೆ ಬಲರಾಮನಿಗಾಗಿಯೂ ಮರುಗಿದೆ.

'ನಾನು ಬೇಡಾಂದ್ರೆ ನೋಡು ಆದರೂ ಯಾಕೆ ಅವನು ಆ ಹಾಳು ಸಿಳ್ಳಿಕೇ ತನ್ನ ಪ್ರೀತಿಸಬೇಕಿತ್ತು"

'ಅದಕ್ಕಲ್ಲಪ್ಪ, ಹಾಳು, ತುಂಬಾ ಸಾಲ ಮಾಡಿದ್ನಂತೆ. ಅವನಪ್ಪನಿಗೆ ಕಾಗದ ಬರೆದ್ನಂತೆ. ಅವರು ಬೈದು ಬರೆದರು. ಅದಕ್ಕೆ ಏನೂ ಮಾಡಲಾಗದೆ ಸಾಲಕ್ಕೆ ಪ್ರಾಣವನ್ನೇ ಬಡ್ಡಿಯಾಗಿ ತೆತ್ತನಂತೆ.'

'ನನಗೆ ಗೊತ್ತಯ್ಯ ಹೀಗಾಗುತ್ತೆ ಅಂತ ಸಾಲಾಗ್ದೆ ಏನಾಗುತ್ತೇ ಹೇಳು. ಆ ಗುಳ್ಳೇ ನರಿ ಇದ್ನಲ್ಲ, ಅವನ ಜೊತೆ ಹೋದರೆ ಸಾಲ ಮಾಡಿಸ್ದೆ ಬಿಡ್ತಾನೇ ಅವನು?"

"ಸಾಲಾನೂ ಇಲ್ಲ· ಏನೂ ಇಲ್ಲ, ಮದ್ವೆ ವಿಷಯದಲ್ಲಿ ಅವನಿಗೂ ಅವನ ಅಪ್ಪನಿಗೂ ಏನೋ ಒಂದುಮಾತು ಬಂತಂತೆ· ಅದಕ್ಕೇ ಅವನು ಹೀಗಾದದ್ದು"

"ಸುಳ್ಳು, ಸುಳ್ಳು ಬಿಡು, ಪರೀಕ್ಷೇಲಿ ಪಾಸಾಗೋ ಭರವಸೆ ಇರಲಿಲ್ಲ, ಅದಕ್ಕಂತ ಸತ್ತಿದ್ದು.?

"ಸುಮ್ಮನೆ ಏಕೆ ಸುಳ್ಳುಗಳ ಕಂತೆಯನ್ನು ಜೋಡೀಸುತ್ತೀರಿ. ಅವನು ಸಿನಿಮಾಗೆ ಸೇರಬೇಕೆಂದು ಪ್ರಯತ್ನ ಪಟ್ಟ, ಸಿಗಲಿಲ್ಲ. ಕಡೆಗೆ ನಿರಾಶನಾಗಿ ಈ ಉಪಾಯವನ್ನು ಹುಡುಕಿದ.

"ಇದ್ದರೂ ಇರಬಹುದು. ಮೊದಲಿನಿಂದಲೂ ಅವನಿಗೆ ಹೆಸರಿನ ಮೇಲೆ ಬಹಳ ಪ್ರೀತಿ. ಕಾಲೇಜಿನಲ್ಲೂ ಸಹ ಆ ಸಂಘ ಈ ಸಂಘ ಎಂದು ಯಾವಾಗಲೂ ಕುಣಿದಾಡುತ್ತಿದ್ದ. ಹುಡುಗಿಯರ ಮುಂದೆ ಓಡಾಡಿ ಅವರಿಂದ 'ಭೇಷ್' ಅನ್ನಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಪಡುತ್ತಿದ್ದ.'

"ಏನೇ ಆಗ್ಲಿ ಅವನು ಇಂಗೆ ಮಾಡ್ಕೊಳ್ಳೇ ಬಾರ್ದಾಗಿತ್ತು."

"ಸತ್ತವನು ಸತ್ತ, ಆದರೂ ಇಷ್ಟೊಂದು ಭಯಂಕರವಾಗಿ ಏಕೆ ಸಾಯಬೇಕಿತ್ತು? ವಿಜ್ಞಾನ ಇಷ್ಟು ಮುಂದುವರಿದಿರುವಾಗ ಇವನಿಗೆ ಸಾಯಲು ಯಾವುದೂ ಸುಲಭೋಪಾಯ ಸಿಕ್ಕಲಿಲ್ಲವೆ? ಎಲ್ಲೋ ಮೂಢ, ಹಳ್ಳಿಯ ಗುಗ್ಗು-"

ಹೀಗೆ ಒಬ್ಬೊಬ್ಬರು ಒಂದೊಂದು ಮಾತನ್ನಾಡಿಕೊಳ್ಳುತ್ತಿದ್ದರು. ನಿಜವಾದ ಕಾರಣವನ್ನು ಊಹಿಸಿದ್ದ ನಾನು ಅವನಿಗಾಗಿ ಅರ್ಥಮಾಡಿಕೊಟ್ಟರೆ ಇವರೆಲ್ಲರಿಗಾಗಿ ಅರ್ಥಮಾಡಿಕೊಟ್ಟೆ. ಹೆಣವನ್ನು ಅವನ ತಂದೆಯವರ ಕೈಗೆ ಒಪ್ಪಿಸುವ ಹೊತ್ತಿಗೆ ರಾತ್ರೆ ಹನ್ನೊಂದು ಗಂಟೆಯಾಗಿತ್ತು. ಸತ್ತವನಿಗಲ್ಲ; ನಮ್ಮದೇ ತಿಥಿ ಅನ್ನುವಷ್ಟರ ಮಟ್ಟಿಗಾಗಿತ್ತು. ಪೋಲೀಸ್ ಮಹಜರ್ ಆಗಲೇ ಆಗಿತ್ತು. ಅವನ ತಂದೆಯವರು ಹೆಣವನ್ನು ಟ್ಯಾಕ್ಸಿಯಲ್ಲಿ ಹಾಕಿಕೊಂಡು ಹಳ್ಳಿಯತ್ತ ಹೊರಟರು. ಆ ದೃಶ್ಯ ಬಹಳ ಕರುಣಾಜನಕವಾಗಿತ್ತು. ಟ್ಯಾಕ್ಸಿ ಹೋಗುತ್ತಿದ್ದಂತೆ ನನಗರಿವಿಲ್ಲದೇ ನನ್ನ ಕಣ್ಣಲ್ಲಿ ನೀರು ಬಂತು.

ನನ್ನ ಹಂಸೆಯನ್ನು ತಳ್ಳಿಕೊಂಡು ಹೋಗುವುದು ಅಂತಹ ಹಿತಕರವಾದ ಕೆಲಸವೇನಲ್ಲವಲ್ಲ? ಅವಳನ್ನು ನೂಕಿಕೊಂಡು ಹೋಗುವುದು ಒಲ್ಲದ ಹೆಂಡತಿಯೊಡನೆ ಸಂಸಾರ ಮಾಡಿದಷ್ಟೇ ಕಷ್ಟ. ಬರುವಾಗ ಹೇಗೋ ಬಂದೆ. ಆದರೆ ಹೋಗುವಾಗ ನನ್ನ ಆಪ್ತ ಗೆಳೆಯನ ಮರಣದಿಂದ ಭಾರವಾದ ಕಾಲುಗಳ ಜೊತೆಗೆ ಇದು ಬೇರೆ. ಬಹಳ ತೊಂದರೆಯಾಯಿತು. ದಾರಿಯುದ್ದಕ್ಕೂ ನನಗೂ ಬಲರಾಮನಿಗೂ ಇದ್ದ ಪರಿಚಯವಾದ ದಿನದಿಂದ ನಿನ್ನಿನ ವರೆಗಿದ್ದ ಗೆಳೆತನ, ಅದರಲ್ಲಿನ ಸಿಹಿ—ಕಹಿ ನೆನಪುಗಳು ಒಂದಾದ ಮೇಲೆ ಒಂದರಂತೆ ಬರಲು ಪ್ರಾರಂಭ ಮಾಡಿದವು. ಹೇಗಾದರೂ ಹೆಸರುಗಳಿಸಬೇಕೆಂಬ ಆಸೆ, ಆದರೆ ದೇವರು ಅವನಿಗೆ ಕೊಟ್ಟ ಗತಿ. ಇವುಗಳನ್ನು ನೋಡಿ ನನಗೆ ಅನುಕಂಪವಾಯಿತು. ಮನುಷ್ಯನು ಕಟ್ಟುತ್ತಾನೆ. ಆದರೆ ದೇವರು ಕೆಡವುತ್ತಾನೆ. ಅಂದು ನಾಲ್ಕೈದು ಮೈಲು ನಡೆದು ಆಯಾಸವಾಗಿದ್ದರೂ ನನಗೆ ನಿದ್ದೆ ಬರಲೇ ಇಲ್ಲ. ರಾತ್ರಿಯೆಲ್ಲಾ ಈ ಯೋಚನೆಗಳೇ ಆದವು.

ಮರುದಿನ ಬೆಳಗ್ಗೆ ಪೇಪರನ್ನು ನೋಡುತ್ತೇನೆ, ನನ್ನ ಸ್ನೇಹಿತ ಬಲರಾಮನ್‌ನ ಫೋಟೋ ಬಂದಿದೆ. ಕೆಲವು ಅವನ ಕೆಲಸವನ್ನು ಖಂಡಿಸಿ, ಕೆಲವು ಸುಮ್ಮನೆ ಮಂಡಿಸಿ, ಮತ್ತೆ ಕೆಲವು ಹೊಗಳಿ ಬರೆದಿದ್ದವು. ಅವನ ಸ್ವ— ಆಹುತಿಯನ್ನು ಹೊಗಳಿ ಅನೇಕರು ಕಾಗದಗಳನ್ನು ಬರೆದಿದ್ದರು. ಭಾಷಾಪ್ರೇಮಿ— ಹಿಂದಿನ ಋಷಿಗಳ ಸಾಲಿಗೆ ಸೇರಬೇಕಾದ ವ್ಯಕ್ತಿ —ನವ ವಿಶ್ವಾಮಿತ್ರನೇ ದಿಟಂ— ಅತುಲ ಧೈರ್ಯಶಾಲಿ— ಇಂತಹ ಪುತ್ರನಿಂ ಪುನೀತಳ್ ದ್ರವಿಡಮಾತೆ—ವೀರಾಗ್ರಣಿ — ನಮಸ್ಕಾರ ಎಂದು—ಹೀಗೆ ಅನೇಕರಿಂದ ಹೊಗಳಲ್ಪಟ್ಟಿದ್ದ ನನ್ನ ಸ್ನೇಹಿತ ಬಲರಾಮನ್.

ಹಿಂದಿ—ಇಂಗ್ಲೀಷ್‌ಗ ಘರ್ಷಣೆ— ಶುರುವಾಗುತ್ತಿದ್ದ ಕಾಲ. ಹಿಂದಿ ದಕ್ಷಿಣಕ್ಕೆ ಬೇಡ, ಈಗಿರುವ ಇಂಗ್ಲೀಷೇ ಇರಲಿ ಎಂದು ಕೂಗುತ್ತಿರುವ ಕಾಲ. ಹೀಗೆ ಸುಮ್ಮ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ತಯಾರಾಗಿದೆ—
ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಎಂಬ ಭಗವದ್ಗೀತೆಯ ಸಮೂಲ
ಭಾಷಾಂತರದ ಹೊಸ ಮುದ್ರಣ
ಆಕರ್ಷಕ ಮುಖ ಪತ್ರ 420 ಪುಟಗಳು.
ಬೆಲೆ ರೂ. 1—50 [ಟ. ಖ. ಪ್ರತ್ಯೇಕ]
ಬಹು ಪ್ರತಿಗಳಿಗೆ ರಿಯಾಯಿತಿ ದರ.
ತ್ವರೆ ಮಾಡಿರಿ!
ನವಯುಗ ಪ್ರೆಸ್, ಉಡುಪಿ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕಲ್ಕತ್ತೆಯ ಫ್ರೀಪ್ರೆಸ್ ಜರ್ನಲ್ ಎಂಬ 25 ವರ್ಷ ಪ್ರಾಯದ ವಾಣಿಜ್ಯ ಪ್ರಮುಖಾಧಿಕಾರಿಯು (ಪ್ರಥಮ ಸಾಲಿನಲ್ಲಿ ಕನ್ನಡಕ ಧರಿಸಿದವನು) ಇತ್ತೀಚೆಗೆ ಅಂತಾರಾಷ್ಟ್ರೀಯ ಜೀವನಾನುಭವದ ನೆಲೆಯಲ್ಲಿ ಅಮೇರಿಕಕ್ಕೆ ಸಂದರ್ಶನವಿತ್ತಾಗ ವಾಷಿಂಗ್ಟನ್‌ನಲ್ಲಿ ಇತರ ವಿದೇಶಿ ಜತೆಗಾರರೊಂದಿಗೆ ನಿಂತಿರುವುದನ್ನು ಕಾಣಬಹುದು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೬	೨೩—೨—೧೯೬೭	No. 26

ಶೀಲ-ಚರಿತ್ರ ಬೆಳೆಯಬೇಕು

ವಿಶಾಲ ಪ್ರಜಾಪ್ರಭುತ್ವ ಭಾರತದ ಸುಮಾರು ೨೫ ಕೋಟಿ ಮತದಾರರು ತಮ್ಮ ಪ್ರತಿನಿಧಿಗಳು ಯಾರಾಗಬಹುದೆಂದು ಮತ ಚಲಾಯಿಸಿದರು. ಚುನಾವಣೆ ಸಂಪೂರ್ಣ ಮುಗಿಯಲಿಲ್ಲವಾದರೂ ಉಳಿದಿರುವ ಅಂಶ ಅತ್ಯಲ್ಪ. ಗೋವಾ, ದಮನ ಮತ್ತು ದೀವಿಗಳು, ಬಿಹಾರದ ಕೆಲವು ಪ್ರದೇಶಗಳು ಹೀಗೆ ಮಾತ್ರ. ಹಾಗಾಗಿ ಚುನಾವಣೆಗಳು ಮುಕ್ತಾಯಗೊಂಡುವು ಎಂದೇ ಹೇಳಬಹುದು. ಮತದಾರರು ಈ ಬಾರಿ ಮತ ಚಲಾಯಿಸುವಲ್ಲಿ ಹೆಚ್ಚಿನ ಉತ್ಸಾಹ ತೋರಿಸಲಾರರು ಎಂಬ ಅಭಿಪ್ರಾಯ ಮೊದಲಿಗಿತ್ತು. ಆದರೆ, ಚುನಾವಣಾನಂತರ ಇದು ತೀರ ಸುಳ್ಳಾಯಿತು. ತೀರ ಗ್ರಾಮೀಣ ಮತ್ತು ಗುಡ್ಡಗಾಡು ಬಂಜರು ಪ್ರದೇಶಗಳನ್ನುಳಿದರೆ ಉಳಿದೆಡೆಗಳಲ್ಲಿ ಸೇ. ೫೦ ರಿಂದ ೧೦೦ ರ ವರೆಗೂ ಮತದಾನ ನಡೆದ ಪ್ರದೇಶಗಳುಂಟು. ಮತದಾರರ ಯಾದಿಯಲ್ಲಿ ಮೃತರಾದವರು, ಪರವೂರಿಗೆ ಹೋದವರ, ಎರಡು ಸಾರಿ ಹೆಸರಿರುವವರು—ಹೀಗೂ ಇರುವುದರಿಂದ ಮತದಾನವು ತೀರ ಬಿರುಸಿನಿಂದಲೂ ಉತ್ಸಾಹದಿಂದಲೂ ನಡೆಯಿತು ಎನ್ನಬೇಕು. ಪ್ರಜಾಪ್ರಭುತ್ವಕ್ಕೆ ಅನರ್ಹರೆಂದು ಬ್ರಿಟಿಷರು ದೃಢವಾಗಿ ನಂಬಿದ್ದರು, ಭಾರತೀಯರನ್ನು. ಆದರೆ ತಮ್ಮ ಪ್ರತಿನಿಧಿಗಳನ್ನು ಆರಿಸುವಲ್ಲಿ ಇಲ್ಲಿನ ಜನತೆ ತೋರಿಸಿದ ಆತುರ ಮತ್ತು ಉತ್ಸಾಹವನ್ನು ಕಾಣುವಾಗ, ವಿದೇಶೀಯ ಪತ್ರಿಕಾಕರ್ತರೂ ವೀಕ್ಷಕರೂ ಮೂಗಿಗೆ ಬೆರಳೇರಿಸಿದರು. ಭಾರತೀಯರಲ್ಲಿ ಪ್ರಜಾಪ್ರಭುತ್ವದ ಮೂಲ ತತ್ವಗಳು ರಕ್ತಗತವಾಗುತ್ತಿದೆಯೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಅನಗತ್ಯ.

ಚುನಾವಣೆಗಳು ಮುಕ್ತಾಯದ ಹಂತದಲ್ಲಿರುವಾಗ ಫಲಿತಾಂಶಗಳೂ ಪ್ರಕಟವಾಗತೊಡಗಿವೆ. ಮುಂದಿನ ತಿಂಗಳ ಮೊದಲನೆ ವಾರದೊಳಗೆ ಎಲ್ಲ ಫಲಿತಾಂಶಗಳೂ ಹೊರ ಬರುವ ನಿರೀಕ್ಷೆಯಿದೆ. ಆಳುವ ಪಕ್ಷ ಕಾಂಗ್ರೆಸ್ಸು ಅಖಿಲ ಭಾರತ ಖ್ಯಾತಿ ಮತ್ತು ಶಕ್ತಿಯಿರುವ ಏಕೈಕ ಪಕ್ಷವಾದರೂ ಈ ಬಾರಿ ವಿರೋಧೀ ಪಕ್ಷಗಳು ಒಂದಾಗಿ ಸಂಯುಕ್ತ ರಂಗವನ್ನು ರಚಿಸಿ ಪ್ರಬಲವಾದ ವಿರೋಧವನ್ನು ಒಡ್ಡುವ ಪ್ರಯತ್ನ ಮಾಡಿದುವು. ಈ ಸಂಯುಕ್ತ ರಂಗದ ಏಕಮೇವ ಉದ್ದೇಶ ಕಾಂಗ್ರೆಸ್ಸನ್ನು ಸೋಲಿಸುವುದು. ಟಿಕೇಟು ಸಿಗದೆಯೋ, ಅಧಿಕಾರ ದೊರೆಯದೆಯೋ ಕಾಂಗ್ರೆಸ್ಸಿನಿಂದ ಹೊರಬಿದ್ದ ಮಾಜಿ ಕಾಂಗ್ರೆಸ್ಸಿಗರೂ ಇವರಿಗೆ ಒತ್ತಾಸೆ ನೀಡಿರಬಹುದು. ಹಾಗಿದ್ದರೂ ಈ ಸಂಯುಕ್ತ ರಂಗದ ಸಂಯೋಜನೆಯು ಕಾಂಗ್ರೆಸ್ಸಿಗೆ ತೀವ್ರವಾದ ಆಹ್ವಾನವೆಂಬಂತಿದ್ದರೂ, ಸಂಯೋಜನೆಯು ಹೆಚ್ಚಿನೆಡೆ ನಿಷ್ಫಲವೇ ಆದುದರಿಂದ ಕಾಂಗ್ರೆಸ್ಸಿಗೇ ಅನುಕೂಲವಾದ ಉದಾಹರಣೆಗಳೂ ಉಂಟು. ಜನತೆಯಲ್ಲಿ ಪ್ರಜಾಸತ್ತಾತ್ಮಕ ಭಾವನೆಯು ದೃಢವಾಗುತ್ತ ಬಂದಂತೆ, ವಿರೋಧಿ ಪಕ್ಷಗಳ ಸಂಖ್ಯೆಯೂ ಪ್ರಚಾರ ಮಾಧ್ಯಮವೂ ವಿಸ್ತೃತವಾಗುತ್ತ ಬಂದಂತೆ, ಒಂದೇ ಪಕ್ಷದ ಆಡಳಿತೆಯು ಬಹುಕಾಲ ಮುಂದುವರಿದಂತೆ ಇತರ ಪಕ್ಷಗಳ ಬಲ ಹೆಚ್ಚುವುದು ಸಹಜ ಮತ್ತು ಸ್ವಾಭಾವಿಕ. ಇದು ಕಾಂಗ್ರೆಸ್ಸಿನ ಸೋಲಲ್ಲ; ವಿರೋಧೀ ಪಕ್ಷಗಳ ಗೆಲುವೂ ಅಲ್ಲ. ಜನತೆಯ ಸರ್ವಸಾಮಾನ್ಯ ಸಹಜ ಪ್ರವೃತ್ತಿ. ಕಾಂಗ್ರೆಸ್ಸು ನಾಯಕರು ಅತ್ಯಧಿಕ ಬಹುಮತಗಳಿಸುವ ಆಶೆಯನ್ನು ಹೊಂದಿರುವಂತೆಯೇ ವಿರೋಧಿಗಳೂ ನಂಬಿದ್ದಾರೆ. ಯಾರು ನಿಜವಾಗಿ ಬಹುಮತ ಪಡೆಯುವರು—ಇದು ಇನ್ನು ಕೆಲದಿನಗಳಲ್ಲಿ ಸ್ಪಷ್ಟ ಗೊತ್ತಾಗುತ್ತದೆ. ಬರಿಯ ಸಮೀಕ್ಷೆಯಿಂದ ಹೇಳುವುದಾದರೆ, ಮುರಾರ್ಜಿ ಭಾಯಿಯವರ ಒಂದು ಮಾತನ್ನು ಉಲ್ಲೇಖಿಸಬಹುದು—"ಈ ಬಾರಿಯ ಚುನಾವಣೆಗಳಲ್ಲಿ ವಿಚಿತ್ರ ಮತ್ತು ಅನ್ಯಾಶ ಅನಿರೀಕ್ಷಿತ ಫಲಿತಾಂಶಗಳು ಹೊರ ಬರುತ್ತವೆ. ಇದನ್ನು ವ್ಯಾಖ್ಯಾನಿಸುವುದಾದರೆ, ಕಾಂಗ್ರೆಸ್ಸಿನ ಕೆಲಕೆಲವು ಭದ್ರಕೋಟೆಗಳು ವಿರೋಧಿಗಳ ಕೈವಶವಾಗುವುವು. ವಿರೋಧಿಗಳಿಗೂ ಇದೇ ರೀತಿಯ ಅನುಭವವಾಗುವುದು. ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ಸು ನಿಚ್ಚಳ ಬಹುಮತ ಪಡೆಯುವಲ್ಲಿ ಸಮರ್ಥವಾಗಬಹುದಾದರೂ ಒಟ್ಟಿನಲ್ಲಿ ಸಂಖ್ಯಾಬಲ ಕಡಿಮೆಯಾಗುವುದರಿಂದ ಈಗ ಅಲ್ಪ ಬಹುಮತವಿರುವಲ್ಲಿ ಅದು ಅಧಿಕ ಸಂಖ್ಯಾಕ ಪಕ್ಷವಾಗಿಯೇ ಉಳಿಯಬೇಕಾದ ಪ್ರಸಂಗಗಳೂ ತಲೆದೋರಬಹುದು. ಇದು ಅನಪೇಕ್ಷಣೀಯವೆಂದು ಹೇಳಬಹುದಾದಾದರೂ ಅನಿವಾರ್ಯವೂ ಹೌದು. ಸಬಲ ವಿರೋಧಿ ಪಕ್ಷದ ಕೊರತೆಯಿರುವ ಭಾರತದಲ್ಲಿ ಇದು ಸ್ವಾಭಾವಿಕವೇ.

ಕಾಂಗ್ರೆಸ್ಸು ಸೋಲುಣ್ಣಬೇಕಾದುದು ದುಃಖದಾಯಕವಾದರೂ ಇದರ ಹಿನ್ನೆಲೆಯಲ್ಲಿರುವ ಕಾರಣಗಳನ್ನು ನಾಯಕರು ಇನ್ನಾದರೂ ಅವಲೋಕಿಸಬೇಕು. ಅಧಿಕಾರದ ಮದದಲ್ಲಿ, ಅಥವಾ ಅನಿವಾರ್ಯತೆಯ ಪರಿಸ್ಥಿತಿಯಲ್ಲಿ ತಮ್ಮ ಪಕ್ಷೀಯರ ಮನಸ್ಸು ಮುರಿಯುವಂತೆ ಕಾರ್ಯಪ್ರವೃತ್ತರಾಗುವುದು ಉಚಿತವಾಗದು. ರಾಜಕೀಯವನ್ನೂ ಸ್ವಾರ್ಥ ಸಾಧನೆಯನ್ನೂ ಒಂದೇ ನೂಲಿನಲ್ಲಿ ನೇಯುವ ಕುತಂತ್ರವನ್ನು ಕಾರ್ಯಕರ್ತರು ಅರಿತುಕೊಳ್ಳುತ್ತಾರೆ; ಮತದಾರರೂ ಅದನ್ನು ತಿಳಿದುಕೊಳ್ಳುವಷ್ಟು ಬುದ್ಧಿವಂತರಾಗಿದ್ದಾರೆ. ಅಧಿಕಾರ ಸ್ಥಾನದಲ್ಲಿರುವವರೇ ನಾಯಕರ ...

ವಚನ ಸುಧೆ

ಅಸೂಯಕೋ ದಂದಶೂಕೋ
ನಿಷ್ಠುರೋ ವೈರಕೃಚ್ಛಠಃ
ಸ ಕೃಚ್ಛ್ರಂ ಮಹದಾಪ್ನೋತಿ
ನ ಚಿರಾತ್ ಪಾಪಮಾಚರನ್॥

ಗುಣಗಳಲ್ಲಿ ದೋಷಗಳನ್ನು ನೋಡುವವನು, ಮರ್ಮಾಘಾತ ಮಾಡುವವನು, ನಿರ್ದಯಿ, ಶತ್ರುತ್ವ ಬೆಳೆಸುವವ ಮತ್ತು ಶಠ—ಇವರು ಪಾಪಾಚರಣೆ ಮಾಡುತ್ತ ಹೋಗುತ್ತಾರೆ, ಶೀಘ್ರವಾಗಿ ವಿಪತ್ತಿಗೆ ಗುರಿಯಾಗುತ್ತಾರೆ.

ನಿಸಿಕೊಂಡವರೇ ವಾಮಪಂಥ ಹಿಡಿದರೆ, ಮತ್ತೆ ಸಾಮಾನ್ಯರ ಪಾಡೇನು? ಛತ್ರಪತಿ ಶಿವಾಜಿಯೊಮ್ಮೆ ನುಡಿದಿದ್ದ— "ಶಿವಾಜಿಯಲ್ಲಿಯೇ ಶೀಲವಿಲ್ಲವಾದರೆ, ಚರಿತ್ರವಿಲ್ಲವಾದರೆ, ಆತನ ಪ್ರಜೆಗಳಲ್ಲಿ ಇದು ಎಲ್ಲಿಂದಿರಬೇಕು?" ಸುಮಾರು ಮುನ್ನೂರು ವರ್ಷಗಳಿಗೆ ಮೊದಲು ಶಿವಾಜಿಯಂದಿದ್ದ ಮಾತು ಯಾವ ಕಾಲಕ್ಕೂ ಸತ್ಯ. ಅಧಿಕಾರಿಗಳ ರೀತಿ ನಡವಳಿಯು ಸಾರವಿದು ಅಧಿಕಾರ ಸ್ಥಾನದಲ್ಲಿರುವವ

(ಹತ್ತನೇ ಪುಟ ನೋಡಿರಿ)

ಉಡುಪಿ ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

L. T. O. P. 363/1966.

ಕರುಣಾಕರ ಶೆಟ್ಟಿ —ಅರ್ಜಿದಾರ

ಮತ್ತು

1) ಕೊರಪಳು ಶೆಡ್ತಿ—ಕೊರಗಿ ಶೆಡ್ತಿ ಮಗಳು—3) ಆನಂದ ಶೆಟ್ಟಿ—ಕೊರಪಳು ಶೆಡ್ತಿ ರಮಗ, ಉಡ್ಪಿ ತಾಲೂಕು ಪಲುವಳ್ಳಿಗ್ರಾಮದ ಆಲಡ್ಕ. —ಎದ್ರಿರು

ಯಿವರೊಳಗೆ

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ನೀವು ಮತ್ತು 2ನೇ ಎದ್ರಿ ಚಂದು ಶೆಡ್ತಿ ಕೂಡಾ ಅರ್ಜಿದಾರನ ವಳಗೆ ಗೇಣಿ ಹಕ್ಕಿನಿಂದ ಅನುಭವಿಸಿಬರುವ ಆಸ್ತಿಗಳ ಬಾಬ್ತು ಕಳೆದ ಫಿಶ್ವಾ ಸಂವತ್ಸರಕ್ಕೆ ಬಾಗೇಣಿಯನ್ನು ನೀವು ಸರಿಯಾಗಿ ಪಾವತಿಸದ್ದರಿಂದ ಆಕ್ಟಿನನುಸಾರವಾಗಿ ನ್ಯಾಯ ತೀರ್ಮಾನ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 3-3-1967 ಕ್ಕೆ ಯಿಟ್ಟ ದೆಲುವಿಚಾರಿಸುವಂಥಾದ್ದು ಯಿದ್ದರೆ ಆ ದಿನ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಬಂದು ಹಾಜರಾಗಿ ಜವಾಬು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು—

K. Balachandra Rao
Advocate for Petitioner

Udipi, 18—2—1967.

ನರಸಣ್ಣನ ಸರಸ



"ನೋಡು, ನೂರು ವರ್ಷದ ಮುದುಕ ಎದ್ದು ಬಿದ್ದು ಮತ ಹಾಕಿದ್ದಂತೆ?"

'ಅಯ್ಯೋ, ಏನ ಬಂತು? ಇಪ್ಪತ್ತೆರಡು ವರ್ಷದ ಹುಡುಗನೂ ಹಾಕಿದ್ದಾನೆ ಮತದಾರರ ಯಾದಿಯಲ್ಲಿ ಅವನು ಎಪ್ಪತ್ತು ವರ್ಷದ ಹೆಣ್ಣು.'

ಗೇಹ ರಾಜ್ಯದಲ್ಲಿ

ಮೊದ್ಲೂ ಒಂದೇ, ಮತ್ತೂ ಒಂದೇ

'ಅಂತೂ ಚುನಾವಣೆಗಳು ಮುಗಿದು ಹೋಂತಾಯ್ತು....."

'ಹ್ಞೂಂ... ಹಾಗೇಂತ ಅಂದುಕೊಳ್ಳ ಬಹುದು..."

"ಅಲ್ರಿ, ಏನಿದು ಯಕ್ಷಗಾನದಲ್ಲಿ ಅರ್ಥ ಹೇಳುವಂತೆ ಮಾತಾಡ್ತೀರಿ?'

"ಅದೂ ಹೌದೂನ್ನು..."

"ಯಾಕೆ?'

'ಯಾಕೆ ಅಂದ್ರೆ? ಅಡಿಗೆ ಬಿದ್ರೂ ಮೂಗು ಮೇಲೆ ಮಾಡೋದು ಪುರುಷ ವೇಷದ ಸ್ವಭಾವ. ಇರುವಂಥ ಸ್ಥಳ ಅಂತ ಭಾಗವತರು ಕೇಳಿದ್ರೆ ಹಸ್ತಿನಾವತಿಗೆ ಯಾರೆಂದು ಕೇಳಿ ಬಲ್ಲಿರಿ ಅಂತ ಮರು ಸವಾಲು ಧರ್ಮರಾಯಾಂತ ಕೇಳಿ ಬಲ್ಲೆವು ಅಂತ ನೇರ ಜವಾಬು ನೀಡಿದರೆ, ಹಾಗೇಂತ ಅಂದುಕೊಳ್ಳಬಹುದೂಂತ ಉಪ್ಪರ...."

'ಏ ಏ, ಸಾಕು ಸಾಕು ಕಣೇ....ಎರಡು ಮೂರುದಿನ ನಿದ್ದೆ ಬಿಟ್ಟಿದ್ರಿಂದ ಪಿತ್ತಕೆದರಿದೆಯೋ ಏನೋ ನಿನಗೆ?'

"ಅದ್ಯಾಕೆ ಸಂದೇಹ?'

'ಅಂದರೆ ಕಂಡಿತ ಅಂದ ಹಾಗಾಯ್ತು'.

'ನೋಡಿ, ಅನ್ನೋದಕ್ಕೂ ಅಂದ ಹಾಗೆ ಆಗೋದಕ್ಕೂ ಏನೂ ವ್ಯತ್ಯಾಸವೇ ಇಲ್ಲವೆ?'

'ಇದೇನ್ನು......ಆದ್ರೂ ಅಂದ ಹಾಗೆ ಆದ ಮೇಲೆ ಅಂದೂ ಆಗಿರುತ್ತೆ....'

'ಅಂದರೆ?"

"ನೋಡು, ಜನ ಹೇಳ್ತಾರೆ...... ಮಾತು ಮಾತಿಗೆ, ಅದು ಏನೋ ಅಂದ ಹಾಗೆ...ಅಂತ. ಇಲ್ಲಿ ನೋಡು, ಅಂದ ಹಾಗೇಂದ್ರೆ ಅಂದು ಆಗ್ಬಿಟ್ಟದೇಂತ ತಾನೆ?"

"ಹ್ಞೂಂ...."

"ಹಾಗಿರುವಾಗ ಮಾತಿನ ದಾಟಿಯನ್ನ ಅರ್ಥ ಮಾಡಿಕೊಳ್ಳದೆ ಏನೇನೋ ಅನರ್ಥ ಮಾಡ್ಬಿಡ್ತೀ ನೋಡು...."

"ಅಲ್ರಿ, ಅದೆಂಥದೇ ಇರಲಿ, ಈ ಸಲದ ಇಲೆಕ್ಷನ್ನು ಭಾರೀ ಸಪ್ಪೆ...."

"ಯಾಕೆ ಹಾಗಂತಿ?"

"ಬೂತಿನಲ್ಲಿ ನುಗ್ಗು ನೂಕಲು ಇದ್ದಂತೆ ಅನ್ನಿಸಲಿಲ್ಲ...."

"ಹಾಗೇನೂ ಇಲ್ಲಾನ್ನು. ನೋಡಿದ್ದಿಯಲ್ಲಾ ಇಲ್ಲೆಲ್ಲ ನೂರಕ್ಕೆ ೬೦—೭೦ರಂತೆ ಮತದಾನ ಆಗಿದೆಯಂತೆ...."

"ಆದ್ರೂ ಹಿಂದಿನ ಸಲಕ್ಕಿಂತ ಕಡಿಮೆ ಅಲ್ವಾ?"

"ಅದು ಸರಿ. ಆದ್ರೆ ನೋಡು, ರಾಯಚೂರು ಜಿಲ್ಲೆಯಲ್ಲಿ ಕುಡುಲಾಲಿ ಎಂಬ ಮತಗಟ್ಟೆಯಲ್ಲಿ ನೂರಕ್ಕೆ ಎರಡೂವರೆ ಯಷ್ಟು ಮಾತ್ರ ಮತದಾನವಾಗಿದೆಯಂತೆ..."

'ಸುಳ್ಳು, ಸುಳ್ಳು..."

'ಸುಳ್ಳು ಯಾಕೆ ಹೇಳ್ಬೇಕು?'

'ಅಲ್ರಿ, ಅಲ್ಲಿ ಜನರನ್ನು ಕೂತುಕೊಳ್ಳೋಕೆ ಬಿಟ್ರೆ?"

'ಯಾರು?'

'ಮತ್ಯಾರು? ಅಭ್ಯರ್ಥಿಗಳ ಪರವಾಗಿ ದುಡಿಯುವವರು. ನಮ್ಮಲ್ಲಿ ನೋಡಿ, ಈ ಬಾರಿಯೇನೋ ಕಡಿಮೆಯೆನ್ನಿ, ಗಂಟೆಗೆ ಇಪ್ಪತ್ತು ಸಲ ಬಾಗಿಲು ಗುದ್ದಿ ಓಟ್ಸ್ ಹಾಕ ಬನ್ನೀಂತ ಸ್ವಾಗತ ಮಾಡ್ತಿದ್ರು....'

"ಅದು ಹಿಂದೆ, ಈ ಸಲ?'

'ಸತ್ಯ ಹೇಳ್ಬೇಕಾದ್ರೆ ನಮ್ಮನೆಗೆ ಯಾರೊಬ್ರೂ ಬರ್ಲಿಲ್ಲ! ಕಣ್ರಿ...'

'ಯಾಕೆ ಬರ್ಲಿಲ್ಲ?'

"ನೋಡಿ, ಪೇಪ್ರಿನಲ್ಲಿ ಹಾಕ್ತಾರೆ ಎಲ್ಲರನ್ನೂ ಭೆಟ್ಟಿಯಾಗೋಕೆ ಅವಕಾಶವಿಲ್ಲ, ಕ್ಷಮಿಸಬೇಕು, ಮತವಿತ್ತು ಅನುಗ್ರಹ ಮಾಡಬೇಕೂಂತ ಎರಡೂ ಕೈ ಮುಗಿಯುತ್ತಾರೆ...."

"ಇದು ಯಾಕೆ ಗೊತ್ತಾ?"

'ಯಾಕೆ?'

'ಇಂದು ಚುನಾವಣೆಯ ಮಹತ್ವ ಜನತೆಗೆ ತಿಳಿದಿದೆ. ಮತದಾನ ಮಾಡುವುದು ತಮ್ಮ ಕರ್ತವ್ಯವೆಂಬ ಪ್ರಜ್ಞೆ ಜನತೆಯಲ್ಲಿ ಮೂಡಿದೆ. ಅಕ್ಷರಸ್ಥರ ಸಂಖ್ಯೆ ಹೆಚ್ಚಿದೆ....'

"ಸಾಕು ಬಿಡೀಂದ್ರೆ.... ಈ ತಿಳಿವು, ಪ್ರಜ್ಞೆ, ಶಿಕ್ಷಣ ಎಲ್ಲಕ್ಕೂ ನಿಮ್ಮ ಟೋಪಿ ಸರಕಾರದ ಆಡಳಿತೆಯೇ ಕಾರಣ ಅಂತ ಅನ್ನಬೇಡಿ ಮತ್ತೆ....?

"ಯಾಕೆ ಅನ್ನಬಾರದೂಂತ?'

"ಯಾಕೆ ಅಂದ್ರೆ? ಟೋಪಿ ಸರಕಾರದ ಬದಲು ಮತ್ಯಾವ ಸರಕಾರ ವಿದ್ದಿದ್ರೂ ಈ ಕೆಲ್ಸ ಮಾಡಿಯೇ ಮಾಡಿತು......'

'ನೀನು ವಿರೋಧ ಪಕ್ಷದವ್ರು ಮಾತಾಡಿದ ಹಾಗೆ ಮಾತಾಡ್ತಿಯಲ್ಲ?'

'ನೀವು ಸರ್ಕಾರಿ ಪಕ್ಷದ ಪರವಾಗಿ ಮಾತಾಡುವಾಗನಾನು ಮತ್ತೇನು ಮಾಡಬೇಕು?'

'ಅಂದ್ರೆ ನನ್ನ ಮತವನ್ನು ವಿರೋಧಿಸೋದಷ್ಟೇ ನಿನ್ನ ಕೆಲ್ಸ...."

"ಹಾಗಲ್ರಿ, ದೇಶದ ಉನ್ನತಿಯನ್ನು ಕಾಂಗ್ರೆಸ್ಸು ಸಾಧಿಸಿದೆ—ಇದು ಒಪ್ಪಿಕೊಳ್ಳ ತಕ್ಕ ಮಾತೇ. ಆದ್ರೆ ಕಾಂಗ್ರೆಸ್ಸು ನನ್ನ ಹಣತರಲಿಲ್ಲ ನೋಡಿ. ಜನ ತೆತ್ತ ಹಣವನ್ನು ಉಪಯೋಗಿಸಿ ಅಭಿವೃದ್ಧಿ ಸಾಧಿಸಿದೆ—ಅಧಿಕಾರದಲ್ಲಿ ಅದು ಇದ್ದದ್ದರಿಂದ. ಅಲ್ಲಿ ಮತ್ಯಾರಾದರೂ ಇರುತಿದ್ರೆ ಅವ್ರೂ ಮಾಡಿದ್ರಂತ ನಾನು ಅನ್ನೋದು....'

'ಅದು ಸರೀನ್ನು. ಕೋಳಿ ಕೂಗಿದ್ರೆ ಮಾತ್ರ ಬೆಳಗಾಗೋದಲ್ಲಾಂತ ತಾನೇ ನೀನನ್ನೋದು? ಆದ್ರೂ ಕೋಳಿಕೂಗಿದ್ರೆ ಬೆಳಗು ಈಗ ಆಗುತ್ತೇಂತ ಪೂರ್ವಸೂಚನೆ ದೊರೆಯೋದಿಲ್ವೆ?"

"ಕೂಗಲಿ, ಯಾರು ಬೇಡಾಂತಾರೆ?'

'ನೋಡು, ಉಳಿದವರು ಇದುವರೆಗೆ ಅಧಿಕಾರ ಪಡೆಯೋ ಬಾರ್ದೂಂತ್ಲೇ ಜನ ಮತವಿತ್ತಿದ್ದಾರೆ. ಆದ್ರೆ ಈ ಬಾರಿ...'

"ಈ ಬಾರಿ__ಏನು? ಹಾಗೆಯೇ ಆಗುತ್ತೇನ್ನಿ. ಬೇರೆ ಪಾರ್ಟಿಯವರ ಮೇಲೆ ಹಿಂಸಾಚಾರ ಮಾಡೋರಿಗೆ ಯಾರು ಓಟು ಕೊಡ್ತಾರೆ?'

'ಹಾಗಲ್ಲವೆ? ಈ ಬಾರಿ ಇನ್ನೂ ಒಂದು ತಮಾಶೆ ಎಲ್ಲೆಡೆಯೂ ನಡೆದಿದೆ. ಸಮಷ್ಟಿಗಿಂತ ವ್ಯಷ್ಟಿಯತ್ತ ಜನ ಗಮನ ಕೇಂದ್ರೀಕೃತವಾಗಿದೆ...."

"ಅಂದರೆ, ಪಕ್ಷಕ್ಕಿಂತ ವ್ಯಕ್ತಿ ನಿಷ್ಠೆ ಹೆಚ್ಚಿದೆ....ಏನು ತಪ್ಪು ಇದ್ರಲ್ಲಿ? ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು, ಲೋಕನಾಯಕ ಜವಾಹರಲಾಲರು ಇದನ್ನೂ ಸಮರ್ಥಿಸಿದ್ದಾರಲ್ಲಾ?"

'ಆದ್ರೆ, ಅವ್ರು ಯಾವುದರ ಬಗ್ಗೆ ನುಡಿದರೊ! ಹಿರಿಯರಲ್ಲಿ ಹಿರಿಯ ರಾಜಕಾರಣಿಗಳು ಪಕ್ಷವನ್ನು ಸೇರದೆ ಚುನಾವಣೆಗಳಲ್ಲಿ ಸ್ಪರ್ಧಿಸಿದಾಗ ಹೇಗೆ ಮಾಡಬಹುದೂಂತ ಅವರ ಆಶಯವಿರಲೂಬಹುದು. ಅದಿಲ್ಲವಾದರೆ, ಬರಿಯ ವ್ಯಕ್ತಿಯನ್ನೆ ನೋಡುವುದಾದರೆ, ಪಕ್ಷೀಯ ಪದ್ಧತಿಯ ಆಡಳಿತೆ ನಮಗೇಕೆ?'.

"ಅದೂ ಹೌದೂನ್ನಿ. ಅಂದರೆ ಜಯಪ್ರಕಾಶ ನಾರಾಯಣರಂತವರು ಪಕ್ಷಾತೀತರಾಗಿ ಸ್ಪರ್ಧಿಸಿದರೆ, ಅವರನ್ನು ಬೆಂಬಲಿಸಬೇಕೆಂದು ತಾನೇ ಅದರ ಅಭಿಪ್ರಾಯ?"

"ಅದೂ ಸರಿಯೇ. ಮತ್ತೂ ಒಂದು ನೋಡು. ನಮ್ಮ ದೇಶದ ಶ್ರೇಷ್ಠರೆಲ್ಲರೂ ಎಲ್ಲಾ ಪಕ್ಷಗಳಲ್ಲಿ ಹಂಚಿಹೋಗಿದ್ದಾರೆ."

"ಊಹ್ಞೂಂ.... ನಾನದನ್ನ ಒಪ್ಪೋದಿಲ್ಲ...."

"ಮತ್ತೆ?"

"ಪಕ್ಷಗಳನ್ನು ಕಟ್ಟಿಕೊಂಡಿರುವುದರಿಂದಲೇ ಕೆಲವರು ಶ್ರೇಷ್ಠರಾಗಿದ್ದಾರೆ...'

"ಹ್ಞೂಂ.... ಹಾಗಾದರೆ ಹಾಗೆ....'

'ಅಲ್ರಿ, ಮೊನ್ನೆ ಮೊನ್ನೆ ಮುರಾರ್ಜಿ ದೇಸಾಯಿ ಅಂದಿದ್ರಂತೆ ..'

'ಏನಂತ?'

'ಈ ಬಾರಿಯ ಚುನಾವಣೆಗಳಿಗಿಂತ ಭಿನ್ನವಾಗಿರುವುದೂಂತ...'

'ಅದು ಈಗಲೇ ಗೊತ್ತಾಗಿದೆಯಲ್ಲಾ'

'ಅಭ್ಯರ್ಥಿಗಳ ಸಂಖ್ಯೆಯೇನೋ ಹೆಚ್ಚು. ಆದರೆ, ಅವರ ಮತಯಾಚನೆಯ ಕಾರ್ಯ ಸಂಪೂರ್ಣ ಅತೃಪ್ತಿಕರ....ಗಲಭೆ, ಗುಲ್ಲು, ಕಲ್ಲು ಚಪ್ಪಲಿ ಎಸೆತ...'

'ಅದೆಲ್ಲಾ ಬಿಡೇ....ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಅತಿ ಹೆಚ್ಚಿನ ಮತದಾರರು, ಅತಿ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳಲ್ಲಿ ತಮಗೆ ಅತಿ ಹೆಚ್ಚು ಪ್ರಿಯರಾದವರನ್ನು ಆರಿಸುವ ದೇಶ. ಹಾಗಿರವಾಗ, ಇಲ್ಲಿ ನಡೆದಿರುವ ಗಲಭೆಗಳು ಯಾವ ಲೆಕ್ಕಕ್ಕೂ ಇಲ್ಲ....'

'ಅಂದ್ರೆ ಸಮುದ್ರದ ನೀರಿಗೆ ಕೊಡ ಹಾಲು ಸುರಿದಂತೆ ಅಂದಂತೆ...'

"ಹ್ಞೂಂ..."

"ಅಂದ್ರೆ ನೋಡಿ.... ಕೊಡ ಹಾಲು ಕೆಡಿಸಲು ಹುಳಿಯೆಷ್ಟು ಬೇಕು?'

'ನಿನ್ನ ಆದರ್ಶವನ್ನ ತಿಪ್ಪೆಗೆಸೆ. ಇವತ್ತು ಗಾಳಿ ಬಂದತ್ತ ತೂರಿಕೊಳ್ಳುವ ಕಾಲ."

'ಅಲ್ರಿ, ಇಲೆಕ್ಷನ್ ಗಾಳಿ ನಿಮ್ಮನ್ನೂ ಎತ್ತಿ ಹೋಯಿತೇಂತ...."

(ಒಂಭತ್ತನೆಯ ಪುಟ ನೋಡಿರಿ)

In the Court of the Additional Munsiff, Puttur, S.K.

R. E. P. 332/66
in
S. C. 49/65

Between:

K. Kunhali Beary ... petitioner
and
Narayana Maniyani, S/o Chaniappa Maniyani, Residing at Narla, Karadka village, P. O. karmanthody, Kasaragod Taluk ... ... Respondent.

Please take notice that the above Execution Petition stands posted to 7—3—1967 at 11 A. M. for sale of immovable properties and the above Execution Petition stands posted for any objections in respect of the value adopted by the petitioner and for bid application. If you fail to appear on the said date same will be decided in your absence.

By order of Court

K. P. Abdullah,
Advocate for Ptr.

Puttur, 15-2-1967.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ "ಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C.No. 376/1966

ಶಂಕರಶೆಟ್ಟಿ— ವಾದಿಯು.

ಮತ್ತು

ಚಂದಯ್ಯ ಶೆಟ್ಟಿ, ಪೂವಕ್ಕ ಶೆಟ್ಟರ ಮಗ ಮಂಗಳೂರು ತಾಲ್ಲೂಕು ಯೇಳಂಜಿ ಗ್ರಾಮದ ಪಟ್ಟೆಬಂಗ್ಲೆ ಎಂಬಲ್ಲಿರುವವ— ಪ್ರತಿವಾದಿ

ಇವರೊಳಗೆ

ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸುವದೇನೆಂದರೆ—

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆ ನಿಷ್ಕರ್ಷೆಗಾಗಿ 8 3 1967ಕ್ಕೆ ಇಟ್ಟಿದೆ. ಸದ್ರಿ ದಿನ ಬೆ. 10—30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್‌ದ್ವಾರಾ ಹಾಜರಾಗಿ ಉತ್ತರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ದಾವಾ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

N. M. Adyanthaya,
Plaintiff's Advocate

Karkala, 15-2-1967.

ಎಚ್ಚರಿಕೆ

ಪ್ರಾಂತೀಯತೆ ದೂರವಾಗಬೇಕು

ಬರೆದವರು
ಶ್ರೀ ಬಿ. ನರಸಿಂಗರಾವ್.

ದೇಶಭಕ್ತ ರಾಜಕಾರಣಿಯ ದೃಷ್ಟಿ ಸುದೂರದ ವರೆಗೆ ಹಬ್ಬಿರುತ್ತದೆ. ಆದರೆ ಅವಸರವಾದೀ ರಾಜಕಾರಣಿಯ ದೃಷ್ಟಿಯು ತನ್ನ ಸುತ್ತಲಷ್ಟೇ ತಿರುಗುತ್ತಿರುತ್ತದೆ. ದೇಶವನ್ನು ಭಾಷಾವಾರು ಪ್ರಾಂತ್ಯಗಳಾಗಿ ವಿಭಜಿಸುವ ಸೂಚನೆ ಬಂದಾಗ ಉಕ್ಕಿನ ಮನುಷ್ಯ ಸರದಾರರು ಜೀವಿತರಾಗಿದ್ದರು. ಇದರಿಂದ ಸಂಭವಿಸ ಬಹುದಾದ ಹಾನಿಯ ಕುರಿತು ಅವರು ಇತರರಿಗೆ ಮುಂದಾಗಿ ತಿಳಿಸಿದ್ದರು. ಆಗ ಅವರು ಹೇಳಿದ್ದರು—"ದೇಶವನ್ನು ವಿಭಾಗಿಸುವುದೋ, ಹಾಗೆ ಮಾಡದಿರುವುದೋ ಇಂದಿನ ಈ ಪರಿಸ್ಥಿತಿಯಲ್ಲಿ ನಿರ್ಣಯಿಸಲಸಾಧ್ಯ ವಿಷಯ. ಈಗ ದೇಶ ಸ್ವತಂತ್ರವಾಗಿರುವುದಷ್ಟೆ. ಆದುದರಿಂದ ಈ ತರಹದ ವಿವಾದಾಸ್ಪದ ವಿಷಯವನ್ನು ಚರ್ಚಿಸುವುದು ಮೂರ್ಖತನವಾದೀತು. ಈ ಭಾಷಾವಾರು ವಿಷಸರ್ಪವನ್ನು ಬುಟ್ಟಿಯಿಂದ ಹೊರಗೆ ತೆಗೆದರೆ ಮತ್ತೆ ಅದು ನಮ್ಮನ್ನೇ ಕಚ್ಚೀತು. ಮತ್ತೆ ಅದನ್ನು ಬುಟ್ಟಿಗೆ ಸೇರಿಸುವುದೂ ಅಸಾಧ್ಯ". ಭಾಷಾವಾರು ಪ್ರಾಂತ ರಚನೆಯಿಂದಾಗಿ ಈಗ ಸಂಭವಿಸುತ್ತಿರುವ ದುರ್ಘಟನೆಗಳನ್ನೂ ಛಿದ್ರಕಾರೀ ಪ್ರವೃತ್ತಿಯನ್ನೂ ಆ ಮಹಾನುಭಾವರು ಅಂದೇ ಕಂಡಿದ್ದರು. ನೇಹ್ರೂರವರು ಸರದಾರರ ಈ ಅಭಿಪ್ರಾಯವನ್ನು ಮೊದಲಿಗೆ ಒಪ್ಪಿದ್ದರೂ, ಕೊನೆಗೆ ಪೊಟ್ಟಿ ರಾಮುಲುರವರ ಮರಣಾನಂತರ ಅವರು ಪರಿವರ್ತಿತರಾದರು. ಬಹುಶಃ ಇಂದು ಭಾಷಾ ಪ್ರಶ್ನೆಗಾಗಿ ಹರಿಯುತ್ತಿರುವ ರಕ್ತದ ಹೊಳೆಯ ದೃಶ್ಯವು ಅಂದು ನೆಹರೂರವರಿಗೆ ಗೋಚರಿಸದಿರಬೇಕು!

ಸರದಾರರ ದೂರ ದೃಷ್ಟಿಯುಳ್ಳ ಅಭಿಪ್ರಾಯವೇನೇ ಇರಲಿ, ಇಂದಿನ ಪ್ರಚಲಿತ ಘಟನೆಗಳೇನು ತೋರಿಸುತ್ತಲಿವೆ? ಸ್ವಾತಂತ್ರ್ಯ ಸಂದರ್ಭದಲ್ಲಿ ಗಾಂಧೀಜಿಯವರೊಡನೆ ಭುಜಕ್ಕೆ ಭುಜಕೊಟ್ಟು ಹೋರಾಡಿದ 'ಸ್ವಾತಂತ್ರ್ಯಯೋಧ'ರೇ ಇಂದು ಪ್ರಾಂತೀಯ ಸಂಕೀರ್ಣತೆಯಿಂದ ಓಲಾಡಿಯಾರೆಂದು ಯಾರಿಗೆ ತಾನೇ ತಿಳಿದಿತ್ತು? ರೈಲುಗಾಡಿಯನ್ನು ಸುಟ್ಟು, ಹಾಕಿ ನದಿ ನೀರಿನ ಹಂಚಿಕೆಗಾಗಿ ಜಗಳ ನಡೆಸಿಯಾರೆಂದು ಯಾರಿಗೆ ಅರಿವಿತ್ತು? ಆದುದರಿಂದ ಈ ಪ್ರಾಂತೀಯ ಮನೋಭಾವದಲ್ಲಿ ಶೀಘ್ರವೇ ಬದಲಾವಣೆಯಾಗದಿದ್ದಲ್ಲಿ ಭಾರತವು ಸ್ವಾತಂತ್ರ್ಯಪೂರ್ವದ ಪರಿಸ್ಥಿತಿಯನ್ನು ಪುನಃ ಪಡೆದೀತು. ರಾಷ್ಟ್ರೀಯ ಐಕ್ಯವು ಕನಸಿನ ಗಂಟೇ ಆದೀತು. ದುರ್ಭಾಗ್ಯವೆಂದರೆ ಪ್ರಾಂತೀಯ ಭೇದಕ್ಕಾಗಿ ಜಗಳಗಳು ನಡೆಯುವುದೂ ಅಲ್ಲದೆ, ಕಾಂಗ್ರೆಸ್ಸಿಗರು ನಮ್ಮನ್ನು ಆಕ್ರಮಿಸುವಾಗಲೇ, ಎಡಪಂಥೀಯ ದುರ್ದೆಶೆಯೇ ಇಂದು ನೋಡುತ್ತಿದೆ.

ರಾಜೇಂದ್ರ ಪ್ರಸಾದರ ವಿಚಾರ—

ಸ್ವಾತಂತ್ರ್ಯದ ಪೂರ್ವದಲ್ಲಿ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ೧೯೩೮ರಲ್ಲಿ ಸಭೆ ಸೇರಿದಾಗ ಈ ಪ್ರಾಂತೀಯ ಪ್ರಸ್ತಾಪವನ್ನು ಅಂಗೀಕರಿಸಿದರೂ ಅದನ್ನು ಮನಸಾ ಸ್ವೀಕರಿಸಲಿಲ್ಲ. ಬದಲಾಗಿ ಮುಸ್ಲಿಂಲೀಗಿನ ಬೇಡಿಕೆಯನ್ನು ಕೊಂಚಮಟ್ಟಿಗೆ ತಗ್ಗಿಸಲೆಂದೇ ಹಾಗೆ ಮಾಡಿತ್ತು. ದೇಶದಲ್ಲಿ ಪ್ರಾಂತೀಯ ಶಾಸನವಿದ್ದರೆ ತಮಗೆ ನಿಶ್ಚಿತ ಬಹುಮತ ದೊರೆಯುವುದರೊಂದಿಗೆ ತಾವು ಸರಕಾರವನ್ನು ಕೆಣಕುವುದು ಸುಲಭವಾದೀತೆಂದು ಲೀಗಿನವರ ಅಭಿಪ್ರಾಯವಾಗಿತ್ತು. ಕೆಲವೇ ದಿನಗಳನಂತರ ಶ್ರೀ ಶ್ರೀನಿವಾಸ ಶಾಸ್ತ್ರಿಗಳವರು ಈ ಪ್ರಾಂತೀಯ ಶಾಸನವನ್ನು ವಿರೋಧಿಸಿ ಒಂದು ಲೇಖನದಲ್ಲಿ ಹೀಗೆ ಬರೆದಿದ್ದರು—ಕಾಂಗ್ರೆಸ್ ಕಾರ್ಯಕಾರಿಣಿಯ ಈ ಪ್ರಸ್ತಾಪವು ದೇಶದ ಐಕ್ಯವನ್ನು ಮಣ್ಣುಗೂಡಿಸಲಿದೆ. ಭಾರತೀಯ ಸಂವಿಧಾನದ ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಕನ್ಹೈಯಾಲಾಲ ಮುನ್ಶಿಯವರೇ ಮೊದಲಾದ ಪ್ರಮುಖರು ಸರಕಾರವನ್ನೂ ಈ ಕುರಿತು ಎಚ್ಚರಿಕೆ ನೀಡಿದರೂ ಫಲವಾಗಲಿಲ್ಲ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಮೆಹರಚಂದ ಮಹಾಜನರು ಈ ಕುರಿತು ಒಂದು ಲೇಖಮಾಲೆಯನ್ನೇ ಬರೆದು ಸರಕಾರವನ್ನು ಎಚ್ಚರಿಸಿದರು. ತಮ್ಮ ಈ ಲೇಖಗಳನ್ನವರು ರಾಜೇಂದ್ರ ಬಾಬುಗಳಿಗೆ ಕಳಿಸಿ ಪ್ರತಿಕ್ರಿಯೆಯೇನೆಂದು ಕೇಳಿದಾಗ ದೊರಿತ ಉತ್ತರ—

ಪ್ರತ್ಯೇಕತಾವಾದಿ ಚಟುವಟಿಕೆಯು ದೇಶದಲ್ಲಿ ಬೇರೂರಿದೆಯೆಂದು ನನಗೆ ಗೊತ್ತು. ಸಂವಿಧಾನ ಮಾಡುವಾಗ ಕೆಲವರು ಏಕೀಕರಣವನ್ನು ಬಯಸಿದ್ದರಿಂದಲೇ ಕೇಂದ್ರವನ್ನು ಶಕ್ತಿಶಾಲಿಯೆಂದು ಪರಿಗಣಿಸಿದ್ದಾಗಿದೆ. ಆದರೆ ಪ್ರಾಂತ್ಯಗಳನ್ನು ಕೇಂದ್ರದ ಪ್ರಭಾವಕ್ಕೊಳಪಡಿಸಲು ನಾವು ಇದರಿಂದಲೂ ಹೆಚ್ಚಿನದೇನನ್ನು ಮಾಡಲು ಅಸಾಧ್ಯರಿದ್ದೇವೆ. ಕೆಲವೊಂದು ಪ್ರಾಂತ್ಯಗಳು ತಮ್ಮಲ್ಲಿ ವಿವಿಧ ಭಾಷೆಯಾಡುವರು ಇದ್ದಾರೆಂದೂ, ಆದುದರಿಂದ ಇನ್ನೂ ವಿಭಜನೆ ನಡೆಯುವುದವಶ್ಯವೆಂದೂ ಮನಗಂಡಿವೆ. ಇನ್ನೂ ಕೆಲವು ಪ್ರಾಂತ್ಯಗಳು ಆಕೃತಿಯಿಂದ ದೊಡ್ಡದಾಗಿರುವುದರಿಂದ ಅವುಗಳನ್ನು ಇನ್ನೂ ವಿಭಾಗಿಸಬೇಕೆಂದು ಬೇಡಿಕೆ ಬರುತ್ತಿದೆ. ಆದುದರಿಂದ ನನ್ನ ವಿಚಾರದಲ್ಲಿ ಈ ರಾಜ್ಯಗಳ ಶಕ್ತಿಯನ್ನು ಕ್ರಮೇಣ ಅಡಗಿಸಿ, ಕೇಂದ್ರವನ್ನೇ ಪ್ರಬಲವಾಗಿಸಿದರೇ ಈ ಸಮಸ್ಯೆಗೆ ಉತ್ತರ ದೊರಕೀತು. ಆದುದರಿಂದ ಈ ಪ್ರತ್ಯೇಕತಾವಾದಿ ಶಕ್ತಿಯನ್ನು ಕ್ಷೀಣಗೊಳಿಸಿ, ಐಕ್ಯವನ್ನು ಬಲಗೊಳಿಸುವ ಉಪಾಯವನ್ನು ಕಂಡುಹಿಡಿಯುವುದು ಆವಶ್ಯಕ. ಇಂದಿನ ದಿನದಲ್ಲಿ ಈ ಛಿದ್ರಕಾರೀ ಪ್ರವೃತ್ತಿಯನ್ನು ಅಡಗಿಸದೇ ಇದ್ದಲ್ಲಿ ಭಾರತದ ಭವಿಷ್ಯಕ್ಕೆ ಧಕ್ಕೆಯೊದಗೀತು.

ಮುಂಬೈಯನ್ನು ಮಹಾರಾಷ್ಟ್ರ ಹಾಗೂ ಗುಜರಾತವೆಂದು ವಿಂಗಡಿಸುವ ಪ್ರಶ್ನೆ ಬಂದಾಗಲೂ ದೇಶದ ಕೆಲವು ಮುಖಂಡರು ಅದನ್ನು ವಿರೋಧಿಸಿದ್ದರು. ಆದರೆ ರಕ್ತದೋಕುಳಿಯಾಡುವುದು ಕಂಡಾಗ ಅವರು ತಲೆಬಾಗಲೇ ಬೇಕಾಯಿತು. ಪೂನಾದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಈ ವಿಭಜನೆಯನ್ನೇ ಕೊನೆಯದೆಂದು ಸಾರಲಾಯಿತು! ಇನ್ನು ಮುಂದೆ ಯಾವ ರಾಜ್ಯ ವಿಭಜನೆಯ ಪ್ರಶ್ನೆಯನ್ನು ಚರ್ಚಿಸಲೂ ಸಾಧ್ಯವಿಲ್ಲವೆಂದೂ ಹೇಳಿದ್ದಾಯಿತು. ಆದರೆ ಈ ಅಂಗೀಕಾರಕ್ಕೆ ಉಪಯೋಗಿಸಿದ ಮಸಿ ಆರುವ ಮೊದಲೇ ನಾಗಾಲೇಂಡ್ ಎಂಬ ಕಿರಿದಾದ ರಾಜ್ಯ ರಚನೆಯನ್ನು ಸರಕಾರವು ಅಂಗೀಕರಿಸಿತು. ಮತ್ತೆ ಪಂಜಾಬಿನ ವಿಭಜನೆ ನಡೆಯಿತು. ಇಲ್ಲೂ ಭಾರತ ಸರಕಾರ ಸೋಲನ್ನನುಭವಿಸಿತು.

ರಾಜ್ಯದೊಳಗೆ ರಾಜ್ಯ,

ಭಾಷೆಯ ಆಧಾರಕ್ಕನುಸರಿಸಿ ಉಂಟಾದ ಪ್ರಾಂತಗಳನ್ನು ಘೋಷಿಸಿ ಕ್ಷಣವಾಗಲಿಲ್ಲ, ಅಷ್ಟರಲ್ಲೆ ಈ ಪ್ರಾಂತದೊಳಗೆ ವಿಭಜನೆಯ ಕೂಗು. ಆಂಧ್ರದಲ್ಲಿ ತೆಲಂಗಾಣ, ಮಹಾರಾಷ್ಟ್ರದಲ್ಲಿ ವಿದರ್ಭ, ಗುಜರಾತದಲ್ಲಿ ಸೌರಾಷ್ಟ್ರ ಇತ್ಯಾದಿಗಳ ಬೇಡಿಕೆ ಇದೆ. ಗೋವೆಯ ಪ್ರಶ್ನೆಯಂತೂ ಸರಕಾರಕ್ಕೆ ತಲೆಸಿಡಿತವನ್ನೇ ನೀಡಿದೆ. ಬೆಳಗಾಂವ್‌ನ ಪ್ರಶ್ನೆಯೂ ಜೀವಂತವಾಗಿಯೇ ಇದೆ. ಇಲ್ಲೂ ಪ್ರಾಂತೀಯ ಸರಕಾರಗಳೊಳಗೆ ಭೇದ ಕಾಳಗ. ಭೂಮಿಯ ತುಂಡೊಂದು ಮಹಾರಾಷ್ಟ್ರಕ್ಕೋ, ಇಲ್ಲ ಮೈಸೂರಿಗೋ ಎನ್ನುವ ಆ ಪ್ರಶ್ನೆ! ಇದಕ್ಕೋಸ್ಕರ ತೊಂದರೆಪಟ್ಟವರು ಬಡಪಾಯಿ ರೈಲು ಪ್ರಯಾಣಿಕರು, ಪೋಸ್ಟಾಫೀಸಿನವರು ಇತ್ಯಾದಿ. ದೌರ್ಭಾಗ್ಯವೆಂದರೆ ಇಂದು ಭಾರತೀಯನೆನ್ನಬಲ್ಲ ಮುಂದಾಳು ಇಲ್ಲದಿರುವುದು. ಇದೆಲ್ಲ ನಡೆಯುವುದೇತಕ್ಕೆ? ಎಂದರೆ ಈ ಪ್ರಾಂತ್ಯಪ್ರೇಮಿಗಳೊಡನೆ ಉತ್ತರ ನಾಸ್ತಿ. ಕೃಷ್ಣಾ-ಗೋದಾವರಿ ಜಲದ ಪ್ರಶ್ನೆಯನ್ನು ಹಿಡಿದು ಮೈಸೂರು—ಆಂಧ್ರಕ್ಕೆ ಮನಸ್ತಾಪ. 'ಮಹಾರಾಷ್ಟ್ರೀಯರಲ್ಲದವರೆಲ್ಲ ಬೊಂಬಾಯಿಯಿಂದ ಹೊರಡಬೇಕು" ಇದು ಶಿವ ಸೇನೆಯ ಮೊಂಡು ವಾದ. ಅಸಾಮಿನಲ್ಲಿಲ್ಲೋ ವಾಸಿಸುತ್ತಿದ್ದ ಬಂಗಾಳಿಗಳನ್ನು ಅಲ್ಲಿಂದು ಕಿತ್ತೆಸೆಯಲು ಅಸಾಮಿಗಳ ಒತ್ತಾಯ. ಇದಕ್ಕಾಗಿ ಬಂಗಾಳಿಗಳಲ್ಲಿ ರೋಷ! ಇದೇ ರೀತಿ ಭಾರತದಲ್ಲಿ ಪ್ರಾಂತೀಯ ಮನೋಭಾವವು ಮುಂದರಿದದ್ದೇ ಆದರೆ ಭಾರತೀಯ ಐಕ್ಯದ ಕೊನೆಯನ್ನು ಶೀಘ್ರದಲ್ಲೆ ನಿರೀಕ್ಷಿಸಬಹುದು.

(ಎಂಟನೆಯ ಪುಟ ನೋಡಿರಿ)

ಉಳಿತಾಯವನ್ನೇ ಖರ್ಚೆಂದು ಬಗೆದರೆ.......

ಏನನ್ನೂ ಉಳಿಸಲಾರದವರಿಗೆ ಇದೊಂದು ಕಿವಿಮಾತು:

ಸಂಪಾದನೆ ನಿಮ್ಮ ಕೈಗೆ ಬಂದಂತೆ ಏನನ್ನೂ ಉಳಿಸದೆ ಖರ್ಚು ಮಾಡುವುದರಲ್ಲೇ ನಿಮಗೆ ತೃಪ್ತಿಯಿರುವುದಾದರೆ ನಿಮ್ಮ ಖರ್ಚಿನ ಪಟ್ಟಿಯಲ್ಲಿ ಒಂದು ಉಳಿತಾಯದ ಖಾತೆಯನ್ನು ಕೂಡಾ ಸೇರಿಸಿರಿ. ಅದೊಂದು ಮೆಚ್ಚದ ಖರ್ಚೆಂದು ತಿಳಿದು ತೃಪ್ತಿ ಪಡಿರಿ. ನಿಮ್ಮ ಇತರ ಖರ್ಚುಗಳಂತೆ ಈ ಖರ್ಚು ಇಂದು ಮಾತ್ರ ತೃಪ್ತಿಕೊಟ್ಟು ಮುಂದೆ ಚಿಂತೆಗೆ ಈಡು ಮಾಡುವುದಿಲ್ಲ. ಬದಲಿಗೆ ಅದು ಮುಂದೆ ನೀಡಲಿರುವ ಸಂತೋಷ ಹಿರಿದಾದುದು.

ಈ ಹೊಸ ಖರ್ಚಿನಿಂದ ಹಣಮಾತ್ರ ನಿಮ್ಮ ಉಳಿತಾಯ ಖಾತೆಯಲ್ಲೇ ಜಮೆಯಾಗಿ ಅದು ಕ್ರಮೇಣ ಬೆಳೆದು ಸಂಪತ್ತಾಗಿ ಮಾರ್ಪಡುವುದು. ಅತ್ಯಲ್ಪ ದಿನಗಳಲ್ಲಿ ಅದು ನಿಮಗೊಂದು ಅಮೂಲ್ಯ ನಿಧಿಯಾಗಿ ಕಾಣುವುದು. ಉಳಿತಾಯದಂಥ ಈ ಖರ್ಚಿನ ಸವಿ ಒಮ್ಮೆ ನಿಮ್ಮ ಅನುಭವಕ್ಕೆ ಬಂದರೆ ನಿಮ್ಮ ಅನಾವಶ್ಯಕ ಖರ್ಚುಗಳೆಲ್ಲವೂ ಉಳಿತಾಯವಾಗಿ ರೂಪಾಂತರಗೊಳ್ಳುವುವು. ಪರಿಣಾಮ? ನಿಮ್ಮ ಮುಂದಿನ ಬದುಕಿನ ಸುಖ ರೂಪುಗೊಳ್ಳುವುದು.

ಉಳಿತಾಯ ಖಾತೆಯಲ್ಲಿ ಹಣ ಖರ್ಚು ಮಾಡಲು ಇಷ್ಟರಲ್ಲೇ ನೀವು ನಿರ್ಧರಿಸಿದ್ದರೆ ಸಿಂಡಿಕೇಟ್ ಬ್ಯಾಂಕಿನಲ್ಲಿರುವ ಯಾವುದಾದರೊಂದು ಖಾತೆಯಲ್ಲಿ, ನಿಮ್ಮ ಇತರ ಖರ್ಚಿನ ಸಂದರ್ಭಗಳಲ್ಲಿ ಹಣ ಉಳಿಸಿರಿ.

ನ್ಯಾಯದ ಬಣ್ಣ ತಳೆದ ಉಳಿತಾಯ
ನೀಡುವುದು ಸುಖ ಬದುಕಿಗೊಂದು ಅಡಿಪಾಯ

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಕಾಮಧೇನುವಿನ ಬೀಡಿನಲ್ಲಿ

ಜನಾಧಿಪತಿಯವರಿಂದ ಜನಜಾಗರಣ

ಬರೆದವರು: ಶ್ರೀ ಶಿವಶಂಕರ

ಪ್ರಜಾಪ್ರಭುತ್ವ ದಿನಾಚರಣೆಯ ಸಮಯ ಪ್ರಜಾಧಿಪತಿಯವರು ಪ್ರಜೆಗಳಿಗೆ ಭಾಷಣವೀಯುವದು ನಡೆದು ಬರುತ್ತಿರುವ ಅಭ್ಯಾಸ. ಅದಕ್ಕನುಸಾರವಾಗಿ ಈ ಸಲದ ಪ್ರಜಾಪ್ರಭುತ್ವ ದಿನಾಚರಣೆಯ ಸಮಯ ಪ್ರಚಲಿತ ಪ್ರಜಾಧಿಪತಿ ಶ್ರದ್ಧೇಯ ಶ್ರೀ ರಾಧಾಕೃಷ್ಣನ್‌ರವರು ಭಾಷಣವಿತ್ತರು. ಅವರ ಭಾಷಣ ಮೊದಲಿನಂತೆ ಸರಕಾರದ ಪ್ರಗತಿಯ ಕುರಿತು ಇರಬಹುದೆಂದುಕೊಂಡಿದ್ದ ಜನರಿಗೆ ಅಂದು ನಿರಾಶೆಯಾಯಿತು. ಅಂದಿನ ಭಾಷಣ ಸಾಧಾರಣ ರೀತಿಯ ಭಾಷಣವಾಗಿರಲಿಲ್ಲ. ಅಂದು ಜನಾಧಿಪತಿಯವರು ಜನಜಾಗರಣ ಕಾರ್ಯದಲ್ಲಿ ಭಾಗವಹಿಸಿದರು. ತನ್ನ ಮನಸ್ಸಿನ ತಳಮಳವನ್ನು ಜನತೆಯ ಎದುರಿಗೆ ತೋಡಿಕೊಂಡರು. ತನ್ನ ಶಾಂತಮಯ ಮನೋಸಾಗರದಲ್ಲೇ ಎದ್ದಿರುವ ಹೆದ್ದೆರೆಯನ್ನು ಜನತಾ ದಂಡೆಯ ಮೇಲೆ ಅಪ್ಪಳಿಸಿಬಿಟ್ಟರು. ಎಚ್ಚತ್ತಿರುವ ಜನತೆ ಅದನ್ನು ಕಂಡುಕೊಂಡಿತು. ನಿದ್ರಿಸುತ್ತಿದ್ದ ಜನರು ಕಣ್ಣು ತೆರೆದು ಪಿಳಿಪಿಳಿ ನೋಡುವಂತಾಯಿತು. ಆದರೆ ನಿದ್ರೆ ಬಂದಿರುವಂತೆ ನಟಿಸುವವರನ್ನೆಬ್ಬಿಸಲು ಸಾಧ್ಯವಾಗದೆ ಹೋಯಿತು.

ಇಂದು ದೇಶದಲ್ಲಿ ಅತೃಪ್ತಿ, ಅಭಾವ, ದಾರಿದ್ರ್ಯ, ಅಸಮಾಧಾನ ಅದಿನಿತೂ ಅಡೆತಡೆ ಇಲ್ಲದೆ ತಾಂಡವವಾಡುತ್ತಿದೆ. ಅವುಗಳ ನಡುವ ತೀವ್ರ ಒಡಂಬಡಿಕೆ ನಡೆದಿರುವಂತಿದೆ. ಒಂದನ್ನೊಂದು ಬಿಟ್ಟು ಹೋಗುವದಿಲ್ಲವೆಂದು ಶಪಥ ಮಾಡಿಕೊಂಡಂತಿದೆ. ಆದರೆ ನಿಜವಾಗಿ ಇಂದು ಅಭಾವ ಅಥವಾ ದಾರಿದ್ರ್ಯ ದೇಶದಲ್ಲಿದೆಯೇ? ಅದಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರವರು ತಕ್ಕ ಬದಲಿತ್ತಿದ್ದಾರೆ. ನಮ್ಮ ದೇಶ ದಾರಿದ್ರ್ಯಪೀಡಿತ ದೇಶ ಇರುವದಿಲ್ಲ. ಇದು ಕಲ್ಪವೃಕ್ಷ, ಕಾಮಧೇನುಗಳ ಕೋಟೆ. ಭಾರತಮಾತೆ ಸದಾ ವಾತ್ಸಲ್ಯಮಯಿ. ಬಿಹಾರಿನಲ್ಲಿ ಹಾಗೂ ಇತರೆಡೆಗಳಲ್ಲಿ ಆಗಾಗ ಕ್ಷಾಮ ಕಾಲಿಟ್ಟದ್ದನ್ನು ಕಂಡೂ ಆ ರೀತಿ ಹೇಳಲು ಸಾಧ್ಯವೇನು? ಸಂಧ್ಯವೇ ಸರಿ. ಅಲ್ಲಿಯ ಜನತೆ ಕಷ್ಟಕೋಟಲೆಗೊಳಗಾಗಿರುವದು ನಿಜ. ಆದರೆ ಇತರೆಡೆಗಳಲ್ಲಿರುವ ಭಾರತೀಯರ ಸ್ಥಿತಿಯೂ ಹಾಗೆ ಇರುವದಿಲ್ಲ. ಜನತಾ ಹೃದಯ ಕ್ಷೀರಸಾಗರವೇ ಸರಿ. ಸಾಗರದಿಂದ ಒಂದು ಕೊಡ ಹಾಲನ್ನು ತೆಗೆದಲ್ಲಿ ಒಡನೆ ಆ ಸ್ಥಾನವನ್ನು ಅವು ಹಳ್ಳ ಇರಲು ಬಿಡದೆ, ಸಮುದ್ರ ಸರಿಪಡಿಸಿಕೊಳ್ಳುತ್ತದೆ. ಅದೇ ಸಮುದ್ರದ ಸಾಮಿಪ್ಯದಲ್ಲೇ ಇರುವ ಮಳಲಿನ ಸ್ಥಿತಿಯಾದರೋ ತೀರಾ ಭಿನ್ನವಿದೆ. ಹೇರಳವಿರುವ ಹೊಯಿಗೆಯ ರಾಶಿಯಿಂದ ಒಂದು ಹಿಡಿಯಾದರೂ ಏಕೆ, ಒಂದೇ ಒಂದು ಚಿಮುಟಿ ಹೊಯಿಗೆ ತೆಗೆದರೂ ಅಲ್ಲಿ ಹಳ್ಳವಾಗುತ್ತಿದೆ. ಭಾರತೀಯ ಜನತೆಯ ಹೃದಯ ಮರಳು ಭೂಮಿಯಾಗಲು ಸಾಧ್ಯವೇನು? ಹಾಗಿದ್ದರೂ ಅತೃಪ್ತಿ—ಅಸಮಾಧಾನ ಅಟ್ಟಹಾಸಗೈಯುತ್ತಿರಲು ಕಾರಣವೇನು? ಏನು ಕಾರಣ? ಭಾರತೀಯ ಜನತೆಯ ಹೃದಯ ಸಾಗರದಲ್ಲಿ ರಾಷ್ಟ್ರದ ಅಧ್ಯಕ್ಷರು ಅಲೆಯನ್ನೆಬ್ಬಿಸಿರುವರು. ಅದರ ಪರಿಹಾರೋಪಾಯವನ್ನು ಅವರು ಸೂಚಿಸಿರುವರು. ಇಂದಿನ ಅಸಮರ್ಥ ಅಲ್ಲದೆ ಅವ್ಯವಸ್ಥಿತ ಆಕ್ರಮದಿಂದ ಆಡಳಿತ ವಿಧಾನವೇ ಇದಕ್ಕೆಲ್ಲಾ ಕಾರಣವೆಂಬುದನ್ನು ರಾಷ್ಟ್ರಾಧ್ಯಕ್ಷರು ಅದಿನಿತೂ ಸಂಕೋಚಪಡದ ಪಕ್ಷವ್ಯಾಮೋಹ ತೊರೆದು, ಜನತೆಯ ಹಿತದೃಷ್ಟಿಯಿಂದ ಸ್ಪಷ್ಟವಾಗಿ ಸೂಚಿಸಿದ್ದಾರೆ. ಚುನಾವಣೆಯ ಪೂರ್ವ, ಕಣಕ್ಕೆ ಸಮರ್ಥ ಅಭ್ಯರ್ಥಿಗಳನ್ನು ಆರಿಸಿಕೊಳ್ಳಬಹುದಾಗಿತ್ತೆಂದು ಶ್ರೀಮತಿ ಇಂದಿರಾ ಗಾಂಧೀಜಿ ಎವರು ತನ್ನ ಮನಸ್ಸಿನ ಇಂಗಿತವನ್ನು ಅರುಹಿರುವರು. ಅದಕ್ಕೇನು ಅಡ್ಡಿ ಬಂದದ್ದೆಂಬುದು ಕಾಂಗ್ರೆಸಿನೊಳಗಿನ ಗೂಢರಹಸ್ಯ. ಶ್ರೀ ಸಾಮಾನ್ಯನಿಗೆ ಅರ್ಥವಾಗದ ವಿಷಯವದು. ಆದರೆ ಅವನಿಗೆ ಇಂತಹ ಅಸಮರ್ಥರು ಆಡಳಿತ ಅಂಗಣದಲ್ಲಿ ಕಾಲಿಟ್ಟೊಡನೆ ಏನು ಮಾಡಿಯಾರೆಂಬುದರ ಅನುಭವ ಇಪ್ಪತ್ತು ವರ್ಷಗಳಿಂದ ಎಡೆಬಿಡದ ಸಿಕ್ಕಿರುತ್ತದ. ಶ್ರೀಮತಿಜೀಯವರೇ ಸೂಚಿಸಿರುವ ಅಸಮರ್ಥರ ಕೈಯಲ್ಲಿ ಆಡಳಿತದ ಅಂಕುಶ ಸಿಕ್ಕಿತೆಂದರೆ ಅವ್ಯವಸ್ಥೆ ತಾನೇ ತಾನಾಗಿ ಅಲ್ಲಿ ಡೇರೆ ಹೂಡಯುತ್ತದೆ. ಆಗ ಅದನ್ನು ಮುಚ್ಚಿಡಲು ಅಶ್ರುವಾ ವಿಧಾನಗಳಿಗೆ ಅವರು ಶರಣು ಹೋಗಲೇ ಬೇಕಾಗುತ್ತದ. ಆದರ ಒದಲು ಶ್ರೀ ಪಟೇಲ್ ಅಥವಾ ಶ್ರೀ ಶ್ಯಾಮಪ್ರಸಾದ ಮುಖರ್ಜಿಯಂತಹವರು ಅಲ್ಲಿ ಇದ್ದಲ್ಲಿ ಅವ್ಯವಸ್ಥೆ ಅತ್ತ ತಪ್ಪಿಯೂ ದೃಷ್ಟಿ ಹಾಯಿಸುವಂತಿಲ್ಲ. ಆದರೆ ಅದಿಂದು ಚಲ್ಲಿ ಹೋಗಿರುವ ಹಾಲೇ ಸರಿ. ಆದುದರಿಂದ ಪರಿತಪಿಸಿ ಪ್ರಯೋಜನವಿರುವದಿಲ್ಲ. ಅಸಾಮರ್ಥ್ಯತೆಯ ಕಾರಣದಿಂದಾಗಿ, ಸ್ವಾತಂತ್ರ್ಯ ಸಿಕ್ಕುವಾಗ ನಮಗನೇ ಬ್ರಿಟಿಷರೂ ಪಾಕಿಸ್ಥಾನಗಳೂ ಕೋಟಿ ಕೋಟಿ ರೂಪಾಯಿ ಋಣ ಕೊಡಬೇಕಾಗಿತ್ತಾದರೂ, ಇಂದು ಇಪ್ಪತ್ತು ವರ್ಷದಲ್ಲಿ ನಾವು ಪ್ರಪಂಚ ನಿಧಿಗೆ ಅಮೇರಿಕಕ್ಕೆ ಹಾಗೂ ಇತರರಿಗೆ ಕೋಟಿ ಕೋಟಿ ರೂಪಾಯಿ ತರಬೇಕಾಗಿರುವಂತಹ ಪರಿತಾಪಕರ ಪರಿಸ್ಥಿತಿ ಬಂದಿರುತ್ತದ. ಹೀಗೆ ಪ್ರಪಾತದ ಅಂಚಿನಲ್ಲಿ ನಾವಿರುವದರ ಕುರಿತು ರಾಷ್ಟ್ರಾಧ್ಯಕ್ಷರು ಎಚ್ಚರಿಸಿರುವರು.



ಪಶ್ಚಿಮ ಜರ್ಮನಿಯ ಕ್ಲಾಡೋಪಿನ ಯೇಸು ಸಂಘದ ಸದಸ್ಯರು ಬಿಡುವಿನ ವೇಳೆಯಲ್ಲಿ ಬಾಸ್ಕೆಟ್ ಬಾಲನ್ನು ಆಡುತ್ತಾರೆ.

ರಾಜಕೀಯ ನಾಯಕರಿಗೆ ದೇಶದ ಭವಿಷ್ಯತ್ತಿನತ್ತ ಸ್ಪಷ್ಟ ದೃಷ್ಟಿ ಇರಬೇಕು. ಅವರು ತಮ್ಮ ವೈಯಕ್ತಿಕ ಸೌಕರ್ಯ ಹಾಗೂ ಬಾಳ್ವೆಕೆಯಿಂದ ತೃಪ್ತಿಪಟ್ಟುಕೊಳ್ಳಬಾರದೆಂದು ರಾಷ್ಟ್ರಾಧ್ಯಕ್ಷರು ತಿಳಿಸಿರುವರು. ಇಂದಿರಾ ಗಾಂಧೀಜೀಯವರಿಗೆ ಸಮರ್ಥ ಅಭ್ಯರ್ಥಿಗಳನ್ನಾರಿಸುವ ಪಥದಲ್ಲಿ ಅಡ್ಡ ಬಂದಿರುವ ಬಂಡೆ ಯಾವದೆಂಬುದನ್ನು ಶ್ರದ್ಧೇಯ ಶ್ರೀ ರಾಧಾಕೃಷ್ಣನ್ ಕಂಡು ಹಿಡಿದಿರುವರು ಮತ್ತು ಅದಕ್ಕಾಗಿಯೇ ಈ ಮಾತನ್ನಾಡಿರುವರು. ಇದು ಇಂದಿನ ರಾಜಕೀಯ ಮೌಢ್ಯ. ರಾಜಕೀಯ ಪಕ್ಷಗಳು ಕೇವಲ ತಮ್ಮ ಸೌಕರ್ಯ ಹಾಗೂ ಉಳಿವಿನ ಕುರಿತು ಮಾತ್ರ ಯೋಚಿಸುತ್ತವೆ. ತಮ್ಮ ಪಕ್ಷ ಉಳಿದಲ್ಲಿ ತಾನೇ ಭಾವ್ಯಭವಿಷ್ಯತ್ತಿನ ಭಾಗ್ಯ ರೇಖೆಯನ್ನೆಳೆಯಲು ಸಾಧ್ಯವೆಂಬುದು ಅವರ ವಾದ. ಆಡಳಿತದ ಅಂಕುಶ ತಮ್ಮ ಕೈಗೆ ಬಂದಲ್ಲಿ ಈ ದೇಶವೆಂಬ ಆನೆಯನ್ನು ಸರಿಯಾಗಿ ನಡೆಸಿಯೇವೆಂಬುದು ಅವರ ಅಭಿಪ್ರಾಯ. ರಾಷ್ಟ್ರಾಧ್ಯಕ್ಷರ ಸ್ಪಷ್ಟನುಡಿಗಳಿಗೆ ಅಪವಾದವಾಗಿರುವ ಪಕ್ಷ ಯಾವದಾದರೂ ಇಂದು ಇದೆಯೇ? ಆಡಳಿತದ ಅಂಗಣದಲ್ಲಿರುವ ಕಾಂಗ್ರೆಸ್ಸಿನ ವಿಷಯದಲ್ಲಂತೂ ಶ್ರೀಮತಿ ಇಂದಿರಾ ತಮ್ಮ ಖಂಡಿತ ಅಭಿಪ್ರಾಯವನ್ನು ತಿಳಿಸಿರುವರು. ಇತರ ಪಕ್ಷಗಳಾದರೋ ಕಾಂಗೆಸ್ಸಿನ ಕಾಲು ಜಾರಿಸಿ ತಾವು ಆಸನದಲ್ಲಿ ಆಸೀನರಾಗಲು ಆತುರ ಪಡುತ್ತಿವೆ. ಅದಕ್ಕಾಗಿ ಅದ್ಯಾವ ಕಾರ್ಯಕ್ಕೂ ಅವು ಹೇಸುವದಿಲ್ಲ. ಅದೇನೇನೋ ಒಡಂಬಡಿಕೆ—ಮೈತ್ರಿ—ಒಪ್ಪಂದ ವಗೈರೆ ನಡೆಸಿಕೊಳ್ಳುತ್ತಾರೆ ಮತ್ತು ಅಷ್ಟೇ ಸುಲಭವಾಗಿ ಆ ಬಂಧನವನ್ನು ಕಿತ್ತೊಗೆಯುತ್ತವೆ. ಕಾಂಗ್ರೆಸ್ಸಿನಲ್ಲಿ ತಮ್ಮ ಬೇಳೆ ಬೇಯದಿದ್ದುದರಿಂದ ಹೊರಬಂದವರೇ ಇಂದು ಸ್ವತಂತ್ರ ಪ್ರಜಾಸಮಾಜವಾದಿ ಪಕ್ಷಗಳಲ್ಲಿರುವದಲ್ಲದೆ, ವ್ಯಕ್ತಿಗೊಂದರಂತೆ ಮಹಾಕಾಂಗ್ರೆಸ್ ಪಕ್ಷಗಳನ್ನು ಸ್ಥಾಪಿಸಿಕೊಳ್ಳುತಿದ್ದಾರೆ. ಇವರಿಗೆ ದೇಶದ ಭವಿಷ್ಯತ್ತಿನತ್ತ ಅದಿನಿತಾದರೂ ಸ್ವಲ್ಪ ದೃಷ್ಟಿ ಇರಲಿ, ಯೋಚನೆಯೇ ಇಲ್ಲ. ತಮ್ಮ ರಾಜಕೀಯ ಪಥನಕ್ಕೆ ಕಾರಣರಾಗಿರುವವರ ಕಾಲನ್ನೆಳೆಯುವದೇ ಅವರ ಗುರಿ. ಮೇಧಾವಿ ಶ್ರೀ ರಾಜಗೋಪಾಲಾಚಾರಿಯವರೂ ಇದಕ್ಕೆ ವಿರೋಧವಾಗಿಲ್ಲ. ಇತ್ತೀಚಿಗೆ ಪ್ರತಿಕಾ ಪ್ರತಿನಿಧಿಗಳು ಕೇಳಿರುವ ಪ್ರಶ್ನೆಗೆ ಅವರು ಉತ್ತರಕೊಟ್ಟಿರುವ ರೀತಿಯನ್ನು ನೋಡಿದರೂ ಸಾಕು. ಕಾಂಗ್ರೆಸ್ಸಿನ ಮಹಾನಾಯಕರು ಅವರ ಬಳಿ ತಮ್ಮ ತಪ್ಪೊಪ್ಪಿಕೊಂಡಲ್ಲಿ ಸಾಕು, ಕ್ಷಮೆ ಬೇಡುವದೂ ಬೇಡ, ಅವರು ಹಿಂದಿನದೆಲ್ಲವನ್ನೂ ಮರೆತು ಸ್ವತಂತ್ರಪಾರ್ಟಿಯನ್ನು ವಿಸರ್ಜಿಸಿ ಕಾಂಗ್ರೆಸ್ಸಿನವರೊಂದಿಗೆ ಕೈಕಾಲು ಕೂಡಿಸುವರು. ದೇಶದ ಭವಿಷ್ಯತ್ತಿನತ್ತ ದೃಷ್ಟಿ ಇರಲಿ, ಯೋಚನೆ ಇರಲಿ ಅದ್ಯಾರಿಂದರೂ ಮುಸ್ಲಿಂಲೀಗ, ದ್ರಾವಿಡ ಮುನ್ನೇಟ್ರ ಕಝಗಂ, ದ್ರಾವಿಡ ಕಝಗಂ, ಅಕಾಲಿದಳ, ಶಿವಸೇನೆಯಂತಹ ವಿಚ್ಛೇದನಕಾರಿ ದುಃಶಕ್ತಿಗಳ ಎದುರ ಮಂಡಿಯೂರುವರೇ? ಅಖಿಲ ಭಾರತೀಯ ಪಕ್ಷ ಎನಿಸಿಕೊಳ್ಳುತ್ತಿರುವ ಸ್ವತಂತ್ರ ಪಾರ್ಟಿಯ ಚಕ್ರವರ್ತಿಯವರು ಈ ಸಲದ ಚುನಾವಣೆಯ ಕಾಲದಲ್ಲಿ ಪ್ರತ್ಯೇಕ ದ್ರಾವಿಡನಾಡನ್ನು

ಧರ್ಮ ವಿರೋಧಿ, ಕೇಳುತ್ತಿರುವ, ಬ್ರಾಹ್ಮಣರ ಶತ್ರು ದ್ರಾವಿಡ ಮುನ್ನೇಟ್ರ ಕಳಗವಿನ ಕಾಲಡಿಯಲ್ಲಿ ಸೇರಿ ರಸ್ತೆ ರಸ್ತೆಯಲ್ಲಿ ಅನಕ್ಕಾಗಿ ಪ್ರಚಾರ ಪೌರೋಹಿತ್ಯ ನಡೆಸುವ ಆಚಾರ್ಯರಾಗಿಬಿಟ್ಟರು. ದೇಶದ್ರೋಹಿ, ಧರ್ಮದ್ರೋಹಿ ಕಮ್ಯೂನಿಸ್ಟರೊಂದಿಗೆ ಕೈಕುಲುಕಿಸಿಕೊಂಡಿರುವ ಸ್ವತಂತ್ರ, ಪ್ರಜಾಸಮಾಜವಾದಿ, ಸಮಾಜವಾದಿ ಮುಂತಾದ ಪಕ್ಷಗಳಿಗೆ ದೇಶದ ಭವಿಷ್ಯತ್ತಿನ ಆಶೆ ಇದೆಯೇ? ಅವರಿಗೆ ಬೇಕಾಗಿರುವದು ಆಸನ, ಅಧಿಕಾರ ಅವರ ಕೈಗೆ ಬಂದರೆ ಸಾಕು. ದೇಶವನ್ನು ನೂರಿಪ್ಪತ್ತು ಹೋಳು ಮಾಡಲೂ ಅವರು ಸಿದ್ಧ. ಅಮೇರಿಕಾಕ್ಕೋ, ರಷ್ಯಾಕ್ಕೋ, ಚೈನಾಕ್ಕೋ ಒತ್ತೆ ಇಡಲೂ ಅವರು ಹೇಸುವುದಿಲ್ಲ. ದೇಶದ ಗೌರವದ ಅಪಮೌಲ್ಯವನ್ನು ಅಮೇರಿಕಾದ ಒತ್ತಡದ ಪರಿಣಾಮವಾಗಿ ಕಾಂಗ್ರೆಸ್ಸಿಗರು ನಡೆಸಿರುವರು. ಸ್ವತಂತ್ರ ಪಾರ್ಟಿಗೆ ಅಷ್ಟರಿಂದಲೇ ತೃಪ್ತಿ ಇಲ್ಲ. ದೇಶದ ಭವಿಷ್ಯತ್ತನ್ನೇ ಒತ್ತೆ ಇಡಲು ಅದು ಸೂಚಿಸುತ್ತದೆ. ಕಮ್ಯೂನಿಸ್ಟರಲ್ಲಿ ಒಂದು ಗುಂಪಿನವರು ರಷ್ಯದೊಂದಿಗೆ ರಮಿಸಬೇಕೆಂದೂ, ಇನ್ನೊಂದು ಗುಂಪಿನವರು ಚೈನಾದ ಚರಣದಾಸರಾಗಬೇಕೆಂದೂ ಹೇಳುತ್ತಿದ್ದಾರೆ.

ಈ ರೀತಿ, ಇಂದಿನ ದಿಲ್ಲೀಶರು ತಮ್ಮ ಅಸಮರ್ಥ, ಅವ್ಯವಸ್ಥಿತ, ಅಕ್ರಮ ಆಡಳಿತ ವಿಧಾನದಲ್ಲ ಪಂಥದ ಪ್ರವಾಹದಲ್ಲಿ ತೀವ್ರ ಪ್ರಗತಿಯಿಂದ ಧಾವಿಸಿರುವರು. ಮತ್ತು ರಾಜಕೀಯ ಪಕ್ಷಗಳ ನೇತಾರರಾದರೋ ಭವಿಷ್ಯತ್ತಿನತ್ತ ಯೋಚನೆ ಕೂಡಾ ಮಾಡದ ಕೇವಲ ತಮ್ಮ ನಿಲಕರ್ಮ್ಯ ಹಾಗೂ ಉಳಿವಿಗಾಗಿ ಹೋರಾಡುತ್ತಿದ್ದಾರೆ ಹಾಗಿದ್ದರೂ ಆಶಾದೇವಿಯನ್ನು ನಾವು ನಗ್ನಗೊಳಿಸಬೇಕಾಗಿಲ್ಲ. ಈ ದುಸ್ಥಿತಿಯನ್ನು ಬದಲಾಯಿಸಲೇ ಬೇಕು. ಅದಕ್ಕೆ ಕ್ರಾಂತಿಯ ಅವಶ್ಯಕತೆ ಇದೆ, ಆದರದು ರಕ್ತಕ್ರಾಂತಿಯಲ್ಲ. ಉತ್ಸಾಹ ಹಾಗೂ ಭಾಷಣ ರಂಗದಲ್ಲಿ ಕ್ರಾಂತಿ ನಡೆಯಲೇ ಬೇಕು. ಇಂದು ನೈತಿಕ ಜಾಗರಣ ಆಗಬೇಕು. ರಾಷ್ಟ್ರದ ಪುನರುತ್ಥಾನಕ್ಕೆ ಇದು ತೀರಾ ಆವಶ್ಯಕ.

ಶ್ರದ್ಧೇಯ ಶ್ರೀ ರಾಧಾಕೃಷ್ಣರವರು ದೇಶದ ದುಃಸ್ಥಿತಿ, ಅದರ ಕಾರಣ ಹಾಗೂ ಪರಿಹಾರೋಪಾಯವನ್ನು ಸೂಚಿಸಿರುವರು ರಾಷ್ಟ್ರೀಯ ಭಾವನೆಯ ಕ್ರಾಂತಿ ನಮ್ಮಲ್ಲಿ ನಡೆಯಲೇ ಬೇಕು. ಆ ದಾರಿಯಲ್ಲಿರುವ ಮಿಥ್ಯ ರಾಷ್ಟ್ರೀಯತೆಯನ್ನು ದೂರ ಸರಿಸಲೇಬೇಕು. ಸ್ಪಷ್ಟ ಅಭಿಪ್ರಾಯ ನಮ್ಮ ಮುಂದಿರಬೇಕು. ನಾವೆಲ್ಲರೂ ವಾತ್ಸಲ್ಯಮಯಿ ಭಾರತಾಂಬೆಯ ಮಕ್ಕಳಿದ್ದೇವೆ—ಭಾರತೀಯರಿದ್ದೇವೆ. ಇಲ್ಲಿನ ಧಾರ್ಮಿಕ ಭಾವನೆ, ರಾಷ್ಟ್ರೀಯತೆಯ ಅವಹೇಳನೆಯನ್ನು ನಾವು ಸಹಿಸಲಾರೆವು. ನಮ್ಮ ಪೂರ್ವಜನ ಮೇಲೆ, ಸಂಸ್ಕೃತಿಯ ವಿಷಯದಲ್ಲಿ ನಮಗೆ ಗೌರವ ಇರಬೇಕು. ಈ ತಳಹದಿಯ ಮೇಲೆ ಅದೆಂತಹ ಭಾರೀ ಕಟ್ಟಡವನ್ನೂ ಕಟ್ಟಬಹುದು. ಅದು ಕುಸಿದು ಬೀಳುವಂತಿಲ್ಲ.

ಆದರೆ ಈ ರಾಷ್ಟ್ರೀಯತೆಯ ಅಮೃತವನ್ನು ಕುಡಿಯಲು ಮುಂದೆ ಬರಲು ಸಿದ್ಧರಿರುವ ರಾಜಕೀಯೋದ್ಯಮಿಗಳ್ಯಾರು? ಅವರಿಗೆ ಬೇಕಾಗಿರುವದು ಅಮೃತವಲ್ಲ. ತಾತ್ಕಾಲಿಕ ಹಾಗೂ ಒಡನೆ ಅಮಲು ಬರುವಂತಹ ಹುಳಿ ಹೆಂಡ—ಅದೂ ಪರದೇಶದಿಂದ ಆಮದಾಗಿರುವ ಬಾಟ್ಲಿಯಲ್ಲಿ ಹಾಕಿದ್ದು! ಇಂತಹ ರಾಜಕೀಯ ಕುಡುಕರ ಸಹವಾಸದಿಂದ ಬೇಸತ್ತಿರುವ ಶ್ರದ್ಧೇಯ ಶ್ರೀ ರಾಧಾಕೃಷ್ಣನ್‌ರವರು ರಾಷ್ಟ್ರಾಧ್ಯಕ್ಷರ ಭಾರೀ ಗೌರವದ ಆಸನಕ್ಕೆ ನಮಸ್ಕಾರ ಮಾಡಿ ದೂರ ಸರಿಯಲು ಸಿದ್ಧರಾಗುತ್ತಿದ್ದಾರೆ. ಅಂತೆಯೇ ಅಣಿಗೊಳಿಸಿಕೊಳ್ಳುತ್ತಿರುವಾಗಲೇ ಜನಜಾಗರಣದ ಪವಿತ್ರ ಕಾರ್ಯವನ್ನು ಆರಂಭಿಸಿ ಬಿಟ್ಟಿರುವರು ಅವರು ಹಾಗೆ ಮಾಡದೆ ಪಕ್ಷವ್ಯಾಮೋಹದಿಂದಾಗಲೀ, ಇತರ ಚಿಕ್ಕಪುಟ್ಟ ವೈಯುಕ್ತಿಕ ಕಾರಣದಿಂದಾಗಲೀ, ಜನಜಾಗರಣ ರಾಷ್ಟ್ರೋತ್ಥಾನ ಕಾರ್ಯದಲ್ಲಿ ಭಾಗವಹಿಸದಿದ್ದಲ್ಲಿ ದಿ| ಶ್ರೀ ರಾಜೇಂದ್ರ ಪ್ರಸಾದರಂತೆಯೇ ಆಗುತ್ತದೆ. ಶ್ರೀ ರಾಜೇಂದ್ರ ಪ್ರಸಾದರೋ ಒಬ್ಬ ಶತ್ರುವೆನಿಸಿಕೊಂಡಿದ್ದರೂ, ತನ್ನ ಬಾಯಿಗಬೀಗ ಇದಯೆಂದು ಅವರು ಹೇಳಬೇಕಾಗುತ್ತಿತ್ತು ಶ್ರದ್ಧೇಯ ಶ್ರೀ ರಾಧಾಕೃಷ್ಣನ್ ಹಾಗೆ ಮಾಡದಿರಲಿ, ರಾಷ್ಟ್ರೀಯ ಜಾಗರಣ ಕಾರ್ಯದಲ್ಲಿ ಉತ್ಸಾಹದಿಂದ ಭಾಗವಹಿಸಲಿ.



ಪರ್ವತಯನ್ನು ತಯಾರಿಸಿದ ವಾಹ್ಯಾ ಎಡದಲನಯು ಜಟ್ಟ್ಯಮನ.
ಇದು ೩೭ ಪ್ರಯಾಣಿಕರನ್ನು ಒಯ್ಯಬಲ್ಲುದು

ಅಭಿಪ್ರಾಯ

ದೇಶದ ಮೇಲೆ ಕೇರಳದ ಪ್ರಭಾವ

ಕೇರಳದಲ್ಲಿ ಸಪ್ತರಂಗ ರಚನೆಯ ಪರಿಣಾಮ ದೇಶದ ಇತರ ರಾಜ್ಯಗಳ ಮೇಲೆಯೂ ಕೇಂದ್ರದ ಮೇಲೆಯೂ ಬೀಳುವುದು ಅನಿವಾರ್ಯ.

ಬರೆದವರು

ಶ್ರೀ ಎಂ. ಉಮೇಶ ರಾವ್, ಎಡ್ವೋಕೇಟ್

1957 ರಿಂದ 1959ರ ಅವಧಿಯಲ್ಲಿ ಕೇರಳದಲ್ಲಿ ಕಮ್ಯುನಿಸ್ಟ ಪಕ್ಷವು ಆಡಳಿತವನ್ನು ನಡೆಸಿದಾಗ, ಆ ಪಕ್ಷದ ಪ್ರಭಾವವೂ ದೇಶದ ಇತರ ಪ್ರಾಂತಗಳಿಗೂ ಹಬ್ಬಬಹುದೋ ಎಂಬ ಭೀತಿಗೆ ಆಸ್ಪದ ಉಂಟಾಗಿದ್ದಿತು. 1959ರಲ್ಲಿ ನಡೆದ ವಿಮೋಚನ ಸಮರದಿಂದ, ಕೇರಳದಲ್ಲಿ ಕೂಡಾ ಆ ಪಕ್ಷಕ್ಕೆ ಹೆಚ್ಚಿನ ಬೆಂಬಲವಿಲ್ಲವೆಂದೂ, ಪ್ರಜಾಸತ್ತಾತ್ಮಕ ಪಕ್ಷಗಳು ಒಂದುಗೂಡಿದರೆ ಅದನ್ನು ಸುಲಭವಾಗಿ ಸೋಲಿಸಬಹುದೆಂದೂ ವಿಶದಪಡಿಸಲಾಯಿತು. ಆ ಪಕ್ಷವು, ಆಳಿದ 28 ತಿಂಗಳುಗಳಲ್ಲಿ, ತನ್ನ ನೆಲೆಯನ್ನು ಬಲವಾಗಿ ಭದ್ರಪಡಿಸಿದುದರಿಂದ, ಇಡೀ ಐದು ವರ್ಷ ಅದರ ಆಡಳಿತವು ಮುಂದರಿಸಿದರೆ, ಹೆಚ್ಚಿನ ಅಪಾಯ ಸಂಭವಿಸಬಹುದೆಂದು ತಿಳಿದು ಇತರ ಮೂರು ಪಕ್ಷಗಳು ಒಂದುಗೂಡಿ ಅದರ ಆಳ್ವಿಕೆಯನ್ನು ಕೊನೆಗಾಣಿಸಿದವು. 1960ರಲ್ಲಿ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ ಪಕ್ಷಕ್ಕೆ ಅತ್ಯಧಿಕ ಮತದಾರಕ್ಷೇತ್ರಗಳಲ್ಲಿ ಅಪಜಯವುಂಟಾಯಿತು ಆದರೆ, ಅನಂತರ, ಆಡಳಿತವನ್ನು ವಹಿಸಿದ ಐಕ್ಯರಂಗದ ಮುಖಂಡರೊಳಗಿನ ಅಧಿಕಾರ ದಾಹ ಮತ್ತು ಅಂತಃಕಲಹಗಳಿಂದಾಗಿ ಅವರೊಳಗಿನ ಒಗ್ಗಟ್ಟು ಮುರಿದು ಹೋಯಿತು. ಕೊನೆಗೆ ಕಾಂಗ್ರೆಸ್ ಪಕ್ಷದ ಒಳಜಗಳಗಳಿಂದಲೂ ಕಾಂಗ್ರೆಸ್ ವರಿಷ್ಠ ಮುಖಂಡರು ಅವುಗಳನ್ನು ಸರಿಯಾಗಿ ಇತ್ಯರ್ಥಿಸದುದರಿಂದಲೂ ಕಾಂಗ್ರೆಸ್ ಮಂತ್ರಿಮಂಡಳವೂ ಕೊನೆಗೊಂಡು ಕಮ್ಯುನಿಸ್ಟ ಪಕ್ಷವನ್ನು ಎದುರಿಸಬಲ್ಲ ಬಲವಾದ ಸಂಘಟಣೆಯು ಇಲ್ಲದಂತಾಯಿತು.

1965ರ ಚುನಾವಣೆಯ ವೇಳೆ ಸಂಯುಕ್ತ ಸೋಶಿಯಲಿಸ್ಟ ಪಕ್ಷವೂ ಮುಸ್ಲಿಂ ಲೀಗೂ ಕಮ್ಯುನಿಸ್ಟ ಪಕ್ಷದೊಡನೆ ಸಖ್ಯವನ್ನು ಬೆಳೆಸಿದವು, ಅಲ್ಲದ ಕೇರಳ ಕಾಂಗ್ರೆಸ್ ಪ್ರತ್ಯೇಕ ಪಕ್ಷವಾಗಿ ಉದ್ಭವಿಸಿ, ಕೆಲವು ಸ್ಥಾನಗಳನ್ನು ಪಡೆಯಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅನೇಕ ಕ್ಷೇತ್ರಗಳಲ್ಲಿ ಅಪಜಯ ಹೊಂದಿದರೂ, ಜಯಗಳಿಸಿದ ಪಕ್ಷಗಳು ಒಮ್ಮತದಿಂದ ವರ್ತಿಸದುದರಿಂದ, ಅಧ್ಯಕ್ಷರ ಆಳ್ವಿಕೆಯು ಅಗತ್ಯವಾಯಿತು.

ಕಳೆದ ಹತ್ತು ವರ್ಷಗಳ ಅನುಭವವನ್ನು ಕೇರಳದ ಜನತೆಯೂ ಪ್ರಜಾಸತ್ತಾತ್ಮಕ ಪಕ್ಷಗಳೂ ಸಂಪೂರ್ಣ ಮರೆತಿವೆಯೋ ಎಂಬಂತೆ ತೋರುತ್ತದೆ. 'ಕೇರಳ ಕಾಂಗ್ರೆಸ್' ಪಕ್ಷಕ್ಕೆ ದೊರೆತ ಜಯದಿಂದ ಅದರ ತಲೆ ತಿರುಗಿದಂತೆ ಭಾಸವಾಗುತ್ತಿದೆ ಅದನ್ನು ಅದರ ಮಾತೃ ಸಂಸ್ಥೆಯಾದ ಪ್ರದೇಶ ಕಾಂಗ್ರೆಸಿನೊಂದಿಗೆ ವಿಲಯನಗೊಳಿಸಲು ಮಾಡಿದ ಎಲ್ಲಾ ಪ್ರಯತ್ನಗಳೂ ಅದರ ಕೆಲವು ಮುಖಂಡರ ಛಲದ ಪರಿಣಾಮವಾಗಿ ವಿಫಲಗೊಂಡವು. ಎಷ್ಟರ ತನಕ "ಕೇರಳ ಕಾಂಗ್ರೆಸ್" ಪ್ರದೇಶ ಕಾಂಗ್ರೆಸಿನಲ್ಲಿ ಸೇರುವುದಿಲ್ಲವೋ ಆ ವರೆಗೆ ಕೇರಳದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯ ಸ್ಥಾನ ಪಡೆಯಲಾರದೆಂಬುದು ನಿಸ್ಸಂಶಯ. ಕಳೆದ ಚುನಾವಣೆಯ ಫಲಿತಾಂಶದಿಂದ ಉಬ್ಬಿ ಹೋದ 'ಕೇರಳ ಕಾಂಗ್ರೆಸ್' ಪಕ್ಷಕ್ಕೆ ಈ ಚುನಾವಣೆಯ ನಂತರ ತನ್ನ ತಪ್ಪು ಸಂಪೂರ್ಣ ಮನವರಿಕೆಯಾಗಿ, ಆ ಮೇಲೆ ಪ್ರಾಂತದ ಹಿತದೃಷ್ಟಿಯಿಂದ ಅದು ಪ್ರದೇಶ ಕಾಂಗ್ರೆಸಿನೊಂದಿಗೆ ಸೇರುವುದೆಂದು ಆಶಿಸಬಹುದು.

ಈ ಚುನಾವಣೆಯಲ್ಲಿ ಕೇರಳದ ಕಾಂಗ್ರೆಸ್ ಪಕ್ಷವನ್ನು ಸದೆಬಡಿಯುವ ಉದ್ದೇಶದಿಂದ ಐಕ್ಯರಂಗವನ್ನು ರಚಿಸಿದುದು ಅನಿಷ್ಟ ಸೂಚಕವಾಗಿದೆ. ಇದು ಕಮ್ಯುನಿಸ್ಟ ಎಡಪಕ್ಷದ ಮುಖಂಡರಾದ ಶ್ರೀ ಶಂಕರನಂಬೂದಿರಿಪಾಡರ ಬುದ್ಧಿವಂತಿಕೆ ಮತ್ತು ಚುರುಕುತನದ ಸ್ಮಾರಕವಾಗಿದೆ. ಏಳು ವಿವಿಧ ಪಕ್ಷಗಳನ್ನು ಒಂದುಗೂಡಿಸಿ ಒಗ್ಗಟ್ಟನ್ನುಂಟು ಮಾಡುವುದು ಅಗಾಧವಾದ ಕಾರ್ಯವೇ. ಶ್ರೀ ನಂಬೂದಿರಿಪಾಡರ ತಾಳ್ಮೆ ಮತ್ತು ದೂರದೃಷ್ಟಿಯನ್ನು ಯಾರಾದರೂ ಶ್ಲಾಘಿಸಲೇ ಬೇಕು. ಹೀಗೆ ಒಂದುಗೂಡಿದ ಪಕ್ಷಗಳೊಳಗಿನ ಭಿನ್ನಾಭಿಪ್ರಾಯಗಳು ಯಾವುದೇ ಇರಲಿ, ಈ ಐಕ್ಯರಂಗದ ಪರಿಣಾಮವಾಗಿ ವಿಧಾನ ಸಭೆಯಲ್ಲಿ ಪ್ರದೇಶ ಕಾಂಗ್ರೆಸ್ ಪಕ್ಷದ ಪ್ರಾತಿನಿಧ್ಯವು ಬಹಳ ಮಟ್ಟಿಗೆ ಕುಂದುವುದರಲ್ಲಿ ಸಂದೇಹವೇ ಇಲ್ಲ. ಈ ಐಕ್ಯರಂಗವು ಬಹಳ ವಿಚಿತ್ರ ತರದ್ದಾಗಿದೆ. ಮುಸ್ಲಿಂ ಲೀಗಿಗೆ ಮಲಬಾರಿನಲ್ಲಿ ಕೆಲವು ಮತದಾರ ಕ್ಷೇತ್ರಗಳಲ್ಲಿ ಬೆಂಬಲವಿದೆ. ಬಲ ಕಮ್ಯುನಿಸ್ಟ ಪಕ್ಷದಲ್ಲಿ ಕೆಲವು ಪ್ರಮುಖ ಮುಖಂಡರು ಮಾತ್ರವಿದ್ದು, ಅವರಿಗೆ ಬೆಂಬಲವು ಬಹಳ ಕಡಿಮೆ ಇದೆಯೆಂದು ಕಳೆದ ಚುನಾವಣೆಯಿಂದ ಸ್ಪಷ್ಟವಾಗಿದೆ. ಸಂಯುಕ್ತ ಸೋಶಿಯಲಿಸ್ಟ ಪಕ್ಷದಲ್ಲಾದರೋ, ಪ್ರತಿ ಚುನಾವಣೆಯಲ್ಲಿಯೂ ಕೆಲವಾದರೂ ಸ್ಥಾನಗಳನ್ನು ಪಡೆಯುವ ಉದ್ದೇಶದಿಂದ ಯಾವ ತತ್ವವೂ ಇಲ್ಲದೆ ಒಂದಲ್ಲೊಂದು ಬಲವಾದ ಪಕ್ಷದೊಡನೆ ಸಖ್ಯವನ್ನು ಬೆಳೆಸಿ, ತಮ್ಮ ಪಕ್ಷವು ಕೇರಳದಲ್ಲಿ ಜೀವಂತವಾಗಿದೆ ಎಂದು ತೋರಿಸಲೆತ್ನಿಸುವ ಚುರುಕು ಬುದ್ಧಿಯ ಮುಖಂಡರಿರುವರೆಂದು ಹೇಳಬಹುದು. ಆರ್. ಎಸ್. ಪಿ.ಗೆ ಒಂದೆರಡು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಜನ ಬೆಂಬಲವಿದೆ. ಮತದಾರ ಕ್ಷೇತ್ರಗಳನ್ನು ಎಲ್ಲಾ ಪಕ್ಷಗಳಿಗೆ ಹಂಚಲಾಗಿದೆ. ಹೆಚ್ಚಿನವುಗಳಲ್ಲಿ ಎಡ ಕಮ್ಯುನಿಸ್ಟ ಪಕ್ಷಕ್ಕೆ ಮಾತ್ರವೇ ಸರಿಯಾದ ಬೆಂಬಲವಿದೆ. ಆದರೂ ಹಲವು ಇಂತಹ ಕ್ಷೇತ್ರಗಳನ್ನು ಬೆಂಬಲವಿಲ್ಲದ, ತಮ್ಮ ಶಕ್ತಿಯಿಂದಲೇ ಗೆಲ್ಲಲು ಯೋಗ್ಯತೆ ಇರದ ಇತರ ಪಕ್ಷಗಳಿಗೆ ಹಂಚಲಾಗಿದೆ. ಈ ರೀತಿ ಐಕ್ಯಕ್ಕೆ

(ಒಂಭತ್ತನೇ ಪುಟ ನೋಡಿರಿ)

ಪ್ರಾಂತೀಯತೆ ದೂರವಾಗಬೇಕು

(ಐದನೆಯ ಪುಟದಿಂದ)

ರಾಜ್ಯ ಪುನರ್ಘಟನಾ ಆಯೋಗದ ಶಿಫಾರಸಿನಂತೆ ೧೮ ರಾಜ್ಯಗಳ ಸೀಮೆಯನ್ನು ಕಡಿಮೆಗೊಳಿಸಿ ೧೩ ರಾಜ್ಯವನ್ನೆ ಮಾಡಿದರು. ಆದರೆ ಈಗಿನ ಅಧಿಕವಾಗುತ್ತಿರುವ ವಿಭಜನೆಯಿಂದಾಗಿ ಪ್ರಾಂತ್ಯಗಳು ೧೮ನ್ನೂ ಮೀರಿ ಬೆಳೆಯಬಹುದೆಂದು ಕಾಣುತ್ತದೆ. ಇನ್ನು ಮುಂದಿನ ಬೃಹತ್ ಚುನಾವಣಾನಂತರ ಕೆಲವೊಂದು ರಾಜ್ಯಗಳಲ್ಲಿ ಕೇಂದ್ರದಲ್ಲಿ ಬಹುಮತವಿರದ ಪಕ್ಷಗಳ ಸರಕಾರ ರಚನೆಯಾಗುವ ಸಂಭವವಿದೆ. ಮತ್ತೆ ರಾಜ್ಯ ಕೇಂದ್ರದೊಳಗೆ ನಡೆಯುವ ಸಂಘರ್ಷಕ್ಕೆ ಅಂತ್ಯವೇ ಇರದು.

ಈ ಭಾಷಾವಾರು ಪ್ರಾಂತ ರಚನೆಯಿಂದ ದೊರೆತ ಕಟು ಅನುಭವದಿಂದಾಗಿ ಇದೀಗ ತಪ್ಪು ತಿಳಿದ ರಾಜಕಾರಣಿಗಳು ಐದು ಕ್ಷೇತ್ರೀಯ ಪರಿಷತ್ತಿನ ಸ್ಥಾಪನೆ ಮಾಡಿದ್ದಾರೆ. ಕ್ರಮೇಣ ಈ ಪರಿಷತ್ತಿಗೆ ಪ್ರಬಲ ರೂಪವಿತ್ತು ಪ್ರಾಂತೀಯ ಸರಕಾರವನ್ನು ನಿಯಂತ್ರಣಗೊಳಿಸುವುದೇ ಅವರ ಉದ್ದೇಶ. ರಾಜ್ಯದ ಮಂತ್ರಿಗಳೊಳಗೆ ನಡೆಯುವ ಕ್ಷುಲ್ಲಕ ಕಚ್ಚಾಟವು ದೇಶದ ಶುಭ ಚಿಹ್ನೆಯಲ್ಲ. ಆದುದರಿಂದ ದೇಶಕ್ಕೆ ಒಂದು 'ಯುನಿಟರಿ ಫಾರ್ಮ್ ಆಫ್ ಗವರ್ನಮೆಂಟ್' ರಚಿಸದೇ ದೇಶದ ಐಕ್ಯವು ದುಸ್ಸಾಧ್ಯ. ವಿಶ್ವದ ಹೆಚ್ಚಿನ ರಾಷ್ಟ್ರಗಳಲ್ಲಾ ಈ ತರದ ಸರಕಾರದ ಛಾಯೆಯಲ್ಲಿ ಆಡಳಿತೆಯನ್ನು ಸುಲಭವಾಗಿ ನಡೆಸುತ್ತಿವೆ. ಇದಕ್ಕೊಂದು ಜ್ವಲಂತ ಉದಾಹರಣೆ ಬ್ರಿಟನ್ ಆಗಿದೆ.

ಇಂದು ಗುಜರಾತಿ, ಮರಾಠಿ, ಬಂಗಾಳಿ, ಮದ್ರಾಸಿ ಹಲವರು ದೊರೆಯುತ್ತಾರೆ. ಆದರೆ ಕಣ್ಣಿಗೆ ಎಣ್ಣೆ ಹಚ್ಚಿ ಹುಡುಕಿದರೂ 'ಭಾರತೀಯ' ಸೂಕ್ಷ್ಮ ಕನ್ನಡಲ್ಲೇ ದೊರೆಯಬಲ್ಲ. ಸ್ವಾರ್ಥಿ ರಾಗೂ ಕುತಂತ್ರಿ ರಾಜಕಾರಣಿಗಳು ಈ ಕುರಿತು ವಿಚಾರ ಮಾಡದೆ, ಇದನ್ನು ತಡೆಯದೆ ಇದ್ದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ, ದ್ವಾರಕೆಯಿಂದ ಉತ್ತರ ಪೂರ್ವ ಸೀಮಾಂತಲದ ವರೆಗೆ ಚಾಚಿರುವ ಭಾರತದಲ್ಲಿ "ಭಾರತ ಮಾತೆಗೆ ಜಯವಾಗಲಿ!" ಎನ್ನುವ ಭಾರತೀಯನು ದೊರೆಯಲಾರನು.

(ಪ್ರಕಾಶವೀರ ಶಾಸ್ತ್ರಿಯವರ ಲೇಖನವನ್ನಾಧರಿಸಿ).

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 472/66.

ವಾದಿ— ಯಜ್ಞನಾರಾಯಣ ಅಡಿಗ,
ಪ್ರತಿವಾದಿ. ನಂಜಪ್ಪ ಹೆಗ್ಡೆ ಕೂಡಾ 10 ಜನರು.

8ನೆ ಪ್ರತಿವಾದಿಗೆ ಯೂ ಮೂಲಕ ತಿಳಿಸುವದೇನೆಂದರೆ —

8ನೆ ಪ್ರತಿವಾದಿ. ಮಂಜಯ್ಯ ಶೆಟ್ಟಿ. ಅನಂತ ಹೆಗ್ಗಡೇರ ಮಗ ಕುಂದಾಪುರ ತಾಲ್ಲೂಕು ಮಡಾಮಕ್ಕಿ ಗ್ರಾಮಸ್ಥ.

ವಾದಿಯು ನಿಮ್ಮ ವಗೈರೆರ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 3—3—1967ಕ್ಕೆ ತನಿಕೆಗೆ ಇಡಲಾಗಿಯದೆ. ಸದ್ರಿ ದಾವೆಯಲ್ಲಿ ನಿಮ್ಮ ಕಡೆಯ ಉದಾಹರಣೆಯಿದ್ದ ಪಕ್ಷದಲ್ಲಿ ನೀವು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾರೀಕಿನದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಸದ್ರಿ ದಾವೆಯನ್ನು ನಿಮ್ಮ ಗೈರುಹಾಜರಿಯಲ್ಲಿ ತೀರ್ಪೈಸಲು ನಾಡಲಾಗುವುದೆಂತ ಈ ಮೂಲಕ ತಿಳಿಸಲಾಗುತ್ತದೆ.

M. Madhava Rao,
Advocate for plaintiff.

ಮೊಕ್ಕಾಂ: ಕುಂದಾಪುರ.
ತಾರೀಖು 13—2—67.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು

(ದೇವಸ್ಥಾನದ ಆಡಳಿತೆಯ ಐತಿಹಾಸಿಕ ಅಧ್ಯಯನ)

ಲೇಖಕರು: ಶ್ರೀ ಪಾದೂರು ಗುರುರಾಜ ಭಟ್.

ಪ್ರಕಾಶಕರು: ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ.

ಪುಟಗಳು: ೬೬, ಬೆಲೆ: ರೂ. ೪.೦೦

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವೇ ಪ್ರತ್ಯೇಕ ಅಸ್ತಿತ್ವವನ್ನು ಪಡೆದಿರುವ ಸ್ಥಾನಿಕ ಬ್ರಾಹ್ಮಣ ಸಮಾಜದ ಐತಿಹಾಸಿಕ ಹಿನ್ನೆಲೆಯ ಮೇಲೆ ಈಗಾಗಲೇ ಬೆಳಕು ಬೀರಿದ ಪ್ರೊ| ಭಟ್ಟರು ತನ್ನ ಈ ಪುಸ್ತಕದಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಈ ಪುಸ್ತಕದಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಸ್ಥಾನಿಕ ಶಬ್ದೋತ್ಪತ್ತಿಯನ್ನು ಕೂಲಂಕಷವಾಗಿ ವಿಶ್ಲೇಷಿಸಿ, ಅದು ಉದ್ಯೋಗವಾಚಕವಲ್ಲವೆಂದೂ ಸ್ಥಾನವಾಚಕವೆಂದೂ ಸಿದ್ಧಾಂತಿಸಿದ್ದಾರೆ. ಮುಂದೆ ದೇವಾಲಯದ ಸೇವಕ ವರ್ಗದ ವಿವರಗಳನ್ನೂ ಶಾಸನಾಧಾರಗಳಿಂದಲೇ ನೀಡಿದ್ದಾರೆ; ಅವರವರ ಕರ್ತವ್ಯಗಳಾವುವು ಎಂಬುದನ್ನು ಶಾಸನಗಳಿಂದಲೇ ಸಮರ್ಥಿಸಿದ್ದಾರೆ.

ಗ್ರಂಥದ ಎರಡನೆಯ ಭಾಗವು ದೇವಾಲಯದ ಆಡಳಿತ ವರ್ಗದ ಮತ ವಿಚಾರವನ್ನು ವಿವೇಚಿಸುತ್ತದೆ. ತುಳುನಾಡಿನ ಹೊರಗಣ ಪ್ರದೇಶದಲ್ಲಿ 'ಸ್ಥಾನಿಕ'ರು ಶಾಕ್ತ ಮತ್ತು ಪಾಶುಪತ ಮತಾವಲಂಬಿಗಳಾಗಿದ್ದರೂ ತುಳುನಾಡಿನಲ್ಲಿ ಅವರು ತುಳು ಬ್ರಾಹ್ಮಣರಾಗಿದ್ದು, ಪಂಚಾಯತನವನ್ನು ಅವಲಂಬಿಸುವವರೇ ಆಗಿದ್ದಾರೆ. ಇವರಲ್ಲಿ ಕಂಡು ಬರುವ ಗೋತ್ರ ಪ್ರವರ, ಕುಲನಾಮಗಳ ವಿವರಗಳನ್ನು ತಿಳಿಸುತ್ತ ದೇಗುಲಗಳ ಸ್ಥಾನಿಕರೂ ಶಾಂತಿಯವರೂ ತಂತ್ರಿಗಳೂ ಪಾದಮೂಲಗಳೂ ಬ್ರಾಹ್ಮಣರೇ ಆಗಿದ್ದರೆಂದು ಶ್ರೀ ಭಟ್ಟರು ಆಧಾರಪುರಸ್ಸರವಾಗಿ ನಿಷ್ಕರ್ಷೆಗೆ ಬಂದಿದ್ದಾರೆ.

ಮೂರನೆಯ ಭಾಗವು ದೇಗುಲಗಳ ಪರಿಚಾಯಕವಿದೆ. ಪ್ರಕೃತ ಸ್ಥಾನಿಕ ಬ್ರಾಹ್ಮಣರ ಆಡಳಿತೆಯಲ್ಲೇ ಇರುವ ೧೦ ಪ್ರಾಚೀನ ದೇವಾಲಯಗಳಲ್ಲಿ ಬಸ್ರೂರು, ಕಟಪಾಡಿ, ನಾಲೂರು ಗಳ ದೇಗುಲ ರಚನೆಯ ಕಾಲನಿರ್ಣಯ, ಶಿಲ್ಪ ಮತ್ತು ವಾಸ್ತು ಪರಿಚಯಗಳು ಇಲ್ಲಿವೆ. ಕಲೆಯ ದೃಷ್ಟಿಯಿಂದಲೂ ಇತಿಹಾಸದ ಹಿನ್ನೆಲೆಯ ಮಹತ್ವದಿಂದಲೂ ಈ ದೇವಸ್ಥಾನಗಳು ಅಧ್ಯಯನ ಯೋಗ್ಯವಾಗಿವೆ. ತುಳುನಾಡಿನ ಕಲಾವೈಭವದ ಭವ್ಯ ಪ್ರತೀಕವಾಗಿರುವ ಈ ದೇಗುಲಗಳ ಸಂರಕ್ಷಣೆ ಮತ್ತು ಜೀರ್ಣೋದ್ಧಾರ ಕಾರ್ಯಗಳು ಅವಶ್ಯವಲ್ಲವೆ?

ಗ್ರಂಥವನ್ನು ಬರೆವಲ್ಲಿ ತಾನು ನೀಡಿದ ೧೮೭ ಆಧಾರಗಳನ್ನು ಟಿಪ್ಪಣಿ ರೂಪದಲ್ಲಿಯೂ ತುಳುನಾಡಿನ ಸ್ಥಾನಿಕರನ್ನು ಕುರಿತು ಈ ತನಕದ ವಿಮರ್ಶೆಗಳ ಸಾರವನ್ನು ಗ್ರಂಥಾಂತ್ಯದಲ್ಲಿಯೂ ನೀಡಿದ್ದಾರೆ. ಕೊನೆಯಲ್ಲಿ ಕೊಟ್ಟಿರುವ ಆಧಾರ ಗ್ರಂಥಗಳ ಉದ್ಧೃತಿ ಅಧ್ಯಯನ ಶೀಲರಿಗೆ ಉಪಯೋಗಿಯಾಗಿದೆ.

ಗ್ರಂಥವು ಪುಟ್ಟದಾಗಿದ್ದರೂ ಮೂರನೆಯ ಭಾಗಕ್ಕೆ ಸಂಬಂಧಿಸಿದಂತೆ ೨೧ ಕಲಾಕೃತಿಗಳೂ ಸೇರಿಕೊಂಡಿವೆ. ಮುಂದಿನ ಅಧ್ಯಯನಕ್ಕೆ ಕಲಾವಿಮರ್ಶಕರ ಕುತೂಹಲ ಕೆರಳಿಸುವಲ್ಲಿ ಇವು ಉಪಯುಕ್ತವಾಗಿವೆ. ಹಳೆಯ ಬೀಡು—ಬೇಲೂರುಗಳಷ್ಟೆ ಕಲಾವಿಲಾಸಗಳ ಬೀಡೆಂದು ನಂಬಿದ ತುಳುವರು ತಾವೂ ಕಸ್ತೂರಿ ಮೃಗದ ಕುಲಜರೆಂಬುದನ್ನು ಮನವರಿಕೆ ಮಾಡಿಕೊಳ್ಳಬಾರದೇಕೆ?

ಶ್ರೀ ಪಲಿಮಾರು ಮಠದ ಶ್ರೀ ಶ್ರೀಗಳು ಒಂದು ಸಂದೇಶವನ್ನು ನೀಡಿ ಸಂಶೋಧನೆ ಬೆಳೆದಾಗ ಸತ್ಯಾಂಶ ಬೆಳಕಿಗೆ ಬಂದು ಮತಭೇದಗಳನ್ನು ಬಗೆಹರಿದು ಸಮಾಜದಲ್ಲಿ ಒಂದು ಒಕ್ಕೂಟವನ್ನು ಕಟ್ಟಲು ಸಾಧ್ಯವಾಗುವ ಆಶಯ ವ್ಯಕ್ತಪಡಿಸಿದ್ದಾರೆ. ಇದು ಸಾಧ್ಯವಾಗಬೇಕು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಮುನ್ನುಡಿ ಬರೆಯುತ್ತ ನಮ್ಮ ಇತಿಹಾಸ ಪ್ರಜ್ಞೆ ಮತೀಯ ಕಲಹದ ಭ್ರಾಂತಿಯ ನಡುವೆ ಹಿಂದಾಗಿದೆಯೆಂದೂ ಈ ಕಾರ್ಪಣ್ಯ ತೊಲಗಲು ಶ್ರೀ ಭಟ್ಟರ ಸಂಶೋಧನೆಯು ನೆರವಾಗ ಬಹುದೆಂದೂ ಹಾರೈಸಿದ್ದಾರೆ.

ತುಳುನಾಡಿನ ಇತಿಹಾಸ ಸಂಶೋಧನೆಯಲ್ಲೇ ಮಗ್ನರಾದ ಪ್ರೊ| ಗುರುರಾಜ ಭಟ್ಟರು ಸ್ಥಾನವಾಚಕವಾಗಿದ್ದ 'ಸ್ಥಾನಿಕ' ಶಬ್ದವು ಉದ್ಯೋಗವಾಚಕವಾಗಿ ವ್ಯವಹೃತವಾಗುತ್ತಿದೆಯೆಂದು ಖಡಾಖಂಡಿತವಾಗಿ ಸಾರುತ್ತಾರೆ. ದೇವಾಲಯಗಳ ಆಡಳಿತೆಯಲ್ಲಿ 'ಸ್ಥಾನಿಕ'ನ ಸ್ಥಾನ ಅತ್ಯುನ್ನತವಾದುದೆಂದೂ ಅವನು ಸ್ವಾಮಿ ವರ್ಗವೆಂದೂ ಅರ್ಚಕರೇ ಮೊದಲಾದವರು ಸೇವಕವರ್ಗದವರೆಂದೂ ಪ್ರತಿಪಾದಿಸಿದ್ದಾರೆ. ಇಂದು 'ಸ್ಥಾನಿಕರು' ಹಲವಾರು ಒತ್ತಡಗಳಿಂದಾಗಿ ಜರ್ಜರಿತರಾದಂತಿದ್ದರೂ ತಮ್ಮ 'ಸ್ಥಾನಿಕ' ತನವನ್ನು ಉಳಿಸಿಕೊಂಡೇ ಬಂದಿದ್ದಾರೆ ಎಂಬುದಕ್ಕೆ ಅವರ ಆಡಳಿತೆಯ ದೇಗುಲಗಳೇ ಸಾಕ್ಷಿ. ನಿ-ದಿಸುತ್ತಿವೆ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ.

ಶ್ರೀ ಭಟ್ಟರದು ಸಂಶೋಧನಾತ್ಮಕ—ಅಧ್ಯಯನಾತ್ಮಕ ಗ್ರಂಥವಿದು. ಆದುದರಿಂದ "ಇದು ಹೀಗಿಲ್ಲ" ವೆಂದು ಸಾಧಾರ ವಿಮರ್ಶೆ ಜರುಗುವವರೆಗೆ "ಇದು ಹೀಗೆಯೇ" ಎಂದು ನಂಬಲೇ ಬೇಕು. ಶ್ರೀಯುತರ ಪರಿಶ್ರಮ ಸಫಲವಾಗಿದೆ; ಸ್ಥಾನಿಕ ಸಮಾಜದ ಹಿನ್ನೆಲೆಯನ್ನು ಬೆಳಕಿಗೆ ತಂದುದು ಮಾತ್ರವಲ್ಲ, ಸಮಾಜದ ಇತಿಹಾಸದಲ್ಲಿ ಪ್ರಮುಖ ಸ್ಥಾನ ವಹಿಸಾತಿದ್ದ ದೇವಾಲಯಗಳ ಮೇಲೆಯೂ ತನ್ನ ಕ್ಷ—ಕಿರಣ ಬೀರಿ, ಸತ್ಯ ಶೋಧನೆಗೆ ಮುಂದಾಗಿದ್ದಾರೆ. ಶ್ರೀಯುತರು ತಮ್ಮ ಕಾರ್ಯದಲ್ಲಿ ಮುಂದುವರಿಯಲಿ, ಸಿದ್ಧಿ ಅವರಿಗೆ ಲಭಿಸಲಿ.

ಸಂಸ್ಕೃತಿ: (ದಿ| ಶ್ರೀನಿವಾಸ ಉಡುಪರ ಸವಿನೆನಪು)

ಪ್ರಕಾಶನ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕನ್ನಡ.

ಪುಟಗಳು: ೭೭, ಬೆಲೆ: ರೂ. ೧—೦೦

ಪ್ರಸಿದ್ಧ ಸಂಸ್ಕೃತ ಕನ್ನಡ ವಿದ್ವಾಂಸ ಕಾರ್ಕಳದ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾಗಿ "ದಿವಾಪಿ ಶೋಭತೇ ಉಡುಪಃ" ಎಂಬ ಬಿರುದು ಭಾಜನರಾದ ಶ್ರೀ ಶ್ರೀನಿವಾಸ ಉಡುಪರ ಆತ್ಮೀಯರೂ ಶಿಷ್ಯ ಕೋಟಿಯೂ ಸೇರಿ ಬರೆದ ಸಂಸ್ಮೃತಿಗಳ ಮಾಲೆಯಿದು. ಉಡುಪರ ನಿರಾಡಂಬರ ಜೀವನ, ಸರಳ ಹೃದಯ, ಪರಿಪಕ್ವವಾದರೂ ಪ್ರೇಮಲ ಮನಸ್ಸು, ನಿರಹಂಕಾರ ಪ್ರವೃತ್ತಿ...ಇತ್ಯಾದಿ ಉತ್ತಮೋತ್ತಮ ಗುಣಗಳು ಅವರ ವಿದ್ವತ್ತಿನ ಬಂಗಾರಕ್ಕೆ ಪರಿಮಳವನ್ನು ತಂದಿವೆ. ದಿವಂಗತರ ಪರಿಚಾಯಕವಾದ ಈ ಗ್ರಂಥ ಸಂಗ್ರಾಹ್ಯವೆನ್ನಬಹುದು. —ಗೋರಾ.

ನಗೆ ಬಿಂದು

"ಏನಯ್ಯಾ, ನಿಮ್ಮಲ್ಲಿ ಕರೆಯುವ ದನವಿದ್ದೂ ಮಿಲ್ಕ್ ಸಪ್ಲೈ ಡಿಪೋದಿಂದ ಹಾಲು ಕೊಂಡು ಹೋಗುತ್ತಿದ್ದೀಯಾ? ......"

"ಇಂದು ಆ ದನದ ವ್ಯಾಪಾರವಾಗುವ ಸಂಭವವಿದೆ; ಒಬ್ಬರು ದನ ನೋಡಲು ಬರುವುದಾಗಿ ತಿಳಿಸಿದ್ದಾರೆ.........ಬೆಳಗ್ಗೆ ಕರೆದ ಹಾಲನ್ನು ನೋಡೋಣವೆಂದರೆ, ಅದು ಕಡಿಮೆಯಾಗಿ ಕಾಣುವುದು ಬೇಡವೆಂದು ಮಾತ್ರ...."

o o o

"ಸ್ವಾಮೀ! ನನ್ನ ಸೈಕಲು ಕಾಣೆಯಾಗಿ ಕೆಲವು ದಿನಗಳಾದವು..."

"ಅದರ ಗುರುತು, ಚಹರೆಗಳು?"

"ಅದಕ್ಕೆ ಬೆಲ್ ಇಲ್ಲ; ಬ್ರೇಕ್ ಇಲ್ಲ. ಲೈಟ್ ಇಲ್ಲ; ಲೈಸನ್ಸೂ ಇಲ್ಲ..."

"ಹಾಗಾದರೆ ಸೀದಾ ಹೋಗಿ ಪೋಲಿಸ್ ಠಾಣೆಯಲ್ಲಿ ವಿಚಾರಿಸಿ ನೋಡುವುದೊಳ್ಳೆಯದು."

o o o o

ಪತ್ನಿ ಕೋಣೆಯೊಳಗಿಂದ ಕೂಗಿ ಕರೆದಳು: —"ಅಯ್ಯೋ! ಭೂತ.... ಭೂತ..."

"ನಾನು ಆಗಲೇ ಹೇಳಿಲ್ಲವೆ! ನೀನು ಕನ್ನಡಿ ನೋಡಬೇಡವೆಂದು?" — ಪತಿ ಉತ್ತರಿಸಿದ.

o o o

ಆಫೀಸಿನಿಂದ ಮರಳಿ ಬಂದವನೇ ತನ್ನ ಪತ್ನಿಗಾಗಿ ಹುಡುಕಿದ. ಆಕೆ ಮನೆಯಲ್ಲಿರಲಿಲ್ಲ. ನೆರೆ ಮನೆಯ ವೃದ್ಧನನ್ನು ಕರೆದು ವಿಚಾರಿಸಿದ:—

"ಮಾವಾ! ಗೀತೆಯ ಪತ್ತೆಯಿಲ್ಲ....ನಿಮಗೇನಾದರೂ ಗೊತ್ತೆ?"

"ಇಲ್ಲ...ಇಲ್ಲ ಒಂದು ಹಳೆಯ ಮಹಾಭಾರತವಿದೆ__"

—ಎಚ್. ಎಂ. ನಾರಾಯಣ ಭಟ್
ಪೆರಡಾಲ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ದೇಶದ ಮೇಲೆ ಕೇರಳದ ಪ್ರಭಾವ

(ಏಳನೇ ಪುಟದಿಂದ)

ಬೇಕಾಗಿ ತಮ್ಮದಾದ ಕೆಲವು ಕ್ಷೇತ್ರಗಳನ್ನು ಇತರರಿಗೆ ಬಿಟ್ಟು ಕೊಡಲು ತನ್ನ ಪಕ್ಷದ ಸದಸ್ಯರ ಒಪ್ಪಿಗೆಯನ್ನು ಪಡೆದು ಶ್ರೀ ನಂಬೂದಿರಿಪಾಡರ ಮಹತ್ಕಾರ್ಯವೇ ಸರಿ. ಇತರ ಪಕ್ಷಗಳನ್ನು ಕ್ರಮೇಣ ನಶಿಸುವ ಮಹದುದ್ದೇಶದಿಂದ ಬಹಳ ಚತುರ ರೀತಿಯಲ್ಲಿ ಎಡ ಕಮ್ಯುನಿಸ್ಟ ಪಕ್ಷವು ಈ ತ್ಯಾಗಕ್ಕೆ ಸಮ್ಮತಿಸಿದುದಾಗಿದೆ. ಮುಂದಿನ ಐದು ವರ್ಷಗಳೊಳಗೆ, ಈ ಪಕ್ಷಗಳ ಬಲವು ಕ್ಷೀಣವಾಗಿ, ಎಡ ಕಮ್ಯುನಿಸ್ಟ ಪಕ್ಷವು ಬಲಿತು, ಅದನ್ನು ಎದುರಿಸಲು ಶಕ್ತವಾದ ಪಕ್ಷವೇ ಇಲ್ಲದಂತಾಗುವುದು.

ಕೇರಳದ ಐಕ್ಯರಂಗದ ಜಯವು ಮುಂದಿನ ಚುನಾವಣೆಗಳ ಮೇಲೆ ಮಾತ್ರವಲ್ಲ ಈ ಚುನಾವಣೆಯ ನಂತರ ಕೇಂದ್ರದಲ್ಲೂ ಇತರ ಪ್ರಾಂತಗಳಲ್ಲೂ ರಚಿಸುವ ಸರಕಾರಗಳ ಮೇಲೆ ಮಹತ್ತ್ವದ ಪರಿಣಾಮವನ್ನುಂಟುಮಾಡುವ ಸಂಭವವಿದೆ. ಕಾಂಗ್ರೆಸ್ಸ ಪಕ್ಷದ ಅಧಿಕಾರವನ್ನು ಕೊನೆಗಾಣಿಸಲು, ವಿಭಿನ್ನ ಧ್ಯೇಯಗಳ ಎಲ್ಲಾ ಪಕ್ಷಗಳಿಗೂ ಸಂಯುಕ್ತ ಸೋಶಿಯಲಿಸ್ಟ ಪಕ್ಷದ ಮುಖಂಡರು ಆಹ್ವಾನವಿತ್ತರೂ ಈ ತನಕ ಅವರ ಕರೆಗೆ ಸಂಪೂರ್ಣ ಮನ್ನಣೆ ದೊರೆತಿಲ್ಲ. ಪ್ರಾಂತ್ಯಗಳ ರಾಜಕೀಯ ಪ್ರಶ್ನೆಗಳು ವ್ಯಕ್ತಿಗಳ ಮಹತ್ವಾಕಾಂಕ್ಷೆ, ತತ್ವಗಳ ಭಿನ್ನತೆ ಇವೇ ಮೊದಲಾದ ಕಾರಣಗಳಿಂದ ಇತರ ಪ್ರಾಂತಗಳಲ್ಲಿ ಬೇರೆಬೇರೆ ಪಕ್ಷಗಳು ಒಂದುಗೂಡಲು ಸಾಧ್ಯವಾಗಿಲ್ಲ. ಕೆಲವು ಪಕ್ಷಗಳು ಈ ರೀತಿಯ ಐಕ್ಯದಿಂದ ತಮ್ಮ ವ್ಯಕ್ತಿತ್ವಕ್ಕೆ ದೋಷ ಒದಗಬಹುದೆಂದು ಭೀತಿ ಪಡುತ್ತಿವೆ. ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಕಮ್ಯುನಿಷ್ಟ ಪಕ್ಷದೊಡನೆ ಸಖ್ಯ ಬೆಳೆಸಲು ಸಮ್ಮತಿಸಿಲ್ಲ ಕೆಲವು ಪ್ರಾಂತಗಳಲ್ಲಿ ಅವುಗಳಿಗೆ ತಮ್ಮ ಶಕ್ತಿಯಿಂದಲೇ ಬಹುಮತವನ್ನು ಪಡೆದು ಅಧಿಕಾರಕ್ಕೆ ಬರುವ ಧೈರ್ಯ ತೋರುವುದರಿಂದ ಇತರರೊಡನೆ ಕೂಡುವ ಅವಶ್ಯಕತೆ ತೋರಿಲ್ಲ. ಆದರೂ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಹೊರದಬ್ಬುವ ಮಹದಾಕಾಂಕ್ಷೆಯಿಂದ ಧ್ಯೇಯಗಳ ಭಿನ್ನತೆಯನ್ನು ಪರಿಗಣಿಸದೆ ಇತ್ತೀಚೆಗೆ ಅಲ್ಲಲ್ಲಿ ಚುನಾವಣಾರಿಯಾಯಿತಿಗಳೆಂಬ ನೆವದಿಂದ ಈ ಪಕ್ಷಗಳು ಇತರ ಪಕ್ಷಗಳೊಡನೆ ಸಹಕರಿಸುವುದನ್ನು ಕಾಣುತ್ತೇವೆ. ಕೇರಳದ ಐಕ್ಯರಂಗದ ಜಯವು ಇತರ ಪ್ರಾಂತಗಳಲ್ಲೂ ಸಾಧ್ಯವಿದ್ದಲ್ಲಿ ಕಾಂಗ್ರೆಸ್ಸ ಪಕ್ಷವನ್ನು ಅಧಿಕಾರದಿಂದ ತಳ್ಳುವರೆ, ಇತರ ಎಲ್ಲಾ ಪಕ್ಷಗಳು ಒಂದುಗೂಡುವಂತೆ ಹೆಚ್ಚಿನ ಪ್ರೋತ್ಸಾಹ ನೀಡುವುದು. ಹೀಗೆ ಒಂದುಗೂಡಿ ರಚಿಸುವ ಸರಕಾರಗಳು ಎಷ್ಟರ ತನಕ ಉಳಿಯಬಹುದು ಎಂಬುದು ಹೇಗೋ ಇರಲಿ. ಕಾಂಗ್ರೆಸ್ ಪಕ್ಷವನ್ನು ಎದುರಿಸುವ ಯಾವ ಪಕ್ಷವೂ ಈ ಚುನಾವಣೆಯಲ್ಲಿ ಕೇಂದ್ರದ ಆಡಳಿತವನ್ನು ಕಾಂಗ್ರೆಸ್ ಪಕ್ಷದಿಂದ ಕಿತ್ತು ಕೊಳ್ಳಲು ಸಾಧ್ಯವಾಗುವದೆಂಬ ಭರವಸೆಯನ್ನು ತಾಳಿಲ್ಲ. ಕೆಲವಾದರೂ ಪ್ರಾಂತಗಳಲ್ಲಿ ಐಕ್ಯರಂಗಗಳು ಅಧಿಕಾರ ವಹಿಸುವುದಾದರೆ ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರವನ್ನು ಹೀನೈಸುವರೆ ಅಲ್ಲಸಲ್ಲದ ಆರೋಪಗಳನ್ನು ತಂದೊಡ್ಡಿ ಕಲಹವನ್ನು ಪ್ರಾರಂಭಿಸುವ ಸಂಭವವಿದೆ. ಸುಗಮವಾದ ಆಡಳಿತವು ಕಷ್ಟಸಾಧ್ಯವಾಗುವುದು.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. E. P.613/66. O.S. 596/64.

ಅಣ್ಣಪ್ಪ ಭಂಡಾರಿ— ಅರ್ಜಿದಾರ

ತ್ಯಾಂಪಣ್ಣ ಶೆಟ್ಟಿ ಕೂಡಾ— ಯೆದ್ರಿರು

1. ತ್ಯಾಂಪಣ್ಣ ಶೆಟ್ಟಿ—ಅಬ್ಬಚ್ಚು ಹೆಂಗ್ಸಿನ ಮಗ—ನರಿಮೊಗ್ರು ಗ್ರಾಮ

11. ಉಗ ಶೆಟ್ಟಿ 12. ಪೂವಣಿ ಶೆಟ್ಟಿ — ಅಕ್ಕಮ್ಮ ಹೆಂಗ್ಸಿನ ಮಕ್ಕಳು, ಕೊಳ್ನಾಡು ಗ್ರಾಮ. 13. ನಾರಾಯಣ ಅಡಪ 14. ಬಾಬು ಅಡಪ 15. ರಾಮ ಅಡಪ 16. ಪೂವಕ್ಕೆ— ಮುಂಡಕ್ಕೆ ಮಕ್ಕಳು, ಕೊಳ್ನಾಡ ಗ್ರಾಮ. 31. ಲಕ್ಷ್ಮಣ ರೈ, ಪೂವು ಹೆಂಗ್ಸಿನ ಮಗ, ಕಾಸ್ರಗೋಡು ತಾಲ್ಲೂಕ, ಉಪ್ಪಳ ಗ್ರಾಮ, 23. ಅಂಮುರ್ಲೈ ಅಕ್ಕಮ್ಮ ಹೆಂಗ್ಸಿನ ಮಗ, ಮೂಡಿಲಾ ಗ್ರಾಮ 44. ಸಂಕಪ್ಪ ಶೆಟ್ಟಿ, ಮುಂಡಕ್ಕೆ ಮಗ, ಕನ್ಯಾನ ಗ್ರಾಮ 48 ಸಾಂತ ಶೆಟ್ಟಿ, ಕಾವೇರಿ ಹೆಂಗ್ಸಿನ ಮಗ, ಕೊಳ್ನಾಡು ಗ್ರಾಮ 59. ನಾರಾಯಣ ಶೆಟ್ಟಿ 60 ಉಗ್ಗ ಶೆಟ್ಟಿ— ಪೂವಕ್ಕೆ ಹೆಂಗ್ಸಿನ ಮಕ್ಕಳು 59ನೆಯವ ಕೊಳ್ನಾಡು ಗ್ರಾಮ 60 ನೇಯವ ಮಂಗಳೂರು ಶಹರ ಪೈಕಿ ಬಜಲಕೇರಿ 61. ಮುಂಡಪ್ಪ ಶೆಟ್ಟಿ, ರಾಮಕ್ಕೆ ಮಗ, ಪಟ್ರಮೆ ಗ್ರಾಮ 65 ಮುಂಡಕ್ಕೆ, ಸಂಕಮ್ಮ ಮಗಳು ಗೋಕ್ರ ಮಜಿಲು ಗ್ರಾಮ.

ಇವರೀಗೆ ಮೇಲ್ಕಂಡ ಅನ್ನು ಜಾರಿಯಲ್ಲಿ ಸಲಂನ ಶರ್ತಗಳನ್ನು ನಿರ್ಣಯಿಸುವರೇ ತಾ. 18—8—67 ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವುದರಿಂದ ಆ ದಿವಸ ಬೆಳಿಗ್ಗೆ 11ಘಂಟೆಗೆ ನೀವು ಸ್ವತಹಾ ಯಾ ವಕೀಲ ದ್ವಾರ ಹಾಜರಾಗಿ ಉಜ್ರು ಮಾಡಬೇಕು ಹೊರತಾಗಿ ಉದಾಸಿನಪಡಿದ್ದರೆ ನಿಮ್ಮ ಗೈರ ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು.

A. Ammu Shetty

Advocate for Petitioner

ಪುತ್ತೂರು, 10—3—67

ಮೊದ್ಲೂ ಒಂದೇ, ಮತ್ತೂ ಒಂದೇ

(ನಾಲ್ಕನೆಯ ಪುಟದಿಂದ)

'ಹಾಗೇನಿಲ್ಲ....ಇಂದಿನ ವಾತಾವರಣವನ್ನು ಕಂಡು ಕಂಡು ಹಾಗೆ ಅನ್ನ ಬೇಕಾಯ್ತು, ಇನ್ನು ಪರಿಣಾಮ ಕಾದುನೋಡಬೇಕು....'

'ಅಲ್ರಿ, ಎಲ್ಲೂ ತಮಗೇ ಜಯ ಅಂತ ದೃಢವಾಗಿ ನಂಬಿದ್ದ ಕಾಲ ಹೋಗ್ತಿ, ಹೇಗೋ ಎಂಬ ಸಂದೇಹದಿಂದ ಕೂಡಿದಂತನಿಸುತ್ತದೆ.......ಪಾಪ, ರಾತ್ರಿ ನಿದ್ದೆ ಮಾಡುವುದಕ್ಕೂ ಇಲ್ಲ....''

'ಹೀಗಿದ್ರೇನೇ ಚಂದ ನೋಡು. ವಿಚಿತ್ರ ಪರಿಣಾಮಗಳು ಹೊರ ಬಂದಾಗ ವಿಚಿತ್ರ ಪರಿಸ್ಥಿತಿ ನಿರ್ಮಾಣವಾಗದಿರಲಿ ಅಂತ ಹಾರೈಸ್ಬೇಕು....'

"ನೀವು ಏನೇ ಹೇಳಿ, ಸೋತವರೂ ಗೆದ್ದವರೂ ಮೊದಲೂ ಒಂದೇ, ಇನ್ನೂ ಒಂದೇ. ಅವರ ಬಾಲ ಹಿಡಿದವ್ರು ಮಾತ್ರ ...."

'ಅದ್ರಲ್ಲೇನು ವಿಶೇಷ? ನಾನೂ ನೀನೂ ಹೊಡೆದಾಡಿದ್ರೂ, ಮತ್ತೆ ಒಂದಾಗೋದಿಲ್ವೆ?'

"ಹ್ಞಾಂ....ಹಂಗ್ಯಾಗಿಲ್ಲರೀ....'

'ಮತ್ತೆ....?'

'ಬೇಡ....ಈಗ್ಲೇ....''

"ಅಬಬ್ಬಾ...'

—ಗೋರಾ,

ಸಂಸ್ಮರಣೆ

ಪತ್ರಿಕೋದ್ಯೋಗದಲ್ಲಿ ಒಂದು ವಿಶಿಷ್ಟ ಘಟ್ಟ

ಬರೆದವರು: ಪ್ರೊ। ಪಿ. ಗುರುರಾಜ ಭಟ್ಟ.

ಪ್ರೊಫೆಸರ್ ಭಟ್ಟರಿಗೆ ನಮಸ್ಕಾರಗಳು. ನಿಮ್ಮ ಇತ್ತೀಚಿನ ಸಂಶೋಧನೆಯ ಫಲವಾದ ಸ್ಥಾನಿಕರ ಮೇಲಿನ ಪುಸ್ತಕವನ್ನು ಉಚಿತವಾಗಿ ಕಳುಹಿಸುವರೆ ವ್ಯವಸ್ಥೆ ಮಾಡಿದುದಕ್ಕೆ ಆಭಾರಿಯಾಗಿದ್ದೇನೆ. ಈ ಪುಸ್ತಕವು ವೈಜ್ಞಾನಿಕ ರೀತಿಯಲ್ಲಿ ವಿಮರ್ಶೆ ಮಾಡಿದುದರ ಸ್ವರೂಪವನ್ನು ಹೊಂದಿದೆ. ಈ ವಾರದ ಅಂತ್ಯದೊಳಗೆ ಸವಿವರವಾದ ಪತ್ರ ಒಂದನ್ನು ನಿಮಗೆ ಬರೆಯುವೆನು, ಪದ್ಮಾವತಿ ಎಂಬ ಎಳೆ ಹರೆಯದ ಕವಿಯಿಂದ ಬರೆದ 'ಲೇಓಫ್ ದಿ ಸ್ಥಾನಿಕಾಸ್' ಎಂಬ ಹಸ್ತಪ್ರತಿಯನ್ನು ನಿಮಗೆ ಹೇಗೆ ಕಳುಹಿಸುವುದೆಂದು ಯೋಚಿಸುತ್ತಾ ಇದ್ದೇನೆ. ಇವಳು ಪಣಂಬೂರು ಶ್ರೀ ರಾಮಚಂದ್ರರಾಯರ ಪುತ್ರಿ. ನಾನು ನಾಳೆ ಶ್ರೀ ಯಂ. ಯಂ. ಪ್ರಭುಗಳನ್ನು ಕಂಡು ಅವರೊಡನೆ ಮಾತನಾಡಿ ಈ ಎಲ್ಲಾ ಸಾಹಿತ್ಯ ಸಾಮಗ್ರಿಯನ್ನು ನಿಮ್ಮ ಅವಗಾಹನೆಗೆ ನಿಮಗೆ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆ...."

ವೇದಮೂರ್ತಿ ಆರ್. ಕೆ. ಪ್ರಭುಗಳು ನನಗೆ ತಾ. 31–1–1967ರಲ್ಲಿ ಆಂಗ್ಲ ಭಾಷೆಯಲ್ಲಿ ಬರೆದ ಪತ್ರದ ಅಭಿಪ್ರಾಯವಿದು. ಆದರೆ ಪರಮಾತ್ಮನ ಇಚ್ಛೆಯಂತೆ ತಾ. 4–1–1967ರಲ್ಲಿ ಶ್ರೀ ಪ್ರಭುಗಳು ದೈವಾಧೀನರಾದರು. ಅವರಿಂದ ಸವಿವರ ಪತ್ರವನ್ನು ಪಡೆಯುವ ಸುಯೋಗ ನನ್ನದಾಗಿರಲಿಲ್ಲ. ಶ್ರೀ ಪ್ರಭುಗಳು ಮೃತಪಟ್ಟಾಗ ಅವರಿಗೆ ಅಂಕಜ್ಮ ಹೆಚ್ಚು ಪ್ರಾಯವಾಗಿತ್ತೆಂದು ಕೇಳಿದ್ದೆ. ಏಕೆಂದರೆ, ನಾನವರನ್ನು ಮುಖತಃ ಕಂಡು ಮಾತನಾಡಿಸಿಲ್ಲ. ಅಂತಹ ಸಂದರ್ಭವೊಂದನ್ನು ಕಾಯುತ್ತಿದ್ದೆ. ಸಿಂಡಿಕೇಟ್ ಬೇಂಕಿನ ಶ್ರೀ ಎಂ. ಜನಾರ್ದನನವರ ಮಂಗಳೂರಿನ ಶ್ರೀ ಯಂ. ಯಂ. ಪ್ರಭುಗಳೂ ಅವರನ್ನೊಮ್ಮೆ ಭೇಟಿಯಾಗಿ ವಿಚಾರವಿನಿಮಯ ಮಾಡುವ ಅವಶ್ಯಕತೆ ತುಂಬಾಯಿದೆ ಎಂಬುದಾಗಿ ಅನೇಕ ಸಲ ತಿಳಿಸಿದ್ದರು. ನನ್ನ ಆಲಸ್ಯದಿಂದ ಭೇಟಿ ಹಿಂದಕ್ಕೆ ಬಿತ್ತು. ಕಾಲದ ಸದುಪಯೋಗವನ್ನು ಸಕಾಲದಲ್ಲಿ ನಾವು ಮಾಡಬೇಕಾಗುತ್ತದೆ.

ಶ್ರೀ ಆರ್. ಕೆ. ಪ್ರಭುಗಳು ತನ್ನನ್ನು ನನಗೆ ಪರಿಚಯ ಮಾಡಿಕೊಂಡ ಕ್ರಮ ಪತ್ರದ ಮುಖೇನ ತಾ. 16-12-66ರಲ್ಲಿ ಬರೆದ ಪತ್ರದ ಒಂದು ಭಾಗದ ಅಭಿಪ್ರಾಯವನ್ನು ಈ ಕೆಳಗೆ ಕೊಟ್ಟಿದ್ದೇನೆ. 'ನನ್ನ ಪರಿಚಯವು ನೀವು 'ದೀಪಿಗೆ' ಪುಟಗಳನ್ನು ನೋಡಿದರೆ ನಿಮಗಾಗಬಹುದು. ಅದರಲ್ಲಿ ರಾಷ್ಟ್ರ ಕವಿ ಗೋವಿಂದ ಪೈಗಳ ಜೀವನದ ನೆನಪುಗಳನ್ನು ಕುರಿತಾಗಿ ಒಂದು ಲೇಖನವನ್ನಿತ್ತಿದ್ದೇನೆ. ನಾನು ನಿಮ್ಮ ಕಾಲೇಜನ್ನು ಕಳೆದ ವರ್ಷ ಸಂದರ್ಶಿಸಿದಾಗ ನಿಮ್ಮ ಪರಿಚಯವಾಗುವ ಸುಯೋಗವನ್ನು ಪಡೆಯಲಿಲ್ಲ. ನಾನೊಬ್ಬ ಪತ್ರಿಕೋದ್ಯಮಿ ಮತ್ತು ಗ್ರಂಥಕರ್ತ ಹಾಗೂ ಸಾಧಕ. ಸುಮಾರು ೩೦ ವರ್ಷಗಳ ಕಾಲವನ್ನು ಬೊಂಬಾಯಿಯಲ್ಲಿ ಕಳೆದು ಈಗ ಅಚೇತನನಾಗಿ ಅಂತ್ಯದ ದಿನಗಳನ್ನು ಕಳೆಯಲು ನನ್ನ ತವರೂರಾದ ಮಂಗಳೂರಿಗೆ ಬಂದಿದ್ದೇನೆ. ಕಳೆದ ತಿಂಗಳಲ್ಲಿ ವಾರ್ತಾ ಪತ್ರದಲ್ಲಿ ಪ್ರಕಟವಾದ ಸ್ಥಾನಿಕ ಬ್ರಾಹ್ಮಣರ ಕುರಿತಾದ ನಿಮ್ಮ ಸಂಶೋಧನಾ ಗ್ರಂಥದ ವರದಿಯನ್ನು ಓದಿ ಈ ಪತ್ರವನ್ನು ನಿಮಗೆ ಬರೆದಿದ್ದೇನೆ..."

ಶ್ರೀ ಪ್ರಭುಗಳ ನಿಸ್ಪೃಹತೆಯು ಅವರ ಪತ್ರದಿಂದ ಸ್ಪಷ್ಟವಾಗುತ್ತದೆ. ಅವರು ಸಾರ್ವಜನಿಕ ಪತ್ರಿಕೆಯ ಸಂಪಾದಕತನದಲ್ಲೇ ಪತ್ರಿಕೋದ್ಯೋಗಿಯಾಗಿಯೇ ತನ್ನ ಜೀವನವನ್ನು ಸವೆಯಿಸಿದವರೆಂದೂ ವಿಚಾರಮೂರ್ತಿಯೆಂದೂ ಅವರ ಬರಹದಿಂದ ವೇದ್ಯವಾಗುತ್ತದೆ.

ಶ್ರೀ ಪ್ರಭುಗಳು ತಾ. 22–12–66 ರಲ್ಲಿ ನನಗೆ ಮೂರು 'ಲಘುಗ್ರಂಥ ಲೇಖನ'ಗಳನ್ನು (pamphlets) ಕಳುಹಿಸಿದ್ದರು. 1. A Pre—Historic Cry. 2 List of Vedic Papers. 3. Chart of the Rigvedic Calender (an explanation) ಅವುಗಳನ್ನು ಓದಿದಾಗ ನನಗೆ ಅತ್ಯಂತ ಆನಂದವೂ ನನ್ನ ಮನಸ್ಸಿನ ಮೇಲೆ ಅತೀವ ಪರಿಣಾಮವೂ ಆಯಿತು.

ಶ್ರೀ ಪ್ರಭುಗಳು ತುಂಬಿದ ಕೊಡವೆಂದು ಕೇಳಿಬಲ್ಲೆ. ಅವರ ಸಂಶೋಧನೆಯಲ್ಲಿ ಹಿರಿತನವನ್ನು ಪಡೆದವರೂ ಹೌದು. ವೇದ ಕಾಲದ ಇತಿಹಾಸ ಮತ್ತು ಧರ್ಮದ ಕುರಿತಾದ ಸಂಶೋಧನೆ ಮಾಡುವುದೆಂದರೆ ಅದು ಲಘು ಲೇಖನಗಳನ್ನೂ ಮನೋರಂಜನೆ ಸಾಹಿತ್ಯವನ್ನೂ ಕವನಗಳನ್ನೂ ಕಾದಂಬರಿಗಳನ್ನೂ ಬರೆದಂತಲ್ಲ. ಪತ್ರಿಕೋದ್ಯೋಗಿಗಳು ಎರಡು ತೆರನಾಗಿ ಕರ್ತವ್ಯ ಪರಿಪಾಲನೆ ಮಾಡುವುದು ಅವರ ಉದ್ಯೋಗಕ್ಕೆ ಸಹಜವಾದ ಹಾಗು ಅನಿವಾರ್ಯವಾದ ಲಕ್ಷಣವೆಂಬುದು ಶ್ರೀ ಪ್ರಭುಗಳ ಜೀವನದಿಂದ ತಿಳಿದು ಬರುತ್ತದೆ. ಸಾರ್ವಜನಿಕ ಪತ್ರಿಕೆಯ ಸಂಪಾದಕನು ಜ್ಞಾನದ ಶೇಖರವನ್ನು ಮಾಡಿ ಅದನ್ನು ಯೋಗ್ಯ ರೀತಿಯಲ್ಲಿ ಪ್ರಚಾರ ಮಾಡಬೇಕು. ಮಾತ್ರವಲ್ಲದೆ ಜ್ಞಾನದ ವೃದ್ಧಿಯು ಸದಾ ಕಾಲದಲ್ಲಾಗುವಂತೆ ಪ್ರಯತ್ನಿಸಬೇಕು. ಶ್ರೀ ಪ್ರಭುಗಳ ಜೀವನವು ಈ ಎರಡು ಉದ್ದೇಶಗಳ ಪರಿಪೂರ್ಣತೆಯನ್ನು ಪಡೆದಿತ್ತೆಂದು, ಆನಂದ ಗೌರವಾದರಗಳಿಂದ ಹೇಳಬಹುದು.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL–4.17–4/65–66 dated 26—4—1966.

(ಮೂರನೇ ಪುಟದಿಂದ)

ರು—ಸರಕಾರಿಯಿರಲಿ, ಪಕ್ಷೀಯವಿರಲಿ, ಎಷ್ಟರ ಮಟ್ಟಿಗೆ ಇದನ್ನು ತಿಳಿದು ಆಚರಿಸುತ್ತಾರೆಯೋ ಅಷ್ಟು ಮಟ್ಟಿಗೆ ಪ್ರಜಾಪ್ರಭುತ್ವ ವಾದಕ್ಕೆ ಬಲ ಬರುತ್ತದೆ.

ಮತ್ತೆ ಹೋರಾಟ

ವಿಯತನಾಮುದಲ್ಲಿ ತಾತ್ಕಾಲಿಕವಾಗಿ ನಿಂತಿದ್ದ ಕದನ ಮತ್ತೆ ಬಾಂಬುಗಾಳಿಯಿಂದ ಆರಂಭವಾಯಿತು. ಲಂಡನ್ನಿನಲ್ಲಿ ವಿಲ್ಸನ್—ಕೋಸಿಗಿನ್ ಬೆಟ್ಟಿ ನಡೆಯುತ್ತಿದ್ದಂತೆಯೇ ಈ ಪುನರಾರಂಭವಾದುದು ಗಮನೀಯವೇ. ವಿಯೆತನಾಮು ಪ್ರಶ್ನೆಗೊಂದು ಪರಿಹಾರವರಸುವಲ್ಲಿ ಇದ ವರೆಗೆ ಮಾಡಲಾದ ಹಲವು ಸೂಚನೆಗಳೂ ನಿರುಪಯುಕ್ತವಾಗಿವೆ. ಅಂದರೆ, ಈ ಯುದ್ಧ ಯುದ್ಧದ ರೂಪದಲ್ಲಿ ನಡೆಯುತ್ತಿದೆ. ಎಂದರ್ಥವಲ್ಲ, ಬರಿಯ ತಂಟೆಖೋರತನದಂತೆ ಮುಂದುವರಿಯುತ್ತಿದೆಯೆನ್ನಬೇಕು. ಕೆಂಪು ಚೀನಾದಲ್ಲಿ ಮಾವೋ ವಿರೋಧಿಗಳ ಕೈವಾಡ ಅಧಿಕವಾಗುತ್ತ ಇದೆ, ರಶ್ಯಾ—ಚೀನಾ ವಿವಾದ ಉಲ್ಬಣಗೊಳ್ಳುತ್ತ ಇದೆ ಟಿಬೇಟಿನ ಮೇಲೂ ಮಾವೋ ವಿರೋಧಿಗಳ ಕೈ ಬಿಗಿತವಿದೆ— ಈ ಚೀನೀಯ ಆಂತರಿಕ ಕಲಹ ಪ್ರಬಲವಾದ ವೇಳೆಯಲ್ಲಿ ವಿಯತನಾಮುದಸ್ಥಿತಿಯೇನಾಗಬಹುದೆಂದು ಕೇಳಬರುವಂತಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಯುಥಾಂ ಅನ್ನುವಂತೆ ಇದು ಖೇದ ಜನಕ ಪ್ರಸಂಗವಷ್ಟೆ. ಜಗತ್ತಿಗೆ ಯುದ್ಧ ಬೇಡವಾದರೂ ಅಮೇರಿಕೆ—ಕೆಂಪು ಚೀನಾಗಳಿಗೆ ಇದು ಆವಶ್ಯಬೇಕು ಅನ್ನುವಂತಿದೆ, ಈ ಸನ್ನಿವೇಶದಲ್ಲಿ ಉಳಿದವರೇನು ಮಾಡಬಲ್ಲರು? ಮಾಡಬಹುದಾದುದನ್ನು ಮಾಡುವಷ್ಟು ನೈತಿಕ ಬಲ ಅವರಲ್ಲಿದೆಯೆ?

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. I A 10‿6/66 O.S 244/64

ಅರ್ಜಿದಾರ— ಸುಬ್ರಾಯ ಕಾರಂತ

ಎದ್ರಿರು—1 ಶೇಜಪ್ಪಸೆಟ್ಟಿ 2. ಗಿರಿಯಮ್ಮ ಸೆಡ್ತಿ 3. ಮಾಳಮ್ಮ ಸೆಡ್ತಿ 4 ಅಕ್ಕಮ್ಮ ಸೆಡ್ತಿ 5. ಶೀನಪ್ಪಸೆಟ್ಟಿ 6. ಎಚ್ಚಮ್ಮ ಸೆಡ್ತಿ 7. ಪದ್ದಮ್ಮ ಸೆಡ್ತಿ 8. ವೆಂಕಯ್ಯಸೆಟ್ಟಿ 9. ಸಂಧ್ಯಪ್ಪ ಸೆಟ್ಟಿ 10 ಬಚ್ಚಮ್ಮ ಸೆಡ್ತಿ 11 ನಾರಾಯಣ ಸೆಟ್ಟಿ 12. ರಂಗಯ್ಯ ಸೆಟ್ಟಿ 13 ಮಂಜಮ್ಮ ಸೆಡ್ತಿ 14. ಕೃಷ್ಣಪ್ಪಸೆಟ್ಟಿ.

ಈ ಮೇಲ್ಕಂಡ 4ರಿಂದ 11ರ ವರೆಗಿನ ಎದ್ರಿರಿಗೆ ತಿಳಿಯ ಪಡಿಸುವುದೇನೆಂದ್ರೆ—

ಪ್ರತಿವಾದಿ ಡಿಕ್ರಿಯ ಪ್ರಕಾರ ಎದ್ರಿರು ಋಣ ತೆರದ ಕಾರ್ಣ ಎದ್ರಿರ ಕುಟುಂಬದ ಹಕ್ಕಿನ ಸ್ಥಳಗಳನ್ನು ನಿಲಾಂ ಮಾಡುವಂತೆ ಡಿಕ್ರಿ ಕೊಡಿಸ ಬೇಕಾಗಿ ಅರ್ಜಿದಾರನು ಅರ್ಜಿ ಕೊಟ್ಟಿರುತ್ತಾನೆ ಸದ್ರಿ ಅರ್ಜಿ ತಾ. 13 3 67 ಕ್ಕೆ ತನ್ನಿಗೆ ಇದೆ. ಆಕ್ಷೇಪ ಇದ್ದಲ್ಲಿ, ಆ ದಿವಸ ಕೋರ್ಟಿ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಹುಕುಂ ಪ್ರಕಾರ

H Laxminarayanyya

Advocate for petitionrr

ಕುಂದಾಪುರ, 1J— 2—67

ಎಲ್ಲೆಲ್ಲಿ ಏನೇನು?

ಮಹಾ ಸಭೆ.

ಮೋಡರ್ನ್ ಕಿರಿಯ ಬುನಾದಿ ಮತ್ತು ಹಾ ಎ ಶಾಲಾ ಹಳೇ ವಿದ್ಯಾರ್ಥಿ ಸಂಘದ ಮಹಾಸಭೆಯು ಶಾಲಾ ಸಭಾ ಭವನದಲ್ಲಿ ತಾ. 12—2—67 ರಲ್ಲಿ ಪೂರ್ವಾಹ್ನ ಸಂಘದ ಅಧ್ಯಕ್ಷ ಡಾ| ಮೋಹನದಾಸ ಪೈ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಉಪಾಧ್ಯಕ್ಷರಾದ ನಿ. ಶ್ರೀಶ ಬಲ್ಲಾಳರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಯು. ಕೃಷ್ಣಪ್ಪನವರು ವರದಿ ಮತ್ತು ಆಯವ್ಯಯ ಪಟ್ಟಿಯನ್ನು ಸಭೆಯ ಮುಂದಿಟ್ಟರು. ಸಭೆಯು ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಿದ ಬಳಿಕ ಹೊಸ ವರ್ಷಕ್ಕೆ ಹಿಂದಿನ ಕಾರ್ಯಕಾರೀ ಸಮಿತಿಯೊಂದಿಗೆ ಹೊಸತಾಗಿ ನಾಲ್ವರನ್ನು ಸದಸ್ಯರನ್ನಾಗಿ ಚುನಾಯಿಸಲಾಯಿತು. ಶಾಲಾ ಆಡಳಿತೆದಾರ ಶ್ರೀ ಕೆ ಜಗನ್ನಾಥ ನಾಯ್ಕರು ಶಾಲಾ ಅಭಿವೃದ್ಧಿಯ ಕುರಿತು ಹಾಗೂ ಆಗ ಬೇಕಾದ ಕಾರ್ಯಗಳ ಕುರಿತು ಸಲಹೆ ಸೂಚನೆಗಳನ್ನಿತ್ತರು. ಶ್ರೀ ಎ. ಜೆ ಆಲ್ವೆಯವರು ಮೋಡರ್ನ್ ಹಾ ಎ ಶಾಲಾ ಬೆನಿಫಿಟ್ ಟ್ರಸ್ಟ್ ಫಂಡಿನ ಚಟುವಟಿಕೆಗಳ ಕುರಿತು ಸೂಕ್ಷ್ಮ ಪರಿಚಯವಿತ್ತು ಹಳೆ ವಿದ್ಯಾರ್ಥಿ ಸಂಘವು ಸಾಧಿಸಬೇಕಾದ ಕೆಲಸಗಳ ಕುರಿತು ಸಲಹೆ ಕೊಟ್ಟರು. ಕಾರ್ಯದರ್ಶಿ ಕೃಷ್ಣಪ್ಪನವರು, ಈ ಬಾರಿಯೂ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಮೋಹನದಾಸ ಪೈ, ಉಪಾಧ್ಯಕ್ಷ ಶ್ರೀಶ ಬಲ್ಲಾಳ ಹಾಗೂ ಕಾರ್ಯಕಾರೀ ಸಮಿತಿಗೆ ಶುಭಕೋರಿ ಧನ್ಯವಾದ ಸಮರ್ಪಿಸಿದರು.

ವಾರ್ಷಿಕೋತ್ಸವ

ಉಡುಪಿ, ಫೆಬ್ರವರಿ—12 ಉಡುಪಿ ಮೋಡರ್ನ್ ಕಿರಿಯ ಬುನಾದಿ ಮತ್ತು ಹಾ. ಎ. ಶಾಲೆಯ ಮತ್ತು ಹಳೇ ವಿದ್ಯಾರ್ಥಿ ಸಂಘದ ದಿನಾಚರಣೆಯು ಉಡುಪಿ ಸರಕಾರೀ ಆಸ್ಪತ್ರೆಯ ಪ್ರಧಾನ ವೈದ್ಯಾಧಿಕಾರಿ ಡಾ| ಎಸ್. ಕೆ. ವಿಶ್ವೇಶ್ವರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರರಾದ ಶ್ರೀ ಕೆ ಜಗನ್ನಾಥ ನಾಯ್ಕರು ಸ್ವಾಗತಿಸಿದರು. ಶ್ರೀ ಬಾಲಕೃಷ್ಣ ವಾಂಗಣ್ಣಾಯ ಇವರು ಸ್ವಸ್ತಿವಾಚನ ಮಾಡಿದರು. ಶಾಲಾ ವಿದ್ಯಾರ್ಥಿ ಶ್ರೀ ಸುಧಾಕರ ಸೆಟ್ಟರು ಸ್ವಸ್ತಿವಾಚನಕ್ಕೆ ಉತ್ತರವಿತ್ತರು ಉಡುಪಿ ಡಿವಿಜನ್ನಿನ ಸಹಾಯಕ ವಿದ್ಯಾಧಿಕಾರಿ ಶ್ರೀ ಎ. ಜೆ ಜೋರ್ಜ ಇವರು ಬಹುಮಾನ ವಿತರಣೆ ಮಾಡಿದರು ಅಧ್ಯಕ್ಷರ ಭಾಷಣದ ಬಳಿಕ ಶಾಲಾ ಮಕ್ಕಳಿಂದ ವಿವಿಧ ನೃತ್ಯಗಳೂ ಹಾಗೂ ಮನರಂಜನೆಯ ಕಾರ್ಯಕ್ರಮಗಳೂ, ಸೀತಾಪರಿತ್ಯಾಗ ನಾಟಕವೂ, ಹಳೇ ವಿದ್ಯಾರ್ಥಿಗಳಿಂದ ಸುಭದ್ರಾ ಪರಿಣಯ ಎಂಬ ನಾಟಕವೂ ಮನರಂಜನೆಯ ಕಾರ್ಯಕ್ರಮಗಳೂ ಯಶಸ್ವಿಯಾಗಿ ನಡೆದುವು, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್. ಭಟ್ಟರು ಧನ್ಯವಾದ ಸಮರ್ಪಿಸಿದರು.

ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಪೂರ್ವಾಹ್ನ 8ಗಂಟೆಗೆ ಉಡುಪಿ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ ನರಸಿಂಹ ವಾಂಗಣ್ಣಾಯರು ಧ್ವಜ ಅರಳಿಸಿ ಶ್ರೀ ಕಾಣಿಯೂರು ಸ್ವಾಮೀಜಿಯವರಿಂದ ಕೊಡಲ್ಪಟ್ಟ ಸಿಹಿತಿಂಡಿಯನ್ನು ಹಂಚಿದರು.

ವ್ಯಕ್ತಿ ಮಾರ್ಗದರ್ಶನ ಸಪ್ತಾಹ

ಸತ್ಯಸಾಯಿ ವಿಹಾರ, ಫೆ.—15. ಇಲ್ಲಿಯ ಲೋಕ ಸೇವಾ ಹೈಸ್ಕೂಲಿನ ಮಾರ್ಗದರ್ಶನ ವಿಭಾಗವೊಂದು ತೆರೆಯಲ್ಪಟ್ಟು ತಾ. 2ರಿಂದ 8ರ ತನಕ ವ್ಯಕ್ತಿ ಮಾರ್ಗದರ್ಶನ ಸಪ್ತಾಹವನ್ನು ಆಚರಿಸಲಾಯಿತು. 2ನೇ ತಾರೀಕಿನಂದು ವಿಟ್ಲದ ಕೇಂದ್ರ ಅಡಿಕೆ ಪರಿಶೋಧನಾಲಯದ ಪ್ರಧಾನಾಧಿಕಾರಿ ಶ್ರೀ ಅಹಮ್ಮದ್ ಬಾವಪ್ಪ ಇವರು ಉದ್ಘಾಟನೆಯನ್ನು ಗೈದು ಕೃಷಿ ವಿಭಾಗದ ಕುರಿತಾಗಿ ಮಾತನಾಡಿದರು. ಶ್ರೀ ಮಡಿಯಾಲ ನಾರಾಯಣ ಭಟ್ಟರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಜನಜಾಗೃತಿಯನ್ನುಂಟು ಮಾಡುವ ಇಂತಹ ಕಾರ್ಯಕ್ರಮಗಳ ಪ್ರಾಮುಖ್ಯತೆಯನ್ನು ವಿವರಿಸಿದರು.

ಪುಸ್ತಕಗಳ ಹಾಗೂ ಪ್ರಕಟಣೆಗಳ ಪ್ರದರ್ಶನವನ್ನೂ ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು

ತಾ 4,6 ಮತ್ತು 7ರಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಬಿ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆಗಳು ಜರಗಿ ಶ್ರೀ ಮಡಿಯಾಲ ನಾರಾಯಣ ಭಟ್ ಶ್ರೀ ಜಿ ಯಸ್. ಕೃಷ್ಣ ಭಟ್ಟ, ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯಾಧಿಕಾರಿ ಶ್ರೀ ಡಿ. ಯಸ್ ಭಟ್ಟ, ವಿಟ್ಲದ ಬ್ಯಾಂಕ ಆಫ್ ಕೋಆಪರೇಶನಿನ ವಿಸ್ತರಣಾಧಿಕಾರಿ ಶ್ರೀ ಗಣಪತಿ ಭಟ್ಟರು ಭಾಷಣ ಮಾಡಿದರು.

8 ನೇ ತಾರೀಕಿನಂದು ಜರಗಿದ ವೃತ್ತಿ ಸಮ್ಮೇಳನದಲ್ಲಿ ಪ್ರಧಾನ ಅತಿಥಿಗಳಾಗಿ ವಿಟ್ಲ ಸ್ಟೇಶನಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ರಾಮಲಿಂಗಂ, ಪ್ರಾಥಮಿಕ ಆರೋಗ್ಯ ಕೇಂದ್ರದ ಮೆಡಿಕಲ್ ಆಫೀಸರ್ ಡಾ| ಎ. ಯನ್ ಹೆಗ್ಡೆ ಮತ್ತು ಡಿಪ್ಪಿ ದಿ ಡಿ. ಓ. ಶ್ರೀ ಯು ವಾಸುದೇವ ಕಿಣಿ ಮುಂತಾದವರು ಭಾಗವಹಿಸಿದ್ದರು. ಅವರು ತಮ್ಮ ತಮ್ಮ ಖಾತೆಗಳಲ್ಲಿರುವ ಉದ್ಯೋಗಾವಕಾಶಗಳು, ಅದಕ್ಕೆ ಬೇಕಾಗುವ ಶಿಕ್ಷಣಾರ್ಹತೆಗಳು ಮತ್ತು ಗುಣಸ್ವಭಾವಗಳು ಮುಂತಾದ್ದುವುಗಳ ಕುರಿತು ವಿವರಿಸಿ ಪ್ರಶ್ನೋತ್ತರ ಕಿಮರ್ಶೆಗಳ ಮೂಲಕ ಸಂದೇಹಗಳನ್ನು ಪರಿಹರಿಸಿದರು. ಕೊನೆಯಲ್ಲಿ ಮಡಿಯಾಲ ನಾರಾಯಣ ಭಟ್ ಮಾತನಾಡುತ್ತಾ ಭಾರತದಲ್ಲಿ ಇಂದು ಸರಕಾರಿ ಹಾಗೂ ಬೇರೆ ಬೇರೆ ಖಾಸಗೀ ವಿಭಾಗದಲ್ಲಿರುವ ನೂರಾರು ಉದ್ಯೋಗಾವಕಾಶಗಳ ಉದಾಹರಣೆ ಸಹಿತ ವಿವರಣೆ ನೀಡಿ ಕಾರ್ಯಕ್ರಮವನ್ನು ಸಮಾಲೋಚಿಸಿಗೊಳಿಸಿದರು. ಕಾರ್ಯದರ್ಶಿ ಶ್ರೀ ಕೆ ಎಸ್ ಕೃಷ್ಣ ಭಟ್ಟರು ಧನ್ಯವಾದ ಮಾಡಿದರು.

ಚಂದಾದಾರರಲ್ಲಿ ವಿನಂತಿ

ಇನ್ನೂ ತಮ್ಮ ಬಾಕಿ ಚಂದಾಹಣವನ್ನ ಕಳುಹಿಸದ ನಮ್ಮ ಚಂದಾದಾರ ಬಂಧುಗಳು ದಯಮಾಡಿ ಅದನ್ನು ಬೇಗನೆ ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ.

ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದರ ನಾವು ಅನಿವಾರ್ಯವಾಗಿ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ.

ಹಿರಣ್ಣಯ್ಯ ಮಿತ್ರ ಮಂಡಳಿ, ಮೈಸೂರು

ಇವರ ಈ ವರ್ಷದ ಹೊಸ ಕಾಣಿಕೆ

ಮಂಗಳೂರು ಟೌನ್ ಹಾಲ್‌ನಲ್ಲಿ

ಯಶಸ್ವೀ 2ನೇ ವಾರ

ಭ್ರಷ್ಟಾಚಾರ

ಕೆಲವೇ ನಾಟಕಗಳು ಮಾತ್ರ

ಪ್ರತಿದಿನ ರಾತ್ರಿ 9-30ಕ್ಕೆ.

ಪ್ರತಿ ರವಿವಾರ ಸಂಜೆ 6-30ಕ್ಕೆ 1 ನಾಟಕ.

ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯನವರು

ಬಫೇದಾರ್ ಮುರಾರಿ ಪಾತ್ರದಲ್ಲಿ.

ಟಿಕೇಟು ದರ: ರೂ 5, 4, 3, 2, 1.

ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ 1, 2 ಮತ್ತು 3ನೇ ಕ್ಲಾಸು

ರಿಜರ್ವೇಶನ್ ಮಾಡಲಾಗುವುದು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

S C 185/66

ಕೃಷ್ಣಬೈಪಡಿತ್ತಾಯ — ವಾದಿ.

ಮತ್ತು

ಶೀನಪ್ಪ ರೈ— ಪ್ರತಿವಾದಿ.

ಪ್ರತಿವಾದಿಗೆ: ಪುತ್ತೂರು ತಾಲ್ಲೂಕು ನೆಕ್ಕಿಲಾಡಿ ಗ್ರಾಮದಲ್ಲಿರುವ ತಿಂಗಪ್ಪ ರೈಗಳ ಮಗ ಶೀನಪ್ಪ ರೈಗಳಿಗೆ.

ವಾದಿಯು ನಿಮ್ಮ ಮೇಲೆ ಮಾಡಿದ ಸದ್ರಿ ನಂಬ್ರವು ನಿಮ್ಮ ಹಾಜರಾತಿ ಬಗ್ಗೆ ಮತ್ತು ನಿಮ್ಮ ಆಕ್ಷೇಪಗಳಿದ್ದಲ್ಲಿ ತಿಳಿಸುವರೆ ತಾರೀಕು 1—3—67ಕ್ಕೆ ವಾಯಿದೆ ಇರುತ್ತದೆ. ಆ ದಿವಸ ಬೆಳಗ್ಗೆ 11 ಗಂಟೆಗೆ ನೀವು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- K. T. Bhat.

Advocate foi Petr.

Puttur, 16—2—67

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R E. P No 466/1966

S C 18/1965

ತ್ಯಾಂಪು ಶೆಟ್ಟಿ - ಅರ್ಜಿದಾರ

ಮತ್ತು

1 ದೊಡ್ಡಣ್ಣ ಶೆಟ್ಟಿ, 2. ಪದ್ಮಾವತಿ ಶೆಟ್ಟಿ.

—ಎದ್ರಿರು.

ಇವರೊಳಗೆ

ಈ ಮೂಲಕ ಸದ್ರಿ ವ್ಯವಹರಣೆಯ 2 ನೆ ಎದ್ರಿ ಶ್ರೀ ಪದ್ಮಾವತಿ ಶೆಟ್ಟಿ, ಚಂದಯ್ಯ ಶೆಟ್ರ ಹೆಂಡ್ತಿ ಮಂಗಳೂರು ತಾಲ್ಲೂಕು ಯೇಳಿಂಜೆ ಗ್ರಾಮದ ಪಟ್ಟೆ ಬಂಗ್ಲೆ ಎಂಬಲ್ಲಿರುವವರಿಗೆ ಯಾವುಲ್ಲ ತಿಳಿಸುವದೇನಂದ್ರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ನಿಮ್ಮ ಪಕ್ಷನಸ್ತಿ ರೆಸ್ತಿ ಯೇಲಂಗೆ ಅಪೇಕ್ಷಿಸಿ, ಸದ್ರಿ ಅಮಲ್ಜಾರಿ ನಿಮ್ಮ ಹಾಜರಿ ಬಗ್ಗೆ ತಾರೀಕು 16—3—67ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 30 ಗಂಟೆಗೆ ನೀವು ಮೇಲ್ಕಂಡ ಕೋರ್ಟ ಮುಂದೆ ಸ್ವತಹ ಯಾ ವಕೀಲರ ದ್ವಾರಾ ಹಾಜ್ರಾಗಿ ಉದಾಹರಿಸತಕ್ಕದ್ದು ತಪ್ಪಿದಲ್ಲಿ ನಿಂಮನ್ನು ಸಿನ್ಯಾ ಮಾಡಿ ಸದ್ರಿ ವ್ಯವಹರಣೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

N. M Adyanthaya

Advocate for Petitioner

Karkala, 13—2—1967.

READ & ADVERTISE IN NAVAYUGA WEEKLY

ಬಲಿದಾನದ ರಹಸ್ಯ

(ಎರಡನೇ ಪುಟದಿಂದ)

ನೆ ಕುಳಿತು ಕೂಗಿದರೆ ಯಾವ ಸರ್ಕಾರ ನಮ್ಮ ಮಾತನ್ನು ಕೇಳುತ್ತದೆ? ಅದೂ ಪ್ರಜಾ ಸರ್ಕಾರದಲ್ಲಿ ಕೂಗಿದವನೇ ಗೆದ್ದ. ಸುಮ್ಮನಿದ್ದವನು ಸತ್ತ ಹಾಗೆಯೇ ಲೆಕ್ಕ. ಆದ್ದರಿಂದ ಒಬ್ಬೊಬ್ಬರೂ ಒಂದೊಂದು ಮಾರ್ಗದಿಂದ ಇಂಗ್ಲೀಷನ್ನು ಉಳಿಸಲು ಪ್ರಯತ್ನಪಟ್ಟರು. ಕೆಲವರು ರೈಲು ಕಂಬಿಗಳನ್ನು ಕಿತ್ತರೆ ಮತ್ತೆ ಕೆಲವರು ಇಂಗ್ಲೀಷ್ ಪುಸ್ತಕಗಳನ್ನು ಸುಟ್ಟರು, ಕೆಲವರು ತಮ್ಮವನೇ ಆದ ಪೋಲಿಸ್ ಪೇದೆಯನ್ನೇ ಆಹುತಿ ಕೊಟ್ಟರು. ಕೆಲವರು ಊಟವನ್ನೇ ಬಿಟ್ಟರೆ ಮತ್ತೆ ಕೆಲವರು ಪ್ರಾಣವನ್ನೇ ಬಿಟ್ಟರು. ಆ ಪ್ರಾಣವನ್ನು ಬಿಟ್ಟವರ ಪಂಕ್ತಿಯಲ್ಲಿ ನನ್ನ ಸ್ನೇಹಿತ ಬಲರಾಮನ್ ಆದದ್ದು ನನಗೆ ಬಹಳ ಹೆಮ್ಮೆಯ ವಿಷಯವಾಗಿತ್ತು, ಅಂತೂ ಏನ ಕೇನ ಪ್ರಕರೇಣ......ತನ್ನ ಹೆಸರನ್ನು ಪ್ರಪಂಚಕ್ಕೆ ಸಾರಿಯೇ ಬಿಟ್ಟ. ನನ್ನ ಸ್ನೇಹಿತ ಸಮಯ ಕೌಶಲಿ. ಸಾಯುವುದಕ್ಕೆ ಮೊದಲೇ ಶ್ರೀ ರಾಜಾಜಿ, ಪ್ರಧಾನಿ ಶ್ರೀ ಶಾಸ್ತ್ರಿ, ಶ್ರೀ ಅಣ್ಣಾದೊರೈ ಇವರುಗಳಿಗೆಲ್ಲಾ ಪತ್ರ ಬರೆದಿದ್ದ. ರೂಮಿನ ಬಾಗಿಲು ತೆಗೆದು ಪೆಟ್ರೋಲ್ ಸುರಿದುಕೊಂಡು ಜೋರಾಗಿ ಕೂಗಿ ಬೆಂಕಿಕಡ್ಡಿಯನ್ನು ಹಚ್ಚಿದನಂತೆ. ಸ್ವಲ್ಪ ಹೊತ್ತಿಕೊಂಡ ತಕ್ಷಣ ರೂಮಿನ ಮುಂದೆ ಲಗ್ಗೋ ಲಗ್ಗೆಯಾಯಿತಂತೆ. ಆದರೆ ಯಾರಿಂದಲೂ ಅವನನ್ನು ಉಳಿಸಲು ಆಗಲಿಲ್ಲ. ಸಾಯುವಾಗಲೂ ಹೇಳಿಕೊಂಡೇ ಸತ್ತನಂತೆ, 'ದ್ರಾವಿಡನಾಡ್‌ಗೆಲ್ಲೆ-ಹಿಂದೀ ಮುರ್ದಾಬಾದ್, ಇಂಗ್ಲೀಷ್ ಜಿಂದಾಬಾದ್'.

ರಾಜಾಜಿ ಅವರೆಲ್ಲಾ ಮರುಕವನ್ನು ಸೂಚಿಸಿ ಕಾಗದ ಬರೆದಿದ್ದರು. ಇವನ ಮಾರ್ಗವನ್ನು ಬಹಳ ಜನ ಅನುಸರಿಸುವ ಮೊದಲೇ ಸರ್ಕಾರ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕೆಂದು ತಿಳಿಸಿದ್ದರು. ಶ್ರೀ ಶಾಸ್ತ್ರೀಜಿಯವರು ವಿಷಾದವನ್ನು ವ್ಯಕ್ತಪಡಿಸಿ, ಇಂತಹ ಘಟನೆಗಳನ್ನು ತೆಗಳಿ ಬರೆದಿದ್ದರು. ಇಂತಹ ಅಲ್ಪ ವಿಷಯಕ್ಕಾಗಿ ಪ್ರಾಣ ನೀಗಿದ್ದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದ್ದರು.

ಹೀಗೆ ಅನೇಕರು ಅನೇಕ ರೀತಿ ಪತ್ರಗಳನ್ನು ಬರೆದಿದ್ದರು. ಒಟ್ಟಿನಲ್ಲಿ ಬಲರಾಮನ್‌ನ ಹೆಸರು ದೇಶದ ಅನೇಕರಿಗೆ ಪರಿಚಯವಾಯಿತು. ಅವನ ಸಾವು ಅವನ ಭಾಷಾ ಪ್ರೇಮದ ಅನಂತ ಶುರವಾಯಿತು. ನಮ್ಮ ಸ್ನೇಹಿತರ ಬಳಗದಲ್ಲೂ ಈ ಘಟನೆಯ ಮೇಲೆ ಅನೇಕ ಚರ್ಚೆಗಳಾದುವು.

"ಏನೇ ಹೇಳು, ಈ ಅಲ್ಪ ವಿಷಯವನ್ನು ಅಷ್ಟು ದೊಡ್ಡದಾಗಿ ಮಾಡಬಾರದಾಗಿತ್ತು."

"ಅಲ್ಲಯ್ಯ, ಭಾಷಾಪ್ರೇಮ ಅಂದರೆ ಹಾಗಿರಬೇಕು. ನಾವೂ ಇದ್ದೀವಿ ನೋಡು ಹೇಡಿಗಳು. ನಾವು ಇಲಿಗಳೇ ದಿಟಂ ಅವನು ಪುಲಿಯೇವಲಂ.'

"ಭಾಷೆಯ ಮೇಲಿನ ಪ್ರೀತಿ ದೇಶದ ಮೇಲೂ ಇರಬೇಕಲ್ಲವೆ?"

"ಹೌದು, ಇರಬೇಕು' ಎಲ್ಲರೂ ಒಂದೇ ಕಂಠದಿಂದ ಕೂಗಿದರು.

"ಹಾಗಾದರೆ ಈಗಿನ ಈ ಹಠ ಆ ಚೀಣೀಯರ ಆಕ್ರಮವಾದಾಗ ಏಕೆ ಇರಲಿಲ್ಲ? ಚೀಣೀಯರು ಚಿತ್ರಹಿಂಸೆ ಕೊಟ್ಟಾಗ ನಮ್ಮ ರಕ್ತ ಕುದಿಯಲಿಲ್ಲ. ನಮಗೆ ರೋಷ ಬರಲಿಲ್ಲ. ಬಂದರೂ ಅದು ತಣ್ಣನೆಯ ಕೋಪ. ಈಗಲೂ ಅವರು ಕತ್ತಿ ಮಸೆಯುತ್ತಲೇ ಇದ್ದಾರೆ. ಅದಕ್ಕಾಗಿ ನಾವೆಂದು ತಯಾರಾಗುತ್ತಿದ್ದೇವೆ. ಅವರು ಬಾಂಬು ತಯಾರಿಸಿದರೂ ಸುಮ್ಮನೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದೇವೆ. ಪಾಕಿಸ್ಥಾನ ತುಳಿದರೂ ನಾವು ಉಸಿರೆತ್ತುವುದಿಲ್ಲ. ಅತ್ತ ಹುಲಿ, ಇತ್ತ ದರಿ, ಇಟ್ಟುಕೊಂಡೂ ನಾವು ಹುಚ್ಚೆದ್ದು ಕುಣಿಯುತ್ತಿದ್ದೇವೆ. ಪೆದ್ದ ಪೆದ್ದಾಗಿ ಆಡುತ್ತಿದ್ದೇವೆ. ಸುಟ್ಟುಕೊಂಡು ಸಾಯುವುದೆಂದರೇನು? ಯಾಕೆ ಈ ಹುಚ್ಚುಚ್ಚಾಟ? ಇದ್ದರಲ್ಲಿ ಒಂದಂಶವಾದರೂ ರಾಷ್ಟ್ರಭಕ್ತಿ ಇದ್ದರೆ ಈ ರೀತಿ ಭಾರತಮಾತೆ ಹಿಂದುಳಿಯಬೇಕಿರಲಿಲ್ಲ.'

"ಸಾಕು ನಿಲ್ಲಿಸಿ ನಿಮ್ಮ ಭಾಷಣ. ನಿಮ್ಮ ಕೈಲಾಗದಿದ್ರೆ ಸುಮ್ಮನಿರ್ರಿ. ಪವಾಡಗಳನ್ನು ಮಾಡಿ ತೋರಿಸುವವರ ವಿಷಯದಲ್ಲಿ ಒಂದು ಮೆಚ್ಚಿಗೆಯಂತೂ ಬೇಡ? ನಿಮ್ಮಂತಹವರಿಂದಲೇ ಆ ಉತ್ತರದ ಜನ ತಮ್ಮ ಭಾಷೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆ. ನಾಳೆ ನಮ್ಮ ಭಾಷೆಯಲ್ಲಿ ಮಾತಾಡುವವರಾರು? ಸಾವಿರಾರು ವರ್ಷಗಳಿಂದ ಬಂದ ನಮ್ಮ ಭಾಷೆಯ ಗತಿಯೇನು? ಇದನ್ನೆಲ್ಲಾ ಯೋಚಿಸಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಬಲರಾಮನ್ ಅವರಿಗೆ ಅನಂತ ವಂದನೆಗಳು. ಸದಾ ಅವರ ನೆನಪು ಉಳಿಯಲಿ. ಅವರ ಆತ್ಮಕ್ಕೆ ದೇವರು ಚಿರಕಾಲ ಶಾಂತಿಯನ್ನು ನೀಡಲಿ. ಜಯ ರಾಮನ್‌ಕೀ ಜೈ!

ಎಲ್ಲರೂ ಸೇರಿ 'ಜಯರಾಮನ್‌ಕೀ ಜೈ" ಎಂದು ಕೂಗಿದರು.

'ನಮ್ಮ ರಕ್ತದಲ್ಲಿ ನಮ್ಮ ಭಾಷೆ ಹರಿಯುತ್ತಿದೆ. ನಮ್ಮ ಪ್ರತಿಯೊಂದು ಅಂಗಾಂಗಗಳಲ್ಲಿಯೂ ನಮ್ಮ ಭಾಷೆ ಪ್ರತಿಧ್ವನಿಸುತ್ತಿದೆ. ನಾವು ಅಂದರೆ ನಮ್ಮ ಭಾಷೆ, ತಾಯ್ನುಡಿ. ನಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಈ ಹಿಂದಿ ವಾದಿಗಳಾದ ಗಾವಿಲರ ಜೊತೆ ಹೊಡೆದಾಡಬೇಕು.. ನಮ್ಮ ಒಂದೇ ಒಂದು ಮಗುವಿನ ಕೊನೆಯ ಉಸುರಿರುವ ವರೆವಿಗೂ ಹೊಡೆದಾಡಲೇ ಬೇಕು. ಗಾಂಧೀಜೀ ಹೇಳಿರುವ ಅಹಿಂಸಾತ್ಮಕವಾದ ಸತ್ಯಾಗ್ರಹವನ್ನು ಮಾಡಿ ತೋರಿಸಿರುವ ಬಲರಾಮನ್ ಅವರಿಗೆ ನಾವೆಲ್ಲಾ, ನಮ್ಮ ಮುಂದಿನ ಪೀಳಿಗೆಯೆಲ್ಲಾ ಚಿರಋಣಿ!

'ಬಲರಾಮನ್ ಮಾಡಿರುವ ಮಹತ್ಕಾರ್ಯವನ್ನು ಅಳೆಯಲೇ ನಮ್ಮಿಂದ ಸಾಧ್ಯವಿಲ್ಲ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರೋಣ.'

'ಅಸಾಧ್ಯವನ್ನು ಸಾಧ್ಯವೆಂದು ತೋರಿಸಿದ್ದಾರೆ ಬಲರಾಮನ್. ಹೇಡಿಗಳಿಂದ ಯೋಚಿಸಲೂ ಆಗದ ಕೃತಿಯನ್ನು ಮಾಡಿ ತೋರಿಸಿದ್ದಾರೆ. ಅವರ ತ್ಯಾಗದಿಂದಲಾದರೂ ಸರ್ಕಾರ ಕಣ್ಣು ತೆರೆದೀತು ಎಂದು ತಿಳಿಯುವ.'

ಹೀಗೆ ನನ್ನ ಸ್ನೇಹಿತ ವೃಂದವು ಬಲರಾಮನ್‌ನನ್ನು ಅನೇಕ ವಿಧವಾಗಿ ಶ್ಲಾಘಿಸುತ್ತಿತ್ತು. ನಮ್ಮ ಕಾಲೇಜಿನ ಕಣ್ಮಣಿಯರೂ ಸಹ ಅವನ ಸಾವಿಗಾಗಿ ತಮ್ಮ ಎರಡು ಹನಿ ಕಣ್ಣೀರಿನ ವಂದನೆಯನ್ನು ಅರ್ಪಿಸಿದರು. ಅವನ ವೀರಮಾತೆಯನ್ನು ಹೊಗಳಿದರು. ತಮ್ಮ ಅಣ್ಣ ತಮ್ಮಂದಿರೂ ಅಂತಹವರಾಗಲಿ ಎಂದು ಆಶಿಸಿದರು.

ಆದರೆಲ್ಲಾ ಪಣ್ಮಲಿಯ ದುಃಖವಂತೂ ಹೇಳತೀರದು. ಅವಳು ಅವನನ್ನು ಪ್ರೀತಿಸುತ್ತಿದ್ದಳೆಂದು ಈಗ ಹೇಳುವುದೆ? ಆಚರರವಾದರೂ ಅವನಿಗೆ ಗೊತ್ತಿದ್ದರೆ ಅವನು ಪ್ರಾಣವನ್ನು ಕಳೆದುಕೊಳ್ಳುತ್ತಲೇ ಇರಲಿಲ್ಲ!

ಒಂದೇ ದಿನದಲ್ಲಿ ಅವನು ಏರಿದ ಕೀರ್ತಿ ಶಿಖರವನ್ನು ನೋಡಿ ನನಗೆ ಬಹಳ ಆನಂದವಾಯಿತು. ಅವನು ಸತ್ತದ್ದಕ್ಕೂ ಸಾರ್ಥಕವಾಯಿತು ಎಂದುಕೊಂಡೆ. ಹಳ್ಳಿಯಲ್ಲಿನ ಅವನ ಸ್ಮಾರಕವನ್ನು ನೋಡಿಕೊಂಡು ಹೋಗಲು ಅನೇಕರು ಬರಲು ಪ್ರಾರಂಭಿಸಿದರು. ಅದೂ ಒಂದು ಯಾತ್ರಾಸ್ಥಳವಾಯಿತು. ಅವನು ಬಯಸಿದ್ದನ್ನು ತೀರಿಸಿ ಕೊಂಡಿದ್ದ. ಆದರೆ ಅವನು ಬದುಕಿ ಈ ಕೀರ್ತಿಯನ್ನು ನೋಡಲಾಗಲಿಲ್ಲ. ಅವನ ಹೆಸರು ಕೀರ್ತಿ ಕಲಶವನ್ನು ಹೊಂದಿತು.

ನನಗೊಬ್ಬನಿಗೆ ಬಿಟ್ಟು ಮತ್ಯಾರಿಗೂ ಅವನ ಸಾವಿನ ಗುಟ್ಟು ತಿಳಿದಿರಲಿಲ್ಲ. ಒಟ್ಟಿನಲ್ಲಿ ಅವನು ಒಳ್ಳೆಯ ಕಾಲಜ್ಞ; ವೃಥಾ ಕೆಲಸವನ್ನು ಮಾಡುವುದು ಅವನ ಜಾಯಮಾನಕ್ಕೆ ಬಂದದ್ದೇ ಅಲ್ಲ. ಯಾವಾಗಲೂ ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಹೊಡೆಯುವುದೇ ಅವನ ಸ್ವಭಾವ. ಈ ಸಲವೂ ಅದರಂತೆಯೇ ಮಾಡಿದ್ದ. ಈ ಹಿಂದೀ ವಿರುದ್ಧ ಹೋರಾಟವನ್ನು ತನ್ನ ಉಪಯೋಗಕ್ಕೆ ಬಳಸಿಕೊಂಡಿದ್ದ. ಆತ್ಮಹತ್ಯೆಯ ಅಭಿಪ್ರಾಯ ಅವನಿಗೆ ಅನೇಕ ಸಲ ಬಂದಿತ್ತು. ಅದನ್ನು ಹತ್ತಿಕ್ಕಿದವನೇ ನಾನು. ಆದರೆ ಈ ಸಲ ಅದಕ್ಕೆ ನನ್ನ ಕಣ್ಣು ತಪ್ಪಿಸಿ ನಡೆಸಿದ್ದ. ಇಂದಲ್ಲದಿದ್ದರೂ ಇನ್ನೆರಡು ತಿಂಗಳಿಗಾದರೂ ಸಾಯುವುದು ಖಂಡಿತ ಎಂದು, ಶ್ವಾಸಕೋಶದ ಕ್ಯಾನ್ಸರ್‌ನಿಂದ ನರಳುತ್ತಿದ್ದ ಅವನಿಗೆ ಡಾಕ್ಟರ್ ಹೇಳಿದ್ದರು. ಇನ್ನೆರಡು ತಿಂಗಳಾದ ಮೇಲೆ ಭಿಕಾರಿಯಂತೆ ಸಾಯುವುದಕ್ಕಿಂತ ಈ ರೀತಿ ಸತ್ತು ಹೆಸರನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟಿದ್ದ.

ಲಾ ಕಾಲೇಜು ದಿನಾಚರಣೆ

ಇದೇ ತಾ. ೪ರಂದು ಉಡುಪಿ ಲಾ ಕಾಲೇಜು ದಿನಾಚರಣೆಯು ಮುಂಬಯಿ ಹೈಕೋರ್ಟಿನ ಜಸ್ಟಿಸ್ ವಿ. ಎ. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಕಾಲೇಜು ಯೂನಿಯನ್ ಅಧ್ಯಕ್ಷ ಶ್ರೀ ಸಿ. ಐ. ಅಲೆಕ್ಸಾಂಡರ್‌ರವರು ಸ್ವಾಗತಿಸಿದರು. ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಅತಿಥಿಗಳ ಪರಿಚಯ ಮಾಡಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಡಿ. ಜೆ. ದೇಶಪಾಂಡೆಯವರು ಕಾಲೇಜಿನ ವರದಿಯೊಪ್ಪಿಸಿದರು. ಬಹುಮಾನ ವಿತರಣೆಯಾದ ತರುವಾಯ ಎಕೆಡೆಮಿಯ ರಿಜಿಸ್ಟ್ರಾರಾದ ಡಾ| ಟಿ. ಎಂ. ಎ. ಪೈಯವರು ಭಾಷಣಮಾಡುತ್ತಾ ಎಕೆಡೆಮಿಯ ಕಾಲೇಜುಗಳಿಂದ ವರ್ಷಕ್ಕೆ 700 ಪದವೀಧರರು ಹೊರಬರುತ್ತಿದ್ದಾರೆಂದು ಹೇಳಿದರಲ್ಲದೆ ಇದೇ ಜೂನ್ ತಿಂಗಳಲ್ಲಿ ಲಾ ಕಾಲೇಜಿಗೆ ಹೊಸ ಕಟ್ಟಡ ರೂಪುಗೊಳ್ಳಲಿದೆಯೆಂದರು.

ಕುಮಾರಿ ಪ್ರೇಮಾದೇವಿ ಹಂದೆಯವರು ಸ್ವಸ್ತಿವಾಚನಗೈದುದಕ್ಕೆ ಶ್ರೀ ಜೆ. ಸಿ. ರೇಗೋರವರು ಉತ್ತರವಿತ್ತರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾನೂನು ಶಿಕ್ಷಣವು ವೃತ್ತಿಯನ್ನು ಕೈಗೊಳ್ಳುವವರಿಗಾಗಿಯಷ್ಟೇ ಅಲ್ಲದೆ ಇತರ ಕ್ಷೇತ್ರಗಳಲ್ಲಿರುವವರಿಗೂ ಅದರ ಅಭ್ಯಾಸ, ಅನುಭವಗಳು ಅವಶ್ಯವೆಂದರು.

ಕೊನೆಯಲ್ಲಿ ಶ್ರೀ ಕೆ. ಅಪ್ಪುಶೆಟ್ಟರು ವಂದನಾರ್ಪಣೆಗೈದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 693/1966

ವಾದಿ— ಕಮಲಾಕರ ಪ್ರಭು

ಪ್ರತಿವಾದಿ— ನಾರಾಯಣ ಸೆಟ್ಟಿ

ಮೇಲಿನ ದಾವೆಯ ಪ್ರತಿವಾದಿ ನಾರಾಯಣ ಸೆಟ್ಟಿ, ಲಚ್ಚ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂಕು ಪಟ್ಟಂಗಡಿ ಗ್ರಾಮದ ಮಾಕಮ್ಮ ಸೆಟ್ರ ಪಟ್ಟಿಗೆಯಿರುವವ. ಈತನಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ-

ನೀವು ವಾದಿಗೆ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಬಾಕಿ ಬಡ್ಡಿ ಬಗ್ಗೆ ವಾದಿಯು ದಾಖಲ್ಲು ಮಾಡಿದ ಮೇಲಿನ ದಾವೆಯು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾರೀಕು 13-3-1967ನೇ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ತನಿಖೆಗೆಯಿಟ್ಟಿರುತ್ತದೆ. ನೀವು ಸ್ವತಃ ವ ವಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿಯಂತೆ ತೀರ್ಮಾನ ಮಾಡಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

K. Raghunath Shenai
Advocate for Pltf.

ಮೊಕ್ಕಾಂ: ಕುಂದಾಪುರ
ತಾರೀಕು 11-2-67

ರೈತ ಬಾಂಧವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P.ಯಿಂದ 20 H.P.ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

NAVAYUGA 23—2—1967

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನಂಜನಗೂಡು

ಮೈಸೂರಿನ ವೈಶಿಷ್ಟ್ಯಪೂರ್ಣ ಇತಿಹಾಸ ಕ್ಷೇತ್ರ

— ಶ್ರೀ ಎಚ್. ಎಂ. ನಾರಾಯಣ ಭಟ್ಟ.

ರಸಬಾಳೆ ಹಣ್ಣು ಟೂತ್ ಪೌಡರ್ ಮುಂತಾದವುಗಳಿಗೆ ಹೆಸರಾಂತ ನಂಜನಗೂಡು ಮೈಸೂರು ರಾಜವಂಶದ ಉತ್ಪತ್ತಿಯ ಇತಿಹಾಸ ಕೇಂದ್ರವೂ ಆಗಿದೆ. ನಂಜನ + ಗೂಡು ಎಂದರೆ ಶಿವನ ಸ್ಥಾನ. ನಂಜುಂಡೇಶ್ವರನ ದೇವಾಲಯವು ಇದ್ದುದರಿಂದಾಗಿಯೇ ಅಲ್ಲಿಗೆ ನಂಜನಗೂಡೆಂಬ ಹೆಸರು ಬಂದಿರಬೇಕು. ಹಾವುಗಳು ಧಾರಾಳವಾಗಿ ಸುತ್ತಾಡುತ್ತಿರುವ ಪ್ರದೇಶವದು. ಸಣ್ಣ ಮಕ್ಕಳೂ ಹಾವುಗಳನ್ನು ಹಿಡಿದು ಕೊರಳಿಗೆ ಸುತ್ತು ಹಾಕಿಕೊಂಡು ವಿನೋದ ಪರವಶರಾಗಿ ಆಲೆದಾಡುತ್ತಿರುವನೋಟಗಳಿಗೂ ಅಲ್ಲಿ ಕಡಿಮೆಯಿಲ್ಲ.

ಸುಮಾರು ೨೦ ಸಾವಿರ ಜನಸಂಖ್ಯೆಯುಳ್ಳ ನಂಜನಗೂಡು ಪಟ್ಟಣವು ಕಪಿಲಾ (ಕಾವೇರಿ) ನದಿಯ ತೀರದಲ್ಲಿ ಮೈಸೂರು ನಗರದಿಂದ ೧೦ ಮೈಲು ದಕ್ಷಿಣಕ್ಕಿದೆ. ನಂಜನಗೂಡಿಗೆ ಸಮೀಪವುಳ್ಳ ಹದಿನಾಡು ಮೈಸೂರು ರಾಜ ಮನೆತನದ ಉದ್ಭವ ಸ್ಥಳವೆನ್ನಲಾಗಿದೆ. ಸುಮಾರು ೫೦೦ ವರ್ಷಗಳ ಹಿಂದೆ ವಿಜಯನಗರದ ಯದುರಾಯ ಮತ್ತು ಕೃಷ್ಣರಾಯನೆಂಬಿಬ್ಬ ರಾಜಕುಮಾರರು ತೀರ್ಥಾಟನ ಮಾಡುತ್ತಾ ಮೈಸೂರನ್ನು ಸೇರಿದರು. ಅವರು ಹದಿನಾಡನ್ನೂ ಸಂದರ್ಶಿಸಿದರು. ಅಂದಿನ ಹದಿನಾಡಿನ ರಾಜರು ೩೩ ಗ್ರಾಮಗಳ ಒಡೆಯರು ಆಗಿದ್ದು ಮಾನಸಿಕ ರೋಗದಿಂದ ಎಲ್ಲಿಗೋ ಓಡಿಹೋಗಿದ್ದರು. ಮನೆಯಲ್ಲಿ ಮಡದಿ ಮಗಳು ದೇವಾಜಿ ಅಮ್ಮಣ್ಣಿ ಮತ್ತು ಆಕೆಯ ತಾಯಿ ವ್ಯಾಕುಲಚಿತ್ತರಾಗಿದ್ದರು. ಹದಿನಾಡನ್ನು ಆಕ್ರಮಿಸಲು ನೆರೆ ಪ್ರದೇಶಗಳಲ್ಲಿ ದುರಾಗ್ರಹವಿತ್ತು. ದೇವಾಜಿಯನ್ನು ತನಗೆ ನೀಡದಿದ್ದರೆ ಯುದ್ಧಕ್ಕೆ ಸನ್ನದ್ಧರಾಗುವಂತೆ ಆಕೆಯ ತಾಯಿಗೆ ಸಮೀಪದ ಕಾರುಗ ಹಳ್ಳಿಯ ಒಬ್ಬ ನಾಯಕನು ಪಂಥಾಹ್ವಾನ ಕಳಿಸಿದ್ದ. ಯುದ್ಧಕ್ಕೆ ಸಿದ್ಧತೆ ಮಾಡುವ ಪರಿಸ್ಥಿತಿಯಲ್ಲಿಲ್ಲದಿದ್ದ ಆ ಸ್ತ್ರೀಯರು ಅನಾಥರಂತಾಗಿದ್ದ ಆ ಸಂದರ್ಭದಲ್ಲಾಗಿತ್ತು ಈ ಸಹೋದರರ ಸಂದರ್ಶನ.

ಹದಿನಾಡಿನ ದುರ್ಯೋಗವನ್ನು ಅಲ್ಲಿನ ಅರಮನೆಯ ಒಬ್ಬ ಸೇವಕ ಈ ಸಂದರ್ಶಕರಿಗೆ ವಿವರಿಸಿದ. ದೇವಾಜಿಯ ಮತ್ತು ಆ ಪ್ರದೇಶದ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿದ ಈ ಸಹೋದರರು ಕಾರುಗಹಳ್ಳಿ ನಾಯಕನ ರುಂಡವನ್ನು ಕತ್ತರಿಸಿ ಅದನ್ನು ಕೋಟೆಯ ಹೊರಭಾಗದಲ್ಲಿ ತೂಗ ಹಾಕಿದರು. ಕಾರುಗ ಹಳ್ಳಿಯವರಿನ್ನಿತರೂ ತಮ್ಮ ನಾಯಕನ ವಿಯೋಗದಿಂದ ಚೆದರಿ ಚದರಿದರು.

ತನ್ನ ಮಾನವನ್ನೂ ರಾಜ್ಯವನ್ನೂ ಸಂರಕ್ಷಿಸಿದ ರಾಜಕುಮಾರನಿಗೆ ದೇವಾಜಿಯ ವಿವಾಹವಾಯಿತು. ರಾಜಕುಮಾರರು ಕಾರುಗ ಹಳ್ಳಿಯನ್ನೂ ಸಮೇತ ಆಡಳಿತೆ ಮಾಡತೊಡಗಿದರು ಎಂಬಿತ್ಯಾದಿಯಾಗಿ ಕತೆ ಮುಂದರಿಯುತ್ತದೆ.

ಕ್ರಿ.ಶ. ೧೫೭೦ರಲ್ಲಿ ಚಾಮರಾಜೇಂದ್ರ ಒಡೆಯರ್ ಮೈಸೂರು ಸಿಂಹಾಸನವನ್ನೇರುವುದಕ್ಕಿಂತಲೂ ಸುಮಾರು ೧೦೦ ವರ್ಷಗಳ ಹಿಂದಾಗಿರಬೇಕು ಈ ಸಂಭವ.

ಸ್ಕಂದ ಪುರಾಣದಲ್ಲಿ ನಂಜನಗೂಡಿನ ಶಿವ ಕ್ಷೇತ್ರದ ಕುರಿತು ಪ್ರಸ್ತಾಪವಿದೆ. ತಾಯಿಯನ್ನು ಕೊಲೆ ಮಾಡಿದ ಪ್ರಾಯಶ್ಚಿತ್ತಕ್ಕಾಗಿ ತಪಸ್ಸು ಮಾಡಲು ಶ್ರೀ ಪರಶುರಾಮನು ನಂಜನಗೂಡನ್ನು ಸೇರಿದ್ದನಂತೆ. ಆ ಕಾಡು ಪ್ರದೇಶದಲ್ಲಿ ಪರ್ಣ ಶಾಲೆ ನಿರ್ಮಿಸಲು ಪರಶುರಾಮನು ತನ್ನ ಕೊಡಲಿಯಿಂದ ಮರಗಳನ್ನು ಕಡಿಯುವಾಗ ಒಂದು ಶಿವಲಿಂಗಕ್ಕೆ ತಾಗಿ ಆ ಲಿಂಗದ ಒಂದು ತುಂಡು ಸಿಡಿದುಹೋಗಿತ್ತೆಂದೂ ಆಸ್ಥಳದಲ್ಲಿಯೇ ಪರಶುರಾಮನು ಒಂದು ಗರ್ಭಗುಡಿಯನ್ನು ನಿರ್ಮಿಸಿದನೆಂದೂ ಪುರಾಣದ ಕತೆ.

೧೮ನೇ ಶತಮಾನದ ಕೊನೆಗೆ ಅಂದಿನ ಮೈಸೂರು ರಾಜರಲ್ಲೊಬ್ಬರಾಗಿದ್ದ ನಂದಿರಾಜರೂ ಪೂರ್ಣಯ್ಯನೆಂಬ ಸಚಿವರೂ ಸೇರಿ ಈ ಕ್ಷೇತ್ರವನ್ನು ವಿಸ್ತರಿಸಿದರು.

ನಂದಿರಾಜನು ನಂಜನಗೂಡಿನಲ್ಲೇ ಒಂದು ಕೋಟೆ ಕಟ್ಟಿಸಿ ಅಲ್ಲಿ ಸ್ಥಿರವಾಸವಾಗಿದ್ದು "ಸಂಗೀತ ಗಂಗಾಧರ" ಎಂಬ ಕೃತಿಯನ್ನು ರಚಿಸಿ ಶ್ರೀ ನಂಜುಂಡೇಶ್ವರನನ್ನು ಪೂಜಿಸಿದ್ದುದಾಗಿ ಪ್ರತೀತಿಯಿದೆ.

೧೪೫ ಕಲ್ಲಿನ ಕಂಬಗಳುಳ್ಳ ದ್ರಾವಿಡ ಸಂಪ್ರದಾಯದಲ್ಲಿ ನಿರ್ಮಿಸಲ್ಪಟ್ಟ ಈ ದೇವಾಲಯವು ೩೮೫ ಅಡಿ ಉದ್ದ ೧೬೦ ಅಡಿ ಅಗಲವಿದೆ. ಇಲ್ಲಿನ ಕಟ್ಟಿದ ವಿಗ್ರಹಗಳೆಲ್ಲಾ ವಿಶೇಷ ರೀತಿಯ ಶಿಲ್ಪ ಕಲಾ ಕೌಶಲ್ಯವನ್ನು ಪ್ರದರ್ಶಿಸಿವೆ. ಸಾಧಾರಣ ದೇವಾಲಯಗಳಲ್ಲಿರದ ಬ್ರಹ್ಮ ಪ್ರತಿಷ್ಠೆಯು ಈ ಕ್ಷೇತ್ರದಲ್ಲಿರುವುದು ಒಂದು ವಿಶೇಷ. ಬಲಿಪೀಠಗಳಲ್ಲಿ ಕೆತ್ತಲಾದ ೧೩ನೇ ಶತಮಾನದ ಲಿಪಿಗಳಿವೆ. ತಿರುಜ್ಞಾನ ಸಂಬಂಧರ್ (ಕ್ರಿ. ಪೂ. ೬೨೦) ಎಂಬ ಪ್ರಸಿದ್ಧ ಶೈವಾಚಾರ್ಯನು ಈ ಕ್ಷೇತ್ರವನ್ನು ಸಂದರ್ಶಿಸಿದ್ದನಂತೆ. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ್ ಸುಮಾರು ಒಂದು ಶತಮಾನದ ಹಿಂದೆ ಈ ಕ್ಷೇತ್ರದ ಗೋಪುರವನ್ನು ನಿರ್ಮಿಸಿದ್ದನು. ಈ ಕ್ಷೇತ್ರದ ಅಮೂಲ್ಯ ಆಭರಣಗಳು ಸರಕಾರೀ ಖಜಾನೆಯಲ್ಲಿಯೂ ದೇವಾಲಯದ ಉಗ್ರಾಣಗಳಲ್ಲಿಯೂ ಶೇಖರಿಸಲ್ಪಟ್ಟಿವೆ. ಈ ಆಭರಣಗಳಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಕಾಣಿಕೆಗಳೂ ಒಳಗೊಂಡಿವೆ.

ವಿಷ್ಣು ಪ್ರತಿಷ್ಠೆಗೆ ಸಮೀಪದ ಸಣ್ಣ ಕಲ್ಲ ಮಂಟಪದಲ್ಲಿ ಇರಿಸಲಾದ ಒಂದು ಅಪೂರ್ವ ಶಿವಲಿಂಗವಿದೆ. ಈ ಮಂಟಪದ ಮೇಲೆ "ಶ್ರೀ ಟಿಪ್ಪು ಸುಲ್ತಾನ್‌ಸೇದಿಯಾ ಹುವಾ ಪಚ್ಚೆ ಶಿವಲಿಂಗಂ" ಎಂದು ಹಿಂದಿಯಲ್ಲಿ ಬರೆಯಲ್ಪಟ್ಟಿದೆ.

ಟಿಪ್ಪುವಿನ ವಾತ್ಸಲ್ಯಕ್ಕೆ ಪಾತ್ರವಾಗಿದ್ದ ಒಂದು ಆನೆಗೆ ಕಣ್ಣು ಕಾಣದಾಯಿತು. ಹಲವರ ಚಿಕಿತ್ಸೆಗಳಿಂದಲೂ ಪ್ರಯೋಜನವಿಲ್ಲ. ನಂಜುಂಡೇಶ್ವರನನ್ನು ಸೇವಿಸಿದರೆ ಆನೆಗೆ ಕಣ್ಣು ಬರುವುದೆಂದು ಒಂದು ಹಿಂದೂ ಟಿಪ್ಪುವಿಗೆ ಸಲಹೆಯಿತ್ತ. ಟಿಪ್ಪು ಸುಲ್ತಾನನು ಆನೆಯನ್ನು ಕ್ಷೇತ್ರಕ್ಕೆ ಬಿಟ್ಟ. ಒಂದು ತಿಂಗಳಲ್ಲಿ ಆ ಆನೆಗೆ ಕಣ್ಣು ಬಂತು. ಅನಂತರ ಅಪೂರ್ವವಾದ ಹಸುರು ಶಿವಲಿಂಗವನ್ನು "ನಂಜಪ್ಪ"ನಿಗೆ ಟಿಪ್ಪು ಸುಲ್ತಾನನು ಕಾಣಿಕೆ ಯಿತ್ತನೆಂದೂ ಹೇಳಲಾಗಿದೆ.

ವಾರ್ಷಿಕ ಕೊನೆಯಲ್ಲಿ ಈ ಕ್ಷೇತ್ರದಲ್ಲಿ ಸಾವಿರಾರು ಭಕ್ತಾದಿಗಳು ಸೇರುವರು. ಪ್ರತಿ ಹುಣ್ಣಿಮೆ ಇಲ್ಲೊಂದು ವಿಶೇಷ ದಿನ. ಸಂತಾನ ಪ್ರಾಪ್ತಿಗಾಗಿ ಹಲವರು ಸ್ತ್ರೀಯರು ನಂಜುಂಡೇಶ್ವರನಿಗೆ ಹರಕೆ ಹೊರುವುದಿದೆ.

ಕ್ಷೇತ್ರ ದರ್ಶನ ಮಾಡುವ ಮುನ್ನ ಸಮೀಪದ ಕೆರೆಯಲ್ಲಿ ಮಿಂದು ಪರಶುರಾಮ ಕ್ಷೇತ್ರವನ್ನು ಸಂದರ್ಶಿಸ ಬೇಕು. ಪರಶುರಾಮ ಕ್ಷೇತ್ರದ ವಠಾರದ ಮಣ್ಣು (ಮೃತ್ತಿಕೆ) ಎಲ್ಲಾ ವಿಧದ ಚರ್ಮರೋಗಗಳಿಗೆ ಸುಲಭ ಔಷಧವೆಂದು ನಂಬಲ್ಪಡುತ್ತದೆ.

ಈ ಕ್ಷೇತ್ರದ ಸಮೀಪದಲ್ಲೇ ೧೫ನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟ ಒಂದು ವೈದಿಕ ಮಠವಿದೆ. ಕ್ಷೇತ್ರದಿಂದ ಹಿಂತಿರುಗುವಾಗ ಪ್ರತಿಯೊಬ್ಬ ಭಕ್ತನೂ ಸ್ವಲ್ಪ ಹೊತ್ತಾದರೂ ಅಲ್ಲಿ ವಿಶ್ರಮಿಸ ಬೇಕೆಂಬ ಕಟ್ಟಳೆ.

ಈ ಕ್ಷೇತ್ರದಲ್ಲಿನ ಪುರಾತನ ವಸ್ತುಗಳ ರಕ್ಷಣೆಗಾಗಿ ಪೊಲೀಸ್ ಕಾವಲಿದೆ.

ಮನ ಸುಮದ ತೆರ ತಾನೊಡನೆ ಬಿರಿದು

ಮೂಡು ದಿಶೆಯಲಿ ಸುಧಾ ಕಲಶವೈ
ತಂದಿಹುದು
ಗಾಢ ಬಯಕೆಯ ತಳೆದು ಮೇಲೇರು
ತಿಹುದು.

ನೀಲವರ್ಣದ ಕಮಲವರಳಿಹುದು
ಸರಸಿಯಲಿ
ಅಲೆಯಲೆಗಳಲ್ಲಾಟ ಶರಧಿಯೂ
ಕರೆಯಲ್ಲಿ.

ಪಾದಪಗಳಾ ಬನದಿ ಮುಗಿಲ ಮುಟ್ಟುವ
ತೆರದಿ
ನಾದಗೈಯುತಲಿಹವು ಪಕ್ಕಿಗಳು ತಾ
ಭರದಿ.

ಬೆಳೆದ ತರುರಾಜಗಳು ತಳೆದುದಕೆ
ಸೌಂದರ್ಯ
ಕಳೆಯು, ಈ ಜಗದಲ್ಲಿ ದೇವ ಹರಡಿದ
ಶೌರ್ಯ.

ಸೆಲೆಚಿಮ್ಮಿ ಕಾರಂಜಿ ನಸುವಾಗ
ಪುಟಿದಂತೆ
ನೆಲೆಗೊಂಡಿತೀ ಶೋಭೆ ಮನ್ಮಂದಿರದಿ
ಹಿಂತೆ.

ಮಂದಮಾರುತ ಬೀಸಿ ಶಾಂತರಸ ತಾ
ಸುರಿದು
ನೊಂದ 'ಮನ ಸುಮದ ತೆರ ತಾನೊಡನೆ
ಬಿರಿದು'.

— ಶ್ರೀ ಎಂ. ಗೋವಿಂದ ರಾವ್.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited Printed & Published by K. H. Shetty at the Navayuga Press, Udupi. S. India.

ನವಯುಗ

2—3—1967

೨೦
ಪೈಸೆ

ಕಥಾ ಪ್ರಪಂಚ

ಪ್ರೇಮ ಪತನ

ಬರೆದವರು
ಶ್ರೀ ಹಳೆನಾಡು ಸುಬ್ರಾಯ ಭಟ್ಟ.

ಊರ ಮುಂದಿನ ಮೈದಾನಿನ ಮಧ್ಯದಲ್ಲಿ ಹಳೆಯ ಹಾಡನ್ನು ಹಾಡುತ್ತಾ ಹಾಸು ಮೂಳಿನ ಮರವೊಂದು ನೆರಳಿನಾಸರೆಯಾಗಿ ನಿಂತಿದೆ. ಹತ್ತು ವರ್ಷಗಳಿಂದ ಆ ಹುಚ್ಚನನ್ನು ಬಿಸಿಲಿನ ತಾಪದಿಂದ ರಕ್ಷಿಸಿಕೊಂಡು ಬರುತ್ತಲಿದೆ ಆ ಮರ.

ಅವನ ಪಾಲಿಗಿಂದು ಹಗಲು ರಾತ್ರಿಗಳೆರಡು ಒಂದೇ ಆಗಿದ್ದವು. ಎಣ್ಣೆ ಕಾಣದ ಕೂದಲು; ಕ್ಷೌರ ಕಾಣದ ಮುಖ, ನೋಡುವಾಗ ಭೀಕರವಾಗಿ ಕಂಡರೂ ಕಣ್ಣುಗಳಲ್ಲಿ ಸದಾ ಕರುಣಾರಸವೇ ಹೊರಸೂಸುತಿತ್ತು.

ದಾನಿಗಳು ನೀಡಿದ ತಿಂಡಿ ತಿನಿಸುಗಳೇ ಅವನಿಗಾಧಾರವಾಗಿತ್ತು. ಆದರೆ ಯಾರೊಡನೆಯೂ ಎಂದೂ ತನಗಾಗಿ ಕೈ ಮುಂದೆ ಚಾಚಿ ಬೇಡುತ್ತಿದ್ದಿಲ್ಲ. ಯಾರಾದರೂ ಕರೆದು ಕೊಟ್ಟಾಗ ಮೌನವಾಗಿಯೇ ಕೈ ಚಾಚುತ್ತಿದ್ದನು. ಇಂದು ಅವನ ಪಾಲಿಗುಳಿದಿರುವ ಅಮೂಲ್ಯ ಸಂಪತ್ತು ಆ ಎರಡು ಕೊಳಕು ಬಟ್ಟೆಗಳು ಮಾತ್ರ.

ಅರೆಕ್ಷಣವೂ ಸುಮ್ಮನಿರದೆ ಬಾಯಿಯಲ್ಲಿ ಅದೇನನ್ನೋ ಹೇಳಿಕೊಳ್ಳುವನು. ಒಮ್ಮೊಮ್ಮೆ ಕಣ್ಣೀರಿಡುತ್ತಾ ಕುಳಿತಿರುವನು. ಅವನ ಮುಖದಲ್ಲಿ ತಿಳಿನಗೆಯ ಸುಳಿವಿನ ದಾರಿ ಮಾಯವಾಗಿ ಅದೆಷ್ಟೋ ವರ್ಷಗಳೇ ಉರುಳಿದ್ದುವು.

ಮಕ್ಕಳ ತಮಾಷೆಗೂ ಸೇರನು. ದೊಡ್ಡವರ ಕೋಪಕ್ಕೂ ಗುರಿಯಾಗನು. ದಿನವೂ ಒಂದೇ ಹಾಡು ಒಂದೇ ರಾಗ. ಆಗಿಂದಾಗ್ಗೆ ಬಾಯಿಯಿಂದ ಹೊರ ಸೂಸುವ ಶಬ್ದ ಒಂದೊಂದೇ; ಚೆನ್ನಿ....! ಚೆನ್ನಿ!...

○ ○ ○

ಹತ್ತು ವರ್ಷಗಳ ಅನಂತರವೂ ಮರೆಯಲಾಗದ ಹೆಸರು ಅವನ ಪಾಲಿಗುಳಿದುದು ಅದೊಂದೇ—ಚೆನ್ನಿ...

ಚೆನ್ನಿಯ ಜೊತೆಯಲ್ಲಿ ಎಳೆಯ ಬಾಲಕನಾಗಿದ್ದಾಗ ಅದೆಷ್ಟೋ ದಿನಗಳನ್ನು ಅದೇ ಮರದಡಿಯಲ್ಲಿ ಸಂತೋಷದಿಂದ ಕಳೆದಿದ್ದನು. ಅಂದು ಅವರಿಬ್ಬರೂ ಜೊತೆಯಾಗಿ ಆಡಿದ ಆಟಗಳ ಸವಿನೆನಪನ್ನು ಅವನೆಂದೂ ಮರೆತಿರಲಿಲ್ಲ. ಎಳೆಯ ಆತ್ಮಗಳೆರಡರ ಒಲವಿನ ಸಸಿಗೆ ಪ್ರೀತಿಯ ನೀರೆರೆದು ಪ್ರೇಮದ ಸಾರವನ್ನಿಕ್ಕಿದ ಸ್ಥಳವಾಗಿತ್ತದು. ಆದರಿಂದು ಎಲ್ಲವೂ ಬರಿದು. ಕಾಲಚಕ್ರದ ಸುಳಿಯಲ್ಲಿ ಸಿಲುಕಿದ ಅವರಿಬ್ಬರ ಜೀವನ ನುಚ್ಚುನೂರಾಯಿತು. ಚೆನ್ನಿ ಕಾಣದೂರಿಗೆ ಸಾಗಿದ್ದರೆ ಹೊನ್ನ ಹುಚ್ಚನಾಗಿ ಮನೆ ಬಿಟ್ಟನು.

○ ○ ○

ಆಗಿನ್ನು ಚೆನ್ನಿಗೆ ಏಳು ವರ್ಷಗಳು ದಾಟಿರಲಿಲ್ಲ. ಹೊನ್ನನಿಗೆ ಹತ್ತು ವರ್ಷಗಳಿಗಿಂತ ಹೆಚ್ಚಿರಲಾರದು. ಮನೆಯ ದನ ಕಾಯುವ ಕೆಲಸ ಅವರಿಬ್ಬರದಾಗಿತ್ತು. ಊರ ಮುಂದಿನ ಮೈದಾನು ನಿತ್ಯ ಕಂಡು ಸುವ ಸ್ಥಳವಾಯಿತು. ಯಾವ ಕೆಟ್ಟ ಭಾವನೆಯೂ ಇಲ್ಲದ ಮೂಕ ಪಶುಗಳು ಜೊತೆ ಜೊತೆಯಾಗಿಯೇ ಮೇಯುತ್ತಿದ್ದುವು. ಹಾಗೆಯೇ ನಿಷ್ಕಲ್ಮಶ ಹೃದಯದ ಎಳೆಯ ಜೀವಿಗಳೆರಡು ದಿನವೂ ಕೂಡಿಯೇ ಆಡುತ್ತಿದ್ದುವು. ಯಾವ ಭೇದ ಭಾವನೆಗಳೂ ಆ ಎಳೆಯ ಜೀವಿಗಳ ಮನದಲ್ಲಿ ಒಂದು ದಿನವೂ ಸುಳಿದಿರಲಿಲ್ಲ.

ಆದರೆ ಮಕ್ಕಳ [illegible] ಹಿರಿಯರ [illegible] ದ್ವೇಷಾಸೂಯೆಯ [illegible] ಇಬ್ಬರ ಮನೆಯು ಒತ್ತೊತ್ತಿಗಿದ್ದರೂ ಮತ್ಸರವನ್ನು ಮನೆತನದ ಹಕ್ಕಾಗಿ ಬೆಳೆಸಿಕೊಂಡು ಬಂದಿದ್ದರು. ಒಬ್ಬರ ನೆರಳನ್ನು ಮತ್ತೊಬ್ಬರು ನೋಡಲೂ ಕೂಡಾ ಹೇಸುತ್ತಿದ್ದರು. ದಿನವೂ ಯಾವುದಾದರೊಂದು ಸಣ್ಣ ಪುಟ್ಟ ಕಾರಣಕ್ಕಾಗಿ ಜಗಳ ತಪ್ಪಿರಲಿಲ್ಲ.

○ ○ ○

ಸೋಮನ ಏಕ ಮಾತ್ರ ಪುತ್ರ ಹೊನ್ನ ಮುದ್ದು ಮಗನ ಮೇಲೆ [illegible] ಳ ಅಕ್ಕರೆ ತುಂಬಾ [illegible] ಹಾಗೆಯೇ ಹೊನ್ನನಿಗೂ ತನ್ನ ತಂದೆ ತಾಯಿಗಳೆಂದರೆ ಪಂಚ ಪ್ರಾಣ.

ದೂಮನ ನಾಲ್ಕು ಮಕ್ಕಳಲ್ಲಿ ಕಿರಿಯವಳೇ ಚೆನ್ನಿ. ಚೆನ್ನಿ ಹಿಂದೆಯೇ ಮತ್ತೆ ಮೂರು ಮಂದಿ ಇರುವುದರಿಂದ ಚೆನ್ನಿಯ ಮೇಲಿನ ಮಮತೆ ತಂದೆ ತಾಯಿಗಳಿಗೆ ಅಷ್ಟಕಷ್ಟೆ.

ಮನೆಯ ದನಕಾಯುವ ಕೆಲಸ ಅವರಿಬ್ಬರದಾಗಿತ್ತು. ಬೆಳಿಗ್ಗೆ ಬೇಗನೆದ್ದು ತಂಗುಳನ್ನ ತಿಂದು, ಜೊತೆಯಲ್ಲಿ ಬುತ್ತಿ ಹೊತ್ತು ದನ ಬಿಟ್ಟು ಮನೆಯಿಂದ ಹೊರ ಹೊರಟರೆ ಮತ್ತೆ ಸಂಜೆಯೇ ಮರಳಿ ಮನೆ ಸೇರುತ್ತಿದ್ದರು.

ಮನೆಯಿಂದ ಮೈದಾನಿಗೆ ಸುಮಾರು ಅರ್ಧಮೈಲಿಗೂ ದೂರ ಮಿಕ್ಕಿತ್ತು. ಒಂದು ದಿನ ಹೊನ್ನ ಮುಂದಾದರೆ ಮತ್ತೊಂದು ದಿನ ಚೆನ್ನಿ ಮುಂದಾಗುತ್ತಿದ್ದಳು.

ಅವರಿಬ್ಬರು ಮನೆಯಲ್ಲಿ ಬಂಧನದಲ್ಲಿಟ್ಟ ಪ್ರಾಣಿಯಂತಿದ್ದರೆ ಮೈದಾನು ಸೇರಿದಾಗ ಗರಿಯೊಡನೆ ಹಕ್ಕಿಯಂತಾಗುತ್ತಿದ್ದರು.

ಮಧ್ಯಾಹ್ನದ ಉರಿಬಿಸಿಲಿಗೆ ಹಸುಗಳನ್ನು ಹತ್ತಿರದ ಕೆರೆಗೆ ಕೊಂಡು ಹೋಗಿ ನೀರನ್ನು ಕುಡಿಸುವರು. ಆ ಮೇಲೆ ತಾವು ತಂದ ಬುತ್ತಿಯನ್ನು ಕಲ್ಲಮೇಲಿಟ್ಟು ತಿನ್ನತೊಡಗುವರು. ಹೊಸ ಪದಾರ್ಥವಿದ್ದರೆ ಅದನ್ನು ಮತ್ತೊಬ್ಬರಿಗೆ ಕೊಡಲು ಮರೆಯುತ್ತಿರಲಿಲ್ಲ.

ಸಂಜೆ ಮನೆದಾರಿ ಹಿಡಿದಾಗ ಇಬ್ಬರೂ ಪ್ರತ್ಯೇಕವಾಗುತ್ತಿದ್ದರು. ಹಿರಿಯರೆದುರು ಮಾತನಾಡುವುದಿರಲಿ, ಕಣ್ಣೆತ್ತಿಯೂ ಮತ್ತೊಬ್ಬರನ್ನು ನೋಡುವ ಧೈರ್ಯವಿರಲಿಲ್ಲ.

ಕಾಲಚಕ್ರದ ಗತಿಗೆ ಸಿಲುಕಿದ ಚೆನ್ನಿಯ ರೂಪವು ಬದಲಾಯಿಸಿತು. ದನಕಾಯುವ ಬದಲು ಮನೆಗೆಲಸ ಮಾಡಲು ತಾಯಿಯ ಕಟ್ಟಪ್ಪಣೆ ಯಾಯಿತು.

"ಗಂಡಸು ಹುಡುಗ ಹೋಗಿ ದುಡ್ಕೋಕೆ ಹುಡ್ಗೀ ಕಲ್ಸ ಕಲ್ಯಾಕ್ಬೇಕು. ಇಲ್ಲವಾದ್ರೆ ಮುಂದ ನನ್ನ ಹೆಸ್ರು ಊರ್ತುಂಬಾ ಹರಡ್ತಾರೆ' ಎಂಬ ತಾಯಿಯ ಮಾತೇ ಚೆನ್ನಿಯ ಕೆಲಸದ ಪರಿವರ್ತನೆಗೆ ಕಾರಣವಾಯಿತು.

ಚೆನ್ನಿಯ ಬದಲು ರಾಮನು ದನವನ್ನಟ್ಟಿ ಮೈದಾನಿಗೆ ಹೊರಟನು. ಮೊದಲ ದಿನ ರಾಮನನ್ನು ಕಂಡಾಗ ಹೊನ್ನನಿಗ ಮನದಲ್ಲೇನೋ ಕಸಿವಿಸಿಯಾಯಿತು. ತಮ್ಮಿಬ್ಬರ ಏಕಾಂತ ವಿಚಾರ ಮನೆಯವರಿಗ ತಿಳಿದು ತಪ್ಪಿಸಿರ ಬಹುದೇ ಎಂಬ ಸಂದೇಹವೂ ಬಂತೊಡಗಿತು.

ಹೊನ್ನನಿಗಂದು ಹೊತ್ತೇ ಹೋಗದಾಯಿತು. ಮಧ್ಯಾಹ್ನದ ಬುತ್ತಿಯಂತೂ ಬಾಯಿಗೆ ರುಚಿಸದಾಯಿತು. ರಾಮನಲ್ಲಿ ಚೆನ್ನಿಯ ವಿಷಯ ತಿಳಿಯಬೇಕೆಂಬಾಸೆಯುಂಟಾದರೂ ಕೇಳಲು ಅದೇಕೋ ಮನ ಅಳುಕಿತು.

ರಾಮನಂತೂ ಹೊನ್ನನಿಂದ ಎಂಟು ಮಾರು ದೂರವೇ ಉಳಿದಿದ್ದನು. ರವಿಯು ಪಡುವಣ ಕಡಲನ್ನು ಸೇರಿದಾಗ ಹೊನ್ನ ಭಾರವಾದ ಮನಸ್ಸಿನಿಂದಲೇ ಮನೆಯತ್ತ ಹೆಜ್ಜೆ ಹಾಕಿದನು.

ಅಂದು ಮನೆಯಲ್ಲುಳಿದ ಚೆನ್ನಿಯು ಕೆಲಸ [illegible] ಒಂದು ಮುಂದಾದುವು. ನೀರು ತರಲು ಹೋದ ಚೆನ್ನಿ ಅಲ್ಲಿಯೇ ನಿಂತು ಯೋಚಿಸುವಾಗ ತಾಯಿಯ ಬೈಗಳೇ ಎಚ್ಚರಿಸಿತು. ಪಾತ್ರೆ ತಿಕ್ಕಲು ಕುಳಿತರೆ ಕೈಗಳೇ ಓಡದಾದವು. ಅವಳ ಪಾಲಿಗಂದು ಮನೆ ಎಂಬುದು ಮುಳ್ಳಿನ ಹಾಸಿಗೆಯಂತಾಯಿತು. 'ರಾಮನು ಮನೆಗೆ ಯಾವಾಗ ಬಂದಾನು; ಹೊನ್ನನ ವಿಚಾರ ಯಾವಾಗ ಕೇಳಿಯೇನು?' ಎಂಬ ಸಂಕಟವೇ ಹೆಚ್ಚಾಯಿತು.

ಚೆನ್ನಿ ಮಾಳ ಸಂಕಟದಲ್ಲಿ ಕಾಲಯಾಪನ ಮಾಡುವಾಗಲೇ ರಾಮನು ದನವನ್ನಟ್ಟಿ ಬರುವ ಸದ್ದು ಕೇಳಿಸಿತು. ಹಿಡಿದ ಕೆಲಸವನಲ್ಲಿಯೇ ಬಿಟ್ಟು ಕೊಟ್ಟಿಗೆಗೋಡಿದಳು. ರಾಮನ ಮುಖದಿಂದಾವ ಮಾತುಗಳೂ ಹೊರಡದಾಗ ನಿರುತ್ಸಾಹವೇ ಉಂಟಾಯಿತು.

ಕ್ಷಣಕಾಲ ತಡೆದು ಅವಳೇ ಮೆಲ್ಲ ಕೇಳಿದಳು. 'ರಾಮ! ಮೇಯಲು ಮತ್ತಾರ ದನಗಳು ಬಂದಿದ್ದುವು?'

'ಏನೋ ನಂಗೇನು ಗೊತ್ತು? ಬಹಳ ಬಂದಿದ್ದುವು. ನಾನೇನು ಕೇಳಿ ತಿಳಕ್ಕೊಂಡಿಲ್ಲ. ಎಂದನು ಅಕ್ಕನ ಮಾತಿಗುತ್ತರವಾಗಿ.

'ರಾಮ!........' ಕರೆಯಲ್ಲಿ ಕಾತರದ ದನಿಯಿತ್ತು.

ರಾಮ ಅಕ್ಕನ ಮುಖವನ್ನು ತಲೆ ಎತ್ತಿ ನೋಡಿದನು. ಆ ಮುಖದಲ್ಲಿ ಎಂದಿನ ನಗುವಿರಲಿಲ್ಲ ಯಾವುದೋ ಸಂಕಟವನ್ನನುಭವಿಸುತ್ತಿದ್ದಾಳೆಂಬ ಅರಿವುಂಟಾಗಲು ಆ ಎಳೆಯ ಬಾಲಕನಿಗೂ ತಡವಾಗಲಿಲ್ಲ.

'ಯಾಕೆ ಅಕ್ಕಾ?' ಪ್ರೀತಿಯಿಂದಲೇ ಕೇಳಿದನು.

'ಹೊನ್ನ ಬಂದಿದ್ದನೇ?' ಪಿಸುದನಿಯಲ್ಲಿ ಕೇಳಿದಳು.

'ಹೌದಕ್ಕಾ!' ಸಹಜವಾಗಿಯೇ ಉತ್ತರಿಸಿದನು.

'ನಿನ್ನ ಮಾತಾಡಿಸಿದನೇ?' ಕುತೂಹಲದಿಂದಲೇ ಕೇಳಿದಳು.

'ಇಲ್ಲ. ನಂಗ್ಯಾಕೆ ಮಾತಾಡ್ಸಿಯಾನು?' ಸ್ವಾಭಾವಿಕವಾಗಿಯೇ ನುಡಿದನು.

'ಏನೂ ಕೇಳಿಲ್ಲವೇ?' ಮತ್ತೊಮ್ಮೆ ಕೇಳಿದಳು.

'ಇಲ್ಲಕ್ಕಾ!'

ಮತ್ತೂ ಅವಳಿಗೆ ರಾಮನ ಮಾತಿನ ಮೇಲೆ ಭರವಸೆಯುಂಟಾಗಲಿಲ್ಲ.

'ಸುಳ್ಳು ಹೇಳ್ಬೇಡ ರಾಮ. ಮಾತಾಡ್ಸಿದ್ದರೆ ಹೇಳು. ನಿನ್ನಾಣೆಯಾಗಿಯೂ ನಾನು ಅಪ್ಪ ಅಮ್ಮಂಗೆ ಹೇಳೋಕಿಲ್ಲ.' ಮಾತಾಡಿಸಿಲ್ಲವೇ ಬೇಕೆಂಬ ಹಂಬಲ ಅವಳದಾಗಿತ್ತು.

'ನಿನ್ನ ಕೊಂಬಾಣೆ ಇಲ್ಲಕ್ಕಾ.'

ಆ ಮಾತು ಕೇಳಿ ಅವಳಿಗೆ ಅಳುವು ತಡೆಯದಾಯಿತು. ಫಳಕ್ಕನೆ ಕಣ್ಣುಗಳಿಂದ ನೀರು ಜಾರಿತು. ಅದನ್ನು ತಮ್ಮ ನೋಡಬಾರದೆಂದು ಸೆರಗಿನ ತುದಿಯನ್ನು ಮುಖಕ್ಕೆ ಅಡ್ಡ ಹಿಡಿದಳು. ಆದರೆ ಅದು ರಾ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶ್ರೀ ಶಿವಪ್ರಸಾದ
ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೭	೨—೩—೧೯೬೭	No. 27

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫
++
ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಭದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಯಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

—— ಮುಖಪತ್ರದಲ್ಲಿ: ——

ಮೇಲ್ಗಡೆ—
ಆಧುನಿಕ ನೃತ್ಯದ ಒಂದು ದೃಶ್ಯ.

ಕೆಳಗಡೆ— ಅಮೆರಿಕೆಯ ಮನೋವೈಜ್ಞಾನಿಕ ಪ್ರಯೋಗ ಶಾಲೆಯಲ್ಲಿ ಪಡೆದುಕೊಳ್ಳುವ ಪೂರ್ವ ಸಂದರ್ಶನದ ದೃಶ್ಯವಿದು. ಆಕೆಯ ಕೈಯಲ್ಲಿರುವ ಉಪಕರಣಗಳು ಭಾವೋದ್ರೇಕ ಸ್ಥಿತಿಯನ್ನು ದಾಖಲು ಮಾಡುವ ಯಂತ್ರಕೆ ಒಯ್ದು ಮುಟ್ಟಿಸುವುವು.

ನಾಲ್ಕನೆಯ ಚುನಾವಣೆ

ಇದೀಗ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ಪರಿಣಾಮಗಳು ಬಹಿರಂಗವಾಗಿವೆ. ಈ ಮೊದಲೇ ಊಹಿಸಿದ್ದಂತೆ, ಇದು ವಿಚಿತ್ರವಾಗಿಯೇ ಇದೆ. ಕಾಂಗ್ರೆಸ್ಸು ತನ್ನ ನಿರೀಕ್ಷೆಗೂ ಮಿಕ್ಕಿ ಕೆಲವೆಡೆ ಸೋಲನ್ನು ಅನುಭವಿಸಿದಂತೆಯೇ ವಿರೋಧಿ ಪಕ್ಷಗಳೂ ಸೋಲನ್ನು ಅನುಭವಿಸಿವೆ. ಮಧ್ಯ ಪ್ರದೇಶದಲ್ಲಿ ಸರಕಾರ ರಚಿಸುವುದಕ್ಕೆ ಸಿದ್ಧವಿದ್ದ ಜನಸಂಘವು ಸೋತು ಕಾಂಗ್ರೆಸ್ ದಿಗ್ವಿಜಯಗಳಿಸಿದೆ. ರಾಜಸ್ಥಾನದಲ್ಲಿ ಸ್ವತಂತ್ರ ಪಕ್ಷವು ಅಧಿಕಾರವೇರಲು ಅಸಮರ್ಥವಾದದ್ದು, ಕೇರಳ ಮತ್ತು ಮದ್ರಾಸಗಳಲ್ಲಿ ಕಾಂಗ್ರೆಸು ವಿಚಿತ್ರ ಅದ್ಭುತ ಸೋಲುಂಡದ್ದು, ಕಾಂಗ್ರೆಸ್ಸಿನ ಭದ್ರಕೋಟೆ ಉತ್ತರ ಪ್ರದೇಶದಲ್ಲಿಯೇ ಅದು ನಿಚ್ಚಳ ಬಹುಮತ ಪಡೆಯಲು ಅಸಮರ್ಥವಾದದ್ದು—ಘಟಾನುಘಟಿಗಳು—ಪಾಟೀಲ್, ಮೆನನ್, ಕಾಮರಾಜ, ರಂಗಾ, ಕಾಮತ್, ಕೃಪಲಾನಿ, ಸುಬ್ರಹ್ಮಣ್ಯಂ—ಜನತೆಯಿಂದ ತಿರಸ್ಕೃತರಾದುದು— ಇವೆಲ್ಲ ಅನಿರೀಕ್ಷಿತಗಳೇ.

ಚುನಾವಣೆಗಳ ಫಲವಾಗಿ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಮಧ್ಯಪ್ರದೇಶ, ಹರಿಯಾಣಾ, ಗುಜರಾತ, ಆಸ್ಸಾಂ ರಾಜ್ಯಗಳಲ್ಲಿ ಕಾಂಗ್ರೆಸ್ಸು ಸರಕಾರ ರಚಿಸುವುದು. ಮದ್ರಾಸದಲ್ಲಿ ಡಿ. ಎಂ. ಕೆ. ಯು ೧೩೭ ಸ್ಥಾನಗಳನ್ನು ಪಡೆದಿದ್ದು ಮಂತ್ರಿಮಂಡಳ ರಚಿಸುವುದು. ಕೇರಳದಲ್ಲಿ ಎಡಕಮ್ಯೂನಿಸ್ಟರ ನೇತೃತ್ವದಲ್ಲಿರುವ 'ಸಪ್ತರಂಗ'ವೂ ಒರಿಸ್ಸಾದಲ್ಲಿ ಸ್ವತಂತ್ರ ಮತ್ತು ಜನಕಾಂಗ್ರೆಸ್‌ಗಳು ಸಮ್ಮಿಶ್ರವಾಗಿಯೂ ಸರಕಾರ ಸ್ಥಾಪಿಸುವುವು. ರಾಜಸ್ಥಾನದಲ್ಲಿ ಕೆಲ ಪಕ್ಷಾತೀತರೂ ಕಾಂಗ್ರೆಸ್ಸು ಸೇರಿರುವುದರಿಂದ ಅಲ್ಲಿ ಇದರ ನಾಯಕತ್ವದಲ್ಲೇ ಸರಕಾರ ರಚನೆಯಾಗುವ ಸಾಧ್ಯತೆಯಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಇಂದಿನ ಸರಕಾರವೇ ಮುಂದುವರಿಯಬಹುದು. ಪಶ್ಚಿಮ ಬಂಗಾಳ, ಬಿಹಾರ, ಉತ್ತರಪ್ರದೇಶ, ಪಂಜಾಬಗಳಲ್ಲಿ ಕಾಂಗ್ರೆಸ್ಸು ವಿಧಾನ ಸಭೆಯಲ್ಲಿ ಅಧಿಕ ಬಲಶಾಲಿ ಪಕ್ಷವಾದರೂ ಸರಕಾರ ರಚಿಸಲು ಅಗತ್ಯವುಳ್ಳ ಬಹುಮತ ಪಡೆಯಲು ಅಶಕ್ತವಾಯಿತು. ಹಾಗಾಗಿ ಇತರರೊಡನೆ ಕೂಡಿಕೊಂಡು ಅಧಿಕಾರ ನಿರ್ವಹಿಸಬೇಕೇ ವಿರೋಧಿ ಪಕ್ಷವಾಗಿಯೇ ಉಳಿಯಬೇಕೇ ಎಂಬ ಬಗ್ಗೆ ನಿರ್ಧಾರವಾಗುತ್ತಲಿದೆ. ಹೀಗೆ ಇಲ್ಲಿ ಸರಕಾರ ರಚನೆಯಾಗುವುದಾದರೆ ಅದು ಸಮ್ಮಿಶ್ರವಾಗುವುದು. ಕೇಂದ್ರಾಧೀನ ಪ್ರದೇಶಗಳಲ್ಲಿ ದಿಲ್ಲಿಯೊಂದನ್ನುಳಿದು ಬೇರೆಡೆ ಕಾಂಗ್ರೆಸ್ಸು ಬಹುಮತ ಪಡೆದಿದೆ. ಇದು ವರೆಗೆ ಕೇರಳ ರಾಜ್ಯವೊಂದು ಕೈಬಿಟ್ಟ ಪ್ರಸಂಗ ಮಾತ್ರವಿದ್ದರೆ, ಈ ಬಾರಿ ಮದ್ರಾಸವೂ ಪೂರ್ಣವಾಗಿ ಕಾಂಗ್ರೆಸಿನ ಕೈತಪ್ಪಿತು. ಕೆಲವೇ ವರ್ಷಗಳ ಹಿಂದೆ ಜನ್ಮ ತಳೆದ ಡಿ ಎಂ ಕೆ ಅಧಿಕಾರ ನಿರ್ವಹಿಸಲು ಪ್ರಚಂಡ ಬಹುಮತ ಪಡೆಯಲು ಶಕ್ತವಾದುದು ಅದ್ಭುತ ಸಾಧನೆಯೇ ಸರಿ. ಉಳಿದೆಡೆಯ ಹೋರಾಟ ಸ್ವಾಭಾವಿಕ.

ಇನ್ನು ಲೋಕಸಭೆಯ ಫಲಿತಾಂಶಗಳನ್ನು ನೋಡುವುದಾದರೆ, ಕಾಂಗ್ರೆಸ್ಸಿನ ಅಮೋಘ ಬಹುಮತ ತಪ್ಪಿ ಹೋಗಿ ಸಾಮಾನ್ಯ ಬಹುಮತ ಒದಗಿದೆ. ಮಂತ್ರಿಮಂಡಳ ರಚಿಸಲು ಇದು ಸಾಕು; ಆದರೂ ಸಂವಿಧಾನ ತಿದ್ದುಪಡಿಯಂತಹ "ಆಟ" ನಡೆಯಲು ಸಾಲದು. ಆಡಳಿತೆಯಲ್ಲಿ ಕಸುವು ಬರುವುದಕ್ಕೆ ಹೀಗೆಯೇ ಇದ್ದರೆ ಚೆನ್ನು. ಕೆಲರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಸ್ಥಾಪನೆಯಾಗುವುದರಿಂದ ಕೇಂದ್ರ – ರಾಜ್ಯಗಳ ನಡುವೆ ಹಲವು ಸಮಸ್ಯೆಗಳು ಮತ್ತೆ ಹುಟ್ಟುವ ನಿರೀಕ್ಷೆಯಿದೆ. ಕೆಲವೆಡೆ ಜನಪ್ರಿಯ ಸರಕಾರ ರಚನೆಯೂ ಅಸಾಧ್ಯವಾಗಬಹುದು. ಇನ್ನು ಕೆಲವೆಡೆ ರಚನೆಯಾಗುವ ಸರಕಾರ ಐದು ವರ್ಷಗಳ ಮಧ್ಯೆ ಉರುಳಿ ಹೋದರೂ ಹೋಗಬಹುದು. ಹಾಗಾಗಿ ರಾಷ್ಟ್ರಪತಿ ಆಳಿಕೆಯನ್ನು ಅಲ್ಲಿ ಘೋಷಿಸ ಬೇಕಾಗಿ ಬಂದರೂ ಬರಬಹುದು. ಇದರಿಂದ ಮುಂದಿನ ಪ್ರಧಾನಿ ಸ್ಥಾನವನ್ನು ಯಾರು ಏರುವರೆಂಬುದು ಕುತೂಹಲದಾಯಕವಾದುದು. ಪ್ರಚಲಿತ ಪ್ರಧಾನಿಯವರೇ ಮುಂದುವರಿಯುವರೇ ಅಥವಾ ಹೊಸಬರು ಆಯ್ಕೆಗೊಳ್ಳುವರೇ ಎಂಬುದನ್ನು ಕಾದು ನೋಡಬೇಕು. ಮುರಾರ್ಜಿ ದೇಸಾಯಿಯವರು ಪಕ್ಷದ ನಾಯಕರಾಗಿ ಆಯ್ಕೆಯಾದರೂ ಆಗಬಹುದು. ಅವಿರೋಧ ಆಯ್ಕೆಗೆ ಪ್ರಯತ್ನ ನಡೆಯುತ್ತಿದೆ. ಆದರೆ, ಒಂದು ಮಾತ್ರ ನಿಜ. ದೇಶದ ಮುಂದಿರುವ ಹಲವಾರು ಸಮಸ್ಯೆಗಳನ್ನು ಎದುರಿಸುವುದು ಮಾತ್ರವಲ್ಲದೆ ರಾಜ್ಯಗಳ ಮೇಲೂ ಪ್ರಭಾವ ಬೀರಬಲ್ಲ ನಾಯಕತ್ವ ದೇಶಕ್ಕಿಂದು ಬೇಕಾಗಿದೆ.

ರಾಷ್ಟ್ರಪತಿ-ಉಪರಾಷ್ಟ್ರಪತಿಗಳ ಆಯ್ಕೆಯೂ ಈ ಬಾರಿ ಕುತೂಹಲಕರವಾಗಿದೆ. ವಿಧಾನ ಸಭೆ, ಲೋಕ ಸಭೆ ಮತ್ತು ರಾಜ್ಯ ಸಭೆಯ ಸದಸ್ಯರ ಮತಗಳಿಂದ ಆಯ್ಕೆಯಾಗುವ ಇವರು ಇದು ವರೆಗೆ ಕಾಂಗ್ರೆಸ್‌ನ ಅನುಗ್ರಹ ಪಡೆದವರೇ ಎನ್ನಬಹುದು. ಆದರೆ, ಈ ಬಾರಿ ವಿಧಾನ ಸಭೆಗಳಲ್ಲಿಯೂ ಲೋಕ ಸಭೆಯಲ್ಲಿಯೂ ಕಾಂಗ್ರೆಸ್ಸಿನ ಪಕ್ಷಬಲವು ಹ್ರಾಸಹೊಂದಿರುವುದರಿಂದ ಎಲ್ಲ ಪಕ್ಷಗಳಿಗೂ ಒಪ್ಪಿಗೆಯಾಗುವ ವ್ಯಕ್ತಿಯೇ ಈ ಪದಗಳಿಗೆ ಸ್ಪರ್ಧಿಸಬೇಕಾಗಿದೆ. ಕಾಂಗ್ರೆಸ್ಸು ಈ ಬಾರಿ ಸಂಖ್ಯಾಬಲದಲ್ಲಿ ಕುಗ್ಗಿದುದು ಅದು ಸ್ವಾಭಾವಿಕವೆನ್ನುವುದು ಸಾಧ್ಯವಿಲ್ಲ. ಆದರೂ ಅದರ ಸಂಘಟನೆಯು ಶಿಥಿಲವಾಗಿರುವುದೂ ಈ ಸೋಲಿಗೊಂದು ಮುಖ್ಯ ಕಾರಣವಾಗಿರುವುದನ್ನು ಅಲ್ಲಗಳೆಯಲಾಗದು. ಆದುದರಿಂದ ಕಾಂಗ್ರೆಸ್ಸು ಮುಂದಾದರೂ ತನ್ನಲ್ಲಿ ಛಿನ್ನ ವಿಚ್ಛಿನ್ನವಾಗಲು ಅವಕಾಶ ಕೊಡದೆ ಬಲಸಂವರ್ಧನೆಗಾಗಿ, ಜನಪ್ರಿಯತೆ ಉಳಿಸಿಕೊಳ್ಳುವುದಕ್ಕಾಗಿ ಶ್ರಮಿಸಬೇಕಾಗಿದೆಯೆಂಬುದು ಸ್ಪಷ್ಟ. ಮತದಾರರೂ ಇದೇ ಅಭಿಪ್ರಾಯವನ್ನು ನೀಡಿದ್ದಾರಲ್ಲವೆ?

> **ವಚನ ಸುಧೆ**
>
> ಯಃ ಪ್ರಮಾಣಂ ನ ಜಾನಾತಿ
> ಸ್ಥಾನೇ ವೃದ್ಧೌ ತಥಾಕ್ಷಯೇ
> ಕೋಶೇ ಜನಪದೇ ದಂಡೇ
> ನ ಸ ರಾಜ್ಯೇವತಿಷ್ಠತೇ॥
>
> ಸ್ಥಿತಿ, ಲಾಭ, ಹಾನಿ, ಕೋಶ, ದೇಶ ಮತ್ತು ದಂಡ ಮೊದಲಾದುವುಗಳ ಪ್ರಮಾಣವನ್ನರಿಯದ ರಾಜನು ರಾಜ್ಯದಲ್ಲಿ ಸ್ಥಿರನಾಗಿರುವುದು ಸಾಧ್ಯವಿಲ್ಲ.

ಕಾಂಗ್ರೆಸ್ ಜಿಲ್ಲೆಯೆ?

ದಕ್ಷಿಣ ಕನ್ನಡ ಜಿಲ್ಲೆಯ ಚುನಾವಣಾ ಫಲಿತಾಂಶವನ್ನು ಸಮೀಕ್ಷಿಸುವಾಗ ವಿಧಾನ ಸಭೆಯ ೧೪ಸ್ಥಾನಗಳಲ್ಲಿ ಕಾಂಗ್ರೆಸ್ಸು ಬರಿಯ ೬ ಸ್ಥಾನಗಳನ್ನು ಮಾತ್ರ ಪಡೆದಿವೆ. ಇವುಗಳಲ್ಲಿಯೂ ಉತ್ತರ ಭಾಗದ ೮ಸ್ಥಾನಗಳಲ್ಲಿ ಬರಿಯ ಒಂದು ಸ್ಥಾನವನ್ನೂ ದಕ್ಷಿಣದ ಆರರಲ್ಲಿ ಐದನ್ನೂ ಹೊಂದಿದೆ. ಉತ್ತರದ ಲೋಕ ಸಭಾಸ್ಥಾನವನ್ನೂ ಕಾಂಗ್ರೆಸ್ಸು ಕಳೆದು ಕೊಂಡಿರುವುದು. ಅಂದರೆ, ಜಿಲ್ಲೆಯ ಉತ್ತರ ವಿಭಾಗ ಕಾಂಗ್ರೆಸ್ಸಿಗೆ ಪ್ರಬಲ ವಿರೋಧವೊಡ್ಡಿದೆಯೆಂಬುದು ಸ್ಪಷ್ಟ. ಕಳೆದ ಬಾರಿ ಎಂಟರಲ್ಲಿ ನಾಲ್ಕು ಸ್ಥಾನಗಳನ್ನು ಕಾಂಗ್ರೆಸ್ಸು ಕಳೆದುಕೊಂಡಿತ್ತು. ಕಾಂಗ್ರೆಸ್ಸನ್ನೇ ಬೆಂಬಲಿಸುತ್ತ ಬಂದಿದ್ದ ಈ ಪ್ರದೇಶದ ಜನರು ಕಾಂಗ್ರೆಸ್ ವಿರೋಧೀ ಭಾವನೆಯನ್ನೇಕೆ ಹೊಂದಿದರು ಎಂಬುದು ಪರಿಶೀಲಿಸಿ ಸೂಕ್ತ ಪರಿಹಾರ ಪಡೆಯಬೇಕಾದ ಪ್ರಶ್ನೆ. ಒಲ್ಲದ ಅಭ್ಯರ್ಥಿಗಳ ನಿಯುಕ್ತಿಯೂ ಈ ಕಾರಣಗಳಲ್ಲಿ ಒಂದೆಂಬುದು ನಿಜ. ಬೇರಿನಿಂದ ಚಿವುಟಬಹುದಾದ ದೋಷವನ್ನು ಬೆಳೆಯಗೊಟ್ಟುದು ನಾಯಕರ ಮಹಾದೋಷವೆಂಬುದು ನಿರ್ವಿವಾದ. ಈ ದೋಷ ಹಿಂದಿನಿಂದಲೇ ಕಾಣಿಸಿಕೊಂಡಿದ್ದು ಇಂದು ಉಲ್ಬಣಿಸಿದೆಯಷ್ಟೆ.

ನರಸಣ್ಣನ ಸರಸ

'ಕಾಂಗ್ರೆಸ್ಸು ಸಂಪೂರ್ಣ ಸೋತರೂ ಆಡಕ್ಕೆ ವಿಧಾನ ಸಭೆಯ ಉಪಾಧ್ಯಕ್ಷ ಸ್ಥಾನ ಸಿಗುತ್ತಾರಂತೆ, ಅಣ್ಣಾಡೊರೈ...."

'ಭಲೇ, ಕಾಮರಾಜ್, ಅವಗೆ ಬಿದ್ದರೂ ಮೂಗು ಮೇಲೆ...."

ಗೇಹ ರಾಜ್ಯದಲ್ಲಿ

ಈ ಕಾಲದಲ್ಲಿ ಹುಟ್ಟಿದ್ದೇ....?

"ಏ, ಭಾರೀ ಸುದ್ದಿ ತಂದಿದ್ದೇನೆ ಇಂದು...'

'ಏನ್ರಿ ಅದು? ನಮ್ಮ ಇಂದಿರಮ್ಮ ಗೆದ್ದು ಬಿಟ್ಟಳೆ?"

"ಛೆ...ಛೆ.... ಇಂದಿರಮ್ಮ ಗೆಲ್ಲದೆ ಮತ್ಯಾರು ಗೆಲ್ಲೋದು?"

'ಯಾಕೆ ಹಾಗಂತೀರಾ?"

'ನೋಡು, ನಿನ್ನೆ, ಅಲ್ಲ, ನಮ್ಮ ಇಂದಿರಮ್ಮನಿಗೆ ಒಂದಲ್ಲ ನೂರು ಕ್ವಾಲಿಫಿಕೇಶನ್ಸು ಇರುವಾಗ ಯಾಕೆ ಗೆಲ್ಲೋಲಾಗೋಲ್ಲಾಂತ....'

"ನೋಡೋಣ ಯಾವ ಯಾವ ಕ್ವಾಲಿಫಿಕೇಶನ್ಸಂತ...."

"ನೋಡು, ಯಾರು ಬೇಡಾಂತಾರೆ? ಮೊತ್ತಮೊದಲು ಲೋಕ ನಾಯಕ ಜವಾಹರಲಾಲರ ಸುಪುತ್ರಿ...'

'ಹ್ಞಾಂ....'

'ಎರಡನೆಯದಾಗಿ ಆಕೆ ಹೆಣ್ಣು........ ಹೆಂಗಸು ಮತದಾರರು ಆಕೆಗೆ ಕಣ್ಣು ಮುಚ್ಚಿ ಮತ ನೀಡಿದ್ದಾರೇಂತ..."

"ಓಯ್, ಏನು ಅನ್ತೀರೀಂತ? ಕಣ್ಣು ಮುಚ್ಚಿ ಮತ ನೀಡಿದ್ರೆ ಮತದ ಕುಲ ಕೆಟ್ಟು ಹೋಗುತ್ತೆ...'

'ಹ್ಹ...ಹ್ಹ...ಹಾಗಲ್ವೆ, ಶ್ರದ್ಧೆ ಅಭಿಮಾನದಿಂದ ಆಕೆಗೇ ಮತ ನೀಡಿದ್ದಾರೇಂದೆ....'

"ಇರಬಹುದೂನ್ನಿ ಮೂರು....'

"ಮೂರನೆಯದಾಗಿ ಆಕೆ ಪ್ರಧಾನ ಮಂತ್ರಿ ಸ್ಥಾನದಲ್ಲಿರುವವಳು..."

"ಅರ್‍ರಿ, ಮಂತ್ರಿಗಳು, ಮುಖ್ಯಮಂತ್ರಿಗಳು ಸೋತು ಸುಣ್ಣ ಆಗಿರುವಾಗ ಪ್ರಧಾನ ಮಂತ್ರಿ ಸೋತರೇ ಏನಂತೆ?'

"ಹಾಗಲ್ವೆ, ಪ್ರಧಾನ ಮಂತ್ರಿ ಸೋತೋದು ಅಂದರೆ, ಮನೇರು ಯಜಮಾನನ ಮುಖಕ್ಕೆ ಮಸಿ ಬಳಿದಂತೇಂತ ಅರ್ಥ.'

"ಆಯ್ತಪ್ಪ. ಮತ್ತೆ...?'

'ಮತ್ತೆ ನಾಲ್ಕನೆಯದಾಗಿ ಹೇಳುವುದಾದರೆ, ಒರಿಸ್ಸಾದಲ್ಲಿ ಮೂಗು ಮುರಿದುಕೊಂಡು ಬಂದ ಇಂದಿರಾಜಿಯ ಮುಖಕ್ಕೆ ಮೂಗು ಹಚ್ಚಿದ್ದಾರೆ ರಾಯ್‌ಬರೇಲಿಯ ಜನ....'

'ಹ್ಞಾಂ.... ಮತ್ತೇನು?'

"ಇಂದಿರಾಜಿಯವರು ಆರಿಸಿಕೊಂಡ ಕ್ಷೇತ್ರವೂ ಅದೇ ರಾಯ್‌ಬರೇಲಿ...."

'ಅಂದ್ರೆ, ಖಂಡಿತ ಜಯ ಸಿಗುತ್ತೇಂತ ವಿಶ್ವಾಸವಿದ್ದಲ್ಲಿಯೇ ನಿಂತಿದ್ದಾರೆ...'

"ಹಾಗಲ್ಲ... ಮುಂಬಯಿಯ ಅನಭಿಷಿಕ್ತ ದೊರೆ ಕಿಂಗ್ ಮೇಕರ್ ಎಸ್. ಕೆ. ಪಾಟೀಲರು ಸೋಲಲಿಲ್ಲವೇ"

"ಹ್ಞಾಂ....ಪಾಟೀಲರು ಬಿದ್ದರೇನು?"

'ಅವರು ಮಾತ್ರವಲ್ಲ, ಆಹಾರ ಮಂತ್ರಿ ಸುಬ್ರಹ್ಮಣ್ಯಂ ಕೂಡ ಬಿದ್ದಿದ್ದಾರೆ...'

'ಅಯ್ಯೋ, ಇದೇನೂಂತ?'

'ಏನು ಅಂದ್ರೆ? ಅರ್ಥಮಂತ್ರಿ ಸಚೀನ್ ಚೌಧರಿಯವರೂ ಬಿದ್ದು ಹೋಗಿದ್ದಾರೆ....'

'ಹೌದೆ? ಹಾಗಾದರೆ........ಹಾಗಾದರೆ...'

'ಏನು?"

"ಇಂದಿರಾಜಿಯ ಬಲಗೈ ತುಂಡಾಯಿತಲ್ಲಾಂತ...."

'ಅದು ಹೇಗೆ ಹೇಳುವುದು?"

'ಮತ್ತೆಂಥದು? ಇದನ್ನೆಲ್ಲಾ ನೋಡುವಾಗ ಮುಂದೆ ಇಂದಿರಾಜಿ ಪ್ರಧಾನಿಯಾಗುವ ಲಕ್ಷಣವಿಲ್ಲ...."

"ಅಲ್ಲ, ಲೋಕ ಸಭೆಯಲ್ಲಿ ಬಹುಮತ ಪಡೆಯೋದೇ ಭಾರಿ ಕಷ್ಟವಾಗಿರುವಾಗ ನೀನು ಸರಕಾರ ರಚನೆಯ ಕಾರ್ಯಕ್ಕೆ ಮುಂದುವರಿದಿದ್ದೀಯೆ..."

'ಹಾಗಲ್ರಿ, ಈ ಬಾರಿ ಕಾಂಗ್ರೆಸ್ಸು ಭಾರಿ ಸೋಲು ಅನುಭವಿಸಿತಲ್ಲಾ?'

"ಸೋಲು ಅಂದರೆ ಏನು?'

"ಬಹುಮತ ಪಡೆಯುವಲ್ಲಿ ವಿಫಲವಾಗಿದೇಂತ....'

'ಹ್ಞಾಂ....ಸದ್ಯ ಬಹುಮತ ಏಳು--ಎಂಟು ರಾಜ್ಯಗಳಲ್ಲಿ ಮಾತ್ರ ಸಿಕ್ಕಿದೆ. ಕೇರಳ ಮತ್ತು ಒರಿಸ್ಸಾಗಳಲ್ಲಿ ಕಾಂಗ್ರೆಸ್ಸು ಸಂಪೂರ್ಣ ಸೋತಿದೆ. ಮದ್ರಾಸದಲ್ಲಿ ಡಿ ಎಂ ಕೆ ಬಹುಮತ ಗಳಿಸಿದೆ. ಇನ್ನು, ಪಶ್ಚಿಮ ಬಂಗಾಳ, ಪಂಜಾಬು, ಬಿಹಾರಗಳಲ್ಲಿಯೂ ಕಾಂಗ್ರೆಸ್ಸು ಸ್ಪಷ್ಟ ಬಹುಮತ ಪಡೆಯುವಲ್ಲಿ ಅಸಮರ್ಥವಾಗಿದೆ....'

'ಮತ್ತೆ ಉತ್ತರಪ್ರದೇಶ?'

"ಅದೂ ಹಾಗೆಯೇ. ಸ್ಪಷ್ಟ ಬಹುಮತ ಸಿಗೋದು ಕಷ್ಟ—"

'ಅಲ್ರಿ, ಇನ್ನು ಅಲ್ಲೆಲ್ಲಾ ಏನಾಗುತ್ತೆ?'

'ಏನು ಅಂದ್ರೆ? ಜನಮತವನ್ನು ಎಲ್ಲರೂ ಅಂಗೀಕರಿಸ ಬೇಕುತಾನೆ?

'ಕಾಂಗ್ರೆಸ್ಸು ಏಳುರಾಜ್ಯಗಳಲ್ಲಿ ಖಂಡಿತ ಸರಕಾರ ರಚಿಸುವುದು. ಡಿ ಎಂ ಕೆ ಮದ್ರಾಸಿನ ಗದ್ದುಗೆಯೇರುವುದು. ಕೇರಳದಲ್ಲಿ ಮತ್ತೆ ನಂಬೂದರಿ ಪಾದರು ಠಿಕ್ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ...."

'ಅದು ಸರಿ,...ಉಳಿದೆಡೆಯಲ್ಲಿ?'

'ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತವಿಲ್ಲ. ಕಾಂಗ್ರೆಸ್ಸು ಹಲವೆಡೆ ಅಧಿಕ ಸಂಖ್ಯಾಕ ಪಕ್ಷವಾಗಿದೆ. ಆದುದರಿಂದ ಸಮ್ಮಿಶ್ರ ಸರಕಾರ ರಚನೆ ಸಾಧ್ಯವಾದರೂ ಆಗಬಹುದು....'

'ಹ್ಞಾಂ....ಒಂದು ವೇಳೆ ಅಂತಹ ಸರಕಾರ ರಚನೆಯಾದರೂ ಅದು ಐದು ವರ್ಷಗಳ ಕಾಲ ಉಳಿಯುವುದೆಂಬ ವಿಶ್ವಾಸವಿಲ್ಲ..........'

'ಏನೇ ಇರಲಿ. ನಮ್ಮ ಮಾಜಿ ಗವರ್ನರ್ ಜನರಲ್ ರಾಜಾಜಿ ಅಂದಿದ್ದಾರೆ ನೋಡು, ಜನ ತಮಗೆ ಬೇಕಾದವರನ್ನು ಆರಿಸಿಕೊಳ್ಳಲಿ. ಸುಭದ್ರ ಸರಕಾರ ರಚನೆ ಅಸಾಧ್ಯವಾದರೆ, ಚಿಂತಿಸಲು ರಾಷ್ಟ್ರಪತಿಗಳು ಇದ್ದಾರೇಂತ....'

'ಅಂದರೆ, ರಾಷ್ಟ್ರಪತಿಗಳ ಆಳಿಕೆ?'

'ಹ್ಞಾಂ....ಯಾಕಾಗಬಾರದು?

'ಅದೇ ಒಳ್ಳೆಯದು...ಒಂದೊಂದು ತೇಪೆ ಹಚ್ಚಿದ ಸರಕಾರ ಇದ್ದು ಹೋರಾಡುವುದಕ್ಕಿಂತ ಅದೇ ಒಳ್ಳೆಯದು...."

'ಹಾಗನ್ನ ಬೇಡ. ಪ್ರಜಾಸತ್ತೆಯ ಬೇರು ಭಾರತದಲ್ಲಿ ಬಲವಾಗಿ ಬಿಟ್ಟಿದೆ. ಇನ್ನು ಕೆಲವೇ ವರ್ಷಗಳಲ್ಲಿ ಅದು ಫಲವನ್ನೂ ನೀಡುತ್ತದೆ...'

'ಅಂದರೆ?

'ದೇಶದಲ್ಲಿ ವಿರೋಧಿ ಪಕ್ಷಗಳು ತಮ್ಮ ಬಲವನ್ನು ಹೆಚ್ಚಿಸಿಕೊಂಡಿವೆ ನೋಡು, ಇದು ಉತ್ತಮ ನಿದರ್ಶನ ತಾನೆ?..."

"ಅದು ಸರಿಯೇ. ಆದರೆ, ಜನಪ್ರಿಯ ಸರಕಾರ ರಚನೆ ಹೇಗೆ?"

'ಅದೂ ಹೀಗೆಯೇ. ನೋಡು, ನಾಳೆಯ ಭವಿಷ್ಯಕ್ಕಾಗಿ ಇಂದು ತುಸು ತ್ಯಾಗ ಮಾಡಬೇಕು ಎಂದು ನಾಯಕರು ಹೇಳುತ್ತಾರೆ ನೋಡು. ಹಾಗೆಯೇ ಪ್ರಜಾಸತ್ತೆಯ ಭವ್ಯ ಭವಿಷ್ಯಕ್ಕಾಗಿ ಇಂದು ನಾವು ತುಸು ಸಹನಾಶೀಲರಾಗಬೇಕು..

'ಸಾಕು ಬಿಡೀಂದ್ರೆ....ಅಂತೂ ನಾವು ಈ ಕಾಲದಲ್ಲಿ ಹುಟ್ಟಿದ್ದೇ ಅಪರಾಧವಾಯ್ತು....'

"ಈ ಕಾಲದಲ್ಲೇಂತಲ್ಲ, ಹುಟ್ಟುವುದೇ ಅಪರಾಧ....'

"ಅಂದರೆ? ಹುಟ್ಟಬಾರದೇನು?

"ಮುಕ್ತನಾಗಬೇಕು...."

"ಹ್ಞಾಂ....ಅದೆಲ್ಲಾ ವೇದಾಂತ....ಎಷ್ಟು ಜನ ಮುಕ್ತರಾಗುತ್ತಾರೆ?'

'ಮುಕ್ತರಾಗದಿದ್ದರೂ ಮುಗ್ಧರಾಗುತ್ತಾರೆ....'

'ಹ್ಞಾಂ....ಕೆಲವರು ಅಧಿಕಾರದಿಂದ ಮುಗ್ಧರು..."

'ಸಾಕು ಮಾಡೇ, ನೀನು ನೋಡೋದನ್ನು ಕಾಣುವಾಗ ನೀನೇ ಅಧಿಕಾರೀಂತ....'

'ಹ್ಞಾಂ....ಆಗ್ಲಿ ಏನಾಯ್ತು...."

'ನಾನೂನೂ ಹಾಗೆಯೇ....'

"ಇಬ್ಬರೂನ್ನಿ ಮುಗೀತಲ್ಲಾ...'

'ಅಂದಿದ್ದಾರಲ್ಲ, ಕಳ್ಳಕಳ್ಳಗೆ ನಂಟು?

'ಛಿ... ಎಂಥ ಮಾತು?'

"ರಾಜಕೀಯ ಅಂದ್ರೆ ಅದೇನು?

ಸಾಕು ಮಾಡಿ ಆ ಸುಡುಗಾಡು ರಾಜಕೀಯ...ಏನಾದ್ರೂ ಇದ್ರೆ...'

'ಛೆ....ಛೆ...ಇಲ್ಲದೆ ಉಂಟೆ? .... ಇಗೋ....'

—ಗೋರಾ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಹಿರಣ್ಣಯ್ಯ ಮಿತ್ರ ಮಂಡಳಿ, ಮೈಸೂರು
ಮಂಗಳೂರು ಟೌನ್ ಹಾಲ್‌ನಲ್ಲಿ
ಬಹುಜನರ ಮೆಚ್ಚುಗೆ ಪಡೆದ

ಲಂಚಾವತಾರ

ಪ್ರತಿದಿನ ರಾತ್ರಿ 9-30ಕ್ಕೆ.
ಪ್ರತಿ ರವಿವಾರ ಸಂಜೆ 6-30ಕ್ಕೆ 1 ನಾಟಕ.
ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯನವರು ದತ್ತುಪಾತ್ರದಲ್ಲಿ.
ಟಿಕೇಟು ದರ: ರೂ. 5, 4, 3, 2, 1.
ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ 1, 2 ಮತ್ತು 3ನೇ ಕ್ಲಾಸು ರಿಜರ್ವೇಶನ್ ಮಾಡಲಾಗುವುದು.

ಸೇಲ್ ನೋಟಿಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 469/56 O. S. 512/64

ಅರ್ಜಿದಾರ—ಹರಿಕೃಷ್ಣ ಮಯ್ಯ.

ಎದ್ರಿರು—1. ಮಂಜುನಾಥ ಹೆಬ್ಬಾರ, ಶಂಭು ಯಾನೆ ನರಸಿಂಹ ಹೆಬ್ಬಾರರ ಮಗ, ಉಡುಪಿ ತಾಲೂಕು ಕೋಟತಟ್ಟು ಗ್ರಾಮದ ಪಂದಟ್ಟು.

ಸದ್ರಿ 1ನೇ ಎದ್ರಿಗೆ ಈ ಮೂಲಕ ತಿಳಿಯ ಪಡಿಸಿದ್ದು.

ಮೇಲ್ಕಾಣಿಸಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ನಿಮ್ಮ ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿಮಾಡಿಕೊಂಡಿದ್ದಾನೆ. ಆದ್ದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ. 7.3.67 ನೇ ತಾರೀಕು ನಿಶ್ಚಯಿಸಲ್ಪಟ್ಟಿರುತ್ತದೆ.

(ಕೋರ್ಟು ಹುಕುಂ ಪ್ರಕಾರ)

ಎ. ಎಸ್. ಎನ್. ಹೆಬ್ಬಾರ್
ಅರ್ಜಿದಾರನ ಕಡೆ ಎಡ್ವೊಕೇಟ್

ಕುಂದಾಪುರ, 10—2—1967

ಪರಿಚಯ

ಡಾ। ರಾಧಾಕೃಷ್ಣನ್

ಸಂಗ್ರಹಕಾರರು:
ಶ್ರೀ ಲಕ್ಷ್ಮೀಸುತ

ಸ್ವಾಮಿ ವಿವೇಕಾನಂದ ಮತ್ತು ಕವೀಂದ್ರ ರವೀಂದ್ರರ ಅನಂತರ ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಯಶಸ್ಸನ್ನು ವೃದ್ಧಿಸುವುದರಲ್ಲಿ ಪ್ರಮುಖರಾದವರೂ, ಭಾರತೀಯ ಸಂಸ್ಕೃತಿ ಮತ್ತು ಭಾರತ ದರ್ಶನದ ಸರ್ವಶ್ರೇಷ್ಠ ಆಚಾರ್ಯರೂ ಡಾ। ಸರ್ವಪಲ್ಲಿ ರಾಧಾಕೃಷ್ಣರು ಆಗಿರುವರು. ಇವರು ಭಾರತಾಂಬೆಯ ಉದರದಲ್ಲಿ ಜನಿಸಿ, ಭಾರತಮಾತೆಯ ಪಾವಿತ್ರ್ಯವನ್ನು ಪಾವನಗೊಳಿಸಿದರು. ತನ್ನ ವಿದ್ವತ್ತತೆ ಮತ್ತು ಪ್ರತಿಭೆಗಳಿಂದ ಅವರು ಪಾಶ್ಚಾತ್ಯ ವಿದ್ವನ್ಮಣಿಗಳನ್ನು ಪ್ರಭಾವಿತರನ್ನಾಗಿ ಮಾಡಿದರು. ತನ್ನ ಉದ್ಗ್ರಂಥ ಹಾಗೂ ಭಾಷಣಗಳಿಂದ ಅವರು ಭಾರತೀಯ ಸಂಸ್ಕೃತಿ ಮತ್ತು ದರ್ಶನದ ವೈಶಿಷ್ಟ್ಯವನ್ನು ಜಗತ್ತಿಗೆ ಎತ್ತಿ ತೋರಿದರು.

ಡಾ। ರಾಧಾಕೃಷ್ಣರ ಜನನವು ಮದ್ರಾಸಿನ ಚಿತ್ತೂರು ಜಿಲ್ಲೆಯ ತಿರುತ್ತನಿ ಗ್ರಾಮದಲ್ಲಿ ೧೮೮೮ನೇ ಇಸವಿ ಸೆಪ್ಟೆಂಬರ್ ತಿಂಗಳ ೫ನೆ ತಾರೀಕಿನಂದು ಮಧ್ಯಮ ವರ್ಗದ ಬ್ರಾಹ್ಮಣ ಪರಿವಾರದಲ್ಲಾಯಿತು. ಇವರ ಬಾಲ್ಯ ಶಿಕ್ಷಣವು ತಿರುಪತಿ ಹಾಗೂ ತಿರತ್ತನ್ನಿಯಲ್ಲಿ ಕಳೆಯಿತು. ಇವು ಪ್ರಾರಂಭ ಕಾಲದಿಂದಲೇ ಹಿಂದುಗಳ ಹಾಗೂ ಶೈವಭಕ್ತರ ಶ್ರೇಷ್ಠವಾದ ತೀರ್ಥಸ್ಥಾನವು ಉಪಾಸನಾ ಕೇಂದ್ರವೂ ಆಗಿರುವುದರಿಂದ ಅವರ ವಿಚಾರಧಾರೆಯು "ಅತಿರಿಕ್ತ ಧರ್ಮ'ದ ಅರ್ಥಾತ್ 'ಚಿರಂತನ ಸತ್ಯ'ದ ಪ್ರಾಪ್ತಿಗೋಸ್ಕರ ಪ್ರಯತ್ನಶೀಲವಾಯಿತು. ಅವರ ಬಾಲ್ಯವು ಸ್ವಾತಂತ್ರ್ಯ ಸಂಗ್ರಾಮದ ಅಸಫಲತೆಯ ಕಾರಣದಿಂದುಂಟಾದ ನಿರಾಶಾ ಭಾವದಿಂದ ವ್ಯಾಪ್ತವಾಗಿದ್ದಿತು. ಹಾಗೂ 'ಮೆಕಾಲೇ'ಯವರ ಕೂಟ ನೀತಿ ಯೋಜನೆಯ ಅಂತರ್ಗತ ಧಾರೆಯ ಕಡೆಗೆ ಪ್ರಭಾವಿತವಾಗುತ್ತಲಿದ್ದಿತು. ಜನರು ಭಾರತೀಯ ಸಭ್ಯತೆಗೆ ಹೀನವಾಗಿ ನಡೆಯುತ್ತಿದ್ದುದರಿಂದ, ಕ್ರೈಸ್ತ ಮಿಶನರಿಗಳ ಪ್ರಚಾರಕ ವರ್ಗವು ಅಶಿಕ್ಷಿತ ಜನತೆಯನ್ನು ಪಥ ಭ್ರಷ್ಟರನ್ನಾಗಿ ಮಾಡಲು ಸುಸಂದರ್ಭವನ್ನು ಪಡೆಯಿತು. ಈ ಸಮಯದಲ್ಲಿ ಸ್ವಾಮಿ ಪರಮ ಹಂಸ ಹಾಗೂ ಸ್ವಾಮಿ ವಿವೇಕಾನಂದರು ಶಿಕ್ಷಿತ ಜನ ಸಮುದಾಯವನ್ನು ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆಯ ಕಡೆಗೆ ಸೆಳೆಯುತ್ತಿದ್ದರು. ಹತ್ತು ವರುಷದ ಬಾಲ್ಯಾವಸ್ಥೆಯಲ್ಲಿದ್ದ ಶ್ರೀಯುತ ರಾಧಾಕೃಷ್ಣನ್ನರು ಶ್ರೀ ವಿವೇಕಾನಂದರ ವಿಚಾರ ಧಾರೆಗಳನ್ನು ಅರಿತುಕೊಳ್ಳುವ ಪ್ರಯಾಸದಲ್ಲಿ ತೊಡಗಿ, ತನ್ನ ವಾಸ್ತವಿಕ ಶಿಕ್ಷಣದ ಅಡಿಗಲ್ಲನ್ನು ಸ್ಥಾಪಿಸಿದರು. ಇದುವೇ ಅವರ ಶಿಕ್ಷಣದ ನಾಂದಿಯಾಯಿತು.

ಇವರ ಪ್ರಾರಂಭಿಕ ಶಿಕ್ಷಣವು ಕ್ರೈಸ್ತ ಮಿಶನರಿಗಳ ಶಾಲೆಯಲ್ಲಿ ಪ್ರಾಪ್ತವಾಯಿತು. ಇಲ್ಲಿನ ಕ್ರೈಸ್ತ ಪ್ರಚಾರಕರ ಭಾರತೀಯ ಸಭ್ಯತೆಯ ಮೇಲಣ ಆಕ್ಷೇಪಣೆಗಳಿಂದ ಅವರ ಬುದ್ಧಿಯಲ್ಲಿದೃಢತೆ ಹಾಗೂ ಸ್ಥಿರತೆಯುಂಟಾಯಿತು. ಇದರ ಪರಿಣಾಮವಾಗಿ ಅವರ ಅಭಿರುಚಿಯು ಭಾರತೀಯ ಸಂಸ್ಕೃತಿಯ ಕಡೆಗೆ ಸೆಳೆಯಿತು. ೧೯೦೨ನೇ ಇಸವಿಯಲ್ಲಿ ಇವರು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ತರುವಾಯ ೧೯೦೪ರಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು ಈ ಪ್ರಕಾರ ಶಿಕ್ಷಾ ಪಥದಲ್ಲಿ ಮುಂಬರುತ್ತ ಅವರು ಮದರಾಸಿನ ಕ್ರಿಶ್ಚಿಯನ್ ಕಲಾ ಶಾಲೆಯಿಂದ ಎಂ. ಎ. ಡಿಗ್ರಿಯನ್ನು ಪಡೆದರು ಅವರಿಗೆ ಸಂಸ್ಕೃತ ಹಾಗೂ ದರ್ಶನ ಶಾಸ್ತ್ರ ಜ್ಞಾನವು ಅಪಾರವಾಗಿತ್ತು. ಅವರ ಮಿತ್ರರು ಅವರನ್ನು 'ವಾಕಿಂಗ್ ಎನ್ ಸೈಕ್ಲೊ ಪೀಡಿಯಾ' ಅರ್ಥಾತ್ "ಚಲಿಸುವ ವಿಶ್ವಕೋಶ' ಎಂದು ಕರೆಯುತ್ತಿದ್ದರು. ಆ ಸಮಯದಲ್ಲಿ ಅವರು ಬರೆದ 'ವೇದಾಂತದಲ್ಲಿ ಆಚಾರ ನೀತಿ" ಎಂಬ ಸಂಶೋಧನಾತ್ಮಕ ಪ್ರಬಂಧವು ದೇಶ ವಿದೇಶಗಳಲ್ಲಿ ಬಹು ಪ್ರಶಂಸನೀಯವಾಗಿ ಆದರಿಸಲ್ಪಟ್ಟಿತು.



ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ಅವರು ಮದರಾಸಿನ "ಪ್ರೆಸಿಡೆನ್ಸಿ ಕಾಲೇಜಿನ" ದರ್ಶನ ಶಾಸ್ತ್ರದ ಪ್ರೊಫೆಸರ್ ಆಗಿ ಸೇರಿದರು ಅವರು ತನ್ನ ವಿಲಕ್ಷಣವಾದ ವಿದ್ವತ್ಪ್ರಭೆಯಿಂದ ದರ್ಶನ ಶಾಸ್ತ್ರದಂತಹ ನೀರಸ ಹಾಗೂ ಕ್ಲಿಷ್ಟ ವಿಷಯವನ್ನು ಸರಸ ಹಾಗೂ ಸರಳ ಮಾಡಿ ತೋರಿಸಿದರು. ೧೯೨೬ ನೇ ಜೂನ್ ತಿಂಗಳಲ್ಲಿ ನಡೆದ ಇಂಗ್ಲೆಂಡಿನ "ಕೇಂಬ್ರಿಜ್ ವಿಶ್ವವಿದ್ಯಾನಿಲಯ" ಹಾಗೂ ಇನ್ನಿತರ ಬ್ರಿಟಿಷ್ ವಿಶ್ವವಿದ್ಯಾನಿಲಯಗಳ ಸಮ್ಮೇಲನದಲ್ಲಿ, ಅವರು ಭಾರತೀಯ ಪ್ರತಿನಿಧಿಯ ರೂಪದಲ್ಲಿ ಕಂಗೊಳಿಸಿದರು. ಇಂಗ್ಲೆಂಡಿನಲ್ಲಿನ ಅನೇಕ ತಾಣಗಳಲ್ಲಿ ಆಧ್ಯಾತ್ಮಿಕ ವಿಷಯದ ಕುರಿತಾಗಿ ಭಾಷಣವಿತ್ತರು. ಇದರಿಂದ ಅವರ ಅಂತಾರಾಷ್ಟ್ರೀಯ ಖ್ಯಾತಿ ಹೆಚ್ಚಾಯಿತು. "ಫ್ಯೂಚರ್ ಆಫ್ ಸಿವಿಲೈಝೇಶನ್ (ಸಭ್ಯತೆಯ ಭವಿಷ್ಯ) ಇದು ಅವರು ಅಮೇರಿಕದ 'ಹಾವರ್ಡ್ ವಿದ್ಯಾನಿಲಯ'ದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಲನದಲ್ಲಿ ಕೊಟ್ಟ ಭಾಷಣದ ಸಂಗ್ರಹರೂಪ.

ತತ್ಪರಿಣಾಮವಾಗಿ ಸಮಸ್ತ ಭಾರತದಲ್ಲಿ ರಾಧಾಕೃಷ್ಣನ್ನರ ಕೀರ್ತಿಯು ಹರಡಿತು. ಅಮೇರಿಕಾದಿಂದ ಸ್ವದೇಶಕ್ಕೆ ಮರಳಿದ ತರುವಾಯ ಅವರು ಇಂಗ್ಲೆಂಡಿಗೆ ತೆರಳಿ ಅಲ್ಲಿನ 'ಆಕ್ಸ್‌ವರ್ಡ್ ವಿಶ್ವವಿದ್ಯಾನಿಲಯ"ದಲ್ಲಿ ದರ್ಶನ ಶಾಸ್ತ್ರದ ಶಿಕ್ಷಕರಾಗಿ ಸೇವೆಯಕೊಂಡರು. ಏಷ್ಯಾ ಖಂಡದ, ವಿಶೇಷವಾಗಿ ಭಾರತದ ವಿದ್ವನ್ಮಣಿಗಳಿಗೆ ಇಂಗ್ಲೆಂಡಿನಲ್ಲಿ ಪ್ರಥಮವಾಗಿ ಸನ್ಮಾನ ದೊರೆಯಿತು ಡಾ। ರಾಧಾಕೃಷ್ಣನ್ನರಿಗೆ ೧೯೩೯ರಲ್ಲಿ 'ಕಾಶೀ ವಿಶ್ವವಿದ್ಯಾಲಯ'ದಲ್ಲಿ ಉಪಕುಲಪತಿಯ ಸನ್ಮಾನ ಭರಿತ ಪದವಿಯನ್ನೀಯಲಾಯಿತು. ಶ್ರೀ ಮಾನ್ ಮದನಮೋಹನ ಮಾಲವೀಯರ ಮರಣಾನಂತರ ಅವರು ತಮ್ಮ ಶ್ರೇಷ್ಠ ಪದವಿಗೆ ರಾಜೀನಾಮೆಯನ್ನಿತ್ತರು.

ಶ್ರೀಯುತರು ಭಾರತೀಯ ದರ್ಶನದ ಮೇಲೆ ಹಲವಾರು ಹೊತ್ತಗೆಗಳನ್ನು ಬರೆದಿದ್ದಾರೆ. ಅವರ ಗ್ರಂಥಗಳೆಲ್ಲವೂ ಪಾಶ್ಚಾತ್ಯ ದೇಶಗಳಲ್ಲಿ ವಿಶೇಷ ಪ್ರಚಾರದಲ್ಲಿವೆ. "ರವೀಂದ್ರನಾಥ ಠಾಕೂರರ ದರ್ಶನ", "ಇಂದಿನ ದರ್ಶನದ ಮೇಲೆ ಧರ್ಮ

(ಎಂಟನೇ ಪುಟ ನೋಡಿರಿ)



ಕನಸಿಗೊಂದು ರೂಪ.....

ಮಕ್ಕಳ ಕಲ್ಪನೆಯ ಲೋಕದಲ್ಲಿ ಅಸಾಧ್ಯವಾದುದೇನೂ ಇಲ್ಲ. ಕನಸಿನಲ್ಲಿ ತೇಲುವಷ್ಟು ಕಾಲ ಎಲ್ಲವೂ ಸಾಧ್ಯವೇ! ಅವರ ವಿದ್ಯಾಭ್ಯಾಸ, ಉದ್ಯೋಗ ಜೀವನ, ಕುಟುಂಬದ ಬದುಕು, ಹೊಸಮನೆ, ಆಧುನಿಕ ಅಭಿರುಚಿಗೆ ಒಗ್ಗುವ ಸಾಧನ ಸೌಕರ್ಯಗಳು... ಹೀಗೆ ಹತ್ತು ಹಲವು ಆವಶ್ಯಕತೆಗಳು ಮಕ್ಕಳು ಬೆಳೆದಂತೆ, ನಿಮಗೆ ಇದಿರಾಗುವ ಸಮಸ್ಯೆಗಳು. ಕನಸನ್ನು ನಿಜಗೊಳಿಸಲು ಉಳಿತಾಯವೊಂದೇ ಸರಳ ಮಾರ್ಗ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು, ಹಣ ಸಂಪಾದನೆಯಾದಂತೆ ಅದರಲ್ಲಿ ಉಳಿಸಿಕೊಂಡು ಬನ್ನಿ. ಖಾತೆಯಲ್ಲಿ ಹಣ ಬೆಳೆದಂತೆ ನಿಮ್ಮ ಮಕ್ಕಳ ಕನಸಿಗೆ ಕ್ರಮೇಣ ರೂಪ ಬರಲು ತೊಡಗುವುದು.

ಕನಿಷ್ಠ ರೂಪಾಯಿ ಒನ್ನು ಕೆಟ್ಟು ತೆರೆಯಬಹುದಾದ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ 25 ಪೈಸೆಯನ್ನೂ ಕಟ್ಟುತ್ತಾ ಬರಬಹುದು ಚೆಕ್ ಪುಸ್ತಕದ ಸೌಲಭ್ಯವಿದೆ ವರ್ಷದಲ್ಲಿ 150 ಬಾರಿ ಖಾತೆಯಿಂದ ಹಣವನ್ನು ಹಿಂದೆ ಪಡೆಯಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ ಆಫೀಸು, ಮಣಿಪಾಲ, ಮೈಸೂರು ರಾಜ್ಯ.

ವಿವೇಚನೆ

ಜಾತಿ ಧರ್ಮ

ಬರೆದವರು: ಶ್ರೀ "ಭಗೀರಥ"

ಯಾವುದಾದರೊಂದು ಸಮಸ್ಯೆಯು ಬಗೆಹರಿಯದ್ದಿದ್ದರೆ ಅದರ ಮೂಲವನ್ನೇ ಕೆದಕಿ ಶೋಧಿಸಿ ನಿವಾರಿಸುವುದು ಬುದ್ಧಿವಂತರ ದೃಷ್ಟಿ. ಅನೇಕ ಮೇಧಾವಿಗಳ ಮಿದುಳನ್ನೂ ಧಿಕ್ಕರಿಸಿ ಸಮಾಜವನ್ನು ಸಂಪೂರ್ಣ ಆವರಿಸಿ ಸರ್ಕಾರವನ್ನು ಅಪೋಶಿಸಿ ವಿಕಟಾಟ್ಟಹಾಸದಿಂದ ನಿಂತಿರುವ ಪೆಡಂಭೂತವೆಂದರೆ ಭಾರತದ ಜಾತೀಯತೆಯ ಸಮಸ್ಯೆ.

ಇದೇನು ಮಹಾಭೂತವೇ ಎನ್ನಬೇಡಿ. ವೇದಕಾಲದ ನಂತರದ ಸುಸಂಸ್ಕೃತ ಸಮಾಜವು ಈ 'ಮಹಾಶಕ್ತಿಯುತ ಜಾತಿಭೂತದಿಂದ ಮಹಾ ಪ್ರಯೋಜನ ಪಡೆದಿದ್ದಿರಬಹುದು. ಮಹಾ ಅಸ್ತ್ರಶಸ್ತ್ರಗಳ ಪ್ರಯೋಗ ಉಪಸಂಹಾರ ಮಾಡಬಲ್ಲವರಾಗಿದ್ದ ಆಕಾಲದವರಿಗೆ ಜಾತಿಭೂತದಿಂದಲೂ ನಿಯಂತ್ರಿತ ಪ್ರಯೋಜನ ಪಡೆಯುವದು ಕರಗತವಾಗಿದ್ದಿರಬೇಕು. ಆ ಪ್ರಯೋಜನದ ಕಾಲ ಮೀರಿ, ಹತೋಟಿಯಲ್ಲಿಡ ಬಲ್ಲವರಿಲ್ಲದೆ ಜಾತಿಭೂತವು ಸ್ವೇಚ್ಛೆಯಿಂದ ಸಮಾಜವನ್ನು ಶೋಷಿಸುತ್ತಿರುವದು ಎಲ್ಲರಿಗೂ ಮನಗಂಡ ವಿಚಾರ. ಸಮಾಜದ ಸಂಪ್ರದಾಯ ವ್ಯವಹಾರಗಳಲ್ಲಿ ಇದರ ಏಕೈಕ ನಿರಂಕುಶ ದಬ್ಬಾಳಿಕ ನಿತ್ಯದೃಶ್ಯವಾಗಿದೆ. ಒಂದು ಅವಿಭಕ್ತ ಕುಟುಂಬದ ಆದರ್ಶವು ಹೇಗೆ ನಿಷ್ಪಕ್ಷಪಾತವುಳ್ಳ ಹಿರಿಯರಿಂದ ಸಾಧಿಸಿ ನಿರ್ವಹಿಸಲ್ಪಡುತ್ತಿತ್ತೋ ಅದೇ ತತ್ವದ ಆಧಾರದಂತೆ ಆ ಕಾಲದಲ್ಲಿ ಹಿಂದೂ ಸಾಮಾಜಿಕ ಆದರ್ಶವು ನಾಲ್ಕು ವರ್ಣ ವ್ಯವಸ್ಥೆಯ ಕರ್ಮಗಳಿಂದ ನಿರ್ವಹಿಸಲ್ಪಡುತ್ತಿತ್ತೆನ್ನಬಹುದು. ಆದರೆ ಇದು ಎಲ್ಲ ಕಡೆಯೂ ಎಂದೆಂದಿಗೂ ಪಾಲನೀಯ "ಆದರ್ಶ" ವೆಂದು ಮಾತ್ರ ಹೇಳುವುದು ತಪ್ಪಾದೀತು. ಯಾಕೆಂದರೆ ಬ್ರಹ್ಮಕ್ಷತ್ರಿಯ ವೈಶ್ಯ ಶೂದ್ರರೆಂಬ ವರ್ಣಭೇದ ಕಲ್ಪಿಸದೆಯೇ ಆ ಕರ್ಮಗಳಿಂದಲೇ ಅಭಿವೃದ್ಧಿ ಹೊಂದುತ್ತಿರುವ ಜನಾಂಗಗಳ ಆದರ್ಶವೂ ನಮ್ಮ ಮುಂದೆ ಇರುವುದನ್ನು ಮರೆಯಲಾಗದು. ಜನ್ಮ ಮೂಲಕ ಬಂದ ಜಾತಿ ಪದ್ಧತಿಯು "ದೈವ ಸೃಷ್ಟಿ" ಎಂಬೊಂದು ವಾದವು ಸನಾತನಿಗಳ ಜಾತೀಯತೆಗೆ ಪುಷ್ಟಿಕೊಡುತ್ತದೆ. ಈ ಜಾತಿ ಧರ್ಮವು ಕೇವಲ ಮಾನವ ಸೃಷ್ಟಿಯಲ್ಲದೆ ದೈವ ಸೃಷ್ಟಿಯಾಗಿದ್ದರೆ ಭೂಗೋಳದಾದ್ಯಂತ ಮಾನವ ಮೃಗ ಪಕ್ಷಿಗಳಲ್ಲಿ ಪ್ರಕೃತಿಜನ್ಯ ಗಂಡು ಹೆಣ್ಣು ಭೇದವಿದ್ದಂತೆಯೇ ಈ ಜಾತಿ ಭೇದವೂ ಜಗದಾದ್ಯಂತ ನೈಸರ್ಗಿಕವಾಗಿರಬೇಕಿತ್ತಲ್ಲವೆ? ಮತ್ತು ಸಸ್ಯಾದಿಗಳಲ್ಲಿ ಗುಣಭೇದವಿರುವಂತೆ ಜಾತಿಗೆ ತಕ್ಕ ಗುಣ ಕರ್ಮಗಳೂ ಹುಟ್ಟಿನಿಂದಲೇ ಸ್ವಾಭಾವಿಕವಾಗಿ ಮಾನವನಲ್ಲಿರಬೇಕಿತ್ತಲ್ಲವೆ? ಅದೇಕೆ ಇಲ್ಲ?—ಎಂಬ ವಾದವೂ ಇದೆ. ಇದರಿಂದ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' ಎಂಬ ಗೀತೆಯಲ್ಲಿನ ಭಗವಂತನ ವಾಕ್ಯವು ಮಾನವ ಸಮಾಜ ಕಲ್ಯಾಣಕ್ಕೆ ಶಾಸ್ತ್ರ ವಿದ್ಯೆ, ಜ್ಞಾನ, ರಕ್ಷಣೆ, ವಾಣಿಜ್ಯ ಪಶುಪಾಲನೆ ಕೃಷಿ ಮತ್ತು ಸೇವೆ ಎಂಬ ಗುಣ ಕರ್ಮ ವಿಭಾಗಗಳ ಅಗತ್ಯದಂತೆಯೇ ಆಯಾ ವರ್ಣ ವಿಭಾಗವೇರ್ಪಡಿಸಿದೆಯೆಂಬ ಅಭಿಪ್ರಾಯ ಕೊಡುತ್ತದೆಯೇ ಹೊರತು ವರ್ಣ ಮುಖ್ಯವಾಗಿ ಕರ್ಮವೇ ಪುಟ್ಟಿತೆಂದಲ್ಲ. ನಾಲ್ಕು ವರ್ಣಗಳು ಸೃಷ್ಟಿಯ ಆದಿಯಿಂದ ಬಂದಿತೆಂದು ಯಾರೂ ಹೇಳಲಾರರು. ಆದ್ದರಿಂದ ವರ್ಣಾಶ್ರಮ ಧರ್ಮದ ಆದರ್ಶವು ಆ ಪ್ರಾಯ ಮಾನವಾಗಿದ್ದರೂ, ಈಗಿನ ಕಮ್ಯೂನಿಸಂ, ಸೋಷಲಿಸಂ, ಡೆಮಾಕ್ರಸಿ ಮುಂತಾದ ಆದರ್ಶಗಳಂತೆಯೇ, ಅದನ್ನು ಆಚರಿಸಬಲ್ಲ ಜನಾಂಗವು ಉನ್ನತ ಮಟ್ಟದ ಸಂಸ್ಕೃತಿ ಧರ್ಮದಿಂದ ಅನುಸರಿಸಲಾರದಿದ್ದಾಗ ಯಾವ ಉಚ್ಚ ಆದರ್ಶವೂ ಹಿತಕರವಾಗಿ ಪರಿಣಮಿಸುವುದಿಲ್ಲವೆಂಬುದು ಈಗಿನ ನಮ್ಮ ಪ್ರಜಾಪ್ರಭುತ್ವದಲ್ಲೇ ನಿದರ್ಶನಕ್ಕೆ ಬಂದಿದೆ. ಆದರೂ ಸನಾತನ ಜಾತಿವಾದಿಗಳ ಅಂಧತೆಗೆ ಗೀತೆಯಲ್ಲಿನ ಇತರ ಹಲವು ವಾಕ್ಯಗಳು ಪೋಷಕವಾಗಿರುವುದು. ಕಾರಣ, "ಸ್ವಕರ್ಮನಿರತನಾಗಿ ಪರಮಾತ್ಮನನ್ನು ಪೂಜಿಸಿದವನು ಈಶ್ವರಾನುಗ್ರಹ ಹೊಂದುವನು"—ಎಂಬುದು ಆ ವಾಕ್ಯ. ಇದು "ಸ್ವಾಭಾವ ನಿಯತಂ ಕರ್ಮಂ"—ಎಂದೂ ಸ್ಪಷ್ಟಪಡಿಸಿದೆ. "ಸಹಜಂ ಕರ್ಮಕೌಂತೇಯ ಸದೋಷಮಪಿ ಸತ್ಯಜೇತ್"—ಎಂಬೂ ಹೇಳಿದೆ. ಅದೇ ಭಗವಂತನು "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಾ"—ಎಂದೂ ಆಶ್ವಾಸನೆ ನೀಡಿದ್ದಾನೆ. ಮೇಲಿನ 'ಸ್ವಭಾವ ನಿಯತಂ ಕರ್ಮ' ಮತ್ತು 'ಸಹಜಂ ಕರ್ಮ' ಎಂಬ ವಾಕ್ಯಗಳಿಗೆ ಅನೇಕ ಅರ್ಥಗಳನ್ನು ಕೊಡಬಹುದಾಗಿದೆ. ಅದೇ 'ಸ್ವಜನ್ಮ ನಿಯತಂ ಕರ್ಮ' ಅಥವಾ "ಸ್ವವರ್ಣ ನಿಯತಂ ಕರ್ಮ" ಎಂಬುದಾಗಿದ್ದರೆ ಜಾತಿ ಧರ್ಮ ವಿಷಯವು ಸ್ಪಷ್ಟವಾಗುತ್ತಿತ್ತು. ಜಾತಿವಾದಿಗಳು ವಾದಿಸುವಂತೆ ಭಗವಂತನು ಅಷ್ಟು ಸಂಕುಚಿತ ಭಾವವುಳ್ಳವನಲ್ಲ. ಭಗವಂತನ ಅರ್ಥವೂ ಸ್ಪಷ್ಟವಾಗಿದೆ. ಯಾವುದೊಂದು ಔದ್ಯೋಗಿಕ ಕರ್ಮವೂ ವಂಶಾನುಗತವಾಗಿ ಬಂದಲ್ಲಿ ಅದು ಆಯಾ ಸಂತತಿಗಳಲ್ಲಿ ಪ್ರಗತಿ ಪಥದಲ್ಲಿ ಮುನ್ನಡೆದು ದೇಶದ ಸಂಪತ್ತು ಹೆಚ್ಚುತ್ತಿರುವುದೆಂಬುದು ನಿರ್ವಿವಾದ. ಮತ್ತು ಸಮಾಜದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರ ಸಂತತಿಗಳು ದೇಶಕ್ಕೆ ಆಯಾ ಕರ್ಮದ ಗಾತ್ರ ವೈಶಾಲ್ಯಗಳ ಅವಶ್ಯಕತೆ ಇದ್ದಂತೆ ತಕ್ಕ ಪ್ರಮಾಣದಲ್ಲಿ ಬಂದಿರುತ್ತದೆಯೆಂಬುದು. ದೇಶದ ಪ್ರಜೆಗಳೆಲ್ಲಾ ಬ್ರಾಹ್ಮಣ ಕರ್ಮವನ್ನೇ ಆಚರಿಸಲಾರರು, ಅಥವಾ ಬರಿ ಯುದ್ಧಾಸಕ್ತರಾಗಿ ಕ್ಷತ್ರಿಯರಂತಿರಲಾರರು. ಅಥವಾ ಎಲ್ಲರೂ ಕೃಷಿಯಲ್ಲೇ ವ್ಯಾಪಾರದಲ್ಲೇ ತೊಡಗಲಾರರು. ಆ ರೀತಿ ಕಾನೂನು ಮಾಡಿದರೂ ಅದು ಅಸಾಧ್ಯವೂ ಮೂರ್ಖತನವೂ ಆದೀತು. ಒಂದು ವೃತ್ತಿಯು ಹೆಚ್ಚು ಸುಲಭ ಮತ್ತು ಸುಖಪ್ರದವೂ ಲಾಭದಾಯಕವೂ ಆಗಿ ಕಂಡು ಬಂದಲ್ಲಿ ಎಲ್ಲರೂ ಅದನ್ನೇ ಅವಲಂಬಿಸಲು ಆಶಿಸುವುದು ಸ್ವಾಭಾವಿಕವಾದುದರಿಂದ ಒಂದು ಕಾಲದಲ್ಲಿ ಬರಿ ಬ್ರಾಹ್ಮಣ ಧರ್ಮವೇ ಹೆಚ್ಚಾಗಿ ಇತರ ಧರ್ಮಗಳು ನಶಿಸಬಹುದು. ಅಥವಾ ಬರಿ ಕ್ಷತ್ರಿಯ ಧರ್ಮವೇ ಹೆಚ್ಚಾಗಿ ಇತರ ಧರ್ಮಗಳು ನಶಿಸಬಹುದು. ಇದರಿಂದ ಪ್ರಜಾಕ್ಷೋಭೆ ಕಾರಣವಾಗುವುದರಿಂದ ಒಂದು ನಿಯಂತ್ರಿತ ವ್ಯವಸ್ಥೆ ಅಗತ್ಯವಾಯಿತು. ಆದರೂ ಎಲ್ಲಾ ವ್ಯವಸ್ಥೆಗಳೂ ಅವುಗಳ ಆದರ್ಶವನ್ನು ಕಳೆದುಕೊಂಡು ಹೆಸರಿಗೆ ನಿಂತು ವಿಪರೀತದ ಮೂಢನಂಬಿಕೆಗಳಿಂದ ಒಂದು ಸಮಾಜವನ್ನೇ ಶೋಷಿಸುತ್ತಿದ್ದಾಗ ಆ ಆದರ್ಶ ವ್ಯವಸ್ಥೆಗಳಿದ್ದೇನು ಲಾಭ? ಪುಸ್ತಕದಲ್ಲಿ ಕಾನೂನು ಇದ್ದಂತೆ ಅಲ್ಲವೆ? ನಾಲ್ಕು ವರ್ಣ ಹೋಗಿ 'ಪಂಚಮವರ್ಣ' ಹುಟ್ಟಿತು. ಒಂದೊಂದು ವರ್ಣದಲ್ಲೂ ಅನೇಕ ಜಾತಿ ಭೇದಗಳಾದುವು. ಇದೂ ಭಗವಂತನ ಆಜ್ಞೆಯೆ? ಕೇವಲ ಸಮಾಜದ ಮೌಢ್ಯವಲ್ಲವೇ? ಬ್ರಾಹ್ಮಣರಲ್ಲಿ ವರ್ಣಧರ್ಮದ ಆದರ್ಶವು ತೆರೆಹಿಂದೆ ಅಡಗಿ ಅಂತರ್ಜಾತಿ ಗುಂಪುಗಳಾಗಿ ಆಚಾರ ವ್ಯವಹಾರ ಸಂಪ್ರದಾಯ ಭೇದಗಳೇ 'ದೊಡ್ಡಧರ್ಮ'ವಾಗಿ ಮುಂದೆ ನಿಂತಿತು. ಇದೂ ಭಗವಂತನ ಹೆಸರಿನಲ್ಲಿ ನಡೆಯುತ್ತಿರುವ ಆದರ್ಶ. ರಾಜಧರ್ಮವು ಸರಿಯಾಗಿದ್ದಾಗ ಯಾವ ಆದರ್ಶ ವ್ಯವಸ್ಥೆಯೂ ಚೆನ್ನಾಗಿ ನಡೆಯಬಲ್ಲದು. ಎಂದಿನಿಂದ ರಾಜಧರ್ಮವು ಕೆಟ್ಟಿತೋ ಅ ದಿನದಿಂದ ಆದರ್ಶಗಳ ಪ್ರಯೋಜನವೂ ಕೆಟ್ಟಿತು. ಅನೇಕ ಸಂತ ಮಹಾತ್ಮರು ಜಾತಿ ಭೇದದ ಮೌಢ್ಯವನ್ನು ಹಳಿದು ಹಾಡಿರುವರು. ಈ ಮೌಢ್ಯವು ತೊಲಗ ಬೇಕಾದರೆ ಜ್ಞಾನ ದೀವಿಗೆ ಬೆಳಗುವುದು ಅವಶ್ಯ.

ಇಷ್ಟಾದರೂ ಜಾತೀಯತೆ ತೊಲಗದಿರಲು ಅದು ಈಗಿನ ಸಮಾಜದಲ್ಲಿ ಒಂದು ಪಟ್ಟಭದ್ರಹಿತವಾಗಿರುವುದೇ ಕಾರಣವೆನ್ನಬೇಕು. ಮಾನವನು ತಾನು ಹುಟ್ಟಿನಿಂದ ಬೆಳೆದ ವಾತಾವರಣದ ಪ್ರತಿಬಿಂಬವಲ್ಲದೆ ಬೇರೆಯಾಗಲಾರ. 'ತಾನು, ತನ್ನದು' ಎಂಬ ಭಾವನೆ ಬಿಟ್ಟು ಬದುಕಲಾರ. ತನ್ನ, ತನ್ನ ಕುಟುಂಬದ, ತನ್ನ ವರ್ಗದ ಇರವಿಗೆ ಪೋಷಕವಾದುದನ್ನು ಬಿಟ್ಟು ಕೊಡಲಾರ. ಅತನ ಒಳ್ಳೆಯ ಅಥವಾ ಕೆಟ್ಟ ಕೆಲಸಗಳು ಈ ಇರುವಿಕೆಯ ಸ್ವಾರ್ಥದ ಸುತ್ತ ಅಗೋಚರವಾಗಿ ಅವ್ಯಕ್ತವಾಗಿ ಸುತ್ತಿಕುತ್ತಿ, ಬಳಸಿ ಪೋಷಕವಾಗಿರುವದು ಸೃಷ್ಟಿ ಸಹಜ ನಿಯಮ. ಹೀಗಿರುವಾಗ 'ಜಾತಿ'ಯ ಕಾರಣವಾಗಿ ಗಳಿಸಿದ ಅಥವಾ ಲಭಿಸಿದ ಒಂದು ವಿಶಿಷ್ಟ ಲಾಭ, ಸ್ಥಾನ ಮಾನಗಳನ್ನು ಜಾತಿ ವಾದಿ ಪರಿತ್ಯಜಿಸಲಾರ. 'ಜಾತಿ ಪದ್ಧತಿ ಕೆಟ್ಟದು, ಅದು ಪಟ್ಟಭದ್ರಹಿತ, ಶೋಷಣೆಗೆ ದಾರಿ, ಮತ್ತು ಮೌಢ್ಯ' ಎಂಬೆಲ್ಲಾ ಮಾತುಗಳು ಅವನಿಗೆ ವಿಷ. ಅವನೆಷ್ಟೇ ಅಧರ್ಮ ಮಾಡಿದ್ದರೂ ತಾನು ಜಾತಿ ಪದ್ಧತಿ ಆಚರಿಸಿ ದೇವರನ್ನು ಪೂಜಿಸಿದರೆ ಮೋಕ್ಷ ತಪ್ಪಿದ್ದಲ್ಲ ಎಂಬುದು ಅವನ ನಂಬಿಕೆ. ವರ್ಣ ಸಾಂಕರ್ಯವು ಪಾಪವೆಂದು ಭಯ ಹುಟ್ಟಿಸಲು ಹಲ ಕೆಲವು ಮೂಢ ನಂಬಿಕೆಗಳನ್ನು ಪ್ರಚುರಿಸಲೂ ಹಿಂತೆಗೆಯಲಾರ. ಹೀಗೆ ಶತಮಾನಗಳಿಂದ ಸಾಗಿ ಬಂದ ಜಾತೀಯ ಮೂಢ ನಂಬಿಕೆಗಳು ಅಳಿಯಬೇಕಾದರೆ ಬೇಕಾದ ತ್ಯಾಗ ಸಾಮಾನ್ಯವಲ್ಲ. ಅದಕ್ಕೆ ಬೇಕಾದ ಜ್ಞಾನ ಸಾಧನೆ ಸಾಧಾರಣವಲ್ಲ. ಜಾತಿ ಧರ್ಮಕ್ಕಿಂತ ಉತ್ತಮವಾದ "ಮಾನವ ಧರ್ಮ" ವೆಂಬುದೊಂದಿದೆಯೆಂಬುದು ಅಂತಹವರ ಗಮನಕ್ಕೆ ಬರಲಾರದು. ಇದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಜಾತಿಪಿಡುಗು ನಮ್ಮಲ್ಲಿ ಎಷ್ಟು ಬಲವಾಗಿ ಬೇರೂರಿದೆಯೆಂದರೆ,—ಸ್ವಯಂ ಭಗವಂತನೇ ಹನ್ನೊಂದನೇ ಅವತಾರವೆತ್ತಿ ಜಾತೀಯ ಕೊಳೆ ನಿರ್ಮೂಲನಕ್ಕೆ ಪ್ರಯತ್ನಿಸಿದರೆ ನಮ್ಮ ಜಾತ್ಯಾಂಧರು ಅತನನ್ನು ಕ್ರಿಸ್ತನಂತೆ ಶಿಲುಬೆಗೇರಿಸಿಯೋ ಗಡೀಪಾರು ಮಾಡಿಸಿಯೋ ಸಮಾಧಾನ ಪಡೆಯುವುದರಲ್ಲಿ ಆಶ್ಚರ್ಯವಿಲ್ಲ. ಜಾತಿ ಧರ್ಮದ ಹೆಸರಿನಲ್ಲಿ ನಡದ ಅಧರ್ಮಗಳೇ ಈಗಿನ ಜಾತೀಯತಾ ನಿರ್ಮೂಲನಾಂದೋಳನಕ್ಕೆ ಪ್ರಚೋದನೆ ಕಲ್ಪಿಸಿದ್ದರೆ ಅದು ಸಹಜವೇ ಸರಿ. ಸಮಾಜದಲ್ಲಿ ಅನೇಕ ಜ್ಞಾನಿಗಳಾದವರೂ ಈಗಿನ ಸಮಾಜದ ಅಂತರಿಕ ಮನೋಭಾವವನ್ನರಿತುಕೊಂಡು ಕೇವಲ ಜೀವನ ನಿರ್ವಹಣೆಗೆ ಜಾತಿ ಪದ್ಧತಿಯನ್ನು ಅನುಸರಿಸುತ್ತಿರುವುದೂ ತಿಳಿದ ವಿಚಾರ.

ಗೀತೆಯ ಮೂಲಗ್ರಂಥವಾದ ಮಹಾಭಾರತದ ಕರ್ತೃ ವ್ಯಾಸಮಹಾಮುನಿಯು ವರ್ಣಭೇದಕ್ಕೆ ಜನ್ಮವೇ ಮುಖ್ಯವೆಂದು ಎಲ್ಲಿಯೂ ತಿಳಿಸಿಲ್ಲ. "ಕರಿಯ ಬಣ್ಣದ ಚಂಡಾಲನಾಗಿದ್ದರೂ ಇಂದ್ರಿಯ ನಿಗ್ರಹ ಮಾಡಿದ ತಪಸ್ವಿಯಂತೆ ಶುದ್ಧ ಕರ್ಮ ಪ್ರವರ್ತನನಾಗಿ ಸಚ್ಚರಿತ್ರನಾಗಿದ್ದರೆ ದೇವತೆಗಳೂ ಅವನನ್ನು ಬ್ರಾಹ್ಮಣನೆಂದೇ ತಿಳಿಯುವರು"—ಎಂದು ಮಹಾಭಾರತದಲ್ಲಿ ತಿಳಿಸಿದ್ದಾರೆ. ಕರ್ಮ ಪ್ರಾಮುಖ್ಯತೆಯೇ ವರ್ಣ ನಿಷ್ಕರ್ಷೆಗೆ ಕಾರಣವೆಂಬುದು ದೇವತೆಗಳ ದಾರಿ. ಜನ್ಮದಿಂದ ಬ್ರಾಹ್ಮಣನಾಗಿದ್ದು ಚಂಡಾಲನಂತೆ ವರ್ತಿಸುವವನನ್ನು ಬ್ರಾಹ್ಮಣನೆಂದು ಭಗವಂತನೂ ಹೇಳಲಾರ. ಆದರೆ ನಮ್ಮ ಈಗಿನ ಭಾರತದಲ್ಲಿ ಮಾತ್ರ ಕರ್ಮ ಚಂಡಾಲನಾದರೂ

ರ್‍ಯಾಬರೇಲಿ ಲೋಕಸಭಾ ಕ್ಷೇತ್ರದಿಂದ ಪ್ರಚಂಡ ಬಹುಮತದಿಂದ ವಿಜಯ ಗಳಿಸಿದ ಪ್ರಧಾನಿ ಇಂದಿರಾ ಗಾಂಧಿ

ಜನ್ಮದಿಂದ ಬ್ರಾಹ್ಮಣನಾದವನು ಬ್ರಾಹ್ಮಣನಾಗಿಯೇ ಪರಿಗಣಿಸಲ್ಪಡುವನು ಧರ್ಮಜ್ಞಾನದಿಂದ ಮಹಾಬ್ರಾಹ್ಮಣನಾದ ಕನಕದಾಸನೂ ಚಂಡಾಲನಾಗಿಯೇ ಉಳಿಯುವನು. ಇದು ಜಾತಿವಾದಿಗಳ ಧರ್ಮದ ಫಲ. ಇನ್ನು ಧರ್ಮ ಎಂಬ ಪದಕ್ಕೆ ಸರಿಯಾದ ವಿಮರ್ಶಾತ್ಮಕ ಅರ್ಥ ಪರಿಜ್ಞಾನ ಸಾಮಾನ್ಯರಲ್ಲಿ ಇಲ್ಲದ ಕಾರಣ ಜಾತಿ ಧರ್ಮವೇ 'ಧರ್ಮ"ವೆಂಬುದಾಗಿ ತಿಳುವಳಿಕೆ ಸನಾತನಿಗಳಿಂದ ಉಣಬಡಿಸಲ್ಪಟ್ಟಿದೆ. ಪ್ರಜಾಹಿತ ದೃಷ್ಟಿಯಿಂದ ದಯೆ, ನಿತ್ಯ ಸತ್ಯದ ಆಧಾರದ ಮೇಲೆ ರಚಿಸಲ್ಪಟ್ಟ, ಸಕಲ ಮಾನವ ಜನಾಂಗಕ್ಕೂ ಅನ್ವಯಿಸತಕ್ಕ ನ್ಯಾಯ ನೀತಿ ನಡೆವಳಿಕೆಗಳೇ ಧರ್ಮವೆನ್ನಬಹುದು. ಒಬ್ಬೊಬ್ಬರೂ ಅವರವರ ಬುದ್ಧಿ ಶಕ್ತ್ಯನುಸಾರ ಧರ್ಮವನ್ನು ಭಾಗಶಃ ಗ್ರಹಿಸಿ ತಿಳಿಯುವರೇ ಹೊರತು ಪೂರ್ಣವಾಗಿ ಅರಿತವರಿಲ್ಲವೆಂದೇ ಹೇಳಬೇಕು. ಇದು ಪ್ರಕೃತಿಯ ಶಾಪ, ಜಾತಿಧರ್ಮ, ಕುಲಧರ್ಮ, ಲೋಕಧರ್ಮ, ರಾಜಧರ್ಮ, ಬ್ರಾಹ್ಮಣಧರ್ಮ, ನಾರೀಧರ್ಮ, ಮೃಗಧರ್ಮ, ಶರೀರಧರ್ಮ ಮುಂತಾಗಿ ಶಬ್ದಗಳು ಬಳಕೆಯಲ್ಲಿವೆ. ಅವು ಆಯಾ ವಸ್ತು ವಿಶೇಷಗಳ ಪ್ರಕೃತಿ ಸಹಜ ಸ್ವಭಾವ ಗುಣವನ್ನೂ ಬೆಳವಣಿಗೆಗೆ ತಕ್ಕ ನಡತೆಯನ್ನೂ ಸೂಚಿಸುತ್ತವೆ. ಉದಾ: ಶರೀರಧರ್ಮವೆಂದರೆ ಮಾನವ ಮೃಗ ಪಕ್ಷಿಗಳು ತಮ್ಮ ಶರೀರ ಪೋಷಣೆಯ ನೈಸರ್ಗಿಕ ಕರ್ಮವನ್ನು ಯಾವ ಪುಸ್ತಕ ಪಾಠ ವಿದ್ಯೆಗಳ ಅವಶ್ಯಕತೆಯಿಲ್ಲದೆ ನಡೆಸುವುದು ಶರೀರಧರ್ಮ. ಆಹಾರ, ನಿದ್ರೆ, ಮೈಥುನಗಳು ದೇಹ ಧರ್ಮಗಳು. ಇವನ್ನು ದೇಹ ಪೋಷಣೆಗೆ ಅಗತ್ಯವಿದ್ದಷ್ಟು ನಿಯಮಿತವಾಗಿ ನಡೆಸಿ, ವಿದ್ಯೆ ಜ್ಞಾನ ಸಂಪಾದಿಸಿ, ವೈವಾಹಿಕ ಧರ್ಮ ಕುಟುಂಬ ಪೋಷಣೆ ಆಚರಿಸಿ, ಇತರರಿಗೆ ತೊಂದರೆ ಮಾಡದೆ ಪರೋಪಕಾರಿಯಾಗಿ ಇಂದ್ರಿಯ ಸಂಯಮದಿಂದ ಜೀವನ ನಡೆಸಿ ಆತ್ಮಾನಾತ್ಮ ವಿವೇಚನ ಹೊಂದುವುದೇ "ಮಾನವ ಧರ್ಮ"ದ ಸಹಜ ಪ್ರವೃತ್ತಿ. ಸುಡುವುದು ಬೆಂಕಿಯ ಧರ್ಮ—ಇತ್ಯಾದಿ ವಾಕ್ಯಗಳಿಂದ "ಧರ್ಮ" ಪದದ ವ್ಯಾಪ್ತಿ ತಿಳಿಯಬಹುದು. "ಧೃತಿಃ ಕ್ಷಮಾ ದಮೋಽಸ್ತೇಯಂ, ಶೌಚಂ ಇಂದ್ರಿಯ ನಿಗ್ರಹಃ, ಧೀರ್ವಿದ್ಯಾ ಸತ್ಯಮ ಕ್ರೋಧೋ ದಶಕಂ ಧರ್ಮ ಲಕ್ಷಣಂ"—ಎಂಬುದು ಆರ್ಯೋಕ್ತಿ. ಈ ಮೇಲಿನ ಧರ್ಮವನ್ನು ಕಡೆಗಣಿಸಿ ಕೇವಲ ಜಾತಿ ಧರ್ಮ ನಂಬುವ ಮಾನವರನ್ನು ಸಮಾಜದ ಗಣ್ಯರೆಂತ ಗೌರವಿಸುವುದು ಇಂದಿನ ಸಮಾಜದ ದುರಂತ ದೃಶ್ಯವಾಗಿದೆ. ಆಂಧ್ರದ ವೀರೇಶಲಿಂಗಂ ಪಂತುಲು, ಕನ್ನಡದ ಕನಕ ಬಸವೇಶ್ವರರು, ತಮಿಳಿನ ನಂದನಾರ್, ಉತ್ತರಭಾರತದ ರಾಮಕೃಷ್ಣ ಪರಮಹಂಸರು, ವಿವೇಕಾನಂದ, ಗಾಂಧಿಯೇ ಮುಂತಾದವರು ಕರ್ಮದಿಂದ ನಿಜ ಬ್ರಾಹ್ಮಣರು. ಅವರನ್ನು ಸಮಾಜ ಗೌರವಿಸಿ ಪೂಜಿಸಿತು. ಆದರೆ ಅವರ ಉಪದೇಶಾಮೃತವನ್ನೂ ಅನುಸರಿಸಲಿಲ್ಲ. ನೂರಕ್ಕೆ ತೊಂಭತ್ತು ಮಂದಿ ಸಾಮಾನ್ಯರೇ ಇರುವ ಸಮಾಜದಲ್ಲಿ ಎಲ್ಲರೂ ಜ್ಞಾನಿಗಳಾಗಲು ಸಾಧ್ಯವೂ ಇಲ್ಲ. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್, ನಬ್ರೂಯಾತ್ ಸತ್ಯಮ ಪ್ರಿಯಂ, ಪ್ರಿಯಂಚ ನಾನೃತಂ ಬ್ರೂಯಾತ್ ಸೂಕ್ಷ್ಮಾರ್ಥ ಧರ್ಮಗತಿಃ ಕರಾ" ಎಂದರೆ ಸತ್ಯವನ್ನೇ ನುಡಿಯಬೇಕು. ಆದರೆ ಪ್ರಿಯವಾದ ಸತ್ಯವನ್ನೇ ಆಡಬೇಕು, ಅಪ್ರಿಯವಾದ ಕಠೋರ ಸತ್ಯ ನುಡಿಯಬಾರದು. ಅದಕ್ಕಿಂತ ಮೌನ ಲೇಸು, ಕೇಳುವವನಿಗೆ ಸಂತೋಷ ಪಡಿಸಲು ಅಪದ್ದಗಳನ್ನಾಡಬಾರದು. ಧರ್ಮವು ಅತಿಸೂಕ್ಷ್ಮ" — ಇದು ವ್ಯಾವಹಾರಿಕ ಧರ್ಮ. ಪ್ರಾಣಿ ಹಿಂಸೆ ಮತ್ತು ಕೊಲ್ಲುವುದು ಪಾಪ. ಹಾಗೆಂದರೆ ಹಸುವಿನ ಹಾಲು ಕರೆಯುವುದೂ ಪಾಪ, ಎತ್ತಿನ ಗಾಡಿ ಹೊಡೆಯುವುದೂ ಪಾಪ, ಕಟುಕನು ಪ್ರಾಣಿವಧೆ ಮಾಡುವುದೂ ಪಾಪ ಎಂದಾದೀತು, ಆದರೆ ಜೀವನಾಧಾರ ವೃತ್ತಿಯನ್ನನುಸರಿಸುವುದು 'ಧರ್ಮ'ವಾದುದರಿಂದ ಆಯಾ ಕರ್ಮಿಗಳಿಗೆ ಅವು ಅಧರ್ಮವಲ್ಲ, ಹೊಸದಾಗಿ ಲಾಭದೃಷ್ಟಿಯಿಂದ ಈ ವೃತ್ತಿ ಅವಲಂಬಿಸುವವನಿಗೆ ಅಧರ್ಮವಾದೀತು. 'ವ್ಯಾಪಾರಂ ದ್ರೋಹ ಚಿಂತನಂ' ಎಂದ ಮೇಲೆ ಅದು ಅಧರ್ಮವಲ್ಲವೆ? ಆದರೆ ಆ ವೃತ್ತಿಯಲ್ಲಿರುವವನು ತನಗೆ ಜೀವನಕ್ಕೆ ಅವಶ್ಯವಿದಷ್ಟು ಲಾಭವಿಟ್ಟುಕೊಂಡು ವ್ಯಾಪಾರ ಮಾಡುವುದು ಅಧರ್ಮವಲ್ಲ. ಆದರೆ ಅತಿ ಆಸೆಯಿಂದ ಪ್ರಜೆಗಳನ್ನು ಶೋಷಿಸಿ ತಾನು ಧನಿಕನಾಗುವುದು ಅಧರ್ಮ. ನ್ಯಾಯ ನಿಷ್ಕರ್ಷೆಯಲ್ಲಿ ಯಮಧರ್ಮನು ಅಸಮರ್ಥನಾಗಿ ಅಣಿಮಾಂಡವ್ಯ ಋಷಿಯಿಂದ ಶಾಪ ಹೊಂದಿ ಭೂಮಿಯಲ್ಲಿ ವಿದುರನಾಗಿ ಹುಟ್ಟಿದ ಕಥೆ ವ್ಯಾಸರೇ ತಿಳಿಸಿದ್ದಾರೆ. ಪ್ರಕೃತ ಕಾಲದಲ್ಲೇ ನೋಡಿ. ಲೋಕಸಭೆಯಲ್ಲಿ ಶಾಸಕರು ನ್ಯಾಯ ಧರ್ಮಗಳೆಂದು ಪರಿಗಣಿಸಿ ಮಾಡಿದ ಅನೇಕ ರಾಜ್ಯಾಂಗ ಶಾಸನಗಳನ್ನೇ ನ್ಯಾಯಾಲಯದಲ್ಲಿ 'ಮಾನವ ಧರ್ಮ' ವಿರುದ್ಧವೆಂದು ತಿರಸ್ಕರಿಸಿದ ಪ್ರಸಂಗಗಳಿವೆ. ಮತ್ತು ನ್ಯಾಯ ನಿಷ್ಕರ್ಷೆಯಲ್ಲಿ ಕೆಳಗಿನ ನ್ಯಾಯಾಲಯ ಮತ್ತು ಮೇಲಿನ ನ್ಯಾಯಾಲಯಗಳಲ್ಲಿ ವಿರುದ್ಧ ತೀರ್ಪು ಕೊಟ್ಟಿರುವುದಕ್ಕೂ ಅನೇಕ ದೃಷ್ಟಾಂತಗಳಿವೆ. ಹೀಗೆ ರಾಜ್ಯಾಂಗ ಶಾಸನಗಳನ್ನೂ, ನ್ಯಾಯ ಧರ್ಮಗಳನ್ನೂ ತಿಳಿದು ಪರಿಣತರಾದ ನ್ಯಾಯಾಧಿಪತಿಗಳಲ್ಲೇ ನ್ಯಾಯ ನಿಷ್ಕರ್ಷೆಯಲ್ಲಿ ಭೇದಗಳಾಗಬೇಕಿದ್ದರೆ ಸಮಾಜದಲ್ಲಿ ಸ್ವಾರ್ಥಹಿತವುಳ್ಳ ಜಾತಿ ಪಕ್ಷಪಾತಿಗಳಾದ ಸಾಮಾನ್ಯರು ಗಣ್ಯರಂತೆ ಸೂಕ್ಷ್ಮ ಧರ್ಮಗಳನ್ನು ಉದ್ಧರಿಸುವವರಾದರೆ ಎಷ್ಟು ದೋಷಯುತವಾಗಿರಬೇಕೆಂದು ನಾವು ಊಹಿಸಿಕೊಳ್ಳಬಹುದು. 'Action and reaction are equal and opposite.' ಇದು ಸೃಷ್ಟಿ ನಿಯಮಿತ ಕರ್ಮ ತತ್ವ. ಇದರಂತೆ ಮಾಡಿದ ಕರ್ಮ ಫಲವನ್ನನುಭವಿಸುವುದೇ ಜನ್ಮದ ಗುರಿ. ಜೀವಿಯ ಹೃದಯಸ್ಥನಾದ ಅಂತರಾತ್ಮನು ಮಾನವನ ಸುಪ್ತ ಚೇತನದಲ್ಲಿ conscious) ಅಡಗಿ ಅನವರತ ಪಾಪ ಪುಣ್ಯಗಳನ್ನೂ ಗ್ರಹಿಸಿ ಪ್ರಕೃತಿಯಲ್ಲೂ ಸರ್ವವ್ಯಾಪಿಯಾಗಿ ಆತ್ಮನಿಗೆ ಆಯಾ ಫಲಗಳನ್ನು ಪ್ರಕೃತಿದತ್ತವಾಗಿಯೇ ಕೊಡುವುದರಲ್ಲಿ ಸಂಶಯವಿಲ್ಲ. ಹೀಗಿರುವಾಗ ಜಾತಿ ಭೇದವನ್ನು ಧರ್ಮವನ್ನಾಗಿ ನಂಬುವವರು ಆತ್ಮಾನಾತ್ಮ ವಿವೇಕ ಯುಕ್ತಿಯುಕ್ತ ವಿವೇಚನೆ ಧರ್ಮಾಧರ್ಮ

ವಿರುಧನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕೆಲವೇ ಮತಗಳ ಕೊರತೆಯಿಂದ ಪರಾಜಯಗೊಂಡ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕಾಮರಾಜರು

ಜ್ಞಾನವಿಲ್ಲದೆ ಡಂಬಾಚಾರಕ್ಕಾಗಿ ಧರ್ಮ ಪಾಲಿಸುವರಂತೆ ಸೋಗು ಹಾಕಿದರೆ ಅದು ಅಧರ್ಮ ಮಾತ್ರವಲ್ಲದೆ ಆತ್ಮವಂಚನೆಯೂ ಆದೀತು. ವರ್ಣ ಧರ್ಮದ ಆದರ್ಶ ಕುರಿತು ಕೊಂಡಾಡುವ ಮಹನೀಯರು ಸಮಾಜದಲ್ಲಿ ಯಾವ ಉದ್ಧಾರವನ್ನೂ ಸಾಧಿಸಲಾರರು ಮತ್ತು ಆ ಆದರ್ಶಗಳು ನಮ್ಮ ಸಮಾಜದಲ್ಲಿ ಬರುವುದು ಸಾಧ್ಯವೂ ಆಗಲಾರದು.

ಅಂತರ್ಜಾತಿ ವಿವಾಹಗಳನ್ನು ಜಾತಿವಾದಿಗಳು ಸಹಿಸಲಾರರು. ಆ ನವದಂಪತಿಗಳು ಅಂತಹವರ ದಬ್ಬಾಳಿಕೆಯ ಪ್ರತಿಫಲವುಂಡು ಪಶ್ಚಾತ್ತಾಪ ಪಡುವಂತೆ ಮಾಡಿ ತಾವು ಧರ್ಮ ಕೆಲಸಮಾಡಿದೆವೆಂದು ಸಮಾಧಾನ ಪಡುವುದು ಸಾಮಾನ್ಯ ದೃಶ್ಯ. ಈ ಅಹಂಕಾರ ಜನಿತ ಧರ್ಮವು ಸಮಾಜದ ಮುನ್ನಡೆಗೆ ಕಂಟಕ ಪ್ರಾಯ. ಇದರಿಂದ ಲೇಖಕನು ಅಂತರ್ಜಾತಿ ವಿವಾಹವನ್ನು ಉತ್ತೇಜಿಸುವನೆಂದು ತಿಳಿಯಬಾರದು. ಅನಿವಾರ್ಯ ಕಾರಣದಿಂದ ಬಾಹ್ಯ ಪ್ರಚೋದನೆಗಳಿಲ್ಲದೆ ಪ್ರಕೃತಿ ಸಹಜವಾಗಿ ನಡೆದ ಅಂತರ್ಜಾತಿ ವಿವಾಹ ಬಂಧಗಳನ್ನು ಸಮಾಜದ ಪರಿಷ್ಕಾರು ದ್ವೇಷಾಸೂಯೆಗಳಿಂದ ತೊಂದರೆಗೊಳಿಸುವುದು ಮಾನವ ಧರ್ಮ ವಿರುದ್ಧವೆಂದ ಅಭಿಪ್ರಾಯ. ವರ್ಣ ಭೇದದ ಆದರ್ಶ ಯುಗದಲ್ಲಿ ಅಂತರ್ಜಾತಿ ವಿವಾಹಗಳು ಸಮಾಜ ಪುರಸ್ಕೃತವಾಗಿರಲಿಲ್ಲವೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಜೀವನ ಧರ್ಮ ವಿಷಮಿಸುತ್ತಿರುವದಕ್ಕೆ ಕಾರಣವಾಗಿರುವುದು ಮಾನವನ ಸ್ವಾರ್ಥ ಸಂಕುಚಿತ ಮನೋಭಾವವೇ ಹೊರತು ವರ್ಣಸಾಂಕರ್ಯವಾಗಲಿ ಅಂತರ್ಜಾತಿ ವಿವಾಹವಾಗಲಿ ಕಾರಣವೆಂದು ಎಂದಿಗೂ ಗೋಚರಿಸಲಾರದು. ಬಾಹ್ಯ ಪ್ರಚೋದಿತ ವಿವಾಹ ಅಧರ್ಮವಾಗಬಹುದೇ ಹೊರತು ಇದು ಅಧರ್ಮವೆಂದೆನಿಸಲಾರದು. ಹೀಗೆಂದು ಅಂತರ್ಜಾತಿ ವಿವಾಹಕ್ಕೆ ಮುನ್ನುಗ್ಗಬೇಡಿ. ಯಾಕೆಂದರೆ ಕಠೋರ ಸಂಪ್ರದಾಯಗಳು ಸಡಿಲವಾದ ಹೊರತು ಈ ವಿವಾಹಗಳು ಸುಗಮವಾಗಲಾರವು.

ಜಾತೀಯತೆಯು ವಿಷಮಿಸಿ ಬಲಗೊಂಡಿರುವುದು ಈ ಅರ್ಥಹೀನ ವಿಭಿನ್ನ ಸಂಪ್ರದಾಯಗಳಿಂದಲೇ. ಜಾತಿವಾದಿಗಳ ದಬ್ಬಾಳಿಕೆಗೆ ಇದೂ ಕಾರಣ. ಪರಿಶೀಲಿಸಿದಲ್ಲಿ ವೇದ ಕಾಲದ ಸಂಪ್ರದಾಯಗಳು ಮಧ್ಯ ಕಾಲದಲ್ಲಿರಲಿಲ್ಲ. ೪—೬ನೇ ಶತಮಾನಗಳಲ್ಲಿದ್ದ ಸಂಪ್ರದಾಯಗಳು ಬ್ರಿಟಿಷರ ಆಳ್ವಿಕೆಯಲ್ಲಿರಲಿಲ್ಲ. ೩೦ ವರ್ಷಗಳ ಕೆಳಗಿದ್ದ ಆಚಾರ ಸಂಪ್ರದಾಯಗಳು ಈಗ ಉಳಿದಿಲ್ಲ. ಹೀಗೆ ಕಾಲದ ಪ್ರಭಾವದಿಂದ ಸಂಪ್ರದಾಯಗಳು ನಿರಂತರವಾಗಿ ಬದಲಿಸುತ್ತಿರುವುದನ್ನು ಅನೇಕರು ಗಮನಿಸಲಾರರು. ಇದರಿಂದ ಸಂಪ್ರದಾಯ ಶರಣರಿಗೆ ಆಸ್ತಿ ಕಳೆದುಕೊಂಡಂತೆ ಅನ್ನಿಸುವುದು ಸಹಜ. ಮಾನವ Security minded ಅಲ್ಲವೆ? ಇಂತಹವರ ಮೆಚ್ಚಿಕೆಗಾಗಿ ಅನೇಕ ಬಡ ಕುಟುಂಬಗಳವರು ಸಾಮಾಜಿಕ ವಿವಾಹಾದಿ ಧರ್ಮಕರ್ಮಗಳಲ್ಲಿ ಹೇರಳ ಹಣ ವೆಚ್ಚಮಾಡಿ ದುಃಸ್ಥಿತಿಗೆ ಬಂದಿರುವುದನ್ನು ಬರುತ್ತಿರುವುದನ್ನು ಇಂದಿಗೂ ಕಾಣಬಹುದು.

ಮೌಢ್ಯಕ್ಕೂ ಸಂಪ್ರದಾಯ ಶರಣತ್ವಕ್ಕೂ ಅನಾದಿಕಾಲದಿಂದ ಗಾಢಮಿತ್ರತ್ವವಿದೆ. ಇದನ್ನು ಅಲ್ಲವೆನ್ನಲಾಗದು. ಒಂದಕ್ಕೆ ಬಲಿಯಾದವನು ಇನ್ನೊಂದಕ್ಕೂ ಬಲಿಯಾಗಿ ಕಷ್ಟನಷ್ಟಗಳಿಗೆ ತಪ್ಪದೇ ಗುರಿಯಾಗುವುದು ಸಹಜ. ಅಂತಹ ನಿರ್ಭಾಗ್ಯರನ್ನು ಯಾವ ಧರ್ಮವಾಗಲಿ ಜಾತಿಯಾಗಲಿ ಸಂಪ್ರದಾಯವಾಗಲಿ ರಕ್ಷಿಸಿ ಉದ್ಧರಿಸಿದುದನ್ನು ಕಾಣುವುದು ಕಷ್ಟ. ಸಾಮಾನ್ಯರಲ್ಲಿ ವೈಚಾರಿಕ ಕ್ರಾಂತಿಯಾಗುವುದು ಇಂದಿನ ಜಾತಿಭೂತದ ನಿರ್ಮೂಲನಕ್ಕೆ ಅನಿವಾರ್ಯವಾಗಿದೆ.

ಪರಮಾತ್ಮನಿಗೆ ಜಾತಿಯಿದೆಯೆ? ಆತ ಯಾವ ಜಾತಿ? ಆದ್ದರಿಂದ ಜಾತಿಭೇದಗಳ ಸಂಕುಚಿತ ತನವು ಮಾರಿಕೊಳ್ಳುವ ದೇವರ ಜಾತಿಯೇ ತನ್ನ ಜಾತಿ ಎಂದು ಮಾನವ ಧರ್ಮವೇ ತನ್ನ ಧರ್ಮವೆಂದು ಅರಿತು ಆದರ್ಶವಾಗಿ ಮಾನವನು ಯಾವಾಗ ನಡೆಯುವನೋ ಅಂದು ಜಾತಿ ಭೂತವು ತೊಲಗಿ ಮಾನವ ಜೀವನ ಹಗುರವಾದೀತೆಂದು ತಿಳಿಯಬೇಕು.

ಡಾ| ರಾಧಾಕೃಷ್ಣನ್

(ಐದನೇ ಪುಟದಿಂದ)

ಗಳ ಪ್ರಭಾವ", "ವೇದಾಂತಗಳ ಇತಿಹಾಸ", "ಹಿಂದುಗಳ ಜೀವನ ದರ್ಶನ" ಹಾಗೂ "ಕಲ್ಕಿಯಣ ಸಂಸ್ಕೃತಿಯ ಭವಿಷ್ಯ" ಎಂಬೀ ಹೊತ್ತಗೆಗಳು ಅತಿಪ್ರಾಧಾನ್ಯ ಗಳಿಸಿವೆ. ತನ್ನ ಹೊತ್ತಗೆಗಳಲ್ಲಿ, ವಿಶೇಷವಾಗಿ "ವೇದಾಂತ ಇತಿಹಾಸ'ದಲ್ಲಿ ಪ್ರಮೂರ್ಣ ಪೂರ್ವಕವಾಗಿ ಯುನಾನ್ ದರ್ಶನದ ಮೇಲೆ ಪ್ರಾಚೀನ ದರ್ಶನದ ಪ್ರಭಾವವಿದೆ. 'ಅರಸ್ತು ಮತ್ತು ಅಫಲಾತೂನ' ನಂತಹ ತತ್ವವೇತ್ತರೂ ಭಾರತೀಯ ದರ್ಶನ ಶಾಸ್ತ್ರದಿಂದ 'ಪ್ರಭಾವಿತರು' ಎಂಬುದನ್ನು ಸಮರ್ಥಿಸಿದ್ದಾರೆ.

ಶ್ರೀ ಶಂಕರಾಚಾರ್ಯರ ಅದ್ವೈತ ವಾದದ ಮೇಲೆ ಇವರ ಸಂಪೂರ್ಣ ವಿಶ್ವಾಸವಿದ್ದಿತ್ತು. "ಶ್ರೀ ರಾಮಾನುಜರ ವಿಶಿಷ್ಟಾದ್ವೈತವಾದ ಭಾಸ್ಕರಾಚಾರ್ಯರ ಶುದ್ಧಾದ್ವೈತನಾದ ಯಾ ಪುಷ್ಟಿವಾದದಲ್ಲಿ ಹಲವಾರು ಬಾಹ್ಯ ಭೇದಗಳಿದ್ದರೂ ಇವೆಲ್ಲರ ಮೂಲವು ಒಂದೇಯಾಗಿದೆ" ಎಂಬುದನ್ನು ಡಾ| ರಾಧಾಕೃಷ್ಣನ್ ನಂಬಿದ್ದರು. ಶ್ರೀ ರಾಧಾಕೃಷ್ಣನ್ನರು ಸಭ್ಯತೆ ಹಾಗೂ ಸಂಸ್ಕೃತಿಯ ಬಗ್ಗೆ ಸ್ವಾಭಿಮಾನಿಯಾಗುತ್ತಲಿದ್ದರೂ ಪಾಶ್ಚಾತ್ಯ ಸಭ್ಯತೆಯು ಸುತರಾಂ ಹೇಯವೂ ಉಪೇಕ್ಷಣೀಯವೂ ಆಗಿದೆ ಎಂದವರು ನಂಬುವುದಿಲ್ಲ. ಅವರು "ವಸುಧೈವಂ ಕುಟುಂಬಕಂ'' ಆದರ್ಶ ಸಿದ್ಧಾಂತಕ್ಕೆ ಅವರು ಉದಾಹರಣೆ. ಅವರು ಏಕದೇಶೀಯರಲ್ಲ ವಿಶ್ವನಾಗರಿಕರು.

೧೯೪೭ನೇ ಮಾರ್ಚ್ ತಿಂಗಳಲ್ಲಿ ದೆಹಲಿಯಲ್ಲಿ ನಡೆದ ಏಷ್ಯಾ ಖಂಡಗಳಲ್ಲಿರುವ ದೇಶಗಳ ಸಮ್ಮೇಲನದಲ್ಲಿ ಇವರು ವಿಭಿನ್ನ ರಾಷ್ಟ್ರಗಳ ಪ್ರತಿನಿಧಿಗಳೊಡನೆ ವಿಚಾರವಿನಿಮಯ ಮಾಡಿ ಅವಂಗೆ ಭೌತಿಕ ವಾದದಲ್ಲಿ ವಿಶ್ವಾಸವಿಡುವುದರಿಂದ ವಿಶ್ವಶಾಂತಿಯಾಗಲು ಸಾಧ್ಯತೆಯಿಲ್ಲ ಎಂಬುದನ್ನು ತಿಳಿಯಪಡಿಸಿದರು. ಹಾಗೂ ವಿಶ್ವಶಾಂತಿಯನ್ನು ಸ್ಥಾಪಿಸಲು ಅಗತ್ಯವಾದ ಮಾರ್ಗ "ಆಧ್ಯಾತ್ಮಿಕ ವಾದ" ಎಂದು ದೃಢೀಕರಿಸಿದರು.

ಅಧ್ಯಯನ ನಿರತರಾದ ಅವರಿಗೆ ಏಕಾಕಿ ಜೀವನವೇ ಇಷ್ಟವಾಗಿತ್ತು. ಆದುದರಿಂದ ಅವರ ವ್ಯಕ್ತಿತ್ವ ಎಷ್ಟು ಆಕರ್ಷಕವಾಗಿದೆ. ಅವರ ಸ್ವಭಾವದ ವಿಷಯದಲ್ಲಿ ಅವರು ಸ್ವತಃ—"ನನ್ನನ್ನು ಜನರು ಶಾಂತಿ ಹಾಗೂ ತೀವ್ರ ಇಚ್ಛಾಶಕ್ತಿಯುಳ್ಳವನೆಂದು ತಿಳಿದುಕೊಳ್ಳುತ್ತಾರೆ. ಆದರೆ ನಾನು ಅದಕ್ಕೆ ವ್ಯತಿರಿಕ್ತನಾಗಿರುವೆನು. ಭಾವಕತೆ ನನ್ನಲ್ಲಿ ತೀವ್ರರೂಪದಿಂದ ಇದೆ." ಅವರು ಸರಳತೆ ಹಾಗೂ ವಿನಮ್ರತೆಯ ಪ್ರತಿಮೂರ್ತಿಯಾಗಿದ್ದಾರೆ. ಆಡಂಬರ ಪೂರ್ಣವಾದ ಜೀವನವನ್ನವರು ಎಂದೂ ಆಶಿಸುತ್ತಿರಲಿಲ್ಲ, ಅವರು ಚತುರ ವಾಗ್ಮಿಯೂ, ಭಾಷಣಕಾರರೂ ಮಾತ್ರವಲ್ಲ ಓರ್ವ ಸಮರ್ಥ ಪಾರ್ಲಿಮೆಂಟಿನ ಸದಸ್ಯರು ಹೌದು! ಇವರು ರಾಷ್ಟ್ರೀಯ ಆಂದೋಲನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದಿದ್ದರೂ ಅವರು ರಾಷ್ಟ್ರೀಯ ಮುಖಂಡರ ಮಿತ್ರರಾಗಿದ್ದುದು ಅವರ ವೈಶಿಷ್ಟ್ಯ. ರಾಷ್ಟ್ರಪಿತ ಗಾಂಧೀಜಿಯವರ ಅಪಮಾನವನ್ನು ತನಗಾದ ಅಪಮಾನವೆಂದೇ ತಿಳಿಯುತ್ತಿದ್ದರು. ಅಷ್ಟು ಪರಮ ಭಕ್ತಿ ಹಾಗೂ ಶ್ರದ್ಧೆಯಿತ್ತು ಗಾಂಧೀಜಿಯವರ ಮೇಲೆ ಅವರಿಗೆ! ಕಾಂಗ್ರೆಸ್ ಸಮಿತಿಯು ಜವಾಹರಲಾಲ್‌ರಿಂದ ರಚಿಸಲ್ಪಟ್ಟಾಗ ಅವರು ಸಾಂಸ್ಕೃತಿಕ ವಿಭಾಗಗಳ ಅಧ್ಯಕ್ಷರಾಗಿದ್ದರು.

ಇವರು ೧೯೪೭ರಲ್ಲಿ ಸ್ವತಂತ್ರ ಭಾರತದ ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ತರುವಾಯ ಇಂಗ್ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲ್ಪಟ್ಟರು. ಶ್ರೀಮತಿ ವಿಜಯಲಕ್ಷ್ಮೀ ಪಂಡಿತರನ್ನು ಅಮೇರಿಕದ ರಾಯಭಾರಿಯಾಗಿ ಮಾಡಿದುದರಿಂದ ಶ್ರೀಯುತರನ್ನು ಅವರ ಸ್ಥಾನದಲ್ಲಿ ಭಾರತದ ರಾಜ ಪ್ರತಿನಿಧಿಯಾಗಿ ರಷ್ಯಾಕ್ಕೆ ವರ್ಗಾಯಿಸಲಾಯಿತು. ಭಾರತವು ಪ್ರಜಾಪ್ರಭುತ್ವವನ್ನು ಪಡೆದ ತರುವಾಯ ನಡೆದ ಮೊದಲ ಚುನಾವಣೆಯಲ್ಲಿ ಜನತೆಯು ಇವರನ್ನು ಭಾರತದ ಪ್ರಥಮ ಉಪರಾಷ್ಟ್ರಪತಿಯನ್ನಾಗಿ ಚುನಾಯಿಸಿತು. ಐದು ವರ್ಷಗಳಿಗೆ ಹಿಂದೆ ಅವರು ರಾಷ್ಟ್ರಪತಿಯಾಗಿ ಆಯ್ಕೆ ಹೊಂದಿದರು.

ಈ ಐದು ವರ್ಷಗಳಲ್ಲಿ ದೇಶವು ಹಲವಾರು ಗಂಡಾಂತರಗಳಿಗೆ ಗುರಿಯಾದ ಸಂದರ್ಭದಲ್ಲಿ ಧೃತಿಗೆಡದ ತನ್ನ ಕರ್ತವ್ಯ ಪಾಲನೆಯನ್ನು ಮಾಡಿದ ಮಹಾ ಪುರುಷರವರು. ಹೊಸ ರಾಷ್ಟ್ರಪತಿಯ ಆಯ್ಕೆ ನಡೆಯಲಿರುವ ಈ ಸಮಯದಲ್ಲಿ ಡಾ| ರಾಧಾಕೃಷ್ಣನ್ನರ ಸೇವೆಗಳನ್ನು ನೆನೆಯುವುದು ಅವಶ್ಯ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

೬ C. 690/66.

ವಾದಿ—ಹೆಬ್ಬಗಲು ಶೇಷಯ್ಯ ಶೇರಿಗಾರ.

ಪ್ರತಿವಾದಿರು— ೨. ರಘುನಾಥ ಶೆಟ್ಟಿ ಚಂದಮ್ಮ ಶೆಡ್ತಿ ಮಗ, ಕುಂದಾಪುರ ತಾಲೂಕು ಕಾಲ್ತೋಡು.

ಸದ್ರಿ ೨ನೇ ಪ್ರತಿವಾದಿಗೆ ತಿಳಿಯ ಪಡಿಸುದ್ದು.

ನೀವು ಮತ್ತು ಚಂದಮ್ಮ ಶೆಡ್ತಿ ವಾದಿಗೆ ರೂ—150/— ಕ್ಕೆ ಬರಕೊಟ್ಟ ತಾ. 27—7—1964ರ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳ ವಸೂಲಿ ಬಗ್ಗೆ ವಾದಿ ಮೇಲ್ಕಂಡ ದಾವಾ ಮಾಡಿದ್ದು, ಸದ್ರಿ ದಾವೆ ತಾ. 8—3—67ಕ್ಕೆ ತನಿಖೆಗೆ ಇರುತ್ತದೆ. ನಿಮಗೆ ಉದಾಹರಣ ಯೇನಾದರೂ ಇದ್ದರೆ ಸದ್ರಿ ದಿವಸ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಹೇಳಿ ಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲ್ಪಡುತ್ತದೆ.

(ಕೋರ್ಟು ಹುಕುಂ ಪ್ರಕಾರ)

ಎ. ಎಸ್. ಎಸ್. ಹೆಬ್ಬಾರ್,
ವಾದಿ ಕಡೆ ಎಡ್ವೋಕೇಟ್

ಕುಂದಾಪುರ, 14—2—1967

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಹಣತೆ.— ಅನುವಾದ: ಶ್ರೀ ಶಿವಮುಂಜೆಪರಾರಿ. ಮೂಲ: ಶ್ರೀ ಸುದರ್ಶನ್. (ಹಿಂದಿ) ಪುಟಗಳು: ೧೨೦. ಬೆಲೆ: ರೂ. ೧-೨೫.

ರಾಜ ಭಾಷೆ ಹಿಂದೀಯ ಶ್ರೇಷ್ಠ ಕಥಾಕಾರರಾದ ಶ್ರೀ ಸುದರ್ಶನರ 'ಝುರೋಕೇ' ಎಂಬ ಭಾವ ಕಥೆಗಳ ಸಂಗ್ರಹದ ಅನುವಾದವಿದು. ಈಗಾಗಲೇ ಹಿಂದಿಯ ಕೆಲವು ಕೃತಿಗಳನ್ನು ಕನ್ನಡಿಗರಿಗೆ ಉಣಿಸಿದ ಶ್ರೀ ಶಿವಮುಂಜೆ ಪರಾರಿಯವರು ಇನ್ನೊಂದು ಉತ್ತಮ ಗ್ರಂಥವನ್ನು ಒದಗಿಸಿದ್ದಾರೆ. ಹಣತೆಯೆಂಬುದು ೪೮ ಭಾವಕಥೆಗಳ ಸಂಗ್ರಹ. ಇಲ್ಲಿನ ಕಥೆಗಳು ಭಾವೋತ್ತೇಜಿತವಿವೆ. ನವೀನ ಸಂವೇದನೆಯ ರಹಸ್ಯವನ್ನು ಹೊರಗೆಡಹುತ್ತವೆ. ಶ್ರೀ ಸುದರ್ಶನ್ ಖಲೀಲ ಗಿಬ್ರಾನನ ಉಕ್ತಿಗಳಿಂದ ಸ್ಫೂರ್ತಿ ಹೊಂದಿ ತನ್ನ 'ಝುರೋಕೇ'ಯನ್ನು ಬರೆದರೆಂದೂ ಇದನ್ನು ಸುದರ್ಶನರ ಹೇಳಿಕೆಯಂತೆ ಅನುವಾದಕರು ಕನ್ನಡದಲ್ಲಿ ಅನುವಾದಿಸಲು ತೊಡಗಿದರೆಂದೂ ಅರಿಕೆಯಿಂದ ತಿಳಿಯುತ್ತದೆ.

'ವ್ಯವಹಾರ ಚತುರ' ಎಂಬ ಕಥೆಯನ್ನು ಉದಾಹರಣೆಗೆ ಎತ್ತಿಕೊಳ್ಳುವುದಾದರೆ, ಬರಿಯ ಭಾವ ಕಥೆ ಮಾತ್ರವಲ್ಲ, ಜನಜೀವನದ ಚಿತ್ರವೂ ಹೌದು; ಆದರೆ, ಮಾನವ ಜೀವನದ ಸತ್ಯವನ್ನು ಈ ಕಥೆಗಳಲ್ಲಿ ಭಾವ ಜೀವಿ ಮಾತ್ರ ಅರಿತು ಕೊಳ್ಳ ಬಲ್ಲ. ಭ್ರಮರಮಾತ್ರ ಪರಾಗದ ಸವಿಯರಿಯ ಬಲ್ಲುದಲ್ಲದೆ ಕಣಜದ ಹುಳವೇನು ಮಾಡೀತು? ಕನ್ನಡ ಭಾಷೆಯಲ್ಲಿ ಈ ಬಗೆಯ ಕೃತಿಗಳು ಬಹಳ ಕಡಿಮೆ. 'ಪ್ರವಾದಿಯ ತೋಟ' ವೆಂಬುದು ಖಲೀಲ ಗಿಬ್ರಾನನ ಮಾತುಗಳ ಕನ್ನಡಿಕೆಯೇ. ಕನ್ನಡಿಗರು ಸ್ವತಂತ್ರವಾಗಿಯೇ ಈ ಬಗೆಯ ಸಾಹಿತ್ಯ ನಿರ್ಮಿಸುವಲ್ಲಿ ಈ ಅನುವಾದಗಳು ಪ್ರೇರಕವಾಗಲಾರವೆ?

ಶ್ರೀ ಶಿವಮುಂಜೆ ಪರಾರಿಯವರ ಶೈಲಿ ಮತ್ತು ಭಾಷೆಯು ತುಂಬ ಸುಧಾರಿಸಿದೆ. ಆದರೂ ಹಿಂದಿಯಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಕಡಮೆ ಮಾಡಿದರೆ ಭಾಷೆಯಲ್ಲಿ ಸರಳತೆಯೂ ಕೋಮಲತೆಯೂ ಮೂಡುವುದೆಂದು ಹೇಳಬಹುದು. ಉದಾಹರಣೆಗೆ, ಪುಟ ೫೫.೫೬. ಕೊನೆಯ ವಾಕ್ಯವೃಂದ. 'ತತ್‌ಕ್ಷಣ ನನ್ನ ವೃದ್ಧತ್ವ ನನ್ನತ್ತ ತಿರುಗಿ" ಇದನ್ನು 'ಕೂಡಲೇ ನನ್ನ ಮುದಿತನ ನನ್ನತ್ತ ತಿರುಗಿ' ಎಂದರೆ ಕನ್ನಡತೆ ತುಂಬಿ ಬರಲಾರದೆ? ಪ್ರಸಾದ ಗುಣ ಮೂಡಿಬರಲಾರದೆ? ಹಿಂದೀ ಭಾಷೆಯ 'ಶೈಲಿ'ಯು ಕನ್ನಡಕ್ಕೆ ತೀರ ಅಸ್ವಾಭಾವಿಕ. ಭಾಷೆಯಲ್ಲಿ ಸರಳತೆಯನ್ನೂ ಬೋಧಗಮ್ಯತೆಯನ್ನೂ ತರಬೇಕಾದಲ್ಲಿ ಆಯಾ ಭಾಷಾ ಸಹಜತೆಯಿರಬೇಕು. ಶ್ರೀ ಶಿವಮುಂಜೆಯವರು ಈ ದಿಸೆಯಲ್ಲಿ ತುಂಬ ಪ್ರಯತ್ನಶೀಲರಿದ್ದಾರೆ; ಅವರ ಪ್ರಯತ್ನ ಸಫಲತೆಯ ದಾರಿಯಲ್ಲಿ ನಡೆಯುತ್ತಿದೆ. ಅವರ ಶ್ರಮ ಸಾರ್ಥಕವಾಗಲಿ. ಕನ್ನಡಿಗರಿಗೆ ಅವರು ಮುಂದಿಯೂ ರಸದೌತಣ ನೀಡುತ್ತಿರಲಿ. 'ಹಣತೆ' ಬುದ್ಧಿಜೀವಿಯ ಎದೆಯನ್ನು ಬೆಳಗಬಲ್ಲ 'ಹಣತೆ'ಯಾಗ ಬಲ್ಲುದು. ಇದೊಂದು ಉತ್ತಮ ಅನೂದಿತ ಕೃತಿಯೆಂಬುದಕ್ಕೆ ಸಂದೇಹವಿಲ್ಲ.

ಹೊಂಬುಜ ಕ್ಷೇತ್ರ ಮಹಾತ್ಮ್ಯ ಎಂಬ ಶ್ರೀ ಪದ್ಮಾವತೀ ಪುರಾಣ ಅಥವಾ ಜಿನದತ್ತರಾಯ ಚರಿತ ನಾಟಕಂ—

ಲೇಖಕರು.— ಶ್ರೀ ಯು. ವಾಸುದೇವ ನಾಯಕ್.

ಪ್ರಕಾಶಕರು.— ಶ್ರೀ ಯಂ. ಡಿ. ಅಧಿಕಾರಿ, ಮೆನೇಜರ್, ವರಂಗ ಪ.ರ.

ಪುಟಗಳು:—೮೮. ಬೆಲೆ ರೂ. ೧-೨೫.

ಇದೊಂದು ನಾಟಕ. ಉದ್ದವಾದ ಶೀರ್ಷಿಕೆ, ಅದ್ಭುತವಾದ ದೃಶ್ಯ ಸಂಯೋಜನೆ. ಅತ್ಯಧಿಕ ಸಂಖ್ಯೆಯ ಪಾತ್ರಗಳು, ಅಭಿನಯ ಕಷ್ಟಸಾಧ್ಯವಾದ ಸನ್ನಿವೇಶಗಳು ಇದರ ವೈಶಿಷ್ಟ್ಯ. ನಾಟಕದ ಮುಖ್ಯ ಉದ್ದೇಶ ಅಭಿನೇಯತೆಯೆಂಬುದನ್ನು ಸಮರ್ಥಿಸುವುದಾದರೆ, ಇದು ಆ ದೃಷ್ಟಿಯಲ್ಲಿ ಅಸಮರ್ಥ ಕೃತಿಯೆನ್ನಬಹುದು. ಆದರೆ, ಇಂದು ಓದುವ ನಾಟಕಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹಿಂದೀ ಭಾಷೆಯ ಸುಪ್ರಸಿದ್ಧ ನಾಟಕಕಾರ ಜಯಶಂಕರ ಪ್ರಸಾದರ ನಾಟಕಗಳು ಈ ಸಾಲಿನಲ್ಲೇ ನಿಲ್ಲುತ್ತವೆ.

ಶ್ರೀ ಹೊಂಬುಜ ಕ್ಷೇತ್ರದ ಮಹಾತ್ಮ್ಯೆಯೇ ನಾಟಕದ ಕಥಾವಸ್ತು. ಮಧುರಾ ರಾಜ್ಯದಿಂದ ಪ್ರಾಣ ಭಯದಿಂದ ಗುರುವಾಜ್ಞೆಯಂತೆ ದಕ್ಷಿಣಕ್ಕೆ ಬಂದು ಪದ್ಮಾವತೀ ಕೃಪಾಭಾಜನನಾದ ಜಿನದತ್ತನಿಂದಾಗಿ ಅವತರಿಸಿದ ಹೊಂಬುಜ ಕ್ಷೇತ್ರವೇ ಇಲ್ಲಿನ ಫಲ. ಸಾಕಾರ ಮಹಾರಾಜ ಪದ್ಮಿನಿಯರ ಪ್ರಣಯ ಪ್ರಸಂಗವೇ ಇದಕ್ಕೆ ಬೀಜ. ಈ ಕಥೆಯ ಹಿನ್ನೆಲೆಯಲ್ಲಿ ನಾಟಕ ಮುಂದುವರಿಯುತ್ತದೆ. ನಾಟಕೀಯತೆ ಇಲ್ಲಿಲ್ಲವೆಂಬುದನ್ನು ಒಪ್ಪಬೇಕು. ಚಿಕ್ಕ ಚಿಕ್ಕ ಸಂವಾದ, ಕೆಲವೆಡೆ ಪದ್ಯಸಂಯೋಜನೆ ಎಲ್ಲವೂ ಸಮುಚಿತವಿವೆ ಆದರೇನು? ಅಭಿನಯಯೋಗ್ಯವೇ ಎಂಬುದನ್ನು ಕಲಾವಿದರೇ ಹೇಳಬೇಕು.

ಲೇಖಕರು ಯಕ್ಷಗಾನ ರೂಪದಲ್ಲಿ ಆರಂಭದಲ್ಲಿ ಈ ಮಹಿಮೆಯನ್ನು ಬರೆದರೆಂದೂ ಮುಂದೆ ಗುರುವಾಜ್ಞೆಯಿಂದ ನಾಟಕ ರೂಪದಲ್ಲಿ ಬರೆದರೆಂದೂ ... ಕ್ಷೇತ್ರ ... ಜನರಿಗೆ ಕ್ಷೇತ್ರ ಮಹಿಮೆಯನ್ನು ತಿಳಿಸುವುದೇ ಉದ್ದೇಶವಿದ್ದಿದ್ದರೆ, ಸಾಮಾನ್ಯ ಗದ್ಯರೂಪದಲ್ಲೇ ಬರೆಯಬಹುದಿತ್ತು. ಇಲ್ಲಿನ ನಾಟಕರೂಪದಲ್ಲಿ ಯಕ್ಷಗಾನದ ಮುದ್ರೆ ಬಿದ್ದ ಭಾಸವಾಗುತ್ತದೆ. ಪೌರಾಣಿಕ ನಾಟಕಕ್ಕೆ ಉಚಿತವಾದ ಭಾಷೆ, ಹಳೆಯ ಮೂದರಿಯ ಶೈಲಿ ಉತ್ತಮವೇ ಇವೆ. ಒಟ್ಟಿನಲ್ಲಿ ಇದೊಂದು 'ಆಡು ನಾಟಕ'ವಲ್ಲ "ಓದು ನಾಟಕ"ದ ಸಾಲಿನಲ್ಲಿ ನಿಲ್ಲಬಹುದಾದ ನಾಟಕ.

— ಗೋರಾ



ಅಭಿಪ್ರಾಯ

ಇಂದಿನ ರಾಜಕೀಯ ಪರಿಸ್ಥಿತಿ

ಬರೆದವರು
ಶ್ರೀ ಎಂ. ಉಮೇಶ ರಾವ್,
ಅಡ್ವೊಕೇಟ್, ಮಾಜಿ ಎಂ. ಎಲ್. ಎ.

ಕಳೆದ ಒಂದು ವರ್ಷದಲ್ಲಿ ಕೆಲವು ಪ್ರತಿ ಪಕ್ಷಗಳ ಅಸಭ್ಯ ನಡತೆ ಮತ್ತು ದೇಶದಲ್ಲಿ ತಲೆದೋರಿದ ರಾಜಕೀಯ ಅಶಾಂತಿ ಬಹಳ ಚಿಂತಾಜನಕವಾಗಿದ್ದು, ಅವುಗಳನ್ನು ಸುಲಭವಾಗಿ ಮರೆಯಲು ಸಾಧ್ಯವಿಲ್ಲ. ವಿಧಾನ ಸಭೆಗಳೊಳಗೂ ಕೂಡ ಅಸಹನೆಯ ಮತ್ತು ಅನಾಗರಿಕ ವರ್ತನೆಯ ಪ್ರದರ್ಶನವು ಆಗಿಂದಾಗ್ಯೆ ನಡೆಯುತ್ತಿದ್ದಿತು. ತಮ್ಮ ಕಾರ್ಯಾಚರಣೆಯ ಉದ್ದೇಶ, ಅದರಿಂದ ಸಮಾಜದ ಮೇಲಾಗಲೀ ದೇಶದ ಮೇಲಾಗಲೀ ಉಂಟಾಗಬಹುದಾದ ಪರಿಣಾಮ, ಇವುಗಳ ಗುಣಾವಗುಣಗಳ ಕಡೆಗೆ ಸ್ವಲ್ಪವಾದರೂ ಲಕ್ಷ್ಯವಿಡದೆ ಚಳವಳಿಗಳನ್ನು ನಡೆಸಲಾಗುತ್ತಿದ್ದಿತು. ಚುನಾವಣೆಯು ಸಮೀಪಿಸುತ್ತಲೇ, ಒಂದಲ್ಲೊಂದು ನಿರರ್ಥಕವಾದ ಅಸಾಧ್ಯವಾದ ಬೇಡಿಕೆಯನ್ನು ಮುಂದೊಡ್ಡಿ ಗಲಭೆಯನ್ನುಂಟು ಮಾಡಲಾಗಿದ್ದಿತು. ದೇಶದ ಹಿತವನ್ನು ಪರಿಗಣಿಸದೆ ಕಾಂಗ್ರೆಸ್ ಸರಕಾರವನ್ನು ಹೀನೈಸುವುದೇ ಈ ಚಟುವಟಿಕೆಗಳ ಪ್ರಾಮುಖ್ಯಗುರಿಯಾಗಿದ್ದಿತು. ಒಮ್ಮೊಮ್ಮೆ ಆಡಳಿತವನ್ನು ಅಸಾಧ್ಯಗೊಳಿಸಿ ಗುಲಭೆಯನ್ನುಂಟು ಮಾಡುವುದೊಂದೇ ಚಳವಳಿಗಾರರ ಉದ್ದೇಶವೋ ಎಂಬ ಸಂಶಯವಾಗುತ್ತಿದ್ದಿತು. ಒಂದೆರಡು ಪ್ರತಿಪಕ್ಷಗಳಂತೂ ತೀವ್ರವಾದ ಅಶಾಂತಿಯನ್ನುಂಟುಮಾಡುವರೆ ತಮ್ಮ ಕೈಲಾದಷ್ಟು ಪ್ರಯತ್ನಿಸಿವೆ. ಡಾಕ್ಟರ್ ಲೋಹಿಯಾರಂತಹ ಕೆಲವು ವ್ಯಕ್ತಿಗಳ ಘೋಷಣೆಗಳೂ ಬೆದರಿಕೆಯ ಮಾತುಗಳೂ ಬಹಳ ಉದ್ರೇಕದಾಯಕವಾಗಿದ್ದುವು. ಅವರ ಪಕ್ಷದ ಕೆಲವು ಪ್ರತಿನಿಧಿಗಳ ನಡತೆಯು ಬರೇ ಪುಂಡಾಟಿಕೆಯಾಗಿದ್ದಿತು. ಕೆಲವು ಸಾಮಿಗಳೂ ಸಾಧುಗಳೂ ಬೇರೆ ಯಾವ ಸಮಯದಲ್ಲಾದರೂ ಇತ್ತೀಚೆಗೆ ನಡೆದ ರೀತಿಯಲ್ಲಿ ವರ್ತಿಸಿದುದಾದರೆ, ಅವರ ಪಂತವೇ ಅವಹೇಳನಕ್ಕೆ ಗುರಿಯಾಗುತ್ತಿದ್ದಿತು. ದೇಶದಲ್ಲಿ ಅನಾವೃಷ್ಟಿ, ಮತ್ತು ಆಹಾರದ ಕೊರತೆಗಳಿರುವ ಕಾಲದಲ್ಲಿ ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳುವ ದೇಶದ ಸಂಪತ್ತನ್ನು ನಾಶ ಮಾಡಲಾಯಿತು, ರೈಲ್ವೇ ಅಪಘಾತಗಳನ್ನುಂಟು ಮಾಡಿದುದರಿಂದ ನೂರಾರು ಜನರು ಮರಣಕ್ಕೀಡಾದರು. ಗಲಭೆಯನ್ನುಂಟು ಮಾಡುವರೆ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲಾಯಿತು. ಕಳೆದ ವರ್ಷ ನಡೆದ ಅತ್ಯಾಚಾರಗಳ ವಿವರಣೆಯು ಬಹಳ ದುಃಖಕರವಾಗಿದೆ. ಯುದ್ಧದ ವೇಳೆ ಪಂಚಮ ದಳವು ನಡೆಸಬಹುದಾದ ಅನಾಹುತಗಳನ್ನು ಹೋಲುತ್ತಿದ್ದುವು. ಜನತೆಯಲ್ಲಿ ಹೆಚ್ಚಿನ ... ಅವಿದ್ಯಾವಂತರಾಗಿದ್ದರೂ, ಅವರಿಗೆ ಪ್ರಜಾಸತ್ತೆಯಲ್ಲಿರುವ ಸಹಜವಾದ ಪ್ರೀತಿ ವಿಶ್ವಾಸಗಳಿಂದಾಗಿ ಮಾತ್ರವೇ ಪರಿಸ್ಥಿತಿಯು ಹದಗೆಡಲಿಲ್ಲ. ದೇಶದ ಮುಖಂಡರು ಆ ಕಾಲದಲ್ಲಿ ಗಾಬರಿಪಟ್ಟಿರಲು ಕಾರಣವಿದ್ದಿತು. ಇಂತಹ ಸಂದಿಗ್ಧ ಸಮಯದಿಂದ ದೇಶದ ಭದ್ರತೆಗೆ ದ್ರೋಹ ತಟ್ಟದಂತೆ ಪಾರಾದುದರ ಬಗ್ಗೆ ಸರಕಾರವನ್ನೂ ಜನತೆಯನ್ನೂ, ಅಭಿನಂದಿಸಲೇಬೇಕು.

ಈ ಚುನಾವಣೆಯಲ್ಲಿ ಕೆಲವು ಹಿಂದೀ ಪ್ರಾಂತಗಳಲ್ಲಿ ಬಹುಮತವನ್ನು ಕಾಂಗ್ರೆಸ್ಸು ಖಂಡಿತವಾಗಿಯೂ ಪಡೆಯಲಾರದೆಂದೂ ಕಾಂಗ್ರೆಸೇತರ ಪಕ್ಷಗಳು ಆಡಳಿತವನ್ನು ವಹಿಸಿದರೆ, ಅವರು ಏರ್ಪಡಿಸುವ ಸರಕಾರವು ಆರು ತಿಂಗಳುಗಳೊಳಗೆ ಅದ್ಭುತ ಕಾರ್ಯವನ್ನು ಸಾಧಿಸ ತಕ್ಕದು. ಇಲ್ಲದಿದ್ದಲ್ಲಿ ಅದು ಕೂಡಾ ಕಾಂಗ್ರೆಸ್ ಸರಕಾರದ ಗತಿಯನ್ನೇ ಅನುಭವಿಸಬೇಕಾಗುವುದು ಎಂದೂ ಡಾಕ್ಟರ್ ಲೋಹಿಯಾ ಹೇಳಿದರಾಗಿ ಪ್ರಕಟವಾಗಿದ್ದಿತು. ಅವರೂ ಇತರ ಕೆಲವು ಮಹನೀಯರೂ ಕಾಂಗ್ರೆಸ್ ಪಕ್ಷವು ಈ ಚುನಾವಣೆಯ ನಂತರವೂ ಆಡಳಿತವನ್ನು ವಹಿಸಿದರೆ, ದೇಶದಲ್ಲಿ ಗೊಂದಲವೂ ಅರಾಜಕತೆಯೂ ಉಂಟಾಗುವುದೆಂದು ಬೆದರಿಸುತ್ತಿರುವುದು ಸೋಜಿಗವಾಗಿದೆ. ಇಂತಹ ಬೇಜವಾಬ್ದಾರಿಯ ಹೇಳಿಕೆಗಳನ್ನು ಪರಿಶೀಲಿಸಿದರೆ ಗೊಂದಲವನ್ನುಂಟುಮಾಡುವ ದುಷ್ಟ ಮನೋವೃತ್ತಿಯು ಕೆಲವರಾದರೂ ಮುಖಂಡರೆನಿಸಿಕೊಳ್ಳುವ ವ್ಯಕ್ತಿಗಳು ಮರೆಯುತ್ತಿರುವರೆಂಬುದು ತಿಳಿಯಬರುತ್ತದೆ. ಇವರಿಗೆ ಜನತೆಯ ಅಲ್ಪ ಸ್ವಲ್ಪವಾದರೂ ಬೆಂಬಲ ಇರುವುದಾದರೆ ಈ ಪಂಗಡವು ಯಾವ ರೀತಿಯ ದುಷ್ಕಾರ್ಯಗಳನ್ನು ನಡೆಸಬಹುದೆಂದು ಊಹಿಸಲು ಕಷ್ಟವಾಗಿದೆ. ಕೇರಳದಲ್ಲಿ ಐಕ್ಯರಂಗವನ್ನೂ ರಚಿಸಿದಂತೆಯೇ ಇತರ ಪ್ರಾಂತ್ಯಗಳಲ್ಲಿಯೂ ಪ್ರತಿಪಕ್ಷಗಳು ಐಕ್ಯರಂಗಗಳನ್ನು ಸ್ಥಾಪಿಸಿ ಆಡಳಿತವನ್ನು ವಹಿಸಿದರೆ ದೇಶದಲ್ಲಿ ಹೆಚ್ಚಿನ ಅವ್ಯವಸ್ಥೆಯುಂಟಾಗಿ ಅದರ ದುರುಪಯೋಗವನ್ನು ಬೇರೆ ಕೆಲವರು ಪಡೆಯಲೆತ್ನಿಸಬಹುದು.

ಕೆಲವು ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಅಧಿಕಾರವು ತಪ್ಪಿ ಹೋಗುವುದರಿಂದ ಆ ಪಕ್ಷದ ಮೇಲೆ ಒಳ್ಳೆಯ ಪರಿಣಾಮ ಉಂಟಾಗಲು ಅಸ್ಪದವಿದೆ. ಆದರೆ ಕಾಂಗ್ರೆಸಿಗರೂ ಅದರ ಮುಖಂಡರೂ ಮಂತ್ರಿಗಳೂ ಕಳೆದ ಹಲವು ವರ್ಷಗಳಿಂದ ಸಂಸ್ಥೆಯಲ್ಲಿ ಕೂಡಿ ಬರುತ್ತಿರುವ ದೋಷಗಳನ್ನು ನಿವಾರಿಸಲು ಮನಃಪೂರ್ವಕವಾಗಿ ಶ್ರಮಿಸದೆ, ಅದು ಸಾಧ್ಯವಾಗಲಾರದು. ಮಹಾತ್ಮಾ ಗಾಂಧಿ ಮತ್ತು ಸರ್ದಾರ್ ಪಟೇಲರು ರಚಿಸಿದ, ಸೇವೆಯೂ ತ್ಯಾಗವೂ ಧ್ಯೇಯಗಳಾಗಿರುವ ಸಂಸ್ಥೆಯಲ್ಲ ಇಂದಿನ ಕಾಂಗ್ರೆಸ್. ಪಂಡಿತ ಜವಾಹರಲಾಲರು ಬೆಳೆಸಬೇಕೆಂದು ಆಶಿಸಿ, ನಿರಂತರ ಅದರ ಸಲುವಾಗಿ ದುಡಿದ ಸಂಸ್ಥೆಯು ಇದಲ್ಲ. ತನ್ನ ಕೊನೆಯ ಕೆಲವು ವರ್ಷಗಳಲ್ಲಿ ಜವಾಹರಲಾಲರು ಆಶಾಭಗ್ನರಾಗಿದ್ದುದನ್ನು ಯಾರೂ ತಿಳಿಯಬಹುದಾಗಿದ್ದಿತು. ಅವರ ಸುತ್ತಲೂ ಅಪ್ರಿಯವಾದ ಕೆಲವು ದುಷ್ಟ ಶಕ್ತಿಗಳೂ ಬಲಗೊಳ್ಳುತ್ತಿದ್ದುವು. ಅಯೋಗ್ಯ ವ್ಯಕ್ತಿಗಳು ಅಧಿಕಾರವನ್ನು ಪಡೆದು, ಅವರ ಅನುಯಾಯಿಗಳೆಂದೆನಿಸುವವರಲ್ಲ ಅನೇಕರು ಕಾಂಗ್ರೆಸ್ ತತ್ವಗಳನ್ನು ಬದಿಗೊತ್ತಿ ಕಾರ್ಯವನ್ನೆಸಗುವುದನ್ನು ಕಾಣಲಾಗುತ್ತಿದ್ದಿತು, ಆದರೂ ಸತ್ಯಕ್ಕೂ ನ್ಯಾಯಕ್ಕೂ ಜಯವು ಸಿಗಲೇಬೇಕೆಂದು ತಿಳಿದು, ಪ್ರಜಾಸತ್ತೆಯ ಮೇಲಿನ ಅಭಿಮಾನದಿಂದಾಗಿ ಅವರು ಇದನ್ನೆಲ್ಲಾ ನಿರ್ಮೂಲಗೊಳಿಸಲು ಹಿಂಜರಿದರು. ಒಳ ಜಗಳ, ಅಶಿಸ್ತು, ಅವ್ಯವಸ್ಥೆಗಳು ಕಾಂಗ್ರೆಸ್ ಸಂಸ್ಥೆ ಮತ್ತು ಪಕ್ಷದ ಪ್ರಾಧಾನ್ಯ ಗುಣಗಳಾಗಿ ಪರಿಣಮಿಸಿವೆ. ಕೆಲವೇ ವ್ಯಕ್ತಿಗಳ ಹೊರತು ಇತರ ಕಾಂಗ್ರೆಸಿಗರು ಅದರಲ್ಲೂ ಅಧಿಕಾರ ಪಡೆದವರು ದೇಶದ ಹಿತವನ್ನೂ ಬಯಸದೆ ತಮ್ಮ ಸ್ವಾರ್ಥ ಸಾಧನೆಯ ಬಗ್ಗೆ ದುಡಿಯುವವರೆಂಬ ಅಭಿಪ್ರಾಯವು ಜನತೆಯಲ್ಲಿ ಉಂಟಾಗಿದೆ. ಅತೀ ಪ್ರಾಮಾಣಿಕರೆಂದು ಗುಣಿಸಲ್ಪಟ್ಟ ಕೆಲವು ವ್ಯಕ್ತಿಗಳೂ ಮುಖಂಡರೂ ನಡೆಸುವದಾಗಿ ಹೇಳಲ್ಪಡುವ ಭ್ರಷ್ಟಾಚಾರದ ವಿವರಗಳನ್ನು ನಂಬುವುದು ಕಷ್ಟವಾಗುತ್ತಿದೆ. ಅಧಿಕಾರಕ್ಕಾಗಿ ನಡೆಯುವ ಒಳಜಗಳಗಳು ಸಂಸ್ಥೆಯ ಜೀವನ ಬಲವನ್ನು ದಿನೇ ದಿನೇ ಕುಂದಿಸುತ್ತಿವೆ. ಮನುಷ್ಯನ ರಕ್ತದ ರುಚಿಯ ಅನುಭವ ದೊರೆತ ವ್ಯಾಘ್ರವು ನರಬಲಿಯನ್ನೇ ಅಪೇಕ್ಷಿಸಿ ಸುತ್ತಾಡುವುದೆಂದು ಹೇಳಲಾಗುತ್ತದೆ. ಯಾವುದಾದರೂ ಸ್ಥಾನವನ್ನು ಪಡೆದ ಕಾಂಗ್ರೆಸಿಗನು, ಆತನಿಗೆ ತಕ್ಕ ಯೋಗ್ಯತೆ ಇರಲಿ, ಇಲ್ಲದಿರಲಿ, ಅವನ ಸೇವೆಯ ಆಗತ್ಯವಿರಲಿ, ಇಲ್ಲದಿರಲಿ, ತನಗೆ ದೊರೆತ ಸ್ಥಾನವು ಪುನಃ ಸಿಗದೆ ಹೋದರೆ, ಯಾವ ಸಂಸ್ಥೆಯ ಬೆಂಬಲದಿಂದ ತಾನು ಆ ಮೊದಲು ಸ್ಥಾನವನ್ನು ಪಡೆಯಲು ಶಕ್ತನಾದನೋ ಅಂತಹ ಸಂಸ್ಥೆಯನ್ನೇ ವಿರೋಧಿಸಲು ಹಿಂಜರಿಯುವುದಿಲ್ಲ. ಈ ರೀತಿ ಕಾಂಗ್ರೆಸಿನಿಂದ ಹೊರಟು ಬಂದು ಕಾಂಗ್ರೆಸ್ ಸರಕಾರದ ಧೋರಣೆಯೂ ಕಾರ್ಯಕ್ರಮವೂ ಸರಿಯಲ್ಲದುದರಿಂದ ತಾವು ಬೇಸರಗೊಂಡು ಅದನ್ನು ವಿರೋಧಿಸಬೇಕಾಗಿದೆಯೆಂದು ಘೋಷಿಸುವ ವ್ಯಕ್ತಿಗಳ ಸಂಖ್ಯೆಯು ಹೆಚ್ಚಾಗುತ್ತಾ ಇದೆ. ಈ ಕೂಟದಲ್ಲಿ ಮಾಜಿ ಗವರ್ನರ್ ಜನರಲ್, ಮಾಜಿ ಗವರ್ನರರು, ಮಾಜಿ ಮಂತ್ರಿಗಳೇ ಮೊದಲಾದವರನ್ನು ಕಾಣಬಹುದು. ಲೋಕಸಭೆಗೋ ವಿಧಾನಸಭೆಗೋ ಸ್ಪರ್ಧಿಸಲು ಟಿಕೇಟ್ ಸಿಗದ ಕಾರಣ ಹೊರಬಂದವರ ಸಂಖ್ಯೆ ಬಹಳ ದೊಡ್ಡದಿದೆ. ಇಂತಹ ವರ್ತನೆಯನ್ನು ಅಭಿಪ್ರಾಯ ಸ್ವಾತಂತ್ರ್ಯದ ನಿದರ್ಶನವೆಂದು ಸ್ವಾಗತಿಸಿ ಶ್ಲಾಘಿಸುವುದು ಅತಿಶಯವಾಗಿದೆ.

ಪಂಡಿತ ಜವಾಹರಲಾಲರು ಜೀವಂತರಾಗಿರುವ ವೇಳೆ ಕಾಂಗ್ರೆಸ್ ಸಂಸ್ಥೆಯನ್ನು ದುರ್ಬಲಗೊಳಿಸುವ ಈ ಶಕ್ತಿಗಳು ತಲೆದೋರುತ್ತಿದ್ದರೂ ಅವುಗಳ ಬೆಳವಣಿಗೆಗೆ ಸ್ವಲ್ಪ ತಡೆಯಿದ್ದಿತು. ಕಳೆದ ಎರಡು ವರ್ಷಗಳಲ್ಲಿ ಇವೆಲ್ಲ ನಿರಾತಂಕವಾಗಿ ವೃದ್ಧಿಗೊಂಡು ಮಹತ್ತಾದ ಕಾಂಗ್ರೆಸ್ ಸಂಸ್ಥೆಯನ್ನೇ ನಾಶಮಾಡಲು ಹೊರಟಿವೆ. 'ಕಾಂಗ್ರೆಸ್ ಸರಕಾರವು ಕೊನೆಗೊಳ್ಳುವುದರಿಂದ ಜನತೆಗೆ ಪ್ರಜಾಪ್ರಭುತ್ವದಲ್ಲಿರುವ ವಿಶ್ವಾಸವು ಬಲಗೊಳ್ಳುವುದಾಗಿಯೂ ಕಾಂಗ್ರೆಸಿಗೆ ಅಧಿಕಾರ ಸಿಗದೆ ಹೋದಲ್ಲಿ ದೇಶದ ಸರಕಾರಕ್ಕೆ ಏನಾಗಬಹುದೆಂದು ಆಲೋಚಿಸುವುದು ಮತದಾರರ ಕೆಲಸವಲ್ಲ, ಅದು ರಾಷ್ಟ್ರಾಧ್ಯಕ್ಷರಿಗೆ ಬಿಟ್ಟದ್ದು" ಎಂಬುದಾಗಿಯೂ ಶ್ರೀ ರಾಜಗೋಪಾಲಾಚಾರಿಯವರು ಹೇಳಿದುದು ಚುನಾವಣೆಯ ವೇಳೆಯಲ್ಲಿ, ಪ್ರತಿಪಕ್ಷದ ಮುಂದಾಳುವಿನ ಪ್ರಚಾರದ ಚತುರ ಉಪಾಯವೇನೋ ಸರಿ, ಆದರೂ ಪ್ರತಿಯೊಬ್ಬ ನಾಗರಿಕನೂ ಅದರ ಫಲಿತಾಂಶವು ದೇಶದ ಶಾಂತಿಗೆ ಹಿತಕರವಾಗಬಲ್ಲುದೋ ಎಂಬುದನ್ನು ವಿವೇಚಿಸಲೇಬೇಕು. ಬರುವ ಐದು ವರ್ಷಗಳಲ್ಲಿ, ಇಂದಿನ, ರಾಜಕೀಯ ಪರಿಸ್ಥಿತಿಯನ್ನೂ ಕಾಂಗ್ರೆಸಿನಲ್ಲಿರುವ ದೋಷಗಳನ್ನೂ ಸಂಪೂರ್ಣವಾಗಿ ಮನಗಂಡು, ಕಾಂಗ್ರೆಸಿಗರು ದೇಶದ ಹಿತದೃಷ್ಟಿಯಿಂದ ದೇಶಸೇವೆಯೊಂದೇ ಗುರಿಯಾಗಿರುವ ಕಾಂಗ್ರೆಸ್ ಸಂಸ್ಥೆಯನ್ನು ಪುನರುಜ್ಜೀವನಗೊಳಿಸುವುದು ಆಗತ್ಯ. ಇಲ್ಲವೇ ಒಂದು ಯೋಗ್ಯ ಪ್ರತಿಪಕ್ಷವು ಬೆಳೆಯತಕ್ಕದ್ದು. ಎರಡೂ ಸಾಧ್ಯವಾಗದೆ ಇರುವುದಾದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಬಾಳ್ವೆಯು ಅನಿಶ್ಚಿತ.

In the Court of the Munsif of Karkala.

O. S. 443/1966.

Ananthamathi ... Plaintiff.
And
Shanthiraja Bhandary & Others... Defendants.

The above mortgage suit filed by Thodar Ananthamathi stands posted to 6—3—1967 at 11 A. M. before the above court for the appearance of the following defendants who on default to appear in person or through counsel will be declared ex-parte and the suit will be decided in their absence:-

1. Defendant No. 17 Koragu Bhandary son of Shrin... ...
2. Defendant No. 23 Kinni Bhandary, son of Laxmimathi
3. Defendant No. 24 Kumaru Bhandary, son of Laxmimathi
4. Defendant No. 26 Jinaraja Bhandary, son of Sesamma.
5. Defendant No. 27 Babu Bhandary, son of Sesamma.
6. Defendant No. 30 Ananthamathi, daughter of Chandappe.
7. Defendant No. 31 Babu Bhandary, son of Shivadevi.

The above reside at Karmbial, in Idu village of Karkala Taluk.

8. Defendant No 38 Raviraja,
9. Defendant No. 39 Dharmapala,
10. Defendant No.41 Vardhamana —Sons of Kanthu Bannu.

The above reside at Panakaje, in Maladi village of Belthangady Taluk.

H. P. A. Jain,
Pleader for Plaintiff.

Karkala, 24-2-1967.

ವಿಕಾಸಶೀಲತೆಯೇ ಉಸಿರು

ವಿಜಯಾ ಬ್ಯಾಂಕಿನ ಮದ್ರಾಸ ಶಾಖೆಯ ಉದ್ಘಾಟನೆ

ಮದ್ರಾಸು, ಫೆ. 4, ರಾಷ್ಟ್ರದ ಆರ್ಥಿಕ ಸ್ವಾವಲಂಬನೆಯಲ್ಲಿ ಚಿಕ್ಕ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸಿವೆಯೆಂದು ಡಾ| ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರರು ವಿಜಯಾ ಬ್ಯಾಂಕಿನ ಮದ್ರಾಸ ಶಾಖೆಯನ್ನು ಉದ್ಘಾಟಿಸುತ್ತ ಅಭಿಪ್ರಾಯಪಟ್ಟರು. ಚಿಕ್ಕ ಬ್ಯಾಂಕುಗಳು ದೊಡ್ಡ ಬ್ಯಾಂಕುಗಳೊಂದಿಗೆ ಸೇರ್ಪಡೆಗೊಳ್ಳಬೇಕೆಂಬ ರಿಜರ್ವ ಬ್ಯಾಂಕಿನ ನೀತಿಯನ್ನು ತಾನು ಒಪ್ಪುವುದಿಲ್ಲ. ನೀಡುವ ಸಾಲದ ವಿಚಾರದಲ್ಲಿ ಚಿಕ್ಕ ಪಟ್ಟಣಗಳಲ್ಲಿನ ಚಿಕ್ಕ ಬ್ಯಾಂಕುಗಳು ರೈತರ ಆವಶ್ಯಕತೆಗಳನ್ನು ನಗರಗಳಲ್ಲಿನ ಬ್ಯಾಂಕುಗಳಿಗಿಂತ ಚೆನ್ನಾಗಿ ತಿಳಿದುಕೊಳ್ಳುತ್ತವೆ. ಈ ದೃಷ್ಟಿಯಿಂದ ಕೃಷಿಕರಿಗೆ ಸಾಲ ನೀಡಲು ಚಿಕ್ಕ ಬ್ಯಾಂಕುಗಳೇ ಬಹಳ ಉಚಿತವಾಗಿವೆ. ಹಿರಿಯ ಬ್ಯಾಂಕುಗಳಲ್ಲಿ ಸೇರ್ಪಡೆ ಹೊಂದುವುದರಿಂದ ರೈತರಿಗೆ ದೊರೆಯುವ ಆವಶ್ಯಕ ಸಹಾಯನಿಂತಂತೆಯೇ. ರೂ. ೧೫೦೦ಗಳ ವರೆಗಿನ ಸಾಲಗಳಿಗೆ ರಿಜರ್ವ ಬ್ಯಾಂಕು ಗ್ಯಾರಂಟಿ ನೀಡಿರುವಾಗ ಕಿರಿಯ ಬ್ಯಾಂಕುಗಳು ಆರ್ಥಿಕ ಮುಗ್ಗಟ್ಟಿಗೆ ಗುರಿಯಾಗುವುವೆಂಬ ಭಯವೇಕೆ? ಇದನ್ನು ರಿಜರ್ವ ಬ್ಯಾಂಕು ಗಮನಿಸಬೇಕು ಎಂದು ಡಾ| ಚೆಟ್ಟಿಯಾರರು ಹೇಳಿದರು.

ಕಳೆದ ಐದು ವರ್ಷಗಳಲ್ಲಿ ವಿಜಯಾ ಬ್ಯಾಂಕು ಸಾಧಿಸಿದ ಪ್ರಗತಿಯನ್ನು ಡಾ| ಚೆಟ್ಟಿಯಾರರು ಪ್ರಶಂಸಿಸಿ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರ ಪ್ರಯತ್ನ—ಸಾಧನೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಶೆಟ್ಟರ ಅಧ್ಯಕ್ಷತೆಯಲ್ಲಿ ಬ್ಯಾಂಕು ಆಧುನಿಕಪರಿಸ್ಥಿತಿಗಳನ್ನು ಹೆಚ್ಚು ಹೆಚ್ಚಾಗಿ ಅಳವಡಿಸುವ ಆಶಯವನ್ನು ಅವರು ಪ್ರಕಟಿಸಿದರು.

ಗಣನೀಯ ಅತಿಥಿಗಳನ್ನು ಈ ಸಮಾರಂಭಕ್ಕೆ ಸ್ವಾಗತಿಸುತ್ತ ಬ್ಯಾಂಕಿನ ಅಧ್ಯಕ್ಷ ಶ್ರೀ ಶೆಟ್ಟರು ಮದ್ರಾಸಿನ ಜನತೆಯು ವಿಜಯಾ ಬ್ಯಾಂಕಿನ ಸೇವೆಯನ್ನು ಬಯಸುವಂತೆಯೇ ಮದ್ರಾಸ ನಗರದಲ್ಲಿ ಬ್ಯಾಂಕಿನ ಮುನ್ನಡೆಗಾಗಿ ಜನತೆಯ ಸಹಾಯವನ್ನು ಯಾಚಿಸಿದರು. ಪ್ರಾದೇಶಿಕ ಬ್ಯಾಂಕುಗಳು ಭಾರತದಲ್ಲಿ ವಿಕಾಸಗೊಳ್ಳುವ ಆವಶ್ಯಕತೆಯನ್ನು ವಿವರಿಸುತ್ತ ಭೌಗೋಲಿಕ ಏಕಾಂತತೆಯಲ್ಲಿ ಚಿರಪರಿಚಿತರ ಸೇವೆಯನ್ನೇ ಮಾಡುತ್ತಿರುವ ದಿನಗಳು ದೂರವುಳಿದುವು; ವಿಕಾಸಶೀಲತೆಯೇ ಇಂದು ನಮ್ಮ ಉಸಿರಾಗಬೇಕು ಎಂದರು. ರಾಜ್ಯ ಪುನರ್ಘಟನೆಗೆ ಮೊದಲು ಮದ್ರಾಸದಲ್ಲಿ ಮಂತ್ರಿಯಾಗಿದ್ದ ವಿಜಯಾ ಬ್ಯಾಂಕಿನ ಸ್ಥಾಪಕ—ಅಧ್ಯಕ್ಷರಾದ ಶ್ರೀ ಎ. ಬಿ. ಶೆಟ್ಟರನ್ನು ಅವರು ಸ್ಮರಿಸಿಕೊಂಡರು. ಮದ್ರಾಸದ ಆರ್ಥಿಕ ರಂಗಕ್ಕೆ ಸಮುಚಿತ ಸೇವೆ ಸಲ್ಲಿಸುವುದೇ ವಿಜಯಾ ಬ್ಯಾಂಕಿನ ಉದ್ದೇಶವೆಂದ ಅವರು ೧೯೬೧ರಲ್ಲಿ ೨೧ ಶಾಖೆಗಳ ಮೂಲಕ ಸೇವೆ ಮಾಡುತ್ತಿದ್ದ ಬ್ಯಾಂಕು ೧೯೬೭ರಲ್ಲಿ ೭೫ ಶಾಖೆಗಳನ್ನು ಹೊಂದಿದೆಯೆಂದು ತಿಳಿಸಿದರು. ೧೯೬೩ ರಿಂದ ಇದುವರೆಗೆ ೮ ಬ್ಯಾಂಕುಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡ ವಿಜಯಾ ಬ್ಯಾಂಕು ಸಾಮಾನ್ಯ ಬ್ಯಾಂಕಿಂಗ್ ಸೌಕರ್ಯವಲ್ಲದೆ ಹುಬ್ಬಳ್ಳಿ ಮತ್ತು ಬಂಗಳೂರಿನ ಸಿಟಿ ಮತ್ತು ಕಂಟೋನ್ಮೆಂಟ್ ಪ್ರದೇಶಗಳಲ್ಲಿ ಮೈಸೂರು ರಾಜ್ಯದ ಇಲೆಕ್ಟ್ರಿಕ್ ಬೋರ್ಡಿನ ಪರವಾಗಿ ಬಿಲ್ಲಿನ ಹಣ ಸ್ವೀಕರಿಸುತ್ತಿದೆಯೆಂದು ಹೇಳಿ, ಈ ಸೇವೆಯು ಬಳಕೆದಾರರಿಗೆ ಬಹಳ ಸೇರಿಕೆಯಾಗಿದೆಯೆಂದು ತಿಳಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮಾಜಿಕಾರ್ಯದರ್ಶಿ ಹಾಗೂ ವಿಜಯಾ ಬ್ಯಾಂಕಿನ ಡೈರೆಕ್ಟರರಲ್ಲಿ ಒಬ್ಬರಾದ ಶ್ರೀ ಕೆ. ಪಿ. ಮಾಧವನ್ ನಾಯರರು ವಂದನಾರ್ಪಣೆ ಮಾಡುತ್ತ ಚೆಟ್ಟಿನಾಡಿನ ಡಾ|| ಸರ್ ಮುತ್ತಯ್ಯ ಚೆಟ್ಟಿಯಾರರೂ ಇನ್ನಿತರರೂ ಹಿತೈಷಿಗಳಾಗಿರುವಾಗ ಬ್ಯಾಂಕು ಉತ್ತಮ ಭವಿಷ್ಯ ಹೊಂದಿದೆಯೆಂಬುದರಲ್ಲಿ ಸಂದೇಹವಿಲ್ಲವೆಂದರು.

ಚುನಾವಣೆಯಲ್ಲಿ ದ.ಕ. ಜಿಲ್ಲೆಯಲ್ಲಿ ವಿಜಯಿಗಳಾದವರು.

ವಿಧಾನ ಸಭೆಗೆ—

ಬೈಂದೂರು ಕ್ಷೇತ್ರ— ಶ್ರೀ ಎಚ್. ಸುಬ್ಬರಾವ್ (ಪ ಸೋ.)

ಕುಂದಾಪುರ— ಶ್ರೀಮತಿ ವಿ ಫೆರ್ನಾಂಡಿಸ್ (ಪ್ರ. ಸೋ.)

ಬ್ರಹ್ಮಾವರ— ಶ್ರೀ ಬಿ. ಜಯಪ್ರಕಾಶ ಶೆಟ್ಟಿ (ಪ)

ಉಡುಪಿ— ಶ್ರೀ ಎಸ್. ಕೆ. ಅಮೀನ್ (ಕಾಂ).

ಕಾರ್ಕಳ— ಶ್ರೀ ಬೋಳ ರಘುರಾಮ ಶೆಟ್ಟಿ (ಜ. ಸಂ).

ಮೂಡಬಿದಿರೆ— ಶ್ರೀ ಕೆ. ರತ್ನಕುಮಾರ್ ಶೆಟ್ಟಿ. (ಸ್ವ).

ಕಾಪು— ಶ್ರೀ ಬಿ. ಭಾಸ್ಕರ ಶೆಟ್ಟಿ (ಪ್ರ. ಸೋ).

ಸುರತ್ಕಲ್— ಶ್ರೀ ಪಿ. ವಿ. ಐತಾಳ (ಪ್ರ. ಸೋ).

ಮಂಗಳೂರು I—ಶ್ರೀ ಮಹೇಲ್ ಶ್ರೀನಿವಾಸ ನಾಯಕ್ (ಕಾಂ).

ಮಂಗಳೂರು II—ಶ್ರೀ ಬಿ.ಎಂ. ಇದಿನಬ್ಬ (ಕಾಂ).

ಬಂಟ್ವಾಳ— ಶ್ರೀಮತಿ ಕೆ. ಲೀಲಾವತಿ ರೈ (ಕಾಂ).

ಪುತ್ತೂರು— ಶ್ರೀ ವಿಠಲ ದಾಸ್ ಶೆಟ್ಟಿ (ಕಾಂ).

ಸುಳ್ಯ— ಶ್ರೀ ಎ. ರಾಮಚಂದ್ರ (ಸ್ವ).

ಬೆಳ್ತಂಗಡಿ— ಶ್ರೀ ಬಿ. ವೈಕುಂಠ ಬಾಳಿಗ (ಕಾಂ).

ಲೋಕಸಭೆಗೆ—

ಉಡುಪಿ ಲೋಕಸಭಾ ಕ್ಷೇತ್ರ— ಶ್ರೀ ಜೆ. ಎಂ. ಲೋಬೊ ಪ್ರಭು (ಸ್ವ).

ಮಂಗಳೂರು ಲೋಕಸಭಾ ಕ್ಷೇತ್ರ— ಶ್ರೀ ಸಿ. ಎಂ. ಪೂಣಚ್ಚ (ಕಾಂ).

ಸಮಾರೋಪ ಸಭೆ

ತಾ 21—2—1967ರಲ್ಲಿ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಸ್ಪೀಕರ್ಸ್ ಕ್ಲಬ್ಬಿನ ಸಮಾರೋಪ ಸಭೆಯು ಪ್ರೊ. ತೆರೇಸಾ ಜೋಸೆಫ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಎನ್. ರಾಜಗೋಪಾಲ ಬಲ್ಲಾಳರಿಂದ ಪ್ರಾರ್ಥನೆಯಾದ ಬಳಿಕ ಕೆ. ವೇದವ್ಯಾಸ ಅವರು ಸ್ವಾಗತ ಭಾಷಣ ಮಾಡಿದರು. ವಾಮನ ಮೂರ್ತಿಯವರು ಸಂಘದ ವರದಿ ವಾಚನಗೈದ ಬಳಿಕ ಅಂದಿನ ಸಮಾರಂಭದಲ್ಲಿ ಪ್ರಧಾನ ಅತಿಥಿಗಳಾಗಿ ಆಗಮಿಸಿದ ಶ್ರೀ ಎ. ಕೃಷ್ಣರಾವ್ ಸಿಂಡಿಕೇಟ್ ಬೇಂಕಿನ ಡಿವಿಜನಲ್ ಆಫೀಸರರವರು ಕ್ಲಬ್ ಪ್ರಕಟಿಸಿದ 'ಕಾಣಿಗೆ' ಎಂಬ ಹೊತ್ತಗೆಯನ್ನು ಉದ್ಘಾಟಿಸಿ ಸಂಘದ ಚಟುವಟಿಕೆಗಳ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಸಮಾರೋಪ ಭಾಷಣವನ್ನು ಮಾಡಿದರು. ಈ 'ಕಾಣಿಗೆ' ಹೊತ್ತಗೆಯನ್ನು ಕ್ಲಬ್ ಸದ್ಯವೇ ಈ ಕಾಲೇಜಿನಿಂದ ನಿವೃತ್ತರಾಗಲಿರುವ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಪಿ. ನಾರಾಯಣ ಅಯ್ಯಂಗಾರರಿಗೆ ಅರ್ಪಿಸಿದ ಕೃತಿಯಾಗಿದೆ. ಅನಂತರ ವಿದ್ಯಾರ್ಥಿ ಪ್ರತಿನಿಧಿಗಳು ಒಂದೊಂದಾಗಿ ಹೂವಿನ ಹಾರವನ್ನು ಪ್ರೊ. ಅಯ್ಯಂಗಾರರಿಗೆ ಗೌರವ ಸೂಚಕವಾಗಿ ಅರ್ಪಿಸಿದರು. ಶ್ರೀ ಅಯ್ಯಂಗಾರರ ವ್ಯಕ್ತಿತ್ವದ ಕುರಿತಾಗಿ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯ ಮತ್ತು ಶ್ರೀ ಪ್ರೇಮಾನಂದರು ಮಾತನಾಡಿದರು.

ಶ್ರೀ ಅಯ್ಯಂಗಾರರು ತನ್ನನ್ನು ಗೌರವಿಸಿದ ವಿದ್ಯಾರ್ಥಿ ವೃಂದವನ್ನೂ ಸಂಸ್ಥೆಯನ್ನೂ ಹರಸಿದರು. ಅಧ್ಯಕ್ಷರ ಭಾಷಣದ ನಂತರ ರಿಚರ್ಡ್ ಮಿನೇಜಸ್ ಧನ್ಯವಾದವಿತ್ತರು.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಕೊನೆಯ ಪುಟದಲ್ಲಿ ಪ್ರಕಟವಾದ "ಮನಸುಸುದ ತೆರ ತಾನೊಡನೆ ಬಿಂದು" ಎಂಬ ಕವನವನ್ನು ಬರೆದವರು ಶ್ರೀ ಎಂ. ಗೋವಿಂದ ರಾವ್ ಎಂಬುದರ ಬದಲಿಗೆ ಶ್ರೀ ಎಂ. ಗೋಪಾಲಕೃಷ್ಣ ರಾವ್ ಎಂದಾಗಬೇಕು. (ಸಂ. ನ)

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಾಲುಕಟ್ಟೆ, ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No 349/1966.

ನಾಗಪ್ಪ ಶೆಟ್ಟಿ— ವಾದಿ.

ಮತ್ತು

ಶಾಂತಾರಾಮ ಶೆಟ್ಟಿ ಸಹಾ—ಪ್ರತಿವಾದಿರು

ಇವರೊಳಗೆ

ಈ ಮೂಲ್ಕ ಸದ್ರಿ ದಾವೆಯ ಪ್ರತಿವಾದಿರು 2 ಸುಮಿತ್ರ ಶೆಟ್ಟಿ 6 ಸದಾನಂದ ಶೆಟ್ಟಿ—ರುಕ್ಮಿಣಿಶೆಟ್ಟಿರ ಮಕ್ಕಳು, ಕಾರ್ಕಳ ತಾಲ್ಲೂಕು ಕುಕ್ಕುಂದೂರು ಗ್ರಾಮದ ಜಡ್ಡು ಹೊಸಮನೆಯಲ್ಲಿರುವವರಿಗೆ ತಿಳಿಸುವದೇನಂದ್ರೆ—

ವಾದಿ ನೀವು ಕೂಡಾ 6 ಜನರ ಮೇಲೆ ಮಾಡಿದ ಮೇಲಿನ ದಾವಾ ನಮ್ಮ ಹಾಜರಿಗೆ ತಾರೀಕು 23—3—1967ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10—30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court

N. M. Adyanthaya

Advocate for Plaintiff.

Karkala, 23—2—67.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. 1053/1966.

O S. 90/1966.

H. ಗೋಪಾಲ ಲಕ್ಷ್ಮಣ ಪ್ರಭು— ಅರ್ಜಿದಾರ.

ಬಾಬುರಾವ್ ಸಹಾ— ಎದ್ರಿರು.

ಬಿ. ನಾಗೇಶ, ಈಶ್ವರಯ್ಯನವರ ಮಗ, ಕಾರ್ಕಳತಾಲ್ಲೂಕು ಬ್ರಾಂತ್ಯ ಗ್ರಾಮದಲ್ಲಿರುವವ—

3ನೇ ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ಸದ್ರಿ ದಾವೆಯಲ್ಲಿ ತಾ. 16—6—1966 ರಲ್ಲಿ ಅರ್ಜಿದಾರನ ಗುಣಕ್ಕೆ ಆದ ಪ್ರಿಲಿಮಿನರಿ ಡಿಕ್ರಿಯನ್ನು absolute ಮಾಡಿ ಸ್ಥಿರಾಸ್ತಿ ಹರಾಜು ಬಗ್ಗೆ ಅರ್ಜಿದಾರನ ಗುಣಕ್ಕೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 16—3—1967ಕ್ಕೆ ನಿಮಗೆ ಆಕ್ಷೇಪ ನೋಟಿಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ ನೀವು ಕೋರ್ಟಿನ ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath

Advocate for Petitioner.

Karkala, 24—2—67.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R, L. P. No. 652/1966

O. S. No 251/1964

ರುದ್ರ ಶೆಟ್ಟಿ ಕೂಡಾ— ಅರ್ಜಿದಾರ್ರು.

ಮತ್ತು

ದೇವಪ್ಪ ಶೆಟ್ಟಿ ಸಹಾ— ಎದ್ರಿರು.

ಇವರೊಳಗೆ.

ಈ ಮೂಲ್ಕ ಸದ್ರಿ ವ್ಯವಹಾರ್ದ 8ನೆ ಎದ್ರಿ ಶ್ರೀರೇಣುಕ ಶೆಟ್ಟಿ ಸಾಮಾನಾರಿ ಗುತ್ತು ಲಕ್ಷ್ಮಿ ಶೆಟ್ಟಿರ ಮಗಳು, ಉಡುಪಿ ತಾಲ್ಲೂಕು ಸಾಂತೂರು ಗ್ರಾಮದ ಸಾಮಾನಾರಿ ಗುತ್ತಿನವರಿಗೆಯಿರುವೂಲ್ಕ ತಿಳಿಸುವದೇನಂದ್ರೆ.—

ಮೇಲ್ಕಂಡ ಅಮಲ್ಜಾರಿ ನಿಮಗೆ ಜಪ್ತಿ ಹುಕುಂ ಜಾರಿ ಬಗ್ಗೆ ತಾರೀಕು 28—3—1967 ಕ್ಕೆ ಇಟ್ಟಿದೆ. ಆದ್ರಿಂದ ಸದ್ರಿ ದಿನ ಬೆಳಿಗ್ಗೆ 10—30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವಾಯ್ ಮಾಡಿ ಮೇಲಿನ ಅಮಲ್ಜಾರಿ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

By order of the court.

M. J Hegde

Advocate for petr.

Karkala. 24—2—1967

ಚಂದಾದಾರರು

ದಯಮಾಡಿ ತಮ್ಮ ಬಾಕಿ ಚಂದಾಹಣವನ್ನು ತ್ವರಿತ ಕಳುಹಿಸಿಕೊಡುವಂತೆ ವಿನಂತಿ.

ಮೆನೇಜರ್.

ಪ್ರೇಮ ಪತನ

(ಎರಡನೇ ಪುಟದಿಂದ)

ಮನ ಕಣ್ಣಿಗೆ ಗೋಚರಿಸದೆ ಹೋಗಲಿಲ್ಲ.

"ಅಕ್ಕಾ! ಅಳ್ತಿಯೂಕೆ? ನ... ತಪ್ಪು ಮಾಡಿದೆ ಹೇಳಕ್ಕಾ" ಎಂ... ಅಕ್ಕನ ದುಃಖದ ಅರಿವಾಗದೆ ಕೇಳಿದನು.

"ರಾಮು! ನೀ ನನ್ನ ತಮ್ಮ ಅಲ್ವೇ?" ತಮ್ಮನ ತಲೆ ಸವರುತ್ತಾ ಕೇಳಿದಳು.

"ಹೀಗ್ಯಾಕೆ ಕೇಳ್ತಿ ಅಕ್ಕಾ?'

'ನನ್ನ ಒಂದ್ಮಾತು ನಡ್ಸಿ ಕೊಡ್ತೀಯಾ?"

"ಅದೇನ್ ಹೇಳಕ್ಕಾ!'

"ನಾಳೆ ಹೊನ್ನನ್ನ ನಾ ಕೇಳದ್ದೀನಿ ಅಂತ ಹೇಳ್ತಿಯಾ?'

'ಅಂವ ನನ್ನತ್ರ ಮಾತಾಡ್ತ್ಯಾನೇ ಅಕ್ಕಾ?' ಅನುಮಾನದಿಂದಲೇ ಕೇಳಿದನು.

'ಹೊನ್ನ ಬಹಳ ಒಳ್ಳೆಯವ. ಅಮ್ಮ ಅಪ್ಪನೆದ್ರು ಈ ಮಾತ್ ಹೇಳ್ಬೇಡ. ನಾಳೆ ನಿಂಗೆ ದೋಸೆ ಮಾಡಿ ಇಟ್ರಿರ್ತೀನಿ.'

ಅಕ್ಕನ ಮಾತಿಗೆ ರಾಮು ತಲೆ ಅಲ್ಲಾಡಿಸಿದನು. ಅಗಲೇ ತಾಯಿ ಕೊಟ್ಟಿಗೆಗೆ ಬಂದಾಗ ಇಬ್ಬರೂ ಅಲ್ಲಿಂದ ಕಾಲ್ಕಿತ್ತಿಗೆದರು.

ಮರುದಿನ ರಾಮುನ ಮುಖಾಂತರ ಚೆನ್ನಿಯ ಸಮಾಚಾರ ತಿಳಿದ ಹೊನ್ನನಿಗೆ ಎಲ್ಲಿಲ್ಲದ ಆನಂದೋತ್ಸಾಹ ಉಂಟಾಯಿತು. ಅಂದಿನಿಂದ ರಾಮುನನ್ನು ಪ್ರೀತಿಯಿಂದಲೇ ನೋಡ ತೊಡಗಿದನು. ತನ್ನ ಗುಪ್ತ ಸಂದೇಶಗಳನ್ನು ರಾಮುನ ಮೂಲಕವೇ ಚೆನ್ನಿಗೆ ಹೇಳಿ ಕಳುಹಿದನು. ಚೆನ್ನಿ—ಹೊನ್ನರ ಪ್ರೇಮವನ್ನು ರಾಮುನ ಬೆಸುಗೆ ಬೆಸೆಯಲಾರಂಭಿಸಿತು.

೦ ೦ ೦ ೦

ಪ್ರಾಯಭರಿತ ಮಗನನ್ನು ಹೊನ್ನನ ತಂದೆ ಹೊಲಗೆಲಸ ಮಾಡಲು ಹಚ್ಚಿದನು. ರಾಮುನ ಸಂದರ್ಶನ ಹೊನ್ನನಿಗೆ ಕಡಿಮೆಯಾಗ ತೊಡಗಿತು ಆಗ ಚೆನ್ನಿಯೂ ಪ್ರಾಯ ತುಂಬಿ ನೋಡುವವರ ಕಣ್ಮನ ಸೆಳೆಯುವಂತಾಗಿದ್ದಳು. ಆಗ ಇಬ್ಬರಲ್ಲಿಯೂ ಮನದ ಕಾಮನೆ ಚೇತನಗೊಂಡಿತು. ಆಗಾಗ ಇಬ್ಬರ ಕಣ್ಣುಗಳೂ ಒಂದಾಗುತ್ತಿದ್ದುವು. ಮಾತಿಲ್ಲವಾದರೂ ನಾವಿಬ್ಬರೊಂದೆಂಬ ಭಾವನೆಯನ್ನು ತೋರ್ಪಡಿಸುತ್ತಿದ್ದುವು. ಒತ್ತಟ್ಟಿನ ಮನೆಯೂ ಗಿದ್ದರೂ ಮಾತನಾಡುವ ಅವಕಾಶ ಅವರಿಬ್ಬರಿಗೆ ಒಂದು ದಿನವೂ ದೊರಕಿರಲಿಲ್ಲ ಅದಕ್ಕೆ ಚೆನ್ನಿಯ ತಾಯಿಯ ಸರ್ಪಗಾವಲೇ ಕಾರಣವಾಗಿತ್ತು. ಆದರೆ ನೋಡುವ ಅವಕಾಶವನ್ನು ಒಂದು ದಿನವೂ ಕಳೆದುಕೊಂಡಿರಲಿಲ್ಲ.

ಹೊನ್ನ ಹೊಲದಲ್ಲಿರುವಾಗ ಚೆನ್ನಿ ಬೇಕೆಂದೇ ಹುಲ್ಲು ತರಲು ಬಯಲಿಗೆ ಹೋಗುವಳು. ಆದರೆ ಒಬ್ಬಳೇ ಎಲ್ಲಿಗೂ ಹೋಗುವಂತಿರಲಿಲ್ಲ. ಜೊತೆಯಲ್ಲಿ ಮಕ್ಕಳನ್ನು ಕರೆದುಕೊಂಡೇ ಹೋಗುವಂತೆ ತಂದೆ ತಾಯಿಗಳ ಕಟ್ಟಪ್ಪಣೆಯಾಗಿತ್ತು.

ಹೊನ್ನ ಹೊರ ಅಂಗಳದಲ್ಲಿ ನಿಂತಾಗ ಚೆನ್ನಿ ನೀರು ತರಲು ಕೊಡ ಹಿಡಿದು ಹೊರ ಹೊರಡುವಳು. ಹೊನ್ನನ ಕಟ್ಟುಮಸ್ತಾದ ತೋಳುಗಳನ್ನು ಕಂಡಾಗ ಚೆನ್ನಿಯ ಮೈರೋಮಾಂಚನಗೊಳ್ಳುತ್ತಿತ್ತು. ಚೆನ್ನಿಯ ಉಬ್ಬಿದೆದೆದುಂಡಾದ ಮುಖವನ್ನು ಕಂಡು ಹೊನ್ನ ಮಗ್ನನಾಗುತ್ತಿದ್ದನು.

ಇಬ್ಬರೂ ಮನದಲ್ಲಿ ... ಜೀವನದ ಆಶಾಗೋಪುರ ... ಕಟ್ಟತೊಡಗಿದ್ದರು ... ಬ್ಬರ ಆಸಾಮೋತ್ಸಾಹಗಳು ... ಸ ಉಳಿಯದಾಯಿತು. ಇವರಿಬ್ಬರ ಆಶಾಗೋಪುರವನ್ನು ಚೆನ್ನಿಯ ಮದುವೆಯ ಸಮಾಚಾರ ಬಿರುಗಾಳಿಯಂತೆ ಬೀಸಿ ಅಲುಗಾಡಿಸಿತು. ಮತ್ತೊಂದು ಹೊರಬಿದ್ದ ಬರಸಿಡಿಲಿಗೆ ಇಬ್ಬರೂ ನಡುಗಿದರು. ಏಕಾಂತದಲ್ಲಿ ಪ್ರೇಮಿಗಳ ಕಣ್ಣೀರ ಕಾಲುವೆಯೇ ಹರಿಯಿತು.

ಇಬ್ಬರೂ ಮೂಕವೇದನೆಯನ್ನನುಭವಿಸ ತೊಡಗಿದರು. ಒಬ್ಬರನ್ನೊಬ್ಬರು ಸಂಧಿಸಲು ಮಾಡಿದ ಪ್ರಯತ್ನ ವಿಫಲವಾಯಿತು. ಅದರಿಂದ ಚೆನ್ನಿಗೆ ಹಗಲು ಇರುಳಾಗಿ ತೋರ ತೊಡಗಿತು. ತಂದೆ ತಾಯಿಗಳ ಮುಖವನ್ನು ಕಣ್ಣೆತ್ತಿಯೂ ನೋಡದಾದಳು. ಮನೆಗೆಲಸದಲ್ಲಿಯೂ ನಿರುತ್ಸಾಹ ಉಂಟಾಯಿತು.

ವಧು ಪರೀಕ್ಷೆಯ ದಿನ ಚೆನ್ನಿಯ ಸಂಕಟ ಹೇಳತೀರದು. ತಾನೇನು ಮಾಡುತ್ತಿರುವೆನೆಂಬ ಅರಿವೇ ಅಂದು ಅವಳಿಗಿರಲಿಲ್ಲ. ಅಂದು ಒಂದು ತೊಟ್ಟು ನೀರನ್ನು ಮುಟ್ಟಲಿಲ್ಲ. ಮಗಳಿಗೆ ಮೈಸ್ವಾಸ್ಥ್ಯವಿಲ್ಲವೆಂದೇ ತಂದೆ ತಾಯಿಗಳ ಭಾವನೆಯಾಯಿತು.

ಬಂದವರು ಹೊರಡುವಾಗ ನಿಶ್ಚಿತಾರ್ಥವನ್ನು ನಿಶ್ಚಯಿಸಿಯೇ ಹೋದರು. ಆಗ ಚೆನ್ನಿಗೆ ಮುಂದೇನು ಮಾಡಲೆಂದು ಹೊಳೆಯದಾಯಿತು. ಏಕಾಂತದಲ್ಲಿ ಕುಳಿತು ಕಣ್ಣೀರು ಹರಿಸುವುದೇ ಉಳಿದ ದಾರಿಯಾಗಿತ್ತು. ಹೊನ್ನನ ನೆನಪು ಎಡೆಬಿಡದೆ ಮನದಲ್ಲಿ ಮರುಕಳಿಸ ತೊಡಗಿತು. ಹೊನ್ನ ತನ್ನನ್ನು ಸಂಧಿಸಲು ಪ್ರಯತ್ನವನ್ನೇಕೆ ಪಡಿ... ಮಾಡಿದನೆಂಬ ವಿಷಯವೇ ತಿಳಿ... ಒಮ್ಮೆ ಹೊನ್ನನನ್ನು ಕಂಡು ಅವನ ಮಡಿಲಲ್ಲಿ ತಲೆಯಿಟ್ಟು ಕಣ್ಣೀರು ಹರಿಸಬೇಕೆಂಬಾಸೆಯುಂಟಾಗುತ್ತಿತ್ತು. ಹೊನ್ನನ ಜೊತೆಯಲ್ಲಿ ಊರು ಬಿಟ್ಟೋಡಲೂ ಸಿದ್ಧವಾಗಿದ್ದಳು. ತನ್ನಂತೆ ಹೊನ್ನನಿಗಾಸೆಯಿಲ್ಲವೇ ಎಂಬ ಅನುಮಾನವೂ ಒಮ್ಮೊಮ್ಮೆ ಸುಳಿಯುತ್ತಿತ್ತು. ಗಂಡಾಗಿಯೂ ಹೀಗೇಕೆ ಹಿಂದೆಗೆಯುತ್ತಿದ್ದಾನೆಂಬ ಯೋಚನೆ ಬಲವಾಯಿತು.

ಕೆಲ...ಂದ ಹೊನ್ನನನ್ನು ನೋಡ... ಚೆನ್ನಿಯ ಮನದಲ್ಲಿ ಕಸಿವಿಸಿಯೂ ...

ಚೆನ್ನಿಯ ಮದುವೆಯ ವಾರ್ತೆ ಕೇಳಿದ ಹೊನ್ನನಿಗೆ ವಜ್ರಾಘಾತವಾದಂತಾಯಿತು. ಕಾಣುವ ಆತುರದಿಂದ ಒಂದೆರಡು ಬಾರಿ ದೂಮನ ಮನೆಯ ಬಳಿ ಸುಳಿದಾಗ ಕನ್ನ ಕೊರೆಯುವ ಕಳ್ಳನಂತೆ ಸಿಕ್ಕಿಬಿದ್ದು ದೂಮನ ಬೈಗಳಿಗೆ ಪಾತ್ರನಾಗಿದ್ದನು. ಆ ವಿಚಾರ ಹೊನ್ನನ ತಂದೆ ಸೋಮನ, ಕಿವಿಗೆ ಬಿದ್ದಾಗ ಮಗನ ಮೇಲೆ ರೌದ್ರಾವತಾರವನ್ನೇ ತಾಳಿದನು. ಅದರಿಂದ ಹೊನ್ನನ ಆಸೆಯ ಕುಡಿಗೆ ಬಿಸಿನೀರೆರೆದಂತಾಯಿತು. ಮನಸ್ಸು ಚೆನ್ನಿಯನ್ನೇ ಹಿಂಬಾಲಿಸಿತು. ಮನೆಯಲ್ಲಿ ನಿಲ್ಲಲು ಮನಸ ಬಾರದಾಯಿತು. ಹಾಗೆಯೇ ಕೆಲವಿನ ಚಿಕ್ಕಮ್ಮನ ಮನೆಗೆ ಹೋಗಿ ಬರುವೆನೆಂದು ಮನೆಯಿಂದ ಹೊರಟು ಹೋದನು. ಆದರೆ ಅಲ್ಲಿಯೂ ಅವನ ಮನ ನೆಮ್ಮದಿ ತಾಳದಾಯಿತು. 'ಹೇಡಿ! ಹೇಡಿ!' ಎಂದು ಯಾರೋ ಅಣಕಿಸಿದಂತೆ ಭಾಸವಾಯಿತು. "ಇನ್ನು ಇದ್ದೇನು ಪ್ರಯೋಜನ? ಆತ್ಮಹತ್ಯವೇ ಲೇಸೆಂಬ ನಿರ್ಧಾರಕ್ಕೂ ಬಂದನು' ಆದರೆ ಮನವೇಕೋ ಅಳುಕಿತು.

ಸದಾ ಕಣ್ಮುಂದೆ ಚೆನ್ನಿಯ ಸುಂದರ ರೂಪವೇ ಬಂದು ನಿಲ್ಲುತಿತ್ತು. ತವಿುಬ್ಬರ ಬಾಲ್ಯದ ದಿನಗಳ ಸವಿನೆನಪು ಒಂದೊಂದೇ ಸ್ಮರಣೆಯಾಗುತಿತ್ತು. ಇಂದು ತನ್ನ ಅಸಹಾಯಕತೆಗಾಗಿ ಕಣ್ಣೀರು ಮಿಡಿದನು. ಚಿಕ್ಕಮ್ಮನ ಮನೆಯಲ್ಲ ಹೆಚ್ಚು ನಿಲ್ಲ... ಮಾಡದೆ ಮತ್ತೆ ಊರಿನ ದಾರಿ ಹಿಡಿದನು.

೦ ೦ ೦ ೦

ಚೆನ್ನಿಯ ದೇಹ ಚಿಂತೆಯಿಂದ ದಿನದಿನಕ್ಕೆ ಸೊರಗಿತು. ಮನೆಯವರ ಸಂತಸ ಕಂಡು ಚೆನ್ನಿಗೆ ಬೆಂಕಿಯನ್ನು ಮುಟ್ಟಿದಂತಾಯಿತು. ಏಕಾಂತದಲ್ಲಿ ದಿನವಿಡೀ ಒಬ್ಬಳೇ ಕುಳಿತು ಯೋಚಿಸತೊಡಗಿದಳು ಮಗಳ ಮನದ ಬೇಗುದಿ ತಂದೆ ತಾಯಿಗಳ ಗಮನಕ್ಕೆ ಬಾರದೆ ಹೋಯಿತು.

ಮದುವೆಯ ಮುಂಚಿನ ದಿನವೇ ದಿಬ್ಬಣಿಗರು ದೂಮನ ಮನೆ ಸೇರಿದರು. ಚೆನ್ನಿಯ ಗೆಳತಿಯರೆಲ್ಲರು ಚೆನ್ನಿಯನ್ನು ಸುತ್ತುವರಿದು ಕಿರುಕುಳ ಕೊಡತೊಡಗಿದರು. ಆಗ ಕೃತಕ ನಗೆಯಿಂದಲೇ ಅವೆಲ್ಲವನೂ ಸ್ವಾಗತಿಸುವಂತೆ ನಟಿಸುತ್ತಿದ್ದಳು.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧ್ರುವ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್
ಕಾರ್ಕಳ (ದ. ಕ.)

ಅಂದು ರಾತ್ರಿ ಹನ್ನೆರಡು ಗಂಟೆಗೆ ಮದುವೆಯ ಮುಹೂರ್ತವೆಂದು ನಿಶ್ಚಯಿಸಿದ್ದರು. ಚೆನ್ನಿಯ ಮದುವೆಗಾಗಿ ದೂಮನ ಆಪ್ತರೆಲ್ಲಾ ನೆರೆದಿದ್ದರು. ವಾದ್ಯದ ವಾದನ ಮೊಳಗುತಿತ್ತು. ವಧುವಿನ ಶೃಂಗಾರ ಆಗಲೇ ಪೂರೈಸಿತ್ತು. ಶುಭ ಮುಹೂರ್ತಕ್ಕಾಗಿ ಪುರೋಹಿತರು ಕಾದು ಕುಳಿತಿದ್ದರು.

ಎಲ್ಲರೂ ಕೋಣೆಯಿಂದ ಹೊರಬಿದ್ದಾಗ ಚೆನ್ನಿಯೊಬ್ಬಳೇ ಉಳಿದಿದ್ದಳು. ಕನ್ನಡಿಯಲ್ಲೊಮ್ಮೆ ತನ್ನ ಪ್ರತಿಬಿಂಬವನ್ನು ನೋಡಿಕೊಂಡಳು. ಆಗ ಹೊನ್ನನ ನೆನಪಾಗದೆ ಉಳಿಯಲಿಲ್ಲ. ಮನದಲ್ಲಿಯೇ ಮುಂದಿನ ಭವಿಷ್ಯ ಯೋಚಿಸಿ ಬೆದರಿದಳು. ಹಾಗೆಯೇ ಮೆಲ್ಲ ಹೊರಟು ಹೊರಬಂದಳು ಆದರೆ ಯಾರೂ ಅವಳತ್ತ ಗಮನ ಹರಿಸಿದಂತೆ ಕಂಡು ಬರಲಿಲ್ಲ. ಯಾರೂ ಕಾಣದಂತೆ ಮುಖ ತುಂಬಾ ಮುಸುಕೆಳೆದುಕೊಂಡು ಕತ್ತಲೆಯಲ್ಲಿ ಮೆಲ್ಲ ಮೆಲ್ಲ ಹೆಜ್ಜೆ ಇಡತೊಡಗಿದಳು.

ಮನೆಯ ಒಳಕೋಣೆಯಲ್ಲಿ ಮಲಗಿದ್ದ ಹೊನ್ನನಿಗೆ ನಿದ್ದೆ ಬಾರದಾಯಿತು. ಮದುವೆಯ ಮನೆಯ ವಾಲಗದ ದನಿ ಬಂದು ಕಿವಿಗಳಿಗಪ್ಪಳಿಸುತಿತ್ತು. ಅದನ್ನು ಕೇಳಿದ ಹೊನ್ನನ ತಲೆ ಚಿಟ್ಟೆನ್ನತೊಡಗಿತು. ಅಂದು ರಾತ್ರಿಯ ಊಟವೂ ರುಚಿಸಿರಲಿಲ್ಲ. ಸದಾ ಕಣ್ಮುಂದೆ ಚೆನ್ನಿಯ ರೂಪವೇ ಬಂದು ನಿಲ್ಲುತಿತ್ತು. ಅದರ ಮುಂದೆ ತವಿುಬ್ಬರ ಗೋರಿ ಕಂಡಂತಾಯಿತು. ಅದರ ಹಿಂದೆ ಭೀಕರ ಪ್ರೇತ ನೃತ್ಯ ತಾಂಡವವಾಡಿದಂತಾಯಿತು. ಅದನ್ನು ಕಂಡಾಗ ಹೊನ್ನನ ಎದೆ ಅಳುಕಿತು. ಭಯ ಭೀತಿಯಿಂದ ಮೇಲೆದ್ದು ಕುಳಿತನು.

ಆಗಲೇ ವಾಲಗದ ಸದ್ದಡಗಿತ್ತು. ಹೊರಗಡೆಯಿಂದ ಅದೇನೋ ಗುಲ್ಲು ಕೇಳಬಂತೊಡಗಿತು. ಅದೇನೆಂದು ನೋಡಲು ಹೊನ್ನ ಹೊರಬಂದನು.

ಚೆನ್ನಿಯ ಮನೆಯಲ್ಲಿ ಸಂತೋಷದ ಹೊನಲಿನ ಬದಲಾಗಿ ದುಃಖದ ಆಗರ ಕಂಡಿತು. ಕುತೂಹಲ ತಡೆಯಲಾರದೆ ಕಾಲುಗಳನ್ನತ್ತ ಒಯ್ದನು. ಜನಸಂದಣಿಯ ಮಧ್ಯೆ ತೂರಿಕೊಂಡು ಮುನ್ನಡೆದನು. ಚೆನ್ನಿ ಹೆಣವಾಗಿ ಮಲಗಿದ್ದಳು. ದೂಮನು ತಲೆಯ ಮೇಲೆ ಕೈಹೊತ್ತು ಕುಳಿತಿದ್ದನು. ಅವಳ ಒದ್ದೆ ಬಟ್ಟೆಯೇ ಆತ್ಮಹತ್ಯವೆಂದು ಸಾರಿ ಹೇಳುತಿತ್ತು. ಚೆನ್ನಿಯ ಮುಖ ಕಂಡಾಗ ಹೊನ್ನನಿಗೆ ಹುಚ್ಚು ಹಿಡಿದಂತಾಯಿತು. "ಚೆನ್ನಿ!" ಎಂದು ಒದರಿ ಪಾರ್ಥಿವ ಶರೀರದ ಮೇಲುರುಳಿದನು.

ಸ್ಮೃತಿ ಇಲ್ಲದ ಹೊನ್ನನನ್ನು ಹೊತ್ತು ಮನೆಗೆ ಸಾಗಿಸಿದರು. ಹೊನ್ನ ಎಚ್ಚೆತ್ತಾಗ ಚೆನ್ನಿಯ ಹೊಗೆ ಸುರುಳಿಸುರುಳಿಯಾಗಿ ಮೇಲಕ್ಕೇರುವುದು ಕಂಡಿತು. ಹೊನ್ನನ ಪ್ರೇಮವನ್ನು ಚೆನ್ನಿ ಪತನ ಮಾಡಿ ಹೋಗಿದ್ದಳು. ಚೆನ್ನಿಯ ಹೊಗೆ ಕಂಡ ಹೊನ್ನನಿಗೆ ಬುದ್ಧಿ ಕೆಟ್ಟಿತು. ಅದೇ ಕೊರಗಿನಿಂದಲೇ ಹೊನ್ನನ ತಂದೆ ತಾಯಿ ಅಸು ನೀಗಿದರು. ಮುಂದೆ ತಬ್ಬಲಿಯಾದ ಹೊನ್ನನಿಗೆ ಮೈದಾನಿನ ಮಾವಿನ ಮರವೇ ಆಶ್ರಯದ ನೆರಳಾಯಿತು. ಅಂದಿನಿಂದ ಎಲ್ಲರ ಬಾಯಲ್ಲಿಯೂ ಚೆನ್ನಿ—ಹೊನ್ನರ ಕಥೆ ಹೊನಲಾಗಿ ಹರಿಯಿತು.

NAVAYUGA 2—3—1967
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿಜ್ಞಾನ

ಕೃತಕ ವಜ್ರಗಳು - ಅವುಗಳ ಉಪಯೋಗ

ವಜ್ರದ ಅನೇಕ ನೂತನ ಉಪಯೋಗಗಳಿಗೆ ಈಗ ಅವಕಾಶವುಂಟಾಗಿದೆ. ೨೦ನೆಯ ಶತಮಾನದಲ್ಲಿ ಪ್ರಶಸ್ತ ಶಿಲೆಗಳೂ ತಾಂತ್ರಿಕ ವಸ್ತುವಾಗಿವೆ. ಉಜ್ವಲ ಕಾಂತಿಯ ಕಾರಣ ಅಮೂಲ್ಯವೆನಿಸುತ್ತಿದ್ದ ಪ್ರಶಸ್ತ ಶಿಲೆಗಳು ತಮ್ಮ ಅಸಮಾನ ಕಾಠಿನ್ಯದ ಕಾರಣ, ಖನಿಜಗಳಲ್ಲಿ ಪ್ರತ್ಯೇಕ ಸ್ಥಾನವನ್ನು ಪಡೆದಿವೆ. ಹಿಂದೆ ವಜ್ರಗಳು ಕಿರೀಟಗಳನ್ನು ಅಲಂಕರಿಸುತ್ತಿದ್ದುವು. ಇಂದು ಅವು ಕತ್ತರಿಸುವ, ಹೊಳಪು ಕೊಡುವ ಸಾಧನವಾಗಿವೆ. ಆಧುನಿಕ ಯಂತ್ರಕಲೆಗೆ ಈ 'ವಸ್ತು'ವಿನ ಆವಶ್ಯಕತೆ ಹೆಚ್ಚಾಗಿದೆ; ಅಗ್ಗವಾಗಿಯೂ ಬೇಕಾಗಿದೆ. ಈ ಸಮಸ್ಯೆಯನ್ನು ಎದುರಿಸಿ, ಭೌತಶಾಸ್ತ್ರಜ್ಞರು ಪ್ರಯೋಗಶಾಲೆಗಳಲ್ಲಿ ವಜ್ರದ ಹರಳುಗಳನ್ನು ತಯಾರಿಸತೊಡಗಿದ್ದಾರೆ. 'ಗ್ರಾಫೈಟಿನ' ಸ್ಫಟಿಕ ಜಾಲಂದರಗಳ ಅತ್ಯುನ್ನತ ಉಷ್ಣೋಗ್ರತೆಯ, ಒತ್ತಡದ ಮೂಸೆಗಳಲ್ಲಿ ಪುನಸ್ಸಂಘಟಿತವಾದಾಗ ಮಾನವ ನಿರ್ಮಿತ ವಜ್ರಗಳು ತಯಾರಾಗುತ್ತವೆ. ಇತ್ತೀಚೆಗೆ ಸೋವಿಯೆತ್ ವಿಜ್ಞಾನ ಅಕಾಡೆಮಿಯ ಉನ್ನತ ಒತ್ತಡದ ಭೌತಶಾಸ್ತ್ರ ಪ್ರತಿಷ್ಠಾನದ ಸಿಬ್ಬಂದಿಯು ೩—೪ ಮಿಲ್ಲಿಮೀಟರು ಗಾತ್ರದ ಕೃತಕ ವಜ್ರಗಳನ್ನು ತಯಾರಿಸಲು ಸಮರ್ಥರಾದರು.

ಕೃತಕ ವಜ್ರ ತಯಾರಿಕೆಯ ಸಮಸ್ಯೆಯನ್ನು ೧೯೬೦ರಲ್ಲಿಯೇ ಯಶಸ್ವಿಯಾಗಿ ಬಗೆಹರಿಸಲಾಯಿತು. ಇದರ ತಯಾರಿಕೆಗಾಗಿ ಸರಂಜಾಮನ್ನೂ ಮತ್ತು ಹೆಚ್ಚು ಕಡಿಮೆ ವಜ್ರದಷ್ಟೇ ಕಠಿಣವಾದ ಬೋರಾಜೋನ್ ಎಂಬ ವಸ್ತುವನ್ನೂ ಉಕ್ರೇನಿನ ಯೋಜನಾ ಸಮಿತಿಯ ಕಠಿನ ವಸ್ತು-ಹರಿತ ಸಂಶೋಧನ ಸಂಸ್ಥೆಗೆ ಒದಗಿಸಲಾಯಿತು. ಕಾರ್ಯವನ್ನು ವಿಸ್ತರಿಸಿ, ಅಲ್ಲಿ ಅವನ್ನು ಉತ್ಪಾದನೆ ಘಟ್ಟಕ್ಕೆ ತರಲಾಯಿತು. ಇಂದು ಚೆನ್ನಾಗಿ ಬೆಳೆಸಲಾದ ಕೃತಕ ವಜ್ರ ಕೈಗಾರಿಕೆ ಇದೆ. ಮಾನವ ನಿರ್ಮಿತ ವಜ್ರಗಳ ಹಲ್ಲು ಸಾಣೆಯ ಉಪಕರಣಗಳ ತಯಾರಿಕೆಯಲ್ಲಿ ವ್ಯಾಪಕ ರೂಪದಲ್ಲಿ ಬಳಸಲಾಗುತ್ತಿದೆ. ಲೋಹ ಕತ್ತರಿಸುವ ಕಠಿನ ಮಿಶ್ರಲೋಹೋಪಕರಣಗಳನ್ನು ಹರಿತಗೊಳಿಸುವುದಕ್ಕೂ, ಕೆತ್ತಿ ನಯಗೊಳಿಸುವುದಕ್ಕೂ ವಜ್ರ ಚಕ್ರಗಳನ್ನೂ ಗರಗಸಗಳನ್ನೂ ಬಳಸಲಾಗುತ್ತದೆ.

ಈ ವಜ್ರಗಳ ಬಳಕೆಯಿಂದ ಉಪಕರಣಗಳ ಬಾಳಿಕೆ ಹೆಚ್ಚುತ್ತದೆ. ಯಂತ್ರಭಾಗಗಳ ಮೇಲ್ಮೈ ಹೆಚ್ಚು ನಯವಾಗುತ್ತದೆ. ಈ ಕಠಾರುವಾಕ್ಯಾದ ನಯಗೆಲಸದಿಂದ ಉಪಕರಣಗಳು ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಅವುಗಳ ಯೋಗ್ಯತೆ ಹೆಚ್ಚುತ್ತದೆ. ಇದರಿಂದ ದೇಶಕ್ಕೆ ತುಂಬಾ ಉಳಿತಾಯವಾಗುತ್ತದೆ.

ಆದರೂ ಕೂಡಾ ಔದ್ಯೋಗಿಕ ಕೃತಕ ಸ್ಫಟಿಕಗಳು ಹೆಚ್ಚಾಗಿಲ್ಲ. ಏಕಸ್ಫಟಿಕ ಉಪಕರಣಗಳೆನ್ನಲ್ಪಡುವ ಬೈರಿಗೆ ಅಲಗುಗಳು, ಉಳಿಗಳು, ಮುಂತಾದುವುಗಳಿಗಾಗಿ ದೊಡ್ಡ ವಜ್ರಗಳನ್ನು ನಿರ್ಮಿಸುವ ಕಾರ್ಯಭಾರವನ್ನು ಈಗ ಎದುರಿಸಬೇಕಾಗಿದೆ. ಇತ್ತೀಚೆಗೆ ಈ ದಿಶೆಯಲ್ಲಿ ಕೆಲವು ಸಫಲತೆಗಳನ್ನೂ ಸಾಧಿಸಲಾಗಿದೆ.

ಇತ್ತೀಚೆಗೆ ಉಕ್ರೇನಿನ ಅತಿ ಕಠಿನ ವಸ್ತು ಉಪಕರಣ ಸಂಸ್ಥೆಯ ನಿರ್ದೇಶಕರಾದ ವ. ನ. ಬಾಕುಲೆ ಅವರು ಅರ್ಧ ಮಿಲಿಮೀಟರು ಗಾತ್ರದ ಸ್ಫಟಿಕಗಳ ತಯಾರಿಕೆಯನ್ನು ಪ್ರಾರಂಭಿಸಿರುವ ಸುದ್ದಿಯನ್ನು ವರದಿ ಮಾಡಿದರು. ಈ ಸ್ಫಟಿಕಗಳು ಬೈರಿಗೆ ಅಲಗುಗಳಿಗೆ ಉಪಯುಕ್ತವಾಗಿರುತ್ತವೆ.

ಪೂರ್ವ ನಿಶ್ಚಿತ ಕಾರ್ಯಕ್ರಮದ ಪ್ರಕಾರ ಗ್ರಾಫೈಟಿನಿಂದ ದೊಡ್ಡ ಕೃತಕ ವಜ್ರಗಳನ್ನು ತಯಾರಿಸುವ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಈ ಸ್ಫಟಿಕಗಳು ಕೆಂಪು, ಪಚ್ಚೆಗಳಂತಹ ಕಠಿನ ಶಿಲೆಗಳ ಕಾರ್ಯವನ್ನು ಮಾಡಬಲ್ಲುವೆಂದು ಕಂಡುಬಂದಿದೆ. ನೂತನ ಸ್ಫಟಿಕಗಳ ಕಾರ್ಯ ಸಾಮರ್ಥ್ಯದ ಬಗ್ಗೆ ವ್ಯಾಪಕ ಸಂಶೋಧನೆಯನ್ನು ಈಗ ನಡೆಸಲಾಗುತ್ತಿದೆ.

ಮುಂದೆ ಮಾಡಬೇಕಾಗಿರುವ ಜಟಿಲ ಕಾರ್ಯವು ತುಂಬಾ ಇದೆ. ದೊಡ್ಡ ವಜ್ರಗಳ ಕೈಗಾರಿಕೆಯನ್ನು ನಿರ್ಮಿಸಬೇಕಾಗಿದೆ. ಬೇರೆ ಬೇರೆ ವಜ್ರೋಪಕರಣಗಳನ್ನು ಈಗ ಅಭಿವೃದ್ಧಿಗೊಳಿಸಬೇಕಾಗಿದೆ.

ಪಯಣ

ಇನ್ನೂ ದಣಿದಿಲ್ಲ;
ಈ ನನ್ನ ಪ್ರಯತ್ನ ಪ್ರಯಾಸವಾಗಿಲ್ಲ!
ದಿನಗಳೆನಿತೋ ಸರಿದುವು
ಕತ್ತಲುಗಳನೇಕ ಸಂದುವು,
ಮಳೆ ಬಂದಿತು
ಚಳಿ ಬಂದಿತು
ಋತು ಬಂದಿತು ಋತುವಿನ ಹಿಂದೆ;
ಬಿಸಿಲು ನೆರಳಿನ ಹಾದಿ
ಕಲ್ಲು ಮುಳ್ಳಿನ ದಾರಿ
ನಡೆದೆ, ಎಲ್ಲದಾಟಿ, ಮುಂದೆ ಮುಂದೆ;
ಮನವು ನೋತಿಲ್ಲ
ಕಾಲು ನೋವೆನಿಸಿಲ್ಲ
ತನುವಿದು ಪಯಣಿಗನ ಕುರುಹಾಗಿಲ್ಲ;
ಈ ನನ್ನ ಪ್ರಯತ್ನ ಪ್ರಯಾಸವಾಗಿಲ್ಲ!
ಜೀವ ಉಳಿದಿತ್ತು
ಮನವೆ ಹಸಿದಿತ್ತು
ನೀರಡಿಕೆ ಇಂಗಿತ್ತು
ನಾಲಿಗೆಯನೆ ನುಂಗಿತ್ತು
ಎದುರು ನೋಟವದು
ಬದಲಾಗಲಿಲ್ಲ, ಇತ್ತು,
ಕಾಲು ಸಾಗಿತ್ತು,
ಕೈಯು ಬೀಸಿತು.
ಅವು ನಿಲ್ಲಲಿಲ್ಲ.
ಒಮ್ಮೆಯೂ ನಿಟ್ಟುಸಿರು ಉಸಿರಾಡಲಿಲ್ಲ
ದೃಢತೆ ಸಂಯಮ ಮಾಯವಾಗಲಿಲ್ಲ
ಈ ನನ್ನ ಪ್ರಯತ್ನ ಪ್ರಯಾಸವಾಗಿಲ್ಲ!
ಅದೆಷ್ಟು ಮುಂದೆ
ನಾ ಸಾಗಿ ಬಂದೆ
ಎನುವುದರ ಅರಿವೆ ಇಲ್ಲ!
ಕಳೆದ ವೇಳೆಯ ಪರಿವೆ ಇಲ್ಲ!
ಸಿಗಬಹ ದೆ ನನಗೆ
ನನ್ನದಾದ ಗುರಿ?
ಆತುರ—ಭಯದಿಂದ
ನೋವಿನ ನಯದಿಂದ
ತೇಲುತಿರುವೆ ಗುರಿ!
ನಡಿಗೆಯ ಗತಿ ಮೀರುತಿದೆ; ಆಸೆ ಕುಂದಿಲ್ಲ!
ನಾವು ಕಾಣುವ ಮುನ್ನ ಗುರಿ ಕಾಣಬೇಕಲ್ಲ!
ಈ ನನ್ನ ಪ್ರಯತ್ನ ಪ್ರಯಾಸವಾಗಿಲ್ಲ.

—ರತ್ನಾಕರ ಶೆಟ್ಟಿ.

ನಗೆ ಬಿಂದು

"ಏನ್ರಿ, ನಿಮ್ಮ ಹುಡುಗ ಛದ್ಮ ವೇಷ ಹಾಕಿ ಪ್ರೈಜ್ ಹೊಡೆದನಂತೆ?"

"ಛದ್ಮವೇಷವೊಂದೂ ಇರಲಿಲ್ಲ ... ಭಿಕ್ಷುಕನ ವೇಷವಾಗಿತ್ತು....'

o o o

"ಇಲ್ಲಿ ಮೃಗ ಡಾಕ್ಟರ್ ಇದ್ದಾರೆಯೆ?"

'ಇಲ್ಲ......"

'ಆ ಒಳಗಿರುವವರಾರು?"

'ಅವರು ಮೃಗಗಳಿಗೆ ಚಿಕಿತ್ಸೆ ಮಾಡುವ ಡಾಕ್ಟರ್!"

o o o

"ಏನ್ರೀ, ಬೀಗವನ್ನು ಕೈಯಲ್ಲೇ ಹಿಡಕೊಂಡಿದ್ದೀರಾ?"

'ಅದು ನಮ್ಮ ಮನೆ ಕವಾಟದ್ದು. ನನ್ನ ಕಣ್ಣು ತಪ್ಪಿದರೆ ಅದನ್ನು ಕೊಡೆ ಕಡ್ಡಿಯ ಮೂಲಕ ನಮ್ಮ ರಂಗ ತೆಗೆದು ಹಣ ಕಸಿಯುತ್ತಾನೆ. ಅದಕ್ಕಾಗಿ ಆ ಬೀಗವನ್ನೀಗ ನಾನು ಕೈ ಬಿಡುವುದೇ ಕಡಿಮೆ....'

o o o

'ಅಪ್ಪಾ ಈ ಪೆನ್ಸಿಲು ಒಮ್ಮೆ ಮೊನೆ ಮಾಡಿ ಕೊಡು...."

"ಹೇಗಮ್ಮಾ? ಇಲ್ಲಿ ಹರಿತವಿರುವ ಯಾವುದೇ ಚೂರಿಯಿಲ್ಲ...."

"ಬೇಕಾಗಿಲ್ಲಪ್ಪಾ, ಅಪ್ಪ ನಿನ್ನೆ ಹೇಳಲ್ವೇ? ಹೆಂಗಸರ ನಾಲಿಗೆ ಬಹಳ ಹರಿತವೆಂದು?...."

o o o

"ಮಗೂ, ಪರೀಕ್ಷೆಯಲ್ಲಿ ನೀನು ಗಳಿಸಿದ ಮಾರ್ಕೆಷ್ಟು?"

"ಅದೇಕಪ್ಪಾ? ನಿಮ್ಮ ಕಚೇರಿಯ ವಿಚಾರ ನಾನೇನಾದರೂ ಕೇಳುವುದಿದೆಯೆ? ...."

—ಎಚ್. ಎಂ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

9—3—1967

೧೦
ಪೈಸೆ

ಕಥಾ ಪ್ರಪಂಚ

ಮೈ ಬೆವರಿತು

ಕಥೆಗಾರರು
ಶ್ರೀ ಕೆ. ಪ್ರಭಾಕರ್, ಕಾಸರಗೋಡು

ಆಸ್ಪತ್ರೆಗೆ ಹೋಗಬೇಕೊ? ಗೀತಾಳನ್ನು ಕಾಣಲೋ—? ಹೋಗದೆ ಇರುವುದು ಸರಿಯೊ...? ದೀರ್ಘಕಾಲ ಆಲೋಚಿಸಿ ಯಾವುದೊಂದು ತೀರ್ಮಾನಕ್ಕೂ ಬಾರದಾದೆ.

ನನ್ನ ಜೀವನದಲ್ಲಿ ಒಂದಾಗಿ ಸೇರಿದವಳೇ ಗೀತಾ. ಆರು ವರ್ಷ ನಾವು ಒಂದಾಗಿ ಬಾಳಿದ್ದೇವೆ.

ಹಾಗಾದರೆ ಇಂದು? ಅವಳು ಯಾರು? ನನಗೆ ಅವಳಲ್ಲಿರುವ ಸಂಬಂಧ ಏನು? ಇಲ್ಲ.... ಒಂದೂ ಇಲ್ಲ. ನಮ್ಮ ದಾಂಪತ್ಯ ಬಂಧನದ ಹಗ್ಗವು ತುಂಡರಿಸಿ ವರುಷಗಳು ಕಳೆದಿರುತ್ತದೆ

ಗೀತಳ ನೆನಪು ಅಳಿಸಿ ಹೋಗಿದೆ. ಈಗ ಅವಳ ಸ್ಥಾನದಲ್ಲಿರುವವಳು ಚಂದ್ರ.

ಆದರೆ, ಗೀತಳ ಚಿಂತೆ ಈಗ ಪುನಃ ಮರುಕಳಿಸುತ್ತಲಿವೆ. ಅವಳನ್ನು ಕಾಣಲು ಒಳಗಿಂದೊಳಗೇ ಆಗ್ರಹ ಬರುತ್ತಲಿದೆ.

ಆಸ್ಪತ್ರೆಗೆ ಹೋಗುವ ವಿಷಯ ಚಂದ್ರಳಿಗೆ ತಿಳಿದರೆ? ಅವಳು ಏನೆಂದು ಗ್ರಹಿಸಿಯಾಳು? ಅವಳಿಗೆ ಯಾವ ರೀತಿಯಲ್ಲಿ ವಿಶದೀಕರಿಸಿಯೇನು? ಅದನ್ನೂ ಗ್ರಹಿಸುವಾಗ ನಾನು ಕಂಗಾಲಾದೆನು.

ಗೀತಾಳು ನನ್ನನ್ನು ತೊರೆಯಲು ಕಾರಣ? ಒಬ್ಬ ಹೆಂಡತಿಯು ಮಾಡ ಬಾರದ್ದನ್ನು ಮಾಡಿದಳು. ಅದನ್ನು ಗಂಡನಾದ ನಾನೆಂತು ಸಹಿಸಿಯೇನು?

ಗೀತಾಳು ನನ್ನನ್ನೂ ಅಗಲಿದ ದೃಶ್ಯ ಇಂದು ನನ್ನ ಮನಃಪಟಲದಲ್ಲಿ ತೇಲಾಡಿ ಬಂತು.

o o o o

ಆಫೀಸಿನಿಂದ ನಾನು ತಿರುಗಿ ಬರುತ್ತಿದ್ದೆ. ಮನೆಯಂಗಳದಲ್ಲಿ ಹಲವರು ನಿಂತಿರುವುದನ್ನು ಕಂಡೆ. ಏನಾಗಿರ ಬಹುದು. ಕಾರಣ?

ಸ್ವಲ್ಪ ಗಂಭೀರನಾಗಿಯೇ ಒಳಗಡೆಗೆ ತೆರಳಿದೆ. "ಸ್ವಲ್ಪ ಇತ್ತ ಬನ್ನಿ" ದಯಾನಂದ ಕರೆದನು. ನಾನು ಹೊರಗಡೆ ಹೋದೆನು.

"ಏನು....ಏನು ವಿಶೇಷ" ಎಂದು ಕೇಳಿದೆನು.

"ಒಂದು ತೊಂದರೆಯಾಯಿತು. ಆವೇಶವೇನೂ ಉಂಟಾಗ ಕೂಡದು."

"ಏನು ವಿಶೇಷ ಹೇಳಿ"

"ಬೇಸರಿಸ ಬಾರದು. ಚೆನ್ನಾಗಿ ಯೋಚಿಸಿಯೇ ನಿರ್ಧಾರಕ್ಕೆ ಬರಬೇಕು"

"ಏನಾಗಿದ ಅಂತಹ ಮಹಾ?' ನನಗೆ ದೇಹದಲ್ಲಿ ವಿದ್ಯುಚ್ಛಕ್ತಿ ಹರಿದಂತಾಗಲು ಪ್ರಾರಂಭವಾಯಿತು.

"ಏನಿದ್ದರೂ ನಾನು ಹೇಳುವೆನು...ಬೇರೇನೂ ಗ್ರಹಿಸಕೂಡದು. ನಿಮ್ಮ ಹೆಂಡತಿಯ ವಿಷಯ."

"ಅವಳೇನು ಮಾಡಿದಳು!" ಮೈ ಬೆವರಿತು.

"ಆಗಬಾರದ್ದು ಆದ ಹಾಗೆ ತೋರುತ್ತೆ. ಏನಿದ್ದರೂ ಎಲ್ಲವೂ ಬಯಲಾಗಿದೆ"

'ಅಯ್ಯೋ ವಿಷಯ ಹೇಳಿ ...ಹೇಳಿ ದಯಾನಂದ್'

'ನಿಮ್ಮ ಹೆಂಡತಿಯೂ ಗಣೇಶನೂ ತಮ್ಮೊಳಗೆ ಪ್ರೀತಿಸುವರು, ಇದು ನಮ್ಮೆಲ್ಲರಿಗೂ ತಿಳಿಯಿತು. ಇದು ತಿಳಿದೇ ನಾವು ಇಲ್ಲಿಗೆ ಬಂದದ್ದು. ನೀವು ಬಂದ ಮೇಲೇ ಹೋಗೋಣಾಂತ ನಿಂತಿದ್ದೆವು.'

ಹೃದಯದಲ್ಲಿ ಯಾರೋ ಕಠಾರಿಯಿಂದ ತಿವಿಯುತ್ತಿರುವಂತೆ ಭಾಸವಾಯಿತು. ಯಾವತ್ತೂ ಸಂಕೋಚಿಸಲು ಎಡೆ ಇಲ್ಲದಂತಹ ಸಂಕೋಚ ನಾನೀಗ ಕೇಳುತ್ತಿರುವುದು. ಇದೆಲ್ಲಾ ಅನ್ಯರು ತಿಳಿದಿರ ಬಹುದು.

"ಗಣೇಶನು ಮನೆಯಲ್ಲಿಲ್ಲ. ಎಲ್ಲಿಗೋ ಹೊರಗೆ ಹೋಗಿರುವನೆಂತ ತೋರುತ್ತೆ. ಗಲಾಟೆ ಮಾಡಿ ಪ್ರಯೋಜನವಿಲ್ಲ ನಿಮ್ಮ ಬುದ್ಧಿ ಮತ್ತು ಕ್ಷಮೆಯನ್ನು ಶರಣು ಹೋಗಬೇಕಾದ ಸಮಯ ಇದು...' ದಯಾನಂದ ತಡೆಯದೆ ಹೇಳತೊಡಗಿದ. ಆತನ ಒಂದೊಂದು ಮಾತುಗಳೂ ಮುಳ್ಳಿನ ಚುಚ್ಚೇ ಆಗಿದ್ದುವು.

ನೀರನ್ನೂ ಗೊಬ್ಬರವನ್ನೂ ಹಾಕಿ ಸಾಕಿ ಸಲಹಿದ ಹೂ ಗಿಡವನ್ನು ಯಾರೋ ಬುಡ ಸಮೇತ ಕಿತ್ತು ಎಸದಿದ್ದಾರೆ! ಇನ್ನದನ್ನು ನೆಟ್ಟು ಬೆಳೆಸಲು ಸಾಧ್ಯವಿದೆಯೇ.... ಒಂದೂ ನಿಶ್ಚಯವಿಲ್ಲ. ಹುಚ್ಚು ಹಿಡಿಯುವಂತಾಯಿತು ನನಗೆ.

"ಯಾಕಾಗಿ ನೀವೆಲ್ಲ ಇಲ್ಲಿ ನಿಂತಿದ್ದೀರಿ? ಇಲ್ಲೇನೂ ಇಲ್ಲ... ಹೋಗ ಬಹುದು. ಹೂಂ" ಗಟ್ಟಿಯಾಗಿ ಹೇಳಿದೆ. ಒಳಗೆ ಹೋಗಿ ಬಾಗಿಲು ಹಾಕುತ್ತಾ, ಮೇಜಿನಲ್ಲಿದ್ದ ಸಿಗರೇಟು ಹೊತ್ತಿಸಿದೆ ಅಲ್ಲೇ ಕುಳಿತು ಬಿಟ್ಟೆ. ಎಷ್ಟು ಸಮಯವೆಂದು ನನಗೇ ತಿಳಿಯದು. ಪಕ್ಕನೆ ನಾನು ಕೇಳಿದ ವಿಷಯಗಳನ್ನು ಒಂದೊಂದಾಗಿ ಮೆಲುಕು ಹಾಕಿದೆ.

"ಗೀತಾ...ಗೀತಾ...' ಸಿಟ್ಟಿನಲ್ಲೇ ಕರೆದೆನು ಕರೀಬೇಕೆಂದು ಕರೆದದ್ದಲ್ಲ. ಕರೆದು ಹೋದದ್ದು.

'ಏನು ..?" ಎಂಬ ಪ್ರಶ್ನೆಯೊಂದಿಗೆ ಬಾಗಿಲ ಬಳಿ ಬಂದು ನಿಂತಳು.

"ಬಾ ಇತ್ತ'

"ಏನಿದು ಇಂದು ಹೀಗೆ ಮಾಡುತ್ತಿರಾ?" ಸ್ವಲ್ಪ ಹತ್ತಿರಕ್ಕೆ ಬಂದು ನಿಂತಳು ನಾನು ಸ್ತಂಭೀಭೂತನಾದೆ. ಅವಳ ಕಣ್ಣುಗಳನ್ನು ಸೂಕ್ಷ್ಮವಾಗಿ ನೋಡಿದೆನು. ಇಲ್ಲ, ಈ ಮುಖದಲ್ಲಿ ಯಾವೊಂದು ಭಾವ ವ್ಯತ್ಯಾಸವಿಲ್ಲ ನಾನು ಕೇಳಿದ್ದೆಲ್ಲಾ ಸರಿಯಾಗಿರ ಬಹುದೆಂದು ಇವಳನ್ನು ಕಂಡಾಗ ತೋರುತ್ತಿಲ್ಲ.

"ಈಗ ಅವರು ಹೇಳಿದ್ದೆಲ್ಲಾ ಸರಿಯೇ ಗೀತಾ?"

'ಹೌದು'

'ಹೌದೋ.... ಏನೆಂದ?"

ವ್ಯಕ್ತವಾಯಿತು, ಮತ್ತೆ ಅವಳೇ ಹೇಳಿದಳು. ಆ ಶಬ್ದ ನನ್ನ ಕಿವಿಗಳನ್ನು ಕಿವುಡಾಗಿಸಿದುವು ನನ್ನ ಕೈಕಾಲುಗಳು ಕ್ಷೀಣಿಸಿದುವು. ನಿಲ್ಲಲಾಗಲಿಲ್ಲ. ಮೈ ಬೆವರಿ ಒದ್ದೆಯಾಯಿತು.

'ಗೀತಾ ...ನೀನೇನು ಹೇಳುತ್ತಿರುವೆ?"

"ಹೇಳಿದ್ದು ಕೇಳಿಲ್ಲವೇ? ನಾನೂ ಗಣೇಶನೂ ನಮ್ಮೊಳಗೆ ಪ್ರೀತಿಸುವೆವು. ನಿಮ್ಮನ್ನು ತ್ಯಜಿಸಲು ತೀರ್ಮಾನಿಸಿದ್ದೇನೆ'

'ನೀನು ಆಲೋಚಿಸಿ ತಾನೇ ಇದೆಲ್ಲವನ್ನು ಹೇಳುತ್ತಿರುವುದು. ಈ ವಿಚಾರ! ನಿನ್ನ ಬಾಯಿಯಿಂದ....ಇದೇನು, ಕನಸೇ ನನಸೇ!!'

"ಅದೆಲ್ಲಾ ಸರಿ. ಏನೋ ಹೇಗೋ ಸಂಭವಿಸಿತು. ಗತಿಸಿದ್ದನ್ನು ಚಿಂತಿಸಿ ಫಲವಿಲ್ಲ.'

"ಹಾಗಾದರೆ ಕಳೆದದ್ದನ್ನೆಲ್ಲಾ ಮರೆಯ ಬೇಕೆಂದು ತಾನೇ ನೀನು ಹೇಳುವುದು.?'

"ಹೌದು'

"ನನ್ನನ್ನು ನಾನೇನು ನೋಯಿಸಿದ್ದ? ಸಂಪೂರ್ಣವಾಗಿ ನಿನಗೆ ಸುಖ ಕೊಡಲು ನನ್ನಲ್ಲಿ ಧನ ಸಂಪಾದನೆ ಇಲ್ಲವಾಗಿತ್ತು ಆಗ ತಮ್ಮ ಸ್ಥಿತಿ ಈಗ ಸುಧಾರಿಸಿದೆ ಒಳ್ಳೆಯ ಸಂಪಾದನೆಯಿದೆಯೆಂದು ನಿನಗೆ ತಿಳಿಯದೆ? ಇಂತಹ ಸಮಯದಲ್ಲಿ ನೀನು ನನ್ನನ್ನು ತ್ಯಜಿಸುವುದೆಂದರೆ ...?"

"ಮುಗಿಯಿತೇ. ಇಲ್ಲ. ಇನ್ನೂ ಇದೆಯೇ? ನಿಮ್ಮೊಡನೆ ನನಗೆ ವಿರೋಧವಿಲ್ಲ. ಯಾವುದೋ ಒಂದು ವಿಷಗಳಿಗೆಯಲ್ಲಿ ಹೀಗೆ ನಡೆದು ಹೋಯಿತು. ಆದರಿಂದ ಇನ್ನು ಆ ವಿಷಯವನ್ನು ಆಲೋಚಿಸಿ ಪ್ರಯೋಜನವಿಲ್ಲ."

"ಇದು ನೀನು ಹೇಳಬೇಕಾದದ್ದು ಅಲ್ಲ ನಾನೇ ಹೇಳಬೇಕಾದದ್ದು."

"ಹೌದು."

"ಆದರೆ ನನಗೀಗ ಹಾಗೆ ತೋರುವುದಿಲ್ಲ."

"ನನಗೆ ಹಾಗೇ ತೋರುತ್ತೆ."

"ಹಾಗಾದರೆ ನೀನು ನನ್ನನ್ನು ಕೈ ಬಿಡುವೆಯಾ ಗೀತಾ__?"

"ಹೌದು. ನಮ್ಮ ವಿವಾಹ ಬಂಧನ ಮುರಿಯಲೇ ಬೇಕು'

ನನಗೇನೂ ಹೇಳಲು ತೋಚಲಿಲ್ಲ.

"ಹೀಗೆ ಕುಳಿತರೆ ಹೇಗೆ... ನೀವು ಏನು ತೀರ್ಮಾನಕ್ಕೆ ಬಂದಿರಿ? ಗೀತಾ ಕೇಳಿದಳು.

"ನಾನೇನು ಮಾಡಬೇಕು. ಹೇಳು ಗೀತಾ....ಹೇಳು.'

'ತಗೊಳ್ಳಿ, ಇದರದ್ದೊಂದು ಪ್ರತಿ ಬರೆಯಿರಿ ಇದು ಕೈ ಬದಲಾಗಿ ನಮ್ಮ ವಿವಾಹ ಬಂಧನ ಮುರಿಯ ಬೇಕು'.

'ಈ ರೀತಿ ಮಾಡಿದರೆ ವಿವಾಹ ವಿಮೋಚನೆ ದೊರೆಯ ಬಹುದೆ? ನನ್ನ ಜೀವನದ ಪ್ರಥಮ ಅನುಭವ ಗೀತಾ ಇದು."

ನಾನು ಆ ಕಾಗದವನ್ನು ನೋಡಿದೆನು. ಅಯ್ಯೋ ಇದನ್ನೂ ಕೂಡಾ ಇವಳು ಬರೆದು ತಯಾರಿಸಿ ಇಟ್ಟಿದ್ದಾಳೋ! ಈ ಹೆಂಗಸರು ಎಷ್ಟು ಭೀಕರ! ಇವರ ಒಳಗಿನ ಗುಟ್ಟು ಯಾರು ತಿಳಿದವರು? ಎಲ್ಲಾ ಗೋಮುಖ ವ್ಯಾಘ್ರಗಳು!

ಗೀತಾಳ ಮುಖವನ್ನೊಮ್ಮೆ ನೋಡಿದೆನು. ಮೊದಲಿನಿಂದ ಅವಳನ್ನು ಕಂಡೊಡನೆ ಅವಳ ನಡತೆ ನನ್ನ ಮನಸ್ಸಿಗೆ ಹಿಡಿಸಿದ್ದುವು. ಪ್ರೇಮದ ಮಾಧುರ್ಯ ತುಂಬಿ ಪ್ರಾಣಿಗಳಂತೆ ವರ್ತಿಸಿದ್ದವು. ಅನಂತರವೇ ವಿವಾಹವಾದದ್ದು. ಅಂದಿನ ಆ ಗೀತಾ ಇಂದಿನ ಈ ಗೀತಾಳಾಗಿ ಹೇಗೆ ಬದಲಾದಳು?

ಇನ್ನಾವುದನ್ನೂ ಚಿಂತಿಸಿ ಫಲವಿಲ್ಲ. ನನ್ನನ್ನು ತೊರೆಯಲು ಅವಳು ಸಿದ್ಧಳಾಗಿರುವಳು. ಹಾಗಿಯೇ ಆಗಲಿ.........ನಾನು ತೀರ್ಮಾನಿಸಿದ. ಕಾಗದಕ್ಕೆ ಸಹಿ ಹಾಕಿದೆ. ಪರಸ್ಪರ ಕೈ ಬದಲಾಯಿತು

'ಈ ರಾತ್ರಿ ನಾನಿಲ್ಲಿರಲು ನಿಮ್ಮ ಅಡ್ಡಿಯೇನಾದರೂ ಇದೆಯೇ?' ಗೀತಾ ಕೇಳಿದಳು.

ನಿನ್ನ ಇಷ್ಟವಿದ್ದಂತೆ ಮಾಡು.' ನಾನು ಹೇಳಿದೆ.

ನಾನು ಊಟ ಮಾಡಲಿಲ್ಲ ಎಂದಿನಂತೆ ನಿದ್ರಿಸುವ ಮಂಚದಲ್ಲಿ ಮಲಗಿದೆ; ಅವಳು ಪಕ್ಕದ ಕೋಣೆಯಲ್ಲಿ. ನನಗೆ ನಿದ್ರೆ ಬರಲಿಲ್ಲ. ತಿರುಗಿ ಮರುಗಿ ಮಲಗಿದೆ. ಅಂತೂ ಕಣ್ಣು ಮುಚ್ಚಿದ್ದು ತಿಳಿಯಲಿಲ್ಲ ಸ್ವಲ್ಪ ತಡವಾಗಿಯೇ ಎಚ್ಚರವಾಯಿತು ಗೀತಾ

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕೆಯ ಶಿಲ್ಪಿ ಬೋರ್‍ಗ್ಲಿಟೋರವರು ತನ್ನ ಅದ್ವಿತೀಯ ಕೃತಿಗೆ ಅಂತಿಮ ಸ್ಪರ್ಶ ನೀಡುತ್ತಿದ್ದಾರೆ.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೨೮ | ೯—೩—೧೯೬೭ | No. 28

ಇದು ರೋಗವಲ್ಲ

ಮದ್ರಾಸದಂತಹ ಕಾಂಗ್ರೆಸಿನ ನೆಲೆಮನೆಯಲ್ಲಿಯೂ ನಿಲ್ಲಲಾರದ ಕಾಂಗ್ರೆಸ್ ಸರಕಾರವನ್ನು ರಚಿಸುವ ಅಧಿಕಾರ ಕೆಲವೆಡೆ ಮಾತ್ರ ಉಳಿದಿದೆ. ಮೈಸೂರು ಅಥವಾ ಕರ್ನಾಟಕ ರಾಜ್ಯವು ಇಂತಹ ರಾಜ್ಯಗಳಲ್ಲಿ ಒಂದು. ೨೧೬ ವಿಧಾನ ಸಭೆಯ ಸ್ಥಾನಗಳಲ್ಲಿ ೧೪೦ನ್ನು ಗೆದ್ದುಕೊಳ್ಳುವೆವು ಎಂಬುದನ್ನು ಚುನಾವಣೆಗೆ ಮೊದಲು ರಾಜ್ಯ ಕಾಂಗ್ರೆಸ್ ನಾಯಕರ ಆತ್ಮವಿಶ್ವಾಸವೆನ್ನುವುದಕ್ಕಿಂತ ಗುರಿಯೆಂದು ಹೇಳುವುದು ಉಚಿತವಾದೀತು. ಚುನಾವಣಾ ಫಲಿತಾಂಶ ಹೊರಗೆಡಹುತ್ತಿದ್ದಾಗ, ೧೦೮ ಸ್ಥಾನಗಳಿಗೂ ಕೊರತೆ ಬಂದೀತೇನೋ ಎನ್ನುವ ಸಂದೇಹ ಕಾಡಿತಾದರೂ ಸುದೈವದಿಂದ ಆ ಸಂಖ್ಯೆ ೧೨೬ಕ್ಕೆ ಏರಿತು. ಸುಭದ್ರ ಸರಕಾರ ರಚಿಸಲು ಈ ಬಹುಮತ ಧಾರಾಳ ಸಾಕು.

ಕರ್ನಾಟಕ ರಾಜ್ಯ ರಚನೆಯಾಗಿ ಹತ್ತುವರೆ ವರ್ಷಗಳು ಕಳೆದುವು. ಈ ನಡುವೆ ಆರು ಬಾರಿ ಮುಖ್ಯ ಮಂತ್ರಿಯನ್ನು ಆಯ್ದುಕೊಳ್ಳುವ ಅವಕಾಶ ಪ್ರಾಪ್ತವಾಯಿತು. ಆರನೆಯ ಬಾರಿ ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರೇ ನಾಯಕರಾಗಿದ್ದಾರೆ. ಸತತವಾಗಿ ನಾಲ್ಕನೆಯ ಸಲ ಸರ್ವಾನುಮತದ ಆಯ್ಕೆ ಎಂದರೆ, ಯಾರೂ ಗಾಬರಿಯಾಗ ಬೇಕಾಗಿಲ್ಲ. ನಿಜಲಿಂಗಪ್ಪನವರು ವಿಧಾನ ಸಭೆಗೆ ಆಯ್ಕೆಗೊಂಡ ಕ್ರಮವನ್ನು "ಹಿಂಬಾಗಿಲಿನ ಪ್ರವೇಶ"ವೆಂದು ಕರೆಯುವವರುಂಟು. ಹಿಂದಿನ ಬಾರಿ ಚುನಾವಣೆಯಲ್ಲಿ ಸೋತ ಮುಖ್ಯ ಮಂತ್ರಿಗಳಾಗಿದ್ದ ಇವರು ಮತ್ತೆ ಉಪಚುನಾವಣೆಯ ಮೂಲಕ ಗೆದ್ದು ಭಂತನಿಂದ ರಾಜ್ಯಭಾರ ವಹಿಸಿದ ಕಥೆ ಎಲ್ಲರಿಗೂ ತಿಳಿದದ್ದೆ. ಈ ಬಾರಿ ಆರಂಭದಲ್ಲೇ ರಾಮರಾಜ್ಯ ಸ್ಥಾಪಿತವಾಯಿತು ಎಂಬುದಷ್ಟೇ ಸಮಾಧಾನ. ಚುನಾವಣೆಗಳಲ್ಲಿ ತನ್ನ ಪಂಗಡಗಳವರಿಗೆ ಮಾತ್ರ ಕಾಂಗ್ರೆಸ್ ಟಿಕೇಟು ಕೊಡುತ್ತಿದ್ದರು ಎಂಬುದು ಈ ರಾಮನ ಮೇಲಿನ ಚುನಾವಣಾ ಆಕ್ರೋಶದಿಂದ ಮಾಡಿದ ಆರೋಪ. ಇದರಿಂದಾಗಿ ಭಿನ್ನಮತ ಕಾಂಗ್ರೆಸ್ಸು ಬಲಗೊಂಡಿತು. ವಿಧಾನ ಸಭೆಯ ಬಲದಲ್ಲಿ ಕಾಂಗ್ರೆಸ್ಸಿನ ಬಲ ಕಡಿಮೆಯಾದುದಕ್ಕ ಟಿಕೇಟು ವಿತರಣೆಯಲ್ಲಿನ ಕುಂದುಕೊರತೆಗಳೂ ಕಾರಣವಾಗಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಜನತೆಯಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ರಾಜಕೀಯ ಪ್ರಜ್ಞೆಯನ್ನು ಪ್ರಜಾಪ್ರಭುತ್ವದ ಬೆಳವಣಿಗೆ ಎಂದೇ ಕರೆಯಬೇಕಲ್ಲದೆ, ಕಾಂಗ್ರೆಸ್ಸಿನ ಸೋಲು ಎಂದು ಕರೆಯಲಾಗದು. ಜನತೆ ಕಾಂಗ್ರೆಸ್ಸಿನಲ್ಲಿ ವಿಶ್ವಾಸ ಕಳೆದುಕೊಂಡಿದೆ ಎನ್ನುವುದು ಸರಿಯಲ್ಲ; ವಿರೋಧೀ ಪಕ್ಷಗಳಿಗೂ ಒಂದು ಅವಕಾಶಕೊಟ್ಟು ನೋಡೋಣವೆಂದು ಅನ್ನಿಸಿದೆ ಜನಕ್ಕೆ ಅಷ್ಟೆ. ಆದರೆ, ಕರ್ನಾಟಕದಲ್ಲಿ ಇಂತಹ ಆಶೆ ಈಡೇರಲಿಲ್ಲ. ಮುಂದಿನ ಬಾರಿ ಕಾಂಗ್ರೆಸ್ಸು ಎಚ್ಚರ ತಪ್ಪಿದರೆ ಈ ಆಶೆಯೂ ಈಡೇರುವ ಲಕ್ಷಣಗಳೇ ಹೆಚ್ಚು. ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಳದ ಸದಸ್ಯರ ಹೆಸರುಗಳು ಇಷ್ಟರಲ್ಲೇ ಪ್ರಕಟವಾಗಲಿವೆ. ಸಂಪುಟವೂ ಹಿಂದಿನದರಂತೆಯೇ ಸಾಕಷ್ಟು 'ವಿಶಾಲ ತಳಹದಿಯಲ್ಲಿ'ಯೇ ಇರುವುದೆಂದೂ ನಂಬಬಹುದು. ಚುನಾವಣೆಗಳಲ್ಲಿ ಪರಾಜಿತರಾದ ಕೆಲವರ ಸ್ಥಾನಗಳನ್ನು ಹೊಸ ಹೆಸರುಗಳಿಂದ ಭರ್ತಿ ಮಾಡುವ ಸಂಭವವೇ ಹೆಚ್ಚು. ಅಂದರೆ, ಒಟ್ಟಿನಲ್ಲಿ ಮತ್ತೆ ಹಿಂದಿನವರದೇ ಅಧಿಕಾರ ಜನತೆಯ ಮೇಲೆ.

ನಾಯಕತ್ವವು ಹಳೆಯದಾಗುವಾಗ ಅದರ ಅನುಗಾಮಿತ್ವವೂ ಹಳೆಯದಾಗುವುದು ಅನಿವಾರ್ಯವೋ ಏನೋ! ಇದನ್ನೊಂದು ರೋಗವೆಂದು ಕರೆಯಬಹುದಾದರೆ, ಇದರಿಂದ ಯಾವ ರಾಜಕೀಯ ಪಕ್ಷವೂ ವಿಮುಕ್ತವಾಗಿಲ್ಲ; ಯಾವ ದೇಶವೂ ಇದಕ್ಕೆ ಹೊರತಾಗಿಲ್ಲ. ಕೇರಳವನ್ನೇ ತೆಗೆದುಕೊಳ್ಳಬಹುದು. ಎಡ ಕಮ್ಯೂನಿಸ್ಟ್ ನಾಯಕತ್ವದಲ್ಲಿ ಸಪ್ತಗಂಗ ಅಧಿಕಾರ ಸ್ವೀಕರಿಸಿತು. ಶ್ರೀ ನಂಬೂದರಿಪಾದರೇ ಮತ್ತೆ ಮುಖ್ಯಮಂತ್ರಿಯಾದರು. ಅವರ ಮಂತ್ರಿಗಳು ಯಾರು? ತನ್ನ ಪಕ್ಷದಿಂದ ಹಳೆಯ ಅನುಯಾಯಿಗಳನ್ನೇ ಅವರು ಆಯ್ದುಕೊಳ್ಳಲಿಲ್ಲವೆ? ಉಳಿದ ಪಕ್ಷಗಳ ಕಥೆ ದೂರವಿರಲಿ. ಕೇಂದ್ರ ಸರಕಾರದಲ್ಲೂ ಅಷ್ಟೇ. ೧೮ ವರ್ಷಗಳ ಕಾಲ ನಿರಂತರವಾಗಿ ಪ್ರಧಾನಿ ಪೀಠವಲಂಕರಿಸಿದ ಲೋಕ ನಾಯಕ ನೆಹರು ಕೂಡ ಈ ಆರೋಪಕ್ಕೆ ಗುರಿಯಾಗದಿಲ್ಲ. ಒಂದಕ್ಕಿಂತ ಹೆಚ್ಚು ಬಾರಿ ನಾಯಕನಾಗಿ ಆಯ್ಕೆಗೊಳ್ಳುವುದು, ತನ್ನ ಅನುಯಾಯಿಗಳನ್ನೇ ಮಂತ್ರಿಯಾಗಿ ನೇಮಿಸುವುದು ವಿದೇಶಗಳಲ್ಲೂ ಇದೆ. ಪ್ರಜಾಸತ್ತೆಯ ರಾಣಿ ಇಂಗ್ಲೆಂಡಿನ ಕಥೆಯೇನು? ತನ್ನ ಜೀವನದಲ್ಲಿ ಸುಮಾರು ಮುಕ್ಕಾಲಂಶವನ್ನು ಚರ್ಚಿಲ್ ಮಹಾಶಯರು ಪಾರ್ಲಿಮೆಂಟ್ ಭವನದಲ್ಲಿಯೇ ಕಳೆದರು. ನಡು ಹರೆಯದಲ್ಲೂ ಮುದಿತನದಲ್ಲೂ ಅವರೂ ಅವರ ಅನುಯಾಯಿಗಳೂ ಮಂತ್ರಿಗಳಾದರು. ತನ್ನ ನೇತೃತ್ವದ ಸರಕಾರ ತನ್ನ ನೀತಿ-ಧೋರಣೆಗಳಿಗೆ ಸರಿಯಾಗಿ ನಡೆಯುವಂತಾಗಬೇಕಾದರೆ, ತನ್ನಲ್ಲಿ ವಿಶ್ವಾಸವಿಟ್ಟವರಾಗಬೇಕು; ತನ್ನ ವಿಶ್ವಾಸಕ್ಕೆ ಪಾತ್ರರೂ ಆಗಬೇಕು. ಕೈ ಮತ್ತು ಕಾಲುಗಳಲ್ಲಿ ಮಿಲನ ಸಾಧ್ಯವಿಲ್ಲ. ಹಾಗಾಗಿ ನಿಜಲಿಂಗಪ್ಪನವರು ಹಳೆಯ ಅನುಯಾಯಿಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಿದರೆ ಅದು ಅಪರಾಧವಲ್ಲ. ಇದುವರೆಗೆ ಕಾಂಗ್ರೆಸ್ಸು ಮಾತ್ರ ಈ ಆರೋಪ ಹೊರುತ್ತಿತ್ತು; ಈ ಬಾರಿ ಕಮ್ಯುನಿಸ್ಟರೂ ಆ ಆರೋಪ ಹೊರಲು ಹಿಂಜರಿಯಲಿಲ್ಲ. ಮುಂದೆ ಇನ್ನೂ ಕೆಲವು ಪಕ್ಷಗಳೂ ಹೊರಬೇಕಾಗಿ ಬರಬಹುದು. 'ಹಿಂಬಾಗಿಲಿನ ಪ್ರವೇಶ'ದ ನಿಜವಾದ ಅರ್ಥ ಜನಸಾಮಾನ್ಯರಿಗೆ ಆಗಿಯೇ ಆಗುತ್ತದೆ. ಮೊದಲು ಹುಟ್ಟಿದ ಕಿವಿಗಿಂತ ಮುಂದೆ ಮೂಡಿದ ಕೊಂಬಿನಿಂದಲೇ ಹಾನಿ ಹೆಚ್ಚು ಎಂಬುದು ಅವರಿಗೆ ಮನವರಿಕೆಯಾಗುತ್ತದೆ. ಇದಕ್ಕಾಗಿ ಜನ ಜಾಗೃತಿ ಮಾಡುವುದು ಕಾಂಗ್ರೆಸ್ಸಿನ ಕರ್ತವ್ಯ; ಉಳಿದವರ ಕಾರ್ಯವೂ ಹೌದು.

ಸುಖಾಂತಿಯಾ ಸುಖಿಯೆ?

ಇದುವರೆಗೆ ದೇಶದ ಯಾವ ಮೂಲೆಯಲ್ಲಿಯೂ ಕಾಣದ ಪ್ರಸಂಗವೊಂದು ರಾಜಸ್ಥಾನದಲ್ಲಿ ತಲೆದೋರಿತು. ಅಲ್ಲಿನ ಅಧಿಕಾರ ಸ್ವಯಂವರ ಪೀಠವನ್ನು ಏರಲು ತಾವು ಸಶಕ್ತರೆಂದು ಕಾಂಗ್ರೆಸಿಗರೂ ತಾವೇ ಸಶಕ್ತರೆಂದು ವಿರೋಧಿ ಸಂಯುಕ್ತರಂಗದವರೂ ವಾದಿಸಿ ರಾಜ್ಯಪಾಲ ಡಾ| ಸಂಪೂರ್ಣಾನಂದರನ್ನು ಕಂಗೆಡಿಸಿದರು. ಒಬ್ಬ ಕನ್ಯೆಯನ್ನು ಬಯಸಿ ಬಂದ ಇಬ್ಬರು ಕುಮಾರರಲ್ಲಿ ಯಾರನ್ನು ಆಯ್ದುಕೊಳ್ಳುವುದು ಎಂದು ಕನ್ಯಾಪಿತನ ಚಿಂತೆ. ತನ್ನ ನಿರ್ಧಾರವನ್ನು ಮರುದಿನ ತಿಳಿಸುವುದಾಗಿ ಹೇಳಿದ ಅವರು ಕಾಂಗ್ರೆಸ್ಸನ್ನೇ ಆಮಂತ್ರಿಸಿದರು. ವಿಧಾನ ಸಭೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ದೊರೆಯದೆ ಹೋದರೆ, ಅಧಿಕ ಸಂಖ್ಯಾಕ ಪಕ್ಷವು ಸರಕಾರ ರಚಿಸಲು ಅವಕಾಶ ಕೊಡುವುದು ಸಹಜವೆಂದವರು ಸ್ವಾತಂತ್ರ್ಯ ಪೂರ್ವದಲ್ಲಿನ ರಾಜಾಜಿ ಮಂತ್ರಿಮಂಡಳ ರಚನೆಯ ಉದಾಹರಣೆ ಇತ್ತರು. ಇದು ನ್ಯಾಯವೇ. ಆದರೆ, ಪ್ರಜಾಸತ್ತೆಗೆ ಪ್ರಹಾರವೆಂದು ಈಗಲೇ ಬೊಬ್ಬಿರಿಯುವ ವಿರೋಧಿಗಳ ನಡುವೆ ಈ ಸುಖಾಡಿಯಾ ಹೇಗೆ ಸುಖದ ದಿನಗಳನ್ನು ಕಾಣುವರು?

ವಚನಸಪ್ತಕ

ಪಿತೃಪಿತಾಮಹಂ ರಾಜ್ಯಂ
ಪ್ರಾಪ್ತವಾನ್ ಸ್ವೇನ ಕರ್ಮಣಾ
ವಾಯುರಭ್ರಮಿ ವಾಸಾದ್ಯ
ಭ್ರಂಶಯತ್ಯನಯೇ ಸ್ಥಿತಃ||

ಅನ್ಯಾಯ ನಿರತನಾದ ರಾಜನು ತನ್ನ ಪೂರ್ವಪುರುಷರಿಂದ ಅಧಿಕಾರ ಪಡೆದರೂ ತನ್ನ ಕುಕೃತ್ಯಗಳಿಂದಲೇ, ಗಾಳಿಯು ಮೋಡಗಳನ್ನು ಛಿನ್ನ-ಭಿನ್ನವಾಗಿಸುವಂತೆ ಅಧಿಕಾರವನ್ನು ಭ್ರಷ್ಟಗೊಳಿಸುತ್ತಾನೆ.

ನರಸಣ್ಣನ ಸರಸ



'ನಾವು ಹೆಚ್ಚು ಕೆಲಸ ಮಾಡಿದ್ದಲ್ಲಿಯೇ ಸೋತಿದ್ದೇವೆ ಎಂದು ನಾಯಕರೊಬ್ಬರು ಉದ್ಗರಿಸಿದರಂತೆ—'

'ನಾಯಕರ ಕೆಲಸದ ಗುಟ್ಟು ಬೋರೇಗೌಡ ಅರಿತುಕೊಂಡನಲ್ಲಾ, ಅದೇ ಸಂತೋಷ...'

ಗೇಹ ರಾಜ್ಯದಲ್ಲಿ

ನಿಮ್ಮದೇ ಅಧಿಕಾರವಿರಬೇಕು

"ಕೇಳಿದ್ರಲ್ಲಾ?"

"ಏನು?"

"ಅಲ್ಲಾ, ಹೊಸ ರಕ್ತಕ್ಕೆ ಅವಕಾಶ ಮಾಡಿಕೊಡ್ಬೇಕೂಂತ ಬಾಯಲ್ಲಿ ಶಾಸ್ತ್ರ ಹೇಳ್ತಾ ಹೇಳ್ತಾ ಈ ಹಳೇ ಹುಲಿಗಳು ಗಾಳ ಹಾಕಿಯೇ ಬಿಟ್ರುವಲ್ಲಾಂತ?"

'ಅಂದ್ರೆ? ಎಂಥದಿದು? ಹಳೆ ಹುಲಿ, ಹೊಸ ರಕ್ತ.... ಯಾರು? ಏನು? ಎಲ್ಲಿ? ......'

'ಮತ್ತೆಂಥದಿರಿ? ನಿಮ್ಮ ಟೋಪಿಯವರ ಭಾರಿ ಕಥೆ...."

'ಅಂದ್ರೆ?"

"ನೋಡಿ, ದೇಶದ ಆಡಳಿತೆಯಲ್ಲಿ ಹೊಸ ರಕ್ತಕ್ಕೆ ಅವಕಾಶ ಮಾಡಿಕೊಡಬೇಕು; ಯುವಜನಾಂಗವನ್ನು ಪಕ್ಷಕ್ಕೆ ಆಕರ್ಷಿಸಬೇಕು .... ಅವರಿಗೂ ಅಧಿಕಾರ ಸ್ಥಾನ ಕೊಡಬೇಕು... ಹಾಗೆ...ಹೀಗೇಂತ ಮಾರುದ್ದ ನಾಲಿಗೆ ತುಂಬ ಲೆಕ್ಚರ್ ಬಿಟ್ಟವ್ರೆಲ್ಲಾ ನೋಡಿ, ಚುನಾವಣೆಯಲ್ಲಿ ಗೆದ್ದದ್ದೇ ತಡ ಎಲ್ರೂ ತಮ್ಮ ಹಳೆಯ ಗುಳವನ್ನೇ ಬಿಗಿಯಾಗಿ ಹಿಡಿದು ಬಿಟ್ರೂಂತ....'

'ಓ ಹೋ ಹೋ....ಇದಷ್ಟು ದ್ರಾವಿಡ ಪ್ರಾಣಾಯಾಮ...."

'ಏನು ದ್ರಾವಿಡರಾದವರು ದ್ರಾವಿಡ ಪ್ರಾಣಾಯಾಮ ಮಾಡಿದ್ರೆ ತಪ್ಪೇನಂತೆ?'

"ನೋಡಮ್ಮ, ಪ್ರಜಾಸತ್ತೆಯಲ್ಲಿ ತಪ್ಪು—ಒಪ್ಪು ಎಂಬುದು ಬೇರಿಲ್ಲ. ಬಹುಜನಮತವೇ ಒಪ್ಪು; ಅಲ್ಪಜನಮತವೇ ತಪ್ಪು. ಹಾಗಿರುವಾಗ, ಯಾರು ಸರಿ, ಯಾರು, ತಪ್ಪು ಎಂದು ಹೇಗೆ ಸಿದ್ಧ ಮಾಡುವುದು?'

'ಅದು ಸರೀನ್ನಿ. ಸಂವಿಧಾನದಲ್ಲಿ ಕೊಡಮಾಡಿದ ಮೂಲಭೂತ ಹಕ್ಕುಗಳನ್ನು ನಿಮ್ಮ ಟೋಪಿ ಸರಕಾರ ಮೊಟಕು ಮಾಡುತ್ತ ಬಂದುದು ತಪ್ಪಾದರೂ ಉಚ್ಚನ್ಯಾಯಾಲಯವು ಅನೆಲ್ಲಕ್ಕೂ ಅನಿವಾರ್ಯ ಮನ್ನಣೆ ನೀಡಿರುವಾಗ...'

'ಮತ್ತೆ ಮಾಡುವುದೇನು? ಇನ್ನು ಮುಂದೆ ಹೀಗೆ ಮಾಡಬಾರದೂಂತ ಗದರಿಸಿ ಬಿಡುವುದು...."

"ಹ್ಞಾಂ.... ಶಾಲೆಯಲ್ಲಿ ಮಕ್ಕಳನ್ನು ಉಪಾಧ್ಯಾಯರು ಬೆದರಿಸುತ್ತಾರೆ, ನೋಡಿ ಹಾಗೆ...."

"ಹೌದು__ಆದಿರ್ಲಿ.... ಈಗ ನೀನು ಏನು ಹೇಳುತ್ತಿದ್ದೆ?"

"ಯಾರು? ನಾನೆ? ಹ್ಞಾಂ....ಹೌದು. ನೋಡಿ, ಈ ಬಾರಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ನಿಚ್ಚಳ ಬಹುಮತಗಳಿಸಿದ್ದು ಬರಿಯ ಏಳು ರಾಜ್ಯಗಳಲ್ಲಿ. ಅಲ್ಲಿ ಹೊಸ ರಕ್ತಕ್ಕ ಹೇಗೆ ಪ್ರಾಶಸ್ತ್ಯ ನೀಡುತ್ತಾರೇಂತ ನೀವೇ ನೋಡಿ—ಮೈಸೂರಿಗೆ ನಾಲ್ಕನೆಯ ಬಾರಿಗೆ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾದರು. ಆಂಧ್ರ ಪ್ರದೇಶಕ್ಕ ಮತ್ತ ಬ್ರಹ್ಮಾನಂದ ರೆಡ್ಡಿಯವರು...'

'ಹ್ಞಾಂ... ಮಧ್ಯಪ್ರದೇಶದಲ್ಲಿ ಮಿಶ್ರ, ಮಹಾರಾಷ್ಟ್ರದಲ್ಲ ನಾಯಕ್, ಗುಜರಾಥದಲ್ಲಿ ದೇಸಾಯಿ, ಅಸ್ಸಾಮದಲ್ಲ ಚಾಲಿಹಾ ಮತ್ತ ನಾಯಕರಾದರು...'

'ಇನ್ನು ಹರಿಯಾನಾದಲ್ಲ ಅಷ್ಟೆ...."

'ಹ್ಞಾಂ.... ಏನಾಯಿತು?'

"ಅಲ್ಲ, ಈ ಹಳೆ ಹುಲಿಗಳು ಅಧಿಕಾರ ಬಿಡದೆ ಹೋದರೆ, ಹೊಸಬರಿಗೆ ಅವಕಾಶವೆಲ್ಲಿಂತ?'

'ಓಹೋ, ಹಾಗೊ? ನೋಡು.... ಈ ಬಾರಿ ಶಾಸಕ ಸ್ಥಾನಕ್ಕೆ ಉಮೇದ್ವಾರಿಗಳನ್ನು ಆರಿಸುವಾಗ ಹೊಸ ರಕ್ತ—ಎಳೆರಕ್ತಗಳಿಗೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ...'

'ಸರಿ. ಆದರೆ, ನಾಯಕತ್ವವೆಲ್ಲ ತಂಗೂಳು....'

'ಛೇ...ಹಾಗೆನ್ನ ಬೇಡ. ಆಡಳಿತಯಂತ್ರವು ಸುಸೂತ್ರವಾಗಿ ಸಾಗಬೇಕಾದರೆ, ಅನುಭವ ಬೇಕು ...ನರೆತ ತಲೆಯಲ್ಲೇ ಅನುಭವ ಭಂಡಾರ ತುಂಬಿಕೊಳ್ಳುತ್ತದೆ__'

"ಇರಬಹುದು ..'

'ಇನ್ನು ನೋಡು, ಮುಖ್ಯಮಂತ್ರಿಗಳು ಹಿಂದಿನವರೇ ಆದರು. ಯಾಕೆ? ಎಲ್ಲ ಸದಸ್ಯರೂ ಅವರೇ ನಾಯಕರಾಗಬೇಕೆಂದು ಪಟ್ಟು ಹಿಡಿದರು ತಮಗೆ ಎಳ್ಳಿನ ಏಳಂಶದಷ್ಟು ಮನಸ್ಸಿಲ್ಲದಿದ್ದರೂ, ಹೊಸಬರಿಗೆ ಅವಕಾಶ ಮಾಡಿಕೊಡುವ ಹುಮ್ಮಸ್ಸಿದ್ದರೂ ಜನತಾಜನಾರ್ದನನ ಕಳಕಳಿಯ ಪ್ರಾರ್ಥನೆಯನ್ನು ಕಡೆಗಣಿಸಿ ಅವರನ್ನು ದುಃಖ ಸಂಕಟಕ್ಕೆ ತಳ್ಳುವ ಅಪರಾಧ ಮಾಡುವುದು ನ್ಯಾಯವೆ, ನೀನೆ? ಅದುದರಿಂದಲೇ ನಾಯಕತ್ವದ ಮುಳ್ಳಿನ ಕಿರೀಟವನ್ನು ಹೊತ್ತು ಅಧಿಕಾರದ ಮುಳ್ಳಿನ ಹಾಸುಗೆಯಲ್ಲಿ ಕುಳಿತಾಯಿತು. ಇನ್ನು, ತನ್ನ ಸಹೋದ್ಯೋಗಿಗಳನ್ನು ಆಯುವಾಗ, ನೀನಂದಂತಹ ವಿಷಯಗಳನ್ನು ಗಮನದಲ್ಲಿ ಅವಶ್ಯ ಇಟ್ಟುಕೊಳ್ಳುತ್ತಾರೆ...."

"ನಾಳು ಬಿಡೀಂದ್ರೆ ಸಿನ್ಮಾರಾಮಾಯಣ. ಅಲ್ಲಾ, ಅಧಿಕಾರದ ವ್ಯಾಮೋಹವಿಲ್ಲ ಅಂತಾದ್ರೆ, ಚುನಾವಣೆಗೆ ಯಾಕ ನಿಲ್ಲಬೇಕಿತ್ತು? ನಿಂತರೂ ಗೆದ್ದು ಬರೋದಕ್ಕೆ ಯಾಕೆ ಮಹಾಭಾರತ ಮಾಡಬೇಕಿತ್ತು?"

"ಯಾಕೆ ಅಂದರೆ? ಪ್ರಜಾಪ್ರಭುತ್ವದಲ್ಲಿ ಜನತೆಯೇ ದೇವರು. ಜನರು ತಮಗೆ ನೀವು ಬೇಕು ಅಂತ ಅಂದಾಗ ನಾವಿಲ್ಲಾಂತಂದ್ರೆ ಶಾಪವಿಟ್ಟಾರು. ಜನ ಸೇವೆಯನ್ನೇ ಜೀವನದ ಹೆಗ್ಗುರಿಯಾಗಿಟ್ಟುಕೊಂಡ ರಾಜಕಾರಣಿಗಳು ಹಾಗೆ ಮಾಡಲೂ ಬಾರದು...."

'ಅಂತೂ ಅನ್ನಿ. ನಮ್ಮದೇ ಪ್ರೈವೇಟ್ ಲಿಮಿಟೆಡ್ ಕಂಪೆನಿ. ಮೆನೇಜರಗಿರಿ ನೀಡಲು ನೆರವಾದಂತ ಕೆಲವರೇ ಡೈರೆಕರರೂ ಆಗುತ್ತಾರೆ...."

"ಅಂದ್ರೆ?'

'ಮತ್ತೇನು? ಇನ್ನು ಈ ಹೊಸ ಚುನಾವಣೆಯ ನಂತರ ಮತ್ತೆ ಹಳೆಯ ಮಂತ್ರಿ ಮಾಗಧರೇ ಅಧಿಕಾರಕ್ಕೆ ಬರುತ್ತಾರೆ....ಅದಕ್ಕೇ ನೋಡಿ, ಉಳಿದೆಡೆ ಕಾಂಗ್ರೆಸ್ಸು ಸೋತು ಹೋಗಿರೋದು...."

'ಅದೆಂಥದೆ? ಇಲ್ಲಿ ನೋಡು. ಕೇರಳದಲ್ಲಿ ಎಡ ಕಮ್ಯೂನಿಸ್ಟ್ ನಾಯಕತ್ವದಲ್ಲಿ ಸಪ್ತರಂಗ ಅಧಿಕಾರ ವಹಿಸಿತು. ನಾಯಕರು ಯಾರು? ಹಿಂದಿನ ಕಮ್ಯೂನಿಸ್ಟ್ ಸರಕಾರದ ನಾಯಕರೇ, ನಂಬೂದಿರಿ ಪಾಡರು....ಇನ್ನವರ ಸಂಪುಟದ ಸದಸ್ಯರು.. ಅವರೇ ಗೌರಿ....ಕೋಯಾ....'

"ಹಾದೇನ.?'

"ಇಲ್ಲಿ ನೋಡು.... ಪಶ್ಚಿಮ ಬಂಗಾಳದ ಸಂಯುಕ್ತ ಸರಕಾರದ ಕಥೆ.... ನಾಯಕರು ಬಂಗ್ಲ ಕಾಂಗ್ರೆಸ್ಸಿನ ಅಜಯಮುಖರ್ಜಿ..ಇವರೂ ಹಳೆಯ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ..ಇನ್ನು ಒರಿಸಾದಲ್ಲಿ ಮಹತಾಬರ ಡಾಳ ಉರುಳುವ ನಿರೀಕ್ಷೆ ಹೀಗೆಯೇ...'

'ಅಂದ್ರೆ, ಅಧಿಕಾರ ಒಮ್ಮೆ ವಹಿಸಿದ್ರೆ ಕೆಳಗೆ ಬರೋದಕ್ಕೆ ಮನಸ್ಸು ಒಪ್ಪೋದಿಲ್ಲ....'

'ಅಷ್ಟು ಮಾತ್ರವಲ್ಲ ಕೈಕಾಲು ಹಿಡಿದು ಜಗ್ಗಿದ್ರೂ ಜಾರೋಕೆ ಇಷ್ಟವಿಲ್ಲ. ಹಾಗಿರುವಾಗ, ಇದ್ರಲ್ಲೇನು ವಿಶೇಷಾಂತ...'

'ಸರಿ, ಹಾಗಾದ್ರೆ....'

"ಏನು ಸರಿ?'

"ಅಲ್ಲ, ಸೋತ ಎಸ್. ಕೆ. ಪಾಟೀಲರು ಮತ್ತೆ ಉಪಚುನಾವಣೆಯಲ್ಲಿ ನಿಲ್ಲ ಬಯಸುತ್ತಾರೇಂತ ಕೇಳಿದೆ....ಅಂದ್ರೆ ಇಷ್ಟು ಅಧಿಕಾರದ ಮೋಹ ಯಾಕೇಂತ ಅಂದುಕೊಂಡಿದ್ದೆ....ಈಗ ನೋಡುವಾಗ ಇದು ಬರಿಯ ಕಾಂಗ್ರೆಸ್ಸಿಗೆ ಮಾತ್ರವಲ್ಲ. ಎಲ್ಲ ಪಕ್ಷ—ವ್ಯಕ್ತಿಗಳಿಗೂ ಅಂಟಿದ ಸಾಂಕ್ರಾಮಿಕರೋಗ...."

'ಹ್ಞಾಂ....ನೋಡು, ಕೃಷ್ಣಮೆನನ್‌ಗೆ ಕಾಂಗ್ರೆಸ್ ಟಿಕೇಟು ದೊರೆಯದೆ ಹೋದಾಗ, ಕಾಂಗ್ರೆಸ್ ಬಿಟ್ಟು ಜನತೆಯ ಒತ್ತಾಯದ ಮೇರೆಗೆ ಪಕ್ಷಾತೀತವಾಗಿ ನಿಂತರು. ಅಲ್ಲಿನ ಜನತೆಯು ಅವರನ್ನು ನಿರಾಕರಿಸಿತೂನ್ನು. ಈಗ ಮತ್ತೆ, ಕಮ್ಯೂನಿಸ್ಟರಾಗಿ ಕೇರಳದಲ್ಲಿಯೋ, ದ್ರಾವಿಡಕಳಗಂ ಆಗಿ ಮದ್ರಾಸದಲ್ಲಿಯೋ ಮತ್ತೆ ಉಪಚುನಾವಣೆಗೆ ನಿಲ್ಲುವ ಆಲೋಚನೆಯಲ್ಲಿದ್ದಾರಂತೆ....'

"ಯಾರ ಒತ್ತಾಯದ ಮೇಲೆ?"

'ಅಧಿಕಾರದ ಒತ್ತಡದ ಮೇಲೆ...."

(ಪರಿಪೂರಣ ಪುಟ ನೋಡಿರಿ)

ಪ್ರಗತಿ ಪಥದಲ್ಲಿ ಸಿಂಡಿಕೇಟ್ ಬ್ಯಾಂಕು

1966ರ ಮೈಲುಗಲ್ಲುಗಳು

	1964 ರೂ.	1965 ರೂ.	1966 ರೂ.
ಪಾವತಿಯಾದ ಭಂಡವಲು (ಮುಂಗಡ ಕರೆಯಲ್ಪಟ್ಟ ಅಂಶಗಳು ಒಳಗೊಂಡಿವೆ)	93,57,904	99,72,556	1,00,54,817
ಕಾದಿಟ್ಟ ನಿಧಿ (ಶೇರ್ ಪ್ರೀಮಿಯಂ ಒಳಗೊಂಡಿವೆ)	85,00,000	1,00,00,000	1,33,84,724
ಠೇವಣಿಗಳು	51,45,38,335	59,11,12,449	74,02,51,654
ಕೊಟ್ಟ ಸಾಲಗಳು ಮತ್ತು ಖರೀದಿ ಪತ್ರಗಳು ವಟಾಯಿಸಿದ್ದು	33,48,03,373	37,25,37,620	47,91,15,620
ಠೇವಣಿ ಇಟ್ಟವರ ಖಾತೆಗಳು	6,46,756	8,28,119	9,55,079
ಶಾಖೆಗಳು	203	204	217
ಶಿಬಂದಿ ಸಂಖ್ಯೆ	2,983	3,179	3.544
ಪಾಲುಗಾರರು	4,769	4,876	5,307

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

...........ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ...........

ಎರಡಾಣೆ ನಿಧಿಯ ಸಾಧನೆ

ಬಾಳೆಹೊನ್ನೂರಿನ ಸಂಶೋಧನಾ ಸಂಸ್ಥೆ

ಹದಿನೇಳನೆಯ ಶತಮಾನದಲ್ಲಿ ಸಂತ ಬಾಬಾಬುಡನ್ ಸಾಹೇಬರು ಮೊದಲನೆಯ ಬಾರಿ ಭಾರತಕ್ಕೆ ಕಾಫಿ ಪರಿಚಯ ಮಾಡಿಸಿಕೊಟ್ಟರೆಂದು ಹೇಳಲಾಗಿದೆ. ಅವರು ಅರೇಬಿಯಾದಿಂದ ತಂದ ಆರು ಕಾಫಿ ಬೀಜಗಳನ್ನು ಚಿಕ್ಕಮಗಳೂರಿನ ಬೆಟ್ಟಗುಡ್ಡಗಳಲ್ಲಿ ನೆಟ್ಟರೆಂದೂ ಹೇಳಲಾಗಿದೆ. ಈ ರೀತಿಯಾಗಿ ಅಂದು ಅವರು ನೆಟ್ಟ ಮೊದಲನೆಯ ಕಾಫಿ ಬೀಜ ಶತಮಾನಗಳ ತರುವಾಯ ಒಂದು ಪ್ರಧಾನ ಉದ್ಯಮದ ಬೀಜವಾಯಿತು.

ಆದರೆ ದೇಶದಲ್ಲಿ ಮೊಟ್ಟಮೊದಲನೆಯ ಕಾಫಿ ತೋಟವೆಂದರೆ ತಲ್ಲಿಚೆರಿಯಲ್ಲಿ ೧೮ನೆಯ ಶತಮಾನದಲ್ಲಿ ಬೆಳೆಯಿಸಿದ ಸಣ್ಣ ಪ್ರಮಾಣದ ಹಿತ್ತಲು ತೋಟವಷ್ಟೆ. ಈ ರೀತಿಯಾಗಿ ಪ್ರಾರಂಭವಾದ ಈ ಉದ್ಯಮ ೧೮೩೦—೧೮೮೦ ಅವಧಿಯಲ್ಲಿ ಯಾದೃಚ್ಛಿಕವಾಗಿ ಬೆಳೆದ ಪರಿಣಾಮವಾಗಿ ದೇಶದಲ್ಲಿ ಕಾಫಿ ಉದ್ಯಮಕ್ಕೆ ಅಪಾಯ ತಟ್ಟಿತು.

ಈ ಮಧ್ಯೆ ಈ ಉದ್ಯಮಕ್ಕೆ ಹೊಸದೊಂದು ಪಿಡುಗು ಕಾಣಿಸಿಕೊಂಡಿತು. ಸಿಲೋನಿನಲ್ಲಿ ಕಾಫಿ ಉದ್ಯಮವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಿದ ಎಲೆ ಬೂಷ್ಟುರೋಗವೊಂದು ಭಾರತಕ್ಕೂ ಹರಡಿ ಅನಾಹುತಕ್ಕೆ ಕಾರಣವಾಯಿತು. ೧೮೮೦ರಲ್ಲಿ ಭಾರತದಲ್ಲಿ ೩೦೦,೦೦೦ ಎಕರೆಗಳಲ್ಲಿ ಅರಾಬಿಕಾ ಕಾಫಿ ಬೆಳೆಯುತ್ತಿದ್ದಾಗ್ಯೂ ೧೯೧೦ರ ವೇಳೆಗೆ ೩,೮೦,೦೦೦ ಎಕ್ರೆಗೂ ಕಡಿಮೆ ವಿಸ್ತೀರ್ಣಕ್ಕೆ ಇಳಿಯಿತು.

ಎರಡಾಣೆ ನಿಧಿ

ಹೆಮೆಲಿಯಾವೆಸ್ಟ್ರಿಕ್ಸ್ ಎಂಬ ಹೆಸರಿನ ಹೊಸ ರೋಗ ಮಾರಕ ಸ್ವರೂಪ ತಾಳಿದಾಗ, ಮೈಸೂರು ರಾಜ್ಯದಲ್ಲಿನ ಕಾಫಿ ತೋಟಗಾರರು ೧೯೧೫ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ರೋಗದ ಬಗ್ಗೆ ಸಂಶೋಧನೆ ನಡೆಸುವುದಕ್ಕೆಂದು ಪ್ರಯೋಗ ಶಾಲೆಯೊಂದನ್ನು ಸ್ಥಾಪಿಸಿದರು. ಈ ರೋಗ ಅತ್ಯುಗ್ರ ಸ್ವರೂಪ ತಾಳಿದಾಗ ಕಾಫಿ ಬೆಳೆಗಾರರು ಒಂದು ಎಕರೆಗೆ ಎರಡಾಣೆಯಂತೆ ಚಂದಾ ಎತ್ತಬೇಕೆಂದು ನಿರ್ಧರಿಸಿದರು. ಈ ರೀತಿ ಕೂಡಿದ ಹಣದಿಂದ ಮೈಸೂರು ಸರ್ಕಾರದವರು ೧೯೨೫ರಲ್ಲಿ ಬಾಳೆಹೊನ್ನೂರಿನಲ್ಲಿ ಕಾಫಿ ಕ್ಷೇತ್ರ ಸಂಶೋಧನಾ ಕೇಂದ್ರವೊಂದನ್ನು ತೆರೆದರು.

೧೯೩೦ರಲ್ಲಿ ಕಾಫಿಬೆಳೆಗಾರರಲ್ಲಿ ಒಬ್ಬರಾದ ಮೇಜರ್ ಸಿ. ಎಸ್. ಕ್ರಾಫರ್ಡ್ ಎಂಬ ಮಹನೀಯರು ಈ ಕೇಂದ್ರಕ್ಕೆ ೧೭ ಎಕರೆಗಳಷ್ಟು ಭೂಮಿಕೊಟ್ಟರು. ೧೭ ಎಕರೆಗಳಷ್ಟು ಭೂಮಿ ಪಡೆದ ಈ ಕೇಂದ್ರ ಕ್ರಮೇಣ ವಿಸ್ತಾರಗೊಳ್ಳುತ್ತ ಬಂದಿತು. ಈಗ ಈ ಕೇಂದ್ರಕ್ಕೆ ಸುಮಾರು ೨೯೮ ಎಕರೆಗಳಷ್ಟು ಭೂಮಿ ಸೇರಿದೆ. ಇದರಲ್ಲಿ ೧೧೫ ಎಕರೆಗಳಷ್ಟು ವಿಸ್ತೀರ್ಣದಲ್ಲಿ ೫ ಅರಾಬಿಕಾ, ೩೩.೬ ಎಕರೆಗಳಲ್ಲಿ ರೋಬಸ್ಟ ಕಾಫಿ ಸಸಿಗಳನ್ನು ಬೆಳೆಯಲಾಗುತ್ತಿದೆ.

ಪ್ರಾರಂಭದಲ್ಲಿ, ಬಾಳೆಹೊನ್ನೂರು ಕೇಂದ್ರವು ಕಾಫಿ ಎಲೆಗಳಿಗೆ ತಗಲುವ ಬೂಷ್ಟುರೋಗನಿವಾರಣೆಗೆ ಸಂಬಂಧಪಟ್ಟ ಕೆಲಸದಲ್ಲಿ ಮಾತ್ರ ತೊಡಗಿತ್ತು. ದಕ್ಷಿಣ ಭಾರತದ ತೋಟಗಾರರ ಸಂಸ್ಥೆಯ ಪಿ. ವಿಲ್ಸನ್ ಮೇಯಿನ್ ಅವರು ಬಾಳೆಹೊನ್ನೂರಿನ ಕೇಂದ್ರದ ವೈಜ್ಞಾನಿಕ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಈ ಕೇಂದ್ರದ ಕೆಲಸಕಾರ್ಯಗಳ ಸ್ವರೂಪ ತೀವ್ರವಾಗಿ ಬದಲಾಯಿಸಿತು. ಪಿ. ವಿಲ್ಸನ್ ಮೇಯಿನ್‌ರವರೇ ಎಲೆಗಳಿಗೆ ತಗಲುವ ಬೂಷ್ಟು ರೋಗದ ಬಗ್ಗೆ ಸಂಶೋಧನೆ ಪ್ರಾರಂಭಿಸಿದ್ದು. ತಾವು ನೇಮಕಗೊಂಡ ಕೇವಲ ಎರಡು ವರ್ಷಗಳೊಳಗಾಗಿ ಪಿ. ಮೇಯಿನ್‌ರವರು ಬೂಷ್ಟ ರೋಗದ ನಾಲ್ಕು ಜಾತಿಗಳನ್ನು ಪತ್ತೆ ಹಚ್ಚಿದರು. ಪ್ರಪಂಚದಲ್ಲಿ ಎಲೆಗಳಿಗೆ ತಗಲುವ ಬೂಷ್ಟ ರೋಗಕ್ಕೆ ಸಂಬಂಧಪಟ್ಟಂತೆ ೨೧ ಜಾತಿಗಳಿವೆಯೆಂದು ಪ್ರಕಟಪಡಿಸಿದರು.

ಬಾಳೆಹೊನ್ನೂರು ಕೇಂದ್ರದ ಅಭಿವೃದ್ಧಿಗೆ ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯ ಮಂತ್ರಿ ಡೈರೆಕ್ಟರಾದ ಪಿ. ಲೆಸ್ಲಿ ಕೋಲ್ಮನ್‌ರವರು ಒಬ್ಬ ಕಾರಣ ಪುರುಷರೆಂದೇ ಹೇಳಬಹುದು.

ಈ ಕೇಂದ್ರದ ಪ್ರಪ್ರಥಮ ಭಾರತೀಯ ಮುಖ್ಯಾಧಿಕಾರಿಗಳೆಂದರೆ ಶ್ರೀ ಕೆ. ಎಂ. ಥಾಮಸ್. ಈ ಕೇಂದ್ರದ ಸ್ಥಾಪನೆಯ ಮುಖ್ಯೋದ್ದೇಶ ಉತ್ತಮ ಗುಣಾಂಶ ಕಾಫಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಸುವುದೇ ಆಗಿದೆ.

೧೯೬೬ರ ಜೂನ್ ತಿಂಗಳಲ್ಲಿ ಮೈಸೂರು ಸರ್ಕಾರವು ಕಾಫಿ ಪ್ರಯೋಗವೆಂದು ಕರೆಯಲಾಗುತ್ತಿದ್ದ ಈ ಕೇಂದ್ರವನ್ನು ಕಾಫಿ ಬೋರ್ಡ್‌ಗೆ ವಹಿಸಿಕೊಟ್ಟಿತು. ೧೯೪೭ರ ಮೇ ತಿಂಗಳಲ್ಲಿ ಈ ಕೇಂದ್ರದ ಆಡಳಿತ ಹತೋಟಿ ಬೋರ್ಡಿಗೆ ಬಂದಾಗ ಕೇಂದ್ರದ ಹೆಸರು ಕಾಫಿ ಸಂಶೋಧನಾ ಸಂಸ್ಥೆ ಎಂದಾಯಿತು.

ಉಪಕೇಂದ್ರ

ಕೊಡಗು ಜಿಲ್ಲೆಯ ಮಡಿಕೇರಿಗೆ ೧೦ ಮೈಲುಗಳ ದೂರದಲ್ಲಿ ಚೇತಹಳ್ಳಿಯಿದೆ. ಈ ಹಳ್ಳಿಯಲ್ಲಿ ಕಾಫಿ ಸಂಶೋಧನಾ ಉಪಕೇಂದ್ರವಿದೆ. ಈ ಉಪಕೇಂದ್ರದಲ್ಲಿ ಬಾಳೆಹೊನ್ನೂರಿನ ಪ್ರಯೋಗಾಲಯದಲ್ಲಿ ರೂಪಗೊಂಡ ಸಂಶೋಧನೆಯ ಫಲಿತಾಂಶಗಳ ಪ್ರತ್ಯಕ್ಷ ಪ್ರಯೋಗಗಳು ನಡೆಯುತ್ತಿವೆ. ಚೇತಹಳ್ಳಿ ಕೇಂದ್ರ ಸಹ ಕೊಡಗು ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಕಾಫಿಬೆಳೆಗೆ ಸಂಬಂಧಪಟ್ಟಂತೆ ಹಲವಾರು ಸಮಸ್ಯೆಗಳನ್ನು ಕುರಿತು ಪರಿಶೀಲನೆ ನಡೆಸುತ್ತಿದೆ.

ಸಮರ್ಥಶಾಲಿಗಳಾದ ಡಾ| ಎಂ. ಎಸ್. ಶರ್ಮರವರ ನಾಯಕತ್ವದಲ್ಲಿ ಬಾಳೆಹೊನ್ನೂರು ಸಂಸ್ಥೆಯು ಭೂಮಿಯಲ್ಲಿ ಬೀಜವನ್ನು ನೆಟ್ಟು, ಹುರಿಯುವುದಕ್ಕಾಗಿ ಕಾಫಿ ಬೀಜಗಳನ್ನು ಸಿದ್ಧಪಡಿಸುವರೆಗೆ ಈ ಉದ್ಯಮಕ್ಕೆ ಸಂಬಂಧಪಟ್ಟ ನಾನಾ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುವ ರೀತಿಯಲ್ಲಿ ಸಜ್ಜುಗೊಂಡಿದೆ. ಈ ಸಂಸ್ಥೆಯಲ್ಲಿರುವ ಸಸ್ಯವಿಜ್ಞಾನ, ಸಸ್ಯರೋಗನಿದಾನ, ರಸಾಯನ ಶಾಸ್ತ್ರ ಈ ಮುಂತಾದ ವಿಭಾಗಗಳು ಕಾಫಿ ಸಸ್ಯರೋಗ ಚಿಕಿತ್ಸೆಗೆ ಸಂಬಂಧಪಟ್ಟಂತೆ ಸಂಶೋಧನಾ ಕಾರ್ಯದಲ್ಲಿ ನಿರತವಾಗಿವೆ. ಸಂಶೋಧನೆಗಳ ಫಲಿತಾಂಶಗಳನ್ನು ಪ್ರಯೋಗಾರ್ಥ ಕಾರ್ಯರೂಪಕ್ಕೆ ತರಲು ಘಾರಂ ಒಂದು ಸಹ ಇದೆ. ನಾಲ್ಕು ದಶಕಗಳಿಂದಲೂ ಅಸ್ತಿತ್ವದಲ್ಲಿರುವ ಈ ಸಂಸ್ಥೆಯು ಕಾಫಿ ಬೆಳೆ ಸುಧಾರಣೆಗೆ ಸಂಬಂಧಪಟ್ಟಂತೆ ಗಣನೀಯ ಸೇವೆ ಸಲ್ಲಿಸಿದೆ.

ಮಣ್ಣಿನಸಾರ ಪರೀಕ್ಷೆ

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಸಹಾಯ ಕಾರ್ಯಕ್ರಮವೊಂದರ ಪ್ರಕಾರ ಮೈಸೂರಿನಲ್ಲಿ ೧೯೫೯ರಲ್ಲಿ ಮಣ್ಣಿನಸಾರ ಪರೀಕ್ಷಾ ಪ್ರಯೋಗ ಶಾಲೆಯೊಂದನ್ನು ತೆರೆಯಲಾಗಿದೆ. ಈ ಪ್ರಯೋಗ ಶಾಲೆಯಲ್ಲಿ ಉಚಿತವಾಗಿ ಮಣ್ಣಿನಸಾರ ಪರೀಕ್ಷೆ ನಡೆಸುತ್ತಿದೆ. ಇಲ್ಲಿಯ ವರೆಗೆ ಸುಮಾರು ೩೫೦೦೦ ಸ್ಯಾಂಪಲ್‌ಗಳನ್ನು ಪರೀಕ್ಷಿಸಿ ಕಾಫಿ ಬೆಳಗಾರರಿಗೆ ಸೂಕ್ತ ರೀತಿಯ ಸಲಹೆ ನೀಡಲಾಗಿದೆ.

ಮಹತ್ತರ ಸಾಧನೆ

ಈ ಸಂಸ್ಥೆಯು ಕಾಫಿ ಉದ್ಯಮಕ್ಕೆ ನೀಡಿರುವ ಮಹತ್ವದ ಕಾಣಿಕೆ ಎಂದರೆ "ಸ್ಟೇಷನ್ ಸಿಲೆಕ್ಷನ್ ೭೯೫ ಎಂಬ ಹೊಸ ಜಾತಿಯ ಕಾಫಿ ಸಸ್ಯದ ಅಭಿವೃದ್ಧಿ ೧೯೬೫—೬೬ರಲ್ಲಿ ಈ ಹೊಸ ಜಾತಿಯ ಕಾಫಿ ಗಿಡಗಳನ್ನು ೬೫,೩೦೦ ಹೆಕ್ಟೇರ್‌ಗಳಷ್ಟು ಭೂಮಿಯಲ್ಲಿ ನಡೆಯಿತು.

ಆ ವರ್ಷ ೨೬,೦೦೦ ಮೆಟ್ರಿಕ್ ಟನ್ನುಗಳಷ್ಟು ಕಾಫಿ ಬೆಳೆಯಾಯಿತು. ೧೯೬೬—೬೭ರಲ್ಲಿ ವಿಸ್ತೀರ್ಣ ಮತ್ತು ಬೆಳೆ ಕ್ರಮಶಃ ೩೨,೦೦೦ ಹೆಕ್ಟೇರ್‌ಗಳು ಮತ್ತು ೭೦,೦೦೦ ಮೆಟ್ರಿಕ್ ಟನ್ನುಗಳಿಗೆ ಹೆಚ್ಚುವ ನಿರೀಕ್ಷೆಯಿದೆ. ಈಗ ಈ ಹೊಸ ಜಾತಿ ಕಾಫಿಯನ್ನು ದೇಶದಲ್ಲಿ ಅರಾಬಿಕಾ ಕಾಫಿ ಬೆಳೆಯುವ ವಿಸ್ತೀರ್ಣದ ಸೈಕಿ ಅರ್ಧಕ್ಕೂ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ.

ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆಯ ಬೇಸಾಯ ವಿಜ್ಞಾನ ವಿಭಾಗದವರು, ಸಸ್ಯ ಹಾಗೂ ಮಣ್ಣಿನ ಸಾರ ಪರೀಕ್ಷಣೆಯಲ್ಲಿ ಮಹತ್ತರ ಪ್ರಗತಿ ಸಾಧಿಸಿದ್ದಾರೆ. ಪೋಲಿಥೈಲಿನ್ ಬ್ಯಾಗ್‌ಗಳಲ್ಲಿ ಬೆಳೆಯಲಾಗುವ ಕಾಫಿಯ ಸಸ್ಯಗಳು ಬೆತ್ತದ ಬುಟ್ಟಿಗಳಲ್ಲಿ ಬೆಳೆದ ಕಾಫಿಯ ಸಸ್ಯಕ್ಕಿಂತಲೂ ಹೆಚ್ಚು ದಷ್ಟ—ಪುಷ್ಟವಾಗಿರುತ್ತವಲ್ಲದೆ, ಹೆಚ್ಚು ಎಲೆಗಳನ್ನು ಹೊಂದಿರುತ್ತವೆ ಎಂಬುದು ಸಂಶೋಧನೆಯಿಂದ ಕಂಡುಬಂದಿದೆ.

ಈ ವಿಭಾಗದವರು ಕಾಫಿ ಪ್ಲಾಂಟೇಷನ್‌ಗಳಲ್ಲಿ ಕಳೆಯನ್ನು ನಿವಾರಿಸುವ ಔಷಧ ವಸ್ತುಗಳ ಪೂರೈಕೆ, ಕಾಫಿ ಸಸ್ಯಗಳ ಸಂಸ್ಕರಣದ ಪರಿಣಾಮ ವೀಕ್ಷಣೆ, ಇವೇ ಮೊದಲಾದ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಸಂಸ್ಥೆಯ ಸಸ್ಯಶಾಸ್ತ್ರ ವಿಭಾಗದಲ್ಲಿ ಅಪೇಕ್ಷಿತ ಗುಣಗಳುಳ್ಳ ಕಾಫಿ ಸಸ್ಯಗಳ ಆಯ್ಕೆ ಹಾಗೂ ಅವುಗಳನ್ನು ಕಸಿ ಮಾಡುವ ಕೆಲಸ ನಡೆದಿದೆ. ಈ ವಿಭಾಗದವರು ಕಂಡು ಹಿಡಿದಿರುವ ಎಸ್. ೭೯೫ ಜಾತಿಯ ಕಾಫಿ ಸಸ್ಯಗಳು ಈಗ ಚೆನ್ನಾಗಿ ಪರಿಚಿತವಾಗಿವೆ. ಈ ಮುಂಚೆ ಕಾಫಿ ಎಲೆಗಳಿಗೆ ತಗಲುವ ಬೂಷ್ಟು ರೋಗವನ್ನು ನಿವಾರಿಸಲು ಪ್ರಯತ್ನಗಳು ನಡೆದವು. ಬಳಿಕ ಕ್ರಮೇಣ ಕಾಫಿ ಬೀಜಗಳ ಗುಣಾಂಶ ಸುಧಾರಣೆಯ ದೃಷ್ಟಿಯಿಂದ ಕಾಫಿ ಸಸ್ಯಗಳನ್ನು ಕಸಿ ಮಾಡುವ ಕಾರ್ಯವೂ ಆರಂಭವಾಯಿತು.

ಈ ವಿಭಾಗದವರು ಕಂಡು ಹಿಡಿದಿರುವ ಎಸ್. ೧೯೩೪ ಜಾತಿಯ ಕಾಫಿ ಸಸ್ಯ ಅತ್ಯಂತ ಜನಪ್ರಿಯವಾಗಿದೆ. ಈ ಕೆಲಸ ಕಾರ್ಯಗಳ ಜೊತೆಗೆ, ವಿಶ್ವಾದ್ಯಂತ ಕಾಫಿ ಬೆಳೆಯುವ ದೇಶಗಳಿಂದ ಅವರು ವಿವಿಧ ಜಾತಿಯ ಕಾಫಿ ಸಸಿಗಳನ್ನು ತರಿಸಿಕೊಂಡು ಸಂಗ್ರಹಿಸಿದ್ದಾರೆ. ಈ ಸಂಗ್ರಹದಲ್ಲಿ ಇಥಿಯೋಪಿಯ (ಅರಾಬಿಕಾ ಕಾಫಿಯ ತವರು) ಕಾಫಿ ಸಸ್ಯಗಳು ಎಲೆಗಳಿಗೆ ತಗಲುವ ಬೂಷ್ಟ ರೋಗ ನಿರೋಧ ಸಾಮರ್ಥ್ಯವನ್ನು ಅಧಿಕವಾಗಿ ಪಡೆದಿವೆಯೆಂದು ವ್ಯಕ್ತಪಟ್ಟಿದೆ.

ದೇಶದಲ್ಲಿ ಲಭ್ಯವಿರುವ ಎಸ್. ೭೯೫ ಜಾತಿಯ ಕಾಫಿಯ ಇಥಿಯೋಪಿಯದ ಕಾಫಿ ಸಸ್ಯಗಳೊಂದಿಗೆ ಕಸಿ ಮಾಡುವ ಕೆಲಸ ಪ್ರಗತಿ ಪರವಾಗಿ ನಡೆದಿದೆ. ಈ ಸಂಸ್ಥೆಯ ರಸಾಯನ ಶಾಸ್ತ್ರ ವಿಭಾಗದವರು, ಕಾಫಿ ಎಲೆಗಳಿಗೆ ರೋಗ ತಗಲದಂತೆ ಕೀಟ ನಾಶಕ ಔಷಧಿಗಳನ್ನು ಸಿಂಪಡಿಸುವ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕಲಾರಂಗ

ಕನ್ನಡ ರಂಗಭೂಮಿ

ಬರೆದವರು : ಶ್ರೀ ಸ. ನಾರಾಯಣ.

ನಾಟಕ ಕಲೆಯ ಪರಂಪರೆ ಬಹು ಪುರಾತನವಾದದ್ದು, ಅಷ್ಟೇ ಪ್ರಸಿದ್ಧವಾದದ್ದು. ಜನಮನೋವಿಕಾಸಕ್ಕೆ, ಸಮಾಜ ಹಾಗೂ ಜನತೆಯ ಉದ್ಧಾರದ ಮಾರ್ಗದರ್ಶನಕ್ಕೆ, ವೈವಿಧ್ಯಪೂರ್ಣ ಆದರ್ಶ ನೀತಿ ರೀತಿಗಳ ಪ್ರತಿಪಾದನೆಗೆ ರಂಗಭೂಮಿ ಪ್ರಮುಖ ಸಾಧನ. ನಾಟಕ ಕಲೆಯ ಬೆಳವಣಿಗೆ, ರಂಗಭೂಮಿಯ ಪರಂಪರಾಗತ ವಿನ್ಯಾಸ ಬಹು ಹಿಂದಿನಿಂದಲೂ ಬೆಳೆದು ಬಂದಿರುವುದು ಗೊತ್ತಾಗುತ್ತದೆ.

ವೇದಗಳಲ್ಲಿ, ಭರತ ಮುನಿಯ ನಾಟ್ಯಶಾಸ್ತ್ರದಲ್ಲಿ, ಪಾಣಿನಿಯ ಗ್ರಂಥಗಳಲ್ಲಿ ನಾಟಕಗಳ ಪರಿಚಯ ಪ್ರಸ್ತಾಪ ವಿಶೇಷವಾಗಿವೆ. ಅಭಿನಯ ದರ್ಪಣ, ಅಭಿನವ ಭಾರತಿ, ಭಾವ ಪ್ರಕಾಶನ ಮೊದಲಾದುವುಗಳಲ್ಲಿಯೂ ನಾಟ್ಯ ಕಲೆಯ ಪ್ರಸ್ತಾಪವಿದೆ.

ಕ್ರಿ. ಶ. ಒಂದನೆಯ ಶತಮಾನದ ಸಂಸ್ಕೃತ ನಾಟಕಕಾರ ಅಶ್ವಘೋಷನ ನಾಟಕಗಳೇ ಉಪಲಬ್ಧವಿರುವ ಮೊದಲ ನಾಟಕಗಳು. ಗ್ರೀಕ್ ನಾಟಕಗಳ ಬೆಳವಣಿಗೆಗಿಂತಲೂ ಮೊದಲೇ ಭಾರತದಲ್ಲಿ ನಾಟಕ ಕಲೆ ಪ್ರಚಾರದಲ್ಲಿತ್ತು—ಪ್ರಸಿದ್ಧವಾಗಿತ್ತು ಎಂಬ ಸಂಗತಿ ತಿಳಿದು ಬರುತ್ತದೆ.

ಕನ್ನಡ ನಾಡಿನ ಮೊದಲ ಗ್ರಂಥವಾದ ನೃಪತುಂಗನ 'ಕವಿರಾಜ ಮಾರ್ಗ' ಗ್ರಂಥದಲ್ಲಿ ನಾಟಕಗಳ ಉಲ್ಲೇಖವಿದೆಯಾದರೂ ಪೂರ್ವದ ಅಥವಾ ಅನಂತರದ ಯಾವ ನಾಟಕವೂ ಕನ್ನಡದಲ್ಲಿ ಉಪಲಬ್ಧವಿಲ್ಲ. ಕ್ರಿ. ಶ. ೧೬೮೦ರಲ್ಲಿ ಮೈಸೂರ್ ಅರಸರ ಆಶ್ರಯದಲ್ಲಿದ್ದ ಸಿಂಗರಾರ್ಯರು ಬರೆದ 'ಮಿತ್ರ ವಿಂದ ಗೋವಿಂದ' ನಾಟಕವೇ ಉಪಲಬ್ಧವಿರುವ ಮೊದಲ ಕನ್ನಡ ನಾಟಕ. ಕ್ರಿ. ಶ. ೧೮೮೮ರಲ್ಲಿ ಬಸವಪ್ಪ ಶಾಸ್ತ್ರಿಗಳು ಕಾಳಿದಾಸ ಕವಿಯ ಅಭಿಜ್ಞಾನ ಶಾಕುಂತಳ ಸಂಸ್ಕೃತ ನಾಟಕವನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ 'ಶಾಕುಂತಳ' ನಾಟಕ ರಚಿಸಿದರು. ಆಧುನಿಕ ಯುಗಕ್ಕೆ ಆ ಕೃತಿ ಅಮೂಲ್ಯ ಕೊಡುಗೆಯಾಯಿತು.

ಜೀವನದ ಹಲವು ಸ್ವರೂಪಗಳನ್ನೂ ಸಮಸ್ಯೆಗಳನ್ನೂ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡಲು ನೈಜಸ್ಥಿತಿಯ ಪರಿಚಯ ಮಾಡಿಕೊಡಲು, ಮಾನವನ ಮನೋವಿಕಾಸಕ್ಕೆ ಕಾರಣವಾಗುವ ಲಲಿತ ಕಲೆಗಳಲ್ಲಿ ನಾಟಕ ಕಲೆ ಅತಿ ಮುಖ್ಯವಾದದ್ದು. ಬೆಳೆಯುವ ಬಾಲ್ಯಾವಸ್ಥೆಯಲ್ಲಿಯೆ ಇದ್ದ ರಂಗಭೂಮಿಯ ಏಳಿಗೆಗಾಗಿ ಕೆಲವು ನಟರು ನಾಟಕಕಾರರು ಸಾಹಿತಿಗಳು, ರಂಗಭೂಮಿ ಅಭಿಮಾನಿಗಳು ವಿಶೇಷವಾಗಿ ದುಡಿದು ನಾಟಕ ಕಲೆಯ ಪುನರುದ್ಧಾರಕ್ಕೆ ಕಾರಣರಾದರು.

ಅನುಭವಿ ಹಿರಿಯರ ಮಾತಿನಲ್ಲಿಯೇ ಹೇಳುವುದಾದರೆ ನಾಟಕ ದೇಹ, ನಟ ಆತ್ಮ, ನಾಟಕ, ಸೂತ್ರಧಾರ, ಪಟ, ರಂಗಮಂಟಪ, ಪ್ರೇಕ್ಷಕ ಈ ಐದು ಅಂಗಗಳು ನಾಟಕ ಕಲೆಯ ಮುಖ್ಯ ಅಂಗಗಳು. ಮೊಟ್ಟಮೊದಲಿಗೆ ನಾಟಕಗಳ ಪಾತ್ರ ಸಮಾಜದ ಬೆಳವಣಿಗೆಯಲ್ಲಿ ವಿಶೇಷವಾಗಿತ್ತು ಎಂಬುದು ಗಮನಿಸ ಬೇಕಾದ ಸಂಗತಿ. ನಾಟಕದ ಕಥಾವಸ್ತು ಪುರಾಣದ ಕಥಾವಸ್ತು. ಅಂದರೆ ರಾಮಾಯಣ, ಮಹಾಭಾರತ ಅಥವಾ ಭಾಗವತ ಕಥೆಯ ವಸ್ತುವೇ ಆಗಿರುತ್ತಿತ್ತು. ಕೆಲವು ಪ್ರಾಚೀನ ನಾಟಕಗಳಲ್ಲಿಯೂ ಸಾಮಾಜಿಕ ಸಮಸ್ಯೆಯ ರೂಪರೇಷೆಗಳು ಕಾಣಬರುತ್ತದೆ. ಉದಾಹರಣೆಗೆ ಶೂದ್ರಕನ 'ಮೃಚ್ಛಕಟಿಕ' ನಾಟಕ.

ಬಸವಪ್ಪ ಶಾಸ್ತ್ರಿಗಳು ಸುಬ್ಬಾಶಾಸ್ತ್ರಿ ಅಯ್ಯಾಶಾಸ್ತ್ರಿ, ತಿರುಮಲೆ ಶ್ರೀನಿವಾಸ ಅಯ್ಯಂಗಾರ್ಯ, ವೆಂಕಟಾಚಾರ್ಯ, ಹುಯಿಲಗೋಳ ನಾರಾಯಣರಾಯ, ಶೇಷಗಿರಿರಾಯ, ಶಾಂತಕವಿ, ಗಂಗಾಧರ ಉಡಿ, ವಂಕೇಶ್ವರ, ತೋರಣಗಲ್ಲ ರಾಜಾರಾಯ, ಕೃಷ್ಣಮಾಚಾರ್ಯ, ಕೋಲಾಚಲಂ ಶ್ರೀನಿವಾಸರಾಯ, ಗೋಪಾಲಾಚಾರ್ಯ, ಚಿಕ್ಕೋಡಿ ತಮ್ಮಣ್ಣಪ್ಪ, ಬೆಳ್ಳಾವೆ ನರಹರಿಶಾಸ್ತ್ರಿ, ನಂಜನಗೂಡು ಶ್ರೀಕಂಠಶಾಸ್ತ್ರಿ ಮೊದಲಾದವರು ಕನ್ನಡ ರಂಗಭೂಮಿಯ ಉನ್ನತಿಗಾಗಿ ಶ್ರಮಿಸಿದ ಪ್ರಮುಖ ವ್ಯಕ್ತಿಗಳು.

ಕೋಲಾಚಲಂ ಶ್ರೀನಿವಾಸರಾಯರು ಬರೆದ ಜಗತ್ತಿನ ರಂಗಭೂಮಿಯ ಇತಿಹಾಸ" ಎಂಬ ಕೃತಿ ನಾಟಕ ಕಲೆಯ ಪರಂಪರೆಯ ಅದ್ವಿತೀಯ ಗ್ರಂಥ.

ಕ್ರಿ. ಶ. ೧೯೦೦ರಿಂದ ೧೯೩೦ರ ವರೆಗೆ ಕನ್ನಡ ರಂಗಭೂಮಿಯಲ್ಲಿ ಹೊಸ ಪರಂಪರೆಯೊಂದು ಬೆಳೆದು ನಾಡಿನ ನಾಟಕ ಕಲೆಯ ಕೀರ್ತಿ ಬೆಳಕು ಬೀರಿತು. ಎ.ವಿ. ವರದಾಚಾರ್ಯ, ಮಹಮದ್ ಪೀರ್, ಗರುಡ ಸದಾಶಿವರಾಯರು, ಹಂದಿಗನೂರು ಸಿದ್ಧರಾಮಪ್ಪ, ಬಸವರಾಜ ಮನ್ಸೂರ, ರಂಗನಾಥ ಭಟ್ಟ; ಹುಲಿಮನೆ ಸೀತಾರಾಮ ಶಾಸ್ತ್ರಿ, ಟಿ. ರಾಘವಾಚಾರ್ಯ, ಜೋಳದರಾಶಿ ದೊಡ್ಡನ ಗೌಡ, ಪಟ್ಟಂಜಯರಾಯ, ಗಂಗಾಧರರಾಯ, ಕೃಷ್ಣಮೂರ್ತಿ, ಸಬರ್ನ್ ರಾಮರಾಯರು, ನಾಗೇಂದ್ರರಾಯರು, ಸುಬ್ಬಯ್ಯನಾಯ್ಡು, ಗುಬ್ಬಿವೀರಣ್ಣ ಮೊದಲಾದವರು ಕನ್ನಡ ರಂಗಭೂಮಿಯ ಆಚಂದ್ರಾರ್ಕ ಕೀರ್ತಿಗೆ ಅಸ್ತಿಭಾರ ಹಾಕಿದರು. ಇವರಲ್ಲಿ ಎ. ವಿ. ವರದಾಚಾರ್ಯರ ಕನ್ನಡ ರಂಗಭೂಮಿಯ ಸೇವೆ ಅದ್ವಿತೀಯವಾದುದು. ಅವರ ರತ್ನಾವಳಿ ಥಿಯೇಟ್ರಿಕಲ್ ಕಂಪೆನಿಯ ಮೂಲಕ ಕೆತ್ತಾರು ಮಂದಿ ನಾಡಿನ ಹೆಸರಾಂತ ನಟರು ಬೆಳಕಿಗೆ ಬಂದರು.

ಕನ್ನಡ ರಂಗಭೂಮಿಗೆ ಹೊಸ ಹಾದಿಯನ್ನು ತೋರಿಸಿದವರು ಟಿ. ಪಿ. ಕೈಲಾಸಂ, ಸಂಸ, ಶ್ರೀರಂಗ, ಶಿವರಾಮ ಕಾರಂತ, ಅ. ನ. ಕೃಷ್ಣರಾಯ ಮೊದಲಾದವರು. ಪೌರಾಣಿಕ ಕಥಾವಸ್ತು, ಅಗ್ಗದ ಹಾಸ್ಯ, ಅನಾವಶ್ಯಕವಾದ ನಡವಳಿಕೆಗಳನ್ನು ನಾಟಕಗಳಲ್ಲಿ ಕಂಡು ಹೊಸ ಪ್ರಯೋಗಕ್ಕೆ ನಾಂದಿ ಹಾಕಿದವರು ಕೈಲಾಸಂ. ಅವರ ಪ್ರವೇಶದಿಂದ ಪರಿಶ್ರಮದಿಂದ ಕನ್ನಡ ರಂಗಭೂಮಿಯಲ್ಲಿ ಹೊಸ ಪರಂಪರೆ ಮೊದಲಾಯಿತು. ಕೈಲಾಸಂ ಪಾಶ್ಚಿಮ ರಾಷ್ಟ್ರದಲ್ಲಿದ್ದವರು. (ಇಂಗ್ಲೆಂಡ್) ಅಲ್ಲಿಯ ನಾಟಕಗಳ ರೀತಿ-ನೀತಿಗಳನ್ನು ಅರಿತಿದ್ದವರು. ಕನ್ನಡ ರಂಗಭೂಮಿಯಲ್ಲಿ ಮಾರ್ಪಾಡು ಅಗತ್ಯ ಎಂದು ತೋರಿದಾಗ ಜೀವನದ ಹಲವು ಸಮಸ್ಯೆಗಳನ್ನು, ಘಟನೆಗಳನ್ನು ಕೈಗೆತ್ತಿಕೊಂಡು ನಾಟಕ ಕಲೆಗೆ ಅಳವಡಿಸಿಕೊಂಡು ಆ ಕಥೆಗಳನ್ನು ರಂಗಭೂಮಿಗೆ ತಂದರು.

ವರದಾಚಾರ್ಯ, ಗರೂಡ್, ಪೀರ್ ಇವರ ಕಾಲದಲ್ಲಿ ಕನ್ನಡ ರಂಗಭೂಮಿಯ ಭವಿಷ್ಯ ಸ್ವಲ್ಪ ಮಟ್ಟಿಗೆ ಬದಲಾಗಿದ್ದು ಹೊಸ ಹಾದಿ ಹಿಡಿದಿದ್ದರೂ ಕೆಲವು ಬದಲಾವಣೆಗಳು ಆಗತ್ಯವಾಗಿ ಆಗಲೇಬೇಕಿತ್ತು. ಕನ್ನಡ ನಾಟಕಗಳಲ್ಲಿ ಪಾರ್ಸಿ ಮತ್ತು ಉರ್ದು ನಾಟಕಗಳ ಪ್ರಭಾವ ವಿಶೇಷವಾಗಿ ಇದ್ದಂತೆ ಕಾಣ ಬರುತ್ತಿತ್ತು. ರಂಗರಚನೆ, ದೃಶ್ಯ, ಪರಿಸರಣ, ಉಡುಪು, ಅಲಂಕಾರ, ಮೊದಲಾದುವುಗಳಲ್ಲಿ ವಿಶೇಷ ವಿಚಿತ್ರತೆ ತೋರಿ ಬರುತ್ತಿತ್ತು. ಆ ಕಾಲದ ಜನತೆಯ ಅಭಿರುಚಿಗೆ ಆ ಬಗೆಯ ರೀತಿ-ನೀತಿ-ನಡವಳಿಕೆಗಳು ಅಗತ್ಯವಿತ್ತೆಂದು ತೋರುತ್ತದೆ. ಸುಶಿಕ್ಷಿತ ವಿದ್ಯಾವಂತರ—ಯುವಕರ ಅಭಿಪ್ರಾಯ, ಭಾವನೆಗಳು ಬಲಗೊಂಡಾಗ ನಾಟಕಗಳಲ್ಲಿ ರಂಗಭೂಮಿಯ ವ್ಯವಸ್ಥೆಯಲ್ಲಿ ಮಾರ್ಪಾಡು ಅನಿವಾರ್ಯವಾಗಿ ಉಂಟಾಯಿತು. ಕ್ರಮೇಣ ಸಾಮಾಜಿಕ ಕಥಾವಸ್ತುವುಳ್ಳ ನಾಟಕಗಳು ರಂಗಭೂಮಿಯ ಮೇಲೆ ಬಂದವು.

ನಾಟಕ ಕಲೆಯನ್ನು ಆಶ್ರಯಿಸಿದವರಲ್ಲಿ ಎರಡು ಗುಂಪು. ಒಂದು ಗುಂಪಿಗೆ ನಾಟಕವೇ ಅನ್ನಕೊಟ್ಟ ದೇವರು; ಅದೇ ಸರ್ವಸ್ವ. ಇನ್ನೊಂದು ಗುಂಪಿಗೆ ನಾಟಕ ರಚನೆ, ಅಭಿನಯ ಒಂದು ಹವ್ಯಾಸ. ನಾಡಿನಲ್ಲಿ ಹತ್ತಾರು ಕಂಪೆನಿಗಳು ನಾಟಕಾಭಿನಯವನ್ನೇ ಆಧಾರವಾಗಿಟ್ಟುಕೊಂಡು ಬೆಳೆದವು. ಅನೇಕ ಸಣ್ಣ ಪಟ್ಟಣಗಳಲ್ಲಿ ದೊಡ್ಡ ನಗರಗಳಲ್ಲಿ ನಾಟ್ಯವಿಲಾಸಿ (ameteur) ಸಂಘಗಳು ಜನ್ಮ ತಾಳಿದವು. ಆಂಗ್ಲ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ವಿಶೇಷ ಪರಿಣಾಮ ಬೀರಿದಂತೆಯೇ ಆಂಗ್ಲ ನಾಟಕಗಳು ಕನ್ನಡ ರಂಗಭೂಮಿ ಬೆಳವಣಿಗೆಯಲ್ಲಿ ಪ್ರಭಾವ ಬೀರಿದವು. ವರದಾಚಾರ್ಯರು ಷೇಕ್ಸ್‌ಪಿಯರ್ ಕವಿಯ ಇಂಗ್ಲಿಷ್ ನಾಟಕಗಳನ್ನು ಭಾಷಾಂತರಿಸಿ ರಂಗಭೂಮಿಯ ಮೇಲೆ ತಂದರು. ಕಾಲಕ್ರಮೇಣ ರಂಗಭೂಮಿ ಸರ್ವಜನ ಮಾನ್ಯತೆ ಪಡೆಯಲು ಸಾಧ್ಯವಾಯಿತು. ಮೊಟ್ಟಮೊದಲಿಗೆ ಪ್ರಾದೇಶಿಕ ಭಾಷೆ, ಸಾಹಿತ್ಯ, ಕಲೆ, ಜನಜೀವನದ ಮೇಲೆ ಸಂಸ್ಕೃತ ಭಾಷೆ, ಕಾವ್ಯ, ಕಲೆ ಮೊದಲಾದುವು ಬೀರಿದ ಪ್ರಭಾವ ವಿಶೇಷ. ಅನಂತರದ ದಿನಗಳಲ್ಲಿ ಸಂಸ್ಕೃತ ಭಾಷೆಯೂ ಮೂಲೆಗುಂಪಾಯಿತು. ಇದಕ್ಕೆ ಕಾರಣ ಸಂಸ್ಕೃತ ಜನಸಾಮಾನ್ಯ ಬಳಕೆಯ ಭಾಷೆ ಆಗದಿದ್ದುದು. ಸಂಸ್ಕೃತದ ಸ್ಥಾನಮಾನಗಳನ್ನು ಇಂಗ್ಲೀಷ್ ಗಳಿಸಿಕೊಂಡುದು ಸಹಜ.

ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಇಂದಿಗೂ ಕೆಲವು ನ್ಯೂನತೆಗಳು ಕಾಣಬರುತ್ತವೆ. ಪ್ರತಿಭಾವಂತ ಕಲಾವಿದರನೇಕರು ತಮ್ಮ ವೈಭವಪೂರ್ಣ ಅಭಿನಯದಿಂದ ನಾಟಕದ ಕೀರ್ತಿಯನ್ನು ಬೆಳೆಸಿದರು—ಬೆಳಗಿಸಿದರು.

ಇಂದು ಚಲನ ಚಿತ್ರಗಳ ಪ್ರಭಾವದಿಂದ ರಂಗಭೂಮಿಯ ಬೆಳವಣಿಗೆಗೆ, ನಾಟಕ ಕಲೆಯ ಉದ್ಧಾರಕ್ಕೆ ಭಂಗ ಬಂದಿದೆ ಎಂಬುದು ಸಹಜ. ಆದರೆ ಪೂರ್ಣ ಆಪಾದವನ್ನು ಚಲನ ಚಿತ್ರಗಳ ಮೇಲೆ ಹೊರಿಸುವಂತಿಲ್ಲ. ಪೂರ್ಣ ಕಲೆಯನ್ನು ರಂಗಭೂಮಿಯ ಮೇಲೆ ಕಾಣಲು ಸಾಧ್ಯವೇ ಹೊರತು ತೆರೆಯ ಮೇಲಿನ ಚಿತ್ರದಲ್ಲಲ್ಲ—ಯಂತ್ರದ ಮೂಲಕವಲ್ಲ. ಇಂದಿಗೂ ಚಿತ್ರರಂಗದ ಹೆಸರಾಂತ ನಟನಟಿಯರು ಹಿಂದೊಮ್ಮೆ ರಂಗಭೂಮಿಯಲ್ಲಿ ಅಭಿನ

(ಹನ್ನೊಂದನೇ ಪುಟ ನೋಡಿರಿ)

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳ ಇಚ್ಛೆಯಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ತಾಲೂಕಾಫೀಸ್(?) ಕೋಟೆ, ಉಡುಪಿ, ದ. ಕ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ಪರಿಹಾರ ಉಪಾಯ ಸೂಚಿಸುವ ಉಪಯುಕ್ತ ಪುಸ್ತಕ.

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿವೇಚನೆ

ಕಷ್ಟದ ಕೋಟೆಗೆ ಕಣ್ಣೀರಿನ ಕಾಲುವೆ

ಬರೆದವರು : ಶ್ರೀ ಶಿವಶಂಕರ.

"ನಾವು ಬಹಳಷ್ಟು ಅತ್ತಿದ್ದೇವೆ. ಸಾಕುಮಾಡಿ ಅಳುವದನ್ನು. ನಿಮ್ಮ ಕಾಲಿನ ಮೇಲೆಯೇ ನೀವು ನಿಲ್ಲಿರಿ. ನೀವು ಮಾನವರಾಗಿರಿ." ಸ್ವಾಮಿ ವಿವೇಕಾನಂದರ ವಿವೇಕವಾಣಿ ಇದು. ಇದೀಗ ಬಹಳ ವರ್ಷಗಳ ನಂತರ ಅಂತಹದ್ದೇ ಮಾತು ಕೇಳಬರುತ್ತಿದೆ. ಕಲ್ಕತ್ತದಲ್ಲಿ ಶ್ರೀಮತಿ ಇಂದಿರಾ ಗಾಂಧೀಜಿಯವರು ಭಾಷಣ ಮಾಡುತ್ತಿದ್ದಾಗ ಅಂತಹ ಮಾತುಗಳನ್ನಾಡಿರುವರು. ಭಾರತದಲ್ಲಿ ಇಂದು ಹಬ್ಬಿಕೊಂಡಿರುವ ಸಮಸ್ಯೆಗಳು ಹಾಗೂ ಕಷ್ಟಕೋಟಲೆಗಳು ಭಾರತಕ್ಕೇನೂ ಹೊಸತಲ್ಲ. ಆ ಕಷ್ಟಗಳನ್ನು ಕಂಡು ಕಣ್ಣೀರು ಸುರಿಸುವದರಿಂದ ಏನೂ ಪ್ರಯೋಜನವಾಗುವದಿಲ್ಲವೆಂದು ಶ್ರೀಮತಿ ಇಂದಿರಾಜೀ ತನ್ನ ಮನದಿಂಗಿತವನ್ನು ಜನತೆಗೆ ತಿಳಿಯಪಡಿಸಿರುವರು.

'ಭಾರತದತ್ತ ನೋಡಿದಾಗ ಅಲ್ಲಿ ಬರೀ ಬಡತನ ಮಾತ್ರ ಕಣ್ಣಿಗೆ ಬೀಳುವದೇನು? ಅಲ್ಲಿ ರಾಷ್ಟ್ರವನ್ನು ಕಟ್ಟಲು ಭಾರೀ ಪ್ರಯತ್ನ ನಡೆಯುತ್ತಿರುವದು ಕಣ್ಣಿಗೆ ಕಾಣುವದಿಲ್ಲವೇನು?.... ಇಂದು ಒಂದು ಹೊಸ ಇಂಡಿಯಾವನ್ನು ಕಟ್ಟುವ ಕಾರ್ಯದಲ್ಲಿ ನಾವು ಮಗ್ನರಾಗಿದ್ದೇವೆ. ಈ ಮಹಾನ್ ಕಾರ್ಯದಲ್ಲಿ ತರುಣರು ಭಾಗವಹಿಸಬೇಕು.' ಭಾರತದ ಚಿತ್ರವನ್ನು ಜನತೆಯ ಮುಂದಿಕ್ಕಿಟ್ಟು, ತರುಣ ಜನಾಂಗಕ್ಕೆ ಆಹ್ವಾನವನ್ನಿತ್ತಿದ್ದಾರೆ ಶ್ರೀಮತಿ ಇಂದಿರಾ ಗಾಂಧೀಜಿ.

ಭಾರತವನ್ನು ಬಡ ರಾಷ್ಟ್ರ, ಹಿಂದುಳಿದ ದೇಶವೆಂದೆಲ್ಲಾ ಅಪಪ್ರಚಾರ ನಡೆಸಿ ವಿದೇಶಿ ಧನ ಸಹಾಯದತ್ತ ದೈನ್ಯದ ನೋಟವನ್ನು ಬೀರದವರ್ಯಾರು? ಅನ್ಯರ ಬಳಿ ಭಿಕ್ಷೆ ಬೇಡುವಾಗ ನಾವು ಬಡವರಿರುತ್ತೇವೆ. ಅವರ ಸಹಾಯ ಸಿಕ್ಕಿತೆಂದರೆ ನಂತರ ನಾವು ಶ್ರೀಮಂತರೇ ಸರಿ! ಸಹಾಯದ ದ್ರಾಕ್ಷಿ ನಮಗೆ ಸಿಗದಿದ್ದಲ್ಲಿ ಅದನ್ನಾಗ ಹುಳಿಯೆಂದು ಹೀಯಾಳಿಸಿ ಬಿಡುತ್ತೇವೆ! ಅದೂ ಅಲ್ಲದೆ ಚುನಾವಣೆಯ ಕಾಲದಲ್ಲಿ ನಡೆದಿರುವ ಸಂಭವಗಳನ್ನು ಜ್ಞಾಪಿಸಿಕೊಳ್ಳುವಾಗ ಇಲ್ಲಿ ಕೇವಲ ಬಡತನ ಮಾತ್ರ ಮನೆಮಾಡಿ ಕೊಂಡಿರುವದಲ್ಲ, ಕೊಲೆ-ಸುಲಿಗೆ-ಮೋಸ ಮುಂತಾದವು ಕೂಡಾ ಮನೆಮಾಡಿ ಕೊಂಡಿವೆಯೆಂಬುದು ಮನದಟ್ಟಾಗುತ್ತದೆ.

ಇಲ್ಲಿ ಹೊಸ ಇಂಡಿಯಾ ಹಾಗೂ ರಾಷ್ಟ್ರ ನಿರ್ಮಾಣಕ್ಕಾಗಿ ಪ್ರಯತ್ನ ನಡೆಯುತ್ತಿದನ್ನುತ್ತಿರುವ ಶ್ರೀಮತಿ ಇಂದಿರಾ ಗಾಂಧೀಜೀ, ಅವರ ಪಿತಾಜೀ ಪಂಡಿತ ಜವಾಹರಲಾಲ ನೆಹರೂಜೀ ಕೂಡಾ ಹಾಗನ್ನೇ ಹೇಳುತ್ತಿದ್ದರು. ಇಪ್ಪತ್ತು ವರ್ಷಗಳಿಂದಲೂ ನಾವು ಹೊಸ ಇಂಡಿಯಾಕ್ಕಾಗಿ ಪ್ರಯತ್ನಿಸುತ್ತಿದ್ದೇವೆ ಮತ್ತು ಒಂದು ರಾಷ್ಟ್ರದ ರಚನೆಗಾಗಿ ಪ್ರಯತ್ನಿಸುತ್ತಿದ್ದೇವೆ! ಯಾಕೆ? ಇಲ್ಲಿ ದೇಶ—ರಾಷ್ಟ್ರ, ಜನಾಂಗ, ಸಂಸ್ಕೃತಿ ಒಂದೂ ಇದ್ದಿಲ್ಲವೇನು? ಹಾಗೆ ಆದೀನಾವರೂ 'ಇದ್ದಿದ್ದರೂ ಅನ್ಯಾನ್ಯ ಅನ್ಯರ ಆಕ್ರಮಣ ಅಲ್ಲದ ಅನ್ಯಾನ್ಯ ಕಾರಣಗಳಿಂದಾಗಿ ಕೊಳೆತು ಹಾಳಾಗಿ ಹೋಗಿದೆಯೇನು? ಆದುದರಿಂದ ಆ ಹಳೆಯ ಅಜ್ಜ ನೆಟ್ಟಿರುವ ಆಲದ ಮರವನ್ನು ಕಿತ್ತು ಹಾಕಿ ಬಿಟ್ಟು ಹೊಸ ಅಶೋಕ ಗಿಡವನ್ನು ನೆಡಬೇಕೇನು? ಇಪ್ಪತ್ತು ವರ್ಷಗಳಿಂದಲೂ ಈ ವನ ಮಹೋತ್ಸವ ಕಾರ್ಯ ನಡೆಯುತ್ತಿದೆ! ಅಲ್ಲದೆ ತರುಣ ಪೀಳಿಗೆಯನ್ನು ಆ ಕಾರ್ಯಕ್ಕಾಗಿ ಆಮಂತ್ರಿಸಲಾಗುತ್ತಿದೆ! ಕಮ್ಯೂನಿಸಮಿನ ಕಪಿ ಮುಷ್ಟಿಯಲ್ಲಿರುವ ರಷ್ಯಾ ಜರ್ಮನಿಯ ಆಕ್ರಮಣದಿಂದ ಜರ್ಝರಿತವಾದಾಗ ಸ್ಟೆಲಿನ್—ಭವ್ಯ ರಷ್ಯವನ್ನು ಕಟ್ಟಲು ಆಹ್ವಾನವೀಯುತ್ತಿದ್ದ ಸ್ಟೆಲಿನ್—ರಷ್ಯನರೇ, ನಿಮ್ಮ ಸಂಸ್ಕೃತಿ, ರಾಷ್ಟ್ರೀಯತೆಯನ್ನು ಕಾಯಲು ಮುಂದೆ ಬನ್ನಿರೆಂದು ಪೂರ್ವಜರ ಪ್ರಖ್ಯಾತಿಯತ್ತ ಗಮನ ಸೆಳೆದು ಹಿಟ್ಲರನ ಹಿಡಿತಕ್ಕೊಳ್ಳಗಾಗದೆ ತಪ್ಪಿಸಿಕೊಂಡರು. ಹೀಗ ದೇಶವನ್ನು ಸರಿಯಾದ ರೀತಿಯಲ್ಲಿ ಮುಂದಕ್ಕೊಯ್ಯಲು ಇಷ್ಟಪಡುವವರು ತಮ್ಮ ಪೂರ್ವಜರ ಅವಹೇಳನೆಗೈದು ಭಾವೀ ಜನಾಂಗಕ್ಕೆ ಭಲೇ ಭಲೇ ಅನ್ನಲಾರರು. ವನ ಮಧ್ಯದಲ್ಲಿ ಸುತ್ತಾಡುತ್ತಿರುವ ಸಿಂಹ ರಾಜನು ಅಲ್ಲಲ್ಲಿ ನಿಂತು ಅವಲೋಕನಗೈದು ಅಡಿಯ ಮುಂದಿಡುತ್ತಾನೆ. ಅಂದರೆ ನೈಜಪ್ರಗತಿಶೀಲನು ತನ್ನ ಪೂರ್ವಜರ ನಡೆ—ನುಡಿ, ರೀತಿ—ನೀತಿ, ಆಚಾರ—ವಿಚಾರಂಗಳನ್ನು ಸಿಂಹಾವಲೋಕನ ನಡೆಸಿ ಮುಂದರಿಯುತ್ತಾನೆ. ಆದರೆ ಕತ್ತೆಯ ವಿಷಯ ಹಾಗಲ್ಲ, ಅದರ ಮುಂದುಗಡೆ ಗೆಣಸನ್ನು ತೋರಿಸಿಕೊಂಡೇ ಅದನ್ನು ನಡೆಸಬೇಕಾಗುತ್ತದೆ. ನಮ್ಮ ನಾಡಿನ ಪ್ರಜೆಗಳು ಯಾವ ಗುಂಪಿಗೆ ಸೇರಿದವರು? ಭಾವೀ ರಾಷ್ಟ್ರ ನಿರ್ಮಾಣದ ಗೆಣಸಿಗಾಗಿ ನಾಲಗೆ ಚಾಚುವವರೇ? ಅಂತಹವರ ಸಂಖ್ಯೆ ಅಧಿಕವಲ್ಲವೆಂಬುದನ್ನು ಚುನಾವಣೆಯ ಸಂಖ್ಯೆ ಸಹಾ ಸೂಚಿಸುತ್ತದೆ.

ಇದೇ ದಾರಿಯಲ್ಲಿ, ನಮ್ಮ ದೇಶವು ನಿಸ್ಸಂದೇಹವಾಗಿ ಪ್ರಗತಿ ಹೊಂದುತ್ತಿದೆ. ಆದಂದು ವಿದೇಶಿ ಸಹಾಯದಿಂದ ಇವ. ಅದು ಒಳ್ಳೆಯದಲ್ಲ. ಮುಂದಿನ ಹತ್ತು ವರ್ಷದಲ್ಲಿ ಆಹಾರ ವಿಷಯದಲ್ಲಿ ಮಾತ್ರವಲ್ಲ, ಎಲ್ಲಾ ವಿಷಯಗಳಲ್ಲೂ ನಾವು ಸ್ವಯಂ—ಪೂರ್ಣರಾಗಬೇಕೆಂದು ಇಂದಿರಾಜಿ ಹೇಳುತ್ತಾರೆ. ಹೌದು, ಪ್ರಗತಿ ಹೊಂದಿಲ್ಲವೆನ್ನುವ ಪ್ರಜೆ ಯಾವನಾದರೂ ಇರುವನೇ? ಆದರೆ ಅದು ಯಾವ ರೀತಿಯ ಪ್ರಗತಿ? ಅಲ್ಲೊಂದು ಇಲ್ಲೊಂದು ಅಣೆಕಟ್ಟು, ಉಕ್ಕಿನ ಕಾರ್ಖಾನೆ, ಬೃಹದ್ ಕಾರ್ಖಾನೆ, ಆಧುನಿಕ ಕಸಾಯಿಖಾನೆ, ವಿದ್ಯುತ್ಸಲಕರಣೆ, ವಾಹನ ಸೌಕರ್ಯ ಹೆಚ್ಚಾಗಿರುವದರಲ್ಲಿ ಸಂದೇಹವಿಲ್ಲ. ಪ್ರಗತಿಯೆಂದಲ್ಲ ಇಷ್ಟೇ ಏನು? ಅಣೆಕಟ್ಟು, ಬೃಹದ್ ಕಾರ್ಖಾನೆಗಳಿಗಾಗಿ ಇಂದದೆಷ್ಟು ಬಡಿದಾಟಗಳು ನಡೆಯುತ್ತಿರುವುದಿಲ್ಲ. ರಾಷ್ಟ್ರೀಯತೆಯ ಅಣೆಕಟ್ಟು ಬಿರುಕುಬಿಡುತ್ತಿದೆಯಲ್ಲ? ಸಂಸ್ಕೃತಿಯ ಗಾರೆ ಒಂದಿಷ್ಟೂ ಇಲ್ಲದಿರುವ ಭಾವೀಜನದ ಅಣೆಕಟ್ಟು ಗಟ್ಟಿಯಾಗಿ ನಿಲ್ಲುವದೆಂತು? ನಿನ್ನೆಯ ವರೆಗೂ ಒಂದಾಗಿದ್ದವರು ಇಂದು ಪಂಜಾಬಿಗರು ಪ್ರತ್ಯೇಕ, ಹರಿಯಾನವಿಗಳು ಬೇರೆಯಾಗುತ್ತಿದ್ದಾರೆ! ಮಹಾನಗರ ಬೊಂಬಾಯಿಯಲ್ಲಿ ತಮಿಳರೋ—ಮಲೆಯಾಳಿಗಳೋ ತಲೆಯೆತ್ತಿ ನಡೆಯುವಂತಿಲ್ಲ. ಹಾಗೆಯೇ ಮದರಾಸಿನಲ್ಲಿ ಹಿಂದೀವಾಲಾಗಳು ಮುಖತೋರಿಸುವಂತಿಲ್ಲ. ಇದು ಪ್ರಗತಿ ಏನು?........

ದೇಶದ ಪುನರ್-ನಿರ್ಮಾಣಕ್ಕಾಗಿ ಕಾಂಗ್ರೆಸ್ಸು ಪ್ರತಿಜ್ಞೆ ಮಾಡಿರುತ್ತದೆ. ಕಾಂಗ್ರೆಸ್ಸಿಗಂದರೋ ಒಂದು ರಾತ್ರಿಯೊಳಗೆ ಜಾದುಕೋಲಿನ ಸಹಾಯದಿಂದ ಬಡತನವನ್ನು ಪರಿಹರಿಸಲು ಸಾಧ್ಯವಿಲ್ಲವಾದರೂ ಭವ್ಯಭಾವೀ ಭಾರತದ ನಿರ್ಮಾಣದ ಮಾತನ್ನದು ಕೂಡುತ್ತದೆಂದು ಪ್ರಜೆಗಳ ಮುಂದಕ್ಕೆ ಇಂದಿರಾ ಗಾಂಧೀಜೀ ಗೆಣಸು ಹಿಡಿದಿರುವರು. ಇಪ್ಪತ್ತು ವರ್ಷಗಳಲ್ಲಿ ಬಡತನ ಪ್ರಗತಿ ಪಥದಲ್ಲಿ ಕ್ಷಿಪ್ರಗತಿಯಲ್ಲಿ ಸಾಗಿದೆಯೇ ಅಥವಾ ಹಿಂದಕ್ಕೆ ಬಿದ್ದದೆಯೇ? ಜಾದುಕೋಲಿನ ಸಹಾಯದಿಂದಲ್ಲ, ಅಧಿಕಾರ ಅಥವಾ ರಾಜದಂಡದ ಸಹಾಯದಿಂದ, ಒಂದು ರಾತ್ರಿಯಲ್ಲಿ ಅಲ್ಲ, ಇಪ್ಪತ್ತು ವರ್ಷಗಳ ರಾತ್ರಿಯಲ್ಲಿ ನಾವು ಮಾಡಿರುವ ಕೆಲಸವಾದರೂ ಏನು? ಅಮೇರಿಕನ ಅಮಾನುಷ ಅಲ್ಲದೆ ಭೀಕರ ಕೃತ್ಯಗಳಿಗೊಳಗಾಗಿ ಅಣುಗುಂಡಿನಿಂದ ಜರ್ಝರಿತವಾದ ಜಪಾನು ಇಂದು ಅದೆಂತಿದೆ! ಜರ್ಮನಿ ಹಿಂದಕ್ಕೆ ಬಿದ್ದಿದೆಯೇ? ಅದೂ ಬೇಡ. ಪ್ರಪಂಚದಲ್ಲಿ ಚದುರಿಹೋಗಿದ್ದ ಯೆಹೂದ್ಯರೆಲ್ಲಾ, ಅಂಗೈಯಗಲದ ಇಸ್ರೇಲಿನಲ್ಲಿ ಇತ್ತೀಚೆಗೆ ಬಂದು ತಂಗಿ, ಇಂದು ನಮಗೆನೇ ನೆರವಿನ ಉದಾರ ಹಸ್ತವನ್ನೀಯಲು ಮುಂದಕ್ಕೆ ಬಂದಿದ್ದಾರೆ. ಈ ರಾಷ್ಟ್ರಗಳೊಂದಿಗೆ ಹೋಲಿಸಿಕೊಳ್ಳುವಾಗ ನಮ್ಮ ಪ್ರಗತಿ ಯಾವ ದುರ್ಗತಿಯಲ್ಲಿದೆಂಬುದು ಗೊತ್ತಾಗುತ್ತದೆ. ಕಾಂಗ್ರೆಸ್ಸಿನ ಆಳ್ವಿಕೆ ಆರಂಭವಾಗುವಾಗ ಬ್ರಿಟಿಷರೂ ಪಾಕಿಸ್ತಾನಿಗಳೂ ನಮಗೆ ಸಹಸ್ರಾರು ರೂಪಾಯಿ ಸಾಲ ಹಿಂತಿರುಗಿಸಬೇಕಾಗಿತ್ತು. ಇಂದಿನ ಪರಿಸ್ಥಿತಿ ಹೇಗಿದೆ? ನಾವು ಅದೆಷ್ಟು ರಾಷ್ಟ್ರಗಳಿಗೆ ಅದೆಷ್ಟು ಸಹಸ್ರ ಕೋಟಿ ರೂಪಾಯಿ ಸಾಲ ಹಿಂತಿರುಗಿಸಬೇಕಾಗಿರುತ್ತದೆ! ಇದೇ ಏನು ಇಂದಿರಾಜೀಯವರ ಪ್ರಗತಿಯೆಂಬ ಶೂರ್ಪನಖಿಯ ಸುಂದರ ರೂಪ? ಅದನ್ನು ಕಂಡು ಮೈಮರೆಯುವವರಾರು? ಮೋಸಹೋಗುವವರ್ಯಾರು?

ಇಂತಹ ಪ್ರಶ್ನೆಯನ್ನು ಕೇಳಿದೊಡನೆ ಶ್ರೀಮತಿ ಇಂದಿರಾಜೀ ಇತರ ಪಕ್ಷಗಳ ಮೇಲೆ ದೋಷಾರೋಪಣೆ ಮಾಡುತ್ತಾರೆ. ಕಲ್ಕತ್ತದಲ್ಲಿ ಮಾತಾಡುತ್ತ, 'ಕಮ್ಯುನಿಸ್ಟ್ ಪಕ್ಷಗಳು ದೇಶದ ಐಕ್ಯತೆಯನ್ನೊಡೆಯುತ್ತಿವೆಯಲ್ಲದೆ, ಕಾರ್ಮಿಕರ ಹಾಗೂ ಇತರರ ನಡುವೆ ಕಾಲುವೆಯನ್ನು ಕಡಿಯುತ್ತಿವೆಯೆಂದೂ ಜನಸಂಘವು ಮತೀಯ ಭೇದದ ಬೀಜವನ್ನು ಬಿತ್ತುತ್ತಿದೆಯೆಂದೂ ಕಾಂಗ್ರೆಸ್ಸಿಗೆ ಮಾತ್ರ ಎಲ್ಲಾ ಇಂಡಿಯನರು—ಜಾತಿ, ಪಂಥ ಮತ್ತು ಭಾಷಾಭೇದವಿಲ್ಲದೆ, ಒಂದೇ ಎಂದು ಹೆಮ್ಮೆಯಿಂದ ಹೇಳಿಕೊಂಡಿರುವರು.

ಕಮ್ಯೂನಿಸ್ಟರ ಪರವಾಗಿ ಪ್ರೋತ್ಸಾಹಕರ ಮಾತುಗಳನ್ನಾಡಲು ಮುಂದಕ್ಕೆ ಬರುವವನ ರಾಷ್ಟ್ರಪ್ರೇಮ ಅಥವಾ ದೇಶಭಕ್ತಿಯ ಕುರಿತು ಯೋಚಿಸಬೇಕಾಗುತ್ತದೆ. ಕಲ್ಕತ್ತದಲ್ಲಿ ಜನಸಂಘದ ಅಭ್ಯರ್ಥಿಯಾಗಿ ಅನ್ಯಾನ್ಯ ಮತಸ್ಥರು ಚುನಾವಣಾ ಕಣಕ್ಕಿಳಿದಿದ್ದರು ಎಂಬುದನ್ನು ಮರೆಯುವಂತಿಲ್ಲ.

ಇಷ್ಟೆಲ್ಲಾ ಇಂದಿರಾಜಿ ಹೇಳುತ್ತಿರುವರಾದರೂ ಎಲ್ಲಾ ಇಂಡಿಯನರು ಇಂದಿರಾಜಿಯವರ ಹಾಗೂ ಕಾಂಗ್ರೆಸ್ಸಿಗರ ಕಣ್ಣಿಗ ಒಂದೇ ಏನು? ಕಾಂಗ್ರೆಸ್ಸಿಗರು ಹೇಳುವ ಇಂಡಿಯನರಿಗೂ ಭಾರತೀಯ ಜನಸಂಘದವರು ಹೇಳುವ ಭಾರತೀಯರಿಗೂ ಇರುವ ವ್ಯತ್ಯಾಸವಾದರೂ ಏನು? ಚುನಾವಣಾ ಪ್ರಚಾರದ ಸಮಯ ಶ್ರೀಮತಿ ಇಂದಿರಾಜೀ ಮಹಮ್ಮದೀಯರ ಮತವಿಚಾರದಲ್ಲಿ ಕೈ ಹಾಕುವದಿಲ್ಲವೆಂದು ಅವರಿಗೆ ಆಶ್ವಾಸನ ಕೊಟ್ಟಿದ್ದಾರೆ. ಇಂದು ಬರುತ್ತಿರುವ ಕಾನೂನುಗಳು ಕೇವಲ ಹಿಂದೂಗಳಿಗೆ ಮಾತ್ರ ಇದೆ. ಓಹೋ! ಇದು ಜಾತಿ, ಪಂಥ ಮತ್ತು ಭಾಷೆಗೆ ಸಂಬಂಧಪಟ್ಟದ್ದಿರುವದಿಲ್ಲ—ಮತಕ್ಕೆ ಹಾಗೂ ರಾಷ್ಟ್ರೀಯತೆಗೆ ಸಂಬಂಧಪಟ್ಟ ಸಂಗತಿಯೇ ಸರಿ. ಇಂದು ಜಾತಿ—ಪಂಥ ಅಥವಾ ಭಾಷಾ ವಿಷಯದ ಮೇಲೆ ಹೊಡೆದಾಡಿಕೊಳ್ಳುತ್ತಿರುವವರು ಯಾರು? ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರ ಪರವಾಗಿ ಪ್ರಚಾರ ಮಾಡುತ್ತಿರುವವರು ಯಾರು?

(ಹತ್ತನೇ ಪುಟ ನೋಡಿರಿ)

ದಯಮಾಡಿ ವಿಚಾರಿಸಿರಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ವಾಲುಕೋಟ, ಉಡುಪಿ, ದ. ಕನ್ನಡ.

ಸವಾರಿ ಮಾಡುವ ಭೂತ

ಜನಸಂಖ್ಯೆಯ ಹೆಚ್ಚಳಕ್ಕೆ ಪರಿಹಾರವೇನು?

ಲೇಖನವನ್ನು ಆರಂಭಿಸುವ ಮೊದಲೇ ಜನಸಂಖ್ಯಾಧಿಕ್ಯದ ಸಮಸ್ಯೆಯು ಬಗ್ಗೆ ಕೇವಲ ಶುಷ್ಕ ಕಲ್ಪನೆ ಏನೂ ಇಲ್ಲವೆಂದು ಸ್ಪಷ್ಟ ಮಾಡಿಕೊಳ್ಳೋಣ. ಇದು ಸಾಕಷ್ಟು ವಾಸ್ತವಿಕವಾದದ್ದೇ. ಕೆಲವೊಂದು ದೇಶಗಳಲ್ಲಿ ಇದು ಇಲ್ಲವೇ ಇಲ್ಲ. ಇನ್ನು ಕೆಲವು ದೇಶಗಳಲ್ಲಿ ಇದು ಈಗಷ್ಟೇ ಅನುಭವಕ್ಕೆ ಬರುತ್ತಿದೆ. ಮತ್ತೆ ಕೆಲವು ದೇಶಗಳಲ್ಲಿ ಇದು ಅತ್ಯಂತ ತೀವ್ರವಾಗಿಯೇ ಭಾಧಿಸುತ್ತಿದೆ.

"ಜನಸಂಖ್ಯಾಧಿಕ್ಯದ ಸಮಸ್ಯೆಗಳು" ಎಂದರೆ ನಿಜವಾಗಿಯೂ ನಾವೇನು ಅರ್ಥ ಮಾಡುತ್ತೇವೆ?

ಜಗತ್ತಿನ ಜನಸಂಖ್ಯೆ ಸತತವಾಗಿ ಬೆಳೆಯುತ್ತಿದೆ. ಮಾನವ ಕುಲದ ಅಸ್ತಿತ್ವದ ಉಷಃಕಾಲದಲ್ಲಿ ವರ್ಷಕ್ಕೆ ಜನಸಂಖ್ಯೆ ಶತ ಒಂದರ ಪ್ರಮಾಣದಲ್ಲಿಯು ಅತ್ಯಂತ ಸೂಕ್ಷ್ಮ ಭಾಗದಷ್ಟು ಬೆಳೆಯುತ್ತಿತ್ತೆಂದು ನಂಬಲಾಗಿದೆ. ಅನಂತರ ಕ್ರಮೇಣ ಕ್ರಮೇಣವಾಗಿ ಈ ಪ್ರಮಾಣವು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಶೇಕಡಾ ಒಂದರ ಪ್ರಮಾಣವನ್ನು ತಲುಪಿತು. ಇಂದು ವರ್ಷವೊಂದಕ್ಕೆ ಈ ಪ್ರಮಾಣವು ಶೇಕಡಾ ಎರಡರಷ್ಟಾಗಿದೆ.

ಮನುಷ್ಯ ಕುಲದ ಅಸ್ತಿತ್ವದ ಅಂದಾಜು ಮಾಡಲಾದ ಒಂದು ಮಿಲಿಯ ವರ್ಷಗಳಲ್ಲಿ ಜಗತ್ತಿನ ಜನಸಂಖ್ಯೆ ೩.೩ ಬಿಲಿಯಗಳಷ್ಟು ಹೆಚ್ಚಿದೆ. ಈ ಸಂಖ್ಯೆ ಇಮ್ಮಡಿಗೊಳ್ಳಲು ಕೇವಲ ೩೫ ವರ್ಷಗಳೇ ಸಾಕು—ಅಂದರೆ ಕೇವಲ ೨೦೦೦ ಇಸ್ವಿ. ೧೯೬೫ನೇ ಸಾಲಿನಲ್ಲಷ್ಟೇ ಸುಮಾರು ೬೫ ಮಿಲಿಯಗಳಷ್ಟು ಜನ ಭೂಮಿಯ ಮೇಲಿನ ಮನುಷ್ಯ ಜೀವಿಗಳೊಡನೆ ಸೇರಿರಬೇಕು.

ಈ ಚಿತ್ರ ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಭಿನ್ನಭಿನ್ನವಾಗಿದೆ.

ಜನಸಂಖ್ಯಾ ಶಾಸ್ತ್ರಜ್ಞರು ತೀವ್ರ ಜನಸಂಖ್ಯಾಭಿವೃದ್ಧಿಗೆ ಕಾರಣವನ್ನು ಮರಣಸಂಖ್ಯಾ ಪ್ರಮಾಣದಲ್ಲಿಯ ಇಳುವರಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯ ಜನನ ಪ್ರಮಾಣದಲ್ಲಿ ಯಾವುದೇ ಅನುರೂಪದ ಇಳುವರಿಯಿಲ್ಲದಿರುವುದರ ಕಡೆಗೆ ತೋರಿಸುತ್ತಾರೆ.

ಜನಸಂಖ್ಯಾ ಬೆಳವಣಿಗೆಗೂ ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳಿಗೂ ನಾನಾ ವಿಧದ ಆಂತರಿಕ ಸಂಬಂಧಗಳಿವೆ. ಕೆಲವೊಂದು ದೇಶಗಳಲ್ಲಿ ಜನಸಂಖ್ಯಾಭಿವೃದ್ಧಿಯು ಪರಿಣಾಮಕಾರಿಯಾದಂಥ ಶ್ರಮಶಕ್ತಿಯನ್ನು ನಿರ್ಮಿಸುತ್ತದೆ ಮತ್ತು ಇದನ್ನು ಉಪಯೋಗಿಸಿಕೊಂಡದ್ದೇ ಆದರೆ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯೂ ಚೇತನಗೊಳ್ಳುತ್ತದೆ. ಬೇರೆ ಕೆಲವು ದೇಶಗಳಲ್ಲಿ ಇದು ಅಂಥ ಆರ್ಥಿಕ ಪರಿಣಾಮವನ್ನೇನು ಉಂಟು ಮಾಡುವುದಿಲ್ಲ. ನಿರುದ್ಯೋಗ ಮತ್ತು ಅಧಿಕವಾಗಿ ಕೃಷಿ ಜನರೇ ಇರುವಂಥ ದೇಶಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಇದು ಇನ್ನಷ್ಟು ಕ್ಲಿಷ್ಟಕರವಾಗಿಸುತ್ತದೆ.

ದೇಶದೇಶಗಳ ನಡುವೆಯೂ ವ್ಯತ್ಯಾಸಗಳು ವಿಶಾಲವಾಗಿರುವುದು ಅರ್ಥವಾಗುವ ಸಂಗತಿ. ಯೋಜಿತ ಸಾಂಪತ್ತಿಕ ವ್ಯವಸ್ಥೆಯಿರುವಂಥ ಸಮಾಜವಾದೀ ದೇಶಗಳು, ವಸಾಹತು ಬೇಡಿಗಳನ್ನು ಈಗಷ್ಟೇ ಕಿತ್ತಸೆದಿರುವಂಥ ದೇಶಗಳು ಮತ್ತು ನವ ವಸಾಹತುಶಾಹಿಯ ಬಾಧೆಗೊಳಗಾಗಿರುವಂಥ ದೇಶಗಳು ಇವುಗಳ ನಡುವೆ ನಿಸ್ಸಂದೇಹವಾಗಿಯೂ ವ್ಯತ್ಯಾಸಗಳಿವೆ. ಇನ್ನು ಕಣ್ಣಿಗ ಕಾಣುವಂಥ ಬೇರೆ ಸಂಗತಿಗಳೆಂದರೆ ಜನಸಾಂದ್ರತೆ, ಸಾಂಸ್ಕೃತಿಕ ಮಟ್ಟಗಳು, ನೈಸರ್ಗಿಕ ಸಂಪತ್ತು ಮತ್ತು ಪ್ರಾಕೃತಿಕ ಪರಿಸ್ಥಿತಿಗಳು.

ಹೀಗಿರುವಾಗ ಜನಸಂಖ್ಯೆಯ ಬದಲಾವಣೆಗೆ ಕಾರಣವಾದಂಥ ಮತ್ತು ಎಲ್ಲ ದೇಶಗಳಿಗೂ ಅನ್ವಯಿಸುವಂಥ ಸಾಮಾನ್ಯವಾದೊಂದು ನಿಯಮವಿಲ್ಲ, ಆರ್ಥಿಕ ರಚನೆಗಳಂತೂ ಇನ್ನೂ ದೂರ ಉಳಿದುವು. ಈ ಬಗ್ಗೆ ವಿಭಿನ್ನ ಸಾಮಾಜಿಕ ರಚನೆಗಳ ಮೇಲೆ ಕಣ್ಣಿಟ್ಟು ಜನಸಂಖ್ಯಾ ನಿಯಮಗಳನ್ನು ಸ್ಪಷ್ಟ ರೀತಿಯಲ್ಲಿ ಅಭ್ಯಸಿಸಬೇಕಾದುದು ಅಗತ್ಯ.

ಕೆಲವೊಂದು ಜನಸಂಖ್ಯಾ ಸಮಸ್ಯೆಗಳು ಎಲ್ಲ ಅಭಿವೃದ್ಧಿಶೀಲ ದೇಶಗಳಿಗೂ ಸಾಮಾನ್ಯವಾಗಿವೆ. ಜನಸಂಖ್ಯಾ ಬೆಳವಣಿಗೆ ಮತ್ತು ರಾಷ್ಟ್ರೀಯ ಸಾಂಪತ್ತಿಕ ಅಭಿವೃದ್ಧಿ ಇವುಗಳನ್ನು ಅತ್ಯುತ್ತಮವಾಗಿ ಮೇಳಗೂಡಿಸುವುದು ಇಲ್ಲಿ ತುಂಬಾ ಮಹತ್ವದ್ದಾಗಿದೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಔದ್ಯೋಗೀಕರಣ ಮತ್ತು ನಗರಾಭಿವೃದ್ಧಿ ಕಾರ್ಯಗಳು ಕಾರ್ಯಗತವಾಗಲಾರಂಭಿಸಿದೊಡನೆ ಜನನ ಪ್ರಮಾಣದಲ್ಲೂ ಕ್ರಮೇಣ ಇಳುವರಿ ಆರಂಭವಾಗುತ್ತದೆಯೆಂಬ ವಾಸ್ತವಾಂಶವನ್ನು ಸಮರ್ಥಿಸಲು ಬೇಕಾದಷ್ಟು ಆಧಾರಗಳೂ ಅಂಕೆ-ಅಂಶಗಳೂ ಇವೆ. ಆದರ ಇಂಥ ಸಂಗತಿಗಳು ತತ್ಕ್ಷಣದ ಭವಿಷ್ಯತ್ತಿನಲ್ಲಿ ಪ್ರಯೋಜನಕಾರಿಯಾಗಬಲ್ಲವೆ?

ವಾಸ್ತವಾಂಶಗಳನ್ನೇ ನೋಡೋಣ: ಕಳೆದ ನಾಲ್ಕು ದಶಕಗಳಲ್ಲಿ ಭಾರತದ ನಗರ ಜನಸಂಖ್ಯೆ ಇಮ್ಮಡಿಗೊಂಡಿದೆ, ಆದರೆ ಜನನ ಪ್ರಮಾಣ ಮಾತ್ರ ಅಬಾಧಿತವಾಗಿದೆ. ವೆನೆಜುಯೇಲಾದಲ್ಲೂ ನಗರ ಜನಸಂಖ್ಯೆ ಕಳೆದ ಮೂರು ದಶಕಗಳಲ್ಲಿ ಇಮ್ಮಡಿಗಿಂತ ಹೆಚ್ಚಿದೆ, ಮೆಕ್ಸಿಕೋದ ಮಾತೂ ಹೀಗೆ. ಸಂಯುಕ್ತ ಅರಬ್ ಗಣರಾಜ್ಯ, ಅಲ್ಜೀರಿಯ ಮತ್ತು ಇನ್ನೂ ಕೆಲವಾರು ರಾಷ್ಟ್ರಗಳೂ ಹೀಗಿಯೇ. ಆದರೆ ಜನನ ಪ್ರಮಾಣದಲ್ಲಿ ಇಳುವರಿ ಸೂಚನೆ ಮಾತ್ರ ಕಂಡು ಬರುವುದಿಲ್ಲ

ಇದು ತೋರಿಸುವುದೇನು? ಆರ್ಥಿಕವಾಗಿ ಅಭಿವೃದ್ಧಿಗೊಂಡಿರುವ ದೇಶಗಳಿಗೆ ವಿಶಿಷ್ಟವಾಗಿರುವುದನ್ನು ಸಾಮ್ರಾಜ್ಯವಾದ ಮತ್ತು ವಸಾಹತುವಾದಗಳಿಂದ ಆರ್ಥಿಕ ಅಭಿವೃದ್ಧಿ ಹಿಂದುಳಿದಿರುವಂಥ ದೇಶಗಳಿಗೆ ಯಾಂತ್ರಿಕವಾಗಿ ಅನ್ವಯಿಸಿ ಅಥವಾ ಕಲ್ಪಿಸಿ ನೋಡುವುದು ಸರಿಯಲ್ಲ. ಈ ದೇಶಗಳಲ್ಲಿಯು ಔದ್ಯೋಗೀಕರಣ ಮತ್ತು ನಗರ ಜೀವನಗಳು ಕ್ರಮೇಣದ ಕಾಲಾವಧಿಯಲ್ಲಿ ಜನನ ಪ್ರಮಾಣದಲ್ಲಿಯ ಇಳುವರಿಗೆ ಕಾರಣವಾಗುತ್ತವೆ. ಆದರೆ ಇವುಗಳಲ್ಲಿ ಅನೇಕ ದೇಶಗಳು ಜನಸಂಖ್ಯಾ ಸಮಸ್ಯೆಯನ್ನು ಈಗಲೇ ಬಿಡಿಸಬೇಕಾಗಿದೆ. ಅಂತೆಯೆ ಒಂದು ನಿಷ್ಕರ್ಷವಾದ ಜನಸಂಖ್ಯಾ ನೀತಿ, ಅಂದರೆ ಜನಸಂಖ್ಯಾಭಿವೃದ್ಧಿಯನ್ನು ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಯ ಸಾಧ್ಯತೆಗಳು ಹಾಗೂ ಪ್ರತೀಕ್ಷೆಗಳೊಡನೆ ಉತ್ತಮವಾಗಿ ಮೇಳಗೂಡಿಸುವಂಥ ನೀತಿ ಅಗತ್ಯ.

ವಿಶೇಷ ರೀತಿಯ ಶಾಸನಗಳೂ ಸರ್ಕಾರದ ಕ್ರಮಗಳೂ ಜನಸಂಖ್ಯಾ ಕ್ರಿಯೆಯನ್ನು ಅಗತ್ಯವಾದ ದಿಸೆಯಲ್ಲಿ ತಿರುಗಿಸಬಹುದು. ಮನುಷ್ಯ ಶಕ್ತಿಯ ಕೊರತೆಯಿರುವಂಥ ಹಾಗೂ ತನ್ನ ಸಾಮಾನ್ಯ ಪುನರುತ್ಪಾದನೆಯನ್ನೂ ಭರವಸಿಗೊಳಿಸದಂಥ ದೇಶಗಳಲ್ಲಿ ಜನನ ಪ್ರಮಾಣಕ್ಕೆ ಉತ್ತೇಜನ ನೀಡಬೇಕು. ಇಂಥ ರಾಷ್ಟ್ರಗಳು ಹೆತ್ತವರು ಹೊಸ ಪೀಳಿಗೆಯನ್ನು ಪೋಷಿಸಿ ಬೆಳೆಸುವುದಕ್ಕಾಗಿ ಹಣ ಕಾಸು ಸಹಾಯವನ್ನು ಒದಗಿಸಬಹುದು.

ಅನ್ಯೋನ್ಯವಾದ ಮಿಗಿತೆಯ ಜನಶಕ್ತಿಯಿರುವಂಥ ಮತ್ತು ಭಾವೀ ಶ್ರಮ ಮೂಲಗಳಲ್ಲಿ ಅಂಶಿಕ ಉಪಯೋಗವನ್ನು ಮಾತ್ರವೇ ಕಲ್ಪಿಸಿದಂಥ ದೇಶಗಳಲ್ಲಿ ಜನನ ನಿಯಂತ್ರಣವು ಸೀಮಿತವಾಗಿರಬೇಕು. ಉದಾಹರಣೆಗೆ ಜಪಾನಿನಲ್ಲಿ ಔದ್ಯೋಗೀಕರಣದ ಹಾಗೂ ಭೂ ಸುಧಾರಣೆಯ ಕಾಲದಲ್ಲಿ ಇಂಥ ಧೋರಣೆ ಜನನ ಪ್ರಮಾಣದಲ್ಲಿ ೧೯೪೭-೪೯ರಲ್ಲಿ ಪ್ರತಿ ಸಹಸ್ರಕ್ಕೆ ೩೪ರಿಂದ ೧೯೬೧-೬೪ರಲ್ಲಿ ಕೇವಲ ೧೭ರಷ್ಟಕ್ಕೆ ಕಳಗೆ ತಂದಿತು.

ಜಗತ್ತಿನಲ್ಲೇ ಅತ್ಯಂತ ದಟ್ಟ ಜನವಸತಿಯ ದೇಶವಾದ ಭಾರತದಲ್ಲಿ, ಸರ್ಕಾರವು ವಿಶೇಷ ರೀತಿಯ ಕ್ಲೀನಿಕ್‌ಗಳನ್ನು ಸ್ಥಾಪಿಸುವ ಮೂಲಕ ವಿಸ್ತೃತ ವೈದ್ಯಕೀಯ ಮಾಹಿತಿ ಪ್ರಸಾರದ ಮೂಲಕ ಮತ್ತು ಕೆಲವೊಂದು [illegible] ಹಾಗೂ ವಿವಾಹ ಶಾಸನಗಳ ಮೂಲಕ ಸಂತಾನ ನಿಯಂತ್ರಣವನ್ನು ಊರ್ಜಿತಗೊಳಿಸುತ್ತಿದೆ.

ಜನಸಂಖ್ಯಾಸಮಸ್ಯೆಯ ಬಗ್ಗೆ ಮಾಲ್ಥೂಸಿಯನ್‌ವಾದಿಗಳು ಮತ್ತು ಮಾರ್ಕ್ಸ್‌ವಾದೀ—ಲೆನಿನ್‌ವಾದಿಗಳು ಇವರನ್ನು ವಿಭಜಿಸುವಂಥದು ಜನನ ಪ್ರಮಾಣವನ್ನು ಕ್ರಮಾಗತಗೊಳಿಸಬೇಕೆಂಬ ವಿಷಯವಲ್ಲ, ಆದರೆ ಜನಸಂಖ್ಯೆಯ ಮೂಲ ಕ್ರಿ

೧೯೬೬ನೆ ಸಾಲಿನ ವೈದ್ಯಕೀಯ ನೊಬೆಲ್ ಪಾರಿತೋಷಕವನ್ನು ಕ್ಯಾನ್ಸರ್ ಸಂಬಂಧದ ಸಂಶೋಧಕರಾದ ಡಾ| ಚಾರ್ಲ್ಸ್ ಬ್ರ್ಯಾ ಹಗ್ಗಿನ್ಸ್, ಚಿಕಾಗೊ ವಿಶ್ವವಿದ್ಯಾಲಯ (ಎಡ) ಮತ್ತು ಡಾ| ಫ್ರಾನ್ಸಿಸ್ ಪೆಟನ್ ರೌಸ್, ರೊಕ್‌ಫೆಲ್ಲರ್ ವಿಶ್ವವಿದ್ಯಾಲಯ (ಬಲ)

ಯೆಗಳ ಬಗ್ಗೆ ಹೊಂದಿರುವ ಪರಸ್ಪರ ನೇರ ವಿರೋಧಿಯಾದಂಥ ತಿಳುವಳಿಕೆಯಾಗಿದೆ.

ಮಾಲ್ಥೂಸಿಯನ್ ಸಿದ್ಧಾಂತಿಗಳು ಜನಸಂಖ್ಯಾಭಿವೃದ್ಧಿಗೆ ಜೈವಿಕ ನಿಯಮಗಳು ಕಾರಣವೆಂದು ಭಾವಿಸುತ್ತಾರಾದರೆ ಮಾರ್ಕ್ಸ್‌ವಾದಿಗಳು ಸಾಮಾಜಿಕ ಮತ್ತು ಆರ್ಥಿಕ ನಿಯಮಗಳೇ ಎಂದು ಭಾವಿಸುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಕಟ್ಟಳೆಗಳ ಮೂಲಕ ಜೈವಿಕ ನಿಯಮಗಳು ಕಾರ್ಯ ಮಾಡುವುದರಿಂದ ಆ ಕಟ್ಟಳೆಗಳು ಜೈವಿಕ ಗತಿಯ ಮೇಲೆ ಪರಿಣಾಮವನ್ನುಂಟುಮಾಡುತ್ತವೆ. ಜೈವಿಕ ಕ್ಷೇತ್ರವು ಸಾಮಾಜಿಕ ಕ್ಷೇತ್ರದೊಡನೆ ಆಂತರಿಕ ಕ್ರಿಯೆಯನ್ನು ಹೊಂದಿದೆ.

ಮಾಲ್ಥೂಸಿಯನ್‌ವಾದಿಗಳ ಪ್ರಕಾರ ಜನಸಂಖ್ಯಾಧಿಕ್ಯವೇ ಇಂದು ಆಕ್ರಮಣಕ್ಕೆ ಮೂಲ. ಯುದ್ಧಗಳು ಅತಿ ಕಡಿಮೆ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತವೆಯೆಂದು ಅವರು ಹೇಳುತ್ತಾರೆ. ಫ್ರೆಂಚರಾದ ಬಾಸಿನ್ 'ಜಗತ್ತಿನ ಜನಸಂಖ್ಯೆ ಕಳವಳಕಾರೀ ಪ್ರಮಾಣದಲ್ಲಿ ಬೆಳೆಯುತ್ತಲೇ ಇದೆ ಮತ್ತು ಯುದ್ಧ ಈ ವರೆಗೂ ವಿನಾಶದ ಕನಿಷ್ಠ ಸಾಧನವಾಗಿಯೆ ಉಳಿದಿದೆ' ಎಂದು ಬರೆಯುತ್ತಾರೆ. ಅಷ್ಟೇ ಅಲ್ಲ, ಅವರು ಗತ ಯುದ್ಧವು ಕೊಲ್ಲಬಹುದೆಂದು ನಿರೀಕ್ಷಿಸಿದ್ದಕ್ಕಿಂತಲೂ ಕಡಮೆ ಸೋವಿಯೆತ್ ಜನರ ಜೀವಗಳನ್ನು ಕಳೆದುಕೊಂಡರೆಂದು ದುಃಖಿಸುತ್ತಾರೆ. ಕಟ್ಟಡಗಳಿಗೆ ಧಕ್ಕೆಯೊದಗದಂತೆ ಜನರನ್ನು ಮಾತ್ರವೇ ಸಾಯಿಸುವಂಥ ಮಿಲಿಟರಿ ಉಪಾಯಗಳನ್ನು ಕಂಡು ಹಿಡಿದರೆ ಒಳ್ಳೆಯದೆಂದೂ ಅವರು ಅಭಿಪ್ರಾಯ ಪಡುತ್ತಾರೆ.



ಲ್ಯೂನರ್ ೨ ಕಳಿಸಿದ ಚಂದ್ರನ ಮೇಲ್ಮೈಯ ಚಿತ್ರ. ಇದರಲ್ಲಿ ಪರ್ವತ-ಕಣಿವೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ.

ಇನ್ನು ಬ್ರಿಟಿಷ್ ಜೀವವಿಜ್ಞಾನಿ ಫಾನೆಟ್‌ರಂತೂ ಪ್ರಾಚೀನ ತ್ರಿಶಕ್ತಿಗಳಿಗೆ ಮೊರೆಹೋಗದೆ ಬೇರೆ ದಾರಿಯನ್ನೇ ಕಾಣುವುದಿಲ್ಲ. ಅವೆಂದರೆ: ಯುದ್ಧ, ರೋಗ ರುಜಿನ ಮತ್ತು ಉಪವಾಸ. ಈ ತ್ರಿಶಕ್ತಿಗಳೇ ಜನಸಂಖ್ಯಾ ಸಮಸ್ಯೆಯನ್ನು ಹತೋಟಿಗೆ ತರಬಹುದೆಂದು ಅವರ ಅಭಿಪ್ರಾಯ. ಪಾಶ್ಚಾತ್ಯ ದೇಶಗಳಲ್ಲಿಯ ಕೆಲವು "ಗಣ್ಯ ವ್ಯಕ್ತಿಗಳು" ರೋಗ ರುಜಿನಗಳ ವಿರುದ್ಧ ಹೋರಾಡುತ್ತ, ಮನುಷ್ಯನ ಆಯುಷ್ಯವನ್ನು ದೀರ್ಘಗೊಳಿಸುತ್ತ ವಿಜ್ಞಾನಿಗಳು ನಿಜವಾಗಿಯೂ ಸಾಮಾಜಿಕ ಆವಶ್ಯಕತೆಯೊಂದನ್ನು ಪೂರೈಸುವರೆ ಎಂದು ಸಂದೇಹಪಡುತ್ತಾರೆ.

ಸೋವಿಯೆತ್ ಜನರು ಮತ್ತು ಸಾಮಾಜಿಕ ಪ್ರಗತಿಯನ್ನು ಪ್ರತಿಪಾದಿಸುವಂಥ ಎಲ್ಲ ಜನರೂ ಈ ಸ್ವಜಾತಿ ಭಕ್ಷಣದ "ಸಿದ್ಧಾಂತ"ಗಳನ್ನು ಒಂದೇಟಿಗೆ ತಿರಸ್ಕರಿಸುತ್ತಾರೆ.

ಜಾಗತಿಕ ಜನಸಂಖ್ಯಾಭಿವೃದ್ಧಿಯ ತೀವ್ರತೆ ಭಯಭ್ರಾಂತಿಗೆ ಕಾರಣವಾಗಬೇಕಾದ್ದಿಲ್ಲ. ಅಥವಾ ಉಪವಾಸ ವನವಾಸದಿಂದ ಸಾವುಗಳು ಅನಿವಾರ್ಯ ಎಂಬ ಹೆದರಿಕೆ ಬೆದರಿಕೆಗಳಿಗೂ ಕಾರಣವಾಗಬೇಕಾದ್ದಿಲ್ಲ.

ಕಾಲ ಕಳೆದಂತೆ, ಬಯಸಿದರೆ ಜಗತ್ತಿನ ಜನಸಂಖ್ಯೆ ದೃಢತೆಯನ್ನು ಸಾಧಿಸುತ್ತದೆ. ಸಂಸ್ಕೃತಿ ಪ್ರಸಾರ, ಸಂತಾನ ನಿಯಂತ್ರಣ, ಶಿಶು ಮೃತ್ಯು ನಿವಾರಣೆ ಮೊದಲಾದವುಗಳಿಂದ ತಂದೆ ತಾಯಿಗಳು ಎರಡು ಅಥವಾ ಮೂರು ಮಕ್ಕಳಿಂದ ತೃಪ್ತರಾಗಬಹುದು. ಇದರಿಂದ ಜನನ ಪ್ರಮಾಣವು ಮರಣ ಪ್ರಮಾಣದ ಮಟ್ಟಕ್ಕೆ ಬರುತ್ತದೆ ಮತ್ತು ಜನಸಂಖ್ಯಾ ವಿಸ್ತಾರ ನಿಧಾನಗೊಳ್ಳುತ್ತದೆ.

ಅಭಿವೃದ್ಧಿಶೀಲ ದೇಶಗಳ ಸಾಮಾಜಿಕ ರಚನೆಯಲ್ಲಿ ಮೂಲಭೂತ ಬದಲಾವಣೆ, ಅವುಗಳ ಆರ್ಥಿಕ ಪ್ರಗತಿ ಮತ್ತು ಸಾಂಸ್ಕೃತಿಕ ಮುನ್ನಡೆ ಇವುಗಳೊಡನೆ ಪರಿಣಾಮಕಾರಿಯಾದಂಥ ಜನಸಂಖ್ಯಾ ಧೋರಣೆಯೂ ಮೇಳಗೂಡಿದಾಗ ಮಾಲ್ಥೂಸಿಯನ್‌ವಾದಿಗಳು ಅತಿ ಪ್ರೀತಿಯಿಂದ ಚಿತ್ರಿಸಬಯಸುವ ಕಾಲ್ಪನಿಕ ಜನಸಂಖ್ಯಾ ಭಯಂಕರತೆಯ ಭೀತಿಯಿಂದ ಜಗತ್ತಿನ ಜನರು ವಿಮೋಚನೆಗೊಳ್ಳಲೇಬೇಕು. ಮನುಕುಲದ ಸುವರ್ಣಯುಗ ಹಿಂದೆ ನಡೆದು ಹೋದ ಸಂಗತಿಯಲ್ಲ, ಬದಲು ಅದು ಇರುವುದು ಇನ್ನು ಮುಂದೆ.

ವಿಯತ್ ಕಾಂಗೋಲಿಗಳಿಂದ ಬಿಡುಗಡೆ ಹೊಂದಿದ ದ. ವಿಯತ್‌ನಾಮಿಯೊಬ್ಬ. ೩೩ ವರ್ಷ ಪ್ರಾಯದ ಈ ಬಡಪಾಯಿ ಅಮೆರಿಕನ್ ಸೇನೆಯಿಂದಾಗಿ ಮುಕ್ಕನಾದ.

ಶಾಲಾ ಕಾಲೇಜು ಲೈಬ್ರೆರಿಗಳಿಗೆ ಉಪಯುಕ್ತ ಪುಸ್ತಕಗಳು

		ರೂ.ಪೈ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿನೇವಾ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯುಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಬಿಂದ ಮುಗುಳು	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣಯಾತ್ರೆ	(ನಚಿಕೇತ)	1=50
ಭಾರತದ ವೀರಾಂಗನೆಯರು	(ಕೆ.ಎನ್.ಭಟ್ ಶಿರಾಡಿಪಾಲ್)	1=50
ಮೇಗ ಕೊಟ್ಟ ಬೆಂಡೋಲೆ	(ಎಸ್. ಸದಾಶಿವ ರಾವ್)	1=80

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಿತ್ಯಾಲೋಕನ

ದೇವತೆಯೆದುರೂ ಮಾನವತೆ ನಿಂತಿತು

ತಂದೆ ದೇವೇಂದ್ರನಿಂದ ಅಗ್ನಿಪರೀಕ್ಷೆ ನಡೆದಾಗ ಮಗ ಅರ್ಜುನ ಅಪ್ಪಟ ಬಂಗಾರವಾದ ಉದಾತ್ತ ಘಟನೆ.

ಬರೆದವರು
ಶ್ರೀ ಯು. ವಾಸುದೇವ ನಾಯಕ್.

ಅನಾದಿಯಿಂದಲೂ—ದಕ್ಷಿಣ ಭಾರತದಲ್ಲಿ ಯಕ್ಷಗಾನವು ಹಲವು ನಾಮಾಂಕಿತಗಳನ್ನು ಹೊಂದಿ ಪ್ರಚಾರದಲ್ಲಿದೆ. ಈ ಕಲೆಯ ಪ್ರಯೋಗಗಳಿಂದಾಗಿಯೇ ಪುರಾಣಗಳಲ್ಲಿ ನಂಬಿಕೆ. ಅರ್ಥಾತ್ ಜನಸಾಮಾನ್ಯರಲ್ಲಿಯೂ ಪೌರಾಣಿಕ ಕಥಾನಕದ ಅರಿವು ಚಿರಕಾಲ ಉಳಿದು ಬಂದಿದೆ. ಈ ಜಾನಪದ ಕಲೆಯು ಮನರಂಜನೆಯ ಮೂಲಕ ಮಾನವ ಪುರುಷಾರ್ಥಗಳ ಸಾಧನೆಗೆ ಮುನ್ನಡೆಸುತ್ತಿದೆ. ಇವುಗಳಿಂದಾಗಿಯೇ ದೇವರ ಮೇಲೆ ಭಕ್ತಿ—ಗುರು ಹಿರಿಯರಲ್ಲಿ ವಿಶ್ವಾಸ—ಪಾತಿವ್ರತ್ಯದ ಮಹಿಮೆ—ಪೌರುಷದ ಕೆಚ್ಚೆದೆ—ಅತಿಥಿ ಸತ್ಕಾರ—ದುಷ್ಟ ಸಂಹಾರ-ಶಿಷ್ಟ ಜನರುದ್ಧಾರ ಮೊದಲಾದ ಹಿರಿಯ ಭಾರತೀಯ ನಿಷ್ಠಾಪೂರ್ವಕ ಧಾರ್ಮಿಕ ಆಚಾರ—ವಿಚಾರ— ವ್ಯವಹಾರಗಳು ಹಾಸುಹೊಕ್ಕಾಗಿ ಜನ ಜೀವನದಲ್ಲಿ ಹೆಣೆದುಕೊಳ್ಳಲು ಅವಕಾಶವಾಯಿತು.

ಇವಕ್ಕೆಲ್ಲಾ ಕಾರಣರು ನಮ್ಮ ನಾಡಿನ ಕವಿಗಳು ಮತ್ತು ಕಲಾವಿದರು. ಜೀವನವನ್ನೇ ಮುಡುಪಾಗಿಟ್ಟು ದುಡಿದ ಕವಿಗಳ ಮತ್ತು ಕಲಾವಿದರ ಸೇವೆಯಿಂದ ನಾಡಿಗೆ ತುಂಬಾ ಪ್ರಯೋಜನ ದೊರಕಿದೆ—ದೊರಕುತ್ತಾ ಇದೆ. ಯಕ್ಷಗಾನ ಪ್ರಸಂಗವನ್ನು ರಚಿಸುವುದು ಸಾಮಾನ್ಯವಾದ ವಿಷಯವಲ್ಲ. ನವರಸ ಪ್ರಧಾನವಾದ ಪೌರಾಣಿಕ ಕಥಾಭಾಗವನ್ನು ಆರಿಸಿ, ರಸಪೂರ್ಣವಾಗಿ, ಹೃದಯಂಗಮವಾಗಿ, ಕಾಲಕ್ಕನುಸಾರವಾದ ರಾಗಭೇದಗಳಿಂದ, ಭಾವಕ್ಕನುಗುಣವಾದ ಪದಲಾಲಿತ್ಯ ರಾಗಲಾಲಿತ್ಯಗಳಿಂದ ರಚಿಸಬೇಕಾದುದು ಕವಿಯ ವಿಶಿಷ್ಟತೆಯಾಗಿದೆ. ಕವಿಯು ಧಾರ್ಮಿಕನಾಗಿಯೂ, ನೈತಿಕ, ಸಾಮಾಜಿಕ, ಲೌಕಿಕಾದಿ ವಿಷಯ ಸಂಗ್ರಹಸ್ಥನಾಗಿದ್ದು ತ್ರಿಗುಣಾತ್ಮಕನಾಗದ ಹೊರತು ಆತನ ಕಾವ್ಯಸೃಷ್ಟಿಯು ಅತ್ಯುತ್ತಮವಾಗಲಾರದು.

ಇತ್ತೀಚೆಗೆ ಎಷ್ಟೋ ನೂತನ ಪ್ರಸಂಗಗಳ ರಚನೆಯಾಗುತ್ತಾ ಇದೆ, ಆಗಬೇಕಾದುದೂ ಸಹಜವೂ ಅಗತ್ಯವೂ ಆಗಿದೆ. ಆದರೂ ಈ ವರ್ತಮಾನ ಕಾಲಕ್ಕೆ ನೂತನ ಪುನರ್ನಿರ್ಮಾಣವಾಗುವಾಗ ನಾವು ಕಳೆದ ಕಾಲದ ನಿರ್ಮಾಣಗಳನ್ನು ಉಳಿಸಿಕೊಳ್ಳುವ ಪ್ರಯತ್ನದೊಡನೆ ಹಳೇ ಕವಿಗಳ ಉದಾತ್ತ ಮನೋಭಾವ ಹಾಗೂ ಅವರುಗಳ ರಚನೆ— ಜನತೆಗೆ ಬೋಧರೂಪವಾಗಿ ತೋರಿಸಿದ ನೀತಿ ಮಾರ್ಗಗಳನ್ನು ಗಮನಿಸುವುದೂ ಅಗತ್ಯವಾಗಿದೆ. ಮನರಂಜನೆಯ ನೀಡುತ್ತಿರುವ ತಾತ್ಕಾಲಿಕ ಸುಖದ ಮೂಲಕ ಮಾನವತೆಯ ಮೇಲೆ ಬಹು ಕಾಲ ಪರಿಣಾಮ ಬೀರಬಲ್ಲ ಘನ ಉದ್ದೇಶವನ್ನು ಕವಿಯು ಇಟ್ಟುಕೊಂಡಿದ್ದನೆಂಬುದನ್ನು ಸೂಚಿಸುವ ಒಂದು ಹಳೆ ಪ್ರಸಂಗದಲ್ಲಿನ ಒಂದು ಘಟನೆಯನ್ನು ಇಲ್ಲಿ ಉದಾಹರಣೆಗೆ ಕೊಡಲಾಗಿದೆ.

ಯಕ್ಷಗಾನ ಸೌಗಂಧಿಕಾಹರಣ ಮತ್ತು ಜಟಾಸುರವಧೆ ಎಂಬ ಪ್ರಸಂಗವು ಹಳೆಯದು. ಇದನ್ನು ರಚಿಸಿದಾತ ನಾರಾಯಣಾಚಾರ್ಯನ ಮಗ "ನಾಗ" ನೆಂದು ಉಲ್ಲೇಖವಿದೆ. ಈತನ ಕಾಲ— ಸ್ಥಳಗಳ ಪರಿಚಯ ಪ್ರಸಂಗದಲ್ಲಿಲ್ಲ. ಅದು ಪ್ರಕೃತ ಅವಶ್ಯವೂ ಇಲ್ಲ. ಕವಿಯು ಆರಿಸಿದ ಕಥಾವಸ್ತುವಿನಲ್ಲಿ ಮಧ್ಯ ಪಾಂಡವನಾದ ಅರ್ಜುನನು ಇಂದ್ರಕೀಲಕದಲ್ಲಿ ಶಿವನ ಆರಾಧನೆ ಮಾಡಿ ಪಾಶುಪತ ಪಡೆದಾಗ ಮೋಹದಿಂದ ದೇವೇಂದ್ರನು ಆತನನ್ನು ಅಮರಾವತಿಗೆ ಆಹ್ವಾನಿಸುತ್ತಾನೆ. ಅರ್ಜುನನೂ ಕುತೂಹಲ ಭರಿತನಾಗಿ, ತೆರಳಿ ಸುಧರ್ಮಾ ಸಭೆಯಲ್ಲಿ ನಾಟ್ಯವಾಡುವ ಊರ್ವಶಿಯನ್ನೇ ಕಂಡು "ಭಾಪು" "ಶಹಭಾಸ್" ಎನ್ನುತ್ತಾನೆ. ಆ ಮಾತಿನ ಓಘವನ್ನರಿತ ಪುರಂದರನು ತನ್ನ ಮಗನು ಊರ್ವಶಿಯನ್ನು ಬಯಸಿದ್ದಾನೆ ಎಂದೆಣಿಕೆಯಿಂದ ಆಕೆಯನ್ನು ಚಿತ್ರಸೇನನೊಡನೆ ಪಾರ್ಥನ ವಿಶ್ರಾಂತಿ ನಿಲಯಕ್ಕೆ ಕಳುಹಿಸಿ ಕೊಡುತ್ತಾನೆ. ಆಕೆ ಬಂದಾಗ ಅವನು ಮಲಗಿರುತ್ತಾನೆ. ಅವನಿಗೆ ಆಯಾಸ— ಊರ್ವಶಿಗೆ ಅನುರಾಗ. ಆಗ ಕವಿಯು ಒಂದು ಭಾಮಿನಿಯಲ್ಲಿ ಅವರಿಬ್ಬರ ಹೃದಯಗಳನ್ನೂ ವಾಚಕರಿಗೆ ಅರಿವಾಗಲೆಂದು ಸೂಚಿಸಿದ ಬಗೆ ಬಹಳ ಚಮತ್ಕಾರಪೂರಿತವಾಗಿದೆ—

"ಭಾಮಿನಿ"

ಸ್ಮರ ವಿರೋಧಿಯು ಕೂಡೆ ಸೆಣಸಿದ ।
ವರನು ಸಾಹಸಿ ಪುಷ್ಪ ಬಾಣನ ।
ಧುರಕೆ ಹಿಮ್ಮೆಟ್ಟುವನ ಮಲಗಿಹ ತಪದ ಶ್ರಮದಿಂದ॥ ಪರಿಹರಿಸಲೆಂತವನೆದ್ದಪ॥ ನೆನುತ ಚರಣಾಭರಣ ಝಣಝಣಲು ।
ನರನು ಬಚ್ಚಿತಲೆದ್ದು ನೋಡಿದ ಮುಂದೆ ಊರ್ವಶಿಯು ॥ ೧ ॥

ಮುಂದೆ ಊರ್ವಶಿಯು ಅನುರಾಗ ಬೀರಲು ಅರ್ಜುನನು ಅನುಪಮ ಸುಂದರಿಯಾದ ತ್ರಿಭುವನ ಮೋಹಿನಿಯಾದ ಅಪ್ಸರೆಯು ಏಕಾಂತವಾಗಿ ತಾನಾಗಿ ಬಂದು ಒದಗಿದ್ದರೂ—ಮಾನವ ಧರ್ಮದ ಕಟ್ಟುಪಾಡುಗಳಿಗೆ ಬದ್ಧ ಹೇಳುವ ಮಾತು ಬಹಳ ಅರ್ಥಪೂರ್ಣವಾಗಿದೆ.

॥ ರಾಗ ॥ ಕಾಂಭೋಜ ॥ ಝಂಪೆತಾಳ ॥

ಲೇಸು ಲೇಸಲೆ ತಾಯೆ । ತಪಚಾರಣ ಭೇಟಿಯಲಿ । ನಾಶವಾದುದು ಎನ್ನ ದುರಿತ ॥ ವಾಸವನ ಭೋಗ ಸತಿ ನಿಮಗೆ ನಾ ಮಂಗನ್ಯಸ । ವಂಶಿಪಟ ಬಹುದು ಖತು ವಿಹಿತ ॥ ೧ ॥

ಈ ಪದ್ಯದಲ್ಲಿ ಅರ್ಜುನನ ಮನಸ್ಸು ಆಕೆಯ ಪರವಾಗಿ ಹೇಗೆ ಹೊಂದಿದೆ? ತಂದೆಯ ಅಧೀನದಲ್ಲಿರುವ ಸತಿಯಾದ ಆಕೆಯು ತನಗೆ ಮಾತೃ ಸಮಾನಳು. ಆಕೆಯ ದರ್ಶನ ಮಾತ್ರದಿಂದಲೇ ಪಾಪಗಳೆಲ್ಲಾ ತೊಲಗಿ ಹೋದುವು ಎಂಬಲ್ಲಿವರೆಗಿನ ಭಕ್ತಿಯಿಂದ ಅರ್ಜುನ "ಭಾಗವತೋತ್ತಮ"ರ ಸಾಲಿನಲ್ಲಿ ಇಂದಿಗೂ ರಂಜಿಸುತ್ತಿದ್ದಾನೆ.

ಆಗ ಊರ್ವಶಿ ಅರ್ಜುನರ ಮಾತುಕತೆ ಸಮರ್ಪಕವಾಗಿದೆ.

॥ ರಾಗ ॥ ಶಂಕರಾಭರಣ ॥ ಏಕತಾಳ ॥

ಭೂತಳದೊಳಧಿಕ ಸತ್ಯ । ಖ್ಯಾತರಹುದು ಸತಿಯೊಬ್ಬಳಿಗೆ । ಪ್ರೀತರೈದು ಮಂದಿ ವೃಷಭ । ಜಾತಿಯ ತೆರದಿ ॥ ಮಾತೆಯನುಜ್ಞೆಯನು ಸುಜನ । ವ್ರಾತ ಮೀರಬಾರದೆಂದು । ಪ್ರೀತಿಯ ಭೋಗಿಸಿದೆಲ್ ಮುನಿ । ನಾಥ ನುಡಿದಂತೆ ॥ ೧ ॥ ಜನನಿ ವಚನವನ್ನು ನಡೆಸಿ । ಜನಕನಾಜ್ಞೆಗಾಗಿ ಬಂದ । ವನಿತೆಯನ್ನು ತ್ಯಜಿಸುವಂತೆ । ಘನ ಶಾಸ್ತ್ರವಿಹುದೆ ॥ ವನಜಮುಖಿಯೆ ನಮ್ಮ ನೆಲೆಯು । ನಿನಗೆ ತಿಳಿಯದೀಗ ಹಿಂದೆ । ಮನುಮಥಾರಿ ಕೊಟ್ಟ ವರದೊ । ಳನುಭವಿಸುವೆವು ॥ ೨ ॥

ಈ ರೀತಿ ಸಂವಾದ ನಡೆದು ಕೊನೆಗೂ ಊರ್ವಶಿ ಅರ್ಜುನನನ್ನು ಸೋಲಿಸಲಾರದೆ ಸಿಟ್ಟಿನಿಂದ ಶಾಪ ಕೊಟ್ಟು ತೆರಳುತ್ತಾಳೆ. ಅರ್ಜುನನು ಒಂದು ವರ್ಷ ಶಿಖಂಡಿಯಾಗುವ ಶಾಪ ದೊರಕಿತಲ್ಲಾ—ತಾನಿನ್ನು ಬದುಕಿ ಪ್ರಯೋಜನವಿಲ್ಲ—ಆತ್ಮಹತ್ಯೆಯೇ ಉಚಿತವೆಂದು ಹಲುಬುವಾಗ ದೇವರಾಜನು ಬಂದು ಮುಂದೆ ಅಜ್ಞಾತವಾಸದಲ್ಲಿ ಆ ಶಾಪದಿಂದ ನಿನಗೆ ಉಪಕಾರವಾಗಲಿದೆ ಎಂದು ಸಮಾಧಾನಪಡಿಸುತ್ತಾನೆ.

ಈ ಘಟನೆಯು ಆ ಪ್ರಸಂಗದ ಒಂದು ಅಂಶ. ಇದರಿಂದ ಇಂದು ನಾವು ಲೌಕಿಕವಾಗಿ ವಿಮರ್ಶೆ ಮಾಡಬೇಕಾದ ಒಂದು ಅವಶ್ಯಕತೆಯಿದೆ ಎಂದು ಆಲೋಚಿಸಬೇಕಾಗಿದೆ.

ದೇವರಾಜ ತ್ರಿಭುವನದಲ್ಲಿ ಪೂಜ್ಯ ವಿಚಾರವಂತ, ಲೋಕಾಚಾರಗಳಿಗೆ ಮಾರ್ಗದರ್ಶಕ. ಆದರೂ ಅರ್ಜುನನ ಅಂತಃಕರಣವನ್ನು ಅರಿಯದವನಾಗಿ ಊರ್ವಶಿಯನ್ನು ಕಳುಹಿಸಿ ಕೊಟ್ಟನೇ? ದೇವದೇವನಾದ ಆತನು ತನ್ನ ಮಗನಾದ ಅರ್ಜುನನು ವಾರಾಂಗನೆಯೊಡನೆ ಸುಖಿಸಲೆಂದು ಸಂದರ್ಭ ಒದಗಿಸಿ ಕೊಡುವುದೆಂದರೆ? ಇದು ಅತ್ಯಂತ ವಿಷಾದಕರ. ಲೌಕಿಕವಾಗಿ ಯೋಚಿಸಿದರೆ ಇದು ಶುದ್ಧ ತಪ್ಪು ಎಂದೇ ಕಂಡು ಬರುತ್ತದೆ. ಹಿರಿದಾದ ಪಿತೃ ಸ್ಥಾನದಲ್ಲಿದ್ದ ವ್ಯಕ್ತಿ ಮಕ್ಕಳಿಗೆ ವ್ಯಭಿಚಾರಾದಿ ದುರ್ವ್ಯಸನಗಳನ್ನು ಕಲಿಸಲು ಮುಂದಾಗುವುದೆಂದರೆ ಹೇಯ ಕೃತ್ಯವಲ್ಲವೇ? ಇಲ್ಲ, ಅರ್ಜುನನ ಮನಸ್ಸನ್ನು ಪರೀಕ್ಷಿಸಲು ಕಳುಹಿಕೊಟ್ಟನೇ? ಯಾತರ ಪರೀಕ್ಷೆ? ಏನು ಅವಶ್ಯ? ಎಂಬಿತ್ಯಾದಿ ಪ್ರಶ್ನೆಗಳೇಳುತ್ತವೆ— ವಿಚಾರ ಮಾಡಬೇಕಾದ ಅಂಶ ಇದಾಗಿದೆ. ಸಾಮಾನ್ಯರು ತಪ್ಪು ಮಾಡುವುದಿದೆ. ಅದು ತಿಳಿವಿಲ್ಲದೆ-ಅಜ್ಞಾನದಿಂದ ಎನ್ನಬಹುದು. ಆದರೆ ತಿಳಿದವರು ಮಾಡುವ ಕೆಲಸಗಳು ಅಜ್ಞಾನದಿಂದ ಎನ್ನಲು ಬರುವುದಿಲ್ಲ. ಉದ್ದೇಶಪೂರ್ವಕವಾಗಿಯೇ ಇರಬೇಕಾಗುತ್ತದೆ. ಹಾಗಿದ್ದರೂ ಈ ರೀತಿಯ ಉದ್ದೇಶಗಳಿಟ್ಟು ಕೊಂಡುದು ಸ್ವರ್ಗಾಧಿನಾಥನಿಗೆ ಭೂಷಣವೇ?

ಅಂಥಾ ಸಂದರ್ಭದಲ್ಲಿಯೂ ವ್ಯಾಮೋಹಕ್ಕೆ ಬಲಿಯಾಗದೆ—ವಿಷಯದ ಕಾಮದಾಹಕ್ಕೆ ಗುರಿಯಾಗದೆ ಅಂತಃಸತ್ವದ ಆತ್ಮಜ್ಞಾನದ ಅರಿವಿನ ಪ್ರಭೆಯಿಂದ ಮಹಾ ಮನುಷ್ಯನಾಗಿ—ಊರ್ವಶಿಯಂತಹ ಅನುಪಮ ಸುಂದರಿಯನ್ನು ತೃಣಪ್ರಾಯವಾಗಿ ಕಡೆಗಣಿಸಿ ಮಾನವತೆಯ ಮಹೋನ್ನತ ಉಜ್ವಲ ಸತ್ಯವನ್ನು ಎತ್ತಿ ತೋರಿಸಿದಾತ ಧರ್ಮೋದ್ಧಾರ ಅರ್ಜುನ ಎನ್ನದೆ ಗತ್ಯಂತರವಿಲ್ಲ.

ಈ ಘಟನೆಯು ಮಾನವರಿಗೂ ದೇವತೆಗಳಿಗೂ ಇರುವ ಸ್ವಭಾವ ಭೇದವನ್ನು ಎತ್ತಿ ತೋರಿಸುತ್ತದೆ. ಎಂತಹ ಸಂದರ್ಭದಲ್ಲಿಯೂ ಮನುಷ್ಯನು ವಿಕಾರ ಹೊಂದಿ—ಧರ್ಮಬಾಹಿರನಾಗಬಾರದು. ಧಾರ್ಮಿಕ ತಳಹದಿಯಿಂದ ಬೆಳೆದು ಬಂದ ನೈತಿಕ ಜೀವನವೇ ಮನುಷ್ಯ ಜನ್ಮದ ಸಾರ್ಥಕತೆ ಎಂಬುದನ್ನು ಪ್ರತಿಯೊಬ್ಬರೂ ಮನಗಾಣಬೇಕಾದ ನೈಜತೆಯನ್ನು ಅರ್ಜುನನಲ್ಲಿ ಆಚಂದ್ರಾರ್ಕಪರ್ಯಂತ ಉಳಿಸಿಕೊಟ್ಟಿದ್ದಾನೆ. ಆರ್ಯಕುಲಕ್ಕೆ ಭೂಷಣಪ್ರಾಯನಾಗಿ ಕೀರ್ತಿಶೇಷನಾಗಿದ್ದಾನೆ.

ಹಾಗಿದ್ದರೂ ಮನುಷ್ಯರಾದವರು ದೇವತ್ವದ ಮೇಲೆ ಪ್ರಶ್ನೆ ಮಾಡಬಾರದು ಎಂದು ಶಾಸ್ತ್ರವಿದೆ. ಆ ನೆಲೆಯಲ್ಲಿ ದೇವರಾಜನು ಮಾಡಿದ ಈ ಪಾರ್ಥ ಪರೀಕ್ಷಾ ಘಟನೆಯನ್ನು ಅಪಾರ್ಥ ಮಾಡಿಕೊಂಡ ದೋಷ ಬರುತ್ತದೋ ಏನೋ? ಆಧ್ಯಾತ್ಮಿಕ ದೃಷ್ಟಿಯನ್ನು ಬಲ್ಲಂತಹ ದೇವೇಂದ್ರನು ಭವಿಷ್ಯ ಚಿಂತನೆಯಿಂದ ಅರ್ಜುನನಿಗೆ ಉತ್ತಮ ಪ್ರಯೋಜನವನ್ನು ಬಯಸಿಯೂ, ಅಲ್ಲದೆ ಆತನ ನಿಯಮಗಳ ಪರಾಕಾಷ್ಠತೆಯ ಪ್ರಭಾವವನ್ನು ಜಗತ್ತಿಗೆ ತೋರಿಸಿಕೊಡುವುದಕ್ಕಾಗಿಯೂ ಈ ರೀತಿಯ ಸನ್ನಿವೇಶವನ್ನು ಏರ್ಪಡಿಸಿಕೊಂಡನೋ ಏನೋ! ಏನಿದ್ದರೂ ಭಾರತ ಪುರಾಣಾಂತರ್ಗತವಾದ ವಿಷಯವನ್ನು ಕವಿಯು ಎತ್ತಿಕೊಂಡು ಜನತೆಗೆ ನೈತಿಕ ಬೋಧೆಯನ್ನು ನೀಡುವ ಪ್ರಸಂಗ ರಚನೆಯನ್ನು ಮಾಡುವುದರ ಮೂಲಕ ದೇವತೆಗಳಿದಿರಲ್ಲಿಯೂ ಮನುಷ್ಯರು ಮನುಷ್ಯತ್ವವನ್ನು ಉಳಿಸಿ ಕೊಳ್ಳಲು ಪ್ರಯತ್ನಿಸುತ್ತಾರೆ ಎಂಬುದನ್ನು ತೋರಿಸಿಕೊಟ್ಟ ಮಹೋಪಕಾರ ಮರೆಯಲಾಗದುದು. ಈ ಘಟನೆಯು ಹೃದಯಂಗಮವೂ— ನೀತಿಪ್ರದವೂ—ಆಗಿರುತ್ತದೆ. ಈ ಪ್ರಸಂಗವು ತಾಳಮದ್ದಳೆಯೂ— ಬಯಲಾಟಕ್ಕೂ ಉತ್ತಮವಾಗಿದೆ.

ಕಷ್ಟದ ಕೋಟೆಗೆ ಕಣ್ಣೀರಿನ ಕಾಲುವೆ

(ಏಳನೇ ಪುಟದಿಂದ)

ಏನೇ ಇದ್ದರೂ, ಇಂದಿನ ಕಷ್ಟದ ಕೋಟೆಗೆ ಭಾರತೀಯರ ಕಣ್ಣೀರಿನ ಕಾಲುವೆ ಒಳ್ಳೆಯದಲ್ಲ. ಆ ಕೋಟೆಯ ಭದ್ರತೆಗೆ ನಾವು ಯೋಜನೆ ರಚಿಸುವುದು ಬೇಡ. ಆ ಕೋಟೆಯನ್ನು ಬದಲಾಯಿಸೋಣ. ಸುಖ—ಸಮೃದ್ಧಿ—ಶಾಂತಿಯ ಕೋಟೆಯನ್ನು ಕಟ್ಟೋಣ. ಅವಕ್ಕೆ ರಾಷ್ಟ್ರೀಯತೆಯ ಕಾಲುವೆಯೇ ಕಾವಲಿಗಿರಲಿ. ಶ್ರೀಮತಿ ಇಂದಿರಾಜೀಯವರ ನೈಜ ಮನದಿಂಗಿತವೂ ಇದೇ ಇರಬಹುದು. ಏವೇರವಾಣಿಯಂತೆ ನಾವು ಅಳುವುದನ್ನು ರಾಜರೀಯ ರಾಗಾಲಾಪನೆಯನ್ನು ನಿಲ್ಲಿಸೋಣ. ನಮ್ಮ ಕಾಲಿನ ಮೇಲೆಯೇ ನಾವು ನಿಲ್ಲೋಣ.

ಬಾಳೆಹೊನ್ನೂರಿನ ಸಂಶೋಧನಾ ಸಂಸ್ಥೆ

(ಐದನೇ ಪುಟದಿಂದ)

ಕಾರ್ಯ ಕೈಗೊಂಡಿದ್ದಾರೆ. ಈ ವಿಭಾಗದವರು ಕೈಗೊಂಡಿರುವ ಸಿಂಪಡಿಸುವ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿದೆ. ಕಾಫಿ ಸಸ್ಯಗಳಿಗೆ ಕೀಟಗಳ ಉಪದ್ರವನ್ನು ತಪ್ಪಿಸಲು ಯತ್ನಗಳು ನಡೆದಿವೆ. ಈ ವಿಭಾಗದವರು ಅರಾಬಿಕಾ ಕಾಫಿ ಸಸ್ಯಗಳಿಗೆ ತಗಲುವ ಬಿಳಿಯ ಕೀಟ ಹಾಗೂ ರೋಬಸ್ಟ್ ಕಾಫಿ ಸಸ್ಯಕ್ಕೆ ತಗಲುವ ಇತರ ಕೀಟಗಳ ನಿವಾರಣೆಗೆ ಹೊಸ ರಾಸಾಯನಿಕ ವಸ್ತುಗಳನ್ನು ಕಂಡು ಹಿಡಿದಿದ್ದಾರೆ.

ಅರಾಬಿಕ ಕಾಫಿ ಸಸ್ಯಗಳಿಗೆ ಕೀಟಗಳು ಬಹುವೇಗ ತಗಲುತ್ತವೆಯೆಂದೂ, ರೋಬಸ್ಟ್ ಜಾತಿಯ ಕಾಫಿ ಸಸ್ಯ ಕೀಟ ನಿರೋಧಕ ಶಕ್ತಿಯನ್ನು ಹೊಂದಿದೆಯೆಂದೂ ಸಮೀಕ್ಷೆಯಿಂದ ವ್ಯಕ್ತಪಟ್ಟಿದೆ.

ಸಂಸ್ಥೆಯ ಸಸ್ಯರೋಗ ವಿಜ್ಞಾನ ವಿಭಾಗದವರು, ಕಾಫಿ ಬೆಳೆಗೆ ತಗಲುವ ವಿವಿಧ ರೋಗಗಳನ್ನು ಕುರಿತು ಸಂಶೋಧನೆ ಹಾಗೂ ಸಮೀಕ್ಷೆ ಕೈಗೊಂಡಿದ್ದಾರೆ. ವಿಸ್ತೀರ್ಣ ವಿಭಾಗವು ಸಂಸ್ಥೆಯ ಮಹತ್ವದ ವಿಭಾಗಗಳಲ್ಲೊಂದಾಗಿದೆ.

ಮೈಸೂರು, ಮದ್ರಾಸ್, ಕೇರಳದ ಜಿಲ್ಲೆಗಳಲ್ಲಿ ಕಾಫಿ ಬೆಳೆಯುವ ಸಮಗ್ರ ಪ್ರದೇಶವನ್ನು ಹನ್ನೆರಡು ಸಂಪರ್ಕ ಜಿಲ್ಲೆಗಳಿಗಾಗಿ ವಿಂಗಡಿಸಲಾಗಿದೆ. ಐದು ಕಾಫಿ ಡೆಮೊನ್ಸ್ಟ್ರೇಷನ್ ಕೇಂದ್ರಗಳು ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆಯು ಮಾಡಿರುವ ಶಿಫಾರಸುಗಳನ್ನು ಪರಿಶೀಲಿಸುವುದಲ್ಲದೆ, ಪ್ರಾದೇಶಿಕ ಸ್ಥಿತಿಗತಿಗಳ ಅಗತ್ಯ ಸೂಚಿಸುವುವು. ಈ ಫಾರಂಗಳಲ್ಲಿ ಆರಿಸಲಾದ ಮಹತ್ವಪೂರ್ಣ ಕಾಫಿ ಜಾತಿಗಳನ್ನು ಪರೀಕ್ಷಿಸಲಾಗುತ್ತಿದೆ.

ಸಂಪರ್ಕ ವಿಭಾಗವು ಸಣ್ಣ ಕಾಫಿ ಹಿಡುವಳಿಗಳಲ್ಲಿ ಸುಧಾರಿಸಿದ ತಂತ್ರಗಳಿಂದ ಅಧಿಕ ಉತ್ಪಾದನೆ ಹೇಗೆ ಸಾಧ್ಯ ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತದೆ. ಈ ಪ್ರಾತ್ಯಕ್ಷಿಕೆ ಕೇಂದ್ರಗಳು ಸುಮಾರು ಅರ್ಧದಿಂದ ಒಂದು ಎಕರೆಯಷ್ಟು ವಿಸ್ತೀರ್ಣವಾಗಿರುತ್ತವೆ.

ಸಂಪರ್ಕಾಧಿಕಾರಿಗಳು ಕಾಫಿ ಎಸ್ಟೇಟ್‌ಗಳಿಗೆ ಭೇಟಿ ನೀಡಿ ಕಾಫಿ ಬೆಳೆಗಾರರಿಗೆ ನೀಡಬೇಕಾದ ದೀರ್ಘಾವಧಿ ಅಲ್ಪಾವಧಿ ಸಾಲಗಳ ಬಗ್ಗೆ ಪರಿಶೀಲನೆ ನಡೆಸುವರು. ಸಂಪರ್ಕದ ವಿಭಾಗವು ಸಂಶೋಧನೆಯ ಫಲಶ್ರುತಿಯನ್ನು ಕಾಫಿ ಬೆಳೆಗಾರರಿಗೆ ಮುಟ್ಟಿಸುವುದಲ್ಲದೆ ಕಾಫಿ ಬೆಳೆಗಾರರ ಸಮಸ್ಯೆಗಳನ್ನು ಬಾಳೆಹೊನ್ನೂರು ಸಂಸ್ಥೆ ಪ್ರಯೋಗಾಲಯಗಳಿಗೆ ಒದಗಿಸುವರು.

ಕನ್ನಡ ರಂಗಭೂಮಿ

(ಆರನೇ ಪುಟದಿಂದ)

ಯಿಸುತ್ತಿದ್ದವರು, ಅನುಭವ ಪಡೆದವರು ಎಂಬುದು ಗಮನಿಸಬೇಕಾದ ವಿಷಯ.

ಪಾಶ್ಚಾತ್ಯ ರಂಗಭೂಮಿಯಲ್ಲಿ ಚಲನ ಚಿತ್ರಗಳಲ್ಲಿ ವಿಶೇಷ ಆಧುನಿಕ ವಿಜ್ಞಾನದ ಮಾರ್ಪಾಡುಗಳುಮೂಡಿವೆಯಾದರೂ ಜನತೆಯಾಗಲಿ, ನಟನಟಿಯರಾಗಲಿ ಆ ಎರಡು ಕಲೆಗಳ ವಿಶೇಷತೆಯನ್ನು ಮರೆತಿಲ್ಲ. ಅನೇಕ ಹೆಸರಾಂತ ನಟರು ರಂಗಭೂಮಿಯ ಸೇವೆಗಾಗಿ ಸದಾ ಸಿದ್ಧವಿದ್ದು ನಾಟಕ ಕಲೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಹಾಗೆಯೇ ಜನತೆಯ ಪ್ರೋತ್ಸಾಹ ನಾಟಕ ಕಲೆಗೆ ವಿಶೇಷವಾಗಿ ಇಂದಿಗೂ ದೊರೆಯುತ್ತಲಿದೆ.

ಕನ್ನಡ ರಂಗಭೂಮಿಯ ಪುನರುದ್ಧಾರದ ಯೋಜನೆ ಕಲಾವಿದರಿಗಾಗಲಿ, ಜನತೆಗಾಗಲಿ, ಸರ್ಕಾರಕ್ಕಾಗಲಿ ಇಲ್ಲ. ಬೆರಳೆಣಿಸಬಹುದಾದ ನಾಲ್ಕಾರು ನಾಟಕ ಸಂಸ್ಥೆಗಳು ಮಾತ್ರವೇ ಸಮಸ್ಯೆಗಳನ್ನು ಎದುರಿಸಿ ಬದುಕುತ್ತಿವೆ. ರಂಗಭೂಮಿಯ ಮಡಿಲಲ್ಲಿ ಬೆಳೆದು ಕೀರ್ತಿ ಪಡೆದು ಚಿತ್ರರಂಗ ಪ್ರವೇಶಿಸಿದ ಅನೇಕ ನಟ—ನಟಿಯರಿಗೆ ರಂಗಭೂಮಿಯ ನೆನಪು ಮಾಸಿದಂತಾಗಿಗಿದೆ. ನಾಟ್ಯ ವಿಲಾಸಿ ಸಂಸ್ಥೆಗಳು ವರ್ಷದಲ್ಲಿ ಒಂದೆರಡು ಬಾರಿ ವಾರ್ಷಿಕೋತ್ಸವ, ಸತ್ಕಾರ ಸಮಾರಂಭ ಮೊದಲಾದುವುಗಳಲ್ಲಿಮಾತ್ರ ನಾಟಕಗಳನ್ನು ಅಭಿನಯಿಸುತ್ತಿರುವುದು ಕಾಣ ಬರುತ್ತಿದೆ. ನಾಟಕ ಕಲೆಯನ್ನು ನಂಬಿ, ಆಶ್ರಯಿಸಿ ಬದುಕಲು ಹೊರಟ ಕಲಾವಿದನಿಗೆ ಯಾವ ಭರವಸೆಯೂ ಇಲ್ಲ. ಹೀಗೆ ನಾನಾ ಕಾರಣಗಳಿಂದ ನಾಟಕ ಕಲೆ ನಶಿಸುತ್ತಿದೆ. ಇದರ ಉದ್ಧಾರಕ್ಕೆ ಸಾರ್ವಜನಿಕರ, ಸರ್ಕಾರ, ಕಲಾವಿದರ ಸಹಕಾರ ಅಗತ್ಯ ನಾಳೆಯಲ್ಲ—ಇಂದು.

ಕನ್ನಡ ನಾಟಕ—ಚಲನ ಚಿತ್ರಗಳ ಬೆಳವಣಿಗೆಯಲ್ಲಿ, ಹಲವಾರು ಸಮಸ್ಯೆಗಳು ಬೃಹದಾಕಾರವಾಗಿ ನಿಂತಿವೆ. ಅಭಿಮಾನಿಗಳನೇಕರ ಸತತ ಪರಿಶ್ರಮದಿಂದ ಕಲಾಕ್ಷೇತ್ರದಲ್ಲಿ ಅಲ್ಪ ಸ್ವಲ್ಪ ಮಾರ್ಪಾಡುಗಳು ಕಾಣ ಬರುತ್ತಿವೆ. ನಾಡಿನ ನಾಟಕ—ಚಲನ ಚಿತ್ರ ಕ್ಷೇತ್ರದಲ್ಲಿ ಕೆಲವು ಮಾರ್ಪಾಡುಗಳು ಅನಿವಾರ್ಯ. ಹಲವಾರು ಹಿರಿಯ ಕಿರಿಯ ಲೇಖಕರ ನಾಟಕಗಳು ರಂಗಭೂಮಿಯ ಮೇಲೆ ನಾಟ್ಯವಿಲಾಸಿ ಸಂಸ್ಥೆಗಳಿಂದ, ಪ್ರಕಾಶನ ಸಂಸ್ಥೆಗಳಿಂದ, ಆಕಾಶವಾಣಿಯಿಂದ ಪ್ರಸಾರವಾಗುತ್ತಿವೆ. ಎ. ಎನ್. ಮೂರ್ತಿರಾವ್, ಪರ್ವತವಾಣಿ, ದಾಶರಥಿದೀಕ್ಷಿತ್ ಮೊದಲಾದವರ ಸಾಧನೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕಲೆಯ ಎರಡು ಮುಖಗಳಾದ ನಾಟಕ ಕಲೆ—ಚಲನಚಿತ್ರ ಕಲೆ ಉನ್ನತಿ ಪಡೆಯ ಬೇಕಾದದ್ದು, ಪ್ರಭಾವಯುತವಾಗಿ ಪ್ರಸಿದ್ಧಿ ಪಡೆಯಬೇಕಾದದ್ದು ಅಗತ್ಯ. ಕಲಾವಿದ, ನಾಟಕಕಾರ, ಪ್ರೇಕ್ಷಕರ, ಅಭಿಮಾನಿಗಳ ಸತತ ಸಾಧನೆ, ಸಹಕಾರಗಳಿಂದ ಕಲೆ ಬೆಳೆಯಲು ಬಾಳಲು ಸಾಧ್ಯ. 'ರಂಗಭೂಮಿಯ ಪುನರುದ್ಧಾರ, ಪವಿತ್ರತೆಯ ರಕ್ಷಣೆಯ ಬಗ್ಗೆ ಗಮನಹರಿಸಬೇಕಾದುದು ಅಗತ್ಯ' ಎಂಬ ಸೂಚನೆ ಅನುಚಿತವೆನಿಸಲಾರದು.

READ &
ADVERTISE IN
NAVAYUGA WEEKLY



(ಹೊಸ ಮುದ್ರಣ)

ವೇದವು ಸಾರುತ್ತಿದೆ:

"ಏಳಿ; ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾಗಿಲ್ಲ. ತಿಳಿದವ ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ
ಗೀತೆಯ ಸಮೂಲ ಭಾಷಾಂತರವು

ಗೀತೆಯ ಕೈಗನ್ನಡಿಯಾಗಿ

ಹೊಸ ಆವೃತ್ತಿಯಾಗಿ ಪ್ರಕಟವಾಗಿದೆ
ಅದನ್ನು ಎಲ್ಲರೂ ಓದಬೇಕಾಗಿದೆ.

—"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"
ಎಂದು ವರಾಹ ಪುರಾಣವೂ ಸಾರುತ್ತಿದೆ.

. ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ
ಪಾಕೆಟ್ ಸೈಜಿನ ಈ ಪುಸ್ತಕದ ಬೆಲೆ ಬರೀ ಒಂದೂವರೆ ರೂಪಾಯಿ
2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

ಪಡುಬಿದರೆಯ ಢಕ್ಕೆಬಲಿ

ಬರೆದವರು
[ಪ್ರೊ. ಪಿ. ಗುರುರಾಜ ಭಟ್ಟ, ಇತಿಹಾಸ ಪ್ರಾಧ್ಯಾಪಕ,
ಎಂ. ಜಿ. ಎಂ. ಕಾಲೇಜು, ಉಡುಪಿ]

ತುಳುನಾಡಿನ ವಿಶಿಷ್ಟಪೂರ್ಣವಾದ ಏಳು ಉತ್ಸವಗಳಲ್ಲಿ [ಉಡುಪಿ ಪರ್ಯಾಯ, ಧರ್ಮಸ್ಥಳ ದೀಪ, ಕವತಾರಿನ ಆಯನ, ಬಪ್ಪನಾಡಿನ ಜಾತ್ರೆ, ಪಡುಬಿದಿರೆಯ ಢಕ್ಕೆ ಬಲಿ ಅರಸು ಕಂಬಳ, ಕಾಪು ಮಾರಿಪೂಜೆ] ಪಡುಬಿದಿರೆಯ ಢಕ್ಕೆ ಬಲಿಯು ಒಂದಾಗಿದೆ. ಇದರ ಸಂಕ್ಷಿಪ್ತವಾದ ಪರಿಚಯವನ್ನು ಈ ಕೆಳಗೆ ಮಾಡಿಕೊಟ್ಟಿದೆ. ಸುಮಾರು ೫೦೦–೬೦೦ ವರ್ಷಗಳಿಂದ ಈ ಸಮಾರಂಭವು ಬಳಕೆಯಲ್ಲಿದ್ದಿರಬಹುದು.

ಉಡುಪಿಯಿಂದ ದಕ್ಷಿಣಕ್ಕೆ ೧೫ ಮೈಲು ದೂರದಲ್ಲಿ ಪಡುಬಿದರೆ ಪೇಟೆಯಿದೆ. ಪೇಟೆಯಿಂದ ಪಡು ದಿಕ್ಕಿನಲ್ಲಿ ಸುಮಾರು ೩ ಫರ್ಲಾಂಗು ದೂರ ಹೋಗುವಾಗ 'ಬ್ರಹ್ಮಸ್ಥಾನ'ವು ನೋಡ ಸಿಗುತ್ತದೆ. ಈ 'ಬ್ರಹ್ಮಸ್ಥಾನ' ವು ಸಾಧಾರಣ ಅರಣ್ಯ ಮಧ್ಯದಲ್ಲಿದ್ದಂತೆ ಕಂಡು ಬರುತ್ತದೆ. ಆದರೆ ಪಶ್ಚಿಮದಲ್ಲಿ ಹತ್ತಿರದಲ್ಲಿಯೇ ಸಮುದ್ರವು ಭೋರ್ಗರೆಯುವುದರ ದೃಶ್ಯವಿದೆ. ಅಂತೂ ಈ ಸ್ಥಾನವು ನಯನ ಮನೋಹರವಾಗಿದೆ.

ಪ್ರೇಕ್ಷಕರು ಒಮ್ಮೆ ಈ ಬ್ರಹ್ಮಸ್ಥಾನವನ್ನು ಪ್ರವೇಶಿಸುವಾಗ ಅಲ್ಲಿಯ ಪ್ರಶಾಂತ ವಾತಾವರಣವೂ ಪಾವಿತ್ರ್ಯವೂ ಮನಸ್ಸಿನಲ್ಲಿ ಬೇರೂರಿ ಸ್ಥಳದಲ್ಲಿ ಭಯಭಕ್ತಿಯನ್ನು ಉಂಟುಮಾಡುವಂತಿದೆ. ಇಲ್ಲಿ ಎರಡು ವರ್ಷಗಳಿಗೊಮ್ಮೆ (ಉಡುಪಿಯಲ್ಲಿ ಪರ್ಯಾಯವಿಲ್ಲದ ವರ್ಷ) ಪ್ರಸಿದ್ಧವಾದ ಢಕ್ಕೆ ಬಲಿಮಹೋತ್ಸವವು ಜರಗುವುದು.

ಮೊದಲನೇ ಢಕ್ಕೆ ಬಲಿಯು ಊರಿನ ಜನರ ಸೇವಾ ರೂಪವಾಗಿ ನಡೆಯುವುದು. ತರುವಾಯ ಅಂಸಿದ ಪವಿತ್ರ ದಿವಸಗಳಲ್ಲಿ ಊರಿನ ಹಾಗೂ ಪರವೂರಿನ ಭಕ್ತ ಮಹಾಶಯರ ಢಕ್ಕೆ ಬಲಿ ಸೇವೆಗಳು ಜರುಗುವುವು. ಢಕ್ಕೆ ಬಲಿಯ ಸೇವೆಯು ಮಕರ ತಿಂಗಳಲ್ಲಿ ಪ್ರಾರಂಭವಾಗಿ ಮೀನ (ಸುಗ್ಗಿ) ಸಂಕ್ರಮಣಕ್ಕೆ ಜರಗುವ ಪಡುಬಿದರ ಶ್ರೀ ಮಹಾಲಿಂಗ ದೇವರ ವಾರ್ಷಿಕ ಜಾತ್ರೆಯೊಳಗೆ ಮುಕ್ತಾಯವಾಗುತ್ತದೆ.

ಬ್ರಹ್ಮಸ್ಥಾನವು ಆದಿಶಕ್ತಿಯ ಆರಾಧನಾ ಸ್ಥಳವೆಂದು ಸಾಮಾನ್ಯ ಅಭಿಪ್ರಾಯ. 'ಬ್ರಾಹ್ಮೀಸ್ಥಾನ'ವೇ ಬ್ರಹ್ಮಸ್ಥಾನವಾಗಿದೆ ಎಂದು ಒಂದು ಪಂಥದವರ ಅಭಿಪ್ರಾಯ. ಇಲ್ಲಿ ಖಡ್ಗೇಶ್ವರಿ ಎಂದು ಇಲ್ಲಿಯ ಸ್ಥಳದ ಪೂರ್ವ ಭಾಗದಲ್ಲಿ ಶಿಲಿ ಕಲ್ಲುಗಳ ಮಧ್ಯದಲ್ಲಿ ಒಂದು ಪ್ರಶಸ್ತವಾದ ಲಿಂಗಾಕಾರ ನಿರ್ದೇಶದಂತೆ, ಕಾಣುವ ಬಿಂಬವಿದೆ. ಅದುವೇ ಮೂಲಸ್ಥಳ. ಆದರೆ ಬ್ರಾಹ್ಮೀಸ್ಥಾನವೇ ಬ್ರಹ್ಮಸ್ಥಾನವಾಯಿತೆಂಬುದಕ್ಕೆ ಆಧಾರ ಸಾಲದು. ಕಾರಣ ತುಳುನಾಡಿನಲ್ಲಿ ವಿಶಿಷ್ಟಪೂರ್ಣವಾದ ಈ ಬ್ರಹ್ಮಸ್ಥಾನಗಳು ಅನೇಕ ಕಡೆ ಇದ್ದು ಅಲ್ಲಿ (1) ಬ್ರಹ್ಮ (2) ನಾಗ (3) ರಕ್ತೇಶ್ವರಿ (4) ನಂದಿಗೋಣ (5) ಕ್ಷೇತ್ರಪಾಲ (ಬೇತಾಳ?) ಈ ಐದು ದೇವತೆಗಳು ಆರಾಧಿಸಲ್ಪಡುತ್ತವೆ. ಇಲ್ಲಿ ರಕ್ತೇಶ್ವರಿ ಎಂಬುದು 'ಲೆಕ್ಕೆಸಿರಿ' ಎನ್ನುವ ತುಳು ರೂಪದ ದೇವತೆ. ಬ್ರಹ್ಮನು ವೇದ ಬ್ರಹ್ಮನೋ ಅಲ್ಲವೋ ತಿಳಿಯದು. ಪ್ರಾಯಃ ಈಶ್ವರ ಗಣವಿರಬೇಕು. ಈ ಬ್ರಹ್ಮನು ಅಶ್ವಾರೂಢನಾಗಿ ಕೈಯಲ್ಲಿ ಖಡ್ಗವನ್ನು ಧರಿಸಿ ಸವಾರಿ ಮಾಡುವ ಗಣ ದೈವತ. ಇದಂತಿರಲಿ.

ಢಕ್ಕೆ ಬಲಿಯಲ್ಲಿ ಒಂದು ಲಿಂಗ ದರ್ಶನ. ಈ ಸ್ಥಳದಲ್ಲಿ ದರ್ಶನಕ್ಕೆ ನಿಲ್ಲುವುದಕ್ಕೆ ಒಂಭತ್ತು ಮಂದಿ ಪಾತ್ರಿಗಳಿದ್ದರೆಂದು ಬಲ್ಲವರು ಹೇಳುತ್ತಾರೆ. ಈಗ ಮೂರು ಮಂದಿ ಮಾತ್ರ ಪಾತ್ರಿಗಳಿರುತ್ತಾರೆ. ಢಕ್ಕೆ ಬಲಿ ರಾತ್ರೆ ಸಾಧಾರಣ ೯|| ಗಂಟೆಗೆ ಸುರುವಾಗುತ್ತದೆ. ಪ್ರಾರಂಭದಲ್ಲಿ ನಾನಾ ವಿಧಗಳ ವಾದ್ಯ ಘೋಷದಿಂದ ದೇವಿ ಪೂಜೆಯಾಗುತ್ತದೆ. ತರುವಾಯ ದೇವಿ ಸನ್ನಿಧಾನದ ಎದುರ್ಭಾಗದಲ್ಲಿ ಶುಚಿರ್ಭೂತರಾಗಿ ಪಾತ್ರಿಗಳು ನಿಂತಿರುತ್ತಾರೆ. ಢಕ್ಕೆಯವರು ಢಕ್ಕೆ ತಾಳ ಬಾರಿಸಿ ದೇವಿಯನ್ನು ನಾನಾ ರೀತಿಯ ಹಾಡುಗಳನ್ನು ಹಾಡಿ ಹೊಗಳುತ್ತಾರೆ. ಆಗ ಒಬ್ಬೊಬ್ಬ ಪಾತ್ರಿಗೆ ಆವೇಶ ಆಗಿ ದರ್ಶನ ಸುರುವಾಗುತ್ತದೆ. ವಾದ್ಯ ಘೋಷ ಮೊಳಗುತ್ತದೆ. ಢಕ್ಕೆಯವರು ಒಬ್ಬೊಬ್ಬ ಪಾತ್ರಿಯನ್ನು ಬ್ರಹ್ಮ ದೇವಿ ಸನ್ನಿಧಾನದಿಂದ ನರ್ತನ ಮಾಡಿಸುತ್ತಾ ನಾಗನ ಬನದ ಎದುರಿಗೆ ತಂದು ನಿಲ್ಲಿಸುತ್ತಾರೆ ತದನಂತರ ಎಲ್ಲಾ ಪಾತ್ರಿಗಳನ್ನು ಕುಣಿಸುತ್ತಾ ಹಾಡುಗಳನ್ನು ಹೇಳುತ್ತಾ ಸ್ವಲ್ಪ ಹೊತ್ತು ವಿಧ ವಿಧದ ನೃತ್ಯಗಳಿಂದ ದೇವಿಯನ್ನೂ ನಾಗನನ್ನೂ ಆರಾಧಿಸುತ್ತಾರೆ. ತರುವಾಯ ಪಾತ್ರಿಗಳ ಮೂಲಕ ಪ್ರಸಾದ ವಿತರಣೆಯಾಗುತ್ತದೆ. ಇಲ್ಲಿಗೆ ತಂಬಿಲ ಅಥವಾ ಪ್ರಾಥಮಿಕ ಪೂಜೆ ಮಂಗಳವಾಗುತ್ತದೆ, ಆಗ ರಾತ್ರಿ ೧೨ ಘಂಟೆಯಾಗುತ್ತದೆ. ಮಧ್ಯೆ ಒಂದೆರಡು ಘಂಟೆ ವಿಶ್ರಾಂತಿ.

ಆ ಸಮಯಕ್ಕೆ ಢಕ್ಕೆಯವರು ಬೇರೆ ಕಡೆಗಳಲ್ಲಿ ನಾಗಮಂಡಲ ಸೇವೆಯಲ್ಲಿ ಬಿಡಿಸುವಂತೆ ಪಂಚವರ್ಣದ ಪುಡಿಗಳಿಂದ (ಹಳದಿ, ಕೆಂಪು, ಕಪ್ಪು, ಬಿಳುಪು ಮತ್ತು ಹಸುರು) ನಾಗನ ಚಿತ್ರವನ್ನು ಅಂದವಾಗಿ ಬಿಡಿಸಿ ಹೂ ಹಣ್ಣುಗಳಿಂದಲೂ ದೀಪಗಳಿಂದಲೂ ಅಲಂಕರಿಸುತ್ತಾರೆ. ನಾಗಕನ್ನಿಕೆಯ ವೇಷ ಧರಿಸಿದ ಒಬ್ಬರಿಬ್ಬರು ಢಕ್ಕೆಯವರು ನಾನಾ ರೀತಿಯ ಹಾಡುಗಳನ್ನು ರಸರಂಜಿತವಾಗಿ ಹಾಡಿ ಪ್ರೇಕ್ಷಕರನ್ನು ಸಂತೋಷಗೊಳಿಸುತ್ತಾರೆ.

ಸಾಧಾರಣ ಒಂದು ಘಂಟೆಗೆ ಢಕ್ಕೆ ಬಲಿ ಸುರುವಾಗುತ್ತದೆ. ಸಂಭ್ರಮದ ದೇವಿಪೂಜೆಯಾಗುತ್ತದೆ. ಮೊದಲಿನಂತೆಯೇ ಢಕ್ಕೆಯವರು ದೇವಿ ಸನ್ನಿಧಾನದಲ್ಲಿ ನಿಂತಿದ್ದ ಪಾತ್ರಿಗಳನ್ನು ಒಬ್ಬೊಬ್ಬರನ್ನಾಗಿ ಹಾಡುಗಳಿಂದ, ದೇವಿ ಸ್ತುತಿಯಿಂದ ದೇವಿಯ ಆವೇಶವಾಗುವಂತೆ ಮಾಡಿ ದೇವಿಸನ್ನಿಧಾನದಿಂದ ನಾಗ ಬನಕ್ಕೂ ಅಲ್ಲಿಂದ ನಾಗ ಮಂಡಲ ಬರೆದ ಕಟ್ಟೆಗೂ ನರ್ತಿಸುತ್ತಾ ಕರೆತರುತ್ತಾರೆ. ಹೀಗೆ ಎಲ್ಲಾ ಪಾತ್ರಿಗಳನ್ನು ಕರೆತಂದ ಮೇಲೆ ಅಲ್ಲಿ ತರತರದ ಹಾಡುಗಳೂ ಕುಣಿತಗಳೂ ಜರಗುತ್ತವೆ. ದರ್ಶನ ಮಾಡುವ ಪಾತ್ರಿಗಳು ಎರಡೂ ಕೈಗಳಲ್ಲಿಯೂ ಹಿಂಗಾರ ಹಾಳೆಗಳನ್ನು ಹಿಡಿದು ಕೊಳ್ಳುತ್ತಾರೆ. ಮಾತ್ರವಲ್ಲ ಹಚ್ಚಿರಳನ್ನು ಗಾತ್ರದ ವಸ್ತ್ರದಿಂದ ಮಾಡಿ ಎಣ್ಣೆಯಲ್ಲಿ ಮುಳುಗಿಸಿದ ದೀಪ ಜ್ವಾಲೆಗಳನ್ನು ಕೈಗಳಲ್ಲಿ ಹಿಡಿದುಕೊಂಡು ಕುಣಿಯುತ್ತಾರೆ. ಒಮ್ಮೊಮ್ಮೆ ಒಂದು ಎರಡು ದೀಪಗಳನ್ನು ಎರಡೂ ಕೈಗಳಲ್ಲಿ ಹೂವಿನಂತೆ ಎತ್ತಿ ಕೊಳ್ಳುತ್ತಾ ಕುಣಿಯುತ್ತಾರೆ. ಈ ಕುಣಿತವು ಪ್ರೇಕ್ಷಕರಿಗೆ ಅದ್ಭುತರಮ್ಯವಾಗಿ ಕಾಣುತ್ತದೆ. ಕುಣಿತದ ಮಧ್ಯೆ ನೆಲದ ಮೇಲೆ ಬೀಳುತ್ತಾರೆ. ಬಿದ್ದವರು ನೆಲದ ಮೇಲೆ ಹೊರಳಾಡುತ್ತಾರೆ. ಆಗ ದೇವರ ಸೇವೆಯವರು ಇವರನ್ನು ಮತ್ತೆ ಎತ್ತಿ ನಿಲ್ಲಿಸುವರು. ಮತ್ತೆ ದರ್ಶನ ಯಥಾಪ್ರಕಾರ ಜರಗುವುದು. ಈ ರೀತಿಯಾಗಿ ಸಂಭ್ರಮದ ವೇಷಧಾರಿಗಳು ಢಕ್ಕೆಯವರ ಹಾಗೂ ಪಾತ್ರಿಗಳ ಕುಣಿತವೂ ಹಾಡುಗಾರಿಕೆಯೂ ಪೂರ್ಣವಾದ ಮೇಲೆ ಮಂಡಲಪೂಜೆಯಾಗಿ ಬಂದ ಭಕ್ತಾದಿಗಳಿಗೆ ಪ್ರಸಾದದ ವಿತರಣೆಯಾಗುತ್ತದೆ. ನೆರೆದವರಲ್ಲಿ ಅನೇಕರು ತಮ್ಮ ಕಷ್ಟಕಾರ್ಪಣ್ಯಗಳನ್ನು ಪ್ರಾರ್ಥಿಸಿಕೊಂಡು ನಿವೃತ್ತಿಯನ್ನು ಉತ್ತರ ರೂಪವಾಗಿ ಪಡೆದು ಸಮಾಧಾನ ಹೊಂದುತ್ತಾರೆ. ಪೂಜಾಕಾಲದಲ್ಲಿ ದೇವಿಗೆ ಅರ್ಪಿತವಾದ ಹೂ, ವೀಳ್ಯದೆಲೆ, ಅಡಿಕೆ, ಸೀಯಾಳ, ಹಣ್ಣು, ಪಂಚಕಜ್ಜಾಯ ಇತ್ಯಾದಿ ಸರ್ವರಿಗೂ ವಿತರಣೆಯಾದ ಮೇಲೆ ಮಂಗಳವಾಗುತ್ತದೆ.

ಢಕ್ಕೆಯವರಿಗೂ ಪಾತ್ರಿಗಳಿಗೂ ಯಥೋಚಿತವಾಗಿ ಉಡುಗರೆಕೊಟ್ಟು ಗೌರವಿಸಲಾಗುತ್ತದೆ. ಪಾವಿತ್ರ್ಯ ಹಾಗೂ ನಿಸ್ಪೃಹತೆಯು ಪ್ರತ್ಯೇಕವಾದ ಈ ಬ್ರಹ್ಮಸ್ಥಾನದಲ್ಲಿ ಕೇವಲ ಸಾತ್ವಿಕ ಗುಣವು ಪ್ರಧಾನವಾಗಿದೆ. ಇಲ್ಲಿ ಭವ್ಯ ಕಟ್ಟಡಗಳಿಲ್ಲ, ದೇವರ ಕಾಣಿಕೆಯ ಡಬ್ಬಿಗಳಿಲ್ಲ, ಪೂಜೆಯ ಭಟ್ಟರಿಗೆ ಹಾಗೂ ಪಾತ್ರಿಗಳಿಗೆ ದಕ್ಷಿಣೆಯ ರೂಢಿಯೇ ಇಲ್ಲ; ಯಾವ ಸ್ಥಿರವಾದ ಕಟ್ಟಡಗಳಿಗೂ ದೇವತೆಯು ಒಪ್ಪಿಗೆ ಕೊಡುವುದಿಲ್ಲ ಕೇವಲ ಪ್ರಕೃತಿ ಸೌಂದರ್ಯವೇ ಇಲ್ಲಿಯ ವೈಶಿಷ್ಟ್ಯವಾಗಿದೆ. ಢಕ್ಕೆ ಬಲಿಯ ಸಮಯ ಮಾತ್ರ ದೇವಿಗೆ ಅತ್ಯಂತ ಪ್ರಿಯವಾದ ನಾನಾ ತರದ ಹೂ ಹಣ್ಣುಗಳ ಅಲಂಕಾರಕ್ಕಾಗಿ ತಾತ್ಕಾಲಿಕವಾಗಿ ಕೆಲವು ಕಂಬಗಳನ್ನು ಮಾತ್ರ ನಲೆಗೊಳಿಸುತ್ತಾರೆ. ಈ ಉತ್ಸವದ ಸಮಯದಲ್ಲಿ ಬ್ರಹ್ಮಸ್ಥಾನದ ದೇವಿಸನ್ನಿಧಾನ ಹಾಗೂ ನಾಗ ಬನಗಳು ಪುಷ್ಪಾಲಂಕಾರ ಮಂಟಪ, ದೀಪಾಲಂಕಾರ ಇತ್ಯಾದಿಗಳಿಂದ ನಯನ ಮನೋಹರವಾಗಿ ರಂಗೊಳಿಸುತ್ತವೆ. ಈ ಮಹೋತ್ಸವಕ್ಕೆ ಳರಿಂದ ೬ ಸಾವಿರದಷ್ಟು ಭಕ್ತರು ಸೇರುತ್ತಾರೆ.

(ಈ ಲೇಖನದ ತಯಾರಿಯಲ್ಲಿ ನನಗೆ ಸಹಾಯಕರಾದ ಶ್ರೀ ಪಡುಬಿದ್ರೆ ಕೃಷ್ಣಾಚಾರ್ಯರಿಗೂ ಶ್ರೀ ಬಪ್ಪನಾಡು ಶ್ರೀನಿವಾಸ ಭಟ್ಟರಿಗೂ ನಾನು ಋಣಿಯಾಗಿದ್ದೇನೆ)

Statement about ownership and other particulars about Newspaper: NAVAYUGA

FORM IV (Rule 8)

1	Place of Publication	...	UDIPI
2	Periodicity of its Publication	..	WEEKLY
3	Printer's Name	...	K. H. SHETTY
	Nationality	...	INDIAN
	Address	...	Palukote, Udipi (S. K.)
4	Publisher's Name	...	K. H. SHETTY
	Nationality	...	INDIAN
	Address	...	Palukote, Udipi (S. K.)
5	Editor's Name	...	K. H. SHETTY
	Nationality	...	INDIAN
	Address	...	Palukote, Udipi (S. K.)
6	Names and addresses of individuals who own the News-paper and partners or shareholders holding more than one percent of the total capital.		K. H. SHETTY Palukote, Udipi (S. K.) (Prop)

I, K. H. Shetty, hereby declare that the particulars given above are true to the best of my knowledge and belief.

(Sd) K. H. SHETTY,
Signature of Publisher

Date 2—3—1967



ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಕನ್ನಡ ನಾಡಿಗೆ

ಜೈನ ಧರ್ಮದ ಕಾಣಿಕೆ

ಕಲೆ ಸಾಹಿತ್ಯ, ಸಂಗೀತ, ಶಿಲ್ಪ, ಹಾಗೂ ರಾಜಕೀಯ ಹೀಗೆ ಅನೇಕ ರಂಗಗಳಲ್ಲಿ ತನ್ನ ಸರ್ವೋತ್ಕೃಷ್ಟತೆಯನ್ನು ಜೈನ ಧರ್ಮವು ಕರ್ನಾಟಕದಲ್ಲಿ ಮೆರೆಸಿದ. ನಮ್ಮ ಕನ್ನಡ ನಾಡಿಗೆ ಈ ಧರ್ಮವು ನೀಡಿದ ಕಾಣಿಕೆ ಅಪಾರವಾಗಿದೆ. ಜೈನ ಧರ್ಮಾನುಯಾಯಿಗಳಿಂದ ಕನ್ನಡ ನುಡಿದೇವಿ ಶೃಂಗರಿಸಲ್ಪಟ್ಟಷ್ಟು ಇನ್ನಾರಿಂದಲೂ ಶೋಭೆಗೊಂಡಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು.

ಕನ್ನಡ ಸಾಹಿತ್ಯ ಸರಸ್ವತಿಯ ಶಬ್ದ ಭಾಂಡಾರವನ್ನೇ ಸೋಸಿ ತೆಗೆದ ಕೀರ್ತಿ 'ಗದಾಯುದ್ಧ'ದ ರನ್ನನಿಗೆ ಬಂದಿದೆ. ಪಂಪ, ನಾಗವರ್ಮ, ನೇಮಿಚಂದ್ರ, ಕೇಶಿರಾಜ, ರತ್ನಾಕರ ಅಂಡಯ್ಯ ಮುಂತಾದ ಮಹಾಕವಿಗಳು ಸುಪ್ರಸಿದ್ಧ ಸಾಹಿತಿಗಳೂ ಜೈನರೇ ಆಗಿರುವರು. ಕೇಶಿರಾಜನ ಶಬ್ದ ಕೋಶ, ರತ್ನಾಕರ ವರ್ಣಿಯ ರಸಿಕ ರಸದಿಂದ ಕೂಡಿದ ಆಸ್ಥಾನ ವೈಭವ, ಅಂಡಯ್ಯನ ಕನ್ನಡ ತಾಯ್ ವರ್ಣನೆ ಇಷ್ಟಲ್ಲದೆ ಕನ್ನಡದಲ್ಲಿ ಇಂದಿನವರೆಗೂ ಉಪಲಬ್ಧವಾಗಿರುವ ಗ್ರಂಥ ಸಮೂಹಗಳಲ್ಲಿಯೇ ಅತ್ಯಂತ ಪುರಾತನವಾದ "ಕವಿರಾಜ ಮಾರ್ಗ"ದ ಕರ್ತೃ ನೃಪತುಂಗನೂ ಜೈನ ಧರ್ಮಾನುಯಾಯಿಗಳಾಗಿದ್ದು ಕನ್ನಡ ಸಾಹಿತ್ಯ ರಂಗಕ್ಕೆ ಇವರು ನೀಡಿದ ಸೇವೆ ಅಪಾರವಾಗಿದೆ. ರಸಿಕ ಶಿರೋಮಣಿಯಾದ ಕಂತಿಯು ಸಹ ಕನ್ನಡ ಗ್ರಂಥ ರಾಶಿಗಳಿಗೆ ಬೇರುಗಳನ್ನು ಕೊಟ್ಟಿರುವಳು.

ಕಲೆಯ ಪರಿಣಿತರಾದ ಜೈನರು ನಮ್ಮ ನಾಡಿನ ಕಲಾರಾಜಿಗೆ ಸಲ್ಲಿಸಿದ ಸೇವೆ ಅಗಣಿತವಾದದ್ದು. ಹೊಯ್ಸಳ, ಮಹಾರಾಣಿ ಶಾಂತಲಾ ಸ್ವತಃ ಗಾನಸರಸ್ವತಿಯಲ್ಲದೆ ನಾಟ್ಯ ರಾಣಿಯೂ ರಸಿಕ ಶಿಖಾಮಣಿಯೂ ಆಗಿದ್ದಳು.

ಶಿಲ್ಪ ಕಲೆಯಿಂದಾಗಿ ಕರ್ನಾಟಕ ರಾಜ್ಯವನ್ನು ಮುಗಿಲೆತ್ತರಕ್ಕೆ ನಿಲ್ಲಿಸಿದ ಸಾಹಸವನ್ನು ನೋಡಿದರೆ ಈ ನಾಡಿನ ಜನತೆ ಜೈನಧರ್ಮೀಯರಿಗೆ ಚಿರಋಣಿಗಳಾಗಿರಬೇಕು. ಇದಕ್ಕೆ ಕಾರಣ ಬೇಲೂರಿನ ಚನ್ನಕೇಶವ, ಹಳೇಬೀಡಿನ ಶಿಲಾಬಾಲಿಕೆಯರು, ಸೋಮನಾಥಪುರದ ದೇವಾಲಯ ಇವು ಉತ್ತಮ ನಿದರ್ಶನಗಳಾಗಿವೆ. ಕಾರ್ಕಳದ ಗೋಮಟೇಶ್ವರ, ಬೆಳಗೊಳದ ಗೋಮಟೇಶ್ವರ ಇವುಗಳು ಶಿಲ್ಪಕಲೆಯ ಅತ್ಯುನ್ನತ ಮಟ್ಟಗಳನ್ನು ಮುಟ್ಟಿದವುಗಳಾಗಿವೆ. ಸಹಜ ಸುಂದರವಾದ ಉನ್ನತ ಏಕ ಶಿಲಾ ಪುರುಷಾ ಕೃತಿಯನ್ನು ಪ್ರಪಂಚಕ್ಕೆ ನೀಡಿ ಪ್ರಕೃತಿಯಲ್ಲಿ ಪುರುಷನು ಮೂಡಬಹುದಾದ ಪರಮತರ ಕಾಣಿಕೆಯನ್ನು ಜೈನರು ನಮ್ಮ ನಾಡಿಗೆ ನೀಡಿರುವರು.

ಜೈನ ಧರ್ಮ ತನ್ನ ಧರ್ಮದ ಬೀಜವನ್ನು ಇಲ್ಲಿ ಬಹು ಆಳವಾಗಿ ಬೇರಿಸಿ ತನ್ನ ತತ್ವವನ್ನು ಕನ್ನಡದ ಜನತೆಯ ಜೀವನಕ್ಕೆ ಆಧಾರವಾಗಿ ಹಂಚಿದ. ಇದಕ್ಕೆ ಕಾರಣ ನಮ್ಮ ನಾಡಿನ ಎಲ್ಲೆಡೆಗೂ ಕಂಗೊಳಿಸುವ ಜೈನ ಬಸದಿಗಳೇ ಆಗಿವೆ.

ತನ್ನ ಜನ ಧರ್ಮದಲ್ಲಷ್ಟೇ ಅಲ್ಲದೆ ಇತರ ಧರ್ಮದಲ್ಲೂ ಆಸಕ್ತಿ ವಹಿಸಿದರು. ಹೊಯ್ಸಳರ ವಂಶದಲ್ಲಿ ಮಹಾ ಪ್ರತಿಭಾವಂತನಾದ ಚಕ್ರವರ್ತಿ ಬಿಟ್ಟಿದೇವನು ಆಚಾರ್ಯ ಶ್ರೀ ರಾಮಾನುಜರ ಶಿಷ್ಯತ್ವವನ್ನು ಹೊಂದಿ ವಿಷ್ಣುವರ್ಧನನಾದನು. ಶ್ರೀ ಭಕ್ತಿಭಾಂಡಾರಿ ಬಸವೇಶ್ವರರಿಂದ ಪುನರುಜ್ಜೀವಿಸಲ್ಪಟ್ಟ ವೀರಶೈವ ಮತವನ್ನು ರಾಜಾಶ್ರಯದಲ್ಲಿ ಸಲಹಿದನನೆಂದರೆ ಕಲ್ಯಾಣದ ಕಳಚೂರರ ಬಿಜ್ಜಳದೇವ. ಇದಲ್ಲದೇ ಭಾರತದ ಭವ್ಯ ಇತಿಹಾಸದ ಕಾರಣ ಕರ್ತರಾದ ಅನೇಕಾನೇಕ ಕನ್ನಡದ ರಾಜ ಮಹಾರಾಜರುಗಳೂ ಜೈನರೇ ಆಗಿರುವರು.

ನಮ್ಮ ನಾಡು ಹಾಗು ನುಡಿಗಳಿಗೆ ಅಪಾರ ಸೇವೆ ಸಲ್ಲಿಸಿದ ಕೀರ್ತಿ ಜೈನ ಧರ್ಮದ್ದಾಗಿದೆ. ನಮ್ಮ ನಾಡನ್ನು ಭಾರತದಲ್ಲಷ್ಟೇ ಅಲ್ಲದೆ ಪರದೇಶಗಳಲ್ಲಿಯೂ ಒಂದು ವಿಶಿಷ್ಟ ಸ್ಥಾನಕ್ಕೆ ನಿಲ್ಲಿಸಿದ ಈ ಮಹಾ ಸೇವೆ ಜೈನರದೇ ಎನ್ನಬಹುದು. ಕಾರಣವೆಂದರೆ ಅವರಿಂದ ಸೃಜಿಸಲ್ಪಟ್ಟ ಗೊಮ್ಮಟೇಶ್ವರ, ಬೇಲೂರು ಹಳೇಬೀಡಿನ ಶಿಲಾಬಾಲಿಕೆಯರು ಇಂತಹವರಿರುವರು.

ಹೀಗೆ ಇದರ ಸರ್ವತೋಮುಖವಾದ ಸೇವೆ ಇಂದಷ್ಟೇ ಅಲ್ಲದೆ ಇಂದಿಗೂ ಸತತವಾಗಿ ಸಾಗಿ ಬರುತ್ತಿರುವದು. ಜೈನ ಜನಾಂಗದ ಹಲವಾರು ಜನ ಇಂದು ಕನ್ನಡ ಸಾಹಿತ್ಯ ಹಾಗೂ ಚಿತ್ರ ಕಲಾರಂಗದಲ್ಲಿ ತಮ್ಮ ಅಪಾರ ಸೇವೆಯಿಂದಾಗಿ ಸುವಿಖ್ಯಾತರಾಗಿರುವರು. ಈ ಪ್ರವಾಹವು ಇನ್ನೂ ಮುಂದೂ ಸತತವಾಗಿ, ಸುಲಲಿತವಾಗಿ ಕನ್ನಡದ ಚರಿತ್ರೆಯ ಪುಟ ಪುಟಗಳಲ್ಲಿ ಹಬ್ಬಲಿರುವದು. ಹೀಗಾಗಿ ಜೈನ ಧರ್ಮ ಕರ್ನಾಟಕದಲ್ಲಿ ವಿಶಿಷ್ಟತೆಯನ್ನು ಪಡೆದಿರುವದು ಇದಕ್ಕೆ ಕಾರಣ ಜೈನ ಧರ್ಮವು ಕನ್ನಡ ನಾಡಿಗೆ ನೀಡಿದ ಕಾಣಿಕೆ ಬಹು ಅಮೂಲ್ಯವಾದದ್ದು.

(ಪಂಚಾಮೃತ).

ನಿಮ್ಮದೇ ಅಧಿಕಾರವಿರಬೇಕು

(ನಾಲ್ಕನೇ ಪುಟದಿಂದ)

"ಹ್ಞಾಂ ..ಸರಿ ಹೋಯಿತೂನ್ನಿ....ಅಧಿಕಾರ ಅಂದರೆ ಹಾಗೇನೇ....ಆದೂ ಹಾದು.. ಈಗ ನೀವು ಅಧಿಕಾರ ಬಿಡೋಕೆ ತಯಾರಿದ್ದೀರಾ?'

'ನಾನು? ಯಾರ ಮೇಲಿನದ್ದು....'

"........'

'ಹ್ಞಾಂ.. ಅಬ್ಬಾ ..ತೆರೆಗಣ್ಣು —ಮುಚ್ಚುಗಣ್ಣುಗಳ ಅಭಿಪ್ರಾಯದಲ್ಲಿ ಸಾಮ್ಯವಿಲ್ಲ ಅಂತ ನನ್ನ ಆಸೆಗಣ್ಣು ಸೂಚಿಸುತ್ತಲಿದೆಯಲ್ಲ. ."

'ಸಾಕು ಬಿಡೀಂದ್ರು.... ನೋಡಿ, ತುಸು ಇತ್ತಬನ್ನಿ....'

"ಹ್ಞಾಂ ...'

"ನೋಡಿ, ಒಂದು ರಹಸ್ಯ ಹೇಳ್ತೀನಿ. ಯಾರಿಗೂ ಹೇಳಬೇಡಿ ಮತ್ತೆ...."

ಹ್ಞಾಂ....'

"... . . ಹ್ಞಾಂ...ಏನು?"

'ಇದೇನೇಯೂ! ಇದ್ರಲ್ಲೇನು ರಹಸ್ಯ? ಎಲ್ಲರಿಗೂ ತಿಳಿದದ್ದೇ ಅಲ್ಲವೆ!"

"ಹೌದೇ....'

'ಏನೇ ಇದು?'

'ಯಾವುದು?'

"....... ...."

ಅದು ಅದೇ....ಪಾಪ, ಭ್ರಮರಕ್ಕೆ ಪುಷ್ಪದ ಮೇಲೆ ಅಧಿಕಾರ ದೈವದತ್ತವಾದದ್ದು ತಾನೆ!"

"ಆದರೆ, ಜನತೆಯ ಮೇಲೆ...."

"ಅದು ನನಗ್ಗೊತ್ತಿಲ್ಲ ಅದ್ರೆ ನನ್ನ ಮೇಲೆ ಸದಾ ನಿಮ್ಮ ಅಧಿಕಾರವೇ ಇರಲಿ...."

"ಹ್ಞಾಂ ..."

"ಆಹ್ಞಾ, ನನ್ನ....'

—ಗೋರಾ.

ನಿಮಗೂ ಗೊತ್ತಿರಲಿ

ಬಾಲಕರ ಸರ್ಕಸ್ ಎಲ್ಲೀ ಬೂಗ್

ಮನೆಯಿಂದ ಓಡಿ ಹೋಗಿ ನಾಟಕದ ಕಂಪನಿಯನ್ನೋ ಸರ್ಕಸ್ ಕಂಪನಿಯನ್ನೋ ಸೇರುವ ಆಕಾಂಕ್ಷೆ ಎಷ್ಟೋ ಮಂದಿ ಬಾಲಕರಿಗೆ ಹುಟ್ಟುವುವಷ್ಟೆ! ಎಷ್ಟೋ ಮಂದಿ ಬಾಲಕರು ಅಂತಹ ಆಸೆಗಳ ವಶರಾಗಿ ಮನೆಮಟಗಳನ್ನು ತ್ಯಜಿಸಿರುವುದನ್ನೂ ನಾವು ಕೇಳಿಬಲ್ಲೆವಷ್ಟೆ? ಆದರೆ ಅಂತಹ ಹುಡುಗರಿಗೆ ಆಮ್‌ಸ್ಟರ್ ಡಾಮಿನ "ಎಲ್ಲೀ ಬೂಗ್" ಸರ್ಕಸ್ ಕಂಪನಿಯಲ್ಲಿ ಸ್ವಾಗತದ ಆಹ್ವಾನ ದೊರೆತಂತೆ ಮತ್ತೆಲ್ಲಿಯೂ ದೊರೆಯಲಾರದು. ಈ ಸರ್ಕಸ್ ಕಂಪನಿಯಲ್ಲಿರುವವರೆಲ್ಲರೂ ೭ರಿಂದ ೧೫ ವರ್ಷ ವಯಸ್ಸಿನೊಳಗಿರುವ ಬಾಲಕ ಬಾಲಕಿಯರೇ. ಇದನ್ನು ಮಕ್ಕಳ ಸರ್ಕಸ್ ಎಂದೇ ಕರೆಯಬಹುದು

ಇದು ಸ್ಥಾಪಿತವಾದುದು ೧೯೪೮ರಲ್ಲಿ. ಇದನ್ನು ಸ್ಥಾಪಿಸಿದವರು ಐಯುಟ್ ಟರ್ ಹಾರ್ ಎಂಬ ಡಚ್ ಮಹಿಳೆ. ಸುಖಕರ ಗೃಹ ವಾತಾವರಣದಿಂದ ವಂಚಿತರಾಗಿರುವ ಬಾಲಕ, ಬಾಲಕಿಯರು ಸಂತೋಷವಾಗಿ ಗೃಹ ಜೀವನ ನಡೆಸಲು ನೆರವಾಗುವಂತೆ ಮಾಡುವುದೇ ಈ ಸರ್ಕಸ್ ಸ್ಥಾಪಿಸಿದ ಉದ್ದೇಶ. ಕಾನೂನು ವಿರುದ್ಧ ಕಾರ್ಯಗಳಲ್ಲಿ ತೊಡಗುವ ಚಾಪಲ್ಯ ತೊಲಗಿಸುವಲ್ಲಿ ಈ ಸರ್ಕಸ್ ನೆರವಾಗಿದೆಯಂತೆ. ಮಕ್ಕಳನ್ನು ಸಮಾಜಹಿತ ಕಾರ್ಯಗಳಲ್ಲಿ ತೊಡಗಿಸುವುದಲ್ಲದೆ ಅವರಿಗೆ ಒಂದು ವಿಧವಾದ ಮನರಂಜನೆಯನ್ನು ಈ ಸರ್ಕಸ್ ನೀಡುವುದಾಗಿದೆ

ಈ ಸರ್ಕಸ್ ಆರಂಭದೆಸೆಯಲ್ಲಿ ಬಹಳ ಸಾಧಾರಣವಾಗಿತ್ತು. ಅದನ್ನು ಸರ್ಕಸ್ ಎಂದು ಕರೆಯುವಂತೆಯೂ ಇರಲಿಲ್ಲ. ಮನೆ ಛಾವಣಿ ಹತ್ತುವುದೇ ಮೊದಲಾದ ಚೇಷ್ಟೆಗಳಲ್ಲಿ ತೊಡಗುತ್ತಿದ್ದ ಮಕ್ಕಳಿಗೆ ತಂತಿ ಮೇಲೆ ನಡೆಯುವುದೇ ಮೊದಲಾದ ಸರ್ಕಸ್ಸಿನ ಸಾಧನೆಗಳನ್ನು ಅಂಗಸಾಧಕ ಶಿಕ್ಷಕರ ಸಹಾಯದಿಂದ ಕಲಿಸುವುದು ಐಯಟ್ ಟರ್ ಹಾರರ ಉದ್ದೇಶ. ಈ ವಿದ್ಯೆಗಳಲ್ಲಿ ಗುರುವನ್ನೇ ಮೀರಿಸಲಾರಂಭಿಸಿದ ಶಿಷ್ಯರ ಸಾಮರ್ಥ್ಯದಿಂದ ಉತ್ತೇಜನಗೊಂಡ ಟರ್ ಹಾರರು ಸರ್ಕಸ್ಸನ್ನೇ ಸ್ಥಾಪಿಸುವ ಯೋಜನೆ ಮಾಡಿದರು. ಮಕ್ಕಳಿಗೆ ಇನ್ನೂ ಹೆಚ್ಚಿನ ತರಬೇತಿ ನೀಡುವುದೆಂದಾಯಿತು. ಉದ್ಯೋಗಸ್ಥ ಸರ್ಕಸ್ ಸಂಸ್ಥೆಗಳಲ್ಲಿನ ಆಟಗಳನ್ನು ವೀಕ್ಷಿಸುವುದು ಈ ತರಬೇತಿಯ ಒಂದು ಮುಖ್ಯ ಅಂಗ. "ಎಲ್ಲೀ ಬೂಗ್" ಸಂಸ್ಥೆ ಸ್ಥಾಪನೆಯ ಸುದ್ದಿ ಹರಡಿದಾಗ ತಡ ಕಾನೂನು ಬಾಹಿರ ಜೀವನದಲ್ಲಿ ತೊಡಗಿದ್ದ ಅಥವಾ ತೊಡಗಲಿದ್ದ ಬೀದಿಯ ಮಕ್ಕಳು ಅದಕ್ಕೆ ಸೇರಲಾರಂಭಿಸಿದರು. 'ಎಲ್ಲೀ ಬೂಗ್"ನ ಆಸರೆಯಿಲ್ಲದಿದ್ದಿದ್ದರೆ ಕಷ್ಟ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವುದು ಸಾಧ್ಯವಿಲ್ಲವಾಗುತ್ತಿತ್ತೆಂದು "ಎಲ್ಲೀ ಬೂಗ್"ನ ಅನೇಕ ಮಕ್ಕಳು ಕೃತಜ್ಞತೆಯಿಂದ ನುಡಿಯುವರು.

ಬಾಲ ಅಪರಾಧಿಗಳನ್ನು ಒಳ್ಳೆಯ ದಾರಿಗೆ ತರಲು ನೆರವಾಗಿರುವುದರಿಂದ ಇದಕ್ಕೆ ಸಾರ್ವಜನಿಕರಿಂದ ಧನ ಸಹಾಯವೂ ದೊರಕಿತು. ಟರ್ ಹಾರ್‌ರಿಗೆ ಸಹಾಯಕರಾಗಿ ಅನೇಕ ಸ್ವಯಂ ಸೇವಕರು ಮುಂದೆ ಬಂದರು ಇವರೆಲ್ಲರೂ ಈಗ ಸಂಸ್ಥೆಯ ನಿಷ್ಠಾವಂತ ಕಾರ್ಯಕರ್ತರಾಗಿರುವರು. "ಎಲ್ಲೀ ಬೂಗ್'ನ ಮಕ್ಕಳಿಗೆ ಇತ್ತೀಚೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿದ್ದು ಉಡುಪುಗಳನ್ನು ನಿರ್ಮಿಸುವುದು, ಹೊಸ ಸಾಧನೆಗಳನ್ನು ಅಭ್ಯಾಸ ಮಾಡುವುದು ಮುಂತಾದ ಕ್ರಿಯಾತ್ಮಕ ಕೆಲಸಗಳಲ್ಲಿ ಮಕ್ಕಳು ತೊಡಗುವುದು ಸಾಧ್ಯವಾಗಿದೆ. ಈ ಸಂಸ್ಥೆ ಮಕ್ಕಳಿಗೆ ಹೊಂದಿರುವ ಬಹು ಮುಖ್ಯ ಆಕರ್ಷಣೆಯೆಂದರೆ ಅದರ 'ಗೃಹ ವಾತಾವರಣ' ಸಮಾಜ ಸೇವೆಯೂ ಈ ಸಂಸ್ಥೆಯ ಮುಖ್ಯೋದ್ದೇಶವೇ. ಆಮ್‌ಸ್ಟರ್ ಡಾಮಿನಲ್ಲಿ ಕಟ್ಟಲಾಗುತ್ತಿರುವ ಆಸ್ಪತ್ರೆಯ ಕಟ್ಟಡವೊಂದಕ್ಕೆ ೧೦,೦೦೦ ಪೌಂಡುಗಳ ನೆರವನ್ನು ಈ ಸಂಸ್ಥೆ ಇತ್ತೀಚೆಗೆ ನೀಡಿತು!

ಆಮ್‌ಸ್ಟರ್ ಡಾಮಿಗೆ ಭೇಟಿ ಕೊಡುವವರೆಲ್ಲರೂ 'ಎಲ್ಲೀ ಬೂಗ್" ಸರ್ಕಸ್ ಆಟವನ್ನು ಕಡ್ಡಾಯವಾಗಿ ನೋಡಬೇಕೆಂದು ಸಲಹೆ ಮಾಡಲಾಗಿದೆ. ಕತ್ತೆಗಳು, ಕುದುರೆಗಳು, ಸಿಂಹಗಳು, ಜಿರಾಫೆ

ಗಳೇ ಮುಂತಾದ ಪ್ರಾಣಿಗಳಲ್ಲದೆ ಸರ್ಕಸ್ ಪ್ರದರ್ಶನ ನೀಡುವವರು ಅದರ ಸಣ್ಣ ವಯಸ್ಸಿನ ಮಕ್ಕಳು. ಉದ್ಯೋಗಸ್ಥ ಸರ್ಕಸ್ ಆಟಗಾರರ ಕಸರತ್ತುಗಳೆಲ್ಲವನ್ನೂ ಈ ಮಕ್ಕಳು ಮಾಡುವರಂತೆ! ಪ್ರಾಣಿಗಳಿಂದಲೂ ಅಚ್ಚರಿ ಸಾಧನೆಗಳನ್ನು ಮಾಡಿಸುವರಂತೆ.

“ಎಲ್ಲೀ ಬೂಗ್”ನ ಪ್ರಸಿದ್ಧಿ ಯೂರೋಪಿನಾದ್ಯಂತ ವ್ಯಾಪಿಸಿದೆ. ಯೂರೋಪಿನ ಎಲ್ಲ ದೇಶಗಳ ಮುಖ್ಯ ನಗರಗಳಲ್ಲಿ ಪ್ರದರ್ಶನ ನೀಡಲು ಅದಕ್ಕೆ ಒತ್ತಾಯ ಪಡಿಸಲಾಗುತ್ತಿದೆಯಂತೆ. ಆದರೆ ಹಣಗಳಿಸುವುದು “ಎಲ್ಲೀ ಬೂಗ್”ನ ಮುಖ್ಯ ಉದ್ದೇಶವಲ್ಲ. ಆದ್ದರಿಂದಾಗಿ ಇಂತಹ ಕೋರಿಕೆಗಳನ್ನು ಈಡೇರಿಸಲು ಅದು ಉತ್ಸಾಹ ತೋರಿಸುತ್ತಿಲ್ಲ.

“ಎಲ್ಲೀ ಬೂಗ್’ ಸಂಸ್ಥೆಗೆ ಸೇರುವ ಮಕ್ಕಳು ಯಾವ ವಿಧವಾದ ಚಂದಾ ಹಣವನ್ನೂ ಕೊಡಬೇಕಾಗಿಲ್ಲ. ಅದಕ್ಕೆ ಸೇರಲು ಬರುವ ಬಾಲಕಬಾಲಕಿಯರೆಲ್ಲರಿಗೂ ಸ್ವಾಗತವುಂಟು. ಮಕ್ಕಳನ್ನು ಯಾವ ಬಗೆಯ ಪ್ರಶ್ನೆಗಳನ್ನೂ ಕೇಳದಿರುವುದು ಸಂಸ್ಥೆಯ ನೀತಿ. ಮಕ್ಕಳು ಸಂಸ್ಥೆಗೆ ಸೇರಿದ ನಂತರವೇ ಅವರ ಸ್ಥಿತಿಗತಿಗಳನ್ನು ವ್ಯವಸ್ಥಾಪಕರು ತಿಳಿಯಲು ಪ್ರಯತ್ನಿಸುವುದು. ಅದೂ ಅವರ ಮುಂದಿನ ಜೀವನವನ್ನು ಸರಿಯಾದ ರೀತಿಯಲ್ಲಿ ರೂಪಿಸುವ ಉದ್ದೇಶದಿಂದ.

ಕೆಟ್ಟದಾರಿ ಹಿಡಿಯ ಬಹುದಾದ ಮಕ್ಕಳನ್ನು ಉತ್ತಮ ಹಾದಿಯಲ್ಲಿ ನಡೆಸಲು ಶ್ರಮಿಸುತ್ತಿರುವ “ಎಲ್ಲೀ ಬೂಗ್’ ಎಲ್ಲರ ವಿಶ್ವಾಸ, ಗೌರವಗಳಿಗೆ ಪಾತ್ರವಾಗಿರುವುದರಲ್ಲಿ ಆಶ್ಚರ್ಯವಿಲ್ಲ.

ವಿಜಯವಾಡಾದಲ್ಲಿ 6ನೆಯ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ

ವಿಜಯವಾಡಾ ಫೆ. 27, ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನವು 1967ನೇ ಮಾರ್ಚ 10ನೇ ಶುಕ್ರವಾರ, 11ನೇ ಶನಿವಾರ, 12ನೇ ರವಿವಾರದ ಈ ಮೂರು ದಿನಗಳಲ್ಲಿ ವಿಜಯವಾಡಾದ ಗಾಂಧೀ ನಗರದಲ್ಲಿರುವ ಫಿಲ್ಮ್ ಚೇಂಬರದ ಹತ್ತಿರದ ಆವರಣದಲ್ಲಿ ರಚಿತವಾದ ‘ಪೂರ್ಣಪ್ರಜ್ಞ ಮಂಟಪ’ದಲ್ಲಿ ನಡೆಯಲಿದೆ.

ಈ ಸಮ್ಮೇಳನವನ್ನು ಸೋಸಲೆಯ ಶ್ರೀ ವ್ಯಾಸರಾಜ ಮಠದ ಶ್ರೀಗಳು ಉದ್ಘಾಟಿಸಲು ಹಾಗೂ ಶ್ರೀ ರಾಯರಮಠದ ಶ್ರೀಗಳು ಅಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡಿದ್ದಾರೆ. ಅಲ್ಲದೆ ಶ್ರೀ ಭೀಮನಕಟ್ಟೆ, ಶ್ರೀ ಭಂಡಾರಕೇರಿ, ಶ್ರೀ ಮಜ್ಜಿಗೇನಹಳ್ಳಿ, ಶ್ರೀ ಬಾಳೇಗಾರು, ಶ್ರೀ ಚಿತ್ರಾಪುರ, ಶ್ರೀ ಅದಮಾರು, ಶ್ರೀ ಪಲಿಮಾರು, ಶ್ರೀ ಸೀರೂರ ಹಾಗೂ ಶ್ರೀ ಪೇಜಾವರ ಮಠದ ಶ್ರೀಪಾದಂಗಳವರು ಉಪಸ್ಥಿತರಿದ್ದು ಅನುಗ್ರಹ ಭಾಷಣಗಳನ್ನು ಮಾಡಲು ಒಪ್ಪಿಕೊಂಡಿದ್ದಾರೆ.

ಈ ಸಮ್ಮೇಳನದಲ್ಲಿ ಪಂಡಿತಗೋಷ್ಠಿಯು ನಡೆಯಲಿದ್ದು ದೇಶದ ನಾನಾ ಭಾಗಗಳಿಂದ ಪ್ರತಿಷ್ಠಿತ ಪಂಡಿತರು ಭಾಗವಹಿಸಲಿರುವರು.

ಇದೇ ಸಂದರ್ಭದಲ್ಲಿ ಸಮ್ಮೇಳನದ ಸಂಸ್ಮರಣ ಸಂಚಿಕೆಯು ಪ್ರಕಾಶನವಾಗಲಿರುವದು.

ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಉಪನ್ಯಾಸಗಳು ನಡೆಯಲಿರುವವು.

ಹೆಚ್ಚಿನ ವಿವರಗಳಿಗೆ ಕೂಡಲೇ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ, ಭಾರತೀ ಕ್ಲಿನಿಕ್, ಗಾಂಧೀನಗರ, ವಿಜಯವಾಡಾ-3 ಇವರೊಡನೆ ಸಂಪರ್ಕ ಮಾಡಬೇಕಾಗಿಯೂ ಸಕಲ ಅಭಿಮಾನಿಗಳು ಈ ಅಧಿವೇಶನದಲ್ಲಿ ಭಾಗವಹಿಸಿ ಶ್ರೇಯೋಭಾಗಿಗಳಾಗಬೇಕಾಗಿ ಮಾಧ್ವಮಹಾ ಮಂಡಲದ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಅನಂತ ತಡಸ ಅವರು ಬಿನ್ನವಿಸುತ್ತಾರೆ.

ರವೀಂದ್ರ ಮಂಟಪದ ಉದ್ಘಾಟನೆ

ಉಡುಪಿ, ಮಾ. ೪, ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಎಂ. ಜಿ. ಎಂ. ಕಾಲೇಜು ವಠಾರದಲ್ಲಿ ನಿರ್ಮಿಸಿರುವ ‘ರವೀಂದ್ರ ಮಂಟಪ’ದ ಉದ್ಘಾಟನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಕೆ. ಎಲ್. ಶ್ರೀಮಾಲಿಯವರು ಡಾ| ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಪ್ರಸಾರಾಂಗ ಪ್ರಕಟಣೆಗಳಾದ ಸಾಂಖ್ಯ [ಡಾ| ಕೆ. ಬಿ. ರಾಮಕೃಷ್ಣರಾವ್] ಮತ್ತು ವೇದಾಂತ ಸಾರ’ ಶ್ರೀ [ಕಾಲಗಿ ಕೇಶವಾಚಾರ್ಯ] ಪುಸ್ತಕಗಳ ಬಿಡುಗಡೆಗೊಳಿಸಲಾಯಿತು. ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಸ್ವಾಗತ ಭಾಷಣ ಮಾಡಿದರು.

ಡಾ| ಶ್ರೀಮಾಲಿಯವರು ಉದ್ಘಾಟನಾ ಭಾಷಣ ಮಾಡಿದ ತರುವಾಯ ಪ್ರೊ. ಎಸ್. ಎಸ್. ರಾಘವಾಚಾರ್ಯರು ಗ್ರಂಥಪರಿಚಯ ಮಾಡಿದರು. ಗ್ರಂಥ ಕರ್ತರುಗಳು ಮಾತನಾಡಿದ ಬಳಿಕ ಡಾ| ಕಾರಂತರು ಅಧ್ಯಕ್ಷ ಭಾಷಣ ಮಾಡಿ ಕೆಲವೊಂದು ಸೂಚನೆಗಳನ್ನಿತ್ತರು ಡಾ| ಪ್ರಭುಶಂಕರರು ವಂದನಾರ್ಪಣೆ ಮಾಡಿದರು.

ದ. ಕ. ಕೃಷಿಕರ ಚೇಂಬರ್

ಇವರ ಸಭೆಯು ತಾ. 2ರಂದು ಉಪಾಧ್ಯಕ್ಷ ಶ್ರೀ. ಎಂ. ಕೆ. ದೇವರಾಜರ ಅಧ್ಯಕ್ಷತೆಯಲ್ಲಿ ಜರಗಿ, ಜಿಲ್ಲೆಯಲ್ಲಿರುವ ನೀರಾವರಿಯ ಸಣ್ಣಕೆರೆಗಳನ್ನು ಊರ್ಜಿತ ಪಡಿಸುವಲ್ಲಿ ಸರಕಾರವು ಕೈಗೊಂಡಿರುವ ಕೆಲಸಗಳಲ್ಲಿ ಕಂಡುಬಂದಿರುವ ಅನೇಕ ನ್ಯೂನತೆಗಳನ್ನು ಜಿಲ್ಲೆಯಾದ್ಯಂತ ರೈತಾಪಿ ಜನರು ಚೇಂಬರಿನ ಗಮನಕ್ಕೆ ತಂದಿರುತ್ತಾ ಆ ಬಗ್ಗೆ ಪರಿಶೋಧನೆ ನಡಿಸಿ ಕುಂದು ಕೊರತೆಗಳನ್ನು ಸರಿಪಡಿಸುವಲ್ಲಿ ತಕ್ಕ ಕ್ರಮಗಳನ್ನು ಕೈಗೊಂಡು ಸರಕಾರವನ್ನು ಒತ್ತಾಯಿಸಲು ಕಾರ್ಯದರ್ಶಿಯವರಿಗೆ ಅಧಿಕಾರವೀಯಲಾಯಿತು.

ಭತ್ತದ ಸಾಗುವಳಿಗೆ ನಮ್ಮ ಜಿಲ್ಲೆಯಲ್ಲಿ ತಗಲುವ ಖರ್ಚಿನ ಬಗ್ಗೆ ಪರಿಶೋಧನೆ ನಡೆಸಲು ನಿವೃತ್ತ ಜಿಲ್ಲಾ ಕೃಷಿ ಇಲಾಖಾ ಅಧಿಕಾರಿಗಳಾದ ಶ್ರೀ ಕೆ. ದೇಜಪ್ಪ ಶೆಟ್ರ ನೇತೃತ್ವದಲ್ಲಿ ನೇಮಿಸಿದ ಕಮಿಟಿಯು ಒಪ್ಪಿಸಿದ ವರದಿಯಂತೆ, ಪ್ರಕೃತದ ಧಾರಣೆ ಮೇಲೆ ಭತ್ತ ಕ್ವಿಂಟಾಲು ಒಂದನ್ನು ಬೆಳೆಸಲು ಕನಿಷ್ಠ ರೂ. 68.90 ಖರ್ಚು ತಗಲುವುದೆಂದು ವಿಷಯವನ್ನು ಗಮನಿಸಿ ಈ ಜಿಲ್ಲೆಯಲ್ಲಿ ಇನ್ನು ಮುಂದಿನ ಲೆವಿ ಧಾರಣೆಯನ್ನು ಭತ್ತ ಕ್ವಿಂಟಾಲ್ 1ಕ್ಕೆ ಕನಿಷ್ಠ ರೂ. 70/-ರಂತೆ ನಿಗದಿಪಡಿಸಬೇಕೆಂದು ಸರಕಾರವನ್ನು ತೀರ್ಮಾನಿಸಲಾಯಿತು.

ಮೈಸೂರು ಭೂಸುಧಾರಣಾ ಕಾನೂನಿನ ಮೇಲೆ ಸುಪ್ರೀಂ ಕೋರ್ಟು ಇತ್ತೀಚೆಗಿತ್ತ ತೀರ್ಮಾನಕ್ಕನುಗುಣವಾಗಿ ಈ ಜಿಲ್ಲೆಯ ಕೃಷಿಕ ವರ್ಗದ ಜನತೆಯಲ್ಲಿ ಕಾನೂನಿನ ಬಗ್ಗೆ ಉಂಟಾದ ಅನಿಶ್ಚಿತತೆಯ ವಾತಾವರಣವನ್ನು ಸರಿಪಡಿಸುವ ಬಗ್ಗೆ, ಸುಪ್ರೀಂ ಕೋರ್ಟಿನ ತೀರ್ಪಿನ ಪರಿಣಾಮವನ್ನು ಸರಿಯಾಗಿ ಬಿಡಿಸಿ ತಿಳಿಸುವಂತಹಾ ಪತ್ರಿಕಾ ಪ್ರಕಟನೆಯನ್ನು ಕೂಡಲೇ ನೀಡಲು ಮೈಸೂರು ಸರಕಾರವನ್ನು ಒತ್ತಾಯಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

S. C. 264/66.

ರಾಜವರ್ಮ ರೈ —ವಾದಿ.

K. ಸಂಕಪ್ಪ ರೈ, ಅರ್ಕ್ಯಭಂಟರ ಅಳಿಯ, ಪುತ್ತೂರು ತಾಲ್ಲೂಕು ವಳಮೊಗ್ರು ಗ್ರಾಮದಲ್ಲಿರುವವನ. —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ–

ವಾದಿಗೆ ಬರಕೊಟ್ಟ ಡಿ. ಪ್ರೋ. ನೋಟಿನ ಅಸ್ಲು ಬಡ್ಡಿ ಖರ್ಚುಗಳ ವಸೂಲಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾ. 16–3–67ಕ್ಕೆ ಇಟ್ಟದೆ. ಅದ್ರಿಂದ ನೀವು ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ಉಜರುಂಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

[ಕೋರ್ಟು ಹುಕುಂ ಪ್ರಕಾರ]

P. A. Ariga

Advocate for Plaintiff.

ಪುತ್ತೂರು, 16—2—1967.

ಪುತ್ತೂರು II A ಮುನ್ಸಿಫ್ ಕೋರ್ಟಿನಲ್ಲಿ

O. S. 332/66.

ಶೀಲಾರಕ್ಷ ಯಾನೆ ವಿಜಯಲಕ್ಷ್ಮಿ —ವಾದಿ

ಕುಂಞಣ್ಣ ಶೆಟ್ಟಿ ಕೂಡಾ —ಪ್ರತಿವಾದಿರು

2ನೇ ಪ್ರತಿವಾದಿ ಲಕ್ಷ್ಮಿ, 3ನೇ ಪ್ರತಿವಾದಿ ಲಕ್ಷ್ಮಣ ಶೆಟ್ಟಿ, 4ನೇ ಪ್ರತಿವಾದಿ ಮಂಜಕ್ಕ, 5ನೇ ಪ್ರತಿವಾದಿ ಬಾಲಪ್ಪ ಶೆಟ್ಟಿ ಇವರಿಗೆ—

ವಾದಿಗೆ ಬರಾ ಮೂಲಗೇಣಿ ಬಾಕಿ ರೂ. 1848–01ಕ್ಕೆ ಮಾಡಿದ ದಾವೆ ನಿಮ್ಮ ಉದಾಹರ್ಣೆಗೆ ತಾ. 27–3–67ಕ್ಕೆ ಇಟ್ಟಿರುವುದರಿಂದ ಆ ವ್ಯಾದಗೆ ನೀವು ಈ ಕೋರ್ಟು ಮುಂದೆ 11 ಗಂಟೆಗೆ ಹಾಜರಾಗಿ ಆಕ್ಷೇಪಗಳು ಇದ್ದಲ್ಲಿ ಹೇಳಿಕೊಳ್ಳದಿದ್ರೆ ನಿಮ್ಮನ್ನು ಗೈರು ಹಾಜರಿ ಮಾಡಿ ದಾವೆ ಮುಂದರಿಸಲಾದೀತು.

B/O of court.

B. Chidananda Rao.

Vakil for plaintiff.

ಪುತ್ತೂರು, ತಾ. 6—2—67.

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ರಿಜಿಸ್ಟರ್ಡ್ ಆಫೀಸು: ವಿಜಯ ಬ್ಯಾಂಕ್, ಬಿಲ್ಡಿಂಗ್, ಲೈಟ್‌ಹೌಸ್ ಹಿಲ್‌ರೋಡ್, ಮಂಗಳೂರು-3 ದ. ಕ.

<u>ಏಲಂ ನೋಟೀಸು.</u>

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ-ವ-ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 18.3.1967ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 18–3–1967ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನ: ನೋಟೀಸು ಕೊಡದನೇ ಬಹಿರಂಗ-ಯಾ- ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗ ಬಹುದಾದ ಸಕಲ ಖರ್ಚು -ವೆ- ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ತಾ. 31–12–1966 ಕ್ಕೆ ಬರತಕ್ಕ ಮೊಬಲಗು
128/64	ಬಿ. ಶೀನಪ್ಪ ಸೆಟ್ಟಿ, ಗೋವಿಂದ ಸೆಟ್ರ ಅಳಿಯ, ಬೇಳೂರು ಗ್ರಾಮ, ಪೋಸ್ಟು ಬೇಳೂರು (ಕುಂದಾಪುರ ತಾಲೂಕು)	148 = 75
79/66	ಎಮ್. ಮಹಾಬಲ ಸೆಟ್ಟಿ, ಟೀಚರ್, ಗಿರಿಜಮ್ಮ ಹೆಗ್ಡೆಯವರ ಅಳಿಯ, ಕೊಡ್ಲಾಡಿ ಮನೆ, ಮೊಳಹಳ್ಳಿ ಗ್ರಾಮ, ಪೋಸ್ಟು ಹುಣ್ಸೆಮಕ್ಕಿ (ಕುಂದಾಪುರ ತಾಲೂಕು)	67 = 10
102/66	ಎಮ್. ಕೃಷ್ಣಪ್ಪ ಸೆಟ್ಟಿ, ಅಂಕಯ್ಯ ಸೆಟ್ಟಿ ಅಳಿಯ ಕರ್ಕುಂಜೆ ಗ್ರಾಮ, ಪೋಸ್ಟು ಕರ್ಕುಂಜೆ (ಕುಂದಾಪುರ ತಾಲೂಕು, ದ. ಕ.)	166 = 65
114/66	ಬಾಬು ಯಾನೆ ಮಂಜಯ್ಯ ಸೆಟ್ಟಿ, ಪುಟ್ಟಯ್ಯ ಸೆಟ್ರ ಮಗ, ಹೊಂಬಾಡಿ ಮಂಡಾಡಿ ಗ್ರಾಮ, ಪೋಸ್ಟು ಹುಣ್ಸೆಮಕ್ಕಿ (ಕುಂದಾಪುರ ತಾಲೂಕು)	157 = 06
244/65	ಟಿ. ಗೋವಿಂದ ಸೆಟ್ಟಿ, C/o ವೆಂಕಪ್ಪ ಸೆಟ್ಟಿ, ಕೋಟೆಬೈಲು, ಕನ್ಯಾನ ಗ್ರಾಮ, ಪೋಸ್ಟು ಕಟ್‌ಬೆಲ್ತೂರು (ಕುಂದಾಪುರ ತಾಲೂಕು)	120 = 00
260/65	ಮುತ್ತಯ್ಯ ಸೆಟ್ಟಿ, ರಾಮಣ್ಣ ಸೆಟ್ರ ಅಳಿಯ, ಹೆರಂಜಾಲು ಅನಗಳ್ಳಿ ಗ್ರಾಮ, ಪೋಸ್ಟು ಹೆಂಗವಲ್ಲಿ (ಕುಂದಾಪುರ, ತಾಲೂಕು)	496 = 26

ಸ್ಥಳ: ಕುಂದಾಪುರ
ತಾ. 8—3—1967

ಕೆ. ಭಾಸ್ಕರ ಹೆಗ್ಡೆ
ಮೆನೇಜರ್

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 84/66

ಪಿ. ರವಿರಾಜ ಕಂಬಳಿ —ವಾದಿ.

ಅಹಮ್ಮದ್ ಬ್ಯಾರಿ, ಸಹಾ—ಪ್ರತಿವಾದಿರು

1) ಹಮ್ಮದ್ ಬ್ಯಾರಿ, ಉಮ್ಮರ ಬ್ಯಾರಿಗಳ ಮಗ, 2) ಹಸನೆ ಬ್ಯಾರಿ, ಹಮ್ಮದ್ ಬ್ಯಾರಿಯ ಮಗ, ಇಬ್ಬರೂ, ಬೆಳ್ತಂಗಡಿ ತಾಲ್ಲೂಕು ಬಡೆಕೊಡಿ ಗ್ರಾಮದಲ್ಲಿರುವವರು.

ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯದಲ್ಲಿ ವಾದಿಗೆ ನೀವು ತಾ. 19–1–1965ರಲ್ಲು ಬರಕೊಟ್ಟು ಪಡೆದ ಡಿ. ಪ್ರೊ. ನೋಟಿನ ಅಸಲು ಬಡ್ಡಿ ಕೂಡಾ ರೂ. 187 = 61ನ್ನು ಬರಮಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಖಲ್ಲು ಮಾಡಿದ ದಾವೆಯು ತಾ. 29—3—1967ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ರ ಸಮಯ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಿ ಉಜ್ರಾಹಿರಾ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮಿಬ್ಬರನ್ನೂ ಏಕ್ತಾ ಮಾಡಿ ದಾವೆಯನ್ನು ಮುಂದುವರಿಸಲಾದೀತು.

N. J. Kadamba

Advocate, Belthangady,

ಬೆಳ್ತಂಗಡಿ, 2—3—1967.

ಮೈ ಬೆವರಿತು

(ಎರಡನೇ ಪುಟದಿಂದ)

ಳನ್ನು ನೋಡಿದೆ. ಆದರೆ ಅವಳೆಲ್ಲಿ? ಎಲ್ಲಿಗೆ ಹೋಗಿರಬಹುದು? ಗಣೇಶನು ಬಂದಿದ್ದನೋ, ಅಥವಾ ಅವಳು ಅವನನ್ನು ಹುಡುಕಿಕೊಂಡು ಹೋದಳೋ ಮತ್ತೂ ಪ್ರಶ್ನೆಗಳೇ. ತಲೆ ತುಂಬಾ ಪ್ರಶ್ನೆಗಳು.

ಂ ಂ ಂ

'ಏನು ಬಹಳ ದೊಡ್ಡ ಯೋಚನೆಯಲ್ಲಿ ಮುಳುಗಿದಂತಿದೆಯಲ್ಲಾ," ಚಂದ್ರಾಳ ಪ್ರಶ್ನೆ ಕೇಳಿ ಆಲೋಚನಾ ಲೋಕದಿಂದ ಎಚ್ಚೆತ್ತೆನ.

'ಅಂ! ಏನಿಲ್ಲ." ನಾನೆಂದೆ.

ಅದನ್ನು ಅವಳು ನಂಬಿದಂತೆ ತೋರಲಿಲ್ಲ.

'ಊಟದ ಹೊತ್ತಾಯ್ತು.' ಅವಳು ಹೇಳಿದಳು.

'ಸ್ವಲ್ಪ ತಡವಾಗಿಯಾದರೂ ಸಾಕು.'

'ಗೀತಾಳನ್ನು ಕುರಿತು ಚಿಂತಿಸುವಿರೋ? ಇಷ್ಟು ಕಾಲದಿಂದಲೂ ಅದೇ ಚಿಂತೆಯೇ?"

ನನ್ನನ್ನು ಸಿಟ್ಟಿಗೇಳಿಸುವ ಈ ಅಸ್ತ್ರವನ್ನು ಹಲವು ಬಾರಿ ಉಪಯೋಗಿಸಿದ್ದಳು.

"ಏನು ನಾನು ಆಲೋಚಿಸ ಕೂಡದೆ? ಹಿಡುಕಿನಲ್ಲೇ ಕೇಳಿದೆ

'ಅವಳನ್ನು ನೆನಸದಿರುವುದೇ ಒಳ್ಳೆಯದು.'

ಇವಳೂ ಅವಳ ಹಾಗೇ ತೊಡಗಿರುವಳೋ? ನಾನು ಪುನಃ ಕಣ್ಣು ಮುಚ್ಚಿ ಕುಳಿತೆ. ಚಂದ್ರ ಅಡುಗೆ ಮನೆಗೆ ಹೋದಳು.

ಂ ಂ ಂ

ಚಂದ್ರಾಳನ್ನು ಮದುವೆಯಾದ ದಿನವನ್ನು ನಾನಿನ್ನೂ ಮರೆತಿರಲಿಲ್ಲ. ಗೀತಾ ನನ್ನನ್ನು ಬಿಟ್ಟು ಮೂರು ವರ್ಷ ಕಳೆದಂತಹ ದಿನವಾಗಿತ್ತು.

ಆ ದಿನ!

ವಿವಾಹ ಕಳೆದು ನಾವು ಮನೆಗೆ ತಲುಪಿದೆವು. ಸಂಜೆ ನಾಲ್ಕು ಗಂಟೆಯಾಯಿತು. ಬಂಧು ಮಿತ್ರರು ಆಗಮಿಸಿದರು. ಹೊಸ ಹೆಣ್ಣನ್ನು ಕಂಡು ನನ್ನತ್ತ ತಮಾಷೆ ಹೇಳಿ ಹೊರಟರು.

ಅವರು ಹೋಗುವುದನ್ನೇ ನಾನು ನೋಡುತ್ತಾ ಕುಳಿತೆ. ಅಂ........ಅದಾರು ಸುಂದರಿ....! ಅವಳು ಗೇಟು ದಾಟಿ ಬರುತ್ತಿದ್ದಳು. ಯಾರವಳು? ನಾನು ತದೇಕ ದೃಷ್ಟಿಯಲ್ಲಿ ನೋಡಿದೆ. ಗೀತಾ....! ನಾನು ಸ್ತಂಭೀಭೂತನಾಗಿ ಬಿಟ್ಟೆ. ಇವಳು ಇಷ್ಟು ಸುಂದರಿಯಾಗಿರುವಳೇ! ಕುತ್ತಿಗೆಯಲ್ಲಿ ಹೊಳೆಯುವ ಸರ, ಹಣೆಯಲ್ಲಿ ತಿಲಕ, ತಲೆಯಲ್ಲಿ ಗುಲಾಬಿ ಹೂ, ನಾನು ಪರಾಂಬರಿಸಿ ನೋಡಿದೆನು. ಇವಳು ಇಷ್ಟು ಮನೋಹರಿಯಾಗಿ ನಾನು ಮೊದಲು ಒಮ್ಮೆಯೂ ಕಂಡಿಲ್ಲ. ಇವಳು ಇಲ್ಲಿಗೆ ಬಂದದ್ದಾದರೂ ಯಾಕೆ? ನಾಟಕೀಯವಾಗಿ ಜೀವನದಲ್ಲಿ ಏನೆಲ್ಲಾ ಸಂಭವಿಸುತ್ತವೆ!

"ನನ್ನ ಒಂದು ಛತ್ರಿ ಇಲ್ಲಿ ಇಂಬೇಕಲ್ಲಾ...ಅದು ನನಗೆ ಬೇಕು." ಜಗಲಿಯ ಮೇಲೆ ಬಂದು ನಿಂತಳು.

ನಾನು ಅವಳ ಕಣ್ಣುಗಳನ್ನು ದುರುಗುಟ್ಟಿ ನೋಡಿದೆನು. ಅವಳನ್ನು ಹಿಡಿದು ಹೊರಗೆ ದಬ್ಬಬೇಕೆನಿಸಿತು. ಆದರೆ,ಎದ್ದು ನಿಲ್ಲಲು ಆಗಲಿಲ್ಲ. ಸ್ನೇಹದಲ್ಲೇ ಅವಳನ್ನು ಹೊರಗೆ ಕಳುಹಿಸುವುದು ಒಳ್ಳೆಯದೆಂದು ತೋರಿತು

"ಕೊಡೆ; ಇಲ್ಲಿ ಹೇಗೆ ಕಾಣಬೇಕು?' ಸ್ವರ ತಗ್ಗಿಸಿಯೇ ಕೇಳಿದೆನು.

ಗೀತಾ ಒಳಗಿನ ಕೋಣೆಗೆ ನಡೆದಳು. ಅವಳನ್ನು ನಿಲ್ಲಿಸಲು ಆಗಲಿಲ್ಲ. ನವವಧುವಿನ ಪಕ್ಕಕ್ಕೆ ತಲುಪಿದಳು.

ಜಗಲಿಯಲ್ಲೂ ಕೋಣೆಯಲ್ಲೂ ಇದ್ದವರು ಶ್ರದ್ಧಾಪೂರ್ವಕ ಇದೆಲ್ಲಾ ನೋಡುತ್ತಾ ನಿಂತಿದ್ದರು.

"ಏ ಹುಡುಗಿ, ನನ್ನದೊಂದು ಕೊಡೆ ಇಲ್ಲಿ ಇರಬೇಕು. ಇಲ್ಲಿಂದ ಬಿಟ್ಟು ಹೋಗುವಾಗ ಅದನ್ನು ಕೊಂಡು ಹೋಗಿಲ್ಲ.' ಗೀತಾ ಹೇಳಿದಳು.

ತಲೆ ಜೋತು ಹಾಕಿ ಕುಳಿತಿದ್ದ ಹೊಸ ಹೆಣ್ಣು ಇದನ್ನು ಕೇಳಿ ಗೀತಾಳನ್ನು ನೋಡಿದಳು.

'ಇನ್ನು ಅವರ ಕೆಲಸಕಾರ್ಯಗಳನ್ನೆಲ್ಲಾ ನೀನು ನೋಡಿಕೊಳ್ಳಬೇಕು. ನನಗೆ ಅದರಲ್ಲೇನೂ ಹಕ್ಕಿಲ್ಲ..." ಗೀತಾ ಮತ್ತೊಮ್ಮೆ ಉಸುರಿದಳು. ನಾಚಿಕೆಯಲ್ಲಿದ್ದಂತಹ ಚಂದ್ರಳ ಕಣ್ಣುಗಳು ಬೆಂಕಿ ಕಂಡದಂತೆ ಜ್ವಲಿಸಿದವು. ಅವಳು ಸಂಶಯದ ಹೊಂಡದಲ್ಲಿ ಬಿದ್ದು ಬಿಟ್ಟಳು. ನಾನು ಬಾಗಿಲ ಬಳಿ ಬಂದು ನಿಂತೆನು. ಆದರ, ಏನು ಮಾಡಬೇಕೆಂದೇ ತೋರಲಿಲ್ಲ.

"ಏನಿದ್ದರೂ ನನಗೆ ಇದು ಸಾಕು." ಕೋಣೆಯ ಮೂಲೆಯಲ್ಲಿದ್ದ ಛತ್ರಿಯನ್ನು ಗೀತಾಳು ತೆಗೆದಳು.

ಈ ಛತ್ರಿಯಲ್ಲೇ ನಾನೂ ಚಂದ್ರಳೂ ಮನೆಗೆ ಬಂದದ್ದು.

ಕೋಣೆಯೊಳಗೆ ಕೂಗು. ಆ ಗದ್ದಲ ಇಡೀ ಮನೆಯನ್ನೂ ತುಂಬಿತ್ತು. ಚಂದ್ರಳು ಕೂಗುತ್ತಿದ್ದಳು. ಎಲ್ಲರೂ ಆ ಕಡೆ ಓಡಿದರು. ಕೊಡೆಯೊಂದಿಗೆ ಗೀತಾಳು ಹೊರಗೆ ನಡೆದಳು.

ಈಗಲೂ ಕಳೆದು ಹೋದ ಆ ದಿನವನ್ನು ಕುರಿತು ಆಲೋಚಿಸುವಾಗ ನನಗೆ ಭಯವೆನಿಸಿತು. ಅಂದಿನ ಒಂದೊಂದು ನಿಮಿಷ! ಅಯ್ಯೋ ಯೋಚಿಸಲಾರೆ!

ಂ ಂ ಂ

'ಇದೇನು ನಿದ್ದೆ. ಗಂಟೆ ಎರಡಾಯ್ತು.' ಚಂದ್ರಾ ಕೈ ಹಿಡಿದು ಹೇಳಿದಳು. ಗೀತಾಳನ್ನು ಕುರಿತು ನೆನೆದು ಕುಳಿತಲ್ಲೇ ನಿದ್ರಿಸಿದೆನೆಂದು ಈಗ ತಿಳಿಯಿತು.

'ಇವತ್ತೇನು ವಿಶೇಷ? ಇದೇನು ಆಲೋಚನೆ. ಊಟಮಾಡಲು ಬರಬಾರದ?' ಚಂದ್ರಾ ಕರೆದಳು.

'ನಾನು ಎದ್ದು ಕೈ ತೊಳೆಯಲು ಹೊರಗಡೆ ಹೋದೆನು. ಗೇಟು ದಾಟಿ ಒಬ್ಬ ವ್ಯಕ್ತಿ ಬರುವುದನ್ನು ಕಂಡೆ. ದಯಾನಂದನೇ.

'ಏನು ದಯಾನಂದ್'

'ನಿನಗೆ ವಿಷಯ ತಿಳಿಯಿತೆ? —ಗೀತಾ ತೀರಿಹೋದಳು."

ಆತಿಥ್ಯ ನೀಡುವ

ಅಲ್ಲಾವುದ್ದೀನನ ವಿಚಿತ್ರದೀಪ

ಭಾರಿ ಹೋಟೆಲುಗಳ ಗಿರಾಕಿಗಳೆಂದರೆ ಭಾರಿ ಕೈಗಾರಿಕೋದ್ಯಮಗಳ ಮಾಲಿಕರು, ಸಿನಿಮಾ ತಾರೆಯರು, ರಾಜಕಾರಣಿಗಳು ಹಾಗೂ ಇತರ ಶ್ರೀಮಂತ ವರ್ಗದವರು. ಇವರ ಇಚ್ಛೆಗಳನ್ನು ನೆರವೇರಿಸುವುದೇ ಇವರು ತಂಗುವ ಹೋಟೆಲು ಆಡಳಿತದ ವರ್ಗದವರ ಗುರಿ. ಅದೇ "ಆತಿಥ್ಯ'ದ ಉಚ್ಚ ಆದರ್ಶ. ಅಲ್ಲಾವುದ್ದೀನನ ಅದ್ಭುತ ದೀಪದಂತೆ ಇವರ ಬಯಕೆಗಳನ್ನು ಈಡೇರಿಸುವ ಪವಾಡವೇನು?

ಅಸಾಧ್ಯವೆನಿಸುವುದನ್ನು ಗಿರಾಕಿಗಳಿಗಾಗಿ ಸಾಧ್ಯಗೊಳಿಸುವುದು ಪಾಶ್ಚಿಮಾತ್ಯ ದೇಶಗಳ ಈ ಭಾರಿ ಹೋಟೆಲುಗಳ ಸಂಪ್ರದಾಯ. ಆ ಗಿರಾಕಿಗಳೆಂದರೂ ಭಾರಿ ಶ್ರೀಮಂತ ವರ್ಗದವರು—ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಸಿನಿಮಾ ತಾರೆಯರು, ರಾಜಕಾರಣಿಗಳು, ಕೈಗಾರಿಕಾ ಮಾಲೀಕರು, ಇಲ್ಲವೆ ಮಾಜಿ ದೊರೆಗಳು. ಸಾಮಾನ್ಯರಿಗೆ ಅಸಾಧ್ಯವೆನಿಸುವ ಬಯಕೆಗಳು ಇವರಿಗೆ ಹುಟ್ಟುವುವು. ಟಿಕೆಟ್ಟುಗಳೆಲ್ಲ ಮಾರಿ ಮುಗಿದಿರುವ ಸಿನಿಮಾ ಮಂದಿರದಲ್ಲಿ ಹೊಸ ಚಿತ್ರದ ಪ್ರೀಮಿಯರ್‌ನ್ನು ನೋಡಲು ಅವರಿಗೆ ಬಯಕೆಯಾಗಬಹುದು. ಇಲ್ಲವೆ ರಾಜ ಯೋಗ್ಯವಾದ ಕೊಠಡಿಗಳನ್ನು ಮುಂಚಿತವಾಗಿ ಕಾದಿರಿಸದಯೇ ಕೊಠಡಿಗಳೊಂದೂ ಖಾಲಿಯಿಲ್ಲದಿರುವ ಭಾರಿ ಹೋಟೆಲಿಗೆ ರಾಜಕಾರಣಿ ಅಥವಾ ಮಾಜಿ ದೊರೆಯೊಬ್ಬರು ಬರಬಹುದು.

ಇಂತಹ ಸಂದರ್ಭದಲ್ಲಿ ಅಸಾಧ್ಯವೆನಿಸಬಹುದಾದುದನ್ನು ಸಾಧ್ಯಗೊಳಿಸುವುದು ಈ ಹೋಟೇಲುಗಳ ಆಡಳಿತ ವರ್ಗದವರು ಅನುಸರಿಸುತ್ತಿರುವ ಒಂದು ಸಂಪ್ರದಾಯ. ಈ ಕೆಲಸಗಳನ್ನು ನಿರ್ವಹಿಸುವುದು ಹೋಟೇಲುಗಳ ಮುಖ್ಯ ಪೋರ್ಟರುಗಳ ಹೊಣೆಗಾರಿಕೆ. ವೇಷಭೂಷಣಗಳಲ್ಲಿ ಭಾರಿ ವ್ಯಾಪಾರದ ಮ್ಯಾನೇಜರುಗಳನ್ನೋ ಇಲ್ಲವೇ ರಾಯಭಾರಿಗಳನ್ನೋ ಹೋಲುವ ಇವರು ಅಲ್ಲಾವುದ್ದೀನನ ಅದ್ಭುತ ದೀಪದಂತೆ ಅಸಾಧ್ಯವಾದುದನ್ನು ಸಾಧ್ಯಗೊಳಿಸುವರು.

ಪಶ್ಚಿಮ ಜರ್ಮನಿಯಲ್ಲಿ ಭಾರಿ ಹೋಟೆಲುಗಳ ಮುಖ್ಯ ಪೋರ್ಟರುಗಳ ಸಂಖ್ಯೆ ೧೭೦ರ ಇದೆ. ಕೆಳಗಣ ಸ್ಯಾಕ್ಸನಿ ಹ್ಯಾನೋವರ್‌ನ ರಾಜಧಾನಿ ಹ್ಯಾನೋವರ್‌ನಲ್ಲಿ ಇತ್ತೀಚೆಗೆ ಈ ಮಾಂತ್ರಿಕರ ವಾರ್ಷಿಕ ಸಭೆ ಸೇರಿತ್ತು. ಇವರೆಲ್ಲರೂ 'ಗೋಲ್ಡನ್ ಕೀಸ್' ಎಂಬ ಅಂತಾರಾಷ್ಟ್ರೀಯ ಸಂಘದ ಸದಸ್ಯರು. ವಿಶ್ವದ ೨೪೦೦ ಭಾರಿ ಹೋಟೇಲುಗಳ ಮುಖ್ಯ ಪೋರ್ಟರುಗಳು ಈ ಸಂಘದ ಸದಸ್ಯರು.

ಯುವಕ ಪೋರ್ಟರುಗಳಿಗೆ ತರಬೇತಿ ನೀಡುವುದು ಈ ವರ್ಷದ ಮುಖ್ಯ ಪೋರ್ಟರುಗಳ ಸಭೆಯಲ್ಲಿ ಚರ್ಚಿಸಲಾದ ಮುಖ್ಯ ವಿಷಯ. ಇನ್ನು ಮುಂದೆ ಮುಖ್ಯ ಪೋರ್ಟರುಗಳಿಗೆ ಮೊದಲು ಇಟಲಿ, ಅನಂತರ ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ತರಬೇತಿ ಕೊಡಬೇಕೆಂಬುದನ್ನು ಸಭೆಯಲ್ಲಿ ನಿರ್ಧರಿಸಲಾದುದಲ್ಲದೆ ಆ ಬಗ್ಗೆ ಇತರ ಯೂರೋಪು ರಾಷ್ಟ್ರಗಳ ಹೋಟೆಲು ಮಾಲಿಕರಿಗೂ ಸಲಹೆ ಕೊಡಲಾಗುವುದು.

ಕಾರ್ಯಕ್ರಮದ ಪಟ್ಟಿಯಲ್ಲಿಲ್ಲದ ಅನೇಕ ವಿಷಯಗಳನ್ನೂ ಸಭೆಯಲ್ಲಿ ಚರ್ಚಿಸಲಾಯಿತಂತೆ. ಅವಲ್ಲವೂ ನಿಗೂಢ ರಹಸ್ಯವಾದುವು. ಆದರೆ ಅವಲ್ಲವೂ ಭಾರಿ ಗಿರಾಕಿಗಳ ಬಯಕೆಗಳನ್ನೀಡೇರಿಸುವುದಕ್ಕೆ ಸಂಬಂಧಿಸಿದ ಮಾಂತ್ರಿಕ ತಂತ್ರಗಳೆಂಬುದು ಬಲ್ಲವರ ಅಭಿಪ್ರಾಯ.

ಭಾರಿ ಗಿರಾಕಿಗಳ ಅಸಾಧ್ಯ ಬಯಕೆಗಳನ್ನು ಸಾಧ್ಯಗೊಳಿಸುವುದಲ್ಲದೆ ಇತರೇ ಕುಂದು ಕೊರತೆಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳುವುದು ಇವರ ಕರ್ತವ್ಯ. ಪ್ರತಿಯೊಂದು ರೈಲುಗಾಡಿ, ವಿಮಾನ, ಹಡಗುಗಳು ಬಂದು, ಹೋಗುವ ವೇಳೆಗಳನ್ನು ತಿಳಿದಿರುವುದಲ್ಲದೆ ಟೈಮುಂತಾದವುಗಳನ್ನು ತರದೆಬರುವವರಿಗೆ ಅವನ್ನು ಸಹ ಈತ ಒದಗಿಸಬೇಕು. ಪ್ರತಿಯೊಬ್ಬ ಮುಖ್ಯ ಪೋರ್ಟರನೂ ೨—೩ ಅಥವಾ ಇನ್ನೂ ಹೆಚ್ಚಿನ ಭಾಷೆಗಳನ್ನು ತಿಳಿದಿರುವನು.

ಮುಖ್ಯ ಪೋರ್ಟರುಗಳ ಮಾಸಿಕ ವೇತನ ೭೦೦೦—೧೫೦೦೦ ಜರ್ಮನ್ ಮಾರ್ಕುಗಳು ಇಲ್ಲವೇ ೨೫೦—೩೭೫ ಡಾಲರುಗಳಾಗಬಹುದು. ಇದಲ್ಲದೆ ಅವರಿಗೆ ಟಿಪ್ಸ್ ಮುಖಾಂತರ ಎಷ್ಟು ಹಣ ದೊರೆಯುವದೆಂಬುದು ಕಾದಿರಿಸಿರುವ ಗುಟ್ಟು, ಅದು ಅವರ ವೈಯಕ್ತಿಕ ಶಕ್ತಿ ಸಾಮರ್ಥ್ಯಗಳನ್ನವಲಂಬಿಸಿದೆ.

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೇಗೆ) ಮತ್ತು ಪಂಪು ಸೆಟ್ಟುಗಳು.....

ಬ್ಲೂ ಸ್ಟೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ, ಬಲ್ಮಠ ರಸ್ತೆ, ಮಂಗಳೂರು1

NAVAYUGA 19—3—1967

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭಾರತ ಮಾತೆ

ಜಯ ಭಾರತ,
ಶಾಂತಿಯ ರಥ
ಮುನ್ನಡೆಯಲಿ, ನಡೆಯಲಿ!
ಭುವಿ, ಬಾನಿನ ಎಡೆಯಲಿ
ದಿಗ್‌ದಿಗಂತ ಗುಡಿಯಲಿ
ಭಾರತದೆದೆ ಗುಡಿಯಲಿ
ಶಾಂತಿ ಮಂತ್ರ ಮಿಡಿಯಲಿ!

ನೂರು ಬೆಟ್ಟ
ಸಾರು ಘಟ್ಟ
ತಗ್ಗು ದಿಣ್ಣೆ ದಾರಿಯು!
ಕಗ್ಗತ್ತಲೆ ಮಾರಿಯು
ತನ್ನೋ ಮಾಯೆ ಬೀರಿಯು
ಇಷ್ಟೆಲ್ಲವು ತೋರಿಯು—

ಮುಳ್ಳು ಕಲ್ಲು
ಎಲ್ಲು—ಎಲ್ಲು
ಇದ್ದರೇನು ಹಿಡಿದು ನಿಲ್ಲು!
ಇದೇ ತಾಯಿ ನುಡಿವ ಸೊಲ್ಲು
ಮಿಡಿಯಲಿ ಎದೆ—ಎದೆಗಳಲ್ಲು!
ಜಯ ಭಾರತ!
ಶಾಂತಿಯ ರಥ!
ಮುನ್ನಡೆಯಲಿ! ನಡೆಯಲಿ!
ಭುವಿ, ಬಾನಿನ ಎಡೆಯಲಿ!

ಚೀನವಿರಲಿ
ಪಾಕು ಬರಲಿ
ನಮ್ಮ ಚಕ್ರದಡಿಯಲಿ
ಮುಳಿ ಮುರಿದು ಹುಡಿಯಲಿ
ದುಷ್ಟ ಆಸೆ ಕೆಡೆಯಲಿ!
ಜಯ ನಮ್ಮದೆ ಕಡೆಯಲಿ!!

ಇಂಥಾ ರಥ
ಶಾಂತಿಯ ಪಥ
ಹಿಡಿದು, ಬಿಡದೆ ಸಾಗಿದೆ!
ಎದೆಯು ಎದೆಗೆ ತಾಗಿದೆ.
ಭೇದ ದೂರ ಹೋಗಿದೆ!

ಇರಲೊಮ್ಮತ!
ಸಹಿ ಸಮ್ಮತ.
ಸಾಗಲಿ ನಮ್ಮೀ ರಥ!
ಇದು ನಮ್ಮ ಮನೋರಥ!
ಜಯ! ಜಯ! ಜಯ! ಭಾರತ!!

—"ತ್ರಿಮೂರ್ತಿ"

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 418/1965.

ಮುರ್ಕಪ್ಪ ಶಾಮುತ್ ಪೌತಿ ಕೂಡಾ—
ವಾದಿರು.

ಗಂಗಮ್ಮ ಶೆಡ್ತಿ ಕೂಡಾ —ಪ್ರತಿವಾದಿರು.
4ನೇ ಪ್ರತಿವಾದಿ, ಶೀನಪ್ಪ ಶೆಟ್ಟಿ, ಗಂಗಮ್ಮ ಶೆಡ್ತಿಯ ಮಗ, ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಗ್ರಾಮ, P. O. Tekkatte
—ಇವರಿಗೆ

ವಾದಿಯು ಅತರ್ ಮಾಲಗೇಣಿ ರಿಡಂಪ್ಶನ್ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 28—3—1967 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ಪ್ರಕಟಣೆ ಯ ಮೂಲಕ ತಿಳಿಸಲಾಗುತ್ತದೆ.

(Sd.) K. Raghunatha Shenoy
Advocate for Plffs.
Coondapoor, 1—3—1967.

ಮದ್ರಾಸ್ 'ದಾಸಪ್ರಸಾದ'ದಲ್ಲಿ ಮಧ್ವನವಮೀ ಸಮಾರಂಭ

ಮದ್ರಾಸ್ ಪುರಶುವಾಕದಲ್ಲಿರುವ ಶ್ರೀ ಕೆ. ಸೀತಾರಾಮರಾಯರ ಸ್ವಗೃಹವಾದ 'ದಾಸಪ್ರಸಾದ'ದಲ್ಲಿ ಅವರಿಂದ ಮದ್ರಾಸ್ ಮಾಧ್ವಸಂಘದ ಪರವಾಗಿ ಇದೇ ಫೆಬ್ರವರಿ ತಾ॥ 12ರಲ್ಲಿ ಪುರಂದರ ದಾಸರ ದಿನಾಚರಣೆ ತಾ॥ 18ರ ಲ್ಲಿ ಮಧ್ವನವಮೀ ಉತ್ಸವ ಮತ್ತು ತಾ॥ 19ರಲ್ಲಿ ಅವರ ತಂದೆ ಭಕ್ತ ಶ್ರೀ ಗೋವಿಂದ ದಾಸರ ಸ್ಮಾರಕ ದಿನಾಚರಣೆಗಳು ಅತಿ ವಿಜೃಂಭಣೆಯಿಂದ ನಡೆದವು.

ಈ ಉತ್ಸವದ ಅಂಗವಾಗಿ ಮತತ್ರಯ ವಿದ್ವಾಂಸರುಗಳಿಂದ ಭೂಷಿತವಾದ ವಿದ್ವತ್ಸಭೆಯು ನಡೆಯಿತು. ತಾ 18ರಲ್ಲಿ ಉಡುಪಿಯ ಪಾಡಿಗಾರು ಶ್ರೀ ಕೇಶವಾಚಾರ್ಯರ ಮತ್ತು ತಾ॥ 19ರಲ್ಲಿ ಮೈಸೂರಿನ ಶ್ರೀ ಎಚ್. ಕೆ. ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ವಿದ್ವತ್ಸಭೆಯಲ್ಲಿ ಶ್ರೀ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು, ಶ್ರೀ ಅಡ್ಡೆ ವ್ಯಾಸಾಚಾರ್ಯರು, ಶ್ರೀ ತೇರಗುಂಡಿ ಗೋಪಾಲಕೃಷ್ಣಾಚಾರ್ಯರು ಶ್ರೀ ಆರ್ಚಕ ರಾಮಾಚಾರ್ಯರು, ಶ್ರೀ ಮಾದನೂರು ನರಸಿಂಹಾಚಾರ್ಯರು, ಶ್ರೀ ಕುಷ್ಟಗಿ ಪ್ರಹ್ಲಾದ ಆಚಾರ್ಯರು, ಶ್ರೀ ಕೆ. ಬಾಲಸುಬ್ರಹ್ಮಣ್ಯ ಶಾಸ್ತ್ರಿಗಳು, ಶ್ರೀ ರಾಮಾನುಜಾಚಾರ್ಯರು ಮುಂತಾದ ಪಂಡಿತೋತ್ತಮರುಗಳು ಶ್ರೀ ಮಧ್ವಾಚಾರ್ಯರ ಮತ್ತು ಅವರ ಗ್ರಂಥಗಳ ವೈಶಿಷ್ಟ್ಯವನ್ನು ಕುರಿತು ಬೇರೆ ಬೇರೆ ವಿಧದಿಂದ ಸಮರ್ಥಿಸಿದರು.

ತ್ರಿಮತಸ್ಥ ವಿದ್ವಾಂಸರುಗಳಿಗೆ ಉತ್ತಮ ರೀತಿಯ ಸಂಭಾವನೆಯನ್ನು ಕೊಟ್ಟ ಮೇಲೆ ಶ್ರೀ ಶ್ರೀಧರಾಚಾರ್ಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ವೈದ್ಯರಿಗೆ ಹೆಚ್ಚು ಸೌಕರ್ಯ ನೀಡಬೇಕೆಂದು ಶ್ರೀ ಟಿ. ಎ. ಪೈ.

ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವು ಕಳೆದ ತಾ. 26ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ರಿಜಿಸ್ಟ್ರಾರ್ ಡಾ॥ ಟಿ. ಮಾಧವ ಪೈಗಳು ಸ್ವಾಗತಿಸುತ್ತಾ, ವೈದ್ಯಕೀಯ ಕ್ಷೇತ್ರದಲ್ಲಿ ಈ ಕಾಲೇಜು ಸರಕಾರಕ್ಕೂ ಖಾಸಗೀ ಪ್ರಯತ್ನಕ್ಕೂ ಒಂದು ಮಾದರಿಯಾಗಿದೆಯೆಂದು ನುಡಿದರು. ಕಾಲೇಜಿನ ಡೀನ್ ಡಾ॥ ಎ. ಕೃಷ್ಣ ರಾಯರು ಕಾಲೇಜಿನ ಪ್ರಗತಿಪರ ವರದಿಯನ್ನೋದಿ ಈ ವರೆಗೆ ಈ ಕಾಲೇಜಿನಿಂದ 1137 ವೈದ್ಯಕೀಯ ಪದವೀಧರರು ತೇರ್ಗಡೆಯಾಗಿದ್ದಾರೆಂದರು. ಬಳಿಕ ಶ್ರೀ ಟಿ. ಎ. ಪೈಗಳು ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ, ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ಡಾಕ್ಟರುಗಳಿಗೆ ಹೆಚ್ಚು ಸೌಕರ್ಯ ನೀಡಬೇಕು ಅಲ್ಲದೆ, ಸೇವೆ ಸಲ್ಲಿಸುವಲ್ಲಿ ಆಸಕ್ತಿ ಹುಟ್ಟುವ ಸಲುವಾಗಿ ಅವರಿಗೆ ಆದಾಯ ತೆರಿಗೆಯಿಂದ ವಿನಾಯಿತಿ ದೊರೆಯಬೇಕೆಂದು ನುಡಿದರು.

ಮುಂದುವರಿಯುತ್ತಾ ಅವರು, ಹಳ್ಳಿಗಳಲ್ಲಿ ಇಂದು ಡಾಕ್ಟರುಗಳು ಸಾಕಷ್ಟು ಇದ್ದಾರೆ. ಹಳ್ಳಿಗಳಲ್ಲಿ ಸರಕಾರೀ ಡಾಕ್ಟರುಗಳೇ ಆಗಬೇಕೆಂಬ ನಮ್ಮ ಹಟವನ್ನು ಬಿಟ್ಟು, ಹಳ್ಳಿಗಳಲ್ಲಿ ಇರುವ ಡಾಕ್ಟರುಗಳಿಗೆ ಯೋಗ್ಯ ಸೌಕರ್ಯವನ್ನೊದಗಿಸಿ ಕೊಟ್ಟಲ್ಲಿ ಗ್ರಾಮೀಣ ಪ್ರದೇಶಗಳ ವೈದ್ಯಕೀಯ ಸವಲತ್ತಿನ ಸನ್ನಿವೇಶ ಬದಲಾಗಲು ಸಾಧ್ಯವಿದೆಯೆಂದೂ ನುಡಿದರು.

ಕೊನೆಯಲ್ಲಿ ಶ್ರೀ ಪೈಗಳು, ಈ ಸಂಸ್ಥೆಗಳನ್ನು ಕಟ್ಟಲು ಡಾ| ಮಾಧವ ಪೈಗಳು ಪಟ್ಟ ಶ್ರಮ—ಕೈಗೊಂಡ ಧೈರ್ಯದ ಹೆಜ್ಜೆಯನ್ನು ವಿವರಿಸಿ, ಅದು ಯಶಸ್ಸು ಗೊಂಡಾಗಲೂ, ಅದರ ಯಶಸ್ಸಿಯನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದ ನಮ್ಮ ಜನರ ಧೋರಣೆಗೆ ಆಶ್ಚರ್ಯ ವ್ಯಕ್ತಪಡಿಸಿದರು. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಯತ್ನ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಹತ್ವದ ಕ್ರಾಂತಿಯಾಗಿದೆಯೆಂದೂ ಅವರು ಹೇಳಿದರು.

ಕೊನೆಯಲ್ಲಿ ಪ್ರಿನ್ಸಿಪಾಲ್ ಡಾ| ಎಂ. ವಿ. ರಾಯರು ಧನ್ಯವಾದ ಸಮರ್ಪಿಸಿದರು.

ಪ್ರೇಮದೊಡವೆ

* *

ಹೇಮಗಿರಿಯಲ್ಲಿ— ನೂರು ಹೂ ಬಳ್ಳಿ
ಬಳು—ಬಳುಕಿ ಆಡಿದಾಗ!
ಹೆರೆಗೊಂದು ಹಕ್ಕಿ —ಆನಂದ ಉಕ್ಕಿ
ಸವಿಯಾಗಿ ಹಾಡಿದಾಗ!
ಬಾನಲ್ಲಿ ಇಂದು—ಹಾಲಲ್ಲಿ ಮಿಂದು
ತಾರೆಯೊಡನಾಡಿದಾಗ!
ಹೂಮರದ ಕೆಳಗೆ—ಸವಿಬಂಧದೊಳಗೆ
ಒಂದಾಗಿ ಕೂಡಿದಾಗ!
ಆ ತಂಪಿನಲ್ಲಿ— ಆ ಸೊಂಪಿನಲ್ಲಿ
ಮೈ ಮರೆತು ನಲಿಯುವಾಗ!
ಮಾತಾಡಲೆಂದು— ಸವಿಕೆಡುವುದೆಂದು
ಮೂಕಾಗಿ ಕಲೆಯುವಾಗ!
ಮಾತಧೂಳಿಳಿದು— ಮೌನವೇ ತಿಳಿದು
ಆನಂದ ತೇಲಿದಾಗ!
ಕವಿಯ ಹೊಂಗನಸು —
ನಮ್ಮೊಂದು ಮನಸು
ಕೊಳದಿ ಮೈದಾಳಿದಾಗ!
ಹವಳಗಳ ನಡುವೆ-ಮುತ್ತೊಂದನಿಡುವೆ
ಇತ್ತ ತಿರುಗೆನ್ನ ಚೆಲುವೆ!
ಉಂಟೇನೆ ಚಿನ್ನ?— ಇದಕಿಂತ ಚೆನ್ನ
ಚೆಲುವಾದ ಪ್ರೇಮದೊಡವೆ!!

—'ತ್ರಿಮೂರ್ತಿ'

ಕರ್ನಾಟಕ ಸರ್ವೋದಯ ಮಂಡಳ

ಮದರಾಸು ರಾಜ್ಯದಲ್ಲಿ ಸಂಪೂರ್ಣ ಪಾನನಿರೋಧವನ್ನು ಇನ್ನು ಮುಂದೆಯೂ ಅಚರಿಸಿಕೊಂಡು ಹೋಗುವದಾಗಿಯೂ, ಅಗ್ಗದ ಬೆಲೆಗೆ ಅಕ್ಕಿಯನ್ನು ಜನರಿಗೆ ಒದಗಿಸಲು ಪ್ರಯತ್ನಿಸುವದಾಗಿಯೂ, ಡಿ. ಎಂ. ಕೆ. ಪಕ್ಷದ ನಾಯಕರಾದ ಶ್ರೀ ಅಣ್ಣಾದೊರೈ ಅವರು 24. 4. 1967ನೆಯ ದಿನ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಇತ್ತ ಭರವಸೆಯನ್ನು ಸಂತೋಷದಿಂದ ಸ್ವಾಗತಿಸುತ್ತ ಬೆಂಗಳೂರಲ್ಲಿರುವ ಕರ್ನಾಟಕ ಸರ್ವೋದಯ ಮಂಡಳಿಯ ಅಧ್ಯಕ್ಷರು, ಭಾರತದಲ್ಲೇ ಮೊದಲು ರಾಜ್ಯದಾದ್ಯಂತ ಪಾನನಿರೋಧವನ್ನು ಜಾರಿಗೆ ತಂದ ಮದರಾಸು ರಾಜ್ಯದಲ್ಲಿ ಪಾನ ನಿರೋಧವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದು ಲಕ್ಷಾಂತರ ಬಡ ಕುಟುಂಬಗಳ ಕೃತಜ್ಞತೆಯನ್ನು ಸಂಪಾದಿಸಿ ಕೀರ್ತಿಯನ್ನು ಪಡೆಯಬೇಕೆಂದು ಶ್ರೀ ಅಣ್ಣಾದೊರೈಯವರನ್ನು ಪ್ರಾರ್ಥಿಸಿ ಪತ್ರ ಬರೆದಿರುತ್ತಾರೆ.

ಯಕ್ಷಗಾನ—'ಗಲುವಿನಕತ್ತಿ'

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ [illegible]ರಂದು ಬನಾರಿ ಶ್ರೀಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಶ್ರೀ [illegible] ಮಾಸ್ತರ್ ವಿಷ್ಣು ಭಟ್ಟ ಅವರಿಂದ ವಿರಚಿತ ಲ್ಪಟ್ಟ 'ಗೆಲುವಿನಕತ್ತಿ' ಎಂಬ ಐತಿಹಾಸಿಕ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ನಡೆಸಲ್ಪಟ್ಟಿತು.

ಶ್ರೀ ಹಳೆಮನೆ ರಾಮಯ್ಯ ಗೌಡರು ಪ್ರಸ್ತಾವನೆಗೊಳಿಸಿದ ಈ ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ರಾಮಯ್ಯ ಗೌಡರು ಧನ್ಯವಾದವಿತ್ತರು.

ಸಂಗೀತ ಸಭಾ, ಉಡುಪಿ

ಇವರ ಆಶ್ರಯದಲ್ಲಿ

ಹಿರಣ್ಣಯ್ಯ ಮಿತ್ರಮಂಡಳಿ (ಮೈಸೂರು)

ಇವರ ನವೀನ ಕ್ರಾಂತಿಕಾರಿ ಸಾಮಾಜಿಕ ನಾಟಕಗಳ ಪ್ರದರ್ಶನ.

ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯನವರು
ಪ್ರತಿ ನಾಟಕದಲ್ಲಿ ಪ್ರಧಾನ ಪಾತ್ರ ವಹಿಸುವರು
ಜಿಲ್ಲೆಯ ಉತ್ತರ ಭಾಗದಲ್ಲಿ 3 ನಾಟಕಗಳ 6 ಪ್ರದರ್ಶನ ಮಾತ್ರ

ಲಂಚಾವತಾರ ಮಾರ್ಚಿ 5, 6 ಮತ್ತು 7, 1967
ಭ್ರಷ್ಟಾಚಾರ ಮಾರ್ಚಿ 8 ಮತ್ತು 9, 1967
ಬಿಕನಾಸಿ ಮಾರ್ಚಿ 10, 1967

ಸಮಯ: ಪ್ರತಿ ದಿನ ರಾತ್ರಿ 9-30 ಕ್ಕೆ.
ಸ್ಥಳ: ಉಡುಪಿಯ ವಿ. ಜೆ. ಯು. ಕ್ಲಬ್ಬಿನ ವಠಾರದಲ್ಲಿ ರಚಿಸಲಾದ ಭವ್ಯ ರಂಗಮಂದಿರ.

ಟಿಕೇಟು ದರ: I ಕ್ಲಾಸ್: ರೂ. 5; II ಕ್ಲಾಸ್: ರೂ. 3; III ಕ್ಲಾಸ್: ರೂ. 2; IV ಕ್ಲಾಸ್: ರೂ. 1; ರಿಸರ್ವ್ಡ್ ಕ್ಲಾಸ್: ರೂ. 10; ಸೀಸನ್ ಟಿಕೇಟು (ರಿಸರ್ವ್ಡ್ ಕ್ಲಾಸ್): ರೂ. 25; ಸೀಸನ್ ಟಿಕೇಟ್ (I ಕ್ಲಾಸ್): ರೂ. 12. (ಸೀಸನ್ ಟಿಕೇಟಿನಲ್ಲಿ ಪ್ರತಿಯೊಬ್ಬರಿಗೆ ಯಾವುದೇ ಮೂರು ನಾಟಕಗಳಲ್ಲಿ ಪ್ರವೇಶವಿದೆ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

16—3—1967

೨೦
ಪೈಸೆ

ಕಥಾ ಪ್ರಪಂಚ

ಬಿಡುಗಡೆ

ಬರೆದವರು
ಶ್ರೀ ಹಳನಾಡು ಸುಬ್ರಾಯ ಭಟ್ಟ.

ಖೈದಿ ನಂಬರ್ ಇಪ್ಪತ್ತನಾಲ್ಕು—ರಮೇಶನ ಬಿಡುಗಡೆ ಅಂದಾಗಿತ್ತು. ಜೇಲು ಸೇರಿ ಹತ್ತು ವರ್ಷಗಳ ಅನಂತರ ಮತ್ತೆ ಹೊರ ಪ್ರಪಂಚವನ್ನು ಕಾಣುವ ಸುಯೋಗ ಅವನಿಗೆ ವಿಧಿ ಒದಗಿಸಿತ್ತು. ಆ ಹತ್ತು ವರ್ಷಗಳಲ್ಲಿ ಅವನ ರೂಪವೇ ಬದಲಿಸಿತ್ತು. ಮುಖದಲ್ಲಿ ಗೇಣುದ್ದ ಕೂದಲು ಬೆಳೆದಿತ್ತು. ತಲೆಯ ಕೂದಲೆಲ್ಲಾ ನರೆತು ಕಣ್ಣು ಗುಳಿಬಿದ್ದು; ದೇಹದ ಎಲುಬುಗಳೆಲ್ಲಾ ಎಣಿಕೆಗೆ ಬರುವಂತಿದ್ದುವು.

ಹೊರಡುವ ಮುನ್ನ ಅವನ ಹಳೆಯ ಬಟ್ಟೆಯನ್ನು ಒದಗಿಸಲಾಯಿತು. ನೀರು ಕಾಣದೆ ನಾರುತ್ತಿದ್ದ ಬಟ್ಟೆಯನ್ನೇ ಮತ್ತೆ ತೊಟ್ಟು ಹೊರಬೀಳಬೇಕಾಗಿತ್ತು. ಆದರೆ ಜೇಲಿನಿಂದ ಹೊರಬೀಳುವ ಖೈದಿಗಾಗುವ ಉತ್ಸಾಹ ಆನಂದ ಅವನಿಗಿರಲಿಲ್ಲ.

ಜೀವನದಲ್ಲಿ ಮೋಸ ವಂಚನೆಗೆ ಸಿಲುಕಿ ನುಚ್ಚು ನೂರಾದ ಮನ ಮತ್ತೆ ಹೊರ ಜಗತ್ತನ್ನು ಕಾಣಲು ಬಯಸದಾಯಿತು.

ಹತ್ತು ವರ್ಷಗಳ ಜೀವನದಲ್ಲಿ ಕೂಡಿ ಬಾಳಿದ ಜೇಲಿನ ಇತರ ಖೈದಿಗಳು ಹೊರ ಹೊರಟು ಹೋಗುವ ರಮೇಶನಲ್ಲಿ ತಮ್ಮ ಅಗಲಿಕೆಯ ದುಃಖವನ್ನು ತೋಡಿಕೊಂಡಿದ್ದರು. ಹೊರ ಜಗತ್ತನ್ನು ಕಾಣ ಹೊರಟ ರಮೇಶನೇ ಭಾಗ್ಯಶಾಲಿಯೆಂದು ಬಗೆದಿದ್ದರು.

ಆದರೆ ರಮೇಶನ ಅಂತರಾತ್ಮ ತಾನಿನ್ನು ಹೇಗೆ ಮುಖ ಹೊರ ಹಾಕಲಿ ಎಂದೇ ಯೋಚಿಸುತಿತ್ತು.

ಯೋಚಿಸುತ್ತಿದ್ದಂತೆ ಜೇಲಿನ ಮುಖ್ಯಾಧಿಕಾರಿಯಿಂದ ಬಿಡುಗಡೆಯ ಚೀಟಿಯೂ ಬಂತು. ಮತ್ತೆ ಆರೆಕ್ಷಣವೂ ಅಲ್ಲಿ ಉಳಿಯುವಂತಿರಲಿಲ್ಲ.

ತಾಯಿಯನ್ನು ಕಳೆದುಕೊಂಡ ತಬ್ಬಲಿ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳಲು ಆರಂಭಿಸಿದನು.

ರಮೇಶನ ವರ್ತನೆ ಅಲ್ಲಿಯ ಕಾವಲುಗಾರ ಮೂರಣ್ಣನಿಗೆ ಆಶ್ಚರ್ಯವನ್ನುಂಟು ಮಾಡಿತು.

ಎಷ್ಟೋ ಜನ ಖೈದಿಗಳು ಅವಧಿ ಮುಗಿಯುವ ಮುನ್ನವೇ ಪರಾರಿಯಾಗಲು ಹವಣಿಸುತ್ತಿದ್ದರು. ಬಿಡುಗಡೆ ಚೀಟಿ ದೊರಕಿದಾಗಲಂತೂ ಖೈದಿಗಾಗುತ್ತಿದ್ದ ಆನಂದ ಅಪರಿಮಿತ.

ಆದರೆ ರಮೇಶ ಮಾತ್ರ ಅದಕ್ಕೆ ಅಪವಾದವಾಗಿ ಕಂಡನು. ಆ ಹತ್ತು ವರ್ಷಗಳಲ್ಲಿ ರಮೇಶನ ಸಂಪೂರ್ಣ ಅನುಭವ ಮೂರಣ್ಣನಿಗಾಗಿತ್ತು. ಒಂದು ದಿನವೂ ತನ್ನ ಕೆಲಸದಲ್ಲಿ ಆಲಸ್ಯವನ್ನು ತೋರದ, ಮಾಡಿ ಮುಗಿಸುತ್ತಿದ್ದನು. ಬಿರುನುಡಿಯಾಗಲಿ; ಅವಿಧೇಯತನವಾಗಲಿ ಅವನ ಬಳಿ ಸುಳಿದಿರಲಿಲ್ಲ. ಯಾರನ್ನೂ ಯಾಚಿಸದೆ ತನ್ನಷ್ಟಕ್ಕೆ ತಾನು ಇದ್ದುಬಿಡುತ್ತಿದ್ದನು.

ಅವನ ಹಿರಿಯ ನಡತೆಯೇ ಅವನಿಗೆ ಐದು ವರ್ಷಗಳ ಶಿಕ್ಷೆ ರಿಯಾಯತಿ ದೊರಕಿಸಿ ಕೊಟ್ಟಿತ್ತು.

ಆದರೆ ಅವನಿಗೆ ಅಪ್ಪಣೆ ದೊರಕಿ ಗಂಟೆ ಒಂದಾದರೂ ಅವನು ಹೊರ ಹೊರಡಲಣಿಯಾದಂತೆ ಕಂಡು ಬರಲಿಲ್ಲ.

ಮೂರಣ್ಣ ಎಲ್ಲರ ಪಾಲಿಗೆ ಯಮನಂತಾಗಿದ್ದರೂ ರಮೇಶನ ಪಾಲಿಗೆ ಕರುಣಾಮೂರ್ತಿಯಾಗಿಯೇ ಉಳಿದಿದ್ದನು. ಮೂರಣ್ಣನ ಕೃಪೆಗೊಳಗಾದ ರಮೇಶ ಕೆಲವು ಖೈದಿಗಳ ದ್ವೇಷಕ್ಕೂ ಗುರಿಯಾಗಿದ್ದನು. ತಮ್ಮ ಪಾಲಿಗಿಲ್ಲದ ಕರುಣೆ ರಮೇಶನಿಗೆ ದೊರಕುತ್ತದೆಂಬ ಅಸೂಯೇ ಕಾರಣವಾಗಿತ್ತು. ಆದರೆ ರಮೇಶನ ಮೇಲೆ ಕೈಮಾಡಲು ಮೂರಣ್ಣನ ಭವ್ಯ ಮೂರ್ತಿಯನ್ನು ನೆನೆದು ಹಿಂದೇಟು ಹಾಕಿದ್ದರು.

ಎಷ್ಟೋ ಖೈದಿಗಳ ಬಿಡುಗಡೆಯ ದಿನ ಸಂಬಂಧಿಕರು ಅವರಿಗಾಗಿ ಹೊಸ ಬಟ್ಟೆ ತಂದು ಹೊರ ಬಾಗಿಲಲ್ಲಿ ಕಾದು ನಿಲ್ಲುತ್ತಿದ್ದರು. ಆದರೆ ರಮೇಶನಿಗಾಗಿ ಆ ದಿನ ಯಾರೂ ಬಂದಿರಲಿಲ್ಲ. ಬರುವ ಸೂಚನೆಯೂ ಇರಲಿಲ್ಲ.

ಬಿಡುಗಡೆಯಾದರೂ ಹೊರ ಹೊರಡದೆ ಅಳುತ್ತಾ ಕುಳಿತಿದ್ದ ರಮೇಶನನ್ನು ಹೊರ ಹಾಕಲು ಮೂರಣ್ಣನೇ ಸಮೀಪಿಸಿದನು.

"ಬಿಡುಗಡೆ ದೊರಕಿದರೂ ಇಲ್ಲೇಕೆ ಅಳುತ್ತಾ ಕುಳಿತಿದ್ದಿ? ಬೇಗ ಎಲ್ಲಿಂದ ಹೊರ ಹೊರಡಬೇಕು. ಇಂತಹ ಸುಸಮಯಕ್ಕಾಗಿಯೇ ಎಲ್ಲರೂ ಕಾಯುತ್ತಿರುವಾಗ ನೀನೇಕೆ ಹುಚ್ಚನಂತೆ ಅಳುತ್ತಿದ್ದಿ?" ಎಂದನು. ಒಮ್ಮೆ ದೀನ ದೃಷ್ಟಿಯಿಂದ ಅವನತ್ತ ನೋಡಿದ ರಮೇಶ. ಆ ಮುಖದಲ್ಲಿ ಮೂರಣ್ಣನಿಗೆ ಯಾವುದೋ ಅನಂತ ವೇದನೆಯ ಸುಳಿಯೊಂದು ಕಂಡಿತು. "ಬೇಗ ಇಲ್ಲಿಂದ ಹೊರಬೀಳು; ನೀನೀಗ ಸ್ವತಂತ್ರನಿರುವೆ. ಮುಂದೆ ಸಮಾಜದಲ್ಲಿ ಯೋಗ್ಯನಾಗಿ ಬಾಳು.' ಎಂದು ಹಿತೋಪದೇಶ ಹೇಳಿದನು. ಆ ಮಾತು ಕೇಳಿ ರಮೇಶನ ಮುಖದಲ್ಲಿ ತಿರಸ್ಕಾರದ ನಗೆಯೊಂದು ತೇಲಿ ಹೋಯಿತು. ಮತ್ತೆ ಗಂಭೀರನಾಗಿ ಕೇಳಿದನು—

'ಸರ್! ಮತ್ತೆ ಇಲ್ಲಿಯೇ ಉಳಿಯಲು ಸಾಧ್ಯವಿಲ್ಲವೇ?"

ಆ ಮಾತು ಕೇಳಿ ಮೂರಣ್ಣನಿಗಾಶ್ಚರ್ಯವಾಯಿತು. ಯಾರೂ ಯಾವಾಗಲೂ ಬಯಸದ ಆ ನರಕ ಸದೃಶ ಜೀವನವನ್ನೇ ಆ ಖೈದಿ ಮತ್ತೆ ಬಯಸಿದ್ದನು.

'ಯಾರೂ ಅಪೇಕ್ಷಿಸದ ಈ ಜೀವನವನ್ನು ನೀನೇಕೆ ಮತ್ತೆ ಬಯಸುವೆ? ಒಮ್ಮೆ ಬಿಡುಗಡೆ ದೊರಕಿದ ಮೇಲೆ ಮತ್ತಿಲ್ಲಿ ಉಳಿಯುವಂತಿಲ್ಲ." ಮೂರಣ್ಣನ ನುಡಿಕೇಳಿ ರಮೇಶ ಸ್ತಂಭೀಭೂತನಾದ; ಮನದಲ್ಲಿ ಅದೇನನ್ನೋ ಯೋಚಿಸುತ್ತಲೇ ಕೇಳಿದನು—

'ಹಾಗಾದರೆ ನಾನು ಇಲ್ಲಿಂದ ಹೊರಡಲೇ ಬೇಕೇನು?'

'ಹೌದು! ಕೇಳಿದ್ದನ್ನೇ ಕೇಳುತ್ತಿರುವೆಯಲ್ಲ. ನಿನ್ನ ಸಂಬಂಧಿಕರಾರೂ ಇಲ್ಲವೇ? ಯಾರೂ ನಿನ್ನನ್ನು ಕರೆದೊಯ್ಯಲು ಬಂದಂತಿಲ್ಲ.'

'ಇಲ್ಲವೆಂದೇ ಹೇಳಬೇಕು."

'ಹಾಗಾದರೆ ನಿನ್ನ ಮೊದಲಿನ ಜೀವನವೇನು?'

"ಅದನ್ನು ಕೇಳಬೇಡಿ. ಅದರಿಂದ ಇಂದು ಯಾವ ಪ್ರಯೋಜನವೂ ಸಿಗಲಾರದು.'

'ರಮೇಶ್! ನೀನೀಗ ಖೈದಿಯಲ್ಲ. ಮಿತ್ರನೆಂದೇ ಕೇಳುತ್ತಿದ್ದೇನೆ. ನಿನ್ನ ಹಿಂದಿನ ಕಥೆ ಕೇಳಬೇಕೆಂಬ ಕುತೂಹಲ ಕಾತರಬಾ ನನ್ನಲ್ಲುಂಟಾಗಿದೆ. ಅದನ್ನು ಹೇಳುವುದರಿಂದ ನಿನ್ನ ಮನಸ್ಸಿಗೂ ಸ್ವಲ್ಪ ಸಮಾಧಾನ ಸಿಗಬಹುದು.' ಎಂದನು.

ಹತ್ತು ವರ್ಷಗಳಲ್ಲಿ ಅವರಿಬ್ಬರಲ್ಲಿ ಅಷ್ಟೊಂದು ಸಂಭಾಷಣೆ ನಡೆದದ್ದು ಅದೇ ಮೊದಲಾಗಿತ್ತು.

"ಹಾಗಾದರೆ ಹೇಳಲೇ ಬೇಕೇನು? ಅದನ್ನು ಕೇಳಿಯಾದರೂ ಮತ್ತೆ ನಾನು ಇಲ್ಲಿ ಇರಲು ಬಯಸಿದ್ದು ನ್ಯಾಯವೆಂದೇ ನಿಮ್ಮ ಮನಸ್ಸಿಗೆ ಹೊಳೆದರೆ ನಾನಾಗ ಧನ್ಯನೆಂದೇ ತಿಳಿಯುವೆ." ಎಂದನು.

'ನಿನ್ನ ಕಥೆ ಕೇಳಲು ನನಗಿಷ್ಟೊಂದು ಆಸೆ ಉಂಟಾಗಿರುವುದು ಯಾಕೆಂದೇ ನನಗೆ ತಿಳಿಯುತ್ತಿಲ್ಲ. ನಾನಿಷ್ಟರ ವರೆಗೆ ಯಾರೊಡನೆಯೂ ಇಷ್ಟೊಂದು ಗೆಳೆತನ ಬಯಸಿದವನಲ್ಲ. ನಿನ್ನ ಕಥೆ ಬೇಗ ಹೇಳಿ ಮುಗಿಸಿಬಿಡು.' —ಎಂದು ಮೂರಣ್ಣ ಖೈದಿಯ ಹಾಸಿಗೆ ಮೇಲೆಯೇ ಕುಳಿತನು. ರಮೇಶ ಕ್ಷಣಕಾಲ ಕಣ್ಮುಚ್ಚಿ ಯೋಚಿಸಿದನು. ಆ ಮೇಲೆ ಮೆಲ್ಲ ಹೇಳಹೊರಟನು.

"ಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು. ನಾನಾಗ ಸರಕಾರಿ ನೌಕರಿಯಲ್ಲಿದ್ದೆ. ಅಂದು ಒಬ್ಬಂಟಿಗನಾದ ನನ್ನ ಜೀವನಕ್ಕೇನೂ ಕೊರತೆಯಿರಲಿಲ್ಲ. ಕೆಲಸಕ್ಕೆ ಸೇರಿ ಎರಡೇ ವರ್ಷಗಳಲ್ಲಿ ಎಲ್ಲರಂತೆ ನಾನೂ ಸಂಸಾರಿಯಾದೆ. ನನ್ನ ಮೊದಲ ಹೆಂಡತಿ ನಿಜವಾಗಿಯೂ ನನ್ನ ಜೀವನಕ್ಕೊಂದು ಮೆರಗು ಹಚ್ಚಿದ್ದಳು. ಇದ್ದುದರಲ್ಲಿಯೇ ಅಚ್ಚುಕಟ್ಟು ತನದಿಂದ ಮನೆಯನ್ನು ನಡೆಸಿಕೊಂಡು ಹೋಗುತ್ತಿದ್ದಳು. ಒಂದೇ ವರ್ಷದಲ್ಲಿ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಮತ್ತೆ ನಮಗೆ ಮಕ್ಕಳಾಗಲಿಲ್ಲ. ಇದ್ದೊಬ್ಬ ಮಗನನ್ನು ಅತಿ ಮುದ್ದಾಗಿಯೇ ಬೆಳೆಸಿದೆವು. ಚುರುಕಾದ ಹುಡುಗ ಶೇಖರ. ಅವನ ಅಂದ ಚೆಂದ ನೋಡಿ ನಾವಿಬ್ಬರೂ ಅವನಿಗೆ ಮಾರುಹೋಗಿದ್ದೆವು.

ಸುಖದ ದಿನಗಳು ಉರುಳಿದುದೇ ಅರಿವಾಗಲಿಲ್ಲ. ಹೈಸ್ಕೂಲಿನಲ್ಲಿ ಕಲಿಯುತ್ತಿದ್ದ ಶೇಖರನಿಗಾಗ ಹದಿನಾರರ ಹರೆಯ. ಪೆಗನ ಭವ್ಯತನವನ್ನು ಕಾಣುತ್ತಿದ್ದ ನಮ್ಮ ಪಾಲಿಗೊಂದು ದುರ್ದಿನ ಒದಗಿ ಬಂತು.

ನನ್ನಾಕೆ ಪಾರ್ವತಿ ಇದ್ದಕ್ಕಿದ್ದಂತೆಯೇ ಒಂದು ರಾತ್ರಿ ವಾಂತಿಭೇದಿಯಿಂದ ನಮ್ಮಿಬ್ಬರನ್ನು ಅಗಲಿ ಕಾಣದೂರಿಗೆ ಸಾಗಿ ಹೋದಳು."—ಎಂಬಾಗ ಕಣ್ಣುಗಳೆಡೆಯಿಂದ ನೀರು ಕೆಳಗಿಳಿದುದನ್ನು ಬಟ್ಟೆಯ ತುದಿಯಿಂದ ಉಜ್ಜಿ ತೆಗೆದು ತನ್ನ ಕತೆ ಮುಂದುವರಿಸಿದನು.

'ಮನೆ ಶ್ಮಶಾನದಂತಾಯ್ತು. ಶೇಖರ ದಿನವೂ ತಾಯಿಗಾಗಿ ಹಂಬಲಿಸಿ ಮರುಗುತ್ತಿದ್ದ. ನನಗಂತೂ ಮಂಕು ಕವಿದಂ

(ಹದಿನ್ನೆದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಫೋನ್:77
ಕುಂದಾಪುರ, ದ. ಕ.

ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್.ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೨೯	೧೩—೩—೧೯೬೭	No. 29

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ಪ್ರಾದೇಶಿಕ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣಗಳನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಕೊಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕೇರಳವು ತನ್ನ ನೌಕಾ ನೆಲೆಯ ಕೇಂದ್ರಕ್ಕಾಗಿ ಅಮೆರಿಕೆಯಿಂದ ಆಯಾತ ಮಾಡಿಕೊಂಡ ಕೋಳಿಮೊಟ್ಟೆಗಳನ್ನು ಬೊಂಬಾಯಿಯಿಂದ ವಿಮಾನ ಮೂಲಕ ಕಳಿಸುವುದರಲ್ಲಿ ಮಗ್ನರಾದ ಶಾಂತಿದಳದ ಸ್ವಯಂಸೇವಕರು.

ಒಮ್ಮತ ಸಾಧ್ಯವಾಯಿತು

ಭಾರತದ ಸಾರ್ವತ್ರಿಕ ಚುನಾವಣೆಗಳ ಬಿಸಿಯು ವಾತಾವರಣದ ಲೋಕ ಸಭೆಯ ಕಾಂಗ್ರೆಸ್ ಪಕ್ಷದ ನಾಯಕನ ಆಯ್ಕೆಯೊಂದಿಗೆ ತಣ್ಣಗಾಯಿತು ಎಂದರೆ ವಿಸ್ಮಯವೇನಲ್ಲ. ಸಚಿವ ಸಂಪುಟದಲ್ಲಿ ಯಾರ್ಯಾರಿರುವರು, ಲೋಕಸಭಾಧ್ಯಕ್ಷರು ಉಪಾಧ್ಯಕ್ಷರು ಯಾರಾಗುವರು ಎಂಬ ಪ್ರಶ್ನೆಗಳು ಗೌಣ. ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಆಯ್ಕೆ ಮಾತ್ರ ಮುಂದಿನ ಹಾಗೂ ಕೊನೆಯ ಅಂಕ. ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ನಾಕಸ್ತ್ಯ ಕುತೂಹಲ ಕೆರಳಿಸಿದ ಪ್ರಶ್ನೆಯೊಂದೇ — ಭಾರತದ ಮುಂದಿನ ಪ್ರಧಾನಿ ಯಾರು ಎಂಬುದು. ಕಳೆದ ಮೂರು ವರ್ಷಗಳಲ್ಲಿ ಮೂರು ಬಾರಿ ಇಂತಹುದೇ ಸವಾಲನ್ನು ಎದುರಿಸಿದ ಪ್ರಜಾಪ್ರಭುತ್ವವಾದಿ ಭಾರತವು ಮೂರು ಬಾರಿಯೂ ತನ್ನ ಗೌರವವನ್ನು ಉಳಿಸಿಕೊಂಡಿತು. ತೊಡಕಿನದಾದ ಪ್ರಸಂಗವನ್ನು ಧೈರ್ಯದಿಂದ ಎದುರಿಸಿತು.

ಸಾರ್ವತ್ರಿಕ ಚುನಾವಣೆಗಳು ನಡೆಯುವುದಕ್ಕೆ ಮೊದಲೇ ಈ ಪ್ರಶ್ನೆ ಉದ್ಭೂತವಾಗಿತ್ತು. ಫಲಿತಾಂಶ ಪ್ರಕಟವಾಗುತ್ತ ಬಂದ ಹಾಗೆ ಈ ಅಂಕುರ ಬೆಳೆಯಿತು. ಲೋಕಸಭೆಯಲ್ಲಿ ಬಹುಮತ ಗಳಿಸಿದ ಮೇಲಂತೂ ಮೇಲಾಟ ಭರದಿಂದಲೇ ಆರಂಭಿಸಿತು. ತಾನು ನಾಯಿಕೆಯಾಗಿದ್ದವಳು; ಚುನಾವಣೆಯಲ್ಲಿ ತಾನೂ ತನ್ನ ಪಕ್ಷವೂ ಬಹುಮತ ಗಳಿಸಿದುದರಿಂದ ಮತ್ತೆ ತಾನು ಪುನರಾಯ್ಕೆ ಬಯಸುವುದು ಅಪಥವಲ್ಲವೆಂದು ಶ್ರೀಮತಿ ಇಂದಿರಾ ಗಾಂಧಿಯವರು ಅಭಿಪ್ರಾಯಪಟ್ಟರು. ಪ್ರಜಾಪ್ರಭುತ್ವದ ಉಳಿವಿಗಾಗಿ ತಾನೂ ಸ್ಪರ್ಧಿಸುವ ಬಗ್ಗೆ ವಿಚಾರ ಮಾಡಬಹುದೆಂದು ಶ್ರೀ ಮುರಾರ್ಜಿ ಅಂದರು. ಕಳೆದ ವರ್ಷ ಇಬ್ಬರೊಳಗೆ ಸ್ಪರ್ಧೆ ನಡೆದದ್ದನ್ನೂ ಮುರಾರ್ಜಿ ಅಲ್ಪಮತ ಪಡೆದದ್ದನ್ನೂ ನೆನೆಯಬಹುದು. ಆದರೆ, ಮುರಾರ್ಜಿ ಗೆದ್ದು ಬರುವ ಉದ್ದೇಶದಿಂದ ಸ್ಪರ್ಧಿಸುವುದಲ್ಲ; ತತ್ವಕ್ಕಾಗಿ, ಪ್ರಜಾಪ್ರಭುತ್ವದ ನೆಮ್ಮದಿಗಾಗಿ. ಆದರೆ, ಅವಿರೋಧ ಆಯ್ಕೆಯಾಗಬೇಕು ಎಂಬ ಬೇಡಿಕೆ ಹಿರಿಯ ನಾಯಕರೆನ್ನಿಸುವವರಿಂದ ಒಂದೇ ಸಮನೆ ಬರತೊಡಗಿತು. ಪ್ರಧಾನಿ ಪಟ್ಟಕ್ಕೆ ಅವಶ್ಯವಾದ ಗುಣಗಳು ತನ್ನಲ್ಲಿವೆ ಎಂದು ತನ್ನ ನಂಬಿಕೆ—ಎಂದ ಮುರಾರ್ಜಿಯವರು ಸ್ಪರ್ಧಿಸುವುದು ನಿಶ್ಚಿತವಾಯಿತು. ದಹಲಿಯಲ್ಲಿ ಕಾಂಗ್ರೆಸ್ ನಾಯಕರಾಗಿ ಸೇರಿದಾಗ ಈ ಸಂಬಂಧದ ಹೆಚ್ಚಿನ ಚಟುವಟಿಕೆಗಳು ನಡೆದುವು. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ತನ್ನ ಮಾಮೂಲು ಪ್ರವಾಸ ಕೈಗೊಂಡರು. ಭೇಟಿಯಾಗ ಬೇಕೆಂದವರನ್ನು ಭೇಟಿ ಮಾಡಿದರು—ಒಂದಲ್ಲ ಹಲವು ಬಾರಿ. ಸಲಹೆ ಕೇಳಿಕೊಂಡರು— 'ಒಮ್ಮತದ ಆಯ್ಕೆ ಇಂದಿನ ದಿನಗಳಲ್ಲಿ ಬೇಕು' ಎಂಬುದು ಬಹು ಜನರ ಕೇಳಿಕೆಯಾಗಿತ್ತಾದುದರಿಂದ—ಇದು ಒಳ್ಳೆಯ



ಶ್ರೀಮತಿ ಇಂದಿರಾ ಗಾಂಧಿ

ದೇ. ಕೆಟ್ಟದೇ ಆ ಮಾತು ಬೇರೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಬಹುಮತದ್ದೇ ಗೆಲುವು—ಇದಕ್ಕಾಗಿ ಕೊನೆಯ ಗಳಿಗೆಯ ತನಕವೂ ಪ್ರಯತ್ನ ಸಾಗಿತು. ಮುರಾರ್ಜಿ—ಇಂದಿರಾ—ಕಾಮರಾಜರ ನಡುವೆ ವಿಚಾರ ವಿನಿಮಯವೇನೋ ನಡೆಯಿತು —ಆದರೆ ನಿರ್ಧಾರಕ್ಕೆ ಬರಲಾಗಲಿಲ್ಲ—ಅಂದರೆ, ಸ್ಪರ್ಧೆ ಅನಿವಾರ್ಯವಾಯಿತು. ಮುರಾರ್ಜಿ ತನ್ನ ನಿರ್ಧಾರವನ್ನು ಪ್ರಕಟಿಸಿದರು. ಹೀಗಾದರೂ ಕಾಮರಾಜರು ಸುಮ್ಮನಿರಲಿಲ್ಲ. ತನ್ನ ಕರ್ತವ್ಯ ಮುಂದುವರಿಸಿದರು—ಲೋಕಸಭಾ ಸದಸ್ಯರಿಗೆ ನಾಯಕನಾಯ್ಕೆಯ ಬಗ್ಗೆ ಮಾಡುವ ವಿನಂತಿಪತ್ರವನ್ನು ತಡೆಹಿಡಿಯಬೇಕೆಂಬ ಅವರ ಬೇಡಿಕೆಯನ್ನು ಮನ್ನಿಸಿದರು ಮುರಾರ್ಜಿ. ಅಂತೂ ಕೊನೆಯ ಗಳಿಗೆಯಲ್ಲಿ ಒಮ್ಮತ ಸಾಧ್ಯವಾಯಿತು. ಶ್ರೀಮತಿ ಗಾಂಧಿಯವರೇ ಮುಂದಿನ ನಾಯಿಕೆಯಾಗಿ ಪುನರಾಯ್ಕೆಗೊಂಡರು.

ಇದರ ರಹಸ್ಯವೇನು? ಹೊರಬಂದ ವರದಿಗಳಂತೆ ಮುರಾರ್ಜಿ ಭಾಯಿಯವರು ಉಪಪ್ರಧಾನಿಯಾಗಿ ಬಂದು ಮಹತ್ವದ ಖಾತೆಯನ್ನೆ (ಅದು ಅರ್ಥ ಖಾತೆಯೆಂದು ಹಲವರ ಅಂಬೋಣ) ನೋಡಿಕೊಳ್ಳುವರು. ಸಂಪುಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆಯುವರು. ಪಕ್ಷೀಯ ಸಭೆಗಳ ಅಧ್ಯಕ್ಷಸ್ಥಾನವನ್ನು ವಹಿಸುವರು. ಪ್ರಧಾನಿ—ಉಪಪ್ರಧಾನಿಗಳ ನಡುವೆ ಯಾವುದೇ ಅಧಿಕಾರ ವಿಭಜನೆಯಿಲ್ಲ; ದ್ವಿಮುಖ ಆಡಳಿತಕ್ಕೆ ಅವಕಾಶವೇ ಇಲ್ಲ. ತನ್ನ ಸಂಪುಟ ರಚನೆ ಮಾಡಲು ಪ್ರಧಾನಿಯವರು ಸ್ವತಂತ್ರರಿದ್ದಾರೆ. ಹಾಗಾದರೆ, ಇವರಿಬ್ಬರೊಳಗಿನ ಸ್ಪರ್ಧೆ ಮೇಲಾಟ ಯಾಕೆ? ಮುರಾರ್ಜಿ ದೇಸಾಯಿಯವರಿಗೂ ಅಧಿಕಾರದ ಅಮಲು ಹಿಡಿಯಿತೇ ಎಂದು ಕೆಲವರು ಕೇಳಬಹುದು. ಆದರೆ, ಮುರಾರ್ಜಿಯವರನ್ನು ದೂರವಿರಿಸುವುದು ಇಂದಿನ ಸರಕಾರಕ್ಕೆ ಕ್ಷೇಮವಲ್ಲವೆಂಬುದು ಇನ್ನು ಹಲವರ ಅಭಿಪ್ರಾಯ ಹಿಂದೆ. ಇದ್ದ ಉಪಪ್ರಧಾನಿ ಹುದ್ದೆಯನ್ನು ಮತ್ತೆ ಆರಂಭಗೊಳಿಸಿದುದು ಅಪರಾಧವೇನೂ ಅಲ್ಲ. ಆರಂಭದಲ್ಲಿ ಇಂದಿರಾಜಿ ಇದಕ್ಕೆ ತನ್ನ ಒಪ್ಪಿಗೆನೀಡಲಿಲ್ಲವೆಂದೂ ಮುರಾರ್ಜಿ ಗೃಹ ಖಾತೆಯನ್ನೇ ಬಿಗಿಹಿಡಿದಿದ್ದರೆಂದೂ ಸುದ್ದಿ. ಉಭಯ ನಾಯಕರೂ ತಮ್ಮ ತಮ್ಮ ನಿಲುವಿನಿಂದ ದೂರ ಸರಿಯುವಂತೆ ಮಾಡುವಲ್ಲಿ ಶ್ರೀ ಕಾಮರಾಜರ ಪ್ರಯತ್ನ ಸಫಲವಾದುದು—ಚುನಾವಣೆಯಲ್ಲಿ ಸೋತರೂ—ಅವರು ಉತ್ತಮ ರಾಜಕಾರಣಿ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿತು. ಇಂದಿರಾ—ಮುರಾರ್ಜಿಯವರ

ಶ್ರೀ ಮುರಾರ್ಜಿ ದೇಸಾಯಿ

ಮುಖಗಳು ಒಂದೆಡೆಗೆ ಕೇಂದ್ರೀಕೃತವಾಗಬೇಕು—ದೇಶಹಿತದಷ್ಟು. ತನ್ನ ಸಂಪೂರ್ಣ ಸಹಕಾರ ನೀಡಲು ಭರವಸೆ ನೀಡಿದ ಮುರಾರ್ಜಿ—ಸಹಾಯ ಬಯಸಿದ ಇಂದಿರಾಜಿ—ಇರ್ವರಿಗೂ ಅಭಿನಂದನೆಗಳು.

(ಹದಿನಾಲ್ಕನೇ ಪುಟ ನೋಡಿರಿ)

ವಚನ ಸುಧೆ

ಧರ್ಮಾರ್ಥಾಯಃ ಪರಿತ್ಯಜ್ಯ
ಸ್ಯಾದಿಂದ್ರಿಯವಶಾನುಗಃ|
ಶ್ರೀಪ್ರಾಣಧನದಾರೇಭ್ಯಃ
ಕ್ಷಿಪ್ರಂ ಸ ಪರಿಹೀಯತೇ||

ಧರ್ಮ ಮತ್ತು ಅರ್ಥಗಳನ್ನು ತ್ಯಾಗಮಾಡಿ, ಇಂದ್ರಿಯವಶವಾಗುವವನು ಶೀಘ್ರದಲ್ಲಿಯೇ ಸಂಪತ್ತು, ಪ್ರಾಣ, ಕುಟುಂಬವೆಲ್ಲವುಗಳಿಂದಲೂ ಕೈ ತೊಳೆದುಕೊಳ್ಳುತ್ತಾನೆ.

ವರಸಣ್ಣನ ಸರಸ

'ಕೊನೆಗೂ ಇಂದಿರಾಜಿಯೇ ಗೆದ್ದರು..'
'ಅಲ್ಲ, ಮುರಾರ್ಜಿ ಗೆದ್ದರು....'
'ಏಕೆ?'
'ಸ್ಪರ್ಧೆಯಲ್ಲಿ ಮುರಾರ್ಜಿ ಗೆಲ್ಲುತ್ತಿದ್ದಿಲ್ಲ; ಈಗ ಸ್ಪರ್ಧೆಯಿಲ್ಲದೇನೇ ಅವರು ಗೆದ್ದರಲ್ಲಾ...'

ಮೂರು

ಗೇಹರಾಜ್ಯದಲ್ಲಿ
ದ್ರಾಕ್ಷಿ ಎಟುಕಿಲ್ಲಾಂತ ಬಳ್ಳಿಯನ್ನ ಅಲ್ಲಾಡ್ಸೋದೆ?

"ಕೇಳಿದ್ರ್ಯಾ?"

"ಏನು?"

"ಇನ್ನೆಂಥದು? ನಿಮ್ಮ ಟೋಪಿಯವ್ರೆಲ್ಲ ಅಂತರ್ಲಾಗ ಹಾಕಿದವ್ರಂತ...:

'ಅಂದ್ರೆ?"

"ಅಂದ್ರೆ ಏನು? ರಾಜ್ಯಗಳಲ್ಲಿ ಅಧಿಕಾರವನ್ನು ಅವರ ಕಪಿಮುಷ್ಟಿಯಿಂದ ಬಿಡುಗಡೆಯಾದುವು. ಮುಂದಿನ ಬಾರಿ ಉಳಿದ ರಾಜ್ಯಗಳಿಂದಲೂ ಕೇಂದ್ರದಿಂದಲೂ ಕಾಂಗ್ರೆಸ್ಸಿನ ಉಚ್ಚಾಟನೆಯಾಗುವುದು ಖಂಡಿತ ಅನ್ನುತ್ತಾರೆ ಎಲ್ಲವರೂ...."

'ಹ್ಞಾಂ, ಇರಬಹುದೂನ್ನು. ಆದರೂ ಜಪಿಸಬಹುದು..."

"ಏನು, ಭಾರಿ ಮೆತ್ತಗಾಗಿ ಆದರೂ ಆಗಬಹುದೂಂತ ಸ್ವರ ಸೇರಿಸುತ್ತೀರಿ?"

'ಮತ್ತೆ ಮಾತುವುದಾದರೂ ಏನು?'

"ಅಂತೂ ನೀವು ಆಸವಾಯಿಕರೂಂತ ಈಗಲಾದರೂ ಒಪ್ಪಿಕೊಂಡಿರಲ್ಲಾ..."

"ಹಾಗೇನೂ ಇಲ್ಲಾನ್ನು. ನೀನು ಖಂಡಿತ ವಾಕ್ಯನ್ನ ಅಧಿಕಾರವಾಣಿಯಿಂದ ಆಡುತ್ತಿರುವಾಗ ನಾನು ಅನ್ನೋದಾದ್ರೂ ಏನು?'

'ಅಂದ್ರೆ, ನನ್ನ ಮಾತ್ನಲ್ಲಿ ಹುರುಳಿಲ್ಲಾಂತ ಅನ್ನೋದೆ?'

"ನೋಡು, ಕರ್ನಾಟಕದಲ್ಲಿ ಕಾಂಗ್ರೆಸ್ಸು ೧೫೦ ಸ್ಥಾನ ಗೆಲ್ಲುತ್ತದೆ ಅಂತ ಖಂಡಿತ ನುಡಿದಿದ್ದರು..."

'ಈಗ ಖರೇ ೧೨೭ ಗೆದ್ದಿತೂನ್ನಿ....'

'ಮತ್ತೆ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ಸನ್ನು ಸದೆಬಡಿದು ಜನಸಂಘ ಅಧಿಕಾರ ಪಡೆಯುತ್ತೇಂತ ಡಂಗುರ ಸಾರ್ಸಿದ್ರು...."

'ಅಲ್ಲಿ ಅವ್ರಿಗೆ ೭೮ ಸ್ಥಾನ ಗಳಿಸಬೇಕಾದ್ರೆ ಸಾಕೋಬೇಕಾಗಿ ಬಂತು...."

'ಅಷ್ಟು ಮಾತ್ರವಲ್ಲ, ಕಾಂಗ್ರೆಸ್ಸು ೨೯೭ರಲ್ಲಿ ೧೬೭ ಸ್ಥಾನ ಹೊಂದಿದೆ, ಮತ್ತೆ ಅಧಿಕಾರಕ್ಕೆ ಬಂದಿದೆ........ಇನ್ನು ರಾಜಸ್ಥಾನದಲ್ಲಿ...'

"ಹೌದ್ರಿ, ಅಲ್ಲೇನೋ ಗೋಳಿಬಾರು—ಕರ್ಫ್ಯೂ ಹಾಗೆ ಹೀಗೇಂತ ಅನ್ನುತಿದ್ರು...."

"ಅಯ್ಯೋ, ಅದೆಲ್ಲಾ ಕೇಳಬೇಡ...."

"ಯಾಕೆ? ಏನಾಯ್ತು?"

'ಒಟ್ನಾರೆ ಎಂಥದು? ಅಲ್ಲ, ನಂಯಷ್ಟು ಬುದ್ಧಿಯಿಲ್ಲ ಅವ್ರಿಗೆ...."

'ಅಂದ್ರೆ, ಎಂಥದು ಹೇಳಿ...ಪೂರಾ ಹೇಳಿ..."

'ಹೇಳೋದಕ್ಕೇನೂ ಅಡ್ಡಿಯಿಲ್ಲ. ಮತ್ತೆ ಎಲ್ಲಾ ಕೇಳಿದ್ಮೇಲೆ ನೀನೂ ನಿನ್ನ ಕೊಂಕುಕಾರಣ ಮುಂದಿಟ್ಟು ವಾದಕ್ಕೆ ನಿಲ್ಲಬಾರ್ದು....'

'ಅಯ್ಯೋ, ಏನಪ್ಪಾ, ಇಂದು ವಾದಕ್ಕೆ ಹೆದರೋದು?'

'ವಾದಕ್ಕೆ ಹೆದರೋ ಆಸಾಮಿಯಿಡಲ್ಲಾಂತ ಲೋಕಕ್ಕೇನೇ ಗೊತ್ತೂನ್ನು. ಅದ್ರೂ ಯಾಕೆ ನಪ್ಗೇಂತ....'

'ಹ್ಞಾಂ.... ಆಯ್ತೂನ್ನಿ.... ಹೇಳಿ...'

'ಸರಿ ಹಾಗಾದ್ರೆ ಕೇಳು....ರಾಜಸ್ಥಾನ ಅಂದ್ರೆ...

'ರಾಜಸ್ಥಾನ ಎಂಬತಕ್ಕದ್ದು....'

'ಭಾರಿ ಆಯ್ತಲ್ಲಾ....ಶುಪ್ಪಾಂತಂದ್ರೆ ಘ್ಯತಾಂತ ಹೇಳುತ್ತಾರೆ. ನಿನ್ಗೆ ಹಾಗನ್ನೋಕೂ ಬರೋಲ್ಲಾನ್ನು...'

'ಅಲ್ರಿ, ನಿಮ್ಮ ಮಾತು ಕೇಳಿದಾಗ, ಪಕ್ಕನೆ ನೆನಪಿಗೆ ಬಂತು...'

'ಬಾರ್ದಿ ಏನೆ? ಬರುತ್ತೆ ಬರುತ್ತೆ...'

'ಎಂಥದು?'

'ನೆನಪು...'

'ಅಷ್ಟೇನೆಯೇ? ನಾನು ಏನೋ ಎಂಥದೋತ...."

'ಹೌದು ಹೌದು. ಏನು ಎಂಥದು ಎಲ್ಲಿ..."

"ಸರೀರಿ—ಸ್ವಲ್ಪ ಇಲ್ಲಿ ಕೇಳಿ....ನೋಡಿ, ಮೊನ್ನೆ ಪೇಟೆಗೆ ಹೋಗ್ತಾ ಇದ್ದೆ.?

'ಹ್ಞಾಂ....ಮೊನ್ನೇಂತೇನು? ನಾವು ಪೇಟೆಗೆ ಹೋಗದ ದಿನವಾದರೂ ಇದೆಯೇಂತ?'

'ನೋಡಿ, ಫೀವು ಮಾತಿನ ನಡುವೆ ಮಾತಾಡಿದ್ರೆ ಹೇಗೆ? ಬಂದ ನೆನ್ಪು ಹಾರಿ ಹೋಗುತ್ತೆ...'

'ಅಯ್ಯೋ...ಹಕ್ಕಿ ಬಂದಿತ್ತು ಅಂಗಳದಲ್ಲಿ! ಆ ಕ್ಷಣ ಹಾರಿಯೇ ಹೋಯಿತ್ತು ಅಲ್ಲಿ....'

'ಎಲ್ಲಿ?'

"ಅಲ್ಲ..."

"ಕಾಣೊಲ್ಲ'

"ಹೇಗೆ ಕಾಣುತ್ತೆ? ಕಣ್ಣು ಕಂಡರೆ ತಾನೇ ಕಾಣೋದು.... ಅದಿರ್ಲಿ.... ಈಗ ಹೇಳು ನಿನ್ನ ನಾರೀ ಪುರಾಣ..."

'ಅಬ್ಬ ದೇವ್ರೆ, ನನ್ನ ಮಾತೂಂತಂದ್ರೆ ಅದು ಪುರಾಣವಾಗಿ ಹೋಯ್ತಲ್ಲಾ...'

'ಪುರಾಣಾಂತಂದ್ರೆ ಯಾಕೆ ಕಣ್ಣು ಕೆಂಪಗೆ ಮಾಡ್ತೀಯ? ಭಗವಾನ್ ವೇದವ್ಯಾಸರು ಪುರಾಣಗಳಿಂದಲೇ ಅವಧೂರರಾದವರು. ಶ್ರೀ ಭಗವಂತನೂ ಪುರಾಣಪುರುಷ..."

'ಅಂದ್ರೆ, ನಾನೂ ಅಮರಳಾಗಬೇಕೆಂದು ನಿಮ್ಮಿಚ್ಛೆಯೆ?"

"ಅಯ್ಯೋ, ಹಾಗ ನಾನೆಲ್ಲಾದರೂ ಅಂದೇನೆ?"

"ಅಂದ್ರೆ ನಿಮಗೆ ನಾನು ಅಮರಳಾಗಬೇಕೆಂಬಾಶೆಯಿಲ್ಲ....ಸರಿಬಿಡಿ— ಪೂರಾ ಗೊತ್ತಾಯ್ತು. ನಿಮ್ಮ ಪುರುಷ ಜಾತಿಯೇ ಹಾಗೆ, ಹಿಂದಿನಕಾಲದಿಂದಲೂ ನಮ್ಮ ಸುಖ ಮೆಟ್ಟಿಕೊಂಡೇ ಬಂದವ್ರು..."

"ಯಾರು ಯಾರನ್ನು ಮೆಟ್ಟೋದೆ? ನೋಡು...ನೀನು ತಪ್ಪುಕಲ್ಪನೆ ಮಾಡಿದ್ದೀಯ? ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ ಅಂತ ಅಂದು ನಾರಿಯರನ್ನು ಪೂಜಿಸಿದ್ದಾರೆ....'

"ಹೌದು ಹೌದು....ಅದ್ರಿಂದ್ಲೆ ಅವಿನ್ನೂ ಮನೆ ಹೊರಗೆ ತಲೇ ಹಾಕೋಕಿಲ್ಲ..."

"ಅಯ್ಯೋ ಅಮ್ಮಾವ್ರೇ.... ಗಂಡಸ್ರು ದುಡಿಮೇಂತ ಹೊರಗೆ ಹೋದ್ರೆ, ಹೆಂಗಸ್ರೂನೂ ಹಾಗೆ ಮಾಡಿದ್ರೆ ಮತ್ತೆ ಮನೆ ಮಾರಿನ ಗತಿಯೇನೂಂತ?"

"ಮನೆ ಮಾರಿ ಬಿಡೋದು..."

"ಜತೆಗೆ ಮಾನಾನೂ ಅನ್ನು...."

"ಅಲ್ರಿ, ಈಗ ಮಾನಕ್ಕೆ ಬಂದಿರೋ ಆಪತ್ತೇನು?'

"ಮನೆ ಬಾಡಿಗೆದ್ದಾದ್ರೂ ಅದ್ಕೇನೂ ಗಂಡಾಂತರ ಒದಗಿಲ್ಲಾಂನ್ನು...'

"ಮತ್ತೆ, ಅದಿರ್ಲಿ-- ನೋಡಿ, ಮೊನ್ನೆ ನಾನು ಹೋಗ್ತಿದ್ದೆ....ಓ ಅಲ್ಲಿ ಮನೆ ಚಾವಡಿಯಲ್ಲಿ ಪಾಠ ನಡೆಯುತಿತ್ತು..."

"ಹ್ಞಾಂ...."

"ಅಲ್ಲಿ ಸಾಗುತಿತ್ತು ಪಾಠ........ಪಿತೃಪಿತೃ ಎಂಬತಕ್ಕಂಥವನು, ಪಿತಾಮಹಂ ಪಿತಾಮಹ ಎಂಬ ತಕ್ಕಂಥವನು ರಾಜ್ಯಂ ರಾಜ್ಯ ಎಂಬತಕ್ಕಂಥದ್ದನ್ನು...."

'ಓಹೋ ಹಾಗ....ಹ್ಞಾಂ.... ಸರಿ ಸರಿ. ಮುಂದಿನದನ್ನು ಕೇಳು........ರಾಜಸ್ಥಾನ ಅಂದ್ರೆ ಹಿಂದಿನ ನೂರಾರು ರಾಜ—ಮಹಾರಾಜರ ರಾಜ್ಯ......ಸರ್ದಾರ ಪಟೇಲರ ದೂರದರ್ಶಿತನದಿಂದ ಅದೆಲ್ಲವೂ ಭಾರತದಲ್ಲಿ ವಿಲೀನಗೊಂಡಿತು. ಈಗ ಅಲ್ಲಿ ಸ್ವತಂತ್ರ ಪಕ್ಷದ ಪ್ರಾಬಲ್ಯ. ಮದ್ರಾಸದಲ್ಲಿ ದ್ರಾವಿಡ ಮುನ್ನೇತ್ರ ಕಳಗಂನಂತೆ ನಿಚ್ಚಳ ಬಹುಮತ ಪಡೆಯುವ ಹೇರಾಸೆಯಿಟ್ಟುಕೊಂಡಿದ್ದ ಸ್ವತಂತ್ರ ಪಕ್ಷ ೧೮೪ರಲ್ಲಿ ೪೯ರಲ್ಲಿ ಸ್ಥಾನ ಮಾತ್ರ ಪಡೆಯಿತು. ಕಾಂಗ್ರೆಸ್ಸು ೮೯ ಸ್ಥಾನ ಗಳಿಸಿತ್ತು.'

"ಅಲ್ರಿ, ಅಲ್ಲಿ ಗಲಭೆಯೇನೂಂತ?'

"ಅದೇ. ಕಾಂಗ್ರೆಸ್ಸು ವಿಧಾನ ಸಭೆಗೆ ಆಯ್ಕೆಯಾದ ಕಲವು ಸ್ವತಂತ್ರರ ಸಹಾಯ ಪಡೆದದೆಯೆಂದೂ ತನಗೆ ಸರಕಾರ ರಚಿಸಲು ಶಕ್ತಿಯಿದೆಯೆಂದೂ ಹೇಳಿತು.."

"ಅದು ಸರೀನ್ನಿ. ಹಾಗೆಯೇ ವಿರೋಧಿ ಪಕ್ಷಗಳೂ ಅಂದವಂತೆ ರಾಜ್ಯಪಾಲರು ಬಹು ಸಂಖ್ಯಾಕ ಪಕ್ಷ ಅಂತ ಕಾಂಗ್ರೆಸ್ಸನ್ನು ಕರೆದರಂತೆ....'

"ಎಲ್ಲಾ ಗೊತ್ತಿದ್ದು ನನ್ನ ಕೇಳ್ತಾ ಇದ್ದೀರಲ್ಲಾ?'

'ಅಲ್ರಿ, ಏನಾಯ್ತು ಅದ್ರಲ್ಲೀಂತ....'

"ಅಂದ್ರೆ... ರಾಜ್ಯಪಾಲರು ಕಾಂಗ್ರೆಸ್ಸನ್ನ...."

'ಆದದ್ದು ಗೊತ್ತೇ ಇದೆ. ಗಲಭೆ, ಗುಲ್ಲು, ಮೃತ್ಯು, ಗಾಂಧಿ... ಇತ್ಯಾದಿ..."

"ಯಾಕೇಂತ?"

'ರಾಜ್ಯಪಾಲರು ಕಾಂಗ್ರೆಸ್ಸಿನ ಒತ್ತಡಕ್ಕೆ ಬಲಿಯಾದರು, ಪ್ರಜಾಪ್ರಭುತ್ವದ ಪಂಚಾಂಗವೇ ಮುಗಿಯಿತೂಂತ.... ಗುಲ್ಲೆಬ್ಬಿಸಿದರು ಮತ್ತೆ ಶಾಂತಿ—ಸುವ್ಯವಸ್ಥೆಗಾಗಿ...."

"ಅಲ್ರಿ, ಅದಕ್ಕೆಲ್ಲಾ ಯಾಕೆ ಅಷ್ಟೆಲ್ಲಾ ಮಾಡಬೇಕು? ರಾಜ್ಯಪಾಲರ ನಿರ್ಣಯ ಸರಿಯಲ್ಲ ಅಂತ ಅವಂಗೆ ತೋರಿಸಬೇಕಾದರೆ, ಮುಂದಿನ ಸಭೆಸೇರುವಾಗ ತಮ್ಮ ಬಲತೋರಿಸ ಬಹುದಿತ್ತಲ್ಲಾ....'

'ಅದಕ್ಕೇ ಅನ್ನೋದು. ಕೈಗೆಟಕದ ದ್ರಾಕ್ಷಿಯನ್ನು ಹುಳೀಂತ ಅಂದು ನರಿಯಾದ್ರೂ ದೂರ ಸರೀತು. ಅದ್ರ ಕಂಬವನ್ನೋ ಕಾಂಡವನ್ನೋ ಹಿಡಿದಲ್ಲಾಡಿಸೋಕ್ಕೆ ಹೋಗಲಿಲ್ಲ...'

'ಅದು ಹೌದ್ರಿ...ಮತ್ತೆ ನೋಡಿ, ಸ್ವತಂತ್ರ ಪಕ್ಷ, ಜನಸಂಘ ಇವುಗಳೆಲ್ಲಾ ಪ್ರಜಾತಂತ್ರದ ಕೈವಾರಿಗಳೆಂದು ಕರೆದುಕೊಳ್ಳುವವರು...ಇವೂ ಇಂತಹ ಅಸಮ್ಮತಿಯನ್ನು ಪ್ರಜಾತಂತ್ರಾತ್ಮಕ ರೀತಿಯಲ್ಲಿ ಸೂಚಿಸದೆ ಹೀಗೆ....'

'ಅದೇ ಅಂದದ್ದಲ್ಲ...ಅಂತೂ ಅಧಿಕಾರ ಒಂದು ಅಮೃತ ಕಲಶ. ಅದರ ಮೇಲೆಯೇ ಎಲ್ಲರ ಕಣ್ಣೂನೂ.'

"ಅಲ್ರಿ, ಅಧಿಕಾರವೆಂದರೆ ವಿಷಸಮಾನ ಅನ್ನುತ್ತಾರಲ್ಲಾ...."

"ನಮ್ಮ ದೇಶದಲ್ಲ ಅಧಿಕಾರ ಅನ್ನೋದು ಅಮೃತಮಯವಾಗೇ ಇದೇಂತ ತೋರ್ತದೆ. ಅದ್ರಿಂದ್ಲೇ ಅದನ್ನು ಹೊಂದೋಕೇ ಎಲ್ಲರ ಆಶೆಯು. ಒಂದ್ವೇಳೆ ಅದು ಕೈಗೆಟಕದೆ ಹೋದರೆ ಪರರಿಗೂ ಸಿಗಬಾರದೂಂತ...'

"ಅಲ್ರಿ, ಕಾಂಗ್ರೆಸ್ಸು ಎಲ್ಲೆಡೆಯಲ್ಲೂ ಮಾಡ ಬಹುದಿತ್ತು....'

"ಛೆ...ಛೆ...ಅದು ಹೇಗೆ? ಅದಕ್ಕೆ ಸರಕಾರ ನಡೆಸಬಲ್ಲೆನೆಂಬ ವಿಶ್ವಾಸ ಬೇಕು ....ರಾಜ್ಯಪಾಲರಿಗೂ ಅದು ಮನವರಿಕೆಯಾಗಬೇಕು..."

"ರಾಜ್ಯಪಾಲರಿಗೇನು? ಎಲ್ರೂ ಕಾಂಗ್ರೆಸ್ನ ಕೈವಾರಿಗಳು..."

"ಛೆ...ಛೆ ...ನೋಡು, ಇಲ್ಲೇ ನೀನು ತಪ್ಪಿ ಬಿದ್ದಿರೋದು..."

"ಯಾಕೆ?"

'ರಾಜ್ಯಪಾಲರು ರಾಷ್ಟ್ರಪತಿಗಳ ಪ್ರತಿನಿಧಿಗಳು. ಅವರು ಯಾವ ಪಕ್ಷಕ್ಕೂ ಸೇರಿದವರಲ್ಲ...."

"ಅದು ಸರೀನ್ನಿ; ನೋಡೋಕೆ, ಅದ್ರೂ ಹಿಂದೆ....'

"ಅದೂ ಸುಳ್ಳು... ಕೇಳು.... ಕೆಲವರು ಮಾಜಿ ಸರಕಾರಿ ಅಧಿಕಾರಿಗಳು, ಕೆಲವ

(ಹದಿಮೂರನೇ ಪುಟ ನೋಡಿ)

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ
ದಯಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಶಾಲುಕೋಟೆ, ಉಡುಪಿ, ದ. ಕನ್ನಡ.

ಭಾರತೀಯರು ಮರೆಯದ ಹೂ

ಪದ್ಮ

ಬರೆದವರು : ಶ್ರೀ ಸ. ನಾರಾಯಣ.

ಪದ್ಮ, ಕುಮುದ, ನಳಿನ, ಅರವಿಂದ, ಸಹಸ್ರಪತ್ರ, ಶತಪತ್ರ, ಕಮಲ, ತಾಮರಸ, ರಾಜೀವ, ಮೃಣಾಳ, ಸರಸೀರುಹ, ಪಂಕೇರುಹ—ಮೊದಲಾದ ಹೆಸರುಗಳು ಕಮಲದ ಹೂವಿಗೆ ಇವೆ. ಪುಷ್ಪಗಳಲ್ಲಿ ಕಮಲ ಪುಷ್ಪಕ್ಕೆ ಹಿರಿಯ ಸ್ಥಾನ. ಅಮರ ಕೋಶದಲ್ಲಿ ಕಮಲ ಪುಷ್ಪಕ್ಕೆ ಇರುವ ಹೆಸರಿನ ಪಟ್ಟಿಯೇ ಇದೆ. ನಾನಾ ಹೆಸರುಗಳಿಂದ ಕರೆದರೂ ಪುಷ್ಪ ಒಂದೇ. ಅದರ ಸೌರಭ, ಸೌಂದರ್ಯ, ಶ್ರೇಷ್ಠತೆಯೂ ಒಂದೇ ಆಗಿದೆ.

ಪ್ರಾಚೀನ ಕಾವ್ಯಗಳಲ್ಲಿಯೂ ಪದ್ಮ ಪುಷ್ಪಕ್ಕೆ ವಿಶೇಷ ಸ್ಥಾನವಿದೆ. ದೇವತಾ ಸ್ತೋತ್ರಗಳಲ್ಲಿ, ಉಪನಿಷತ್ತುಗಳಲ್ಲಿ, ವೇದಗಳಲ್ಲಿ ಸಹ ಕಮಲ ಪುಷ್ಪದ ಖ್ಯಾತಿ ವಿಸ್ತಾರವಾಗಿ ಹರಡಿದೆ. ನಮ್ಮ ಪ್ರಾಚೀನರಿಗೆ ಆ ಪುಷ್ಪದ ಬಗ್ಗೆ ವಿಶೇಷ ಮಮತೆ. ಭಾರತೀಯ ದೇವ ದೇವತೆಗಳಿಗೆಲ್ಲ ಪದ್ಮದ ಬಗ್ಗೆ ವಿಶೇಷ ಅಭಿಮಾನ ಅಂತಃಕರಣ. ಎಲ್ಲ ದೇವದೇವತೆಗಳಿಗೂ ಒಂದೊಂದು ಬಗೆಯಲ್ಲಿ ಕಮಲ ಪುಷ್ಪದ ಸಂಬಂಧವಿದೆ. ಇಂದು ಶತ ದಶ- ಸಹಸ್ರದಳ ಪದ್ಮಗಳನ್ನೂ ಕಾಣುವಂತಿಲ್ಲ. ಆದರೆ ಕೊಳಗಳಲ್ಲಿ, ನದಿಗಳಲ್ಲಿ ತಾವರೆ ಹೂಗಳನ್ನು ಹೇರಳವಾಗಿ ಕಾಣಬಹುದು.

ತಾವರೆ ಬಳ್ಳಿಯನ್ನು ಹಿತ್ತಲಲ್ಲಿ ನೀರೆರೆದು ಬೆಳಸಿ ಪುಷ್ಪ ಪಡೆಯುವಂತಿಲ್ಲ. ತಾವರೆ ಪುಷ್ಪ ಬೇಕಾದರೆ ಬೆಳೆದಿರುವ ಸ್ಥಳಕ್ಕೇ ಹೋಗಬೇಕು. ತಾವರೆ ಹೂವುಗಳಲ್ಲಿಯೂ ಎರಡು ಗುಂಪು ಕೆಂದಾವರೆ—ಬಿಳಿತಾವರೆ. ಅಂದ ಚಂದವೂ ವಿಶೇಷ ಬಗೆಯದ್ದು. ಕಮಲ ಅಥವಾ ಪದ್ಮವನ್ನು ಕಾಣುವುದು ಅಪುರೂಪವಾದರೂ ತಾವರೆ ಹೂಗಳನ್ನು ಮನದಣಿಯ ನೋಡಬಹುದು. ತಾವರೆಯ ಹೂವಿನಂತೆಯೇ ಅದರ ಸುತ್ತ ಹಂಡಿರುವ ಚಿತ್ರವೂ ನೋಡಲು ಆಪ್ಯಾಯಮಾನವಾಗಿರುತ್ತದೆ.

ಪ್ರಾಚೀನ ಕವಿಗಳಿಗೆ ಪದ್ಮ ಪುಷ್ಪದ ಬಗ್ಗೆ ವಿಶೇಷ ಮಮತೆ. ಪದ್ಮ ಪುಷ್ಪದ ಪ್ರಸ್ತಾಪವಿರದ ಪ್ರಾಚೀನ ಕಾವ್ಯ ಯಾವುದೂ ಇಲ್ಲ. ಈ ಪುಷ್ಪ ಪ್ರಾಚೀನ ಭಾರತೀಯರ ಸಂಸ್ಕೃತಿಯ ಸಂಕೇತವೆಂದರೆ ಅತಿಶಯವಲ್ಲ.

ಹೋಲಿಕೆಗಾಗಿ ಪದ್ಮವನ್ನು ಬಳಸಿಕೊಳ್ಳುವುದು ಬರಹಗಾರರ ವೈಶಿಷ್ಟ್ಯಗಳಲ್ಲೊಂದು. ಪದ್ಮದ ಕೀರ್ತಿಗೆ, ಅದ್ಭುತ ದಂಡೆಯ ಅಂದಕ್ಕೆ ಮಾರುಹೋದ ಲೇಖಕ ತನ್ನ ಬರಹಗಳಲ್ಲಿ ಒಂದಡಿಯಲ್ಲಾದರೂ ಬಳಸಿರುವುದು ಸ್ವಾಭಾವಿಕ. ಸುಪ್ರಸಿದ್ಧ—ಅಪ್ರಸಿದ್ಧ ಬರಹಗಾರರೆಲ್ಲರೂ ಸಾಮಾನ್ಯವಾಗಿ ಪದ್ಮದ ನೆರವು ಪಡೆದಿರುತ್ತಾರೆ ತಮ್ಮ ಬರಹಗಳಲ್ಲಿ.

ಹೆಣ್ಣಿನ ಮುಖವನ್ನು ವರ್ಣಿಸುವಾಗ 'ಅವಳ ಮುಖಕಮಲ' ಕೋಮಲವಾಗಿತ್ತು ಎಂದು ವರ್ಣಿಸುವುದು, ದೇವರ ಗುರುಹಿರಿಯರ ಪಾದಗಳನ್ನು ಹೇಳುವಾಗ ಪಾದಪದ್ಮಗಳು ಎಂದು ವರ್ಣಿಸುವುದು, ಹೃದಯಕಮಲ, ಕರಕಮಲ ಎಂದು ವರ್ಣಿಸುವುದು ಸ್ವಾಭಾವಿಕ. ಕಮಲ ಪುಷ್ಪದ ಕೋಮಲತೆ, ಅದರ ಶ್ರೇಷ್ಠತೆಯನ್ನು ಹಿತಮಿತವಾಗಿ ಬಳಸದೆ, ಅತಿಯಾಗಿ ಬಳಸಿ ಅಭ್ಯಾಸ ಮಾಡಿರುವ ಸಂಗತಿಗಳೂ ಉದಾಹರಣೆಗಳೂ ಉಂಟು. ಒಟ್ಟಿನಲ್ಲಿ ಆಧುನಿಕ ಯುವಕ ಉತ್ಸಾಹಶೀಲಿ ಬರಹಗಾರರಿಗೆ ತಮ್ಮ ಕಥೆ ಕಾದಂಬರಿಯ ನಾಯಕಿಯ ಮುಖ ಕಮಲದಲ್ಲಿದ್ದ ಅಂದ. ಹೃದಯವೂ ಅಷ್ಟೇ. ಅವಳ ಮುಖ ಪದ್ಮ ಅರಳಿತು. ಅವಳ ಹೃದಯ ಕಮಲ ಬಿರಿಯಿತು. ಅವಳ ಕರ ಕಮಲ...ಹೀಗೆ ನಾನಾ ವಿಧದ ವರ್ಣನೆ ನಡೆದಿರುತ್ತದೆ. ವರ್ಣನೆ ಹೇಗಾದರೂ ಇರಲಿ ಬಾಳಿಗೂ ಕಮಲಪುಷ್ಪಕ್ಕೂ ಪದ್ಮಕ್ಕೂ ಹೆಣ್ಣಿಗೂ ವಿಶೇಷ ಸಂಬಂಧವಿದೆ—ಸಾಮರಸ್ಯವಿದೆ ಎಂಬುದು ಸ್ಪಷ್ಟ.

ಪದ್ಮ ಎಷ್ಟು ಶ್ರೇಷ್ಠ ಪುಷ್ಪವೋ ಅದು ಉದ್ಭವಿಸುವ (ಹುಟ್ಟುವ) ಜಾಗ ಅಷ್ಟೇ ಕನಿಷ್ಠ ನಿಕೃಷ್ಟ. ಅದು ಹುಟ್ಟುವುದು ಕೆಸರಿನಲ್ಲಿ. ಹೆಜ್ಜೆ ಇಡಲು, ಕೈ ಸೋಂಕಿಸಲು ಹಿಮ್ಮೆಟ್ಟುವ ಸ್ಥಳದಲ್ಲಿ. ಆದರೆ ಕಮಲದ ಬಳ್ಳಿ ಕೆಸರಲ್ಲಿ ಇರುವುದಾದರೂ ಪುಷ್ಪ ಕೆಸರಿನಿಂದ, ಮಲಿನತೆಯಿಂದ, ಜಲದಿಂದ ಮೇಲೆ ಇರುತ್ತದೆ. ಕೆಸರಿನಲ್ಲಿ ಹುಟ್ಟಿದ ಪುಷ್ಪ ದೇವ ದೇವನ ಅಡಿ ಸೇರಬಹುದು. ಹೆಣ್ಣಿನ ಮುಡಿ ಸೇರಬಹುದು. ಕೀಳವೆ ಎಂದು ಯಾವುದನ್ನು ದೂರಮಾಡಬಾರದು. ಹುಟ್ಟಿಗೆ ಪ್ರಾಮುಖ್ಯತೆ ಕೊಡಬಾರದು. ಕೀಳು ಸ್ಥಳದಲ್ಲಿಯೂ ಮೇಲ್ಮಟ್ಟದ ವಸ್ತು ದೊರೆಯಲು ಸಾಧ್ಯ ಎಂಬುದನ್ನು ಕೊಳಚೆಯಲ್ಲಿ ಹುಟ್ಟಿದ ಕಮಲ ವ್ಯಕ್ತಪಡಿಸುತ್ತದೆ.

(ಹನ್ನೆರಡನೇ ಪುಟ ನೋಡಿರಿ)



ಹಣ ಉಳಿಸುವುದರಲ್ಲಿ ಮಗುವಿಗೆ ಆಸಕ್ತಿಯಿಲ್ಲವೇಕೆ?

ಏಕೆಂದು ಎಲ್ಲರಿಗೂ ಗೊತ್ತು — ಸ್ವತಃ ವಿಚಾರ ಮಾಡಲು ಅಥವಾ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ಅವಕ್ಕೆ ಗೊತ್ತಿಲ್ಲ. ಹೆತ್ತವರು ಮಾಡುವ ಪ್ರೀತಿ ಮತ್ತು ರಕ್ಷಣೆಯ ಮೇಲೆ ಅವರ ಸುಖ ಹೊಂದಿಕೊಂಡಿದೆ. ಆದರೆ, ನೀವು ನಿಮ್ಮ ಮತ್ತು ನಿಮ್ಮ ಪುಟ್ಟ ಮಕ್ಕಳ ವಿಷಯದಲ್ಲಿ ನೀವೇ ಯೋಚಿಸಬೇಕಾಗಿದೆ. ಇಂದಿಗೆ ಮತ್ತು ನಾಳೆಗೆ ನಿಮಗಾಗಿ ನೀವು ಧನಾರ್ಜನೆ ಮಾಡಬೇಕಾಗಿದೆ ಮತ್ತು ಹಣ ಉಳಿಸಬೇಕಾಗಿದೆ. ಸ್ವಲ್ಪ ಹಣ ಕೂಡ, ವಿಶೇಷ ಸಂದರ್ಭಗಳಿಗಾಗಿ ಅಥವಾ ಮಳೆಯ ದಿನಗಳಿಗಾಗಿ ಬಿಡ್ಡಿಯನ್ನು ಪ್ರತಿ ತಿಂಗಳೂ ಸಂಪಾದಿಸುವುದು ಮತ್ತು ಭದ್ರತೆಯನ್ನು ನೀಡುವುದು. ಕೆನರಾ ಬ್ಯಾಂಕಿನಲ್ಲಿ ಸೇವಿಂಗ್ಸ್ ಅಕೌಂಟನ್ನು ಇಂದೇ ತೆರೆಯಿರಿ. ಆಗ, ಕೆನರಾ ಬ್ಯಾಂಕಿನಲ್ಲಿ ಡಿಪಾಸಿಟ್ ಇಡುವವರಿಗೆ ಒಂದು ವಿಶೇಷ ತರದ ಸಂತೃಪ್ತಿಯ ಅನುಭವವಾಗುವುದೆಂದೂ, ಇಂದಿನ ಮತ್ತು ಮುಂದಿನ ಕಾಲದ ಬಗೆ ಒಂದು ವಿಶೇಷ ತರದ, ಸುರಕ್ಷಿತತೆಯ ಭಾವನೆಯುಂಟಾಗುವುದೆಂದೂ ನಿಮಗೇನೇ ಅರಿವಾಗುವುದು.

SERVING TO GROW GROWING TO SERVE
CANARA BANK LTD ESTD 1906

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ... ಮಂಗಳೂರು,
ಆಡಳಿತ ಆಫೀಸು
112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

SISTA'S-CB-17 KZI

ಬದುಕುವ ಕಲೆ

ಬದುಕು ನಿಮ್ಮದೇ ಆಗಿದೆ

ತೋರಿಕೆಗೆ ವಿದ್ಯಾವಂತನೆಂಬ ಇಂದಿನ ಮನುಷ್ಯನು ಧರ್ಮದಲ್ಲಿ ಅನಾಸಕ್ತನಾಗಲು ಕಾರಣ ಧಾರ್ಮಿಕ ಶಾಸ್ತ್ರದ ಅಪ್ರಯೋಜಕತೆ ಅಥವಾ ಪೊಳ್ಳುತನ ಮಾತ್ರವಲ್ಲ, ಅದು ಅತನು ಲೋಕದಲ್ಲಿರುವ ಧಾರ್ಮಿಕ ಗ್ರಂಥಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಅಸಮರ್ಥನಾದುದರಿಂದಲೂ ಆಗಿರಬಹುದು. ಇದು ಹಿಂದೂಗಳ ವಿಷಯದಲ್ಲಿ ಮಾತ್ರವಲ್ಲ, ಎಲ್ಲಾ ಮತಗಳ ಜನರಲ್ಲಿಯೂ ಸತ್ಯವಾಗಿದೆ. ಪ್ರಾಚೀನ ವಿಚಾರಗಳನ್ನು ನವ ವಿಧಾನದ ವಿಜ್ಞಾನಗಳಿಗೆ ಹೊಂದಿಸಿಕೊಳ್ಳುವ ಕಷ್ಟವನ್ನು ಪ್ರಪಂಚದಲ್ಲಿ ಎಲ್ಲಾ ವ್ಯವಸ್ಥಾಪಿತ ಮತಗಳ ಅನುಯಾಯಿಗಳೂ ಕಂಡುಕೊಂಡಿರುವರು. ಯಥಾರ್ಥ ಧಾರ್ಮಿಕತೆ ಎಂದೂ ಸಾಯಲಾರದು, ಹಿಂದೂ ಧರ್ಮವು ಸತ್ತಿಲ್ಲ. ಮಾರ್ಗದ ಬದಿಯಲ್ಲಿನ ಮರದ ಹೊರ ಚಾಚಿರುವ ಶಾಖೆಗಳಲ್ಲಿ ಎಲೆ ಮತ್ತು ಹೂಗಳಿಲ್ಲದಿರುವುದನ್ನು ಕಂಡ ನಾವು, ಅದು ಒಂದಾನೊಂದು ಕಾಲದಲ್ಲಿ ವೈಭವಯುತವಾಗಿ ಜೀವಂತವಾಗಿದ್ದ, ಸತ್ತುಹೋದ ಮರದ ಅಸ್ಥಿಪಂಜರವೆಂದು ಭಾವಿಸುವೆವು. ಆದರೀಗ ಅದು ನೆರಳನ್ನು ಹಬ್ಬುವುದಿಲ್ಲ. ಹಾಗೂ ಕೆಲವೇ ಯಾತ್ರಿಕರಿಗೆ ತನ್ನ ಅಲ್ಪ ನೆರಳಿನಲ್ಲಿ ಆಶ್ರಯ ನೀಡುತ್ತದೆ. ಇರಲಿ, ಒಬ್ಬ ವೃಕ್ಷಪ್ರೇಮಿಯು ಸಸ್ಯಶಾಸ್ತ್ರವನ್ನು ಬಲ್ಲವನಾಗಿದ್ದರೆ, ಆ ಒಣ ಮರದಲ್ಲಿ ಇತರ ಉಪಜೀವಿಗಳಾದ ಬಳ್ಳಿಗಳು ಸುತ್ತಿಕೊಂಡಿರುವುದನ್ನು ಕಾಣುವನು. ಈ ಉಪಜೀವಿಗಳ ಬೆಳವಣಿಗೆಯ ದರ್ಶನ ಮಾತ್ರದಿಂದ, ಮೃತವೆಂದು ಹೊರನೋಟಕ್ಕೆ ತೋರುವ ಆ ವೃಕ್ಷದಲ್ಲಿ ಚೈತನ್ಯ ಸತ್ವವನ್ನು ನಿರೀಕ್ಷಿಸಲು ಸಮರ್ಥನಾಗುವನು.

ಅದೇ ರೀತಿಯಲ್ಲಿ ಹಿಂದೂ ಧರ್ಮವು ಇಂದು ತನ್ನ ಸಮಗ್ರ ಸಮಾಜಕ್ಕೆ ಬೇಕಾಗುವ ಆಶ್ರಯದ ನೆರಳನ್ನು ನೀಡಲು ಸಾಮರ್ಥ್ಯವಿಲ್ಲದಂತಾಗಿದೆ. ಅದು ತನ್ನ ಎಲೆಗಳಿಂದ ತುಂಬಿದ ಮೇಲ್ಛಾವಣಿಯನ್ನು ಕಳಕೊಂಡಿದೆ, ನೋಡಲದು ಶವಕುಂಡದಲ್ಲಿ ಹಲ್ಲು ಕಿರುಚಿನಿಂದ ಎಲುಬುಗೂಡಿನಂತಿದೆ. ಆದರೆ ಈ ಮಹಾ ಹಿಂದೂ ವೃಕ್ಷವು ಅನೇಕ ಉಪಜೀವಿಗಳನ್ನು ಪೋಷಿಸಿ ಸಂರಕ್ಷಿಸುತ್ತ ಮುಂದುವರಿಯುವಾಗ, ಒಬ್ಬ ಪ್ರಾಮಾಣಿಕನಾದ ಧಾರ್ಮಿಕ ವ್ಯವಸಾಯಗಾರನು ಧೈರ್ಯಗೊಂಡು "ಇದು ಸಾಯಲಿಲ್ಲ; ಇದರಲ್ಲಿ ಚೈತನ್ಯ ಹರಿಯುತ್ತಿದೆ. ಇದನ್ನು ಪುನರ್ಜೀವಗೊಳಿಸಬಹುದು" ಎಂದು ಗರ್ಜಿಸುವನು.

ಮೃತಪಾಯ ವೃಕ್ಷವನ್ನು ಪುನಃ ಚೇತರಿಸಲು ತೋಟಗಾರನು ಹಾಳು ಬಂದ ಶಾಖೆಗಳನ್ನು ಕತ್ತರಣೆಯಿಂದ ತೆಗೆಯುವನು. ಬುದ್ಧಿವಂತಿಕೆಯಿಂದ ಅನಾವಶ್ಯಕವಾದ ಹೊರೆಯನ್ನು ಹೊತ್ತಿರುವ ಕೊಂಬೆಗಳನ್ನು ಕಡಿದು ಹಾಕುವನು. ಬೇರುಗಳ ಬುಡದ ಮಣ್ಣನ್ನು ಸಡಿಲುಗೊಳಿಸುವನು. ಹೊಸ ಮಣ್ಣಿನಿಂದಲೂ ಗೊಬ್ಬರದಿಂದಲೂ ಅದನ್ನು ಪೋಷಿಸುವನು. ಹಾಗೆಯೇ ಜ್ಞಾನವೆಂಬ ಪೋಷಕ ಲವಣದಿಂದಲೂ ಪ್ರಾಮಾಣಿಕತನದ ಸಾಧನೆಯ ಸತ್ಯಜಲದಿಂದಲೂ ನಮ್ಮ ಧಾರ್ಮಿಕ ವೃಕ್ಷವನ್ನು ಬದುಕಿಸಿ, ಶುಚಿಗೊಳಿಸಿ, ವೀರ್ಯವತ್ತಾಗಿ ಮಾಡಲು ಸಾಧ್ಯ.

ಆಗ ಮಾತ್ರ ಆಧುನಿಕ ಮಕ್ಕಳು ಪ್ರಾಚೀನ ಧರ್ಮ ಗ್ರಂಥಗಳ ಕೂಲಂಕಷ ಅಧ್ಯಯನದ ಮೂಲಕ — ನವವಿಜ್ಞಾನಕ್ಕೂ, ಪ್ರಾಚೀನ ಧರ್ಮಕ್ಕೂ ತಾವು ಗ್ರಹಿಸಿಕೊಂಡಂತೆ ಪರಸ್ಪರ ವಿರೋಧಾಭಾಸವೇನೂ ಇಲ್ಲವೆಂದು ಮನಗಾಣುವರು. ನಾನು ಅದು ಹಿಂದೂ ಧರ್ಮಕ್ಕೆ ಮಾತ್ರ ಅನ್ವಯಿಸಬೇಕೆಂದು ವಾದಿಸುವುದಿಲ್ಲ. ಅದು ಹಿಂದೂ ಧರ್ಮಕ್ಕೆ ಎಷ್ಟು ಸರಿಯೋ ಅಷ್ಟೇ ಸರಿಯಾಗಿ ಲೋಕದ ಇಂದಿನ ಇತರ ಮತಗಳಿಗೂ ಅನ್ವಯಿಸುತ್ತದೆ. ದೌರ್ಭಾಗ್ಯವಶಾತ್ ನಾವು ಧರ್ಮವೆಂಬ ಹೆಸರನ್ನು ಕೆಲವು ಕಲ್ಲಿನಿಂದ ಕಟ್ಟಿದ ದೇವಸ್ಥಾನಗಳಿಗೂ, ಇಗರ್ಜಿಗಳಿಗೂ ಮಸೀದಿಗಳಿಗೂ, ಸೈನಗಾಗ್, ಪಗೋಡಾ ಹಾಗೂ ಗುರುದ್ವಾರಗಳಿಗೂ ಹೊಂದಿಸಿ ಕೊಳ್ಳುತ್ತೇವೆ. ಧರ್ಮವೆಂಬ ಪದವನ್ನು ಪವಿತ್ರ ಗ್ರಂಥಗಳೆಂದೂ, ಅಂತ್ಯವಿಲ್ಲದ ವಿವಿಧ ನಿರ್ಣಯಗಳೆಂದೂ, ಯಜ್ಞಯಾಗಾದಿಗಳೆಂದೂ ಹೇಳಿಕೊಳ್ಳುವುದುಂಟು. ಆ ಅರ್ಥದಲ್ಲಿ ವೇದನಾಜನಕ ಅಂತಃಕಲಹದಿಂದ ದ್ವೇಷ ಮತ್ತು ಹಿಂಸೆಗಳು ನಡೆದಿವೆ. ನಿಜವಾದ ಧರ್ಮ ಯಾವುದೆಂಬುದನ್ನು ತಿಳಿಯದ ಆಗಾಗ ಹೀಗಾಗುವುದುಂಟು.

ಧರ್ಮವೆಂದರೆ ಮೂಲತಃ ಜೀವನದ ವಿಜ್ಞಾನವೆಂದು ಅರ್ಥ ಮಾಡಿಕೊಳ್ಳಬೇಕು. ಇದರಿಂದ ನಾವು ನಮ್ಮ ದಿನನಿತ್ಯದ ಅಸ್ತಿತ್ವವನ್ನು ಪುನರ್ ನಿರ್ಮಾಣ ಮಾಡಲು ಯೋಗ್ಯವಾದ ಜೀವನದ ಮೌಲ್ಯಗಳನ್ನು ಅರಿತು ಕೊಳ್ಳಬಲ್ಲೆವು. ಈಗ ನೆಲೆಯಲ್ಲಿರುವ ಧರ್ಮವು ಅತಿ ಹಳೆಯದಾಗಿ, ಅಕಾಲಿಕವಾಗಿ ಹಾಗೂ ಅಪ್ರಯೋಗಿಕವಾಗಿದ್ದರೆ, ಅದು ಬೋಧಿಸುವ ಜೀವಿತದ ಮೂಲಭೂತ ಮೌಲ್ಯಗಳು ನಮ್ಮ ನಿತ್ಯದ ಸಮಸ್ಯೆಗಳನ್ನು ಬಗೆಹರಿಸಲಾರವಾದರೆ, ನಾವು ನಿರ್ದಾಕ್ಷಿಣ್ಯದಿಂದ ಇವೆಲ್ಲವುಗಳನ್ನೂ ತಳ್ಳಿ ಹಾಕಿ ಬಿಡೋಣ. ಬದಲಾಗಿ ಹೊಸ ತತ್ವಗಳನ್ನು ಯೋಗ್ಯ ಜೀವನದ ನಿಯಮಗಳನ್ನು ಸಂಶೋಧಿಸಲು ಯತ್ನಿಸೋಣ. ಧರ್ಮವು ದೈನಂದಿನ ಅಸ್ತಿತ್ವಕ್ಕೆ ಸಂಬಂಧ ಪಡದ ಸರ್ವಾಧಿಕಾರೀ ಜೀವನ ಪದ್ಧತಿಯ ಪೋಷಕವಾದರೆ, ನಾವು ಅಂಥ ಹಳೆಯ ಧರ್ಮವನ್ನೂ ಬಹಿಷ್ಕರಿಸೋಣ. ಅನಂತರ ಹೊಸತೆಂದು ಸಂಸ್ಕೃತಿಗೂ, ಅಪೇಕ್ಷಣೀಯ ಮತಕ್ಕೂ ಸೇರೋಣ. ಯಾಕೆಂದರೆ ಮನುಷ್ಯನು ಪರದಲ್ಲಿನ ಜೀವನಕ್ಕಿಂತ ಇಹಜೀವನದ ಯೋಚನೆಯಲ್ಲಿಯೇ ಇರುವನು—ಇರಲೇ ಬೇಕಾಗಿದೆ.

"ಬಾಹ್ಯೇಂದ್ರಿಯಗಳಿಗೆ ಪ್ರತ್ಯಕ್ಷವಾಗಿ ಗೋಚರಿಸುವ ಲೋಕದ ಹಿಂದ ಯಾವ ಯಥಾರ್ಥವಿದೆ, ಯಾವ ಮಹತ್ತರವಾದ ಶಕ್ತಿಯಿದೆ ಎಂಬ ವಿಚಾರಗಳನ್ನು ಮನುಷ್ಯನೇಕೆ ಹಿಂಬಾಲಿಸ ಬೇಕು?'— ಎಂದು ತಾರ್ಕಿಕವಾಗಿ ಯಾರಾದರೂ ಕೇಳಬಹುದು. ನಿಜವಾಗಿಯೂ ಪ್ರಾಣಿವರ್ಗಗಳಲ್ಲಿ ಮತವೆಂಬ ಯಾವ ಸಂಸ್ಥೆಯನ್ನೂ ನಾವು ಕಾಣುವುದಿಲ್ಲ. ಧರ್ಮದ ಆವಶ್ಯಕತೆ, ಆಧ್ಯಾತ್ಮಿಕ ಸ್ವಾತಂತ್ರ್ಯದ ದಾಹ, ಅಂತರಾಳದೊಳಗಿನ ಕರೆ—ಇವನ್ನು ಅನುಭವಿಸುವವನು ಮನುಷ್ಯನು ಮಾತ್ರ. ಎಲ್ಲ ಮನುಷ್ಯರೂ ಇದನ್ನು ಬಯಸುವುದಿಲ್ಲ. ಪ್ರತಿಯೊಂದು ಯುಗದಲ್ಲಿಯೂ ಈ ಮಹಾಸತ್ಯವನ್ನು ಅನ್ವೇಷಿಸುವ ತೃಷ್ಣೆ ಪ್ರತ್ಯೇಕವಾದ ಒಂದು ನ್ಯೂನ ಪಕ್ಷವೇ ಅನುಭವಿಸುವುದು ಸಹಜ. ಒಂದು ಶ್ರೇಷ್ಠವಾದ ನ್ಯೂನ ಪಕ್ಷ ಮಾತ್ರವೆ ಈ ಜೀವಂತ ಸಮಸ್ಯೆಯನ್ನು ಎದುರಿಸುವ ಪ್ರೇರಣೆಯನ್ನು ಹೊಂದ ಬೇಕೆಂಬುದನ್ನು ನಮ್ಮ ಪುರಾತನ ಗ್ರಂಥಗಳು ವಿಸ್ತಾರವಾಗಿ ಪ್ರತಿಪಾದಿಸಿವೆ. ಅಲ್ಲದೆ ಡಾರ್ವಿನನು ತನ್ನ ವಿಕಾಸವಾದದಲ್ಲಿಯೂ ಅಸ್ಪಷ್ಟವಾಗಿ ಇದನ್ನು ಸೂಚಿಸಿದ್ದಾನೆ. ಆತನು ವಿವರಿಸುವ ರೀತಿಯಲ್ಲಿ—ಜೀವವು ಒಂದು ಆಕಸ್ಮಿಕ ಘಟನೆಯಾಗಿ ಆರಂಭವಾದರೂ, ತನ್ನ ಹಲವು ರೀತಿಯ ವಿಕಾಸದ ಬೆಳವಣಿಗೆಗೆ ತಕ್ಕಂತೆ ದ್ವಿಗುಣಿತವಾಗಿ, ಅದು ಯೋಚಿಸುವ ಶಕ್ತಿಯುಳ್ಳ ಮನುಷ್ಯನೆಂಬ ಜಂತುವಿನ ಪರಮೋಚ್ಚ ಸಿದ್ಧಿಗೆ ಮುಟ್ಟುವಂತೆ ಇರುವುದು, ಎಂದು ತೋರುತ್ತದೆ. ಅನಂತರ ವಿಕಾಸವು ಮುಂದುವರಿಯುತ್ತಾ ಜೀವಿಯು ದೇವ ಮಾನವ ಸ್ಥಿತಿಗೆ ಮುಟ್ಟುವನು ಎಂಬ ಭರವಸೆಯನ್ನು ಕೊಟ್ಟು ವಾಚಕರನ್ನು ಆನಂದಾಕಾಶಕ್ಕೆ ಹಾರಿಸುವನು.

ಈ ಪ್ರಾಣಿಶಾಸ್ತ್ರಜ್ಞನಾದ ಪ್ರವಾದಿಯ ನಿರ್ಣಯವು ನಿಜವಾದ ಪಕ್ಷದಲ್ಲಿ ಮರ್ಕಟ ಅಥವಾ ಮರ್ಕಟ ಮನುಷ್ಯರಾದ ನಾವು ಹೇಗೋ ಹೇಗೋ ಕಾಲ ಕಳೆದು, ಪ್ರಕೃತದ ಮಾನವರಾಗಲು ದಿನಂಪ್ರತಿ ಮುಖಕ್ಷೌರ ಮಾಡಲು ತೊಡಗಿದೆವು ಎಂದು ಒಪ್ಪಲೇ ಬೇಕು. ಈ ರೀತಿಯಲ್ಲಿ ಮೃಗರಾಜ್ಯದಿಂದ ವಿಕಾಸವು ಸಂಪೂರ್ಣ ಮನುಷ್ಯನಾಗುವ ಸಿದ್ಧಿಯ ವರೆಗೆ ವಿಸ್ತರಿಸಿತು. ಆದರೆ ಇಲ್ಲಿಯೂ ಹೊರ ತೋರುವಂತೆ ಅಂತರ್ಗತ ಕಾಲವಿದ್ದಿತು. ಮನುಷ್ಯನ ರೂಪದಲ್ಲಿ ತೀರಾ ಮೃಗಗಳಿಗಿಂತ ಉತ್ತಮವಲ್ಲದ ರೀತಿಯಲ್ಲಿ ವರ್ತಿಸುವ ಮೃಗೀಯ ಸ್ವಭಾವಗಳಿಂದ ಕೂಡಿರುವ ಜಂತುಗಳನ್ನು ನಾವು ನೋಡುತ್ತೇವೆ. ಇಂತಹ ಪ್ರಾಣಿಗಳಿಗೆ, ಪ್ರಾಣಿಗಳ ಅವಯವಗಳಿಂದ ಕೂಡಿದ್ದರೂ, ಮನುಷ್ಯರ ಆಕಾರ ರೂಪಗಳಿದ್ದರೂ ಮೃಗರಾಜ್ಯದಲ್ಲಿ ಸ್ವೀಕರಿಸಿದ ಮೌಲ್ಯಗಳಿಂದ ಮೇಲೆ ಹೋಗಲು ಸಾಧ್ಯವಾಗಲಾರದು. ಇಂಥವರಿಗೆ ಧರ್ಮವು ಪ್ರತ್ಯಕ್ಷವಾದ ಅಥವಾ ಶೀಘ್ರವಾದ ಪ್ರಯೋಗವಾಗಲಾರದು. ಆದರೆ ಯಾರು ಮೇಲೆ ಹೇಳಿದ ಸ್ಥಿತಿಯನ್ನು ದಾಟಿ, ಜೀವನದ ಏರುಪೇರುಗಳಿಂದ ಹಾದು ಹೋಗಿ, ಮಾನಸಿಕವಾಗಿಯೂ ಬೌದ್ಧಿಕವಾಗಿಯೂ ಹೆಚ್ಚಿನ ಪ್ರಗತಿ ಹೊಂದಿರುವರೋ ಅಂಥವರಿಗೆ ಪಂಥಾಹ್ವಾನವನ್ನು ಕೊಡುವ ಪ್ರಶ್ನೆಗಳು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪುತ್ತೂರು ಅಡಿಶನಲ್ ಮು. ಕೋರ್ಟಿನಲ್ಲಿ.

R. E. P. 332/66
R. E. A. 1183/66

ಕುಂಞಾಲಿ ಬ್ಯಾರಿ— ಅರ್ಜಿದಾರ.

ಕಾಸರಗೋಡು ತಾಲೂಕು ಕಾರಡ್ಕ ಗ್ರಾಮದ ನಾರ್ಲ ಎಂಬಲ್ಲಿರುವ ಚೆನ್ನಿಯಪ್ಪ ಮಣಿಯಾಣಿಯ ಮಗ ನಾರಾಯಣ ಮಣಿಯಾಣಿಗೆ— ಎದ್ರಿ

ಅರ್ಜಿದಾರನು ಮೇಲಿನ ಅಮಲ್ಜಾರಿಯಲ್ಲಿ ನಿಮ್ಮ ಸ್ಥಿರಾಸ್ತಿಯನ್ನು ವಿಕ್ರಯಿಸಲು ಮತ್ತು ಏಲಂ ಕಾಲದಲ್ಲಿ ಏಲಂಗೆ ನಿಲ್ಲುವರೇ ಪರ್ಮಿಶನ್ ಕೊಡಬೇಕೆಂತ ಅರ್ಜಿ ಮಾಡಿರುತ್ತಾನೆ. ಆದುದರಿಂದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಧರಿಸಲೂ, ಅರ್ಜಿದಾರನಿಗೆ Bid ಮಾಡಲು ಪರ್ಮಿಶನ್ ಕೊಡಲೂ, [illegible]-1967ರಲ್ಲು ಹಗಲು ಗಂಟೆ 10ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆದುದರಿಂದ ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಹಾಜರಾಗಿ ಉಜರ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನ [illegible] ಎಂತ ಈ ಮೂಲಕ ತಿಳಿಸಲಾಗಿದೆ.

By order of court

ಕೆ. ಪಿ. ಅಬ್ದುಲ್ಲ.
ಅರ್ಜಿದಾರನ ಕಡೆ ಎಡ್ವೊಕೇಟ್

ಪುತ್ತೂರು, ತಾ. 6—8—1967

ಮಧ್ಯ ಪ್ರದೇಶದಲ್ಲಿ

ನರಬಲಿ ಕೊಡುತ್ತಿದ್ದ ಕೊಳ್ಳೆಗಾರ

'ಭೀಕ'ನ ಸೂಕ್ಷ್ಮ ಪರಿಚಯ

ಬರೆದವರು: ಶ್ರೀ ಎಚ್. ಎಂ. ನಾರಾಯಣ ಭಟ್.

> ಮಧ್ಯ ಪ್ರದೇಶದಲ್ಲಿ ಸಾಮೂಹಿಕ ಕೊಳ್ಳೆ, ದರೋಡೆ ಮತ್ತು ಕೊಲೆ ಪಾತಕಗಳೊಂದಿಗೆ ಭಯಾನಕ ಕತೆಗಳಿಗೂ ಕಾರಣರಾಗಿ ಪೋಲೀಸರಿಗೆ ಸಮಸ್ಯೆಗಳನ್ನುಂಟು ಮಾಡಿದ್ದ ಕುಪ್ರಸಿದ್ಧ ಚೋರ ಶಿಖಾಮಣಿಗಳ ಕುರಿತು ಶ್ರೀ ರಾಕೂರ್ ಘನಶ್ಯಾಂ ನಾರಾಯಣ ಸಿಂಹರು ಬರೆದುದರಿಂದ ಸಂಗ್ರಹಿಸಿದ ಲೇಖನ ಮಾಲೆಯಲ್ಲಿ ಇದು ಮೊದಲನೆಯದು.

ನಮ್ಮ ಜೀವಮಾನದಲ್ಲೇ ಸಾಮೂಹಿಕ ಕೊಲೆ, ಕೊಳ್ಳೆ ಮತ್ತು ದರೋಡೆಗಳಲ್ಲಿ ಕುಪ್ರಸಿದ್ಧವಾದ ಮಧ್ಯ ಪ್ರದೇಶದ ಭಿಂಡ್ ಜಿಲ್ಲೆಯಲ್ಲಿ ಪ್ರಭಾವ ಬೀರಿದ್ದ ಭೀಕನ ಕುರಿತು ಹಲವು ಸ್ವಾರಸ್ಯ ವಿಚಾರಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು.

ಭೀಕನು ಭಿಂಡ್ ಜಿಲ್ಲೆಯ ಮಗ್ವ ಗ್ರಾಮದಲ್ಲಿ ಆಡು, ದನ ಮೇಯಿಸುವವನೊಬ್ಬನ ಮಗನಾಗಿ ಹುಟ್ಟಿ ತಾನೂ ಅದೇ ವೃತ್ತಿಯನ್ನನುಸರಿಸಿದ್ದನಾದರೂ ಒಮ್ಮೆ ಆ ಪ್ರದೇಶದಲ್ಲಿ 'ಕಾಲೆರಾ' ಬಾಧಿಸಿ ಅನೇಕ ಜನ ಜಾನುವಾರುಗಳು ನಾಶ ಹೊಂದಿದ್ದುದರಿಂದ ಭೀಕನ ಕೆಲಸಕ್ಕೆ ಸಾಕಷ್ಟು ಪ್ರತಿಫಲಸಿಗುತ್ತಿರಲಿಲ್ಲ.

ದೃಢಕಾಯನಾಗಿದ್ದ ಭೀಕನು ಹೊಲದಿಂದ ಮರುಳುವಾಗ ರಾತ್ರಿಯಾದರೂ ಆತನನ್ನು ಆ ಬಗ್ಗೆ ವಿಚಾರಿಸುವ 'ಯಜಮಾನ'ರು ಹೆಚ್ಚು ಮಂದಿಯಿರಲಿಲ್ಲ.

ನೀಳವಾದ ಆತನ ಶರೀರದಲ್ಲಿ ಮೃಗೀಯ ಶಕ್ತಿಯಿದ್ದಂತೆ ಆತನ ದಿನಚರಿಯೂ ಅನುಗುಣವಾಗಿಯೇ ಸಹಕರಿಸಿತ್ತು.

ಅರೆ ಮುಚ್ಚಿದ ಕಣ್ಣು ರೆಪ್ಪೆಗಳಿದ್ದ ಒಂದು ಭೀಕರ ಮುಖವನ್ನು ಕೆಲವು ವರ್ಷಗಳ ಹಿಂದೆ ಉತ್ತರ ಭಾರತದ ಪತ್ರಿಕೆಗಳು ಪ್ರಕಟಿಸಿದ್ದವು. ಭೀಕನನ್ನು ಕೊನೆಗೆ ಪೋಲೀಸರು ಗುಂಡಿಕ್ಕಿ ಕೊಂದಿದ್ದರು.

ಭೀಕನ ಕುರಿತು ಪೋಲೀಸರು ಸಂಗ್ರಹಿಸಿದ್ದ ದಾಖಲೆಗಳಲ್ಲಿಯ ಆತನ ಜೀವನ ಚರಿತ್ರೆಯಿಲ್ಲಿದೆ.

ಒಂದುದಿನ ಆಡುಗಳನ್ನು ಮೇಯಿಸಲು ಹೊಲಕ್ಕೆ ಹೋಗಿದ್ದ ಭೀಕ ಅವನ್ನು ಅಲ್ಲಿ ಬಿಟ್ಟು ತಾನು ಸಮೀಪದ ಅರಣ್ಯವನ್ನು ಪ್ರವೇಶಿಸಿ ಚಂಬಾಲ್ ನದೀ ತೀರದಲ್ಲಿಯೇ ದಟ್ಟಡವಿಯನ್ನು ಸೇರಿದ. ಆ ಘೋರ ಕಾನನದಲ್ಲಿ ನದೀ ತೀರದ ಒಂದು ಗವಿಯ ಬಾಗಿಲಲ್ಲಿ ಆತನೊಂದು ದೃಶ್ಯವನ್ನು ಕಂಡು ಆಶ್ಚರ್ಯಪಟ್ಟನು.

ದೊಡ್ಡದೊಂದು ವೃಕ್ಷದ ಅಡಿಯಲ್ಲಿ ಆಳೆತ್ತರದ ಕಾಳೀ ವಿಗ್ರಹ; ಕೊರಳಿಗೆ ರುಂಡಮಾಲೆ. ಇದಿರಲ್ಲೇ ಸಿಂಧೂರ ಪೂಸಿದ್ದ ಒಂದು ನಗ್ನ ದೇಹ. ಅದು ಮೃತ ದೇಹವಾಗಿತ್ತು. ಸ್ವಲ್ಪದೂರ ಧ್ಯಾನ ಮಗ್ನನಾಗಿ ಕಣ್ಣುಮುಚ್ಚಿ ಕುಳಿತಿರುವ ಒಬ್ಬ ಯೋಗಿ. ಯೋಗಿಯ ತುಟಿಗಳು ಆಗಾಗ ಚಲಿಸುವಾಗ ಏನೋ ಶಬ್ದ ಅಲ್ಲಿಂದ ಹೊರಡುತ್ತಿತ್ತು. ಮಂತ್ರ ಜಪಿಸುತ್ತಿರುವುದಾಗಿರಬಹುದು.

ಏನು ಮಾಡಬೇಕೆಂದು ಭೀಕನಿಗೆ ಅರ್ಥವಾಗಲಿಲ್ಲವಾದರೂ ಆತ ಹೆದರಿರಲಿಲ್ಲ. ಯೋಗಿಗೆ ವಂದಿಸಿ ಸ್ವಲ್ಪದೂರದಲ್ಲಿಯೇ ಭೀಕ ಕುಳಿತ.

ಯೋಗಿ ಧ್ಯಾನಾಸಕ್ತನಾಗಿಯೇ ಇದ್ದ. ಸ್ವಲ್ಪ ಹೊತ್ತಿನ ತರುವಾಯ ಆ ಯೋಗಿ ಕಣ್ಣು ತೆರೆದು ಭೀಕನನ್ನು ಕಂಡ. ತನ್ನ ಏಕಾಂತತೆಯನ್ನು ಭಂಗಮಾಡಿದ ದುಷ್ಟನನ್ನು ಸುಮ್ಮನೆ ಬಿಡುವ ಹಾಗಿಲ್ಲವೆಂಬ ಭಾವದಲ್ಲಿ ಯೋಗಿ ಕೈಯಲ್ಲಿ ಒಂದು ಕಠಾರಿಯನ್ನು ಹಿಡಕೊಂಡ. ಭೀಕ ಅಳುಕಲಿಲ್ಲ; ಕುಪಿತನಾದ ಯೋಗಿಗೆ ಸಾಷ್ಟಾಂಗ ನಮಸ್ಕರಿಸಿದ.

'ನೀನಿಲ್ಲಿಗೇಕೆ ಬಂದೆ?"—ಪ್ರಶ್ನೆ.

"ನಾನು ಮಾಡ ಬೇಕಾದುದನ್ನೊಂದನ್ನೂ ಮಾಡಲಿಲ್ಲ. ಹಾಗಾಗಿ ನನ್ನ ಮನಸ್ಸಿಗೆ ಶಾಂತಿಯಿಲ್ಲ, ನಾನು ಅರಣ್ಯದಲ್ಲಿ ತಿರುಗಾಡ ಹೊರಟೆ. ಆಗ ನಾನು ಇಲ್ಲಿ ಸ್ವಾಮಿಯವರನ್ನು ಕಂಡೆ. ಸ್ವಾಮಿ ಧ್ಯಾನ ಮಗ್ನರಾಗಿರುವಾಗ ವಿಘ್ನ ಮಾಡಬಾರದೆಂದು ವಂದಿಸಿ ಸ್ವಲ್ಪ ದೂರದಲ್ಲಿಯೇ ಸದ್ದಿಲ್ಲದೆ ಕುಳಿತೆ. ಕ್ಷಮಿಸಿ ಅನುಗ್ರಹಿಸಬೇಕು...."

—ಭೀಕನ ವಿಜ್ಞಾಪನೆ.

"ನನ್ನ ಸಾನ್ನಿಧ್ಯದಲ್ಲಿ ನಿನಗೆ ಇಷ್ಟವಾದರೆ ನನ್ನ ಶಿಷ್ಯ ನಾಗು. ನನ್ನ ವಿದ್ಯೆಯನ್ನು ಕಲಿ....ಆದರೆ, ಮೊದಲು ನಾನು ನಿನ್ನನ್ನು ಬೇಕಾದಷ್ಟು ಪರೀಕ್ಷಿಸದಿರೆನು. ಆ ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ ಮಾತ್ರವೇ ಶಿಷ್ಯ ಸ್ಥಾನಕ್ಕೆ ನೀನು ಅರ್ಹನಾಗುವೆ.'

ಎಂತಹ ಪರೀಕ್ಷೆಗಾದರೂ ತಾನು ಸಿದ್ಧನೆಂದು ಭೀಕ ಆಶ್ವಾಸನೆಯಿತ್ತ.

"ಹಾಗಾದರೆ ನಾಳೆ ಇದೇ ಸಮಯಕ್ಕೆ ನೀನಿಲ್ಲಿ ಬಾ...."

ಮರುದಿನ ಕ್ಲಪ್ತ ಸಮಯವಾದಾಗ ಭೀಕ ತನ್ನ ಕೋವಿ ಸಮೇತ ಯೋಗಿಯ ಸಾನಿಧ್ಯಕ್ಕೆ ಹಾಜರಾದ. ಯೋಗಿಯ ದೃಷ್ಟಿ ಮೊದಲು ಹರಿದುದು ಭೀಕನ ಕೋವಿಯತ್ತ. ಕೋವಿಯನ್ನು ಮಹಾಕಾಳಿಯ ಪಾದಾಬ್ಜಗಳಿಗೆ ಕಾಣಿಕೆಯರ್ಪಿಸುವಂತೆ ಯೋಗಿಯ ಆಜ್ಞಾಪನೆಯನ್ನು ಭೀಕ ಅನುಸರಿಸಿದ್ದಾಯಿತು.

ಯೋಗಿಯಿತ್ತ ಕಠಾರಿಯಿಂದ ಭೀಕ ತನ್ನ ದೇಹದ ರಕ್ತವನ್ನೂ ಕಾಳಿಗೆ ಬಲಿ ಸಮರ್ಪಿಸಿದ್ದಾಯಿತು.

ಯೋಗಿ ಪ್ರಸನ್ನನಾಗಿ ಹೇಳಿದ—"ಪುತ್ರಾ! ನಾನೊಬ್ಬ ತಾಂತ್ರಿಕ. ನನ್ನದು ಅಘೋರ ವಿದ್ಯೆ. ಅದಕ್ಕೆ ನರಬಲಿ ಅಗತ್ಯ. ತಡೆಯಿಲ್ಲದೆ ನರಬಲಿ ಕೊಡುತ್ತಾ ಬಂದರೆ ನಮ್ಮಿಬ್ಬರಿಗೂ ಕ್ಷೇಮ; ಮಾತ್ರವಲ್ಲ—ಲೋಕದ ಸರ್ವಾಧಿಕಾರ ಸಿದ್ಧಿಸಲೂ ಸಾಧ್ಯ.........ಸಿದ್ಧನಾದರೆ ನನ್ನ ಶಿಷ್ಯನಾಗಿ ಪರಿಗ್ರಹಿಸುವೆನು......"

"ಯೋಗೀಶ್ವರರು ಎಂತಹ ಪರೀಕ್ಷೆ ಬೇಕಾದರೂ ಮಾಡಬಹುದು. ನನ್ನದು ದೃಢನಿರ್ಧಾರ. ಸರ್ವಸಿದ್ಧನಾಗಿಯೇ ಬಂದಿರುವೆನು."

"ನಿನ್ನ ಅಚಲ ವಿಶ್ವಾಸವನ್ನೂ ಧೈರ್ಯವನ್ನೂ ಮೆಚ್ಚಿದೆನು. ನೀನು ನನ್ನ ಶಿಷ್ಯನಾಗಿರುವೆ. ಕಾಳಿಗೆ ನರಬಲಿ ಅರ್ಪಿಸುವುದು ನಿನ್ನ ಹೊಣೆಗಾರಿಕೆ...ಅದನ್ನು ಮಾಡು...."

ಭಾವೀ ಜೀವನದ ಕುರಿತು ಆಲೋಚಿಸುವ ಬುದ್ಧಿಯೇ ವಿವೇಕವೋ ಆ ಕಠಾಳ ಹೃದಯ— ಭೀಕನಿಗಿರಲಿಲ್ಲ. ಏನು ಮಾಡಲೂ ಸಿದ್ಧನೆಂದು ಆತ ಒಪ್ಪಿಕೊಂಡ.

ಯೋಗಿಯು ಒಂದು ಎಲುಬಿನ ತುಂಡನ್ನು ಕಚ್ಚಿಕೊಂಡು ಆಜ್ಞಾಪಿಸಿದ—

'ಹಾಗಾದರೆ ಹೋಗು....ಯಾರನಾದರೂ ಹಿಡಿದು ತಾ....ಇಂದೇ ಕಾರ್ಯ ಪ್ರಾರಂಭಿಸೋಣ...'

ಭೀಕ ಕೂಡಲೇ ಹೊರಟ. ಸ್ವಲ್ಪ ಹೊತ್ತಿನ ಬಳಿಕ ಸಮೀಪದ ಒಬ್ಬ ಗ್ರಾಮಾಧಿಕಾರಿಯನ್ನು ಎತ್ತಿಕೊಂಡು ಬಂದೇ ಬಂದ.

ಇಷ್ಟು ಬೇಗ ನರಬಲಿಗೆ ಶಿಷ್ಯ ಸಿದ್ಧತೆ ಮಾಡುವನೆಂದು ಯೋಗಿ ಭಾವಿಸಿರಲಿಕ್ಕಿಲ್ಲ.

"ಜೈ! ಕಾಳೀ ಮಾತಾಕೀ!"

ಭೀಕ ತಂದಿದ್ದ ಗ್ರಾಮಾಧಿಕಾರಿಯನ್ನು ಕಟ್ಟಿಹಾಕಿ ಬೇಗನೇ ಸ್ನಾನ ತೀರಿಸಿ ಬರುವಂತೆ ಯೋಗಿ ಆಜ್ಞಾಪಿಸಿದ.

ನರಬಲಿಯರ್ಪಿಸಿದ ತರುವಾಯ ಗುರು-ಶಿಷ್ಯರು ಮೃತ ದೇಹದ ಕರುಳು ಮಾಂಸಗಳನ್ನು ಬೇಕಾದಷ್ಟು ತಿಂದರು; ಅಗತ್ಯವಿರುವ ಸೂಚನೆಗಳನ್ನಿತ್ತು ಯೋಗಿ ತೆರಳಿದ.

ಗುರುವಿನ ನಿರ್ದೇಶನಗಳನ್ವಯ ದೇವೀ ವಿಗ್ರಹಕ್ಕೆ ತಿಂಗಳಿಗೊಂದರಂತೆ ನರಬಲಿಯರ್ಪಿಸಬೇಕು. ಇದಕ್ಕಾಗಿ ಕೊಳ್ಳೆಕಾರರ ಸಂಘವನ್ನೇರ್ಪಡಿಸುವ ಅವಶ್ಯಕತೆಯನ್ನು ಭೀಕ ಮನಗಂಡು ಕಾರ್ಯೋನ್ಮುಖನಾದ.

ಭಿಂಡ್ ಜಿಲ್ಲೆಯಲ್ಲಿ ಕೊಳ್ಳೆಗಾರರು ನಿರ್ಭೀತರಾಗಿ ವಿಹರಿಸುತ್ತಿದ್ದ ಕಾಲವದು. ಅವರಿಗೆ ಅಗತ್ಯವಿದ್ದ ಆಯುಧಗಳನ್ನು ಸಂಗ್ರಹಿಸಿ ಒಂದು ಸಂಘಟನೆಯನ್ನೇ ಭೀಕ ರೂಪಿಸಿದ.

ಭೀಕನ ನೇತೃತ್ವದ ಕೊಳ್ಳೆಕಾರರ ಚಟುವಟಿಕೆಗಳ ಬಗ್ಗೆ ಪತ್ರಿಕಾ ವರದಿಗಳು ಭಯಾನಕವಾಗಿ ಪರಿಣಮಿಸಿದವು. ಕೊಳ್ಳೆತನದಿಂದ ಸಂಪಾದಿಸಿದ ಐಶ್ವರ್ಯದಲ್ಲಿ ಭೀಕನಿಗೆ ಅಭಿಲಾಷೆ ಇಲ್ಲವಾಗಿದ್ದುದರಿಂದ ಸಂಘದ ಕಾರ್ಯಕರ್ತರು ಆತನಿಗಾಗಿ ಏನು ಮಾಡಲೂ ಸಿದ್ಧರಾಗಿದ್ದರು.

ಭೀಕನು ಹಗಲು ಹೊತ್ತಿನಲ್ಲೇ ಕೊಳ್ಳೆ ಹೊಡೆಯುತ್ತಿದ್ದನೆಂದೂ ಶ್ರೀಮಂತರ ಬಂಗ್ಲೆಗಳನ್ನೇ ಅವನು ಧಾಳಿಮಾಡುತ್ತಿದ್ದನೆಂದೂ ವಾರ್ತೆಗಳು ಹರಡಿದಾಗ ಆ ಪ್ರದೇಶದ ಪೋಲೀಸರು ಎಷ್ಟು ಪರಿಶ್ರ

(ಹತ್ತನೇ ಪುಟ ನೋಡಿರಿ)

RANGE OF PRODUCTS **RANGE OF PRODUCTS**

Squashes, Crushes, Syrups, Biccola & Brinda (Special Syrups) Pickles, Tomato Ketchup, Sweets & Toffees.

Canned Pineapple & Mango Slices Mango Pulp Pineapple Juice, Tomato Juice, Fruit Cock-tail, Jams, Ginger, Preserve (a delicious desert relieves indigestion and gastric trouble.)

Sales Depot: **Bhavanthi Street, Mangalore-1.** PHONE: 3266

ಕಮ್ಯೂನಿಸ್ಟರೊಂದಿಗೆ ಕೈಮಿಲಾಯಿಸಿದೆ. ಈಗ ಬೇರೆ ಬದಲೀಯಾದ ಬೊಂಬೆಯಂತಿರಲು ಶ್ರೀ ರಾಜಾಜಿಯವರಿಂದ ಸಾಧ್ಯವಾಗಲಿಲ್ಲ. ತಾವು ಅಭಿಪ್ರಾಯವನ್ನು ಬದಲಾಯಿಸಿಲ್ಲವಾದರೂ ಅಂದಿಗೆ ಅದೇ ಸುಖವಾಗಿತ್ತು, ಇಂದು ಇದೇ ಸುಖವಾಗಿದೆಂದು ಹೇಳಿದರು. ಅಲ್ಲದೆ ಅಲ್ಲಿ ಇಲ್ಲಿ ಒಂದು ಹಿಡಿಯಷ್ಟು ಕಮ್ಯೂನಿಸ್ಟರು ಅಪ್ಪಿತಪ್ಪಿ ಲೋಕ ಸಭೆಯೊಳಗೆ ಹೋದರೂ ಹಾನಿ ಏನೂ ಆಗುವಂತಿಲ್ಲವೆಂದು ಅವರು ಅಂದು ತಿಳಿಸಿದರು, ಅಂದರೆ ಅದೇನಾದರೂ ಮಾಡಿ ತನಗೆ ಅಡ್ಡಗಾಲು ಹಾಕಿರುವ ಕಾಂಗ್ರೆಸ್ಸಿನ ಖಡೀಮರನ್ನು ಕಾಲು ಜಾರಿಸಿ ಬಿಡಬೇಕಾಗಿದೆ ಶ್ರೀ ರಾಜಾಜಿಯವರಿಗೆ.

ಸ್ವತಂತ್ರ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ, ಮುಸ್ಲಿಂ ಲೀಗು ಮತ್ತು ತಮಿಳು ಅರಸು ಕಳ್ಗಮಿನವರು ನಾಲ್ಕು ಮೂಲೆಗಳತ್ತ ನೋಡುತ್ತ ದ್ರಾವಿಡ ಮುನ್ನೇಟ್ರ ಕಳ್ಗವನ್ನು ಹೊತ್ತುಕೊಂಡಿರುವುದಾಗಿ ಹೇಳಿದಾಗ ಅವರು ಕಾಂಗ್ರೆಸ್ ಪಕ್ಷವೇ ಒಂದು ದೊಡ್ಡ ಒಪ್ಪಂದ ನಡೆಸಿರುವವರ ಗುಂಪೆಂದೂ, ಅಲ್ಲಿ ಹಲವಾರು ಅಭಿಪ್ರಾಯಗಳುಳ್ಳ ಜನರು ಇದ್ದಾರೆಂದೂ ಹಾಗೆಯೇ ಈ ಚುನಾವಣಾ ಒಪ್ಪಂದ ನಡೆಸಿರುವವರೂ ಇದ್ದಾರೆಂದು ಬಹಳ ಚಾಣಾಕ್ಷತನದಿಂದ ಬದಲಿತ್ತರು. ಚುನಾವಣಾ ಒಕ್ಕೂಟದಲ್ಲಿ ಹಾಗಿರಲಿ, ಸ್ವತಂತ್ರ ಪಾರ್ಟಿಯಲ್ಲೇ ಇರುವವರೆಲ್ಲರೂ ಸ್ವತಂತ್ರರೇ ಇದ್ದಾರೆ. ಅವರನ್ನು ಆದ್ಯಾವ ತತ್ವ ಅಥವಾ ಧ್ಯೇಯಧೋರಣೆ ಬಂಧಿಸುವದಿಲ್ಲ. ಶ್ರೀ ರಾಜಾಜಿಯವರು ಕಾಂಗ್ರೆಸ್ಸನ್ನು ಆ ಗುಂಪಿಗೇನೇ ಸೇರಿಸಿ ಬಿಟ್ಟಿರುವರು. ಯಾಕೆಂದರೆ ಪರಿಸ್ಥಿತಿ ಅಲ್ಲೂ ಹಾಗೇನೇ ಇದೆ. ಇತ್ತೀಚಿಗಿನ ಗೋಹತ್ಯಾ ನಿರೋಧ ಆಂದೋಲನದ ಸಮಯ ನಡೆದ ವಿಷಯಗಳತ್ತ ದೃಷ್ಟಿ ಹಾಯಿಸಿದರೂ ಸತ್ಯಸ್ಥಿತಿ ತಿಳಿದು ಬರುತ್ತದೆ. ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜ ಹಾಗೂ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಗೋಹತ್ಯೆಯನ್ನು ನಿಷೇಧಿಸಲು ಸಿದ್ಧರಿಲ್ಲ. ಆದರೆ ಸ. ಶ್ರೀ ಸೇಟ್ ಗೋವಿಂದದಾಸ್, ಕಮಲನಯನ ಬಜಾಜ್, ಗುಲ್ಜಾರಿಲಾಲ್ ನಂದಾ, ಸದೋಬಾ ಪಾಟೀಲ್ ಮುಂತಾದವರು ಗೋಹತ್ಯಾ ನಿರೋಧ ಕಾನೂನಿಗ ಪರವಾಗಿ ಇದ್ದಾರೆ. ಆಂಧ್ರದ ಕಾಂಗ್ರೆಸ್ಸಿಗರು ಲಂಕ್ಕನ ಬೃಹತ್ ಕಾರ್ಖಾನೆ ಪರಾಕುಬಟ್ಟಣದಲ್ಲಿರಬೇಕೆಂದು ವಿವಾದಕ್ಕೆ ಮುಂದಾದ್ದಲ್ಲಿ ತಮಿಳುನಾಡಿನ ಕಾಂಗ್ರೆಸ್ಸಿಗರು ಅದು ಸೇಲಮ್ ನಲ್ಲಿರಬೇಕೆಂದು ತಕರಾರು ಮಾಡುತ್ತಿದ್ದಲ್ಲ, ಕರ್ನಾಟಕದ ಕಾಂಗ್ರೆಸ್ಸಿಗರು ಹೊಸಪೇಟೆಯಲ್ಲಿ ಅದಿರಬೇಕೆಂದು ಆಗ್ರಹ ಕೆಲವರೂ ಬೇಳಿದಾದರೂ ಮೆಲ್ಲನ ಕಿರಿಕಿರಿ ಮಾಡುತ್ತಿದ್ದಾರೆ. ಹೀಗೆ ಆ ಪಕ್ಷದವರೆಲ್ಲ ಏಕಸೂತ್ರತೆಗೆ ಒಳಪಟ್ಟವರೆನ್ನುವದು ಸತ್ಯಕ್ಕೆ ಹಾಸ್ಯ ಮಾಡಿದಂತೆಯೇ ಸರಿ. ಏನೇ ಇರಲಿ. ಇದರೊಂದಿಗೆ ಶ್ರೀ ರಾಜಾಜೀಯವರು ಒಕ್ಕೂಟ ಸರಕಾರದಂತೆ ರಾಷ್ಟ್ರೀಯ ಸರಕಾರ ಇರಬೇಕೆಂದು ರಾದ್ಧಾಂತ ಮಾಡುತ್ತಿದ್ದಾರೆ ಹಾಗಾದರೆ ಈಗ ಇರುವದು ರಾಷ್ಟ್ರೀಯ ಸರಕಾರವಲ್ಲವೇನು? ಪಕ್ಷ ಸರಕಾರದ ಬದಲು ಬುದ್ಧಿವಂತರ ಪಕ್ಷಾತೀತ ಸರಕಾರವಿರಬೇಕೆಂಬುದು ಶ್ರೀ ರಾಜಾಜೀಯವರ ಅಭಿಪ್ರಾಯ. ಇದು ಅವರ ಹೃದಯದ ಅಂತರಾಳದಿಂದ ಬಂದಿರುವ ಮಾತೆನ್ನುವದು ಸ್ವಲ್ಪ ಕಷ್ಟ. ಯಾಕೆಂದರೆ ಅವರು ಕಾಂಗ್ರೆಸ್ಸಿನಲ್ಲಿದ್ದು ಮಂತ್ರಿಯಾಗಿದ್ದಾಗ ಅದೆಷ್ಟು ಅನ್ಯಪಕ್ಷದವರಿಗೆ ಸ್ಥಾನಕೊಟ್ಟಿದ್ದಾರೆ? ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರ ಇರುವಿಕೆ ಇವರಿಗೆ ಅಂದು ಹಿಡಿಸಿರಲಿಲ್ಲ. ಆದರೆ ಅವೇ ಶ್ರೀ ರಾಜಾಜಿ ಇಂದು ಸ್ಥಾನವಿಲ್ಲದೆ ಸುತ್ತಾಡುತ್ತಿರುವಾಗ ರಾಷ್ಟ್ರೀಯ ಸರಕಾರದ ಸೊಲ್ಲನ್ನೆತ್ತುತ್ತಿದ್ದಾರೆ! ಇದೇ ರಾಜಕೀಯದಲ್ಲಿರುವ ವೈಚಿತ್ರ್ಯ! ಇದು ಸಾಧ್ಯವೇ ಇಲ್ಲವೆಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ— ಕಮ್ಯೂನಿಸ್ಟರು ಸ್ವರ ಸೇರಿಸುತ್ತಿದ್ದಾರೆ. ಅದು ಅವರವರ ಅಭಿಪ್ರಾಯವೇ ಇದೆ. ಆದರೆ ಒಂದು ವಿಷಯವನ್ನು ಮರೆಯಲು ಸಾಧ್ಯವಿಲ್ಲ. ಪಕ್ಷ ಹಾಗೂ ವೈಯಕ್ತಿಕ ಭಿನ್ನಾಭಿಪ್ರಾಯ ಇದಿಷ್ಟಿದ್ದರೂ, ಇದು ನನ್ನ ರಾಷ್ಟ್ರ, ದೇಶವೆಂಬ ಮೂಲಭೂತ ವಿಷಯ ಜ್ಞಾಪಕದಲ್ಲಿದ್ದರೆ ಒಕ್ಕೂಟ ಸರಕಾರದ ಅಥವಾ ರಾಷ್ಟ್ರೀಯ ಸರಕಾರವು ಗಗನ ಕುಸುಮವಲ್ಲ. ಉತ್ತಮ ಫಲದಾಯಕವಾಗಿ ಪರಿಣಮಿಸುವುದಿತ್ತು. ಮೂಲಭೂತ ವಿಷಯದ ಅಭಾವವೇ ಇಂದಿನ ಎಲ್ಲಾ ಸಮಸ್ಯೆ—ಹೊಡೆದಾಟ— ಕಚ್ಚಾಟಗಳಿಗೆ ಕಾರಣ. ಶ್ರೀ ರಾಜಾಜಿಯವರಿಗೆ ಇದೆಲ್ಲಾ ಬೇಕಾಗಿರುವದಿಲ್ಲ. ಅವರಿಗೆ ಕಾಂಗ್ರೆಸ್ಸಿನ ಇತಿಶ್ರೀಯಾಗಬೇಕು, ಅಷ್ಟೇ. ಈ ಒಂದು ಕಾರಣದಿಂದಾಗಿ ಅವರು ದ್ರಾವಿಡ ಮುನ್ನೇಟ್ರ ಕಳ್ಗಂ, ಮುಸ್ಲಿಂಲೀಗ್ ಕಮ್ಯೂನಿಸ್ಟ್ ಪಕ್ಷ, ತಮಿಳು ಅರಸು ಕಳ್ಗಂ ಮುಂತಾದ ವಿಭಜನಾವಾದಿ, ಮತೀಯ, ದೇಶದ್ರೋಹಿ ಹಾಗೂ ಸ್ಥಾನೀಯ ಅಥವಾ ಭಾಷಾಭ್ರಮೆಗೊಳಗಾಗಿರುವ ಪಕ್ಷಗಳೊಂದಿಗೆ ಕೈ ಸೇರಿಸಿಕೊಂಡು ಕಾಂಗ್ರೆಸ್ಸಿನ ಕಾಲನ್ನೆಳೆಯಲು ಪ್ರಯತ್ನಿಸುತ್ತಿದ್ದಾರೆ. ಇದರಲ್ಲಿ ಅವರದ, ತಂತ್ರಶಾಲಿ ಹಾಗೂ ಪಳಗಿದ ಕೈ ಹಾದು. ಇಲ್ಲದಿದ್ದಲ್ಲಿ ರಾಜಸ್ಥಾನ, ಗುಜರಾಥ ಮುಂತಾದಡೆ ಭಾರತೀಯ ಜನಸಂಘದೊಂದಿಗೆ ಚುನಾವಣಾ ಮೈತ್ರಿ ನಡೆಸಿಕೊಂಡಿರುವ ಸ್ವತಂತ್ರ ಪಾರ್ಟಿಯು ಮದ್ರಾಸಿನಲ್ಲಿ ಜನಸಂಘವನ್ನು ಕಡೆಗಣ್ಣೆತ್ತಿಯೂ ನೋಡಿರುವದಿಲ್ಲ! ಅದು ಪ್ರಭಲವಾಗದ ಹಾಗೆ ನೋಡಿಕೊಂಡು ಜಾಗ್ರತೆವಹಿಸಿದವರೂ ಶ್ರೀ ರಾಜಾಜೀ ಎಂಬುದನ್ನು ಯಾರೂ ಮರೆಯಲಾರರು.

ಹೀಗೆ ಇದೆ ಸ್ವತಂತ್ರ ಪಾರ್ಟಿಯ ಚಕ್ರವರ್ತಿ ರಾಜಗೋಪಾಲಾಚಾರ್ಯರವರ ರಾಜಕೀಯ.



ಸೈಗಾನಿಗೆ ಸಮೀಪವಿರುವ ವಿಯತನಾಮ ಯುದ್ಧದಲ್ಲಿ ಭಾಗವಹಿಸುವ ಅಮೇರಿಕನ್ ಹೆಲಿಕಾಪ್ಟರು, ಮತ್ತಿತರ ಸಮರ ಸಾಧನಗಳು ಉರುವಲು ತುಂಬಿ ಕೊಳ್ಳುತ್ತಿವೆ. ಮುಂದಿನ ಹೋರಾಟಕ್ಕೆ ನಾಂದಿಯಾಗಿ.

ಹೋಳಿ ಹಬ್ಬವು ಕೆಲಿಸುವ ಪಾಠ

ಮುಕ್ಕಣ್ಣಗೆ ಸಿಲುಕಿದ ಮಾರ

ಬರೆದವರು ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

"ಹೋಳಿ ಹಬ್ಬ" ಎಂದೊಡನೆಯೇ ನಮ್ಮ ಕಣ್ಣ ಮುಂದೆ ಸುಳಿಯುವ ವ್ಯಕ್ತಿಗಳು ಇಬ್ಬರು. ವ್ಯಾಘ್ರ ಚರ್ಮಾಂಬರ ಧಾರಿಯಾದ ಶಂಕರನೂ, ಪುಷ್ಪ ಬಾಣವನ್ನು ಧರಿಸಿರುವ ಮನ್ಮಥನೂ ನಮ್ಮ ಸ್ಮೃತಿಪಟಲಕ್ಕೆ ಗೋಚರಿಸುವರು. ಆ ಬಗ್ಗೆ ಕಥೆಯೊಂದನ್ನು ಜ್ಞಾಪಿಸೋಣ.

ತಾರಕನೆಂಬ ರಕ್ಕಸನು ವಜ್ರಾಂಗ ಮತ್ತು ವಜ್ರಾಂಗಿಯರ ಪುತ್ರನಾಗಿರುತ್ತಾ 'ಪಾರಿಯಾತ್ರ'ವೆಂಬ ಬೆಟ್ಟದಲ್ಲಿ ಬ್ರಹ್ಮದೇವನನ್ನು ಕುರಿತು ಕಠಿಣ ತಪಸ್ಸನ್ನಾಚರಿಸ ತೊಡಗಿದನು. ತಪಸ್ಸಿಗೆ ಒಲಿದ ವಿಧಾತನು ತಾರಕನಿಗೆ ಪ್ರತ್ಯಕ್ಷನಾಗಿ ಬೇಕಾದ ವರವನ್ನು ನೀಡುವೆನೆನ್ನಲು— "ಹುಟ್ಟಿದ ಏಳು ದಿನಗಳೊಳಗಿನ ಶಿಶುವಿನಿಂದಲ್ಲದೆ— ಉಳಿದ ಯಾರಿಂದಲೂ ಮರಣವುಂಟಾಗಬಾರದು" ಎಂದು ವರ ಕೇಳಿಕೊಂಡನು. ಬ್ರಹ್ಮನು "ತಥಾಸ್ತು" ಎಂದು ಹೇಳಿ ಮಾಯವಾದನು.

"ಬ್ರಹ್ಮನಿಗ ಹುಚ್ಚು! ಏಳು ವರ್ಷದ ಶಿಶುವು ನನ್ನನ್ನು ಕೊಲ್ಲುವುದು ಸಾಧ್ಯವೇ?' ಎಂಬ ದೃಢ ನಿರ್ಧಾರವೇ—ರಕ್ಕಸನನ್ನು ಆ ರೀತಿಯ—ವರ ಕೇಳುವಂತೆ ಮಾಡಿತ. ವರವೂ ದಕ್ಕಿತು ಮನಸ್ಸೂ ಸೊಕ್ಕಿತು. ಅಹಂಕಾರ ಉಕ್ಕಿತು. ದೇವಲೋಕಕ್ಕೇ ತಾರಕಾಸುರನ ಹಾವಳಿಯೂ ಯಿತು. 'ಇವೆಲ್ಲದಕ್ಕೆ ಮೂಲಕಾರಣ ಬ್ರಹ್ಮದೇವ" ಎಂದು ಆಲೋಚಿಸಿದ ದೇವೇಂದ್ರನು ದೇವತೆಗಳ ಸಮೂಹದೊಂದಿಗೇ ಹೋಗಿ ಬ್ರಹ್ಮದೇವನಲ್ಲಿ ತಾರಕನ ಹಾವಳಿಯನ್ನು ತೋಡಿಕೊಂಡರು. ಕಿಂಕರ್ತವ್ಯತಾ ಮೂಢನಾದ ಬ್ರಹ್ಮನು— "ಹೌದು, ಆ ತಾರಕನ ತಪಸ್ಸಿಗೊಲಿದ ನಾನು ವರ ಕೊಟ್ಟಿದ್ದು ನಿಜ. ಆದರೆ ಈಗ ರಕ್ಕಸನಿಗೆ ಅಹಂಕಾರ ಬಂದಿದೆ. ಏನು ಮಾಡಲಿ!....ಆದರೆ.. ಒಂದು ದಾರಿಯಿದೆ. ಇದು ಮಹೇಶ್ವರನಿಂದ ಮಾತ್ರ ಸಾಧ್ಯವಿದೆ. ಹಾಗೆ ಆಗ ಬೇಕಾದರೆ ಶಿವ—ಪಾರ್ವತಿಯರು ಒಂದಾಗ ಬೇಕು. ಹಾಗೆ ಒಂದುಗೂಡಿದಲ್ಲಿ ಅವರಲ್ಲಿ ಕಾರ್ತಿಕೇಯನು ಜನಿಸಿ, ಹುಟ್ಟಿದ ಏಳನೆಯ ದಿನಗಳೊಳಗೇ ತಾರಕಾಸುರನನ್ನು ಸಂಹಾರ ಮಾಡುವವನಲ್ಲದೆ ನಿಮ್ಮ ಸೇನೆಗೇ ಅಧಿಪತಿಯಾಗಲಿರುವನು ಆದರೆ ಈ ಕೆಲಸವು ಸುಲಭವಾಗಿ ಆಗಲಾರದು. ಇದಕ್ಕಾಗಿ ನೀವು ಮನ್ಮಥನ ಸಹಾಯ ಪಡೆಯಬೇಕು" ಎಂದನು.

ಕೂಡಲೇ ದೇವತೆಗಳೆಲ್ಲರೂ ಕಾಮಜನಕ ಶ್ರೀಶ್ವರನಲ್ಲಿಗೆ ತೆರಳಿ, ನಡೆದ ವಿಚಾರಗಳೆಲ್ಲವನ್ನೂ ಅವನಿಗೆ ತಿಳಿಸಿ "ಶಿವನಿಗೆ ಪುಷ್ಪ ಬಾಣವನ್ನು ಹೂಡಿ ಶಿವಪಾರ್ವತಿಯರನ್ನು ಒಂದುಗೂಡಿಸಿ ದೇವತೆಗಳಿಂದ ನಮಗೆ ಸ್ವಾತಂತ್ರ್ಯವನ್ನು ಒದಗಿಸಿ ಕೊಡಬೇಕು" ಎಂದು ಬೇಡಿಕೊಂಡರು.

ತನಗೆ ಮುಂದೆ ಮೃತ್ಯು ಇದೆ ಎಂದು ಗೊತ್ತಿದ್ದರೂ ಪರೋಪಕಾರಾರ್ಥಂ ಇದಂ ಶರೀರಂ ಎಂಬಂತೆ ಒಪ್ಪಿದನು. ಶಿವನಿಗೆ ಪಂಚ ಬಾಣವನ್ನು ಬಿಟ್ಟೇ ಬಿಟ್ಟನು. ತಪೋಭಂಗವಾಗಲು ತ್ರಿನೇತ್ರನು ತನ್ನ ಹಣೆಗಣ್ಣನ್ನು ತೆರೆದನು. ಕೂಡಲೇ ಮನ್ಮಥನು ಭಸ್ಮವಾದನು. (ಆದರೆ ಮುಂದೆ ಕೃಷ್ಣನ ಮಗ ಪ್ರದ್ಯುಮ್ನನೆಂಬ ಹೆಸರಿನಿಂದ ಅವತರಿಸಿ ರತಿಯನ್ನು ಹೆಂಡತಿಯನ್ನಾಗಿ ಪಡೆಯುವನು.)

ಇನ್ನೇನು ಮನ್ಮಥನ ಕಾಯವಳಿದ ಮೇಲೆ [illegible] ಶಿವ— ಪಾರ್ವತಿಯರ [illegible] ತ್ರ್ಯವನ್ನು ಒದಗಿಸುವನು.

[illegible]

ಹೋಳಿ ಹಬ್ಬ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೨

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಪರಾಶರಕಂಡ ಪರತತ್ತ್ವ–ಭಾಗ—೧
(ವೇದವ್ಯಾಸರ ವಿಷ್ಣು ಪುರಾಣದ ಕನ್ನಡ ರೂಪ)

ಲೇಖಕರು: ಶ್ರೀ ಬನ್ನಂಜೆ ಗೋವಿಂದಾಚಾರ್ಯ.

ಪ್ರಕಾಶನ: ಧನ್ಯವಾಣಿ ಪ್ರಕಾಶನ, ಉಡುಪಿ.

ಪುಟಗಳು: ೨೨೦. ಬೆಲೆ: ರೂ. ೪/=

ಹದಿನೆಂಟು ಪುರಾಣಗಳ ಕರ್ತೃ ವೇದವ್ಯಾಸರ ವಿಷ್ಣು ಪುರಾಣ ಚಿಕ್ಕದಾದುದು; ಚಿಕ್ಕದಾದುದು ಅಂದರೆ ಬರಿಯ ೨೩ ಸಾವಿರ ಶ್ಲೋಕಗಳು. ಆದರೆ ನಮಗೆ ದೊರೆತಿರುವುದು ಕೇವಲ ಆರು ಸಾವಿರ ಶ್ಲೋಕಗಳು. ಈ ಶ್ಲೋಕಗಳಲ್ಲಿಯೂ ಸ್ವಯಂ ವೇದವ್ಯಾಸರದ್ದೆಷ್ಟು, ತಾವೂ ಪುರಾಣ ಕರ್ತೃಗಳೆಂದು ಕರೆದು ಕೊಳ್ಳಲು ಅಂಜಿ ಭಗವಾನ್ ವೇದವ್ಯಾಸರ ಮುಖಕ್ಕೆ ಬಣ್ಣ ಬಳಿದವರದ್ದೆಷ್ಟು ಇವೆಲ್ಲ ಅಗೋಚರ, ಅಜ್ಞಾತ. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಇದುವರೆಗೆ ಅಚ್ಚಾದ ಯಾವ ಪ್ರತಿಯನ್ನೂ ಆಧಾರವಾಗಿಟ್ಟು ಕೊಳ್ಳದೆ, ಉಡುಪಿಯ ಪುತ್ತಿಗೆ ಮಠದ ಲೈಬ್ರರಿಯಲ್ಲಿ ದೊರೆತ ಪ್ರತಿಯನ್ನು ಮಾತ್ರ ಕಯಾಗಿಟ್ಟು ಕೊಂಡರು. ಈ ಪ್ರತಿ ಉಳಿದವುಗಳಿಗಿಂತ ಸಾಕಷ್ಟು ಭಿನ್ನವಾಗಿಯೂ ಪರಿಷ್ಕಾರವಾಗಿಯೂ ಇತ್ತೆಂದು ಶ್ರೀ ಆಚಾರ್ಯರು ಹೇಳುತ್ತಾರೆ. 'ವಿಷ್ಣು ಪುರಾಣ'ದಲ್ಲಿ ಮಥಿತಾರ್ಥವು ಸಂಸ್ಕೃತವರಿಯದ ಕನ್ನಡಿಗರಿಗೂ ದೊರೆಯುವಂತಾಗಲಿ ಎಂದು 'ಪರಾಶರ ಕಂಡ ಪರಮ ತತ್ತ್ವ' ಕನ್ನಡಿಗರ ಕೈಸೇರಿದೆ.

'ಪರಾಶರ ಕಂಡ ಪರತತ್ತ್ವ'ದಲ್ಲಿ ವಿಷ್ಣುಪುರಾಣದ ಮೂಲ ಶ್ಲೋಕಗಳನ್ನು ಕೊಟ್ಟು ಅವುಗಳ ಸಾರವನ್ನು ಸರಳಗನ್ನಡದಲ್ಲಿ ನೀಡಲಾಗಿದೆ. ವಿಷ್ಣು ಪುರಾಣದ ನವನೀತವನ್ನು ಕನ್ನಡಿಗರಿಗೆ ಉಣಿಸುವುದಷ್ಟೇ ಈ ಗ್ರಂಥದ ಉದ್ದೇಶವಾದುದರಿಂದ ಇಲ್ಲಿ ಶಬ್ದ ಶಬ್ದಾನುವಾದವಿಲ್ಲ; ಪಾಂಡಿತ್ಯ ಪ್ರದರ್ಶನವಿಲ್ಲ, ಪಾಠಾಂತರಗಳ ಕೀಟಲೆಯಲ್ಲಿ ಮೂಲದ ಅರ್ಥವನ್ನು ಗ್ರಹಿಸಿ, ಅದನ್ನು ಕನ್ನಡದಲ್ಲಿ ಭಟ್ಟಿಯಿಳಿಸುವಲ್ಲಿ ಶ್ರೀ ಆಚಾರ್ಯರು ಯಶಗಳಿಸಿದ್ದಾರೆ. ಉದಾಹರಣೆಗೆ:

ಮೂಲ: ತತಃ ಸ್ಫುರತ್ಕಾಂತಿಮತೀ
ವಿಕಾಸಿಕಮಲೇ ಸ್ಥಿತಾ
ಶ್ರೀರ್ದೇವೀ ಪಯಸಸ್ತ
ಸ್ಮಾದುತ್ಥಿತಾ ಧೃತ ಪಂಕಜಾ॥

ಕನ್ನಡ: ಅನಂತರ ದಿವ್ಯಕಾಂತಿಸೂಸುವ ಶ್ರೀದೇವಿ ಕಮಲಪಾಣಿಯಾಗಿ ಅರಳುತಾವರೆಯ ಮೇಲೆ ಕುಳಿತು ಮೂಡಿ ಬಂದಳು—ಇದು ಶ್ರೀ ಆಚಾರ್ಯರ ಭಾಷಾ ಸರಳತೆಗೂ ವಿಷಯ ಪ್ರಜ್ಞಾನಕ್ಕೂ ಒಂದು ನಿದರ್ಶನ. ಹೀಗೆ 'ಪರಾಶರ ಕಂಡ ಪರತತ್ತ್ವ'ದ ಮೊದಲಭಾಗವು ಒಂದು ಉಪಯುಕ್ತ ಸಂಗ್ರಾಹ್ಯ ಗ್ರಂಥವಾಗಿದೆ. ಇದರ ಮುಂದಿನ ಭಾಗಗಳೂ ಆದಷ್ಟು ಶೀಘ್ರ ಕನ್ನಡಿಗರಿಗೆ ದೊರೆಯುವಂತಾಗಲಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಶ್ರೀ ವಾದಿರಾಜ ಗುರುವರ 'ಕೃಪಾತರಂಗ'

ಬರೆದವರು:–'ಗಿರಿಬಾಲೆ', ಪ್ರಕಾಶನ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕನ್ನಡ.

ಪುಟಗಳು: ೯೬. ಬೆಲೆ: ೧=೫೦.

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಾದಿರಾಜ ಸ್ವಾಮಿಯವರು ತಮ್ಮ ಕಾಲದ ಮಹಾವಿಭೂತಿಯಾಗಿದ್ದರು. ಅವರಿಂದಾಗಿಯೇ ಉತ್ತರ ಕನ್ನಡದ ಮಲೆ ಗಿರಿನಾಡು ಸೋದೆಗೆ ಹೆಸರು ಬಂದಿದೆಯೆನ್ನಬಹುದು. ಸೋದೆಯ ಹಿರಿಮೆ ಮಹಿಮೆಗಳಿಗೆ ಗುರು ವಾದಿರಾಜರ ಹಿರಿಮೆ ಮಹಿಮೆಗಳೇ ಕಾರಣ. ಶ್ರೀ ಸೋದಾ ಸಂದರ್ಶನದಿಂದ ಪ್ರಭಾವಿತೆಯರಾದ 'ಗಿರಿಬಾಲೆ'ಯವರು ವಾದಿರಾಜ ಗುರುಗಳ ಸ್ತುತಿಯನ್ನು ಮಾಡಿದರು. ಈ ಸ್ತುತಿ ರೂಪವಾದ ೫೨ ತರಂಗಗಳು ಈ ಹೊತ್ತಿಗೆಯಲ್ಲಿ ಸಂಗ್ರಹವಾಗಿವೆ.

ಕೀರ್ತನೆಗಳ ರೂಪದಲ್ಲಿರುವ ಈ ಸ್ತುತಿಗಳು ದಾಸ ಸಾಹಿತ್ಯದ ಧಾಟಿಯಲ್ಲೇ ಇವೆ. 'ಗಿರಿಬಾಲೆ ವರದ' ಎಂಬ ಅಂಕಿತ ಪ್ರತಿ ಕೀರ್ತನೆಯಲ್ಲೂ ಇವೆ. ಶ್ರೀ ಗುರು ವರೇಣ್ಯರ ಮಹಿಮೆ, ಸೋದಾಕ್ಷೇತ್ರದ ಹಿರಿಮೆ, ಹಯವದನ ಗರಿಮೆ ಇವುಗಳೊಡನೆ ಉಡುಪಿಯ ಶ್ರೀ ಕೃಷ್ಣನಿಗೆ ಸಂಬಂಧಿಸಿದ ಕೀರ್ತನೆಗಳೂ ಇವೆ. 'ಪರಮಾತ ಭಕ್ತರೆ ಭರದಿ ಬನ್ನಿರಿ ಸೋದೆಗೆ' ಎಂದು ವೈಷ್ಣವರನ್ನು ಸೋದೆಗೆ ಎಳೆದುಕೊಂಡು ಹೋಗುತ್ತಾರೆ ಗಿರಿ ಬಾಲೆ. 'ಹರಿ ಕೈ ಬಿಟ್ಟರು ನೀ ಬಿಡದಿರಯ್ಯ' ಎಂದು ಕೃಪಾ ನಿಧಿ ಗುರು ವಾದಿರಾಜರೊಡನೆ ಪ್ರಾರ್ಥಿಸುತ್ತಾರೆ. ಯತಿಕುಲ ತಿಲಕರೊಡನೆ 'ನಾನು ಮತಿಭ್ರಾಂತಳಾದೆನಯ್ಯ' ಎಂದು ಚ್ಯುತಿಗಳನ್ನು ಮನ್ನಿಸಬೇಕೆಂದು ಬೇಡುತ್ತಾರೆ. ಅನುಗ್ರಹ-ದಯವನ್ನು ಬಯಸುತ್ತಾರೆ.

ಪ್ರತಿಯೊಂದು ಹಾಡೂ ರಾಗ-ತಾಳ-ಲಯಬದ್ಧವಾಗಿರುವುದರಿಂದ ಗೇಯವಾಗಿದೆ. ಕೀರ್ತನೆಗಳನ್ನು ಹಾಡುವಂತೆಯೇ ಇವನ್ನೂ ಹಾಡಬಹುದು. ಗ್ರಂಥಾಂತ್ಯದಲ್ಲಿನ 'ಹೃದ್ಗತ' ಶ್ರೀಗುರು ವಾದಿರಾಜರ ಸೋದೆಯ ಮಹಿಮಾತಿಶಯವನ್ನು ವರ್ಣಿಸುತ್ತದೆ. —ಗೋರಾ

ನರಬಲಿ ಕೊಡುತ್ತಿದ್ದ ಕೊಳ್ಳೆಗಾರ

(ಏಳನೇ ಪುಟದಿಂದ)

ಮು ವಹಿಸಿಯೂ ಹತ್ತಿಕ್ಕಲಾರದೆ ಹೋದರು.

ಭೀಕನು ರಾತ್ರಿಹೊತ್ತಿನಲ್ಲಿ ತನ್ನ ಸಂಘದವರಿಂದ ಬೇರ್ಪಟ್ಟು ಗುಪ್ತ ವಿಧಾನಗಳಲ್ಲಿಯೇ ಜೀವಿಸುತ್ತಿದ್ದನು.

ಭೀಕನ ಪಂಗಡದ ಸ್ವಯಂ ಸೇವಕರ ಪೈಕಿ ೧೨ ಮಂದಿ ಆತನ ವಿಶ್ವಾಸಾದರಗಳಿಗೆ ಹೆಚ್ಚಿನ ಪಾತ್ರರಾಗಿದ್ದರು.

ಪ್ರತಿ ತಿಂಗಳ ಕೊನೇ ದಿನ ರಾತ್ರಿ ತನ್ನ 'ಅತಿ ಸ್ನೇಹಿತ'ರ ಪೈಕಿ ಒಬ್ಬನನ್ನು ಜತೆಯಲ್ಲಿ ಕರಕೊಂಡು ಕಾಳೀ ವಿಗ್ರಹದ ಬಳಿ ಹೋಗುವನು. ಸ್ನೇಹಿತನನ್ನು ಕಾಳಿಗೆ ಬಲಿಯರ್ಪಿಸಿ ಮರುದಿನ ತನ್ನ ಸಂಘದವರೊಂದಿಗೇ ಸೇರುವನು.

ಹೀಗೆ ಭೀಕನೊಂದಿಗೆ ಒಟ್ಟೊಬ್ಬರಾಗಿ ತೆರಳಿ ಮರಳದವರ ಸಂಖ್ಯೆ ಹತ್ತಾಯ್ತು. ಹನ್ನೊಂದನೇಯವನೂ ತನ್ನನ್ನು ನುಗವುಸುವಂತೆ ಭೀಕ ಅಪೇಕ್ಷಿಸಿದಾಗ ಹನ್ನೆರಡನೇಯವನಿಗೆ ಸಂದೇಹವಾಯಿತು. ಭೀಕನಿಗೆ ತಿಳಿಯದಂತೆಯೇ ೧೨ನೇಯವನೂ ೧೧ನೇಯವನನ್ನು ಹಿಂಬಾಲಿಸಿದನು.

ಅಂದು ಕರಾಳ ರಾತ್ರಿ. ಭೀಕನು ದಟ್ಟಡವಿಯನ್ನು ಪ್ರವೇಶಿಸಿದಾಗ ೧೧ನೇ ಮಿತ್ರನೂ ಜತೆಯಲ್ಲಿದ್ದನು. ೧೨ನೇಯವನು ಇವರಿಬ್ಬರನ್ನು ಅನುಗಮಿಸಿದ್ದುದು ಯಾರೂ ತಿಳಿದಿರಲಿಲ್ಲ.

ಯೋಗಿಯನ್ನು ಭೀಕ ಪ್ರಥಮ ಬಾರಿ ಕಂಡ ಅದೇ ಸ್ಥಳ. ಕಾಳೀ ವಿಗ್ರಹ ಅಲ್ಲೇ ಇದೆ. ಬಲಿಯರ್ಪಿಸಲಾಗಿದ್ದ ದೇಹಗಳ ಅವಶೇಷಗಳು ವಿಗ್ರಹದ ಬಳಿ ಬಿದ್ದಿವೆ. ಯೋಗಿಯೂ ಅಲ್ಲಿದ್ದು ಇಬ್ಬರೂ ಸ್ನಾನ ತೀರಿಸಿ ಬರುವಂತೆ ಆಜ್ಞಾಪಿಸಿದ್ದ.

ಭೀಕನು ತನ್ನ ಸಂಗಾತಿಯೊಂದಿಗೆ ಮಿಂದು ಬಂದೊಡನೆ ಯೋಗಿಯ ಎಡ ಬಲ ಭಾಗಗಳಲ್ಲಿ ಕುಳಿತು. ಧ್ಯಾನಾಸಕ್ತರಾದರು. ಯೋಗಿ ಮಂತ್ರೋಚ್ಚಾರಣೆ ಮಾಡುತ್ತಿದ್ದ. ಇವರಿಬ್ಬರೂ ಕಣ್ಣುಮುಚ್ಚಿ ಧ್ಯಾನಮಾಡುತ್ತಿದ್ದಾಗ, ಅನಂತರದ ಕಾರ್ಯಕ್ರಮ ಭೀಕರವಾಗಿತ್ತು.

೧೨ನೇಯವನು ಈ ದೃಶ್ಯವನ್ನು ದೂರದಿಂದ ನೋಡುತ್ತಾ ಉಸುರೆತ್ತದೆ ಅವಿತಿದ್ದ.

೧೧ನೇಯವನನ್ನು ಥಟ್ಟನೆ ಭೀಕ ಮತ್ತು ಯೋಗಿ ಹಿಡಿದು ಕಟ್ಟಿ ಬಿಗಿದು ಸಮೀಪದ ಮರದ ಕೊಂಬೆಗೆ ಕಟ್ಟಿ ತಲೆ ಕೆಳಗಾಗಿ ತೂಗಿ ಹಾಕಿದರು. ಅಂದು ಏನೋ ವಿಶೇಷ ತಾಂತ್ರಿಕ ಸಿದ್ಧಿಗಿದ್ದ ಅಟ್ಟಹಯೂಗಿತ್ತು.

ತೂಗಹಾಕಲಾಗಿದ್ದ ಮನುಷ್ಯನ ರಕ್ತವು ಧಾರಾಕಾರವಾಗಿ ಕೆಳಗಿಳಿಸಲಾಗಿದ್ದ ಪಾತ್ರೆಗೆ ಚಿಮ್ಮುವಂತೆ ಆತನ ತಲೆಯನ್ನು ಕತ್ತರಿಸಲಾಗಿತ್ತು.

ಈ ಘೋರ ಕೃತ್ಯವನ್ನು ಕಂಡು ಸಹಿಸದ ೧೨ನೇ ಮಿತ್ರ ಅಲ್ಲಿಂದ ಓಡಿ ಪೋಲೀಸರಿಗೆ ವಿವರವಿತ್ತ.

ಪರಿಣಾಮವಾಗಿ ಸಾಯುಧ ಪೋಲೀಸ್ ಸೇನೆಯು ಸಂಭವ ಸ್ಥಳವನ್ನು ಆ ರಾತ್ರಿಯಲ್ಲೇ ಮುತ್ತಿಗೆ ಹಾಕಿತು. ಗಲಭೆ ಕೇಳಿದ ಭೀಕ ಕೋವಿಯನ್ನು ತಲೆದಿಂಬಾಗಿರಿಸಿ ಮಲಗಿಕೊಂಡಿದ್ದವನು ಓಡಿ ಪಾರಾಗಲು ವಿಫಲ ಯತ್ನಮಾಡಿದ. ಭೀಕನು ಗುಂಡಿನೇಟಿಗೆ ಬಲಿಯಾದ.

(ಆಧಾರದಿಂದ)

ಶಾಲಾ ಕಾಲೇಜು ಲೈಬ್ರೆರಿಗಳಿಗೆ ಉಪಯುಕ್ತ ಪುಸ್ತಕಗಳು

		ರೂ.ಪೈ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿನೇವಾ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಬಿಂದ ಯುಗಂಳು	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರಾ ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಜೀವನಯಾತ್ರೆ	(ನಚಿಕೇತ)	1=50
ಭಾರತದ ವೀರಾಂಗನೆಯರು	(ಕೆ.ಎನ್.ಭಟ್ ಶಿರಾಡಿಪಾಲ್)	1=50
ಮೇರಿ ಕೊಟ್ಟ ಚೆಂಡೋಲೆ	(ಎಸ್. ಸದಾಶಿವ ರಾವ್)	1=80

ವಿವರಗಳಿಗಾಗಿ ಕೆಳಗಿನವರಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ನಗೆ ಬಿಂದು

ರಿಹರ್ಸಲ್

"ನೀವು ಇತ್ತೀಚೆಗೆ ವಿವಾಹವಾದುದಾಗಿ ಕೇಳಿದೆ...."

"ಹೌದು; ಮರಣಾನಂತರ ಒಂದು ವೇಳೆ ನರಕವನ್ನನುಭವಿಸಬೇಕಾಗಿ ಬಂದರೆ ಆ ಬಗ್ಗೆ ಈಗಲೇ ರಿಹರ್ಸಲ್ ಆಗಲೆಂದು ಭಾವಿಸಿ ಮಾತ್ರ...."

o o o

ಅಮಲಿನ ಸಂಬಂಧ

ಶರಾಬು ಸೇವಿಸಿದ ಅಮಲಿನಲ್ಲಿ ಇಬ್ಬರು ಕತ್ತಲಲ್ಲಿ ದಾರಿ ತಡವರಿಸುತ್ತಾ ಗುಡ್ಡದಿಂದ ಇಳಿಯುವಾಗ ಸಂಧಿಸಿದರು.

ಒಬ್ಬ—"ನಿಮಗೆಲ್ಲಿ ಹೋಗಬೇಕು?"

ಇನ್ನೊಬ್ಬ—"ಆ ಮೇಲಿನ ಮನೆ ಜಾನಕಿಯಲ್ಲಿಗೆ....ಅವಳು ನನ್ನ ಪತ್ನಿ."

'ಹಾಗಾದರೆ ನಾವು ಜತೆಯಾಗಿಯೇ ಹೋಗೋಣ. ನಾನು ಆಕೆಯ ಮಗ....'

ಇಲ್ಲದ ಆಗ್ರಹ

ಅಮೇರಿಕಾ ದೇಶದ ಅಧ್ಯಕ್ಷ ಟ್ರೂಮನ್ ಓರ್ವ ಸಂದರ್ಶಕನೊಡನೆ ಹೇಳಿದರು:—

"ಈ ಸ್ಥಾನದಲ್ಲಿರಲು ನನಗೇನೂ ಆಗ್ರಹವಿಲ್ಲ..."

"ಅದೇನು?...."

"ಇದೊಂದು ಭಡ್ತಿಯಿರದ ಉದ್ಯೋಗ ತಾನೆ?...."

—ಎಚ್. ಎಂ.

ಬದುಕು ನಿಮ್ಮದೇ ಆಗಿದೆ

(ಆರನೇ ಪುಟದಿಂದ)

ಮುಂದೆ ಬರುತ್ತವೆ. "ಇವೆಲ್ಲಾ ವಸ್ತುಗಳು ಎಲ್ಲಿಂದ ಬಂದುವು? ಇವುಗಳೆಲ್ಲಾ ಎಲ್ಲಿಗೆ ಹೋಗುವವು ಮತ್ತು ಯಾಕೆ? ಜೀವನಕ್ಕೊಂದು-ಉದ್ದೇಶ ಮತ್ತು ಗುರಿ ಇದೆಯೆ? ಅಥವಾ ಜೀವನವು ಕೇವಲ ಒಂದು ಆಕಸ್ಮಿಕ ಘಟನೆಯೆ?"

ಹೀಗಿರುವ ಪ್ರಬುದ್ಧ ಜೀವಿಗಳಿಗೆ ಧರ್ಮದಲ್ಲಿ ಒಂದು ಅರ್ಥ, ಒಂದು ಉದ್ದೇಶ ಸಿಗುತ್ತದೆ. ಅದು ಮಾರ್ಗವನ್ನೂ ಗುರಿಯನ್ನೂ ತೋರಿಸುತ್ತದೆ. ತತ್ವಹೀನವಾದ ಯಾವ ಧರ್ಮವೂ ಸಾಧ್ಯವಾಗಲಾರದು. ತತ್ವವು ನಾವು ಜೀವಿಸುತ್ತಿರುವ ಲೋಕವನ್ನು ವಿವರಿಸಲು ಪ್ರಯತ್ನಿಸುತ್ತದೆ, ಹಾಗೂ ಅದರ ಕಾರಣಗಳನ್ನು ತಿಳಿಸುತ್ತದೆ. ವಾಸ್ತವಿಕವಾಗಿ ಪೂರ್ವ ಮತ್ತು ಪಶ್ಚಿಮಗಳಲ್ಲಿನ ತಾತ್ವಿಕ ವಿಚಾರಗಳ ಮೂಲಭೂತ ಭೇದವಿರುವುದು ಇಲ್ಲಿಯೇ.

ಸ್ವಾಭಾವಿಕವಾಗಿ ಬಹಿರ್ಮುಖಿಗಳಾದ ಪಾಶ್ಚಾತ್ಯರಿಗೆ ತತ್ವವು ಹೆಚ್ಚೆಂದರೆ ಒಂದು ಐಚ್ಛಿಕ ವಿಜ್ಞಾನ. ಅವರಿಗೆ ತತ್ವವು ಜೀವನದ ಒಂದು ಪಥಸೂಚಕವಾಗಿರುವುದು. ಆದರ್ಶವು ಬದಲಾಗಬಹುದು ಅಲ್ಲ, ಅದು ಆಗ ಬದಲಾಗುತ್ತಿದೆ. ಅದರ ಫಲವಾಗಿ ಪಾಶ್ಚಾತ್ಯರಲ್ಲಿ ಸಾಮಾನ್ಯತ: ಪ್ರತಿಯೊಂದು ದಶಕದಲ್ಲಿ ಒಂದು ಹೊಸ ಆದರ್ಶವು ನಮಗೆ ಕಂಡು ಬರುತ್ತದೆ.

ಪೌರ್ವಾತ್ಯರಲ್ಲಿ, ತತ್ವವು ಜೀವನದ ಮಾರ್ಗದರ್ಶಿ ಮಾತ್ರವಾಗಿರದೆ ಅದಕ್ಕಿಂತ ಮಿಗಿಲಾಗಿ ತಿಳಿಯಲ್ಪಡುತ್ತದೆ. ಯಾಕೆಂದರೆ ಆರ್ಯರು ಅತಿ ಪ್ರಾಚೀನಕಾಲದ ಜನರಾಗಿದ್ದರು. ತಾತ್ವಿಕನು ಬೋಧಿಸಿದ ವಿಚಾರಗಳಾಗಲಿ ಆದರ್ಶಗಳಾಗಲಿ ಅವು ಆಚರಣೆ ಯೋಗ್ಯವಾಗಬೇಕೆಂಬುದು ಅವರ ಅಪೇಕ್ಷೆ. ಅಂತೆಯೆ ತಾತ್ವಿಕನು ಆದರ್ಶ ಲೋಕದ ಉಜ್ವಲ ಚಿತ್ರವನ್ನು ರೂಪಿಸಿದರೆ ಮಾತ್ರ ಸಾಲದು. ಆತನು ಅದರ ಚಿತ್ರವನ್ನೂ ಮತ್ತು ವಿವರವಾಗಿ ಅದನ್ನು ಮುಟ್ಟುವ ದಾರಿಯನ್ನೂ ಸೂಚಿಸಬೇಕೆಂದು ಬಲವಂತ ಮಾಡುತ್ತಿದ್ದರು. ಏವಂಚ ಪೌರ್ವಾತ್ಯರಿಗೆ ತತ್ವವು ಜೀವನದ ಒಂದು ದೃಷ್ಟಿ ಮಾತ್ರವಲ್ಲ, ಜೀವನದ ಪಥವೂ ಆಗಿದ್ದಿತು.

ಜೀವನದ ದೃಷ್ಟಿಯನ್ನು ಸೂಚಿಸುವ ತತ್ವವು ನಿಶ್ಚಯವಾಗಿಯೂ ಶಾಸ್ತ್ರೀಯವಾಗಲು ಸಾಧ್ಯ. ಆದರ ಅದಕ್ಕೊಂದು ನಿಯಮವಿಂಲ್ಲರದು. ನಿಯಮವಿಲ್ಲದ ವಿಜ್ಞಾನ ಶಾಸ್ತ್ರವು ಮಕ್ಕಳು ಓದುವ ಕಟ್ಟುಕತೆಗಳಾಗಬಹುದು. ಈ ವಿಚಾರದ ಹಿನ್ನಲೆಯಲ್ಲಿ ಲೋಕದ ಎಲ್ಲಾ ಧರ್ಮಗಳನ್ನು ವಿಮರ್ಶಿಸಿದರ, ಅಸ್ತಿತ್ವದಲ್ಲಿರುವ ಬೇರೆಲ್ಲಾ ಧರ್ಮಗಳಿಗಿಂತ ಉಚ್ಚವಾಗಿ ಹಿಂದೂ ಧರ್ಮವು ವೇದಾಂತ ತತ್ವದ ಮೂಲಕ, ಪರಿಷ್ಕೃತ ಜೀವನವನ್ನು ಸಂಘಟಿಸುವ, ಶಾಂತಿಯುತವಾದ ಲೋಕ ನಿರ್ಮಾಣದ ಬುನಾದಿಯನ್ನು ವಿವೇಚಿಸುವುದು. ಮಾತ್ರವಲ್ಲ ಅದು ಸಮಾಧಾನಕರವಾದ ತರ್ಕದಿಂದ ಅಮೌಲ್ಯಗಳು ಯಾಕಾಗಿ ಪರಿಪೂರ್ಣವೂ ಮೂಲಭೂತವೂ ಆಗಿರುವುದೆಂಬುದನ್ನು ನಮಗೆ ಕಾಣಿಸಿಕೊಡುತ್ತದೆ.

(ಸ್ವಾಮಿ ಚಿನ್ಮಯಾನಂದರ ಅಭಿಪ್ರಾಯ)

ಪತ್ರಿಕೋದ್ಯೋಗದಲ್ಲಿ ಒಂದು ವಿಶಿಷ್ಟ ಛಾಪು

ವೇ| ಮೂ| ಆರ್. ಕೆ. ಪ್ರಭು

ಬರೆದವರು. ಪ್ರೊ| ಪಿ. ಗುರುರಾಜ ಭಟ್ಟ

ಪತ್ರಿಕೋದ್ಯೋಗದಲ್ಲಿಯೇ ತನ್ನ ಜೀವನವನ್ನು ಸವೆಯಿಸಿ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯನ್ನಿತ್ತು ಜ್ಞಾನಿಯಾಗಿ ಬಾಳಿ ತನ್ನ 84ನೇ ವರ್ಷದಲ್ಲಿ ದೈವಾಧೀನರಾದ ಶ್ರೀ ಆರ್ ಕೆ. ಪ್ರಭುಗಳ ವೃತ್ತಾಂತ ಪರಿಚಯ ಈ ಕೆಳಗಿನಂತಿದೆ.

ಶ್ರೀ ಪ್ರಭುಗಳು ಮಂಗಳೂರಲ್ಲಿ ಗೌರವವಾದ ಗೌಡ ಸಾರಸ್ವತ ಕುಟುಂಬದಲ್ಲಿ ಕ್ರಿ. ಶ. 1882 ಜನನವೆತ್ತಿ ವಿಶ್ವವಿದ್ಯಾನಿಲಯದ ಬಿ ಎ. ಪದವೀಧರರಾಗಿ ಬೊಂಬಾಯಿಯಲ್ಲಿ 60 ವರ್ಷಗಳ ಕಾಲ ಶ್ರಮ ಜೀವನವನ್ನು ಮಾಡಿದವರು. ಇವರು ಸ್ವಲ್ಪ ಸಮಯ ಮಾಯಾವತಿ ಅದ್ವೈತ ಆಶ್ರಮದಲ್ಲಿ ತನ್ನ ಸೇವೆಯನ್ನು ಸಲ್ಲಿಸಿದ್ದರು. ಇವರು ಬೊಂಬಾಯಿಂದ ಹೊರಡುವ "ಬೊಂಬೇ ಕ್ರೊನಿಕಲ್" ಎಂಬ ವಾರ್ತಾಪತ್ರದ ಉಪ ಸಂಪಾದಕರಾಗಿದ್ದು ಅನಂತರದಲ್ಲಿ ಪ್ರಧಾನ ಸಂಪಾದಕರಾಗಿದ್ದರು. ಮಹಾತ್ಮಾ ಗಾಂಧಿಯವರ 'ಯಂಗ್ ಇಂಡಿಯಾ' ಎಂಬ ವಾರ್ತಾ ಪತ್ರದ ಸಂಪಾದಕೀಯವನ್ನೂ ಮಾಡಿಕೊಂಡಿದ್ದರು. "ಗಿರ್ಗಾಂವ್" ಕೋಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ 1938-39 ರಲ್ಲಿ ಕಾರ್ಯವೆಸಗಿದ್ದರು. ಶ್ರೀ ಯಸ್. ಕೆ. ಪಾಟೀಲರೊಡನೆ ಒಂದು ಕಾರಣದಿಂದ ವೈಮನಸ್ಸು ಉಂಟಾಗಿತ್ತು. ಬೊಂಬಾಯಿಯ 'ಎಂಥ್ರಪಲೋಜಿಕಲ್' (ಮಾನವ ಶಾಸ್ತ್ರಕ್ಕೆ ಸಂಬಂಧಿಸಿದ) ಸಂಘದ ಕಾರ್ಯದರ್ಶಿಯಾಗಿಯೂ ತದನಂತರ ಉಪಾಧ್ಯಕ್ಷರಾಗಿಯೂ ದಕ್ಷತೆಯಿಂದ ಕರ್ತವ್ಯ ಪರಿಪಾಲನೆ ಮಾಡಿದವರು ಶ್ರೀ ಪ್ರಭುಗಳು ಈ ಸಂಘದ ನಿಯತಕಾಲಿಕ ಪತ್ರಿಕೆಯಲ್ಲಿ ಇವರ ಬೋಧಪ್ರದವಾದ ಹಲವು ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿದ್ದುವು.

ಇವರ ಕೃತಿಗಳಲ್ಲಿ ಅತ್ಯುತ್ಕೃಷ್ಟವಾದುದೆಂದರೆ 'ದಿ ಮೈಂಡ್ ಓಫ್ ಮಹಾತ್ಮಾ' (ಮಹಾತ್ಮರವರ ಮನಸ್ಸು) ಎಂಬುದು. ಮಹಾತ್ಮಾ ಗಾಂಧಿಯವರ ಕುರಿತಾಗಿ ಅನೇಕ ಲಘು ಗ್ರಂಥ ಲೇಖನಗಳನ್ನೂ ಹೊತ್ತಗೆಗಳನ್ನೂ ಇವರು ಪ್ರಕಟಿಸಿದ್ದರಲ್ಲದೆ, 'ಕ್ವಿಟ್ ಇಂಡಿಯಾ' ಎಂಬ ಶ್ರೀ ಯು. ಆರ್. ರಾವ್‌ರವರೊಡನೆ ಸಹಕರಿಸಿ ಇವರು ಬರೆದ ಕೃತಿಯು ವಿಚಾರಪೂರ್ಣವಾಗಿದೆ. 'ಒರಿಯಂಕಲ್ ಕಾನ್ಫರೆನ್ಸ್'ಗಳಲ್ಲಿ ಹಲವಕ್ಕೆ ವೈದಿಕ ಸಾಹಿತ್ಯಗಳನ್ನೂ ವೈದಿಕ ಸಮಸ್ಯೆಗಳ ಪರಿಹಾರರೂಪವಾಗಿ ಸಂಶೋಧನಾತ್ಮಕ ಲೇಖನಗಳನ್ನೂ ಬರೆದೊಪ್ಪಿಸಿರುವರು. ಇದೊಂದು ವಿಶಿಷ್ಟ ಕೊಡುಗೆ.

ಶ್ರೀ ಪ್ರಭುಗಳು ಅವರ ಅತ್ಯಂತ ದಿನಗಳ ತನಕವೂ ಜ್ಞಾನಜಿಜ್ಞಾಸುಗಳಾಗಿದ್ದರು. ಅವರೊಡನೆ ಮಾತನಾಡುವಾಗ ಅವರು ಆಗಿಂದಾಗ್ಗೆ ಹಿಂದಿನ ಕಾಲದ ನೆನಪುಗಳನ್ನು ಮಾಡಿಕೊಳ್ಳುತ್ತಾ ಅದರ ತಪ್ಪು ಒಪ್ಪುಗಳನ್ನು ನಮೂದಿಸುತ್ತಿದ್ದರಂತೆ. ಇವರ ವೈದಿಕ ಸಾಹಿತ್ಯದ ಸ್ಥೂಲ ಪರಿಚಯವನ್ನು ಇನ್ನೊಂದು ಲೇಖನದಲ್ಲಿ ಮಾಡಿ ಕೊಡುವೆನು ನಿಷ್ಠೆ, ಸತತ ಅಭ್ಯಾಸ ಮತ್ತು ಕೇಂದ್ರೀಕೃತವಾದ ಅವಗಾಹನೆ- ಇವು ಶ್ರೀ ಪ್ರಭುಗಳಲ್ಲಿ ಮೂರ್ತಿಮತ್ತಾಗಿದ್ದುವೆಂದು ಹೇಳಬಲ್ಲೆ. ಇಂತಹ ಒಂದು ವ್ಯಕ್ತಿಯು ನಮ್ಮ ಜಿಲ್ಲೆಯಲ್ಲಿ ಸಾರ್ವಜನಿಕವಾಗಿ ಮಾನ್ಯತೆ ಪಡೆಯದುದು ನಮ್ಮ ಅಜ್ಞಾನವನ್ನು ತಿಳಿಯಪಡಿಸುತ್ತದೆ.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಿಲಿಚಂಡಿಕಲ್ಲು? ಉಡುಪಿ, ದ. ಕ.



Syndicate Bank Marches Ahead.

The Syndicate Bank has continued to make good progress during the year 1966 It made a net profit of Rs 32 91 lakhs in the year 1966 after providing for taxation and bonus to staff Inclusive of carry forward, the total amount available for appropriations is Rs 33 16 lakhs Out of this the Directors have transferred Rs 16 30 lakhs to statutory and other Reserves and Rs 16 35 lakhs to Special Reserve They have proposed to pay dividends at the same rates as paid last year, namely 8 57 percent per annum on Cumulative Preference Shares of Rs 100/ each and 7 1o percent per annum on Cumulative Preference Shares of Rs 10/- each, subject to deduction of tax and 20 percent per annum on A, B and C Class Equity Shares subject to deduction of tax Dividends will absorb Rs 16 77 lakhs from the special reserve

As on 31—12—1966, the total Paid-up Capital of the Bank stands at Rs 1 01 crores (Rs 99 72 lakhs for 1965) The Reserves including Share Premium and Special Reserves stand at Rs 1 34 crores

The Bank's Deposits have increased to Rs 74 02 crores (Rs 58 15 crores in 1965) (an increase of 27 percent over 1965) and Advances to Rs 47 91 crores (Rs. 37 25 crores in 1965) 80 percent of ad[illegible] ully secured Total number of Deposit Accounts have improved from 8 28 lakhs to 9 55 lakhs The Bank opened thirteen branches during the year at Sadashivgad, Betim, Delhi-Chandni Chowk, Mysore—V V Mohalla, Panjim, Madhurai, Ahmedabad, Vizianagaram, Kotekar, Bangalore—H A L, New Delhi- Super Bazar, Poona and Yadiki and has a net work of 217 branches all over the country.

ಪದ್ಮ

(ಹಿಂದಿನ ಸಂಚಿಕೆಯಿಂದ)

ಭಾರತೀಯ ಸಂಸ್ಕೃತಿ, ಕಲೆ, ಧರ್ಮ, ಸಾಹಿತ್ಯಗಳಲ್ಲಿ ಪದ್ಮಕ್ಕೆ ಪವಿತ್ರ ಸ್ಥಾನ. ವಿಷ್ಣು 'ಕಮಲ ನಯನ'— ಪದ್ಮನಾಭ. ಶ್ರೀಮನ್ನಾರಾಯಣನ ನಾಭಿ ಕಮಲದಲ್ಲಿ ಬ್ರಹ್ಮ ಉದಿಸಿ ಬಂದ. ಬೀಕರ ಸ್ವರೂಪಿಣಿ ಶಕ್ತಿ ರೂಪಿಣಿ ಮಹಾಕಾಳಿ ಭಯಂಕರಿ ಆದರೆ ಒಂದು ಕೈಯಲ್ಲಿ ಕತ್ತಿ, ಒಂದು ಕೈಯಲ್ಲಿ ಕತ್ತರಿ, ಒಂದು ಕೈಯಲ್ಲಿ ಪೂರ್ಣ ಕುಂಭ, ಮತ್ತೊಂದು ಕೈಯಲ್ಲಿ ಕಮಲ ಪುಷ್ಪ ಹಿಡಿದಿದ್ದಾಳೆ. ನಾಶವೇ ಅಂತ್ಯವಲ್ಲ ಸೃಷ್ಟಿಯೇ ಅದರ ಇನ್ನೊಂದು ಮುಖ ಅನ್ನುವುದಕ್ಕೆ ಕಾಳಿ ಹಿಡಿದಿರುವ ಪೂರ್ಣಕುಂಭ ಶ್ವೇತ ಪದ್ಮಗಳೇ ಸಾಕ್ಷಿ.

ವಿಷ್ಣು ಪತ್ನಿ ಲಕ್ಷ್ಮಿ ಅನುಗ್ರಹಕಾರಿಣಿ. ಆಕಗೆ ಪದ್ಮ, ಪದ್ಮಾಲಯ, ಪದ್ಮಿನಿ, ಕಮಲಾ ಎಂಬ ಹೆಸರುಗಳುಂಟು. ಲಕ್ಷ್ಮಿ ಧನ ಕನಕ—ಧಾನ್ಯ ಮೊದಲಾದ ಸಂಪತ್ತಿನ ಅಧಿದೇವತೆ. ಪ್ರಸನ್ನವದನೆ. ತನ್ನ ನಾಲ್ಕು ಕೈಯಲ್ಲಿ ಮೇಲಿನ ಎಡ ಬಲ ಕೈಗಳಲ್ಲಿ ಪದ್ಮ ಪುಷ್ಪಗಳನ್ನು ಹಿಡಿದಿರುತ್ತಾಳೆ. ಇನ್ನುಳಿದ ಎರಡು ಕೈಗಳು ವರದ ಅಭಯ ಹಸ್ತಗಳು. ಲಕ್ಷ್ಮಿ ಪದ್ಮಸಂಭವೆ, ಪದ್ಮೇಸ್ಥಿತೆ, ಪದ್ಮವರ್ಣೆ, ಪದ್ಮಾಕ್ಷಿ. ಇವಳಿಗೆ ಶ್ರೀ ಎಂಬ ಮತ್ತೊಂದು ಹೆಸರಿದೆ. ಲಕ್ಷ್ಮಿಗೆ ಅತಿ ಪ್ರಿಯವಾದ ಪುಷ್ಪ ಪದ್ಮ. ಆದ್ದರಿಂದಲೇ ಇವಳಿಗೆ ಪದ್ಮಪ್ರಿಯಾ ಎಂದು ಹೆಸರು.

ಲಕ್ಷ್ಮಿಯ ಸಂಪೂರ್ಣ ಸ್ವರೂಪದ ಸಂಕೇತ ಪದ್ಮ ಪುಷ್ಪವೇ ಆಗಿದೆ. ಪದ್ಮಹಸ್ತ, ಪದ್ಮಪಾಣಿ ಎಂಬ ಹೆಸರುಗಳಿಂದ ಖ್ಯಾತಿಗಳಾದ ಪದ್ಮಾವತಿ ಪದ್ಮಪಾಣಿಯಾದ ಬುದ್ಧದೇವ (ಬೋಧಿಸತ್ವ)ನ ಕೃಪೆಯಿಂದ ಬೌದ್ಧ ಮತದ ಮಹಾಯಾನ ಪಂಥದಲ್ಲಿ ವಿಶಿಷ್ಟ ಸ್ವರೂಪ—ಸ್ಥಾನ ಪಡೆದಿದ್ದಾಳೆ. ಸಂಪತ್ತನ್ನು ಮಾತ್ರವೇ ಅಲ್ಲದ ಮೋಕ್ಷವನ್ನು ಅನುಗ್ರಹಿಸುವ ಕೃಪಾಮಯಿ, ಪದ್ಮಾವತಿ. ಪದ್ಮ ಪುಷ್ಪ ಜ್ಞಾನ ಸಂಕೇತವೂ ಹೌದು. ಲೋಕದ ಕ್ಲೇಶವೂ ಮೋಕ್ಷ ಸಾಮ್ರಾಜ್ಯ ತಲುಪಿದ ಮೇಲೆ ತಾನು ನಿರ್ವಾಣ ಪಡೆಯುತ್ತೇನೆಂಬುದು ಪದ್ಮಪಾಣಿ ಅವಲೋಕೇಶ್ವರನ ಸಂಕಲ್ಪ.

ಯೋಗ ವಿದ್ಯೆಯಲ್ಲಿಯೂ ಪದ್ಮ ಪುಷ್ಪದ ಪ್ರಸ್ತಾಪ ಬರುತ್ತದೆ. ಶಿವ ಶಾಂತ, ಅವನು 'ಪದ್ಮಾಸನಸ್ಥ'. ಸರ್ವ ಲೋಕ ಗುರು ಈಶ್ವರನ ಪಾದಗಳನ್ನು ಭಕ್ತರು ಸಹಜ ಭಕ್ತಿಯಿಂದ 'ಪಾದಪದ್ಮ'ಗಳೆಂದು ಕರೆಯುತ್ತಾರೆ. ತಮಿಳು ನಾಡಿನ ಶ್ರೇಷ್ಠ ಆಳ್ವಾರರುಗಳಿಗೆ ಭಗವಂತನ ಪಾದಗಳು 'ತಿರುವಡಿ ತಾಮರೈಗಳ್'. 'ಅಮೃತ ಸ್ಪಂದಿನಿ ಪಾದ ಪಂಕಜ..' ಅಮೃತ ಧಾರೆಯನ್ನು ಸುರಿಸುವ ಪಾದ ಪಂಕಜಗಳು.

ಹಿಂದೂ, ಬೌದ್ಧ, ಜೈನ, ಧರ್ಮ ಸಾಹಿತ್ಯದಲ್ಲಿ ಪದ್ಮ ಪುಷ್ಪದ ಪ್ರಸ್ತಾಪ ಪ್ರಮುಖವಾಗಿದೆ, ಪ್ರಸಿದ್ಧವಾಗಿದೆ. ಮಾನವನ ಬಾಳು 'ಪದ್ಮ ಪತ್ರಮಿವಾಂಭಸಾ' ಎಂದರೆ ಪದ್ಮ ಪತ್ರದ ಮೇಲಿನ ಜಲ ಬಿಂದುವಿನಂತೆ ಇರಬೇಕು ಎಂದು ಭಾರತೀಯ ಧರ್ಮ ಸಂಸ್ಕೃತಿಗಳು ಸೂಚಿಸುತ್ತವೆ. ಈ ಮಾತನ್ನು ಗೀತಾಚಾರ್ಯ ಭಗವಾನ್ ಶ್ರೀ ಕೃಷ್ಣನೇ ಹೇಳಿದ್ದಾನೆ. ಉಪನಿಷತ್ತಿನಲ್ಲಿ ಶ್ರೀ ದೇವಿಯನ್ನು ಪದ್ಮಪ್ರಭೆ— ಪದ್ಮ ಸುಂದರಿ ಎಂದು ಸಂಬೋಧಿಸಿದೆ. ಶ್ರೀ ಕೃಷ್ಣನನ್ನು ಅರ್ಜುನ "ಕಮಲ ಪತ್ರಾಕ್ಷ" ಎಂದು ಕರೆಯುತ್ತಾನೆ. ಯೋಗ ಶಾಸ್ತ್ರ 'ಆಸನಂ ಪದ್ಮಕಂ ಬದ್ಧ್ವಾ' ಎಂದು ಸೂಚಿಸುತ್ತದೆ. ಧ್ಯಾನಾಸಕ್ತ ಪದ್ಮಾಸನದಲ್ಲಿ ಕುಳಿತುಕೊಳ್ಳಬೇಕು. ಮಾನವನ ಹೃದಯವನ್ನು ಹೃದಯಕಮಲ ಎಂದು ಕರೆಯುತ್ತೇವೆ. ಹೃದಯ ಕಮಲ ಭಗವಂತನ ನೆಲೆ. ಅದವನ ದಿವ್ಯ ಕ್ಷೇತ್ರ.

ತಾವರೆಯ ಶುಭ್ರ - ಧವಳಕಾಂತಿ ಭಾರತದ ಧರ್ಮ ಸಂಸ್ಕೃತಿ, ಸಾತ್ವಿಕ ಧ್ಯೇಯಗಳ ಸಂಕೇತವೆಂದೂ, ಜಗತ್ತಿನಲ್ಲಿ ಉಳಿದು ಕೊಳೆಯನ್ನು ಅಂಟಿಸಿಕೊಳ್ಳದೆ ಶುಭ್ರವಾಗಿಯೇ ಉಳಿಯುವ ಯೋಗಿಹೃದಯ ಪದ್ಮ ಸದೃಶನೆಂದೂ ಭಾರತದ ಸುಪ್ರಸಿದ್ಧ ಕವಿಯತ್ರಿ ದಿ. ಸರೋಜಿನಿ ನಾಯುಡು ಹೇಳುತ್ತಾರೆ ತಮ್ಮ ಪದ್ಯ ಒಂದರಲ್ಲಿ.

ದಕ್ಷಿಣ ಭಾರತದ ನೂರಾರು ದೇವಾಲಯಗಳಲ್ಲಿ ಹಿಂದಿನ ಪ್ರಸಿದ್ಧ ರೂವಾರಿಗಳು ತಮ್ಮ ಕಲಾ ನೈಪುಣ್ಯದಿಂದ ರೂಪಿಸಿರುವ ಪದ್ಮ ಪುಷ್ಪಗಳ ಚಿತ್ರಗಳನ್ನು ಇಂದಿಗೂ ಕಾಣಬಹುದು. ದೇವಾಲಯದ ನವರಂಗಗಳಲ್ಲಿ, ಜಾಲಂದ್ರಗಳಲ್ಲಿ, ಕಂಬಗಳಲ್ಲಿ ನಾನಾಬಗೆಯ ಪದ್ಮ ಪುಷ್ಪಗಳ ಛಾಯೆಯನ್ನೂ ಕಾಣಬಹುದು. ಸಹಸ್ರದಳ, ಶತದಳ ಪದ್ಮ ಪುಷ್ಪಗಳನ್ನೂ ಸೃಷ್ಟಿಯಲ್ಲಿ ಕಾಣಲು ಸಾಧ್ಯವಿಲ್ಲವಾದರೂ ಕಲ್ಲಿನಲ್ಲಿ ಕೆತ್ತಿ ನಿರೂಪಿಸಿರುವುದನ್ನೂ ಕಾಣಬಹುದು, ಆನಂದಿಸಬಹುದು. ಶಿಲ್ಪಿಗಳಲ್ಲಿ ಮೂಡಿ ಬಂದಿರುವ ಪದ್ಮ ಪುಷ್ಪಗಳ ರೇಖೆ, ದಳಗಳ ಸೂಕ್ಷ್ಮತೆ, ಅಂದವಾಗಿದೆ— ಅನಂತವಾಗಿದೆ.

ಕಮಲ ಪುಷ್ಪ ಆಕಾರ, ಅಂದ, ಸೌರಭ, ಸೂಕ್ಷ್ಮತೆ, ವರ್ಣ— ವೈವಿಧ್ಯತೆಗಳಿಂದ ಭಾರತೀಯರ ಹೃದಯವನ್ನೂ ಆಕರ್ಷಿಸಿದೆ—ಆನಂದ ನೀಡಿದೆ. ಸತ್ಯಂ-ಶಿವಂ—ಸುಂದರಂ ತತ್ವಗಳ ಸಂಕೇತವಾಗಿ ಪದ್ಮ ಪುಷ್ಪ ಉಳಿದಿದೆ—ಅದಳಿದ ಎಂದು ಹೇಳುವುದು ಅಪ್ರಕೃತವಾಗಲಾರದು. ಪದ್ಮ ಪುಷ್ಪದ ಪ್ರಭೆ ಪ್ರಸಿದ್ಧವಾದುದು—ಪವಿತ್ರವಾದುದು.

ಕೇವಲ ದಾರಿ ಕೆಂಪು ದೀಪ

ರಾಜ್ಯಾಂಗ ಪ್ರುಟಚೆಂಡಲ್ಲ

ನಮ್ಮ ಬಲುದೊಡ್ಡ ಸಮಸ್ಯೆಗಳಲ್ಲಿ ಒಂದು—ಆಹಾರ.

ಇದನ್ನು ಎದುರಿಸಲಾರದ ಕೇಂದ್ರ ಆಹಾರ ಮಂತ್ರಿಗಳು ಚುನಾವಣೆಗಳಲ್ಲಿ ಬಲಿಯಾದರು. ರಾಜ್ಯದ ಆಹಾರ ಮಂತ್ರಿಗಳು ಅಧಿಕಾರದಲ್ಲಿ ಸಣ್ಣವರಾಗಿರುವುದರಿಂದಲೂ ಇರಬಹುದು, ಆಹಾರಾಸುರನ ಬಾಯಿಯಿಂದ ಪಾರಾಗಿ ಬಂದರು. ಕುಂಭಕರ್ಣನ ಬಾಯಿಯಿಂದೊಳಹೊಕ್ಕು ಮೂಗಿನಿಂದ ಹನುಮಂತ ಹೊರ ಬಂದಿದ್ದನಂತೆ.

ಉಳುವವನೇ ಹೊಲದೊಡೆಯನಾಗಬೇಕು. ಅದಕ್ಕಾಗಿ ಭೂ ಸುಧಾರಣೆ ಕಾನೂನು. ಈ ಕಾನೂನುಗಳು ಸಿಂಧುತ್ವ ಪಡೆಯಲು ರಾಜ್ಯಾಂಗಕ್ಕೆ ತಿದ್ದುಪಡಿ.

ಈ ಮೊದಲಿದ್ದ ಲೋಕಸಭೆಯಲ್ಲಿ ಕಾಂಗ್ರೆಸ್ಸಿನ ಬಹುಮತ ಮಹತ್ತಾಗಿದ್ದುದರಿಂದ ರಾಜ್ಯಾಂಗವನ್ನು ಪುಟಿಸಲು ಅನುಕೂಲ ವಾತಾವರಣವೂ ಇತ್ತು.

ಹಾಗಿದ್ದರೂ ಒಂದೊಮ್ಮೆ ಸರಕಾರ ಸೋತು ಹೋಗಿತ್ತು—ಕಾಂಗ್ರೆಸ್ ಪ್ರತೋದದರ ಧಾರಾಳ ವಿಶ್ವಾಸದಿಂದಾಗಿ.

ಇಂದು ಆ ಪರಿಸ್ಥಿತಿಯಿಲ್ಲ. ಹೊಸ ಸದಸ್ಯರ ಲೋಕ ಸಭೆಯಲ್ಲಿ ಕಾಂಗ್ರೆಸ್ಸು ಗಳಿಸಿರುವುದು ಬರಿಯ ಅರ್ಧ.. ಮೇಲೆ ಒಂದೆರಡು. ಇನ್ನು ಗೊತ್ತಿಲ್ಲಗಳಿರುವ ಬರಿ ಣಾಮಗಳು ಈಗೂ ನಡೆಯ ಬಹುದಾದ ಉಪ ಚುನಾವಣೆಗಳು ಮತ್ತೆರಡು ಸೀಟುಗಳನ್ನು ಒದಗಿಸ ಬಹುದಷ್ಟೆ.

ಸಂವಿಧಾನ ತಿದ್ದುಪಡಿಗೆ ಮೂರರಲ್ಲಿ ಎರಡಂಶ ಮತ ದೊರೆಯ ಬೇಕು—ಅಂದರೆ, ವಿರೋಧೀ ಪಕ್ಷಗಳಿಗೆ ಒಪ್ಪಿತವಾಗದ ತಿದ್ದುಪಡಿ ಮಂಜೂರಾಗುವುದು ಸಾಧ್ಯವಿಲ್ಲ.

ಕಾಂಗ್ರೆಸ್ಸನ್ನು ಸೋಲಿಸುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡ ವಿರೋಧಿ ಪಕ್ಷಗಳ ಇಂದಿನ ವಾತಾವರಣ ಕಾಣುವಾಗ ಅವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಲಕ್ಷಣಗಳೆಲ್ಲ ಅಗೋಚರವೇ.

ಈ ಹಿಂದ ಬೇರೆ ಬೇರೆ ರಾಜ್ಯಗಳು ಮಂಜೂರು ಮಾಡಿಕೊಂಡಿರುವ ಭೂ ಸುಧಾರಣಾ ಕಾನೂನುಗಳಿಗೆ ಸಂವಿಧಾನ ರೀತ್ಯಾ ಮಾನ್ಯತೆ ನೀಡಲು ಮಾಡಿದ ಸಂವಿಧಾನ ತಿದ್ದುಪಡಿ ಈಗ ಆಕ್ಷೇಪಾರ್ಹ.

ಈ ಸಂಬಂಧದ ರಿಟ್ ಅರ್ಜಿಯ ನಿರ್ಣಯ ನೀಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಅತ್ಯಂತ ಮಹತ್ವಪೂರ್ಣವಿದೆ; ಇತಿಹಾಸ ಪ್ರಸಿದ್ಧವಿದೆ.

ಪ್ರಜಾಪ್ರಭುತ್ವದಲ್ಲಿ ರಾಜ್ಯಾಂಗದ ಅಧಿಕಾರ ಪರಮೋಚ್ಚವಾದುದು. ಅದು ನಾಗರಿಕರಿಗೆ ಕೊಡಮಾಡಿದ ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವ ಅಧಿಕಾರ ಪಾರ್ಲಿಮೆಂಟಿಗಿರುವುದಿಲ್ಲ.

ಸಾರ್ವಜನಿಕ ಹಿತದೃಷ್ಟಿಯಿಂದ ಯೋಗ್ಯವಾದುದನ್ನು ಮಾಡಲು ಸರಕಾರಕ್ಕೆ ಅಥವಾ ಪಾರ್ಲಿಮೆಂಟಿಗೆ ಅಧಿಕಾರವಿಲ್ಲವೆ?

ಈ ಪ್ರಶ್ನೆ ಇಲ್ಲಿ ಉದ್ಭೂತವಾಗುವುದಿಲ್ಲ. ಮೂಲಭೂತ ಅಧಿಕಾರಗಳನ್ನು ಮೊಟಕು ಮಾಡುವ ಅಥವಾ ಕಸಿದುಕೊಳ್ಳುವ ಅಧಿಕಾರವು ಸಂಸತ್ತಿಗಿದೆಯೆಂದು ಒಪ್ಪಿಕೊಳ್ಳುವುದು ಪ್ರಜಾಸತ್ತೆಗೆ ಗಂಡಾಂತರಕಾರಿ.

ಅಧಿಕಾರದಲ್ಲಿರುವ ಪಕ್ಷ ಅಥವಾ ಸಂಸತ್ತಿನ ಸದಸ್ಯರು ತಮಗೆ ಬೇಕಾದಂತೆ ಯಾವ ಕ್ಷಣಕ್ಕೂ ರಾಜ್ಯಾಂಗ ರಾಷ್ಟ್ರದ ಜನತೆಗೆ ನೀಡಿರುವ ಮೂಲಭೂತ ಅಧಿಕಾರಗಳನ್ನು ಹಿಂತೆಗೆದುಕೊಳ್ಳಬಹುದು. ಉಚ್ಚಾದರ್ಶಗಳಿಂದಲೂ ಉದಾತ್ತ ಧ್ಯೇಯಗಳಿಂದಲೂ ಕೂಡಿದ ನಮ್ಮ ಸಂವಿಧಾನದ ಭವ್ಯಭವನ ಅರೆಕ್ಷಣದಲ್ಲ ಉರುಳಿ ಬೀಳಬಹುದು —ಸರ್ವಾಧಿಕಾರಕ್ಕೆ ಮುಕ್ತ ದ್ವಾರವಾಗಬಹುದು.

ಸಂವಿಧಾನ ತಿದ್ದುಪಡಿಯು ಕಾನೂನಿನ ತಿದ್ದುಪಡಿಗಿಂತ ಭಿನ್ನವಾಗಿದೆ. ರಾಜ್ಯಾಂಗದ ಪ್ರಕಾರ ತನಗೆ ನೀಡಿದ ಅಧಿಕಾರದಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವುದು ಸಾಧ್ಯವಿಲ್ಲ. ಇಂದು ಸರ್ವೋಚ್ಚ ನ್ಯಾಯಾಲಯದ ಇಂದಿನ ಅಭಿಮತ. ಈ ಹಿಂದೆ ೧೯೫೧ರಲ್ಲಿ ಸಂವಿಧಾನಕ್ಕೆ ಮೊತ್ತ ಮೊದಲ ತಿದ್ದುಪಡಿಯಾಗುವಾಗ ಇದನ್ನು ನ್ಯಾಯಾಲಯವು ಮನ್ನಿಸಿತ್ತು. ಹಾಗೆಯೇ ೧೯೬೪ರಲ್ಲಿ ರಾಜ್ಯಾಂಗದ ೧೭ನೇ ತಿದ್ದುಪಡಿಯು "ರಾಜ್ಯಾಂಗದಲ್ಲಿ ನಮೂದಿಸಿದಂತೆ' ನಡೆದಿರುವುದರಿಂದ ಅದಕ್ಕೂ ಮಾನ್ಯತೆ ದೊರೆತಿತ್ತು.

ಆದರೆ, ಇಂದಿನ ಸ್ಥಿತಿ ಅದಕ್ಕೆ ಹೊರತಾದುದು. ರಾಜ್ಯಾಂಗ ತಿದ್ದುಪಡಿಯಾಗುವಾಗ ಮೂಲಭೂತ ಹಕ್ಕುಗಳಿಗೆ ಧಕ್ಕೆ ತಗಲದಂತೆ ನೋಡಿಕೊಳ್ಳಬೇಕು—ಎಂಬುದು ಮುಂದಿಗೆ ಎಚ್ಚರಿಕೆ ಮಾದರಿ, ವ್ಯಾವಹಾರಿಕತೆಯ ದೃಷ್ಟಿಯಿಂದ ಇದು ವರೆಗೆ ಮಾಡಿರುವ ತಿದ್ದುಪಡಿಗಳನ್ನು ನ್ಯಾಯಾಲಯ ಎತ್ತಿ ಹಿಡಿದಿದೆ.

ಅಂತೂ ಆದದ್ದೆಲ್ಲ ಸರಿಯಾಯಿತು. ಮುಂದೆ?

ಸರ್ವೋಚ್ಚ ನ್ಯಾಯಾಲಯದ ನಿರ್ಣಯದಿಂದ ಹಲವಾರು ವ್ಯಾವಹಾರಿಕ ತೊಂದರೆಗಳು ಉತ್ಪನ್ನವಾಗುತ್ತವೆಯೆಂಬುದು ಕೆಲವರ ಅಭಿಪ್ರಾಯ. ಇವುಗಳಿಗೆ ವ್ಯಾವಹಾರಿಕ ಪರಿಹಾರ ಹುಡುಕಬೇಕು.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
5 H. P. ಪಂಪು ಸೆಟ್ಟುಗಳು........

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು:—
ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್
ಕಾರ್ಕಳ (ದ. ಕ.)

ವಿಜ್ಞಾನದ ಸಾಧನೆ

ಬರಡುಭೂಮಿಯಲ್ಲೂ ಹುಲ್ಲು ಬೆಳೆಯುತ್ತದೆ

ಮಳೆಯಿಲ್ಲದೆ ನಿಮ್ಮ ಮನೆಯ ಮುಂದಿನ ಹುಲ್ಲು ಒಣಗಿ ಹೋಗಿದೆಯೆ? ಅಥವಾ ಉದ್ಯಾನಗಳು ಬರಡಾಗಿವೆಯೆ? ಇನ್ನು ಮುಂದೆ ಎಂತಹ ಬರಡು ಭೂಮಿಯನ್ನಾದರೂ ಹಚ್ಚನೆಯ ಹುಲ್ಲು ಮೈದಾನವಾಗಿ ಪರಿವರ್ತಿಸುವುದು ಸಾಧ್ಯ. ಹುಲ್ಲು ಕೃತಕವಾಗಿ ಬೆಳೆಯುವ ವಿಧಾನವನ್ನು ಇದೀಗ ಜರ್ಮನಿಯ ಭಾರಿ ರಸಾಯನಿಕ ಕೈಗಾರಿಕಾ ಸಂಸ್ಥೆಯೊಂದು ಕಂಡು ಹಿಡಿದಿದೆ. ಬಂಜರು ಭೂಮಿಯನ್ನು ಫಲವತ್ತಾಗಿಸಿ ವ್ಯವಸಾಯ ಯೋಗ್ಯವಾಗಿಸುವಲ್ಲಿ ಇದು ಪ್ರಥಮ ಹೆಜ್ಜೆಯೆಂದು ಅನೇಕರು ಸಂತೋಷಿಸುತ್ತಿರುವರು. ಇತ್ತೀಚಿನ ದಿನವೊಂದರಲ್ಲಿ ಪಶ್ಚಿಮ ಜರ್ಮನಿಯ ಲುಡ್ವಿಗ್ ಷ್ಲೇಫನ್‌ನಲ್ಲಿ ಮಂಜಿನ ಬಿರುಗಾಳಿಯೆದ್ದಂತೆ ಭಾಸವಾಯಿತು. ಆದರೆ ಅದು ಮಂಜಿನ ಬಿರುಗಾಳಿಯಲ್ಲದ ವಿಮಾನದಿಂದ ಎಸೆಯುತ್ತಿದ್ದ ಸಣ್ಣ ಗಾತ್ರದ ಬಿಳಿಯ ಗೋಲಿಗಳೆಂಬುದು ಹತ್ತಿರದಿಂದ ವೀಕ್ಷಿಸುತ್ತಿದ್ದವರಿಗೆ ತಿಳಿದಿತ್ತು. ನಿಜಕ್ಕೂ ಅದು ಮಂಜಿನ ಬಿರುಗಾಳಿಯಾಗಿರದೆ ಲುಡ್ವಿಗ್ ಷ್ಲೇಫನ್‌ನ ಭಾರೀ ರಾಸಾಯನಿಕ ಕೈಗಾರಿಕಾ ಸಂಸ್ಥೆಯೊಂದು ಪಶ್ಚಿಮ ಜರ್ಮನಿಯ ಹಾಗೂ ವಿದೇಶೀಯ ಪತ್ರಿಕಾಕರ್ತರಿಗೆ ತನ್ನ ಅಪೂರ್ವ ಸಾಧನೆಯೊಂದನ್ನು ನಿದರ್ಶನಗಳ ಮೂಲಕ ತೋರಿಸುತ್ತಿದ್ದುದೇ ಅಂದು ಮಂಜಿನ ಬಿರುಗಾಳಿ ಬೀಸುತ್ತಿದೆಯೋ ಎಂದು ದೂರದ ಪ್ರೇಕ್ಷಕರಿಗೆ ಭಾಸವಾಗಲು ಕಾರಣ.

ಹಗುರವಾದ, ಸೋಪಿನ ಗುಳ್ಳೆಗಳಂತೆ ಗಾಳಿಯಲ್ಲಿ ತೇಲಾಡುವ "ಲೈಟ್‌ಸ್ಟೈರಾಪೋರ್" ಎಂಬ ಕೃತಕ ಮಂಜಿನಂತಹ ವಸ್ತುವನ್ನು ವಿಮಾನದಿಂದ ಭೂಮಿಗೆ ಬೀಳಿಸಿದುದೇ ಅಂದಿನ ಪ್ರದರ್ಶನದ ಮುಖ್ಯ ಭಾಗ.

ಈ ಹೊಸ ರಸಾಯನಿಕ ವಸ್ತು ಅನೇಕ ವಿಧಗಳಲ್ಲಿ ಉಪಯೋಗಕ್ಕೆ ಬರಲಿದೆಯಂತೆ. ಕಟ್ಟಡಗಳಲ್ಲಿ ಬಳಸುವ ಉಷ್ಣರಕ್ಷಕ ವಸ್ತುಗಳಲ್ಲಿ ಇದನ್ನು ಬಳಸಬಹುದು. ಶೈತ್ಯೀಕರಣ ಉಪಕರಣಗಳಲ್ಲಿ ಇದನ್ನು ಬಳಸಬಹುದು; ಹಾಗೂ, ಮಾಂಸ, ಮೀನು ಮುಂತಾದುವು ಕೆಡದಂತೆ ರಕ್ಷಿಸಲು ಇದು ಉಪಯೋಗಕರವಾಗಿದೆಯಂತೆ

ಇದಲ್ಲದೆ ಅತ್ಯಂತಹಗುರವಾಗಿರುವ ಮತ್ತೊಂದು ರಸಾಯನಿಕ ವಸ್ತುವನ್ನೂ ಜರ್ಮನಿಯ ರಾಸಾಯನಿಕ ಶಾಸ್ತ್ರಜ್ಞರು ಕಂಡುಹಿಡಿದಿರುವರು. ಇದರಲ್ಲಿ ನೀರು ಹಾಗೂ ಸಸ್ಯಗಳಿಗೆ ಬೇಕಾದ ಪೋಷಕ ದ್ರವ್ಯಗಳನ್ನು ಅಡಕಗೊಳಿಸಲು ಸಾಧ್ಯ. ಸಸ್ಯಗಳಿಗೆ ನೀರು, ಹಾಗೂ ಪೋಷಕ ದ್ರವ್ಯಗಳನ್ನು ನೀಡಲು ಈ ಹೊಸ ವಸ್ತು ಬಹಳ ಉಪಯೋಗಕರವಾಗಿದೆ. ಮಳೆಯಿಲ್ಲದ ಬಂಜರು ಭೂಮಿಗಳಲ್ಲಿ ಸಸ್ಯಗಳನ್ನು ಬೆಳೆಸಲು ಈ ಹೊಸ ರಾಸಾಯನಿಕ ವಸ್ತು ಎಷ್ಟು ಉಪಯೋಗಕರವಾಗಿದೆ! ಮರಳು ಪ್ರದೇಶಗಳಲ್ಲಿಯೂ ಹುಲ್ಲು ಬೆಳೆಯುವಂತೆ ಮಾಡಲು ಇದು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿದೆಯೆಂಬುದನ್ನು ಈಗಾಗಲೇ ಪ್ರಯೋಗಗಳಿಂದ ತೋರಿಸಲಾಗಿದೆ.

ಈ ಹೊಸ ಹುಲ್ಲು ಬೆಳೆಯುವ ಮಂಜಿನ ತೆಳುಫಲಕಗಳಲ್ಲಿ ಹುಲ್ಲು ಬೀಜಗಳು, ಕೃತಕ ಗೊಬ್ಬರ ಮತ್ತು ಹೈಗ್ರೊಮುಲ್ ಎಂಬ ವಸ್ತು—ಇವಿಷ್ಟೂ ಅಡಕವಾಗಿವೆಯಂತೆ. ಇವು ಎಂತಹ ಬರಡು ಭೂಮಿಯಲ್ಲಿಯೂ ಹುಲ್ಲು ಬೆಳೆಯುವಂತೆ ಮಾಡಬಲ್ಲವು. ಲುಡ್ವಿಗ್ ಷ್ಲೇಫನ್‌ನ ಕೈಗಾರಿಕಾ ಸಂಸ್ಥೆಯ ೪೦೦-ಹೆಕ್ಟೇರ್ ವಿಸ್ತೀರ್ಣದ ಪ್ರಯೋಗ ಕ್ಷೇತ್ರದಲ್ಲಿ ಇವುಗಳ ಸಹಾಯದಿಂದ ಹುಲ್ಲು ಬೆಳೆಸಲಾಗಿದೆಯಂತೆ. ಈ ಹೊಸರಾಸಾಯನಿಕ ವಸ್ತುವಿನಲ್ಲಿ ನೀರಿನ ಅಂಶವನ್ನೂ ಸೇರಿಸಲಾಗುತ್ತದೆ.

ಬಂಜರು ಭೂಮಿಯನ್ನು ಸಾಗುವಳಿ ಮಾಡಿ ಬೆಳೆ ಬೆಳೆಯುವ ಆಸೆ ಮನುಷ್ಯನಿಗೆ ಮೊದಲಿನಿಂದಲೂ ಇದೆ. ಜರ್ಮನಿಯ ರಾಸಾಯನಿಕ ಶಾಸ್ತ್ರಜ್ಞರ ಈ ಸಾಧನೆ ಆ ಶೋಧನೆಗೆ ಸಾಧ್ಯವಾದೀತೆಂಬ ಆಶಾಭಾವನೆಗೆ ಎಡೆ ಮಾಡಿದೆ. ಈ ಹೊಸ ವಿಧಾನದ ಸಹಾಯದಿಂದ ಗೋಧಿಯನ್ನೂ ಸಹ ಬೆಳೆಯಬಹುದೆಂಬುದು ಅನೇಕರ ಆಶಯ.

ಈ ಹೊಸ ಸಾಧನ ಸಹರಾವನ್ನು ನಂದನವನವನ್ನಾಗಿ ಪರಿವರ್ತಿಸಲು ಸಹಾಯಕಾರಿಯಾದೀತು!

ದ್ರಾಕ್ಷೆ ಎಟಕ್ಲಿಲ್ಲಾಂತ ಬಳ್ಳಿಯನ್ನ ಅಲ್ಲಾಡ್ಸೋದೆ?

(ನಾಲ್ಕನೇ ಪುಟದಿಂದ)

ರು ಸಂಸ್ಥಾನಾಧಿಪತಿಗಳು, ಇತರ ಪಕ್ಷಕ್ಕೆ ಸೇರಿದವರೂ ಪಕ್ಷಾತೀತರೂ ಹಲವರು. ಇನ್ನು ಕಾಂಗ್ರೆಸ್ಸಿಗರು ಅಂದುಕೊಂಡವರು ಏನು, ಮೂರರಲ್ಲಿ ಒಂದಂಶ....'

"ಅದೇನೇ ಇರ್ಲಿ.... ರಾಜಸ್ಥಾನದ ರಾಜ್ಯಪಾಲ ಸಂಪೂರ್ಣಾನಂದರು...,

"ಅವ್ರು.... ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗಿದ್ದವರು..."

"ಸರಿ ಮತ್ತೆ... ಆದ್ರಿಂದ್ಲೆ ಅವ್ರು..."

"ಹ್ಞಾಂ ನಮ್ಮ... ಅದ್ಕೇ ನೋಡು ಮೊದ್ಲೇ ಅಂದದ್ದು ಮೊಂಡುವಾದ ಮಾಡಬಾರ್ದೂಂತ....'

"ಹ್ಞಾಂ...ಸರಿ. ಬಾಯ್ಮುಚ್ಚಿದೇನ್ನಿ.'

'ತೆರಿಯೇ....'

"ಊ ಹ್ಞಾಂ....'

"ಓಹೋ ಹಾಗೋ....ಸರಿ ಹಾಗಾದ್ರೆ ...ನಾನೇ ತೇರೀತೇನೆ, ಸಾಟಿನ ಕಡ ತಂದು..."

"ಹ್ಞಾಂ...ಸ್ವಲ್ಪ ಸಕ್ಕರೇ ಡಬ್ಬಿಗೆ ಮಗುಳುಗಿಸಿಕೊಂಡು ಬನ್ನಿ...'

"ಹ್ಞಾಂ....ಪರ್ವಾಗಿಲ್ವೇ ನೀನು......ಆದ್ರೆ...ಹಾಗಲ್ಲ ಸಕ್ರ ತಿಂದ್ರೆ ಹೊಟ್ಟೆ ನೋವು ಆದೀತು....'

"ಹ್ಞಾಂ....ಅಗ್ಲಿ ಬಿಡಿ....'

"ಬಿಡೋವಂತೆ ಬೇಡ..."

"ಹಾಗಾದ್ರೆ ಹಿಡೀರಿ...."

"ಹ್ಞಾಂ....ಮತ್ತೆ ...'

—ಗೋರಾ.

ಸೋವಿಯೆತ್ ದೃಷ್ಟಿಯಲ್ಲಿ

ವಾಶಿಂಗ್ಟನ್ ಮತ್ತು ಪೀಕಿಂಗ್

'ವಾಷಿಂಗ್ಟನ್ನಿನ ವ್ಯಾವಹಾರಿಕ ಜ್ಞಾನ ಕೇವಲ ೪೮ ಗಂಟೆಗಳ ಕಾಲ ಮಾತ್ರವೆ ಬಾಳಿತು. ಶ್ವೇತ ಭವನವು ಮತ್ತೊಮ್ಮೆ ಬಾಂಬೇ ಸರಿಯೆಂದು ಭಾವಿಸಿತು" ಸಂಯುಕ್ತ ರಾಜ್ಯ ಅಮೆರಿಕವು ಅಲ್ಪಕಾಲದ ನಿಲುಕಡೆಯಿಂದ ಪುನಃ ಉತ್ತರ ವಿಯೆಟ್ನಾಮಿನ ಮೇಲೆ ಬಾಂಬುದಾಳಿಯನ್ನು ಆರಂಭಿಸಿದಾಗ ಜಾಗತಿಕ ಪತ್ರಿಕೆಗಳು ಬರೆದ ಭಾಷ್ಯಗಳ ಸಾರಾಂಶಕ್ಕೆ ಮೇಲೆ ಹೇಳಿದ ಎರಡು ವಾಕ್ಯಗಳೇ ಸಾಕು. ದಕ್ಷಿಣ ವಿಯೆಟ್ನಾಮಿನಲ್ಲಿ ಹೊಸ ವರ್ಷದ ದಿನಾಚರಣೆಯ ಪ್ರಯುಕ್ತ ಸಾರಲಾಗಿದ್ದ ಕದನವಿರಾಮದೊಂದಿಗೇ ಅಮೆರಿಕದ ಈ 'ನಿಲುಕಡೆ'ಯೂ ಬಂದಿತ್ತು.

ಪುನಃ ಬಾಂಬುದಾಳಿಯ ಆರಂಭವು ಜಗತ್ತಿನಲ್ಲೆಲ್ಲ ಹುಟ್ಟಿಸಿದ ಹೇವರಿಕೆ ಹಾಗೂ ಕೋಪವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಜನವಾದೀ ವಿಯೆಟ್ನಾಮ್ ಗಣರಾಜ್ಯದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು "ಸಂಯುಕ್ತ ರಾಜ್ಯ ಅಮೆರಿಕವು ಜನವಾದೀ ವಿಯೆಟ್ನಾಂ ಗಣರಾಜ್ಯದ ಮೇಲಿನ ಬಾಂಬುದಾಳಿಯನ್ನು ಮತ್ತು ಅದರ ವಿರುದ್ಧ ಯಾವುದೇ ರೀತಿಯ ಇಂಥ ಕೃತ್ಯಗಳನ್ನು ನಿಲ್ಲಿಸಿದರೆ ಮಾತ್ರವೇ ಸಂಧಾನದ ದಾರಿ ತೆರೆಯಲ್ಪಟ್ಟೀತೆಂದು ಸಾರಿತು. ಸಮಸ್ತ ಶಾಂತಿವಾದಿಗಳೂ ಹುರುಪಿನಿಂದ ಈ ಕ್ರಮವನ್ನು ಸ್ವಾಗತಿಸಿದರು.

ಫೆಬ್ರವರಿ ತಿಂಗಳ ಆರಂಭದಲ್ಲಿ ಪೋಪ್ ಪೌಲರು ಮತ್ತು ಪ್ರಪಂಚ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜನರಲ್ ಉ ಥಾಂಟರು ಇತ್ತ ಹೇಳಿಕೆಗಳಲ್ಲೂ ಜನವಾದೀ ವಿಯೆಟ್ನಾಂ ಗಣರಾಜ್ಯದ ಈ ಸೂಚನೆಯ ಮುಂದಿನ ಹಣೆಬರಹದಲ್ಲಿ ಸಂಯುಕ್ತ ರಾಜ್ಯ ಅಮೆರಿಕವು ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವಂತಿಲ್ಲವೆಂಬ ಸ್ಥೂಲ ಸೂಚನೆಯಿತ್ತು. ವಿಯೆಟ್ನಾಂ ಸಮಸ್ಯೆಯ ಇತ್ಯರ್ಥದಲ್ಲಿ ಬಹು ಮುಖ್ಯ ಆತಂಕವಾಗಿರುವ ಈ ಬಾಂಬುದಾಳಿ ಕೂಡಲೆ ನಿಲ್ಲಬೇಕೆಂಬ ಬೇಡಿಕೆ ನಾನಾ ದೇಶಗಳ ಸರ್ಕಾರಗಳ ಹಾಗೂ ಸಾರ್ವಜನಿಕ ಸಂಸ್ಥೆಗಳ ಹೇಳಿಕೆಗಳಲ್ಲಿ ಇನ್ನೂ ಸ್ಪಷ್ಟವಾಗಿತ್ತು. ಅಮೆರಿಕದ ಪ್ರಮುಖ ರಾಜಕಾರಣಿಗಳ ನುಡಿಗಳಲ್ಲೂ ಇದು ಇನ್ನೂ ಸ್ಫುಟವಾಗಿತ್ತು.

ಬಾಗಿಲು ಮುಚ್ಚಿದ ಕೆಲಗಳಿಗೆಯಲ್ಲೇ ವಾಷಿಂಗ್ಟನ್ನಿನ ಬೈಗಳು ಬಲವಾಗಿ ಅದನ್ನು ಅಪ್ಪಳಿಸಿ ಬಡಿದವು. ಉತ್ತರ ವಿಯೆಟ್ನಾಮಿನ ಮೇಲೆ ಅಷ್ಟೊಂದು ಆತುರದಿಂದ ಬಾಂಬುದಾಳಿಯನ್ನು ಆರಂಭಿಸಿದುದು ಪಾಶ್ಚಾತ್ಯ ಶಿಬಿರದಲ್ಲಿಯೇ ಅನೇಕ ರಾಜಕಾರಣಿಗಳಿಗೆ ದಿಗಿಲನ್ನುಂಟುಮಾಡಿತು. ಅಮೆರಿಕನ್ ಸೆನೇಟರ್ ರಾಬರ್ಟ್ ಕೆನ್ನೆಡಿ 'ಗಾಢ ವಿಷಾದ'ವನ್ನು ವ್ಯಕ್ತಪಡಿಸಿದರು. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಗಾಢವಾದ ಸಂದೇಹವನ್ನು ತೋರಿಸಿತು.

ಅಮೆರಿಕನ್ "ಡೇಗೆಗಳ" (ಯುದ್ಧವಾದಿಗಳ) ಗುಪ್ತ ಸಂಚುಗಳು ತಿಳಿಯಬೇಕಿದ್ದರೆ ಜಗತ್ತಿನ ಬೇರೆಡೆಗಳಿಂದ ವಿಶೇಷವಾಗಿ ಪೇಕಿಂಗ್ ಕಡೆಯಿಂದ ಬರುತ್ತಿರುವ ಸಂಕೇತಗಳಿಗೆ ವಾಷಿಂಗ್ಟನ್ ಯಾವರೀತಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆಯೆಂದು ನೋಡುವುದು ಕುತೂಹಲಕಾರೀ ಸಂಗತಿಯಾಗಿದೆ. ಜನವಾದೀ ವಿಯೆಟ್ನಾಮ್ ಗಣರಾಜ್ಯದ ಹೊಸ ಸೂಚನೆ ಬಂದ ಮರುಗಳಿಗೆಯಲ್ಲೇ ಅಧ್ಯಕ್ಷ ಜಾನ್ಸನ್ ತಮ್ಮ ಪ್ರಥಮ ಪ್ರತಿಕಾಗೋಷ್ಠಿಯಲ್ಲಿ 'ಸಮ್ಮೇಳನಕ್ಕೆ ಸೂಲು ಆಧಾರ ಸಾಲದು" ಎಂದು ಹೇಳಿದರು ಮತ್ತು "ಚೀಣದಲ್ಲಿಯ ಘಟನೆಗಳು ಉತ್ತರ ವಿಯೆಟ್ನಾಮಿಗಳ ಬಲವನ್ನೇನೂ ಹೆಚ್ಚಿಸುವುದಿಲ್ಲ' ಎಂಬ ಅಭಿಪ್ರಾಯವನ್ನು ಧ್ವನಿಸಿದರು. ಶ್ವೇತ ಭವನಕ್ಕೆ ಅತ್ಯಂತ ನಿಕಟವಾಗಿರುವ ವೀಕ್ಷಕರ ಮತು ಇನ್ನೂ ಸ್ಪಷ್ಟವಾಗಿತ್ತು. ಚೀಣದಲ್ಲಿಯ "ಅರಾಜಕತೆ' ಸಮಾಜವಾದೀ ದೇಶಗಳು ಜನವಾದೀ ವಿಯೆಟ್ನಾಮ್ ಗಣರಾಜ್ಯಕ್ಕೆ ನೀಡುತ್ತಿರುವ ನೆರವಿನ ಮೇಲೆ ಎಂಥ ಪರಿಣಾಮ ಬೀರಬಹುದೆಂದು ಅವರು ಊಹಾಪೋಹ ನಡೆಸಿದರು.

ಈ ಸೂಚನೆಗಳ ಹಿಂದೆ ಏನಿದೆಯೆಂಬ ಬಗ್ಗೆ ಎರಡಭಿಪ್ರಾಯಗಳು ಇಲ್ಲವೇ ಇಲ್ಲ. ಜನವರಿ ತಿಂಗಳ ಕೊನೆ ಮತ್ತು ಫೆಬ್ರವರಿ ತಿಂಗಳ ಆರಂಭದಲ್ಲಿ ಮಾವೋತ್ಸೆ—ತುಂಗ್ ಮತ್ತವರ ಗುಂಪು ಬಹುಜೋರಾಗಿ ನಡೆಸಿದ ಸೋವಿಯೆತ್—ವಿರೋಧಿ ಚಳವಳಿವು ತಮ್ಮ ಸಂಚಿಗೆ ಅನುಕೂಲವಾಗಿದೆಯೆಂದು ಅಮೆರಿಕದ 'ಡೇಗೆ'ಗಳು ಭಾವಿಸಿದುವು. ಅವರ ಗಮನವೆಲ್ಲ— ಸಂಪೂರ್ಣವಾಗಿ ಪೇಕಿಂಗ್ ಕಡೆಗೇ ಹೊರಳಿತು. ಚೀಣದಲ್ಲಿಯ ಸೋವಿಯೆತ್—ವಿರೋಧಿ ಉನ್ಮಾದವು ಸೋವಿಯೆತ್ ಒಕ್ಕೂಟವು ಉತ್ತರ ವಿಯೆಟ್ನಾಮಿಗೆ ಭೂಮಿ ಮತ್ತು ಆಕಾಶದ ಮೂಲಕ ನೀಡುತ್ತಿರುವ ಸಹಾಯಕ್ಕೆ ದಾಟಲಿಕ್ಕಾಗದಂಥ ಒಂದು ಅಡ್ಡಿಯಾದೀತೆ?

ವಾಷಿಂಗ್ಟನ್ನಿನ ಈ ಲೆಕ್ಕಾಚಾರಗಳು ಪೂರ್ಣ ನಿರಾಧಾರವೇನಲ್ಲ. ಸೋವಿಯೆತ್ ವಿರೋಧಿ ಮತ್ಸರಭಾವವು ಮಾವೊ ಗುಂಪನ್ನು ಬಹಳ ಕುರುಡಾಗಿಸಿದೆ. ಅವರೀಗ ನಿಜವಾಗಿಯೂ ಸಾಮ್ರಾಜ್ಯವಾದೀ ವಿರೋಧದ ಧೈರ್ಯಭಾರವನ್ನೂ ಘೋಷಣೆಗಳನ್ನೂ ಬಿಟ್ಟು ಕೊಟ್ಟಿದ್ದಾರೆ. ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನತೆಗಳೊಂದಿಗೆ, ಅಖಂಡ ಆಫ್ರೊ ಏಷ್ಯನ್ ವಿಮೋಚನಾ ಚಳವಳಿಯೊಂದಿಗೆ ವ್ಯಕ್ತಪಡಿಸುವ ಅವರ "ಐಕ್ಯಮತ್ಯ"ದ ನಿಜವಾದ ಬೆಲೆ ಹೀಗಿರಲು ಇತ್ತ ವಾಷಿಂಗ್ಟನ್ನು ಪೇಕಿಂಗಿನ ಸೋವಿಯತ್ ವಿರೋಧಿ ಕ್ರಮಾಂಗಗಳನ್ನು ತನ್ನ ಬೇಳೆ ಬೇಯಿಸಿಕೊಳ್ಳಲು ಉಪಯೋಗಿಸದೆ ಯಾವತ್ತೂ ಬಿಡುವುದಿಲ್ಲ.

ಆದರೆ 'ಡೇಗೆಗಳು" ಜಾಗರಗೊಂಡ ಈ ಸಮಯದಲ್ಲೂ ಶ್ವೇತ ಭವನವು ಸೋವಿಯೆತ್ ಒಕ್ಕೂಟ ಹಾಗೂ ಇತರೇ ಸಮಾಜವಾದೀ ದೇಶಗಳು ಸೋದರ ವಿಯೆಟ್ನಾಮೀ ಜನರಿಗೆ ನೀಡುವ ಸರ್ವಸಹಾಯದಿಂದ ಒಂದು ಅಂಗುಲವಾದರೂ ದೂರ ಸರಿಯುತ್ತವೆಯೆಂದು ಯೋಚಿಸುವುದು ಮಾತ್ರ ಕೇವಲ ವ್ಯರ್ಥ—ಇದು ಇದುವರೆಗಿನ ಅನುಭವವೇ.

(ನೂರನೇ ಪುಟದಿಂದ)

ಯಾರು ಹೊಣೆ?

ಮಂಗಳೂರು ಬಂದರ ... ಶ್ರೀ ಶಾಸನ-ಮಂಗಳೂರು- ರೈಲ್ವೆ ರಚನೆ—ಎಂದಿನಷ್ಟು ಕಳೆದ ... ವರ್ಷಗಳಲ್ಲಿ ಹಲವು ಕೋಟಿ ರೂ.ಯ ವೆಚ್ಚ ಮಾಡಿದ್ದೇವೆ. ಈಗ ಯೋಜನೆಯು ಸ್ಥಗಿತಗೊಳ್ಳುವಂತಹ ವರದಿಗಳು ಬಂದಿವೆ. ಪಶ್ಚಿಮ ಜರ್ಮನಿಯ ತಜ್ಞರ ತಂಡ ವೊಂದರ ಅಭಿಪ್ರಾಯದಂತೆ ಈ ವಂದಿ ಬಂದಿವೆ. ಬಂದರದಿಂದ ನಿರ್ಮಾಣಗೊಳಿಸಲು ಸಾಕಷ್ಟು ಶಕ್ತಿಶಾಲಿಯಾದ ಆದುದು ಸಿಗಲಾರದಾದುದರಿಂದ, ಬಂದರು ಹಾಗೂ ರೈಲ್ವೆ ... ನಿರ್ಮಾಣ ಅನಿಶ್ಚಿತ ಕಾಲದಲ್ಲಿ ಸಾಗಿ ... ಚೆಂಬುದಾಗಿ ... ಸಂಗತಿ. ಚತ್ತೀಸ್ ... ಚುನಾವಣೆಯಲ್ಲಿ ಕಾಂಗ್ರೆಸ್ಸ್ ಉಂಡ ಪ್ರಚಂಡ ಪರಾಭವ ಕಕ್ಕೆ ಈ ಯೋಜನೆಗಳು "ಕೈ ಕೊಟ್ಟ"ವಂತದ್ದಕ್ಕೂ ಸಂಬಂಧವಿದೆಯೆ.? ಇರಲಿ, ಇಲ್ಲವಾಗಿರಲಿ, ಕೋಟಿಗಟ್ಟಲೆ ಬಂಡವಳ ತೊಡಗಿಸುವಾಗ ನಾವು ಮಾಡಿದ ವಿವೇಚನೆ ತೀರ ಅಡಿಮೇಲಾಯಿತು ಎಂದೇ ಇದರ ಅರ್ಥವಾದರೆ, ಸರಕಾರದ ಅಂದಾಜು ತಪ್ಪಿನಿಂದಲೇ ಕ ಡಿಸ್ಟ ಎಂಬುದಕ್ಕೆ ಬೇರೆ ನಿದರ್ಶನಗಳು ಅನವಶ್ಯ.

ಉಡುಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ-

O. S. 236 Of 1966.

ಶೀನಪ್ಪ ಶೆಟ್ಟಿ— ವಾದಿ

ಮತ್ತು

ಮೊನಕ್ಕ ಶೆಟ್ತಿ ಕೂಡಾ— ಪ್ರತಿವಾದಿಗಳು ಯವರೊಳಗೆ-

8ನೇ ಪ್ರತಿವಾದಿ—ಶಾಮುಶೆಟ್ಟಿ, ಮೊನಕ್ಕ ಶೆಡ್ತಿ ರ ಮಗ, ಕಾರ್ಕಳ ತಾಲೂಕು ಕುಚ್ಚೂರು ಗ್ರಾಮ.

ಇವರಿಗೆ—ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ತಾರೀಕು 9-9-1956ರಲ್ಲಿ ನಿಮ್ಮ ಕುಟುಂಬದಲ್ಲಾದ ರಿಜಿಸ್ಟ್ರು ವಿಭಾಗ ಪತ್ರದ ಶರತ ಪ್ರಕಾರ ವಾದಿಗೆ ಕಳೆದ ವಿದ್ಯಾವನು ಸಂವತ್ಸರಕ್ಕೆ ನೀವು ಕೂಡಾ ಪ್ರತಿವಾದಿಯಿಂದ ಬಹಃ ಜೀವನಾಂಶವನ್ನು ವಸೂಲು ಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 29-3-1967ಕ್ಕೆ ಯಿಟ್ಟಿದೆ. ಉದ ... ದಂಧಾದು ಇದ್ದರೆ ಆ ದಿನ್ನ ಪೂರ್ವಾಹ್ನ 11 ಘಂಟೆಗೆ ಸದರಿ ಕೋರ್ಟಿನ ಮುಂದ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao
Advocate for Plaintiff.

Udipi, 10—3—1967.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 1/1967.

ಚೆಕ್ಕ ಮುದಿವಾಳ— ವಾದಿ.

1. ಸುಬ್ಬ ಪೂಜಾರಿ, ಕಣ್ಣು ಹೆಂಗ್ಸಿನ ಮಗ, 2. ಸೋಮಯ್ಯ ಪೂಜಾರಿ, 3. ಪೂವಪ್ಪ ಪೂಜಾರಿ, 4. ನಾಗಮ್ಮ— 5. ನಾರಾಯಣ—ಅಕ್ಕು ಹೆಂಗ್ಸಿನ ಮಕ್ಕಳು, 6. ಚೆನ್ನಪ್ಪ ಪೂಜಾರಿ.— ಪ್ರತಿವಾದಿಗಳು.

1ರಿಂದ 5ನೇ ವರೇಗಿನ ಪ್ರತಿವಾದಿಗಳು ಮಂಗಳೂರು ತಾಲ್ಲೂಕು ಕೊಲ್ಲೂರು ಗ್ರಾಮದ ಕೆಳಗಿನ ಗುಡ್ಡೆ ಎಂಬಲ್ಲಿಯೂ 6ನೆಯವನು ಸದ್ರಿ ಕೊಲ್ಲೂರು ಗ್ರಾಮದಲ್ಲಿಯೂ ವಾಸ್ತವ್ಯ ಇರುತ್ತಾರೆ.

ಸದ್ರಿ ಪ್ರತಿವಾದಿಗಳು ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ,—

ವಾದಿಗೆ ನಿಮ್ಮ ಪೈಕಿ 1ರಿಂದ 5ನೇ ವರೇಗಿನ ಪ್ರತಿವಾದಿಗಳು ವಗೈರೆ ರು ತಾ. 22—4—1958ರಲ್ಲಿ ರಿಜಿಸ್ಟ್ರು ಸಿಶಿ ರೂಪಾಯಿ 500ಕ್ಕೆ ಬರಕೊಟ್ಟ ಸ್ಥಿರಾಸ್ತಿ ಲಡ ವಿನ ಅಸಲು ರೂಪಾಯಿ 500— ಮತ್ತು ತಾ. 23—4—1960ರ ಅಗ್ರಿಮೆಂಟಿನ ಬಡ್ಡಿ ಕೂಡಾ ಅಸಲು ಬಡ್ಡಿ ರೂ. 606—25ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 30—3—1967ಕ್ಕೆ ನಿಮಗೆ ಆಕ್ಷೇಪಣೆ ನೋಟೀಸಿಗೆ ಇಟ್ಟಿದ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff.

Karkala, 10—3—67.

ವರ್ಷಾವಧಿ ಜಾತ್ರೆ

"ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಕೊಲ್ಲಿ ಶ್ರೀ ದುರ್ಗಾ ದೇವಸ್ಥಾನದಲ್ಲಿ ಮಾಮೂಲಾಗಿ ನಡೆಯುವ ವರ್ಷಾವಧಿ ಜಾತ್ರ ಉತ್ಸವಾದಿಗಳು ತಾ. 10—4—67ರಿಂದ 16—4—67ರವರೇಗೆ ಜರಗಲಿರುವುವು" ಎಂತ ಮೊಕ್ತೇಸರ ಕೂಡಬೆಟ್ಟು ವೆಂಕಟಸುಬ್ಬರಾಯರು ತಿಳಿಸುತ್ತಾರೆ.

ಋಷಿಬೋಧೋತ್ಸವ

ಮಂಗಳೂರು ಸನ್ಯಾಸಿ ಗುಡ್ಡದಲ್ಲಿರುವ ಆರ್ಯ ಸಮಾಜ ಮಂದಿರದಲ್ಲಿ ಇದೇ ಮಾರ್ಚ್ ತಿಂಗಳ ತಾ. 19ನೇ ಆದಿತ್ಯವಾರ ಅಪರಾಹ್ನ ಘಂಟೆ 4-30ಕ್ಕೆ ಋಷಿಬೋಧೋತ್ಸವ ಪೂ, ಸ್ವಾಮಿ ಶ್ರದ್ಧಾನಂದ ಸರಸ್ವತಿಯವರ ನಿರ್ವಾಣ ಕಾರ್ಯವು ಡಾಕ್ಟರ್ ಎ. ಎಸ್. ಅಸ್ಕೆ, ಇವರ ಅಧ್ಯಕ್ಷತೆಯಲ್ಲಿ ಜರಗವುದೆಂದು, ತಾವು ಬಂಧು ಮಿತ್ರರೊಡಗೂಡಿ ಬಂದು, ಸಮಾರಂಭದ ... ಶ್ರದ್ಧಾನಂದ ಸೇವಾ ಪ್ರ ... ಅಧ್ಯಕ್ಷ ಡಾ|| ಕೆ. ಬಿ. ಶೆಟ್ಟರು ಕೋರುತ್ತಾರೆ.

ಪೆರ್ಡೂರು ರಥೋತ್ಸವ

ಪೆರ್ಡೂರು ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಾಮೂಲು ಮೇರೆಗೆ ಜರಗುವ ರಥೋತ್ಸವವು ತಾ. 12-3-67ರಿಂದ ತಾ. 19—3—67ರ ತನಕ ಜರಗಲಿರುವುದೆಂದೂ ಸರ್ವರೂ ಬಂದು ಗಂಧ ಪ್ರಸಾದವನ್ನು ಸ್ವೀಕರಿಸಬೇಕೆಂದೂ ಎಕ್ಸಿಕ್ಯುಟಿವ್ ಆಫೀಸರ್ ಮತ್ತು ಟ್ರಸ್ಟಿಗಳು ಅಪೇಕ್ಷಿಸುತ್ತಾರೆ.

ಕೋಟಿ - ಚೆನ್ನಯ ಬೈದೇರು ಉತ್ಸವ

ಸುಳ್ಯ ತಾಲೂಕಿನ ಶ್ರೀ ಬೈದೇರುಗಳ ಆದಿ ಸ್ಥಳ ಎಣ್ಮೂರು ಬೀಡಿನ ಪೂರ್ವ ಪದ್ಧತಿ ಪ್ರಕಾರ ತಾ. 3-3-67ರಿಂದ ತಾ. 25-3-67ರ ವರೆಗೆ ಕೋಟಿ-ಚೆನ್ನಯರೆಂಬ ಬೈದೇರುಗಳ ಉತ್ಸವ ಜರಗಲಿರುವುದೆಂದೂ ಸರ್ವರೂ ಬಂದು ಸಹಕರಿಸ ಬೇಕೆಂದೂ ಕಟ್ಟ ಬೀಡಿನ ಪಟೇಲ್ ಕೆ. ಬಿ. ನಿರ್ಧಾರ್ ರೈ ಅವರು ಅಪೇಕ್ಷಿಸುತ್ತಾರೆ.

ಶ್ರೀ ಕಡೆಕಾರ್ ಕೃಷ್ಣ ಯನ್. ಶೆಟ್ಟರ ನಿಧನ

ಮುಂಬೈಯ ಸ್ಕ್ಯಾಕರ್ನಾಟಕ ಟಿಸ್ಪಿಕಲ್ ಕಂಪೆನಿಯ ಮಾಲೀಕರಾದ ಶ್ರೀ ಕಡೆಕಾರ್ ಕೃಷ್ಣ ಯನ್. ಶೆಟ್ಟರು ತಾ. 27-1-1967ರಂದು ಮುಂಬೈ ನಿಲಯದಲ್ಲಿ ಹೃದಯ ಸ್ತಂಭನದಿಂದ ದೈವಾಧೀನರಾದರು. ದಿವಂಗತ ಶೆಟ್ಟರು ಮುಂಬೈಯ ಪ್ರಮುಖ ಸಮಾಜ ಸೇವಾಕರ್ತರೂ, ಉತ್ಸಾಹೀ ಕಾಂಗ್ರೆಸ್ ಕಾರ್ಯಕರ್ತರೂ ಉದಾರ ದಾನಿಗಳೂ ಆಗಿದ್ದು, ಮುಂಬೈ ಕನ್ನಡಿಗರ ಆಪ್ತಬಾಂಧವರಾಗಿದ್ದರು. ಹಲವಾರು ಸ್ವಸಾ ಸಂಸ್ಥೆಗಳಲ್ಲಿ ಸಂಬಂಧ ಬೆಳೆಸಿಕೊಂಡಿದ್ದ ಶ್ರೀ ಶೆಟ್ಟರು ಬಂಟರ ಯಾನೆ ನಾಡವರ ಸಂಘದ ಕೋಶಾಧಿಕಾರಿಗಳಾಗಿಯೂ, ಮುಂಬೈ ಪ್ರದೇಶ ಕಾಂಗ್ರೆಸ್ ಕಮಿಟಿಯ 'ಎ' ವಾರ್ಡ್ ನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದವರಲ್ಲದೆ, ಕನ್ನಡ ಭವನ ಸೊಸೈಟಿಯ ಉಪಕೋಶಾಧಿಕಾರಿಗಳಾಗಿಯೂ ದುಡಿದಿದ್ದರು.

ಹಿರಣ್ಣಯ್ಯ ಮಿತ್ರ ಮಂಡಳಿಯವರ ನಾಟಕ ಪ್ರದರ್ಶನ

ಉಡುಪಿ, ... ಖ್ಯಾತ ನಾಟಕ ಕಲಾವಿದರಿಂದ ಮಾಸ್ಟರ್ ಹಿರಣ್ಣಯ್ಯನವರ ಹಿರಿಯಣ್ಣಯ್ಯ ಮಿತ್ರ ಮಂಡಳಿ (ಮೈಸೂರು) ನಾಟಕ ಸಂಸ್ಥೆಯವರು ತಾ. 5ರಿಂದ ತಾ. 11ರ ತನಕ ಉಡುಪಿ ಸಂಗೀತ ಸಭೆಯ ಆಶ್ರಯದಲ್ಲಿ ಲಂಚಾವತಾರ, ಭ್ರಷ್ಟಾಚಾರ, ನಡುಮನೆ ಹಾಗೂ ಹೇಮ ಹರಾಜು ಎಂಬ ಜನಪ್ರಿಯ ನಾಟಕಗಳನ್ನು ಉಡುಪಿ ಪಿ. ಪಿ. ಯು. ಕಲ್ಬಿನ ಮರ ... ದಲ್ಲಿ ರಚಿಸಲಾದ ರಂಗ ಮಂಟಪದಲ್ಲಿ ಯಶಸ್ವಿಯಾಗಿ ಅಭಿನಯಿಸಿ ಜನ ಮೆಚ್ಚುಗೆ ಪಡೆದರು. ಪ್ರಾರಂಭದ ದಿನ ಸಂಗೀತ ಸಭೆಯ ಅಧ್ಯಕ್ಷ ಶ್ರಿ ಕೆ. ಕೆ. ಪೈಯವರು ಕಲಾವಿದರನ್ನು ಆದರದಿಂದ ಸ್ವಾಗತಿಸಿ, ಸಂಗೀತ ಸಭೆಯ ವಿವರ ಕಾರ್ಯ ಕಲಾಪಗಳ ಪರಿಚಯ ಮಾಡಿಕೊಟ್ಟರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 6/1967

ವಾದಿ— ಸೀಶೆಟ್ಟಿ.

ಪ್ರತಿವಾದಿಗಳು— 1 ಕೊಲ್ಲು ಹೆಂಗ್ಸು, 2. ರಾಮು.

ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮದಲ್ಲಿರುವ ನಾಗಿ ಹೆಂಗ್ಸಿನ ಮಗಳು ಕೊಲ್ಲು ಹೆಂಗ್ಸು 1 ಈಕೆಯ ಮಗ ರಾಮು 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ... ಸಂವತ್ಸರದ ... ಬಾಕಿ ... ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 28-3-67ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪವೇನಾದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah
Advocate for Plff.

Date: 7—3—67, Coondapoor.

1966ನೇ ದಶಂಬರ 31ರಲ್ಲಿದ್ದಂತೆ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಭಂಡವಾಳ ಮತ್ತು ಹೊಣೆಗಾರಿಕೆಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು	ಆಸ್ತಿ ಮತ್ತು ಮೂಲಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು
1. ತೆತ್ತ ಭಂಡವಾಳ	1,00,54,817	1. ನಗದಿ	5,06,19,678
2. ಕಾದಿಟ್ಟ ನಿಧಿ ಮತ್ತು ಇತರ ನಿರ್ದಿಷ್ಟ ನಿಧಿಗಳು	1,33,84,724	2. ಇತರ ಬ್ಯಾಂಕುಗಳಲ್ಲಿ ಶಿಲ್ಕು	1,35,78,502
3. ಠೇವಣಿ ಮತ್ತು ಇತರ ಖಾತೆಗಳು	74,02,51,654	3. ವಿನಿಯೋಗಗಳು ಮೂಲಬೆಲೆಯಲ್ಲಿ	26,13,37,277
4. ಇತರ ಬ್ಯಾಂಕಿಂಗ್ ಕಂಪೆನಿಗಳು, ಏಜಂಟ್ಸ್ ಇತ್ಯಾದಿಯವರಿಂದ ಪಡೆದ ಸಾಲಗಳು	3,18,92,289	4. ಸಾಲಗಳು	47,91,15,620
5. ಪಾವತಿಯಾಗಬೇಕಾದ ಬಿಲ್‌ಗಳು	73,56,396	5. ಸಂಗ್ರಹಿಸಬೇಕಾದ ಬಿಲ್ಲುಗಳು	5,41,85,702
6. ಸಂಗ್ರಹಿಸಲು ಪರಿಗ್ರಹಿಸಿದ ಬಿಲ್‌ಗಳು	5,41,85,702	6. ಎಸೆಪ್ಟೆನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಹೊಣೆಗಾರಿಕೆಗಳು	5,76,54,633
7. ಇತರ ಹೊಣೆಗಾರಿಕೆಗಳು	3,71,78,932	7. ಕಟ್ಟಡಗಳು (ಮೂಲಬೆಲೆಯಲ್ಲಿ)	59,63,500
8. ಎಸೆಪ್ಟೆನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಜವಾಬ್ದಾರಿಗಳು	5,76,54,633	8. ಫರ್ನಿಚರ್, ಫಿಟ್ಟಿಂಗ್ಸ್ ಇತ್ಯಾದಿ	46,63,000
		9. ಇತರ ಮೂಲಗಳು	2,46,45,735
		10. ಬ್ಯಾಂಕೇತರ ಮೂಲಗಳು	1,90,500
	95,19,59,147		95,19,59,147

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

............ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ............

ಬಿಡುಗಡೆ

(ಎರಡನೇ ಪುಟದಿಂದ)

ತಾಯಿತು. ಏನನ್ನೂ ಯೋಚಿಸಲಾರದವನಾಗಿದ್ದೆ. ಮಗನು ದಿನದಿನಕ್ಕೆ ಕ್ಷೀಣಿಸುತ್ತಿರುವುದು ನನ್ನ ಗಮನಕ್ಕೆ ಬಾರದೆ ಹೋಗಲಿಲ್ಲ. ದಿನದಲ್ಲಿ ಬೆಳಗ್ಗೆ ಮಾಡಿದ ಅಡಿಗೆಯೇ ಸಂಜೆಯ ವರೆಗಾಗಿ ಸುತ್ತೂ ಮಿಗುತಿತ್ತು. ಯಾರಿಗೂ ಊಟ ರುಚಿಸಲೊಲ್ಲದು. ನಿದ್ದೆ ಬರಲೊಲ್ಲದು. ನಮ್ಮಿಬ್ಬರ ಕಷ್ಟಗಳನ್ನು ನೋಡಿ ಮತ್ತೆ ಮದುವೆಗೆ ಒತ್ತಾಯ ಬರತೊಡಗಿತು. ಆಗ ನನಗೆ ಪಯಸ್ಸು ನಲ್ವತ್ತಕ್ಕೂ ಮಿಕ್ಕಿತ್ತು.

ಮರು ಮದುವೆಗೆ ಮನ ಕೊಡದೆ ಉಳಿದಿದ್ದರೂ ದಿನ ದಿನಕ್ಕೂ ಮಿತ್ರರ ಬಲವಂತ ಹೆಚ್ಚಾಗತೊಡಗಿತು. ಮಗನು ತಾಯಿಯ ಆರೈಕೆಯಿಲ್ಲದೆ ಕೊರಗುತ್ತಿರುವನೆಂಬುದನ್ನು ನನ್ನ ಗಮನಕ್ಕೆ ತಾರದೆ ಹೋಗಲಿಲ್ಲ. ನನ್ನ ಮೆಚ್ಚಿನ ಪಾರ್ವತಿಯನ್ನು ಮರೆಯಲು ಮತ್ತೊಂದು ಹೆಣ್ಣು ಅಗತ್ಯವೆಂಬುದನ್ನು ಮನಗಾಣಿಸ ಹತ್ತಿದರು. ಮಿತ್ರರ ಬಲವಂತ ಹೆಚ್ಚಾದಂತೆ ದಿನ ದಿನಕ್ಕೆ ನನ್ನ ನಿರ್ಧಾರ ಕುಸಿಯ ಹತ್ತಿತು. ಕೊನೆಗೂ ನಾನೇ ಸೋತು ಹೋದೆ.

ವಯಸ್ಸಾದ ವಿದುರನಿಗೆ ದೊರಕುವ ಕನ್ಯೆ ಆವೆಂತಹದೆಂಬುದನ್ನು ನಾನಾಗ ಎಣಿಸದೆ ಹೋದೆ. ಎಲ್ಲರೂ ನನ್ನ ಪಾರ್ವತಿಯಂತೆಯೇ ಇರಬಹುದೆಂದು ಯೋಚಿಸಿದ್ದೆ.

ಹೆಚ್ಚಿನ ಆಡಂಬರವಿಲ್ಲದೆ ಮದುವೆಯಾಯಿತು. ಹೊಸ ಪತ್ನಿಯನ್ನು ಮನೆಗೆ ಕರೆತಂದ ನಾಲ್ಕು ದಿನ ಚೆನ್ನಾಗಿಯೇ ಇದ್ದಳು. ದಿನ ಸರಿದಂತೆ ಅವಳ ಬೇಕುಗಳು ಹೆಚ್ಚಾಗ ತೊಡಗಿತು. ಸ್ನೋ, ಫೌಡರ್, ಸೀರೆ, ಚಿನ್ನ, ಅಬ್ಬಾ ಒಂದೆರಡಲ್ಲ. ಆಗ ನನ್ನ ಪಾರ್ವತಿಯ ನೆನಪು ಕ್ಷಣ ಕ್ಷಣಕ್ಕೂ ಬರತೊಡಗಿತು. ಅವಳೊಂದು ದಿನವೂ ನನಲ್ಲಿ ಏನನ್ನೂ ಬೇಕೆಂದೂ ಕೇಳಿದವಳಲ್ಲ.

ಹೊಸ ಹೆಂಡತಿ, ಜೊತೆಗೆ ಹರೆಯದವಳು ಆದ ಕಾರಣ ಅವಳ ಮನ ನೋಯಿಸ ಬಾರದೆಂದು ಅವಳ ಬಯಕೆಯನ್ನೆಲ್ಲಾ ಪೂರೈಸುತ್ತಿದ್ದೆ. ಮಗನನ್ನು ಮಮತೆಯಿಂದ ಕಾಣುತ್ತಿದ್ದಾಳೆಂಬ ಸಮಾಧಾನವೇ ನನಗೆ ನೆಮ್ಮದಿಯನ್ನು ತಂದು ಕೊಟ್ಟಿತ್ತು. ನಾನಾಗ ಹದಿನಾರರ ಹರೆಯದ ನನ್ನ ಮರು ಪತ್ನಿಗೆ ನಾನು ಮುದುಕನೆಂಬ ಭಾವನೆ ಇಲ್ಲವೆಂದೇ ಭಾವಿಸಿದ್ದೆ. ಅದಕ್ಕೆ ಕಾರಣ ಸದಾ ನನ್ನೆದುರು ನಗು ಮುಖದಿಂದಲೇ ನನ್ನನ್ನು ಉಪಚರಿಸುತ್ತಿದ್ದಳು.

ಹೀಗೆಯೇ ಜೀವನದ ಬಂಡಿ ಯಾಂತ್ರಿಕವಾಗಿಯೇ ಕಲವು ದಿನ ಉರುಳಿತು.

ಆದರೊಂದು ದಿನ ನನ್ನ ಪಾಲಿಗೆ ಮತ್ತೆ ದುರ್ದಿನವಾಗಿ ಪರಿಣಮಿಸಿತು ಮಾಡಬಾರದ ವಿಚಾರವನ್ನು ಮಾಡ ಬೇಕಾಯಿತು. ನನ್ನ ಸಹನೆಗೆ ಮೀರಿದ ವಿಚಾರ ಅದಾಗಿತ್ತು.

ನನ್ನ ಹರೆಯದ ಮಡದಿಯನ್ನು ಶೇಖರ ಮೋಹಿಸಿದನೆಂಬ ಆಪಾದನೆ ಕೇಳಿ ನನಗೆ ಎಲ್ಲಿಲ್ಲದ ಕೋಪ ಬಂತು. ಅದೂ ಹೆಂಡತಿಯ ಬಾಯಿಂದಲೇ ಕೇಳಿದ ನನಗೆ ಮಗನ ಮೇಲಿನ ಮಮತೆ ಭಸ್ಮವಾಯಿತು. ಎಷ್ಟೋ ವೇಳೆ ಅವನು ನನ್ನ ಪತ್ನಿಯೊಡನೆ ನಕ್ಕು ನಲಿದಾಡುವುದನ್ನು ಕಣ್ಣಾರೆ ಕಂಡಿದ್ದೆ. ಆಗ ನನ್ನಲ್ಲಿ ಆವರಿಬ್ಬರೂ ತಾಯಿ— ಮಗನೆಂಬ ಭಾವನೆ ಇದ್ದಿತ್ತು.

ಆದರೆ ಆ ವೇಳೆ ಕೇಳಿದ ವಿಚಾರ ನನ್ನ ಭಾವನೆಯನ್ನು ಬುಡಮೇಲು ಮಾಡಿತು. ಅರೆಕ್ಷಣವೂ ತಡ ಮಾಡದೆ ಮಗನನ್ನು ಉಟ್ಟ ಬಟ್ಟೆಯಲ್ಲಿಯೇ ಹೊರ ನೂಕಿದೆ.

ಆಗ ಹೈಸ್ಕೂಲು ಪೂರೈಸಿ ಕಾಲೇಜು ಮೆಟ್ಟಲನ್ನೇರಿದ್ದ. ತಾನು ತಪ್ಪಿತಸ್ಥನಲ್ಲವೆಂದು ಅಂಗಲಾಚಿದ. ಆದರ ಮಡದಿಯ ಮೇಲಿನ ಮೋಹ ಮಗನ ಮೇಲಿನ ಕರುಣೆಗೆ ತಡೆಯನ್ನೊಡ್ಡಿತು. ಅಂದು ಚಿತ್ತಶಾಂತಿಯೇ ತಪ್ಪಿ ಹೋದರೂ ಎಳೆಯ ಮಡದಿಯ ಮೋಹಕ ರೂಪಿಗೆ ಮರುಳಾಗಿ ಎಲ್ಲವನ್ನೂ ಮರೆಯಿಸಿ ಮತ್ತೆ ಸಂತೋಷದ ಹೊನಲು ಹರಿಯಿತು.

ಆದರೆ ಹೆಂಡತಿಯ ಮೇಲಿಟ್ಟ ನಂಬಿಕೆ ಹೆಚ್ಚು ದಿನ ಉಳಿಯಲಿಲ್ಲ. ಅವಳ ಅಸಭ್ಯ ವರ್ತನೆ ಹೊರಬೀಳುವ ಸನ್ನಿವೇಶವೊಂದು ಆಕಸ್ಮಿಕವಾಗಿಯೇ ಒದಗಿ ಬಂತು.

ಆದೊಂದು ದಿನ ಆಫೀಸಿಗೆ ತೆರಳಿದ ನನಗೆ ಅದೇಕೋ ತಲೆ ಸಿಡಿಯಲಾರಂಭಿಸಿತು. ಕೆಲಸ ಮಾಡಲು ಅಸಮರ್ಥನಾದ ನಾನು ಎಂದಿಗಿಂತ ಮೊದಲೇ ಮನೆಯ ದಾರಿ ಹಿಡಿದೆ.

ಮನೆ ಸೇರುವಾಗ ಬಾಗಿಲುಗಳೆಲ್ಲಾ ಭದ್ರವಾಗಿತ್ತು. ಒಳಗಿನಿಂದ ಅಗುಳಿ ಹಾಕಿದ್ದರೂ ಬಾಗಿಲುಗಳಿಲ್ಲದ ಕಿಟಕಿಗಳು ತೆರೆದೇ ಇದ್ದುವು. ಮೆಲ್ಲ ಅತ್ತ ಸರಿದು ಇಣಿಕಿ ನೋಡಿದೆ. ಹೆಂಡತಿ ಎನ್ನುವ ಪ್ರಾಣಿ ಮತ್ತೊಬ್ಬನ ತೋಳಿನಲ್ಲಿ ಭದ್ರವಾಗಿದ್ದುದನ್ನು ಕಂಡಾಗ ನನ್ನ ತಲೆಸಿಡಿತ ಮಾಯವಾಗಿ ಮತಿ ಭ್ರಮಣೆಯಾಗ ಹತ್ತಿತು. ಯಾರೆಂದು ಗುರುತಿಸಲಾರದೆ ಕಾಲು ಒಯ್ದತ್ತ ಸಾಗಿದೆ. ಎಲ್ಲೆಲ್ಲಿ ತಿರುಗಾಡಿ ಹಿಂತೆರಳಿದೆನೆಂಬ ನೆನಪಾಗಲೊಲ್ಲದು. ಅಂತೂ ಅಂದು ಮರಳಿ ಮನೆ ಸೇರುವಾಗ ರಾತ್ರಿ ಹತ್ತು ಗಂಟೆಗೂ ಮಿಕ್ಕಿತ್ತು.

ತಡವಾಗಿ ಮನೆ ಸೇರಿದ ನನ್ನಲ್ಲಿ ಎಲ್ಲಿಲ್ಲದ ಪ್ರೀತಿ ವಿಶ್ವಾಸ ತೋರತೊಡಗಿದಳು. ತನ್ನ ಮೋಹಕ ರೂಪಿನಿಂದ ತನ್ನ ಹಾದರದ ಕೊಳಕನ್ನು ಮುಚ್ಚ ತೊಡಗಿದಳು. ಅಂದು ರಾತ್ರಿ ಶಾಂತತೆಯಿಂದಲೇ ಎಲ್ಲವನ್ನೂ ಸಹಿಸಿದೆ.

ಆಗಲೇ ನನಗೆ ನನ್ನ ಮಗನನ್ನು ಹೊರ ಹಾಕಿದ್ದು ತಪ್ಪೆನ್ನುವ ಭಾವನೆ ಬರತೊಡಗಿತು. ಹೆಣ್ಣಿನ ಮಾತಿಗೆ ಮರುಳಾಗಿ ವಿಚಾರಣೆ ಇಲ್ಲದೆ ಮುದ್ದು ಮಗನನ್ನು ಹೊರ ದೂಡಿದೆನೆಂಬ ವೇದನೆ ಹೃದಯದಲ್ಲಿ ಎದ್ದೇಳ ತೊಡಗಿತು.

ಈ ಹೀನ ಬಾಳನ್ನು ಅಂತ್ಯಗೊಳಿಸ ಬೇಕೆಂಬ ದೃಢ ನಿರ್ಧಾರಕ್ಕೆ ಬಂದು ಮುಟ್ಟಿದೆ.

ಮರುದಿನ ಆಫೀಸಿಗೆ ರಜೆ ಹಾಕಿದರೂ ಎಂದಿನಂತೆ ನಿಶ್ಚಿತ ಸಮಯಕ್ಕೆ ಮನೆಯಿಂದ ಹೊರಬಿದ್ದೆ. ಆಗಾಗ ನಾನು ಶಿಕಾರಿಗಾಗಿ ಗೆಳೆಯ ಸತೀಶನ ಬಂದೂಕು ಎರವಲಾಗಿ ಪಡೆಯುವಂತೆ ಅಂದು ಕೂಡಾ ಕೇಳಿದ ಕೂಡಲೇ ಮಾರಮಾತಾ



(ಹೊಸ ಮುದ್ರಣ)

ವೇದವು ಸಾರುತ್ತಿದೆ:

"ಏಳ; ಎಚ್ಚರಗೊಳ್ಳ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳ" ಎಂದು. ತಿಳಿದವರನ್ನೆಲ್ಲಿ ಹುಡುಕಬೇಕೆಂದು ನೀವು ಗೊಣಗಾಡಬೇಕಾಗಿಲ್ಲ. ತಿಳಿದವರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮಾನುಷ್ಯವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ

ಗೀತೆಯ ಸಮೂಲ ಭಾಷಾಂತರವು

ಗೀತೆಯ ಕೈಗನ್ನಡಿಯಾಗಿ

ಹೊಸ ಆವೃತ್ತಿಯಾಗಿ ಪ್ರಕಟವಾಗಿದೆ

ಅದನ್ನು ಎಲ್ಲರೂ ಓದಬೇಕಾಗಿದೆ.

—"ಬೇರೆ ಶಾಸ್ತ್ರಗಳನ್ನೋದಿದರೇನ? ಗೀತೆಯನ್ನು ಚೆನ್ನಾಗಿ ಓದಬೇಕು" ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೇ ಒಂದೂವರೆ ರೂಪಾಯಿ

2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

NAVAYUGA 16—3—1967
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಡದೆ ನನಗಿತ್ತಾಗ ಆದ ಸಂತೋಷ ಹೇಳಲದಳ.

ಕಡಿಮೆ ಬಾಡಿಗೆಯೆಂದೇ ಪಡೆದ ನನ್ನ ಮನೆ ತೆಂಗಿನ ತೋಟದ ಮಧ್ಯದಲ್ಲಿತ್ತು. ಹತ್ತಿರ ಬೇರೆ ಮನೆಗಳಿಲ್ಲದ ಕಾರಣ ನನ್ನ ಕೆಲಸ ಕೈಗೂಡುವುದೆಂದೇ ಭಾವಿಸಿದೆ.

ಎಲ್ಲವನ್ನೂ ಅಣಿಗೊಳಿಸಿಕೊಂಡು ಗುಡ್ಡನತ್ತ ಸಾಗುತ್ತಿದ್ದಂತೆ ಎದುರಾಗಿ ಬಂದ ನಾಯಿಯತ್ತ ಗುರಿ ಹಿಡಿದೆ. ಕ್ಷಣಕಾಲದಲ್ಲಿಯೇ ಕೈ ಕೆಲಸ ಮಾಡಿತು. ರಕ್ತದ ಮಡುವಿನಲ್ಲಿ ತೇಲುವ ನಾಯಿಯನ್ನು ಕಂಡಾಗ ನನಗೆ ಅದೇಕೋ ತೃಪ್ತಿ ಎನಿಸಿತು.

ಅಂದು ಮಧ್ಯಾಹ್ನ ಮೂರು ಗಂಟೆಗೆ ವಿಕ್ಷಿರಲಾರದು. ಮನೆಯತ್ತ ಹೆಜ್ಜೆ ಹಾಕತೊಡಗಿದೆ. ಮೊದಲ ದಿನದಂತೆ ಬಾಗಿಲು ಭದ್ರವಾಗಿತ್ತು. ಒಬ್ಬರನ್ನೊಬ್ಬರು ಅಪ್ಪಿ ಮಲಗಿದ್ದರು. ಕ್ಷಣವೂ ತಡಮಾಡದ ಕೋವಿಯ ಕುದುರೆಯನ್ನೆಳೆದು ಬಿಟ್ಟೆ. ಆಗ ಗುಂಡಿನ ಶಬ್ದದೊಡನೆ ಒಳಗಿನ ಚೀರಾಟದ ಧ್ವನಿಯೂ ಕೇಳಿಸಿತು. ಕಾರ್ಯ ಪೂರೈಸಿತೆಂದು ಓಡಲು ಹವಣಿಸಿದೆ. ಆದರೆ ಅಷ್ಟರಲ್ಲಿ ನನ್ನನ್ನು ಬಂಧಿಸಿದ್ದರು.

ರಕ್ತದ ಮಡುವಿನಲ್ಲಿ ಗೆಳೆಯ ಸತೀಶನ ಶವ ತೇಲುವುದನ್ನು ಕಂಡಾಗ ನನಗಾದ ಆಶ್ಚರ್ಯ ಅಪರಿಮಿತ. ಮೊದಲ ದಿನ ಕಂಡದ್ದು ಸತೀಶನನ್ನಲ್ಲ. ಹೀಗೆಯೇ ಇನ್ನಷ್ಟು ಮಂದಿಯೋ ಎಂಬ ಭಾವನೆ ಬಂತು. ಆಗ ಶೇಖರನನ್ನು ಹೊರ ಹಾಕಲು ಕಾರಣ ನನಗೆ ಸುಸ್ಪಷ್ಟವಾಯಿತು. ಅವನಿಂದ ತನ್ನ ಕಾರ್ಯಕ್ಕೆ ತಡೆಯಾಗಬಾರದೆಂಬುದರ ಹೊರತು ಮತ್ತಾವುದೂ ಅಲ್ಲವೆಂಬುದು.

ಆದರೆ ಆಗಲೇ ಎಲ್ಲವೂ ಕೈಮೀರಿ ಹೋಗಿತ್ತು. ಮುಂದೆ ನನ್ನ ಮೇಲೆ ಕೋರ್ಟು ಕೊಲೆಗಾರನೆಂಬ ಜೊತೆಗೆ ಕೋವಿ ಕಳವಿನ ಅಪಾದನೆಯನ್ನೂ ಹೊರಿಸಿತು. ಅನಂತರ ಕೋರ್ಟು ತೀರ್ಮಾನದಂತೆಯೇ ಇಲ್ಲಿಗೆ ಬಂದಿರುವೆ. ಆದ್ದರಿಂದ ಇನ್ನೇಕೆ ನಾನು ಬಿಡುಗಡೆಯಾಗಬೇಕು? ನನ್ನನ್ನು ಆದರಿಸಿ ಉಪಚರಿಸುವವರು ನನಗಾರಿದ್ದಾರೆ ಈ ಜಗತ್ತಿನಲ್ಲಿ?" ಎಂದು ದುಃಖದಿಂದ ತಲೆತಗ್ಗಿಸಿ ಕುಳಿತನು. ಆವನ ಕರುಣಾಜನಕ ಕಥೆ ಕೇಳಿ ಮೂರಣ್ಣನ ಕಣ್ಣಲ್ಲಿಯೂ ನೀರಿಳಿದು ಬಂತು.

ಆಗಲೇ ಮೂರಣ್ಣನಿಗೆ ಮೇಲಧಿಕಾರಿಯಿಂದ ಕರೆ ಬಂತು. ಆಗ ತಾನೆ ಹೊಸತಾಗಿ ಅಧಿಕಾರ ವಹಿಸಿಕೊಂಡ ಮೇಲಧಿಕಾರಿಯ ನಡೆವಳಿಯನ್ನು ಹಿಡಿದು ಕೊಳ್ಳಲು ಮೂರಣ್ಣನಿಂದಾಗಿರಲಿಲ್ಲ. ಆದ್ದರಿಂದ ಕೂಡಲೇ ಅತ್ತ ತೆರಳಿದನು.

ರೂಮಿನಲ್ಲಿ ಕುಳಿತ ಮೇಲಧಿಕಾರಿಯನ್ನು ನೋಡಿ ಸೆಟೆದು ಸೆಲ್ಯೂಟ್ ಹೊಡೆದು ನಿಂತನು.

"ಮೂರಣ್ಣ! ನಂಬರ್ ಇಪ್ಪತ್ತನಾಲ್ಕರ ಬಿಡುಗಡೆಯಾಯಿತೇ?" ಎಂದರು.

"ಬಿಡುಗಡೆ ಚೀಟಿಕೊಟ್ಟರೂ ಇನ್ನೂ ಹೊರಟಿಲ್ಲ ಸರ್!' ನಮ್ರತೆಯಿಂದಲೇ ನುಡಿದನು.

"ಅವನನ್ನು ಹೊರಹಾಕಲು ನೀವೇನೂ ಪ್ರಯತ್ನಿಸಿಲ್ಲವೇ?'

"ಈಗಲೇ ಹೊರಹಾಕ್ತೇನೆ ಸರ್!"

'ಹೊರಹಾಕುವ ಮೊದಲು ಅವನಿಗೆ ನಾಲ್ಕು ಒಳ್ಳೆಯ ಬಟ್ಟೆ ತರಿಸಿಕೊಡಿ. ಜೊತೆಗೆ ಈ ಹಣ ಅವನ ಕೈಯಲ್ಲಿಟ್ಟುಬಿಡಿ' ಎಂದು ನೋಟಿನ ಕಂತೆಯೊಂದನ್ನು ಮೇಜಿನ ಮೇಲಿಟ್ಟರು.

ಮೂರಣ್ಣ ಮೂಕನಂತಾಗಿ ನಿಂತನು. ಯಾವ ಅಧಿಕಾರಿಯೂ ಈ ವರೆಗೆ ಈ ರೀತಿ ಖೈದಿಯ ಬಗ್ಗೆ ಕನಿಕರ ತೋರಿರಲಿಲ್ಲ. 'ಕೇಳಿಸಿತೆ ಹೇಳಿದ್ದು? . ದುಡ್ಡು ತಗೆದು ಕೊಳ್ಳಿ'—ಎಂದಾಗ ಮೂರಣ್ಣ ಮಾತನಾಡದೆ ನೋಟಿನ ಕಂತೆಯನ್ನೆತ್ತಿದನು.

ಕೂಡಲೇ ಬಟ್ಟೆ ತರಿಸಿ ಖೈದಿಯ ಮುಂದಿಡಲು ತಾನೇ ಮುಂದಾದನು.

ಹೊಸಬಟ್ಟೆಯ ಜೊತೆಗೆ ಹಣವೂ ಇರುವುದನ್ನು ಕಂಡು "ಸರ್! ಇದಲ್ಲಾ ನನಗೆ ಬೇಕಿಲ್ಲ'ವೆಂದು ರಮೇಶ ನಿರಾಕರಿಸಿದನು. "ಇದನ್ನು ನೀನು ತಗೆದು ಕೊಳ್ಳಲೇಬೇಕು. ನಮ್ಮ ಮೇಲಧಿಕಾರಿಗಳ ಉಡುಗೊರೆ" ಎಂದಾಗ.

"ಅವರನ್ನೊಮ್ಮೆ ಕಾಣುವ ಅವಕಾಶ ಕಲ್ಪಿಸಿ ಕೊಡುವಿರಾ?" ಎಂದು ಅಂಗಲಾಚಿದನು.

'ಅಪ್ಪಣೆ ಪಡೆದು ತಿಳಿಸುವೆ'ನೆಂದು ಅಲ್ಲಿಂದ ಹೊರ ಬಿದ್ದನು. ರಮೇಶನಿಗೆ ಮೂರಣ್ಣನ ಮುಂದಾಳುತನದಿಂದ ಅಧಿಕಾರಿಗಳ ಮನೆಗೆ ಹೋಗುವ ಅವಕಾಶ ದೊರಕಿದಾಗ ಆನಂದ ಹೊಂದಿದನು. ಮಾನವರ ಮೇಲೆ ಕನಿಕರ ತೋರುವ ಆ ದೀನದಯಾಳುವನ್ನೊಮ್ಮೆ ಕಣ್ಣಾರೆ ಕಂಡಾದ ಮೇಲೆ ತನ್ನ ಅಂತಿಮ ಗುರಿ ನಿರ್ಧಾರವೆಂದು ಭಾವಿಸಿದನು.

ಜೇಲಿನ ಕಂಪೌಂಡಿಗೆ ತಾಗಿಯೇ ಅವರ ಬಿಡಾರ. ರಮೇಶ ಅವರ ಮನೆಯ ಬಳಿ ಬರುವಾಗ ಮುಬ್ಬುಗತ್ತಲೆ ಕವಿದಿತ್ತು. ಬಾಗಿಲ ಬುಡದಲ್ಲಿ ನಿಂತ ಸೇವಕ ಒಳಗೆ ಕರೆದೊಯ್ದನು. ನಾಲ್ಕಾರು ಕುರ್ಚಿಗಳ ನಡುವೆಯೊಂದು ದುಂಡು ಮೇಜು, ರಾರಾಜಿಸುತ್ತಿತ್ತು. ಗೋಡೆಯ ಮೇಲೆ ತೂಗಾಡುವ ಭಾವಚಿತ್ರಗಳು ರಾಷ್ಟ್ರನಾಯಕರದು. ಆ ಕೋಣೆಯ ಸುಂದರ ರಸಾಸ್ವಾದನೆಯಲ್ಲಿ ಅವನ ಕಣ್ಣಿಗೆ ಬಿದ್ದ ಭಾವಚಿತ್ರವೊಂದು ಅವನನ್ನು ಆಳವಾದ ಸಮಸ್ಯೆಯಲ್ಲಿ ಕೆಡವಿತು.

ಎಲ್ಲಿಯೋ ನೋಡಿದ ನೆನಪು. ಎಷ್ಟು ಯೋಚಿಸಿದರೂ ನೆನಪಿಗೆ ಬರಲೊಲ್ಲದು. ಹಳೆಯ ನೆನಪನ್ನು ಕೆದಕುತ್ತಲೇ ಇದ್ದನು. ಅಷ್ಟರಲ್ಲಿ ಒಳಗಿಂದ ತುಂಬುದೇಹದ ನವ ತರುಣನೊಬ್ಬ ಹೊರ ಬಂದು "ಕುಳಿತು ಕೊಳ್ಳಿ" ಎಂದು ಕುರ್ಚಿಯನ್ನು ತೋರಿದನು.

ಆಗ ರಮೇಶ ಆ ಕುಡಿಮೀಸೆಯ ಯುವಕನ ಮುಖವನ್ನೇ ನೋಡುತ್ತಾ ನಿಂತಾಗ—

"ಅದೇನು ನೋಡ್ತಾ ಇದ್ದೀರಿ?' ಎಂದನು.

ಆಗಲೂ ರಮೇಶನಿಗೆ ಹೇಳಲು ಧೈರ್ಯವಿಲ್ಲದೆ ಎಷ್ಟೋ ವರ್ಷಗಳ ಹಿಂದಿನ ನೆನಪನ್ನು ಯೋಚಿಸುತ್ತಲೇ ಇದ್ದನು.

"ಅದೇನು ಯೋಚನೆ?' ಮತ್ತೊಮ್ಮೆ ಕೇಳಿದಾಗ—

"ನೀವು....ನನ್ನ.......' ಮುಂದೆ ಮಾತು ಹೊರಡದಾಯಿತು.

'ಅದೇನು ಅರ್ಧಕ್ಕೆ ನಿಲ್ಲಿಸಿದಿರಲ್ಲ? ಹೇಳಿಬಿಡಿ.' ಎಂದಾಗ—

"ಶೇಖರಾ' ಎಂದು ಓಡಿ ಹೋಗಿ ರಮೇಶ ಆ ಯುವಕನನ್ನು ಬಾಚಿ ತಬ್ಬಿಕೊಂಡಾಗ—

"ಅಪ್ಪಾ! ನನ್ನನ್ನು ಗುರುತಿಸಲು ನಿಮಗಿಷ್ಟು ತಡವಾಯಿತೇ?" ಎಂದನು.

"ಹೌದು ಮಗು! ಅನುಮಾನಿಸುತ್ತಲೇ ಇದ್ದೆ. ಆ ಭಾವಚಿತ್ರ ನೋಡಿದ ನೆನಪು. ಹಾಗೆಯೇ ನಿನ್ನ ಮುಖ ಎಲ್ಲಿಯೋ ಕಂಡ ನೆನಪು. ಕಡೆಗೆ ನಿನ್ನ ಎಡ ಭಾಗದಲ್ಲಿರುವ ಮಚ್ಚೆ ಕಂಡಾಗಲೇ ಹೌದೆಂದು ನಿರ್ಧರಿಸಿದೆ." ಎಂದನು ಕಣ್ಣೀರು ಮಿಡಿಯುತ್ತಾ.

"ನನಗೂ ನೀವು ನನ್ನ ತಂದೆ ಎಂಬುದು ಇಂದು ಆಕಸ್ಮಾತ್ತಾಗಿಯೇ ತಿಳಿಯಿತು". ಎಂದನು.

"ಅದು ಹೇಗೆ ತಿಳಿಯಿತು?" ಕುತೂಹಲದಿಂದಲೇ ಕೇಳಿದನು.

"ನಾನು ವಾರ್ಡನ್ನು ಸುತ್ತುತ್ತಾ ಬರುವಾಗ ನೀವು ಮೂರಣ್ಣನೊಡನೆ ಹೇಳುತ್ತಿದ್ದ ಕಥೆ ನನ್ನ ಮನ ಸೆಳೆಯಿತು. ಎಲ್ಲವನ್ನು ಕೇಳಿದ ಮೇಲೆ ನೀವೇ ನನ್ನ ತಂದೆಯೆಂದು ನಿರ್ಧರಿಸಿದೆ."

"ನನ್ನನ್ನು ಕ್ಷಮಿಸು ಶೇಖರಾ! ನಾನಂದು ಕಾಮದಿಂದ ಕುರುಡಾಗಿದ್ದೆ. ಆದರಿಂದ ಪ್ರೇಮವನ್ನು ಕಡಿದುಕೊಂಡೆ. ಮುಂದಿನ ನಿನ್ನ ಓದು ಹೇಗೆ ಸಾಗಿತು?"

"ಆದ ತಪ್ಪಿಗಾಗಿ ಪಶ್ಚಾತ್ತಾಪ ಪಡುವುದೇ ಪರಿಹಾರ. ನನ್ನ ಕೈ ಹಿಡಿದ ಶಾಲಿನಿಯ ತಂದೆಯ ಸಹಾಯದಿಂದ ಓದು ಪೂರೈಸಿತು.'

'ಕೊನೆಯ ಕಾಲಕ್ಕಾದರೂ ನಿನ್ನ ಮುಖ ಕಂಡೆನಲ್ಲ! ಅದೇ ನನಗೆ ಆನಂದ. ಇ ಇನ್ನು ಬರುತ್ತೇನೆ." ಎಂದು ಹೊರಡಲಣಿಯಾದ.

"ನೀವು ಹೋಗುವುದೆಲ್ಲಿಗೆ! ಇದು ನಿಮ್ಮ ಮನೆಯೆಂದೇ ತಿಳಿಯಿರಿ.'

'ಬೇಡ ಮಗೂ! ನೀನು ಕೊಲೆಗಡುಕನ ಮಗನೆಂದು ಯಾರೂ ನಿನ್ನನ್ನು ಕರೆಯುವುದು ನನಗೆ ಬೇಕಿಲ್ಲ.'

'ಜನ ಕರೆಯುತ್ತಿದ್ದರೂ ಅದೇನೂ ಸುಳ್ಳಾಗಲಾರದಲ್ಲ. ಅಪವಾದಕ್ಕೆ ಹೆದರಿ ಆಕಸ್ಮಾತ್ತಾಗಿ ಸಿಕ್ಕಿದ ತಂದೆಯನ್ನು ಬೀದಿಪಾಲು ಮಾಡುವ ಕೃತಘ್ನ ಮಗ ನಾನಲ್ಲವೆಂಬುದನ್ನು ತಿಳಿಯಿರಿ'.

'ನಾನು ತಂದೆಯಾಗಿ ಬಾಳದಿದ್ದರೂ ನೀನು ಮಗನಾಗಿ ಬಾಳುತ್ತಿರುವೆ ಮಗು.'

'ನಿಮ್ಮ ಬಿಡುಗಡೆಯೇ ನಮಗೀ ಬಂಧನವೆಂಬುದನ್ನು ತಿಳಿಯಿರಿ'. ಅಷ್ಟರಲ್ಲಿ ಶಾಲಿನಿ ಉಪಾಹಾರದ ತಟ್ಟೆ ಹಿಡಿದು ಹೊರ ಬರುವುದು ಕಂಡಿತು. ಆಗ ರಮೇಶನಿಗೆ ತನ್ನ ಮೊದಲ ಹೆಂಡತಿಯ ನೆನಪಾಗಿ ಎರಡು ತೊಟ್ಟು ಕಣ್ಣೀರು ಹರಿದು ಬಂದುದನ್ನು ಕಂಡು ಶೇಖರ ತಂದೆಯ ಕಣ್ಣಲ್ಲಿ ಉದುರುತ್ತಿರುವುದು ಆನಂದ ಬಾಷ್ಪವೆಂದೇ ತಿಳಿದನು.

ನಿಮ್ಮ ಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ ಕೂರಡ್ಕರ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಅ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಅ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

23—3—1967

೨೦ ಪೈಸೆ

ಕಥಾ ಪ್ರಪಂಚ

ಇಬ್ಬರ ಜಗಳ

ಬರೆದವರು: ಶ್ರೀ ಸ. ನಾರಾಯಣ, ಚಿತ್ರದುರ್ಗ.

ತಂದೆ ತಾಯಿ ಇಬ್ಬರೂ ಮಗನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಪರೀಕ್ಷೆ ಮುಗಿದೊಡನೆಯೆ ಮಧು ಮನೆಗೆ ಹಿಂದಿರುಗಿದ. ತಂದೆ ತಾಯಿ ಇಬ್ಬರೂ ಮಗನಿಗೆ ತಮ್ಮ ಸ್ವಂತ ಅಭಿಪ್ರಾಯವನ್ನು ತಿಳಿಸಿ ಅವನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಮಧು ಸಂಜೀವರಾಯರ ಮತ್ತು ಪಾರ್ವತಮ್ಮನವರ ಒಬ್ಬನೇ ಮಗ. ಇದ್ದ ಒಬ್ಬನೇ ಮಗ 'ವೀರ ಬಸವ' ಎನಿಸಿಕೊಳ್ಳದೆ ಪ್ರತಿಭಾವಂತನಾಗಿಯೇ ಬೆಳೆದ. ತಂದೆ—ತಾಯಿ ಇಬ್ಬರೂ ಮಗನ ಆಸೆ ಆಕಾಂಕ್ಷೆಗಳಿಗೆ ಪ್ರತಿಹೇಳದೆ ಅವನ ಮನೋಭಿಪ್ರಾಯದಂತೆಯೇ ವರ್ತಿಸುತ್ತಿದ್ದರು. ಮಧುವೆಷ್ಟಾದರೂ ತಂದೆತಾಯಿಯರ ಒಬ್ಬನೇ ಮಗ! ವಂಶದ ಏಕೈಕ ಕುಡಿ! ಅಪಾರ ಆಸ್ತಿಯ ಏಕೈಕ ವಾರಸುದಾರ!!!

ಸಂಜೀವರಾಯರಿಗೆ ಸಂಪಿಗೆಯ ಸುತ್ತ ಮುತ್ತ ನೂರಾರು ಎಕರೆ ಜಮೀನಿತ್ತು. ಗದ್ದೆ, ತೋಟಗಳು, ಹೊಲಗಳು ವಿಶಾಲವಾಗಿಯೇ ಇದ್ದುದರಿಂದ ಅವುಗಳಿಂದ ಬರುವ ಉತ್ಪತ್ತಿ ಹೇರಳವಾದ್ದರಿಂದ ಅವರು ಸರ್ಕಾರಿ ನೌಕರಿಯನ್ನು ಮಾಡಬೇಕಿರಲಿಲ್ಲ. ಹೊಟ್ಟೆಯ ಪಾಡಿಗಾಗಿ ಯಾವ ಉದ್ಯೋಗವನ್ನು ಅವಲಂಬಿಸ ಬೇಕಿರಲಿಲ್ಲ. ರೈತರ ದುಡಿದು ಅರ್ಥವನ್ನು ಸಂಜೀವರಾಯರಿಗೇ ತಲುಪಿಸುತ್ತಿದ್ದರು. ಸಂಜೀವರಾಯರಿಗೆ ಬರುತ್ತಿದ್ದ ವರಮಾನದಲ್ಲಿ ಇಪ್ಪತ್ತು ಜನರ ಸಂಸಾರ ಸುಖವಾಗಿ ಸಾಗಿ ಬರುತಿತ್ತು.

ಹೇರಳ ಆಸ್ತಿ, ವರಮಾನದೊಂದಿಗೆ ಸಂಜೀವರಾಯರಿಗೆ ಮತ್ತು ಪಾರ್ವತಮ್ಮನವರಿಗೆ ಧಾರಾಳ ಹೃದಯವೂ ಇತ್ತು. ಅವರ ಕೈಗಳಿಗೆ "ಬಿಗಿತ" ಎನ್ನುವ ಅರ್ಥ ಗೊತ್ತಿರಲಿಲ್ಲ.

ಮಧು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳನ್ನು ಯಶಸ್ವಿಯಾಗಿ ದಾಟಿದ. ಸಾಹುಕಾರರ ಮನೆಯ ಮಕ್ಕಳು "ಪೊದ್ದ"ಗಳಾಗುವುದು ಹೆಚ್ಚು ಆದರೆ ಮಧು ಆ ಮಾತಿಗೆ ಅಪವಾದವಾಗಿದ್ದ. ಆಟಪಾಟ, ಚಟುವಟಿಕೆಗಳಲ್ಲಿ ಮಧು ಮೊದಲಿಗನಾಗಿರುತ್ತಿದ್ದ.

P. U. C. ಮುಗಿಸಿದ ನಂತರ ಮಧು ತಾನು ಮೆಡಿಕಲ್ ಕಾಲೇಜಿಗೆ ಸೇರಿ M. B. B. S. ಅಭ್ಯಸಿಸುವುದಾಗಿ ತಿಳಿಸಿದ. ಮಧು ಮನತೃಪ್ತಿಯಾಗುವವರೆವಿಗೂ ಓದ ಬಯಸಿತ್ತು. ಅವನು ನೌಕರಿ ಹಿಡಿಯಬೇಕಾದ ಅಗತ್ಯವಿರಲಿಲ್ಲ ವೈದ್ಯನಾಗಿ ರೋಗಿಗಳ ಶುಶ್ರೂಷೆ ಮಾಡಬೇಕು, ಸಮಾಜಸೇವಕನಾಗಿ ದುಡಿಯಬೇಕು, ಎಂಬ ಹಂಬಲ ಅವನಲ್ಲಿ ಮೂಡಿತ್ತು.

ಅದೆಲ್ಲ ಏಕೋ ಮಧು B. A. ನೋ, B Sc.ನೋ ಮಾಡಿಕೊಂಡರೆ ಸಾಕು. ನೀನು ಎಲ್ಲಿ ದುಡಿಯಬೇಕಾಗಿದೆ. ಇರುವ ಆಸ್ತಿ ನೋಡಿಕೊಂಡರೆ ಸಾಕು. ನಮಗೆ ನಿನ್ನನ್ನು ಬಿಟ್ಟರೆ ಬೇರೆ ಯಾರಿದ್ದಾರೆ? ನೀನು ಓದಿ ದೂರದ ಊರಿಗೆ ಹೋದರೆ ಏನು ಬಂತು ಭಾಗ್ಯ. ನಮ್ಮ ಕಣ್ಮುಂದೆ ಇರಬೇಕೆನ್ನುವ ಆಸೆ ನನ್ನದು, ನಿನ್ನಮ್ಮನದು.' ಎಂದರು ಸಂಜೀವರಾಯರು.

"M B B S ಮಾಡಿಕೊಂಡ ಮಾತ್ರಕ್ಕೆ ಬೇರೆ ಊರಿಗೆ ಹೋಗುತ್ತೇನೆ ಎಂದು ಅರ್ಥವೇನಪ್ಪ. ಇಲ್ಲೇ ನನ್ನ ಸೇವೆ ಸಲ್ಲಿಸುತ್ತೇನೆ. ಸುತ್ತಮುತ್ತಲ ರೋಗರುಜಿನ, ಜೀವನ ನೋಡಿದಾಗ ಇಲ್ಲಿ ನಿಂತುಕೊಂಡು ರೈತರ ಸೇವೆಯನ್ನೇಕೆ ಮಾಡಬಾರದು ಎಂಬ ಯೋಚನೆ ಮೂಡಿದೆ. ದಯವಿಟ್ಟು ಒಪ್ಪಿ' ಎಂದ ಮಧು.

"ಮಧು ಮಾತು ನಿಜ. ಅವನು ಎಂದೂ ನಮ್ಮನ್ನು ಬಿಟ್ಟು ಹೋಗವುದಿಲ್ಲ. ನಮ್ಮ ಮಾತನ್ನು ಮೀರುವುದಿಲ್ಲ ಮೈಸೂರಿನಲ್ಲಿ M.B B S ಪರೀಕ್ಷೆಗೆ ಓದಲಿ ಬಿಡಿ. ನಾವು ಇನ್ನು ಯಾರಿಗೆ ಖರ್ಚು ಮಾಡಬೇಕಾಗಿದೆ ಇರೋನು ಒಬ್ಬ ಮಗ. ನಮ್ಮ ಮಗ ವಿದ್ಯಾವಂತನಾದರ ವಿವೇಕಶಾಲಿಯಾದರೆ, ವೈದ್ಯನಾಗಿ ಜನಸೇವೆ ಮಾಡಿದರೆ ನಾವೇಕೆ ಬೇಡವೆನ್ನಬೇಕು' ಎಂದು ಮಗನ ಪರವಾಗಿ ವಕಾಲತ್ತು ವಹಿಸಿದರು.

"ನೀವು ತಾಯಿ ಮಗ ಒಂದಾದ ಮೇಲೆ ನನ್ನದೇನಿದೆ ಹೇಗೂ ಬಹುಮತದ ಕಾಲ. ಸರಿ ಕಣೋ, ನೀನು ಮೈಸೂರಿಗೆ ಹೋಗಿ ಕಾಲೇಜಿಗೆ ಸೇರಲು ಏನು ವ್ಯವಸ್ಥೆ ಮಾಡಬೇಕೋ ಮಾಡಿ ಬಾ" ಎಂದರು, ಸಂಜೀವ ರಾಯರು.

"ನೀವು ಇಷ್ಟು ದೊಡ್ಡವರಾದಿರಿ ನಿಮಗೆ ಬುದ್ಧಿ ಮಾತ್ರ ಬಂದಿಲ್ಲ. ಅವನಿನ್ನೂ ಹುಡುಗ ಅವನಿಗೇನು ತಿಳಿಯುತ್ತೆ. ನೀವು ಹೋಗಿ ಎಲ್ಲಾ ವ್ಯವಸ್ಥೆ ಮಾಡಿ ಬನ್ನಿ. ಇದನ್ನೆಲ್ಲಾ ನಾನು ಹೇಳಬೇಕೆ?" ಎಂದರು, ಪಾರ್ವತಮ್ಮ

"ಹಾಗೆ ಆಗ್ಲಿ ಕಣೆ ಮಹರಾಯ್ತಿ" ಎಂದರು ಸಂಜೀವರಾಯರು.

ಮಧು ಮೈಸೂರಿನಲ್ಲಿದ್ದ ಮೆಡಿಕಲ್ ಕಾಲೇಜಿಗೆ ದಾಖಲಾದ, ಸಂಜೀವರಾಯರು ಮೈಸೂರಿಗೆ ಬಂದು ಮಗನ ವಾಸ, ವ್ಯಾಸಂಗಗಳಿಗೆ ತಕ್ಕ ಏರ್ಪಾಡು ಮಾಡಿ ಹಳ್ಳಿಗೆ ಹಿಂದಿರುಗಿದರು.

ಯಾವ ತರಗತಿಯಲ್ಲಿಯೂ ಕುಂಟದೆ ನಿಲ್ಲದೆ ಮಧು, ಎಲ್ಲಾ ತರಗತಿಗಳಲ್ಲಿಯೂ ಮೊದಲನೆಯವನಾಗಿ ಉತ್ತೀರ್ಣನಾಗುತ್ತಾ ಬಂದ ತಂದೆ-ತಾಯಿಯರಿಗೆ ಪ್ರತಿಭಾವಂತ ಮಗನ ಬಗ್ಗೆ ಎಲ್ಲಿಲ್ಲದ ಹಿಗ್ಗು. ಮಧು ಕೊನೆಯ ವರ್ಷದ ಪರೀಕ್ಷೆಗಾಗಿ ಅಭ್ಯಾಸ ನಡೆಸುತ್ತಿದ್ದ.

ಮಧು M B B. S. ಮೂರನೆಯ ವರ್ಷದಲ್ಲಿರುವಾಗಲೇ ಮನೆಯಲ್ಲಿ ಮದುವೆಯ ಪ್ರಸ್ತಾಪ ನಡೆದಿತ್ತು. "ಓದು ಮುಗಿಯುವ ವರೆಗೂ ಯಾವ ಪ್ರಸ್ತಾಪ, ಪ್ರಯತ್ನಗಳೂ ಬೇಡ. ನನಗೆ ಈಗಲೇ ಮದುವೆಯಾಗಲು ಇಚ್ಛೆ ಇಲ್ಲ" ಎಂದು ಮಧು ಅಭಿಪ್ರಾಯವನ್ನು ವ್ಯಕ್ತಪಡಿಸಿದ.

ತಂದೆಯ ಸಿಟ್ಟಿನ ಮಾತಾಗಲಿ, ತಾಯಿಯ ಕಣ್ಣೀರಾಗಲಿ ಅವನ ನಿರ್ಧಾರ ಅಲ್ಲಾಡಿಸಲಿಲ್ಲ ಮಗ ಹಟವಾದಿ ಎಂಬ ಸಂಗತಿಯು ತಂದೆ-ತಾಯಿ ಇಬ್ಬರಿಗೂ ಗೊತ್ತಿತ್ತು.

— ೨ —

ಮಗ ಮಧುವಿಗೆ ಹೆಣ್ಣು ಗೊತ್ತು ಮಾಡುವ ವಿಷಯದಲ್ಲಿ ಸಂಜೀವರಾಯರಿಗೆ ಮತ್ತು ಪಾರ್ವತಮ್ಮನವರಿಗೆ ದೊಡ್ಡ ವಾಗ್ಯುದ್ಧವೇ ಆಯಿತು. ಜಗಳ ಯಾರ ಕಿವಿ ತಾಕದಿದ್ದರೂ, ಮಧುಗೆ ಗೊತ್ತಿಲ್ಲದಿದ್ದರೂ ವಿಚಿತ್ರವಾಗಿಯೇ ಇತ್ತು.

ಶೈಲಜಾ ಪಾರ್ವತಮ್ಮನವರ ಅಣ್ಣನ ಮಗಳು. ಪಾರ್ವತಮ್ಮನವರ ಅಣ್ಣ ಸಾಕಷ್ಟು ಶ್ರೀಮಂತರಾಗಿರುವುದೂ ಅಲ್ಲದ, ಸರ್ಕಾರದ ದೊಡ್ಡ ಹುದ್ದೆಯಲ್ಲಿಯೂ ಇದ್ದರು. ಮಧು ಶೈಲಜಾಳನ್ನು ಒಪ್ಪುವ ಮುಂಚೆಯೇ ಪಾರ್ವತಮ್ಮನವರು ತಮ್ಮ ಸೋದರ ಸೊಸೆಯನ್ನು ಒಪ್ಪಿ ತಮ್ಮ ಏಕೈಕ ಪುತ್ರನನ್ನು ಒಪ್ಪಿಸಿ ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಲು ಸಿದ್ಧರಿದ್ದರು. ಅಣ್ಣನಿಗೆ ಭರವಸೆಯನ್ನು ಕೊಟ್ಟಿದ್ದರು. ಶೈಲಜಾ ತಮ್ಮ ಮನೆಯ ಸೊಸೆ ಎಂದು ಹೇಳಿಕೊಳ್ಳುತ್ತಿದ್ದರು. ತಾಯಿಯ ಮಾತು ಅನೇಕ ಭಾರಿ ಮಧು ಕಿವಿಗೆ ಬಿದ್ದಿತ್ತು. ಇವನು ಪ್ರತಿ ಹೇಳಿರಲಿಲ್ಲ.

ಪತ್ನಿಯ ಆಯ್ಕೆ ಸಂಜೀವರಾಯರಿಗೆ ಸರಿಹೋಗಿರಲಿಲ್ಲ. ಅವರಿಗೆ ಪತ್ನಿಯ ಅಣ್ಣನ ಸ್ವಭಾವ ಸರಿದೋರಲಿಲ್ಲ. ತನ್ನದೇ ಶ್ರೇಷ್ಠ, ತನಗೆ ಪ್ರತಿ ಹೇಳುವ ಎದೆಗಾರಿಕೆ ಯಾರಿಗಿದೆ ಎಂಬ ಬಿಗುಮಾನದ ಜನದು. ತಂದೆಯ ನೆರಳಿನಲ್ಲಿ ಬೆಳೆದಿದ್ದ ಶೈಲಜಾಳಲ್ಲಿ ತಂದೆಯ ಅನೇಕ ವಿಚಿತ್ರ ಗುಣಗಳು ಮನೆ ಮಾಡಿಕೊಂಡಿರುವ ಸಂಗತಿಯನ್ನು ಸಂಜೀವರಾಯರು ಅರಿತಿದ್ದರು.

ತಮ್ಮ ಒಬ್ಬಳೆ ತಂಗಿಯ ಮಗಳು ಪದ್ಮಳನ್ನು ಮಧುವಿಗೆ ತಂದು ಕೊಳ್ಳಬೇಕೆಂದು ಆಸೆ ಸಂಜೀವರಾಯರಿಗೆ ವಿಶೇಷವಾಗಿತ್ತು. ಪದ್ಮ ಹತ್ತು ವರ್ಷದವಳಿರುವಾಗಲೆ ಅವಳ ತಾಯಿ ಕಣ್ಮುಚ್ಚಿದರು. ಪದ್ಮಳ ಆರೈಕೆಯ ನೆವದಲ್ಲಿ ಅವಳ ತಂದೆ ಮತ್ತೊಂದು ಮದುವೆ ಮಾಡಿಕೊಂಡರು. ಪದ್ಮಳ ಚಿಕ್ಕಮ್ಮ ಮಲತಾಯಿಯಾಗಿಯೇ ಉಳಿದಿದ್ದರು. ಸಂಜೀವರಾಯರು ಸೋದರ ಸೊಸೆಯನ್ನು ಮನೆಗೆ ಕರೆತರುವ ಪ್ರಯತ್ನವನ್ನು ನಡೆಸಿದರು. ಆದರೆ ಪದ್ಮಳ ತಂದೆ, ಚಿಕ್ಕಮ್ಮ ಇವರು ಅದಕ್ಕೆ ಸಂಪೂರ್ಣವಾಗಿ ಸಮ್ಮತಿಸಿರಲಿಲ್ಲ. ತಾಯಿ ಇಲ್ಲದ ಮಗಳನ್ನು ಮಾಡಿಕೊಂಡರೆ ಬಾಂಧವ್ಯವೂ ಉಳಿಯುತ್ತವೆ, ಪದ್ಮಳಿಗೂ ಉತ್ತಮ ನೆಲೆ ದೊರೆತಂತಾಗುತ್ತದೆ ಎಂಬ ಯೋಚನೆ ಸಂಜೀವರಾಯರದು.

ಸಂಜೀವರಾಯರ ಯೋಚನೆಯಂತೆಯೇ ಪಾರ್ವತಮ್ಮನವರದೂ ಶೈಲಜಾಳನ್ನು ಸೊಸೆಯನ್ನಾಗಿ ಮಾಡಿಕೊಂಡರೆ ತೌರಿನ ನಂಟು ಬೆಳೆಯುತ್ತದೆ ಎಂದು. ಶೈಲಜಾ ಬೆಳೆದಂತೆಲ್ಲಾ, ಪತಿ ಪದ್ಮಳನ್ನ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುತ್ತೇನ ಎಂದು ಹೇಳಿದಂತೆಲ್ಲಾ ಪಾರ್ವತಮ್ಮನವರಿಗೆ ಪದ್ಮಳ ಬಗ್ಗೆ ತಾತ್ಸಾರ ಬೆಳೆಯಿತು.

ಪದ್ಮಳ ರೂಪ ಗುಣಗಳಿಗೆ ಪಾರ್ವತಮ್ಮನವರೂ ಮನಸೋತಿದ್ದರು. ಆದರೂ ಅವರು ಬಾಯಿ ಬಿಟ್ಟು ಎಂದೂ ಹೇಳಿರಲಿಲ್ಲ. ಅವರ ಸ್ವಾಭಿಮಾನ ಅಷ್ಟು ದೊಡ್ಡದಾಗಿತ್ತು. ಪದ್ಮ ಮನೆಯ ಸೊಸೆಯಾಗಿ ಬರುವುದು ಅವರಿಗೆ ಇಷ್ಟವಿರಲಿಲ್ಲ. ಪದ್ಮಳ ಗುಣ ಮತ್ತು ರೂಪ ಮಧುವನ್ನು ವಿಶೇಷವಾಗಿ ಆಕರ್ಷಿಸಿದ್ದವು. ತಂದೆಯ ಮಾತಿನಲ್ಲಿ ಸತ್ಯಾಂಶವಿದೆ. ಪದ್ಮಳನ್ನೇ ಮದುವೆಯಾಗುವುದು ಒಳ್ಳೆಯದು. ಎಂದು ಅನೇಕ ಬಾರಿ ಅವನು ಯೋಚಿಸಿದ್ದ. ಪಾರ್ವತಮ್ಮ ಮಗನ ಮನಸ್ಸನ್ನು ಶೈಲಜಾಳ ಕಡೆಗೆ ತಿರುಗಿಸಲು ಹಲಬಗೆಯಲ್ಲಿ ಪ್ರಯತ್ನಿಸಿದ್ದರು. ಅವನ ಗಮನ ಅತ್ತ ಕಡೆಗೆ ಹರಿಯುವಂತೆ ಹಲವು ಅವಕಾಶ ಒದಗಿಸಿಕೊಟ್ಟರು.

ಸಂಜೀವರಾಯರು, ಪಾರ್ವತಮ್ಮನವರು ಸೋಲುವಂತಿರಲಿಲ್ಲ. ತಮ್ಮ ಹಟ ಬಿಡಲೂ ಸಿದ್ಧರಿರಲಿಲ್ಲ.

— ೩ —

ಮನೆಯ ವಾತಾವರಣದ ಪೂರ್ಣ ಪರಿಚಯ ಮಧುವಿಗಿಲ್ಲದಿದ್ದರೂ, ಅಲ್ಪಸ್ವಲ್ಪ ಗೊತ್ತಿಲ್ಲದೆ ಇರಲಿಲ್ಲ. ತಂದೆ, ತಾಯಿ ಪ್ರತ್ಯೇಕವಾಗಿ ಬರೆಯುತ್ತಿದ್ದ ಪತ್ರಗಳಲ್ಲಿ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ್

ಫೋನ್ 7 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು ತಾ. 19-1-67ರಂದು ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಚಿತ್ತೈಸಿದಾಗ ದೇವಳದ ಆಡಳಿತೆ ಮಂಡಳಿಯವರು ಕಾಶಿಕಟ್ಟೆ ಶ್ರೀ ಆಂಜನೇಯ ಮತ್ತು ಗಣಪತಿ ದೇವರುಗಳ ಗುಡಿಗಳ ಬಳಿ ಸಕಲ ಬಿರುದು ಬಾವಲಿಗಳೊಂದಿಗೆ ಭವ್ಯ ಸ್ವಾಗತ ನೀಡಿ ಮಾನಪತ್ರ ಅರ್ಪಿಸಲಾಗಿ ಶ್ರೀ ಆಂಜನೇಯ ಮತ್ತು ಗಣಪತಿ ದೇವರುಗಳಲ್ಲಿ ಮಂಗಳಾರತಿ ಸ್ವೀಕರಿಸಿ, ಮುಖ್ಯ ಕ್ಷೇತ್ರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ತೆರಳುವ ಸಂದರ್ಭದ ಒಂದು ದೃಶ್ಯ. ಚಿತ್ರದಲ್ಲಿ ಮಹಾರಾಣಿ, ಇವರ ಹಿರಿಯ ಪುತ್ರ, ದೇವಳದ ಧರ್ಮದರ್ಶಿಗಳು ಮತ್ತು ಮೆನೇಜರರನ್ನು ಕಾಣಬಹುದು.

ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಗೆ ಪೂರ್ಣಕುಂಭದೊಂದಿಗೆ ಕರೆದೊಯ್ಯಲಾಗಿ ಮಹಾಪೂಜಾ ನಂತರ ಶಿಷ್ಟ ಸಂಪ್ರದಾಯಕ್ಕೆ ಅನುಸರಿಸಿದ ರಾಜಮರ್ಯಾದೆಗಳೊಂದಿಗೆ ಅರ್ಚಕರು ಫಲಮಂತ್ರಾಕ್ಷತೆ, ಮಹಾಪ್ರಸಾದಾದಿಗಳನ್ನಿತ್ತರು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೦	೨೩—೩—೧೯೬೭	No. 30

ವಚನ ಸುಧೆ

ಆತ್ಮನಾತ್ಮಾನಮನ್ವಿಚ್ಛೇನ್ಮನೋ
ಬುದ್ಧೀಂದ್ರಿಯೈರ್ಯತೈಃ ।
ಆತ್ಮಾ ಹ್ಯೇವಾತ್ಮನೋ ಬಂಧು
ರಾತ್ಮೈವ ರಿಪುರಾತ್ಮನಃ ॥

ಮನಸ್ಸು ಬುದ್ಧಿ ಮತ್ತು ಇಂದ್ರಿಯಗಳನ್ನು ತನ್ನ ಅಧೀನದಲ್ಲಿರಿಸಿ, ತನ್ನಿಂದಲೇ ತನ್ನಾತ್ಮನನ್ನು ಅರಿಯಬೇಕು. ಏಕೆಂದರೆ, ಆತ್ಮವೇ ತನ್ನ ಬಂಧು ಮತ್ತು ಅದೇ ತನ್ನ ಶತ್ರು.

ಉಪಾಂತ್ಯ ಅಂಕ

ಕೇಂದ್ರದಲ್ಲಿ ಮತ್ತು ಕಾಂಗ್ರೆಸ್ಸು ಬಹುಮತ ಪಡೆದು ಬಂದಿರುವ ರಾಜ್ಯಗಳಲ್ಲಿ ಮತ್ತೆ ಕಾಂಗ್ರೆಸ್ ಮಂತ್ರಿ ಮಂಡಳಗಳು ಸ್ಥಾಪಿತವಾದುವು. ಉತ್ತರ ಪ್ರದೇಶದಲ್ಲಿ ಪಕ್ಷಾತೀತರ ನೆರವನ್ನು ಪಡೆದು ಕಾಂಗ್ರೆಸ್ಸು ಅಧಿಕಾರ ನಿರ್ವಹಿಸಿತು. ಚುನಾವಣೆಯ ನಂತರ ರಾಜಸ್ಥಾನವನ್ನುಳಿದು ಇತರಕ್ಕೆ "ಜನಪ್ರಿಯ" ಸರಕಾರಗಳು ಸ್ಥಾಪನೆ ಹೊಂದಿದುವು. ಬಹುಮತ ಪಕ್ಷವೆಂದು ರಾಜಸ್ಥಾನದಲ್ಲಿ ಕಾಂಗ್ರೆಸ್ಸನ್ನು ಮೊದಲಿಗೆ ರಾಜ್ಯಪಾಲರು ಸರಕಾರ ರಚಿಸುವಂತೆ ಕೇಳಿಕೊಂಡದ್ದು, ಪ್ರತಿಪಕ್ಷೀಯರು ದೊಂಬಿಯೆದ್ದದ್ದು, ಅನಿವಾರ್ಯವಾಗಿ ಅಲ್ಲಿನ ವಿಧಾನ ಸಭೆಯನ್ನು ತಾತ್ಕಾಲಿಕವಾಗಿ ರದ್ದು ಮಾಡಿ, ರಾಷ್ಟ್ರಪತಿ ಆಳಿಕೆಯನ್ನು ಹೇರಿದ್ದು ದುರ್ದೈವದ ಸಂಗತಿ. ಅದೇನೇ ಇದ್ದರೂ ವಿಧಾನ ಸಭೆಯನ್ನು ಸಂಪೂರ್ಣ ವಿಸರ್ಜನೆ ಮಾಡದಿರುವುದರಿಂದ ಉಚಿತ ವಾತಾವರಣ ಪ್ರಾಪ್ತವಾದೊಡನೆಯೇ ಮತ್ತೆ ಜನತಾ ಸರಕಾರ ರಚಿಸಲ್ಪಡುವುದೆಂದು ನಂಬಬಹುದು. ರಾಜ್ಯದಲ್ಲುಂಟಾದ ಗಲಭೆ—ಪ್ರದರ್ಶನಗಳ ಅಶಾಂತ ಪರಿಸ್ಥಿತಿಯಲ್ಲಿ ತಾನು ಸರಕಾರ ರಚಿಸಲು ಅಸಮರ್ಥನೆಂದು ಸುಖಾಡಿಯಾ ತಾವೇ ಒಪ್ಪಿಕೊಳ್ಳಬೇಕಾದರೆ, ಅಲ್ಲಿನ ಸ್ಥಿತಿಗತಿಗಳು ನಿಜಕ್ಕೂ ಗಂಭೀರವಾಗಿಯೇ ಇರಬೇಕು.

ಮಂತ್ರಿ ಮಂಡಳದೊಡನೆ ಸಭಾಧ್ಯಕ್ಷರ ಆಯ್ಕೆಯೂ ನಡೆಯಿತು. ಕರ್ನಾಟಕದ ಮಂತ್ರಿ ಮಂಡಳದ ಬಗ್ಗೆ ಹೆಚ್ಚು ವಿಮರ್ಶೆ ಅನಗತ್ಯ—ಪ್ರತಿ ಪಕ್ಷೀಯರೊಬ್ಬರು ನುಡಿದಂತೆ 'ಹಳೆ ಹುಲಿಗಳೇ ಮತ್ತೆ ಬಂದಿದ್ದಾರೆ.' ವಿಧಾನ ಸಭಾಧ್ಯಕ್ಷರೂ ಮತ್ತೆ ಆಯ್ಕೆಗೊಂಡಿದ್ದಾರೆ. ಆದರೆ, ಕೇಂದ್ರ ಸಚಿವ ಸಂಪುಟದಲ್ಲಿ ಮಹತ್ವ ಪೂರ್ಣ ಬದಲಾವಣೆಗಳನ್ನು ನಾವು ಕಾಣಬಹುದು. ಸರ್ವ ಶ್ರೀ ಪಾಟೀಲ್, ಸುಬ್ರಹ್ಮಣ್ಯಂ, ಚೌಧರಿ, ಅತುಲ್ಯಘೋಷ್ ಮೊದಲಾದ ಘಟಾನುಘಟಿಗಳು ಚುನಾವಣೆಯಲ್ಲಿಯೇ ಪರಾಜಿತರಾದರು. ಇವರೆಲ್ಲರೂ ಶ್ರೀಮತಿ ಗಾಂಧಿಯವರ ಬಲಗೈಯಂತಿದ್ದವರು ಎಂದರೂ ಅತಿಶಯೋಕ್ತಿಯಲ್ಲ. ನೀಲಂ ಸಜೀವರೆಡ್ಡಿಯವರಂತಹರ ಹೆಸರೂ ತಪ್ಪಿ ಹೋಗಿದೆಯೆನ್ನುವಾಗ ತನ್ನ ಸಹದ್ಯೋಗಿಗಳ ಆಯ್ಕೆ ಮಾಡುವಾಗ ಶ್ರೀಮತಿಯವರು ತುಂಬ ಯೋಚಿಸಿರಬೇಕು. ಸಚಿವ ಸಂಪುಟ ತಯಾರಿಸುವುದಕ್ಕೆ ಮೊದಲು ಅವರು ಯಾರೊಡನೆಯೂ ಸಮಾಲೋಚನೆ ಮಾಡಲಿಲ್ಲವೆಂದೂ ಯಾದಿ ತಯಾರಾದ ಮೇಲೆ ಕಾಂಗ್ರೆಸ್ ಅಧ್ಯಕ್ಷರಿಗೆ ತೋರಿಸಿದರೆಂದೂ ಮುರಾರ್ಜಿಯವರೊಡನೆ ಚರ್ಚಿಸಿದರೆಂದೂ ವರದಿಗಳು ಬಂದಿವೆ. ಮಂತ್ರಿಗಳ ಆಯ್ಕೆಯು ಸಂಪೂರ್ಣವಾಗಿ ಪ್ರಧಾನಿಗೇನೇ ಬಿಟ್ಟಿರುವ ವಿಷಯವಾದರೂ ಈ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡವೂ ತುಸು ಇದ್ದಂತಿತ್ತು. ಆದುದರಿಂದ ಈ ಬಾರಿ ಇಂದಿರಾ ಗಾಂಧಿಯವರ ಸಂಪುಟವು ನಿಜಕ್ಕೂ ಅವರದ್ದೇ ಆಯ್ಕೆ. ಹಾಗಾಗಿ ಆಡಳಿತೆಯನ್ನು ತನಗುಚಿತ ರೀತಿ ನಡೆಸುವದರಲ್ಲಿ ಅವರೀ ಬಾರಿ ಹೆಚ್ಚು ಸಫಲರಾಗಬೇಕು.

ಲೋಕ ಸಭಾಧ್ಯಕ್ಷರಾಗಲು ಈ ಬಾರಿ ಸಮರ್ಥರೊಬ್ಬರ ಅಗತ್ಯವಿತ್ತು. ಮಾಲವಣಕರ್ ಮತ್ತು ಅಯ್ಯಂಗಾರರು ಈ ಸ್ಥಾನದಲ್ಲಿದ್ದು ಸತ್‌ಪರಂಪರೆಯನ್ನು ಹಾಕಿಕೊಟ್ಟವರು. ಕಳೆದೈದು ವರ್ಷಗಳಲ್ಲಿ ಸರ್ದಾರ ಹುಕುಂ ಸಿಂಗರು ಕೆಚ್ಚೆದೆಯಿಂದಲೇ ಈ ಹೊಣೆ ಹೊತ್ತರೆನ್ನಬೇಕು. ಇದೀಗ ಇದು ನೀಲಂರ ಜವಾಬ್ದಾರಿಯದಾಗಿದೆ. ಕಾಂಗ್ರೆಸ್ಸು ಎಲ್ಲೆಲ್ಲೋ ಹರಿದಾಡಿ ನೀಲಂರತ್ತ ದೃಷ್ಟಿ ಹರಿಯಿಸಿತೆಂದು ತಿಳಿಯುತ್ತದೆ. ಆದರೆ, ಸಂಜೀವರೆಡ್ಡಿಯವರಿಂದ ಈ ಹೊಸ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವುದು ಸಾಧ್ಯವಿದೆಯೆ? ಆಂಧ್ರ ಮತ್ತು ಕೇಂದ್ರಗಳಲ್ಲಿ ಅವರಿಗೆ ಆಡಳಿತೆಯ ಅನುಭವವೇನೋ ಇದೆ. ಉತ್ತಮ ಮಂತ್ರಿ ಎಂಬ ಹೆಸರೂ ಇದೆ. ಲೋಕಸಭಾಧ್ಯಕ್ಷನಲ್ಲಿ ಅಗತ್ಯವಾಗಿರಬೇಕಾದ ಸಂವಿಧಾನ ಮತ್ತು ಕಾನೂನು, ಸಂಪ್ರದಾಯಗಳ ಪರಿಜ್ಞಾನ ಅವರಿಗೆ ಪ್ರಾಪ್ತವಿದೆಯೆ? ಈ ಹಿಂದ ಉಪಾಧ್ಯಕ್ಷರಾಗಿದ್ದವರನ್ನೇ ಅಧ್ಯಕ್ಷರನ್ನಾಗಿ ಆರಿಸಲಾಗುತಿತ್ತು. ಈ ಬಾರಿ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರಿಗೆ ಟಿಕೇಟು ನಿರಾಕರಿಸಿದ್ದರಿಂದ ಹೊಸ ಮುಖವನ್ನು ಕಾಣುವಂತಾಯಿತು. ವಿರೋಧಿ ಪಕ್ಷಗಳ ಬಲವು ಹೆಚ್ಚಾಗಿರುವಾಗ, ಸರಕಾರಿ ಪಕ್ಷಕ್ಕೆ ಬಹುಮತ ಕಡಿಮೆಯಿರುವಂತಹ ಸಂದರ್ಭದಲ್ಲಿ ಸಭೆಯ ಶಿಸ್ತು—ಸಂಯಮಗಳನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ಅತಿ ಹೆಚ್ಚಿನದು. ಇದನ್ನು ಶ್ರೀ ನೀಲಂ ಯಾರಿಗೂ ಅಪಚಾರವಾಗದಂತೆ ನಿರ್ವಹಿಸುವಂತಾಗಲಿ.

ಇನ್ನು ಮುಂದಿನ ಪ್ರಶ್ನೆ ರಾಷ್ಟ್ರಪತಿ-ಉಪರಾಷ್ಟ್ರಪತಿಗಳ ಆಯ್ಕೆ. ಇದಕ್ಕೆ ನಾಮಪತ್ರಗಳನ್ನು ಸಲ್ಲಿಸುವ ದಿನವೂ ಹತ್ತಿರ ಬಂತು. ಯಾರಾಗುವರು ಎಂಬುದಕ್ಕಿಂತ ಯಾರು ನಾಮಪತ್ರ ಸಲ್ಲಿಸುವರು ಎಂಬುದೂ ಮಹತ್ವದ ಪ್ರಶ್ನೆ. ಡಾ| ರಾಧಾಕೃಷ್ಣನ್ ಮತ್ತೆ ಆ ಸ್ಥಾನದಲ್ಲುಳಿಯಲು ಒಪ್ಪದೇ ಹೋದರೆ, ಇದನ್ನು ತುಂಬಿಸುವಾಗ ತುಂಬ ಎಚ್ಚರಿಕೆ ಬೇಕೆನಿಸುತ್ತದೆ. ಕಾಂಗ್ರೆಸ್‌ಗೆ ಬಹುಮತ ಕಡಿಮೆಯಾಗಿರುವುದೇ ಇದಕ್ಕೆ ಮುಖ್ಯ ಕಾರಣ. ವಿರೋಧಿಗಳ ಶಕ್ತಿ ಬೆಳೆಸಿರುವುದರಿಂದ ಎಲ್ಲ ಪಕ್ಷೀಯರಿಗೂ ಸಮ್ಮತವಾಗಬಲ್ಲಂತಹ ಇನ್ನೊಬ್ಬನನ್ನು ಕಾಂಗ್ರೆಸ್ಸು ಹುಡುಕದೆ ಹೋದರೆ, ಮುಂದೆ ತೊಂದರೆಯಾಗದೆ? ಆದುದರಿಂದ ಸದ್ಯದ ರಾಷ್ಟ್ರಪತಿ—ಉಪರಾಷ್ಟ್ರಪತಿಗಳೇ ಮುಂದುವರಿಯುವಂತೆ ಮನವೊಲಿಸುವುದೇ ಉಚಿತವೆನಿಸುತ್ತದೆ.

ರಾಜಕೀಯ ಕೊಲೆ ?

ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೇಟು ದೊರೆಯುವುದೇ ಕಷ್ಟ. ದೊರೆತರೆ ಸುಲಭದಲ್ಲಿ ಗೆದ್ದು ಬಂದೇನೆಂಬ ವಿಶ್ವಾಸವೂ ಇಂದು ಇಲ್ಲವೆಂಬಂತಾಗಿದೆ. ಉ

(ಹತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 2/1967

1. ಭಾಗೀರಥಿ ಅಮ್ಮ— 2. ಯು. ಕೆ. ಪದ್ಮನಾಭರಾವ್, 3. ಯು. ಕೆ. ವೆಂಕಟರಾವ್, 4. ಯು. ಕೆ. ಶೇಷಗಿರಿರಾವ್, 5. P. R ವರದಾಬಾಯಿ — ಅರ್ಜಿದಾರರು

ಮತ್ತು

1. ಯು. ಕೆ. ಗೋಪಾಲಕೃಷ್ಣರಾವ್— 2. B ಜಲಜಾಕ್ಷಿ, 3 B. N. ಜಯಲಕ್ಷ್ಮಿ —ಎದುರಾಳಿಗಳು

ಇವರೊಳಗೆ—

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅರ್ಜಿ 1ನೆ ಅರ್ಜಿದಾರಳ ಗಂಡ, ಬಾಕಿ ಅರ್ಜಿದಾರರ ಮತ್ತು ಎದುರಾಳಿಗಳ ತಂದೆ ತಾರೀಕು 19—9—65ರಲ್ಲು ಉಪ್ಪೂರು ಗ್ರಾಮದಲ್ಲಿ ಮೃತಪಟ್ಟ ಯು. ಕೆ. ಕೃಷ್ಣರಾಯರಿಗೆ ಅರ್ಜಿಯಲ್ಲಿ ವಿವರಿಸಿದಂತೆ ಬರಬೇಕಾದ ಸಾಲ ವಸೂಲು ಪಡಿಯುವರೆ ತಾವು ಮತ್ತು ಎದುರಾಳಿಗಳು ಸಮಾನ ಹಕ್ಕುದಾರರೆಂತಲೂ, ಆ ಕುರಿತು 4ನೆ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿ ತಾ. 14—4—1967ಕ್ಕೆ ಇದೆರೋಜಾಗಿಯದೆ ಆ ಬಗ್ಗೆ ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸಮಸ್ತ ಜನರಿಗೆ ತಿಳಿಸಲಾಗಿಯದೆ.

V. R. Kidyur
Advocate for Petitioners

ಉಡುಪಿ 18—3—67,

ನರಸಣ್ಣನ ಸರಸ

'ರಾಜ್ಯಪಾಲರ ಭಾಷಣ ನೀರಸವಿತ್ತು ...'
'ಬಿಡ್ರಿ, ತಯಾರಿಸಿಕೊಟ್ಟೋರು ನೀರಸರೇ ಇರ್ಬೇಕು...'

ಗೇಹೆರಾಜ್ಯದಲ್ಲಿ

ಅಶಿಸ್ತಿಗೆ ಮೂಲ ಯಾರು ?

ವಿದ್ಯಾರ್ಥಿಗಳಲ್ಲಿನ ಅಶಿಸ್ತು ಇಂದಿನ ರಾಷ್ಟ್ರೀಯ ಸಮಸ್ಯೆ. ಆಹಾರ, ಆರ್ಥಿಕ ಮೊದಲಾದ ಸಮಸ್ಯೆಗಳು ವರ್ತಮಾನವನ್ನು ಮಾತ್ರ ಅಂಧಕಾರಮಯ ಮಾಡುವುವಾದರೆ, ಅಶಿಸ್ತು ವರ್ತಮಾನ—ಭವಿಷ್ಯವೆರಡರ ಮೇಲೂ ಕತ್ತಲು ಹರಡಿಸುವುದು. ಇದಕ್ಕೆ ಹೊಣೆ ಯಾರು?

ವಿದ್ಯಾರ್ಥಿಗಳ ಹೆತ್ತವರು, ಶಿಕ್ಷಕರು ಮತ್ತು ಶಿಕ್ಷಣ ಪ್ರಣಾಳಿಯನ್ನು ರೂಪಿಸುವ ಸರಕಾರ ಇವು ಅಂಶಿಕವಾಗಿ ಕಾರಣವಾಗಬಹುದು. ಉಳಿದ ಬಹ್ವಂಶ ಸ್ವಯಂ ವಿದ್ಯಾರ್ಥಿಗಳೇ ಎನ್ನಬಹುದು. ನಾಯಿಗೆ ಹುಚ್ಚು ಹೇಗೆ ಹಿಡಿಯಿತು ಎನ್ನುವುದಕ್ಕಿಂತ ಹುಚ್ಚನ್ನು ದೂರಮಾಡುವ ಉಪಾಯದತ್ತ ದೃಷ್ಟಿಯಿಡುವುದು ಉತ್ತಮವೆಂದು ನನ್ನ ಅಭಿಪ್ರಾಯ.

ವಿದ್ಯಾರ್ಥಿಯ ಮೇಲೆ ಯಾರೊಬ್ಬನಿಗೂ ಇಂದು ಸಂಪೂರ್ಣ ಹಿಡಿತವಿರುವುದಿಲ್ಲವೆಂಬುದನ್ನು ಒಪ್ಪಲೇ ಬೇಕು. ಗೊತ್ತಿದ್ದ ಸಮಯದಲ್ಲಿ ಗೊತ್ತು ಮಾಡಿದನ್ನು 'ಪಾಠ'ವನ್ನು ವಿದ್ಯಾರ್ಥಿಗೆ ಬೇಕಾಗಿರಲಿ, ಬೇಡವಾಗಿರಲಿ ಕಲಿಸಿಯೇ ತೀರುವ ಕರಾರಿಗೆ ಸಹಿ ಹಾಕಿದ ಶಿಕ್ಷಕರು ಏನು ಮಾಡಬಲ್ಲರು? ಶಾಲಾ ಆವರಣದಲ್ಲಿ ಶಿಸ್ತು ಕಾಪಾಡಬಹುದು - ಅಸ್ತಿಯಿದ್ದರೆ! ಜೀವನದ ಹೋರಾಟದಲ್ಲಿಯೇ ಮಗ್ನರಾದ ಹೆತ್ತವರು ತಮ್ಮ ಮಕ್ಕಳು ದೇವಸಮಾನರೆಂದೇ ತಿಳಿಯುತ್ತಾರೆ. ಅವರ ಸಹವಾಸ, ತಿರುಗಾಟ ಮೊದಲಾದುವುಗಳ ಬಗ್ಗೆ ಆಲೋಚಿಸಲು ಅವರಿಗೆ ಸಮಯಾವಕಾಶವೂ ಇಲ್ಲ; ಮಕ್ಕಳ ಮೇಲಿನ ಮಮತೆಯೂ 'ಅತಿ ವಿಶ್ವಾಸ'ವೂ ಇದಕ್ಕೆ ಅಡ್ಡಿ ಬರುತ್ತವೆ.

ಇನ್ನು ಸರಕಾರದ ಅನಿಶ್ಚಿತ ನೀತಿ—ನಿಯಮಗಳು. ತನಗೆ ಪ್ರಿಯವಾದುದನ್ನು ಮೆಚ್ಚುವುದು ಮನುಷ್ಯ ಸಹಜ ಗುಣ. ವಿದ್ಯಾರ್ಥಿಯ ಮನಸ್ಸಿಗೆ ಒಪ್ಪಿಗೆಯಾಗುವಂತಹ ಶಿಕ್ಷಣಕ್ರಮ ಬೇಕು. ಯಾರಿಗೆ ಯಾವುದರಲ್ಲಿ ವಿಶೇಷ ಆಸಕ್ತಿಯಿದೆಯೋ ಅದನ್ನು ಕಲಿಯುವ ಪೂರ್ಣಾವಕಾಶವಿರಬೇಕು. ಉಳಿದ ಅವಶ್ಯಕ ಜ್ಞಾನ ಸಾಮಗ್ರಿಯನ್ನು ಇದರ ಮೂಲಕವೇ ಕೊಡುವಂತಾಗಬೇಕು. ಒಲ್ಲದ ವಿಷಯ ಹೇಳಿದರೆ ಏನು ಪ್ರಯೋಜನ?

ಸೂಕ್ತ ಮಾರ್ಗದರ್ಶನದ ಅಭಾವವೂ ಅಶಿಸ್ತಿಗೊಂದು ಕಾರಣ. ಮೀಸೆ ಬರುವಾಗ ದೇಶ ಕಾಣದೆ ಹೋಗುವುದು ಸಹಜವೇ. ವಿದ್ಯಾರ್ಥಿ ಹೈಸ್ಕೂಲಿನ ಮೆಟ್ಟಲೇರುವಾಗಲೇ ಆತನು ಶಿಸ್ತುಬದ್ಧ ಜೀವನಕ್ಕೆ ತಯಾರಾಗಬೇಕು. ಇದಕ್ಕೆ ತಕ್ಕಷ್ಟು ಸ್ವಾತಂತ್ರ್ಯ ಹೈಸ್ಕೂಲು—ಕಾಲೇಜುಗಳ ಅಧ್ಯಾಪಕರಿಗಿರಬೇಕು. ತಪ್ಪಿದ ವಿದ್ಯಾರ್ಥಿಯನ್ನು ಯಾರೊಬ್ಬರೂ ಕೊಲ್ಲುವುದಿಲ್ಲ; ಸುಮ್ಮಸುಮ್ಮಗೆ ಗದರಿಸುವುದೂ ಇಲ್ಲ. ಅಕಾರಣವಾಗಿ ಶಿಕ್ಷೆ ವಿಧಿಸುವುದೂ ಇಲ್ಲ. ಶಿಕ್ಷಕರ ಸ್ಥಾನ—ಮಾನಗಳು ಸಮಾಜದಲ್ಲಿ ಹೆಚ್ಚಬೇಕು. ಅವರು ಮಕ್ಕಳನ್ನು ಹೆಚ್ಚಿನ ಪ್ರೀತಿ—ವಿಶ್ವಾಸದಿಂದ ನಡೆಸಿಕೊಳ್ಳುವಂತಾಗಬೇಕು. ಸ್ವಯಂ ತೃಪ್ತರೂ ಕಾರ್ಯಕರ್ತವ್ಯನಿಷ್ಠರೂ ಅವರಾಗಬೇಕು. ಹೆತ್ತವರ ವಿಚಾರಧಾರೆಯೂ ಬದಲಾಗಬೇಕು. ರಾಜಕೀಯ ಪುಢಾರಿಗಳು ಶಿಕ್ಷಕರ, ಶಿಕ್ಷಣದ ಮೇಲೆ ಸವಾರಿ ಮಾಡುವುದು ತಪ್ಪಬೇಕು.

ವಿದ್ಯಾರ್ಥಿಗಳು ಸಂಸ್ಕೃತಿ ದರ್ಶನಕ್ಕಾಗಿ ಬರುವರು. ಸರಸ್ವತಿಯ ನಾನಾರೂಪಗಳಲ್ಲಿ ತಮಗೆ ಮೆಚ್ಚುಗೆಯಾಗುವ ರೂಪವನ್ನು ಕಾಣುವ ಸದವಕಾಶವು ಅವರಿಗೆ ದೊರೆಯಬೇಕು. ಹೀಗಾದಲ್ಲಿ ವಿದ್ಯಾರ್ಥಿಯ ಶಕ್ತಿ ಸದ್ವ್ಯಯವಾಗುವುದು, ಅನಾವಶ್ಯಕ ಹಾಗೂ ಅಸಂಬದ್ಧ ಚಟುವಟಿಕೆಗಳಲ್ಲಿ ಅನಾಸಕ್ತಿ ಹುಟ್ಟುವುದು ಸಾಧ್ಯವಾಗಬಹುದು.

ಇದಕ್ಕಾಗಿ ಹೆತ್ತವರಿಂದ ತೊಡಗಿ ಸರಕಾರಿ ನೀತಿಯವರೆಗೂ ಆಮೂಲಾಗ್ರ ರಕ್ತ ರಹಿತ ಕ್ರಾಂತಿ ನಡೆಯಬೇಕು. ಇದಾದರ ಹೊರತು ರಕ್ತ ಬೀಜಾಸುರನ ವಂಶ ಅಭಿವೃದ್ಧಿಯಾಗುವುದು ಖಂಡಿತ.

—ಗೋರಾ.

ಕುಂದಾಪುರ ಮುನ್ಸಿಫ್
ಕೋರ್ಟಿನಲ್ಲಿ

S. C. 4/1967

ವಾದಿ.— ಶಿವರಾಮ ಶೆಟ್ಟಿ

ಪ್ರತಿವಾದಿ. ತೇಜಪ್ಪ ಶೆಟ್ಟಿ ಹೆಗ್ಡೆರ ಮನೆ ಮಂಜಪ್ಪ ಹೆಗ್ಡೆರ ಮಗ, ಕುಂದಾಪುರ ತಾಲ್ಲೂಕು ಕಟ್ಟಬೇಲ್ತೂರು ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ನೀವು ವಾದಿಗೆ ತಾ 28—8—1963ರಲ್ಲಿ ಬರೆಕೊಟ್ಟ ದಿನಾಂಡು ನೋಟಿನ ಅಸಲು ಬಡ್ಡಿ ಹಣಗಳ ಬಗ್ಗೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ತಾ 27-3-67ಕ್ಕೆ ತನಿಖೆಯಿಟ್ಟಿರುತ್ತದೆ. ಆ ಕುರಿತು ನಿಮ್ಮ ದೇನಾದರೂ ಆಕ್ಷೇಪವಿದ್ದರೆ ಅದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಖುದ್ದಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ನಿಮಗೆ ತಿಳಿಸಲಾಗಿದೆ

By order of the court

Y. Tejappa Shetty
Advocate for plff,

Coondapoor, 14—3—67

ಶಾಲಾ ಕಾಲೇಜು ಲೈಬ್ರೆರಿಗಳಿಗೆ
ಉಪಯುಕ್ತ ಪುಸ್ತಕಗಳು

	ರೂ.ಪೈ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು (ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು.ಶಿ.ಹರಿದಾಸ ಭಟ್)	2=00
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು (ಅನು: ಕು.ಶಿ.ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿವೇವಾ (ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ (ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು (ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ (ಎಸ್. ಗೋಪಿಚಂದ ರಾವ್)	1=50
ಬಿಡಿದ ಮುಗುಳು (ಎಸ್. ಗೋಪಿಚಂದ ರಾವ್)	1=00
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು (ಹನುಮಂತ ರಾವ್ ಮಾಂಜ್ರೇಕರ್)	0=90
ಹಸುರು ಹಂಸ (ನಚಿಕೇತ)	2=00
ಭಾವಾರ್ಚನೆ (ನಚಿಕೇತ)	1=25
ಪುಣ್ಯಯಾತ್ರೆ (ನಚಿಕೇತ)	1=50
ಭಾರತದ ವೀರಾಂಗನೆಯರು (ಕೆ.ಎನ್. ಭಟ್ ಶಿರಾಡಿಪಾಲ್)	1=50
ಮೀರಿ ಕೊಟ್ಟ ಬೆಂಡೋಲೆ (ಎಸ್. ಸದಾಶಿವ ರಾವ್)	1=80
ಗೀತಾ ಕೈಗನ್ನಡಿ (ಹೊಸಕೆರೆ ಚಿದಂಬರಯ್ಯ)	1=50
ಮಾನ ಮದ್ದು (ಡಾ॥ ಕೂರಡ್ಕಲ್ ವೆಂಕಟಪ್ಪ)	2=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಶ್ಚಿಮ ಜರ್ಮನಿಯಲ್ಲಿ

ಮಹಿಳಾ ಪೋಲೀಸ್ ಪಡೆ

ಪ್ರಪಂಚದ ಅನೇಕ ಮುಂದುವರಿದ ರಾಷ್ಟ್ರಗಳಂತೆ ಪ. ಜರ್ಮನಿಯಲ್ಲೂ ಮಹಿಳಾ ಪೋಲೀಸ್ ಪಡೆಗಳಿವೆ. ಅವರು ದರೋಡೆಕೋರರನ್ನು ಅಟ್ಟಿಸಿಕೊಂಡು ಹೋಗದಿರಬಹುದು; ಅಥವಾ ಕಳ್ಳರನ್ನು ಹಿಡಿಯದಿರಬಹುದು. ವಿಶ್ವದ ಅನೇಕ ದೊಡ್ಡ ನಗರಗಳಂತೆ ಜರ್ಮನಿಯ ನಗರಗಳಲ್ಲಿಯೂ ಯುವಕರು ಅಪಾಯಗಳಿಗೀಡಾಗುವ ಸಂಭವಗಳುಂಟು. ಇವರನ್ನು ರಕ್ಷಿಸುವುದು—ಹಾಗೂ ಅವರ ನೈತಿಕ ಮಟ್ಟವನ್ನು ಕಾಪಾಡುವುದೇ ಇವರ ಮುಖ್ಯ ಕರ್ತವ್ಯ.

ಪಶ್ಚಿಮ ಜರ್ಮನಿಯಲ್ಲಿ ಮಹಿಳಾ ಪೋಲೀಸರು ನಿರ್ವಹಿಸುವ ಕೆಲಸ ಒಂದು ರೀತಿಯಲ್ಲಿ ಅಪೂರ್ವದ್ದೆಂದು ಹೇಳಬಹುದು. ಅವರು ಸಮವಸ್ತ್ರಗಳನ್ನು ಧರಿಸುವರು; ಆದರೆ ಶಸ್ತ್ರ ಧರಿಸುವುದಿಲ್ಲ. ಅಪಾಯ ಒದಗಬಹುದಾದ ಸಂದರ್ಭಗಳಲ್ಲಿ ಅವರಿಗೆ ಶಸ್ತ್ರಧಾರಿಗಳಾದ ಪುರುಷ ಪೋಲೀಸರ ನೆರವೊದಗುವುದು.

ಸಂಚಾರ ನಿಯಂತ್ರಣಗೊಳಿಸುವುದಾಗಲೀ ಅಥವಾ ದರೋಡೆಕೋರರನ್ನು ಅಟ್ಟಿಸಿಕೊಂಡು ಹೋಗುವುದಾಗಲೀ ಇವರ ಕೆಲಸವಲ್ಲ. ಹ್ಯಾಂಬರ್ಗ್‌ನಂತಹ ಭಾರಿ ನಗರಗಳಲ್ಲಿ ಯುವಕರಿಗೆ ಎಷ್ಟು ಆಕರ್ಷಣೆಗಳುಂಟೋ ಅಷ್ಟೇ ಅಪಾಯಗಳೂ ಉಂಟು. ಅಂತಹ ಅಪಾಯಗಳಿಂದ ಮಕ್ಕಳನ್ನು, ಮತ್ತು ಯುವಕರನ್ನು ರಕ್ಷಿಸುವುದು ಈ ಮಹಿಳಾ ಪೋಲೀಸರ ಕರ್ತವ್ಯ. ಯುವಕರ ನೈತಿಕ ರಕ್ಷಣೆ ಇವರ ಮುಖ್ಯ ಕಾರ್ಯಭಾರ.

ಬ್ರಿಟಿಷ್ ಪೋಲೀಸ್ ಪಡೆಯ ಮಾದರಿಯಲ್ಲಿ ರಚಿತವಾಗಿರುವ ಈಗಾಗಲೇ ೧೨ ವರ್ಷ ಹಳೆಯದು (ಇದು ಸ್ಥಾಪಿತವಾದುದು ೧೯೫೫ರಲ್ಲಿ). ಇದು ಪುರುಷ ಪೋಲೀಸ್ ದಳಕ್ಕೆ ಸೇರದೆ ಬೇರೆಯಾಗಿದೆ. ಹ್ಯಾಂಬರ್ಗ್‌ನಲ್ಲಿ ೭೫ ಮಂದಿ ಮಹಿಳಾ ಪೋಲೀಸರ ನೇಮಕಕ್ಕೆ ಅವಕಾಶವುಂಟು. ಆದರೆ ಅದರಲ್ಲಿ ಈಗಾಗಲೇ ೪೭ ಮಂದಿಯನ್ನು ನೇಮಿಸಿಕೊಳ್ಳಲಾಗಿದೆ.

ಮಾನಸಿಕ ವ್ಯಾಧಿಗಳಿಗೊಳಗಾಗಿರುವ ಮಹಿಳೆಯರ, ಮಕ್ಕಳ ಮತ್ತು ರೋಗಿಗಳ ನೆರವಿಗೆ ಹೋಗುವುದೂ ಇವರ ಕರ್ತವ್ಯಗಳಲ್ಲೊಂದು. ಮಹಿಳಾ ಅಪರಾಧಿಗಳನ್ನು ಪ್ರಶ್ನಿಸುವುದು, ಇಲ್ಲವೆ ಅಪಘಾತಗಳಿಗೀಡಾಗಿರುವ ಮಹಿಳೆಯರಿಗೆ ನೆರವು ನೀಡುವುದೂ ಸಹ ಇವರ ಕರ್ತವ್ಯಗಳೇ. ಇವರ ಕಾರ್ಯವ್ಯಾಪ್ತಿ ಪುರುಷ ರಕ್ಷಣಾ ಪಡೆಗಳ ಕಾರ್ಯವ್ಯಾಪ್ತಿಯಿಂದ ಬೇರೆಯಾಗಿದೆ. ಪೋಲಿಸ್ ಪ್ರವೇಶಕ್ಕೆ ಅವಕಾಶಕೊಡದಂತ ಅನೇಕ ಅಪರಾಧಗಳನ್ನು ಮೊಳಕೆಯಲ್ಲಿ ಚಿವುಟುವುದು ಇವರ ಕೆಲಸ.

ಹ್ಯಾಂಬರ್ಗಿನ ವಿನೋದ ಪ್ರದೇಶಗಳಲ್ಲಿ ಇಂಥ ಚಟುವಟಿಕೆಗಳು ಹೆಚ್ಚು. ಈ ಭಾಗಗಳಲ್ಲಿ ಹ್ಯಾಂಬರ್ಗಿನ ಯುವಕ ರಕ್ಷಣಾ ಪಡೆಗಳೂ ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿರುವುದು. ಈ ರಕ್ಷಣಾ ಪಡೆಗಳಲ್ಲಿ ಗಂಡಸು, ಹಾಗೂ ಹೆಂಗಸು ಪೋಲೀಸರುಂಟು. ಇವರು ಮಫ್ತಿ ಉಡುಪಿನಲ್ಲಿರುವರು. ಇದರೆ ಯುವಕರಿಗೆ ಅಪಾಯ ಒದಗಬಹುದಾದ ಜಾಗಗಳಲ್ಲಿ—ಉದ್ಯಾನವನಗಳು, ಬಾರ್, ಫಲಹಾರ ಮಂದಿರಗಳು, ಜೂಜುಕಟ್ಟೆಗಳೇ ಮೊದಲಾದವು. ಇವರು ಗಸ್ತುತಿರುಗುವುದು, ಮತ್ತು ರಕ್ಷಣಾಕೆಲಸವನ್ನು ನಿರ್ವಹಿಸುವುದು—ಮುಂತಾದ ಕೆಲಸಗಳಲ್ಲಿ ತೊಡಗುವರು. ೨೧ವರ್ಷ ವಯಸ್ಸಿಗಿಂತ ಕಡಿಮೆ ಇರುವ ಯುವತಿಯರನ್ನು ವಿಸ್ತ್ರಕಬಾವು ದೇ ಮುಂತಾದ ವಿನೋದ ಉದಗಳು

(ಒಂಭತ್ತನೇ ಪುಟ ನೋಡಿರಿ)

ಮಧ್ಯಪ್ರದೇಶದಲ್ಲಿ— ೨

ನರ್ತಕಿಯ ಗಾನಕ್ಕೆ ಮರುಳಾದ

"ಸುಲ್ತಾನ"

ಬರೆದವರು

ಶ್ರೀ ಎಚ್. ಎಂ. ನಾರಾಯಣ ಭಟ್.

[ಕುಪ್ರಸಿದ್ಧ ಕೊಳ್ಳೆಗಾರ "ಬೀಕ' ನನ್ನೊಂದು ನರಬಲಿಯನ್ನು ಕಾಳೀ ವಿಗ್ರಹಕ್ಕೆ ರ್ಪಿಸಿದ ಕತೆಯನ್ನು ಈ ಮೊದಲ ಆವೇ ಲೇಖನಮಾಲೆಯಲ್ಲಿ ಕೊಡಲಾಗಿತ್ತು.

ಸುಲ್ತಾನ'ನ ಮಾನಸೋಹಿನಿ - ಆರಾಧ್ಯ ಮೂರ್ತಿ ಪುತ್ಥಳಿಯ ಪರಿಚಯ ಮುಂದಿನ ಲೇಖನದಲ್ಲಿ.]

ಕ್ರೂರತೆಯ ಪ್ರತಿರೂಪವಾಗಿದ್ದ "ಸುಲ್ತಾನ' ನ ಹೃದಯದಲ್ಲಿ ಕಗ್ಗಲ್ಲಿನ ರಾಶಿಯಿದ್ದರೂ ಓರ್ವ ನರ್ತಕಿ ಮತ್ತು ಗಾಯಕಿಯಾಗಿದ್ದ "ಪುತ್ಥಳಿ"ಯ ಮಟ್ಟಿಗೆ ಮಾತ್ರ ಅದು ದುರ್ಬಲವಾಗಿತ್ತು.

ಶಕ್ತಿ ಕೊಂದರ ಸ್ಥಾನವನ್ನು ಕೂಡಾ ತೊಳೆಯದ ಅನೇಕ 'ನರರಾಕ್ಷಸ'ರು ಮಧ್ಯ ಪ್ರದೇಶದ ಕೊಳ್ಳೆಗಾರರ ಸಂಘದ ನಾಯಕರಾಗಿದ್ದರು. ಈ ಪಂಗಡದವರ ಪೈಕಿ "ಸುಲ್ತಾನ"ನಿಗೆ ಪ್ರಥಮ ಸ್ಥಾನ ಸಂದಿದೆ.

ಸುಲ್ತಾನ ಸಿಂಹ ಗುಜರ್ ಎಂಬುದು ಈ ಖಳನಾಯಕನ ಹೆಸರು. ಭಿಂಡ್ ಜಿಲ್ಲೆಯ "ಸ ಖಂಡ' ಹೆಸರಿನ ಗ್ರಾಮದಲ್ಲಿ ಕೃಷಿಮಜೂರ ವರ್ಗದಲ್ಲಿ ಗರೀಬರಲ್ಲಿ ಜನಿಸಿದ ಈ ಬಾಲಕ ಚಿಕ್ಕಂದಿನಿಂದಲೂ ವನಾಂತರಗಳಲ್ಲಿ ಅಲೆದಾಡುವುದರಲ್ಲಿ ವಿಶೇಷ ಆಸಕ್ತಿ ವಹಿಸಿದ್ದನು. ಪ್ರಾಯ ಹೆಚ್ಚಿದಂತೆಲ್ಲಾ ಕದಿಯುವ ವಿದ್ಯೆಯಲ್ಲಿಯೂ ನೈಪುಣ್ಯತೆಯನ್ನು ಗಳಿಸಿದ್ದನು. ಕೊಳ್ಳೆದರೋಡೆಗಳಿಗೂ ಆತ ಸಿದ್ಧನಾಗಿಯೇ ಇದ್ದ.

ಹರಗೋವಿಂದ ಮಹಾರಾಜಸಿಂಗ್ ಗುಜರ್ ಆ ಕಾಲದ ಪ್ರಖ್ಯಾತ ಕೊಳ್ಳೆದರೋಡೆ ಮತ್ತು ಕೊಲೆಗಾರನಾಗಿದ್ದನು. ಸುಲ್ತಾನನು 'ಚಿಲ್ಲರೆಕಳ್ಳ'ನೆಂಬುದನ್ನು ತಿಳಿದ ಖಳ ಶೇಖರನು ಸುಲ್ತಾನನನ್ನು ತನ್ನ ಸಂಘಕ್ಕೆ ಸೇರುವಂತೆ ಆಹ್ವಾನಿಸಿದನು. ಸುಲ್ತಾನನಲ್ಲಡಕವಾಗಿದ್ದ ಚೋರ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವುದು ತನ್ನಂತಹವರ ಕರ್ತವ್ಯವೆಂದು ಆತ ಭಾವಿಸಿರಲೂ ಬಹುದು.

ಗೌಳರಿ ತನಕ ಸುಲ್ತಾನನು ಹರಿಗೋವಿಂದನ ಸಂಘದಲ್ಲಿಯೇ ಇದ್ದ. ಮತ್ತೆ ಆತನ ಅಧಿಕ ಪ್ರಸಂಗ, ಅಹಂಭಾವ ಮತ್ತು ಮೃಗೀಯತೆಯಿಂದಾಗಿ ಸಂಘದಿಂದ ಹೊರ ಹಾಕಲಾಯಿತು.

ಸುಲ್ತಾನನ ಸಂಘಟನಾ ಶಕ್ತಿಯೂ ಅನಾಚಾರಗಳಲ್ಲಿನ ಸಾಮರ್ಥ್ಯವೂ ಪ್ರದರ್ಶಿಸಲ್ಪಡಬೇಕಲ್ಲವೆ? ಹರಿಗೋವಿಂದನು ತನ್ನನ್ನು ಬಿಟ್ಟುದು ಹೆಡ್ಡಾಯಿತೆಂದು ಆತನಿಗೆ ಪಶ್ಚಾತ್ತಾಪವಾಗುವಂತೆ ಬಹು ಸಾಮರ್ಥ್ಯತೆಯಿಂದ ಕಾರ್ಯ ಪ್ರವೃತ್ತನಾಗಬೇಕೆಂದು ಸುಲ್ತಾನ ಭಾವಿಸಿದ. ಕೊಲೆಗಡುಕತನವೆಂದಾಗಿ ಕಣ್ಣಿನ ರಕ್ತ ಆರಿದ್ದ ಸುಲ್ತಾನನಿಗೆ ಎಂತಹ ಅನಾಚಾರಂಗಳಲೂ ಮನಸ್ಸು ಎಷ್ಟೆಂದರೂ ಬರಬೇಕಾಗಿರಲಿಲ್ಲ. ತನ್ನ ದುಸ್ಸಾಮರ್ಥ್ಯವನ್ನು ಜನರೂ ತಿಳಿಯಲಿ!

ಸುಲ್ತಾನ ಪ್ರತ್ಯೇಕ ಸಂಘ ಕಟ್ಟಿದ; ಹಲವೆಡೆ ಕೊಳ್ಳೆ ಹೊಡೆದ; ತನ್ನ ಯೋಜನೆಯ ಶಸ್ತ್ರಯೋಗ ಬೇಡವೆ?

ಗೌಳದ್ಕ ಪಿಕ್ಕಿ ಮಂದಿಯ ಕಗ್ಗೊಲೆಗಡುಕನಾದ ಸುಲ್ತಾನ ಏನು ತಾನೇ ಮಾಡಲು ಹೇಸುವನು?

ದರ್ಗಾಜಿಲ್ಲೆಯ ಅಲೋಲಿ ಗ್ರಾಮದಲ್ಲಿ ಗೈದ ಕಗ್ಗೊಲೆ ಅತಿಭಯಾನಕವಾದುದಾಗಿತ್ತು. ಪೋಲೀಸಿಗೆ ವಿವರ ತಿಳಿಸುವವರೆಂದು ಸಂಶಯಪಟ್ಟು ಆರು ಮಂದಿಯನ್ನು ಹಿಡಿದು ಕಟ್ಟಿಹಾಕಿ ತನ್ನ ಮುಂದೆ ಹಾಜರು ಪಡಿಸಲು ಸುಲ್ತಾನ ತನ್ನ ಸಂಘದವರಿಗೆ ಆಜ್ಞಾಪಿಸಿದ.

"ಜೀ ಹುಜೂರ್."

ಮರುಘಳಿಗೆಯೇ ಆ ಆರುಮಂದಿಯನ್ನು ಹಾಜರು ಪಡಿಸಲಾಯಿತು. ಈ ಆರು ಮಂದಿಯ ಕೈಕಾಲುಗಳನ್ನು ಮೊದಲು ಕತ್ತರಿಸಲಾಯಿತು. ಅವರ ಮುಂಡಗಳನ್ನು ಬಿಸಿಲಲ್ಲಿರಿಸಲಾಯಿತು. ಸ್ವಲ್ಪ ಹೊತ್ತು "ಜೀವನ್ಮರಣ'ದಿಂದ ಅವರು ನರಳಿ ಹೊರಳಾಡಿದರು. ಆ ದೃಶ್ಯ ನೋಡಿ ಸಂತೃಪ್ತ ಭಾವನೆಯಿಂದ ಎಲ್ಲರಿಗೂ ಗುಂಡಿಕ್ಕಿ ಕೊಂದ.

ಸುಲ್ತಾನನ ಹೆಸರಿಗೆ ಕೀರ್ತಿ ಬರಲು ಹೆಚ್ಚು ಹೊತ್ತು ಬೇಕೆ? ವಾರ್ತೆ ಕೇಳಿದವರ ಹೃದಯಗಳು ಭಯಪಟ್ಟು ಕಂಪಿಸಿದವು.

ಪುತ್ಥಳಿಯ ಸಮಾಗಮ

ಗೌಳಗಾರಲ್ಲಿ ಸುಪ್ರಸಿದ್ಧ ವೇಶ್ಯೆ—ನರ್ತಕಿ ಮತ್ತು ಗಾಯಕಿಯಾಗಿದ್ದ ಪುತ್ಥಳಿ ಒಂದು ನೃತ್ಯ ಪ್ರದರ್ಶನ ಮತ್ತು ಹಾಡುಗಾರಿಕೆ ತೀರಿಸಿ ಮನೆಗೆ ಮರಳುತ್ತಿದ್ದಳು. ಶರತ್ಕಾಲದ ರಾತ್ರಿ. ಆದರೂ ಪುತ್ಥಳಿ ತನ್ನ ಕಾರಿನಿಂದಿಳಿದು ಒಂದು ನಿಸರ್ಗ ಸೌಂದರ್ಯ ಕೇಂದ್ರವಾಗಿದ್ದ ಗುಡ್ಡದ ತಪ್ಪಲಲ್ಲಿಯೇ ಡೇರೆ ಹೊಡೆದು ತನ್ನ ತಾಯಿಯೊಂದಿಗೆ ಮೊಕ್ಕಾಂ ಮಾಡಿದಳು. ಆಕೆಯೊಂದಿಗೆ ಆಕೆಯ ಅನುಯಾಯಿಗಳೂ ಇದ್ದರು. ಮುಂದೆ ಚಂಬಲ್ ತೀರದ 'ಅಪಾಯಕರ' ವಲಯವಾಗಿದ್ದುದರಿಂದ ಪ್ರಯಾಣ ಮುಂದರಿಸಲು ಆ ಪಂಗಡದವರಿಗೆ ಧೈರ್ಯವಿದ್ದಿಲ್ಲ.

ರಾತ್ರಿ ಹೊತ್ತು ಊಟಕ್ಕ ಅಡಿಗೆಯಾಗುತ್ತಿದೆ. ಚಂದ್ರೋದಯವಾಗಿ ಸ್ವಲ್ಪ ಹೊತ್ತಾಗಿತ್ತು ಮಂದ ಮಾರುತವು ನವಚೇತನದಾಯಕವಾಗಿತ್ತು. ಕಲಾ ಪ್ರಿಯರಿಗೆ ರಸದೂಟ ಬೇರ ಬೇಕಾಗಿರಲಿಲ್ಲವಾದ್ದರಿಂದಾಗಿ ರಾಹುದು—ಪುತ್ಥಳಿಯ ಎಳೆ ಹೃದಯ ಪುಳಕಿತವಾಯಿತು.

ಆಕೆ ನರ್ತಿಸುವ ಭಂಗಿಯಲ್ಲಿಯೇ ಹಾಡಿಕೊಂಡು ಡೇರೆಯಿಂದ ಹೊರ ಬಂದಳು. ವೀರ ರಸ ಪ್ರಧಾನವಾದ ಗೀತ ಕಾವ್ಯ "ಆಲ್ಹಾ"ವನ್ನು ಸ್ಫೂರ್ತಿಯಿಂದ ಹಾಡಿದ್ದಳು.

ಅನತಿ ದೂರದಲ್ಲಿಯೇ ಇದ್ದ ಸುಲ್ತಾನನ ಆಕರ್ಷಿಸಲ್ಪಟ್ಟ. ಆ ಮಧುರ ಗಾನದ ಧ್ವನಿ ತನಗೆ ಪರಿಚಿತವಾಗಿದ್ದಂತೆ ತೋರಿತು; ಮತ್ತೂ ಮತ್ತೂ ಕೇಳೋಣವೆಂದೆನಿಸಿತು. ಸಂಗೀತದ ಧ್ವನಿ ಬಂದ ಕಡೆಗಾಗಿ ಸುಲ್ತಾನನ ಕಾಲುಗಳು ತಾವಾಗಿ ಹೋದುವು.

ತನ್ನ ಚಿರಕಾಲದ ಮನ ದೇವತೆ ಪ್ರಸನ್ನಳಾಗಿದ್ದಾಳೆ. ಅಪ್ರತೀಕ್ಷಿತವಾದ ಈ ಸಂದರ್ಭವನ್ನು ಸದುಪಯೋಗಿಸಿಕೊಳ್ಳುವ ಬಗೆ ಹೇಗೆ?

ತನ್ನಲ್ಲಿ ತಾನೇ ವಿಲೀನಳಾಗಿ ಹಾಡುತ್ತಿದ್ದ ಪುತ್ಥಳಿ ಸುಲ್ತಾನನ ಸಾನ್ನಿಧ್ಯವನ್ನರಿತಿರಲೇ ಇಲ್ಲ. ಹಾಡು ಮುಗಿದಾಗ ಸನ್ನಿಧಿಯಲ್ಲಿದ್ದ ಆ ಕರಾಳ ರೂಪವನ್ನು—ತನ್ನನ್ನೇ ನೋಡುತ್ತಿದ್ದ ಆ ಭಯಂಕರನನ್ನು ಕಂಡಾಗ ಪುತ್ಥಳಿ ಹೆದರಿದಳು.

ಸುಲ್ತಾನ "ಪ್ರೇಮದಾನ" ಮಾತ್ರವೇ ಅಪೇಕ್ಷಿಸಿದವನಂತೆ ಆಕೆಯ ಕೈ ಹಿಡಿದ, ನೀನು ಪುತ್ಥಳಿಯೆಂದು ನನಗೆ ತಿಳಿಯಿತು; ನಿನ್ನನ್ನು ಕಾಣುವ ಆಗ್ರಹ ಮಾಡಿ ಕೆಲವು ದಿನಗಳಾದವು; ಇಂದು ಆ ಅಭಿಲಾಷೆಯೂ ಕೈಗೂಡಿತು.... (ಮತ್ತೆ ಶಿರಬಾಗಿ) ಈಗ ಪ್ರೇಮ ಭಿಕ್ಷೆ ಬೇಡುವ ಆರಾಧಕನು ಸುಲ್ತಾನನು......"

ಪುತ್ಥಳಿ ಸಂಭ್ರಮಿಸಿದಳು. ಆದರೆ ಕುಪ್ರಸಿದ್ಧ ಚೋರ ಸುಲ್ತಾನ ತನ್ನ ಪ್ರಣಯಾರ್ಥಿಯಾಗಿ ಬಂದಿರುವುದನ್ನು ಸ್ಮರಿಸಿದಾಗ ಆಕೆಯ ಮನಸ್ಸಿನ ಭಾರ ಹಗುರವಾಯಿತು.

ಪ್ರೇಮ ಭಿಕ್ಷೆ ನೀಡಿದ ಪುತ್ಥಳಿಗೆ ವಜ್ರ ಖಚಿತವಾದ ಒಂದು ಸರವನ್ನು ಕೊಟ್ಟು ಸುಲ್ತಾನ ತೆರಳಿದ.

(ಒಂಭತ್ತನೇ ಪುಟ ನೋಡಿರಿ)

ಪ್ರಗತಿ ಪಥದಲ್ಲಿ ಸಿಂಡಿಕೇಟ್ ಬ್ಯಾಂಕು

1966ರ ಮೈಲುಗಲ್ಲುಗಳು

	1964 ರೂ.	1965 ರೂ.	1966 ರೂ.
ಪಾವತಿಯಾದ ಭಂಡವಲು (ಮುಂಗಡ ಕರೆಯಲ್ಪಟ್ಟ ಅಂಶಗಳು ಒಳಗೊಂಡಿವೆ)	93,57,904	99,72,556	1,00,54,817
ಕಾದಿಟ್ಟ ನಿಧಿ (ಶೇರ್ ಪ್ರೀಮಿಯಂ ಒಳಗೊಂಡಿದೆ)	85,00,006	1,00,00,000	1,33,84,724
ಠೇವಣಿಗಳು	51,45,38,335	59,11,12,449	74,02,51,654
ಕೊಟ್ಟ ಸಾಲಗಳು ಮತ್ತು ಖರೀದಿ ಪತ್ರಗಳು ವಟಾಯಿಸಿದ್ದು	33,48,03,373	37,25,37,620	47,91,15,620
ಠೇವಣಿ ಇಟ್ಟವರ ಖಾತೆಗಳು	6,46,756	8,28,119	9,55,079
ಶಾಖೆಗಳು	203	204	217
ಸಿಬಂದಿ ಸಂಖ್ಯೆ	2,983	3,179	3,544
ಪಾಲುಗಾರರು	4,769	4,876	5,307

ನಮ್ಮ ಪೂನಾ ಶಾಖೆ— 712, ಪಾಠೆ-ವಾಡೆ, ನಾರಾಯಣ ಪೇಟೆ, ಲಕ್ಷ್ಮೀ ರೋಡು, ಪೂನಾ—2.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ.

.........ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ...........

ಪ್ರಚಲಿತ ಪ್ರಸಂಗ

ಮುಖವನ್ನುಳಿಸಿದ ಮೂಗು

ಬರೆದವರು . ಶ್ರೀ ಶಿವಶಂಕರ.

ಚುನಾವಣಾ ಪ್ರಚಾರ ಬಹಳ ಬಿರುಸಿನಿಂದ ನಡೆದಿತ್ತು. ಹೂವಿನಿಂದ ಹೂವಿಗೆ ಹಾರಿ ಚಿಟ್ಟೆಯು ಜೇನನ್ನು ಹೀರುವಂತೆ, ವೇದಿಕೆಯಿಂದ ವೇದಿಕೆಗೆ ಧಾವಿಸಿ ರಾಜಕೀಯ ಚಿಟ್ಟೆ ಶ್ರೀಮತಿ ಇಂದಿರಾಗಾಂಧೀಜೀಯವರು ಜನತೆಯ ಬೆಂಬಲವನ್ನು ಪಡೆಯುತ್ತ ಭುವನೇಶ್ವರಕ್ಕೆ ಬಂದಿದ್ದರು. ಶ್ರೀ ನ.ಶಿವೇಯವರ ಚುನಾವಣಾ ಪ್ರಚಾರಕ್ಕೆ ಒರಿಸ್ಸಾದ ರಾಜಕೀಯ ವಾತಾವರಣ ಯೋಗ್ಯವಾಗಿಲ್ಲದಿರುವ ಕಾರಣ ಅವರು ಅತ್ತ ಬರಕೂಡದೆಂದು ಕಾಂಗ್ರೆಸ್ಸಿನ ಹಳೆಯ ಹುಲಿ ಶ್ರೀ ಹರೇಕೃಷ್ಣ ಮೆಹತಾಬರವರು ಶ್ರೀಮತಿ ಇಂದಿರಾಜೀಯವರಿಗೆ ಆದಾಗಲೇ ತಿಳಿಸಿದ್ದರಾದರೂ, ಅದಕ್ಕೆ ಬೆದರದೆ, ಧೈರ್ಯದಿಂದ ಅವರು ಅತ್ತ ಬಂದಿದ್ದರು. ಅಲ್ಲದೆ ಪುರಿ ಮತ್ತು ಕಟಕ್ ಜಿಲ್ಲೆಗಳಲ್ಲಿ ಹಲವಾರೆಡೆಗಳಲ್ಲಿ ಭಾಷಣವಿತ್ತಿದ್ದರು. ಅಲ್ಲಿ ಶ್ರೋತೃವೃಂದ ಸಾವಧಾನದಿಂದ ಅವರ ಮಾತನ್ನು ಕೇಳಿತ್ತು. ಕೆಲವೆಡೆಗಳಲ್ಲಿ "ಗೋಹತ್ಯೆಯನ್ನು ಪ್ರತಿಬಂಧಿಸಿರಿ" ಎನ್ನುವ ಸ್ವರ ಕೇಳಬರುತ್ತಿತ್ತಾದರೂ ಶ್ರೀಮತಿ ಇಂದಿರಾಜೀಯವರು ಅದರ ಉಚಿತ ಯೋಜನೆ ಮಾಡುತ್ತಿರುವದಾಗಿ ಸಾಂತ್ವನಪರ ಮಾತುಗಳನ್ನಾಡಿದಾಗ ಗಲಭೆಯ ಕಾವು ತಣಿಯುತ್ತಿತ್ತು, ಅದರ ಬದಲು, ಇಂದಿರಾಗಾಂಧೀಜೀ ಗದ್ದಲಿಸಿದಲ್ಲಿ ಗಲಭೆ ಹೆಚ್ಚಾಗುತ್ತಿತ್ತಾದರೂ ಅದು ಗೂಂಡಾಗಿರಿಯ ಗಡಿಯನ್ನು ದಾಟುತ್ತಿರಲಿಲ್ಲ. ಇದನ್ನು ಕಾಂಗ್ರೆಸ್ಸಿಗರ ಪೂರ್ವನಿಯೋಜಿತ ಸಂಚು. ಏಕೆಂದರೆ ಜನ ಶಾಂತಿದಳದ ಧೋರಣೆಯ ವಿಚಾರವಾಗಿ ಪ್ರಸಂಗ ನಿಂತವರು ಹೇಳುವರು. ಗೋಹತ್ಯೆ ನಿಷೇಧವಾಗಿ ಪ್ರಯತ್ನಿಸುತ್ತಿರುವ ಪರಾಜಿತ ಪಕ್ಷದ ವೇಳೆ ದುಷ್ಪ್ರಚಾರದ ತಿಮಿಸ್ಕರಿಚಲಿಕ್ಕಾಗಿ ಕಾಂಗ್ರೆಸ್ಸಿಗರೇ ಅನೇಕಬಾರಿ ಕೂಡಿಯುವ ನಾಟಕವನ್ನಾಡುತ್ತಿರುವರೆಂಬುದು ಅವರ ಅಭಿಪ್ರಾಯ. ಏನೇ ಇದ್ದರೂ ಅಲ್ಲೆಲ್ಲೂ ಇಂತಹ ಗಲಭೆ ಆಗುತ್ತಿರಲಿಲ್ಲ. ಶ್ರೀಮತಿ ಗಾಂಧೀಜೀಯವರ ಇತ್ತೀಚಿನ ಮಾತುಗಳನ್ನು ಕೇಳಿದವರಿಗೆ, ಒಬ್ಬಾಗಿಲ್ಲ ಕಂಡವರಿಗೂ ಅನುಮಾನ ಸಂಭವಿಸಿತ್ತು ... ಅವರ ರಾಜಕೀಯದ ಧೋರಣೆಯತ್ತ ಸುವರ ... 'ಇಂದಿರಾ ಗಾಂಧೀಜೀ ಗಾಂಧಿಯಿಂದ ಇಳಿದು ಜೇರಾದಿತ' ಎನ್ನುವ ಲೇಖನವನ್ನು ಪ್ರಕಟಿಸಿದ ಪತ್ರಿಕೆ. ಅಂದರೆ ಶ್ರೀಮತಿ ಇಂದಿರಾಜೀ ಜನತೆಯ ತಾಳ್ಮೆಯನ್ನು ಇಷ್ಟರ ಮಟ್ಟಿಗೆ ಕೆಣಕಿದರು. ಆದರೂ ಏನು, ಕಟ್ಟುಕಿನಷ್ಟ ಗಂಡಾಂತರವೇನೂ ಸಂಭವಿಸಲಿಲ್ಲ. ಅವರು ಬಾಂಕಿಗೆ ಬಂದುದೇ ತಡ, ಬೊಬ್ಬಾಟಕ್ಕಾರಂಭ ಆಯಿತು. ಅಲ್ಲಿ ಬಿಜೂ ಪಟ್ನಾಯಕರನ್ನು ಮಾತಾಡಲೂ ಸಭೆ ಬಿಡಲಿಲ್ಲ. ಬಿಜೂ ಪಟ್ನಾಯಕರನ್ನು ಬಿಟ್ಟು ಬಿಡದ ಗದ್ದಲಿ ಸಭಿಕರು ತನ್ನ ಮಾತನ್ನು ಸಹಿಸಿಕೊಳ್ಳಲಿಕ್ಕಿಲ್ಲವೆನ್ನುವದು ಅವರಿಗೆ ಗೊತ್ತಾಗಲಿಲ್ಲ. ಬಾಂಕಿಯಲ್ಲಿ ಕಂಡ ಬೆಂಕಿಯಿಂದಲಾದರೂ ಇಂದಿರಾಜೀ ಮುಂದಿನ ಪರಿಸ್ಥಿತಿಯತ್ತ ದೃಷ್ಟಿ ಹರಿಸಬೇಕಾಗಿತ್ತು. ಅದರ ಬದಲು ಬಿಜೂ ಪಟ್ನಾಯಕರನ್ನು ತನ್ನ ನೆರಳಿನಂತೆ ಬಿಟ್ಟರು. ಭುವನೇಶ್ವರ ಬುಸುಗುಟ್ಟುತ್ತಿದೆನ್ನುವದನ್ನು ತಿಳಿದುಕೊಂಡ ಸರಕಾರಿ ಅಧಿಕಾರಿಗಳು ಅವರನ್ನು ಸೈನಿಕ ವಿಮಾನ ನಿಲ್ದಾಣದಲ್ಲಿ ಇಳಿಸಿದರು. ಅಲ್ಲಿಗೆ ಹೋಗಲು ಕೇಂದ್ರದ ಮಂತ್ರಿಗಳಾಗಿದ್ದ ಶ್ರೀಮತಿ ನಂದಿನಿ ಶತಪಥಿ ಹಾಗೂ ಶ್ರೀ ವಿಭೂವೇಂದ್ರ ಮಿಶ್ರರವರಿಗೂ ಅನುಮತಿ ಸಿಗಲಿಲ್ಲ. ಹಾಗಿದ್ದರೂ ಬಿಜೂ ಪಟ್ನಾಯಕ ಅತ್ತ ಹೋಗಲು ಅಡ್ಡಿ ಇರಲಿಲ್ಲ. ವಾತಾವರಣ ಹದಗೆಡುತ್ತಿರುವದನ್ನು ತಿಳಿದುಕೊಂಡ ಮುಖ್ಯಮಂತ್ರಿ ಶ್ರೀ ಸದಾಶಿವ ತ್ರಿಪಾಠಿಯವರು ಅಂದು ಸಂಜೆ ನಡೆದ ಸಾರ್ವಜನಿಕ ಸಭೆಗೆ ಹೋಗದೆ ತನಗೆ ಮೈ ಚೆನ್ನಾಗಿಲ್ಲವೆಂದು ಮನೆಯಲ್ಲೇ ಮಲಗಿಕೊಂಡರು. ಆ ರೀತಿ ಅವರಂದು ತಪ್ಪಿಸಿಕೊಂಡರು. ಇದೆಲ್ಲಾ ಆದ ಮೇಲೂ ಶ್ರೀಮತಿ ಇಂದಿರಾ ಗಾಂಧೀಜೀಯವರು ಬಿಜೂ ಪಟ್ನಾಯಕರನ್ನು ಬಾಯಿ ತುಂಬಾ ಹೊಗಳಿದರು. ಬಿಜೂ ಪ್ರಕರಣ ಕುಖ್ಯಾತಿಯ ಒಂದು ಕೋಟಿ ರೂಪಾಯಿ ಇದ್ದಲ್ಲಿ ಪ್ರಧಾನಿ ಪದವಿಯನ್ನು ಪಡೆದುಕೊಳ್ಳುವದಾಗಿ ಬಡಾಯಿ ಕೊಚ್ಚುತ್ತಿದ್ದ ಬಿಜೂ ಪಟ್ನಾಯಕರನ್ನು ಪ್ರಶಂಸಿದುದು ಸಭಿಕರಿಗೆ ರುಚಿಸಲಿಲ್ಲವೆಂದ ಕಾರಣ ಗಲಾಟೆಗೆ ಆರಂಭವಾಯಿತ. ಪಟ್ನಾಯಕ—ಮಿತ್ರರು ಡಾಕುಗಳಿದ್ದಾರೆ—ಇಂದಿರಾ ಗಾಂಧೀಜೀಯವರೇ ಹಿಂತಿರುಗಿರೆಂದು ಸಭೆ ಸ್ವರ ಎತ್ತಿತು. ಈ ಕೋಲಾಹಲದ ನಡುವೆಯೂ ಸುಮಾರು ಒಂದು ಘಂಟೆ ಸಮಯ ಶ್ರೀಮತಿ ಇಂದಿರಾಜೀ ಮಾತಾಡಿ ಕುಳಿತುಕೊಂಡರು. ಬಿಜೂ ಪಟ್ನಾಯಕ ಮಾತಾಡಲು ಎದ್ದದ್ದೇ ತಡ, ಗಲಭೆ ಉಲ್ಬಣಾವಸ್ಥೆಗೇರಿತು. ಶಾಂತಿ—ಸಮಾಧಾನದ ಕರೆಕೊಡುವ ಬದಲು ಬಿಜೂ ಪಟ್ನಾಯಕರು ಕುಳಿತುಕೊಳ್ಳಿರಿ, ನಾನು ಹೇಳುತ್ತಿದ್ದೇನೆ, ಕುಳಿತುಕೊಳ್ಳಿರೆಂದು ಬೊಬ್ಬಿಟ್ಟದ್ದೇ ತಡ ಸಭೆಯಲ್ಲ ಸಮಾಧಾನದ ಕಟ್ಟೆ ಒಡೆದು ಹೋಯಿತು. ಅದನ್ನು ಸರಿಪಡಿಸುವ ಗೋಜಿಗೆ ಯಾರೂ ಹೋಗದೆ, ಇನ್ನು ಒತ್ತಡವನ್ನೇ ಹೇರಿದರು. ಈ ಪ್ರದರ್ಶನವನ್ನು ಪುಂಡಾಟಿಕೆ—ಅಶಾಂತಿಯವೆಂದು ಇಂದಿರಾಜೀ ಜರೆದರು. ಹಬ್ಬುತ್ತಿರುವ ಬೆಂಕಿಗೆ ಗಾಳಿ ಬೀಸಿದಂತಾಯಿತು. ಸಭಿಕರಲ್ಲಿ ಕೆಲವರು ವೇದಿಕೆಯತ್ತ (ಬಿಜೂ ಪಟ್ನಾಯಕರ ಮೇಲೆ) ಕಲ್ಲುಗಳನ್ನೆಸೆಯಲಾರಂಭಿಸಿದರು. ಇದನ್ನು ಕಂಡ ಇಂದಿರಾಜೀ ಮುಂದಕ್ಕೆ ಬಂದು, ಇತರರ ಮೇಲೆ ಕಲ್ಲು ತೂರುವ ಪೋಕರಿಗಳಿಗೆ ಧೀಮಂತರಾಗಿ ಮಾತಾಡಿದರೂ... ಕೇಳಿದುದೇ ತಡ, ರೊಯ್ಯನೆ ಒಂದು ಕಲ್ಲು ಬಂದು ಅವರ ತುಟಿಗಳ ಮೇಲೆ ಬಿತ್ತು, ಮೂಗಿಗೂ ತಾಗಿತು. ಆ ರೀತಿ ಇಂದಿರಾಜೀಯವರ ಬಾಯಿ ಮುಚ್ಚಿಸಲಾಯಿತ . ಅದರೆ ಅದರ ಪರಿಣಾಮ!

ಇಲ್ಲಿ ಗಲಾಟೆಕೋರರು ಸಭೆಯ ಮೊದಲನೆ ಸಾಲಿನಲ್ಲೇ ಇದ್ದರು — ಅಂದರೆ ವೇದಿಕೆಯ ಸಮೀಪದಲ್ಲೇ ಆಯಕಟ್ಟಿನ ಸ್ಥಳದಲ್ಲಿ ಕಲ್ಲು ಹಿಡಿದುಕೊಂಡೇ ಸಿದ್ಧರಾಗಿದ್ದರು. ಸುಮಾರು ಒಂದು ಘಂಟೆ ಕಾಲ ಗಲಾಟೆ ನಡೆಯುತ್ತಿದ್ದರೂ, ಪೋಲೀಸ ಪಡೆ ಇದ್ದರೂ, ಆ ರೀತಿ ಮೂಗಿನ ಮೇಲೆ ಕಲ್ಲು ಬೀಳಲು ಕಾರಣವೇನು? ಇದೆಲ್ಲಾ ಹೇಗೆ ಸಾಧ್ಯ? ಅದ್ಯಾವ ಭಿತ್ತಿಪತ್ರಗಳನ್ನು ಕೊಡಲು ಪೋಲೀಸರು ಶ್ರೀಮತಿ ಇಂದಿರಾಜೀಯವರ ಸಭೆಯಲ್ಲಿ ಬಿಟ್ಟಿರಲಿಲ್ಲ. ಗೋಹತ್ಯೆಯನ್ನು ಪ್ರತಿಬಂಧಿಸುವ ಕುರಿತು ಪ್ರಕಟಿಸಲಾಗಿದ್ದ ಕರಪತ್ರಗಳನ್ನು ಹಂಚುತ್ತಿದ್ದ ಗೋಭಕ್ತರನ್ನು ಬಂಧಿಸಿ ಪೋಲೀಸ ಠಾಣೆಗೆ ಕೊಂಡೊಯ್ದು ಅವರನ್ನು ಥಳಿಸಲಾಗಿತ್ತು. ಬೆಂಗಳೂರಿನಲ್ಲಿ ಶ್ರೀಮತಿಯವರನ್ನು ಕಾಣಲು ಬರುತ್ತಿದ್ದವರನ್ನು ಪೋಲೀಸರು ಬೆದರಿಸುತ್ತಿದ್ದರು. ಹೀಗೆಲ್ಲಾ ಇದ್ದರೂ, ಭುವನೇಶ್ವರದಲ್ಲಿ ಗೂಂಡಾಗಿರಿ ನಡೆಯಲು ಕಾರಣ ಏನು? ಈ ದುರ್ಘಟನೆ ಬೇಕೆಂದೇ ಎದುರು ಪಕ್ಷಗಳವರು ನಡೆಸಿದ್ದೇ? ಬಿಜೂಪಟ್ನಾಯಕರ ವಿರೋಧಿಗಳು—ಜನಕ್ರಾಂತಿ ದಳದ ಮುಖಂಡರು ನಡೆಸಿದ ಪುಂಡಾಟಿಕೆಯೋ? ಅಥವಾ ಕಾಂಗ್ರೆಸ್ಸಿನ ಪ್ರಚಾರಕ್ಕಾಗಿ, ಅನ್ಯರ ಅಪಪ್ರಚಾರಕ್ಕಾಗಿ ಕಾಂಗ್ರೆಸ್ಸಿಗರೇ ಹೂಡಿರುವ ರಾಜಕೀಯ ನಾಚಿಕೆಗೇಡಿತನದ ನಾಟಕವೇ? ಅದಲ್ಲವಾದಲ್ಲಿ ಸುಮಾರು ಒಂದು ಘಂಟೆಯಿಂದಲೂ ಗಲಭೆ ನಡೆಯುತ್ತಿದ್ದರೂ, ಅದನ್ನು ಹತೋಟಿಗೆ ತಾರದ ಪೋಲೀಸರು ಏನು ಮಾಡುತ್ತಿದ್ದರು? ಪೋಲೀಸರು ಮಾತ್ರವಲ್ಲ ಕಾಂಗ್ರೆಸ್ ಸೇವಾದಳದವರೂ ಇದ್ದರೂ, ಅವರು ಮಾಡಿದ್ದಾದರೂ ಏನು? ದಿಲ್ಲಿಯಲ್ಲಿ ನಂದಾರವರಿಗೆ ಮಾಡಿದ್ದನ್ನೇ ಇಲ್ಲಿ ಇಂದಿರಾಜಿಯವರಿಗೆ ಮಾಡಲಾಯಿತೇ? ಇಂತಹ ಹಲವಾರು ಅಹಿತಕರ ಪ್ರಶ್ನೆಗಳಿಗೆ ಈ ದುರ್ಘಟನೆ ಎಡೆಮಾಡಿಕೊಟ್ಟಿದೆ. ಅಂತೂ ಬಿಜೂ ಮುಂತಾದ ಕಾಂಗ್ರೆಸ್ಸಿಗರ ಮೇಲಿನ ಕೋಪದ ಹಾಲಾಹಲವನ್ನು ಶ್ರೀಮತಿ ಇಂದಿರಾಜೀ ಕುಡಿದು ಕಾಂಗ್ರೆಸ್ಸನ್ನು ಉಳಿಸಿದರು.

ಈ ದುರ್ಘಟನೆಯನ್ನು, ಭೀರುತನವನ್ನು, ಪುಂಡಾಟಿಕೆಯನ್ನು, ದುಷ್ಕೃತ್ಯವನ್ನು, ಹೇಯ ಕೆಲಸವನ್ನು ಖಂಡಿಸದಿರುವವರಾರು? ದುರ್ಘಟನೆಯ ಕೆಟ್ಟ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಮತ್ತು ಈ ದುರ್ಘಟನೆಯನ್ನು ಖಂಡಿಸುವದರಲ್ಲಿ ಪಂದ್ಯಾಟವೇ ನಡೆಯಿತೆನ್ನಬಹುದು. ದುರ್ಘಟನೆಯ ವಿಷಯದಲ್ಲಿ ಅಭಿಪ್ರಾಯಬೇಧಕ್ಕೆ ಆಸ್ಪದವಿರಲಿಕ್ಕಿಲ್ಲ. ಆದರೆ ಖಂಡನೆಯ ರೀತಿ ಹಾಗೆ ಇಲ್ಲ. ಯೋಚನೆ ಮಾಡುವವನಿಗೆ ಅದು ಬೇರಾದನ್ನು ವಿಷಯಗಳನ್ನು ತಂದಿರುತ್ತದೆ. ಕೆಲ ಉದಾಹರಣೆಗಳು:—

"ಇದು ನಾಚಿಕೆಯನ್ನುಂಟು ಮಾಡುವ ಕೃತ್ಯವಿದೆ. ಇಡೀ ದೇಶದೊಳಗೂ ಹೊರಗೂ ಈ ಕೃತ್ಯವು ಒರಿಸ್ಸಾದ ಗೌರವವನ್ನು ಕುಂದಿಸಿರುತ್ತದೆಂದು ಒರಿಸ್ಸಾದ ಮುಖ್ಯಮಂತ್ರಿ ಶ್ರೀ ಸದಾಶಿವ ತ್ರಿಪಾಠಿ ಹೇಳಿದರು. ಹೌದು, ಅದರಲ್ಲಿ ಸಂದೇಹವಿಲ್ಲ ಆದರೆ ಸಭಾಂಗಣಕ್ಕೆ ಅವರು ಹೋಗದೆ ಇದ್ದದ್ದು ಗಲಾಟೆ ಹೆಚ್ಚಾಗಲು ಕಾರಣವಲ್ಲವೇ? ಒಂದು ಘಂಟೆ ಕಾಲ ಗಲಭೆ ನಡೆಯುತ್ತಿದ್ದರೂ ಶ್ರೀ ತ್ರಿಪಾಠಿಯವರ ಪ್ರಾಂತ್ಯದ ಪೋಲೀಸರಿಗೆ ಪ್ರಧಾನಿಯವರನ್ನು ಗೂಂಡಾಗಳಿಗೆ ತಪ್ಪಿಸಲಿಕ್ಕೆ ಸಾಧ್ಯವಾಗಲಿಲ್ಲ! ಹಾಗಿದ್ದು ಖಂಡನೆಯ ಪ್ರದರ್ಶನ! ಪುರಿ ಗೋವರ್ಧನ ಪೀಠ ಒರಿಸ್ಸಾದಲ್ಲಿದೆ ಅಲ್ಲಿನ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರನ್ನು ಹೀನ ರೀತಿಯಲ್ಲಿ ದಿಲ್ಲಿ ದೊರೆಗಳು ಕಂಡಾಗ, ಅವರನ್ನು ದಿಲ್ಲಿ—ಪೊಂಡಿಚೇರಿ—ಪುರಿ ಹಾರಾಡಿಸಿದಾಗ ಈ ಮುಖ್ಯ ಮಂತ್ರಿಗಳು ಏನು ಮಾಡುತ್ತಿದ್ದರು? ಇದೂ ನಾಚಿಕೆಗೇಡಿನ ವಿಷಯವಲ್ಲವೇನು? ಒರಿಸ್ಸಾಕ್ಕೆ ಇದರಿಂದ ಒಳ್ಳೆಯ ಹೆಸರು ಬಂತೇನು? ಅದರ ಗೌರವ ಹೆಚ್ಚಿತ್ತೇನು?

"ಶ್ರೀಮತಿ ಗಾಂಧಿಯವರಿಗೆ ಬಿದ್ದಿರುವ ಪೆಟ್ಟು ಒರಿಸ್ಸಾದ ಒಳ್ಳೆಯ ಹೆಸರನ್ನು ಅಳಿಸಿ ಬಿಟ್ಟಿತೆ'ಂದು ಒರಿಸ್ಸಾದ ಪ್ರದೇಶ ಕಾಂಗ್ರೆಸ್ಸ್ ಸಮಿತಿಯ ಅಧ್ಯಕ್ಷ ಶ್ರೀ ಬಿಜಯಕುಮಾರ ಪಾಣಿ ಹೇಳಿರುವರು. ನಿಜ. ಆದರೆ ಶ್ರೀಮತಿ ಗಾಂಧೀಯವರಿಂದ ಗೋವರ್ಧನ ಪೀಠ ಧೀಶ ಶ್ರೀ ಶ್ರೀ ಶಂಕರಾಚಾರ್ಯರ ಕುರಿತ ಹೇಳಲ್ಪಟ್ಟಿರುವ ಮಾತು ಒರಿಸ್ಸಾದ ಒಳ್ಳೆಯ ಹೆಸರನ್ನು ಅಳಿಸಿಲ್ಲವೇನು? ಶ್ರೀ ಶ್ರೀ ಶಂಕರಾಚಾರ್ಯರ ಮೇಲೆ ಬಿದ್ದಿರುವ ಮಾತಿನ ಪೆಟ್ಟಿನ ನೋವು ಬಿಜಯಕುಮಾರ ಪಾಣಿಯವರಿಗೆ ಅನುಭವವಾಗಿಲ್ಲವೆಂಬುದೂ ನಿಜ. ಏನೇ ಇರಲಿ. ವೇದಿಕೆಯ ಮೇಲಿದ್ದೂ, ವಾತಾವರಣದ ಅನುಭವ ಆದ ಮೇಲೂ ಶ್ರೀಮತಿಯವರನ್ನು ಗೂಂಡಾಗಳ ಹೊಡತದಿಂದ ತಪ್ಪಿಸಲು ಸಾಧ್ಯವಾಗದ ಬಿಜಯಕುಮಾರ ಪಾಣಿ ಇಂತಹ ಮಾತುಗಳಿಂದಲೇ ತೃಪ್ತಿಪಟ್ಟುಕೊಳ್ಳಬೇಕು. ಅಷ್ಟೇ. ಕೈಲಾಗದವನು ಇನ್ನೇನು ತಾನೇ ಮಾಡಿಯಾನು? ಶ್ರೀಮತಿಜೀಯವರನ್ನು ಗೂಂಡಾಗಳಿಂದ ತಪ್ಪಿಸಲಾರದವನು ಕಾಂಗ್ರೆಸ್ ಪಕ್ಷವನ್ನು ಎದುರು ಪಕ್ಷಗಳ ಪರಾಕ್ರಮದಿಂದ ತಪ್ಪಿಸುವದುಂಟೇ? ಆ ತಯೋ ಬಿಟ್ಟುಕೊಟ್ಟಿರುವರು!

"ಪ್ರಧಾನಿಯವರ ಮೇಲೆ ನಡೆದ ಹೇಡಿ ಕೃತ್ಯವನ್ನು ನಾನು ಖಂಡಿಸುತ್ತೇನೆ. ಇದನ್ನು ಯಾರೇ ಮಾಡಿರಲಿ ಅವರು ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಭಾರೀ ಅಪಕಾರ ಮಾಡುವವರು. ಈ ಕೃತ್ಯವನ್ನು ಈ ದೇಶದಲ್ಲಿ ಯಾವ ಪ್ರಜ್ಞಾವಂತ ರಾಜಕೀಯ ಪಕ್ಷವೂ ಪ್ರೋತ್ಸಾಹಿಸಿತೆಂದು ನಾನು ತಿಳಿಯುವದಿಲ್ಲವೆ'ಂದು ಶ್ರೀ ಸುರೇಂದ್ರನಾಥ ದ್ವಿವೇದಿ ಹೇಳಿದರು. ಹೌದು, ರಾಜಕೀಯ ಪಕ್ಷ ಪ್ರೋತ್ಸಾಹಿಸಲಿಕಿಲ್ಲ. ಅಂದರೆ ರಾಜಕೀಯಕ್ಕೆ ಸಂಬಂಧ ಪಡದವರು? ಇದನ್ನು ಯಾರೂ ಪ್ರೋತ್ಸಾಹಿಸಲಾರರು. ಇದು ಹೇಡಿಕೃತ್ಯವೇ ಹೌದು. ಆದರೆ ಅದೇ ಪ್ರಧಾನಿಯವರ ಸರಕಾರ ಮಾಡಿದ್ದೇನು? ಜಗದ್ಗುರು ಪುರಿ ಶಂಕರಾಚಾರ್ಯರು ಉ

ಪ್ರವಾಸ ಮಾಡುತ್ತಿದ್ದ ಸ್ಥಳಕ್ಕೆ ರಾತ್ರಿ ಹೊತ್ತಿನಲ್ಲಿ ಕಳ್ಳತನದಿಂದ ಪೋಲೀಸರನ್ನು ಕಳುಹಿಸಿ ಅವರನ್ನು ಕರೆದುಕೊಂಡು ಒಡನೆ ಪೊಂಡಿಚೇರಿಗೆ ಕಳುಹಿಸಿರುವದು ಹೇಡಿಗಳ ಕೆಲಸ ಅಲ್ಲವೇನು? ನವಂಬರ ಏಳರಂದು (೧೯೬೬) ದೇಶದ ಮೂಲೆಮೂಲೆಗಳಿಂದಲೂ ಪ್ರದರ್ಶನಕಾರರು ಸೇರಿದಾಗ ಅದನ್ನು ಕಂಡು ಅವರ ಬೇಡಿಕೆಯನ್ನು ಕೇಳಲು ಧೈರ್ಯವಿಲ್ಲದ ಪ್ರಧಾನಿ ಹಾಗೂ ಅವರ ಹಿಂಬಾಲಕರು ದಿಲ್ಲಿಯಲ್ಲಿ ಮಾಡಿದ್ದೇನು? ಭಿಕ್ಷೆ ಬೇಡಲೋ, ನ್ಯಾಯ ಕೇಳಲೋ ಬಂದ ಸನ್ಯಾಸಿಯ ಮೇಲೆ ತಮ್ಮ ನಾಯಿಗಳಂತಿರುವ ಗೂಂಡಾಗಳನ್ನು ಛೂ ಬಿಟ್ಟಿಲ್ಲವೇನು? ಜನತೆಯೆದುರು ನಿಲ್ಲಲು ಅವರಿಗೇಕೆ ಧೈರ್ಯಬರಲಿಲ್ಲ ಇದನ್ನೂ ಖಂಡಿಸದಿರಲು ಸಾಧ್ಯವೇನು? ತಾವು ಕೊಂದ ಮೂಲೂ ಹೆಣಗಳನ್ನ ಸಂಬಂಧಿಕರಿಗೆ ಕೊಡಲು ಧೈರ್ಯವಿಲ್ಲದೆ ಹೋಯಿತು ಈ ಪ್ರಧಾನಿಯವರಿಗೆ. ಅವನ್ನು ಹೇಡಿತನದಿಂದ, ಕಳ್ಳತನದಿಂದ ರಹಸ್ಯವಾಗಿ ಒಯ್ದು ವಿದ್ಯುತ್ ಸ್ಮಶಾನದಲ್ಲಿ ಸುಡಲಾಯಿತು! ನ್ಯಾಯಕ್ಕೆ ಮುಖ ತೋರಿಸುವ ಧೈರ್ಯವಾದರೂ ಈ ಪ್ರಧಾನಿಯವರಿಗೆ ಬಂತೇನು? ಆದರೂ ಗುಟ್ಟು ಹೊರಬಂತು.

"ಪ್ರಧಾನಿಯವರ ಮೇಲೆ ಕಲ್ಲು ತೂರುವಂತಹ ನಾಚಿಕೆಗೇಡಿತನದ ಕೆಲಸ ಬೇರಿನ್ನಾರದೂ ಇಲ್ಲ'ವೆಂದು ಶ್ರೀ ಯಶವಂತ ಚವಾನರು ತಿಳಿಸಿದರು. ಕಲ್ಲು ತೂರುವದು ಮಾತ್ರ ನಾಚಿಕೆಗೇಡಿನ ಕೆಲಸವೇನು? ಅದೇನು ಅಂತಹ ಕೆಲಸ ಮಾಡಿದರೂ ಅದು ಖಂಡನೀಯವೇ ಸರಿ ಪ್ರಧಾನಿಯವರ ಮೇಲೆ ಕಲ್ಲು ತೂರುವದು ಮಾತ್ರ ನಾಚಿಕೆಗೇಡಿನ ಕೆಲಸವೇನು? ಬೇರೆಯವರ ಮೇಲೆ ಕಲ್ಲು ತೂರಬಹುದೇನು? ಕೊಲೆ ಮಾಡಬಹುದೇನು? ಓಹೋ, ಆದಕ್ಕನೇ ಎಂದು ಕಾಣುತ್ತದೆ. ದಿಲ್ಲಿಯಲ್ಲಿ ನವಂಬರ ಏಳರಂದು (೧೯೬೬) ಗೋಹತ್ಯಾ ನಿಷೇಧಾರ್ಥ ಭಾರೀ ಪ್ರದರ್ಶನ ನಡೆದಾಗ ಪಕ್ಕದ ಟ್ರಾನ್ಸ್‌ಪೋರ್ಟ ಭವನ ಬಳಿ ರಸ್ತೆಯಲ್ಲಿ ಹೇರಳ ಜಲ್ಲಿಕಲ್ಲು ರಾಶಿ ಹಾಕಿಸಿಟ್ಟು, ಸಮೀಪದಲ್ಲಿ ಕಲ್ಲು ಹೊಡೆಯಲು ಗೂಂಡಾಗಳಿಗೆ ದಾರಿ ಹೊಡೆದು ಕೊಟ್ಟದ್ದು! ಶ್ರೀಯಶವಂತ ಚವಾನರ ದೃಷ್ಟಿಯಲ್ಲಿ ಇದು ಪ್ರಶಂಸನೀಯ ಕೆಲಸವೇನು? ಆಗ ದಿಲ್ಲಿಯಲ್ಲಿದ್ದ ಇವರ ಪಕ್ಷದ ಸೇವಾದಳದವರು ಮಾಡಿದ್ದೇನು? ಚವಾನರು ಇದನ್ನೇತಕ್ಕೆ ಖಂಡಿಸಿರುವದಿಲ್ಲ?

'ಹೆಂಗಸಿನ ಮೇಲೆ ಆಕ್ರಮಿಸುವದು ಎಲ್ಲಾ ಧರ್ಮ ಶಾಸ್ತ್ರಗಳ ಕಾನೂನಿಗೆ ವಿರೋಧವಾದದ್ದು. ಪ್ರಜಾಪ್ರಭುತ್ವದ ಮೇಲೆ ನಮಗಿರುವ ನಂಬಿಕೆ ಅದೆಷ್ಟು ನಿರ್ಬಲವೆಂಬುದನ್ನು ಈ ಘಟನೆ ಪ್ರದರ್ಶಿಸುತ್ತದೆ'ಂದು ಶ್ರೀ ಪೀಟರ್ ಆಳ್ವಾರಿಸ್‌ರವರು ಪೀಟರ್‌ನಂತೆಯೇ ಹೇಳಿರುವರು. ಆದುದರಿಂದಲೋ ಏನೋ ಈ ಸಲದ ಚುನಾವಣೆಯಲ್ಲಿ ಅವರಿಗೆ ಅನುಮತಿಯೇ ಸಿಗಲಿಲ್ಲ! ಇರಲಿ. ಇಂದಿರಾ ಗಾಂಧೀಜೀ ಮಾತ್ರ ಹೆಂಗಸಿರುವದಿಲ್ಲ. ನವಂಬರ ಏಳರಂದು (೧೯೬೬) ದಿಲ್ಲಿಯಲ್ಲಿ ನಡೆದ ಗೋವಧೆ ನಿಷೇಧ ಸಂಬಂಧ ಸಾಮೂಹಿಕ ಪ್ರದರ್ಶನದಲ್ಲಿ ಸಹಸ್ರಾರು ಮಾತೆಯರು ಮಕ್ಕಳೊಂದಿಗ ಬಂದಿದ್ದಾಗ ಇಂದಿರಾಜೀಯವರ ಪಕ್ಷದ ಗೂಂಡಾಗಳು, ಪೋಲೀಸ ಪಡೆ ಮಾಡಿರುವದೇನು? ಕಾಂಗ್ರೆಸ್ಸೇತರ ಸ್ತ್ರೀಯರ ಮೇಲೆ ಆಕ್ರಮಣ ನಡೆಸಿದರೂ ಅದು ಕೂಡಾ ಧರ್ಮ ವಿರೋಧವೇ ಇದೆ. ಈ ಧರ್ಮದ ಪ್ರಜ್ಞೆ ದಿಲ್ಲಿ ದೇವತೆಗಳಿಗೆ ಇದ್ದಲ್ಲಿ ಅಂದು ಹಾಗೆ ಮಾಡುತ್ತಿದ್ದರೇನು?

ಇವೆಲ್ಲದಕ್ಕಿಂತಲೂ ತಮಾಷೆ–ವ್ಯಂಗ್ಯ ಅಡಗಿರುವದು ಕಾಂಗ್ರೆಸ್ಸಿನ ಖಜಾಂಚಿ ಶ್ರೀ ಅತುಲ್ಯ ಘೋಷರ ಮಾತಿನಲ್ಲಿ 'ಭುವನೇಶ್ವರದಲ್ಲಿ ಪ್ರಧಾನಿಯವರ ಸಭೆಯಲ್ಲಿ ಗೊಂದಲವನ್ನುಂಟು ಮಾಡಲು ಪ್ರಯತ್ನಿಸಿರುವದು ಮಾತ್ರವಲ್ಲ, ಕಲ್ಲುತೂರಿ ಗಾಯಗೊಳಿಸಿರುವ ವಿಷಯ ಬಹುಶಃ ಇಡೀ ಭಾರತವನ್ನೇ ಕಂಪಿಸುವಂತಹದ್ದಿದ.... ಇಂತಹ ಕೃತ್ಯಗಳನ್ನು ಜನತೆ ಅದು ಹೇಗೆ ಸಹಿಸುತ್ತದೋ! ...ಇಂತಹ ಕೃತ್ಯಗಳು ಭಾರತದ ಜನತೆಗೆ ಕುಂದು ತರುತ್ತವೆ...' ಮುತ್ತಿನಂತಹ ಮಾತುಗಳು! ಇವನ್ನು ಆಡಿದವರ್‍ಯಾರು? ನವಂಬರ ಏರಂದು(೧೯೬೬) ದಿಲ್ಲಿಯಲ್ಲಿ ನಡೆದ ಅಭೂತಪೂರ್ವ ಪ್ರದರ್ಶನವನ್ನು ಚದುರಿಸಿದ ಕುಖ್ಯಾತಿಯನ್ನು ಹೊಂದಿರುವ ಶ್ರೀ ಅತುಲ್ಯ ಘೋಷ್! ತನ್ನ ಆಶ್ರಯದಲ್ಲಿರುವವರು ದೇಶದ್ರೋಹಿ ಚಟುವಟಿಕೆ ಬಯಲಾದಾಗ ಅವರನ್ನು ಬಂಧಿಸಿಬಿಡಲೊಪ್ಪದಿರುವ ಗೃಹಮಂತ್ರಿಯವರನ್ನ ಮನೆಗೆ ಕಳುಹಿಸಲು ಸಂಚು ಹೂಡಿದವ ಶ್ರೀ ಅತುಲ್ಯಘೋಷ್! ತನ್ನ ಪಕ್ಷದ ಮಹಾಪ್ರಭು ತಿರುಕಾಮರಾಜ ಮನೆಗೆ ಬೆಂಕಿ ಇಟ್ಟ ಶ್ರೀ ಅತುಲ್ಯ ಘೋಷ್! ಇಂತಹಾ ಭಾರೀ ದೊಡ್ಡ ಮೀನು ಒಂದು ಚಿಕ್ಕ ಮೀನಿನ ಅಪಹಾಸ್ಯ ಗೈಯ್ಯದೆ ಇನ್ನೇನು ತಾನೇ ಮಾಡೀತು? ಇಂತಹವರನ್ನೂ ಜನತೆ ಹೇಗೆ ಸಹಿಸುತ್ತದೋ! ಸಹಿಸುವದಿಲ್ಲವೆಂದೇ ಖಜಾಂಚಿ ಘೋಷರನ್ನು ಚುನಾವಣಾ ರಂಗದ ಕಸದಬುಟ್ಟಿಗೆ ಹಾಕಿಬಿಟ್ಟಿತು ಬಂಗಾಲದ ಜನತೆ!

ಶ್ರೀಮತಿಜೀಯವರ ಮೂಗು ಜನತೆಯ ಮನೋಸಾಗರದಲ್ಲಿ ದೊಡ್ಡ ದೊಡ್ಡ ತೆರೆಗಳನ್ನು ಎಬ್ಬಿಸಿರುತ್ತದೆ. ನಮ್ಮ ದೇಶದ ವಾತಾವರಣಕ್ಕೆ ಈ ದುರ್ಘಟನೆ ತೀರಾ ಹೊಸತು. ನಮ್ಮ ದೇಶದ ಚರಿ

ಧರ್ಮ ಸಮ್ಮೇಳನ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನಡೆಯುವ ಉತ್ಸವಗಳಲ್ಲಿ ಶ್ರೀ ಸುಬ್ರಹ್ಮಣ್ಯ ಷಷ್ಠಿ ಮತ್ತು ಕಿರುಷಷ್ಠಿಗಳೂ ಮುಖ್ಯವಾದುವು. ಪ್ರತಿ ವರ್ಷವೂ ಕಿರುಷಷ್ಠಿಯ ಸುಸಂದರ್ಭದಲ್ಲಿ ಧರ್ಮ ಸಮ್ಮೇಳನವೂ ನಡೆದು ಬರುವುದು ಸಂಪ್ರದಾಯವಾಗಿದೆ. ಈ ವರ್ಷದ ಧರ್ಮ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಪೆರ್ಡಾಲದ ಮಹಾಜನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಶ್ಯಾಮ ಭಟ್ಟರು ವಹಿಸಿದ್ದರು. ಸಮ್ಮೇಳನವನ್ನು ಶ್ರೀಮದ್ ಎಡನೀರು ಮಠಾಧೀಶ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಯವರು ಉದ್ಘಾಟಿಸಿದ ಬಳಿಕ, ಸುರತ್ಕಲ್‌ನ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಶ್ರೀ ಎಂ. ಆರ್. ಗಜೇಂದ್ರಗಾಡ್ ಮತ್ತು ಪುತ್ತೂರು ವಿವೇಕಾನಂದ ಕಾಲೇಜಿನ ಶ್ರೀ ಎಚ್. ಎಲ್. ಸುಬ್ರಹ್ಮಣ್ಯ ಇವರು ಭಾಷಣ ಮಾಡಿದರು. ಆರಂಭದಲ್ಲಿ ದೇವಾಲಯದ ಮೆನೇಜಿಂಗ್ ಟ್ರಸ್ಟಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು.

ಕೊನೆಯಲ್ಲಿ ದೇವಾಲಯದ ಮೆನೇಜರ್ ಶ್ರೀ ರಾಮಕೃಷ್ಣ ಭಟ್ಟರು ಧನ್ಯವಾದವಿತ್ತರು.

ಆ ದಿನ ರಾತ್ರಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ, ಅಂಗದ ಸಂಧಾನ – ಇಂದ್ರಜಿತುಕಾಳಗವೆಂಬ ಯಕ್ಷಗಾನವೂ ಜರಗಿತು. ಶ್ರೀ ಬಿ. ನಾರಾಯಣ ಶೇಕರು ಧನ್ಯವಾದವರ್ಪಿಸಿದರು. ಹಿಂದಿನ ದಿನ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿಯವರಿಂದ ಶ್ರೀ ಮದ್ರಾಮಾಯಣ ವಾಚನವೂ ಹರಿದಾಸ ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರಿಂದ ಹರಿಕಥಾ ಕಾಲಕ್ಷೇಪವೂ ನೆರವೇರಿದ್ದುವು.

ಈ ಧರ್ಮ ಸಮ್ಮೇಳನಕ್ಕೆ ಸಂಬಂಧಿಸಿದ ಕೆಲವು ದೃಶ್ಯಗಳನ್ನು ಇಲ್ಲಿ ಕಾಣಬಹುದು.

ಶ್ರೀಮದೆಡನೀರು ಮಠಾಧೀಶರು ಸಮ್ಮೇಳನವನ್ನು ಉದ್ಘಾಟಿಸಿ ಭಾಷಣ ಮಾಡುತಿದ್ದಾರೆ.



ದೇವಾಲಯದ ಮೆನೇಜಿಂಗ್ ಟ್ರಸ್ಟಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡ ಇವರು ಸಮ್ಮೇಳನಕ್ಕೆ ಆಗಮಿಸಿದವರನ್ನು ಸ್ವಾಗತಿಸುತ್ತಿದ್ದಾರೆ.



ಪ್ರಿನ್ಸಿಪಾಲ್ ಕೆ. ಶ್ಯಾಮ ಭಟ್ಟರು ಅಧ್ಯಕ್ಷ ಭಾಷಣ ಮಾಡುತಿದ್ದಾರೆ.

ತ್ರೆಯಲ್ಲಿ ಇಂತಹ ದುರ್ಘಟನೆಗಳು ನಡೆದಿವೆಯೆನ್ನುವದ, ಕಾಂಗ್ರೆಸ್ಸಿಗರೇ ಸರಿ. ಅನ್ಯಪಕ್ಷಗಳಲ್ಲಿ (ಬಿ.ಕೆ.ಡಿ. ಹೊರ) ಚುನಾವಣೆ ಸಮಯ ಕಾಂಗ್ರೆಸ್ಸಿನಿಗೆ ಕೊಲೆತ ಕೊಟ್ಟಿ, ಟೊಮ್ಯಾಟೋ ಮುಂತಾದ್ದುಗಳಿಂದ ಹೊಡೆಯುವದು ಸ್ವಾಭಾವಿಕವೇ ಇದೆ. ಅಲ್ಲಿ ಕಲ್ಲು ಬಹಳ ಕಮ್ಯುನಿಸ್ಟರುಗಳಲ್ಲಿ ಶಕ್ತಿ ಬಹಳ ಇತರ ಪಕ್ಷಗಳು ಅವನ್ನು ಉಪಯೋಗಿಸಿಕೊಂಡವು. ಶ್ರೀಮತಿ ಇಂದಿರಾಜೀಯವರಿಗೆ ಅಂದು ಮೂಗಿಗೆ ಪೆಟ್ಟಾಯಿತು. ಮಾಪಕ್ಷಪಾತಿ ರೀತಿಯ ಅವರ ಬೆಂಬಲಿಗರನ್ನು ವಿರೋಧ ಮಾಡುವ ದೊರೆಯಿತು. ಇಷ್ಟೇ ಅಲ್ಲ ಅವರ ಮೇಲಾಗಲು ಯಾವಾಗಲೋ ಕಲ್ಲೆಸೆತ ನೋಡಿ. ಆದನ್ನು ಜನತೆಯು ನುಂಡೆ ಪ್ರವರ್ತಕರು ಇದೇ ರಸ್ತೆಯಿಂದ ಶ್ರೀಮತಿ ಪ್ರಯಾಣ ಮಾಡಿದ್ದೆಂದು ಪ್ರಚಾರ ಮಾಡಿದರು, ಇದು ನಾಣ್ಯದ ಒಂದು ಮುಖ ಅವರಿಗದು ಪ್ರಚಾರಕ್ಕೆ ಪ್ರಮುಖ ಸಾಧನವಾಯಿತು.

ರಾಜಕೀಯ ನಾಣ್ಯದ ಇನ್ನೊಂದು ಮುಖ ಮಾಗಿಯೇ ಅಥವಾ ಅದಕ್ಕಿಂತಲೂ ಘೋರ ವಾಗಿದೆ. ಮಧ್ಯಪ್ರದೇಶದಲ್ಲಿ ಆಗಿನ ಮುಖ್ಯಮಂತ್ರಿ ಶ್ರೀ ದ್ವಾರಕಾ ಪ್ರಸಾದ ಮಿಶ್ರರವರು ಬಿದ್ದಲ್ಲಿ ಜನರ ಕೊಲೆ ಮಾಡಿಸಲಿಲ್ಲ ಕಚ್ಚಿದರಲು ಹೊತ್ತಿನಲ್ಲಿ ಸೆಯೋಗಿ ನಿಗ್ರಹ ಧೋರಣೆಯ ಬಗ್ಗೆ ಅನಂತರ ನಿಷೇಧ ಕಾರ್ಯಕರ್ತರನ್ನು ಕೊಲೆ ಮಾಡಿಸಲಿಲ್ಲವೇನು? ಅದು ಪ್ರತಿಪಕ್ಷದ ಪ್ರದೇಶದಲ್ಲಿ ನಡೆಯಿತು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. No 683/1966

ರಾಘವೇಂದ್ರ ಉಡುಪ— ವಾದಿ

ಮತ್ತು

ಶಿವಾನಂದ ಶೆಟ್ಟಿ— ಪ್ರತಿವಾದಿ.

ಪ್ರತಿವಾದಿಯು ಪ್ರತಿವಾದಿ ಶಿವಾನಂದ ಶೆಟ್ಟಿ ಕೃಷ್ಣಪ್ಪ ಶೆಟ್ಟಿ ... ಗ್ರಾಮ ಬಾಲ್ಯ ಕೊಟ್ಟ ... ಗ್ರಾಮ.

ಇವರಿಗೆ

ನೀವು ವಾದಿಗೆ ತಾರೀಕು 16—8—1966 ರಲ್ಲಿ ರೂಪಾಯಿ 350ಕ್ಕೆ ಬರೆದು ಕೊಟ್ಟ ... ತಾ. 15—12—1965 ... ಬಂದ ರೂ. 100 ... ತಾರೀಕು 11—1—1966ರಲ್ಲಿ ... 25 ... 10 ... 17—11—1966ರಲ್ಲಿ ... 19 ... ತಾ. 11—4—1967 ... 11 ಗಂಟೆಗೆ ... [illegible]

(ಕೋರ್ಟಿನ ಹುಕುಂ ಪ್ರಕಾರ)

G. Ramakrishna Rao

Advocate

ತಾ. 14—3—1967, ಕುಂದಾಪುರ

ಪೇಂಟಲೋಸಿಂಗ ನುಂಡಿ ಬರಲಿಲ್ಲ! ಶ್ರೀ ... ಫಲಿ ... ಕಲ್ಲೆ ನಡೆದವೇನು? ಮೊದಲಿನ ಪ್ರಕರಣದಲ್ಲಿ ಬಾಯಿಬಿಡದ ಶ್ರೀಮತಿ ಇಂದಿರಾಜೀ ಮತ್ತು ಶ್ರೀ ಲಿಮಯೆ ಅವರ ವಿಷಯದಲ್ಲಿ ವಿಚಾರಣೆಗ ದರೂ ಪ್ರೋತ್ಸಾಹಿಸಿರುವರು. ಆದಕ್ಕೆ ಕಾರಣ ಏನು? ಬಿಸಿಯಾಗದೆ ಬೆಣ್ಣೆ ಕರಗದೇನು? ಕಾಶ್ಮೀರದಲ್ಲಿ ನಡೆದ ಘಟನೆಗಳನ್ನೂ ಶ್ರೀಮತಿ ಇಂದಿರಾ ಗಾಂಧಿಯವರು ಅಷ್ಟೇನು ಗಮನ ಕೊಟ್ಟದ್ದು ತಿಳಿದು ಬಂದಿಲ್ಲ. ಶ್ರೀಮತಿ ಇಂದಿರಾ ಗಾಂಧಿ ಹಾಗೂ ಅವರ ಅನುಯಾಯಿಗಳಿಗೆ ತಮಗೆ ಹಾಗೂ ತಮ್ಮ ಪಕ್ಷದವರಿಗೆ ಮಾತ್ರ ಅಪಮಾನದ ರೀತಿ ಕಲ್ಲಿದ್ದು ಸಂಭವಿಸಿದಾಗ ಮಾನ-ಅಪಮಾನ, ಗೌರವ, ಘೋಷಣೆ, ಪುಂಡಾಟಿಕೆ ವಗೈರೆಗಳ ಜ್ಞಾಪಕ ಬರುವದೆಂದು ಕಾಣುತ್ತದೆ, ಅವು ಮಾತ್ರ ಆದೇನು ಬೇಕಾದರೂ ಹೋಗಲಾಯಿ ದಬ್ಬಾಳಿ ನಡೆಸಬಹುದು!

ಮಾನ—ಅಪಮಾನ—ಧಾ ಗೌರವ ಅಗೌರದ ವಿಷಯವೂ ಹಾಗೆಯೇ ಇದೆ. ಪ್ರಧಾನಿಯವರ ಮೇಲೆ ಪುಂಡಾಟಿಕೆ ನಡೆಸಿದಾಗ ಮಾತ್ರ ದೇಶದ ಗೌರವಕ್ಕೆ ಕುಂದು ಬರುವದೇನು? ಪ್ರಧಾನಿ ಪಕ್ಷದವರು ಎದುರು ಪಕ್ಷದವರನ್ನು ಕೊಲೆ ಮಾಡಿದಾಗ, ಅವರ ಮೇಲೆ ಹಲ್ಲೆ ನಡೆಸಿದಾಗ ದೇಶದ ಗೌರವ ಹೆಚ್ಚುವದೇನು? ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ನ್ಯಾಯದಂತಿದ ಈ ವಿಷಯ. ಅಷ್ಟು ಮಾತ್ರವಲ್ಲ ಪ್ರಧಾನಿಯವರ ಮೇಲ ಹಾಗಿದ್ದರೂ ... ರಾಷ್ಟ್ರದ ಗೌರವಕ್ಕೆ ಹಾಗೂ ಏರಿನ್ನುದ ... ಕಲ್ಲು ಹೊಡೆಗಿ, ಕಲ್ಲು ಬಂತೆಂದು ಹೇಳಿದವರೂ ಹಲವಾರು ಮಂದಿ ಇದ್ದಾರೆ. ಇದು ನಿಜ ಆದರೂ ಅದಕ್ಕೆ ಅಷ್ಟೊಂದು ಪ್ರಧಾನಿಯನ್ನು ಇಟ್ಟು ಕೊಂಡು ರಾಷ್ಟ್ರದ ಗೌರವಕ್ಕೆ ಹಾಗೂ ಏರಿನ್ನುದ ಮಾತ್ರವಲ್ಲ ಭಾರತದ ಒಳ್ಳೆಯ ಹೆಸರಿಗೆ ಕಳಂಕವಲ್ಲವೇನು? ತನ್ನ ಪ್ರಜೆಗಳನ್ನೇ ಶತ್ರು ಕ್ರಮಕೊಂಡ ಒಂದು ಹೇಳಿರುವವರು ಪ್ರಧಾನಿ ಮಾಗಿಲು ಯೋಗ್ಯರೇನು? ತನ್ನ ದೇಶದ ಸಂಸ್ಕೃತಿ ಕಲೆ, ಆಚಾರ — ವಿಚಾರಗಳ ಕುರಿತು ಬಹಳ ಅಭಿಮಾನ ಇಲ್ಲದೆ ಅವಮಾನವನ್ನುಂಟು ಮಾಡುವ ರೀತಿಯಲ್ಲಿ ವಿಷಾ ...

ಕಾಡುಮಂತಹವರನ್ನು ಪ್ರಧಾನಿಯನ್ನಾಗಿ ಪಟ್ಟದಲ್ಲಿ ಕೂಡುಕೊಳ್ಳಿರಿಸಿರುವದು ರಾಷ್ಟ್ರದ ಗೌರವಚಂದ್ರನಿಗೆ ಗ್ರಹಣ ಹಿಡಿದಂತಲ್ಲವೇನು?

ಏನೇ ಇರಲಿ. ಇಂತಹ ಗೌರವ—ಅಪಮಾನಗಳಂತಹ ದೊಡ್ಡ ಮಾತುಗಳು ಒತ್ತಟ್ಟಿಗಿರಲಿ. ಈ ದುರ್ಘಟನೆಯಿಂದ ಪ್ರಯೋಜನವಾದದ್ದು ಸ್ವತಃ ಶ್ರೀಮತಿ ಇಂದಿರಾ ಗಾಂಧೀಜೀಯವರಿಗೇ. ಇಲ್ಲದಿದ್ದಲ್ಲಿ ಆನರ ಪಾಡ ... ಶ್ರೀ ಕಾಮರಾಜ, ಶ್ರೀ ಸದೋಬಾ ಪಾಟೀಲ್, ಶ್ರೀ ಬಿಜೂ ಪಟ್ನಾಯಕ್, ಶ್ರೀ ಅತುಲ್ಯ ಘೋಷ್, ಶ್ರೀ ಸುಬ್ರಹ್ಮಣ್ಯಂ ಮುಂತಾದ ಕಾಂಗ್ರೆಸ್ಸಿನ ಕಂಭಗಳುರುಳಾಗುತ್ತಿತ್ತು. ಕಾಂಗ್ರೆಸ್ಸಿನ ಈ ಅತಿರಥ ಮಹಾರಥರ ಅವಸ್ಥೆ ಹಾಗಾಗುತ್ತದೆಂದು ಯಾರಾದರೂ ಹಿಂದೆ ಭಾವಿಸಿದ್ದರೇನು? ಶ್ರೀ ಕಾಮರಾಜರಾದರೋ ತಾವು ಮಲಗಿಕೊಂಡೇ ಜಯಿಸುವದಾಗಿ ಹೇಳುತ್ತಿದ್ದರು. ಪಾಪ! ಅವರು ಮಲಗಿಯೇ ಬಿಟ್ಟರು, ದೈಹಿಕವಾಗಿ ಮಲಗಿದು ಮಾತ್ರವಲ್ಲ, ರಾಜಕೀಯ ರಂಗದಲ್ಲಿ ಅವರು ಬಿದ್ದೇ ಬಿಟ್ಟರು. ಒಂದು ಕೋಟಿ ರೂಪಾಯಿ ಇದ್ದಲ್ಲಿ ಪ್ರಧಾನಿ ಪದವಿಯನ್ನು ಕ್ರಯಕ್ಕೆ ಪಡೆದ ಕೊಳ್ಳುವದಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಶ್ರೀ ಬಿಜೂ ಪಟ್ನಾಯಕರಿಗೆ ಕೊನೆಯಲ್ಲಿ ಲೋಕಸಭಾ ಸದಸ್ಯನಾಗಲು ಬೇಕಾಗುವಷ್ಟು ಮತಗಳನ್ನು ಪಡೆಯಲು ಸಾಧ್ಯವಾಗದೆ ಹೋಯಿತು. ಆದರೂ ಈ ಗಂಭೀರನಲ್ಲದ್ದು ರಾಜಕೀಯ ಹಕ್ಕಿಗಳಲ್ಲಿ ತಪ್ಪಿಸಿ ಕೊಂಡದ್ದು ಒಂದೇ ಒಂದು ಹಕ್ಕಿ—ಹಣ್ಣಾ ಹಕ್ಕಿ—ಅದುವೇ ಶ್ರೀಮತಿ ಇಂದಿರಾ ನೆಹ್ರೂ ಗಾಂಧಿ. ಅವರದ್ದು ಮುಖಭಂಗವಾಗುತ್ತಿತ್ತು. ಆದರೆ ಅವರ ಮುಖವನ್ನು ಅವರ ಮೂಗು ಉಳಿಸಿತು. ಹಾಗೆಯೇ ಕಾಂಗ್ರೆಸ್ಸಿನ ಗೌರವವೆಂಬ ಮುಖವನ್ನು ಇಂದಿರಾ ಗಾಂಧಿಯವರ ಮೂಗು ಉಳಿಸಿತು.

ಶ್ರೀಮತಿ ಇಂದಿರಾ ಗಾಂಧಿಯವರ ಮುಖ ಉಳಿಯಿತು ಆದರೂ, ಕಾಂಗ್ರೆಸ್ಸಿನ ಮುಖ ಉಳಿದಿಯಾದರೂ ಇಂತಹ ದುರ್ಘಟನೆಗಳನ್ನು ಪಕ್ಷಭೇದ ತೊರೆದು ಪಡೆಯಲು ಎಲ್ಲರೂ ಪ್ರಯತ್ನಿಸುವದು ದೇಶದ ಹಿತದೃಷ್ಟಿಯಿಂದ ಬಹಳ ಒಳ್ಳೆಯದೇ ಸರಿ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್"

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—1

ವಾರ್ಷಿಕೋತ್ಸವ

ಬಿಟ್ಟ ವಿರಲ ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 12-3-67 ರಂದು ಪುತ್ತೂರಿನ ಅಸಿಸ್ಟಂಟ್ ಕಮಿಶನರರಾದ ಶ್ರೀ. ಬಿ. ಯನ್. ಚಟರ್ಜೀ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ. ವಿ. ಪದ್ಮನಾಭ ಶಿವಿಲಾಯರು ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ. ವಿ. ಸುಬ್ರಾಯ ಶೆಟ್ಟಿಗಾರರು ಈ ಸಂಘದ ಸ್ಥಾಪನೆ ಬೆಳವಣಿಗೆ ಹಾಗೂ ಅದರ ಪ್ರಗತಿಗಳ ಸಮಗ್ರ ಇತಿಹಾಸವನ್ನು ವರದಿಯ ಮೂಲಕ ಸಭೆಯ ಮುಂದಿರಿಸಿದರು. ಸಂಘದ ಅಧ್ಯಕ್ಷರು ಸ್ಥಳೀಯ ಹೈಸ್ಕೂಲಿನ ವ್ಯಾಯಾಮ ಶಿಕ್ಷಕರಾಗಿದ್ದು, ಈಜುವ ಸ್ಪರ್ಧೆಯಲ್ಲಿ ಮೈಸೂರು ರಾಜ್ಯದಲ್ಲೇ ಹಿರಿಯ ಮಟ್ಟದ ಕೀರ್ತಿಯನ್ನು ತರುವಂತೆ ಮಾಡಿದ ದಿ| ಯಚ್. ಕೃಷ್ಣ ಭಟ್ಟರ ಗುಣಗಾನ ಮಾಡಿ ಅವರ ಹೆಸರಿನಲ್ಲಿ ಸ್ಥಾಪಿತವಾಗಲಿರುವ "ಈಜುಸ್ಪರ್ಧಾ ನಿಧಿಗೆ" ಉದಾರವಾಗಿ ಸಹಾಯ ಧನವೀಯುವಂತೆ ಕಳಕಳಿಯಿಂದ ವಿನಂತಿಸಿದರು. ಬಹುಮಾನ ವಿತರಣೆಯ ಬಳಿಕ ಅಧ್ಯಕ್ಷರು ಮಾತನಾಡುತ್ತಾ, ಈ ಸಂಘದ ಚಟುವಟಿಕೆಗಳನ್ನು ಮನಸಾರೆ ಶ್ಲಾಘಿಸಿ, ಈ ಸಂಸ್ಥೆಯ ಸದಸ್ಯರು ಬಹಳ ಶ್ರಮಪಟ್ಟು ಇಂತ ಒಂದು ಸ್ತುತ್ಯಾರ್ಹವಾದ ಕೆಲಸವನ್ನು ಮಾಡಿ ಈ ವಿರಳ ಕ್ಷೇತ್ರಕ್ಕೆ ಕೀರ್ತಿ ಬರುವಂತೆ ಮಾಡಿದ್ದಾರೆ ಎಂದು ಹೇಳಿ ಸಂಸ್ಥೆಗೆ ಶುಭವನ್ನು ಕೋರಿದರು. ಧನ್ಯವಾದ ಸಮರ್ಪಣೆಯ ಬಳಿಕ ವಿವಿಧ ನೃತ್ಯ ಅಭಿನಯಗಳಲ್ಲದೆ 'ರಂಗ ಜೀವನ' ಎಂಬ ಕನ್ನಡ ಹಾಗೂ 'ಬದಿತ್ತ್ ಕೊಡಿ' ಎಂಬ ತುಳು ಸಾಮಾಜಿಕ ನಾಟಕಗಳೂ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟವು.

ಗೋವಿಂದ ಪೈ ಜನ್ಮದಿನೋತ್ಸವ

ರಾಷ್ಟ್ರಕವಿ ಎಂ. ಗೋವಿಂದ ಪೈಯವರ ಜನ್ಮದಿನೋತ್ಸವವು ತಾ. 23-3-67ನೆಯ ಗುರುವಾರ ಸಂಜೆ 6ಕ್ಕೆ ವಿಜಯ ಸಾಹಿತ್ಯಮಾಲೆಯ ಪಕಿಯಿಂದ ಗಳೆಯರ ಬಳಗದ ಸಹಕಾರದಿಂದ ಸುಂಕದಕಟ್ಟೆ ವಿದ್ಯಾದಾಯಿನೀ ಶಾಲಾ ಮುಂದಿನಲ್ಲಿ ಜರಗಲಿದೆ. ಶ್ರೀ ಪೈಯವರ ಕೃತಿಗಳ ಪರಿಚಯಾತ್ಮಕ ಭಾಷಣಗಳು ವಿದ್ವಾಂಸರಿಂದ ನಡೆಯುತ್ತವೆ. ಶ್ರೀ ಗೋವಿಂದ ಪೈಯವರ ಜೀವನ ಕೃತಿಗಳ ... ಶಿಲ್ಪನಕ್ಷತ್ರ ಚಿತ್ರಣ ಗ್ರಂಥಗಳ ಪ್ರದರ್ಶನವೂ ಏರ್ಪಡಿಸಲ್ಪಡಲಿದೆ ಎಂದು ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ.

ಉಡುಪಿ ಲೇಂಡ್ ಟ್ರಿಬ್ಯುನಲ್ ಕೋರ್ಟಿನಲ್ಲಿ.

L. I. O. P. 360/1966

U. ರಾಮಪ್ಪಯ್ಯ ಶ್ಯಾನುಭೋಗ— ಅರ್ಜಿದಾರ

ಮತ್ತು

ಉದ್ದ ಶೆಟ್ಟಿ ಕಾಡಾ— ಎದುರು-

ಯವರುಗಳಿಗೆ.

4ನೇ ಎದು—ಭುಜಂಗ ಶೆಟ್ಟಿ—ಮುದ್ದು ಶೆಟ್ಟಿ ... ಉತ್ತರಾಧಿಕಾರಿಗಳಾದ ... ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ತಾರೀಕು 4-6-1961ನೇ ರಜಿಸ್ಟ್ರಿ ... ನೀವು ... ಅರ್ಜಿದಾರನು ... ತಾರೀಕು 28—8—1967ಕ್ಕೆ ... ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ... ತಪ್ಪಿದ್ದಲ್ಲಿ ... ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao

Advocate for petitioner

Udipi, 16—3—1967

"ಸುಲ್ತಾನ"

(ಐದನೇ ಪುಟದಿಂದ)

ಒಂದು ತಿಂಗಳ ತರುವಾಯ "ಪುನರ್ಮಿಲನ"ವೆಂಬ ನಿರ್ಧಾರವಾಗಿತ್ತು. ಆದರೆ ಆ ಕಾಮಿನಿ ಬರಲಿಲ್ಲ.

ಧೌಲ್‌ಪುರದಲ್ಲಿ ಒಂದು ಕಾರ್ಯಕ್ರಮಕ್ಕೆ ತನ್ನ ಮನೋರಾಣಿ ತೆರಳಿರುವುದಾಗಿ ತಿಳಿದು ಸುಲ್ತಾನನು ಅತ್ತ ನಡೆದ. ಸಂಗೀತ ಕಚೇರಿಯಾಗುತ್ತಿದ್ದ ಸ್ಥಳಕ್ಕೆ ಪೂರ್ವಸಿದ್ಧತೆಗಳೊಂದಿಗೆ ಸುಲ್ತಾನ ಹೋದ. ಪುತ್ಲಿ ಹಾಡುತ್ತಿದ್ದಳು. ಆಕೆಯನ್ನು ವೇದಿಕೆಯಿಂದ ಎತ್ತಿಕೊಂಡು ಸುಲ್ತಾನ ಮೊದಲಾಗಿ ಸಿದ್ಧಗೊಳಿಸಿದ್ದ ಕುದುರೆಯೇರಿ ಪಲಾಯನ ಮಾಡಿದ.

ಗಾಯಕಿ ಕಳವಾದಾಗ ಸಭಿಕರು ಕೋಲಾಹಲವೆಬ್ಬಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಪುತ್ಲಿಯಿನ್ನು ಸುಲ್ತಾನನದ್ದಾಗಿದ್ದಳು...

ಸುಲ್ತಾನನು ಪುತ್ಲಿಯ ತಾಯಿ ಅಸಗರಿ ಬಾಯಿಗೆ ಪ್ರತಿಫಲವಾಗಿ ಮತ್ತೆ ರೂ. ೨೫ ಸಾವಿರ ಸಲ್ಲಿಸಿದ್ದ. ಮಾತ್ರವಲ್ಲ ಪುತ್ಲಿಯನ್ನು ವಿಧಿಪೂರ್ವಕ ವಿವಾಹವಾಗುವ ಆಶ್ವಾಸನೆಯನ್ನೂ ನೀಡಿದ್ದ.

ಸುಲ್ತಾನನನ್ನು ಪುತ್ಲಿ ಪ್ರೀತಿಸಿದಳಾದರೂ ವನಜೀವನ ಆಕೆಗೆ ಹಿಡಿಸಲಿಲ್ಲ. ಹಗಲಿರುಳೆನ್ನದೆ ಸುಲ್ತಾನನೊಂದಿಗೆ ಕಾಡುಗುಡ್ಡಗಳಲ್ಲಲೆದು ಆಯಾಸ ಆಕೆಗೆ ಸಾಕಾಯಿತು. ಒಂದು ದಿನ ಸಂದರ್ಭ ಕಾದು ಆಕೆ ತಾಯಿಯ ಮನೆಗೆ ಓಡಿದಳು.

ಸುಲ್ತಾನ ಬಿಡುವನೆ? ಪುತ್ಲಿಯನ್ನು ಕರೆಕೊಂಡೇ ಹೋದ. ಹಾಗೆ ಅವರ ದಾಂಪತ್ಯ ಜೀವನ ಸಾಗಿತು. ಪುತ್ಲಿ ಹೆಣ್ಣು ಮಗುವನ್ನು ಹೆತ್ತಳು. ಅರಣ್ಯದ ಅವಿತ ಜೀವನದಲ್ಲಿ ಮಗುವನ್ನು ಪೋಷಿಸುವ ಕಷ್ಟವನ್ನು ಆ ತಾಯಿ ಮನಗಂಡಳು.

ಸುಲ್ತಾನನು ಹೋದರೆ ಐದಾರು ದಿನ ಕಳೆದು ಬರುವುದೂ ಇದೆ. ಸಹವಾಸಕ್ಕೆ ಬೇರೆ ಯಾರೂ ಇಲ್ಲ. ಆಕೆ ಮತ್ತೊಮ್ಮೆ ತವರಿಗೆ ಹೋದಳು.

ಸುಲ್ತಾನ ಅಸಗರಿ ಬಾಯಿಯನ್ನು ಸಮೀಪಿಸಿ ಆಕೆಗೆ ರೂ. ೫೦ ಸಾವಿರ ಕೊಟ್ಟು ಸಂತೈಸಿದ. ಆದರೂ ತಾಯಿಯ ಸಮ್ಮತಿಯಿಲ್ಲದೇ ತಾನು ಆಕೆಯ ಮಗಳನ್ನು ಕೊಂಡುಹೋದೆನೆಂದಾದರಲ್ಲವೆ— ಹೆಚ್ಚಿನ ಕೀರ್ತಿ? ಅದ್ದರಿಂದ ಸುಲ್ತಾನನೊಂದಿಗೆ ಅನುಗಮಿಸಲಿದ್ದ ಪತ್ನಿಯನ್ನೂ ಪುತ್ರಿಯನ್ನೂ ಆತ ಕರೆಕೊಂಡು ಹೋಗದೆ ಮತ್ತೊಂದು ಸಂದರ್ಭಕ್ಕಾಗಿ ಕಾದು ಹಿಂತಿರುಗಿದ.

ಬಲ್ಪಾ ಗ್ರಾಮದಲ್ಲಿ ಒಂದು ನೃತ್ಯ ಪ್ರದರ್ಶನದಿಂದ ಮರಳುತ್ತಿದ್ದ ಪತ್ನಿಯ ವಾಹನದಿಂದ ಸುಲ್ತಾನ ಆಕೆಯನ್ನು ಎತ್ತಿಕೊಂಡು ಓಡಿದ.

ಸಶಸ್ತ್ರ ಪೋಲೀಸರೂ ಸುಲ್ತಾನನಿಗೆ ಹೆದರಿ 'ಕರ್ತವ್ಯ ಲೋಪ'ವನ್ನಾದರೂ ಅನುಷ್ಠಾನಕ್ಕೆ ತಂದಾದರೂ ಬದುಕುವ ಉಪಾಯ ಹೂಡಿದ್ದರಿಂದಲೂ ಸುಲ್ತಾನನ ಬಾಧೆ ಹೆಚ್ಚುತ್ತಿದ್ದುದರಿಂದಲೂ ಕುಪಿತರಾಗಿ ಗ್ರಾಮ ನಿವಾಸಿಗಳೇ ಪ್ರತಿಭಟನಾ ಕಾರ್ಯಗಳಲ್ಲಿ ಆಸಕ್ತಿ ವಹಿಸಲು ಸಂಘಟಿತರಾದರು.

೧೯೫೪ರಲ್ಲಿ ಸುಖಂಡ್ ಗ್ರಾಮದಲ್ಲಿ ಒಂದು ಪ್ರತಿಭಟನಾ ಸಭೆ ಸೇರಿತ್ತು. ಸಭೆಯಲ್ಲಿ ಒಬ್ಬನು ಸುಲ್ತಾನನ ಅಮಾನುಷ ವರ್ತನೆಗಳ ಬಗ್ಗೆ ಖಂಡಿಸಿ ಭಾಷಣ ಮಾಡುತ್ತಿದ್ದಾಗ ಸುಲ್ತಾನನು ತನ್ನ ಪರಿವಾರ ಸಮೇತನಾಗಿ ಧಾವಿಸಿ ಭಾಷಣಕಾರನನ್ನು ಹಿಡಿದೆಳೆದು ನೆಲಕ್ಕಪ್ಪಳಿಸಿ ತುಳಿದು ಕಠಾರಿಯಿಂದ ಆತನ ಎರಡು ಕಣ್ಣುಗಳನ್ನೂ ಕಿತ್ತುಹಾಕಿದ. ಈ ಘೋರ ಕೃತ್ಯದಿಂದಾಗಿ ಜನರ ಸಂಘಟನಾ ಶಕ್ತಿ ಪ್ರವರ್ಧಿಸಲು ಸಹಾಯ ಮಾಡಿತು.

ಒಂದು ದಿನ ಸುಲ್ತಾನನು ರಜಯಿ ಗ್ರಾಮದಲ್ಲಿ ಡೇರೆ ಹೊಡೆದನು. ಆತನಿಗಾಗಿ ಒಲೆಯಲ್ಲಿ ಮಾಂಸ ಬೇಯಿಸಲ್ಪಡುತ್ತಿತ್ತು. ಸುಲ್ತಾನ ಸುರಾಪಾನ ಮಾಡುತ್ತಾ ಕುಳಿತಿದ್ದನು. ಆತನೆದಿರಲ್ಲೇ ಪುತ್ಲಿ ನರ್ತಿಸುತ್ತಿದ್ದಳು. ಪುತ್ಲಿಯ ಹೃದಯಹಾರಿಯಾದ ಸಂಗೀತದ ಮಾಧುರ್ಯದಿಂದಾಗಿ ಆ ವಠಾರ ತಲ್ಲೀನವಾಗಿ ಹೋಗಿತ್ತು.

ಅಷ್ಟರಲ್ಲಿ ಅಲ್ಲಿದ್ದವರು "ಪೋಲೀಸ್!....ಪೋಲೀಸ್!...."ಎಂದು ಕೂಗಿ ಕರೆದರು. ಅಪ್ರತೀಕ್ಷಿತವಾಗಿದ್ದ ಆಕ್ರಮಣ!

ಸುಲ್ತಾನನು ತನ್ನ ಜೋಡು ನಳಿಗೆಯ ಕೋವಿಯಿಂದ ಎಡೆಬಿಡದೆ ಗುಂಡಿಕ್ಕಿದನಾದರೂ ಸುತ್ತಲೂ ಆವರಿಸಿದ್ದ ಪೋಲೀಸ್ ಸೇನೆಯನ್ನು ಭೇದಿಸಲು ಸುಲಭವಿರಲಿಲ್ಲ. ಒಂದು ಸಣ್ಣ ಯುದ್ಧವೇ ಸಂಭವಿಸಿತು. ತನ್ಮಧ್ಯೆ ಪುತ್ಲಿ ಪರಾರಿಯಾದುದನ್ನು ಮನಗಂಡ ಸುಲ್ತಾನನೂ ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಓಡಿದನು.

ಈ ಸಲ ಸುಲ್ತಾನನು ಎಂಟನೇ ಸಲ ಪೋಲೀಸರಿಂದ ತಪ್ಪಿಸಿಕೊಂಡುದಾಗಿತ್ತು.

೫—೫—೧೯೫೫ರಂದು ಸಾಸಸ್ಪುರ ಗ್ರಾಮದಲ್ಲಿ ಸುಲ್ತಾನನನ್ನು ಪೋಲೀಸರು ಮತ್ತೊಮ್ಮೆ ಆಕ್ರಮಿಸಿದರು. ಈ ಸಲ ಪುತ್ಲಿ ಸುಲ್ತಾನನೊಂದಿಗಿದ್ದಿಲ್ಲ. ಪೋಲೀಸರೊಂದಿಗೆ ಸ್ವಲ್ಪ ಹೊತ್ತಿನ ಹೋರಾಟದಿಂದಾಗಿ ಸುಲ್ತಾನನ ವ್ಯಮುಖಗಳೆಲ್ಲಾ ಗುಂಡಿನೇಟಿನ ಗಾಯಗಳಿಂದ ವಿರೂಪಗೊಂಡವು.

ಸುಲ್ತಾನ ಸ್ಥಳದಲ್ಲೇ ಬಿದ್ದು ಕೊನೆಯುಸಿರೆಳೆದ.

—ಆಧಾರದಿಂದ.

ಜತೆ ವರ್ಧಂತ್ಯುತ್ಸವ

ವಿಟ್ಲ, ವಿಠಲ ಹೈಸ್ಕೂಲು ಹಾಗೂ ವಿಠಲ ಬಾಲಿಕಾ ಪ್ರಾಥ ಶಾಲೆಗಳ ಜತೆ ವರ್ಧಂತ್ಯುತ್ಸವವು ತಾ. ೧೧—೩—೬೭ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಯಸ್. ಪಾರ್. ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕರೆಸ್ಪೋಂಡೆಂಟ್ ಶ್ರೀ ಯನ್. ನಾರಾಯಣ ಭಟ್ಟರು ಅತಿಥಿಗಳಿಗೆ ಆದರದ ಸ್ವಾಗತವನ್ನು ಬಯಸಿದರು. ಶಾಲಾ ಸಹಾಯಕ ಶ್ರೀ ಯನ್. ತ್ಯಾಗರಾಜರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಓದಿದರು. ಅನಂತರ ಈ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳಾಗಿದ್ದ ಶ್ರೀ ಯನ್. ಭೀಮ ಭಟ್, ಡಿ. ಎಸ್. ಸಿ. ಕರೂರ್ ಇವರು ಈ ಶಾಲೆಯ ವ್ಯಾಯಾಮ ಶಿಕ್ಷಕರಾಗಿದ್ದ ದಿ| ಯು. ಕೃಷ್ಣ ಭಟ್ಟರ ಭಾವಚಿತ್ರವನ್ನು ಅನಾವರಣಗೈದರಲ್ಲದೆ ಶುಭಾಶಂಸನೆಯನ್ನು ಮಾಡಿ, ತಮ್ಮ ಮಾತೃ ಶಾಲೆಯ ಸವಿನೆನಪುಗಳನ್ನು ಕಿರಿಯ ವಿದ್ಯಾರ್ಥಿ ಬಂಧುಗಳಿಗೆ ತಿಳಿಸಿ ಅವರು ಸ್ಫೂರ್ತಿಯನ್ನೂ, ಮಹತ್ವಾಕಾಂಕ್ಷೆಯನ್ನೂ ಬೆಳೆಸಿಕೊಳ್ಳುವಂತೆ ಹಿತೋಪದೇಶ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಸಿ. ಕೃಷ್ಣ ಶಾಸ್ತ್ರಿ ಹಾಗೂ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ. ನಿರ್ಮಲಾ ಶೆಟ್ಟಿ ಇವರು ತಮ್ಮ ಶಾಲೆಗಳ ಪ್ರಗತಿಪರವಾದ ವರದಿಯಲ್ಲಿ, ಈ ವಿದ್ಯಾಮಂದಿರಗಳು ಸ್ಥಾಪಿಸಲ್ಪಟ್ಟ ಬಳಿಕ ಸಾಧಿಸಿದ ಅಪೂರ್ವವಾದ ಏಳಿಗೆಯನ್ನು ವಿಷದವಾಗಿ ಪ್ರಸ್ತಾಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನವಿತರಣೆ ನಡೆದ ಬಳಿಕ, ಅಧ್ಯಕ್ಷರು ಮಾತನಾಡಿ, ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯದವರೆಗೆ ಕುಸಿಯುತ್ತಿರುವ ಶಿಕ್ಷಣಮಟ್ಟದ ಕುರಿತು ವಿಷಾದ ವ್ಯಕ್ತಪಡಿಸಿ ಅದಕ್ಕೆ ಶಿಕ್ಷಕ, ಪಾಲಕ, ಬಾಲಕ ಇವರ ಸಮನ್ವಯ ಪ್ರಯತ್ನವೇ ಪರಿಹಾರವೆಂದು ಸೂಚಿಸಿದರು. ವಿದ್ಯಾಧಿಕಾರಿಗಳು ಮುಂದುವರಿದು ಶಾಲೆಗಳಲ್ಲಿ ನೈತಿಕ ಹಾಗೂ ಧಾರ್ಮಿಕ ಶಿಕ್ಷಣಗಳ ಆವಶ್ಯಕತೆಯನ್ನು ಹೃದಯಂಗಮವಾಗಿ ವಿವರಿಸಿ, ಸರಕಾರ ಆ ಕಡೆಗೆ ಸೂಕ್ತ ಗಮನವೀಯುವುದರ ಜೊತೆಗೆ ಶಿಕ್ಷಕರ ಸ್ಥಾನ, ಮಾನ, ವೇತನಗಳನ್ನು ಹೆಚ್ಚಿಸುವ ಬಗ್ಗೆ ಮಾಡುತ್ತಿರುವ ಏರ್ಪಾಡುಗಳನ್ನು ತಿಳಿಸಿ, ವಿಠಲ ಹೈಸ್ಕೂಲಿನ ಸರ್ವತೋಮುಖವಾದ ಪ್ರಗತಿಗೆ ಹಾರ್ದಿಕವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಇದು ಮುಂದೆ ಒಂದು ಆದರ್ಶ ವಿದ್ಯಾಸಂಸ್ಥೆಯಾಗಲೆಂದು ಹಾರೈಸಿದರು. ಧನ್ಯವಾದ ಸಮರ್ಪಣೆಯ ಬಳಿಕ ವಿವಿಧ ವಿನೋದಾವಳಿಗಳ ಅಂಗವಾಗಿ ನೃತ್ಯ ಅಭಿನಯಗಳಲ್ಲದೆ "ಅಜ್ಜಿಯ ಆಸ್ತಿ", "ಹಗಲುವೇಷ" ಮೊದಲಾದ ನಾಟಕಗಳೂ ಎರಡೂ ಶಾಲೆಗಳ ವಿದ್ಯಾರ್ಥಿನಿಯರಿಂದ ಯಶಸ್ವಿಯಾಗಿ ಜರಗಿದವು.

ಕಾವ್ಯರ್ಷಿ ಧನ್ಯ ನೀನ್!

(ತಾ ೨೩—೩—೮೩ ರಲ್ಲಿ ಜನಿಸಿದ ಶ್ರೀ ಗೋವಿಂದ ಪೈಯವರು ತಾ ೬—೯—೬೩ ರಲ್ಲು ನಿರ್ಯಾಣರಾದರು. ಇಂದಿನ ತನಕ ಬಾಳಿದ್ದರೆ ಇದೇ ತಿಂಗಳ ೨೩ರಲ್ಲು ೮೪ಕ್ಕೆ ಕಾಲಿಡುತ್ತಿದ್ದರು. ವಿಧಿಯ ವಿಲಾಸ ಆರಿಗೂ ಮೀರಲಾರದು! ನಡುಹರೆಯದಲ್ಲಿ ಪತ್ನಿವಿಯೋಗ, ಮುಪ್ಪಿನಲ್ಲಿ ಸ್ವಗ್ರಾಮವು ತನ್ನ ತಾಯ್ನಾಡನ್ನುಳಿದು ಬೇರೆಡೆ ಸೇರಿದ ಕಳವಳ, ಒಂದೆರಡು ಸಲ ಚುನಾವಣೆಗಳ ಘೋಷಣೆಗಳಂತೆ ದುಂಬಿ ಸೇರುವ ಹಿತವಿಲ್ಲದ ಗಲಿಬಿಲಿಗಳಿಂದ ಆ ಶ್ರೀಯುತರಲ್ಲಿ ವೈರಾಗ್ಯವೊದಗಿತೆಂದರೆ ಅತಿಯಾಗದು, ಆಗಲಾರದೂ. ರಾಜ್ಯಗಳ ಸೀಮಾ ಪರೀಕ್ಷಣ ಸಮಿತಿಯು ನ್ಯಾಯ ಪಕ್ಷಪಾತಿಯಾಗಿ, ಕಾಸರಗೋಡು ಕನ್ನಡಿಗೆ ಸೇರಲು ತಕ್ಕಂತೆ ವ್ಯವಹರಿಸಿದರೆ ಶ್ರೀ ಗೋವಿಂದ ಪೈಯವರ ಆತ್ಮಕ್ಕೆ ಸಾಕು ಸಂತೋಷಗಳಾದಾವೆಂದರೆ ತಪ್ಪಲ್ಲ! ಅಂತಹ ಸುದಿನವೊದಗಲೆಂದು ಪುನಃ ಪ್ರಾರ್ಥಿಸಿ, ಈ ಚಿಕ್ಕ ಕವಿತೆಯ ಕಾಣಿಕೆಯನ್ನು ಅವರ ಸವಿನೆನಪಿಗಾಗಿ ಕನ್ನಡಿಗರಲ್ಲಿ ಒಪ್ಪಿಸುವುದು ನ್ಯಾಯವಾಗಿದೆ!)

೧

ಸಾಹಿತ್ಯ-ಸಂಶೋಧನಾಚಾರ್ಯ! ನೀನು ಪ್ರ-
ವಾಹಿಸಿದ ಕಾವ್ಯಧುನಿ ಕನ್ನಡದಿ ಮುಂಬರಿದು
ಭಾರತದ ರಾಜ್ಯಷೋಡಶದಲ್ಲಿ ಜನಮನದಿ
ಒರಗೆಯ ಮಾನವನ್ನಾವಹಿಸುತಿದೆಯ್ಯಲಾ!

೨

ವಾಸುದೇವನ ಚರಿತೆ ಏಕಲವ್ಯನ ಬಿಲ್ಲಿ-
ನಾ ಬಿಜ್ಜೆಯುಜ್ಜುಗಂ ನಿರ್ಕರಂ ಬಿತ್ತರಿಸಿ,
ಏಸು-ಬುದ್ಧರ ಕೊನೆಯದಿನಗಳನುಕಂಡರಿಸಿ,
ಪ್ರಾಸಂಗಳನ್ನುಳಿದು ಬರೆಯುತೊಡಗಿದ ಪದ್ಧತಿ
ಲೇಸಾಗಿ ಸಾಗಿದಾ, ಕಾವ್ಯರ್ಷಿ ಧನ್ಯ ನೀನ್!

೩

ಸಾರಸ್ವತದ ಮೂಲಕೆಳಸಿ ಸಾಗಿದ ನಿನ್ನ
ಸಾರಸ್ವತದ ನೆರೆಯನರಿವರಾರ್ ಮುನ್ನ?
ಪ್ರಾಚೀನ ಚಾರಿತ್ರ ಸಂಶೋಧನೆಯ 'ನವ್ಯ-
ಪ್ರಾಚೀನ' ರೀತಿಯುಲಿ ಸಾಗಿಸುತೆಯುನ್ನಗಂ,
ಪ್ರಾಚಾರ್ಯ ಪದವಿಯಂ ಪಡೆದೆ, ನೀಂ
ಧನ್ಯನ್!

೪

ಪೂರ್ವ-ಪಶ್ಚಿಮ ಭಾಷೆಗಳನೆನಿತೊ ತಿಳಿದೆ!
ಪೂರ್ವ-ಪಶ್ಚಿಮ ದೇಶಗಳನೆನಿತೊ ಮೆರೆದೆ!
ನಿನ್ನವೋಲ್ ಸೌಹಾರ್ದ- ವೈದುಷ್ಯಗಳ
ಸಾಂತ-
ನಿನ್ನವರಮಿಲ್ಲ ಗಡಮಿದುವೆ ಸಿದ್ಧಾಂತಮು!

—ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು

ಮಹಿಳಾ ಪೋಲೀಸ್ ಪಡೆ

(ನಾಲ್ಕನೇ ಪುಟದಿಂದ)

ಮಿಸಿಕೊಳ್ಳುದಂತೆ ನೈಟ್ ಕ್ಲಬ್, ಹೋಟೆಲ್ ಮಾಲಿಕರನ್ನು ಇವರು ತಡೆಯುವರು. ಮನೆಯಿಲ್ಲದೆ, ಅಥವಾ ದಿಕ್ಕಿಲ್ಲದೆ ಅಲೆಯುವ ಮಕ್ಕಳ ಮತ್ತು ಯುವಕರ ರಕ್ಷಣೆಯನ್ನೂ ಇವರು ಮಾಡುವರು. ಅಪಾಯ ಒದಗಬಹುದಾದ ಸಂದರ್ಭಗಳಲ್ಲಿ ಮಹಿಳಾ ಪೋಲೀಸರ ನೆರವಿಗೆ ಗಂಡು ಪೋಲೀಸರು ಸಿದ್ಧರಾಗಿರುವರು.

ಜರ್ಮನಿಯ ಮಹಿಳಾ ಪೋಲೀಸರ ಅವಿಶ್ರಾಂತ ಕೆಲಸದಿಂದ ಬಾಲ ಅಪರಾಧಿಗಳ ಸಂಖ್ಯೆ ಬೆಳೆಯುವುದಕ್ಕವಕಾಶವಾಗಿಲ್ಲ. ೨೫೦,೦೦೦ ಮಂದಿ ೧೪—೧೮ ವರ್ಷ ವಯಸ್ಸಿನ ಯುವಕ, ಯುವತಿಯರಿರುವ ಹ್ಯಾಂಬರ್ಗ್‌ನಲ್ಲಿ ಬಾಲ ಅಪರಾಧಿಗಳ ಸಂಖ್ಯೆ ಕೇವಲ ಶೇ. ೦.೧ ಮಾತ್ರ!

ಚಂದಾದಾರರು

ದಯವಿಟ್ಟು ತಮ್ಮ ಬಾಕಿ ಚಂದಾಹಣವನ್ನು ತ್ವರಿತ ಕಳುಹಿಸಿಕೊಡುವಂತೆ ವಿನಂತಿ.

ಮೆನೇಜರ್.

ತಯಾರಾಗಿದೆ—

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಎಂಬ ಭಗವದ್ಗೀತೆಯ ಸಮೂಲ ಭಾಷಾಂತರದ ಹೊಸ ಮುದ್ರಣ

ಆಕರ್ಷಕ ಮುಖ ಪತ್ರ 450 ಪುಟಗಳು

ಬೆಲೆ ರೂ. 1—50 [ಟ. ಖ. ಪ್ರತ್ಯೇಕ]

ರಖಂ ಪ್ರತಿಗಳಿಗೆ ರಿಯಾಯಿತಿ ದರ.

ತ್ವರೆ ಮಾಡಿರಿ!

ನವಯುಗ ಪ್ರೆಸ್, ಉಡುಪಿ.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ನಿರೋಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0—60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಾಲುಕೋಟೆ, ಉಡುಪಿ, ದ. ಕ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಕವನ ಮಂಜರಿ: ಲೇಖಕರು: 'ಕವಿತಾ ಕೃಷ್ಣ'. ಪ್ರಕಾಶನ: ಕವಿತಾ ಪ್ರಕಾಶನ, ಕೃಷ್ಣಾಪುರ, ತುಮಕೂರು ಜಿಲ್ಲೆ ಪುಟಗಳು: ೧೫. ಬೆಲೆ. ರೂ. ೧. ೨೦.

ಹೃದಯ ವೀಣೆಯು ಮಿಡಿದಾಗ ನಾದ ಹೊರಹೊಮ್ಮುತ್ತದೆ. 'ಕವಿತಾಕೃಷ್ಣ'ರ ಹೃದಯ ವೀಣೆ ಮಿಡಿದಾಗ 'ನಾದಗೀತ'ದ ಅಲೆಗಳು ಎದ್ದಿವೆ. ಇಲ್ಲಿ ಹದಿನಾರು ಅಲೆಗಳ 'ಕವನ ಮಂಜರಿ' ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಇಲ್ಲಿ ದೇಶಪ್ರೇಮ, ರಾಜ್ಯಪ್ರೇಮ, ವಿದೇಶೀ ಆಕ್ರಮಣಗಳಿಂದ ಮಿಡಿದ ಹೃದಯದ ಸಂವೇದನೆಯಿದೆ. ದಿವಂಗತರಾದ ಪ್ರಧಾನಿ ಶಾಸ್ತ್ರಿ, ಗುರು ಸೂರ್ಯನಾರಾಯಣ ರಾವ್, ಮಹಾತ್ಮಾಗಾಂಧಿ, ಪೂಜ್ಯ ಸ್ವಾಮಿಯವರ ಸಂಸ್ಮರಣೆಗಳಿವೆ. ಆರೋಗ್ಯದ ವರ್ಣನೆಯೂ ಇದೆ. ಇವಕ್ಕೆ ಕಲಶವಿಡುವ 'ಮಿಲನ ಗೀತೆ'ಯೂ ಇದೆ.

'ಪ್ರೇಮ ಗುಡಿಯಲಿ ನಾನೆ ಗಂಟೆಯು! ನೀನೆ ಪೂಜೆಯ ಮೂರುತಿ; ನನ್ನ ನೌಕೆಗೆ ನೀನೆ ಅಂಬಿಗ, ನಾನೆ ಪುಷ್ಪವು ನೀನೆ ತುಂಬಿಯು' ಇಲ್ಲಿಯ ಭಾವ ಸುಂದರವಿದೆ.

ಚಿಲ್ಲಿ: (ಮಕ್ಕಳ ಕವನಗಳು) ರಚಯಿತರು. ಶ್ರೀ ಸೂಡಾ ಸದಾನಂದ ಶೆಣೈ. ಪ್ರಕಾಶನ: ಹುಡುಗರ ಪುಸ್ತಕ ಪ್ರಕಾಶನ, ಲಕ್ಷ್ಮೀನಿಲಯ, ಪಳ್ಳಿ. ಪುಟ: ೨೦. ಬೆಲೆ. ರೂ. ೦-೫೦.

ಇದು ಮಕ್ಕಳಿಗಾಗಿ ಬರೆದ ಇಪ್ಪತ್ತು ಕವನಗಳ ಸಂಗ್ರಹ. ಈಗಾಗಲೇ ಇಂತಹ ಗೀತೆಗಳನ್ನು ಬರೆದಿರುವ ಶ್ರೀ ಶೆಣೈ ಅವರು ಇಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. 'ವಿಷಯ ಸಾಮೀಪ್ಯ'ಕ್ಕೆ ಇಲ್ಲಿ ಪ್ರಾಧಾನ್ಯವಿಲ್ಲವಾದರೂ ಪ್ರತಿಪಾದನಾ ಕ್ರಮದಲ್ಲಿ ಹೊಸತನವಿದೆ; 'ಗುಂಡಿ ವ್ಯಾಪಾರಿ'.ಮೋಹಿನಿಯ 'ತಾಯಿ' ಈ ಮಾದರಿಯವು—ಇವು ಸಂಪೇಕ್ಷನಾತ್ಮಕವಾಗಿಯೂ ಇವೆ.

ಶ್ರೀ ಸದಾನಂದ ಶೆಣೈಯವರು ಅಧ್ಯಾಪಕರು. ಹಾಗಾಗಿ ಮಕ್ಕಳ ವಯೋಧರ್ಮ, ಮನೋಧರ್ಮಗಳನ್ನು ಅರಿವಾಗಿ ಅಧ್ಯಯನ ಮಾಡುವಂತೆಯೇ ಕಾಲಧರ್ಮವನ್ನು ಅರಿವಡಿಸಿ ಉತ್ತಮ ಕೃತಿಗಳನ್ನು ಇನ್ನೂ ರಚಿಸಿಕೊಂಡು ಬರುವಂತಾಗಲಿ.

ಲೇಡೀಸ್ ಹಾಸ್ಟೆಲ್: ಕಥೆಗಾರರು: ಶ್ರೀ ಕಾ. ರಾ. ಸಾರಂಗಿ. ಪ್ರಕಾಶನ: ವಾಗ್ದೇವಿ ಪ್ರಕಾಶನ, ಬೀಚ್ ರಸ್ತೆ, ಕಾಸರಗೋಡು. ಪುಟಗಳು: ೪೮. ಬೆಲೆ. ರೂ. ೧-೭೫.

ಇದು ಆರು ಕಥೆಗಳ ಸಂಕಲನ. 'ಆ ಗುಡಿಯ ದೇವ ಬಾವಿಗೆ ಬಿದ್ದ' 'ಲೇಡೀಸ್ ಹಾಸ್ಟೆಲ್'—ಇವು ಇಂದಿನ ತರುಣ ಪೀಳಿಗೆಯ ದುರವಸ್ಥೆ ಮತ್ತು ಕೆಡುತ್ತಿರುವ ವಾತಾವರಣದ 'ಅಸಹ್ಯ' ಚಿತ್ರಗಳು. 'ಶಾರದಮ್ಮ ತಿರುಗಿ ಬರಲೇ ಇಲ್ಲ'ವೆಂಬುದು ಒಂದು ಸಾಂಸಾರಿಕ ಚಿತ್ರ—ಇಲ್ಲಿಯೂ 'ರತಿ'ಗೆನೇ ಪ್ರಾಶಸ್ತ್ಯ. ಗಂಡು ಹೆಣ್ಣು ಪರಸ್ಪರ ಮಿಲನಗೀತ ಹಾಡಿ ಬಂದು ಮುಂದೆ ಇವರ ಆಯ್ಕೆ ಹಿರಿಯರ ಆಯ್ಕೆಯೂ ಆದುದು ಸಿಹಿಯಾದ ಕಥೆಯಂತೆ ರಂಜಕವಿದೆ. ದಾಂಪತ್ಯ ಜೀವನದಲ್ಲಿ ಹೆಣ್ಣಿನ ಪಾತ್ರವಹಿಸಿದಾಗ ತೆಗೆದ ಚಿತ್ರವೊಂದರಿಂದ ಬೀಸಿದ 'ಸುಂಟರಗಾಳಿ'ಯಿಂದ ಗಂಡು ಹಾರಾದ ಕಥೆ ಮೋಹಕವಿದೆ. ಭಿಕ್ಷುಕ-ಸಮಾಜ ಸಂಬಂಧವನ್ನು ಹಿಡಿದಾಗ ನೋವಾದರೂ ಕನಸೆಂದು ತಿಳಿದೊಡನೆಯೇ ಸಮಾಧಾನ ಪಡಬಹುದಾದ ಕಥೆ 'ಬಿಡುಗಡೆ ದೊರೆಯಿತು'.

ಕಥೆಗಳು ಚಿಕ್ಕವಾಗಿ ಚೊಕ್ಕವಾಗಿವೆ. ಸಮಾಜದ ನೈಜ ಚಿತ್ರವನ್ನೇ ಎಳೆಯುವ ಪ್ರಯತ್ನ ಕಾಣುತ್ತದೆ. ಕೆಟ್ಟದ್ದನ್ನು ಹೃದಯ ಮುಟ್ಟುವಂತೆ ವರ್ಣಿಸಿ, ಅದರ ಅನಾಹುತವನ್ನು ಹೇಳಿದರೆ ಕೆಟ್ಟದಾರಿ ತುಳಿಯ ಬಾರದು ಎಂಬುದು ಸೂಚ್ಯವಾಗುತ್ತದೆ. ಇಲ್ಲಿನ ಕಥೆಗಳ ಈ ಮಾದರಿಯವು. ಕಥನ ಕಲೆಯ ದೃಷ್ಟಿಯಿಂದಲೂ ಕಥೆಗಳು ಒಳ್ಳೆಯವಿವೆ. ದೇಶಕಾಲ ವಾತಾವರಣ, ಮನೋರಂಜನೆ,ಪಾತ್ರ ಚಿತ್ರಣ, ಭಾಷೆ, ಶೈಲಿ, ಉದ್ದೇಶ ಈ ತಂತ್ರಗಳು ಯಥೋಚಿತವಾಗಿ ನಿರ್ವಹಿಸಲ್ಪಟ್ಟಿವೆ. ಸಂಕಲನ ಚಿಕ್ಕದಾದರೂ ಸಾರಂಗರಿಂದ ಮುಂದೆಯೂ ಉತ್ತಮ ಕಥೆಗಳನ್ನು ನಿರೀಕ್ಷಿಸಬಹುದು ತಪ್ಪಲ್ಲ.

ಮಧುರ ಬಂಧನ: ಲೇಖಕರು: ಶ್ರೀ ವಿ. ತಮ್ಮಣ್ಣ ಪ್ರಕಾಶನ: ಜನಜೀವನ ಸಾಹಿತ್ಯ ನಿಧಿ, ಮುಲ್ಕಿ, ದ. ಕ.

ಪುಟಗಳು: ೧೨೬. ಬೆಲೆ: ರೂ ೧-೦೦

ಇದೊಂದು ಸಾಮಾಜಿಕ ಕಾದಂಬರಿ. ಹಿರಿಯರಾಗಿದ್ದ ಕಾದಂಬರಿಯನ್ನು ಮುದ್ರಣವೆಚ್ಚಕ್ಕೆ ಹೆದರಿ ಅರ್ಧಕ್ಕರ್ಧ ಇಳಿಸಿದ್ದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಅಂದರೆ, ಕಾದಂಬರಿಯ ಈ ಸ್ವರೂಪಕ್ಕೆ ಅಚ್ಚುಹಾಕಿಸಬೇಕು ಎಂಬುದೇ ಉದ್ದೇಶವಿದ್ದಂತಿರುತ್ತದೆ. ಮುಖಪೃಷ್ಠದಲ್ಲಿನ ಚಿತ್ರ 'ಮಧುರ ಬಂಧನ' ವೆಂಬ ಹೆಸರಿಗೆ ಸಮರ್ಪಕವಾಗಿ ಹೊಂದಿಕೊಳ್ಳದೆನಿಸುತ್ತದೆ. ಉತ್ತಮವಾದ ಮುದ್ರಣ ಹಾಳು ಕಾಗದ ಆಕರ್ಷಕವಿವೆ.

ಕಾದಂಬರಿಯ ವಸ್ತು ಹಳೆಯದು. ಆದರಲ್ಲಿ ಹೊಸತನದ ಅಭಾವ ತುಂಬ. 'ಹಣ ಪ್ರಪಂಚ' ಇಂದಿನದೆಂದು ಒಪ್ಪುವುದಾದರೂ, ಈ ವಸ್ತುವು ಅವಾಸ್ತವಿಕವೆನ್ನುವುದು ಅಸಾಧ್ಯ. ಆದರೆ, ಕೆಸರಿನಲ್ಲಿ ಕಮಲವೂ ಇರುವಂತೆ ಸಮಾಜದಲ್ಲಿ ಮಾಧವ ಭಟ್ಟ, ಶಂಕರ ಭಟ್ಟ, ದೀಕ್ಷಿತ ಮೊದಲಾದ ವ್ಯಕ್ತಿಗಳು ಅಸ್ವಾಭಾವಿಕವಲ್ಲ. ಗೋವಿಂದನಂತವರಿಗೂ ಕೊರತೆಯಿಲ್ಲ. ಕಥಾನಾಯಕ ಕಿಟ್ಟನ ನಿರ್ಗಳ್ಯಹಸ್ತ; ಇದರಿಂದಾಗಿಯೇ ಆತ ಬವಣೆಯುಂಡು ಬೆನಾರ್ಸ್ ಮುಟ್ಟಿ ಅಲ್ಲಿ ಮತ್ತೆ ಗಿಜ್ಜನಿಕೆಯ ಶಿಬಿರ ಮುಟ್ಟಿದ ಗೋವಿಂದ ಭಟ್ಟ ಸಂಪತ್ತಿನ ಸೊಕ್ಕಿನಿಂದ ನಡೆಸಿದ ದ್ರೋಹ-ಮುಂದೆ ಉಂಡ ಕಠಿಣ ಫಲಗಳ ವಿಸ್ತೃತ ವರ್ಣನೆಯಿಲ್ಲಿದೆ.

ಶ್ರೀ ತಿಮ್ಮಣ್ಣರ ವರ್ಣನಾ ಶೈಲಿಗೆ ತಕ್ಕ ಉದಾಹರಣೆಗಳು ಆರಂಭದ ಪ್ರಕೃತಿ ಚಿತ್ರ ಮತ್ತು ಕೊನೆಯಲ್ಲಿನ ನದಿಯ ತಟದಸೌಂದರ್ಯ ವರ್ಣನೆಗಳು.

ವಸ್ತುವು ಉಪದೇಶದಾಯಕವಿದ್ದು ಪಾತ್ರ ಚಿತ್ರಣ ಯಥೇಷ್ಟ ಮೂಡಿದೆಯೆನ್ನುವಂತಿಲ್ಲವಾದರೂ ಅಭಾವ ಪೀಡಕವಾಗಿಲ್ಲ. ಕಥೋಪಕಥನದ ಶೈಲಿ ಸಂಭಾಷಣೆಗನುಗುಣವಾಗಿ ರಂಜಿಸುತ್ತದೆ. ಚಿತ್ರ ಪೂರ್ಣವಾದ ದೇಶ-ಕಾಲ ವಾತಾವರಣಗಳ ವರ್ಣನೆ ಉತ್ತಮವಾದ ಶೈಲಿ-ವಸ್ತುವಿಗನುಸಾರವಾಗಿ ಹಳೆಯದು. ಸಂಖ್ಯೆ ನಾಲದು, ನಾವೀನ್ಯ ಕಡಮೆ ಇಟ್ಟಿನಲ್ಲಿ ಕಾದಂಬರಿಯ ತತ್ವಗಳನ್ನು ಬದಿಗಿರಿಸಿ ಇದನ್ನು ಓದುವುದಾದರೆ, ಹೃದಯವನ್ನು ಮುಟ್ಟುವ ಭಾರತೀಯ ಸಂಸ್ಕೃತಿಯ ಸಾತ್ವಿಕತೆ ಸುಖಾಂತವಾದ ಕಥಾವಸ್ತು

ಕವಿತಾ !

ಪ್ರೇಮರಸವನ್ನರೆದು ಬೆರೆಸಿ
ಭೂಮಂಡಲಕೆ ಇಳಿಸಿ
ಜಾಮ ಜಾಮಕ ಹರಸಿದೇನೆಂದು!
ಬ್ರಹ್ಮ ಕೊಟ್ಟನೆ ರೂಪ
ನಮ್ಮ ನೆರೆಮನೆ ದೀಪ
ಮಮತೆ ತುಂಬಿದ ತಾಯಿಪೂರ್ಣ
ಇಂದು !

ಆಗಸದಿ ಧರೆಗಿಳಿದ
ನಾಗಮಣಿಯಂತೆ ಈ
ಜಗದ ನೇತ್ರದ ತಾರೆ ನೀನು
ಮಿಗುವೇ |

ಮಾತೆ ಯ ಮಮತೆಯಂ
ಮಾತಿನಿಂದಳೆಯುವುದು
ಯಾತರವದೆಂದು ನಾನೊಲ್ಲೆ ಮಗುವೇ!
ಆದರೂ ಪೇಳುತಿಹೆ ನೀ
ನೊಂದು ಮುತ್ತಳಿಯೆ
ಬಂದು ಜ್ಯೋತಿಯ ತಂದ ಧನ್ಯ
ಕವಿತಾ |

ದರ್ಪವಂ ಅರಿತಿಲ್ಲ
ಮೋಹಿಸುವೆ ಜಗವೆಲ್ಲ
ಸಿರಿಯಾಸೆ ಇಲ್ಲದಾ ಹಸುಳೆ ಕವಿತಾ!
ನನ್ನಿ ಸಾರುವ ತೆರದಿ
ನಿನ್ನ ಪ್ರೇಮವು ಜಗದಿ
ಚೆನ್ನ ಕಾಯುದ ಕೂಸುಚೆಲುವೆಯೀನು|
ನೀನು ನಗು ನಗುತಿರಲು
ಬಾನಂಚಿನಲಿ ಮೂಡಿ
"ಮಿನುಗುವಾ ತಾರೆ" ನೀನೆಂಬೆ ನಾನು !

—ಮ. ಗೋ. ರಾವ್, ಮುಲ್ಕಿ

ಲೋಕ ಸೇವಾ ಹೈಸ್ಕೂಲಿನಲ್ಲಿ

ಭಾಷಣ

ಇದೇ ತಾ. ೧೧ರಂದು ಲೋಕಸೇವಾ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯ ಶ್ರೀ. ಬಿ. ನಾರಾಯಣರಾವ್ ಅಧ್ಯಕ್ಷತೆಯಲ್ಲಿ ಕೂಗಿನ ಪೋಲೀಸ್ ಸುಪರಿಂಡೆಂಟರಾದ ಶ್ರೀಯುತ್ ಭೀಮ ಭಟ್ಟರ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ಶ್ರೀ ಭೀಮ ಭಟ್ಟರು ಸಂಸ್ಥೆಯ ಅಧ್ಯಕ್ಷರ ಮತ್ತು ತಮ್ಮ ಹಳೆಯ ಸಂಬಂಧವನ್ನು ನೆನಪು ಮಾಡಿ ಶಿಸ್ತು ಬದ್ಧ ಜೀವನದ ಅವಶ್ಯಕತೆ, ಅಧ್ಯಯನ ಹಾಗೂ ಸೇವಾ ಜೀವನಗಳಿಂದ ದೊರಕುವ ಅನುಭವವನ್ನು ಸೊಗಸಾಗಿ ವಿವರಿಸಿದರು. ಆ ಮೇಲೆ ಶ್ರೀಕೋಡೂರು ಕೃಷ್ಣ ಭಟ್ಟರು, ಸಂಸ್ಥೆಯ ಮತ್ತು ತಮ್ಮ ಸಾಧುಸಂಬಂಧವನ್ನು ಪುನಃಸ್ಮರಿಸಿದರು. ಕಾರ್ಯದರ್ಶಿ ಶ್ರೀ ಯು. ಗಂಗಾಧರ ಭಟ್ಟರಿಂದ ವಂದನಾರ್ಪಣೆ ನಡೆಯಿತು.

ಯಕ್ಷಗಾನ ಬಯಲಾಟ

ಮುಂಬಾಯಿಯ ಬ್ರಿಟನ್ನಿಯಾ ಬಿಸ್ಕಿತ್ ಕಂಪೆನಿಯ ಎದುರು ಇರುವ ದಾದಾಸಾಹೇಬ್ ರಾಜವಾಡೆ ಹೋಟೆಲಿನ ಮಾಲಕರಾದ ಕುಟ್ಟಿ ಶೆಟ್ಟಿಯವರ ವರ್ಷಂಪ್ರತಿ ಜರಗುವ ಶ್ರೀ ಸತ್ಯನಾರಾಯಣ ಪೂಜೆಯ ಅಂಗವಾಗಿ ಶ್ರೀ ಕೃಷ್ಣಾ ಕೃಪಾ ಯಕ್ಷಗಾನ ಕಲಾ ಮಂಡಲಿ, ರಾಜಾಪುರ ಇದರ ಕಲಾವಿದರ ಕೂಡುವಿಕೆಯಿಂದ 'ದೇವಿಮಹಾತ್ಮೆ' ಎಂಬ ಯಕ್ಷಗಾನ ಬಯಲಾಟವು ತಾ. ೧೧-೩-೬೭ರಂದು ಪ್ರಸಿದ್ಧ ಭಾಗವತರಾದ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಮಂಜುನಾಥ ಅಚಾರಿ ಮೃದಂಗ ವಾದನ, ರಾಮದಾಸಪ್ರಭು, ಕೆ. ಕೃಷ್ಣಪ್ಪ (ದೇವಿ) ಕೆ. ಸದಾಶಿವ ಶೆಟ್ಟಿ, ಬಿ. ರಘುರಾಮ ಶೆಟ್ಟಿ,ಶ್ರೀನಿವಾಸಭಟ್ಟ, ಇವರೇ ಹಲವಾರು ಊರುಗಳನ್ನು ಸುತ್ತಿ ಖ್ಯಾತಿಯಲ್ಲಿ ಕೊನೆಗೊಳ್ಳುತ್ತದೆ.

ಅಧುನಿಕ ಕಾಲದಲ್ಲಿ ಪೌರಾಣಿಕ ಹಳೆಯ ಮಾದರಿಯ ಕೃತಿಯೆಂಬುದರಿಂದ ಇದು ಸ್ಥಾನ ಪಡೆಯ ಬಲ್ಲುದು.

—ಗೋರಾ

(ಮೂರನೇ ಪುಟ ನೋಡಿರಿ)

ಹ್ವರ ಪ್ರದೇಶದಲ್ಲಿ ಆಯ್ಕೆಯಾಗಿದ್ದ ದರ್ಬಾರ ಸಿಂಗರೆಂಬುವರು ಪ್ರಮಾಣವಚನ ಸ್ವೀಕರಿಸಲೆಂದು ರಾಜಧಾನಿಗೆ ತೆರಳುತ್ತಿರುವಾಗ ರೇಲನ್ನೇ ನಿಲ್ಲಿಸಿ ಅವರ ಮೇಲೆ ಗುಂಡು ಹೊಡೆಯಲಾಯಿತೆಂದೂ ಶ್ರೀ ಸಿಂಗರು ಆಸ್ಪತ್ರೆಯಲ್ಲಿ ದೈವಾಧೀನರಾದರೆಂದೂ ತಿಳಿದು ಬಂದಿದೆ. ತಾಳ್ಮೆಯರು ಯಾರೆಂದು ತಿಳಿದು ಬಂದಿಲ್ಲ; ಕೊಲೆಗೈದ ಕಾರಣವೂ ಲಭ್ಯವಿಲ್ಲ. 'ರಾಜಕೀಯ ಕಾರಣ'ವೇ ಹೇತುವೆಂಬುದು ಶಕ್ಯವಾಗುವುದಿಲ್ಲ. ಆದರೆ, ಇಂತಹ ಘಟನೆಗಳೂ ನಡೆಯುತ್ತ ಬಂದರೆ, ಪ್ರಜಾ ಸತ್ತೆಯ ರಥ ಮುಂದುವರಿಯುವುದು ಹೇಗೆ ಎಂಬುದೇ ಬಿಡಿಸಲಾಗದ ಒಗಟಾಗುತ್ತಿದೆ.

ಈ ದೇಶದ ಬಗ್ಗೆ—

ಕನಿಕರ ಪಡಿರಿ.

ಮೂಢ ನಂಬಿಕೆಗಳು ವಿಪುಲವಿದ್ದು ಧರ್ಮದ ಆಚರಣೆ ಇಲ್ಲದಿರುವ,

ತಾನು ನೇಯದ ಬಟ್ಟೆ ಉಡುವ, ತಾನು ಬೆಳೆಸದ ಅನ್ನ ಉಣ್ಣುವ,

ಬಲಾಢ್ಯನನ್ನು ಬುದ್ಧಿವಂತನೆಂದೂ, ದಬ್ಬಾಳಿಕೆ ನಡೆಸುವವನನ್ನು ನೀತಿವಂತನೆಂದೂ ತಿಳಿದಿರುವ,

ಸ್ವಪ್ನದಲ್ಲಿ ತಾನು ವಿರೋಧಿಸುವುದನ್ನೇ ಜಾಗೃತದಲ್ಲಿ ಮಾಡಲೆಳಸುವ,

ಶುಕ್ತಿಗಿಗೆ ಭಾರ ಬಿಗಿಯಲ್ಪಟ್ಟಿದ್ದರೂ ದಂಗೆ ಏಳದ, ಸ್ಮಶಾನದಲ್ಲಲ್ಲದೆ ಬೇರೆಡೆ ಉಸಿರೆತ್ತದ, ಹಳೆ ಕೀರ್ತಿ ಮಂದಿರಗಳಲ್ಲದೆ ತನ್ನ ಕೀರ್ತಿಯ ಬಗ್ಗೆ ತವಕಪಡದ,

ನರಿತಂತ್ರಗಾರರನ್ನು ರಾಜಕೀಯ ಧುರೀಣರಾಗಿ ಪಡೆದ, ಮಾತಿನ ಆಡಂಭರದವರನ್ನು ಧರ್ಮದರ್ಶಿಗಳಾಗಿ ಪಡೆದ, ಅನುಕರಣೆಯನ್ನೇ ಕಲೆಯೆಂಬುವ ಕಲಾಕಾರರನ್ನು ಪಡೆದ,

ಹೊಸ ಆಡಳಿತಗಾರರನ್ನು ಕೊಂಬು ಕಹಳೆಯಿಂದಸ್ವಾಗತಿಸುವ,ಬೀಳ್ಕೊಡುವಾಗ ತಿರಸ್ಕಾರ ಸೂಚಿಸುವ, ಗೆದ್ದ ಎತ್ತಿನ ಬಾಲ ಹಿಡಿಯುವ ಪ್ರವೃತ್ತಿಯ, ಮತ್ತು ಯಾವ ದೇಶದ ಜ್ಞಾನಿಗಳು ಮೌನರಾಗಿರುವರೋ, ಯಾರ ಶಕ್ತಿ ಶಾಲಿಗಳೂ ಇನ್ನೂ ತೊಟ್ಟಿಲಲ್ಲಿರುವರೋ

ಯಾವರಾಜ್ಯವು ತನ್ನೊಳಗೆ ತಾನುಗುದ್ದಾಡಿಕೊಂಡು ಪ್ರತಿಯೊಂದು ಭಾಗವೂ ತಾನೇ ಸ್ವತಂತ್ರ ರಾಷ್ಟ್ರವೆಂಬಂತೆ ವರ್ತಿಸುತ್ತಿದೆಯೋ ಅಂಥಾ ದೇಶದ ಬಗ್ಗೆ ಕನಿಕರ ಪಡಿರಿ; ಕಂಬನಿ ಮಿಡಿಯಿರಿ; ಆ ದೇಶಕ್ಕೆ ಭವ್ಯ ಭವಿಷ್ಯವಿರದು.

—ಖಲೀಲ್ ಗಿಬ್ರಾನ್

ಮೊದಲಿಂದ ಕಲಾವಿದರಿಂದ ಯಶಸ್ವಿಯಾಗಿ ಜರಗಿದ ಬಳಿಕ ಸಂಘದ ಅಧ್ಯಕ್ಷ ಕೆ. ಆನಂದ ಶೆಟ್ಟಿಯವರ ಧನ್ಯವಾದ ಸಮರ್ಪಿಸಿದ ಬಳಿಕ ಮಂಗಳ ಗೀತೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಸೇಲ್ ನೋಟೀಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 17/67
O. S. 375/51.

ಅರ್ಜಿದಾರಳು — ಸಾವಿತ್ರಿ ಅಮ್ಮ, ರಾಯ ಹೊಳ್ಳರ ವಿಧವೆ, ವಡೇರಹೋಬಳಿ,

ಎದುರು — 2. ವಾಸು ಹೊಳ್ಳ, ಸುಬ್ರಾಯ ಹೊಳ್ಳರ ಮಗ, ವಡೇರಹೋಬಳಿ ಗ್ರಾಮ, 3. ಸೂರ್ಯನಾರಾಯಣ ಹೊಳ್ಳ, ಯಜ್ಞನಾರಾಯಣ ಹೊಳ್ಳರ ಮಗ, ಕುಂದಾಪುರ ರಥಬೀದಿ.

ಸದ್ರಿ 2, 3ನೇ ಎದುರಿಗೆ ತಿಳಿಯಪಡಿಸಿದ್ದು, ಮೇಲ್ಕಾಣಿಸಿದ ವ್ಯಾಜ್ಯದಲ್ಲಿ ಡಿಕ್ರಿಯೊಂದ್ದಿದವಳಾದ ಅರ್ಜಿದಾರಳು ನಿಮ್ಮ ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿ ಮಾಡಿಕೊಂಡಿದ್ದಾಳೆ. ಅದ್ದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 17.4.1967 ನೇ ತಾರೀಖು ನಿಶ್ಚಯಿಸಲ್ಪಟ್ಟಿರುತ್ತದೆ.

(ಕೋರ್ಟಿನ ಹುಕುಂ ಪ್ರಕಾರ)

ಎ. ಎಸ್. ಎನ್. ಹೆಬ್ಬಾರ್,
ಅರ್ಜಿದಾರಳ ಕಡೆ ಎಡ್ವೊಕೇಟ್.

ಕುಂದಾಪುರ, ತಾ. 17-3-1967.

ಇಬ್ಬರ ಜಗಳ

(ಎರಡನೇ ಪುಟದಿಂದ)

ಪೂರ್ಣವಾಗಿ ಸಂಗತಿಯನ್ನು ಪ್ರಸ್ತಾಪಿಸುತ್ತಿದ್ದರು. ಪರೀಕ್ಷೆ ಮುಗಿದೊಡನೆಯೇ ಮಧು ಊರಿಗೆ ಬಂದ.

ಮನೆಯ ವಾತಾವರಣ ಬಿಸಿಯಾಗಿದೆ ಎಂಬುದನ್ನು ತಿಳಿಯಲು ಮಧುವಿಗೆ ಹೆಚ್ಚು ಕಾಲ ಬೇಕಾಗಿರಲಿಲ್ಲ. ತಂದೆ, ತಾನು ಪದ್ಮಳನ್ನೇ ಮದುವೆಯಾಗ ಬೇಕೆಂದು ಬಯಸುತ್ತಾರೆ. ತಾಯಿ, ತಾನು ಶೈಲಜಾಳನ್ನೇ ಮದುವೆಯಾಗ ಬೇಕೆಂದು ಬಯಸುತ್ತಾರೆ, ಎಂಬುದು ಅವನಿಗೆ ಸ್ಪಷ್ಟವಾಗಿ ತಿಳಿಯಿತು.

ಮನೆಗೆ ಬಂದು ನಾಲ್ಕು ದಿನ ವಿಶ್ರಾಂತಿ ಪಡೆಯಲಿ ಎಂದು ತಂದೆ ತಾಯಿ ಇಬ್ಬರೂ ನಾಲ್ಕು ದಿನ ವಿಷಯವನ್ನು ಪ್ರಸ್ತಾಪಿಸದೆ ಅವನೊಂದಿಗೆ ಅನ್ಯೋನ್ಯವಾಗಿಯೇ ಇದ್ದು ಉಪಚರಿಸಿದರು.

'ನಿನಗೆ ವಿವೇಕವೇ ಇಲ್ಲ ಹೋಗೋ ಮಧು. ನಿನ್ನ ಒಳ್ಳೇದಕ್ಕೆ ತಾನೆ ನಾನು ಹೇಳೋದು. ಒಪ್ಪಿಕೊಂಡುಬಿಡು."

"ಒಂದೇ ಸಲ ಒತ್ತಾಯಿಸಿದರೆ ನಾನು ಏನಮ್ಮ ಹೇಳಲಿ.'

'ಹೋಗ್ಲಿ ಶೈಲಜಾಳನ್ನೇ ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಬಿಡು ಸಾಕು.'

'ನೀನು ಅಣ್ಣ ಒಪ್ಪಿದರೆ ಆಯ್ತಮ್ಮ ನನ್ನದೇನು.'

'ಹಾಗಲ್ಲಾ ಕಣೋ. ಶೈಲಜಾಗೆ ವಿದ್ಯೆ ಇಲ್ವೆ, ರೂಪ ಇಲ್ವೆ. ಅಣ್ಣ ಅವಳಿಗೆ ಏನು ಕಡಿಮೆ ಮಾಡಿದ್ದಾನೆ. ನಿನ್ನನ್ನು ಅವನು ದೇವರು ನೋಡಿದ ಹಾಗೆ ನೋಡಿಕೊಳ್ತಾನೆ.'

'ನನಗೆ ಅದೆಲ್ಲಾ ಬೇಕಮ್ಮ. ಇದಕ್ಕೆ ಶೈಲಜಾ ಒಪ್ಪಿಗೆ ಇದೆಯೇನಮ್ಮ.

"ಅವಳಿಗೇನು ತಿಳಿಯುತ್ತದೆ. ನಾವು ಹೇಳಿದರೆ ಇಲ್ಲ ಎನ್ನುತ್ತಾಳೆಯೆ. ಅಣ್ಣನಿಗೆ ನಾನು ಎಂದೋ ಮಾತುಕೊಟ್ಟಿದ್ದೇನೆ. ಸದ್ಯ ನಿನ್ನ ಒಪ್ಪಿಗೆ ಮುಖ್ಯ ಈಗ.'

'ಅಣ್ಣ ಒಪ್ಪಿದ್ದಾರೇನಮ್ಮ"

'ನಿಮ್ಮಣ್ಣ ಒಪ್ಪದೆ ಹೋದ್ರೆ, ನೀನು ಶೈಲಜಾನ ಮದುವೆ ಆಗೋಲ್ಲ ಅನ್ನು...'

'ಹಾಗಲ್ಲಮ್ಮ."

'ನಿಮ್ಮಣ್ಣ ಆ ಕರ್ಪೂರದ ಗೊಂಬೆ ಪದ್ಮೀನ ನಿನಗೆ ಗಂಟು ಹಾಕಬೇಕು ಅಂತ ಮಾಡಿದ್ದಾರೆ. ನನಗೂ, ಅವರಿಗೂ ನಿತ್ಯ ಮನೆಯಲ್ಲಿ ಇದೇ ಬಡಿದಾಟವಾಗಿದೆ. ನೀನು ಒಪ್ಪಿಕೊಂಡರೆ ಸಾಕು. ನಾಳೆಯೇ ಮದುವೆ ಮುಗಿಸಿ ಬಿಡ್ತಾರೆ ನನಗಂತೂ ಅವಳು ಮನೆಗೆ ಸೊಸೆಯಾಗಿ ಬರುವುದು ಸ್ವಲ್ಪವೂ ಇಷ್ಟವಿಲ್ಲ.'

"ತುಂಬಾ ಚೆನ್ನಾಗಿ ಕಣಮ್ಮ ಈ ವ್ಯವಹಾರ."

"ನಿಮ್ಮಣ್ಣ ಪದ್ಮ ವಿಷಯ ಪ್ರಸ್ತಾಪಿಸಿದರೇನೋ?"

"ಯಾವ ವಿಷಯಾನೂ ಅಣ್ಣ ಬಾಯಿ ಬಿಟ್ಟಿಲ್ಲಮ್ಮ"

"ಇವತ್ತೊ ನಾಳೆಯೋ ಕೇಳ್ತಾರೆ ಖಂಡಿತ. ಪದ್ಮಿನ ಮದುವೆ ಆಗೋಲ್ಲ. ಅಮ್ಮನಿಗೆ ಮಾತು ಕೊಟ್ಟಿದ್ದೇನೆ, 'ಹೇಳಿಬಿಡು.' ಎಂದರು, ಪಾರ್ವತಮ್ಮ. ಮಧು ಪ್ರತಿ ಹೇಳಲಿಲ್ಲ.

'ಪದ್ಮಿ ಅದು ಹೇಗೆ ನಿನ್ನ ಹೆಂಡ್ತಿ ಆಗ್ತಾಳೋ, ಅದು ಹೇಗೆ ಈ ಮನೆಯ ಸೊಸೆ ಆಗಿ ನಿಭಾಯಿಸುತ್ತಾಳೋ ನಾನು ನೋಡ್ತೇನೆ', ಎಂದರು ಪಾರ್ವತಮ್ಮ ಅಧಿಕಾರವಾಣಿಯಲ್ಲಿ.

ಮಧು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ.

"ವಿಷಯ ಗೊತ್ತಾಯಿತಾ ಮಧು' ಎಂದರು ಸಂಜೀವರಾಯರು.

"ಯಾವ ವಿಷಯ ಅಪ್ಪ' ಎಂದ ಮಧು.

'ಏನೂ ಗೊತ್ತಿಲ್ಲದವನ ಹಾಗೆ ಕೇಳ್ತೀಯಲ್ಲೋ ಮಧು. ನಿನ್ನ ಮದುವೆ ವಿಷಯ ನಿಮ್ಮಮ್ಮ ಆಗಲೇ ಎಲ್ಲ ವರದಿ ಮಾಡಿ ಭಾಷೆಯನ್ನು ಪಡೆದಿರಬಹುದು.'

"ಇಲ್ಲಣ್ಣ ನಾನೆ ಏನನ್ನ ಹೇಳಲಿಲ್ಲ. ಶೈಲಜಾನ ಮದುವೆ ಮಾಡಿಕೋ ಎಂದಳಷ್ಟೆ'.

"ಪದ್ಮ ಮದುವೆ ಮಾಡ್ಕೊ ಬೇಡ ಅಂದಳು ಇಲ್ವಾ?"

"......"

'ನೋಡು ಮಧು, ನೀನು ವಯಸ್ಸಿಗೆ ಬಂದ ಮಗ, ನಿನ್ನೊಂದಿಗೆ ಹೇಳಬೇಕಾದ್ದೇನಿಲ್ಲ. ನಿನಗೂ ವಿವೇಕವಿದೆ. ಒಂದು ಸ್ವಲ್ಪ ಯೋಚನೆ ಮಾಡು. ಅಷ್ಟೆ."

"ಏನಣ್ಣಾ ಹೀಗೆ ಹೇಳ್ತೀರಾ?"

'ನಿಮ್ಮಮ್ಮ ನನಗೆ ಎಲ್ಲಾ ವಿಷಯವನ್ನೂ ತಿಳಿಸಿರಬಹುದು. ಆದರೂ ಒಂದು ಮಾತನ್ನ ಕೇಳ್ತೀನಿ. "ಪ್ರಾಪ್ತ ವಯಸ್ಕರಾದ ಮಕ್ಕಳನ್ನು ತಂದೆ ಮಿತ್ರರಂತೆ ಕಾಣಬೇಕಂತೆ...' ಎಂದರು ಸಂಜೀವರಾಯರು.

ಮಧು ಯಾವ ಮಾತನ್ನೂ ಆಡಲಿಲ್ಲ.

"ನಿನಗೆ ಶೈಲಜಾ, ಪದ್ಮ ಇಬ್ಬರೂ ಗೊತ್ತು. ಇಬ್ಬರ ರೂಪ; ಗುಣಗಳೂ ಗೊತ್ತು. ಶೈಲಜಾ ತಂದೆ ದೊಡ್ಡ ಅಧಿಕಾರಿ, ಶ್ರೀಮಂತರು. ಪದ್ಮ ತಾಯಿ ಇಲ್ಲದ ತಬ್ಬಲಿ. ಹೆಚ್ಚು ವಿದ್ಯೆ ಕಲಿತವಳಲ್ಲ. ಅವಳಿಗೆ ನಮ್ಮ ವಿನಹ ಸಮೀಪದ ಬಂಧುಗಳು ಯಾರೂ ಇಲ್ಲ. ಅವಳ ತಂದೆ, ಚಿಕ್ಕಮ್ಮ ನಂತರ ದೇವರೇ ಗತಿ. ಶೈಲಜಾಗೆ ಅವಳ ತಂದೆ ಪ್ರಯತ್ನಪಟ್ಟು ಅವರ ಅಂತಸ್ತಿಗೆ ತಕ್ಕ ಗಂಡು ಹುಡುಕಬಹುದು, ವಿವಾಹ ಮಾಡಬಹುದು. ಆದರೆ ಹಾಗೆಂದು ಪದ್ಮಳನ್ನ ಕೈ ಬಿಡಲಾಗುವುದಿಲ್ಲ. ಪದ್ಮ ನಿನಗೆ ತಕ್ಕ ಹುಡುಗಿ. ಈ ಮನೆಗೆ ತಕ್ಕ ಸೊಸೆ ಎಂದು ನಿರ್ಧರಿಸಿದ್ದೇನೆ. ನಿಮ್ಮಮ್ಮನಿಗೆ ಅದೇಕೋ ಅವಳ ಬಗ್ಗೆ ತಾತ್ಸಾರ. ನೀನು ಮನಸ್ಸು ಮಾಡಿ ಅವಳನ್ನು ಮದುವೆಯಾದರೆ ನನ್ನ ಆತ್ಮಕ್ಕೆ, ನಿನ್ನ ಸೋದರತ್ತೆಯ ಆತ್ಮಕ್ಕೆ ಶಾಂತಿ ಲಭಿಸುತ್ತದೆ. ಪದ್ಮಳಿಗೂ ಯೋಗ್ಯ ನೆಲೆ ದೊರೆತಂತಾಗುತ್ತದೆ. ಯೋಚನೆ ಮಾಡಿ ನಿರ್ಧರಿಸು, ಅಭಿಪ್ರಾಯ ತಿಳಿಸು.'

'ಪದ್ಮಳನ್ನು ಮದುವೆಯಾಗುವಂತೆ ಒಪ್ಪಿಸುತ್ತೇನೆ ಎಂದು ವಾದ ಮಾಡಿದ್ದೇನೆ. ನನ್ನ ಮಾತನ್ನು ಉಳಿಸು. ಇಲ್ಲವಾದರೆ ನನ್ನ ಮಾತಿಗೆ ಬೆಲೆ ಇಲ್ಲದಂತಾಗುತ್ತದೆ. ಈ ಒಂದು ಮಾತಿಗೆ ಒಪ್ಪಿ ಪದ್ಮಳನ್ನ ವಿವಾಹವಾಗಿ, ನನ್ನ ಮಾತು ಉಳಿಸಿ ಕೊಡು' ಎಂದು ದೈನ್ಯದಿಂದಲೇ ನುಡಿದರು, ಸಂಜೀವರಾಯರು.

ತಂದೆಯ ಮಾತಿನಂತೆ ನಡೆಯಲೆ ಅಥವಾ ತಾಯಿಯ ಅಜ್ಞೆಯನ್ನು ಪರಿಪಾಲಿಸಲೆ ಎಂದು ಮಧು ಯೋಚಿಸಿದ. ದೊಡ್ಡ ಸಮಸ್ಯೆ ಅವನನ್ನು ಕೊರೆಯುತ್ತಿತ್ತು. ತಂದೆಯ ಮಾತನ್ನು ಅನುಸರಿಸಿದರೆ ತಾಯಿಗೆ ಕೋಪ, ತಾಯಿಯ ಮಾತನ್ನು ಒಪ್ಪಿದರೆ ತಂದೆಗೆ ಬೇಸರ, ವ್ಯಥೆ, ಮನಸ್ತಾಪ ಎಂಬುದು ಅವನ ಮನಸ್ಸಿಗೆ ಸ್ಪಷ್ಟವಾಗಿತ್ತು.

ಮಗ ತನ್ನ ಮಾತನ್ನು ಮೀರುವುದಿಲ್ಲವೆಂದು ಸಂಜೀವ ರಾಯರಿಗೆ, ಪಾರ್ವತಮ್ಮನಿಗೆ ಇಬ್ಬರಿಗೂ ಇತ್ತು. ಮಧು ಮನಸ್ಸು ಶೈಲಜಾ ಮತ್ತು ಪದ್ಮ ಇವರನ್ನು ಚಿಂತಿಸಿತು. ನಾಲ್ಕಾರು ದಿನ ಯೋಚಿಸಿ "ಇದೇ ಸರಿ" ಎಂದು ನಿರ್ಧರಿಸಿದ.

ಮೈಸೂರಿಗೆ ಹೊರಟು ನಿಂತ ಮಗನನ್ನು ಕಂಡು ತಂದೆತಾಯಿ ಇಬ್ಬರೂ ಆಶ್ಚರ್ಯಗೊಂಡರು.

'ಇನ್ನೇನೋ ಇದ್ದಕ್ಕಿದ್ದ ಹಾಗೆ ಹೊರಟುಬಿಟ್ಟೆ ರಜೆ ಇದೆ." ಎಂದರೂ ಪಾರ್ವತಮ್ಮ.

"ರಜೆ ಇದೆಯಮ್ಮ ನಿಮಗೆ ನನ್ನ ಒಪ್ಪಿಗೆ ಕೊಡಬೇಕು. ನಿರ್ಧಾರ ತಿಳಿಸಬೇಕು. ಮೈಸೂರಿನಲ್ಲಿ ನನ್ನ ಆತ್ಮೀಯರೊಬ್ಬರಿದ್ದಾರೆ. ಅವರನ್ನು ತಿಳಿದು ಬರುತ್ತೇನೆ" ಎಂದ ಮಧು.

— ೪ —

ಮಧು ಮೈಸೂರಿಗೆ ಪ್ರಯಾಣ ಬೆಳೆಸಿ ನಾಲ್ಕು ದಿನಗಳಾಗಿತ್ತು. ಅವನಾಗಲಿ, ಅವನ ಪತ್ರವಾಗಲಿ ಊರು ತಲುಪಿರಲಿಲ್ಲ. ಸಂಜೀವರಾಯರು, ಪಾರ್ವತಮ್ಮ "ಏಕೆ ಹೋದ, ಬರಲಿಲ್ಲವಲ್ಲ. ಎಂದು ಚಡಪಡಿಸಿದರು. ಅವನ ಬರುವನ್ನೆ ಎದುರು ನೋಡುತ್ತಿದ್ದರು. ಐದನೆಯ ದಿನವೂ ಮಧು ಬರಲಿಲ್ಲ. ಆದರೆ ಅವನ ಬರೆದ ಪತ್ರ ಬಂತು.

ಸಂಜೀವರಾಯರು ಪತ್ರ ಓದಿ ಪತ್ನಿಯ ಮುಂದಿಟ್ಟರು. ಪಾರ್ವತಮ್ಮ ಪತ್ರವನ್ನು ಕೈಗೆತ್ತಿಕೊಂಡು ಓದ ತೊಡಗಿದರು. ಪತ್ರದ ಕೊನೆಯಲ್ಲಿದ್ದ ಸಾಲುಗಳನ್ನು ಮತ್ತೊಮ್ಮೆ ಓದಿ ಕೊಂಡರು.

'ತಂದೆ-ತಾಯಿ ಇಬ್ಬರೂ ನನ್ನ ಎರಡು ಕಣ್ಣಿದ್ದಂತೆ. ಯಾವ ಕಣ್ಣಿಗೆ ನೋವಾದರೂ ವ್ಯಥೆ ಪಡಬೇಕಾಗುತ್ತದೆ. ನೋವನ್ನು ಅನುಭವಿಸಬೇಕೆಂಬ ಆಸೆ ಇಲ್ಲ, ಅನುಭವಿಸಬಲ್ಲ ಶಕ್ತಿ ಇಲ್ಲ. ಪದ್ಮಳನ್ನ ವಿವಾಹವಾದರೆ ತಾಯಿಯ ಮನಸ್ಸಿಗೆ ನೋವು. ಶೈಲಜಳನ್ನು ಮದುವೆಯಾದರೆ ಅಣ್ಣನ ಹೃದಯಕ್ಕೆ ಬೇಸರ. ಇಬ್ಬರಲ್ಲಿ ಯಾರೊಬ್ಬರನ್ನ ಮದುವೆಯಾದರೂ ಮತ್ತೊಬ್ಬರಿಗೆ ವ್ಯಥೆಯಾಗುವುದು ಸಹಜ. ಈ ಕಾರಣದಿಂದ ಈ ನಿರ್ಧಾರಕ್ಕೆ ಬಂದಿದ್ದೇನೆ.

"ವೈದೇಹಿ ಇಲ್ಲಿಯ ವೈದ್ಯರೊಬ್ಬರ ಮಗಳು - ನನ್ನ ಜೊತೆಯಲ್ಲಿಯೇ ಎಲ್ಲಾ ತರಗತಿಯಲ್ಲಿಯೂ ಇದ್ದಳು. ನಾವಿಬ್ಬರೂ ಪರಸ್ಪರ ಒಬ್ಬರನ್ನೊಬ್ಬರ ಪ್ರೀತಿಸಿದ್ದೇವೆ ಎಂದು ಹೇಳಬೇಕಾಗಿಲ್ಲ. ವೈದೇಹಿ ನನ್ನನ್ನ ವಿವಾಹವಾಗಿ ನನ್ನ ಕಷ್ಟಸುಖಗಳಲ್ಲಿ ಭಾಗಿಯಾಗಲು ಸಿದ್ಧಳಾಗಿದ್ದಾಳೆ. ವಿವಾಹವಾಗಲು ನಿರ್ಧರಿಸಿದ್ದೇನೆ. ನಮ್ಮ ದಾಂಪತ್ಯ ಜೀವನಕ್ಕೆ ಹಿರಿಯರಾದ ನಿಮ್ಮ ಆಶೀರ್ವಾದ ಬೇಕು."

ಈ ನಿರ್ಧಾರವನ್ನು ಯಾವ ಕಾರಣದಿಂದಲೂ ಬದಲಿಸಲು ಸಾಧ್ಯವಿಲ್ಲ. ನಾನು ವೈದೇಹಿಯೊಂದಿಗೆ ಮುಂದಿನ ಭಾನುವಾರ ಬರುತ್ತೇನೆ.'

— ಎಂದು ಬರೆದಿದ್ದ ಮಧು.

ಪಾರ್ವತಮ್ಮ ಪತ್ರ ಓದಿ ದೀರ್ಘವಾಗಿ ನಿಟ್ಟುಸಿರು ಬಿಟ್ಟರು. ಪತಿಗೆ ಏನೋ ಹೇಳಲು ಯೋಚಿಸಿ, ಸಂಜೀವರಾಯರು ಕುಳಿತಿದ್ದ ಕುರ್ಚಿಯ ಕಡೆಗೆ ನೋಡಿದರು. ಅದು ಬರಿದಾಗಿತ್ತು.

ರೈತ ಭಾಂದವರ ಜೀವನ ಸಂಗಾತಿ.........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು... ......

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು 1



ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦

NAVAYUGA 23—3—1967
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವ್ಯವಸಾಯ ಕ್ಷೇತ್ರ

ಮರ ಸಿಗಿದ ಹುಡಿಯ ಉಪಯೋಗ

ಮರಕುಯಿದ ಹುಡಿಯನ್ನು ಪಟ್ಟಣಗಳಲ್ಲಿ ಸ್ನಾನಗಾಗಿ ಉಪಯೋಗಿಸಿದರೂ ಹಳ್ಳಿಗಳಲ್ಲಿ ಅದು ನಿರುಪಯೋಗವೆಂದು ಬಿಸಾಡಲ್ಪಡುತ್ತದೆ. ಮರಕುಯಿದ ಹುಡಿಯಿಂದ ನೂರಾರು ಪ್ರಯೋಜನಗಳನ್ನು ನಾವು ಪಡೆಯಬಹುದು. ವ್ಯವಸಾಯ ಕ್ಷೇತ್ರಕ್ಕೆ ಇದು ಅತ್ಯಮೂಲ್ಯ ವಸ್ತುವಾಗಿದೆ. ಅದು ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದರಿಂದ ನೀರು ಬಸಿದುಹೋಗುವ ಮರಳು ಗದ್ದೆಗಳಿಗೆ ಹಾಕಿದರೆ ನೀರು ಒಣಗದಂತೆ ತಡೆಯಬಲ್ಲುದು. ಮಳೆ ನೀರು ಇಲ್ಲದೆ, ಬತ್ತದ ಬೆಳೆಗೆ ತೊಂದರೆ ಆಗುವ ಗದ್ದೆಗಳಿಗೆ ಇದನ್ನು ಹಾಕಿದರೆ ಬಹು ಸಮಯದ ವರೆಗೆ ತೇವವನ್ನು ಉಳಿಸಿ ಬೆಳೆ ಫಸಲು ಕೊಡುವಂತೆ ಕಾಯುವುದು. ಅಂಟು ಜೇಡಿ ಮಣ್ಣಿನ ಗದ್ದೆಗಳಿಗೂ ಇದು ಉಪಯೋಗಕರ. ನೇಗಿಲಿಗೆ ಮಣ್ಣು ಅಂಟಿ ಕಾಲೆಳೆಯುವುದೇ ಕಷ್ಟವಾಗುವ ಮಣ್ಣಿಗೆ ಇದನ್ನು ಹಾಕಿದರೆ ಮಣ್ಣಿನ ಜಿಗುಟುತನವನ್ನು ನಿವಾರಿಸಿ ಉಳಲು ಸುಲಭಮಾಡುವುದಲ್ಲದೆ ಬೆಳೆಗೂ ಸಹಾಯಕವಾಗುವುದು.

ಮರಕುಯಿದ ಹುಡಿಯಲ್ಲಿ ಹೆಚ್ಚು ಪರಿಮಾಣದಲ್ಲಿ 'ಲಿಗಿಸಿನ' ಎಂಬ ಸತ್ವ ಇರುವುದರಿಂದ ಮಣ್ಣು ಕೊಳೆತು ಅದರ ರಸಾಯನಿಕ ಶಕ್ತಿ ಹ್ರಾಸವಾಗುವುದನ್ನು ತಡೆದು ಬಹು ವರ್ಷಗಳ ವರೆಗೆ ಮಣ್ಣು ಸಾರವತ್ತಾಗಿರುವಂತೆ ಮಾಡುವುದು.

ಆದರೆ ಕುಯಿದ ಮರದ ಹುಡಿಯಲ್ಲಿ ಕಾರ್ಬನ್ ಅಂಶ ಹೆಚ್ಚಿರುವುದರಿಂದ ಬೆಳೆಗೆ ಆತಂಕವಾಗುವ ಸಂಭವ ಹೆಚ್ಚು. ಅದನ್ನು ಪರಿಹರಿಸಲು ಅದರೊಂದಿಗೆ ನೈಟ್ರೋಜಿನಸ್ ಗೊಬ್ಬರವನ್ನು ಮಿಶ್ರ ಮಾಡಬೇಕು. ಹಟ್ಟಿ ಮತ್ತು ಕಂಪೋಸ್ಟ್ ಗೊಬ್ಬರ ಕೊಳೆಯುವ ಸಮಯದಲ್ಲಿ ಅದರಲ್ಲಿರುವ ನೈಟ್ರೋಜಿನಸ್ ಭಾಗವು ಶೇಕಡ ೩೦ರಿಂದ ೫೦ರ ವರೆಗೆ ನಷ್ಟವಾಗಿ ಗೊಬ್ಬರದ ಶಕ್ತಿ ಕಡಿಮೆಯಾಗುತ್ತದೆ. ಇಂಥಾ ಗೊಬ್ಬರ ಸಂಗ್ರಹ ಮಾಡುವಾಗ ಶೇಕಡ ೫ರಷ್ಟು ಮರಕುಯಿದ ಹುಡಿಯನ್ನು ಅದಕ್ಕೆ ಮಿಶ್ರಮಾಡಿದರೆ ಶೇಕಡ ೧೦ರಷ್ಟು ನೈಟ್ರೋಜಿನಸ್ ಶಕ್ತಿಯು ಗೊಬ್ಬರದಲ್ಲಿ ಉಳಿಯುವಂತಾಗಿ ಗೊಬ್ಬರವು ಹೆಚ್ಚು ಫಲಪ್ರದವಾಗುವುದು.

ದನಗಳ, ಮನುಷ್ಯರ ಮೂತ್ರವು ಬಹು ಉಪಯುಕ್ತ ಗೊಬ್ಬರ. ಅದರಲ್ಲಿ ಶೇಕಡ ೯೦ರಷ್ಟು ನೀರಿದ್ದು ಕೇವಲ ಶೇಕಡ ೧೦ರಷ್ಟು ಧಾತು ಮಾತ್ರವಿರುವುದರಿಂದ ಇದನ್ನು ಸಂಗ್ರಹಿಸಿಡುವುದು ಕಷ್ಟವಾಗಿದೆ. ಈ ಮೂತ್ರಗಳನ್ನು ಸಂಗ್ರಹಿಸಲು ಮರಕುಯಿದ ಹುಡಿಯು ಬಹಳ ಉಪಯುಕ್ತ. ಕೊಟ್ಟಿಗೆಗೆ ಈ ಹುಡಿಯನ್ನು ಚೆಲ್ಲಿದರೆ ಅದು ಮೂತ್ರವನ್ನು ಹೀರಿಕೊಳ್ಳುವುದಲ್ಲದೆ ಬಹುಕಾಲದ ವರೆಗೆ ಸಂಗ್ರಹಿಸಿಡಲು ಸುಲಭವಾಗುವುದು. ಮಣ್ಣಿಗಿಂತಲೂ ಉತ್ತಮ ಮೂತ್ರ ಸಂಗ್ರಾಹಕವಾಗಿರುವುದರಿಂದ ಗೊಬ್ಬರದ ಅಂಶ ಪೂರ್ಣವಾಗಿ ಉಳಿದಿರುತ್ತದೆ. ಜೊತೆಗೆ ಇದರಿಂದ ದುರ್ವಾಸನೆಯೂ ಕಡಿಮೆಯಾಗುತ್ತದೆ. ಮೂತ್ರ ಸಿಂಚಿತ ಮರಹುಡಿಯನ್ನು ನೇರ ಗೊಬ್ಬರವಾಗಿ ಉಪಯೋಗಿಸಲೂ ಬಹುದಾಗಿದೆ.

ಮನುಷ್ಯನ ಮೂತ್ರವು ಅತ್ಯಮೂಲ್ಯ ಗೊಬ್ಬರ. ಭಾರತೀಯರೆಲ್ಲರ ಮೂತ್ರವನ್ನು ಯೋಗ್ಯ ರೀತಿ ಸಂಗ್ರಹಿಸಿದರೆ ಅದೇ ವರ್ಷಕ್ಕೆ ೧.೯೨ ಮಿಲಿಯ ಟನ್ ನೈಟ್ರೋಜನ್ ಗೊಬ್ಬರ ಅಂದರೆ ೯.೬ ಮಿಲಿಯ ಟನ್ ಅಮೋನಿಯಮ್ ಸಲ್ಫೇಟ್ ಗೊಬ್ಬರದಷ್ಟಾಗುವುದು. ಮೂತ್ರವನ್ನು ಮರದ ಹುಡಿಯ ಪಾತ್ರೆಗಳಲ್ಲಿ ಸಂಗ್ರಹಿಸಿ ಅದನ್ನು ಒಣಗಿಸಿ ಗೊಬ್ಬರವಾಗಿ ಉಪಯೋಗಿಸಿದಾಗ ಶೇಕಡ ೧೩೦ರಷ್ಟು ಫಲಿತಾಂಶ ಉತ್ತಮವಾದುದು ಕಂಡು ಬಂದಿದೆ.

ಮನುಷ್ಯನ ಮಲವನ್ನು ಗೊಬ್ಬರವನ್ನಾಗಿ ಉಪಯೋಗಿಸುವುದು ಸಾಮಾನ್ಯವಾದರೂ ಅದನ್ನು ಕೊಳೆಯಿಸಿ ಗೊಬ್ಬರವಾಗಿ ಮಾರ್ಪಡಿಸಲು ಆರು ತಿಂಗಳು ಬೇಕಾಗುತ್ತದೆ. ಆದರೆ ಮಲದೊಂದಿಗೆ ಮರದ ಹುಡಿಯನ್ನು ಮಿಶ್ರಮಾಡಿ ಒಣಗಿಸಿ ಗೊಬ್ಬರವಾಗಿ ಉಪಯೋಗಿಸಬಹುದು. ಮರ ಹುಡಿಯು ಅದರ ನೀರನ್ನು ಹೀರಿಕೊಳ್ಳುವುದರಿಂದ ವಾಸನೆಯೂ ಇಲ್ಲದಾಗುತ್ತದೆ. ಇದರಿಂದ ನೊಣಗಳ ಬಾಧೆಯೂ ತಪ್ಪುವುದು.

ಇಟ್ಟಿಗೆಯ ತಳಹದಿ ಮಾಡಿ ಅದರ ಮೇಲೆ ಮೂರು ಇಂಚು ದಪ್ಪದಷ್ಟು ಮರದ ಹುಡಿಯನ್ನು ಸಮನಾಗಿ ಹರವಬೇಕು. ಅದರ ಮೇಲೆ ಮಲವನ್ನು ಸಮವಾಗಿ ಹರಡಿ ಮತ್ತೆ ಅದರ ಮೇಲೆ ಶೇಕಡ ೫೦ರಷ್ಟು ಮರಹುಡಿ ಹಾಕಿ ಮಿಶ್ರಮಾಡಬೇಕು. ನೀರನ್ನು ಮರಹುಡಿ ಹೀರಿಕೊಂಡು ಇದು ಬೇಗ ಒಣಗುತ್ತದೆ. ಚೆನ್ನಾಗಿ ಒಣಗಿಸಿ ಸಂಗ್ರಹಿಸಿಟ್ಟರೆ ವಾಸನೆ ಇಲ್ಲದೆ ಬೇಕಾದಾಗ ಉಪಯೋಗಿಸಲು ಬರುವುದು. ಇದು ಹಟ್ಟಿ ಗೊಬ್ಬರಕ್ಕಿಂಥಾ ಉತ್ತಮವಾದುದು.

—ಆಧಾರದಿಂದ.

ವಿಜ್ಞಾನ ಸಾಧನೆ

ಸೋವಿಯತ್ ತಜ್ಞರ ಸಂಶೋಧನೆ

ಕಿವುಡುತನಕ್ಕೆ ಚಿಕಿತ್ಸೆ

ನಮ್ಮ ಕಿವಿಯು ಅತ್ಯಂತ ಸ್ಪಂದನಶೀಲ ಅಂಗ. ತೆಳ್ಳನೆಯ ಗಾಳಿಯ ಸುಳಿವನ್ನಾಗಲೀ, ಹರಿಯುವ ನೀರಿನ ಕಲಕಲವನ್ನಾಗಲೀ, ಹಕ್ಕಿಗಳ ಚಿಲಿಪಿಲಿ ಶಬ್ದವನ್ನಾಗಲೀ ಚೆನ್ನಾಗಿ ಸ್ಪಷ್ಟವಾಗಿ ಅದು ಗ್ರಹಿಸುತ್ತದೆ. ಕಿವಿಯ ಪಟಲವು ಅತ್ಯಂತ ಹಗುರವಾಗಿಯೂ, ತೆಳುವಾಗಿಯೂ ಇರುವ ಸಿಗರೇಟು ಕಾಗದದಂತೆ ಅರ್ಧ-ಪಾರದರ್ಶಕವಾಗಿರುತ್ತದೆ. ಅದೃಶ್ಯ ಧ್ವನಿ ತರಂಗಗಳು ಈ ಪಟಲಕ್ಕೆ ತಾಕುವುದರಿಂದಲೇ ನಮಗೆ ಕಿವಿ ಕೇಳಿಸುತ್ತದೆ.

ಆರೋಗ್ಯವಾಗಿರುವ ಕಿವಿಯು ಈ ರೀತಿಯಾಗಿ ಧ್ವನಿಯನ್ನು ಗ್ರಹಿಸುತ್ತದೆ. ಆದರೆ ಕಿವಿಯೊಳಗಡೆ ಇರುವ ಒಂದು ಅತ್ಯಂತ ಸಣ್ಣ ಶ್ರವಣ ಅಸ್ಥಿಯು—(ಅದರ ತೂಕವು ಒಂದು ಗ್ರಾಮಿನ ನಾಲ್ಕು ನೂರರಲ್ಲೊಂದು ಪಾಲಿನಷ್ಟು ಕೂಡಾ ಇಲ್ಲ)—ತಂತು ವೃದ್ಧಿಯ ಕಾರಣ ಅಚಲವಾಗಿರುವ ವೇಳೆಯಲ್ಲಿ ಧ್ವನಿತರಂಗಗಳನ್ನು ತಡೆಯುವುದರಿಂದ ಭಂಗವಾಗುತ್ತದೆ. ಆಗ ಶ್ರವಣ ಶಕ್ತಿಯು ಇಲ್ಲದಂತಾಗುತ್ತದೆ.

ಈ ದೋಷವನ್ನು ನಿವಾರಿಸಲು ವಿಜ್ಞಾನಿಗಳು ಅನೇಕ ಶತಮಾನಗಳಿಂದ ಪ್ರಯತ್ನ ಮಾಡುತ್ತ ಬಂದಿದ್ದಾರೆ. ಪ್ರೊ। ಅಲೆಕ್ಸೇಯ್ ಕೊಲೊಮೊಚೆಂಕೊ ಅವರು ಸೋವಿಯೆತ್ ನಾಡಿನಲ್ಲಿ ಪ್ರಥಮತಃ ಈ ಕಠಿನ ಶಸ್ತ್ರಚಿಕಿತ್ಸೆ ನಡೆಸಿದರು. ಶ್ರವಣ ಶಕ್ತಿಯ ಪುನರುಜ್ಜೀವನದ ಈ ಕಾರ್ಯ ಸಾಧನೆಗಾಗಿ ಅವರಿಗೂ ಮತ್ತು ಇತರ ಶಸ್ತ್ರಚಿಕಿತ್ಸಕರಿಗೂ ೧೯೬೬ರಲ್ಲಿ ಲೆನಿನ್ ಪುರಸ್ಕಾರವನ್ನು ನೀಡಲಾಯಿತು.

ಶಲ್ಯ ಚಿಕಿತ್ಸೆಯ ಮೂಲಕ ಶ್ರವಣ ಅಸ್ಥಿಯನ್ನು ಸಚಲಗೊಳಿಸುವ ಪ್ರಯತ್ನ ಯಶಸ್ವಿಯಾಯಿತು. ಈ ಶಸ್ತ್ರಚಿಕಿತ್ಸೆ ನಡೆಯುವಾಗ ರೋಗಿಯು ಪ್ರಜ್ಞಾವಂತನಾಗಿಯೇ ಇರುತ್ತಾನೆ. ಆಗಾಗ್ಗೆ ಕೆಲವು ಮಾತುಗಳನ್ನಾಡುತ್ತಿರುವಂತೆ ಅವರಿಗೆ ತಿಳಿಸಲಾಗುತ್ತದೆ. ಇದರಿಂದ ಆತನ ಶ್ರವಣಶಕ್ತಿಯ ಸುಧಾರಣೆಯು ವ್ಯಕ್ತವಾಗುತ್ತದೆ.

ಈ ಶಲ್ಯಚಿಕಿತ್ಸೆಯ ಕಾಲದಲ್ಲಿ ಸ್ವಾಭಾವಿಕ ಶ್ರವಣ ಅಸ್ಥಿಗೆ ಬದಲಾಗಿ ಕೃತಕ ಅಸ್ಥಿಯನ್ನು ಜೋಡಿಸಲಾಗುತ್ತದೆ. ಕೂಡಲೇ ರೋಗಿಯು ಉಲ್ಲಾಸದಿಂದ 'ನನಗೆ ಈಗ ಕಿವಿ ಕೇಳಿಸುತ್ತದೆ' ಎಂದು ಹೇಳತೊಡಗುತ್ತಾನೆ.

ವಿದ್ಯಾರ್ಥಿಗಳಿಗೆ ಕರೆ

ಮಣಿಪಾಲ, ಮಾ. ೧೦.-ದೇಶವನ್ನು ಮುಕ್ತಿಗೊಳಿಸಬೇಕಾಗಿರುವ ವಿದ್ಯಾರ್ಥಿಗಳು ಈಗಿನ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಕಾರ್ಯೋನ್ಮುಖರಾಗಬೇಕೆಂದು ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಎಮೆರಿಟಸ್ ಪ್ರೊಫೆಸರ್ ಡಾ| ಜೆ. ಡಿ. ವೇಲಿಯತ್‍ರವರು ಇಂದಿಲ್ಲಿ ಒತ್ತಿ ಹೇಳಿದರು.

ವಿಶ್ವವಿದ್ಯಾನಿಲಯಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದಿರುವುದನ್ನು ಅವರು ತೀವ್ರವಾಗಿ ಟೀಕಿಸಿ ಇಂತಹ ಅಹಿತಕಾರಿ ಕ್ರಮಗಳಿಗೆ ವಿದ್ಯಾರ್ಥಿಗಳು ವಿರೋಧ ಸೂಚಿಸಬೇಕೆಂದು ಕಸ್ತೂರ್ಬಾ ಮೆಡಿಕಲ್ ಕಾಲೇಜ್ ವಿದ್ಯಾರ್ಥಿ ಸಂಘದ ಮುಖ್ಯ ಭಾಷಣ ಮಾಡುತ್ತ ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವಾಚರಣೆಯ ಅಂಗವಾಗಿ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ। ಕೆ. ಕೃಷ್ಣಸ್ವಾಮಿಯವರು ಮಾತನಾಡಿ ವಿಶ್ವವಿದ್ಯಾನಿಲಯದ ಪ್ರಗತಿಯನ್ನು ವಿವರಿಸಿದರು.

ವಿದ್ಯಾರ್ಥಿನಾಯಕ ಶ್ರೀ ಬಾಬು ರಾಜೇಂದ್ರನ್‍ರವರು ವರದಿಯನ್ನೋದಿದ ನಂತರ ಡೀನ್ ಡಾ॥ ಎ. ಕೃಷ್ಣರಾವ್‍ರವರು ಮಾತನಾಡಿದರು ಡಾ॥ ವೇಲಿಯತ್‍ರವರು ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಇತ್ತಿಯವಿರಾ ಫಿಲಿಫೋಸ್‍ರವರು ವಂದನೆಗಳನ್ನು ಅರ್ಪಿಸಿದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಾ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by M. H. Shetty at the Navayuga Press, Udipi, S. India.

ನವಯುಗ

30—3—1967

೨೦
ಪೈ. ಸೆ.

ಕಥಾ ಪ್ರಪಂಚ

ಸಾವಿನ ದವಡೆಯಲ್ಲಿ...

೧

ಬರೆದವರು : ಶ್ರೀ ವ್ಯಾಸಲಿನ್ ಆಂಡ್ರೀವ್.

"ಪ್ರಾಯಶಃ ಅದು ಇಂದು ಬರಲಾರದು—" ವಿಹಿರ್ ಅನಿಶ್ಚಿತವಾಗಿ ನುಡಿದ.

"ಅದು ಬಂದೇ ಬರುವುದು!' ಸ್ವಾಮೆನ್ ದೃಢವಾಣಿಯಿಂದ ಹೇಳಿದ.

'ಹೇಳುವುದು ಕಷ್ಟ—'

"—ಅದು ಖಂಡಿತ ಬರುವುದೆಂದು ನಾನು ಹೇಳುತ್ತೇನೆ ಅಂದರೆ—" ಸ್ವಾಮೆನ್ ಸ್ವಲ್ಪ ತಾಳ್ಮೆಗೆಟ್ಟು ನುಡಿದ.

ವಿಹಿರ್ ಸ್ವಾಮೆನ್‌ನ ಮುಖವನ್ನೇ ಗಮನಿಸಿದ. ಸ್ವಾಮೆನ್‌ನ ಆತ್ಮವಿಶ್ವಾಸ, ಅವನ ತಿಳಿವಳಿಕೆ ತನಗೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು ಬಗೆದ. ಆದರೆ—

'ಅದು ಬಂದೇ ಬರುವುದೆಂದು ನಿನಗೆ ಹೇಗೆ ಗೊತ್ತು?"

"ಅದೇನು ಮಹಾ! ಸ್ವಾಮೆನ್ ನುಡಿದ. "ಬೆಟ್ಟ ಗುಡ್ಡಗಳ ಪ್ರದೇಶದಲ್ಲಿ ಹೆಚ್ಚುಕಾಲ ವಾಸಿಸಿರುವವರಿಗೆ ಅದು ತಾನಾಗಿಯೇ ತಿಳಿಯುವುದು. ಅನುಭವದಿಂದೊದಗುವ ತಿಳಿವಳಿಕೆ ಎಂದು ಹೇಳು, ಬೇಕಿದ್ದರೆ. ಅಲ್ಲದೆ ನಾನು ಬೇಟೆಗಾರ-"

ತಾನೆಂದೂ ಬೇಟೆಗಾರನಲ್ಲವೆಂಬುದನ್ನ ವಿಹಿರ್ ಜ್ಞಾಪಿಸಿಕೊಂಡ. ಗುಡ್ಡಗಾಡಿನ ಜೀವನವಂತೂ ಅವನಿಗೆ ತೀರ ಅಪರಿಚಿತ. ತಾನಾದರೋ ಪಟ್ಟಣವಾಸಿಯೆಂಬುದು ಅವನ ಮುಖವೇ ಎತ್ತಿ ತೋರಿಸುತ್ತಿತ್ತು. ತನಗೆ ನಾಚಿಕೆಯೆನಿಸದಿದ್ದರೆ ಸ್ವಾಮೆನ್‌ನ ಕಡೆಯ ನಿಶ್ಚಿತ ಹೇಳಿಕೆಗೆ ಆಧಾರವೇನೆಂದು ಅವನು ಕೇಳುವವನಿದ್ದನು. ಆದರೆ ಸ್ವಾಮೆನ್‌ನೇ ಮಾತನಾಡ ತೊಡಗಿದನು.

"ಇಲ್ಲಿ ನೋಡು! ಹುಲ್ಲು ಹೊಸದಾಗಿ ಚಿಗುರಿ ಹಸಿರಾಗಿ ಕಾಣಿಸುತ್ತಿದೆ. ಇದನ್ನು ಯಾವ ಪ್ರಾಣಿಯೂ ಇನ್ನೂ ತುಳಿದಿಲ್ಲ.

ತಮ್ಮ ಆಗು ಹೋಗುಗಳಿಗೆ ಕಾರಣರಾಗಿರುವ ಗೆಳೆಯರೊಬ್ಬರನ್ನು ಕುರಿತು ಚರ್ಚಿಸುವಂತೆ ಅವರು ಮಾತನಾಡುತ್ತಿದ್ದರು. ಆದರೆ ಅವರು ನಿರೀಕ್ಷಿಸುತ್ತಿದ್ದ ಅಥವಾ ಕಾತರಪಡುತ್ತಿದ್ದ ಪ್ರಾಣಿ ಅಥವಾ ವ್ಯಕ್ತಿ ಒಂದು ರೀತಿಯಲ್ಲಿ ಅವರ ಪ್ರಾಣ ಕಾಪಾಡುವುದಾಗಿದ್ದಿತು. ಹಲವಾರು ದಿನಗಳಿಂದ ಅವರು ಕಾಡುಗಾಡಿನಲ್ಲಿಯೇ ಪ್ರಯಾಣ ಮಾಡುತ್ತಿದ್ದರು—ಯುದ್ಧದಲ್ಲಿ ತಮ್ಮ ಸೈನ್ಯದಳದಿಂದ ಬೇರೆಯಾದಾಗಿನಿಂದ, ಶತ್ರುಗಳ ಕಣ್ಣಿಗೆ ಬೀಳದೆ ತಪ್ಪಿಸಿಕೊಳ್ಳುವುದು ಅವರ ಮೊದಲ ಕರ್ತವ್ಯವಾಗಿತ್ತು. ಶತ್ರುಗಳಿಂದ ದೂರವಾದೊಡನೆಯೇ ಅವರ ಸೈನ್ಯದಳದೊಡನೆ ಸಂಪರ್ಕವೂ ಕಡಿದುಹೋಗಿರುವುದು ಅವರ ಅರಿವಿಗೆ ಬಂತು. ಕಾಡುದಾರಿಯಲ್ಲಿ ಪ್ರಯಾಣ ಮುಂದುವರಿಸುವುದೇ ಅವರಿಗೆ ಉಳಿದ ಮಾರ್ಗವಾಯಿತು. ಹಳ್ಳಿಗಳನ್ನು ಪ್ರವೇಶಿಸುವುದೆಂದರೆ ಗುಂಡಿನ ಸುರಿಮಳೆಗೆ ಪ್ರಾಣವನ್ನು ಬಲಿಕೊಟ್ಟಂತೆಯೇ.

ಮೇಲೆ, ನೀಲಿಯಾಕಾಶದಲ್ಲಿ ಹಾರಿ ಹೋಗುತ್ತಿದ್ದ ಪಕ್ಷಿಯೊಂದು ವಿಹಿರ್‌ನ ಕಣ್ಣಿಗೆ ಬಿತ್ತು. ಆ ಪಕ್ಷಿ ಸೋಫಿಯಾ ಕಡೆ ಹಾರಿಹೋಗುತ್ತಿತ್ತು. ತನ್ನ ಪ್ರೇಯಸಿ ಇರುವುದು ಸೋಫಿಯಾದಲ್ಲಿಯೇ—ಕಾರಾಗೃಹವೊಂದರಲ್ಲಿ ಎಂಬುದು ವಿಹಿರನಿಗೆ ತಟ್ಟನೆ ಜ್ಞಾಪಕಕ್ಕೆ ಬಂದು ಮುಖ ಬಾಡಿತು. ಸ್ವಾಮೆನ್‌ನ ಮನಸ್ಸೂ ಎಲ್ಲಿಯೋ ದೂರ—ಪ್ರಾಯಶಃ ಮಡದಿ ಮಕ್ಕಳ ಬಳಿ ಸುಳಿದಾಡುತ್ತಿರುವಂತೆ ವಿಹಿರ್‌ನಿಗೆ ಭಾಸವಾಯಿತು. ತಕ್ಷಣವೇ ಸ್ವಾಮೆನ್ ಮತ್ತು ವಿಹಿರ್ ಎರಡು ಭಾರಿ ಮರಗಳ ಹಿಂದೆ ಬೋರಲಾಗಿ ಬಿದ್ದುಕೊಂಡರು. ಕೊನೆಗೂ ಅವರು ನಿರೀಕ್ಷಿಸುತ್ತಿದ್ದ ಜಿಂಕೆ ಹುಲ್ಲು ಮೈದಾನಕ್ಕೆ ಬಂದೇ ಬಂದಿತು—ಅದರ ಜೊತೆಯಲ್ಲಿ ಪುಟ್ಟ ಮರಿ ಬೇರೆ.

ಸ್ವಾಮೆನ್ ಮತ್ತು ವಿಹಿರ್ ಜಿಂಕೆ ಮತ್ತು ಮರಿಯನ್ನು ಮರಗಳ ಹಿಂದಿನಿಂದ ಗಮನಿಸತೊಡಗಿದರು. ಸುತ್ತಲೂ ಹಸಿರು ಮೈದಾನ—ಅವುಗಳಿಗೆ ಬೇಲಿ ಹಾಕಿದಂತೆ ಸುತ್ತಲೂ ಮರಗಿಡಗಳು—ಮೇಲೆ ನೀಲಿಯಾಕಾಶ. ಇಂತಹ ಪ್ರಕೃತಿ ಸೊಬಗು ಸ್ವಾಮೆನ್‌ನಿಗೆ ಹೊಸದಲ್ಲದಿದ್ದರೂ ಅಂದು ಅವೆಲ್ಲ ಹೊಸದಾಗಿಯೇ ಕಾಣಿಸುತ್ತಿದ್ದುವು. ಜಿಂಕೆ ಹುಲ್ಲು ಕಡ್ಡಿಗಳನ್ನು ತಿನ್ನುತ್ತಿತ್ತು. ಮರಿ ಕುಣಿಯುತ್ತ, ನೆಗೆಯುತ್ತ ಆಡುತ್ತಿತ್ತು.

ಜಿಂಕೆ ಎಚ್ಚರದಿಂದ ಮುಂದು ಮುಂದೆ ಹೋಗತೊಡಗಿತು. ಪ್ರಾಯಶಃ ಅದಕ್ಕೆ ಬಾಯಾರಿಕೆಯೋ, ಸ್ವಾಮೆನ್ ಯೋಚಿಸತೊಡಗಿದ. ಹುಲ್ಲಿನ ಮೇಲಿನ ಹಿಮವನ್ನು ಅದು ಹೀರುವುದಕ್ಕೆ ಕಾತುರಗೊಂಡಿರಬೇಕು. ಜಿಂಕೆಯ ಕತ್ತು ಮೇಲಿದ್ದಿತು. ಅದರ ಕಣ್ಣುಗಳು ಚಂಚಲದಿಂದ, ಗಾಬರಿಯಿಂದ ಸುತ್ತ ನೋಡತೊಡಗಿದವು. ಅದಕ್ಕೆ ಪ್ರಾಯಶಃ ಗಾಬರಿಯಾಗಿದೆಯೆಂದು ಅವನು ಬಗೆದ. ಜಿಂಕೆಯ ಆಗಿನ ಬೆಡಗಿನ ನೋಟ ಸ್ವಾಮೆನ್‌ನನ್ನು ಮುಗ್ಧಗೊಳಿಸದೆ ಹೋಗಲಿಲ್ಲ. ಅದರ ಮರಿಯಾಟ ಸ್ವಾಮೆನ್ನಿನ ಮಗುವಿನ ಆಟವನ್ನು ಜ್ಞಾಪಕಕ್ಕೆ ತಂದಿತು. ಮಡದಿ ಮಕ್ಕಳ ಜ್ಞಾಪಕ ಬಂದು ಸ್ವಾಮೆನ್ ನಿಟ್ಟುಸಿರು ಬಿಟ್ಟ.

ವಿಹಿರ್—ಅವನ ಮನಸ್ಸು ಸೋಫಿಯಾದ ಕಾರಾಗೃಹದಲ್ಲಿರುವ ಪ್ರೇಯಸಿಯೆಡೆಗೆ ಹರಿಯತೊಡಗಿತು.

ಸ್ವಾಮೆನ್ ವಿಹಿರ್‌ನತ್ತ ತನ್ನ ಗಮನ ಹರಿಸತೊಡಗಿದ. ಅವನ ಯೌವನದ ಮುಖ ಅವನ ಉತ್ಸಾಹ ಕೂಡಲು ಅವನನ್ನು ಸುಂದರನೆಂದು ಸಾರುವಂತಿದ್ದವು. ವಿಹಿರ್ ಜಿಂಕೆಯನ್ನೇ ದಿಟ್ಟಿಸಿ ನೋಡುತ್ತಿದ್ದ.

"ವಿಹಿರ್!" ಸ್ವಾಮೆನ್‌ನ ಧ್ವನಿಯಲ್ಲಿ ಕಾತರತೆಯಿತ್ತು. "ನೀನು ಜಿಂಕೆಯತ್ತ ಗುಂಡು ಹಾರಿಸುವ ಯೋಚನೆ ಮಾಡುತ್ತಿಲ್ಲವಷ್ಟೆ?—"

ವಿಹಿರ್ ಸ್ವಾಮೆನ್‌ನ ಕಡೆ ನೋಟ ತಿರುಗಿಸಿದ.

'ನೀನು ಗುಂಡು ಹಾರಿಸಿದುದೇ ಆದರೆ ನಾವಿಲ್ಲಿರುವುದು ಶತ್ರುಗಳಿಗೆ ಪತ್ತೆಯಾಗಿ ಹೋದೀತು—"

"ನಾನೇನು ಹುಚ್ಚನೋ ಅಥವಾ ಬುದ್ಧಿಯಿಲ್ಲದವನೊ?'

"ಹಾಗಲ್ಲ,' ಸ್ವಾಮೆನ್ ನುಡಿದ. "ನಮ್ಮ ಕ್ಷೇಮದ ಬಗ್ಗೆ ಯೋಚನೆ ಇರಲಿ!"

ವಿಹಿರ್ ಮತ್ತೊಮ್ಮೆ ಸ್ವಾಮೆನ್‌ನತ್ತ ತನ್ನ ದೃಷ್ಟಿ ಬೀರಿದ. 'ನಮ್ಮ ಕ್ಷೇಮಕ್ಕಾಗಿಯಲ್ಲವ ಸ್ವಾಮೆನ್ ಗುಂಡು ಹಾರಿಸಬೇಡವೆಂದು ಹೇಳುತ್ತಿರುವುದು. ಇಲ್ಲದಿದ್ದರೆ ಅವನು ಜಿಂಕೆಯನ್ನು ಖಂಡಿತವಾಗಿ ಕೊಲ್ಲುತ್ತಿದ್ದ"— ಸ್ವಾಮೆನ್ ಎಷ್ಟಾದರೂ ಬೇಟೆಗಾರ. ದಯೆ ದಾಕ್ಷಿಣ್ಯಗಳು ಅವನ ಬಳಿ ಸುಳಿಯುವಂತಿರಲಿಲ್ಲ. ಅವನ ಗಡಸು ಮನಸ್ಸು, ಹಾಗೂ ಧೈರ್ಯಗಳು ವಿಹಿರ್‌ನ ಮೆಚ್ಚುಗೆ ಗಳಿಸಿದ್ದುವು. ವಿಹಿರ್ ಜಿಂಕೆಯ ಮಾಂಸವನ್ನು ಎಂದೂ ಸವಿದಿರಲಿಲ್ಲ. ಸ್ವಾಮೆನ್‌ನನ್ನು ನೋಡುತ್ತಿದ್ದಂತೆಯೇ ಅವನಿಗೆ ಜಿಂಕೆಯ ಮಾಂಸದ ಮೇಲೆ ಬಯಕೆ ಹುಟ್ಟಿತು. ಅವನ ಹಸಿವು ತೀಕ್ಷ್ಣವಾದಂತೆ ತೋರಿತು. ಜೊಲ್ಲು ನುಂಗುತ್ತಾ ಅವನು ಹೇಳಿದ:

"ಇಬ್ಬರ ಊಟಕ್ಕಾಗಿ ಆ ಜಿಂಕೆ ಕೊಲ್ಲುವುದು ವ್ಯರ್ಥವೆನಿಸುತ್ತದೆ?— ವಿಹಿರ್ ಹೇಳಿದ. "ನಮ್ಮ ಊಟಕ್ಕಾಗಿ ಹೆಚ್ಚಿನ ಮಾಂಸ ಉಳಿದು ಬಿಡುತ್ತದೆ!"

'ನಿಜ ನಿಜ!' ಸ್ವಾಮೆನ್ ಗೊಣಗಿದ. "ಮಾಂಸ ಪೋಲಾಗುವುದೆಂದು ವಿಹಿರ್‌ನಿಗೆ ಪರಿತಾಪ—ಪ್ರಾಣಿಯನ್ನು ಕೊಲ್ಲಬೇಕೆಂದಲ್ಲ—"

ವಿಹಿರ್ ಮತ್ತು ಸ್ವಾಮೆನ್ ಪರಸ್ಪರ ತಮ್ಮ ಭಾವನೆ ಹೊಂದದೆ ಸಾಧ್ಯವಾಗಲಿಲ್ಲ. ಆದರೂ ಜಿಂಕೆಯನ್ನು ಕೊಲ್ಲಲು ಅವರು ಹಿಂತೆಗೆಯುತ್ತಿದ್ದುದಕ್ಕೆ ನಿಜವಾದ ಕಾರಣ ಶತ್ರುಗಳ ರಕ್ತದಾಹದಿಂದ ಅವರಿಗುಂಟಾಗಿದ್ದ ಜಿಗುಪ್ಸೆಯೇ ಆಗಿದ್ದಿತು. ಇದನ್ನು ಸ್ವಾಮೆನ್‌ನಾಗಲೀ ವಿಹಿರ್ ಆಗಲೀ ಬಹಿರಂಗ ಪಡಿಸಲಿಲ್ಲ. ಆದರೆ ಅದು ಅವರ ಅಂತರಾಳದಲ್ಲಿ ಕಲಸವಾಡುತ್ತಿತ್ತು. ಅವರೂ ಕೊಲ್ಲುವ ಇಚ್ಛೆಯುಳ್ಳವರೇ ಆದರೆ ಅವರು ಜನರನ್ನು ಕೊಲ್ಲುವ ಇಚ್ಛೆಯುಳ್ಳವರಾಗಿರಲಿಲ್ಲ.

ಸ್ವಾಮೆನ್ ಮತ್ತು ವಿಹಿರ್ ಒಬ್ಬರನ್ನೊಬ್ಬರು ಅನಿಶ್ಚಿತ ರೀತಿಯಿಂದ ನೋಡತೊಡಗಿದರು. ತಾವು ನಿಜವಾಗಿಯೂ ಜಿಂಕೆಯನ್ನು ಕೊಲ್ಲದ ಇರುವುದು ಸಾಧ್ಯವೇ ಎಂಬಂತೆ ಅವರ. ಒಬ್ಬರನ್ನೊಬ್ಬರು ನೋಡುತ್ತಿರುವಂತೆ ತೋರಿತು.

ಮರುಕ್ಷಣದಲ್ಲಿಯೇ ಸ್ವಾಮೆನ್ ಹೊಟ್ಟೆ ಮೇಲೆ ತೆವಳಿಕೊಂಡು ಮುಂದು ಮುಂದೆ ಹೋದುದು ವಿಹಿರ್‌ನ ಗಮನಕ್ಕೆ ಬಂದಿತು. ಎರಡೂ ಮೊಣಕೈಗಳನ್ನೂರಿ ಅವನು ಬಂದೂಕಿನಿಂದ ಜಿಂಕೆಯ ಕಡೆಗುರಿಯಿಡಲಾರಂಭಿಸಿದ! ಬೇಡವೆಂದು ವಿಹಿರ್ ಕಿರಿಚಲಿಲ್ಲ— ಚೀರಲಿಲ್ಲ. ಅವನ ಗಂಟಲಿನಲ್ಲೊಂದು ಸೀಸದ ಗುಂಡು ಅಡ್ಡವಿದ್ದಂತೆ ಅವನಿಗೆ ತೋರಿತು.

"ದಯವಿಟ್ಟು ಬೇಡ— ಸ್ವಾಮೆನ್, ದಯವಿಟ್ಟು— 'ವಿಹಿರ್ ಮೆಲುದನಿಯಲ್ಲಿ ಬೇಡಿದ.

'ಷ!' ಸ್ವಾಮೆನ್ ಪಕ್ಕಕ್ಕೆ ತಿರುಗಿ ನೋಡುತ್ತಾ ತನ್ನ ಕೈ ಬೀಸಿದ.' ಕೂಗಬೇಡ!'

ಕಾತರತೆಯಿಂದ ವಿಹಿರ್ ಜಿಂಕೆಯತ್ತ ನೋಡಿದ ಅದು ತನಗೆ ಕಾದಿರುವ ವಿಪತ್ತಿನ ಪರಿವೆಯೇ ಇಲ್ಲದ ಮೇಯುತ್ತಿತ್ತು. ಅದಕ್ಕೆ ಮನುಷ್ಯರ ವಾಸನೆ ಬಂದಂತೆ ತೋರಲಿಲ್ಲ. ಗಾಳಿ ಎದುರು ದಿಕ್ಕಿಗೆ ಬೀಸುತ್ತಿತ್ತು.

ಢಮಾರ್! ಗುಂಡಿನ ಶಬ್ದ ನಿಶ್ಶಬ್ದ ಕಣಿವೆಯನ್ನು ತುಂಬಿತು. ಸ್ವಾಮೆನ್‌ನ ಬಂದೂಕಿನಿಂದ ಹೊಗೆ ಬರುತ್ತಿತ್ತು.

ಜಿಂಕೆ ಎಲ್ಲಿಯಂತ ಧಂಧರನೆ ನಡುಗಿತು—ತಲೆಯನ್ನು ತಿರುಗಿಸಿ ಒಂದೇ ವೇಗದಲ್ಲಿ ಓಡತೊಡಗಿತು—ಮರಿಜಿಂಕೆ ತಾಯಿಯನ್ನು ಹಿಂಬಾಲಿಸಿತು. ಬೆರಗಿನಿಂದ ಆ ಜಿಂಕೆ ಓಡುತ್ತಿದ್ದುದು ಎಂತಹ ಸುಂದರ ನೋಟ!

ವಿಹಿರ್ ಸಮಾಧಾನದ ನಿಟ್ಟುಸಿರು ಬಿಟ್ಟ. ಜಿಂಕೆ ತಪ್ಪಿಸಿಕೊಂಡುದಕ್ಕೆ ಅವನಿಗಾದ ಸಂತೋಷ ಅವನ ಮುಖದ ಮೇಲೆ ಎದ್ದು ಕಾಣಿಸುವಂತಿತ್ತು.

(ಹತ್ತನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೧	೩೦—೩—೧೯೬೭	No. 31

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ....
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಒಹಿಯೊ ಸ್ಟೇಟ್ ಯುನಿವರ್ಸಿಟಿಯಲ್ಲಿಯ ವಿದ್ಯಾರ್ಥಿಗಳು ತಮ್ಮ ಕ್ರಮಗತ ಕ್ಲಾಸು ಕೋಣೆಯ ಉಪನ್ಯಾಸಗಳ ಪೂರಕವಾಗಿ ಟೇಪ್ ರೆಕಾರ್ಡರ್ ಲೆಕ್ಚರು ಅಥವಾ ಸಂಗೀತವನ್ನು ಕೇಳುವುದಕ್ಕಾಗಿ ಕೀ ನಂಬ್ರವನ್ನು ತಿರುಗಿಸುತ್ತಿದ್ದಾರೆ.

ದೃಷ್ಟಿ ಅಂತರ್ಮುಖವಾಗಲಿ

ಈ ವರ್ಷದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಸಭೂತವಾದ ಪರಾಭವನ್ನು ಏಕೆ ಪಡೆಯಿತು? ಇದಕ್ಕೆ ಕಾರಣಗಳು ಒಂದಲ್ಲ ನೂರು ಇರಬಹುದು, ಇವೆಯೆಂಬುದೂ ನಿಜ. ಆಡಳಿತೆಯ ಲೋಪದೋಷಗಳನ್ನು ತ್ರಿವಿಕ್ರಮನನ್ನಾಗಿಸಿ ವಿರೋಧ ಪಕ್ಷಗಳು ನೃತ್ಯವಾಡಿವೆ. ಇದೇ ಮಹತ್ವಾಕಾಂಕ್ಷೆಯಿಂದ ಕೂಡಿದ ನಮ್ಮ ಮೂರನೆಯ ಯೋಜನೆ, ದೇಶಕ್ಕೆ ಬಾಹ್ಯರಂಗಗಳಿಂದಾದ ಆಕ್ರಮಣ, ನಡೆದ ಹೋರಾಟ, ಆಂತರಿಕವಾಗಿ ನಿಸರ್ಗದ ಚೆಂಡಾಟ-ಇವುಗಳೊಂದಿಗೆ ಆಡಳಿತೆಯ ಬಿಗಿತವೂ ಸಡಿಲವಾಯಿತು; ವಿದೇಶಗಳ ಮುಂದೆ ಕಿತ್ತಿನ ಚೀಲ ಚಾಚ ಹೋದ ನಾವು, ಅವರ ಭರ್ತ್ಸನೆ—ನಿಂದನೆಗಳಿಂದ ಪಾರಾಗುವುದು ಸಾಧ್ಯವೂ ಆಗಲಿಲ್ಲ. ಹಾಗಾಗಿಯೇ ಇರಬೇಕು, ರೂಪಾಯಿಯ ಅಪಮೌಲ್ಯವನ್ನು ಸರಕಾರ ಘೋಷಿಸಿತು.

ಮೌಲ್ಯವಿಚ್ಛೇದನ ನಡೆದು ಈಗ ವರ್ಷವೊಂದು ಗತಿಸುತ್ತ ಬರುತ್ತಿದೆ. ಮುಖ್ಯವಾಗಿ ವಿದೇಶೀಯರ ಒತ್ತಾಯಕ್ಕೆ ಮಣಿದು ಸರಕಾರ ಈ ದಿಟ್ಟ ಹೆಜ್ಜೆ ಇಟ್ಟಿತು—ಇದನ್ನು ಪ್ರಧಾನಿ ಗಾಂಧಿಯವರಾಗಲೀ ಅವರ ಸಹಚಾರಿಗಳಾಗಲೀ ಒಪ್ಪುವುದಿಲ್ಲ; ಒಪ್ಪುವುದು ಸಾಧ್ಯವೂ ಅಲ್ಲ. ಈ ಸಂಬಂಧದಲ್ಲಿ ವಿದೇಶಗಳೊಡನೆ ಏನಾದರೂ ಮಾತುಕತೆ—ಸಮಾಲೋಚನೆ ಮಾಡಿದ್ದೇ ಇದ್ದರೆ, ಅದು ರಹಸ್ಯವಾದುದು, ಬಹಿರಂಗ ಚರ್ಚೆಗೆ ಅದು ಎಟಕಲಾಗದು. ಸೂರ್ಯನನ್ನು ಮೋಡ ಕವಿದರೂ ಪ್ರಕಾಶಕ್ಕೆ ಕುಂದಿಲ್ಲ; ಸತ್ಯವನ್ನು ಬಹುಕಾಲ ಬಚ್ಚಿಡುವುದೂ ಸಾಧ್ಯವಿಲ್ಲ. ಅಂತೂ ಸರಕಾರ ಮೌಲ್ಯವಿಚ್ಛೇದನದಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಹೊಸ ದಾರಿ ತೋರುವುದು ಎಂದು ಅಂದು ನಂಬಿತ್ತು. ನಿರ್ಯಾತದ ಪ್ರಮಾಣವು ಹಿಗ್ಗುವುದೆಂದೂ ತನ್ಮೂಲಕ ವಿದೇಶೀ ವಿನಿಮಯದ ಗಳಿಕೆ ಹೆಚ್ಚುವುದೆಂದೂ ಸರಕಾರ ವಿಶ್ವಸಿತ್ತು. ಆದರೆ, ಇದಿನ್ನೂ ಕೈಗೂಡಿರುವುದಿಲ್ಲ. ಜನತೆಯು ಅಪಮೌಲ್ಯದ ಹಿಂದಿದ್ದ ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ಸಚೀಂದ್ರ ಚೌಧರಿಯವರನ್ನು ಪ್ರಚಂಡ ಬಹುಮತದಿಂದ ಸೋಲಿಸಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದೆ— ಪ್ರಜಾಪ್ರಭುತ್ವದಲ್ಲಿ ಇದೊಂದು ದಾಖಲೆಯಲ್ಲದೆ ಮತ್ತೇನು? ಒಮ್ಮೆ ಮಾಡಿಕೊಂಡ ಮೌಲ್ಯ ವಿಚ್ಛೇದನವು ನಮಗೆ ಹಾನಿಯನ್ನು ಮಾಡಲಿಲ್ಲವೆಂದು ಸರಕಾರ ಭಾವಿಸಿ ಸಮಾಧಾನ ಪಡಬಹುದು. ಆದರೆ, ಯಾವ ಲಾಭವನ್ನೂ ಮಾಡಲಿಲ್ಲ ಎಂಬುದು ಹಗಲಿನಷ್ಟು ಸತ್ಯ. ಅದಲ್ಲದೂ ಸಂಸತ್ತಿನಲ್ಲಿ "ಅಪಮೌಲ್ಯವಿಲ್ಲ"ವೆಂದು ಒಂದರ ಮೇಲೊಂದರಂತೆ ಭರವಸೆ ನೀಡುತ್ತ ಬಂದು ಒಮ್ಮಿಂದೊಮ್ಮೆಗೇನೇ ಬಾಂಬು ಸಿಡಿದಂತೆ ಅನಿರೀಕ್ಷಿತ ಘೋಷಣೆ ಕೇಳಿ ಬಂದುದರಿಂದ ವಜ್ರಾಘಾತವೇ ಆಗಿತ್ತೆಂದರೆ ವಿಸ್ಮಯವಲ್ಲ. ಈಗ ಮತ್ತೆ ಅಪಮೌಲ್ಯದ ಪಿಸುಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಮೊರಾರ್ಜಿಭಾಯಿಯವರು ಭರವಸೆ ನೀಡುತ್ತಿದ್ದಾರೆ. ನನ್ನ ಕೈಗಳಲ್ಲಿ ವಿತ್ತಖಾತೆಯಿರುವಷ್ಟುಕಾಲ ಅಪಮೌಲ್ಯವಿಲ್ಲ. ಇದೇ ಮೊರಾರ್ಜಿಯವರು ಅಪಮೌಲ್ಯದಿಂದ ನಿರೀಕ್ಷಿತ ಪ್ರಯೋಜನ ದೇಶಕ್ಕೆ ಲಭಿಸಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಅಪಮೌಲ್ಯಕ್ಕಿಂತ ಆರ್ಥಿಕ ಸ್ಥಿತಿಯನ್ನು ಎತ್ತರಿಸುವುದೇ ಅರ್ಥ ಭದ್ರತೆಯ ಬುನಿಯಾದಿಯೆಂಬುದು ಅವರ ಸ್ಪಷ್ಟ ಅಂಬೋಣ. ಇದಕ್ಕಾಗಿ ಏನೇನನ್ನೆಲ್ಲ ಮಾಡಬೇಕು, ಅವನ್ನೆಲ್ಲಾ ಸರಕಾರ ಮಾಡಿಯೇ ಮಾಡುವುದು ಎಂದೂ ಅವರ ಅಭಿಪ್ರಾಯ. ಮೌಲ್ಯ ವಿಚ್ಛೇದನದಿಂದ ವಿದೇಶೀ ವಿನಿಮಯ ಸಂಪಾದನೆ ಹೆಚ್ಚಬೇಕಿದ್ದರೂ ಮಾರುಕಟ್ಟೆಯ ಸ್ಥಿತ್ಯಂತರಗಳಿಂದಾಗಿ ಹಾಗಾಗಲಿಲ್ಲ—ಇದು ಒಪ್ಪತಕ್ಕ ಮಾತು. ಅಪಮೌಲ್ಯದ ಪರಿಣಾಮ ಪ್ರತಿಕೂಲವೇ ಆಗಿದೆಯೆಂದು ಒಪ್ಪುವುದಾದರೂ, ಅನುಕೂಲವೆನ್ನುವುದಾದರೂ— ಅದು ನಡೆದುದು ಸತ್ಯ. ಇಂದು ಅದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೆ, ಮುಂದಕ್ಕೆ ಮಾತ್ರ ಎಚ್ಚರಿಕೆಯಿಂದ ಇಂತಹ ಹೆಜ್ಜೆಯಿಡಬೇಕೆಂಬುದು ಅವಶ್ಯ.

ದೇಶದ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷ ಕಳೆಯಿತು. ಕೇಂದ್ರದಲ್ಲಾಗಲೀ ರಾಜ್ಯಗಳಲ್ಲಾಗಲೀ ಈ ವರ್ಷ ಯಾವ ಯೋಜನೆಯೂ ಇಲ್ಲದೆ ಯೋಜನೆಯನ್ನು ಮುಂದುವರಿಸಲಾಯಿತಷ್ಟೆ. ವಿದೇಶೀ ಸಹಾಯದ ಮೊತ್ತ ನಿರ್ಣಯಾತ್ಮಕ ತಿಳಿಯದೆ ಹೋದುದರಿಂದ ಇಂತಹ ಪರಿಸ್ಥಿತಿ ತಲೆದೋರಿತು. ಇದೇ ರೀತಿಯಲ್ಲಿ ನಾವು ಮುಂದುವರಿಯುವುದಾದರೆ, ನಮಗೂ ಒಂದು ಯೋಜನೆ ಬೇಕೆ? ಅನ್ನಿಸುತ್ತಿದೆ. ದೇಶದ ಆಂತರಿಕ ಸಂಪತ್ತಿನ ಸಂಪೂರ್ಣ ಉಪಯೋಗ ಮಾಡದೆ ಇದ್ದರೆ, ನಮ್ಮ ಉದ್ಧಾರ ಕಂಡಿತವಾಗಿಯೂ ಅಸಾಧ್ಯ. ಬಹಿರ್ಮುಖವಾದ ನಮ್ಮ ದೃಷ್ಟಿಯನ್ನು ಅಂತರ್ಮುಖವಾಗಿಸುವುದು ನಮ್ಮ ಇಂದಿನ ಪ್ರಥಮ ಕರ್ತವ್ಯ. ಇದಕ್ಕೆ ನಾವು ತಪ್ಪಿದರೆ, ರಾಬಿಯಿಲ್ಲದ ರೈಲು ಎಲ್ಲೆಲ್ಲೋ ಓಡುವಂತಾದೀತು.

ವಿಚಿತ್ರ ಸತ್ಯಗಳು

ರಾಜಸ್ಥಾನದಲ್ಲಿ ವಿಪರೀತ ಪರಿಸ್ಥಿತಿ ತಲೆದೋರಿ ಸುಖಾದಿಯಾ ಅನಿವಾರ್ಯ ಬದ್ಧ ಸಚಿವ ಸಂಪುಟ ರಚಿಸುವುದರಲ್ಲಿ ಸುಖವಿಲ್ಲ ಎಂದು ತಿಳಿದು ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸಿದುದರಿಂದ ಅಲ್ಲಿ ಅನಿವಾರ್ಯವಾಗಿ ರಾಷ್ಟ್ರಪತಿಗಳ ಆಳಿಕೆಯನ್ನೇ ಹೇರಬೇಕಾಯಿತು. ಈಗ ಅಲ್ಲಿ ವಿರೋಧಿ ಪಕ್ಷಗಳ ಸಂಯುಕ್ತ ರಂಗಕ್ಕೆ ಸರಕಾರ ರಚಿಸುವ ಅವಕಾಶ ನೀಡುವ ಬಗ್ಗೆ ಬಿರುಸಿನ ವಿಚಾರ ನಡೆದಿದೆ. ಹರಿಯಾನಾದಲ್ಲಿ ಕಾಂಗ್ರೆಸ್ಸು ನಿಚ್ಚಳ ಬಹುಮತ ಪಡೆದಿದ್ದರೂ ಆಂತರಿಕ ಮತಭೇದದಿಂದಾಗಿ ಮುಖ್ಯಮಂತ್ರಿ ಶರ್ಮ ರಾಜಿನಾಮೆಯಿತ್ತು ಯುಬೇಕಾಯಿತು. ಈಗ ಅಲ್ಲಿ ಕಾಂಗ್ರೆಸ್ಸೇತರ ಸರಕಾರವು ರಚನೆಗೊಂಡಿತು. ಕೇಂದ್ರ ಶಾಸಿತ ಪ್ರದೇಶ ಪಾಂಡಿಚೇರಿಯ ಕಥೆ ಇನ್ನೂ ವಿಚಿತ್ರ. ಪಕ್ಷದ ಇಬ್ಬರು ರಾಜಿನಾಮೆಯಿತ್ತುದರಿಂ

(ಹತ್ತನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
O. S. No. 679/1966.

ದೇಜಪ್ಪ ಶೆಟ್ಟಿ— ವಾದಿ.

ಮತ್ತು

ಕಾಳುನಾಯ್ಕ—ಗಂಗಯ್ಯ ನಾಯ್ಕರ ಮಗ, ಕಾರ್ಕಳ ತಾಲ್ಲೂಕು ಮಿಯ್ಯಾರು ಗ್ರಾಮದ ಸೂರಾವಿನಲ್ಲಿರುವವ— Post Meiyar.— ಪ್ರತಿವಾದಿ.

ಇವರೊಳಗೆ,

ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸಲ್ಪಡುವದೇನಂದ್ರೆ—

ವಾದಿ ನಿಮ್ಮ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರು ಬಗ್ಗೆ ತಾರೀಕು 17-4-1967ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court.

N. M. Adyanthaya
Advocate for Plaintiff.

Karkala, 23—3—1967.

ನರಸಣ್ಣನ ಸರಸ



'ನಾಲ್ಕು ಕೋಟಿ ರೂಪಾಯಿಗಾಗಿ ನಮ್ಮ ಸರಕಾರ ಹೊಸ ಪ್ರತಿಬಂಧ ಸಡಿಲು ಮಾಡುತ್ತದಂತೆ....'

'ಹಾಗಿದ್ದರೆ, ಅಂಚಾಮೃತದಲ್ಲಿ ಆದರೂ ಒಂದು ಪಾಲು ದೊರಕಬಾರದೆ?"

ಶುದ್ಧ ಹರಟೆ

ಫೀಮೇಲ್ ಸರ್ವೆಂಟ್

ಬರೆದವರು

ಶ್ರೀ ಬಸವರಾಜ ಕುಂಚೂರು.

ಹಾಸಿಗೆಯಿಂದ ಏಳುವಾಗಲೆ ಆರಂಭ ವಾಯ್ತು ನನ್ನ ಮನೆಯವರ ಆಲ್ಲಾರಾಂ.

"ಅಲ್ಲಾರಿ, ಆ ಸುಪರ್‌ನೈಜರ್ ಮನೆಯಲ್ಲಿ ಒಬ್ಬ ಫೀಮೇಲ್ ಸರ್ವೆಂಟ್ ಇದ್ದಾಳೆ. ನೀವು ಲೆಕ್ಚರರ್ ಆಗಿ ಮನೆಯಲ್ಲಿ ಫೀಮೇಲ್ ಸರ್ವೆಂಟ್‌ಗೆ ಗತಿ ಇಲ್ಲ ಅಂದ್ರೇನು"!

"ಹೌದು ತುಂಬಾ ಅಗೌರವ, ನಮ್ಮ ಮರ್ಯಾದೇಗೇನ್ನ, ಕುಂದು ಅಲ್ವಾ? ನೋಡು ನಮ್ಮ ಮನೆ ಕೆಲಸಾನ ನಾವು ಮಾಡಿಕೊಳ್ಳೋಕೆ ನಾಚಿದರೆ ಹೇಗೆ? ನಮ್ಮ ಕೆಲಸಾನ, ನಾವು ಕೈಮುಟ್ಟಿ ಮಾಡದೆ, ಮೈಗಳ್ಳರಾಗಿ, ತಿಂದು, ಉಂಡು ಅಲೆದದ್ದಕ್ಕೆ ನಮ್ಮ ದೇಶಕ್ಕೆ ಇಂಥ ಪರಿಸ್ಥಿತಿ ಬಂದಿರೋದು. ಫಾರಿನ್ ಕಂಟ್ರಿಯಲ್ಲಿ ಅಡಿಗೆ ಮಾಡುವದರಿಂದ ಹಿಡಿದು ಕಕ್ಕಸು ಕ್ಲೀನ ಮಾಡೋದ ಸಹಿತ, ಎಲ್ಲಾ ಸ್ವಂತ ಕೈನೆ, ನನ್ನೆ ತಗೋ, ಜರ್ಮನಿಯಲ್ಲಿ ನಾನಿದ್ದಾಗ ಎಲ್ಲಾ ಕೆಲಸ ನಾನೇ ಮಾಡುತಿದ್ದೆ." 'ಸರಿ ಹೋಯ್ತು, ಮಾತೆತ್ತಿದರೆ, ಜರ್ಮನಿಯಲ್ಲಿ ಹಾಗೆ, ಜರ್ಮನಿಯಲ್ಲಿ ಹೀಗೆ, ಅಂತಾ ಹೇಳಿ ಬಾಯಿ ಮುಚ್ಚಿಸಿಬಿಡ್ತೀರಿ. ಮಾಡೋಳು ಗಟ್ಟಿಯಾದಾಳು, ಸಿಕ್ಕಿದಾಳಂತ ಹೇಳಿ ನಿಮಗೆ ಚಕ್ಕಂದವಾಗಿದೆ. ಮುಂದಿನ ತಿಂಗಳಿಂದ ಫೀಮೇಲ್ ಸರ್ವೆಂಟ್ ಬಂದ್ರೇನೆ, ನಿಮ್ಮ ಮೈಗೆ ಬಿಸಿ ನೀರ ಜಳಕ, ಬಟ್ಟೆಗೆ ಸೋಪಿನ ನೀರು, ಮನೆಗೆ ಕಸಬರಿಗೆ ಸೇವೆ. ಇಲ್ದೆ ಇದ್ರೆ, ಎಲ್ಲಾ ಬಂದ್'....

ಇಷ್ಟೇನು ಹೋಂ ಮಿನಿಸ್ಟರೆ ಗಲಾಟೆ ಮಾಡಿದ ಮೇಲೆ, ಪಾಪ ಅವಳಾದರು ಏನು ಮಾಡ್ಯಾಳ. ದೇಶದ ತುಂಬಾ 'ಬಂದ್', "ಮುಷ್ಕರ', 'ಉಪವಾಸದ' ಗಾಳಿ ಬೀಸಿದೆ. ಶಾಲೆ, ಕಾಲೇಜಿನಲ್ಲೂ ಮುಷ್ಕರ, ಸರ್ಕಾರಿ ನೌಕರರದು ಮುಷ್ಕರ, ರಾಜಕಾರಣಿಗಳದು ಮುಷ್ಕರ, ಡಿಲ್ಲಿಯಲ್ಲೂ ಹಳ್ಳಿಯಲ್ಲೂ ಬಂದ್ ದೇಶನ ಆಳೋರೆ "ಬಂದ್ ರೋಗಕ್ಕೆ ತುತ್ತಾದರೆ ಹ್ಯಾಗೆ ಅಂತೀ?

ನಾಳೆ ದೇಶದಾದ್ಯಂತ ಹೆಂಡರೆಲ್ಲರು ಅಡಿಗೆ ಮಾಡೋದಿಲ್ಲಾ ಅಂತಾ ಮುಷ್ಕರ ಹೂಡಲಿಕ್ಕೂ ಸಾಕು. ಅಂತು ಏನಾದ್ರು ಮಾಡಿ ಫೀಮೇಲ್ ಸರ್ವೆಂಟ್ ಹುಡಕಬೇಕಾಯ್ತು. ಈಗಿನ ಕಾಲದಲ್ಲಿ ಅವರಿಗೂ ಏನು ಕಡಿಮೆ ಡಿಮ್ಯಾಂಡೆ? ಮಾತೆತ್ತಿದ್ದರೆ ರೂಲ್ಸ ಮಾತೋಡ ಕಾಲ ಅದರಲ್ಲಿ ನನ್ನ ಶ್ರೀಮತಿಯ ಸೂಚನೆಯಂತೆ, ಕೆಳಗಿನ ಕ್ವಾಲಿಫಿಕೇಶನ್ನ ಬೇರ ಇರಬೇಕು.

ಅವಳು ಇದೇನು ಸರ್ಕಾರಿ ನೌಕರಿ ಅಂತ, ತಿಳಿದಾಳೋ ಏನೋ. "ನನ್ನ ಮಗಳ್ಗೆ ಲಾಯರ್ ಹಡ್" ಅಂತಾ ಅವರಪ್ಪನೆ ಮದುವೆ ಆಗ್ವ ಮುನ್ನ ಜಂಬ ಕೊಚ್ಚಿದ್ದು ಈಗ ನೋಡಿದ್ರೆ ನಿಜ ಅನಸ್ತದೆ;(1) ಸುಂದರಳಾಗಿರ ಬಾರದು (2) ಪ್ರಾಯಸ್ಥಳಾಗಿರ ಬಾರದು (3) ಮದುವೆಯಾಗಿರಬೇಕು ವಯಸ್ಸು ಮುವತ್ತು ದಾಟಿರಬೇಕು (4) ಚುರುಕಾಗಿಯು ನಿರೋಗಿಯಾಗಿಯು ಇರಬೇಕು. ಇದೆಲ್ಲ ನೋಡಿದ್ರೆ ಯಾವುದಾದರು ಪತ್ರಿಕೆಗೆ ಜಾಹೀರಾತು ಕೊಡೋದ ವಾಸಿ. ಈ ಲೆಕ್ಚರರ್ ಕೆಲಸಾನ ಬೇಡ. "ಫೀಮೇಲ್ ಸರ್ವೆಂಟ್ಸ ಸೊಸೈಟಿ' ಸ್ಥಾಪನ ಮಾಡಿ, ಮಿನಿಸ್ಟರಿಂದ ಉದ್ಘಾಟನ ಮಾಡಿಸಿ, ನಮ್ಮ ಶ್ರೀಮತಿಯವರನ್ನೇ ಪ್ರೆಸಿಡೆಂಟ್ ಮಾಡಿ, ಬಿಸಿನೆಸ್ ಸ್ಟಾರ್ಟ್ ಮಾಡೋದ ಒಳಿತು......

ಕೊನೆಗೂ, ಪ್ರಯತ್ನ ಮಾಡಿ ಕ್ರಿಶ್ಚಿಯನ್ ಹುಡುಗಿ ಹುಡುಕಿದೆ. ಅವಳು ಹೇಳಿದ ಕ್ವಾಲಿಫಿಕೇಷನ್ನಲ್ಲಿ ನಾಲ್ಕನೆಯದೊಂದು ಬಿಟ್ಟರೆ, ಉಳಿದವೆಲ್ಲಾ ಉಲ್ಟಾ ಆಗಿದ್ದವು. "ಯಾರೋ ಸಿಗಲೇ ಇಲ್ವ ನಿಮಗ, ಈ ಕ್ರಿಶ್ಚಿಯನ್ ಹುಡಿಗೀನೆ ಸಿಕ್ಕಳ್ಯ, ಅವಳ ಸೋಕಿ ನೋಡಿದರೆ ಸಿನೇಮಾ ನಟಿ ಹಾಗ ಕಾಣ್ತಾಳೆ, ಏನ ಕೆಲಸ ಮಾಡ್ತಾಳೋ ನಾ, ಕಾಣೆ.' ಎಂದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಸುವ್ಯಾಸಾದಳು. ಇಷ್ಟಕ್ಕಿದ್ದ ಹಾಗೆ, ಒಂದು ದಿನ ಕೂಲಿಂಗ್ ಗ್ಲಾಸ್ ಮಾಯಾಗಿಬಿಡ ಬೇಕೆ. ೬೦ ರೂಪಾಯಿ ಕೊಟ್ಟು ಗೋವಾದಿಂದ ತಂದಿದ್ದೆ. ಸರಿ, ಮನೆಯಲ್ಲಾ ಹುಡುಕಿಯಾಯ್ತು ಎಲ್ಲೂ ಪತ್ತೆ ಆಗಲಿಲ್ಲ. "ಎಲ್ಲಿ ಕಾಲೇಜಿನಲ್ಲಿ ಮರೆತು ಬಂದಿರೋ ಏನೊ ಇಲ್ಲಿ ಬಂದು ಹಡಕಾಡ್ತೀರಿ" ಎಂದು ಶ್ರೀಮತಿಯ ಜಬರದಸ್ತು ಬೇರೆ. ಕಳೆದದ್ದು ಕಳೆದು ಹೋಯ್ತು ಎಂದು, ಅಲ್ಲಿಗೆ, ಮರೆತು ಬಿಟ್ಟೆ.

ನಮ್ಮಾಕೆಯು ಒತ್ತಾಯ ತಾಳಲಾರದೆ, "ಲವ್ ಇನ್ ಟೋಕಿಯೋ ಸಿನೇಮಾಕೆ ಹೊರಡಬೇಕಾಯ್ತು." ಅಲ್ರಿ ನಾನು ಜಪಾನ ನೋಡಲಿಕ್ಕೆ ಈ ಜನ್ಮದಲ್ಲಾದ್ರು ಸಾಧ್ಯ ಏನ್ರಿ. ನೀವೇನೋ, ಬಿಟ್ಟಿ ಸರ್ಕಾರಿ ದುಡ್ಡಿನಲ್ಲಿ ಜರ್ಮನಿ, ಜಪಾನ ನೋಡಿಬಂದ್ರಿ. ನಾನು ಸಿನೇಮಾದಲ್ಲಾದ್ರು ನೋಡಬಾರ್ದೆ, ಇದು ನಮ್ಮಾಕೆಯ ಸವಾಲು, ರಸ್ತೆಯಲ್ಲಿ ಹೋಗ್ತಾ ಇರುವಾಗಲೆ. "ರ್ರಿ, ರ್ರಿ," ಅಂಥಾ ಸುರುಮಾಡ ಬೇಕೆ? "ಏನೇ ನಿಂದು ಮನೆಯನ್ನೋದು ಗೊತ್ತಿಲ್ಲ ಬಜಾರ ಅನ್ನೋದು ಗೊತ್ತಿಲ್ಲ ಯಾವಾಗಲು ಒಟಗುಟ್ಟುತ್ತಿ.'

'ಅಯ್ಯೊ ಅಲ್ಲ, ನೋಡ್ರಿ ನಮ್ಮ ಮನಿ ಕೆಲಸದವಳ್ರಿ, ಡಿಸೋಜಾ, ನಿಮ್ಮ ಕೂಲಿಂಗ್ ಗ್ಲಾಸ ಹಾಕ್ಕೊಂಡು ಹೋಗ್ತಾ ಇದ್ದಾಳೆ.' ಹೌದ್ಯಾ! ಎಂದು ನೋಡೋದರೊಳಗೆ ಎಲ್ಲೋ ಹೊರಟುಹೋಗಿ ಬಿಟ್ಟಿದ್ಲು. ಜರ್ಲಿ ಅವಳು ಕೆಲಸಕ್ಕೆ ನಾಳೆ ದಿನ ಎಂದು ಸುಮ್ಮನಾದೆ. ನೋಡ್ರಿ, "ನಾನು ಸಿನೇಮಾಕ್ಕೆ ಬಂದದಕ್ಕೆ ನಿಮ್ಮ ಕೂಲಿಂಗ್ ಗ್ಲಾಸ್ ಪತ್ತೆ ಆಯ್ತು' "ಹೌದು, ಹೌದು, ಬಾಳ ಬುದ್ಧಿವಂತೆ ಕಣೆ'.... ಮರು ದಿವಸ ಅವಳು ಕೆಲಸಕ್ಕೆ ಬರಬಾರ್ದೆ. ನಾನೇ ಅವರ ಮನೆ ವರಗೆ ಹೋಗಿ ಕೇಳಿನೋಡಿದೆ, "ಇಲ್ರಿ, ಅವಳು ನಿನ್ನೆ ದಿವಸ ಯಾರನ್ನೊ ಕಟ್ಟಿಕೊಂಡು ಓಡಿ ಹೋಗಿದ್ದಾಳ" ಅಂತಾ ಹೇಳಿದ್ರು. ಸರಿ ಏನು ಮಾಡೋದು ನನ್ನ ಅಡ್ವಾನ್ಸ. ೫೦ ರೂಪಾಯಿನು ಹೋಯ್ತು; ಜೊತಗೆ ಕೂಲಿಂಗ್ ಗ್ಲಾಸು.

"ಯಾರಾದರು ಪಾರ್ಟ್ ಟೈಂ ಬರ ರಿದ್ರು ಗೊತ್ತು ಮಾಡ್ರಿ" ನಮ್ಮಾಕೆಯ ಸಲಹೆ. ಇನ್ನೇನು ಮಾಡೋದು, ಎದುರು ಮನೆಗೆ, ಕೆಲಸಕ್ಕೆ ಬರುತಿದ್ದ ಗಂಗಮ್ಮನಿಗೆ ಬರಲಿಕ್ಕೆ ತಿಳಿಸಿದೆ. ಅವಳ ಕರಾರು ಏನು ಅಂದ್ರೆ, ಬೆಳಿಗ್ಗೆ ೮-೩೦ರಿಂದ ೧೦ ಘಂಟೆ ವರೆಗೆ ಕೆಲಸ, ರವಿವಾರ ರಜೆ. ತಿಂಗಳಿಗೆ ಹದಿನೈದು ರೂಪಾಯಿ. ಅಡ್ವಾನ್ಸ್ ಆಗಿ ತಿಂಗಳ ಸಂಬಳ ಮೊದಲೆ ಕೊಡಬೇಕು. ಒಂದು ಕಾಫಿ, ವರ್ಷಕ್ಕೊಂದು ಸೀರೆ. ಸರಿ, ಎಲ್ಲದಕ್ಕೂ ತಥಾಸ್ತು ಎಂದು ಹೇಳದೆ ನಿರ್ವಾಹವಿಲ್ಲ. ಹೇಗೂ ಕೆಲಸ ಸುರು ಮಾಡಿದಳು. ತೊಂದರೆ ಇಲ್ಲದೆನೆ ನಡೀತು. ಆದರೆ, ಇವಳು ಏನು ಕಡಿಮೆಯವಳೆ? ಅವರ ಮನೆಯಲ್ಲಿ ಹೀಗೆ, ಇವರ ಮನೆಯಲ್ಲಿ ಹಾಗೆ, ಮನೆ, ಮನೆಗೆ ಜಗಳ ಹಚ್ಚಲಿಕ್ಕೆ ಸುರು ಮಾಡಬೇಕೆ?

"ನನಗೆ ಪಾತ್ರೆ ಮಾಡೋಕೆ ಬರಾದಿಲ್ಲ" ಅವರ ಹೇಣ್ತಿಗೆ ಅಡಿಗೇನೆ, ಮಾಡೋಕೆ ಬರಾದಿಲ್ಲ ಅಂಥಾ ಹೇಳಿದ್ರಮ್ಮ, ಪ್ರೊಫೆಸರ್ ಮನೆಯವರು, ಇದ್ನ ನಮ್ಮಾಕೆಯ ಮುಂದೆ, ರಾಗ. "ಏನ್ರಿ ನಿಮಗೆ ಪಾತ್ರ ಮಾಡಲಿಕ್ಕೆ ಬರೋದಿಲ್ಲಂತೆ? ಯಾರೇ ನಿನಗೆ ಹೇಳಿದವರು"? "ಆ ಕೆಲಸದ ಗಂಗಮ್ಮ" 'ಸರಿ ಹೋಯ್ತು ನಾಳೆ ನಿನಗೆ ಅಡಿಗೇನೆ, ಮಾಡೋಕೆ ಬರಾದಿಲ್ಲ ಅಂತ ಹೇಳ್ತಾಳೆ, ಅವಳಗೋಸ್ಕರ ನಿನಗ್ಯಾಕೆ? ನೋಡು ಅವಳಿಗೆ ತಿಳಿಸಿ ಬಿಡು "ನಮ್ಮ ಮನಿ ಸುದ್ದಿ ಬೇರೆಯವರ ಮುಂದೆ, ಬೇರೆಯವರ ಸುದ್ದಿ ನಮ್ಮ ಮುಂದೆ" ಹೇಳಕೂಡದು ಅಂತ. 'ಹಾಗೆ ಮಾಡ್ತೀನಿ ಅವಳಿಗೆ...'

"ರ್ರೀ, ರ್ರೀ, ಒಗಿಲಿಕ್ಕೆ ಕೊಟ್ಟ ನನ್ನ ಮದುವೆ ಸೀರೆ, ನಿಮ್ಮ ಟೆರಿಲಿನ್ ಷರ್ಟ ಹರಿದುಬಿಟ್ಟಾಳ್ರಿ'. ಆಯ್ಯೊ! ನಮ್ಮ ಗ್ರಹಚಾರ, "ಅವಳಿಗೆನು ಳಿದ್ದು ಬರೋದುಬೇಡಾ, ಅಂತ ಹೇಳ್ತನ್ರಿ." "ಹೌದು, ಅವಳು ಬರೋದೆ ಬೇಡ. ಹೀಗೆಲ್ಲಾ ಮಾಡಿದ್ರೆ ನಾವು ಉಳಿದೇವಾ, ಖಂಡಿತ ಹೇಳಿ ಬಿಡು ಬರೋದು ಬೇಡ ಅಂತ..."

"ರ್ರೀ, ಈಗ ಐದನೇ ತಿಂಗಳ್ರಿ, ಕೆಲಸ ಮಾಡೋಕೆ ಆಗುವುದಿಲ್ಲ. ಎರಡು ಹೆರಿಗೇನು, ತವರ ಮನೆಯಲ್ಲಿ ಆದವು, ಮೂರನೇದು, ಇಲ್ಲೆ ಆಗಬೇಕು ಅಂತಿರೇನು?" "ಈ ಸಾರೆ, ಆಗಲಿಕ್ಕಿಲ್ಲ, ಹಳ್ಳಿ ಕಡೆಯುವಳು ಯಾರಾದ್ರು ಇದ್ರ ನೋಡ್ರಿ."

ವಿಷಯ ಬಹಳ ಗಂಭೀರವಾಯ್ತು. ಫೀಮೇಲ್ ಸರ್ವೆಂಟ್ ಹುಡುಕಲೇ ಬೇಕು. ಎಲ್ಲಿ ಅಂತ ಹುಡುಕೋದು? ಒಳ್ಳೆಯವರು ಎಲ್ಲ ಸಿಗುತ್ತಾರೆ ಹಾಗೂ, ಹೀಗೂ ಕಷ್ಟ ಪಟ್ಟು ನನ್ನ ಹಳೆಯ ಹಳ್ಳಿ ಕ್ಲಾಸಮೇಟ್, ಮಾದೇ ಗೌಡನ ವಸೂಲಿ

(ಹತ್ತನೇ ಪುಟ ನೋಡಿರಿ)

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 2553/66 O. S. 106/66

ಕಟ್ಟೆ ನಾರಾಯಣ ಭಟ್ಟ— ಅರ್ಜಿದಾರ

ಎದ್ರು

ಗಿರಿಜಮ್ಮ-ಕೇಶವ ಉಪಾಧ್ಯಾಯರ ವಿಧವೆ, ಮಾಣಿಲ ಗ್ರಾಮದ ತೋಟದ ಮನೆ, ಬಂಟ್ವಾಳ ತಾಲೂಕು— ಎದ್ರು.

ಇವರೀಗೆ

ವಾದಿಯು ನಿಂಮ ಮೇಲೆ ಮಾಡಿದ [illegible] ಆಸ್ತಿ [illegible] ಫೈನಲ್ ಡಿಕ್ರಿ ಕೊಡಿಸಬೇಕೆಂಬ ಅರ್ಜಿಯು ತಾ, 7—4—67ಕ್ಕೆ ವ್ಯಾಜ್ಯದಿಯ [illegible] ಆ ದಿನ ಈ ಕೋರ್ಟಿನ ಮುಂದೆ [illegible] ನಿಮ್ಮಗೇನಾದರೂ ಆಕ್ಷೇಪ [illegible] ತಪ್ಪಿದರೆ [illegible] ತೀರ್ಮಾನಿಸಲಾಗುತ್ತದೆ ಎಂದು ತಿಳಿಸಿದೆ.

(Sd.) V. M. Bhat

Advocate forPetr.

ಪುತ್ತೂರು, 16—3—67

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 6/67.

ಕೆ. ಅಶ್ವತ್— ವಾದಿ.

ಪಿ. ಗೋಪಾಲ ಶೆಟ್ಟಿ ಕೂಡಾ ಪ್ರತಿವಾದಿರು

1ನೇ ಪ್ರತಿವಾದಿ ಪುತ್ತೂರು [illegible] ಗ್ರಾಮದ [illegible] ಗೋಪಾಲ ಶೆಟ್ಟಿರೀಗೆ.

ನಿಮ್ಮ ಮೇಲೆ [illegible] ನಿಮ್ಮ [illegible] ದಾವೆ [illegible] ತಾ. 14—4—1967ಕ್ಕೆ ನಿಮ್ಮ ಹಾಜರಾತಿ ಬಗ್ಗೆ [illegible] ಹಗಲು ಗಂಟೆ 11ಕ್ಕೆ ನೀವು ಮೇಲೆ ಹೇಳಿದ ಕೋರ್ಟಿನ ಎದುರು [illegible] ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಮುಂದುವರಿಸಲಾಗುತ್ತದೆ ಎಂದು ತಿಳಿದಿರಿ.

(ಕೋರ್ಟಿನ ಹುಕುಂ ಪ್ರಕಾರ)

ಪಿ. ರಾಮಚಂದ್ರ ಭಟ್ಟ

ವಾದಿ ಕಡೆ ವಕೀಲರು.

ಪುತ್ತೂರು, 16—3—1967.

In the Court of the Additional Munsiff-cum-Magistrate Court, Udipi.

O. S. No. 33/65

Between:

1. Sri Bommarbettu Baidarkala Gardi of Bommarbettu village, Udipi Tq. by its trustee (since dead) Sri Sheshappa Shetty.
2. Sundara Shetty as acting defacto trustee, beneficiary and devotee of plaintiff No. 1 (supplemental)

—Plaintiffs

vs

Vittu Poojary and others

—Defendants

To whomso ever it may concern

Notice is hereby given that the supplemental 2nd plaintiff in the above suit has filed an application in R. I. A. No. 2/67 seeking permission to sue on behalf of the 1st plaintiff Gardi in his representative capacity. Anybody interested may appear before the above court at 11 · 00 A. M. on 14—4—1967 and make his submission.

(By order of the Court)

B. Krishna Bhat,

Advocate for Plaintiffs.

Udipi, 23-3-1967.

ಸಾಹಿತ್ಯ ಸಂಸದ

ಆಧುನಿಕ ಹಿಂದೀ ಕಾವ್ಯದ ಕುರಿತೊಂದು ಪ್ರಬಂಧ

ಬರೆದವರು: ಶ್ರೀ ಲ್ಯುದ್ಮಿಲ್ ಆಗಾನಿನ್.

ಇನ್ನೊಂದು ಮೂಲಭೂತವಾದಂಥ ಕೃತಿಯಿಂದ ಸೋವಿಯೆತ್ ಒಕ್ಕೂಟದಲ್ಲಿಯ ಭಾರತ ವಿಜ್ಞಾನ[illegible]ವು (ಇಂಡಾಲಜಿ) ಮತ್ತಷ್ಟು ಶ್ರೀಮಂತಗೊಂಡಿದೆ. ಭಾಷಾ ಪಂಡಿತರಾದ ಎವ್ಗೆನಿ ಚೆಲ್ಶೇವ ಆಧುನಿಕ ಹಿಂದೀ ಕಾವ್ಯ ಎಂಬ ಕೃತಿಯೊಂದರಲ್ಲಿ ಭಾರತೀಯ ಸಾಹಿತ್ಯದಲ್ಲಿ ತಾವು ಅನೇಕ ವರ್ಷಗಳ ಕಾಲ ನಡೆಸಿದ ಅಧ್ಯಯನ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ. ಈ ಪುಸ್ತಕಕ್ಕೆ "ಸುಮಿತ್ರಾನಂದನ ಪಂತ್ ಮತ್ತು ಸೂರ್ಯಕಾಂತ್ ತ್ರಿಪಾಠಿ—ನಿರಾಲಾ ಅವರ ಕೃತಿಗಳಲ್ಲಿ ಪರಂಪರೆ ಮತ್ತು ನವೀಕರಣ" ಎಂಬ ಉಪಶೀರ್ಷಿಕೆಯಿದ್ದು, ಇದು ಚೆಲ್ಶೇವರು ಕೇವಲ ಆಧುನಿಕ ಕಾಲವನ್ನು ಮಾತ್ರವೇ ಅಲ್ಲ, ಗತಕಾಲವನ್ನೂ ಪರಿಶೀಲನೆಗೆ ತೆಗೆದುಕೊಂಡಿದ್ದಾರೆಂಬುದನ್ನೂ ತೋರಿಸುತ್ತದೆ. ಮತ್ತು ಅವರು ವಿಶಿಷ್ಟ ಸಂಗತಿಗಳ ಮೂಲಕ ಸಾಮಾನ್ಯವಾದುದರ ವಿಶ್ಲೇಷಣೆ ನಡೆಸಿರುವುದು ಕಾಣಿಸುತ್ತದೆ.

ಈ ಕೃತಿಯು ತುಂಬ ಆಸಕ್ತಿಕರವಾಗಿದೆ. ಯಾಕೆಂದರೆ ಮೊದಲನೆಯದಾಗಿ ಪರಂಪರೆ ಮತ್ತು ನವೀಕರಣಗಳ ಸಮಸ್ಯೆಯನ್ನು ಎತ್ತಿಕೊಳ್ಳಲಾದ ರೀತಿ, ಎರಡನೆಯದಾಗಿ ಭಾರತೀಯ ಕವಿಗಳ ಕೃತಿಗಳಲ್ಲಿ ಕಂಡು ಬರುವ ಸಾಹಿತ್ಯ, ತತ್ವಜ್ಞಾನ ಮತ್ತು ಸಾಮಾನ್ಯ ಸಾಂಸ್ಕೃತಿಕ ಪರಂಪರೆ ಇವುಗಳ ಕ್ಲಿಷ್ಟಕರ ಅಂತರಿಕ ಸಂಬಂಧಗಳ ಗಾಢವಾದ ವಿಶ್ಲೇಷಣೆ.

ಭಾರತೀಯ ಸಾಹಿತ್ಯದಲ್ಲಿಯ ಪರಂಪರೆ ಮತ್ತು ನವೀನತೆ ಇವುಗಳ ನಡುವ ಈ ದ್ವಂದ್ವಮಾನ ಪ್ರ[illegible]ಕ್ರಿಯೆ ಕೇವಲ ತಾತ್ವಿಕ ಆಸಕ್ತಿಯ ಸಂಗತಿಯಾಗಿಲ್ಲ, ಅದ್ಭುತ ವಾಸ್ತವಿಕ ಮಹತ್ವದ್ದಾಗಿದೆಯೆಂಬುದೂ ನಿರ್ವಿವಾದವಾಗಿದೆ. ಸಾಹಿತ್ಯ ಪ್ರಗತಿಗೆ ಶತಮಾನಗಳ ಹಳೆಯ ಲಕ್ಷಣಗಳು ಮತ್ತು ಹೊಸ ಲಕ್ಷಣಗಳು ಎಂಥ ಕಾಣಿಕೆಯನ್ನು ನೀಡುತ್ತವೆ ಮತ್ತು ಅದರ ಅಭಿವೃದ್ಧಿಯನ್ನು ಹೇಗೆ ಕುಂಠಿತಗೊಳಿಸುತ್ತವೆ ಎಂಬುದು ಇನ್ನೊಂದು ಪ್ರಶ್ನೆಯಾಗಿದೆ. ಸ್ವಲ್ಪ ಕಾಲದ ಹಿಂದೆ ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ಲೇಖಕರ ಸಮ್ಮೇಳನದಲ್ಲಿ ಪರಂಪರೆ ಮತ್ತು ನವೀನತೆ ಇವುಗಳ ನಡುವಣ ಪರಸ್ಪರ ಕ್ರಿಯೆ ಎಂಬ ವಿಷಯವೂ ಒಂದು ಸಂಗತಿಯಾಗಿತ್ತೆಂಬುದು ಈ ಪಾತನ್ನು ದೃಢಪಡಿಸುತ್ತದೆ.

ಎವ್ಗೆನಿ ಚೆಲ್ಶೇವ್, ಅಥವಾ ಈ ವಿಷಯಕ್ಕೆ ಸಂಬಂಧಿಸಿದಂಥ ಕೃತಿಗಳನ್ನೇನೂ ಮರೆತಿಲ್ಲ. ಹಜಾರಿ ಪ್ರಸಾದ್ ದ್ವಿವೇದಿ, ನಗೇಂದ್ರ, ರಾಂಬಿಲಾಸ್ ಶರ್ಮಾ, ಶಿವದಾನ್ ಸಿಂಘ, ಚೌಹಾಣ್, ನಮ್ವಾರ್ ಸಿಂಘ್ ಹಾಗೂ ಮತ್ತಿತರರು ಮುಂದಿಟ್ಟ ವಾದಿತ ಕಲ್ಪನೆಗಳನ್ನು ಅವರು ವಿವರವಾಗಿ ಪರೀಕ್ಷಿಸುತ್ತಾರೆ. ಲೇಖಕರು ಕೆಲವರೊಂದಿಗೆ ವಾದಿಸಿ, ಮತ್ತೆ ಕೆಲವರೊಂದಿಗೆ ಒಪ್ಪಿಕೊಂಡು ತಮ್ಮದೆ ಆದ ದೃಷ್ಟಿಯನ್ನೂ, ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಾರೆ.

ಚೆಲ್ಶೇವರ ಕೃತಿ ಎರಡು ಭಾಗಗಳಲ್ಲಿದೆ. ಮೊದಲನೆಯ ಭಾಗದಲ್ಲಿ ಅವರು ಗಣನೆಗೆ ತೆಗೆದುಕೊಂಡ ಅವಧಿಯಲ್ಲಿಯ ಸಾಹಿತ್ಯ ಬೆಳವಣಿಗೆಯ ಸಾಮಾನ್ಯ ವರ್ಣನೆ ಬರುತ್ತದೆ. ಕೆಲವು ಲೇಖಕರ ಕೃತಿಗಳನ್ನು ಮುಂದಿಟ್ಟುಕೊಂಡು ಸಂಕೀರ್ಣವಾದ ಸಾಹಿತ್ಯಗತಿಯನ್ನು ವಿಶ್ಲೇಷಿಸುತ್ತಾರೆ. ಎರಡನೆಯ ಭಾಗವು, ಸಮಸ್ತ ಆಧುನಿಕ ಹಿಂದೀ ಕಾವ್ಯದ ಸ್ವಭಾವವನ್ನೇ ಗಣನೀಯ ಪ್ರಮಾಣದಲ್ಲಿ ನಿರ್ಧರಿಸಿದಂಥ ಇಬ್ಬರು ಗಣ್ಯ ಕವಿಗಳಾದ ಸೂರ್ಯಕಾಂತ ತ್ರಿಪಾಠಿ ನಿರಾಲಾ ಮತ್ತು ಸುಮಿತ್ರಾ ನಂದನ ಪಂತ ಅವರ ನಿರ್ಮಾಣಶೀಲ ಪ್ರಯೋಗಶಾಲೆಗೆ ನಮ್ಮನ್ನು ಕೊಂಡೊಯ್ಯುತ್ತದೆ.

ತಮ್ಮ ಕೃತಿಯನ್ನು ಈ ರೀತಿ ವ್ಯವಸ್ಥೆಗೊಳಿಸಿರುವುದು ಚೆಲ್ಶೇವರಿಗೆ ಸಂಶೋಧನಾತ್ಮಕ ಪ್ರಬಂಧವನ್ನು ಬರೆಯುವಲ್ಲಿ ತುಂಬಾ ಸಹಾಯಕವಾಗಿದೆ. ಸಾಹಿತ್ಯ ಗತಿಯ ಮುಖ್ಯ ಸೂತ್ರಗಳನ್ನು ನಿರ್ಧರಿಸಲು ಮತ್ತು ಬಳಿಕ ಅವುಗಳ ಸ್ಪಷ್ಟವಾದ ನಿರ್ಮಾಣರೂಪುಗಳಲ್ಲಿ ಗುರುತಿಸಲು ಸಹಾಯಕವಾಗಿದೆ.

ಹೀಗೆ ಲೇಖಕರು ಕಲಾಪದ್ಧತಿಯ ವಿಕಾಸವನ್ನು ಮನದುಂಬುವಂತೆ ತೋರಿಸಿಕೊಡಲು ಶಕ್ತರಾಗಿದ್ದಾರೆ. ಭಾರತೀಯ ರೋಮ್ಯಾಂಟಿಸಿಸಮ್ಮನ್ನು ಅದರಿಲ್ಲ ಸಂಕೀರ್ಣತೆಯಲ್ಲೂ ವಿಶ್ಲೇಷಿಸುತ್ತ, ಮುಖ್ಯವಾಗಿ ಅದರ ವೈಚಾರಿಕ ಮತ್ತು ರಸಾಭಿಜ್ಞತೆಯ ವ್ಯತ್ಯಾಸಗಳು ರಹಸ್ಯವಾದದಿಂದ ಸಂಕೇತವಾದ, ಅಲ್ಲಿಂದ ಕ್ರಾಂತಿಕಾರೀ ರೋಮ್ಯಾಂಟಿಸಿಸಮ್‌ಗಳನ್ನು ಪೃಥಃಕರಿಸಿ ಚೆಲ್ಶೇವರು ಮತ್ತೆ ಇದರಲ್ಲೂ ವಿಶೇಷವಾಗಿ ಭಾರತೀಯ ಸಾಹಿತ್ಯದ ಒಂದು ವಿಶಿಷ್ಟ ಲಕ್ಷಣವೆನಿಸಿದ ಛಾಯಾವಾದದ ವಿಕಾಸವನ್ನು ಪರಿಶೀಲಿಸುತ್ತಾರೆ. ಲೇಖಕರು ತುಂಬು ಸಂಕೀರ್ಣವೂ ಗಾಢವಿರೋಧಾಭಾಸದ್ದೂ ಆದ ಈ ಪ್ರವೃತ್ತಿಯ ಸಾರಭೂತವನ್ನು ಪ್ರಕಟಗೊಳಿಸುತ್ತಾರೆ. ಇದರ ಮೂಲವು ಸಾಂಸ್ಕೃತಿಕ ಬಂಡಾಯವಿದ್ದ ಮತ್ತು ಭಾರತದ ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಸೇರಿದ ಭಾರತದ ಮಧ್ಯಮ ವರ್ಗ.

ಚೆಲ್ಶೇವರು ಇದರ ಸಾಮಾಜಿಕ ಸತ್ವವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ: ದೇಶದ ಬಾಳುವೆಯಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಮಾರ್ಗದ ವಿರುದ್ಧ ಎದ್ದ ದಂಗೆ, ಸರಂಜಾಮಿ ನಿರ್ಬಂಧಗಳಿಂದ ಮನುಷ್ಯನ ಬಿಡುಗಡೆಗೆ ಮನವಿ, ಭಾವನೆಗಳ ಸ್ವತಂತ್ರ ಅಭಿವ್ಯಕ್ತಿಗೆ ಬೇಡಿಕೆ, ಕೋರಿಕೆ ಮಧ್ಯಯುಗದ ಸಂಪ್ರದಾಯಶರಣ ಹಾಗೂ ನೈತಿಕ ನಡೆವಳಿಕೆಗಳ ವಿಚಾರಗಳಿಂದ ಮತ್ತು ವ್ಯಕ್ತಿಯ ಸ್ವತಂತ್ರ ಅಸ್ತಿತ್ವವನ್ನೂ ವಿಕಾಸವನ್ನು ಪ್ರತಿಬಂಧಿಸುವಂಥ ಎಲ್ಲ ಇತಿಮಿತಿಗಳಿಂದ ಬಿಡುಗಡೆಗೆ ಹಾತೊರೆಯುವ ಮನವಿ.'

ಪುಸ್ತಕದ ಮೊದಲ ಭಾಗವು ಛಾಯಾವಾದೀ ಕವಿಗಳ ಕಾವ್ಯ ಪ್ರತಿಮಾ ವಿಧಾನ ಮತ್ತು ವರ್ಣನಾತ್ಮಕ ವಿಧಾನಗಳ ಸಾಮಾನ್ಯ ಸ್ವರೂಪಗಳನ್ನು ಪರಿಚಯ ಮಾಡಿಕೊಡುತ್ತದೆ. ಹೀಗೆ ವಾಚಕನಿಗೆ ಈ ಒಂದು ಕುತೂಹಲಕಾರೀ ಸಾಹಿತ್ಯ ಲಕ್ಷಣದ ಸಾಮಾನ್ಯ ಕಲ್ಪನೆಯ ಪರಿಚಯವಾಗುತ್ತದೆ ಮತ್ತು ರೋಮ್ಯಾಂಟಿಕ್ ಕಾವ್ಯ ಬಂಡಾಯಗಾರರು ಮುಖ್ಯವಾಗಿ ಪಂತ್, 'ರೀತಿ' ಕಾವ್ಯದ ಸೌಂದರ್ಯಾನುಭೂತಿಯ ಸ್ವರೂಪಗಳ ವಿರುದ್ಧ ಬಂಡಾಯವೆದ್ದುದನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡುತ್ತದೆ ಮತ್ತು ಜ್ಞಾನೋದಯದ ಕಾಲವು ಉಚಿತವಾದ ಶಬ್ದಗಳಲ್ಲಿ ವ್ಯಕ್ತಗೊಳ್ಳುತ್ತದೆ. ಕವಿ ಮತ್ತು ನವೀನತಾವಾದಿ ಪಂತರು ಆಧುನಿಕ ಕಾವ್ಯದೊಂದಿಗೆ ಸಮರಸಗೊಳ್ಳಬಹುದಾದಂಥ ಗತಕಾಲಗಳ ಕಾವ್ಯದಲ್ಲಿಯ ಕಾವ್ಯಪದ್ಧತಿಯ ಸೂಕ್ಷ್ಮತಿಸೂಕ್ಷ್ಮ ಅಂಶಗಳನ್ನು ಹೇಗೆ ವಿವೇಚನಾತ್ಮಕವಾಗಿ ನಿರೂಪಿಸುತ್ತಾರೆಂಬುದನ್ನು ಚೆಲ್ಶೇವ್ ಉದಾಹರಿಸುತ್ತಾರೆ. ವಾಚಕರು ನವೀನ ಕಾವ್ಯದ ಭಾವಪೂರ್ಣತೆಯ ಪರಿಚಯ ಮಾಡಿಕೊಳ್ಳುತ್ತಾರೆ.

ಮೂಲ ಕಾವ್ಯ ಮತ್ತು ಕಲಾತ್ಮಕ ಪದ್ಧತಿಗೆ ಸಂಬಂಧಿಸಿದ ವಿಭಾಗಗಳು ಅಷ್ಟೇ ಆಸಕ್ತಿಪೂರ್ಣವಾಗಿವೆ. ವಾಸ್ತವವಾ

(ಎಂಟನೇ ಪುಟ ನೋಡಿರಿ)

1966ನೇ ದಶಂಬರ 31ರಲ್ಲಿದ್ದಂತೆ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಭಂಡವಾಳ ಮತ್ತು ಹೊಣೆಗಾರಿಕೆಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು	ಆಸ್ತಿ ಮತ್ತು ಮೂಲಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು
1. ತೆತ್ತ ಭಂಡವಾಳ	1,00,54,817	1. ನಗದು	5,06,19,678
2. ಕಾದಿಟ್ಟ ನಿಧಿ ಮತ್ತು ಇತರ ನಿರ್ದಿಷ್ಟ ನಿಧಿಗಳು	1,33,84,724	2. ಇತರ ಬ್ಯಾಂಕುಗಳಲ್ಲಿ ಶಿಲ್ಕು	1,35,78,502
3. ಠೇವಣಿ ಮತ್ತು ಇತರ ಖಾತೆಗಳು	74,02,51,604	3. ವಿನಿಯೋಗಗಳು ಮಾರುಬೆಲೆಯಲ್ಲಿ	26,13,37,277
4. ಇತರ ಬ್ಯಾಂಕಿಂಗ್ ಕಂಪೆನಿಗಳು, ಏಜಂಟ್ಸ್ ಇತ್ಯಾದಿಯವರಿಂದ ಪಡೆದ ಸಾಲಗಳು	3,18,92,269	4. ಸಾಲಗಳು	47,91,10,620
		5. ಸಂಗ್ರಹಿಸಬೇಕಾದ ಬಿಲ್ಲುಗಳು	5,41,85,702
5. ಪಾವತಿಯಾಗಬೇಕಾದ ಬಿಲ್‌ಗಳು	73,50,396	6. ಎಸಪ್ಟನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಹೊಣೆಗಾರಿಕೆಗಳು	5,76,54,033
6. ಸಂಗ್ರಹಿಸಲು ಸಂಗ್ರಹಿಸಿದ ಬಿಲ್‌ಗಳು	5,41,85,702	7. ಕಟ್ಟಡಗಳು (ಮೂಲಬೆಲೆಯಲ್ಲಿ)	59,68,500
7. ಇತರ ಹೊಣೆಗಾರಿಕೆಗಳು	3,71,78,932	8. ಫರ್ನಿಚರ್, ಫಿಟ್ಟಿಂಗ್ಸ್ ಇತ್ಯಾದಿ	40,63,000
8. ಎಸಪ್ಟನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಜವಾಬ್ದಾರಿಗಳು	5,76,54,033	9. ಇತರ ಮೂಲಗಳು	2,46,45,735
		10. ಬ್ಯಾಂಕೇತರ ಮೂಲಗಳು	1,90,500
	95,19,59,147		95,19,59,147

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

............ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ............

ಮಧ್ಯಪ್ರದೇಶದ ಕೊಳ್ಳೆಗಾರರು—3

ತಸ್ಕರ ವನಿತೆ 'ಪುತ್ಥಳಿ'

ಭೀಕ, ಸುಲ್ತಾನರಿಗಿಂತಲೂ ಮಿಗಿಲು.

ಬರೆದವರು
ಶ್ರೀ ಎಚ್. ಎಂ. ನಾರಾಯಣ ಭಟ್.

[ಈ ಲೇಖನ ಮಾಲೆಯಲ್ಲಿ ಹಿಂದಿನ ಎರಡು ಲೇಖನಗಳು ಭೀಕ ಮತ್ತು ಸುಲ್ತಾನರ ಪರಿಚಯ ಮಾಡಲಾಗಿತ್ತು. ಪುತ್ಥಳಿ ಸರಕಾರಕ್ಕೇ ಸಮಸ್ಯಾವನಿತೆಯಾಗಿ ಪರಿಣಮಿಸಿದ್ದಳು. ಮುಂದಿನ ಲೇಖನ ಕಲ್ಲಗುಜರ್‌ನ ಕುರಿತು —ಲೇಖಕ]

ಚಂಬಲ್ ನದೀ ತೀರ (ಮಧ್ಯ ಪ್ರದೇಶ)ದಲ್ಲಿ ಮುರೇನ ಎಂಬ ಸಣ್ಣ ನಗರವಿದೆ. ಇದು ಮೊದಲು ಗ್ವಾಲಿಯರ್ ಆಶ್ರಿತ ರಾಜರ ಅಧಿಕಾರ ಕ್ಷೇತ್ರದಲ್ಲಿತ್ತು. ಅಲ್ಲಿ ಅಸಗಿರ್ ಬ್ಯಾ ಒಬ್ಬ ವೇಶ್ಯೆಯಾಗಿದ್ದಳು; ಹಾಡುಗಾರಿಕೆಯಲ್ಲೂ ನೃತ್ಯ ಕಲೆಯಲ್ಲಿಯೂ ವಿದಗ್ಧೆ! ಆಕೆಯ ಮಗಳು ಪುತ್ಥಳಿಯೆಂಬ ತಸ್ಕರ ವನಿತೆ. ಅಸಾಮಾನ್ಯ ಸಾಹಸಕೃತ್ಯಗಳಲ್ಲಿ ಆಕೆಗೆ ಆಸಕ್ತಿ ಹೆಚ್ಚಾಗಿತ್ತು.

ಪುತ್ಥಳಿ ಅಷ್ಟೇನೂ ಸೌಂದರ್ಯವತಿಯಾಗಿರಲಿಲ್ಲ. ಶರೀರದ ಲಾಘವ ಮತ್ತು ಚಾಂಚಲ್ಯದ ಕಾರಣ ನೃತ್ಯ ಕಲೆಯಲ್ಲಿ ಪ್ರವೀಣತೆಗಳಿಸಲು ಸಾಧ್ಯವಾಗಿತ್ತು. ತೆಳ್ಳಗೆ ಕಪ್ಪಾದ ಕುಳ್ಳದೇಹ; ತೀಕ್ಷ್ಣ ನೋಟ. ಕಂಠ ಬಹಳ ಮಾಧುರ್ಯ. "ಅಲ್‌ಹಾ' ಗೀತ ಕಾವ್ಯವನ್ನು ಆಕೆ ಅತಿ ತನ್ಮಯತೆಯಿಂದ ಹಾಡುತ್ತಿದ್ದಳು. ವಿವಿಧ ಕೇಂದ್ರಗಳಿಗೆ ನೃತ್ಯ—ಸಂಗೀತ ಕಚೇರಿಗಳಿಗಾಗಿ ಆಕೆ ಆಹ್ವಾನಿಸಲ್ಪಡುತ್ತಿದ್ದಳು.

ಪುತ್ಥಳಿ ಯುವತಿಯಾದಾಗ ಮಧ್ಯಪ್ರದೇಶದಲ್ಲಿ ಸುಲ್ತಾನನೆಂಬ ಕುಪ್ರಸಿದ್ಧ ಡಕಾಯಿತನ ಬಗ್ಗೆ ಎಲ್ಲರೂ ದಿಗಿಲುಗೊಂಡಿದ್ದರು. ಪುತ್ಥಳಿಯ ನೃತ್ಯವನ್ನೊಮ್ಮೆ ಕಾಣಬೇಕೆಂತಲೂ ಆಕೆಯ ಸಂಗೀತವನ್ನೊಮ್ಮೆ ಕೇಳಲೂ ಸುಲ್ತಾನ ಬಯಸಿ ಕಾದಿದ್ದ.

ಒಂದು ದಿನ ಪುತ್ಥಳಿ ನೃತ್ಯ—ಸಂಗೀತ ಕಾರ್ಯಕ್ರಮದ ತರುವಾಯ ಸ್ವಗ್ರಾಮಕ್ಕೆ ಮರಳುವ ದಾರಿಯಲ್ಲಿ ಸುಲ್ತಾನ–ಪುತ್ಥಳಿಯರ ಸಮಾಗಮವಾಯಿತು. ಸುಲ್ತಾನನ ಅಭಿಲಾಷೆ ನೆರವೇರಿತು. ಅಸಗಿರಿ ಬ್ಯಾಯ ಸರ್ವಸ್ವವಾಗಿದ್ದ ಪುತ್ಥಳಿಯನ್ನು ವಿವಾಹವಾಗುವುದಾಗಿ ಆಶ್ವಾಸನೆಯಿತ್ತ ಸುಲ್ತಾನ ತನ್ನ ಮನೋರಾಣಿಯ ತಾಯಿಗೆ ಬೇಕಾದಷ್ಟು ಹಣ ನೀಡಿದ. ಸುಲ್ತಾನ ಪುತ್ಥಳಿಯರ ದಾಂಪತ್ಯ ಜೀವನ ಸ್ವಲ್ಪ ಕಾಲ ಹಾಗೆಯೇ ಕಳೆದಾಗ ಅವರಿಗೆ ಒಂದು ಹೆಣ್ಣು ಮಗು ಜನಿಸಿದಳು.

ಅರಣ್ಯವಾಸದಲ್ಲಿ (ಅಜ್ಞಾತವಾಸವೂ) ಬೇಸರಗೊಂಡ ಪುತ್ಥಳಿ ಆಗಾಗ ತವರುಮನೆಗೆ ಓಡಿಹೋಗುತ್ತಿದ್ದಳು. ಆಕೆಯನ್ನು ಹುಡುಕಿಕೊಂಡು ಕರೆತರಲು ಸುಲ್ತಾನ ಹೋದಾಗಲೆಲ್ಲಾ ಆತನ ಹೃದಯ ದೌರ್ಬಲ್ಯವನ್ನರಿತ ಅಸಗಿರಿ ಬ್ಯಾ ಹೇರಳ ಸಂಪತ್ತನ್ನು ಸುಲ್ತಾನನಿಂದ ಪಡೆದಳು.

ತಾನು ಆ ಮುದುಕಿಗೂ ಪತ್ನಿಗೂ ಹೆದರಿಯಾಗಿರಲಿಲ್ಲ—ಹಾಗೆ ಆಗಾಗ ಕಾಣಿಕೆ ಮಾಡುತ್ತಿದ್ದುದೆಂದು ಜನರಿಗೆ ಮನವರಿಕೆಯಾಗಲೆಂದೇ ಸಂಗೀತ ಕಚೇರಿಯಾಗುತ್ತಿದ್ದಾಗಲೂ ನೃತ್ಯ ಪ್ರದರ್ಶನವಾಗುತ್ತಿದ್ದಾಗಲೂ ಅಪ್ರತೀಕ್ಷಿತವಾಗಿ ಧಾವಿಸಿ ಪುತ್ಥಳಿಯನ್ನು ಎತ್ತಿಕೊಂಡು ಹೋಗುತ್ತಿದ್ದ—ಸುಲ್ತಾನ.

ಒಂದುದಿನ ರಜಯಿ ಗ್ರಾಮದಲ್ಲಿ ಪೋಲೀಸರು 'ಚೋರ ದಂಪತಿ'ಗಳನ್ನು ಸುತ್ತುಗಟ್ಟಿದಾಗ ಪುತ್ಥಳಿ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋದಳು. ಮತ್ತೆ ಸ್ವಲ್ಪ ದಿನಗಳ ತನಕವೂ ಸುಲ್ತಾನನನ್ನಾಗಲೀ ಆತನ ಸಂಗಡದವರನ್ನಾಗಲೀ ಕಾಣಲು ಸಾಧ್ಯವಾಗದೆ ಒಂಟಿಯಾಗಿ ಅಲೆದಾದಳು—ಅರಣ್ಯದಲ್ಲಿ. ಆಗ್ರಾ ಪೋಲೀಸರು ತನ್ನನ್ನು ಬಂಧಿಸಿದಾಗ ಸುಲ್ತಾನನನ್ನೇನು ಮಾಡಿದರೆಂಬ ಬಗ್ಗೆ ಆಕೆಗೆ ದಿಗಿಲಿತ್ತು.

ಸುಲ್ತಾನ ತಪ್ಪಿಸಿಕೊಂಡಿದ್ದ. ಪುತ್ಥಳಿಯನ್ನು ಪೋಲೀಸರು ಜಾಮೀನಿನಲ್ಲಿ ಬಿಡುಗಡೆಗೊಳಿಸುವಂತೆ ಅತ ಯತ್ನಿಸಿದ. 26-5-1953ರಂದು ಆಕೆ ಜಾಮೀನಿನ ಮೇಲೆ ಬಿಡಲ್ಪಟ್ಟಳು. ಸುಲ್ತಾನ-ಪುತ್ಥಳಿಯವರ ಸಹಬಾಳ್ವೆ ಮತ್ತೊಮ್ಮೆ ಪ್ರಾರಂಭ.

ಪುತ್ಥಳಿ—ಸುಲ್ತಾನರ ಕಾರ್ಯಕ್ಷೇತ್ರ ಮಧ್ಯಪ್ರದೇಶದಿಂದ ರಾಜಸ್ಥಾನ, ಉತ್ತರ ಪ್ರದೇಶಗಳಿಗೂ ವ್ಯಾಪಿಸಿತು.

5—5—1955ರಂದು ಸುಲ್ತಾನನು ಪೋಲೀಸರ ಗುಂಡಿಗಾಹುತಿಯಾದ ಬಳಿಕ ಪುತ್ಥಳಿಯು ಬಾಬು ಗುಜರ್‌ನ ಕೊಳ್ಳೆ ಸಂಘವನ್ನು ಸೇರಿದಳು. ಬಾಬು ಗುಜರ್ ಸುಲ್ತಾನನ ಸಂಘಕ್ಕೆ ಸೇರಿದ್ದವನಾಗಿದ್ದು ಸುಲ್ತಾನನ "ಉತ್ತರಾಧಿಕಾರಿ"ಯಂತ ನೇತೃತ್ವ ವಹಿಸಿದನು.

6—9—55 ರಂದು ಸಿಗರ್‌ಪುರ ಗ್ರಾಮದಲ್ಲಿ ಪುತ್ಥಳಿಯ ಹೊಸ ನಾಯಕನೂ ಪೋಲೀಸರ ಗುಂಡಿಗಾಹುತಿಯಾದನು.

ಪುತ್ಥಳಿ ಮತ್ತೊಮ್ಮೆ ನಿರ್ಗತಿಕಳಂತಾದಳು. ಆದರೆ ಬೇರೊಬ್ಬ ಚೋರ ಶಿಖಾಮಣಿ "ರೂಪ"ನೆಂಬವನು ಪುತ್ಥಳಿಯನ್ನು ವಹಿಸಿಕೊಂಡನು. ಆದರ ಅವನಿಗಿಂತಲೂ ಪ್ರಮುಖ ಖಳವೀರನಾಗಿದ್ದ ಕಲ್ಲ ಗುಜರ್ ಮತ್ತೆ ಪುತ್ಥಳಿಯನ್ನು ವಿವಾಹವಾದನು.

ಕಲ್ಲ ಗುಜರ್ ಸದಾ ಸುಲ್ತಾನನ ಬಲಗೈಯಂತೆ ಇದ್ದವನಾಗಿದ್ದನು. ಕಲ್ಲನ ಚೋರ ಸಂಘದಲ್ಲಿ ಹಲವರಿದ್ದರೂ ಪುತ್ಥಳಿಗೆ ದ್ವಿತೀಯಸ್ಥಾನ ಮಾನಗಳು ಲಭಿಸಿದ್ದವು.

"ಕಲ್ಲ—ಪುತ್ಥಳಿ ಸಂಘ'ವೆಂದೇ ಮತ್ತೆ ಪೋಲೀಸರು ಇವರ ಸಂಘವನ್ನು ಕರೆದರು.

14—12—1956ರಂದು ಈ ಸಂಘವನ್ನು ಪೋಲೀಸರು ಗೋರ್ಮಿ ಗ್ರಾಮದಲ್ಲಿ ಸುತ್ತುಗಟ್ಟಿ ಹೋರಾಡಿದರು. ಪೋಲೀಸರಿಗೆ ತುಂಬಾ ನಾಶ ನಷ್ಟಗಳು ಸಂಭವಿಸಿದವು; ಪುತ್ಥಳಿಯ ಎಡಗೈಗಾದ ತೀವ್ರ ಗಾಯಕ್ಕೆ ಔಷಧವನ್ನು ಸಕಾಲದಲ್ಲಿ ಮಾಡಲು ಸೌಕರ್ಯವಿಲ್ಲದ್ದರಿಂದಾಗಿ ಅದು ವ್ರಣವಾಗಿ ಪರಿಣಮಿಸಿತು.

ಕಲ್ಲನು ಮುರೇನಾದ ಒಬ್ಬ ಪ್ರಸಿದ್ಧ ಡಾಕ್ಟರರನ್ನು ಕಣ್ಣುಕಟ್ಟಿ ಎತ್ತಿಕೊಂಡು ಹೋಗಿ ತುಪಾಕಿ ಹಿಡಿದು ಗದರಿಸಿ ತನ್ನ ಪತ್ನಿಯ ಕೈಯ ವ್ರಣವನ್ನು ಗುಣಪಡಿಸುವಂತೆ ಅಪೇಕ್ಷಿಸಿದ.

ಬೇರೇನೂ ದಾರಿ ಕಾಣದ ಡಾಕ್ಟರ್ ಪುತ್ಥಳಿಯ ಎಡಗೈಯನ್ನು ತುಂಡು ಮಾಡಬೇಕಾಯಿತು.

ನೋವು ಕಡಿಮೆಯಾದ ತರುವಾಯ ಪುತ್ಥಳಿ ಮತ್ತೂ ಕೊಳ್ಳೆಗೆ ಹೊರಟಳು.

ಕುದುರೆ ಸವಾರಿಯಲ್ಲಿಯೂ ಪ್ರವೀಣೆಯಾಗಿದ್ದ ಪುತ್ಥಳಿ ಕುದುರೆಯ ಕಡಿವಾಣದ ತುದಿಯನ್ನು ಹಲ್ಲುಗಳಿಂದ ಕಚ್ಚಿ ಹಿಡಿದುಕೊಂಡು ಬಲಗೈಯಲ್ಲಿ ತುಪಾಕಿ ಧರಿಸಿ ಅಗತ್ಯ ಬಿದ್ದಲ್ಲಿ ವಿರೋಧಿಗಳನ್ನಿದಿರಿಸುತಿದ್ದಳು.

ಕೈಯನ್ನು ಕಳಕೊಂಡುದರಿಂದಾಗಿ ಆಕೆಯ ವೃತ್ತಿಗೇನೂ ಹಾನಿಯೊದಗಲಿಲ್ಲವಾಗಿದ್ದರೂ ಬಹಳ ದುಃಖಿತಳಾಗಿದ್ದಳು. ಆದರೂ ನಿರಪರಾಧಿಗಳನ್ನೂ ದುರ್ಬಲರನ್ನೂ ಹಿಂಸೆಗೀಡು ಮಾಡುವುದು ಆಕೆಯ ವಿನೋದಗಳಲ್ಲೊಂದಾಗಿ ಪರಿಣಮಿಸಿತ್ತು.

ಪುತ್ಥಳಿಯನ್ನು ಹಿಡಿಯುವುದಕ್ಕಾಗಿ ಪೋಲೀಸರು ವಿವಿಧ ಉಪಾಯಗಳನ್ನು ಮಾಡಿ ನೋಡಿದ್ದರು. 23-1-58ರಂದು ಮುರೇನಾ ಜಿಲ್ಲೆಯ ಛೋಟಿ ಕಾಶರ್ ಎಂಬಲ್ಲಿ ಆಕೆ ಸಿಕ್ಕಿ ಬಿದ್ದಳು. ಆದರೂ ಸಹ ಬಿಡದೆ ನದಿಗೆ ಹಾರಿ ಈಜಾಡಿ ಆಚೆ ದಡವನ್ನು ಸೇರಲು ಶ್ರಮಿಸಿದಳು. ಆಕೆ ನದಿಯಲ್ಲಿ ಈಜುತ್ತಿದ್ದಂತೆಯೇ ಎರಡೂ ದಡಗಳಲ್ಲಿದ್ದ ಪೋಲೀಸರ ಗುಂಡುಗಳಿಗೆ ಬಲಿಯಾದಳು. ನದೀ ಜಲ ಪುತ್ಥಳಿಯ ರಕ್ತ ಮಿಶ್ರವಾಗಿ ಕೆಂಪಾಯಿತು.

ಪುತ್ಥಳಿಯನ್ನು ಹಿಡಿದವರಿಗೆ ಮತ್ತು ಆ ಕುರಿತು ಬೇಕಾದ ವಿವರವಿತ್ತವರಿಗೆ ರೂ. 20 ಸಾವಿರ ಬಹುಮಾನ ನೀಡುವುದಾಗಿ ಸರಕಾರ ಘೋಷಿಸಿತ್ತು.

ಸುಲ್ತಾನನನ್ನು ಹಿಡಿದವರಿಗೆ ಕೇವಲ ರೂ. ಎರಡು ಸಾವಿರ ಬಹುಮಾನವನ್ನು ಮಾತ್ರವೇ ಸರಕಾರ ಘೋಷಿಸಿದುದನ್ನು ನೆನಪಿಡಬೇಕು.

ಪುತ್ಥಳಿಯ ಮೃತದೇಹ ಹೊರತು ಪೋಲೀಸರಿಗೆ ಬೇರೇನೂ ಸಿಗಲಿಲ್ಲ. ಆಕೆ ಸಾಯುವ ಮುನ್ನ ತನ್ನ ಕುದುರೆಯನ್ನೂ ಕೊಂದಿದ್ದಳು!

(ಆಧಾರದಿಂದ)



ಬವೇರಿಯಾದ ರಾಜಧಾನಿ ಮ್ಯೂನಿಚ್‌ನ ಬಳಿಯ ಡೋರ್ನಿಯರ್ ವರ್ಕ್ಸ್‌ನ ಹೊಸ ಮಾದರಿಯ ವಿಮಾನ, ಈ ಡಿ ಓ ೩೧—ಇಪ್ಪತ್ತೈದು ಟನ್ ಭಾರವನ್ನು ಹೊರಬಲ್ಲುದು.

ವೇದಾಂತ ದರ್ಶನ

ಜೀವನ ಮತ್ತು ಜೀವನ ಕಲೆ

ಮೂಲ: ಸ್ವಾಮಿ ಚಿನ್ಮಯಾನಂದ
ಅನು: ಕೆ. ಬಿ. ವಾಸುದೇವ ರಾವ್

ಅನ್ನ ಮೇರಿಯಂತಹ ಎಳೆಪ್ರಾಯದ ನವೀನ, ವಿಶಾಲ ಹೃದಯದ ಹೆಂಗಳೆಯರನ್ನು ಪಶ್ಚಿಮ ಜರ್ಮನ್ನರು ಮೆಚ್ಚುತ್ತಾರೆ. ಅಲ್ಲಿ ನಡೆದ ಜನಮತ ಸಂಗ್ರಹದಿಂದಿದು ವ್ಯಕ್ತವಾಗಿದೆ.

ನಮ್ಮ ಯುಗವನ್ನು ನಾಸ್ತಿಕವೆಂದೂ ಧರ್ಮಬಾಹಿರವೆಂದೂ ಹೇಳಲಾಗಿದೆ. ನಾವು ಶ್ರುತಿಯೊಂದನ್ನು ಬಹಿರಂಗವಾಗಿ ಧೈರ್ಯವಾಗಿ ವಿಚಾರಿಸುತ್ತಿರುವುದೇ ಇದಕ್ಕೆ ಕಾರಣ. ಯಾವುದೇ ಘೋಷಣೆಯೇ ಆಗಲಿ ಅದು ನಮ್ಮ ಎಚ್ಚತ್ತುಕೊಂಡ ಬುದ್ಧಿಗೆ ಸಮರ್ಪಕವಾಗಿ ತರ್ಕಬದ್ಧವಾಗಿ ತೋರಿಬಾರದಿದ್ದರೆ, ಅದನ್ನು ಹೇಳಿದ ಪ್ರವಾದಿಯು ಎಷ್ಟೇ ಶ್ರೇಷ್ಠನಾಗಿರಲಿ ಅಥವಾ ಆ ಮುನಿಯು ಎಷ್ಟೇ ಪೂಜ್ಯನಾಗಿರಲಿ, ನಾವು ಅದನ್ನು ಸ್ವೀಕರಿಸಲು ಸಿದ್ಧರಿಲ್ಲ. ನಾವು ಸಂಪೂರ್ಣ ಬೌದ್ಧಿಕ ಜಾಗ್ರತಿ ಹೊಂದಿದ ಶಾಸ್ತ್ರೀಯ ಸಿದ್ಧಾಂತದ ಯುಗದಲ್ಲಿ ಜೀವಿಸುವವೆಂದು ಹೇಳಿಕೊಳ್ಳುತ್ತಿದ್ದೇವೆ. ಬರೀ ಶ್ರದ್ಧೆ ನಮ್ಮ ಮೇಲೆ ಯಾವುದೇ ಹಿಡಿತವನ್ನೂ ಇಡಲಾರದು. ಆದರೆ ತರ್ಕಗಳು ಬುದ್ಧಿಪರವೂ ಶಾಸ್ತ್ರೀಯವೂ ಆಗಿದ್ದರೆ ಒಬ್ಬ ಸರ್ವಾಧಿಕಾರಿಯು ನಮ್ಮನ್ನು ಆತನ ಗುಲಾಮರನ್ನಾಗಿ ಮಾಡಬಹುದು. ನಾವು ನಮ್ಮ ತಲೆಗಳ ಮೇಲೆ ನಡೆಯಲೂ ಸಿದ್ಧ.

ಯುಗದ ಮನೋಧರ್ಮವೇ ಹೀಗಿರುವುದರಿಂದ ಉಪನಿಷತ್ತುಗಳಲ್ಲಿ ಪ್ರತಿಪಾದಿಸಲ್ಪಟ್ಟ ವೇದಾಂತ ತತ್ವಗಳು ನಮ್ಮ ಮೇಲೆ ಪ್ರಬಲವಾದ ಮೋಹವನ್ನುಂಟುಮಾಡಿದೆ. ಜಗತ್ತಿನ ಯಾವುದೇ ಮತವನ್ನು ಹಿಂದೂಧರ್ಮದೊಂದಿಗೆ ತುಲನೆಮಾಡಿ ನೋಡಿದರೂ ಆ ಮತವು ಒಬ್ಬ ಪ್ರವಾದಿ ಅಥವಾ ಗುರುವಿನಿಂದ ಪ್ರತಿಪಾದಿಸಲ್ಪಟ್ಟ ಕಟ್ಟುನಿಟ್ಟಿನ ಘೋಷಣೆಯಾಗಿದೆ. ಹಿಂದೂಧರ್ಮವನ್ನು ಒಂದು 'ಬೆಳೆಯುತ್ತಿರುವ ಪರಂಪರೆ' ಎಂದು ನಿರ್ವಚಿಸಬಹುದು. ನೂತನ ವಿಜ್ಞಾನದ ಹಾಗೆ, ಹಿಂದೂಧರ್ಮ ಯಾವೊಬ್ಬ ವ್ಯಕ್ತಿಯಿಂದ ಘೋಷಿಸಲ್ಪಟ್ಟದಲ್ಲ. ಅನೇಕ ಯುಗಾಂತರಗಳ ಸಂಶೋಧಕರ ನಿರ್ಣಯಗಳ ಮೊತ್ತವಾಗಿವೆ ಅದು.

ಈ ಕ್ಷಣದಲ್ಲಿಯೇ, ವೈಜ್ಞಾನಿಕ ನಿರ್ಣಯಗಳು ಬದಲಾವಣೆ ಹೊಂದುತ್ತಿವೆ. ಸಂಶೋಧಿಸಲ್ಪಟ್ಟ ನೂತನ ಲೆಖ್ಖಾಚಾರ ಪ್ರಕಾರ ಹಲವು ವಾಸ್ತವಿಕವಾಗಿಯೂ ಬದಲಾವಣೆ ಹೊಂದಿವೆ. ಇದೇ ರೀತಿಯಲ್ಲಿ ಧರ್ಮದಲ್ಲಿ ಕೂಡ ಮೂಲಭೂತ ತತ್ವಗಳು ಒಂದೇ ರೀತಿಯಾಗಿ ಉಳಿದರೂ ಕಾಲಾನುಗತವಾಗಿ ವರ್ಧಿಸುತ್ತಿರುವ ಸಮಾಜದ ಬೇಡಿಕೆಗಳಿಗನುಸಾರವಾಗಿ ಜೀವನದಲ್ಲಿನ ಆಚರಣೆ ಮಾತ್ರ ಯುಗದಿಂದ ಯುಗಕ್ಕೆ ವ್ಯತ್ಯಾಸಗೊಳ್ಳುತ್ತದೆ. ಈ ದೃಷ್ಟಿಯಲ್ಲಿ ನೋಡಿದರೆ, ಒಂದು ಧರ್ಮಗ್ರಂಥ ಸಮಾಜಕ್ಕೆ ವಿಸ್ತರಿಸುವ ಸ್ವಾತಂತ್ರ್ಯವನ್ನು ನೀಡದಿದ್ದರೆ, ಅದು ತನ್ನಷ್ಟಕ್ಕೆ ತಾನೂ ಹಾಗೂ ಸಮಾಜವನ್ನೂ ಉಸಿರುಕಟ್ಟಿಸುವುದು. ಉದಾಹರಣೆಗಾಗಿ, ದೈತ್ಯಾಕಾರದಲ್ಲಿ ಬೆಳೆಯುತ್ತಿರುವ ಮರಕ್ಕೆ, ಅದು ಸಸಿಯಾಗಿದ್ದಾಗ ಅದರ ರಕ್ಷಣೆಗಾಗಿಟ್ಟ ಕಬ್ಬಿಣದ ಉರುಳು ಅದರ ಬೆಳವಣಿಗೆಗೆ ಪ್ರತಿಬಂಧಕವಾಗುವುದು.

ದುರ್ದೈವವಶಾತ್, ವೇದಾಂತವೆಂಬ ಶಬ್ದವನ್ನು ಕೇಳುವುದೇ ತಡ,—ಹಲವು ವಿಮರ್ಶಕರು (ಟೀಕಾಕಾರರು) ನಮ್ಮಲ್ಲಿದ್ದಾರೆ—ಅವರು ನಮಗೆ ಶಂಕರಾಚಾರ್ಯರ ಹಾಗೂ ಇತರ ಭಾಷ್ಯಕಾರರನ್ನು ಹುಟ್ಟಿಸುತ್ತಾರೆ—ಅವರು ತಮ್ಮ ಮಾರ್ಗಗಳನ್ನು ಸುರುಟಿ, ಕಾನೂನಿನ ಚರ್ಚೆಗಳನ್ನೂ ಮತಾಂಧತೆಯ ಹೇಳಿಕೆಗಳನ್ನೂ ಪ್ರತೀಕ್ಷಿಸುತ್ತಾರೆ. ನಮ್ಮ ಆಧುನಿಕ ಶಿಕ್ಷಿತ ತರುಣರು ತಮ್ಮ ಬುದ್ಧಿ ಕನ ನಿರ್ಣಯದಂತ ಸಾಮಾನ್ಯವಾಗಿ ಒಂದು ಅಭಿಪ್ರಾಯಕ್ಕೆ ಬರುವುದುಂಟು. ಅಂಥವರಲ್ಲಿ ನಾನೂ ಕೂಡಾ ಒಬ್ಬನಾಗಿದ್ದೆ. ವೇದಾಂತದಲ್ಲಿ ಪ್ರಮುಖ ಋಷಿಗಳ ವಿಷಯಗಳೆಂದರೆ, ಕೆಲವು ಲೆಖ್ಖಾಚಾರ ತಪ್ಪಿದ ವಿಚಿತ್ರ ಅಭಿಪ್ರಾಯವುಳ್ಳ ವಿಚಿತ್ರ ರೀತಿಯ ಮನುಷ್ಯರ ಆಲಾಪ ಮತ್ತು ನಿಟ್ಟುಸಿರುಗಳೆಂದೂ, ವೇದಾಂತಿಗಳೆಂದರೆ ಅವರು ತಮ್ಮ ವೈರಾಗ್ಯ ಜೀವನದಿಂದ, ಸ್ವಯಂಪ್ರೇರಿತ ದೇಹಯಾತನೆಯಿಂದ, ಅನೈಸರ್ಗಿಕವಾದ ವನಾಂತರದಲ್ಲಿನ ಏಕಾಂತವಾಸದ ಪರಿಣಾಮವಾಗಿ, ಮಾನಸಿಕ ದುರ್ವರ್ತನೆಗಳಿಂದ ಬಳಲುವವರೆಂದು ತಿಳಿಯಲ್ಪಟ್ಟಿರುವರು.

ಆದರೆ, ಕೊಂಚ ಶಾಸ್ತ್ರೀಯವಾಗಿ ಪರೀಕ್ಷೆ ಮಾಡಿದಲ್ಲಿ, ಋಷಿಗಳು ಆಧುನಿಕ ಮೇಧಾವಿಗಳಿಗಿಂತ, ತಮ್ಮ ಚಲನವಲನಗಳಲ್ಲಿ ಮತ್ತು ಜೀವನದಲ್ಲಿ ಯಾವುದೇ ಶ್ರೇಷ್ಠತರದ ಅಪರೂಪದ ವೈಚಿತ್ರ್ಯವನ್ನು ಪ್ರದರ್ಶಿಸಲಿಲ್ಲವೆನ್ನುವುದು ತಿಳಿಯುತ್ತದೆ. ಉದಾಹರಣೆಗಾಗಿ, ಒಬ್ಬ ವಿಜ್ಞಾನಿ, ಒಬ್ಬ ಕವಿ, ಒಬ್ಬ ಚಿತ್ರಗಾರ ಅಥವಾ ಒಬ್ಬ ಸಂಗೀತಗಾರನನ್ನು ನಿರೀಕ್ಷಿಸೋಣ. ಆತನು ತನ್ನ ಪಥದಲ್ಲಿ ಸಿದ್ಧಿಯನ್ನು ಪಡೆಯಬೇಕವನಾದರೆ, ತನ್ನ ಕಾರ್ಯದಲ್ಲಿ ಸಂಪೂರ್ಣವಾಗಿ ಪದಾರ್ಪಣ ಮಾಡಿದಂತವನಾದರೆ, ಆತನು ತಾನು ಆಯ್ದುಕೊಂಡ ಉದ್ಯಮದಲ್ಲಿ ಜೀವಿತದ ಪ್ರಾಶಸ್ತ್ಯೆಯನ್ನು ಕಂಡವನಾದರೆ, ಆತನು ಸಾಂಪ್ರದಾಯಿಕ ಜೀವನಕ್ಕೆ ನಡವಳಿಕೆಗೆ ಹೊಂದಿಕೊಂಡವನಲ್ಲವೆಂದು ನಾವು ಮನಗಾಣುವೆವು. ಯಾಕೆಂದರೆ, ಆತನು ತನ್ನ ಕೆಲಸದಲ್ಲಿ ತಲ್ಲೀನನಾಗಿರುವಾಗ, ತನ್ನ ಪವಿತ್ರವಾದ ಕಾರ್ಯವನ್ನು ಮುಂದುವರಿಸುವ ಸ್ವಾತಂತ್ರ್ಯವನ್ನಲ್ಲದೆ, ಅತನಲ್ಲಿ ಇತರರನ್ನು ನೋಡುವ ಕಣ್ಣುಗಳು, ಇತರರಿಂದ ಬೇರೇನಾದರೂ ಕೇಳುವ ಕಿವಿಗಳು, ತನ್ನ ಮೂಲಭೂತ ಹಕ್ಕುಗಳನ್ನು ಬೇಡುವ ವ್ಯಕ್ತಿತ್ವ—ಇವು ಯಾವುವೂ ಇರುವುದಿಲ್ಲ. ಕಲೆಗಾರನ ವಿಚಿತ್ರ ವರ್ತನೆ, ಸ್ವಪ್ರಾಧಾನ್ಯತೆಯ ಮರವೆ, ಚಿಂತಕನ ಸ್ವಯಂ ಕೇಂದ್ರಿತವಾದ ವ್ಯವಹಾರ—ಇವೆಲ್ಲ ಸಾಮಾನ್ಯೇತರ ಒಂದು ಪ್ರತ್ಯೇಕ ಆದರ್ಶದ ಕಡೆಗಿರುವ ಏಕಾಗ್ರತಾ ಸಾಧನೆಯ ಚಿಹ್ನೆಗಳು.

ಈ ವಿಚಾರದಲ್ಲಿ ಋಷಿಗಳನ್ನು ಯಥಾರ್ಥ ಜೀವನದ ವಿಜ್ಞಾನಿಗಳೆಂದು ನಾವು ತಿಳಿದುಕೊಂಡರೆ, ಏಕಾಂತತೆ ಮತ್ತು ನಿಸ್ಸಂಗತ್ವ ಅವರ ಧ್ಯೇಯಕ್ಕೆ ಅವಶ್ಯವೆಂದು ಮನಗಾಣಬಹುದು. ತಮ್ಮ ಸಂಪೂರ್ಣ ನಿಸ್ಸಂಗತ್ವದಿಂದ ಆ ಋಷಿಯ

(ಒಂಭತ್ತನೇ ಪುಟ ನೋಡಿರಿ)

ಇದೇ ವರ್ಷದಿಂದ ಪಶ್ಚಿಮ ಜರ್ಮನರಿಗೆ ವರ್ಣರಂಜಿತ ದೂರದರ್ಶಕದ ಸೌಕರ್ಯ ದೊರೆಯುತ್ತದೆ.

ಸಾವಿನ ದವಡೆಯಲ್ಲಿ

(ಎರಡನೇ ಪುಟದಿಂದ)

ವಿಹಿರ್ ಜಿಂಕೆ ಓಡುತ್ತಿದ್ದ ದಿಕ್ಕಿನತ್ತ ನೋಡುತ್ತಿದ್ದಂತೆಯೇ ಸ್ವಾವೆನ್ ಅದನ್ನು ಬೆನ್ನಟ್ಟಿಹೋಗುತ್ತಿದ್ದುದು ಕಂಡು ಬಂತು. ಸ್ವಾವೆನ್ ಮತ್ತೆ ಮತ್ತೆ ಗುಂಡು ಹಾರಿಸತೊಡಗಿದ.

"ಗುಂಡು ಹಾರಿಸು. ಹುಚ್ಚ—ಗುಂಡು ಹಾರಿಸು—' ಮತ್ತೊಂದು ಅಪರಿಚಿತ ಧ್ವನಿ ಕೇಳಿಸಿತು.

ಶತ್ರು ಕಡೆಯವನೊಬ್ಬ ಮರದ ಹಿಂದೆ ಅವಿತಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವುದು ವಿಹಿರ್‌ನ ಗಮನಕ್ಕೆ ಬಂದಿತು. ವಿಹಿರ್ ವೈರಿಯ ಕಡೆ ಗುಂಡು ಹಾರಿಸಿದ. ಆದರೆ ವೈರಿ ಅತಿ ಶೀಘ್ರಗತಿಯಿಂದ ಚಲಿಸಿ ಕಣ್ಣು ರೆಪ್ಪೆ ಹಾಕುವಷ್ಟರಲ್ಲಿಯೇ ಕಾಡಿನಲ್ಲಿ ಮಾಯವಾದ. ಅವನ ಬೆನ್ನು ಚೀಲ ಹಿಂದುಳಿಯಿತು.

'ಅವರು ನಮಗೆ ರೊಟ್ಟಿಯೊದಗಿಸಲು ಬಂದಂತಿದೆ!'

ಸ್ವಾವೆನ್ ಹೇಳಿದ, ತೃಪ್ತಿ ಸೂಸುತ್ತಾ. ಆದರೆ ಮರುಕ್ಷಣ ಅವನ ಮುಖ ಕಪ್ಪುಗಟ್ಟಿತು.

ಸ್ವಾವೆನ್ ಮತ್ತು ವಿಹಿರ್ ಮುಂದು ಮುಂದೆ ಹೆಜ್ಜೆ ಹಾಕ ತೊಡಗಿದರು. ವೈರಿ ಹುಲ್ಲುಗಾವಲಿನ ಆಚೆ ಬದಿಯಲ್ಲಿ ಸತ್ತು ಬಿದ್ದಿದ್ದುದು ಅವರ ಕಣ್ಣಿಗೆ ಬಿದ್ದಿತು.

'ಇವನು ಜಿಂಕೆಯ ಕಡೆಗುರಿಯಿಡುತ್ತಿದ್ದ!" ಸ್ವಾವೆನ್ ಹೇಳಿದ." ಅವನು ಜಿಂಕೆಯನ್ನು ಕೊಂದು ಬಿಡುತ್ತಿದ್ದ—ಪಾಪಿ!' ಸ್ವಾವೆನ್ ಸತ್ತ ವೈರಿಯ ಆಟೊಮ್ಯಾಟಿಕ್ ಬಂದೂಕವನ್ನು ತೆಗೆದುಕೊಂಡ.

"ಇನ್ನು ನಾವು ಪಲಾಯನ ಮಾಡಬೇಕು," ಸ್ವಾವೆನ್ ಹೇಳಿದ." ಇವನು ಪೆಟ್ರೋಲ್ ಪಡೆಗೆ ಸೇರಿದವನಿರಬೇಕು. ಇನ್ನೂ ವೈರಿಗಳು ನಮ್ಮನ್ನು ಸುತ್ತು ಗಟ್ಟಿಯಾರು—"

ವಿಹಿರ್ ಸ್ವಾವೆನ್ ಹಿಂದೆ ಹೆಜ್ಜೆ ಹಾಕತೊಡಗಿದ. ಅವನನ್ನು ಮೌನ ಆವರಿಸಿತ್ತು. ಅವನು ಅಪರಾಧಿಯಂತೆ ವರ್ತಿಸುತ್ತಿದ್ದ.

ಇಂತಹ ಅನುಭವಗಳಾದ ನಂತರ ಬಹಳ ಮಾತನಾಡುವ ವಾಚಾಳಿ ವಿಹಿರ್, ಆದರಲ್ಲಿಯೂ ಉದ್ವಿಗ್ನತೆಯಿಂದ ಮಾತನಾಡುವುದು ಅವನ ಪದ್ಧತಿ. ಆದರೆ ಅಂದು ಮಾತ್ರ ಅವನು ಮಾತನಾಡಲಾರದಾದ. ಅವನ ಗಂಟಲಲ್ಲೊಂದು ಭಾರಿ ಅಡಚಣೆಯುಂಟಾದಂತೆ ಅವನಿಗನ್ನಿಸಿತು.

ಕುಂದಾಪುರ ಮು. ಕೋರ್ಟಿನಲ್ಲಿ

O. S. 541/66.

ವಾದಿಳು— ಶಾಂತ. ದಾಯಿ.

ಪ್ರತಿವಾದಿರು— ಹಿರಿಯಣ್ಣ ಶೆಟ್ಟಿ ಕೂಡಾ

8ನೆ ಪ್ರತಿವಾದಿಗೆ ಯಿ ಮೂಲಕ ತಿಳಿಸುವದೇನೆಂದರೆ—

8ನೆ ಪ್ರತಿವಾದಿ. ಗೋಪಾಲರಾವ್, ಶಿರಾಲಿ,
No. 8. Perumal Mudali Street, Royetah Madras-14.

ವಾದಿಳು ಗೇಣಿಬಾಕಿ ಕ್ರಂತು ಮೇಲ್ಕಂಡ ದಾವೆಯನ್ನು ಮಾಡಿರುತ್ತಾಳೆ. ಸದ್ರಿ ದಾವೆಯು ತಾರೀಕು 13-4-67ಕ್ಕೆ ತನಿಗೆ ಯಿಡೋಣಾಗಿಯದೆ. ಸದ್ರಿ ದಾವೆಯಲ್ಲಿ ನಿಂಮ ಕಡೆಯಿಂದ ಉದಾರಣೆ ಗಾಳಲು ಮಾಡುವಂತಾದ್ದು ಯಿದ್ದ ಪಕ್ಷದಲ್ಲಿ ಸದ್ರಿ ತಾರೀಕು 18-4-67ರ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಂಮ ಗೈರು ಹಾಜ್ರಿಯಲ್ಲಿ ಸದ್ರಿ ದಾವೆಯಂನು ಕೇಳಿ ಫೈಸಲು ಮಾಡೋಣಾದೀತೆಂತ ಯಿ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plaintiff.

ತಾರೀಖು, 14-3-67,
ಮೊಕ್ಕಾಂ: ಕುಂದಾಪುರ.

ಆಧುನಿಕ ಹಿಂದೀ ಕಾವ್ಯದ ಕುರಿತೊಂದು ಪ್ರಬಂಧ

(ಐದನೇ ಪುಟದಿಂದ)

ದದ "ನಾನಾ ರೂಪುಗಳು" ಆರಂಭವನ್ನು ಎಂದರೆ "ಪ್ರಕೃತಿವಾದೀ ಯಥಾರ್ಥವಾದ" "ಅಂತರ್‌ಚೇತನವಾದೀ ಯಥಾರ್ಥವಾದ" ('ಫ್ರಾಯ್ಡಿಯನ್ ಯಥಾರ್ಥವಾದ"), "ವ್ಯಕ್ತಿವಾದೀ ಯಥಾರ್ಥವಾದ' ಮೊದಲಾದವುಗಳನ್ನು ಕವಿಯು ಪ್ರತಿಭಟಿಸುತ್ತಾನಾದರೂ ವಾಸ್ತವವಾದವೆನ್ನುವುದು ಏಕರೂಪದ್ದೆಂದೇನೂ ಭಾವಿಸುವುದಿಲ್ಲ. ಭಾರತೀಯ ಯಥಾರ್ಥವಾದವು ಒಂದೊಂದು ಘಟ್ಟದಲ್ಲಿ ಹೇಗೆ ಬದಲಾವಣೆಗೊಂಡಿದೆಯೆಂಬುದನ್ನೂ ಚೆಲ್ಶಿಷೇವ್ ಗುರುತಿಸುತ್ತಾರೆ. 19ನೇ ಶತಮಾನದ ದ್ವಿತೀಯಾರ್ಧದ ಭರತೇಂದು ಹರಿಶ್ಚಂದ್ರ ಹಾಗೂ ಬಂಕಿಮಚಂದ್ರ ಚಟ್ಟೋಪಾಧ್ಯಾಯ ಇವರ ಜ್ಞಾನೋದಯ ಕಾಲದ ಯಥಾರ್ಥವಾದವು ಮತ್ತು ಶತಮಾನದ ಕೊನೆಯಲ್ಲಿ ಕಂಡ, ಉದಾಹರಣೆ ರಾಕೂರರ ಕಥೆಗಳಲ್ಲಿ ಬರುವ ವಿಮರ್ಶಾತ್ಮಕ ಯಥಾರ್ಥವಾದ ಇವುಗಳಲ್ಲಿ ತುಂಬ ವ್ಯತ್ಯಾಸವಿದೆ. ಗುಣಾತ್ಮಕವಾಗಿ ಮೊದಲಿನ ಯಥಾರ್ಥವಾದವು ಎರಡನೇ ಯಥಾರ್ಥವಾದದಿಂದ ಬಹಳೇ ದೂರವಿದೆ.

ಈ ಅಥವಾ ಆ ಲೇಖಕರ ವಾಸ್ತವವಾದೀ ಪ್ರವೃತ್ತಿಯನ್ನು ವ್ಯಾಖ್ಯಾನಿಸುವ ಕಾಲಕ್ಕೆ ಚೆಲ್ಶಿಷೇವರು ಆ ಲೇಖಕರು "ಖಂಡಿತ, ಸ್ಪಷ್ಟ, ವಾಸ್ತವಿಕತೆಯ ವರ್ಣನೆಯಿಂದ ಆಧುನಿಕ ಕಾಲದ ಮನುಷ್ಯ ತನ್ನ ಸುತ್ತಣ ಪರಿಸರದೊಂದಿಗೆ ಹೊಂದಿರುವ ಆಂತರಿಕ ಲೋಕದ ಸಂಬಂಧದ" ವರೆಗೆ ನಡೆದುಬಂದ ದಾರಿಯನ್ನು ಗುರುತಿಸುತ್ತಾರೆ. ಪ್ರೇಮಚಂದರು ಆಮೂರ್ತ ಮಾನುಷಿಕ ಆದರ್ಶಗಳಿಂದ ಪಾರಾಗಿ ಯಥಾರ್ಥವಾದಕ್ಕೆ ಹೇಗೆ ಬಂದರೆಂಬುದನ್ನು, ಅವರ ಬಳಿಕ, ಪ್ರಸಾದರು ಛಾಯಾವಾದದ ಕಾವ್ಯ ಭ್ರಮಾಲೋಕದಿಂದ ಹೇಗೆ ಹೊರಬಂದರೆಂಬುದನ್ನು ಮತ್ತು ಕವಿ ಹಾಗೂ ರೋಮಾಂಟಿಸಿಸ್ಟ್ ಪಂತರಲ್ಲಿ ದುಡಿಯುವ ಬಡ ಜನರ ಬಗ್ಗೆ ಇದ್ದ ಪ್ರಾಮಾಣಿಕ ಸಹಾನುಭೂತಿಯು ಅವರನ್ನು ಹೇಗೆ ಯಥಾರ್ಥವಾದಕ್ಕೆ ತಂದಿತೆಂಬುದನ್ನು ನಾವು ಕಾಣುತ್ತೇವೆ. ಪುಸ್ತಕದ ಎರಡನೇ ಭಾಗದಲ್ಲಿ ಕೊನೆಯ ಇಬ್ಬರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

ಚೆಲ್ಶಿಷೇವರ ಪುಸ್ತಕವು ಸ್ಪರ್ಶಿಸುವ ಇನ್ನೊಂದು ಸಮಸ್ಯೆಯೆಂದರೆ ಸಾಹಿತ್ಯದ ಪರಸ್ಪರ ಕ್ರಿಯೆ ಮತ್ತು ಪ್ರಭಾವ—ಈ ಸಮಸ್ಯೆ ನಮಗೆ ಮಾತ್ರವೇ ಮಹತ್ವದ್ದಾಗಿ ಕಾಣುತ್ತಿಲ್ಲ. ಭಾರತೀಯ ಲೇಖಕರಲ್ಲೂ ಈ ಬಗ್ಗೆ ಬಿಸಿ ಬಿಸಿ ಚರ್ಚೆ ನಡೆಯುತ್ತಲೇ ಇದೆ. ಚೆಲ್ಶಿಷೇವರು ಇದನ್ನು ಎರಡು ಮುಖಗಳಲ್ಲಿ ನೋಡುತ್ತಾರೆ. ಒಂದು ಹಿಂದಿನ ಅವಧಿಯ ರಾಷ್ಟ್ರೀಯ ಸಾಹಿತ್ಯದ ಪ್ರಭಾವ ಮತ್ತು ಇನ್ನೊಂದು ಹೊರಗಿನ ಸಾಹಿತ್ಯದ ಪ್ರಭಾವ. ಹಿಂದೀ ಕಾವ್ಯದ ಮೇಲೆ ಆದ ಷೆಲ್ಲಿ, ವರ್ಡ್ಸ್‌ವರ್ತ್, ಬ್ರೌನಿಂಗ್ ಮತ್ತು ಟಿ. ಎಸ್. ಇಲಿಯಟ್ ಹಾಗೂ ಇತರರ ಪ್ರಭಾವವನ್ನು ಲೇಖಕರು ವಿಶ್ಲೇಷಿಸುತ್ತಾರೆ ಮತ್ತು ಇನ್ನೊಂದೆಡೆ ಗೋರ್ಕಿಯವರ ಕಲ್ಪನೆಗಳು ಚಿತ್ರಗಳು, ಪ್ರತಿಬಿಂಬಗಳು ಭಾರತೀಯ ಸಾಹಿತಿಗಳ ಕೃತಿ ರಚನೆಯ ಮೇಲೆ ಬೀರಿದ ಪ್ರಭಾವವನ್ನು ವಿಶ್ಲೇಷಿಸುತ್ತಾರೆ. ಇವು ಎಲ್ಲ ಘಟ್ಟಗಳಲ್ಲೂ ಭಾರತದ ಮಾನವತಾವಾದೀ ಪರಂಪರೆಯಿಂದ ಸಮತೂಕಗೊಂಡಿವೆಯೆಂದು ಲೇಖಕರು ಅಭಿಪ್ರಾಯ ಪಡುತ್ತಾರೆ. "ಪಂತರ ಮಾನವತಾವಾದೀ ಆದರ್ಶವನ್ನು ಭಾರತೀಯ ಪರಂಪರೆಗೆ ಅನುಗುಣವಾದ ಆಶಾವಾದೀ ಸೂತ್ರದ ಮುಂದೊರೆದ ವಿಕಾಸವೆಂದು ಪರಿಗಣಿಸಬಹುದು ಮತ್ತು ಇಂಥ ಭಾರತೀಯ ಪರಂಪರೆಯನ್ನು ಕೆಡುಕಿನ ಮೇಲೆ ಒಳ್ಳಿತಿನ ವಿಜಯ ಅನಿವಾರ್ಯವೆಂದು ಸಾರುವ ತುಲಸೀದಾಸರ ರಾಮಚರಿತ ಮಾನಸದಲ್ಲಿ ಗುರುತಿಸಬಹುದು. ಪಂತರ ಮಾನವತಾವಾದದ ಮೂಲಗಳನ್ನು ಮಾನವ ಸೇವೆಗೆ "ಅವತಂಸಿದ" ವಿವೇಕಾನಂದರ ಧಾರ್ಮಿಕ ಮತ್ತು ತಾತ್ವಿಕ ಕಲ್ಪನೆಗಳಲ್ಲಿ ಕೂಡ ಕಾಣಬಹುದು" ಎಂಬುದಾಗಿ ಚೆಲ್ಶಿಷೇವ್ ಅಭಿಪ್ರಾಯ ಪಡುತ್ತಾರೆ. ಆಧುನಿಕ ಸಾಮಾಜಿಕ ವಿಚಾರದೊಡನೆಯ ಘರ್ಷಣೆಯಲ್ಲಿ ಭಾರತದ ಸಾಂಪ್ರದಾಯಿಕ ಪ್ರತೀಕಗಳು ಹೊಸ ಸತ್ವವನ್ನೂ ಹೊಸ ಕಾವ್ಯಾಭಿವ್ಯಕ್ತಿಯನ್ನೂ ಪಡೆಯುತ್ತಿವೆ.

ಚೆಲ್ಶಿಷೇವ್ ಹಿಂದೀ ಕಾವ್ಯದ ನವೀಕರಣ ಬಗ್ಗೆ ತೀರ್ಮಾನಕ್ಕೆ ಬರುವುದೇ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಶತಮಾನದ ಆರಂಭದಲ್ಲಿ ಮೂಲಭೂತವಾಗಿಯೂ ಭಿನ್ನವಾಗಿ ಕಂಡು ಬಂದ ಮಾನವತಾವಾದದ ಭಿನ್ನ ಸ್ವರೂಪಗಳೂ, ವಿರಕ್ತಿ ಮತ್ತು ಅಂಧ ಧಾರ್ಮಿಕ ಭಾವನೆಯಿಂದ ವಿಮೋಚನೆಗೊಂಡ ಹಾಗೂ ಮಾನುಷ ವ್ಯಕ್ತಿತ್ವದ ಸ್ವತಂತ್ರ ಮೌಲ್ಯ ಪ್ರತಿಪಾದನೆಯ ಕ್ರಿಯಾ ಶೀಲ ಶಕ್ತಿಯ ನಿಯಮಕ್ಕೂ ಇದು ಒಳಗಾಯಿತು ಎಂಬುದಾಗಿ ಅವರು ಭಾವಿಸುತ್ತಾರೆ.

ವಾಸ್ತವಿಕತೆಯನ್ನು ಪ್ರತಿಬಿಂಬಿಸುವ ವಿಶಿಷ್ಟ ಕಲಾತ್ಮಕ ಕಲ್ಪನೆಗಳ ಕುರಿತಾದ ವಿಭಾಗಗಳು ವಿಶೇಷವಾಗಿ ಕುತೂಹಲಕಾರಿಯಾಗಿವೆ. ಭಾರತದ ಪುರಾಣ ಕಾವ್ಯಗಳಿಂದ, ಮಹಾ ಕಾವ್ಯಗಳಿಂದ, ಜಾನಪದ ಕಥೆಗಳಿಂದ ಎತ್ತಿಕೊಂಡ ಕಾವ್ಯ ಪ್ರತಿಮೆಗಳು ಸುತ್ತಣ ಜೀವನದಲ್ಲಿ ಗಾಢವಾಗಿ ಪ್ರವೇಶಿಸಿದಂತೆ ಅವು ಹೇಗೆ ಭಿನ್ನವಾದ ಧ್ವನಿಯನ್ನು ಪಡೆಯುತ್ತವೆ, ಕವಿಗಳ ನಿರಂತರ ನಿರ್ಮಾಣಶೀಲತೆಯಿಂದ ಪ್ರತಿಮೆ ಹಾಗೂ ಕಲ್ಪನೆಗಳು ಕ್ರಮೇಣ ಅದು ಹೇಗೆ ವಿಸ್ತಾರಗೊಳ್ಳುತ್ತವೆಯೆಂಬುದನ್ನು, ಗಂಗೆ, ಹಿಮಾಲಯ, ಉಷಃಕಾಲ, ಸರಸ್ವತಿ, ಈಶ್ವರ ಮೊದಲಾದ ಪ್ರತಿಮೆಗಳು ಹೇಗೆ ವಿನೂತನಗೊಳ್ಳುತ್ತವೆಯೆಂಬುದನ್ನು ಡಾ। ಚೆಲ್ಶಿಷೇವರು ಮನೋಜ್ಞವಾಗಿ ಚಿತ್ರಿಸುತ್ತಾರೆ. ಮೂಲಭೂತವಾಗಿಯೆ ನೂತನವಾದ ವಾಸ್ತವಿಕತೆಯು ಹೊಸಶೈಲಿಗೂ, ಕಲಾತ್ಮಕ ಮತ್ತು ವರ್ಣನಾತ್ಮಕವಾದ ಹೊಸ ಮಾಧ್ಯಮಗಳಿಗೂ ದಾರಿಮಾಡಿಕೊಡುತ್ತದೆಯೆಂಬ ಕಲ್ಪನೆಯನ್ನು ವಾಚಕರಿಗೆ ಇದು ನೀಡುತ್ತದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 895/66.

ವಾದಿ— ಕೆ. ಲಕ್ಷ್ಮೀನಾರಾಯಣ ಕಾರಂತ,

ಪ್ರತಿವಾದಿ— ಕೆ. ಬಿ. ರಾಮಣ್ಣ ಸೆಟ್ಟಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ಪ್ರತಿವಾದಿ ಕೆ. ಬಿ ರಾಮಣ್ಣ ಸೆಟ್ಟಿ. ಚಂದಮ್ಮ ಸೆಟ್ಟಿ ಮಗ, ಅಸಿಸ್ಟಂಟ್ ಟೀಚರ್, ವಿವೇಕೋದಯ ಹ್ಯಾಯರ್ ಎಲಿಮೆಂಟ್ರಿ ಶಾಲಾ, ಸೂನಾರಿ, ಪೋಸ್ಟು ಸಳ್ವಾಡಿ.

ವಾದಿಯು ಮೇಲ್ಕಂಡ ದಾವೆಯನ್ನು ನಿಮ್ಮ ಮೇಲೆ ಹಾಕಲು ಮಾಡಿರುವದ್ರಿಂದ ಸದ್ರಿ ದಾವೆಯು ತಾರೀಕು 17-4-67ಕ್ಕೆ ತನಿಗೆ ಯಿಟ್ಟಿರುವದ್ರಿಂದ ಆ ಬಾಬಿನಲ್ಲಿ ನಿಮ್ಮ ಉದಾಹರಣೆಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ಫೈಸಲು ಮಾಡೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Pltf.

ಮೊಕ್ಕಾಂ: ಕುಂದಾಪುರ, ತಾ. 22.3-67.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 65 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ

ರಿ, ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಜೀವನ ಮತ್ತು ಜೀವನ ಕಲೆ

(ಏಳನೇ ಪುಟದಿಂದ)

ರ್ಯರು ಜೀವನವನ್ನು ಪರೀಕ್ಷಿಸಿ, ವಿಶ್ಲೇಷಿಸಿ ಕೆಲವು ನಿರ್ಣಯಗಳಿಗೆ ಬಂದು ಮುಟ್ಟಿದರು. ಆ ನಿರ್ಣಯಗಳನ್ನು, ಶ್ರದ್ಧೆಯಿಂದ, ಮಾನಸಿಕ ಮತ್ತು ಬೌದ್ಧಿಕ ಪರಿಕರಗಳನ್ನು ಆರಂಭದಲ್ಲಿ ಉಪಯೋಗಿಸಲು ಅಭ್ಯಾಸ ಮಾಡಿದಂತಹ, ತಮ್ಮ ಶಿಷ್ಯ ವರ್ಗಕ್ಕೆ ಹಂಚಿಕೊಟ್ಟರು. ಶಿಷ್ಯಂದಿರು ಪ್ರತಿಯೊಬ್ಬರೂ ಈ ನಿರ್ಣಯಗಳ ಕುರಿತು ಗಾಢವಾಗಿ ಚಿಂತಿಸಿ, ತಮ್ಮದೇ ಆದ ಅಭಿಪ್ರಾಯಕ್ಕೆ ಬಂದು, ಆ ತತ್ವವು ಪ್ರತಿಯೊರ್ವ ಮನುಷ್ಯನಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಹೇಗೆ ಪ್ರವರ್ತಿಸುತ್ತದೆ ಎನ್ನುವುದನ್ನು ತಿಳಿದುಕೊಂಡರು.

ಈ ಎಲ್ಲಾ ಸಂಶೋಧನೆಗಳ ಫಲವಾಗಿ, ಅನುಭವವಿಲ್ಲದೆ ಜೀವಿಸಲು ಸಾಧ್ಯವಿಲ್ಲ. ಹಾಗು ಜೀವನವು ಅನುಭವಗಳ ಸರಣಿ, ಜೀವನದಲ್ಲಿ ಅನುಭವ ಅನಿವಾರ್ಯವೆಂದು ಒಪ್ಪಿಕೊಂಡರು. ಜೀವಿಯು ಹೊರಗಿನ ಅಥವಾ ಒಳಗಿನ ಯಾವುದಾದರು ಅನುಭವವನ್ನು ಪಡೆಯುವುದು ನಿಂತುಹೋದರೆ, ಆ ಕ್ಷಣ ಅವನು ಮೃತನಾದನೆಂದು ತಿಳಿಯಲ್ಪಡುವನು. ಬಳಿಕ ಶರೀರದ ಕೊಳೆಯುವಿಕೆ ತೊಡಗಿ, ಆ ಮನುಷ್ಯನ ರೂಪ ಮತ್ತು ಆಕೃತಿ, ಅವು ಯಾವ ತತ್ವಗಳಿಂದ ನಿರ್ಮಿಸಲ್ಪಟ್ಟಿರುವವೋ ಅವುಗಳೊಂದಿಗೆ ಸೇರಿಕೊಳ್ಳುವುವು.

ಮನುಷ್ಯನು ತನ್ನ ಪ್ರತಿಯೊಂದು ಅನುಭವದಲ್ಲಿಯೂ ಪೂರ್ಣತ್ವವನ್ನು ಅಪೇಕ್ಷಿಸುವನು. ಅವನು ಸುಖ, ಶಾಂತಿಯನ್ನು ಇಚ್ಛಿಸುವನು. ಪರಿಪೂರ್ಣ ಶಾಂತಿ ಹಾಗು ಅನಂತ ಸುಖವೇ ಅವನನ್ನು ತೃಪ್ತಿಪಡಿಸಬಲ್ಲುದು. ಈ ಪ್ರಕಾರ ಇನ್ನೂ ಪೂರ್ಣತ್ವ ಇನ್ನೂ ಪೂರ್ಣ ಆನಂದ ಅನುಭವಿಸುವ ಅವಕಾಶವನ್ನು ಕಲ್ಪಿಸಿಕೊಂಡು, ಅವನು ವಸ್ತುಗಳ ಬದಲಾಗುತ್ತಿರುವ ಏರ್ಪಾಡಿನಿಂದ ನಿರ್ಮಿಸಲ್ಪಟ್ಟ, ಒಂದು ಪರಿಸ್ಥಿತಿಯ ಕೂಟದಿಂದ ಮತ್ತೊಂದು ರೀತಿಯ ಅವಸ್ಥೆಗೆ ಹೋಗುವನು. ತಾನು, ಮಹತ್ತರ, ಉತ್ತಮ, ಪರಿಪೂರ್ಣ ಹಾಗೂ ಅಗಾಧವಾದ ಆನಂದವನ್ನು ಪಡೆಯಬೇಕೆಂಬ ಆಸೆಯೇ ಇವೆಲ್ಲಕ್ಕೂ ಕಾರಣ.

ನಮಗೆ ಲಭ್ಯವಾದ ಯಾವುದೇ ರೀತಿಯ ಅನುಭವವಾದರೂ ಸರಿಯೆ, ಅದನ್ನು ಪ್ರಪಂಚದ ಸಂಪರ್ಕದಿಂದ ಮಾತ್ರವೇ ಪಡೆಯಲು ಸಾಧ್ಯವೆಂಬುದು ಖಂಡಿತ. ವಸ್ತುಜಗತ್ತಿನ ತಿಳುವಳಿಕೆ ಉತ್ತಮಗೊಂಡಂತೆಯೇ, ಅದರ ಸಂಬಂಧ ಕೂಡ ಉತ್ತಮಗೊಳ್ಳುವುದೆಂದು ತಿಳಿಯಬೇಕು. ಆ ವಿವೇಚನೆಯಿಂದ ನಾವು ಜಗತ್ತನ್ನು ಸಮೀಪಿಸಿದರೆ, ಅದು ನಮಗೆ ಇನ್ನೂ ಪೂರ್ಣ ತೃಪ್ತಿಯನ್ನು ಕೊಡುವುದು ಮಾತ್ರವಲ್ಲದೆ ಮನಸ್ಸಿನ ಬಂಧನಕ್ಕೆ ಸಿಲುಕಿರುವ ಸಂದರ್ಭವನ್ನು ಅತಿ ವಿರಳವಾಗಿ ಮಾಡುವುದೇ ವೇದಾಂತದ ದೃಷ್ಟಿಯಲ್ಲಿ— ನಾವು ನಮ್ಮ ಉದ್ವೇಗದ ಭರದಲ್ಲಿ ವಿಚಾರಶೂನ್ಯರಾಗಿ, ಜೀವನ, ವಸ್ತುಗಳು, ಜೀವಿಗಳು—ಇವೆಲ್ಲವುಗಳ ಕುರಿತು ತಪ್ಪಾದ ಮೌಲ್ಯ ನಿರ್ಣಯ ಮಾಡುವುದರಿಂದ, ನಾವು ಅದರ ಆಘಾತವನ್ನು ಅನುಭವಿಸಬೇಕಾಯಿತು. ತಪ್ಪಾಗಿ— ಚಿತ್ರೀಕರಿಸಲ್ಪಟ್ಟ ಈ ಲೋಕದ ಮಂದದೃಷ್ಟಿಯ ಮೂಲಕ ಸ್ವಾಭಾವಿಕವಾಗಿ ನಮ್ಮ ದುಃಖದ ಪಾಲು ಹೆಚ್ಚುತ್ತಾ ಬರುತ್ತಿರುವುದನ್ನು ಜ್ಞಾನಿಗಳಾದ ಮುನಿವರ್ಯರು ಪ್ರಬಲವಾಗಿ ಖಂಡಿಸಿರುವರು. ಮಾತ್ರವಲ್ಲದೆ, ಜನರು ಪ್ರಾಪಂಚಿಕ ವಸ್ತುಗಳ ಕುರಿತು ಯುಕ್ತವಾದ ನೂತನ ಸಮೀಕ್ಷೆಯನ್ನು ಮಾಡಬೇಕೆಂದು ಕಳಕಳಿಯ ಕರೆ ನೀಡಿರುವರು.

ಈ ಒಂದು ಭಾವದಲ್ಲಿಯೆ ವೇದಾಂತವು—'ಜಗನ್ಮಿಥ್ಯ ಬ್ರಹ್ಮಸತ್ಯ, ಅಂದರೆ ಜಗತ್ತು ಅಸತ್ಯ ವಸ್ತು ಸತ್ಯ (ಬ್ರಹ್ಮ) ಮಾತ್ರವೇ ಯಥಾರ್ಥವಾದದ್ದು' ಎಂದು ಸಾರುತ್ತಿರುವುದು. ಆದುದರಿಂದ ಸರಿಯಾಗಿ ತಿಳಿದುಕೊಂಡಲ್ಲಿ ಜಗತ್ತಿನ ಹಿತಕರವಾದ ಪುನರ್ವಿವೇಚನೆಯನ್ನು ಮಾಡಬೇಕೆಂಬುದೇ ವೇದಾಂತದ ನಿರ್ದೇಶವಾಗಿದೆ. ಆದ, ಮನುಷ್ಯನು ದುಃಖದ ಕಡೆಗೆ, ಸಾಮಾಜಿಕ ಅನ್ಯಾಯದ ಕಡೆಗೆ, ಬಡತನ ಮತ್ತು ದಾಸ್ಯದ ಕುರಿತು ನಿರ್ಲಕ್ಷ್ಯರಾಗಿರಬೇಕೆಂದು ಹೇಳುತ್ತದೆ! ಇದು ಮಿಥ್ಯಾರೋಪಣೆಯಲ್ಲಿ ಆಸಕ್ತಿಯಿರುವ ನ್ಯಾಯಬಾಹಿರ ಟೀಕೆ. ಅಂಥವರನ್ನು ವಿಚಾರಶೂನ್ಯರು ಮತ್ತು ಅಜ್ಞಾನಿಗಳು ಮಾತ್ರ ಶ್ಲಾಘಿಸುವರು.

ಧರ್ಮ ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ ಸ್ವಕೀಯ ಸೊತ್ತಲ್ಲ. ನ್ಯಾಯವಾಗಿ ವಿಚಾರ ಮಾಡಿದಲ್ಲಿ, ಅದು ಅಪೂರ್ವ ದೃಷ್ಟಿಯ ಶಕ್ತಿಯನ್ನು ಪಡೆಕೊಂಡ ಕೆಲ ವಿಚಿತ್ರ ವ್ಯಕ್ತಿಗಳ ಘೋಷಣೆಯಲ್ಲ. ಇಲ್ಲವೆ ಅದ್ಭುತ ಆಚರಣೆಗಳ ಕಟ್ಟುಗಳಲ್ಲ. ಅದು ರಹಸ್ಯ ಗೂಢಾಚಾರರ ನಿಗೂಢವಾದ ಬೀಡಲ್ಲ. ಬದಲಾಗಿ ಅದು ವಿಶಾಲ ಸಮಾಜವು ಶಾಂತಿಯುತ ತುಂಬು ಜೀವನವನ್ನು ಸಾಗಿಸಲು ಶಿಕ್ಷಣ ನೀಡುವ ಪರಿಪೂರ್ಣವಾದ ಜೀವನ ಶಾಸ್ತ್ರವಾಗಿದೆ.

ಧರ್ಮವು ವಿಜ್ಞಾನವನ್ನು ಅಂಗೀಕರಿಸಿ ಅದರೊಡನೆ ಕೈಕುಲುಕಲು ತಯಾರಿಲ್ಲದ ಕಾಲವೊಂದಿತ್ತು. ಅದು ಧರ್ಮದ ಸ್ವಸಮಾಧಿಯನ್ನು ಸಿದ್ಧಗೊಳಿಸಿತು, ಇಂದು ಅದೇ ರೀತಿಯ ತಪ್ಪನ್ನು ಇನ್ನೊಂದು ಭಾಗದಲ್ಲಿ ಕಾಣುವೆವು. ಈಗ ವಿಜ್ಞಾನವು ಸ್ವೇಚ್ಛೆಯಿಂದ ಬಹಿರಂಗವಾಗಿ ಧರ್ಮವನ್ನು ಅಲ್ಲಗಳೆದಿದೆ. ಇದರಿಂದಾಗಿ ಭೌತಿಕವಾದವು ತನ್ನ ಪೂರ್ಣತೆಯ ಪರಾಕಾಷ್ಠತೆಯಲ್ಲಿರುವ ಕಾಲದಲ್ಲಿ ತಾನೇ ನಿರ್ಮಿಸಿದ ವ್ಯಸನಗಳಿಂದ ಬೆಳೆಯುತ್ತಿದೆ. ಇವೆರಡರಲ್ಲಿ ಯಾವುದಾದರೂ ಒಂದು ಸಮಾಜಕ್ಕೆ ಸುಖವನ್ನಿತ್ತು ಮಾನವನ ನಿತ್ಯ ಜೀವನಕ್ಕೆ ಸಹಾಯವನ್ನು ಮಾಡಬೇಕೆಂದಿದ್ದರೆ, ತನ್ನ ಕಾಲಲ್ಲೇ ಪ್ರತ್ಯೇಕವಾಗಿ ನಿಲ್ಲಲು ಅಸಮರ್ಥ.

ಯಥಾರ್ಥವಾಗಿ ನೋಡಿದರೆ, ವಿಜ್ಞಾನದ ತತ್ವಗಳು ಹಾಗೂ ವೈಜ್ಞಾನಿಕ ಸಮೀಪನವು ಧರ್ಮವನ್ನು ಚೈತನ್ಯಮಯವಾಗಿಸುತ್ತದೆ. ಅದೇ ಪ್ರಕಾರ, ಉತ್ಪಾದನೆಗಳ ಸಿದ್ಧಿಗಳು, ಹಂಚಿಕೆಗಳ ಕಾರ್ಯನೈಪುಣ್ಯತೆಗಳು, ಸಹಕಾರದ ಪ್ರಯೋಗಗಳು, ವ್ಯಕ್ತಿ ವೈಶಿಷ್ಟ್ಯದ ಅದ್ಭುತಗಳು, ನಿಸರ್ಗದ ಮೇಲಣ ವಿಕ್ರಮಗಳು—ಮೊದಲಾದುವುಗಳು ಧರ್ಮವು ಬೋಧಿಸುವ ಸುಖಮಯ ಜೀವನದ ಅತ್ಯುನ್ನತ ಮೌಲ್ಯಗಳನ್ನು ಸ್ವೀಕರಿಸಿಕೊಳ್ಳದಿದ್ದಲ್ಲಿ, ಅಲ್ಲದೆ ಸಮಾಜವನ್ನು ನಿರ್ಮಿಸಿದ ವ್ಯಕ್ತಿಗಳನ್ನು ತಮ್ಮ ಆತ್ಮೈಕ್ಯತೆಯ ಪಾಠವನ್ನು ಅನುಸರಿಸಲು ಒತ್ತಾಯಪಡಿಸದಿದ್ದಲ್ಲಿ, ಅವು ತಾವಾಗಿ ಜೀವನದ ಬೇಡಿಕೆಗಳನ್ನು ಪೂರೈಸಲಾರವು. ಮಾತ್ರವಲ್ಲ ಮಾನವ ಸುಖದ ಕಡೆಗೆ ತಮ್ಮ ಮಹತ್ತಾದ ಪಾಲನ್ನು ಭರವಸೆಯಿಂದ ನೀಡಲಾರವು.

(ಮುಂದುವರಿಯುವುದು)

ನೀರಾವರಿ ಅಭಿವೃದ್ಧಿ

ಅಧಿಕ ಆಹಾರೋತ್ಪಾದನೆಗಾಗಿ ನೀರಾವರಿ ಸೌಕರ್ಯ



[illegible] ನೀರಾವರಿ ಯೋಜನೆಗಳಿಂದಾಗಿ
ನಮ್ಮ [illegible] ನೀರಾವರಿ [illegible] ವಿಸ್ತರಿಸಿದೆ:—

		ಲಕ್ಷ ಎಕರೆಗಳು
[illegible]	...	24
[illegible] ಯೋಜನೆಯ ಅಂತ್ಯದಲ್ಲಿ	...	47
[illegible] ಯೋಜನೆಯ ಅಂತ್ಯದಲ್ಲಿ	...	79
[illegible] ಯೋಜನೆಯ ಅಂತ್ಯದಲ್ಲಿ	...	126

[illegible]

66/506

ಫಿಮೇಲ್ ಸರ್ವೆಂಟ್

(ನಾಲ್ಕನೇ ಪುಟದಿಂದ)

ಯಿಂದ ಗೊತ್ತುಮಾಡಿ ಕರಕೊಂಡು ಬಂದೆ, ಅವಳಿಗೆ ಯಾರೂ, ದಿಕ್ಕಿಲ್ಲವಂತೆ, ಮನೆಯಲ್ಲೇ ಬಿಡಾರ ಆಗಬೇಕು, ಅವಳ ಎಲ್ಲಾ ಕರಾರುಗಳಿಗೂ ಒಪ್ಪಲೇ ಬೇಕಾಯ್ತು. ಹೇಗೂ ಒಂದು ಭಾರ ಇಳಿತಲ್ಲ ಎಂದು ಒಪ್ಪಿ ಕರಕೊಂಡು ಬಂದೆ.

"ನೋಡ್ರಿ, ಗಂಟೆ ಎಂಟಾಗ್ತಾ ಕದನೇ ತೆಗಿದಿಲ್ಲ. ಏನಾಗಿದೆಯೋ ಇವಳಿಗೆ?" "ನಾನೇ ಹೋಗಿ, ಕೂಗಿ ಕೂಗಿ, ಗಂಟಲ ಹರಕೊಂಡೆ. ಏಳಲೇ ಇಲ್ಲ ಕೊನೆಗೆ, ಕದದ ಚಿಲಕನೇ ತಪ್ಪಿಸಿ ಒಳಗೆ ಹೋಗಿ ನೋಡಿದ್ರೆ, ಪಕ್ಕದಲ್ಲಿ ಫಾಲಿಡಾಲ್‌ನ ಬಾಟ್ಲಿ ಒಂದು ಹಾಳೆ ಬಿದ್ದಿತ್ತು. ಅವಳು ಆಗಲೆ, ಈ ಲೋಕ ಬಿಟ್ಟಿದ್ದಳು. ಆಕಾಶವೆ ಕಳಚಿ ಬಿದ್ದಂತಾಯ್ತು. ಏನು ಮಾಡೋದ? ನಮ್ಮ ಬೀದಿಯಲ್ಲೇ ಸಬ್‌ಇನ್‌ಸ್ಪೆಕ್ಟರ್ ರಾಮಸ್ವಾಮಿ ಮನೆ. ಅವರನ್ನೆ ಹಿಡಿದು ಪಂಚನಾಮೆ ಮಾಡಿಸಿ, ಕೈತೊಳಕೊಂಡೆ. ಅಷ್ಟು ಮಾಡೋದ್ರೊಳಗೆ, ೫೦೦ ರೂಪಾಯಿ ಖಾಲಿಯಾಗಿದ್ದವು.

"ರೀ, ಇನ್ನು ಮೇಲೆ, ಎಲ್ಲಾ ಕೆಲಸಾನೂ ನಾನೇ ಮಾಡ್ತೇನ್ರಿ. ಅದೇ ಹಣದಿಂದ ನನಗೆ ಬಂಗಾರದ ಬಳೆ ಮಾಡಿಸ್ರಿ." ಈ ಬುದ್ಧಿ ಮೊದಲೆ ಬಂದಿದ್ರೆ, ಆಗಲೆ, ಎರಡು ಬಳೆ ಕೈಯಲ್ಲಿ ಇರುತ್ತಿದ್ದುವು. ಒಳ್ಳೇದು, ಈಗಲಾದರು ಬುದ್ಧಿ ಬಂತಲ್ಲ. ಅದು ಸರಿ. "ಅವಳೇನಂತ ಪತ್ರ ಬರೆದಿದ್ದಳು?" "ಅವಳು ಮೂರು ತಿಂಗಳ ಬಸುರಿಯಂತೆ; ಅವನು ಯಾವೋನೋ ಡ್ರೈವರ್, ಇವಳಿಗೆ ಕೈಕೊಟ್ಟು ಬೇರೆ ಕಡೆ ಮದ್ವೆ ಆದ್ನಂತೆ."

"ಹಾಗೇನ ವಿಷಯ!"

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 417/1966

ಸರ್ವೋತ್ತಮ ಭಟ್ಟ— ವಾದಿ.

ಸುಬ್ರಾಯ ಪತ್ವಾರ ಕೂಡಾ—ಪ್ರತಿವಾದಿರು.

1ನೇ ಪ್ರತಿವಾದಿ- ಸುಬ್ರಾಯ ಪತ್ವಾರ, ನಾಗಪ್ಪ ಪತ್ವಾರರ ಮಗ, ಜವುಳಿ ವ್ಯಾಪಾರಂ, ಬೆಂಗಳೂರು ಸಿಟಿ ದೊಡ್ಡಪೇಟೆ

ಇವರಿಗೆ

ವಾದಿಯು ನಿಮ್ಮ ವಗೈರೆರ ಮೇಲೆ ರೂಪಾಯಿ 597.87 N. P. ಕ್ಕೆ ಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆಯಿದ್ದಲ್ಲಿ ತಾರೀಕು 13-4-1967ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರ್ರು ಆಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

K. Raghunatha Shenoy
Advocate for Plaintiff

ಕುಂದಾಪುರ, 14-3-1967

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. I. A. 2585/66.
O. S. 354/64.

ಗುಣವತಿ ಅಮ್ಮ ಸಹ — ಅರ್ಜಿದಾರರು

ಲಕ್ಷ್ಮೀನಾರಿ ಸಹ— ಎದ್ರಿರು

6ನೇ ಎದ್ರಿ, ಗುಣಪಾಲ ರೈ. ನೀಲಮ್ಮನ ಮಗ, ಪುತ್ತೂರು ತಾಲ್ಕು ಕುದುಮಾರು ಗ್ರಾಮ, ಇವರಿಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲ್ಕಂಡ ವ್ಯವಹಾರದಲ್ಲಿ ನಿಂಮನ್ನು ಸಪ್ಲಿಮೆಂಟರಿ ಎದ್ರಿಯಾಗಿ ಕಕ್ಷಿಯಲ್ಲಿ ಸೇರಿಸಬೇಕೆಂತ ಮಾಡಿದ ಮೇಲ್ಕಂಡ ಅರ್ಜಿಯು ತಾ. 12-4-67ಕ್ಕೆ ಇರುವುದರಿಂದ ನಿಮ್ಮ ಆಕ್ಷೇಪಣೆಗಳಿದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದೆ 11ಗಂಟೆಗೆ ಸರಿಯಾಗಿ ಹಾಜರಾಗಿ ಊರ್ಜಿತಪಡಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿದೆ.

(Sd.) B. Ishwara Bhat
Advocate for Plff.

ಪುತ್ತೂರು, ತಾ. 24-3-67.

(ಮೂರನೇ ಪುಟದಿಂದ)

ದ ಅಲ್ಲಿ ಕಾಂಗ್ರೆಸ್ ಸರಕಾರವೂ ರಾಜಿಯಿತ್ತಿತು. ಕಾಂಗ್ರೆಸ್—ಮತ್ತು ವಿರೋಧಿಗಳಿಗೆ ಸಮಬಲವಿತ್ತು. ಇಬ್ಬರೂ ಬಹುಮತಕ್ಕಾಗಿ ಪ್ರಯತ್ನಿಸುತಿದ್ದರು. ಕೊನೆಗೂ ಕಾಂಗ್ರೆಸ್ಸೇ ಗೆದ್ದು ಮತ್ತೆ ಸರಕಾರ ರಚಿಸಲು ಮುಂದೆ ಬಂದಿದೆ—ಇವೆಲ್ಲಾ ಏನನ್ನು ತೋರಿಸುತ್ತವೆ? ಅಧಿಕಾರ ಕ್ಷೀರವೇಲಣ ಗುಳ್ಳೆಯೆಂಬುದನ್ನೋ, ಜೀವನವೆನ್ನುವುದು ಭಗವಂತನಾಡುವ ಗೊಂಬೆಯಾಟವೆಂಬುದನ್ನೋ?

ಬೆಳ್ತಂಗಡಿ ತಾಲೂಕು ಗಿರಿಜನರ ಸಮ್ಮೇಳನ

ಬೆಳ್ತಂಗಡಿ ತಾಲೂಕು ಗಿರಿಜನರ ಸಮ್ಮೇಳನದ ಸಮಾರೋಪ ಸಮಾರಂಭವು ಮುಂಡಾಜೆಯಲ್ಲಿ ಶ್ರೀ ಟಿ. ಎ. ಪೈಯವರಿಂದ ಮಾರ್ಚ 24ರಂದು ಉದ್ಘಾಟಿಸಲ್ಪಟ್ಟಿತು.

ಸಮ್ಮೇಳನದ ಅಧ್ಯಕ್ಷತೆಯನ್ನು ಬೆಳ್ತಂಗಡಿ ತಾಲೂಕು ಬೋರ್ಡ್ ಸದಸ್ಯ ಶ್ರೀ ಎಂ. ವಾಸುದೇವ ಹೆಬ್ಬಾರರು ವಹಿಸಿದ್ದರು. ಬೆಳಿಗ್ಗೆ ಸಮ್ಮೇಳನವನ್ನು ಶ್ರೀ ಬಿ. ನಾರಾಯಣ ನಾಯ್ಕರು ಉದ್ಘಾಟಿಸಿದರು. ತಾಲೂಕು ಅಭಿವೃದ್ಧಿ ಮಂಡಳಿಯ ಪ್ರಧಾನ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎ. ಶಶಿಕಲಾರವರು ಸ್ವಾಗತಿಸಿದರು. ಜಿಲ್ಲಾ ಅಭಿವೃದ್ಧಿ ಸಹಾಯಕ ಅಧಿಕಾರಿ ಶ್ರೀ ರಂಗಣ್ಣನವರು ಸಮ್ಮೇಳನದಲ್ಲಿ ಭಾಗವಹಿಸಿ ಸರಕಾರವು ಕೈಗೊಂಡ ಕಾರ್ಯಗಳನ್ನು ವಿವರಿಸಿದರು. ತಾಲೂಕು ಬೋರ್ಡ ಅಧ್ಯಕ್ಷ ಶ್ರೀ ಜಿ. ಎಸ್. ಭಿಡೆಯವರ ನೇತೃತ್ವದಲ್ಲಿ ಚರ್ಚಾಗೋಷ್ಠಿ ನಡೆದು ಹಲವು ಠರಾವುಗಳಾದುವು.

ಶ್ರೀ ಟಿ. ಎ. ಪೈಯವರು ತಮ್ಮ ಸಮಾರೋಪ ಭಾಷಣದಲ್ಲಿ 'ಹರಿಜನ— ಗಿರಿಜನರು ದೇಶದ ಹಿರಿಜನರು. ಅವರು ಏಳ್ಗೆಹೊಂದದೆ ದೇಶದ ನಿಜವಾದ ಪ್ರಗತಿಯಾಗದು. ಅದು ಮಾನಸಿಕ ಬದಲಾವಣೆಯಿಂದ ಹಾಗೂ ದೃಷ್ಟಿವೈಶಾಲ್ಯದಿಂದ ಮಾತ್ರ ಸಾಧ್ಯ. ಅಲ್ಲದೆ ಸಭೆಸಮಾರಂಭ ಜರಗಿಸಿದರೆ ಉದ್ಧಾರವಾಗದು.' ಎಂದರು. ಅವರು ಮುಂದುವರಿಯುತ್ತಾ ನೇಕಳಟ್ಟಲು ತ್ಯಾಗಬೇಕು. ದೇಶದ ಸಂಪತ್ತು ಬೆಳೆಸಲು ಸಂಕುಚಿತ ಭಾವನೆತೊರೆದು ನಿಲ್ಲಬೇಕು. ಆಗ ಪ್ರಯೋಜನವೂ ಲಭಿಸುತ್ತದೆ. ಇಂತಹ ಸಮ್ಮೇಳನಗಳಲ್ಲಿ ಒಳ್ಳೆಯ ಕಸುಬು ಮಾಡಿದವರಿಗೆ ಪ್ರಶಸ್ತಿಯಿತ್ತು ಗೌರವಿಸಬೇಕೆಂದರು. ಕಸುಬುಗಳಲ್ಲಿ ಹುಲು ಕೀಳಿಲ್ಲ. ಈ ದೇಶದಲ್ಲಿರುವ ಅಪಾರ ಪ್ರಕೃತಿ ಸಂಪತ್ತನ್ನು ಸದುಪಯೋಗಪಡಿಸಬೇಕು ಎಂದರು.

ಆರಂಭದಲ್ಲಿ ಶ್ರೀ ಭಿಡೆಯವರು ಸ್ವಾಗತಿಸಿ ಶ್ರೀ ಪೈಯವರ ಜನಪ್ರಿಯತೆ, ಕಾರ್ಯನಿಪುಣತೆ, ಶಿಕ್ಷಣ ಪ್ರೇಮಗಳನ್ನು ಕೊಂಡಾಡಿದರು. ಅನಂತರ ಸ್ಪರ್ಧೆಯಲ್ಲಿ ವಿಜಯಿಗಳಾದವರಿಗೂ ಹರಿಜನ ಗಿರಿಜನ ಮಹಿಳೆಯರಿಗೂ ವಸ್ತ್ರ, ಸೀರೆ ಮೊದಲಾದ ಬಹುಮಾನಗಳನ್ನು ಶ್ರೀ ಪೈಗಳು ವಿತರಣೆ ಮಾಡಿದರು.

ಕೊನೆಯಲ್ಲಿ ಪಂಚಾಯತ್ ವಿಸ್ತರಣಾಧಿಕಾರಿ ಶ್ರೀ ಮಹಾಬಲ ಶೆಟ್ಟರು ಧನ್ಯವಾದ ಸಮರ್ಪಿಸಿದರು. ಎಲ್ಲ ಭಾಗಗಳಿಂದ ಆಗಮಿಸಿದ ಹರಿಜನ ಗಿರಿಜನರಿಗೆ ಮಧ್ಯಾಹ್ನವೂ ರಾತ್ರಿಯೂ ಊಟದ ವ್ಯವಸ್ಥೆ ಇತ್ತು.

ಬೀಳ್ಕೊಡುಗೆ.

ಮಾಲ್ಕಿ ಸಬ್‌ಡಿವಿಜನಿಗೆ ವರ್ಗವಾಗಿ ಹೋಗಲಿರುವ ಕುಂದಾಪುರ ಸಬ್‌ಡಿವಿಜನಿನ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಕಟಪಾಡಿ ಬಾಲಕೃಷ್ಣರವರನ್ನು ಶ್ರೀ ಬಸವೇಶ್ವರ ಯುವಕ ಸಂಘದವರು ಸಂಘದ ಸಂಚಾಲಕ ಶ್ರೀ ಕೆ. ಕೇಶವರವರ ಅಧ್ಯಕ್ಷತೆಯಲ್ಲಿ ಸತ್ಕರಿಸಿದರು. ಶ್ರೀಗಳಾದ ಬಿ. ಗೋವಿಂದ, ಟಿ. ಕೇಶವ ಮೊದಲಾದವರು ಮಾತನಾಡಿದರು. ಅತಿಥಿಗಳ ಉತ್ತರದ ನಂತರ ಶ್ರೀ ಬಿ. ಗೋವಿಂದನವರು ಧನ್ಯವಾದಗಳನ್ನು ಸಮರ್ಪಿಸಿದರು.

ಉಡುಪಿ ಲಯನ್ಸ್ ಕ್ಲಬ್ಬಿನ ಸಭೆ

ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯು ತಾ. 23ರಂದು ಜರಗಿ ಈ ಕೆಳಗಿನ ಆಡಳಿತ ಮಂಡಳಿಯನ್ನು ಮುಂದಿನ ವರ್ಷಕ್ಕೆ ರಚಿಸಲಾಯಿತು.

ಶ್ರೀಗಳಾದ ಎಸ್. ವಿ. ಕಾಮತ್, ಅಧ್ಯಕ್ಷ, ಕೆ. ವಿ. ಪೈ, ಎಲ್. ಮೆಂಡೋನ್ಸ, ಡಾ| ಯು. ಕೆ. ಆಚಾರ್ಯ ಉಪಾಧ್ಯಕ್ಷರು. ಟಿ. ಎ. ವಾಸುದೇವನ್ ಕಾರ್ಯದರ್ಶಿ, ಶ್ರೀ. ಆರ್. ವಿ. ಶೆಣೈ ಕೋಶಾಧಿಕಾರಿ, ಕವಿರಾಜ, ಎಂ. ಜಿ. ಶೆಣೈ, ಟ್ಯಾಲ್ ಟ್ವಿಸ್ಟರ್, ಎಸ್. ವಿ. ಪಿ. ಶೆಟ್ಟಿ, ಲಯನ್ ಟೇಮರ್, ಶ್ರೀಗಳಾದ ಕೆ. ಎಸ್. ಕಾಮತ್, ಎನ್. ಎಸ್. ಕಾಮತ್, ಎಂ. ಕೇಶವ ಭಟ್, ಡಾ. ವಿ. ಎಸ್ ಆಚಾರ್ಯ, ಕೆ. ಕೆ. ಮೆನೋನ್, ಡಾ| ಎಂ. ಆರ್. ಹೆಗ್ಡೆ, ಡಾ| ಕೆ. ಆರ್. ವಿ. ಕೃಷ್ಣ, ಡಾ| ಎಂ. ಎಸ್. ಶೆಟ್ಟಿ, ಡಾ| ಎಂ. ಬಿ. ಶೆಟ್ಟಿ ಡೈರೆಕ್ಟರುಗಳು.

ವಿದಾಯ ಸತ್ಕಾರ

ಮಾರ್ಚ 18:- ಉಡುಪಿ ಮೋಡರ್ನ್ ಹಾಯರ ಎಲಿಮೆಂಟರಿ ಶಾಲಾ 7ನೇ ತರಗತಿಯ ಮಕ್ಕಳನ್ನು ಬೀಳ್ಕೊಡುವ ಸಮಾರಂಭವು ಶ್ರೀ ಶಿರ್ವಾಡಿ ವಿಲಿಯಂ ಪಿಂಟೋ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಜೆ. ಜಿ. ಜೋರ್ಜ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶಾಲಾ ಮೆನೇಜರರಾದ ಶ್ರೀ ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ಮಕ್ಕಳಿಂದ ಶಾಲೆಗೆ ಕೊಡಲ್ಪಟ್ಟ ಕಾಣಿಕೆಗಳನ್ನು ಶಾಲಾ ಮೆನೇಜರರಿಗೆ ಕೊಟ್ಟರು. ಮಕ್ಕಳಿಂದ ಭಾಷಣವಾದ ಬಳಿಕ ಅಧ್ಯಾಪಕರಲ್ಲಿ ಶ್ರೀ ಕೃಷ್ಣಮೂರ್ತಿ ಐತಾಳರು ಮತ್ತು ಶ್ರೀ ರತ್ನಾಕರ ಅಡಿಗರು ಮಕ್ಕಳಿಗೆ ಹಿತವಚನಗಳನ್ನಾಡಿದರು. ಮುಂದೆ ಅಧ್ಯಕ್ಷರ ಭಾಷಣವಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರು ಧನ್ಯವಾದ ಸಮರ್ಪಿಸಿದರು.

ಮುಂಡಾಜೆ ಯುವಕ ಮಂಡಲದ ವಾರ್ಷಿಕೋತ್ಸವ

ಇದೇ ತಾ. 24ರಂದು ಮುಂಡಾಜೆ ಯುವಕ ಮಂಡಲದ ವಾರ್ಷಿಕೋತ್ಸವವನ್ನು ಶ್ರೀ ಟಿ. ಎ. ಪೈಯವರು ಶ್ರೀ ಜಿ. ಎಸ್. ಭಿಡೆಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸುತ್ತಾ ಯುವಕರು ಸಂಘಟಿತರಾಗಿ ಹಳ್ಳಿಗಳ ಉದ್ಧಾರಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ದುಡಿದು ಮಾರ್ಗದರ್ಶನ ಮಾಡಬೇಕೆಂದು ಕರೆಕೊಟ್ಟರು. ವರದಿ ವಾಚನ, ಯುವಕರ ಭಾಷಣಗಳಾದ ಬಳಿಕ ಅಧ್ಯಕ್ಷ ಶ್ರೀ ಭಿಡೆಯವರು ಯುವಕ ಮಂಡಲಿಗಳು ಮಾಡ ಬಹುದಾದ ಕೆಲಸಗಳನ್ನು ವಿವರಿಸಿ ಹಿತಸೂಚನೆಗಳನ್ನಿತ್ತರು.

ಹರಿಜನ ಗಿರಿಜನ ಪರಿಷತ್ತು

ಉಡುಪಿ ತಾಲೂಕು ಬೋರ್ಡಿನ ವತಿಯಿಂದ ಹರಿಜನ ಗಿರಿಜನ ಪರಿಷತ್ತು ಪರ್ಕಳದಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎ. ಜೆ. ಆಳ್ವಯವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಬಿ. ಎಸ್. ಶೆಟ್ಟಿ ಮೊದಲಾದವರು ಸಮಯೋಚಿತ ಭಾಷಣಗೈದರು. ಶ್ರೀ ಮಂಜುನಾಥ ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಮಧ್ಯಾಹ್ನ ಸಮಾರೋಪ ಸಮಾರಂಭವು ಶ್ರೀ ಬೀಳಂಜೆ ವಿಠಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಸಿ. ರಂಗನಾಥ ಶೆಣೈಯವರಿಂದ ಉದ್ಘಾಟಿಸಲ್ಪಟ್ಟು ಹಲವರು ಭಾಷಣ ಮಾಡಿದರು. ಸುಮಾರು 800 ಹರಿಜನ ಗಿರಿಜನರಿಗೆ ಊಟದ ವ್ಯವಸ್ಥೆ ಇತ್ತು 150 ಸ್ತ್ರೀಯರಿಗೆ ಬಟ್ಟೆಬರೆ ಹಂಚಲಾಯಿತು.

ಮಂಗಳೂರಿಗೊಂದು ನೂತನ ಹೋಟೆಲ್

ನಗರದ ಸುಪ್ರಸಿದ್ಧ ಹೋಟೆಲ್ ಉದ್ಯಮಿಗಳಾದ ಮೆಸರ್ಸ್ ಉಡ್ಪಿ ಶ್ರೀನಿವಾಸ ಶೆಟ್ಟಿ ಎಂಡ್ ಕೊ. ಅವರ ಮಾಲಕತ್ವದಲ್ಲಿರುವ 'ಮೋತಿ ಮಹಲ್' ಹೋಟೆಲನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಇದೇ ತಾ. 26ರಂದು ಪೂರ್ವಾಹ್ನ ಉದ್ಘಾಟಿಸಿದರು. ವಿಧಾನಸಭಾಧ್ಯಕ್ಷ ಶ್ರೀ ಬಿ. ವೈಕುಂಠಬಾಳಿಗಾರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ನಗರದ ಫಳ್ನೀರಿನಲ್ಲಿರುವ 123 ಅಡಿ ಎತ್ತರದ ಹಾಗೂ ಏಳು ಮಾಳಿಗೆಗಳುಳ್ಳ ಈ ಭವ್ಯ ಕಟ್ಟಡದ ರಚನಾ ಕಾರ್ಯವು ಅಂತರಾಷ್ಟ್ರೀಯ ಮಟ್ಟದ್ದಾಗಿದೆ. ಕಟ್ಟಡದ ಕನ್‌ಸಲ್ಟಿಂಗ್ ಇಂಜಿನಿಯರ್ ಶ್ರೀ ಸಿ. ವಿ. ಕಾಮತ್ ತಾ. 21ರಂದು ಸಂಜೆ ಪತ್ರಿಕಾಕರ್ತರೊಡನೆ ಮಾತನಾಡುತ್ತಾ ಕಟ್ಟಡ ನಿರ್ಮಾಣದ ಬಗ್ಗೆ ಸಂಪೂರ್ಣ ವಿವರಗಳನ್ನಿತ್ತರು.

ಹೋಟೆಲಿನ ಮೆನೇಜರ್ ಶ್ರೀ ಮೋಂಟಿ ಡಯಾಸ್ ಅವರು ಹಾಗೂ ಶ್ರೀ ಉಡ್ಪಿ ಪಾಂಡುರಂಗ ಶೆಟ್ಟಿಯವರು ಪತ್ರಿಕಾ ಕರ್ತರನ್ನು ಹೋಟೆಲಿನ ಎಲ್ಲಾ ವಿಭಾಗಗಳಿಗೆ ಕೊಂಡೊಯ್ದರು. ಇಲ್ಲಿ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಊಟ, ತಿಂಡಿಗಳನ್ನು ಒದಗಿಸಲಾಗುವುದು. ನಗರದ ಸಂದರ್ಶಕರಿಗೆ ಅತ್ಯಾಧುನಿಕ ರೀತಿಯ ಸೌಕರ್ಯಗಳನ್ನು ಒದಗಿಸಲಿರುವ ಈ ಭವ್ಯ 'ಮೋತಿ ಮಹಲ್' ಬೃಹತ್ ನಗರವಾಗಲಿರುವ ಮಂಗಳೂರಿಗೆ ಹೆಚ್ಚು ಉಪಯುಕ್ತವಾಗಲಿದೆ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 197/1966.

ಕಾಶ್ಮೀರ್ ಪಿಂಟೊ— ವಾದಿ.

ಮತ್ತು

ಜುಲೇಕಾಬಿ ಕೂಡಾ— ಪ್ರತಿವಾದಿರು.

ಇವರೊಳಗೆ.

3ನೇ ಪ್ರತಿವಾದಿ ಜುಲೇಕಾಬಿ— ಆ್ಯಸಮ್ಮನ ಮಗಳು, ಮೂಲೂರು ಗ್ರಾಮದ ಪಡುಕೋಪ್ಲ ಕರೆ.

ತಾ. 30-5-56ರಲ್ಲು ರೂ 4000/-ಕ್ಕೆ 1ನೇ ಪ್ರತಿವಾದಿರು ಕೂಡಾ ಬರಕೊಟ್ಟ ಯೋಡು ದಸ್ತಾವೇಜು ಪ್ರಕಾರ ಬಾಕಿಕ್ಕೆ ಅ್ಯವಜಿಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು 3ನೇ ಪ್ರತಿವಾದಿಳ ನೋಟೀಸಿನ ಬಗ್ಗೆ ತಾ. 3-4-67ಕ್ಕೆ ಇಟ್ಟಿದೆ ಸದ್ರಿಯವಳು 3-4-67ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿಯವರ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯ ತೀರ್ಮಾನಿಸಲ್ಪಡುವದು.

(Sd.) Gratian C. Rego,
Vakil for Plaintiff.

ತಾ. 24-3-1967.

Wanted a secondary or hr. grade trained Teacher. Appointment temporary. Apply immediately. The correspondent U. B. M. C. Ele. School, Kallambadi camp: B. M. Compound, P. O. Parkala.

ಚಂದಾದಾರರು

ದಯಮಾಡಿ ತಮ್ಮ ಬಾಕಿ ಚಂದಾಹಣವನ್ನು ತ್ವರ್ಯ ಕಳುಹಿಸಿಕೊಡುವಂತೆ ವಿನಂತಿ.

ಮೆನೇಜರ್

ದೇಶ ವಿದೇಶಗಳಲ್ಲಿ

ನಮಸ್ಕಾರ ಪದ್ಧತಿ

ಬರೆದವರು : ಶ್ರೀ ಸ. ನಾರಾಯಣ

'ನಮಸ್ಕಾರ" ಎಂದು ಕೈ ಮುಗಿಯುತ್ತೇವೆ. ಇದು ಸುಸಂಸ್ಕೃತ ವ್ಯಕ್ತಿಯ ನಡವಳಿಕೆಯ ಪ್ರಮುಖ ಅಂಗ. ಬಂಧುಗಳನ್ನು, ಪರಿಚಿತ—ಅಪರಿಚಿತ ವ್ಯಕ್ತಿಗಳನ್ನು ಭೇಟಿಯಾದಾಗ ಪರಸ್ಪರ ಕುಶಲ ಸಂಭಾಷಣೆ ನಡೆಸುವ ಮುಂಚೆ, ನನ್ನ ಮನೋಭಾವನೆ— ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮುಂಚೆ ನಮಸ್ಕರಿಸುತ್ತೇವೆ. ಇದಕ್ಕೆ ಅಭಿವಂದನೆ— ಪ್ರಣಾಮ ಎಂದೂ ಕರೆಯಬಹುದು.

ಸಮ ವಯಸ್ಕ ಗೆಳೆಯರನ್ನು ಸಂಧಿಸಿದಾಗ ಮುಗುಳು ನಗೆಯ ಜೊತೆಗೆ ಕುಶಲ ಸಮಾಚಾರ ಕೇಳುತ್ತೇವೆ. ಹಿರಿಯರನ್ನೂ ಅಧಿಕಾರಿಗಳನ್ನೂ, ಗೌರವಾನ್ವಿತ ವ್ಯಕ್ತಿಗಳನ್ನೂ ಭೇಟಿ ಮಾಡಿದಾಗ ಭಕ್ತಿಯಿಂದ ವಂದಿಸುತ್ತೇವೆ, ಕಿರಿಯರಿಗೆ ಆಶೀರ್ವಾದ ಮಾಡುತ್ತೇವೆ. ಈ ಸಂದರ್ಭದಲ್ಲಿ ನಮ್ಮಲ್ಲಿ ಅಧಿಕವಾಗಿ ಸರಳತೆ, ನಮ್ರತೆ ಮತ್ತು ಕೋಮಲತೆ ವ್ಯಕ್ತವಾಗುತ್ತವೆ. ಇದು ಸತ್ಕಾರದ— ಸೌಜನ್ಯದ ಚಿಹ್ನೆ ಎಂದು ಹೇಳಬಹುದು.

ನಾನಾ ವಿಧವಾದ ನಮಸ್ಕಾರ ಪದ್ಧತಿಗಳು ದೇಶವಿದೇಶಗಳಲ್ಲಿ ಬಳಕೆಯಲ್ಲಿವೆ. ಭಾರತದಲ್ಲಿ ಎರಡು ಕೈಗಳನ್ನು ಜೋಡಿಸಿ ಮುಗಿದು "ನಮಸ್ಕಾರ"—(ನಮಸ್ತೆ) ಎಂದು ಹೇಳುವ ವಾಡಿಕೆ ಇದೆ. ಭಾರತದ ಪಶ್ಚಿಮ ಭಾಗದ ಪ್ರಾಂತಗಳಲ್ಲಿನ ನಿವಾಸಿಗಳು ಪರಸ್ಪರ ತಮ್ಮಲ್ಲಿ "ರಾಮ್ ರಾಮ್" 'ಜಯಗೋಪಾಲ" ಎಂದು ಹೇಳುವ ಸಂಪ್ರದಾಯವಿದೆ. ಮುಸ್ಲಿಂ ಜನರು ಸಲಾಮ್ ಅಲೇಕುಂ" 'ಆದಾಬ್ ಅರ್ಜ್' ಎಂದು ಹೇಳಿ ಸಂಧಿಸುತ್ತಾರೆ.

ಇಂಗ್ಲಿಷ್ ಜನರಲ್ಲಿ ಅಭಿವಂದನೆಯ ರೀತಿ ಭಿನ್ನವಾಗಿದೆ. ಆದರೆ ಅವರ ರೀತಿ ನೀತಿ ಸಂಪ್ರದಾಯಗಳು ನಮಗ ಚಿರಪರಿಚಿತವಾಗಿವೆ. ನಮ್ಮ ನಿತ್ಯ ವ್ಯವಹಾರಗಳಲ್ಲಿ ಬಳಕೆಯಲ್ಲಿವೆ. ಸಂಧಿಸಿದಾಗ ಪರಸ್ಪರ ಗುಡ್ ಮಾರ್ನಿಂಗ್ (Good—morning) ಗುಡ್ ಡೇ (Good day) ಗುಡ್ ಆಫ್ಟರ್‌ನೂನ್ (Good—afternoon) ಗುಡ್ ಈವನಿಂಗ್ (Good evening) ಗುಡ್ ನಾಯಿಟ್ (Good night) ಹೇಳುತ್ತಾ ಷೇಕ್ ಹ್ಯಾಂಡ್ (Shake—hand—ಕೈ ಕುಲುಕುವ) ಮಾಡುವ ಪದ್ಧತಿಯಿದೆ. ಕೊನೆಯಲ್ಲಿ ಪರಸ್ಪರ ಬೀಳ್ಕೊಡುವಾಗ ಗುಡ್ ಬೈ (Good bye) ಎಂದು ಹೇಳಿ ತೆರಳುತ್ತಾರೆ. ಇದೊಂದು ಬಗೆಯ ಉತ್ತಮ ಸೌಹಾರ್ದತೆ ಮತ್ತು ಸದ್ಭಾವನೆಗಳಿಂದ ಕೂಡಿದ ಅಭಿನಂದನಾ ಪದ್ಧತಿ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಪಡೆಯುತ್ತಿರುವ ನಾಡಿನಲ್ಲಿ ಈ ಬಗೆಯ ನಡವಳಿಕೆ ಇರುವುದು ಪರಿಚಿತ ಸಂಗತಿ. ಇಂಗ್ಲೀಷ್ ಜನರಲ್ಲಿ ಇನ್ನೊಂದು ಬಗೆಯ ಅಭಿನಂದನಾ ಸಂಪ್ರದಾಯವೂ ಉಂಟು. ಪರಿಚಿತರನ್ನು ಸ್ವಲ್ಪ ದೂರದಲ್ಲಿ ಕಂಡೊಡನೆಯೇ ಪರಸ್ಪರ ತಲೆ ತಗ್ಗಿಸುತ್ತಾರೆ. ವಿಶೇಷ ಸನ್ಮಾನ ಸಂದರ್ಭಗಳಲ್ಲಿ, ಗೌರವ ಪ್ರದರ್ಶಿಸ ಬೇಕಾದ ವೇಳೆಯಲ್ಲಿ ತಲೆಯ ಟೋಪಿ ತೆಗೆಯುತ್ತಾರೆ. ಕೆಲವು ಕಡೆಗಳಲ್ಲಿ, ಕೆಲವು ಸನ್ನಿವೇಶಗಳಲ್ಲಿ ತಮ್ಮ ಹೃತ್ಪೂರ್ವಕ ವಿಶೇಷ ಆದರ—ಗೌರವ—ವಿಶ್ವಾಸಗಳನ್ನು ಪ್ರಕಟಿಸುವ ಸಲುವಾಗಿ ಟೋಪಿಯನ್ನು ತಲೆ ಕೆಳಗೂ ಇಡುತ್ತಾರೆ. ಇದು ಆಯಾ ನಾಡಿನ ಸಂಸ್ಕೃತಿ, ರೀತಿನೀತಿ ನಡವಳಿಕೆಗಳನ್ನು ಅವಲಂಬಿಸಿದ ಸಂಪ್ರದಾಯಗಳು.

ಇಂಗ್ಲಿಷ್ ಜನರಲ್ಲಿ ಟೋಪಿ ತೆಗೆದು ಅಭಿನಂದಿಸುವ ಸಂಪ್ರದಾಯ ಇರುವಂತೆಯೇ ಫ್ರೆಂಚ್ ಜನರಲ್ಲಿಯೂ ಅದೇ ಬಗೆಯ ಸಂಪ್ರದಾಯ ನಡವಳಿಕೆಯಲ್ಲಿದೆ. ಅಲ್ಲಿ ಪರಸ್ಪರ ಗಾಢಾಲಿಂಗನ ಮಾಡಿಕೊಳ್ಳುವ ಕ್ರಮವೂ ಇದೆ. ಇದೇ ರೀತಿಯ ಪದ್ಧತಿ ಬೆಲ್ಜಿಯಂನಲ್ಲಿಯೂ ಇದೆ.

ಸ್ಪೈಯಿನ್ ದೇಶದಲ್ಲಿ ರೈತರ ಪರಸ್ಪರ ಪ್ರಣಾಮ ಪದ್ಧತಿ ವಿಚಿತ್ರವಾಗಿದೆ ಮತ್ತು ಆಶ್ಚರ್ಯಜನಕವಾಗಿದೆ. ಅಲ್ಲಿಯ ಜನರು ಪರಸ್ಪರ ಭೇಟಿಯಾದಾಗ ರೊಟ್ಟಿಯ ಚೂರನ್ನು ತೋರಿಸುತ್ತಾರಂತೆ. ಸ್ಪೈಯಿನ್ ದೇಶದ ಜನರು ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ತಮ್ಮೊಂದಿಗೆ ರೊಟ್ಟಿಯ ಚೂರನ್ನು ಇಟ್ಟುಕೊಂಡು ತಿರುಗುತ್ತಾರೆ. ಪರಸ್ಪರ ಸಂಧಿಸಿದಾಗ ರೊಟ್ಟಿಯ ಚೂರನ್ನು ತೋರಿಸುತ್ತಾರಷ್ಟೇ ಏನೂ ಕೊಡುವುದಿಲ್ಲ.

ರೆಡ್ ಇಂಡಿಯನ್ (Red Indian) ಜನರು ಭೇಟಿಯಾದ ತರುವಾಯ ಪರಸ್ಪರ ಸಿಗರೇಟುಗಳನ್ನು ಬದಲಿಸಿ ಕೊಳ್ಳುತ್ತಾರೆ. ಬರ್ಮಾದೇಶದ ಮಿತ್ರರು ಪರಸ್ಪರ ಸಂಧಿಸಿದ ಸಮಯದಲ್ಲಿ ಚುಂಬಿಸುವ ಪದ್ಧತಿ ಬಳಕೆಯಲ್ಲಿದೆ.

ಚೀಣ ದೇಶದ ಜನರು ಭೇಟಿಯಾದ ಸಮಯದಲ್ಲಿ ಕೈ ಜೋಡಿಸಿ ತಲೆ ಬಾಗಿಸುತ್ತಾರೆ. ಮತ್ತು ಪರಸ್ಪರ ಟೋಪಿಗಳನ್ನು ಕೂಡಿಸುತ್ತಾರೆ—(ಸೇರಿಸುತ್ತಾರೆ). ಯಾವ ಚೀನೀಯನೂ ರಾತ್ರಿಯ ವೇಳೆಯಲ್ಲಿಯೂ ಟೋಪಿ ಇಲ್ಲದೆ ಹೊರಗೆ ಸಂಚರಿಸುವುದಿಲ್ಲ. ಆಕಸ್ಮಿಕವಾಗಿ ರಾತ್ರಿಯ ವೇಳೆ ಅತಿಥಿ ಮನೆಗೆ ಆಗಮಿಸಿದ ಸಂದರ್ಭದಲ್ಲಿ ಮನೆಯ ಯಜಮಾನ ತನ್ನ ಟೋಪಿಯನ್ನು ಧರಿಸಿ ಅನಂತರ ಅತಿಥಿಯನ್ನು ಸಂಧಿಸುತ್ತಾನೆ. ಚೀಣದಲ್ಲಿ ಜನರು ಕುಶಲವನ್ನು ಕೇಳುವ ಬಗೆಯೇ ಬೇರೆ. "ತಮ್ಮ ಊಟ ಮಾಡಿದ್ದೀರಾ?, ತಮ್ಮ ಆರೋಗ್ಯ ಚೆನ್ನಾಗಿದೆಯೋ' ಎಂಬುದಾಗಿ ಪ್ರಶ್ನಿಸುತ್ತಾರಂತೆ. ಒಂದೊಂದು ನಾಡಿನ ಜನತೆಯ ಸದ್ಭಾವನೆ ಸತ್ಪ್ರೇರಣೆಗಳು ಒಂದೊಂದು ಬಗೆಯವು.

ಫಿಲಿಪೈನ್, ಟಾಸ್ಮೇನಿಯಾ, ಮಲಯಾ ಮುಂತಾದ ದ್ವೀಪಗಳಲ್ಲಿಯ ನಡವಳಿಕೆಯೇ ಬೇರೆಯ ಬಗೆಯದಾಗಿದೆ. ಅವರ ಅಭಿನಂದನ ಪದ್ಧತಿಯೂ ವಿಚಿತ್ರವಾಗಿದೆ. ಸಂಧಿಸಿದವರ ಮೂಗಿಗೆ ಸಂಧಿಸಲ್ಪಡುವವನ ಮೂಗನ್ನು ಉಜ್ಜುವುದು ಪರಸ್ಪರ ಗಾಢಾಲಿಂಗನ ಚುಂಬನ ಇವುಗಳು ಅವರಲ್ಲಿ ಬಳಕೆಯಲ್ಲಿರುವ ಪ್ರಮುಖ ಪದ್ಧತಿಗಳು. ಫಿಲಿಪೈನ್ ದ್ವೀಪದಲ್ಲಿ ಪರಸ್ಪರ ಸಂಧಿಸಿದ ಸಮಯದಲ್ಲಿ ತಮ್ಮ ಎರಡೂ ಕೈಗಳನ್ನೂ ಎರಡು ಕಿವಿಗಳ ಮೇಲಿಟ್ಟು ಕಾಲು ಎತ್ತಿ ಪ್ರೇಮಾಭಿವಂದನೆ ಮಾಡುವ ಸಂಪ್ರದಾಯವೂ ಇದೆ.

ಆಫ್ರಿಕಾ ಖಂಡದ ಮೂರ್ ಜಾತಿಯ ಜನರಲ್ಲಿ ಬಳಕೆಯಲ್ಲಿರುವ ಅಭಿವಂದನೆಯ ರೀತಿ ಬಹಳ ಭಯಂಕರವಾದುದು ಮತ್ತು ಅದ್ಭುತವಾದುದು ಮಿತ್ರನೊಬ್ಬರನ್ನು ಸಂಧಿಸುವ ಸಮಯ ಒದಗಿ ಬಂದೊಡನೆಯೇ ಕುದುರೆಯ ಮೇಲೆ ಹತ್ತಿ ಕುಳಿತು ಕುದುರೆಯನ್ನು ಎರಡು ಕಾಲಿನ ಮೇಲೆ ನಿಲ್ಲಿಸಿ ಭೇಟಿಯಾಗಲು ಬಂದವನಿಗೆ ಗುರಿ ಇಟ್ಟು ಹೊಡೆಯುತ್ತಾರಂತೆ. ಆದರೆ ಪಿಸ್ತೂಲಿನಲ್ಲಿ ಗುಂಡು ಇರುವುದಿಲ್ಲ. ಭೇಟಿಗೆ ಬಂದ ಮಿತ್ರನಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲ. ಒಂದು ವೇಳೆ ಗುಂಡಿದ್ದ ಪಿಸ್ತೂಲನ್ನೇ ಬಳಸಿದರೆ ಪರಿಚಿತನನ್ನು ಭೇಟಿಯಾಗಲು ಬಂದ ವ್ಯಕ್ತಿ ಪರಲೋಕದ ಭೇಟಿಗೆ ತೆರಳಬೇಕಾಗುತ್ತದೆ. ಇದೊಂದು ವಿಚಿತ್ರ ಪದ್ಧತಿ.

ಈಜಿಪ್ಟ್ ದೇಶದ ಜನರು ಪರಸ್ಪರ ಸಂಧಿಸಿದಾಗ 'ಈ ದಿನ ಬಿಸಿಲು ಹೇಗಿತ್ತು?" ಎಂದು ಕುಶಲ ಪ್ರಶ್ನೆ ಹಾಕುತ್ತಾರಂತೆ. ಟಿಬೇಟ್ ಜನತೆಯ ಅಭಿನಂದನಾ ಸಂಪ್ರದಾಯ ಇನ್ನೂ ವಿಚಿತ್ರವಾಗಿದೆ. ಅವರು ಪರಸ್ಪರ ಸಂಧಿಸಿದಾಗ ಪರಸ್ಪರ ನಾಲಿಗೆ ತಗಲಿಸುತ್ತಾರಂತೆ. ಅದರಲ್ಲೇನು ಮೋಜಿನಿಯೋ?

ಹೀಗೆ ಹಲಬಗೆಯ ಅದ್ಭುತ, ಆಶ್ಚರ್ಯಕರ ಅಭಿನಂದನಾ ಪದ್ಧತಿಗಳು ವಿಶ್ವದ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿವೆ. ಹಲಬಗೆಯ ವಿಚಿತ್ರ ರೀತಿ ನೀತಿಗಳನ್ನು ನೋಡಿದಾಗ ನಮಗೆ ನಗು ಉಕ್ಕಿ ಬರುತ್ತದೆ. ಆದರೆ ಆಯಾ ದೇಶದ ನಿವಾಸಿಗಳಿಗೆ ಆಯಾ ದೇಶದ ಸಂಪ್ರದಾಯಗಳು ಸಾಮಾನ್ಯವಾಗಿ ಬಹುಮಟ್ಟಿಗೆ ಪ್ರಿಯವಾಗಿವೆ.

ಭಾರತದ ಹಲವು ಭಾಗಗಳಲ್ಲಿ ಇಂದಿಗೂ ಭೇಟಿಯಾದಾಗ ಪರಸ್ಪರರು ಪ್ರೀತಿಯಿಂದ ಆಲಿಂಗಿಸಿಕೊಳ್ಳುವ ಸಂಪ್ರದಾಯವಿದೆ. ಚುಂಬನ ನಿಷೇಧವೆಂದು ದೂರಮಾಡಲ್ಪಟ್ಟಿದೆ. ಚಲನ ಚಿತ್ರಗಳಲ್ಲಿ ಚುಂಬಿಸುವುದನ್ನೂ ಸರಕಾರ ನಿಷೇಧಿಸಿದೆ.

ಹಿಂದೆ ಚುಂಬನ ಆಲಿಂಗನಗಳು ಅಭಿವಂದನೆಯ ಮುಖ್ಯ ಅಂಗಗಳಾಗಿದ್ದವು ಎಂಬ ಸಂಗತಿ ಪ್ರಾಚೀನ ಕಾವ್ಯ ನಾಟಕಾದಿಗಳಲ್ಲಿ ಪ್ರಸ್ತಾಪಿಸಿರುವ ಸಂಗತಿಗಳ ಮೂಲಕ ತಿಳಿದು ಬರುತ್ತದೆ. ವಿಶ್ವದ ವಿವಿಧ ಭಾಗಗಳಲ್ಲಿ ಪ್ರಣಾಮ ಪದ್ಧತಿಗಳು ವೈವಿಧ್ಯಮಯವಾಗಿವೆ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ವಿಸ್ಮಯಕರ ಪ್ರಣಾಮ ಪದ್ಧತಿಯಿಂದ ಭಾರತವೂ ಬೇರೆಯಾಗಿಲ್ಲ.

ಕೀಟಗಳ ಕೌತುಕ ಜೀವನ

ಬರೆದವರು:
(ಸುರತ್ಕಲ್ ರಾಮಕೃಷ್ಣ ಜೆಬ್ಬಾರ್.)

ತೋಟದಲ್ಲಿರುವ ಕಂಬಳಿ ಹುಳುವನ್ನು ಕಂಡು ಅಸಹ್ಯ ಪಡುವವರಿದ್ದಾರೆ. ಆದರೆ ಅದೇ ಕೀಟವೇ ಮುಂದೆ ಅಂದವಾದ ಪತಂಗವಾಗಿ ಹೂಗಿಡಗಳಲ್ಲಿ ಕಂಗೊಳಿಸುವಾಗ ಬಣ್ಣದ ಚಿಟ್ಟೆಯೆಂದು, ಕಣ್ಣಾಣಿಯೆ ನೋಡದವರು ವಿರಳ. ರೇಷ್ಮೆ ಹುಳು ತನ್ನ ಕೋಶದಲ್ಲಿ ಹಲವಾರು ಕೀಟಗಳನ್ನಿಡುತ್ತದೆ. ಆದರೆ ಆ ಕೋಶವನ್ನೇ ಬಿಸಿನೀರಿಗೆ ಹಾಕಿ ಅವೆಲ್ಲವನ್ನು ಕೊಂದು ರೇಷ್ಮೆ ನೂಲನ್ನು ಪಡೆಯುತ್ತಾರೆ. ರೇಷ್ಮೆ ವಸ್ತ್ರವು ಅಂದವೂ ಬೆಲೆ ಬಾಳುವಂತಹುದೂ ಆಗಿದೆ.

ಜೇನು ನೊಣವು ಅಮೃತದಂತಹ ಸಿಹಿ ರಸವನ್ನು ಒದಗಿಸುತ್ತದೆ. ಪ್ರತಿಯೊಂದು ಹೂವಿನ ಬಳಿಗೆ ಹೋಗಿ ಜೇನುರಸವನ್ನು ಹೀರಿ, ಹೊಟ್ಟೆಯೊಳಗೆ ಸಂಗ್ರಹಿಸುತ್ತದೆ. ಹೊಟ್ಟೆಯೊಳಗೆ ರಾಸಾಯನಿಕ ಕ್ರಿಯೆಯುಂಟಾಗಿ ಸಿಹಿಯಾದ ಜೇನು ಉತ್ಪತ್ತಿಯಾಗುತ್ತದೆ. ಇದನ್ನೇ ತನ್ನ ಗೂಡಿನಲ್ಲಿ ಸಂಗ್ರಹಿಸುತ್ತದೆ. ಒಂದು ಬಿಂದು ಜೇನಿಗಾಗಿ ಜೇನು ನೊಣವು ಸಾವಿರಾರು ಹೂಗಿಡಗಳ ಬಳಿ ಹೋಗಿ ಸಂಗ್ರಹಿಸುತ್ತದೆ. ಇಂತಹ ಅದ್ಭುತವೂ, ಪರಿಶ್ರಮವೂ ಆದ ಕಾರ್ಯವನ್ನು ಜೇನು ನೊಣವು ಮಾಡುತ್ತವೆ. ಜೇನು ನಮಗೆ ಅತ್ಯಂತ ಉಪಯುಕ್ತವಾದ ವಸ್ತುವಾಗಿದೆ; ಕೀಟಗಳಿಂದಲೂ ಮನುಷ್ಯನಿಗೆ ಉಪಕಾರಗಳಿವೆ.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
5 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸಿಸ್

ಕಾರ್ಕಳ (ದ. ಕ.)

NAVAYUGA 30—3—1967
Registered with the Registrar
of News Papers for India
under No. R. N. 3640/'57

REGD. No. B. G. 176
LICENCE No. 31
Licensed to Post without Prepayment

ಕಲಾರಂಗ

ಸೋವಿಯೆತ್ ರಂಗಮಂದಿರ

ನವದಿಲ್ಲಿಯಲ್ಲಿ ನಡೆದ ಪೂರ್ವ—ಪಶ್ಚಿಮ ನಾಟಕ ವಿಚಾರ ಸಂಕಿರಣದಲ್ಲಿ ಸೋವಿಯೆತ್ ಪ್ರತಿನಿಧಿ ಮಿಖಾಯಿಲ್ ಜ್ಸಾರೆವ್— ಸೋವಿಯೆತ್ ಒಕ್ಕೂಟದ ಜನತಾ ಕಲಾವಿದ, ಸೋವಿಯೆತ್ ಒಕ್ಕೂಟದ ಅಂತಾರಾಷ್ಟ್ರೀಯ ನಾಟಕ ಸಂಸ್ಥೆಯ ಅಧ್ಯಕ್ಷರು— ತಮ್ಮ ಪ್ರಬಂಧವನ್ನು ಓದಿ ಪೂರ್ವ ಮತ್ತು ಪಶ್ಚಿಮದ ದೇಶಗಳ ನಡುವೆ ಸಾಂಸ್ಕೃತಿಕ ಸಂಬಂಧಗಳು ಇನ್ನಷ್ಟು ವಿಕಾಸಗೊಳ್ಳುತ್ತವೆಯೆಂಬ ಆಸೆಯನ್ನು ವ್ಯಕ್ತಪಡಿಸಿದರು.

ಅವರು ಈ ಸಮಯದಲ್ಲಿ ಸೋವಿಯೆತ್ ಒಕ್ಕೂಟದೊಳಗೆ ನಾಟಕ ಪ್ರದರ್ಶನಗಳನ್ನು ಹೇಗೆ ಸಂಘಟಿಸಲಾಗುತ್ತದೆ, ನಾಟಕದ ಸೂತ್ರಗಳೇನು ಎಂಬುದನ್ನು ಸಭಿಕರಿಗೆ ಪರಿಚಯ ಮಾಡಿಕೊಟ್ಟರು.

ಬಹು ಜನಾಂಗೀಯ ರಾಜ್ಯವಾದ ಸೋವಿಯೆತ್ ಒಕ್ಕೂಟದಲ್ಲಿ ಇಂದು ಸುಮಾರು ೪೦ ಭಾಷೆಗಳಲ್ಲಿ ನಾಟಕಗಳನ್ನಾಡಲಾಗುತ್ತಿದೆ. ಸೋವಿಯೆತ್ ಒಕ್ಕೂಟದ ನಾಟಕ ಸಂಸ್ಕೃತಿಯನ್ನು ಹಳತು ಮತ್ತು ಹೊಸತು ಎಂದು ವಿಂಗಡಿಸಬಹುದು. ಹಳೆಯವು ಎಂದರೆ ಬಹುಕಾಲದ ಹಿಂದೆ, ಶತಕಗಳ ಹಿಂದೆ ಆವಿರ್ಭವಾದಂಥವು. ಇವುಗಳಿಗೆ ತಮ್ಮದೇ ಆದ, ಸಮೃದ್ಧ ರಾಷ್ಟ್ರೀಯ ಪರಂಪರೆ ಇದೆ. ಹೊಸತು ಎಂದರೆ ಮಹಾನ್ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ನಂತರವೇ ಅವತಾರಗೊಂಡ ಸಂಸ್ಕೃತಿಗಳು.

ಸೋವಿಯೆತ್ ಜನತೆಯ ನಾನಾ ಜನಾಂಗಗಳಲ್ಲಿ ಅನೇಕ ಜನಾಂಗಗಳ ನಾಟಕ ಸಂಸ್ಕೃತಿಯೆನ್ನುವುದು ಕೇವಲ ಮಹಾನ್ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ನಂತರವೇ ಜನ್ಮ ಪಡೆದುದು. ಇದಕ್ಕೂ ಮೊದಲು ಒಟ್ಟಾರೆ ಇದ್ದ ಸಾಂಸ್ಕೃತಿಕ ಹಿಂದುಳಿದಿರುವಿಕೆ ಮತ್ತು ನಾಟಕ ಕಲೆಯೆಂದರೇನೆ ಪಾಪವೆಂದು ತಿಳಿಯುತ್ತಿದ್ದಂಥ ಮುಸ್ಲಿಂ ಧರ್ಮ ಮೊದಲಾದ ಕಾರಣಗಳಿಂದ ಈ ಕೆಲವು ಜನತೆಗಳಿಗೆ ನಾಟಕವೆಂಬುದೇ ಇರಲಿಲ್ಲ—ಹಿಂದೆ ನಾಟಕರಂಗಗಳೇ ಇಲ್ಲದಿದ್ದ ಜನತೆಗಳಲ್ಲಿ ನಾಟಕ ಕಲೆ ಇಷ್ಟೊಂದು ಜನಪ್ರಿಯವಾಗಿ, ಶೀಘ್ರವಾಗಿ ಹೇಗೆ ಬೆಳೆಯಿತೆಂದರೆ ತಮ್ಮ ತಮ್ಮ ಜನತೆಗಳ ಕಲೆ ಅಭಿರುಚಿಗಳನ್ನು ಜಾನಪದ ಕಥೆಗಳನ್ನು ಪುರಾಣಕಥೆಗಳನ್ನು ಆಧರಿಸಿ ಯುರೋಪಿಯನ್ ರೀತಿಯಲ್ಲಿ ನಾಟಕ ರಚನೆಗೆ ಹಾಗೂ ಅಭಿನಯಕ್ಕೆ ತೊಡಗಿದುದೇ ಎಂದು ಹೇಳಬೇಕು. ರಾಷ್ಟ್ರೀಯ ಸ್ವಭಾವ ಮತ್ತು ರಾಷ್ಟ್ರೀಯ ಜೀವನದ ವೈಶಿಷ್ಟ್ಯಗಳು ಸೋವಿಯೆತ್ ಒಕ್ಕೂಟದ ವಿವಿಧ ಜನಾಂಗಗಳ ನಾಟಕ ಸಂಸ್ಕೃತಿಯಲ್ಲಿ ಆದ್ಯಸ್ಥಾನ ಪಡೆದುವು. ಹಳೆಯ ಮತ್ತು ಹೊಸ ನಾಟಕಗಳನ್ನು ಅವುಗಳ ರಸಾಭಿಜ್ಞತೆಯ ದೃಷ್ಟಿಯಿಂದ ತುಲನೆ ಮಾಡಿ ನೋಡುವುದಾದರೆ ಹೊಸ ಸಂಸ್ಕೃತಿಗಳಲ್ಲಿ ಮುಖ್ಯವಾಗಿ ಈ ಲಕ್ಷಣಗಳು ಕಂಡುಬರುತ್ತವೆ. ಅಂದರೆ: ಆಯಾಯ ಜನತೆಗಳ ಸಂಗೀತ ಮತ್ತು ನೃತ್ಯ ಕಲೆಗಳಿಗೆ ಅನುಗುಣವಾಗಿರುವಂಥ ನಾಟಕೀಯತೆ, ಸಂಗೀತ ಹಾಗೂ ನೃತ್ಯಗಳು ಮಿಲನಗೊಂಡಿರುವ ಸಂಯೋಜಿತ ರಂಗಭೂಮಿ. ಕ್ರಮೇಣ ಒಂದೊಂದರ ನಾಟಕ ಕಲೆಯೂ ವಿಕಾಸಗೊಂಡು ಇಂದು ಒಂದೊಂದೂ ತಮ್ಮದೇ ಆದ ಒಪೆರಾ ಮತ್ತು ಬ್ಯಾಲೆ ಥಿಯೇಟರುಗಳನ್ನು ಹೊಂದಿವೆ.

ಚೆನ್ನಾಗಿ ತರಬೇತುಗೊಂಡ ಹೊಸ ಯುವಕರ ಪ್ರವಾಹ ನುಗ್ಗದೆ ನಾಟಕ ರಂಗವು ಪ್ರಗತಿಗೊಳ್ಳುವುದು ಸಾಧ್ಯವಿಲ್ಲ. ಸೋವಿಯೆತ್ ನಾಟಕ ಶಿಕ್ಷಣವು ಎರಡು ರೀತಿಯದಾಗಿದೆ. ಮಾಸ್ಕೋ, ಲೆನಿನ್‌ಗ್ರಾಡ್, ಯೆರೆವಾನ್, ತಿಬಿಲಿಸಿ, ತಾಷ್ಕೆಂತ್, ಕೀಯೆವ್ ಮಿನ್ಸ್ಕ್ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಟರು, ನಿರ್ದೇಶಕರು ಮತ್ತು ನಾಟಕ ವಿಮರ್ಶಕರು ಇರುವಂಥ ದೊಡ್ಡ ದೊಡ್ಡ ನಾಟಕ ಸ್ಟುಡಿಯೋಗಳಿವೆ. ಅಲ್ಲದೆ ಪ್ರಧಾನ ನಾಟಕ ಕಂಪೆನಿಗಳಿಗೆ ತಮ್ಮ ಸ್ವಂತದ ಸ್ಟುಡಿಯೋಗಳಿವೆ. ಅಕ್ಷರಶಃ ದೇಶದ ಎಲ್ಲ ಥಿಯೇಟರುಗಳಿಗಾಗಿಯೂ ನಟರನ್ನು ಉನ್ನತ ನಾಟಕ ಸ್ಟುಡಿಯೋಗಳಲ್ಲೂ, ಥಿಯೇಟರ್ ಕಂಪೆನಿಗಳಿಗಿರುವ ಸ್ಟುಡಿಯೋಗಳಲ್ಲೂ ನುರಿತ ಶಿಕ್ಷಕರ ಕೈಯಲ್ಲಿ ತಯಾರಿಸಲಾಗುವುದು. ಸೋವಿಯೆತ್ ನಾಟಕ ಶಿಕ್ಷಣವು ಕೊನ್‌ಸ್ಟಾಂಟಿನ್ ಸ್ಟಾನಿಸ್ಲಾವ್‌ಸ್ಕಿ ಪದ್ಧತಿಯನ್ನು ಆಧರಿಸಿದೆ.

ರಷ್ಯನ್ ಬ್ಯಾಲೆ ಪಂಥವೆಂಬುದೊಂದು ಇರುವಂತೆಯೇ ಸೋವಿಯೆತ್ ರಂಗ-ನಿರ್ದೇಶನದಲ್ಲೂ ಸ್ಟಾನಿಸ್ಲಾವ್‌ಸ್ಕಿ, ನೆಮಿರೋವಿಚ್-ಡಾಂಚೆಂಕೊ, ವಖ್ತಾಂಗೋವ್ ಮತ್ತು ಮೇಯೆರ್‌ಹೋಲ್ಡ್ ಕಲಾಶೈಲಿ ಮೂಲಗಳೂ ಇವೆ.

ಸೋವಿಯೆತ್ ಥಿಯೇಟರುಗಳ ಚಟುವಟಿಕೆಗಳಲ್ಲಿ ಮಾರ್ಗನಿರ್ದೇಶಕ ಸೂತ್ರಗಳೆಂದರೆ ಪ್ರೇಕ್ಷಕರಿಗೆ ಅವು ಸಾಧ್ಯವಿದ್ದಷ್ಟೂ ಸಮೀಪವಾಗಿರಬೇಕು ಮತ್ತು ನಾಟಕ ಕಲೆಯು ಪ್ರಚಾರಗೊಳ್ಳಬೇಕು ಎಂಬುದೇ. ಥಿಯೇಟರುಗಳು ತಮ್ಮ ಪ್ರೇಕ್ಷಕರಿಗೆ ಈ ರೀತಿ ಸಂಪರ್ಕ ಹೊಂದಿರಬೇಕೆಂಬ ಸ್ವರೂಪಕ್ಕೆ ಬಹಳ ಮಹತ್ವ ನೀಡುತ್ತೇವೆ.

ಸೋವಿಯೆತ್ ನಾಟಕ ಕಾರ್ಯಕರ್ತರು ಕಲೆ, ಅದರಲ್ಲೂ ವಿಶೇಷವಾಗಿ ನಾಟಕ ಕಲೆ ಸಾಮಾಜಿಕ ಜೀವನದಲ್ಲಿ ಬಹು ಮಹತ್ವದ ಸಂಗತಿಯೆಂದೂ ಅದು ಜನರ ಸಾಂಸ್ಕೃತಿಕ ಪ್ರಗತಿಗೆ ಆಗತ್ಯವಾದಂಥ ಪ್ರಭಾವವನ್ನು ಬೀರುವಂಥದೆಂದೂ ಭಾವಿಸುತ್ತಾರೆ. ಜನರ ಜೀವನದೊಂದಿಗೆ ನಿಕಟ ಸಂಬಂಧ ಹೊಂದಿದ್ದರೆ ಮಾತ್ರವೇ ಕಲೆಯು ತನ್ನ ಐತಿಹಾಸಿಕ ಕಾರ್ಯವನ್ನು ನಿರ್ವಹಿಸಬಲ್ಲದೆಂದೂ ಮತ್ತು ಇದೇ ಕೋಟ್ಯಂತರ ಜನರ ಮುಖವಾಣಿ ಹಾಗೂ ಉದ್ದೇಶವೆಂದೂ ಅವರು ಭಾವಿಸುತ್ತಾರೆ. ರಾಷ್ಟ್ರ-ರಾಷ್ಟ್ರಗಳ ವಿಶ್ವಾಸದಂಥ ಘನವಾದ ಹಾಗೂ ಮಾನವೀಯ ಉದ್ದೇಶದಲ್ಲೂ ಕಲೆಯು ಪ್ರಧಾನ ಮಹತ್ವದ ಸಂಗತಿಯೆಂದೂ ಅವರು ತಿಳಿಯುತ್ತಾರೆ.

ಕರ್ನಾಟಕ ಸಂಘ, ಮದ್ರಾಸು

ಮದ್ರಾಸಿನ ಕರ್ನಾಟಕ ಸಂಘದ ಪರವಾಗಿ ಡಾ. ಯು. ರಂಗನಾಥನ್ ಕಲಾಮಂಟಪದಲ್ಲಿ ದಿನಾಂಕ 12—3—1967ರಂದು ಸಂಜೆ 'ಮೂಷ್ಟಿಕೈಗಳ್ ಜಾಗ್ರತೈ' ಎಂಬ ತಮಿಳು ಪ್ರಹಸನವು ಸಂಘದ ಸದಸ್ಯರಿಂದ ಬಹು ಶ್ಲಾಘನೀಯವಾಗಿ ಅಭಿನಯಿಸಲಾಯಿತು.

ಡಾ. ಶೇಷಗಿರಿರಾಯರ ನಿರ್ದೇಶನದಲ್ಲಿ ನಡೆದ ಈ ಪ್ರಹಸನದ ಈ ಯಶಸ್ಸು ಶ್ರೀ ಬಿ. ರಾಮಮೂರ್ತಿಯವರಿಗೆ ಸಲ್ಲತಕ್ಕದ್ದು. ಇದು ಬಾಲಂ ದೀಕ್ಷಿತರ 'ಅಳಿಯ ದೇವರು' ಎಂಬ ಕನ್ನಡ ನಾಟಕದ ಭಾಷಾಂತರ. ನಮ್ಮ ಕನ್ನಡಿಗರು ತಮಿಳು ನಾಟಕವನ್ನು ತಮಿಳರಿಗೆ ಸರಿಸಮಾನರಾಗಿ ಅಭಿನಯಿಸಿದ್ದು ಪ್ರಶಂಸನೀಯವಾಗಿದೆ.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 677/66.
O. S. 234/55.

ಯಮುನಮ್ಮ— ಅರ್ಜಿದಾರ.

ಪದ್ಮನಾಭಯ್ಯ ಡಿತ್ತಾಯ, ಕೃಷ್ಣಯ್ಯ ಡಿತ್ತಾಯರ ಮಗ—ಬಲ್ಯ ಗ್ರಾಮದ ಪಟ್ಟೆ—1ನೇ ಎದ್ರಿ.

ಸದ್ರಿ 1ನೇ ಎದ್ರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನಂದರೆ—

ಸದ್ರಿ ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿ ಮಾರಾಟದಿಂದ ಡಿಕ್ರಿ ಹಣವನ್ನು ವಸೂಲು ಮಾಡಬೇಕಾಗಿ ಮಾಡಿದ ಈ ಅಮಲ್ಜಾರಿ ಅರ್ಜಿಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 6-4-67ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರುಹಾಜರು ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

M. Sadashiva Rao
Vakil for Petitioner.

Puttur, 16—3—67.

ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

ಡಾ| ಕೊರಡ್ಕಲ್ ವೆಂಕಟರಾವ್ ವಿರಚಿತ
ಮನೆ - ಮದ್ದು
ನೂರಾರು ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

ನವಯುಗ

6—4—1967



೧೦
ಪೈಸೆ

ಕಥಾ ಪ್ರಪಂಚ

ಮನೆಗೆ ಬಂದ ಮಾಧವ

ಕಥೆಗಾರರು:
ಶ್ರೀ ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಬೆಂಗಳೂರು

ಮಾಧವನು ವಸಂತಮ್ಮನ ಮನೆಗೆ ಬರುವಾಗ ನಡು ಮಧ್ಯಾಹ್ನದ ಬಿಸಿಲ ಝಳದಲ್ಲಿ ಬೆಂದು ಹೋದಂತಿದ್ದನು; ಅವನು ನಿಟ್ಟುಸಿರು ಬಿಡುವುದನ್ನು ನೋಡುವಾಗ ಕೆಲವು ಮೈಲು ದೂರದ ಕಠಿಣವಾದ ಮಾರ್ಗದಿಂದ ಬಂದಂತೆ ಭಾಸವಾಗುತ್ತಿತ್ತು. ಒಳಗಿನ ತುಟಿಗಳು, ಧೂಳು ಧೂಸರಿತ ಶರೀರ ಕೆದರಿಹೋದ ಕೂದಲು, ಕೊಳೆಯಿಂದಲೂ ಬೆವರಿನಿಂದಲೂ ಬೆರೆತು ಹೋದ ಹರಕು ಅಂಗಿ ಇದೆಲ್ಲವನ್ನೂ ನೋಡಿದರೆ ಬಹಳ ದೂರದ ಹಳ್ಳಿಯಿಂದ ಯಾವುದೇ ವಿಪತ್ತಿಗೆ ಹೆದರಿ ಓಡಿ ಬಂದಿರಬೇಕೆಂಬ ಕಲ್ಪನೆ ನನ್ನಲ್ಲಿ ಉಂಟಾಯಿತು.

ಅವನಿಗೆ ಇನ್ನೂ ಹದಿನೈದು ವರ್ಷ ವಯಸ್ಸಾಗಿರಲಿಕ್ಕಿಲ್ಲ, ಆದರೆ ಶರೀರವು ಹಳ್ಳಿಯಲ್ಲಿ ಚೆನ್ನಾಗಿ ಕಾಯಕಷ್ಟಕ್ಕೊಳಗಾದಂತಿತ್ತು. ಹೊಟ್ಟೆಗೆ ಆಹಾರವಿಲ್ಲದೆ ಬಳಲಿ ಬೆಂಡಾಗಿದ್ದನು. ಆದರೆ ತನ್ನ ಶರೀರದ ಎಲ್ಲಾ ಯಾತನೆಗಳನ್ನು ಸಹಿಸಿ ಕೊಂಡು ಬಂದವನೇ ನನಗೆ ಕೈ ಮುಗಿದು "ಅಮ್ಮಾ! ನನಗೇನಾದರೂ ನೌಕರಿ ಕೊಡಲಾರಿರಾ?' ಎಂದು ಕರುಣಾರ್ಥವಾಯವಾಗಿ ಬೇಡಿದಾಗ ಅವರ ಅಂತಃಕರಣ ದ್ರವವಾಗಿ ಬಿಟ್ಟಿತು; ಈಗಿನ ಕಾಲದಲ್ಲಿ ಇವನಂತಹ ಹುಡುಗರು ರೈಲ್ವೆ-ಮೋಟಾರು ನಿಲ್ದಾಣಗಳಲ್ಲಿ ಸೋಮಾರಿಗಳಾಗಿ ತಿರುಗುತ್ತಾ, ಯಾತ್ರಿಕರನ್ನು ಭಿಕ್ಷೆಗಾಗಿ ಪೀಡಿಸುವರು. ಈತನಾದರೋ ತನ್ನ ಕಠೋರವಾದ ಆಯಾಸವೆಲ್ಲವನ್ನೂ ಸಹಿಸಿ ಕೆಲಸ ಬೇಡಿದನು. ಮನೆ ಕೆಲಸಕ್ಕೆ ಒಬ್ಬ ಆಳಿಲ್ಲದೆ ಬಹಳ ಸಮಯದಿಂದ ವಸಂತಮ್ಮ ಕಷ್ಟಪಡುತ್ತಿದ್ದರು. ಆದರೆ ಇಷ್ಟು ಸಣ್ಣ ವಯಸ್ಸಿನಲ್ಲಿ ನಮ್ಮ ಇಷ್ಟು ದೊಡ್ಡ ಮನೆಯ ನೂರಾರು ಕೆಲಸಗಳನ್ನು ಈತನು ಹೇಗೆ ಮಾಡ್ಯಾನು? ಎಂಬ ಯೋಚನೆ ಮನಸ್ಸಿಗೆ ಬಂದು ವಸಂತಮ್ಮ ಆತನನ್ನು ಕುರಿತು,

'ಅಯ್ಯೋ ನೀನು ಸಣ್ಣವನಿದ್ದೀಯಾ! ನಮ್ಮ ಮನೆ ಕೆಲಸ ಬಹಳ ವಿಪರೀತವಿದೆ! ಅದೆಲ್ಲವನ್ನು ಮಾಡಲಿಕ್ಕೆ ನಿನಗೆ ಕಷ್ಟವಾದೀತು" ಎಂದರು.

'ಅಮ್ಮಾ! ನೀವು ನನ್ನಿಂದ ಕೆಲಸ ಮಾಡಿಸಿ ನೋಡಿ ತಾಯಿ; ತಾವು ಏನು ಕೆಲಸ ಹೇಳುವಿರೋ ಅದನ್ನು ಮಾಡುವೆನು. ನನಗೆ ಅನ್ನ ಕೊಡಿ. ನಿಮ್ಮ ಮನೆಯಲ್ಲಿ ಕೆಲಸಕ್ಕೆ ಆಳಿಲ್ಲ; ನನಗೆ ಕೆಲಸವಿಲ್ಲ' ಎಂದು ತ್ವರಿತನು ಅವನ ಮಾತಿನಲ್ಲಿ ಮಾರುಕವಿತ್ತು; ನಿಸ್ಸಹಾಯಕತೆ ಇತ್ತು.

"ನಿನ್ನ ಹೆಸರೇನು?'

'ನನ್ನ ಹೆಸರು ಮಾಧವ. ಮನೆಯಲ್ಲಿ ನನ್ನನ್ನು ಮಧೂ! ಎಂದು ಕರೆಯುತ್ತಿದ್ದರು. ನೀವು ಸಹ ಹಾಗೆಯೇ ಕರೆಯಿರಿ."

"ನಿನ್ನ ತಂದೆ-ತಾಯಿಗಳೇನು ಮಾಡುತ್ತಾರೆ!"

'ಅಮ್ಮಾ! ಆ ವಿಚಾರ ಎತ್ತಬೇಡಿರಿ' ನ್ನುವಷ್ಟರಲ್ಲಿ ಅವನ ಕಣ್ಣುಗಳು ತುಂಬಿಕೊಂಡವು. ಮತ್ತೆ ವಸಂತಮ್ಮನಿಂದ ತಡೆಯಲಾಗದ ಕೆಲಸಕ್ಕೆ ಸೇರಿಸಿದರು.

"ಮಧೂ; ನೀನು ಮೊದಲು ಸ್ನಾನ ಮಾಡು, ಬೇರೆ ಅಂಗಿ ಕೊಡುತ್ತೇನೆ, ಊಟ ಮಾಡು; ಸ್ವಲ್ಪ ಆಯಾಸ ಕಡಿಮೆಯಾಗಲಿ. ನಾಳೆಯಿಂದ ಮನೆ ಕೆಲಸ ಹೇಳುತ್ತೇನೆ.' ಎಂದರು ವಸಂತಮ್ಮ.

ಗೊತ್ತುಗುರಿಯಿಲ್ಲದ ದಾರಿಗಳಲ್ಲಿ ದೂರ ಪ್ರಯಾಣ ಮಾಡಿ ಬಂದ ಆಯಾಸದಿಂದ ಅಂದು ಮಧ್ಯಾಹ್ನ ಮಲಗಿದ ಮಾಧು ಸಾಯಂಕಾಲ ನಾಲ್ಕುವರೆ ಗಂಟೆಗೆ ಎದ್ದನು. ಅವನ ಅಭಿನಯವಿನಯ ಶೀಲತೆ ವಸಂತಮ್ಮನವರ ಅಂತಃಕರಣದಲ್ಲಿ ಅದೇಕೋ ಒಂದು ತರಹ ಅನುಕಂಪನ ಉಂಟು ಮಾಡಿತ್ತು.

ಒಂದು ವಾರದೊಳಗೆ ಮಾಧುವಿನಲ್ಲಿ ಬಹಳ ಪರಿವರ್ತನೆ ಕಂಡು ಬಂತು, ಶರೀರದಲ್ಲಿ ಒಂದು ವಿಧದ ಸ್ವಚ್ಛತೆ, ಮುಖದಲ್ಲಿ ಪ್ರಫುಲ್ಲತೆ, ಕಪ್ಪಗಿನ ಮೈ ಬಣ್ಣದಲ್ಲಿಯೂ ಸ್ವಲ್ಪ ಶುಭ್ರತೆ ತೋರಿ ಬಂತು. ನಾನು ಹೇಳುವ ಮೊದಲೇ ತಾನಾಗಿಯೇ ಪ್ರತಿಯೊಂದು ಕೆಲಸವನ್ನು ಸ್ವತಃ ಕಂಡು, ತಿಳಿದು ಮಾಡುವನು. ಬಟ್ಟೆಗಳನ್ನು ಒಗೆದರಂತೂ ಅವುಗಳನ್ನು ನೋಡಿದರೆ ಮನಸ್ಸಿಗೆ ಆನಂದವಾಗುತ್ತಿತ್ತು. ಮಾಧವನು ಮನೆಗೊಬ್ಬ ಆಳು. ಆದರೆ ವಸಂತಮ್ಮ ಅವನನ್ನು ಮಗನಂತೆ ಮಮತೆಯಿಂದ ನೋಡಿಕೊಳ್ಳುತ್ತಿದ್ದರು. ಅವನಲ್ಲಿದ್ದ ಭಕ್ತಿ ಭಾವ, ಪ್ರಾಮಾಣಿಕತನ, ಮಕ್ಕಳಲ್ಲಿ ಅಪಾರವಾದ ಪ್ರೀತಿ ಇವೆಲ್ಲವೂ ವಸಂತಮ್ಮನ ಮನಸ್ಸನ್ನು ಸೂರೆಗೊಂಡಿದ್ದವು. ಅವನು ಮಾಡದ ಕೆಲಸ ಒಂದೂ ಇರಲಿಲ್ಲ. ವಸಂತಮ್ಮನನ್ನು ಯಾವ ಕೆಲಸಕ್ಕೂ ಕೈ ಹಾಕಗೊಡುತ್ತಿರಲಿಲ್ಲ. ಆದರೆ ಒಂದೇ ಒಂದು ಕೆಲಸ ಮಾತ್ರ ಅವರು ಎಷ್ಟು ಹೇಳಿದರೂ ಮರುಮಾತಾಡದೆ ಅದನ್ನು ಮಾಡುತ್ತಿರಲಿಲ್ಲ. ಸೀತಮ್ಮನ ಮನೆಯಿಂದ ಹಾಲು ತರುವುದು, ಅವರ ಮನೆ ಸ್ವಲ್ಪ ದೂರ ಇತ್ತು; ಆದರೆ ರಾಜಮಾರ್ಗದ ಬದಿಯಲ್ಲಿತ್ತು. ಮಾಧು ಹೋಗಿ ಹಾಲು ತೆಗೆದುಕೊಂಡು ಬಾ ಎಂದಾಗಲೆಲ್ಲಾ ಅವರೇ ತಂದು ಕೊಟ್ಟು ಹೋಗಲಿ ಎಂದು ಹೇಳಿ ಎದ್ದು ನಿಲ್ಲದ ಅತ್ತ ಸರಿಯುತಿದ್ದನು. ಇದರ ಮೂಲ ರಹಸ್ಯ ತಿಳಿಯದ ವಸಂತಮ್ಮ ಬಹಳ ಆಶ್ಚರ್ಯಕ್ಕೊಳಗಾಗಿದ್ದರು. ಆದರೆ ಅವನು ತನ್ನ ಈ ಆಜ್ಞೆಯನ್ನು ಉಲ್ಲಂಘನ ಮಾಡುತ್ತಾನೆಂದು ಅವರು ಮನಸ್ಸಿಗೆ ಸ್ವಲ್ಪವೂ ಸಿಟ್ಟಿಗೆ ಅವಕಾಶ ಕೊಡಲಿಲ್ಲ.

ಮಳೆಗಾಲದಲ್ಲಿ ದನಗಳು ಕಂಪೌಂಡಿನೊಳಗೆ ನುಗ್ಗುತ್ತಿದ್ದಾಗ ಮಾಧವನನ್ನು ಕರೆದು ಅವುಗಳನ್ನು ಓಡಿಸೆಂದು ಹೇಳಿದರೆ ಕಿವುಡರು ಕೆಲಕಡೆ ಲಕ್ಷ್ಯವೇ ಕೊಡುತ್ತಿರಲಿಲ್ಲ ದನಗಳಿಗೆ ಅವನು ಬಹಳವಾಗಿ ಭಯ ಪಡುವುದೇ ಇದಕ್ಕೆ ಮುಖ್ಯ ಕಾರಣವೆಂದೂ, ಈ ಭಯದಿಂದಾಗಿಯೇ ಅವನು ಹಾಲು ತರಲಿಕ್ಕೆ ದನ ಇದ್ದಲ್ಲಿ ಹೋಗದಿರಲಿಕ್ಕೆ ಮುಖ್ಯ ಹೇತುವೆಂದೂ ವಸಂತಮ್ಮ ತಿಳಿದುಕೊಂಡರು. ಆದರೆ ಗೋವುಗಳಲ್ಲಿ ಈತನಿಗೆ ಈರೀತಿ ಭಯವುಂಟಾಗಲು ಕಾರಣವೇನೆಂಬುದು ಅವರ ಮನಸ್ಸಿಗೆ ಹೊಳೆಯಲಿಲ್ಲ.

ವಸಂತಮ್ಮನ ಪ್ರೀತಿಯ ಆಳು ಮಾಧುವಿಗೆ ಹತ್ತೊಂಭತ್ತು ವಯಸ್ಸು ತುಂಬಿತು. ಈಗ ಅವನು ಮನೆಯ ಎಲ್ಲಾ ಕೆಲಸ ಪೂರೈಸಿ ಹಿತ್ತಲಲ್ಲಿ ತುಂಬಾ ತರಕಾರಿ ಬೆಳೆಸಿ, ಅಂಗಳದಲ್ಲಿ ತರ ತರದ ಹೂವಿನ ಗಿಡಗಳನ್ನು ನೆಟ್ಟು ಬಹಳ ಅಚ್ಚುಕಟ್ಟಾದ ಚಿಕ್ಕ ತೋಟ ನಿರ್ಮಿಸಿ ವಸಂತಮ್ಮನ ಚಿಕ್ಕ ಮಗಳು ಯಶೋಧರೆಯನ್ನು ಶಾಲೆಗೆ ಕರಕೊಂಡು ಹೋಗುವುದು, ಕರೆದು ತರುವುದು ಈ ಎಲ್ಲಾ ಕೆಲಸ ಮಾಡುತ್ತಿದ್ದನು. ಮಾಧವನು ಬರುವಾಗ ಯಶೋಧರೆ ಮೂರು ವರ್ಷದ ಮಗು. ಈಗ ಏಳು ದಾಟಿ ಎಂಟನೆಯ ವಯಸ್ಸಿಗೆ ಬಂದಿದ್ದಾಳೆ. ಮಾಧು ಅವಳನ್ನು ಒಡಹುಟ್ಟಿ ತಂಗಿಗಿಂತ ಮಮತೆಯಿಂದ ನೋಡುತ್ತಿದ್ದನು. ಅವಳು ಸಹ ಅವನನ್ನು ಅಣ್ಣಾ! ಎಂದು ಕೋಮಲ ಸ್ವರದಿಂದ ಕರೆದು ಅವನ ಕೈಗೆ ರಕ್ಷಾ ಬಂಧ (ರಾಖಿ)ವನ್ನು ಕಟ್ಟಿದಾಗ ಮಾಧವನು ಆನಂದದಿಂದ ಮೈಮರೆತು ಸಂತೋಷದ ಕಂಬನಿ ಉದುರಿಸುತ್ತಿದ್ದನು.

ದಿನಗಳುರುಳಿದಂತೆ ಮತ್ತೆರಡು ವರ್ಷ ಹೀಗೆ ಮಧು ವಸಂತಮ್ಮನ ಮನೆಸೇರಿ ಐದು ವರ್ಷ ಕಳೆದರೂ ಮಾಧು ಒಂದು ಸಲವಾದರೂ ತನ್ನ ಮನೆಗೆ ಹೋಗಿ ಬರುತ್ತೇನೆಂದು ರಜೆ ಕೇಳಲಿಲ್ಲ. ಕೆಲಸದ ಆಳುಗಳು ಮನೆಗೆ ಹೋದರೆ ಬರುವಾಗ ತಮ್ಮ ವಸ್ತ್ರಗಳನ್ನೆಲ್ಲಾ ಮನೆಯಲ್ಲಿ ಬಿಟ್ಟು ಬಂದು ಪುನಃ ಬೇರೆ ವಸ್ತ್ರಗಳಿಗಾಗಿ ಪೀಡೆ ಕೊಡುವುದುಂಟು. ಮಾಧು ತನ್ನ ಬಟ್ಟೆಗಳನ್ನು ಬಹಳ ಎಚ್ಚರಿಕೆಯಿಂದ ಚೊಕ್ಕಟವಾಗಿಡುತಿದ್ದನು. ಯಾವಾಗಲೂ ಶುಭ್ರವಾದ ಬಟ್ಟೆಗಳು, ಕಾಲಿಗೆ ಹೊಳಪಿನ ಪಾದರಕ್ಷೆ, ತಲೆ ಕೂದಲು ನೇವರಿಸಿ ಬಾಚಿಕೊಳ್ಳುವುದು ಇದೆಲ್ಲವನ್ನೂ ನೋಡಿದರೆ ಅವನೊಬ್ಬ ಮನೆ ಕೆಲಸದವನೆಂದು ಯಾರೂ ಹೇಳುತ್ತಿದ್ದಿಲ್ಲ. ವಸಂತಮ್ಮ ಈ ರೀತಿ ಪ್ರೀತಿ—ವಾತ್ಸಲ್ಯದಿಂದ ಅವನನ್ನು ನೋಡಿಕೊಳ್ಳುತಿದ್ದರು.

ಮಾಧುವಿಗೆ ಕೊಡುವ ತಿಂಗಳ ಸಂಬಳವೆಲ್ಲವನ್ನೂ ತನ್ನ ಬಟ್ಟೆಗೇನೇ ಖರ್ಚು

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ
ಫೋನ್ ?77 ಕುಂದಾಪುರ, ದ. ಕ.

ಹೊಸಕೆರೆ ಚಿದಂಬರಯ್ಯ ವಿರಚಿತ
ಗೀತೆಯ ಕೈಗನ್ನಡಿ
(ಶ್ಲೋಕ ಮತ್ತು ಅರ್ಥಸಹಿತ)
ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ
ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು
ಬೆಲೆ : ಒಂದೂವರೆ ರೂಪಾಯಿ.
ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.
ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.
ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ

ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು
ಅನಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬಿಡಿ ಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಹಂಗೇರಿಯ ಸೆಪೆಲ್‌ನಲ್ಲಿ ಸ್ವಯಂಚಾಲಿತ ಟ್ರಾನ್ಸ್‌ಫರ್ ಲೈನಿನಲ್ಲಿ ತಯಾರಾಗುತ್ತಿರುವ ವಿದ್ಯುತ್ ಮೋಟಾರು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೨	೬—೪—೧೯೬೭	No. 32

ವಚನ ಸುಧೆ

ಪೂರ್ವೇ ವಯಸಿ ತತ್ ಕುರ್ಯಾದ್
ಯೇನ ವೃದ್ಧಃ ಸುಖಂ ವಸೇತ್।
ಯಾವಜ್ಜೀವೇನ ತತ್ ಕುರ್ಯಾದ್
ಯೇನ ಪ್ರೇತ್ಯ ಸುಖಂ ವಸೇತ್॥

ಮುಪ್ಪನ್ನು ಸುಖಪೂರ್ವಕ ಬದುಕುವಂತಹ ಕಾರ್ಯಗಳನ್ನು ಆರಂಭದ ಅವಸ್ಥೆಗಳಲ್ಲಿ ಮಾಡಬೇಕು. ಮರಣಾನಂತರ ಸುಖ ಪಡೆಯಬಲ್ಲ ಕೆಲಸಗಳನ್ನು ಇಡಿಯ ಜೀವನದಲ್ಲಿ ಮಾಡುತ್ತಿರಬೇಕು.

ರಾಜ್ಯಪಾಲರ ನಿಯುಕ್ತಿ

ಕರ್ನಾಟಕದ ರಾಜ್ಯಪಾಲರಾಗಿದ್ದ ಶ್ರೀ ವಿ. ವಿ. ಗಿರಿಯವರ ಸ್ಥಾನದಲ್ಲಿ ಶ್ರೀ ಜಿ. ಎಸ್. ಪಾಠಕರನ್ನು ರಾಷ್ಟ್ರಪತಿಯವರು ನೇಮಿಸಿದ್ದಾರೆ. ಸ್ವಾತಂತ್ರ್ಯದ ಆರಂಭದಲ್ಲಿ ಸೋತ ಮಂತ್ರಿಗಳನ್ನೋ ಕಾಂಗ್ರೆಸ್ಸಿಗರನ್ನೋ ರಾಜ್ಯಪಾಲರಾಗಿ ನೇಮಿಸುವ ಪರಿಪಾಠವಿದ್ದರೆ, ಮುಂದೆ ಅದು ಬದಲಾಯಿತು. ಕಳೆದ ಸಾರ್ವತ್ರಿಕ ಚುನಾವಣೆಯ ನಂತರ ಈ ಪರಿಪಾಠ ನಿಂತು ಹೋಯಿತೆಂದು ಹೇಳಬಹುದು. ಡಾ| ಸಂಪೂರ್ಣಾನಂದ, ಶ್ರೀ ಅನಂತಶಯನಂ ಐಯ್ಯಂಗಾರ ಮೊದಲಾದವರನ್ನು ರಾಜ್ಯಪಾಲ ಪದವಿಗೆ ಒಲಿಸಲಾಯಿತು. ಸರಕಾರಿ ನೌಕರಿಯಲ್ಲಿ ಹಿರಿಯ ಸ್ಥಾನದಿಂದ ನಿವೃತ್ತರಾದವರು ನಿವೃತ್ತ ಸೈನಿಕ ಅಧಿಕಾರಿಗಳು ಮೊದಲಾದವರಿಗೂ ರಾಜ್ಯಪಾಲ ಪದವನ್ನು ಕೊಡಮಾಡಲಾಯಿತು. ಕಾಂಗ್ರೆಸ್ಸೇತರರಿಗೆ ಅಥವಾ ನಿವೃತ್ತ ಅಧಿಕಾರಿಗಳಿಗೆ ರಾಜ್ಯಪಾಲ ಪದ ನೀಡಬೇಕೆಂಬ ಅಭಿಪ್ರಾಯಕ್ಕಿಂತಲೂ ಕಾಂಗ್ರೆಸಿಗರು ಅಧಿಕಾರ ಸ್ಥಾನದಿಂದ ದೂರವುಳಿಯ ಬಯಸದಿರುವುದೇ ಇದಕ್ಕೆ ಬಲವಾದ ಕಾರಣವಿರಬಹುದೆನಿಸುತ್ತದೆ. ಇಂದು ಪರಿಸ್ಥಿತಿ ಬದಲಾಗಿದೆ. ಅನೇಕ ರಾಜ್ಯಗಳಲ್ಲಿ ಕಾಂಗ್ರೆಸು ತನ್ನ ಅಧಿಕಾರವನ್ನು ಕಳೆದುಕೊಂಡಿದೆ. ಸಂಯುಕ್ತರಂಗಗಳ ಸರಕಾರವಿರುವಲ್ಲಿಯೂ ಕಾಂಗ್ರೆಸ್ ಸರಕಾರವಿರುವಲ್ಲಿಯೂ ಬಹುಮತದ ಪ್ರಮಾಣ ತೀರ ಸಾಮಾನ್ಯವಾದುದು. ಹಾಗಾಗಿ ಮುಂದಿನ ಗಳಿಗೆಯಲ್ಲಿ ಏನು ರಾಜಕೀಯ ಸ್ಥಿತ್ಯಂತರ ನಡೆಯುತ್ತದೆಯೋ ಎಂದು ಹೇಳುವುದು ಅಸಾಧ್ಯ. ಉತ್ತರ ಪ್ರದೇಶ, ಹರಿಯಾಣಾ, ರಾಜಸ್ಥಾನಗಳನ್ನೇ ಇದಕ್ಕೆ ಉದಾಹರಿಸಬಹುದು.

ರಾಜ್ಯಪಾಲ ಪದವಿಯ ಮಹತ್ವದ ಬಗ್ಗೆ ಕೆಲವೊಮ್ಮೆ ಚರ್ಚೆ ಎದ್ದುದೂ ಇದೆ. ಅವರ ಸ್ಥಾನ—ಮಾನಗಳ ಪ್ರಶ್ನೆಯು ಇನ್ನೂ ಪ್ರಶ್ನಾರ್ಥವಾಗಿ ಉಳಿದಿದೆ. ರಾಜ್ಯಪಾಲರೆಂದರೆ ಬರಿಯ ಉತ್ಸವಮೂರ್ತಿಯಲ್ಲ—ಅವರು ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ರಾಜ್ಯದಲ್ಲಿರುತ್ತಾರೆ— ರಾಜ್ಯದ ಆಡಳಿತೆಯು ಸುಸೂತ್ರವಾಗಿ ನಡೆಸುವುದು, ಅದು ಕುಸಿದಾಗ ಆಡಳಿತೆಯನ್ನು ಕ್ರಮಬದ್ಧಗೊಳಿಸುವುದು—ಇವೆಲ್ಲವೂ ಅವರ ಜವಾಬ್ದಾರಿಯೆಂದು ಹೇಳುವಂತಿಲ್ಲ. ಹಿಂದೆ ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್ ಗಣನೀಯ ಬಹುಮತ ಪಡೆದು ಸರಕಾರ ನಡೆಸುತ್ತಿರುವಾಗ, ರಾಜ್ಯಪಾಲರ ಕೆಲಸವು ಸುಲಭವಾಗಿಯೇ ಇತ್ತು ಎನ್ನಬಹುದು. ಸರಕಾರದೊಡನೆ ಭಿನ್ನಮತವಿದ್ದರೂ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಅವರು ಮುಂದೆ ಬರುವುದು ಉಚಿತವೆಂದು ಭಾವಿಸುತ್ತಿರಲಿಲ್ಲ. ಉದಾಹರಣೆಗಾಗಿ ರಾಷ್ಟ್ರಪತಿ ಬಾಬೂ ರಾಜೇಂದ್ರಪ್ರಸಾದರ ವಿಚಾರ ಸರಣಿಗೂ ಕೇಂದ್ರ ಸರಕಾರದ ನೀತಿಗೂ ಕೆಲವೊಮ್ಮೆ ಘರ್ಷಣೆಯುಂಟಾದುದನ್ನು ನೆನಪಿಸಿಕೊಳ್ಳಬಹುದು. ಡಾ| ರಾಧಾಕೃಷ್ಣನ್ ಕೂಡಾ ತನ್ನ ಈ ವರ್ಷದ ಪ್ರಜಾಪ್ರಭುತ್ವದಿನದ ಸಂದೇಶದಲ್ಲಿ ಸರಕಾರಕ್ಕೆ ತೀವ್ರ ಎಚ್ಚರಿಕೆಯ ರೂಪದಲ್ಲಿ ಮಾತಾಡಿರುವುದನ್ನು ಸ್ಮರಿಸಬಹುದು. ಸರಕಾರವು ಸಂವಿಧಾನಾತ್ಮಕವಾಗಿ ಕಾರ್ಯ ಮಾಡದೆ ಹೋದಾಗ ಅದನ್ನು ಸಚೇತಗೊಳಿಸುವುದು ರಾಜ್ಯಪಾಲರ ಅಥವಾ ರಾಷ್ಟ್ರಪತಿಗಳ ಕರ್ತವ್ಯವೇ ಆಗಿದೆ. ರಾಜಸ್ಥಾನದಲ್ಲಿ ಆದುದಾದರೂ ಏನು? ಬಹುಸಂಖ್ಯಾಕ ಪಕ್ಷವೆಂದು ಕಾಂಗ್ರೆಸ್ಸನ್ನು ಸಚಿವ ಸಂಪುಟ ರಚಿಸಲು ರಾಜ್ಯಪಾಲರು ಕೇಳಿಕೊಂಡರು. ವಿರೋಧಿಗಳ ವಿದ್ರೋಹದಿಂದ ಅಲ್ಲಿ ರಾಷ್ಟ್ರಪತಿಗಳ ಆಳಿಕೆಯೇ ಒಮ್ಮೆಗೆ ಬರಬೇಕಾಯಿತು. ರಾಜ್ಯಪಾಲ ಡಾ| ಸಂಪೂರ್ಣಾನಂದರನ್ನು ಹಿಂದ ಕರೆದುಕೊಳ್ಳಬೇಕೆಂಬ ಸ್ವರ ವರೆಗೂ ಜನತೆಯ ಆರ್ಭಟೆಯೆದ್ದಿತು. ಇದೇ ಕಾರಣದಿಂದಾಗಿಯೋ ಅಥವಾ ಅಧಿಕಾರಾವಧಿ ಸದ್ಯವೇ ಮುಗಿಯುವುದೆಂಬುದರಿಂದಲೋ ಅವರ ಸ್ಥಾನದಲ್ಲಿ ಲೋಕಸಭೆಯ ಮಾಜಿ ಅಧ್ಯಕ್ಷ ಸರ್ದಾರ ಹುಕುಂ ಸಿಂಗರನ್ನು ನೇಮಿಸಲಾಗಿದೆ. ಈಯೆಲ್ಲ ದೃಷ್ಟಾಂತಗಳಿಂದ ರಾಜ್ಯಪಾಲರ ಪದವಿಯು ಬರಿಯ ಗೌರವಕ್ಕೆ ಮಾತ್ರವಿರುವುದಲ್ಲ, ಅಧಿಕ ಜವಾಬ್ದಾರಿಯುತವೂ ಆಗಿದೆಯೆಂಬುದು ಈಗೀಗ ವ್ಯಕ್ತವಾಗುತ್ತದೆ. ಹಾಗೆಯೇ ಉತ್ತರ ಪ್ರದೇಶದಲ್ಲಿಯೂ ಶ್ರೀ ಬಿ. ಗೋಪಾಲರೆಡ್ಡಿಯವರು ನಿಯುಕ್ತಿಗೊಂಡುದು ಅರ್ಥವಿದ್ದೇ ಇದೆ. ಶ್ರೀ ಚಂದ್ರಭಾನು ಗುಪ್ತರ ಸರಕಾರ ಪತಿತವಾಗಿ ಅಲ್ಲಿ ವಿರೋಧಿಗಳ ಸಂಯುಕ್ತರಂಗವೀಗ ಸರಕಾರ ನಡೆಸುತ್ತಿದೆ.

ನಮ್ಮ ಸಂವಿಧಾನದಲ್ಲಿ ರಾಜ್ಯಪಾಲ ರಾಷ್ಟ್ರಪತಿಗಳ ಕರ್ತವ್ಯ ಮತ್ತು ಹೊಣೆಗಾರಿಕೆಗಳು ಸ್ಪಷ್ಟವಾಗಿ ಉಲ್ಲೇಖಿತವಾಗಿವೆ. ಆದರೆ, ಸಂವಿಧಾನವು ತಮಗೆ ನೀಡಿರುವ ಅಧಿಕಾರವನ್ನು ಇವರು ಚಲಾಯಿಸುವಷ್ಟು ಮುಂದೆ ಹೋಗಿರುವುದಿಲ್ಲ. ಇದೀಗ ಕಾಲಸ್ಥಿತಿ ಬದಲಾಗಿದೆ. ರಾಜ್ಯ ವಿಧಾನ ಸಭೆಗಳೂ ಸಂಸತ್ತೂ ಬಹುಮತದಿಂದ ಪಾಸು ಮಾಡಿದ ಹಲವಾರು ಕಾಯಿದೆಗಳು ಸಂವಿಧಾನ ವಿರೋಧಿ ಎಂಬ ಆಶಯ ಉಚ್ಚ, ಸರ್ವೋಚ್ಚನ್ಯಾಯಾಲಯಗಳು ವ್ಯಕ್ತಪಡಿಸಿವೆ. ಸಂವಿಧಾನ ತಿದ್ದುಪಡಿ ಮಾಡಿ ಮೂಲಭೂತ ಅಧಿಕಾರಗಳನ್ನು ಮೊಟಕುಗೊಳಿಸುವ ಅಧಿಕಾರವು ಸಂಸತ್ತಿಗಿಲ್ಲವೆಂಬ ಅಭಿಪ್ರಾಯ ಮಹತ್ವಪೂರ್ಣವಾದದ್ದು. ಜನತಾ ಪ್ರತಿನಿಧಿಗಳು ಜನಹಿತ ದೃಷ್ಟಿಯಿಂದ ಮಂಜೂರು ಮಾಡಿದ ಕಾಯಿದೆಯನ್ನು ಸಾಮಾನ್ಯವಾಗಿ ರಾಜ್ಯಪಾಲರೂ ರಾಷ್ಟ್ರಪತಿಗಳೂ ಒಪ್ಪಿ ಬಿಡುವುದೂ ಒಂದು ಸಂಪ್ರದಾಯವಾಗಿ ಬಂದಿದೆ. ಆದರೆ, ಇಂದು ಇಂತಹ ಪರಿಸ್ಥಿತಿ ಉಳಿದಿಲ್ಲ. ಬಹುಮತದ ಬಲದಿಂದ ಸಂವಿಧಾನ ವಿರೋಧಿ ಕಾಯಿದೆಗಳನ್ನು ಸರಕಾರ ಮಂಜೂರು ಮಾಡಿಸುವಲ್ಲಿ ಸಮರ್ಥವಾದರೂ ಆ ಬಗ್ಗೆ ಸೂಕ್ತ ವಿವೇಚನ ನಡೆಸುವುದು ಅಗತ್ಯವಾಗಿದೆ. ವಿವಿಧ ರಾಜ್ಯಗಳಲ್ಲಿ ಹಲವಾರು ಕಾಂಗ್ರೆಸ್ಸೇತರ ಸರಕಾರವೂ ಕೇಂದ್ರದಲ್ಲಿ ಕಾಂಗ್ರೆಸ್ಸು ಸರಕಾರವೂ ಇರುವಾಗ, ರಾಜ—ಕೇಂದ್ರಗಳ ಮಧ್ಯೆ ವಿರಸವುಂಟಾಗುವ ಪ್ರಮೇಯ ಬಂದರೂ ವಿಸ್ಮಯ ಪಡಬೇಕಾಗಿಲ್ಲ. ಇಂತಹ ವೇಳೆ ನಿಷ್ಪಕ್ಷಪಾತತನದಿಂದ ಸಂವಿಧಾನಾತ್ಮಕ ಹೆಜ್ಜೆಯಿಡುವ ಎದೆಗಾರಿಕೆ ರಾಜ್ಯಪಾಲರಲ್ಲಿರಬೇಕು. ಇದೀಗ ನೇಮಕವಾದ ಮೂವರೂ ಹೊಸ ರಾಜ್ಯಪಾಲರು ಈ ದಿಸೆಯಲ್ಲಿ ಉಚಿತವಾಗಿ ನಡೆಯುವರೆಂದು ವಿಶ್ವಾಸವಿಡಬಹುದು. ಇನ್ನೂ ಕೆಲವು ರಾಜ್ಯಪಾಲರ ಅಧಿಕಾರಾವಧಿ ಸದ್ಯದಲ್ಲೇ ಮುಗಿಯಲಿದ್ದು ಆ ಸ್ಥಾನಗಳಿಗೂ ಸಮರ್ಥರ ನೇಮಕವೇ ಆಗುವುದೆಂದು ನಂಬಬಹುದು.

ಯಾರು ಬಂದರೂ ....

ರಾಜಸ್ಥಾನದಲ್ಲಿನ ಗೊಂದಲ ಮುಗಿಯಿತನ್ನುವಾಗ ಪಶ್ಚಿಮ ಬಂಗಾಲದಲ್ಲಿ ಅಶಾಂತ ಪರಿಸ್ಥಿತಿ ತಲೆದೋರಿ ಅಲ್ಲಿ ಶಾಂತಿ ಸ್ಥಾಪಿಸಲು ಸೇನೆಯನ್ನೇ ಕರೆಯಬೇಕಾಯಿತು. ಕಾಂಗ್ರೆಸ್ಸು ಸರಕಾರ ಪರಿಸ್ಥಿತಿಯನ್ನು ಹತೋಟಿಗೆ ತರಲು ಅಶ್ರುವಾಯು ಪ್ರಯೋಗ, ಲಾಠೀಚಾರ್ಜು, ಗೋಳಿಬಾರುಗಳನ್ನು ಅನಿವಾರ್ಯವಾಗಿ ಕೈಗೊಳ್ಳಬೇಕಾಗಿ ಬಂದಾಗ ಅದನ್ನು ಉಗ್ರವಾಗಿ ಪ್ರತಿಭಟಿಸುತ್ತಿದ್ದ ವಿರೋಧ ಪಕ್ಷಗಳ ಸಂಯುಕ್ತ ಸರಕಾರವೇ ಇಂದು ಇಂತಹ ಕೃತ್ಯಗಳಿಗೆ ಕೈ

(ಹತ್ತನೇ ಪುಟ ನೋಡಿ)

ನರಸಣ್ಣನ ಸರಸ



'ಮುರಾರ್ಜಿ ಭಾಯಿ ಕೊರತೆಯ ವಿನಿಯೋಗವನ್ನು ಕೈ ಬಿಡುವ ಬಗ್ಗೆ ಬಹಳವಾಗಿ ಆಲೋಚಿಸುತ್ತಿದ್ದಾರಂತೆ....'

'ಅದಕ್ಕಾಗಿಯೇ ಭಾರಿ ಕರಭಾರ ಹಾಕುತ್ತಾರೇನು? '

ಗೀಹೆ ರಾಜ್ಯದಲ್ಲಿ

ಮನೇಲಿ ಬೇರೆ ದೀಪಾನೇ ಬೇಡ

"ಓಯ್ …"

"ಹ್ಞಾಂ…"

'ಅಲ್ರಿ, ಈಗೀಗ ನಿನ್ಗೆ ಪುರ್ಸೊತ್ತು ಸಿಗೋದಿಲ್ಲ…'

'ಸದ್ಯ ಅಷ್ಟಾದ್ರೂ ತಿಳ್ಕೊಳ್ಳೋಕೆ ನಿನ್ಗೆ ಪುರ್ಸೊತ್ತು ಸಿಕ್ಕಿತಲ್ಲಾ….?'

'ಏನು ಪುರ್ಸೊತ್ತೋ! ಇಷ್ಟಕ್ಕನಾಲ್ಕಾ ಕಾಸಿನ ದುಡಿತ ಸಾಕೋ ಬೇಕಾಗಿ ಹೋಯ್ತು."

'ಕಂಡಿತಕ್ಕೂ….ಹುಚ್ಚುಕ್ಕೆ ಎಲ್ಲ ರಂಗದಲ್ಲೂ ಸುಧಾರಣೆ ಮಾಡಿದ ಸರಕಾರ ಸಮಯ ವಿಭಜನೆಯತ್ತ ಇನ್ನೂ ಸರಿದಿಲ್ಲ….'

'ಅಂದ್ರೆ?"

'ಅಂದ್ರೆ ಏನು? ಸೇರು ತೊಲ ಹೋಯ್ತು, ಗ್ರಾಮು ಕೆಜಿ ಬಂತು. ಅಂದ್ರೆ ಏನಾಯ್ತು? ಒಂದು ಸೇರು ಬೇಳೆ ಬದ್ಲು ೨೦೦ ಗ್ರಾಂ ಬೇಳೆ ಬಂತು.'

"ಹ್ಞೂಂ…"

"ಕುಡ್ತೆ ಹೋಗಿ ಲೀಟರ್ ಬಂತು. ಇದೂನೂ ಹಾಗೇನೇ… ಮತ್ತೆ ಮೈಲು ಹೋಗಿ ಕಿಲೋಮೀಟರ್ ಬಂತು, ಇದ್ರ ಹಣೆಬರಹಾನೂ ಅಷ್ಟೆ…"

"ಏನೇ ಇಲ್ಲಿ, ಪೈ ಹೋಗಿ ಪೈಸೆ ಬಂದಾಗ ಈ ಜಾಡ್ಯ ಅಂಟಲಿಲ್ಲಾರೀ…."

'ಅಯ್ಯೋ, ಏನು ಹೇಳ್ತೀಯೋ? ಕೆಜಿ, ಲೀಟರ್, ಕಿಮಿ ಎಲ್ಲ ಹೆಚ್ಚಾಗ್ಲಿ ಕಡಮೆಯಾಗ್ಲಿ, ಸಾಮಾನ್ಯ ಪ್ರಮಾಣದಲ್ಲಿ ಪ್ರಾಮಾಣಿಕೆಯಾದ್ರೂ ಇದೆ. ಆದ್ರೆ …"

"ಪೈಸೆಯಲ್ಲಿ ಇಲ್ಲಾಂತೀರಾ?"

'ನಾನ್ಯಾಕೆ ಇಲ್ಲಾನ್ನಬೇಕು? ಒಂದು ಪೈ ಮಾಡಿದ್ದ ಕೆಲಸವನ್ನ ಇಂದಿನ ಪೈಸೆ ಮಾಡದು….'

'ಅಂದ್ರೆ?"

'ಅಂದ್ರೆ ಏನು? ಹಿಂದೆ ಒಂದು ಪೈಗೆ ಹತ್ತು ಕಡ್ಲೆ ಕಾಯಿ ಸಿಕ್ಕಿದ್ರೆ ಇಂದು ಅದ್ರ ಸಿಪ್ಪೇನೂ ಸಿಗಲೊಲ್ಲದು…"

'ಅಂದ್ರೆ ನೀನನ್ನೋದು ಏನೂಂತ? ಪೈಸೆ ಬೆಲೆ ಇಳಿದಿದೇಂತ ತಾನೆ?"

ಹಾಗೆ ಯಾಕೆ ಅನ್ಬೇಕು? ಪೈಸೆಯ ಉತ್ಪಾದನೆ ಜಾಸ್ತಿಯಾಗಿದೆ….

"ಅಲ್ಲಾ, ಎಲ್ಲಿಂದ್ಲೋ ಆರಂಭ ಮಾಡಿ ಎಲ್ಲೆಲ್ಲೋ ಬಂದು ಬಿಟ್ಟಿವಲ್ರಿ….?'

'ಸದ್ಯ ಹೂವುದಾದ್ರೂ ಒಂದು ಬೊಟ್ಟಿನತ್ತ ಮುಟ್ಟಿದೆವಲ್ಲ, ಬೀದಿ ನಾಯಿಯಂತೆ ಎಲ್ಲೆಲ್ಲೋ ಇನ್ನೂ ತಿರುಗಾಡುತ್ತಾ ಇಲ್ಲ ತಾನೆ?"

"ಪಾಪ, ಕಳೆದ ಹದಿನೈದುದಿನಗಳಿಂದ ದುಡಿದು ದುಡಿದು ಸುಣ್ಣ ಆಗಿ ಹೋಗಿದ್ದೀರಿ…. ಇನ್ನಾದ್ರೂ ಕೆಲ ದಿನ್ನ ಆರಾಮವಿರಿ…."

"ಭಾರಿ ಒಳ್ಳೆಯ ಸಲಹೆ. ಸಹಾನುಭೂತಿಯಿಂದ ವಿಚಾರಿಸಲು ಯೋಗ್ಯವಾಗಿದೆ….'

'ಬೇಕಾದ್ರೆ ಮೈಗೆ ಕೈಗೆ ಎಣ್ಣೆ ಹಚ್ಚಿ ಅಭ್ಯಂಗ…."

'ಮಾಡಿಸೋಂದ್ರೆ ಯಾರು ತಾನೇ ಬೇಡಾಂತಾರೆ? ಆದ್ರೆ, ನನ್ಗಿಂತ ಹೆಚ್ಚು ದಣಿದವ್ಳು ನೀನು…"

"ನಮ್ಮದೇನು ಮಹಾ? ನಾವಿರೋದೇ ದುಡಿಯೋಕೆ…. ಆದೇ ಅಂದ್ರಲ್ಲಾ ಈಗಿನ ೨೪ ತಾಸುಗಳನ್ನ ೧೦೦ಕ್ಕೆ ಏರಿಸಿದ್ರೂ ನಮಗೆ ದುಡಿತ ತಪ್ಪಿದ್ದಲ್ಲ__"

"ಅಂದ್ರೆ ಹೆಣ್ಣು ಮಾತ್ರ ದುಡಿಯೋದು, ಗಂಡು ತಿನ್ನೋದು ಅಂತ್ಲೇ ನಿನ್ನ ಅಂಬೋಣ?'

"ಹಾಗೇ ಅಲ್ದೆ ಮತ್ತೇಂತದು? ಆದ್ರೆ ದುಃಖ ಅಂದ್ರೆ, ನಮ್ಮ ದುಡಿತ ನಿಮ್ಮ ಕಣ್ಣಿಗೆ ಕಾಣಿಸೋಲ್ಲ…"

'ಯಾರು ಅಂದ್ರೇ ಹಾಗೆ? ಅಯ್ಯೋ, ಏಕೆ ಮುಖ ಕೆಂಡವಾಯ್ತು? ಯಾರು ಹೊಟ್ಟೆಕಿಚ್ಚೆ ಉರಿಯನ್ನ!…."

"ಸಾಕು ಬಿಡೀಂದ್ರೆ, ನಿಮ್ಗೆ ನಾವ ಹೊಗಳಲ್ಲೂ ಸರಸ….ಅಲ್ಲ, ಇಷ್ಟೆಲ್ಲ ಜೀತದ ಆಳಿನಂತೆ ದುಡಿಯುತ್ತ ಬಂದ್ರೂ ನಿಮ್ಮ ಬಾಯಿಯಿಂದ ಒಂದು ಒಳ್ಳೆಯ ಮಾತು….'

'ಅಯ್ಯೋ, ಬರೀ ಮಾತಿನಿಂದ ಏನು ಬಂದೀತೆ?'

'ಸಮಾಧಾನ…'

'ಈಗ ನಾನು ನಿನ್ನ ಹೊಗಳ್ಲಿಲ್ಲಾಂತ ಬೇಸ್ರವೇ ಅಲ್ಲ, ನಾನು ನಿನ್ನನ್ನ ಹೊಗಳಿದ್ರೆ ನೀನು ನನ್ನನ್ನ ಹೊಗಳಿದ್ರೆ ಅದ್ರಲ್ಲಿ ವಿಶೇಷವೇನು ಬಂತೆ!"

'ಬೇಡಾರೀ ಈ ಚರ್ಚೆ. ಅಂತೂ ನನ್ನ ಮೇಲೆ ನಿಮಗೆ ಸಮಾಧಾನ ಇಲ್ಲಾನ್ನಿ…."

"ಅಯ್ಯೋ, ಯಾರು ಹಾಗಂದವರು"

"ಯಾರಾದರೂ ಅನ್ನೋದು ಯಾಕೆ. ನಿಮ್ಮ ವರ್ತನೆಯೇ ಅದನ್ನ ಸಾರಿ ಹೇಳುತ್ತೆ…'

"ನನ್ನ ವರ್ತನೆ ಅದು ಹೇಗೆ "

"ಅದು ಹೇಗೆ ಅಂತೆ! ಪಾಪ, ಹೇಗೆ ಗೊತ್ತಾಗಬೇಕು? ಯಾವಾಗ್ಲೂ ಹಾಗೇನೇ. ಬೇರೆಯವ್ರದ್ದೆಲ್ಲಾ ಬೇಗನೇ ಗೊತ್ತಾಗುತ್ತೆ. ತಮ್ಮದು ಮಾತ್ರ ಗೊತ್ತಾಗೋಲ್ಲ…."

'ಯಾಕೆ ಹಾಗೆ ಅಂತೀಯ? ನಿನ್ನ ಮೇಲೆ ನನಗೆ ಬಿಡು, ಬಂದವ್ರು, ಹೋದವ್ರು, ಆಡಿದವ್ರು, ನೋಡಿದವ್ರು, ಅವ್ರು ಇವ್ರು ಎಲ್ರೂ ಪ್ರಶಂಸೆಯ ಮಾತನ್ನಾಡಿದ್ದಾರೆ. ಹುಡುಗಿ ಅಂದ್ರೆ ಹುಡುಗಿ; ಇಂಥ ಒಂದು ಹುಡುಗಿ ಮನೇಲಿದ್ರೆ ಸಾಕು, ಮತ್ತೆ ಮನೇಲೀ ದೀಪಾನೇ ಬೇಡಾಂತ….'

"ಸಾಕು ಬಿಡೀಂದ್ರೆ ನಿಮ್ಮ ತಮಾಷೆ. ಅಲ್ಲ, ಮನೇಲಿ ದೀಪವೇ ಬೇಡಾ ಅಂದ್ರೆ…."

'ಅಂದ್ರೆ, ನೀನೇ ದೀಪ, ಧೂಪ ನೈವೇದ್ಯಾಂತ, ನೀನೊಬ್ಬಳು ಮನೇಲಿದ್ರೆ ಮನೆಯೆಲ್ಲಾ ಬೆಳಗೋ ಬೆಳಕೂಂತ….'

'ಯಾರ್ಯಾರ ಪ್ರಶಂಸೆ ಹಾಗೇನೇ ಇಲ್ಲಿ, ನಿಮ್ಮ ಮುಖದಿಂದ ಏನು ಹೊರಡುತ್ತೇಂತ?"

'ಅಯ್ಯೋ, ಈ ಮುಖ ಯಾರನ್ನಾದ್ರೂ ಇದು ವರೆಗೆ ಹೊಗಳಿದ್ದು ಇದೆಯೇಂತ?'

"ಅದೇ ಅಂದದ್ದಲ್ಲಾ, ಹೊಗಳಿಕೆ ಬೇಡ, ತೆಗಳಿಕೆಯಾದ್ರೂ…'

'ಅಯ್ಯೋ, ನಾಲಗೆಯಲ್ಲಿ ಹುಳ ಬಿದ್ದೀತು….'

"ಯಾಕೆ?"

'ಯಾಕೇಂದ್ರೆ? ಎಲ್ರೂ ಮನೇ ದೀಪಾಂತ ಪ್ರಶಂಸೆ ಮಾಡಿರೋದನ್ನ ನಾನು …'

'ಪಾಪ, ಲೋಕಭಯ ಅಲ್ವೆ? ಇಲ್ಲಾದ್ರೆ…'

"ನೋಡಮ್ಮ. ಇದ್ದದ್ದನ್ನೆ ಇದ್ದ ಹಾಗೆ ಹೇಳೋಕೆ ಯಾರ ಭಯ ಯಾಕೆ ಬೇಕು?'

"ಹಾಗಾದ್ರೆ ಹೇಳಿರಲ್ಲಾ…'

"ನನ್ನ ಹೃದಯ ಅರಿತ ನೀನು ಯಾಕೆ ಹೀಗೆ ಹಠ ಮಾಡ್ತೀಯೊ?"

"ಮುಖದಿಂದ್ಲೇ ಕೇಳ್ಬೇಕು__"

'ಊಹ್ಞೂಂ…. ನನ್ನ ಚಿನ್ನ…."

'ಸಾಕು ಬಿಡೀಂದ್ರೆ__ ಎಲ್ಲಾ ಗೊತ್ತು. ಬಾಯಲ್ಲಿ ಚಿನ್ನ ರನ್ನ ವಜ್ರ ವೈಡೂರ್ಯಾಂತ…."

'ಏ…. ಎಂಥದೇ ಇದೆಲ್ಲಾ?'

'ಮತ್ತೆ ಎಂಥದು? ಎಲ್ಲಾ ಗೊತ್ತು. ತಮ್ಮ ಬೇಳೆ ಬೇಯಬೇಕಾದ್ರೆ ಎಲ್ರೂ ಹೊಗಳ್ತಾರೆ…."

"ಅಂದ್ರೆ…''

"ಅಂತ್ರೆ ಎಂಥದು ಮತ ಕೇಳೋಕೆ ಹೊರಟವ್ರು ಮತದಾರರನ್ನ ಹೊಗಳಹೊಗಳಿ ಅಟ್ಟಕ್ಕೆ ಏರ್ಸೋದಿಲ್ವೆ ಹಾಗೆ…ಹಕ್ಕಿ ಬುಟ್ಟಿಯಲ್ಲಿ ಬಿತ್ಮೇಂತಾದ್ಮೇಲೆಬಿಡಿ, ಕುತ್ತಿಗೆ ಹಿಚುಕಿ ಬಿಡೋದೇ…"

"ಹ್ಞೂಂ… ಇದೆಲ್ಲಾ ಏಕೇಂತ ಗೊತ್ತಾಯ್ತು ಬಿಡು. ಒಂದು ಸಿನೆಮಾಕೆ ಹೋಗೋದು ಬೇಡಾಂದೇಂತ ತಾನೇ ಈ ಎಲ್ಲ ಕೋಪ ತಾಪ…."

"ಅಲ್ಲ, ಮನೇಲಿ ಎಲ್ರೂ ಹೊರಟಿರುವಾಗ ನಾನು ಮಾತ್ರ ಹೋಗೋದು ಬೇಡಾಂತಂದಾಗ ಎಷ್ಟು ಬೇಸ್ರವಾಯ್ತು ಗೊತ್ತೆ"

'ಗೊತ್ತು…"

"ಗೊತ್ತಂತೆ ಗೊತ್ತು, ಏನು ಗೊತ್ತಾಗುತ್ತೆ ನಿಮಗೆ…. ಇಲ್ಲಿ…. ನಮ್ಮ ಹಣೆಬರಹವೇ ಹಾಗೆ, ಕತ್ತೆ ಚಾಕರಿ ಮಾಡೋದು, ನಾಯಿ ಹಾಗೆ ಒದೆತ ತಿಂದು ಬಿದ್ದಿರೋದು…"

'ಅಯ್ಯೋ. ಹೀಗೆಲ್ಲಾ ಸಂಭವ ಪಡೆದರೆ ಹೇಗೆ? ಅಲ್ಲಾ, ಇದಕ್ಕೆ ಮೊದ್ಲು ನಿನ್ನ ನಾನೆಂದಾದ್ರೂ ಬೇಡ ಅಂದಿದ್ದೆನೆ?"

"ಇಲ್ಲ…"

'ಮತ್ತೆ ಇಂದು ಬೇಡಾಂತನ್ನಬೇಕಾದ್ರೆ ಏನಾದ್ರೂ ಬಲವತ್ತರ ಕಾರಣವಿರ್ಬೇಕೂಂತ ನಿನ್ನ ಚುರುಕು ಬುದ್ಧಿಗೆ ಹೊಳೆಯದೆ ಹೋಯ್ತೇನು?"

'ಎಂಥದದು?"

"ನೀನೇ ಯೋಚಿಸು. ನೋಡು ನಿನಗೆ…"

"…ಓ, ಹಾಗೇನು? ಅಯ್ಯೋ, ನಾನು ಏನೇನೋ ತಿಳ್ಕೊಂಡು ಎಷ್ಟು ಅತ್ತೆ ಗೊತ್ತೆ?'

"ಪಾಪ, ಕಣ್ಣೀರು ಸುರಿದು ಕಡಲೇ ನಿರ್ಮಾಣವಾಗಿದೆ…ಎಲ್ಲಿದ [illegible] ಆ ವರ್ಷ ಸುರಿಸಿದ ಪುಷ್ಕರಾವರ್ತ ಮೇಘ ನಾಳೆ…'

"ಸಾಕು ಬಿಡೀಂದ್ರೆ……ನಿಮ್ಗೇನು? ಯಾರು ಇದ್ದಾರೆ, ಇಲ್ಲ ಎಂಬುದ್ರ ಗೊಡವೇನೇ ಇಲ್ಲ….'

'ನಿಮ್ಮಿಂದೆ ಮಾತ್ರ…'

"ಹ್ಞಾಂ…ನನ್ಗೆ…ಅಯ್ಯೋ' …

— ಗೋಪಾ.

In the Court of the Munsif of the Udipi, S. K.

O. S. No. 129 of 1965

Between.—

Shanthirajayarasu Maramma Hegde … Plaintiff.

and

Boggi Hengsu (Since deceased) … Defendant.

NOTICE.

Is hereby given to Sri Chandu Poojary son of Boggi Hengsu in Yermal of Thenka village of Udipi Taluk that R. I. A. No. 648/66 and R. I. A. No. 649/66 for condonation of delay and to set aside abatement of suit, filed by plaintiff against you (R4) and others, have been posted to 18—4—1967 and that you may appear before the court at 11 A. M. on that day and state your objection if any thereto.

By order.

(Sd.) P. N. K. Rao,
B. A., LL. B.,
Advocate for plaintiff

Udipi, S. K. Dated 20-2-1967.

ರೈತ ಭಾಂದವರ ಜೀವನ ಸಂಗಾತಿ…………

ಇಮಾನಿ ಕ್ರೂಡ್ ಆಯಿಲ್ ಇಂಜಿನ್

(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು…….

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು

(1 H.P. ಯಿಂದ 20 H.P ವರೇಗೆ) ಮತ್ತು ಪಂಪು ಸೆಟ್ಟುಗಳು……

ಬ್ಲೂ ಪೀಟರ್ ಸಪ್ಲಯರುಗಳು……..

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು—

ಸ್ವಾಮಿ ಇಲೆಕ್ಟ್ರಿಕಲ್ಸ್,

ಗಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮರ ರಸ್ತೆ, ಮಂಗಳೂರು1

ವಿವೇಚನೆ

ಸ್ವತಂತ್ರಾಚಾರ್ಯರ ಸಂಯುಕ್ತ ಸರಕಾರ

ಬರೆದವರು: ಶ್ರೀ ಶಿವಶಂಕರ.

ಚುನಾವಣೆಯ ಫಲಿತಾಂಶ ಪ್ರಕಟವಾದೊಡನೆ ಮದ್ರಾಸಿನ ಕಡಲುಕರೆಯಲ್ಲಿ ಗೆದ್ದ ಸಂಯುಕ್ತ ಪಕ್ಷದವರು ಭಾರೀ ವಿಜಯೋತ್ಸವವನ್ನಾಚರಿಸಿದರು. ಅದರಲ್ಲಿ ಸ್ವತಂತ್ರ ಪಾರ್ಟಿಯ ಮಹಾ ನಾಯಕ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಭಾಗವಹಿಸಿದ್ದರು. ಅದೇ ರೀತಿ ದಿಲ್ಲಿಯಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಆರಂಭವಾಗುವ ಸ್ವಲ್ಪ ದಿನಗಳ ಹಿಂದೆ ಸ್ವತಂತ್ರ ಪಾರ್ಟಿಯ ಸಂಸತ್ತಿನ ಸದಸ್ಯರ ಸಭೆಯಲ್ಲಿ ಅಲ್ಲದೆ ಭಾರೀ ಸಾರ್ವಜನಿಕ ಸಭೆಯೊಂದರಲ್ಲೂ ಅವರು ಮಾತಾಡಿರುವರು. ಈ ನಡುವೆ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೂ ಅವರು ಉತ್ತರಿಸಿರುವರು. ಮದ್ರಾಸಿನಲ್ಲಿ ಇತ್ತೀಚೆಗೆಂದೂ ಅಂತಹ ಸಭೆ ನಡೆದಿರಲಿಲ್ಲ. ಅಷ್ಟು ಜನಸಮುದಾಯ ಸೇರಿತ್ತು. ದಿಲ್ಲಿಯಲ್ಲೂ ಸಾರ್ವಜನಿಕ ಸಭೆಯಲ್ಲಿ ಸಹಸ್ರಾರು ಜನರು ಸೇರಿದ್ದರು. ಹಾಗೆಯೇ ಪತ್ರಿಕಾ ಪ್ರತಿನಿಧಿಗಳಂತೂ ಬಹಳ ಮಂದಿ ಕಲೆತಿದ್ದರು. ಈ ಎಲ್ಲಾ ಸ್ಥಳಗಳಲ್ಲಿ ಅವರು ಹೇಳಿರುವ ವಿಷಯ ಒಂದೇ ಒಂದು — ಅದುವೇ ಸಂಯುಕ್ತ ಸರಕಾರ ಸ್ಥಾಪಿಸುವ ವಿಷಯ.

ಇಂದಿನ ಕಷ್ಟ ಕಾಲದಲ್ಲಿ ವಿರುದ್ಧ ಪಕ್ಷಗಳ ಸಮ್ಮಿಶ್ರ ಸರಕಾರವು ದಿಲ್ಲಿಯಲ್ಲಿ (ಕೇಂದ್ರದಲ್ಲಿ) ಇರುವದು ಯೋಗ್ಯವೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸಿನ ಸಭೆಯಲ್ಲಿ ಹೇಳಿರುವರು. ಆದರೆ ಜನತೆ ಅವರ ಬಳಿಯೇ ಪ್ರಶ್ನೆ ಕೇಳುತ್ತ—ಕೇಂದ್ರದಲ್ಲಿ ಮಾತ್ರ ಕಷ್ಟಕಾಲ ಬಂದಿರುವದೇ?—ಮದ್ರಾಸಿನಲ್ಲಿ ಬಂದಿಲ್ಲವೇ? ಸರಿ. ಏನೋ ಇರಬಹುದು. ಹಿರಿಯರು ಹೇಳುತ್ತಿದ್ದಾರೆಂದು ಸುಮ್ಮನಿರೋಣವೆಂದರೆ ಮತ್ತೆ ವಿರುದ್ಧ ಪಕ್ಷಗಳ ಸಮ್ಮಿಶ್ರ ಸರಕಾರದ ಕುರಿತು ಅವರು ಹೇಳುತ್ತಿದ್ದಾರಲ್ಲಾ! ಸಮ್ಮಿಶ್ರ ಸರಕಾರ ಸ್ಥಾಪಿಸುವ ಯೋಚನೆ ಇದ್ದಲ್ಲಿ, ಚುನಾವಣೆಯ ಕಾಲದಲ್ಲಿ ಪಕ್ಷಗಳ ನಡುವೆ ಒಡಂಬಡಿಕೆ ನಡೆದಿರಬೇಕು. ಆದರೆ ಶ್ರೀ ಸಿ. ರಾಜಗೋಪಾಲಾಚಾರಿಯವರು ಹಾಗೆ ಮಾಡಿಸಿಲ್ಲ. ಮದ್ರಾಸಿನಲ್ಲೇನೋ ದ್ರಾವಿಡ ಮುನ್ನೇಟ್ರ ಕಳಗಂ, ಸ್ವತಂತ್ರ ಪಾರ್ಟಿ, ಕಮ್ಯುನಿಸ್ಟ್ ಪಕ್ಷಗಳು, ಮುಸ್ಲಿಂ ಲೀಗು, ತಮಿಳು ಅರಸು ಕಳಗಂ, ನಾಮ್ ತಮಿಳರ್ ಮುಂತಾದ ಪಕ್ಷಗಳು ಒಂದಾಗಿ ಚುನಾವಣಾ ಕಣದಲ್ಲಿ ಕಾಂಗ್ರೆಸ್ಸನ್ನೆದುರಿಸಿದ್ದವು. ಅನಂತರ ನಡೆದದ್ದೇನು? ತಮಿಳು ಅರಸು ಕಳಗಮಿನ ಮಹಾನಾಯಕ ಶ್ರೀ ಮಾ. ಪೊ. ಶಿವಜ್ಞಾನ ಗ್ರಾಮಣಿಯವರನ್ನು ಮದ್ರಾಸ್ ವಿಧಾನ ಸಭೆಯ ಅಧ್ಯಕ್ಷರನ್ನಾಗಿಸಲು ಪ್ರಯತ್ನ ನಡೆದಾಗ ಅದಕ್ಕೆ ದ್ರಾವಿಡ ಮುನ್ನೇಟ್ರ ಕಳಗಂ ಒಪ್ಪಲಿಲ್ಲ. ಶ್ರೀ ಆದಿತ್ತನ್‌ರವರು ನಾಮ್ ತಮಿಳರ ಪಕ್ಷವನ್ನು ವಿಸರ್ಜಿಸಿ ದ್ರಾ. ಮು. ಕ. ದೊಂದಿಗೆ ಒಂದಾಗಿ ಹೋದುದರಿಂದ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಇದನ್ನು ಸಹಿಸದೆ ಸ್ವತಂತ್ರ ಪಾರ್ಟಿಯವರು ಕಣದಲ್ಲಿಳಿದು ಸೋತಿರುವರು. ಅರೆ! ಚುನಾವಣೆಯ ಸಮಯ ಒಂದಾಗಿ ನಿಂತ ಪಕ್ಷಗಳೇ ಅಧಿಕಾರ ಬಂದಾಗ ಒಬ್ಬರ ಮುಖವನ್ನು ಇನ್ನೊಬ್ಬರು ನೋಡಲು ಇಚ್ಛಿಸದೆ ಇರುವಾಗ, ಎದುರೆದುರಾಗಿ ನಿಂತಿದ್ದ ಪಕ್ಷಗಳೀಗ ಒಂದಾಗುವದು ಸುಲಭವೇನು? ಶ್ರೀ ರಾಜಾಜೀಯವರು ತಮ್ಮ ಮನೆಯಲ್ಲೇ ಸೋತಿದ್ದಾರೆನ್ನಬಹುದು.

ಅವರ ಸಮ್ಮಿಶ್ರ ಸರಕಾರದ ಪಾಲುಗಾರರು ದ್ರಾ. ಮು. ಕಳಗಂ ಜನಸಂಘ ಮತ್ತು ಸ್ವತಂತ್ರ ಪಾರ್ಟಿ ಇಂದಲ್ಲವಾದಲ್ಲಿ ನಾಳೆಯಾದರೂ ಈ ತ್ರಿಪಕ್ಷಗಳ ಸಂಗಮ ಅಖಿಲ ಭಾರತೀಯ ಮಟ್ಟದಲ್ಲಿ ನಡೆಯುತ್ತದೆಂದೂ ಹೇಳಿರುವರು. ದ್ರಾ. ಮು. ಕಳಗಂ ಅಖಿಲ ಭಾರತೀಯ ಪಕ್ಷ ಇರುವದಿಲ್ಲ ಅದು ತಮಿಳುನಾಡಿನ ಪ್ರಾಂತೀಯ ಪಕ್ಷ (ಕರ್ನಾಟಕ, ಕೇರಳ ಅಥವಾ ಮುಂಬೈಯಲ್ಲಿ ಕಪ್ಪು ಕೆಂಪು ಬಟ್ಟೆ ಕಾಣಲು ಸಿಗುತ್ತದೆಯಾದರೂ ಅದರಡಿಯಲ್ಲಿ ಇರುವವರು ತಮಿಳರು ಮಾತ್ರ ಎಂಬುದನ್ನೂ ಸುಲಭವಾಗಿ ಗುರುತಿಸಬಹುದು.) ಜನಸಂಘ ಹಾಗೂ ಸ್ವತಂತ್ರ ಪಾರ್ಟಿ ಅಖಿಲ ಭಾರತೀಯ ಪಕ್ಷಗಳೇನೋ ನಿಜ. ಹಾಗಿರುವಾಗ ಈ ಮೂರು ಪಕ್ಷಗಳ ನಡುವೆ ಅಖಿಲ ಭಾರತೀಯ ಮಟ್ಟದಲ್ಲಿ ಒಡಂಬಡಿಕೆ ನಡೆಯಲು ಸಾಧ್ಯವೆಂತೂ? ಆದರೆ ದ್ರಾ. ಮು. ಕ.ದ ಕೆಲ ಚುನಾಯಿತ ನಾಯಕರುಗಳು ಲೋಕಸಭೆ ಹಾಗೂ ರಾಜ್ಯಸಭೆಯ ಅಧಿವೇಶನಕ್ಕೆ ದಿಲ್ಲಿಗೆ ಹೋಗುವರು. ಅಂತೆಯೇ ಜನಸಂಘ ಹಾಗೂ ಸ್ವತಂತ್ರ ಪಾರ್ಟಿಯ ಸಂಸತ್ತಿನ ಸದಸ್ಯರೂ ಬರುವರು. ಅಲ್ಲಿ ಮಾತುಕತೆ ನಡೆಯಬಹುದೇನು? ಕಾದು ನೋಡಬೇಕಾಗಿದೆ. ಅಖಿಲ ಭಾರತದ ವ್ಯವಹಾರಿಕ ಭಾಷೆ ಹಿಂದಿಯಾಗಿರಬೇಕೆಂದು ಹೇಳುವ ಪಕ್ಷ ಭಾರತೀಯ ಜನಸಂಘ ಹಿಂದಿ ಶಬ್ದ ಕೇಳಿದೊಡನೆ ಕಿಡಿಕಿಡಿಯಾಗುವ ಪಕ್ಷ ದ್ರಾ. ಮು. ಕ. ಇಂಡಿಯಾದ ಅಫೀಸು ಭಾಷೆಯಾಗಿ ಇಂಗ್ಲೀಷೇ ಇರಬೇಕೆಂದು ವಾದಿಸುವ ಪಕ್ಷ ಸ್ವತಂತ್ರ ಪಾರ್ಟಿ ಈ ರೀತಿ ನೇರ, ಸಿಕ್ಕಾಬಟ್ಟೆ, ಬಹಳ ದೂರ ನೋಡುತ್ತಿರುವ ಪಕ್ಷಗಳ ಸಂಗಮ ನಡೆಯುತ್ತದೆಂದು ಆಚಾರ್ಯರವರು ಭವಿಷ್ಯ ಹೇಳುತ್ತಿದ್ದಾರೆ! ಆದುದರಿಂದಲೇ ಅವರು ನಾಳೆಯ ವಿಷಯ ತೆಗೆದಿರುವದು. ಸ್ವತಂತ್ರ ದ್ರಾವಿಡ (ತಮಿಳು)ನಾಡಿನ ಬೇಡಿಕೆಯನ್ನು ದ್ರಾ. ಮು. ಕ. ಬಿಟ್ಟುಕೊಟ್ಟಿರುವಂತೆ ಭಾಷೆಯ ವಿಷಯದಲ್ಲೂ ಅಖಿಲ ಭಾರತೀಯ ಮಟ್ಟದ ಭಾಷೆಯನ್ನು ವ್ಯವಹಾರಿಕ ಭಾಷೆಯನ್ನಾಗಿ ಅದು ಇಂದಲ್ಲವಾದಲ್ಲಿ ನಾಳೆಯಾದರೂ ಸ್ವೀಕರಿಸೀತೆಂಬ ವಿಶ್ವಾಸ ಶ್ರೀ ರಾಜಾಜಿಯವರಲ್ಲಿರುವಂತಿದೆ. ದ್ರಾ. ಮು. ಕ. ವಾದರೋ ಎಲ್ಲವನ್ನು ಸರಕಾರೀಕರಣಗೊಳಿಸಲು ವಾದಿಸುವ ಪಕ್ಷ. ಸ್ವತಂತ್ರ ಪಾರ್ಟಿಯಾದರೋ ಸರಕಾರೀಕರಣ ನಡೆಯಕೂಡದೆಂದು ಹೇಳುತ್ತಿರುವ ಪಕ್ಷ. ಸರಕಾರ ವ್ಯಾಪಾರಕ್ಕಿಳಿಯಬಾರದೆಂದು ಜನಸಂಘದ ಅಭಿಪ್ರಾಯವಾದರೂ, ಸರಕಾರ ಕೈ ಹಾಕಿದರೂ ಸಾರ್ವಜನಿಕರಿಗೂ ಅದೇ ರೀತಿ ವಹಿವಾಟು ನಡೆಸಲು ಅಭ್ಯಂತರ ಇರಕೂಡದೆನ್ನುವ ಪಕ್ಷ ಭಾರತೀಯ ಜನಸಂಘ ಈ ತ್ರಿಪಕ್ಷಗಳ ಸಂಗಮ ನಡೆಯುವುದೆಂತು ಇಂದು ಸಮ್ಮಿಶ್ರನ ಸರಕಾರದ ಸ್ವರ ಎತ್ತುತ್ತಿರುವ ಶ್ರೀ ಚಕ್ರವರ್ತಿಯವರಿಗೆ ಸ್ವತಂತ್ರಪಾರ್ಟಿಯನ್ನು ಸ್ಥಾಪಿಸುವ ಆವಶ್ಯಕತೆಯಾದರೂ ಏನಿತ್ತು? ಅವರು ಹೊಸ ಸ್ವತಂತ್ರ ಪಕ್ಷವನ್ನು ಕಟ್ಟುವ ಬದಲು ಭಾರತೀಯ ಜನಸಂಘಕ್ಕೆ ಅಥವಾ ದ್ರಾವಿಡ ಮುನ್ನೇಟ್ರ ಕಳಗಮಿಗೆನೇ ಸೇರಿ ರಾಜಕೀಯ ಶುದ್ಧಿಕಾರ್ಯವನ್ನು ನಡೆಸಬಹುದಿತ್ತಲ್ಲಾ? ಅದರ ಬದಲು ಭಾರತೀಯ ಜನಸಂಘದ ತಮಿಳುನಾಡು ಹಾಗೂ ಕರ್ನಾಟಕದ ಮುಖಂಡರನ್ನು ಸತ್ಕಾರ ಸಭೆಗೆ ಆಮಂತ್ರಿಸಿ ಇದ್ದ ನಾಲ್ಕು ಜನರೆದುರು ಎಲ್ಲರೂ ಸೇರಿ ಆಗ ಆರಂಭಿಸಿರುವದು ಸ್ವತಂತ್ರಪಾರ್ಟಿಯೆಂದು ಸಾರಿಬಿಟ್ಟರು! "ಏನ್ರೀ ಇದೆಲ್ಲಾ" ಆ ನಾಯಕರು ಕೇಳಿದಾಗ "ಏನಿಲ್ಲ, ಹೀಗೆಂ"ದು ರಾಗ ಎಳೆದು ಬಿಟ್ಟರು ರಾಜಾಜಿ ಅನಂತರ ಭಾರತೀಯ ಜನಸಂಘದ ಮೇಲೆ ಪಂಡಿತ ಜವಾಹರಲಾಲ ನೆಹರೂಜೀಯವರು ಜಾತೀಯತೆಯ ಮುದ್ರೆಯನ್ನೊತ್ತಿರುವದರಿಂದ, ಅದಕ್ಕಿಂತಲೂ ವಿಶಾಲ ಅಡಿಪಾಯವಿರುವ ಹೊಸ ಪಕ್ಷವನ್ನು, ಜನಸಂಘ ಬೆಳೆದು ಬರುವವರಿಗೆ ತಾತ್ಕಾಲಿಕವಾಗಿ ಸ್ಥಾಪಿಸಿರುವೆನೆಂದು ಅವರು ಅಂದು ಆಶ್ವಾಸನೆ ಇತ್ತಿದ್ದರು. ಆದರೂ ಚುನಾವಣೆಯಲ್ಲಿ ಭಾರತೀಯ ಜನಸಂಘಕ್ಕೆ ಸ್ವತಂತ್ರ ಪಾರ್ಟಿ ಸಹಾಯ ಮಾಡಿರುವ ಉದಾಹರಣೆಯೂ ಇಲ್ಲವೆಂದಲ್ಲಿ ತಪ್ಪಾಗಲಾರದು. ಈ ಸಲ ಗುಜರಾಥ ಮತ್ತು ರಾಜಸ್ಥಾನದಲ್ಲಿ ಕೇವಲ ಒಂದು ಚುನಾವಣಾ ಮೈತ್ರಿ ನಡೆದಿರುತ್ತದೆ, ಅಷ್ಟೇ. ಇಷ್ಟೆಲ್ಲಾ ಹೇಳುವ ಶ್ರೀ ರಾಜಾಜಿಯವರ ಕಣ್ಣೆದುರಿನಲ್ಲೇ ಜನಸಂಘವೂ ಸ್ವತಂತ್ರ ಪಾರ್ಟಿಯೂ ವಿರುದ್ಧವಾಗಿ ಹೋರಾಡುತ್ತವೆ. ಅದನ್ನು ತಪ್ಪಿಸಲು ಶ್ರೀ ರಾಜಾಜಿಯವರಿಂದ ಸಾಧ್ಯವಾಗಿರುವದಿಲ್ಲ. ಶ್ರೀ ಅಣ್ಣಾದೊರೈಯವರು ಲೋಕಸಭೆಗೆ ಆರಿಸಿ ಬರಲು ಕಾರಣವಾದವರಲ್ಲಿ ಶ್ರೀ ರಾಜಾಜಿ ಪ್ರಮುಖ ವ್ಯಕ್ತಿ. ಈಗ ಅಣ್ಣಾದೊರೈಯವರ್ಗಳ್ ದಿಲ್ಲಿಗೆ ಹೋಗದೆ ತಮಿಳು ನಾಡಿನಲ್ಲೇ ಮುಖ್ಯಮಂತ್ರಿಗಳಾಗಿರುವರು. ಖಾಲಿ ಆದ ಆ ಸ್ಥಾನಕ್ಕೆ ಪುನರ್ ಚುನಾವಣೆ ನಡೆಯಬೇಕಾಗಿರುತ್ತದೆ. ಹಿಂದೆ ಆ ಸ್ಥಾನಕ್ಕೆ ಕಾಂಗ್ರೆಸ್ಸ್ ಅಭ್ಯರ್ಥಿಯನ್ನು ನಿಲ್ಲಿಸುವದಿಲ್ಲವೆಂದು ಘೋಷಿಸಿತ್ತು. ಇದೀಗ ತಾವೂ ಕಣದಲ್ಲಿರುವದಾಗಿ ಅದು ತಿಳಿಸಿರುತ್ತದೆ. ಇದು ರಾಜಕೀಯ ತಂತ್ರವೇ ಇರಬಹುದು. ಅದೇ ಸ್ಥಾನದಲ್ಲಿ ಭಾರತೀಯ ಜನಸಂಘದ ಅಭ್ಯರ್ಥಿಯೂ ಹಿಂದೆ ಕಣದಲ್ಲಿದ್ದು ಮುಂದೆಯೂ ನಿಲ್ಲಲಿರುವರು. ಈಗ ಶ್ರೀ ರಾಜಾಜಿ ತನ್ನ ತಂತ್ರವನ್ನೇಕೆ ಆಡಬಾರದು? ಅಲ್ಲ ಭಾರತೀಯ ಜನಸಂಘ ಹಾಗೂ ಕಾಂಗ್ರೆಸ್ಸ್ ತಮ್ಮ ಶಕ್ತಿ ಪರೀಕ್ಷೆ ಮಾಡಿಕೊಳ್ಳಲಿ. ಜನಸಂಘದೊಡನೆ ಸ್ನೇಹ ಬೆಳೆಸಿಕೊಳ್ಳುವೆನೆಂದು ಹೇಳುತ್ತಿರುವ ಶ್ರೀ ರಾಜಾಜೀ ಸ್ನೇಹ ಬೀಜವನ್ನು ತನ್ನ ಮನೆಯ ತೋಟದಲ್ಲೇ ಬಿತ್ತಲಿ. ಆ ಬೀಜವು ಸಸಿಯಾಗಿ, ಬಳ್ಳಿಯಾಗಿ, ಹೂಬಿಡಲಿ. ಆ ಪುಷ್ಪದ ಸೌರಭ ದೇಶದ ಮೂಲೆ ಮೂಲೆಗೂ ಹಬ್ಬಲಿ. ನಿಜವಾಗಿ ಶ್ರೀ ರಾಜಾಜಿಯವರ ಮನಸ್ಸಿನಲ್ಲಿ ಈ ಸದಭಿಪ್ರಾಯವಿದ್ದಲ್ಲಿ ಮಾತ್ರ ಅವರು ಸ್ನೇಹದ ಬೀಜವನ್ನು ಬಿತ್ತಿಯಾರು. ಇಲ್ಲದಿದ್ದಲ್ಲಿ ದಿಲ್ಲಿಯ ವಾತಾವರಣಕ್ಕನುಸಾರವಾಗಿ ಆ ರೀತಿ ಅವರು ಆಡಿದ್ದಾರೆಂದಾಗುತ್ತದೆ. ಮತ್ತು, ಇನ್ನು ಮುಂದೆಯೂ ಸ್ನೇಹ ಬೆಳೆಸುತ್ತೇನೆಂದು ಭಾರತೀಯ ಜನಸಂಘದವರ ಕಣ್ಣಿಗೆ ರಾಜಕೀಯದ ಮಣ್ಣು ಹಾಕಿ, ಇವರು ಕಮ್ಯೂನಿಸ್ಟರೊಡನೆಯೂ, ಮುಸ್ಲಿಂ ಲೀಗಿನೊಡನೆಯೂ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕವಿ ಜೀವನದ ಒಂದು ಘಟನೆ

"ದಿ ವಿಕಾರ್ ಆಫ್ ವೇಕ್ ಫೀಲ್ಡ್"

ಬರೆದವರು: ಶ್ರೀ ಸ. ನಾರಾಯಣ.

ಗೋಲ್ಡ್ ಸ್ಮಿತ್ ಸುಪ್ರಸಿದ್ಧ ಇಂಗ್ಲೀಷ್ ಬರಹಗಾರ. ಆತನ ಹಲವಾರು ಪ್ರಸಿದ್ಧ ಕೃತಿಗಳು ವಿಶ್ವದ ವಿವಿಧ ಪ್ರಮುಖ ಭಾಷೆಗಳಿಗೆ ಭಾಷಾಂತರ ಹೊಂದಿವೆ. ಲೋಕ ವಿಖ್ಯಾತ ಬರಹಗಾರರ ಶ್ರೇಣಿಯಲ್ಲಿ ನಿಲ್ಲಬಲ್ಲ ಪ್ರತಿಭಾವಂತ ವ್ಯಕ್ತಿ ಕವಿ ಗೋಲ್ಡ್ ಸ್ಮಿತ್. ಈತ ತನ್ನ ಜೀವನದ ಅನೇಕ ಅನುಭವಗಳನ್ನು, ಪ್ರಮುಖ ಘಟನೆಗಳನ್ನು ವಾಸ್ತವಿಕವಾಗಿ, ಸರಳವಾಗಿ ಬರೆದಿದ್ದಾನೆ. ಆತನದು ಅಂತಃಕರಣಪೂರ್ಣ ಅಭಿಮಾನ. ಕವಿಯ ಜೀವಮಾನದ ಒಂದು ಪ್ರಮುಖ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ

ಡಾ|| ಜಾನ್ಸನ್ (ಜಾನ್ ಸನ್) ಆಂಗ್ಲ ಭಾಷೆಯ ಪ್ರತಿಭಾವಂತ ಭಾಷಾ ಪಂಡಿತ. ಡಾ|| ಜಾನ್‌ಸನ್‌ರ ಕೃಪಾಶ್ರಯದಲ್ಲಿದ್ದ ಗೋಲ್ಡ್ ಸ್ಮಿತ್ ಅನೇಕ ತಮ್ಮ ಬರಹವನ್ನು ಆಂಗ್ಲ ಭಾಷೆಯಲ್ಲಿ ರಚಿಸಿ ಪ್ರಸಿದ್ಧರಾಗುತ್ತಿದ್ದರು. ಗ್ರಂಥ ರಚನೆಯಿಂದ ಅವರಿಗೆ ಸಾಕಷ್ಟು ಸಂಪಾದನೆಯೂ ಇತ್ತು. ಆದರೆ ಗೋಲ್ಡ್ ಸ್ಮಿತ್ ತಮ್ಮ ಸಂಪಾದನೆಯನ್ನೆಲ್ಲಾ ಕುಡಿಯುವುದಕ್ಕ, ಜೂಜಾಡಲು ಅಥವಾ ಸುಖ ಜೀವನದಲ್ಲೋ ದುಂದು ವೆಚ್ಚ ಮಾಡುತ್ತಿದ್ದರು. ಈ ರೀತಿ ಅವರು ಸಂಪಾದಿಸಿದ ಹಣವೆಲ್ಲ ಕಳೆದು ಹೋಗುತ್ತಿತ್ತು. ಅನೇಕ ವಿಧದಲ್ಲಿ ಸಾಲಗಾರರೂ ಆಗಿರುತ್ತಿದ್ದರು. ಗ್ರಂಥ ರಚನೆ ಮತ್ತು ಪ್ರಕಟಣೆಯಿಂದ ಹೆಚ್ಚು ವರಮಾನ ಬಂದಂತೆಲ್ಲಾ ಗೋಲ್ಡ್ ಸ್ಮಿತ್‌ರ ದುಂದು ವೆಚ್ಚವೂ ಹೆಚ್ಚಾಯಿತು. ಸಾಲವೂ ಮಿತಿಮೀರಿ ಬೆಳೆಯಿತು. ಸಾಲಗಾರರ ಕಿರುಕುಳವನ್ನು ತಾಳಲಾರದೆ ಪದೇ ಪದೇ ತಮ್ಮ ನಿವಾಸವನ್ನೇ ಬದಲಿಸುತ್ತಿದ್ದರು. ಕಲವು ವೇಳೆ ಅಜ್ಞಾತ ವಾಸ ಮಾಡುತ್ತಿದ್ದುದು ಉಂಟು.

ಸಾಲಗಾರರಿಗೆ ಕೈ ಕೊಡುವುದರಲ್ಲಿ ಗೋಲ್ಡ್ ಸ್ಮಿತ್ ನಿಸ್ಸೀಮರಾಗಿದ್ದರು. ಅನೇಕ ಸಾಲಗಾರರು ಅವರ ಮೋಸಕ್ಕೊಳಗಾಗಿದ್ದರು. ಆದರೆ ಗೋಲ್ಡ್ ಸ್ಮಿತ್ ತಾವು ವಾಸಿಸುತ್ತಿದ್ದ ಮನೆಯ ಮಾಲೀಕಳನ್ನೂ ಮೋಸಗೊಳಿಸಲು ನಡೆಸಿದ ಪ್ರಯತ್ನ ವ್ಯರ್ಥವಾಯಿತು. ಮನೆಯ ಬಾಡಿಗೆ ಸಂದಾಯ ಮಾಡುವುದಾಗಿ ಗೋಲ್ಡ್ ಸ್ಮಿತ್ ಅನೇಕ ಬಾರಿ ಮನೆಯ ಮಾಲೀಕಳಿಗೆ ಭರವಸೆ ನೀಡಿದರು. ಆದರೆ ಕೊಟ್ಟ ಮಾತನ್ನೂ ಉಳಿಸಿಕೊಳ್ಳದೆ, ಪದೇ ಪದೇ ವಂಚಿಸುತ್ತಿದ್ದುದನ್ನು ನೋಡಿ ಆಕೆ ಗೋಲ್ಡ್ ಸ್ಮಿತ್‌ರನ್ನು ನ್ಯಾಯಾಲಯದ ಮೂಲಕ ಬಂಧನಕ್ಕೆ ಒಳಪಡಿಸಿದಳು. ಬಂಧನಕ್ಕೊಳಗಾದ ಗೋಲ್ಡ್ ಸ್ಮಿತ್ ತಮ್ಮ ಆಶ್ರಯದಾತ ಡಾ|| ಜಾನ್‌ಸನ್ನರಿಗೆ ಪತ್ರ ಬರೆದು 'ತುಂಬ ಕಷ್ಟದಲ್ಲಿದ್ದೇನೆ. ಕೂಡಲೇ ಬಂದು ಹೋಗಿ' ಎಂದು ಪ್ರಾರ್ಥಿಸಿದರು.

ಗೋಲ್ಡ್ ಸ್ಮಿತ್‌ರಿಗೆ ಬಂದಿರುವ ಕಷ್ಟ ಎಂತಹದು ಎಂಬುದನ್ನು ಗ್ರಹಿಸದ ಜಾನ್‌ಸನ್ ಪತ್ರ ತಂದಿದ್ದ ಮನುಷ್ಯನ ಮೂಲಕ ಐದು 'ಗಿನಿ' (ಇಪ್ಪತ್ತೊಂದು ಶಿಲಿಂಗ್ ನಾಣ್ಯ)ಯನ್ನು ಗೋಲ್ಡ್ ಸ್ಮಿತ್‌ರಿಗೆ ಕಳುಹಿಸಿಕೊಟ್ಟು "ಶೀಘ್ರದಲ್ಲಿಯೇ ಬರುತ್ತೇನೆ" ಎಂದು ತಿಳಿಸು—ಎಂದು ಹೇಳಿ ಕಳುಹಿಸಿದರು. ಜಾನ್ ಸನ್ ಹೇಳಿದ ಪ್ರಕಾರ ಸ್ವಲ್ಪ ವೇಳೆಯೊಳಗಾಗಿಯೇ ಗೋಲ್ಡ್ ಸ್ಮಿತ್ತರ ನಿವಾಸಕ್ಕೆ ಬಂದರು. ಆ ವೇಳೆಗೆ ಗೋಲ್ಡ್ ಸ್ಮಿತ್ ತಮ್ಮ ವಶಕ್ಕೆ ಬಂದಿದ್ದ ನಾಣ್ಯದಲ್ಲಿ ಒಂದು ಗಿನಿಯನ್ನು ಖರ್ಚುಮಾಡಿ ಒಂದು ಸೀಸೆ 'ಮದಿರಾ' ದ್ರಾಕ್ಷಾರಸವನ್ನು ತರಿಸಿಕೊಂಡು ನ್ಯಾಯಾಲಯದ ಅಧಿಕಾರಿಯೊಂದಿಗೆ ಸೇವಿಸುತ್ತಾ, ಮನೆಯವಳನ್ನು ಶಪಿಸುತ್ತಾ ಕುಳಿತಿದ್ದರು. ಇದನ್ನು ಕಂಡ ಜಾನ್ ಸನ್ ದ್ರಾಕ್ಷಾರಸದ ಸೀಸೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಗೋಲ್ಡ್ ಸ್ಮಿತ್‌ರಿಗೆ "ಸುಮ್ಮನೆ ಕುಳಿತಿರು"ವಂತೆ ಸೂಚಿಸಿದರು.

ಜಾನ್‌ಸನ್ ನಮ್ರತೆಯಿಂದ ಗೋಲ್ಡ್ ಸ್ಮಿತ್‌ರ ಆರ್ಥಿಕ ಪರಿಸ್ಥಿತಿಯನ್ನು ಅರಿತುಕೊಂಡರು. ಅಪಾರ ಸಾಲವಿದ್ದ ಗೋಲ್ಡ್ ಸ್ಮಿತ್‌ರಲ್ಲಿ ಒಂದು 'ಪೆನ್ನಿ' ಹಣ ಕೂಡ ಇಲ್ಲ ಎಂಬ ಸಂಗತಿ ಅವರಿಗೆ ಸ್ಪಷ್ಟವಾಗಿ ತಿಳಿಯಿತು. "ನೀವು ಬರೆದಿರುವ ಯಾವುದಾದರೂ ಗ್ರಂಥ ನಿಮ್ಮಲ್ಲಿದೆಯೇ"? ಎಂದು ಜಾನ್‌ಸನ್ ಪ್ರಶ್ನಿಸಿದರು.



ಸೂರತ್‌ಘರದ ಯಾಂತ್ರಿಕ ವ್ಯವಸಾಯ ಕ್ಷೇತ್ರದಲ್ಲಿ ಟ್ರ್ಯಾಕ್ಟರುಗಳ ಸಹಾಯದಿಂದ ಗದ್ದೆಗಳನ್ನು ಉಳುತ್ತಿರುವ ಸನ್ನಿವೇಶ.

ಅದುವರೆವಿಗೂ ಯಾರೊಬ್ಬರ ದೃಷ್ಟಿಗೂ ಬೀಳದಿದ್ದ ಒಂದು ಗ್ರಂಥದ ಹಸ್ತಪ್ರತಿಯನ್ನು ಹೊರಗೆ ತೆಗೆದು ಗೋಲ್ಡ್ ಸ್ಮಿತ್ ಅದನ್ನು ಜಾನ್‌ಸನ್‌ರಿಗೆ ಅರ್ಪಿಸಿದರು. ಅದೊಂದು ಕಾದಂಬರಿಯ ಹಸ್ತಪ್ರತಿಯಾಗಿತ್ತು. ಜಾಣ್ಮೆ, ಪ್ರತಿಭೆ ಮತ್ತು ಪಾಂಡಿತ್ಯಗಳನ್ನು ಸೇರಿಸಿ ಆ ಕಾದಂಬರಿಯನ್ನು ರಚಿಸಿದ್ದರು ಗೋಲ್ಡ್ ಸ್ಮಿತ್. ಬಹು ಪರಿಶ್ರಮದಿಂದ ಬರೆದಿದ್ದ ಗೋಲ್ಡ್ ಸ್ಮಿತ್ ಆ ಕಾದಂಬರಿಯ ಹಸ್ತಪ್ರತಿಯನ್ನು ಪ್ರಕಟಣೆಗೆ ಯೋಗ್ಯ ಅವಕಾಶ ಒದಗದೆ ಇದ್ದುದರಿಂದಾಗಿ ಮುಚ್ಚಿಟ್ಟಿದ್ದರು. ಈಗ ಅನಿವಾರ್ಯವಾಗಿ ಆ ಕಾದಂಬರಿಯ ಹಸ್ತಪ್ರತಿಯನ್ನು ಹೊರ ತೆಗೆದು ಅದನ್ನು ಜಾನ್‌ಸನ್‌ರಿಗೆ ಕೊಡಲೇ ಬೇಕಾಯಿತು.

ಗೋಲ್ಡ್ ಸ್ಮಿತ್‌ರ ಕಾದಂಬರಿಯ ಹಸ್ತಪ್ರತಿಯನ್ನು ಕೈಯಲ್ಲಿ ಹಿಡಿದು ಕುಳಿತಲ್ಲಿಯೇ ಬಹುಭಾಗವನ್ನು ಓದಿ ಮೆಚ್ಚಿದರು. ಗೋಲ್ಡ್ ಸ್ಮಿತ್‌ರ ಲೇಖನ ಕೌಶಲ್ಯವನ್ನು ಕಂಡು ಆನಂದಿಸಿದರು. ಗೋಲ್ಡ್ ಸ್ಮಿತ್‌ರ ಸಾಲ ತೀರಿಸುವ ಸಲುವಾಗಿ ಕಾದಂಬರಿಯ ಹಸ್ತಪ್ರತಿಯನ್ನು ಮಾರಲು ಪ್ರಯತ್ನಿಸುವುದಾಗಿ ಹೇಳಿ ಡಾ|| ಜಾನ್ ಸನ್ ಹಸ್ತಪ್ರತಿಯೊಂದಿಗೆ ನಗರಕ್ಕೆ ಹೊರಟರು.

ಪುಸ್ತಕ ವ್ಯಾಪಾರಿಯೊಬ್ಬನನ್ನು ಭೇಟಿ ಮಾಡಿ ತಾವು ತಂದಿದ್ದ ಕಾದಂಬರಿಯ ಹಸ್ತಪ್ರತಿಯನ್ನು ಕೊಂಡುಕೊಳ್ಳುವಂತೆ ಡಾ|| ಜಾನ್‌ಸನ್ ಪ್ರಾರ್ಥಿಸಿದರು. ಆದರೆ ಪುಸ್ತಕ ವ್ಯಾಪಾರಿ ಚಿರಪರಿಚಿತ ಬರಹಗಾರನಲ್ಲದ ಕಾದಂಬರಿಕಾರನ ಹಸ್ತಪ್ರತಿಯನ್ನು ಕೊಳ್ಳಲು ನಿರಾಕರಿಸಿದ. ಸಾಹಿತ್ಯ ಕ್ಷೇತ್ರದಲ್ಲಿ ಜನಪ್ರಿಯತೆ ಗಳಿಸದೆ ಇದ್ದ ಈ ಅಪ್ರಸಿದ್ಧ ಬರಹಗಾರನ ಗ್ರಂಥವನ್ನು ಪ್ರಕಟಿಸಿ ಹಣ ಸಂಪಾದಿಸುವುದು ಅಸಾಧ್ಯ ಎಂಬುದು ಆ ಪುಸ್ತಕ ವ್ಯಾಪಾರಿಯ ವಾದ. ಜಾನ್‌ಸನ್ ಪಟ್ಟು ಹಿಡಿದು ಕುಳಿತರು. ಕಾದಂಬರಿಯ ಶ್ರೇಷ್ಠತೆಯನ್ನು ಮುಕ್ತ ಕಂಠದಿಂದ ಪ್ರಶಂಶಿಸಿದರು. ಜಾನ್‌ಸನ್‌ರ ಮಾತಿನ ಮೋಡಿಗೆ ಮರುಳಾದ ಪುಸ್ತಕ ವ್ಯಾಪಾರಿ (ಪ್ರಕಾಶಕ) ತನ್ನ ಅಭಿಪ್ರಾಯ ಬದಲಿಸಿದ.

ಜಾನ್‌ಸನ್ ಗೋಲ್ಡ್ ಸ್ಮಿತರ ಕಾದಂಬರಿ ಹಸ್ತಪ್ರತಿಗೆ ಅರುವತ್ತು ಪೌಂಡ್ ಬೆಲೆ ಕಟ್ಟಿದರೂ ಪುಸ್ತಕ ವ್ಯಾಪಾರಿ ನಲವತ್ತು ಪೌಂಡು ಬೆಲೆ ಕೊಡಲು ಒಪ್ಪಿದ. ಇಬ್ಬರಲ್ಲಿಯೂ ವಾದ ಪ್ರತಿವಾದ ನಡೆದು ಕೊನೆಗೆ ಸಂಧಾನವಾಯಿತು. ಕೊನೆಗೆ ಜಾನ್‌ಸನ್‌ರ ಹಟವೇ ಗೆದ್ದಿತು. ಪುಸ್ತಕ ವ್ಯಾಪಾರಿ ಅರುವತ್ತು ಪೌಂಡು ಹಣ ಕೊಟ್ಟು ಹಸ್ತಪ್ರತಿಯನ್ನು ಪಡೆದ. ಜಾನ್‌ಸನ್ ಹಣ ಪಡೆದು ಗೋಲ್ಡ್ ಸ್ಮಿತ್‌ರ ನಿವಾಸಕ್ಕೆ ತೆರಳಿ ಅವರ ಎಲ್ಲ ಸಾಲ ತೀರಿಸಿ, ಅವರನ್ನು ಬಂಧನದಿಂದ ವಿಮುಕ್ತರನ್ನಾಗಿ ಮಾಡಿ, ಉಳಿದ ಹಣವನ್ನು ಅವರಿಗೆ ಕೊಟ್ಟರು. ಮಾನವ ಪ್ರೇಮಿ ಡಾ|| ಜಾನ್‌ಸನ್‌ರ ನಿಸ್ವಾರ್ಥ ಸೇವೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಗೋಲ್ಡ್ ಸ್ಮಿತ್‌ರಿಂದ ಬರೆಯಲ್ಪಟ್ಟು, ಜಾನ್‌ಸನ್‌ರ ಮೂಲಕ ಪುಸ್ತಕ ವ್ಯಾಪಾರಿಗೆ ಅರುವತ್ತು ಪೌಂಡುಗಳ ಮೌಲ್ಯಕ್ಕೆ ಮಾರಾಟವಾದ ಹಸ್ತಪ್ರತಿ 'ದಿ ವಿಕಾರ್ ಆಫ್ ವೇಕ್ ಫೀಲ್ಡ್' ಎಂದು ಜನಪ್ರಿಯವಾಗಿರುವ ಆಂಗ್ಲ ಕಾದಂಬರಿಯಾಗಿತ್ತು. ಆ ಕಾದಂಬರಿಯ



ಬಿಹಾರ ರಾಜ್ಯದ ಸೋನೆಪುರದಲ್ಲಿ ನಡೆದ ಜಾನುವಾರು ಜಾತ್ರೆಯ ಒಂದು ನೋಟ.

ಮಧ್ಯ ಪ್ರದೇಶದ ಕೊಳ್ಳೆಗಾರರು—4.

ಹೇಡಿ ಸ್ವಪ್ನಗಳನ್ನುಂಟುಮಾಡಿದ "ಕಲ್ಲು"

ಬರೆದವರು : ಶ್ರೀ ಎಚ್. ಎಂ. ನಾರಾಯಣ ಭಟ್.

[ಮಧ್ಯಪ್ರದೇಶದಲ್ಲಿ ಹಲವು ಬಗೆಯ ಕ್ರೂರ ಕೃತ್ಯಗಳನ್ನು ನಡೆಸಿ ಚೋರರ ವಿವಿಧ ಸಂಘಗಳಲ್ಲಿ ದುಡಿದ ಕಲ್ಲನು ತನ್ನ ಪ್ರೇಯಸಿ ಪುತ್ಥಳಿಯ ವಿಯೋಗದಿಂದಾಗಿ ವೈರಾಗ್ಯಗೊಂಡು ಅತಿ ಕಠೋರ ಹೃದಯನಾಗಿ ವರ್ತಿಸಿ ಸರಕಾರಕ್ಕೇ ಸಮಸ್ಯೆಗಳನ್ನುಂಟು ಮಾಡಿ ಗುಂಡಿನೇಟಿಗೆ ಬಲಿಯಾದ ಕತೆಯಿದು]

ಮಧ್ಯ ಪ್ರದೇಶದ ನಿವಾಸಿಗಳಿಗೆ ಹೇಡಿಸ್ವಪ್ನಗಳನ್ನುಂಟುಮಾಡಿದ ಭಯಾನಕ ವ್ಯಕ್ತಿಗಳಲ್ಲಿ 'ಕಲ್ಲಾ ಗುಜರ್' ಸ್ಥಾನಗಳಿಸಿದ್ದ. ಕಲ್ಯಾಣ ಸಿಂಹನೆಂದಾಗಿತ್ತು ಆತನ ಹೆಸರು. ಕುಪ್ರಸಿದ್ಧ ಕೊಳ್ಳೆಗಾರರಿಗೆ ಹೆಸರಾಂತ ಭಿಂಡ್ ಜಿಲ್ಲೆಯ ಖಜನಾವ್— ಖುರ್ದ್ ಗ್ರಾಮದಲ್ಲಿ ೧೯೩೦ರಲ್ಲಿ ಜನಿಸಿದ ಕಲ್ಲನೊಂದಿಗೇ ಸಾಂಕ್ರಾಮಿಕ ರೋಗಗಳೂ ಹರಡಿ ಅನಿಷ್ಟಕಾಲವನ್ನೆ ಸೂಚಿಸಿದ್ದವು. ಕಲ್ಲನ ತಾಯಿ ತಂದೆಯರೂ ಸಾಂಕ್ರಾಮಿಕಕ್ಕೆ ತುತ್ತಾದರು. ಆದರೂ ತನ್ನ ಸಹೋದರರಾಗಿದ್ದ ಬದ್ರಿಯೂ ಮತ್ತು ಫತ್ತೇಸಿಂಗರೊಂದಿಗ ಅನಾಥ ಬಾಲಕನಾಗಿಯೇ ಬೆಳೆದ.

ಸ್ವಲ್ಪಕಾಲ ಚಿಕ್ಕ ತಂದೆಯ ರಕ್ಷಣೆಯಲ್ಲಿ ಈ ಬಾಲಕರಿದ್ದರು. ಕೃತಘ್ನರೂ ಗರ್ವಿಗಳೂ ಅವಿಧೇಯರೂ ಆಗಿದ್ದ ಮಕ್ಕಳನ್ನು ಸರಿದಾರಿಗೆ ತರುವುದು ಆತನಿಂದ ಸಾಧ್ಯವಾಗಲಿಲ್ಲ.

ಕಲ್ಲನೂ ಸ್ವೇಚ್ಛಾ ವಿಹಾರಿಯಾದ. ಸಂದರ್ಭ ಸಿಕ್ಕಿದಾಗಲೆಲ್ಲಾ ಕಳ್ಳತನ ಮಾಡಲೂ ಯಾತ್ರಿಕರನ್ನ ಕೊಳ್ಳೆ ಹೊಡೆಯಲೂ ಆ ಬಾಲಕ ತರಬೇತಿ ಹೊಂದಿದ.

ಒಮ್ಮೆ ಆತನನ್ನು ಪೋಲೀಸರು ಬಂಧಿಸಿದರಾದರೂ ಆತ ಹೇಗೋ ತಪ್ಪಿಸಿಕೊಂಡ. ಅಂದಿನಿಂದ ಕಲ್ಲ ಜನ ದ್ರೋಹಿಯಾಗಿ ವೀರಸಾಹಸ— ಕ್ರೂರ ಜೀವನ ವಾರಂಭಿಸಿದನೆನ್ನ ಬಹುದು.

ಪೋಲೀಸರಿಂದ ತಪ್ಪಿಸಿಕೊಂಡ ಕಲ್ಲನಿಗೆ ತಾನಾಗಿಯೇ ಚೋರ ವಿದ್ಯೆಯಲ್ಲಿ ಉತ್ತೇಜನ ಸಿಕ್ಕಿತು. ಆತನ ಕಾರ್ಯ ಕ್ಷೇತ್ರವೂ ವಿಸ್ತರಿಸಿತು. ಕಲ್ಲನೆಂದರೆ ಏನು ಮಾಡಲೂ ಹೇಸದ ಹೃದಯನೆಂದು ಜನಸಾಮಾನ್ಯರು ಹೆದರಿದರು.

ಹಲವು ಬಾರಿ ಪೋಲೀಸರ ಬೋನಿನಿಂದ ಜಾಲಗಾರನಂತೆ ತಪ್ಪಿಸಿ ಕೊಂಡ ಕಲ್ಲನಿಗೆ ಆತ್ಮ ಧೈರ್ಯವೂ ಹೆಚ್ಚಿತು. ಪೋಲೀಸರು ಹಿಡಿದ ಕೈಯಿಂದಲೂ ಕಲ್ಲ ಆವಿಯಾಗಿ ಹಾರಿಹೋದಂತಿತ್ತು. ಇದರಿಂದಾಗಿ ಸಾರ್ವಜನಿಕರ ಭಯ ಶಂಕೆಗಳು ಹೆಚ್ಚಾದರೆ ಆಶ್ಚರ್ಯವೇನು?

ಕೊಳ್ಳೆಗಾರನಿಗೆ ತನ್ನ ವಹಿವಾಟಿಗೆ ಬೇಕಾಗುವ ಭಂಡವಾಳವೂ ಅದೇ!

ಪೋಲೀಸರಿಗಂತೂ ನಾಚಿಕೆಯಾಯಿತು. ಕಲ್ಲನನ್ನು ಜೀವಂತ ಹಿಡಿಯಲಾಗದಿದ್ದರೆ ಬೇಡ; ಆತನ ಮೃತ ಶರೀರವಾದರೂ ಸಿಗಲೇ ಬೇಕೆಂದು ಅವರು ಪಣ ತೊಟ್ಟರು.

ಗುಲ್ಜಾರಿ ಎಂಬವನನ್ನು ಪೋಲೀಸರು ಕಲ್ಲನನ್ನನುಗಮಿಸಲು ಬಿಟ್ಟರು. ಗುಲ್ಜಾರಿ ಕಳ್ಳರಿಗೆ ಸಹಾಯ ಮಾಡುವವನೆಂದು ಪರಿಗಣಿಸಲ್ಪಟ್ಟಿದ್ದ ಸಾಹಸಿ. ಆತನಿಗೆ ವೇಷ ಪಲ್ಲಟ, ವಿವಿಧ ಭಾಷೆ ಮತ್ತು ವಿದ್ಯೆಗಳಲ್ಲಿ ಪ್ರವೀಣತೆಯಿತ್ತು. ಗುಲ್ಜಾರಿಗೆ ಬೇಕಾದ ಎಲ್ಲಾ ಸಹಾಯಗಳನ್ನೂ ಒದಗಿಸುವುದಾಗಿ ಪೋಲೀಸರು ಭರವಸೆಯಿತ್ತಿದ್ದರು.

ಗುಲ್ಜಾರಿ ಕಲ್ಲನ ಗ್ರಾಮಕ್ಕೆ ತೆರಳಿದ. ಗುಲ್ಜಾರಿಯನ್ನು ಕಂಡೊಡನೆಯೇ ಆತನಿಂದ ತನಗೊದಗ ಬಹುದಾದ ಆಪತ್ತಿನ ಕುರಿತು ಕಲ್ಲ ತಿಳಿದ. ಶತ್ರುವಾಗಿರಬೇಕೆಂಬ ಸಂಶಯ ತೋರಿದರೆ ಏನು ಮಾಡಬೇಕೆಂದು ಕಲ್ಲನಿಗೆ ತಿಳಿದೇ ಇತ್ತು.

ಆ ಗ್ರಾಮದ "ರೌಡಿ"ಯಾಗಿದ್ದ ಅಜಮೇರನೆಂಬಾತನನ್ನು ಕಲ್ಲ ಸಮೀಪಿಸಿ ಏನೋ ಪಿಸು ಮಾತಾಡಿದ. ಅಜಮೇರನು ಸತ್ಯ ಪ್ರತಿಜ್ಞೆ ಮಾಡಿ ಆಶ್ವಾಸನೆಯಿತ್ತು ಕಾರ್ಯರಂಗಕ್ಕಿಳಿದ.

ಒಂದು ದಿನ ಗುಲ್ಜಾರಿ ಹಕ್ಕಿ ಬೇಟೆಯ ನೆವದಲ್ಲಿ ಬಹಳ ಜಾಗರೂಕನಾಗಿ ಅಲೆಯುತ್ತಿದ್ದ; ಕೈಯಲ್ಲಿ ಕೋವಿಯಿತ್ತು. ಹೆಚ್ಚು ತಡವಿಲ್ಲದ ಕಲ್ಲನೂ ಅಜಮೇರನೂ ಸೇರಿ ಗುಲ್ಜಾರಿಯನ್ನು ಕೊಂದು ಕೋವಿ ಮತ್ತಿತರ ವಸ್ತುಗಳ ಸಮೇತ ಅರಣ್ಯ ಪ್ರವೇಶ ಮಾಡಿದರು.

ಕಲ್ಲನು ಬೇರೊಂದು ತಸ್ಕರ ಸಂಘವನ್ನು ಸೇರಿ ಅಲ್ಲಿಯೂ ಖಳ ನಾಯಕ (ಸಹಾಡ)ನ ವಿಶ್ವಾಸಕ್ಕೆ ಪಾತ್ರನಾದ. ಅಜಮೇರನಿಗೂ ಅದೇ ಸಂಘದಲ್ಲಿ ಆಶ್ರಯ ದೊರೆತಿತ್ತು.

ಒಂದು ದಿನ ಕಲ್ಲನು ಅಜಮೇರನೊಂದಿಗೆ ಶ್ರೀಮಂತ ಮನೆ ಹೊಕ್ಕಾಗ ಅಲ್ಲಿ ಮನೆಯವರಿಗೂ ಕಳ್ಳರಿಗೂ ಹೋರಾಟವೇ ನಡೆಯಿತು. ಕಲ್ಲನಿಗೆ ಹೇರಳ ದ್ರವ್ಯ ಲಭಿಸಿತಾದರೂ ಅಜಮೇರನು ಅಲ್ಲೇ ಗಾಯಗಳಿಗೆ ಬಲಿಯಾದ. ಕಲ್ಲ ಈ ದುಷ್ಕೃತ್ಯವನ್ನು ಸಹಿಸಲಿಲ್ಲ. ಸಹಾಡನ ಸಂಘ ಅವಲಕ್ಷಣವೆಂದು ಆತ ಭಾವಿಸಿದ.

ಕಲ್ಲ ಅಲ್ಲಿಂದಲೂ ಪರಾರಿಯಾಗಿ ಹರಿಗೋವಿಂದ ಸಿಂಹ ಮಹಾರಾಜಾಸಿಂಹನ ಸಂಘವನ್ನು ಸೇರಿದ. ಈ ಸಂಘ ಸುಸಜ್ಜಿತವಾಗಿತ್ತು. ಕಲ್ಲನನ್ನು ಈ ಸಂಘದವರು ವೈಭವಗಳಿಂದಲೇ ಸ್ವಾಗತಿಸಿದ್ದರು. ಶಿಸ್ತು ಪರಿಪಾಲನೆ ಅತಿ ಕಠಿಣವಾದ್ದರಿಂದಾಗಿ ಕಲ್ಲ ಈ ಸಂಘವನ್ನು ಬಿಡಬೇಕಾಗಿ ಬಂತು. ಮತ್ತೆ ಕಲ್ಲನು ಸುಲ್ತಾನನ ಸಂಘವನ್ನು ಸೇರಿದನು. ಸುಲ್ತಾನನ ಸಂಘದಲ್ಲಿದ್ದರೆ ಮಾತ್ರವೇ ತನ್ನ ಪರಾಕ್ರಮಗಳನ್ನು ಪ್ರದರ್ಶಿಸಲು ಸಾಧ್ಯವೆಂದು ಕಲ್ಲನಿಗೆ ಮನವರಿಕೆಯಾಗಿತ್ತು.

ಸುಲ್ತಾನನು ಯಾವ ಯೋಜನೆಯನ್ನಾದರೂ ಕಲ್ಲನೊಡನೆ ಪರ್ಯಾಲೋಚಿಸುತ್ತಿದ್ದ. ಕಲ್ಲನ ಸಾಹಸ ಕೃತ್ಯಗಳಿಂದಾಗಿ ಅಧಿಕ ಲಾಭಗಳಿಸಿದ ಸುಲ್ತಾನನಿಗೆ ಪ್ರೀತಿ ವಿಶ್ವಾಸಗಳು ದಿನದಿಂದ ದಿನಕ್ಕೆ ಬೆಳೆದವು.

ಒಂದು ದಿನ ಸುಲ್ತಾನನು ವಿಶೇಷ ಸಭೆಸೇರಿಸಿ ಕಲ್ಲನಿಗೆ ಒಂದು ರತ್ನ ಖಚಿತ ಕಿರೀಟವನ್ನೂ ಕರಾರಿಗುನ್ನೂ (ರೂ. ೨೦ ಸಾವಿರ ಬೆಲೆ) ಪಾರಿತೋಷಕವಿತ್ತು ಸನ್ಮಾನಿಸಿದ.

ಸುಲ್ತಾನನ ದುರಂತದ ಬಳಿಕ ಅನಾಥೆಯಾಗಿದ್ದ ಪುತ್ಥಳಿ ಕಲ್ಲನೊಂದಿಗೆ ಸೇರಿದಳು. ಪುತ್ಥಳಿಯ ಪೂರ್ಣ ಪರಿಚಯವೂ ಅವನಿಗಿತ್ತು. ಪುತ್ಥಳಿಯಂತಹ ಧೀರ ವನಿತೆ ತನ್ನ ಪ್ರೇಯಸಿಯಾಗಿ ದೊರೆತ ಕಲ್ಲ ತಾನೇ ಧನ್ಯನೆಂದು ಭಾವಿಸಿದ್ದನು.

೨೩—೧—೫೮ರಂದು ಪೋಲೀಸರು ಪುತ್ಥಳಿಯನ್ನು ನದಿಯಲ್ಲಿ ಗುಂಡಿಕ್ಕಿ ಕೊಂದಾಗ ಕಲ್ಲ ಹೇಗೋ ತಪ್ಪಿಸಿಕೊಂಡಿದ್ದು ಬಹಳ ದುಃಖಿಕ್ಕೀಡಾದನು.

ಅತಿ ಕಠಿಣವಾದ ಆ ಪರಾಜಯಕ್ಕಾಗಿ ತನ್ನ ವಿಧಿಯನ್ನು ಕಲ್ಲನಿಂದಿಸಿದ. ಆತನ ಶರೀರಕ್ಕಿಂತಲೂ ಹೆಚ್ಚಿನ ಅಸ್ವಾಸ್ಥ್ಯ ಮನಸ್ಸಿಗಾಯಿತು. ಅಷ್ಟರೊಳಗೇ ಆತನ ಆಪ್ತ ಕಾರ್ಯಕರ್ತರಲ್ಲನೇಕರು ದುರ್ಮರಣಕ್ಕೀಡಾಗಿದ್ದರು. ಬೇರೆ ಒಬ್ಬ ಸ್ನೇಹಿತ ಅಚ್ಛೇಲಾಲ್ ಬಂಧನದಲ್ಲಿದ್ದ.

ಕಲ್ಲ ತನ್ನ ಜೀವಮಾನದ ಪ್ರಾರಂಭ ದಿನಗಳ ಸುಖ ಸಂತೋಷಗಳನ್ನು ಸ್ಮರಿಸಿ ಮತ್ತೆ ವೈರಾಗ್ಯ ಹುಟ್ಟಿದವನಂತೆ ಅತಿ ಕ್ರೂರ ವರ್ತನೆಗಳಿಗೂ ಹೇಸದವನಾಗಿ ಪರಿಣಮಿಸಿದ್ದ. ಮಧ್ಯಪ್ರದೇಶ ಸರಕಾರಕ್ಕೇ ಅವನೊಂದು ಸಮಸ್ಯೆ! ಕಲ್ಲನನ್ನು ಜೀವಸಹಿತ ಅಥವಾ ಜೀವರಹಿತ ಹಿಡಿದವರಿಗೆ ರೂ. ಹತ್ತು ಸಾವಿರ ಬಹುಮಾನ ನೀಡುವುದಾಗಿ ಸರಕಾರ ಪ್ರಕಟಿಸಿತು.

ಆಗ ಕಲ್ಲನ ಸಂಘದಲ್ಲಿ ೧೨ ಮಂದಿ ಮಾತ್ರವೇ ಇದ್ದರು. ಸಂಘದ ಶಕ್ತಿ ಕಡಿಮೆಯಾದಂತೆಲ್ಲಾ ಆತನ ಪ್ರತೀಕಾರ ಭಾವನೆ ಕಠೋರವಾಗುತ್ತಿತ್ತು.

೨೫—೧೧—೫೮ರ ರಾತ್ರಿ ಹರಿಗೋವಿಂದಪುರದಲ್ಲಿ ಪೋಲೀಸರು ಕಲ್ಲನ ಸಂಘವನ್ನು ಮುತ್ತಿಗೆ ಹಾಕಿ ಗುಂಡಿಕ್ಕಿದರು. ಕಲ್ಲ ಅಲ್ಲೇ ಸತ್ತು ಬಿದ್ದನಾದರೂ ಮಿಕ್ಕ ಕಳ್ಳರು ತಪ್ಪಿಸಿಕೊಂಡರು.

(—ಆಧಾರದಿಂದ)

ಕೀರ್ತಿ ಪ್ರತಿಭೆ ಪ್ರಕಟವಾದ ತರುವಾಯ ಸಾಹಿತ್ಯ ಲೋಕಕ್ಕೆ ಪರಿಚಯವಾಯಿತು. ಡಾ. ಜಾನ್‌ಸನ್‌ರಿಂದ ಪುಸ್ತಕ ವ್ಯಾಪಾರಿ (ಪ್ರಕಾಶಕ) ಗೆ ಮಾರಾಟವಾದ ಎರಡು ವರ್ಷಗಳ ತರುವಾಯ ಈ 'ದಿ ವಿಕಾರ್ ಆಫ್ ವೇಕ್ ಫೀಲ್ಡ್' ಆಂಗ್ಲ ಕಾದಂಬರಿ ಪ್ರಕಟವಾಗಿ ಜನಪ್ರಿಯತೆ ಗಳಿಸಿತು.

'ದಿ ವಿಕಾರ್ ಆಫ್ ವೇಕ್ ಫೀಲ್ಡ್' ಕಾದಂಬರಿ ಗ್ರಂಥಕರ್ತ ಗೋಲ್ಡ್ ಸ್ಮಿತ್‌ರಿಗೆ ಆರ್ಥಿಕ ಲಾಭವು ಗಳಿಸಿ ಕೊಡದೆ ಹೋದರೂ, ಅವರ ಪಾಂಡಿತ್ಯಕ್ಕೆ ನ್ಯಾಯವಾಗಿ ಸಲ್ಲ ಬೇಕಾಗಿದ್ದ ಗೌರವವನ್ನು ಗಳಿಸಿಕೊಟ್ಟಿತು. ಹಾಗು ಈ ಕಾದಂಬರಿಯ ಮೂಲಕ ಗೋಲ್ಡ್ ಸ್ಮಿತ್ ಆಂಗ್ಲ ಸಾಹಿತ್ಯ ಕ್ಷೇತ್ರಕ್ಕೆ ಚಿರಪರಿಚಿತರಾದರು.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : "ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡು,
ಮಂಗಳೂರು—3

ಇವರು ತಮ್ಮ

66ನೇ ಶಾಖೆಯನ್ನು

ಕಾರ್ನಾಡ್ (ಮುಲ್ಕಿ)

ಮಂಗಳೂರು—ಉಡುಪಿ ಕರಾವಳಿ ರಸ್ತೆ
(ದಕ್ಷಿಣ ಕನ್ನಡ ಜಿಲ್ಲೆ)

ಎಂಬಲ್ಲಿ

1967ನೇ ಎಪ್ರಿಲ್ 3ನೇ ಸೋಮವಾರ

ತೆರೆದಿರುತ್ತಾರಾಗಿ ತಿಳಿಸಲು

ಸಂತೋಷಪಡುತ್ತಾರೆ.

ಸ್ವತಂತ್ರಾಚಾರ್ಯರ ಸಂಯುಕ್ತ ಸರಕಾರ

(ಐದನೇ ಪುಟ ನೋಡಿರಿ)

ಒಪ್ಪಂದ ನಡೆಸಿಕೊಂಡು ತನ್ನ ಗುರಿಯನ್ನು ಬೆಳಗಿಸುತ್ತ ಇರುತ್ತಾರೆಂಬುದಕ್ಕೆ ಸ್ಪಷ್ಟ ನಿದರ್ಶನ ಸಿಕ್ಕಿದಂತಾಗುತ್ತದೆ.

ಸರಿ, ರಾಜಕೀಯ ಒತ್ತಡದ ಪರಿಣಾಮವಾಗಿ ಮುಂದಾಳುಗಳು ತಮ್ಮ ಸ್ವಪಕ್ಷವನ್ನು ಸ್ಥಾಪಿಸಲು ಮುಂದೆ ಬಂದಿದ್ದರು. ಈಗ ವಾತಾವರಣದ ಅನುಭವವಾಗಿರುವದರಿಂದ ಒಂದಾಗ ಬಯಸುವದರಲ್ಲಿ ತಪ್ಪೇನಿಲ್ಲ. ಆದರೆ ಒಂದಾಗ ಬಯಸುವ ಹೃದಯಗಳ ಐಡಿಕ ಒಂದೇ ರೀತಿ ಇರಬೇಕಾಗಿಲ್ಲವೇನು? ಪಕ್ಷಗಳೊಳಗೆ ಸಾಮ್ಯತೆ ಇರಬೇಕಲ್ಲವೇನು? ದ್ರಾ. ಮು. ಕಳಗದವರ ಧೋರಣೆ ಘೋಷಣೆಗಳಿಗೂ ಸ್ವತಂತ್ರ ಪಾರ್ಟಿಯ ನಿಲುವು-ಯೋಜನೆಗಳಿಗೂ, ಭಾರತೀಯ ಜನಸಂಘದ ಧ್ಯೇಯ-ಧೋರಣೆ ಹಾಗೂ ಯೋಜನೆಗಳಿಗೆ ಉದಯ ಸೂರ್ಯ-ನಕ್ಷತ್ರ ಹಾಗೂ ನಂದಾ ದೀಪಗಳಿಗೆ ಇರುವ ಸಾಮ್ಯತೆಯೇ ಇದೆ. ಅದರಲ್ಲೂ ದ್ರಾ. ಮು. ಕ. ವೂ ಭಾರತೀಯ ಜನಸಂಘವೂ ಒಂದಾಗುವವೆಂದಲ್ಲಿ ರಾವಣ-ರಾಮರು ಒಂದಾಗುವವೆಂದಲ್ಲಿ ತಪ್ಪಾಗಲಾರದು. ಅವರನ್ನು ಒಂದುಗೂಡಿಸುವ ಕಾರ್ಯವನ್ನು ಶ್ರೀ ರಾಜಾಜಿಯವರ ಸ್ವತಂತ್ರ ಪಾರ್ಟಿ ನಡೆಸುತ್ತಿದೆನ್ನುವದನ್ನು ನಂಬಬೇಕಾದಲ್ಲಿ ಈ ಎರಡು ಪಕ್ಷಗಳ ನಡುವೆ ಇದು ಮಧ್ಯಮವರ್ತಿ ಪಕ್ಷವಿರಬೇಕು. ನಿಜವಾಗಿ ಹಾಗೆ ಇದೆಯೇ?

ಸ್ವತಂತ್ರ ಪಾರ್ಟಿ ಮತ್ತು ದ್ರಾ. ಮು. ಕ. ಗಳ ನಡುವೆ ಮೂಲಭೂತ ಏಕೀಭಾವ ಇದೆಯೆನ್ನುತ್ತಾರೆ ಶ್ರೀ ರಾಜಾಜಿ. ಅದಕ್ಕೆ ಅವರಿತ್ತಿರುವ ಉದಾಹರಣೆ: ಕೇಂದ್ರ ಸರಕಾರಕ್ಕೆ ಬಹಳಷ್ಟು ಅಧಿಕಾರ ಇರುವದು ಈ ಎರಡು ಪಕ್ಷಗಳಿಗೂ ಒಪ್ಪುವದಿಲ್ಲ. ರಾಜ್ಯ ಸರಕಾರಗಳನ್ನು ನಗರಸಭೆಯ ರೀತಿಯಲ್ಲಿ ಕೇಂದ್ರ ಸರಕಾರ ನೋಡಿಕೊಳ್ಳದೆ, ಆ ಸರ್ಕಾರಗಳಿಗೂ ಸಾಕಾದಷ್ಟು ಅಧಿಕಾರ ಕೊಡಬೇಕು.

ಇದು ಶ್ರೀ ರಾಜಾಜಿಯವರ ವಾದ. ಸ್ವತಂತ್ರ ಪಾರ್ಟಿಯವರಲ್ಲಾದರೋ ಪ್ರತಿಯೊಂದು ವಿಷಯದಲ್ಲೂ ಸ್ವತಂತ್ರ ಅಥವಾ ಭಿನ್ನಭಿನ್ನ ಅಭಿಪ್ರಾಯ ಇದೆ. ಆದರೂ ರಾಜ್ಯ ಸರಕಾರದ ವಿಷಯದಲ್ಲಿ ಕೆಲವರಾದರೂ ಶ್ರೀ ರಾಜಾಜಿಯವರ ಅಭಿಪ್ರಾಯವನ್ನು ಒಪ್ಪಬಹುದು. ದ್ರಾ. ಮು. ಕ.ವು ಇತರ ಉತ್ತರದ ರಾಜ್ಯ ಸರ್ಕಾರಗಳ ಕುರಿತು ಯೋಚನೆಯೇ ಮಾಡದೆ ಅವನ್ನು ಶತ್ರುಗಳ ರೀತಿ ನೋಡುತ್ತಿದೆ. ದ್ರಾವಿಡ ನಾಡಿನ ಬೇಡಿಕೆಯ ಕೈ ಬಿಟ್ಟಿರುವದಾಗಿ ದ್ರಾ. ಮು. ಕ.ದ ಧುರೀಣರು ಹೇಳುತ್ತಿರುವರಾದರೂ ಆ ವಿಷಯವನ್ನು ಕೈಬಿಟ್ಟೆಂದು ದ್ರಾ. ಮು. ಕ.ದ ಅಸ್ತಿತ್ವಕ್ಕೆ ತಿಲಾಂಜಲಿ ಕೊಟ್ಟಂತೆಯೇ ಸರಿ. ಉತ್ತರ—ದಕ್ಷಿಣ, ಹಿಂದಿ, ಬ್ರಾಹ್ಮಣ—ಬ್ರಾಹ್ಮಣೇತರ ವಿಷಯಗಳನ್ನು ಬಿಟ್ಟಲ್ಲಿ ದ್ರಾ. ಮು. ಕ. ಗಾಳಿ ತೆಗೆದ ಕಾಲ್ಚೆಂಡೇ ಸರಿ. ನಂತರ ಅದು, ಎಷ್ಟು ಒದ್ದರೂ ನೆಗೆಯದು. ಇನ್ನು ಭಾರತೀಯ ಜನಸಂಘವಾದರೋ ರಾಜ್ಯ ಸರ್ಕಾರಗಳ ಅಸ್ತಿತ್ವವೇ ಹಿಡಿಸುವದಿಲ್ಲ. ಅದು ಕೇಂದ್ರ ರಾಷ್ಟ್ರ, ಏಕ ಶಾಸನವನ್ನೇ ಇಚ್ಛಿಸುತ್ತದೆ. ಅಖಂಡ ಭಾರತವನ್ನು ಅದು ಒಂದೇ ಒಂದು ಘಟಕವೆಂದು ಪರಿಗಣಿಸುತ್ತದೆ.

ಸ್ಥಿತಿಯು ಹೀಗಿದ್ದರೂ ಈ ಮೂರು ಪಕ್ಷಗಳ ನಡುವಣ ವ್ಯತ್ಯಾಸವು ಕೇವಲ ಮೇಲ್ನೋಟ ಮಾತ್ರವೆಂದು ಶ್ರೀ ರಾಜಾಜಿಯವರು ಹೇಳಿರುವರು. ಅವು ತಮ್ಮ ಅಂತರಾಳದತ್ತ ದೃಷ್ಟಿ ಹಾಯಿಸಿದಲ್ಲಿ ಒಳ್ಳೆಯ ವಿಷಯಕ್ಕಾಗಿ ತನ್ನ ಪಕ್ಷ ಸ್ಥಾಪನೆಯಾಗಿರುವದನ್ನು ಕಂಡುಕೊಳ್ಳಬಹುದು. ಸ್ವತಂತ್ರ ಪಕ್ಷ ಪಾರ್ಟಿಯ ಬಳಿ ಉತ್ತಮ ಆರ್ಥಿಕ ನೀತಿ ಇದೆ. ಜನಸಂಘದ ಬಳಿ ಉತ್ತಮ ಆರ್ಥಿಕ ನೀತಿಯೊಂದಿಗೆ ಜನತಾ ಸಂಪರ್ಕದ ವೈಶಿಷ್ಟ್ಯಪೂರ್ಣ ಗುಣ ಇದೆ. ದಕ್ಷಿಣಕ್ಕೆ ಒಳ್ಳೆಯದು ಮಾಡುವ ವಿಶೇಷ ಕಾರ್ಯಕ್ಕಾಗಿ ದ್ರಾ. ಮು. ಕ.ದ ಸ್ಥಾಪನೆಯಾಗಿದೆಂಬುದು ಶ್ರೀ ರಾಜಾಜಿಯವರ ವಿವರಣೆ.

ಸ್ವತಂತ್ರ ಪಾರ್ಟಿಯ ಬಳಿಯೂ ಜನಸಂಘದ ಬಳಿಯೂ ಉತ್ತಮ ಆರ್ಥಿಕ ನೀತಿ ಇದ್ದು, ಜನಸಂಘಕ್ಕೆ ಜನಸಂಪರ್ಕ ಕರಗತವಾಗಿದ್ದಲ್ಲಿ ಸ್ವತಂತ್ರ ಪಾರ್ಟಿಯ ಅಸ್ತಿತ್ವದ ಅವಶ್ಯಕತೆ ಆದೇನು? ಅದನ್ನು ಆದಾಗಲೇ ಶ್ರೀ ರಾಜಾಜಿ ವಿಸರ್ಜಿಸಿಬಿಟ್ಟು, ಜನತೆಯೊಂದಿಗೆ ಅಂದರೆ ಜನಸಂಘದೊಂದಿಗೆ ಒಂದಾಗಬೇಕಿತ್ತು. ವಾಸ್ತವ್ಯವಾಗಿ ಹಾಗೆ ಇದೆ ಏನು? ಶ್ರೀ ರಾಜಾಜಿ ಹಾಗೆ ಮಾಡದೆ ಸ್ವತಂತ್ರ ಪಾರ್ಟಿಯ ಪ್ರಚಾರಕ್ಕಾಗಿ ಆದ್ಯಾವ ಮಟ್ಟಕ್ಕೂ ಇಳಿಯುತ್ತಿರುವಾಗ ಶ್ರೀ ಸಾಮಾನ್ಯ ಯೋಚಿಸದೆ ಇರಲಾರನು. ಇವರ ಈ ಆರ್ಥಿಕ ನೀತಿಯೆಂಬುದಾದರೂ ಏನು? ಸ್ವತಂತ್ರ ಪಾರ್ಟಿಯ ಬೆನ್ನೆಲುಬಾಗಿರುವವರು ಮಾಜಿ ಮಹಾರಾಜರು ಹಾಗೂ ಇಂದಿನ ಕುಬೇರರಂತಿರುವ ಕೈಗಾರಿಕೋದ್ಯಮಿಗಳು. ಮಾಜಿ ಮಹಾರಾಜರನ್ನು ತಮ್ಮ ಕೈಯೊಳಗಿಟ್ಟುಕೊಳ್ಳುವದಕ್ಕಾಗಿ ಸರ್ಕಾರದ ಬೊಕ್ಕಸದಿಂದ ಭಾರೀ ಹಣವನ್ನು ಕೊಡುತ್ತಿದೆ. ಸ್ವತಂತ್ರ ಪಾರ್ಟಿ ಇದಕ್ಕೆ ವಿರೋಧವಾಗಿಲ್ಲ. ಆದರೆ ಜನಸಂಘ ಇದನ್ನು ವಿರೋಧಿಸುತ್ತಿದೆ.

ಅವರ ದೃಷ್ಟಿಯಲ್ಲಿ ಮಹಾರಾಜರೂ ಶ್ರೀ ಸಾಮಾನ್ಯನೂ ಭಾರತೀಯರೇ ಇದ್ದು ಯಾರೂ ವಿಶಿಷ್ಟ ಸಲುಗೆಗೆ ಪಾತ್ರರಲ್ಲ. ಇನ್ನು ಕೈಗಾರಿಕೋದ್ಯಮಿಗಳ ವಿಷಯದಲ್ಲೂ ಹಾಗೇನೇ. ಸ್ವತಂತ್ರ ಪಾರ್ಟಿಯ ದೃಷ್ಟಿಯಲ್ಲಿ ಆಧುನಿಕ ಕುಬೇರರಿಗೆ ಲಕ್ಷ್ಮೀಕಟಾಕ್ಷ ಇರುವದು ದೈವಕೃಪೆ ಇದ್ದು, ಅವರು ಭೋಗಿಸಲಿಕ್ಕಾಗಿಯೂ ಶ್ರೀ ಸಾಮಾನ್ಯನು ಸೇವೆಗಾಗಿಯೂ ಇರುವವನಿದ್ದಾನೆ. ಆದರೆ ಭಾರತೀಯ ಜನಸಂಘದ ದೃಷ್ಟಿಯಲ್ಲಿ ಹಾಗಲ್ಲ. ಕೈಗಾರಿಕೋದ್ಯಮಿಯ ಕೈಕೆಳಗಿರುವ ಪ್ರತಿಯೊರ್ವ ದುಡಿಮೆಗಾರನೂ ತನ್ನ ವೇತನದಲ್ಲಿ ಒಂದಂಶವನ್ನು ತೆಗೆದುಕೊಳ್ಳದೆ ಹಾಗೆಯೇ ಬಿಡಬೇಕು. ಈ ರೀತಿ ಬಿಟ್ಟ ಧನವೂ ಮಾಲಿಕನು ಹಾಕಿರುವ ಮೂಲಧನವೂ ಸರಿಸಮಾನವಾಗಿ ದುಡಿಮೆಗಾರರೂ ಆ ಕಾರ್ಖಾನೆಯಲ್ಲಿ ಪಾಲುಗಾರರಾಗಬೇಕು. ಆಗ ಕೈಗಾರಿಕೆಯಲ್ಲಿ ಅಧಿಕ ಲಾಭ ಬರುವಂತೆ ಅವರು ಸೇರಿ ಶ್ರಮ ಪಡುವದರಲ್ಲಿ ಸಂದೇಹವಿಲ್ಲ. ಇತ್ತ ಅಧಿಕ ಉತ್ಪಾದನೆಯಾಗಿ ಜನರಿಗೆ ಬೇಕಾದಷ್ಟು ಸಾಮಗ್ರಿಗಳು ಸಿಗುವಂತಾಗುತ್ತದೆ. ಇದರಲ್ಲಿ ಯಾವದು ಉತ್ತಮ ಮಟ್ಟದ ಆರ್ಥಿಕ ನೀತಿ? ದ್ರಾ. ಮು. ಕ. ಕ್ಕೆ ಅಖಿಲ ಭಾರತೀಯ ಮಟ್ಟದ ಆರ್ಥಿಕ ನೀತಿಯೇ ಇಲ್ಲವೆಂದು ಸ್ವತಃ ಶ್ರೀ ರಾಜಾಜಿಯವರೇ ಅಭಿಪ್ರಾಯ ಪಡುತ್ತಿದ್ದು ಇಂತಹ ಪಕ್ಷಗಳಲ್ಲಿ ಮೂಲತಃ ಏಕತೆ ಇದೆಯೆನ್ನುತ್ತಿದ್ದಾರೆ! ದ್ರಾ. ಮು. ಕ.ವಾದರೋ ಶ್ರೀಮಾನ್ ರಾಮಸ್ವಾಮಿ ನಾಯ್ಕರ್‌ರವರ ದ್ರಾವಿಡ ಕಳಗದಿಂದ ಬಂಡೆದ್ದು ಹೊರಬಂದ ಪ್ರಗತಿಶೀಲರ (ಪ್ರನ್ಯೇಟ್ರ) ಪಕ್ಷವಿದೆ. ಹಾಗಿರುವಾಗ ತಾತ್ವಿಕ ದೃಷ್ಟಿಯಲ್ಲಿ ಈ ಎರಡು ಗುಂಪುಗಳೊಳಗೆ ಭಿನ್ನತೆ ಇರುವದಿಲ್ಲ ಕೇವಲ ದ್ವೇಷ ಮಾತ್ರ ಇಂಬು ಸಾಧ್ಯ. ಆದರೂ ಒಂದು ದಿನ ಸರಿಯಾಗಿ ಹೋದೀತು. ದ್ರಾವಿಡ ಕಳಗವಿಗೆ ಜಸ್ಟೀಸ್ ಪಾರ್ಟಿಯ ಸಹಾಯ ಹಾಗೂ ಕ್ರಿಶ್ಚಿಯನ್ ಮತಪ್ರಸಾರಕರ ನೆರವಿನಿಂದಾಗಿ ಇದು ಉಂಟಾಗಿ ಹಬ್ಬಿರುತ್ತದೆ. ಹೀಗಿರುವಾಗ "ದಕ್ಷಿಣ"ದ ಒಳ್ಳೆಯದಕ್ಕಾಗಿ ದ್ರಾ. ಮು. ಕ. ಉಂಟಾಗಿಲ್ಲ ಭಾರತದ ಏಕತೆಗೆ ಸುರಂಗವಿಡಲಿಕ್ಕಾಗಿ ಅದು ಉಂಟಾಗಿದೆಂಬುದನ್ನು ಪಾಮರರೂ ಅರಿತುಕೊಂಡಾರು. ಶ್ರೀ ರಾಜಾಜಿಯವರಿಗೆ ತನ್ನ ಕೆಲಸ ಆಗಬೇಕಾಗಿಯದೆ. ಆದುದರಿಂದ ಕತ್ತೆಯ ಕಾಲನ್ನೂ ಗಾರ್ಧಭರೂಪವೆಂದು ಮಣ್ಣನೆಯ ಮಾತುಗಳಲ್ಲಿ ಹೇಳುತ್ತಿದ್ದಾರೆ. ಇದೇ ದ್ರಾ. ಮು. ಕ. ದವರ ಹುಟ್ಟಡಗಿಸಲು ಶ್ರೀ ರಾಜಾಜಿಯವರು ತಮಿಳುನಾಡಿನ ಮುಖ್ಯ ಮಂತ್ರಿಯಾಗಿದ್ದಾಗ ಪ್ರಯತ್ನಿಸಿರಲಿಲ್ಲವೇನು? ಕಾಂಗ್ರೆಸ್ ಅವರನ್ನೆಂದು ಕಡೆಗಣಿಸಿತು; ದ್ರಾ. ಮು. ಕ. ಕ್ಕೆ ಹಿಂಬದಿಯಿಂದ ಸಹಾಯ ಮಾಡುತ್ತಿದ್ದ ತಿರುಕಾಮರಾಜರನ್ನು ಮುಖ್ಯ ಮಂತ್ರಿ ಪದವಿಗೂ ನಂತರ ಕಾಂಗ್ರೆಸ್ಸಿನ ಅಧ್ಯಕ್ಷಗಿರಿಗೂ ಏರಿಸಿಬಿಟ್ಟಿತು. ಶ್ರೀ ರಾಜಾಜಿ ಪೆಟ್ಟು ತಿಂದ ಹುಲಿಯಂತೆ ಆದರು. ಈಗ ಅವರು ಹಗೆ ತೀರಿಸಿಕೊಳ್ಳುತ್ತಿದ್ದಾರೆ, ಅಷ್ಟೇ.

ಇಂದಿನ ಪರಿಸ್ಥಿತಿಯಲ್ಲಿ ದೇಶಕ್ಕೆ ಸರಿಯಾದ ರೀತಿಯ ನಾಯಕತ್ವವನ್ನು ಸ್ವತಂತ್ರ ಪಾರ್ಟಿ ಹಾಗೂ ಭಾರತೀಯ ಜನಸಂಘದ ಮೈತ್ರಿ ಒದಗಿಸಬಲ್ಲುದೆಂದು ದಿಲ್ಲಿಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಶ್ರೀ ರಾಜಾಜಿ ಸಾರಿರುವರು. ಹಾಗಾದಲ್ಲಿ ಈ ಮೈತ್ರಿಯ ಮೂಲವಾದರೂ ಎಲ್ಲಿದೆ? ಇದಕ್ಕೆ ಅಡ್ಡ ಬರುತ್ತಿರುವವರು ಯಾರು? ಇವನ್ನೆಲ್ಲಾ ಶ್ರೀ ರಾಜಾಜಿ ಏಕೆ ಸರಿಪಡಿಸಿ ಕೊಡುವದಿಲ್ಲ? ಅನ್ನದಿಂದ ಹಸಿವು ನೀಗಿಸಿಕೊಳ್ಳಬಹುದು. ನೀರಿನಿಂದ ಬಾಯಾರಿಕೆಯನ್ನು ತಣಿಸಿಕೊಳ್ಳಬಹುದು........ಈ ರೀತಿ ಉಪದೇಶಕೊಡಬಹುದು. ಆದರೆ ಆ ಘಂಟೆಯನ್ನು ಕಟ್ಟುವವರ್ಯಾರು? ಶ್ರೀ ರಾಜಾಜಿಯವರಾದರೋ ಸ್ವತಂತ್ರ ಪಾರ್ಟಿಯ ಆಚಾರ್ಯರು ಅಲ್ಲದೆ ಚಕ್ರವರ್ತಿಯೇ ಇದ್ದಾರೆ. ಅವರು ಮನಸ್ಸು ಮಾಡದೆ ಇನ್ನಾರು ಮನಸ್ಸು ಮಾಡುವದು? ಈ ಮಾತು ನಿಜವಾಗಿ ಅವರ ಹೃದಯದ ಅಂತರಾಳದಿಂದ ಬಂದಿದೆಯಾದಲ್ಲಿ ಯುಗಾದಿಯ ಪರ್ವಕಾಲದಲ್ಲಾದರೂ ಅವರು ಮುಂದಕ್ಕೆ ಬರಲಿ. ರಾಜಕೀಯದಲ್ಲಿ ಒಂದು ನವಯುಗವನ್ನೇ ಸ್ಥಾಪಿಸಲಿ. ಅದು ಭಾರತೀಯ ಜನತಂತ್ರ ಪಕ್ಷವೋ ಅಥವಾ ಕೇವಲ ಭಾರತೀಯ ಜನಸಂಘವೇ ಇರಲಿ. ಅಂತೂ ರಾಜಕೀಯ ರಂಗದಲ್ಲಿ ಹಲವಾರು ನಟ ಪಕ್ಷಗಳು ಬಂದು ರಂಗಮಂಟಪದಲ್ಲಿ ಗೊಂದಲವೆಬ್ಬಿಸುವದಕ್ಕಿಂತ ಬೇರಾದ ಪಾತ್ರಗಳು ಮಾತ್ರ ಬರಲಿ. ಈ ಎರಡು ಪಕ್ಷಗಳಂದರೂ ಒಂದಾಗಬಹುದಾದಲ್ಲಿ ಬಹು ಬೇಗನೆ ಒಂದಾಗಲಿ. ಬಲಶಾಲಿ ಯೋಗ್ಯ ಸರಕಾರವನ್ನು ರಚಿಸುವದಕ್ಕೇ, ಪ್ರಬಲ ಪ್ರತಿಪಕ್ಷವಾಗಿರುವದಕ್ಕೆ ಅದು ಸುಲಭ ಸಾಧ್ಯವಾಗುತ್ತದೆ.

ಶ್ರೀ ರಾಜಗೋಪಾಲಾಚಾರಿಯವರಾದರೋ ಮೈತ್ರಿ [illegible] ಮುಂತಾದ ಮಾತುಗಳನ್ನಾಡುತ್ತಿದ್ದಾರೆಯೇ ವಿನಾ ಕಾರ್ಯರಂಗಕ್ಕಿಳಿದಿರುವದು ಗೊತ್ತಾಗುವದಿಲ್ಲ. ಅವರು ಕೇವಲ ಮಾತಿನ ಚಕ್ರವರ್ತಿ ಸ್ಥಾನದಿಂದ ಕೆಳಗಿಳಿದು ಬಂದು ಕಾರ್ಯರಂಗದಲ್ಲಿ ಗೋಪಾಲನಾಗುವದಿಲ್ಲ. ಅವರು ಇನ್ನೂ ಮುಂದಂದು ಪತ್ರಿಕಾ ಪ್ರತಿನಿಧಿಗಳೆದುರು ಈಗಿನ ಕಾಂಗ್ರೆಸ್ಸ್ ಸರಕಾರ ಹದಿನೈದು ತಿಂಗಳು ಮಾತ್ರ



ಜೀವಂತವಾಗಿರುತ್ತದೆ. ಆಸ್ಪರಲ್ಲಿ ಹೊಸ ಚುನಾವಣೆ ನಡೆಯುತ್ತದೆ. ಈ ಸಮಯವಾದರೋ ಸ್ನೇಹಿತರು ಹಾಗೂ ಪಕ್ಷಗಳಿಗೆ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಪ್ರಯತ್ನ ನಡೆಸಲಿಕ್ಕಾಗಿ ಇದೆಯೆಂದು ಹೇಳಿರುವರು. ಕಾಂಗ್ರೆಸ್ಸ್ ಸರಕಾರ ಹದಿನೈದು ಮಾಸ ಇರುತ್ತದೋ, ಹದಿನೈದು ತಿಂಗಳು ಉಳಿಯುತ್ತದೋ, ಹದಿನೈದು ವರ್ಷ ಬಾಳುತ್ತದೋ ಅಥವಾ ಹದಿನೈದು ದಿನಗಳಲ್ಲೂ ಸಮಾಪ್ತವಾಗುತ್ತದೋ—ಅದು ಆ ಪಕ್ಷದ ನೇತಾರರ ಮೇಲೆ ಹೊಂದಿಕೊಂಡಿದೆ. ಆದರೆ ಶ್ರೀ ರಾಜಾಜಿಯವರು ಹೇಳುವ ರಾಷ್ಟ್ರೀಯ ಸರಕಾರವಾದರೂ ಏನು? ಹುತಾತ್ಮರಾಗಿರುವ ಶ್ಯಾಮ ಪ್ರಸಾದ ಮುಖರ್ಜಿ ಕಾಂಗ್ರೆಸಿಗರಲ್ಲ. ಅವರನ್ನು ಕೇಂದ್ರದಲ್ಲಿ ಮಂತ್ರಿ ಸಭೆಗೆ ದಿವಂಗತರಾಗಿರುವ ಅಂದಿನ ಪ್ರಧಾನಿ ಜವಾಹರಲಾಲ ನೆಹ್ರೂಜೀ ಸೇರಿಸಿಕೊಂಡಾಗ ಶ್ರೀ ರಾಜಾಜಿಯವರೇಕೆ ಹುಬ್ಬು ಗಂಟಿಕ್ಕಿಕೊಂಡದ್ದು? ಕಾಂಗ್ರೆಸ್ಸೇತರರನ್ನು ಪದಗೇರಿಸಕೂಡದೆಂದು ಅಂದು ಅಭಿಪ್ರಾಯಪಡುತ್ತಿದ್ದ ಶ್ರೀ ರಾಜಾಜಿ ಇಂದು ರಾಷ್ಟ್ರೀಯ ಸರಕಾರ, ಸ್ವತಂತ್ರ—ದ್ರಾ.ಮು.ಕ., ಜನಸಂಘ ಮಿಶ್ರ ಸರಕಾರ, ಸ್ವತಂತ್ರ—ಜನಸಂಘ ಸಂಯುಕ್ತ ಅಥವಾ ಸಮ್ಮಿಲನ ಸರಕಾರದ ಸ್ವರ ಎತ್ತುತ್ತಿದ್ದಾರೆ. ಅಂದಿನ ರಾಜಾಜಿ ಇಂದು ಬದಲಾಗಿರಬಹುದು. ಆದರೆ ಯಾವ ದಿಶೆಯಲ್ಲೆಂಬುದು ಮುಖ್ಯ. ಇದೀಗ ಭಾರತೀಯ ಜನಸಂಘದ ದೀಪವು ಅವರಲ್ಲಿದ್ದ ರಾಜಕೀಯ ಅಂಧಕಾರವನ್ನು ಹೊಡೆದಟ್ಟಿದೆಯೇನು? ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರನ್ನು ಆಗಿನ ಕಾಶ್ಮೀರದ ಮುಖ್ಯಮಂತ್ರಿ ಶೇಖ್ ಅಬ್ದುಲ್ಲಾ ಕೊಲೆಮಾಡಿರುವರೆಂಬ ಮಾತು ಇನ್ನೂ ಹಾಗೆಯೇ ಇದೆ. ಶೇಖ್ ಅಬ್ದುಲ್ಲಾ ರಾಜ ವೈಭವದ ಕಾರಾಗ್ರಹದಲ್ಲಿಂದಿದ್ದಾರೆ. ಅವರ ಬಿಡುಗಡೆಯಾಗಬೇಕೆಂದು ಶ್ರೀ ರಾಜಾಜಿ ವಕಾಲತ್ತು ವಹಿಸುತ್ತಿದ್ದಾರೆ. ಇವರಿಗೆ ನಿಜವಾಗಿ ಭಾರತದ ಹಿತ ಹಾಗೂ ಭಾರತೀಯ ಜನಸಂಘದ ಮೈತ್ರಿಯ ಆವಶ್ಯಕತೆ ಇದ್ದಲ್ಲಿ ಶೇಖ್ ಅಬ್ದುಲ್ಲಾರ ಬಿಡುಗಡೆಯೆಂಬ ಮಾತಿನ ಬದಲು ಅವರ ವಿಚಾರಣೆ ನಡೆಯಲೆನ್ನುವ ಮಾತು ಬರುತ್ತಿತ್ತು. ಹೋಗಲಿ—ಇದು. ಕೇಂದ್ರದಲ್ಲಿ ಇಂದು ಇರುವದಾದರೂ ಏನು? ರಾಷ್ಟ್ರೀಯ ಸರಕಾರ ಅಲ್ಲವೇನು? ಅರಾಷ್ಟ್ರೀಯ ಅಥವಾ ಅನ್ಯರಾಷ್ಟ್ರೀಯರ ಸರಕಾರವೇನು? ಪಕ್ಷಭೇದ ತೊರೆದ ಮೇಧಾವಿಗಳ ಸಂಯುಕ್ತ ಸರಕಾರವೆಂದು ಶ್ರೀ ರಾಜಾಜಿ ಹೇಳಬಹುದು. ಈಗಿನ ಮಂತ್ರಿಮಂಡಲದಲ್ಲೂ ಶ್ರೀ ಕರಣ ಸಿಂಘ್, ಶ್ರೀ ತ್ರಿಗುಣ ಸೇನ್, ಶ್ರೀ ಚಂದ್ರಶೇಖರ್ ಮುಂತಾದ ಪಕ್ಷೇತರರು ಇಲ್ಲವೇನು? ಹೀಗೆ ಕಾಂಗ್ರೆಸ್ಸ್ ಅಲ್ಲದವರೂ ಅಲ್ಲಿರುವದರಿಂದ ಒಂದು ರೀತಿಯಲ್ಲಿ ಅದು ಸಂಯುಕ್ತ ಸರಕಾರವೇ ಇದೆ. ಶ್ರಮೋಣ ಈ ಮಂತ್ರಿಗಳು ಕೂಡಾ ಶ್ರೀ ಅಶೋಕ ಮೆಹ್ತಾ ಅಲ್ಲದೆ ಮಹಮದ್ ಕರೀಂಛಾಗ್ಲಾರವರಂತ ಕಾಂಗ್ರೆಸ್ಸಿಗ ಬಹುದಾದರೂ ಇಂದು ಅವರು ಪಕ್ಷೇತರರೇ ಇದ್ದು ಅವರಲ್ಲಿ ಒಬ್ಬೊಬ್ಬರಾದರೂ ಉತ್ತಮ ರಾಷ್ಟ್ರೀಯ ಮನೋಭಾವನೆ ಇರುವ ಮೇಧಾವಿಗಳೇ ಇದ್ದಾರೆ. ಇಂತಹ ಸಂಯುಕ್ತ ಸರಕಾರ ಇಂದಿನ ಆವಶ್ಯಕತೆಯಾದಲ್ಲಿ ಶ್ರೀ ರಾಜಾಜಿ ಅದನ್ನು ರಾಜ್ಯ ಸರಕಾರ ಮಟ್ಟದಲ್ಲಿ ಮೊದಲು ಆರಂಭಿಸಬೇಕಾಗಿತ್ತು. ಅವರಿಂದ ಮದ್ರಾಸಿನಲ್ಲೇ ಅದು ಸಾಧ್ಯವಾಗಿರುವದಿಲ್ಲ. ಅದರ ಬದಲು ತಮ್ಮ 'ಮಧು—ಚಂದ್ರ' ಮುಗಿಯಿತೆಂದು ಅವರು ಒಪ್ಪಿಕೊಳ್ಳಬೇಕಾಗಿ ಬಂದಿರುತ್ತದೆ. ಮಧುಚಂದ್ರ ಮುಗಿದ ಮೇಲೆ ಜವಾಬ್ದಾರಿಯುತ ಕುಟುಂಬ ನಡೆಸುವದೇ, ವಿಚ್ಛೇದನಕ್ಕೆ ಅರ್ಜಿ ಹಾಕುವದೇ? ಇಂತಹ ಪ್ರಶ್ನೆಗಳಿರುವಾಗ ಶ್ರೀ ರಾಜಾಜಿ ಮೊದಲು ಸ್ವತಂತ್ರ—ಜನಸಂಘದ ಮೈತ್ರಿ—ಸಮ್ಮಿಲನದ ಕಾರ್ಯವನ್ನು ಸರ್ವಾಲದಲ್ಲಿ ಸಾಂಗವಾಗಿ ನೆರವೇರಿಸಲಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

S. E. P. 531/1966 S. C. 343/1961

ಯಡ್ತರೆ ನಾರಾಯಣ ಶೆಟ್ಟಿ— ಅರ್ಜಿದಾರ

ಹಳೆಪೈಕ ರಾಮು ಹೆಂಗಸು ಸಹಾ—ಎದ್ರಿರು.

ಸದ್ರಿ ಅರ್ಜಿ ವ್ಯವಹಾರದಲ್ಲಿ ಎದ್ರಿರು.

1. ಹಳೆಪೈಕ ರಾಮು ಹೆಂಗಸು, 2. ಹಳೆಪೈಕ ಯಂಕಪ್ಪ—ಅಮ್ಮು ಹೆಂಗಸಿನ ಮಕ್ಕಳು, 3. ಹಳೆಪೈಕ ಸುಬ್ಬಯ್ಯ, ರಾಮುಹೆಂಗಸಿನ ಮಗ, 4. ಹಳೆಪೈಕ ವೆಂಕಟಯ್ಯ, ಲಕ್ಷ್ಮಿ ಹೆಂಗಸಿನ ಮಗ

ಕುಂದಾಪುರ ತಾಲ್ಲೂಕು ನಂ. 1ನೇ ಶಿರೂರು ಗ್ರಾಮದ ಮೇಲ್ಪಂಕ್ತಿಯಲ್ಲಿರುವವರು.

ಇವರಿಗೆ

ಸದ್ರಿ ಅಮಲ್ಜಾರಿಯಲ್ಲಿ ಅರ್ಜಿದಾರನು ನಿಮ್ಮ ಬಾಬ್ತು ಜಪ್ತಿ ಮಾಡಿದ ಚರಸೊತ್ತುಗಳ ಏಲಂ ಬಗ್ಗೆ ಅಪೇಕ್ಷಿಸಿ, ಆ ಕುರಿತು ಇಸ್ತಿಹಾರಿನ ಶರ್ತುಗಳನ್ನು ನಿರ್ಣಯಿಸುವರೇ ಇದೇ ತಾ. 19–4–1967ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ತಿಳಿದಿರಿ.

(By order of the court)

A. Rajeeva Shetty,
B. A. B. Com B. L.
Advocate for Petitioner.

Coondapoor, Date, 23—3—1967.

ಬದಲಾಗುವ ಲೋಕದಲ್ಲಿ

ಗೃಹಿಣಿ ಯಜಮಾನಿಯಾಗುತ್ತಾಳೆ

ಮಹಿಳೆಯ ಆಧಿಪತ್ಯ ಮನೆಗೆ ಮಾತ್ರ ಸೀಮಿತವಾದುದೇನು? 'ಗೃಹಿಣೀ ಗೃಹಮುಚ್ಯತೇ' ಎಂಬುದು ಎಷ್ಟೇ ಮೆಚ್ಚತಕ್ಕದ್ದಾದರೂ ಕೈಗಾರಿಕಾ ರಾಷ್ಟ್ರಗಳಲ್ಲಿ ಅದನ್ನು ಅಕ್ಷರಶಃ ಅನುಸರಿಸುವುದು ಕಷ್ಟವಾಗಿದೆ. ಮನೆಯಲ್ಲಿದ್ದುಕೊಂಡು ಗೃಹಕೃತ್ಯ ನಡೆಸಬೇಕಾದುದು ಎಷ್ಟು ಅನಿವಾರ್ಯವೋ ಕೈಗಾರಿಕೆ, ವ್ಯಾಪಾರ ಮುಂತಾದವುಗಳನ್ನು ನಡೆಸುವುದೂ ಜರ್ಮನಿಯ ಮಹಿಳೆಗೆ ಅಷ್ಟೇ ಅನಿವಾರ್ಯವಾಗಿದೆ.

ಮಹಿಳೆಯ ರಾಜ್ಯ ಮನೆ ಎಂಬುದು ಎಷ್ಟೇ ಮೆಚ್ಚತಕ್ಕದ್ದಾದರೂ ಮುಂಬರಿದ ರಾಷ್ಟ್ರದಲ್ಲಿ ಅದರ ಅನುಷ್ಠಾನ ಬಹಳ ಕಷ್ಟವಾದೀತು. ಕಾಲಕ್ಕೆ ತಕ್ಕಂತೆ ಸಮಾಜದಲ್ಲಿ ಗಂಡಸರು ಮತ್ತು ಹೆಂಗಸರು ನಿರ್ವಹಿಸಬೇಕಾದ ಕರ್ತವ್ಯಗಳೂ ಬದಲಾವಣೆಯಾಗಬೇಕೆಂಬುದಕ್ಕೆ ಪಶ್ಚಿಮ ಜರ್ಮನಿಯ ಮಹಿಳಾ ರಂಗದಲ್ಲಿ ಕಂಡುಬಂದಿರುವ ವಿಪ್ಲವಗಳೇ ನಿದರ್ಶನಗಳಾಗಿವೆ. ಸಾವಿರ ಮಂದಿ ಕಾರ್ಮಿಕರು ಕೆಲಸ ಮಾಡುವ ಕಾರ್ಖಾನೆಯೊಂದರ ಯಜಮಾನ್ಯವನ್ನು ಮಹಿಳೆಯ ತಲೆಗೆ ಕಟ್ಟುವುದು ಉಚಿತವೆನ್ನುವಿರಾ! ಆ ರೀತಿ ಕೈಗಾರಿಕೋದ್ಯಮಗಳನ್ನು ನಡೆಸಬೇಕಾಗಿರುವುದು ಪಶ್ಚಿಮ ಜರ್ಮನಿಯ ಮಹಿಳೆಯರನೇಕರಿಗೆ ಅನಿವಾರ್ಯವಾಗಿದೆ. ಹೀಗೆ ವ್ಯಾಪಾರೋದ್ಯಮಗಳ ಒಡತಿಯರಾಗಿರುವವರ ಸಂಖ್ಯೆ ಈ ದೇಶದಲ್ಲಿ ೨೪,೦೦೦ಕ್ಕಿಂತ ಹೆಚ್ಚಿಗಿದೆ. ಅವರಲ್ಲಿ ಅನೇಕರು ೧೦ ಮಂದಿ ಕಾರ್ಮಿಕರ ಅಥವಾ ನೌಕರರ ಯಜಮಾನಿಯರಾಗಿರಬಹುದು. ಆದರೆ ಅನೇಕರು ೧೦೦೦ ಮಂದಿ ಕಾರ್ಮಿಕರ ಅಥವಾ ನೌಕರರ ಯಜಮಾನಿಯರಾಗಿರುವರು.

ಎಲೆಯ ಮರೆಯ ಕಾಯಿಯಂತಿರುವುದು ಇವರಿಗೆ ಪ್ರಿಯ. ಸಮಾಜದಲ್ಲಿ ತಮಗೆ ಉನ್ನತ ಅಥವಾ ಗಣ್ಯ ಸ್ಥಾನವಿದೆಯೆಂದು ಇವರು ಮೆರೆಯಲು ಇಷ್ಟಪಡುವುದಿಲ್ಲ. ಸಾಮಾಜಿಕ, ಸಾಂಸ್ಕೃತಿಕ, ಮತ್ತು ರಾಜಕೀಯ ಚಟುವಟಿಕೆಗಳಿಂದ ದೂರವಿರ ಬಯಸುತ್ತಾರೆ. ಅನೇಕ ಕಂಪನಿಗಳ ಮಹಿಳಾ ಡೈರೆಕ್ಟರುಗಳು ಯಜಮಾನಿಯಂತೆ ವರ್ತಿಸುವುದಿಲ್ಲ. ಇತರರಿಗಿಂತಲೂ ಇವರಲ್ಲಿ "ಸ್ತ್ರೀ"ತ್ವ ಹೆಚ್ಚಾಗಿರುವಂತೆ ತೋರ್ಪಡುವುದು.

ಗಂಡಸರೊಡನೆ ಕೈಗಾರಿಕೆ, ವ್ಯಾಪಾರೋದ್ಯಮ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿಷ್ಟವಿಲ್ಲದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಇವರಲ್ಲಿ ಅನೇಕರು ಕಾರ್ಖಾನೆಗಳ ಯಜಮಾನಿಯರಾಗಿರುವುದು ಅವರ ಸ್ವಂತ ಇಚ್ಛೆಯಿಂದಲ್ಲ. ತಂದೆ ಅಥವಾ ಗಂಡನ ಕೈಗಾರಿಕೆ ವ್ಯಾಪಾರೋದ್ಯಮಗಳಿಗೆ ವಾರಸುದಾರರಾಗಿ "ಯಜಮಾನಿ"ಯಾಗಬೇಕಾಗಿಬಂದಿದೆ.

ಆದರೆ ತಮ್ಮ ಸ್ವಂತ ಇಚ್ಛೆಯಿಂದಲೇ ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಜರ್ಮನಿಯ ಮಹಿಳೆಯರು ನಡೆಸಬೇಕಾಗಿ ಬರುವ ಕಾಲ ದೂರವಾಗಿಲ್ಲ. ನಲ್ವತ್ತರ ನಂತರ ಮಹಿಳೆಯರಿಗೆ ಗೃಹಕೃತ್ಯಗಳಿಂದ ಬಹು ಮಟ್ಟಿಗೆ ವಿರಾಮ ದೊರೆಯುವುದು ಹಾಗೂ ಅವರು ಗಂಡಸರಿಗಿಂತ ಹೆಚ್ಚಿನ ದೀರ್ಘಾಯುಷ್ಯ ಪಡೆದಿರುವುದು ಅವರನ್ನು ಉದ್ಯಮರಂಗಕ್ಕೆಳೆಯಲು ಸಾಕಷ್ಟು ಕಾರಣಗಳೆಂಬುದು ಅಲ್ಲಿ ಮನವರಿಕೆಯಾಗುತ್ತಿದೆ. ವೃತ್ತಿರಂಗದಲ್ಲಿ ಒಳ್ಳೆಯ ತರಬೇತಿ ಮತ್ತು ಯಶಸ್ಸು ತಮಗೆ ಹೆಚ್ಚಿನ ಸ್ಥಾನಮಾನಗಳನ್ನು ದೊರಕಿಸಲಿದೆಯೆಂಬುದು ಜರ್ಮನ್ ಮಹಿಳೆಯರಿಗೆ ಅರಿವಾಗಿದೆಯಂತೆ. ವೃತ್ತಿ ಕೈಗಾರಿಕಾ ರಂಗಗಳಲ್ಲಿ ಮಹಿಳೆಯರು ಸರಿದಂತೆಲ್ಲಾ ಅವರಿಗೆ ಗಂಡಸರೊಂದಿಗೆ ಸಮಾನ ಸ್ಥಾನಬೇಕೆಂಬ ಕೂಗು ಮಾಯವಾಗುವುದು, ತಮ್ಮ ಉನ್ನತ ಸ್ಥಾನಗಳ ಫಲವಾಗಿ ದೊರಕುವ ಆತ್ಮ ವಿಶ್ವಾಸದ ಪರಿಣಾಮವಾಗಿ ಅವರೇ ಗಂಡಸರಿಗೆ ಸರಿಸಮಾನರಂತೆ ವರ್ತಿಸುವರು.

ಮೋತಿಮಹಲ್ ಹೋಟೇಲ್ ಉದ್ಘಾಟನಾ ಸಮಾರಂಭ

ಕಳೆದ ತಾ 26 ರಂದು, ಮಂಗಳೂರು ನಗರದಲ್ಲಿ ಅತ್ಯಾಧುನಿಕ ರೀತಿಯಲ್ಲಿ ನಿರ್ಮಿಸಲ್ಪಟ್ಟ ಹೋಟೆಲ್ ಮೋತಿಮಹಲಿನ ಉದ್ಘಾಟನೆಯು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ನೆರವೇರಿತು. ಆರಂಭದಲ್ಲಿ ವೇದ ಮಂತ್ರಗಳ ಪಠನವಾದ ಮೇಲೆ ಸಂಸ್ಥೆಯ ಮೆನೇಜಿಂಗ್ ಪಾರ್ಟ್ನರ್ ಶ್ರೀ ಕುಡ್ವ ಶ್ರೀನಿವಾಸ ಶೆಣೈಯವರು ಸ್ವಾಗತಿಸಿದರು.

ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸುತ್ತಾ, 'ದಕ್ಷಿಣ ಕನ್ನಡ ಜಿಲ್ಲೆಯು ನಿಸರ್ಗ ಸೌಂದರ್ಯ, ಚಾರಿತ್ರಿಕ, ಪೌರಾಣಿಕ ಸ್ಥಳಗಳ ನೆಲೆವೀಡಾಗಿದ್ದು ವ್ಯಾಪಾರ ಕೇಂದ್ರವಾಗಿಯೂ, ಬೃಹತ್ ಬಂದರ ಹಾಗೂ ಕೈಗಾರಿಕಾ ಸ್ಥಾಪನೆಗಳಿಂದಲೂ, ಪ್ರವಾಸಿಗಳನ್ನೂ ಸಂದರ್ಶಕರನ್ನೂ ಆಕರ್ಷಿಸಲಿದೆ. ಅವರಿಗೆ ಯೋಗ್ಯ ವಸತಿ ಸೌಕರ್ಯಗಳನ್ನು ಒದಗಿಸುವಲ್ಲಿ ಹೋಟೆಲುಗಳ ಪಾತ್ರ ಮಹತ್ತರವಾಗಿದೆ'ಯೆಂದರು. ಅವರು ಮುಂದುವರಿಯುತ್ತಾ, ಅತ್ಯಂತ ಸುಂದರ, ಆಧುನಿಕ ಹೋಟೆಲೆಂದು ವರ್ಣಿಸಿ ಅದರ ಸ್ಥಾಪನೆಗಾಗಿ ಶ್ರೀ ಕುಡ್ವ ಶ್ರೀನಿವಾಸ ಶೆಣೈ ಹಾಗೂ ಅವರ ಸಂಸ್ಥೆಯನ್ನು ಅಭಿನಂದಿಸಿದರು.

ಶ್ರೀ ಮಣೇಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ., ಮತ್ತು ಶ್ರೀ ಅರೂರ್ ಶ್ರೀಪತಿ ರಾವ್ ಸಭಿಕರ ಪರವಾಗಿ ಕುಡ್ವ ಕುಟುಂಬದವರ ಸಾಧನೆಯನ್ನು ಅಭಿನಂದಿಸಿದರು. ಚೇಂಬರ್ ಆಫ್ ಕಾಮರ್ಸ್‌ನ ಕಾರ್ಯದರ್ಶಿ ಶ್ರೀ ರಾಜಾರಾಮ ಮಲ್ಯರು ಈ ಸಂದರ್ಭದಲ್ಲಿ ಮಾತನಾಡಿದ ಮೇಲೆ ಶ್ರೀ ನಯಂಪಳ್ಳಿ ರಾಮರಾವ್ ಅವರು ದಿ| ಕೆ. ಗೋಪಾಲಕೃಷ್ಣ ಶೆಣೈ, ದಿ| ಕೆ. ವಾಸುದೇವ ಶೆಣೈ ಹಾಗೂ ದಿ|| ಯು. ಎಸ್. ಮಲ್ಯರ ಭಾವಚಿತ್ರ ಅನಾವರಣಗೈದರು.

ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ್ದ ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗರವರು ಮಾತನಾಡುತ್ತಾ ಇಂದಿನ ಉದ್ಘಾಟನೆಯು ಮಂಗಳೂರು ನಗರದ ಅಭಿವೃದ್ಧಿಯಲ್ಲಿ ಒಂದು ಪ್ರಾಮುಖ್ಯ ಘಟನೆಯಾಗಿದೆಯೆಂದರು. ಅಲ್ಲದೆ ಅಭಿವೃದ್ಧಿ ಹೊಂದಲು ಇಂತಹ ಸ್ಥಾಪನೆಗಳು ಅತ್ಯಾವಶ್ಯಕವಾದ್ದರಿಂದ ಜನತೆಯು ಸಹಕಾರ ನೀಡಬೇಕೆಂದರು.

ಶ್ರೀ ಕೆ. ರಾಮಚಂದ್ರ ಶೆಣೈಯವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಓದಿದ ಮೇಲೆ ಶ್ರೀ ಕೆ. ಪಾಂಡುರಂಗ ಶೆಣೈಯವರ ಧನ್ಯವಾದದೊಂದಿಗೆ ಸಮಾರಂಭವು ಅಂತ್ಯವಾಯಿತು.

ಕಿವುಡರಿಗೆ ಸೌಲಭ್ಯ

ಮಣಿಪಾಲ, ಮಾ. ೨೯— ಕಿವಿಯ ಕಾಯಿಲೆಗಳನ್ನು ಹಾಗೂ ಕಿವುಡನ್ನು ಗುಣಪಡಿಸುವುದಕ್ಕಾಗಿ ಇಲ್ಲಿಯ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಆಡಿಯೋಮೀಟರ್ ಹಾಗೂ ಆಪರೇಟಿಂಗ್ ಮೈಕ್ರೋಸ್ಕೋಪ್‌ನಂತಹ ಆಧುನಿಕ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಆಸ್ಪತ್ರೆಯ ಮುಖ್ಯಾಧಿಕಾರಿಯವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

ವಿದೇಶ ಪ್ರಯಾಣ

ಮಣಿಪಾಲ, ಮಾ. ೨೯—ಅಮೆರಿಕ ಸರಕಾರದ ವೃತ್ತಿ ಪುನರ್ನಿವೇಶನ ಆಡಳಿತ ಇಲಾಖೆಯ ಆಹ್ವಾನದ ಮೇಲೆ ಮೈಸೂರ್ಜು ಕೊಂಡವರು ಪುನರ್ನಿವೇಶನ ಹಾಗೂ ಚಿಕಿತ್ಸೆಯ ಆಧುನಿಕ ವಿಧಾನಗಳನ್ನು ಅಭ್ಯಸಿಸುವುದಕ್ಕಾಗಿ ಇಲ್ಲಿಯ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಬರ್ನ್ಸ್ ಸೆಂಟರಿನ ಪ್ರಾಜೆಕ್ಟ್ ಡೈರೆಕ್ಟರ್ ಡಾ|| ಎಂ. ಪಿ. ಪೈಯವರು ಅಮೆರಿಕಕ್ಕೆ ತೆರಳಿದ್ದಾರೆ.

ಬರುವ ಜುಲೈ ತಿಂಗಳಿನಲ್ಲಿ ಇಲ್ಲಿಗೆ ಹಿಂತಿರುಗುವ ಮುನ್ನ ಅವರು ಇಂಗ್ಲೆಂಡಿನಲ್ಲಿರುವ ಬರ್ನ್ಸ್‌ಸೆಂಟರುಗಳನ್ನು ಸಂದರ್ಶಿಸಲಿದ್ದಾರೆ.

ಇತರರಿಗೆ ಸಹಾಯ ಮಾಡುವ ಬುದ್ಧಿ ಬೆಳೆಯಲಿ

ಉಡುಪಿ, ಮಾ. 29 ಇಲ್ಲಿಯ ಪಾಸ್ ಟ್ಯುಟೋರಿಯಲ್ ಕೋಲೇಜಿನ ವಿದ್ಯಾರ್ಥಿ ವಿಹಾರ ಕೂಟದ ಅಧ್ಯಕ್ಷಸ್ಥಾನದಿಂದ ಎಂ. ಜಿ. ಎಂ. ಕೊಲೇಜ್ ಪ್ರೊಫೆಸರ್ ಶ್ರೀ ರೋಬರ್ಟ್ ಪೇರಿಸರು ಮೇಲಿನಂತೆ ಹೇಳುತ್ತಾ ವಿದ್ಯಾರ್ಥಿಗಳು ಮುಂದಿನ ಜೀವನದಲ್ಲಿ ಧೈರ್ಯವಂತರೂ, ಸ್ವಾವಲಂಬಿಗಳೂ, ಉತ್ತಮ ಗುಣ ಶೀಲರೂ, ವಿನಯಿಗಳೂ ಆಗಿರಬೇಕೆಂದು ಹರಸಿದರು.

ಮುಖ್ಯ ಅತಿಥಿ ಬೋರ್ಡ್ ಹೈಸ್ಕೂಲು ಹೆಡ್ ಮಾಸ್ಟರ್ ಶ್ರೀ. ಬಿ. ಎನ್. ಅಡಿಗರು [illegible] ನಾಲ್ಕು ಉದ್ದೇಶಗಳು [illegible], ತಿಳುವಳಿಕೆ, ವಿವೇಕ ಮತ್ತು [illegible] ತಿಳಿಸಿ ಇಂಥಾ ನಾಲ್ಕು [illegible] ಬೋಧನಾ ಕಾಲದಲ್ಲಿ ವ್ಯಯ [illegible] ಆಗತಕ್ಕವೆಂತಲೂ, [illegible] ಪಾಸ್ ಟ್ಯುಟೋರಿಯಲ್‌ನಲ್ಲಿ ವೈಯಕ್ತಿಕ [illegible] ಎಂತಲೂ ತಿಳಿಸಿದರು.

ಶ್ರೀ ಎ. ಜಿ. ಅತ್ತಿಯವರು ಪಾಸ್‌ಫೆಸ್ಟಿವಲ್‌ನ ದಿನ. ಗದ್ದೆ ವ್ಯವಸ್ಥಾಪತ್ರಧಾರಿಗಳಿಗೆ [illegible] ವಿದ್ಯೆ ಎಂದರೆ [illegible] ಒಳ್ಳೆದನ್ನು ಬಳಸುವ ಶಕ್ತಿ ಎಂತ [illegible]. ಟ್ಯುಟೋರಿಯಲ್‌ನಲ್ಲಿ ಅತ್ಯಂತ ಪ್ರೇರಣೆಯಿಂದ ಬಂದು ವಿದ್ಯೆಯನ್ನು ಕಲಿಯುತ್ತಾರೆ. ಇಲ್ಲಿ ನೂರಕ್ಕೆ ನೂರು ಪಾಸಾಗಲು ಸಾಧ್ಯವಿದೆ ಎಂತ ಹರಸಿದರು.

ಶ್ರೀ ಕೆ. ಸಂಜೀವರಾಯರು, ಪಾಸ್ ಕೋಲೇಜಿನ ಶಿಸ್ತು, ವಿದ್ಯಾಕ್ರಮ ಮತ್ತು ಏಳಿಗೆ ತನ್ನ ಅನುಭವದಂತೆ ಬಹಳ ಮೇಲ್ಪಟ್ಟದ್ದಿದೆ ಎಂದರು.

ಶ್ರೀ ರಾಮಕೃಷ್ಣ ಬಲ್ಲಾಳ, ಕುಮಾರಿ ಪ [illegible], ಸರೋಜಿನಿ ಎಡ್ವರ್ಡ್ ಬ್ರಿಟ್ಟೊ, ಗಣಪತಿ [illegible] ಮತ್ತು ರೋಕಯ್ಯ ಸೆಟ್ಟಿಗಾರ [illegible]. ತಮ್ಮ ತಮ್ಮ ಅಭಿಪ್ರಾಯಗಳ [illegible] ಮಾತನಾಡಿದರು.

[illegible] ಕಲ್ಕೂರರು [illegible] ಸಂಕ್ಷಿಪ್ತ ವಿವರಗಳನ್ನಿತ್ತು ವಿದ್ಯಾರ್ಥಿ ವೃಂದಕ್ಕೂ, ಮತ್ತಿತರ ಅತಿಥಿಗಳಿಗೂ ಧನ್ಯವಾದಗಳನ್ನಿತ್ತರು.

ರಥೋತ್ಸವ

ಕಾರ್ಕಳ, 26—3—1967. ಶ್ರೀ ಮಹಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದ ರಥೋತ್ಸವದಂದು, ಶ್ರೀ ಶ್ರೀ ಪುತ್ತಿಗೆ ಮಠದ ಶ್ರೀಗಳವರು, ದೇವಸ್ಥಾನದ ಪರವಾಗಿ ಶ್ರೀ ಕೆ. ಅನಂತ ಸೆಟ್ಟರು ಬಿನ್ನವಿಸಿಕೊಂಡಂತೆ ಶ್ರೀ ಪಿ. ಗುರುರಾಜ ಜ್ಯೋಯಿಸರು ಇವರ ದಿ| ತಾಯಿಯ ಹೆಸರಲ್ಲಿ ಅರ್ಪಿಸಿದ ಚಂದ್ರಮಂಡಲ ರಥ ಹಾಗೂ, ಶಿಬ್ರಿರು ಗುತ್ತು ಮುದ್ದು ಸೆಟ್ಟಿ ಬೊಂಬಾಯಿ, ಇವರಿಂದ ಹೋದ ವರ್ಷ ಅರ್ಪಿಸಿದ ಧ್ವಜಸ್ತಂಭಕ್ಕೆ ಈ ದಿನ ಅರ್ಪಿಸಿದ ಮರ್ಕ್ಯುರಿ ಲೈಟನ್ನೂ ಮತ್ತು ಹೆಗ್ಡೆ ರಾಮಕೃಷ್ಣ ಭಟ್ ಮೈಸೂರು ಇವರಿಂದ ದೇವಸ್ಥಾನಕ್ಕೆ ಅರ್ಪಿಸಿದ ಮರ್ಕ್ಯುರಿ ಲೈಟನ್ನೂ ಉದ್ಘಾಟಿಸಿದರು. ನಂತರ ನೆರೆದ ಸಭೆಯಲ್ಲಿ ಶ್ರೀ ಪಿ. ಮಂಜುನಾಥ ಶೆಣೈಯವರು ಎಲ್ಲರನ್ನೂ ಸ್ವಾಗತಿಸಿದ ತರುವಾಯ ಶ್ರೀಗಳವರು ಅನುಗ್ರಹ ಭಾಷಣ ಮಾಡಿ ಇಲ್ಲಿಯ ಕಾರ್ಯಕ್ಕೆ ಮೆಚ್ಚಿ ಭಕ್ತ ಜನರನ್ನೂ ಆಶೀರ್ವದಿಸಿದರು. ಶ್ರೀ ಗುರುರಾಜ ಜ್ಯೋಯಿಸರು ಧನ್ಯವಾದ ಅರ್ಪಿಸಿದ ತರುವಾಯ ಭವ್ಯ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಶ್ರೀ ಗೋವಿಂದ ಪೈ ಜಯಂತಿ

ಸುರತ್ಕಲ್ಲಿನ ವಿದ್ಯಾದಾಯಿನೀ ಶಾಲಾ ಮಂದಿರದಲ್ಲಿ ವಿಜಯ ಸಾಹಿತ್ಯಮಾಲೆ ಹಾಗೂ ಗೆಳೆಯರ ಬಳಗದ ವತಿಯಲ್ಲಿ ಕಳೆದ ತಾರೀಕು 23ರಂದು ಶ್ರೀ ಗೋವಿಂದ ಪೈ ಜಯಂತಿ ನೆರವೇರಿತು. ಶ್ರೀ ಯು. ವಾಸುದೇವ ರಾಯರು ಸಭಾಧ್ಯಕ್ಷರಾಗಿಯೂ, ಶ್ರೀ ಪಿ. ಕೆ. ನಾರಾಯಣ, ಶ್ರೀ ಎಚ್. ಮನಮೋಹನ ಕಾಮತ್, ಶ್ರೀ ಪಿ. ಸುಂದರೇಶನ್, ಶ್ರೀ ಎಸ್. ಎಂ. ಪಾಟೀಲ್, ಶ್ರೀ ಪಿ. ಗುರುರಾಜ ಭಟ್ಟರು ಭಾಷಣಕಾರರಾಗಿಯೂ ಶ್ರೀ ಪೈಯವರ ಗುಣ ಹಾಗೂ ಕೃತಿಗಳ ಮಹತ್ವಗಳನ್ನು ವಿವರಿಸಿದರು. ಶ್ರೀ ಎಚ್. ವಾಸುದೇವ ರಾವ್ ಸಂದೇಶ ಪತ್ರವೋದಿದರು. ಶ್ರೀ ಪಿ. ಸಿ. ವಾಸುದೇವ ರಾವ್ ಶ್ರೀ ಪೈಯವರ ಕವಿತೆ ವಾಚಿಸಿದರು. ಶ್ರೀ ಕೆ. ಪದ್ಮನಾಭಾಚಾರ್ಯರು ತಾವು ಬರೆದ ಶ್ರೀ ಪೈಗಳ ಶ್ಲಾಘನ ಪದ್ಯ ಹಾಡಿದರು. ಶ್ರೀ ಪೈಯವರು ಬರೆದ ಕೃತಿಗಳ ಮತ್ತು ತತ್ಸಂಬಂಧಿ ಲೇಖನ ಗ್ರಂಥಗಳ ಪ್ರದರ್ಶನವೂ, ವಿಜಯ ಸಾಹಿತ್ಯಮಾಲೆಯ ಪ್ರಕಟನೆಯ ಪ್ರದರ್ಶನವೂ, ಜತೆಗೊಂಡಿದ್ದವು. ಪ್ರಾರಂಭದಲ್ಲಿ ಪ್ರಾಚೀನ ವಸ್ತು ಸಂಗ್ರಹದ ವರದಿ ಓದಿದ ಶ್ರೀ ಕೆ. ವೆಂಕಟರಾಮಾಚಾರಿ ಶ್ರೀ ಪೈಗಳ ಸಂಸ್ಮರಣಾರ್ಥವಾಗಿ, ಶ್ರೀ ಎಂ. ಎಸ್. ಅನಂತ ಪದ್ಮನಾಭರಾಯರು ಬರೆದ "ಉತ್ತರ ರಾಮ ಕಥೆ"ಯ ವಿಮರ್ಶೆಯನ್ನು ಪುಸ್ತಕಾಕಾರವಾಗಿ ಪ್ರಕಟಿಸುವ ನಿರ್ಧಾರ ಸೂಚಿಸಿದರು. ಶ್ರೀ ಸುರತ್ಕಲ್ಲು ಭೋಜ ಬಂಗೇರರಿಂದ 'ಮೀರಾಬಾಯಿ' ಕತೆ ಚಿತ್ರಗೊಂಡಿತ್ತು. ಶ್ರೀ ಬಿ. ಕೆ. ನಾರಾಯಣ ರಾವ್ ಮತ್ತು ಶ್ರೀ ಎಚ್. ಎಸ್. ವೆಂಕಟ ರಾವ್ ಹಿಮ್ಮೇಳಕ್ಕೆ ನೆ ವಾಗಿದ್ದರು ಎಂದು ತಿಳಿಯ ಬರುತ್ತಿದೆ.

ಯಕ್ಷಗಾನ "ರಣ ಮಲ್ಲ ವಿಜಯ"

ಬೆಳಂಬಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಕಳೆದ ದಿನಾಂಕ 16ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ ವಿರಚಿತ "ರಣ ಮಲ್ಲ ವಿಜಯ" ಎಂಬ ಐತಿಹಾಸಿಕ ಕಥಾ ಭಾಗದ ಯಕ್ಷಗಾನ ತಾಳಮದ್ದಳೆಯು ಜರಗಲ್ಪಟ್ಟಿತು. ಶ್ರೀ ಕುಟ್ಯಪ್ಪ ಗೌಡರ ವತಿಯಿಂದ ನಡೆಸಲಾದ ಈ ವಿಶೇಷ ಕಾರ್ಯಕ್ರಮದಲ್ಲಿ ಸರ್ವ ಶ್ರೀಗಳಾದ ಕೀ. ವ. ಕೇಶವ, ಹಳೆಮನೆ ರಾಮರಾಯ ಗೌಡ, ಬಿ. ವಿ. ವಿನೋದ, ಕುಂಬಡಾಜೆ ಮಾಸ್ತರ್ ಜತ್ತಪ್ಪ ರೈ, ಕಲ್ಲಡ್ಕ ಬಾಬು ರೈ, ಪರಮೇಶ್ವರ ಭಟ್, ಕುತ್ತಿಮುಂಡ ಸಾಂತಪ್ಪ ಗೌಡ ಮಾಸ್ತರ್, ಬಂದ್ಯಡ್ಕ ಲಕ್ಷ್ಮಣ ಗೌಡ, ಬಿ. ಶ್ರೀಧರ—ಮೊದಲಾದವರು ಭಾಗವಹಿಸಿದ್ದರು. ವ್ಯವಸ್ಥಾಪಕರ ವತಿಯಿಂದ—ಕುಂಬಡಾಜೆ ಮಾಸ್ತರ್ ಜತ್ತಪ್ಪ ರೈಗಳು ಕೊನೆಯಲ್ಲಿ ಧನ್ಯವಾದವಿತ್ತರು.

ಗುರುಸ್ತುತಿ

ಬಾಳಿನಲಿ ಬೆಳದಿಂಗಳುದಿಸಿತು
ಕರಿಸಿ ಕೊಂಡಿರಿ ಗುರುವರಾ!
ಹರಿಸಿ ಚಿಂತೆಯ, ಹರಿಸಿ ಕಾವಿರಿ
ನಿಮ್ಮ ಬಳಿಗೈತರುವರಾ!
ಧನ್ಯನಾ ಸನ್ಯಾಸ್ಯ ಸದ್ಗುರು
ಇಂದು ತಮ್ಮಡಿ ಕಂಡೆನು!
ಮತಿಯ ನೀಯುವ ಯತಿವರರ
ಉನ್ನತಿಯನೀದಿನ ಕಂಡೆನು!
ಇನ್ನು ಜೀವನದರಕೆ ತುಂಬಿತು
ಬಿದ್ದೆನೋ ನಿಮ್ಮಡಿಯಲಿ!
ನಿಮ್ಮ ಪಾದದ ಧೂಳಿ ಬೀಳಲಿ
ಬಾಗಿದೆನ್ನೀ ಮುಡಿಯಲಿ!
ಬಾಳ ಬಾನಲಿ ಬೀಡು ಬಿಟ್ಟಿಹ!
ಕಾಳ ಮೋಡವು ಹರಿಯಲಿ!
ಕರುಣಿಸೈ ಓ ಜ್ಞಾನ ಸೂರ್ಯ
ಮನಸು ನಿಲ್ಲಲಿ ಅರಿಯಲಿ!
ರಾಘವೇಂದ್ರ ಮಹಾಗುರೂ ತುಂಗಾ
ನದೀ ತಟವಾಸಿಯೆ
ನಮಿಪೆನಿಗೊ ಸದ್ಭಕ್ತ ಹೃತ್ಕಾಸಾರ
ಕಮಲ ನಿವಾಸಿಯೆ!
ಕಣ್ಣು ಮೈಮನದಿಂಬು ತುಂಬುವ
ದಿವ್ಯ ಮಂಗಳ ವೇಷಿಯೆ
ಇದೊ! ನಮೋನಮೊ, ರಾಘವೇಂದ್ರ
ಯತೀಂದ್ರ ತೇಜೋ ರಾಶಿಯೆ..!

—'ತ್ರಿಮೂರ್ತಿ.'

(ಮೂರನೇ ಪುಟದಿಂದ)

ಹಾಕ ಬೇಕಾದುದು ದುರ್ದೈವೆನ್ನಬೇಕು. ಕೇರಳದಲ್ಲಿ ಶ್ರೀ ನಂಬೂದಿರಿಪಾದರ ಸಚಿವ ಸಂಪುಟ ಅಧಿಕಾರ ಸ್ವೀಕರಿಸಿದ ದಿನವೂ ಇದೇ ತಂದ ಗೊಂದಲ ತುಸು ನಡೆದಿತ್ತು—ಇದರ ಅರ್ಥವೇನು? ಶಾಂತಿ—ಸುವ್ಯವಸ್ಥೆಗಳು ಕೈಮೀರಿ ಕೆಟ್ಟಾಗ ಸರಕಾರ ಉಗ್ರಕ್ರಮ ಕೈಗೊಳ್ಳಲೇ ಬೇಕಾಗುತ್ತದೆ. ಸರಕಾರ ಕಾಂಗ್ರೆಸ್ಸಿನದ್ದಿರಲಿ, ಯಾರದೋ ಇರಲಿ— ಇದು ಕೊನೆಯ ಸಾಧನವೇ?

ಎಚ್ಚರಿಕೆಯ ವಿಚಾರಗಳಲ್ಲ ಕಡೇ ಭಾವನ ಹಿತಕರ. ಪ್ರಿಯ ವಿಚಾರಗಳಲ್ಲ ಮೊದಲ ಭಾವನೆ ಸುಖಕರ.

1966ನೇ ದಶಂಬರ 31ರಲ್ಲಿದ್ದಂತೆ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಭಂಡವಾಳ ಮತ್ತು ಹೊಣೆಗಾರಿಕೆಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು	ಆಸ್ತಿ ಮತ್ತು ಮೂಲಗಳು (ರೂಪಾಯಿಗೆ ಸಮೀಪಗತವಾಗಿ)	ರೂಪಾಯಿಗಳು
1. ತೆತ್ತ ಭಂಡವಾಳ	1,00,54,817	1. ನಗದು	5,06,19,678
2. ಕಾದಿಟ್ಟ ನಿಧಿ ಮತ್ತು ಇತರ ನಿರ್ದಿಷ್ಟ ನಿಧಿಗಳು	1,33,84,724	2. ಇತರ ಬ್ಯಾಂಕುಗಳಲ್ಲಿ ಶಿಲ್ಕು	1,35,78,502
3. ಠೇವಣಿ ಮತ್ತು ಇತರ ಖಾತೆಗಳು	74,02,51,654	3. ವಿನಿಯೋಗಗಳು ಮೂಲಬೆಲೆಯಲ್ಲಿ	26,13,37,277
4. ಇತರ ಬ್ಯಾಂಕಿಂಗ್ ಕಂಪೆನಿಗಳು,ಏಜಂಟ್ಸ್ ಇತ್ಯಾದಿಯವರಿಂದ ಪಡೆದ ಸಾಲಗಳು	3,18,92,289	4. ಸಾಲಗಳು	47,91,15,620
		5. ಸಂಗ್ರಹಿಸಬೇಕಾದ ಬಿಲ್ಲುಗಳು	5,41,85,702
5. ಪಾವತಿಯಾಗಬೇಕಾದ ಬಿಲ್‌ಗಳು	73,56,396	6. ಎಸೆಪ್ಟೆನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಹೊಣೆಗಾರಿಕೆಗಳು	5,76,54,633
6. ಸಂಗ್ರಹಿಸಲು ಸಂಗ್ರಹಿಸಿದ ಬಿಲ್‌ಗಳು	5,41,85,702	7. ಕಟ್ಟಡಗಳು(ಮೂಲಬೆಲೆಯಲ್ಲಿ)	59,68,500
7. ಇತರ ಹೊಣೆಗಾರಿಕೆಗಳು	3,71,78,932	8. ಫರ್ನಿಚರ್, ಫಿಟ್ಟಿಂಗ್ಸ್ ಇತ್ಯಾದಿ	46,63,000
8. ಎಸೆಪ್ಟೆನ್ಸಸ್, ಎಂಡೋರ್ಸ್‌ಮೆಂಟ್ಸ್ ಮತ್ತಿತರ ಜವಾಬ್ದಾರಿಗಳು	5,76,54,633	9. ಇತರ ಮೂಲಗಳು	2,46,45,735
		10. ಬ್ಯಾಂಕೇತರ ಮೂಲಗಳು	1,90,500
	95,19,59,147		95,19,59,147

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

...........ವಿಶ್ವದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ...........

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 472/1966

ಸುಲೋಚನ ಬಾಯಿ— ವಾದಿಳು

ಮತ್ತು

ನಾವಲ ಮ್ಯೊಲಿ, ಸಿದ್ದು ಮ್ಯೊಲಿ ಮಗ, ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಕಲಂಚಿಮಾರಲ್ಲಿರುವವ, Post Nitte

—ಪ್ರತಿವಾದಿ

ಇವರೊಳಗೆ

ಈ ಮೊಕದ್ದಮೆ ಸದ್ರಿ ಪ್ರತಿವಾದಿಗೆ ತಿಳಿಸುವದೇನಂದರೆ

ವಾದಿಳು ನಿಂಮ ಮೇಲೆ ಮಾಡಿದ ಮೋಲಿನ ದಾವೆ [illegible] ಬಗ್ಗೆ ತಾರೀಕು 7—6—1967ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10.30 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ಉಪಸ್ಥಿತರಿರತಕ್ಕದ್ದು. ತಪ್ಪಿದಲ್ಲಿ ನಿಂಮನ್ನು ಗೈರು ಮಾಡಿ ಮೇಲಿನ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court.

N. M. Adyanthaya

Advocate for Plaintiff

Karkala 1—4—1967.

ಮನೆಗೆ ಬಂದ ಮಾಧವ

(ಎರಡನೇ ಪುಟದಿಂದ)

ಮಾಡಿ ಪುಡಿ ಕಾಸು ಉಳಿದರೆ ತನ್ನ ತಂಗಿಯೆಂದು ಮಮತೆಯಿಂದ ಯಶೋಧರೆಗೆ ತಿಂಡಿ ತಂದುಕೊಡುತ್ತಿದ್ದನು. ಈ ರೀತಿ ಏಕೆ ಖರ್ಚು ಮಾಡುತ್ತೀ? ಒಂದೆರಡು ಕಾಸು ಕೂಡಿಡಬಾರದೆ? ಎಂದು ವಸಂತಮ್ಮ ಹೇಳಿದರೆ ನನಗೇತಕ್ಕೆ ತಾಯಿ ಕಾಸು? ಎಂದು ನಗುತ್ತಾ ಹೇಳಿಬಿಡುವನು. ಈಗ ಅವನು ಒಳ್ಳೆಯ ಒಬ್ಬ ನಾಗರಿಕನಂತಿದ್ದನು; ಅವನಲ್ಲಿದ್ದ ಕೇವಲ ಒಂದು ದೋಷವೆಂದರೆ ನಿರಕ್ಷರತೆ. ಆದರೆ ಈ ಕೊರತೆಯನ್ನು ಸಹ ಅವನು ನಿವಾರಿಸಿಕೊಂಡಿದ್ದನು. ಯಶೋಧರೆಯೇ ಅವನಿಗೆ ಸ್ವಲ್ಪ-ಸ್ವಲ್ಪವಾಗಿ ಓದುಬರಹ ಕಲಿಸುತ್ತಾ ಬಂದಿದ್ದಳು. ಈಗ ಅವನು ವರ್ತಮಾನ ಪತ್ರಿಕೆ ಸರಾಗವಾಗಿ ಓದುತಿದ್ದಾನೆ. ಬೆಳಗ್ಗೆ ಎದ್ದ ಕೂಡಲೇ ಯಶೋಧರೆಯನ್ನು ಕಂಡು "ಗುಡ್ಮಾರ್ನಿಂಗ್ ತಂಗಿ!" ಎಂದು ಹೇಳಿ ಎಲ್ಲರನ್ನೂ ನಗಿಸುತಿದ್ದನು.

ಇಷ್ಟು ದೊಡ್ಡವನಾದರೂ ಕೂಡಾ ದನದ ಹೆದರಿಕೆ ಹೋಗಲೇ ಇಲ್ಲ; ಅವನ ತಂದೆ, ತಾಯಿ ಅಕ್ಕ ತಂಗಿಯರ ಮಾತೆತ್ತಿದ ಕೂಡಲೇ ಅವನ ಮುಖ ಬಾಡಿದ ಹೂ ಬಳ್ಳಿಯಂತಾಗುತ್ತಿತ್ತು. 'ಅಮ್ಮಾ ಇದೇ ನನ್ನ ಮನೆ! ನೀವೇ ನನ್ನ ತಾಯಿ' ಯಶೋಧರೆಯೇ ನನ್ನ ತಂಗಿ' ಎಂದು ತಲೆ ಬಗ್ಗಿಸಿ ಹೇಳುತ್ತಾ ಮನೆಯೊಳಗೆ ಹೊರಟು ಹೋಗುತ್ತಿದ್ದನು.

ಮಾಧವನು ತುಂಬಿದ ಯೌವನಕ್ಕೆ ಕಾಲಿಟ್ಟಿರುತ್ತಾನೆ. ಈಗ ಅವನು ಹಳ್ಳಿಯ ಕುಂಟು ಪದಗಳನ್ನ ಬಿಟ್ಟು ಪೇಟೆಯ ಉತ್ತಮವಾದ ಸಿನೇಮಾ ಹಾಡುಗಳನ್ನು ಮಾಧುರವಾಗಿ ಹಾಡುತ್ತಿರುವನು. ಒಂದು ವರ್ಷದಿಂದೀಚೆಗೆ ತನ್ನ ಖರ್ಚಿನಲ್ಲಿ ಹೆಚ್ಚಿನಂಶವನ್ನೂ ಕಡಿಮೆ ಮಾಡಿ ಹಣ ಸಂಗ್ರಹ ಮಾಡತೊಡಗಿದ್ದನು. ಒಂದು ದಿನ ವಸಂತಮ್ಮ ಕರೆದು 'ಮಾಧು! ಈಗ ನೀನು ಹಣ ಜಮೆಮಾಡಲಿಕ್ಕೆ ಅಭ್ಯಾಸ ಮಾಡಿದ್ದು ಒಳ್ಳೆಯದಾಯಿತು. ಮನೆಗೆ ಕಳುಹಿಸುತ್ತೀಯಾ?' ಎಂದು ಕೇಳಿದರು. 'ಮನೆಗೆ ಕಳುಹಿಸುವುದಿಲ್ಲ. ಮನೆಗಾಗಿ ಜಮೆಮಾಡುತ್ತೇನೆ'ಂದು ಹೇಳಿ ನಾಚಿಕೆಯಿಂದ ತಲೆ ಬಗ್ಗಿಸಿ ಒಳಕ್ಕೆ ಹೋದ ವಸಂತಮ್ಮನಿಗೆ ಅವನ ಮನದ ಇಂಗಿತ ಅರ್ಥವಾಗದೆ ಇರಲಿಲ್ಲ. ಅವರಲ್ಲಿ ಒಂದು ವಿಧದ ಆತ್ಮತೃಪ್ತಿ ಉಂಟಾಗಿತ್ತು. ಒಬ್ಬ ಹಳ್ಳಿಯ ಅನಾಗರಿಕ ಬಡ ಬಾಲಕನನ್ನು ಮಾನವತೆಯ ಉತ್ತಮ ಸ್ಥಾನಕ್ಕೆ ತಂದುಕೊಂಡನೆಂಬ ಸಂತೋಷದಿಂದ ಹಿರಿ ಹಿಗ್ಗುತಿದ್ದರವರು. ಮಾಧು ವಸಂತಮ್ಮನಿಗೆ ಉತ್ತರಕೊಟ್ಟು ಹೊರಗೆ ಬರುವಾಗ ಅಂಗಳದಲ್ಲಿ ಒಬ್ಬ ಆಗಂತುಕ ವ್ಯಕ್ತಿ ನಿಂತಿರುವುದನ್ನು ಕಂಡಾಕ್ಷಣ ಮಾಧವನು ಧಡಲ್ಲನೆ ಜಗಲಿ ಮೇಲೆ ಬಿದ್ದು ಮೂರ್ಛೆ ಹೋದನು. ವಸಂತಮ್ಮ ಭಯದಿಂದ ಓಡಿಬಂದು, "ಮಗೂ ಮಾಧೂ! ಏನಾಯಿತಪ್ಪಾ" ಎಂದು ಅವನ ತಲೆಯನ್ನೆತ್ತಿ ಹಿಡಿದು ಕುಳಿತುಕೊಂಡು ಮುಖಕ್ಕೆ ನೀರು ಚಿಮುಕಿಸಿದರು. ಅಷ್ಟರೊಳಗೆ ಆ ವ್ಯಕ್ತಿ ಓಡಿಬಂದು ಮಾಧವನನ್ನು ಎತ್ತಿ ತೊಡೆಯ ಮೇಲೇರಿಸಿ "ಅಯ್ಯೋ ನನ್ನ ಕಂದಾ! ಏಕೋ ಬಿದ್ದುಬಿಟ್ಟೆ! ಯಾಕೆ ಮಗು ನೀನು ಮನೆ ಬಿಟ್ಟು ಓಡಿ ಬಂದೆ? ನಮ್ಮನ್ನೇಕೆ ಕಂದಾ ಈ ತನಕ ದುಃಖದಲ್ಲಿ ದೂಡಿದೆ?" ಎಂದೆಲ್ಲಾ ಹೇಳುತ್ತಾ, ಧಾರಾಕಾರವಾಗಿ ಕಂಬನಿ ಸುರಿಸತೊಡಗಿದನು. ಮಾಧವನು ಎಚ್ಚತ್ತು ಬಂದ ವ್ಯಕ್ತಿಯನ್ನೂ ಬಿಗಿದಪ್ಪಿ ಅಪ್ಪಾ ನನ್ನನ್ನೂ ಕ್ಷಮಿಸಪ್ಪಾ! ನನಗೆ ಹೊಡೆಯಬೇಡಪ್ಪಾ! ಗುಡ್ಡವೇ ಆಕಸ್ಮಾತ್ ಕುಸಿದು ಬಿದ್ದು ನಮ್ಮ ದನಕರುಗಳೆಲ್ಲವೂ ಸತ್ತು ಹೋದವಪ್ಪಾ! ನಾನೇನೂ ದೂಡಿಹಾಕಿದ್ದಲ್ಲ; ಅಥವಾ ಉದಾಸೀನ ಮಾಡಿದ್ದಲ್ಲ; ನೋಡುತ್ತಿದ್ದಂತೆ ಗುಡ್ಡದ ತುದಿಯೇ ಒಂದೇ ಸಲ ಜರಿದು ಬಿದ್ದು ಅವೆಲ್ಲವೂ ಕೂಡಲೇ ಅದರಡಿಯಲ್ಲಿ ಸತ್ತು ಹೋದವು. ಅವುಗಳನ್ನು ಕಳಕೊಂಡು ಮನೆಗೆ ಬಂದರೆ ನಿನ್ನ ಪೆಟ್ಟಿನ ಭಯಸಹಿಸಲಾರದೆ ನಾನು ಅಲ್ಲಿಂದಲೇ ಇಲ್ಲಿಗೆ ಓಡಿಬಂದೆನು."

"ಈ ತಾಯಿ ನನಗೆ ಆಸರೆ ಕೊಟ್ಟರು. ಇಷ್ಟು ದೊಡ್ಡವನಾಗಿ ಬೆಳೆಸಿದರು. ಹುಟ್ಟು ತಂಗಿ ಯಶೋಧರೆ ನನಗೆ ಬರಹ ಕಲಿಸಿದಳು. ನೋಡಪ್ಪಾ! ಅಲ್ಲಿ ನಿಂತು ನೋಡುತಿದ್ದಾಳೆ ನನ್ನ ಪ್ರೀತಿಯ ಚಿನ್ನ ಯಶೋಧರಾ!" ಎಂದೆಲ್ಲಾ ಸಂಭಾಷಣೆಗಳನ್ನು ಕೇಳಿದ ವಸಂತಮ್ಮನಿಗೆ "ಮನೆಗೆ ಬಂದ ಮಾಧವ" ದನದ ಬಳಿಗೆ ಹೋಗಲು ಏಕೆ ಹೆದರುತ್ತಿದ್ದನು? ಅಕಸ್ಮಾತ್ತಾಗಿ ತಮ್ಮಲ್ಲಿಗೆ ನೌಕರನಾಗಿ ಏಕೆ ಬಂದನು? ಎಲ್ಲದರ ಅಂತರಾಳದ ಅರಿವಾಯಿತು. ತಂದೆ-ಮಗನ ಪ್ರೇಮಪಾಶವನ್ನು ಕಡಿದೊಗೆಯುವುದು ಮಹಾಪಾಪವೆಂಬುದನ್ನು ತಿಳಿದ ವಸಂತಮ್ಮ "ಮನೆಗೆ ಬಂದ ಮಾಧವನು ಮನೆಗೆ ಹೋಗು"ವಂತೆ ಮನತುಂಬಾ ಆಶೀರ್ವದಿಸಿ ನೂರು ರೂಪಾಯಿ ನೋಟೊಂದನ್ನು ಅವನ ಕೈಗಿಟ್ಟು "ಮಾಧು ಇದು ನಿನ್ನ ಕಲ್ಪನೆಯಲ್ಲಿರುವ ಮನೆ"ಗಾಗಿ ಎಂದು ನಗುತ್ತಾ ಕಳುಹಿಸಿ ಕೊಟ್ಟರು. ಯಶೋಧರೆ ಅಗಲುವ ತನ್ನ ಅಣ್ಣನ ಕೈಗೆ ಓಡಿ ಬಂದು ಮುದ್ದುಟ್ಟ ರಕ್ಷಾ ಬಂಧವನ್ನು ಕಟ್ಟಿ "ಅಣ್ಣಾ, ನನ್ನನ್ನು ಮರೆಯಬೇಡ! ಮನೆಗೆ ಅತ್ತಿಗೆ ಬರುವಾಗ ನನಗೆ ತಿಳಿಸಣ್ಣಾ' ಎಂದು ಹೇಳಿದಾಗ ಮಾಧವನ ಕಣ್ಣುಗಳಿಂದ ನಾಲ್ಕು ಹನಿ ಮುತ್ತುಗಳುದುರಿದವು. ತನ್ನ ನಲ್ಮೆಯ ಭಗಿನಿಯ ತಲೆ ಸವರಿ "ಸುಖಿಯಾಗಿ ಬಾಳಿ ಬದುಕಿರಮ್ಮಾ ಯಶೋಧರಾ ಹೋಗಿ ಬರುತ್ತೇನೆ! ಹೋಗಿ ಬರುತ್ತೇನೆ ತಾಯಿ" ಎಂದು ವಸಂತಮ್ಮನ ಕಾಲಿಗೆ ಬಿದ್ದು ನಮಸ್ಕರಿಸಿ ಭಾರವಾದ ಮನಸ್ಸಿನಿಂದ ಹಿಂದಿರುಗಿ ನೋಡುತ್ತಾ ತಂದೆಯೊಡನೆ ಮನೆಗೆ ಹೋದ ಮಾಧವ ಘನವಂತರ ಮನೆಗೆ ಸೇರಿದವ ಘನವಂತನಾಗುತ್ತಾನೆಂಬುದು ಮಾಧವನ ತಂದೆಗೆ ಆಗ ಗೊತ್ತಾಯಿತು.

ವಿಜ್ಞಾನ ಸಾಧನೆ

ಸೋವಿಯೆತ್ ತಜ್ಞರ ಶೋಧನೆ

ಮಕ್ಕಳ ವಾಗ್ದೋಷ ನಿವಾರಣೆ

ಮಕ್ಕಳು ಉಗ್ಗುತ್ತಿದ್ದರೆ ಅಥವಾ ಅವರು ಮಾತನಾಡುವುದರಲ್ಲಿ ಮತ್ತೇನಾದರೂ ತೊಂದರೆ ಇದ್ದರೆ, ಸ್ವತಃ ಅವರಿಗೂ ಮತ್ತು ಅವರ ಸಂಬಂಧಿಗಳಿಗೂ ಚಿಂತೆ ಉಂಟಾಗುತ್ತದೆ. ಈ ದೋಷಗಳಿಂದ ಅವರ ಭಾವೀ ವಿಕಾಸದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಆದುದರಿಂದ ಈ ದೋಷಗಳನ್ನು ಬಾಲ್ಯದಲ್ಲಿಯೇ ದೂರ ಮಾಡುವುದು ಅವಶ್ಯಕ.

ಇದಕ್ಕಾಗಿ ಪ್ರಾಥಮಿಕ ಶಾಲಾಧ್ಯಾಪಕರಿಗೆ ವಿಶೇಷ ಶಿಕ್ಷಣವನ್ನು ನೀಡಬೇಕು. ಸೋವಿಯೆತ್ ಒಕ್ಕೂಟದಲ್ಲಿ ಅಧ್ಯಾಪಕರ ಪ್ರಶಿಕ್ಷಣ ಕೇಂದ್ರಗಳಲ್ಲಿ ಈ ವಿಷಯಕ್ಕೆ ವಿಶೇಷ ಗಮನವನ್ನು ನೀಡಲಾಗುತ್ತದೆ.

ಉದಾಹರಣೆಗೆ ಹೇಳುವುದಾದರೆ ಲಾತ್ವಿಯದ ಲಿಪಾಜಾ ನಗರದಲ್ಲಿರುವ ಶಿಕ್ಷಣ ಪ್ರಶಿಕ್ಷಣ ಸಂಸ್ಥೆಯ ಒಂದು ವಿಭಾಗದಲ್ಲಿ ಪ್ರಾಥಮಿಕ ಶಾಲಾಧ್ಯಾಪಕರಿಗೆ ಮಕ್ಕಳ ವಾಗ್ದೋಷ ನಿವಾರಣೆಯ ಪ್ರಶಿಕ್ಷಣವನ್ನು ನೀಡಲಾಗುತ್ತದೆ. ಸೈದ್ಧಾಂತಿಕ ವಿಷಯಗಳನ್ನು ತಿಳಿಸುವುದು ಮಾತ್ರವಷ್ಟೇ ಅಲ್ಲದೆ, ಅವರಿಗೆ ಪ್ರಾಯೋಗಿಕ ಪ್ರಶಿಕ್ಷಣವನ್ನು ನೀಡುವ ವ್ಯವಸ್ಥೆಯೂ ಇದೆ. ಅವರಿಗೆ ಸ್ವರ ರಚನೆಯ ಪ್ರಕ್ರಿಯೆಯನ್ನೂ, ಶುದ್ಧ ಉಚ್ಚಾರಣೆಯ ಉಲ್ಲಂಘನೆಯ ಕಾರಣವನ್ನೂ ಸಹ ತಿಳಿಸಿಕೊಡಲಾಗುತ್ತದೆ.

ಈ ಪ್ರಶಿಕ್ಷಣ ಕೇಂದ್ರದಲ್ಲಿ ವಿಶೇಷ ಪ್ರಯೋಗ ಶಾಲೆಗಳಿವೆ. ಅವುಗಳಲ್ಲಿ ಅನೇಕ ಬಗೆಯ ಯಂತ್ರಗಳ ಸಹಾಯದಿಂದ ಭಾಷಣ ಪದ್ಧತಿಯನ್ನು ವಿವರಿಸಲಾಗುತ್ತದೆ. ಸ್ವದೇಶದ ಮತ್ತು ವಿದೇಶಗಳ ಭಾಷೆಗಳಿಗೆ ಸಂಬಂಧಿಸಿದ ಧ್ವನಿ ಶಾಸ್ತ್ರದ ಜ್ಞಾನವನ್ನು ಕೂಡ ಇಲ್ಲಿ ನೀಡಲಾಗುತ್ತದೆ.

ಪ್ರಶಿಕ್ಷಣ ಕಾಲದಲ್ಲಿ ಈ ಭಾವೀ ಅಧ್ಯಾಪಕರು ತಮ್ಮ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ವಾರ್ಷಿಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾಗುತ್ತದೆ. ಉಗ್ಗುವ ಮಕ್ಕಳ ಮನೋವಿಜ್ಞಾನದ ಮೇಲೆ ವಾಗ್ದೋಷದ ನಿವಾರಣೆಯ ತರುವಾಯ ಉಂಟಾಗುವ ಸತ್ಪರಿಣಾಮಗಳು, ಚಾರಿತ್ರ್ಯಪರಿವರ್ತನೆಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಅನುಭವಗಳನ್ನು ಅವರು ಪಡೆಯುತ್ತಾರೆ.

ಈ ಶಿಕ್ಷಣ ಪ್ರಶಿಕ್ಷಣ ಸಂಸ್ಥೆಯಲ್ಲಿ ಭಾಷಣ ಮತ್ತು ಶ್ರವಣಸಂಬಂಧವಾದ ಅಂಗಗಳ ಕ್ರಿಯಾಕಲಾಪಗಳ ವೈಜ್ಞಾನಿಕ ಪರಿಚಯವನ್ನು ಭಾವೀ ಅಧ್ಯಾಪಕರಿಗೆ ಮಾಡಿಕೊಡುವ ತಜ್ಞರ ವೃಂದವೂ ಇರುತ್ತದೆ.

ಕಳೆದ ೪೦ ವರ್ಷಗಳಲ್ಲಿ ಈ ಸಂಸ್ಥೆಯು ಅನೇಕ ಜನ ಅಧ್ಯಾಪಕರಿಗೆ ವಾಗ್ದೋಷ ನಿವಾರಣೆ ಬಗ್ಗೆ ಪ್ರಶಿಕ್ಷಣವನ್ನು ನೀಡಿದೆ. ಅವರೆಲ್ಲರೂ ಈಗ ಲಾತ್ವಿಯ ಮತ್ತು ಇತರ ಗಣರಾಜ್ಯಗಳಲ್ಲಿ ಸಫಲ ಶಿಕ್ಷಣ ಕಾರ್ಯದಲ್ಲಿ ನಿರತರಾಗಿದ್ದಾರೆ.

RANGE OF PRODUCTS **RANGE OF PRODUCTS**

Squashes, Crushes, Syrups, Biccola & Brinda (Special Syrups) Pickles, Tomato Ketchup, Sweets & Toffees.



Canned Pineapple & Mango Slices Mango Pulp Pineapple Juice Tomato Juice, Fruit Cocktail, Jams, Ginger, Preserve (a delicious desert relieves indigestion and gastric trouble)

Sales Depot: **Bhavanthi Street, Mangalore-I.** PHONE: 3266

NAVAYUGA 6—4—1967
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿವೇಚನೆ

ಶಿಕ್ಷಣದಲ್ಲಿ ಶಿಶುಸಾಹಿತ್ಯ

ಬರೆದವರು ಶ್ರೀ ಮ. ಗೋ. ರಾವ್.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ನಾಣ್ಣುಡಿಯನ್ನು ಯಾರು ಬಲ್ಲವರಿಲ್ಲ? ಸಮಾಜದ ಮುಂದಿನ ಜನಾಂಗವೆಂದೆನಿಸಿದ ಇಂದಿನ ಮಕ್ಕಳ ಸ್ಥಾನ, ಗಣನೀಯ ಸ್ಥಾನ. ಸಾಹಿತ್ಯವು ಸಮಾಜದ ಪ್ರತಿಬಿಂಬವಾದ ಸಾಹಿತ್ಯದಲ್ಲಿ ಶಿಶುಸಾಹಿತ್ಯಕ್ಕೂ ಗಣ್ಯಸ್ಥಾನವಿರಬೇಕಾದುದು ಆಗತ್ಯ ಮಾತ್ರವಲ್ಲದೆ ಅನಿವಾರ್ಯವೂ ಆಗಿದೆ. ಆದರೆ ನಮ್ಮ ಕರ್ನಾಟಕದಲ್ಲಿ ಶಿಶು ಸಾಹಿತ್ಯದ ಬೆಳವಣಿಗೆ, ಅದರ ಪೂರ್ಣತೆ ಪ್ರಗತಿ ಆಗಿಲ್ಲವೆಂಬ ಮಾತನ್ನು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಈ ಪರಿಸ್ಥಿತಿಗೆ ಮೂಲ ಪ್ರಬಲ ಕಾರಣ ಜನತೆಯ ಪ್ರೋತ್ಸಾಹದ ಅಭಾವ. ಯಾವ ಸಾಹಿತ್ಯವು ಬೆಳಗಬೇಕೋ ಅದಕ್ಕೆ ಸಾಕಷ್ಟು ಜನರ ಪ್ರೋತ್ಸಾಹ, ಮುಖ್ಯವಾಗಿ ಸಾಹಿತ್ಯದ ಮೇಲೆ ಅಭಿಮಾನ ಅತ್ಯಾವಶ್ಯಕ. ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳ ಹೊತ್ತಿಗೆ ಎಂದೊಡನೆ ಮೂಗು ಮುರಿಯುವವರೇ ಬಹಳ ಮಂದಿ.

ನಮ್ಮ ಭವ್ಯನಾಡಿನಲ್ಲಿಂದು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಜನಸಂಖ್ಯೆಯು ಹತ್ತೋಟಿ ಮೀರಿದೆ, ಆಹಾರದ ಅಭಾವವು ಎಲ್ಲೆ ಮೀರಿದೆ. ಇಂತಹ ಹದಗೆಟ್ಟ ಪರಿಸ್ಥಿತಿಯಲ್ಲೂ ಎದೆಗಾರಿಕೆ ತಂದುಕೊಂಡು ಪ್ರಕಾಶನ ಕಾರ್ಯಕ್ಕೆ ಮುಂದಾದರೆ ಕೈ ಸುಟ್ಟುಕೊಂಡು ಹಿಂದಿರುಗುವ ಹತಭಾಗ್ಯ ಲೇಖಕರೇ ಬಹಳಷ್ಟು ಮಂದಿ. ಹೀಗಾಗಿ ಶಿಶು ಸಾಹಿತ್ಯವು ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ಹೊರತು ಸರ್ವಾಂಗ ಸುಂದರವಾಗಿ ಬೆಳೆದು ಬಂದಿಲ್ಲ.

ಹೊಸತಾಗಿ ಓದು ಬರಹ ಕಲಿತ ಕಿರಿ ಮಕ್ಕಳಿಗೆ ಬಗ್ಗುವ ಸರಳ, ಸುರಸ ಶೈಲಿಯಲ್ಲಿ, ಮನೋರಂಜಕ ಚಿತ್ರಗಳಿಂದೂಡಗೂಡಿದ ಚಿತ್ತಾಕರ್ಷಕವಾದ ಕತೆಗಳ, ಕವನಗಳ ಹೊತ್ತಿಗೆಗಳನ್ನು ತುಂಬು ಮನಸ್ಸಿನಿಂದ ಆಹ್ವಾನಿಸಿ ತನ್ಮೂಲಕ ಮಕ್ಕಳ ಜ್ಞಾನಾಭಿವೃದ್ಧಿಗೊಳಿಸುವುದು ನಮ್ಮ ಕರ್ತವ್ಯ.



ದೇಶ ಪರದೇಶಗಳ ಉತ್ತಮ ಪುರಾಣಕತೆಗಳನ್ನು ಮಹಾಪುರುಷರ ಜೀವನ ಚರಿತೆಗಳನ್ನು ಆಯ್ದು ಶ್ರೇಷ್ಠ ಗುಣಗಳನ್ನು ಆದರ್ಶ ಜೀವನದ ಗುರಿಯನ್ನು ಮನ ಮುಟ್ಟುವಂತೆ ನಿರೂಪಿಸಿದರೆ ಅದೇ ನಾಳಿನ ಜನಾಂಗದ ಭದ್ರತೆಯುಂಟಾಗಲಿಲ್ಲವೇ?

ನಮ್ಮ ಭರತವರ್ಷದ ಉಪನಿಷತ್ತುಗಳು ಪ್ರಪಂಚದ ತತ್ವಶಾಸ್ತ್ರದ ಗ್ರಂಥಗಳಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿವೆ. ಅವು ಭಾರತೀಯರ ಜ್ಞಾನ ಕೋಶದ ಸಾರಸರ್ವಸ್ವವಾಗಿದ್ದು ನಮ್ಮ ಆಧ್ಯಾತ್ಮಿಕ ಸಂಸ್ಕೃತಿಯ ಬೆಳಕನ್ನು ಪ್ರಪಂಚಕ್ಕೆ ಬೀರಿದ.

ಉಪನಿಷತ್ತುಗಳೆಂದರೆ ಹಿಂದಿನ ಕಾಲದ ಶಿಕ್ಷಣ ಕೇಂದ್ರಗಳಾದ ಋಷಿಗಳ ಗುರುಕುಲದಲ್ಲಿ ಗುರುವು ತನ್ನ ಶಿಷ್ಯರಿಗೆ ಬೋಧಿಸಿದ ಆತ್ಮಜ್ಞಾನದ, ಬ್ರಹ್ಮದರ್ಶನದ ತತ್ವವಿಚಾರದ ಸಂಗ್ರಹವಾಗಿದೆ.

ಉಪನಿಷತ್ತುಗಳಲ್ಲಿ ಕೇನ, ಕಠ, ಈಶಾವಾಸ್ಯ, ಪ್ರಶ್ನ, ಮುಂಡಕ—ಮಾಂಡೂಕ್ಯ, ತೈತ್ತರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕಗಳೆಂಬ ದಶೋಪನಿಷತ್ತುಗಳಿಗೆ ಅದ್ವೈತ ಮತಸ್ಥಾಪಕಾಚಾರ್ಯರಾದ ಶ್ರೀ ಶಂಕರಾಚಾರ್ಯರೂ, ದ್ವೈತ ಮತ ಸ್ಥಾಪನಾಚಾರ್ಯರಾದ ಶ್ರೀ ಮಧ್ವಾಚಾರ್ಯರೂ ಈ ಹತ್ತು ಬಾಷ್ಯಗಳೆಂಬ ವಿಸ್ತಾರವಾದ ವಿವರಣೆ ಬರೆದಿರುವರು.

ಉಪನಿಷತ್ತುಗಳಲ್ಲಿ ಕೆಲವು ಪ್ರೌಢ ವಿಚಾರಗಳನ್ನು ಸುಂದರವಾದ ಸಣ್ಣ ಕತೆಗಳ, ದೃಷ್ಟಾಂತಗಳ ರೂಪದಲ್ಲಿ ವಿವರಿಸಿ ಬರೆದಿರುತ್ತಾರೆ. ಉಪನಿಷತ್ತಿನ ವಿಚಾರಗಳನ್ನು ಸಾಮಾನ್ಯ ರೀತಿಯಿಂದ ಸುಲಭವಾಗಿ ತಿಳಿಯಬಹುದಾದಂತಹ ಶಿಶುಸಾಹಿತ್ಯದ ಹೊತ್ತಿಗೆಗಳನ್ನು ಆಯ್ದು ಅಂತಹ ವಿಷಯಗಳನ್ನು ಮಕ್ಕಳಿಗೆ ಮನದಟ್ಟು ಮಾಡಿಸಿದರೆ ಆ ವಿಚಾರಗಳ ಕಡೆಗೆ ಮಕ್ಕಳ ಮನಸ್ಸು ಸೆಳೆಯಲ್ಪಡುವುದರಲ್ಲಿ ಸಂದೇಹವಿಲ್ಲ.

ಶಾಲಾ ವಿಷಯಗಳಿಗಿಂತ ಇತ್ತೀಚೆಗಂತೂ ಮಕ್ಕಳ ಮನಸ್ಸು ರಾಜಕೀಯ ವಿಷಯದ ಕಡೆಗೆ ಓಲುತ್ತಿರುವುದು ಸಾಮಾನ್ಯವಾಗಿ ಎಲ್ಲೆಲ್ಲಿಯೂ ಕಂಡು ಬರುವುದು. ಮಕ್ಕಳು ರಾಜಕೀಯ ವಿಷಯಗಳ ಅಧ್ಯಯನ ಮಾಡಲಿ, ಆದರೆ ರಾಜಕೀಯ ಪಕ್ಷಗಳಲ್ಲಿ ವಿಲೀನರಾಗಿ ಅದರಲ್ಲೇ ತಲ್ಲೀನರಾಗಿ ಶಾಲಾ ಜೀವನವನ್ನು ಮರೆತು ತಾನು ಯಾವ ಉದ್ದೇಶದಿಂದ ತೊಡಗಿರುವೆನೋ ಅದನ್ನೂ ಬದಿಗಿರಿಸಿ ಗಾಂಧಿ, ನೆಹರು ಇನ್ನಿತರ ಮಹನೀಯರು ರಾಜಕೀಯಕ್ಕಿಳಿದಂತೆ ತಾನು ವಿದ್ಯಾಭ್ಯಾಸ ತೊರೆದು ರಾಜಕೀಯ ರಂಗಕ್ಕಿಳಿಯುವುದು ಎನ್ನುವುದು ಬರಿ ಭ್ರಾಂತಿ ಎಂದೆನಿಸುವುದು.

ಆಸ್ತೊಂದು ಕಾಲದಲ್ಲಿ ಅಂತಹ ಪರಿಸ್ಥಿತಿಯೊದಗಿ ಬಂದಿತು. ಪುಟ್ಟ ಮಕ್ಕಳ ಅಭಿವೃದ್ಧಿ ಅಂದರೆ ಸರ್ವತೋಮುಖ ಪ್ರಗತಿಯೇ ನಾಳಿನ ಭದ್ರ ಜನಾಂಗದ ಭವ್ಯ ಬುನಾದಿಗೆ ನಾಂದಿಯಾಗುವುದು. ಶಿಶುಗಳಲ್ಲಿ ದೇಶ ಪ್ರೇಮವನ್ನು ಉತ್ಪನ್ನಗೊಳಿಸುವಂತಹ ವೀರ ಕವನಗಳನ್ನು ಹಾಡಿಸಿ ಅವುಗಳ ಅಂತರಿಕ ಪರಿವರ್ತನೆಗೆ ಶ್ರಮಿಸಬೇಕಾದುದು ಸಾಹಿತ್ಯಾಭಿಮಾನಿಗಳ, ದೇಶಪ್ರೇಮಿಗಳ ಆದ್ಯ ಕರ್ತವ್ಯವೆಂಬುದನ್ನು ಜನತೆ ಮನಗಂಡಿರುತ್ತದೆ. ಆದರೆ "ಹೇಳುವುದು ಶಾಸ್ತ್ರ, ಇಕ್ಕುವುದು ಗಾಳ" ವೆಂಬಂತಾಗಿದೆ ನಮ್ಮ ನಡವಳಿಕೆ. ಸಾಹಿತಿಗಳನ್ನು ಪ್ರೋತ್ಸಾಹಿಸಬೇಕು. ಅಭಿನಂದಿಸಬೇಕು, ಎಂಬವರೆ ಸಾಹಿತ್ಯದ ವಿಮರ್ಶೆಗೋ, ಅಥವಾ ದೂಷಣೆಗೋ ತೊಡಗುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯವನ್ನು ಕಾಣಬಹುದಾಗಿದೆ.

ಸಾಹಿತ್ಯ ಬೆಳಗಬೇಕು, ಅದರಿಂದಾಗಿ ಸಾಹಿತಿಯೂ ಕೃತಕೃತ್ಯತೆಯನ್ನು ಪಡೆಯಬೇಕು, ಸಮಾಜದ ಉದ್ಧಾರವಾಗಬೇಕು, ಅಂತ ಸಾಹಿತ್ಯವನ್ನು ಪ್ರೋತ್ಸಾಹಿಸಬೇಕು. ಅಂತಹ ನವ ಶೋಧ ಮಾಡಿದ ಸಾಹಿತಿಯನ್ನು ಗೌರವಿಸಬೇಕು. ಪ್ರಶಂಸಿಸಬೇಕು, ಅಂದೇ ನಾಗರಿಕ ಜನಾಂಗದ ಉದಯ. ಜೀವನದ ಸಾರ್ಥಕ್ಯತೆ.

ಇಂದಿನ ಸಮಾಜದಲ್ಲಿ ಶಿಶುಸಾಹಿತ್ಯಕ್ಕೆ ಶಿಶುಗಳ ಮಾತ್ರ ಪ್ರೋತ್ಸಾಹ ಕೊಡುವಂತಾಗಿದೆ. ಇದು ನಮ್ಮ ಸಾಹಿತ್ಯ ಸಾಗರಕ್ಕೊಂದು ಕುಂದು. ಸಮಾಜ ಮತ್ತು ಸಾಹಿತ್ಯ ಒಂದಕ್ಕೊಂದು ಪೂರಕವಾದುದರಿಂದ ಬಿಂಬ ಪ್ರತಿಬಿಂಬದಂತಿದ್ದುದರಿಂದ ಸಮಾಜದ ನೈಜ ಚಿತ್ರಣವನ್ನು ಸಾಹಿತ್ಯದಲ್ಲಿ ನಿರೂಪಿಸಿದರೆ ಸಾಹಿತ್ಯವು ನಿತ್ಯನೂತನವಾಗಿದ್ದು ಜನತೆಯ, ಸಮಾಜದ ಅಭಿವೃದ್ಧಿಗೆ, ಮತ್ತು ಪ್ರಗತಿಗೆ ಕಾರಣವಾಗುವುದು.

ಪ್ರಸ್ತುತ ಸಮಾಜದಲ್ಲಿ ರಾಜಕೀಯ ಪಕ್ಷಗಳ ಚದುರಂಗ ದಾಟಗಳು ನಡೆಯುತ್ತಲೇ ಇರುತ್ತವೆ. ಒಂದು ರೀತಿಯಲ್ಲಿ ಪ್ರಬಲ ಪ್ರತಿಪಕ್ಷಗಳಿದ್ದರೇನೇ ಪ್ರಗತಿ ಸಾಧ್ಯ ಎಂದು ಕೆಲವರ ಅಭಿಪ್ರಾಯ. ದೇಶದಲ್ಲಿ ಐಕ್ಯತೆ ಇದ್ದರೆ ಪಕ್ಷಗಳ ಗೊಂದಲವೇಕೆ? ನಾವೆಲ್ಲಾ ಒಂದೇ ಪಕ್ಷ. ಒಂದೇ ದೇಶದ ಒಂದೇ ಪಕ್ಷಕ್ಕೆ ಸೇರಿದ ಪ್ರಜೆ. ನಾನು ಎನ್ನುವ ಭಾವನೆ ಪ್ರತಿ ಮಾನವನ ... ತ್ತಿ ಮತ್ತೆ ಮೂಡಿ ಬಂದರೆ ನಮ್ಮ ಭಾರತಾಂಗ ಬಂಧುರ ನಾಡಾದೀತು. ಭವ್ಯತೆಯ ಬೀಡಾದೀತು. ಒಕ್ಕಟ್ಟಿನ ಗೂಡಾದೀತು.

ವಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟರಾವ್ ವಿರಚಿತ

ಮನೆ-ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 · (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

13—4—1967

೨೦
ಪೈಸೆ

ಕಥಾ ಪ್ರಪಂಚ

ಮೋಸದ ಚದುರಿತು

ಬರೆದವರು
ಶ್ರೀ ಸ. ನಾರಾಯಣ

ಸುನಂದಮ್ಮ ಪುಸ್ತಕವನ್ನು ಕೈಯಲ್ಲಿ ಹಿಡಿದಿದ್ದರೂ ಅವರ ದೃಷ್ಟಿ ಬಾಗಿಲ ಕಡೆಗೇ ಇತ್ತು. ಗೋಡೆಯ ಮೇಲಿದ್ದ ಗಡಿಯಾರ ಏಳು ಗಂಟೆ ಎಂದು ಸಾರಿತು 'ಏಳು ಗಂಟೆಯಾದರೂ ಇವಳ ಕಾಲೇಜು ಮುಗಿಯುವುದಿಲ್ಲ' ಎಂದು ಗೊಣಗಿಕೊಂಡರು ಸುನಂದಮ್ಮ.

ತಾರಾ ಬಾಗಿಲನ್ನು ತೆಗೆದುಕೊಂಡು ಒಳಕ್ಕೆ ಪ್ರವೇಶಿಸಿದಳು. ಅಂಗಳದಲ್ಲಿ ಮಲಗಿದ್ದ ಟೈಗರ್ ಒಂದೆರಡು ಬಾರಿ ಬೊಗಳಿ, ತನ್ನ ಬಾಲವನ್ನು ಆಡಿಸುತ್ತಾ ತನ್ನ ಪ್ರೀತಿಯನ್ನು ಪ್ರದರ್ಶಿಸಿತು.

'ಎಷ್ಟು ಹೊತ್ತೇ ನಿನ್ನ ಕಾಲೇಜು?'

"...............'

'ನಿನ್ನನ್ನೇ ಕಣೆ ಕೇಳ್ತಿರೋದು ಇಷ್ಟು ಹೊತ್ತು ಯಾಕಾಯ್ತು ಅಂತ"

"ಕಾಲೇಜು ಮುಗಿದದ್ದೇ ಆರು ಗಂಟೆಗೆ ಚಿಕ್ಕಮ್ಮ ... ಬಸ್ಸಿಗೆ ಕಾಯುತ್ತಾ ನಿಂತೆ. ಹೊತ್ತಾಯ್ತು...'

"ಅಯ್ಯೋ ನೀನು ರಾಜಕುಮಾರಿ__ಬಸ್ಸಿಗೆ ಕಾಯುತಿದ್ದೆ ನಿಂತೆಯೋ ಅಥವಾ ನಿನ್ನ ಶ್ರೀನಿವಾಸನಿಗೆ ಕಾಯ್ತಾ ನಿಂತಿದ್ದೆ."

"ಚಿಕ್ಕಮ್ಮ..."

"ಈ ನಾಟಕ ಎಲ್ಲ ನನ್ನ ಹತ್ತಿರ ಬೇಡ ಕಣೆ... ನೀನು ಎಲ್ಲಿ ಹೋಗ್ತೀಯಾ...ಎಲ್ಲಿ ಬರ್ತೀಯ ಅಂತ ನನಗ ಗೊತ್ತು...."

"ಮತ್ತೆ ನೀವ್ಯಾಕೆ ನನ್ನನ್ನು ಅದೇ ಪ್ರಶ್ನೆ ಕೇಳಿ ಚಿತ್ರಹಿಂಸೆ ಮಾಡುತ್ತೀರ.." ಎಂದು ಬೇಸರದಿಂದ ನುಡಿದಳು ತಾರಾ.

"ನಾಟಕಗಿಟಕವೆಲ್ಲ... ನನಗೇ ಎದುರು ಮಾತನಾಡುವಷ್ಟು ಅಹಂಕಾರವೇನೆ ನಿನಗೆ..' ಎಂದು ಸುನಂದಮ್ಮ ಮೇಜಿನ ಮೇಲಿದ್ದ ಪುಸ್ತಕವನ್ನೆತ್ತಿ ತಾರಾಳ ಮುಖಕ್ಕೆ ಎಸೆದರು ತಾರಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಪುಸ್ತಕ ಅವಳ ಮೂಗಿಗೆ ಬಡಿಯಿತು. ಅವಳ ಮೂಗಿನಿಂದ ರಕ್ತ ಸುರಿಯಲಾರಂಭಿಸಿತು. ತಾರಾ ರಕ್ತವನ್ನು ತಡೆಯಲು ಸೆರಗನ್ನು ಮೂಗಿಗೆ ಅಡ್ಡ ಹಿಡಿದಳು.

'ಈ ರೀತಿ ನನ್ನನ್ನು ಹಿಂಸಿಸುವುದಕ್ಕೆ ಬದಲಾಗಿ ಕೊಂದು ಬಿಡಿ ನಿಮಗೆ ಸಮಾಧಾನವಾಗುತ್ತದೆ' ಎಂದಳು ತಾರಾ.

'ಆ ಕಾಲವೂ ಬರುತ್ತದೆ' ಎಂದರು ಸುನಂದಮ್ಮ ತಮ್ಮ ಅಧಿಕಾರ ವಾಣಿಯಲ್ಲಿ.

○ ○ ○

ಸಂಸಾರದ ಸಮಗ್ರ ವರದಿಯನ್ನು ಒಪ್ಪಿಸಲು ಸುನಂದಮ್ಮ ಪತಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದರು. ಶೇಷಣ್ಣ ವ್ಯಾಪಾರದ ವ್ಯವಹಾರವನ್ನು ಮುಗಿಸಿಕೊಂಡು ಹಿಂದಿರುಗಿದರು

ಪ್ರೀತಿಯ ಪತ್ನಿಯ ಉಪಚಾರ, ಸವಿನುಡಿಗಳಿಂದ ಶೇಷಣ್ಣ ತೃಪ್ತರಾದರು. ಸುನಂದಮ್ಮ ಪತಿಯ ಕೈಗೆ ತಮ್ಮ ಪೆಟ್ಟಿಗೆಯಲ್ಲಿದ್ದ ಪತ್ರವನ್ನು ತೆಗೆದುಕೊಡುತ್ತ ಹೋದರು. 'ವಿಷಯವನ್ನು ಹೇಳಬೇಕೆಂದಿದ್ದೆ ನೋಡಿ ನಿಮ್ಮ ಸುನಂದ' ಎಂದರು ಶೇಷಣ್ಣ.

'ನಿಮ್ಮ ಮುದ್ದು ಮಗಳ ರಾಮಾಯಣ ನೋಡಿ ಸಂತೋಷ ಪಡಿ ...ಬೇಕಾದರೆ ಎರಡು ಲೋಟ ಬಾದಾಮಿ ಹಾಲು ಮಾಡಿಕೊಡುತ್ತೇನೆ...' ಎಂದರು ಸುನಂದಮ್ಮ.

"ಆಪಾದನೆ, ಟೀಕೆ, ದೂಷಣೆ ಇದ್ದೇ ಇರುತ್ತದೆ ಬಿಡೂ. ಈಗ ಆದದ್ದೇನು?"

'ನೀವೇನೋ ತಿಂಗಳಲ್ಲಿ ಮೂರುವಾರ ಹೊರಗಡೆಯೇ ಸುತ್ತುತ್ತಿರುತ್ತೀರಿ ನಾನು ತಾನೆ ಅವಳೊಂದಿಗೆ ಏಗೋಳು....'

"ಅಯ್ಯೋ ಪಾಪ. ಅದೇನು ಕೊಡು' ಎಂದು ಪತ್ರವನ್ನು ತೆಗೆದುಕೊಂಡು ಓದಿದರು ಶೇಷಣ್ಣ. ಎರಡು ಮೂರು ಬಾರಿ ಪತ್ರವನ್ನು ಓದಿದರು.

'ಗೊತ್ತಾಯ್ತು ತಾನೆ ಇದಕ್ಕೇ ಅವಳಿಗೆ ಕಾಲೇಜು ಓದು ಬೇಡ ಅಂದದ್ದು... ಮುದ್ದು ಮಗಳು ಕೇಳಬೇಕೆ...ನಾನು ಏನಾದರೂ ಹೇಳಿದರೆ ಇಬ್ಬರಿಗೂ ವಿರೋಧ....ನೀವು ಅವಳಿಗೆ ಹೀಗ ಸಲುಗೆ, ಸ್ವಾತಂತ್ರ್ಯ ಕೊಡಿ ಯಾವನೊಂದಿಗಾದರೂ ಓಡಿ ಹೋಗದಿದ್ದರೆ ಕೇಳಿ".

'ಸುನಂದಾ...ಈ ಮಾತನ್ನು ಇನ್ನೊಂದು ಬಾರಿ ಹೇಳಿದರೆ ಪರಿಣಾಮ ಚೆನ್ನಾಗಿರುವುದಿಲ್ಲ....ಅವಳ ಬಗ್ಗೆ ನೀನು ಏನೂ ಹೇಳಬೇಕಾದುದಿಲ್ಲ. ತಾರಾ ತಾಯಿ ಇಲ್ಲದ ಮಗಳು ಎನ್ನುವುದನ್ನು ಮರೆಯಬೇಡ....ಅವಳ ಬಗ್ಗೆ ಒಂದು ಕೆಟ್ಟ ನುಡಿ ಕೇಳಲೂ ನಾನು ಸಿದ್ಧನಿಲ್ಲ — ಎಂದು ಕೋಪದಿಂದ ನುಡಿದರು ಶೇಷಣ್ಣ ಸುನಂದಮ್ಮ ಸೆರಗನ್ನು ಕಣ್ಣಿಗ ಒತ್ತಿಕೊಳ್ಳುತ್ತಾ "ನಿಮ್ಮ ಬಗ್ಗೆ ತಾರಾ ಬಗ್ಗೆ ನನಗ ಪ್ರೀತಿ ಇಲ್ವೆ....ಯಾಕೆ ಹೀಗೆ ಕೋಪ ಮಾಡಿಕೊಳ್ಳುತ್ತೀರಿ...ಈ ಮನಗ ಕೆಟ್ಟ ಹೆಸರು ಬಂದರೆ ನನಗೆ ಸಂತೋಷವೆ? ಎಂದರು.

"ಹೋಗಲಿ ಬಿಡು ಎಲ್ಲಿಯ ಮಾತು. ತಾರಾ ಬಂದಿದ್ದಾಳೇನು?" ಎಂದರು ಶೇಷಣ್ಣ.

'ಇನ್ನೂ ಬಂದಿಲ್ಲ...ಅಂದರೆ ಕಾಗದದ ವಿಷಯ ಏನು ಹೇಳಿ....ನನಗೇಕೋ ಅನುಮಾನ."

"ಇದು ಅನಾಮಧೇಯ ಪತ್ರ ಸುನಂದ....ಅವನು ನಿಜವಾದ ಹಿತೈಷಿ ಅಭಿಮಾನಿ ಆಗಿದ್ದರೆ ಮನೆಗೆ ಬಂದು ತಿಳಿಸಬಹುದಿತ್ತು...ತಾರಾನ ಭೇಟಿ ಮಾಡಿ ನೀವು ಮಾಡುತ್ತಿರೋದು ತಪ್ಪು ಎಂದು ಹೇಳಬಹುದಿತ್ತು...ಇಂತಹ ಸಮಾಜ ಘಾತುಕರ ಸಂಖ್ಯೆ ಹೆಚ್ಚಾಗಿದೆ.... ಇಂತಹವರಿಂದ ಅನೇಕ ಸಂಸಾರಗಳು ಮಣ್ಣುಪಾಲಾಗಿವೆ ...ತಾರಾಳ ವಿಷಯದಲ್ಲಿ ನೀನು ತಲೆಕೆಡಿಸಿಕೊಳ್ಳಬೇಡ.'

"ತಾರಾ ಸುಖವಾಗಿರಲಿ ಎನ್ನುವ ಆಸೆ ಇದೆ .... ನಾನು ಏನು ಹೇಳಿದರೂ ಎಲ್ಲರಿಗೂ ಅಪಾರ್ಥ...ತಾರಾ, ನೀವು, ಸಮಾಜ ಸಹಿತ ನನ್ನನ್ನು ಮಲತಾಯಿ ಎಂದು ಕರೆಯುತ್ತದೆ. ನನ್ನ ಎದೆಯನೋವು ಯಾರಿಗೆ ಗೊತ್ತು ...ಆ ಶ್ರೀನಿವಾಸ ಯಾರು? ತಾರಾ ಅವನ ಮೋಸಕ್ಕೆ ಬಲಿಯಾದರೆ?"

'ತಾರಾ ಎಳೆಯ ಮಗುವಲ್ಲ ಸುನಂದ, ಅವಳಿಗೂ ವಿವೇಕವಿದೆ'

'ನೀವು ಅಂತಹ ಪ್ರೀತಿಗೆ ಪ್ರೋತ್ಸಾಹ ನೀಡುತ್ತೀರಾ...'

"ಆ ಹುಡುಗ ಮತ್ತು ತಾರಾ ಪರಸ್ಪರ ಒಪ್ಪಿಕೊಂಡರೆ ನನ್ನ ವಿರೋಧವಿಲ್ಲ..."

"ಜಾತಿ, ಅಂತಸ್ತು ನೋಡುವುದು ಬೇಡವೆ?'

"ಅದೆಲ್ಲ ಬೇಕು ಅನ್ನುವವರಿಗೆ.... ಹಣ, ಅಧಿಕಾರ, ಅಹಂಕಾರ ಇರುವ ಜನಕ್ಕೆ. ನನಗೆ ನನ್ನ ಮಗಳು ಸುಖವಾಗಿದ್ದರೆ ಸಾಕು, ಮತ್ತೇನೂ ಬೇಡ.'

"ಇದು ನಿಮ್ಮ ನಿರ್ಧಾರವೇನು?... ನಾನು ಇದೆಲ್ಲ ಬೇಡವೆಂದು ಹಟ ಹಿಡಿದರೆ?'

'ಈ ನನ್ನ ಆಸ್ತಿಯಲ್ಲಿ ನನ್ನ ಮಗಳಿಗೆ ಸಮ ಭಾಗವಿದೆ ಸುನಂದ" ಎಂದರು ಶೇಷಣ್ಣ.

"ಈ ಪತ್ರಕ್ಕೆ ಬೆಲೆಯೇ ಇಲ್ಲವೆ?'

'ಇದೇ ಬೆಲೆ' ಎಂದು ಪತ್ರವನ್ನು ಹರಿದು ಹಾಕಿದರು ಶೇಷಣ್ಣ.

. ಸುನಂದಮ್ಮನವರ ಮುಖ ಕೋಪದಿಂದ ಕೆಂಪಾಯಿತು.

'ಯಾವಾಗ ಬಂದೆಯಪ್ಪ" ಎನ್ನುತ್ತಲೇ ತಾರಾ ಒಳಕ್ಕೆ ಪ್ರವೇಶಿಸಿದಳು.

'ಸಂಜೆ ಬಂದೆ ತಾರಾ........ತುಂಬಾ ಹೊತ್ತಾಯ್ತಲ್ಲಮ್ಮ. ಎಂಟು ಗಂಟೆ ಸಮಯ ಮುಂಚೆ ಬಂದುಬಿಡ ಬಾರದೇನಮ್ಮ" ಎಂದು ಮಗಳ ಬಾಡಿದ ಮುಖವನ್ನೇ ನೋಡುತ್ತಾ ಹೇಳಿದರು ಶೇಷಣ್ಣ.

'ಬಸ್ಸು ಸಿಕ್ಕಲಿಲ್ಲವಪ್ಪ ನಾನು ಪದ್ಮ, ಉಮಾ, ಶೀಲಾ ಎಲ್ಲರೂ ನಡೆದು ಕೊಂಡು ಬಂದೆವು ಹೊತ್ತಾಯ್ತು' ಎಂದಳು ತಾರಾ. ಶೇಷಣ್ಣನವರು ಮಗಳನ್ನೇ ಸೂಕ್ಷ್ಮವಾಗಿ ಗಮನಿಸಿದರು. ಎಲ್ಲಿ ಅವಳದೇ ಮುಖ, ಅದೇ ಅಂದ, ಅದೇ ವಿನಯ, ಅದೇ ತರದ ಮಾತು. ತಾಯಿ ಮಗಳಿಗೆ ವ್ಯತ್ಯಾಸವೇ ಇಲ್ಲ' ಎಂದು ಕೊಂಡರು. ತಾರಾಳ ಮೂಗಿನ ಬಳಿ ಗಾಯವಾಗಿದ್ದುದು, ಆ ಭಾಗ ಊದಿಕೊಂಡಿದ್ದುದು ಶೇಷಣ್ಣನವರಿಗೆ ಕಾಣದಿರಲಿಲ್ಲ.

'ಯಾಕಮ್ಮ ಮೂಗಿನ ಬಳಿ ಗಾಯವಾಗಿದೆ?' ಎಂದು ಶೇಷಣ್ಣ ಪ್ರೀತಿಯಿಂದ ಪ್ರಶ್ನಿಸಿದರು.

'ಮೊನ್ನೆ ಬಸ್ಸಿನಿಂದ ಇಳಿಯುವಾಗ ಮೂಗು ಬಾಗಿಲಿಗೆ ತಗಲಿತಪ್ಪ ಅಷ್ಟೆ' ಎಂದಳು ತಾರಾ.

"ಇಷ್ಟು ವಯಸ್ಸಾಯ್ತು ನಿನಗೆ ಸ್ವಲ್ಪ ಗೊತ್ತಾಗುವುದಿಲ್ವಮ್ಮ' ಎಂದು ಮಗಳ ಮೈದಡವಿದರು ಶೇಷಣ್ಣ.

ಸುನಂದಮ್ಮ ಅಡಿಗೆಯ ಮನೆಯಲ್ಲಿಯೇ ನಿಟ್ಟುಸಿರು ಬಿಟ್ಟರು.

○ ○ ○ ○

ಶೇಷಣ್ಣ ಪ್ರಸಿದ್ಧ ಬಟ್ಟೆ ವ್ಯಾಪಾರಿಗಳು. ತಮ್ಮ ಪ್ರಾಮಾಣಿಕ ವ್ಯವಹಾರದಿಂದ ಹೇರಳ ಆಸ್ತಿಯನ್ನು ಗಳಿಸಿದ್ದರು. ಗಂಡು ಮಕ್ಕಳಿಲ್ಲದ ಕೊರಗು ಅವರನ್ನು ಬಹಳವಾಗಿ ಕಾಡುತ್ತಿತ್ತು.

ಮೀನಾಕ್ಷಮ್ಮ ಶೇಷಣ್ಣನವರ ಮೊದಲ ಹೆಂಡತಿ. ಮೀನಾಕ್ಷಮ್ಮ ಎಂಟು ವರ್ಷದ ಮಗಳು ತಾರಾಳನ್ನು ಪತಿಗೆ ಒಪ್ಪಿಸಿ ಕಣ್ಮುಚ್ಚಿದ್ದರು. ಮೊದಲು ಬೇಡವೆಂದು ಪಟ್ಟು ಹಿಡಿದಿದ್ದ ಶೇಷಣ್ಣ ಹಿರಿಯರ ಸಲಹೆಯಂತೆ ಸುನಂದಮ್ಮನನ್ನು ವಿವಾಹವಾದರು. ಸುನಂದಮ್ಮನ ಸೌಂದರ್ಯ ಶೇಷಣ್ಣನವರನ್ನು ಆಯಸ್ಕಾಂತದಂತೆ ಆಕರ್ಷಿಸಿತ್ತು. ಅವರ ಮುಖದ ಸೌಂದರ್ಯ ಅವರ ಹೃದಯದಲ್ಲಾಗಲಿ, ಮಾತಿನಲ್ಲಾಗಲಿ ಇರಲಿಲ್ಲ. ಅವರು ಮೊದಲು ವಿನಯ ವಿಧೇಯತೆಗಳಿಂದ ವರ್ತಿಸುತ್ತಿದ್ದರೂ ಅವರಿಗೆ ಪತಿಯ ಐಶ್ವರ್ಯ, ಆಸ್ತಿಗಳ ಕಡೆಗೆ ಮನಸಿತ್ತು. ಇವುಗಳ ಆಸೆಗಾಗಿಯೇ ಅವಳ ತಾಯಿ ತಂದೆಯರು ದ್ವಿತೀಯ ವಿವಾಹಕ್ಕೆ ಸಂತೋಷದಿಂದ ಒಪ್ಪಿ ಮಗಳನ್ನು ಧಾರೆ ಎರೆದು ಕೊಟ್ಟಿದ್ದರು.

ಸುನಂದಮ್ಮ ಪತಿಯ ಎದುರಿನಲ್ಲಿ ಮಲಮಗಳು ತಾರಾಳ ಬಗೆಗೆ ಪ್ರೀತಿಯ ಧಾರೆಯನ್ನು ಹರಿಸುತ್ತಿದ್ದರೂ ಪತಿ ಕಣ್ಣ ಮುಂದಿಲ್ಲ ಇಲ್ಲದಾಗ ಅವಳನ್ನು ಬಹು ಕೀಳಾಗಿ ಕಾಣುತ್ತಿದ್ದರು. ಶೇಷಣ್ಣ ಹಲವು ಬಾರಿ ಮೊದಲ ಹೆಂಡತಿ ಮೀನಾಕ್ಷಮ್ಮ ಮತ್ತು ಅವರ ಮಗಳು ತಾರಾಳನ್ನು ಹೊಗಳುತ್ತಿದ್ದರು. ಸುನಂದಮ್ಮ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್: 177 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೩	೧೩—೪—೧೯೬೭	No. 33

Estd. 1921
NAVAYUGA
Leading Kannada Weekly
UDIPI, S. Kanara

ಡಾ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಕೊಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕಡಿಮೆ ಕ್ರಯದ ಪರ್ಸ್ ಪುಸ್ತಕ ಪ್ರದರ್ಶನವೊಂದು ನವದೆಹಲಿಯಲ್ಲಿ ನಡೆಯಿತು. ವಿದ್ಯಾರ್ಥಿಗಳು ಕುತೂಹಲದಿಂದ ಇದನ್ನು ವೀಕ್ಷಿಸಿದರು.

ವಿದೇಶೀ ಗಾಳಿ

ಭಾರತ ನೆರವು ಕೂಟದ ಸದಸ್ಯ ರಾಷ್ಟ್ರಗಳು ಬಹಳ ತಡವಾಗಿ ಸಭೆ ಸೇರಿದರೂ ನಮಗೆ ಸಾಕಷ್ಟು ಅನುಕೂಲ ನಿರ್ಣಯವನ್ನೇ ಮಾಡಿದುವು. ೧೯೬೬ರ ಕೊನೆಯ ಭಾಗದಲ್ಲಾದರೂ ಸೇರ ಬೇಕಾಗಿದ್ದ ಈ ಸಭೆ ಇಷ್ಟು ವಿಲಂಬವಾಗಿ ಸೇರುವುದಕ್ಕೂ ಭಾರತದ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಿಗೂ ಸಂಬಂಧ ಕಲ್ಪಿಸುವುದು ತಪ್ಪಾಗಲಾರದು. ಹಾಗೆಯೇ ಕಾಂಗ್ರೆಸ್ಸೇ ಕೇಂದ್ರದಲ್ಲಿ ಮತ್ತೆ ಅಧಿಕಾರ ಪಡೆದುದು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರೇ ಪ್ರಧಾನಿಯಾಗಿ ಮುಂದುವರಿದುದು ನೆರವು ಕೂಟದ ನೆರವಿನ ಪ್ರಮಾಣ ನಿಗದಿ ಮಾಡುವಲ್ಲಿ ಮಹತ್ವದ ಪಾತ್ರವಹಿಸಿವೆಯೆಂದರೆ ಒಪ್ಪಲೂ ಬಹುದು.

ಭಾರತದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಸುಮಾರು ೨೩,೭೫೦ ಕೋಟಿ ರೂಪಾಯಿಗಳ ಪ್ರಮಾಣದ್ದು. ಪ್ರತಿ ವರುಷಕ್ಕೂ ಸುಮಾರು ೧೫೦೦ ಮಿಲಿಯ ಡಾಲರುಗಳ ಸಹಾಯ ವಿದೇಶಗಳಿಂದ ಬರಬೇಕೆಂದು ಆಶಿಸಲಾಗಿತ್ತು. ಈ ಮೊತ್ತದಲ್ಲಿ ಒಟ್ಟು ನೂರು ಮಿಲಿಯಗಳು ಯೋಜನೆಯ ಸಾಮಾನ್ಯ ವೆಚ್ಚವೆಂದೂ ಉಳಿದುದು ಆಹಾರವೇ ಮೊದಲಾದ ಉದ್ದೇಶಗಳಿಗೆಂದೂ ಸೂಚಿಸಲಾಗಿತ್ತು. ಭಾರತ ಸರಕಾರದ ನಿಯೋಗ ಪ್ಯಾರಿಸಿಗೆ ತೆರಳಿ ಅಲ್ಲಿ ಸಭೆ ಸೇರಲು ಸಮಾಗಮಿಸಿದ್ದ ನೆರವು ಕೂಟದ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳಿಗೆ ಭಾರತದ ಈ ಆವಶ್ಯಕತೆಗಳನ್ನು ಮನವರಿಕೆ ಮಾಡಿಕೊಟ್ಟಿರುವುದು ಇಂದು ಸಫಲವಾಗಿಯೆಂದು ಹೇಳಬಹುದು. ಇದೀಗ ನಿರ್ಣಯವಾದಂತೆ, ಭಾರತಕ್ಕೆ ಅದು ಸೂಚಿಸಿದಷ್ಟು ನೆರವು ಕೂಟವು ಒಪ್ಪಿಕೊಂಡಿರುವುದು ಭಾರತದ ಸ್ತುತಿಕ ವಿಜಯ. ಭಾರತವು ನಿರೀಕ್ಷಿಸಿದ ಪ್ರಮಾಣದಷ್ಟು ನೆರವೀಗ ದೊರೆಯದ ಹೋದರೂ ಅದರ ಬಹಳಷ್ಟು ಅಂಶಗಳು ನೆರವೇರಿವೆ. ಅಂದರೆ, ೧೯೬೬-೬೭ನೆಯ ವರ್ಷಕ್ಕೆ ಸಾವಿರದ ಮುನ್ನೂರು ಮಿಲಿಯ ಡಾಲರ್‌ಗಳ ನೆರವು ದೊರೆತಿದೆ. ಇದರ ಮೊತ್ತ ೯೭೫ ಕೋಟಿ ಆಗುವುದು. ಈ ಸಹಾಯದಲ್ಲಿ ಒಂಭೈನೂರು ಮಿಲಿಯ ಡಾಲರ್. ಈ ಯೋಜನಾ ವೆಚ್ಚಕ್ಕೆ ದೊರೆತಿದೆ. ಅಂದರೆ, ಭಾರತವು ಈ ಉದ್ದೇಶಕ್ಕೆ ಬಯಸಿದಷ್ಟು ಸಹಾಯ ಲಭಿಸಿದೆ. ಉಳಿದ ನಾನ್ನೂರು ಮಿಲಿಯ ಡಾಲರ್‌ಗಳಷ್ಟು ಸಾಲವಾಗಿ ಸಿಕ್ಕಿದೆ. ಇದು ಆಹಾರ ಧಾನ್ಯಾದಿಗಳಿಗೆ ಸಂಬಂಧಿಸಿದ್ದು. ದೇಶದಲ್ಲಿ ತಲೆದೋರಿರುವ ಆಹಾರಾಭಾವವು ನಿಸರ್ಗದ ಪ್ರಕೋಪದಿಂದ ಈ ವರ್ಷದಲ್ಲೂ ಉಲ್ಬಣಗೊಂಡೇ ಇದೆ. ಬಿಹಾರ, ಕೇರಳಗಳಲ್ಲಿ ಅನ್ನಾಭಾವವು ತಾಂಡವವಾಡುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ನೆರವು ನಮ್ಮ ಆವಶ್ಯಕತೆಯಲ್ಲಿ ಬಹಳಂಶವನು ಪೂರೈಸುವುದು. ಇನ್ನುಳಿದ ಕೊರತೆಯನ್ನು ತುಂಬಿಸಲು ಬೇರೆ ವಿಧಾನಗಳನ್ನು ನಾವು ಅಳವಡಿಸಬೇಕಾಗಿದೆ. ಅಂತಹ ದೇಶದ ಜಟಿಲ ಪ್ರಶ್ನೆಗಳನ್ನು ಬಗೆಹರಿಸಿ ಯೋಜನಾಬದ್ಧ ಮಾರ್ಗದಲ್ಲಿ ಮುಂದುವರಿಯುವಲ್ಲಿ ನಮಗೆ ವಿದೇಶೀಯರೂ ಸ್ನೇಹಹಸ್ತ ನೀಡುವುದನ್ನು ಮುಂದುವರಿಸಿಕೊಂಡು ಬಂದಿದ್ದಾರೆ—ಇದು ಚಿರಸ್ಮರಣೀಯ; ಇದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರಬೇಕು.

ದೇಶವು ಸ್ವಾವಲಂಬಿಯಾಗಬೇಕು; ಪರದೇಶೀಯರ ಮುಂದೆ ಕೈಚಾಚುವ ದುಷ್ಪ್ರವೃತ್ತಿ ಕೊನೆಗಾಣಬೇಕು. ಇದಕ್ಕಾಗಿ ಆಂತರಿಕ ಸಂಪನ್ಮೂಲಗಳನ್ನು ನಾವು ಸಂಪೂರ್ಣವಾಗಿ ಕ್ರೋಢೀಕರಿಸಿ ಬಳಸಿಕೊಳ್ಳಬೇಕು. ದೇಶದ ಪ್ರತಿ ರಾಜ್ಯವೂ ಈ ದಿಸೆಯಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಕು. ಬೆಲೆಯೇರಿಕೆ ಮತ್ತು ಅತಿಪ್ರಸರಣಗಳಿಗೆ ಪರಸ್ಪರ ನಿಕಟ ಸಂಬಂಧವಿರುವುದು. ಇದಕ್ಕೆ ರಾಜ್ಯಗಳು ಓವರ್ ಡ್ರಾಫ್ಟ್ ಪಡೆದುಕೊಳ್ಳುವ ಪದ್ಧತಿಯೇ ಕಾರಣವೆಂದು ಅರ್ಥಶಾಸ್ತ್ರಜ್ಞರ ಅಂಬೋಣ. ಇದು ಇಂದಲ್ಲ ನಾಳೆಯಾದರೂ ಕೊನೆಗೊಳ್ಳಬೇಕು. ಉಪಪ್ರಧಾನಿ ಶ್ರೀ ಮುರಾರ್ಜಿ ದೇಸಾಯಿಯವರು ಈ ದಿಸೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ, ರಾಜ್ಯಗಳ ಸಹಕಾರವನ್ನು ಕೋರಿದ್ದಾರೆ. ಕೊರತೆ ಧನ ವಿನಿಯೋಗದ ನೀತಿಯನ್ನು ಕೈಲಾದಷ್ಟು ಮಟ್ಟಿಗೆ ಕೈಬಿಡುವ ಬಗ್ಗೆ ಅವರು ಚಿಂತನ ಮಾಡುತ್ತಿದ್ದಾರೆ. ಹಾಗಾಗುವಾಗ, ದೇಶದ ಮುಂಗಡ ಪತ್ರದ ವೆಚ್ಚದ ಬಾಬು ಕೂಡಿಸಲು ಆಂತರಿಕ ಗಳಿಕೆಯನ್ನೇ ಹೆಚ್ಚಿಸಬೇಕು. ಸಂಪನ್ಮೂಲ ಎಲ್ಲಿದೆಯೆಂದು ಹುಡುಕಿ ಅದನ್ನು ಕರಗತ ಮಾಡಿಕೊಳ್ಳಬೇಕು. ಮಿತವ್ಯಯದ ಸೂತ್ರವನ್ನು ಆಡಳಿತೆಯೂ ಜನತೆಯೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕು. ಸದಾಕಾಲವೂ ವಿದೇಶೀಯ ಬಂಡವಾಳದ ಕೈಗೊಂಬೆಯಾಗಿ ನಾವು ಬದುಕುವುದು ನಿಂದನೀಯವೇ ಸರಿ. ಕರ ಪ್ರಮಾಣದಲ್ಲಿ ಕಡಿಮೆ ಮಾಡಬೇಕು ಎಂಬುದು ಕೆಲವು ರಾಜಕೀಯ ಪಕ್ಷಗಳ ಅಭಿಪ್ರಾಯವಿದೆ. ಆದರೆ, ಸಂವೃದ್ಧಿಯತ್ತ ಸಾಗಬಯಸುವ ದೇಶದಲ್ಲಿ ಇದು ಎಷ್ಟರ ಮಟ್ಟಿಗೆ ವ್ಯವಹಾರ್ಯವೆಂದು ಹೇಳುವಂತಿಲ್ಲ. ಚೀನೀಯರ ಆಕ್ರಮಣದ ನಂತರ ೧೯೬೩ರಲ್ಲಿ ಕರಭಾರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿದುದರಿಂದ ಮುಂದಾದ ಪಾಕ್ ಆಕ್ರಮಣವನ್ನೆದುರಿಸುವಲ್ಲಿ ನಾವು ಸಮರ್ಥರಾದೆವು ಎನ್ನುತ್ತಾರೆ, ಮುರಾರ್ಜಿ. ಪರರಾಕ್ರಮಣದ ಭೀತಿ ನಮ್ಮನ್ನಿನ್ನೂ ಬಿಟ್ಟಿಲ್ಲ. ಜತೆಗೆ ಆಂತರಿಕ ಕ್ರಾಂತಿಯ ಭೀತಿಯನ್ನು ಹುಟ್ಟಿಸುವ ಹೇಯಕೃತ್ಯಗಳು ಅಲ್ಲಲ್ಲಿ ತಲೆದೋರುತ್ತಿವೆ. ಇವೆಲ್ಲವಕ್ಕೂ ಮುಖ್ಯ ಕಾರಣವೆಂದರೆ, ಯಾರ ಹಣವಾದರೂ ಸರಿ, ನಾವು ಸುಖದಿಂದಿದ್ದರೆ ಸಾಕು ಎಂಬ ನಮ್ಮ ನಿಷ್ಕ್ರಿಯ ಮನೋಭಾವ. ವಿದೇಶೀಯ ವಿಷಗಾಳಿಗಿಂತ ರಾಷ್ಟ್ರೀಯತ, ಸ್ವಾವಲಂಬನಗಳ ಗಾಳಿಯನ್ನೇ ನಾವು ಉಸಿರಾಡಲು ತೊಡಗಿದೆವೆಂದರೆ, ನಮ್ಮ ಕಾಲಮೇಲೆ ನಾವುನಿಲ್ಲಲು ಖಂಡಿತಕ್ಕೂ ಸಮರ್ಥರಾಗುತ್ತೇವೆ. ಇಲ್ಲವಾದರೆ, ನಮಗೆ ನಮ್ಮದೂ ಇಲ್ಲ, ಪರರದೂ ಇಲ್ಲವಾಗುವುದು, ಹಾಗಾಗ ಬಾರದು.

> **ವಚನ ಸುಧೆ**
> ಯಃ ಕಶ್ಚಿದಪ್ಯಸಂಬದ್ಧೋ
> ಮಿತ್ರಭಾವೇನ ವರ್ತತೇ।
> ಸ ಏವ ಬಂಧುಸ್ತನ್ಮಿತ್ರಂ
> ಸಾ ಗತಿಸ್ತತ್ಪರಾಯಣಂ॥
> ಪೂರ್ವಸಂಬಂಧವಿಲ್ಲವಾದರೂ ಮಿತ್ರನಂತೆ ವರ್ತಿಸುವ ಬಂಧುವೇ ನೈಜ ಮಿತ್ರನು, ಆವನೇ ಆಶ್ರಯದಾತನು.

ಚದುರಂಗದಾಟ

ಕೇಂದ್ರಾಧೀನ ಪ್ರದೇಶಗಳಾದ ಗೋವಾ, ದೀವ ಮತ್ತು ದಮನ್ ಹಾಗೂ ಪಾಂಡಿಚೇರಿಗಳು ವಿಲಕ್ಷಣ ರಾಜಕೀಯಕ್ಕೆ ಈಡಾದ ಪ್ರಸಂಗವಿದೆಯೆನ್ನಬೇಕು. ಇತ್ತೀಚೆಗೆ ಗೋವೆಯಲ್ಲಿ ಜನಮತ ಗಣನೆ ನಡೆದಾಗ, ಅದು ಕೇಂದ್ರಾಧೀನ ಪ್ರದೇಶವಾಗಿಯೇ ಉಳಿಯಬೇಕು ಎಂದು ಗೋಮಾಂತಕರು ಬಹುಮತದ ನಿರ್ಣಯವಿತ್ತರು. ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಗೋವೆಯನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕೆಂಬ ಉದ್ದೇಶವಿಟ್ಟುಕೊಂಡೇ ಸ್ಥಾಪಿತವಾದ, ತನ್ನ ಅಧಿಕಾರಾವಧಿಯಲ್ಲಿ ಅದಕ್ಕಾಗಿಯೇ ಶಕ್ತಿಮೀರಿ ಪ್ರಯತ್ನಿಸಿದ್ದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವನ್ನೇ ಬಹುಮತದಿಂದ ಅಧಿಕಾರ ಗದ್ದುಗೆಗೆ ಮತದಾರರು ಏರಿಸಿದರು. ಪಾಂಡಿಚೇರಿಯ ಕಾಂಗ್ರೆಸ್ ಸರಕಾರವು ಕೆಲ ಸದಸ್ಯರ ಪಕ್ಷತ್ಯಾಗದಿಂದ ಪತನವಾಯಿತು. ಇದೀಗ ವಾರವೊಂದು

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ

"ರಾಷ್ಟ್ರಪತಿ ಯಾರಾಗ ಬೇಕೆಂತ ಎಲ್ಲಾ ತಲೆಕೆಡಿಸಿಕೊಳ್ಳೋಕೆ ಆರಂಭಿಸಿದ್ದಾರೆ."
"ಯಾರೇ ಆಗ್ಲಿ, ನಾನು ಮಂತ್ರಿಯಾದ್ರೂ ಆಗಬಹುದು, ರಾಷ್ಟ್ರಪತಿ ಮಾತ್ರ ಆಗೋಲ್ಲ."

ಗೇಹೆ ರಾಜ್ಯದಲ್ಲಿ

ದೊಣ್ಣೆಯಿರುವವನಿಗೆ ಹಣ್ಣು

'ನೋಡಿ, ಸ್ವಲ್ಪ ಇಲ್ಲಿ ಕೇಳೀಂದ್ರೆ...'

"ಎಂಥದಪ್ಪ, ಅಂಥಾದ್ದು..."

"ಎಂಥದೂಂದ್ರೆ .... ಯಾರ್‍ನಾರೊಡನೆ ಮಾತಾಡೋಕೆ ನಿಮ್ಗೆ ಬಾಯಿಯೂ ಇದೆ, ವೇಳ್ಯಾನೂ ಇದೆ. ಆದ್ರೆ ಕೈ ಹಿಡಿದವ್ಳು ಮಾತಾಡ್ಸೋಕೆ ಬಂದ್ರೆ ಎಂಥದಪ್ಪ ಅಂಥಾದ್ದೂಂತ ಅಪಸ್ವರವೇಳುತ್ತೆ..."

"ಅಯ್ಯೋ ಮಹಾರಾಯ್ತಿ, ಎಂಥದೂಂತ ಕೇಳಿದ್ರೆ ಅದನ್ನು ಎಲ್ಲೆಲ್ಲಿಗೊ ಒಯ್ದು ಏನೇನೋ ಅಪಾರ್ಥಮಾಡಿ ಬರಿದೆ ಗುಲ್ಲು ಎಬ್ಬಿಸುತ್ತಿಯಲ್ಲಾ?"

"ಅಯ್ಯಯ್ಯ, ನಾನಂತೆ ಗುಲ್ಲು ಎಬ್ಬಿಸಿದೋಳು, ಬಿತ್ತಿದವನದ್ದೇ ಹಣ್ಣು....'

"ಊ ಹ್ಞೂಂ....ಆ ಕಾಲ ಹೋಯ್ತು ...'

"ಮತ್ಯಾವಕಾಲ ಬಂತು?"

'ದೊಣ್ಣೆಯಿರುವವನದೇ ಹಣ್ಣೂಂತ.'

'ಅದೇ ಅಂದೆನಲ್ಲಾ, ನಿಮ್ಗೆಲ್ಲಾ ಹೀಗೇನೇ?

'ನನ್ನದೂಂತೇನು? ಲೋಕವೆಂದು ನಡೆಯೋದೇ ದೊಣ್ಣೆ ಬಲದಿಂದ. ದೊಣ್ಣೆ ಎಷ್ಟು ಉದ್ದವಿದೆಯೋ ಅಷ್ಟು ಹೆಚ್ಚು ಹಣ್ಣು ಪಡೆಯುತ್ತಾರೆ. ಬಿತ್ತಿದವ ಕಣ್ ಕಣ್ ಬಿಟ್ಟು ನೋಡ್ತಾನೇ ಇರ್‍ತಾನೆ.'

'ನೀವು ಯಾವುದೋ ಸುಳಿಗೆಯ ಕಥೆ ಹೇಳ್ತಾ ಇದ್ದೀರೀಂತ ತೋರುತ್ತೆ....'

'ಇದು ಕಥೆಯೂ ಅಲ್ಲ ಗಿಥೆಯೂ ಅಲ್ಲ. ಆದರೆ....'

'ಏನು? ಅರ್ಧದಲ್ಲೇ ನಿಲ್ಲಿಸಿದ್ರಿ....'

'ಮತ್ತೇಂಥದು? ವ್ಯಥೆ ಪಡಬೇಕಾದ ವಿಚಾರ....'

"ಎಂಥ ವ್ಯಥೇರಿ? ಹತ್ತಿರ ಸಾವು ಮದುವೆಗ ಸನಿಹನಾಂತ ಅನ್ನಾರೆ ನೋಡಿ. ಮತ್ತೆ ಊರಿಗೆ ಒಂದಿದ್ದ ಮನೆಗೆ ಅಂತ ಕಾನೂ ಹೇಳ್ತಾರೆ. ಊರಿಗೆ ಊರೇ, ಯಾಕೆ, ಇಂದಿನ ಜಗತ್ತೇ ಹೀಗಿರುವಾಗ ನೀವು ಮಾತ್ರ ಯಾಕೆ ವ್ಯಥೆ ಪಡಬೇಕು? ಎಲ್ಲರೊಡನೆ ನಾವೂ ಅನ್ನೋದು ಗೋವಿಂ...'

"ನಿಲ್ಲಿ, ತುಸು ಸಮಾಧಾನ ಪಟ್ಟು ಕೇಳಿ. ಅಂದ್ರೆ ನಮ್ಮ ಕಥೆ 'ಇದಕ್ಕಿಂತ ತುಸು ಭಿನ್ನ ಅಷ್ಟು. ಕೇಳಿದ್ದ ನೋಡು....'

"ಎಂಥದು?"

"ಅದೇ ಗೋವಿಂದನ ಕಥೆ..."

"ಯಾವ ಗೋವಿಂದ?'

"ಕೇಳು, ಊರ ಜಾತ್ರೆಯಲ್ಲಿ ಎಲ್ರೂ ಗೋವಿಂದಾ ಗೋವಿಂದಾ ಅನ್ನುತ್ತ ರಥ ಎಳೀತಿದ್ರಂತೆ. ಒಬ್ಬಾಕೆ ನಡುಹರೆಯದವಳು ನಾನೂ ಹಾಗೇನೇ ನಾನೂ ಹಾಗೇನೇ ಅಂತ ದನಿ ಸೇರಿಸುತ್ತಿದ್ಳಂತೆ.'

"ಭಾರಿ ತಮಾಷೆ ಮನುಷ್ಯಳಲ್ಲಾ...."

"ಯಾಕೇಂತಿಂದ್ರೆ, ಆಕೆ ಗಂಡನ ಹೆಸ್ರು ಗೋವಿಂದಾಂತಂತೆ....'

"ಭಾರೀ ಚಲೋದ್ರಿ.....ಇಲ್ಲಿ....ನೋಡಿ, ಪಂಜಾಬದಲ್ಲಿ ಸಂಯುಕ್ತ ಸರಕಾರ ಸಂಭವಗೊಂಡಿತಂತೆ...."

"ಹ್ಞೂಂ....'

'ಅಲ್ರಿ, ಅಷ್ಟು ದೊಡ್ಡ ವಿಷಯವನ್ನು ನೀವು ಒಂದೇ ಒಂದು ಹ್ಞೂಂ ಅಂತ ಕಡೆಗಣಿಸಿ ಬಿಡೋದಾ?'

"ಒಂದು ಸಾಕಾಗದಿದ್ರೆ ಹತ್ತು ಹ್ಞೂಂ ...ತೆಗೆದುಕೋ ಮುಗೀತಲ್ಲಾ...'

"ಎಂಥದು?'

"ಯಾರಿಗೆ ಗೊತ್ತು?"

'ನನಗೇನಾ?'

'ಹ್ಞೂಂ..."

'ಆದ್ರೆ ನೋಡಿ, ಅಷ್ಟು ಸುಲಭವಾಗಿ ರಾಜೀನಾಮೆ ಕೊಡಲು ಸಂಯುಕ್ತ ರಂಗ ತಯಾರಿಲ್ಲ..."

'ಎಷ್ಟಾದ್ರೂ ಕೈಗೆ ಬಂದ ಅಧಿಕಾರವನ್ನು ಬಿಟ್ಟು ಕೊಡುವುದು ಎಂದರೆ, ಅರಸುತಿಹ ಬಳ್ಳಿ ಕಾಲಿಗೆ ತೊಡಕಿದಾಗ ಕಿತ್ತೆಸೆದು ಬಿಟ್ಟಂತೆ....'

'ಹಾಗೇನೂ ಅಲ್ಲಾನ್ನಿ. ಮುಖ್ಯ ಮಂತ್ರಿ ಗುರುನಾಮ ಸಿಂಗರು ತಮಗೆ ಅಧಿಕಾರದ ಮೇಲೆ ಮೋಹವಿಲ್ಲ; ಆದ್ರೂ ರಾಜೀನಾಮೆ ಕೊಡುವುದಿಲ್ಲ ಅಂದ್ರಂತ...."

'ನಿಜವಾಗಿ ಅವರೇನ ನಿಸ್ಪೃಹರು.... ಯಾಕೆ ಅಂತೀಯಾ? ಅವರಿಗೆ ಅಧಿಕಾರ ಇದ್ದರೂ ಒಂದೇ, ಇಲ್ಲದ್ದರೂ ಒಂದೇ...."

'ಅಲ್ರಿ, ರಾಜ್ಯಪಾಲರಿಗೆ ಅಭಿನಂದನೆ ಸಲ್ಲಿಸುವ ಗೊತ್ತುವಳಿಗೆ ತಿದ್ದುಪಡಿ ಮಂಜೂರಾಯಿತೆಂದರೆ, ಅದು ಅವಿಶ್ವಾಸ ಗೊತ್ತುವಳಿ ಸ್ವೀಕೃತವಾದಂತೆ ಅಲ್ಲ ಎಂದು ಗುರುನಾಮ ಸಿಂಗರು ವಾದಿಸುತ್ತಾರೆ...."

'ಅದು ಸರೀನ್ನಿ. ಆದ್ರೆ ಇದಕ್ಕೆ ವಿರುದ್ಧವಾಗಿ ಕಾಂಗ್ರೆಸಿಗರು ಏನನ್ನುತ್ತಾರೆ? ನೋಡು, ಸರಿಹಾಯವಾನೇನಾಯಿತು? ವಿಧಾನ ಸಭಾಧಿವೇಶನ ನಡೆಯಲು ಬಿಡಲಿಲ್ಲ. ಕೊನೆಗೂ ಅನಿರ್ದಿಷ್ಟ ಅವಧಿಯವರೆಗೆ ಅದನ್ನು ಮುಂದೂಡಬೇಕಾಯಿತು....'

"ಅಲ್ರಿ, ಇದ್ರಲ್ಲಿ ಯಾರು ಸರಿ?"

"ಒಂದೊಂದು ರೀತಿಯಿಂದ ಇಬ್ಬರೂ ಸರೀನ್ನಿ.... ಆದ್ರೂ, ಇನ್ನೊಂದು ರೀತಿಯಿಂದ..."

"ಏನು, ಗುರುನಾಮರು ರಾಜೀನಾಮೆ ನೀಡಿ, ನಿಮ್ಮ ಜೋಷಿಯವರಿಗೆ ಅಧಿಕಾರ ನಡೆಸೋಕೆ ಅವಕಾಶ ಮಾಡಿಕೊಡಬೇಕೇನು?"

"ಛೆ...ಛೆ...ಹಾಗೇನೂ ಇಲ್ಲ..."

'ಮತ್ತೆ?'

"ನಾನನ್ನೋದನ್ನು ತುಸು ತಾಳ್ಮೆಯಿಂದ ಕೇಳು.'

"ಹ್ಞೂಂ....ಏನಂತೆ?'

'ಏನೂ ಅಂದ್ರೆ.... ಇಂದು ಗುರುನಾಮ ಸಿಂಗರು ಭಾರಿ ಪ್ರಶ್ನೆಯೊಂದಕ್ಕೆ ಉತ್ತರಿಸಬೇಕು...'

"ಅದ್ಯಾವ ಪ್ರಶ್ನೆ?'

ತಮ್ಮ ನಾಯಕತ್ವದಲ್ಲಿ ವಿಧಾನ ಸಭೆಗೆ ವಿಶ್ವಾಸವಿದೆಯೋ ಇಲ್ಲವೇ ಎಂಬುದನ್ನು ತೋರಿಸಬೇಕು..."

'ನೀವು ಎಂಥದ್ರಿ ಹೇಳೋದು. ಸರಕಾರ ಅಸ್ತಿತ್ವದಲ್ಲಿ ಬಂದು ಇನ್ನೂ ತಿಂಗಳಷ್ಟೇ ಕಳೆದಿದೆ....'

"ನೋಡು, ವಿರೋಧಿ ಸದಸ್ಯರು ಸರಕಾರದ ಗೊತ್ತುವಳಿಗೆ ತಿದ್ದುಪಡಿ ಸ್ವೀಕೃತವಾದುದರಿಂದ ಅವಿಶ್ವಾಸ ವ್ಯಕ್ತವಾಯಿತು ಅಂತ ಕೂಗಾಡ್ತಾ ಇದ್ದಾರೆ, ರಾಜ್ಯಪಾಲರಿಗೂ ದೂರಿದ್ದಾರೆ. ಸರಕಾರಕ್ಕೆ ಅಸ್ತಿತ್ವದಲ್ಲಿರಲು ಸಾಂವಿಧಾನಿಕ ಹಾಗೂ ನೈತಿಕ ಬಲವಿಲ್ಲವೆಂದು ಹಾರಾಡ್ತಾ ಇದ್ದಾರೆ....'

'ಇದಲ್ಲ ವಿರೋಧ ಪಕ್ಷದ ಗೊಂದಲ'

'ಇರಬಹುದು. ಇಂದು ಅಧಿಕಾರದಲ್ಲಿರುವವರೂ ಹಿಂದೆ ಇದಕ್ಕಿಂತಲೂ ಹೆಚ್ಚು ಮಾಡಿದ್ದಾರೆನ್ನಿ. ಆದರೂ ಇಂದಿನ ಪ್ರಶ್ನೆಯೊಂದೆ—ಗುರುನಾಮರು ವಿಧಾನ ಸಭೆಯಲ್ಲಿ ವಿಶ್ವಾಸ ಮತಯಾಚಿಸಬೇಕೇ ಬೇಡವೇ ಎಂದು. ಅವಿಶ್ವಾಸ ಗೊತ್ತುವಳಿ ಸ್ವೀಕೃತವಾಗದೆ ಹೋದರೂ ವಿಶ್ವಾಸವಿಲ್ಲನೆಂಬ ಅಪವಾದದಿಂದ ಅವರು ಮುಕ್ತರಾಗದೆ ಅಧಿಕಾರದಲ್ಲಿ ಉಳಿಯುವುದು ಸಾಧ್ಯವಿಲ್ಲ....'

'ಯಾಕೆ?'

"ನೋಡಿದಿಯಲ್ಲಾ? ವಿಧಾನ ಸಭೆಯ ಕಾರ್ಯಕಲಾಪಗಳು ನಡೆಯಗೊಡದಿರುವಾಗ ಪುಹಾರ ಕಾಣುವುದು?'

"ಹ್ಞೂಂ.....ಅದೂ ಹೌದ್ರಿ.....ಆದ್ರೆ ಮುಖ್ಯ ಮಂತ್ರಿಯವರು ಹಾಗೆ ಮಾಡುತ್ತಾರೆಯೆ?

'ಕಾದು ನೋಡೋಣ. ಪಂಜಾಬ ಎರಡನೆಯದಾಗಿ ಜೋಡು ನಮಸ್ಕಾರಾಜ್ಯ'ವಾದಂತಾಯಿತು. ವಿಶ್ವಾಸಮತ ಯಾಚನೆಗಾಗಿ ಸಭೆ ಸೇರಿಸಬೇಕೆನ್ನುವ ಸಲಹೆಯನ್ನು ರಾಜ್ಯಪಾಲರು ನೀಡಿದರೂ ನೀಡಬಹುದು...'

'ಹ್ಞೂಂ...ಅದು ಹಾಗಾಯಿತು. ಮತ್ತೆ ನೋಡಿ, ಲೋಕ ಸಭೆಯಲ್ಲೂ ಗೊಂದಲ ಅಂತೆ....'

'ಏನೋ ಅಧ್ಯಕ್ಷರ ಬಾಯ್ತಪ್ಪು ಛಾದಿ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟರಂತೆ....'

'ಅದು ಹೌದ್ರಿ....ಆದ್ರೆ, ಲೋಕಸಭೆಯ ಅಧ್ಯಕ್ಷಸ್ಥಾನದಲ್ಲಿ ಮಂಡಿಸಿರುವಂತಹ ಶ್ರೇಷ್ಠರ ಬಾಯಿಯಿಂದಲೂ ತಪ್ಪು ಹೊರಡುವುದೆಂದರೆ, ನಮ್ಮ ಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೇಂತ?"

'ಅದು ನಿಜಾನ್ನಿ. ಆದ್ರೂ ಅವ್ರು ಮನುಷ್ಯರೇ ಅಲ್ಲವೆ?"

'ಹೌದ್ರಿ, ಮನುಷ್ಯರು ನಿಜ. ಆದ್ರೂ ತಾವು ಎಲ್ಲಿದ್ದೇವೆ, ಏನು ಆಡ್ತಾ ಇದ್ದೇವೆ ಎಂಬೋ ಪರಿಜ್ಞಾನವೂ ಇಲ್ಲದೆ ಹೋದರೆ..."

"ಇಂಥದ್ದೇ ಸಂಸ್ಥಿತಿ ತಲೆದೋರುತ್ತದೆ....'

'ಹೌದು...... ಮತ್ತೆ ನೋಡಿ ರಾಷ್ಟ್ರಪತಿ—ಉಪರಾಷ್ಟ್ರಪತಿಯವರ ಆಯ್ಕೆಯ ಪ್ರಶ್ನೆ..."

"ಹೌದು, ಅದೂ ಜಟಿಲವಾಗುತ್ತ ಬರುತ್ತಿದೇನ್ನಿ....'

"ಒಮ್ಮತವಿರುವುದಾದರೆ ತಾನು ಸ್ಪರ್ಧಿಸುವುದಾಗಿ ಜಸ್ಟೀಸ್ ಸುಬ್ಬರಾಯರು ತಿಳಿಸಿದ್ದಾರಂತೆ ..."

"ಹೌದು. 'ಒಮ್ಮತ'ದ ವ್ಯಾಖ್ಯಾನವೇ ನನಗಂತ ಸರಿಯಾಗಿ ಗೊತ್ತಿಲ್ಲ....'

"ಅಂದ್ರೆ....'

'ತನ್ನ ಹೆಸರನ್ನು ಸೂಚಿಸಿದ್ದ ವಿರೋಧಿ ಪಕ್ಷಗಳು, 'ಒಮ್ಮತ ಅಂದ್ರೆ ಕಾಂಗ್ರೆಸ್ಸು ಒಪ್ಪುವುದಾದರೆ ಅಂತ್ಲೆ?'

"ಇರಬಹುದು....'

"ಇಲ್ಲವಾದ್ರೆ, ಕಾಂಗ್ರೆಸ್ಸೇ ಅವರನ್ನು ಬೆಂಬಲಿಸಲಿಲ್ಲ ಅಂತ ಅಪವಾದ ಬೇರೆ__ಅಂತೂ ..'

'ನಮ್ಮ ಇಂದಿರಾಜಿ ಭಾರಿ ಪೇಚಿನಲ್ಲಿ ಸಿಕ್ಕಿ ಬಿದ್ರು....'

"ಸಿಕ್ಕಿ ಬಿದ್ದದ್ದು ಅಲ್ಲ, ಸಿಕ್ಕಿಸಿಕೊಂಡದ್ದು...'

"ಹೇಗೆ?'

"ಅಲ್ಲಾ, ವಿರೋಧಿ ಪಕ್ಷಗಳ ಒಮ್ಮತದ ಸೂಚನೆಯು ಬಂದರೆ, ಪರಿಶೀಲಿಸಲಾಗುವುದೂಂತ ಯಾಕೆ ಘೋಷಣೆ ಮಾಡಿದ್ದು?'

'ಏನಾಯಿತದರಿಂದ?'

'ಅದೇನು? ಗೊತ್ತಾಯಿತಲ್ಲ? ತಮ್ಮ ಪಕ್ಷದ ಅಭ್ಯರ್ಥಿಯಾರೆಂದು ಗೊತ್ತು ಮಾಡುವವರೆಗೆ ಮಾನಮೋಸವಣಿಸುವವರು...'

'ಅಂತೂ ನಮ್ಮ ಇಂದಿರಾ ಮಾಡಿದ್ದು ತಪ್ಪೂಂತ ನಾನೇ ಹೇಳನ್ನೋದು?'

'ವಿರೋಧಿಗಳ ಸಂಖ್ಯಾಬಲ ಸಾಕಷ್ಟಿರುವಾಗ ಇಂಥಹ ಮುಖ್ಯ ಪ್ರಶ್ನೆಗಳು ದೂರ ಸಂದಂತೆಯೇ. ಯಾರು ಅಭ್ಯರ್ಥಿಗಳಲ್ಲಾತ್ತಾರೆ ಹೇಳಲು ಸಾಧ್ಯವಿಲ್ಲ...."

'ಅಲ್ರಿ, ಡಾ| ರಾಧಾಕೃಷ್ಣನ್ ಮತ್ತು ಜಾಕೀರ್ ಹುಸೇನರು, ತಂತಮ್ಮ ಪದದಲ್ಲಿ ಮುಂದುವರಿದರೆ...."

(ಎಂಭತ್ತನೇ ಪುಟ ನೋಡಿರಿ)

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್

ಜಯನಗರ ೪ನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉಚ್ಚ ವಿದ್ಯಾನುಭವವುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರ್ಕಾರ ಮನ್ನಣೆ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟೆಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೧೦೦ ರೋಗಿಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವದ ಸೌಕರ್ಯವಿದೆ.

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು. ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿ.

ಡಾ|| ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ವೇದಾಂತ ದರ್ಶನ

ಜೀವನ ಮತ್ತು ಜೀವನ ಕಲೆ

ಮೂಲ: ಸ್ವಾಮೀ ಚಿನ್ಮಯಾನಂದ
ಅನು: ಕೆ. ಬಿ. ವಾಸುದೇವ ರಾವ್

(ತಾ. ೩೦—೩—೬೭ರ ಸಂಚಿಕೆಯಿಂದ)

ಒಂದು ಸಮಾಜ ಹಾಗು ರಾಷ್ಟ್ರ ಆ ಜನರಿಂದ ನಿರ್ಮಾಣವಾಗಿದೆಯೆಂಬುದನ್ನು ಮರೆಯಬಾರದು. ಒಂದು ರಾಷ್ಟ್ರದ ಶಕ್ತಿ ಅಥವಾ ಸಮಾಜದ ಸುಖ, ಅದರ ಭೌತಿಕ ಲಾಭ ಇಲ್ಲವೇ ಜೀವನದ ವಿಶಿಷ್ಟ ಮಟ್ಟದ ಪರಿಸ್ಥಿತಿ ಇವುಗಳನ್ನು ಆಶ್ರಯಿಸಿಲ್ಲ. ಆದರೆ, ಪ್ರತಿ ವ್ಯಕ್ತಿಯಲ್ಲಿರುವ ಸಮಗ್ರತೆ ಮತ್ತು ರಚನೆಯನ್ನು ಅವಲಂಬಿಸಿದೆ. ಕೇವಲ ಶಿಲ್ಪ ಶಾಸ್ತ್ರದ ಜ್ಞಾನದಿಂದ ನಾವು ಜಗತ್ತಿನಲ್ಲಿ ಅತ್ಯುತ್ತಮ ರೀತಿಯ ಭವನ ನಿರ್ಮಾಣದ ಯೋಜನೆಯನ್ನು ಸುಲಭವಾಗಿ ತಯಾರಿಸಬಹುದು. ಆದರೆ ಅದನ್ನು ಕಟ್ಟಬೇಕಾದಲ್ಲಿ ನಾವು ಉಪಯೋಗಿಸುವ ಇಟ್ಟಿಗೆಯ ಯೋಗ್ಯತೆಯನ್ನು ತಿಳಿಯಲು ಜಾಗರೂಕರಾಗದಿದ್ದರೆ ಆ ಕಟ್ಟೋಣವನ್ನು ಆಶ್ರಯಿಸುವ ನಿವಾಸಿಗಳು ಅದರೊಳಗೇನೇ ತಮ್ಮ ಸಮಾಧಿಯನ್ನು ಸೇರಬೇಕಾಗಬಹುದು. ಅದೇ ಪ್ರಕಾರ, ಲೌಕಿಕ ಯೋಜನೆಗಳು, ಭೌತಿಕಯುಗದ ಶಾಸ್ತ್ರೀಯ ಜ್ಞಾನ—ಇವೆಲ್ಲ ತಾತ್ವಿಕವಾಗಿ ಅಂದವಾಗಿ ತೋರುವುದು ನಿಶ್ಚಯ. ಆದರೆ ಅವುಗಳೆಲ್ಲವನ್ನು ಪ್ರಯೋಗಕ್ಕೆ ಹಾಕಿ ನೋಡಿದಲ್ಲಿ, ಅವುಗಳು ಬರಿದಾಗಿ ಕುಸಿದು ಬಿದ್ದು ನಮ್ಮ ಸಂತೋಷವನ್ನು ನಾಶನವನ್ನಾಗಿಸುವುದೆಂದು ತೋರುವುದು. ನಮ್ಮ ಭೌತಿಕ ನಾಗರಿಕತೆಯ ಆಗಿಂದಾಗಿನ ಅನುಭವವೆಲ್ಲಾ ಇದೇ, ಇತಿಹಾಸವೂ ಇದನ್ನೇ ಉಲ್ಲೇಖಿಸುತ್ತದೆ. ಅಲ್ಲದೆ ನಮ್ಮ ಸ್ವಂತ ಅನುಭವ ಕೂಡ ಇದನ್ನು ಸ್ಪಷ್ಟವಾಗಿ ಅನುಮೋದಿಸುತ್ತಿದೆ.

ಪ್ರಾಪಂಚಿಕದೊಡನೆ ಪಾರಮಾರ್ಥಿಕವೂ, ಧಾರ್ಮಿಕದೊಡನೆ ವಿಜ್ಞಾನವೂ ಹೀಗೆ ತಮ್ಮೊಳಗೆ ಸೌಹಾರ್ದ ಸಂಬಂಧ ಇಟ್ಟುಕೊಂಡರೆ ಈ ಸಮಸ್ಯೆಯ ಪರಿಹಾರ ದೊರೆಯಬಲ್ಲುದು.

ಮನುಷ್ಯರೆಲ್ಲರೂ ಶಾಂತಿಯಿಂದಲೂ ಆನಂದದಿಂದಲೂ ಜೀವನ ನಡೆಸಲು ಸಾಧ್ಯವಾದ ಜೀವನ ಪದ್ಧತಿಯನ್ನು ಸ್ಥಾಪಿಸಲು ಶುದ್ಧ ವಿಜ್ಞಾನಿಯು ಪರಾಜಯಗೊಂಡಿರುವನು. ಮಾನವನ ಇತಿಹಾಸವೆಲ್ಲ ಪದೇ ಪದೇ ನಡೆದ ಯುದ್ಧ ಮತ್ತು ಕ್ರಾಂತಿಗಳ ದಾರುಣ ಕತೆಗಳೇ ಆಗಿವೆ. ಎಲ್ಲರೂ ಹೋರಾಡಿದ್ದು ಶಾಂತಿಯ ಹೆಸರಿನಲ್ಲೇ. ಶಾಂತಿಯ ಸೋಗಿನಲ್ಲಿ ನಾವು ವಿನಾಶಕಾರೀ ಆಯುಧಗಳಿಂದ ತೀಕ್ಷ್ಣವಾದ ಜಾಣ್ಮೆಯಿಂದ ಒಬ್ಬರು ಮತ್ತೊಬ್ಬರ ತಲೆಯನ್ನು ಚೆಂಡಾಡಲು ಕಲಿತುಕೊಂಡೆವು! ಇಂದು ನಾವು ತಿಳಿದುಕೊಂಡಿರುವ ಶಾಂತಿ, ಮುಂಬರುವ ಎರಡು ಯುದ್ಧಗಳ ನಡುವಣ ಕ್ಷೀಣವಾದ, ಪ್ರಯಾಸಕರವಾದ, ದುರ್ಮಾರ್ಗಕಾರೀ ವಿರಾಮವಷ್ಟೆ. ಒಂದೊಂದು ಕ್ರೂರ ರಕ್ತ ಚೆಲ್ಲಾಟದ ರುದ್ರ ನಾಟಕದ ತರುವಾಯ, ನಮ್ಮಲ್ಲಿರುವ ಮೃಗೀಯತ್ವವು ತನ್ನ ಅತಿಯಾದ ದಣಿವಿನಿಂದ ಮರುಗುವುದಕ್ಕೋ ಇಲ್ಲವಾದರೆ ತನ್ನ ಗಾಯವನ್ನು ನೆಕ್ಕುತ್ತ ಪುನಃ ಹೊಡೆತಕ್ಕೆ ಸನ್ನಾಹ ಮಾಡುವುದಕ್ಕೋ ಅವಿತಿರುತ್ತದೆ.

ಈ ರಮ್ಯ ಯುದ್ಧ, ಶಾಂತಿ—ಇವುಗಳೆಲ್ಲ ಸುಖಕ್ಕೆ ಬೇಕಾದ ರಹಸ್ಯದ ಔಷಧವನ್ನು ಕಂಡು ಹಿಡಿಯಲು, ಅಥವಾ ಪ್ರತಿಯೋರ್ವ ನಾಗರಿಕನು ತನ್ನ ಯೋಗ್ಯತೆಗೆ ತಕ್ಕಂತೆ ಹೆಚ್ಚಾದ ಸುಖವನ್ನು ಪಡೆದು ಪ್ರಫುಲ್ಲನಾಗುವಂತೆ ಮಾಡುವ ದೋಷರಹಿತ ಭರಣ ಪದ್ಧತಿಯನ್ನು ಕಂಡು ಹಿಡಿಯುವಲ್ಲಿ ಯಶಸ್ಸುಗಳಿಸಿಲ್ಲ. ಜೀವನದ ನಿಜವಾದ ಅರ್ಥ ಅಥವಾ ಅದರ ಪ್ರಗತಿಯ ಭಾಗಗಳು ಯಾವುವೆಂಬುದರ ಬಗೆಗಿನ ಅಜ್ಞಾನವೇ ಈ ಪರಾಜಯಕ್ಕೆ ಕಾರಣವೆಂಬುದು ಸ್ಪಷ್ಟ. ಲೇಖನಿಯಿಂದ, ಶಬ್ದದಿಂದ ಅಥವಾ ಖಡ್ಗದಿಂದ ತಯಾರಿಸಿದ ಯಾವ ಪದ್ಧತಿಯಲ್ಲಿಯೂ ವಸ್ತುಗಳ ಪೂರ ಆಕೃತಿಯು ಅವ್ಯಾಹತವಾಗಿ ಹೆಚ್ಚುಕಾಲ ಬಾಳಲಾರದೆಂಬುದು ಮರೆತುಹೋಗುತ್ತದೆ. ಇಲ್ಲವಾದರೆ ಗ್ರಹಿಸಲಾರದ ಹೋಗಿದೆ. ಯಾವ ಪದ್ಧತಿಯೇ ಆಗಲಿ ಅದು ನಿರಂತರವಾಗಿ ಬದಲಾಗುತ್ತದೆ. ಅಂತೆಯೇ ವ್ಯಕ್ತಿಗಳ ಮನಸ್ಸು ಕೂಡ ಈ ಬದಲಾವಣೆಯ ಪ್ರವಾಹದಲ್ಲಿ ಸಮತೋಲನವನ್ನು ಸ್ಥಾಪಿಸುವುದು ಕೇವಲ ಕಲ್ಪಿತ ಕನಸಾಗಿದೆ. ಆದುದರಿಂದ ಎಂದಿನತನಕ ಅವುಗಳು ಮಾನಸಿಕವಾಗಿಯೂ ಬುದ್ಧಿಪೂರ್ವಕವಾಗಿಯೂ ಆಧ್ಯಾತ್ಮಿಕತೆಯಿಂದ ಕೂಡಿದ ಮಾನವನ ವ್ಯಕ್ತಿತ್ವವನ್ನು ಅಲ್ಲಗಳೆಯುತ್ತವೆಯೋ ಅಂದಿನ ತನಕ ಎಲ್ಲಾ ಕ್ರಾಂತಿಕಾರೀ ಜೀವನ ಮಟ್ಟದ ಸುಧಾರಣೆಗಳು ಪರಾಜಯದಲ್ಲೇ ಸಮಾಪ್ತಗೊಳ್ಳುವುವು.

ಹಾಗಾದರೆ ಆಧ್ಯಾತ್ಮವೆಂಬುದು ಹತಾಶೆಯ ಸ್ವಪ್ನವೇ? ಅದು ಹಾಗಾಗುತ್ತಿದ್ದರೆ ಮನುಷ್ಯನು ಅದನ್ನು ದೂರನೂಕಿ ಅದರ ಬಾಧೆಯಿಂದ ತಪ್ಪಿಸಿಕೊಳ್ಳುತ್ತಿದ್ದನು. ಆದರೆ ಅದು ಹಾಗೇನಲ್ಲ. ಬದಲಾಗಿ ನಿಜವಾದ ಆಧ್ಯಾತ್ಮಿಕ ತತ್ವ ಎಚ್ಚರದಿಂದ ವಿಚಾರಶೀಲನಾಗಿ ವರ್ತಿಸುವಂತ ಮಾನವನಿಗಿತ್ತ ಆಶಾದಾಯಕ ಕರೆ. ಅದರ ಸಹಾಯದಿಂದ ಮಾನವನು ಕ್ಷಣದಿಂದ ಕ್ಷಣಕ್ಕೆ ಮಹತ್ತಾದ ಪೂರ್ಣತ್ವದ ಸ್ಥಿತಿಯನ್ನು ನಿರ್ಮಿಸಿ, ಆತನ ಶಾಶ್ವತವಾದ ಮೌಲ್ಯಗಳನ್ನು ಬೆಂಬಲಿಸಿ, ಹೆಚ್ಚು ಪಾವನಮಯ ಪ್ರವೃತ್ತಿಯಿಂದ—ಕೂಡಿದ ಲೋಕದಲ್ಲಿ ಬಾಳುವ ಸಾಧ್ಯತೆಯನ್ನು ಕಂಡುಕೊಳ್ಳಲು ಮಾನವನಿಗಿತ್ತ ಅತ್ಯಂತ ಆಶಾದಾಯಕ ಕರೆ. ನಮ್ಮ ಮುನಿವರ್ಯರು ಲೋಕಕ್ಕಿತ್ತ ಪರಿಹಾರ ಈ—ಅಂತರಿಕ ಕ್ರಾಂತಿಯ ಸಿದ್ಧಿಯಿಂದೇ ತೋರುತ್ತದೆ. ಅವರು ಹೇಳುವ ಪ್ರಕಾರ, ಆನಂದದ ನಿಜವಾದ ಗುರಿಯನ್ನು ಮುಟ್ಟಬೇಕಾದರೆ, ವ್ಯಕ್ತಿಗಳು ಜೀವನದ ಏರುಪೇರುಗಳ ಮಧ್ಯದಲ್ಲಿ ತಮ್ಮ ಮನಸ್ಸಿನ ಸಮತೋಲನವನ್ನು ನಿರ್ಮಿಸಿ ಕ್ಷಣದಿಂದ ಕ್ಷಣಕ್ಕೆ ಮಾರ್ಪಡುತ್ತಿರುವ ಜೀವನ ಕ್ರಮದಲ್ಲಿ ಸಮುಚಿತತೆಯನ್ನು ಅಳವಡಿಸಿಕೊಂಡರೆ ಮಾತ್ರ ಸಾಧ್ಯ. ಆಂತರಿಕ ಪರಿವರ್ತನೆಯ ಸಿದ್ಧಿಗಾಗಿ ಅವರು ಅನುಸರಿಸಬೇಕಾದ ನಿಯಮಗಳನ್ನೂ ತಿಳಿಯಬೇಕಾದ ವಿಧಾನವನ್ನೂ ಸವಿಸ್ತಾರವಾಗಿ ಹೇಳಿರುವರು. ನಿಜವಾಗಿ ನೋಡಿದರೆ, ಅವರ ಉದ್ದೇಶ, ಜೀವನದ ಮೂಲಭೂತವೂ ಸಮಗ್ರವೂ ಆದ ವಾಸ್ತವಿಕತೆಯನ್ನು ಕಂಡುಕೊಳ್ಳುವುದೇ ಆಗಿತ್ತು.

ಹಲವು ಶತಮಾನಗಳ ಅತಿ ಸೂಕ್ಷ್ಮ ಪರಿಶೀಲನೆ, ಪ್ರಶಾಂತವಾದ ವಿಶ್ಲೇಷಣೆಗಳಿಂದ ಹಾಗು ಅಸಾಧ್ಯವಾದ ಪರಿಶ್ರಮದಿಂದಲೂ ಲಭಿಸಿದ ಆಧಾರದ ಪ್ರಕಾರ ಪ್ರತಿಯೊಂದು ಅನುಭವವು ಈ ಮೂರು ಘಟಕಗಳನ್ನೊಳಗೊಂಡಿದೆ ಎಂದು ತಿಳಿದು ಬರುತ್ತದೆ. ಅವುಗಳು 1) ಕರ್ತೃ (ಅನುಭವಿಸುವವನು) 2) ವಿಷಯ (ಅನುಭವಿಸಲ್ಪಟ್ಟದ್ದು) ಹಾಗೂ 3) ಕರ್ತೃವಿಗೂ ವಿಷಯಕ್ಕೂ ಇರುವ ಸಂಬಂಧ (ಅನುಭವಿಸುವುದು) ಈ ಮೂರರಲ್ಲಿ ಯಾವುದಾದರೂ ಒಂದು ಲೋಪವಾದರೆ ಒಂದು ಅನುಭವ ಉಂಟಾಗಲಾರದು. ಉದಾಹರಣೆಗೆ, ಪರಮಾಣುವಿನ ಮೂರು ಪದಾರ್ಥಗಳಲ್ಲಿ ಯಾವುದಾದರೂ ಒಂದು ಇಲ್ಲವಾದಲ್ಲಿ ಅದು ಖಂಡಿತವಾಗಿ ಬೇರ್ಪಟ್ಟು ಹೋಗುವುದು.

ಅನುಭವಿಸುವವನು, ಅನುಭವಿಸಲ್ಪಟ್ಟದ್ದು ಮತ್ತು ಅನುಭವಿಸುವುದು— ಹೀಗೆ ಈ ಮೂರು ಸಮ್ಮಿಶ್ರಣದಲ್ಲಿ ಲೌಕಿಕ ವಿಜ್ಞಾನಿಗಳು ತಮ್ಮ ಸಂಶೋಧನೆಗೂ ಸಿದ್ಧಿಗೂ 'ಅನುಭವಿಸಲ್ಪಟ್ಟದನ್ನು ಪ್ರತ್ಯೇಕವಾಗಿ ಆರಿಸಿಕೊಂಡಂಬುದು ವ್ಯಕ್ತ." ಜೀವನದ ಸೂಕ್ಷ್ಮ ವಿಜ್ಞಾನಿಗಳಾದ ಋಷಿಗಳು ತಮ್ಮ ಅನ್ವೇಷಣಾ ಕ್ಷೇತ್ರಕ್ಕೆ "ಅನುಭವಿಸುವವನ' ಲೋಕವನ್ನು ಎತ್ತಿಕೊಂಡರು. ಇದೇ ಲೌಕಿಕ ವಿಜ್ಞಾನಿಗಳಿಗೂ ಋಷಿಗಳಿಗೂ ಇರುವ ಭಿನ್ನತೆ. ಲೌಕಿಕ ವಿಜ್ಞಾನಿಗಳು ಅನ್ವೇಷಣೆಗಾಗಿ ಭೌತಿಕ ವಸ್ತುಗಳ ಬಾಹ್ಯ ಪ್ರಪಂಚದಲ್ಲಿ ತಮ್ಮ ಕಾರ್ಯವೆಸಗುತ್ತಿದ್ದರೆ, ಋಷಿವರ್ಯರು ಕರ್ತೃವಿನ ಆಂತರಿಕ ಪ್ರಪಂಚವನ್ನು ಆದರ ಮೂಲಕ ಸರ್ವ ವ್ಯಾಪಿಯಾದ ಸತ್ಯವನ್ನೂ ಆರಿಸಿಕೊಂಡರು.

ಅಂತರ್ಗಾಮಿನ ಈ ಚಿಂತಕರು ತಮ್ಮ ಸಂಶೋಧನೆಯ ಮೂಲಕವಾಗಿ ಕರ್ತೃವು ವಸ್ತುವಿನ ಸಂಪರ್ಕಗೊಂಡಾಗ ತನ್ನಲ್ಲಿ ಒಂದು ಅನುಭವವನ್ನು ಪಡೆಯುತ್ತಾ

(ಎಂಟನೇ ಪುಟ ನೋಡಿರಿ)



ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ.

O. S. No. 253/1966.

ಲೂಸಿ ಮಸ್ಕರೇನಸ್ ಬ್ಯ— ವಾದಿಳು,

ಮತ್ತು

ಬಾಗು ಪೂಜಾರ್ತಿ ಕೂಡ— ಪ್ರತಿವಾದಿರು

1. ಬಾಗು ಪೂಜಾರ್ತಿ, 2. ಕೊರಗ ಪೂಜಾರಿ — ಉಂಬು ಪೂಜಾರ್ತಿ ಮಕ್ಕಳು. 3. ಕಾಟಿ ಪೂಜಾರ್ತಿ. ಮೈರ ಪೂಜಾರ್ತಿ ಮಗಳು. ಉಡುಪಿ ತಾಲೂಕು ಕಟ್ಟಿಂಗೇರಿ ಗ್ರಾಮದ ರಾಯಿಮನೆ.

ಪ್ರತಿವಾದಿರು ಕುಟುಂಬದ ಆಗಿನ ಯಜಮಾನ್ತಿಯಾಗಿದ್ದು, ಈಗ ಮೃತ ಮೈರೆ ಪೂಜಾರ್ತಿಯು ವಾದಿಗೆ ತಾ. [illegible] ರಲ್ಲಿ ರೂ. 2,700-00ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟು ಪ್ರಕಾರ ಬರಬೇಕಾದ ಅಸಲು ಬಡ್ಡಿ ಕೂಡಿ ರೂ. 3,142-33ಕ್ಕೆ ದಾವಾ ಮಾಡಿದ ಮೇಲಿನ ದಾವೆಯು 1 ರಿಂದ 3ನೇ ವರೆಗಿನ ಪ್ರತಿವಾದಿರ ನೋಟೀಸಿನ ಬಗ್ಗೆ ತಾ. 11-1-67ಕ್ಕೆ ಇಟ್ಟಿದೆ. ಸದ್ರಿಯವರು ಸದ್ರಿ ತಾ. 11-1-67ನೇ ಪೂರ್ವಾಹ್ನ ಘಂಟೆ 10ಕ್ಕೆ ಮೇಲಿನ ವ್ಯಾಜ್ಯದಲ್ಲಿ ಸ್ವಂತ ಕೋರ್ಟಿನ ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿಯವರ ಗೈರು ಹಾಜರಿಯಿಂದ ಮೇಲಿನ ವ್ಯಾಜ್ಯ ತನ್ನಿಯಿಂದಲೇ ತೀರ್ಮಾನಿಸಲ್ಪಡುವದು.

(Sd.) [illegible] C. Rego
Vakil for Plaintiff

ಉಡುಪಿ, ತಾ. 4—4—67.

ಮಧ್ಯ ಪ್ರದೇಶದ ಕೊಳ್ಳೆಗಾರರು—೫.

ಮಾನಸಿಂಹನ ಶಿಷ್ಯ "ರೂಪ"

ಬರೆದವರು : ಶ್ರೀ ಎಚ್. ಎಂ. ನಾರಾಯಣ ಭಟ್.

ಭಾರತದ 'ರೋಬಿನ್ ಹುಡ್' ಎಂದು ಪ್ರಸಿದ್ಧನಾಗಿದ್ದ ಮಾನಸಿಂಹನ ಬಾಲ ಮಿತ್ರನೂ ಶಿಷ್ಯನೂ ಆಗಿದ್ದ "ರೂಪ ನು ಪೈಶಾಚಿಕವಾದ ಅನೇಕ ನರಹತ್ಯೆಗಳ ನ್ನು ಮಾಡಿದ್ದರೂ ಉತ್ತರ ಭಾರತವನ್ನಿಡೀ ಈತನ ಅನೀತಿಯ ಆಕ್ರಮಗಳಿಂದಾಗಿ ನಡುಗಿದ್ದರೂ ಈತನ ವಿರುದ್ಧ ಪೊಲೀಸರು ಕೈಗೊಂಡ ಅನೇಕ ಕಾರ್ಯಕ್ರಮಗಳು ವಿಫಲವಾಗಿದ್ದವು.

ರೂಪನನ್ನು ಹಿಡಿದು ಕೊಟ್ಟವರಿಗೆ ರೂ ೬೦ ಸಾವಿರ ಬಹುಮಾನ ನೀಡುವುದಾಗಿ ಸರಕಾರ ಪ್ರಕಟಿಸಿತು. ಆದರೂ ಪರಿಣಾಮವಾಗಲಿಲ್ಲ. ಹೀಗಾಗಿ ರೂಪನು ಇಂದ್ರಜಾಲ ವಿದ್ಯೆ ತಿಳಿದ ಮಾಯಾವಿಯೆಂದೇ ಹಲವರು ನಂಬಿ ಅನುಯೋಗ್ಯವಾದ ಕಟ್ಟು ಕಥೆಗಳನ್ನು ಹೇಳುತ್ತಿದ್ದರು.

೯೦ ಕ್ಕೂ ಮಿಕ್ಕಿ ಕೊಲೆಗಳು!

ರೂಪನು ೯೦ಕ್ಕೂ ಮಿಕ್ಕಿ ಕೊಲೆಗಳನ್ನು ತನ್ನ ಕೈಗಳಿಂದಲೇ ಮಾಡಿದ್ದ, ಕೊಳ್ಳೆ, ಕಳವು, ದರೋಡೆಗಳ ಪೂರ್ಣ ವಿವರಗಳೇ ಇಲ್ಲ, ಆತನ ಸಂಘದವರು ೧೫೦ ಕ್ಕೂ ಮಿಕ್ಕಿ ಕೊಲೆ ಮೊಕದ್ದಮೆಗಳಲ್ಲಿ ಅಪರಾಧಿಗಳೆಂದು ಪೋಲೀಸರು ಪರಿಗಣಿಸಿದ್ದರು

ರೂಪನ ಸಂಹಾರ ಲೀಲೆಯ ಒಂದು ಮಾದರಿ ಹೀಗೆ.—

ಒಬ್ಬನನ್ನು ಕೊಂದರೆ ಮೃತ ದೇಹದ ಗುರುತು ಸಿಗದಂತೆ ಮಾಡುವುದಕ್ಕಾಗಿಯೇ ಬೇರೊಂದು ತಲೆಯನ್ನೂ ಕಡಿದು ಮೊದಲು ಕೊಲೆ ಮಾಡಿದ ಮುಂಡಕ್ಕೆ ಜೋಡಿಸಿ ರುಂಡಗಳನ್ನು ಮಾತ್ರ ಅದಲು ಬದಲು ಮಾಡುವುದು. ಈ ಬಗ್ಗೆ ಹಚ್ಚ ರುಂಡಗಳನ್ನು ತಂದು ಹಾಜರು ಪಡಿಸುವವರಿಗೆ ಕಳವು ಮಾಲಿನಲ್ಲಿ ಹಿರಿಯ ಪಾಲು! ಹಾಗಾದರೆ ಒಂದೇ ಕೊಲೆಯಾಗಿ ಸಂಭವಿಸಲೇ ಸಾಧ್ಯವಿಲ್ಲ.

ಚಂಬಾಲ್ ನದೀ ತಟ ಪ್ರದೇಶವೇ ರೂಪನ ಕಾರ್ಯಸ್ಥಳವಾಗಿತ್ತು. ೧೮೫೭ರ ಸಿಪಾಯಿ ದಂಗೆ ಕಾಲದಲ್ಲೂ ಈ ಪ್ರದೇಶ ನಿವಾಸಿಗಳು ಭಾಗವಹಿಸಿದ್ದರಂತೆ.

ಆ ಪ್ರದೇಶದ ನಿಸರ್ಗ ಲಕ್ಷಣಗಳೇ ಗಣಲೆಂದಲ್ಲ ಮಾನಸಿಂಹನನ್ನು ಚೋರ ಸಂಘವನ್ನು ರೂಪಿಸಲು ಪ್ರೇರೇಪಿಸಿದವಂತೆ! ಮಾನಸಿಂಹನಿಗೆ ಸರ್ವ ಸಹಾಯ ನೀಡಲು ರೂಪನು ಸ್ವಂತ ಬಳಗ ವನ್ನೂ ಉಪೇಕ್ಷಿಸಿ ಮುಂದೆ ಬ ಪದ್ದ. ಮಾನಸಿಂಹನು ಒಂದು 'ಪ್ಯಾರಲಲ್ ಗವರ್ನ್‌ಮೆಂಟ್'ನ್ನೇ ರೂಪಿಸಿದ್ದನಾಗಿಯೂ ಪ್ರತೀತಿಯಿದೆ. ಮಾನಸಿಂಹನು ಬಡವರನ್ನೂ ಅಂಗವಿಕಲರನ್ನೂ ಪ್ರೋತ್ಸಾಹಿಸುತ್ತಿದ್ದನು.

ಗುರುವೂ ಶಿಷ್ಯನೂ

೧೯೫೫ರಲ್ಲಿ ಮಾನಸಿಂಹನನ್ನು ಪೋಲೀಸರು ಗುಂಡಿಕ್ಕಿ ಕೊಂದ ಬಳಿಕ ರೂಪನು ಪೋಲೀಸರನ್ನು ತೀವ್ರವಾಗಿ ಪ್ರತಿಭಟಿಸಿ ಹೋರಾಡಿದನು. ತನ್ನ ಸಂಘದವರು ರೂಪನಿಗೆ ಸಂಪೂರ್ಣ—ಹಾರ್ದಿಕ ಸಹಾಯ ನೀಡಿದ್ದರು. ಆದರೂ ಪೋಲೀಸರ ಶಕ್ತಿ ಮತ್ತೂ ಹೆಚ್ಚಿದ್ದರಿಂದಾಗಿ ರೂಪನು ಹಿಮ್ಮೆಟ್ಟಲು ನಿರ್ಧರಿಸಿದನಾದರೂ ತನ್ನ ಗುರು (ಮಾನಸಿಂಹ)ವಿನ ಮೃತ ದೇಹವನ್ನು ಪೋಲೀಸರಿಗೆ ಬಿಡೆನೆಂದು ನಿರ್ಧರಿಸಿ ಕಾದುತ್ತಿದ್ದಾಗ ಮಾನಸಿಂಹನ ಸಹೋದರ ನವಾಬಸಿಂಹನು ಗಾಯಗೊಂಡು ಬಿದ್ದನು ಆಗ ಬೇರೆ ಉಪಾಯ ಕಾಣದ ರೂಪನು ನವಾಬಸಿಂಹನನ್ನೆತ್ತಿಕೊಂಡು ಅಲ್ಲಿಂದ ಓಡಿದನು.

ಅಷ್ಟರೊಳಗೆ ಮಾನಸಿಂಹನ ಶಿಷ್ಯರನೇಕರು ಸ್ವಂತ ಸಂಘಗಳನ್ನೇ ರಚಿಸಿದ್ದರು. ಮಾನಸಿಂಹನ ಮರಣದಿಂದಾಗಿ ಈ ಸಂಘಗಳ ಚಟುವಟಿಕೆ ಬಲವಾಯಿತು.

ತಮ್ಮ ಗುರುವಿನ ವಧೆಗೈದ ಪೋಲೀಸ್ ಪಡೆಯನ್ನು ಸಂದರ್ಭ ಸಿಕ್ಕಿದಾಗಲೆಲ್ಲಾ 'ಸಂಘ'ವು ಆತಿಕ್ರಮಿಸಿತು. ಪೋಲೀಸರಲ್ಲಿ ಸಹಾನುಭೂತಿ ಪ್ರದರ್ಶಿಸಿದವರನ್ನು ಕೊಲ್ಲಬೂ ಇವರು ಹೇಸಲಿಲ್ಲ ಹೀಗೆ ೧೯೫೫ರ ಬಳಿಕ ಚೋರ ಸಂಘದವರು ಪೋಲೀಸ್ ಇಲಾಖೆಯ ದೊಡ್ಡ ಸಮಸ್ಯೆಯಾಯಿತು.

ಪೋಲೀಸರ ಮೇಲೆ ಪ್ರತೀಕಾರಕ್ಕಾಗಿಯೇ ರೂಪನು ಚೋರರನ್ನು ಸಂಘಟಿಸಿದ. [ಮಾ]ನಸಿಂಹನಿಗಿಂತಲೂ ರೂಪ ಭಯಂಕರನಾದ.

ಸಿಕ್ಕಿದ ಸಂದರ್ಭ ಸಾಧಿಸುವ ಕೊಳ್ಳೆಗಾರನಾಗಿರಲಿಲ್ಲ—ರೂಪ ಪ್ರತಿಯೊಂದು ಕೊಳ್ಳೆಯ ಬಗ್ಗೂ ಪ್ರತ್ಯೇಕ ಯೋಜನೆ ಸಿದ್ಧವಾಗುವುದು, ಯೋಜನೆಯನ್ನಯ ಸಹೋದ್ಯೋಗಿಗಳೊಂದಿಗೆ ವಿಚಾರ ವಿನಿಮಯ. ಶಿಸ್ತು ಪರಿಪಾಲನೆಯಲ್ಲಿ ರೂಪ ವಿಶೇಷ ಶ್ರದ್ಧೆ ವಹಿಸಿದ್ದ. ಆದರೂ ಸಹೋದ್ಯೋಗಿಗಳೂ ತಂತಮ್ಮ ಅಭಿಪ್ರಾಯ ಹೇಳಬಹುದಾಗಿತ್ತು — ಸಮಾಲೋಚನೆ ವೇಳೆ.

ರೂಪನಿಗೆ ದುಸ್ಸ್ವಾರ್ಥವಿರಲಿಲ್ಲ. ಸಹೋದ್ಯೋಗಿಗಳ ಸುಖ ಮತ್ತು ಸುರಕ್ಷೆಗಾಗಿತ್ತು ಆತನ ಪ್ರಥಮ ಗಮನ ಮನೋರಂಜನೆಗೆ ಅಗತ್ಯವಿದ್ದ ಜನರೂ ವಸ್ತುಗಳೂ ರೂಪನೊಂದಿಗೇ ಇದ್ದಿರ ಬೇಕು. ಪ್ರತಿಯೊಂದು ಕೊಳ್ಳೆಯ ಬಳಿಕ ಒಮ್ಮೆ ಮನರಂಜನಾ ಕಾರ್ಯಕ್ರಮದಿಂದಾಗಿ ಉಲ್ಲಸಿತನಾಗಿ ಚೇತರಿಸಿಕೊಂಡು ಮುಂದಿನ ಕಾರ್ಯಕ್ರಮದ ಚಿಂತನೆ.

ತನ್ನ ಉದ್ಯಮಕ್ಕೊದಗಬಹುದಾದ ಅಪಾಯವನ್ನು ಮನಗಂಡು ರೂಪ ಅವಿವಾಹಿತನಾಗಿಯೇ ಇದ್ದ.

ಸುಂದರ ದೃಢಕಾಯನಾಗಿದ್ದ ರೂಪನಿಗೆ ಕುದುರೆ ಸವಾರಿ ಬಹಳ ಇಷ್ಟ ಬಹಳ ಮುಂಜಾಗರೂಕನಾಗಿಯೇ ಕಾರ್ಯೋನ್ಮುಖನಾಗುತ್ತಿದ್ದ. ಎರಡು ಕೈಗಳಲ್ಲೂ ತುಪಾಕಿಯನ್ನು ಪ್ರಯೋಗಿಸಬಲ್ಲ ರೂಪ ಅತಿಸಮರ್ಥ.

ಮುಮುತ್ತೆ, ಕರುಣೆಗಳನ್ನರಿಯದ ಈ ಚೋರಾಗ್ರೇಸರ ತನ್ನ ಅನುಯಾಯಿಗಳಿಗಿತ್ತ ಆಜ್ಞೆ ಹೀಗಿತ್ತು.—

"ಪ್ರಾಣವನ್ನೋ ಐಶ್ವರ್ಯವನ್ನೋ ಕದಿಯಬಹುದು....ಆದರೆ ಯಾವುದೇ ಸ್ತ್ರೀಯ ಮಾನವನ್ನು ಮಾತ್ರ ಕದಿಯಬಾರದು."

ಮೇಲಿನ ಆಜ್ಞೆಯನ್ನು ಉಲ್ಲಂಘಿಸಿದ ಸಹೋದ್ಯೋಗಿಗಳು ಪ್ರಾಣಾಪಾಯಕ್ಕೊಳಗಾಗುತ್ತಿದ್ದರು—ರೂಪನಿಂದ ನಿರ್ದಾಕ್ಷಿಣ್ಯವಾಗಿ.

ಕಳ್ಳಗೆ ಕಳ್ಳ ಶತ್ರು

ರೂಪನಲ್ಲಿ ವಿರೋಧ ಭಾವವಿದ್ದ ಚೋರರೂ ಇಲ್ಲದಿರಲಿಲ್ಲ ಲಾಖನ್ ಸಿಂಹನೆಂಬ ಅತಿದುಷ್ಟನಾಗಿದ್ದ ಚೋರರನ್ನು ರೂಪ ಇದಿರಿಸಬೇಕಾಗಿ ಬಂದಿತ್ತು. ಲಾಖನ್‌ಸಿಂಹನನ್ನು ಸೋಲಿಸಿದಾಗ ತನ್ನ ತಂಗಡದಲ್ಲಿಯೇ ಇದ್ದವರಲ್ಲೊಬ್ಬನಾದ ಮಡರ ರೂಪನನ್ನು ವಿರೋಧಿಸಿ ತಲೆಯೆತ್ತಿದ. ರೂಪನು ಆತನನ್ನೂ ಸಂಹರಿಸಿದ.

ಒಂದು ರಾತ್ರಿ ರೂಪ ತನ್ನ ಡೇರೆಯನ್ನು ಅರಣ್ಯದಲ್ಲಿ ಹಾಕಿದ್ದ ಕೀರ್ತನೆಗಳನ್ನು ಹಾಡುತ್ತಾ ಆ ದಾರಿಯಾಗಿ ಓರ್ವ ಸನ್ಯಾಸಿ ಬಂದುದನ್ನು ತಿಳಿದ ರೂಪ ಸಂಶಯಗೊಂಡು ತುಪಾಕಿ ಹಿಡಿದದ್ದ. ಸನ್ಯಾಸಿ ಶಾಂತ ಸ್ವರದಲ್ಲಿಯೇ ಹೇಳಿದ— 'ನೀನು ರೂಪನೆಂದು ತಿಳಿಯಿತು.... ನನ್ನನ್ನು ಕೊಂದರೆ ನೀನು ಮತ್ತ ಪಶ್ಚಾತ್ತಾಪಪಡಬೇಕಾದೀತ.

ಈ ಉಪದೇಶಗಳೊಂದೂ ರೂಪನಿಗೆ ಬೇಕಾಗಲಿಲ್ಲ ಸನ್ಯಾಸಿಯ ದೇಹ ಶಿರದಿಂದ ಬೇರ್ಪಟ್ಟಿತ್ತು

ಸ್ವಲ್ಪ ದಿನಗಳಲ್ಲೇ ಸನ್ಯಾಸಿಯ ಪಾಪದ ಬಗ್ಗೆ ರೂಪನಿಗೆ ಮನವಂಕೆಯಾಯಿತು ಸನ್ಯಾಸಿಯನ್ನು ಕೊಲೆ ಮಾಡಬಾರದಿತ್ತೆಂದೇ ಆತನ ಮನಸ್ಸು ಅಸ್ವಾಸ್ಥ್ಯಕ್ಕೀಡಾಯಿತು. ಪ್ರಾಯಶ್ಚಿತ್ತಗಳನ್ನೇ ಕವಾದರೂ ಪ್ರಯೋಜನವಿಲ್ಲ. ಅನೇಕ ದೇವಾಲಯಗಳಲ್ಲ ತನ್ನ ಖರ್ಚಿನಿಂದ ಬಂಗಾರದ ಗಂಟೆಗಳನ್ನಿರಿಸಿದ, 'ಈ ಗಂಟೆ ಪಂಡಿತ್ ರೂಪ ನಾರಾಯಣ ಶರ್ಮನು ತನ್ನ ಪಾಪಗಳ ಪ್ರಾಯಶ್ಚಿತ್ತವಾಗಿ ಭಗವಂತನಿಗೆ ಸಮರ್ಪಿಸಿದ್ದ' ಎಂದು ಆ ಗಂಟೆಗಳಲ್ಲ ಕೆತ್ತಲ್ಪಟ್ಟಿತ್ತು.

ತನ್ನ ಅತಿ ಬೀಭತ್ಸವಾದ ದುರಾಚಾರಗಳಿಂದಾಗಿ ಕುಪ್ರಸಿದ್ಧನಾಗಿದ್ದ ರೂಪ ೨೬—೧೦—೧೯೫೯ರಂದು ಪೋಲೀಸರ ಗುಂಡಿಗೆ ಬಲಿಯಾದ.

—(ಆಧಾರದಿಂದ.)

ಎಚ್ಚರಿಕೆ ವಿಚಾರಗಳಲ್ಲ ಕಡೇ ಬಾವನೆ ಹುತರಿಂ. ಪ್ರಿಯ ವಿಚಾರಗಳಲ್ಲಿ ಮೊದಲ ಭಾವನ ಸುಂದರ

o o o

ಚೋರನಿಗೆ ಪ್ರತಿ ಕಂಬವೂ ಪೋಲೀಸನಂತ ತೋರುವಂತೆ ಚೋರ ಮನಸಿನ ಎಲ್ಲ ಅಂದೆಯ ಎಚ್ಚರಿಸುತ್ತಿರುತ್ತಾನೆ.

o o o

ತಪ್ಪನ್ನು ತಪ್ಪೆಂದು ತಿಳಿಯುಕೊಳ್ಳುವುದೇ ಜ್ಞಾನ ಪ ಟ್ಟಲೇರುವ ಪ್ರಥಮ ಹೆಜ್ಜೆ.

o o o

ಮಳೆಗಾಲದ ಬಿರುಮಳೆ ಹೂವನ್ನು ಅರಳಿಸದು. ಅದರಂತೆ ಪ್ರೇಮ ಸಂಚಿತವಲ್ಲದ ಕಂಬನಿ ಹೃದಯವನ್ನರಳಿಸದು.

o o o

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಮಾರ್ಟಿನ್ ಡಬ್ಲ್ಯೂ. ಮಿಲ್ಲರ್ ಕಾಗದದ ಸುರುಳಿಯಲ್ಲಿ ಕಟ್ಟಿ ಆಹಾರವನ್ನು ಕೆಡದಂತೆ ಒಂದು ವರ್ಷಗಳ ಕಾಲ ಇರಿಸುವ ವಿಧಾನವನ್ನು ಕಂಡುಹಿಡಿದರು. ಅವರು ತನ್ನ ಕೈಗಳಲ್ಲಿ ಇಂತಹ ಒಂದು ಸುರುಳಿಯನ್ನು ಹಿಡಿದುಕೊಂಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಇದು ನಮ್ಮ ಭಾರತ

ಇಲ್ಲಿ ಪ್ರಜಾಸತ್ತೆಯ ಬೇರು ಬಲಿಯಿತು

ಸುಮಾರು ನಾಲ್ಕು ತಿಂಗಳ ಹಿಂದೆ ಜಗತ್ತಿನ ಪ್ರಜಾಪ್ರಭುತ್ವವಾದಿ ಮತ್ತು ಸಾಮ್ಯವಾದಿ ದೇಶಗಳಲ್ಲಿ ಭಾರತದ ಸಾರ್ವತ್ರಿಕ ಚುನಾವಣೆಯ ಬಗ್ಗೆ ಅಭಿಪ್ರಾಯ ವ್ಯಕ್ತವಾಗಿತ್ತು.

ಫೆಬ್ರವರಿ ತಿಂಗಳಲ್ಲಿ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿದ್ದುವು. ಪ್ರಜಾಪ್ರಭುತ್ವವು ನಾಲ್ಕನೆಯ ಬಾರಿಗೆ ತನ್ನ ಶಾಸಕರನ್ನು ಆರಿಸಲಿತ್ತು.

ಲೋಕನಾಯಕ ಭಾರತ ರತ್ನ, ಕಾಂಗ್ರೆಸಿನ ಉಸಿರು ಜವಾಹರಲಾಲರಿಲ್ಲದೆ ಮೊತ್ತ ಮೊದಲ ಬಾರಿಗೆ ಕಾಂಗ್ರೆಸ್ಸು ಚುನಾವಣೆಯಲ್ಲಿ ಹೋರಾಡಲಿತ್ತು.

ಕೆಂಪು ಚೀನಾ— ಪಾಕಿಸ್ತಾನಗಳ ಆಕ್ರಮಣ ಆಹಾರಾಭಾವ, ವಿದೇಶೀ ನೆರವಿನ ಡೋಲಾಯಮಾನಸ್ಥಿತಿ, ಆರ್ಥಿಕ ಅಧಃಪತನ, ಅತಿ ಪ್ರಸರಣ, ಬೆಲೆಯೇರಿಕೆ, ಹತ್ತಾರು ರಾಜಕೀಯ ಪಕ್ಷಗಳು, ಸ್ವಯಂ ಕಾಂಗ್ರೆಸ್ಸಿನಲ್ಲೇ ಅಂತಃಕಲಹ, ರಾಷ್ಟ್ರೀಯತೆ ಕೊರತೆ— ಮೊದಲಾದ ಒಂದಲ್ಲ ನೂರು ವಿಪತ್ತುಗಳ ಮೇಲೆ ಜೋಕಾಲಿಯಾಡುತ್ತಿದ್ದ ಭಾರತದ ಚುನಾವಣೆಗಳು ಜಾಗತಿಕ ಕುತೂಹಲ ಕೆರಳಿಸಿದ್ದುದು ತಪ್ಪೇನಲ್ಲ.

ದೇಶ— ವಿದೇಶಗಳ ರಾಜಕೀಯ ಶಾಸ್ತ್ರಜ್ಞರು ತಂತಮ್ಮ ಮೆದುಳಿಗೆ ತೋಚಿದಂತ ಭವಿಷ್ಯವನ್ನು ನುಡಿದಿದ್ದರು.

ಹೆಚ್ಚಿನವರ ಅಭಿಪ್ರಾಯವನ್ನು ಕ್ರೋಢೀಕರಿಸಿ ಒಂದೇ ಮಾತಿನಲ್ಲಿ ಹೇಳುವುದಾದರೆ 'ಭಾರತದಲ್ಲಿ ಪ್ರಜಾಸತ್ತೆಯಳಿದು ಹೋಗುತ್ತದೆ.'

ನಿರಾಶ— ವಿನಾಶಗಳಿಂದ ತತ್ತರಿಸಿದ್ದ ಈ ಭವಿಷ್ಯವಾದಿಗಳು ಚುನಾವಣೆಗ ಮೊದಲ ದಿನಗಳಲ್ಲಿ ಒಂದಲ್ಲ ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು.

ದಶಂಬರ ತಿಂಗಳಲ್ಲಿ ಇವರು ಕಡ್ಡಿ ಮುರಿದಂತ ಹೇಳಿದ್ದರು. ಭಾರತದಲ್ಲಿ ಫೆಬ್ರವರಿ ತಿಂಗಳಲ್ಲಿ ಚುನಾವಣೆಯೇ ನಡೆಯಲಾರದು—ಎಂದು.

ಜನವರಿ ಬಂದಾಕ್ಷಣ ಇವರ ರಾಗ ಬದಲಾಯಿತು—ಫೆಬ್ರವರಿಯಲ್ಲಿ ಚುನಾವಣೆಗಳು ನಡೆದರೂ ನಿರಾತಂಕವಾಗಿ ದೇಶ ತುಂಬ ರಕ್ತಪಾತವಾಗುವುದು ಎಂದು ಅನ್ನತೊಡಗಿದರು.

ಫೆಬ್ರವರಿಯ ಅವರ ಭವಿಷ್ಯವಿದು— ಪರಿಣಾಮಗಳು ಭ್ರಷ್ಟ ರಾಜಕೀಯ ನೇತಾರರನ್ನು ಎತ್ತಿಹಿಡಿಯುವುವು.

— ಈ ಯಾವ ಭವಿಷ್ಯವೂ ಸತ್ಯವಾಗಲಿಲ್ಲ. ಫೆಬ್ರವರಿ ಮಧ್ಯಾವಧಿಯಲ್ಲಿ ನಿಯೋಜಿತ ದಿನಗಳಲ್ಲೇ ಚುನಾವಣೆಗಳು ನಡೆದುವು. ಎಲ್ಲ ರಂಗಗಳಲ್ಲಿಯೂ ವಿದೇಶೀ ರಾಜಕಾರಣ ಪಟುಗಳ ಭವಿಷ್ಯಗಳನ್ನು ಸುಳ್ಳುಮಾಡಿದುವು. ಯಾವುದೇ ರೀತಿಯ ರಕ್ತಪಾತ ನಡೆಯಲಿಲ್ಲ; ಗೊಂದಲಗಳಿಗೂ ಅವಕಾಶ ದೊರೆಯಲಿಲ್ಲ. ಉದ್ಯೋಗಿ ರಾಜಕಾರಣ ಪಟುಗಳ ಕಾರುಭಾರವೂ ನಡೆಯಲಿಲ್ಲ. ವಿದೇಶೀಯರ ಯಾವ ಆಟಕ್ಕೂ ಇಲ್ಲಿ ಅವಕಾಶವುಳಿಯಲಿಲ್ಲ.

ಭಾರತದ ೨೫ ಕೋಟಿ ಸ್ತ್ರೀ–ಪುರುಷ ಮತದಾರರು ತಮ್ಮ ದೃಷ್ಟಿಯಲ್ಲಿ ಉತ್ತಮ ಶಾಸಕರನ್ನು ಆರಿಸಲು, ಸ್ವತಂತ್ರರಾಗಿ ಮತದಾನ ಮಾಡಲು, ಮತಕಟ್ಟೆಯೆದುರು ಸಾಲಾಗಿ ನಿಂತು ತಮ್ಮ ಸರದಿಯನ್ನು ಕಾಯುತ್ತಿರುವ ದೃಶ್ಯ ಇವರ ಬೆರಳನ್ನು ಮೂಗಿಗೇರಿಸದೆ ಬಿಡಲಿಲ್ಲ.

ಯಾವುದೇ ಒತ್ತಾಯ, ಜಾತಿ, ಪಂಥಗಳಿಗೆ ಮಾರುಹೋಗದೆ, ತಮ್ಮ ಅಂತರಾತ್ಮವು ಯಾರನ್ನು ಆರಿಸಬಯಸಿತ್ತೋ ಅಂಥವರಿಗೆ ಮತದಾರರು ಮತವಿತ್ತರು. ಮನೆಯ ಹಿರಿಯರು—ಕಿರಿಯರು ಎಲ್ಲರೂ ಸ್ವತಂತ್ರವಾಗಿಯೇ ಮತ ನೀಡಿದರು. ಯಾವ ಆಸೆ—ಆಮಿಷಗಳಿಗೂ, ಅಂಜಿಕೆ—ಆಗ್ರಹಗಳಿಗೂ ಯಾರೂ ಬಲಿಯಾಗಲಿಲ್ಲ.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು ಭಾರತೀಯ ಪ್ರಜಾಪ್ರಭುತ್ವದಲ್ಲಿ ಒಂದು ಬಗೆಯ ಕ್ರಾಂತಿಯೆಬ್ಬಿಸಿದುವು— ಆದರೆ, ಅದು ಪ್ರಜಾಸತ್ತೆಗೆ ಒಪ್ಪುವಂತಹ ಕ್ರಾಂತಿ. ರಕ್ತಪಾತಕ್ಕೆ ಅವಕಾಶವೇ ಇಲ್ಲದ ಶಾಂತ— ಧೀರ ಶಾಂತ— ವಿಧಾನದ ಕ್ರಾಂತಿ.

ಪರಿಣಾಮಗಳು ಹೊರಬಿದ್ದ ಮೇಲೆ ಒಬ್ಬೊಬ್ಬರ ಅಂಬೋಣ ಒಂದೊಂದು ತರವಾಯಿತು. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರ ತ್ಯಜಿಸಿತು — ಆದರೆ, ಇದರಿಂದ ಪ್ರಜಾಸತ್ತೆ ಸಾಯಲಿಲ್ಲ. ಅದು ಮತ್ತೂ ಬಲವೇ ಆದಂತಾಯಿತು.

ರಾಜ್ಯಗಳಲ್ಲೂ ಪ್ರಜಾ ಪ್ರಭುತ್ವಕ್ಕೆ ಒಪ್ಪುವ ರೀತಿಯಲ್ಲಿ ಸರಕಾರಗಳು ಕ್ಷಿಪ್ರದಲ್ಲಿಯೇ ರಚಿತವಾದುವು. ಸಚಿವ ಸಂಪುಟಗಳೂ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದುವು.

ಇದಕ್ಕಿಂತ ಹೆಚ್ಚಿನದು ಇನ್ನೇನು ಬೇಕು?

ವಿದೇಶೀಯ ಕುಚೇಷ್ಟೆಗಾರರು ಈ 'ಸ್ಥಿತ್ಯಂತರ'ವನ್ನು 'ಪ್ರಜಾಸತ್ತೆಯ ಅವಸಾನ'ವೆಂದು ಹೆಸರಿಸುವುದಾದಲ್ಲಿ ಅದವರ ಮೂರ್ಖತನದ ಪರಮಾವಧಿ.

ಇನ್ನುಳಿದ ರಾಷ್ಟ್ರಪತಿ— ಉಪರಾಷ್ಟ್ರಪತಿಗಳ ಚುನಾವಣೆಯ ಬಗ್ಗೆಯೂ ದೇಶ-ವಿದೇಶಗಳಲ್ಲಿ ಅನೇಕಾನೇಕ ಊಹಾಪೋಹಗಳು ಎದ್ದುವು ನಿಜ. ಆದರೆ ಭಾರತೀಯರು ಪ್ರಜಾಸತ್ತೆಯಲ್ಲಿ ಎಷ್ಟು ಸುಪುಷ್ಟರು. ಅವರು ಅದರ ಉಳಿವಿಗಾಗಿ ಏನನ್ನೂ ಮಾಡ ಸಮರ್ಥರು. ಜನಮನವನ್ನು ಅರಿತ ಮಾನ್ಯ ಶಾಸಕರು ಅವರ ಇಂಗಿತದಂತೆ ರಾಷ್ಟ್ರಪತಿ—ಉಪರಾಷ್ಟ್ರಪತಿ ಚುನಾವಣೆಯಲ್ಲಿ ಭಾಗವಹಿಸಿ ಪ್ರಜಾಸತ್ತೆಯ ಕಿರೀಟಕ್ಕೆ ನವಿಲು ಗರಿಯೇರಿಸಿಯೇ ಬಿಡುತ್ತಾರೆ.

ಇಲ್ಲಿಗೆ ವಿದೇಶೀಯರು ಬೀರಿದ ವಕ್ರದೃಷ್ಟಿಗೆ ಐದು ವರುಷಕಾಲ ವಿರಾಮ ದೊರೆತೀತು.

ಅಭಿಪ್ರಾಯ

ರಾಜಕೀಯ ವ್ಯಭಿಚಾರ

ಬರೆದವರು:
ಶ್ರೀ ಎಂ. ಉಮೇಶ ರಾವ್,
ಎಡ್ವೋಕೇಟ್.

ಪ್ರಜಾಸತ್ತಾತ್ಮಕ ತತ್ವಗಳನ್ನು ಅನುಸರಿಸಿ ಆಡಳಿತವನ್ನು ನಿರ್ವಹಿಸಲಿಕ್ಕಿರುವ ಅತಿ ದೊಡ್ಡ ದೇಶವು ನಮ್ಮದಾಗಿದೆ. ದೇಶವು ಬಹಳ ವಿಸ್ತಾರವಾಗಿದ್ದು ಅವಿದ್ಯಾವಂತರ ಸಂಖ್ಯೆಯು ಹೆಚ್ಚಿನ ಪರಿಮಾಣದಲ್ಲಿರುವುದರಿಂದಲೂ ನೂರಾರು ಭಾಷೆಗಳು ಬಳಕೆಯಲ್ಲಿರುವುದರಿಂದಲೂ, ಈ ಪ್ರಯತ್ನವು ಎಷ್ಟರ ಮಟ್ಟಿಗೆ ಸಫಲವಾಗ ಬಹುದೆಂಬುದರ ಕುರಿತು ಸಂಶಯಕ್ಕೆ ಆಸ್ಪದವಿದ್ದಿತು. ಆದಾಗ್ಯೂ ಕಳೆದ ಎರಡು ದಶಕಗಳಲ್ಲಿ ಈ ಪರೀಕ್ಷೆಯಲ್ಲಿ ನಾವು ಗಣನೀಯ ಜಯವನ್ನು ಗಳಿಸಿರುವುದು ಸಂತೋಷದ ವಿಷಯ. ಈ ಅವಧಿಯಲ್ಲಿ ನಡೆದ ನಾಲ್ಕು ಸಾರ್ವತ್ರಿಕ ಚುನಾವಣೆಗಳಲ್ಲಿ ಜನರು ಉತ್ಸಾಹದಿಂದ ಭಾಗವಹಿಸಿ, ಮತದಾನದ ಮಹತ್ವವನ್ನು ತಮ್ಮ ಮೇಲಿರುವ ವಿಶೇಷ ಹೊಣೆಯನ್ನು ಸರಿಯಾಗಿ ಅರಿತಿರುವರೆಂಬುದನ್ನು ಪ್ರಕಟಗೊಳಿಸಿರುವರು. ಇತ್ತೀಚೆಗೆ ನಡೆದ ಚುನಾವಣೆಯ ಮೊದಲು ಹಲವು ಪ್ರದೇಶಗಳಲ್ಲಿ ನಡೆದ ಗಲಭೆಗಳ ವಿವರವನ್ನು ಓದಿದಾಗ, ಚುನಾವಣೆಯು ಶಾಂತರೀತಿಯಲ್ಲಿ ಮುಂದರಿಯುವ ಕುರಿತು ಸಹಜವಾದ ಸಂದೇಹ ಉಂಟಾಗಿದ್ದಿತು. ನಿಶ್ಚಿತ ವೇಳೆಯಲ್ಲಿ ಚುನಾವಣೆಯು ನಡೆಯಲಾರದೆಂದೇ ಕೆಲವು ರಾಜಕೀಯ ಧುರೀಣರು ತಮ್ಮ ತರ್ಕದ ಮುನ್ಸೂಚನೆಯನ್ನು ಬಹಿರಂಗಪಡಿಸಿದ್ದರು. ರಾಜಕೀಯ ಭವಿಷ್ಯವಾದಿಗಳ ಈ ರೀತಿಯ ಉದ್ರೇಕಕರವಾದ ಹೇಳಿಕೆಗಳಿದ್ದಾಗ್ಯೂ ಮಿಲಿಯಗಟ್ಟಲೆ ಮತದಾರರು ವ್ಯಕ್ತಪಡಿಸಿದ ಅಭಿಪ್ರಾಯಗಳನು ಆಧರಿಸಿ, ರಾಜ್ಯಗಳಲ್ಲಿ ಸರಕಾರಗಳು ಏರ್ಪಟ್ಟಿರುವುದು ಅಭಿನಂದನೀಯವಾಗಿದೆ.

ರಾಜಕೀಯವು ಅಪಾಯಕರವಾದ ವಾಹನವೆಂಬುದಾಗಿಯೂ ನೀತಿತತ್ವಗಳನ್ನು ಲಕ್ಷಿಸದಿರುವವರು ಮಾತ್ರ ಅದರಲ್ಲಿ ಭಾಗವಹಿಸಲು ಅರ್ಹರೆಂಬುದಾಗಿಯೂ ಟೀಕೆ ಮಾಡುವುದುಂಟು. ಇಂತಹ ಅಭಿಪ್ರಾಯವು ಕೆಲವೇ ಜನರಿಗೆ ಮಾತ್ರ ಅನ್ವಯಿಸುವುದು. ಆದರೆ ಇತ್ತೀಚೆಗೆ ಕೆಲವು ಪ್ರತಿನಿಧಿಗಳು ಅಭಿನಯಿಸುವ ಡೊಂಬರಾಟವನ್ನು ನೋಡಿದರೆ ಮೇಲೆ ಹೇಳಿದ ಟೀಕೆಯು ಸ್ವಲ್ಪ ತೀಕ್ಷ್ಣವಲ್ಲವೆಂದೇ ತಿಳಿಯಬೇಕಾಗುತ್ತದೆ. ಸಭ್ಯರೆಂದು ಹೇಳಲ್ಪಡುವ ಗೃಹಸ್ಥರು ಯಾವುದಾದರೊಂದು ರಾಜಕೀಯ ಪಕ್ಷದ ಸದಸ್ಯರಾಗಿ ಚುನಾವಣೆಯಲ್ಲಿ ಭಾಗವಹಿಸಿ, ತಮ್ಮ ಪಕ್ಷದ ವಿಶೇಷ ಗುಣಗಳನ್ನು ನೂರಾರು ಸಭೆಗಳಲ್ಲಿ ವಿವರಿಸಿ, ಕೆಲವೊಮ್ಮೆ ಇತರ ರಾಜಕೀಯ ಪಕ್ಷಗಳ ದೋಷಗಳನ್ನು ಎತ್ತಿತೋರಿಸುವುದು ವಾಡಿಕೆಯಾಗಿದೆ. ನೂರಾರು ಯುವಕ ಯುವತಿಯರೂ ಮತದಾರರೂ ತಂತಮ್ಮ ನ್ಯಾಯವಾದ ಕೆಲಸಗಳನ್ನು ಬದಿಗೊತ್ತಿ ಇವರು ಜಯಶೀಲರಾಗುವಂತೆ ಸಮಯವನ್ನು ವಿನಿಯೋಗಿಸುತ್ತಾರೆ. ಸಾವಿರಾರು ಮತದಾರರು ತಮ್ಮ ಅಮೂಲ್ಯವಾದ ಮತಗಳನ್ನು ಈ ಹುರಿಯಾಳುಗಳ ಪರವಾಗಿ ಕೊಡುವುದು ಮಾತ್ರವಲ್ಲ, ಅವರು ಜಯಿಸಿದ ಕೂಡಲೆ ಅವರನ್ನು ವಿಜೃಂಭಣೆಯಿಂದ ಬೀದಿಬೀದಿಗಳಲ್ಲಿ ಮೆರವಣಿಗೆಯಾಗಿ ಕೊಂಡುಹೋಗಿ, ಹಾರಗಳನ್ನು ಅರ್ಪಿಸಿ, ಜಯಘೋಷವನ್ನು ಮಾಡಿ ತಮ್ಮ ಗೌರವವನ್ನೂ ಸಂತೋಷವನ್ನೂ ವ್ಯಕ್ತಪಡಿಸುವುದನ್ನೂ ನಾವು ಕಾಣುತ್ತೇವೆ. ಈ ರೀತಿ ಚುನಾಯಿತರಾದ ನಂತರ ಐದು ವರ್ಷಗಳ ವರೆಗೆ, ತಮ್ಮ ಸ್ಥಾನಗಳು ಭದ್ರವಾಗಿರುವುದಾಗಿಯೂ, ಯಾವ ಮತದಾರರನ್ನು ಒಲಿಸಲು ತಾವು ಸರ್ವಪ್ರಯತ್ನವನ್ನು ಮಾಡಿದೆವೋ ಅಂತಹವರಿಗೆ ತಮ್ಮ ಮೇಲೆ ಯಾವ ಅಧಿಕಾರವೂ ಇಲ್ಲವೆಂಬುದಾಗಿಯೂ ಪ್ರತಿನಿಧಿಗಳು ಬಲ್ಲರು. ಸ್ಥಾನವನ್ನು ಪಡೆದ ಬಳಿಕ ತಮ್ಮ ಕರ್ತವ್ಯವನ್ನು ಕೆಲವರು ಸಂಪೂರ್ಣವಾಗಿ ಕಡೆಗಣಿಸುವುದನ್ನು ನಾವು ಕಾಣುತ್ತೇವೆ. ತಮ್ಮ ನಡತೆಯು ನ್ಯಾಯವಾದುದೋ ಪ್ರಾಮಾಣಿಕವಾದುದೋ ಎಂಬುದನ್ನು ಗಮನಿಸದೆ, ಕೆಲವು ಪ್ರತಿನಿಧಿಗಳು ತಮ್ಮ ಪಕ್ಷವನ್ನು ತೊರೆದು ಬೇರೊಂದು ಪಕ್ಷವನ್ನು ಸೇರುವುದು ಶೋಚನೀಯವಾಗಿದೆ.

ಮತದಾರರನ್ನು ವಂಚಿಸುವ ಇಂತಹ ನಡತೆಯನ್ನು ಕೊನೆಗಾಣಿಸುವರೆ ಯೋಗ್ಯ ಕ್ರಮವನ್ನು ಕೈಕೊಳ್ಳುವುದು ಅತ್ಯಗತ್ಯ. ಒಬ್ಬ ವ್ಯಕ್ತಿಯು ಯಾವದೊಂದು ರಾಜಕೀಯ ಪಕ್ಷವನ್ನು ತ್ಯಜಿಸಿ ಮತ್ತೊಂದನ್ನು ಸೇರುವ ಮೊದಲು ತಾನು ಮೊದಲಿದ್ದ ಪಕ್ಷದ ವತಿಯಿಂದ ಸ್ಪರ್ಧಿಸಿ ಪಡೆದ ಸ್ಥಾನವನ್ನು ಕೂಡಾ ತ್ಯಜಿಸಬೇಕಾದುದು ನ್ಯಾಯ ಸಮ್ಮತವಾಗಿದೆ. ಅಭಿಪ್ರಾಯ ಸ್ವಾತಂತ್ರ್ಯವನ್ನು ತಡೆಯುವುದು ಪ್ರಜಾಸತ್ತೆಯ ಒಳ್ಳೆಯ ಲಕ್ಷಣವಲ್ಲ. ಯಾವ ಪಕ್ಷವು ಯೋಗ್ಯವಾದುದು ಅಥವಾ ಯಾವ ಪಕ್ಷವನು ಸೇರಿದ ನಂತರ ಅನ್ಯ ಹಿತಸಾಧನೆಯಾಗಬಹುದೆಂದು ನಿರ್ದಿಷ್ಟಪಡಿಸುವರೆ ಪ್ರತಿಯೊಬ್ಬ ನಾಗರಿಕನಿಗೆ ಜನ್ಮಸಿದ್ಧವಾದ ಹಕ್ಕಿದೆ. ಆದರೆ ಒಂದು ಪಕ್ಷದ ವತಿಯಿಂದ ಚುನಾವಣೆಯಲ್ಲಿ ಭಾಗವಹಿಸಿ ಜನರ ಬೆಂಬಲವನ್ನು ಪಡೆದು ಜಯಿಸಿದ ನಂತರ, ಆ ಸ್ಥಾನವನು ತ್ಯಜಿಸದೆ, ಜನತೆಯನ್ನು ವಂಚಿಸಿ ಬೇರೊಂದು ಪಕ್ಷವನ್ನು ಸೇರುವ ಹೇಯ ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ. ಚುನಾವಣಾ ನಿಯಮಗಳಲ್ಲಿ ಈ ಕುರಿತು ತಕ್ಕ ಬದಲಾವಣೆಗಳನ್ನು ರೂಪಿಸಿ ಈ ರೀತಿಯ ರಾಜ

(ಒಂಭತ್ತನೇ ಪುಟ ನೋಡಿರಿ)



ಇದು ಕೃತಕ ಚಿತ್ರವೇನಲ್ಲ. ಕಣ್ಣಿನ ಚಲನ—ವಲನಗಳನ್ನು ಸರಿಯಾಗಿ ತಿಳಿದುಕೊಳ್ಳಲು ಯಂತ್ರಗಳನ್ನು ಹರಡಿಡಲಾಗಿದೆ. ಮೆಸೆಚುಸೆಟ್ಸ್‌ನ ತಾಂತ್ರಿಕ ಸಂಸ್ಥೆಯು ಈ ಸಂಬಂಧದಲ್ಲಿ ಸಂಶೋಧನೆಗೆ ಮುಂದಾಗಿದೆ.

ಜೀವನ ಮತ್ತು ಜೀವನ ಕಲೆ

(ಐದನೇ ಪುಟದಿಂದ)

ನೆ. ಅನುಭವಿಸುವವನು ಭೌತಿಕವಾಗಿ ಒಬ್ಬನೇ ಆಗಿದ್ದರೂ ವಿಷಯದೆಡೆಗೆ ತನ್ನಲ್ಲಾದ ನಾನಾ ತರದ ಸೂಕ್ಷ್ಮ ಪ್ರತಿಕ್ರಿಯೆಗಳ ನಿಮಿತ್ತ ತಾನು, ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕಗಳೆಂಬ ನಾಲ್ಕು ವಿಭಿನ್ನ ವ್ಯಕ್ತಿತ್ವಗಳ ಕೂಟವೆಂದು ತಿಳಿದುಕೊಂಡನು. ಅವುಗಳು ಅತಿ ಗಹನವಾಗಿರುವುದರಿಂದ ಹಾಗು ಅವು ಅನುಭವದ ವೇಳೆ ಅತಿ ತೀವ್ರವಾಗಿ ವರ್ತಿಸುವುದರಿಂದ ಓರ್ವ ಸಾಮಾನ್ಯ ಬಾಹ್ಯ ವೀಕ್ಷಕನು ಒಂದೇ ಕಾಲದಲ್ಲಿ ನಡೆಯುವ ಈ ಕಾರ್ಯದ ಸೂಕ್ಷ್ಮ ಭೇದವನ್ನು ಗುರುತಿಸಲಾರನು.

ಅವರ ಕಠಿಣವಾದ ಸಂಶೋಧನೆಗಳಿಂದ ಹಾಗೂ ಸುದೀರ್ಘವಾದ ಚಿಂತನೆಗಳಿಂದಲೂ ನಮಗೆ ಸ್ಫಟಿಕದಂತೆ ನಿಚ್ಚಳವಾದ ತತ್ವವೊಂದು ಗೋಚರವಾಗುತ್ತದೆ. ಅದಕ್ಕನುಸಾರ, ಕರ್ತೃ ವಸ್ತುವಿನ ಸಂಪರ್ಕ ಹೊಂದಿದಾಗ ಅದು ಸಮಗ್ರವಾದ ಏಕೈಕ ಘಟಕವಾಗಿ ತೋರುವ ಬದಲು ನಾಲ್ಕು ವಿಭಿನ್ನ ವ್ಯಕ್ತಿಗಳಂತೆ ವರ್ತಿಸುತ್ತದೆ. ಪ್ರತಿಯೊಂದಕ್ಕೂ ತನ್ನದೇ ಆದ ಕೊರತೆಗಳು ಮತ್ತು ಬೆಲೆಗಳು ಇರುತ್ತವೆ. ಇವನಲ್ಲಿಯ ನಾಲ್ಕು ಹೊದಿಕೆಗಳು ಪ್ರತಿಯೊಂದು ವಿಷಯದ ಅಥವಾ ಜೀವಿಯ ವಸ್ತುವಿನಿಂದ ನಿಶ್ಚಿತವಾದ ಪರಿಸ್ಥಿತಿಯ ಪ್ರತಿಯೊಂದು ಸಂಘಾತವನ್ನು ಸ್ವೀಕರಿಸಿ ಕೂಡಲೇ ಅದನ್ನು ಅನುಭವಿಸಲು ಕಾತರಗೊಳ್ಳುವುವು. ನಿಮ್ಮ ನೆರೆಮನೆಯವನು ನಿಮಗೊಂದು ಅಪೂರ್ವವಾದ ಹಣ್ಣನ್ನು ಬಹುಮಾನವಾಗಿ ನೀಡಿದನೆಂದು ಭಾವಿಸೋಣ. ಆಗ ನಿಮ್ಮಲ್ಲಿರುವ ದೈಹಿಕ ಮನುಷ್ಯನು ತಕ್ಷಣವೇ ಅದನ್ನು ಅನುಭವಿಸಲು ಹಾರಾಡುವನು. ಕಣ್ಣುಗಳು ಅದರ ಆಕಾರ, ಮೂಗ ಅದರ ಪರಿಮಳ, ಚರ್ಮ ಅದರ ಸ್ಪರ್ಶ—ಇವುಗಳ ಫಲವಾಗಿ ನಾಲಿಗೆ ನೀರೂರಲು ಆರಂಭಿಸುವುದು. ನಿಮ್ಮಲ್ಲಿರುವ ಮಾನಸಿಕ ಮನುಷ್ಯನು ಕೂಡಾ ಅದನ್ನು ಅನುಭವಿಸಲು ವೇಗದಿಂದ ಹೊರಡುವನು. ಆದರೆ ಆ ಕ್ಷಣದಲ್ಲಿ—ಈಗ ಹಸಿವೆ ಹೆಚ್ಚಾಗದೆ ಇದ್ದುದರಿಂದ ಒಂದೆರಡು ತಾಸು ಕಳೆದು ತಿನಿಸನ್ನು ಸವಿಯಬಹುದೆಂದು ನಿರ್ಧರಿಸುತ್ತಾನೆ. ಇಷ್ಟೇ ಅಲ್ಲ. ನಿಮ್ಮಲ್ಲಿಯ ಬೌದ್ಧಿಕ ಉಪಕರಣ ಕೂಡ ಈ ಪರಿಸ್ಥಿತಿಯಲ್ಲಿ ನಿಷ್ಕರ್ಷಿಸಲು ಏಳಬಹುದು. ಒಂದು ವೇಳೆ ಅದಕ್ಕೆ ನೆನಪಾಗಬಹುದು. 'ನೀವು ಮೂತ್ರರೋಗದಿಂದ ಬಳಲುತ್ತಿರುವುದರಿಂದ ವೈದ್ಯರು ಸಿಹಿ ತಿಂಡಿ ಪ್ರಕೃತಿಗೆ ಕೆಟ್ಟದೆಂದು' ಎಚ್ಚರ ಕೊಟ್ಟದ್ದು ನೆನಪಾಗಬಹುದು. ಮಾತ್ರವಲ್ಲ ನಿಮ್ಮಲ್ಲಿರುವ ದೈವಿಕ ಪ್ರಜ್ಞೆ ಹಾಗೂ ಸತ್ಯಶೋಧೆ, ಅದನ್ನು ಸ್ವೀಕರಿಸುವುದರಲ್ಲಿ ನೆರೆಮನೆಯವನ ದಾಕ್ಷಿಣ್ಯಕ್ಕೆ ಬಲಿಯಾಗುವ ವಿಷಯದಲ್ಲಿ ಆತಂಕವೊಂದನ್ನು ಕಲ್ಪಿ ಬಹುದು.

ಹೀಗೆ ಒಂದೊಂದು ಕ್ಷಣದಲ್ಲಿಯೂ, ನಿಮ್ಮ ಪ್ರತಿಯೊಂದು ಅನುಭವದಲ್ಲಿಯೂ, ಭಿನ್ನ ಭಿನ್ನವಾದ ಪ್ರತಿಕ್ರಿಯೆಗಳು ನಿಮ್ಮಲ್ಲಿಂದ ಹೊರಟು, ಅವುಗಳ ಸಮ್ಮಿಶ್ರಿತವಾದ ಅನುಭವದ ಲಾಭವನ್ನು ಪಡೆಯುತ್ತದೆ. ನಾಲ್ಕು ಭಿನ್ನವಾದ ಶಕ್ತಿಗಳು ಪ್ರತ್ಯೇಕ ಕಾಮನೆಗಳಿಂದ ಕೂಡಿದ್ದು ಅಪರಿಚಿತರಾದ ಪರಕೀಯರಂತೆ ಇರುವುದರಿಂದ ಒಂದು ಪದಾರ್ಥ ಅಥವಾ ಒಂದು ಸ್ಥಿತಿಯನ್ನು ಆಸ್ವಾದಿಸಲು ಒಟ್ಟುಗೂಡಿದಾಗ, ಆ ನಾಲ್ಕರಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ತೃಪ್ತಿಯೆಂದಾದರೆ, ಅದು ಮಿಕ್ಕುಳಿದ ಮೂರಕ್ಕೆ ಅತೃಪ್ತಿಯ ಸೂಚನೆ ಕೊಡುವುದು. ಇದರ ಫಲವಾಗಿ, ಯಾವ ಸಾಮಾನ್ಯ ಮಾನವನಾದರೂ ಇಂದಿನ ತನಕ, ಈ ನಾಲ್ಕು ಶಕ್ತಿಗಳಿಗೂ ಪರಿಪೂರ್ಣ ಸಂತೃಪ್ತಿ ನೀಡುವ ಒಂದು ಅವಸ್ಥೆ ಕಂಡು ಹಿಡಿಯಲು ಸಮರ್ಥನಾಗಿಲ್ಲ.

ಈ ಬದುಕಿನ ಯೋಜನೆಯಲ್ಲಿ—ಈ ನಮ್ಮೊಳಗಿನ ವೈವಿಧ್ಯ ವ್ಯಕ್ತಿತ್ವಗಳ ಗೊಂದಲದಿಂದ, ಈ ಶೋಕಮಯ ಆಂತರಿಕ ಅವ್ಯವಸ್ಥೆ, ಮನುಷ್ಯನ ಶಾಂತಿ ಸಮಾಧಾನಗಳ ಪ್ರಯತ್ನ, ಆತನ ಅವಿರತ ಆನಂದ, ಪರಿಪೂರ್ಣತ್ವ ಇವನ್ನೆಲ್ಲಾ ಪಡೆಯುವ ಆಕಾಂಕ್ಷೆ ಹಾಗೂ ಆತನ ಉಲ್ಲಾಸದಿಂದ ಮಂದಹಾಸ ಬೀರಿ ಬಾಳುವ ಆಶೆ—ಇವುಗಳೆಲ್ಲ ಭಗ್ನವಾಗಿ ಹೋಗುವುವು. ಮಾತ್ರವಲ್ಲದೆ, ಆತನನ್ನು ನಿರಾಶೆ, ಕ್ಷುದ್ರತೆ, ವಿಷಾದ ಹಾಗೂ ಅಶಾಂತಿಯ ಪ್ರಪಾತಕ್ಕೆ ತಳ್ಳುವುದು. ಸಂಕ್ಷಿಪ್ತವಾಗಿ, ಆತನ ಆಂತರಿಕ ವ್ಯಕ್ತಿತ್ವಗಳ ಈ ಆಂತರಿಕ ಅವ್ಯವಸ್ಥೆಯೇ ನಮಗೆ ಪರಿಚಿತವಾದ 'ಸಂಸಾರ' ವೆನಿಸುವ ಜೀವನದ ಸಮಸ್ತ ಅಜ್ಞಾತ ದುಃಖಗಳು.

ಸೂಕ್ಷ್ಮ ಗ್ರಾಹಿಗಳಾದ ಪುರಾತನ ಗುರುವರ್ಯರು, ಮನುಷ್ಯನು ಪರಿಸ್ಥಿತಿಯ ಪ್ರಭಾವಕ್ಕೆ ಸಿಕ್ಕಿ ಇಂತಹ ದಿಕ್ಕುಗೆಟ್ಟ ಸುಳಿಗೆ ನೂಕಲ್ಪಟ್ಟದ್ದನ್ನು ಮನಗಂಡರು. ಜೀವನದೊಳಗಿನ ಒಂದು ಭಾಗವು ತೃಪ್ತಿಕರವಾದ ಒಂದು ಆನಂದಾವಸ್ಥೆಯಲ್ಲಿರುವಾಗ, ನಾಲ್ಕರಿಂದ ಸಂಘಟಿಸಲ್ಪಟ್ಟ ಒಂದು ವ್ಯಕ್ತಿತ್ವವು ತನ್ನಲ್ಲಿಯೂ ಸಮಾನ ಸುಖ ಪಡೆಯುವ ಹಾಗಾಗಲು, ಆ ಮಹಾತ್ಮರು—ಮನುಷ್ಯನು ಚಾತುರ್ಯದಿಂದ ಹಾಗೂ ಆತ್ಮವಿಶ್ವಾಸದಿಂದ ತನ್ನಲ್ಲಿರುವ ಈ ನಾಲ್ಕು ವ್ಯಕ್ತಿತ್ವಗಳನ್ನು ಒಂದೇ ಒಂದು ಸಂಯೋಜಿತ ಪರಿಪೂರ್ಣ ವ್ಯಕ್ತಿಯಾಗುವ ದಾರಿಯನ್ನು ಸಂಶೋಧಿಸಿದರು. ಒಂದು ರಥವನ್ನು ನಾಲ್ಕು ದುಷ್ಟ ಕುದುರೆಗಳು ಎಳೆಯುವಾಗ, ಪ್ರತಿಯೊಂದು ಕುದುರೆಯು ತನ್ನ ದುಷ್ಟ ಶಕ್ತಿಯಿಂದ ಅಡ್ಡಾದಿಡ್ಡಿ ಎಳೆಯುತ್ತಾ ಇದ್ದರೆ, ಆ ನಿಯಂತ್ರಣ ತಪ್ಪಿದ ರಥಕ್ಕೆ ದಾರಿಯ ಮೇಲಿಂದ ತನ್ನ ಗುರಿಯತ್ತ ಸಾಗಲು ಸಾಧ್ಯವಾಗದೆ, ಹಳ್ಳಕ್ಕೆ ಬಿದ್ದು ನಾಶವಾಗಬಹುದು. ಹಾಗೆಯೇ ಇಂದು ನಾವು ಆಂತರಿಕವಾಗಿ ನಮ್ಮ ಜೀವನ ಯಾತ್ರೆಯಲ್ಲಿ ವಿಭಿನ್ನರಾಗಿರುವ ಕಾರಣ, ನಾವು ಎತ್ತಲೂ ಮುಂದೆ ಸಾಗದೆ, ದಾರಿಯ ಬದಿಯಲ್ಲಿರುವ ಚರಂಡಿಯಲ್ಲಿ ಬಿದ್ದು, ನಮ್ಮ ಗುರಿಯೆಡೆಗೆ ಮುಟ್ಟದೆ, ನಾಶವಾಗುವ ಪರಿಸ್ಥಿತಿಯಲ್ಲಿದ್ದೇವೆ.

ಧರ್ಮದ ಪ್ರಾಯೋಗಿಕ ಪ್ರತಿಪಾದನೆಯು ನಾವು ನಮ್ಮೊಳಗಿನ ಈ "ನಾಲ್ಕ"ನ್ನು ಯಾವ ರೀತಿಯಲ್ಲಿ ತರಬೇತಿಗೊಳಿಸಬಹುದು. ಹಾಗೂ ನಮಗೆ ಲಭ್ಯವಾದ ಜೀವನ ಪಥದಲ್ಲಿ ಆನಂದದಾಯಕ ಸವಾರಿಯನ್ನು ಮಾಡಬಹುದು, ಎನ್ನುವುದನ್ನು ವಿವರಿಸುವ ಒಂದು ಸಿದ್ಧಾಂತವಾಗಿದೆ. ಧರ್ಮ ಮುಖೇನ ನಿರ್ಧರಿಸಲ್ಪಟ್ಟ ಪ್ರಾಯೋಗಿಕ ನಿರ್ದೇಶಗಳು ಹಾಗೂ ಅಭ್ಯಾಸಗಳು, ವಿದ್ಯುಕ್ತ ಕರ್ಮಗಳಲ್ಲಿ ಅಂತರ್ಗತವಾದ ಎಲ್ಲಾ ಶಾಸ್ತ್ರೀಯ ವಿಧಾನಗಳಿಂದ ನಾವು ಪ್ರತಿಯೊಬ್ಬರೂ ವ್ಯಕ್ತಿತ್ವದ ಪರಿಪೂರ್ಣತೆಯನ್ನು ಹೊಂದಬಲ್ಲೆವು. ಹೀಗೆ ವ್ಯಕ್ತಿತ್ವದ ಈ ಪರಿಪೂರ್ಣತೆ ಅದೆಷ್ಟು ಅಧಿಕವಾಗುವುದೋ ಅದೇ ಪ್ರಮಾಣದಲ್ಲಿ ನಾವು ಬಾಳಿನ ಜಂಜಾಟಗಳಿಂದ ಬಿಡುಗಡೆ ಹೊಂದಬಲ್ಲೆವು. ನಿಜಕ್ಕೂ ನಿರಂತರ ಪರಿವರ್ತನಾಶೀಲವಾದ ಅನುಭವಗಳಿಂದೊಡಗೂಡಿದ ಬಾಹ್ಯ ಜಗತಿನಿಂದ ಸಂಪೂರ್ಣ ಸ್ವಾತಂತ್ರ್ಯ, ಶಾಶ್ವತವೂ ಅಪರಿವರ್ತನಶೀಲವೂ ಆದ ಸಮತ್ವ ಹಾಗೂ ಶಾಂತಿಯನ್ನು ಪಡೆಯಬಲ್ಲೆವಾದರೆ, ಅದೊಂದು ಪೂರ್ಣ ಸಿದ್ಧಿಯೇ ಸರಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No 12/1967

ಕಂಬಳಮನೆ, ದೇಜು ಸೆಟ್ಟಿ— ನಾಗಿಸೆಟ್ಟಿ ಮಗ, ಕಾರ್ಕಳ ತಾಲ್ಲೂಕು ಸೂಡ ಗ್ರಾಮಸ್ಥ— ವಾದಿ,

ಮತ್ತು

1. ಕೊರಪಳು ಸೆಟ್ಟಿ, ನಾಗಿ ಸೆಟ್ಟಿರ ಮಗಳು, 2. ಕಮಲ ಸೆಟ್ಟಿ, 3. ಕೃಷ್ಣಸೆಟ್ಟಿ, 4. ವನಜಸೆಟ್ಟಿ, 5. ಕಲ್ಯಾಣಿ ಸೆಟ್ಟಿ, 6 ಸದಾಶಿವ ಯಾನೆ ಕೋಟು ಸೆಟ್ಟಿ, 7. ಪ್ರಭಾಕರಸೆಟ್ಟಿ, 8. ಶಾಂತಸೆಟ್ಟಿ 9. ಲೀಲಾ ಸೆಟ್ಟಿ, 10. ಗಿರಿಜ ಸೆಟ್ಟಿ— ಪ್ರತಿವಾದಿರು.

ಕೊರಪಳು ಸೆಟ್ಟಿರ ಮಕ್ಕಳು. ಕಾರ್ಕಳ ತಾಲ್ಲೂಕು, ನಿಂಜೂರು ಗ್ರಾಮದ ಕಂಬಳ ಮನೆಯಲ್ಲಿರುವವರು

ಸದರಿ ದಾವೆಯ 3ನೇ ಪ್ರತಿವಾದಿ ಕೃಷ್ಣಸೆಟ್ರಿಗೆ—

ವಾದಿಯು ಕುಟುಂಬದ ಆಸ್ತಿಗಳಲ್ಲಿ ತನಗಿರುವ ಪಾಲಿನ ಬಗ್ಗೆ ಮತ್ತು ತನಗೆ ಕುಟುಂಬದಿಂದ ಬರ 4 ವರುಷಗಳ ಗತ ಆದಾಯದ ಬಗ್ಗೆ ಕೂಡಾ ವಗೈರೆ ನಿವೃತ್ತಿ ಕೇಳಿ ಮಾಡಿದ ಈ ದಾವೆಯನ್ನು ವಿಚಾರಣೆಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾ. 18—4—1967ನೇ ಬೆಳಿಗ್ಗೆ 10ಗಂಟೆಗೆ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಹರಣೆಯಿರುವಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಖಾಂತ್ರ ಸದರಿ ತಾರೀಕಿನಲ್ಲಿ ಹಾಜರಾಗಿ ಜ್ವಾಹಿರು ಮಾಡಿ ಕೊಳ್ಳಬಹುದಾಗಿಯೂ, ತಪ್ಪಿದಲ್ಲಿ, ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಕೋರ್ಟು ಹುಕುಮು ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopala Achar
Advocate for Plaintiff

Karkala, 3—4—1967

ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಚಂದಾದಾರರಲ್ಲಿ ವಿನಂತಿ

ಇನ್ನೂ ತಮ್ಮ ಬಾಕಿ ಚಂದಾಹಣವನ್ನು ಕಳುಹಿಸದ ನಮ್ಮ ಚಂದಾದಾರ ಬಂಧುಗಳು ದಯಮಾಡಿ ಅದನ್ನು ಬೇಗನೆ ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ.

ಅಂತಹ ಸಕಾಲದಲ್ಲಿ ಚಂದಾ ಬಾರದಿದ್ದರೆ ನಾವು ಅನಿವಾರ್ಯವಾಗಿ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. ಸಂ. ನ.

ನಿಮ್ಮಂಥವರೇ ಹೆಚ್ಚು ಮಂದಿ:

ಲೇಖಕರು: ಶ್ರೀ ಮಿತ್ರ್ರೂರು.

ಪ್ರಕಾಶನ: ಜನ ಜೀವನ ಸಾಹಿತ್ಯ ಸದನ ಮೂಲ್ಕಿ, ದ. ಕ.

ಪುಟಗಳು: ೧೧೪. ಬೆಲೆ: ರೂ. ೨

'ನಿಮ್ಮಂಥವರೇ ಹೆಚ್ಚು ಮಂದಿ', 'ಹೋದ ಹಾದಿ', 'ಮೂರು ಮತ್ತು ಆರು', 'ಕುಲದೀಪಕ', 'ತಾಯಿ ಮಡಿಲಲ್ಲಿ', 'ಹಂದಿಯು ಹಿಂದೆ' ಮತ್ತು 'ಗಾಂಚಿ ಗಂಡನ ಮನೆಸೇರಿದಾಗ' ಎಂಬ ಏಳು ಕಥೆಗಳ ಸಂಕಲನವಿದು. ಪ್ರತಿಕಥೆಯೂ ಒಂದೊಂದು ಘಟನೆಯ ಸುತ್ತ ಹೆಣೆಯಲ್ಪಟ್ಟಿದೆ. ಬಸ್ ಸ್ಟ್ಯಾಂಡ್‌ನಲ್ಲಿ ಪುಸ್ತಕ ಮಾರುವ ಯುವಕನ ದಯನೀಯ ಕಥೆ ಮತ್ತು ಯಾತ್ರಿಕರ ಕುಚೇಷ್ಟೆ ಮೊದಲನೆಯ ಕಥೆಯಲ್ಲಿ ಸುಂದರವಾಗಿ ಮೂಡಿಬಂದಿದೆ. ಶ್ರೀಮಂತ ಕೃಪಣ ಹಳ್ಳಿಗ ಬೊಂಬಾಯಿಯಲ್ಲಿ ಮೋಸ ಹೋದ ಘಟನೆ ಎರಡನೆಯ ಕಥೆಯ ವಸ್ತು. ಭಾರತದ ಬಡ ವರ್ಗದ ಬಡ ಜನತೆಯ ಸತ್ಯ ಚಿತ್ರವೊಂದು 'ಮೂರು ಮತ್ತು ಆರು'ರಲ್ಲಿ ಮೂಡಿದ್ದರೆ, 'ಕುಲದೀಪಕ' ನವತರುಣ ತರುಣಿಯರ ಚಿಂತೆ, ಚಿಕಿತ್ಸೆಯ ದುಷ್ಪರಿಣಾಮವನ್ನು ಪ್ರತಿಬಿಂಬಿಸುತ್ತದೆ. ಸುಖಾಂತವಾಗುತ್ತದೆ—ಗೋಳಿನ ಭ್ರಷ್ಟರಂತಹ ಉದ್ಯೋಗಗಳು ಸಿನೇಮಾದಲ್ಲಿ ಬೇಕಷ್ಟು ದೊರೆಯುತ್ತವೆ. ವ್ಯವಹಾರದಲ್ಲಿ ಯಾಕೆ ದೊರೆಯಲಾರದು? ಭಾಷೆ ಬದಲಿಸುವ ಪಾಂಬಿಯು ಭೀಕರತೆ ವಿವರ ಕಥೆಯಲ್ಲಿ. ಸರಕಾರದ ಅಧಿಕಾರಿಗಳ ಉದಾಸೀನ್ಯದ ಕೆಟ್ಟ ಫಲ ಆ ಘಟನೆಯುದ್ದಕ್ಕೂ ಮೂಡಿದೆ. ಎಂಕಣ್ಣ ಭಿಕ್ಷುವಂತಹ ದಲ್ಲಾಳಿಗಳ ಕೈಯಲ್ಲಿ ಸಿಕ್ಕು ಜೀವನದಲ್ಲಿ ಬವಣೆ ಪಡುವವರ ಒಂದು ಚಿತ್ರ ಕೊನೆಯದರಲ್ಲಿದೆ.

ಇದು ಒಳ್ಳೆಯ ಕಥೆಗಳ ಸಂಕಲನ. ಸಾಹಸಗಿಂತ ವರ್ಣನೆಗೇನೇ ಪ್ರಾಧಾನ್ಯವಿತ್ತಂತೆ ಭಾಸವಾಗುವುದಾದರೂ ಸಂಘರ್ಷವೂ ಇಲ್ಲಿ ಎದ್ದು ಕಾಣುತ್ತದೆ. ಕೆಲವೆಡೆ ಎಲ್ಲ ನಿರೂಪಣೆ ಮತ್ತು ಸಂವಾದ ಸುದೀರ್ಘವಾದಂತೆ ಅನಿಸುತ್ತದೆ. ಆದರೂ ಶ್ರೀ ಮಿತ್ರ್ರೂರರವರ ಸಂವಾದ ಶೈಲಿ

(ಏಳನೇ ಪುಟದಿಂದ)

ಕೇಯ ವ್ಯಭಿಚಾರವನ್ನು ತಡೆಗಟ್ಟುವುದು. ಆತ್ಮಗತ್ಯ ಪಕ್ಷವನ್ನು ತ್ಯಜಿಸುವ ಮೊದಲು ತಾನು ಪಕ್ಷದ ಟಿಕೆಟಿನಿಂದ ಗೆದ್ದ ಸ್ಥಾನವನ್ನು ತ್ಯಜಿಸಬೇಕೆಂಬ ಕಡ್ಡಾಯ ನಿಯಮವು ಬೇಕಾಗಿದೆ. ಇದರಿಂದಾಗಿ ಕೆಲವೆಡೆಗಳಲ್ಲಿ ಚುನಾವಣೆಗಳನ್ನು ನಡೆಸಬೇಕಾಗುವುದರಿಂದ ಆ ಬಗ್ಗೆ ವೆಚ್ಚ ನಮಗಾಗುವುದೇನೋ ನಿಜ. ಇದರ ಇದರಿಂದ ಕಲುಷಿತವಾದ ರಾಜಕೀಯ ವಾತಾವರಣವು ನಿರ್ಮಲವಾಗುವುದೆಂದು ಆಶಿಸಬಹುದು. ಇಂತಹ ನಿಯಮಗಳನ್ನು ಮಾಡದಿದ್ದರೆ ವಂಚನೆಯಿಂದ ಎಸಗುವ ತಾವು ಆರಿಸಿದ ಪ್ರತಿನಿಧಿಗಳ ದುರ್ವರ್ತನೆಯನ್ನು ಮಿಂಡಿಸುವರೇ ನೇರವಾದ ಜನತೆಯ ನ್ಯಾಯವನ್ನು ಕೈಕೊಳ್ಳಬೇಕಾಗುವುದು.

ಏಲಂ ಪ್ರಕಟಣೆ

ಬೆಳ್ಳೂರು ಗ್ರಾಮ ಪಂಚಾಯತಿನ (1) C. V. R. ಡೀಸೆಲ್ H. P. ಪಂಪು ಸೆಟ್ ಮತ್ತು (4) ಹಳೆಯ ಬಟ್ಟಿ ರೇಟಿಯೋ ಮತ್ತು ಸ್ಪೀಕರ್ ಇವುಗಳನ್ನು ತಾ. 19—4—1967 ನೇ ದಿನ ಮಧ್ಯಾಹ್ನ ಘಂಟೆ 3ಕ್ಕೆ ಪಂಚಾಯತು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಏಲಂ ನಿಯಮ ಷರತ್ತುಗಳನ್ನು ಪಂಚಾಯತು ಆಫೀಸಿನಲ್ಲಿ ತಿಳಿದುಕೊಳ್ಳುವದು.

ಕಂಜೂರು ಕೃಷ್ಣಮೂರ್ತಿ ರಾವ್

ಸಭಾಪತಿ ಗ್ರಾಮ ಪಂಚಾಯತು.

ಬೆಳ್ಳೂರು ಪಂಚಾಯತು ಕಛೇರಿ

ತಾ. 6—4—1967.

ಯಲ್ಲಿ ಎತ್ತಿದ ಕೈ ಎಂದು ಹೇಳಬಹುದು. ಪರಿಶ್ರಮ ಹೆಚ್ಚಿದಂತೆ ಶ್ರೀಯುತರು ಇನ್ನೂ ಉತ್ತಮ ಕಥೆಗಳನ್ನು ಕನ್ನಡಿಗರಿಗೆ ನೀಡುವುದು ಸಾಧ್ಯ. ಶೈಲಿ-ಭಾಷೆಗಳಲ್ಲಿ ಸರಳ ಸುಂದರತೆ ಶ್ರೀ ಮಿತ್ರೂರರ ವೈಶಿಷ್ಟ್ಯ.

ಹಿಂದೂ ಧರ್ಮವೇ ಏಕಮೇವ ಧರ್ಮ

ಲೇಖಕರು. ಶ್ರೀ ಶಿವಶಂಕರ.

ಪ್ರಕಾಶನ: ಹಿಂದೂ ಧರ್ಮ ಪ್ರಕಾಶನ, ಕಾಸರಗೋಡು, ಕೇರಳ.

ಪುಟಗಳು: ೩೨ ಬೆಲೆ: ೫೦ ಪೈಸೆ

'ಧಾರಣೆಗೆ ಅವಶ್ಯವಿರುವುದು ಧರ್ಮ, ಧೃತಿ, ಕ್ಷಮೆ, ದಮೆ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ, ವಿದ್ಯೆ, ಸತ್ಯ, ಅಕ್ರೋಧ—ಇವು ಹತ್ತು ಧರ್ಮ ಲಕ್ಷಣಗಳು.' ಜಗತ್ತಿನ ಅತ್ಯಂತ ಪ್ರಾಚೀನತಮ ಸುಸಂಸ್ಕೃತ ಭಾರತದಲ್ಲಿನ ಹಿಂದೂ ಧರ್ಮವೇ ಏಕಮೇವ ಧರ್ಮ. ಇಂದು ಧರ್ಮವೆಂದು ಕರೆಯಲಾಗುವ ಕ್ರಿಸ್ತೀಯ, ಇಸ್ಲಾಂ ಮೊದಲಾದುವು ಧರ್ಮವಲ್ಲ, ಮತಗಳು ಮಾತ್ರ. ಧರ್ಮದ ಉದ್ದೇಶ ಲೋಕಧಾರಣೆ, ಲೋಕ ಕಲ್ಯಾಣವಾದುದರಿಂದ ಅದರ ಲಕ್ಷಣಗಳು ಬದಲಾಗುವಂತಿಲ್ಲ. ಅದರ ಮೇಲಿನ ಮತಾಂತರಗಳು ಆಯಾ ದೇಶ ಕಾಲಗಳಿಗೆ ಹೊಂದಿಕೊಂಡು ಪರಿವರ್ತನೆಯಾಗಬಹುದು. ಅನೇಕರು ಆ-ಬಾಲರದ ಕುರುಡರು ಆನೆಯ ವಿವಿಧಾಂಗಗಳನ್ನೇ ಆನೆಯೆಂದು ಕರೆದಂತೆ ಹಿಂದೂ ಧರ್ಮದ ಆಳವನ್ನು ಅರಿಯಲಾರದವರು—ಮೇಚ್ಛರಾಗಿದವರು ಕೂಡ—ಮತಾಂತರಗಳನ್ನೇ ಧರ್ಮಾಂತರವೆಂದು ಪ್ರಚುರಪಡಿಸಿ ಅಸತ್ಯ ಪ್ರಚಾರ ಕಾಲದಲ್ಲಿ ಜನತೆಯನ್ನು ಅಜ್ಞಾನಕ್ಕೆ ತಳ್ಳಿದ್ದಾರೆ—ಇವುಗಳಲ್ಲಿ ಆಧಾರವನ್ನು ವಿವಿಧ ಗ್ರಂಥಗಳ ಉಲ್ಲೇಖಗಳೊಂದಿಗೆ ಸರಳ ಪ್ರಭಾವಯುತ ಶೈಲಿಯಲ್ಲಿ ಶ್ರೀ ಶಿವಶಂಕರರು ಈ ಪುಸ್ತಿಕೆಯಲ್ಲಿ ವಿವರಿಸಿದ್ದಾರೆ. ಸತ್ಯ ಯಾವ ದಿಕ್ಕಿನಿಂದ ಬಂದರೂ ಒಪ್ಪಲೇಬೇಕು. ಈ ಪುಸ್ತಿಕೆ ಚಿಕ್ಕದಾದರೂ ಉಪಯುಕ್ತವಾಗಿದೆ. ಅಧ್ಯಯನ ಶೀಲರೂ ಧರ್ಮಜಿಜ್ಞಾಸುಗಳೂ ಆದ ಶ್ರೀ ಶಿವಶಂಕರರ ಮನೋಧರ್ಮವನ್ನು ಈ ಕೃತಿ ಸಂಪೂರ್ಣ ಹೊರಗೆಡಹುತ್ತದೆ. ಅಂತಃಸ್ಫೂರ್ತಿಯ ಸತ್ಯವನ್ನು ಪ್ರತಿಪಾದಿಸುತ್ತದೆ.

ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ

ಪಂಚಾಂಗ ಕರ್ತರು: ಶ್ರೀ ಶೇಷಶಾಸ್ತ್ರಿ.

ಪ್ರಕಾಶನ: ಆರ್ಯ ವೈಶ್ಯ ಸಂಘ, ರಂಗಂಪೇಟೆ (ಸುರಪುರ)

ಬೆಲೆ: ರೂ. ೧-೦೦

ಶ್ರೀ ಶಕ ೧೮೮೯ನೆಯ ಪ್ಲವಂಗ ನಾಮ ಸಂವತ್ಸರದ ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗವು ಹಿಂದಿನವರ್ಷಗಳಂತೆಯೇ ಕನ್ನಡಿಗರ ಜ್ಯೋತಿರ್ಗ್ರಂಥವಾಗಿ ಹೊರಬಂದಿದೆ. ಜ್ಯೋತಿಷ್ಯದಲ್ಲಿ ಆಸಕ್ತಿಯಿರುವವರ ದೈನಂದಿನ ಅವಶ್ಯಕ ಜ್ಯೋತಿರ್ವಿಚಾರಗಳೆಲ್ಲವೂ ಇದರಲ್ಲಿ ಅಡಕವಾಗಿವೆ. ಸಂವತ್ಸರ ಫಲ, ದ್ವಾದಶರಾಶಿಯವರ ಸುವಿಸ್ತೃತ ವರ್ಷ ಭವಿಷ್ಯ, ದೇಶ ವಿದೇಶಗಳ ಭವಿಷ್ಯ, ಒಕ್ಕಲಿಗರಿಗಾಗಿ ಮಳೆಯ ವಿಚಾರ, ಬೆಳೆಬಿತ್ತನೆ ವಿಚಾರ, ಜಾತಕ ಮೇಲಾಮೇಲಿ ಶಕುನ ಫಲ ಇತ್ಯಾದಿಯಾಗಿ ಸರ್ವ ವಿಷಯ ಸಂಗ್ರಹವಾದ ಈ ಪಂಚಾಂಗ ಸಂಗ್ರಹಣೀಯವಾಗಿದೆ, ನಿತ್ಯೋಪಯೋಗಕ್ಕೆ ಅವಶ್ಯಕವಾಗಿದೆ.

ಬೊಜ್ಜಿರುವವನಿಗೆ ಹೆಣ್ಣು

(ನಾಲ್ಕನೇ ಪುಟದಿಂದ)

"ಒಸ್ಸಿಗೆ ಶಾಂತವಾದರೂ ಆಗಬಹುದು. ಆದರೆ, ಅವರಿಟ್ಟರೂ ಒಪ್ಪಬೇಕಲ್ಲ?'

'ಅಂತಹ ಭಾವಿ ಶ್ವಾಸಕೊಡಲಾರದೆ ಇದೆ, ಕೊನೆಯ ಅಂಕ ...'

"ಹ್ಞಾಂ... ಕೊನೆಗ ಇಲ್ಲಗೇ ಮಗಳಿಗೆ ಅಂತ ಪ್ರಯತ್ನಿಸುವಂತಾಗದಿದ್ದ್ರೆ ಸಾಕು....'

'ಎಲ್ಲಿಗೆ?'

'ಇಲ್ಲಿಗೇನೇ...."

'ಎಂಥದು? ... ಅಯ್ಯೋ....

'ಸ್ಸ್......' —ಗೋಪಾಲಕೃಷ್ಣ

ಸುಧಾರಣೆಯ ಒಂದು ಹೆಜ್ಜೆ

ಅಂಗವಿಕಲರಿಗೆ ವಿಶ್ವವಿದ್ಯಾನಿಲಯ ವ್ಯಾಸಂಗ

ಜೀವನದ ಅನೇಕ ಸೌಭಾಗ್ಯಗಳು ಅಂಗವಿಕಲರ ಪಾಲಿಗೆ ಇಲ್ಲವೆನ್ನಬಹುದಷ್ಟೆ! ವಿಶ್ವವಿದ್ಯಾನಿಲಯದ ವ್ಯಾಸಂಗವೂ ಅವರಲ್ಲಿ ಅನೇಕರಿಗೆ ಎಟುಕದಾಗಿತ್ತು. ಅಂಗವಿಕಲರು ತಮ್ಮ ಚಕ್ರದ ಕುರ್ಚಿಯಲ್ಲಿ ಕುಳಿತೇ ವಿಶ್ವವಿದ್ಯಾನಿಲಯ ವ್ಯಾಸಂಗ ಮಾಡಲು ಪಶ್ಚಿಮ ಜರ್ಮನಿ ಇದೀಗ ಹೊಸ ಸೌಕರ್ಯಗಳನ್ನು ಒದಗಿಸಿದೆ.

ಅಂಗವಿಕಲರ ಪುನರ್ವಸತಿಗಾಗಿ ಪಶ್ಚಿಮ ಜರ್ಮನಿಯಲ್ಲಿ ಕೈಗೊಂಡಿರುವ ಕ್ರಮಗಳಲ್ಲಿ ಅವರಿಗೆ ವಿಶ್ವವಿದ್ಯಾನಿಲಯದ ವ್ಯಾಸಂಗ ಒದಗಿಸುವುದೂ ಒಂದಾಗಿದೆ. ಮಾರ್ಬರ್ಗ್‌ನ ಫಿಲಿಪ್ಸ್ ವಿಶ್ವವಿದ್ಯಾನಿಲಯ ದಲ್ಲಿ ಅಂಗವಿಕಲರಿಗಾಗಿ ಕಳೆದ ಬೇಸಗೆಯಲ್ಲಿ ಏರ್ಪಡಿಸಲಾಗಿದ್ದ ತರಗತಿಗಳಲ್ಲಿ ಬಹಳ ಉತ್ತೇಜನಕರವಾಗಿದ್ದುವೆಂಬುದು ಮಾರ್ಬರ್ಗ್ ವಿಶ್ವವಿದ್ಯಾನಿಲಯದ ಆಸ್ಪತ್ರೆಯ ಪ್ರೊ|| ಡಾ|| ಜಿ ಹೇರ್ಡ್ ಎಕ್ಸ್‌ನರ್‌ರ ವರದಿ.

ಅಂಗವಿಕಲರು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರ ನಿರೀಕ್ಷೆಗೆ ಬಂದರು. ಪ್ರಸ್ತುತ ಚಳಿಗಾಲದ ತರಗತಿಗಳಲ್ಲಿ ಅಂಗವಿಕಲರ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

ಅಪಘಾತಗಳಲ್ಲಿ ಹಾನಿಗೊಳಗಾದ ಅಂಗವಿಕಲರು ವೃತ್ತಿ ಸೇವೆಯಿಂದ ಬಿಡುಗಡೆ ಹೊಂದಿದ ಮೇಲೆ ಅನೇಕ ಉದ್ಯೋಗಗಳನ್ನವಲಂಬಿಸಬಹುದಾಗಿದೆ. ಅವರಲ್ಲಿ ಚಿಕ್ಕ ವಯಸ್ಸಿನವರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಬಹುದು. ಇಂಥಹ ವ್ಯಾಸಂಗ ಅವರ ಜೀವನದಲ್ಲಿ ಬೆಳಕು ನೀಡುವ ಸಾಧನವಾಗಿದೆ.

ಚಕ್ರದ ಕುರ್ಚಿಯೇ ಗತಿಯೆಂದು ಮೂಲೆಗೊತ್ತರಿಸಲ್ಪಟ್ಟಿದ್ದ ಅನೇಕ ಅಂಗವಿಕಲರು ವಿಶ್ವವಿದ್ಯಾನಿಲಯದ ಹೊಸ್ತಿಲು ದಾಟುವುದು ಸಾಮಾನ್ಯವಾಗಲಿದೆ. ಇದು ವರೆಗೆ ಇವರು ವಿಶ್ವವಿದ್ಯಾನಿಲಯದ ವ್ಯಾಸಂಗ ಪಡೆಯದಿದ್ದುದಕ್ಕೆ ಮೂರು ಪ್ರಬಲ ಕಾರಣಗಳಿದ್ದುವು. ಅವರ ವಾಸಿಸಲು ಸೂಕ್ತ ಸ್ಥಳಗಳ ಅಭಾವ ಮತ್ತು ಅವರ ಶುಶ್ರೂಷೆ ಮಾಡುವವರ ಕೊರತೆ, ಅವರಿಗೆ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಕ್ಕೆ ಅಡ್ಡಿಯಾಗುವಂತೆ ನಿರ್ಮಿಸಿರುವ ತರಗತಿ ಕೋಣೆಗಳು, ಮತ್ತು ಸ್ಥಳಾಭಾವ ಹಾಗೂ ಅವರು ವಾಸಿಸುವ ಸ್ಥಳಗಳಿಂದ ಅವರನ್ನು ವಿಶ್ವವಿದ್ಯಾನಿಲಯಗಳಿಗೊಯ್ಯಲು ಬೇಕಾಗುವ ವಾಹನ ಸೌಕರ್ಯದ ಅಭಾವ ಇವೇ ಆ ಕಾರಣಗಳು.

ಪ. ಜರ್ಮನಿಯ ಅನೇಕ ವಿಶ್ವವಿದ್ಯಾನಿಲಯಗಳು ಈ ಕೊರತೆಗಳನ್ನು ಇದೀಗ ನಿಂವಾರಿಸಿಕೊಂಡಿವೆ—ಅದೂ ಅಲ್ಪ ವೆಚ್ಚದಲ್ಲಿ. ಮಾರ್ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಅಂಗವಿಕಲರಿಗಾಗಿಯೇ ಪ್ರತ್ಯೇಕ ಕೋಣೆಗಳು ಮತ್ತು ವಾಸಸ್ಥಾನಗಳನ್ನು ನಿರ್ಮಿಸಲಾಯಿತು. ಚಕ್ರದ ಕುರ್ಚಿಗಳಲ್ಲಿ ಸಂಚರಿಸುವುದಕ್ಕೆ ಅನುಕೂಲವಾಗಿರುವಂತೆ ಇವುಗಳನ್ನು ನಿರ್ಮಿಸಿ ರುವುದೇ ಇವುಗಳ ವೈಶಿಷ್ಟ್ಯ. ಸೇವೆಗಾಗಿ ಇವರಿಗೆ ವ್ಯಾಸಂಗ ಕಾಲದಲ್ಲಿ ಬೇಕಾದ ನೆರವು ನೀಡಲು ಸ್ವಯಂ ಸೇವಕರು ಮುಂದೆ ಬರುತ್ತಿರುವರು.

ಈ ಸ್ವಯಂ ಸೇವಕರ ಸೇವೆ, ಇವರು ಅಂಗವಿಕಲರಿಗಿತ್ತಿರುವ ನೆರವು ಎಷ್ಟು ಪರಿಣಾಮಕಾರಿಯಾಗಿದೆಯೆಂದರೆ ಇದರಿಂದ ಉತ್ತೇಜನಗೊಂಡ ಮಾರ್‌ಬರ್ಗ್ ವಿಶ್ವವಿದ್ಯಾನಿಲಯ ಇವರ ವ್ಯಾಸಂಗಕ್ಕೆ ಬೇಕಾದ ಅನುಕೂಲತೆಗಳನ್ನು ನಿರ್ಮಿಸಲು ಉತ್ಸಾಹ ತೋರಿತು. ಅಂಗವಿಕಲರಿಗಾಗಿ ಮಾರ್ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ವಾಸಸ್ಥಾನ ಹಾಗೂ ವ್ಯಾಸಂಗ ಸ್ಥಳಗಳನ್ನೇ ಏರ್ಪಡಿಸಲಾಗಿದೆ. ಇವರಿಂದಾಗಿ ಅಂಗವಿಕಲರಿಗೆ ಸೇವೆಮಾಡಲು ಸಿದ್ಧರಿರುವವರ ಪೂರ್ಣ ವೇಳಾ ಕಾರ್ಯಕರ್ತರ ಅಗತ್ಯ ತೋರಿಬಂದಿದೆ. ಕಲಾ ವಿಭಾಗ ಮತ್ತು ವಿಜ್ಞಾನ ವಿಭಾಗಗಳಲ್ಲಿ ಇವರು ಈಗ ವ್ಯಾಸಂಗ ಮಾಡಬಹುದಾಗಿದ್ದರೂ ಭವಿಷ್ಯದಲ್ಲಿ ಇವರು ಪತ್ರಿಂದ ಎಂಜನಿಯರಿಂಗ್ ವ್ಯಾಸಂಗವನ್ನೂ ಸಹ ಮಾಡಬಹುದೆಂದ ನಿರೀಕ್ಷೆಯಿದೆ.

ಪಂಚಾಯತ ಸಭೆ

ಬೆಳ್ತಂಗಡಿ ಪಂಚಾಯತದ ಸಾಮಾನ್ಯ ಸಭೆಯು ತಾ. 31—3—67 ರಂದು ಶ್ರೀ ಓ. ನೇಮಿರಾಜ ಹೆಗ್ಡೆ, ಚೇರ್ಮನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ವಿಸ್ತರಣಾಧಿಕಾರಿಯ ಮಹಾಬಲ ಶೆಟ್ಟಿಯವರ ಸೂಕ್ತ ಸಲಹೆಯೊಂದಿಗೆ ಈ ಕೆಳಗಿನ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ರೂ. 6000. ವೆಚ್ಚದಿಂದ ಆಸ್ಪತ್ರೆ ಕಟ್ಟಡ ಕೊಂಡು ಮಳೆಗಾಲದ ಕಷ್ಟದ ದಿನಗಳಲ್ಲಿ ಊರವರಿಗೆ ವಿತರಣೆ ಮಾಡುವುದು, ಪಂಚಾಯತ ಸಿಬ್ಬಂದಿವರ್ಗದವರಿಗೆ ಏರಿದ ತುಟ್ಟಿ ಭತ್ತೆಯನ್ನು ಜನವರಿ ತಿಂಗಳಿನಿಂದಲೇ ಕೊಡುವುದು ಪಂಚಾಯತಕ್ಕೆ ಒಂದು ಪ್ರತ್ಯೇಕ ರೀಡಿಂಗ್ ರೂಮನ್ನು ತೆರೆಯುವುದು, ಅಲ್ಲದೆ 1967-68ನೇ ವರ್ಷದ ಬಾಬ್ತು ಮಾರ್ಕೆಟು ವರಿ ವಸೂಲಿ ಹಕ್ಕು ರೂ. 5860ಕ್ಕೆ ಆದ ಏಲಂನ್ನು ಮಂಜೂರು ಮಾಡಲಾಯಿತು.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರಿದ ಮುಗಿಲು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳನೋಟ	1—50
ಭಾರತದ ವೀರಾಂಗನೆಯರು	1—50
ಮೋಸಕೂಟ್ಟ ಬಂದೂಕು	1—80
ಶಿಲ್ಪ	1—50
ಪ್ರತಿಸ್ಮಾ ಮೂರ್ತಿ	1—00
ಘಾಟಿಸುಂದರಿ	1—50
ನೀತಿ ವಿನೋದ ಕತೆಗಳು	1—00

ಬೇಟಿಯಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಮಕ್ಕಳಿಗಾಗಿ ಸಣ್ಣ ಕತೆ

ಗೂಬೆಯ ಕೂಗಿನ ಗುಟ್ಟು

ಒಂದಾನೊಂದ ಕಾಲದಲ್ಲಿ ಎಲ್ಲ ಪಕ್ಷಿಗಳ ಸಂಚರವೂ ಒಂದೇ ತೆ ನಾಗಿತ್ತು. ಅದರಿಂದ ಅವು ಬೇಸರಗೊಂಡುವು.

ಆದುದರಿಂದ ಈ ಪರಿಸ್ಥಿತಿ ಬದಲಾಯಿಸಬೇಕೆಂದು ಅವು ನಿರ್ಧರಿಸಿದ ವು. ಬೇರೆಬೇರೆ ಧ್ವನಿಗಳನ್ನು ಅವು ಒಂದು ಪೆಟ್ಟಿಗೆಯಲ್ಲಿ ಹಾಕಿ, ಬಿಡಿಕೆ ಮಾಡಲು ಪೆಟ್ಟಿಗೆಯನ್ನು ಚೆನ್ನಾಗಿ ಅಲ್ಲಾಡಿಸಿದುವು. ಆ ಮೇಲೆ ಪಕ್ಷಿಗಳು ಒಂದೊಂದಾಗಿ ಧ್ವನಿಗಳನ್ನು ಆರಿಸಿಕೊಂಡುವು. ಆಯಾ ಪಕ್ಷಿಗೆ ಅದೇ ತನ್ನ ವಿಶಿಷ್ಟ ರಾಗ ಧ್ವನಿ ಆಯಿತು.

ಈ ಐಯ್ಕೆಯ ಸ್ಥಳವನ್ನೂ ಸಮಯವನ್ನೂ ಮೊದಲೇ ಗೊತ್ತುಪಡಿಸಲಾಗಿತ್ತು. ಎಲ್ಲ ಪಕ್ಷಿಗಳೂ ದೂರದೂರದ ವನಗಳಿಂದ ಹಿಂಡುಗಟ್ಟಿ ಬಂದಿದ್ದುವು.

ಒಂದು ಪಕ್ಷಿ ಮಾತ್ರ ಬರಲಿಲ್ಲ, ಸೊಕ್ಕಿನ ಪರಿಣಾಮಗಿ, ಗೂಬೆ ತಡವಾಗಿ ಒಂದಾಗ ಎಲ್ಲ ಧ್ವನಿಗಳನ್ನು ಹಂಚಿಯಾಗಿತ್ತು. ಪೆಟ್ಟಿಗೆಯಲ್ಲೇನೂ ಉಳಿದಿರಲಿಲ್ಲ.

ಇದರಿಂದ ಗೂಬೆಗೆ ವ್ಯಸನವಾಯಿತು. ಆದರೂ ಕೂಡ, ಸ್ವಲ್ಪ ಸಮಯದ ತರುವಾಯ ಅದಕ್ಕೊಂದು ಯೋಚನೆ ಹೊಳೆಯಿತು.

"ನಾನು ನನ್ನ ಧ್ವನಿಯನ್ನು ಮಾನವರಿಂದ ಕಲಿಯುವೆನು. ಹಳ್ಳಿಯಲ್ಲೊಂದು ಮದುವೆ ನಡೆಯುತ್ತಿದೆ. ಮದುವೆಗಳಲ್ಲಿ ಉತ್ತಮವಾದ ಹಾಡುಗಳನ್ನೇ ಮಾನವರು ಹಾಡುತ್ತಾರೆ. ಅದೇ ನನಗೆ ಸರಿ"—ಎಂದುಕೊಂಡು ಗೂಬೆಯು ಹಳ್ಳಿಗೆ ಹಾರಿ, ಮದುವೆ ಮನೆಯ ಮುಂದೆ ಇದ್ದ ಸೇಬಿನ ಗಿಡದ ಮೇಲೆ ಕುಳಿತುಕೊಂಡಿತು.

ಆ ಮನೆಯಲ್ಲಿ ಅತಿಥಿಗಳು ಕಿಕ್ಕಿರಿದು ತುಂಬಿದ್ದರು. ತಡವಾಗಿ ಬಂದ ಅತಿಥಿಯೊಬ್ಬನು ಬಾಗಿಲ ಮುಂದೆ ನಿಂತಿದ್ದನು. ಒಳಗಿದ್ದವರು ಬಾಗಿಲು ಮುಚ್ಚಿದರು. ಪಾಪ, ಬಾಗಿಲ ಒಳ ನಿಂತಿದ್ದಾತನ ಬೆರಳು ಸಿಕ್ಕಿಕೊಂಡಿತು.

ಒಡನೆಯೇ ಅತನು "ಊ! ಊ! ಊ!......!" ಎಂದು ಹಲುಬುತ್ತ, ತನ್ನ ಬೆರಳನ್ನು ಬೀಸತೊಡಗಿದನು.

ಈ ಸದ್ದು ಕೇಳಿ ಗೂಬೆಗೆ ಸ್ವಲ್ಪ ಸಂದೇಹ ಉಂಟಾಯಿತು. 'ಇದೇನು! ಕಮಾ ಹಿಯಾಗಿದೆ ಸ್ವರ. ಮದುವೆಗಳಲ್ಲೇ ಜನ ಹೀಗೆ ಹಾಡುತ್ತಾರೆ ಎಂದ ಮೇಲೆ ಅದು ಅವರಿಗೆ ಚೆನ್ನಾಗಿರಬಹುದು!'— ಎಂದುಕೊಂಡಿತು ಗೂಬೆ.

ಅದೂ ಕೂಡ 'ಊ....ಊ!' ಎಂದು ಕೂಗಲು ಪ್ರಯತ್ನಿಸಿತು.

"ಪರವಾ ಇಲ್ಲ!"– ಎಂದು ತನಗೆ ತಾನೇ ಹೇಳಿಕೊಂಡು, ಗೂಬೆಯು ಅಡವಿಗೆ ವಾಪಸು ಧಾವಿಸಿತು. ಇತರ ಪಕ್ಷಿಗಳ ಮುಂದೆ ತನ್ನ ಹೊಸ ದನಿಯನ್ನು ತೋರಿಸಿಕೊಳ್ಳಲು ಅದಕ್ಕೆ ಆತುರ.

ನೀವೆಂದಾದರೂ ರಾತ್ರಿಯ ಹೊತ್ತು ಅಡವಿಗೆ ಹೋದಾಗ, "ಊ! ಊ! ಊ!" ಎಂಬ ಶಬ್ದವನ್ನೇ ಈಗಲೂ ಗೂಬೆಯು ಹಾಡುತ್ತಿರುವುದನ್ನು ಕೇಳಬಹುದು.

ಭಕ್ತನಾರು?

(ಪ್ರಶ್ನೋತ್ತರ)

ಭಕ್ತನಾರು?

—ಅಸೂಯೆ ಇಲ್ಲದವನು.

ದಯಾಮಯನಾರು?

—ಅಹಂಕಾರ ಇಲ್ಲದವನು.

ನಿಃಸ್ವಾರ್ಥಿ ಯಾರು?

—ಶೀತ-ಉಷ್ಣ ಸುಖ-ದುಃಖಗಳನ್ನು ಒಂದೇ ರೀತಿಯಾಗಿ ಭಾವಿಸುವವನು.

ಕ್ಷಮಾ ಶೀಲನಾರು?

—ಸದಾ ತೃಪ್ತನಾದವನು.

ಯಾರ ದೃಢ ನಿಷ್ಠೆ ಯುವನು?

—ದೇವರಲ್ಲಿ ಮನಸ್ಸನ್ನೂ ಆತ್ಮವನ್ನೂ ನೆಲೆಗೊಳಿಸಿದವನು.

ಯಾವನು ಭಯ ಉಂಟು ಮಾಡುವುದಿಲ್ಲ?

—ಯಾರಿಂಗೆ ಇನ್ನರ ಭಯವಿಲ್ಲವೊ ಆತನು.

ಅಮೃತ ಬಿಂದು

ಎಲ್ಲವನ್ನು ಸಹಿಸುವುದು ಯೋಗ್ಯತೆ ಎಣಿಸದು; ಆದರೆ ಸಹನೆ ಇಲ್ಲದಿರುವು ಅಯೋಗ್ಯತೆ ಎನಿಸುವುದು.

o o o

ಚಿನ್ನದ ಹುಡಿಯೂ ಕೂಡ ಬೆಲೆಯುಳ್ಳವಾಗಿರುವಂತೆ ಸಮಯದ ಪ್ರತಿ ಸೆಕೆಂಡೂ ಕೂಡ ಬೆಲೆಯುಳ್ಳದ್ದಾದುದು.

o o o

ಉತ್ತಮ ಭಾವನೆಗಳನ್ನು ಮನಸ್ಸಿನಲ್ಲಿ ತುಂಬಿಕೊಂಡವನಜೀವನ ಉತ್ತಮಗೊಳ್ಳುವುದು ಏಕೆಂದರೆ ಉತ್ತಮ ಭಾವನೆಯೇ ಉತ್ತಮ ಜೀವನ.

o o o

ಮನುಷ್ಯನ ಸುಖದುಃಖಗಳು ಆತನ ಮನೋಭಾವಕ್ಕೆ ಹೊಂದಿಕೊಂಡಷ್ಟು ಆತನ ಸಂಪತ್ತು, ಅದೃಷ್ಟಗಳಿಗೆ ಹೊಂದಿಕೊಂಡಿಲ್ಲ.

o o o

ಬೆಳೆ, ಆರೋಗ್ಯದ ಸಂತೋಷ ಪಡೆಯಬೇಕಾದರೆ ಬೀಜ ನೆಡುವ ಕಷ್ಟ ಸಹಿಸಲೇಬೇಕು.

o o o o

ತನ್ನ ಧನವನ್ನೆಲ್ಲಾ ತನ್ನ ತಲೆಗಾಗಿ ಸುರಿಯುವವನ ಸಂಪತ್ತನ್ನು ಯಾರೂ ಅಪಹರಿಸಲಾರರು.

ಯಾವನು ಶೋಕ, ಸಂತೋಷ, ಭೀತಿಗಳಿಂದ ದೂರಿರುತ್ತಾನೆ?

—ಪರಿಶುದ್ಧನಾದವನು.

ಕರ್ಮಕುಶಲನಾಗಿಯೂ, ಕರ್ಮಗಳಿಂದ ಅಲಿಪ್ತನಾಗಿರುವವನಾರು?

—ಅವುಗಳ ಇಷ್ಟಾನಿಷ್ಟ ಫಲಗಳನ್ನು ತ್ಯಾಗ ಮಾಡುವವನು.

ಶತ್ರು-ಮಿತ್ರರನ್ನು ಒಂದೇ ದೃಷ್ಟಿಯಿಂದ ನೋಡುವವನಾರು?

ಮಾನಾಪಮಾನಗಳಿಂದ ಅಲಿಪ್ತನಾಗಿರುವವನು.

ಹೊಗಳಿಕೆಯಿಂದ ಹೆಮ್ಮೆಗೊಳ್ಳದವನಾರು?

—ಯಾರು ಜನರ ನಿಂದೆಯಿಂದ ಕುಗ್ಗುವುದಿಲ್ಲವೊ ಆತನು.

ಯಾರು ಮೌನ ವ್ರತ, ಏಕಾಂತ ಬಯಸುತ್ತಾನೆ?

—ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡವನು.

—ವಾಂ.

ಕನಸಿಗೊಂದು ರೂಪ...

ಮಕ್ಕಳ ಕಲ್ಪನೆಯ ಲೋಕದಲ್ಲಿ ಅಸಾಧ್ಯವಾದುದೇನೂ ಇಲ್ಲ. ಕನಸಿನಲ್ಲಿ ತೇಲುವಷ್ಟು ಕಾಲ ಎಲ್ಲವೂ ಸಾಧ್ಯವೇ! ಅವರ ವಿದ್ಯಾಭ್ಯಾಸ, ಉದ್ಯೋಗ ಜೀವನ, ಕುಟುಂಬದ ಬದುಕು, ಹೊಸಮನೆ, ಆಧುನಿಕ ಅಭಿರುಚಿಗೆ ಒಗ್ಗುವ ಸಾಧನ ಸೌಕರ್ಯಗಳು.... ಹೀಗೆ ಹತ್ತು ಹಲವು ಅವಶ್ಯಕತೆಗಳು ಮಕ್ಕಳು ಬೆಳೆದಂತೆ, ನಿಮಗೆ ಇದಿರಾಗುವ ಸಮಸ್ಯೆಗಳು. ಕನಸನ್ನು ನಿಜಗೊಳಿಸಲು ಉಳಿತಾಯವೊಂದೇ ಸರಳ ಮಾರ್ಗ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು, ಹಣ ಸಂಪಾದನೆಯಾದಂತ ಅದರಲ್ಲಿ ಉಳಿಸಿಕೊಂಡು ಬನ್ನಿರಿ. ಖಾತೆಯಲ್ಲಿ ಹಣ ಬೆಳೆದಂತೆ ನಿಮ್ಮ ಮಕ್ಕಳ ಕನಸಿಗೆ ಕ್ರಮೇಣ ರೂಪ ಬರಲು ತೊಡಗುವುದು.

ಕನಿಷ್ಟ ರೂಪಾಯಿ 5ನ್ನು ಕಟ್ಟಿ ತೆರೆಯಬಹುದಾದ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ 25 ಪೈಸೆಯನ್ನೂ ಕಟ್ಟುತ್ತಾ ಬರಬಹುದು. ಚೆಕ್ ಪುಸ್ತಕದ ಸೌಲಭ್ಯವಿದೆ. ವರ್ಷವೊಂದರಲ್ಲಿ 100 ಬಾರಿ ಖಾತೆಯಿಂದ ಹಣವನ್ನು ಹಿಂದೆ ಪಡೆಯಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

(ಮೂರನೇ ಪುಟದಿಂದ)

ಕಳೆಯುವುದರೊಳಗೆ ಮತ್ತೆ ಕೆಲವರು ಕಾಂಗ್ರೆಸ್ ಸೇರಿರುವುದರಿಂದ ಈಗ ಅಲ್ಲಿ ಕಾಂಗ್ರೆಸ್ ಹೊಸ ಸರಕಾರ ಸ್ಥಾಪಿಸಿತು. ಈ ಬಗೆಯ ರಾಜಕೀಯವು ರಾಜಕೀಯ ಚದುರಂಗದಾಟವೆಂಬುದನ್ನೇ ದೃಢಪಡಿಸುತ್ತದಲ್ಲವೆ? ಪಂಜಾಬದಲ್ಲಿ ಸಂಯುಕ್ತ ರಂಗದ ನಾಲ್ವರು ಸದಸ್ಯರು ಕಾಂಗ್ರೆಸಿಗೆ ಬೆಂಬಲ ನೀಡಿ, ಸಂಯುಕ್ತ ಸರಕಾರದ ಪರಾಭವಕ್ಕೆ ಕಾರಣರಾದುದೂ ಇದನ್ನೇ ಸಮರ್ಥಿಸುತ್ತದೆ. ಇದೂ ಆಡಳಿತಕ್ಕೊಂದು ರಾಜಕೀಯ!

ಸೇಲ್ ನೋಟೀಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 576/66.
O. S. 203/63.

ಅರ್ಜಿದಾರ—ತಿಮ್ಮಪ್ಪ ಹೆಬ್ಬಾರ್, ವೆಂಕಟ್ರಮಣ ಹೆಬ್ಬಾರನ ಮಗ, ಆನಗಳ್ಳಿ.

ಎದ್ರಿರು—2, ರಾಮಕೃಷ್ಣಯ್ಯ, 3, ಮಹಾಬಲಯ್ಯ—ನಾರಾಯಣಪ್ಪಯ್ಯನ ಮಕ್ಕಳು, ಆನಗಳ್ಳಿಯಲ್ಲಿರುವವರು.

ಸದ್ರಿ ಎದ್ರಿರಿಗೆ ತಿಳಿಯಪಡಿಸಿದ್ದು—

ಮೇಲ್ಕಂಡ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರನು ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ. ಅದ್ರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ ತಾ. 30—5—67ನೇ ತಾರೀಕು ನಿಶ್ಚಯಿಸಲ್ಪಟ್ಟಿದೆ.

[ಕೋರ್ಟಿನ ಹುಕುಂ ಪ್ರಕಾರ]

ಎ. ಎಸ್. ಎನ್. ಹೆಬ್ಬಾರ್
ಅರ್ಜಿದಾರನ ಎಡ್ವೊಕೇಟ್.

Coondapoor, 8—4—67.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ.

R. E. P. 454/66.
O. S. 469/56.

ಅರ್ಜಿದಾರರು— 1. ಬಿ. ಬೀಬಿ, ಮೀರಾ ಸಾಹೇಬನ ವಿಧವೆ. 2. ಸಫಿಯಾಬಿ, 3. ಮುಲ್ಲಾ ಸಾಹೇಬಿ, 4. ಮುಲ್ಲಾ ಜೈನುಲ್ಲಾ—ಮೀರಾ ಸಾಹೇಬನ ಮಕ್ಕಳು.

ನಂ. 1ನೇ ಶಿರೂರು ಗ್ರಾಮದಲ್ಲಿರುವವರು

ಎದ್ರಿರು— 5. ಅಲ್ಲಿ ಸಾಬ 6. ಹಸನ್ ಸಾಬ, 7. ಸಫಿಯಾಬಿ, 8 ಮೀರಾ ಸಾಬ, 9. ಉಸ್ಮಾನ್ ಸಾಬ, 10. ಅಬ್ದುಲ್ ರಹಿಮಾನ್— ಉಮ್ಮರ್ ಸಾಬರ ಮಕ್ಕಳು, 12. ಮಸಾಬಿ, ಮೈದಿನ್ ಸಾಬರ ಹೆಂಡತಿ. 13. ಬೀಬಿಮಾ ಯಾನೆ ಕೈರುನ್ನಿಸಾ, ಗೌಸನ ಹೆಂಡತಿ.

ಸದ್ರಿ ಶಿರೂರು ಗ್ರಾಮದಲ್ಲಿರುವವರು.

ಸದ್ರಿ 5ರಿಂದ 13ನೇ ವರೆಗಿನ ಎದ್ರಿರಿಗೆ ತಿಳಿಸಿದ್ದು—

ಮೇಲ್ಕಂಡ ವ್ಯಾಜ್ಯದಲ್ಲಿ ಕೊಡೋಣಾದ ಫೈನಲ್ ಡಿಕ್ರಿಯ ಬಗ್ಗೆ ಎದ್ರಿಯು ಮೃತಪಟ್ಟದ್ರಿಂದ ಅವನ ... ಪ್ರತಿನಿಧಿಯಾದ ತಮಗೆ ಆತನ ಹಿಸೆಗೆ ಬಂದ ಸ್ಥಿರಾಸ್ತಿಯ ಡೆಲಿವರಿ ಕೊಡಿಸಬೇಕೆಂತ ಅರ್ಜಿದಾರರು ಅರ್ಜಿ ಮಾಡಿಕೊಂಡಿರುತ್ತಾರೆ. ನಿಮಗೆ ಈ ಬಗ್ಗೆ ಏನಾದರೂ ಆಕ್ಷೇಪವಿದ್ದಲ್ಲಿ ತಾ. 13—4—67ರಂದು ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

ಎ. ಎಸ್. ಎನ್. ಹೆಬ್ಬಾರ್
ಅರ್ಜಿದಾರರ ಎಡ್ವೊಕೇಟ್,

ಕುಂದಾಪುರ, 1—4—67

ಮೋಡ ಚದುರಿತು

(ಎರಡನೇ ಪುಟದಿಂದ)

ನಿಗೆ ಸಹಿಸಲಾಗುತ್ತಿರಲಿಲ್ಲ. ತನಗೆ ಮಕ್ಕಳಿಲ್ಲ ಎನ್ನುವುದು ಅವರ ಕೋಪಕ್ಕೆ ಮತ್ತೊಂದು ಪ್ರಮುಖ ಕಾರಣವಾಗಿತ್ತು.

ತಾರಾಳನ್ನು ಹಲಬಗೆಯಲ್ಲಿ ಶಿಕ್ಷಿಸಿ, ದಂಡಿಸಿ, ದೂಷಿಸಿ ತಮ್ಮ ಕೋಪವನ್ನು ಶಾಂತ ಮಾಡಿಕೊಳ್ಳುತ್ತಿದ್ದರು— ಸಂತೋಷಪಡುತ್ತಿದ್ದರು ಸುನಂದಮ್ಮ. ನೋವನ್ನು ಅನುಭವಿಸಲಾರದೆ ತಾರಾ ಕೆಲವಾರಿ ಚಿಕ್ಕಮ್ಮನೊಂದಿಗೆ ವಾದಿಸುತ್ತಿದ್ದಳು. ಆದರೆ ತಂದೆ ಎದುರಿನಲ್ಲಿ ಒಂದು ಮಾತನ್ನೂ ಆಡುತ್ತಿರಲಿಲ್ಲ. ತಾರಾಳ ಸೌಮ್ಯ ಗುಣ, ಸರಳತನ ಸುನಂದಮ್ಮನವರ ಕೋಪ ತಾಪ ದಬ್ಬಾಳಿಕೆಗಳಿಗೆ ಸಹಾಯಕವಾಗಿದ್ದವು. ಶೇಷಣ್ಣನವರಿಗೆ ಮನೆಯ ಪರಿಸ್ಥಿತಿಯ ಪರಿಚಯವಾಗಿತ್ತು. ಹಗರಣ, ಮನಸ್ತಾಪಗಳನ್ನು ತಪ್ಪಿಸುವ ಕಾರಣದಿಂದ ಅವರು ಮೌನಿಗಳಾಗಿರುತ್ತಿದ್ದರು.

ಶೇಷಣ್ಣ ಮಗಳ ಆಸೆ—ಆಕಾಂಕ್ಷೆಗಳಿಗೆ ಅಡ್ಡ ಬರಲು ಸಿದ್ಧರಿರಲಿಲ್ಲ. ತಾರಾ ಸುಖವಾಗಿರಲಿ ಎಂದು ಅವರ ಹೃದಯ ಸದಾ ಹಾರೈಸುತ್ತಿತ್ತು.

ಅನಂತ ಸುನಂದಮ್ಮನ ತಮ್ಮ. ನಗರದ ಕಾಲೇಜಿನಲ್ಲಿ ಓದುತ್ತಿದ್ದ. ಆಗಾಗ್ಗೆ ಅಕ್ಕನನ್ನು ಭೇಟಿ ಮಾಡುವ ಸಲುವಾಗಿ ಬರುತ್ತಿದ್ದ. ಅನಂತ ಅಕ್ಕನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಿದ್ದ.

ಶೇಷಣ್ಣ ಪತ್ನಿಗೆ ಕೆಲ ಸಂಗತಿಗಳನ್ನು ಸಂಕೋಚವಿಲ್ಲದೆ ತಿಳಿಸಿದ್ದ. "ನನಗೆ ಗಂಡು ಸಂತಾನವಿಲ್ಲ, ಸುನಂದ. ನನಗೆ ಗಂಡು ಹೆಣ್ಣು ಎಲ್ಲ ತಾರಾ ಒಬ್ಬಳೇ. ನೀನು ನನ್ನ ಕೈ ಹಿಡಿದು ಈ ಮನೆಯನ್ನು ಬೆಳಗಿದೆ. ನನ್ನಿಂದ ಯಾರಿಗೂ ಅನ್ಯಾಯವಾಗ ಬಾರದು ಎನ್ನುವ ಆಸೆ. ನನಗೆ ಇಬ್ಬರು ಹೆಂಡತಿಯರು....ಮೊದಲಾ ಉಳಿಯಲಿಲ್ಲ. ಅವಳಿಗೆ ಆಸ್ತಿ ಅನುಭವಿಸುವ ಯೋಗವಿಲ್ಲ. ನನ್ನ ಅರ್ಧ ಆಸ್ತಿ ಅವಳ ಮಗಳು ತಾರಾಗೆ ಸೇರುತ್ತದೆ. ಉಳಿದ ಅರ್ಧ ನಿನಗೆ ಸಲ್ಲುತ್ತದೆ" ಎಂದು ಹೇಳಿದ ಮಾತನ್ನು ಸುನಂದಮ್ಮ ಮರೆಯುತ್ತಿರಲಿಲ್ಲ. ಅವರ ಮನಸ್ಸು ಸದಾ ಅದೇ ಮಾತನ್ನೇ ಮೆಲುಕು ಹಾಕುತ್ತಿತ್ತು.

ತಾರಾ ಮದುವೆ ಮಾಡಿಕೊಂಡರೆ ಅವಳ ಆಸ್ತಿ ಗಂಡನ ಪಾಲಾಗುತ್ತದೆ. ಉಳಿದ ಅರ್ಧ ಮಾತ್ರ ನನ್ನದು. ಹೇಗೂ ಗಂಡು ಸಂತಾನವಿಲ್ಲ. ಎಲ್ಲಾ ಆಸ್ತಿಯನ್ನು ನನ್ನದಾಗಿ ಏಕೆ ಮಾಡಿಕೊಳ್ಳ ಬಾರದು ಎನ್ನುವ ಆಸೆ ಸುನಂದಮ್ಮನನ್ನು ಕಾಡುತ್ತಿತ್ತು. ಅವರ ಆಸೆ ನೆರವೇರಲು ಅವಕಾಶವು ಇತ್ತು. "ತಮ್ಮ ಅನಂತನಿಗೆ ತಾರಾಳನ್ನು ತಂದುಕೊಂಡರೆ ಆಸ್ತಿ ಪಾಲುಗಳು ಆಗುವ ಅವಕಾಶವಿಲ್ಲ" ಎಂಬುದು ಅವರ ಯೋಚನೆಗೆ ಬಂತು. ಅನಂತತಾರಾಳೊಂದಿಗೆ ಸಲಿಗೆಯಿಂದಿರಲು ಪ್ರೋತ್ಸಾಹಿಸಿದರು. ಹಣವನ್ನು ಮುಂದೂ ಅನೇಕ ಬಾರಿ ಅನಂತ—ತಾರಾ ಇವರ ವಿಷಯವನ್ನು ಪ್ರಸ್ತಾಪಿಸಿದರು. ಶೇಷಣ್ಣ ಯಾವ ಮಾತನ್ನು ಆಡಲಿಲ್ಲ. ತಾರಾ ಚಿಕ್ಕಮ್ಮನ ಸಲಹೆಯನ್ನು ಕೇಳಿ ನಿರಾಕರಿಸಿದಾಗ ಸುನಂದಮ್ಮ ದಂಡನೆ—ದೂಷಣೆಗಳನ್ನು ಹೆಚ್ಚಿಸಿದರು. ತಾರಾಳ ನೋವನ್ನು ಚಿಂತಿಸುವಷ್ಟು ತಾಳ್ಮೆಯೂ ಅವರಿಗೆ ಇರಲಿಲ್ಲ.

೦ ೦ ೦

ಅನಂತನಿಗೆ ಅನೇಕ ದುಶ್ಚಟಗಳ ಪರಿಚಯವಿತ್ತು. ಅನಾಯಾಸವಾಗಿ ಅಕ್ಕನಿಂದ ವಿಶೇಷವಾಗಿ ಹಣ ಕೈಸೇರುತ್ತಿತ್ತು. ಅನಂತನಿಗೆ ಹಣ ಬೇಕಾದಷ್ಟು ದೊರೆಯುತ್ತದೆ ಎಂದು ತಿಳಿದ ಕೆಲವು ಗೆಳೆಯರು ಅವನನ್ನು ನಂಬಿ ಅನುಸರಿಸಿದರು.

ತಾರಾಳ ಸೌಂದರ್ಯ ಅವನಿಗೆ ಹುಚ್ಚು ಹಿಡಿಸಿತು. ಸುನಂದಮ್ಮ ತಾರಾಳ ವಿಷಯವನ್ನು ತಿಳಿಸಿ 'ದುಡುಕಬೇಡ, ಎಚ್ಚರಿಕೆಯಿಂದಿರು, ಮೊದಲು ಅವಳನ್ನು ಪ್ರೀತಿಸು' ಎಂದು ತನ್ನ ಯೋಜನೆಯನ್ನು ತಿಳಿಸಿದಳು; ತಾರಾಳಂತಹ ಹೆಣ್ಣಿನೊಂದಿಗೆ ಆಸ್ತಿಯೂ ಲಭಿಸುತ್ತದ ಎಂದು ತಿಳಿದು ಅನಂತ ಆನಂದಿಸಿದ.

ಹೆಂಡತಿ ಮತ್ತು ಅವಳ ತಮ್ಮನ ಅಧಿಕಾರ ಮಿತಿ ಮೀರಿ ವ್ಯಾಪಿಸುತ್ತಿರುವುದನ್ನು ಕಂಡು ಶೇಷಣ್ಣ ದಿಗಿಲುಗೊಂಡರು. ಮಗಳಿಗೆ ತೊಂದರೆಯಾಗದಿರಲೆಂದು ವ್ಯವಸ್ಥೆ ಮಾಡಿದರು. ಕಾಲೇಜು ಅಭ್ಯಾಸ ಮುಗಿಯಿತು. ತಾರಾ ತಂದೆಯೊಂದಿಗೆ ಪ್ರವಾಸ ಹೋಗುತ್ತಿದ್ದಳು. ತಾರಾ ರೈಲು ನಿಲ್ದಾಣದಲ್ಲಿ ನಿಂತಿದ್ದಳು.

"ತಾರಾ"...

"ಓ...ನೀವಿಲ್ಲಿ?"

'ಹೌದು ನಾನೀಗ C. I. D. ಬ್ರಾಂಚಿನಲ್ಲಿದ್ದೇನೆ"

"ಹಾಗಾದರೆ ನಿಮ್ಮ ಸಹವಾಸ ತುಂಬ ಕಷ್ಟ"

"ಬೇಡ ಬಿಟ್ಟು ಬಿಡು...."

"ನೋಡಿದಿರಾ...ನಿಮ್ಮ ವಿಷ:..."

'ಸರಿ ಸರಿ ಸಂತೋಷ....ಇದೆಲ್ಲ ಕನಸು ತಾರಾ...ಚೆನ್ನಾಗಿದ್ದೀಯಾ ತಾನೆ?"

'ಏನು ಚಂದನೋ ಏನೋ ಇದ್ದೇನೆ'

"ಇದೇನು ಇಷ್ಟೊಂದು ವೈರಾಗ್ಯ" ಎಂದ ಶ್ರೀನಿವಾಸ. ಆ ವೇಳೆಗೆ ಶೇಷಣ್ಣನವರು ಆಗಮಿಸಿದರು. ತಾರಾ 'ಅಪ್ಪ ಇವರೇ ಕಣಪ್ಪ ಶ್ರೀನಿವಾಸ್; ನಮ್ಮ ಕಾಲೇಜು ಸಂಘದ ಕಾರ್ಯದರ್ಶಿಯಾಗಿದ್ದರು. ಇವರು ನನ್ನ ತಂದೆ...." ಎಂದಳು.

"ಪರಿಚಯ ಇಷ್ಟೇ ಸಾಕೇನಮ್ಮ.... ಉದ್ಯೋಗ.... ಅಧಿಕಾರ....ಹಣ....ವಿದ್ಯೆ ವಿವೇಕ ಏನೂ ಬೇಡವೆ? ಎಂದರು ಶೇಷಣ್ಣ.

"ಹೋಗಪ್ಪ ನಿನಗೆ ಹಾಸ್ಯ'

'ತಾರಾ ನಿನ್ನ ಶ್ರೀನಿವಾಸ ಒಬ್ಬನನ್ನೇ ಅಲ್ಲ ಅವನ ಅಪ್ಪನನ್ನು ಬಲ್ಲೆ. ನನ್ನ ಸ್ನೇಹಿತ ರಾಮು ಮಗ ಕಣಮ್ಮ ಅವನು ...."

"ಅಪ್ಪ...ಅವರು....'

'ಸಾಕಮ್ಮ ನನಗೆಲ್ಲ ಗೊತ್ತಿದೆ....ನೀವಿಬ್ಬರು ಮಾತನಾಡುತ್ತಿರಿ...ಈಗ ಬಂದು ಬಿಡುತ್ತೇನೆ' ಎಂದು ನಡೆದರು ಶೇಷಣ್ಣ.

"ನೀವು ತುಂಬಾ ತುಂಟ' ಎಂದು ನಗು ನಗುತ್ತಾ ನುಡಿದಳು ತಾರಾ.

೦ ೦ ೦ ೦

'ಅಕ್ಕ'

'ಏನೋ ಅನಂತ'

'ಬೇಗ ಬಾ ಒಂದು ನಿಮಿಷ'

'ಏನೋ ಅದು?'

'ಮಿಲಿಟರಿಗೆ ಸೇರಿದ್ದೇನೆ.... ಇವತ್ತು ಪ್ರಯಾಣ ಬೆಳೆಸುತ್ತೇನೆ. ಆಶೀರ್ವದಿಸು ಅಕ್ಕ'

"ನಿಂಗೇನು ಬಂತೋ ಕೇಡು'

"ಯಾರಿಗೂ ಕೇಡು ಬರಬಾರದು ಅಂತಲೇ ಹೀಗೆ ಮಾಡಿದ್ದೇನೆ. ಇಲ್ಲಿಯವರೆಗೆ ಮಾಡಿದ ಪಾಪ ಕರ್ಮಗಳು ಸಾಕು. ಸಿಪಾಯಿಯಾಗಿ ಭೂಮಿತಾಯಿಯ ಋಣ ತೀರಿಸುತ್ತೇನೆ'

'ಇದೇನು ಹುಚ್ಚಾಟವೋ.... ನಿನಗೆ ಹೀಗೆ ಮಾಡು ಅಂತ ಯಾರು ಹೇಳಿಕೊಟ್ಟರೋ...ಏನೇನೋ ಆಸೆ ಇಟ್ಟುಕೊಂಡಿದ್ದೆ...ಆಸ್ತಿ ಎಲ್ಲ...."

'ಅಕ್ಕ ನಾನು ಹಾಲು ಕುಡಿಯೋ ಮಗುವಲ್ಲ. ನಿನ್ನ ಆಸ್ತಿ ನೀನು ನೋಡಿಕೋ ಸಾಕು....ಶತ್ರುಗಳು ಬಂದು ರಾಷ್ಟ್ರದ ಆಸ್ತಿಯನ್ನು ಕಿತ್ತುಕೊಂಡು ಹೋಗುತ್ತಿರುವಾಗ ನೀನು ಆಸ್ತಿಗೆ ಅಳ್ತೀಯಲ್ಲ ಅಕ್ಕ...'

'ಅಪ್ಪ ಅಮ್ಮನಿಗೆ ಹೇಳಿದಯೋ ನೋ, ಅವರು ಒಪ್ಪಿಕೊಂಡರೇ'

'ಸನ್ಮಾರ್ಗದಲ್ಲಿ ಬಾಳೋದಕ್ಕೆ...ಪ್ರಾಮಾಣಿಕತೆಯಿಂದ ಬದುಕುವುದಕ್ಕೆ— ನ್ಯಾಯ ನೀತಿ ಧರ್ಮಗಳ ಮಾರ್ಗ ಅನುಸರಿಸುವುದಕ್ಕೆ...ನನ್ನ ದೇಶದ ರಕ್ಷಣೆಗೆ ಹೋಗುವುದಕ್ಕೆ ಯಾರು ಒಪ್ಪಿದರೇನು, ಯಾರು ಒಪ್ಪದಿದ್ದರೇನು? ನಿನಗೆ ಹೇಳಿ ಹೋಗಲು ಬಂದೆ ಅಷ್ಟೆ'

'ಅವಳು ಶ್ರೀನಿವಾಸನನ್ನು ಮದುವೆಯಾದರೆ ಅರ್ಧ ಆಸ್ತಿ ಅವನದಾಗುತ್ತಾ ದೆಯಲ್ಲೋ?'

"ಅಕ್ಕ ನೀನು ಇನ್ನು ಹತ್ತು ಜನ್ಮ ಹೊತ್ತರೂ ನಿನಗೆ ತಾರಾ ಬುದ್ಧಿ ಬರುವುದಿಲ್ಲ"

"ಅವಳು ಆಸ್ತಿಯನ್ನೆಲ್ಲ...'

"ಆಗಲೇ ಅವನ ಹೆಸರಿಗೆ ಬರೆಸಿದಳೇನೋ?...ನಿಮ್ಮ ಭಾವ ಎಲ್ಲೋ?"

"ಹೆದರ ಬೇಡ ಕಣಕ್ಕ....ತಾರಾ ತನ್ನ ಪಾಲಿನ ಅರ್ಧ ಆಸ್ತಿಯನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಬರೆದಿದ್ದಾಳೆ....'

"ಅಂದರೆ ಅವಳು....'

"ತಾಯ್ನಾಡಿಗಾಗಿ ತನ್ನ ಸಮಸ್ತವನ್ನೂ ತ್ಯಾಗ ಮಾಡಿದ್ದಾಳೆ.... ಅವಳು ಶ್ರೀನಿವಾಸನನ್ನೇ ಮದುವೆಯಾಗುತ್ತಾಳೆ. ಭಾವ ಒಪ್ಪಿಗೆ ಕೊಟ್ಟಿದ್ದಾರೆ.... ನೀನು ಅತ್ತರೆ....ಜಗಳ ಮಾಡಿದರೆ ತೊಂದರೆ, ಅಪವಾದ ನಿನಗೆ ಅಷ್ಟೆ."

"ನೀನು ನನ್ನ ಅನ್ನಿಯೋ ನೋ?"

"ನ್ಯಾಯಕ್ಕೆ ಎಲ್ಲರೂ ಒಂದೇ ಕಣಕ್ಕ'

"ಸುನಂದ....' ಎಂದು ಹೊರ ಬಾಗಿಲಲ್ಲಿ ನಿಂತು ಕೂಗಿದರು ಶೇಷಣ್ಣ.

'ಬಂದೆ....' ಎನ್ನುತ್ತಾ ಕೋಪದಿಂದಲೇ ಹೊರಕ್ಕೆ ಬಂದರು ಸುನಂದಮ್ಮ.

'ನಿನ್ನ ಕೋಪತಾಪ ಎಲ್ಲ ಬಿಟ್ಟು ಬಿಡು...ಇನ್ನು ಮುಂದೆ ಎಲ್ಲ ಅವರ ಕಾಲ ....ನಾವು ಒಪ್ಪಿಕೊಂಡರೆ ನಮಗೆ ಮರ್ಯಾದೆ. ಇಲ್ಲವಾದರೆ ನಮಗೆ ನಷ್ಟ...ಸ್ವಲ್ಪ ಸಮಾಧಾನದಿಂದ ನೋಡು...ಇವಳು ನಿನ್ನ ಮಗಳು ತಾರಾ....ಇವನು ನಿನ್ನ ಭಾವಿ ಅಳಿಯ ಶ್ರೀನಿವಾಸರು. ಅರ್ಥಾತ್ ತಾರಾ ಗಂಡ....ಇನ್ನು ಮುಂದೆ ಅನಂತನ ಹಾಗೆ ತಮ್ಮ ಅಂತ ಅಂದುಕೋ...' ಎಂದರು ಶೇಷಣ್ಣ.

ಸುನಂದಮ್ಮ ತಾರಾಳನ್ನೇ ನೋಡುತ್ತಾ ನಿಂತಿದ್ದರು.

'ಅವರು ಮನೆಯೊಳಕ್ಕೆ ಬರಲೋ ಬೇಡವೋ ಹೇಳಿ ಬಿಡು' ಎಂದರು ಶೇಷಣ್ಣ.

'ಇದು ಅವರ ಮನೆ....ನಾನೇಕೆ ಬೇಡವೆನ್ನಲಿ' ಎಂದರು ಸುನಂದಮ್ಮ.

'ಮುಂಗಾರು ಮೋಡ ಚದುರಿತು' ಇನ್ನು ಭಯವಿಲ್ಲ ಎಂದು ತೃಪ್ತಿಯಿಂದ ನುಡಿದರು ಶೇಷಣ್ಣ.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು.......

ವಿತರಣೆಗಾರರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್

ಕಾರ್ಕಳ (ದ. ಕ.)

ತಯಾರಾಗಿದೆ—

ಹೊಸಕೆರೆ ಚಿದಂಬರಯ್ಯನವರ:

ಗೀತೆಯ ಕೈಗನ್ನಡಿ

ಎಂಬ ಭಗವದ್ಗೀತೆಯ ಸಮೂಲ ಭಾಷಾಂತರದ ಹೊಸ ಮುದ್ರಣ

ಆಕರ್ಷಕ ಮುಖ ಪತ್ರ 450 ಪುಟಗಳು

ಬೆಲೆ ರೂ. 1—50 [ಟ. ಖ. ಪ್ರತ್ಯೇಕ]

ರಖಂ ಪ್ರತಿಗಳಿಗೆ ರಿಯಾಯತಿ ದರ.

ತ್ವರೆ ಮಾಡಿರಿ!

ನವಯುಗ ಪ್ರೆಸ್, ಉಡುಪಿ.

NAVAYUGA 13—4—1967
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನಿಮ್ಮ ಮನಸ್ಸು

ಭಾವಪ್ರೇರಣೆಯು ಭ್ರಾಂತಿಯೆ ?

ಬರೆದವರು: ಶ್ರೀ ಅ. ಶ. ಗೂಬೆಂಕೋ.

ಭಾವ-ಪ್ರೇರಣೆ ಎಂದರೇನು? ಇದು ಅತ್ಯಂತ ಅಪೂರ್ವವಾದ ಸಹಜ ಘಟನೆಯೆ? ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಅಡಗಿರುವ ಸಾಮರ್ಥ್ಯವೇ? ಜೈವಿಕ ಸಮಾಚಾರದ ಈ ಘಟನೆಯನ್ನು, 'ಮಸ್ತಿಷ್ಕ ಧ್ವನಿ'ಯನ್ನು ವಿವರಿಸುವ ಆಧಾರ ಕಲ್ಪನೆಗಳು ಸತ್ಯಕ್ಕೆ ಎಷ್ಟು ಸಮೀಪವಾಗಿವೆ?

ಇಲ್ಲಿ ನಾನು ಎಲ್ಲಕ್ಕೂ ಮೊದಲು 'ಪ್ಯಾರ-ಸೈಕಾಲಜಿ' ಶಬ್ದವನ್ನು ವಿವರಿಸಬಯಸುತ್ತೇನೆ. 'ಪ್ಯಾರ' ಎಂಬ ಗ್ರೀಕ್ ಶಬ್ದಕ್ಕೆ 'ಸಮೀಪ'ವೆಂದು ಅರ್ಥ. ಈ ಪರಮನಸ್‌ಶಾಸ್ತ್ರವು ಸಂವೇದನಾತೀತ ದೃಷ್ಟಿಕ್ಷೇತ್ರದ ಅಧ್ಯಯನ ಮತ್ತು ಪ್ರಯೋಗ ನಡೆಸುತ್ತದೆ. ದೂರಮನಸ್ಪರ್ಶನ (ಟೆಲಿಪತಿ), ಜೀವಿಗಳು ಪರಜೀವಿಗಳ ಮೇಲೆ ಮನೋಭೌತಿಕ ಪ್ರಭಾವ ಬೀರುವಾಗಿನ ವಿಭಿನ್ನ ಘಟನೆಗಳು, ಅಥವಾ ಈ ಕಾಲದಲ್ಲಿ ಕರೆಯಲಾಗುತ್ತಿರುವಂತೆ 'ಜೈವಿಕ—ರೇಡಿಯೋ ಸಂಪರ್ಕ'— ಈ ಸಮಸ್ಯೆಯ ಪರಿಶೀಲನೆಯೇ ಸುಮಾರು ನೂರು ವರ್ಷಗಳಿಂದ ಈ ಪರ-ಮನಸ್‌ಶಾಸ್ತ್ರದ ಮುಖ್ಯ ವಿಷಯವಾಗಿದೆ.

ಅನೇಕ ಜನ ಪ್ರಮುಖ ವಿಜ್ಞಾನಿಗಳು ಈ ವಿಜ್ಞಾನ ಶಾಖೆಗೆ ಸಕ್ರಿಯವಾಗಿ ಬೆಂಬಲ ನೀಡಿದ್ದಾರೆ. ಗತಶತಮಾನಾಂತ್ಯದಲ್ಲಿ ಈ ಅತ್ಯಂತ ಸ್ವಾರಸ್ಯಕರ ಕ್ಷೇತ್ರದಲ್ಲಿ ಮೊದಲ ಪ್ರಯೋಗಗಳು ನಡೆದುವು. ವೈಜ್ಞಾನಿಕ ಸಂಶೋಧನೆಯ ಅತ್ಯಾಧುನಿಕ ವಿಧಾನಗಳ ಪ್ರಯೋಜನ ಪಡೆಯುವ ವಿಶೇಷ ಸಂಸ್ಥೆಗಳನ್ನು ಈ ಕಾರ್ಯಕ್ಕಾಗಿ ಸ್ಥಾಪಿಸಲಾಗಿದೆ.

ಭಾವ ಪ್ರೇರಣೆ

ದೂರದಿಂದ ಮನೋಭಾವಗಳನ್ನು ಅರಿಯುವ ಉದಾಹರಣೆಗಳು ಆಗಾಗ್ಗೆ ಕಂಡುಬರುತ್ತವೆ. ಈ ವಿಚಿತ್ರ ಘಟನಾ ಸಂಯೋಗವು ಸಾಂದರ್ಭಿಕವೆನಿಸದು. ಪದೇ ಪದೇ ಸಂಭವಿಸುವ ಈ ಹೊಂದಿಕೆಯ ಘಟನೆಗಳ ವಿಶೇಷ ಸಂಖ್ಯೆಯೇ ಅವು ಸಾಂದರ್ಭಿಕವಲ್ಲವೆಂದು ಸೂಚಿಸುತ್ತದೆ. ಉದಾಹರಣೆಗೆ ನಾನಿಲ್ಲಿ ಮಿಖಯಿಲ್ ಕೂಫ ಎಂಬ ಸುಪ್ರಸಿದ್ಧ ನಟಶ್ರೇಷ್ಠರ ಜೀವನದ ಸ್ವಾರಸ್ಯಕರ ಘಟನೆಯನ್ನು ತಿಳಿಸುತ್ತೇನೆ.

ಎಳೆಯ ವಯಸ್ಸಿನಲ್ಲಿ ಮಿಖಯಿಲ್ ಕೂಫಿಯವರು ಮಾಸ್ಕೋದಲ್ಲಿ ವ್ಯಾಸಂಗ ನಿರತರಾಗಿದ್ದಾಗ, ಅವರ ತಾಯಿಯು ವಿತೆಬ್‌ಸ್ಕಿನಲ್ಲಿದ್ದರು. ತಾಯಿಯ ಕಾಲನ್ನು ಇಲಿ ಕಚ್ಚಿದುದರಿಂದ ಆಕೆಗೆ ಏಡಿ ಹುಣ್ಣಾದಂತೆ ಒಂದು ದಿನ ರಾತ್ರೆ ಆತನಿಗೊಂದು ಕನಸಾಯಿತು. ಉದ್ರಿಕ್ತತೆಯಿಂದ ಎಚ್ಚತ್ತು, ಆತನು ತುಂಬ ಚಿಂತಿತನಾದನು. ಕನಸುಗಳನ್ನು ನಂಬಿ ಹಾಗೆ ಚಿಂತಿಸುದೇಕೆಂದು ಆತನ ಮಿತ್ರರು ಸಲಹೆ ನೀಡುತ್ತಿದ್ದಾಗಲೇ, ಅಂಚೆಯಾತನು ತಂತಿಯೊಂದನ್ನು ತಂದು ಕೊಟ್ಟನು. ತಾಯಿಗೆ ತುಂಬಾ ಕಾಹಿಲೆಯೆಂದು ಅದರಲ್ಲಿ ತಿಳಿಸಲಾಗಿತ್ತು. ಆತನು ವಿತೆಬ್‌ಸ್ಕಿಗೆ ಹೋದ ಮೇಲೆ ಕನಸಿನ ವಾಸ್ತವ ಸ್ವರೂಪವು ಆತನಿಗೆ ವ್ಯಕ್ತಪಟ್ಟಿತು. ಕಾಲಿನ ಮೇಲೆ ಇಲಿ ಕಚ್ಚಿದುದೂ, ಅದರಿಂದ ಹುಣ್ಣಾದುದೂ ನಿಜವೇ ಆಗಿತ್ತು. ಭಾವಪ್ರೇರಣೆಯ ಕುರಿತು ಇಂಥ ಅನೇಕ ಉದಾಹರಣೆಗಳನ್ನು ನಾವು ಸಂಗ್ರಹಿಸಿದ್ದೇವೆ. ಆದರೂ ಕೂಡ ಮೊದಲ ನೋಟಕ್ಕೆ ವಿಚಿತ್ರವೆನಿಸುವ ಈ ಘಟನೆಗಳ ಕುರಿತು ವೈಜ್ಞಾನಿಕ ನಿರೂಪಣೆ ನೀಡುವುದೂ, ಈ ವಿಷಯದ ಬಗ್ಗೆ ಪ್ರಯೋಗಗಳನ್ನು ನಡೆಸುತ್ತಿರುವ ವಿಜ್ಞಾನಿಗಳ ಅಭಿಪ್ರಾಯಗಳನ್ನು ಅರಿಯುವುದೂ ಉಚಿತವೆನಿಸುತ್ತದೆ.

ಮಾನವರ ಜ್ಞಾನತಂತುಗಳ ಚಟುವಟಿಕೆ ಬಗ್ಗೆ 'ಗಣ್ಯ ಏಶಿಯನ' ವಿಜ್ಞಾನಿ ವ. ಬೆಖ್ತೆರೆವ್ ಅವರು ನಡೆಸಿದ ಕೆಲವು ಪ್ರಯೋಗಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸೂಕ್ಷ್ಮಗ್ರಾಹಿಯಾದ ಹುಡುಗಿಯೊಬ್ಬಾಕೆಯು ಮೇಜಿನ ಬಳಿ ಕುಳಿತಿದ್ದಳು. ಅದರ ಮೇಲೆ ಬೆಂಕಿಕಡ್ಡಿ, ಬೆಂಕಿಕಡ್ಡಿ ಪೆಟ್ಟಿಗೆ, ಸಿಗರೇಟು, ಬಾಚಣಿಗೆ, ಇತ್ಯಾದಿ ಕೆಲವು ವಸ್ತುಗಳಿದ್ದವು. ಪ್ರಯೋಗ ನಡೆಸುತ್ತಿದ್ದವರು ಹುಡುಗಿಯ ಕಡೆಗೆ ಬೆನ್ನು ತಿರುಗಿಸಿಕೊಂಡು, ಸುಮಾರು ಆರು ಮೀಟರು ದೂರದಲ್ಲಿದ್ದ ಪರದೆಯ ಹಿಂದೆ ಇದ್ದರು. ಅವರ ಬಳಿಯಲ್ಲೊಂದು ಟೊಪ್ಪಿಗೆಯಲ್ಲಿ ಕಾಗದದ ಚೂರುಗಳಿದ್ದವು. ಮೇಜಿನ ಮೇಲಿದ್ದ ವಸ್ತುಗಳ ಹೆಸರುಗಳನ್ನು ಆ ಕಾಗದದ ಚೂರುಗಳಲ್ಲಿ ಬರೆದಿಡಲಾಗಿತ್ತು. ಅವುಗಳಲ್ಲಿ ಯಾವುದೋ ಒಂದು ಕಾಗದದ ಚೂರನ್ನು ಸಹಾಯಕರು ಎತ್ತಿಕೊಂಡು ಪ್ರಯೋಗಕಾರರಿಗೆ ಮೌನವಾಗಿ ಕೊಟ್ಟರು. ಆಗ ಅವರು ತಮ್ಮ ಮನಸ್ಸಿನಲ್ಲಿಯೇ ಆ ವಸ್ತುವನ್ನು ಚಿತ್ರಿಸಿಕೊಳ್ಳತೊಡಗಿದರು. ಅಂತಹ ವೇಳೆಯಲ್ಲಿ ದೂರದಲ್ಲಿ ಕುಳಿತಿದ್ದ ಹುಡುಗಿಯೂ ಸಹ ಸಾಮಾನ್ಯವಾಗಿ ಪ್ರಯೋಗಕಾರರು ಯಾವ ವಸ್ತುವಿನ ಬಿಂಬವನ್ನು ಆಕೆಗೆ ಭಾವಪ್ರೇರಣೆಯ ಮೂಲಕ ತಿಳಿಸಲು ಪ್ರಯತ್ನಿಸುತ್ತಿದ್ದರೋ, ಅದೇ ವಸ್ತುವನ್ನೇ ಕೈಗೆತ್ತಿಕೊಳ್ಳುತ್ತಿದ್ದಳು.

ಸಿದ್ಧಾಂತದ ಸಮರ್ಥನೆ

ಮಾನವ ಮಸ್ತಿಷ್ಕವು ಕೆಲವು ವಿದ್ಯುತ್ಕಾಂತ ತರಂಗಗಳನ್ನು ವಿಸರ್ಜಿಸುತ್ತದೆಯೆಂದು ಅನೇಕ ಜನ ವಿಜ್ಞಾನಿಗಳು ಭಾವಿಸುತ್ತಾರೆ. ಬಾನುಲಿ ಕೇಂದ್ರವು ತನ್ನ ತರಂಗಗಳನ್ನು ಕಳಿಸುವಂತೆಯೇ ಜನತೆಯ ಮಸ್ತಿಷ್ಕಗಳೂ ಸಹ ತರಂಗ ಪ್ರೇಷಕಗಳಾಗಿಯೂ ಗ್ರಾಹಕಗಳಾಗಿಯೂ ಕೆಲಸ ಮಾಡುತ್ತದೆ. ಈ ಆಧಾರ ಕಲ್ಪನೆಯು ವಿಚಿತ್ರವೆನಿಸಬಹುದು. ಆದರಲ್ಲೇನೂ ಅತಿಲೌಕಿಕತೆಯಿಲ್ಲ. ಮಾನವ ಶರೀರದಲ್ಲಿ ವಿದ್ಯುತ್ ಚೈತನ್ಯವಿದೆಯೆಂದು ಈಗಾಗಲೇ ರುಜುವಾತಾಗಿದೆ. ಜೀವಿಯು ಜೀರ್ಣಿಸಿಕೊಳ್ಳುವ ಪೋಷಕ ದ್ರವ್ಯಗಳ ವಿಘಟನೆಯ ಕಾಲದಲ್ಲಿ ಉಂಟಾಗುವ ಜೀವರಾಸಾಯನಿಕ, ಜೀವ—ಭೌತಿಕ ಪ್ರಕ್ರಿಯೆಗಳ ಪರಿಣಾಮವಾಗಿ ಶರೀರದಲ್ಲಿ ಜೀವ ಪ್ರವಾಹಗಳು ರೂಪುಗೊಳ್ಳುತ್ತವೆ. ಈ ಪ್ರವಾಹಗಳು ಅತ್ಯಂತ ಬಲಹೀನವಾಗಿರುತ್ತವೆಯೆಂಬುದೂ ಸಹ ನಿಜ. ಹೀಗಾಗಿ ಮಸ್ತಿಷ್ಕ ಗ್ರಹಿಸುವ ಜೈವಿಕ ವಿದ್ಯುಚ್ಛಕ್ತಿಯು ಕೆಲವು ವೇಳೆ ಒಂದು ವೋಲ್ಟಿನ ಮಿಲಿಯಾಂಶದಷ್ಟು ಮಾತ್ರವೇ ಆಗಿರುತ್ತದೆ. ಈ ಚೈತನ್ಯವನ್ನು ಶುದ್ಧಾಕಾಶದೂರಕ್ಕೆ (ಈತರ) ವಿಸರ್ಜಿಸಲಾಗುತ್ತದೆಯೆಂದು ನಂಬಲು ಆಧಾರಗಳಿವೆ. ವೈಜ್ಞಾನಿಕ ದೂರಮನಸ್ಪರ್ಶನ ಸಿದ್ಧಾಂತದ ಸ್ಥಾಪಕರಲ್ಲೊಬ್ಬರಾದ ಬ. ಬ. ಕಝಿನ್‌ಸ್ಕಿಯವರು ಜ್ಞಾನತಂತುಗಳ ವಿದ್ಯುತ್ಪಾದನೆಯ ಕ್ರಮವನ್ನು [illegible]ಷ್ಟು ಹಿಂದೆಯೇ ನಿರೂಪಿಸಲು ಪ್ರಯತ್ನಿಸಿದರು.

ಉಕ್ರೇನಿನ ವಿಜ್ಞಾನ ಅಕಾಡೆಮಿಯ ವಿಜ್ಞಾನಿ ಅಕಡೆಮೀಷಿಯನ್ ಬ. ವ. ಲಿಯೊನ್‌ತೋವಿಚ್ ಅವರ ಕಝಿನ್‌ಸ್ಕಿ ಅವರು ಆಧಾರಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ತಮ್ಮ ಗಣ್ಯ ರೇಡಿಯೊ-ಭೌತಶಾಸ್ತ್ರಜ್ಞ ಪುತ್ರರ ಸಹಾಯದಿಂದ (ಆತನೂ ಸಹ ಒಬ್ಬರು ಅಕಡೆಮಿಷಿಯನರೇ), ಮಾನವ ಮಸ್ತಿಷ್ಕವು ವಿಸರ್ಜಿಸುವ ಜೈವಿಕ ವಿದ್ಯುತ್ಕಾಂತ ತರಂಗಗಳು ಒಂದು ಸೆಂಟಿ ಮೀಟರು ಉದ್ದವಾಗಿರುತ್ತವೆಯೆಂದು ಲೆಕ್ಕ ಹಾಕಿದ್ದಾರೆ. ಅವುಗಳ ಕಂಪನವು ಅತ್ಯಂತ ವಿಶೇಷವೆಂದೂ-- ಸುಮಾರು ನೂರು ಕೋಟಿ ಹರ್ಟ್ಜ್‌ಗಳೆಂದೂ,-- ಅವುಗಳ ವೇಗವು ಪ್ರಕಾಶವೇಗಕ್ಕೆ ಸಮನಾದುದೆಂದೂ ಊಹಿಸಲಾಗಿದೆ. ಸ್ರೋತ್ರವು ಬಲಹೀನವಾಗಿದ್ದರೂ ಕೂಡಾ, ಈ ಎಲ್ಲ ಕಾರಣಗಳಿಂದ ತರಂಗಗಳು ಬಹುದೂರದವರೆಗೆ ಸಂಚರಿಸುವುದು ಸಾಧ್ಯವಾಗುತ್ತದೆ.

ವಿದ್ಯುತ್ಕಾಂತ ಸಿದ್ಧಾಂತವು ಮಾತ್ರವೇ ಪರ—ಮನಸ್‌ಶಾಸ್ತ್ರಕ್ಕೆ ಅನ್ವಯಿಸುತ್ತದೆಯೆಂದೇನೂ ಇಲ್ಲ. ಪರ—ಮನಸ್-ಶಾಸ್ತ್ರೀಯ ಸಮಾಚಾರವಾಹಕವಾದ ವಿಶಿಷ್ಟ ಅಪರಿಚಿತ ಚೈತನ್ಯವನ್ನು ಮಸ್ತಿಷ್ಕವು ವಿಸರ್ಜಿಸುತ್ತದೆಯೆಂದು ನಂಬುವುದರ ಕಡೆಗೆ ಈಗ ಬಹ್ವಂಶದ ವಿಜ್ಞಾನಿಗಳ ಪ್ರವೃತ್ತಿ ಉಂಟಾಗಿದೆ.

ಪರ—ಮನಸ್—ಶಾಸ್ತ್ರದ ಪ್ರತ್ಯಕ್ಷ ಉಪಯೋಗ

ಪರ—ಮನಸ್—ಶಾಸ್ತ್ರದ (ಪ್ಯಾರಾ—ಸೈಕಾಲಜೀ) ಪ್ರತ್ಯಕ್ಷ ಉಪಯೋಗದ ಕುರಿತು, ವಿಶೇಷತಃ ಮಾನವ ಮಸ್ತಿಷ್ಕದ ಜೀವ—ವಿದ್ಯುತ್ ಸಂಬಂಧಗಳ ಕುರಿತು ಮಾತನಾಡುವ ಕಾಲವಿನ್ನೂ ಬಂದಿಲ್ಲ. ಈ ವಿಜ್ಞಾನ ಸೂತ್ರದ ಕೆಲವು ಕ್ರಮಗಳನ್ನು ಈಗಾಗಲೆ ಬಳಸಲಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಶಿಕ್ಷಣ ಕ್ಷೇತ್ರದಲ್ಲಿ ಬಾಯಿಮಾತು ಮತ್ತು ಸ್ವಂತ ಉದಾಹರಣೆಯ ಜತೆಗೆ ಮಾನಸಿಕ ಭಾವ ಪ್ರೇರಣೆಯೂ ಅತ್ಯಂತ ಮುಖ್ಯ ಪಾತ್ರ ವಹಿಸಬಲ್ಲುದು. ಈಗ ಇಂತಹ ಭಾವ ಪ್ರೇರಣೆಯು ಮನಸ್ಸಿನ ಅಜಾಗೃತ ಸ್ಥಿತಿಯಲ್ಲಿ ನಡೆಯುತ್ತದೆ. ಆದುದರಿಂದಲೇ ಅದು ಸಾಕಾದಷ್ಟು ಪರಿಣಾಮಕಾರಿಯಾಗಿಲ್ಲ.

ಯಂತ್ರಕಲಾ ವಿಜ್ಞಾನದಲ್ಲಿಯೂ ಈ ವಿಧಾನಗಳನ್ನು ಬಳಸುವುದರಿಂದ, (ಇಂದು ಈ ಕಲ್ಪನೆಯೇ ವಿಚಿತ್ರವೆನಿಸುತ್ತದೆಯಾದರೂ ಕೂಡ,) ಜೆಟ್ ವಿಮಾನಗಳನ್ನೂ, ಅಂತರಿಕ್ಷ ನೌಕೆಗಳನ್ನೂ ಲೋಹ ಕರ್ಮದ ಎಲ್ಲ ಪ್ರತಿಕ್ರಿಯೆಗಳನ್ನೂ ಮಾನಸಿಕ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಬಹುದು.

ಕಡೆಯದಾಗಿ ಫ್ರಾನ್ಸಿನ ಪರ-ಮನಸ್‌ಶಾಸ್ತ್ರಜ್ಞರಾದ ಅರ್-ಸೆರವುಮ್ಯಾನರು ಆಶಾವಾದದಿಂದ ವ್ಯಕ್ತಪಡಿಸಿರುವ ಹೇಳಿಕೆಯನ್ನು ನಾನಿಲ್ಲಿ ಉದ್ಧರಿಸ ಬಯಸುತ್ತೇನೆ: "ಒಂದು ದಿನ ಪರ-ಮನಸ್‌ಶಾಸ್ತ್ರ ವಿಕಾಸವು ನಮ್ಮ ನಾಗರಿಕತೆಯನ್ನು ಸಂಪೂರ್ಣತಃ ನೂತನ ಪಥದೆಡೆಗೆ ನಿರ್ದೇಶಿಸುವುದೆಂದು ನಂಬುತ್ತೇನೆ."

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ್ರ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು
ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0—60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಮಾಲುಕಾಪೇಟೆ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

నవయుగ

20—4—1967

NAVAYUGA

౧౦ పైస

ಕಥಾ ಪ್ರಪಂಚ

ಆ ಸುಖ - ಈ ಮುಖ

ಬರೆದವರು: ಶ್ರೀಮತಿ ರಮಾ ನಾಗೇಶ.

"ವನೂ"

"ಊ"

'ಆದಿತ್ಯವಾರ ಯಾವಾಗ ಬರುತ್ತದೆ ಎಂದು ಯಾವಾಗಲೂ ಕಾಯುತ್ತಿರುತ್ತೇನೆ'

'ನಾನು ಕಾಯೋದಿಲ್ಲವೇ?'

"ಗೊತ್ತು. ಹೀಗೆ ಎಂಟೆಂಟು ದಿನಗಳಿಗೊಮ್ಮೆ ಭೇಟಿಯಾಗುವ ಬದಲು ಒಟ್ಟಿಗೆ ಮನೆ ಮಾಡಿ ಬಿಡುವಾ"

"ಅದು ಹೇಗಾಗುತ್ತದೆ? ಹಾಗಾದರೆ ನಿಮ್ಮ ಓದು ಈ ವರ್ಷಕ್ಕೆ ಮುಗಿಯುವ ಹಾಗಿಲ್ಲ"

"ಆ ದೃಷ್ಟಿಯಿದ್ದುದ್ದರಿಂದಲೇ ಈ ಪೇಚಾಟ"

'ಹೇಗೂ ಈ ಒಂದು ವರ್ಷ ತಾನೇ? ಸ್ವಲ್ಪ ಸಹಿಸಿಕೊಳ್ಳಿ"

"ಇಕೋ ಚೊಕ್ಲೇಟ್'

'ನಿಮಗೆ?'

"ಬಾಯಿಗೆ ಹಾಕು"

"ಯಾರಾದರೂ ಥಕ್ಕನೆ ಬಂದಾರು. ನನ್ನಿಂದಾಗದು'

'ಬಂದರೇನಂತೆ?"

'ನನಗೆ ನಾಚಿಕೆಯಾಗುತ್ತದೆ' ಎಂದಳು ವನಮಾಲ. ಹುಡುಗಿಯರ ಹಾಸ್ಟೇಲಿನ ಅತಿಥಿಗಳ ಕೋಣೆಯಲ್ಲಿ ಈ ಮಾತು ಕತೆಗಳಾಗುತಿದ್ದುವು.

ಸುರೇಶ, ವನಮಾಲ ಬೇಸಗೆ ರಜೆಯಲ್ಲಿ ಮದುವೆಯಾದ ನವದಂಪತಿಗಳು. ಹೈಸ್ಕೂಲು ಕಲಿತು ಮುಗಿಸಿದ ವನಮಾಲಳ ಕೈಯನ್ನು ಹಿಡಿದಿದ್ದ ಸುರೇಶ, B. E. ಯ ಕೊನೆಯ ವರ್ಷದಲ್ಲಿ ಕಲಿಯುವ ತರುಣ. ಮದುವೆಯ ಬಳಿಕ ತಾನು ಕಲಿಯುವ ಊರಿನ ಹೆಣ್ಮಕ್ಕಳ ಕಾಲೇಜಿಗೆ ತನ್ನ ಹೆಂಡತಿಯನ್ನೂ ಸೇರಿಸಿದ್ದ. ಇಬ್ಬರೂ ಒಬ್ಬರನ್ನೊಬ್ಬರು ರಜೆ ದಿನಗಳಲ್ಲಿ ಭೇಟಿಯಾಗುತಿದ್ದರು.

ಅನುಕೂಲ ಮನೆತನಸ್ಥರಾದ ದಂಪತಿಗಳಿಗೆ ಆರ್ಥಿಕ ಮುಗ್ಗಟ್ಟು ಇರಲಿಲ್ಲ. ಹಾಸ್ಟೇಲಿನ ಮೇಲಧಿಕಾರಿಗಳೊಡನೆ ತಮ್ಮಿಬ್ಬರ ಭೇಟಿಗೆ ರಜಾ ದಿನಗಳಲ್ಲಿ ಅವಕಾಶ ಕೊಡಲೇ ಬೇಕೆಂದು ಸುರೇಶ ಕೇಳಿದ್ದ; ಅನುಮತಿ ಪಡೆದಿದ್ದ.

o o o o

'ವನೂ"

"ಏನಿಷ್ಟು ಉತ್ಸಾಹ ಈ ದಿನ?"

"ನಿನ್ನ ಒಂದು ಸಿಹಿ ಮುತ್ತು ಬೇಕು"

"ಮೆಲ್ಲ ಮಾತನಾಡಿ, ನನ್ನ ಗೆಳತಿಯರ ಕಿವಿಗೆ ಬಿದ್ದರೆ ತುಂಬಾ ಗೇಲಿ ಮಾಡುತ್ತಾರೆ.'

'ಮಾಡಲಿ, ನಾವೇನು ಮದುವೆಯಾಗದವರೇ?'

"ಹಾಗಲ್ಲ, ತುಂಬಾ ಗೋಳು ಹೊಯ್ಯುತ್ತಾರೆ."

'ಹೊಯ್ದರೆ ಏನಂತೆ?" ಎನ್ನುತ್ತಾ ಪೇಂಟಿನ ಕಿಸೆಯಲ್ಲಿದ್ದ ಹಸುರು ಬಣ್ಣದ ರವಕೆ ಕಣವನ್ನು ಕೊಟ್ಟು,

'ಇನ್ನೊಂದು ಆದಿತ್ಯವಾರ ನೀನು ಇದರಿಂದ ರವಕೆ ಹೊಲಿಸಿ ಹಾಕಿಕೊಳ್ಳಬೇಕು' ಎಂದ.

'ನಾನೆಲ್ಲಿ ದರ್ಜಿಯನ್ನು ಹುಡುಕೊಂಡು ಹೋಗಲಿ?'

"ಅಳತೆ ಕೊಡು, ನಾನು ಮಾಡಿಸಿ ತರುತ್ತೇನೆ.'

'ನಿಮ್ಮ ಹತ್ತಿರ ಕೊಟ್ಟರೆ ಆದಿತ್ಯವಾರ ಹಾಕಿಕೊಳ್ಳಲು ಸಾಧ್ಯವಾಗದು. ನಿಮ್ಮಲ್ಲಿ ಬಿಟ್ಟು ವಸ್ತ್ರ ಬದಲಾಯಿಸಲು ಹೋದರೆ, ನನ್ನ ರೂಮ್ ಮೇಟಿನಿಂದ ತಮಾಷೆ ಮಾಡಿಸಿಕೊಂಡು ಸಾಯಬೇಕಾದೀತು.'

"ನೀನು ಯಾಕೆ ಅವರ ತಮಾಷೆಗೆ ಹೆದರಬೇಕು?' ಎಂದ ಸುರೇಶ.

o o o

'ಇಗೋ ಈ ಸೀರೆ"

"ಯಾಕಾಗಿ ಹಣ ಖರ್ಚು ಮಾಡುತ್ತೀರಿ; ನನಗೆ ಸಾಕಷ್ಟು ಸೀರೆ ಇದೆಯಲ್ಲಾ. ಕಾಲೇಜಿನಲ್ಲಿ ಇಪ್ಪತ್ತನಾಲ್ಕು ಗಂಟೆಯೂ ನನ್ನ ಯೋಚನೆಯೇ?"

"ಒಂದೊಂದು ದಿನ ಯಂತ್ರಗಳೇ ಕಾಣಿಸುವುದಿಲ್ಲ. ಎಲ್ಲಾ ಕಡೆಗೂ ನಿನ್ನ ಮುಖವೇ ಆಗಿ ಹೋಗಿದೆ"

"ಏನೋ ನನ್ನ ಭಾಗ್ಯ. ಆದರೆ ನಿಮ್ಮದಿದು ಫ್ಯಾನಲ್ ಇಯರ್, ಕ್ಲಾಸ್ ತೆಗಿಬೇಕು. ಮರೆಯ ಬೇಡಿ.'

'ಇವತ್ತು ನಿನ್ನೊಟ್ಟಿಗೆ ಸಿನೇಮಾಕ್ಕೆ ಹೋಗುವಾ ಅಂತಿದ್ದೆ'

'ನನಗೆ ನಾಚಿಕೆ. ಎಲ್ಲರೂ ಗೇಲಿ ಮಾಡುವವರೇ'

'ಮಾಡಲಿ ಬಿಡು, ಇದೊಂದು ವರ್ಷ ತಾನೇ? ಹೋಗೋಣ ಬೇಗ ಬಾ.'

'ಮೆಟ್ರನ್ ಒಪ್ಪಿಗೆ ಕೊಡಬೇಕಲ್ಲಾ?'

'ನಾನು ಕೇಳುತ್ತೇನೆ' ಎಂದು ಕಾಲಿಂಗ್ ಬೆಲ್ ಒತ್ತಲು ಹೋದ. ಬೇಡವೆಂದು ಇವಳು ಕೈ ಎತ್ತುವಾಗಲೇ, ಆಕೆಯ ಕೈಯನ್ನು ಹಿಡಿದು ಚುಂಬಿಸಿದ. ಅವಳು ನಾಚಿಕೆಯಿಂದ ಕೆಂಪೇರಿ ಅಲ್ಲೇ ಕುಳಿತಳು. ಸುರೇಶ ಕಾಲಿಂಗ್ ಬೆಲ್ ಒತ್ತಿದ. ಮೆಟ್ರನ್ ಬಂದರು, ಏನೆಂದು ಕೇಳಿದರು.

"ಮೇಡಂ'

'ಏನು ಕರೆದಿರಿ?'

'ವನಮಾಲಳನ್ನು ಸಿನೀಮಾಕ್ಕೆ ಕರೆದುಕೊಂಡು ಹೋಗಬೇಕೆಂದಿದ್ದೇನೆ.'

'ಎಷ್ಟು ಹೊತ್ತಿಗೆ?'

'ನಿಮ್ಮ ಒಪ್ಪಿಗೆ ಎಷ್ಟು ಹೊತ್ತಿಗೆ?'

'ಸಂಜೆ ಗಂಟೆ ಆರ ಒಳಗೆ ಹಾಸ್ಟೇಲಿಗೆ ತಂದು ಬಿಡಬೇಕು.'

'ಅಷ್ಟೇ ತಾನೇ?' ಎಂದು ವನಮಾಲಳನ್ನು ನೋಡಿದ. ಅವಳು ನಾಚಿಕೆಯಿಂದ ಮುದ್ದೆಯಾಗಿದ್ದಳು.

o o o

ಹೀಗೆ ರಜೆ ದಿನಗಳಲ್ಲಿ ವನಮಾಲಳನ್ನು ಆಗಾಗ ಭೇಟಿಯಾಗುತ್ತಿದ್ದ, ಪ್ರೇಮದ ನುಡಿಗಳನ್ನಾಡುತ್ತಿದ್ದ ಸುರೇಶನಿಗೆ ಬಯಕೆ ತಡೆಯದಾಯಿತು. ದೀರ್ಘವಾಗಿ ಆಲೋಚಿಸಿ, ಹೋಟೇಲಲ್ಲಿ ರೂಂ ಮಾಡಿ ವನಮಾಲಳನ್ನು ಕರೆದು ತರುವ ಕಾರ್ಯಕ್ರಮ ಗೊತ್ತು ಮಾಡಿಕೊಂಡ. ಆದರೆ ವನಮಾಲ ಅದಕ್ಕೆ ಒಪ್ಪಲಾರಳೆಂದು ತಿಳಿದಿತ್ತು. ಹಾಗಾಗಿ ಆಗೊಮ್ಮೆ ಈಗೊಮ್ಮೆ ಕೂಡಿ ತಿರುಗಾಡುತಿದ್ದ ನೆವದಿಂದಲೇ, ಅವಳನ್ನು ಹಾಸ್ಟೆಲಿನಿಂದ ಹೊರ ತರಬೇಕೆಂದು ಯೋಚಿಸಿದ್ದ. ಮೆಟ್ರನ್‌ನವರೊಡನೆ, 'ಸೋಮವಾರ ಕಾಲೇಜು ಆರಂಭವಾಗುವುದರೊಳಗೆ ಕಳುಹಿಸಿ ಕೊಡುತ್ತೇನೆ. ಹತ್ತಿರದ ಸಂಬಂಧಿಕರಲ್ಲಿ ಹೋಗಬೇಕಾಗಿದೆ,' ಎಂದು ಸುರೇಶ ತಿಳಿಸಿದನು.

o o o

ಬಯಕೆಯ ಬೇಗುದಿಯಿಂದ ಕುದಿಯುತಿದ್ದ ಸುರೇಶ ಮಧ್ಯಾಹ್ನದ ಊಟದ ಮೊದಲೇ ವಿದ್ಯಾರ್ಥಿನಿಯರ ಹಾಸ್ಟೇಲಿನ ಅತಿಥಿಗಳ ಕೋಣೆಗೆ ಬಂದನು.

'ವನೂ, ಈ ದಿನ ದೂರಕ್ಕೆ ತಿರುಗಲು ಹೋಗುವಾ ಎಂದು ಬೇಗ ಬಂದೆ.' ಎಂದ ಉತ್ಸಾಹದಿಂದ.

'ಏನೋ, ಈ ದಿನ ತಲೆನೋವು' ಎಂದಳಾಕೆ. ಸುರೇಶನ ಉತ್ಸಾಹಕ್ಕೆ ನೀರೆರೆದಂತಾಯಿತು. ತೋರಗೊಡದೆ, "ಅಮೃತಾಂಜನ ಹಚ್ಚಲಿಲ್ಲವೇ? ಎಸ್ಪ್ರೋ ಇರಲಿಲ್ಲವೇ?" ಎಂದ.

"ಎಲ್ಲಾ ಆಯಿತು.'

"ಮೊನ್ನೆ ತಂದ ಸೀರೆ, ರವಕೆ ತೊಟ್ಟು ಬಾ. ಎಲ್ಲಾ ಗುಣವಾಗುತ್ತದೆ. ಗಾಳಿಗೆ ತಿರುಗುವಾಗ ವಾಸಿಯಾಗುತ್ತದೆ."

'ನನ್ನ ಊಟವಾಗಲಿಲ್ಲ'

'ಹೋಟೇಲಿನಲ್ಲಿ ಕೂಡಿ ಮಾಡುವಾ'

"ಇಸ್ಸಿ ಸ್ಸೀ'

'ಅಷ್ಟು ನಾಚುಗೆಯೇ? ಹೋಟ್ಲಿಗೆ ಬಾ ಎಷ್ಟು ಜನರು ನಮ್ಮಂತೆ ಮಜಾ ಮಾಡಲು ಅಲ್ಲಿಗೆ ಬರುತ್ತಾರೆಂದು ತೋರಿಸುತ್ತೇನೆ,' ಎಂದು ಸುರೇಶ.

"ನಾಚಿಕೆ ಇಲ್ಲದವರು!'

"ಯಾರು?"

'ಅಲ್ಲಿಗೆ ಬರುವವರೆಲ್ಲಾ!"

"ನಾವೂ ಅವರೊಟ್ಟಿಗೆ ಸೇರುವಾ'

"ಬೇಡ, ಬೇಡ ನನಗದು ಆಗುವುದಿಲ್ಲ" ಎಂದಳು ವನಮಾಲಾ. ಆದರೆ, ಗಂಡನ ಬಲವಂತಕ್ಕೆ, ಆತನಿಗೆ ಬೇಸರ ಕೊಡಬಾರದು ಎಂಬ ದೃಷ್ಟಿಯಿಂದ ಹೊರಟಳು. ಮೆಟ್ರನ್ ಬಾಗಿಲಲ್ಲಿ ನಿಂತು ನಗುವುದನ್ನು ಕಂಡಾಗಲೇ, ನಾಚುಗೆಯಿಂದ ಅಡಗಿ ಹೋದಳು ವನಮಾಲಾ.

"Thanks" ಎಂದು ಮೆಟ್ರನ್‌ಗೆ ಹೇಳಿದ ಸುರೇಶ, ಉತ್ಸಾಹಿಯಾಗಿ. ಹಾಸ್ಟೇಲ್ ಕಾಂಪೌಂಡು ಇಳಿದು ಬರುತ್ತಲೇ, 'ಕಾರ್ ಮಾಡಲೇ?"ಎಂದನು.

'ನಿಮ್ಮಿಷ್ಟ.' ಎಂದಳು ವನಮಾಲಾ.

ಅಲ್ಲೇ ಸ್ವಲ್ಪ ಹೊತ್ತು ನಿಂತರು. ಅಷ್ಟರಲ್ಲಿ ಒಂದು ಕಾರು ಬಂತು. ಬಾಡಿಗೆ ಗೊತ್ತು ಮಾಡುತ್ತ,

'ಎಲ್ಲಿಗೆ?' ಎಂದ ಡ್ರೈವರ್.

"ಮೋಡರ್ನ್ ಹೋಟೇಲಿಗೆ' ಎಂದ ಸುರೇಶ.

'ಯಾಕೆ?' ಎಂದಳು ವನಮಾಲಾ.

'ಊಟ ಬೇಡವೇ?'

"ಬೇಡ, ನನಗೇನೂ ಬೇಕಾಗಿಲ್ಲ, ಅದೂ ಅಲ್ಲದೆ ಹೋಟೇಲಿನಲ್ಲಿ ಬೇಡ'

'ನೀನೇನೂ ಯೋಚನೆ ಮಾಡಬೇಡ," ಎನ್ನುತ್ತಾ ಅವಳ ಕೈ ಹಿಡಿದು ಕಾರನ್ನು ಹತ್ತಿದ. ಒತ್ತೊತ್ತಾಗಿ ಕುಳಿತರು ಇಬ್ಬರೂ. ವನಮಾಲಗೆ ತಮ್ಮನ್ನು ಯಾರಾದರೂ ನೋಡಿದರೆ ಎಂಬ ನಾಚುಗೆ; ಹಾಗಾಗಿ ಸುತ್ತ ಕಣ್ಣು ಹಾಯಿಸುತ್ತಾ ಇದ್ದಳು. ಸುರೇಶ ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ನೇವರಿಸುತ್ತಾ,

'ಕೋಪವೇ" ಎಂದ.

'ಯಾಕೆ?'

'ಹೋಟೇಲಿಗೆ ಕರೆದು ತಂದೆ ಎಂದು!' ಅಷ್ಟರಲ್ಲಿ ಕಾರಿನ ಹಾರ್ನ್ ಗರ್ಜಿಸಿತು. ವನಮಾಲ ಉತ್ತರಿಸಲಿಲ್ಲ.

'ಮಾತನಾಡು," ಎಂದು ಮೆಲ್ಲನೆ ಚಿವುಟಿದ.

"ಏನು ಮಾತನಾಡಲಿ?"

'ಬೇಸರವಾಗಿದೆಯೋ? ಹಾಗಾದರೆ ಹಾಸ್ಟೇಲಿಗೆ ಹೋಗು,' ಎಂದು ಬೇಸರದಿಂದಲೇ ಹೇಳಿದ ಸುರೇಶ.

'ಬೇಸರ ಏಕೆ? ಹೋಟೇಲಿನಲ್ಲಿ ನಮ್ಮಿಬ್ಬರ ಪ್ರದರ್ಶನ ಯಾಕೆ ಬೇಕಿತ್ತು?', ಎಂದು ಯೋಚನಾ ಮಗ್ನಳಾಗಿ ಹೇಳಿದಳು ವನಮಾಲಾ.

'ಮತ್ತೆಲ್ಲಿ ನಿನ್ನೊಡನೆ ನಾನು ಕೂಡಿಕೊಳ್ಳುವುದು?'

'ಕೂಡಿಕೊಳ್ಳುವುದು!' ಎಂದಳು ಆಶ್ಚರ್ಯದಿಂದ.

(ಹನ್ನೊಂದನೇ ಪುಟ ನೋಡಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೩೪ | ೨೦—೪—೧೯೬೭ | No. 34

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾದಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

'ಬ್ಲಾಕ್ ಪಿರೇಟ್' ಎಂಬ ವಿಶ್ವವಿಖ್ಯಾತ ಚಲಚಿತ್ರದಲ್ಲಿ ಡಗ್ಲಸ್ ಫೈರ್ ಬಾಂಕ್ಸ್‌ರ ಸಾಹಸಮಯ ಅಭಿನಯ. ಈ ಶತಮಾನದ ಪ್ರಥಮಾರ್ಧದಲ್ಲಿ ಈ ಕಲಾವಿದರು ಅನೇಕ ಸಾಹಸ ಚಿತ್ರಗಳಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ.

ಯಾರ ಮುಂದೆ ಎತ್ತುವಿಕೆ?

ತಪ್ಪು ಮಾಡುವುದು ಮಾನವ ಸ್ವಭಾವವೆಂಬುದು ನಿಜ; ಆದರೆ, ತಾನು ಮಾಡಿದುದು ತಪ್ಪು ಎಂದು ಮನವರಿಕೆಯಾದ ಮೇಲೆ ಮುಂದೆಯೂ ಅದೇ ತಪ್ಪನ್ನು ಮಾಡುವುದು ಅವಿವೇಕದ ಪರಮಾವಧಿ. ಅಮೆರಿಕನ್ ಸರಕಾರದ ಭಾರತ-ಪಾಕ್ ಸಂಬಂಧದ ನೀತಿಯು ಇದೇ ಮಾದರಿಯದು. ೧೯೬೫ರ ಮಧ್ಯಾವಧಿಯಲ್ಲಿ ನಿಂತು ಹೋದ ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಪಾಕಿಸ್ತಾನಕ್ಕೆ ಮುಂದುವರಿಸುವ ತನ್ನ ಹಳೆಯ ಪ್ರಶ್ನೆಯನ್ನು ಸಮರರಾಗವನ್ನೇ ಅಮೆರಿಕ ಈಗ ಮತ್ತೆ ಹಾಡತೊಡಗಿದೆ. ಹಿಂದೆ, ಅಮೆರಿಕೆಯು ಪಾಕಿಸ್ತಾನಕ್ಕೆ ವಿಪುಲ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ನೀಡಿ, ಅದನ್ನು ತಲೆಯ ಮೇಲೆತ್ತಿ ಕೊಬ್ಬಿಸಿದ್ದರಿಂದಲೇ ಅದು ಭಾರತದ ಮೇಲೆರಗಿ ಬಂದಿತ್ತೆಂಬುದನ್ನು ಇನ್ನೂ ಅಮೆರಿಕೆಯು ಮನಗಾಣಲಿಲ್ಲವೆ? ಅಥವಾ ಮನಗಂಡರೂ ಅದನ್ನು ಕಡೆಗಣಿಸಿ ಯಾವ ಮಹೋದ್ದೇಶಕ್ಕಾಗಿ ಹಾವಿಗೆ ಮತ್ತೂ ಮತ್ತೂ ಹಾಲೂಡಲು ಹವಣಿಸುತ್ತದೆ?

ಇದು ಅಮೆರಿಕನ್ ಸರಕಾರಕ್ಕೆ ಮಾತ್ರ ಗೊತ್ತು. ಭಾರತ ಉಪಖಂಡದಲ್ಲಿ ಶಾಂತಿ ಕೆದಕಬಾರದು—ಇದು ಎಲ್ಲರ ಆಶಯ. ಇದರಿಂದಾಗಿಯೇ ತಾಷ್ಕೆಂಟ್ ಒಡಂಬಡಿಕೆಯನ್ನು ಎಲ್ಲರೂ ಕೈಯೆತ್ತಿ ಸ್ವಾಗತಿಸಿದರು. ಅದರ ಉದ್ದೇಶ ಪೂರ್ಣಗೊಳ್ಳುವ ಲಕ್ಷಣಗಳು ದೂರದ ನಕ್ಷತ್ರವೆನಿಸಿದರೂ ಪಾಕಿಸ್ತಾನವು ಕಾಲು ಕೆದರಿ ಜಗಳಕಾಯುವಷ್ಟು ಹೀನ ನೀತಿಗೆ ಮಾರು ಹೋಗಲಾರದು. ಏಕೆಂದರೆ, ಒಂದು ಬಾರಿ ಸಂಗ್ರಹಿಸಿದ ಫೈಟರ್ ವಿಮಾನಗಳೂ ಪ್ಯಾಟನ್ ಟ್ಯಾಂಕುಗಳೂ ಸಂಪೂರ್ಣ ನಾಶಗೊಂಡಿದ್ದುವು. ಇಂದು ಪಾಕಿಸ್ತಾನಕ್ಕೆ ಅವು ಬೇಕು; ಭಾರತವನ್ನು ಹೆದರಿಸಿ, ಬೆದರಿಸಿಯಾದರೂ ತನ್ನ ಬೇಳೆ ಬೇಯಿಸಿಕೊಳ್ಳುವ ಕಪಿಗೆ ಸಹಜವಾದ ಚಪಲತೆ ಅದರದ್ದು. ಅಮೆರಿಕೆಯಿಂದ ಶಸ್ತ್ರಾಸ್ತ್ರಗಳು ಮತ್ತೆ ಬರುವಂತಾದರೆ, ಕೆಂಪು ಚೀನಾ ಅಪ್ತಮಿತ್ರನೆನಿಸಿದರೆ, ಭಾರತದ ಮೇಲೆ ಒತ್ತಾಯತರಲು ಸಾಧ್ಯವಾಗಬಹುದು—ಇದು ಅಯ್ಯೂಬಖಾನರ ಮಹೇಚ್ಛೆಯು ರಬೇಕು. ಇಕ್ಕಡೆಯಿಂದಲೂ ಕುಕ್ಕಿ ಗದಬ್ಬತೊಡಗಿದರೆ, ಭಾರತ ತನಗೆ ತಾನೇ ಕಾಶ್ಮೀರವನ್ನು ಕಾರುವುದು—ಇದು ಅವರ ನಂಬಿಕೆ. ಆದರೆ, ಹೊರಗಿದ್ದುದನ್ನು ನುಂಗಿದರ ಮಾತ್ರ ಕಾರಲು ಬರುವುದು. ಕಾಶ್ಮೀರ ಭಾರತ ವಶದ ಒಂದು ರಾಜ್ಯ. ಅದು ಹೊರಗಿನದ್ದಲ್ಲ; ಅದನ್ನು ಕಾರುವುದು ಪ್ರಾಣಾಪಾಯವಿಲ್ಲದೆ ಸಾಧ್ಯವಿಲ್ಲ. ಈ ಸತ್ಯ ಅಮೆರಿಕೆಗಿನ್ನೂ ಮನದಟ್ಟಾಗಲಿಲ್ಲ. ಇದಿನ್ನೂ ಅಪರಾಧಿ ಮತ್ತು ನಿರಪರಾಧಿಗಳಿಬ್ಬರನ್ನೂ ತನ್ನ ವಕ್ರ ತಕ್ಕಡಿಯಲ್ಲಿಯೇ ತೂಗಿ, ಇಬ್ಬರೂ ಸಮಭಾರದವರೆಂದು ನಿರ್ಣಯ ನೀಡುವ ಹಳೆಯ ನೀತಿಯನ್ನೇ ಬಿಗಿ ಹಿಡಿದಿದೆ. ಇದು ತಪ್ಪದೆಸತ್ಯ ಬಹಿರಂಗವಾಗುವುದಿಲ್ಲ.

ಅಮೆರಿಕೆ ಏತಕ್ಕಾಗಿ ಪಾಕಿಸ್ಥಾನವನ್ನು ಎತ್ತಿ ಕಟ್ಟುತ್ತದೆ? ಕಮ್ಯೂನಿಜಂನ ವಿರುದ್ಧ ಹೋರಾಡುವುದಕ್ಕೆಂದು ಮೊದಲಿಗೆ ಸಹಾಯ ಲಭಿಸಿತ್ತು ಪಾಕಿಸ್ಥಾನದ ಮೇಲೆ ಆಕ್ರಮಣ ಮಾಡಬಲ್ಲ ಕಮ್ಯುನಿಸ್ಟ್ ರಾಷ್ಟ್ರಗಳು ಯಾವುವು? ಮೊದಲನೆಯದು ಸೋವಿಯತ್ ರಶ್ಯ. ಆದರೆ, ರಶ್ಯ ಇದು ವರೆಗೂ ಪಾಕಿಸ್ತಾನ ವಿರೋಧೀ ನೀತಿಯನ್ನು ತಳೆದಿಲ್ಲ. ಅದು ಯಾರ ಮೇಲೂ ಆಕ್ರಮಣ ಮಾಡಿರುವುದಿಲ್ಲ. ಭಾರತದೊಡನೆ ಅದರ ಸಂಬಂಧ ಪಾಕಿಸ್ತಾನದೊಡನಿರುವುದಕ್ಕಿಂತ ಉತ್ತಮವಾಗಿದೆಯೆಂದ ಮಾತ್ರಕ್ಕೆ ಅದು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವುದು ಎಂದು ಊಹಿಸಲಾಗದು. ಮತ್ತೆ ಉಳಿದಿರುವುದು ಕೆಂಪು ಚೀನಾ. ಪಾಕಿಸ್ತಾನವು ಕೆಂಪು ಚೀನಾದ ಜನ್ಮಜನ್ಮಾಂತರದ ಮಿತ್ರನಂತೆ ವರ್ತಿಸುವಾಗ, ಅದು ಆಕ್ರಮಣ ಮಾಡೀತೆ? ಹಾಗಿರುವಾಗ ಮತ್ಯಾರ ವಿರುದ್ಧವೀ ಶಸ್ತ್ರಾಸ್ತ್ರಗಳ ಸಂಗ್ರಹ?

ಪಾಕಿಸ್ತಾನವು ಕೆಂಪು ಚೀನಾದ ಅತ್ಯಂತ ನಿಕಟವರ್ತಿಯಾಗುತ್ತ ಇದೆ. ಅಮೆರಿಕೆಯು ತನಗೆ ಸೈನಿಕ ನೆರವು ನೀಡಲಿಲ್ಲವಾದರೆ, ಚೀನಾದಿಂದ ಪಡೆದುಕೊಳ್ಳುವುದೂ ಅಸಂಭವವಲ್ಲ. ತಮ್ಮ ಬುಟ್ಟಿಯಲ್ಲಿನ ಹಕ್ಕಿ ಹಾರಿ ಪರರ ಬಳಿ ಸೇರುವುದರಿಂದ ಅಮೆರಿಕೆಗೆ ತುಂಬ ನಷ್ಟ. ಅದಕ್ಕಾಗಿಯೇ ಅದು ಪಾಕಿಸ್ತಾನದ ತಾಳಕ್ಕೆ ಸರಿಯಾಗಿ ಕುಣಿಯುತ್ತಿರುವಂತೆ ಭಾಸವಾಗುತ್ತದೆ. ಇನ್ನೂ ಒಂದು ಕುಚೋದ್ಯವೆಂದರೆ, ಅಮೆರಿಕೆಯು ತನ್ನ ನೀತಿಯ ಬಗ್ಗೆ ಪರರಾಷ್ಟ್ರಗಳ ಅಭಿಪ್ರಾಯ ಕೇಳುತ್ತಿದೆಯಂತೆ! ಹೆಚ್ಚಿನ ದೇಶಗಳು ತಮ್ಮ ವಿಮಂಚನೆಯನ್ನೇ ವ್ಯಕ್ತಪಡಿಸಿದವಂತೆ! ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವು ತನ್ನ ನೀತಿಯ ಮೇಲೆ ಪರರ ಉಪದೇಶ ಕೇಳುವುದು ಮತ್ತು ಅದನ್ನು ಕಡೆಗಣಿಸುವುದು ಅಂದರೆ, ಪಾಕಿಸ್ತಾನದಂತಹ ಒಂದು ದೇಶದ ಮುಂದೆ ಅಮೆರಿಕೆಯು ತಲೆಬಾಗುತ್ತದೆಯೆನ್ನಬೇಕೆ? ಇವೆಲ್ಲ ಕಾರ್ಯಭಾರ ಭಾರತದ ತಲೆ ತಗ್ಗುವಂತ ಮಾಡಲು. ಆದರೆ, ಒಂದು ನೆನಪು. ಭಾರತವು ಯಾವುದೇ ಅನ್ಯಾಯದ ಮುಂದೆ ತಲೆತಗ್ಗಿಸಲಾರದು. ಇದನ್ನು ಹಿಂದೂವರೆ ವರ್ಷಗಳಿಗೆ ಮೊದಲೊಮ್ಮೆ ಲೋಕ ಅರಿತುಕೊಂಡಿದೆ. ಒತ್ತಾಯ—ಆಗ್ರಹ, ಶಕ್ತಿ—ತಂತ್ರ ಮೊದಲಾದ ವಿಧಾನಗಳ ಮುಂದೆ ಭಾರತ ಮಣಿಯದು. ಅಮೆರಿಕೆಯು ಈ ಶಕ್ತಿ ನೀತಿಯಿಂದ ಮತ್ತೆ ಕೊಬ್ಬುವ ಮಯೋಧನನ್ನೆದುರಿಸಲು ಭಾರತವು ಬಲಭೀಮನಾಗಬೇಕು. ಅನ್ಯಥಾ ವಿಧಿಯಿಲ್ಲ.

ವಚನ ಸುಧೆ

ಸುಲಭಾ: ಪುರುಷಾ ರಾಜನ್
ಸತತಂ ಪ್ರಿಯವಾದಿನಃ
ಅಪ್ರಿಯಸ್ಯ ತು ಪಥ್ಯಸ್ಯ
ವಕ್ತಾ ಶ್ರೋತಾ ಚ ದುರ್ಲಭಃ॥

ಸದಾ ಸಿಹಿಯಾಗಿರುವ ಮಾತುಗಳನ್ನು ಆಡುವವರು ಸುಲಭದಲ್ಲಿ ಸಿಗುತ್ತಾರೆ. ಆದರೆ, ಅಪ್ರಿಯವಾದರೂ ಹಿತವಾದ ಮಾತುಗಳನ್ನಾಡುವವನೂ ಅದನ್ನು ಕೇಳುವವನೂ ಅಪರೂಪ.

ದೆಹಲಿಯ ಪಾಠ

ಭಾರತದ ರಾಜಧಾನಿ—ನವದೆಹಲಿ. ಅಲ್ಲಿ ನಡೆದಿದೆಯೆಂದು ಪೋಲೀಸರ ಸಂಪು. ಪ್ರಾಯಃ ಭಾರತದಲ್ಲಿ ಪೋಲೀಸರು ಸಂಪು ಹೂಡಿದ ನಿದರ್ಶನ ಇದು ವರೆಗೆ ಇಲ್ಲ; ಇದ್ದರೂ ಇಷ್ಟೊಂದು ಅಧಿಕ ಸಂಖ್ಯೆಯಲ್ಲಿಲ್ಲ. ತಮ್ಮ ಕೆಲ ಬೇಡಿಕೆಗಳನ್ನವರು ಮೊದಲೇ ಮಂಡಿಸಿದ್ದರೆಂದೂ ಇದನ್ನು ಪರಿಶೀಲಿಸಲು ಸಮಿತಿಯೊಂದು ನೇಮಕಗೊಂಡಿದೆಯೊಂದೂ, ಅದು ಕಾರ್ಯಪ್ರವೃತ್ತವಾಗಿದೆಯೆಂದೂ ತಿಳಿಸುತ್ತದೆ. ಆದರೆ ಇತ್ತೀಚೆಗೆ ಕೆಲವು ಪೋಲೀಸರನ್ನು ಕಿತ್ತೊಗೆದುದೇ ಈ ತರದ ಅಸಮಾಧಾನಕ್ಕೆ ಒಂದು ಕಾರಣವೆಂದು ಗೊತ್ತಾಗಿದೆ. ಇದು ಉಲ್ಬಣಗೊಂಡುದರಿಂದ ಶಾಂತಿ—ವ್ಯವಸ್ಥೆಯು ಕೆಟ್ಟು ಹೋಯಿತು. ಸೇನೆಯ ಸಹಾಯವೂ ಬೇಕಾಗ ಬಹುದಾದಂತಹ ಪರಿಸ್ಥಿತಿ ತಲೆದೋರಿತು. ಸದ್ಯ ವಿಕೋಪಕ್ಕೆ ಹೋದ ಪರಿಸ್ಥಿತಿ ಹೇಗಾದರೂ ಹತೋಟಿಗೆ ಬರಬಹುದು; ಏನಾದರೂ ಉಭಯ ಸಮ್ಮತ ಒಡಂಬಡಿಕೆಯೂ ಸಾಧ್ಯವಾಗ ಬಹುದು. ಆದರೆ, ಕಲುಷಿತಗೊಂಡ ಮನಸ್ಸು ಮತ್ತೆ ಒಂದಾಗುವುದು ಸಾಧ್ಯವಿದೆಯೇ ಎಂಬ ದೇ ಮಹತ್ವದ ಪ್ರಶ್ನೆ. ದೇಶದ ಶಾಂತಿ—ಸುವ್ಯವಸ್ಥೆಯಲ್ಲಿ ಸಂರಕ್ಷಿಸುವ ಗುರುತರ ಹೊಣೆಗಾರಿಕೆಯು ಪೋಲೀಸ್ ವಿಭಾಗದ ಮೇಲಿರುವಾಗ, ಈ ಪೋಲೀಸರೇ ಅದನ್ನು ಕೆಡಿಸುವಂತಹುದು ದುರ್ದೈವದ ಘಟನೆ. ಇದೇ ರೀತಿಯಲ್ಲಿ ಬೇಲಿಯೇ ಹೊಲ ಮೇಯುವಂತಹ ದುರ್ದೈವೀ ದುರ್ಘಟನೆ ಅನ್ಯತ್ರ ಹರಡುವ ಸೋಂಕು ರೋಗವಾದರೆ, ದೇಶದ ಪತನ ಬಹುದೂರವಿಲ್ಲವೆಂದು ಹೇಳಲೇ ಬೇಕಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳ ಮುಂದಿರುವ ಒಂದ ಮುಖ್ಯ ಸಮಸ್ಯೆಯೆಂದರೆ, ತನ್ನ ನೌಕರರ ಅತೃಪ್ತಿ ಮತ್ತು ಅದನ್ನು ಎದುರಿಸುವಲ್ಲಿರುವ ಎದೆಗಾರಿಕೆಯ ಕೊರತೆ. ಇದನ್ನು ಪರಿಹರಿಸದೆ ಹೋದರೆ, ದೇಶ ಕಲ್ಯಾಣಕಾರ್ಯ ಎಂದೆಂದಿಗೂ ಅಪೂರ್ಣವೇ.

ನರಸಣ್ಣನ ಸರಸ



"ಎಲ್ಲರನ್ನೂ ತೃಪ್ತಿ ಪಡಿಸುವುದು ಸಾಧ್ಯವಿಲ್ಲನೆಂಬುದು ಇಂದಾದರೂ ಮುಖ್ಯಮಂತ್ರಿ ನಿಜಲಿಂಗಪ್ಪನವರಿಗೆ ಮನವರಿಕೆಯಾಯಿತಲ್ಲಾ, ಇದೇ ಸಮಾಧಾನ.."

ಮುಂದುವರಿದಿದೆ

ಗೇಹ ರಾಜ್ಯದಲ್ಲಿ

ನೀನೇ ಕೊನೆಗೂ ಗೆಲ್ಲೋಳು

"ನೋಡ್ರಿ, ರಾಷ್ಟ್ರಪತಿ ಸ್ಥಾನದಲ್ಲಿ ಡಾ|| ರಾಧಾಕೃಷ್ಣನ್ ಮುಂದುವರಿಯುವುದಿಲ್ಲ ಎಂಬುದೀಗ ಖಂಡಿತವಾಗಿದೆ."

"ಹೇಗೆ?"

'ಹೇಗೇಂದೆ? ಆರಿ ಮನಸ್ಸಿನಲ್ಲಿದ್ದ ಇವರು ದೇಶದ ಈ ಉಚ್ಚ ಸ್ಥಾನಗಳ ಬಗ್ಗೆ ನಡೆಯುತ್ತಿರುವ ಚಿನ್ನಾಟದಿಂದ ರೋಸಿ ಹೋಗಿ, ತನ್ನ ಮೊದಲ ನಿರ್ಧಾರಕ್ಕೇನೇ ಬಲವಾಗಿ ಅಂಟಿಕೊಂಡಿದ್ದಾರೆ..."

"ಹ್ಞೂಂ, ಅದೂ ಒಳ್ಳೆಯದೇ ಆಯಿತೂನ್ನು....'

"ಯಾಕೆ?"

"ಯಾಕೆ ಅಂದ್ರೆ? ಪಕ್ಷಗಳ ಬಲಾಬಲಗಳ ತೀವ್ರ ಸ್ಪರ್ಧೆಗೊಂದು ಸದವಕಾಶ. ಯಾರ ಕೈ ಮೇಲಾಗುತ್ತೋ ಕಾದು ನೋಡೋಣ...'

'ಅಲ್ರಿ, ಸದ್ಯದ ಪರಿಸ್ಥಿತಿಯನ್ನೇ ಮುಂದುವರಿಸಲು ಆರಂಭದಲ್ಲಿ ಯೋಚಿಸಲಾಗಿತ್ತು. ಆದ್ರೆ, ಕೊನೆಗೆ ಎಲ್ಲವೂ ತಿರುವು ಮುರುವು. ನಾವು ಪತ್ರ ಸಲ್ಲಿಕೆಯೂ ಮುಗಿದಿರುವುದರಿಂದ, ಭಾರತೀಯ ಇತಿಹಾಸದಲ್ಲಿ ಇನ್ನೊಂದು ಪುಟ ತೆರೆದಂತಾಯಿತು.'

'ಏನು ಪುಟವೋ... ಅಂತೂ ರಾಧಾಕೃಷ್ಣನ್ ನಿವೃತ್ತರಾಗುತ್ತಾರೆ. ಜಾಕೀರ್ ಹುಸೇನ್ ಮತ್ತಿತರ ೩೦ ಅಭ್ಯರ್ಥಿಗಳ ನಡುವ ಸ್ಪರ್ಧೆ ನಡೆಯುತ್ತಿದೆ....'

'ಅಲ್ರಿ, ಎಲ್ಲಿಂದ ಎಲ್ಲಿಗೆ ಬಂತೂಂತಿ?'

'ಏನದು?'

'ನೋಡಿ, ರಾಷ್ಟ್ರಪತಿಗಳ ಆಯ್ಕೆಯು ಅವಿರೋಧವಾಗಿರ ಬೇಕು, ಎಲ್ಲ ಪಕ್ಷದವರಿಗೂ ಒಪ್ಪುವಂತವನಾಗಿರ ಬೇಕು ಎಂಬ ಮಾತು ಆರಂಭದಲ್ಲಿದ್ದರೆ, ಈಗ!"

'ಏಕ ಅವಿರೋಧವಾಗಬೇಕು? ಒಂದೇ ರಾಜಕೀಯ ಪಕ್ಷದ ನಾಯಕ ಸ್ಥಾನಕ್ಕೂ ಸ್ಪರ್ಧೆ ನಡೆಯುವಾಗ ರಾಷ್ಟ್ರಪತಿ ಮಾತ್ರ ಏಕಕ್ಕೆ ಅವಿರೋಧವಾಗಿ ಚುನಾಯಿತನಾಗಬೇಕು? ಮತ್ತೂ ಒಂದು ....'

'ಏನು?"

"ಮತ್ತೇನೂ ಇಲ್ಲ, ನೋಡು, ಒಬ್ಬ ರಾಷ್ಟ್ರಪತಿಯ ಸ್ಥಾನಕ್ಕೆ ಅರ್ಜಿ ಗುಜರಾಯಿಸಿದವರು ಎಷ್ಟು ಮಂದಿ?"

"ಇಪ್ಪತ್ತು ಅಂತ..."

"ಇದು ಏನನ್ನು ತೋರಿಸುತ್ತದೆ?"

'ಅದೇ ಹಿಂದಿದ್ದಂ ನೋಡಿ, ಚಿನ್ನಾಟವೋ ಹುಚ್ಚಾಟವೋ ವಿಸ್ಮಯ ಅಂತ...'

ಅಲ್ಲ, ಹಿಂಗೇಳ್ಬ್ಯಾಡಿ ಹಂಗಲ್ಲ...."

"ಮತ್ತೆ...."

"ಭಾರತಾಂಬೆ ವೀರ ಪ್ರಸವಿನಿ ಎಂಬುದನ್ನು..."

"ಹೇಗೆ?'

"ರಾಷ್ಟ್ರಪತಿಯಂತಹ ಘನ ಜೋಖೀಮಿನ ಸ್ಥಾನವನ್ನು ವಹಿಸಲು ಈ ಬಾರಿ ೨೦ ವೀರರು ದೊರಕಿದರು, ನಾವು ಅತ .... ತಾವು ಸಮರ್ಥರು ಎಂಬ ಆತ್ಮ ವಿಶ್ವಾಸವುಳ್ಳ ಇಷ್ಟು ಮಂದಿ ಭಾರತದಲ್ಲಿರುವುದು ನಮ್ಮ ಸೌಭಾಗ್ಯ..."

"ಅಲ್ರೀ, ಒಂದು ವೇಳೆ ಹಿಂದಿದ್ದರೆ ಅದಕ್ಕೆ ೨೦ ಅರ್ಜಿಗಳು ಬರೋದಕ್ಕಾಲವಿದು. ಆದ್ರಲ್ಲಿ ಸೇ. ೫೦ ಅನ್‌ಕ್ವಾಲಿಫೈಡು. ಸೇ. ೨೦ ಬಾಯಿ ಸೊನ್ನೆ. ಸೇ. ೨೦ ಪರ್ಸನಾಲಿಟಿ ಶೂನ್ಯ. ಮತ್ತೆ ಸೇ....'

'ಏ ಹಾಕೇ ತುಸು ಬೇಗ...'

'ಎಲ್ಲಿಗೆ....'

'ಬಾಯಿಗೆ...'

'ಎಲ್ಲಿದ್ದಾಳೇಂದೆ ಬಾಯಿ? ಬಂದುಬಿಟ್ಲಾ?'

'ಅಯ್ಯೋ, ಬಾಯಿಗೆ ಬೇಗ ಹಾಕೂಂತಂದ್ರೆ ಇವ್ರು ಬಾಯಿ ಎಲ್ಲಿದ್ದಾಳೇಂತಂತಾಳೆ! ಏನು ಹೇಳ್ಬೇಕು ಇದನ್ನ....'

'ಓ ಆ ಟುಳ್ಳದ ಬಾಯಿ ಮೊನ್ನಿನ ತಿಂಗ್ಳೇನೇಂತ ಅಂದು ಬಿಟ್ಟು ಬಾಡಿ ಬಯ್ದಿದ್ಳು.... ಆ್ಯ ಬದ್ಲೇಂತ...'

ಅಂತೂ, ಬೂಏಕೊಂಡು ಹೋಗಿ ಆಯ್ತಲ್ಲಾ....'

'ಹ್ಞೂಂ, ಮೊನ್ನೆ ಬುದುವಾರ ಬರ್ತೀನೇಂತ ಅಂದಿದ್ಳು...ಬುಧುವಾರ ಹೋಗಿ ಶನಿವಾರ ಬಂದ್ರೂನೂ...'

'ಪರ್ವಾಗಿಲ್ಲ ಕಣೇ....ಬಾದು ಬುಧುವಾರ ಹೋದ್ರೇವಂತೆ? ಮತ್ತೆ ಬುಧವಾರ ಬರೋದೇ ಇಲ್ಲೇನು?'

"ಅಂತೂ ಸರೀನ್ನಿ. ಇನ್ನ ನಮ್ಮ ಬೂದಿ ಕೂಡದಾಗಲೀ ಬರೋದು....'

"ಛೆ....ಛೆ... ಹೀಗೆಲ್ಲಾ ನಿರಾಶೆ ಮಾಡ್ಬೇಡಿ ಹೇಗೇಂತ್ರೆ ಇನ್ನೂ ಒಂದೆರಡು ಎಟ್ಟ್ ಕೊಡೋದ್ರೊಳ್ಗೆ ಬಂದೇ ಬರ್ತಾಳೆ. ಹಿಂದಿನ ಮಣ್ಣಿನ ಜತೆಗೆ ನಾಲ್ಕು ಸೌತೇ ಕಾಯನ್ನೂ ಕೂಡ್ಸಿ ಮುಂದಿನ ಬುಧವಾರ ಕಂಡಿತಕ್ಕೂ ಬರ್ತೀನೇಂತ ಹೇಳ್ತಾಳೆ...'

"ಸಾಕು ಬಿಡೇಂದ್ರೆ.... ಬಿಡ್ಲಿ ಇನ್ನು ಮುಂದ ಅವ್ಳು.... ಹೊಡ್ತೀನ ಆವಳಿಗ__'

'ಏನು ಮಾಡ್ತೀಯ? ಇದು ಡಮೊಕ್ರಸಿ. ಪ್ರಾಯ ತುಂಬಿದ ಮತದಾರರೆಲ್ಲ ಬೇಕಾದರೂ ರಾಷ್ಟ್ರಪತಿಯಾಗಬಹುದು—ಹಾಗಿರುವಾಗ ನಾಳೆ, ನಿನ್ನ ಬಾಯಿಯನ್ನೇ ರಾಷ್ಟ್ರಪತಿಯಾಗಿ ಬಿಟ್ರೆ...'

"ಅಯ್ಯೋ, ಏನು ಹೇಳ್ತೀರಿ?'

'ಹೇಳೋದೇನೆ? ಪ್ರಜಾಪ್ರಭುತ್ವದಲ್ಲಿ ನಿಮ್ಮ ನಿಯೋಜನ ರಾಷ್ಟ್ರಪತಿ ಚುನಾವಣೆಗಳಲ್ಲ ಹುದು. ಹಾಗಿರುವಾಗ ನೀನು ಅವರಿಗೆ ಲಕ್ಷ ನ್ಯೂಸೆನ್ಸ್ ನೋಟೀಸ್ ಹಾಕಿದ್ರೆ, ಆಳಿದ ಊರಿಗೆ ಗೌಡನಾಗಲು ಉಳಿಯುವವನಾದರೂ, ಯಾರು?

'ಅಲ್ರಿ, ರಾಷ್ಟ್ರಪತಿ ಪದದ ಮಹತ್ವವೇನು? ಅವರ ಸ್ಥಾನಮಾನವೇನು? ಅಂತಹ ಉನ್ನತ ಸ್ಥಾನವನ್ನು ಯಾರು ಏರಬೇಕೆಂಬು ನಾವು ಗಳಿಗೆ ಕೊಡಗಿ ಧರ್ಮಕ್ಕೆ ಅಪಚಾರ ಮಾಡಿದವರಲ್ಲಾಂತ...'

"ಓಹೋ, ನೀನು ಯಥಾಸ್ಥಿತಿ ಉಳಿಯಬೇಕೆಂದು ಹೇಳುವವಳು ಅಲ್ವೆ? ಇರ್ಲಿ, ಮಂತ್ರಿ ಮಾರ್ಗದರ್ಶಿ ಹೆಚ್ಚಿನವು ಹಳೆಯ ಗಿಡಗಳೇ ಆಗಿರುವಾಗ ಇದಾದ್ರೂ ಬದಲಾದ್ರೆ...."

"ಅದು ಸರೀನ್ನಿ... ಆದ್ರೆ, ಯಥಾಸ್ಥಿತಿಯೇ ಮುಂದುವರಿಯುವ ಸಂಭವ ಮೊನ್ನೆ ಮೊನ್ನೆಯ ವರೆಗೂ ಇದ್ದದ್ದು, ಏಕೆ ಬದಲಾಯಿತೂಂತ?"

"ಅದೆ? ಅದಕ್ಕೆ ಸ್ವತಂತ್ರ ಪಕ್ಷದ ಮಸಾನಿಯವರೇ ಕಾರಣ...."

"ಯಾಕೆ?"

"ಯಾಕೆಂದರೆ, ಈ ದಿಸೆಯಲ್ಲಿ ದಾಳ ಎಸೆದವರೇ ಅವರು."

"ಅದು ಹೇಗೆ?'

"ಹೇಗೆಂದರೆ, ವಿರೋಧೀ ಪಕ್ಷಗಳ ನಾಯಕರನ್ನು ಸೇರಿಸಿ ಮುಖ್ಯನ್ಯಾಯಾಧೀಶ ಕೋಕಾ ಸುಬ್ಬರಾಯರ ಹೆಸರನ್ನು ಮುಂದೆ ತಂದು ಶಕುನಿಯ ಪಗಡೆಯಾಟವಾಡಿದರು...."

'ಹೌದ್ರಿ, ಹೇಗಂತ...."

'ನೋಡು, ಅವ್ರು ಡಾ| ರಾಧಾಕೃಷ್ಣನ್ನರೇ ಮುಂದುವರಿಯಬೇಕು— ಎಂಬ ವಿನಂತಿಯನ್ನೂ ಆರಂಭದಲ್ಲಿ ಸೇರಿಸಿದ್ದರೆ, ಎಲ್ಲವೂ ಸರಿಯಾಗುತ್ತಿತ್ತು. ಅವ್ರು ಹಾಗೆ ಮಾಡದೆ ಏಕಪಕ್ಷೀಯವಾಗಿ ಏಕನಾಮವನ್ನೇ ಮುಂದೆ ತಂದು ವಾತಾವರಣವನ್ನು ಕೆಡಿಸಿಬಿಟ್ಟರು....'

'ಸಾಕು ಬಿಡೀಂದ್ರೆ, ನೀವು ಮಾತ್ರ ಸಂಭಾವಿತರು. ಶ್ರೀ ಪಾಟೀಲರು ಯಥಾಸ್ಥಿತಿಯ ಮುಂದುವರಿಕೆಗೆ ಕೊನೆಯ ಪ್ರಯತ್ನ ನಡೆಸುವುದಾಗಿ ಅಂದಾಗ ಕಾಂಗ್ರೆಸ್ ಕಾರ್ಯಕಾರಿಣಿಯು ಮೌನವ್ರತ ಧಾರಣೆ ಮಾಡಿದ್ದನ್ನು ಯಾಕೆ ಹೇಳುವುದಿಲ್ಲ?"

'ಡಾ| ರಾಧಾಕೃಷ್ಣನ್ ಒಪ್ಪುವುದಿಲ್ಲವೆಂಬುದು ಆದಾಗಲೇ ಸ್ಪಷ್ಟವಾಗಿ ಗೊತ್ತಾಗಿತ್ತು."

"ಇಲ್ಲಿ, ರಾಷ್ಟ್ರಪತಿ— ಉಪರಾಷ್ಟ್ರಪತಿಗಳ ಚುನಾವಣೆ ಸಂಬಂಧದಲ್ಲಿ ರಾಜಿಗೆ ಬರಬಹುದೆಂಬುದನ್ನೂ ಯಾಕೆ ತಳ್ಳಿಹಾಕಿದ್ದು?"

"ಒಂದು ಕೈಯೆತ್ತಿ ಬಲ ಪ್ರದರ್ಶನ ಮಾಡ ಬಂದವರನ್ನು ಬಲದಿಂದಲೇ ಎದುರಿಸೋಣಾಂತ...."

'ಓಹೋ, ಹಾಗೆ. ಆದ್ರೆ ನೋಡಿ, ಈ ಸಂಬಂಧದಲ್ಲಿ ವಿರೋಧಿ ಪಕ್ಷಗಳು ಅವಿರೋಧವಾಗಿ ಹೆಸರು ಸೂಚಿಸಿದರೆ, ನಾವು ಪರ್ಯಾಲೋಚಿಸುತ್ತೇವೆ ಅಂತ ಅಂದವ್ರು ಮುಂದೆ ಮಾಡಿದ್ದಾದ್ರೂ ಏನು?'

"ಸರಿ, ಆದ್ರೆ ಸೂಚನೆಯನ್ನು ಖಾಸಗಿಯಾಗಿ ತಿಳಿಸದೆ ಬಹಿರಂಗ ಪಡಿಸಿ ದೇಶದ ಪತ್ರಿಕೆಗಳಿಗೆಲ್ಲ ಆಹಾರವಾಗಿ, ಜನ ಜನರ ನಾಲಿಗೆಯಲ್ಲೂ ಚರ್ಚೆಯಾದ ಹೆಸರಾಗಿ ರಾದ್ಧಾಂತವೆಬ್ಬಿಸಿದಾಗಲೇ ಪ್ರಧಾನಿಯವರ ಆ ಕೊಡುಗೆಗೆ ಕಲ್ಲು ಬಿತ್ತು....'

'ಅಲ್ಲ, ನೀವು ಈಗ ಹೇಗೆ ಬೇಕಾದ್ರೂ ತಿರುಗಿಸಿ...'

'ನೋಡು, ಅಲ್ಲೇ ಪತ್ರಕರ್ತರು ಅಂದಿದ್ದಾರೆ, ವಿರೋಧಿಗಳ ಸೂಚನೆ ಕಾಂಗ್ರೆಸ್ಸನ್ನು ಪೇಚಿನಲ್ಲಿ ಸಿಕ್ಕಿಸುವುದಕ್ಕಾಗಿಯೇ ಎಂದು....'

'ಇರಬಹುದು, ಅಂತೂ ಮುಂದೆ ಏನಾದೀತು?'

'ಏನಾದೀತೂಂತ ಹೇಗೆ ಅನ್ನೋದು? ಜಾಕೀರ ಹುಸೇನ್ ಮತ್ತು ವಿ. ವಿ. ಗಿರಿಯವರಿಬ್ಬರೂ ಆಯ್ಕೆಯಾಗುವ ಸಂಭವವೇ ಹೆಚ್ಚು....'

'ಜಾಕೀರರ ಆಯ್ಕೆಯೆಂದರೆ, ಭಾರತದ ಜಾತ್ಯತೀತತೆಯ ವಿಜಯ....ಅಂತೆಯೇ ನೋಡಿ, ರಾಜ್ಯ ಸಭೆಯಲ್ಲಿ ಅವರನ್ನು ಕಾಂಗ್ರೆಸಿಗರು ಮಾತ್ರವಲ್ಲ, ವಿರೋಧಿ ಪಕ್ಷೀಯರೂ ಪ್ರಶಂಸಿಸಿದ್ದಾರೆ__'

'ಅವರ ಸೇವೆಯನ್ನು ರಾಜ್ಯಸಭೆಯು ಎಷ್ಟರ ಮಟ್ಟಿಗೆ ಮೆಚ್ಚಿಕೊಂಡಿದೆಯೆಂಬುದು ಸದ್ಯವೇ ಗೊತ್ತಾಗುತ್ತದೆ..."

'ಅಲ್ರಿ, ಇನ್ನೂ ಏನಾದ್ರೂ ಸಹಮತವಾಗುವುದು ಸಾಧ್ಯವಿಲ್ವೆ?'

'ನಾಮಪತ್ರ ಹಿಂತೆಗೆಯಲು ದಿನವಿದೆಯಾದ್ರೂ, ಸಹಮತ ಸಾಧ್ಯವೇ ಇಲ್ಲಾಂತ ಅನಿಸುತ್ತದೆ. ಆದ್ರೂ ಹೇಗನ್ನೋದು?

"ಅದು ಯಾಕೆ?"

'ಹೇಗಂದ್ರೆ.... ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ, ಕಾಂಗ್ರೆಸ್ಸು ಸಹಮತಕ್ಕೆ ಬರುವುದರಿಂದ, ವಿರೋಧಿ ಪಕ್ಷಗಳ ಮುಂದ ತಲೆಬಾಗಿ ಸೋಲೊಪ್ಪಿಕೊಂಡಂತೆಯೇ ಸರಿ..."

'ಹೌದೆ?'

'ಮತ್ತೆಂಥದು? ಆದುದರಿಂದ ಸೋಲುವುದಿಂದಲೂ ಬಹಿರಂಗವಾಗಿಯೇ ನೋಡೋಣವೆಂದು ಪಕ್ಷ ಸಂಘಟನೆಯತ್ತ ಮನ ಹರಿಸಿದ್ದಾರೆ...'

'ಮತ್ತೆ ಡಿವಿಂಕೆಯವರು ಸಭೆ ಸೇರುತ್ತಾರಂತೆ..."

'ಹ್ಞೂಂ..."

'ಅವ್ರು ಹೇಗೆ?'

'ಹೇಗಂದು ಹೇಗೆ ಹೇಳುವುದು? ಎಲ್ಲವನ್ನೂ ಕಾದೇ ನೋಡ ಬೇಕು....'

'ಕಾದು ನೋಡಬೇಕಂತೆ....ಅದೂ ಎಲ್ಲವನ್ನೂ....'

'ಓ, ಸಿಟ್ಟು ಬಂತೇನು? ಇಲ್ಲಾನ್ನು.. ಎಲ್ಲವನ್ನೂ ಅಂದ್ರೆ ಭವಿಷ್ಯವನ್ನು ಮತ್ತೆ

(ಒಂಭತ ನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1

ಮಧ್ಯ ಪ್ರದೇಶದ ಕೊಳ್ಳೆಗಾರರು—೭

"ಕಾಕಾಜಿ" ಎಂದರೆ ಹೃದಯ ಕರಗುತ್ತಿದ್ದ "ದೇವೀಸಿಂಹ"

ಬರೆದವರು ಶ್ರೀ ಎಚ್ ಎಂ ನಾರಾಯಣ ಭಟ್

[ಈ ಲೇಖನ ಮಾಲೆಯಲ್ಲಿ ಇದು ಆರನೆಯದು ಮತ್ತು ಕೊನೆಯದು. ಇದು ದೇವೀಸಿಂಹನು ಪೋಲೀಸರನ್ನೂ ಧನಿಕರನ್ನೂ ಹೇಗೆ ಜಯಿಸಿದ್ದನೆಂಬುದನ್ನು ವಿವರಿಸುತ್ತದೆ. —ಲೇಖಕ.]

ಕೊಳ್ಳೆಗಾರರ ಹೆಸರುಪಟ್ಟಿಯಲ್ಲಿ ದೇವೀಸಿಂಹನಿಗೆ ಒಳ್ಳೆಯ ಸ್ಥಾನವಿತ್ತು. ಚೋರ ಕಲೆಯಲ್ಲಿ ಆತ ನಿಪುಣ, ಮಾತ್ರವಲ್ಲದೆ ಅತಿ ಸ್ನೇಹದ ಸ್ವಭಾವಿಯೂ. ತನ್ನ ನೇತೃತ್ವದಲ್ಲಿರುವ ಸಂಘವು ಕಾಲಿಟ್ಟಂತ ಗಳನ್ನೆಸಗದಂತೆ ಹಾಗೂ ಪೋಲೀಸರನ್ನ ಶಿಕ್ಷಿಸುವ ತಂತ್ರ ಸ್ಪಷ್ಟ ಆದೇಶಗಳನ್ನಿತ್ತಿದ್ದನು. ಅನಾವಶ್ಯಕವಾಗಿ ರಕ್ತ ಚೆಲ್ಲಲು ಆತ ಬಯಸಲಿಲ್ಲ.

ವಿಂಧ್ಯ ಪರ್ವತ ಶ್ರೇಣಿಯ ತಪ್ಪಲು ಪ್ರದೇಶ ಪನ್ನಾ ಜಿಲ್ಲೆಯ ಒಂದು ಗ್ರಾಮದಲ್ಲಿ ಗೊಂಡರಲ್ಲಿ ದೇವೀಸಿಂಹ ಜನಿಸಿದ್ದು ಒಂದು ಬಡ ಕೃಷಿಕ ಕುಟುಂಬದಲ್ಲಾಗಿತ್ತು. ಆತನ ಹೆತ್ತವರು ಹಲವು ಹರಕೆಗಳನ್ನು ಹೊತ್ತ ಬಳಿಕ ದೇವೀಕಟಾಕ್ಷದಿಂದ ಅನುಗ್ರಹಿತರಾದ ಮಗುವಿಗೆ 'ದೇವೀಸಿಂಹ' ಎಂಬ ಹೆಸರಿಡಲಾಗಿತ್ತು.

ಬಾಲ್ಯದಲ್ಲಿ ಹೆತ್ತವರೊಂದಿಗೆ ಕೃಷಿ ಕೆಲಸಗಳಲ್ಲಿ ಭಾಗವಹಿಸಿ ಸಹಾಯ ಮಾಡಿದ ದೇವೀಸಿಂಹ ಕ್ರಮೇಣ ಆ ಕೃಷಿಯನ್ನು ಅವಗಣಿಸಿ ಬೇರೆ ವ್ಯವಸಾಯ ಪ್ರಾರಂಭಿಸಿದ. ಅಂದ ಪನ್ನಾ ಒಂದು ಆಶ್ರಿತ ಸಂಸ್ಥಾನವಾಗಿತ್ತು. ನಗರದಲ್ಲಿ ಖಾಕಿ ಉಡುಪು ಧರಿಸಿದ್ದ ಯುವಕರು 'ಕವಾತು' ಮಾಡುವುದನ್ನು ಒಮ್ಮೆ ಕಂಡ ದೇವೀಸಿಂಹನು ತ್ತ ಪ್ರಭಾವಿತನಾದಾಗ ಎಲ್ಲರೂ ನೇರ ಲಾಠಿಸಿದ್ದ. ಗಳನೇ ವಯಸ್ಸಿನೊಳಗೇ ಊರು ಬಿಟ್ಟು ಹೊರ ಪನ್ನಾದಲ್ಲಿ 'ಛತ್ರಸಾಲ್ ಇನ್‌ಫೆಂಟರಿ'ಯನ್ನು ಸೇರಿದ.

ಆದರೆ ವಿವಾಹಿತನಾಗಿದ್ದ ಆ ತರುಣ ಆ ತನ್ನೂರ ಬದುಕಿಗೆ ಹಿಂತಿರುಗಿ ಬಯಸದಿದ್ದುದರಿಂದಾಗಿ ಸೈನ್ಯ ಶಿಸ್ತು ಮತ್ತು ಪಿಥೀಯಿಕ ಅತನಿಗೆ ಹಿಡಿಸದಾದವು.

ಒಂದು ದಿನ ಕವಾತಿನ ಸಮಯ ಕೆಲಸ ತಪ್ಪಿಸಿ ಹಚ್ಚಿಯಟ್ಟ ತಪ್ಪು ಮಾಡಿದ ಅಧಿಕಾರಿ ಗರ್ಜಿಸಿದ. ಇಂತಹ ಬದುಕಿನ ಅತ ವಿಷಯ ಸಹಿಸಲಿಲ್ಲ. ಎಲ್ಲರೂ ನೋಡುತ್ತಿದ್ದಂತೆಯೇ ಅಧಿಕಾರಿಗೆ ದೇವೀಸಿಂಹ ಬೀಳಿಸಿದ.

ದೇವೀಸಿಂಹ ಸಂಧಿಸಿದಾಗ ಸೇನಾ ನ್ಯಾಯಾಲಯದಲ್ಲಿ ಕಾನೂನು ಹೊಂದಿರುವ ಡಲು ನಾಗರಿಕತ್ವವಾಗ ಅನವಲು ಗೆಂದಿಟ್ಟು ಅತ್ರ್ಯಯಿಸಿ ದೇವೀಸಿಂಹ ಬಳಿತ ಪ್ಪಿಸಿದ. ವಿಂಧ್ಯ ಪರ್ವತದ ತಟದಾಗಿ ಹೊಸ ವಿಧದ ಜೀವನ ಪ್ರಾರಂಭಿಸಿದ.

ಜೀವನ ನಿರ್ವಹಣೆಯ ಬಗ್ಗೆ ದೇವೀಸಿಂಹ ಬಹಳವಾಗಿ ಚಿಂತಿಸಿದ. ಯಾವುದಾದರೂ ಉಪಯೋಗ ಮಾಡುವವನಂತೆ ಪೋಲೀಸರಿಗೆ ಬೆಂಬತ್ತ ಹಿಂಸ್ಯತಿ ಇಲ್ಲದ ಕಾಣಸಿಗಲಾಗುವುದೊಂದೇ ದಾರಿಯೆಂದು ನಿರ್ಧರಿಸಿದ. ದೇವೀಸಿಂಹ 'ಪ್ರೊಫೆಶನಲ್' ಕೊಳ್ಳೆಗಾರನಾದ.

ದಾರಿ ಹೋಕರ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಕಳ್ಳತನ ಮಾಡಲು ಆತ ಪ್ರಾರಂಭಿಸಿದ. ಸ್ವಲ್ಪ ಸಂಪಾದಿಸಿದ ತರುವಾಯ ತಾನು ಹೀಗೆ ಜೀವನ ಹೊಂದಿರುವಂತೆ ತನ್ನ ಬಳಿಗ ಬೇಳುವವರನ್ನ ಮಾತ್ರವೇ ಸುಲಿಗೆ ಮಾಡಿದರ ಸಲದೆಂದು ಶ್ರೀಮಂತರ ಮನೆಗಳನ್ನೇ ಕೊಳ್ಳೆ ಹೊಡೆದು ಆಗಾಗ ಅಗ್ರಹ ಹೆಚ್ಚಾಯಿತು. ಹೀಗೆ ಮಾಡಬೇಕಾದರ ಸಂಘಬಲ ಅಗತ್ಯ ತನ್ನ ಸಂಘಕ್ಕ ರಿಕ್ರೂಟ್‌ಮೆಂಟ್ ನಡೆಸಿ ಸಂಸಕ್ತೆ ಬೇರಿಂದ ನಿಯಮಗಳು ಸಿದ್ಧವಾದವು. ಪ್ರತಿಯೊಬ್ಬ ಸದಸ್ಯನೂ ಸ್ವೀಕರಿಸಬೇಕಾಗಿದ್ದ ಪ್ರತಿಜ್ಞಾ ವಿಧಿ ಹೀಗಿತ್ತು—

೧) ಚೋರನನ್ನು ಕೊಲ್ಲಬಾರದು

೨) ಗುಂಡು ಹಾರಿಸಬೇಕಾಗಿ ಬಂದಲ್ಲಿ ಮೊಣಕಾಲಿಂದ ಕೆಳಭಾಗ ಮಾತ್ರವೇ ಗುರಿಯಾಗಿರಬೇಕು.

೩) ಅಸಹಾಯ ಅರನ್ನೂ ಸ್ತ್ರೀಯರನ್ನೂ ಉಪದ್ರವಿಸಬಾರದು. ಸ್ತ್ರೀಯರ ಮಾನಹಾನಿ ಬಗ್ಗೆ ಯೋಚಿಸಲೂ ಕೂಡದು. ನಿರ್ಗತಿಕರಿಗೆ ಸಾಧ್ಯವಿದ್ದ ಸಹಾಯ ಮಾಡಬೇಕು. ಸಂಘವನ್ನು ಸೇರಬಯಸುವವನು ಬಕ್ಸ್‌ವಾಹಾ ಅರಣ್ಯದೊಳಗಿದ್ದ ಕಾಳೀ ಕ್ಷೇತ್ರದಲ್ಲಿ ಪತ್ನ ಪ್ರತಿಜ್ಞಾವಿಧಿ ಸ್ವೀಕರಿಸಬೇಕಾಗಿತ್ತು. ಪ್ರತಿಜ್ಞಾ ಪತ್ರಗಳಲ್ಲಿ ತಂತಮ್ಮ ರಕ್ತದಿಂದಲೇ ಸಹಿ ಹಾಕಬೇಕಾಗಿತ್ತು.

ಸಂಘಕ್ಕೆ ತನ್ನ ಮಾವನ ಮಗ ಮೂರತ್ ಸಿಂಹ ಫಲೀರಾಂಬ್ ಮತ್ತಾದವರನ್ನು ಸೇರಿಸಿಕೊಂಡ ಬಳಿಕ ದೇವೀ ಸಿಂಹನ ಕಾರ್ಯಕ್ಷೇತ್ರ ವಿಸ್ತರಿಸಿತಾದರೂ ಛಲೀರಾಂ ಜನನ್ನು ಗ್ವಾಲಿಯರ ಜಾನ್ ಜಂಗಲಿನಲ್ಲಿ ಪೋಲೀಸರು ಗುಂಡಿಕ್ಕಿ ಕೊಂದರು. ಚೋರ ಸಂಘಕ್ಕೆ ಒಬ್ಬ ಅಡಿಗ ಭಟ್ಟ (ವ ?)ನಿದ್ದು ಕೊಳ್ಳೆಗೆ ಹೊರಡುವಾಗ ಲೆಲ್ಲಾ ಅಕ್ಕಿ ಹಿಟ್ಟು ಮತ್ತು ಬೆಲ್ಲವನ್ನು ಕಟ್ಟಿಕೊಂಡೇ ಹೋಗಬೇಕಾಗಿತ್ತು. ಅಡಿಗೆಯವನ ಪಕ್ಕದ ವಿದ್ಯೆಯಲ್ಲಿಯೂ ಗುರಿಯಿಟ್ಟು ಹೊಡೆಯುವುದರಲ್ಲಿಯೂ ಪ್ರವೀಣನಾಗಿದ್ದ. ಒಮ್ಮೆ ದೇವೀಸಿಂಹನನ್ನು ಆತ ರಕ್ಷಿಸಿದ್ದ.

ರಕ್ತ ಪಾತವಿಲ್ಲದೆ ಕೊಳ್ಳೆ ಹೊಡೆಯುವುದರಲ್ಲಿ ದೇವೀಸಿಂಹ ಅಗ್ರಗಣ್ಯನೆನಿಸಿದ. ತನ್ನ ನಿರ್ದೇಶಗಳನ್ನು ಪರಿಪಾಲಿಸುವುದರಲ್ಲಿ ತಪ್ಪಿದ ಮೂರತ್ ಸಿಂಹನನ್ನು ಹಲವು ಬಾರಿ ಸಂಘದಿಂದ ಹೊರ ತಳ್ಳಿದ್ದನಾದರೂ ಅತ ಕ್ಷಮೆ ಯಾಚಿಸಿದ್ದರಿಂದ ಸೇರ್ಪಡಿಸಿದ್ದ. ಮೂರತ್ ಸಿಂಹನ ರಕ್ತದಾಹ ಎಂದಿರಲಿಲ್ಲ.

ಗ್ವಾಲಿಯರಲ್ಲಿ ಮೂರತ್ ಸಿಂಹನು ಮೂವರು ಪೋಲೀಸರನ್ನು ಕೊಂದನು. ಈ ಮೂರತ್ ಸಿಂಹನತ್ತ ಎರಡು ಸಲ ಗುಂಡು ಹಿಡಿದನಾದರೂ ದೇವೀಸಿಂಹನ ಸಹಚರರು ಅಡ್ಡ ಬಂದುದರಿಂದಾಗಿ ಮೂರತ್ ಸಿಂಹ ಬದುಕಿದ; ಆದರೆ ಸಂಘದಿಂದ ವಿಸರ್ಜಿಸಲ್ಪಟ್ಟ.

ಒಮ್ಮೆ ಶಿಸ್ತು ಭಂಗ ಮಾಡಿ ಸೇನೆಯಿಂದ ಹೊರ ಬಂದವನಾದರೂ ದೇವೀಸಿಂಹನು ಆಗ ಶಿಸ್ತು ನಿಷ್ಠ ಗಳಲ್ಲಿಯೇ ಇದ್ದ.

ದೇವೀಸಿಂಹನಿಗೆ ದೇವಿಯ ಅನುಗ್ರಹದ ವಿಶ್ವಾಸದಿಂದ ಪ್ರೀತಿ ದೊರೆಯದರೆ ಅಗತ್ಯ ಮಾಡುವವರೇ ಹೆಚ್ಚು ದರೂ ವಿಂಧ್ಯಾ ತಪ್ಪಲಲ್ಲಿ ಹೀಗೆ ಬಲ್ಲವರು ನಂಬಿದ್ದರು.

ದೇವೀಸಿಂಹನು ಅವಿವಾಹಿತ ಎಲ್ಲಿದ್ದನ್ನು ತೀರಿಸಿ ದುರ್ಗಾಸಪ್ತಶತಿ ಯ ಪಾರಾಯಣ ಮಾಡುತ್ತ ಧ್ಯಾನ ಮಗ್ನನಾಗಿದ್ದನು. ನಾಲ್ಕಾರು ಪೋಲೀಸ್ ಸೇನೆಯ ವಿರುದ್ಧವೂ ಹಲವು ಬಾರಿ ಈ ದೇವೀಭಕ್ತ ಹೋರಾಡಿದ್ದರೂ ಪೋಲೀಸರ ಗುಂಡುಗಳು ಆತನ ಶರೀರಕ್ಕೆ ತಾಗಿರಲಿಲ್ಲ.

೧೯೪೭ರಲ್ಲಿ ದೇವೀಸಿಂಹ ಸ್ವರ್ಗಸ್ಥನಾದನು ಎಂದು ಸಿದ್ದಿದ ಗೂಢಚಾರರ ಮೂಲಕ ಪೋಲೀಸರಿಗೆ ವರದಿ ತಲುಪಿತ್ತು.

(ಎಂಟನೇ ಪುಟ ನೋಡಿ)

ಉಳಿತಾಯ ಸಾಧಿಸಿದ ಬದುಕು

ಚಿಂತು ಮೊತ್ತಮೊದಲಲ್ಲಿ ಫ್ಯಾಕ್ಟರಿಯೊಂದರಲ್ಲಿ ಫಿಟ್ಟರ್ ಕೆಲಸ ಕೈಗೊಂಡದ್ದ. ಆದಾಯ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಹಣ ಕೂಡಿಡುತ್ತಾ ಬಂದ. ಐದಾರು ವರುಷಗಳಲ್ಲಿ ಬಡ್ಡಿ ಸಹಿತ ಅದನ ಮೊತ್ತ ಬೆಳೆದು, ಆ ಹಣದಿಂದ ಅವನು ಒಂದೆರಡು ಪುಟ್ಟ



ಯಂತ್ರಗಳನ್ನು ಕ್ರಯಕ್ಕೆ ಪಡೆದ. ಇದೀಗ ಅತ ತನ್ನ ಸ್ವಂತ ಚಿಕ್ಕ ವರ್ಕ್‌ಶಾಪನ್ನು ನಡೆಸುತ್ತಿದ್ದಾನೆ. ಉಳಿತಾಯ ಸಾಧಿಸಿದ ಫಲವೇ ತನ್ನ ಈಗಿನ ಸಂತೃಪ್ತ ಬದುಕು ಎಂದು ಅತ ಹೇಳುತ್ತಿದ್ದಾನೆ.

ಸೋಮಯ್ಯ ಕೈಮಗ್ಗದ ಕಾರ್ಖಾನೆಯಲ್ಲಿ ದಿನಗೂಲಿ ಕೆಲಸದಲ್ಲಿದ್ದ. ದಿನಸ್ಪತಿ ಸಂಜೆ ಕೂಲಿ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಖಾತೆಯಲ್ಲಿ ಎಂಟಾಣೆಯಂತೆ ಕೂಡಿಡುತ್ತಾ ಬಂದ. ಏಳು ವರ್ಷಗಳ ಕೊನೆಗೆ ಅತನ ಕೈಗೆ ಬಂದ ಒಟ್ಟು ಹಣದಲ್ಲಿ ನಾಲ್ಕು ಮಗ್ಗಗಳನ್ನು ಕ್ರಯಕ್ಕೆ ಪಡೆದು ಸ್ವಂತ ಚಿಕ್ಕ ನೇಯ್ಗೆಯ ಕಾರ್ಖಾನೆಯೊಂದನ್ನು ತೊಡಗಿದ. ತಾನು ನಿಯಮಿತವಾಗಿ ಉಳಿತಾಯ ಮಾಡಿದುದರಿಂದಲೇ ಈ ಸ್ವತಂತ್ರ ಉದ್ಯೋಗ ತನಗೆ ಸಾಧ್ಯವೆನಿಸಿತು ಎಂಬುದು ಸೋಮಯ್ಯನ ಈಗಿನ ಹರ್ಷದ ಉದ್ಗಾರ.

ಗೋವಿಂದನು ಮರ ಕಿಗಿಯುವ ಕಾರ್ಖಾನೆಯಲ್ಲಿ ಬಡಗಿಯ ಕೆಲಸ ಕೈಗೊಂಡಿದ್ದ. ತಿಂಗಳ ಸಂಬಳ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಕ್ಯುಮುಲೇಟಿವ್ ಡಿಪಾಸಿಟ್ ಖಾತೆಯಲ್ಲಿ ಹಣವನ್ನು ಜಮೆ ಮಾಡುತ್ತಾ ಬಂದ. ವರ್ಷದ ಕೊನೆಯಲ್ಲಿ ದೊರೆತ ಹಣವನ್ನು ನಿಗದಿಯಾದ ಉಳಿಸು ಮತ್ತೆ ಒಂದೆರಡು ವರ್ಷ ಕಾಲ ಕ್ಯುಮುಲೇಟಿವ್ ಖಾತೆಯಲ್ಲಿ ಠೇವಿರಿಸಿಕೊಂಡು ಬಂದ. ಅವಧಿ ಸಂದಂತೆ ಅತನ ಮೊತ್ತ ಬೆಳೆದು, ಆ ಹಣದಿಂದ ಒಂದು ಮರದ ಕೆಲಸದ ವರ್ಕ್‌ಶಾಪ್‌ನ್ನು ತೊಡಗಿದ. ತಾನು ಉಳಿಸಿದ ಹಣವೇ ತನ್ನ ಸ್ವತಂತ್ರ ಜೀವನ ವೃತ್ತಿಗೆ ಕಾರಣ ಎಂಬುದು ಇದೀಗ ಸುಖಜೀವನ ನಡೆಸುವ ಗೋವಿಂದನ ಅನುಭವ.

SYNDICATE — FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ಮಣಿಪಾಲ, ಮೈಸೂರು ರಾಜ್ಯ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O S 305/1966

ಜನ್ನಾಡಿ ಕೃಷ್ಣ ಮಯ್ಯ — ವಾದಿ.
ನರಸಿಂಹ ಪ್ರಭು ಕೂಡಾ ಪ್ರತಿವಾದಿಗಳು.

3ನೇ ಪ್ರತಿವಾದಿ ಮಿಸ್ಟರ್ ಎಸ್. ಎಮ್. ಯಬ್ರಾಹಿಮ್ ಸಾಹೇಬರ ಹೆಂಡತಿ ವ ಅಬ್ದುಲ್ ರೆಹಮಾನ್ ಸಾಹೇಬರ ಮಗಳು, ಬುಂದರ ಟೌನ್, P. O Mangalore—ಇವರಿಗೆ, ಗಂಗೊಳ್ಳಿ ನ ಅಬ್ದುಲ್ ರೆಹಮಾನ್ ಸಾಹೇಬರ ನರಸಿಂಹನ ಕೂಡಾ ತಾರೀಕು 1-4-1955ರ ಸಿದ ಬರಕೊಟ್ಟ ರೂ. 300—00 ಬರಕೊಟ್ಟ ಯ ಜಿನ ಬಾಬ್ತು ವ ಬಡ್ಡಿ ಬ್ರಸ್ತು ಸಹ ದಾವೆಯ ಮೊಬಲಗಿನ ನಿಮ್ಮಿಂದ ವಸೂಲು ಮಾಡುವುದರಿಂದ ಆ ಕುರಿತು ನಿಮ್ಮದೇನಾದು ಆಕ್ಷೇಪಣೆ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು —196 ರ ಹಗಲು 11 ಗಂಟೆಗೆ ಹಾಜರಾಗಿ ಆಕ್ಷೇಪಣೆಯನ್ನು ತಿಳಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿ ನ್ನು ಮುಂದಿನ ಕ್ರಮ ಕೂಡಲೇ ಜರುಗುವುದೆಂದು ಈ ಮೂಲಕ ತಿಳಿಸಲಾಗಿ ಯದೆ

L. Raghunath Shenoy
Advocate for Plff

ಕುಂದಾಪುರ, 10-1-6

ವಿವೇಚನೆ

ಭಾರತೀಯರಿಗೇ ಬೇಡವಾದ ಭಾರತ ಸರಕಾರ

ಬರೆದವರು : ಶ್ರೀ ಶಿವಶಂಕರ.

ಮಹಾ ಚುನಾವಣೆ ಮುಗಿಯಿತು. ಫಲಿತಾಂಶಗಳು ಪ್ರಕಟಿಸಲ್ಪಟ್ಟವು. ಸುಮಾರು ಶೇಕಡಾ ಐವತ್ತನಾಲ್ಕರಷ್ಟು ಸ್ಥಾನಗಳನ್ನು ಪಡೆದು ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಮಂತ್ರಿ ಮಂಡಲವನ್ನು ರಚಿಸಿತು. ಮಾರ್ಚ್ ದಿನಾಂಕ ಹದಿನೆಂಟರಂದು ಹೊಸ ಲೋಕ ಸಭೆಯ ಹಾಗೂ ಹಳೆ ರಾಜ್ಯ ಸಭೆಯ ಸದಸ್ಯರು ಸಂಸದ್ ಭವನದಲ್ಲಿ ಒಂದಾಗಿ ಸೇರಿದರು. ರಾಷ್ಟ್ರಾಧ್ಯಕ್ಷರು ಎರಡೂ ಸಭೆಯ ಸದಸ್ಯರ ಜಂಟಿ ಸಭೆಯಲ್ಲಿ ಭಾಷಣವಿತ್ತರು. ಆದಾದೊಡನೆ ಭಾರತೀಯ ಜನಸಂಘದ ನೇತಾ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಪ್ರಚಲಿತ ಸರ್ಕಾರ ಅಂದರೆ ಮಂತ್ರಿ ಮಂಡಲದ ಮೇಲೆ ನಂಬಿಕೆ ಇಲ್ಲವೆಂಬ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು. ಇಂದಿರಾ ಗಾಂಧೀಜೀಯವರ ಮಂತ್ರಿ ಮಂಡಲ ರಚನೆಯಾಗಿ ಕೇವಲ ಆರು ದಿನಗಳಾಗಿದ್ದವು. ಹಾಗಿದ್ದರೂ ವಿಷಯವನ್ನು ಸಭೆಯ ಮುಂದಿಡುವಾಗ ಪ್ರಧಾನಿಯವರು ಬೇಡವೆನ್ನಲಿಲ್ಲ. ಅದನ್ನು ಧೈರ್ಯದಿಂದ ಎದುರಿಸಿದರು. ಶ್ರೀ ಅಟಲ ಬಿಹಾರಿ ವಾಜಪೇಯಿಯವರ ಅಸಾಧಾರಣ ವಾಕ್ಚಾತುರಿಯಿಂದ ಸದಸ್ಯರೆಲ್ಲರೂ ಚಕಿತರಾದರು. ಅದಕ್ಕೆ ಶ್ರೀ ರಾಮ ಮನೋಹರ ಲೋಹಿಯಾರವರ ಲೋಕಸಭೆಯ ಸದೃಶ ಮಾತಿನ ಒಗ್ಗರಣೆಯೂ ಸಿಕ್ಕಿತು.

ಈ ರಾದ್ಧಾಂತಕ್ಕೆ ರಾಜಸ್ಥಾನದ ರಾಜಕೀಯ ರೂಢಿಯೇ ಕಾರಣ. ಅಲ್ಲಿಯ ವಿಧಾನ ಸಭೆಯಲ್ಲಿ ಒಟ್ಟು ಇರುವುದು ಒಂದು ನೂರ ಎಂಭತ್ತನಾಲ್ಕು ಸ್ಥಾನಗಳು. ಅದರಲ್ಲಿ ಕಾಂಗ್ರೆಸ್ಸಿನ ಮೂಲಕ ಆರಿಸಿ ಬಂದಿರುವವರ ಸಂಖ್ಯೆ ಎಂಭತ್ತೊಂಭತ್ತು. ಉಳಿದ ಸ್ಥಾನಗಳನ್ನು ಇತರ ಪಕ್ಷಗಳೂ (ಸ್ವತಂತ್ರ ಪಾರ್ಟಿ, ಜನಸಂಘ, ಸಂಯುಕ್ತ ಸಮಾಜವಾದಿ ಪಕ್ಷ ಹಾಗೂ ಕಮ್ಯೂನಿಸ್ಟ್ ಪಕ್ಷ) ಸ್ವತಂತ್ರರೂ ಪಡೆದುಕೊಂಡಿರುವರು. ಇದರಲ್ಲಿ ಕೆಲ ಸ್ವತಂತ್ರರೂ ಓರ್ವ ಸ್ವತಂತ್ರ ಪಾರ್ಟಿಯ ಸದಸ್ಯರೂ ಕಾಂಗ್ರೆಸ್ಸಿಗೆ ಸೇರಿದರು. ಹಾಗೆಯೇ ಕಾಂಗ್ರೆಸ್ಸಿನಿಂದ ಒಬ್ಬರು ಪ್ರತಿಪಕ್ಷಗಳೊಂದಿಗೆ ಸೇರಿಕೊಂಡು ಮತ್ತು ಸ್ವತಂತ್ರರು ಪ್ರತಿಪಕ್ಷಗಳೊಂದಿಗೆ ಸೇರಿಕೊಂಡು ತೊಂಭತ್ತಮೂರು ಜನರ ಸಂಯುಕ್ತ ದಳವನ್ನು ರಚಿಸಿಕೊಂಡರು.

ರಾಜಸ್ಥಾನದ ರಾಜ್ಯಪಾಲರು ಪಕ್ಷೀಯ ಸಂಖ್ಯಾ ಬಲವಿದ್ದ ಕಾಂಗ್ರೆಸ್ಸಿಗರನ್ನೇ ಕರೆದು ಮಂತ್ರಿ ಮಂಡಲವನ್ನು ರಚಿಸಲು ಹೇಳಿದರು. ಪ್ರತಿ ಪಕ್ಷಗಳಿಗೆ ಸಿಟ್ಟು ಬಂತು. ಇಕ್ಕೆಲದವರೂ ಹೊಡೆದುಕೊಂಡರು. ವಿಷಯ ರಸ್ತೆಗೆ ಬಂತು. ಬಡಪಾಯಿಗಳ ಪ್ರಾಣಹಾನಿಯೂ ಆಯಿತು. ಸಂಯುಕ್ತ ದಳದವರು ಡೆಲ್ಲಿಗೆ ಹೋಗಿ ರಾಷ್ಟ್ರಾಧ್ಯಕ್ಷರ ಎದುರು ತಮ್ಮ ಸಮಸ್ಯೆಯನ್ನಿಟ್ಟರು. ಗೃಹಮಂತ್ರಿಗಳನ್ನು ಕಂಡರು. ಲೋಕಸಭೆ ಹಾಗೂ ರಾಜ್ಯಸಭೆಗಳ ಜಂಟಿ ಸಭೆಯೆಡೆಗೂ ಹೋದರು. ಅದೇನು ನಡೆಸಿದರೂ, ರಾಜಸ್ಥಾನದಲ್ಲಿ ಸರ್ಕಾರ ರಚಿಸುವ ಸಂದರ್ಭ ಕಾಂಗ್ರೆಸ್ಸಿಗಾಗಲೀ ಪ್ರತಿಪಕ್ಷಗಳಿಗಾಗಲೀ ಸಿಗಲಿಲ್ಲ.

ಆಡಳಿತ ಯಂತ್ರ ಈ ರೀತಿ ಶೀಘ್ರವಾಗಿ ಉರುಳಿದುದರಿಂದ ಸಂಸತ್ತಿನಲ್ಲಿ ನಂಬಿಕೆ ಇಲ್ಲದ ವಿಷಯವನ್ನು ಸಭೆಯ ಮುಂದಿಡಬೇಕಾಯಿತು. ಈ ವಿಷಯದ ಮೇಲೆ ಮಾತಾಡಿದವರಲ್ಲಿ ಪ್ರಮುಖರು ಸ॥ ಶ್ರೀ ಅಟಲ ಬಿಹಾರಿ ವಾಜಪೇಯಿ (ಜನಸಂಘ) ಮಹರಾಣಿ ಗಾಯತ್ರಿ ದೇವಿ (ಸ್ವ. ಪಾರ್ಟಿ) ನಾಂಜಿಲ್ ಮನೋಹರನ್ (ದ್ರಾ. ಮು. ಕ.), ಸುರೇಂದ್ರನಾಥ ದ್ವಿವೇದಿ (ಪ್ರ. ಸ. ವಾ.), ಡಾ॥ ರಾಮಮನೋಹರ ಲೋಹಿಯಾ (ಸ. ಸ. ವಾ.) ಶ್ರೀಪಾದ ಅಮೃತ ಡಾಂಗೆ (ಬಲ ಕಮ್ಯೂನಿಸ್ಟ್), ಪಿ. ರಾಮಮೂರ್ತಿ (ಎಡ ಕಮ್ಯೂನಿಸ್ಟ್), ಕರ್ಣಿ ಸಿಂಘ (ಸ್ವತಂತ್ರ). ಅದೇ ರೀತಿ ಆಡಳಿತ ಪಕ್ಷದ ವತಿಯಿಂದ ಮಾತಾಡಿದವರಲ್ಲಿ ಪ್ರಧಾನಿ ಶ್ರೀಮತಿ ಇಂದಿರಾಜೀ, ಗೃಹಮಂತ್ರಿ ಶ್ರೀ ಯಶವಂತ ಚವಾಣ ಹಾಗೂ ಕಮಾಲನಯನ ಬಜಾಜರು ಪ್ರಮುಖರು. ಇವರಲ್ಲಿ ಶ್ರೀಮತಿ ಗಾಯತ್ರಿ ದೇವಿಯವರು ರಾಜಸ್ಥಾನದವರು. ಹಾಗೆಯೇ ಶ್ರೀ ಕರ್ಣಿ ಸಿಂಘರೂ ರಾಜಸ್ಥಾನದವರು. ಕರ್ಣಿಸಿಂಘರ ಮಾತಿನ ಪ್ರಕಾರ ಅವರು ತಟಸ್ಥರು. ಇನ್ನು ಸಕ್ರಿಯವಾಗಿ ಭಾಗವಹಿಸಿದವರೆಂದರೆ ಶ್ರೀಮತಿ ಗಾಯತ್ರಿ ದೇವಿಯವರೇ. ಅವರು ಗಲಾಟೆಯನ್ನು ಜಟ್ಟಾಪಟಿಯನ್ನು ಪ್ರತ್ಯಕ್ಷವಾಗಿ ಕಂಡವರಿದ್ದಾರೆ. ಹೀಗೆ ಅವರ ಮಾತಿಗೆ ವಿಶೇಷ ಬೆಲೆ.



ಡಾ। ರಾಧಾಕೃಷ್ಣನ್

ರಾಜಸ್ಥಾನದಲ್ಲಿ ನಡೆದದ್ದೇನೆಂಬುದರ ಪೂರ್ತಿ ವಿವರಗಳನ್ನು ರಾಣಿ ಗಾಯತ್ರಿ ದೇವಿಯವರು ಲೋಕಸಭೆಯ ಮುಂದಿಟ್ಟರು. ರಾಜಸ್ಥಾನದ ಗೊಂದಲಕ್ಕೆ ಕಾಂಗ್ರೆಸ್ಸೇ ಕಾರಣವೆಂದು ಅವರು ಘೋಷಿಸಿದರು. ರಾಜಸ್ಥಾನದ ಜನರಿಗೆ ಕಾಂಗ್ರೆಸ್ಸಿನ ಮೇಲೆ ನಂಬಿಕೆ ಇಲ್ಲದಿದ್ದ ಕಾರಣ ಚುನಾವಣೆಯಲ್ಲಿ ಅದನ್ನು ಹಿಂದಕ್ಕೆ ತಳ್ಳಿಬಿಟ್ಟರೆಂದರು. ಆದರೆ ಅದೇ ರೀತಿ ಸ್ವತಂತ್ರ ಪಾರ್ಟಿಯನ್ನೂ ಜನತೆ ತಳ್ಳಿಬಿಟ್ಟಿದೆಂಬುದನ್ನು ಅವರು ಹೇಳಲಿಲ್ಲ. ಮತ್ತು ಮುಂದರಿದು, ನಮಗೆ ಭಾರತ ಸರ್ಕಾರದ, (ಗವರ್ನ್‌ಮೆಂಟ್ ಆಫ್ ಇಂಡಿಯಾ) ಮೇಲೆ ವಿಶ್ವಾಸ ಇಲ್ಲ. ಹಾಗೆಯೇ ರಾಜಸ್ಥಾನದ ಗವರ್ನರ್ (ಡಾ। ಸಂಪೂರ್ಣಾನಂದ), ಮುಖ್ಯ ಕಾರ್ಯದರ್ಶಿ ಹಾಗೂ ಇನ್ಸ್‌ಪೆಕ್ಟರ್-ಜನರಲ್ ಆಫ್ ಪೋಲೀಸರ ಮೇಲೂ ನಂಬಿಕೆ ಇಲ್ಲವೆಂದು ಗುಡುಗುಟ್ಟಿದರು. ಪಕ್ಷದ ಕೋಟೆಯಿಂದ ಹೊರಬಂದು ಮಾನವೀಯತೆ ಹಾಗೂ ನ್ಯಾಯದ ದೃಷ್ಟಿಯಿಂದ ನೋಡಿದಲ್ಲಿ ರಾಜಸ್ಥಾನದಲ್ಲಿ ರಾಜಕೀಯ ರೋಗ ಭಯಂಕರವಾಗಿ ಹಬ್ಬಿದ್ದು ಅದು ಬಲಿ ತೆಗೆದುಕೊಳ್ಳುತ್ತಿದೆಂಬುದನ್ನು ಒಪ್ಪಿಕೊಳ್ಳದಿರಲು ಸಾಧ್ಯವಾಗಲಿಕ್ಕಿಲ್ಲ. ಕಾಂಗ್ರೆಸ್ಸೆಂಬ ಕಡು ಬಡಲಿಂಗ್ನಿ ಸಿಕ್ಕಿದ್ದೆಲ್ಲವನ್ನೂ ಸ್ವಾಹಾ ಮಾಡುತ್ತ ಹಬ್ಬಿಬಿಟ್ಟಿತು. ಇತ್ತ ಅಧಿಕಾರದಾಸೆಯಿಂದ ವಿರುದ್ಧ ಪಕ್ಷಗಳೆಂಬ ಬಿರುಗಾಳಿ ಸಿಕ್ಕಿದ್ದೆಲ್ಲವನ್ನೂ ನೆಲಸಮ ಮಾಡುತ್ತ ಸಾಗಿತು. ಮತ್ತು ಕಾಂಗ್ರೆಸ್ಸಿನ ಮೇಲೆ ಜನತೆಗೆ ವಿಶ್ವಾಸವಿಲ್ಲವೆಂದು ಅರಿಯಿತು—ಮುಂದಿನ ಎಷ್ಟು ಹೋಗುತ್ತಿರುವಾಗ ಹಿಂದಿನ ಎಷ್ಟು ಇಷ್ಟು! ನಾಚಿಕೆಗೆಟ್ಟವಳೆಂದು ಹೇಳಿದಂತೆ ಏನಿದ್ದರೂ ಪ್ರತಿಪಕ್ಷಗಳಿಗಿಂತಲೂ ಅಧಿಕ ಸ್ಥಾನಗಳನ್ನು ಮತಗಳನ್ನು ಕಾಂಗ್ರೆಸ್ ಪಡೆದಿದೆಂಬುದನ್ನು ಅಲ್ಲಗಳೆಯಲು ಅವ್ಯಾರಿಂದಲೂ ಸಾಧ್ಯವಿಲ್ಲ. ಹಾಗಿದ್ದರೂ ಅದಕ್ಕೆ ಶೇಕಡಾ ನಲ್ವತ್ತರಷ್ಟಕ್ಕಿಂತ ಅಧಿಕ ಮತಗಳನ್ನು ಪಡೆಯಲಿಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ಮರೆಯಲು ಸಾಧ್ಯ ಇರುವುದಿಲ್ಲ. ಹೀಗೆ ಸೋಲಿನ ದಾರಿಯಲ್ಲಿರುವವರು ತಮ್ಮ ಭದ್ರತೆಗಾಗಿ ಬಡಿದಾಡುವದು ಸ್ವಾಭಾವಿಕವೇ ಸರಿ. ಹಾಗೆಯೇ ವಿಜಯದಲ್ಲಿ ಮುನ್ನಡೆಯುತ್ತಿರುವವರು ಗುರಿಮುಟ್ಟಲು ಅದೆಂತಹ ಉಪಾಯಕ್ಕೆ ಶರಣು ಹೋಗುವದೂ ಸಹಜವೇ. ರಾಜ್ಯಸ್ಥಾನದಲ್ಲಿ ನಡೆದದೂ ಇದುವೇ. ಅಧಿಕ ಸಂಖ್ಯೆಯಲ್ಲಿದ್ದ ಎದುರು ಪಕ್ಷದವರು ಇದನ್ನು ಬಲವಾಗಿ ಎದುರಿಸಿದರು. ಅದರ ಪರಿಣಾಮವೇ ಕೊಲೆ, ಭೀಭತ್ಸ ವರ್ತನೆ, ದೌರ್ಜನ್ಯ ಎಲ್ಲಾ.

ಇವನ್ನು ಶ್ರೀಮತಿ ಗಾಯತ್ರಿ ರಾಣಿಯವರು ಲೋಕಸಭೆಯ ಮುಂದಿಟ್ಟಿರುವರಾದರೂ ಅವರಾಡಿರುವ ಮಾತುಗಳು ಯಾವ ರೀತಿಯವು? ಸರಿ. ಅವರಿಗೆ ಪೋಲೀಸ ಅಧಿಕಾರಿಯ ಮೇಲೂ, ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯಪಾಲರ ಮೇಲೆ ನಂಬಿಕೆ ಇಲ್ಲದಿರಬಹುದು. ಹಾಗೇನೇ ಕಾಂಗ್ರೆಸಿನ ಮೇಲೆಯೇ ವಿಶ್ವಾಸ ಇಲ್ಲದಿರಬಹುದು. ಆದರೂ ಭಾರತ ಸರಕಾರದ ಮೇಲೆ ವಿಶ್ವಾಸ ಇಲ್ಲವೆನ್ನುವ ಮಾತು ಒಳ್ಳೆಯ ಮಾತೆನಿಸಲಿಲ್ಲ. ಭಾರತ ಸರಕಾರವೆಂದು ಅವರು ಕೇಂದ್ರದಲ್ಲಿರುವ ಕಾಂಗ್ರೆಸ್ ಮಂತ್ರಿಮಂಡಲವನ್ನುದ್ದೇಶಿಸಿ ಹೇಳಿರುವರಾದರೂ ಭಾರತ ಸರಕಾರವೆಂದೊಡನೆ ಪ್ರತಿಯೊರ್ವ ನೈಜ ಭಾರತೀಯನಿಗೂ ಗೌರವ, ಹೆಮ್ಮೆಯನ್ನೀಯುವ ವಿಷಯವೇ ಇದು. ಭಾರತೀಯರ ಸರಕಾರವೇ ಭಾರತ ಸರಕಾರ ಇದೆ. ಅದರ ಮೇಲೆಯೇ ಇವರಿಗೆ ವಿಶ್ವಾಸ ಇಲ್ಲವೆಂದಾದಲ್ಲಿ ಇನ್ಯಾವ ಸರಕಾರದ ಮೇಲೆ ಇವರಿಗೆ ವಿಶ್ವಾಸ ಇರುವದು? ಅವರಿಗೆ ಅವರ ಹಿಂದಿನ ರಾಜ್ಯ ಬೇಕೇನು? ಅಥವಾ ಪುನಃ ಇಂಗ್ಲೀಷರು ಬಂದು ಇಲ್ಲಿ ಆಳಕೊಂಡಿರಬೇಕೇ? ಇಂತಹ ಪ್ರಶ್ನೆಗಳಿಗೆ ಆ ಪದ ಪ್ರಯೋಗ ಆಸ್ಪದ ಮಾಡಿಕೊಟ್ಟಿದೆ. ಆಂಗ್ಲ ಭಾಷೆಯು ಆಡಳಿತ ಭಾಷೆಯಾಗಿ ಆಚಂದ್ರಾರ್ಕ ಇರಬೇಕೆಂದು ಸ್ವತಂತ್ರ ಪಾರ್ಟಿ ಸ್ವರ ಎತ್ತುತ್ತಿರುವಾಗ, ಆರ್ಥಿಕ ದೃಷ್ಟಿಯಲ್ಲಿ ಭಾರತವನ್ನು ಅಮೇರಿಕದ ಆಶ್ರಯಕ್ಕೊಳಪಡಿಸಬೇಕೆಂದು ಸ್ವತಂತ್ರ ಪಾರ್ಟಿ ಹೇಳುತ್ತಿರುವಾಗ ಭಾರತ ಸರಕಾರದ ಮೇಲೆಯೇ ತಮಗೆ ವಿಶ್ವಾಸವಿಲ್ಲವೆಂದಿರುವ ಮಾತು ಬಹಳ ದೂರದ ವರೆಗೆ ಪರಿಣಾಮ ಬೀರಬಲ್ಲುದು. ಅದರಲ್ಲೂ ಶ್ರೀ ರಾಜಾಜಿಯವಂಥ ರಾಷ್ಟ್ರೀಯ ಸರಕಾರ, ಸವಿಕ್ತ್ರಿ ಸರಕಾರ, ಬುದ್ಧಿ ಜೀವಿಗಳ ಸರಕಾರವೆಂದೆಲ್ಲಾ ಹೇಳುತ್ತಿರುವಂತಹ ಸಮಯದಲ್ಲೇ ಶ್ರೀಮತಿ ಗಾಯತ್ರಿದೇವಿಯವರು ಈ ರೀತಿ ಹೇಳಿರುವದು ಯೋಚನೆಗೆ ಆಹಾರವೇ ಸರಿ. ಮಾತಿನ ಭರದಲ್ಲಿ ಕೆಲವೊಮ್ಮೆ ನಾವು ಬಹಳ ದೂರ ಹೋಗಿಬಿಡುತ್ತೇವೆ. ಸರಿ ತಪ್ಪುಗಳ ಕುರಿತೂ ಯೋಚಿಸುವದಿಲ್ಲ. ಬಡಬಡಿಸಿಬಿಡುತ್ತೇವೆ. ಇಲ್ಲಿ ನಡೆದಿರುವದಾದರೂ ಅದುವೇ.

ಇಷ್ಟರ ವರೆಗೆ ಕಮ್ಯೂನಿಸ್ಟರೆಂದರೆ ರಷ್ಯಾದ ಬಾಲ ಬಡುಕರು ಚೈನಾದ ತಲೆಹಿಡುಕರೆಂದೆಲ್ಲಾ ಭಾರತೀಯ ಜನಸಂಘದವರು ಹೇಳುತ್ತಿದ್ದರು. ಈಗ ಕಮ್ಯೂನಿಸ್ಟರೂ ಇರುವ ಬಂಗಾಲಿನ ಮಂತ್ರಿಮಂಡಲದಲ್ಲಿ ಇವರೂ ಸೇರಿಕೊಂಡಿದ್ದಾರೆ. ಪಂಜಾಬಿನಲ್ಲೂ ಹೀಗೇನೆ. ರಾಜಸ್ಥಾನ, ಉತ್ತರ ಪ್ರದೇಶಗಳಲ್ಲೂ ಅಷ್ಟೇ. ಕಮ್ಯೂನಿಷ್ಟರಂತೂ ಭಾರತೀಯ ಸರಕಾರಕ್ಕಾಗಿ ಇರುವದಿಲ್ಲ. ಗೆದ್ದು ಬಂದ ಕೂಡಲೇ ಶ್ರೀ ನಂಬೂದಿರಿ ಪಾದರವರು ಚೈನಾದೇವಿಗೆ ಸಲ್ಲಾಪ ಆಡಲಿಕ್ಕಾಗಿ ಜನತಾ

ಮತದಾನ ಮಾಡಿರುತ್ತರೆಂದು ನುಡಿದಿರುವರು.

ಹೀಗೆ 'ಭಾರತೀಯತೆ'ಗೆನೇ ಬೇಡವಾಗಿರುವ ಭಾರತ ಸರ್ಕಾರವೆಂದು ಇದೆಂದು ಹೇಳಿದಲ್ಲಿ ತಪ್ಪಾಗಲಾರದು. ಈ ಭೀಕರ ಝಾಢ್ಯ ಅದೆಲ್ಲಿಯ ವರೆಗೆ ಹಬ್ಬಿದ್ದು; ಭಯಂಕರ ಸ್ವರೂಪವನ್ನು ಪಡೆದಿರುತ್ತದೆಂಬ ವಿಷಯವನ್ನು ಪ್ರಜಾಪ್ರಭುತ್ವ ದಿನಾಚರಣೆಯ ಸಮಯ ಭಾರತದ ರಾಷ್ಟ್ರಾಧ್ಯಕ್ಷ ಶ್ರದ್ಧೇಯ ಡಾ। ರಾಧಾಕೃಷ್ಣನ್‌ರವರು ಜನತೆಯ ಗಮನಕ್ಕೆ ತಂದಿರುವರು. ಇದೀಗ ಹೊಸ ಮಂತ್ರಿ ಮಂಡಲ ಬಂದ ಮೇಲೆ ಉಪರಾಷ್ಟ್ರಾಧ್ಯಕ್ಷ ಡಾ। ಝಾಕೀರ್ ಹುಸೇನ್‌ರವರು

ಇಂದಿರಾ ಗಾಂಧಿ

ಜನತೆಗೆ ಎಚ್ಚರಿಕೆ ನೀಡಿರುವರು; ಇಂದು ಸ್ಪರ್ಧೆ ತಾಂಡವವಾಡುತ್ತಿದ್ದು, ದೇಶ ಕ್ಷೀಣವಾಗುತ್ತಿದೆಂಬುದರ ಕುರಿತು ಯೋಚಿಸುವ ಅಭ್ಯಾಸದ ಅಭಾವ ಕಂಡುಬರುತ್ತಿದೆಯೆಂಬ ಕಟುಸತ್ಯವನ್ನು ಬಹಳ ವೇದನೆಯಿಂದಲೇ ಶ್ರೀ ಝಾಕೀರ್ ಹುಸೇನರು ಸ್ಪಷ್ಟಪಡಿಸಿರುವರು. ಈ ಮನೋಭಾವನೆಯ ಸ್ಪಷ್ಟ ಚಿತ್ರ ಇದೀಗ ಲೋಕಸಭೆಯಲ್ಲೇ ಕಂಡುಬಂದಿರುತ್ತದೆ. ಸಂಯುಕ್ತ ಸಮಾಜವಾದಿ ಪಕ್ಷದ ಸದಸ್ಯರೊಬ್ಬರು ಲೋಕಸಭೆಯಲ್ಲಿ ಮುನ್ಸೂಚನೆ ಕೊಡದೆ ಕನ್ನಡದಲ್ಲಿ ಮಾತನಾಡಲಾರಂಭಿಸಿದರು. ಇತರ ಭಾಷೆಯವರು. ಪಕ್ಷದವರು ಅವರವರ ಕಾರಣಗಳಿಗಾಗಿ ಪ್ರತಿಭಟಿಸಿದರು. ಮುನ್ಸೂಚನೆ ಕೊಡದೆ ಲೋಕಸಭೆಯ ಪದ್ಧತಿಯನ್ನು ಮೀರುವದಕ್ಕೆ ಪ್ರತಿಭಟಿಸಬಹುದೇ ವಿನಃ ಕನ್ನಡದಲ್ಲಿ ಮಾತನಾಡಿದುದಕ್ಕೆ ಪ್ರತಿಭಟಿಸುವದೆಂದರೆ ನಾಚಿಕೆಗೇಡಿನ ವಿಷಯವಿದೆ. ಸ್ವತಂತ್ರ ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರ ಭಾರತದಲ್ಲಿ ರಾಷ್ಟ್ರೀಯ ಭಾಷೆಗಳಲ್ಲೊಂದಾದ ಕನ್ನಡದಲ್ಲಿ ಮಾತಾಡಲು ಅಧಿಕಾರ ಇಲ್ಲ, ಆದರೆ ಪರಕೀಯ ಭಾಷೆ ಗುಲಾಮತನದ ಕುರುಹಾದ ಆಂಗ್ಲ ಭಾಷೆಯಲ್ಲಿ ಮಾತಾಡಲು ಅಧಿಕಾರ ಇದೆ, ಅದಕ್ಕ ಅಡ್ಡಿ ಇಲ್ಲ! ಅಂದರೆ ನಮಗೆ ಭಾರತೀಯ ಸರಕಾರದ ಮೇಲೆ ನಂಬಿಕೆ ಇಲ್ಲ, ಆಂಗ್ಲ ಸರಕಾರದ ಮೇಲೆ ನಂಬಿಕೆ ಇದೆಯೆಂದಾಯಿತು. ಇಪ್ಪತ್ತು ವರ್ಷ ಕಾಂಗ್ರೆಸಿನ ಆಡಳಿತದಿಂದಾಗಿ ಈ ಕೆಟ್ಟ ಮನೋಭಾವನೆಯು ವಿಷಗಾಳಿಯಂತೆ ಹಬ್ಬಲಾರಂಭವಾಗಿದೆ. ಇದನ್ನೇ ಶ್ರೀ ಝಾಕೀರ ಹುಸೇನರು ನಮ್ಮ ಸ್ವಾತಂತ್ರ್ಯಕ್ಕೇನೇ ಗಂಡಾಂತರಬಂದಿದೆಯೆಂದು ಗಂಡೆದೆಯಿಂದ ಹೇಳಿದ್ದಾರೆ. ಲೋಕಸಭೆಯಲ್ಲಿ ಅನಂತರ ನಡೆದದ್ದಾದರೂ ಏನು? ಕನ್ನಡದಲ್ಲಿ ಮಾತಾಡಿದವರು ಕಾಂಗ್ರೆಸ್ಸಿಗರಲ್ಲವೆಂಬ ಕಾರಣದಿಂದಲೋ ಏನೊ. ಕಾಂಗ್ರೆಸ್ಸಿನ ಸದಸ್ಯೆ ಶ್ರೀಮತಿ ತಾರಕೇಶ್ವರಿ ಸಿಂಹ ಬಹಳ ಗಲಾಟೆಮಾಡಿ ಬಿಟ್ಟಿದುದರಿಂದ ಅವರನ್ನು ಹೊರಗೆ ಕಳುಹಿಸಬೇಕಾಯಿತು. ಈ ರೀತಿ ಗಲಾಟೆ ಮಾಡಿದ ಸದಸ್ಯರನ್ನು ಹೊರಗೆ ಕಳುಹಿಸಿರುವದು ಇದು ಮೊದಲ ಬಾರಿ ಇರುವದಿಲ್ಲ. ಈ ಸಲ ಹೊರಗೆ ಕಳುಹಿಸಲ್ಪಟ್ಟವರು ಕಾಂಗ್ರೆಸ್ಸು ಸದಸ್ಯೆ. ಆಳ್ವಿಕೆಯ ಅಂಕುಶ ಇರುವದು ಕಾಂಗ್ರೆಸ್ಸಿಗರ ಕೈಯಲ್ಲಿ. ಒಡನೆ ಅವರು ಹೊರಗೆ ಹೋಗಲು ಹೇಳಿದವರನ್ನು ತರಾಟೆಗೆ ತೆಗೆದುಕೊಂಡರು. ಸ್ಪೀಕರ್ ಭಯಪಡಬೇಕಾಯಿತು. ಸ್ಥಾನ ಬೇಕಾದಲ್ಲಿ ಯಾರಾದರೇನು? ಭಯಪಡಲೇಬೇಕು. ಹೇಗೂ ನಾಟಕ ಮುಗಿಯಿತು. ಇಂತಹ ಸರಕಾರದ ಮೇಲೆ ಯಾರಿಗಾದರೂ ವಿಶ್ವಾಸ ಉಳಿದೀತೇ? ಸರಕಾರವನ್ನುವದಕ್ಕಿಂತಲೂ ಮಂತ್ರಿಮಂಡಲವೆನ್ನುವದೇ ಒಳ್ಳೆಯದೇ ಒಳ್ಳೆಯದು ವಿಶ್ವಾಸ ವಿಲ್ಲವೆನ್ನುವದನ್ನೇ ಪ್ರತಿಪಕ್ಷಗಳೂ, ಲೋಕ ಸಭೆಯ ಹೊರಗೆ ಉಪ-ರಾಷ್ಟ್ರಾಧ್ಯಕ್ಷ ಶ್ರೀ ಝಾಕೀರ ಹುಸೇನರು ತಿಳಿಸಿದ್ದು ಮುನ್ನೆಚ್ಚರಿಕೆಯನ್ನಿತ್ತಿರುವರು.

ಇದರಿಂದ ಪಾಠಕಲಿತುಕೊಳ್ಳುವವರ್ಯಾರು? ಮಂತ್ರಿಮಂಡಲದ ಮೇಲೆ ಜನತೆಗೆ ವಿಶ್ವಾಸವಿರುವ ರೀತಿಯಲ್ಲಿ ಆಡಳಿತ ಪಕ್ಷ ಇನ್ನೂ ನಡೆದು ಕೊಳ್ಳುತ್ತಿಲ್ಲ. ಅದರ ಪರಿಣಾಮವಾಗಿ ಇಂದೂ ಕಾಂಗ್ರೆಸಿನಿಂದ ಅದರ ಸದಸ್ಯರು ಹೊರಗೆ ಬಂದು ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಬೀಳಿಸುತ್ತಿದ್ದಾರೆ. ಹೀಗೆ ಕಾಂಗ್ರೆಸ್ ಪ್ರತಿಪಕ್ಷಗಳಿಂದ ಮಾತ್ರವಲ್ಲ ಕಾಂಗ್ರೆಸಿಗರಿಂದಲೇ ನಾಶವಾಗುತ್ತಿದೆ. ಕಾಂಗ್ರೆಸ್ಸಿಗರಿಂದಲೇ ಮಹಾತ್ಮಾ ಗಾಂಧೀಜೀಯವರ ಮಾತಿನಂತೆ ಕಾಂಗ್ರೆಸ್ಸ್ ವಿಸರ್ಜಿಸಲ್ಪಡದೆ ಅಧಿಕಾರಕ್ಕೆ ಅಂಟಿಕೊಂಡಿರಲು ಹವಣಿಸುತ್ತಿದೆಯಾದರೂ ಜನತೆಯಿಂದಲೇ ತ್ಯಜಿಸಲ್ಪಡುತ್ತಿದೆ.

ಇಂತಹ ಸನ್ನಿವೇಶದಲ್ಲಿ ಪ್ರತಿಪಕ್ಷಗಳಾದರೂ ಸರಿಯಾದ ರೀತಿಯಲ್ಲಿ ವರ್ತಿಸುತ್ತಿದೆಯೇ? ದುರ್ದೈವ ಮಾತ್ ಇಲ್ಲವೇ ಇಲ್ಲ, ಅವು ಅಧಿಕಾರಕ್ಕಾಗಿ ಹಂದ್ಯಾಟ ನಡೆಸುತ್ತಿವೆ. ಶ್ರೀ ರಾಮಮನೋಹರ ಲೋಹಿಯಾರವರು ತನ್ನ ಸ್ವಂತ ಪಕ್ಷದವರ ಕುರಿತೂ ಮುಚ್ಚುಮರೆ ಇಲ್ಲದ ಅದೇ ವಿಷಯವನ್ನು ಹೇಳಿರುವರು. ಪ್ರತಿಪಕ್ಷಗಳಾದರೋ ಬಹಳಷ್ಟು ಮುಂದರಿದು ಭಾರತ ಸರಕಾರದ ಮೇಲೆಯೇ ನಂಬಿಕ ಇಲ್ಲವೆಂದು ಹೇಳುತ್ತಿವೆ. ಈಗಾದಲ್ಲಿ ಯಾವ ಸರಕಾರದ ಮೇಲೆ ಇವರಿಗೆ ನಂಬಿಕ ಇದೆ? ಇಂದು ಭಾರತ ಸರಕಾರವೆಂದರೆ ಕಾಂಗ್ರೆಸ್ಸಿನ ಆಡಳಿತ ಇರಬಹುದು ನಾಳೆ ಜನಸಂಘದವರ ಅಥವಾ ಸ್ವತಂತ್ರ ಪಾರ್ಟಿಯ ಸರದಿ ಬರಬಹುದು. ಅದೂ ಭಾರತ ಸರಕಾರವೇ ಸರಿ. ಹಾಗಿರುವಾಗ ಭಾರತ ಸರಕಾರದ ಮೇಲೆ ವಿಶ್ವಾಸವಿಲ್ಲವೆನ್ನುವದು ಸರಿಯೇನು? ಅದೂ ಅಲ್ಲದೆ, ಲೋಕಸಭೆ ಮತ್ತು ರಾಜ್ಯಸಭೆ ಹಾಗೂ ಮಂತ್ರಿ ಇಲ್ಲದೇ ಹೋಗುವ ದಿನವೂ ಬರಬಹುದು—ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬರಬಹುದು. ಅಂತಹ ಸಮಯದಲ್ಲಿ ಸರಕಾರವೇ ಇಲ್ಲವೆನ್ನಲು ಸಾಧ್ಯವೇನು? ಮಂತ್ರಿ ಮಾಗಧರು ಇಲ್ಲ ಅಷ್ಟೇ. ಸರಕಾರದ ಚಕ್ರ ಸುತ್ತುತ್ತಿರುತ್ತದೆ. ಈ ಸರಕಾರದ ಮೇಲೆ ನಂಬಿಕೆ ಇಲ್ಲವೆನ್ನುವದು ಯೋಗ್ಯವೇನು? ರಾಣಿ ಗಾಯತ್ರಿ ದೇವಿಯವರಿಗೆ [illegible] ಮೊತ್ತದಲ್ಲಿ ನಂಬಿಕೆ ಇಲ್ಲದ ವಿಷಯ ತಂದವರಿಗ ಸರಕಾರದ ಮೇಲೆ ನಂಬಿಕೆ ಇಲ್ಲವೆನ್ನುವದು ಸರಿಯಲ್ಲ. ಅದಕ್ಕಿಂತಲೂ ಕಾಂಗ್ರೆಸ್ಸಿನ ಮೇಲೆ ಅಥವಾ ಕಾಂಗ್ರೆಸ್ಸ್ ಮಂತ್ರಿಮಂಡಲದ ಮೇಲೆ ವಿಶ್ವಾಸವಿಲ್ಲದಿರಬಹುದು ಅಷ್ಟೇ. ಅದನ್ನೇ ಪ್ರಚಲಿತ ಸರಕಾರವೆಂದರೂ ಅಷ್ಟೇನೂ ತಪ್ಪಾಗಲಿಕ್ಕಿಲ್ಲ ಯಾಕೆಂದರೆ ಸರಕಾರದ ಸೀಮೆ ಎಲ್ಲಿ ಕೊನೆಗೊಳ್ಳುತ್ತದೆ, ಮಂತ್ರಿಮಂಡಲದ ಸೀಮೆ ಎಲ್ಲಿ ಆರಂಭವಾಗುತ್ತದೆನ್ನುವದನ್ನು ಹೇಳುವದಿಂದು ಸ್ವಲ್ಪ ಕಷ್ಟ ಕಷ್ಟವೇ ಸರಿ. ಏನಿದ್ದರೂ ಭಾರತೀಯ ಸರಕಾರದ ಮೇಲೆಯೇ ನಂಬಿಕೆ ಇಲ್ಲವೆಂದು ರೇಗಾಡುವದ, ಜವಾಬ್ದಾರಿಯುತ ವ್ಯಕ್ತಿಗಳಿಗಂತೂ ಶೋಭಿಸುವಲ್ಲ. ಜವಾಬ್ದಾರಿಯುತ ವ್ಯಕ್ತಿಗಳಂತೂ ಕಾಪಾಡುವ ಪ್ರತಿಪದದ ಕುರಿತು ಯೋಚಿಸಿಯೇ ಮಾತಾಡುವದೊಂದು ಪದ್ಧತಿ. ಅದನ್ನು ಮೀರಿದಲ್ಲಿ, ಯಾರಾದರೇನು, ಟೀಕೆಗೆ ಅರ್ಹರೇ ಆಹುದು.

ಹೃದಯ ಕೇಳುತ್ತದೆ

ನಾವು ಎತ್ತ ಸಾಗುತ್ತಿದ್ದೇವೆ?

ಬರೆದವರು: ಶ್ರೀ ಎಂ. ಉಮೇಶ ರಾವ್.

ಸಮಾಜದ್ರೋಹ

ಸಂದರ್ಭ ಒದಗಿದಾಗ ತನ್ನ ಮೇಲ್ಮೆಯ ಬಗ್ಗೆ ಅದರ ಸದುಪಯೋಗವನ್ನು ಪಡೆಯಲೆತ್ನಿಸುವುದು ಮಾನವ ಸಹಜವಾದ ಸ್ವಭಾವವೇನೋ. ಆ ರೀತಿಮಾಡದೆ ಇರುವವನು ಕೆಲವು ವೇಳೆ ಕರ್ತವ್ಯ ಭ್ರಷ್ಟನೆಂದು ಗಣಿಸಲ್ಪಡಬಹುದು. ಏಕೆಂದರೆ ಒಬ್ಬನ ಜೀವಮಾನದಲ್ಲಿ ಅಂತಹ ಸಂದರ್ಭವು ಮರಳಿ ಸಿಗುವುದೆಂದು ಹೇಳಲು ಸಾಧ್ಯವಿಲ್ಲ. ಆದಾಗ್ಯೂ ಇತರರ ಸಂಕಷ್ಟದ ದುರುಪಯೋಗವನ್ನು ಪಡೆದು ತನ್ನ ಅಭಿವೃದ್ಧಿಯನು ಸಾಧಿಸುವ ಹವ್ಯಾಸವು ನೀಚವಾದುದು.

ನಮ್ಮ ದೇಶದಲ್ಲಿರುವ ಆಹಾರದ ಕೊರತೆಯನ್ನು ನೀಗಿಸುವರೆ ಪ್ರತಿ ದಿನವೂ ಪರದೇಶಗಳಿಂದ ಅಕ್ಕಿ, ಗೋದಿ, ಹಾಲಿನ ಹುಡಿ ಮೊದಲಾದ ಪದಾರ್ಥಗಳನ್ನು ನಾವು ದಾನವಾಗಿ ಪಡೆಯುತ್ತೇವೆ—ಅಲ್ಲಿಂದ ಮಕ್ಕಳು ಕೂಡಾ ಪವೈನಂದಿನ ಅಗತ್ಯದ ಖರ್ಚಿನ ಹಣದಿಂದ ಸ್ವಲ್ಪ ಉಳಿಸಿ ನಮ್ಮ ಜನತೆಯ ಕಷ್ಟ ಪರಿಹಾರಕ್ಕಾಗಿ ಅದನ್ನು ಕಳುಹಿಸಿರುವರೆಂದು ತಿಳಿಯುತ್ತೇವೆ. ಅದೇ ವೇಳೆ, ನಮ್ಮವರೇ ಆಗಿರುವ ಕೆಲವರು ಆಹಾರ ಧಾನ್ಯಗಳನ್ನು ಗುಪ್ತವಾಗಿ ಕೂಡಿಸಿಟ್ಟು, ಕಾಳಸಂತೆಯಲ್ಲಿ ಮಾರಿ, ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದು, ಲಾಭ ಗಳಿಸುವುದನ್ನು ಕಾಣುತ್ತೇವೆ. ಆಹಾರ ಪರಿಸ್ಥಿತಿಯು ಸುಧಾರಿಸುವುದರೊಳಗೆ ಸಾಧ್ಯವಾದಷ್ಟು ಐಶ್ವರ್ಯವನ್ನು ಸಂಪಾದಿಸುವುದೇ ಅವರ ಜೀವನದ ಗುರಿ ಎಂಬಂತೆ ತೋರುತ್ತದೆ. ಕಾಲವು ಕಳೆದಂತೆ ಈ ರೀತಿಯ ದುಷ್ಟ ಸ್ವಾರ್ಥ ಮನೋಮಟ್ಟದ ವ್ಯಕ್ತಿಗಳು ಹೆಚ್ಚಾಗುತ್ತಾ ಇರುವುದು ನಮ್ಮ ಜನಾಂಗದ ನೈತಿಕ ಅವನತಿಯ ದ್ಯೋತಕವಾಗಿದೆ.

ಸತ್ಯನ್ಯಾಯಗಳಿಗೆ ಸ್ಥಾನವಿಲ್ಲ.

ಜನರು ಕಾನೂನುಗಳನ್ನು ನಿರ್ಭೀತಿಯಿಂದ ಉಲ್ಲಂಘಿಸುವುದನ್ನು ಕಂಡು ಬೇಸರವಾಗುತ್ತದೆ. ಚಿನ್ನ, ವಾಚುಗಳು, ಟ್ರಾನ್ಸಿಸ್ಟರುಗಳು, ಶೇಂದಿ, ಶರಾಬು ಆಹಾರಧಾನ್ಯಗಳೇ ಮೊದಲಾದವುಗಳನ್ನು ಕಳ್ಳಪಟನೆಯಿಂದ ಸಾಗಿಸಿ ಮಾರಾಟ ಮಾಡುವವರು ಹೆಚ್ಚಿನ ಐಶ್ವರ್ಯವನ್ನು ಗಳಿಸಿ, ದೊಡ್ಡ ಕಾರುಗಳಲ್ಲಿ ತಿರುಗುತ್ತಿದ್ದು ಗದ್ದೆ ಭೂಮಿಗಳನ್ನು ಪಡೆದು ಮನೆಗಳನ್ನು ಕಟ್ಟಿಸಿ, ಅನಾಯಾಸವಾಗಿ ವೈಭವದಿಂದ ಮೆರೆಯುವುದನ್ನು ನಮ್ಮ ಸುತ್ತಲೂ ಕಾಣುತ್ತೇವೆ. ಇಂತಹ ತಕ್ಷೀರುಗಳನ್ನು ಕಂಡು ಹಿಡಿಯುವ ಶಿಬಂದಿಯೇ ನಮ್ಮ ದೇಶದಲ್ಲಿ ಇರುವುದಿಲ್ಲವೋ ಎಂಬಂತೆ ಭಾಸವಾಗುತ್ತದೆ. ಕೆಲವೆಡೆಗಳಲ್ಲಿ ಕಳ್ಳ ಸಾಗಾಟಿಕೆಯ ಸಾಮಾನುಗಳನ್ನು ಪತ್ತೆ ಮಾಡಿ ಸ್ವಾಧೀನ ಗೊಳಿಸಿದುದರ ವಿವರಗಳನ್ನು ಕೇಳುತ್ತೇವೆ. ಅಪರಾಧಿತರನ್ನು ತಕ್ಕ ಶಿಕ್ಷೆಗೆ ಗುರಿಪಡಿಸಿದ ವಾರ್ತೆಯು ಬಹಳ ವಿರಳ. ಭ್ರಷ್ಟಾಚಾರವು ಹೆಚ್ಚಾಗುತ್ತಾ ಇದೆ. ಸರಕಾರಕ್ಕೆ ತೆರಬೇಕಾದ ತೆರಿಗೆಗಳನ್ನು ಕೊಡದಂತೆ ತಪ್ಪಿಸಿಕೊಳ್ಳುವುದನ್ನು ಅನಿವಾರ್ಯ ಕರ್ತವ್ಯವೆಂದು ಪರಿಗಣಿಸಲಾಗುತ್ತದೆ. ಚತುರ ರೀತಿಗಳಲ್ಲಿ ಈ ಬಗ್ಗೆ ಸರಕಾರವನ್ನು ವಂಚಿಸುವುದನ್ನು ಸಮಾಜವು ಖಂಡಿಸುವುದಿಲ್ಲ. ಸತ್ಯ ಮತ್ತು ನ್ಯಾಯಗಳಿಗೆ ಗಮನ ಕೊಟ್ಟು ದೈವವಿಶ್ವಾಸದಿಂದ ಪ್ರಾಮಾಣಿಕ ಜೀವನ ನಡೆಸುವವನು ಇದನ್ನೆಲ್ಲಾ ಕಂಡು ಬೆರಗಾಗುತ್ತಾನೆ. ಕಳ್ಳ ಉಪಾಯಗಳಿಂದ ಧನವನ್ನು ಶೇಖರಿಸಿದವನು ಗಣ್ಯ ವ್ಯಕ್ತಿಗಳೊಂದಿಗೆ ಬೆರೆತು ಸರಕಾರದ ಮೇಲಧಿಕಾರಿಗಳಿಂದ ಮನ್ನಣೆ ಪಡೆಯುತ್ತಾನೆ. ಸಣ್ಣ ಅಧಿಕಾರಿಗಳು ಅವನಿಂದ ಪಡೆಯ ಬಹುದಾದ ಲಾಭವನ್ನು ನಿರೀಕ್ಷಿಸಿ ಅವನಿಗೆ ವಿಧೇಯರಾಗಿರುತ್ತಾರೆ. ಕಾನೂನನ್ನು ಉಲ್ಲಂಘಿಸುವುದರಲ್ಲಿ ಅವನು ತೋರಿಸುವ 'ಸಾಹಸ'ವನ್ನು ಕೆಲವೊಮ್ಮೆ ಶ್ಲಾಘಿಸುವುದೂ ಉಂಟು. ಸತ್ಯನ್ಯಾಯಗಳನ್ನು ಅಲಕ್ಷಿಸಿ ಐಶ್ವರ್ಯವನ್ನು ಸಂಪಾದಿಸುವುದೊಂದೇ ಸಮಾಜದಲ್ಲಿ ಅನೇಕರ ಧೋರಣೆಯಾಗಿರುವುದು ಶೋಚನೀಯವಾಗಿದೆ.

ಬ್ರಿಟಿಷರು ನಮ್ಮನ್ನು ಆಳುತ್ತಿದ್ದಾಗ ಪರಿಸ್ಥಿತಿಯು ಇಷ್ಟರ ಮಟ್ಟಿಗೆ ಹದಗೆಟ್ಟಿರಲಿಲ್ಲ. ಜನರಿಗೆ ಸರಕಾರದ ಕುರಿತು ಪ್ರೀತಿಯಿಲ್ಲದಿದ್ದರೂ ಭೀತಿಯಿದ್ದಿತು. ನಿಯಮಗಳನ್ನು ಉಲ್ಲಂಘಿಸಿದವರು ತಕ್ಕ ಶಿಕ್ಷೆಗೆ ಗುರಿಯಾಗುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ವೇಳೆ, ನಾವು ಆಡಳಿತವನ್ನು ನಡೆಸುವ ಯೋಗ್ಯತೆಯನ್ನು ಪಡೆದಿಲ್ಲವೆಂದು ಬ್ರಿಟಿಷರ ಹೇಳಿಕೆಯಾಗಿದ್ದಿತು. ಹೇಗೂ ಎರಡನೇ ಮಹಾ ಯುದ್ಧದ ನಂತರ ಜಾಗತಿಕ ಪರಿಸ್ಥಿತಿಯು ನಮಗೆ ಅನುಕೂಲವಾಗಿದ್ದಿತು. ನಾವು ಸ್ವತಂತ್ರರಾದೆವು. ಇಷ್ಟು

(ಒಂಭತ್ತನೇ ಪುಟ ನೋಡಿರಿ)

"ಕಾಕಾಜಿ" ಎಂದರೆ ಹೃದಯ ಕರಗುತ್ತಿದ್ದ "ದೇವೀಸಿಂಹ"

(ಐದನೇ ಪುಟದಿಂದ)

ಪೋಲೀಸರು ಮನೆಯನ್ನು ಸುತ್ತುವರಿಯಲು ಛತ್ರಸಾಲ್ ರೆಜಿಮೆಂಟಿನ ಸಹಾಯ ಹೊಂದಿತ್ತು. ಆದರೂ ಮಾಡಿನಲ್ಲಿ ತೂತು ಮಾಡಿ ಪೋಲೀಸರ ಮೇಲಕ್ಕೇ ಹಾರಿ ಕಾನೂ ಗುಂಡು ಹಾರಿಸುತ್ತಾ ತಪ್ಪಿಸಿ ಓಡಿ ಹೋಗಲು ದೇವೀಸಿಂಹನಿಗೆ ಸಾಧ್ಯವಾಗಿತ್ತು.

ಆಗಿಂದಲೇ ದೇವೀಸಿಂಹನನ್ನು ವೈರಾಗ್ಯ ಬಾಧಿಸಿತು. ಸಾಂಗವಾಗಿ ನಡೆಸಿದ್ದ ಕೆಲವು ಕೊಳ್ಳೆಗಳೇ ಆತನ ಮನಸ್ಸನ್ನು ಪೀಡಿಸಿದ್ದವು.

ಆತ ಎಡೆಬಿಡದೆ ಗಂಗಾಸ್ನಾನ ಮಾಡುವಂತೆ ಕೆಲವರು ಸೂಚಿಸಿದರು. ಆದರೆ ಅದು ಅಷ್ಟೇನೂ ಸುಲಭ ಕಾರ್ಯವಲ್ಲವೆಂದು ದೇವೀಸಿಂಹನಿಗೆ ಗೊತ್ತಿತ್ತು.

ದೇವೀಸಿಂಹನನ್ನು ಹಿಡಿದು ಕೊಟ್ಟವರಿಗೆ ದೊಡ್ಡ ಬಹುಮಾನಗಳನ್ನು ಸರಕಾರ ಘೋಷಿಸಿತ್ತು. ಆತನ ಫೋಟೋ ಚಿತ್ರಗಳು ಮತ್ತು ಬಿತ್ತಿಪತ್ರಗಳು ಒದಗಿದ್ದ ಕಟ್ಟಡಗಳ ಗೋಡೆಗಳ ಮೇಲೂ ಇತರ ಪ್ರಧಾನ ಸ್ಥಳಗಳಲ್ಲೂ ಪ್ರದರ್ಶಿಸಲ್ಪಟ್ಟಿತ್ತು. ಪತ್ರಿಕೆಗಳಂತೂ ಆತನ ಸುಳಿವಿನ ಕುರಿತೂ ಚಟುವಟಿಕೆಗಳ ಕುರಿತೂ ಆಗಾಗ ಸಾರ್ವಜನಿಕರನ್ನು ಎಚ್ಚರಿಸುತ್ತಲೇ ಇದ್ದವು. ಗುಪ್ತ ಪೋಲೀಸರಿಗೆ ವಿಶ್ರಾಂತಿಯೇ ಇಲ್ಲ...

ಒಂದು ದಿನ ಕಟ್ನಿ ರೈಲ್ವೆ ಜಂಕ್ಷನಿನ ಬಳಿ ಮೊಕ್ಕಾಂ ಮಾಡಿದ್ದ ಸಶಸ್ತ್ರ ಪೋಲೀಸ್ ಸೇನೆಗೆ ಹೆಡ್ಕ್ವಾರ್ಟರಿನಿಂದ ಒಂದು ತಂತಿ ತಲುಪಿತು.

ದೇವೀಸಿಂಹನನ್ನೇ ಹೋಲುವ ಒಬ್ಬ ವ್ಯಕ್ತಿ ಪ್ರಥಮ ತರಗತಿಯ ರೈಲ್ವೆ ಪ್ರಯಾಣಿಕನಾಗಿ ಕಟ್ನಿಗೆ ತಲುಪುವುದಾಗಿ ಆ ತಂತೀ ಸಂದೇಶದ ಅರ್ಥವಾಗಿತ್ತು.

ಸಶಸ್ತ್ರ ಪೋಲೀಸ್ ಪಡೆಯಲ್ಲಿದ್ದ ದೇವೀಸಿಂಹನ ಗೂಢಚಾರರು ಈ ವಿವರವನ್ನು ಆದಷ್ಟು ಬೇಗನೇ ಮೌನಿ (ದೇವೀಸಿಂಹನ ಬಾಣಸಿಗ)ಗೆ ತಿಳಿಸಿದರು.

ಮೌನಿ ಕೂಡಲೇ ಅಲ್ಲಿಂದೋಡಿ ಕಟ್ನಿಗೆ ಇನ್ನೂ ನಾಲ್ಕು ಸ್ಟೇಶನುಗಳಿರುವಾಗಲೇ ರೈಲ್ವೆ ಪ್ರಯಾಣ ಮಾಡುತ್ತಿದ್ದ ದೇವೀಸಿಂಹನಿಗೆ ವಿವರ ತಿಳಿಸಿದುದರಿಂದಾಗಿ ಕೂಡಲೇ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರನ ವೇಷಧರಿಸಿ 'ಸೆಕೆಂಡ್ ಕ್ಲಾಸ್' ಟಿಕೇಟು ಪಡೆದು ತಾನೊಬ್ಬ ಕಮ್ಯೂನಿಸ್ಟನ ಬಂಧನಕ್ಕಾಗಿ ಹೋಗಿದ್ದುದಾಗಿ ಸಹ ಪ್ರಯಾಣಿಕರಿಗೆ ತಿಳಿಸಿ ಮೌನಿಯೊಂದಿಗೆ ಸೆಕೆಂಡ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಕುಳಿತು ಕಟ್ನಿಗೆ ಪ್ರಯಾಣ ಮಾಡಿದ.

ಮೌನಿ ಕಮ್ಯೂನಿಸ್ಟನಾದ! ಕಟ್ನಿ ನಿಲ್ದಾಣ ಬಂತು. ಸಶಸ್ತ್ರ ಪೋಲೀಸರು ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟುಗಳನ್ನು [illegible] ಶೋಧಿಸುತ್ತಿದ್ದಾಗಲೇ ದೇವೀಸಿಂಹ ತನ್ನ ಕೈದಿಯೊಂದಿಗೆ ಸ್ಟೇಶನ್ನಿಂದ ಜಾರಿಬಿದ್ದುದನ್ನು ಯಾರೂ ಗಮನಿಸಲಿಲ್ಲ.

ಮತ್ತೆ ಮತ್ತೆ ಮೊದಲಾಗಿ ತಿಳಿಸದ ಯಾವ ಮನೆಯನ್ನೂ ಕೊಳ್ಳೆ ಹೊಡೆಯಲು ದೇವೀಸಿಂಹ ಸಿದ್ಧನಾಗಿರಲಿಲ್ಲ. ದಿನ, ಸಮಯ, ಅಪೇಕ್ಷಿಸುವ ಧನ ಇತ್ಯಾದಿ ವಿವರಗಳನ್ನು ಮನೆಯ ಮಾಲಕನಿಗೆ ಮುಂಚಿತವಾಗಿಯೇ ತಿಳಿಸಿದ ಮೇಲೆ ಆ ಹಣವನ್ನು ಸ್ವಸಂತೋಷದಿಂದ ತೆತ್ತರೆ ಸುಖ; ಇಲ್ಲವಾದರೆ ಏನು ಸಂಭವಿಸುವುದೆಂದು ಊಹಿಸಲೇ ಕಷ್ಟವಾಗುತ್ತಿತ್ತು.

ಒಮ್ಮೆ ಒಬ್ಬ ಧನಿಕನಿಗೆ ದೇವೀಸಿಂಹನ ಪತ್ರ ಲಭಿಸಿರುವುದಾಗಿ ಪೋಲೀಸರಿಗೆ ವರದಿಯಾಯಿತು. ಸ್ವಂತ ಗೂಢಚಾರರ ಮೂಲಕ ದೇವೀಸಿಂಹನೂ ಈ ವಿವರ ತಿಳಿದ. ನಿರ್ದಿಷ್ಟ ದಿನದಂದು ಆಕ್ರಮಿಸಲು ಕೊಳ್ಳೆಗಾರರು ಹೋಗಲೇ ಇಲ್ಲ. ಪೋಲೀಸರು ಮನೆಯೊಡೆಯನ ಮೇಲೆ ರೇಗಿದರು.

ಒಂದು ತಿಂಗಳ ಮೇಲೆ ಮತ್ತೊಂದು ಪತ್ರ ದೇವೀಸಿಂಹನಿಂದ ಬಂತು. ಈ ಸಲ ಪೋಲೀಸರು ನಂಬರೆಂದು ಭಾವಿಸಿ ಮಾಲಕ ಸುಮ್ಮನೇ ಇದ್ದ. ಈ ಬಾರಿಯೂ ತಾನು ಪೋಲೀಸರಿಗೆ ತಿಳಿಸಿರಬಹುದೆಂದು ದೇವೀಸಿಂಹ ಭಾವಿಸುವನೆಂದೂ ಆತ ಸಮಾಧಾನಪಟ್ಟನು.

ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಮನೆಯ ಬಾಗಿಲನ್ನು ತಟ್ಟುವ ಸದ್ದು ಕೇಳಿಸಿತು. ಮಾಲಕ ಹೆದರಿದ, ಬಾಗಿಲು ತೆರೆಯಲಿಲ್ಲ. ಕಿಟಿಕಿಯ ಮೂಲಕ ಒಂದು ಕೋವಿಯ ನಳಿಗೆ ಒಳಕ್ಕೆ ತಲೆ ಚಾಚಿರುವುದನ್ನು ಕಂಡ ಮಾಲಕ ಬೇರೆ ಉಪಾಯ ಕಾಣದೆ ಬಾಗಿಲು ತೆರೆದ.

ದೇವೀಸಿಂಹನ ಬಾಣಸಿಗ ಅಲ್ಲಿದ್ದು ಹೇಳಿದ— "ರಾಜಾಜು (ದೇವಿ ಸಿಂಹನನ್ನು ಸಂಘದವರು ಹಾಗೆ ಸಂಬೋಧಿಸುತ್ತಿದ್ದರು) ಬಂದಿರುವನು. ಹೋಗಿ ಕಂಡು ಸತ್ಕರಿಸು.... ಇಲ್ಲವಾದರೆ ಬೇಡದ ಪ್ರಹಾರ ಲಭಿಸೀತು....'

ದೇವೀ ಸಿಂಹ ತಿಳಿಸಿದ್ದಷ್ಟು ಹಣವನ್ನು ಮಾಲಕ ಎಣಿಸಿಕೊಟ್ಟ. ಪ್ರಹಾರ ಹೇಗಾದರೂ ಸಿಕ್ಕದಿರಲಿಲ್ಲ. ಆದರೂ ಒಂದು ಹನಿಯಾದರೂ ರಕ್ತ ಸುರಿದಿರಲಿಲ್ಲ.

ದೇವೀಸಿಂಹನದು ಶಿಲಾ ಹೃದಯ. ಆದರೂ "ಕಾಕಾಜಿ" (ಮಾವಯ್ಯ) ಎಂದು ಯಾರಾದರೂ ಆತನನ್ನು ಸಂಬೋಧಿಸಿದಾಗಲಾ ಪಾಷಾಣ ಹೃದಯವೂ ಕರಗುತಿತ್ತು.

ಗಾಳಿಯರ್ ಸಮೀಪದ [illegible] ಜಿಲ್ಲೆಯ ಒಂದು ಕುಗ್ರಾಮದಲ್ಲಿ ಒಂದು ಜೈನ ವಸತಿಯನ್ನು ಕೊಳ್ಳೆ ಹೊಡೆಯಲು ಹೋಗಿದ್ದಾಗ ಮಾಲಕನು ಪೋಲೀಸರಿಗೆ ದೂರು ಕೊಡದೇನೇ ಸ್ವಂತ ಬುದ್ಧಿವಂತಿಕೆಯಿಂದಲೇ ಪರಿಸ್ಥಿತಿಯನ್ನೆದುರಿಸಲು ತೀರ್ಮಾನಿಸಿದ್ದುದನ್ನು ದೇವೀಸಿಂಹ ತಿಳಿದಿದ್ದ. ಅಲ್ಲಿದ್ದ ಒಂದು ಪೆಟ್ಟಿಗೆಯನ್ನು ಎತ್ತಿಕೊಂಡು ಸಂಘದವರು ಹೊರಟಾಗ ಹಿಂದಿನಿಂದ ಒಬ್ಬ ಯುವತಿ ಬಹು ದುಃಖಿತಳಾಗಿ ಕೇಳಿದಳು—'ಕಾಕಾಜಿ! ಹುಡುಗಿ ಮದುವೆಗಾದರೆ ನನ್ನ ಒಂದು ಆಭರಣವನ್ನಾದರೂ ಉಳಿಸಿ ಬಿಡಿರಾ!...."

ದೇವೀಸಿಂಹನ ಮನಸ್ಸು ಕರಗಿತು. 'ಮಗಳೇ, ನಿನಗೆ ಬೇಕಾದ ಆಭರಣವನ್ನು ತೆಗೆದು ಕೋ....' ಎಂದು ಸಮ್ಮತಿಸಿಯೇ ಬಿಟ್ಟ.

ದೇವೀ ಸಿಂಹನು ಕರುಣಾಳುವಾಗಿ ಮಾರ್ಪಾಟಾದ ಹಲವು ನಿದರ್ಶನಗಳ ಪೈಕಿ ಮೇಲೆ ಹೇಳಿದ್ದು ಒಂದು ಮಾತ್ರ.

ವಿಂಧ್ಯ ಪ್ರದೇಶದ ಎಡ್ಮಿನಿಸ್ಟ್ರೇಟರ್ ವಾಗ್ದಾನ ನೀಡಿದ್ದುದರಿಂದಾಗಿ ದೇವೀಸಿಂಹ ಪೋಲೀಸರಿಗೆ ಶರಣಾದರೂ ಆ ವಾಗ್ದಾನ ನೆರವೇರಿಸಲ್ಪಡುವ ಸಂಭವ ಕಡಿಮೆಯೆಂದು ತಿಳಿದಾಗ ದೇವೀಸಿಂಹನು ರಿಮಾಂಡಿನಿಂದಲೂ ತಪ್ಪಿಸಿಕೊಂಡು ಓಡಿದ. ಎಲ್ಲಿಗೆ ಹೋಗಿರುವನೆಂಬುದನ್ನು ಪತ್ತೆ ಹಚ್ಚಲು ಸರಕಾರಕ್ಕೆ ಸಾಧ್ಯವಾಗದೇ ಹೋಯಿತು.

ಗ್ವಾಲಿಯರಲ್ಲಿ ದೇವೀಸಿಂಹನು ತನ್ನ ಮಗಳನ್ನು ವಿವಾಹಮಾಡಿ ಹೇರಳ ಸ್ತ್ರೀ ಧನ ಸಮೇತ ವೈಭವಯುಕ್ತವಾಗಿ (ರಷ್ಯಾದಿಯ ಧನಿಕನೊಬ್ಬನಿಗೆ) ಕೊಡುವುದಾಗಿ ಮುಂದಾಗಿಯೇ ಪತ್ರಿಕೆಗಳು ಪ್ರಕಟಿಸಿದ್ದವಾದರೂ "ಬಂಗಾಳ್ಳಿ ನಿವ್ವಗೇಡು...." ಎಂದೇ ಪೋಲೀಸರು ಭಾವಿಸಿ ಸುಮ್ಮನಿದ್ದರು.

—(ಆಧಾರದಿಂದ.)

ರಸಿಕತೆಯ ರನ್ನೆ

ಮಲ್ಲಿಗೆಯ ಹೆರಳಲ್ಲಿ
ಮಲ್ಲಿ ನೀ ಮುಡಿದಿರುವೆ
ಬಲ್ಲೆ ನಾ ನಿನ್ನನ್ನ ನೀ
ನೊಲ್ಲೆ ಏನ? ॥೧॥

ಮುಗ್ಧ ಮನಸಿನ ಕನ್ಯೆ
ಸದ್ದು ನೀಡಿದ ಸನ್ನೆ
ಮುದ್ದು ಮುಖ ಕೆಂಗೆನ್ನೆ
ಸ್ನಿಗ್ಧ ವ ನದನ್ನೆ. ॥೨॥

ಅರೆಬಿರಿದ ತುಟಿಗಳಲಿ
ಮರೆ ಮಾಚುತಿಹ ಬಾಲೆ
ತೆರೆ ನಿನ್ನ ಮನದಗಳಿ
ಬೆರೆತುನೋಡು ॥೩॥

ವಿಶ್ವವೆಲ್ಲೆಡೆ ನುಸ್ಳಿ
ವಿಷದ ಹಾವುಗಳಿಹವು
ವಿಶ್ವಸ್ತ ಮುಗ್ಧ ಸ್ತ್ರೀ ನೀ
ನರಿತು ಹುಡು. ॥೪॥

ಹೊಂಗನಸ ಬಯಕೆಯನು
ಭೃಂಗದಾಕಾಂಕ್ಷೆಯನು
ಹೊಂಗೆ ತುದಿವಲ್ಲಿರುವ
ರಂಗ ಪುಷ್ಪ. ॥೫॥

ಕೆಂಪಾದ ಸುಮಗಳವು
ಕಂಪಿಲ್ಲದರಳುಗಳು
ತಂಬು ಬಳಿ ಸಾರಿ ಮೊಡೆ
ಜೊಂಪ ಬಾಷ್ಪ ॥೬॥

ಹೊರೆವ ಯೌವನ ನನ್ನ
ಹಸನ್ಮನೆಗೆ ಕರೆವಿಹ ದು
ಬಿಸಿ ರಕ್ತದನುಭವದ
ನಗುನಗು ಚಿನ್ನೆ. ॥೭॥

ಹಸಿರು ಬಯಲಲಿ ಎನ್ನ
ಕೆಸರು ಕಳೆಯಲು ನೀನು
ಕಿಸ ಕಿಸನೆ ನಕ್ಕ ಮನ
ರಸಿಕತೆಯ ರನ್ನೆ. ॥೮॥

—ಶ್ರೀ ಎಂ. ಗೋಪಾಲಕೃಷ್ಣ ರಾವ್

ದುಷಿತವು ಶರೀರವನ್ನು ಆರೋಗ್ಯದಲ್ಲಿ, ಮನಸನ್ನು ಶಿಸ್ತಿನಲ್ಲಿ, ಹೃದಯವನ್ನು ಪರಿಪೂರ್ಣತೆಯಲ್ಲಿ, ಜೇಬನ್ನು ಸಮೃದ್ಧಿಯಲ್ಲಿಡುತ್ತದೆ.

ಂ ಂ ಂ ಂ

ಮಾನಹಾನಿ ಗೌರವ ಹಾನಿಯನ್ನು ತಲೆತಗ್ಗಿಸಿ ಸಹಿಸುವವನು ಶಾರೀರಿಕ ಗಂಡಾಂತರವನ್ನು ಎದುರಿಸಬೇಕಾಗುತ್ತದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 46/67.

ಮಹಾಬಲ ಶೆಟ್ಟಿ— ವಾದಿ

ಮತ್ತು

ಮಂಜಯ್ಯ ಶೆಟ್ಟಿ- ಪ್ರತಿವಾದಿ.

ಕುಂದಾಪುರ ತಾಲೂಕು ಸಿದ್ಧಾಪುರ ಗ್ರಾಮದ ಹಳ್ಳಿಯಲ್ಲಿರುವ ತಿಮ್ಮಪ್ಪ ಶೆಟ್ರ ಅವರ ಪ್ರತಿವಾದಿ [illegible] ಮೂಲಕ ತಿಳಿಸುವುದೇನೆಂದರೆ —

ನಿಮ್ಮಿಂದ ವಾದಿಗೆ ಸಲ್ಲತಕ್ಕ ದಿನದಂದು ನೋಟೀಸು ಸಲುವಾಗಿ [illegible] ದಾವೆ ಮಾಡಿದ್ದು, ಅದ ಆಧ್ಯರ್ತ ಬಗ್ಗೆ ತಾರೀಕು 6—6—67ಕ್ಕೆ ಇಟ್ಟಿರುತ್ತದೆ. ಆದಕಾರಣ ಸದ್ರಿ ದಿನಾ ಹಗಲು 11 ಗಂಟೆಗೆ ಈ ಕೋರ್ಟಿನಲ್ಲಿ ನೀವು ಸ್ವತಹಾ ಯಾ ವಕೀಲರ ಮೂಲಕ ನಿಮ್ಮ ಆಕ್ಷೇಪವಿದ್ದರೆ, ದಾಖಲು ಮಾಡುವರೇ ತಪ್ಪಿದಲ್ಲಿ, ನಿಮ್ಮ ಗೈರು ಹಾಜರಿಯಿಂದ ದಾವೆಯನ್ನು ತೀರ್ಮಾನಿಸಲಾಗುವುದು.

(ಕೋರ್ಟಿನವರ ಅಪ್ಪಣೆ ಪ್ರಕಾರ)

G. Kushala Hegde

ವಾದಿ ಪರ ಎಡ್ವೋಕೇಟು

ಕುಂದಾಪುರ, ತಾ. 10—4—67

ಎಂಗೆ?



ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. ಸಂ. ಸ.

ಥೇಮ್ಸ್‌ನಿಂದ ಗಂಗೆಗೆ

ಬರೆದವರು: ಡಾ| ಸುರೇಂದ್ರನಾಥ ಕಾಮತ್.

ಪ್ರಕಾಶಕರು: ನವಯುಗ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧

ಪುಟಗಳು ೨೦೮, ಬೆಲೆ: ರೂ. ೨-೫೦.

ಸ್ವಾಮಿ ವಿವೇಕಾನಂದರಿಂದ ಪ್ರಭಾವಿತಳಾಗಿ ಅವರ ಶಿಷ್ಯೆಯಾಗಿ ಭಾರತ ಮಾತೆಯ ಸೇವೆಯಲ್ಲಿಯೇ ತನ್ನ ಜೀವನವನ್ನರ್ಪಿಸಿದ ಸಿಸ್ಟರ್ ನಿವೇದಿತಾಳ ಪುನರವತಾರವೆಂಬಂತೆ ಚಿತ್ರಿತಳಾದ ಐರಿಸ್ ಹುಡುಗಿ ಮೈಬೆಲಳ ಸುತ್ತ ಹೆಣೆದ ದೇಶಭಕ್ತಿ, ದೇವಪ್ರೇಮ, ಭಾರತೀಯ ಸಂಸ್ಕೃತಿ ಪ್ರಸಾರದ ಕಾದಂಬರಿಯಿದು. ಭಾಸ್ಕರ ಎಂಬಾತ ಅಧ್ಯಯನಕ್ಕೆಂದು ಇಂಗ್ಲೆಂಡಿಗೆ ಹೋಗಿ ಅಲ್ಲಿ ಉದ್ಯೋಗನಿರತನಾದಾಗ ಮೆಬೆಲ್ ಶ್ರೀಮತಿ ಉಲ್ಲಾಳಳಾದಳು.

ಪಂ. ನೆಹರೂರವರ ಕರೆಯಂತೆ ಭಾರತ ಸರಕಾರದ ಸೇವೆಯಲ್ಲಿ ಸೇರಿಕೊಂಡ ಭಾಸ್ಕರ ಅಪಘಾತವೊಂದರಲ್ಲಿ ಮೃತ್ಯುಮುಖನಾದ. ಆತನ ಅಣ್ಣ ಪ್ರಭಾಕರ ಉಲ್ಲಾಳರು ದಿನವೂ ಭಾಷಣ ಬಿಗಿಯುತ್ತ ಮೆಬೆಲಳ ಭವಿಷ್ಯದತ್ತ ಆರೋಪ ಹೊರಿಸುತ್ತಿದ್ದರು. ಉಲ್ಲಾಳರ ಬಳಿಯೇ ಇರುವಂತೆ ಇಲ್ಲದ ತಪ್ಪುಗಳಿಗೆ ಅವರಲ್ಲಿ ಮೆಬೆಲ್ "ಅನುಗ್ರಹಿಸುವರೂ ಮುಂದೆ ತನ್ನ ತಪ್ಪಿನರಿವು ಆಗಲಾಗ....? ಮೆಬೆಲ್ ಹಿಂದುವಾಗಿ ಅರ್ಹಳಾಗಿ ಶಿಕ್ಷಣ ರಂಗದಲ್ಲಿ ಮಹತ್ತರ ಕ್ರಾಂತಿಗಾಗಿ ದುಡಿದು ಮುಂದೆ ಸನ್ಯಾಸತ್ವವ ಪಡೆದು ಗಂಗಾತೀರದಲ್ಲಿ ಸಮಾಧಿಸ್ಥಳಾಗುತ್ತಾಳೆ.

ನೀನೇ ಕೊನೆಗೂ ಗೆಲ್ಲೋಳು

(ನಾಲ್ಕನೇ ಪುಟದಿಂದ)

ವರ್ತಮಾನವನ್ನ..."

"ನಾಕು ಬಿಡೀಂದ್ರೆ..."

"ಬಿಡೋದೇನು ಬಂತೇ ಬಿಡೋದಾದ್ರೆ ಹಿಡಿಸ್ಕೋಳ್ಳೋದ್ಯಾಕೆ?"

"ಇದೇ ಬುದ್ದಿ ಎಲ್ಲ ಗಂಡಸ್ರಿಗೂ ಇದ್ದಿದ್ರೆ....ಅಯ್ಯೋ....ಬೇಡ-ಂದ್ರೆ...."

"ಮತ್ಯಾರ. ಬೇಕಾಂದವ್ರು..."

'ಯಾರಾ? ನೀವೂ....ಅಯ್....

'ಕೇಳು ಕಣೆ, ನೀನೇ ಗೆಲ್ಲುವುದು_'

'ಖಂಡಿತಕ್ಕಾ....'

'ಖಂಡಿತಕ್ಕೂ, ಆದ್ರೆ ನೂರು ಪೈಸೆ..."

'ಹಾಗಿದ್ರೆ ಸರಿ...ಅಲ್ವೇ...."

"ಹೌದು....ಹೌದು..."

—ಗೋರಾ.

ನಾವು ಎತ್ತ ಸಾಗುತ್ತಿದ್ದೇವೆ?

(ಒಂದನೇ ಪುಟದಿಂದ)

ವರ್ಷಗಳು ಕಳೆದಿವೆ. ಸಾಮರ್ಥ್ಯವುಳ್ಳ ಮುಖಂಡರ ಕೊರತೆಯು ಸವಾಗಿರುವುದಿಲ್ಲ. ಆದರೂ ನಾವು ಎಷ್ಟು ಪ್ರಗತಿಯನ್ನು ಸಾಧಿಸಿರುತ್ತೇವೆ? ಹಲವು ವಿಷಯಗಳಲ್ಲಿ ನಾವು ಅಭಿವೃದ್ಧಿಯನ್ನು ಹೊಂದಿರುವುದು ನಿಜ. ಸ್ವರಾಜ್ಯ ಜನರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿದುದು ಜನತೆಯು ಸುಖ ಸಮೃದ್ಧಿಗಳನ್ನು ಪಡೆಯಬೇಕೆಂಬುದರ ಬಗ್ಗೆ ಪ್ರಾಸ್ತ. ಈ ಉದ್ದೇಶವು ಸಫಲವಾಗಲಿದೆಯೇ? ನಮ್ಮ ಜನರಲ್ಲಿ ಬೆಳೆದು ಬರುವ ನೈತಿಕ ಅವನತಿಯು ಎಂದು ದೂರವಾಗುವುದು? ನಾವು ಎತ್ತ ಸಾಗುತ್ತಿದ್ದೇವೆ?

ಕಾದಂಬರಿಯ ಮುಖ್ಯ ಉದ್ದೇಶ ಭೌತಿಕವಾದಿ ಪಾಶ್ಚಾತ್ಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕವಾದಿ ಭಾರತೀಯ ಸಂಸ್ಕೃತಿಗಳ ನಡುವಣ ಸಂಘರ್ಷ, ಪರ್ಯಾಯ ಭಾರತೀಯ ಸಂಸ್ಕೃತಿ ವಿಶ್ವಾಸಗಳ ಶ್ರೇಷ್ಠತೆಯ ಪರಿಚಯ ಮಾಡಿಕೊಡುವುದು. ಭಾರತೀಯರ ವಿಶ್ವಾಸಗಳಲ್ಲಿ ಪ್ರತಿಯೊಂದಕ್ಕೂ ಆಳವಾದ ಅರ್ಥವಿದೆ. ಬರಿಯ ಮೇಲ್ಮುಖವಾಗಿಯೇ ತೋರುವ ಪಾಶ್ಚಾತ್ಯರಿಗೆ ಇದು ಅಂಧ ವಿಶ್ವಾಸವಾಗಿ ತೋರುತ್ತದೆ. ಶ್ರೀಮತಿ ಮೆಬೆಲ್ ಭಾರತೀಯರ ಭಾರತೀಯತೆಯ ಪ್ರಬಲ ವಿರೋಧಿಯಾಗಿದ್ದವಳು ಅದರ ಸಬಲ ಸಮರ್ಥಕಿ, ಪ್ರಚಾರಕಿಯಾಗಲು ಒದಗಿದ ಘಟನಾವಳಿ ಮನೋಹರವಾಗಿ ಇಲ್ಲಿ ಚಿತ್ರಿತವಾಗಿವೆ.

ಮಿ. ಉಲ್ಲಾಳರ ದೇವಮಾನವತ್ವ, ಅನಾಥ ಸನ್ಯಾಸಿನಿಯ ವೈಧವ್ಯಜೀವನ, ಶ್ರೀಮತಿ ಸಿಂಪ್ಸನ್, ಪಿಲು ಮೊದಲಾದವರ ಕಾರ್ಯನಿಮಗ್ನತೆ ಡಾ| ಕೇಳಕರ ಮೊದಲಾದ ಆದರ್ಶ ಕಾರ್ಯ ದುರಂಧರರ ಸರಳ ನಿಷ್ಕಪಟ ವರ್ತನೆ ಮೆಬೆಲಳನ್ನು ಬದಲಾಯಿಸಿದವು. ಆಕೆ ಸಿಸ್ಟರ್ ನಿವೇದಿತಾಳ ದಾರಿ ಹಿಡಿದ, ಅವಳ ದಾರಿಯನ್ನೇ ಹಿಡಿದಳು. ಮೇಲೆ ಹೇಳಿದ ವ್ಯಕ್ತಿಗಳ ಚಿತ್ರವನ್ನು ಸುಂದರವಾಗಿ ಡಾ| ಕಾಮತರು ಮೂಡಿಸಿ ಬೆಳಗಿಸಿದ್ದಾರೆ. ದೇಶ, ಕಾಲ ವಾತಾವರಣ, ಭಾಷೆ ಮತ್ತು ಶೈಲಿಯಲ್ಲಿ ಲೇಖಕರು ಎಚ್ಚರಿಕೆ ವಹಿಸಿದ್ದಾರೆ. ಇಂಗ್ಲೆಂಡಿನ ಕೊಳಕು ನದಿ ಥೇಮ್ಸ್‌ನ ದಡದಲ್ಲಿ ಹುಟ್ಟಿದ ಕೊಳಚೆ ಮೆಬೆಲ್ ಭಾಸ್ಕರನ ಕೈಹಿಡಿದು ತನ್ನ ಬದುಕಿನಲ್ಲಿ ಬೆಳಕು ಪಡೆದು ಅರ್ಪಣಳಾಗಿ ಪವಿತ್ರ ಗಂಗಾತಟದಲ್ಲಿ ಅವತಾರ ಮುಗಿಸಿ ಅಮರಾತ್ಮಳಾದ ಹೃದಯಸ್ಪರ್ಶಿ ಕಥಾನಕವಿರುವ ಈ ಬಗೆಯ ಕಾದಂಬರಿಗಳು ನಮ್ಮಲ್ಲಿಂದು ಮನೆಮಾಡಿರುವ ನೂರಾರು ಲೋಪದೋಷ-ಅಭಾವ-ನಿಲಕ್ಷ್ಯಗಳಿಗೆ ರಾಮಬಾಣವಾಗ ಬಹುದು. ಹಾಗಾಗಿ ಇಂತಹ ಸಾಂಸ್ಕೃತಿಕ ಮಹತ್ವದ ಕಾದಂಬರಿಗಳು ನಿಜಕ್ಕೂ ಸ್ವಾಗತಾರ್ಹ.

ಸತ್ವ ಪರೀಕ್ಷೆ

ಲೇಖಕರು: 'ರತ್ನ ಪುತ್ರ'

ಪ್ರಕಾಶಕರು: ಆದರ್ಶ ಸಾಹಿತ್ಯ ಪ್ರಕಾಶನ, ಸುರತ್ಕಲ್, ದ. ಕ.

ಪುಟಗಳು: ೩೨. ಬೆಲೆ. ೧-೦೦.

ಹರಿಯು ಭಾಗವತೋತ್ತಮ ಪ್ರಹ್ಲಾದನ ಹರಿಭಕ್ತಿ ತಾನೇ ನೆನಪು, ರಾಜರ್ಷಿ, ಎಲ್ಲವೂ ಎಂಬ ಅಜ್ಞಾನದ ಪರಾಕಾಷ್ಠೆಯಿಂದ ಹಿರಣ್ಯಕಶ್ಯಪನ ಪ್ರಾಣಹೀರಿದ ಭಕ್ತಿಪ್ರಧಾನ ಕಥೆ ಸುಪರಿಚಿತ ಶ್ರೀ 'ರತ್ನ ಪುತ್ರ' ರು ಈ ಕಥೆಯನ್ನೇ ನಾಟಕರೂಪದಲ್ಲಿ ಕನ್ನಡಿಗರ ಮುಂದೆ ಪ್ರದರ್ಶಿಸಿದ್ದಾರೆ. ಈ ಏಕಾಂಕ ನಾಟಕವು ೧೧ ದೃಶ್ಯಗಳಿಂದ ಕೂಡಿದ್ದು ಸುಮಾರು ಒಂದು ತಾಸಿನಲ್ಲಿ ರಂಗಭೂಮಿಯಲ್ಲಿ ಪ್ರದರ್ಶಿತವಾಗ ಬಲ್ಲುದು. ಭಾಷೆಯಲ್ಲಿನ ಪ್ರೌಢತೆ ಪೌರಾಣಿಕ ನಾಟಕಕ್ಕೆ ಯೋಗ್ಯವಿದೆ. ದೃಶ್ಯ ಸಂಯೋಜನ ಅಭಿನಯ ತೆಯ ಸಾಧ್ಯತೆಯನ್ನು ಹೆಚ್ಚಿಸಿದೆ. ಪಾತ್ರಗಳ ಸಂಖ್ಯೆ ಇನ್ನಷ್ಟು ಹೆಚ್ಚನವು ಕಿರಿಯವು ಚಿಕ್ಕವಾಕ್ಯ ಸಂವಾದ, ಕಾಕಾಕ್ಷ-ಭ್ರೂಪ್ರಕ್ಷೇಪ ಮೊದಲಾದವುಗಳ ಸಹಾಯದಿಂದ ನಾಟಕದ ಕಳೆಯೇರಿಸಿವೆ.

'ಸತ್ವ ಪರೀಕ್ಷೆ' ಶಾಲಾ ಬಾಲಕ ಬಾಲಿಕೆಯರಿಗಾಗಿ ಬರೆದ ಒಂದು ನಾಟಕ. ಇದು ತನ್ನ ಉದ್ದೇಶದಲ್ಲಿ ಸಫಲವಾಗ ಬಲ್ಲುದು.

—ಗೋರಾ

ಸನ್ಮಾನ ಪತ್ರ ಸಮರ್ಪಣೆ

ಶ್ರೀ ಮದ್ವಾಮಚಂದ್ರಪುರ ಮಠದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರು ತಾ. 8—4—67ರಂದು ಲೋಕ ಸೇವಾ ವೃಂದಕ್ಕೆ ಸಂದರ್ಶನ ನೀಡಿದರು.

ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಮಜ್ಜಗದ್ಗುರುಗಳಿಗೆ ಲೋಕಸೇವಾ ವೃಂದದ ಅಧ್ಯಕ್ಷ ಶ್ರೀ. ಎಂ. ನಾರಾಯಣ ಭಟ್ಟರು ಸಂಸ್ಥೆಯ ಪರವಾಗಿ ಸನ್ಮಾನ ಪತ್ರವನ್ನು ಸಮರ್ಪಿಸಿದರು. ಶ್ರೀ ಯು. ಗಂಗಾಧರ ಭಟ್ಟರಿಂದ ಸ್ವಾಗತ ಭಾಷಣ ನಡೆಯಿತು. ವಿದ್ವಜ್ಜನರ ಪರವಾಗಿ ಶ್ರೀ ದೇರಾಜೆ ಸೀತಾರಾಮಯ್ಯನವರು, ಪ್ರಚಲಿತ ಪರಿಸ್ಥಿತಿಯಲ್ಲಿ ಧರ್ಮ ಬೋಧನ ಮತ್ತು ಆಚರಣೆಯು ಹೇಗೆ ಆಗತ್ಯವೆಂಬುದನ್ನು ಸಾಧಾರವಾಗಿ ವಿವರಿಸಿದರು. ಆ ವೇಳೆ ಮಾತನಾಡಿ ಮಿತ್ತಾಂತರು ಶ್ರೀ ಪುರೋಹಿತ ಶಂಕರ ನಾರಾಯಣ ಭಟ್ಟರು ಧರ್ಮವೆಂಬುದರ ವಿಭಿನ್ನಾರ್ಥಗಳನ್ನು ವಿವರಿಸಿ ಸನಾತನಧರ್ಮದ ಮಹತ್ವವನ್ನು ತಿಳಿಸಿದರು. ಆ ಮೇಲೆ ಶ್ರೀ ಮಜ್ಜಗದ್ಗುರುಗಳು ಮಾತನಾಡುತ್ತ 'ಧರ್ಮಾಚರಣೆಯ ಮೂಲಕ ಆತ್ಮಸಾಕ್ಷಾತ್ಕಾರವನ್ನು ಸಾಧಿಸಿ ಕೊಳ್ಳುವುದೇ ಮಾನವ ಜೀವಿತದ ಪರಮೋದ್ದೇಶ ಇದು ನಮ್ಮ ಅಂತರ್ಯದಲ್ಲಿ ಹುದುಗಿರುವ ಭಗವಂತನ ದಿವ್ಯ ಶಕ್ತಿಯನ್ನೇ ನಾವು ಕಾಣುವುದಾಗಿದ, ಇದಕ್ಕೆ ನಮ್ಮ ಸಂಸ್ಕಾರ ಉತ್ತಮಗೊಳ್ಳಬೇಕು. ಮನಸ್ಸಿನ ಮೇಲೆ ಬುದ್ಧಿಯ ಹಿಡಿತ ಬಲವಾಗಬೇಕು. ಧರ್ಮ, ಸಂಸ್ಕೃತಿ, ತೀರ್ಥಕ್ಷೇತ್ರ, ಪುಣ್ಯ ಪುರುಷರ ಚರಿತ್ರೆಗಳು ಸದ್ಭಾವನೆಯ ಮೂಲಕ ನಮಗೆ ಅಲೌಕಿಕವಾದ ಆನಂದವನ್ನಿತ್ತು ನಮ್ಮನ್ನು ಆತ್ಮಸಾಕ್ಷಾತ್ಕಾರಕ್ಕೆ ಅನುಗೊಳಿಸುತ್ತವೆ.

ಹಿಂದಿನಿಂದಲೂ ಭಾರತವು ಪ್ರಪಂಚದ ಧರ್ಮದ ಕೇಂದ್ರ. ಎಲ್ಲ ಋಷಿ ಮುನಿಗಳಿಗೂ ಧರ್ಮೋಪದೇಶಕರಿಗೂ ತವರೂರು ಪವಿತ್ರ ತೀರ್ಥಕ್ಷೇತ್ರಗಳು, ಪುಣ್ಯನದಿಗಳು ಮತ್ತು ಜ್ಞಾನಿಗಳಾದ ವಿಭೂತಿ ಪುರುಷರ ಅಲೌಕಿಕ ದೈವೀ ವಿಚಾರಗಳಿಂದ ಕೂಡಿದ ದೇಶವಿದು. ವಿಜ್ಞಾನ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅಮೇರಿಕ, ಕೆನಡಾ, ಇಂಗ್ಲೆಂಡ್ ಮೊದಲಾದ ದೇಶಗಳು ಲೌಕಿಕ ದೃಷ್ಟಿಯಿಂದ ಹೆಚ್ಚು ಮುಂದುವರಿದಂತೆ ಕಾಣಬಹುದು. ಆದರೆ ಅವುಗಳು ಮಾನಸಿಕವಾಗಿ ಘೋರ ಅಶಾಂತಿಯನ್ನೇ ಅನುಭವಿಸುತ್ತಿವೆ.

ಇತ್ತೀಚೆಗೆ ನಮ್ಮಲ್ಲಿಯೂ ಈ ಅಧರ್ಮ ಭಾವನೆ ಅಧಿಕವಾಗಿದೆ ಮುಂದಿನ ಜನಾಂಗ ದೇಶದ ಜ್ಯೋತಿಗಳಾದ ವಿದ್ಯಾರ್ಥಿಗಳಲ್ಲಿಯೂ ಇದರ ಪ್ರಭಾವ ಎದ್ದು ಕಾಣುತ್ತಲಿದೆ. ವಿದ್ಯಾರ್ಥಿ ಚಳವಳಿ ಪರಿಣಾಮವಾಗಿ ಕಲ್ಕತ್ತಾ ವಿಶ್ವವಿದ್ಯಾನಿಲಯವೇ ಕೆಲ ತಿಂಗಳುಗಳ ತನಕ ಮುಚ್ಚಲ್ಪಟ್ಟಿತು. ಇದಕ್ಕೆ ನಮ್ಮ ಭಾರತೀಯ ಸಂಸ್ಕೃತಿಯ ಹಿನ್ನೆಲೆ ಇಲ್ಲದಿರುವುದೇ ಕಾರಣವೇ ಪ್ರತ್ಯೇಕ ಹೇಳುವುದು ಬೇಡ. ಇದನ್ನು ನಿವಾರಿಸಬೇಕಾದರೆ ವಿಚಾರ ಮಾಡಬೇಕಾಗುತ್ತಿದೆ. ಇದರ ಪರಿಹಾರಕ್ಕೆ ಉಪಾಧ್ಯಾಯರು ಉತ್ತಮ ಆಚಾರ ವಿಚಾರವಂತರಾಗಬೇಕು. ಅದರಿಂದ ಮಕ್ಕಳ ಮೇಲೆ ಉತ್ತಮ ಪರಿಣಾಮವಾಗುವುದು.

ಇಲ್ಲಿ ನಾರಾಯಣ ಭಟ್ಟರು ಭಾರತೀಯ ಸಂಸ್ಕೃತಿಯ ತಳಹದಿಯಲ್ಲಿ ಈ ಹೈಸ್ಕೂಲು ಪ್ರಾರಂಭಿಸಿದ್ದಾರೆ. ಕಾಲೇಜು ನಡೆಸುವ ಯೋಜನೆಯನ್ನು ಮಾಡುತ್ತಲಿದ್ದಾರೆ. ಉತ್ತಮ ಆಚಾರ ನಿಯಮಿತ ಜೀವನ ಇತ್ಯಾದಿಗಳಿಂದಿಗೆ ಈ ವಿದ್ಯಾ ಕ್ಷೇತ್ರದಲ್ಲಿ ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಯತ್ನ ನಡೆಯುತ್ತಿದೆ. ಹಿಡಿದುದನ್ನು ಕೊನೆ ಮುಟ್ಟಿಸುವ ಪ್ರವೃತ್ತಿಯೂ ಅವರಲ್ಲಿದೆ. ಇಂತಹ ಕಾರ್ಯಕ್ಕೆ ಸದಾ ದೈವಾನುಗ್ರಹವಿದೆ. ಇಲ್ಲಿನ ವಿದ್ಯಾರ್ಥಿಗಳು ಒಳ್ಳೆಯ ಪುಣ್ಯವಂತರಾಗಿ ಅವರ ಭವಿಷ್ಯವು ಉಜ್ವಲವಾಗಲಿ ಎಂದು ಹೇಳಿ ಹರಸಿದರು.

ಧನ್ಯವಾದ ಹಾಗೂ ದೇವರ ನಾಮಗಳೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಹಳೇ ವಿದ್ಯಾರ್ಥಿ ವಿಧಾನ ಸಭಾ ಸದಸ್ಯರಿಗೆ ಸನ್ಮಾನ

ಉಡುಪಿ, ಎಪ್ರಿಲ್-10

ಉಡುಪಿ, ಬೋರ್ಡ್ ಹೈ. ಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಸದ್ರಿ ಶಾಲಾ ಹಳೇ ವಿದ್ಯಾರ್ಥಿಯಾಗಿದ್ದು ಈಗ ಬ್ರಹ್ಮಾವರ ಮತದಾರ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟ ಶ್ರೀ ಎಸ್. ಜಯಪ್ರಕಾಶ ಶೆಟ್ಟಿ, ಬಿ. ಎ. ಎಲ್. ಎಲ್. ಬಿ. ಇವರನ್ನು ಸನ್ಮಾನಿಸುವ ಸಭೆಯು ಸಂಘದ ಅಧ್ಯಕ್ಷ ಡಾ| ವೋಯಿನವಾಣಿ ಪೈ ಇವರ ಅಧ್ಯಕ್ಷತೆಯಲ್ಲಿ, ಶಾಲಾ ಸಭಾಭವನದಲ್ಲಿ ನಡೆಯಿತು. ಸಂಘದ ಎಕ್ಸ್ ಆಫೀಶಿಯೋ ಸದಸ್ಯರಾದ ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತಿಸಿದರು. ಸಭಿಕರಲ್ಲಿ ಶ್ರೀ ಬಾಲಕೃಷ್ಣ ಪಂಗಣ್ಣಾಯ, ಶ್ರೀಪತಿ ಆಚಾರ್ಯ, ಸುಬ್ರಹ್ಮಣ್ಯ ಭಟ್ಟರು ಮಾತನಾಡಿ ಶುಭಕೋರಿದರು. ಅಧ್ಯಕ್ಷರ ಭಾಷಣದ ಬಳಿಕ ಲಘೂಪಹಾರ ನಡೆಯಿತು. ಬಳಿಕ ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್

ಜಯ ನಗರ ಆರನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉಚ್ಚ ವಿದ್ಯಾಸಂಪನ್ನರುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರಕಾರ ಮನ್ನಣೆ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟೆಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೨೦೦ ಹಾಸಿಗೆಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಶಿಕ್ಷಣದ ಸೌಕರ್ಯವಿದೆ.

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು, ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿರಿ.

ಡಾ|| ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಹೊಂಚು ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಲ್ಪವೃಕ್ಷ	1—50
ಭಾರತದ ವೀರಾಂಗನೆಯರು	1—50
ಮೇಂಕೊಟ್ಟ ಬಂದೋಬೆ	1—30
ಶಿಲ್ಪಿ	1—50
ಪ್ರೀಚೆಕ್ಟ್ನ ಮಾರ್ಕ	1—00
ಘಂಟನಾದ	2—50
ನೀತಿ ವಿನೋದ ಕತೆಗಳು	1—10

ಕಮಿಶನ್ ಕಳುಹಿಸಿಕೊಡಲಾಗುವುದು

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಖಾರವಾದರೂ ಬಹಳ ರುಚಿ

ನಾಲಗೆ ಸವಿಯುವ ಮೆಣಸಿನ ಕಾಯಿ

ಭಾರತೀಯರ ಭಕ್ಷ್ಯದ ತಾಟನ್ನು ನೋಡಿ, ಅದರ ಒಂದು ಮೂಲೆಯಲ್ಲಿ ಉಪ್ಪು—ಚಟ್ನಿ ಇದ್ದದ್ದೇ. ಬಾಯಿ ಚಪ್ಪರಿಸಲು ಇವು ಬೇಕೇಬೇಕು.

ನಮ್ಮ ಊಟದ ಒಂದು ಮುಖ್ಯಾಂಗವಾಗಿ ಕಂಡುಬರುತ್ತಿರುವ ಮೆಣಸಿನಕಾಯಿ ಹೆಸರೂ ಮುನ್ನೂರು ವರುಷಗಳ ಹಿಂದೆ ಕೇಳಬಂದದ್ದಿಲ್ಲ; ಕಂಡುಬಂದದ್ದಿಲ್ಲ. ಸಂಸ್ಕೃತದಲ್ಲಿ ಮೆಣಸಿನಕಾಯಿಗೆ ಸಮಾನ ಶಬ್ದ ಸಿಕ್ಕಿಲ್ಲ; ಅಷ್ಟೇ ಏಕೆ ಚೀಣೀ, ಪರ್ಶಿಯನ್, ಹೆಬ್ರ್ಯು, ಗ್ರೀಕ್ ಅಥವಾ ಲ್ಯಾಟಿನ್ ಭಾಷೆಗಳಲ್ಲಿಯೂ ಈಗಿನ ಮೆಣಸಿನಕಾಯಿಯ ಪ್ರಸ್ತಾಪವಿಲ್ಲ!

ದಕ್ಷಿಣ ಅಮೇರಿಕೆಯಲ್ಲಿ ಶೋಧಿತವಾದ ಮೆಣಸಿನ ಕಾಯಿಯನ್ನು ಹದಿನೈದನೇ ಶತಮಾನದ ಅಂತ್ಯಭಾಗಕ್ಕೆ ಪೋರ್ತುಗೀಸರು ಭಾರತಕ್ಕೆ ಮೊತ್ತ ಮೊದಲ ಸಲ ತಂದರು. ಹದಿನೇಳನೆ ಶತಮಾನದ ಮಧ್ಯಕಾಲಕ್ಕೆ ಭಾರತ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ಮೆಣಸಿನ ಕಾಯಿಯ ಪ್ರತ್ಯಕ್ಷ ಬೇಸಾಯ ನಡೆದದ್ದು.

ಕಡುಗೆಂಪು ಬಣ್ಣದ ಈ ಆಗಂತುಕ ನಮ್ಮ ಅಡುಗೆ ಮನೆಯನ್ನು ಪ್ರವೇಶಿಸಿ, ಮೊದಲಿನ, ಮೂಲ, ದೇಶಸ್ಥ ಕರಿಮೆಣಸನ್ನು ಸೋಲಿಸಿ ಅದರ ಸ್ಥಾನವನ್ನು ಆಕ್ರಮಿಸಿದ! ಇತ್ತೀಚಿನ ತಲೆಮಾರಿನ ಹುಡುಗರು ಮೆಣಸೇ ಪರದೇಶದ್ದು, ಮೆಣಸಿನ ಕಾಯಿಯೇ ಸ್ವದೇಶದ್ದು ಎಂದು ತಿಳಿಯುವಂತಾಗಿದೆ. ಈ ಮಾತು, ಖಾರವಿದ್ದೂ ಎಲ್ಲವನ್ನು ಮೆಲ್ಲನೆ ಗೆಲ್ಲುವ ಮೆಣಸಿನ ಕಾಯಿಯ ರುಚಿಯ ಬಗ್ಗೆ ನಮಗಿರುವ ಪ್ರೀತಿಯನ್ನೇ ಸೂಚಿಸುತ್ತದೆ.

ಭಾರತದಲ್ಲಿ ಮೆಣಸಿನ ಕಾಯಿಯ ಉಪಯೋಗವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಆಂಧ್ರ ಪ್ರದೇಶದ ಜನರು ನಮ್ಮ ದೇಶದಲ್ಲೇ ಅತಿ ಹೆಚ್ಚು ಮೆಣಸಿನ ಕಾಯಿಯನ್ನು ತಿನ್ನುವರು. ಪ್ರತಿಯೊಬ್ಬ ವಯಸ್ಕನು ಆಂಧ್ರ ಪ್ರದೇಶದಲ್ಲಿ ಸರಾಸರಿ ವರ್ಷಕ್ಕೆ ೩॥ ಕೆ. ಜಿ. ಹಸಿಮೆಣಸಿನಕಾಯಿಯನ್ನೂ ಮತ್ತು 2॥ ಕೆ. ಜಿ. ಒಣ ಮೆಣಸಿನ ಕಾಯಿಯನ್ನು ತಿನ್ನುತ್ತಾನೆಂದು ವರದಿ ಇದೆ. ಮಹಾರಾಷ್ಟ್ರದ ಜನರಿಗೆ ಹಸಿಮೆಣಸಿನಕಾಯಿಯ ಮೇಲೆ ಅಪಾರ ಪ್ರೀತಿ, ಮಹಾರಾಷ್ಟ್ರದಲ್ಲಿ ವರ್ಷಕ್ಕೆ ತಲಾ ಸರಾಸರಿ ಐದು ಕೆ. ಜಿ. ಹಸಿ ಮತ್ತು ಒಣ ಮೆಣಸಿನ ಕಾಯಿಯನ್ನು ತಿನ್ನುತ್ತಾರೆ. ತುಲನಾತ್ಮಕವಾಗಿ ಪಂಜಾಬ್, ಬಿಹಾರ್, ಉತ್ತರ ಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಮೆಣಸಿನ ಕಾಯಿಯ ಉಪಯೋಗ ಕಡಿಮೆ ಎಂದೇ ಹೇಳಬಹುದು.

ಊಟದ ಒಂದು ಅಂಗವಾಗಿರುವ ಮೆಣಸಿನ ಕಾಯಿಯಲ್ಲಿ ಪೌಷ್ಟಿಕಾಂಶ ಅಷ್ಟೇನು ಇಲ್ಲ. ಆದರೆ, ಇದು ಊಟಕ್ಕೆ ರುಚಿಯನ್ನು ತಂದುಕೊಡುತ್ತದೆ. ಮೆಣಸಿನ ಕಾಯಿಯ ಭಕ್ಷ್ಯಗಳಿಗೆ ಅದಿಲ್ಲದ ಸಪ್ಪೆ ಅಡಿಗೆ ಅಂದರೆ ಆಗದು.

ಭಾರತದಲ್ಲಿ ಹದಿನೈದು ಲಕ್ಷಕ್ಕೂ ಹೆಚ್ಚು ಎಕರೆ ಭೂಮಿಯಲ್ಲಿ ಮೆಣಸಿನ ಕಾಯಿಯನ್ನು ಬೆಳೆಸಲಾಗುತ್ತಿದ್ದು, ಭಾರತವು ನಾಲ್ಕು ಲಕ್ಷ ಟನ್ ಮೆಣಸಿನ ಕಾಯಿಯನ್ನು ಉತ್ಪಾದಿಸುವುದು. ನಮ್ಮ ದೇಶದ ಒಟ್ಟು ಮೆಣಸಿನ ಕಾಯಿಯ ಕೃಷಿಯ ಶೇಕಡ ಐವತ್ತು ಆಂಧ್ರ ಪ್ರದೇಶ, ಮಹಾರಾಷ್ಟ್ರ, ಮೈಸೂರು ಮತ್ತು ಮದ್ರಾಸ್ ರಾಜ್ಯಗಳಲ್ಲಿ ಬೆಳೆಯಲಾಗುತ್ತಿದೆ. ಮಳೆಯ ನೀರಿನಿಂದ ಬೆಳೆಯುವ ಈ ಮೆಣಸಿನ ಕಾಯಿಯ ಸಸಿಗಳು ಮಾನ್‌ಸೂನ್ ಮಳೆಯನ್ನೇ ಅವಲಂಬಿಸಿವೆ.

ಮೆಣಸಿನ ಕಾಯಿಗಳಲ್ಲಿ ಅನೇಕ ರೂಪದವು ಇವೆ; ಅನೇಕ ಬಣ್ಣದವೂ ಇವೆ. ಕೆಲವು ನೀಳವಾಗಿವೆ; ಇನ್ನೂ ಕೆಲವು ಉದ್ದ ಮತ್ತು ದಪ್ಪ; ಕೆಲವು ಗಿಡ್ಡ ಜಾತಿಯವು. ಬೇರೆ ಕೆಲವು ದಂಟೆ ಆಕಾರದವು; ಚಿಕ್ಕ ಗುಂಡು ಆಕಾರದವೂ ಹಲವು. ಸಣ್ಣ ಮೆಣಸಿನ ಕಾಯಿ, ದೊಣ್ಣೆ ಮೆಣಸಿನ ಕಾಯಿ, ಮುಗಿಲ ಮೆಣಸಿನ ಕಾಯಿ —ಈ ರೀತಿ ಮೆಣಸಿನ ಕಾಯಿಯ ಪರಿವಾರ ದೊಡ್ಡದಿದೆ. ಆಕಾರದಲ್ಲಿ ವೈವಿಧ್ಯತೆ ಇದ್ದಂತೆ, ಇವುಗಳ ಖಾರ ಗುಣವು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿದೆ. ನಾಲಿಗೆಯನ್ನು ಚುರುಕುಗೊಳಿಸುವ ಖಾರದ ಅಂಶವು ಮೆಣಸಿನ ಕಾಯಿಯ ಮೈಯಿಗೆ ಅಂಟಿಕೊಂಡಿರುವ "ಕ್ಯಾಪ್ಸಿಸಿನ್" ಎಂಬ ದ್ರವ್ಯದ ಮೂಲಕ ಬಂದುದಾಗಿದೆ. ಕ್ಯಾಪ್ಸಿಸಿನ್ ದ್ರವ್ಯವನ್ನು ಸುಟ್ಟರೆ—ಕರಿದರೆ, ಅದು ಘಾಟು ಎಬ್ಬಿಸುತ್ತದೆ, ಛಟ್ ಛಟ್ ಸಪ್ಪಳ ಮಾಡುತ್ತ ಕಿಡಿಗಳನ್ನೇ ಹಾರಿಸುತ್ತದೆ.

ಅಡಿಗೆ ಮತ್ತು ಉಪ್ಪಿನಕಾಯಿ ತಯಾರಿಸುವಾಗ ಮೆಣಸಿನ ಕಾಯಿಯನ್ನು ರುಚಿಗಾಗಿ, ರಸಕ್ಕಾಗಿ ಉಪಯೋಗಿಸುತ್ತಾರೆ, ಕಡಿಮೆ ಖಾರ ಜಾತಿಯ ದೊಣ್ಣೆ ಮೆಣಸಿನಕಾಯಿ ಅಥವಾ ಇತರ ಮೆಣಸಿನಕಾಯಿಯನ್ನು ಸಾಮಾನ್ಯ ತರಕಾರಿಯಂತೇ ಉಪಯೋಗಿಸುವುದುಂಟು.

ಮೆಣಸಿನಕಾಯಿಗೆ ಸ್ವಲ್ಪ ಔಷಧಿ ಗುಣವೂ ಇದೆ. ಅಜೀರ್ಣ ಮತ್ತು ವಾಯು ದೋಷದ ಪ್ರಕರಣಗಳಲ್ಲಿ ಮೆಣಸಿನಕಾಯಿಯನ್ನು ಉಪಯೋಗಿಸುತ್ತಾರೆ. ಆದರೆ, ವ್ರಣದಿಂದ ತೊಳಲುತ್ತಿರುವವರಿಗೆ ಮೆಣಸಿನ ಕಾಯಿ ಮಾರಕ. ಮೆಣಸಿನ ಕಾಯಿಯನ್ನು ಹೆಚ್ಚು ಹೆಚ್ಚಾಗಿ ತಿನ್ನುವ ರೂಢಿ ಇದ್ದವರಿಗೆ ಕರುಳಿನ ಊತದಂತಹ ಭಯಂಕರ ರೋಗ ತಗಲಬಹುದು. ಖಾರಪುಡಿಯಿಂದ ತಯಾರಿಸಲಾದ ಮುಲಾಮನ್ನು ಸಂಧುವಾತ ಪ್ರಕರಣಗಳಲ್ಲಿ ಉಪಯೋಗಿಸುತ್ತಾರೆ.

ಸಿಲೋನ್, ಕುವೈತ್, ಬಹ್ರೇನ್ ದ್ವೀಪ ಮತ್ತು ಜರ್ಮನ ದೇಶಗಳಿಗೆ ಭಾರತವು ಗಣನೀಯ ಪ್ರಮಾಣದಲ್ಲಿ ಮೆಣಸಿನ ಕಾಯಿಯನ್ನು ರಫ್ತು ಮಾಡುತ್ತದೆ. ೧೯೭೦—೭೧ ಸಾಲಿನಲ್ಲಿ ಮೆಣಸಿನ ಕಾಯಿಯ ರಫ್ತು ವ್ಯಾಪಾರದಿಂದ ನಮಗೆ ೨.೫ ಕೋಟಿ ರೂ. ವಿದೇಶಿ ವಿನಿಮಯ ದೊರೆತಿದೆ.

ಮೆಣಸಿನ ಕಾಯಿಯ ಬಣ್ಣವು ಮೆಣಸಿನಕಾಯಿಯ ಬೆಲೆಯನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಥಳಥಳಿಸುವ ಕೆಂಪು ಬಣ್ಣವು ತುಂಬಿನಿಂದ ತುದಿಯವರೆಗೆ ಮೆಣಸಿನ ಕಾಯಿಯಲ್ಲಿ ಇದ್ದುದಾದರೆ, ಅದಕ್ಕೆ ಭಾರೀ ಬೆಲೆ. ಉತ್ತಮ ತಳಿ ಮೆಣಸಿನ ಕಾಯಿಗಳು ಬಹಳ ಖಾರ; ದಪ್ಪ ತೊಗಟೆಯುಳ್ಳ ಮೆಣಸಿನಕಾಯಿಗಳು ಅಷ್ಟು ಖಾರವಿರುವುದಿಲ್ಲ. ಬೀಜಗಳು ಉದುರದ, ಕಾಯಿಗಳು ಮುರಿಯದ ಮೆಣಸಿನಕಾಯಿಯ ರವಾನೆ ಚೀಲಗಳಿಗೆ ಉತ್ತಮ ಹಣ ದೊರೆಯುತ್ತದೆ.

ಪರದೇಶಗಳಿಗೆ ಕಳುಹಿಸಲಾಗುವ ಮೆಣಸಿನ ಕಾಯಿಗಳು, ಶ್ರೇಷ್ಠ ದರ್ಜೆಯವು ಇರಬೇಕೆಂಬ ದೃಷ್ಟಿಯಿಂದ 'ಅಗ್‌ಮಾರ್ಕ್' ಕ್ರಮಕ್ಕೆ ಒಳಪಡಿಸಿ ಗುಣ ಶ್ರೇಷ್ಠತೆಯನ್ನು ಪರೀಕ್ಷಿಸಿ ಮೆಣಸಿನ ಕಾಯಿಗಳನ್ನು ರಫ್ತುಮಾಡಲಾಗುವುದು. ಭಾರತದ ಬಂದರಿನಿಂದ ಹೊರಗೆ ಹೋಗುವ ಪ್ರತಿಯೊಂದು ಮೆಣಸಿನ ಕಾಯಿಯ ಚೀಲವನ್ನು— ವಿಶೇಷವಾಗಿ ತೂತುಕೋರಿನ್ ಬಂದರಿನಿಂದಲೇ ಹೆಚ್ಚಾಗಿ ರಫ್ತಾಗುತ್ತವೆ —ಸರಕಾರೀ ಇನ್ಸ್‌ಪೆಕ್ಟರುಗಳು ಪರೀಕ್ಷಿಸುವರು, ಚೀಲದಲ್ಲಿಯ ಮೆಣಸಿನ ಕಾಯಿಯನ್ನು ಪರೀಕ್ಷಾಲಯದಲ್ಲಿ ವಿಶ್ಲೇಷಿಸುವರು ಮತ್ತು ಯೋಗ್ಯ ಅಗ್‌ಮಾರ್ಕ್ ನೀಡುವರು.

ಕಳೆದ ಐದು ನೂರು ವರುಷಗಳ ಅವಧಿಯಲ್ಲಿ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಅಮೇರಿಕೆಯಿಂದ ಪ್ರಾರಂಭಿಸಿ, ಮೆಣಸಿನ ಕಾಯಿಯು ವಿಶ್ವಪರ್ಯಟನ ಮಾಡಿದೆ. ಥಳಥಳಿಸುವ ಕೆಂಪು ವರ್ಣದ ಕೋಶಗಳ—ಅರ್ಥಾತ್ ಮೆಣಸಿನ ಕಾಯಿಗಳ ಫಲ ನೀಡುವ ಈ ಚಿಕ್ಕ ಸಸಿಯ ಶೀಘ್ರದ ಖಂಡಾಂತರ ಪ್ರವಾಸವು ಗಮನಾರ್ಹ ವಿಷಯವೇ!

ಸಂದರ್ಶನ

ಉಡುಪಿ, ಎ. 13, ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಡಾ। ಟಿ. ಎಂ. ಎ. ಪೈಯವರು ಸ್ಥಳೀಯ ಶಾಖೆಗೆ ಸಂದರ್ಶನವಿತ್ತು ಆಫೀಸಿನ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸಿ ಸಂತೃಪ್ತರಾದರು. ಬಳಿಕ ಹೊರಾಂಗಣದಲ್ಲಿ ಜರಗಿದ ಸಭೆಯ ಆರಂಭದಲ್ಲಿ ಅಸಿಸ್ಟಂಟ್ ಮೆನೇಜರ್ ಶ್ರೀ ಜಿ. ಎಂ. ಶೆಣೈಯವರು ಸ್ವಾಗತಿಸಿದರು. ಮೆನೇಜರ್ ಶ್ರೀ ಕೆ. ಪಿ. ಶೆಣೈಯವರು ಡಾ। ಪೈಗಳ ಸೌಹಾರ್ದ ಸಂದರ್ಶನಕ್ಕಾಗಿ ಸಂತೋಷ ವ್ಯಕ್ತಪಡಿಸಿ ಮಣಿಪಾಲದಲ್ಲಿ ರೂಪಗೊಳ್ಳುತ್ತಿರುವ ಡಾ। ಎ. ವಿ. ಬಾಳಿಗ ಸ್ಮಾರಕ ಶಸ್ತ್ರ ಚಿಕಿತ್ಸಾ ಆಸ್ಪತ್ರೆಗೆ ತಮ್ಮ ಸಿಬಂದಿಯವರಿಂದ ಸಂಗ್ರಹಿಸಿದ ರೂ 8000/ವನ್ನು ಒಪ್ಪಿಸಿದರು. ಡಾ। ಪೈಗಳು ಈ ಕೊಡುಗೆಯನ್ನು ಆಭಾರಪೂರ್ವಕ ಸ್ವೀಕರಿಸಿ ಮಾತನಾಡುತ್ತ ಸಿಂಡಿಕೇಟ್ ಬ್ಯಾಂಕಿನ ಸ್ಥಾಪನೆ, ಬೆಳವಣಿಗೆಯನ್ನು ಪ್ರಸ್ತಾಪಿಸಿ ಇಂದಿನ ವ್ಯಾಪಕ ಪ್ರಗತಿಯನ್ನೂ ಬ್ಯಾಂಕು ಸಲ್ಲಿಸುತ್ತಿರುವ ಸೇವೆಯನ್ನೂ ವಿವರಿಸಿದರು. ಈ ವರ್ಷದಿಂದ ವಿದ್ಯಾರ್ಥಿ ಯೋಜನೆಯೊಂದನ್ನು ಪ್ರಾರಂಭಿಸಲಾಗುವುದೆಂದೂ ಇದರಿಂದ ವಿದ್ಯಾರ್ಥಿಗಳು ಕಲಿಯುತ್ತಿರುವಾಗಲೇ ಅವರಿಗೆ ಸಂಪಾದಿಸುವ ಸಂದರ್ಭವನ್ನು ಒದಗಿಸಿದಂತಾಗುವುದೆಂದೂ ಹೇಳಿ, ಈ ಸಮಾರಂಭಕ್ಕಾಗಿ ಆನಂದ ವ್ಯಕ್ತಪಡಿಸಿದರು. ಕೊನೆಯಲ್ಲಿ ಶ್ರೀ ಕೆ. ಎಸ್. ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಉದ್ಘಾಟನೆ: ಅಂಬಲಪಾಡಿಯಲ್ಲಿರುವ 'ಅಂಬಿಕಾ' ಬಿಲ್ಡಿಂಗ್‌ನಲ್ಲಿ "ಅಶಾ ಗಿಫ್ಟ್ ಹೌಸ್" ಎಂಬ ನೂತನ ಸಂಸ್ಥೆಯನ್ನು ಡಾ। ಪಿ. ಅನಂತ ಶೆಟ್ಟಿ ಇವರು ಅದೇ ತಾ. 10ರಂದು ಉದ್ಘಾಟಿಸಿ, ಗಿಫ್ಟ್ ಹೌಸಿಗೆ ಶುಭವನ್ನು ಕೋರಿದರು. ಗಿಫ್ಟ್ ಹೌಸಿನ ಪಾರ್ಟನರ್ ಕುಮಾರ್ ಕೃಷ್ಣರಾಜ್, ಮೆನೇಜರ್ ಕೆ. ಗಿರೀಶ್ ಕುಮಾರ್ ಮಂಗಳೂರು ಇವರು ಭಾಷಣ ಮಾಡಿದರು. ಕೊನೆಯದಾಗಿ ವಿಠಲ್ ಅಮೀನ್ ಅವರು ಸಂಸ್ಥೆಯ ಪರವಾಗಿ ವಂದನಾರ್ಪಣ ಗೈದರು.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....

ಅದಕ್ಕಾಗಿ ಚಿಂತಿಸುವಿರೇಕೆ?.................

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ..........

ವೀಗಲ್ ಪೆಟ್ರೋಲ್ / ಚಿಮಿಣಿ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

VEEGAL 2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಜಾಪಾನಿನಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ವ್ಯಾಪಾರದ ನಂತರದ ಉತ್ತಮ ಸೇವೆ.

ವಿತರಕರು :

ವಿಕ್ಟರ್ ಟ್ರೇಡಿಂಗ್ ಕೋರ್ಪೊರೇಶನ್

ಫಳ್ನೀರು ರಸ್ತೆ, ಮಂಗಳೂರು-1. Ph. 5737

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ

ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ, ರೇಲ್ವೆ ಮತ್ತು ವಿಮಾನ ರವಾನೆ ಖರ್ಚು ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯತಿ ದೊರೆಯುತ್ತದೆ.

ಆ ಮುಖ – ಈ ಮುಖ

(ಎರಡನೇ ಪುಟದಿಂದ)

'ಹೂಂ, ನಿನ್ನನ್ನು ನಾನು ಕೂಡಿಕೊಳ್ಳುವುದು!'

'ಅಂದರೆ?'

'ಹೋಟೇಲಿಗೆ ಹೋಗುವಾ; ಆನಂತರ ತಿಳಿಯುತ್ತೆ', ಎನ್ನುವಾಗಲೇ ಕಾರು ಮೋಡರ್ನ್ ಹೋಟೇಲಿನ ಮುಂದೆ ನಿಂತಿತು. ಅಷ್ಟರಲ್ಲಿ ಮೌನಿಯಾಗಿದ್ದ ವನಮಾಲಾಳನ್ನು, ಸುರೇಶ ಎಷ್ಟು ಪ್ರಯತ್ನಿಸಿದರೂ ಮಾತನಾಡಲಾರಿಸದಾದ. ಮುಂದೆ ಇಂತಹದ್ದೇ ನಡೆಯಬಹುದೆಂದು ತಿಳಿದ ವನಮಾಲಳಿಗೆ, ಹೋಟೇಲಿನಲ್ಲಿ ಸೇರಿಕೊಳ್ಳುವುದು ಬೇಡವಾಗಿತ್ತು. ಈ ಘಟನೆಯೊಂದು ಅವರ ಬಾಳಿನಲ್ಲಿ ಕಹಿಯನ್ನು ಬಿತ್ತಿತು.

o o o o

ಎಷ್ಟು ಪರಿಯಿಂದ ಸಮಾಧಾನ ಪಡಿಸಿದರೂ ಸಮಾಧಾನವಾಗಲಿಲ್ಲ ವನಮಾಲಳ ಮನಸ್ಸು. ತನ್ನ ಗಂಡ ಸ್ತ್ರೀ ಲಂಪಟ ಎನ್ನುವ ಭಾವನೆ ಬಲವಾಯಿತಲ್ಲದೆ, ಆತನ ನಡತೆ ಸಹಜ ಪ್ರವೃತ್ತಿ ಎಂದು ತಿಳಿಯಲಾರದೆ ಹೋದಳು. ಇದರಿಂದ ತನ್ನ ಮುಂದಿನ ಬಾಳು ನುಚ್ಚುನೂರಾಗಬಹುದೆಂದು, ಊಹಿಸಿಕೊಂಡು, ಗಂಡನಲ್ಲಿ ತಿರಸ್ಕಾರ ಭಾವನೆಯನ್ನು ಅಳೆದಳು. ಆ ಘಟನೆಯ ಬಳಿಕ, ಗಂಡ ಬಂದಾಗಲೆಲ್ಲಾ ಉದಾಸೀನತೆಯನ್ನೇ ತೋರಿಸುತ್ತಿದ್ದಳಲ್ಲದೆ, ತಿರುಗಾಡಲು, ಸಿನೇಮಾಕ್ಕೆ ಅವನೊಡನೆ ಹೋಗಲು ನಿರಾಕರಿಸಿದಳು. ಅನೇಕ ಬಾರಿ ಅವರೊಳಗೆ ಕಹಿ ಮಾತುಗಳಾದುವು. ಮುಂದಕ್ಕೆ ಹಾಸ್ಟೇಲಲ್ಲಿ ಅವಳ ಭೇಟಿಯೇ ದೊರಕದಾಯಿತು. ಅಕ್ಟೋಬರ ರಜೆ ಬರುವುದರೊಳಗೆ, ೬ ತಿಂಗಳೊಳಗಾಗಿ ನವದಂಪತಿಗಳೊಳಗೆ ವಿರಸ ಬೆಳೆದು ಹೋಗಿತ್ತು.

o o o

ರಜೆಗೆ ಮನೆಗೆ ಬಂದ ವನಮಾಲಳ ಮನೋಸ್ಥಿತಿಯನ್ನು ಕಂಡು ಅವಳ ತಂದೆ, ತಾಯಿಗಳು ಬೆದರಿದರು. ಏನಾಯಿತೆಂದು ಎಷ್ಟು ಪರಿಯಿಂದ ಕೇಳಿದರೂ, ಆಕೆ ಬಾಯಿ ಬಿಡಲಿಲ್ಲ. ರಜೆ ಮುಗಿಯುತ್ತಾ ಬಂದರೂ ಸುರೇಶ ಹೆಂಡತಿಯನ್ನು ಕರೆದುಕೊಂಡು ಹೋಗಲು ಬಾರದೆ ಇದ್ದುದನ್ನು ಕಂಡು, ಮಗಳನ್ನು ವಿಚಾರಿಸಿದರು ಐವರಲ್ಲಿ ಚಿಕ್ಕವಳಾದ ವನಮಾಲಾ ತಾನು ಗಂಡನ ಮನೆಗೆ ಹೋಗಲಾರೆನೆಂದು ತಿಳಿಸಿದಳು. ಕಾರಣ ಮಾತ್ರ ಹೇಳಲಿಲ್ಲ. ಹೇಳುತ್ತಿದ್ದರೆ ಅನುಭವಿಗಳಾದ ಹೆತ್ತವರು ಅವರೊಳಗಿನ ವಿರಸವನ್ನು ತೊಳೆದು ತೆಗೆಯುತ್ತಿದ್ದರೋ ಏನೋ? ಎರಡು ತಿಂಗಳು ರಜೆ ಕಳೆದು, ಎರಡನೇ ಟರ್ಮಿನ ಕಾಲೇಜ್ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಹೋದಳು.

o o o

ವನಮಾಲಳ ಹೆತ್ತವರು ಕಾರಣ ತಿಳಿದುಕೊಳ್ಳುವುದಕ್ಕಾಗಿ ಹುಡುಗನ ಮನೆಗೆ ಹೋದರು. ವಿಷಯ ಸ್ಪಷ್ಟವಾಗಿ ತಿಳಿಯಲಿಲ್ಲ; ವನಮಾಲಾ ಸುರೇಶನಿಗೆ ಅವಮರ್ಯಾದೆ ಮಾಡಿದಳು; ಇದರಿಂದ ಸುರೇಶ, ವನಮಾಲಾ ಕೂಡಿ ಸಂಸಾರ ಹೂಡಲು ಸಾಧ್ಯವಾಗದೆಂದು ತಿಳಿಯಿತು. ತಪ್ಪೊಪ್ಪಿ ವನಮಾಲಾ ಸುರೇಶನೊಡನೆ ಕ್ಷಮೆ ಕೇಳಿದರೆ, ಅವರಿಬ್ಬರೂ ಕೂಡಿ ಬಾಳಬಹುದೆಂದು ತಿಳಿದು ಮನೆಗೆ ಹಿಂತಿರುಗಿದರು.

o o o

ಸರಿಯಾದ ಕಾರಣ ತಿಳಿಯದ ತಂದೆ ತನ್ನ ಮಗಳ ಪರವಾಗಿ ವಾದಿಸುವಂತಾಯಿತು. ಅವಳ ಮಾತನ್ನು ಅನುಮೋದಿಸಿ ವಿವಾಹ ವಿಚ್ಛೇದನಕ್ಕೆ ಕೋರ್ಟಿಗೆ ಹೋದರು. ಪರಿಣಾಮವಾಗಿ, ಅವರಿಬ್ಬರೊಳಗೆ ವಿವಾಹ ವಿಚ್ಛೇದನೆಯೂ ಆಯಿತು.

o o o

ಸುರೇಶ B. E. ಮುಗಿಸಿಕೊಂಡು ದಂಡಕಾರಣ್ಯ ಪ್ರೊಜೆಕ್ಟಿನಲ್ಲಿ ಕೆಲಸಕ್ಕೆ ಸೇರಿಕೊಂಡು ಉತ್ತಮ ಹುಡುಗಿಯನ್ನು ನೋಡಿ, ಎರಡನೇ ಮದುವೆ ಮಾಡಿಕೊಂಡ.

ವನಮಾಲಾ ಕೆಲವು ವರ್ಷಗಳ ಬಳಿಕ ಧಾರವಾಡದ ಕಾಲೇಜ್ ಒಂದರಲ್ಲಿ ಪ್ರಾಧ್ಯಾಪಿಕೆಯಾಗಿ ಸೇರಿಕೊಂಡಳು.

o o o

ತಾನು ಹೆಣ್ಣು, ತನಗೆ ಬಯಕೆ ಇದೆ; ಸಹಜ ಪ್ರವೃತ್ತಿ ಇದೆ ಎಂದು ವನಮಾಲಳ ತಿಳುವಳಿಕೆಗೆ ಬರುವಷ್ಟರಲ್ಲಿಯೇ, ದಾಂಪತ್ಯ ಜೀವನದ ಬಾಗಿಲು ಮುಚ್ಚಿಯಾಗಿತ್ತು. ತೆರೆದ ಕಿಟಕಿಗಳಿಂದ ಪ್ರಕೃತಿಯನ್ನು ವೀಕ್ಷಿಸುವಾಗ, ತಾನು ಹೆಣ್ಣು ಎಂಬ ಅನುಭವ ಆಕೆಗಾಗುತ್ತಿತ್ತು; ಜತೆಯಲ್ಲಿಯೇ ಯಾವುದೋ ಕಾವಿನಂತೆ ಎದೆ ತುಂಬಿ ಬರುತಿತ್ತು. ಹಿಂದಿನ ತನ್ನ ಬಾಳನ್ನು ಎಣಿಸಿ 'ಅಯ್ಯೋ?' ಎನಿಸಿದರೂ, ಸುರೇಶ ಮಾಡಿದ್ದು ತಪ್ಪು ಎಂದು ಸಮರ್ಥಿಸಿಕೊಂಡರೂ, 'ನೀನು ದುಡುಕಿದ" ಎಂದು ವಿವೇಕ ಹೇಳುತ್ತಿತ್ತು. ಸಮರ್ಥನೆಯ ಬಳಿಕ ಆಯಾಸಗೊಂಡು, ನೀಲಿಯಾಕಾಶವನ್ನು ಶೂನ್ಯತೆಯಿಂದ ನೋಡುವಳು ವನಮಾಲಾ. ಅಂಥ ಒಂದು ದಿನ ತನ್ನ ಕೋಣೆಯ ಕದವನ್ನು ಯಾರೋ ತಟ್ಟಿದಂತಾಯಿತು. ತಬ್ಬಿಬ್ಬಾದ ವನಮಾಲಾ, ಬಾಗಿಲು ತೆರೆದಳು.

'ನಮಸ್ಕಾರ.'

"ನಮಸ್ಕಾರ."

"ಬನ್ನಿ' ಎಂದು ಕುಳಿತುಕೊಳ್ಳಲು ಸೋಫಾವನ್ನು ತೋರಿಸಿದಳು. ಶಿವಕುಮಾರ್ ಕುಳಿತುಕೊಂಡು,

"ತೊಂದರೆಯಾಯಿತೇ?"

"ಇಲ್ಲವಲ್ಲ ಏನು ವಿಚಾರ?"

"ಹೀಗೆ ಹೋಗುತ್ತಾ ಇದ್ದೆ. ಮೊನ್ನೆ ನಿಮ್ಮ ಕೈಯಲ್ಲಿದ್ದ Life ಮೆಗೆಝೀನ್ ನೋಡಿದೆ. ಹೇಗೂ ಸಮಯ ಹೋಗುವುದಿಲ್ಲ. ತೆಗೆದುಕೊಂಡು ಹೋಗೋಣ ಎಂದು ಬಂದೆ", ಎಂದ ಶಿವಕುಮಾರ.

'ತರುತ್ತೇನೆ" ಎಂದು ಒಳ ತೆರಳಿದ ವನಮಾಲಾ, Life ಪತ್ರಿಕೆಯೊಂದಿಗೆ ಬಿಸ್ಕಿಟ್ಸ್, ಶರಬತ್ತನ್ನು ತಂದಿಟ್ಟಳು. ಶಿವಕುಮಾರ ತಂದುದನ್ನು ಸ್ವೀಕರಿಸಿದ ಬಳಿಕ,

"ತ್ರಾಸಕೊಟ್ಟೆ"

'ಇಲ್ಲವಲ್ಲಾ'

"ಥ್ಯಾಂಕ್ಸ್ ಬರುತ್ತೇನೆ; ನಮಸ್ಕಾರ", ಎಂದು ಎದ್ದು ನಿಂತ.

'ಯಾವಾಗ ಹಿಂತಿರುಗಿಸಬೇಕು ಇದನ್ನು?"

"ನಾಳೆ ನಾಡದು, ನಾನೂ ಪೂರ್ತಿ ಓದಿಯಾಗಿಲ್ಲ" ಎಂದು ಮಾತನ್ನು ಮುಗಿಸಿದಳು ವನಮಾಲಾ, ಹಾಗೆ ಪುಸ್ತಕ ತೆಗೆಕೊಂಡು ಹೋದ ಶಿವಕುಮಾರ ಅವಳ ಸಹೋದ್ಯೋಗಿ, ಚರಿತ್ರೆಯ ಪ್ರಾಧ್ಯಾಪಕ. ಅವರಿಬ್ಬರೂ ಆಗೊಮ್ಮೆ—ಈಗೊಮ್ಮೆ ಮಾತನಾಡಿ, ಪರಿಚಯವಿದ್ದವರೇ ಆಗಿದ್ದರು.

o o o o

ಬಾಗಿಲು ತೆರೆದಿತ್ತು, ರೇಡಿಯೋ ಪದ್ಯ ಹಾಡುತಿತ್ತು. ಫ್ಯಾನಿನ ಗಾಳಿಯ ಅಡಿಯಲ್ಲಿ ಕುಳಿತು ವನಮಾಲಾ ಓದುತಿದ್ದಳು. ಬಾಗಿಲನ್ನು ಮೆಲ್ಲನೆ ಹೊಡೆದಂತಾಯಿತು. ಎದ್ದು ನೋಡುವಾಗ, ಶಿವಕುಮಾರ ಎದುರು ನಿಂತಿದ್ದ. ಅವಳ ಬಟ್ಟೆ ಅಸ್ತವ್ಯಸ್ತವಾಗಿತ್ತು. ಶಿವಕುಮಾರ,

'ಸೋರಿ" ಅಂದ.

"ನೆವರ್ ಮೈಂಡ್' ಎನ್ನುತ್ತಾ ಸೀರೆಯನ್ನು ಸರಿಮಾಡಿಕೊಂಡಳು. ಕಣ್ತೆರೆದು ನೋಡುತ್ತಲೇ ಇದ್ದ ಶಿವಕುಮಾರ.

"Lifeನ್ನು ಹೇಳಿದ ದಿನ ತಂದುಕೊಡಲಾಗಲಿಲ್ಲ. ಕ್ಷಮಿಸಿ" ಅಂದ.

"ಪರವಾಗಿಲ್ಲ; ಕುಳಿತುಕೊಳ್ಳಿ, ನಿಂತೇ ಇದ್ದಿರಲ್ಲಾ" ಅಂದಳು.

'ನೀವೇನೋ ಓದ್ತಾ ಇದ್ದಿರಲ್ಲಾ, ನನ್ನಿಂದ ತೊಂದರೆಯಾಯಿತಲ್ಲಾ"

"ಏನೂ ಇಲ್ಲ. ಇಲಿಯಟ್‌ನ ಒಂದು ಕವನ ಸಂಗ್ರಹ" ಎಂದು ಪುಸ್ತಕವನ್ನು ಅವನ ಮುಂದೆ ಹಿಡಿದಳು.

"ಚೆನ್ನಾಗಿದೆ, ಓದಿದ್ದೇನೆ' ಹೀಗೆ ಆರಂಭಗೊಂಡ ಮಾತು ಮುಂದುವರೆಯಿತು. ಕಾಲೇಜಿನ ವಿಚಾರ, ಲೇಖಕರ ವಿಚಾರ, ಊರಿನ ವಿಚಾರ, ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿಚಾರ, ಸಿನೇಮಾದ ವಿಚಾರ—ಎಲ್ಲವನ್ನೂ ಮಾತನಾಡಿಕೊಂಡರು. ಮಾತನಾಡುತ್ತಾ ಸಮಯ ಕಳೆದುದೇ ತಿಳಿಯಲಿಲ್ಲ ಸಂಜೆ ೭ ಗಂಟೆ ಹೊಡೆಯುವಾಗಲೇ ಇಬ್ಬರಿಗೂ ಎಚ್ಚರವಾದುದು.

ಬೆಳೆದ ಸಲುಗೆ ಅವರಿಬ್ಬರನ್ನೂ ಹತ್ತಿರಕ್ಕೆ ಸೆಳೆಯಿತು; ಎಳೆಯಿತು.

o o o

ಒಂದು ದಿನ ಸಂಜೆ ವನಮಾಲಾ "ಬೇಡ್ ಮಿಂಟನ್' ಆಡಿಕೊಂಡು ಬರುವಾಗ ಕತ್ತಲಾಗುತ್ತಾ ಬಂದಿತ್ತು. ಶಿವಕುಮಾರ ತಿರುಗಾಡಿಕೊಂಡು ಅದೇ ದಾರಿಯಾಗಿ ಅವಳಿಗೆದುರಾಗಿ ಬರುತ್ತಿದ್ದ. ವನಮಾಲಳನ್ನು ಕಂಡು, "ನಮಸ್ತೇ' ಅಂದ.

'ಗುಡ್ ಇವಿನಿಂಗ್" ಅಂದಳು.

"ತುಂಬಾ ಹೊತ್ತಾಯಿತಲ್ಲಾ" ಅಂದ

"ಆಟವಾಡುತ್ತಾ ಇರುವಾಗ ಹೊತ್ತೇ ತಿಳಿಯಲಿಲ್ಲ'

"ಕಾಫಿ ಆಗಿಲ್ಲವೆಂದು ಕಾಣುತ್ತದೆ."

"ಇಲ್ಲ. ಈಗ ಹೋಗುವುದು ಮನೆಗೆ ತಾನೇ?'

ಪರವಾಗಿಲ್ಲ. ನಿಮ್ಮ ಮನೆಯಲ್ಲಿ ಎಷ್ಟೋ ಬಾರಿ ಕಾಫಿ ಕುಡಿದಿರುವೆ. ಈ ಬಾರಿ ನನ್ನ ಆತಿಥ್ಯ ಸ್ವೀಕರಿಸಬಹುದಲ್ಲಾ!'

"ರಸ್ತೆಯಲ್ಲಿ ಆತಿಥ್ಯವೇ?'

ರಸ್ತೆಯ ಇಕ್ಕಡೆಗಳಲ್ಲಿ ಹೋಟೇಲುಗಳೇಕೆ?'

"ಬೇಡ; ಥ್ಯಾಂಕ್ಸ್" ಎಂದು ಮುಂದರಿದಳು. ಆದರೆ ಒತ್ತಾಯವಾಗಿ ಶಿವಕುಮಾರ ಅವಳನ್ನು ಹೋಟೇಲಿಗೆ ಕರೆದೊಯ್ದು ಕಾಫಿ ಕುಡಿಸಿದ.

ಹೀಗೆ ಒತ್ತಾಯ ಪೂರ್ವಕವಾಗಿ ಸಿನೇಮಕ್ಕೂ ಹೋದಳು ವನಮಾಲಾ. ಅಲ್ಲಿಯೂ ಅವರಿಬ್ಬರನ್ನು ಕಾಣುವ ಕಣ್ಣುಗಳಿಗೆ ಕೊರತೆ ಇರಲಿಲ್ಲ.

o o o

ಮೆಲ್ಲನೆ ಬಾಗಿಲನ್ನು ತಟ್ಟಿ, "ಮಿಸ್ ವನಮಾಲಾ ಇದ್ದಾರೆಯೆ?' ಎಂದು ಕೇಳಿದ ಶಿವಕುಮಾರ ಸಲುಗೆಯ ಫಲವಾಗಿ, ಬರುವಾಗ ಹಣ್ಣುಗಳನ್ನು ತಂದಿದ್ದ.

'ಯಾಕಾಗಿ ಹಣ್ಣುಗಳನ್ನು ತರುತ್ತೀರಿ'

'ತಿನ್ನಲು'

"ಯಾರಿಗೆ?"

'ನೀನೇ ಹೇಳು,' ಎನ್ನುವ ಏಕವಚನದ ಮಾತಿನಷ್ಟು ಸಲುಗೆಯ ಹಂತಕ್ಕೆ ಅವನು ಏರಿದ್ದ.

'ಈ ಒಂದು ಬಟ್ಟೆ ಹೇಗಿದೆ ನೋಡು ವನಮಾಲಾ' ಎಂದು ಕರೆದ, ಒಳಹೋದ ವನಮಾಲಾಳನ್ನು ಅವಳು ಬರುತ್ತಾ, ಹಾಲು ಬಿಸ್ಕೆಟ್ಟುಗಳನ್ನು ತಂದಿತ್ತು; ಬಟ್ಟೆ ನೋಡುತ್ತಾ,

"ಅಂದವಾಗಿದೆ, ಯಾರಿಗೆ?' ಎಂದಳು.

'ಯಾರಿಗೆ ಕೊಡಬೇಕೋ ಅವರಿಗೆ'

ಇನ್ನೂ ಇದೆ

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು..........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ವ್ಯಾಪಾರ ವಿಭಾಗ: ಬಲ್ಮಠ ರಸ್ತೆ, ಮಂಗಳೂರು 1.

NAVAYUGA 20—4—1967

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

"ಅಂದರೆ?"

'ಎದುರಿಗಿದ್ದವರಿಗೆ'

ವನಮಾಲಳ ಮುಖ ಕೆಂಪೇರಿತು. ಸಲುಗೆ, ಇನ್ನೂ ಬೆಳೆಯಿತು.

'ಯಾಕೆ ತಂದಿರಿ?"

'ತಂಬೇಕೆಂದು ಕಂಡಿತು ತಂದೆ, ತಗೋ' ಅಂದ.

'ಥ್ಯಾಂಕ್ಸ್" ಎಂದು ತೆಗೆದುಕೊಳ್ಳಲು ಕೈ ನೀಡಿದಾಗ, ಕೈ ಹಿಡಿದು ಮುತ್ತಿಟ್ಟ. ರೋಮಾಂಚನ ಗೊಂಡಳು ವನಮಾಲಾ.

o o o

ಸಲುಗೆ ನಯವಾಗಿ ಹಬ್ಬ ತೊಡಗಿತು. ತಿರುಗಾಟ, ಹೋಟೇಲು ಕಾಫಿ, ಸಿನೇಮಾಗಳಿಂದ ವಿಸ್ತರಿಸಿತು. ಬಳಿಕ ಶಿವಕುಮಾರ ಆಗಾಗ, ಕಾರಣಗಳಿಲ್ಲದೆಯೂ ವನಮಾಲಳ ಮನೆಗೆ ಬರ ತೊಡಗಿದ. ಹೊತ್ತಲ್ಲದ ಹೊತ್ತಲ್ಲ ಇರತೊಡಗಿದ ಶಿವಕುಮಾರ ಯಾವುದೋ ಒಂದು ಅವಕಾಶಕ್ಕಾಗಿ ಕಾಯುತ್ತಲೇ ಇದ್ದ.

o o o o

ಅದೊಂದು ಸಂಜೆ ಶಿವಕುಮಾರ ವನಮಾಲಳಲ್ಲಿಗೆ ಬಂದಾಗ ಆಕೆ ಮಲಗಿದ್ದಳು. ವಿಪರೀತ ತಲೆನೋವು, ಆಲಸ್ಯ ಆಕೆಗಿತ್ತು. ಊಟವನ್ನೂ ಮಾಡಿರಲಿಲ್ಲ. ಉತ್ಸಾಹವೇ ಇರಲಿಲ್ಲ. ಬಳಿಬಂದ ಶಿವಕುಮಾರ.

'ಮಾಡ್ ಚೆನ್ನಾಗಿಲ್ಲವೇ?' ಅಂದ.

"ತಲೆನೋವು, ಜಡತೆ'

"ಅಮೃತಾಂಜನ ಹಾಗಿಸ ಬೇಕಿತ್ತು?"

'ಅಮೃತಾಂಜನ ಏನ್ನೋ ಎಲ್ಲಾ ಆಯಿತು."

'ಬಹಳ ಓದುತ್ತಿದ್ದಿಯೆಂದು ಕಾಣುತ್ತದೆ. ಅದರ ಪರಿಣಾಮ ಇರಬೇಕು."

'ಇಲ್ಲ. ಏನೋ ಆಲಸ್ಯ; ಅಷ್ಟೇ' ಅಂದಳು.

'ಹಾಗಾದರೆ ಸ್ವಲ್ಪ ಗಾಳಿಯಲ್ಲಿ ತಿರುಗಾಡಿ ಬರುವಾ; ಎಲ್ಲಾ ವಾಸಿಯಾಗುತ್ತೆ" ಎಂದ.

'ಬೇಡಾ, ನಡೆಯುವುದೇ ಬೇಡ ಎಂದನಿಸುತ್ತದೆ. ಹಸಿವು ಬೇರ ಕಾಡುತ್ತಾ ಇದೆ; ಬರುವುದಿಲ್ಲ" ಅಂದಳು.

'ಊಟ ಆಗಿಲ್ಲವೇ?"

'ಬೆಳಗ್ಗಿನಿಂದ ಸೊನ್ನೆ'

"ಹಾಗಾದರೆ ನಡಿ; ಹೋಟ್ಲಿಗೆ ಹೋಗೋಣ, ನನ್ನದೂ ಊಟ ಆಗಿಲ್ಲ."

'ನೀವು ಹೋಗಿ, ನಾನು ಬರೋದಿಲ್ಲ. ಹೋಟ್ಲು ಊಟ ಮಾಡಿ ನನಗಭ್ಯಾಸವಿಲ್ಲ' ಎಂದಳು ವನಮಾಲಾ.

ಹಾಗೆ ಹೇಳಿದರೂ ಶಿವಕುಮಾರನ ಬಲವಂತಕ್ಕಾಗಿ, ಹೋಟ್ಲಿಗೆ ಹೋಗಬೇಕಾಯಿತು. ಎದುರು ಬದುರಾಗಿ ಊಟ ಮಾಡುತ್ತಿರುವಾಗ, ಅವರಂತೆ ಊಟಕ್ಕಾಗಿ ಬಂದ ಗಿರಾಕಿಗಳ ಪಿಸುಮಾತು; ನಸುನಗು, ಅವಳ ಕಿವಿಗ ಬಿದ್ದುವು. ಆಗಲೇ ಶಿವಕುಮಾರ.

"ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವಾ, ಬಾ' ಅಂದ.

'ಎಲ್ಲಿಗೆ?'

"ಇಲ್ಲೇ ರೂಮಿದೆ. ಒಂದನ್ನು ಬಾಡಿಗೆಗೆ ಕೇಳುವಾ.'

'ಬೇಡ; ಬೇಡಾ, ಮನೆಗೆ ಹೋದುವಾ.'

"ಏನಿಲ್ಲ. ಒಂದೆರಡು ಗಂಟೆ ಮಾತ್ರ ಇರೋಣ, ಅನಂತರ ಸುಧಾರಿಸುತ್ತೆ. ಬಳಿಕ ಮನೆಗೆ ಹೋದರಾಯಿತು." ಎಂದ.

ಏನೋ ಮನಸ್ಸಿಗೆ ಕಸಿವಿಸಿಯಾಯಿತು. ಆದರೂ ಒಪ್ಪಿದಳು. ರೂಮಿಗೆ ಹೋದಳು. ರೂಮಿನಿಂದ ಹೊರ ಬರುವಾಗ ಕೆಲವು ವರ್ಷಗಳ ಹಿಂದೆ ನಡೆದಿದ್ದ ಘಟನೆಯು ಕಹಿಯಲ್ಲಿ ಅಡಗಿರಬಹುದಾದ್ದ ಸಿಹಿಯ ಅನುಭವ ಆಕೆಗಾಗಿತ್ತು.

ಪುರಾತನ ಕಾಲದ ಒಂದು ಜ್ಞಾನಕೋಶ

— ಯಕೋವ್ ನಬಕ್ಕನ್ —

ಉಜ್ಬೆಕಿಸ್ತಾನದ ಜೆರೆವಶಾನ್ ತೀರದ ಮೇಲೆ ಬೇಟೆಗಾರನೊಬ್ಬ ಮೊಲ ಒಂದನ್ನು ಹೊಡೆದ. ಅದೊಂದು ಕಂಡಿಯಲ್ಲಿ ಹೋಗಿಬಿತ್ತು. ಅದನ್ನೆತ್ತಿಕೊಳ್ಳಲು ಆತ ಕೆಳಗಿಳಿದಾಗ ಕೆಲವು ಹಳೇ ಹೊತ್ತಗೆಗಳು ಕೈಗೆ ತಗಲುವು. ಅವು ಒಂದು ಅಮೂಲ್ಯ ಸಂಶೋಧನೆಯಾಗಿ ಕಂಡವು. ಅವು ಬೈಬಿಲ್, ಹಫೀಜ್ ಮತ್ತು ನವೋಯಿಯವರ ಹಸ್ತಪ್ರತಿಗಳಾಗಿದ್ದುವು.

ಅವೀಗ ಸಮರ್ಕಂದ್ ವಿಶ್ವವಿದ್ಯಾಲಯ ಗ್ರಂಥ ಭಂಡಾರದ ಪೌರಸ್ತ್ಯ ಹಸ್ತಪ್ರತಿಗಳ ವಿಭಾಗದಲ್ಲಿವೆ. ಈ ವಿಭಾಗದಲ್ಲಿ ನಿಜವಾಗಿಯೂ ಕೆಲವು ಸೋಜಿಗದ ಹಸ್ತಪ್ರತಿಗಳಿವೆ. ಉದಾಹರಣೆಗೆ ಪದ್ಯ ಸ್ವರೂಪದಲ್ಲಿ ಒಂದು ಗಣಿತ ಪುಸ್ತಕವಿದೆ. ಇದರ ಕರ್ತೃ, 19ನೇ ಶತಮಾನದ ಸಮರ್ಕಂದದಲ್ಲಿ ವಾಸವಾಗಿದ್ದ ಬಹಾಯುದ್ದೀನ್ ಮಿರ್ಜಾಕುಲೋವ್ ಎಂಬವರು. ಬುದ್ಧಿಶಾಲಿ ಗಣಿತ ಶಾಸ್ತ್ರಜ್ಞರಾದ, ಕವಿಯೂ ಆಗಿದ್ದ ಮತ್ತು ಭಾಷಾಶಾಸ್ತ್ರಜ್ಞನೂ ಆಗಿದ್ದ ಮಿರ್ಜಾಕುಲೋವ್ ಒಂದು ಜ್ಯಾಮಿತಿ ಪುಸ್ತಕವನ್ನು ಉಜ್ಬೆಕ್ ಭಾಷೆಗೆ ಅನುವಾದಿಸಿ ಮೂಲ ಗಣಿತ ಶಾಸ್ತ್ರವನ್ನೂ, ಗಣಿತ ನಕ್ಷೆಗಳನ್ನೂ ವಿವರಿಸಿದರು. ಪುರಾತನ ಕಾಲದ 94 ಉಜ್ಬೆಕ್ ಬುಡಕಟ್ಟುಗಳ ಹೆಸರನ್ನು ಉಲ್ಲೇಖಿಸಿದ ಮೊದಲಿಗರೂ ಇವರೆ.

ತನ್ನ ಕಾಲದ ಕವಯಿತ್ರಿಯರಲ್ಲಿ ಜೆಬುನ್ನಿಸಾ ಒಬ್ಬಳಾಗಿದ್ದಳು. ಭಾರತದ ಸಾಮ್ರಾಟ ಔರಂಗಜೇಬನ ಪುತ್ರಿಯಾದ ಈಕೆ ಅರಸರ ವಿಲಾಸ ಜೀವನವನ್ನು ಹೀಗಳೆದು ಸಾಹಿತಿಯ ಸಾಮಾನ್ಯ ಬಾಳನ್ನು ಮೆಚ್ಚಿಕೊಂಡಳು. 'ಲೈಲಿ ಮತ್ತು ಮಜ್ನೂನ್' ಎಂಬ ಆಕೆಯ ಕವಿತಾ ಸಂಗ್ರಹವೊಂದು ಇತ್ತೀಚೆಗೆ ತಾಜಿಕಿಸ್ತಾನದಲ್ಲಿ ಪುನರ್ಮುದ್ರಣಗೊಂಡಿದೆ. ಅದಿಂದು ಪುರಾತನ ಹಸ್ತಪ್ರತಿಗಳ ವಿಭಾಗದಲ್ಲಿ ಸುರಕ್ಷಿತವಾಗಿದೆ.

ಈ ಗ್ರಂಥಾಲಯದಲ್ಲಿ ನವೋಯಿಯ 10, ಹಫೀಜ್‌ರ 16 ಮತ್ತು ಬೇದಿಲ್‌ರ 16 ಹಾಗೂ ಜಮಿಯರ 15 ಮತ್ತು ಮುಷ್ಟಾಬ್‌ರ 4 ಹಸ್ತ ಪ್ರತಿಗಳಿವೆ. ಒಂದೊಂದು ಹಸ್ತ ಪ್ರತಿಯೂ ಶೈಲಿ, ಬರವಣಿಗೆಯ ಕ್ರಮ ಹಾಗೂ ವಿನ್ಯಾಸದಲ್ಲಿ ಭಿನ್ನಭಿನ್ನವಾಗಿವೆ. ಮತ್ತೆ ಇದೇ ಕಾಲಕ್ಕೆ ಅರಾಬಿಕ್ ಭಾಷೆಯಲ್ಲಿ ಒಂದೇ ಪದವನ್ನು ಹನ್ನೆರಡು ರೀತಿಗಳಲ್ಲಿ ಬರೆಯಬಹುದಾಗಿದೆಯೆಂಬುದನ್ನು ನಾವು ಮರೆಯಬಾರದು.

ಬೇದಿಲ್‌ರ ಕಾವ್ಯದ ಹಸ್ತಪ್ರತಿ ಪರ್ಷಿಯನ್ ಭಾಷೆಯಲ್ಲಿದೆ, ಉದ್ದುದ್ದವಾಗಿ (ಮೇಲಿನಿಂದ ಕೆಳಕ್ಕೆ) ಸಾಲುಗಳನ್ನು ಬರೆಯಲಾಗಿದೆ. ಇದನ್ನು ನಕಲು ಮಾಡಿದ್ದ ಶಾದಿ ಮುಹಮ್ಮದೋವಾ ಬುಖಾರದಲ್ಲಿ 18ನೇ ಶತಮಾನದಲ್ಲಿ ವಾಸವಾಗಿದ್ದಳು. ಶಾದಿಯವರ ಪದ್ಯಾವಲಿ 16ನೇ ಶತಮಾನದಲ್ಲಿ ಪ್ರಕಟವಾಯಿತು. ನಕಲು ಮಾಡಲು ಸುಮಾರು ಎರಡು ವರ್ಷಗಳ ಕಾಲ ಹಿಡಿದಂಥ ನವೋಯಿಯ ಪದ್ಯಗಳನ್ನು ಸುಮಾರು 1300 ಪುಟಗಳ ಗಾತ್ರದ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ.

ಈ ಗ್ರಂಥಾಲಯದಲ್ಲಿ ಅತ್ಯಂತ ಹಳೆಯ ಹಸ್ತಪ್ರತಿಯೆಂದರೆ ಅರಬ್ಬೀ ವ್ಯಾಕರಣ ಪ್ರತಿ. ಇದು 1370ರಲ್ಲಿ ಬೆಳಕು ಕಂಡದ್ದು. ರೇಷ್ಮೆ ಕಾಗದದ ಮೇಲೆ ಇದನ್ನು ಬರೆಯಲಾಗಿದೆ.

ವಯಸ್ಸನ್ನು ಕಂಡುಹಿಡಿಯಲಾಗದಂಥ ಹಸ್ತಪ್ರತಿಗಳ ವಯಸ್ಸನ್ನು ಅವಕ್ಕೆ ಬಳಸಿದ ಕಾಗದ ಕಟ್ಟು ಮತ್ತು ಕ್ಯಾಲಿಗ್ರಾಫಿ ಮೊದಲಾದುವುಗಳ ಮೂಲಕ ನಿರ್ಧರಿಸಲಾಗುವುದು. ಇದಂತೂ ಸುಲಭಸಾಧ್ಯ ಕೆಲಸವಾಗಿಲ್ಲ. ಅಂಥ ವಿದ್ವಾಂಸರಲ್ಲಿ ಬಿ. ವಲಿಹೋಜಾಯೇವ್, ಎಸ್. ಶುಕುರೋವ್ ಮತ್ತು ಟಿ. ಇಗಾಂಬರ್ದ್ಯೇವ್ ಮೊದಲಾದವರು ಪ್ರಮುಖರಾಗಿದ್ದಾರೆ.

ಈ ವಿಭಾಗದ ಕ್ಯೂರೇಟರರಾದ ಫಂದ್ದೀನ್ ಮರುಫಿ ಸ್ವತಃ ಈ ರಂಗದಲ್ಲಿ ಸಮರ್ಥ ತಜ್ಞರಾಗಿದ್ದಾರೆ. ವೃತ್ತಿಯಿಂದ ಅಧ್ಯಾಪಕರಾಗಿರುವ 67 ವರ್ಷದ ಈ ವಿದ್ವಾಂಸರು 7 ಪೌರಸ್ತ್ಯ ಭಾಷೆಗಳನ್ನು ಬಲ್ಲರು. ಇವರು ಸುಮಾರು 50 ಪೌರಸ್ತ್ಯ ಹಸ್ತಪ್ರತಿಗಳ ಗ್ರಂಥಸೂಚಿಯನ್ನು 500 ಉಜ್ಬೆಕ್ ಗಾದೆ ಮಾತುಗಳನ್ನೂ 350 ತಾಜಿಕ್ ಜಾಣ್ನುಡಿಗಳನ್ನೂ ಸಂಗ್ರಹಿಸಿದ್ದಾರೆ.

ಅಲಂಕಾರ ವಿಶ್ವವಿದ್ಯಾಲಯ ರೆಕ್ಟಾರರಾದ ಮಸೂದ್ ಕವಾಲ್ ಯದ್ದಿನ್ ಮತ್ತು ಪ್ರಾ. ಫೆಯಿಕ್ ರಶೀದ್ ಅವರುಗಳು ಈ ವಿಭಾಗಕ್ಕೆ ಭೇಟಿಕೊಟ್ಟಾಗ ಸಂದರ್ಶಕರ ಪುಸ್ತಕದಲ್ಲಿ ಹೀಗೆ ಬರೆದರು: 'ಸಮರ್ಕಂದ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಹಸ್ತಪ್ರತಿಗಳ ಅತ್ಯಂತ ಸಮೃದ್ಧ ಸಂಗ್ರಹವಿದೆ. ನಮ್ಮ ಕಾರ್ಯದಲ್ಲಿ ಇವನ್ನು ಬಹು ಸಂತೋಷದಿಂದ ಬಳಸಿಕೊಂಡೆವು ಮತ್ತು ಪೌರಸ್ತ್ಯದ ಹಸ್ತಪ್ರತಿಗಳ ಮಹಾ ಭಂಡಾರವಿದಾಗಿದೆ ಯೆಂಬ ಅಭಿಪ್ರಾಯದಿಂದ ಹಿಂತಿರುಗುತ್ತಿದ್ದೇವೆ.'

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ



Edited, Printed & Published by K. H. Shetty at the Navayuga Press, Udipi, S. India.

ನವಯುಗ

27—4—1967

೧೦
ಪೈ. ಸೆ.

ಕಥಾ ಪ್ರಪಂಚ

ಬಯಲಾದ ರಹಸ್ಯ

ಬರೆದವರು
ಹಳನಾಡು ಸುಬ್ರಾಯ ಭಟ್ಟ ಚೋನಾಳಿ

ಕತ್ತಲಾಗಲು ಇನ್ನೂ ಕೆಲವೇಳೆ ಉಳಿದಿತ್ತು. ಟಪ್-ಟಪ್-ಚಪ್ಪಲಿ ಸದ್ದಿನೊಡನೆ ಜಾನಕಿ ಮೆಟ್ಟಿಲೇರಿ ಬರುವುದು ಹಾಸಿಗೆಯಲ್ಲಿ ಮಲಗಿದ್ದ ಸಂಗಣ್ಣನ ಕಣ್ಣಿಗೆ ಗೋಚರಿಸಿತು. ಹದಿನಾರರ ಹರೆಯದ ಮಗಳ ಮುಖ ಕಂಡಾಗ ಅವಳ ಭವಿಷ್ಯತ್ತಿನ ಕಲ್ಪನೆ ನೆನೆದು ಮರುಕಗೊಂಡನು. "ನಾನಿಂದು ಎಲ್ಲರಂತೆ ಸಮರ್ಥನಾಗಿದ್ದರೆ......" ಎಂಬ ಆಲೋಚನೆ ಬಾರದೇ ಇರಲಿಲ್ಲ. ಹಗಲು ರಾತ್ರಿಗಳೆನ್ನದೆ ತಿಂಗಳು ವರ್ಷಗಳೇ ಯೋಚಿಸಿದ್ದರೂ ವ್ಯರ್ಥವಾಗಿತ್ತು.

ಆಗ ತಾನು ಬದುಕುಳಿಯಲೇ ಬಾರದಿತ್ತೆಂಬ ಯೋಚನೆ ಬಂದಿದ್ದರೂ ಸಾಯುವ ಮಾರ್ಗ ಮಾತ್ರ ಸುಗಮವಾಗಿ ಕಂಡಿರಲಿಲ್ಲ. ತಾನು ಸತ್ತು ಮಡದಿಯನ್ನು ವಿಧವೆಯೆಂಬ ದುಃಖದ ಆಗರದಲ್ಲಿ ದೂಡಬಾರದೆಂಬುದೇ ಅವನಾಶೆಯಾಗಿತ್ತು.

ತಾನು ಹಾಸಿಗೆ ಹಿಡಿದು ಇಪ್ಪತ್ತು ವರ್ಷಗಳೇ ಉರುಳಿ ಹೋದುವೆಂದು ಯೋಚಿಸುವಾಗ ಆಶ್ಚರ್ಯವೆನಿಸುತಿತ್ತು.

ಅವನೆಣಿಕೆಯಲ್ಲಿ ನಿನ್ನೆ ಮೊನ್ನೆ ಬಂದಂತೆ ಕಂಡರೂ ಜಾನಕಿ ಅವನೆಣಿಕೆಯನ್ನು ಹುಡಿ ಮಾಡಿದ್ದಳು. ಕಣ್ಮುಂದೆ ಸುಳಿದು ಹೋದ ಮಗಳು ಹುಟ್ಟುವ ಮೊದಲೇ ಸಂಗಣ್ಣ ಕಾಣದ ಕಾಹಿಲೆಯ ಕೈಗೊಂಬೆಯಾಗಿದ್ದನು. ಮಾನವನ ಜೀವನದಲ್ಲಿ ನಡೆಯುವ ಮಾರ್ಪಾಡು ಕಲ್ಪನೆಗೂ ನಿಲುಕದ ರಹಸ್ಯವೆಂದೇ ಬಗೆದನು. ಯೋಚಿಸುತ್ತಾ ಮಲಗಿದ್ದ ಸಂಗಣ್ಣನ ನೆನಪು ತುಳಿದು ಬಂದ ಹಾದಿಯನ್ನೇ ಹಿಡಿಯಿತು.

o o o

ಆಗಿನ್ನೂ ಸಂಗಣ್ಣ ಇಪ್ಪತ್ತರ ಹರೆಯದ ಯುವಕ. ಹುಟ್ಟಿದೂರನ್ನು ಬಿಟ್ಟು ಕೆಲಸವನ್ನರಸಿ ಪಟ್ಟಣ ಸೇರಿದ್ದನು. ದೃಢಕಾಂಗ ಶರೀರಕ್ಕೊಪ್ಪುವ ಎತ್ತರದ ನಿಲುವಿನ ಸಂಗಣ್ಣ ಶಾಂತಿಲಾಲರ ಕಣ್ಣಿಗೆ ಬಿದ್ದುದರಲ್ಲೇನೂ ಆಶ್ಚರ್ಯವಿದ್ದಿಲ್ಲ. ಒಂದು ದಿನ ಪೇಟೆಯೊಂದರಲ್ಲಿ ಉಳಿದುಕೊಂಡಿದ್ದ ಲಾಲರ ಹದ್ದಿನ ಕಣ್ಣಿಗೆ ತಿರುಗಾಡುತ್ತಿದ್ದ ಸಂಗಣ್ಣನ ದೇಹಾಕೃತಿ ಕಂಡು ಬಂತು. ಎಷ್ಟೋ ದಿನಗಳಿಂದ ಅರಸುತ್ತಿದ್ದ ಮೂರ್ತಿ ಇದೆಂಬ ಭಾವನೆ ಬಂತು. ಆ ವ್ಯವಹಾರ ಕುಶಲರಾದ ಲಾಲರು ಸಂಗಣ್ಣನ ಮನವನ್ನು ತಮ್ಮತ್ತ ಸೆಳೆದು ಊರಿಗೆ ಜೊತೆಯಲ್ಲಿ ಕರೆದೊಯ್ದರು.

ದುಡಿಮೆಯ ಆಳುಗಳ ಮೇಲ್ವಿಚಾರದ ಕೆಲಸ ಸಂಗಣ್ಣನ ಪಾಲಿಗೊದಗಿ ಬಂತು. ವಿಸ್ತಾರವಾದ ಕಾಫಿ ತೋಟದ ಮಧ್ಯೆ ಎದ್ದು ನಿಂತ ಭವ್ಯವಾದ ಬಂಗಲೆಯೇ ಶಾಂತಿಲಾಲರ ವಸತಿಗೃಹ. ಅದರ ಪಕ್ಕದಲ್ಲಿಯೇ ಇದ್ದ ಚಿಕ್ಕ ಕೊಠಡಿ ಸಂಗಣ್ಣನ ವಾಸಸ್ಥಾನವಾಯಿತು. ಊಟ ಕಾಫಿ ಶಾಂತಿಲಾಲರ ನಿವಾಸದಲ್ಲಿಯೇ ಪೂರೈಸುತ್ತಿತ್ತು. ಹಾಗಾಗಿ ಸಂಗಣ್ಣನಿಗೆ ಕೈ ಸುಟ್ಟುಕೊಳ್ಳುವ ಪ್ರಮೇಯವಿರಲಿಲ್ಲ.

ಆಳುಗಳನ್ನು ದುಡಿಸುವುದರಲ್ಲಿ ಸಂಗಣ್ಣ ಧಣಿಯ ಮೆಚ್ಚುಗೆ ಪಡೆಯಲು ಹೆಚ್ಚು ದಿನ ಬೇಕಾಗಲಿಲ್ಲ. ಕಾರಣ ಹಳ್ಳಿಯಲ್ಲಿದ್ದು ಚೆನ್ನಾಗಿ ಶ್ರಮವಹಿಸಿ ದುಡಿದು ಅನುಭವ ಪಡೆದಿದ್ದ. ಹಾಗಾಗಿ ಕೆಲವೇ ದಿನಗಳಲ್ಲಿ ಶಾಂತಿಲಾಲರ ಅಚ್ಚುಮೆಚ್ಚಿನ ಬಂಟನೆನಿಸಿದ.

ನೂರಾರು ಕೂಲಿಗಳು ಹಗಲಿಡೀ ಲಾಲರ ತೋಟದಲ್ಲಿ ದುಡಿಯುತ್ತಿದ್ದರು. ವಾರಕ್ಕೊಮ್ಮೆ ಸಿಗುವ ಕೂಲಿ ಹಣದ ರೂಪದಲ್ಲಿ ದೊರಕುತ್ತಿತ್ತು. ಆಳುಗಳ ಅನುಕೂಲತೆಗಾಗಿ ಅಂಗಡಿಯೊಂದನ್ನು ತೆರೆದಿದ್ದರು. ಅದನ್ನು ವಾರದಲ್ಲೊಂದು ದಿನ ಮಾತ್ರ ಸಂಗಣ್ಣನೇ ತೆರೆದು ಮುಚ್ಚಬೇಕಾಗಿತ್ತು.

ಅಲ್ಪಸ್ವಲ್ಪ ವಿದ್ಯಾವಂತನಾದ ಸಂಗಣ್ಣ ಒಪ್ಪಿಸುತ್ತಿದ್ದ ಲೆಕ್ಕದ ವರದಿಯಲ್ಲಿ ತಪ್ಪಿಲ್ಲವೆಂಬುದನ್ನು ಮ್ಯಾನೇಜರ್ ರಾಮಕೃಷ್ಣಯ್ಯ ಲಾಲರಿಗೆ ಮನವರಿಕೆ ಮಾಡಿದ್ದನು. ಆದ್ದರಿಂದ ಸಂಗಣ್ಣ ಲಾಲರ ಕುಟುಂಬದವರಲ್ಲೊಬ್ಬನಾಗುಳಿದ.

o o o

ಸಂಗಣ್ಣ ಲಾಲರ ಮನೆ ಸೇರಿ ವರ್ಷಗಳೇ ಉರುಳಿದುವು. ಹಾಗೆಯೇ ಅವನ ಉಡುಪು ತೊಡುಪಿನಲ್ಲಿಯೂ ಬದಲಾವಣೆ ಕಾಣತೊಡಗಿತು. ಕೂಲಿಗಳ ಪಾಲಿಗೆ ಸಂಗಣ್ಣ ಮೇಸ್ತ್ರಿಯಾಗಿದ್ದ. ಕಳ್ಳ ಕೂಲಿಗಳ ಪಾಲಿಗೆ ಸಂಗಣ್ಣ ಯಮನಂತಾಗಿದ್ದರೂ ನಂಬಿಗಸ್ಥ ಸೇವಕರ ಪಾಲಿಗೆ ಕರುಣಾಮೂರ್ತಿಯಾಗಿದ್ದ.

ಕಾಫಿ ಗಿಡಗಳು ಹಣ್ಣುಬಿಡುವಾಗ ಹೆಣ್ಣು ಗಂಡುಗಳೆಲ್ಲರೂ ಕೂಲಿಗಾಗಿ ಬರುತ್ತಿದ್ದರು. ಅವರು ಹಣ್ಣುಗಳನ್ನು ಕೊಯ್ಯುವಾಗ ಉಳಿದ ಚಿಗುರು ಕಾಯಿಗಳು ಹಾಳಾಗದಂತೆ ಜಾಗ್ರತೆ ನೋಡಬೇಕಿತ್ತು. ಅಲ್ಲದೆ ಮನೆಗೆ ಹೋಗುವ ಮುನ್ನ ಅವರೆಲ್ಲರನ್ನೊಮ್ಮೆ ಪರೀಕ್ಷಿಸಿಯೇ ಬಿಡುವ ಕ್ರಮ. ಇಲ್ಲವಾದರೆ ಎಲ್ಲಿಯಾದರೂ ಕಾಣದಂತೆ ತಮ್ಮ ಗುಡಿಸಲಿಗೆ ಕೊಂಡು ಹೋಗುವ ಪರಿಪಾಠವು ಕೆಲವರಿಗಿರುತ್ತಿತ್ತು.

ಇದೆಲ್ಲದರ ಮೇಲ್ವಿಚಾರದ ಕೆಲಸ ಸಂಗಣ್ಣನೊಬ್ಬನೇ ಬೇಸರವಿಲ್ಲದೆ ಮಾಡಿ ಮುಗಿಸುತ್ತಿದ್ದನು. ಗಂಡಾಳು ಹೆಣ್ಣಾಳುಗಳೆಲ್ಲರಿಗೂ ಸಂಗಣ್ಣ ಪರಿಚಿತನು. ಅವನ ಅನುಗ್ರಹ ಸಂಪಾದಿಸಲು ಎಲ್ಲರೂ ಹೆಣಗಾಡುತ್ತಿದ್ದರು.

o o o

ಒಂದು ದಿನ ಸಂಗಣ್ಣ ಕೂಲಿಗಳಿಗೆಲ್ಲಾ ಸಾಮಾನು ಕೊಟ್ಟು ಅಂಗಡಿ ಮುಚ್ಚುವ ತಯಾರಿಯಲ್ಲಿದ್ದನು. ಕತ್ತಲಾವರಿಸಲು ತುಸು ವೇಳೆ ಉಳಿದಿತ್ತು. ಆಗ ದೂರದಿಂದ ಕೈಚೀಲ ಹಿಡಿದು ರಭಸದಿಂದ ಅಂಗಡಿಯತ್ತ ಯಾರೋ ಬರುವುದು ಕಂಡಿತು. ಕೂಲಿಗಳೆಲ್ಲಾ ಮನೆ ಸೇರಿ ಆಗಲೇ ಅರ್ಧ ಗಂಟೆಗೂ ಮಿಕ್ಕಿರಬಹುದು. ಹಾಗಾದರೆ ಈಗ ಪುನಃ ಯಾರು ಬರುತ್ತಿರಬಹುದು? ಅಥವಾ ಕೂಲಿಗಳಾದರೂ ಸಾಮಾನು ಕೊಂಡು ಹೋಗಲು ಮರೆತಿರಬಹುದೇ? ಎಂದು ಯೋಚಿಸುವಾಗಲೇ ಅಂಗಡಿ ಎದುರು ನಿಂತು ಏದುಸಿರು ಬಿಡುವ ಪಾರ್ವತಿಯನ್ನು ಕಂಡು ತುಟಿಗಳೆಡೆಯಿಂದ ತಿಳಿನಗೆಯೊಂದು ತೇಲಿಹೋಯಿತು.

"ನಂಗೆ ಸಾಮಾನು ಕೊಡ್ತೀರಾ ಮೇಸ್ತ್ರಿಗಳೇ?" ಎಂದಳು ಪಾರ್ವತಿ ತನ್ನತ್ತಲೇ ನೋಡಿ ನಗುತ್ತಿದ್ದ ಸಂಗಣ್ಣನನ್ನುದ್ದೇಶಿಸಿ.

ಕೂಲಿಗಾಗಿ ಬರುತ್ತಿದ್ದ ಪಾರ್ವತಿಯನ್ನು ಹಿಂದೆ ಅದೆಷ್ಟೋ ಬಾರಿ ಕಂಡಿದ್ದನು. ಆದರೆ ಆಗವಳ ಸೌಂದರ್ಯದ ಅರಿವಾಗಿರಲಿಲ್ಲ. ಈಗ ಎದುರು ನಿಂತು ಮಾತಾಡುತ್ತಿದ್ದ ಪಾರ್ವತಿಯನ್ನು ಕಂಡಾಗ ಸಂಗಣ್ಣ ತನಗರಿವಿಲ್ಲದೆ ಅವಳತ್ತ ಆಕರ್ಷಿತನಾಗಿದ್ದನು. ತೆರೆದ ಕಣ್ಣುಗಳಿಂದಲೇ ಅವಳ ಸೌಂದರ್ಯಾಮೃತವನ್ನು ಹೀರತೊಡಗಿದ್ದನು.

'ಮನೇಲಿ ಅಪ್ಪಂಗೆ ಕುಶಾಲಿಲ್ಲ. ಬೇಗ ಹೋಗ್ಬೇಕು." ಎಂದಳು ತನ್ನತ್ತಲೇ ನೋಡುತ್ತಿದ್ದ ಸಂಗಣ್ಣನೊಡನೆ.

'ಆಗಲಿ! ಎಲ್ಲಿ ನಿನ್ನ ಕೈಚೀಲ ಹಿಡಿ" ಎಂದನು.

ಕೈ ಧಾನ್ಯ ಅಳೆಯುತ್ತಿದ್ದರೂ ಕಣ್ಣು ಪಾರ್ವತಿಯ ಅರಳಿದ ಅಂಗಾಂಗಗಳನ್ನು ಈಕ್ಷಿಸುತ್ತಲೇ ಇತ್ತು.

ವಾರದಲ್ಲಿ ಕೊಡುವ ಧಾನ್ಯಕ್ಕಿಂತಲೂ ಅಚ್ಚೇರು ಧಾನ್ಯ ಹೆಚ್ಚಾಗಿಯೇ ಹಾಕಿದಾಗ—

'ಇದೇನು ಮೇಸ್ತ್ರಿಗಳೇ ಅಚ್ಚೇರು ಹೆಚ್ಚು ಹಾಕಿದಿರಿ?' ಎಂದು ಎಚ್ಚರಿಸಿದಳು.

"ಪಾಪ ಈರಣ್ಣನಿಗೆ ಕಾಹಿಲೆಯೆಂದು ತಿಳಿದು ಬಹಳ ಸಂಕಟವಾಯ್ತು. ಪಾಪ ಮುದುಕ ಬೇರೆ. ಇನ್ನೆಷ್ಟು ಕಾಲ ದುಡಿದಾನು? ಇದಕ್ಕೆ ನೀನೇನೂ ಕೊಡಬೇಕಿಲ್ಲ. ಇದು ನನ್ನ ಅಲ್ಪ ಸಹಾಯ" ಎಂದು ಪಾರ್ವತಿಯ ಬಾಯಿ ಮುಚ್ಚಿಸಿದನು.

ಆಗ ಪಾರ್ವತಿಗೆ ಸಂಗಣ್ಣ ದೇವರಾಗಿ ಕಂಡನು.

ಸೇರು ಧಾನ್ಯ ಕೊಂಡು ಹೋಗಿ ಗುಡಿಸಲಲ್ಲಿ ಅಳೆಯುವಾಗ ಮೂರು ಪಾವಾಗುತ್ತಿತ್ತು. ಅಂದು ಸಂಗಣ್ಣ ಕೊಟ್ಟ ಧಾನ್ಯ ಅಳೆಯುವಾಗ ಅಳತೆಗಿಂತಲೂ ಮಿಕ್ಕಿತ್ತು. ಮೇಸ್ತ್ರಿಗಳಿಗೆ ಬಡವರು; ಮುದುಕರೆಂದರೆ ಮಮತೆಯೆಂದೇ ಭಾವಿಸಿದಳು.

ಮರುದಿನ ಎಂದಿನಂತೆ ಈರಣ್ಣ ಕೆಲಸಕ್ಕೆ ಬಾರದುದನ್ನು ಕಂಡಾಗ ಪಾರ್ವತಿಯೊಡನೆ ಈರಣ್ಣನ ಯೋಗಕ್ಷೇಮ ವಿಚಾರಿಸಿದನು. ದಿನದ ಕೆಲಸದಲ್ಲಿಯೂ ಪಾರ್ವತಿಗೆ ಯಾರೂ ನೋಡದಂತೆ ಅಷ್ಟಿಷ್ಟು ಸಹಾಯ ಮಾಡಿದನು.

ದಿನದ ಕೆಲಸ ಮುಗಿದಾಗ ಆಳುಗಳೆಲ್ಲಾ ತಮ್ಮ ತಮ್ಮ ಗುಡಿಸಲು ಸೇರಿದರು.

o o o

ಈರಣ್ಣನಿಗೆ ಒಬ್ಬಳೇ ಮಗಳು ಪಾರ್ವತಿ. ಹರೆಯದಲ್ಲಿಯೇ ಪತ್ನಿ ಕೈಬಿಟ್ಟು ಹೋಗಿದ್ದಳು. ಅವನ ಜೀವನಕ್ಕಾಧಾರವಾಗಿಯೇ ಪಾರ್ವತಿ ಉಳಿದಿದ್ದಳು. ಬಾಲ್ಯ ಕಳೆದು ಯೌವನದ ಹೊಸ್ತಿಲಿಗೆ ಕಾಲಿಟ್ಟ ಮಗಳನ್ನು ಕಂಡಾಗ ಮುದುಕನಿಗೆ ಮರುಕ ಉಂಟಾಗುತ್ತಿತ್ತು. ಅವನಿಗೆ ಹಿಡಿದಿರುವ ಚಿಂತೆ ಮಗಳ ಭವಿಷ್ಯತ್ತಿನದು. ಉತ್ತಮ ವರನ ಕೈಮೇಲಿಟ್ಟು ತನ್ನ ಜವಾಬ್ದಾರಿ ಕಳಚಿಕೊಳ್ಳಬೇಕೆಂದು ಬಗೆದಿದ್ದನು.

ನಾಲ್ಕಾರು ಕಡೆಗಳಿಂದ ಮಗಳ ಮದುವೆಗೆ ಒತ್ತಾಯ ಬಂದಿದ್ದರೂ ಅವನ ಮನಸ್ಸಿಗೇಕೋ ಸಮ್ಮತವಾಗಿರಲಿಲ್ಲ.

ಈಗೆರಡು ದಿನಗಳಿಂದ ಈರಣ್ಣನ ಆರೋಗ್ಯ ಕೆಟ್ಟಿತ್ತು. ಜೊತೆಗೆ ಜ್ವರವೂ ಬಂದಿತ್ತು. ದುಡಿಯಲು ಸಾಧ್ಯವಿದ್ದಿಲ್ಲ. ಕೂಲಿಗಾಗಿ ಮಗಳನ್ನು ಕಳುಹಿಸಿ ಒಬ್ಬನೇ ಉಳಿದಾಗ ಅದೇನೋ ಭಯ ಕಾಡುತ್ತಿತ್ತು. ಮಗಳನ್ನು ಕಾಣುವ ತನಕ ಮನಸ್ಸು ಹಿತದಲ್ಲುಳಿಯುತ್ತಿರಲಿಲ್ಲ.

ದುಡಿದು ಬಂದ ಪಾರ್ವತಿ ತಂದೆಗೆ ಗಂಜಿ ಬೇಯಿಸಿದಳು. ಕಂಚಿನ ಗಂಗಾಳದಲ್ಲಿ ತಂದೆಗೆ ಗಂಜಿಕೊಟ್ಟಳು. ಹತ್ತಿರದ

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶ್ರೀ ಶಿವಪ್ರಸಾದ

ಫೋನ್ 77
ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೫	೨೨—೪—೧೯೬೭	No. 35

Estd. 1921

NAVAYUGA

Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ
ಕೆ. ಸೂರ್ಯನಾರಾಯಣ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾದಾರರನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಂದಿರೇಟರ್ ಜೇಂಕ ದ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುತ್ತದೆ

ಮುಖಪತ್ರ್ರದಲ್ಲಿ.

ಮೆಚ್ಚಬಹುದಾದ ಧೋರಣೆ

ದೇಶದ ಸರ್ವಾಂಗೀಣ ಅಭಿವೃದ್ಧಿ ಯಾಗಬೇಕಾದರೆ ಸರಕಾರದ ಯೋಜನೆ ಗಳ ಜತೆಗೆ ಖಾಸಗಿ ರಂಗದಲ್ಲೂ ತ್ವರಿತದ ಯತ್ನವು ನಡೆಯಬೇಕಾಗಿದೆ. ಕೇವಲ ಸರಕಾರದ ಮುಖ ನೋಡುತ್ತ ಕುಳಿತರೆ, ನಾವು ಮೆಚ್ಚಿನ ಪ್ರಗತಿ ಸಾಧಿಸುವುದು ಕಠಿನ ಮಾತು. ಆದಕಾರಣ, ದೇಶದ ಪ್ರಗತಿರಂಗದಲ್ಲಿ ಪಾಲುಗೊಳ್ಳಲು ಖಾಸಗಿ ಬಂಡವಾಳಗಾರರು, ಉದ್ದಿಮೆದಾರರು ಮುಂದೆ ಬರುವುದು ಅತಿ ಅಗತ್ಯ. ನಮ್ಮ ದೇಶದ ಔದ್ಯಮಿಕ ರಂಗವನ್ನು ಪರಿಶೀಲಿಸಿದರೆ, ಈ ರಂಗದ ಪ್ರಗತಿಗೆ ಸರಕಾರದಷ್ಟೇ ಖಾಸಗಿಯವರೂ ಕಾರಣರಾಗಿದ್ದಾರೆ.

ಟಾಟಾ, ಬಿರ್ಲಾರಂತಹ ಉದ್ದಿಮೆದಾರರ ಧೈರ್ಯ, ಸಾಹಸ ಹಾಗೂ ದೂರದೃಷ್ಟಿಗಳೇ ಇಂದು ಭಾರತದ ಹಲವಾರು ಉದ್ದಿಮೆಗಳಿಗೆ ಜನ್ಮವಿತ್ತಿವೆ. ಆದರೆ ಇತ್ತೀಚೆಗೆ ಖಾಸಗಿ ಕ್ಷೇತ್ರದ ಕುರಿತು, ಖಾಸಗಿ ಉದ್ದಿಮೆಗಳ ಕುರಿತು ಉಪೇಕ್ಷಣೀಯ ಭಾವನ, ನಿರ್ಲಕ್ಷ್ಯತನ ಹರಿಯುತ್ತಿದೆ. ಹೆಚ್ಚಿನ ರಾಜಕೀಯ ಧುರೀಣರು ಖಾಸಗಿ ರಂಗದ ಉದ್ದಿಮೆಗಳಿಗೆ ವಿರೋಧವುಳ್ಳವರಾಗಿದ್ದಾರೆ. ನಮ್ಮ ಸರಕಾರದ ಧೋರಣೆಯಾದರೂ ಇತ್ತೀಚಿನ ಹಲವಾರು ವರುಷಗಳಲ್ಲಿ ಖಾಸಗಿ ರಂಗಕ್ಕೆ ವಿರೋಧವಲ್ಲವಾದರೂ, ಉತ್ತೇಜನದಾಯಕವಾಗಿರಲಿಲ್ಲ.

ಈಗ "ರಾಷ್ಟ್ರೀಕರಣ" "ಸಾರ್ವಜನಿಕ ರಂಗ" ಎಂಬ ಶಬ್ದಗಳತ್ತ ವ್ಯಾಮೋಹ ಹೆಚ್ಚುತ್ತಿದ್ದಾಗಿದೆ. ಸರಿಯಾದರೂ, ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಕೈಗಾರಿಕೆಗಳನ್ನು ಸ್ಥಾಪಿಸುವ ಭರದಲ್ಲಿ ಖಾಸಗಿ ಕ್ಷೇತ್ರವನ್ನು ಕಡೆಗಣಿಸಿದ ನಿದರ್ಶನಗಳಿವೆ. ಸಾರ್ವಜನಿಕ ರಂಗಕ್ಕೆ ನೀಡುತ್ತಿಲ್ಲ. ಮೇಲಾಗಿ, ಸರಕಾರದ ಎಕ್ರ ದೃಷ್ಟಿಯೂ ಈ ಕಡೆ ಹರಿದು ಖಾಸಗಿ ಉದ್ದಿಮೆಗಳು, ಕೈಗಾರಿಕೆಗಳು ಬದುಕುವುದು ಕಷ್ಟವಾಗಿದೆ.

ಸಾರ್ವಜನಿಕ ಹಾಗೂ ಖಾಸಗಿರಂಗದ ಪ್ರಗತಿಯನ್ನು ಗಮನಿಸುವಾಗ, ಬಂಡವಳಿಕೆ ಲಾಭವನ್ನು ತರುವಲ್ಲಿ ಸಾರ್ವಜನಿಕರಂಗಕ್ಕಿಂತಲೂ ಖಾಸಗಿ ರಂಗವೇ ಮುಂದಾಗಿದೆ. ನಮ್ಮ ಹಲವಾರು ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿ ನಡೆಯುತ್ತಿವೆ. ಇದಕ್ಕೆ ಕಾರಣವೇನು? ಸಾರಿಗೆ ರಾಷ್ಟ್ರೀಕರಣದಿಂದ ಸರಕಾರಕ್ಕೆ ಹಾಕಿದ ಬಂಡವಾಳದ ಬಡ್ಡಿಯೂ ದೊರಕದಿದ್ದಲ್ಲಿ ಯಾವ ಉದ್ದೇಶಕ್ಕಾಗಿ ರಾಷ್ಟ್ರೀಕರಣ ಮಾಡಬೇಕು. ರಾಷ್ಟ್ರೀಕರಣದಿಂದ ಯಾ ಸಾರ್ವಜನಿಕ ರಂಗದ ಉದ್ದಿಮೆಗಳಿಂದ ನಾವು ಹೆಚ್ಚಿನ ಲಾಭ ನಿರೀಕ್ಷಿಸದಿದ್ದರೂ, ನಷ್ಟವನ್ನು ನಿರೀಕ್ಷಿಸಬಹುದೆ?

ಖಾಸಗಿ ರಂಗದ ಕುರಿತು ಸರಕಾರದ ಮಲತಾಯಿ ಧೋರಣೆಯಿಂದ ಇತ್ತೀಚೆಗೆ ಬಂಡವಳಗಾರರು, ಉದ್ದಿಮೆದಾರರು ಹೊಸ ಉದ್ದಿಮೆಗಳನ್ನು, ಕೈಗಾರಿಕೆಗಳನ್ನು ತೆರೆಯಲು ಮುಂದೆ ಬರುತ್ತಿಲ್ಲ. ಇದರಿಂದಾಗಿ, ನಮ್ಮ ರಾಷ್ಟ್ರವು ಕೈಗಾರಿಕಾ ಕ್ಷೇತ್ರದಲ್ಲಿ ರಭಸದ ಮುನ್ನಡೆಯನ್ನು ಮಾಡಿಲ್ಲ. ಸಾರ್ವಜನಿಕ ರಂಗಕ್ಕೆ ನೀಡುತ್ತಿರುವ ಅಗ್ರ ಪ್ರಾಶಸ್ತ್ಯದಿಂದ, ಕೈಗಾರಿಕೋದ್ಯಮಗಳು ಬೇಸರ ಹೊಂದಿದಂತಿದೆ. ನಮ್ಮ ದೇಶದ ಅಪಾರ ನೈಸರ್ಗಿಕ ಸಾಧನ ಸಂಪತ್ತಿನ ಸದುಪಯೋಗ ಹೀಗಾಗಿ, ಆಗದೆ ಉಳಿದಿದೆ. ಕೈಗಾರಿಕಾ ಪ್ರಗತಿ ನಿರೀಕ್ಷಿಸಿದಷ್ಟು ಆಗಿಲ್ಲ.

'ಖಾಸಗಿ' ಮತ್ತು 'ಸಾರ್ವಜನಿಕ' ಎಂಬ ಬೇಧಭಾವ ಇಂದು ತೊಲಗಬೇಕಾಗಿದೆ. ಸರಕಾರವಾದರೂ ಈ ಎರಡೂ ಕ್ಷೇತ್ರಗಳನ್ನು ಸಮಾನ ರೀತಿಯಿಂದ ಕಂಡು, ಇಬ್ಬರಿಗೂ ಏಕಪ್ರಕಾರವಾದ ಸವಲತ್ತು, ಸೌಲಭ್ಯಗಳನ್ನು ದೊರಕಿಸಿ ಕೊಟ್ಟು, ಈ ಎರಡು ಕ್ಷೇತ್ರಗಳ ನಡುವೆ ಆರೋಗ್ಯಯುತ ಸ್ಪರ್ಧೆ ಏರ್ಪಡಿಸಬೇಕಾಗಿದೆ. ಹೀಗೆ ಮಾಡುವುದರಿಂದ ಈ ಎರಡೂ ಕ್ಷೇತ್ರಗಳ ಪರಸ್ಪರರಿಂದ ಅರಿತು ಕೊಂಡು ಪ್ರಗತಿ ಹೊಂದಲು ಸಾಧ್ಯ.

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಸಿದ್ಧವನ ಹಳ್ಳಿ ನಿಜಲಿಂಗಪ್ಪನವರು ಈ ದಿಸೆಯಲ್ಲಿ ದಿಟ್ಟವಾದ ಹೆಜ್ಜೆ ಇಟ್ಟಿರುತ್ತಾರೆ. ಕಳೆದ ತಿಂಗಳು ಅವರು ಕಲ್ಕತ್ತದ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್‌ನ ಸಭೆಯಲ್ಲಿ ನೆರೆದಿದ್ದ ಅಪಾರ ಕೈಗಾರಿಕೋದ್ಯಮಿಗಳನ್ನುದ್ದೇಶಿಸಿ ಮಾತನಾಡುತ್ತಾ, ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳ ನಡುವೆ ಬೇಧಭಾವ ಸಲ್ಲದು ಎಂದರು. ಅಧಿಕ ಉತ್ಪಾದನೆ ಮತ್ತು ಉಪಯೋಗವಾಗದೆ ಉಳಿದಿರುವ ನೈಸರ್ಗಿಕ ಸಂಪತ್ತಿನ ಸದುಪಯೋಗ — ಇವುಗಳೇ ಇಂದಿನ ಗುರಿಗಳಾಗಿವೆ, ಇವುಗಳನ್ನು ಯಾರು ಮಾಡಿದರೂ ಸರಿಯೇ ಎಂಬ ಅಭಿಪ್ರಾಯವನ್ನು ಅವರು ತಾಳಿದರು.

ಕೈಗಾರಿಕೋದ್ಯಮಿಗಳು ದೇಶದ ಔದ್ಯಮಿಕ ಪ್ರಗತಿಗೆ ಮೂಲ ಕಾರಣಕರ್ತರು. ಧೈರ್ಯ, ಸಾಹಸಗಳೇ ಉದ್ದಿಮೆಗಳ ಪ್ರಗತಿಗೆ ಕಾರಣ ಎಂದು ನುಡಿದ ನಿಜಲಿಂಗಪ್ಪನವರು ಉದ್ದಿಮೆದಾರರನ್ನು ಮೈಸೂರು ರಾಜ್ಯಕ್ಕೆ ಆದರದಿಂದ ಆಮಂತ್ರಿಸಿದ್ದಾರಲ್ಲದೆ, ಅವರಿಗೆ ಸಕಲ ಪ್ರೋತ್ಸಾಹ ನೀಡುವ ಭರವಸೆ ನೀಡಿದ್ದಾರೆ, ಒಂದು ವೇಳೆ ಇದಕ್ಕೆ ಕೇಂದ್ರದ ತಡೆ ಇರುವುದಾದರೆ ತಾನು ಅದರ ವಿರುದ್ಧ ಹೋರಾಡುವುದಾಗಿ ಹೇಳಿದ್ದಾರೆ.

ನಮ್ಮ ಮುಖ್ಯ ಮಂತ್ರಿಗಳ ನಿಲುವು ಸಮಯೋಚಿತ ಮಾತ್ರವಲ್ಲ ನ್ಯಾಯೋಚಿತವೂ ಹೌದು. ಕೇವಲ ಸಾರ್ವಜನಿಕ ರಂಗವನ್ನೇ ನಾವು ನೆಚ್ಚಿಕೊಂಡು ಬಾಳುವಂತಿಲ್ಲ. ಖಾಸಗಿ ಸಾರ್ವಜನಿಕ ಎರಡೂ ರಂಗಗಳು ಸ್ಪರ್ಧೆಯಿಂದ ಕಾರ್ಯವೆಸಗಿದರೆ ಆಗ ನಿಜಕ್ಕೂ ಯೋಗ್ಯ ಫಲಿತಾಂಶ ಸಿಗುವುದು. ಶ್ರೀ॥ ನಿಜಲಿಂಗಪ್ಪನವರು ರಾಜ್ಯದ ಔದ್ಯಮಿಕ ಅಭಿವೃದ್ಧಿಯತ್ತ ತೀವ್ರ ಆಸಕ್ತರಾಗಿದ್ದಾರೆ. ಅಂತಲೇ, ಅವರು ಕಲ್ಕತ್ತ, ಮುಂಬಯಿಗಳಂತಹ ನಗರಗಳಿಗೆ ಹೋಗಿ ಉದ್ದಿಮೆದಾರರನ್ನು ಮೈಸೂರಿಗೆ ಬರುವಂತೆ ಆಹ್ವಾನಿಸುತ್ತಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳ ಈ ಧೋರಣೆ, ಅನುಕರಣೀಯ ಮಾತ್ರವಲ್ಲ ಉತ್ತೇಜನಕಾರಿಯೂ ಹೌದು.

ವಚನ ಸುಧೆ

ಜರಾ ರೂಪಂ ಹರತಿ ಧೈರ್ಯಮಾಶಾ
ಮೃತ್ಯುಃ ಪ್ರಾಣಾನ್ ಧರ್ಮಚರ್ಯಾಮಸೂಯಾ|
ಕಾಮೋ ಹ್ರಿಯಂ ವೃತ್ತಮನಾರ್ಯಸೇವಾ
ಕ್ರೋಧಃ ಶ್ರಿಯಂ
ಸರ್ವಮೇವಾಭಿಮಾನಃ ॥

ಮುಪ್ಪು ರೂಪವನ್ನು, ಆಶೆಯು ಧೈರ್ಯವನ್ನು, ಮೃತ್ಯು ಪ್ರಾಣವನ್ನು, ಅಸೂಯೆಯು ಧರ್ಮಾಚರಣೆಯನ್ನು, ಕಾಮವು ಲಜ್ಜೆಯನ್ನು, ನೀಚಸೇವೆಯು ಸದಾಚಾರವನ್ನು, ಕ್ರೋಧವು ಸಂಪತ್ತನ್ನು ಮತ್ತು ಅಭಿಮಾನವು ಸರ್ವಸ್ವವನ್ನೂ ನಾಶಗೊಳಿಸುತ್ತದೆ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 42/67

ವಾದಿ—ಶೀನಪ್ಪ ಸಟ್ಟಿ,
ಪ್ರತಿವಾದಿ—ಗೋವಿಂದ ಸಟ್ಟಿ

ಉಪ್ಪುಂದ ಗ್ರಾಮದಲ್ಲಿರುವ ಚೌಟಿಮನೆಲು ಶೇರಿ ಸಟ್ಟಿ ಮಗ ಸದ್ರಿ ಪ್ರತಿವಾದಿ ಗೋವಿಂದ ಸಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನಿಮ್ಮಿಂದ ನೋಟಿನ ಬಾಬ್ತು ಕೂಡಾ ಬರತಕ್ಕ ಹಣ ಬಡ್ಡಿಯನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿ ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವಾ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾ 8-6-1967ನೇ ದಿನ ಬೆಳಿಗ್ಗೆ 11 ಗಂಟೆಗೆ ತನ್ಕಿಗೆ ಇಡಲ್ಪಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

B. S. Shetty
B. A., B. L.
Vakil for Plaintiff
Coondapoor, 22—4—67

ನರಸಣ್ಣನ ಸರಸ



"ಕಾಂಗ್ರೆಸೇತರ ಸರಕಾರವಿದ್ದ ರಾಜ್ಯಗಳಲ್ಲೂ ಗೋಲಿಬಾರ್, ಲಾಠೀ ಚಾರ್ಜ್ ನಡೆಯುತ್ತವಂತಲ್ಲ ರಾಯರೇ?"

"ಪೊಲೀಸರಿಗೆ ಪಡೆಸ್ವೀಕರಿಸಿ ಮಂತ್ರಿಗಳೇ ಆಜ್ಞಾಪಿಸಿ ಬಿಟ್ಟರೆ ಗೊಂದಲ ಮುಗೀತಲ್ಲ!"

ಗುರುದೇವ ರವೀಂದ್ರನಾಥ ಟಾಗೋರ್

ಇವರ ಅಮೃತಶಿಲಾ ಪ್ರತಿಮೆಯೊಂದನ್ನು ಇತ್ತೀಚೆಗೆ ರಾಜ್ಯಪಾಲ ವಿ. ವಿ. ಗಿರಿಯವರು ಮಂಗಳೂರು ಬಾವಟೆ ಗುಡ್ಡೆಯಲ್ಲಿನ ಟಾಗೋರ್ ಉದ್ಯಾನದಲ್ಲಿ ಅನಾವರಣ ಗೈದರು.

ಬಾಹ್ಯಾಂತರಿಕ್ಷ ಪಠನವೆಸಗುವ

ಕ್ಷಿಪಣಿ ವಿಕ್ಷೇಪಣಾ ಕೇಂದ್ರ

ಬರೆದವರು:
ಶ್ರೀ ಎಚ್. ಎಂ. ನಾರಾಯಣ ಭಟ್

ಕೇರಳದ ರಾಜಧಾನಿಯೂ ಹಿಂದೂ ಯಾತ್ರಾ ಸ್ಥಳಗಳಲ್ಲೊಂದಾದ "ಅನಂತಶಯನ"ವೂ ಆಗಿರುವ ತಿರುವನಂತಪುರದ ಸಮೀಪ "ತುಂಬಾ" ಎಂಬಲ್ಲಿನ ಕ್ಷಿಪಣಿ ವಿಕ್ಷೇಪಣಾ ಕೇಂದ್ರದಿಂದ ಮೊದಲನೇ ಪ್ರಯೋಗವಾಗಿ "ಜೂಡಿಡಾರ್ಟ್ ರಾಕೆಟ್" ವಿಕ್ಷೇಪಿಸಲ್ಪಟ್ಟುದಾಗಿ ಕೆಲವು ತಿಂಗಳ ಹಿಂದಿನ ವರದಿಯಿತ್ತು.

ಇದೊಂದು ಸಾಮಾನ್ಯ ವಿಚಾರವಾಗಿ ತೋರಿದರೂ ವಿಜ್ಞಾನ—ಸಂಶೋಧನಾ ಕ್ಷೇತ್ರದ ಒಂದು ಮಹತ್ಸಾಧನೆಗಳಲ್ಲೊಂದಾಗಿ ಪರಿಗಣಿಸಲಾಗುತ್ತಿದೆ.

ಹವಾಮಾನ ಪಠನ

ಜೂಡಿ ಡಾರ್ಟ್ ರಾಕೆಟ್‌ಗಳು ಹವಾಮಾನ ಸಂಶೋಧನೆಯ ಆವಶ್ಯಕತೆಗಳಿಗಾಗಿದ್ದು ಇದೀಗ ಈ ಕೇಂದ್ರದಿಂದ ಪ್ರಥಮ ಬಾರಿಯ ಯಶಸ್ವೀ ಪ್ರಯೋಗವನ್ನು ಮಾಡಲಾಗಿದೆ. ಗಾಳಿಯ ವೇಗ, ಬಾಹ್ಯಾಂತರಿಕ್ಷದ ಹವಾಮಾನ ಮುಂತಾದವುಗಳನ್ನು ಅಳೆಯುವುದೇ ಪ್ರಧಾನ ಉದ್ದೇಶವಾಗಿತ್ತು.

ಈ ವಿಕ್ಷೇಪಣಾ ಕೇಂದ್ರದಲ್ಲಿ ಪ್ರಯೋಗ ಪ್ರಾರಂಭವಾದ ದಿನಗಳಲ್ಲಿ ಜನಸಾಮಾನ್ಯರ ಉತ್ಸಾಹ ಕೆರಳಿತ್ತು; "ಮೇಘ ಆಕಾಶದಲ್ಲಿ ಉರಿಯುವ ನಕ್ಷತ್ರದಂತೆ ಬೆಳ್ಳಿಯ ಬಣ್ಣದ ತಟ್ಟೆಗಳಿಂದ ದೂರಕ್ಕೆ ಓಡಿ ಬಂದು ಮೇಲಕ್ಕೆ ನೋಡಿ ನಿಲ್ಲುವ ಆಸಕ್ತಿ ಕಡಿಮೆಯಾಗುತ್ತ ಬಂದಿದೆ—ಎಂದು ತಿರುವನಂತಪುರ ನಿವಾಸಿಗಳೊಬ್ಬರು ವಿವರಿಸಿದರು.

ಬಾಹ್ಯಾಕಾಶ ಸಂಶೋಧನೆ

ಭಾರತದಲ್ಲಿ ಬಾಹ್ಯಾಕಾಶ ಸಂಶೋಧನಾ ಕಾರ್ಯವನ್ನು ೧೯೬೧ರಲ್ಲಿ ಅಣುಶಕ್ತಿ ಆಯೋಗ ವಹಿಸಿತು. ಈ ಬಗ್ಗೆ ಬೇಕಾದ ರೂಪಗಳನ್ನು ತಯಾರಿಸಲು ಮತ್ತು ಅದರ ಸ್ಥೂಲ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಹಾಯಕವಾಗುವಂತೆ "ಇಂಡಿಯನ್ ನೇಶನಲ್ ಕಮಿಟಿ ಫಾರ್ ಸ್ಪೇಸ್ ರಿಸರ್ಚ್" ರೂಪಿಸಲ್ಪಟ್ಟಿತು. ಅದರ ಬಳಿಕ ತುಂಬಾ ವಿಕ್ಷೇಪಣಾ ಕೇಂದ್ರ ಸ್ಥಾಪಿಸಲ್ಪಟ್ಟದ್ದು. ಇದನ್ನೇ "ಟೇರ್ಲ್ಸ್" (Terls)—ತುಂಬಾ ಇಕ್ವಿಟೋರಿಯಲ್ ರಾಕೆಟ್ ಲಾಂಚಿಂಗ್ ಸ್ಟೇಶನ್ ಎನ್ನುವುದೂ ಇದೆ.

ಈ ಕೇಂದ್ರ ಕಾರ್ಯಪ್ರವೃತ್ತವಾದುದು ೧೯೬೩ನೇ ನವಂಬರದಲ್ಲಿ. ಭೂಮಧ್ಯರೇಖೆಯ ಕಾಂತ ವಲಯದಲ್ಲಿ ನಿರ್ವಹಿಸಬೇಕಾದ "ಸೌಂಡಿಂಗ್ ರಾಕೆಟ್" (Sounding Rocket) ಪ್ರಯೋಗವು ಅಮೇರಿಕಾ ದೇಶದ "ನಾಸ", ಫ್ರಾನ್ಸಿನ "ನೇಸ" ಮತ್ತು ರಷ್ಯಾದ ಸೈನ್ಸ್ ಎಕಾಡೆಮಿ ಎಂಬೀ ಸಂಸ್ಥೆಗಳ ಸಹಕಾರದಿಂದ ಸಾಧ್ಯವಾಯಿತು. ಈ ಕೇಂದ್ರದ ಸ್ಥಾಪನೆ ಬಗ್ಗೆ ಆಗಿನ ರಾಜ್ಯ ಸರಕಾರ ಸಂತೃಪ್ತವಾಗಿರಲಿಲ್ಲವೆನ್ನಲಾಗಿದೆ.

೧೯೬೪ರಲ್ಲಿ ದೇಶವಿದೇಶಗಳ ವಿಜ್ಞಾನಿಗಳು ಈ ಕೇಂದ್ರವನ್ನು ಸಂದರ್ಶಿಸಿ ಇದರ ಚಟುವಟಿಕೆಗಳ ಬಗ್ಗೆ ಸಂಬಂಧಪಟ್ಟ ವಿಜ್ಞಾನಿಗಳ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದರು.

'ಸೌಂಡಿಂಗ್ ರಾಕೆಟ್" ಅಂತರಿಕ್ಷ ಪರಿಸರಕ್ಕೆ ಅತಿ ಪ್ರಯೋಜನಕಾರಿಯಾಗಿದ್ದು ಈ ಯಂತ್ರೋಪಕರಣವು "ಬಲೂನ್" ಪರಿಧಿಯಿಂದಲೂ ಆಚೆ—ಉಪಗ್ರಹಗಳ ಪರಿಧಿಯನ್ನೂ ಮೀರಿ ಸುಮಾರು ೧೦೦ ಮೈಲಿ ತನಕವೂ ಅಳತೆ ಮಾಡುವ ಸಾಮರ್ಥ್ಯವುಳ್ಳದ್ದೆಂದು ಹೇಳಲಾಗಿದೆ. ರೇಡಿಯೋ ಪ್ರಸರಣದ ಕುರಿತೂ ಮಾಹಿತಿ ಸಂಗ್ರಹಿಸಲು ಈ ಯಂತ್ರಕ್ಕೆ ಸಾಧ್ಯವಂತೆ!

ಈ ಕೇಂದ್ರದ ಟೆಸ್ಟ್ ಡೈರೆಕ್ಟರ್‌ರ ವಿವರಣೆ ಮೇರೆಗೆ ಈ ಕೇಂದ್ರದ ಪ್ರಾಧಾನ್ಯ ಬಹಳವಿದೆ. ಇಲ್ಲಿನ ವೈಜ್ಞಾನಿಕ ಸಂಶೋಧನಾ ಫಲಗಳು ಇತರ ವಿಜ್ಞಾನಿಗಳಿಗೆ ದಾರಿದೀಪ—ಅಮೂಲ್ಯವಾದುದು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉತ್ಥಾನವೆಂದು?

ಪ್ರಗತಿ, ಏಳಿಗೆ ಎನುವ ಜನ
ಜಾಗೃತಿಯ ಹೊಂದಿ ಮನ
ನಿಗ್ರಹವ ಜಯಿಸಿದೊಡೆ ನಮ್ಮ ಉತ್ಥಾನ

ವಿನಯದಿಂದಲಿ ಬಾಳಿ ಸ
ವಿನಯ ವಿದ್ಯಾಭೂಷಿತವಥಿ
ಮಾನರಹಿತ ವಿನಯವಾತ್ಮಕ್ಕೈರಿಯ
ಉತ್ಥಾನ.

ಸಂಪತ್ತು ಸಮೃದ್ಧಿ ಯ
ಇಂಪುರಸದೊಳಗದ್ದಿ ಕಾ
ಕಂಪ ಹರಡಿದೊಡಾಗ ನಾಡಿನುತ್ಥಾನವು

ಕರ್ತವ್ಯವಿಮುಖತೆಯ
ವರ್ತನೆಗೆ ಇಂಬಿಡದೆ
ನರ್ತಿಸುವ ನೀಚತೆಯ ತೊರೆದೊಡು
ತ್ಥಾನ.

ಭೀಷ್ಮ ವಿಶ್ವಾಮಿತ್ರದ್ವಯ
ಸೂಕ್ಷ್ಮ ಲಾಲಸೆ ತೊರೆದತೆರ
ರೇಷ್ಮೆಯಂತೆ ಮನವಾದ ರಾಗ ಉತ್ಥಾನ.

ಲಾಲಸೆಯಿಂದ ಬಂಧಮುಕ್ತ
ಹಾಲಹಲದ ಇಚ್ಛೆ, ಸುಕ್ತ
ಕಾಲದಲ್ಲಿ ತೊರೆದೊಡಾಗ ಭವ್ಯ ಉತ್ಥಾನ

ಪುನರುತ್ಥಾನಗೊಳ್ಳಲೀ ನಮ್ಮ
ಘನನಾಡಿನಿತಿಹಾಸ ಮಹಾ
ಜನ ತಿಳಿದು ಬಯಸಲಿದ ಭವ್ಯ ಉತ್ಥಾನ.

—ಮು. ಗೋ. ರಾವ್.

ಸ್ಪೇಸ್ ಟೆಕ್ನೋಲಜಿ

"ಸ್ಪೇಸ್ ಟೆಕ್ನೋಲಜಿ" ಕೇಂದ್ರವೊಂದನ್ನು ಇದರ ಬಳಿಯಲ್ಲಿಯೇ ಬೇಗನೇ ಸ್ಥಾಪಿಸಲಿದ್ದಾರೆ ಬಾಹ್ಯಾಂತರಿಕ್ಷ ಪಠನವನ್ನು ಪ್ರೋತ್ಸಾಹಿಸಲು ಕೇರಳ ವಿಶ್ವವಿದ್ಯಾನಿಲಯವೂ "ಡಿಗ್ರಿ ಕೋರ್ಸ್" ಪ್ರಾರಂಭಿಸುವ ಉದ್ದೇಶದಿಂದಿದೆ.

ವಿದೇಶೀ ವಿಜ್ಞಾನಿಗಳ ಆಶಯದ ಮೇರೆಗೆ ಮುಂದಿನ ದಶವರ್ಷದಲ್ಲಿ ಈ ವಿಕ್ಷೇಪಣಾ ಕೇಂದ್ರವು ಮಹತ್ತರ ಸಾಧನೆಗಳನ್ನು ಸಾಧಿಸಲಿದೆ.

—(ಸಂಗ್ರಹ)

ಅಮೃತ ಬಿಂದು

ಧರ್ಮದ ಹೃದಯ (ತಿರುಳು)ವನ್ನರಿತವನು ಇತರರ ಹೃದಯಗಳನ್ನು ಸುಲಭವಾಗಿ ಮುಟ್ಟುವನು.

೦ ೦ ೦ ೦

ದೇವರನ್ನು ಪ್ರೀತಿಸಿದರೆ ಆತನು ನಮ್ಮೊಳಗೆ ಜೀವಿಸುತ್ತಾನೆ. ದೇವರ ಸೇವಕನಾದರೆ ಆತನ ನಿತ್ಯ ತತ್ವಗಳ ಸತ್ಯತೆಯನ್ನು ತೋರುತ್ತಾನೆ.

೦ ೦ ೦ ೦

ಧರ್ಮದ ಪಥವು ದೀನನಿಗೆ ಸುಲಭಗ್ರಾಹ್ಯ, ಅಹಂಕಾರಿಗೆ ಅಡಚಣೆ ತುಂಬಿದ್ದು, ನೀಚನಿಗೆ ಅಭೇದ್ಯವಾದುದು.

೦ ೦ ೦ ೦

ಸುಖವೆಂಬುದು ಒಣಗಿ ಹೋಗುವ ಹೂವಿನಂತೆ, ಸುಖದ ನೆನಪು ಹೂವಿನ ಕಂಪಿನಂತೆ!

೦ ೦ ೦ ೦

ಪ್ರತೀಕಾರ ಭಾವನೆ ಇರುವವರು ಒಣಗಿ ವಾಸಿಯಾಗುವ ಗಾಯವನ್ನು ಕೆದಡಿ ಹೆಚ್ಚಿಸುವರು.

೦ ೦ ೦ ೦

ಕಣ್ಣಿಗೆ ರೆಪ್ಪೆಗಳಿರುವಂತೆ ಕೆಲಸಕ್ಕೆ ವಿಶ್ರಾಂತಿ ಬೇಕು.

೦ ೦ ೦ ೦

ಪುಸ್ತಕ ಓದುವುದಕ್ಕಿಂತಾ ಕಡಿಮೆ ವೆಚ್ಚದ ಮನೋರಂಜನೆ ಇಲ್ಲ; ಮತ್ತು ಅದರಷ್ಟು ದೀರ್ಘಕಾಲ ಮನಸ್ಸಿನಲ್ಲುಳಿಯುವ ಸುಖವೂ ಬೇರಿಲ್ಲ.

೦ ೦ ೦ ೦

ಮನುಷ್ಯರು ಕ್ರೂರರಾಗಿದ್ದಾರೆಂಬುದು ನನಗೆ ಆಶ್ಚರ್ಯದ ವಿಚಾರವಲ್ಲ; ಈ ಕ್ರೌರ್ಯಕ್ಕಾಗಿ ಅವರಿಗೆ ನಾಚಿಕೆ ಎನಿಸದಿರುವುದು ಆಶ್ಚರ್ಯ.

೦ ೦ ೦ ೦

ಹಣವು ಸೇವಕನಾಗಿದ್ದರೆ ನಿಜಕ್ಕೂ ಒಳ್ಳೆಯದು. ಅದು ಯಜಮಾನನಾದರೆ ಮಾತ್ರ ಜೀವನ ನಿಸ್ಸಾರವಾಗುವುದು.

೦ ೦ ೦ ೦

ದುಡಿತದ ಆದರ್ಶವನ್ನು ತನ್ನ ಮಕ್ಕಳಿಗೆ ಉಳಿಸಿಕೊಡುವ ಮಾತಾಪಿತರು ಅಮಿತ ಆಸ್ತಿಪಾಸ್ತಿಗಳಿಗಿಂತಾ ಹೆಚ್ಚಿನದಾಯವನ್ನು ಒದಗಿಸಿದಂತೆ.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....
ಅದಕ್ಕಾಗಿ ಚಿಂತಿಸುವಿರೇಕೆ?................
ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ.........
ವೀಗಲ್
VEEGAL
ಪೆಟ್ರೋಲ್ / ಚಿಮಿಣಿ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು
2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು :
ವಿಕ್ಟರ್ ಟ್ರೇಡಿಂಗ್ ಕೋರ್ಪೋರೇಶನ್
ಫಳನೀರು ರಸ್ತೆ, ಮಂಗಳೂರು-1. Pb. 5737

ವಿವೇಚನೆ

ಕೇಂದ್ರ - ರಾಜ್ಯಗಳ ಸಂಬಂಧ

ಲೇಖಕರು:
ಶ್ರೀ ಕೆ. ಜಿ. ವಸಂತಮಾಧವ, ಎಂ. ಎ.

ಪೀಠಿಕೆ:— ಇತ್ತೀಚಿನ ಚುನಾವಣೆಯಿಂದಾಗಿ ಭಾರತದ ಕೆಲವು ರಾಜ್ಯಗಳಲ್ಲಿ ಅಧಿಕಾರ ರೂಢವಾಗಿದ್ದ ಕಾಂಗ್ರೆಸ್ ಪಕ್ಷವು ಬಹುಮತವನ್ನು ಕಳೆದುಕೊಂಡು ವಿರೋಧ ಪಕ್ಷವಾಗಿದೆ. ಕೇಂದ್ರದಲ್ಲಿ ಅಲ್ಪ ಬಹುಮತದಿಂದ ಕಾಂಗ್ರೆಸ್ ಅಧಿಕಾರಾರೂಢ ಪಕ್ಷವಾಗಿದೆ. ಇದರಿಂದಾಗಿ ಕೇಂದ್ರ ಕಾಂಗ್ರೆಸ್ ಸರಕಾರ ಮತ್ತು ರಾಜ್ಯಗಳ ಕಾಂಗ್ರೆಸೇತರ ಸರಕಾರಗಳು ಘರ್ಷಣೆಗೆ ಬಂದು ದೇಶದ ಐಕ್ಯಕ್ಕೆ ಭಂಗ ತರುವುದೊ ಎಂಬ ಸಮಸ್ಯೆ ರಾಜ್ಯ ಶಾಸ್ತ್ರಜ್ಞರಲ್ಲಿ ಹುಟ್ಟಿಕೊಂಡಿದೆ. ಇಪ್ಪತ್ತು ವರುಷಗಳಿಂದ ಕೇಂದ್ರ-ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಈ ಅವಧಿಯಲ್ಲಿ (೧೯೫೭—೫೯ರಲ್ಲಿ ಕೇರಳ ರಾಜ್ಯವನ್ನು ಹೊರತುಪಡಿಸಿ) ಕೇಂದ್ರ-ರಾಜ್ಯ ಸರಕಾರಗಳಲ್ಲಿ ಘರ್ಷಣೆಯು ಬಂದಿದ್ದರೂ ಶ್ರೇಷ್ಠ ಜನನಾಯಕ ನೆಹರೂರವರ ವರ್ಚಸ್ಸು, ವ್ಯಕ್ತಿತ್ವದಿಂದಾಗಿ ಈ ಘರ್ಷಣೆ ಮಾಯವಾಗಿ ಕೇಂದ್ರ ಸರಕಾರಕ್ಕೆ ಯಶಸ್ಸು ದೊರೆತಿದೆ. ಆದರೆ ಈಗ ಕೇಂದ್ರದಲ್ಲಿ ನೆಹರೂರವರಂತಹ ನಾಯಕರಿಲ್ಲ. ಇದೇ ಸಮಯದಲ್ಲಿ ಕೆಲವು ರಾಜ್ಯಗಳ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ತಮ್ಮ ರಾಜ್ಯಕ್ಕೆ ಹೆಚ್ಚಿನ ಅಧಿಕಾರಕ್ಕೋಸುಗ ಹೋರಾಡುವುದಾಗಿ ತಿಳಿಸಿದ್ದಾರೆ. ಇದರಿಂದಾಗಿ ಇನ್ನು ಮುಂದೆ ಕೇಂದ್ರ-ರಾಜ್ಯಗಳಲ್ಲಿ ಘರ್ಷಣೆ ಬರುವುದೋ? ಭಾರತವು ಸ್ಥಿರವಾಗಿ, ಭದ್ರ ರಾಷ್ಟ್ರವಾಗಿ ನಿಲ್ಲಬಲ್ಲುದೋ? ನಮ್ಮ ಪ್ರಜಾಪ್ರಭುತ್ವ ಸಂಯುಕ್ತ ರಾಷ್ಟ್ರ ಪದ್ಧತಿ ಯಶಸ್ವಿಯಾಗಬಹುದೊ? ಎಂಬ ಸಮಸ್ಯೆಗಳು ದೇಶಭಕ್ತರನ್ನು ಕಾಡುತ್ತಿವೆ. ಇವುಗಳಿಗೆ ಉತ್ತರಿಸುವ ಪೂರ್ವದಲ್ಲಿ ನಮ್ಮ ಘಟನೆಯಲ್ಲಿ ಕೇಂದ್ರ— ರಾಜ್ಯಗಳ ಸಂಪರ್ಕ ಹೇಗಿದೆ ಎಂದು ತಿಳಿಯುವುದು ಅಗತ್ಯ.

ಭಾರತವು ಅರ್ಧ ಏಕೀಕೃತ, ಅರ್ಧ ಸಂಯುಕ್ತ ರಾಷ್ಟ್ರವಾಗಿದೆ [Quasi fedrae, Quasi monitary] ೧೯೪೭ರ ಪೂರ್ವದಲ್ಲಿ ಭಾರತವು ಏಕರಾಷ್ಟ್ರವಾಗಿತ್ತು. ಆಗ ಭಾರತದ ಪ್ರಾಂತ್ಯಗಳೆಲ್ಲ ಕೇಂದ್ರ ಸರಕಾರದ ಕವಲುಗಳಾಗಿದ್ದವು. ಕೇಂದ್ರ ಸರಕಾರವು ಆಡಳಿತೆಯ ಅನುಕೂಲಕ್ಕೋಸ್ಕರ ದೇಶವನ್ನು ಹಲವು ಘಟಕಗಳಾಗಿ ಮಾಡಿತ್ತು. ಅವೇ ಮುಂದೆ ಪ್ರಾಂತ್ಯಗಳಾಗಿ ಮಾರ್ಪಾಡುಗೊಂಡವು. ಆದುದರಿಂದ ಭಾರತದಲ್ಲಿ ಪ್ರಾಂತ್ಯಗಳು ಕೇಂದ್ರ ಸರಕಾರದಿಂದ ರಚಿಸಲ್ಪಟ್ಟವು. ಸಂಯುಕ್ತರಾಷ್ಟ್ರದ ಮುಖ್ಯ ತತ್ವದಂತೆ ಇಲ್ಲಿ ಕೇಂದ್ರ—ರಾಜ್ಯ ಸರಕಾರಗಳ ಅಧಿಕಾರ ವಿಭಜನೆ ಇದೆ. [Division of power] ನಮ್ಮ ರಾಜ್ಯಾಂಗ ಘಟನೆ ಕೇಂದ್ರ—ರಾಜ್ಯ ಸರಕಾರಗಳ ಸಂಬಂಧವನ್ನು ಸರಿಯಾಗಿ ರೂಪಿಸಿದೆ. ಅವುಗಳನ್ನು ಶಾಸನಾಂಗ, ಆಡಳಿತಾಂಗ ಮತ್ತು ಹಣಕಾಸಿನ ಸಂಬಂಧಗಳಾಗಿ ನಿರೂಪಿಸಿ ವಿಂಗಡಿಸಿದೆ.

ಶಾಸನ ಸಂಬಂಧ:— ಸಂಯುಕ್ತ ರಾಷ್ಟ್ರದ [Fedral] ಮುಖ್ಯ ತತ್ವದಂತೆ ಕೇಂದ್ರ-ರಾಜ್ಯ ಸರಕಾರಗಳ ಅಧಿಕಾರವನ್ನು ಸಂಯುಕ್ತರಾಷ್ಟ್ರ ಪಟ್ಟಿ [Union List] ಮತ್ತು ರಾಜ್ಯ ಪಟ್ಟಿ State List] ಮತ್ತು ರಾಜ್ಯ ಮತ್ತು ರಾಷ್ಟ್ರ ಸಮವರ್ತಿ ಪಟ್ಟಿ [Concurrent List] ಗಳಾಗಿ ವಿಭಜಿಸಿದೆ. ಇದಕ್ಕೆ ಸಂಯುಕ್ತ ರಾಷ್ಟ್ರಕ್ಕೆ ಅನ್ವಯಿಸುವ ಶಾಸನ ರಚನಾಧಿಕಾರ ಭಾರತದ ಪಾರ್ಲಿಮೆಂಟಿಗೆ ಸೇರಿದ್ದು. ರಾಜ್ಯ ಸರಕಾರಕ್ಕೆ ಸಮವರ್ತಿ ಪಟ್ಟಿಯಲ್ಲಿ ಅಡಕವಿರುವ ವಿಷಯಗಳ ಮೇಲೆ ಕಾನೂನು ಮಾಡುವ ಅಧಿಕಾರವಿದ್ದರೂ; ಕೇಂದ್ರ ಸರಕಾರಕ್ಕೂ ಸಮವರ್ತಿ ಪಟ್ಟಿಯಲ್ಲಿ ಅಡಕವಾಗಿರುವ ವಿಷಯದ ಮೇಲೆ ಕಾನೂನುಮಾಡುವ ಸಂಪೂರ್ಣ ಹಕ್ಕಿದೆ. ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಮೇಲೆ ಕೇಂದ್ರ—ರಾಜ್ಯ ಸರಕಾರಗಳಲ್ಲಿ ಘರ್ಷಣೆ ಬಂದರೆ ಕೇಂದ್ರ ಸರಕಾರವು ಮಾಡಿದ ಕಾನೂನು ಜ್ಯಾರಿಯಲ್ಲಿ ಬರತಕ್ಕದ್ದು ಎಂದು ನಮ್ಮ ಘಟನೆ ಸ್ಪಷ್ಟವಾಗಿ ಹೇಳಿದೆ. ಭಾರತದ ಘಟನೆಯಲ್ಲಿ ಉಕ್ತವಾಗದೇ ಇರುವ ವಿಷಯಗಳನ್ನು ಕುರಿತು ಶಾಸನಾಧಿಕಾರ ಕೇಂದ್ರ ಶಾಸನ ಸಭೆಗಳಿಗಿವೆ. ರಾಜ್ಯ ಪಟ್ಟಿಗಳ ಮೇಲೆ ಆಯಾ ರಾಜ್ಯಕ್ಕೆ ಅಧಿಕಾರವಿದ್ದರೂ 24ನೇ ನಿಬಂಧನೆಯ ಪ್ರಕಾರ ರಾಷ್ಟ್ರಕ್ಕೆ ಅಗತ್ಯವಿರುವ ವಿಷಯವೆಂದು ರಾಜ್ಯ ಸಭೆಯು 2/3 ಮತದಿಂದ ಪರಿಗಣಿಸಲ್ಪಟ್ಟಲ್ಲಿ ಕೇಂದ್ರ ಸರಕಾರಕ್ಕೆ ರಾಜ್ಯಪಟ್ಟಿಗಳಲ್ಲಿರುವ ವಿಷಯದ ಮೇಲೆ ಕಾನೂನು ಮಾಡುವ ಹಕ್ಕಿದೆ. ಈ ರೀತಿ ರಾಜ್ಯಪಟ್ಟಿಗಳಲ್ಲಿ ಇರುವ ವಿಷಯದ ಮೇಲೆ ಕೇಂದ್ರ ಸರಕಾರಕ್ಕೆ ಕಾನೂನು ಮಾಡುವ ಹಕ್ಕು ಒಂದು ವರ್ಷಕ್ಕೆ ಮಾತ್ರ. ಆದರೆ ಕೇಂದ್ರ ಸರಕಾರವು ಪ್ರತಿ ವರ್ಷವೂ ರಾಜ್ಯ ಸಭೆಯ 2/3ರಷ್ಟು ಮತ ಪಡೆದು ರಾಜ್ಯ ಸರಕಾರಕ್ಕೆ ಸೇರಿದ ವಿಷಯಗಳ ಮೇಲೆ ಕಾನೂನು ಮಾಡಿದರೆ ಯಾವ ಘಟನಾತ್ಮಕ ತೊಂದರೆ ಸಂಭವಿಸುವುದಿಲ್ಲ. ನಿಬಂಧನೆ 250ರ ಪ್ರಕಾರ ರಾಷ್ಟ್ರಕ್ಕೆ ಗಂಡಾಂತರ ಪರಿಸ್ಥಿತಿ ಇದ್ದರೆ ರಾಷ್ಟ್ರಪತಿಯು ತುರ್ತು ಪರಿಸ್ಥಿತಿಯನ್ನು ಸಾರಬಹುದು. ಇಂತಹ ತುರ್ತು ಪರಿಸ್ಥಿತಿಯಲ್ಲಿ ಕೇಂದ್ರ ಶಾಸನ ಸಭೆಗಳಿಗೆ ಸಮಗ್ರ ದೇಶಕ್ಕೂ ಯಾ ರಾಜ್ಯ ಸರಕಾರಗಳ ವಿಷಯದ ಮೇಲೆ ಕಾನೂನು ಮಾಡುವ ಹಕ್ಕಿದೆ. ನಿಬಂಧನೆ 251ರ ಪ್ರಕಾರ ರಾಜ್ಯ ಸರಕಾರವು ಮಾಡಿದ ಕಾನೂನು ಕೇಂದ್ರ ಸರಕಾರವು 249-50ರ ನಿಬಂಧನೆಯಂತೆ ಮಾಡಿದ ನಿಬಂಧನೆಗೆ ವ್ಯತಿರಿಕ್ತವಾಗಿದ್ದರೆ, ರಾಜ್ಯ ಸರಕಾರದ ಕಾನೂನು ಜ್ಯಾರಿಗೆ ಬರಲಾಗದು. ನಿಬಂಧನೆ 252ರ ಪ್ರಕಾರ ಕೆಲವು ರಾಜ್ಯಗಳ ಶಾಸನ ಸಭೆಗಳು ರಾಜ್ಯ ಸರಕಾರಕ್ಕಿರುವ ಪಟ್ಟಿಯ ಮೇಲೆ ಕಾನೂನು ಮಾಡುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬಹುದು. ಅಂತಹ ಸಂದರ್ಭದಲ್ಲಿ ಕೇಂದ್ರ ಪಾರ್ಲಿಮೆಂಟಿಗೆ ಆ ವಿಷಯಗಳ ಮೇಲೆ ಕಾನೂನು ಮಾಡುವ ಹಕ್ಕಿದೆ. ಈ ಕಾನೂನು ಯಾವ ರಾಜ್ಯಗಳು ಶಾಸನ ಮಾಡುವಂತೆ ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದವೊ ಆ ರಾಜ್ಯಗಳು ಅದನ್ನು ಪಾಲಿಸಬೇಕು. ಹಾಗೆ ಮಾಡಿದ ಕಾನೂನನ್ನು ರದ್ದುಪಡಿಸುವ ಯಾ ತಿದ್ದುವ ಹಕ್ಕು ಕೇಂದ್ರ ಪಾರ್ಲಿಮೆಂಟಿಗೆ ಇದೆಯಲ್ಲದೆ ರಾಜ್ಯ ಶಾಸಕಾಂಗಗಳಿಗಿಲ್ಲ. ಪರರಾಷ್ಟ್ರದೊಡನೆ ವ್ಯಾಪಾರ, ಒಪ್ಪಂದ ಇನ್ನಿತರ ಸಂಪರ್ಕವನ್ನು ಮಾಡಿಕೊಳ್ಳುವ ಹಕ್ಕು ಕೇಂದ್ರ ಸರಕಾರಕ್ಕಿದೆಯಲ್ಲದೆ ರಾಜ್ಯ ಸರಕಾರಕ್ಕಿಲ್ಲ. ಜರೂರು ಅಧಿಕಾರ (Emergency Power) ಭಾರತದ ರಾಜ್ಯಾಂಗದ ಮತ್ತೊಂದು ಲಕ್ಷಣ. ಅದು ಏಕರಾಷ್ಟ್ರಾತ್ಮಕವೂ, ಸಂಯುಕ್ತ ರಾಷ್ಟ್ರಾತ್ಮಕವೂ ಅಹುದು. ಯಾವುದೇ ರಾಜ್ಯದ ಶಾಸನಬದ್ಧ ಆಡಳಿತ ಯಂತ್ರ ಕುಸಿದು ಬಿದ್ದಾಗ ಯಾ ಕೇಂದ್ರ ಸರಕಾರವು ಕೊಟ್ಟ ನಿರ್ದೇಶನವನ್ನು ರಾಜ್ಯ ಸರಕಾರ ತಿರಸ್ಕರಿಸಿದಾಗ ಮತ್ತು ರಾಜ್ಯ ಸರಕಾರ ಉದ್ದೇಶಪೂರ್ವಕವಾಗಿ ಕೇಂದ್ರ ಸರಕಾರಕ್ಕೆ ವಿರೋಧ ನಡೆದಾಗ, ರಾಜ್ಯಾಂಗದ 356ನೇ ಸೂತ್ರದಂತೆ ರಾಷ್ಟ್ರಾಧ್ಯಕ್ಷರು ಆ ರಾಜ್ಯ ವಿಷಯಕ್ಕೆ ಅನ್ವಯವಾದಂತೆ ಶಾಸನ ಮಾಡುವ ಅಧಿಕಾರವನ್ನು ಕೇಂದ್ರ ಪಾರ್ಲಿಮೆಂಟಿಗೆ ವಹಿಸಬಹುದಲ್ಲದೆ, ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ಪರಿಪೂರ್ಣಾಧಿಕಾರವನ್ನು ತಾನೇ ಕೈಗೊಳ್ಳಬಹುದು. ರಾಜ್ಯಾಂಗದ 367ನೇ ವಿಧಿಯಂತೆ ರಾಜ್ಯದ ಹಣಕಾಸಿನ ಸಹಾಯದ ವಿಷಯಗಳಲ್ಲೂ ಶಾಸನ ರಚಿಸುವ ಅಧಿಕಾರ ಕೇಂದ್ರಕ್ಕೆ ಇದೆ.

ಆಡಳಿತ ಸಂಬಂಧ:— ರಾಜ್ಯ ಮತ್ತು ಕೇಂದ್ರ ಸರಕಾರಗಳ ಸಂಬಂಧವನ್ನು ಆಡಳಿತ ರೀತಿಯಿಂದ ವೀಕ್ಷಿಸಿದಾಗ ಸಹಕಾರ, ಸದ್ಭಾವನೆಗಳ ವಿಷಯಗಳು ಸಂಯುಕ್ತ ಸರಕಾರದ ಯಶಸ್ಸಿಗೆ ಅಗತ್ಯ ಎಂದು ನಮ್ಮ ಘಟನೆ ತೋರಿಸಿ ಕೊಡುತ್ತದೆ. ರಾಷ್ಟ್ರದ ರಕ್ಷಣೆ, ಶಾಂತಿ ಪಾಲನೆ, ಯೋಗ್ಯ ಸರಕಾರ ರಚನೆ ಈ ವಿಷಯಗಳಲ್ಲಿ ಕೇಂದ್ರ ಸರಕಾರಕ್ಕೆ ಸಂಪೂರ್ಣ ಹಕ್ಕಿದೆ. ಇವುಗಳನ್ನು ಸಮಗ್ರ ದೇಶದಲ್ಲಿ ಸ್ಥಾಪಿಸುವುದು ಕೇಂದ್ರ ಸರಕಾರದ ಮುಖ್ಯ ಹೊಣೆ. ಜರೂರು ಪರಿಸ್ಥಿತಿ ಸಮಯದಲ್ಲಿ ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರಗಳ ಮೇಲೆ ಸಂಪೂರ್ಣ ಹಿಡಿತ ಇದೆ. ನಿಬಂಧನೆ 256; 257, 258ರಂತೆ ಕೇಂದ್ರಸರಕಾರಕ್ಕೆ ರಾಜ್ಯ ಸರಕಾರಗಳಿಗೆ ಆಡಳಿತ ವಿಷಯದಲ್ಲಿ ನಿರ್ದೇಶನ ಕೊಡುವ ಅಧಿಕಾರವಿದೆ. ಅದನ್ನು ರಾಜ್ಯ ಸರಕಾರಗಳು ಪಾಲಿಸಲೇ ಬೇಕು. ಘಟನೆಯ 355ರ ನಿಬಂಧನೆಯಂತೆ ರಾಜ್ಯ ಸರಕಾರಗಳನ್ನು ಪರರಾಷ್ಟ್ರಗಳ ಆಕ್ರಮಣದಿಂದಲೂ ಆಂತರಿಕ ಗೊಂದಲದಿಂದಲೂ ರಕ್ಷಿಸುವುದು ಕೇಂದ್ರ ಸರಕಾರದ ಮುಖ್ಯ ಕರ್ತವ್ಯ. ಭಾರತವು ಸಂಯುಕ್ತ ರಾಷ್ಟ್ರವಾಗಿದ್ದು, ಉ

ಭವಿಷ್ಯದೆಡೆಗೆ ನೋಟ

ಈ ಮಗುವಿನ ನಾಳೆಯ ಬದುಕಿಗೆ ಆಕೆಯ ಹೆತ್ತವರ ನಿಯತ
ಉಳಿತಾಯ ಭದ್ರತೆಯನ್ನೊದಗಿಸಿದೆ. ಸಿಂಡಿಕೇಟ್ ಬ್ಯಾಂಕಿ
ನಲ್ಲಿ ಆಕೆಯ ಹೆಸರಿನಲ್ಲಿ ತೆರೆದ ಕ್ಯುಮುಲೇಟಿವ್
ಠೇವಣಾತಿ ಖಾತೆಯೇ ಆಕೆಯ ಭವಿತವ್ಯದ ರಕ್ಷೆ
ಯೆನಿಸಿದೆ. ಆಕೆಯನ್ನು ಸಲಹುವ ಹಿರಿಯರ
ದೂರದೃಷ್ಟಿಯಿಂದಾಗಿ ಈ ಮಗುವು
ದೂರದ ಭವಿಷ್ಯದೆಡೆಗೆ ತುಂಬು
ವಿಶ್ವಾಸದಿಂದ ನಗು ತುಂಬಿದ
ಕಣ್ಣುಗಳಿಂದ ನೋಟ
ಬೀರುತ್ತಿದೆ.

ನಿಮ್ಮ ಮಕ್ಕಳ ನಾಳೆಯ ಬದುಕಿನ ಭದ್ರತೆಗಾಗಿ
ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್
ಠೇವಣಾತಿ ಖಾತೆಯೊಂದನ್ನು ತೆರೆಯಿರಿ.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಭಯ ರಾಜ್ಯ ವ್ಯವಸ್ಥೆ ಉಳ್ಳದ್ದು. ರಾಷ್ಟ್ರದ ಕ್ರೋಢೀಕರಣದಲ್ಲಿ ಐಕ್ಯತೆಯೇ ರಾಷ್ಟ್ರದ ಗುರಿಯಾಗಿದೆ ಭಾರತದ ಪ್ರಜೆಗಳು ಏಕಪೌರಾಧಿಕಾರ ಉಳ್ಳವರು ನಮ್ಮ ರಾಷ್ಟ್ರದಲ್ಲಿ ಪ್ರತ್ಯೇಕವೂ, ಸ್ವತಂತ್ರವೂ ಇಡೀ ರಾಷ್ಟ್ರಕ್ಕೆ ಅನ್ವಯುತ್ತ ಆದ ನ್ಯಾಯಾಂಗವಿದೆ. ಅಖಿಲ ಭಾರತ ಆಡಳಿತ ಶಾಖೆಗಳಲ್ಲಿನ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಕೇಂದ್ರ ಉದ್ಯೋಗ ಶಾಖೆಯೂ ಇದೆ. ಆದರೆ ಘಟನೆಯಲ್ಲಿ ಸಮಗ್ರ ಭಾರತಕ್ಕೆ ಹೊಂದುವಂತೆ ಭಾರತ ಆಡಳಿತ, ಪೋಲೀಸ್ ಪರರಾಷ್ಟ್ರ ವರ್ಗಗಳೆಂಬ ಸೇವಾ ವರ್ಗಗಳಿವೆ. ಈ ವರ್ಗಗಳ ಅಧಿಕಾರಿಗಳನ್ನು ರಾಜ್ಯ ಮತ್ತು ಕೇಂದ್ರ ಸರಕಾರದವರು ನೇಮಿಸಿಕೊಳ್ಳಬಹುದು.

ಆರ್ಥಿಕ:— ಕೇಂದ್ರ ರಾಜ್ಯ ಸರಕಾರಗಳ ಆರ್ಥಿಕ ಸಂಬಂಧವನ್ನು ವೀಕ್ಷಿಸಿದಾಗ ರಾಜ್ಯ ಸರಕಾರಗಳು ಆರ್ಥಿಕ ವಿಷಯದಲ್ಲಿ ಕೇಂದ್ರ ಸರಕಾರವನ್ನು ಹೊಂದಿಕೊಂಡಿರಬೇಕು ಎಂಬ ವಿಷಯ ತಿಳಿದು ಬರುತ್ತಿದೆ ದೇಶದ ಕೆಲವು ತೆರಿಗೆಗಳನ್ನು ರಾಜ್ಯ ಸರಕಾರವೂ ಕೆಲವು ತೆರಿಗೆಗಳನ್ನು ಕೇಂದ್ರ ಸರಕಾರವೂ ವಸೂಲು ಮಾಡುತ್ತವೆ. ಕೆಲವು ತೆರಿಗೆಗಳನ್ನು ಕೇಂದ್ರ ಸರಕಾರವು ಹೊರಿಸಿ ಅದನ್ನು ರಾಜ್ಯ ಸರಕಾರ ವಸೂಲಿ ಮಾಡುತ್ತದೆ. ಕೆಲವು ತೆರಿಗೆಗಳನ್ನು ಕೇಂದ್ರ ಸರಕಾರವು ಹೊರಿಸಿ ವಸೂಲಿ ಮಾಡಿ ರಾಜ್ಯ ಸರಕಾರಕ್ಕೆ ಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಸಹಾಯ ಧನ ಕೊಡುತ್ತದೆ. ಘಟನೆಯ 273ರ ನಿಬಂಧನೆಯಂತೆ ಅಸ್ಸಾಂ, ಒರಿಸ್ಸಾ, ಬಂಗಾಳ ರಾಜ್ಯಗಳು ಸೆಣಬು ರಫ್ತಿನ ಮತ್ತು ಸೆಣಬು ವಸ್ತುಗಳ ಸುಂಕ ರೂಪವಾಗಿ ಕೇಂದ್ರ ಸರಕಾರವು ಈ ರಾಜ್ಯಗಳಿಗೆ ಸಹಾಯ ಧನವನ್ನು ಕೊಡುತ್ತದೆ. ಅದೇ ರೀತಿ ಕೆಲವು ಸಂದರ್ಭಗಳಲ್ಲಿ ಗಿರಿಜನರ ಅಭಿವೃದ್ಧಿಗೋಸುಗ ಅಸ್ಸಾಂ ರಾಜ್ಯಕ್ಕೆ ಕೇಂದ್ರ ಸರಕಾರವು ಸಹಾಯಧನ ಕೊಡುತ್ತಿದೆ. ಇದರಿಂದ ಆರ್ಥಿಕ ಸಹಾಯ ಮತ್ತು ಸಹಾಯ ಧನಗಳು ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಬಹಳ ಸಹಾಯ ಮಾಡುತ್ತದೆ.

ಪರಿಹಾರ:— ನಮ್ಮ ಘಟನೆಯಲ್ಲಿ ಕೇಂದ್ರ— ರಾಜ್ಯ ಸರಕಾರಗಳಲ್ಲಿಯೋ ರಾಜ್ಯ ರಾಜ್ಯಗಳಲ್ಲಿ ಘರ್ಷಣೆ ಒದಗಿ ಬಂದರೆ ಅದನ್ನು ನಿವಾರಿಸಲು ಕ್ರಮವಿದೆ. ಘಟನೆಯ ನಿಬಂಧನೆ 131ರ ಪ್ರಕಾರ ಸುಪ್ರೀಂ ಕೋರ್ಟಿಗೆ ರಾಜ್ಯ-ರಾಜ್ಯ, ಕೇಂದ್ರ-ರಾಜ್ಯಗಳ ವ್ಯಾಜ್ಯಗಳು ಇದ್ದರೆ ಅದನ್ನು ತೀರ್ಮಾನಿಸುವ ಹಕ್ಕಿದೆ. ಜನತೆಗೆ ಹಿತವೆಂದು ರಾಷ್ಟ್ರಾಧ್ಯಕ್ಷರಿಗೆ ತೋರಿದರೆ ರಾಜ್ಯ-ರಾಜ್ಯಗಳ, ಕೇಂದ್ರ ರಾಜ್ಯಗಳ ಸಂಬಂಧ ಸುಧಾರಿಸಲು ಮತ್ತು ಸಲಹೆ ನೀಡಲು ಅಂತರ್‌ರಾಜ್ಯ ಸಲಹಾ ಮಂಡಳಿ (Inter State Council) ನಿಯಮಿಸುವ ಹಕ್ಕು ರಾಷ್ಟ್ರಾಧ್ಯಕ್ಷರಿಗಿದೆ.

ಯೋಜನಾ ಮಂಡಳಿ, ಆರ್ಥಿಕ ಸ್ಥಿತಿ, ಆಡಳಿತ ನಿರ್ವಹಣೆ, ನಿಯೋಜಿತ ಶಾಸನಾಧಿಕಾರ (Delogated Legistration) ಮತ್ತು ಪರರಾಷ್ಟ್ರಗಳ ಆಕ್ರಮಣ ಭೀತಿಗಳು ಕೇಂದ್ರ ಸರಕಾರವನ್ನು ಶಕ್ತಿಯುತವಾಗಿ ಮಾಡಿವೆ. ನಮ್ಮ ಘಟನೆಯನ್ನು ವೀಕ್ಷಿಸಿದಾಗ ಅದು ಏಕರಾಷ್ಟ್ರ ತತ್ವಕ್ಕೆ ಮಾರಿಕೊಂಡಿದೆ. ಆದರೆ ಸಂಯುಕ್ತ ರಾಷ್ಟ್ರದ ತತ್ವವನ್ನು ನಮ್ಮ ಘಟನೆ ಉಲ್ಲಂಘಿಸಿಲ್ಲ. ಸಮಗ್ರ ದೇಶದ ಅಭಿವೃದ್ಧಿಯು ಅತಿ ಮುಖ್ಯ. ಅದನ್ನು ಸಾಧಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಅನ್ಯೋನ್ಯತೆ ಇರಬೇಕು. ಇತ್ತೀಚಿಗಿನ ಘಟನೆಯಲ್ಲಿ ಇದು ಸಾಧ್ಯವೊ? ಎಂಬ ಸಂಶಯ ಬರುತ್ತದೆ. ಕೇಂದ್ರ ಸರಕಾರವು ಕಾಂಗ್ರೆಸಿನ ನೇತೃತ್ವದಲ್ಲೂ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸೇತರ ಪಕ್ಷಗಳು ಅಧಿಕಾರದಲ್ಲಿರುವುದರಿಂದ ಘರ್ಷಣೆ ಬರುವುದಿಲ್ಲವೊ? ಎಂಬ ಸಂಶಯ ಬರುತ್ತದೆ. ಇದನ್ನು ಹೋಗಲಾಡಿಸಲು ಒಂದೇ ಉಪಾಯವೇನೆಂದರೆ ಅವೆರಡು ಸರಕಾರಗಳು ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು ತಪ್ಪು ಅಭಿಪ್ರಾಯಗಳನ್ನು ಸರಕಾರಗಳಲ್ಲಿ ಬೆಳೆಯಲು ಆಸ್ಪದ ಕೊಡಬಾರದು. ಕೇಂದ್ರ ಸರಕಾರವು ಎಲ್ಲಾ ರಾಜ್ಯಗಳನ್ನು ಒಂದೇ ರೀತಿಯಿಂದ ನೋಡಿಕೊಳ್ಳಬೇಕು. ರಾಜ್ಯ ಸರಕಾರಗಳಿಗೆ ಆರ್ಥಿಕ ಮತ್ತು ಆಹಾರದ ತೊಂದರೆಗಳಿದ್ದರೆ ಅದನ್ನು ಬಗೆಹರಿಸಲು ಕೇಂದ್ರ ಸರಕಾರವು ಸಹಾಯ ಮಾಡಬೇಕು. ಕೇಂದ್ರ ಸರಕಾರವು ಅನಾವಶ್ಯಕವಾಗಿ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಮೇಲೆ ಕಾನೂನನ್ನು ಮಾಡುವುದು ಒಳ್ಳೆಯದಲ್ಲ. ಆವಶ್ಯಕತೆ ಬಿದ್ದಾಗ ರಾಜ್ಯ ಸರಕಾರಗಳ ಸಲಹೆ ಪಡೆದು ಕೇಂದ್ರ ಸರಕಾರ ರಾಜ್ಯ ಪಟ್ಟಿಯ ವಿಷಯಗಳ ಮೇಲೆ ಕಾನೂನನ್ನು ಮಾಡಬಹುದು. ಇದನ್ನು ಸುಲಭ ಮಾಡಲು ರಾಜ್ಯ ಸಭೆಯಲ್ಲಿ ಎಲ್ಲಾ ರಾಜ್ಯಗಳಿಗೆ ಸಮಾನ ಪ್ರಾತಿನಿಧ್ಯವಿರಬೇಕು. ರಾಜ್ಯ ಸರಕಾರಗಳು ಕೇಂದ್ರ ಸರಕಾರಕ್ಕೆ ಸಹಕಾರ ನೀಡಬೇಕು. ಕೇಂದ್ರ ಸರಕಾರವು ಅನಾವಶ್ಯಕವಾಗಿ ರಾಜ್ಯಗಳಲ್ಲಿ ರಾಷ್ಟ್ರಾಧ್ಯಕ್ಷನ ಆಡಳಿತ ಹೇರಬಾರದು. ಒಂದು ವೇಳೆ ಒಂದು ಸರಕಾರವು ಸೋತು ಹೋದರೆ ವಿರೋಧಪಕ್ಷದ ಯಾ ಸಂಯುಕ್ತ ವಿರೋಧ ಪಕ್ಷದ ನಾಯಕನಿಗೆ ಅಧಿಕಾರ ಮಾಡಲು ಆಸ್ಪದ ಕೊಡಬೇಕು. ಒಂದು ವೇಳೆ ವಿರೋಧ ಪಕ್ಷದ ನಾಯಕನು ಸರಕಾರ ಮಾಡುವುದರಲ್ಲಿ ಅಸಫಲನಾದರೆ ರಾಷ್ಟ್ರಾಧ್ಯಕ್ಷರ ಆಳಿಕೆ ಜಾರಿಗೆ ತರಬಹುದು. ಆದರೆ ಅದನ್ನು ಹೆಚ್ಚುಕಾಲ ಮುಂದುವರಿಸಬಾರದು. ರಾಜ್ಯ ಸರಕಾರಗಳು ಕೂಡಾ ದೇಶದ ಐಕ್ಯ ಶಾಂತಿ, ಯೋಗ್ಯ ಸರಕಾರ ಮತ್ತು ಪರರಾಷ್ಟ್ರಗಳ ಆಕ್ರಮಣ ಸಮಯದಲ್ಲಿ ಕೇಂದ್ರ ಸರಕಾರವನ್ನು ಬೆಂಬಲಿಸಬೇಕು. ಪ್ರಾಂತೀಯ ಸ್ವಾಯತ್ತತೆ ಎಂಬ [illegible] ಕೂಗಿನಿಂದ ಕೇಂದ್ರ ಸರಕಾರವನ್ನು ದುರ್ಬಲಗೊಳಿಸುವ ಹವ್ಯಾಸಕ್ಕೆ ರಾಜ್ಯ ಸರಕಾರಗಳು ಹೋಗಬಾರದು. ರಾಜ್ಯಗಳಿಗೆ ನಮ್ಮ ಘಟನೆಯು ಸಾಕಷ್ಟು ಸ್ವಾಯತ್ತತೆ ಕೊಟ್ಟಿದೆ. ಆತರ ಪರಿಸ್ಥಿತಿಯಲ್ಲಿ ಮಾತ್ರ ಭಾರತ ಸರಕಾರವು ಏಕ ರಾಷ್ಟ್ರ (Unitary State) ಆಗುತ್ತದೆ ವಿನಃ ಉಳಿದ ಸಾಮಾನ್ಯ ಸಮಯದಲ್ಲಿ ಭಾರತ ಸರಕಾರವು ಸಂಯುಕ್ತ ರಾಷ್ಟ್ರವಾಗಿದೆ. ಒಂದು ವೇಳೆ ಕೇಂದ್ರ, ಪ್ರಾಂತ್ಯ ಸರಕಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೆ ಅವನ್ನು ರಾಜಿಯಿಂದ ಪರಿಹರಿಸಲು ಎರಡು ಸರಕಾರಗಳು ಪ್ರಯತ್ನಿಸಬೇಕು. ಒಂದು ವೇಳೆ ರಾಜಿಯಿಂದ ಸಮಸ್ಯೆ ಪರಿಹರಿಸಲು ಆಗದಿದ್ದರೆ ಘಟನೆಯಲ್ಲಿ ಸೂಚಿಸಿದಂತೆ ಸುಪ್ರೀಂ ಕೋರ್ಟಿನಲ್ಲಿ ನ್ಯಾಯ ಪಡೆಯಬಹುದು. ಇದೇ ಸಮಯದಲ್ಲಿ ಪತ್ರಿಕೆಗಳು ಯಾವ ಸರಕಾರವು ನ್ಯಾಯದಲ್ಲಿ ನಿರ್ಣಯಿಸಿವೆ ಎಂಬುದನ್ನು ಜನರಿಗೆ ಮನದಟ್ಟು ಮಾಡಲು ಪ್ರಯತ್ನಿಸಬೇಕು. ಒಟ್ಟಿನಲ್ಲಿ ಭಾರತಕ್ಕೆ ಪರರಾಷ್ಟ್ರ ಆಕ್ರಮಣ ಎದುರಿಸಲು ದೇಶದಲ್ಲಿ ಸುವ್ಯವಸ್ಥೆ ಸ್ಥಾಪಿಸಲು, ಯೋಗ್ಯ ಆಡಳಿತ ಸ್ಥಾಪಿಸಲು ಭದ್ರವಾದ ಕೇಂದ್ರ ಸರಕಾರವಿರಬೇಕು. ಅದೇ ರೀತಿಯಲ್ಲಿ ಪ್ರಾದೇಶಿಕ ಅಭಿವೃದ್ಧಿ ಸಾಧಿಸಲು ರಾಜ್ಯ ಸರಕಾರವಿರಬೇಕು. ಇವೆರಡು ಸಾಧಿಸಲು ಸಂಯುಕ್ತ ರಾಜ್ಯದಲ್ಲಿ ಮಾತ್ರ ಸಾಧ್ಯ. ಭಾರತವು ವಿಶಾಲವೂ, ಹಲವು ಮತಗಳ, ಹಲವು ಭಾಷೆಗಳ, ಹಲವು ನಾಗರಿಕ ರಾಜ್ಯವಾದುದರಿಂದ ಸಂಯುಕ್ತ ರಾಷ್ಟ್ರವೇ ಭಾರತಕ್ಕೆ ಯೋಗ್ಯ. ಸದ್ಭಾವನೆ, ಹೊಂದಾಣಿಕೆ, ಪರಸ್ಪರ ಸಹಕಾರ, ಮತ್ತು ವಿಶಾಲ ಭಾವನೆಯು ಭಾರತೀಯ ರಾಜ್ಯಕಾರಣಿಗಳಲ್ಲಿ ಅಗತ್ಯ ಎಂಬುದನ್ನು ಮನಗಂಡು ವರ್ತಿಸಿ ಭಾರತದಲ್ಲಿ ಪ್ರಜಾಪ್ರಭುತ್ವ ಸಂಯುಕ್ತ ರಾಷ್ಟ್ರ (Democratie Fedral State) ಯಶಸ್ವಿಯಾಗುವುದು. ಇವರಂತೆ ವರ್ತಿಸಿದರೆ ಕೇಂದ್ರ ರಾಜ್ಯಗಳಲ್ಲಿ ಅನ್ಯೋನ್ಯತೆ ಬೆಳೆದು ಭದ್ರ ಭಾರತವು ಆಗುವುದರಲ್ಲಿ ಸಂದೇಹವಿಲ್ಲ.

ಹಿಂದೂತ್ವದ ಸಂರಕ್ಷಣೆಗೆ—

ಮದ್ರಾಸದಲ್ಲಿ ಸೇರಿದ ವಿದ್ವತ್ ಪರಿಷತ್ತು

ದೇವತ್ವದ ರಕ್ಷಣೆಗಾಗಿ ಹರಿ-ಹರರು ಒಂದಾದಂತೆ ಹಿಂದೂತ್ವದ ಸಂರಕ್ಷಣೆಗಾಗಿ ಹಿಂದೂಗಳೆಲ್ಲರೂ ಒಂದಾಗಲೇಬೇಕು.

ವರದಿಗಾರರು: ಶ್ರೀ ಶಿವಶಂಕರ.

ಕಳೆದ ವರ್ಷ ಪೂರ್ಣಕುಂಭಮೇಳದ ಪರ್ವಕಾಲದಲ್ಲಿ ಹಿಂದೂ ಧರ್ಮ ಅನ್ಯಾನ್ಯ ಸಂಪ್ರದಾಯಸ್ಥರ ಪ್ರಮುಖರು ಅನ್ಯೋನ್ಯವಾಗಿ ಪವಿತ್ರ ಕ್ಷೇತ್ರ ಪ್ರಯಾಗದಲ್ಲಿ ಒಂದಾಗಿ, ವಿಶ್ವ ಹಿಂದೂ ಪರಿಷತ್ತಿನ ಆಳದ ಮರದಡಿಯಲ್ಲಿ ಸೇರಿದ್ದರು. ಅವರಂದು ಎಲ್ಲಾ ಹಿಂದೂಗಳು, ಯಾವ ಜಾತಿ, ಮತ, ಸಂಪ್ರದಾಯಕ್ಕೆ ಸೇರಿರಲಿ, ಎಲ್ಲರೂ ಸಾಮಾನ್ಯವಾಗಿ ಆಚರಿಸಬಹುದಾದಂತಹ ನಿಯಮಗಳನ್ನು ಕಂಡು ಹಿಡಿಯಬೇಕು, ಅನ್ಯ ದೇಶಗಳಲ್ಲಿರುವ ಹಿಂದೂಗಳ ಹಿಂದೂತ್ವವನ್ನು ಕಾಪಾಡಬೇಕು ಹಾಗೆಯೇ ವಿಭಿನ್ನ ಮತಕ್ಕೆ ಮತ ಬದಲಾಯಿಸಿದ ಪತಿತ ಹಿಂದೂಗಳ ಪುನರುದ್ಧಾರ ಮಾಡಲು ಏನು ಮಾಡಬೇಕೆಂಬುದನ್ನು ತೀರ್ಮಾನಿಸಲು ಒಂದು ಸಮಿತಿಯನ್ನು ನೇಮಿಸಿದ್ದರು ಅದರ ಪ್ರಕಾರ ವಿಶ್ವ ಹಿಂದೂ ಪರಿಷತ್ತಿನ ಮಾಸಿಕ ಪತ್ರಿಕೆ 'ಹಿಂದೂ ವಿಶ್ವ'ದಲ್ಲಿ ಒಂದು ಪ್ರಶ್ನಮಾಲಿಕೆಯನ್ನು ಪ್ರಕಟಿಸಿದ್ದರು. ಅದನ್ನೇ ದೇಶದ ದಶ ದಿಕ್ಕುಗಳಲ್ಲಿರುವ ಅನ್ಯಾನ್ಯ ಸಂಪ್ರದಾಯಗಳ ಮುಖಂಡರಿಗೆ, ವಿದ್ವಾಂಸರಿಗೆ, ಪಂಡಿತರಿಗೆ, ಸ್ವಾಮೀಜೀಯವರಿಗೆ ಕಳುಹಿಸಿ ಕೊಟ್ಟಿದ್ದರು. ಅವರಿಂದ ಬಂದಿದ್ದ ಉತ್ತರಗಳನ್ನು ಆ ಸಮಿತಿಯು ಪರಿಶೋಧಿಸಿ, ಮದ್ರಾಸಿನ ಧರ್ಮಪ್ರಕಾಶದಲ್ಲಿ ಮಾರ್ಚ್ ದಿನಾಂಕ ೨೬, ೨೭, ೨೮ರಂದು ನಡೆದ ವಿದ್ವತ್ ಪರಿಷತ್ತಿನ ಮುಂದಿಟ್ಟಿತು.

ಉಡುಪಿಯ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ ತೀರ್ಥರವರ ಉತ್ಸಾಹದಿಂದಾಗಿ ವಿದ್ವತ್ ಪರಿಷತ್ತು ಮದ್ರಾಸಿನ ಧರ್ಮ ಪ್ರಕಾಶದಲ್ಲಿ ಕಲೆಯುವಂತಾಯಿತು. ಧರ್ಮ ಪ್ರಕಾಶದ ಚಿಕ್ಕ ಪುಟ್ಟ ಭವನಗಳನ್ನು ಆಗಮಿಸಿದ ಶ್ರೀ ಶ್ರೀಯವರುಗಳಿಗಾಗಿ ಹಾಗೂ ಇತರ ವಿದ್ವಾಂಸರಿಗಾಗಿ ಮತ್ತು ಪಂಡಿತರಿಗಾಗಿ ಕಾದಿರಿಸಲಾಗಿತ್ತು. ದಯಮಾಡಿಸಿದವರ ಇತರ ಸೌಕರ್ಯಗಳನ್ನು ಧರ್ಮ ಪ್ರಕಾಶದವರೇ ನೋಡಿಕೊಂಡರು. ಧರ್ಮ ಪ್ರಕಾಶದ ಭವ್ಯ ಭವನದಲ್ಲಿ ವಿದ್ವತ್ ಪರಿಷತ್ತಿನ ಸಭೆಗಳು ನಡೆದುವು.

ಔಪಚಾರಿಕವಾಗಿ ವಿದ್ವತ್ ಪರಿಷತ್ತಿನ ಸಭೆಯು ಆದಿತ್ಯವಾರ (ದಿನಾಂಕ ೨೬) ಪ್ರಭಾತ ಕಾಲದಲ್ಲಿ ಆರಂಭವಾಯಿತಾದರೂ ಮದ್ರಾಸಿನ ಸಜ್ಜನತೆಯು ಅದರ ರೂಪವಾಗಿ ಸಿಕ್ಕಿರುವ ಸಂದರ್ಭವನ್ನು ಶನಿವಾರ ರಾತ್ರಿಯಿಂದೇ ಉಪಯೋಗಿಸಿಕೊಂಡಿತು. ಅಂದು ರಾತ್ರಿ ಭಜನೆ ಹಾಗೂ ಪೇಜಾವರ ಮಠಾಧೀಶ ಮತ್ತಿತರ ಕೆಲ ಸ್ವಾಮೀಜೀಯವರಿಂದಲೂ ಶ್ರೀ ಪ ಹರ್ಶೀಕರ್ ಮುಂತಾದ ವಿದ್ವಾಂಸರಿಂದಲೂ ಭಾಷಣ ಕಾರ್ಯಕ್ರಮಗಳು ನಡೆದು, ಮುಂದಿನ ಕಾರ್ಯಕ್ರಮಗಳಿಗೆ ಉತ್ತಮ ಹಿನ್ನೆಲೆ ಉಂಟಾಯಿತು.

ಆದಿತ್ಯವಾರ ಬೆಳಗ್ಗೆ ಧರ್ಮ ಪ್ರಕಾಶದ ಸಭಾಂಗಣ ಕಿಕ್ಕಿರಿದು ಹೋಗಿತ್ತು. ಸ್ಥಳ ಸಾಕಾಗದೆ ಮದ್ರಾಸಿನ ಉರಿಬಿಸಿಲಿನಲ್ಲೇ ನಿಂತು ಜನತೆಯು ಸ್ವಾಮೀಜೀಯವರುಗಳು ಏನು ಹೇಳುವರೆಂಬುದನ್ನು ಕೇಳುತ್ತಿತ್ತು. ಜನತಾ ಸಾಗರದಲ್ಲೇ ಅಥವಾ ರಾಷ್ಟ್ರೀಯರ ನಡುವೆಯೇ ಇರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಘಚಾಲಕ ಶ್ರೀ ಮಾಧವ ಸದಾಶಿವ ರಾವ್ ಗೋಳ್ವಲ್ಕರ್‌ರವರೂ ಆ ಬಿಸಿಲಿನಲ್ಲೇ ಕುಳಿತಿದ್ದರು. ಬಾಹ್ಯಾಡಂಭರವೇನೂ

ಇರಲಿಲ್ಲ, ಛಾವಣಿ ಚಾಹಿರಾತು ಇರಲಿಲ್ಲ. ಆದರೂ ಧರ್ಮಾಭಿಮಾನಿಗಳು ಬಂದಿದ್ದರು. ಬೇಗನೆ ಬಂದವರು ಭವ್ಯವಿಶಾಲ ಸಭಾಂಗಣದೊಳಗೆ ಹೋಗಿ ಕುಳಿತುಕೊಂಡರು. ಅನಂತರ ಬಂದವರು ಸಭಾಂಗಣ ಹೊರಗೆಯೇ ಕುಳಿತುಕೊಳ್ಳಬೇಕಾಯಿತು. ಆದರೂ ಬಿಸಿಲಿನ ಬೇಗೆಯತ್ತ ಗಮನವೀಯದೆ ಧರ್ಮಾಭಿಮಾನಿ ಜನತೆ ತಮ್ಮ ಸ್ವಾಮೀಜೀಯವರೇನು ಹೇಳುತ್ತಾರೆಂಬುದರತ್ತ ಗಮನ ಕೊಟ್ಟಿದ್ದರು. ಅವರು ಮುಂದೆಯಂತೆ ಸಭಾಂಗಣದೊಳಗೆ ಧಾವಿಸಲಿಲ್ಲ. ಬಿಸಿಲಿನ ಬೇಗೆಯನ್ನು ತಾಳಲಾರದೆ ಹಿಂದಕ್ಕೆ ಓಡಿಹೋಗಲಿಲ್ಲ. ಅಲ್ಲಿ ಅಷ್ಟು ದೊಡ್ಡ ಜನಸಾಗರದ ಬಂದೋಬಸ್ತಿಗೆ ಪೋಲೀಸ ಒಬ್ಬನೂ ಇರಲಿಲ್ಲ. ಅವನ ಆವಶ್ಯಕತೆಯಾದರು ಏನು? ಕುಳಿತುಕೊಳ್ಳಲು ಆಸನವನ್ನೂ ಕುಡಿಯಲು ನೀರನ್ನೂ ಸ್ವಯಂಸೇವಕರೂ, ಸ್ವಾಗತ ಸಮಿತಿಯವರೂ ಕೊಡುತ್ತಿದ್ದರು.

ವೇದ ಮಂತ್ರ ಘೋಷದೊಂದಿಗೆ ವಿದ್ವತ್ ಪರಿಷತ್ತಿನ ಸಭೆ ಆದಿತ್ಯವಾರ ಬೆಳಗ್ಗೆ ಆರಂಭವಾಯಿತು. ಅನಂತರ ಪ್ರಾರ್ಥನೆ ಹಾಗೂ ತೇವಾರಂ ಮುಂತಾದ ಭಕ್ತಿಗೀತೆಗಳ ಕಾರ್ಯಕ್ರಮಗಳಾದುವು. ಅವೆಲ್ಲಾ ಮುಗಿದೊಡನೆ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಕೃಪಾನಂದ ವಾರಿಯೂರ್‌ರವರು ಆಚಾರ್ಯ ಪುರುಷರನ್ನೂ, ಪಂಡಿತರನ್ನೂ, ಅಲ್ಲದೆ, ಜನಕೋಟಿಗೂ ಸ್ವಾಗತ ಬಯಸಿದರು. [ಶ್ರೀ ಕೃಪಾನಂದ ವಾರಿಯೂರ್‌ರವರು ವಿಶ್ವ ಹಿಂದೂ ಪರಿಷತ್ತಿನ ಮದ್ರಾಸ್ ಪ್ರಾಂತದ ಅಧ್ಯಕ್ಷರಿದ್ದಾರೆ. ಅವರ ಹರಿಕಥಾ ಕಾಲಕ್ಷೇಪಕ್ಕೆ ಆಗಮಿಸುವ ಜನರನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಅಪರಿಮಿತ ಜನರು ಅವರ ಕಾಲಕ್ಷೇಪ ಕೇಳಲು ಬರುತ್ತಾರೆ.]

ಹಿಂಸಿಸಲು ಹಿಂಜರಿಯುವವನೇ ಹಿಂದೂ ಇದು ಎಲ್ಲಾ ಸಂಪ್ರದಾಯಸ್ಥರಿಗೂ ಅನ್ವಯಿಸುತ್ತದೆ. ಎಲ್ಲಾ ಸಂಪ್ರದಾಯದ ಹಿಂದೂಗಳಿಂದು ಒಂದುಗೂಡುವ ಸಮಯ ಬಂದಿರುತ್ತದೆ. ಮದುವೆಯ ಮಂಟಪಕ್ಕೆ ಬೆಂಕಿ ತಾಗಿರುವಾಗ ಅದನ್ನು ನಂದಿಸಲು ಎಲ್ಲರೂ ಧಾವಿಸುತ್ತಾರೆ. ತಾನು ಅಡುಗೆಯ ಕೆಲಸದವನು. ಆದುದರಿಂದ ಅಡುಗೆಯ ಕೆಲಸಬಿಟ್ಟು ಬೆಂಕಿನಂದಿಸಲು ನಾನು ಹೋಗುವುದಿಲ್ಲವೆಂದು ಅಡುಗೆ ಭಟ್ಟನು ಹೇಳುವುದಿಲ್ಲ. ಹಾಗೆಯೇ ವಾದ್ಯದವನು ತನಗೆ ಮಂಗಲ ಮಾತ್ರ, ಬೆಂಕಿನಂದಿಸುವ ಕೆಲಸ ಅಲ್ಲವೆಂದು ಹಟಹಿಡಿಯುವದಿಲ್ಲ. ಮಂಟಪ ಕಟ್ಟುವವರು ಕೂಡಾ ಕಟ್ಟುವದು ಮಾತ್ರ ನನ್ನ ಕೆಲಸ, ಅದಕ್ಕೆ ಬೆಂಕಿ ತಾಗಿದಲ್ಲಿ ನಂದಿಸಲು ತಾನು ಹೋಗುವದಿಲ್ಲವೆಂದು ಸುಮ್ಮಗುಳಿಯುವುದಿಲ್ಲ. ಎಲ್ಲರೂ ಆ ಕೆಲಸಕ್ಕಾಗಿ ಮುಂದಾಗುತ್ತಾರೆ. ಹಾಗೆಯೇ ಯಾವ ಸಂಪ್ರದಾಯಸ್ಥನೇ ಇರಲಿ, ಯಾವ ಜಾತಿಯವನೇ ಇರಲಿ ಹಿಂದೂ ಧರ್ಮಕ್ಕೆ ಅಪಾಯ ಬಂದಿರುವಾಗ ಅದನ್ನೆದುರಿಸಲು ಮುಂದಕ್ಕೆ ಬರಬೇಕಾಗಿದೆ. ಆ ಒಂದುಗೂಡಿಸುವ ಮಹಾನ್ ಕಾರ್ಯಕ್ಕಾಗಿ ವಿಶ್ವ ಹಿಂದೂ ಪರಿಷತ್ತಿನ ಆರಂಭವಾಗಿರುತ್ತದೆ.

ನಾವು ಭಿನ್ನಭಿನ್ನ ಸಂಪ್ರದಾಯಸ್ಥರಿದ್ದು ಬೇರೆ ಬೇರೆ ಹೆಸರಿನಿಂದ ದೇವರ ನಾಮವನ್ನು ಜಪಿಸುತ್ತೇವೆ. ಆದರೆ ಆ ವಿಷ್ಣುವೋ, ಶಿವನೋ, ಆರುಮುಗನೋ ಒಬ್ಬನೇ ಇದ್ದು ಆತನೇ ಸಚ್ಚಿದಾನಂದ ಸ್ವರೂಪಿ ಇದ್ದಾನೆ. ನಮ್ಮ ನಡುವೆ ವ್ಯತ್ಯಾಸ ಇರಬಹುದಾದರೂ ಪ್ರತ್ಯೇಕತೆ ಇಲ್ಲ. ಹಾಗಾಗಿ ಒಂದುಗೂಡಲು ಸಾಧ್ಯವೆಂದು ಶ್ರೀ ಕೃಪಾನಂದ ವಾರಿಯರ್ ರವರು ತಮ್ಮ ಸ್ವಾಗತ ಭಾಷಣದಲ್ಲಿ ತಿಳಿಸಿದರು.

ವೇದಿಕೆಯ ಮೇಲೆ ಆಸೀನರಾಗಿದ್ದ ಆಚಾರ್ಯ ಪುರುಷರಿಗೆ, ಧರ್ಮಗುರುಗಳಿಗೆ, ಹೂಮಾಲೆಯನ್ನು ಹಾಕಿ ಗೌರವಿಸಲಾಯಿತು. ಆ ಸ್ವಾಮೀಜೀಯವರು ಪರಿಷತ್ತನ್ನು ಆಶೀರ್ವದಿಸಿದರು. ಅವರಲ್ಲಿ ಹೆಚ್ಚಿನವರು ಸಂಸ್ಕೃತದಲ್ಲೇ ಆಶೀರ್ವಾದಿಸುತ್ತ ಉಪದೇಶವಿತ್ತರು. ಕೆಲವರು ಹಿಂದಿ, ತಮಿಳು ಅಲ್ಲದೆ ಆಂಗ್ಲ ಭಾಷೆಯಲ್ಲಿ ಮಾತನಾಡಿದರೂ ಬಿಸಿಲಿನ ಝಳ ಜೋರಾಗಿದ್ದರೂ ಸಭೆ ಬಹಳ ಶಾಂತವಾಗಿತ್ತು.

ದ್ವಾರಕಾ ಪೀಠದ ಶ್ರೀ ಶ್ರೀ ಶಂಕರಾಚಾರ್ಯರವರು ಅಧ್ಯಕ್ಷ ಸ್ಥಾನಕ್ಕೆ ಕಳೆಯನ್ನಿತ್ತಿದ್ದರು. ಇಲ್ಲಿ ಶಾಸ್ತ್ರಜ್ಞ ವಿದ್ವಾಂಸರು ಸೇರಿರುವರು. ಇವರನ್ನು ಮಾತ್ರವಲ್ಲ ಅಖಂಡ ಭಾರತವನ್ನು ಒಂದಾಗಿಸುವ ಮಹಾಶಕ್ತಿ ಸಂಸ್ಕೃತಕ್ಕಿದೆ. ಇದುವೇ ನಮ್ಮ ಒಗ್ಗಟ್ಟಿನ ರಹಸ್ಯ. ಈ ಪುಣ್ಯಭೂಮಿಯಾದರೋ ಅವತಾರಗಳ ಆಶ್ರಯವಿದೆ. ಅನ್ಯ ದೇಶಗಳಲ್ಲಿ ಪ್ರವಾದಿಗಳು ಹಾಗೂ ದೇವದೂತರು ಜನಿಸಿರುವರು. ಆದರೆ ನಮ್ಮ ದೇಶದಲ್ಲಿ ಸ್ವತಃ ಸರ್ವಶಕ್ತಿಶಾಲೀ ಭಗವಂತನೇ ಅವತಾರ ತಾಳುತ್ತಾನೆ. ಅದು ಇಲ್ಲ ಧರ್ಮಜ್ಞಾನಿಯಾದಾಗ. ಹಾಗೆಯೇ ಜಗತ್ತಿನ ಅನ್ಯಾನ್ಯ ದೇಶಗಳಲ್ಲಿ ಧರ್ಮ ನಾಶವಾದಾಗಲೆಲ್ಲಾ ಭಾರತದಿಂದ ಧರ್ಮೋಪದೇಶಕರು ಅಲ್ಲಿಗೆ ಹೋಗಿ ಧರ್ಮದ ಜೀರ್ಣೋದ್ಧಾರ ಮಾಡುತ್ತಿದ್ದರು. ಅಧರ್ಮವೇ ಹಿಂದೂಧರ್ಮವಿದೆ. 'ಹಿಂದೂ' ಶಬ್ದವು ಬಹಳ ಪುರಾತನವೇ ಇದೆ. ಪುರಾಣಗಳಲ್ಲೂ ಆ ಪದವಿದೆ. ತ್ರಿವಿಷ್ಟಪವು ನಮ್ಮ ದೇಶದ ಭಾಗವೇ ಇದೆ. ಅದು ಶಿವನ ವಾಸಸ್ಥಳವಿದೆ.

ವಿಶ್ವ ಹಿಂದೂ ಪರಿಷತ್ತಿನ ಚಿಹ್ನೆ ವಟವೃಕ್ಷವಿದೆ. ನಮ್ಮ ಧರ್ಮವೇ ಆ ರೀತಿಯದಲ್ಲ. ಜೈನರು, ಬೌದ್ಧರು, ಸಿಖ್ಖರೂ ಅದೇ ವೃಕ್ಷದ ಶಾಖೆಗಳಿದ್ದಾರೆ. ಹಿಂದೂ ಧರ್ಮದ ಸಂದೇಶವು—ಸರ್ವ ಜನರೂ ಸುಖಿಗಳಾಗಿರಲೆಂಬುದಿದೆ. ಈ ಸಂದೇಶವನ್ನು ಸಾರುತ್ತ ಹಿಂದೂಗಳನ್ನು ಒಂದುಗೂಡಿಸುವ ಮಹಾನ್ ಕಾರ್ಯಕ್ಕಾಗಿ ವಿಶ್ವ ಹಿಂದೂ ಪರಿಷತ್, ಇದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಹಿಂದೂಗಳಿದ್ದಾರೆ. ಅವರೆಲ್ಲರೂ ಸುಲಭವಾಗಿ ಆಚರಿಸಬಹುದಾದ ಸಂಸ್ಕಾರನ್ನ ಧಾರ್ಮಿಕ ವಿಧಿಯನ್ನು ನಿಶ್ಚಯಿಸಲು ವಿದ್ವತ್ ಪರಿಷತ್ ಕಲೆತಿದೆ. ಅಲ್ಲದೆ ಹಿಂದುಗಳು ಮತ ಪರಿವರ್ತನೆಗೊಳಗಾಗುತ್ತಿದ್ದಾರೆ. ಅದನ್ನು ತಡೆಯಲು ಹಾಗೂ ಪರಿವರ್ತನೆಗೊಳಗಾದವರನ್ನು ಹಿಂದಕ್ಕೆ ಮಾತೆಯ ಮಡಿಲಿಗೆ ತರಲೇನು ಮಾಡಬೇಕೆಂಬುದನ್ನು ನಿಶ್ಚಯಿಸಲು ವಿದ್ವತ್ ಪರಿಷತ್ತಿನ ಮಹಾ ಸಭೆ ಸೇರಿರುತ್ತದೆ. ಇದಕ್ಕೆ ಶುಭವಾಗಲೆಂದು ದ್ವಾರಕಾ ಪೀಠದ ಶ್ರೀ ಶ್ರೀ ಶಂಕರಾಚಾರ್ಯರು ಆಶೀರ್ವದಿಸಿದರು.

ಇಲ್ಲಿ ಅನೇಕ ಸಂಪ್ರದಾಯಗಳ ಆಚಾರ್ಯರೂ ವಿದ್ವಾಂಸರೂ ಸಮ್ಮಿಲಿತವಾಗಿದ್ದಾರೆ. ಅವರು ಧರ್ಮ ರಕ್ಷಣೆಯ ಕುರಿತು ಯೋಚಿಸಲು ಒಂದಾಗಿದ್ದಾರೆ. ಈ ರೀತಿ ಭಿನ್ನ ಭಿನ್ನ ರೀತಿಯ ಪೂಜಕರ ಒಗ್ಗಟ್ಟಿನ ಮೂಲಕ ದೇಶಭಕ್ತಿಯನ್ನು ಹಬ್ಬಿಸಲು ಸಾಧ್ಯವಾಗುತ್ತದೆ. ಆಗ ಮಾತ್ರ ಎಲ್ಲಾ ರಂಗಗಳ ಜನತೆಯ ಪ್ರಗತಿಯಾಗಬಲ್ಲುದು. ಧರ್ಮದ ತಳಹದಿಯ ಮೇಲೆ ಮಾತ್ರ ಅಭಿವೃದ್ಧಿ—ಸಮೃದ್ಧಿಗೆ ಸಾಧ್ಯ. ಧರ್ಮದ ಆಳ್ವಿಕೆಗೆ ಎಲ್ಲಿ ಆಸರೆ ಇಲ್ಲವೋ ಅಲ್ಲಿ ಅಕ್ರಮ ಹಾಗೂ ನೈತಿಕ ಪಥಕ್ಕೆ ಆಶ್ರಯ ಇರುತ್ತದೆ. ಯಾವೊಬ್ಬ ಮನುಷ್ಯನಿಂದಾಗಲೀ ಅಥವಾ ಅದಕ್ಕಿಂತ ಹೆಚ್ಚು ಭಿನ್ನ ಭಿನ್ನ ಮನುಷ್ಯರಿಂದಾಗಲೀ ತನಗೆ ಸಾವು ಬರಕೂಡದೆಂದು ಹಿಂದೆ ಒಬ್ಬ ರಕ್ಕಸನು ವರ ಪಡೆದುಕೊಂಡನು. ಆಗ ಹರಿ ಹಾಗೂ ಹರ ಇಬ್ಬರೂ ಒಂದಾಗಿ ಹರಿ ಹರ ರೂಪದಿಂದ ಅವನನ್ನು ವಧಿಸಿದರು. ಈ ಹರಿ—ಹರ ಭಕ್ತಿಯೇ ನಮ್ಮ ಶಕ್ತಿಯ ಮೂಲವಿದೆ. ಇಂದು ಎಲ್ಲಾ ಸಂಪ್ರದಾಯದ ಹಿಂದೂಗಳು ವಿಶ್ವ ಹಿಂದೂ ಪರಿಷತ್ತಿನ ಮಹಾವಟ ವೃಕ್ಷದಡಿ ಒಂದಾಗಿ ಧರ್ಮ ರಕ್ಷಣೆಯ ಕಾರ್ಯಕ್ಕೆ ಮುಂದಕ್ಕೆ ಬರಬೇಕು. ಈಗ ಮತಾಂತರದ ಗಂಡಾಂತರ ದೇಶದಲ್ಲೆಲ್ಲೂ ಹಬ್ಬಿರುತ್ತದೆ. ಅತ್ತ ನಾವು ಅಲಕ್ಷ್ಯದಿಂದ ಇದ್ದಲ್ಲಿ ಸಮಾಜದ ಪತನವನ್ನು ಕಂಡು ಸುಮ್ಮಗಿರುವದೇ ಸರಿ. ಒಂದು ದಿನ ಅದು ಪೂರ್ಣ ಸಮಾಜದ ನಾಶಕ್ಕೆನೇ ದಾರಿಯಾದೀತು. ಮೇ ತಿಂಗಳಿನಲ್ಲಿ ಸೂರ್ಯನ ಬಿಸಿಲಿನ ತಾಪ ವಿಪರೀತ ಇರುತ್ತದೆ. ಆದರೂ ಅದನ್ನು ತಡೆದುಕೊಳ್ಳಬಹುದು. ಈ ಸೂರ್ಯ ಬಿಸಿಲಿನ ತಾಪದಿಂದ ಬಿಸಿಯಾಗಿರುವ ಹೊಯಿಗೆಯಲ್ಲಿ ಒಂದು ಕ್ಷಣವಾದರೂ ನಿಲ್ಲಲಾಗುವದಿಲ್ಲ. ಹಾಗೆಯೇ ಪರಕೀಯ ಶಾಸನದ ಕರಾಳತೆಯನ್ನು ಒಂದು ವೇಳೆ ಸಹಿಸಿಕೊಳ್ಳಬಹುದು. ಆದರೆ ಈ ಮತಾಂತರ ಹೊಂದಿರುವವರ ದಮನದಾಳ್ವಿಕೆಯನ್ನು ಸಹಿಸಿಕೊಳ್ಳುವದು ಬಹಳ ಕಷ್ಟವೇ ಸರಿ. ಆದುದರಿಂದಲೇ ಹಿಂದೂಗಳು ಮತಾಂತರ ಹೊಂದದಂತೆ ಪಡೆಯಲಿಕ್ಕಾಗಿ ವಿಶ್ವ ಹಿಂದೂ ಪರಿಷತ್ತು ಆರಂಭವಾಗಿದ್ದು, ಯಾವ ರೀತಿಯಲ್ಲಿ ತಡೆಯಬಹುದೆಂದಾಲೋಚಿಸಲು ವಿದ್ವತ್ ಪರಿಷತ್ತು ಆರಂಭವಾಗಿದ್ದು, ಯಾವ ರೀತಿಯಲ್ಲಿ ತಡೆಯಬಹುದೆಂದಾಲೋಚಿಸಲು ವಿದ್ವತ್ ಪರಿಷತ್ತು ಕೂಡಿದ್ದು ಅದಕ್ಕೆ ಶುಭವಾಗಲೆಂದು ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜೀಯವರು ಆಶೀರ್ವದಿಸಿದರು.

ದೇವರ ದಯೆಯಿಂದ ವಿಶ್ವ ಹಿಂದೂ ಪರಿಷತ್ತಿನ ಆಶ್ರಯದಲ್ಲಿ ವಿದ್ವತ್ ಪರಿಷತ್ತು ಇಲ್ಲಿ ಸೇರಿರುತ್ತದೆ. ಭಾರತ ದೇಶದೊಳಗೂ ಹೊರಗೂ ಇರುವ ಹಿಂದೂಗಳನ್ನು ಒಗ್ಗಟ್ಟಿನ ದಾರದಲ್ಲಿ ಪೋಣಿಸುವದೇ ವಿಶ್ವ ಹಿಂದೂ ಪರಿಷತ್ತಿನ ಧ್ಯೇಯ. ಹಿಂದೂಗಳ ನಡುವೆ ತೋರಿಕೆಯ ಭಿನ್ನತೆ ಕಂಡು ಬರಬಹುದು—ಅದು ಕುಟುಂಬದೊಳಗೆ ಕಂಡು ಬರುತ್ತಿರುವ ಭಿನ್ನತೆಯಂತೆ. ಈ ಭಿನ್ನತೆ ಅಥವಾ ವ್ಯತ್ಯಾಸಕ್ಕಾದರೋ ಅವರವರ ಅಲ್ಪತ್ವೇ ಕಾರಣವಿದೆ. ಇವೆಲ್ಲವನ್ನು ನಾವು ಅರಿತುಕೊಂಡಲ್ಲಿ ವ್ಯತ್ಯಾಸದ ಗುಳ್ಳೆಯನ್ನು ಒಡೆದಂತೆಯೇ ಸರಿ. ಈ ದಾರಿಯಲ್ಲಿ ವಿಶ್ವ ಹಿಂದೂ ಪರಿಷತ್ತಿಗೆ ಜಯವಾಗಲೆಂದು ಮದುರೈ ಅಧೀನಂ ಸ್ವಾಮೀಜೀಯವರು ಆಶೀರ್ವದಿಸಿದರು.

ಉಪನಿಷತ್ತಿನ ಪ್ರಕಾರ ಆತ್ಮ ಸಾಕ್ಷಾತ್ಕಾರವೇ ಹಿಂದೂ ಧರ್ಮದ ಸಾರ ಹಾಗೂ ಗುರಿ ಇದೆ. ಈ ಸಾಕ್ಷಾತ್ಕಾರಕ್ಕೆ ತ್ಯಾಗ ಹಾಗೂ ನಿಯಮ ಅತ್ಯಗತ್ಯ. ನಿಯಮಬದ್ಧ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ಅನ್ಯಾನ್ಯ ಸಂಪ್ರದಾಯದ ಮತಾಚಾರ್ಯರು ತಿಳಿಸಿರುವರು. ಈ ದೇಶವನ್ನು ತಮ್ಮ ಮಾತೃ ಭೂಮಿಯೆಂದು ಮತ್ಸಾದಿಸುವವರೆಲ್ಲರೂ ಹಿಂದೂಗಳೇ ಇದ್ದಾರೆ. ಇದನ್ನು ಸ್ಪಷ್ಟಪಡಿಸಲು ಮುಂದಕ್ಕೆ ಬಂದಿರುವ ವಿಶ್ವಹಿಂದೂ ಪರಿಷತ್ತಿನ ಕಾರ್ಯಕ್ಕೆ ಜಯವಾಗಲೆಂದು ವಲಭ ಪಂಥದ ಸ್ವಾಮಿ ಶ್ರೀ ಕೃಷ್ಣ ಜೀವನ್‌ಜೀಯವರು ಪರಿಷತ್ತನ್ನು ಆಶೀರ್ವದಿಸಿದರು.

ಒಳ್ಳೆಯವನಾಗಿರು ಮತ್ತು ಒಳ್ಳೆಯದನ್ನೇ ಮಾಡೆಂಬುದು ಧರ್ಮದ ಸಾರವಿದೆ. ಒಳ್ಳೆಯವನಾಗಲು ಅವನು ನೈತಿಕ ಹಾಗೂ ಧಾರ್ಮಿಕ ದಾರಿಯಲ್ಲಿ ಸಾಗಬೇಕು. ಒಳ್ಳೆಯ ಅಥವಾ ಕೆಟ್ಟ ವಿಧಾನಗಳಿಂದ ಒಬ್ಬನು ದೊಡ್ಡ ಜನ ಆಗಬಹುದು. ಆದರೆ ಕೆಟ್ಟ ವಿಧಾನಗಳಿಂದ ಒಬ್ಬನು ಒಳ್ಳೆಯವನಾಗಲು ಸಾಧ್ಯ ಇರುವದಿಲ್ಲ.

ವಿಶ್ವಹಿಂದೂ ಪರಿಷತ್ತಿನ ಪ್ರಕಾರ ಈ ದೇಶದಲ್ಲಿ ಉತ್ಪನ್ನವಾದ ಜೀವನ ವಿಧಾನವನ್ನು ಅನುಸರಿಸುವಾತನು ಹಿಂದೂ ಇದ್ದಾನೆ. ಹಿಂದೂ ಧರ್ಮದ ತಳಹದಿ ಬಹಳ ವಿಶಾಲವಿದೆ. ಹಿಂದೂ ಕುಲಾಚಾರವು ಬಹಳ ಪುರಾತನವಿದ್ದಿದ್ದು ಎಲ್ಲಾ ಕುಲಾಚಾರಗಳ ಮಾತೆ ಇದೆ. ಅದನ್ನು ಮಾನವ ಧರ್ಮವೆಂದೂ ಕರೆಯುತ್ತಾರೆ. ಸಹನ ಶೀಲತೆ ಹಾಗೂ ವಿಶಾಲ ಮನೋಭಾವನೆಯೇ ಹಿಂದುತ್ವದ ರಹಸ್ಯವಿದೆ. ಅದರ ಜೀರ್ಣೋದ್ಧಾರಕ್ಕಾಗಿ ವಿಶ್ವಹಿಂದೂ ಪರಿಷತ್ತಿದೆ. ಅದರ ಕಾರ್ಯಕ್ಕೆ ಜಯವಾಗಲೆಂದು ಧಾರವಾಡದ ನವ ಕಲ್ಯಾಣ ಮಠದ ವೀರಶೈವ ಸಂಪ್ರದಾಯದ ಶ್ರೀ ಶ್ರೀ ಕುಮಾರ ಸ್ವಾಮೀಜೀಯವರು ಪರಿಷತ್ತಿಗೆ ಆಶೀರ್ವಾದ ಮಾಡಿದರು.

ವಿಶ್ವ ಹಿಂದೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ. ಕೆ. ಆಪ್ಟೆಯವರು ಪರಿಷತ್ತಿನ ಧ್ಯೇಯ ಹಾಗೂ ಗುರಿಯ ಕುರಿತು ತಿಳಿಸಿದರು. ಪ್ರಯಾಗ ತೀರ್ಥಕ್ಷೇತ್ರದಲ್ಲಿ ಕಲೆತಿದ್ದ ವಿಶ್ವ ಹಿಂದೂ ಪರಿಷತ್ತಿನ ಸಮ್ಮೇಲನದಲ್ಲಿ ಎಲ್ಲಾ ಹಿಂದುಗಳಿಂದಲೂ ಆಚರಿಸಲು ಸಾಧ್ಯವಾಗಬಹುದಾದಂತಹ ಧಾರ್ಮಿಕ ವಿಧಿಯನ್ನು ನಿಶ್ಚಯಿಸಲು ವಿದ್ವತ್ ಪರಿಷತ್ತಿನ ಸಭೆಯನ್ನು ಕರೆಯಬೇಕೆಂದು ತೀರ್ಮಾನವಾಗಿತ್ತು. ಅದಕ್ಕಾಗಿ ಒಂದು ಪ್ರಶ್ನಾವಳಿಕೆಯನ್ನು ತಯಾರಿಸಿ ಎರಡು ಸಾವಿರಕ್ಕಿಂತಲೂ ಹೆಚ್ಚು ವಿದ್ವಾಂಸರಿಗೆ ಕಳುಹಿಸಿಕೊಡಲಾಯಿತು. ಅವರಿತ್ತಿರುವ ಉತ್ತರಗಳನ್ನು ಶೇಖರಿಸಿ, ಪರಿಪಡಿಸಿ ದ್ವಾರಕಾ ಪೀಠಾಚಾರ್ಯ ಶ್ರೀ ಶ್ರೀಗಳ ಸೂಚನೆಯ ಪ್ರಕಾರ ವಿದ್ವತ್ ಪರಿಷತ್ತಿನ ಮುಂದಿಡಲಾಗಿರುತ್ತದೆ. ವಿದ್ವತ್ ಪರಿಷತ್ತು ಆ ಕುರಿತು ಯೋಚಿಸಿ ತೀರ್ಮಾನಕ್ಕೆ ಬರಲಿಕ್ಕಾಗಿ ಇಲ್ಲಿ ಕೂಡಿದೆ

(ಹನ್ನೆರಡನೇ ಪುಟ ನೋಡಿರಿ)

ಆಧುನಿಕ ಭಾರತ

ತರುಣಿಯರ ಎನ್. ಸಿ. ಸಿ. ತಂಡ!

ಲೇಖಕರು:
ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

'ಉಜಿರೆಯ ಹೈಯರ್ ಸೆಕೆಂಡರೀ ಶಾಲಾ ವಠಾರದಲ್ಲಿ ಈ ಸಲ ತರುಣಿಯರ ಮಿಲಿಟರಿ (ಎನ್. ಸಿ. ಸಿ. ಶಿಬಿರ) ವು, ಎಂತ ವರ್ಣಮಯ ನವು ಎಲ್ಲರ ಕುತೂಹಲವನ್ನು ಕೆರಳಿಸಿತ್ತು! ಅದರ ಯಶಸ್ವಿಯಾಗಿ ನಡೆದ ಈ ಶಿಬಿರವನ್ನು ಕಂಡಾಗ, ಕೋಮಲೆಯರು, ಚಂಚಲೆಯರು, ಅಬಲೆಯರು, ಎಂದೆನಿಸಿಕೊಂಡ ಸ್ತ್ರೀಯರು ಸ್ವತಂತ್ರ ಭಾರತದಲ್ಲಿ ಎಷ್ಟರ ಮಟ್ಟಿಗೆ ಸಬಲೆಯರಾಗಿದ್ದಾರೆಂಬುದಕ್ಕೆ ಈ ಶಿಬಿರ ಪ್ರತ್ಯಕ್ಷ ನಿದರ್ಶನದಂತಿದ್ದಿತು!'

ದಿನಾಂಕ 26—12—1966ರಿಂದ 4—1—1967ರ ವರೆಗೆ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹೈಯರ್ ಸೆಕೆಂಡರಿ ಶಾಲಾ ಕ್ರೀಡಾಂಗಣದಲ್ಲಿ ನಡೆದ ತರುಣಿಯರ (ಮಿಲಿಟರಿ) N. C. C. ಶಿಬಿರವು ಅಭೂತಪೂರ್ವವಾಗಿತ್ತು.

ಒಂದು ಕಾಲದಲ್ಲಿ ಮಿಲಿಟರಿ ಜೀಪುಗಳನ್ನು ನೋಡಿದೊಡನೆಯೇ ಹೆದರಿ ಅವಿತುಕೊಳ್ಳುತ್ತಿದ್ದ ಅಬಲೆಯರು ಇಂದು ಅದೇ ಮಿಲಿಟರಿಯವರ ಕೈಕೆಳಗೆ ತಾವು ಸ್ವತಃ ತರಬೇತಿಯನ್ನು ಪಡೆದು ಭಾರತದ ವೀರಾಂಗನೆಯರ ಸಾಲಿಗೆ ಸೇರುತ್ತಿದ್ದಾರೆ! ಇದು ಅಪೂರ್ವವೂ ಸ್ವಾಗತಾರ್ಹವೂ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ದೊರಕುದು ಶಾಂತಿ ಮಂತ್ರದಿಂದಲೇ, ಆದರೆ ಆ ಶಾಂತಿ ಮಂತ್ರದ ಮೊದಲು ಕ್ರಾಂತಿಯ ಕಿಡಿ, ಜ್ವಾಲಾಮುಖಿಯಾಗಿತ್ತು! ಆ ಕ್ರಾಂತಿಯ ಜ್ವಾಲಾಮುಖಿಯ ಜ್ವಾಲೆಯೇ ಶಾಂತಿ ಸ್ಥಾಪನೆಗೆ ಮೂಲ ಪ್ರೇರಕವಾಗಿತ್ತು. ಕ್ರಾಂತಿಯು ಅಂತಿಮ ಶಾಂತಿ ಫಲಕಾರಿಯಾದುದೆಂದು ಇದರಿಂದ ಸ್ಪಷ್ಟವಾಗಿದೆ. ಇಂತಹ ಆ ಕ್ರಾಂತಿಯ ಕಾಲದಲ್ಲಿ ಭಾರತದ ಧೀರ ತರುಣಿಯರನೇಕರು ಕ್ರಾಂತಿ ರಂಗಕ್ಕೆ ಧುಮುಕಿ ಹೋರಾಡಿ ಪುರುಷ ಸಿಂಹ ಕ್ರಾಂತಿವೀರರ ಜತೆಗೆ ಹೆಗಲುಕೊಟ್ಟು ಕ್ರಾಂತಿ ನಕ್ಷತ್ರಗಳಂತೆ ಬೆಳಗಿದ ಉಜ್ವಲವಾದ ಘಟನೆಗಳು ಭಾರತದ ರಕ್ತ ಸಿಕ್ತ ಇತಿಹಾಸದಲ್ಲಿ ಅಮರವಾಗಿದೆ! ಹೀಗೆ ಕ್ರಾಂತಿಯ ಬಳಿಕ ದೊರೆತ ಶಾಂತಿ ಮಾರ್ಗದ ಮೂಲಕ ಭಾರತಕ್ಕೆ ಲಭಿಸಿದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿಯೇ ಈಗ ರಾಷ್ಟ್ರದ ನಾಲ್ಕೆಸೆಗಳಲ್ಲಿಯೂ ಎನ್. ಸಿ. ಸಿ. ಪಡೆಯು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಸಿದ್ಧವಾಗುತ್ತಿದೆ! ಇದು ದೇಶ ರಕ್ಷಣೆಯ ಮಹಾಕಾರ್ಯದ ಮೊದಲ ಹಂತವಾಗಿದೆ.

ಈ ರಾಷ್ಟ್ರೀಯ ಸ್ವಯಂ ಸೇವಾ ದಳವು (N. C. C.) ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಸನ್ 1948ರಲ್ಲಿ ಪ್ರಾರಂಭಿಸಲ್ಪಟ್ಟಿತು. ಸ್ವತಂತ್ರ ಭಾರತ ಸರಕಾರದ, ಸ್ವಾತಂತ್ರ್ಯ ರಕ್ಷಣೆಯ ಈ ಸಾಹಸದ ಹೆಜ್ಜೆ, ಆ ಬಳಿಕ ತುಸು ನಿಧಾನವಾಗಿಯಾದರೂ, ರಾಷ್ಟ್ರದ ಯುವಕ ಯುವತಿಯರನ್ನು ಆಕರ್ಷಿಸಿದ್ದು, ಇಂದು ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ತರುಣ ತರುಣಿಯರು, ಈ ಎನ್. ಸಿ. ಸಿ. ಪಡೆಯ ಶಿಸ್ತು, ಸಮಾನತೆ ಮತ್ತು ಸಂಯಮಗಳನ್ನು ಕಲಿಯುತ್ತ ರಾಷ್ಟ್ರ ರಕ್ಷಣೆಯ ಹೆಗ್ಗುರುತಾಗಿ, ಒಗ್ಗಟ್ಟಿನ ಬಲದಿಂದ ಶೋಭಿಸುತ್ತಿದ್ದಾರೆ!

ರಾಷ್ಟ್ರಕ್ಕೆ ಗಂಡಾಂತರ ಒದಗಿದಾಗ ಸ್ವತಂತ್ರ ಭಾರತದ ವೀರಯೋಧರಿಗೆ ವಿವಿಧ ರೀತಿಯಿಂದ ಸಹಾಯ ಸಲ್ಲಿಸುವುದೇ ಎನ್.ಸಿ.ಸಿ.ಯ ಮುಖ್ಯೋದ್ದೇಶವಾಗಿದೆ. ರಾಷ್ಟ್ರದ ಮೇಲೆ ವೈರಿಗಳ ಆಕ್ರಮಣ ನಡೆದಾಗ ಒದಗಿ ಬರುವ ತುರ್ತು ಪರಿಸ್ಥಿತಿಯಲ್ಲಿ ನಮ್ಮ ವೀರ ಯೋಧರಿಗೆ ಬೆಂಗಾವಲಾಗಿ ನಿಂತು ರಾಷ್ಟ್ರದ ಪ್ರಜಾ ಜನರಿಗೆ ವಿವಿಧ ರೀತಿಯಿಂದ ಸಹಾಯವನ್ನು ಸಲ್ಲಿಸುತ್ತ ರಾಷ್ಟ್ರರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದೂ N. C. C. ಯ ಮುಖ್ಯ ಕರ್ತವ್ಯವಾಗಿರುತ್ತದೆ. ಮಹತ್ವಪೂರ್ಣವಾದ ಈ ಕರ್ತವ್ಯವನ್ನು ನೆರವೇರಿಸಲು ದಕ್ಷರೆಂದ ಸೇನಾ ನಾಯಕರ ಮೂಲಕ ಪ್ರಶಿಕ್ಷಣ ದೊರೆಯಬೇಕಾದುದು ಅತಿ ಅಗತ್ಯವಾಗಿರುವಂತೆ, ಶಿಸ್ತು, ಸಂಯಮ, ಐಕ್ಯಭಾವನೆ ಹಾಗೂ ಸಮಾನತೆ, ಇವುಗಳ ಕುರಿತು ಶಿಕ್ಷಣವೂ ಅತ್ಯಾವಶ್ಯಕವಾಗಿರುತ್ತದೆ. ಎನ್. ಸಿ. ಸಿ. ಶಿಕ್ಷಣ ಪ್ರಶಿಕ್ಷಣದ ಪ್ರಣಾಲಿಯು ಪ್ರತಿಯೋರ್ವ ವ್ಯಕ್ತಿಯ ಜೀವನದಲ್ಲಿಯೂ ವೈಯುಕ್ತಿಕವಾಗಿಯೂ ಒಂದ ಆದರ್ಶವನ್ನು, ಸತ್ ಸಂಸ್ಕಾರವನ್ನು ಒದಗಿಸುತ್ತಿದೆಯೆಂಬುದು ಮರೆಯಲಾಗದ ವಿಚಾರವಾಗಿದೆ. ರಾಷ್ಟ್ರಾದ್ಯಂತವಾಗಿ ನಡೆಯುತ್ತಿರುವ, ಎನ್. ಸಿ. ಸಿ. ಶಿಬಿರಗಳ ಮೂಲಕ ಇಂತಹ ಯೋಗ್ಯ ಶಿಕ್ಷಣ— ಪ್ರಶಿಕ್ಷಣಗಳು ಸ್ವಯಂಸೇವಕರಿಗೆ ದೊರಕುತ್ತಿವೆ.

ನಮ್ಮ ಜಿಲ್ಲೆಯಲ್ಲಿ ಸುಮಾರು ಸನ್ 1961ರಲ್ಲಿ ಹತ್ತು ಕಡೆಗಳಲ್ಲಿ ಎನ್. ಸಿ. ಸಿ. ಶಿಕ್ಷಣ ಆರಂಭವಾಗಿತ್ತು. ಈ ಹತ್ತರಲ್ಲಿ ಒಂದಾಗಿ ಉಜಿರೆಯ ಶ್ರೀ D.K.V. ಹೈಸ್ಕೂಲಿನಲ್ಲಿಯೂ (ಈಗಿನ D. M. H. S. ಸ್ಕೂಲ್) ಎನ್. ಸಿ. ಸಿ. ಶಿಕ್ಷಣ ಆರಂಭವಾಯಿತು. ಶ್ರೀ ಪಿ. ಎಸ್. ಶಾಲಿಯಾನ್‌ರವರು ಪ್ರಥಮ, N. C. C ಆಫೀಸರರಾಗಿ ನೇಮಕಗೊಂಡು (ಇಂದೂ ಶ್ರೀಯುತರೇ N. C. C. ಆಫೀಸರರಾಗಿದ್ದಾರೆ.) ಹೆಚ್ಚಿನ ಉತ್ಸಾಹದಿಂದ ಕಾರ್ಯರಂಗಕ್ಕಿಳಿದರು. ಶ್ರೀಯುತರ ಉತ್ಸಾಹಕ್ಕೆ ಈ ಶಾಲೆಯ ಮುಖ್ಯೋಪಾಧ್ಯಾಯರಾಗಿರುವ ಶ್ರೀ ಆರ್. ಎನ್. ಭಿಡೆ ಅವರ ಬೆಂಬಲವೂ ದೊರೆತು ರೂಪುಗೊಂಡ ಇಲ್ಲಿಯ N. C. C. ಪಡೆ, ದೂರದ ಇತರ N. C. C. ಪಡೆಗಳನ್ನು ಪ್ರಶಿಕ್ಷಣಕ್ಕಾಗಿ ಇಲ್ಲಿಗೆ ಆಕರ್ಷಿಸುವಷ್ಟು ಸಾಮರ್ಥ್ಯವನ್ನು ಪಡೆಯಿತೆಂದರೆ ಇದು ಅತಿಶಯೋಕ್ತಿಯಲ್ಲ! ಇಲ್ಲಿಯ ವಿಶಾಲವಾದ ಅನುಕೂಲವಾದ ಸ್ಥಳದ ಮಹತ್ವವೇ ಆಗಿದೆ.

ಆ ಬಳಿಕ ಸನ್ 1965ರಲ್ಲಿ 66ನೇ ಮೈಸೂರು ಬೆಟಾಲಿಯನ್ N. C. C. ಪಡೆಯ ಕ್ಯಾಂಪು ಚೀಫ್ ಕಮಾಂಡೆಂಟ್ ಮೇಜರ್ ಶ್ರೀ [illegible]—ಅವರ ನೇತೃತ್ವದಲ್ಲಿ—ಈ ಶಾಲಾ ಕ್ರೀಡಾಂಗಣದಲ್ಲಿ ಅತ್ಯಂತ ತೃಪ್ತಿಕರವಾಗಿ ನಡೆಯಿತು. ಈ ಸಲ ಬೇರೆ ಬೇರೆ ಕಾಲೇಜುಗಳ ಸುಮಾರು 600 ಮಂದಿ ವಿದ್ಯಾರ್ಥಿಗಳು ಇಲ್ಲಿ ಸೈನಿಕ ಶಿಕ್ಷಣದ ತರಬೇತಿಯನ್ನು ಪಡೆದರು. ಮೇಜರ್ ವಾರ್ಯ್ರು ಅವರ ಮೆಚ್ಚಿಗೆಯನ್ನು ಪಡೆದ ಇಲ್ಲಿಯ ಕ್ರೀಡಾಂಗಣ ಹಾಗೂ ಇತರ ಅನುಕೂಲತೆಗಳ ಸೌಕರ್ಯದ ಕಾರಣ ಸನ್ 1966ರ ದಸರಾ ರಜೆಯಲ್ಲಿ ಸೀನಿಯರ್ ಕಾಲೇಜು ಕಡೆಟುಗಳಾದ ಸುಮಾರು 600 ಮಂದಿ ಸ್ವಯಂಸೇವಕರ ಮತ್ತೊಂದು ಶಿಬಿರವು, ಮೇಜರ್ ಶ್ರೀ ಮುತ್ತಪ್ಪನವರ ನೇತೃತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಬೇರೆ— ಹಲವು ಕಡೆಗಳಲ್ಲಿ ಇಂತಹ ಶಿಬಿರಗಳು ಸಾಕಷ್ಟು ಯಶಸ್ವಿಯಾಗಿ ನಡೆದಿಲ್ಲವೆಂಬ ಧ್ವನಿ ಕೇಳಿ ಬರುತ್ತಿದ್ದರೂ, ಈ ಶಾಲೆಯಲ್ಲಿ ಅಂತಹ ಭಾವನೆಗೂ ಸಹ ಅವಕಾಶವಿಲ್ಲದಂತೆ, ಯಶಸ್ವಿಯಾದ ಈ ಶಿಬಿರವು ಸೈನ್ಯದ ಪ್ರಮುಖ ಅಧಿಕಾರಿಗಳನ್ನು ಈ ಸ್ಥಳಕ್ಕೆ ಆಕರ್ಷಿಸಿತು. ಈ ಶಿಬಿರದ ಯಶಸ್ಸಿಗೆ ಇಲ್ಲಿಯ ಅನುಕೂಲವಾದ ಸ್ಥಳದ ಮಹತ್ವ ಒಂದಾದರೆ, ವಿಶೇಷ ಅನುಭವ ಸಂಪನ್ನರೂ ಪ್ರತಿಭಾವಂತರೂ ಆಗಿರುವ ಮೇಜರ್, ಶ್ರೀ ಮುತ್ತಪ್ಪನವರ ಸಮರ್ಥವಾದ ನೇತೃತ್ವವೂ ಮತ್ತೊಂದು ಕಾರಣವಾಗಿದ್ದಿತು.

ಆ ಬಳಿಕ, ಡೆಪ್ಯುಟಿ ಡೈರೆಕ್ಟರ್ ಲೆ| ಕರ್ನಲ್ ಶ್ರೀ ಜಿ. ಕೆ. ನಾಯುಡು—ಹಾಗೂ ಲೆ| ಕರ್ನಲ್ ಬಿ. ಸಿ. ಜೋಶಿ, ಮೊದಲಾದ ಪ್ರಮುಖ ಸೇನಾಧಿಕಾರಿಗಳು ಉಜಿರೆಯ ಈ ಶಾಲಾ ವಠಾರವನ್ನು ಮುಕ್ತ ಹೃದಯದಿಂದ ಪ್ರಶಂಸಿಸಿ, ಮೆಚ್ಚಿ ಶಿಫಾರಸ್ ಮಾಡಿದರು; ಯೋಗ್ಯವಾದ ಈ ಶಾಲಾ ವಠಾರದಲ್ಲಿ ರೈಫಲ್ ಶೂಟಿಂಗ್ ಟ್ರೈನಿಂಗ್ ಸೆಂಟರ್ ಕೂಡ ಸುಭದ್ರವಾಗಿ ಕಟ್ಟಲ್ಪಟ್ಟಿದ್ದು ಶಿಕ್ಷಣ ನೀಡುತ್ತಿದೆಯೆಂಬುದು ಹೆಮ್ಮೆಪಡತಕ್ಕ ವಿಚಾರವಾಗಿದೆ.

ಈ ಸಲ ಮೇಜರ್ ಶ್ರೀ ಮುತ್ತಪ್ಪನವರ ನೇತೃತ್ವದಲ್ಲಿ ನಡೆದ ತರುಣಿಯರ N. C. C. ಶಿಬಿರದಲ್ಲಿ ಮೈಸೂರು, ಕೊಡಗು, ಮತ್ತು ನಮ್ಮ ಜಿಲ್ಲೆಯ ಬೇರೆ ಬೇರೆ ಹೈಸ್ಕೂಲುಗಳ ಪ್ರೌಢ ಯುವತಿಯರು ಭಾಗವಹಿಸಿದ್ದರು. ಸಮವಸ್ತ್ರಧಾರಿಗಳಾದ ಈ 500 ಮಂದಿ ತರುಣ ತರುಣಿಯರು—ಎದೆಯುಬ್ಬಿಸಿ ವೀರ ನಡಿಗೆಯಲ್ಲಿ ಪಥಚಲನ (ಪರೇಡ್) ಮಾಡುತ್ತಿದ್ದಾಗಿನ ಆ ಅಪೂರ್ವ ದೃಶ್ಯವು ಝಾನ್ಸಿ ಲಕ್ಷ್ಮಿಯ ಕಾಲದಲ್ಲಿ ಬೆಳಗಿದ್ದ ತರುಣಿಯರ ಸೈನ್ಯದ ಅಪ್ರತ್ಯಕ್ಷವಾಗಿ ಪ್ರತಿಬಿಂಬಿಸಿ, ಪ್ರೇಕ್ಷಕರನ್ನು ವಿಚಾರ ಮಗ್ನರಾಗುವಂತೆ ಮಾಡಿತ್ತು! ಮಮತಾಮಯಿಯರೂ ಕೋಮಲಾಂಗಿಯರೂ ಆದ ತರುಣಿಯರು, ಕಠೋರ ಕರ್ಕಶವಾದ ಸಮವಸ್ತ್ರಗಳಿಂದ ಶೋಭಿಸುತ್ತಿದ್ದುದನ್ನು ನೋಡಿದ ಸಾವಿರಾರು ಮಂದಿ ಸ್ತ್ರೀ ಪುರುಷರು— ಈ ತರುಣಿಯರ ಶಿಸ್ತು, ವೀರೋಚಿತವಾದ ನಡಿಗೆ ಹಾಗೂ ದೃಢ ನಿರ್ಧಾರದ

ಹೊಸಕರ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್
ಜಯನಗರ ೪ನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉತ್ಕೃಷ್ಟ ವಿದ್ಯಾನುಭವವುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರ್ಕಾರ ಮನ್ನಣೆ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೩೦೦ ಹಾಸಿಗೆಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವದ ಸೌಕರ್ಯವಿದೆ.

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು. ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿ.

ಡಾ|| ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ಭಾವ, ಇವುಗಳನ್ನು ನೋಡಿ ನೋಡಿ ತೃಪ್ತರಾಗಿ ಹೋಗಿದ್ದರು.

ತಾಲೂಕ್ ಬೋರ್ಡ ಪ್ರೆಸಿಡೆಂಟ್ ಶ್ರೀ ಜಿ. ಎನ್. ಭಿಡೆ, ಅವರಿಂದ ಉದ್ಘಾಟಿತಗೊಂಡ ಈ ಶಿಬಿರವು ಕೊನೆಯ ದಿನ, ಜಿಲ್ಲಾಧಿಕಾರಿಗಳಾದ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಸಾವಿರಾರು ಮಂದಿ ಪ್ರೇಕ್ಷಕರನ್ನು ತೃಪ್ತಿಪಡಿಸುತ್ತ ಯಶಸ್ವಿಯಾಯಿತು.

ಬಹುಮಾನ ವಿತರಣೆ ಮಾಡಿದ ಈ ಶಾಲೆಯ ಮುಖ್ಯೋಪಾಧ್ಯಾಯ, ಶ್ರೀ ಆರ್. ಎಸ್. ಭಿಡೆ ಅವರು ಯಶಸ್ವಿಯಾದ ಈ ಶಿಬಿರದ ಕುರಿತು ತಮ್ಮ ಹರ್ಷ ವ್ಯಕ್ತಿಯನ್ನು ವ್ಯಕ್ತಪಡಿಸಿದರು. P T ಡಿ ಸ್ಪ್ಲೇ, ಶಾರೀರಿಕ ವ್ಯಾಯಾಮ ಇತ್ಯಾದಿಗಳನ್ನು ಶಿಸ್ತು ಬದ್ಧವಾಗಿ ತೋರಿಸಿದ ಈ ತರಬೇತಿಯಿಂದಲೇ ಇಂದಿನ ವಿದ್ಯಾರ್ಥಿಗಳ ಮನೋಭಾವಗಳಲ್ಲೊಂದು ಸುಧಾರಣೆ ಜನ್ಮತಾಳುತ್ತವೆ ಎಂದರು. ಈ ಶಾಲೆಯ ಕಲಿಸುವಿಕೆಯಿಂದ ವೀರಗೀತೆಗಳ ಘೋಷಣೆ ಎಲ್ಲೆಡೆಯು ಪ್ರಶಂಸೆಗೆ ಪಾತ್ರವಾಗಿತ್ತು. ಈ ಶಿಬಿರ ಯನ್ನು ತಂಡೋತ್ಸಾಹದಿಂದ ನಡೆಸಿದ ಡಿಸ್ಟ್ರಿಕ್ಟ್ ಇನ್‌ಸ್ಟ್ರಕ್ಟರ್ ಶ್ರೀ ಪದ್ಮರಾಜ್ ಅವರ ಶ್ರದ್ಧೆ ಈ ಮೂಲಕ ವ್ಯಕ್ತವಾಯಿತು. ಸ್ತ್ರೀ ಪುರುಷರಿಗೆ ಸಮಾನ ಸ್ವಾತಂತ್ರ್ಯವಿಲ್ಲದ ಹಿಂದಿನ ಕಾಲದಲ್ಲಿ ಸ್ತ್ರೀಯರು ಪುರುಷರಿಗೆ ಸ್ಫೂರ್ತಿದಾಯಕರಾಗಿ ಬೆಂಗಾವಲಿನಂತಿದ್ದರು. ಶ್ರೀ ಪುರುಷರಿಗೆ ಸಮಾನ ಸ್ವಾತಂತ್ರ್ಯವಿರುವ ಈ ಕಾಲದಲ್ಲಿ, ದೇಶವನ್ನು ರಕ್ಷಿಸುವ ಹೊಣೆ, ವಿದ್ಯಾರ್ಥಿನಿಯರ ಮೇಲೆಯೂ ಇದೆ ಎನ್ನುವುದು ಸಮಾನವಾಗಿದೆ. ಇದಕ್ಕಾಗಿಯೇ ಇಂದಿನ ವಿದ್ಯಾರ್ಥಿನಿಯರ ಪಾತ್ರವೆಂದರೆ, ಭಾರತದ ಭಾವೀ ಜನಾಂಗವನ್ನು ರೂಪಿಸಿ, ವೀರತ್ವ—ಪೂಜ್ಯತೆಗಳಿಗೆ ಪಾವಿತ್ರ್ಯ ಕೊಟ್ಟು, ಧೀರರಾಷ್ಟ್ರವನ್ನು ಕಟ್ಟುವ, ಕಟ್ಟುವ ಮಹಾಕಾರ್ಯ. ಈ ದೃಷ್ಟಿಯಿಂದಲೂ ಮಹಿಳೆಯರ ಈ ಪ್ರಗತಿ ಅಪೇಕ್ಷಣೀಯವೂ ಸ್ವಾಗತಾರ್ಹವೂ ಆಗಿದೆ.

ಮೇಜರ್ ಶ್ರೀ ಮುತ್ತಪ್ಪನವರ ನೇತೃತ್ವದಲ್ಲಿ ನಡೆದ ಈ ಶಿಬಿರದ N. C. C. ತಂಡದ ಎಲ್ಲ ಹುಡುಗಿಯರ ಶಿಸ್ತು ಹಾಗೂ ಸಮಯೋಚಿತ ಕಾರ್ಯಗಳು ಅತ್ಯಂತ ಪ್ರಶಂಸನೀಯವಾಗಿದ್ದುವು.

ಇಂತಹ ಅಭೂತಪೂರ್ವವಾದ ಶಿಬಿರವನ್ನು ಏರ್ಪಡಿಸಿದ ಈ ಶಾಲೆಯ ವ್ಯವಸ್ಥಾಪಕರೂ ಮುಖ್ಯೋಪಾಧ್ಯಾಯರೂ, ಅಭಿನಂದನೀಯರಾಗಿದ್ದಾರೆ. ಅಂತೆಯೇ ಈ ಶಿಬಿರದ ಚಟುವಟಿಕೆಗಳಲ್ಲಿ ಸಹಕಾರ ರೂಪವಾಗಿ ವಿಶೇಷ ಉತ್ಸಾಹದಿಂದ ಕಾರ್ಯನಿರತರಾಗಿದ್ದ N. C. C. ಆಫೀಸರ್, ೫೭ ಕೆ ಬಿ ಸಾಲಿಯಾನ್, ಅವರು ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಫಿಸಿಕಲ್ ಡೈರೆಕ್ಟರಾದ ಶ್ರೀ ವಿಶ್ವನಾಥ ಶೆಟ್ಟಿ Bsc. D. P. E. ಅವರೂ ಅಭಿನಂದನೀಯರಾಗಿದ್ದಾರೆ.

READ &
ADVERTISE IN
NAVAYUGA WEEKLY

ಸಿಂಡಿಕೇಟ್ ಬ್ಯಾಂಕಿನ ಅದ್ಭುತ ಪ್ರಗತಿ

'ಬ್ಯಾಂಕಿನಲ್ಲಿ ಪ್ರವರ್ತಿಸಲು ಯಾವ ಒಬ್ಬನೂ ಚಿಕ್ಕವನಲ್ಲ' ಎಂಬ ತತ್ತ್ವವನ್ನು ಹೊಂದಿ, ಸಿಂಡಿಕೇಟ್ ಬ್ಯಾಂಕ್, ಲಿಮಿಟೆಡ್‌ನ ಮೂಲ ಧ್ಯೇಯ ಸಾಲ...



ಮುಖ್ಯೋಜಕ—ಸಾಧಕ
ಡಾ॥ ಟಿ ಎಂ ಎ. ಪೈ
(ಬ್ಯಾಂಕಿನ ಅಧ್ಯಕ್ಷ)

ಮಾರ್ಗ ಇದೇ ವಿಶ್ವಸ್ತ ಧ್ಯೇಯ ಒಡಿಸ್ಸತ್ತದೆ ಬ್ಯಾಂಕಿನ ತತ್ತ್ವ ಒಂದಾಗಿ ಒಳ್ಳ ಒಂದು ಕೋಟಿ ರೂಪಾಯಿ ಬಂಡವಾಳ ವಿರುದ್ಧ ಇದನ್ನು ಸ್ಥಿತಿಯು ಐದು ಲಕ್ಷವಿದ್ದ ಹಾಗೆ ಇತ್ತೀಚಿಗ ಬ್ಯಾಂಕು ರೂ. ೫೫ ಲಕ್ಷ ಮಾರು ಬಡಿ ಶೇರ ಗಳನ್ನು ಹೊರಡಿಸಿದೆ, ಇದರಲ್ಲಿ ರೂ. ೫ ಲಕ್ಷದಷ್ಟನ್ನು ತನ್ನ ನೌಕರರಿಗೇ ಹಂಚಿ ನವೀನಾದ ವಿಧಿದ್ದು, ಇದು ಸಿಂಡಿಕೇಟ್ ಬ್ಯಾಂಕಿನದೇ ವೈಶಿಷ್ಟ್ಯವೆನ್ನುವುದು ನಿಸ್ಸಂದೇಹವಾಗಿದೆ.

ಗ್ರಾಹಿಕ ದೇಶದ ಆರ್ಥಿಕ ಮುಗ್ಗಟ್ಟಿನ ಕಾಲ, ವಿದೇಶೀಯ ಆಕ್ರಮಣದಿಂದಾದ ರೂಪಾಯಿಯ ಅಪಮೌಲ್ಯದ ತರುವಾಯ ಅಪಮೌಲ್ಯದ ಪರಿಣಾಮಗಳು, ಬೆಲೆಯೇರಿಕೆ, ಜೀವನ ವೆಚ್ಚ ಎಲ್ಲವೂ ಬೀಸಿದುವು. ಹಾಗಿದ್ದರೂ ಬ್ಯಾಂಕು ತನ್ನ ಲಾಭಾಂಶದ ಪ್ರಮಾಣವನ್ನು ಉಳಿಸಿಕೊಂಡಿದೆ (ರೂ. ೩೩.೫೫ ಲಕ್ಷ). ಶೇರುದಾರರಿಗೆ ಗ್ರಾಹಕರಂತೆಯೇ ಕಾನೂನು ಕರಿಗೆ ಗೊಳಪಟ್ಟು ನಿರ್ಗಂತ ಡಿವಿಡೆಂಡು ಹಂಚಲು ಸಮರ್ಥವಾಗಿದೆ.

ವರದಿ ವರ್ಷದಲ್ಲಿ ಬ್ಯಾಂಕಿನ ಠೇವಣಾತಿ ರೂ. ೧೭. ಕೋಟಿಯಷ್ಟು ಹೆಚ್ಚಿ ಆದು ರೂ ೭೪ ಕೋಟಿಯನ್ನು ಮೀರಿದೆ. ಜಾಗರೂಕತೆ ಹೊರ ನೀಡಿದ ಸಾಲವು ರೂ ೧೦ ಕೋಟಿಯಷ್ಟು ಹೆಚ್ಚಿ ರೂ ೪೧ ಕೋಟಿಗೆ ನಮೂದಿಸಿದ ಬ್ಯಾಂಕಿನ ಠೇವಣಾತಿ ಎಲ್ಲದರ ಕಾರಣದ ಚಿಕ್ಕ ಮೊತ್ತದಿಂದ ಒದಗಿತ್ತು, ಇವುಗಳಲ್ಲಿ ಪ್ರತಿಯೊಂದರಲ್ಲಿ ರೂ ೧೦೦೦ಕ್ಕಿಂತ ಕಡಿಮೆ ಇರುವುದು. ಇವರೆಲ್ಲರಿಗೂ ಡಿಪಾಜಿಟ್ ಇನ್ಶ್ಯೂರೆನ್ಸ್ ಕಾರ್ಪೊರೇಶನ್ನಿನ ರಕ್ಷಣೆ ದೊರೆಯುವುದು ರೂ. ೫ ಸಾವಿರಕ್ಕಿಂತ ಹೆಚ್ಚು ಡಿಪೋಜಿಟ್ ಇರುವವರು ಕೇವಲ ೨೦೦ ಮಾತ್ರ. ಹಾಗೆಯೇ ಸಾಲಗಳಲ್ಲಿಯೂ ರೂ ೧೦೦೦ಕ್ಕೆ ಕಡಿಮೆ ಸಾಲ ಪಡೆದವರ ಪ್ರಮಾಣ ಸೇ. ೭೦ರಷ್ಟು ಮೀರುತ್ತದೆ. ಜನ ಸಾಮಾನ್ಯನ ಹಣವನ್ನು ಸಂಗ್ರಹಿಸುವುದು ಮತ್ತು ಶ್ರೀ ಸಾಮಾನ್ಯನಿಗೇ ನೆರವಾಗುವುದು ಸಿಂಡಿಕೇಟ್ ಬ್ಯಾಂಕಿನ ಒಂದು ಉದ್ದೇಶ. ಅರ್ಹ ಉಚಿತವಾದ ಪಿಗ್ಮೀ ಮಾದರಿಯ ಹೊಸಾರು ತರದ ಉಳಿತಾಯ ಯೋಜನೆಗಳ ಬ್ಯಾಂಕಿನ ಬಳಿ ಇವೆ

ಬ್ಯಾಂಕಿನ ಒಟ್ಟು ವಹಿವಾಟು ಕೋಟಿ ರೂಪಾಯಿ ... ಬ್ಯಾಂಕಿನ ... ಮೊದಲ ಬ್ಯಾಂಕಿನ ರೇವಣಿದಾರರ ...

ವ್ಯಾಪಕ ಜನಮನ್ನಣೆ ಪಡೆದ ಪ್ರಸಿದ್ಧ ಕರ್ನಾಟಕ ದ ಪ್ರಸಿದ್ಧ ಹಿತಚಿಂತಕ
ಶ್ರೀ ಟಿ ಎ ಪೈ
(ಬ್ಯಾಂಕಿನ ಮೇನೇಜಿಂಗ್ ಡೈರೆಕ್ಟರ್)

ದಾರರು ಎಲ್ಲರೂ ಮಧ್ಯಮ ಹಾಗೂ ಸಾಮಾನ್ಯ ವರ್ಗದವರೇ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಶ್ರೀ ಸಾಮಾನ್ಯನಲ್ಲಿ ಬ್ಯಾಂಕಿಂಗ್ ರುಚಿ ಹುಟ್ಟಿಸುವಲ್ಲಿ ಅಗ್ರಗಾಮಿ

ಜಿ ಗೋಪಾಲಕೃಷ್ಣ ಬ್ಯಾಂಕ್ ಜನರಲ್ ಮ್ಯಾನೇಜರು
ಶ್ರೀ ಕೆ. ಕೆ ಪೈ
(ಬ್ಯಾಂಕಿನ ಚೀಫ್ ಆಫೀಸರ್)

ಯಾದ ಸಿಂಡಿಕೇಟ್ ಬ್ಯಾಂಕ್ ಇಂದು ಭಾರತ ವರ್ಗದ ಭಾರತದಲ್ಲಿ ಹೊಂದಿದ ಶಾಖೆಗಳು ಪ್ರತಿನಿತ್ಯ ಹೆಚ್ಚುತ್ತ ಎಲ್ಲ ನಗರಗಳಲ್ಲಿ ತಾಲೂಕುಗಳನ್ನು ಆರೆಯುವಲ್ಲಿ ಇತರರು ಮುಂಚೆ ಬಂದರೂ ದೂರ ಇಂದಿಗೂ ಸಿಂಡಿಕೇಟ್ ಬ್ಯಾಂಕ್ ಈ ದಿಶೆಯಲ್ಲಿ ಪರಿಣಾಮ ಯಾಗಿಯೇ ಉಳಿದಿದೆ ವಿದೇಶಗಳಲ್ಲಿ ಕೂಡ ಇದು ಅನೇಕ ಏಜನ್ಸಿಗಳನ್ನು ಪಡೆದಿದ್ದು ಬ್ಯಾಂಕಿಂಗ್ ವ್ಯವಹಾರದಲ್ಲಿ ದಕ್ಷ—ಪ್ರಾಮಾಣಿಕ ಸೇವೆಗೆ ಮುಂದಾಗಿದೆ.

ದೇಶದ ಬಲೆ ಬೆನ್ನೆಲುಬಿನ ಆಹಾರ ಸಮಸ್ಯೆಯನ್ನು ಪರಿಹರಿಸಲು ಅಧಿಕೋತ್ಪಾದನೆಯೊಂದೇ ದಾರಿ. ಉತ್ತಮ ಗೊಬ್ಬರ—ಬೀಜ ಉಪಕರಣ ನೀರಿನ ಸರಬರಾಜು ವ್ಯವಸ್ಥೆ, ಸಂರಕ್ಷಣೆ—ಇವು ಇವತ್ತು ನಮ್ಮ ರೈತರು ಬಡತನದಿಂದ ಬಳಲುತ್ತಿರುವುದರಿಂದ ಅವರ ನೆರವಿಗೆ ಸಿಂಡಿಕೇಟ್ ಬ್ಯಾಂಕ್ ಕೆಲ ವರ್ಷಗಳಿಂದ ಧುಮುಕಿದ ರೈತರಿಗೆ ಆಧಿಕ ಧನ ನೆರವನ್ನು ನೀಡುವುದಲ್ಲದೆ, ಒಳಿಯ ಮಾರ್ಗದರ್ಶನೆ ತನ್ನೂ ಅದು ಗಮನ ಕೊಡುತ್ತದೆ ಇದಕ್ಕಾಗಿ ಬ್ಯಾಂಕಿನ ಪ್ರತ್ಯೇಕ ವಿಭಾಗವೊಂದಿದ್ದು ಅದು ದಕ್ಷತೆಯಿಂದ ಕೆಲಸ ಮಾಡುತ್ತಿದೆ ಬೆಳೆಗಳ ವಿಮೆ ಒದಗಿಸಿ, ನಮ್ಮ ವಿಶಾಲ ದೇಶದಲ್ಲಿ ವ್ಯವಹಾರಕ್ಕೆ ಬರುವ ಹಾಗೆ ನವ ರೈತರ ನಾನಾ ವಸ್ತು ಉತ್ಪನ್ನ ಉತ್ತಮ ವಿದ ಸಿದ್ಧ ವ್ಯಾಪಾರರ, ವ್ಯಾಪಾರಿಗಳ ದವಡೆಯಿಂದ ರೈತರನ್ನು ತಪ್ಪಿಸಲು ಸಹಾಯವಾಗಬಹುದು

ಗ್ರಾಹಕರಲ್ಲಿ ಬ್ಯಾಂಕ್ ಸರ್ವತೋಮುಖ ಪ್ರಗತಿ ಹೊಂದಿದೆ ಎಂದು ಹೇಳಲು ಸಂತೋಷವಾಗುತ್ತದೆ. ಬ್ಯಾಂಕಿನ ಮೇನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು, ಪಡ್ ಕಾರ್ಯರೇಶನ್ನಿಂದ ಮರಳಿ ಬ್ಯಾಂಕಿನ ಸೇವೆಗೆ ತೊಡಗಿದ್ದರೆ ಧ್ಯಕ್ಷ ಡಾ॥ ಟಿ ಎಂ ಎ ಪೈಯವರ ಸೂಕ್ತ ಮಾರ್ಗದರ್ಶನದಲ್ಲಿ ಇವರ ಹಾಗೂ ಚೀಫ್ ಆಫೀಸರ್ ಶ್ರೀ ಕೆ. ಕೆ ಪೈಯವರ ನೇತೃತ್ವದಲ್ಲಿ ಬ್ಯಾಂಕು ಇನ್ನು ಒಳ್ಳೆಯ ಪ್ರಗತಿಯನ್ನು ಸಾಧಿಸಲಿ ಬ್ಯಾಂಕಿನ ಆಡಳಿತವರ್ಗ, ಆಧಿಕಾರಿಗಳು, ಮತ್ತೆಲ್ಲ ನೌಕರರ ತ್ರಿವೇಣಿ ಸಂಗಮವಲ್ಲ ಬ್ಯಾಂಕ 'ಶ್ರೀ ಭಾರತೀಯರ ಬ್ಯಾಂಕು' ಎಂಬ ತನ್ನ ಕೀರ್ತಿಯನ್ನು ಮುಂದೆಯೂ ಉಳಿಸಿಕೊಂಡು ಬರಲಿ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
S L P I—/67 S. C 201/66
ದಕ್ಷಿಣ ಕನ್ನಡ ಜಿಲ್ಲೆ — ಅರ್ಜಿದಾರ ...
ತಿಂಗಳುಕ್ಕೈ ಬಟ್ಟ ಸ್ವರ್ಣ ಅಳಿಯ ಪುತ್ತೂರು ... ಎದ್ರು ಪಕ್ಷಕಾರರು
ಇವರಿಗೆ ಕೋರ್ಟ ಸ್ಥಂಭ ಪ್ರಕಾರ ತಿಳಿಸುವುದೇನೆಂದರೆ—
ಮೇಲ್ಕಂಡ ಡಿಕ್ರಿ ಪ್ರಕಾರ ಎಮ್ಮಿಂದ ಬರತಕ್ಕ ಡಿಕ್ರಿ ಹಣ ವಸೂಲಿ ಬಗ್ಗೆ ನಿಮ್ಮ ಮೇಲೆ ಮಾಡಿದ ನೋಟೀಸ ಅಮ್ಮಲ್ ಜಾರಿಯಲ್ಲಿ ನಿಮಗೆ ಕೈದಿಡಿ ವಾರಂಟು ಕೊಟ್ಟು ಶಿವಲಾ ಜೈಲಿಗೆ ರವಾನಿಸ ಬೇಕಾಗಿ ಅಪೇಕ್ಷಿಸಿದ ದರಿಂದ ಅದ್ದ ನಿಮ್ಮಾರ್ಕ್ಕೆ ಬಡೆ ಆಸ್ತಿ ಇಲ್ಲದ್ದು 6—6—67ಕ್ಕೆ ನೀವು ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಉಡಹಂಕಿ ತಿಳ್ಳು ತಕ್ಕದ್ದು ಎಂತ ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದ ನಿಮ್ಮ ಗೈರು ಹಾಜರಾಯಿಂದ ತೀರ್ಮಾನಿಸಲಾಗುವುದು.

(Sd.) C. S. Shastry.
Vakil for Petitioner
ಪುತ್ತೂರು, ತಾ 18—4—67

ಎಲ್ಲೆಲ್ಲಿ ಏನೇನು?

ಅಭಿನಂದನಾ ಸಭೆ

ತಾ. 4—4—1967ರಂದು, ಪುತ್ತೂರು ಮತ್ತು ಬಂಟ್ವಾಳ ವಲಯಗಳಿಂದ ವಿಧಾನ ಸಭಾ ಸದಸ್ಯರಾಗಿ ಚುನಾಯಿತರಾದ ಶ್ರೀ ಕೆ. ವಿಠಲದಾಸ ಶೆಟ್ಟಿ ಮತ್ತು ಶ್ರೀಮತಿ ಕೆ. ಲೀಲಾವತಿ ರೈಗಳವರಿಗೆ ಅಭಿನಂದನಾ ಸಭೆಯೊಂದನ್ನು ಲೋಕ ಸೇವಾ ವೃಂದದಲ್ಲಿ ಏರ್ಪಡಿಸಲಾಯಿತು. ಪ್ರಾರ್ಥನೆಯ ನಂತರ ಸಂಸ್ಥೆಯ ಕೋಶಾಧಿಕಾರಿ ಮುರ್ ಈಶ್ವರ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಹಿತಚಿಂತಕರ ಭಾಷಣಗಳ ನಂತರ ಶ್ರೀಯುತ ವಿಠಲದಾಸ ಶೆಟ್ಟರು ಮಾತಾಡುತ್ತಾ ಇಂದಿನ ಸ್ಥಿತಿಯಲ್ಲಿ ದೇಶಕ್ಕೆ ಲೋಕಸೇವಾ ವೃಂದದಂತಹ ಸಂಸ್ಥೆಗಳಿಂದಾಗ ಬೇಕಾದ ಸೇವೆಯ ಮಹತ್ವವನ್ನು ತಿಳಿಸಿ ಈ ದಿಶೆಯಲ್ಲಿ ತಾನು ಪೂರ್ಣ ಬೆಂಬಲವನ್ನು ಈಯುವೆನೆಂದು ಆಶ್ವಾಸನೆಯಿತ್ತರು. ಆ ಮೇಲೆ ಶ್ರೀಮತಿ ಲೀಲಾವತಿ ರೈಯವರು ಸಂಸ್ಥೆಯ ಬಗ್ಗೆ ಮೆಚ್ಚುಗೆಯ ಮಾತನ್ನಾಡಿ ಪ್ರಚಲಿತ ಪರಿಸ್ಥಿತಿಯಲ್ಲಿ ದೇಶಕ್ಕೆ ಸಲ್ಲಿಸ ಬೇಕಾದ ಸೇವೆಯ ಅವಶ್ಯಕತೆಯನ್ನು ತಿಳಿಸಿದರು. ಬಳಿಕ ಲೋಕ ಸೇವಾ ವೃಂದದ ಅಧ್ಯಕ್ಷರು ಉತ್ತಮ ಗುಣಸಂಪನ್ನರಾದ ಹಾಗೂ ಕರ್ತವ್ಯ ಶಕ್ತಿಯುಳ್ಳ ಮುಖಂಡರ ಅವಶ್ಯಕತೆಯನ್ನು ವ್ಯಕ್ತಪಡಿಸಿ ಆಂತಹ ಕಾರ್ಯವನ್ನು ಈರ್ವರು ಮುಂದಾಳುಗಳೂ ನೆರವೇರಿಸುವರೆಂದು ಹಾರೈಸಿ ಅವರು ಮುಖಂಡರ ಬಗ್ಗೆ ಅಭಿನಂದಿಸಿದರು. ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಹಿರಿಯಡ್ಕ ಜಾತ್ರೆ

ಹಿರಿಯಡ್ಕ ಮಹತೋಭಾರ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕವಾಗಿ ಜರಗುವ ರಥೋತ್ಸವಾದಿ ಕಾರ್ಯಕ್ರಮಗಳು ತಾ. 24—4—67ರಿಂದ ತಾ. 29—4—67ರ ತನಕ ಜರಗಲಿರುವುದರಿಂದ ಭಕ್ತಾದಿಗಳೆಲ್ಲರೂ ಬಂದು ದೇವತಾ ಕಾರ್ಯವನ್ನು ನೆರವೇರಿಸಿ ಕೊಟ್ಟು ಶ್ರೀಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸ ಬೇಕೆಂದೂ ಶ್ರೀಗಳಾದ ಎಂ. ಜಗಂಜೀವ ಆಳ್ವ (ಮೆನೇಜಿಂಗ್ ಟ್ರಸ್ಟಿ) ವೈ. ದೂಮಣ್ಣ ಹೆಗ್ಡೆ, ಎಡ್ವಕೇಟ್ ಕೆ. ವಿಶ್ವನಾಥ ಹೆಗ್ಡೆ, ಎಡ್ವಕೇಟ್ (ಟ್ರಸ್ಟೀಸ್) ಇವರು ಅಪೇಕ್ಷಿಸುತ್ತಾರೆ.

ವಾರ್ಷಿಕೋತ್ಸವ

ಶಿರ್ವ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. 16—4—67ರಂದು ಶ್ರೀ ಬಿ. ಭಾಸ್ಕರ ಶೆಟ್ಟಿ, ಎಂ.ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್ಬಿನ ಅಧ್ಯಕ್ಷ ಶ್ರೀ ಎಲ್. ಮೆಂಡೋನ್ಸರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ಆರ್. ಹೆಗ್ಡೆಯವರು ಪ್ರಗತಿಪರ ವರದಿಯೋದಿದರು. ಉಪಾಧ್ಯಕ್ಷ ಡಾ| ಕೆ. ಆರ್. ವಂಕಟಕೃಷ್ಣರವರು ಸಂದೇಶ ವಾಚಿಸಿದರು. ಶಿರ್ವದ ಹಿರಿಯ ಪಿ.ಟಿ.ಓ.ರವರು ಬಹುಮಾನ ವಿತರಣೆಗೈದರು. ಡಾ| ಟಿ. ಎನ್. ಕೆ. ನಂಬಿಯಾರರು ಧನ್ಯವಾದವಿತ್ತರು.

ವಾರ್ಷಿಕ ಮಹಾಸಭೆಯಲ್ಲಿ ಈ ಕೆಳಗಿನ ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯು ಚುನಾಯಿಸಲ್ಪಟ್ಟಿತು.

ಡಾ| ಟಿ. ಎನ್. ಕೆ. ನಂಬಿಯಾರ್ (ಅಧ್ಯಕ್ಷ) ಶ್ರೀ ಕೆ. ವಾಸುದೇವ ಶೆಟ್ಟಿ (ಉಪಾಧ್ಯಕ್ಷ) ಶ್ರೀ ಸಿ. ಬಿ. ಶೆಟ್ಟಿ (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ) ಶ್ರೀ ಜೆ. ಮ್ಯಾಂಡ ಭಂಡಾರಿ (ಉಪಕಾರ್ಯದರ್ಶಿ), ಶ್ರೀ ಎಲ್. ಮೆಂಡೋನ್ಸ ಶ್ರೀ ಕೆ. ಆರ್. ಹೆಗ್ಡೆ, ಡಾ| ಕೆ. ಆರ್. ವಂಕಟಕೃಷ್ಣ (ಸದಸ್ಯರು), ಶ್ರೀ ಬಿ. ಡಿ ಮಲ್ಲಿ (ಗೌರವ ಲೆಕ್ಕ ಪರಿಶೋಧಕರು.)

ಕಾರ್ನಾಡು ಸದಾಶಿವ ರಾವ್ ಲೈಬ್ರರಿ ಕಟ್ಟಡದ ಉದ್ಘಾಟನೆ.

ಇದೇ ತಾ. 18ರಂದು, ಮಂಗಳೂರಿನ ಟೈಲ್ ಫಾಕ್ಟರಿ ಹಾಲ್‌ನಲ್ಲಿ ಕೆ. ಎಸ್. ಆರ್. ಡಿಸ್ಟ್ರಿಕ್ಟ್ ಲೈಬ್ರರಿಯ ನೂತನ ಕಟ್ಟಡದ ಪ್ರಾರಂಭೋತ್ಸವು ರಾಜ್ಯಪಾಲ ವಿ. ವಿ. ಗಿರಿಯವರಿಂದ ಜರಗಿತು. ಪ್ರಾರ್ಥನೆಯೊಡನೆ ಬಳಿಕ ಎಲ್. ಎಲ್. ಎ. ಚೆಯರ್‌ಮೆನ್ ಶ್ರೀ ಕೆ. ವಿಶ್ವನಾಥ ಕಾಮತ್‌ರವರು ಸ್ವಾಗತಿಸಿದರು.

ರಾಜ್ಯಪಾಲ ಶ್ರೀ ಗಿರಿಯವರು, ಮಾತನಾಡುತ್ತ ಶ್ರೀಮಂತ ಪುತ್ರನಾಗಿ ಜನಿಸಿದರೂ, ತ್ಯಾಗ ಮತ್ತು ದೀನದಲಿತರ ಸೇವೆಯಲ್ಲಿಯೇ ತನ್ನ ಜೀವಮಾನವನ್ನು ಸವೆಯಿಸಿ ಕೊನೆಗೆ ಅತ್ಯಂತ ದೀನ ಸ್ಥಿತಿಯಲ್ಲಿ ಕೊನೆಯುಸಿರೆಳೆದ ದೇಶಬಂಧು ಶ್ರೀ ಕಾರ್ನಾಡ್ ಸದಾಶಿವ ರಾಯರ ಜೀವನದ ಆದರ್ಶಗಳು ಎಂದಿಗಿಂತಲೂ ಇಂದು ಅತ್ಯಂತ ಅನುಕರಣೀಯವಾಗಿವೆ. ದೇಶವಿಂದು ಎದುರಿಸುತ್ತಿರುವ ಬಿಕ್ಕಟ್ಟಿನ ಪರಿಸ್ಥಿತಿಯ ನಿವಾರಣೆಗೆ ಪ್ರತಿಯೊಂದು ಜಿಲ್ಲೆಗೂ ಶ್ರೀ ಕಾರ್ನಾಡ್ ಸದಾಶಿವ ರಾಯರಂಥ ಒಬ್ಬೊಬ್ಬ ವ್ಯಕ್ತಿಯ ಅವಶ್ಯಕತೆಯಿದೆಯೆಂದು ನುಡಿದರು. ಮಾತ್ರವಲ್ಲದೇ ಕಾರ್ನಾಡ್ ಸದಾಶಿವ ರಾಯರ ಆದರ್ಶ ಜೀವನದಿಂದ ಪಾಠ ಕಲಿಯುವಂತೆ ಯುವಜನರಿಗ ಕರೆನೀಡಿದರು.

ಗ್ರಂಥಾಲಯದ ಬಗ್ಗೆ ಅವರು ಮಾತನಾಡುತ್ತ ಇವು ಬರೇ ಪುಸ್ತಕ ಸಂಗ್ರಹದ ಕೇಂದ್ರವಾಗಿರದೆ, ಅತ್ಯಧಿಕ ಸಂಖ್ಯೆಯಲ್ಲಿ ಓದುಗರನ್ನು ಆಕರ್ಷಿಸಬೇಕು ಹಾಗೂ ಅವರ ಜ್ಞಾನ ವರ್ಧನೆಗೆ ಬೇಕಾದ ಯಾವುದೇ ಕೃತಿಗಳು ಸುಲಭದಲ್ಲಿ ಅವರಿಗೆ ದೊರೆಯುವಂತಾಗ ಬೇಕು. ಅಲ್ಲದೆ ಹಾಯ್ ಸ್ಕೂಲು ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ದಿನಂಪ್ರತಿ 3-4 ತಾಸುಗಳಷ್ಟು ಅವಧಿಯನ್ನಾದರೂ ಗ್ರಂಥಾಲಯಗಳಲ್ಲಿ ಓದುತ್ತಾ ಕಳೆಯಬೇಕು. ಇದರಿಂದ ವಿದ್ಯಾರ್ಥಿಗಳಲ್ಲೀಗ ಕಂಡುಬರುತ್ತಿರುವ ಅಶಿಸ್ತು, ಗಲಭೆ, ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗ ಬಹುದು ಎಂದು ನುಡಿದರು.

ಇದಲ್ಲದೇ ಅವರು ವಿದ್ಯಾರ್ಥಿಗಳು ಸಮಾಜ ಸೇವೆಗಳಂತಹ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸುವಂತಾಗ ಬೇಕು, ಎಂದು ತಿಳಿಸಿದರು.

ಕೇಂದ್ರ ರೈಲ್ವೆ ಸಚಿವ ಶ್ರೀ ಸಿ. ಎಂ. ಪೂಣಚ್ಚನವರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಶ್ರೀ ಪೂಣಚ್ಚ ಹಾಗೂ, ಅಧ್ಯಕ್ಷತೆ ವಹಿಸಿದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಗ್ರಂಥಾಲಯಕ್ಕೆ ಶ್ರೀ ಕಾರ್ನಾಡು ಸದಾಶಿವರಾಯರ ಹೆಸರಿಟ್ಟುದಕ್ಕೆ ತೃಪ್ತಿ ವ್ಯಕ್ತಪಡಿಸಿ ಮಾತನಾಡಿದರು.

ಕೊನೆಯಲ್ಲಿ ಶ್ರೀ ಎಂ. ರಂಗನಾಥರಾವ್‌ರವರು ವಂದನಾರ್ಪಣೆಗೈದರು.

ಗೋಕುಲ್ ಮಾರ್ಕೆಟ್ ಉದ್ಘಾಟನೆ

ಇದೇ ಕಳೆದ ತಾ. 17ರಂದು ಮಂಗಳೂರಿನ ಹಂಪನಕಟ್ಟೆಯಲ್ಲಿ ಸುಮಾರು 6 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ "ಗೋಕುಲ್ ಮಾರ್ಕೆಟನ್ನು ಶ್ರೀ ಜೆ. ಸೂರ್ಯಶೇಖರ್‌ರವರ ಅಧ್ಯಕ್ಷತೆಯಲ್ಲಿ ಕೆನರಾ ಬ್ಯಾಂಕಿನ ಚೆಯರ್‌ಮೆನ್ ಶ್ರೀ ಕೆ. ಪಿ. ಜೆ. ಪ್ರಭು ಅವರು ಉದ್ಘಾಟಿಸಿದರು. ಪ್ರಾರಂಭದಲ್ಲಿ ಗೋಕುಲ್ ಮಾರ್ಕೆಟ್ ಮಾಲಕ ಶ್ರೀ ಎನ್. ಲಕ್ಷ್ಮೀನಾರಾಯಣ ಶೆಟ್ಟರವರು ಸ್ವಾಗತಿಸುತ್ತಾ ಮಾರ್ಕೆಟ್ ರಚನೆಯಲ್ಲಿ ನೆರವಾದವರೆಲ್ಲರಿಗೂ ಕೃತಜ್ಞತೆಯನ್ನರ್ಪಿಸಿದರು. ಶ್ರೀ ಪ್ರಭು ಉದ್ಘಾಟಿಸುತ್ತಾ, ಗೋಕುಲ್ ಮಾರ್ಕೆಟ್ ನಂತಹ ವ್ಯಾಪಾರ ಕೇಂದ್ರವನ್ನು ನಿರ್ಮಿಸಿದುದಕ್ಕಾಗಿ ಶ್ರೀ ಶೆಟ್ಟರವರನ್ನೂ, ಅದಕ್ಕಾಗಿ ಶ್ರಮಿಸಿದ ಇತರರೆಲ್ಲರನ್ನೂ ಅಭಿನಂದಿಸಿದರು. ಶ್ರೀ ಮಾಡೆಲ್ ಶ್ರೀನಿವಾಸ ನಾಯಕ್ ಎಂ. ಎಲ್. ಎ. ಅವರು ಮಾತನಾಡುತ್ತಾ ಬೆಳೆಯುತ್ತಿರುವ ಮಂಗಳೂರಿಗೆ ಗೋಕುಲ್ ಮಾರ್ಕೆಟನಂತಹ ವ್ಯಾಪಾರ ಕೇಂದ್ರದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ಬಂಟರ ಯಾನೆ ನಾಡವರ ಸಂಘ

ಈ ಸಂಘದ ವಾರ್ಷಿಕ ಮಹಾ ಸಭೆಯು ತಾ. 16ರಂದು ವೈಸ್ ಚಾನ್ಸಲರ್ ಡಾ|| ಕೆ. ಸಿ ನಾಯಕರ ಅಧ್ಯಕ್ಷತೆಯಲ್ಲಿ ಕಾರ್ಕಳ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ನೆರವೇರಿತು. (ವಿವರವನ್ನು ಬರುವ ವಾರ ಕೊಡಲಾಗುವುದು. ಸಂ. ನ.)

ಬಣ್ಣ ನೂರಿರಲಿ...!

ಣಾ

ಕಪ್ಪೆಂದ ಹೆಣ್ಣುಗಳ ಒಪ್ಪದವರನು ಕಂಡು
ನಗೆ ಬರುವುದೆನಗೆನ್ನ ನೀಲವೇಣಿ—!
ನಿನ್ನ ಸಿರಿ ಮುಡಿ ಕಾಳ ಕಪ್ಪು ಆದರಿಂದಲೇ
ಮದುವೆಯಾದೆನು ಕೇಳ್ ನನ್ನ ರಾಣಿ!

ಕಡುಗೆಂಪು ಹೆಣ್ಣೆಂದು ದೂರವರ ಕಂಡಿಹೆನು
ದೂರಲೇತಕೊ ನಾನು ತಿಳಿಯದಾದ!
ನಿನ್ನ ಕೆಳ ತುಟಿ ತೊಂಡೆಗೆಂಪೆಂದೆ ನಾ ಮೆಚ್ಚಿ
ಮನಸಾರೆ ನಿನ್ನೊಲಿದು ಮದುವೆಯಾದೆ!

"'ಛೀ!' ಬಹಳ ಬಿಳಿ ಒಲ್ಲೆ" ಎಂದವರನೂ ಬಲ್ಲೆ
ಬಿಳಿಯ ಬಣ್ಣದ ಬೆಲೆಯ ಬಲ್ಲರೇನು?
ನಿನ್ನ ಶಾರದ ರದನ ಪಂಕ್ತಿಗಳಿಗಾನೊಲಿದು
ಕೈಪಿಡಿದ ಕೈಕನವರಿಲ್ಲರೇನು?

ಮೈಬಣ್ಣ ನಸುಕೆಂಪು, ಮುಡಿ ಕಪ್ಪು, ಹಲ್ಲು ಬಿಳಿ
ಹೆಣ್ಣಿನಲಿ ನೂರಾರು ಬಣ್ಣವಿಹುದು!
ಕಪ್ಪೊಪ್ಪದವರವರು ಒಪ್ಪದಾಕೆಯ ಮುಡಿಯು
ಕತ್ತರಿಸಲೆಂಬುದೂ ಸತ್ಯವಿಹುದು!!

"ಬಣ್ಣ ನೂರಿರಲಯ್ಯ ಹೃದಯದೊಲವೇ ಬಳಕೆ
ಬಣ್ಣವೆಂದೇ ಕಣ್ಣ ಕಣ್ಣ ಬಿಡುವೆ?
ನಿನ್ನ ಮೊದಲನೆ ಮಗುವೆ ಕಪ್ಪಾಗಿ ಹುಟ್ಟಿದರೆ
ಯಾರಿಗದನೆತ್ತಿ ನೀ ದಾನ ಕೊಡುವೆ?"

—ಎಂದಾನು ಕೇಳುವೆನು! ಓ, ಹೇಮಗಿರಿಯರಸಿ
ಮೈಮೇಲ ಬಣ್ಣವೇನಾದರಿರಲೀ—!
ಎದೆಯ ಒಳಗಡೆ ಮಾತ್ರ ಬಣ್ಣವಿಲ್ಲದ ಪ್ರೇಮ
ಮಡುಗಟ್ಟಿ ನಿಂತು ತಂಪೀಯುತಿರಲೀ!

ಕಪ್ಪಿರಲಿ ಮೈ ಬಣ್ಣ, ನಿನ್ನ ಮುಂಗುಳ್ಳಿಗೆ ಕಪ್ಪೆ?
ನಿನ್ನ ಕೆಂದುಟಿಯಿತ್ತ ಮುತ್ತು ಕಪ್ಪೆ?
ನಿನ್ನ ಚರ್ಮದ ಬಣ್ಣ ನಿನ್ನ ಒಣ್ಣವೆ ಹೇಳ.....?
ಹಾಗೆಂದರದು ಚಿನ್ನ ನಿನ್ನ ತಪ್ಪೆ...?

—'ತ್ರಿಮೂರ್ತಿ'

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ
ಅಂಚೆ ವೆಚ್ಚ ರೇಲ್ವೆ ಮತ್ತು ವಿಮಾನ ರವಾನೆ ಖರ್ಚು
ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ
ರಿಯಾಯತಿ ದೊರೆಯುತ್ತದೆ.

ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ

O. S. 610/66.

K. ಪರಮೇಶ್ವರ ಭಟ್ಟ —ವಾದಿ
ಮಹಾಬಲ ಭಟ್ಟ ಕೂಡಾ—ಪ್ರತಿವಾದಿರು
4ನೇ ಪ್ರತಿವಾದಿ: ಕಾವೇರಮ್ಮ, ಗಣೇಶ ಭಟ್ಟರ ಮಗಳು ಬೆಳಾಲು ಗ್ರಾಮದ ವಾಸರು.

ಸದ್ರಿ 4ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮ ತಂದೆ ಗಣೇಶ ಭಟ್ಟರು ವಾದಿಗೆ ತಾ. 6—7—62ರಲ್ಲು ರೂ. 2100/-ಕ್ಕೆ ಮತ್ತು ತಾ. 11—9—63ರಲ್ಲು ರೂಪಾಯಿ 1000ಕ್ಕೆ ಬರೆಕೊಟ್ಟ ಡಿಮಾಂಡು ಪ್ರೋಮಿಸರಿ ನೋಟುಗಳ ಪ್ರಕಾರ ವಾದಿಗೆ ಬರತಕ್ಕ ಅಸಲು, ಬಡ್ಡಿ ಖರ್ಚುಗಳನ್ನು ಕೇಳಿ ಕೊಡಾ ಹೂಡಿದ ಈ ದಾವೆಯನ್ನು ತಾರೀಕು 3—6—67ಕ್ಕೆ ವಿಮ್ಮ ನೋಟೀಸಿಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ರೀತಿಯಲ್ಲಿ ತೀರ್ಮಾನಿಸಲಾಗುವುದು.

(Sd.) M. Sadashiva Rao
vakil for Plffs.

ತಾ. 20—4—67.

ಬಯಲಾದ ರಹಸ್ಯ

(ಎರಡನೇ ಪುಟದಿಂದ)

ಗುಡಿಸಲುಗಳಲ್ಲಿ ದೀಪ ಆರಿದ್ದರೂ ಈರಣ್ಣನ ಗುಡಿಸಲ ದೀಪ ಮಿಣಿ ಮಿಣಿ ಉರಿಯುತ್ತಿತ್ತು. ಈರಣ್ಣ ಕೆಮ್ಮುತ್ತಾ ಗಂಜಿಯ ಹನಿಯನ್ನು ಗುಟುಕರಿಸುತ್ತಿದ್ದನು.

ಆಗ ಹೊರಗಿನಿಂದ "ಈರಣ್ಣ" ಎಂದು ಕರೆದುದನ್ನು ಕೇಳಿ ಈ ಅಪರಾತ್ರಿಯಲ್ಲಿ ಬಂದವರಾರೆಂದು ನೋಡಲು ಪಾರ್ವತಿ ಚಿಮಿಣಿ ಹಿಡಿದು ಹೊರಬಂದಳು.

ಅಂಗಳದಲ್ಲಿ ಕಂದೀಲು ಹಿಡಿದು ನಿಂತ ಮೇಸ್ತ್ರಿಯನ್ನು ಕಂಡು ಪಾರ್ವತಿ ಆಶ್ಚರ್ಯಪಟ್ಟಳು.

"ಯಾರು ಮಗು?" ಎಂದ. ಈರಣ್ಣ ಒಳಗಿನಿಂದಲೇ ಕೇಳಿದನ.

"ಮೇಸ್ತ್ರಿಗಳು ಬಂದಿದ್ದಾರಪ್ಪ" ಎಂದಳು.

"ಕುಳಿತುಕೊಳ್ಳಲು ಚಾಪೆ ಹಾಸು ಮಗು." ಎಂದನು.

ತಾಳೆಗರಿಯ ಚಾಪೆಯೊಂದನ್ನು ಜಗಲಿಯಲ್ಲಿ ಹಾಸಿದಳು. ಈರಣ್ಣ ಮೆಲ್ಲ ಎದ್ದು ಹೊರಬಂದನು.

'ಏನು ಸ್ವಾಮಿ! ಅಪರೂಪವಾಗಿ ರಾತ್ರಿ ತಾವ ಬಂದು ಬಿಟ್ಟಿರಿ!' ಎಂದು ಈರಣ್ಣ ಕೆಮ್ಮುತ್ತಾ ಕೇಳಿದನು.

'ನಿನಗೆ ಕಾಹಿಲೆಯೆಂದು ಕೇಳಿ ನೋಡಲು ಹಗಲು ಅವಕಾಶವಾಗದ್ದರಿಂದ ಈಗ ಬರಬೇಕಾಯ್ತು ಈರಣ್ಣ.'

'ನಿಮ್ಮ ಹೊಟ್ಟೆ ತಣ್ಣಗಿರಲಿ, ಈ ಮುದುಕ ಇನ್ನೇನು ಹೆಚ್ಚು ದಿನ ಬದುಕುಳಿವಂತಿಲ್ಲ. ಆದರೆ...."

ಹೇಳಬೇಕೆಂಬ ಮಾತು ಕಂಠದಲ್ಲಿಯೇ ಉಳಿಯಿತು. ಕಣ್ಣೀರ ಹನಿ ಮಾತ್ರ ಕೆಳಗಿಳಿದು ಬಂತು.

'ಅದೇನು ಹೇಳು ಈರಣ್ಣ. ಸುಮ್ಮನೆ ಕಣ್ಣೀರು ಇಳಿಸಬೇಡ.' ಎಂದನು ಸಂಗಣ್ಣ.

'ಮಗಳ ಮದುವೆ ಮಾಡದೆ ನಾನೆಲ್ಲಿ ಕಣ್ಮುಚ್ಚುವೆನೋ ಎಂಬ ಹೆದರಿಕೆ.'

"ಅದಕ್ಯಾಕೆ ಚಿಂತೆ ಈರಣ್ಣ. ಪಾರ್ವತಿಯನ್ನು ಮದುವೆಯಾಗಲು ಎಷ್ಟು ಜನ ಕಾದಿರಲಾರರು?'

'ಆದರೆ ಮಗು ನಾಳೆ ಸುಖ ಉಣ್ಬೇಕು. ಅದಕ್ಕಾಗಿ ಯೋಚ್ನೆ.'

'ಈರಣ್ಣ, ನಾನೊಂದು ಮಾತು ಕೇಳಲೇ?'

'ಕೇಳಿ, ಅದಕ್ಕೇನು?'

'ಮತ್ತೆ, ನೀನು ನಡೆಸಿ ಕೊಡ್ಬೇಕು.'

'ಈ ಮುದುಕನಿಂದಾಪ್ರೆ ಖಂಡಿತಾ ನಡೆಸ್ತೀನಿ.'

'ನೀನೊಪ್ಪಿದರೆ ಪಾರ್ವತಿಯ ಕೈಹಿಡಿಯಲು ನಾನೇ ಸಿದ್ಧನಿರುವೆ.'

ಆ ಮಾತು ಕೇಳಿ ಈರಣ್ಣ ಮೂಕನಂತಾದನು. ಸಂಗಣ್ಣನ ಮುಖವನ್ನೇ ದಿಟ್ಟಿಸಿ ನೋಡ ತೊಡಗಿದನು. ಪಾರ್ವತಿ ಆದಾವಾಗಲೋ ಅಲ್ಲಿಂದ ಮಾಯವಾಗಿದ್ದಳು.

'ನಿನ್ನ ಒಪ್ಪಿಗೆ ಇಲ್ಲವೇ ಈರಣ್ಣ?' ಮೌನ ಮುರಿದು ಕೇಳಿದನು ಸಂಗಣ್ಣ.

'ಸಂತೋಷ ಸಂಗಣ್ಣ. ಪಾರ್ವತಿಯ ಪುಣ್ಯ ದೊಡ್ಡದು. ನಾನೀಗಲೇ ನಿನ್ನ ಕೈ ಮೇಲೆ ಹಾಕಿ ಬಿಡುವೆ.' ಎಂದು ಮಗಳನ್ನು ಕೂಗಿ ಕರೆದನು.

ಪಾರ್ವತಿ ನಾಚುತ್ತ ಹೊರ ಬಂದಳು. ಅವರಿಬ್ಬರ ಕೈ ಹೊಂದಿಸಿದ ಈರಣ್ಣ ಆಡಲು ಬಾಯಿ ಬಾರದೆ ಆನಂದ ಬಾಷ್ಪ ಹರಿಸಿದನ.

o o o o

ಪಾರ್ವತಿ ಸಂಗಣ್ಣನ ಧರ್ಮ ಪತ್ನಿಯಾಗಲು ಶಾಂತಿಲಾಲರ ಸಮ್ಮತಿಯೂ ದೊರಕಿತು.

ಮಗಳನ್ನು ಸಂಗಣ್ಣನಿಗಿತ್ತ ಈರಣ್ಣ ನಿಶ್ಚಿಂತೆಯಿಂದ ಒಂದು ದಿನ ಕಣ್ಮುಚ್ಚಿದನು. ಪಾರ್ವತಿ ಈಗ ಕೂಲಿಯ ಹೆಣ್ಣಾಳಲ್ಲ ಮೇಸ್ತ್ರಿ ಸಂಗಣ್ಣನ ಮಡದಿ.

ಸಂಗಣ್ಣನ ಸಂಸಾರ ನಾಲ್ಕುದಿನ ಚೆನ್ನಾಗಿಯೇ ನಡೆಯಿತು. ಆದರ ಇದ್ದಕ್ಕಿದ್ದಂತೆ ಒಂದು ದಿನ ರಾತ್ರಿ ಮಲಗಿದ ಸಂಗಣ್ಣ ಮರುದಿನ ಹಾಸಿಗೆ ಬಿಟ್ಟೇಳಲಿಲ್ಲ.

ಹಳ್ಳಿಯ ಮಂತ್ರವಾಯಿತು. ಪಟ್ಟಣದ ಡಾಕ್ಟರಾಯಿತು. ರೋಗ ಗುಣವಾಗದಿದ್ದರೂ ಕೈಲಿದ್ದ ಅಲ್ಪ ಸ್ವಲ್ಪ ಹಣ ಮಾತ್ರ ಕರಗಿ ಹೋಯಿತು.

ಮುಂದಿನ ದಿನ ನೂಕುವುದೇ ಕಠಿಣವೆನಿಸಿತು. ಆಗ ಪಾರ್ವತಿಯೇ ಕೂಲಿಗಾಗಿ ಹೊರಟು ನಿಂತಳು.

ಹಾಸಿಗೆಯನ್ನಪ್ಪಿ ಮಲಗಿದ್ದ ಸಂಗಣ್ಣ ತನ್ನ ದುರ್ವಿಧಿ ನೆನೆದು ಕಣ್ಣೀರು ಕೋಡಿ ಹರಿಸಿದನು.

ಕೊನೆಗೂ ಶಾಂತಿಲಾಲರ ಕರುಣೆಯಿಂದ ಪಾರ್ವತಿಗೆ ತೋಟದ ಕೂಲಿ ಕೆಲಸದ ಬದಲಾಗಿ ಮನೆಗೆಲಸದ ಅವಕಾಶ ದೊರಕಿತು

ದಿನವೂ ಲಾಲರ ಬಂಗಲೆಯ ಚೊಕ್ಕಟ ಪಾರ್ವತಿಯದಾಯಿತು. ಅದರಿಂದ ಅವರಿಬ್ಬರ ಊಟದ ಚಿಂತನೆ ನೀಗಿತು.

ಪಾರ್ವತಿ ಮನೆಗೆ ಮರಳಿದಾಗ ಪತಿಗೆ ಸಾಂತ್ವನದ ನುಡಿಯಾಡಿ ರಮಿಸುತ್ತಿದ್ದಳು. ಬಂದನಂತರ ಆತನ ಸ್ಥಿತಿ ತೋರುತ್ತಿದ್ದಿಲ್ಲ. ಹೀಗಾಗಿ ಪಾರ್ವತಿ ಸಂಗಣ್ಣನಿಗೆ ದೇವತೆಯಾಗಿ ಕಾಣ ತೊಡಗಿದಳು.

ಸಂಗಣ್ಣ ಹಾಸಿಗೆ ಹಿಡಿದು ವರುಷಗಳ ಮೇಲೆ ವರುಷಗಳುರುಳಿದುವು. ಆಗ ಪಾರ್ವತಿಯು ಹೊಟ್ಟೆಯಲ್ಲಿ ಉದಯಿಸಿದ ಹೊಸ ಕುಡಿಯೊಂದು ದಂಪತಿಗಳಿಗೆ ಸ್ವಲ್ಪ ಸಂತೋಷವನ್ನುಂಟು ಮಾಡಿತು.

ಸಂಗಣ್ಣನಾಗ ಮಡದಿಯ ಚೆಲುವನ್ನು ಕಣ್ಣುಗಳಿಂದಲೇ ಕಂಡು ಸಂತೋಷಿಸುತ್ತಿದ್ದನು. ಮೈ ಕೈ ತುಂಬಿ ಬರುತ್ತಿದ್ದ ಪಾರ್ವತಿಯ ಮೇಲೆ ಎಲ್ಲಿಲ್ಲದ ಆದರಾಭಿಮಾನ ಬೆಳೆಯ ತೊಡಗಿತು. ಒಂದು ದಿನ ಸರಿ ರಾತ್ರಿಯಲ್ಲಿ ಪಾರ್ವತಿ ಹೆಣ್ಣು ಶಿಶುವಿಗೊಂದು ಜನ್ಮವಿತ್ತಳು.

ಆ ಮೂರು ತಿಂಗಳು ಸಂಸಾರದ ಹೊರೆಯನ್ನು ಶಾಂತಿ ಲಾಲರೇ ಹೊರವಂತಾಯಿತು. ಆಗ ಲಾಲರ ತೀರಿಸಲಾರದ ಋಣ ಸಂಗಣ್ಣನನ್ನು ಮೂಕನನ್ನಾಗಿಸಿತು.

ಬಾಣಂತನ ಪೂರೈಸಿದಾಗ ಮತ್ತೆ ಪಾರ್ವತಿ ಲಾಲರ ಮನೆಗೆ ದುಡಿಯ ಹೊರಟಳು. ಆದರೆ ಸಂಗಣ್ಣನ ಪಾಲಿಗೆ ಹಗಲು ರಾತ್ರಿಗಳೆಲ್ಲವೂ ಒಂದೇ ಆಗಿತ್ತು. ಮಗುವಿನ ಮುಖನೋಡಿ ಸ್ವಲ್ಪ ನೆಮ್ಮದಿ ತಾಳಿದ್ದನು.

o o o o

ಮಗಳ ಮೇಲಿನ ಅಭಿಮಾನ ಒಮ್ಮೊಮ್ಮೆ ಪಾರ್ವತಿಯೊಡನೆ ಜಗಳವನ್ನುಂಟು ಮಾಡುತಿತ್ತು. ಬೆಳೆಯುತ್ತಿದ್ದ ಮಗಳನ್ನು ಹತ್ತಿರದ ಶಾಲೆಗೆ ಕಳುಹಿಸಲು ಸಂಗಣ್ಣನ ಬಲವಂತವೇ ಕಾರಣವಾಯಿತು.

ರೂಪದಲ್ಲಿ ಜಾನಕಿ ತಾಯಿಯ ಪಡಿಯಚ್ಚಾಗಿದ್ದಳು. ಜಾನಕಿ ತಾಯಿಯಂತ ಹಳ್ಳಿಯ ಗುಗ್ಗುಗಿರದೆ ನವೀನ ಫ್ಯಾಶನ್ನಿನತ್ತ ವಾಲಿದ್ದಳು. ಕಾಲಿಗೆ ಚಪ್ಪಲಿ ಉಡಲು ಪತ್ತಲ, ಮುಖಕ್ಕೆ ಪೌಡರ್ ಹಾಕುವುದನ್ನು ಕಂಡ ತಾಯಿ ತನ್ನ ವಿರೋಧ ವ್ಯಕ್ತಪಡಿಸಿದರೆ ಸಂಗಣ್ಣ ಪ್ರೋತ್ಸಾಹಕನಾಗಿದ್ದನು. ದುಬಾರಿ ಖರ್ಚು ಮಾಡಬಾರದೆಂಬ ಗುರಿಯಿದ್ದರೂ ಮಡದಿಯ ಕೈಯಲ್ಲಿ ಓಡಾಡುವ ಹಣ ಕಂಡಾಗ ಅದರ ಕೊರತೆ ಕಾಣಲಿಲ್ಲ, ಸಂಗಣ್ಣನಿಗೆ.

ಆದರೆ ಈಗೀಗ ಮಗಳು ಮನೆಯಲ್ಲಿ ರುತ್ತಿದ್ದುದೇ ಅಪರೂಪವಾದಾಗ ಎಲ್ಲಿ ಹೋಗುವಳೆಂಬ ವಿಚಾರ ತಿಳಿಯಲು ಸಂಗಣ್ಣನಿಂದಾಗಲಿಲ್ಲ. ಕರ್ತವ್ಯ ನಿರ್ವಹಿಸಲಾರದ ತಂದೆಯಾಗಿದ್ದೇನು ಪ್ರಯೋಜನವೆಂದೇ ಒಮ್ಮೊಮ್ಮೆ ಭಾವಿಸುತ್ತಿದ್ದನು. ಮೂಕ ವೇದನೆಯಲ್ಲಿಯೇ ದಿನ ನೂಕ ಹೊರಟಿದ್ದನು.

o o o

ಮಧ್ಯಾಹ್ನ ಬಿಸಿಲಿನ ಪ್ರಖರತೆಗೆ ಭೂಮಿ ಕಾಯ್ದಿತ್ತು. ಅದಕ್ಕಿಂತಲೂ ಮಿಗಿಲಾಗಿ ಸಂಗಣ್ಣನ ತಲೆ ಕಾಯ್ದಿತ್ತು. ಆವನೆಂದೂ ಯೋಚಿಸದ ಯೋಚನೆಗಳು ಸಾಧ್ಯವೂ ಅಲ್ಲದ ಹೊಸ ವಿಷಯದ ರಹಸ್ಯವೊಂದು ಬಯಲಾಗಿತ್ತು!

ಮೆಚ್ಚಿನ ಮಡದಿ ಮುದ್ದಿನ ಮಗಳ ಮುಖ ನೋಡಿ ಈ ವರೇಗೆ ಬದುಕುಳಿದಿದ್ದನು. ಆದರೀಗ ಎಲ್ಲವೂ ಬರಿಯ ಭ್ರಾಂತಿಯೆನಿಸುತಿತ್ತು. ರಾತ್ರಿ ತಾಯಿ ಮಗಳಲ್ಲಿ ನಡೆಯುತ್ತಿದ್ದ ಸಂಭಾಷಣೆಯ ಅಲೆಗಳು ಕಾಯ್ದ ಸಲಾಕೆಯಂತೆ ಸಂಗಣ್ಣನ ಕಿವಿ ಹೊಕ್ಕಿತ್ತು. ಆದರ ಉರಿ ಇನ್ನೂ ಮಾಸಿರಲಿಲ್ಲ.

"ಜಾನಕಿ! ನೀನು ತುಳಿಯುವ ದಾರಿ ಸರಿಯಲ್ಲ" ಮನೆಯಲ್ಲೊಬ್ಬ ಗಂಡನಿರುವನೆಂಬುದನ್ನು ಪಾರ್ವತಿ ಮರೆತಂತೆ ಕಾಣುತ್ತಿತ್ತು.

"ಯಾಕಮ್ಮ! ಅವರಿಗೇನು ಕೊರತೆ ಹೇಳು? ನಂಬಿಸಿ ಮೋಸಮಾಡುವವರಲ್ಲವೆಂಬುದನ್ನು ನಾನು ಚೆನ್ನಾಗಿ ಬಲ್ಲೆ."

'ಆದರೂ ಅದೂ ಸಾಧ್ಯವಾಗದ ಮಾತು. ಅವನ ಹೆತ್ತಾತ ಅದಕ್ಕೊಪ್ಪಲಾರರು.'

ಸಂಗಣ್ಣ ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದನು.

"ತಮ್ಮ ಪಾಲು ಪಡೆದು ಮನೆಯಿಂದ ಹೊರಬರಲು ನನಗಾಗಿ ಸಿದ್ಧರಿದ್ದಾರೆ."

"ಅದಕ್ಕೆ ನನ್ನ ವಿರೋಧವಿದೆ."

'ಯಾಕಮ್ಮಾ?"

'ಅದನ್ನು ನೀನು ಕೇಳಲೂ ಬಾರದು. ನಾನು ಹೇಳಲೂ ಬಾರದು."

ಆಗಲೇ ಮಗಳ ರೋಧನದ ದನಿ. ತಾಯಿಯ ಮಧುರ ಮಾತು. ಮಗಳನ್ನು ರಮಿಸುತ್ತಾ ಹೇಳುತ್ತಿದ್ದ ಒಂದೊಂದು ಮಾತೂ ಸಂಗಣ್ಣನ ಎದೆಯಿರಿಯುತ್ತಿತ್ತು.

"ಜಾನಕಿ! ನಿಮ್ಮಿಬ್ಬರ ತಂದೆಯೊಬ್ಬರೇ ಆಗಿದ್ದಾರೆ. ಲಾಲರ ಮಗ ನಿನ್ನಣ್ಣನೆಂಬುದನ್ನು ನೀನೀಗ ತಿಳಿಯಬೇಕಾಗಿದೆ. ಏನು ಮಾಡಲಿ ಹೇಳು. ನನ್ನ ದುರಾದೃಷ್ಟ! ಈಗ ಅಳುವಿನ ಸರದಿ ಪಾರ್ವತಿಯದು.

ಸಂಗಣ್ಣ ಪಾರ್ವತಿಯ ಬಾಯಿಯಿಂದ ಹೊರಬಿದ್ದ ಮಾತು ಕೇಳಿ ಬೆಚ್ಚಿ ಬಿದ್ದನು.

ಶಾಂತಿಲಾಲರ ಮಡದಿ ಕಾಲವಾಗಿ ಎರಡೇ ವರ್ಷಗಳಲ್ಲಿ ಪಾರ್ವತಿ ಅವರ ಮನೆ ಹೊಕ್ಕಿದ್ದಳು. ಮುದುಕರಲ್ಲದ ಲಾಲರಿಗೆ ಪಾರ್ವತಿಯ ಅರಳಿದ ದೇಹ ಕಂಡು ಬೇಕೆನಿಸಿತು. ಮೊದಲೆರಡು ದಿನ ಪಾರ್ವತಿಯ ಪ್ರತಿಭಟನೆ ನಡೆದಿದ್ದರೂ ಮುಂದೆ ಲಾಲರ ಹಣದಾಸೆಯಲ್ಲಿ ಪಾರ್ವತಿಯ ವಿರೋಧ ಸಡಿಲಿತು. ಒಮ್ಮೆ ಜಾರಿದ ಮೇಲೆ ತಡೆಯಲಾಗಲಿಲ್ಲ. ಮನದೊಳಗೆ ಅಂಜಿಕೆಯಿದ್ದರೂ ಹೊರಗಡೆ ನಿರ್ಮಲಳಾಗಿಯೇ ಕಾಣುತ್ತಿದ್ದಳು. ತನ್ನ ಮಮತೆಯ ಮುಸುಕಿನಲ್ಲಿ ಸಂಗಣ್ಣನ ಕಣ್ಮುಚ್ಚಿದ್ದಳು. ಆದ್ದರಿಂದ ಎಲ್ಲವೂ ಬಯಲಾಯಿತ್ತು.

ಸಂಗಣ್ಣನಿಗೀಗ ತಾನೊಂದು ಪಶುವೆಂದು ಕಾಣುತಿತ್ತು. ಪರಾನ್ನಕ್ಕೆ ಬಿದ್ದ ನಾಯಿಯಂತೆ ಕಾಣಿತು. ಮಡದಿಯ ವಾತ್ಸಲ್ಯ, ಲಾಲರ ಪರೋಪಕಾರ ದೃಷ್ಟಿಯ ಹಿನ್ನಲೆ ತಿಳಿದಾಗ ಈ ಹೀನ ಜೀವನ ಕೊನೆಗಾಣಿಸಬೇಕೆಂದೇ ಬಗೆದನು.

o o o

ಎಂದಿನಂತೆ ಹೊರಹೊರಟ ತಾಯಿ ಮಗಳಿಬ್ಬರೂ ಹಿಂತಿರುಗಿ ಬರುವಾಗ ಸಂಗಣ್ಣ ಕಾಣಬರಲಿಲ್ಲ. ಎಲ್ಲಾ ಹುಡುಕಿ ನೋಡುವಾಗ ಬಾವಿಯಲ್ಲಿ ಸಂಗಣ್ಣ ಶವವಾಗಿ ತೇಲುವುದನ್ನು ಕಂಡ ತಾಯಿ ಮಕ್ಕಳಿಬ್ಬರೂ ಮೂಕರಾದರು. ಬಯಲಾದ ರಹಸ್ಯವೇ ಸಂಗಣ್ಣನ ಸಾವಿಗೆ ಕಾರಣವೆಂದು ಬೇರಾರೂ ತಿಳಿಯದಾದರು.

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ ಕ್ರೂಡ್ ಆಯಿಲ್
3 H. P. ಪಂಪು ಸೆಟ್ಟುಗಳು.......

ಧನ ಇಲೆಕ್ಟ್ರಿಕ್ ಮೋಟಾರು ಮತ್ತು
(½ H.P. to 30 H.P.) ಪಂಪು ಸೆಟ್ಟುಗಳು........

ವಿತರಣೆಗಾರರು....

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್

ಕಾರ್ಕಳ (ದ. ಕ.)

NAVAYUGA 27—4—1967
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಮದ್ರಾಸದಲ್ಲಿ ಸೇರಿದ ವಿದ್ವತ್ ಪರಿಷತ್ತು

(ಏಳನೇ ಪುಟದಿಂದ)

ತ್ತದೆ. ಇದರಲ್ಲಿ ನೂರಾರು ನಲ್ವತ್ತು ದಶಕ ಅಧಿಕಾರಿಗಳು, ಪೀಠಾಧಿಕಾರಿಗಳು, ಘನ ವಿದ್ವಾಂಸರು ಭಾಗವಹಿಸಿರುವರೆಂಬುದು ಸಂತೋಷದ ಸಂಗತಿ ಇದೆ. ಕಳೆದ ಬಾರಿ ವಿಶ್ವ ಹಿಂದೂ ಪರಿಷತ್ತಿನ ಸಮ್ಮೇಳನವು ಪ್ರಯಾಗದ ಧರ್ಮನಗರದಲ್ಲಿ ನಡೆದಿದ್ದು, ವಿದ್ವತ್ ಪರಿಷತ್ತು ಧರ್ಮಪ್ರಕಾಶದಲ್ಲಿ ನಡಯುತ್ತಿದೆ. ಧರ್ಮಪ್ರಕಾಶದಲ್ಲಿ ಪರಿಷತ್ತಿನ ಸಭೆಗೆ ಏರ್ಪಾಡು ಮಾಡಿರುವ ದಾಸಪ್ರಕಾಶದ ಮಾಲಿಕ ಶ್ರೀ ಸೀತಾರಾಮರಾವ್‌ರಿಗೆ ಧನ್ಯವಾದಗಳನ್ನು ಪ್ರಧಾನ ಕಾರ್ಯದರ್ಶಿಯವರು ಅರ್ಪಿಸಿದರು.

ಈ ಸಭೆಯ ಅಧ್ಯಕ್ಷಸ್ಥಾನವನ್ನಲಂಕರಿಸಲು ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು (ಮೈಸೂರು ಮಹಾರಾಜ) ಬರಬೇಕಾಗಿತ್ತು. ಆದರೆ ಅಸೌಖ್ಯ ನಿಮಿತ್ತ ಅವರಿಗೆ ಬರಲಿಕ್ಕಾಗಲಿಲ್ಲ. ಅದರ ಬದಲು ದ್ವಾರಕಾ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಮೈಸೂರು ಮಹಾರಾಜರವರು ತಮ್ಮ ಭಾಷಣವನ್ನು ಆದಾಗಲೇ ಕಳುಹಿಸಿ ಕೊಟ್ಟಿದ್ದರು. ಅದನ್ನು ಕರ್ನಾಟಕ ವಿಭಾಗದ ವಿಶ್ವ ಹಿಂದೂ ಪರಿಷತ್ತಿನ [illegible] ಶ್ರೀ ಗುರುರಾಜರಾಯರು ಓದಿದರು.

ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳ ಕುರಿತು ಯೋಚಿಸಲು 'ಇಲ್ಲಿ ವಿದ್ವತ್ ಪರಿಷತ್' ಸೇರಿರುತ್ತದೆ. ಭಾರತದೊಳಗೆ ಹಾಗೂ ಹೊರಗೆ ಅನ್ಯಾನ್ಯ ರಾಷ್ಟ್ರಗಳಲ್ಲಿರುವ ಹಿಂದೂಗಳ ಮಾರ್ಗದರ್ಶನಕ್ಕಾಗಿ ಸಾಮಾನ್ಯ ನಿಯಮವನ್ನು ಕಂಡು ಹಿಡಿದು ವಿಶ್ವ ಹಿಂದೂ ಪರಿಷತ್ತಿಗೆ ನಿರ್ದೇಶಿಸುವುದೇ ಈ ಮಹಾಸಭೆಯ ಉದ್ದೇಶವಿದೆ.

ಹಿಂದೂಧರ್ಮದಲ್ಲಿ ಅನೇಕಾನೇಕ ಜಾತಿ—ಉಪಜಾತಿಗಳೂ ವಿವಿಧ ಪದ್ಧತಿ—ರೀತಿನೀತಿಗಳೂ ಇವೆ. ಆರಾಧನೆಯ ಪದ್ಧತಿಯಲ್ಲೂ ವಿವಿಧತೆ ಇದೆ. ಈ ಭಿನ್ನತೆಯ ಭಾವನೆ ಹಾಗೂ ಅಂಧಶ್ರದ್ಧೆಯು ಬೆಳೆದು ಇಂದು ಏಕತೆಯ ಕೊಂಡಿಯನ್ನು ಸಡಿಲಮಾಡಿರುತ್ತದೆ. ಹಾಗಾಗಿ ಇಂದು ಭ್ರಮೆಯನ್ನು ದೂರಗೊಳಿಸಿ ಏಕತೆ ಬೆಳೆಸುವ ಅವಶ್ಯಕತೆ ಬಂದೊದಗಿರುತ್ತದೆ.

ಹಿಂದೂ ಧರ್ಮದ ಸಾರವನ್ನು ತಿಳಿಸಲಿಕ್ಕಾಗಿ ಇತ್ತೀಚೆಗೆ ಹಲವು ಪ್ರಯತ್ನಗಳು ಫಲವಾಗಿ ನಡೆದಿವೆ. ಆದರೆ ಅವೆಲ್ಲ ಸುಧಾರಣೆಯ ರೀತಿಯಲ್ಲಿವೆ. ಹಾಗಾಗಿ ನೈಜ ಹಿಂದೂ ಧರ್ಮದ ಚಿತ್ರವನ್ನು ಕೊಡಲು ಅವರಿಂದ ಸಾಧ್ಯವಾಗಿರುವುದಿಲ್ಲ. ಕೆಲವರಂತೂ ತೋರಿಸಿರುವ ಚಿತ್ರವು ಹಿಂದೂತ್ವಕ್ಕಿಂತಲೂ ಕ್ರಿಸ್ತೀಯ ವಾದವನ್ನು ಪ್ರತಿಬಿಂಬಿಸುತ್ತಿದೆ. ಕೆಲವರಿಗೆ ಅನ್ಯಾನ್ಯ ಹಿಂದೂಗಳನ್ನು ಒಂದುಗೂಡಿಸುವದರಲ್ಲಿ ಸ್ವಲ್ಪ ಮಟ್ಟಿಗೆ ಜಯವು ಸಿಕ್ಕಿರುತ್ತದಾದರೂ ಅವರು ನೈಜ ಹಿಂದೂತ್ವದ ಚಿತ್ರವನ್ನು ತೋರಿಸಿರುವದಿಲ್ಲ. ಇದಕ್ಕೆ ಕಾರಣವೆಂದರೆ ಅವರು ಮೂಲಧರ್ಮಗ್ರಂಥಗಳತ್ತ ಗಮನ ಹರಿಸಿರುವರಾದರೂ ತೋರಿಸಿರುವದಿಲ್ಲ. ಇದಕ್ಕೆ ಕಾರಣವೆಂದರೆ ಅವರು ಮೂಲಧರ್ಮಗ್ರಂಥಗಳತ್ತ ಗಮನ ಹರಿಸಿರುವರಾದರೂ ಉಪನಿಷತ್ತುಗಳತ್ತ ಗಮನ ಹರಿಸದಿರುವದಿದೆ. ಕೆಲವರು ಬ್ರಹ್ಮಜ್ಞಾನದ ತತ್ವಗಳ ಬಣ್ಣವನ್ನು ಕೊಟ್ಟು ನೈಜ ಹಿಂದೂ ಧರ್ಮದ ಕಾಂತಿಯನ್ನು ಬದಲಾಯಿಸಿದ್ದಾರೆ. ಇದಕ್ಕೆ ಸುಧಾರಣೆಯ ಮನೋಭಾವನೆಯೇ ಕಾರಣ ಇದೆ. ಇಂದು ನೈಜ ಹಿಂದೂ ಧರ್ಮ [illegible] ತಿಳಿಸುವ ವಿಧಾನವೇ ಬೇಕಾಗಿದೆ.

ಹಿಂದೂ ಧರ್ಮದ ನೈಜ ಚಿತ್ರವನ್ನು ಮುಂದಿಡುವಾಗ ಮೂಲ ವಿಶೇಷ ಗುಣಗಳಿಗೆ ಅಲ್ಲಿ ಸ್ಥಾನ ಇರಲೇಬೇಕು. ಮೂರು ಅತಿ ಮುಖ್ಯ ವಿಶೇಷ ಗುಣಗಳು ಹಿಂದೂ ಧರ್ಮದಲ್ಲಿವೆ. ಹಿಂದೂವಿಗೆ ಕರ್ಮದಲ್ಲಿ ನಂಬಿಕೆ ಇದೆ. ಈ ಜನ್ಮದಲ್ಲಿ ಮಾಡಿದ ಕರ್ಮಕ್ಕನುಸಾರವಾಗಿ ಮುಂದಿನ ಜನ್ಮ ಸಿಗುತ್ತದೆ. ಎರಡನೆಯ ವಿಶೇಷ ಗುಣ ಪುರುಷಾರ್ಥವಿದೆ. ಧಾರ್ಮಿಕ ಜೀವನ ನಡೆಸುವುದು ಅದು ಧರ್ಮ ಇದೆ. ಹಣ ಸಂಪಾದನೆಯು ಅರ್ಥ ಇದೆ. ಸುಖಭೋಗ ಅದುವೇ ಕಾಮ ಇದೆ. ಕೊನೆಯಲ್ಲಿ ಮೋಕ್ಷ ಪಡೆಯುವದಿದೆ. ಇವೇ ನಾಲ್ಕು ಪುರುಷಾರ್ಥಗಳು. ಮೂರನೆಯ ವಿಶೇಷ ಲಕ್ಷಣವೇ ಅವತಾರದ ಮೇಲಿನ ನಂಬಿಕೆ. ಗೀತೆಯಲ್ಲಿ ಅದನ್ನೇ, 'ಧರ್ಮದ ನಾಶವಾಗುವಂತಹ ಸಮಯದಲ್ಲಿ, ಅದರ ಉತ್ಥಾನಕ್ಕಾಗಿ ನನ್ನನ್ನು ನಾನೇ ಸೃಷ್ಟಿಸಿಕೊಳ್ಳುತ್ತೇನೆ'ಂದು ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಸ್ಪಷ್ಟ ಪಡಿಸಿರುವನು.

ಹಿಂದೂಗಳನ್ನು ಒಂದುಗೂಡಿಸಲು ಇನ್ನು ಕೆಲವು ಅಂಶಗಳಿವೆ. ಅವರಿಗೆ ನಾಲ್ಕು ವೇದಗಳ, ಉಪನಿಷತ್ತುಗಳ, ರಾಮಾಯಣ, ಮಹಾಭಾರತ, ಮನುಸ್ಮೃತಿ, ಯಾಜ್ಞವಲ್ಕ್ಯ ಸಂಹಿತೆ, ಭಗವದ್ಗೀತೆ, ಪುರಾಣಗಳ ಮೇಲೆ ನಂಬಿಕೆ, ಗೌರವ ಇರಬೇಕು. ಎಲ್ಲಾ ಹಿಂದೂಗಳೂ ಜನ್ಮದಾತ ಬ್ರಹ್ಮ, ಸಂರಕ್ಷಕ ವಿಷ್ಣು ಹಾಗೂ ಸಂಹಾರಕ ಶಿವ—ಈ ತ್ರಿಮೂರ್ತಿಗಳನ್ನು ಪೂಜಿಸಬೇಕು. ಇವರನ್ನಲ್ಲದೆ ಬೇರೆನ್ನಾವ ಹೆಸರಿನಿಂದ ದೇವರನ್ನು ಪೂಜಿಸುವದಿದ್ದರೂ, ಅವೆಲ್ಲವೂ ಒಬ್ಬನೇ ದೇವರ ಬೇರೆ ಬೇರೆ ರೂಪಗಳ ಹೆಸರುಗಳೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಿಂದೂಗಳಿಗೆ ಸಮಾನ ಹಬ್ಬ-ಹರಿದಿನ-ಉತ್ಸವಾದಿಗಳಿರಬೇಕು.

ತ್ರಿಮೂರ್ತಿ ತತ್ವದಂತೆ ಜ್ಞಾನಕಾಂಡ, ಭಕ್ತಿಕಾಂಡ ಹಾಗೂ ಕರ್ಮ ಕಾಂಡಗಳೆಲ್ಲಾ ಪರಮಾತ್ಮನಲ್ಲಿ ಕಂಡುಕೊಳ್ಳಲಿಕ್ಕಾಗಿ. ಮೂರು ದಾರಿಗಳೇ ಇವೆಯೆಂಬುದನ್ನು [illegible]ಕೊಳ್ಳಬೇಕು. ಈ ರೀತಿಯ ಕೆಲವು ವಿಷಯಗಳಿವೆ. ಅವೆಲ್ಲವುಗಳ ಕುರಿತು ಯೋಚಿಸಿ ಒಂದು ನಿರ್ಣಯಕ್ಕೆ ಬಂದು ಹಿಂದೂಗಳನ್ನು ನೈಜ ಹಿಂದೂತ್ವದ ದಾರದಲ್ಲಿ ಪೋಣಿಸುವದೇ ಈ ವಿದ್ವತ್ ಪರಿಷತ್ತಿನ ಮಹಾಕಾರ್ಯವಿದೆ. ಅದಕ್ಕೆ ಶುಭವಾಗಲೆಂಬುದು ಶ್ರೀ ಜಯಚಾಮರಾಜ ಒಡೆಯರ್‌ರವರ ಅಧ್ಯಕ್ಷ ಭಾಷಣದ ಸಾರಾಂಶ.

ಕಲ್ಕತ್ತದ ನಿವೃತ್ತ ನ್ಯಾಯಾಧೀಶ ಶ್ರೀ ರಾಮಪ್ರಸಾದ ಮುಖರ್ಜಿಯವರು ವಿಶ್ವ ಹಿಂದೂ ಪರಿಷತ್ತು ಏಕೆ, ಎಲ್ಲಿ, ಹೇಗೆ ಆರಂಭವಾಯಿತೆಂಬುದನ್ನು ಸಂಕ್ಷಿಪ್ತವಾಗಿ ತಿಳಿಸಿದರು ಮತ್ತು ವಿದ್ವತ್ ಪರಿಷತ್ತಿನ ಕುರಿತು ವಿವರಿಸಿದರು. ಹಿಂದಿನ ಕಾಲದಲ್ಲಿ ಇಂತಹ ಪರಿಷತ್ತು ನೈಮಿಶಾರಣ್ಯದಲ್ಲಿ ಕೂಡುತ್ತಿತ್ತು ಮತ್ತು ಜನಜೀವನದ ಕುರಿತು ಯೋಚಿಸಿ ನಿರ್ಣಯಕ್ಕೆ ಬರುತ್ತಿತ್ತು. ಇಲ್ಲಿ ಸೇರಿರುವ ಪರಿಷತ್ತು ಹಿಂದೂ ಧಾರ್ಮಿಕ ಮುಖಂಡರ ತಾತ್ವಿಕ ಸಮಸ್ಯೆಗಳನ್ನು ಬಗೆಹರಿಸಲಿಕ್ಕಾಗಿ ಕಲೆತಿರದೆ, ಭಾರತದಲ್ಲಿ ಹಾಗೂ ಇತರ ರಾಷ್ಟ್ರಗಳಲ್ಲಿರುವ ಹಿಂದೂಗಳನ್ನು ಸಂಘಟಿಸುವ ವಿಧಾನವನ್ನು ಕಂಡುಹಿಡಿಯಲಿಕ್ಕಾಗಿ ಸೇರಿರುತ್ತದೆ. ಅನ್ಯಾನ್ಯ ರಾಷ್ಟ್ರಗಳಲ್ಲಿ ಅನೇಕಾನೇಕ ಹಿಂದೂಗಳಿರುವರಾದರೂ ಅವರಿಗೆ ಹಿಂದೂ ಜೀವನ ಪದ್ಧತಿಯ ವಿಷಯ ಏನೂ ಗೊತ್ತಿರುವದಿಲ್ಲ. ಆದುದರಿಂದ ಎಲ್ಲಾ ಹಿಂದೂಗಳು ಸಾಮಾನ್ಯವಾಗಿ ಆಚರಿಸಬಹುದಾದಂತಹ ಜೀವನ ವಿಧಾನವನ್ನು ಕಂಡು ಹಿಡಿಯಲು ಹಾಗೂ ಅನ್ಯಾನ್ಯ ಮತಗಳಿಗೆ ಬದಲಾಗಿರುವ ಹಿಂದೂಗಳನ್ನು ಪುನಃ ಹಿಂದೂ ಧರ್ಮಕ್ಕೆ ಹಿಂದಕ್ಕೆ ಸ್ವೀಕರಿಸಿಕೊಳ್ಳುವ ಕುರಿತು ಯೋಚಿಸಿ ನಿರ್ಣಯಕ್ಕೆ ಬರಲು ವಿದ್ವತ್ ಪರಿಷತ್ತು ಕಲೆತಿರುತ್ತದೆಂದೂ ಅವರು ತಿಳಿಸಿದರು.

ಈ ರೀತಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಕೃಪಾನಂದ ವಾರಿಯರ್‌ರವರಿಂದ ಸ್ವಾಗತ ಭಾಷಣವಾದ ಮೇಲೆ ಭಿನ್ನ ಭಿನ್ನ ಸಂಪ್ರದಾಯದ ಆಚಾರ್ಯ ಮಹಾಪುರುಷರು ಪರಿಷತ್ತಿಗೆ ಆಶೀರ್ವದಿಸಿದ ನಂತರ, ಕಾರ್ಯದರ್ಶಿಯವರು ಪರಿಷತ್ತಿನ ಕಾರ್ಯಕ್ರಮದ ಕುರಿತು ತಿಳಿಸಿದ ನಂತರ ಮಧ್ಯಾಹ್ನ ಪರಿಷತ್ತು ಸೇರಿತು. ಪರಿಷತ್ತಿನ ಸಭೆಗೆ ಆಹ್ವಾನಿತ ಮಠಾಚಾರ್ಯ ಹಾಗೂ ಅನ್ಯಾನ್ಯ ಸಂಪ್ರದಾಯಗಳ ವಿದ್ವಾಂಸರಿಗಲ್ಲದೆ ಬೇರೆನ್ನಾರಿಗೂ ಪ್ರವೇಶ ಇರಲಿಲ್ಲ—

(ಮುಂದುವರಿವುದು)

ಡಾ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಉಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನೂರಾರು ರೋಗಗಳಿಗೆ ಮನೆಯಲ್ಲಿ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2-00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Published by … Navayuga Press, Udipi, S. India.

ನವಯುಗ

4—5—1967

೧೦
ಪೈಸೆ

ಕಥಾ ಪ್ರಪಂಚ

ಶನಿಹಿಡಿದದ್ದು !

ಬರೆದವರು
ಶ್ರೀ ಗೋಪಾಲ ರಾವ್, ಎ

— ೧ —

ಬಿ. ಕಾಂ ಕೊನೆಯ ವರುಷದ ಪರೀಕ್ಷೆ ಮೊದಲಾಗಿತ್ತು. ನಾನು ನನ್ನ ಪರೀಕ್ಷಾ ನಂಬರನ್ನು ಹುಡುಕುವ ಆತುರದಲ್ಲಿದ್ದೆ. ಅಂತು ಕೊನೆಗೆ ನನ್ನ ನಂಬರ ಸಿಕ್ಕ ಬೆಂಚಿನಲ್ಲಿ ಕುಳಿತೆ. ನನ್ನ ಬೆಂಚಿನ ಕೊನೆಯಲ್ಲಿ ಇನ್ನೊಬ್ಬ ವಿದ್ಯಾರ್ಥಿ ಕುಳಿತಿದ್ದ. ನಾನು ಆತನನ್ನು ಅಷ್ಟಾಗಿ ಗಮನಿಸದಿದ್ದರೂ ಆತ ನನ್ನನ್ನು ನೋಡಿ ನಕ್ಕ, ನನಗೆ ಆತನ ಪರಿಚಯ ಇದ್ದಿರಲಿಲ್ಲ. ಆದರೆ ಆತ, "ನನಗೆ ನಿನ್ನ ಪರಿಚಯವಿದೆ" ಎಂಬ ಅರ್ಥದಲ್ಲಿ ನನ್ನನ್ನು ನೋಡುತ್ತಿದ್ದ. ಅಷ್ಟರಲ್ಲಿ ಗಂಟೆ ಬಾರಿಸಿದುದರಿಂದ ಪರೀಕ್ಷಾ ಪತ್ರಗಳು ಕೈಗೆ ಬಂದುವು. ಪರೀಕ್ಷೆ ಮುಗಿದ ನಂತರ ಆತನನ್ನು ವಿಚಾರಿಸಿದರಾಯಿತೆಂದು ಭಾವಿಸಿ ನಾನು ಬರೆಯುವುದರಲ್ಲಿ ಮಗ್ನನಾದೆ.

ಬರೆಯುವ ಆತುರದಲ್ಲಿ ಮೂರು ತಾಸುಗಳು ಗತಿಸಿ ಹೋದುವು. ಮುಖದಲ್ಲಿ ಅಲ್ಲಲ್ಲಿ ಹನಿಗೂಡಿದ್ದ ಬೆವರನ್ನು ಕರವಸ್ತ್ರದಿಂದ ಒರಸಿ ಹೊರಬಂದೆ. ನನ್ನ ಬೆಂಚಿನಲ್ಲೇ ಕುಳಿತಿದ್ದ ಪರೀಕ್ಷಾರ್ಥಿ ನನ್ನ ಹಿಂದಿಯೇ ಬಂದು 'ಸಾರ್' ಎಂದು ಕರೆದ. ತಿರುಗಿ ನೋಡಿದ, ಆತನ ಕೈಯಲ್ಲಿದ್ದ ಕರವಸ್ತ್ರವನ್ನು ನೋಡಿದಾಗ ನನ್ನ ಪರಿವಿನ ಅರಿವಾಯಿತು. ಮುಖವನ್ನು ಒರಸಿ ಕರ್ಚೀಫನ್ನು ಅಲ್ಲೇ ಬಿಟ್ಟು ಬಂದಿದ್ದೆ. ಕರ್ಚೀಫನ್ನು ಪಡೆದುಕೊಂಡ ನಾನು 'ಥ್ಯಾಂಕ್ಸ್' ಎಂದು ಹೇಳಿ ತಿರುಗುವುದರಲ್ಲಿದ್ದೆ. ಅಷ್ಟರಲ್ಲಿ ಆತ, 'ಸಾರ್ ನಾನೂ ನೀವು ಇಳಿದಿರೋ ಹೋಟೇಲಿನಲ್ಲೇ ಇರುವುದು. ನಾನೂ ಅಲ್ಲಿಗೆ ಬರುವುದು.' ಎಂದು ಹೇಳುತ್ತಾ ನನ್ನನ್ನು ಹಿಂಬಾಲಿಸ ತೊಡಗಿದ.

ಹೋಟೆಲನ್ನು ಪ್ರವೇಶಿಸಿದಾಗ ಆತ ನನ್ನನ್ನು ಬಿಟ್ಟು ಎತ್ತಲೋ ಹೊರಟು ಹೋದ. ನಾನು ನನ್ನ ರೂಮನ್ನು ಪ್ರವೇಶಿಸಿ ಉಡುಪುಗಳನ್ನು ಬದಲಯಿಸಿ ಕಾಫಿಗಾಗಿ ಕೆಳಗಿಳಿಯುವುದರಲ್ಲಿದ್ದೆ. ಅಷ್ಟರಲ್ಲಿ ಸಪ್ಲೈಯರನ ಉಡುಪುತೊಟ್ಟು ಟ್ರೇಯಲ್ಲಿ ಕಾಫಿ ತೆಗೆದುಕೊಂಡು ಬಂದ ವ್ಯಕ್ತಿಯನ್ನು ನೋಡಿ ದಿಗ್ಭ್ರಾಂತನಾದೆ. ಆತನನ್ನೇ ದಿಟ್ಟಿಸಿ ನೋಡುತ್ತಿದ್ದ ನಾನು ಆತ ಕೊಟ್ಟ ಕಾಫಿಯನ್ನು ಅಲ್ಲೇ ಇಟ್ಟು ಆತನನ್ನು ಪ್ರಶ್ನಿಸಿದೆ.

'ನೀನು ಕಾಲೇಜಿನಲ್ಲಿ ಸಿಕ್ಕಿದವನಲ್ಲವೆ?'

"ಹೌದು!" ಎಂದನಾತ.

'ಮತ್ತೆ, ಹಾಗಾದರೆ ಇಲ್ಲಿ ಸಪ್ಲೈಯರನ ಕೆಲಸ ಏಕೆ ಮಾಡುತ್ತಿರುವೆ?" ಕುತೂಹಲದಿಂದ ಕೇಳಿದೆ ನಾನು.

'ಸಾರ್, ಅದೆಲ್ಲಾ ಒಂದು ಕಥೆ ಸಾರ್, ಅದನ್ನು ನೀವು ಕೇಳಲೂ ಬಾರದು, ನಾನು ಹೇಳಲೂ ಬಾರದು."

"ಸಾರ್" ಎಂದು ಎರಡು ಮೂರು ಬಾರಿ ಆತನಿಂದ ಕರೆಸಿಕೊಂಡು ನನಗೆ, ಆತನಿಂದ ಹಾಗೆ ಕರೆಸಿಕೊಳ್ಳುವುದು ಸಂಕೋಚವೆನಿಸಿತು.

ವಿಚಿತ್ರ ವರ್ತನೆಯಿಂದ, ನನಗೆ ಆತನ ವಿಷಯವನ್ನು ಕೇಳಿ ತಿಳಿಯಬೇಕೆಂಬ ಬಯಕೆ ಹೆಚ್ಚಾಗ ತೊಡಗಿತು. ಕಾಫಿಯನ್ನು ಕುಡಿದ ನಂತರ ಆತನನ್ನು ಒತ್ತಾಯಪಡಿಸಿ ಆತನ ಜೀವನದ ಕಥೆಯನ್ನು ಕೇಳಿ ತಿಳಿದೆ.

ಆತ ಹೇಳ ತೊಡಗಿದ.

— ೨ —

'ಸಾರ್' ನನ್ನ ಹೆಸರು ಸುರೇಶ್. ನನ್ನ ತಾಯಿ ತಂದೆಯರಿಗೆ ಹುಟ್ಟಿದ ಗಂಡು ಮಕ್ಕಳಲ್ಲಿ ನಾನು ಮೂರನೆಯವನು. ನನ್ನ ತಂದೆ ಇದೇ ಊರಿನ ವರ್ತಕ ನಾಗಪ್ಪಯ್ಯನವರಲ್ಲಿ ಗುಮಾಸ್ತ ಕೆಲಸದಲ್ಲಿದ್ದರು. ಆದರೆ ನನಗೆ ಕೇವಲ ಎಂಟು ವರ್ಷ ಪ್ರಾಯವಾಗಿರುವಾಗಲೇ ಪರಲೋಕವಾಸಿಯಾದರು. ನಂತರ ಮೂವರಲ್ಲಿದ ಇಬ್ಬರು ಅಂಗಿಯಂದಿರೂ ಇದ್ದರು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಸಂಸಾರದ ಹೊಣೆ ನನ್ನ ದೊಡ್ಡ ಅಣ್ಣನ ಕೈಯಲ್ಲಿ ಬಿತ್ತು. ಆತನ ಅಲ್ಪ ದುಡಿಮೆಯಿಂದ ನಮ್ಮ ಸಂಸಾರ ಸಾಗುವುದು ಆಳವಿಲ್ಲದ ಹೊಳೆಯಲ್ಲಿ ಹಡಗು ನಡೆಸುವಷ್ಟೇ ಕಷ್ಟ ಸಾಧ್ಯವಾಗಿತ್ತು...'

ತನ್ನ ಮಾತನ್ನು ನಿಲ್ಲಿಸುತ್ತಾ ಬಹಳ ಗಂಭೀರವಾಯಿತು. 'ಸಾರ್, ಅಂತೂ ನನ್ನ ಅಣ್ಣ ಎಸ್. ಎಸ್. ಎಲ್. ಸಿ. ತನಕ ನನ್ನನ್ನು ಕಲಿಸಿದ."

ಮುಂದೇನು? ಎಂಬ ಪ್ರಶ್ನೆ ನನ್ನದು ರು ಭೂತಾಕಾರವಾಗಿ ನಿಂತಿತು.

"ಆದರೆ ನನ್ನ ಅಣ್ಣ ತನ್ನ ಸತತ ಪ್ರಯತ್ನದಿಂದ ನನ್ನನ್ನು ಕಾಲೇಜಿಗೂ ಕಳುಹಿಸಿದ. ಪಿ. ಯು. ಸಿ. ಯಲ್ಲಿ ಫಸ್ಟ್ ಕ್ಲಾಸ್ ಪಡೆದ ನನ್ನನ್ನು ಎಲ್ಲರೂ ಗೌರವಿಸಿದರು. ಮನೆಯಲ್ಲಂತು ಅಣ್ಣ ನನ್ನನ್ನು ಹೊಗಳಿದ್ದೇ ಹೊಗಳಿದ್ದು. ಆದರೆ ಅಪ್ಪನ ನೆನಪಿನಿಂದಾಗಿ ಎಲ್ಲರಿಗೂ ದುಃಖವೆ."

"ಹುಡುಗರಲ್ಲಿ ನಾನಾದರೂ ಡಿಗ್ರಿ ಪಡೆಯ ಬೇಕೆಂಬ ಉದ್ದೇಶದಿಂದ ಅಣ್ಣ ನನ್ನನ್ನು ಮತ್ತೂ ಓದಿಸಿದ, ಬಿ ಕಾಂ ಮೊದಲನೆಯ ವರುಷ ಕಳೆಯಿತು. ಮನೆಯಲ್ಲಿ ಕೊರತೆಗಳಿದ್ದರೂ ಅಣ್ಣ ನನ್ನ ಓದಿಗೆ ಯಾವ ರೀತಿಯಲ್ಲಿಯೂ ಕೊರತೆಯನ್ನಂತು ಮಾಡಿರಲಿಲ್ಲ. ಅಣ್ಣನ ಮದುವೆಯೂ ನಡೆಯಿತು. ಬಡತನದ ಬಾಧೆಯಿಂದ ಜರ್ಜರಿತವಾದ ಆತನ ದೇಹ ಈಗ ಸ್ವಲ್ಪ ನೋಡುವಂತಾಯಿತು. ಬಿ ಕಾಂ ಎರಡನೆಯ ವರುಷವೆಂದರೆ ನನ್ನ ಜೀವನದ ಗುರಿಯನ್ನೇ ಬದಲಾಯಿಸಿದ ವರುಷ ಸಾರ್. ಇಲ್ಲಿಂದಲೇ ನನಗೆ ಶನಿಹಿಡಿಯಲಾರಂಭಿಸಿದುದು.

'ಆಗ ತಾನೇ ಕಾಲೇಜ್ ಡೇ ನಡೆಯುವ ತಯಾರಿಯಲ್ಲಿತ್ತು. ಕನ್ನಡ ಪ್ರಹಸನದಲ್ಲಿ ದುಷ್ಯಂತನಾಗಿ ನಾನು ಅಭಿನಯಿಸ ಬೇಕಾಗಿತ್ತು. ಅದಕ್ಕೆ ತಕ್ಕ ಅಭಿನಯ ಕಲೆಯನ್ನು ಮೈಗೂಡಿಸಿಕೊಂಡೆ. ನಾಟಕ ಆಡುವ ದಿನವೂ ಬಂದಿತು. ನನ್ನ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾದೆ. ನನ್ನ ಮಿತ್ರವನ್ನು ಸ್ತ್ರೀದವರಲ್ಲಿ ಪಿ. ಯು. ಸಿ. ಯಲ್ಲಿದ್ದ ಶಾಂತಿಯೂ ಒಬ್ಬಳು. ಆದರೆ ಆಕೆಯೇ ನನ್ನ ಅರ್ಧಾಂಗಿಯಾಗಿ ನನ್ನ ಜೀವನವನ್ನು ಹಾಳುಮಾಡುವಳೆಂದು ನಾನು ಎಣಿಸಿರಲಿಲ್ಲ ಸಾರ್'

ಆತನ ಮುಖದಲ್ಲಿ ಆವರಿಸುತ್ತಿದ್ದ ನಿರಾಶೆಯನ್ನು ಕಂಡೆ. ನನ್ನ ಹೃದಯ ನಡುಗಿತು.

"ಸಾರ್! ಅಂದು ನಾಟಕ ಮುಗಿದಾಗ ಶಾಂತಿ ಗ್ರೀನ್ ರೂಂಗೆ ಧಾವಿಸಿ ಬಂದು ನನ್ನನ್ನು ಅಭಿನಂದಿಸಿದ ರೀತಿಯನ್ನು ನೆನದರೆ ಈಗಲೂ ನನಗೆ ಸಂಕೋಚವೆನಿಸುತ್ತದೆ. ಆ ಕ್ಷಣದಲ್ಲಿ ತಾನು "ಶಕುಂತಲೆ" ಎಂಬ ಅಂಶವನ್ನು ಆಕೆ ಮರೆತಿದ್ದಳೆಂದು ತೋರುತ್ತದೆ. ಅದರಲ್ಲಿ, ಅಂದಿನಿಂದ ಶಾಂತಿ ನನ್ನ ಸನಿಹವನ್ನೇ ಬಯಸುತ್ತಿದ್ದಳು ಸಾರ್. ತಾನು ರೂಪವತಿ ಎಂದು ಶಾಂತಿಗೆ ಗೊತ್ತಿತ್ತು. ಆವಳೆಂದು ಕೊಂಡಿದ್ದಲ್ಲ, ಆವಳನ್ನು ನೋಡಿದವರೆಲ್ಲರೂ ಇದೇ ಅಭಿಪ್ರಾಯ ಪಡುತ್ತಿದ್ದರು. ಪ್ರೀತಿಯ ಅರ್ಥ ನನಗಿನ್ನೂ ಸರಿಯಾಗಿ ತಿಳಿದಿಲ್ಲವಾದರೂ ನಾನು ಅವಳ ಪ್ರೀತಿಯನ್ನು ಅರ್ಥಮಾಡಿಕೊಳ್ಳಬೇಕಾಯಿತು. ನಾನು ಅವಳನ್ನು ಪ್ರೀತಿಸಿದೆ. ಆವಳೂ ನನ್ನನ್ನು ಪ್ರೀತಿಸಿದಳು. ಇದರಿಂದಾಗಿ ನನ್ನ ಓದು ಮೂಲೆ ಗುಂಪಾಯಿತು."

ಒಂದು ಕ್ಷಣ ತಡೆದು ಆತ ಮುಂದುವರಿಸಿದ

"ಇಲ್ಲೇ, ಸಾರ್ ನಾನು ತಪ್ಪು ಹೆಜ್ಜೆ ಹಿಡಿದುದು. ಶಾಂತಿಯ ಸಮೀಪದಲ್ಲಿದ್ದಾಗ ನಾನು, ನನ್ನ ಮನೆಯ ಸ್ಥಿತಿಯನ್ನು ಮರೆಯುತ್ತಿದ್ದೆ.'

ಆದರೆ ನಮ್ಮ ಪ್ರಣಯ ರಹಸ್ಯವಾಗಿಯೇ ಉಳಿಯಲಿಲ್ಲ ಸಾರ್ ಅದು ಹೇಗೋ ನನ್ನ ಅಣ್ಣನಿಗೂ ತಿಳಿಯಿತು. ಆತ ನನ್ನನ್ನೂ ಕರೆದು ನನ್ನ ಎಲ್ಲಾ ವಿಚಾರಗಳನ್ನು ತಿಳಿದುಕೊಂಡ ಶಾಂತಿಯ ತಂದೆಯೊಡನೆಯೂ ಸಮಾಲೋಚಿಸಿ ನಮ್ಮಿಬ್ಬರನ್ನು ಮದುವೆಯ ಬಂಧನದಲ್ಲಿ ಸಿಲುಕಿಸಿದ."

"ಶಾಂತಿಯ ಮನೆಯವರು ಹೇಳುವಷ್ಟು ಶ್ರೀಮಂತರಲ್ಲದಿದ್ದರೂ ಗರೀಬರಲ್ಲ. ಆಕೆಯ ತಂದೆ ನರಸಪ್ಪಯ್ಯನವರು ವ್ಯಾಪಾರದಲ್ಲಿ ಸ್ವಲ್ಪ ಲಾಭಗಳಿಸಿದ್ದರು. ಶಾಂತಿಕೂಡ ತಂದೆಯ ಬಳಿ ನನ್ನ ಬಗ್ಗೆ ಹೇಳಿರಬೇಕು. ಒಬ್ಬಳೇ ಮಗಳೆಂಬ ಕಾರಣದಿಂದ ನರಸಪ್ಪಯ್ಯನವರೂ ಮದುವೆಗೆ ಒಪ್ಪಿದರು.

ಇನ್ನೇನು, ಒಂದು ವರುಷದಲ್ಲಿ ಅಳಿಯ ಬಿ. ಕಾಂ ಡಿಗ್ರಿ ಪಡೆಯುತ್ತಾನೆ. ಆ ನಂತರ ಉದ್ಯೋಗ ದೊರಕಿಸಿ ಕೊಡುವುದು ಅಷ್ಟೇನೂ ಕಷ್ಟವಾಗಲಾರದು. ಎಂದು ಯೋಚಿಸಿರ ಬೇಕು."

ಒಂದು ಕ್ಷಣ ತಡೆದು ನಿಟ್ಟುಸಿರು ಬಿಡುತ್ತಾ ಆತನು ತನ್ನ ಮಾತನ್ನು ಮುಂದುವರಿಸಿದ.

'ಸಾರ್! ನಿರಾಡಂಬರವಾಗಿ ಮುಗಿಯಿತು ನನ್ನ ಮತ್ತು ಶಾಂತಿಯ ವಿವಾಹ.

'ನನಗಂತೂ ಇಷ್ಟು ಬೇಗ ಮದುವೆ ಬೇಡವಾಗಿತ್ತು. ಆದರೆ ಅಣ್ಣ ಕೇಳಬೇಕಲ್ಲ' ನಾನು ಆಕೆಯಲ್ಲಿಯ ಮಧುವನ್ನು ಸೇವಿಸಿ ನಂತರ ಆಕೆಯನ್ನು ತೊರೆದರೆ! ಎಂಬ ಅನುಮಾನ ಅಣ್ಣನಿಗೆ.

'ಬಿ. ಕಾಂ ಎರಡನೆಯ ವರುಷದಲ್ಲಿ ಹೇಗೋ ಉತ್ತೀರ್ಣನಾದೆ. ಸಾರ್. ಆದರೆ ಕೊನೆಯ ವರುಷದಲ್ಲಿ ಫೈಲಾದುದರಿಂದ ನನಗೆ ಜೀವನವೇ ಬೇಡವೆನಿಸಿತು.

ಒಂದು ಕೈಯಲ್ಲಿದ್ದ ಪದ್ಮ ಮತ್ತು ಮದುವೆ ಎಂಬ ಎರಡು ದೋಣಿಗಳಿಗೆ ಒಂದೇ ಬಾರಿ ಕಾಲಿಟ್ಟಿದ್ದೆ ಸಾರ್.

ಇಷ್ಟಕ್ಕೆಲ್ಲಾ ಕಾರಣರಾರು? ನನ್ನ ಮದುವೆಯಾಗದಿದ್ದರೆ ಖಂಡಿತ ಪಾಸಾಗುತ್ತಿದ್ದೆನೆಂಬ ಭರವಸೆ ನನಗಿತ್ತು. ಶಾಂತಿಯನ್ನು ಮದುವೆಯಾದುದೇ ನನ್ನ ಅವನತಿಯ ಹಾದಿಯೆಂದು ನಾನಾಗ ತಿಳಿದಿರಲಿಲ್ಲ. ಆದರೆ ಒಬ್ಬನನ್ನು ಮನಃಪೂರ್ವಕವಾಗಿ ಪ್ರೀತಿಸಿ ನಿರಾಶನಾದರೆ ಅವನ ಹೃದಯ ಒಡೆದು ಚೂರಾಗುತ್ತದೆ. ಅಲ್ಲವೇ ಸಾರ್?'

"ಹೌದು!" ಎಂದು ತಲೆಯಲ್ಲಾಡಿಸಿ

(ಹನ್ನೊಂದನೇ ಪುಟ ನೋಡಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77 — ಕುಂದಾಪುರ, ದ. ಕ

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿವರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ನೆಲಬಾಡಿಗೆಯನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಶನ್ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಎಪ್ಪತ್ತರ ಹೊಸ್ತಿಲಲ್ಲಿ ಇಪ್ಪತ್ತರ ಯುವಕ
ಪದ್ಮಶ್ರೀ ಡಾ|| ತೋನ್ಸೆ ಮಾಧವ ಅನಂತ ಪೈ.

ತಾ. 30—4—67ರಂದು ಎಪ್ಪತ್ತರ ಹೊಸ್ತಿಲಿಗೆ ಕಾಲಿರಿಸಿದ ಡಾ|| ಪೈಗಳ ಉತ್ಸಾಹ, ಸ್ಫೂರ್ತಿ, ಬುದ್ಧಿಮತ್ತೆ ಹಾಗೂ ಯೋಜನೆಗಳ ಪ್ರಯೋಜನ ಇನ್ನೂ ಬಹುಕಾಲ ನಮ್ಮ ನಾಡಿಗೆ ದೊರಕುವಂತಾಗಲೆಂದು ನವಯುಗವು ಹಾರೈಸಿ ಡಾ|| ಪೈಗಳಿಗೆ ಶುಭಾಶಯಗಳನ್ನರ್ಪಿಸುತ್ತದೆ.

(ಉಡುಪಿ ಸಹಕಾರಿ ಸಾಲ ಸರಬರಾಯಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ|| ಪೈಗಳ ಭಾವಚಿತ್ರವನ್ನು ವಿಧಾನ ಸಭಾಧ್ಯಕ್ಷ ಶ್ರೀ|| ಬಿ. ವೈಕುಂಠ ಬಾಳಿಗಾರು ಕಳೆದ ತಾ. ೩ರಂದು ಅನಾವರಣ ಗೈದರು. ಶ್ರೀ|| ಜೆ. ಎಂ. ಲೋಬೋ ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು.)

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೬	೪—೫—೧೯೬೭	No. 36

ತಾಂತ್ರಿಕ ಕಾಲೇಜುಗಳಿಗೆ ಪ್ರವೇಶ

ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಅತಿ ಮಹತ್ವದ ಸ್ಥಾನವಿದೆ. ದೇಶದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ದಕ್ಷ ಇಂಜಿನಿಯರುಗಳು ಬೇಕು. ಜನರ ಆರೋಗ್ಯವನ್ನು ಕಾಪಾಡಬಲ್ಲ ಸೇವಾನಿರತ ಹಾಗೂ ಚತುರ ಡಾಕ್ಟರರುಗಳು ಬೇಕು. ಅಂತಲೇ ಇವರನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಉತ್ಪಾದಿಸುವ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಇಂದು ದೇಶದಲ್ಲಿ ಹಲವೆಡೆ ಇವೆ.

ಉದ್ಯೋಗದ ಮೇಲಣ ಮಮತೆಯಿಂದಲೋ ಅಥವಾ ಇನ್ನಾವ ಕಾರಣದಿಂದಲೋ, ನಮ್ಮ ತರುಣರಲ್ಲಿ ಹೆಚ್ಚಿನವರಿಗೆ ಡಾಕ್ಟರ್ ಅಥವಾ ಎಂಜಿನಿಯರ್ ಆಗುವ ಆಸೆ. ನಮ್ಮ ಮಕ್ಕಳ ತಂದೆತಾಯಂದಿರಲ್ಲಿ ಬಹು ಜನರ ಆಶೆಯೂ ಇದೇ ಆಗಿದೆ. ಇದರ ದೆಸೆಯಿಂದ ಎಲ್ಲರೂ ಪಿ. ಯು. ಸಿ. ಶಿಕ್ಷಣ ಮುಗಿಸಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೀಟಿಗಾಗಿ ಅರ್ಜಿ ಗುಜರಾಯಿಸುವವರೇ!

ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಚ್ಚಿನವು ಸರಕಾರದಿಂದ ನಡೆಸಲ್ಪಡುತ್ತವೆ. ಇಲ್ಲಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದೂ ಸರಕಾರವೇ. ಈ ಸೀಟು ವಿತರಣಾ ವಿಧಾನ ಕಳೆದ ಹತ್ತು ವರುಷಗಳಲ್ಲಿ ಹತ್ತು ಅವತಾರಗಳನ್ನು ತಾಳಿದೆ. ವಿದ್ಯಾರ್ಥಿಗಳ ಆಯ್ಕೆಯ ಸಂಬಂಧದಲ್ಲಿ ಆತನು ಗಳಿಸಿದ ಅಂಕಗಳಿಂದ ಹೆಚ್ಚು ಪ್ರಾಧಾನ್ಯತೆ ಸಂದರ್ಶನಕ್ಕೆ (ಇಂಟರ್ ವ್ಯೂ) ಇತ್ತು. ಚತುರ ಹಾಗೂ ಪ್ರತಿಭಾಶಾಲಿಗಳಿಗೆ ಸೀಟು ನಿರಾಕರಿಸಲ್ಪಟ್ಟ ನಿದರ್ಶನಗಳೆಷ್ಟೋ ಇವೆ. ಹೆಚ್ಚೇಕೆ? ಈ ಸೀಟು ವಿತರಣಾ ವಿಧಾನದ ವಿರುದ್ಧ, ಅಥವಾ ಆಯ್ಕೆಯ ವಿರುದ್ಧ ಮೈಸೂರು ಹಾಯ್‌ಕೋರ್ಟಿನಲ್ಲಿ ದಾಖಲಾದ ರಿಟ್ ಅರ್ಜಿಗಳನ್ನು ಲೆಕ್ಕ ಹಾಕಿದರೆ ಮತ್ತು ಆ ಕುರಿತಾದ ಹೈಕೋರ್ಟಿನ ತೀರ್ಪನ್ನು ಗಮನಿಸಿದರೆ ಆಯ್ಕೆಯ ವಿಧಾನ ಎಷ್ಟು ದೋಷಪೂರಿತವಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ.

ಸೀಟುಗಳ ಮಾರಾಟದಿಂದ ಬಂಗಲೆ ಕಟ್ಟಿಸಿ ಕೊಂಡವರೂ ಇದ್ದಾರೆ. ಇಂಟರ್‌ವ್ಯೂ ಎಂಬುದು, ತಮಗೆ ಬೇಕಾದವರಿಗೆ ಸೀಟು ಕೊಡಲು ಮಾಡಿಕೊಂಡ ಒಂದು ಉಪಾಯ ಎನ್ನುವಷ್ಟರ ವರೆಗೂ ಅದರ ಗತಿ ಇಳಿದಿವೆ. ಆಯ್ಕೆಯ ಸಮಿತಿಯ ಸದಸ್ಯರು, ಇಂಟರ್‌ವ್ಯೂನಲ್ಲಿ ಯಾವ ರೀತಿ ಅಂಕಗಳನ್ನು ಹಾಕುವರೆಂಬುದು ಒಗಟಾಗಿಯೇ ಉಳಿದಿದೆ. ಹೀಗಾಗಿ, ಈ ಆಯ್ಕೆಯ ವಿಧಾನದ ಕುರಿತು ಹೇಗೆ ಸ್ತೀಕೆ ಟೀಕೆಗಳು ಕಳೆದ ಹಲವು ವರ್ಷಗಳಿಂದ ಬರುತ್ತಿದ್ದವು.

ನಮ್ಮ ರಾಜ್ಯ ಸರಕಾರವು ಮೆಡಿಕಲ್ ಕಾಲೇಜುಗಳಿಗೆ ಪ್ರವೇಶ ನೀಡುವ ಬಗ್ಗೆ ಇದು ವರೆಗೆ ಅನುಸರಿಸುತ್ತಿದ್ದ ಕ್ರಮವನ್ನು ಸ್ವಲ್ಪ ಮಾರ್ಪಾಟು ಮಾಡಲು ತೀರ್ಮಾನಿಸಿದೆ ಎಂಬ ವದಂತಿ. ಪಿ. ಯು. ಸಿ. ಅಥವಾ ತತ್ಸಂಬಂಧವಾದ ಪರೀಕ್ಷೆಗಳಲ್ಲಿ ಆ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಗಮನಿಸಿ ಅಷ್ಟೇ ಜನ ವಿದ್ಯಾರ್ಥಿಗಳಿಂದ ಅರ್ಜಿ ಕರೆಯಲಾಗುವುದಂತೆ. ಅಂತಹ ವಿದ್ಯಾರ್ಥಿಗಳಲ್ಲಿ ಯಾರಿಗಾದರೂ ದೈಹಿಕ ಅಥವಾ ಇನ್ನಿತರ ಅನರ್ಹತೆ ಇದ್ದರೆ ಅಂಥವರನ್ನು ಪಟ್ಟಿಯಿಂದ ತೆಗೆದು ಖಾಲಿಯಾದ ಸ್ಥಾನಗಳಿಗೆ ಬೇರೆ ವಿದ್ಯಾರ್ಥಿಗಳನ್ನು ಆರಿಸಲಾಗುವುದಂತೆ.

ಈ ನಿಯಮ ಜ್ಯಾರಿಗೆ ಬಂದರೆ ಪರೀಕ್ಷೆಯಲ್ಲಿ ಪಡೆದ ಅಂಕಗಳೇ ಆಯ್ಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುವು. ಮಾತ್ರವಲ್ಲ ಸಂದರ್ಶನಕ್ಕೆ ಪ್ರತ್ಯೇಕ ಅಂಕಗಳು ಇಲ್ಲದಿರುವುದರಿಂದ ಇಂಟರ್‌ವ್ಯೂ ಒಂದು ಪ್ರಹಸನ ಆಗಲಿಕ್ಕಿಲ್ಲ. ಸೀಟುಗಳ ಮಾರಾಟ ನಡೆಯಲಿಕ್ಕಿಲ್ಲ. ಪ್ರಭಾವ, ಲಂಚ, ರುಷುವತ್ತುಗಳು ಕಾರ್ಯ ಮಾಡಲಿಕ್ಕಿಲ್ಲ. ಒಟ್ಟಿನಲ್ಲಿ ಯೋಗ್ಯತಾವಂತರಿಗೆ, ಪ್ರತಿಭಾವಂತರಿಗೆ ಸೀಟು ಸಿಗುವ ಆಶೆ ಈಗ ಸ್ವಲ್ಪ ಮೂಡಿದೆ. ಸರಕಾರ ಯೋಗ್ಯತೆಯನ್ನು ಗುರುತಿಸುವ ಜಾಣತನವನ್ನು ಈಗಲಾದರೂ ತೋರಿಸಲು ಮುಂದೆ ಬಂದುದು ಸಂತಸದ ಸಂಗತಿ.

ಈ ಕ್ರಮವನ್ನು ಪ್ರಸ್ತುತ ಮೆಡಿಕಲ್ ಕಾಲೇಜಿನ ಪ್ರವೇಶಕ್ಕೆ ಮಾತ್ರ ಅನುಸರಿಸಲಾಗುವುದಂತೆ. ಎಂಜಿನಿಯರಿಂಗ್ ಕಾಲೇಜುಗಳಿಗೆ ಸದ್ಯ ಈ ಕ್ರಮ ಅನ್ವಯವಾಗುವುದಿಲ್ಲವಂತೆ. ಇದಾವ ಕಾರಣವೋ ತಿಳಿದಿಲ್ಲ. ಸರಕಾರ ಈ ಕುರಿತು ಎರಡೆರಡು ವಿಧಾನ ಅನುಸರಿಸಬಾರದು. ಮೆಡಿಕಲ್ ಕಾಲೇಜುಗಳಿಗೆ ಅನ್ವಯವಾಗುವ ಮೇಲಿನ ನಿರ್ಣಯವನ್ನೇ ಎಂಜಿನಿಯರಿಂಗ್ ಕಾಲೇಜುಗಳಿಗೂ ಅನ್ವಯಿಸಬೇಕು. ಹಾಗೆ ಮಾಡಿದರೆ, ರಾಜ್ಯಕ್ಕೊಂದು ಗೌರವ. ಯೋಗ್ಯ ಹಾಗೂ ನಿಪುಣ ಡಾಕ್ಟರರು, ಎಂಜಿನಿಯರುಗಳನ್ನು ಪಡೆದೇವೆಂಬ ಆಸೆ. ಸರಕಾರ ಈ ಕುರಿತು ವಿಮರ್ಶೆ ಮಾಡದೆ ಪ್ರಸ್ತುತ ವರ್ಷದಿಂದಲೇ ಎರಡೂ ಕಾಲೇಜುಗಳ ಪ್ರವೇಶಕ್ಕೆ ತಿಳಿಸಿದ ಕ್ರಮವನ್ನು ಅನುಸರಿಸಬೇಕು.

ಶಿವಸೇನೆ

ಮಹಾರಾಷ್ಟ್ರದಲ್ಲಿ ಮುಖ್ಯವಾಗಿ ಮುಂಬಯಿಯಲ್ಲಿ 'ಶಿವಸೇನೆ' ಎಂಬ ಹೊಸ ಹೆಸರಿನ ಸಂಸ್ಥೆಯೊಂದು ಜನ್ಮತಾಳಿ,

> **ವಚನ ಸುಧೆ**
>
> ಅನಾಶ್ರಿತಾ ದಾನಪುಣ್ಯಂ
> ವೇದ ಪುಣ್ಯಮನಾಶ್ರಿತಾಃ
> ರಾಗದ್ವೇಷ ವಿನಿರ್ಮುಕ್ತಾ
> ವಿಚರಂತೀಹ ಮೋಕ್ಷಿಣಃ||
>
> ಮೋಕ್ಷ ಪಡೆಯ ಬಯಸುವವರು ದಾನದ ಪುಣ್ಯವನ್ನಾಶ್ರಯಿಸುವುದಿಲ್ಲ. ವೇದದ ಪುಣ್ಯವನ್ನೂ ಬಯಸುವುದಿಲ್ಲ. ನಿಷ್ಕಾಮ ಭಾವದಿಂದ ರಾಗದ್ವೇಷರಹಿತರಾಗಿ ಈ ಲೋಕದಲ್ಲಿ ವಿಚರಿಸುತ್ತಿರುತ್ತಾರೆ.

ಸಾಮಾಜಿಕ ಜೀವನದಲ್ಲಿ ಒಂದು ದೊಡ್ಡ ಗೊಂದಲವೇ ಉಂಟಾಗಿದೆ. ಮುಂಬಯಿ ಮರಾಠಿಗರದ್ದು, ಮಹಾರಾಷ್ಟ್ರ ಮರಾಠಿಗರದ್ದು. ಅಲ್ಲಿ ಇತರ ಭಾಷೆಗಳವರು, ಜಾತಿಗಳವರು, ಪ್ರಾಂತಗಳವರು ಇರಕೂಡದು ಎಂಬ ಉದ್ದೇಶ ಈ ಸೇನೆಯದಂತೆ. ದಕ್ಷಿಣ ಭಾರತೀಯರೇ ಮುಖ್ಯವಾಗಿ ಈ ಸೇನೆಯ ಆಗ್ರಹಕ್ಕೆ ತುತ್ತಾದವರು. ಪುಂಡಾಟಿಕೆ, ಲೂಟಿ, ಬಲಾತ್ಕಾರಗಳ ಮೂಲಕ ಈ ಸೇನೆ ಅನಾಗರಿಕ ರೀತಿಯಲ್ಲಿ ವರ್ತಿಸಿ ದಕ್ಷಿಣ ಭಾರತೀಯರ ವಿತ್ತ, ಜೀವಗಳಿಗೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ.

ರಾಷ್ಟ್ರೀಯ ಭಾವೈಕ್ಯದ ಕುರಿತು ನಮ್ಮ ನಾಯಕರು ಮಾತಾಡುತ್ತಿರುವಾಗಲೇ ಕೋಮುವಾರು ಭಾವನೆಯ ಇಂತಹ ಸಂಸ್ಥೆಗಳು ಹುಟ್ಟಿಕೊಂಡು ರಾಷ್ಟ್ರಘಾತಕ ಚಟುವಟಿಕೆಗಳಲ್ಲಿ ತೊಡಗಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿ. ಈ ಶಿವಸೇನೆಯು ಹಿಂದೆ ಹಲವಾರು ಮರಾಠಿ ಮುಖಂಡರೂ ಕೈವಾಡ ನಡೆಸುತ್ತಿದ್ದಾರೆ ಎಂದು ಸುದ್ದಿ. ಒಂದು ಕಡೆಯಲ್ಲಿ ಉಳಿದ ಪರರನ್ನು ನಿರ್ಮೂಲನಗೊಳಿಸಲು ಈ ಶಿವಸೇನೆಯನ್ನು ಛೂಬಿಡುತ್ತಾ ಇನ್ನೊಂದೆಡೆ, ಅಪ್ರತ್ಯಕ್ಷವಾಗಿ ಇದನ್ನು ಬೆಂಬಲಿಸುವುದೆಂದರೆ ಇದು ತೀರಾ ಹಾಸ್ಯಾಸ್ಪದ.

ಇತ್ತೀಚೆಗೆ ಕೇಂದ್ರ ಗೃಹಮಂತ್ರಿ ಶ್ರೀ|| ವೈ. ಬಿ. ಚವ್ಹಾಣರು ಮುಂಬಯಿಯಲ್ಲಿ ಮಾತನಾಡುತ್ತಾ ಭಾಷಾವಾರು ಮತ್ತು ಮತೀಯ ನೆಲೆಯಲ್ಲಿ ಯಾವುದಾದರೊಂದು ವಿಭಾಗದ ಜನರನ್ನು ಟೀಕಿಸುವುದು ಖಂಡನೀಯ ಎಂದು ನುಡಿದು ಈ ರೀತಿಯ ಸಂಕುಚಿತ ಭಾವನೆಯ ವಿರುದ್ಧ ಹೋರಾಡಬೇಕು ಎಂದರೆಂದು ವರದಿಯಾಗಿದೆ. ಇಂತಹ ಚಟುವಟಿಕೆಗಳಿಗೆ ಕಾನೂನು ಕ್ರಮಗಳು ಮಾತ್ರ ಪರಿಹಾರ

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



"ಏನು ಸ್ವಾಮಿ? ದಿಲ್ಲಿಯಲ್ಲಿ ಪೋಲಿಸರು ಕೂಡಾ ಮುಷ್ಕರ ಹೂಡಿದರಂತಲ್ಲಾ?"

"ಹೌದು! ಇನ್ನು ಒಳ್ಳೆ ಸಮಯ. ನೋಡಿ ನಮ್ಮ ಸೇನೆಯವರು ಮುಷ್ಕರ ಹೂಡಿಬಿಟ್ಟರೆ ಅಲ್ಲಿಗೆ ಈ ದೇಶದ ಉದ್ಧಾರವಾಗುತ್ತೆ!"

ಸುಧಾರಿತ ವ್ಯವಸಾಯವೇ

ಉಳಿವಿನ ದಾರಿ

(ತಾ. 23—4—67ರಂದು ಕಾರ್ಕಳದಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲೆಯ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಧಿವೇಶನದಲ್ಲಿ ಹೆಬ್ಬಾಳದ ವ್ಯವಸಾಯ ಯುನಿವರ್ಸಿಟಿಯ ಉಪಕುಲಪತಿ ಡಾ। ಕೆ. ಸಿ. ನಾಯ್ಕರು ಮಾಡಿದ ಭಾಷಣದ ಸಾರಾಂಶ)

ಈ ಐವತ್ತೊಂಭತ್ತನೇ ಮಹಾಸಭಾ ಅಧಿವೇಶನದಲ್ಲಿ ಭಾಗವಹಿಸಲು ನನ್ನನ್ನು ಆಮಂತ್ರಿಸಿದ್ದಕ್ಕಾಗಿ, ಬಹಳವಾಗಿ ಸನ್ಮಾನಿಸಿದಂತಾಗಿದೆ. ಈ ಗೌರವವನ್ನು ಪಡೆಯಲು ಕಾರಣರಾದವರನ್ನು ವಂದಿಸುವಾಗ, ಈ ಅವಕಾಶವು ನಾನು ಸಮಾಜದ ಪ್ರಗತಿಗೆ ಪ್ರಾಮುಖ್ಯವಾಗಿರುವ ವಿದ್ಯೆ ಮತ್ತು ವ್ಯವಸಾಯ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಲುವಾಗಿ ಬಂದ ಕೊಡುಗೆ (ಬಹುಮಾನ) ಯಾಗಿರಬಹುದೇ ಎಂದು ಭಾವಿಸುತ್ತೇನೆ. ನನ್ನ ಆಹ್ವಾನವು ಈ ಸಂದರ್ಭದಲ್ಲಿ ಯಥಾಪ್ರಕಾರದ ಮಾತಾಗಿರದೆ ನನ್ನ ಕ್ಷೇತ್ರದ ಔಚಿತ್ಯಕ್ಕೆ ಸರಿಹೊಂದುವಂತೆ ಹಾಗೂ ಪ್ರಯೋಜನವಾಗಬಲ್ಲ ಮಾತಾಗಿರಬೇಕು. ಇದನ್ನೇ ನಾನು ಕಾರ್ಯತಃ ಮಾಡಬೇಕೆಂದಿದ್ದೇನೆ.

ಪ್ರಪಂಚದ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಯು ವಿಶೇಷ ಬದಲಾವಣೆ ಹೊಂದುತ್ತಿರುವ ಸಮಯದಲ್ಲಿ, ಅಷ್ಟೇ ಅಲ್ಲದೆ ಆ ಬದಲಾವಣೆ ಈ ಜಿಲ್ಲೆಯಲ್ಲೂ ನಡೆಯುತ್ತಿರುವಾಗ, ಈ ಅಧಿವೇಶನವು ನಡೆಯುತ್ತಿದೆ. ನಮ್ಮ ಧಿಮ್ಮ ಭೇಟಿಯ ಕಾಲ ಯಾವುದೆಂದರೆ, ಜಮೀನು ಹಿಡುವಳಿದಾರರನ್ನು ಅಲ್ಪವಾಗಿ ಕಾಣುವ ಕಾಲ ಅಥವಾ ಹಿಡುವಳಿದಾರರಲ್ಲಿ ಧೀರಸ ಪ್ರದೇಶವೇ ಅತಿಯಾಗಿರುವ ಕಾಲ. ಹಿಂದೆ ಒಂದು ಕಾಲದಲ್ಲಿ ನಾನು ಅನುಭವಿಸುತ್ತಿದ್ದೆನೆಂದು ಹೇಳುತ್ತಿದ್ದ ರಾಜಕೀಯ ಪ್ರಾಬಲ್ಯ ಇನ್ನಿಲ್ಲ ಅಥವಾ ಇದೆ ಎನ್ನುವುದಾದರೆ ಅದೊಂದು ಭ್ರಾಂತಿ. ಅಷ್ಟಲ್ಲದೆ ಹಿಂದೆ ನಾವು ಅನುಭವಿಸುತ್ತಿದ್ದ ದೂರದರ್ಶಿತ್ವವುಳ್ಳ ಹಾಗೂ ಧರ್ಮವಾದಾತ್ಮಕ ಸುಭದ್ರ ನಾಯಕತ್ವ ದೂರದ ಮಾತೇ ಸರಿ. ಎಲ್ಲಾ ಭಾಗದಲ್ಲಿಯೂ ನೋಡಿದ್ದೇ ಆದರೆ ಸಮಾಜದ ಭವಿಷ್ಯವು ದಾರುಣ ಹಾಗೂ ಅಸ್ಪಷ್ಟವಾಗಿದೆ.

ನಮಗೆ ತಿಳಿದ ಹಾಗೆ ಬೇಸಾಯವು ಇಂದು ಖಚಿತವಾಗಿ ಶೋಚನೀಯ ಸ್ಥಿತಿಯಲ್ಲಿದೆ. ಯಾವ ದೇಶದಲ್ಲಿ ಉತ್ಪನ್ನವು ಮಳೆಯ ಮರ್ಜಿಯ ಕೈಗೊಂಬೆಯಾಗಿದೆಯೋ, ಅಲ್ಲಿಯ ವ್ಯವಸಾಯವು ಜೂಜೇ ಸರಿ. ಅಷ್ಟಲ್ಲದೆ ಜನಸಂಖ್ಯೆಯ ಒತ್ತಡದಿಂದಾಗುವ ಹೆಚ್ಚಿನ ಆಹಾರ ಪೂರೈಕೆ, ಬಹಳ ಕಷ್ಟ ಸಾಧ್ಯ. ಆಹಾರದ ಪೂರೈಕೆ ಮತ್ತು ಬೆಳೆಯುತ್ತಿರುವ ಜನತೆ ಪ್ರಪಂಚಕ್ಕೇ ಒಂದು ಸವಾಲಾಗಿದೆ. ಮತ್ತಿನ ಪ್ರತಿಷ್ಠೆಯಂದಿಗೆ ಮುಂದುವರಿಯದ ದೇಶದಲ್ಲಿರುವ ನಾವು, ನಮ್ಮ ಆಹಾರಕ್ಕಾಗಿ ಕೇವಲ ಮಳೆಯ ನೀರನ್ನೆ ಆಶ್ರಯಿಸಬೇಕಾಗಿದೆ— ಅಷ್ಟೇಕೆ ನಮ್ಮ ಜಿಲ್ಲೆಯಲ್ಲೂ ಹಾಗೇ ಅಲ್ಲವೇ? ಬೇಡಿಕೆ ಮತ್ತು ಉತ್ಪನ್ನಗಳು ದೂರವಾದಷ್ಟೂ ನಾವುಗಳು ಬದುಕುವುದೂ ಸಹ ಕಷ್ಟವಾಗುವುದು. ಆರ್ಥಿಕ ಪರಿಸ್ಥಿತಿಯ ಒತ್ತಡದಿಂದಾಗಿ ನಮ್ಮಲ್ಲನೇಕರು ವಿವಿಧ ಕ್ಷೇತ್ರಗಳನ್ನಾಶ್ರಯಿಸಿದ್ದಾರೆ. ಇದರಿಂದಾಗಿ ಯುವಕರುಗಳನ್ನು ನಾವು ಹೆಚ್ಚಾಗಿ ನಗರಗಳಲ್ಲಿ ನೋಡುತ್ತಿದ್ದೇವೆ. ಹಣಕಾಸಿನ ಅವಶ್ಯಕತೆಯು ಸಾಹಸಿಕಾರ್ಯ, ಪರಿಶೋಧಕ ಪ್ರೈತನ್ಯಗಳನ್ನು ವೃದ್ಧಿಗೊಳಿಸುತ್ತದೆ. ಆದಕ್ಕಾಗಿ ನಮ್ಮಲ್ಲನೇಕರು ಜೀವನಕ್ಕಾಗಿ ವಾಣಿಜ್ಯ, ಕೈಗಾರಿಕೆ ಮತ್ತು ಇತರ ಕಸುಬುಗಳಲ್ಲಿ ಪಾಲುಗೊಂಡಿದ್ದಾರೆ. ಇದನ್ನು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲದೆ ಪ್ರಪಂಚದ ಹಲವಾರು ಕಡೆ ಕಾಣುತ್ತೇವೆ. ಇದು ಸ್ಪಷ್ಟ ಪರಿಣಾಮ ಎಂಬ ಸಂದೇಹವಿಲ್ಲವಾದರೂ ವ್ಯವಸಾಯವನ್ನೇ ವೃತ್ತಿಯಾಗಿ ಉಳ್ಳ ಈ ಜಿಲ್ಲೆಯಲ್ಲೇ ಉಳಿದಿರುವ ನಾಗರಿಕರಿಗೆ ಇದು ಸೂಕ್ತ ಪರಿಹಾರವಲ್ಲ.

ಈ ವಿಜ್ಞಾನ ಮತ್ತು ತಾಂತ್ರಿಕ ಯುಗದಲ್ಲಿಯೂ ಸಹ ನಮ್ಮ ವ್ಯವಸಾಯದ ಕಲೆಯು, ಪೂರ್ವಿಕರಿಂದ ಅಭ್ಯಸಿಸಲ್ಪಟ್ಟ ದಾರಿಯಲ್ಲೇ ನಡೆದು ಬರುತ್ತಿರುವುದರಿಂದ, ಬೆಳೆಯುತ್ತಿರುವ ಜನತೆಗೆ ಈ ವಿಧದಲ್ಲಿ ಆಹಾರದ ಪೂರೈಕೆ ಅಸಾಧ್ಯ.

ನಮ್ಮ ಸಾಂಪ್ರದಾಯಿಕ ರೀತಿಯ ಕೃಷಿಯನ್ನು ನವೀನ ವಿಜ್ಞಾನ ರೀತಿಗೆ ಬದಲಾಯಿಸುವುದೆಂದರೆ, ನಮ್ಮ ಅಪೇಕ್ಷೆಯನ್ನು ಸಾಧಿಸುವುದು ಮಾತ್ರವಲ್ಲದೆ ಪ್ರಜಾ ಸಂಖ್ಯೆಯ ಸ್ಫೋಟವನ್ನು ಹತೋಟಿಯಲ್ಲಿಟ್ಟಂತೆ, ಮತ್ತು ನಮ್ಮ ಅಸ್ತಿತ್ವವನ್ನು ಉಳಿಸಿಕೊಂಡಂತೆ ಆಗುತ್ತದೆ. ಈ ವಿಚಾರದಲ್ಲಿ ಮಾರ್ಗದರ್ಶಕರಾಗಬಲ್ಲ ನಾವು; ಈ ಕೃಷಿ ಸಮಾಜಕ್ಕೆ, ಈ ಜಿಲ್ಲೆಯಲ್ಲಿ ನಮ್ಮಿಂದೇನಾದರೂ ಪ್ರಯೋಜನವಾಗಿದೆಯೇ? ಇಲ್ಲವಾದರೆ ನಾನು ಶ್ರದ್ಧೆಯಿಂದ ಕೇಳುವುದೆಂದರೆ, ಇದು ಸಹಾಯ ಮಾಡಲು ಸಕಾಲ.

ಸಮಾಜವಾದದ ಮೇಲೆ ನಿಂತಿರುವ ಈ ಭೂಸುಧಾರಣೆ ಹ್ಯಾಗೋ ಈ ಜಿಲ್ಲೆಯ ಭೂಮಾಲೀಕರನ್ನು ಮೊದಲು ಧಳಿಸಿದೆ. ಆದರ ಧರ್ಮ ಸಿದ್ಧಾಂತ ಅಥವಾ ವಾದ ಸರಣಿ ಏನೇ ಇರಲಿ, (ನಮ್ಮ ಶಾಸಕರು ಇವೆಲ್ಲನ್ನೂ ಈವು, ಉಳಿವಿನ ಪ್ರಶ್ನೆಯಾಗಿರುವುದರಿಂದ ಕೂಲಂಕಷವಾಗಿ ನೋಡುತ್ತಾರೆಂದು ನಂಬೋಣ) ನಾವು ಮರೆಯದೆ ಇರಬೇಕಾದ ವಿಷಯವೆಂದರೆ, ಬಹುತೇಕ ಜನರು ಭೂಮಾಲಿಕರಾಗಿ, ಸ್ವಂತ ವ್ಯವಸಾಯದಿಂದ ಜೀವಿಸುತ್ತಿದ್ದಾರೆ. ಈಗಿನ ಸ್ಥಿತಿಯಲ್ಲಿ ಇದರಿಂದ ಜೀವನ ಸಮರ್ಪಕವಾಗಿ ನಡೆಯುತ್ತಿಲ್ಲ. ಆದುದರಿಂದ ಉಳಿದಿರುವ ದಾರಿಯೆಂದರೆ, ಈ ದಾರಿಯನ್ನೆ ವಿನೂತನ, ವೈಜ್ಞಾನಿಕ ರೀತಿಯ ಕೃಷಿಯನ್ನವಲಂಬಿಸುವುದರಿಂದ ಸಮರ್ಪಕ ಮಾಡಿಕೊಳ್ಳುವುದು. ಈ ವಿಧಾನವು ಜಪಾನ್, ಟೈವಾನ್, ಇಸ್ರೇಲ್ ಮತ್ತು ಮೆಕ್ಸಿಕೋ ದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಹಳ ಪ್ರಯೋಜನಕಾರಿಯಾಗಿದೆ. ಈ ದೇಶಗಳೆಲ್ಲವೂ ಈಗ್ಗೆ ಕೆಲವಾರು ವರ್ಷಗಳ ಹಿಂದೆ, ನಮ್ಮ ದೇಶದ ಹಾಗೆ ಬಹಳ ಹಿಂದುಳಿದುದು ಮಾತ್ರವಲ್ಲದೆ, ಅವುಗಳಲ್ಲಿನ ಭೂಮಿಯೂ ಉತ್ಕೃಷ್ಟವಾಗಿಲ್ಲ ಹಾಗೂ ವಾಯು ಗುಣವೂ ಸಹ ಬೆಳೆಯ ಉತ್ಪನ್ನಕ್ಕೆ ಸಹಕಾರಿಯಾಗಿಲ್ಲ. ಇದೆಲ್ಲವನ್ನೂ ಅಂತ ನಮಗೆ ನಾವು ಮುಂದ ಮಾಡಬೇಕಾಗಿರುವ ಆಯ್ಕೆ (choice) ಕಣ್ಣ ಮುಂದೆ ನಿಂತಿದೆ. ಈ ಸಮಸ್ಯೆಯನ್ನು ಅರ್ಥವತ್ತಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವುದು ನಿಮ್ಮಂತಹ ನಾಯಕರುಗಳ ಆದ್ಯ ಕರ್ತವ್ಯ.

ಆದ್ದರಿಂದ ನನ್ನ ನಿಜಾಭಿಪ್ರಾಯವೆಂದರೆ, ಯಾರು ವ್ಯವಸಾಯವನ್ನೇ ನೆಚ್ಚಿರುವರೋ, ಅವರು ಸುಧಾರಿತ, ವ್ಯವಸ್ಥಿತ ಪದ್ಧತಿಯಿಂದ ಮಾತ್ರ ಹೆಚ್ಚಿನ ಅನುಕೂಲಗಳನ್ನು ಪಡೆಯಬಹುದು.

ಇದು ಹೇಗೆ ಸಾಧ್ಯವೆಂದರೆ ಮೊದಲನೆಯದಾಗಿ ರೈತರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದು, ಅವನು ಅಪೇಕ್ಷಿಸಬಹುದಾದ ಕೆಲವನ್ನು ಉದಾಹರಿಸಬಹುದು. ಅವು:—

1) ಹೆಚ್ಚು ಉತ್ಪನ್ನ ಕೊಡಬಲ್ಲ, ವಿವಿಧ ಮಾದರಿಯ ಸಂತತಿಗೆ ಯೋಗ್ಯವಾದ ಬೀಜಗಳು ಮತ್ತು ಉತ್ಕೃಷ್ಟವಾದ ಗಿಡಗಳು.

2) ಗೊಬ್ಬರ, ಕ್ರಿಮಿನಾಶಕಗಳು ಮತ್ತು ಇತರ ವಸ್ತುಗಳನ್ನು ನ್ಯಾಯ ದರದಲ್ಲಿ ಅವನಿಗೆ ಬೇಕಾದ ಸಮಯಗಳಲ್ಲಿ ಕೊಡುವುದು.

3) ಪ್ರಾಯೋಗಿಕ ಮತ್ತು ವೈಜ್ಞಾನಿಕ ವಿಭಾಗಗಳಲ್ಲಿ ಪರಿಣತರಾದವರುಗಳಿಂದ ಆಗಿಂದಾಗ್ಯೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವೀಯುವುದು.

4) ಸಾಲದ ಸೌಕರ್ಯ, ಸಂಗ್ರಹಣೆ, ವಿತರಣೆ ಮತ್ತು ಮಾರಾಟ ಇವುಗಳಿಗೆ ತಕ್ಕ ಸೌಲಭ್ಯ.

ಇವೆಲ್ಲಕ್ಕೂ ನಾವು ಸರ್ಕಾರವನ್ನೇ ಕಾಯುವುದಾದರೆ ನಾವು ಇದ್ದಲ್ಲಿಯೇ ಇರಬೇಕಾಗುತ್ತದೆ. ಆದ್ದರಿಂದ ರೈತರುಗಳೇ ತಮ್ಮ ಸಂಪಾದನೆಯ ಕೆಲವಂಶವನ್ನು ಒಟ್ಟುಗೂಡಿಸಿ ಒಂದು ಜಿಲ್ಲಾ ಸುಸಂಗಟಿತ ವ್ಯವಸ್ಥಿತ ಸಂಸ್ಥೆಯನ್ನು ಮಾಡಿಕೊಂಡರೆ ಇದಕ್ಕಿಂತಲೂ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವುದಿಲ್ಲವೇ? ಈ ಸಂಸ್ಥೆಯು ರೈತನ ಆವಶ್ಯಕ ಸಾಮಗ್ರಿಗಳನ್ನು ಕೂಡಿಟ್ಟು ಅವನಿಗೇ ಬೇಕಾದಾಗ ಮಾರುವುದರಿಂದ, ಮಧ್ಯವರ್ತಿಯವರು ಮಾಡಿಕೊಳ್ಳುತ್ತಿದ್ದ ಲಾಭವನ್ನು ತಪ್ಪಿಸಿದ ಹಾಗೆ ಆಗುತ್ತದೆ. ಅದರಿಂದಾಗಿ ಸಾಮಗ್ರಿಯ ಬೆಲೆ ಎಷ್ಟೋ ಪಾಲು ಕಮ್ಮಿಯಾಗುತ್ತದೆ. ಅಷ್ಟೇ ಇಲ್ಲದೆ ಈ ಸಂಸ್ಥೆಯು ಪದಾರ್ಥಗಳನ್ನು ಮನೆಗೂ ಸಹ ತಲುಪಿಸಬಹುದು. ಇಂಥ ಒಂದು ಸಂಸ್ಥೆ ಈ ಸೇವೆಗಳ ಜೊತೆಗೆ ಬೇರೆಯ ತರಹ ಚಟುವಟಿಕೆಗಳಲ್ಲೂ ಭಾಗವಹಿಸಬಹುದು. ಉದಾಹರಣೆಗೆ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ, ಯಾಂತ್ರಿಕ ರಿಪೇರಿ, ಸಂಗ್ರಹಣೆ, ವಿತರಣೆ, ಮಾರಾಟ ಇವುಗಳಲ್ಲಿ ಪಾಲುಗೊಳ್ಳುವಿಕೆ, ಸಹಕಾರೀ ಸಸ್ಯ ಸಂರಕ್ಷಣಾ ದಳಗಳು, ಪಂಪುಗಳು, ಟ್ರಾಕ್ಟರ್‌ಗಳು, ಬುಲ್‌ಡೋಜರ್ ಇತ್ಯಾದಿ ಬೆಲೆ ಬಾಳುವ ಉಪಕರಣಗಳನ್ನು ಬಾಡಿಗೆಗೆ ಕೊಡುವುದು, ಸ್ಥಳದಲ್ಲಿ ಇಲ್ಲದಿರುವ ಭೂಮಾಲಿಕರ ಕೃಷಿ ಕ್ಷೇತ್ರವನ್ನು ಸ್ವಲ್ಪ ಕಾಲ ನೋಡಿಕೊಳ್ಳುವುದು ಇತ್ಯಾದಿ. ಒಬ್ಬ ರೈತನು ಮೊ

(ಒಂಭತ್ತನೇ ಪುಟ ನೋಡಿರಿ)

RANGE OF PRODUCTS **RANGE OF PRODUCTS**

Squashes, Crushes, Syrups, Biccola & Brinda (Special Syrups) Pickles Tomato Ketchup, Sweets & Toffees.

Canned Pineapple & Mango Slices Mango Pulp Pineapple Juice, Tomato Juice, Fruit Cocktail, Jams, Ginger, Preserve (a delicious desert relieves indigestion and gastric trouble.)

Sales Depot: **Bhavanthi Street, Mangalore-1.** PHONE: 3266

ನೆಹರೂ ಸಂಸ್ಮರಣೆ

ಜೀವಲತೆಯ ಹೂ-ಹಣ್ಣುಗಳು

೫

ಆನಂದ ಭವನದ ಸಮಸ್ತ ವೈಭವದ ಮಧ್ಯ ಜವಾಹರಲಾಲ್ ನಹರೂರವರು ಸಮಾನ ವಯಸ್ಸಿನ ಜತೆಗಾರರು ಆಟ ವಾಡಲಿಕ್ಕೆ ಇಲ್ಲದೇ, ಏಕಾಕಿ ಬಾಲಕರಾಗಿ ಓಡಾಡುತ್ತಿದ್ದರು. ಎಲ್ಲೋ ಆಕಸ್ಮಾತ್ತಾಗಿ ಸಮ ವಯಸ್ಸಿನ ಹುಡುಗರು, ಜವಾಹರಲಾಲರಿಗೆ ಆಡಲು ದೊರೆಯುತ್ತಿದ್ದರು

ಇಂತಹ ಒಂದು ಸಂದರ್ಭ ಅವರ ಹುಟ್ಟು ಹಬ್ಬದ ವೇಳೆ. ಇದು ಜವಾಹರಲಾಲರ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ನಿಂತಿದೆ "ಈ ಸಂದರ್ಭದಲ್ಲಿ ನಾನು ದೊಡ್ಡ ನಾಯಕನಂತೆ ಆಗಿರುವಂತೆ ನನಗೆ ಅನಿಸುತ್ತಿತ್ತು. ನನ್ನ ಮುಖ್ಯ ತಕರಾರು ಎಂದರೆ—ನನ್ನ ಹುಟ್ಟು ಹಬ್ಬ ವರ್ಷಾಗಲೋ ಒಮ್ಮೆ ಮಾತ್ರ ಬರುತ್ತದೆ ಎಂಬುದೇ ಆಗಿತ್ತು. ಮೇಲಿಂದ ಮೇಲೆ ನನ್ನ ಹುಟ್ಟು ಹಬ್ಬವನ್ನು ಮಾಡಬೇಕೆಂದು ನಾನು ನಿಜವಾಗಿಯೂ ಆಂದೋಲನವನ್ನು ಕೈಗೊಂಡೆ ಎಂದು ಜವಾಹರಲಾಲ ಬರೆದಿದ್ದಾರೆ

ಟ್ರಿನಿಟಿ ಕಾಲೇಜಿನಲ್ಲಿ ಪ್ರಥಮ ಬಾರಿಗೆ ನೆಹರೂರವರು ತಮ್ಮ ಸಮಾನ ಸ್ಕಂದರೊಡನೆ ಗೆಳೆತನವನ್ನು ಮಾಡಿದರು. ತಮ್ಮ ತಂದೆಗೆ ಬರೆದ ಪತ್ರದಲ್ಲಿ ನಹರೂರವರು ಬೆಳಗಿನಿಂದ ದೀರ್ಘ ಸಮಯದವರೆಗೆ ನಾವು ಪ್ರತಿಯೊಬ್ಬರೂ ಬಳಿಕ ಸ್ವಲ್ಪ ಮೌನವಾಗಿ ಕುಳಿತು ಮಾತನಾಡುತ್ತೇವೆ. ಮತ್ತು ಸಹಿಸದ ಬಂಧು ಬಳಗ, ಜಗದ ನಮ್ಮನ್ನು ದಿನ ಸಿಗದ ನಿಗ್ರಹದವರೆಗೂ ಸ್ಥಿರವಾಗಿ ಮಧ್ಯರಾತ್ರಿಯವರೆಗೆ ನಾವು ಚರ್ಚಿಸುತ್ತಲೇ ಇರುತ್ತೇವೆ, ಎಂದು ಬರೆದಿದ್ದಾರೆ

ಲಜ್ಜೆಯ ಹುಡುಗ

ಚರ್ಚೆ ಮಾಡುವಾಗಿಂದ ಸಂದರ್ಭಗಳಲ್ಲಿ ನಹರೂರವರು ಹೆಚ್ಚಾಗಿ ಶ್ರೋತೃವಿನ ಪಾತ್ರವಹಿಸಿದ್ದರು, ವಕ್ತಾರರಾಗಿರಲಿಲ್ಲ. ಯಾರು ಏನೇ ತನ್ನ ವ್ಯಕ್ತಿತ್ವದಿಂದ ಜನರನ್ನು ಮನಸ್ಸನ್ನು ಸೆಳೆಯಲು ಸಮರ್ಥನಾದನೋ ಅಂತಹ ನಹರೂ ಕೆಲವು ಹುಡುಗರ ಮಧ್ಯೆ ಇದ್ದ ಸಂಕೋಚ ಮಾತನಾಡಲು ಧೈರ್ಯವಿರುತ್ತಿರಲಿಲ್ಲ ಎಂಬ ಸಂಗತಿ ಬಹು ಜನರಿಗೆ ತಿಳಿದಿರಲಿಕ್ಕಿಲ್ಲ

ಟ್ರಿನಿಟಿ ಕಾಲೇಜಿನ 'ಮ್ಯಾಗ್ನೆ ಮಿಸ್ಟ್ರೆಸ್ಸ್' ಎಂಬ ಚರ್ಚಾ ಸಭೆಯ ಸದಸ್ಯರಾಗಿದ್ದರು ನಹರೂರವರು. ಆದರೆ ಆ ಸಭೆಯಲ್ಲಿ ಯಾವಾಗಲೂ ಮಾತನಾಡುತ್ತಿರಲಿಲ್ಲವೋ ಅವರು ಒಂದು ದಂಡ ತೆರಬೇಕು ಎಂಬ ನಿಬಂಧನೆ ಇತ್ತು. ನಹರೂರವರು ಮಾತ್ರವೇ ಬರದ ದಂಡವನ್ನು ಹೇಳಿದ್ದನ "ಪತ್ರಿಕಾ ಸಭೆಯ ಬಹಳಷ್ಟು ನಹರೂರವರು ಕೆಲವು ದಿನಗಳಿಂದ ಅಭಿವೃದ್ಧಿ ಪಡೆಯಿತು.

ಕ್ರಮೇಣ ಸಮಯೋಚಿತರು ರೈತರ ಸಂಗಡವಿದ್ದು, ತಮ್ಮ ಲಜ್ಜೆಯ ಕಾರಣವನ್ನು ತಿಳಿಸಬಲ್ಲರು. ಅವರು ಸಾರ್ವಜನಿಕವಾಗಿ ಹೇಗೆ ಮಾತನಾಡಬೇಕೆಂಬುದನ್ನು ನನಗೆ ಕಲಿಸಿದರು"

ಎಂದು ನೆಹರೂರವರು ಸ್ಮರಿಸಿದ್ದಾರೆ

ನೆಹರೂರವರು ನಗರವಾಸಿ ಆದರೂ ಗಿರಿಕಾನನಗಳ ಕಡೆ ಅವರನ್ನು ತನ್ನೆಡೆಗೆ ಸೆಳೆದಿತ್ತು. ಪ್ರಾಣಿ ಜೀವನವನ್ನು ಅವರು ಕೌತುಕದಿಂದ ಅಭ್ಯಸಿಸಿದ್ದರು. ಅವರು ಸೆರೆಮನೆಯಲ್ಲಿದ್ದಾಗ ಕಂಡ ದೃಶ್ಯವನ್ನು ಒಂದೆಡೆ ಬಣ್ಣಿಸಿದ್ದಾರೆ ಕೆಲವು ವೇಳೆ ಒಂದು ಹೆಣ್ಣು ಗಿಳಿಗಾಗಿ ಎರಡು ಗಂಡು ಗಿಳಿಗಳ ಭಯಂಕರ ಕಾದಾಟ ನಡೆಯುತ್ತಿತ್ತು. ಹೆಣ್ಣು ಗಿಳಿ ಸುಮ್ಮನೆ ಕುಳಿತುಕೊಂಡು, ಪರಿಣಾಮವನ್ನು ನೋಡುತ್ತಿತ್ತು ಮತ್ತು ಗೆದ್ದ ಗಿಳಿಗೆ ತನ್ನನ್ನು ಅರ್ಪಿಸಿಕೊಳ್ಳಲು ಸಿದ್ಧವಾಗುತ್ತಿತ್ತು"

ನಹರೂರವರ ತೀರ ಸನಿಹದ ಗೆಳೆಯರೊಬ್ಬರು ಬರೆದಿದ್ದಾರೆ—'ಅಲಹಾಬಾದ್ ಕಾಂಗ್ರೆಸ್ ನಡೆದಾಗ ನೆಹರೂರವರು ಸಂಪೂರ್ಣ ಆನಂದಪರವಶರಾಗಿದ್ದು, ಆಗ ಅವರ ಮುಖ ಸಂತೋಷದಿಂದ ಕೂಡಿತ್ತು. ಅಂತಹ ಸಂತೋಷ ಅವರು ಭಾರತದ ಪ್ರಧಾನ ಮಂತ್ರಿಯಾದಾಗಲೂ ಕಂಡುಬರಲಿಲ್ಲ."

"ಅಲಹಾಬಾದಿನ ಬೀದಿಯಲ್ಲಿ ಅಧ್ಯಕ್ಷೀಯ ಮೆರವಣಿಗೆಯ ಮುಂಭಾಗದಲ್ಲಿಯ ನೆಹರೂರವರ ಮೇಲೆ ಅವರ ತಾಯಿ ಸ್ವರೂಪರಾಣಿ ನೆಹರೂರವರು ಪುಷ್ಪವೃಷ್ಟಿಯ ಮಳೆ ಕರೆದಾಗ ನೆಹರೂರವರ ಮುಖ ಸಂಪೂರ್ಣ ಹರ್ಷ ನಿರ್ಭರವಾಗಿತ್ತು. ಬಹುಶಃ ಅದೊಂದೇ ಕ್ಷಣದಲ್ಲಿ, ಪ್ರಸಂಗದಲ್ಲಿ, ನಹರೂರವರು ಅಷ್ಟೊಂದು ಹಸನ್ಮುಖಿಯಾಗಿ ನನಗೆ ಕಂಡಿದ್ದಾರೆ?

ಸೀಮೆಯಿಲ್ಲದ ಔದಾರ್ಯ

ಬಡವರನ್ನು ಕಂಡರೆ ನೆಹರೂರವರ ಕನಿಕರ ಉಕ್ಕಿ ಬರುತ್ತಿತ್ತು. ಅವರ ಜತೆ ಕೆಲಸ ಮಾಡಿದವರ ಹೇಳಿಕೆಯ ಪ್ರಕಾರ, ನಹರೂರವರು ಮನೆಬಿಟ್ಟು ಹೊರಗೆ ಹೊರಟಾಗ ಸ್ವಲ್ಪ ಹಣವನ್ನು ಅವರ ಜೇಬಿನಲ್ಲಿ ಹಾಕಲಾಗುತ್ತಿತ್ತು. ಅವರು ಮರಳಿ ಬಂದಾಗ ಜೇಬಿನಲ್ಲಿ ಬಹುಶಃ ಏನೂ ಹಣ ಇರುತ್ತಿದ್ದಿಲ್ಲ. ಈ ವೆಚ್ಚವನ್ನು ಎಲ್ಲಿಯೂ ತೋರಿಸಲಿಕ್ಕೆ ಬರುತ್ತಿದ್ದಿಲ್ಲವಾದ್ದರಿಂದ, ಅವರ ಜೇಬಿನಲ್ಲಿ ಸ್ವಲ್ಪೇ ಹಣವನ್ನು ಇಡಲು ನಿರ್ಧರಿಸಲಾಯಿತು.

ನೆಹರೂರವರು ಪ್ರವಾಸದಲ್ಲಿ ಇದ್ದಾಗ್ಗೆ ತಮ್ಮ ಸಿಬ್ಬಂದಿಯವರ ಕ್ಷೇಮ ದ ಬಗ್ಗೆ ಯಾವಾಗಲೂ ಕಾತ್ಯರರಾಗಿದ್ದರು ಒಮ್ಮೆ ಅವರು ರಜೆಯ ಕಾಲದಲ್ಲಿ ಸಿಮ್ಲಾಕ್ಕೆ ಬಂದಿದ್ದರು. ಅವರ ಅಡಿಗೆಯವನು ರಜೆ ಬೇಡಿದ ನಹರೂರವರು ತತ್‌ಕ್ಷಣವೇ ರಜೆ ಮಂಜೂರು ಮಾಡಿ, ಅವನಿಗೆ ೬೦ ರೂ ಗಳನ್ನು ಕೊಟ್ಟು ತನ್ನ ಕುಟುಂಬದವರನ್ನು ಕಾಣಲು, ಸಿದ್ಧನಾಗಿ ಹೋಗಲು ಅನುಮತಿಕೊಟ್ಟರು.

ಸೌಕರ್ಯ ಪ್ರಧಾನವಲ್ಲ

ತಮಗಾಗಿ ಯಾವ ವಿಶೇಷ ಸುಖ—ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು ನೆಹರೂರವರು ಎಂದೂ ಪ್ರಯತ್ನಿಸಲಿಲ್ಲ.

ಒಮ್ಮೆ ಆನಂದ ಭವನದಲ್ಲಿ ಬೇಸಿಗೆಯ ದಿನವೊಂದರಲ್ಲಿ ನೆಹರೂ ಅವರು ಅಭ್ಯಾಸ ಮಗ್ನರಾಗಿ ಕುಳಿತಿದ್ದರು. ಆಗ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ನೆಹರೂರವರನ್ನು ಕಾಣಲು ಬಂದರು. ಕೋಣೆಯೊಳಗೆ ಕಾಲಿಟ್ಟಾಗ ಬಾರೀ ಸೆಕೆ ಶಾಸ್ತ್ರೀಜಿಯವರು ಕೋಣೆಯಲ್ಲಿಯ ಉಷ್ಣತೆಯನ್ನು ಕಡಿಮೆ ಮಾಡಲು ಏನಾದರೂ ಮಾಡಬೇಕೆಂದು ಸೂಚಿಸಿದಾಗ, 'ಇದ್ದ ಅವಸ್ಥೆಯಲ್ಲಿಯೇ ದುಡಿಯಲು ನಾವು ಹೊಂದಿಕೊಳ್ಳಬೇಕು. ಹೆಚ್ಚು ಹೆಚ್ಚು ಸುಖ ಸೌಕರ್ಯ ಬೇಕು ಎಂದು ಆಶೆ ಮಾಡತಕ್ಕದ್ದಲ್ಲ, ತೊಡಬಾರದು' ಎಂದು ನೆಹರೂರವರು ಹೇಳಿದರು.

(ಎಂಟನೇ ಪುಟ ನೋಡಿರಿ)

ಉಳಿತಾಯ ಸಾಧಿಸಿದ ಬದುಕು

ಚಂದು ಮೊತ್ತಮೊದಲು ಫ್ಯಾಕ್ಟರಿಯೊಂದರಲ್ಲಿ ಫಿಟ್ಟರ್ ಕೆಲಸ ಕೈಗೊಂಡಿದ್ದ. ಆದಾಯ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಹಣ ಕೂಡಿಡುತ್ತಾ ಬಂದ ಮೂರು ನಾಲ್ಕು ವರುಷಗಳಲ್ಲಿ ಬಡ್ಡಿ ಸಹಿತ ಆತನ ಮೊತ್ತ ಬೆಳೆದು, ಆ ಹಣದಿಂದ ಅವನು ಒಂದೆರಡು ಪುಟ್ಟ ಯಂತ್ರಗಳನ್ನು ಕ್ರಯಕ್ಕೆ ಪಡೆದ ಇದೀಗ ಆತ ತನ್ನ ಸ್ವಂತ ಚಿಕ್ಕ ವರ್ಕ್‌ಶಾಪನ್ನೂ ನಡೆಸುತ್ತಿದ್ದಾನೆ. ಉಳಿತಾಯ ಸಾಧಿಸಿದ ಫಲವೇ ತನ್ನ ಈಗಿನ ಸಂತೃಪ್ತ ಬದುಕು ಎಂದು ಆತ ಹೇಳುತ್ತಿದ್ದಾನೆ.



ಸೋಮಯ್ಯ ಕೈಮಗ್ಗದ ಕಾರ್ಖಾನೆಯಲ್ಲಿ ದಿನಗೂಲಿ ಕೆಲಸದಲ್ಲಿದ್ದ. ದಿನಪ್ರತಿ ಸಂಜೆ ಕೂಲಿ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಖಾತೆಯಲ್ಲಿ ಎಂಟಾಣೆಯಂತೆ ಕೂಡಿಡುತ್ತಾ ಬಂದ. ಏಳು ವರ್ಷಗಳ ಕೊನೆಗೆ ಅತನ ಕೈಗೆ ಬಂದ ಒಟ್ಟು ಹಣದಲ್ಲಿ ನಾಲ್ಕು ಮಗ್ಗಗಳನ್ನು ಕ್ರಯಕ್ಕೆ ಪಡೆದು ಸ್ವಂತ ಚಿಕ್ಕ ನೇಯ್ಗೆಯ ಕಾರ್ಖಾನೆಯೊಂದನ್ನು ತೊಡಗಿದ. ತಾನು ನಿಯಮಿತವಾಗಿ ಉಳಿತಾಯ ಮಾಡಿದುದರಿಂದಲೇ ಈ ಸ್ವತಂತ್ರ ಉದ್ಯೋಗ ತನಗೆ ಸಾಧ್ಯವೆನಿಸಿತು ಎಂದು ಸೋಮಯ್ಯನ ಈಗಿನ ಹರ್ಷದ ಉದ್ಗಾರ.

ಸುಬ್ಬಾಚಾರಿ ಮರ ಕೊಯ್ಯುವ ಕಾರ್ಖಾನೆಯಲ್ಲಿ ಬಡಗಿಯ ಕೆಲಸ ಕೈಗೊಂಡಿದ್ದ. ತಿಂಗಳ ಸಂಬಳ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಕ್ಯುಮುಲೇಟಿವ್ ಡಿಪಾಜಿಟ್ ಖಾತೆಯಲ್ಲಿ ಹಣವನ್ನು ಜಮೆ ಮಾಡುತ್ತಾ ಬಂದ ವರ್ಷದ ಕೊನೆಯಲ್ಲಿ ದೊರೆತ ಹಣವನ್ನು ನಿಗದಿಯಾಗಿ ಉಳಿಸಿ ಮತ್ತೆ ಒಂದೆರಡು ವರ್ಷ ಕಾಲ ಕ್ಯುಮುಲೇಟಿವ್ ಖಾತೆಯಲ್ಲಿ ಹಣ ಇರಿಸಿಕೊಂಡ. ಬಳಿಕ ಅವಧಿ ಸಂದಂತೆ ಆತನ ಮೊತ್ತ ಬೆಳೆದು, ಆ ಹಣದಿಂದ ಮರದ ಕೆಲಸ ಮಾಡುವ ಡಿಪೋವನ್ನು ತೊಡಗಿದ ತಾನು ಉಳಿಸಿದ ಹಣವೇ ತನ್ನ ಸ್ವತಂತ್ರ ಜೀವನ ವೃತ್ತಿಗೆ ಕಾರಣ ಎಂಬುದು ಈಗ ಸುಬ್ಬಾಚಾರಿ ಹೇಳುವ ತೃಪ್ತಿಯ ಸೊಲ್ಲು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

೨

ರಿಜಿಸ್ಟರ್ಡ್ ಆಫೀಸು ಮಣಿಪಾಲು, ಮೈಸೂರು ರಾಜ್ಯ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O P No 4/1967

S. ನಟರಾಜನ್ ಸುಬ್ಬಣ್ಣಯ್ಯ ಶ್ರೀನಿವಾಸನ್ ಪೋತಿಯವರ ಮಗ Manager, Syndicate Bank Ltd Ilkal Branch. Bijapur Dt.

—ಅರ್ಜಿದಾರ

ಮತ್ತು

1. A. P ನಾಥ, 2. S ಜನಾರ್ದನ ರಾವ್—ಸುಬ್ಬಣ್ಣಯ್ಯ ಶ್ರೀನಿವಾಸನ್ ಪೋತಿಯವರ ಮಕ್ಕಳು, 1ನೆ ಎದ್ರಿ L I C of India, Divisional office Udipi, 2ನೇಎದ್ರಿ residing With Dr. A. N. V Giri Rohini Clinic Sadar Bazaar, Secunderabad A. P.

—ಎದ್ರಿಗಳು

ಮೇಲ್ಕಂಡ ಎದ್ರಿಗಳ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ —

ಮೇಲ್ಕಂಡ ಅರ್ಜಿದಾರ ಮತ್ತು ಎದ್ರಿರ ತಂದೆ ಮೃತ ಸುಬ್ಬಣ್ಣಯ್ಯ ಶ್ರೀನಿವಾಸನ್ ಪೋತಿಯವರ ಬಾಬ್ತು ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿರುವ ಆಸ್ತಿ ವೇಜುಗಳನ್ನು ವಸೂಲು ಪಡಿಯುವರೆ ತಾನು ಹಕ್ಕುದಾರನು ವಾರಿಸುದಾರನೆಂತಲೂ ಆ ಬಗ್ಗೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸುವಂತೆ ಸದ್ರಿ ಅರ್ಜಿದಾರನು ಅರ್ಜಿಮಾಡಿಕೊಂಡಿರುವದ್ರಿಂದ ಅದಕ್ಕೆ ಎದ್ರಿಗಳಾಗಲೀ ಯಾ ಇತರರಾಗಲೀ ಆಕ್ಷೇಪಣೆಯಿದ್ದಲ್ಲಿ ಅದನ್ನು ತಾ. 3 6—1967ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹಾಜರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

T. K Kalkur

Advocate for Petitioner

Udipi, 18—4—1967

ಹಿಂದೂತ್ವದ ಸಂರಕ್ಷಣೆ—೨

ಮದ್ರಾಸಿನಲ್ಲಿ ಸೇರಿದ ವಿದ್ವತ್ ಪರಿಷತ್ತು

ಮತಾಂತರ ಸಮಾನ ಪಾಪವೆಂಬುದಿಲ್ಲ. ಆದುದರಿಂದ ಪರಮತ ಪ್ರಚಾರಕರ ಪಾಶದಿಂದ ಹಿಂದೂಗಳನ್ನು ಬಿಡಿಸಬೇಕು.

ವರದಿಗಾರರು : ಶ್ರೀ ಶಿವಶಂಕರ.

ದಿನಾಂಕ ೨೬-೩-೬೬ (ಆದಿತ್ಯವಾರ) ಸಾಯಂಕಾಲ ಸಾರ್ವಜನಿಕ ಸಭೆಯಲ್ಲಿ ಕೆಲವು ಮಠೀಯರು ... ಧರ್ಮೋಪದೇಶ ಮಾಡಿದರು.

ವೈಷ್ಣವ ಸಂಪ್ರದಾಯದ ಶ್ರೀ ಶ್ರೀ ಅನಂತಾಚಾರ್ಯರು ಧರ್ಮಕ್ಕಾಗಿ ಮಹಾನ್ ವ್ಯಕ್ತಿಗಳು ಏನೇನು ಮಾಡಲೂ ಹಿಂಜರಿಯುವದಿಲ್ಲ. ಧರ್ಮವನ್ನು ರಕ್ಷಿಸಿದವನನ್ನು ಧರ್ಮವು ರಕ್ಷಿಸುತ್ತದೆ ಎಂಬುದಕ್ಕೆ ಉತ್ತಮ ಜೀವಂತ ಉದಾಹರಣೆಯಾಗಿ ಇದೆ ದಿನ. ಎಂದರೆ ಧರ್ಮವು ನಾಶವಾಗುತ್ತದೆಂದಲ್ಲ. ಧರ್ಮವನ್ನು ನಾಶಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಇದು ಅಧರ್ಮದ ಮೋಡದಲ್ಲಿ ಕ್ಷಣಿಕವಾಗಿ ಮರೆಯಾಗಿರುತ್ತದೆ ಅಷ್ಟೆ. ಆಗ ಅದನ್ನು ಸರಿಪಡಿಸಲು ಮಹಾನ್ ವ್ಯಕ್ತಿಗಳು, ಸಾಧುಸಂತರ ಜನನವಾಗುತ್ತದೆ. ಇಂದು ಧರ್ಮರಕ್ಷಣೆಗಾಗಿ ಏನು ಮಾಡಬೇಕೆಂಬುದನ್ನು ಕಂಡುಹಿಡಿಯಲು ವಿಶ್ವ ಹಿಂದೂ ಪರಿಷತ್ತು ವಿದ್ವತ್ ಪರಿಷತ್ತಿನ ಏರ್ಪಾಡು ಮಾಡಿರುತ್ತದೆ. ಅದಕ್ಕೆ ಜಯವಾಗಲೆಂದು ಆಶೀರ್ವದಿಸಿದರು.

ಭಾಷೆ, ಜಾತಿ ಅಂತಹ ಬಾಹ್ಯ ಭಿನ್ನತೆಯ ಪ್ರವಾಹದಲ್ಲಿ ನಾವು ಕೊಚ್ಚಿಕೊಂಡು ಹೋಗಬಾರದು. ಜ್ಞಾನ ವೇದಿಕೆಯ ಮೇಲೆ ಒಂದಾಗಬೇಕು. ಜ್ಞಾನಪ್ರಸಾರದ ಮಹಾನ್ ಕಾರ್ಯವನ್ನು ವಿಶ್ವಹಿಂದೂ ಪರಿಷತ್ತು ಕೈಗೊಂಡಿದೆಯೆಂದು ಶ್ರೀ ಕೃಷ್ಣಾನಂದ ಸ್ವಾಮಿಯವರ್ ತಮ್ಮ ಭಾಷಣದಲ್ಲಿ ತಿಳಿಸಿದರು.

ಮತಾಂತರದ ಬಗ್ಗೆ ಮಾತನಾಡುತ್ತ ಇಂದು ಭಾರತದಲ್ಲಿ ... ರದಲ್ಲಿ ಒಂದು ... ಶಾಲೆಗಳಲ್ಲಿ ಒಂದು ... ಶಾಲೆಗಳು ಕ್ರಿಸ್ತೀಯರ ಕೈಯಲ್ಲಿವೆ. ಅವರ ಮತ ಪ್ರಚಾರಕ್ಕಾಗಿ ಸಹಸ್ರಾರು ಪಾದ್ರಿಗಳು ... ಬರುತ್ತಿದ್ದಾರೆ. ಇವರುಗಳಿಗೂ ಮತಪ್ರಚಾರದ ವಿಧಾನದಲ್ಲಿ ವಿಶೇಷ ತರಬೇತಿ ಕೊಟ್ಟು ... ಹೋಗಿ ಮತಾಂತರ ಮಾಡಲು ಕಳಿಸಲಾಗುತ್ತಿದೆ. ಇಂದೂ ಮತಾಂತರಗೊಳ್ಳುತ್ತಿರುವವರ ಸಂಖ್ಯೆಗೇನೂ ಕೊರತೆ ಇಲ್ಲ. ನಾವು ಇನ್ನೂ ... ಕೊಂಡು ... ಬಹು ದೊಡ್ಡ ... ಶಾಲೆಗಳಲ್ಲಿ ಕ್ರಿಸ್ತೀಯರ ... ಬೇಕಾದೀತು. ... ಹಿಂದೂ ... ಆದುದರಿಂದ ನಾವೆಂದು ಒಂದಾಗಿ ಬೇಕಾಗಿದೆ. ದೇವರನ್ನು ... ಹೆಸರಿನಿಂದ ಕರೆದರೂ ಅದು ಒಬ್ಬ ಸರ್ವಶಕ್ತಿವಂತನಾದ ಭಗವಂತನ ನಾಮಸ್ಮರಣೆಯನ್ನು ಮಾಡುವುದೇ ಆಗಿದೆ. ಅವನು ನಮ್ಮನ್ನು ರಕ್ಷಿಸುವನು. ಇದನ್ನು ಅರಿತುಕೊಂಡಿದ್ದ ನಮ್ಮ ಪೂರ್ವಜರು ವಿಶ್ವದ ಅನೇಕ ದೇಶಗಳಿಗೆ ಹೋಗಿ ಅಲ್ಲಿಯ ಜನತೆಯ ಜೀವನ ಮಟ್ಟವನ್ನು ಮೇಲಕ್ಕೆ ಎತ್ತಿದರು. ಇಂದು ನಾವಾದರೋ ನಮ್ಮ ಬಗ್ಗೆ ಕಚ್ಚಾಡಿಕೊಳ್ಳುತ್ತಿದ್ದೇವೆ—ತಾನು ಮೇಲು, ತನ್ನ ಮತ ಮೇಲೆಂದು. ಇದರ ಕೊನೆಯಾಗಬೇಕು. ಯೋಗಿಯು ಯೋಗವು ಬಹಳ ಶ್ರೇಷ್ಠವಾದುದೆಂದು ಭಾಷಣ ಬಿಗಿಯುವುದರಲ್ಲೇ ಬಾಳನ್ನು ಕಳೆಯುವದಿಲ್ಲ. ಅವನು ಸಾಮಾನ್ಯ ಮಾನವನನ್ನು ಕ್ರಮಶಃ ಯೋಗಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುವನು. ಹಾಗೆಯೇ ಈ ಪರಿಷತ್ತು ಕೂಡಾ ಹಿಂದೂಗಳ ಒಗ್ಗಟ್ಟಿಗಾಗಿ ಶ್ರಮಿಸುತ್ತಿದೆ. ನಮ್ಮ ಆಚಾರ್ಯರು, ಆಳ್ವಾರರು, ನಾಯನ್ಮಾರ್‌ಗಳು ಭಿನ್ನತೆಯ ಕುರಿತು ಬೋಧಿಸಲಿಲ್ಲ. ಅವರು ದೇವರನ್ನು ಶಿವನೆಂದೂ ವಿಷ್ಣುವೆಂದೂ ಕರೆದರು. ಹಿಂದೂ ಧರ್ಮದ ತತ್ವಗಳನ್ನು ತಿಳಿಸಲಿಕ್ಕಾಗಿ ... ಪ್ರಯತ್ನಿಸುತ್ತಿದೆ. ನಮ್ಮ ವಿವಿಧ ಸಂಪ್ರದಾಯದ ಪರಂಪರೆಗಳು ವಿಶ್ವಹಿಂದೂ ಪರಿಷತ್ತಿನ ಸಾಗರದಲ್ಲಿ ಒಂದಾಗಿ, ಹಿಂದೂಗಳ ಒಗ್ಗಟ್ಟಿಗಾಗಿ, ಪ್ರಗತಿಗಾಗಿ ಪ್ರಯತ್ನಿಸಬೇಕೆಂದು ಶ್ರೀ ಅಣ್ಣಂಗರಾಚಾರ್ಯರು ತಮ್ಮ ಭಾಷಣದಲ್ಲಿ ಕೇಳಿಕೊಂಡರು.

ಇಲ್ಲಿ ಆಚಾರ್ಯರು, ವಿದ್ವಾಂಸರು, ಸಾಧು ಸನ್ಯಾಸಿಗಳು ಸೇರಿರುವರು. ಅವರು ತಮ್ಮ ಜೀವನವನ್ನು ಧ್ಯಾನ ಹಾಗೂ ಸಾಧನೆಗಾಗಿ ಮುಡಿಪಾಗಿಟ್ಟವರು. ಧರ್ಮದ ಕುರಿತು ವಿವರಣೆಯನ್ನೀಯುವ ಅರ್ಹತೆ ಅವರಿಗಿದೆ. ನಾನಾದರೋ ದೇಶಪರ್ಯಟನದಲ್ಲೇ ಇರುವದರಿಂದ ದೇಶಕ್ಕೆ ಹಾಗೂ ಧರ್ಮಕ್ಕೆ ಬಂದಿರುವ ಆಪತ್ತಿನ ಕುರಿತು ಮಾತ್ರ ಹೇಳಬಲ್ಲೆನೆಂದು ಹೇಳಿದ ಶ್ರೀ ಮಾಧವ ಸದಾಶಿವ ಗೋಳ್ವಲ್ಕರ್ ರವರು ವಿಶ್ವಹಿಂದೂ ಪರಿಷತ್ತಿನ ಆರಂಭದ ಕುರಿತು ತಿಳಿಸಿದರು. ಮೂರು ವರ್ಷಗಳ ಹಿಂದೆ ವಿಶ್ವಹಿಂದೂ ಪರಿಷತ್ತು ಜನ್ಮ ತಳೆದಿರುತ್ತದೆ. ಪೂರ್ಣ ಕುಂಭಮೇಳದ ಸಮಯ ಸಮ್ಮೇಳನ ಕರೆಯಬೇಕೆಂದು ಆಗ ನಿರ್ಣಯಿಸಲಾಯಿತು. ಅಂತೆಯೇ ಅದರ ಪ್ರಧಾನ ಕಾರ್ಯದರ್ಶಿ ಶ್ರೀ ಶಿ. ಶಂ. ಆಪ್ಟೆಯವರು ಮಠಾಧಿಪತಿಗಳನ್ನು, ವಿದ್ವಾಂಸರನ್ನು ಭೇಟಿಕೊಂಡು ಆಶೀರ್ವಾದ ಪಡೆದರು ಮತ್ತು ಸಮ್ಮೇಳನ ನಡೆಸುವದರಲ್ಲಿ ವಿಜಯಿಯಾದರು. ಹರ್ಷವರ್ಧನನ ಕಾಲದಲ್ಲಿ ನಡೆದ ಸ್ಥಳದಲ್ಲಿ ಅಂತಹ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ನಮ್ಮ ಧರ್ಮದ ವಿವಿಧ ಸಂಪ್ರದಾಯಗಳ ಮುಖಂಡರೂ ಇತರ ಧರ್ಮ ವಿದ್ವಾಂಸರೂ, ಧಾರ್ಮಿಕ ಮುಂದಾಳುಗಳೂ ಭಾಗವಹಿಸಿದ್ದು, ಹಿಂದೂಗಳ ಒಗ್ಗಟ್ಟಿಗಾಗಿ ಶ್ರಮಿಸುವದಾಗಿ ನಿರ್ಣಯಕ್ಕೆ ಬಂದಿರುವರು. ಅದರಲ್ಲೇನೂ ಅವರಿಗೆ ಕಷ್ಟಕಂಡು ಬರಲಿಲ್ಲ. ಅದಕ್ಕೆ ಕಾರಣವೆಂದರೆ ನಮ್ಮ ಧರ್ಮ ಹಾಗೂ ಪರಂಪರೆ ಅಂತಹದ್ದು. ಅದು ಸಾಧಾರಣದ್ದು ಅಥವಾ ಕೇವಲಗತಿಯದ್ದಿರುವದಿಲ್ಲ. ನಾವು ಮಹಾನ್ ಧರ್ಮದ ಅಂಗಗಳೆಂಬುದೊಂದು ಹೆಮ್ಮೆಯ ವಿಷಯವಿದೆ. ಆದರೆ ಅದನ್ನು ಮರೆತು ಬಿಟ್ಟು ನಾವು ಕಚ್ಚಾಡಿಕೊಳ್ಳಲಾರಂಭಿಸಿದುದೇ ನಮ್ಮ ಪತನದ ಕಾರಣವಿದೆ. ನಾವಿಂದು ನಮ್ಮ ಭ್ರಾತೃಗಳನ್ನೇ ನಮ್ಮ ಸ್ವದೇಶ ಬಾಂಧವರೆಂದು ಒಪ್ಪಿಕೊಳ್ಳುತ್ತಿಲ್ಲ. ಅದಕ್ಕೆ ಉದಾಹರಣೆ ಎಂದರೆ ಅಸ್ಸಾಂ. ... ದೇ ಆ ರೀತಿ ಇದೆ. ಎಲ್ಲವೂ ಅಲ್ಲಿ ಅನುಭವವಾಗಿದೆ. ಅಲ್ಲಿ ಗುಡ್ಡಗಾಡುಗಳಲ್ಲಿರುವ ಜನರನ್ನು ಬಯಲಿನಲ್ಲಿರುವ ಜನರೊಂದಿಗೆ ಸೇರಲು ಬ್ರಿಟಿಷರು ಬಿಡದೆ ಇದ್ದರು. ಅವರನ್ನು ಪ್ರತ್ಯೇಕ ಜನಾಂಗವೆಂದೇ ಬ್ರಿಟಿಷರು ಕರೆಯುತ್ತಿದ್ದರು. ಹಾಗೆಯೇ ಉತ್ತರ ಪ್ರದೇಶ, ಮಧ್ಯಪ್ರದೇಶಗಳಲ್ಲಿರುವ ಕೆಲ ಜನರನ್ನು ಆದಿವಾಸಿಗಳೆಂಬ ಹೆಸರಿನಿಂದ ಪ್ರತ್ಯೇಕಿಸಿದರು. ಅವರು ಆದಿವಾಸಿಗಳೆಂದಾದಲ್ಲಿ ಇತರರೆಲ್ಲರೂ ಅಲ್ಲಿಗೆ ಆಕ್ರಮಣಕಾರರೇ? ಹರಿ ಈ ರೀತಿ ಅವರನ್ನು ಪ್ರತ್ಯೇಕವಾಗಿಡಲು ಕಾರಣವೇನೆಂದು ಆಂಗ್ಲರೂ ಇತರ ಕ್ರಿಸ್ತೀಯರು ಕೂಡ ... ಹೇಳುತ್ತಿದ್ದರು. ಈ ನಾಗಾಗಳು ಹಾಗೂ 'ಆದಿವಾಸಿ'ಗಳು ಕಲ್ಲು, ಸರ್ಪ ಹಾಗೂ ಮರಗಳನ್ನು ಪೂಜಿಸುತ್ತಾರೆ. ಆದುದರಿಂದ ಅವರು ಹಿಂದೂಗಳಲ್ಲವೆಂಬ ಅಪಪ್ರಚಾರವನ್ನು ಅವರು ನಡೆಸಿದರು. ನಾವು ಅದಕ್ಕೆ ಬಲಿಯಾದೆವು. ಅದರ ಪರಿಣಾಮವಾಗಿ ಕ್ರಿಸ್ತೀಯರು ಅವರಿದ್ದಲ್ಲಿಗೆ ಹೋಗಿ ತಮ್ಮ ಮತಕ್ಕೆ ಸೇರಿಸಿಕೊಂಡು ಅವರನ್ನು ಪ್ರತ್ಯೇಕ ಜಾತಿಯನ್ನಾಗಿ ಮಾಡಿದರು. ಇಂದು ದಂಗೆಯ ಸಮಾಚಾರ ಬರುತ್ತಿರುವದು ಅದೇ ಸ್ಥಳಗಳಿಂದ. ಅವರನ್ನು ಇಂದು ಎತ್ತಿಕಟ್ಟಲಾಗುತ್ತಿದೆ. ಹಾಗೆ ಗಲಾಟೆ ನಡೆಸುತ್ತಿರುವವರು ಮತಾಂತರಗೊಂಡ ಕ್ರಿಸ್ತೀಯರೇ ಇದ್ದಾರೆ. ಅಸ್ಸಾಮಿನ ಖಾಸಿ ಜಿಲ್ಲೆಯಲ್ಲಿ ಮತಾಂತರಗೊಂಡವರ ಸಂಖ್ಯೆ ಅಧಿಕವಿಲ್ಲವಾದರೂ, ಈ ಹಿಡಿ ಜನರೇ ಗಲಾಟೆ ನಡೆಸುತ್ತಿದ್ದಾರೆ. ಅವರು ಪ್ರತ್ಯೇಕ ದೇಶವನ್ನೇ ಕೇಳುತ್ತಿದ್ದಾರೆ. ಈ ವಿಷಯವನ್ನು ನೇರವಾಗಿ ಪ್ರಧಾನಿ ಅವರಿಗೆ ತಿಳಿಸಿರುವರು. ಮತ್ತು ಅದನ್ನು ನಡೆಸಲಿಕ್ಕಾಗಿ ಗಲಾಟೆ ಮಾಡುತ್ತಿದ್ದಾರೆ. ಕ್ರಿಸ್ತೀಯ ಮತ ಪ್ರಸಾರಕರ ಸಂಪೂರ್ಣ ಬೆಂಬಲ ಇರುವದೇ ಇದಕ್ಕೆ ಕಾರಣವಿದೆ. ಹಾಗಿದ್ದರೂ ದುರದೃಷ್ಟವಶಾತ್, ನಮ್ಮ ಸರಕಾರ ಎಚ್ಚೆತ್ತಿರುವದಿಲ್ಲ. ಇದು ಬ್ರಿಟಿಷರ ಬೂಟುಗಳಲ್ಲೇ ಕಾಲುಗಳನ್ನು ಹಾಕಿಕೊಂಡಿದೆ. ನಮ್ಮಲ್ಲೇ ಆದ ಸರಕಾರ ಗುಡ್ಡಗಾಡುಗಳಲ್ಲಿರುವ ನಮ್ಮ ಸ್ವದೇಶಬಾಂಧವರನ್ನು ಹಿಂದೂಗಳೆಂದು ಪರಿಗಣಿಸುವದಿಲ್ಲ. ಈ ವಿಷಯದ ಕುರಿತು ನಾನು ಗೃಹಮಂತ್ರಿಗಳ ಬಳಿಯೂ ಕೇಳಿದ್ದೇನೆ. ಅವರನ್ನು ಹಿಂದೂಗಳೆನ್ನದೆ ವನವಾಸಿಗಳೆಂದೇಕೆ ಕರೆಯುವದೆಂದು ನಾನು ಗೃಹಮಂತ್ರಿಗಳನ್ನು ಕೇಳಿದೆ. ಅದಕ್ಕೆ ಅವರು ಆ ಜನರು ಮರಗಳನ್ನು, ಕಲ್ಲುಗಳನ್ನು ಹಾಗೂ ಸರ್ಪಗಳನ್ನು ಪೂಜಿಸುತ್ತಿರುವದೇ ಕಾರಣವೆಂದರು. ಆಗ ನಾವು ತುಳಸಿ ನಮ್ಮ ಪವಿತ್ರ ಗಿಡವೆಂದು ಪೂಜಿಸುವದಿಲ್ಲವೇ? ಅಶ್ವತ್ಥ ವೃಕ್ಷವನ್ನು ಪೂಜಿಸುವದಿಲ್ಲವೇ? ... ಎಂದು ಪೂಜಿಸುವದಿಲ್ಲವೇ? ಹನುಮಂತನನ್ನು ಪವಿತ್ರ ಮಂಗನೆಂದು ಪೂಜಿಸುವದಿಲ್ಲವೇ? ಸುಬ್ರಹ್ಮಣ್ಯನೊಂದಿಗೆ ಸರ್ಪಕ್ಕೂ ಪೂಜೆ ನಡೆಯುತ್ತದಲ್ಲವೇನೆಂದು ಅವರನ್ನು ನಾನು ಕೇಳಿದೆ. ಅದಕ್ಕೆ ಅವರಿಂದ ಉತ್ತರವೇನೂ ಬರಲಿಲ್ಲ. ಅವರನ್ನು ಹಿಂದೂಗಳೆಂದೇ ಕರೆಯಬೇಕೆಂದು ನಾನು ಕೇಳಿಕೊಂಡೆನು. ಹಾಗೆ ಮಾಡುವದರಿಂದ ಆ ಸ್ಥಳದಲ್ಲಿ ಹಿಂದೂಗಳ ಸಂಖ್ಯೆ ಹೆಚ್ಚಾಗಿ, ಕ್ರಿಸ್ತೀಯರು ಅಲ್ಪಸಂಖ್ಯಾತರಾಗುತ್ತಾರೆ. ಆಗ ಅವರ ಬೇಡಿಕೆ ಬೇಕಾಗಿಲ್ಲವೆಂದು ಹೇಳಿದೆ. ಹೀಗಿದ್ದರೂ ನಮ್ಮ ಸರಕಾರವು ಅವರಿಗೆ ಪ್ರತ್ಯೇಕ ರಾಜ್ಯದ ಆಸೆ ತೋರಿಸುತ್ತಿದ್ದಲ್ಲದೆ, ಪ್ರತ್ಯೇಕ ಆಗುವ ಹಕ್ಕನ್ನೂ ನೀಡುವ ಆಶ್ವಾಸನೆಯನ್ನೀಯುತ್ತಿದೆ. ನಮ್ಮ ದೇಶದ ಭೂಪಟದಿಂದ ಅಸ್ಸಾಮನ್ನು ಅಳಿಸಿ ಬಿಡಲು ನಾವು ನಿರ್ಧರಿಸಿರುವೆವೇ? ಈಗಿನ ದುಸ್ಥಿತಿ ಮುಂದುವರಿದಲ್ಲಿ ಆ ದುರ್ದಿನವೂ ಬಂದೀತು.

ಬ್ರಹ್ಮಪುತ್ರ ಕಣಿವೆಯಲ್ಲಿ ಒಂದು ಚಿಕ್ಕ ಭೂಪ್ರದೇಶವಿದೆ. ಅದರಲ್ಲಿ ಆದಾಗಲೇ ಪೂರ್ವ ಬಂಗಾಲದಿಂದ ಬಹು ಸಂಖ್ಯೆಯಲ್ಲಿ ಮುಸ್ಲಿಮರು ಕಳ್ಳತನದಿಂದ ಬಂದು ಬೀಡು ಬಿಟ್ಟಿದ್ದಾರೆ. ಈಗ ಅಲ್ಲಿ ಹಿಂದೂಗಳು ಅಲ್ಪ ಸಂಖ್ಯಾತರಾಗಿರುವರು. ಇನ್ನು ಕೆಲವೇ ದಿನಗಳಲ್ಲಿ ಅವರು ತಾವು ಪಾಕಿಸ್ತಾನದೊಂದಿಗೆ (ಪೂರ್ವ ಬಂಗಾಲದೊಂದಿಗೆ) ಸೇರುವದಾಗಿ ಸಾರಿದರೂ ಆಶ್ಚರ್ಯವೇನೂ ಇಲ್ಲ. ಪೂರ್ವ ಬಂಗಾಲದ ಗಡಿಯಲ್ಲಿಂತೂ ಪಾಕಿಸ್ತಾನ ಸೈನ್ಯ ಭಾರೀ ಸಂಖ್ಯೆಯಲ್ಲಿ ಜಮಾಯಿಸಿದೆ. ಸಿಕ್ಕಿಮಿನ ಗಡಿಯಲ್ಲಿ ಚೀನಿಗಳು ಬೀಡು ಬಿಟ್ಟಿದ್ದಾರೆ. ಭಾರತದೊಂದಿನ ಬಾಂಧವ್ಯವನ್ನು ಕಡಿದುಕೊಳ್ಳಲು ಸಿಕ್ಕಿಂ ರಾಜನಿಗೆ ಅವನ ಅಮೇರಿಕನ್ ಹೆಂಡತಿ ಹೇಳಿಕೊಡುತ್ತಿದ್ದಾಳೆ. ಈಗ ಅಸ್ಸಾಂ ಅದರಿಂದ ... ಆವರಣದಲ್ಲಿದೆಯೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಇನ್ನು ದಕ್ಷಿಣಖಂಡದ ಸಮಸ್ಯೆಯೂ ಇದೆ. ಕ್ರಿಸ್ತೀಯರು ಅಲ್ಲಿ ತಮ್ಮ ಮತದ ಹೆಸರಿನಿಂದ ಅಲ್ಲಿಗೆ ಹೋಗಿ ಇಂತಹ ಕಾರುಬಾರುಗಳನ್ನೆಂಟ ಮಾಡುತ್ತಾರೆ. ನಾವಾದರೋ ನಮ್ಮ ಕರ್ತವ್ಯದ ಕಡೆಗೆ ಒಗೊಡದೆ ಸುಮ್ಮನಿದ್ದೇವೆ. ಇನ್ನು ಮುಂದಕ್ಕೂ ಇದೇ ರೀತಿ ಅಲಕ್ಷ್ಯಭಾವದಿಂದಿದ್ದು ನಮ್ಮ ದೇಶದ ಒಂದೊಂದೇ ಭಾಗವನ್ನು ಕಳೆದುಕೊಳ್ಳುತ್ತಾ ಇರೋಣವೇ?

ಆದಿಲ್ಲ—ನಾವು ಭಾರತದ ರಕ್ಷಣೆಗಾಗಿ ಕಾರ್ಯಪರರಾಗಿದ್ದೇವೆಂದರೆ ಎಲ್ಲರೂ ಒಂದಾಗಬೇಕು. ಕಲಿಯುಗದಲ್ಲಂತೂ ಸಂಘವೇ ಶಕ್ತಿ. ಇಲ್ಲವಾದಲ್ಲಿ ವಿನಾಶ ನಮಗಾಗಿ ಕಾದಿದೆ.

ಅಸ್ಸಾಮಿನಲ್ಲಿ ಶ್ರೀ ಚೈತನ್ಯ ಮಹಾಪ್ರಭುವಿನ ವೈಷ್ಣವ ಸಂಪ್ರದಾಯವಿದೆ. ಅದರ ಸುಮಾರು ಆರ್ನೂರು ಶಾಖೆಗಳು ಅಲ್ಲಿವೆ. ಅದರ ಪ್ರಮುಖರಿಗೆ ಗೋಸ್ವಾಮಿಗಳು ಅಥವಾ ಚಕ್ರಧಾರಿಗಳೆನ್ನಲಾಗುತ್ತದೆ. ಈ ಆರ್ನೂರು ಶಾಖೆಗಳ ಪ್ರಮುಖರು ಸುಮಾರು ನಾನ್ನೂರು ವರ್ಷಗಳಲ್ಲಿ ಒಂದಾಗಿ ಕಲೆತಿರುವದಿಲ್ಲ. ವನವಾಸಿಗಳಲ್ಲೂ ವೈಷ್ಣವ ಸಂಪ್ರದಾಯದವರಿದ್ದಾರೆ. ಅವರನ್ನು ಯಾವ ಗೋಸ್ವಾಮಿಯೂ ಕಾಣುವದೇ ಇಲ್ಲ. ಯಾವಾಗಲಾದರೊಮ್ಮೆ ಕಾಣಲು ಹೋದಲ್ಲಿ ಅದು ಗುರುದಕ್ಷಿಣೆಗಾಗಿ ಮಾತ್ರ. ಹಾಗಿದ್ದರೂ ವಿಶ್ವ ಹಿಂದೂ ಪರಿಷತ್ತು ಅವರನ್ನು ಗೋಹಾಟಿಯಲ್ಲಿ ಒಂದುಗೂಡಿಸಿತು—ಇದು ದಯಾಮಯ ದೇವರ ಕೃಪೆಯಿಂದ ಸಾಧ್ಯವಾಯಿತು. ಈ ಸ್ಥಳಗಳೆಲ್ಲಾ ಕ್ರಿಸ್ತೀಯ ಮತಪ್ರಸಾರಕರ ಪ್ರವಾಹಕ್ಕೆ ಒಳಗಾಗಿವೆ. ದಕ್ಷಿಣದಲ್ಲೂ ಈ ಪ್ರವಾಹ ಇದ್ದೇ ಇದೆ. ಇಲ್ಲಿಯ ಜನರು ಈ ಮತಪ್ರಸಾರಕರನ್ನು ಹೊಗಳುತ್ತಿದ್ದಾರೆ. ಈ ಮತಪ್ರಸಾರಕರು ಸಮಾಜಸೇವೆ ಮಾಡುತ್ತಾರಾದ ಕಾರಣ ನಾವು ಅವರಿಗೆ ಋಣಿಗಳಾಗಿದ್ದೇವಂತೆ! ನಾವು ಅವರಿಗೇನಾದರೂ ಬದಲಿಗೆ ಕೊಡದಿರುತ್ತಿದ್ದಲ್ಲಿ ಒಂದು ವೇಳೆ ಋಣಿಗಳಾಗಿದ್ದೇವೆನ್ನಬಹುದು. ನಮ್ಮ ಧರ್ಮದಿಂದ ಲಕ್ಷಾವಲಕ್ಷ ಬಾಂಧವರು ಕೇವಲ ತುಣುಕು ರೊಟ್ಟಿಯ ಮೋಹದಿಂದ ಅಮೂಲ್ಯ ವಸ್ತುವಿಗೆ ತಿಲಾಂಜಲಿ ಇತ್ತು ಅವರ ಮಡಿಲಿಗೆ ಹೋಗುತ್ತಿದ್ದಾರೆ. ನಿಜವಾಗಿ ನಾವು ಅವರಿಗೆ ಋಣಿಗಳಾಗಿರಬೇಕೇ? ಅಥವಾ ಅವರು ನಮಗೆ ಋಣಿಗಳಾಗಿರಬೇಕೇ? ನಮ್ಮ ದೇಶಕ್ಕಾಗಿ, ನಮ್ಮ ಜನತೆಗಾಗಿ ನಾವು ಶ್ರಮಿಸದಿದ್ದಲ್ಲಿ ಅದು ನಮ್ಮದೇ ತಪ್ಪು ಇದು.

ಐವತ್ತು—ಅರುವತ್ತು ವರ್ಷಗಳ ಹಿಂದೆ ಕ್ರಿಸ್ತೀಯರ ಒಂದು ಮಹಾ ಸಮ್ಮೇಳನ ಜರಗಿತ್ತು. ಅದರಲ್ಲಿ ಭಾರತವನ್ನು ಕ್ರಿಸ್ತೀಯ ರಾಷ್ಟ್ರವನ್ನಾಗಿ ಮಾರ್ಪಡಿಸಬೇಕೆಂಬ ತೀರ್ಮಾನವಾಗಿದೆ. ಅದಕ್ಕಾಗಿ ಇಂದೂ ನೂರಾರು ಮತಪ್ರಚಾರಕರು ಅನ್ಯಾನ್ಯ ದೇಶಗಳಿಂದ ಬರುತ್ತಿದ್ದಾರೆ.

ಮತಪ್ರಸಾರಕರು ಶಾಲಾಶಾಲೆಗಳಿಗೆ ಹೋಗಿ ವಿದ್ಯಾರ್ಥಿಗಳ ಬಳಿ ಮಾತನಾಡಿದರು. ದೇಶ, ಅದು, ಇದು, ಬಟ್ಟೆ ವಗ್ಯರೆಗಳ ಕುರಿತು ನಯಭಾಷೆಯಿಂದ ಮಾತಾಡಿ ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡ[illegible] ಅವರಿಗೆ ಮತೀಯ ಮದಿರೆಯನ್ನು ಕುಡಿಸಿಬಿಟ್ಟರು ಮತ್ತು ಮತಪ್ರಸಾರಕ್ಕಾಗಿ ಬೇರೆ ಬೇರೆ ಕಡೆಗಳಿಗೆ ಕರೆದುಕೊಂಡು ಹೋದರು. ಆಗ ಅವರನ್ನು ಅವರ ತಾಯಿ- ತಂದೆಯರು ತಡೆಯುವ ಪ್ರಯತ್ನ ಮಾಡಲಿಲ್ಲ. ಆದೇ ತಾಯಿ—ತಂದೆಯರು ತಮ್ಮ ಮಕ್ಕಳು ತಮ್ಮ ಧರ್ಮದ ಮನೋಪದೇಶಕ್ಕೆ ಮುಂದೆ ಬಂದಲ್ಲಿ ತಡೆಯುತ್ತಿದ್ದರು! ನಮ್ಮ ದೇಶವನ್ನು ತ್ಯಾಗಭೂಮಿ ಎಂದೂ ಆಂಗ್ಲೇಯರ ದೇಶಗಳನ್ನು ಭೋಗಭೂಮಿಯೆಂದೂ ಕರೆಯಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ತನ್ನ ಮಕ್ಕಳು ತಮ್ಮ ಸಮಾಜಸೇವೆಗಾಗಿ ಮುಂದೆ ಬಂದಾಗ ತಾಯಿ ತಂದೆಯರು ಅಳುತ್ತಾರೆ! ಅದೇ ಭೋಗಭೂಮಿಯಿಂದ ನೂರಾರು ಜನರು ಇಲ್ಲಿಗೆ ಬರುತ್ತಿದ್ದಾರೆ! ಇಂತಹ ಪರಿಸ್ಥಿತಿಯಲ್ಲಿ ಸಮಾಜಸೇವೆ, ದೇಶಸೇವೆ ಮಾಡಬೇಕೆಂದಿದ್ದಲ್ಲಿ ಬಾಹ್ಯ ಆಕರ್ಷಣೆಗಳತ್ತ ಗಮನ ಕೊಡದೆ ಮುಂದಕ್ಕೆ ಬರಬೇಕು. ನಮಗೆ, ಹಿಂದೂಗಳಿಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆ. ಆದುದರಿಂದ ಈ ಜನ್ಮದಲ್ಲಿ ದೇಶಸೇವೆ, ಸಮಾಜಸೇವೆ ಮಾಡೋಣ. ಸುಖ ಅನುಭವಿಸಲಂತೂ ಮುಂದಿನ ಜನ್ಮ ಇದ್ದೇ ಇದೆ.

ಸಮಾಜದತ್ತ ಅಲಕ್ಷ್ಯಭಾವದಿಂದ ನಾವಿರುವ ಸಮಯದಲ್ಲಿ ಪೂರ್ತಿ ಬಿಹಾರಿನಲ್ಲಿ ಭೀಕರ ಕ್ಷಾಮವು ತಲೆದೋರಿರುತ್ತದೆ. ಅಲ್ಲಿಯ ನಮ್ಮ ಸ್ವದೇಶ ಬಾಂಧವರಿಗೆ ನಾವು ಸಂಪೂರ್ಣ ಕಷ್ಟನಿವಾರಣೆಯ ದೃಷ್ಟಿಯಿಂದ ಏನೂ ಮಾಡಿರುವದಿಲ್ಲ. ಅಲ್ಲದೆ ಕಳುಹಿಸಲ್ಪಟ್ಟ ಸಾಮಗ್ರಿಗಳನ್ನು ಸರಿಯಾದ ರೀತಿಯಲ್ಲಿ ತಲುಪಿಸಿರುವದಿಲ್ಲ. ಅಲ್ಲಿಯವರೆಗೆ ತಮ್ಮ ನೈತಿಕ ಪತನದ ಎಲ್ಲೆ ಇದೆ. ಶ್ರೀ ಜಯಪ್ರಕಾಶ ನಾರಾಯಣರು ಕೂಡಾ ಇದೇ ವಿಷಯವನ್ನು ಹೇಳಿರುವರು. ಇಂದು ಉದರಭರಣಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಳ್ಳುವ ಹಕ್ಕು ಇದೆಯೆಂದು ಶಾಸ್ತ್ರಗಳು ಹೇಳುತ್ತಿವೆಯಾದರೂ ಇಂದು ನಡೆಯುತ್ತಿರುವದೇನು? ಇದನ್ನು ಹೋಗಲಾಡಿಸಿ, ಹಿಂದೂಗಳನ್ನು ಒಂದುಗೂಡಿಸುವ ಮತ್ತು ಜನತೆಯಲ್ಲಿ ಸಾಮಾಜಿಕ ಪ್ರಜ್ಞೆ ಬರಿಸುವ ಮಹಾನ್ ಕಾರ್ಯಪಥದಲ್ಲಿ ಎಚ್ಚರದಿಂದ ಪರಿಷತ್ ಮುನ್ನಡೆಯುತ್ತಿರುವದೆಂದು ಶ್ರೀಯುತರು ತಿಳಿಸಿದರು.

ಪ್ರಯಾಗ ತೀರ್ಥಕ್ಷೇತ್ರದಲ್ಲಿ ಮೂರು ಪವಿತ್ರ ನದಿಗಳ ಸಂಗಮವಾಗುತ್ತದೆ. ಇಲ್ಲಿ ಇಂದು ಹಲವಾರು ಸಂಪ್ರದಾಯದ ಆಚಾರ್ಯರ ಸಂಗಮವಾದದ್ದೆಂದು ದ್ವಾರಕಾ ಪೀಠದ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರು ತಿಳಿಸಿ, ಕೆಲವೇ ದಿನಗಳ ಹಿಂದೆ ಅಸ್ಸಾಮಿನಲ್ಲಿ ವಿಶ್ವಹಿಂದೂ ಪರಿಷತ್ತಿನ ಪ್ರಾಂತೀಯ ಸಮ್ಮೇಳನ ನಡೆದುದರ ವಿಷಯವನ್ನು ಹೇಳಿದರು. ತಮ್ಮ ಮತಾನುಯಾಯಿಗಳಲ್ಲದೆ ಇರುವವರಿಗೆ ಮುಕ್ತಿ ಇಲ್ಲವೆಂದು ಕ್ರಿಸ್ತೀಯ ಮತಗಳು ಹೇಳುತ್ತಿವೆ. ಹಾಗೆಯೇ ತಮ್ಮ ಮತಾನುಯಾಯಿಗಳಲ್ಲದ ಇತರರು ಕಾಫಿರರೆಂದೂ ಅವರು ಶಾಶ್ವತ ನರಕಕ್ಕೆ ಹೋಗುವರೆಂದು ಮಹಮ್ಮದೀಯ ಮತಗಳು ಹೇಳುತ್ತಿವೆ. ಆದರೆ ಹಿಂದೂ ಧರ್ಮ ಆ ರೀತಿ ಇಲ್ಲ. ನಮ್ಮ ಧರ್ಮದಲ್ಲಿ ಹಿಂದೆ ಹಲವಾರು ಮಹಾನ್ ಪುರುಷರು ಉಗ್ರ ತಪಸ್ಸನ್ನಾಚರಿಸುತ್ತಿದ್ದರು. ಮತ್ತು ವರ ಪಡೆಯುತ್ತಿದ್ದರು. ಇವರು ವರ ಬೇಡುವಾಗ ತನಗೇನೂ ಬೇಡದೆ ಸರ್ವಜನರ ಸುಖಕ್ಕಾಗಿ ವರ ಬೇಡುತ್ತಿದ್ದರು. ಹೀಗಿದ್ದರೂ ಇಂದು ನಾವೇಕೆ ಈ ದುಃಸ್ಥಿತಿಯಲ್ಲಿದ್ದೇವೆ? ಇದಕ್ಕೆ ಒಂದು ಕಾರಣವೆಂದರೆ ಜನತೆಯೊಳಗಿರುವ ಬಿಕ್ಕಟ್ಟು. ಸಾಧಾರಣ ಒಂದು ಸಹಸ್ರ ವರ್ಷಗಳಲ್ಲಿ ಯಾರೂ ಈ ವಿಶಾಲ ಸಮಾಜವನ್ನು ಒಂದುಗೂಡಿಸುವ [illegible]ರಿ ಮಾಡಿರಲಿಲ್ಲ. ಇಂದು ವಿಶ್ವಹಿಂದೂ ಪರಿಷತ್ತು ಆ ದಿಕ್ಕಿನಲ್ಲಿ ಕಾಲಿಟ್ಟಿದೆ. ಇನ್ನೊಂದು ಕಾರಣವು ಇಲ್ಲಿನ ಸರಕಾರವಿದೆ. ಕ್ರಿಸ್ತರ ಗುರು ಪೋಪ್ ಬಂದಾಗ ಈ ಸರಕಾರವು ದಿಲ್ಲಿಯಿಂದ ಬೊಂಬಾಯಿಗೆ ಧಾವಿಸಿ ಬಂತು. ಆದರೆ ಹಿಂದೂ ಧರ್ಮದ ಮಠಾಚಾರ್ಯರು ದಿಲ್ಲಿಗೆ ಹೋಗಿ ಸರಕಾರದ ಬಳಿ ಗೋಹತ್ಯೆ [illegible] ಪ್ರತಿಬಂಧಿಸಬೇಕೆಂದು ಕೇಳಿಕೊಂಡಾಗ ಅವರನ್ನು ಗುಂಡುಗಳಿಂದ ಸತ್ಕರಿಸಲಾಯಿತು. ಇದು ಇಲ್ಲಿಯ ಸೆಕ್ಯೂಲರ್ ಸರಕಾರದ ಗುಣ. ಹೀಗೆ, ಇಂದು ನಾವು ಸಮಾಜವನ್ನು ಏಕತೆಯ ದಾರದಲ್ಲಿ ಪೋಣಿಸುವ ಮಹಾನ್ ಕಾರ್ಯವನ್ನು ಮಾಡಬೇಕಾಗಿದ್ದು, ಅದಕ್ಕಾಗಿ ವಿಶ್ವ ಹಿಂದೂ ಪರಿಷತ್ತಿನ ಸ್ಥಾಪನೆಯಾಗಿದೆಯೆಂದು ಸ್ಪಷ್ಟಪಡಿಸಿದರು.

ವಂದೇ ಮಾತರಂ...ಗೀತೆಯೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು. ಕಳೆದ ವರ್ಷ ಪ್ರಯಾಗ ಪವಿತ್ರಕ್ಷೇತ್ರದಲ್ಲಿ ನೆರೆದ್ದ ವಿಶ್ವಹಿಂದೂ ಪರಿಷತ್ತಿನ ಕಾರ್ಯಕಲಾಪಗಳ ಹಾಗೂ ಉಡುಪಿ ದೇವಸ್ಥಾನದ ಉತ್ಸವಗಳ ಕುರಿತಾದ ಚಲಚ್ಚಿತ್ರವನ್ನು ಅಂದು ರಾತ್ರಿ ಅಲ್ಲೇ ಪ್ರದರ್ಶಿಸಲಾಯಿತು.

(ಮುಂದುವರಿಯುವುದು)

ವಿವೇಚನೆ

ವಿದ್ಯಾರ್ಥಿಗಳಲ್ಲಿ ಅಶಿಸ್ತು ಮತ್ತು ಪರಿಹಾರ

ಬರೆದವರು ಶ್ರೀ ಮ. ಗೋ. ರಾವ್

ಮಾನವನ ಬಾಳಿನಲ್ಲಿ ವಿದ್ಯಾರ್ಥಿ ಜೀವನವು ಅತ್ಯಂತ ಅಮೂಲ್ಯವಾದ ಒಂದು ಘಟ್ಟ. ವಿದ್ಯೆಯೇ ಮಾನವನ ಸಕಲ ಸಂಪತ್ತು. 'ವಿದ್ಯಾ ವಿಹೀನಂ ಪಶು ಸಮಾನಂ' ಎಂದು ಪ್ರಾಜ್ಞರು ಉದ್ಘೋಷಿಸಿದ್ದಾರೆ. ಇಂದಿನ ಸಮಾಜದಲ್ಲಿ ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು, ಗುರುಭಕ್ತಿ, ವಿದ್ಯಾಭಿಮಾನ ಇತ್ಯಾದಿಗಳು ಕುಂದುತ್ತಾ ಬರುವುದನ್ನು ದೈನಂದಿನ ನಾವು ಕಾಣುತ್ತಿದ್ದೇವೆ. ಒಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಅಶಿಸ್ತು, ಅನೀತಿ, ಅನಾಚಾರ, ದುರ್ವರ್ತನೆಗಳು ಬೇರುಬಿಟ್ಟಿವೆ. ಇದು ಕೆಲವು ವಿದ್ಯಾರ್ಥಿಗಳಲ್ಲಿ ಮಾತ್ರ ಕಾಣಬರುವ ವಿಚಾರ.

ವಿದ್ಯಾರ್ಥಿಯ ಪೋಷಣೆಯ ಹೊಣೆ ಹೊತ್ತು, ಆತನಿಂದಾಗಿ ಭಾಗ್ಯದ ಬಾಗಿಲು ತೆರೆದೀತೆಂಬ ಆಶಾಪೂರಿತ ದೃಷ್ಟಿಯಿಂದ ಇರುವ ಆತನ ಹೆತ್ತವರ ಹೊಣೆ ಹಿರಿದು. ತನ್ನ ಮಗನು ವಿದ್ಯಾಸಂಪನ್ನನಾಗಬೇಕೆಂಬ ಸದುದ್ದೇಶದಿಂದ ಚಿಕ್ಕಂದಿನಿಂದಲೂ ಅಕ್ಕರೆಯಿಂದ ಪೋಷಿಸಿ ಶಾಲೆಗೆ ಕಳುಹಿಸಿರುವ ವಿದ್ಯಾರ್ಥಿ ರಕ್ಷಕರು ವಿದ್ಯಾರ್ಥಿಗಳ ಸರಿದಾರಿಯಲ್ಲಿ ನಡೆಯುವರೋ ವಿದ್ಯಾಭ್ಯಾಸದ ಕಡೆಗೆ ಪೂರ್ತಿ ಗಮನ ಹರಿಯಿಸಿರುವರೋ ಎಂಬುದನ್ನು ಅವಲೋಕಿಸಿ ತಿದ್ದುವುದು ಅವರ ಪ್ರಥಮ ಕರ್ತವ್ಯವೆನಿಸಿರುವುದು.

ಇಂದಿನ 'ಫೇಶನ್' ಯುಗದಲ್ಲಿ ಇಂದ್ರಿಯಗಳು ಬಲಿಯದ ಚಪಲ ಸ್ವಭಾವದ ವಿದ್ಯಾರ್ಥಿಗಳು ಅದಕ್ಕೆ ಬಲಿಯಾಗುವುದು ಅಲ್ಲವೇ ಮಾರುಹೋಗುವುದು ಸಹಜವೇ ಸರಿ. ಆದರೆ ಸ್ವಲ್ಪ ಮಟ್ಟಿಗೆ ಅನುಕರಣಾ ಬುದ್ಧಿಯು ಬರದು ಒಂದಿದೆ. ನಾಗರೀಕತೆ ಬೇಕು. ಅದು ಒಪ್ಪಿಕೊಳ್ಳಬೇಕಾದ ವಿಷಯ. ಆ ಕುರಿತು ಭಾರತೀಯರೆಲ್ಲರೂ ಪ್ರಯತ್ನಶೀಲ ಪ್ರಗತಿ ಸಾಧಿಸಬೇಕಾದುದು ಅನಿವಾರ್ಯ ಮಾತ್ರವಲ್ಲ ಅತ್ಯಗತ್ಯ ಕೂಡಾ ಆಗಿದೆ. ಆದರೆ ರೂಪರಹಿತವಾದ ವಿಚಿತ್ರ 'ಫೇಶನು'ಗಳು ನಾಗರಿಕತೆ ಎಂದೆನಿಸುವುದಿಲ್ಲ. ಅದನ್ನು ನಾಗರಿಕತೆಯ ಪರಮಾವಧಿ ಎಂದೆನ್ನಬಹುದು.

ಉಡುಪುಗಳು "ಸಡಿಲವಾಗಿರಬೇಕು" ಎಂದೆನ್ನುವವರೇ ಬಿಗಿ ಉಡುಪುಗಳನ್ನು ಧರಿಸಿ ನರ್ತನ ಮಾಡಿದರೆ ಆ ಉಪದೇಶಕ್ಕೆ ಏನು ಬೆಲೆ ಬಂತು? ಜಗತ್ತಿನಲ್ಲೇ ಬಿಗು ವಾತಾವರಣ ಬಿಗು ಸನ್ನಿವೇಶಗಳು. ಬಿಗು ಮಾತಿನ ಜಗ!!!

ವಿದ್ಯಾರ್ಥಿಗಳಲ್ಲಿ ಸ್ವಪ್ರಜ್ಞೆ ಮತ್ತು ಸ್ವಶಕ್ತಿಗಳಿರಬೇಕಾದುದು ಅತ್ಯವಶ್ಯಕ. ಇಂದು ಈಗಿನ ವಿದ್ಯಾರ್ಥಿಗಳಲ್ಲಿ ಕೆಲವರಲ್ಲಿ ಬಹುದೂರ ಓಡಿರುವುದರಿಂದ ವಿದ್ಯಾರ್ಥಿರಂಗದಲ್ಲೇ ಕೆಲ ಕೆಟ್ಟ ವಾತಾವರಣ ಕಂಡು [illegible]. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಕರ್ತವ್ಯ [illegible] ವ್ಯಕ್ತಿಗಳ ಕೈವಾಡಕ್ಕೆ ತುತ್ತಾಗಿ ರಾಜಕೀಯ ಧುರೀಣರನ್ನೆನಿಸಬೇಕೆಂಬ ಉದ್ದೇಶದಿಂದಲೋ ಏನೋ ರಾಜಕೀಯ ಪಕ್ಷಗಳ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡು ಕೈ ಸುಟ್ಟುಕೊಂಡು ಹಿಂದುಳಿವ ವಿದ್ಯಾರ್ಥಿಗಳೂ ಈ ಸಮಾಜದಲ್ಲಿ ಕಾಣಬಹುದು. ವಿದ್ಯಾರ್ಥಿಗೂ ರಾಜಕೀಯಕ್ಕೂ ಇನಿತು ಸಂಬಂಧವೂ ಇಲ್ಲ.

"ಇಂದಿನ ಶಿಕ್ಷಣ ಕ್ರಮವೇ ಸರಿಯಾಗಿಲ್ಲ. ವಿದ್ಯಾರ್ಥಿಗಳು ಇದರಿಂದ ತೊಂದರೆಗೊಳಗಾಗಿದ" ಎಂದು ಕೆಲವು ದಿನಗಳ ಹಿಂದಿನ ಪತ್ರಿಕೆಯೊಂದರಲ್ಲಿ ನೋಡಿದೆ. ಭಾರತೀಯ ವಿದ್ಯಾವಂತರಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ಮನೋಭಿಪ್ರಾಯ ಇರುತ್ತದೆ. ಸ್ವರಾಜ್ಯ ದೊರೆತಂದಿನಿಂದಲೂ ಪ್ರತಿಯೊಬ್ಬನ ಮನೋಭಿಪ್ರಾಯವನ್ನು ಸಂಗ್ರಹಿಸಿ [illegible] ದುಸ್ಸಾಧ್ಯ. ಸರಕಾರವು ಜ್ಯಾರಿಗೊಳಿಸಿದ [illegible], ಪಠ್ಯಕ್ರಮವನ್ನು ಉಲ್ಲಂಘಿಸದೆ ಅದನ್ನು ಪಾಲಿಸಿ ಅದರಂತೆ ನಡೆಯುವುದು ಭಾರತೀಯ ಪೌರನ ಹಾಗೂ ವಿದ್ಯಾರ್ಥಿಯ ಕರ್ತವ್ಯ.

ಭಾರತದಲ್ಲಿ ಬಡತನ ಭೂತಾಕಾರದಲ್ಲಿದೆ ಎಂಬುದು ಒಪ್ಪಲೇಬೇಕಾದ ವಿಷಯ. ಹೆಚ್ಚೇಕೆ! [illegible] ದೇಶದೆಲ್ಲೆಡೆಯಲ್ಲೂ ಹಲವಾರು ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ತಡಕಾಡಬಹುದು. ಅಂತಹ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಕಡೆಗೆ ಚಿಂತಿಸುತ್ತಿರಬಹುದು. 'ನಿರುದ್ಯೋಗ ಸಮಸ್ಯೆ'ಯು ಕರಾಳ [illegible] ಮಾಡಿರಬಹುದು. ಆದರೂ ಸ್ವಪ್ರಜ್ಞೆಯಿಂದ ನವ ಭವಿಷ್ಯ ಉಜ್ವಲಗೊಳಿಸಲೆಂದು [illegible]

([illegible]ನೇ ಪುಟ ನೋಡಿ)

ಜೀವನಲಹರಿಯ ಹೂ-ಹಣ್ಣುಗಳು

(ಐದನೇ ಪುಟದಿಂದ)

ಆಸ್ತಿ ಪಾಸ್ತಿಗಳ ಬಗೆಗೆ ನೆಹರೂರವರಿಗೆ ನಿಜವಾಗಿಯೂ ಯಾವ ಆಸೆ— ಆಸಕ್ತಿಗಳೂ ಇರಲಿಲ್ಲ. ೧೯೫೫ರ ಏಪ್ರಿಲ್ ೧೧ರಂದು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ನೆಹರೂರವರು ಹೇಳಿದರು:

'ಬದುಕಿನ ದಾರಿಯಲ್ಲಿ ಪ್ರತಿಯೊಬ್ಬನೂ ಆದಷ್ಟು ಕಡಿಮೆ ಭಾರವನ್ನು ಹೊರಬೇಕು. ಯಾರೂ ಒಂದಿಷ್ಟು ಹೊಲ ಅಥವಾ ಮನೆ ಅಥವಾ ಮತಿತ್ತರ ಬಂಧನಕ್ಕೆ ಒಳಗಾಗಬಾರದು. ಆಸ್ತಿಯ ಬಗ್ಗೆ ಈ ಭಾರೀ ವ್ಯಾಮೋಹದ ಅರ್ಥವೇ ನನಗಾಗದು."

ಆಹಾರವನ್ನು ಹಾಳುಮಾಡುವುದು ಅಪರಾಧ

ಆಹಾರವನ್ನು ಹಾಳುಮಾಡುವುದರ ಬಗ್ಗೆ ನೆಹರೂರವರು ಭಾರೀ ವಿರೋಧಿಗಳಾಗಿದ್ದರು. "ಆಹಾರ ಪದಾರ್ಥಗಳು ಬಹು ರುಚಿಯಾಗಿವೆ ಎಂದಾಕ್ಷಣ ನಾನು ಕುತ್ತಿಗೆಗೆ ಬರುವ ತನಕ ತಿನ್ನಬೇಕು, ತಿಂದು ಹೊಟ್ಟೆ ಕೆಡಿಸಿಕೊಳ್ಳಬೇಕು ಎಂದೇನೂ ಅರ್ಥವಲ್ಲ. ಊಟದ ತಟ್ಟೆಯಲ್ಲಿ ಆಹಾರವನ್ನು ಬಿಟ್ಟು ಏಳುವುದು ಶ್ರೀಮಂತಿಕೆಯ ಲಕ್ಷಣ ಎಂದು ಭಾವಿಸುವುದು ತೀರ ತಪ್ಪು. ಆಹಾರವನ್ನು ಹಾಳು ಮಾಡುವುದು ಮಹಾಪರಾಧ"—ಎಂದು ನೆಹರೂ ಹೇಳಿದ್ದಾರೆ.

ನೆಹರೂರವರು ತಾವು ಶ್ರೀಘ್ರ ಕೋಪಿಗಳಾಗಿದ್ದೇನೆಂಬುದನ್ನು ಅರಿತಿದ್ದರು. ಆದರೆ, ಅವರ ಸಿಟ್ಟು ಯಾರಿಗಾದರೂ ಕೇಡನ್ನು ಬಗೆಯಬೇಕು ಎಂದು ಇರಲಿಲ್ಲ. ತಮ್ಮ ಈ 'ದೌರ್ಬಲ್ಯ'ವನ್ನು ಕುರಿತು ನೆಹರೂರವರು ಹೀಗೆ ಹೇಳಿದ್ದಾರೆ: 'ನಾನೊಬ್ಬ ಸಂಯಮಹೀನ ಮನುಷ್ಯ. ಅನೇಕ ಸಲ ತಪ್ಪುಗಳನ್ನು ಮಾಡುತ್ತೇನೆ. ಕೆಲವೊಮ್ಮೆ ಸಲ ಕಠೋರ ಶಬ್ದಗಳನ್ನು ಬಳಸುತ್ತೇನೆ. ಆದರೆ, ನನ್ನ ತಪ್ಪುಗಳನ್ನು ಯಾರೂ ಎತ್ತಿ ತೋರಿಸುವುದಿಲ್ಲ, ನನ್ನ ಕಠೋರ ಶಬ್ದಗಳನ್ನು ಮರೆತು ಬಿಡುತ್ತಾರೆ'—ಈ ತೆರನ ಅವರ ತಪ್ಪೊಪ್ಪಿಗೆಯಲ್ಲಿ ನೆಹರೂರವರ ಸ್ವಭಾವದ ದೊಡ್ಡಸ್ತಿಕೆ ಒಡೆದು ಕಾಣುತ್ತದೆ.

ಯೌವನದ ಉತ್ಸಾಹ

ಅನೇಗಾಲವೂ ನೆಹರೂರವರು ಯೌವನದ ಅಮಿತೋತ್ಸಾಹದಿಂದ ವಿಜೃಂಭಿಸುತ್ತಿದ್ದರು. ಒಮ್ಮೆ ಆನಂದ ಭವನದ ಅಂಗಳದ ಹುಲ್ಲು ಮೈದಾನದಲ್ಲಿ ಭರಭರಾಟೆಯ ಹೋಳೀ ಹಬ್ಬವನ್ನು ಆಚರಿಸಲಾಗುತ್ತಿತ್ತು. ನೆಹರೂರವರು ಹೋಳೀ ಆಟದ ಕೇಂದ್ರ ಬಿಂದುವಾಗಿದ್ದರು. ಆಟದ ವೈಖರಿಯು ಪರಮಾವಧಿಯನ್ನು ಮುಟ್ಟಿದಾಗ, ಒಬ್ಬ ಛಾಯಾ ಚಿತ್ರಕಾರ ಆ ರಂಗಸ್ಥಳಕ್ಕೆ ಬಂದ. ಆಗ ನೆಹರೂರವರು ಪನಿಕದಲ್ಲಿ ನಿಂತ ಆಚಾರ್ಯ ಕೃಪಲಾನಿಯವರ ಹೆಗಲ ಮೇಲೆ ಏರಿ ನಿಂತು ಛಾಯಾ ಚಿತ್ರ ತೆಗೆಸಿಕೊಳ್ಳಲು ಅಣಿಯಾಗಿ ನಿಂತರು. ಕೃಪಲಾನಿಯವರು ಈ ಆನಂದದಲ್ಲಿ ಪಾಲುಗೊಂಡು ನಗುತ್ತಾ, ಅಂತರು, 'ಜವಾಹರ, ನೀನೇನು ಸಣ್ಣ ಮಗು ಅಲ್ಲ, ಕೆಳಗಿಳಿದು ಬಿಡಪ್ಪಾ" ಎಂದರು. ಆದರೆ ಹಾಗೆ ನಿಂತುಕೊಂಡೇ ಛಾಯಾ ಚಿತ್ರ ತೆಗೆಸಿಕೊಳ್ಳಲು ನೆಹರೂರವರು ಪಟ್ಟುಹಿಡಿದರು!

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 512/1964.
S. E. P. No. 104/1965.
S. E. A. No. 222/1965.

ಮುದ್ದು ಹೆಂಗಸು ಕೂಡಾ — ಬಾಧ್ಯತೆ ಅರ್ಜಿದಾರರು.

ಮತ್ತು

ಬಾಸ್ಕರ್ ಫಿಲಿಪ್ ಮೊನ್ತೇರೋ ಕೂಡಾ — ಎದುರರು.

ಇವರೊಳಗೆ

೬ನೇ ಎದುರು ಜೆಂಗಿ ಮಹಾಬಲಿ, ಶಿಕ್ಷಕಿ ಕಾರಿ ಸಂಗ, ಉಡುಪಿ ತಾಲ್ಲೂಕು ಪಡಿಸಾಲ ಗ್ರಾಮದ ಪಡುಬಿದ್ರಿ ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

S. E. P. 104/1965ನೇ ಅಮಲ್ಜಾರಿಯಲ್ಲಿ ಜಪ್ತಾದ ಚರಸೊತ್ತುಗಳು ತಮ್ಮ ದಕ್ಕಿನವುಗಳೆಂದು ಮೇಲ್ಕಂಡ ಬಾಧ್ಯತೆ ಅರ್ಜಿದಾರರು S. E. A. 222/1965ನೇ ಅರ್ಜಿ ದಾಖಲು ಮಾಡಿರುವದ್ರಿಂದ ಆ ಕುರಿತು ೬ನೇ ಎದುರಿಗೇನಾದರೂ ಆಕ್ಷೇಪಣೆಯಿರುವಲ್ಲಿ ಅದನ್ನು ತಾ. 17—6—1967ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳತಕ್ಕದ್ದೆಂಬ ಸಂಗತಿ ಈ ಮೂಲಕ ತಿಳಿಯಪಡಿಸಲಾಗಿದೆ.

P. N. Madhava Rao
Vakil for Petitioners.

ಉಡುಪಿ, 26—6—67.

ನಿರ್ಧಾರದ ಸಾಧನೆ

ನೀರಿನಿಂದ ಭೂಮಿ ಪಡೆಯಬೇಕು

ನೆದರ್ಲೆಂಡಿನ ವ್ಯಾಡನ್ ಸಮುದ್ರದ ಬಾಯಿಂದ ನೆಲ ಪಡೆಯುವ ಬೃಹತ್ ಯೋಜನೆ ರೂಪಿತವಾಗುತ್ತಿದೆ.

ನೆದರ್ಲೆಂಡಿನ ಉತ್ತರಕ್ಕಿರುವ ಒಂಭತ್ತು ದ್ವೀಪಗಳ ಸಮೂಹವನ್ನು ದೇಶದಿಂದ ಪ್ರತ್ಯೇಕಿಸಿರುವ ಅಪಾರ ಜಲರಾಶಿಯೇ ವ್ಯಾಡೆನ್ ಸಮುದ್ರ. ಈ ದ್ವೀಪಗಳ ಪ್ರಕೃತಿ ಸಂಪತ್ತಿನ ಬಗ್ಗೆ ಹೆಚ್ಚಿಗೆ ಹೇಳುವಂತಿಲ್ಲ. ಅವುಗಳ ಭೂಮಿ ಮರಳಿನಿಂದ ಕೂಡಿದ್ದು ಫಲವತ್ತಾಗಿಲ್ಲ. ದ್ವೀಪಗಳ ಸಮೀಪದಲ್ಲಿ ಸಮುದ್ರ ಮರಳು ದಿಣ್ಣೆಗಳಿಂದ ಕೂಡಿದ್ದು ಹೆಚ್ಚು ಆಳವಾಗಿಲ್ಲ. ಕಾಲುವೆಗಳು ಹಡಗು ಯಾನಕ್ಕೆ ಯೋಗ್ಯವಾಗಿಲ್ಲ. ಚಳಿಗಾಲದಲ್ಲಿ ಸಮುದ್ರ ಹೆಪ್ಪುಗಟ್ಟುವುದರಿಂದ ಆ ಕಾಲದಲ್ಲಿ ಹಡಗು ಸಂಚಾರಕ್ಕೂ ಅನನುಕೂಲವೊದಗುತ್ತದೆ. ಈ ದ್ವೀಪ ಸಮುದಾಯಗಳಿಗೂ ಹೊರಪ್ರಪಂಚಕ್ಕೂ ಸಾರಿಗೆ ಸಂಪರ್ಕ ಹೆಚ್ಚಾಗಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಹೊರ ಜಗತ್ತಿನಿಂದ ಹೆಚ್ಚುಕಡಮೆ ಬೇರೆಯಾಗಿರುವ ಈ ದ್ವೀಪಗಳ ಜನಜೀವನ ಹೆಚ್ಚು ವ್ಯತ್ಯಯ ಹೊಂದದೆ ಒಂದೇ ಸಮನೆ ಸಾಗುತ್ತ ಬಂದಿದೆ.

ವಿವಿಧ ಪಕ್ಷಿ ಸಮುದಾಯಗಳೇ ವ್ಯಾಡೆನ್ ಸಮುದ್ರ ಪ್ರದೇಶದ ಪ್ರಕೃತಿ ಸಂಪತ್ತು. ಈ ಪ್ರದೇಶವನ್ನು ಪಕ್ಷಿಗಳ ನಾಡೆಂದು ಕರೆಯುವುದು ತಪ್ಪೆನಿಸುವುದಿಲ್ಲ. ವ್ಯಾಡೆನ್ ಸಮುದ್ರಕ್ಕೆ ಸುತ್ತುಗಟ್ಟು ಕಟ್ಟುವ ಸಾಧ್ಯತೆಯನ್ನು ಚರ್ಚಿಸಿದಾಗಲೆಲ್ಲ ಆ ಪ್ರದೇಶದ ಪಕ್ಷಿಗಳನ್ನು ರಕ್ಷಿಸುವ ಬಗ್ಗೆಯೂ ಚರ್ಚೆ ನಡೆಸಲಾಗುವುದು.

ವ್ಯಾಡೆನ್ ಸಮುದ್ರಕ್ಕೆ ಸುತ್ತುಗಟ್ಟು ಕಟ್ಟಬಹುದೆ? ನೀರಿನಲ್ಲಿ ಮುಳುಗಿರುವ ಅದರ ಭೂಪ್ರದೇಶಗಳನ್ನು ಮತ್ತೆ ಪಡೆಯಬಹುದೆ? ಇವು ಆಗಾಗ ಉಚ್ಚ ಮಟ್ಟದ ಚರ್ಚೆಗಳಿಗೆ ಒದಗುತ್ತಿರುವ ವಸ್ತುಗಳು. ಸುತ್ತುಗಟ್ಟು ನಿರ್ಮಿಸುವುದರ ಮೂಲಕ ವ್ಯಾಡೆನ್ ಸಮುದ್ರದ ವಿಸ್ತೀರ್ಣವನ್ನು ಕುಂದಿಸುವ ಸಾಧ್ಯತೆಯ ಬಗ್ಗೆ ಎಂಜನಿಯರರು ಚರ್ಚಿಸಲು ಸಿದ್ಧರಿದ್ದರೂ, ಸಮುದ್ರದ ಅಪಾರ ವಿಸ್ತೀರ್ಣ ಅವರ ಮುಂದೆ ಅನೇಕ ಸಮಸ್ಯೆಗಳನ್ನೊಡ್ಡಿವೆ. ಜೂಯಿಡರ್ ಸಮುದ್ರ ಮತ್ತು ಅದಕ್ಕಿಂತಲೂ ಕಷ್ಟಕರವಾದ ಡೆಲ್ಟಾ ಯೋಜನೆ—ಇವುಗಳಿಂದ ಭೂಮಿ ಪಡೆದಿರುವುದು ಸಾಧ್ಯವಾಗಿರುವುದರಿಂದ ವ್ಯಾಡೆನ್ ಸಮುದ್ರಕ್ಕೂ ಸುತ್ತು ಗಟ್ಟುಕಟ್ಟುವುದು ಸಾಧ್ಯವೆಂಬುದು ಎಂಜನಿಯರುಗಳ ಅಭಿಪ್ರಾಯ.



ವ್ಯಾಡೆನ್ ಸಮುದ್ರಕ್ಕೆ ಸುತ್ತುಗಟ್ಟು ಕಟ್ಟುವುದರಿಂದ ಹಲವಾರು ಪ್ರಯೋಜನಗಳುಂಟು. ಇದರಿಂದ ಸಮುದ್ರತೀರಕ್ಕೆ ರಕ್ಷಣೆ ಒದಗುವಂತಹುದು. ಸಮುದ್ರತೀರದ ಉದ್ದ ಮೊಟಕಾಗುವುದಲ್ಲದೆ ೩,೫೦,೦೦೦ ಎಕರೆ ಜಮೀನನ್ನು ಸಮುದ್ರದಿಂದ ಪಡೆಯಬಹುದು. ಸಿಹಿ ನೀರಿನ ಪಾತ್ರಗಳನ್ನೂ ಪಡೆಯುವುದು ಸಾಧ್ಯ.

ಈ ಹಿಂದೆ ಕಾರ್ಯಗತಗೊಳಿಸಿರುವ ಬೃಹತ್ ಯೋಜನೆಗಳಿಗಿಂತ ವ್ಯಾಡೆನ್ ಸಮುದ್ರಕ್ಕೆ ಸುತ್ತುಗಟ್ಟು ಕಟ್ಟುವ ಯೋಜನೆ ಹಿರಿದಾದುದು. ಜೂಯಿಡರ್ ಸಮುದ್ರಕ್ಕಾದರೋ ಒಂದೇ ಒಂದು ಮುಖಜಭೂಮಿಯಿತ್ತು. ಡೆಲ್ಟಾ ಯೋಜನೆ ಕಾರ್ಯಗತಗೊಳಿಸುವಲ್ಲಿ ನದೀ ಮುಖಜ ಭೂಮಿಗಳಿಂದ ಹೆಚ್ಚು ಸಮಸ್ಯೆಗಳು ಉದ್ಭವಿಸಲಿಲ್ಲ. ಆದರೆ ವ್ಯಾಡೆನ್ ಸಮುದ್ರಕ್ಕಾದರೋ ೯ ಮುಖಜಭೂಮಿಗಳುಂಟು. ಇವುಗಳಿರುವ ಪ್ರದೇಶದ ಒಟ್ಟು ಉದ್ದ ೮೦ ಮೈಲಿ. ಉತ್ತರದ ದ್ವೀಪಗಳಿಂದ ಪ್ರಥಮತಃ ೬೦ ಮೈಲಿ ದೂರದಷ್ಟು ಪ್ರಾಥಮಿಕ ಡೈಕುಗಳನ್ನು ನಿರ್ಮಿಸಬೇಕು; ಅನಂತರ ನೆದರ್ಲೆಂಡಿನ ಮುಖ್ಯ ಭೂಪ್ರದೇಶದಿಂದ ದ್ವೀಪಗಳ ವರೆಗೆ ೯೦ ಮೈಲಿಗಳ ದ್ವಿತೀಯ ಘಟ್ಟದ ಬಲಿಷ್ಠವಾದ ಡೈಕುಗಳನ್ನು ನಿರ್ಮಿಸಬೇಕು. ಅಪಾಯಕಾರಿ ಮಟ್ಟಕ್ಕೇರುವ ಹೆಚ್ಚಿನ ನೀರನ್ನು ಹೊರ ಬಿಡುವ ವ್ಯವಸ್ಥೆ ಸಹ ಮಾಡಬೇಕು. ಅಂದರೆ ಇಷ್ಟೆಲ್ಲಾ ಮಾಡುವುದಕ್ಕೆ ಅಪಾರ ಹಣ ವೆಚ್ಚವಾಗುವುದೆಂದು ಬೇರೆ ಹೇಳಬೇಕಾಗಿಲ್ಲ. ಈ ಯೋಜನೆಯನ್ನು ಮುಗಿಸಬೇಕಾದರೆ ೪೦—೫೦ ವರ್ಷಗಳಾಗಬಹುದೆಂದೂ, ಮತ್ತು ಅದಕ್ಕೆ ೫೮೮ ದಶಲಕ್ಷ ಪೌಂ. ವೆಚ್ಚ ತಗಲಬಹುದೆಂದೂ ಅಂದಾಜು ಮಾಡಲಾಗಿದೆ. ೫೦ ವರ್ಷಗಳಿಗೆ ಈ ವೆಚ್ಚವನ್ನು ಹಂಚಿದರೆ ಪ್ರತಿವರ್ಷ ಸರಾಸರಿ ೧೧.೭ ದಶಲಕ್ಷ ಪೌಂ. ನಷ್ಟವಾಗುವುದು. ಇದು ೧೯೬೬ರ ವಾರ್ಷಿಕ ತಂಗಿ, ಕಂದಾಯಗಳ ಶೇ. ೧ರಷ್ಟಾಗುವುದು. ೧೯೮೦ರ ವೇಳೆಗೆ ಇದು ಕೇವಲ ಶೇ. ೦.೫ರಷ್ಟಾಗುವುದು.

ಆರ್ಥಿಕ ದೃಷ್ಟಿಯಿಂದ ವ್ಯಾಡೆನ್ ಸಮುದ್ರಕ್ಕೆ ಸುತ್ತುಗಟ್ಟು ಕಟ್ಟುವುದು ಸಾಧ್ಯವೆಂದು ಭಾವಿಸಲಾಗಿದೆ. ಅಲ್ಲದೆ ನೀರಿನಲ್ಲಿ ಮುಳುಗಿರುವ ಭೂಪ್ರದೇಶಗಳನ್ನು ಹೇಗಾದರೂ ಮತ್ತೆ ಪಡೆಯುವುದು ಅನಿವಾರ್ಯವಾಗಿದೆ; ಯಾಕೆಂದರೆ ಇನ್ನು ೪೦ ವರ್ಷಗಳಲ್ಲಿ ನೆದರ್ಲೆಂಡಿನ ಜನಸಂಖ್ಯೆ ೨೦ ದಶಲಕ್ಷವಾಗುವುದಿದೆ.

ಅಂದರೆ ಹೆಚ್ಚುವ ಜನಸಂಖ್ಯೆಗನುಗುಣವಾಗಿ ಗೃಹಗಳು, ಮನರಂಜನೆ, ಕೈಗಾರಿಕೆಗಳು, ರಸ್ತೆ ಮುಂತಾದುವನ್ನು ಒದಗಿಸಲು ಹೆಚ್ಚು ಸ್ಥಳ ಬೇಕಾಗುವುದು. ಅಲ್ಲದೆ, ಕೃಷಿಗಾಗಿ ಭೂಮಿ ಬೇಕಾಗುವುದು. ವ್ಯಾಡೆನ್ ಸಮುದ್ರದಿಂದ ಪಡೆಯುವ ಭೂಮಿ ಬೆಳೆಯುವ ರಾಷ್ಟ್ರದ ಈ ಅಗತ್ಯಗಳನ್ನು ಪೂರೈಸುವಲ್ಲಿ ನೆರವಾಗಬಲ್ಲದು.

READ & ADVERTISE IN NAVAYUGA WEEKLY

ಉಳಿವಿನ ದಾರಿ

(ನಾಲ್ಕನೇ ಪುಟದಿಂದ)

ದಲನೆಯ ಕಂತಿನಲ್ಲಿ, ಈ ಸಂಸ್ಥೆಗೆ ಸದಸ್ಯನಾಗಲು 100ರೂ. ಗಳನ್ನು ಕೊಡುವುದು ದೊಡ್ಡದಾಗಲಾರದು. (ಈ ಹಣ ಕೇವಲ ಎರಡು ಮುಡಿ ಅಕ್ಕಿಯ ಬೆಲೆಯಾಗಬಹುದು ಅಷ್ಟೆ). ನಂತರ ವರ್ಷಂಪ್ರತಿ 50 ರೂ. ಗಳನ್ನು ಸಂಸ್ಥೆಯ ನಿಧಿಗೆ ಕೊಡಬೇಕಾಗುತ್ತದೆ. (ಅಷ್ಟೆ). ಸರ್ಕಾರದಿಂದ ಗ್ರಾಂಟ್ ಇತ್ಯಾದಿಗಳಿಂದ ಪಡೆಯುವ ಪ್ರಯೋಜನವಲ್ಲದೆ, ಹೆಚ್ಚಿನ ಪ್ರಯೋಜನಕ್ಕೆ ಈ ಸಂಸ್ಥೆಯು ಆಸರೆಯಾದರೆ, ಈ ಜಿಲ್ಲೆಯ ಎಲ್ಲ ರೈತನ ಅವಶ್ಯಕತೆಯನ್ನು, ಆರ್ಥಿಕರೀತ್ಯಾ, ಹಾಗೂ ಅತ್ಯಂತ ಪರಿಣಾಮಕಾರಿಯಾಗಿ ಸಕಾಲಕ್ಕೆ ಪೂರೈಸಿದಂತಾಗುತ್ತದೆ

ವಿದ್ಯಾರ್ಥಿಗಳಲ್ಲಿ ಅಶಿಸ್ತು ಮತ್ತು ಪರಿಹಾರ

(ಎರಡನೇ ಪುಟದಿಂದ)

ದ್ಯಾರ್ಥಿ ಯಾವ ರಾಜಕೀಯ ಗೊಂದಲಕ್ಕೂ ಬಲಿಯಾಗದಿರುವುದು ವಿಹಿತವಾಗಿದೆ.

ಶಿಸ್ತು ಮತ್ತು ಸಭ್ಯತೆಯನ್ನು ವಿದ್ಯಾರ್ಥಿಗೆ ಬೋಧಿಸುವುದರಲ್ಲಿ ಶಿಕ್ಷಕರು ಸಹಕರಿಸಿಯಾರು. ವಿದ್ಯಾರ್ಥಿಯಲ್ಲಿ ವಿದ್ಯಾರ್ಜನಾಕಾಂಕ್ಷೆ ಬರುವಂತೆ ಪ್ರೇರೇಪಿಸಿ ಹುರಿದುಂಬಿಸಬೇಕಾದುದು ಆತನ ಹೆತ್ತವರ, ರಕ್ಷಕರ ಹೊಣೆ.

ವಿನಯವಿಲ್ಲದೆ ವಿದ್ಯೆಗೆ ಬೆಲೆ ಬರಲಾರದು. ಕೌರವನು ಮಹಾ ವಿದ್ವಾಂಸನೆನ್ನುವರು, ಆದರೆ ವಿನಯರಹಿತನಾದ ಆತನಿಗೆ ತನ್ನ ಸಭೆಯಲ್ಲ ಎಲ್ಲರೂ ದ್ವೇಷಿಗಳಾಗಿಯೇ ಕಂಡರು. ಧರ್ಮರಾಯ ಮಹಾವಿನಯಶೀಲ. ಆತನಿಗೆ ತನ್ನ ರಾಜಸಭೆಯಲ್ಲಿ ಒಬ್ಬನೇ ಒಬ್ಬ ದ್ವೇಷಿ ಸಿಗಲಿಲ್ಲ. ಪ್ರತಿಯೊಂದಕ್ಕೂ ಅಂತಃಪ್ರೇರಣೆ ಮುಖ್ಯ. ವಿದ್ಯಾರ್ಥಿ ತಾನು ಶಿಸ್ತುಬದ್ಧ ಜೀವನ ನಡೆಸಬೇಕು. ವಿನಯಶೀಲಿಯಾಗಬೇಕು, ಶ್ರದ್ಧಾ ಜೀವಿಯಾಗಬೇಕು ಎಂದು ಮನಗಂಡಾಗಲೇ ಭಾರತದ ಭವಿಷ್ಯ ಉಜ್ವಲವಾದೀತು. ಭಾವೀ ಜನಾಂಗವು ಕಲ್ಯಾಣಕಾರೀ ಕರ್ತವ್ಯದಲ್ಲಿ ತೊಡಗೀತು. ಇದರಿಂದ ನಾಡಿನ ಏಳಿಗೆಯಾದೀತು.

ಕೃಷಿಯ ನಂತರ ಮತ್ತು ಅದಕ್ಕಿಂತ ಉಪಯುಕ್ತವಾದ ಜೀವನದ, ಭದ್ರತೆ ಹಾಗೂ ಮನುಷ್ಯನ ಜಾಣ್ಮೆಯನ್ನು ತೋರಿಸಲೆತ್ನಿಸುವ ಮೂಲ ಅಂಗವೆಂದರೆ ವಿದ್ಯಾಭ್ಯಾಸ ಔದ್ಯೋಗಿಕ ಮತ್ತು ವಿದ್ಯಾ ವಿಷಯಕ. ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿ ವಸತಿ ಗೃಹ (Hostel) ಗಳು ಹಳ್ಳಿಯಿಂದ ಬಂದ ಯುವಕರ ತೊಂದರೆಗಳನ್ನು ನಿವಾರಿಸಿ ಭವ್ಯ ಸೇವೆ ಮಾಡುತ್ತಿದ್ದರೂ ಸಹ, ಅವರ ಕೆಲವಾರು ಪ್ರತಿಕೂಲಗಳು, ಜೀವನದ ಓಟದಲ್ಲಿ, ನಾಗರೀಕತೆಯ ಮಡಿಲಿನಲ್ಲಿ ಹಾಗೂ ಆರ್ಥಿಕ ಸಂಪತ್ತಿನಲ್ಲೇ ಬೆಳೆದು ಬಂದ ಪಟ್ಟಣದ ಯುವಕರ ಮುಂದೆ ಸರಿದೂಗಲಾರದು. ಇದಲ್ಲದೆ ಮತ್ತೊಂದು ತೊಂದರೆ ನಮ್ಮನ್ನು ಆವರಿಸುತ್ತಿದೆ. ಹಳ್ಳಿಯ ಕಡೆಯಿಂದ ಹೋದ ಅನೇಕರು ಪಟ್ಟಣದ ಜೀವನವು ಕೊಡುವ ಸುಖ, ಸೌಲಭ್ಯಗಳಿಗೆ ಮಾರು ಹೋಗಿ, ಅಲ್ಲಿ ನಿಲ್ಲುವುದೇ ಸರಿ ಎನಿಸಿ, ಹಳ್ಳಿಯ ಕಡೆಗೆ ತಿರುಗುವುದಿಲ್ಲ ಇದರ ಪರಿಣಾಮವೆಂದರೆ ನಮ್ಮಲ್ಲಿನ ಜಾಣ ತರುಣರು ನಮಗಿಲ್ಲವಾಗಿ, ವ್ಯವಸಾಯವು ಸಾಮಾನ್ಯವಾಗಿ ಅವಿದ್ಯಾವಂತರ ಕೈಸೇರುತ್ತದೆ. ಇಂತಹ ಸಮಯದಲ್ಲೂ ಸಹ, ಜಿಲ್ಲಾ ಸಂಸ್ಥೆಯು ಹಿಂದೆಯೇ ಪ್ರಸ್ತಾಪಿಸಿದಂತೆ ವಿವಿಧ ರೀತಿಯಲ್ಲಿ ಮಾರ್ಗದರ್ಶನ ನೀಡಬಹುದು.

ಹಿಂದಿನ ದೂರದರ್ಶಿಕ ನಾಯಕತ್ವದಿಂದಾಗಿ, ವಿದ್ಯಾರ್ಥಿ ವಸತಿ ಚಳುವಳಿಯಿಂದ ಅತ್ಯಮೂಲ್ಯ ಕಾರ್ಯಾರಂಭವಾಗಿದೆ. ದಿವಂಗತ ಶ್ರೀ ಎ. ಬಿ. ಶೆಟ್ಟಿ ಇವರೇ ಮುಂತಾದ ಧೀರ ನಾಯಕರುಗಳು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ತಳಹದಿ ಹಾಕಿದ್ದಾರೆ. ಪ್ರಸಕ್ತದಲ್ಲಿ ನನಗನ್ನಿಸುವ ರೀತ್ಯಾ ಈ ಸಂಘದ ನೇತೃತ್ವದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಚಿಕ್ಕ ಸ್ಥಾನವನ್ನು ಕೊಟ್ಟಂತಾಗಿದೆ ಆದ್ದರಿಂದ ಈಗ ಅದಕ್ಕೆ ಮಾನ್ಯತೆ ಕೊಟ್ಟು ಪ್ರಥಮ ಸ್ಥಾನ ಕೊಡಬೇಕಾಗಿದೆ. ತೀವ್ರವಾಗಿ ಬದಲಾವಣೆಯಾಗುತ್ತಿರುವ ಈ ಕಾಲದಲ್ಲಿ, ಕೆಲವರ ಅಭಿಪ್ರಾಯದ ಪ್ರಕಾರ 'ಈಗಿನ ಹಾಸ್ಟೆಲ್ ಜೀವನ, ಕಾಲೇಜು ಸಂಬಂಧದ ಹೊರತು, ಕೆಲವಾರು ಸಲ ವರವಾಗುವ ಬದಲು ಶಾಪವಾಗುತ್ತದೆ'—ಎಂದು ಊಟ ವಸತಿ ಸೌಲಭ್ಯಗಳನ್ನು ನಮ್ಮ ಯುವಕ, ಯುವತಿಯರಿಗೆ ಕಲ್ಪಿಸಿ ಕೊಡುವದರಿಂದ ಮಾತ್ರ ಸಂಸ್ಕೃತಿಯಾಗಲೀ ಜೀವನ ಸಮರವನ್ನು ಎದುರಿಸಲು ಬೇಕಾದ ವೃತ್ತಿ ಕೌಶಲ್ಯವಾಗಲೀ, ಬರುವುದೆಂದು ಯಾವನೊಬ್ಬನೂ ನಂಬಲಾರ. ಅದು ಹೇಗಾಗಲೀ ಹಾಸ್ಟೆಲ್ ಜೀವನವು ಜನತೆಯ ಅಭಿವೃದ್ಧಿಗೆ ಇದೊಂದು ಉಚಿತ ಮಾರ್ಗವಲ್ಲ. ಸಮಾಜದ ಮುಖ್ಯ ಕಸುಬಾದ ವ್ಯವಸಾಯದ ಪ್ರಗತಿ—ಪರ ಮುನ್ನಡೆಯಿಂದ ಮಾತ್ರ ನಮ್ಮ ಭವಿಷ್ಯ ನಿಂತಿದೆ. ಅದರಷ್ಟೇ ಮುಖ್ಯವೆಂದರೆ ಮತ್ತೊಂದು—ವಿದ್ಯಾಭ್ಯಾಸ ಇದು ನಮ್ಮ ಭವಿಷ್ಯದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಎದುರಿಸಬೇಕಾದ ಸ್ಪರ್ಧೆಗಳನ್ನು ಧೈರ್ಯದಿಂದ ಹಾಗೂ ಯೋಗ್ಯತೆಯಿಂದ ಎದುರಿಸಲು ಸಹಾಯ ಮಾಡುತ್ತದೆ. ಹಳ್ಳಿಯ ಯುವಕರನ್ನು, ಪಟ್ಟಣದ ಯುವಕರ ಜೊತೆ ತರಬೇಕಾದರೆ ಔದ್ಯೋಗಿಕ ಶಿಕ್ಷಣ ಮತ್ತು ಮನೆ ಶಿಕ್ಷಣ ಇತ್ಯಾದಿ ಕೊಡಬೇಕಾಗುತ್ತದೆ. ಈ ಹಿಂದೆ ಹೇಳಿದ ಸೂಚನೆಗಳು, ನನ್ನ ದೃಷ್ಟಿಯಲ್ಲಿ ಸಮಾಜದ ಸಾಮಾನ್ಯ ಮುನ್ನಡೆಗೆ ಬೇಕಾದ ವಿವಿಧ ಮಾರ್ಗಗಳು.

ನಮ್ಮ ಮೇಧಾವಿತನ ಅಥವಾ ಜಾಣ್ಮೆಯೆಂಬುದು ಸಂಧರ್ಭಾನುಸಾರ ನಮ್ಮ ಯೋಜನೆಗಳನ್ನು ಬದಲಾಯಿಸಿಕೊಳ್ಳುವುದರಲ್ಲಿದೆ. ಶಿಕ್ಷಣ ಆಯೋಗವು (1966) ಭಾರತದ ಏಳಿಗೆಗೆ ಕೃಷಿ ತಾಂತ್ರಿಕ ಶಾಲೆಗಳು ಬೇಕೆಂದು ಶಿಫಾರಸು ಮಾಡಿದ್ದಲ್ಲಿ, ನಮ್ಮ ಕೆಲವು ಹಾಸ್ಟೆಲ್ಲುಗಳನ್ನು ಈ ಶಾಲೆಗಳಾಗಿ ಮಾರ್ಪಡಿಸಬಾರದೇಕೆ, ಅದೂ ಹಾಸ್ಟೆಲ್ಲುಗಳಿಂದ ಆಗುವ ಪ್ರಯೋಜನವನ್ನು ಅನುಮಾನವಾಗಿ ಎಣಿಸುತ್ತಿರುವಾಗ? ಭೂ ಮಾಲಿಕರಿಂದ ಸ್ವಾಧೀನ ತಪ್ಪಿಸುವದಾದರೆ, ನಾವುಗಳೇಕೆ ಆಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ರೀತ್ಯಾ ಸ್ವಲ್ಪ ಕ್ಷೇತ್ರಫಲದಿಂದ ಬೇಕಾದಷ್ಟು ಪಡೆಯಬಾರದು? (ಹ್ಯಾಗೂ, ನಾವು ಗುತ್ತಿಗೆದಾರರುಗಳಿಂದ ಭಾರಿ ಕ್ಷೇತ್ರಫಲಗಳಿಂದ ಕಮ್ಮಿ ಪಡೆಯುತ್ತಿದ್ದೇವೆ) ಈ ಕೆಲವಾರು ಪ್ರಶ್ನೆಗಳನ್ನು ಇಲ್ಲಿ ನೆರೆದಿರುವ ನಮ್ಮ ನಾಯಕರುಗಳೆದುರಿನಲ್ಲಿ ಪ್ರತಿಪಾದಿಸಿದ್ದೇನೆ. ನಿಮ್ಮಗಳ ಸಾಮುದಾಯಿಕ ವಿವೇಕದಿಂದ, ಈಗಾಗಲೇ ಜಾರುತ್ತಿರುವ ನಮ್ಮ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಸುಭದ್ರ ರೀತಿಯಲ್ಲಿ ನಡೆಸಿಕೊಂಡು ಹೋಗಲು ವಿಶಿಷ್ಟ ದಾರಿಯನ್ನು ಕಂಡುಹಿಡಿಯುವರೆಂದು ನಂಬುತ್ತೇನೆ. ನನ್ನ ನಂಬಿಕೆ ಮತ್ತು ಬೇಡಿಕೆ ಎಂದರೆ ಈ ದಾರಿಯನ್ನು ಕಾಲ ಮೀರುವ ಮೊದಲೇ ಸಂಪಡಿಸಿಕೊಳ್ಳುವುದು

ಸುಭದ್ರ, ಸಜೀವ, ಆರ್ಥಿಕ (ಹಾಗೂ ರಾಜಕೀಯ) ಸಮಾಜವು ವಿವೇಕಯುತ ನಾಯಕತ್ವದಿಂದ ಕೊಟ್ಟ ಸಮರ್ಪಕ ಶಿಕ್ಷಣದಿಂದ ಉದ್ಭವವಾಗಬಲ್ಲುದು. ಇಲ್ಲಿ ನೆರೆದಿರತಕ್ಕ ನಿಮ್ಮೆಲ್ಲರಿಗೂ ಹೇಳುವುದೇನೆಂದರೆ, ಮೇಲೆ ಹೇಳಿದ ನಾಯಕತ್ವವನ್ನು ಕೃತಿಗಿಳಿಸಿ ಸಮಾಜವನ್ನು ಸ್ವಸ್ಥಾನಕ್ಕೆ ತರುವಿರೆಂದು ನಂಬಿ ಮತ್ತು ಅದು ನೆರವೇರಲೆಂದು ಪ್ರಾರ್ಥಿಸುತ್ತೇನೆ.

In the Court of the Munsif of Udipi.

O. P. No 10/67

Between

1 Kavu Shedthy,
2 Padmu Shedthy,— Petitioners

In the matter of debt due to the estate of Garde Yellu Shetty of Kodavur village. Udipi Taluk

To

All persons concerned

The applicants abovenamed have filed the above application for issue of a succession certificate enabling them to collect the debt due to the above deceased Those who have any objection may appear before the Court on 22—6—1967 at 10 A. M and put in their objections, failing which the above petition will be disposed off in their absence.

(By order of Court)

(Sd.) V. G Kedlaya,
M. A. LL. B.,
Advocate for Petitioners

Udipi, D/- 26—4—67.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೩

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್

ಜಯನಗರ ೪ನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉಚ್ಚ ವಿದ್ಯಾನುಭವವುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರ್ಕಾರ ಮನ್ನಣೆ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟೆಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೩೦೦ ಹಾಸಿಗೆಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವದ ಸೌಕರ್ಯವಿದೆ

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು. ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿರಿ.

ಡಾ|| ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ಎಲ್ಲೆಲ್ಲಿ ಏನೇನು?

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನಿನ ವತಿಯಿಂದ ಕೃಷಿ ಕ್ಷೇತ್ರ ಸಂದರ್ಶನ

ಆಹಾರದ ಅಮದಿಗೆ ನಮ್ಮ ದೇಶ ವೆಚ್ಚ ಮಾಡುತ್ತಿರುವ ಹಣದ ಅರ್ಧಾಂಶವನ್ನು ರೈತರಿಗೆ ಪ್ರತ್ಯಕ್ಷವಾಗಿ ನೆರವಿತ್ತರೆ ದೇಶದ ಉತ್ಪನ್ನ ಸೇರಿದಷ್ಟು ಜಾಸ್ತಿಯಾಗಿ, ಪ್ರತ್ಯೇಕವಾದ ಆಹಾರದಕೊರತೆ ಮರೋಗವನ್ನುವದಲ್ಲಿ ಸಂದೇಹವಿಲ್ಲ ಎಂದು ಶ್ರೀ|| ಟಿ ಎ ಪೈಗಳು ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನ್ ವತಿಯಿಂದ ಮುಡಿಯಲ್ಲಿ ಜರಗಿದ ರೈತ ಸಭೆಯ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಾ ಹೇಳಿದರು.

[illegible] ಗಳಾದ [illegible] ಉತ್ತಮ ಬೀಜಗಳ [illegible], ಈಗಿನ ಬರಗಾಲವಿಲ್ಲದ ನೀರಿನ ಕೊರತೆಯಿಲ್ಲದ, ಮುಡಿಯ ರೈತಗಳಿಗೆ [illegible] ತಮ್ಮ ದೇಶದಲ್ಲಿ ಈ ಮಾರಣ [illegible] ವಿವರಿಸು [illegible], ಸಾಗುವಳಿಯನ್ನು [illegible] ಬಳಸಿಕೊಳ್ಳಬೇಕು, [illegible] ಸಹಕಾರಿ ಸಂಘದ [illegible] ಬೇಕಾ[illegible] ಎಂದು ಹೇಳಿದರು. ರೈತ [illegible] ಯೋಗ್ಯ ಬೆಲೆ ನಿರ್ಧರಿಸಿ, [illegible] ಗಳನ್ನು ಒದಗಿಸಿ ಕೊಡುವ ಆವಶ್ಯಕತೆಯನ್ನು ಒತ್ತಿಹೇಳಿದರು.

ಈ [illegible] ಮತ್ತು ಎಡಪದವಿನ [illegible] ರೈತರೂ, [illegible] ಪರಿಪೂರ್ಣ ರೈತರೂ [illegible] ಸಿದ್ದರು ಮತ್ತು ಎಡಪ [illegible] ಪೂರ್ವಾಹ್ನ 7—30ಕ್ಕೆ ಎಡ [illegible] ಬಂಗಾಳ [illegible] ಶ್ರೀ|| [illegible] ಶೆಟ್ಟಿ, ಕಟಪಾಡಿಯ ಶ್ರೀ [illegible] ಕೃಷ್ಣ [illegible], ಜಾಂತಾಳ ಶ್ರೀ||

ಉಡುಪಿ ಮುನ್ಸಿಫ್ ಕೋರ್ಟಿನಲ್ಲ

R. I. A. 192/66 in O. S. 315/64

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ಮಣಿಪಾಲ

—ಅರ್ಜಿದಾರ (ವಾದಿ)

ಮತ್ತು

M. ಇಬ್ರಾಹಿಮ್ ಬ್ಯೇರಿ ಕೂಡಾ —

ಎದುರು (ಪ್ರತಿವಾದಿರು)

ಇವರೊಳಗೆ

ಈ ಮೇಲ್ಕಂಡ ಸದ್ರಿ ಅರ್ಜಿಯ 1ನೇ ಎದುರಾದ M. ಇಬ್ರಾಹಿಮ್ ಬ್ಯೇರಿ, ಮೊಹಿದಿನ್ ಬ್ಯೇರಿಯವರ ಮಗ, ವ್ಯಾಪಾರಸ್ಥ, ಉಡುಪಿ ತಾಲ್ಲೂಕು ಮೂಳೂರು ಗ್ರಾಮ. ಇವರಿಗೆ ತಿಳಿಸುವುದೇನೆಂದರೆ,

ಮೇಲ್ಕಾಣಿಸಿದ ದಾವೆಯಲ್ಲಿ ತಾ. 11—8—66ರಲ್ಲಿ ವಾದಿಯ ಗುಣಕ್ಕೆ ಪ್ರಿಲಿಮಿನರಿ ಡಿಕ್ರಿ ಮತ್ತು ತಾ. 9—7—66ರಲ್ಲಿ ಫೈನಲ್ ಡಿಕ್ರಿ ಕೂಡಾ ಕೊಡೋಣಾಗಿಯದೆ.

ಆದರೆ ಸದ್ರಿ ಮೇಲ್ಕಂಡ ದಾವೆಯ ಪ್ಲೈಂಟಿನಲ್ಲಿ ಟೈಪುಮಾಡುವಾಗ ತಪ್ಪಾಗಿ A ಶೆಡ್ಯೂಲಿನಲ್ಲಿ ಕಾಣಿಸಿದ "ಸರ್ವೆ ನಂಬ್ರ 74—1A1—ಪಂಜ [illegible] Southern Portion O—18" ಎಂದು ಇದ್ದುದನ್ನು "ಸ. ನಂ. 74—1A1 ಪಂಜ [illegible] Southern Portion O—30" ಎಂತ ಬದಲ್ಲು ಪ್ಲೈಂಟನ್ನು [illegible] ಪ್ರಕಾರ [illegible] ಬಗ್ಗೆ ಸದ್ರಿ ಅರ್ಜಿ ಕೊಟ್ಟಿರುತ್ತದೆ. ಸದ್ರಿ ಅರ್ಜಿಯು ತಾ. 15—6—67ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿರುತ್ತದೆ. ನೀವೇನಾದರೂ ಆಕ್ಷೇಪ ಉಡಾಯರಡಕೊಡುವಂತಾದಿದ್ದರೆ ಆ ದಿವಸ ಹಗಲು 11 ಗಂಟೆಗೆ ಸ್ವಯಾಗಿ ಈ ಕೋರ್ಟು ಮುಂದೆ ಸ್ವತಃ ವಾ ವಕೀಲರ ಮುಖಾಂತರ ಹಾಜರಾಗಿ ಜವಾಬು ಮಾಡತಕ್ಕದ್ದು.

(By order of the court)

M. D. Kamath

Advocate for Petitioner,

Udupi, Dated 28—4—67.

ಕೆ. ಪದ್ಮನಾಭ ಭಟ್ ಇವರ ವ್ಯವಸಾಯ ಕ್ಷೇತ್ರಗಳನ್ನಲ್ಲದೆ ಮುಡಿಯ ನ್ಯಾಷನಲ್ ಸೀಡ್ ಫಾರ್ಮನ್ನೂ ಸಂದರ್ಶಿಸಿದರು.

ಶ್ರೀ|| ಕೆ. ಬೆಳಿರಾಯರು ಸ್ವಾಗತಿಸಿದರು. ಶ್ರೀ|| ಮಂಜುನಾಥ ಉಪ ಪರು ವಿಚಾರ ಗೋಷ್ಠಿಯನ್ನು ಪ್ರಾರಂಭಿಸಿದರು. ಕೃಷಿಕರ ಪರವಾಗಿ ಸರ್ವಶ್ರೀ|| ರಾಮರಾವ್, ರಾಮಚಂದ್ರ ತಂತ್ರಿ, ಸಂಜೀವಶೆಟ್ಟಿ ಮೊದಲಾದವರು ಸಿಂಡಿಕೇಟಿನ ಈ ಪ್ರಯತ್ನವನ್ನು ಶ್ಲಾಘಿಸಿದರು.

ಶ್ರೀ|| ವೇಣುಗೋಪಾಲರಾಯರು ಧನ್ಯವಾದ ಸಮರ್ಪಿಸಿದರು.

ಕಟೀಲಿನಲ್ಲಿ ಸಾಂಸ್ಕೃತಿಕ ಸಮಾರಂಭ

ಜಿಲ್ಲೆಯ ಪವಿತ್ರ ಕ್ಷೇತ್ರಗಳಲ್ಲೊಂದಾದ ಕಟೀಲಿನ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾದ ಸಾಂಸ್ಕೃತಿಕ ಸಮಾರಂಭದ ಪ್ರಥಮ ದಿನದ ಕಾರ್ಯಕ್ರಮಗಳು ತಾ. 16ರಂದು ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ದೇವಸ್ಥಾನದ ಆಡಳಿತ ಮೊಕ್ತೇಸರ್ ಶ್ರೀ ವಿ ರಾಜೀವ ಭಂಡಾರಿ ಹಾಗೂ ಅರ್ಚಕ ಶ್ರೀ ಕೆ. ಗೋಪಾಲಕೃಷ್ಣ ಅಸ್ರಣ್ಣರೇ ಮೊದಲಾದವರು ಅತಿಥಿಗಳನ್ನು ವಾದ್ಯಘೋಷದೊಂದಿಗೆ ಬರಮಾಡಿಕೊಂಡರು.

ಪ್ರಾರ್ಥನೆಯಾದ ಬಳಿಕ ಶ್ರೀ ಕೊಡೆತ್ತೂರು ಅನಂತ ಪದ್ಮನಾಭ ಉಡುಪರು ಸ್ವಾಗತಿಸಿದರು. ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ಹಾಗೂ ಅವರ ಕುಟುಂಬ ವಿವಿಧ ಭಕ್ತಿಗೀತೆಗಳನ್ನು ಹಾಡಿದರು. ಶ್ರೀ ಎ. ಎಸ್. ರಾಮಕೃಷ್ಣನವರು "ಮನಸ್ಸು" ಎನ್ನುವ ವಿಷಯದ ಕುರಿತು ಉಪನ್ಯಾಸಗೈದರು. ಅಧ್ಯಕ್ಷರು ಮಾತನಾಡುತ್ತಾ ಕಟೀಲಿನ ಪರಂಪರೆಯನ್ನು ಪ್ರಶಂಸಿಸಿದರು.

ಇದೇ ಸಂದರ್ಭದಲ್ಲಿ ದಿವಂಗತ ಕೊಡೆತ್ತೂರುಗುತ್ತು ಶ್ರೀಧರ ಶೆಟ್ಟರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು. ಕೊನೆಯಲ್ಲಿ "ಅಂಧಕಾಸುರ ಮೋಕ್ಷ"ವೆನ್ನುವ ಯಕ್ಷಗಾನ ಬಯಲಾಟದ ಪ್ರದರ್ಶನವಾಯಿತು.

ಎರಡನೇ ದಿನದ ಸಮಾರಂಭವು ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರವರ ಅಧ್ಯಕ್ಷತೆಯಲ್ಲಿ ಕಟೀಲು ಶಾಲೆಯಲ್ಲಿ ಜರಗಿತು.

ಶಾಲಾ ಪ್ರಧಾನಾಧ್ಯಾಪಕ ಶ್ರೀ ಶ್ರೀನಿವಾಸರಾಯರು ಸ್ವಾಗತಿಸಿದರು. ಶ್ರೀ ಬಿ. ರಾಜೀವ ಭಂಡಾರಿ ಹಾಗೂ ಶ್ರೀ ಗೋಪಾಲ ಕೃಷ್ಣ ಅಸ್ರಣ್ಣರು ಹೂಹಾರಗಳ ಮೂಲಕ ಅತಿಥಿಗಳನ್ನು ಗೌರವಿಸಿದರು. ಶ್ರೀ ಕೊಡೆತ್ತೂರು ಅನಂತ ಪದ್ಮನಾಭ ಉಡುಪರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ವಿದ್ವಾನ್ ಶ್ರೀ ಬಿ. ಪದ್ಮನಾಭ ಸೋಮಯಾಜಿಯವರು "ಭಾರತೀಯ ಸಂಸ್ಕೃತಿ" ಎಂಬ ಕುರಿತು ಉಪನ್ಯಾಸಗೈದರು. ಬಳಿಕ ಶ್ರೀ ಎ. ರಘುರಾಮ ಐತಾಳರು ಭಕ್ತಿಗೀತೆಗಳನ್ನು ಹಾಡಿದರು.

ವಿದ್ವಾನ್ ಶ್ರೀ ಅಮ್ಮಂಬಳ ಶಂಕರನಾರಾಯಣ ನಾವಡರು "ನೈತಿಕ ನಿರ್ಮಲತೆ"ಯ ಬಗ್ಗೆ ಮಾತನಾಡಿದರು. ಅಧ್ಯಕ್ಷರು ಮಾತನಾಡುತ್ತ ಕಾಲಧರ್ಮ, ನಮ್ಮ ಕರ್ತವ್ಯಗಳನ್ನು ವಿವರಿಸಿ ಕಟೀಲಿನ ನಿರಂತರ ಧರ್ಮಸಕ್ತಿಯನ್ನು ಕೊಂಡಾಡಿದರು. ಮನರಂಜನಾ ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಂದ "ಲವಕುಶ" ವೆನ್ನುವ ಯಕ್ಷಗಾನ ಬಯಲಾಟವು ಅಭಿನಯಿಸಲ್ಪಟ್ಟಿತು.

ಮೂರನೆ ದಿನದ ಕಾರ್ಯಕ್ರಮವು ಶ್ರೀ ಕೆ. ಆರ್. ಆಚಾರ್, ಎಂ.ಎಲ್.ಸಿ. ಅವರ ಅಧ್ಯಕ್ಷತೆಯಲ್ಲೂ ಕೊನೆಯ ದಿನ ವಿಧಾನ ಸಭಾಧ್ಯಕ್ಷ ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲೂ ಜರಗಿ ಹಲವರ ಭಾಷಣಗಳಾದವು ಮನರಂಜನ ಕಾರ್ಯಕ್ರಮಗಳೂ ನೆರವೇರಿದವು.

ಡಾ| ಎ. ಪಿ. ಬಾಳಿಗರ ಸಂಸ್ಮರಣೆ

ಮಣಿಪಾಲ, ಏಪ್ರಿಲ್—ಮೈಸೂರು ವಿಧಾನ ಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗಾ, ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ|| ಟಿ ಎಂ ಎ. ಪೈ ಹಾಗೂ ಮೆಡಿಕಲ್ ರಿಲೀಫ್ ಸೊಸೈಟಿಯ ಗೌರವ ಕಾರ್ಯದರ್ಶಿ ಶ್ರೀ ಟಿ. ಎ. ಪೈಯವರು ಇಂದಿಲ್ಲಿ ಅಂತರಾಷ್ಟ್ರೀಯ ಖ್ಯಾತಿ ಗಳಿಸಿದ್ದ ಮುಂಬಾಯಿಯ ಹೆಸರಾಂತ ಶಸ್ತ್ರ ವೈದ್ಯರಾಗಿದ್ದ ಡಾ|| ಎ. ಪಿ. ಬಾಳಿಗಾರವರ ದಿವ್ಯ ಜೀವನವನ್ನು ಕೊಂಡಾಡಿದರು.

ಇಲ್ಲಿಗೆ ಹತ್ತಿರವಿರುವ ಕಲ್ಯಾಣಪುರದಲ್ಲಿ ಜನಿಸಿ ಪ್ರಖ್ಯಾತರಾದ ಡಾ|| ಬಾಳಿಗಾರವರ ಜನ್ಮದಿನದ ಸಂದರ್ಭದಲ್ಲಿ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡುತ್ತಾ ಡಾ|| ಬಾಳಿಗಾರವರಲ್ಲಿದ್ದ ವಿಶೇಷ ಕರುಣೆ ಹಾಗೂ ಸಹಾಯಹಸ್ತವನ್ನು ಅವರು ಉದಾಹರಿಸಿ ಅವರ ಸ್ಫೂರ್ತಿಯಿಂದ ಇನ್ನೂ ಅನೇಕರು ಖ್ಯಾತಿಗಳಿಸುವಂತಾಗಲೆಂದು ಹಾರೈಸಿದರು.

ಉಡುಪಿಯ ಮಿಷನ್ ಆಸ್ಪತ್ರೆಯ ಶ್ರೀಮತಿ ಜೆ. ಕರ್ಕಡಾರವರು ಇಷ್ಟು ಯಶಸ್ವಿ ವಿದ್ಯಾರ್ಥಿ ದಾದಿಯರಿಗೆ ಪ್ರಶಸ್ತಿ ಪತ್ರಗಳನ್ನಿತ್ತರು. ಅಸೋಸಿಯೇಟ್ ಪ್ರೊಫೆಸರ್ ರಾದ ಡಾ|| (ಶ್ರೀಮತಿ) ಎ. ಪದ್ಮರಾವ್‌ರವರು ಬಹುಮಾನಗಳನ್ನು ವಿತರಣೆ ಮಾಡಿದರು.

ಕೆನಡಾದ ಕಾರ್ಯಕರ್ತೆ ಶ್ರೀಮತಿ ಎಡೆಲ್ ವಿಕೆಟ್‌ರವರು ದಾದಿಯರಿಗಾಗಿ ಕೈಯೊತ್ತಿಗೆಯನ್ನು ಬಿಡುಗಡೆ ಮಾಡಿ ವಿಶ್ವಾಸ, ಆಸೆ ಹಾಗೂ ಪ್ರೀತಿ ಇಟ್ಟುಕೊಂಡು ಪ್ರಾಮಾಣಿಕತೆಯಿಂದ ಕೆಲಸ ಮಾಡುವಂತೆ ದಾದಿಯರಿಗೆ ಕರೆಯಿತ್ತರು. ಕುಮಾರಿ ಡಿ' ಸಿಲ್ವಾರವರು ಕಸ್ತೂರ್ ಬಾ ಜನರಲ್ ಆಸ್ಪತ್ರೆಯ ಆಡಳಿತ ಹಾಗೂ ಸಿಬ್ಬಂದಿ ವರ್ಗದವರಿಗೆ ವಿದ್ಯಾರ್ಥಿ ದಾದಿಯರ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಮೆಡಿಕಲ್ ಕಾಲೇಜಿನ ಡೀನ್ ಡಾ|| ಎ. ಕೃಷ್ಣರಾವ್‌ರವರು ವಂದನೆಗಳನ್ನು ಸಲ್ಲಿಸಿದರು.

ಭಾವಚಿತ್ರ ಅನಾವರಣ ಸಮಾರಂಭ ಉಡುಪಿ ಹಾಲು ಸರಬರಾಯಿ ಕೋಪರೇಟಿವ್ ಸಂಘದಲ್ಲಿ

ಉಡುಪಿ ಹಾಲು ಸರಬರಾಯಿ ಕೋಪರೇಟಿವ್ ಸೊಸೈಟಿಯಲ್ಲಿ ಸಂಸ್ಥಾಪಕ ಅಧ್ಯಕ್ಷ ಡಾ| ಟಿ ಮಾಧವ ಪೈಗಳ ಭಾವಚಿತ್ರ ಅನಾವರಣ ಸಮಾರಂಭವು ಲೋಕ ಸಭಾ ಸದಸ್ಯ ಶ್ರೀ ಜೆ. ಎಂ. ಲೋಬೋಪ್ರಭುಗಳ ಅಧ್ಯಕ್ಷತೆಯಲ್ಲಿ ತಾ. 27ರಂದು ನಡೆಯಿತು. ಭಾವಚಿತ್ರ ಅನಾವರಣವನ್ನು ವಿಧಾನ ಸಭಾ ಸ್ಪೀಕರ್ ಶ್ರೀ ಬಿ. ವೈಕುಂಠಬಾಳಿಗಾರವರು ನೆರವೇರಿಸಿದರು.

ಆರಂಭದಲ್ಲಿ ಶ್ರೀ ಸಿ. ರಾಜಶೇಖರಯ್ಯನವರು ಸ್ವಾಗತಿಸಿದರು. ಶ್ರೀ ಟಿ. ಎ ಪೈಗಳವರು ತಮ್ಮ ಭಾಷಣದಲ್ಲಿ ಆರಾಧನಾ ದೃಷ್ಟಿಯನ್ನು ಬಿಟ್ಟು ವಾಸ್ತವಿಕ ದೃಷ್ಟಿ ತಾಳಿ, ಗೋಸಂಪತ್ತನ್ನು ಹೆಚ್ಚಿಸಬೇಕೆಂದು ಹೇಳಿದರು. ಸೊಸೈಟಿಯ ಕಾರ್ಯದರ್ಶಿ ಶ್ರೀ ಪದ್ಮನಾಭ ಅವರು ವರದಿಯೊಪ್ಪಿಸಿದರು. ಶ್ರೀ ಬಿ. ವೈಕುಂಠ ಬಾಳಿಗಾರವರು ಡಾ| ಪೈಗಳ ಭಾವಚಿತ್ರ ಅನಾವರಣೆಗೈದು, ಡಾ| ಪೈಗಳು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು. ಅವರು ಗೋಸಂಪತ್ತನ್ನು ವೃದ್ಧಿಗೊಳಿಸುವ ಆವಶ್ಯಕತೆಯನ್ನು ವಿವರಿಸಿ, ಸಹಕಾರಿ ಸಂಸ್ಥೆಗಳಲ್ಲಿರುವ ವ್ಯಕ್ತಿಗಳು ಪ್ರಾಮಾಣಿಕವಾಗಿ ಕಾರ್ಯವೆಸಗಬೇಕೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ಡಾ| ಪೈಗಳು ಮಾತನಾಡುತ್ತಾ ದೇಶದ ಮುಂದಿರುವ ನಾನಾರೀತಿಯ ಸಮಸ್ಯೆಗಳನ್ನು ಸಹಕಾರೀ ತತ್ವದ ಮೂಲಕ ಪರಿಹರಿಸಿಕೊಳ್ಳಲು ಯತ್ನಿಸುವುದು ಅವಶ್ಯವೆಂದರು. ಜಿಲ್ಲಾಧಿಕಾರಿಯಾಗಿ ಬರತಕ್ಕವನು ವೆಟರ್ನರಿಯ ಬಗ್ಗೆ ಅನುಭವವನ್ನು ಹೊಂದಿದವನಾಗಿರಬೇಕೆಂದು ಕಡ್ಡಾಯಮಾಡುವುದು ಅವಶ್ಯವೆಂದರು. ವೆಟರ್ನರಿ ಡಾಕ್ಟರುಗಳಿಗೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನವನ್ನು ಕಲ್ಪಿಸಿ ಕೊಡುವುದು ಅವಶ್ಯವೆಂದರು.

ಶ್ರೀ. ಎನ್. ವಿ. ಕಾಮತರು ಮಾತನಾಡಿದ ಮೇಲೆ ಶ್ರೀ ಜೆ. ಎಂ. ಲೋಬೋ ಪ್ರಭುಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಗೋಸಂಪತ್ತನ್ನು ರಕ್ಷಿಸುವ ಕುರಿತು ದೇಶದಲ್ಲೇ ಆಂದೋಲನ ನಡೆದಿದ್ದು ಸರಕಾರವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ, ಡಾ| ಪೈಗಳಂಥವರು ವಿಧಾಯಕ ರೀತಿಯ ಯೋಜನೆಯನ್ನು ಮುಂದಿಡಬೇಕೆಂದು ಹೇಳಿದರು. ಈ ಬಗ್ಗೆ ಒಂದು ಸೊಸೈಟಿ ತಲೆಯೆತ್ತುವುದು ಸೂಕ್ತವೆಂದರು. ಅಲ್ಲದೆ ತಾನು ಇನ್ನು ಐದು ವರ್ಷಗಳಲ್ಲಿ ತನ್ನಿಂದಾದ ಸೇವೆಯನ್ನು ಸಲ್ಲಿಸಬೇಕೆನ್ನುವ ಉತ್ಸುಕತೆಯಿಂದಿರುವೆನೆಂದರು.

ಕೊನೆಯಲ್ಲಿ ಸೊಸೈಟಿಯ ಅಧ್ಯಕ್ಷ ಕವಿರಾಜ ಎಂ. ಪಿ. ಶೆಣೈಯವರು ಧನ್ಯವಾದ ಸಮರ್ಪಿಸಿದರು.

(ಮೂರನೇ ಪುಟದಿಂದ)

ವಲ್ಲವೆಂದು ನುಡಿದ ಅವರು ಶಿವಸೇನೆಯ ಉದಯ ಮತ್ತು ಅದರ ಜನಪ್ರಿಯತೆಗೆ ಕಾರಣವೇನೆಂಬುದನ್ನು ಕಂಡುಕೊಂಡು ಅದರ ಪರಿಹಾರಕ್ಕೆ ಯತ್ನಿಸಬೇಕೆಂದು ಹೇಳಿದ್ದಾರೆ.

ಶಿವಸೇನೆಯ ಚಟುವಟಿಕೆಗಳನ್ನು ರಾಷ್ಟ್ರ ಘಾತಕವೆಂದು ಸಾರಿ, ಅದನ್ನು ಹತ್ತಿಕ್ಕುವ ಅಧಿಕಾರ ಚವ್ಹಾಣರಿಗಿದೆ. ಆದರೆ, ಅವರು ಈ ಕುರಿತು ಕಾನೂನಿಗಿಂತ ಉಪದೇಶದತ್ತ ವಾಲಿದ್ದಾರೆ. ಇದಕ್ಕೆ ಬೇರೆ ಕಾರಣ ಹುಡುಕಬೇಕೆ?

ಚಂದಾ ಹಣ ಬಾಕಿ ಇರುವ ಚಂದಾದಾರರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....

ಅದಕ್ಕಾಗಿ ಚಿಂತಿಸುವಿರೇಕೆ?..................

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ..........

ವೀಗಲ್

VEEGAL

ಪೆಟ್ರೋಲ್ / ಚಿಮಿಣಿ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

2 H.P. 3·4 H.P. 5 H.P.

- ಈಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತವೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು :

ವಿಕ್ಟರ್ ಟ್ರೇಡಿಂಗ್ ಕೋಪೊರೇಶನ್

ಫಳನೀರು ರಸ್ತೆ, ಮಂಗಳೂರು-1. Ph. 6737

ಶನಿ ಹಿಡಿದದ್ದು !

(ಎರಡನೇ ಪುಟದಿಂದ)

ಡೆ ನಾನು ಮೂಕನಾಗಿ.

"ಸಾರ್, ನನಗೆ ಶಾಂತಿಯೊಡನೆ ಮದುವೆ ಬೇಕಿತ್ತು ನಿಜ. ಆದರೆ ಅಷ್ಟು ಬೇಗ ಬೇಡವಿತ್ತು. ನಾನು ಬಿ. ಕಾಂ ಪರೀಕ್ಷೆಗೆ ಕಟ್ಟುತ್ತಿದ್ದು ಈ ಬಾರಿ ನೇರಿ ಮೂರನೆಯ ಬಾರಿ ಸಾರ್. ಇನ್ನು ಕಟ್ಟುವುದೇ ಇಲ್ಲ.

"ನಮ್ಮ ಮನೆಯ ಸ್ಥಿತಿಯಂತೂ ಈಗ ಶೋಚನೀಯವಾಗಿದೆ ಸಾರ್.'

"ಶಾಂತಿ ಏನೋ ಸುಂದರಿ, ಲಾವಣ್ಯಮಯಿ. ಅವಳ ತಾರುಣ್ಯದ ಹಾವಭಾವಗಳ ವಿಲಾಸಗಳಲ್ಲಿ ನಾನು ಸೆರೆಸಿಕ್ಕಿದಂತಿದ್ದರೂ ಆಗೊಮ್ಮೆ ಈಗೊಮ್ಮೆಯಾದರೂ ನನ್ನ ಭವಿತವ್ಯದ ಬಗ್ಗೆ ನನಗೆ ಕಳವಳವಾಗದಿರುತ್ತಿರಲಿಲ್ಲ.

"ನನ್ನ ಮನಸ್ಸೇ ನನ್ನನ್ನು ಕೆಡಿಸಿತು ಸಾರ್. ನನ್ನ ಮನಸ್ಸನ್ನು ನನ್ನ ಹತೋಟಿಯಲ್ಲಿಡಲಾಗಲಿಲ್ಲ. ನಾನೇ ಮನಸ್ಸಿನ ಗುಲಾಮನಾಗಿ ನನ್ನೆಡೆಗೆ ಕೈಬೀಸಿ ಬರುತ್ತಿದ್ದ ಬೆಳಕನ್ನು ತಿರಸ್ಕರಿಸಿ ಕತ್ತಲೆಯನ್ನ ಅಪ್ಪಿಕೊಂಡ."

ಎನ್ನುತಿದ್ದ ಸುರೇಶನ ಸ್ವರ ಗದ್ಗದಿತವಾಗ ತೊಡಗಿತು. ಎರಡು ಕ್ಷಣಗಳಲ್ಲಿ ಆತ ಚೇತರಿಸಿಕೊಂಡ.

'ಮೊತ್ತ ಮೊದಲು ನಾನು ತಂದೆಯಾಗಲಿದ್ದೇನೆ ಎಂದು ತಿಳಿದು ಬಂದಾಗ ನನಗಿನಿತೂ ಸಂತೋಷವಾಗಿರಲಿಲ್ಲ, ಸಾರ್. ಬೇಡದ ಸಂಸಾರದ ಬಂಧನದಿಂದ ಮನಸ್ಸು ಭಾರವಾಗಿತ್ತು.

'ಈಗ ನನ್ನ ಅಣ್ಣನ ದುಡಿಮೆಯಿಂದ ಸಂಸಾರ ಸಾಗುವುದು ಕಷ್ಟವಾಗಿದೆ ಸಾರ್. ಆದ್ದರಿಂದಲೇ ಸಾಲ್ಪಿನಲ್ಲಿ ಸಪ್ಲೈಯರನ ಕೆಲಸಕ್ಕೆ ಸೇರಿದುದು. ಡಿಗ್ರಿ ಪಡೆದವರಿಗೂ ಉದ್ಯೋಗ ಸಿಗದ ಈ ಕಾಲದಲ್ಲಿ ನನ್ನಂತವರನ್ನ ಯಾರು ಕೇಳುವರು? ಮನುಷ್ಯನಿಗೆ ವಿದ್ಯೆಯಿಲ್ಲವಾದರೆ ಆತ ಪಶುಗೆ ಸಮಾನನಲ್ಲವೆ, ಸಾರ್?'

ಎಂದು ಆತ ಕಥೆ ಮುಗಿಸಿದಾಗ ನನಗರಿವಿಲ್ಲದೆ ನನ್ನ ಕಣ್ಣುಗಳು ತೇವಗೊಂಡುವು.

'ಸಾರ್, ನಾನು ಮೊದಲೇ ಹೇಳಿರಲಿಲ್ಲವೇ? ನನ್ನ ಕಥೆಯನ್ನು ನೀವು ಕೇಳಬಾರದೆಂದು. ಆದರೂ ಹೇಳಿಸಿದಿರಿ.

"ಉಪ್ಪುತಿಂದವ ನೀರು ಕುಡಿಯಲೇ ಬೇಕಲ್ಲವೇ ಸಾರ್?" ಎಂದು ಆತ ಕೇಳಿದಾಗ ನಾನು ತಲೆತಗ್ಗಿಸಿದ್ದೆ.

ಮರುದಿನ ಸುರೇಶನನ್ನು ಭೇಟಿಯಾದಾಗ ಆತ ಸ್ವಲ್ಪ ಸಂತೋಷದಲ್ಲಿದ್ದುದು ನನ್ನ ಗಮನಕ್ಕೆ ಬಂದಿತು. ಇದಕ್ಕೆ ಕಾರಣವೂ ಇಲ್ಲದಿರಲಿಲ್ಲ. ತಾನು ಈ ಬಾರಿ ಖಂಡಿತವಾಗಿ ಪಾಸಾಗುವನೆಂಬ ಭರವಸೆ ಆತನಿಗಿತ್ತು.

ನನ್ನೊಡನೆ ಮಾತನಾಡುತ್ತಾ, ನನ್ನ ಊರು, ವಿಳಾಸ ಎಲ್ಲವನ್ನೂ ಕೇಳಿ ತಿಳಿದ. ಮಾತ್ರವಲ್ಲ. ಇನ್ನಾದರೂ ತನ್ನ ಅದೃಷ್ಟ ಬಾಗಿಲು ತೆರೆಯಬಹುದೆಂಬ ಆಶಯವನ್ನು ವ್ಯಕ್ತಪಡಿಸಿದ.

— ೪ —

ಆಗ ತಾನೇ ಟಪ್ಪಾಲಿನಲ್ಲಿ ಬಂದ ಕವರನ್ನು ಒಡೆದು ಓದತೊಡಗಿದೆ "ಸಾರ್" ಎಂದು ಮೊದಲು ಮಾಡಿದ ಕಾಗದವನ್ನು ನೋಡಿ ಆರು ತಿಂಗಳ ಹಿಂದೆ ಭೇಟಿಯಾಗಿದ್ದ ಸುರೇಶನ ಜ್ಞಾಪಕವಾಯಿತು,

ಆ ಪತ್ರದಲ್ಲಿ—

ಸಾರ್,

ಈ ಪತ್ರವನ್ನು ಕಂಡು ನಿಮ್ಮ ನೆನಪು ಬರಬಹುದೆಂದು ಭಾವಿಸುತ್ತೇನೆ. ನಾನು ಈ ಬಾರಿ ಪರೀಕ್ಷೆಯಲ್ಲಿ ಉತ್ತೀರ್ಣನಾದರೂ ನನ್ನನ್ನು ಹಿಡಿದ ಶನಿ ಬಿಡಲಿಲ್ಲ ಸಾರ್. ಅದು ಒಂದು ರೀತಿಯಲ್ಲಿ ನನ್ನನ್ನು ತೊರೆದರೂ ಇನ್ನೊಂದು ರೀತಿಯಲ್ಲಿ ತನ ಪ್ರಭಾವವನ್ನು ಬೀರಿತು.

ಎರಡನೆಯ ಹೆರಿಗೆಗೆ ತವರಿಗೆ ಹೋದ ನನ್ನವಳು ಎಂದೂ ತಿರುಗಿ ಬರಲಾರದ ಊರಿಗೆ ಹೋದಳು.

ಇತಿ,
ಅದೃಷ್ಟಹೀನ,
ಸುರೇಶ,

ಪತ್ರವನ್ನೋದಿ ಮುಗಿಸಿದ ನನಗೆ ನಗಬೇಕೋ ಅಳಬೇಕೋ ಎಂದು ತಿಳಿಯದಾಯಿತು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

R. C. O. P. 8/1967

ಕೆ. ರಾಮಾನಂದ ಪೈ — ಅರ್ಜಿದಾರ

ಸುಂದರ ಆಚಾರ್ಯ — ಎದುರು

ಪುತ್ತೂರು ಕಸಬಾ ಗ್ರಾಮದ ಕೂರಾಡಿಯಲ್ಲಿರುವ ಕುಂಬ್ರ ದೇವಪ್ಪ ಆಚಾರ್ಯರ ಮಗ ಸುಂದರ ಆಚಾರ್ಯರಿಗೆ ಈ ಮೂಲಕ ತಿಳಿಸುವುದೇನಂದ್ರೆ—

ಪುತ್ತೂರು ಪಂಚಾಯತ ಬೋರ್ಡಿನ D. No. 28 [13] ನೇ ಅಂಗಡಿ ಕೋಣೆಯ ಸ್ವಾಧೀನತೆಗ [illegible] ಸಿಮ್ಮತ್ತಿಗಳಿಗ ಅರ್ಜಿದಾರರು [illegible] ಮಾಡಿದ ಅರ್ಜಿಯು ತಾರೀಕು 16–6–1967 ಕ್ಕೆ ಹಗಲು ಗಂಟೆ 11 ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಆ ದಿವ್ಸ ನೀವು ಹಾಜರಾಗಿ ವಾದ ಬುಸಿಕೊಳ್ಳ ತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು. ತಿಳಿದಿರಲಿ.

By order of court

(Sd.) M. Raghava
Advocate for Petitioner

ಪುತ್ತೂರು, 28–4–1967

ಭೂಲೋಕದ ನಂದನವನ

ಆಲ್ಸಮೀರದ ಗಾಜಿನ ಹಳ್ಳಿ

ಬೆಂಗಳೂರಿನ 'ಗಾಜಿನ ಮನೆ'ಯ ಹೆಸರರಿಯದವರಿಲ್ಲವೆಂದರೆ, ವಿಸ್ಮಯವಿಲ್ಲ. ಅದೆಷ್ಟು ಜನರ ಕಣ್ಣು-ಮನಗಳನ್ನು ಗಾಜಿನ ಮನೆ ತಣಿಸುತ್ತದೆ! ಬರಿಯ ಒಂದು ಗಾಜಿನ ಮನೆಯೇ ಹೀಗಿರುವಾಗ, ಗಾಜಿನಹಳ್ಳಿಯ ಕಥೆ ಹೇಗಿರಬೇಡ? ಈ ಗಾಜಿನಹಳ್ಳಿಯ ಮುಖ್ಯ ಉದ್ಯಮವೇ ಹೂ ಬೆಳೆಸುವುದು ಮತ್ತು ಅದನ್ನು ನಿರ್ಯಾತ ಮಾಡುವುದು ಎಂದಿರುವಾಗ ಅದು ಸೌಂದರ್ಯದ ಗನಿಯಾಗಿರಲೇ ಬೇಕು. ಇಂತಹ ಗಾಜಿನ ಹಳ್ಳಿಯೊಂದು ನೆದರ್‌ಲ್ಯಾಂಡಿನ ಆಲ್ಸಮೀರ್ ಎಂಬಲ್ಲಿದೆ.

ವರ್ಷ ವರ್ಷವೂ ಸುಮಾರು ೫೦ ಕೋಟಿ ಹೂಗಳನ್ನು ವಿಶ್ವದಾದ್ಯಂತ ರಫ್ತು ಮಾಡುವ ಒಂದು ಚಿಕ್ಕ ಹಳ್ಳಿ ಆಲ್ಸಮೀರ್. ಇದು ಆಮುಸ್ಟರ್‌ಡಾಮಿಗೆ ತೀರ ಹತ್ತಿರದಲ್ಲಿದೆ. ಇಲ್ಲಿನ ಮನೆಗಳಲ್ಲಿ ಹೆಚ್ಚಿನವು ಗಾಜಿನಿಂದಲೇ ನಿರ್ಮಾಣಗೊಂಡವುಗಳು. ಈ ಗಾಜಿನ ಮನೆಗಳಲ್ಲೇ ಜಗದ್ವ್ಯಾಪಿ ಸೌಗಂಧ ಬೀರುವ ಕುಸುಮಗಳು ಬೆಳೆಯುತ್ತವೆ. ಆದುದರಿಂದಲೇ ಆಲ್ಸಮೀರ್ ಎಂದರೆ, ತೋಟಗಾರಿಕೆಗೆ ಇನ್ನೊಂದು ಹೆಸರು.

ಇಲ್ಲಿ ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಹೂ ಬೆಳೆಯುತ್ತಾರೆ? ಸುಮಾರು ೧೦,೧೦೦ ಎಕ್ರೆ ಭೂಮಿಯಲ್ಲಿ ಇದರ ಮೇಲ್ವಿಚಾರಣೆಗೆಂದು ಸುಮಾರು ೧,೩೦೦ ನರ್ಸರಿ ಕೆಲಸಗಾರರಿದ್ದಾರೆ. ಸೌಂದರ್ಯರಾಶಿಯ ಮಧ್ಯೆ ಮಂದ ಸುಗಂಧ ಗಂಧವಾಹನನ್ನು ಸೇವಿಸುತ್ತಿರುವ ಈ ಸುಖ್ಯ ಜೀವಿಗಳಿಗೂ ಒಂದು ಸಮಸ್ಯೆ. ನೆದರ್‌ಲ್ಯಾಂಡಿನ ಹವೆ ಅವರಿಗೆ ಪ್ರತಿಕೂಲವಿದೆ. ವರ್ಷದ ಆರು ತಿಂಗಳು ಮಾತ್ರ ಇವರು ತೋಟಗಾರಿಕೆಯಲ್ಲಿ ಕಳೆಯಬಲ್ಲರು. ಉಳಿದ ಆರು ತಿಂಗಳುಗಳ ಕಾಲ ತಮ್ಮ ಹಿರಿಯರಂತೆ ಅನ್ಯ ಉದ್ಯೋಗಗಳಿಗೆ ಶರಣು ಹೋಗಿಯೇ ಜೀವನ ಸಾಗಿಸಬೇಕಾಗಿದೆ.

ಹಾಲೆಂಡಿನ ಹವೆಯು ಬೇಸಗೆಯ ಕಾಲದಲ್ಲಿ ಹೂ ಬಿಡಲು ಅನುಕೂಲವಿದೆ. ಈ ಐದಾರು ತಿಂಗಳುಗಳ ಕಾಲ ಪಟ್ಟಣದ ಜನರೆಲ್ಲ ರಜೆ ಕಳೆಯಲೆಂದು ಬೇರೆಡೆಗೆ ಹೋಗುತ್ತಾರೆ.

ಆಲ್ಸಮೀರಿನ ತೋಟಗಾರರು ತಮ್ಮ ಗಾಜಿನ ಮನೆಗಳಲ್ಲಿ ತಮಗೆ ಬೇಕಾದ ವಾತಾವರಣವನ್ನುಂಟು ಮಾಡಿ ತಮಗೆ ಬೇಕಾದ ಪುಷ್ಪಗಳನ್ನು ಬೆಳೆಸುತ್ತಾರೆ. ಇದು ಹೇಳಲಿಕ್ಕೆ, ಕೇಳಲಿಕ್ಕೆ ಬಹಳ ಸುಲಭ ವಿಧಾನ. ಹೂ ಬೆಳೆಸುವುದು ಮಾತ್ರ ಬಹಳ ಕಠಿನವಾದ ಕೆಲಸ. ಅಕ್ಟೋಬರದಿಂದ ಮೇ ತಿಂಗಳ ನಡುವೆ ಹೂಗಳಿಗೆ ಬೇಡಿಕೆ ಎಲ್ಲೆಲ್ಲಿಂದಲೂ ಬರುತ್ತದೆ. ಈ ಚಳಿಗಾಲದಲ್ಲಿ ಹೊರಗಡೆ ಮಿತಿಮೀರಿದ ಚಳಿಯಿರುವಾಗ ಗಾಜಿನ ಮನೆಗಳಲ್ಲಿ ಉಷ್ಣಾಂಶವನ್ನು ರಕ್ಷಿಸಿಕೊಂಡು ಬರುವುದು ಬಹಳ ಗಡುತರದ ಕೆಲಸ.

ಆಲ್ಸಮೀರ್ ಹಳ್ಳಿಯು ಪುಷ್ಪ ನಿರ್ಯಾತಕ್ಕೆ ಇಂದು—ನಿನ್ನೆ ಆರಂಭ ಮಾಡಿದ್ದಲ್ಲ. ಈ ಉದ್ಯಮವು ಈ ಹಳ್ಳಿಗೆ ೧೭ನೇ ಶತಮಾನದಿಂದಲೂ ಚಿರಪರಿಚಿತವಿದೆ. ಅಂದಿಗಿಂತ ಇಂದು ತೋಟಗಾರರಿಗೆ ಅನುಕೂಲತೆಗಳು ಹೆಚ್ಚಿವೆ. ಬೇಕಾದಂತೆ ತರಕಾರಿ, ಹಣ್ಣು ಹಂಪಲುಗಳನ್ನೂ ಇವರಿಂದು ಬೆಳೆಯಬಹುದು. ಹಳ್ಳಿಯ ಸುತ್ತಮುತ್ತ ದೊಡ್ಡ ದೊಡ್ಡ ಪಟ್ಟಣಗಳಿವೆ. ಆದುದರಿಂದ ಹೂಗಳಿಗೆ ಬೇಡಿಕೆಗೇನು ಅಭಾವ? ನದಿಗಳಲ್ಲಿ ದೋಣಿಗಳ ಮೂಲಕವಾಗಿಯೂ ಹೂಗಳ ರವಾನೆಯಾಗುತ್ತಿದೆ.

ಬೊಚ್ಚ ಹೊಸ ಹೂಗಳ ಮೇಲೆ ಮೋಹವಿರುವುದು ಆಶ್ಚರ್ಯವಲ್ಲ. ಹಾಗಾಗಿ ಆಲ್ಸಮೀರದಿಂದ ಇತರಡೆಗೆ ವಿಮಾನಗಳ ಮೂಲಕವೂ ಹೂಗಳ ಲಗುವಾಡೆಯಾಗುವುದು ತೀರ ಸಾಮಾನ್ಯ ಸಂಗತಿ. ಇಲ್ಲಿನ ಮುಖ್ಯ ಹೂ ಪೆಂಪರ್, ಪುಷ್ಪರಾಜ—ಗುಲಾಬಿ.

ಆಲ್ಸಮೀರದಲ್ಲಿ ಹೂಗಳನ್ನು ಕೊಂಡು ಕೊಳ್ಳುವುದು ತ್ರಾಸದಾಯಕವೇನಲ್ಲ. ಹೂ ಮಾರುವವರು ತಮ್ಮ ಅಂಗಡಿಗಳನ್ನು ಬೀದಿ—ಬೀದಿಯಲ್ಲಿ ತೆರೆದಿಡುತ್ತಾರೆ. ವಾಹನಗಳಲ್ಲಿ ಹೂ ತುಂಬಿ ಅವರ ಇತರತ್ರ ಒಯ್ದು ಮಾರುವವರೂ ಇದ್ದಾರೆ. ಅನೇಕ ನಗರಗಳಲ್ಲಿ ಹೂವಿನ ಅಂಗಡಿಗಳದ್ದೇ ಬೀದಿಯೊಂದಿದೆ. ಇಷ್ಟು ಚಳಿಗಾಲದಲ್ಲಿ ಮಗಡೊಂದು ಚಿಕ್ಕ ಹೂದೋಟವಾಗಿರ ಬಾಗ ನೋಡಲು ಹೇಗಿರಿಸೀತು?

ಇಷ್ಟೆಲ್ಲಾ ಹೂವನ್ನು ಡಚ್ಚರೇ ಉಪಯೋಗಿಸುತ್ತಾರೆಯೆ? ಛೆ, ಇಲ್ಲವೇ ಇಲ್ಲ. ಅವರಿಗೆ ಬೇಕಾದ ಹೂ ಸುಮಾರು ೧೦ ಕೋಟಿ ಮಾತ್ರ ಉಳಿದ ೫೦ ಕೋಟಿ ಹೂಗಳು ವಿದೇಶಗಳಿಗೆ ರಫ್ತು! ಆದಾಯಗಳಿಗೆಯ ಉದ್ಯಮ—ಬರಿ ಫ್ಯಾಶನ್ ಅಲ್ಲ.

ನಮ್ಮ ದೇಶದಲ್ಲೂ ಬೆಳೆಯುವ ಹೂವಿಲ್ಲ, ಅನುಕೂಲ ಹವೆ, ಸಂಮೃದ್ಧ ಭೂಮಿ, ನೀರಿನ ಅನುಕೂಲ—ಎಲ್ಲವೂ ಇವೆ. ತೋಟಗಾರಿಕೆಯೂ ಒಂದು ಉದ್ಯಮದ ರೂಪತಳೆದರೆ, ದೇಶದ ಸಮಸ್ಯ ಪರಿಹಾರ ಸೂತ್ರದ ಒಂದೆಳೆ ಕೈಸೇರಿದಂತಾಗಾವೂ ನೀವೂ ಇದಕ್ಕಾಗಿ ಏಕೆ ಪ್ರಯತ್ನಿಸಬಾರದು?

ರೈತ ಭಾಂದವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ಹೆ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು1.

NAVAYUGA 4—5—1967
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಪರಿಚಯ

ವಿಲಾರ್ ಔಷಧ ಸಸ್ಯೋದ್ಯಾನ

ಇಲ್ಲಿ ಜಗತ್ತಿನ ಮೂಲೆಮೂಲೆಯಿಂದ ತಂದು ಬೆಳೆಸಿದ ಮೂರು ಸಾವಿರ ಸಸ್ಯಗಳಿವೆ.

ಬೀತ್ಸ್ ಎಂಬ ಸಣ್ಣ ನದಿಯ ತೀರದ ವಷ್ಚರ್ಣಾಸ್ಕೋಯೆ ಹೆದ್ದಾರಿಯ ಹತ್ತಿರವಿರುವ ಮಾಸ್ಕೋ ಉಪ— ನಗರವೊಂದರಲ್ಲಿ 'ವಿಲಾರ್" ಎಂಬ ಹೆಸರಿನ ಔಷಧ ಸಸ್ಯೋದ್ಯಾನವು ಐವತ್ತು ಹೆಕ್ಟೇರು (ಸುಮಾರು 125 ಎಕರೆ) ಕ್ಷೇತ್ರಕ್ಕೆ ವ್ಯಾಪಿಸಿದೆ. ಇಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚು ಬಗೆಬಗೆಯ ಔಷಧ ಸಸ್ಯಗಳು ಬೆಳೆಯುತ್ತವೆ.

ಹೊಸ ಸಸ್ಯಗಳ ಕುರಿತು ಸಂಶೋಧನೆಗಾಗಿಯೂ, ಔಷಧಗಳ ತಯಾರಿಕೆಗಾಗಿಯೂ ಇಲ್ಲಿ ೬೦೦ ಜನ ಸಸ್ಯಶಾಸ್ತ್ರಜ್ಞರೂ, ರಾಸಾಯನಿಕ ಶಾಸ್ತ್ರಜ್ಞರೂ, ಔಷಧಿ ಶಾಸ್ತ್ರಜ್ಞರೂ, ಸೂಕ್ಷ್ಮ ಜೀವಶಾಸ್ತ್ರಜ್ಞರೂ, ಇನ್ನಿತರ ವಿಶೇಷಜ್ಞರೂ ಕಾರ್ಯನಿರತರಾಗಿದ್ದಾರೆ. ಪ್ರತಿವರ್ಷವೂ ಬೇಸಗೆಯಲ್ಲಿ ಈ ಕ್ಷೇತ್ರದ ಸಿಬ್ಬಂದಿಯು ನಾಡಿನ ವಿಭಿನ್ನ ಭಾಗಗಳಿಗೆ ಸಂಶೋಧನೆಯ ಯಾತ್ರೆಗಳನ್ನು ಕೈಗೊಳ್ಳುತ್ತಾರೆ. ಸಣ್ಣ ಎಲೆ—ಗುದ್ದಲಿಗಳನ್ನೂ ಹಲವು ಚೀಲಗಳನ್ನು ಹೊತ್ತು ಸಸ್ಯಾನ್ವೇಷಕರು 'ಟೈಗಾ' ಪ್ರದೇಶದಲ್ಲಿಯೂ, ಸೀಮೆಯಿಲ್ಲದ ಮರುಭೂಮಿಯಲ್ಲಿಯೂ, ಬೆಟ್ಟಗಳಲ್ಲೂ ಕಣಿವೆಗಳಲ್ಲೂ ತಿರುಗಾಡಿ ತ[illegible]ಟೀಲಗಳಲ್ಲಿ ಸಸ್ಯಗಳನ್ನು ತುಂಬಿಸಿಕೊಂಡು ಬರುತ್ತಾರೆ.

ಅವರು ತಂದ ಔಷಧೋಪಯೋಗಿಯಾದ ಕಾಡು ಸಸಿಗಳನ್ನು "ವಿಲಾರ್" ಉದ್ಯಾನದಲ್ಲಿಯೂ, ಅದರ ವಲಯ ಕೇಂದ್ರಗಳಲ್ಲೂ ಬೆಳೆಸಲಾಗುತ್ತದೆ. ಪ್ರತಿಯೊಂದು ಸಸಿಯನ್ನೂ ಚೆನ್ನಾಗಿ ಪರೀಕ್ಷಿಸಿ, ಅದರ ಔಷಧೋಪಯೋಗೀ ಗುಣಗಳನ್ನು ಪರೀಕ್ಷಿಸಲಾಗುತ್ತದೆ. ಅಮೂಲ್ಯ ಸಸ್ಯದ ಪ್ರಾಕೃತಿಕ ಮೂಲಾಧಾರಗಳು ವಿರಳವಾಗಿದ್ದಾಗ, ಆ ಸಸ್ಯವನ್ನು ಅಧಿಕ ಪ್ರಮಾಣದಲ್ಲಿ ಬೆಳೆಸಲಾಗುತ್ತದೆ. ಈ ಸಂಸ್ಥೆಯು ಭಾರತ ದೇಶದಿಂದ ತಂದಿರುವ ಒಂದು ಸಸ್ಯದಿಂದ ಹಿಂದರೈನ್ ಎಂಬ ಔಷಧವನ್ನು ತಯಾರಿಸಲಾಗುತ್ತದೆ. ಅದು ಪಾರ್ಶ್ವವಾಯುವಿಗೆ ಗುಣಕಾರಿಯಾಗಿದೆ. ದೂರಪ್ರಾಚ್ಯದ 'ಜಿನ್‌ಸೆಂಗ್', ನ್ಯೂಜೀಲ್ಯಾಂಡಿನ 'ಇರುಳ —ನೆರಳು' (ನೈಟ್‌ಷೇಡ್) ಸಸ್ಯಗಳು ಈ ಉದ್ಯಾನದಲ್ಲಿ ಚೆನ್ನಾಗಿ ಬೆಳೆಯುತ್ತವೆ. 'ಕಾರ್ಟಿಸೋನ್' ಮತ್ತು 'ಹೈಡ್ರೊ ಕಾರ್ಟಿಸೋನ್' ಔಷಧಗಳ ತಯಾರಿಕೆಗೆ ಬೇಕಾದ ಅಮೂಲ್ಯ ಕಚ್ಚಾ ವಸ್ತುವನ್ನು 'ಇರುಳು—ನೆರಳು' ಸಸ್ಯವು ಒದಗಿಸುತ್ತದೆ.

ಔಷಧ ಸಸ್ಯಗಳನ್ನು ಭೌಗೋಳಿಕ ಕ್ಷೇತ್ರಾನುಸಾರವಾಗಿ ವಿಂಗಡಿಸಲಾಗುತ್ತದೆ. ಯುರೋಪ್, ಏಶಿಯಾ ಮತ್ತು ಇತರ ಖಂಡಗಳ ಸಸ್ಯಗಳಿಗೆ ಪ್ರತ್ಯೇಕ ಪ್ರದೇಶಗಳನ್ನು ಗೊತ್ತುಪಡಿಸಲಾಗಿದೆ. ಸೋವಿಯೆತ್ ಗಣರಾಜ್ಯಗಳ, ಪ್ರದೇಶಗಳ, ಪ್ರಾಂತ್ಯಗಳ ಸಸ್ಯ ಭಂಡಾರವನ್ನೂ ಪ್ರತ್ಯೇಕ—ವಿಭಾಗಗಳಲ್ಲಿ ಬೆಳೆಸಲಾಗುತ್ತದೆ. ಸೋವಿಯೆತ್ ಪ್ರಮಾಣಿತ ಔಷಧ ಕೋಶದ (ಫಾರ್ಮಾ—ಕೋಪಿಯ) ಸಸ್ಯಗಳನ್ನು ಒಂದು ವಿಶಿಷ್ಟ ವಿಭಾಗದಲ್ಲಿ ಕೇಂದ್ರೀಕರಿಸಲಾಗಿದೆ—ಎಂದು ಈ ಸಸ್ಯೋದ್ಯಾನದ ನಿರ್ದೇಶಕರಾದ ಪ. ಕಿಬಾಲ್ಚಿಚ್‌ರವರು ತಿಳಿಸುತ್ತಾರೆ.

ಈ ಸಸ್ಯೋದ್ಯಾನದ ಅನೇಕ ವಿಭಿನ್ನ ಸಸ್ಯಗಳನ್ನು ವಿವರಿಸುವುದು ಅಸಾಧ್ಯ. ಈ ಕೇಂದ್ರೀಯ ಸಸ್ಯೋದ್ಯಾನದ ಮೇಲ್ವಿಚಾರಣೆಯಲ್ಲಿ ಸೋವಿಯೆತ್ ನಾಡಿನ ಬೇರೆ ಬೇರೆ ಹವಾಗುಣಗಳ ಪ್ರದೇಶಗಳಲ್ಲಿ ಪ್ರಾಯೋಗಿಕ ಶಾಖಾ ಕೇಂದ್ರಗಳು ನಡೆಯುತ್ತವೆ. ಸಮೀಪ ಭವಿಷ್ಯತ್ತಿನಲ್ಲಿ ಅಧಿಕ ಸಂಖ್ಯೆಯ ರಾಜ್ಯ ಕೃಷಿಕ್ಷೇತ್ರಗಳಲ್ಲಿ ಔಷಧ ಸಸ್ಯಗಳನ್ನು ಬೆಳೆಸಲಾಗುವುದು.

ಕಳೆದ ದಶಕದಲ್ಲಿ ಈ ಕೇಂದ್ರದ ಸಿಬ್ಬಂದಿಯ ಸಂಶೋಧನೆಯ ಫಲವಾಗಿ ೬೦ ಹೊಸ ಔಷಧಗಳನ್ನು ತಯಾರಿಸಿ, (ಲುಟೆನೂರಿಯಂ, ಕಾರ್ಡಿಯೊವಲೆನಂ ವಿಯೊಸ್ಪೋನಿಯಂ, ವ್ಯಾಡರ್ ಅರ್ಕ ಇತ್ಯಾದಿ) ಈಗ ಸೋವಿಯೆತ್ ನಾಡಿನಲ್ಲಿ ಅವುಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. 'ವಿಲಾರ್' ಉದ್ಯಾನದ ವಿಜ್ಞಾನಿಗಳು ಶಿಫಾರಸು ಮಾಡಿರುವ ಇನ್ನಿತರ ಅನೇಕ ಔಷಧ ಸಸ್ಯ ಸೋವಿಯೆತ್ ನಾಡಿನ ಆರೋಗ್ಯ ಸಚಿವಾಲಯವು ಇತ್ತೀಚೆಗೆ ಮಂಜೂರು ಮಾಡಿದೆ. ಈ ಸಂಸ್ಥೆಯ ವೈದ್ಯಕೀಯ ಜೀವ ವಿಜ್ಞಾನದ ಮತ್ತು ಇತರ ಶಾಖೆಗಳ ಪ್ರಯೋಗ ಶಾಲೆಗಳು ಈಗ ಅನೇಕ ಹೊಸ ಪರಿಣಾಮಕಾರೀ ಔಷಧಗಳನ್ನು ಪರೀಕ್ಷಿಸುತ್ತಿವೆ. ಸಸ್ಯ ಶಾಖೆಯು ಕೃಷಿ ಕ್ಷೇತ್ರಗಳಿಗೆ ಔಷಧ ಸಸ್ಯಗಳ ಸಾಗುವಳಿಯ ವಿಧಾನಗಳನ್ನು ಪರಿಚಯ ಮಾಡಿಕೊಡುತ್ತಿದೆ, ಯೋಗ್ಯವಾದ ಗೊಬ್ಬರಗಳನ್ನೂ, ಮೂಲಿಕಾ ನಾಶಕಗಳನ್ನೂ ಸೂಚಿಸುತ್ತದೆ ಮತ್ತು 'ವಿಲಾರ್' ಉದ್ಯಾನದಲ್ಲಿ ವಿಕಾಸಗೊಳಿಸಲಾದ ಉತ್ತಮ ಬೀಜಗಳನ್ನೂ, ಸಸ್ಯಗಳನ್ನೂ ಒದಗಿಸುತ್ತದೆ. ರಾಸಾಯನಿಕ ಪ್ರಯೋಗ ಶಾಲೆಗಳ ವೈಜ್ಞಾನಿಕ ಕಾರ್ಯಕರ್ತರು ನೂತನ ಔಷಧಗಳ ತಯಾರಿಕೆಗಾಗಿ ತಾಂತ್ರಿಕ ವಿಧಾನಗಳನ್ನು ವಿಕಾಸಗೊಳಿಸಿದ್ದಾರೆ— ಎಂದು, ಕಿಬಾಲ್ಚಿಚ್‌ರು ತಿಳಿಸಿದ್ದಾರೆ.

ಇಲ್ಲಿನ ಪ್ರಾಯೋಗಿಕ ಕಾರ್ಖಾನೆಯು ಈ ವರ್ಷ ಎರಡು ಹೊಸ ಔಷಧಗಳ ತಯಾರಿಕೆಯನ್ನು ಕೈಗೊಂಡಿದೆ. ಏಗೊರ್ಮೆಂಟ್ರಿನಂ ಮಲೆಯಿಕಂ' ಔಷಧವನ್ನು ಇದುವರೆಗೂ ಇತರ ದೇಶಗಳಿಂದ ತರಿಸಿಕೊಳ್ಳಲಾಗುತ್ತಿತ್ತು. 'ರುಬಿಯೊಂಟಿಂಕ್ಟೊರಂ ಎಲ್" ಔಷಧವು ಮೂತ್ರಜನಕಾಂಗದಲ್ಲಿ ರೂಪುಗೊಂಡ ಶಿಲೆಗಳ ಚಿಕಿತ್ಸೆಗೆ ಅತ್ಯಂತ ಗುಣಕಾರಿಯಾದುದು. ಉಬ್ಬಸದ ಉಪಶಮನಕ್ಕಾಗಿ ಒಂದು ಹೊಸ ಔಷಧವನ್ನು ಈಗ ಪರೀಕ್ಷಿಸಲಾಗುತ್ತಿದೆ.

ಈ ಅದ್ಭುತ ಆರೋಗ್ಯ ವನವನ್ನೂ, ಪ್ರಾಯೋಗಿಕ ಔಷಧಾಲಯವನ್ನೂ ಮಾಸ್ಕೋ ಹೊರ ವಲಯಗಳಲ್ಲಿ ನೋಡಿದ ತರುವಾಯ, ಮಾನವರ ಆರೋಗ್ಯಕ್ಕಾಗಿ ನಡೆಯುವ ಹೋರಾಟದಲ್ಲಿ ಹೊಸ ವಿಜಯಾಸ್ತ್ರಗಳನ್ನು ಔಷಧ ಜಗತ್ತಿಗೊದಗಿಸುವ ಕಾರ್ಯಭಾರಕ್ಕೇ ತಮ್ಮ ಜೀವಿತವನ್ನು ಮೀಸಲುಗೊಳಿಸಿರುವ ಜನರ ಮಹತ್ಕಾರ್ಯವನ್ನು ಯಾರಾದರೂ ಮುಕ್ತಕಂಠದಿಂದ ಪ್ರಶಂಸಿಸಲೇಬೇಕಾಗುತ್ತದೆ.

ಧೀರ ಹೆಜ್ಜೆ.

'ಎತ್ತ ಹೊರಟಿಹೆ ಎಲವೊ ಸಾಹಸಿ
ಸುತ್ತಕತ್ತಲು ಮುತ್ತಿರೆ?'
'ಎತ್ತ ಹೊರಟಿಹೆ ಧೈರ್ಯತೋರಿಸಿ
ವಿಶ್ವ ಕಡಲಲಿ ಮುತ್ತಿರೆ.'

'ಮುಚ್ಚು ಸಿಗುವುದೆ ಕುರುಡು ಕತ್ತಲೆ
ದಾರಿ ತಪ್ಪುವೆ ಜಾಗ್ರತೆ.'
'ಮುಚ್ಚು ಸಿಕ್ಕದೆ ಮನವು ಬತ್ತಲೆ
ತುಂಬಿಬರಲೇಕಾಗ್ರತೆ.'

ಇಟ್ಟ ಹೆಜ್ಜೆಯು ಹಿಂದಕಿಟ್ಟರೆ
ಜಗವು ನಗುವುದು ನೋಡಿಕೊ.'
'ಎಳೆಯ ತರುಣನ ಕಾಲಕಿತ್ತರೆ
ಮುಚ್ಚು ಸೋಜಿಗ, ಹಾಡಿಕೊ.'

'ನಿನ್ನ ಬದುಕಿನ ಬಳ್ಳಿ ಕಡಿಯಲಿ—
ಕಾಗಿ ಕೊಡಲಿಯು ಕೊಂಬೆಯು!'
'ಅಲ್ಲ; ಬೆಳೆಸುವೆ, ಬದುಕ ಗಿಡದಲಿ
ದೀರ್ಘ ಕೀರ್ತಿಯ ಕೊಂಬೆಯು.'

'ಕಡಲ ಗರ್ಭದಿ ನುಸುಳಿ ಮುತ್ತನು
ಪಡೆವ ಸಾಹಸನೇತಕೆ?'
'ಧೀರ ಹೆಜ್ಜೆಲಿ ನಡೆದು ಸತ್ತರೆ
ಹೆತ್ತ ಮಾತೆಗೆ ಪೊಗಳಿಗೆ.'

—ಪಿ. ಶ್ಯಾಮ ಭಟ್, ಪೆರಡಾಲ.

ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ.·ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

11—5—1967

೧೦
ಪೈಸೆ

ಕಥಾ ಪ್ರಪಂಚ

'ಬೋನಸ್ ಬಂತು'

ಬರೆದವರು
ಶ್ರೀ ಪಿ. ಜಿ. ಪರಮೇಶ್ವರಪ್ಪ.

'ಪ್ರಜಾವಾಣಿ' ದಿನಪತ್ರಿಕೆ ಹಿಡಿದು ಮನೆಯ ಕಡೆ ಸಂತೋಷದಿಂದಲೇ ಧಾವಿಸಿದ. ಬೋನಸ್ಸಿನ ವಿಚಾರ ಅವಳಿಗೆ ಹೇಳಬೇಕು ಅಂತ ಆತುರ ಬೇರೆ. ಬರುವ ಹಣದಿಂದ ಏನೇನು ಮಾಡಬೇಕು ಅಂತ ದಾರಿಯಲ್ಲಿಯೇ ಇಲ್ಲಸಲ್ಲದ ಯೋಚನೆಗಳು ತುಂಬಿದವು. ಸರ್ಕಾರದಂತೆ ನೂರಾರು ಯೋಜನೆಗಳು ಕ್ಷಣ ಮಾತ್ರದಲ್ಲಿಯೇ ಮಿಂಚಿದವು. ಆದರೆ ಕಾರ್ಯರೂಪಕ್ಕೆ ತರುವುದು ಯಾವುದು ಮೊದಲು? ನನ್ನ ಕಣ್ಣುಗಳು ಯಾವುದಾದರೂ ಬಣ್ಣದ ಕಾದಿದೆಯೆ? ನನ್ನ ಕಾಲುಗಳು ಜಾಗ್ರತೆ ಮುಂದೆ ಮುಂದೆ ಹಾಕಿದರೂ ದಾರಿಯೇ ಸರಿಯಲಿಲ್ಲ. ನಾಗರಾಜ ಶೆಟ್ಟಿ ಎದುರಿಗೆ ಕಂಡರೂ ಜನರ ಮಧ್ಯೆ ನುಸಿದ. ನನ್ನ ಗ್ರಹಚಾರಕ್ಕೆ ರಟ್ಟೆ ಹಿಡಿದ. ನಿಲ್ಲಿಸಿಯೇ ಬಿಟ್ಟ!

'ಏನಯ್ಯ ಪರಶಿವು, ಕಂಡರೂ ಕಾಣದಂತೆ ನಡೀತ್ತಿದ್ದೀಯಾ?'

'ನಿನ್ನ ನೋಡಲಿಲ್ಲ ರಾಜು.'

'ಅಂತೂ ಛಾನ್ಸ್ ಹೊಡೆದೇ ಬಿಟ್ಟೆ'

'ಛಾನ್ಸ್? ..ಯಾವ ಛಾನ್ಸ್? ನಿನ್ನ ಮಾತೇ ಅರ್ಥವಾಗುತ್ತಿಲ್ಲ ರಾಜು!'

'ಹಾಗಲ್ಲ ಕಂಡರೂ ಕಾಣದಂತೆ ನಡೆದೆ. ಇನ್ನು ಬೋನಸ್ಸು ಹಣ ಕೈಗೆ ಬಂತೂ ಅಂದ್ರೆ ?'

'ಓಹೋ. ಬೋನಸ್ಸು ವಿಚಾರವೇ?'

'ಅಲ್ಲಾ ಪರಶಿವು, Electricity department ನವರು ಬೋನಸ್ಸು ಕೊಡುತ್ತಾರೆಂದು ಪೇಪರ್‌ನಲ್ಲಿ ಓದಿ ನನಗೂ ಆಶ್ಚರ್ಯವಾಯಿತು. ಕಷ್ಟಕಾಲದಲ್ಲಿ ಅನುಕೂಲವಾಯ್ತು. ಏನಾದರೂ ಅನ್ನು ಪರಶಿವು, ಜಾಸ್ತಿ ಸಂಬಳ ಬರುವವರಿಗೆ ಅನುಕೂಲ ನೋಡು'

'yes yes ಆದರೂ ಇನ್ನೊಂದು ಸಂತೋಷದ ವಿಚಾರ ದಿನಕೂಲಿ ಮಾಡುವವರಿಗೂ ಕೊಡುತ್ತಾರೆ'

'It is very good news. ಅಂತೂ ಜವಾನನಿಂದ ಹಿಡಿದು ದಿವಾನನವರೆಗೆ ಬೋನಸ್ಸು ಸಿಕ್ಕಂತಾಯಿತು.'

"ಹೌದಯ್ಯ ನಾಗರಾಜ ಶೆಟ್ರೆ. ಜಾಗ್ರತೆ ಹಣ ಕೈಗೆ ಬಂದರೆ ಚನ್ನಾಗಿರುತ್ತೆ"

"ದೀಪಾವಳಿಗೆ ಕೊಡುತ್ತಾರೋ?

'ಈಗ ಸದ್ಯಕ್ಕೆ 4% ಕೊಡಿ ಅಂತಾ employees ಕೇಳಿದ್ದಾರೆ."

"ಹಾಗಾದರೆ ದಸರಕ್ಕೆ ಕೊಡುತ್ತಾರೆ. ಪರಶಿವು, ಬೋನಸ್ಸು ಬಂತೂ ಅಂತ ಕಾಫಿ ತಿಂಡಿ ಬೇಡವೇನಯ್ಯ?'

'ಹಣ ಕೈಗೆ ಬರಲಯ್ಯ'

"ನೋಡು, ನನಗೂ ವರ್ಗವಾಯಿತು. ಈ ವಾರದಲ್ಲಿ ರಿಲೀವ್ ಮಾಡುತ್ತಾರೆ. ಆ ಮೇಲೆ ನಾನೆಲ್ಲೋ ನೀನೆಲ್ಲೋ ಇದ್ದರಿಂದ....'

"ಸಿಕ್ಕಿರುವ ಛಾನ್ಸ್ ಕಳೆದುಕೊಳ್ಳಬಾರದು. ತಾನೇ?"

'Yes, Yes, ಕಾಫಿ ತಿಂಡಿ ತಿಂದು ಹಾಗೇ ಕನ್ನಡ ಪಿಕ್ಚರ್ ಕಿಲಾಡಿರಂಗ'

"ಅಯ್ಯೋ ನಿನೊಬ್ಬ ಮಂಗನೇ ಕಣಯ್ಯ. ಸಿನಿಮಾ ಸಾಧ್ಯವಿಲ್ಲ ನೋಡು ಅವರಲ್ಲಿ ಬೇರೆ ಅವಳೊಬ್ಬಳೆ ಮನೆಯಲ್ಲಿದ್ದಾಳೆ. ಅವಳಿಗೆ ತಿಳಿಸಿಲ್ಲ."

"ಹೆಂಡ್ತಿಗೆ ಹೆದರುತ್ತೀಯೋ ಬೆಪ್ಪತಕ್ಕಡಿ!"

"ನಾನಲ್ಲ ಕಣೋ... ನೀನು, ನಾನು ಎಷ್ಟು ಸಾರಿ ನಿನ್ನ ಮನೆಗೆ ಬಂದಾಗ ನೋಡಲಿಲ್ಲ? ಎಲ್ಲಾ ಹೋಮ್ ಮಿನಿಸ್ಟರ್ ಕೈಲಿ ನಿಮ್ಮ ಜುಟ್ಟನ್ನು ಕೊಟ್ಟು ನನ್ನ ಎದುರಿಗೆ ಜಂಬ ಹೊಡಿಯುತ್ತಿದ್ದೀಯಲ್ಲಾ. ಅಲ್ಲ ಶೆಟ್ರೆ, ಅವಳು ನನಗೋಸ್ಕರ ಕಾಯುತ್ತಿರುತ್ತಾಳೆ ಹೇಳದೆ ಹೋದರೆ ಅವಳಿಗೂ ದಿಗಿಲು. ಇನ್ನೊಂದು ದಿನ ಬೇಕಾದರೆ ..'

'No No ... Mr. Parasiva'

"ನನ್ನ ಬಲವಂತ ಮಾಡಬೇಡಯ್ಯ"

"ಬಲವಂತ ಮಾಡುವುದಕ್ಕೆ ನೀನೇನು ಹುಡುಗ್ನೇ? ಹೇ__ನಡಿಯಯ್ಯ"

ನನ್ನ ರಟ್ಟೆ ಹಿಡಿದುಕೊಂಡು ಸಿನಿಮಾ ಟಾಕೀಸ್ ಹತ್ತಿರ ಎಳೆದು ಕೊಂಡು ಹೋಗೇ ಬಿಟ್ಟ ಬೃಹಸ್ಪತಿ.

ಮನೆ ತಲುಪಿದಾಗ ಹತ್ತು ಗಂಟೆಮೇಲಾಗಿತ್ತು. ಅವಳು ಸಹ ಸ್ವಲ್ಪ ಮುನಿಸಿನಿಂದಲೇ ಬಾಗಿಲು ತೆಗೆದಳು.

"ಸಿನಿಮಾ ಚನ್ನಾಗಿತ್ತೆ?"

"'ಹ್ಞಾ!....ಸಿನಿಮಾ? ..ಯಾರು ಹೋಗಿದ್ರು?'

'ಅಲ್ರೀ, ಹತ್ತು ಗಂಟೆ ಮೇಲೆ ಬಂದ್ರು ಸಿನಿಮಾಕ್ಕಲ್ಲದೆ ಇನ್ನೆಲ್ಲಿಗೆ ಹೋಗುತ್ತೀರಾ ಹೇಳಿ? ಮನೆಯಲ್ಲಿ ಹೆಂಡ್ತಿ ಇದ್ದಾಳೆ ..ಮಕ್ಕಳಿದ್ದಾರೆ ಅವರನ್ನೆಲ್ಲಾ ಕರೆದು ಕೊಂಡು ಹೋಗಬೇಕು ಅಂತಾ ಯೋಚನೆ ಮಾಡಿದ್ರ ತಾನೆ?"

'ಏನು ಮಾಡಲಿ ಹೇಳು? ನಾನೂ ಮನೆಗೆ ಜಾಗ್ರತೆ ಬರಬೇಕು ಅಂತ ಬಂದೆ. ದಾರಿಯಲ್ಲಿ ನಾಗರಾಜ ಶೆಟ್ಟಿ ಸಿಕ್ಕಿದ್ದೇ ತಪ್ಪಾಯಿತು ನೋಡು. ಬೇಡಾ ಅಂದ್ರು ಕೇಳದೆ ಸಿನಿಮಾಕ್ಕೆ ಎಳೆದೇ ಬಿಟ್ಟ.

"ಸುಳ್ಳು ಕಣ್ರೀ ಹೇಳುತ್ತೀರಾ? ನೀವು ಬ್ಬರೇ ಹೋಗಿ ಬಂದೆ ಅಂದ್ರೇ ನಾನೇನು ಬೇಡಾ ಅನ್ನುತ್ತೇನೆಯೇ? ದುಡಿದು ತಂದು ಹಾಕುವವರು ನೀವು. ನನಗೆ ಕೇಳುವ ಅಧಿಕಾರ ತಾನೆ ಎಲ್ಲಿದೆ? ಮತ್ತೆ ಓತಿಕ್ಯಾತಕ್ಕೆ ಬೇಲಿ ಬೇರೆ ಸಾಕ್ಷಿ. ಆಗಿದ್ದಾಯಿತಲ್ಲ, ಬನ್ನಿ ಹೊತ್ತಾಯಿತು. ಊಟ ಮಾಡುವಿರಂತೆ"

"ನಿನ್ನದು ಆಯಿತೋ?'

"ಹುಂ. ಆಯಿತು. ಒಂದು ಜೊಂಪು ನಿದ್ದೆ"

'ನನಗೋಸ್ಕರ ಕಾಯಬೇಡ, ಮಕ್ಕಳ ಜತೆಯಲ್ಲಿಯೇ ಊಟ ಮಾಡಿ ಬಿಡು ಅಂತಾ ಎಷ್ಟು ಸಾರಿ ಹೇಳಿದ್ದೇನೆ'

ಮುಖ ತೊಳೆದು ಕೊಂಡು ಬನ್ನಿ. ತಟ್ಟೆ ಹಾಕುತ್ತೇನೆ"

ಅವಳು ಅಡಿಗೆ ಕೋಣೆ ದಾರಿ ಹಿಡಿದಳು. ನಾನು ಬಟ್ಟೆ ಬಿಚ್ಚಲು ರೂಮು ಹೊಕ್ಕೆ.

'ನೀನು ಹಾಗೇ ತಟ್ಟೆ ಎಳೆದು ಕೋ. ಹಾಗೇ ಬಡಿಸಿಕೊಂಡರಾಯಿತು.

'ಆ ಲಿ'

'ಸ್ವಲ್ಪ, ಉಪ್ಪಿನ ಕಾಯಿ ಹಾಕು. ಶಂಕ್ರು, ರಮೇಶ ಊಟ ಮಾಡಿದರೇ"

'ಹುಂ'

'ಒಂದು ಸಂತೋಷದ ಸಮಾಚಾರ'

'ಏನು?'

'ನಮಗೆಲ್ಲಾ ಬೋನಸ್ಸು ಕೊಡುತ್ತಾರೆ

'ಮಕ್ಕಳಿಗೂ ..."

ಅನ್ನ ತುತ್ತು ನುಂಗುತ್ತಲೇ ಕೇಳಿದಳು.

'ನಿನ್ನ ತಲೆ....ನಿಮ್ಮಪ್ಪನಿಗೂ ಕೊಡುತ್ತಾರೆ. ಆಫೀಸಿನಲ್ಲಿ ಕೆಲಸ ಮಾಡುವವರಿಗೆ ಕೊಟ್ಟರೆ ಸಾಕಾಗದ."

ಎಲ್ಲಾ ಎಷ್ಟು ಬರಬಹುದು?'

'ಸದ್ಯಕ್ಕಂತೂ ನೂರು ರೂಪಾಯಿ ಸಿಕ್ಕುತ್ತೆ'

'ಅನ್ನ ಹಾಕಲೇ'

'ಸಾಕು. ಸಂಜೆ ಶೆಟ್ಟಿ ಜತೆ ದೋಸೆ ತಿಂದಿದ್ದೆ. ಹಸಿವಿಲ್ಲ. ಬೆಳಿಗ್ಗೆ ಆಫೀಸಿಗೆ ಜಾಗ್ರತೆ ಹೋಗಬೇಕು. ಹಾಸಿಗೆ ಹಾಸಿದೆ ತಾನೆ?"

'ಹುಂ, ಎಲೆ ಅಡಿಕೆ ಬೀರಿನಲ್ಲಿದೆ ನೋಡಿ'

'ಈಗೇನು ಬೇಡಾ'

ಎಂಜಲು ಕೈ ತೊಳೆದುಕೊಂಡು, ಟವಲಿಂದ ಕೈ ಒರೆಸುತ್ತಾ ಹಾಸಿಗೆ ಮೇಲೆ ಉರುಳಿದೆ.

ಆಫೀಸಿನಿಂದ ತಂದ ನೂರು ರೂಪಾಯಿಗಳನ್ನು ಕೈಚೀಲದಲ್ಲಿ ಕುಳಿತು ಮತ್ತೊಮ್ಮೆ ಎಣಿಸುತ್ತಿದ್ದ. ಅವಳು ನೋಟುಗಳನ್ನು ತಿನ್ನುವಂತೆ ನೋಡ ತೊಡಗಿದಳು. ಹೆಂಗಸರ ಕಣ್ಣು ಸರ್ಕಾರದ ಕಣ್ಣು ಹಣದ ಮೇಲೆ ಬಿತ್ತು ಅಂದ್ರೇ ತೀರಿತು ನೋಡಿ, ಒಂದು ಪೈಸಾ ಇಲ್ಲದಂತೆ ಖರ್ಚು ಮಾಡುವ ತನಕ ಅವರಿಗೆ ಸಮಾಧಾನವಿರುವುದಿಲ್ಲ. ನಾನು ಸಹ ಅಕ್ಕ ತಂಗಿಯರನ್ನು ನೋಡಿದ್ದೇನೆ. ದೊಡ್ಡಮ್ಮ, ಚಿಕ್ಕಮ್ಮ... ಅತ್ತೆ ಸೊಸೆಯಂದಿರು ....ಅಕ್ಕಪಕ್ಕದ ಹೆಂಗಸರೆಲ್ಲ (ಪರಿಚಯಸ್ಥರು ಮಾತ್ರ) ನೋಡಿದ್ದೇನೆ. ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಹಣ ಕೇಳುವವರೇ. ಅಂತಹರಲ್ಲಿ ನನ್ನ ಹೆಂಡ್ತಿ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಲ್ಲ. ಕೈಗೆ ಹಣ ಬಂದಾಗಲೇ ಪಟ್ಟಿಗೆ ಮೂಲೆಯಲ್ಲಿದ್ದ ಹರಿದ ಸೀರೆ ಜ್ಞಾಪಕಕ್ಕೆ ಬರುತ್ತಿರುತ್ತಾಳೆ. ಗಂಡ ಎಂಬ ಪ್ರಾಣಿ ಕಣ್ಣಿರ ನೋಡಿದ್ರು ನೋಡದಂತೆ ಇದ್ರೆ ಯಾವ ಹೆಂಡ್ತಿಗೆ ತಾನೆ ಸಿಟ್ಟು ಬರುವುದಿಲ್ಲ?

'ಏನೊಂದ್ರೆ!'

ಹೆಂಗಸು ಅಂದ್ರೇ....ಆದರೆ.... ಮಾತನಾಡುವಾಗ ಕೊನೆಗೆ 'ರಿ' ಅಂತಾ ಬ್ರೇಕ್ ಹಾಕಿದರೂ ಅಕ್ಸಿಡೆಂಟ್ ಆಗುವಂತೆ ಮಾಡುತ್ತವೆ

'ಹುಂ'

'ನನಗಂತೂ ಸೀರೆನೇ ಇಲ್ಲ. ಹೇಗೂ ದಸರಾ ಬಂತು. ಕೈಗೆ ಬೋನಸ್ ಬಂತು ಫಿತ್ತ್ರ ಬಳಕೆಗೆ ಎರಡು ಸೀರೆಯಾದ್ರು ತನ್ನಿ.'

'ನಿಮ್ಮ ಕಣ್ಣಿಗೆ ಹಣವೇ ಕಾಣುತ್ತೆ ಬಾರದು ಆಫೀಸಿಗೆ ನಡೆದೂ ನಡೆದೂ ನನಗೆ ಸಾಕಾಗಿ ಹೋಗಿದೆ. ಬಂದಿರುವ ಹಣ ಕೊಟ್ಟು ಸೈಕಲ್ ತೆಗೆದುಕೊಳ್ಳಬೇಕು'

'ನೂರು ರೂಪಾಯಿಗೆ ಸೈಕಲ್ ಬರುತ್ತೆ?'

'ಉಳಿದ ಹಣ ಕಂತಿನ ಮೇಲೆ ತೀರಿಸಿದರಾಯಿತು. ಖಾಲಕ್ ಸುಬ್ಬಯ್ಯನವ ಕೊಡಿಸುತ್ತಾರೆ'

'ಹಾಗಾದರೇ ಕಂತಿನಲ್ಲಿ ಏನೂ ಬೇಕಾದ್ರೂ ಸಿಕ್ಕುತ್ತವೆ ಎನ್ನಿ'

'ಹುಂ ಹುಂ, ಸಿಕ್ಕುತ್ತವೆ. ಈ ಊರಲ್ಲಿ ಹೆಂಗಸು ಕಂತಿನ ಮೇಲೆ ಬರುತ್ತಾರಂತೆ.'

'ಎಂತಹ ಮಾತನಾಡುತ್ತೀರಿ? ಹೇಗಾದರೂ ಖಾಲಕ್ ಗೊತ್ತು ಅಂತಿರಲ್ಲಾ. ಹಾಗೇ ಎರಡು ಸೀರೆನೂ...'

'ನಿನ್ನ ತಲೆ.... ಮುತ್ತೈದೆಯಾದವರು ಕಂತಿನಿಂದ ತಂದ ಬಟ್ಟೆಬರೆ ಉಟ್ಟು ಕೊಳ್ಳಬಾರದು"

'ನೀವೂ ಸಹ ಬೀಳಿಟೋಪಿಯಂತೆಯೇ ಶಾಸ್ತ್ರ ಶಾನೂನೇ ಮಾಡಿಬಿಟ್ರಲ್ಲಾ.' ಆದಕ್ಕೆ ಮತ್ತೆ ಏನ್ರೇನೂ ಬೇಡಾ. ಹಣವಿದೆ, ನಗದೇ ತಂದುಬಿಡಿ"

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೭	೧೧—೫—೧೯೬೭	No. 37

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಭಾರತದ ಜಾತ್ಯತೀತತೆಯ ಅಮರ ಕೀರ್ತಿಗೊಬ್ಬ ಪ್ರಮಾಣ ಪುರುಷ ದಿ|| ಮೌಲಾನಾ ಅಬ್ದುಲ್ ಕಲಾಮ್ ಆಜಾದ್

ಇದು ಕೂಡದು

ಕರ್ನಾಟಕದ ವಿಧಾನ ಸಭೆ ಬೆಂಗಳೂರಲ್ಲಿ ಸೇರಿತು— ಬರೇ ಐದು ದಿನಗಳ ಮಟ್ಟಿಗೆ. ಇದು ಬಜೆಟ್ ಅಧಿವೇಶನವಾಗಬೇಕಿತ್ತು, ತಿಂಗಳುಗಟ್ಟಲೆ ನಡೆಯಬೇಕಿತ್ತು. ಬರಿಯ ಐದು ದಿನಗಳಿಗೆ ಮೊಟಕುಗೊಳಿಸಿದ್ದೇಕೆ ಎಂದು ರೇಗಾಡಿದುವು— ವಿರೋಧಿ ಪಕ್ಷಗಳು. ಪರಿಣಾಮ? ಎಲ್ಲಾ ಸದಸ್ಯರು ಮೂರು ದಿನಗಳ ಕಾಲ ವಾಗ್ವಾದ, ವಾಕ್ಕಲಹ, ಪರಸ್ಪರ ದೋಷಾರೋಪಣೆಯಲ್ಲಿಯೇ ಕಳೆದರು. ಸಭಾಧ್ಯಕ್ಷ ಬಿ. ವೈಕುಂಠ ಬಾಳಿಗಾರವರ ಯಾವ ಆದೇಶವನ್ನೂ ಪಾಲಿಸುವಷ್ಟೂ ಮಾನ್ಯ ಸದಸ್ಯರು ಅಧಿಕ ಗಮನ ಹರಿಸಿದಂತೆ ಕಾಣಲಿಲ್ಲ. ಮೂರು ದಿನಗಳ ಬಿರುಸಿನ ಗರ್ಜನೆಯ ನಂತರ ಬರಿಯ ಹದಿನೈದೇ ನಿಮಿಷಗಳಲ್ಲಿ ಒಮ್ಮತವಾಯಿತು. ಮತ್ತೆ ಕಾರ್ಯಕಲಾಪ ಮುಂದುವರಿಯಿತು.

ವಿಧಾನ ಸಭೆಗಳಲ್ಲಿ ವಾಗ್ವಾದವಾಗುವುದನ್ನು ಯಾರೂ ವಿರೋಧಿಸುವುದಿಲ್ಲ; ಒಂದು ದೃಷ್ಟಿಯಲ್ಲಿ ಶಾಸನ ಸಭೆಗಳು ಇರುವುದೇ ದಕ್ಕೆ, ಇದಕ್ಕೇನೇ ಎನ್ನೋಣ. ಆದರೆ, ಖೇದವೆಂದರೆ, ಯಾವ ಘನ ಉದ್ದೇಶವೂ ಇಲ್ಲದೆ ಜನ ಪ್ರತಿನಿಧಿಗಳು ಮೂರು ದಿನಗಳನ್ನು ಕೊಂದರಲ್ಲಾ ಎಂಬುದು. ಒಂದು ದಿನ ವಿಧಾನ ಸಭಾಧಿವೇಶನ ನಡೆಯಲು ಬೇಕಾದ ವೆಚ್ಚವನ್ನು ಗಣನೆಗೆ ತೆಗೆದುಕೊಂಡರೂ ಇದೇನೂ ಕಡಮೆಯೆನಿಸದು. ರಾಜ್ಯದ ಶಾಸನ ಸೂತ್ರಗಳನ್ನು ಚಲಾಯಿಸುವ ಈ ಪ್ರತಿನಿಧಿಗಳು ಅಸಂತೋಷವನ್ನು ವ್ಯಕ್ತಪಡಿಸುವ ವೇಳೆ ತಮ್ಮ ಸ್ಥಾನಮಾನಗಳನ್ನು ಗಮನಿಸದೆ ಹೋಗುವುದು ಶೋಚನೀಯ, ರಾಜ್ಯದ ಜನತೆಯ ದುರ್ದೈವ. ಸಭಾಧಿವೇಶನವನ್ನು ಮೊಟಕು ಮಾಡುವುದು-ಉದ್ದಮಾಡುವುದು— ಇದು ಸಭಾಧ್ಯಕ್ಷರಿಗೆ ಸೇರಿದ್ದು. ಸಭೆ ಕರೆಯುವವರು ಅವರು ತಾನೆ? ಸರಕಾರದೊಡನೆ ಅವರು ಸಮಾಲೋಚಿಸುತ್ತಾರೆ. ಇದೂ ನಿಜ. ಅದಂ, ಇದೊಂದೇ ಕಾರಣವನ್ನು ಎತ್ತಿಕೊಂಡು ಸಭಾ ಕಾರ್ಯಕ್ರಮಗಳನ್ನು ನಡೆಯಗೊಡದಂತೆ ಮಾಡುವುದು, ಜನತೆಯ ಪ್ರತಿನಿಧಿಗಳೆನಿಸಿಕೊಳ್ಳುವವರಿಗೆ ಭೂಷಣಪ್ರಾಯವಲ್ಲ, ಶೋಭನೀಯವೂ ಅಲ್ಲವೆಂಬುದನ್ನು ಅವರು ಮಾತುಗಳಲ್ಲಿಯೇ ಹೇಳಬೇಕಾಗುತ್ತದೆ. ಸಭಾಧ್ಯಕ್ಷರ ಪದವಿ, ಪ್ರಾರ್ಥನೆ, ಆದೇಶವೆಲ್ಲವನ್ನೂ ಕಡೆಗಣಿಸುವುದೆಂದರೆ, ಇದಕ್ಕಿಂತ ಹೆಚ್ಚಿನ ಅನೀತಿ ಬೇರೆಯಿದೆಯೆನ್ನುವಂತಿಲ್ಲ. ಶಾಸನ ನಿರೂಪಕರು, ರಾಜ್ಯವನ್ನು ಆಳುವವರು, ರಾಜ್ಯದ ನಾಯಕಮಣಿಗಳು ತಮಗೆ ಜನತೆಯಿತ್ತ ಸದವಕಾಶವನ್ನು ರಚನಾತ್ಮಕ ಕಾರ್ಯಕ್ರಮಗಳಿಗೆ ಉಪಯೋಗಿಸದೆ ದುರುಪಯೋಗಗೊಳಿಸುವುದು, ವ್ಯರ್ಥಗೊಳಿಸುವುದು ನ್ಯಾಯೋಚಿತವಲ್ಲ. ಮುಂದು ಹುಡುಗರಂತೆ ಮಾನ್ಯಸದಸ್ಯರು ವರ್ತಿಸಿದರೆ, ಇದರಿಂದ ಅವರ ಕಾಲ ಮಾತ್ರವಲ್ಲ, ಜನತೆಯ ಸಮಯವೂ ಹಣವೂ ಪೋಲಾಗುವುದೆಂಬುದನ್ನು ಮರೆಯಬಾರದು.

ರಾಜ್ಯದ ಶಾಸನ ಸಭೆಯಲ್ಲಿ ಮೂಡಿ ದಂತಹ ಬಿಕ್ಕಟ್ಟು ಮುಂದಾದರೂ ಮೂಡಬಾರದು. ಒಂದು ವೇಳೆ ತಲೆದೋರಿತೆಂದರೂ ಆ ಬಗ್ಗೆ ಜಗಳ ಕಾಯದೆ ಶಾಂತ ಪರಿಹಾರವರಸಬೇಕು. ಸರಕಾರವು ಮುಂಗಡ ಪತ್ರದ ಅಂಕ ಸಂಖ್ಯೆಗಳಲ್ಲಿ ಪರಿವರ್ತನೆಯಾಗಬೇಕಾದುದರಿಂದ ಅಧಿವೇಶನವನ್ನು ಮೊಟಕುಗೊಳಿಸಲಾಯಿತೆಂದು ತಿಳಿಸಿತು. ಆದರೆ, ಯಾವುದೇ ಘನೋದ್ದೇಶವಿಲ್ಲದೆ ಅಧಿವೇಶನ ಕರೆಯುವ ಆಗತ್ಯವಾದರೂ ಏನಿತ್ತು? ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆಯು ನಡೆಯುವ ವೇಳೆ ಈ ಪ್ರತಿನಿಧಿಗಳಿಗೆ ಮತದಾನ ಮಾಡಲು ಅನುಕೂಲವಾಗುವಂತೆ ರಾಜಧಾನಿಯಲ್ಲಿ ಸೇರುವ ಸದವಕಾಶವಿದೆಂದು ಜನತೆ ತಿಳಿದರೆ ತಪ್ಪಾಗಲಾರದು. ಜನತೆ ತಮ್ಮ ವೆಚ್ಚದಿಂದಲೇ ಮತ ನೀಡಲು ಮತಗಟ್ಟೆಗೆ ನಡೆಯುವಂತೆಯೇ ಈ ಜನಪ್ರತಿನಿಧಿಗಳೂ ಮತದಾನ ಮಾಡುವುದಾದರೆ ಹೇಗಾದೀತು? ಆಗ ನಿರ್ದಿಷ್ಟ ಕಾರ್ಯಕ್ರಮವಿಲ್ಲದ 'ಗೊಡ್ಡು' ಅಧಿವೇಶನ ನಡೆಯಲಾರದು; ವ್ಯರ್ಥಗೊಂದಲವೂ ಮನಸ್ತಾಪವೂ ತಲೆದೋರಲಾರದು. ವಿಧಾನ ಸಭಾಧ್ಯಕ್ಷರ ಧರ್ಮಸಂಕಟವೂ ತಪ್ಪುವುದು.

ಶ್ರೀ ಗಿರಿ

ರಾಷ್ಟ್ರಪತಿ—ಉಪರಾಷ್ಟ್ರಪತಿಗಳ ಘನ ಪದವಿಗಳಿಗೆ ಚುನಾವಣೆ ನಡೆಯಿತು. ಉಪರಾಷ್ಟ್ರಪತಿ ಸ್ಥಾನಕ್ಕೆ ಶ್ರೀ ವಿ. ವಿ. ಗಿರಿಯವರು ಅತ್ಯಧಿಕ ಬಹುಮತದಿಂದ ಆಯ್ಕೆ ಹೊಂದಿದ್ದಾರೆ— ಇವರು ಕಾಂಗ್ರೆಸ್ ಪಕ್ಷ ನಾಮಾಂಕಿತರು. ಶ್ರೀ ಗಿರಿಯವರು ಸದ್ಯ ಕರ್ನಾಟಕದ ರಾಜ್ಯಪಾಲರಾಗಿದ್ದರು. ಇದಕ್ಕೆ ಮೊದಲಿಗೂ ಹಲವಾರು ಎಡೆಗಳಲ್ಲಿ ರಾಜ್ಯಪಾಲರಾಗಿ ತಮ್ಮ ಕರ್ತವ್ಯಗಳನ್ನು ಸಮರ್ಥ ರೀತಿಯಲ್ಲಿ ಪಾಲಿಸಿಕೊಂಡು ಬಂದ ಹೆಗ್ಗಳಿಗೆಯವರದು. ಎಪ್ಪತ್ತ ಮೂರು ವರ್ಷದ ಶ್ರೀ ಗಿರಿಯವರು ಕಾರ್ಮಿಕ ಮುಂದಾಳುವೆಂದು ಹೆಸರು ಪಡೆದವರು; ಮತ್ತು ಸೇವೆಯಿಂದಲೇ ಒಂದರಿಂದ ಇನ್ನೊಂದು ಮೇಲ್ಪದವಿಯನ್ನು ಪಡೆದವರು. ಅವರು ಪದವಿಗಳನ್ನು ಬಯಸಿ ಹೋಗಲಿಲ್ಲ, ಪದವಿಯೇ ಅವರನ್ನು ಅರಸಿಕೊಂಡು ಬಂದಿತು. ತಮ್ಮ ಹೊಸ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಆತ್ಮ ವಿಶ್ವಾಸ ಅವರಿಗೂ ಇದೆ; ಜನತೆಗೂ ಇದೆ. ಶ್ರೀ ಗಿರಿಯವರಿಗೆ ತಮ್ಮ ಹೊಸ ಸೇವಾಕ್ಷೇತ್ರದಲ್ಲಿಯೂ ಸಫಲತೆ ಲಭಿಸಲಿಯೆಂದು ಹಾರೈಸಿ ಅವರನ್ನು ಅಭಿನಂದಿಸುತ್ತೇವೆ.

ವಚನ ಸುಧೆ

ಗೋಭಿಃ ಪಶು ಭಿರಶ್ವೈಶ್ಚ
ಕೃಷ್ಯಾ ಚ ಸುಸಮೃದ್ಧಯಾ।
ಕುಲಾನಿ ನ ಪ್ರರೋಹಂತಿ
ಯಾನಿ ಹೀನಾನಿ ವೃತ್ತತಃ॥

ದನ, ಪಶು, ಕುದುರೆ ಹಾಗೂ ಸಮೃದ್ಧವಾದ ಗದ್ದೆಗಳಿಂದ ಕೂಡಿದವನಾದರೂ ಸದಾಚಾರ ಹೀನನಾದ ಮಾತ್ರಕ್ಕೆ ಆವನು ಅವನತಿ ಹೊಂದುತ್ತಾನೆ.

ಅಮರ ವಾಕ್ಯಗಳು

ಕಾಗೆ ಗೂಡ ಕಟ್ಟುತ್ತದೆ. ಅದರಲ್ಲಿ ಕೋಗಿಲೆಯು ಮರಿಯ ಡುತ್ತದೆ.

o o o

ಮುದುಕನು ವಿವಾಹ ಮಾಡಿಕೊಂಡು ಒಡತಿಗೆ ಒಡವೆ ವಸ್ತುಗಳನ್ನು ಕೊಟ್ಟು ಸಾಕಿದರೆ, ಯೌವನಸ್ಥನು ಬಂದು ಅವಳನ್ನು ಅನುಭವಿಸಿ ಹೋಗುತ್ತಾನೆ.

o o o

ತಂದೆಯು ಮಗನನ್ನು ಹೆತ್ತು ಸಾಕಿ ಸಲಹಿ ವಿದ್ಯಾ ಬುದ್ಧಿಗಳನ್ನು ಹೇಳಿ ಅವನನ್ನು ಪ್ರಾಯಸ್ಥನನ್ನಾಗಿ ಮಾಡುತ್ತಾನೆ. ಯುವತಿಯು ಆ ಸಮಯಕ್ಕೆ ಬಂದು ಅವನನ್ನು ಸ್ವಾಧೀನ ಮಾಡಿಕೊಂಡು ತನ್ನಿಂದ ಸಕಲ ಸುಖಗಳನ್ನೂ ಹೊಂದಿ ಆ ಮಗನನ್ನು ತಂದೆಗೆ ಅವಿಧೇಯನಾಗುವಂತೆ ಮಾಡುತ್ತಾಳೆ.

o o o

ನಿನ್ನೆ ನೀನು ತಿಂದ ಆಹಾರವು ಈ ಹೊತ್ತಿಗೇನಾಯಿತು? ನಿನ್ನ ಬಾಲ್ಯವೇನಾಯಿತು? ನಿನ್ನ ಯೌವನವೇನಾಯಿತು? ನಿನ್ನ ಕರಿ ಕೂದಲು ಏನಾಯಿತು? ಈ ನೆರೆ ಕೂದಲು ಎಲ್ಲಿಂದ ಬಂತು?

o o o

ಸಂಗ್ರಹ—ರಾ. ಕೃ. ಹೆಬ್ಬಾರ್.

ನವಸಣ್ಣನ ಸರಸ

"ಪಾಸ್‌ಪೋರ್ಟ್ ನೀಡಿಕೆಯನ್ನು ನಿಯಮಬದ್ಧಗೊಳಿಸುವ ರಾಷ್ಟ್ರಪತಿಗಳ ವಿಶೇಷಾಜ್ಞೆ ಹೊರಟಿದೆ...."
"ನ್ಯಾಯ ಮೂರ್ತಿ ಕೋಕಾ ಸುಬ್ಬರಾಯರು ಇದಕ್ಕೆ ದಾರಿ ಮಾಡಿಕೊಟ್ಟವರಲ್ವೆ?"

ಗೇಪ ರಾಜ್ಯದಲ್ಲಿ

ನೋಡೋರಿಲ್ಲಾ ಕುರುಡರಾದ್ರೆ?

೧

‘ಓಯ್, ಇಲ್ಲಿ ನೋಡೀಂದ್ರೆ....’

‘ಎಂಥದನ್ನ ನೋಡೋದು...ನೋಡಿ ನೋಡಿ ಸಾಕಾಗಿ ಹೋಗಿದೆ....’

‘ಆಹ...ಎಷ್ಟ ನೋಡಿದ್ರೂ ಸಾಕಾಗೋದಿಲ್ಲಾಂತ ಅಂದು ಹೇಳಿದವ್ರು ಈಗ ....’

‘ಎಂಥದನ್ನ ?’

“ನೀವೇ ಹೇಳಿ....”

“ಏ, ನಾನೆಂಥದೇ ಹೇಳೋದು...... ನಾನೇನೋ ಹೇಳ್ಬಿಟ್ರೆ ನೀನು....”

“ಅಲ್ರಿ, ಒಂದು ನಾಲ್ಕು ವರ್ಷದ ಮೊದ್ಲು ನೋಡಿದ್ರೆ ದೃಷ್ಟಿಯಾದೀತೂಂತ ಕದ್ದು ಕದ್ದು ನೋಡಿ ನೋಡಿ ಮತ್ತೂ ಮತ್ತೂ ಆಸೆಗಣ್ಣ ಹಿಡ್ಕೊಂಡು ....’

‘ಏ ...ಸಾಕುಮಾಡೇ ಸಾಕುಮಾಡು.’

‘ಏನು? ಯಾಕ?’

‘ಯಾಕೆ ಅಂದ್ರೆ.. ನಾಲ್ಕು ವರ್ಷದ ಹಿಂದಿನ ಕಥೆ ಬರೀ ಎಷ್ಟಿಬಿಷನ್ನಿಗೆಲಾಯಿಕ್ಕು....’

‘ಯಾಕೇ’

‘ಯಾಕೆ ಅಂದ್ರೆ....ಕೇಳಿಲ್ಲವೇ ಕವಿವಾಣಿಯನ್ನ.... ಗತಕಾಲಂ ಲಯಕಾಲವಾಯ್ತು...’

ಇರಬಹುದು. ಆದರೆ, ವರ್ತಮಾನಕ್ಕಿಂತ ಭೂತದ ಸ್ಮರಣೆಯೇ ಹಿತಂದಾಯಕ ದುದೂಂತ್ಲೂ ಅನ್ನಾರೆ....?

‘ಅನ್ನೋರು ಅನ್ಲಿ... ಒಬ್ಬೊಬ್ಬ ಒಂದೊಂದು ರೀತಿ ಅನ್ನಾರೆ.... ಇರಬಹುದು... ಆದರೆ, ಹಿಂದೆ ಹಾಗಾಯ್ತೂಂತ ಇಂದೂ ಹಾಗೆಯೇ ಆಗಬೇಕೂಂದ್ರ ಸರಿ ಹೋಗುತ್ತೇನೆ?’

“ಯಾಕೆ ಆಗಬಾರದೂಂತ...ನೋಡಿ, ಕೋಟಿ ವರ್ಷಗಳಿಗೂ ಮೊದಲು ಸೂರ್ಯ ಭೂಮಿಗೆ ಬೆಳಕು ಕೊಡುತ್ತೇ ಇದ್ದ; ಇವತ್ತಿಗೂ ಕೊಡುತ್ತಾನೆ; ನಾಳೆಯೂ ಕೊಡುತ್ತಾನೆ; ಇದು ತ್ರಿಕಾಲಾಬಾಧಿತ ಸತ್ಯ....”

‘ಸರೀನ್ನಿ. ಆದ್ರೆ ಪೂರ್ಣ ಸರಿಯಲ್ಲ’

‘ಯಾಕೆ?”

“ಯಾಕೇಂತ ಕೇಳು ...ಮೊದಲು ಸೂರ್ಯನೇ ಭೂಮಿಯ ಸುತ್ತು ತಿರುಗಿ ದಿವಾಕರನೆನಿಸಿಕೊಂಡ, ಆದ್ರೆ ಈಗ ಆತ ದಿವಾಕರನಲ್ಲ....”

‘ಅಂದ್ರೆ ಮತ್ಯಾರು ದಿವಾಕರ....’

‘ನ್ಯಾಯವಾಗಿಯಾದ್ರೆ ಭೂಮಿಯೇ ....’

“ಅದು ಹೇಗೆ?’

“ನೋಡು, ಈಗ ಸೂರ್ಯ ತಿರುಗೋದಿಲ್ಲ. ಆತ ಸ್ಥಿರ. ಆತನ ಸುತ್ತ ಭೂಮಿಯೇ ತಿರುಗಿ ಹಗಲ ರಾತ್ರಿಗಳನ್ನ ಮಾಡಿಕೊಳ್ಳುತ್ತದೆ...”

‘ಅಂದರೆ’

“ಅಂದ್ರೆ ಏನು? ಸೂರ್ಯ ಒಂದು ಸ್ಥಿರವಾದ ಗ್ರಹ ಆತನ ಸುತ್ತಲೂ ಭೂಮಿ ಚಲಿಸುತ್ತದೆ....ಎರಡು ಬಗೆಯ ಚಲನೆಯಿಂದ ಭೂಮಿಗೆ, ಒಂದು ವಾರ್ಷಿಕ ಚಲನೆ, ಇನ್ನೊಂದು ದೈನಿಕ ಚಲನೆ...’

‘ಹ್ಞಾ. ಅದು ಸರೀರಿ...ಶಾಲೆಯಲ್ಲಿ ಗತಕಾಲದಲ್ಲಿ ಎಲ್ಲೋ ಓದಿದ್ದ ನೆನಪಾಗುತ್ತೆ. ಆದ್ರೆ ನೋಡಿ, ಹಿಂದಿನ ಕಾಲದಲ್ಲೂ ಇದ್ದದ್ದು ಹೀಗೆಯೇ. ನಾವು ವಾಸವಾಗಿರುವ ಭೂಮಿಯು ತಿರುಗುತ್ತಿರುವುದು ನೇರಗಣ್ಣಿಗೆ ಕಾಣಿಸೋದಿಲ್ಲ; ಸೂರ್ಯನಾದ್ರೆ ತಿರುಗುವುದು ಕಾಣಿಸುತ್ತದೆ-ಆದ್ರಿಂದ ಹಿಂದಿನವ್ರು ಹಾಗೆ ಹೇಳಿದ್ದರೂನ್ನಿ. ಈಗ ಸಂಶೋಧನೆಗಳ ಫಲವಾಗಿ....ಸತ್ಯ ಬೆಳಕಿಗೆ ಬಂತೂನ್ನಿ.... ಇದ್ರಲ್ಲೇನು ವಿಶೇಷ?’

‘ಏನೂ ಇಲ್ಲಾನ್ನಿ...ಆದ್ರೆ, ಪುಣ್ಯಕ್ಕೆ ಭೂಮಿ ತಿರುಗುತ್ತೇಂತ ಅಂದವನ ತಲೆ ತಿರುಗುತ್ತೇಂತ ಹೇಳ್ಲಿಲ್ಲ ತಾನೆ....’

“ಆಹಹ... ನೀವೂ ಹೀಗನ್ನೋದಾ... ಹಾಗೆ ಅಂದದ್ದ ಯಾರೋ ಒಬ್ಬನನ್ನು ಪಾದ್ರಿ ಚರ್ಚಿನಿಂದ ಹೊರ ಹಾಕಿದ್ದನಂತಲ್ಲ...’

“ಹ್ಞೂಂ....ಅದು ಆ ಕಾಲ...ನಮ್ಮಲ್ಲೂ ಇತ್ತು ನೋಡು, ಧರ್ಮಪೀಠಾಧಿಪತಿಗಳ ತಗ್ಗಳ ರಾಯಭಾರ....’

‘ಹೌದನ್ನಿ ...’

‘ಪಾಪ, ಕಲ್ಲಾಗಿ ಕಂತಿರೋ ದೇವ್ರನ್ನೇ ಓಡಿಸಿ ಬೇರೆಯೇ ಕಲ್ಲನ್ನು ತಂದು ಮುಖ ತಿರುಗಿಸಿ ನಾಟಿ ಇವನೇ ದೇವ್ರೂಂತ ಜನತೆಯ ತಲೆಯಲ್ಲಿ ಹೇರಿದ ಪುಣ್ಯಾತ್ಮರೂ ಇದ್ದಾರೇನ್ನಿ.... ಆದ್ರೆ ಒಂದು.... ಹೀಗೆಲ್ಲಾ ಅನ್ಯಾಯ ನಡೆದಾಗ್ಲೂ ಜನ ಸುಮ್ಮನೆ ತಾಳಿಕೊಂಡಿತ್ತಲ್ಲಾಂತ....’

‘ಅದೇ ನಾನೂ ಅನ್ನೋದು...ಅದ್ರೆ ನೋಡಿ ಅಂದು ಗುರುಮನೆ ರಾಜಮನೆಗಳ ನಡುವೆ ಅಂತಹ ಸಂಬಂಧವಿತ್ತು....’

‘ಹೌದು, ಹೌದು....ತಕ್ಕ ಮತ್ತು ರಿಕ್ಕರ ನಡುವಣದ್ದು...’

‘ಓಯ್, ಇಲ್ಲ ನೋಡಿ, ರಾಜನಿಂದೆ, ಗುರುನಿಂದೆ, ಪಿತೃನಿಂದೆ...ಇವೆಲ್ಲಾ ಮಾಡಿದ್ರೆ ಅಂಥಂತಮುಸ್ಸು....’

‘ನೋಡು, ಇಂಥದೇ ಶಾಸ್ತ್ರ ಬರೆದು, ಜನರಿಗೆ ಕಲಿಸಿಬಿಟ್ರೆ, ಮತ್ತೆ ಅವರ ತಲೇ ಮೇಲೆ ಸವಾರಿ ಮಾಡದೆ ಏನು?”

“ಅಂದ್ರೆ ಅದೆಲ್ಲಾ ಸುಳ್ಳೂಂತ ಅನ್ನೋದೇ ನೀವು?’

“ಛೆ..ಛೆ...ಹಾಗೆ ಅನ್ನೋರ ನಾಲಿಗೆಗೆ ಹುಳ ಬಿದ್ದೀತು....’

‘ಮತ್ತೆ....’

‘ಹಾಗೆ ಇರೋ ಜನತೆಯ ಅಚಲ ಭಾವನೆಯ ದುರುಪಯೋಗ ಮಾಡಿಕೊಂಡೆವಲ್ಲಾಂತ ಗುರುಮನೆ—ಅರಮನೆಗಳ ಬಗ್ಗೆ ರೇಗು....’

‘ಅದು ಸರೀನ್ನಿ. ನೋಡಿ, ಅವ್ರು ಮಾಡಿದ್ದ ಅನ್ಯಾಯ—ಅತ್ಯಾಚಾರಗಳ ಫಲವನ್ನೀಗ ಅವ್ರೇ ಉಣ್ಣುತ್ತಿದ್ದಾರೆ....’

‘ಅಂದ್ರೆ....?’

‘ಅಂದ್ರೆ ಮತ್ತೆಂಥದು? ಜನಜನದ ಧರ್ಮಾಚರಣೆಯ ಗುತ್ತಿಗೆ ಪಡೆದಿದ್ದ ಗುರುಮನೆಯಿಂದ ಗೋಳೋ ಎನ್ನುತ್ತಿದೆ. ಅವರ ಮಾತನ್ನು ಅವರ ಖಾನ್‌ದಾನ್‌ಗಳೇ ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ಅನ್ನುವಾಗ ಮತ್ತೆ...”

“ಹ್ಞೂಂ....”

“ಇನ್ನು ಅರಮನೆಗಳು.... ಪಾಪ, ಇವರ ಮಕ್ಕಳು ಇನ್ನು ‘ಅಂಗಾಲ್ ನಹೀಂ’ ಎಂದು ಗೆರಟೆ— ಕೋಲು ಹಿಡಿದು ತಿರುಗಿದ್ರೆ ಸರಿ...”

‘ಅದೂ ಸರೀನ್ನು ಅನಕ್ಕೇ ಅಂದದ್ದು ನಾನು, ಗತಕಾಲಂ ಲಯಕಾಲವಾಯ್ತೂಂತ...”

‘ಅದು ಸರಿ. ಲಯವಾದರೂ ಅದರ ನೆನಪು ಅಧ್ಯಾಯಮಾನವಾಗಿಯೇ ಉಳಿತ್ತದೆ.....”

‘ಹೌದಪ್ಪ....ಆದ್ರೆ ಬರಿಯ ಅಧ್ಯಾಯಮಾನವಾಗಿದ್ದ ಮಾತ್ರಕ್ಕೆ ಇಂದಿನ ದಿನ ದೂಡುವುದು ಸಾಧ್ಯವೆ?’

‘ಅದು ಹೌದೂನ್ನಿ...’

‘ಮತ್ತೆಂಥದು? ಒಂದು ಕಾಲದಲ್ಲಿ ಸತ್ಯ, ನ್ಯಾಯವಾಗಿರೋದು ಇಂದಿಗೆ ಅಸತ್ಯ— ಅನ್ಯಾಯವಾಗುವುದೂ ಅಸಾಧ್ಯವಲ್ಲ...’

‘ಹಾಗಲ್ಲ....’

‘ಮತ್ತೆ?’

ಒಂದು ಕಾಲದಲ್ಲಿ ಸತ್ಯದಂತೆ ನ್ಯಾಯದಂತೆ ಜನರು ಕಣ್ಣಿಗೆ ಕಾಣಿಸೋದು....’

“ಅಂದ್ರೆ ಸತ್ಯ-ನ್ಯಾಯಗಳ ಮುಸುಕಿನೆಡೆಯಲ್ಲಿ ಅಡಗಿರೋದು....’

‘ಹ್ಞೂಂ...”

“ಸರಿಯೊಯ್ತಲ್ಲಾ....ನಾಲ್ಕು ವರ್ಷಗಳ ಹಿಂದೆ ಅಡಗಿದ್ದ ಸತ್ಯ ಹೊರಪಟ್ಟಿತ್ತು ಈಗ...”

‘ಓಯ್, ಹುಸು ನಿಲ್ಲಿ...ಈಗದ್ದೂ ಸತ್ಯಾಂತ ನೀವು ಹೇಗೆ ಸಾಧಿಸುತ್ತೀರಿ?’

‘ಆ್ಞ...ಏನೆಂದೆ?’

‘ನೀವು ಹಿಂದೆ ಕಂಡುಕೊಂಡದ್ದು ಅಂದಿಗೆ ಸತ್ಯವಾಗಿದ್ದು, ಇಂದಿಗೆ ಅಸತ್ಯಾಂತ ತವಗೆ ಕಾಣಬಹುದೂನ್ನಿ. ಆದರೆ, ಇಂದು ತವಗೆ ಸತ್ಯಾಂತ ಮನವರಿಕೆಯಾಗಿರೋದು ಮುಂದೊಂದು ದಿನ....’

‘ಅದೂ ಹೌದೆ...ಆದ್ರೂ ಇಂದಿಗೆ ಇದೇ ಸತ್ಯ....’

“ಆದ್ರೆ ಒಂದು ಮಾತು. ಸತ್ಯ ಅನ್ನೋದು ಓತೀಕಾಟವಲ್ಲ...’

‘ಮತ್ತೆ ಅದು ನಾಲ್ಕು ನಾಲ್ಕು ಎಂಟು ಅನ್ನುವಂತೆ ಅಂಕ ಗಣಿತದ ಸಿದ್ಧಾಂತವೇನು?”

“ಸತ್ಯ ಅನ್ನೋದು ಸ್ಥಿರ—ನಿಮ್ಮ— ನಮ್ಮ ಸೂರ್ಯನ ಹಾಗೆ. ಅದನ್ನು, ಅದರ ಆಳವನ್ನ ಅರಿಯಲಾರದವ್ರು ಅದು ಹಾಗೆ, ಹೀಗೇಂತ ಬಂಬಡಿ ಬಾರಿಸಿದ ಮಾತ್ರಕ್ಕೆ...ಅದು ಹಾಗೆ ಹೀಗೆ ಆಗುತ್ತೇನು?”

‘ಇಲ್ಲಾ ಇಲ್ಲ...’

‘ನೋಡಿ, ಮೊನ್ನೆ ಮೊನ್ನೆ ಸುಡುಗಾಡು ಆಗಿದ್ದುದು, ಇನ್ನು ಮುಂದೆ ನಂದನವನವಾಗುತ್ತೆ....ಆದರೆ, ಮತ್ತೂ ಮುಂದೆ ಮತ್ತೆ ಸುಡುಗಾಡೇ ಆಗಬಹುದು.... ಆದರೂ...”

ಆದರೂ....’

‘ಎಂಥದೆ?’

“ನೋಡಿ ಇಲ್ಲಿ .... ಈಗ ಎಲ್ಲೋ ಅಲ್ಪ ಸಂಖ್ಯಾತ ಕೋಮಿನವರು ಸುಡುಗಾಡಾಗಿ ಉಪಯೋಗಿಸುತ್ತಿರುವ ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕೆಂದು ಸರಕಾರ ವಶ ಪಡಿಸಿಕೊಂಡಿತಂತೆ...’

ಹ್ಞೂಂ...ಹೌದೆ?’

‘ಆ ಸರಕಾರದ ಈ ಕೃತಿಯಿಂದ ತನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೇಂತ ಪರಿಸ್ನ ನ್ಯಾಯಾಲಯದಲ್ಲಿ ಅಂಟ ಹಾಕಿದ್ದಂತೆ...’

‘ಹ್ಞಾಂ...ಮತ್ತೆ?’

‘ಮತ್ತೆ ಎಂಥದು? ಒಂದು ನಿರ್ದಿಷ್ಟ ಭೂಮಿಯನ್ನು ಸುಡುಗಾಡಾಗಿ ಉಪಯೋಗಿಸುವ ಹಕ್ಕು ಮೂಲ ಭೂತವಾದುದಲ್ಲಾಂತ ತೀರ್ಪು ಹಾಕಿದ್ರಂತೆ....’

‘ಅಯ್ಯೋ, ಸಂವಿಧಾನ ನೀಡಿದ್ದೂ ಮೂಲಭೂತವಾಗಿದೆಯೋ ಇಲ್ಲ

(ಒಂಭತ್ತನೇ ಪುಟ ನೋಡಿರಿ)

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್

ಜಯನಗರ ೪ನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉಚ್ಚ ವಿದ್ಯಾನುಭವವುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರ್ಕಾರ ಮನ್ನಣೆ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟೆಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೩೦೦ ಹಾಸಿಗೆಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವದ ಸೌಕರ್ಯವಿದೆ.

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು. ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿರಿ.

ಡಾ॥ ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ಬರೆಯಿರಿ :-

ನವಯುಗ ಪ್ರೆಸ್, ಉಡುಪಿ.

ಹಳೆಯ ದೇಗುಲಗಳಲ್ಲಿನ

ಕಾಮ ಕ್ರೀಡಾ ಶಿಲ್ಪ

ಲೇಖಕರು:
ಶ್ರೀ ಸ. ನಾರಾಯಣ.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿರುವ ಭವ್ಯ ಭಾರತದಲ್ಲಿ ಸಹಸ್ರಾರು ದೇವಾಲಯಗಳಿವೆ. ಪ್ರಾಚೀನ ಶಿಲ್ಪ ಶಾಸ್ತ್ರಗಳಿಗೆ ಅನುಸಾರವಾಗಿ ದೇವಾಲಯಗಳ ನಿರ್ಮಾಣ ನಡೆದಿದೆ. ಸನಾತನ ಹಿಂದೂ ಧರ್ಮದ ಪ್ರತೀಕವಾಗಿ, ಶ್ರೇಷ್ಠ ಉದಾಹರಣೆಗಳಾಗಿ ದೇವಾಲಯಗಳು ಇವೆ. ಹಲವಾರು ದೇವಾಲಯಗಳ ಹೊರ ವಲಯದಲ್ಲಿ ಕಾಮ ಕ್ರೀಡಾರತ ಜೋಡಿಯ ಚಿತ್ರಗಳನ್ನು ಕಾಣಬಹುದು.

ದೇವಸ್ಥಾನ ಭಗವಂತನ ಆವಾಸಸ್ಥಾನ, ಪವಿತ್ರ ನೆಲೆ. ಇಂತಹ ಸ್ಥಳಗಳಲ್ಲಿ ಕಾಮಕ್ರೀಡಾ ಶಿಲ್ಪಗಳಿರುವುದು ಸ್ವಲ್ಪ ವಿಚಿತ್ರವೆನಿಸಿದರೂ ಇದರಲ್ಲಿ ಪೂರ್ವಕರ ಸದುದ್ದೇಶ, ಪವಿತ್ರ ಭಾವನೆಯ ಸಂಕೇತ ಇಲ್ಲದಿಲ್ಲ. ಪರಂಪರಾಗತ ಭಾರತೀಯ ಸಂಸ್ಕೃತಿ, ಕಲೆಗಳಲ್ಲಿ ದೋಷಗಳನ್ನು ಕಂಡುಹಿಡಿದು ಟೀಕಿಸಲು, ಅವಹೇಳನ ಮಾಡಲು ಕೆಲವರಿಗೆ ಈ ಕಾರಣ ಅವಕಾಶವನ್ನು ನೀಡಿತು.

ಭಾರತೀಯ ಧರ್ಮ, ಸಂಸ್ಕೃತಿ, ನಾಗರಿಕತೆಗಳ ಪರಂಪರೆಯೇ ಬೇರೆ, ದೃಷ್ಟಿಯೇ ಬೇರೆ. ವಿದೇಶೀಯ ಕಲಾವಿಮರ್ಶಕರ ಮತ್ತು ಪ್ರವಾಸಿಗಳ ಹಾಗೂ ಮತಿವಂತ ಭಾರತೀಯರನೇಕರ ತೀಕ್ಷ್ಣ ದೃಷ್ಟಿಗೆ, ಕಟುಟೀಕೆಗೆ ಕಾಮ ಕ್ರೀಡಾ ಶಿಲ್ಪ ಅಥವಾ ಮಿಥುನ ಶಿಲ್ಪ ಗುರಿಯಾಯಿತು.

ಭಾರತದ ಅತಿ ಪ್ರಾಚೀನ ದೇವಾಲಯಗಳ ಹೊರವಲಯ, ಸ್ತೂಪಗಳ ಗೋಡೆ, ಕಂಬಗಳ ಮೇಲೆ, ರಥ ವಾಹನಗಳ ಮೇಲೆ ಕಾಣಬರುವ ಈ ಮಿಥುನ ಶಿಲ್ಪಕ್ಕೆ ಅರ್ಥ ಉದ್ದೇಶ, ಸಂಕೇತಗಳು ಇಲ್ಲದಿಲ್ಲ. ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದ ಅರಸರು, ಶ್ರೀಮಂತರು ಮತ್ತು ಶಿಲ್ಪಿಗಳ ಅತ್ಯಲ್ಪ ಕಾರ್ಯದ ಪ್ರಕಟಣೆಯು ಸಾಧ್ಯವಾಗಲಿಲ್ಲ 'ಮಿಥುನ ಶಿಲ್ಪ'ಗಳು ಎಂಬುದು ಸ್ಪಷ್ಟವಾಗಿದೆ. ಅಥವಾ ಆ ಕಾಲದ ಜನತೆಯ ಲೈಂಗಿಕ ಜೀವನ ಕಳಮಟ್ಟದಲ್ಲಿತ್ತು ಎಂದು ಹೇಳಲು ಬರುವಂತಿಲ್ಲ. ದೇವಾಲಯಗಳಿಗೆ ಬರುವ ಸ್ತ್ರೀಯರ ಮಕ್ಕಳ ಮನಸ್ಸನ್ನು ಚಂಚಲಗೊಳಿಸಿ, ಉದ್ರೇಕಗೊಳಿಸುವ ಯೋಜನೆಯಾಗಲಿ ಅಥವಾ ಅವರನ್ನು ನಾಚಿಸುವ ಉದ್ದೇಶವಾಗಲಿ ಇರಲಿಲ್ಲ ಎಂದು ಹೇಳಲು ಆಧಾರ ದೊರೆಯುತ್ತದೆ.

ಮಿಥುನ ಎಂದರೆ ಜೋಡಿ ಎಂದರ್ಥ. ಸ್ತ್ರೀಯೂ ಸ್ತ್ರೀ ಅಥವಾ ಕಾಮಸಕ್ತ ಎಂಬುದು ವಿಶೇಷಾರ್ಥ. ಭಗವಂತನ ಸೃಷ್ಟಿಯಲ್ಲಿ ಯಾವ ಪ್ರಾಣಿ (ಜೀವಿ)ಯೂ ಒಂಟಿಯಾಗಿ ಜೀವಿಸುವುದಿಲ್ಲ. ಇದು ಪ್ರಕೃತಿನಿಯಮ. ಜೋಡಿ ಸೃಷ್ಟಿಯ ಸಂಕೇತ, ತೃಪ್ತಿಯ ಪ್ರತೀಕ. ಬದುಕಿಗೆ, ಬಾಳಿಗೆ ಆಧಾರವಾದ ಈ ಪೂರ್ಣ ಜೋಡಿಯೇ ಶಿವ—ಶಕ್ತಿ. ಸೃಷ್ಟಿಗೆ ಸ್ಫೂರ್ತಿ. ಶಿವ ಪುರುಷ, ಶಕ್ತಿ ಪ್ರಕೃತಿ. ಶಿವಶಕ್ತಿ ಸಮಾಗಮವೇ ವಿಶ್ವದ ಸೃಷ್ಟಿ ಸ್ಥಿತಿಗಳಿಗೆ ಕಾರಣ ಎಂದು ಧರ್ಮ, ಸಂಪ್ರದಾಯಗಳು ಹೇಳುತ್ತವೆ. ನಂಬಿಕೆಯೂ ಅದೇ ಆಗಿದೆ.

ದೇಶ ಧಾರಣೆಗೆ ಉಳಿದ ಅವಶ್ಯಕತೆಗಳ ಅಗತ್ಯದಂತೆಯೇ ವಿಶ್ವಧಾರಣೆಗೆ ಮೈಥುನವೂ ಅಗತ್ಯ. ವೈಧವನಗಳ, ಪ್ರಜಾ ಕಾಮಿಯಾಗಿ ಮಾತ್ರವೇ ಆಚರಿಸಬೇಕು ಎಂದು ಭಾರತೀಯ ಧರ್ಮ ಶಾಸ್ತ್ರ ಹೇಳುತ್ತದೆ. ಪ್ರಾಚೀನ ಪರಂಪರಾಗತ, ಸದುದ್ದೇಶಪೂರಿತ ಶಾಸ್ತ್ರೀಯ ವಿಧಿನಿಯಮಗಳ ಬಳಕೆ ಅನುಸರಣೆ ಇಲ್ಲವಾದುದರಿಂದಲೇ ಇಂದು ಮೈಥುನಕ್ಕೆ ಇದ್ದ ಪ್ರಾಶಸ್ತ್ಯ, ಪೂಜ್ಯತೆಗಳು ಮಾಯವಾಗಿವೆ.

ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮುಗಿಸಿ ಹಿಂತಿರುಗುವ ಮುಂಚೆ ಅವನಿಗೆ '...... ಪ್ರಜಾ ತಂತುಂ ಮಾ ವ್ಯವಚ್ಛೇತ್ಸೀಃ' —ಸಂತತಿಯನ್ನು ವಿಚ್ಛಿನ್ನಗೊಳಿಸಬೇಡ ಎಂದು ಉಪದೇಶಿಸುತ್ತಿದ್ದರು. 'ಧರ್ಮ ಪ್ರಜಾಸಂಪತ್ತ್ಯರ್ಥಂ ಸ್ತ್ರೀಯಂ ಮುದ್ವಹೆ,' 'ಪುತ್ರಾರ್ಥಂ ಸ್ವೀಕೃತಾತ್ಮಯಾ" ಎಂದು ವಿವಾಹ ಸಂಕಲ್ಪ ಕಾಲದಲ್ಲಿ ಹೇಳಲಾಗುತ್ತದೆ. ಸೂತ್ರ ಮಂತ್ರಗಳನ್ನು ಪರಿಶೀಲಿಸಿದಾಗ ಪೂರ್ವಿಕರ ಅರ್ಥ ಮಹತ್ವಗಳು ಅರಿವಾಗುತ್ತವೆ.

ಭಾರತೀಯರಿಗೆ ಇಹ—ಪರಗಳೆರಡರ ಚಿಂತನ ವಿಶೇಷ. ಈ ಇಹಪರಗಳ ಸಾಧನವನ್ನು ಧರ್ಮ ಅರ್ಥವತ್ತಾಗಿ ಉಪದೇಶಿಸುತ್ತದೆ. ವೇದಾಂತ ನಾಲ್ಕು ಪುರುಷಾರ್ಥಗಳನ್ನು ಸೂಚಿಸುತ್ತದೆ. ಪುರುಷಾರ್ಥ ಎಂದರೆ ಪಡೆಯುವ ಪ್ರಯೋಜನಗಳು ಎಂದರ್ಥ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಪುರುಷಾರ್ಥಗಳು. ಪ್ರಾಚೀನರು ಕಾಮವನ್ನು ಪುರಸ್ಕರಿಸಿದರು. ಧರ್ಮ—ವೇದಾಂತಗಳು ಕಾಮವನ್ನು ಕಡೆಗಣಿಸಲಿಲ್ಲ. ಧರ್ಮ, ಅರ್ಥ, ಕಾಮಗಳನ್ನು ನಿಯಮ ಬದ್ಧವಾಗಿ ಸಾಧಿಸುವವನಿಗೆ ಮೋಕ್ಷ ತಾನಾಗಿಯೇ ದೊರೆಯುತ್ತದೆ.

ಧರ್ಮ, ಅರ್ಥ, ಕಾಮ, ಮೋಕ್ಷಗಳು ಪರಸ್ಪರಪೂರಕ. ಕಲಬಾರ ಮಾರಕಗಳು ಆಗುತ್ತವೆ. ಇವುಗಳ ಸಮನ್ವಯವೂ ಅತ್ಯಗತ್ಯ. ಒಂದೇ ಪ್ರಯೋಜನದ ಸಾಧನ ವ್ಯರ್ಥ ಹಾಗೂ ದುಃಖದಾಯಕ. ಒಂದರ ಸಾಧನೆಯಿಂದಲೇ ಮಾನವ ಪೂರ್ಣನಾಗಲಾರ. ಬ್ರಹ್ಮಚರ್ಯಾ ಶ್ರಮದಿಂದ ನೇರವಾಗಿ ಸನ್ಯಾಸ ಸ್ವೀಕರಿಸುವುದನ್ನೂ ನಿಷೇಧಿಸಿದರು. ಬೇಕು ಕರ್ಮ ಭ್ರಷ್ಟರಾಗ ಬಹುದು. ದುರಾಶಾ ಪೀಡಿತರಾಗಬಹುದು. ಕಾಮಿಗಳಾಗಬಹುದು ಎನ್ನುವ ಕಾರಣದಿಂದ ಹೀಗೆ ಆಗಿರುವ ಉದಾಹರಣೆಗಳೂ ಇಲ್ಲದಿಲ್ಲ.

ಅರ್ಥ ಕಾಮಗಳ ಸಾಧನೆಗೆ ಸ್ವತಂತ್ರ ಮಾರ್ಗ ಹುಡುಕಬಾರದು. ಸ್ವೇಚ್ಛೆಯಿಂದ ವರ್ತಿಸಬಾರದು. ಧರ್ಮದ ಎಲ್ಲೆಯಲ್ಲಿ ಅರ್ಥ ಕಾಮಗಳನ್ನು ಸಾಧಿಸಬೇಕು. ಇದು ಪ್ರಾಚೀನರ ಸೂಚನೆ. ಶಾಸ್ತ್ರಗಳ ನಿರೂಪಣೆ.

ಸೃಷ್ಟಿಕ್ರಿಯೆ ಅಥವಾ ಮೈಥುನ ಯಾರೂ ನಾಚಿಕೆ ಪಡಬೇಕಾದ ಅಕೃತ್ಯವಲ್ಲ. ಈ ಕ್ರಿಯೆ ವಿಶ್ವ ಸೃಷ್ಟಿಗೆ ಆಧಾರ—ಮೂಲ, ಅದರ ಇಂದು ಅದಕ್ಕೆ ಗೌರವವಿಲ್ಲ.

'ಸ್ತ್ರೀ ವಿಗ್ರಹಗಳ ಸೌಂದರ್ಯ, ಮಾಟ, ಭಾವ, ಭಂಗಿಗಳು, ಕಾಮಕೇಳಿಯ ವಿವಿಧ ಭಂಗಿಗಳು ಶಿಲ್ಪಗಳಲ್ಲಿ ಕಾಣಬರುತ್ತವೆ ಶಿಲ್ಪಿಗಳು ಇವುಗಳನ್ನು ಸ್ಪಷ್ಟವಾಗಿ ರೂಪಿಸಿದ್ದಾರೆ. ಅತಿಲಾಲಸೆ, ಅತಿ ಕಾಮ, ವಿಕೃತ ಕಾಮ, ಸೂಚಿತವಾಗಿಲ್ಲ. ಈ ಶಿಲ್ಪಗಳು ಪ್ರೇಮಿಗಳ ಪರಸ್ಪರ ಪ್ರೇಮ, ಕಾತುರ, ಅರ್ಪಣೆ, ಕೃತಜ್ಞತೆ, ತೃಪ್ತಿ ಭಾವಗಳು ಕಾಣಬರುತ್ತವೆ. ಇವುಗಳು ಎಂದೂ ಅಶ್ಲೀಲ ಅಲ್ಲವಲ್ಲ!

ದೇವಾಲಯಗಳ ರಚನೆ, ಬಹು ಪ್ರಾಚೀನ ಕಲೆ. ಶಿಲ್ಪ ಶಾಸ್ತ್ರಗಳಿಗೆ ಸಂಬಂಧಿಸಿದ ಪ್ರಾಚೀನ ಲಕ್ಷಣ ಗ್ರಂಥಗಳಲ್ಲಿ ದೇವಾಲಯದ ದ್ವಾರ ಮತ್ತು ಇತರ ಭಾಗಗಳ ಮೇಲೆ ಎಂಥ ಸಂಕೇತಗಳನ್ನು ರೂಪಿಸಬೇಕು—ಅಲಂಕರಿಸಬೇಕು ಎಂಬ ಉಲ್ಲೇಖವಿದೆ. ಅಗ್ನಿ ಪುರಾಣದ ಪ್ರಾಸಾದ ಲಕ್ಷಣ ವಿಭಾಗದಲ್ಲಿ 'ದೇವಾಲಯಗಳ ದ್ವಾರಗಳನ್ನು ಮಿಥುನಗಳಿಂದ ಅಲಂಕರಿಸಬೇಕು' ಎಂದಿದೆ. ಕಾವ್ಯಗಳಲ್ಲಿಯ ಶೃಂಗಾರ ವರ್ಣನೆ, ಶಿಲ್ಪದಲ್ಲಿನ ಮಿಥುನ ವ್ಯಕ್ತಿಯನ್ನು ಉದ್ಧಾರ ಮಾಡಬೇಕಾದ ಸಾಧನಗಳಾಗಬೇಕೆನ್ನುವ ಆಶಯ ಪ್ರಾಚೀನರದು. ದೇವಾಲಯದ ಬಾಗಿಲಿನಲ್ಲಿರುವ ಮಿಥುನ ಅವನ ಮನಸ್ಸ

(ಎಂಟನೇ ಪುಟ ನೋಡಿರಿ)

ಭವಿಷ್ಯದೆಡೆಗೆ ನೋಟ

ಈ ಮಗುವಿನ ನಾಳೆಯ ಬದುಕಿಗೆ ಆಕೆಯ ಹಕ್ಕುವರ ನಿಯತ
ಉಳಿತಾಯ ಭದ್ರತೆಯನ್ನೊದಗಿಸಿದೆ. ಸಿಂಡಿಕೇಟ್ ಬ್ಯಾಂಕಿ
ನಲ್ಲಿ ಆಕೆಯ ಹೆಸರಿನಲ್ಲಿ ತೆರೆದ ಕ್ಯುಮುಲೇಟಿವ್
ಠೇವಣಾತಿ ಖಾತೆಯೇ ಆಕೆಯ ಭವಿತವ್ಯದ ರಕ್ಷೆ
ಯೆನಿಸಿದೆ. ಆಕೆಯನ್ನು ಸಲಹುವ ಹಿರಿಯರ
ದೂರದೃಷ್ಟಿಯಿಂದಾಗಿ ಈ ಮಗುವು
ದೂರದ ಭವಿಷ್ಯದೆಡೆಗೆ ತುಂಬು
ವಿಶ್ವಾಸದಿಂದ ನಗು ತುಂಬಿದ
ಕಣ್ಣುಗಳಿಂದ ನೋಟ
ಬೀರುತ್ತಿದೆ.

ನಿಮ್ಮ ಮಕ್ಕಳ ನಾಳೆಯ ಬದುಕಿನ ಭದ್ರತೆಗಾಗಿ
ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್
ಠೇವಣಾತಿ ಖಾತೆಯೊಂದನ್ನು ತೆರೆಯಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 301/1966
in O. S. No. 159/63

ಸಾಲೋಚನ ಜಾನೆ ರಾಮಮೂರ್ತಿ ಪುರಂಬಳ್ಳಿ —ಅರ್ಜಿದಾರ

ಮತ್ತು

ಶಂಕರನಾರಾಯಣ ಪುರಂಬಳ್ಳಿ ಕೂಡಾ —ಎದುರು

ಇವರೊಳಗೆ,

ಉಡುಪಿ ತಾಲ್ಲೂಕು ಪುರಂಬಳ್ಳಿ ಗ್ರಾಮದಲ್ಲಿ ರುಪ ತಿಮ್ಮಪ್ಪ ಪುರಂಬಳ್ಳಿಯ ಮಗ 4ನೇ ಎದುರು ಶ್ರೀನಿವಾಸ ಪುರಂಬಳ್ಳಿ ಇವರಿಗೆ.—

ಬಂದಾ ಈಡಿನ ಡಿಕ್ರಿ ಜಾರಿ ವಸೂಲಿ ಕೇಳಿ ನಿಮ್ಮನ್ನು ಕೂಡಾ ಸೇರಿಸಿ ಮಾಡಿದ ಮೇಲಿನ ಅ ನಂ ಅ ಜ್ ರಿ ಅರ್ಜಿಯು ತಾ. 5—6—67ಕ್ಕೆ ನಿಮ್ಮ ಆಕ್ಷೇಪಣೆ ಬಗ್ಗೆ ಇಡಲ್ಪಟ್ಟಿದೆ. ಆದಕ್ಕೆ ನಿಮ್ಮಲ್ಲೇನಾದ್ರೂ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಕೋರ್ಟು ಮುಂದೆ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಉಜರು ಮಾಡಿಸಿ ಕೊಳ್ಳತಕ್ಕದ್ದು.

(By order)

P. N. K. Rao
B. A., LL. B.
Advocate, Udipi.

Udipi, S. K, Dated 25—4—67

ವಿವೇಚನೆ

ಮಂತ್ರಿಮಂಡಲಿ ಮತ್ತು ಆಡಳಿತ ವರ್ಗ

ಬರೆದವರು. ಶ್ರೀ ಕೆ. ಜಿ ವಸಂತಮಾಧವ, ಎಂ. ಎ.

ಸರಕಾರದ ಮೂರು ಅಂಗಗಳೆಂದರೆ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಿವೆ. ಸರಕಾರವು ಯೋಗ್ಯ ರೀತಿಯಲ್ಲಿ ನಡೆಯಲು ಈ ಮೂರು ಅಂಗಗಳಲ್ಲಿ ಸೌಹಾರ್ದ ಇರಬೇಕು. ಕಾನೂನನ್ನು ತಯಾರಿಸುವುದು ಶಾಸಕಾಂಗ, ಕಾನೂನನ್ನು ಜಾರಿಗೆ ತರುವುದು ಕಾರ್ಯಾಂಗ, ಮತ್ತು ದೇಶದಲ್ಲಿ ನ್ಯಾಯ ಸ್ಥಾಪಿಸುವುದು ನ್ಯಾಯಾಂಗಗಳ ಕರ್ತವ್ಯವಾಗಿದೆ.—

ಮಂತ್ರಿಮಂಡಲ:— ಆಧುನಿಕ ಪ್ರಜಾಪ್ರಭುತ್ವವನ್ನು ಅನುಸರಿಸುವ ದೇಶಗಳಲ್ಲಿ ಎರಡು ವಿಧವಾದ ಕಾರ್ಯಾಂಗಗಳಿವೆ. ಒಂದನೆಯದು ಅಧ್ಯಕ್ಷೀಯ ಅಧಿಕಾರಾತ್ಮಕ (Presidential Executive) ಮತ್ತು ಎರಡನೆಯದು ಶಾಸನಾತ್ಮಕ ಕಾರ್ಯಾಂಗ (Parliamentary Executive) ಭಾರತದಲ್ಲಿ ಎರಡನೆಯ ವಿಧವಾದ ಕಾರ್ಯಾಂಗವಿದೆ. ಇಲ್ಲಿ ರಾಷ್ಟ್ರಾಧ್ಯಕ್ಷನು ಇದ್ದರೂ ಲೋಕಸಭೆಗೆ ಹೊಣೆಗಾರವಾದ ಮಂತ್ರಿಮಂಡಲದ ಸಲಹೆಯಂತೆ ನಾಮಕವಾಗಿ ಆಡಳಿತ ನಡೆಸುವುದು. ಮಂತ್ರಿಸಂಪುಟವು ಲೋಕಸಭೆಗೆ ಸಾಮೂಹಿಕವಾಗಿ ಜವಾಬ್ದಾರವಾಗಿದೆ. ರಾಷ್ಟ್ರದ ಮಂತ್ರಿ ಸಂಪುಟವು ಲೋಕಸಭೆಯ ವಿಶ್ವಾಸಕ್ಕೆ ರಾಷ್ಟ್ರೀಯ ಮಂತ್ರಿಸಂಪುಟ ... ಧಾನ ಸಭೆಗಳ ವಿಶ್ವಾಸಕ್ಕೆ ಪಾತ್ರರಾಗಿರುವವರಿಗೆ ಮಾತ್ರ ಅಧಿಕಾರದಲ್ಲಿರುವವು. ಒಟ್ಟಿನಲ್ಲಿ ಕಾರ್ಯಾಂಗ ಶಾಸಕಾಂಗಕ್ಕೆ ಜವಾಬ್ದಾರ ಎಂದು ಸ್ಥೂಲವಾಗಿ ತಿಳಿಯಬಹುದು. ಲೋಕಸಭೆ ಅಥವಾ ವಿಧಾನಸಭೆಗಳಲ್ಲಿ ಬಹುಮತ ಗಳಿಸಿದ ರಾಜಕೀಯ ಪಕ್ಷದ ನಾಯಕನು, ಮಂತ್ರಿಸಂಪುಟ ರಚನೆ ಮಾಡುವಂತೆ ರಾಷ್ಟ್ರಾಧ್ಯಕ್ಷರಿಂದಾಗಲೀ, ರಾಜ್ಯಪಾಲರಿಂದಾಗಲೀ ಕೇಳಲ್ಪಡುತ್ತಾನೆ. ಅವರ ಅನುಮತಿ ದೊರೆತ ಬಳಿಕ ಮಂತ್ರಿಮಂಡಲದ ರಚನೆಯಾಗುತ್ತದೆ. ಸಂಪುಟಕ್ಕೆ ಬಹುಸಂಖ್ಯಾತ ಸದಸ್ಯ ಸಂಗಡದ ನಾಯಕನು ಮುಖ್ಯಮಂತ್ರಿಯಾಗುತ್ತಾನೆ. ಇಂಗ್ಲೆಂಡಿನಲ್ಲಿ ಪ್ರಧಾನ ಮಂತ್ರಿ ಸಂಪುಟದ ಆಧಾರ ಸ್ತಂಭವೆನ್ನುವರು. ಮಂತ್ರಿ ಭಾರತದ ಮಂತ್ರಿ ಸಂಪುಟದಲ್ಲಿ ಮುಖ್ಯಮಂತ್ರಿ ಪ್ರಧಾನಿ ಆಧಾರ ಸ್ತಂಭವಾಗಿದ್ದಾನೆ. ಒಟ್ಟಿನಲ್ಲಿ ಶಾಸನ ಕಾರ್ಯದ ಮುಖಂಡತ್ವವನ್ನು ವಹಿಸುವಲ್ಲಿ ಕಾರ್ಯಾಂಗವು —ಕಾರ್ಯಾಂಗಕ್ಕೆ ಅಧಿಕಾರದಲ್ಲಿ ಪ್ರತ್ಯೇಕತೆಯು ಮಂತ್ರಿವ್ಯವಸ್ಥೆಯಲ್ಲಿರುವುದು ಅಸಾಧ್ಯ. ಏಕೆಂದರೆ ಇಲ್ಲಿ ಶಾಸಕಾಂಗಕ್ಕೆ ಮಂತ್ರಿಮಂಡಲದ ಮೇಲೆ ಸಂಪೂರ್ಣ ಹತೋಟಿ ಇದೆ. ಆದರೆ ರಾಜಕೀಯ ಪಕ್ಷಗಳ ಪ್ರಬಲವಾಗುತ್ತಾ ನಡೆದಂತೆಲ್ಲ ಮಂತ್ರಿಮಂಡಲದ ಪ್ರಾಬಲ್ಯ ಹೆಚ್ಚಿ, ಪಾರ್ಲಿಮೆಂಟಿನ ಪ್ರಾಬಲ್ಯ ಕುಗ್ಗತೊಡಗಿತು.

ಆಡಳಿತ ವರ್ಗ:— ದೇಶವನ್ನು ನಿಜವಾಗಿ ಆಳುವುದು ಆಡಳಿತವರ್ಗ. ಆಡಳಿತ ವರ್ಗವನ್ನು ಖಾಯಂ ಕಾರ್ಯಾಂಗವೆನ್ನುತ್ತಾರೆ. ಸರಕಾರದ ಯೋಗ್ಯತೆಯು ಒಳ್ಳೆ ಆಡಳಿತ ವರ್ಗವನ್ನು ಹೊಂದಿಕೊಂಡಿದೆ. ಶಾಸನಾತ್ಮಕ ಪ್ರಜಾಪ್ರಭುತ್ವದ ಯಶಸ್ಸು ಆಡಳಿತವರ್ಗಗಳ ಸಹಕಾರವನ್ನು ಹೊಂದಿಕೊಂಡಿದೆ. ಶಾಸನಾಂಗ, ಮತ್ತು ಮಂತ್ರಿ ಸಂಪುಟಗಳು ಆಗಿಂದಾಗ್ಗೆ ಅದಲು ಬದಲಾಗಬಹುದು. ಆದರೆ ಆಡಳಿತ ವರ್ಗ ಖಚಿತವಾದ ಅಧಿಕಾರಿಗಳಲ್ಲಿರುವ ರಾಜಕೀಯ ಕಾರ್ಯಾಂಗ ಅದಲು ಬದಲು ಮೂಲ ಆಡಳಿತವರ್ಗದಲ್ಲಿ ಹೆಚ್ಚಿನ ಬದಲಾವಣೆ ಯಾಗುವುದಿಲ್ಲ. ಆಡಳಿತ ವರ್ಗ ಪ್ರತ್ಯೇಕವಾದ, ಸಂಬಳಕ್ಕೆ ದುಡಿಯುವ ಅಧಿಕಾರಿ ವರ್ಗವನ್ನು ಒಳಗೊಂಡ ಸಮೂಹವಾಗಿದೆ. ಮ್ಯಾಕ್ಸ್ ವೆಬರ್‌ನ ಪ್ರಕಾರ ದೇಶದಲ್ಲಿ ಕಾನೂನಿನ ಚಲಾವಣೆ, ಹಾಗೂ ಪ್ರಜೆಗಳ ರಾಷ್ಟ್ರಕ್ಕೆ ಹಕ್ಕು ಮತ್ತು ಕರ್ತವ್ಯಗಳ ದೃಷ್ಟಿಯಿಂದ ಬಾಧ್ಯರಾಗಿರುವಂತೆ ಮಾಡಲು ಸರಕಾರದಿಂದ ಸೂಚನೆಗಳನ್ನು ಪಡೆಯುವ ಅಧಿಕಾರಿಗಳ ಸಮೂಹ ಎಂದು ಬಾರ್ಕರರ ಅಭಿಪ್ರಾಯವಾಗಿರುತ್ತದೆ.

ಆದರೆ ಈ ಆಡಳಿತ ವರ್ಗದಲ್ಲಿ ಸೈನಿಕ ಮತ್ತು ನ್ಯಾಯಾಧಿಕಾರಿಗಳು ಬರುವುದಿಲ್ಲ. ಒಟ್ಟಿನಲ್ಲಿ ಆಡಳಿತ ವರ್ಗವು ಒಳ್ಳೆ ನಡತೆ ಮತ್ತು ಆಡಳಿತ ಅನುಭವವುಳ್ಳ ಅಧಿಕಾರಿಗಳ ಸಮೂಹ.

ಆಡಳಿತವರ್ಗ ಸಂಘಟನೆ—ಆಡಳಿತವರ್ಗ ಸಾಮಾನ್ಯವಾಗಿ ಆಡಳಿತವರ್ಗವು ಯೋಗ್ಯ ರೀತಿಯಲ್ಲಿ ಸಂಘಟಿಸಲ್ಪಟ್ಟಿದೆ. ಆಡಳಿತ ವರ್ಗವನ್ನು ಸಂಘಟಿಸುವಲ್ಲಿ ಈ ಎರಡು ವಿಷಯಗಳು ಮುಖ್ಯವಾಗಿವೆ. ಒಂದನೆಯದಾಗಿ ಆಡಳಿತವರ್ಗವನ್ನು ನೇಮಿಸುವಾಗ ರಾಜಕೀಯ ಅಧಿಕಾರಿಗಳ ಕೈವಾಡವಿರಬಾರದು. ಆಡಳಿತ ವರ್ಗವನ್ನು ನೇಮಿಸುವಲ್ಲಿ ರಾಜಕೀಯ ಅಧಿಕಾರಿಗಳ ಹಸ್ತದಿಂದ ದೂರವಿರಬೇಕು. ಇಲ್ಲದಿದ್ದರೆ ಆಡಳಿತವರ್ಗದಲ್ಲಿ ಸ್ವಜನ ಅಭಿಮಾನ, ಪಕ್ಷಪಾತ ದೋಷ ಮತ್ತು ಲಂಚಗುಳಿತನ ತುಂಬಿ ಆಡಳಿತ ವರ್ಗವು ಕೆಟ್ಟು ಬಿದ್ದು ರಾಜ್ಯದ ಪ್ರಗತಿಗೆ ತೊಡಕಾಗಬಹುದು. ಎರಡನೆಯದಾಗಿ ಆಡಳಿತವರ್ಗವನ್ನು ನೇಮಿಸಲು ಸ್ವತಂತ್ರ ಸಾರ್ವಜನಿಕ ಸೇವಾ ಆಯೋಗ ಇದೆ. ಈ ಸಮಿತಿಯು ಪ್ರತಿವರ್ಷ ಆಡಳಿತವರ್ಗದ ಸ್ಥಾನಗಳಲ್ಲಿ ತಾವು ತಿಳಿದಿರುವಾಗ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದವರನ್ನು ಆಡಳಿತವರ್ಗಕ್ಕೆ ನೇಮಿಸುವಂತೆ ಶಿಫಾರಸು ಮಾಡುತ್ತದೆ. ಈ ಶಿಫಾರಸಿನ ಆಧಾರದ ಮೇಲೆ ಯೋಗ್ಯರಾದ ಯುವಕರನ್ನು ಸರಕಾರವು ಅಧಿಕಾರಿಗಳನ್ನಾಗಿ ನೇಮಿಸುತ್ತದೆ. ಹೀಗೆ ಆರಿಸಲ್ಪಟ್ಟ ಯುವಕರ ನೌಕರಿಯು ಖಾಯಂ ಆಗುವ ಮೊದಲು ಅವರಿಗೆ ಆಡಳಿತ ಕ್ರಮಗಳಲ್ಲಿ ವಿಶೇಷ ತರಬೇತಿಯನ್ನು ಕೊಡುತ್ತಾರೆ. ಆಡಳಿತವರ್ಗದ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಚ್ಯುತಿ ಮಾಡಿದರೆ ಯಾ ಆಡಳಿತ ನಡೆಸುವುದರಲ್ಲಿ ಅಸಮರ್ಥತೆ ತೋರಿಸಿದರೆ ಅವರನ್ನು ಅಧಿಕಾರದಿಂದ ತೆಗೆದು ಹಾಕುವ ಅಧಿಕಾರ ರಾಜಕೀಯ ಕಾರ್ಯಾಂಗಕ್ಕಿದೆ. ಮೂರನೆಯದಾಗಿ ಆಡಳಿತವರ್ಗದ ಬಡ್ತಿಯು ಹಿರಿತನ ಮತ್ತು ಸೇವಾ ನಿಪುಣತೆಯನ್ನು ಹೊಂದಿಕೊಂಡು ಹೋಗುತ್ತದೆ. ನಾಲ್ಕನೆಯದಾಗಿ ಆಡಳಿತವರ್ಗವು ಪಕ್ಷಾತೀತವಾಗಿರಬೇಕು. ಯಾವ ಪಕ್ಷ ಅಧಿಕಾರದಲ್ಲಿದ್ದರೂ ಆ ಪಕ್ಷದ ಆಡಳಿತ ಧೋರಣೆಯನ್ನು ಜಾರಿಗೆ ತರುವುದು ಆಡಳಿತ ವರ್ಗದ ಮುಖ್ಯ ಕರ್ತವ್ಯ. ಆಡಳಿತದ ಗುಪ್ತ ವಿಷಯಗಳನ್ನು ಪ್ರಸಿದ್ಧಿಸುವ ಹಕ್ಕು ಈ ಅಧಿಕಾರಿಗಳಿಗೆ ಇರುವುದಿಲ್ಲ. ಕಾರಣಯಿಂದಾಗಿ ಆಡಳಿತವರ್ಗಗಳ ಕೆಲಸದ ಸಂಪೂರ್ಣ ಜವಾಬ್ದಾರಿ ರಾಜಕೀಯ ಅಧಿಕಾರಿಯಾದ ಮಂತ್ರಿಮಂಡಲಕ್ಕಿದೆ. ಒಟ್ಟಿನಲ್ಲಿ ಹೇಳುವುದಾದರೆ ಆಡಳಿತ ವರ್ಗದ ಯೋಗ್ಯತೆ ಮತ್ತು ಕರ್ತವ್ಯಗಳ ಸಾಮರ್ಥ್ಯ ಮತ್ತು ಘಟನಾತ್ಮಕ ಹೊಣೆ ಮಂತ್ರಿಮಂಡಲದ ಮೇಲಿದೆ.

ಆಡಳಿತ ವರ್ಗ ಮತ್ತು ಮಂತ್ರಿ ಸಂಪುಟ- ಶಾಸಕಾಂಗ ಪ್ರಜಾಪ್ರಭುತ್ವದ ಯಶಸ್ಸು ಮತ್ತು ಅದರ ಪ್ರಗತಿ ಅಧಿಕಾರ ವರ್ಗ ಮತ್ತು ಮಂತ್ರಿಮಂಡಲಕ್ಕಿರುವ ಸಂಬಂಧವನ್ನು ಹೊಂದಿಕೊಂಡಿದೆ. ಶಾಸಕಾಂಗ ಪ್ರಜಾಪ್ರಭುತ್ವವು ಯಶಸ್ವಿ ಯಾಗಬೇಕಾದರೆ ಆಡಳಿತವರ್ಗ ಮತ್ತು ಮಂತ್ರಿಮಂಡಲಗಳಲ್ಲಿ ಅನ್ಯೋನ್ಯ ಸಂಬಂಧವಿರಬೇಕು. ಆಡಳಿತವರ್ಗದ ವರ್ತನೆಯು ರಾಜಕೀಯದಲ್ಲಿ ಆಧುನಿಕ ವ್ಯವಸ್ಥೆಯಂತೆ ಪ್ರಭಾವ ಬೀರುತ್ತದೆ ಎಂದು ತಿಳಿದು ಬರುತ್ತದೆ. ಶ್ರೀಮಾನ್ ರಾಮ್‌ಸೆ ಮ್ಯೂರ್ ರವರ ಅಭಿಪ್ರಾಯದಂತೆ ಶಾಸನಾಂಗವು ಮಂತ್ರಿಮಂಡಲದ ವರ್ಚಸ್ಸಿನಲ್ಲಿದೆ. ಮಂತ್ರಿಮಂಡಲವು ಆಡಳಿತ ವರ್ಗದ ವರ್ಚಸ್ಸಿನಲ್ಲಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಬ್ರಿಟಿಷರು ನಮ್ಮನ್ನಾಳುತ್ತಿದ್ದಾಗ ನ್ಯಾಯ ಪಾಲನೆ ಮತ್ತು ಶಿಸ್ತನ್ನು ರಕ್ಷಿಸುವುದು ಇದೇ ಆಡಳಿತ ವರ್ಗದ ಮುಖ್ಯ ಕೆಲಸವಾಗಿತ್ತು. ಇವುಗಳನ್ನು ಜಾರಿಗೆ ತರುವ ಜವಾಬ್ದಾರಿಯು ಇವರ ಮೇಲೆ ಬಿದ್ದಿತ್ತು. ಬಿಳಿಯರನ್ನು ಮಾಡಿತ್ತು.

ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕಲು ಆಗಿನ ಭಾರತೀಯ ಆಡಳಿತ ಸೇವಾ ವರ್ಗದ ಕೆಲವು ಅಧಿಕಾರಿಗಳು ಬ್ರಿಟಿಷರಿಗೆ ಸಹಾಯ ಮಾಡಿದರು. ಇದರಿಂದಾಗಿ ಹೆಚ್ಚಿನ ಆಡಳಿತ ಅಧಿಕಾರಿಗಳ ಮೇಲೆ ಭಾರತೀಯ ರಾಜಕಾರಣಿಗಳಿಗೆ ಮುಖ್ಯವಾಗಿ ರಾಜಕೀಯ ಕಾರ್ಯಕರ್ತರಿಗೆ ಪೂರ್ವಾಗ್ರಹ ಪಕ್ಷಪಾತ ಭಾವನೆ ಬೆಳೆಯಿತು. ಸ್ವಾತಂತ್ರ್ಯದ ನಂತರ ರಾಜಕೀಯ ಕಾರ್ಯಾಂಗ ಮತ್ತು ಶಾಶ್ವತ ಕಾರ್ಯಾಂಗಗಳಲ್ಲಿ ಒಡೆದ ಘರ್ಷಣೆ ತಲೆದೋರಿ ಆಡಳಿತ ಕ್ಷೀಣವಾದುದನ್ನು ನಾವು ನೋಡಿದ್ದೇವೆ.

ಸ್ವತಂತ್ರ ಭಾರತದಲ್ಲಿ ಆಡಳಿತ ವರ್ಗಕ್ಕೆ ಹಿಂದಿನ ಆಡಳಿತವರ್ಗಕ್ಕಿಂತ ಹೆಚ್ಚಿನ ಪ್ರಾಧಾನ್ಯ ಇದೆ. ಯೋಜನಾಬದ್ಧ ಆರ್ಥಿಕ ವ್ಯವಸ್ಥೆ ಮತ್ತು ಸುಖೀರಾಜ್ಯ ಧ್ಯೇಯದಿಂದಾಗಿ ಆಡಳಿತವರ್ಗದ ಅವಕಾಶ ಹೆಚ್ಚಿದೆ. ಇದರಿಂದಾಗಿ ಆಡಳಿತ ವರ್ಗದವರ ಸಂಖ್ಯೆ ಹೆಚ್ಚಿದೆ. ಸ್ವಾತಂತ್ರ್ಯ ಸಿಗುವುದಕ್ಕಿಂತ ಸ್ವಲ್ಪ ಪೂರ್ವದಲ್ಲಿ ಸಾಧಾರಣ ೧೧೫೦ ಐ. ಸಿ. ಎಸ್ ಆಫಿಸರಿದ್ದರೆ ೧೯೬೫ರಲ್ಲಿ ಇದು ೨೦,೦೯೯ಕ್ಕೆ ಏರಿದೆ.

ರಾಷ್ಟ್ರದ ಧ್ಯೇಯವಾದ ಸುಖೀರಾಜ್ಯ ಮತ್ತು ಯೋಜನಾಬದ್ಧ ಆರ್ಥಿಕ ವ್ಯವಸ್ಥೆ ಸಾಧಿಸಲು ರಾಜಕೀಯ ಕಾರ್ಯಾಂಗಕ್ಕೆ ಶಾಶ್ವತ ಕಾರ್ಯಾಂಗದ ಸಹಕಾರ ಅಗತ್ಯವಿದೆ. ಈ ಎರಡು ವರ್ಗಗಳಲ್ಲಿ ಅನ್ಯೋನ್ಯತೆ ಇದ್ದರೆ ಆಡಳಿತವು ಯೋಗ್ಯ ರೀತಿಯಲ್ಲಿ ನಡೆಯುತ್ತದೆ. ಮಂತ್ರಿ ಸಂಪುಟ ಮತ್ತು ಆಡಳಿತ ವರ್ಗಗಳ ಸಂಬಂಧ ಗಂಡ ಹೆಂಡತಿ ಎಂತಿರಬೇಕೆಂದು, ಶ್ರೇಷ್ಠ ಆಡಳಿತ ಅಧಿಕಾರಿ ಶ್ರೀ ಸಿ. ಡಿ. ದೇಶಮುಖರವರ ಅಭಿಪ್ರಾಯ. ಮಂತ್ರಿ ಸಂಪುಟ ಮತ್ತು ಆಡಳಿತ ವರ್ಗಗಳು ಪರಸ್ಪರ ವಿಶ್ವಾಸ, ಗೌರವ, ಹೊಂದಾಣಿಕೆ ಮತ್ತು ಸದ್ಭಾವನೆಗಳಿಂದ ಕೂಡಿದ್ದರೆ ಮಾತ್ರ ಆಡಳಿತ ಯಂತ್ರವು ಸುಗಮವಾಗಿ ಸಾಗುತ್ತದೆ.

ಆದರೆ ಭಾರತದಲ್ಲಿ ಹೆಚ್ಚಿನ ಕಡೆಗಳಲ್ಲಿ ಇದಕ್ಕೆ ವ್ಯತಿರಿಕ್ತವಾಗಿದೆಯೆಂಬ ದೂರು ಇದೆ. ಮಂತ್ರಿ ಸಂಪುಟವು ಆಡಳಿತದ ಪ್ರತಿಂದಿನ ಕಾರ್ಯಕ್ರಮಗಳಲ್ಲಿ ಕೈಹಾಕಿ ಆಡಳಿತವನ್ನು ತಮ್ಮ ಮರ್ಜಿಗೆ ಬೇಕಾದ ರೀತಿಯಲ್ಲಿ ಮಾರ್ಪಡಿಸುತ್ತಿದ್ದು ಉದಾಹರಣೆಗಳು ಹಲವಾರು. ಎಸ್. ಶಾಸನ ಸಭೆಗಳ ಪ್ರತಿನಿಧಿಗಳು ಕೂಡಾ ಆಡಳಿತ ವರ್ಗಗಳ ಮೇಲೆ ತಮ್ಮ ವರ್ಚಸ್ಸು ಬೀರಿ ಅದನ್ನು ಮಣಿಸಿಕೊಳ್ಳುತ್ತಿದ್ದಾರೆ ಎಂಬ ಅಪವಾದವು ಕೇಳಿಬರುತ್ತಿದೆ. ಇದನ್ನು ತಡೆಗಟ್ಟಲು ಕೆಲವು ರಾಜ್ಯದ ಮುಖ್ಯಮಂತ್ರಿಗಳು ಪ್ರಯತ್ನಿಸಿ ತಮ್ಮ ಕಿವಿಮಾತನ್ನು ಹೇಳಿದುದು ಕೂಡಾ ಬಹಳ ಕಡೆ ವಿಚಾರಗಳೂ ನಮ್ಮ ಕಿವಿಗೆ ಬೀಳುತ್ತಿವೆ. ಮೊನ್ನೆ ಮದ್ರಾಸಿನಲ್ಲಿ ಡಿ. ಎಂ. ಕೆ. ಪಕ್ಷ ಅಧಿಕಾರಕ್ಕೆ ಬಂದಾಗ ಭಾರತದ ಪ್ರಸಿದ್ಧ ರಾಜಕಾರಣಿ ಶ್ರೀ ರಾಜಗೋಪಾಲಾಚಾರ್ಯರು ಅಣ್ಣಾದೊರೈಗೆ ಕೊಟ್ಟ ಮೊದಲ ಸಲಹೆಯು ಈ ರೀತಿಯಲ್ಲಿದೆ. "ಆಡಳಿತ ವರ್ಗದಲ್ಲಿ ರಾಜಕಾರಣಿಗಳು ಮತ್ತು ಪಕ್ಷದ ಪ್ರಮುಖರು ಕೈಹಾಕದಂತೆ ಪ್ರಯತ್ನಿಸು" ಈ ಸಲಹೆ ಯೋಗ್ಯವೂ ಮತ್ತು ಅವಶ್ಯಕವೂ ಆಗಿದೆ.

ಶಾಸನಾತ್ಮಕ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಆಡಳಿತವರ್ಗ ಮತ್ತು ರಾಜಕೀಯ ಕಾರ್ಯಾಂಗಗಳಿಗೆ ಸರಿಯಾದ ಹೊಂದಿಕೆಯಿರಬೇಕು. ರಾಜಕೀಯ ಕಾರ್ಯಾಂಗ ಮತ್ತು ಆಡಳಿತ ವರ್ಗಗ

ಳ ಹೊಂದಿಕೆ ಕರೆಯಾಗಿ ನಿರ್ಣಯಿಸುವುದು ಕಷ್ಟವಾದರೂ ಕೆಲವು ಪ್ರಮುಖ ವಿಚಾರಗಳನ್ನು ಈ ಎರಡು ಕಾರ್ಯಾಂಗಗಳು ತಿಳಿದಿರುವುದು ಒಳ್ಳೆಯದು. ಪ್ರಜಾಸತ್ತಾತ್ಮಕವಾಗಿ ಮಂತ್ರಿಮಂಡಲಕ್ಕೆ ಆಗಿಂದಾಗ್ಗೆ ಆಡಳಿತ ವಿಷಯದಲ್ಲಿ ಅಧಿಕಾರಿವರ್ಗವು ಸಲಹೆ ನೀಡುವ, ಪ್ರೋತ್ಸಾಹಿಸುವ, ಎಚ್ಚರಿಸುವ ಮತ್ತು ವಿವರಣೆ ಕೊಡುವ ಅಧಿಕಾರವನ್ನು ಪಡೆದಿದೆ ಎಂದು ರೋಬ್ಸನ್ ಅಭಿಪ್ರಾಯ ಪಡುತ್ತಾರೆ. ಎರಡನೆಯದಾಗಿ ಮಂತ್ರಿಮಂಡಲಕ್ಕೆ ಸಲಹೆ ನೀಡುವುದಲ್ಲದೆ ಸರಕಾರಕ್ಕೆ ಅಗತ್ಯವಿರುವ ವಿಷಯವನ್ನು ಸಂಗ್ರಹಿಸಿಕೊಡುವ ಕೆಲಸ, ಆಡಳಿತ ಧೋರಣೆಯನ್ನು ನಿರೂಪಿಸುವ ಹಕ್ಕು ಶಾಶ್ವತ ಕಾರ್ಯಾಂಗಕ್ಕಿಲ್ಲದಿದ್ದರೂ ಮಂತ್ರಿ ಮಂಡಲ ಕೈಕೊಂಡ ಧೋರಣೆಯನ್ನು ಜಾರಿಗೆ ತರುವುದು ಆಡಳಿತವರ್ಗದ ಮುಖ್ಯ ಕೆಲಸ. ಮೂರನೆಯದಾಗಿ ಯಾವ ನಿರ್ಣಯದಲ್ಲಾದರೂ ಮಂತ್ರಿಗಳ ನಿರ್ಣಯ ಅಂತಿಮವಾದರೂ, ಆಡಳಿತವರ್ಗವು ಗುಲಾಮಗಿರಿಯ ಮನೋವೃತ್ತಿಯನ್ನು ಬೆಳೆಸಿಕೊಳ್ಳಬಾರದು. ತನಗೆ ತೋರಿದುದನ್ನು ನಿರ್ಭಯವಾಗಿ ನಿರ್ದಾಕ್ಷಿಣ್ಯವಾಗಿ ಯಾವ ಭಾವಕ್ಕೂ ಬಲಿಯಾಗದ ಯಾವ ಒಲವೂ ಇಲ್ಲದ ಆಡಳಿತವರ್ಗವು ಮಂತ್ರಿಗಳಿಗೆ ಎದುರು ಸಲಹೆಯಾಗಿ ಇಡಬೇಕು. ನಾಲ್ಕನೆಯದಾಗಿ ಒಂದು ಧೋರಣೆ ನಿರೂಪಿಸುವ ಪೂರ್ವದಲ್ಲಿ ಆಡಳಿತವರ್ಗವು ಆ ಧೋರಣೆಯ ಬಗ್ಗೆ ಯಾ ವಿರೋಧವಾಗಿ ಅಭಿಪ್ರಾಯ ವ್ಯಕ್ತಪಡಿಸಬಹುದು. ಮಂತ್ರಿಗಳಿಂದ ಒಂದು ಬಾರಿ ನಿರೂಪಗೊಂಡ ಧೋರಣೆಯನ್ನು ಅಧಿಕಾರವರ್ಗವು ಚಾಚೂ ತಪ್ಪದೆ ಪಾಲಿಸಬೇಕಾಗುತ್ತದೆ. ಇದು, ಅಧಿಕಾರ ವರ್ಗವು ನೆನಪಿನಲ್ಲಿಡಬೇಕಾದ ಮುಖ್ಯ ವಿಷಯವಾಗುತ್ತದೆ. ಐದನೆಯದಾಗಿ ಆಡಳಿತವರ್ಗ ರಾಜಕೀಯ ಪಕ್ಷರಹಿತವಾಗಿರಬೇಕು. ಅವರು ಯಾವ ರಾಜಕೀಯ ಪಕ್ಷದೊಡನೆಯೂ ನಿಕಟ ಸಂಪರ್ಕ ಇಟ್ಟುಕೊಂಡಿರಬಾರದು. ಈ ನಿಯಮವನ್ನು ಉಲ್ಲಂಘಿಸಿದರೆ ಆಡಳಿತಾಧಿಕಾರಿಯು ರಾಜಕಾರಣಿಯಾಗುತ್ತಾನಲ್ಲದೆ ಯೋಗ್ಯ ಆಡಳಿತಗಾರನಾಗುವುದಿಲ್ಲ. ಆಡಳಿತವರ್ಗ ಪ್ರತ್ಯಕ್ಷ ರಾಜಕೀಯದಲ್ಲಿ ದುಮುಕುವುದರಿಂದ ಅಹಿತ ಮತ್ತು ಹಾನಿ ಸಂಭವಿಸುವುದು. ಇದರಿಂದ ಆಡಳಿತ ವರ್ಗವು ಶಿಥಿಲವಾಗುವುದಲ್ಲದೆ ಲಂಚಗುಳಿತನ ಮತ್ತು ಸ್ವಾರ್ಥಕ್ಕೆ ದಾರಿಮಾಡಿ ಕೊಟ್ಟಂತಾಗುತ್ತದೆ. ಆರನೆಯದಾಗಿ ಆಡಳಿತ ವರ್ಗವು ಮಂತ್ರಿಗಳ ಧೋರಣೆಯನ್ನು ಕಾರ್ಯಕ್ಕೆ ತರಲು ಮನಃಪೂರ್ವಕ ಸಹಕಾರ ನೀಡಬೇಕಲ್ಲದೆ ಮಂತ್ರಿಗಳನ್ನು ಕಷ್ಟದಲ್ಲಿ ಸಿಕ್ಕಿಸುವ ಹವ್ಯಾಸಕ್ಕೆ ಕೈಹಾಕಬಾರದು. ಕೊನೆಯದಾಗಿ ಆಡಳಿತ ವರ್ಗವು ಜನಾಭಿಪ್ರಾಯ ತತ್ವವನ್ನು ನೆನಪಿನಲ್ಲಿಡಬೇಕು. ಇದೇ ರೀತಿಯಲ್ಲಿ ಮಂತ್ರಿ ಸಂಪುಟವು ಸುಗಮ ಆಡಳಿತ ನಡೆಸಲು ಕೆಲವು ನಿಯಮಗಳನ್ನು ಪಾಲಿಸಿದರೆ ಉತ್ತಮ. ಮಂತ್ರಿಗಳು ಆಡಳಿತ ವರ್ಗದ ಸಲಹೆಗಳನ್ನು ಕೇಳುವುದರಿಂದ ತಮ್ಮ ಘನತೆಗೆ ಕುಂದು ಬರುವುದೆಂದು ಹುಸಿ ದಂಭ ಹೊಂದಬಾರದು. ಆಡಳಿತ ವರ್ಗದವರು ಮಂತ್ರಿಗಳಿಗಿಂತ ಆಡಳಿತದಲ್ಲಿ ಹೆಚ್ಚುಕಾಲ ದುಡಿದು ಅನುಭವ ಪಡೆದವರು. ಹೆಚ್ಚಿನ ಮಂತ್ರಿಗಳು ಆಡಳಿತ ರಂಗಕ್ಕೆ ಹೊಸಬರು. ಆದುದರಿಂದ ಧೋರಣೆಯ ಅಂತಿಮ ನಿರ್ಣಯ ಮಂತ್ರಿಗಳದ್ದಾದರೂ ಒಂದು ಧೋರಣೆ ನಿರೂಪಿಸುವಾಗ ಮಂತ್ರಿಗಳು ಆಡಳಿತ ವರ್ಗದ ಸಲಹೆಯನ್ನು ಕೇಳಬೇಕು. ಶಾಸಕಾಂಗ ಪ್ರಜಾಪ್ರಭುತ್ವದ ಯಶಸ್ಸು ರಾಜಕೀಯ ಮತ್ತು ಶಾಶ್ವತ ಕಾರ್ಯಾಂಗಗಳ ಸೌಹಾರ್ದದಿಂದ ಕೂಡಿದ ಎಂಬ ವಿಚಾರವನ್ನು ಮಂತ್ರಿಗಳು ಸರಿಯಾಗಿ ನೆನಪಿಡಬೇಕು. ಮಂತ್ರಿಗಳು ಆಡಳಿತ ವರ್ಗದ ಮೇಲೆ ಹೊರಿಸಲ್ಪಡುವ ಸರ್ವಾಧಿಕಾರ ಅಪಪ್ರಚಾರ, ಹಾಗೂ ಅವರ ವಿರುದ್ಧ ಚಾಡಿ ಮಾತಿಗೆ ಗಮನಕೊಡಬಾರದು. ಅವು ಎಲ್ಲಿಯವರೆಗೆ ಅವುಗಳ ಸತ್ಯಸಿದ್ಧವಾಗುವ ವರೆಗೆ ಅವರನ್ನು ಸಂಶಯದಿಂದ ಯಾ ಅಲಕ್ಷ್ಯ ಮತ್ತು ಅಗೌರವದಿಂದ ಮಂತ್ರಿಗಳು ನೋಡಬಾರದು. ಆಡಳಿತದಲ್ಲಿ ಕಂಡು ಬರುವ ದೋಷಗಳಿಗೆ ಮಂತ್ರಿಗಳು ಜವಾಬ್ದಾರರಾಗಿ ಮುಂದೆ ಬಂದು ಆಡಳಿತಾಧಿಕಾರಿಗಳನ್ನು ಜನಸಾಮಾನ್ಯರ ಟೀಕೆ ಟಿಪ್ಪಣಿಗಳಿಂದ, ಶಾಸಕಾಂಗದ ದೋಷಾರೋಪಣೆಗಳಿಂದ ರಕ್ಷಿಸಬೇಕು. ಮಂತ್ರಿಗಳು ತಾವು ತಾಳುವ ಧೋರಣೆಯ ಸಾಮಾನ್ಯ ರೂಪವನ್ನು ಮಾತ್ರ ಸಿದ್ಧಗೊಳಿಸಿ, ಅದರ ಸೂಕ್ಷ್ಮವಾದ ವಿವರಣೆಗಳನ್ನು, ಕರ್ತವ್ಯ ವ್ಯವಸ್ಥೆಗಳನ್ನು ಯೋಗ್ಯ ಹಾಗೂ ತೀಕ್ಷ್ಣಮತಿಗಳಾದ ಅಧಿಕಾರಿಗಳು ನಿರೂಪಿಸುವಂತೆ ಮಾಡಬೇಕು. ಇದರಿಂದಾಗಿ ಆಡಳಿತವು ಕುಂದು ಕೊರತೆ ಇಲ್ಲದೆ ಸುಗಮವಾಗುವುದು. ಅತ್ಯಂತ ಮುಖ್ಯ ವಿಷಯವನ್ನು ಮಂತ್ರಿ ಸಂಪುಟ ಗಮನಿಸಬೇಕ್ಕಾದರೆ ದೈನಂದಿನ ಆಡಳಿತದಲ್ಲಿ ಮಂತ್ರಿ ಸಂಪುಟದ ಸದಸ್ಯರಾಗಲಿ ಶಾಸಕಾಂಗದ ಸದಸ್ಯರಾಗಲೀ ಅಗತ್ಯವಿಲ್ಲದ ಕೈ ಹಾಕಿ ಆಡಳಿತ ಯಂತ್ರವನ್ನು ಶಿಥಿಲಗೊಳಿಸಬಾರದು. ಎಲ್ಲಿಯವರೆಗೆ ಆಡಳಿತ ವರ್ಗವು ಮಂತ್ರಿಗಳ ಧೋರಣೆಯನ್ನು ಪಾಲಿಸುತ್ತದೋ ಅಲ್ಲಿಯ ವರೆಗೆ ಮಂತ್ರಿಗಳು ಶಾಸಕಾಂಗ ಸದಸ್ಯರು ಅನಾವಶ್ಯಕವಾಗಿ ಆಡಳಿತದಲ್ಲಿ ಕೈಹಾಕಬಾರದು. ಕೊನೆಯದಾಗಿ ದೈನಂದಿನ ಆಡಳಿತ ನಡೆಸಲು ಸುಗಮವಾಗುವಂತೆ ಆಡಳಿತ ವರ್ಗಕ್ಕೆ ಶೀಘ್ರ ನಿರ್ಣಯ ಕೈಕೊಳ್ಳುವ ಹಕ್ಕು ಇರಬೇಕು.

ಈ ರೀತಿ ಕೆಲವು ತತ್ವಗಳನ್ನು ಆಡಳಿತ ವರ್ಗ ಮತ್ತು ಮಂತ್ರಿಸಂಪುಟಗಳು ಅನುಸರಿಸಿದರೆ ಆಡಳಿತ ಸುಗಮವಾಗುವುದು. ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಲು ಆಡಳಿತವರ್ಗ ಮತ್ತು ಮಂತ್ರಿಮಂಡಲಗಳಲ್ಲಿ ಸಹಕಾರ ಮತ್ತು ಸೌಹಾರ್ದವಿರಬೇಕು. ಈ ರೀತಿಯಲ್ಲಿ ಕಾಂಗ್ರೆಸ್ ಮತ್ತು ಕಾಂಗ್ರೆಸೇತರ ಸರಕಾರಗಳು ನಡೆದರೆ ಅವುಗಳು ತಮ್ಮ ಧ್ಯೇಯವನ್ನು ಸಾಧಿಸುವವಲ್ಲದೆ ಜನತೆಗೆ ಅಗತ್ಯವಿರುವ ಪರಿಶುದ್ಧ ಆಡಳಿತ ದೊರಕುವಂತೆ ಮಾಡಿದಂತಾಗುತ್ತದೆ.

ಹಿಂದೂತ್ವದ ಸಂರಕ್ಷಣೆ—೩

ಮದ್ರಾಸಿನಲ್ಲಿ ಸೇರಿದ ವಿದ್ವತ್ ಪರಿಷತ್ತು

ಬಿಕ್ಕಟ್ಟಿನ ಇತಿಶ್ರೀ ಮತ್ತು ಒಕ್ಕಟ್ಟಿನ ಅತಃ ಓಂ— ಇವು ಇಂದಿನ ಪರಮಾವಶ್ಯಕತೆಗಳು.

ವರದಿಗಾರರು : ಶ್ರೀ ಶಿವಶಂಕರ.

ಎರಡನೆಯ ದಿನ ಸೋಮವಾರ) ದಿ. ೨೭ರಂದು) ಸಾಯಂಕಾಲ ಸಾರ್ವಜನಿಕ ಸಭೆ, ಭಜನೆಗಳಲ್ಲಿ ಭಾಗವಹಿಸಲು ಮಾತ್ರ ಸಾರ್ವಜನಿಕರಿಗೆ ಸಾಧ್ಯವಾಗಿತ್ತು. ಅಂದು ಕೆಲವು ಮಠೀಯ ಮುಖಂಡರು ತಮ್ಮ ತಮ್ಮ ಅಭಿಪ್ರಾಯವನ್ನು ಪಾಮರರಿಗೆ ತಿಳಿಯಪಡಿಸಿದರು.

ಮೈಸೂರಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಿದೆ. ಅಲ್ಲಿ ದತ್ತಾತ್ರೇಯನ ದೇವಸ್ಥಾನ ಇದೆ. ಅದಿಂದು ಮಹಮ್ಮದೀಯರ ವಶದಲ್ಲಿದೆ. ದೇವಸ್ಥಾನದ ಬಳಿ ನಾಲ್ಕು ಗೋರಿಗಳಿವೆ. ಅವನ್ನು ದತ್ತಾತ್ರೇಯನ ಶಿಷ್ಯರ ಗೋರಿಗಳೆನ್ನಲಾಗುತ್ತದೆ. ಇದನ್ನು ಯಾರೂ ತಡೆಯಲು ಪ್ರಯತ್ನಿಸಿರುವುದಿಲ್ಲ. ದೇವಸ್ಥಾನ ಈ ರೀತಿ ಅಪವಿತ್ರವಾಗುತ್ತಿರುವುದರಿಂದ ಸಾಮಾನ್ಯ ಪ್ರಜೆಯಾಗಲೀ, ಅಥವಾ, ಅಲ್ಲ ಹತ್ತಿರದಲ್ಲೇ ಇರುವ ಶೃಂಗೇರಿ ಮಠದ ಜಗದ್ಗುರು ಶಂಕರಾಚಾರ್ಯರಾಗಲೀ ಸರಿಪಡಿಸಲು ಯೋಚಿಸಿರುವುದಿಲ್ಲ. ಸಾಮಾನ್ಯ ಮಾನವನಲ್ಲಿ ವಿಸ್ಮೃತಿ ಬೀಡುಬಿಟ್ಟಿದೆ. ಶೃಂಗೇರಿ ಪೀಠವಾದರೋ ಆದಿಶಂಕರಾಚಾರ್ಯರು ಸ್ಥಾಪಿಸಿರುವ ಮಠಗಳಲ್ಲಿ ಮುಖ್ಯವಾದ ಪೀಠ. ಈ ರೀತಿ ನಾವಿಂದು ಇಲಿ ಅಥವಾ ನರಿಗಳಾಗುತ್ತಿದ್ದೇವೆ. ಆದರೆ ಬದಲು ನಮ್ಮಲ್ಲಿ ಶಕ್ತಿಯು ಹಾಗೆ ಉತ್ಸಾಹ ಇದ್ದಿರಬೇಕು. ಇನ್ನಾದರೂ ನಾಗರ ಪ್ರಭಾವದತ್ತ ಪ್ರಗತಿ ಹೊಂದುವಬದಲು ಸಮಾಜ ಸಂರಕ್ಷಣೆಗಾಗಿ ಹಿಂತಿರುಗಬೇಕಾಗಿದೆ. ನಮ್ಮ ಶಾಸ್ತ್ರಗಳಲ್ಲಿ ಹೇಳಿರುವ ಪ್ರಾಣಾಯಾಮ ಹಾಗೂ ಇತರಸಂಸ್ಕಾರಗಳೊಂದಿಗೆ ಸಮಾಜಕೋಶ ಅಥವಾ ರಾಷ್ಟ್ರಕೋಶವನ್ನು ಸೇರಿಸಬೇಕು. ಇಂದು ಧರ್ಮಕ್ಕಾಗಿ ದುಡಿಯುವ ಕಾಲ ಸನ್ನಿಹಿತವಾಗಿದೆ. ಧರ್ಮರಕ್ಷಣೆಯ ಕಾರ್ಯಪಥದಲ್ಲಿ ಅಂತಃರಾಷ್ಟ್ರೀಯ ಸಂಘರ್ಷವನ್ನು ಕಂಡು ಕಂಗೆಡಬಾರದು. ಇಂದು ರಾಮಾಯಣ ಅಥವಾ ಮಹಾಭಾರತದ ಪಠಣ ಹಾಗೂ ಶ್ರವಣ ಮಾತ್ರ ಸಾಲದು. ರಾಮತ್ವ ಹಾಗೂ ಕೃಷ್ಣತ್ವ ನಮ್ಮಲ್ಲಿ ಮೈಗೂಡಬೇಕು. ನಾವು ನೈಜ ಹಿಂದೂಗಳಾಗಬೇಕು. ಇಂದು ಸಮಾಜದಲ್ಲಿ ಬಿಕ್ಕಟ್ಟು ಹಾಗೂ ಒಂದು ರೀತಿಯ ಅವ್ಯವಸ್ಥೆಯಿರುವುದರಿಂದ ಶರೀರದೊಳಗೆ ವಿಪರೀತ ಮತಪ್ರಚಾರಕ ರೋಗದ ಕ್ರಿಮಿಗಳು ಬಹಳ ಸುಲಭವಾಗಿ ಸೇರಿಕೊಂಡು ಜಾಡ್ಯವನ್ನು ಹುಟ್ಟಿಸುತ್ತವೆ. ನಾವು ಬಲಶಾಲಿಗಳಾದಲ್ಲಿ ಈ ಕ್ರಿಮಿಗಳ ಕಿರುಕುಳದಾಟ ನಡೆಯುವಂತಿಲ್ಲವೆಂದು ಕೇರಳದ ಪಲ್ಘಾಡಿನಲ್ಲಿರುವ ಜ್ಞಾನಾಶ್ರಮದ ಶ್ರೀ ಶ್ರೀ ಪೂರ್ಣಾನಂದ ಸ್ವಾಮೀಜೀಯವರು ತಿಳಿಸಿದರು. ಇಂದು ಧಾರ್ಮಿಕ ವಿದ್ಯೆಯ ಅಭಾವ ತಾಂಡವವಾಡುತ್ತಿರುವುದರಿಂದ ತಾವು ತಮ್ಮ ಆಶ್ರಮದಲ್ಲಿ ವ್ಯಾಸಕಲಾಶಾಲೆಯನ್ನು ತೆರೆಯುವುದಾಗಿ ಶ್ರೀಯುತರು ಹೇಳಿದರು. ಇದು ಸಮಾಜದ ಕಡೆಗೆ ಯಾವೊಬ್ಬ ಪ್ರತ್ಯೇಕ ವ್ಯಕ್ತಿಯು ಕೊಡುವ ಸಮಯ ಇದಲ್ಲ; ಅದಕ್ಕಾಗಿ ಸಂಘಟನಾ ಶಕ್ತಿ ಅತ್ಯಗತ್ಯವೆಂದು ನುಡಿದ ಶ್ರೀ ಶ್ರೀಯವರು ಸಂಘಟನೆಗಾಗಿ ಕರೆಯಿತ್ತರು.

ಮೊದಲ ದಿನವೇ ತಮ್ಮ ಕಂಠ ಹಾಗೂ ಸುಲಲಿತ ಭಾಷಾ ಹತೋಟಿಯಿಂದ ಜನತೆಯ ಗಮನವನ್ನು ಸೆಳೆದುಕೊಂಡಿದ್ದ ಧಾರವಾಡದ ವೀರಶೈವ ಸಂಪ್ರದಾಯದ ನವಕಲ್ಯಾಣ ಮಠದ ಶ್ರೀ ಕುಮಾರ ಸ್ವಾಮೀಜೀಯವರು ವೀರಶೈವ ಸಂಪ್ರದಾಯದ ಕುರಿತು ವಿವರವಾಗಿ ಹಾಗೂ ಒಟ್ಟಿನಲ್ಲಿ ಹಿಂದೂ ತತ್ವಜ್ಞಾನದ ಕುರಿತೂ ಬೋಧಪ್ರದ ಭಾಷಣವಿತ್ತರು.

ಭಾಷಾತಜ್ಞ ಹಾಗೂ ಅತ್ಯುತ್ತಮ ಸಾಧುವಿ ಡಾ। ರಘುವೀರರ ಪುತ್ರ ಲೋಕೇಶಚಂದ್ರರು ಪ್ರಪಂಚದ ಅನ್ಯಾನ್ಯ ರಾಷ್ಟ್ರಗಳಲ್ಲಿ ಹಿಂದೂತ್ವದ ಕುರುಹು ಸಿಕ್ಕುತ್ತಿರುವ ಕುರಿತು ತಿಳಿಸಿದರಲ್ಲದೆ, ದ್ವೀಪಾಂತರ ಅಥವಾ ಇಂಡೋನೇಶ್ಯಾದಲ್ಲಿ ಹಿಂದೂ ಧರ್ಮ ಇರುವ ಕುರಿತು ವರ್ಣಿಸಿದರು. ಪಲ್ಲವರು ಇಲ್ಲಿ ಪ್ರಬಲರಾಗಿದ್ದಾಗ ಇಂಡೋನೇಶ್ಯಾಕ್ಕೆ ಹೋಗಿದ್ದರು. ಇಂದೂ ಅಲ್ಲಿಯ ದೇವಸ್ಥಾನಗಳು ಈ ವಿಷಯವನ್ನು ತಿಳಿಸುತ್ತವೆ. ಜಾವಾದಲ್ಲಿರುವ ದೇಗುಲ ಸಮೂಹವು ಮಹಾಬಲಪುರದ ದೇವಸ್ಥಾನದಂತೆವೆ. ಇಲ್ಲಿಯ ಮುಖ್ಯ ದೇವಸ್ಥಾನದ ಸುತ್ತಮುತ್ತಲೂ ಇನ್ನೂರೆಂಭತ್ತು ದೇವಸ್ಥಾನಗಳಿವೆ. ಇದರಿಂದ ಮಹಮ್ಮದೀಯರು ಆಕ್ರಮಣ ನಡೆಸದ ವರೆಗೆ ಅಲ್ಲಿ ಹಿಂದೂ ಧರ್ಮದ ಪ್ರಭಾವ ಇತ್ತೆಂಬುದು ಸ್ಪಷ್ಟವಾಗುತ್ತದೆ. ಇನ್ನೂರು ವರ್ಷಗಳಿಂದೀಚೆ ಈ ದೇವಸ್ಥಾನದ ಕುರಿತು ಅದ್ಯಾರೂ ಅಷ್ಟು ಮುತುವರ್ಜಿ ತೋರಿಸಲಿಲ್ಲ. ಆದರೆ ಈಗ ಇಂಡೋನೇಶ್ಯದ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬಲಿಷ್ಠವಾಗಿದ್ದು, ಈ ದೇವಸ್ಥಾನವು ಜಗತ್ತಿನಲ್ಲೇ ಮೊತ್ತಮೊದಲಿನ ಅತಿ ಎತ್ತರದ ಕಟ್ಟಡವಾಗಿರುವುದರಿಂದ ಅದನ್ನು ರಕ್ಷಿಸಬೇಕೆಂದು ಜೀರ್ಣೋದ್ಧಾರ ಕಾರ್ಯಕ್ಕೆ ಆರಂಭಿಸಿರುವರು. ಪುನರ್ನಿರ್ಮಾಣದ ಕೆಲಸವನ್ನು ಆರಂಭಿಸುವ ಉತ್ಸವವನ್ನು ಸ್ವತಃ ಸು

(ಹಿಂಭಾಗದ ಪುಟ ನೋಡಿ)

ಕಾಮ ಕ್ರೀಡಾ ಶಿಲ್ಪ

(ಹಿಂದಿನ ಪುಟದಿಂದ)

ನ್ನು ಚಂಚಲಗೊಳಿಸದೆ. ಜಡ ಜೀವನದ ಒಂದು ಅಗತ್ಯ ಎನ್ನುವ ಅರಿವು ಮೂಡಿಸಬೇಕು ಎನ್ನುವ ದೃಷ್ಟಿ ಅವರದು.

ಕ್ರಿ. ಪೂ. ೨ನೆಯ ಶತಮಾನದಿಂದಲೂ ಶಿಲ್ಪದಲ್ಲಿ ಮಿಥುನವನ್ನು ಬಳಸಿದಂತೆ ತಿಳಿದು ಬರುತ್ತದೆ. ಈ ಸಂಪ್ರದಾಯ ಪುರಾತನವಾದುದು ಎಂಬುದು ಸ್ಪಷ್ಟವಾಗಿದೆ. ಆರಂಭದ ದಿನಗಳಲ್ಲಿ ಪಶು, ಪಕ್ಷಿ, ನಾಗ ಮಿಥುನಗಳನ್ನು [ಜೋಡಿ]ಕಂಬ, ಗೋಡೆ ಬಾಗಿಲು ವಾಡಗಳ ಮೇಲೆ ಅಲಂಕಾರಕ್ಕಾಗಿ ಚಿತ್ರಿಸುತ್ತಿದ್ದರು. ಕ್ರಮೇಣ ದೇವತಾ ಮಿಥುನಗಳಿಗೂ ದೇವಾಲಯಗಳ ಮೇಲೆ ಬಸದಿ, ಸ್ತೂಪಗಳ ಮೇಲೆ ದಾತೃ ದಂಪತಿಗಳ ಮಿಥುನವನ್ನು ಚಿತ್ರಿಸಲಾರಂಭಿಸಿದರು. ಯಕ್ಷ ದಂಪತಿಗಳು ಅಥವಾ ದಾತೃ ದಂಪತಿಗಳ ಚಿತ್ರಣದಲ್ಲಿ ಮೋಹ ತೃಪ್ತಿ ಭಕ್ತಿಗಳಿಗೆ ಪ್ರಾಧಾನ್ಯತೆ. ಮಥುರಾದಲ್ಲಿರುವ ಗಾಂಧಾರ ಶಿಲ್ಪ ಸಂಪ್ರದಾಯದಲ್ಲಿ ಮೊದಲ ಬಾರಿಗೆ ನಗ್ನಸ್ತ್ರೀ ಪುರುಷರ ಮಿಥುನಗಳು ಕಾಣ ಬರುತ್ತವೆ. ನದಿಯಲ್ಲಿ ವಿಹಾರಾರ್ಥವಾಗಿ ಹೊರಟ ಪ್ರಣಯಿಗಳು ನಗ್ನರಾಗಿ ಪಾನಪಾತ್ರೆಗಳೊಂದಿಗೆ ಇದ್ದಾರೆ. ಮಿಥುನ ಸಂಕೇತ ದೇವಾಲಯ ಸ್ತೂಪಗಳಲ್ಲಿ ಅಗತ್ಯ ಅಲಂಕರಣ ಪ್ರಾಕಾರವನ್ನು ಈ ಹಂತದ ಗುಪ್ತ ಕಾಲದಲ್ಲಿ ಮೂಡಿ ಬಂತು.

ಒರಿಸ್ಸಾದ ಕೋನಾರ್ಕ, ರಾಜಸ್ಥಾನ ಖಜುರಾಹೋ ದೇವಾಲಯಗಳ ರಚನೆಯ ಕಾಲದಲ್ಲಿ ಮಿಥುನ ಶಿಲ್ಪ—ಕಾಮ ಕ್ರೀಡಾ ಶಿಲ್ಪ ಪರಿಪೂರ್ಣ ಹಂತವನ್ನೇರಿತ್ತು. ಈ ದೇವಾಲಯಗಳ ಶಿಲ್ಪಗಳಲ್ಲಿ ಕಾಮಶಾಸ್ತ್ರದಲ್ಲಿ ನಿರೂಪಿಸಲ್ಪಟ್ಟಿರುವ ಸಂಗತಿಗಳು ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿವೆ.

ಕಾಮ ಕ್ರೀಡಾ ಶಿಲ್ಪ ಚಿತ್ರಗಳ ರಚನೆಗೆ ಸಂಬಂಧಿಸಿದಂತೆ ಒಂದು ಪರಂಪರಾಗತ ನಂಬಿಕೆ ಇದೆ. ಆಕಾಶ ಮೋಡಗಳಿಂದ ಕವಿದು, ಗುಡುಗು ಮಿಂಚು ಸಿಡಿಲುಗಳ ಅಬ್ಬರ ಕೇಳಿ ಬರುವಾಗ, 'ಮಿಂಚಿನ ರಾಣಿ' ಮೋಡ ಭೂಮಿಯನ್ನು ನೋಡುತ್ತಾಳಂತೆ. ಗುಡಿ ಗೋಪುರಗಳ ಕಡೆಗೆ ಅವಳ ದೃಷ್ಟಿ ಹರಿದಾಗ ದೇವಾಲಯಗಳ ಹೊರವಲಯಗಳಲ್ಲಿ ಕಂಬಗಳ ಮೇಲೆ ಕೊರೆಯಲ್ಪಟ್ಟ ಕಾಮಕ್ರೀಡಾರತ ಚಿತ್ರಗಳನ್ನು ನೋಡಿ ತನ್ನ ಗಮನವನ್ನು ಅತ್ತಕಡೆಗೆ ಹೊರಳಿಸುತ್ತಾಳಂತೆ. ಇಲ್ಲದಿದ್ದರೆ ಆಕೆಯ ದೃಷ್ಟಿ ಪಾತದ ಗುಡುಗು ಸಿಡಿಲುಗಳ ಆಘಾತಕ್ಕೆ ಗುಡಿಗೋಪುರಗಳು ನುಚ್ಚುನೂರಾಗಿ ಹೋಗುವುವಂತೆ. ಅಂದರೆ ಕಾಮ ಕ್ರೀಡಾರತ— ಚಿತ್ರಗಳು ದೇವಾಲಯದ ರಕ್ಷಾ ಕವಚಗಳು. ದೇವಾಲಯಗಳ ಸುರಕ್ಷತೆಗಾಗಿಯೇ ಕಾಮಕ್ರೀಡಾ—ಚಿತ್ರ—ಮಿಥುನ ಚಿತ್ರಗಳನ್ನು ದೇವಾಲಯಗಳ ಹೊರವಲಯದಲ್ಲಿ ಕೊರೆದಿರುತ್ತಾರೆ. ಅನೇಕ ತಲೆಮಾರುಗಳಿಂದ ಈ ಬಗೆಯ ನಂಬಿಕೆ ಬಳಕೆಯಲ್ಲಿದ್ದಂತೆ ತಿಳಿದು ಬರುತ್ತದೆ. ನಂಬಿಕೆ ಏನಾದರೂ ಇರಲಿ ದೇವಾಲಯಗಳ ಶಿಲ್ಪಗಳಲ್ಲಿ 'ರತಿ ಮಿಥುನ ಚಿತ್ರೀಕರಣವನ್ನು ಕಾಣುತ್ತೇವೆ.

ಭಾರತದಲ್ಲಿ ಸೂರ್ಯ ದೇವಾಲಯಗಳ ಸಂಖ್ಯೆ ಬೆರಳಿನಲ್ಲಿ ಎಣಿಸುವಷ್ಟು ಸ್ವಲ್ಪ. ಸೂರ್ಯ ದೇವಾಲಯಗಳು ಕಾಮಕಲಾವಿಲಾಸರತಿ ಮಿಥುನ ಚಿತ್ರಗಳಿಗೆ ಪ್ರಸಿದ್ಧ. ಕೋನಾರ್ಕದ ಸೂರ್ಯ ದೇವಾಲಯ ಈ ಬಗೆಯ ರತಿ ಮಿಥುನ ಚಿತ್ರಗಳಿಗೆ, ವಿಗ್ರಹಗಳಿಗೆ ಮುಖ್ಯ ನೆಲೆ. ರಾಜಸ್ಥಾನದ ಖಜುರಾಹೋ ದೇವಾಲಯಗಳಲ್ಲಿಯೂ ಮೈನವಿರೇಳಿಸುವಂತಹ ರತಿ ಮಿಥುನ ಚಿತ್ರಗಳು ವಿಪುಲವಾಗಿವೆ. ಪುರಿಯ ಜಗನ್ನಾಥ ದೇವಾಲಯದಲ್ಲಿ, ದೇವಾಲಯದ ರಥದ ಚಕ್ರದ ಮೇಲೆ ನಾನಾ ಬಗೆಯ ಭಾವ ಭಂಗಿಗಳ ರತಿ ಮಿಥುನ ಚಿತ್ರಗಳನ್ನು ಚಿತ್ರಿಸಿದ್ದಾರೆ. ದಕ್ಷಿಣ ಭಾರತದ ದೇವಾಲಯಗಳಿಗಿಂತಲೂ ಉತ್ತರ ಭಾರತದ ದೇವಾಲಯಗಳಲ್ಲಿ ಈ 'ರತಿ ಮಿಥುನ' ಚಿತ್ರಗಳು ಹೆಚ್ಚೆಂದು ಹೇಳಬಹುದು.

ದೇವಾಲಯಗಳ ಹೊರ ವಲಯಗಳಲ್ಲಿ ಚಿತ್ರಿಸಲ್ಪಟ್ಟಿರುವ ಮಿಥುನ ಚಿತ್ರಗಳನ್ನು ಗಮನಿಸಿದಾಗ, ದೇವತಾರಾಧಕ ದೇವರ ಸನ್ನಿಧಿಗೆ ಬರುವಾಗ ಇಂದ್ರಿಯ ಸುಖಾಪೇಕ್ಷೆಯನ್ನು ಹೊರಗಿರಿಸಿ, ಶುದ್ಧ ಭಾವದಿಂದ—ತ್ರಿಕರಣ ಶುದ್ಧ (ಮಾತು, ಮೈ, ಮನಸ್ಸು)ಯಿಂದ ಪ್ರವೇಶಿಸಬೇಕು ಎಂಬ ಸಂಕೇತವನ್ನು ಹೊಂದಿವೆ ಎಂದು ತೋರುತ್ತದೆ. ಅಥವಾ ಅನುಭವ ಸಂಪನ್ನ ದೃಷ್ಟಿ ಪ್ರೇಮ ಮತ್ತು ಇಂದ್ರಿಯ ಸುಖಾಪೇಕ್ಷೆಗಳ ಶೃಂಗಾರ ಕಾವ್ಯವನ್ನು ಎತ್ತಿ ಸೂಚಿಸಲೆಂದು ದೇವಾಲಯಗಳ ಹೊರವಲಯ ಅಥವಾ ಪ್ರಾಕಾರಗಳ ಮೇಲೆ ರತಿ ಮಿಥುನ ಚಿತ್ರಗಳನ್ನು ನಿರೂಪಿಸಿರಬಹುದು. ಒಟ್ಟಿನಲ್ಲಿ 'ಮಿಥುನ' ಚಿತ್ರಗಳು ಪ್ರಾಚೀನ ಜನತೆಯ ಸಂಸ್ಕೃತಿ, ಸದ್ಭಾವನೆ, ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ. ಅವುಗಳನ್ನು ಲೈಂಗಿಕ, ಅಶ್ಲೀಲ ಚಿತ್ರಗಳೆಂದು ಅಲ್ಲಗಳೆಯುವಂತಿಲ್ಲ, ಅಲಕ್ಷಿಸುವಂತಿಲ್ಲ.

ಶ್ರೀ ರಾಮಕೃಷ್ಣರ

ವಚನ ಮಲ್ಲರಿ

ಎಣ್ಣೆ ತಗಲಿದ ಕಾಗದದ ಮೇಲೆ ಬರೆಯಲಾಗುವುದಿಲ್ಲ. ಇದರಂತೆಯೇ ಇಂದ್ರಿಯ ಭೋಗಾಭಿಲಾಷೆಗಳಿಂದ ಕೆಟ್ಟು ಹೋದ ಮನಸ್ಸು ಭಗವಚ್ಚಿಂತನಕ್ಕೆ ಯೋಗ್ಯವಲ್ಲ. ಆದರೆ ಎಣ್ಣೆಯ ಕಾಗದದ ಮೇಲೆ ಸುಣ್ಣವನ್ನು ಬಳಿದರೆ ಅದರ ಮೇಲೆ ಬರೆಯಲು ಸಾಧ್ಯವಾಗುವಂತೆ, ಮನಸ್ಸಿನ ಮೇಲೆ ವೈರಾಗ್ಯವನ್ನು ಲೇಪಿಸಿದರೆ ಬರೆಯಲು ಸಾಧ್ಯವಾಗುವುದು.

೦ ೦ ೦

ಸಮುದ್ರದಲ್ಲಿ ಒಮ್ಮೆ ಮುಳುಗಿದಾಗ ಮುತ್ತು ಸಿಕ್ಕದೇ ಇದ್ದರೆ ಸಮುದ್ರದಲ್ಲಿ ಮುತ್ತೇ ಇಲ್ಲವೆಂದು ತಿಳಿಯಬೇಡ. ಸಮುದ್ರದಲ್ಲಿ ಲೆಕ್ಕವಿಲ್ಲದಷ್ಟು ಮುತ್ತುಗಳು ಹುದುಗಿವೆ. ಸ್ವಲ್ಪ ಸಾಧನೆಯನ್ನು ಮಾಡಿದ ಮೇಲೆ ದೇವರನ್ನು ಕಾಣದ ಇದ್ದರೆ ಎದೆಗೆಡಬೇಡ. ಸಮಾಧಾನದಿಂದ ಸಾಧನೆಯನ್ನು ಮಾಡು. ಸಕಾಲದಲ್ಲಿ ದೇವರ ಅನುಗ್ರಹ ನಿನಗೆ ದೊರಕುವುದರಲ್ಲಿ ಸಂದೇಹವಿಲ್ಲ.

೦ ೦ ೦

ಹಡಗು ಯಾವ ದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರೂ ಉತ್ತರಮುಖ ಯಾವಾಗಲೂ ಉತ್ತರಕ್ಕೇ ತಿರುಗಿಕೊಂಡಿರುವುದು. ಆದಕಾರಣವೇ ಹಡಗು ತನ್ನ ದಾರಿಯನ್ನು ಕಳೆದುಕೊಳ್ಳುವುದಿಲ್ಲ. ಮನುಷ್ಯನ ಮನಸ್ಸು ಯಾವಾಗಲೂ ದೇವರ ಕಡೆ ತಿರುಗಿದ್ದರೆ ಅವನ ಎಲ್ಲ ಅಪಾಯಗಳಿಂದಲೂ ಪಾರಾಗುವನು.

೦ ೦ ೦

ರೇಷ್ಮೆ ಹುಳು ತನ್ನ ನೂಲಿನಿಂದಲೇ ತಾನೇ ಬಂಧಿಯಾಗುವುದು. ಅದರಂತೆಯೇ ಪ್ರಾಪಂಚಿಕ ಮನುಷ್ಯನು ತನ್ನ ಕರ್ಮದ ಬಲೆಯಲ್ಲಿ ತಾನೇ ಸಿಕ್ಕಿ ಬೀಳುವನು. ಆದರೆ ಹುಳು ಚಿಟ್ಟೆ (ಪಾತರಗಿತ್ತಿ) ಯಾದಾಗ ಗೂಡನ್ನು ಕೊರೆದು ಹೊರಗೆ ಬಂದು ಸ್ವಾತಂತ್ರ್ಯವನ್ನು ಅನುಭವಿಸುವುದು. ಅದರಂತೆಯೇ ಸಂಸಾರದಲ್ಲಿ ನರಳುವ ಜೀವ ವಿವೇಕ ವೈರಾಗ್ಯಗಳೆಂಬ ರೆಕ್ಕೆಗಳನ್ನು ಪಡೆಯುವುದರ ಮೂಲಕ ಮುಕ್ತನಾಗುವನು.

೦ ೦ ೦

ಕೊಳೆ ಕೆಸರಿನಿಂದ ಹೊಲಸು ಮಾಡಿಕೊಳ್ಳುವುದು ಮಕ್ಕಳ ಸ್ವಭಾವ. ಆದರೆ ತಂದೆತಾಯಿಗಳು ಹೊಲಸಿನಲ್ಲಿರುವಂತೆ ಮಕ್ಕಳನ್ನು ಬಿಡುವುದಿಲ್ಲ. ಆದರಂತೆಯೇ ಪ್ರಪಂಚದ ಪ್ರಲೋಭನಗಳಿಗೆ ಸಿಕ್ಕಿ ಮನುಷ್ಯನು ಎಷ್ಟು ಕೊಳೆಯಾಗಿದ್ದರೂ ಅವನು ಮತ್ತೆ ಪರಿಶುದ್ಧನಾಗುವುದಕ್ಕೆ ದೇವರು ಅವಕಾಶವನ್ನು ಕಲ್ಪಿಸುತ್ತಾನೆ.

೦ ೦ ೦

ಪರಮಹಂಸರ ಸ್ಥಿತಿ ಯಾವುದು? ಹಂಸ ಹಾಲಿನೊಂದಿಗೆ ಬೆರಸಿದ ನೀರಿನಲ್ಲಿ ನೀರನ್ನು ಬಿಟ್ಟು ಬರಿಯ ಹಾಲನ್ನೆ ಹೇಗೆ ಕುಡಿಯುವುದೋ ಹಾಗೆಯೇ ಈ ಮಾಯಾಮಯ ಪ್ರಪಂಚದಲ್ಲಿ ಅವರು ಸತ್ಯವನ್ನು ಮಾತ್ರ ಸ್ವೀಕರಿಸಿ ಮಿಥ್ಯವನ್ನು ತೊರೆಯುವರು.

೦ ೦ ೦

ಸೂರ್ಯನ ರಶ್ಮಿ ಎಲ್ಲಾ ಕಡೆಗಳಲ್ಲಿಯೂ ಬೀಳುತ್ತದೆ. ಆದರೆ ಎಲ್ಲಿ ಅದು ನೀರು, ಕನ್ನಡಿ, ನಯವಾದ ಲೋಹ ಮುಂತಾದವುಗಳ ಮೇಲೆ ಬೀಳುತ್ತದೆಯೋ ಅಲ್ಲಿ ಮಾತ್ರ ಸೂರ್ಯ ರಶ್ಮಿ ಪ್ರತಿಬಿಂಬಿತವಾಗುತ್ತದೆ. ಅದರಂತೆಯೇ ಭಗವಂತನು ಎಲ್ಲಾ ಕಡೆಗಿದ್ದರೂ ಯಾರು ಶುದ್ಧಾತ್ಮರೋ ಅವರಲ್ಲಿ ಮಾತ್ರ ವ್ಯಕ್ತನಾಗುತ್ತಾನೆ.

"ಪ್ರದೀಪ"

ಚಂದಾ ಹಣ ಬಾಕಿ ಇರುವ ಚಂದಾದಾರರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....

ಅದಕ್ಕಾಗಿ ಚಿಂತಿಸುವಿರೇಕೆ?...............

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ..........

ವೀಗಲ್ VEEGAL

ಪೆಟ್ರೋಲ್ / ಸೀಮೆಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು :

ವಿಕ್ಟರ್ ಟ್ರೇಡಿಂಗ್ ಕೋರ್ಪೊರೇಶನ್

ಫಳನೀರು ರಸ್ತೆ, ಮಂಗಳೂರು-1. Ph. 6737

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—೩

ಮದ್ರಾಸಿನಲ್ಲಿ ಸೇರಿದ ವಿದ್ವತ್ ಪರಿಷತ್ತು

(ಏಳನೇ ಪುಟದಿಂದ)

ಕಡೋರ ನಡೆಸಿರುವದು. ಮುಸ್ಲಿಮರ ಕೈ ಮೇಲಾದಾಗ ಆಗಿನ ರಾಜಾ ಜಯಭಯನು ತನ್ನ ಜನರೊಂದಿಗೆ ಕಾಡಿಗೆ ಹೋಗಿಬಿಟ್ಟನು. ಅಲ್ಲಿ ಜಯಭಯನು ತಾನು ಐನೂರು ವರ್ಷಗಳ ನಂತರ ಹಿಂತಿರುಗಿ ಬರುವೆನೆಂದು ಭವಿಷ್ಯ ನುಡಿದಿರುವನು. ಆ ಪ್ರಕಾರ ಅವನು ೧೯೬೭ರಲ್ಲಿ ಹಿಂತಿರುಗಬೇಕು. ಅವನ ಅನುಯಾಯಿಗಳ ಸಂಖ್ಯೆ ಸುಮಾರು ಒಂಭತ್ತು ಮಿಲಿಯು. ಇವರು ಇಸ್ಲಾಮಿಗೆ ಸೇರಿರುವದಿಲ್ಲ. ತಮ್ಮನ್ನು ಬಲಿ ಹಿಂದೂಗಳೆಂದು ಇವರು ಕರೆದುಕೊಳ್ಳುತ್ತಾರೆ. ಬಲಿ ಅಂದರೆ ಹಿಂತಿರುಗಿ ಬಂದವನೆಂದು ಅರ್ಥ. ಈ ಐನ್ನೂರು ವರ್ಷಗಳಲ್ಲಿ ಜಾವಾದ ಹಿಂದೂಗಳ ಮೇಲೂ ಪರಿಣಾಮವಾಗಿರುತ್ತದೆ. ಅಲ್ಲಿ ಇಂದೂ ಪ್ರಾಥಮಿಕ ಶಾಲೆಯಿಂದ ಕಲಾಶಾಲೆಯ ವರೆಗೂ ಗಾಯತ್ರಿಯ ಐದು ಮಂತ್ರಗಳನ್ನು ಹೇಳಿಸುತ್ತಾರೆ. ಇಸ್ಲಾಮಿನ ಪ್ರಭಾವ ಅಷ್ಟಿದ್ದರೂ ರಾಜಮನೆತನದ ಮುಸ್ಲಿಮರ ಕುಟುಂಬಗಳ ಅರಮನೆಗಳಲ್ಲಿ ಸಂಸ್ಕೃತ ಮಂತ್ರಪಠನ ನಡೆಯುತ್ತಿದೆಂದು ತಿಳಿಸಿದ ಶ್ರೀ ಲೋಕೇಶ್ಚಂದ್ರರವರು ಆ ದ್ವೀಪಗಳಿಗೆ ಇಲ್ಲಿಂದ ಆಚಾರ್ಯಪುರುಷರು ಹೋಗಿ ಧರ್ಮೋಪದೇಶ ಮಾಡಬೇಕಾಗಿ ನವ್ಯತೆಯಿಂದ ಯೋಚಿಸಿಕೊಂಡರು.

ತಮಿಳು ನಾಡಿನ ಆಳ್ವಾರುಗಳೂ ನಾಯನ್ಮಾರರುಗಳೂ ವಸುಧೈವ ಕುಟುಂಬದ ವಿಷಯವೇ ಹೇಳಿದ್ದ ವಿಶ್ವ ಹಿಂದೂ ಪರಿಷತ್ತು ಕೂಡಾ ಅವನ್ನೂ ಹೇಳುತ್ತಿದೆ. ಇದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿರುವದರಿಂದ ಇದಕ್ಕೆ ಜಯ ಖಂಡಿತವೆಂದು ಶ್ರೀ ಡಿ. ರಾಮಸ್ವಾಮಿ ಅಯ್ಯಂಗಾರ್‌ರವರು ತಮ್ಮ ಭಾಷಣದಲ್ಲಿ ತಿಳಿಸಿದರು.

ಹಿಂದೆ ವಿದ್ಯಾರಣ್ಯ ಸ್ವಾಮಿಜೀಯವರು ಒಂದು ಸದಸ್ಸನ್ನು ಸೇರಿಸಿದ್ದರು. ಇಂದು ಅದೇ ರೀತಿಯಲ್ಲಿ ವಿಶ್ವ ಹಿಂದೂ ಪರಿಷತ್ತು ವಿದ್ವತ್ ಪರಿಷತ್ತನ್ನು ಸೇರಿಸಿರುತ್ತದೆ. ಹಿಂದೂಗಳೆಲ್ಲ ಒಂದಾದಲ್ಲಿ, ಹಿಂದೂಧರ್ಮದ ಮಠಾಚಾರ್ಯರು ಅನ್ಯದೇಶಗಳಿಗೆ ಹೋಗಿ ಧರ್ಮೋಪದೇಶ ಮಾಡಿದ್ದಲ್ಲಿ ಮಾತ್ರ ವಿಶ್ವಶಾಂತಿ ಕಾಣಲು ಸಾಧ್ಯ. ಆ ಸಮಯ ಇದೀಗ ಬಂದಿರುತ್ತದೆಂದ. ಮಹಾಪಂಡಿತ ಬಾಳಾ ಶಾಸ್ತ್ರಿ ಹರದಾಸರವರು ತಮ್ಮ ಭಾಷಣದಲ್ಲಿ ನುಡಿದರು. ಶ್ರೀಯವರು "ಗಲಾಟೆ' ಮುಂತಾದ ಚಾರಿತ್ರಿಕ ಸಂಬಂಧ ಗ್ರಂಥಗಳಿಂದ ಜನತೆಯ ಗಮನವನ್ನು ಸೆಳೆದುಕೊಂಡಿರುವರು.

ಜಾಗ್ರತೆಯಾಗಿರುವವರನ್ನು ಮಾತ್ರ ವೇದ ರಕ್ಷಿಸುತ್ತದೆಂಬ ಅರ್ಥಬರುವ ಶ್ಲೋಕವು ಋಗ್ವೇದದಲ್ಲಿದೆ. ಎಚ್ಚರಿಕೆ ಇಲ್ಲದವನನ್ನು ವೇದಗಳು ಗೀತೆ ಅಥವಾ ರಾಮಾಯಣ ಯಾವುದೂ ರಕ್ಷಿಸಲಾರದು. ಶಾಸ್ತ್ರಗಳೂ ಅವನನ್ನು ಉಳಿಸಲಾರವು. ಇಂದಿನ ಸಮಸ್ಯೆಗಳಿಗೆ ನಾವು ಎಚ್ಚರಿಕೆಯಿಂದಿರದೆ ಬಿಕ್ಕಟ್ಟಿಗೊಳಗಾಗಿರುವದೇ ಕಾರಣವಿರುವದರಿಂದ, ನಾವು ಅದನ್ನು ಸರಿಪಡಿಸಲು ಒಂದಾಗಬೇಕೆಂದು ಜಗದೀಶಚಂದ್ರ ಶಾಸ್ತ್ರೀಜೀಯವರು ತಮ್ಮ ಭಾಷಣದಲ್ಲಿ ಹೇಳಿದರು.

ಒಬ್ಬನಂತೆ ಇನ್ನೊಬ್ಬನಿರುವದಿಲ್ಲ. ಇದಕ್ಕೇನು ಕಾರಣವೆಂದು ಕೆಲವರು ಕೇಳುತ್ತಾರೆ ಹಿಂದೂ ತತ್ವಜ್ಞಾನವು ಇದಕ್ಕೆ ಸಮರ್ಪಕ ಉತ್ತರವನ್ನೀಯುತ್ತದೆ. ಅದಕ್ಕೆ ಕರ್ಮವೇ ಕಾರಣವೆಂದು ಹೇಳಲಾಗಿರುತ್ತದೆ. ಈ ತತ್ವಗಳನ್ನು ಹಿಂದಿನ ಮಠಾಚಾರ್ಯರುಗಳು ಒಪ್ಪಿಕೊಂಡಿರುವರು. ಹಳೆಯ ಒಡಂಬಡಿಕೆಯಲ್ಲಿ ವಿಭೂತಿಯ ವಿಷಯ ಇದೆ. ಆದರೆ ಇಂದಿನ ಕ್ರಿಸ್ತೀಯರು ಹಳೆಯ ಒಡಂಬಡಿಕೆಯನ್ನು ಮಾನ್ಯ ಮಾಡುವದಿಲ್ಲ. ವಿಶ್ವ ಲೀಲೆಯ ಹಿಂದುಗಡೆ ಒಂದು ಮಾಯಾ ಶಕ್ತಿ ಇದ್ದೇ ಇದೆ. ಪರಸ್ಪರ ವಿರೋಧಗಳನ್ನು ಕಂಡು ಪ್ರಕೃತಿಯ ಹೆಸರು ಮುಂತಾದವುಗಳನ್ನು ಹೇಳಲು ಸಾಧ್ಯ' ಶ್ರೀ ಲಂಬಹದೂರ ಶಾಸ್ತ್ರೀಜಿಯವರ ಕೈಸೋಡಿದವರು ಅವರ ಭವಿಷ್ಯವನ್ನು, ಅವರು ಮರಣವನ್ನಪ್ಪುವ ಮುಂಚೆಯೇ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅಂದರೆ ಇದಕ್ಕೆಲ್ಲಾ ವಿಶ್ವೇಶ್ವರನೇ ಕಾರಣ. ಇದನ್ನು ಸ್ಪಷ್ಟವಾಗಿ ತಿಳಿಸುವದು ಹಿಂದೂ ಧರ್ಮ ಒಂದೇ. ಆದುದರಿಂದ ವಿಶ್ವದಲ್ಲಿ ಶಾಂತಿ ನೆಲಸಬೇಕಾದರೆ ಹಿಂದೂ ಧರ್ಮದ ಧ್ವಜ ಅಲ್ಲೆಲ್ಲಾ ಹಾರಾಡುತ್ತಿರಬೇಕೆಂದು ಮಧುರೈಯ ಆಧೀನಮಿನ ಸ್ವಾಮೀಜೀಯವರು ತಿಳಿಸಿದರು.

(ಮುಂದುವರಿಯುವುದು)

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಞಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಮೇರಿಕೊಟ್ಟ ಬೆಂಡೋಲೆ	1—80
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ಘಂಟಮಾರಾ	2—50
ನೀತಿ ವಿನೋದ ಕತೆಗಳು	1—00

ಕಮಿಲಾಗಿಗೆಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನೋಡೋರಿಲ್ಲಾ ಕುರುಡರಾದ್ರೆ?

(ನಾಲ್ಕನೇ ಪುಟದಿಂದ)

ಪ್ರೊಂತ ಕ್ಲಿಯರಿಫಿಕೇಶನ್ನು ಬೇಕಾದೀತು ಇನ್ನು ಮುಂದೆ...'

'ಆದಿಲ್ಲ.... ಸದ್ಯ ನಮಗಂತೂ ಅದು ಬೇಡಾನ್ನಿ. ನೋಡಿ, ಆ ಭೂಮಿಯ ಮೇಲೆ ಸುಡುಗಾಡಿನ ಮುಸುಕು ಹರಿದಿತ್ತು. ಅದಿನ್ನು ಸರಿಯುತ್ತೆ....ನಂದನವನವಾಗಬಹುದು. ವೈದ್ಯಮಿಕ ಕೇಂದ್ರವಾಗಬಹುದ ...ಅಥವಾ ಇನ್ನೂ ಏನೇನೋ ಆಗಬಹುದು...ಮತ್ತೂ ಮುಂದೆ ಇನ್ನೂ ಏನೇನೋ ಪರದೆಯನ್ನು ಹೊದ್ದುಕೊಳ್ಳಬಹುದು....ಆದ್ರೆ ಒಂದು ಮಾತ್ರ ಸತ್ಯ....ಅದು ಬರಿಯ ಭೂಮಿ.....ನೆಲ...ಮಣ್ಣು...'

"ಹೌದೇ...ಇದು ಉನ್ನತ ಮಟ್ಟದ ವೇದಾಂತವಾಯ್ತಲ್ಲಾ...'

'ಸತ್ಯ ಅನ್ನೋದ್ರಲ್ಲಿ, ವೇದಾಂತವೇನು ಬಂತೀರಿ?'

"................ ...."

"ಏನು ಕಣ್ಣು ಕಣ್ಣು ಬಿಡ ತ್ತೀರಿ?'

".... ಮತ್ತೇನೂ ಇಲ್ಲ. ನನಗರಿಯದ ಸತ್ಯ ನೀನು ಕಂಡುಕೊಂಡು ಬಿಟ್ಟೆಯಲ್ಲಾಂತ...."

"ಅಸೂಯೆ?"

"ಛೆ...ಛೆ...ನೀನನ್ನೋದೇ ಸರಿ. ಸತ್ಯವೊಂದು ಅನೆ, ನೋಡೋರು ಕುರುಡರಾದ್ರೆ ಅದ್ರಕ್ಕೆ ಆನೆದ್ದೇನು ದೋಷ?'

"ಶ್ಶ್.... ನೀವೇನೂ ಕುರುಡರಲ್ಲ....'

"..................."

"ಓಯ್, ಇಲ್ಲಿ ನೋಡೀಂದ್ರೆ....'

'........'

"ಹೇಗೆ ಸ್ವಲ್ಪ ಹತ್ರ ಬನ್ನೀಂದ್ರೆ...ಬೇಡ ಬೇಡ, ನಾನೇ ಬರ್ತೀನೆ...ಅಯ್ಯಬ್ಬ.. ಹೇಗಿದೆ....'

"ಭಾರೀ ಭಾರೀ, ನನ್ನ ಚಿನ್ನ....'

'ಶ್ಶ್....ಯಾರಾದ್ರೂ ನೋಡಿ ಗೀಡಿಯಾರು....'

"ನೋಡಿ ಕಾಡ್ತಿದ್ರೆ ಸರಿ....'

'ನೀವು ಯಾವಾಗ್ಲೂ ಹೀಗೇನೇ...."

'ನೀನೂನೂ..."

'ಹ್ಹ ಹ್ಹ ಹ್ಹ ....'

—ಗೋರಾ.

ಮಣಿಪಾಲ ಎಕಾಡಮಿಯ ರಜತೋತ್ಸವ ಆಚರಣೆ

ಕಳೆದ ತಾ. 80 ರಂದು ಮಣಿಪಾಲ ಎಕಾಡಮಿ ಆಫ್ ಜನರಲ್ ಎಜ್ಯುಕೇಶನ್ ಇದರ ಸಂಸ್ಥಾಪಕ ಡಾ| ಟಿ ಮಾಧವ ಪೈಗಳ ಹುಟ್ಟು ಹಬ್ಬ ದಿನಾಚರಣೆ ಮತ್ತು ಎಕಡೆಮಿಯ ಬೆಳ್ಳಿ ಹಬ್ಬ ದಿನಾಚರಣೆಯು ಉಡುಪಿ ವಿ. ಜೆ. ಯು. ಕ್ಲಬ್ಬಿನಲ್ಲಿ ಬೆಂಗಳೂರಿನ ಡಾ|| ಎಂ. ಎನ್. ಮಹದೇವನ ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಡಾ| ಕೆ. ಎಲ್. ಐತಾಳರು ಸ್ವಾಗತಿಸಿದರು. ಬಳಿಕ ವಿವಿಧ ಸಂಸ್ಥೆಗಳ ಪರವಾಗಿ ಡಾ|| ಪೈಗಳಿಗೆ ಪುಷ್ಪಹಾರಗಳನ್ನು ಅರ್ಪಿಸಲಾಯಿತು.

ಡಾ|| ಪೈಗಳು ಈ ಸಂದರ್ಭದಲ್ಲಿ ಮಾತನಾಡುತ್ತಾ, ಕಳೆದ 25 ವರುಷಗಳಿಂದ ಎಕಾಡೆಮಿ ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿ ಇದರ ಸಾಧನೆ, ಜನತೆಯ ಪರಿಶ್ರಮದ ಫಲವೆಂದು ನುಡಿದರು.

ಈ ಸಮಾರಂಭದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿರುವ ಡಾ|| ಕೆ. ವಿ. ಜಯಕರ್, ಡಾ|| ಯು. ಎಸ್. ನಾಯಕ್, ಎಂ ಜಿ. ಎಂ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರರಾಗಿದ್ದ ನಾರಾಯಣ ಅಯ್ಯಂಗಾರ್‌ರವರಿಗೆ ಪ್ರಶಸ್ತಿ ಪತ್ರವನ್ನೀಯಲಾಯಿತು.

ಅಧ್ಯಕ್ಷರು ಮಾತನಾಡುತ್ತಾ ಡಾ|| ಮಾಧವ ಪೈಗಳ ಸೇವೆಯನ್ನು ಶ್ಲಾಘಿಸಿದರು. ಇಂದಿನ ತರುಣ ಪೀಳಿಗೆಯಲ್ಲಿ ಆಗುತ್ತಿರುವ ಕ್ರಾಂತಿಯನ್ನು ಇಂಥ ವಿದ್ಯಾರ್ಥಿಗಳನ್ನು ಜ್ಞಾನವಂತರನ್ನಾಗಿ ಮಾಡುವ ಮಹಾಕಾರ್ಯವನ್ನು ಡಾ|| ಪೈಗಳು ಸಾಧಿಸಿದ್ದಾರೆಂದು ನುಡಿದರು. ಕೊನೆಯದಾಗಿ ಡಾ|| ಪೈಗಳಿಗೆ ದೀರ್ಘಾಯುಷ್ಯವನ್ನು ಹಾರೈಸಿದರು.

ಕೊನೆಯಲ್ಲಿ ಶ್ರೀ ಟಿ. ರಮೇಶ ಪೈಗಳು ವಂದನಾರ್ಪಣೆಗೈದರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ಕಳೆದ ತಾ. ೩೦ರಂದು ಕಾರ್ಕಳದಲ್ಲಿ ಡಾ| ಕೆ.ಸಿ. ನ್ಯಾಕರ ಅಧ್ಯಕ್ಷತೆಯಲ್ಲಿ ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು ಜರಗಿತು. ಬೆಳಿಗ್ಗೆ ದಿ| ವಿಠಲ ದೂಂಜರ ತೈಲ ಚಿತ್ರವನ್ನು ಶ್ರೀ ಎನ್. ಮೋಹನದಾಸ ಅಡ್ಯಂತಾಯರೂ ದಿ| ಮಾರಪೂರು ಸಂಕಣ್ಣ ಶೆಟ್ಟಿ ತೈಲಚಿತ್ರವನ್ನು ಶ್ರೀ ಜಿ. ರಘುರಾಮ ಶೆಟ್ಟಿ, ಎಂ. ಎಲ್. ಎ ಅವರೂ ಅನಾವರಣ ಮಾಡಿ ದಿವಂಗತರುಗಳ ಗುಣಕಥನ ಮಾಡಿದರು. ಅನಂತರ ಶ್ರೀ ಕೆ. ಸುಂದರರಾಮ ಶೆಟ್ಟರು ಭೂಸುಧಾರಣೆಯ ವಿಚಾರವಾಗಿಯೂ ಶ್ರೀ. ಬಿ. ಯಂ. ಹೆಗ್ಡೇರು ಚೇಂಬರ್ ಆಫ್ ಎಗ್ರಿಕಲ್ಚರ್ ಸಂಸ್ಥೆಯ ಕುರಿತಾಗಿಯೂ ಡಾ| ಸುಜೇವ ನುಲ್ಲಿಯವರು ಶ್ರೀ ರಾಮಕೃಷ್ಣ ಕೋಆಪರೇಟಿವ್ ಸ್ಟೋರಿನ ವಿಚಾರವಾಗಿಯೂ ಮಾತನಾಡಿದರು. ಮಧ್ಯಾಹ್ನ ಅಧ್ಯಕ್ಷರನ್ನೂ ಇತರ ಅತಿಥಿಗಳನ್ನೂ ಸಂಘದ ಅಧ್ಯಕ್ಷ ಶ್ರೀ ಬಿ. ಯಂ. ಹೆಗ್ಡೆಯವರು ಸ್ವಾಗತಿಸಿದರು. ಬಳಿಕ ಸಂಘದ ಮತ್ತು ವಿದ್ಯಾರ್ಥಿ ಭವನಗಳ ವರದಿಗಳನ್ನು ಓದಲಾಯಿತು. ಅಧ್ಯಕ್ಷರ ಮತ್ತು ಇತರ ಭಾಷಣಗಳ ಬಳಿಕ ಆಡಳಿತ ಕಮಿಟಿಗೆ ಸದಸ್ಯರನ್ನು ಆರಿಸಲಾಯಿತು (ಅಧ್ಯಕ್ಷರ ಭಾಷಣವನ್ನು ಕಳೆದವಾರ ಪ್ರಕಟಿಸಲಾಗಿದೆ)

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ ರೇಲ್ವೆ ಮತ್ತು ವಿಮಾನ ರವಾನೆ ಖರ್ಚು ಮಗಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯತಿ ದೊರೆಯುತ್ತದೆ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಪರಿಚಯ

ರಂಗಾಪುರದಲ್ಲಿ ಹೊಸ ವೇಧಶಾಲೆ

ಶಿಲಾಮಯವಾಗಿರುವ ಬಂಡು ಬಯಲು ಸ್ಥಳದಲ್ಲಿನ ಒಂದು ಬೆಟ್ಟದ ಮೇಲಿರುವ, ಎತ್ತರದ ಗೋಪುರವಿರುವ ಒಂದು ಕಾಂಕ್ರೀಟ್ ಕಟ್ಟಡ ಹೈದರಾಬಾದಿನಿಂದ ಸುಮಾರು ೪೦ ಮೈಲಿ ಆಗ್ನೇಯದ ರಂಗಾಪುರ ಗ್ರಾಮದ ಜನರ ಕುತೂಹಲವನ್ನು ಕೆರಳಿಸಿದೆ. ಈ ಹೊಸ ಕಟ್ಟಡದಿಂದ ಅವರು ಅವ್ಯಸ್ಥಚಿತ್ತರಾಗಿದ್ದಾರೆ. ಈ ಕಟ್ಟಡಕ್ಕೆ ಹೊಸ ವಿದ್ಯುತ್ ಲೈನನ್ನು ಸ್ಥಾಪಿಸಿರುವುದರಿಂದಾಗಿ, ರಂಗಾಪುರ ಗ್ರಾಮಕ್ಕೆ ಈಗ ವಿದ್ಯುತ್ ಸೌಲಭ್ಯ ದೊರೆತಿದೆ.

ಬೆಟ್ಟದ ಮೇಲಿನ ಕಟ್ಟಡದಲ್ಲಿ ವಿಶೇಷ ರೀತಿಯ ಕಾರ್ಯ ನಡೆಯುತ್ತಿರುವುದನ್ನು ರಂಗಾಪುರದ ಅನೇಕ ನಿವಾಸಿಗಳು ಗಮನಿಸಿದ್ದಾರೆ. ತಳತಳಿಸುವ ಅಲ್ಯುಮಿನಿಯಂ ಗೋಪುರದ ವ್ಯಾಸ ೩೨ ಅಡಿಗಳಷ್ಟಿದೆ. ಗಗನಕ್ಕೆ ಅಭಿಮುಖವಾಗಿರುವ ಒಂದು ಜಾರುವ ಕದ ಈ ಗೋಪುರದಲ್ಲಿದೆ. ಈ ಉದ್ದ ಕಂಡಿಯ ಮೂಲಕ ಒಂದು ದೊಡ್ಡ ದೂರದರ್ಶಕದ ಮುಖಾಂತರಗಳಲ್ಲಿ ವಿಜ್ಞಾನಿಗಳು ದೂರದ ನಕ್ಷತ್ರಗಳನ್ನು ನೋಡುವರು. ಈ ದೂರದರ್ಶಕದ ಸಹಾಯದಿಂದ ಅವರಿಗೆ ಅತಿದೂರದ ಕ್ಷೀರ ಪಥಗಳನ್ನು ಪರಿಶೀಲಿಸಲು, ಅನೇಕ ಸಹಸ್ರ ಮೈಲಿಗಳ ದೂರದಲ್ಲಿರುವ ಗ್ರಹ ನಕ್ಷತ್ರಗಳ ಛಾಯಾಗ್ರಹಣ ಮಾಡಲು ಮತ್ತು ಅವುಗಳ ಗತಿಗಳ ಹಾಗೂ ದೂರಗಳ ನಕಾಶೆ ಸಿದ್ಧಪಡಿಸಲು ಸಾಧ್ಯವಾಗುವುದು.

ಇದು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ನೂತನವಾಗಿ ನಿರ್ಮಿತವಾಗುತ್ತಿರುವ ನೈಜಾಮಿಯಾ ವೇಧಶಾಲೆಯ ಹೊಸ ಕಟ್ಟಡ. ಇದೀಗ ನಿರ್ಮಾಣದ ಹಾಗೂ ಯಂತ್ರ ಸಜ್ಜೀಕರಣದ ಕೊನೆಯ ಹಂತಗಳಲ್ಲಿದೆ. ಪೆನ್ಸಿಲ್ವೇನಿಯದ ಪಿಟ್ಸ್‌ಬರ್ಗ್‌ನ ಫೆಕರ್ ಕಂಪೆನಿ ಎಂಬ ಅಮೆರಿಕದ ಸಂಸ್ಥೆಯೊಂದು ೪೮ ಇಂಚುಗಳ ರಿಫ್ಲೆಕ್ಟರ್ ದೂರದರ್ಶಕವನ್ನು ತಯಾರಿಸಿ ಒದಗಿಸಿತು. ಇದಕ್ಕೆ ತಗಲಿದ ೨,೩೦,೦೦೦ ಡಾಲರು (೧೭,೨೫,೦೦೦ ರೂ.) ಗಳ ವೆಚ್ಚವನ್ನು ಅಮೆರಿಕಾ ಸರಕಾರ ತನ್ನ ಗೋಧಿ ಸಾಲದ ಶೈಕ್ಷಣಿಕ ವಿನಿಮಯ ಕಾರ್ಯಕ್ರಮದ ಮೂಲಕ ಒದಗಿಸಿತು. ವೇಧಶಾಲೆಯ ಪ್ರಧಾನ ಕಟ್ಟಡವನ್ನು, ವೀಕ್ಷಕರ ವಿಭಾಗವನ್ನು ಮತ್ತು ಒಂದು ಕರ್ಮಶಾಲೆಯನ್ನು ೪೩ ಲಕ್ಷ ರೂ. ಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದವರು ಈ ವಿಶ್ವವಿದ್ಯಾನಿಲಯಕ್ಕೆ ನೀಡಿರುವ ಒಂದು ಗ್ರಾಂಟನ್ನು ಈ ವೆಚ್ಚ ನಿರ್ವಹಣೆಗೆ ಉಪಯೋಗಿಸಲಾಗುತ್ತಿದೆ. ವೇಧಶಾಲೆಯ ಡೈರೆಕ್ಟರರಾಗಿರುವ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಖಗೋಳ ವಿಜ್ಞಾನದ ಪ್ರಾಧ್ಯಾಪಕರಾಗಿರುವ ಡಾ| ಆರ್. ವಿ. ಕರಂದೀಕರ್ ಅವರು ದೂರದರ್ಶಕವನ್ನು ಸ್ಥಾಪಿಸುವ ಕಾರ್ಯದಲ್ಲಿ ಶೇಕಡ ೬೦ರಿಂದ ೭೦ರಷ್ಟು ಅಂಶ ಪೂರ್ತಿಯಾಗಿದೆ ಎಂದು ಹೇಳಿದರು. ವಿದ್ಯುತ್ತಿನ ಮತ್ತು ವೀಕ್ಷಣೆಯ ಭಾಗಗಳ ಸ್ಥಾಪನೆ ಪೂರ್ತಿಗೊಳ್ಳಬೇಕಾಗಿದೆಯಷ್ಟೆ. ೪೮ ಇಂಚುಗಳ ಪರವಲಯಾಕೃತಿಯ ಕನ್ನಡಿ ಮತ್ತು ತತ್ಸಂಬಂಧಿ ಉಪಕರಣಗಳು ಹೈದರಾಬಾದಿನಲ್ಲಿವೆ. ಬರುವ ಕೆಲವು ತಿಂಗಳುಗಳಲ್ಲಿ ಅವುಗಳನ್ನು ಇಲ್ಲಿ ನೆಲೆಗೊಳಿಸಲಾಗುವುದು. ಅಕ್ಟೋಬರನಲ್ಲಿ ವೇಧಶಾಲೆಯ ಕಾರ್ಯಾರಂಭ ಸಾಧ್ಯವಾದೀತೆಂದು ಅವರು ಹಾರೈಸುತ್ತಾರೆ.

ಕಾರ್ಯಕಾರಿಯಾದಾಗ, ಈ ಹೊಸ ದೂರದರ್ಶಕ ಆಗ್ನೇಯ ಏಷ್ಯದಲ್ಲೇ ಅತಿ ದೊಡ್ಡ ದೂರದರ್ಶಕವಾಗುವುದು. ಈ ಆಧುನಿಕ ದೂರದರ್ಶಕದ ಸಹಾಯದಿಂದ ಚಂದ್ರ, ಗ್ರಹಗಳು ಮತ್ತು ಕ್ಷೀರ ಪಥಗಳ ಸಂಶೋಧನೆಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಉಸ್ಮಾನಿಯಾ ವಿಶ್ವವಿದ್ಯಾನಿಲಯ ನಿರ್ಧರಿಸಿದೆ.

ಮೆಸಾಚುಸೆಟ್ಸ್‌ನ ಬೆಡ್‌ಫರ್ಡಿನಲ್ಲಿರುವ ಅಮೆರಿಕದ ವಿಮಾನ ಬಲದ ಖಗೋಳ ಮತ್ತು ಖಭೌತ ವಿಜ್ಞಾನದ ಪ್ರಯೋಗಾಲಯದಲ್ಲಿ ಮುಂಚೆ ಕೆಲಸ ಮಾಡಿರುವ ಡಾ| ಕರಂದೀಕರ್ ಹೀಗೆಂದರು: "ನೈಜಾಮಿಯಾ ವೇಧಶಾಲೆಯ ಭೌಗೋಳಿಕ ನಿವೇಶನವು ಚಂದ್ರ ಮತ್ತು ಗ್ರಹಗಳ ಸಂಶೋಧನೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಅಧ್ಯಯನಕ್ಕೆ ವಿಶೇಷ ಅನುಕೂಲವಾಗಿದೆ. ಈ ರೀತಿ ಇದು ಸಹಕರಿಸುವ ಗ್ರಹ ವೀಕ್ಷಕ ವೇಧಶಾಲೆಗಳ ಸರಪಣಿಯಲ್ಲಿ ಒಂದು ಮುಖ್ಯ ಕೊಂಡಿಯಾಗಲಿದೆ." ಈಗ ಈಜಿಪ್ಟಿನ ಹಲ್ವಾನ್‌ನಿಂದ ಜಪಾನಿನ ಒಕಯಾಮದವರೆಗಿನ ಸ್ಥಳದಲ್ಲಿ, ದೊಡ್ಡ ದೂರದರ್ಶಕದಿಂದ ಸಜ್ಜಿತವಾಗಿರುವ, ಸಮಭಾಜಕ ವೃತ್ತ ಪ್ರದೇಶದ ಇತರ ಯಾವುದೇ ವೇಧಶಾಲೆಯಿಲ್ಲ.

೪೨ ಇಂಚುಗಳ ಬೇಕರ್—ಕರೆಕ್ಟರ್ ವ್ಯವಸ್ಥೆಯು ಈ ದೂರದರ್ಶಕದ ಅತಿ ಮುಖ್ಯ ವೈಶಿಷ್ಟ್ಯ. ಇದು ದೂರದರ್ಶಕವನ್ನು ಖಗೋಳ ದರ್ಶಕವನ್ನಾಗಿ ಅಥವಾ ಛಾಯಾಚಿತ್ರ ಗ್ರಾಹಕ ದೂರದರ್ಶಕವಾಗಿ ಪರಿವರ್ತಿಸುತ್ತದೆ. ಪ್ರಪಂಚದಲ್ಲಿರುವ ಇತರ ಎರಡು ದೂರದರ್ಶಕಗಳಿಗೆ ಮಾತ್ರ— ಕ್ಯಾಲಿಫೋರ್ನಿಯದ ಮೌಂಟ್ ಪ ಲೋಮಾರ್‌ನಲ್ಲಿರುವ ರಿಫ್ಲೆಕ್ಟರ್ ದೂರದರ್ಶಕ ಮತ್ತು ಪೂರ್ವ ಜರ್ಮನಿಯ ಜೆನಾದ ಸಮೀಪ ಇರುವ ಇನ್ನೊಂದು ದೂರದರ್ಶಕ— ಇಂಥ ವೈಶಿಷ್ಟ್ಯವಿದೆ.

ಈ ದೂರದರ್ಶಕದಲ್ಲಿ ಮೂರು ನಾಭಿ ಬಿಂದುಗಳನ್ನು ಒದಗಿಸಲಾಗಿದೆ— ನಾಭಿ ಬಿಂದುವಿನ ಉದ್ದ ೧೭ ಅಡಿಯಿರುವ ಒಂದು ನ್ಯೂಟೋನಿಯನ್ ಬಿಂದು, ೬೦ ಮತ್ತು ೧೨೦ ಅಡಿ ಉದ್ದವಿರುವ ಕಾಶೆ ಗ್ರೈನ್ ಮತ್ತು ಕೌಡೆ ಬಿಂದುಗಳೇ ಇಂಥ ನಾಭಿ ಬಿಂದುಗಳು.

ಹೊಸ ದೂರ ದರ್ಶಕದ ಸ್ಥಾಪನೆಯ ನಂತರ, ಕುಜ ಮತ್ತು ಶುಕ್ರ ಗ್ರಹದ ವಾತಾವರಣದ ಚಂದ್ರನ ಹೊರ ಮೈಯ, ನೀಹಾರಿಕೆಗಳ, ಕ್ಷೀರಪಥಗಳ ಹಾಗೂ ನಕ್ಷತ್ರ ಪುಂಜಗಳ ಅಧ್ಯಯನವನ್ನು ಪ್ರಾರಂಭಿಸಲು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಖಗೋಳ ವಿಜ್ಞಾನದ ಪ್ರೌಢ ಅಧ್ಯಯನ ಕೇಂದ್ರದವರು ಯೋಜನೆಗಳನ್ನು ಸಿದ್ಧಗೊಳಿಸಿದ್ದಾರೆ. ಕೆಲವು ಕೆಳಮಟ್ಟದ ಬೆಳಕಿನ ಖಗೋಳ ಮೂಲಗಳ ಬಗೆಗೆ, ವಿಶೇಷವಾಗಿ ಭೂಮಿಯ ಹೊರ ವಾತಾವರಣದಿಂದ ಮತ್ತು ಶುಕ್ರ ಗ್ರಹದ ಅಪ್ರಕಾಶಿತ ಭಾಗದಿಂದ ಬರುವ ಕಿರಣ ಪ್ರಸಾರದ ಬಗೆಗೆ ಅಧ್ಯಯನ ನಡೆಸಲು ಕಾರ್ಯಕ್ರಮವೊಂದನ್ನು ಯೋಜಿಸಲಾಗಿದೆ. ಇತ್ತೀಚೆಗೆ ಕಂಡುಹಿಡಿಯಲಾಗಿರುವ ವಿಶ್ವದ ಅನೇಕ ಕಿರಣ ಪ್ರಸರದ ಮೂಲಗಳನ್ನು ವೀಕ್ಷಣೆಗೆ ಗುರುತಿಸುವ ಕಾರ್ಯಕ್ರಮವೊಂದನ್ನು ಯೋಜಿಸಲಾಗಿದೆ.

೧೯೦೮ರಲ್ಲಿ ಹೈದರಾಬಾದ್— ಸಿಕಂದರಾಬಾದ್‌ನ ಹೊರವಲಯದಲ್ಲಿರುವ ಬೇಗಂಪೇಟೆಯಲ್ಲಿ ಸ್ಥಾಪಿತವಾದ ನೈಜಾಮಿಯಾ ವೇಧಶಾಲೆ ಬಹಳ ಉತ್ತಮ ಕಾರ್ಯಗಳನ್ನು ನಿರ್ವಹಿಸಿದೆ. ಅದು ೮,೦೦,೦೦೦ ನಕ್ಷತ್ರಗಳನ್ನೊಳಗೊಂಡಿರುವ ೧೫ ಖಗೋಲ ಮಾಪನ ಕ್ಯಾಟಲಾಗ್‌ಗಳನ್ನು ಪ್ರಕಟಿಸಿದೆ. ಆದರೆ ಅದರ ೧೫ ಇಂಚುಗಳ ಚಾಕ ಕುಶ ರಿಫ್ರೆಕ್ಟರ್ ಮತ್ತು ೮ ಇಂಚುಗಳ ಫೋಟೋ—ವಿಶುವಲ ಖಗೋಳ ದೂರದರ್ಶಕ ಉಪಕರಣಗಳು ಖಗೋಳ ವಿಜ್ಞಾನದ ಆಧುನಿಕ ಮುನ್ನಡೆಗಳೊಂದಿಗೆ ಹೊಂದಿಕೊಳ್ಳಲು ಸಾಕಾಗಲಾರವು. ಆದುದರಿಂದ ಈ ಹೊಸ ದೂರದರ್ಶಕದ ಸ್ಥಾಪನೆ ಅವಶ್ಯವಾಯಿತು.

ವಿಸ್ತರಿಸುತ್ತಿರುವ ಮುಖ್ಯ ಪಟ್ಟಣದ ವಿದ್ಯುದ್ದೀಪಗಳು ರಾತ್ರಿಕಾಲದಲ್ಲಿ ಖಗೋಳ ವೈಜ್ಞಾನಿಕ ಅಧ್ಯಯನಕ್ಕೆ ಅಡ್ಡಿಕಾರಿಯಾದುದರಿಂದ, ಮುಂಚಿನ ಸ್ಥಳ ಅಷ್ಟೊಂದು ಉತ್ತಮವಾಗಿರಲಿಲ್ಲ. ಆದುದರಿಂದ ಈಗ ಅದನ್ನು ರಂಗಾಪುರಕ್ಕೆ ವರ್ಗಾಯಿಸಲಾಗುತ್ತಿದೆ.

ಹೊಸ ದೂರದರ್ಶಕದ ರಚನಾ ಕ್ರಮ, ತಯಾರಿಕೆ ಮತ್ತು ಸ್ಥಾಪನೆಯ ಬಗೆಗೆ ಪ್ರಸ್ತಾಪಿಸುತ್ತಿದ್ದಾಗ ಡಾ| ಕರಂದೀಕರ್ ಅವರು ಈ ವಿಷಯದಲ್ಲಿ ತಾನು ಹಾಗೂ ತನಗಿಂತ ಮುಂಚೆ ಕೆಲಸ ಮಾಡುತ್ತಿದ್ದವರು ಅನೇಕ ಅಮೆರಿಕನ್ ಖಗೋಳ ವಿಜ್ಞಾನಿಗಳ ಸಹಾಯ ಪಡೆದುದನ್ನು ಸ್ಮರಿಸಿಕೊಂಡರು. ದೂರದರ್ಶಕಕ್ಕೆ ಬೇಕಾದ ಸಾಮಾನುಗಳನು ಪಡೆಯುವ ಕಾಂಟ್ರ್ಯಾಕ್ಟಿನ ಮೇಲ್ವಿಚಾರಣೆ ನಡೆಸಿದ ಕೇರ್ (ಕೋ-ಆಪರೇಟಿವ್ ಫರ್ ಅಮೆರಿಕನ್ ರಿಲೀಫ್ ಎವ್ರಿವೇರ್) ಮತ್ತು ಸಾಮಾನುಗಳನ್ನು ಪಡೆಯಲು ಬೇಕಾದ ಹಣವನ್ನೊದಗಿಸಿ ಹಾಗೂ ಇತರ ರೀತಿಗಳಲ್ಲ ಪ್ರಾಜೆಕ್ಟಿನ ಪ್ರಗತಿಯಲ್ಲಿ ಬಹಳ ಆಸಕ್ತಿ ವಹಿಸಿದ ಅಮೆರಿಕಾ ಸರಕಾರದ ಸಹಾಯವನ್ನು ಅವರು ಸ್ಮರಿಸಿದರು.

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ
ದಯೆಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೊಟಿ, ಉಡುಪಿ, ದ. ಕನ್ನಡ.

ವಿಧಿಯೇ ನೀನು ಕಪಟಿ...

"ಮಗುವೆ! ನೀನು ಏಕೆ ಅಳುವೆ
ಯಾರು ನಿನಗೆ ಹೊಡೆದರೆ?
ನಿನ್ನ ಕಣ್ಣಿನಲ್ಲಿ ನೀರು
ಸುರಿವ ಹಾಗೆ ಬಡಿದರೆ?" ‖ ೧ ‖

ಮಾರ್ಗದಲ್ಲಿ ಅಳ ಹಲಿದ್ದ—
ನೊಬ್ಬ ಮುದ್ದು ಹುಡುಗನು,
ಯಾರೊ ಹೊಡೆದರೆಂದು ನಾನು
ಅವನ ಕರೆದು ನುಡಿದೆನು. ‖ ೨ ‖

"ಮಗುವೆ, ನೀನು ಏಕೆ ಬರಿದೆ
ಅಳುತಲಿಲ್ಲೆ ನಿಂತಿಹೆ?
ಮನೆಗೆ ಹೋಗಿ ಪಿತನ ಒಡನೆ
ಹೇಳು ಎಂದು ಎನುತಿಹೆ." ‖ ೩ ‖

"ತಂದೆಯಿಲ್ಲ, ತಾಯಿ ಇಲ್ಲ........
ಅವರು ಮರಳಿ ಬಾರರು
ಕೆಲವು ದಿನಗಳಾಚೆ ಅವರು
ವಿಧಿಯ ಬಳಿಗೆ ನಡೆದರು... ‖ ೪ ‖

ಇನ್ನು ನನ್ನ ಕಾಪರಿಲ್ಲ......
ಎಂದು ಅಳುತಲಿರುವೆನು
ಅಯ್ಯೋ; ದೇವ! ಎನ್ನ ಸಲಹು
ಎಂದು ಮೊರೆಯನಿಡುವೆನು." ‖ ೫ ‖

ಎನ್ನುತಿರಲು ಅವನ ಕಣ್ಣಿ—
ನಲ್ಲಿ ಬೊಗಲು ಹರಿಯಿತು
ಕೇಳಿ, ನನ್ನ ಕಣ್ಣಿನಲ್ಲಿ
ನೀರ ಹನಿಗಳ್ ಚಿಮ್ಮಿತು. ‖ ೬ ‖

"ಅಯ್ಯೋ ವಿಧಿಯೆ! ನೀನು ಕಪಟಿ...."
ಎಂದು ಒಡಲು ಒರಲಿತು,
"ದೇವ! ಇವನ ಸಲಹು" ಎಂದು
ಮನವು ಮರುಗಿ ಬೇಡಿತು. ‖ ೭ ‖

—ನ. ಭ. ನೆಂಪು.

'ಬೋನಸ್ಸ್ ಬಂತು'

(ಎರಡನೇ ಪುಟದಿಂದ)

'ಸೈಕಲ್...?'

"ಉಳಿದ ಹಣ ದೀಪಾವಳಿಗೆ ಬರುತ್ತೆ ಅಂದಿದ್ರಲ್ಲಾ. ಆಗ...'

'ದೀಪಾವಳಿಗೆ ಬರುತ್ತೋ ಇಲ್ಲಾ ಯುಗಾದಿಗೆ ಬರುತ್ತೋ ಯಾರು ಬಲ್ಲರು? ಎರಡನೆ ಬೋನಸ್ ಬಂದಾಗ ತಂದುಕೊಡುತ್ತೇನೆ"

"ಇದೆಲ್ಲಾ ಸಾಧ್ಯವಿಲ್ಲರೀ, ದಸರಕ್ಕೆ ನನ್ನ ತಂಗಿ ಊರ ಬರುತ್ತಾಳೆ. ಅವಳ ಎದುರಿಗೆ ಹರಕಲು ಸೀರೆ ಉಟ್ಟುಕೊಂಡು ಅಡ್ಡಾಡಲೇ?"

"ಇಲ್ಲಾ ಇಲ್ಲಾ....ಜರತಾರಿ ಸೀರೆ ಉಟ್ಟುಕೊಂಡು ಅಡ್ಡಾಡು. ಅಲ್ರೀ ಅವಳೇಕೆ ಈ ಅಧಿಕ ಮಾಸದಲ್ಲಿ ಬರುತ್ತಾಳೆ? ಕಂಟ್ರೋಲ್ ಕಾಲ ಅಂತಾ ಜನಕ್ಕ ಗೊತ್ತಿಲ್ವೆ?"

'ಸ್ವಾಮಿಗಳ ಅಡ್ಡ ಪಲ್ಲಕ್ಕಿ ಉತ್ಸವ ನಡಯುತ್ತ. ಹುಟ್ಟಿದಾಗಿಂದಲೂ ನೋಡೇ ಇಲ್ಲ ಅಂದಳಲ್ಲ. ಈ ಸಾರಿ ಉತ್ಸವಕ್ಕಾದ್ರು ಕಾಗದ ಬರ ಎಂತ ತಿಳಿಸಿದ್ದಳು.

'ರಾಣಿ ಸಾಹೇಬ್ರು ಬರೆದ, ಯಾಕೆ ಬಿಟ್ರೀ?'

'ಹೂಂ ರ್ರೀ'

'ಹೆಂಗಸರಿಗೆ ಬುದ್ಧಿ ಇಲ್ಲ ಅನ್ನೋದು ಇದಕ್ಕೇ. ಮತ್ತೆ ತಂಗಿ ಬರುತ್ತಾಳೆ....ನಿನಗೆ ಸೀರೆ....ತಂಗಿಗೆ ಸೀರೆ ಚೋಳಿ....ನಿನ್ನ ಮಕ್ಕಳಿಗೆ..."

"ಸರಿಯಾಗಿ ನೆನಪಿಸಿದ್ರಿ. ಶಂಕ್ರೂಗೆ ಬಟ್ಟೆನೇ ಇಲ್ಲ. ಅವನಿಗೆ ಎರಡು ಜತೆ ನಿಕ್ಕರು ಸ್ಲ್ಯಾಗ್ಸ್ ....ಬಿಸಿಲು ಅಂದ್ರೇ ಹೇಳುವುದಕ್ಕಾಗುವುದಿಲ್ಲ. ಈ ಸಾರಿಯಾದ್ರು ಚಪ್ಪಲಿ ತನ್ನಿ. ಶಂಕ್ರು ಬಟ್ಟೆ ನೋಡಿ ರಮೇಶ ಸುಮ್ಮನಿರುತ್ತಾನೆಯೇ?'

'ಆಯಿತೇನೇ....ಮುಗಿದಾಯಿತು ನಿನ್ನ ಮಕ್ಕಳದಾಯಿತು. ನಿನ್ನ ಕ್ರೋಧವನು ಮನದಾಯಿತು....ನಿನ್ನ ಗಂಡನಿಗೆ ಕಷ್ಟವಾದ್ರು ಚಿಂತೆಯಿಲ್ಲಾ ನಿಮಗೆಲ್ಲಾ ಮೊದಲು ತರಬೇಕು. ನಾನು ಯಾರಿಗ ಏನೂ ತರಲ್ಲ.... ನಾನು ಸೈಕಲ್ ತರಲೇ ಬೇಕು.'

ಸಿಟ್ಟಿನಿಂದಲೇ ಹೇಳಿದೆ. ಹೆಂಗಸ್ರು ಒಂದು ಮಾತಿಗೆ ಸುಮ್ಮನಿರುತ್ತಾಳೆಯೆ? ಗಡಿಯಾರದ ಮುಳ್ಳಿನಂತೆ ಅವರ ನಾಲಿಗೆ

'ನೋಡಿ, ಸೈಕಲ್ ಇಲ್ಲದೆ ಇದ್ರೆ ನಡೆಯುತ್ತೆ ದಸರಕ್ಕೆ ನಿಮ್ಮ ಮಾವನವರೂ ಬರಬಹುದು. ಮನೆಯಲ್ಲಿ ಅಕ್ಕಿ ಸಕ್ಕರೆ ಬೇಳೆ ಇಲ್ಲಾ ...ಮಾನ ಮರ್ಯಾದ ಮೊದಲು ನೋಡಿ ಕೊಳ್ಳಿ'

'ಹೌದೇ ... ನಿನ್ನ ತವರು ಮನೆಯವರು ಬರುತ್ತಾರೆ. ಮಾನ ಮರ್ಯಾದೆ ಮುಖ್ಯ. ನಮ್ಮಣ್ಣ ಅತ್ತಿಗೆ ಬಂದಾಗ? ಈ ಮಾನ ಮರ್ಯಾದ ಎಲ್ಲ ಹೋಗಿತ್ತು? ಸರಿಯಾಗಿ ಎರಡೊತ್ತು ಊಟಕ್ಕಾಗಲಿಲ್ಲ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಬಳಿಯುತ್ತೀಯಲ್ಲಾ ನಿನ ಜನ್ಮಕ್ಕೆ ನಾಚಿಕೆ ಕೂಡ ಆಗಲ್ವೆ?'

'ನನ್ನದು ತಪ್ಪಾಯಿತು ಅಂತಾ ಎಷ್ಟು ಸಾರಿ ಹೇಳಿದ್ದೇನೆ? ಏನೋ ದಿನಗಳಿಗೆ ನಡೆಯಿತು. ಆಗಂತೂ ನನಗೂ ಬುದ್ಧಿ ಇರಲಿಲ್ಲ. ಮನೆಗೆ ಯಾರೇ ಬಂದಲಿ ಮಾನ ಮರ್ಯಾದೆ ಕಾಪಾಡಿ ಕೊಂಡು ಬರುತ್ತೇನೆ'

ಅವಳ ಕಣ್ಣಿನಿಂದ ನೀರು ಹರಿಯಿತು. ಹೆಣ್ಣಿನ ಕಣ್ಣೀರು ನೋಡಿ ಗಂಡು ಹೆದರಬಾರದಂತ (ನಮ್ಮಪ್ಪ ಒಂದು ಸಾರಿ ಹೇಳಿದ್ದ)

'ಸಂಧ್ಯಾ, ಕಣೋ? ನನಗೊಂದು ಸಾರಿ ಅವಮಾನ ಮಾಡಿದ್ದೀಯೋ? ಈ ಸಾರಿ ನಿನ್ನ ಮನಸ್ಸು... ಬಂದ್ರೆ ಗೊತ್ತಾಗುತ್ತೆ ರಕ್ತ ಸಂಬಂಧಿಕರು ಬಂದ್ರೆ ಹೇಗ ನಡೆಯಬೇಕು ಅಂತ ತಿಳಿಯುತ್ತೆ. ಬೋನಸ್ಸ್ ಹಣದಿಂದ ಒಂದೇನೇ ಸೈಕಲ್ ತರುತ್ತೇನೆ

'ನನ್ನಾಣೆ ಒಮ್ಮೆಯಾದ್ರೂ....ಹಾಗಲ್ಲಾದರೂ ಮಾಡಿ.. ಆ ಏಲೆ ಅಂಗಡಿ ಸಾಮಾನೂ ಎಲ್ಲ ತಂದಾಗುತ್ತೆ ...ಎಲ್ಲ ನೋಡುವಾ ಸಂಬಳ ಬಂದ್ರೆ

'ಆಗಲಿ ಬಿಡು.... ಗಾಮಾಸ್ತಿರ ಮತ್ತೆ ತಿಂಬಾ ಸಾಲ...ಇದು ಪ್ರಪಂಚಕ್ಕೆ ... ಇರುವ ವಿಷಯ ತಾನೇ ನೀನು ಬೇರೆ ಬಣ್ಣಿಸಿ ಹೇಳಬೇಡ"

"ಅಯ್ಯೋ ದೇವರೇ .. ನಿಮಗ ಯಾವ ರೀತಿ ಹೇಳ್ಲಿ? ದೀಪಾವಳಿಗ ಖಂಡಿತ ಸೈಕಲ್ ತಗೊಂಡುಕೊಳ್ಳುವಿರಂತೆ."

'ಈ ಸಾರಿ ಮಾತ್ರ ಬೇಡತಾನೆ?"

"ಹೂಂನ್ರೀ'

"ಒಂದು ಸಾರಿ ತೀರ್ಮಾನ ಮಾಡಿದ ಮೇಲಾಯಿತು. ತಪ್ಪಿಸಲು ಸಾಧ್ಯವಿಲ್ಲ'

"ಅಪ್ಪಾ Post man ಕವರ್ ಕೊಟ್ಟ'

ನಮ್ಮಿಬ್ಬರ ಮಾತಿನ ಮಧ್ಯೆ ಶಂಕರ ನನ್ನ ಕವರಿತ್ತ. ಕವರ್ ಒಡೆದು ಓದಿದಾಗ ಸೈಕಲ್ ಗಾಲಿಗಳ ಗಾಳಿ ಹೋಗಿ ನೆಲಕ್ಕೆ ಬುಸ್ ಎನ್ನುವಂತೆ ಆಶಾಗೋಪುರ ನೆಲಕ್ಕೆ ಕುಸಿಯಿತು.

"ಏನ್ರೀ, ಏನು ಸಮಾಚಾರ?"

"ಸೈಕಲ್ ತೆಗೆದು ಕೊಂಡಂತಾಯಿತು'

"ಯಾಕೆ? ಸುಮ್ಮನೆ ಕುಳಿತಿರಲ್ಲಾ?'

'ನಿನಗೆ ಸೀರೆ...ನಿನ್ನ ತಂಗಿಗೆ ಸೀರೆ .. ಮಕ್ಕಳಿಗೆ ಬಟ್ಟೆ. ದಸರಕ್ಕೆ ಅಕ್ಕಿ, ಸಕ್ಕರೆ, ಬೇಳೆ....ಎಲ್ಲಾ ಕನಸಾಯಿತು ಕಣೇ'

'ಪತ್ರ ಎಲ್ಲಿದ್ದು?'

'ಅಪ್ಪಾ ಬರೆದಿದ್ದಾರೆ"

'ಮಾವನವರೆ? ಬೋನಸ್ಸ್ ಹಣದ ಮೇಲೂ ಕಣ್ಣು ಬಿತ್ತೆ?"

'ಬೇಡದೆ ಇರುತ್ತೆಯೆ. ನನ್ನ ಓದಿಸಿ, ದೊಡ್ಡವನನ್ನಾಗಿ ಮಾಡಿ ಕೆಲ್ಸ ಕೊಡಿಸಿದ್ರು. ನಿನ್ನಂತಹ ಜಗಳ ಗಂಟ..'

'ಏನ್ರೀ....'

'Sorry........ನಿನ್ನಂತಾ ರತಿಯಂತ ಹುಡಗಿ ತಂದು ಮದ್ವೆ ಮಾಡಿದ. ಈ ಜನ್ಮದಲ್ಲಿಂತೂ ತಂದ ಋಣ ತೀರಿಸಲು ಸಾಧ್ಯವಿಲ್ಲ. ಸಂಬಳದಲ್ಲೂ ಒಂದೂ ಪೈಸಾ ಕಳಿಸಿಲ್ಲ. ಈ ಬೋನಸ್ಸ್ ಹಣ ಕಳಿಸೋಣ'

'ನೀವು ಹೇಳುವ ಮಾತು ತಮಾಷೆಯಾಗಿದೆ. ತಂದೆ ತಾಯಿಗಳ ಕರ್ತವ್ಯ ಮಾಡಿದ್ದಾರೆ. ನಾಳೆ ನಮ್ಮ ಮಕ್ಕಳಿದ್ರೂ ಅಷ್ಟೇ ಎನ್ನಿ.'

'ಹುಂ ಹುಂ__ಮಕ್ಕಳೇ ನನ್ನ ಮುಂದಿನ ಊರು ಗೋಲು ಅಂತಾ ತಿಳಿದು ಕೊಂಡ ನಮ್ಮಪ್ಪ. ನನಗನಿಸುತ್ತೆ, ಒಬ್ಬ ತಂದೆ ಹತ್ತು ಮಕ್ಕಳನ್ನ ಸಾಕಬಲ್ಲ. ಆದರೆ ಹತ್ತು ಮಕ್ಕಳು ಒಬ್ಬ ತಂದೆಯನ್ನು ಸಾಕಲಾರರು. ಕೊನೆಗೆ ಕಷ್ಟ ಸಮಯದಲ್ಲಾದರೂ ಹಣ ಕಳಿಸದ ಹೋದ್ರೆ ನಮ್ಮಪ್ಪನಿಗೆ ಹುಟ್ಟಿದ್ದಕ್ಕೆ ಸಾರ್ಥಕವೇನು?"

"ನಾನು ಎಷ್ಟೋ ಆಸೆಯಿಟ್ಟುಕೊಂಡಿದ್ದೆ. ನಮ್ಮ ಹಣೆ ಬರಹದಲ್ಲಿ ಇಲ್ಲ. ನಿಮ್ಮಪ್ಪನಿಗ ಕಳಿಸಿ!

'ನೀನು ಬೇಡಾ ಅಂದ್ರೆ ಬಿಡುತ್ತೇನೆಯೇ? ತಂದೆ ತಾಯಿಗಳ ಋಣ ಒಂದು ಜನ್ಮದಲ್ಲಿ ತೀರಿಸಲು ಅಸಾಧ್ಯ ಕಣೇ"

'ನಿಮ್ಮಪ್ಪ ಅಮ್ಮನಾ ಋಣಾ ಯೋಚಿಸಿದ್ರಾ ಹೊರಟು. ನನ್ನ ಋಣಾ...'

'ನಿನ್ನ ಮುಕ್ಕಳನ್ನು ಕೇಳು.'

"ಅಲ್ಲ, ಈಗೇಕೆ ಹಣ?'|

'ನನ್ನ ತಮ್ಮನ ಮದುವೆ ಕಣೇ. ಮುಂದಿನ ತಿಂಗಳಲ್ಲಿಯೇ ಇಟ್ಟುಕೊಂಡಿದ್ದಾರೆ. ಸೂಟ್ ಹೊಲಿಸಲಿಕ್ಕೆ ಹಣ ಬೇಕಂತೆ.'

'ಬೋನಸ್ಸ್ ಅಂತು ನಮ್ಮನೆಗೆ ಪಂಗನಾಮ ಬಿತ್ತು.'

'ಲೋ ಶಂಕ್ರು, Post officeಗೆ ಹೋಗಿ ಒಂದು M. O. form ತೆಗೆದು ಕೊಂಡು ಬಾ'

'ಆಗಲಪ್ಪಾ'

ಹತ್ತು ಪೈಸಾ ತೆಗೆದುಕೊಂಡು ಓಡಿದ.

ನನ್ನ ಕೂಗಾಟ ಕೇಳಿ ಅವಳು ಮಗನ ಸಮೇತ ಹಾಸಿಗೆ ಹತ್ತಿರ ಬಂದಳು. 'M. O. ಫಾರಂ ತಂದೇನೋ' ಅಂತಾ ಕನವರಿಸುತ್ತಿದ್ದೆ ಅಂತಾ ಅವಳು ಹೇಳಿದ ಮೇಲೆ ಗೊತ್ತಾಯಿತು. ಶಂಕ್ರು ನೀರು ತಂದು ಮುಖಕ್ಕೆ ಎರಚಿದಾಗ ಕನಸ್ಸಿನಿಂದ ಭೂಮಿಗಿಳಿದೆ. ತಾಯಿ ಮಗ ಇಬ್ಬರೂ ನಕ್ಕರು. ನನಗೇ ನಾಚಿಕೆಯಾಯಿತು.

'M. O. ಫಾರಂ ಯಾತಕ್ಕಪ್ಪಾ?'

'ಬೋನಸ್ಸ್ ಬಂತು M. O. ಆಗಿ ಹೋಯಿತು.,

'ಯಾರಿಗೆ?"

'ನಿನ್ನ ಮೈದುನ ಮದ್ವೆಗ" ರಾತ್ರಿ ಕನಸೆಲ್ಲಾ ಹೇಳಿದೆ.

ನನ್ನ ಕನಸಿನ ಕಥೆ ಕೇಳಿ ಅವಳು ನಕ್ಕಳು. ನಾನೂ ನಕ್ಕೆ. ನಮ್ಮಿಬ್ಬರನ್ನು ನೋಡಿ ಶಂಕರನೂ ನಕ್ಕ.



ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ 3 H. P. ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.......

ಧನ (½ H.P. to 30 H.P.) ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು........

ವಿತರಣೆಗಾರರು --

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್

ಕಾರ್ಕಳ (ದ. ಕ.)

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA 11—5—1967
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿಜ್ಞಾನ — ಆರೋಗ್ಯ

ಶಸ್ತ್ರ ಚಿಕಿತ್ಸೆಯಲ್ಲಿ ಮಕ್ಕಳಿಗೆ ವಶ್ಯಸುಪ್ತಿ

ಮಕ್ಕಳ ಮೇಲೆ ನಡೆಯುವ ಶಸ್ತ್ರ ಚಿಕಿತ್ಸೆಯಲ್ಲಿ ವೇದನೆಯನ್ನು ನಿವಾರಿಸಲಾಗದು. ದೊಡ್ಡವರಂತೆ ಮಕ್ಕಳು ತಮ್ಮ ಸಂಕಲ್ಪ ಶಕ್ತಿಯನ್ನೂ, ಗಮನವನ್ನೂ ಕೇಂದ್ರೀಕರಿಸಿಕೊಳ್ಳಲಾರರು. ಶಸ್ತ್ರ ಚಿಕಿತ್ಸೆಯ ವೇದನೆಯನ್ನು ಅವರು ನಿಗ್ರಹಿಸಿಕೊಳ್ಳಲಾರರು. ಆದುದರಿಂದ ಲೇ ವಿವರಣೆಗಳ ಮೂಲಕ, ಪ್ರೇರಣೆಯ ಮೂಲಕ ಮನೋ-ವೈಜ್ಞಾನಿಕ ಚಿಕಿತ್ಸೆಯನ್ನು ನಡೆಸಲಾಗುತ್ತದೆ. ಆಗ ಮಸ್ತಿಷ್ಕದ ಹೊದಿಕೆಯು ಸಕ್ರಿಯ ಸ್ಥಿತಿಯಲ್ಲಿರುತ್ತದೆ. ಆದರೂ ಅನೇಕ ಸಂದರ್ಭಗಳಲ್ಲಿ ಈ ಪದ್ಧತಿಯೂ ಇನ್ನೂ ಪರಿಣಾಮಕಾರಿಯಾಗಿಲ್ಲ.

ಮಕ್ಕಳ ಮಸ್ತಿಷ್ಕದ ಹೊದಿಕೆಯಲ್ಲೂ ಅಂತರ್ಭಾಗಗಳಲ್ಲೂ ವ್ಯವಸ್ಥೆಯು ಪ್ರಬಲವಾಗಿರುತ್ತದೆ. ಅವಕ್ಕೆ ವಶ್ಯಸುಪ್ತಿ (ಹಿಪ್ನೊಸಿಸ್) ಮನೋವೈಜ್ಞಾನಿಕ ಚಿಕಿತ್ಸೆ ಉತ್ತಮ. ತೀವ್ರವಾಗಿ ಏಕಪ್ರಕಾರವಾದ ಪರಿಣಾಮಗಳನ್ನು ಪಡೆಯಲು ಸೋವಿಯತ್ತಿನಲ್ಲಿ ಪ್ರೊ. ಸ್ಟಾನಿಸ್ಲಾವ್ ದೋಲೆತ್ಸ್ಕಿಯವರ ನಿರ್ದೇಶನದಲ್ಲಿ ಕೇಂದ್ರೀಯ ವೈದ್ಯಕೀಯ ಪ್ರಶಿಕ್ಷಣ ಸಂಸ್ಥೆಯ ಚಿಕಿತ್ಸಾಲಯವು ವಶ್ಯಸುಪ್ತಿ ಕ್ರಮವನ್ನು ಬಳಸಿತು.

ವಶ್ಯಸುಪ್ತಿಯು ನಿರ್ದಿಷ್ಟ ಪ್ರತಿವರ್ತನೆಗಳಿಂದ ಮೂಡಿಸಲಾದ ಆಂಶಿಕ ನಿದ್ರೆ. ನಿದ್ರೆ—ತಡೆವಿಸ್ತರಣೆಯು, ಗಾಢತೆಯು ವ್ಯಕ್ತಿಯಲ್ಲಿ ಇದೆಯೋ, ಸಹಜ ನಿದ್ರೆಗೂ ವ್ಯತ್ಯಾಸವಿದೆ. ವಶ್ಯಸುಪ್ತಿಯ "ಅಸಮಂಜಸತೆಯ" ಘಟ್ಟದಲ್ಲಿ ಬಾಹ್ಯ ಜಗತ್ತಿನ ಪ್ರಬಲ ಪ್ರೇರಣೆಗಳು, ವಶ್ಯಸುಪ್ತಿ ಉಂಟುಮಾಡುವವರ ಮಾತುಗಳ ಪ್ರೇರಣೆಗೆ ದಾರಿ ಮಾಡಿಕೊಡುತ್ತವೆ. ಆಗ ಚಿಕಿತ್ಸೆಯೂ ಪರಿಣಾಮಕಾರಿಯಾಗಿರುತ್ತದೆ.

ನಾಲ್ಕರಿಂದ ಹದಿನಾಲ್ಕು ವರ್ಷಗಳವರೆಗಿನ ವಯಸ್ಸಿನ ಮಕ್ಕಳ ಮೇಲೆ ವಶ್ಯಸುಪ್ತಿಯ ಚಿಕಿತ್ಸೆಯೂ, ಪ್ರೇರಣೆಯೂ ಸುಲಭವಾಗುತ್ತದೆ. ಪ್ರೇರಣೆಯು ಪ್ರಜ್ಞೆಯನ್ನು ಮುಂಬಾಗಿಲಿನಿಂದ ಪ್ರವೇಶಿಸದೆ ಹಿಂಬಾಗಿಲಿನಿಂದ ಪ್ರವೇಶಿಸುತ್ತದೆ" "ವಿಮರ್ಶಾ ಶಕ್ತಿಯನ್ನು ದಾಟಿ" ಪ್ರವೇಶಿಸುತ್ತದೆಯೆಂಬ ಸಂಗತಿಯು ಮಕ್ಕಳ ವಿಷಯದಲ್ಲಂತೂ ಮುಖ್ಯವಾದುದು.

ಮೂರು ರೂಪಗಳು

ಮಕ್ಕಳ ಮೇಲೆ ವಶ್ಯಸುಪ್ತಿ ಚಿಕಿತ್ಸೆ ನಡೆಸುವುದಕ್ಕೆ ಮೂರು ವಿಧಾನಗಳನ್ನು ಬಳಸಿದ್ದಾರೆ. ವೈದ್ಯಕೀಯ ಪ್ರೇರಣೆ, ವೈದ್ಯಕೀಯ ವ್ಯಾಯಾಮ, ಮತ್ತು ವಿಶ್ರಾಂತಿ—"ವಶ್ಯಸುಪ್ತಿ' ಮಗುವಿನ ವಶ್ಯಸುಪ್ತಿ ಸ್ಥಿತಿಯ ಕಾಲದಲ್ಲಿ ವೈದ್ಯಕೀಯ ಪ್ರೇರಣೆಯನ್ನೂ, ಅವಶ್ಯಕವೆನಿಸಿದರೆ ವ್ಯಾಯಾಮಗಳನ್ನೂ ಬಳಸುತ್ತಾರೆ. ರೋಗದ ಸ್ವರೂಪಕ್ಕೆ ತಕ್ಕಂತೆ ವೈದ್ಯಕೀಯ ಪ್ರೇರಣೆ ಮತ್ತು ವ್ಯಾಯಾಮಗಳನ್ನು ವ್ಯತ್ಯಾಸಗೊಳಿಸುತ್ತಾರೆ. ಚಿಕಿತ್ಸೆ ಮುಗಿದ ಮೇಲೆ ವಶ್ಯಸುಪ್ತಿಯನ್ನು ಸಹಜ ಸ್ಥಿತಿಗೆ ಹಿಂದಿರುಗಿಸುತ್ತಾರೆ. ಈ ಕಾಲಾವಧಿಯಲ್ಲಿ ತೀವ್ರ ಗುಣಕ್ಕೆ ಸಹಕಾರಿಯಾಗಿರುವಂತೆ ಉಲ್ಲಾಸ, ಹರ್ಷ ಮತ್ತು ಹಸಿವೆಯ ಮನೋಭಾವಗಳನ್ನು ಪ್ರೇರಿಸುತ್ತಾರೆ. ಆ ಮೇಲೆ ಮಕ್ಕಳು ೧೫ ನಿಮಿಷಗಳಿಂದ ಒಂದು ಗಂಟೆಯವರೆಗೆ ನಿದ್ರಿಸಿ, ತರುವಾಯ ತಾವಾಗಿಯೇ ಏಳುತ್ತಾರೆ.

ಶ್ವಾಸಕೋಶ ರೋಗ ಚಿಕಿತ್ಸೆಯಲ್ಲೂ ವಿಶೇಷತಃ ಮೂತ್ರಜನಕಾಂಗದ ಸ್ನಾಯುಗಳ ಮೇಲೆ ಕೀವು ಕಟ್ಟಿದ ಮೇಲಿನ ಚಿಕಿತ್ಸೆಯಲ್ಲೂ ಉತ್ತಮ ಪರಿಣಾಮಗಳನ್ನು ಪಡೆಯಲಾಗಿದೆ. ಶಸ್ತ್ರ ಚಿಕಿತ್ಸೆಗೆ ಮೊದಲು ನಡೆಯುವ ವೈದ್ಯಕೀಯ ವ್ಯಾಯಾಮದಲ್ಲಿ ಮಕ್ಕಳಿಗೆ ಪೂರ್ಣವಾದ ಆಳವಾದ ಉಸಿರಾಟ ಮತ್ತು ಕೆಮ್ಮುವಿಕೆಗಳ 'ತರಬೇತನ್ನು' ನೀಡಲಾಗುತ್ತದೆ.

ವಶ್ಯಸುಪ್ತಿ ಚಿಕಿತ್ಸೆಯ ತರುವಾಯ ಉಸಿರಾಟದ ಪ್ರಮಾಣವನ್ನು ಸರಾಸರಿ ಸೇಕಡ ೨೦ರಷ್ಟು ತಗ್ಗಿಸಲಾಗುವುದು. ಶ್ವಾಸೋಚ್ಛ್ವಾಸಗಳ ಕಾಲದಲ್ಲಿ ಎದೆಯುಬ್ಬಿಸುವ ವ್ಯಾಯಾಮ ಮಾಡುವುದರಿಂದ ಮಕ್ಕಳಿಗೆ ಉಸಿರಾಟವು ಸುಲಭವೆನಿಸುತ್ತದೆ.

ಶಸ್ತ್ರ ಚಿಕಿತ್ಸೆಯ ತರುವಾಯ ಎದೆಯಲ್ಲಿ ಉಂಟಾದ ಗಾಯದ ನೋವಿನ ಕಾರಣ ಮಕ್ಕಳ ಉಸಿರಾಟವು ಹೆಚ್ಚುತ್ತದೆ ಮತ್ತು ಕೆಮ್ಮು ಬಲಹೀನವಾಗಿರುತ್ತದೆ. ಇದರಿಂದ ಮೇಲ್ಭಾಗದ ಶ್ವಾಸನಾಳದ ಮೇಲೆ ಪರಿಣಾಮವುಂಟಾಗುತ್ತದೆ ಮತ್ತು ಶ್ವಾಸಕೋಶದಲ್ಲಿ ಜಟಿಲ ಸ್ಥಿತಿಗಳೂ ಉಂಟಾಗಬಹುದು.

ವಶ್ಯಸುಪ್ತಿಯ ಚಿಕಿತ್ಸೆಯ ತರುವಾಯ ಮಕ್ಕಳು ಆಳವಾಗಿ, ಕ್ರಮಬದ್ಧವಾಗಿ ಉಸಿರಾಡತೊಡಗಿ, ಚೆನ್ನಾಗಿ ಕೆಮ್ಮುವುದೂ ಸಹ ಅವರಿಗೆ ಸಾಧ್ಯವಾಗುತ್ತದೆ.

ವೈದ್ಯಕೀಯ ಪ್ರೇರಣೆ ಮತ್ತು ವ್ಯಾಯಾಮ

ವಶ್ಯಸುಪ್ತಿಯಲ್ಲಿ ವೈದ್ಯಕೀಯ ಪ್ರೇರಣೆ ಮತ್ತು ವೈದ್ಯಕೀಯ ವ್ಯಾಯಾಮ ಕೂಡ ಗಂಭೀರವಾಗಿ ಗಾಯಗೊಂಡ ಮಕ್ಕಳಿಗೆ ಉಪಯುಕ್ತವಾಗಿರುತ್ತದೆ. ಮೂಳೆ, ಕೈ ಕೀಲುಗಳು, ಸ್ನಾಯುರಜ್ಜು ಮತ್ತು ಸಂಧಿಯ ನರಗಳೂ ಗಾಯಗೊಂಡಾಗ, ವೈದ್ಯಕೀಯ ಪ್ರೇರಣೆಯೂ ಮತ್ತು ವ್ಯಾಯಾಮಗಳೂ ಚಲನೆಯ ಕಾಲದ ನೋವನ್ನು ಕಡಮೆ ಮಾಡುತ್ತವೆ. ವಶ್ಯಸುಪ್ತಿ ಕಾರ್ಯಾಚರಣೆಗಳ ತರುವಾಯ ಗಾಯಗೊಂಡ ಅಂಗದ ಚಲನೆಯ ಶಕ್ತಿ—ವ್ಯಾಪ್ತಿಗಳು ವೃದ್ಧಿಯಾಗುತ್ತವೆ. ಸ್ನಾಯುರಜ್ಜುವಿನ ಹೊಲಿಗೆಯ ತರುವಾಯವೂ, ನರಗಳು ಗಾಯಗೊಂಡ ತರುವಾಯವೂ, ಸಕ್ರಿಯ ಚಲನೆಗಳ ಪುನಃಸ್ಥಾಪನೆಗಾಗಿ ಸಂಕಲ್ಪ ಶಕ್ತಿಯನ್ನು ಬುದ್ಧಿಪೂರ್ವಕವಾಗಿ, ತೃಪ್ತಿಕರವಾಗಿ ಪರಮಾಧಿಕ ಪ್ರಮಾಣದಲ್ಲಿ ಸಾಧಿಸುವುದಕ್ಕೆ ವಶ್ಯಸುಪ್ತಿ ಚಿಕಿತ್ಸೆಯು ಅತ್ಯಂತ ಉಪಯುಕ್ತವೆಂದು ಶಿಫಾರಸು ಮಾಡಲಾಗಿದೆ.

ಮೂತ್ರಜನಕಾಂಗದ ಸ್ನಾಯು ದೋಷಕ್ಕಾಗಿ ಶಸ್ತ್ರ ಚಿಕಿತ್ಸೆ ಪಡೆದ ಮಕ್ಕಳು ಈ ಚಿಕಿತ್ಸಾ ಕ್ರಮದಿಂದ ಬೇಗ ಆರೋಗ್ಯವಂತರಾದರು. ಬಗೆಬಗೆಯ ದೈಹಿಕ ಸಹಜ ಪ್ರವೃತ್ತಿ ದೋಷಗಳಿಂದ ಪೀಡಿತರಾದ ಮಕ್ಕಳಿಗೂ ಸಹ ವಶ್ಯಸುಪ್ತಿಯ ಪ್ರೇರಣಾ ಚಿಕಿತ್ಸಾ ಪ್ರಯೋಗವನ್ನು ಯಶಸ್ವಿಯಾಗಿ ಮಾಡಲಾಗಿದೆ.

ಉಸಿರಾಟ, ಚಲನೆ, ಇತ್ಯಾದಿ ಮುಖ್ಯ ಚಟುವಟಿಕೆಗಳ 'ತರಬೇತಿನ' ಅವಶ್ಯಕತೆಯಿರುವ ಸಂದರ್ಭಗಳಲ್ಲಿ ವಶ್ಯಸುಪ್ತಿ ಚಿಕಿತ್ಸೆಯು ಅತ್ಯಂತ ಉತ್ತಮವೆನಿಸುತ್ತದೆ.

ಮಕ್ಕಳ ಶಸ್ತ್ರ ಚಿಕಿತ್ಸೆಯಲ್ಲಿ ವಶ್ಯಸುಪ್ತಿಯನ್ನು ಈಗ ಬಳಸಲಾಗುತ್ತದೆ. ಈ ಪ್ರಥಮ ಪ್ರಯತ್ನಗಳು ತುಂಬಾ ಆಶಾದಾಯಕವಾಗಿವೆ. ಇವು ಅತ್ಯಂತ ನಿರಪಾಯಕರವೂ ಹೌದು. ಪ್ರೇರಣಾ ಚಿಕಿತ್ಸಾ ವಿಧಾನವನ್ನು ಕರಗತಗೊಳಿಸಿಕೊಂಡಿರುವ ಯಾವ ಚಿಕಿತ್ಸಕನಾದರೂ ಈ ವಿಧಾನವನ್ನು ಯಶಸ್ವಿಯಾಗಿ ಬಳಸಬಹುದು.

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

ಡಾ| ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲಿ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಎ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದಿನಗಳು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸಿನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪೊ, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter no. CL—4.17—4/65—66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

18—5—1967



೨೦
ಪೈಸೆ

ಕಥಾ ಪ್ರಪಂಚ

ಎರಡು ಜೇ ಹಕ್ಕಿಗಳು

ರ

ಅರಣ್ಯದಲ್ಲಿ ಆಳೆತ್ತರಕ್ಕೆ ದಟ್ಟವಾಗಿ ಬೆಳೆದು ನಿಂತಿದ್ದ ಹುಲ್ಲು, ಅವುಗಳ ನಡುನಡುವೆ ಬೆಳೆದಿದ್ದ ಮೂಲಿಕೆಯ ಗಿಡಗಳು—ಇವುಗಳ ಮೇಲೆ ತಂಗಾಳಿ ಬೀಸಿದಾಗ ಎಲ್ಲೆಡೆಯೂ ಹರಡುತ್ತಿದ್ದ ಪರಿಮಳ ಚೇತೋಹಾರಿಯಾಗಿತ್ತು. ಅಲ್ಲೊಂದೆಡೆ ಪುರಾತನವಾದೊಂದು ಮರವು ರಾಜಗಾಂಭೀರ್ಯದಿಂದ ನಿಂತಿತ್ತು. ಅದರ ದೃಢಗಾತ್ರದ ಕಾಂಡ, ನೀಳವಾದ ಕೊಂಬೆಗಳು ಬೇರೆಲ್ಲ ಮರಗಳ ನಡುವೆ ನಿಂತಿದ್ದ ಆ ಮರಕ್ಕೆ ವಿಶಿಷ್ಟವಾದ ಕಳೆಯನ್ನು ನೀಡಿದ್ದವು. ಅದರ ದಟ್ಟವಾದ ಬೇರುಗಳು ಭೂಮಿಯೊಳಗೆ ಆಳಕ್ಕೆ ನುಗ್ಗಿ, ಆ ಮರಕ್ಕೆ ಭದ್ರವಾದ ಅಸ್ತಿಭಾರವನ್ನು ಹಾಕಿಕೊಟ್ಟಿತ್ತು.

ಅದರ ಉತ್ತುಂಗವಾದ ಕೊಂಬೆಗಳು ಸೂರ್ಯನಿಗೆ ಉದಯಕಾಲದಲ್ಲಿ ಮೊಟ್ಟಮೊದಲನೆಯ ವಂದನೆಯನ್ನು ಸಲ್ಲಿಸುತ್ತಿದ್ದವು. ಅದಾದ ಮೇಲೆ, ಮೇಲೇರಿ ಬರುವ ದಿನಕರನ ಕಿರಣಗಳ ಹೊಂಬೆಳಕಿನಲ್ಲಿ ಆ ವೃಕ್ಷವು ಚಿನ್ನದ ಲೇಪನ ಹೊಂದಿದಂತೆ ಕಂಗೊಳಿಸುತ್ತಿತ್ತು.

ಗಾಳಿ ಬೀಸಿದಾಗ, ಜಲಕನ್ನಿಕೆಯ ಕೇಶರಾಶಿಯು ಹೊಯ್ದಾಡುವಂತೆ ಮರದ ಹಸುರೆಲೆಗಳಿಂದ ನಿಬಿಡವಾಗಿದ್ದ ರೆಂಬೆಗಳು ತೂಗ್ಯಾಡುತ್ತಿದ್ದವು. ಮರದ ಉಚ್ಚ ಭಾಗವೊಂದರಲ್ಲಿ ಒಂದು ಪೊಟರೆಯಿತ್ತು. ಮರದ ಆ ಭಾಗವು ಒಣಗಿ ಗಟ್ಟಿಯಾಗಿಯೂ ಇತ್ತು.

ಬೃಹತ್ ವೃಕ್ಷದ ಆ ಪೊಟರೆಯು ಕೆಲವೊಂದು ವರ್ಷಗಳಿಂದ ಎರಡು 'ಜೇ' ಪಕ್ಷಿಗಳ ವಾಸಸ್ಥಾನವಾಗಿತ್ತು. ಒಣಗಿದ ಹುಲ್ಲು, ತರಗೆಲೆ, ಬಿರಿದು ನಿಂತಿದ್ದ ಅರಳೆ ಮುಂತಾದವುಗಳಿಂದ ಪೊಟರೆಯನ್ನು ಆ ಹಕ್ಕಿಗಳು ಮೆತ್ತನೆಯ ಹಾಸಿಗೆಯಂತಾಗಿಸಿದ್ದವು. ಆ ಗೂಡಿನ ಮೇಲ್ಭಾಗವೆಲ್ಲಾ ಅನಂತಾನಂತ ರೆಂಬೆ ಕೊಂಬೆಗಳು ಹಣೆದುಕೊಂಡಿದ್ದುದರಿಂದ ಸಾಧಾರಣವಾಗಿ ಆ ಗೂಡನ್ನು ಕಂಡುಹಿಡಿಯುವುದು ಕಷ್ಟವೇ ಆಗಿತ್ತು.

ಸುಂದರವಾದ ವನ, ಹಸಿರು ಕಾನನ, ಪ್ರಶಾಂತ ವಾತಾವರಣ, ಮನಮೆಚ್ಚಿದ ಮಡದಿಯನ್ನು ಪಡೆದಿದ್ದ ಗಂಡು 'ಜೇ' ಸೂರ್ಯೋದಯದಿಂದ ಅಸ್ತಮಾನದ ವರೆಗೂ ತನ್ನ ಮನೋಹರವಾದ ಕಂಠದಿಂದ ಗಾನ ಮಾಡುತ್ತಿತ್ತು. ಸೂರ್ಯನ ಬಂಗಾರದ ಕಿರಣಗಳು ವೃಕ್ಷದ ಎಲೆಗಳನ್ನು ತೂರಿಕೊಂಡು ಬರುತ್ತಿದ್ದರೆ, ಜೇ ಹಕ್ಕಿಯ ಇಂಚರವು ಆ ಕಿರಣಗಳ ಮೇಲೆ ಕುಳಿತು, ಪ್ರಯಾಣ ಮಾಡಿ ಇಡೀ ಕಾಂತಾರವನ್ನು ನವೋಲ್ಲಸಿತವಾಗಿಸುತ್ತಿತ್ತು.

ಹಕ್ಕಿಯ ಕಂಠದಿಂದ ಕೋಮಲ ನಿನಾದವು ಹೊರಡುವ ಮುನ್ನ ಅದರ ಕಪ್ಪನೆಯ ಕಣ್ಣುಗಳಲ್ಲಿ ಅಪೂರ್ವ ಕಳೆ ಹೊಮ್ಮುತ್ತಿತ್ತು; ಕಂಪನೆಯ ಕತ್ತು ಹೆಮ್ಮೆಯಿಂದ ಬೀಗುತ್ತಿತ್ತು. ಹಾಡಿಗೆ ತಾಳ ಹಾಕುವಂತೆ ಪುಕ್ಕವು ಮಿಟಿಯುತ್ತಿತ್ತು. ಅದರ ಹಾಡಿನ ಪ್ರತಿಧ್ವನಿಯು ಕಾಡಿನ ಮೂಲೆ ಮೂಲೆಗಳಲ್ಲಿಯೂ ಝೇಂಕರಿಸುತ್ತಿತ್ತು.

ಗಂಡ ಹಾಡುತ್ತಾ ಕುಳಿತಿರುವಾಗ ಹೆಂಡತಿ ತಾನು ಇಟ್ಟಿದ್ದ ಎಳೆ ಕಂದು ಬಣ್ಣದ ಮೊಟ್ಟೆಗಳಿಗೆ ಕಾವು ಕೊಡುತ್ತಿದ್ದಳು.

ಎಂದಾದರೊಮ್ಮೆ, ಆ ಮರದಲ್ಲಿ ಗೂಡು ಕೊರೆಯಲು ಸಾಧ್ಯವೇ ಎಂದು ಪರೀಕ್ಷಿಸಲೋಸುಗ ಮರಕುಟಿಕವೊಂದು ಅಲ್ಲಿಗೆ ಹಾರಿ ಬರುತ್ತಿತ್ತು. ಕಾಡು ಪಾರಿವಾಳ, ಹದ್ದುಗಳೂ ಬರುತ್ತಿದ್ದವು. ಆದರೆ, 'ಜೇ' ಹಕ್ಕಿಗಳ ಗೂಡು ಅವುಗಳ ಕಣ್ಣಿಗೆ ಬಿದ್ದಿರಲಿಲ್ಲ. ತಮಗಿಂತ ಶಕ್ತಿಶಾಲಿ ಹಕ್ಕಿಗಳು ಅಲ್ಲಿಗೆ ಬಂದು ತಮ್ಮ ಇರುವಿಕೆಯನ್ನು ಕಂಡುಹಿಡಿಯದೆ ಹೋದಾಗಲೆಲ್ಲಾ ಜೇ ದಂಪತಿಗಳಿಗೆ ಆನಂದವೋ, ಆನಂದ!

ಜೂನ್ ತಿಂಗಳ ಅದೊಂದು ಸಂಜೆ! ನೇಸರು ಮಬ್ಬಾಯಿತು. ನಕ್ಷತ್ರಗಳು ಒಂದೊಂದೇ ಹಣಿಕಿದವು. ಎಲ್ಲೆಡೆಯೂ ಪ್ರಶಾಂತ ಮೌನವಾವರಿಸಿತ್ತು. ಮೆತ್ತಗೆ ಮರದ ಬುಡದ ಬಳಿ ಒಂದು ಕಪ್ಪನೆಯ ನೆರಳು ಕಾಣಿಸಿಕೊಂಡಿತು. ಅಷ್ಟೇ ಮೆತ್ತಗೆ, ಅದು ಮರವನ್ನು ಹತ್ತಲು ತೊಡಗಿತು. ಅದರ ಪಾದಗಳು ಎಷ್ಟೊಂದು ಮೃದುವಾಗಿತ್ತೆಂದರೆ, ಮರ ಹತ್ತುವಾಗ ಒಂದೆಲೆ ಅಲುಗಾಡಿದಾಗಲೂ ಶಬ್ದ ಆಗಲಿಲ್ಲ!

ಅದರ ಕಪ್ಪನೆಯ ನೆರಳಿನಷ್ಟೇ ಕಪ್ಪಗಿದ್ದ ಆ ಕಾಡು ಬೆಕ್ಕಿನ ಹೊಳ್ಳೆಗಳು ನಡುನಡುವೆ ಅರಳಿಕೊಳ್ಳುತ್ತಾ, ಮರದಲ್ಲಿ ಎಲ್ಲಿ ತನಗೆ ಏನು ಸಿಕ್ಕಬಹುದು ಎಂಬುದನ್ನು ಅರಸುತ್ತಾ ಕೊನೆಗೆ ಮೊಟ್ಟೆಗಳೊಡೆದು ಹೊರ ಬಂದಿದ್ದ ಜೇ ಮರಿಗಳ ಎಳೆಯ ವಾಸನೆಯನ್ನು ಆಘ್ರಾಣಿಸಿತು; ಕಾಡು ಬೆಕ್ಕು ಅಲ್ಲೇ ಒಂದು ಕ್ಷಣ ನಿಂತಿತು. ಏನೋ ಸಂದೇಹ! ಇನ್ನು ಸ್ವಲ್ಪ, ಕೆಳಗಿದ್ದ ಮರದ ಇನ್ನೊಂದೆರಡು ಪೊಟರೆ, ಸಂದು, ಪೊಂದುಗಳಲ್ಲಿ ಕಾಲು ತೂರಿಸಿ, ಹುಡುಕಿ ನೋಡಿ, ಅಲ್ಲೇನೂ ಸಿಕ್ಕದೆಂದು ಖಾತ್ರಿ ಮಾಡಿಕೊಂಡು ಮತ್ತೆ ಮೊದಲು ನಿಂತಿದ್ದ ಗೂಡಿನ ಕಡೆಗೆ ಹೊರಟಿತು.

ಮಖಮಲ್ಲಿನಂತಹ ಅದರ ಮಿರುಗುಟ್ಟುವ ಮೈ, ಅಂತರಿಕ್ಷದಲ್ಲಿ ಮಲ್ಲಿಗೆಯಂತೆ ಹಾಸಿದ್ದ ನಕ್ಷತ್ರ ಮಾಲಿಕೆಯಲ್ಲಿ ಥಳಥಳನೆ ಮಿಂಚಿತು. ಬೆಳಗುತ್ತಿದ್ದ ತಾರೆಗಳ ಬೆಳಕಿನಲ್ಲಿಯೂ, ಅದರ ಕಾಲುಗುರುಗಳು ದಂತದಂತೆ ಹೊಳೆದುವು.

ಬಿಡದೆ, ಕಾಡುಬೆಕ್ಕು ಗೂಡನ್ನುದ್ದೇಶಿಸಿ ನಿಟ್ಟಿಸಿ ನೋಡುತ್ತಾ ನಿಂತಿತು. ಏನು ಕೆಟ್ಟ ಕನಸು ಬಿದ್ದಿತೋ, ಏನೋ! ಹೆಣ್ಣು ಜೇ ತಟ್ಟನೆ ಎಚ್ಚರಗೊಂಡಿತು. ಸ್ವಾಭಾವಿಕವಾಗಿಯೇ, ಅದರ ದೃಷ್ಟಿ ಗೂಡಿನಿಂದ ಹೊರ ಹೋಯಿತು. ಅದಕ್ಕೆ ಬೇರೇನೂ ಕಾಣಿಸಲಿಲ್ಲವೆಂದರೂ ಅಗ್ನಿಗೋಲದಂತಿದ್ದ ಎರಡು ವಸ್ತುಗಳು ಗೂಡನ್ನೇ ನಿಟ್ಟಿಸುತ್ತಿವೆಯೆಂಬುದೇನೋ ಅರಿವಾಯಿತು. ಅದು ಕಾಡು ಬೆಕ್ಕಿನ ಕಣ್ಣುಗಳೆಂದು ಅದಕ್ಕೆ ಗೊತ್ತಾಗದಿದ್ದರೂ, ಅವು ನಿರುಪದ್ರವಿಗಳಾದ ನಕ್ಷತ್ರಗಳಲ್ಲವೆಂಬುದೇನೋ ಅದಕ್ಕೆ ಗೊತ್ತಾಯಿತು.

ಏನೋ ಅಪಾಯ ಸನ್ನಿಹಿತವಾಗಿದೆಯೆಂದು ಅದಕ್ಕೆ ತಕ್ಷಣವೇ ಮನವರಿಕೆಯಾಗಿ ಹೋಯಿತು. ಆದರೆ, ಅದು ಸ್ಥಳದಿಂದ ಅಚೀಚೆ ಅಲುಗಲಿಲ್ಲ. ಅದರಲ್ಲಿ ತುಂಬಿ ತುಳುಕುತ್ತಲಿದ್ದ ಮಾತೃವಾತ್ಸಲ್ಯವು ಬೇರೆನಾದರೂ ಮಾಡಲು ಬಿಟ್ಟರಷ್ಟೇ!

ತಾಯ್ತನದ ಸಕಲ ಹಾರೈಕೆಗಳನ್ನೂ ಹೃದಯದಲ್ಲಿ ತುಂಬಿಕೊಂಡು ಮೊಟ್ಟೆಗಳೆಲ್ಲವನ್ನೂ ತನ್ನ ಪಸರಿಸಿದ ರೆಕ್ಕೆಗಳಿಂದ ಭದ್ರವಾಗಿ ಮುಚ್ಚಿಕೊಂಡಿತು.

ಪಾಪ! ಅದೇನು ಮಾಡಿದರೆ ತಾನೆ ಏನು? ಕಾಳ ಮೃತ್ಯುವಿನಂತೆ ಬಂದಿದ್ದ ಆ ಕಾಡು ಬೆಕ್ಕು ಕೊನೆಗೆ ಗೂಡಿಗೆ ಕೈ ಹಾಕಿಯೇ ಬಿಟ್ಟಿತು. ತನ್ನ ನಖಗಳಿಂದ ಇಡೀ ಗೂಡನ್ನೇ ಹಿಡಿದುಕೊಂಡು ಆ ರೆಂಬೆಯಿಂದ ಇನ್ನೊಂದೆರಡು ಕೆಳ ರೆಂಬೆಗಳಿಗೆ ಹಾರಿತು. ಮುಂದಿನ ಕ್ಷಣ! ಕೂರಸಿಯಂತೆ ಮೊನಚಾಗಿದ್ದ ಅದರ ಹಲ್ಲುಗಳು ತಾಯಿ 'ಜೇ'ಯ ಕತ್ತನ್ನು ಸೀಳಿತು.

ಒಂದು ಸಣ್ಣ ನರಳಿಕೆ! ಅಲ್ಲಿಗೆ ಅದರ ಕಥೆ ಮುಕ್ತಾಯಗೊಂಡಿತು! ಅದನ್ನು ನುಂಗಿದ ಮೇಲೆ ಕಾಡು ಬೆಕ್ಕಿನ ಕಣ್ಣುಗಳು ಮತ್ತೆ ಗೂಡನ್ನು ಪರೀಕ್ಷಿಸಿತು. ರೆಕ್ಕೆ ಪುಕ್ಕಗಳೂ ಹುಟ್ಟದ, ಮೊಟ್ಟೆಯಿಂದ ಕೆಲವು ಗಂಟೆಗಳ ಹಿಂದೆ ತಾನೆ ಬಂದಿರಬಹುದಾದ ಎಳೆಯ ಜೇ ಮರಿಗಳನ್ನು ಅದು ನೋಡಿತು. ಯಾರದ್ದಾದರೂ ಭಯವಿದ್ದರೆ ತಾನೆ ಅದು ಅವಸರಪಡಬೇಕು? ನಿಧಾನವಾಗಿ ಒಂದೊಂದೇ ಮರಿಗಳನ್ನು ಅದು ಮುಗಿಸಿತು.

ತಂದೆ 'ಜೇ' ಗೂಡಿನಲ್ಲಿರದೆ, ಬೇರೊಂದು ಕೊಂಬೆಯ ಮೇಲೆ ರಾತ್ರಿಯನ್ನು ಕಳೆಯುತ್ತಿತ್ತು. ಏನೋ ಒಂದು ಬಗೆಯ ಅನುಭವವುಂಟಾದಂತಾಗಿ, ಅದು ಎಚ್ಚರಗೊಂಡು ಸುತ್ತಲೂ ವೀಕ್ಷಿಸಿತು.

ಆದರೆ, ಆ ಕಿಟ್ಟಿರುಳಿನಲ್ಲಿ ಅದಕ್ಕೇನೂ ಕಾಣಿಸಲಿಲ್ಲ! ಹೆಂಡತಿಯಿಂದ ಉತ್ತರವನ್ನು ನಿರೀಕ್ಷಿಸಿ, ಅದು ಮೃದುವಾದ ಶಬ್ದವನ್ನೂ ಮಾಡಿತು. ಉತ್ತರವೇನೂ ಬರಲಿಲ್ಲ! ಏನಾದರೂ ಸದ್ದು ಬಂದೀತೇನೋ ಎಂದು ಕಿವಿಗೊಟ್ಟು ಕೇಳಿತು...... ಫಲವಿರಲಿಲ್ಲ!

ಹೊಟ್ಟೆಗೆ ಬಿದ್ದ ಮೇಲೆ, ಬೆಕ್ಕಿಗೆ ತೃಪ್ತಿಯುಂಟಾಯಿತು. ಆ ರಾತ್ರಿ ಇನ್ನೇನೂ ಬೇಕಿಲ್ಲವೆಂದೂ ಅದಕ್ಕನ್ನಿಸಿತು. ರಾತ್ರಿ ಬೇಟೆ ಮುಗಿದು, ಅದಕ್ಕೆ ವಿಶ್ರಾಂತಿ ಸಿಕ್ಕದರ ಸಾಕನ್ನಿಸಿತ್ತು. ಹೇಗೆ ಬಂದಿತೋ, ಹಾಗೆಯೇ ಇಳಿದು ಮರದ ಬುಡದ ಒಂದು ಪೊದರಿನಲ್ಲಿ ಅದು ಬಿದ್ದುಕೊಂಡಿತು.

ಎಲೆಗಳ 'ಮರಮರ' ಸದ್ದು ಗುಂ

(ಹನ್ನೊಂದನೇ ಪುಟ ನೋಡಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶ್ರೀ ಪ್ರಸಾದ

ಫೋನ್ 77 ಕುಂದಾಪುರ, ದ. ಕ.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ? ....

ಅದಕ್ಕಾಗಿ ಚಿಂತಿಸುವಿರೇಕೆ?..............

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ.........

ವೀಗಲ್ VEEGAL

ಪೆಟ್ರೋಲ್ / ಸೀಮೆ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು :

ವಿಕ್ಟರ್ ಟ್ರೇಡಿಂಗ್ ಕೋರ್ಪೋರೇಶನ್

ಫಳ್ನೀರು ರಸ್ತೆ, ಮಂಗಳೂರು-1. Ph. 5737

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:

ಅಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಚಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

— ಮುಖಪತ್ರದಲ್ಲಿ: —

ಏಕಕಟ್ಟು—ಆಕ್ರಮಣ—ಸಮಸ್ಯೆಗಳ ಜಂಜಾಟದ ನಡುವೆ ನರಳುವಾಗ, ಕಂಗೆಡದೆ ದೇಶವನ್ನು ಮುನ್ನಡೆಸಿದ ಸಮರ್ಥ ದಾರ್ಶನಿಕ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ನಿವೃತ್ತರಾದರು.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೩೮	೧೮—೫—೧೯೬೭	No. 38

ವಚನ ಸುಧೆ

ಅನುಬಂಧಾನ ಪೇಕ್ಷೇತ
ಸಾನುಬಂಧೇಷು ಕರ್ಮಸು
ಸಂಪ್ರಧಾರ್ಯ ಚ ಕುರ್ವೀತ
ನ ವೇಗೇನ ಸಮಾಚರೇತ್||

ಯಾವುದೇ ಪ್ರಯೋಜನಕ್ಕಾಗಿ ಕೆಲಸಮಾಡುವುದಕ್ಕೆ ಮೊದಲು ಪ್ರಯೋಜನವೇನೆಂಬುದನ್ನು ತಿಳಿದುಕೊಳ್ಳಬೇಕು. ಸರಿಯಾಗಿ ವಿಚಾರ ಮಾಡಿ ಕೆಲಸ ಮಾಡಬೇಕು. ಗಡಿಬಿಡಿಯಿಂದ ಕೆಲಸವನ್ನು ಆರಂಭಿಸಬಾರದು.

ನವ ಮನ್ವಂತರ

ಮೇ ತಿಂಗಳ ಹದಿಮೂರನೆಯ ತಾರೀಕು ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ದಿನ. ಪ್ರತಿ ಐದು ವರ್ಷಗಳಿಗೊಮ್ಮೆ ಜನತಂತ್ರ ಭಾರತದ ಹೊಸ ರಾಷ್ಟ್ರಪತಿಗಳು ಈ ದಿನ ಪ್ರತಿಜ್ಞಾವಿಧಿ ಸ್ವೀಕರಿಸುತ್ತಾರೆ? ಕಳೆದ ಐದು ವರ್ಷಗಳ ಕಾಲ ಉಪರಾಷ್ಟ್ರಪತಿಗಳಾಗಿ ದೇಶ ಸೇವೆ ಸಲ್ಲಿಸಿದ ಡಾ| ಜಾಕೀರ ಹುಸೇನರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಮೊನ್ನೆ ಅವರು ಮುಖ್ಯ ನ್ಯಾಯಾಧೀಶ ವಾಂಛೂರವರ ಸಮಕ್ಷಮದಲ್ಲಿ ಸಂವಿಧಾನಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸಿ, ಪ್ರತಿಜ್ಞೆ ಸ್ವೀಕರಿಸಿದರು. ಅದುವರೆಗೆ ರಾಷ್ಟ್ರಪತಿಯಾಗಿದ್ದ ಡಾ| ರಾಧಾಕೃಷ್ಣನ್ ತಮ್ಮ ಅಧಿಕಾರವನ್ನು ಒಪ್ಪಿಸಿದರು. ಇಂತಹ ಸಮಾರಂಭ ಪ್ರತಿ ಐದು ವರ್ಷಗಳಿಗೊಮ್ಮೆ ಸಾಮಾನ್ಯವಾಗಿ ನಡೆಯಬಹುದು. ಆದರೆ, ಈ ಬಾರಿಯ ಈ ಸಮಾರಂಭಕ್ಕೆ ತನ್ನದೇ ಆದ ಪರಂಪರೆಯೂ ಮಹತ್ವವೂ ಇದೆ.

ಡಾ| ರಾಧಾಕೃಷ್ಣನರು ರಾಷ್ಟ್ರಪತಿಯಾಗಿದ್ದ ಕಳೆದ ಐದು ವರ್ಷಗಳ ಕಾಲ ದೇಶದ 'ಗಂಡಾಂತರ ಕಾಲ'ವೆಂದೂ ಕರೆದರೆ ತಪ್ಪಲ್ಲ. ಪೂರ್ವೋತ್ತರದಲ್ಲಿ ಕೆಂಪು ಚೀನೀಯರ ಆಕ್ರಮಣದ ವೇಳೆ ರಾಷ್ಟ್ರಪತಿಗಳು ಇರಾದಿದ್ದ, ದುರ್ಧರ ಪರಿಸ್ಥಿತಿಯನ್ನು ಅವರಿಗೆ ತಮ್ಮ ಅಧಿಕಾರಾವಧಿಯಲ್ಲಿ ಹಿಂತೆಗೆದು ಕೊಳ್ಳುವುದಾಗಲಿಲ್ಲ. ಕೆಂಪು ಆಕ್ರಮಣದಿಂದ ಸುಧಾರಿಸಿಕೊಳ್ಳುತ್ತೇವೆ ಎನ್ನುವಾಗಲೇ ಕೆಂಪು ಗುಲಾಬಿಯ ಜವಾಹರರು ನಮ್ಮನ್ನಗಲಿದರು. ಲೋಕನಾಯಕ ಜವಾಹರರ ಸ್ಥಾನವನ್ನು ಸಂಧಾನಪ್ರಿಯ ಲಾಲಬಹಾದೂರ ಆಯ್ಕೆ ಮಾಡಿ ತುಂಬಿಸಿದವೆನ್ನುವಾಗ ಸ್ವಾತಂತ್ರ್ಯದಿಂದ ಪಾಕಿಸ್ತಾನಿಗಳು ಅಮೇರಿಕನ್ ಶಸ್ತ್ರಾಸ್ತ್ರಗಳಿಂದ ಕೊಬ್ಬಿ ನಮ್ಮ ಮೇಲೆ ದಾಳಿ ಆರಂಭಿಸಿದರು. ಅದನ್ನು ಧೀರತೆಯಿಂದ ಎದುರಿಸಿ ಬಡಿದೋಡಿಸಿದವೆಂದು ಉಸಿರೆಳೆಯುತ್ತಿರುವಾಗಲೇ ಪ್ರಧಾನಿ ಲಾಲಬಹದೂರರು ತಾಷ್ಕೆಂಟದಲ್ಲಿ ಕೊನೆಯುಸಿರೆಳೆದರು. ಹೀಗೆ ಪ್ರತಿ ವರ್ಷವೂ ಒಂದೊಂದು ಬಗೆಯ ಗಂಡಾಂತರವನ್ನು ಹಾದು ಬರುವಾಗ, ಈ ವರ್ಷದ ಸಾರ್ವತ್ರಿಕ ಚುನಾವಣೆಗಳಲ್ಲಿ ದೇಶದ ರಾಜಕೀಯ ಪಟವೇ ಬದಲಾಯಿತೆಂದರೂ ಅಚ್ಚರಿಯಲ್ಲ. ಅನೇಕ ರಾಜ್ಯಗಳಲ್ಲಿ ಕಾಂಗ್ರೆಸು ಬಹುಮತವನ್ನು ಕಳೆದುಕೊಂಡು ಅದು ವಿರೋಧಿ ಪಕ್ಷವಾಗಿ ಉಳಿಯಬೇಕಾಯಿತು. ಕೇಂದ್ರದಲ್ಲಿಯೂ ಕಾಂಗ್ರೆಸಿನ ಪ್ರಬಂಧ ಬಹುಮತ ಸಾಮಾನ್ಯ ಬಹುಮತಕ್ಕಿಳಿಯಿತು. ಇದು 'ಗಂಡಾಂತರಕಾರಿ'ಯಲ್ಲ, ಜನತೆಯಲ್ಲಿ ರಾಜಕೀಯ ಪ್ರಜ್ಞೆ ಮೂಡಿದುದರ ಕುರುಹು. ಇದು ಸ್ವಾಗತಾರ್ಹ. ನೂತನ ಪ್ರಧಾನಿಯಾಗಿ ಶ್ರೀಮತಿ ಗಾಂಧಿಯವರ ಪುನರಾಯ್ಕೆ, ರಾಷ್ಟ್ರಪತಿ ಸ್ಥಾನಕ್ಕೆ ಡಾ| ಜಾಕೀರ್ ಹುಸೇನರ ಆಯ್ಕೆ—ಎರಡರಲ್ಲಿಯೂ ನಾನಾ ಪ್ರಕಾರದ ರಾಜನೀತಿ ತನ್ನ ಜೈವಾಡ ತೋರಿಸಿತು. ಡಾ| ಜಾಕೀರ್ ಹುಸೇನರ ಆಯ್ಕೆಯಿಂದ ದೇಶದ ಗೌರವವು ಹೆಚ್ಚಿದೆಯೋ ಇಲ್ಲವೋ ಹೇಳುವುದು ಕಷ್ಟ, ಆದರೆ, ಭಾರತದ ಜಾತ್ಯತೀತ ನೀತಿಗೆ ವಿಶ್ವದಾದ್ಯಂತ ಪ್ರಶಂಸೆ ಬಂದಿದೆ, ಭಾರತೀಯ ಮುಸಲ್ಮಾನರಿಗೂ ತೃಪ್ತಿ ತಂದಿದೆ; ದೇಶವಾಸಿಗಳೂ ಸಮಾಧಾನಗೊಂಡಿದ್ದಾರೆ.

ಡಾ| ರಾಧಾಕೃಷ್ಣನ್ ದಾರ್ಶನಿಕರು, ಶಿಕ್ಷಣತಜ್ಞರು, ಭಾರತೀಯ ಸಂಸ್ಕೃತಿಯ ಪ್ರಬಲ ಪ್ರವಕ್ತಾರರು. ದೇಶ—ವಿದೇಶಗಳಿಗೂ ಭಾರತೀಯ ಸಂಸ್ಕೃತಿಯ ಸುಗಂಧಮಯ ಸಂದೇಶವನ್ನು ಹರಡಿಸಿದವರು. ದೇಶದ ಆಂತರಿಕ ರಾಜಕೀಯ, ಮತ್ತೆ ಮತ್ತೆ ನವನವೀನವಾಗಿ ಉದ್ಭವಿಸಿ ಕಾಡುತ್ತಿರುವ ಪ್ರಾಂತೀಯತೆ, ಭಾಷೀಯತೆ, ಜಾತೀಯತೆ ಮೊದಲಾದ ಸಂಕುಚಿತ ಭಾವನೆಗಳು, ಪ್ರಕೃತಿಯ ಆಕ್ರೋಶದಿಂದ ತಲೆದೋರಿದ ಆಹಾರ—ನೀರಿನ ವಿಕಟ ಸಮಸ್ಯೆಗಳು, ಸ್ನೇಹಿತ ರಾಷ್ಟ್ರಗಳ ದ್ವಿಮುಖ ನೀತಿ—ಮೊದಲಾದವುಗಳನ್ನೂ ಲಂಚಗುಳಿತನ, ಅಸಮರ್ಥತೆ ಮೊದಲಾದ ಆಂತರಿಕ ಕುಂದುಕೊರತೆಗಳನ್ನೂ ಎದುರಿಸುವಲ್ಲಿ ದೇಶದ ಸರಕಾರವು ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಡಾ| ರಾಧಾಕೃಷ್ಣನ್ ತೃಪ್ತರಾಗಿದ್ದಂತೆ ಕಾಣಲಿಲ್ಲ. ಆದರೂ ಹೊಂದಿಕೊಂಡು ಅವರು ಮುಂದುವರಿದರು; ಡಾ| ರಾಧಾಕೃಷ್ಣನ್ ಸಂಕಟಮಯ ಕಾಲದಲ್ಲಿಯೂ ಧೀರ ಹೆಜ್ಜೆಯಿಟ್ಟು ದೇಶವನ್ನು ಮುನ್ನಡೆಸಿದರು. ಅವರ ಮನದ ತಾಪವನ್ನು ಎಲ್ಲರೂ ಅರ್ಥಮಾಡಿಕೊಳ್ಳಬಲ್ಲರು; ಆದರೆ, ಅಸಹಾಯಕ ಪರಿಸ್ಥಿತಿಯಲ್ಲಿ ಮೌನವೇ ದಿವ್ಯಾಷಧಿ. ಡಾ| ಜಾಕೀರ ಹುಸೇನರು ಡಾ| ರಾಧಾಕೃಷ್ಣನ್ನರನ್ನು ತನ್ನ ಮಾರ್ಗದರ್ಶಕರೆಂದೂ ಗುರುವೆಂದೂ ಸಂಬೋಧಿಸಿದರು. ಅವರು ನಡೆದ ದಾರಿಯಲ್ಲೇ ತಾನೂ ನಡೆಯುವುದಾಗಿ, ದೇಶದ ಸಮಗ್ರತೆ, ಭದ್ರತೆಗಾಗಿ ತನ್ನ ಜೀವವನ್ನು ಮುಡಿಪಿಡುವುದಾಗಿ ಘೋಷಿಸಿದರು—ಡಾ| ಜಾಕೀರ್ ಹುಸೇನರ ಅಧಿಕಾರಾವಧಿ ರಾಜ್ಯ—ಕೇಂದ್ರಗಳ ಸಂಬಂಧದಲ್ಲಿ ಮೂಡಲಿರುವ ಸಮಸ್ಯೆಗಳ ಪರಿಹಾರಕ್ಕೆ ನೆರವಾಗಬಹುದು. ಯೋಗ್ಯ ಸುಸಂಸ್ಕೃತ, ಭಾರತೀಯ ಸಂಸ್ಕೃತಿಯಲ್ಲಿ ವಿಶ್ವಾಸವುಳ್ಳ ಭಾರತೀಯರಾದ ಡಾ| ಜಾಕೀರರು ದೇಶವನ್ನು ಸರಿದಾರಿಯಲ್ಲಿ ಮುನ್ನಡೆಸಲು ಸಮರ್ಥರಾಗಲಿ; ಭಾರತದ ಜಾತ್ಯತೀತತೆಯ ನೀತಿಯ ಬಗ್ಗೆ ಕಿರುಚಾಡುವ ಹೆಚ್ಚು ಜಾತೀಯವಾದಿ ಪಾಕಿಸ್ತಾನದ ಮನಸ್ಸು ಈ ಅವಧಿಯಲ್ಲಾದರೂ ತಿಳಿಯಾಗಲಿ. ಉಭಯ ದೇಶಗಳಲ್ಲಿ ವೈಷಮ್ಯ ನೀಗಿ ಭಾರತ ಉಪಖಂಡದಲ್ಲಿ ಶಾಂತಿ—ಭದ್ರತೆಗಳು ಶಾಶ್ವತವಾಗಿ ನೆಲೆಗೊಳ್ಳುವಂತಾಗಲಿ ಎಂದು ಹಾರೈಸುವುದು ತಪ್ಪಾಗಲಾರದು.

ಕೆರೆಯ ನೀರು ಕೆರೆಗೆ...

ಮದ್ರಾಸ ಸರಕಾರದ ಮುಖ್ಯ ಮಂತ್ರಿ ಅಣ್ಣಾದುರೈ ರೂಪಾಯಿಗೆ ಪಲ್ಲ ಅಕ್ಕಿ ದೊರೆಯುವ ತನಕ ತನ್ನ ಸಂಪುಟದ ಸಚಿವರು ವೇತನ ಸ್ವೀಕರಿಸುವುದಿಲ್ಲವೆಂದು ಸಾರಿದರು. ಇದಕ್ಕೆ ಮೊದಲೇ ತಾವೆಲ್ಲರೂ ಮಾಸಿಕ ಐನೂರು ರೂಪಾಯಿಗಳ ವೇತನ ಮಾತ್ರ ಪಡೆಯುವೆವೆಂದೂ ಹೇಳಿದ್ದರು. ಪ್ರಾಯಃ ಅರ್ಧವೇತನವಾದರೂ ಪಡೆಯದಿರುವುದೂ ಅಕ್ಕಿಯ ಬೆಲೆ ಮಾರುಕಟ್ಟೆಯಲ್ಲಿ ಇಳಿಯುವಂತೆ ಮಾಡುವುದೂ ಅವರಿಗೆ ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಅದಕ್ಕೆಂದೇ ಅಕ್ಕಿಯ ಬೆಲೆಯನ್ನು ಒತ್ತಾಯಪೂರ್ವಕವಾಗಿ ಇಳಿಸಿ, ಅದರಿಂದಾಗುವ ನಷ್ಟವನ್ನು ಸರಕಾರಿ ಖಜಾನೆಯು ತುಂಬಿಕೊಡುವುದೆಂದು ಘೋಷಿಸಿದರು. ಈ ಕ್ರಮದಿಂದ ಮಾರುಕಟ್ಟೆಯಲ್ಲಿ ಜನತೆಗೆ ಅಕ್ಕಿ ಕಡಿಮೆ ಬೆಲೆಯಲ್ಲಿ ದೊರಕೀತು; ಮಂತ್ರಿಗಳಿಗೂ ಸಂಬಳ ಪಡೆಯುವ ಮಾರ್ಗ ಲಭಿಸೀತು. ಆದರೆ, ನಷ್ಟ ತುಂಬಿ ಕೊಡಲು ಖಜಾನೆಗೆ ಹಣವೆಲ್ಲಿಂದ ಬರಬೇಕು? ಈ ಹೆಚ್ಚಿನ ಕೊರತೆಯನ್ನು ತುಂಬಿಸಲು ಜನತೆಯ ಮೇಲೆಯೇ ಕರಭಾರ ಹೇರಿದರೆ, ಅದರಿಂದಾವ ಲಾಭ ದೊರೆತಂತಾಯಿತು? ಕೆರೆಯ ನೀರನ್ನು ಕೆರೆಗೆ ಚೆಲ್ಲುವ ವ್ಯರ್ಥ ಶ್ರಮ ಬರಿಯ ಶ್ರಮ ಮಾತ್ರ. ಇಂತಹ ಕ್ರಮದಿಂದ ಜನತೆಗಿಂತ ಕಾಳಸಂತೆಕೋರರು, ಮಾರುಕಟ್ಟೆ ಮಾಲಿಕರಿಗೇನೇ ಅಧಿಕ ಲಾಭವಾಗಲಾರದೆ?

ನರಸಣ್ಣನ ಸರಸ

"ಕಾಲಿನ ಬರೆಯೇರಿಸಲು ಗೋಹತ್ಯೆಯನ್ನು ಪ್ರೋತ್ಸಾಹಿಸುತ್ತಾರಂತೆ ಅಮೆರಿಕೆಯಲ್ಲಿ..."

"ಕಾಲಿನ ಬೆಲೆ ಇಳಿಸುವುದಕ್ಕಾಗಿಯಾದರೂ ನಮ್ಮಲ್ಲಿ ಗೋಹತ್ಯೆಯನ್ನು ನಿಷೇಧಿಸಬಾರದೇಕೆ?"

ಗೇಹ ರಾಜ್ಯದಲ್ಲಿ

ವೈಣಿಕನನ್ನೇ ಮರೆತರೆ ಹೇಗೆ?

'ಏಯ್......'

'..............."

"ಏನು? ಕರೆಯೋದು ಕೇಳಿಸ್ಲೇದಿಲ್ವೆ?'

'ಯಾರನ್ನ ಕರಿಯೋದು?'

"ಮತ್ಯಾರನ್ನ? ನಾನು ಕರೆಯೋದಾದ್ರೆ ನಿನ್ನನ್ನು ಮಾತ್ರಾನ್ನ....'

'ಅಯ್ಯೋ, ನನ್ನನ್ನ ಎಲ್ಲಿ ಕರೆದ್ರೀಂತ.......'

'ಏನು, ಕಿವೀನೂ ಹೊಟ್ಟು ಹೋಯ್ತೋನು?"

"ಹ್ಞಾಂ... ಇದ್ರೂ ಇರಬಹುದೂನ್ನಿ. ಹೇಳದೆ ಇದ್ದ ಮಾತು ಕೇಳೋಕೆ ನನ್ನಿಂದಾಗೋತೇನು, ಎಲ್ರ ಕಿವೀನೂ ಹೊಟ್ಟು ಹೋಗಿರುತ್ತೆ........'

'ಏನೇ ಇದು?'

"ಯಾವುದು?"

'ಬಂದೊಡನೆಯೇ ಏಯ್ ಅಂತ ಧಡಿ ಗಂಟಲ್ಲಿ ಕೂಗಿದೆ... ಮತ್ತೆ ನೀನು ಕರೀಲಿಲ್ಲಾಂತ ಆರೋಪ ಬೇರೆ ಹೊರಿಸ್ತೀಯ?'

'ಭಾರಿ ಲಾಯಕ್ಕಾಯ್ತು ನಿಮ್ಮದೆ...'

'ಏನು?"

"ಏನು? ನನಗೆ ಹೆಸರು ಇಲ್ವೇಂದ್ರೆ?"

'ಆಯ್ಯೋ, ಯಾರು ಇಲ್ಲಾಂದವ್ರು?'

'ಮತ್ತೆ ಏಯ್ ಏಯ್ ಅಂತ ಕರೀಯುತ್ತೀರಂತೆ...'

"ಓಹೋ, ಹಾಗೇನ?"

'ಒಂದು ಮಾತು ನೆನ್ಪಿರ್ಲಿ. ಇನ್ನು ಮುಂದೆ ಹಾಗ ಕರೆದ್ರೀಂತಾದ್ರ ಊಹ್ಞೂಂ, ನಾ ಮಾತಾಡೋಲ್ಲ....'

'ಅಲ್ವೆ, ಇದು ವರೆಗೆ ಓಗೊಡುತಿದ್ದವಳಿಗೆ ಈಗ?'

"ಅದೊಂದೂ ಕೇಳ ಬೇಡಿ. ನಮ್ಮನ್ನ ನಾವೇ ಸಸಾರ ಮಾಡಿಕೊಂಡೇ ಈ ಗತಿಗೆ ಇಳಿದಿದ್ದೀವಿ. ಇನ್ನು ಮುಂದ ನನ್ನ ಹೆಸರೆತ್ತಿ ಕರೆದ್ರೆ ಮಾತ್ರ....'

'ಅಲ್ವೆ, ಏನಾಯ್ತು ಈಗ?'

'ಆಗೋದೂ ಇಲ್ಲ; ಹೋಗೋದೂ ಇಲ್ಲ. ನಮ್ಮಪ್ಪ ಸುಂದರವಾದ ಹೆಸ್ರು ಇಟ್ಟಿದ್ದಾನೆ.'

'ಮತ್ತೆ, ಇಡದೆ ಉಂಟೆ? ನಿನ್ನ ನಾಮವನ್ನ ದಿನಾ ಸ್ಮರಿಸಿದ್ರೆ ಮಹಾಪಾತಕವೂ ಧ್ವಂಸವಾಗುತ್ತೆ....'

'ನೋಡಿ, ಹಾಗಿರುವಾಗ ನೀವು ಮಾತ್ರ ಏಯ್, ಊಯ್ ಅಂತ ಕರಿಯೋದೆಂದ್ರೆ ಏನೂಂತ...'

'ಸರಿ ಹಾಗಾದ್ರೆ, ಹಾಗೆ ಕರಯೋದ್ರಿಂದ ನಿನ್ನ ಸ್ಥಾನ ಮಾನಕ್ಕೆ ಕುಂದು ಆಗುತ್ತೇಂತ ನೀನು ಭಾವಿಸುವುದಾದ್ರೆ ಇಲ್ಲ. ಇದೋ, ಇಗ್ಗೇ ಖತಮ್ ಮಾಡಿಬಿಟ್ಟೆ....'

'ಅಲ್ರಿ, ಹಾಗೆ ಅಂಥಾದ್ದೇನೂ ಇಲ್ಲ. ಅದ್ರೂ ನನ್ಗೆ ಹೆಸ್ರು ಇರುವುದಾದ್ರೂ ಏಕೇಂತ?'

'ಏಕೆ ಗೊತ್ತೆ? ಮದುವೆಗೆ ನೊದು ಎಲ್ರಿಗೂ, ಮದುವೆಯಾದ್ಮೇಲೆ ಉಳಿದವ್ರಿಗೆ ಕರೆಯೋಕೆ....'

'ಹಾಗೇನೇ ನೀವೂ ಯಾಕೆ ಕರೀ ಬಾರದು?'

'ಬಾರದೂಂತೇನು? ಯಾರೋ ಒಬ್ಬರು ಕವಿ ಹೆಂಡತಿಯ ಹೆಸ್ರ ಏನೂಂತ ಚೌಕಾಶಿ ಮಾಡಿ ಮಾಡಿ, ಕನ್ನಡದಲ್ಲಿ ಚಿನ್ನಿ ಎಂಬುದೇ ಒಳ್ಳೆಯದು ಅಂದಿದ್ದಾರೆ. ಆದ್ರೂ....'

'ಹೌದೌದು....ಈ ಏಯ್‌ಗಿಂತ ಅದೂನೇ ಚಂದ...'

'ಅಲ್ವೆ, ಏಯ್ ಅಂದ್ರೆ ಏನೂಂತ ತಿಳ್ಕೊಂಡಿದೀಯ?'

"ಏನು?"

"ಅದೊಂದು ಕರೆಯುವುದರಲ್ಲಿ ಉಪಯುಕ್ತವಾಗುವ ಅವ್ಯಯ.... ಅದಕ್ಕೆ ಯಾವ ಅರ್ಥವೂ ಇಲ್ಲ....'

'ಅಂದ್ರೆ ಹೆಂಡತಿಯಾದ್ಮೇಲೆ ಹೆಂಗ್ಸಿಗೆ ಯಾವ ಬೆಲೇನೂ ಇಲ್ಲಾಂತ ತಾನೆ? ಆದ್ಕೇ ನೋಡಿ, ನಾವೆಲ್ಲಾ ಇನ್ನು ಸುಮ್ನೆ ಕೂತ್ರ ಆಗ್ಲಲ್ಲ. ನಮ್ಮ ಇಂದಿರಾಜಿ ಡಬ್ಬಲ್ ಪಂದ್ಯ ಗದ್ದಿದ್ದಾರೆ. ಈಗ್ಲೇ ನಾವೂ ಸ್ವಲ್ಪ ಮಾಡ್ಬೇಕೂಂತ...'

'ಏನ, ಮಹಿಳಾ ಸಮಾಜದಲ್ಲಿ ಗೊತ್ತುವಳಿ ಸ್ವೀಕಾರವಾಯ್ತೇನು?'

"ಆ ಎಂತಯೇ ಅನ್ನಿ...."

'ಅಲ್ಲ, ಡಬ್ಬಲ್ ಬಾಜಿ ಗೆದ್ದದ್ದೇನೂಂತ ನಿಮ್ಮ ಇಂದಿರಾಜಿ?'

'ಅಯ್ಯೋ, ಅದೂ ಗೊತ್ತಿಲ್ವೆ? ಮತ್ತೆ ನೀವು ಇರೋದಾದ್ರೂ ಏಕೇಂತ?'

"ನಿನ್ನನ್ನೇ ಕೇಳ್ಬೇಕು .'

'ಯಾಕಾದ್ರೂ ಇರು. ಮುಖ್ಯ ಇಂಬೇಕೂನ್ನಿ, ಇಲ್ಲಾದ್ರೆ ..."

'ಅಯ್ಯೋ, ಎಂಥವರ ?....'

'..............."

'ಏನು? ಕೋಪಾನೇ ನನ್ಮೇಲೆ?'

'ಅಲ್ರಿ, ನೋಡ್ರಿ, ನಮ್ಮ ಪ್ರಧಾನಿ ಇಂದಿರಾಜಿ ಡಬ್ಬಲ ಪಂದ್ಯದಲ್ಲಿ ಗದ್ದುಬಿಟ್ರು. ಇದಕ್ಕೆ ಅವ್ರ ಗಟ್ಟಿ ಮನಸ್ಸೇ ಕಾರಣ...ಆದ್ರಿಂದ ..'

"ಹ್ಞಾಂ... ಯಾವುದದೂಂತ....'

'ನೀವೊಂದು ಬೆಪ್ಪ. ದೊಡ್ಡ ದೊಡ್ಡ ರಾಜ್ಯಕೇಲ ಬಿರುಗಾಳಿ ಬೀಸ್ತಿತ್ತಾಗ, ಇಂದಿರಮ್ಮನ ಪಂದ್ಯ ಮಾತ್ರ..."

'ನಿನ್ನ ಕೋಲು. ಪಡೆಗಳು ಯಾರಿಗೆ ಗೊತ್ತಾಗಬೇಕು? ಹುಸು ನಿನ್ನ ಬಾಯಿಂದ್ಲೇ ಕೇಳಿದ್ರೆ ಸರಿಯಾಗುತ್ತೇಂತ..."

"ಏನೇ ಇರ್ಲಿ.. ಇಲ್ಲಿ ಕೇಳಿ. ಮೊದಲನೆಯದಾಗಿ ಮುರಾರ್ಜಿ ದೇಸಾಯಿಯವರ ಮೇಲೆ ವಿಜಯ ಗಳಿಸಿದ್ರು.... ಹೌದಾ ಅಲ್ವಾ ಹೇಳಿ....'

'ಹ್ಞಾಂ, ಕಾಮರಾಜ ಮುಂತಾದವರ ಸಹಾಯದಿಂದ, ಮುಖ್ಯವಾಗಿ ಮುರಾರ್ಜಿಯವರ ಉದಾರತೆಯಿಂದ....'

"ನೋಡಿ, ನೀವು ಹೀಗೆಲ್ಲಾ ಹೇಳಬಾರದು. ಕಾಮರಾಜರಾದರೂ ಹ್ಞಾಂ. ಸ್ವಲ್ಪ ಸಹಾಯ ಮಾಡಿದರೂನ್ನಿ. ಮುರಾರ್ಜಿ ಏನು ಮಾಡಿದ್ದಾರೆ?'

"ಸ್ಪರ್ಧೆಯಿಂದ ಹಿಂದಳಿದು ಉಪಕಾರ ಮಾಡಿದ್ದಾರೆ "

'ಒಂದು ವೇಳೆ ಸ್ಪರ್ಧೆಗೆ ನಿಲ್ಲುತಿದ್ರೂ ಇಂದಿರಾಜಿಯೇ ಗೆಲ್ಲುತ್ತಿದ್ರು...'

"ಹೌದು...ಆದರೆ, ಪಾರ್ಲಿಮೆಂಟಿನಲ್ಲಿ ವಿರೋಧಿಗಳ ಸಂಖ್ಯೆ ಹೆಚ್ಚುತ್ತಿತ್ತು. ಮುರಾರ್ಜಿ ಭಾಯಿಗೇನೂ ಅಧಿಕಾರ ಬೇಕಾಗಿಲ್ಲ ಸತ್ಯ ಹೇಳುವುದಾದರೆ, ನಿನ್ನ ಇಂದಿರಮ್ಮನಿಗೇ ಅದ್ರಲ್ಲಿ ಮೋಹ....'

'ಇರಬಹುದು, ಇಲ್ಲ ಕೇಳಿ, ದೇಸಾಯಿಗ ಅಧಿಕಾರ ಬೇಡವಾಗಿದ್ರೆ, ಮತ್ತೆ ಮಂತ್ರಿ ಪದವಿಗೆ ಯಾಕ ಬಂದದ್ದು?'

'ಯಾಕ ಅಂದ್ರೆ? ಜನ ಸೇವೆ ಮಾಡುವ ಒಂದು ಸಾಧನಾಂತ, ವಿಕಾಸಪಕ್ಕ ಮುಟ್ಟುತ್ತಿರುವ ನಮ್ಮ ಅರ್ಥ ಪರಿಸ್ಥಿತಿಗ ತಕ್ಕ ಮಂತ್ರಿಯಾಗಿದ್ದಾರೆ, ಇವರು...'

'ಇರ್ಲಿ. ಆದ್ರೂ ಈ ರೌಂಡಿನಲ್ಲಿ ನಮ್ಮ ಇಂದಿರಮ್ಮನೇ ಗೆದ್ದದ್ದು ನಿಜ ತಾನೆ?"

'ಹೌದು...ಅಷ್ಟೇನ್ನ ಲಾಗುತ್ತೆ? ಮಹಾಭಾರತದಲ್ಲಿ ಅರ್ಜುನ ಗೆದ್ದ ಹಾಗೆ...."

'ಈಗ ನೋಡಿ, ಫೈನಲ್ಸಿನಲ್ಲಿ ಕೂಡಾ ಅವರೇ ಗದ್ದಿದ್ದಾರೆ...."

"ಅಂದ್ರೆ?

"ಕಾಮರಾಜು ದೇಸಾಯಿಯವ್ರು, ವಿರೋಧಿ ಪಕ್ಷಗಳು ಬಹಳ ದೊಡ್ಡ ಸರ್ಕಸ್ ಆಡಿದ್ರೂ ಜಾಕೀರ ಹುಸೇನರನ್ನೇ ರಾಷ್ಟ್ರಪತಿಯಾಗಿಸಿದ ಪಂಥ ಇಂದಿರಮ್ಮಂದು...."

'ಹ್ಞಾಂ.. ಮುಗಿಯಿತಾ, ಇನ್ನೂ ಇದೇನಾ?"

"ಒಟ್ಟಿನಲ್ಲಿ, ಒಂದೇ ಮಾತಿನಲ್ಲಿ ಹೇಳೋದಾದ್ರೆ, ಇಂದಿರಮ್ಮ ಕಾಮರಾಜರನ್ನೂ ಸೋಲಿಸಿ ಅನಭಿಷಿಕ್ತ ದೊರೆಸಾನಿ ಆಗಿದ್ದಾಳೆ... ಏನಂತೀರಿ?'

'ಅನ್ನೋದೇನಿಲ್ಲ. ಆದ್ರೆ ಒಂದ್ಮಾತು ನೆನಪಿಡು. ಕಾಮರಾಜರಿಲ್ಲದೆ ಹೋಗಿದ್ರೆ, ಇಲ್ಲಾಂತಾಗುತಿದ್ವು..."

"ಅದೆಲ್ಲಾ ಇನ್ನು ಯಾಕೆ? ಜಾಕೀರರ ವಿಜಯ ಅಂದ್ರೆ ಇಂದಿರಮ್ಮನ ವಿಜಯ, ಸ್ವಯಂ ಕಾಂಗ್ರೆಸ್ ವಿರೋಧಿ ಪಕ್ಷಗಳ ಸದಸ್ಯರೇ ಮೂಗಿಗ ಬೆರಳೇರಿಸಿದ್ದಾರೆ"

"ಹ್ಞಾಂ...'

'ಕಾಮರಾಜರ ಮಾತು ಕೇಳಿದ್ರೆ, ಇಂಥಹ ಪ್ರಚಂಡ ಜಯಭೇರಿ ಬಾರಿಸಿ ದಿಗ್ವಿಜಯ ಮಾಡುವ ಅವಕಾಶ ದೂರ, ಬಹುದೂರ...'

"ಏನೇ ಹೇಳು, ಪ್ರಾಯಃ ಇಂದಿರಮ್ಮನೂ ನಿನ್ನಷ್ಟು ನಾಲಿಗೆ ಸಡಿಲು ಬಿಡಲಿಕ್ಕಿಲ್ಲ...'

"ಓಯ್, ಏನಂದಿರಿ?'

'.............'

'ಏನು ಮಾತಾಡೋದಿಲ್ಲ?"

'ಯಾರೊಡನೆ?'

'ನನ್ನೊಡನೆ!

"ನಿನ್ನೊಡನೆ? ನೀನು ಆದಾರೋ ಓಯ್‌ಯೊಡನೆ ಏನೋ ಕೇಳ್ತ ಇದ್ದಿ....'

'ಅಲ್ರಿ, ನಾನು ಕರೆದದ್ದು ನಿಮ್ಮನ್ನೆ...'

'ನನ್ನನ್ನೆ?'

"ಹೌದು, ನಿಮ್ಮನ್ನೇ ನಿಮ್ಮನ್ನೇ....'

"ಅಯ್ಯೋ, ಹಾಗಿದ್ದು ಕೇಳಿಸಿಲ್ಲ....'

'ಅಲ್ರಿ, ನಾವು ಹೆಂಗಸ್ರು ಗಂಡಸ್ರ ಹೆಸ್ರೆತ್ತಿ ಕರೆಯೋಕಾಗುತ್ತೆ?

'ಹೇಗೂ ಡಬ್ಬಲ್ ಪಂದ್ಯ ಗೆದ್ದಿದ್ದೀರಿ. ಈ ಪಂದ್ಯದಲ್ಲೂ ಗೆದ್ದು ಬಿಡಿ....'

"ಅದು ಹೇಗಾಗುತ್ತೆ?'

'ಅದೊಂದೂ ನನಗೆ ತಿಳೀದು, ನೀನು ಏಯ್ ಅಂದ್ರೆ ಓಗೊಡೋದಿಲ್ಲಾಂದ್ರೆ, ನಾನು ಓ 'ಯ್' ಅಂದ್ರೆ ಓಗೊಡೋಲ್ಲ....'

'ಒಳ್ಳೇ ಮುರಾರ್ಜಿ ಹಠವಾಯ್ತಲ್ಲ ಇದು....'

'ಅಂಥವನನ್ನೂ ಇಂದಿರಮ್ಮ ಗೆದ್ದಿದ್ದಾರೇಂತ ಹಿಂದ ಹಾರಿಸ್ಬಿಯುಲ್ಲಾ, ನೋಡೆ ನಾ, ಸುಂಸುಂಮ್ನೆ ಅವ್ರು ಪಂಥ ಗದ್ದಿದ್ದಾರೆ, ಇವ್ರು ಗೆದ್ದಿದ್ದಾರೇಂತ ಬಡಿದು ಬಾರ್ಸಿದ್ರೆ ಪ್ರಯೋಜನವಿಲ್ಲ. ನೀನು ಗೆಲ್ಲು ನೋಡೋಣ..."

'ಅಯ್ಯೋ, ಒಳ್ಳೆ ಸಜೀತಿಯಾಯ್ತಲ್ಲ ಇದ ....'

'ಯಾಕ?'

'ಅಲ್ರಿ, ಎಲ್ಲಾದ್ರೂ ಉಂಟೆ?

'ಯಾಕ ಇಲ್ಲ! ಬಂಗಾಳದಲ್ಲಿ ಗಂಡನನ್ನು ಏಕವಚನದಲ್ಲೇ ಮಾತಾಡಿಸೋದು ಸಂಪ್ರದಾಯ; ಇಂಗ್ಲಿಷ್‌ನಲ್ಲಿ ಹೆಸರಿಡಿಯೇ ತೀರಬೇಕು ... ಇಂಗ್ಲಿಷ್ ಮಾಡಲ್ಲನ ಲೇಡಿಗಳು ಏನಾದ್ರೂ ಅಡ್ಡ ಹೆಸ್ರು ಇಡೋದೂಂಟೂನ್ನ...'

"ಈಗ ನಾನ ಈ ಮೂರ್ರಲ್ಲಿ ಯಾವ ಗುಂಪಿಗೂ ಸೇರ್ತಿಲ್ಲ ನೋಡ...."

'ಹಾಗಾದ್ರೆ ಒಂದು ಕೆಲ್ಸ ಮಾಡು...'

'ಏನು? ನಿಮ್ಮ ಮಹಿಳಾ ಸಮಾಜದಲ್ಲೇ ಈ ಸಮಸ್ಯೆ ಇಟ್ಟು ಬಿಡು. ನಾವು ಅವ್ರನ್ನ ಓಯ್ ಅಂತ ಮಾತಾಡ್ಸಿದ್ರೆ ಓ

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಪರಿಚಯ

ಹರ್ಷ ಚರಿತೆ

ಲೇಖಕರು: ಶ್ರೀ ಸ. ನಾರಾಯಣ

ಬಾಣ ಭಟ್ಟನ ಹರ್ಷ ಚರಿತೆ ಸಂಸ್ಕೃತ ಸಾಹಿತ್ಯದಲ್ಲಿ ಉಪಲಬ್ಧವಿರುವ ಪ್ರಥಮ ಐತಿಹಾಸಿಕ ಕಾವ್ಯ. ಇದು ಕೇವಲ ಐತಿಹಾಸಿಕ ಪ್ರಶಸ್ತಿಮಾತ್ರವಾಗಿ ಉಳಿಯದೆ ಸುಪ್ರಸಿದ್ಧ ಕಾವ್ಯವಾಗಿಯೂ ಮೆರೆದಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಹರ್ಷ ಚರಿತೆ ಹಲವಾರು ದೃಷ್ಟಿಗಳಿಂದ ಅಮೂಲ್ಯ ಕೃತಿಯಾಗಿದೆ.

ಬಾಣ ಭಟ್ಟನನ್ನು ಬಾಣನೆಂದು ಕರೆಯುವ ಸಂಪ್ರದಾಯವೂ ಇದೆ. ಬಾಣ ಸುಪ್ರಸಿದ್ಧ ಸಂಸ್ಕೃತ ಪಂಡಿತ. ಈತನ ಕಾಲ ಕ್ರಿ. ಶ. ೭ನೆಯ ಶತಮಾನ. ಈತ ಉತ್ತರ ಭಾರತದ ಸುಪ್ರಸಿದ್ಧ ಚಕ್ರವರ್ತಿ ಶ್ರೀ ಹರ್ಷವರ್ಧನನ ಆಸ್ಥಾನ ಕವಿ. ಹರ್ಷ ಚರಿತೆ ಕಾವ್ಯದಲ್ಲಿ ಕವಿ ಬಾಣನಿಗೂ ಹರ್ಷವರ್ಧನ ಮತ್ತು ಅವನ ಆಸ್ಥಾನಕ್ಕೂ ಇದ್ದ ಸಂಬಂಧ ಪ್ರಸ್ತಾಪಿಸಲ್ಪಟ್ಟಿದೆ. ಬಾಣ ಐತಿಹಾಸಿಕ ಘಟನೆಗಳನ್ನು ಮುಖ್ಯ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಇತಿಹಾಸಿಕ ಕಾವ್ಯವನ್ನು ರಚಿಸಿದ್ದಾನೆ. ಆದರೆ, ಕಾವ್ಯ ಕೇವಲ ಚರಿತ್ರೆಯ ವರದಿ ಅಥವಾ ಘಟನೆಗಳ ನಿರೂಪಣೆಯ ಗ್ರಂಥವಾಗಿ ಉಳಿದಿಲ್ಲ. ಬಾಣನ ಪಾಂಡಿತ್ಯ, ಸಂಸ್ಕೃತ ಭಾಷಾಸಾಮರ್ಥ್ಯ, ನಿರೂಪಣ ಶೈಲಿ ಅಮೋಘವಾಗಿದೆ. ಹರ್ಷಚರಿತೆಯ ಆರಂಭದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಅಮೂಲ್ಯ ಸಂಗತಿಗಳೂ ತಿಳಿದು ಬರುತ್ತವೆ. ವ್ಯಾಸ, ಭಟ್ಟಾರ ಹರಿಶ್ಚಂದ್ರ, ಸಾತವಾಹನ, ಪ್ರವರಸೇನ, ಭಾಸ, ಕಾಳಿದಾಸ ಮತ್ತು ವಾಸವದತ್ತಾ ಮತ್ತು ಬೃಹತ್ಕಥೆಯ ಕರ್ತೃಗಳ ಸಂಗತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಹರ್ಷ ಚರಿತೆಯ ಆರಂಭದ ಎರಡು ಉಚ್ಛ್ವಾಸಗಳಲ್ಲಿ ಬಾಣನ ವೈಯಕ್ತಿಕ ಜೀವನ ಸಂಗತಿಗಳೂ ತಿಳಿದುಬರುತ್ತವೆ. ಸಮಕಾಲೀನ ಜೀವನ, ಹಾಗೂ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳು ಹರ್ಷ ಚರಿತೆಯಿಂದ ತಿಳಿದು ಬರುತ್ತವೆ. ಬಾಣ ಐತಿಹಾಸಿಕ ಸಂಗತಿಗಳಿಗೆ ಪ್ರಾಮುಖ್ಯ ನೀಡಿ ಕಾವ್ಯವನ್ನು ರಚಿಸಿದ್ದರೂ ಕಾವ್ಯದ ರಮಣೀಯತೆಗೆ ಶೈಲಿಗೆ ಯಾವ ಕುಗ್ಗು ಕುಂದೂ ಉಂಟಾಗುವುದಿಲ್ಲ.

ಬಾಣ ಹರ್ಷಚರಿತೆಯನ್ನು ಹರ್ಷನ ಕಾಲದಲ್ಲಾಗಿಯೇ ಬರೆದಿದ್ದಾನೆ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಹರ್ಷವರ್ಧನನ ಆಸ್ಥಾನ ಕವಿಯಾಗಿದ್ದು, ಸುಪ್ರಸಿದ್ಧ ಪಂಡಿತ ಎಂದು ಕೀರ್ತಿ ಪಡೆದಿದ್ದ ಬಾಣ ಆಶ್ರಯದಾತನ ದೇಹವನ್ನು ಸ್ತುತಿಸಿರುವುದು — ಪ್ರಶಂಸಿಸಿರುವುದೆ, ಅರಸನ ಬಗ್ಗೆ ಅಭಿಮಾನ ತಾಳಿ ಕಾವ್ಯ ರಚಿಸಿರುವುದು ಸಹಜವಾಗಿದೆ, — ಸಮಂಜಸವಾಗಿದೆ. ಶ್ರೀ ಹರ್ಷನ ಉದಾತ್ತ ಭಾವನೆ, ಧರ್ಮಾಭಿಮಾನ, ಜನಪ್ರಿಯತೆ, ಬಾಳಿನ ಪ್ರಬಲ ಸಮಸ್ಯೆಗಳು, ಹೋರಾಟ ಎಲ್ಲವೂ ಬಾಣನ ಕಾವ್ಯ ರಚನೆಗೆ ಸಾಕಷ್ಟು ಆಧಾರವನ್ನೂ ಒದಗಿಸಿಕೊಟ್ಟಿವೆ. ಆ ಕ್ರಮಕ್ರಮ ಕಥಾ ವಸ್ತುವನ್ನು ಬಾಣ ಆರಿಸಿಕೊಂಡು ಕಾವ್ಯ ರಚಿಸಿದ್ದರೂ ಅರಸ ಶ್ರೀ ಹರ್ಷನ ಜೀವನ ಚರಿತ್ರೆಯ ಸಂಗತಿಗಳೇ ಕಾವ್ಯದಲ್ಲಿ ಆಕರ್ಷಣೀಯವಾಗಿ ನಿರೂಪಿಸಲ್ಪಟ್ಟಿವೆ.

ಸಂಸ್ಕೃತ ಸಾಹಿತ್ಯ ಪ್ರಕಾರದಲ್ಲಿ ಕಾಣಬರುವ ಆಖ್ಯಾಯಿಕೆಗೆ ಹರ್ಷ ಚರಿತೆ ಒಂದು ಉತ್ತಮ ಉದಾಹರಣೆಯಾಗಿದೆ. ಎಂಟು ಉಚ್ಛ್ವಾಸಗಳಲ್ಲಿ ಹರ್ಷಚರಿತೆ ವಿವರಿಸಲ್ಪಟ್ಟಿದೆ. ಮೊದಲ ಎರಡು ಉಚ್ಛ್ವಾಸ ಮತ್ತು ಮೂರನೆಯ ಉಚ್ಛ್ವಾಸರ್ಧದಲ್ಲಿ ಬಾಣ ತನ್ನ ಕೆಲವು ಸಂಗತಿಗಳನ್ನು ಪ್ರಸ್ತಾಪಿಸುತ್ತಾನೆ. ಕಾವ್ಯ ರಚನೆಗೆ ಕಾರಣ, ತನ್ನ ಕಾವ್ಯ ರಚನೆಗೆ ಕಾರಣವಾಗಿ ನೆರವು ನೀಡಿದವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾನೆ.

ಬಾಣ ಬಾಳಿನ ಆರಂಭದ ದಿನಗಳಲ್ಲಿಯೇ ಕಷ್ಟ ಕೋಟಲೆ ಸಮಸ್ಯೆಗಳನ್ನು ಸ್ವಾಗತಿಸಬೇಕಾಗುತ್ತದೆ. ಅನುಭವಿಸಬೇಕಾಗುತ್ತದೆ. ಅವನು ಮಗುವಾಗಿರುವಾಗಲೇ ಅವನ ತಾಯಿ ರಾಜ್ಯದೇವಿ ಕಣ್ಮುಚ್ಚುತ್ತಾಳೆ. ಬಾಣ ಹದಿನಾಲ್ಕು ವರ್ಷಗಳ ಬಾಲಕನಾಗಿರುವಾಗ ಅವನ ತಂದೆ ಅವನನ್ನು ಅನಾಥನನ್ನಾಗಿ ಮಾಡಿ ತೆರಳುತ್ತಾನೆ. ಮುಂದೆ ಪ್ರಯತ್ನ, ಸಾಧನೆಗಳಿಂದ ಅವನಿಗೆ ರಾಜಾಸ್ಥಾನದಲ್ಲಿ ಸ್ಥಳ ದೊರೆಯುತ್ತದೆ. ಹರ್ಷ ವರ್ಧನ ಅವನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಆಶ್ರಯ ನೀಡುತ್ತಾನೆ. ಹರ್ಷ ಚರಿತ್ರೆಯಲ್ಲಿ ಆವರೆವಿಗೂ ಬಾಣನ ಜೀವನ ವೃತ್ತಾಂತವೇ ಪ್ರಧಾನವಾಗಿದ್ದು ಅನಂತರ ಹರ್ಷನ ಸಂಗತಿಗಳು ಬೆಳಕಿಗೆ ಬರುತ್ತವೆ. ಇಲ್ಲಿ ಬಾಣ ತನ್ನ ಜೀವನ ವೃತ್ತಾಂತವನ್ನು ಪ್ರಸ್ತಾಪಿಸಿ ನಿರೂಪಿಸಿರುವುದು ಸಮಯೋಚಿತವಾಗಿದೆ.

ಹರ್ಷ ಚರಿತೆಯ ಮೂರನೆ ಉಚ್ಛ್ವಾಸದ ಮಧ್ಯ ಭಾಗದಿಂದ ಶ್ರೀ ಹರ್ಷನ ಚರಿತ್ರಾರ್ಹ (ಐತಿಹಾಸಿಕ) ಸಂಗತಿಗಳನ್ನು ಬಾಣ ನಿರೂಪಿಸುತ್ತಾನೆ. ಈ ಪರಂಪರೆಯಲ್ಲಿ ಮುಖ್ಯವಾಗಿ ಅನೇಕ ಐತಿಹಾಸಿಕ ಘಟನೆಗಳೇ ಪ್ರಧಾನವಾಗಿವೆ. ಹರ್ಷನ ತಂದೆ ಪ್ರಭಾಕರವರ್ಧನನ ಮರಣ, ಹರ್ಷನ ಹಿರಿಯಣ್ಣ ರಾಜ್ಯವರ್ಧನನ ಕೊಲೆ, ಮಾಲವದ ಘೋರ ಗೃಹವರ್ಮನ ಮರಣ, ಹರ್ಷನ ಸಹೋದರಿ ರಾಜ್ಯಶ್ರೀಯ ದುಃಖ, ಮಾಲವ ರಾಜ್ಯಕ್ಕೆ ತಂಗಿಯ ಭೇಟಿಗಾಗಿ ಹರ್ಷವರ್ಧನನ ಪ್ರಯಾಣ, ಮಾಲವದಿಂದ ರಾಜ್ಯಶ್ರೀಯ ನಿರ್ಗಮನ, ಜೀವನದ ವಿಪತ್ಪರಂಪರೆ, ದುಃಖಗಳಿಂದ ನೊಂದ ರಾಜ್ಯಶ್ರೀ ಚಿತೆಯಲ್ಲಿ ಹಾರಿ ಪ್ರಾಣಾರ್ಪಣೆ ಮಾಡಲು ಸಂಕಲ್ಪಿಸಿ ಚಿತೆಯನ್ನು ಸಿದ್ಧಪಡಿಸಿದಾಗ ಬೌದ್ಧ ಸನ್ಯಾಸಿಯಿಂದ ಅವಳ ಪ್ರಾಣ ರಕ್ಷಣೆ, ಉಪದೇಶ, ಅನಂತರ ಕೊನೆಯಲ್ಲಿ ರಾಜ್ಯಶ್ರೀ ಮತ್ತು ಹರ್ಷನ ಮಿಲನ-ಹೀಗೆ ಹಲವಾರು ಪ್ರಮುಖ ಸಂಗತಿಗಳು, ಘಟನೆಗಳು ಸೇರಿವೆ. ಕಾಲೆಯ ಉಚ್ಛ್ವಾಸಗಳಲ್ಲಿ ಆಸಕ್ತಿ ತಾನೇ ತಾನಾಗಿ ಮೂಡುತ್ತದೆ. ಕೊನೆಯಭಾಗ ವಿಸ್ತಾರವಾಗಿದ್ದರೂ ಸಂಗತಿಗಳು, ನಿರೂಪಣಾಶೈಲಿ ಆಸಕ್ತಿಯನ್ನು ಕೆರಳಿಸಿ ಐತಿಹಾಸಿಕ ಲೋಕದಲ್ಲಿ ವಿಹರಿಸಲು ಅನುಕೂಲ ಮಾಡಿಕೊಡುತ್ತವೆ. ಕಥಾವಸ್ತುವಿನಲ್ಲಿ ಕಲ್ಪನೆಗೆ ಅವಕಾಶವೇ ಇರುವಂತೆ ಕಾಣ ಬರುವುದಿಲ್ಲ. ಶ್ರೀ ಹರ್ಷ ಮತ್ತು ರಾಜ್ಯಶ್ರೀಯ ಪಾತ್ರಗಳು ಓದುಗನ ಎದುರಿನಲ್ಲಿ ನಿಂತಿರುತ್ತವೆ. ಕಾವ್ಯದ ಅಂತ್ಯವೂ ಸ್ವಾರಸ್ಯಕರವಾಗಿದೆ. ಬಾಣ ತನ್ನ ಲೇಖನ ಸಾಮರ್ಥ್ಯ, ಜಾಣ್ಮೆಗಳನ್ನು ಓದುಗರಿಗೆ ವಿಶೇಷ ಬಗೆಯಲ್ಲಿ ಪರಿಚಯ ಮಾಡಿಕೊಡುತ್ತಾನೆ. ಕತ್ತಲು ಆವರಿಸುತ್ತದೆ. ಆ ಮೂಲಕ ಮುಂದಿನ ಘಟನೆಗಳಿಗೆ, ಯೋಚನೆಗೆ ವಿಶ್ರಾಂತಿ ದೊರೆಯುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ ಬಾಣನ ಹರ್ಷ ಚರಿತೆ ಐತಿಹಾಸಿಕ ಗದ್ಯಕಾವ್ಯ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಅನಂತರದ ಎಲ್ಲ ಐತಿಹಾಸಿಕ ಕಾವ್ಯಗಳು ಪದ್ಯ ಕಾವ್ಯಗಳೆಂಬುದು ಸ್ಪಷ್ಟವಾಗಿದೆ. ಈ ಪದ್ಯ ಕಾವ್ಯಗಳು ಸರಳವಾಗಿಯೂ ಮತ್ತು ಶುದ್ಧವಾದ ಪದ್ಯ ಶೈಲಿಯಲ್ಲಿವೆ. ವೇನು ಭೂಪಾಲ ಚರಿತ ಕಾವ್ಯ ಒಂದು ಮಾತ್ರ ಸರ್ವ ವಿಧಗಳಿಂದಲೂ ಹರ್ಷಚರಿತ ಕಾವ್ಯಕ್ಕೆ ಸರಿಸಮಾನವಾಗಿಸಲ್ಲ. ಬಲ್ಲ ಆ ಮೂಲ್ಯ ಸಂಸ್ಕೃತ ಐತಿಹಾಸಿಕ ಗದ್ಯ ಕಾವ್ಯವಾಗಿದೆ.

ಕಾದಂಬರಿ ಬಾಣನ ಸುಪ್ರಸಿದ್ಧ ಕಾಲ್ಪನಿಕ ಕಥೆ, ಪ್ರೇಮವೇ ಈ ಕಾವ್ಯದ ಮೂಲ ಕಥಾವಸ್ತು, ಕಾದಂಬರಿಯ ಕಥಾವಸ್ತುವಿಗಿಂತಲೂ ಕಥಾವಸ್ತುವಿನ ನಿರೂಪಣೆಯಲ್ಲಿ, ಶೈಲಿಯಲ್ಲಿ ಬಾಣ ತನ್ನ ಜಾಣ್ಮೆ, ಚಮತ್ಕಾರಗಳನ್ನು ತೋರಿದ್ದಾನೆ. ಇಬ್ಬರೆ ನಾಯಕರು ಇಬ್ಬರ ನಾಯಕಿಯರು ಅಗಲಿ ಒಬ್ಬರಿಗಾಗಿ ಇನ್ನೊಬ್ಬರು ಆಸೆ — ಆಕಾಂಕ್ಷೆಗಳನ್ನು ದೂರ ಮಾಡಿ ಭೂಮಿಯಲ್ಲಿ ಎರಡು ಬಾರಿ ಜನ್ಮ ತಾಳುತ್ತಾರೆ.

ಕಾದಂಬರಿಯ ಕಥಾ ಸಂವಿಧಾನದಲ್ಲಿ ಬಾಣ ತನ್ನ ಜಾಣ್ಮೆಯನ್ನು ವ್ಯಕ್ತಪಡಿಸಿದ್ದಾನೆ. ಮೂಲಕಥೆಗೆ ಸೇರಿದಂತೆ ಅನೇಕ ಉಪಕಥೆಗಳು ಹೆಣೆದುಕೊಂಡಿವೆ. ಈ ಕಥೆಗಳ ಮೊದಲ ಶ್ರೋತೃ ಶೂದ್ರಕ ರಾ

(ಮುಂದಿನ ಪುಟ ನೋಡಿರಿ)

ಉಳಿತಾಯ ಸಾಧಿಸಿದ ಬದುಕು

ಚಂದು ಮೊತ್ತಮೊದಲಲ್ಲಿ ಫ್ಯಾಕ್ಟರಿಯೊಂದರಲ್ಲಿ ಫಿಟ್ಟರ್ ಕೆಲಸ ಕೈಗೊಂಡಿದ್ದ. ಆದಾಯ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಹಣ ಕೂಡಿಡುತ್ತಾ ಬಂದ. ಮೂರು ನಾಲ್ಕು ವರುಷಗಳಲ್ಲಿ ಬಡ್ಡಿ ಸಹಿತ ಆತನ ಮೊತ್ತ ಬೆಳೆದು, ಆ ಹಣದಿಂದ ಅವನು ಒಂದೆರಡು ಪುಟ್ಟ ಯಂತ್ರಗಳನ್ನು ಕ್ರಯಕ್ಕೆ ಪಡೆದ. ಇದೀಗ ಆತ ತನ್ನ ಸ್ವಂತ ಚಿಕ್ಕ ವರ್ಕ್‌ಶಾಪನ್ನು ನಡೆಸುತ್ತಿದ್ದಾನೆ. ಉಳಿತಾಯ ಸಾಧಿಸಿದ ಫಲವೇ ತನ್ನ ಈಗಿನ ಸಂತೃಪ್ತ ಬದುಕು ಎಂದು ಆತ ಹೇಳುತ್ತಿದ್ದಾನೆ.



ಸೋಮಯ್ಯ ಕೈಮಗ್ಗದ ಕಾರ್ಖಾನೆಯಲ್ಲಿ ದಿನಗೂಲಿ ಕೆಲಸದಲ್ಲಿದ್ದ. ದಿನಪ್ರತಿ ಸಂಜೆ ಕೂಲಿ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಖಾತೆಯಲ್ಲಿ ಎಂಟಾಣೆಯಂತೆ ಕೂಡಿಡುತ್ತಾ ಬಂದ. ಏಳು ವರ್ಷಗಳ ಕೊನೆಗೆ ಆತನ ಕೈಗೆ ಬಂದ ಒಟ್ಟು ಹಣದಲ್ಲಿ ನಾಲ್ಕು ಮಗ್ಗಗಳನ್ನು ಕ್ರಯಕ್ಕೆ ಪಡೆದು ಸ್ವಂತ ಚಿಕ್ಕ ನೇಯ್ಗೆಯ ಕಾರ್ಖಾನೆಯೊಂದನ್ನು ತೊಡಗಿದ. ತಾನು ನಿಯಮಿತವಾಗಿ ಉಳಿತಾಯ ಮಾಡಿದುದರಿಂದಲೇ ಈ ಸ್ವತಂತ್ರ ಉದ್ಯೋಗ ತನಗೆ ಸಾಧ್ಯವೆನಿಸಿತು ಎಂಬುದು ಸೋಮಯ್ಯನ ಈಗಿನ ಹರ್ಷದ ಉದ್ಗಾರ.

ಸುಬ್ಬಾಚಾರಿ ಮರ ಸಿಗಿಯುವ ಕಾರ್ಖಾನೆಯಲ್ಲಿ ಬಡಗಿಯ ಕೆಲಸ ಕೈಗೊಂಡಿದ್ದ. ತಿಂಗಳ ಸಂಬಳ ಕೈಗೆ ಬಂದಂತೆ ಸಿಂಡಿಕೇಟ್ ಬ್ಯಾಂಕಿನ ಕ್ಯುಮುಲೇಟಿವ್ ಡೆಪಾಸಿಟ್ ಖಾತೆಯಲ್ಲಿ ಹಣವನ್ನು ಜಮೆ ಮಾಡುತ್ತಾ ಬಂದ. ವರ್ಷದ ಕೊನೆಯಲ್ಲಿ ದೊರೆತ ಹಣವನ್ನು ನಿಗದಿಯಾಗಿ ಉಳಿಸಿ ಮತ್ತೆ ಒಂದೆರಡು ವರ್ಷ ಕಾಲ ಕ್ಯುಮುಲೇಟಿವ್ ಖಾತೆಯಲ್ಲಿ ಹಣ ಶೇಖರಿಸಿಕೊಂಡು ಬಂದ. ಅವಧಿ ಸಂದಂತೆ ಆತನ ಮೊತ್ತ ಬೆಳೆದು, ಆ ಹಣದಿಂದ ಒಂದು ಮರದ ಕೆಲಸ ಮಾಡುವ ಡಿಪೋವನ್ನು ತೊಡಗಿದ. ತಾನು ಉಳಿಸಿದ ಹಣವೇ ತನ್ನ ಸ್ವತಂತ್ರ ಜೀವನ ವೃತ್ತಿಗೆ ಕಾರಣ ಎಂಬುದು ಇದೀಗ ಸುಬ್ಬಾಚಾರಿ ಹೇಳುವ ತೃಪ್ತಿಯ ಸೊಲ್ಲು.

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಹಿಂದೂತ್ವದ ಸಂರಕ್ಷಣೆ—೪

ಮದ್ರಾಸಿನಲ್ಲಿ ಸೇರಿದ ವಿದ್ವತ್ ಪರಿಷತ್ತು

ಹಿಂದೂವೆಂದೂ ಪತಿತನಾಗದಿರಲಿ — ಪತಿತರಾದವರೂ ಮತ್ತು ಪಾವನರಾಗಲಿ.

ವರದಿಗಾರರು : ಶ್ರೀ ಶಿವಶಂಕರ.

ಮಂಗಳವಾರ (ದಿ. ೨೮-೩-೬೭) ಸಾಯಂಕಾಲ ಧರ್ಮ ಪ್ರಕಾಶ ಸಭಾ ಭವನವು ಕಿಕ್ಕಿರಿದು ಹೋಗಿತ್ತು. ಅಂದು ವಿದ್ವತ್ ಪರಿಷತ್ತಿನ ಸಮಾರೋಪ ಸಮಾರಂಭವಾಗಿತ್ತು. ಪ್ರಾರ್ಥನೆಯಾದೊಡನೆ ವಿಶ್ವಹಿಂದೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಶಿ. ಶಂ. ಆಪ್ಟೆಯವರು ಮೂರು ದಿವಗಳಲ್ಲಿ ನಡೆದ ಕಾರ್ಯಕಲಾಪಗಳ ಸೂಕ್ಷ್ಮ ಪರಿಚಯ ಮಾಡಿಕೊಟ್ಟರು. ಸುಮಾರು ೧೨೦೦ ವರ್ಷಗಳ ಗುಲಾಮಿ ನೊಗದಿಂದ ನಾವಿಂದು ಕೊರಳನ್ನು ತಪ್ಪಿಸಿಕೊಂಡಿದ್ದೇವೆ. ಪ್ರಯಾಗ ಪವಿತ್ರ ಕ್ಷೇತ್ರದಲ್ಲಿ ನಡೆದ ವಿಶ್ವಹಿಂದೂ ಪರಿಷತ್ತಿನ ಸಮ್ಮೇಳನದ ನಂತರ ಹಿಂದೂ ಧರ್ಮದ ಎಲ್ಲಾ ಸಂಪ್ರದಾಯದ ಆಚಾರ್ಯರೂ, ಪಂಡಿತರೂ ಒಕ್ಕಟ್ಟಿಗಾಗಿ ಶ್ರಮಿಸುತ್ತಿದ್ದಾರೆ. ಕಳೆದ ಎರಡು ದಿನಗಳಿಂದ ನಡೆಯುತ್ತಿರುವ ವಿದ್ವತ್ ಪರಿಷತ್ತಿನಲ್ಲಿ ಏಳು ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯಲಾಗಿದೆಂದೂ ಅವರು ತಿಳಿಸಿದರು.

ಪರಿಷತ್ತಿನ ಸಭೆಯಲ್ಲಿ ಹಿಂದೂಗಳೆಲ್ಲರಿಗೂ ಅನ್ವಯಿಸುವ ಸಾಮಾನ್ಯ ಆಚಾರ ಪದ್ಧತಿಯಾವುದೆಂಬುದನ್ನು ಉಡುಪಿಯ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ್ವರ ತೀರ್ಥರವರು ಘೋಷಿಸಿದರು.

ಪರಿಷತ್ತಿನಲ್ಲಿ ಭಾಗವಹಿಸಿದ ಎಲ್ಲಾ ಮಠಾಚಾರ್ಯರೂ ಪಂಡಿತರೂ, ವಿದ್ವಾಂಸರೂ ಒಪ್ಪಿಕೊಂಡ ಮೂರು ತೀರ್ಮಾನಗಳು:—

೧) ಪರರಾಷ್ಟ್ರಗಳಲ್ಲಿರುವ ಹಿಂದೂಗಳ ಸಂಸ್ಕಾರ, ಆಚಾರ, ನಂಬಿಕೆಗಳನ್ನು ಕಾಪಾಡಲಿಕ್ಕಾಗಿ ಇಲ್ಲಿಂದ ತರಬೇತಿ ಹೊಂದಿರುವ ಧರ್ಮ ಪ್ರಚಾರಕರನ್ನು ಅಲ್ಲಿಗೆ ಕಳುಹಿಸಬೇಕು. ಅವಶ್ಯಕತೆ ಇರುವಲ್ಲಿ ದೇವಸ್ಥಾನಗಳನ್ನು ಧಾರ್ಮಿಕ ಶಿಕ್ಷಣವನ್ನು ಕೊಡಲು ಕೇಂದ್ರಗಳನ್ನೂ ಅಲ್ಲಿಯ ಹಿಂದೂಗಳ ಒಳಿತಿಗಾಗಿ ತೆರೆಯಬೇಕು.

೨) ಸಾಮಾನ್ಯ ಜನತೆಗೆ ಹಿಂದೂ ಧರ್ಮದ ಮೇಲಿರುವ ನಂಬಿಕೆಯನ್ನು ಉಳಿಸಲು ಹಾಗೂ ಕಾಪಾಡಿವರ್ಧಿಸಲು ಸಾಮೂಹಿಕ ಪ್ರಾರ್ಥನೆ, ಉತ್ಸವ, ನಾಮಜಪ ಹಾಗೂ ಸಂಕೀರ್ತನೆಗಳಿಗೆ ಏರ್ಪಾಡು ಮಾಡಬೇಕು. ಇದು ಬಹಳ ಸುಲಭವಿದೆ, ಅಭ್ಯಾಸಕ್ಕೂ ಸುಲಭವಿದೆ ಅಲ್ಲದೆ ಎಲ್ಲರಿಗೂ ಸಾಮಾನ್ಯವಾಗಿಯೂ ಇದೆ.

೩) ಅನ್ಯ ಮತಗಳ ವ್ಯಾಮೋಹದ ಜಾಲದಲ್ಲಿ ಸಿಲುಕಿಕೊಂಡಿರುವವರು ಹಿಂದಕ್ಕೆ ತಾಯಿಮಡಿಲಿಗೆ ಬರಲಿಚ್ಛಿಸಿದ್ದಲ್ಲಿ ಅವರಿಗೆ ಪ್ರಾಯಶ್ಚಿತ್ತ ಹಾಗೂ ಅಂತಹ ಶುದ್ಧಿ ಸಂಸ್ಕಾರಗಳನ್ನು ನಡೆಸಿ ಹಿಂದಕ್ಕೆ ಬರಮಾಡಿಸಿ ಕೊಳ್ಳಬೇಕು, ಇತರ ಮತಗಳಿಗೆ ಮತಾಂತರ ಹೊಂದುವದನ್ನು ತಡೆಯಲು ಎಲ್ಲಾ ವಿಧದ ಪ್ರಯತ್ನಗಳನ್ನೂ ನಡೆಸಬೇಕು. ಇನ್ನು ಮುಂದಕ್ಕೆ 'ಯಾವೊಬ್ಬ ಹಿಂದೂ ಪತಿತನಾಗದಿರಲೆಂ'ಬುದು ನಮ್ಮ ಧ್ಯೇಯಘೋಷಣೆ ಇರಲಿ.

ಏಳು ಪ್ರಶ್ನೆಗಳಿಗೆ ಉತ್ತರಗಳು:

ಪ್ರ. ೧) ನಮ್ಮ ದೇಶದಲ್ಲೂ ಪರದೇಶಗಳಲ್ಲೂ ಆಚಾರ-ಸಂಸ್ಕಾರಗಳಿಲ್ಲದೆ ಹೋಗುತ್ತಿರುವ ಹಿಂದೂಗಳಿಗೆ ಯಾವ ದಾರಿ ಹಾಗೂ ಉಪಾಯವನ್ನು ಸೂಚಿಸುವಿರಿ?

ಉತ್ತರ. ಅ) ಸಾಮೂಹಿಕ ಪ್ರಾರ್ಥನೆ ಆ) ಮತೀಯ ವಿಚಾರಗಳನ್ನು ತಿಳಿಸಲು ಧಾರ್ಮಿಕ ಬೋಧಕರನ್ನು ಹೊರದೇಶಗಳಿಗೆ ಕಳಿಸುವದು (ಇ) ಧಾರ್ಮಿಕ ಗ್ರಂಥಗಳ ಸಾರಾಂಶವಿರುವ ಕಿರುಹೊತ್ತಿಗೆಗಳನ್ನು ಪ್ರಕಟಿಸಿ ಹಂಚುವದು. (ಈ) ಧಾರ್ಮಿಕ ಶಿಕ್ಷಣವನ್ನ ಕೊಡಲು ಶಾಲೆಗಳನ್ನೂ ಕೇಂದ್ರಗಳನ್ನೂ ತೆರೆಯುವದು. ಅತ್ಯುನ್ನತ ಮಟ್ಟದಲ್ಲಿ ಧಾರ್ಮಿಕ ಜ್ಞಾನವನ್ನು ಪಡೆಯಲಿಚ್ಛಿಸುವವರಿಗೂ ಏರ್ಪಾಡು ಮಾಡಿಕೊಡಬೇಕು. (ಉ) ಅವರವರ ಮತೀಯ ಚಿಹ್ನೆಗಳನ್ನು ಧರಿಸುವದು, ಸಂಸ್ಕಾರವನ್ನ ಹೊಂದುವದು.

ಪ್ರ. ೨) ಅಂತಹ ಹಿಂದೂಗಳಿಗೆ ಸಾಧಾರಣ, ಅತ್ಯಗತ್ಯ, ಸಾಧ್ಯವಾಗುವಂತಹ ಹಾಗೂ ಸಂಕ್ಷಿಪ್ತ ರೀತಿಯ ಆಚಾರಗಳನ್ನು ಸೂಚಿಸುವಿರಾ? ಯಾವ ಸಂಸ್ಕಾರಗಳನ್ನು ಕೊಡುವಿರಿ ಮತ್ತು ಯಾವ ಪದ್ಧತಿಯಲ್ಲಿ?

ಉತ್ತರ: (ಅ) ಪ್ರತಿಯೊಂದು ಕುಟುಂಬದಲ್ಲೂ ಅವರವರ ಇಷ್ಟ ದೇವತೆ ಅಥವಾ ಕುಲದೇವತೆಗೆ ಸಾಮೂಹಿಕವಾಗಿ ಪ್ರಾರ್ಥನೆ ಮಾಡಬೇಕು. (ಆ) ಸ್ನಾನ, ಸೂರ್ಯ ನಮಸ್ಕಾರ, ಜಪ ಹಾಗೂ ಧ್ಯಾನ - ಇವು ಅವರವರ ಸಂಪ್ರದಾಯದಲ್ಲಿರುವಂತೆ ನಡೆಯಬೇಕು. ಇ) ತಾಯಿಗೆ, ತಂದೆಗೆ, ಗುರುವಿಗೆ ಹಾಗೂ ಗೋಮಾತೆಗೆ ಮರ್ಯಾದೆ ಕೊಡುವದು. ಈ) ಸಂಸ್ಕಾರಗಳಲ್ಲಿ ಅಗತ್ಯವಾದವು.— ನಾಮಕರಣ, ಮದುವೆ ಹಾಗೂ ಶವಸಂಸ್ಕಾರ. ಉ) ತಾವು ಉಣ್ಣುವ ಮುಂಚೆ ಆಹಾರವನ್ನು ಕುಲದೇವತೆಗೆ ಅರ್ಪಿಸಿ, ಅದನ್ನು ಪ್ರಸಾದವೆಂದು ಸ್ವೀಕರಿಸುವದು.

ಪ್ರ. ೩) ಆಪತ್ಕಾಲ ಅಥವಾ ಪ್ರತಿಕೂಲ ಕಾಲವೆಂದರೇನು? ಇದನ್ನು ನಿಶ್ಚಯಿಸುವದೆಂತು? ಅಂತಹ ಆಪತ್ಕಾಲದಲ್ಲಿ ಅದೆಷ್ಟರ ಮಟ್ಟಿಗೆ ಹಾಗೂ ಯಾವ ರೂಪದಲ್ಲಿ ಧರ್ಮದಂತೆ ನಡೆದುಕೊಳ್ಳಬಹುದು?

ಉತ್ತರ: ಅ) ಆಪತ್ಕಾಲವೆಂದರೆ ಧಾರ್ಮಿಕ ವಿಧಿಗಳನ್ನು ನಡೆಸಲು ಅಸಾಧ್ಯವಾಗಿರುವಂತಹ ಸಮಯ ಹಾಗೂ ಸ್ಥಿತಿ. ಆ) ಆಗ ಆರಿಸಲ್ಪಟ್ಟ ಮಂತ್ರದ ಜಪಮಾಡಬಹುದು. ಇ) ಅವರವರ ಯೋಗ್ಯತೆ ಸಾಮರ್ಥ್ಯಗಳಿಗನುಸಾರವಾಗಿ ಸ್ವಧರ್ಮದಂತೆ ನಡೆದುಕೊಳ್ಳಬಹುದು.

ಪ್ರ. ೪) ಅನ್ಯಾನ್ಯ ಸಂಪ್ರದಾಯಗಳಲ್ಲಿರುವ ಹಿಂದೂಗಳಲ್ಲಿ ವಿವಿಧ ರೀತಿಯ ದೈನಂದಿನ ಆರಾಧನಾ ಪದ್ಧತಿ ಇದೆ? ಅವರಿಗೆ ಪೂಜೆ, ಜಪ, ಧ್ಯಾನ, ಸ್ವಾಧ್ಯಾಯಗಳನ್ನು ವಿಷಯದಲ್ಲಿ ಯಾವ ಕನಿಷ್ಠ ಪರಿಮಿತಿ ಸೂಚಿಸುವಿರಿ?

ಉ. ಈ ಪ್ರಶ್ನೆಗೆ ಆಯಾಯಾ ಸಂಪ್ರದಾಯದ ಧರ್ಮಗುರುಗಳೂ ಅಧಿಕಾರಿಗಳೂ ಪರಿಷತ್ತಿಗೆ ಸೂಚಿಸಲಿರುವರು.

ಪ್ರ. ೫: ಪರರಾಷ್ಟ್ರಗಳಲ್ಲಿ ಧಾರ್ಮಿಕ ಆಚರಣೆಗಳನ್ನು ಭಾರತದಲ್ಲಿ ನಡೆಸಿದಂತೆ ನಡೆಸಬಹುದೋ? ನದಿ, ಸರೋವರ, ಸಂಗಮ ದೇವಸ್ಥಾನದಲ್ಲಿ ಜನತೆಯ ಉಪಯೋಗಕ್ಕಾಗಿ ಏನುಮಾಡಬೇಕು?—ಅವುಗಳ ಪಾವಿತ್ರ್ಯವನ್ನು ಉಳಿಸಿಕೊಳ್ಳುವದು ಹೇಗೆ?

ಉತ್ತರ:—ಅ) ತ್ರಿವೇಣಿಯ ಜಲ ಸಿಂಚನದಿಂದ ಹಾಗೂ ತ್ರಿವೇಣಿಯ ಪವಿತ್ರ ಜಲವಿರುವ ಪೂರ್ಣಕುಂಭವನ್ನು ಅಲ್ಲಿ ಇಡುವದರಿಂದ.

ಆ) ಭಾರತದಿಂದ ಕೊಂಡೊಯ್ದ ಅಶ್ವತ್ಥ, ಬಿಲ್ವ ಹಾಗೂ ಅಂತಹ ಪವಿತ್ರ ಮಂಗಳ ಸಸಿಗಳನ್ನು ನೆಡುವದರಿಂದ.

ಇ) ಅವುಗಳಿಗೆ ಭಾರತೀಯ ನಾಮಕರಣದಿಂದ.

ಪ್ರ. ೬) ಬಲಾತ್ಕಾರ, ಭಯ, ಆಶೆ ಆಮಿಷ, ಮೋಸ, ಅಜ್ಞಾನ ಅಲ್ಲದೆ ಭ್ರಮೆಯಿಂದಾಗಿ ಹಿಂದೂ ಧರ್ಮದಿಂದ ಪತಿತರಾದವರನ್ನು ಪುನಃ ಹಿಂದೂ ಸಮಾಜಕ್ಕೆ ಸೇರಿಸಿಕೊಳ್ಳಲಿರುವ ಸುಲಭ ರೀತಿಯ ಕಾರ್ಯಕ್ರಮ ಯಾವದು?

ಉತ್ತರ:—ಅ) ಪವಿತ್ರ ತೀರ್ಥದಲ್ಲಿ ಸ್ನಾನ, ಹೊಸ ಬಟ್ಟೆಯ ಧಾರಣೆ, ಹವನ ಮತ್ತು ಯಜ್ಞ ಇತ್ಯಾದಿ.

ಆ] ಪವಿತ್ರ ಚರಣ ತೀರ್ಥದ ಸೇವನೆ

ಇ] ಪ್ರತಿದಿನವೂ ಮಂತ್ರೋಚ್ಚಾರಣೆ

ಈ] ಹಿಂದೂ ಹೆಸರನ್ನಿಟ್ಟು ಕೊಳ್ಳುವದು.

ಉ] ತಾನೂ ಹಿಂದೂ ಧರ್ಮಕ್ಕೆ ಹಿಂತಿರುಗಿರುವೆನೆಂದು ಅಧಿಕಾರ ಪತ್ರವನ್ನು ಬರೆದು ಅದಕ್ಕೆ ಪರಿಷತ್ತಿನ ಪ್ರಮಾಣ ಪತ್ರಿಕೆಯನ್ನು ಪಡೆಯುವದು.

ಪ್ರಶ್ನೆ. ೭: ಜೈನ, ಬೌದ್ಧ, ವೀರಶೈವ, ಸಿಖ್ಖ ಹಾಗೂ ಇನ್ನಿತರ ಸಂಪ್ರದಾಯದ ಎಲ್ಲಾ ಹಿಂದೂಗಳೂ ಆಚರಿಸಬಹುದಾದಂತಹ ಯೋಗ್ಯ ವ್ರತ ಹಾಗೂ ಉತ್ಸವಗಳು ಯಾವುವು? ಅವುಗಳಲ್ಲಿ ಯಾವುದನ್ನು ಆಚರಿಸಲೇ ಬೇಕು?

ಉತ್ತರ: ಅ) ವಿಜಯ ದಶಮಿ ಆ) ದೀಪಾವಳಿ ಇ) ಮಕರ ಸಂಕ್ರಾಂತಿ, ಈ) ವೈಶಾಖಿ (ಯುಗಾದಿ) ಉ) ಗುರುಪೂಜಾ (ಗುರು ಪೂರ್ಣಿಮ) ಊ) ರಕ್ಷಾಬಂಧನ.

ಇವುಗಳಲ್ಲಿ ಮಕರ ಸಂಕ್ರಾಂತಿ ಉತ್ಸವನ್ನು ವಿಶ್ವದಲ್ಲೆಲ್ಲೂ ಇರುವ ಹಿಂದೂಗಳು "ವಿಶ್ವ ಹಿಂದೂ ಕಲ್ಯಾಣ ದಿನ"ವೆಂದು ಆಚರಿಸಬೇಕು. ಎಲ್ಲಾ ಪಂಚಾಂಗಗಳೂ ಆ ರೀತಿ ಸೂಚಿಸಬೇಕು.

ಇದಾದ ಮೇಲೆ ಡಾ|| ವಿ. ರಾಘವನ್‌ರವರು, ಹಿಂದೂ ಸಮಾಜವನ್ನು ಕಾಯುವ, ಬೆಳೆಸುವ ಕಾರ್ಯವು ಹಿಂದೂ ಪರಿಷತ್ತಿಗೆ ಆರಂಭದಲ್ಲೇ ಬಂದಿದೆಯೆಂದು ಹೇಳಿ, ಸ್ವಾತಂತ್ರ್ಯ ಸಿಕ್ಕಿದ ನಂತರ ನಮ್ಮ ಸ್ಥಿತಿ ಹದಗೆಡುತ್ತಿದೆ. ಅಧಿಕ ಅನ್ಯರುಗಳು ಈಗ ನಮ್ಮ ದೇಶದಲ್ಲಿದ್ದಾರೆ-ತರುಣರಲ್ಲಿ ಧಾರ್ಮಿಕ ಭಾವನೆ ಕಮ್ಮಿಯಾಗುತ್ತಿದೆ. ಇದು ಕಾರ್ಮಿಕ ರಂಗಕ್ಕೂ ಅನ್ವಯಿಸುತ್ತಿದೆ. ಈಗ ಧಾರ್ಮಿಕ ಭಾವನೆಯನ್ನು ಉಳಿಸುವ ಕಾಲ ಇದು. ಪರಿಷತ್ತು ಈ ಮಹಾನ್ ಕಾರ್ಯವನ್ನು ಆರಂಭಿಸಿರುತ್ತದೆ. ಅದರಲ್ಲಿ ಹೆಜ್ಜೆ ಹೆಜ್ಜೆಗೆ ಜಯವನ್ನು ಪಡೆಯುತ್ತಿದೆ. ತಮಿಳು ನಾಡಿನಲ್ಲೂ ಇಂತಹ ಧಾರ್ಮಿಕ ರಂಗಗಳನ್ನು ಏಕದಾರದಲ್ಲಿ ಪೋಣಿಸುವ ಪ್ರಯತ್ನ ನಡೆಯುತ್ತಿದೆ. ಜನರ ನಡುವೆ ಧಾರ್ಮಿಕ ವಿಷಯಗಳನ್ನು ಪ್ರಚಾರಮಾಡಲು ಆರಂಭಿಸಿದ್ದಾರೆ. ಶತ್ರು ಬಂದಾಗ ನಾವು ನೂರೈದು ಜನರೆಂದು ಯುಧಿಷ್ಠಿರನು ಹೇಳಿರುವಂತೆ ಆಪಾಯ ಕಾಲದಲ್ಲಿ ಒಂದಾಗಿ ಆಲದಮರದಂತೆ ಹಲವಾರು ಮತಗಳಿಗೆ ಸೇರಿದವರಾದರೂ, ಒಂದೇ ಧರ್ಮಕ್ಕೆ ಸೇರಿದವರೆಂಬ ನೈಜ ಭಾವನೆಯಿಂದ ಸೇರಬೇಕೆಂದೂ ಹಿಂದಿನ ಕಾಲದಲ್ಲಿ ಧರ್ಮ ಪ್ರಚಾರಕ್ಕಾಗಿ ಪ್ರಪಂಚ ಪರ್ಯಟನ ಮಾಡುತ್ತಿದ್ದರೆಂಬುದನ್ನು ಜ್ಞಾಪಕಪಡಿಸಿದರು.

ಪ್ರಪಂಚದ ಇತಿಹಾಸವನ್ನೋದಿದಲ್ಲಿ ರೋಮನ್ ಸಾಮ್ರಾಜ್ಯ ಅಥವಾ ಬ್ರಿಟಿಷ್ ಸಾಮ್ರಾಜ್ಯದಂತಹ ದೊಡ್ಡ ಸಾಮ್ರಾಜ್ಯಗಳು ಮಣ್ಣುಪಾಲಾಗಿರುವದನ್ನು ಕಾಣಬಹುದು. ಇಂದು ಮಾನವತ್ವವು ನಾಶವಾಗಿ ಅಖಿಲ ಸಹೋದರತ್ವವೋ ಎಂಬ ಸ್ಥಿತಿ ಇದೆ. ಇಂದು ವಿಶ್ವಹಿಂದೂ ಪರಿಷತ್ತು ಬಂದಿದ್ದು ಅದರಿಂದ ಆಧ್ಯಾತ್ಮಿಕ ಭಾವನೆಯುಳ್ಳ ಜನರ ರಚನೆಯಾಗಬಹುದು. ಮಾನವತ್ವದ ರಕ್ಷಣೆಗಾಗಿ ಇಂದು ಸನ್ಯಾಸಿಗಳು ಎದ್ದು ನಿಂತಿದ್ದಾರೆ. ಅವರ ಪ್ರಯತ್ನ ಜಯ ಕಂಡಲ್ಲಿ ಮಾತ್ರ ದೇಶ ಜೀವಂತವಾಗಿ ಬಾಳಬಹುದು. ನೀವೆಲ್ಲರೂ ನಿಮ್ಮ ಪಾಲಿನ ಕಾರ್ಯವನ್ನು ನಡೆಸಲು ಮುಂದಕ್ಕೆ ಬನ್ನಿರೆಂದು ಆಹ್ವಾನಿಸುತ್ತಿದ್ದೇನೆಂದು, ಆವಾಗಲೇ ಶ್ರೋತೃವರ್ಗ ಪರಿಚಿತರಾಗಿದ್ದ ಧಾರವಾಡದ ಅದ್ವೈತ ಸಿದ್ಧಾಂತ ಸಂಪ್ರದಾಯದ ಶ್ರೀ ಶ್ರೀ ಕುಮಾರ ಸ್ವಾಮಿಜೀ ಹೇಳಿದರು.

ಹಲವಾರು ತೀರ್ಮಾನಗಳು ಇಲ್ಲಿವೆ. ತೀರ್ಮಾನಗಳನ್ನು ಮುಂದಿಡುವದು ಸುಲಭ. ಅದನ್ನು ಕಾರ್ಯರೂಪಕ್ಕೆ ತರುವದು ಕಷ್ಟ. ಆದುದರಿಂದ ಈ ಪರಿಷತ್ತು ತೀರ್ಮಾನಗಳನ್ನು ರಚಿಸುವದರಲ್ಲಿ ಮಾತ್ರ ತೃಪ್ತಿಯಾಗಬಾರದು. ನಮ್ಮ ಧರ್ಮವಾದರೋ ಈ ದೇಶದಾದ್ಯಂತ ಮಾತ್ರವಲ್ಲ ದಶ ದಿಕ್ಕುಗಳಲ್ಲೂ ಹಬ್ಬಿದ್ದ ಧರ್ಮ. ಇಂದು ನಮ್ಮ ಸಮಾಜಕ್ಕೆ ಒಂದು ವ್ಯಾಧಿ ಬಂದಿರುತ್ತದೆ. ಈ ದೇಶದಲ್ಲಿ ಧರ್ಮದ ಗ್ಲಾನಿಯಾದಾಗಲೆಲ್ಲಾ ಭಗವಂತನು ಅವತಾರ ಪಡೆದಿರುವನು ಅಲ್ಲದೆ ಮಹಾತ್ಮರನ್ನು ಕಳುಹಿಸಿರುವನು. ಯಾರು ಯಾವ ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಕಟ್ಟಳೆ ಇಟ್ಟಿದ್ದಾನೆ. ಇವತ್ತು ಉತ್ತರದಿಂದ ಧರ್ಮ ಸನ್ಯಾಸಿಗಳು ದಕ್ಷಿಣದ ಮದ್ರಾಸಿಗೆ ಬಂದು ಧರ್ಮ

ಪ್ರಚಾರ ನಡೆಸಿರುವದರಿಂದ ಕೆಲವರಲ್ಲಿದ್ದ ಉತ್ತರ ದಕ್ಷಿಣದ ಭಿನ್ನತೆಯನ್ನು ದೂರಗೊಳಿಸುತ್ತದೆ. ಭಾರತದ ತಲೆಯಂತೆ ಉತ್ತರವಿದೆ, ದಕ್ಷಿಣವು ಕಾಲಿನಂತಿದೆ. ಕಾರ್ಯ ನಡೆಯಬೇಕೆಂದರೆ ಎರಡೂ ಕಾರ್ಯರಂಗದಲ್ಲಿ ಒಂದಾಗಿಳಿಯಬೇಕು. ಹಾಗೆಯೇ ವಿಶ್ವಹಿಂದೂ ಪರಿಷತ್ತು ನಗರಕ್ಕೆ (ಮದ್ರಾಸು) ಬಂದಿರುತ್ತದೆ. ಶೈವ—ವೈಷ್ಣವ ಒಕ್ಕಟ್ಟು, ಉತ್ತರ—ದಕ್ಷಿಣ ಒಕ್ಕಟ್ಟು ಆರಂಬದ ಅತ್ಯಗತ್ಯ. ಆಳ್ವಾರುಗಳು ವಿಷ್ಣುವಿನ ದರ್ಶನವನ್ನು ಪಡೆದವರು. ಅವರು ಬಲಭಾಗದಲ್ಲಿ ವಿಷ್ಣುವನ್ನು, ಎಡಭಾಗದಲ್ಲಿ ಶಿವನನ್ನೂ ಕಂಡಿರುವರು. ಆದುದರಿಂದ ಭಿನ್ನತೆಯನ್ನು ಬದಿಗಿಟ್ಟು, ವಿಶ್ವ ಹಿಂದೂ ಪರಿಷತ್ತಿನ ಆಶ್ರಯದಲ್ಲಿ ಹಿಂದೂಗಳೆಲ್ಲರೂ ಒಂದಾದಲ್ಲಿ ನಮ್ಮ ದೇಶ ಬಲಶಾಲಿಯಾಗುತ್ತದೆ. ಮತ್ತೂ ವಿಶ್ವ ಸಮಾಧಾನಕ್ಕೆ ತಳಹದಿಯೂ ಆಗುತ್ತದೆ. 'ಓಂ—ಶಾಂತಿಃ— ಶಾಂತಿಃ— ಶಾಂತಿಃ' ಸಾರುವ ಧರ್ಮ ಇದೊಂದೇ. ನಮ್ಮ ಧರ್ಮ ಅಳಿಯುವಂತಹದಲ್ಲ. ಅದಕ್ಕಾಗಿ ನೀವು ಪ್ರಾರ್ಥನೆ ಮಾಡಬೇಕು. ನಾವೂ ನಮ್ಮ ಪೂಜೆಯ ಸಮಯ ವಿಶ್ವ ಹಿಂದೂ ಪರಿಷತ್ತಿನ ವಿಜಯಕ್ಕಾಗಿ ಪ್ರಾರ್ಥಿಸುವೆವೆಂದು ಮಧುರೈ ಅಧೀನಂ ಜ್ಞಾನ ಸಂಬಂಧ ಸ್ವಾಮಿಗಳು ಆದೇಶವಿತ್ತರು.

ಇದು ವರೆಗೆ ಮೂರು ದಿನಗಳಲ್ಲಿ ಪರಿಷತ್ತು ಸಮಾಜದ ರಚನೆಯ ಪ್ರಶ್ನೆಗಳನ್ನು ಯೋಚಿಸಿ ತೀರ್ಮಾನಕ್ಕೆ ಬಂದಿರುತ್ತದೆ. ಇದನ್ನು ಬಳಕೆಗೆ ತರಬೇಕು. ಹಿಂದೂ ಸಮಾಜವು ಒಂದೇ ಇದೆ. ಅದನ್ನು ಒಡೆಯಲು ಯಾರಿಗೂ ಸಾಧ್ಯ ಇರುವದಿಲ್ಲ. ಹಲವಾರು ನದಿಗಳು ಹರಿದು ಕೊನೆಯಲ್ಲಿ ಕಡಲಿನಲ್ಲಿ ಕೂಡುವಂತೆ ಸಹಸ್ರ ಸಂಪ್ರದಾಯಗಳು ಹಿಂದೂ ಧರ್ಮದಲ್ಲಿ ಒಂದಾಗಿರುತ್ತದೆ. ಇಷ್ಟು ವಿವಿಧತೆಯಲ್ಲಿ ಏಕತೆಯನ್ನು ಕಾಣಬಹುದು. ತ್ರಿವೇಣಿ ಸಂಗಮದಲ್ಲಿ ಎಂಬತ್ತು ಲಕ್ಷ ಹಿಂದೂಗಳು ಒಂದಾಗುತ್ತಾರೆ. ಅವರಿಗೆ ಆಮಂತ್ರಣ ಪತ್ರಿಕೆಯನ್ನು ಕಳುಹಿಸುವವರಾರೂ ಇಲ್ಲ. ಅವರೂ ನಿರೀಕ್ಷಿಸುವದಿಲ್ಲ. ಹಾಗಿದ್ದರೂ ತಾವಾಗಿಯೇ ಅವರೆಲ್ಲರೂ ತ್ರಿವೇಣಿಯಲ್ಲಿ ಒಂದಾಗುತ್ತಾರೆ. ಇದು ಅನ್ಯದೇಶದವರಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿರುತ್ತದೆ. ಈ ಏಕತೆಯ ವಿಧಾನವನ್ನು ಬಲಪಡಿಸುವದು ಇಂದು ಅಗತ್ಯ. ಈ ವಿದ್ವತ್ ಪರಿಷತ್ತಿನ ತೀರ್ಮಾನಗಳು ಬಹಳ ಒಳ್ಳೆಯವೇ ಇವೆ. ಅದನ್ನು ಬಳಕೆಗೆ ತರಲೇ ಬೇಕಾಗಿವೆ. ಆದುದರಿಂದ ನೀವೆಲ್ಲರೂ ಇದಕ್ಕೆ ಒಪ್ಪುವಿರೆಂದು ನಾನೆಣಿಸುತ್ತೇನೆ. ಇದೀಗ ಉಪದೇಶವಿತ್ತಿರುವ ಮಧುರೈ ಅಧೀನಂ ತಿರುಜ್ಞಾನ ಸಂಬಂಧ ಸ್ವಾಮೀಜೀಯವರು ಲಕ್ಷ್ಮಣನನ್ನು ಪಾದವೆಂದಿರುವರು. ಪಾದವಿದ್ದಲ್ಲಿ ತಾನೇ ನಡೆಯಲು ಸಾಧ್ಯ? ಹಾಗಿರುವಾಗ ವಿದ್ವತ್ ಪರಿಷತ್ ಇಲ್ಲಿ ಕೂಡಿರುವ ಕಾರಣವಾದರೂ ಈ ತೀರ್ಮಾನಗಳು ಸಂಚರಿಸಲ್ಪಡಬೇಕೆಂಬುದೇ ಇದೆ, ಮತ್ತು ಪರಿಷತ್ತಿನ ಕಾರ್ಯ ಪದ್ಧತಿ ಇಲ್ಲಿಗೆ ವಿರಾಮ ಹೊಂದುವದಿಲ್ಲ. ಅದನ್ನು ಕಾರ್ಯರೂಪಕ್ಕೆ ತರಬೇಕು. ಅಸ್ಸಾಮಿನಲ್ಲಿ ವನವಾಸಿಗಳು ಮುಸ್ಲಿಮರಾಗಿಯೂ ಕ್ರಿಸ್ತರಾಗಿಯೂ ಮತಾಂತರ ಹೊಂದುತ್ತಿದ್ದಾರೆ. ಇದನ್ನು ಗಮನಿಸಿಯೂ ಸುಮ್ಮಗಿದ್ದಲ್ಲಿ ನಮ್ಮ ನಾಶ ನಿಶ್ಚಿತ. ವನವಾಸಿಗಳು ನಿಜವಾಗಿಯೂ ಹಿಂದುಗಳೇ ಇರುವರಾದರೂ ಸರಕಾರವು ಹಿಂದಿನ ಬ್ರಿಟಿಷ್ ಆಕ್ರಮಣಗಾರರ ಒಡೆದು ಆಳುವ ನೀತಿಯನ್ನೇ ಅನುಸರಿಸಿ ಹಿಂದೂ ಧರ್ಮವನ್ನು ನಿರ್ಬಲಗೊಳಿಸುತ್ತಿದೆ. ಝಾರ್ಖಂಡದ ಕುರಿತೂ ಶ್ರೀ ಗುರೂಜೀ ಗೊಳ್‌ವಲ್ಕರ್‌ರವರು ಹೇಳಿರುವರು. ಅಲ್ಲೂ ಇದೇ ಪಾಡು. ಇಲ್ಲಿಯ ತೀರ್ಮಾನಗಳು ಪೂರಿಯ ಜಗನ್ನಾಥ ತೇರಿನಂತಿವೆ. ಅದನ್ನು ಚಲಿಸುವಂತೆ ಮಾಡುವದು ಒಂದುಗೂಡಿದ ಜನರ ಒಮ್ಮನಸ್ಸು ಇವೆ. ಇದು ಒಂದು ಹಿಡಿ ಸನ್ಯಾಸಿಗಳದ್ದು ಮಾತ್ರ ಕೆಲಸ ಅಲ್ಲ. ಸ್ವಧರ್ಮಕ್ಕಾಗಿ ಪ್ರಾಣವನ್ನು ಅರ್ಪಿಸಬೇಕೆಂದೂ ಗೀತಾಚಾರ್ಯರು ಹೇಳಿರುವರು. ಆದುದರಿಂದ ಸ್ವಧರ್ಮವನ್ನು ಎಲ್ಲರೂ ಅನುಸರಿಸಬೇಕು. ಕೇರಳ, ನೀಲಗಿರಿ ಮುಂತಾದ ಸ್ಥಳಗಳಲ್ಲೂ ಭಯಂಕರ ರೂಪದಲ್ಲಿ ಮತಾಂತರದ ಝೂಡ್ಯ ಹಬ್ಬುತ್ತಿದೆ. ಈಗ ಹಿಂದೂಗಳೆಲ್ಲರೂ ಒಂದಾಗುವ ಕಾಲ, ಎಚ್ಚತ್ತೇಳುವ ಕಾಲ, ಎಚ್ಚತ್ತಿದ್ದು ಕಾರ್ಯ ಪ್ರವೃತ್ತರಾಗುವ ಕಾಲ ಇದು. ಈ ಒಂದುಗೂಡಿದ ಐವತ್ತು ಕೋಟಿ ಹಿಂದುಗಳ ಶಕ್ತಿಯನ್ನು ತಡೆಯಲು ಅದ್ಯಾರಿಗೂ ಸಾಧ್ಯವಿಲ್ಲ. ಸರಕಾರವಾದರೋ ಬಹು ಸಂಖ್ಯಾತರ ಉತ್ಸಾಹವನ್ನು ಹಿಚುಕಿ, ಅಲಕ್ಷ್ಯ ಭಾವದಿಂದ ಒಂದು ಕ್ಷಣವೂ ಅಧಿಕಾರದಲ್ಲುಳಿಯಲು ಸಾಧ್ಯವಿಲ್ಲ. ಆದುದರಿಂದ ಇದನ್ನೂ ಸರಕಾರವು ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕೆ ಬದಲಾಗಿ ನವಂಬರ ಏಳರಂದು ನಡೆದುಕೊಂಡಂತೆ ನಡೆದುಕೊಳ್ಳಬಾರದು. ಅಂದು ಲಕ್ಷೋಪಲಕ್ಷ ಜನರೂ ಮಠಾಚಾರ್ಯರುಗಳೂ ಸರಕಾರದ ಮುಚ್ಚಿರುವ ಬಾಗಿಲನ್ನು ತಟ್ಟಲು ದಿಲ್ಲಿಗೆ ಹೋಗಿದ್ದಾಗ ಅವರಿಗೆ ತುಪಾಕಿಯನ್ನು ತೋರಿಸಲಾಯಿತು. ಅವರಿಗೆ ಗುಂಡುಗಳ ಮೂಲಕ ಆಮಂತ್ರಣ ಕೊಡಲಾಯಿತು. ಇದೇ ಸರಕಾರ ಪೋಪ್ ಬಂದಾಗ ಲಕ್ಷ—ಲಕ್ಷ ರೂಪಾಯಿ ಖರ್ಚು ಮಾಡಿರುತ್ತದೆ. ರಾಷ್ಟ್ರಾಧ್ಯಕ್ಷರೂ ಪ್ರಧಾನಿಗಳೂ ಅವರ ಚರಣ ಸ್ಪರ್ಶಕ್ಕಾಗಿ ಮುಂಬಯಿಗೆ ಓಡಿ ಬಂದರು. ಸತ್ಕರಿಸಿದರು. ಇದು ನಮ್ಮನ್ನು ಕನಸಿನ ಲೋಕದಿಂದ ಹೊರಗೆ ತರಿಸುವಂತಹ ಘಟನೆ ಇದೆ. ಒಂದಾಗಿ ಕೂಡಿ ಕಾರ್ಯಮಗ್ನರಾಗುವ ಕಾಲ ಇದು. ಇದುವೇ ನನ್ನ ಆಶೀರ್ವಾದವಿದೆ. ಈಗ ನೀವು ನಿದ್ದೆಯಿಂದೇಳದಿದ್ದರೆ ಇನ್ನೆಂದೂ ಎಚ್ಚರಗೊಳ್ಳಲಾರಿರಿ. ನಿಮ್ಮ ಈ ಸತ್ಕಾರ್ಯಕ್ಕೆ ಚಂದ್ರಮೌಳೀಶ್ವರರು ನಿಮಗೆ ಸದ್ಬುದ್ಧಿಯನ್ನೂ, ವಿಚಾರಶಕ್ತಿಯನ್ನೂ ವಿಜಯವನ್ನು ದಯಪಾಲಿಸಲೆಂದು ಪ್ರಾರ್ಥಿಸಿ ನಿಮಗೆ ಆಶೀರ್ವಾದವೀಯುತ್ತಿದ್ದೇನೆಂದು ದ್ವಾರಕಾ ಪೀಠದ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯ ಸ್ವಾಮೀಜೀ ಎಲ್ಲರನ್ನೂ ಆಶೀರ್ವದಿಸಿದರು.

ಈ ದೇಶದಲ್ಲಿ ಹಲವಾರು ಭಾಷೆಗಳಿವೆ. ಹಾಗಿರುವ ಒಕ್ಕಟ್ಟನ್ನು ಕಾಣಲು ಹೇಗೆ ಸಾಧ್ಯ? ದೇಹದಲ್ಲಿ ಹಲವಾರು ಅಂಗಗಳಿವೆಯಾದರೂ ಆತ್ಮವು ಅದೆಲ್ಲವನ್ನು ಒಂದಾಗಿಸಿರುತ್ತದೆ. ಹಾಗೆಯೇ ಹಲವಾರು ಭಾಷೆಗಳಿದ್ದರೂ ಧರ್ಮವು ನಮ್ಮನ್ನು ಒಂದಾಗಿಸಿರುತ್ತದೆ. ಧರ್ಮವನ್ನು ನಾವು ಅಲಕ್ಷ್ಯದಿಂದ ಕಂಡಲ್ಲಿ ನಮ್ಮಲ್ಲಿ ಬಿಕ್ಕಟ್ಟು ಬೆಳೆಯುತ್ತದೆ. ಧರ್ಮವು ರಕ್ಷಿಸಲ್ಪಡದಿದ್ದಲ್ಲಿ ದೇಶವು ವಿಭಜಿಸಲ್ಪಟ್ಟು ನಾಶವಾದೀತು. ಆದುದರಿಂದ ಧರ್ಮದ ಶಕ್ತಿಯಿಂದ ಏಕತೆಗೆ ಶ್ರಮಿಸಬೇಕು. ದೇಹದಲ್ಲಿ ಯಾವದಾದರೊಂದು ಅಂಗಕ್ಕೆ ಗಾಯವಾದಲ್ಲಿ ಅದನ್ನು ಗುಣಪಡಿಸಲು ದೇಹವಿಡೀ ಪ್ರಯತ್ನಿಸುವಂತೆ ನಮ್ಮ ದೇಶದಲ್ಲಿ ಯಾವ ಭಾಗದಲ್ಲಾದರೂ ಅದ್ಯಾವ ರೀತಿಯ ಗಂಡಾಂತರ ಬಂದರೂ ದೇಶವಿಡೀ ಒಂದಾಗಿ ಅದನ್ನೆದುರಿಸುವದು ಅಗತ್ಯ. ಭಾರತವೇ ನಮ್ಮ ದೇಹವಿದೆ. ಆದುದರಿಂದ ದೇಹದ ಯಾವ ಅಂಗಕ್ಕೂ ಅಪಾಯ ಬಂದಲ್ಲಿ ನಾವೊಂದಾಗಿ ಅದನ್ನೆದುರಿಸಬೇಕು. ಊಟ ಮಾಡುವಾಗ ಕೆಲವು ಸಲ ನಾಲಗೆಯನ್ನು ಹಲ್ಲು ಕಚ್ಚಿ ಬಿಡುವದಿದೆ. ಆಗ ಯಾವನಾದರೂ ಹಲ್ಲನ್ನು ಕಿತ್ತುಬಿಡುತ್ತಾನೇನೋ? ಇಲ್ಲ. ಯಾಕೆಂದರೆ ಹಲ್ಲೂ ನಾಲಗೆಯೂ ತನ್ನವೇ ಇವೆ. ಈ ರೀತಿಯ ಒಕ್ಕಟ್ಟಿನ ಭಾವನೆಯನ್ನು ಜನರೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆತ್ಮೀಕ ಧಾರ್ಮಿಕ ಭಾವನೆಗಳಿಂದಲೇ ಒಕ್ಕಟ್ಟು ಶಕ್ತಿಯೂ ಪ್ರಾಪ್ತವಾದೀತು. ಅದೆಷ್ಟು ಪಂಚವಾರ್ಷಿಕ ಯೋಜನೆಗಳು ಬಂದರೂ ಆತ್ಮೀಕ ಭಾವನೆ ಒಂದು ಇಲ್ಲವಾದಲ್ಲಿ ಪ್ರಗತಿಯನ್ನೂ ಶಾಂತಿಯನ್ನೂ ಕಾಣಲು ಸಾಧ್ಯ ಇಲ್ಲ. ಸರಕಾರವು ಭೌತಿಕ ವಿಕಾಸಕ್ಕಾಗಿ ಇಪ್ಪತ್ತು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಆದರೂ ಭೌತಿಕ ಬೆಳವಣಿಗೆಗೆ ಬದಲಾಗಿ ಬಿಕ್ಕಟ್ಟು ಬೆಳೆಯುತ್ತಿದೆ. ಇಂದಿನ ತೀರ್ಮಾನದಂತೆ ನಡೆದಲ್ಲಿ ಇನ್ನು ಮುಂದಕ್ಕೆ ಅದ್ಯಾವ ಹಿಂದುವೂ ಪತಿತನಾಗಲಾರನು. ಬಹಳ ಸಂತೋಷದಿಂದ ಇದನ್ನು ಬರಮಾಡಿಕೊಳ್ಳುತ್ತೇನೆ. ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಉಡುಪಿಯ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜೀಯವರು ಜನತೆಗೆ ಆದೇಶವಿತ್ತರು.

ಕೊನೆಯಲ್ಲಿ ಸಹಕರಿಸಿದವರಿಗೆ ಧನ್ಯವಾದಗಳನ್ನರ್ಪಿಸಲಾಯಿತು. ವಂದೇ ಮಾತರಂ ಸಹಿತ ಕಾರ್ಯಕ್ರಮ ಮುಕ್ತಾಯವಾಯಿತು.

(ಮುಗಿದುದು)

ಉನ್ನತ ಸೇವಾವಕಾಶಕ್ಕೆ

ಶ್ರಮಿಕ ಮುಂದಾಳು— ಶ್ರೀ ಗಿರಿ

೭೩ ವರ್ಷ ಪ್ರಾಯದ ಶ್ರಮಿಕ ಮುಂದಾಳು ಶ್ರೀ ವಿ. ವಿ. ಗಿರಿಯವರ ಹೆಸರು ಉಪರಾಷ್ಟ್ರಪತಿ ಸ್ಥಾನಕ್ಕೆ ಮುಂದೆ ಬಂದುದು ತೀರ ಕೊನೆಗಾದರೂ ಅವರ ಆಯ್ಕೆಯ ವಿಷಯದಲ್ಲಿ ಯಾರಿಗೂ ಸಂದೇಹವಿರಲಿಲ್ಲ. ವಿರೋಧಿ ಪಕ್ಷೀಯರು ಉಪಕುಲಪತಿ ಕಾಲಾರಜಂಗರ ಹೆಸರನ್ನು ಮುಂದೆ ಮಾಡಿದ್ದರೂ ಕೊನೆಯ ಗಳಿಗೆಯಲ್ಲಿ ಪ್ರೊ| ಹಬೀಬರನ್ನೇ ನಿರ್ದೇಶಿಸಬೇಕಾಯಿತು. ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ನಿಚ್ಚಳ ಬಹುಮತವಿರುವುದರಿಂದ ಶ್ರೀ ಗಿರಿಯವರಿಗೆ ಜಯಮಾಲೆ ಬೀಳುವುದೆಂದು ಅವರೂ ನಂಬಿದ್ದರು; ಉಳಿದವರೂ ಊಹಿಸಿದ್ದರು.

ಉಪರಾಷ್ಟ್ರಪತಿ ಆಯ್ಕೆಗೊಂಡ ಶ್ರೀ ಗಿರಿಯವರು ವಿಶಿಷ್ಟ ತರಹದ ವ್ಯಕ್ತಿ. ಶ್ರಮಿಕ ಮುಂದಾಳುವೆಂದೇ ಅವರು ರಾಜ್ಯಕೀಯ ಪ್ರವೇಶಿಸಿದವರು; ರಾಜಕಾರಣದ ನಾನಾ ಮಾಲಿಗೆಗಳನ್ನು ಸುತ್ತಾಡಿ ಬಂದವರು. ಜೀವನದ ಬಗೆಗೆ ಅತಿ ತೋತ್ಸಾಹ, ಜನ ಸಾಮಾನ್ಯರೊಡನೆ ಬೆರೆತು ಬಾಳಬಲ್ಲ ಅದ್ವಿತೀಯ ಕಲೆ; ನಿಷ್ಠುರ ದೇಶ ಪ್ರೇಮ.—ಈ ಸದ್ಗುಣಗಳು ಮುಪ್ಪುರಿಗೊಂಡು ಮೂಡಿ ಬಂದ ಸರಳ ನಿರಾಡಂಬರ ವ್ಯಕ್ತಿ ಶ್ರೀ ಗಿರಿಯೆಂದು ಹೇಳಬಹುದು.

ನಾಲ್ಕಾರು ವರ್ಷ ರಾಜಕೀಯದ ಅಮಲು ಕುಡಿದವರ ಕಪಟ ವರ್ತನೆಯನ್ನು 'ಇದೇ ರಾಜ್ಯಕೀಯ' ಎಂದು ಸಮರ್ಥಿಸುವ ಪುಂಡು ರಾಜಕಾರಣಿಗಳು ಅಣಬೆಗಳಂತೆ ಗೋಚರವಾಗುತ್ತಿದ್ದಾರೆ. ಆದರೆ, ನಲುವತ್ತು ವರ್ಷಗಳ ಕಾಲ ರಾಜ್ಯಕೀಯದಲ್ಲೇ ತಲ್ಲೀನರಾಗಿದ್ದ ಶ್ರೀ ಗಿರಿಯವರಲ್ಲಿ ಇಂತಹ ದುಷ್ಪ್ರವೃತ್ತಿಯು ಲವಲೇಶವೂ ಕಾಣಿಸುವದಿಲ್ಲ. ಅವರೆಂದೂ ಅಧಿಕಾರವನ್ನು ಬಯಸಿ ಕೈಯೊಡ್ಡಿದವರಲ್ಲ; ಆದರೂ ಅಧಿಕಾರ ಪದವಿಯು ಕ್ಷಿದ್ದು ದೇಶ ಸೇವೆ ಮಾಡುವ ಒಂದಲ್ಲ ಹಲವು ಅವಕಾಶಗಳು ಅವರ ಕಾಲಬುಡಕ್ಕೆ ಬಂದು ಬೀಳುತ್ತಿವೆ—ಇದೀಗ ಉಪರಾಷ್ಟ್ರಪತಿ ಸ್ಥಾನವೂ ಅವರ ಪಾಲಿಗೆ ಬರುವಂತಾದುದೂ ಆಕಸ್ಮಿಕವಾಗಿ; ಅನಿರೀಕ್ಷಿತವಾಗಿ.

೧೮೯೪ರ ಆಗಸ್ಟ ೧೦ರಂದು ಜನಿಸಿದ ಶ್ರೀ ಗಿರಿಯವರು ಇಂದಿನ ಒರಿಸ್ಸಾಕ್ಕೆ ಸೇರಿದವರು. (ಅಂದು ಜನ್ಮಸ್ಥಳ ಬಹರಾಮಪುರ ಮದ್ರಾಸಕ್ಕೆ ಸೇರಿತ್ತು.) ತಂದೆ ಜೋಗಯ್ಯ ಪಂತಲುರವರ ಉಜ್ವಲ ದೇಶ ಪ್ರೇಮವೇ ಈ ಮಗನಿಗೆ ಪಿತ್ರಾರ್ಜಿತವಾಗಿ ಬಂತು ಎನ್ನಬಹುದು. ಇದೇ ವೇಳೆ ಅವರಲ್ಲಿ ಸಾರ್ವಜನಿಕ ಸೇವಾಸಕ್ತಿಯೂ ಮೂಡಿತು. ಡಬ್ಲಿನ್‌ಗೆ ಕಾಯ್ದೆಯ ಪದವಿ ಅಭ್ಯಾಸಕ್ಕಾಗಿ ತೆರಳಿದ ಶ್ರೀ ಗಿರಿಯವರು ಬ್ರಿಟಿಶರ ಸಂಶಯ ದೃಷ್ಟಿಗೆ ಗುರಿಯಾದರು; ೧೯೧೬ರಲ್ಲೇ ಅವರನ್ನು ಒತ್ತಾಯ ಪೂರ್ವಕ ಭಾರತಕ್ಕೆ ಮರಳಿಸಲಾಯಿತು.

ಇದೇಕೆ ಹೀಗಾಯಿತು? ಅಂದಿನ ದಿನಗಳಲ್ಲಿ ಐರ್ಲೆಂಡು—ಭಾರತಗಳೆರಡೂ ಬ್ರಿಟಿಷ ಸಾಮ್ರಾಜ್ಯಶಾಹಿಯಲ್ಲಿ ನವೆಯುತ್ತಿದ್ದುವು. ಎರಡೂ ದೇಶಗಳಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿತ್ತು. ಶ್ರೀ ಗಿರಿಯವರಲ್ಲಿ ಸಹಜವಾಗಿದ್ದ ದೇಶಪ್ರೇಮವು ಐರ್ಲೆಂಡಿನ ಚಳುವಳಿಗಾರರೊಡನೆ ಸಂಪರ್ಕ ಬೆಳೆಸಿಕೊಂಡಿತು. ಇದು ಬಿಳಿಯರಿಗೆ ಸರಿಕಾಣದೆ ವಕ್ರ ದೃಷ್ಟಿಯಿಂದ ಶ್ರೀ ಗಿರಿಯವರಿಗೆ ಅರ್ಧಚಂದ್ರ ಪ್ರಯೋಗ ಮಾಡಿದರು.

ಮುಂದೆ ಮದ್ರಾಸದ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಶ್ರೀ ಗಿರಿಯವರು ದುಡಿಯತೊಡಗಿದರು. ಇವರ ಪ್ರತಿಭೆಯಿಂದಾಗಿ ಬ್ರಿಟಿಷ ಸರಕಾರವು ನ್ಯಾಯಾಂಗದಲ್ಲಿ ಉನ್ನತ ಪದಕೊಡ ಮಾಡಿತು. ಆದರೆ ಬ್ರಿಟಿಷ ಸರಕಾರದ ನೌಕರಿ

(ಒಂಭತ್ತನೇ ಪುಟ ನೋಡಿರಿ)

ಹರ್ಷ ಚರಿತೆ

(ಐದನೇ ಪುಟದಿಂದ)

ಜ. ಕಥೆಯ ಬೆಳವಣಿಗೆ ವಿಸ್ತಾರವಾಗಿದ್ದು ಆಕರ್ಷಣೀಯವಾಗಿದೆ. ಚಂದ್ರಾಪೀಡ ಮತ್ತು ಕಾದಂಬರಿಯ ದಿವ್ಯ ಪ್ರೇಮವೇ ಕಾವ್ಯದ ಕಥಾವಸ್ತು. ಈ ಕಥೆ ಸೋಮದೇವನ ಕಥಾಸರಿತ್ಸಾಗರದಲ್ಲಿರುವುದನ್ನೂ ಇಲ್ಲಿ ಸ್ಮರಿಸಬಹುದಾಗಿದೆ. ಆದರೆ ಕೆಲವು ದೃಷ್ಟಿಗಳಿಂದ ಕಥಾಸರಿತ್ಸಾಗರದ ಕಾದಂಬರೀ ಕಥೆಗೂ ಬಾಣನ ಕಥೆಗೂ ವ್ಯತ್ಯಾಸವಿದೆ. ಬಾಣ ಕಾವ್ಯ ರಮಣೀಯತೆಗೆ ಅಗತ್ಯವಾಗುವಂತೆ ಕಾದಂಬರಿ ಕಥೆಯನ್ನು ಮಾರ್ಪಡು ಮಾಡಿಕೊಂಡು ಹಲ ಬಗೆಯ ಕಲ್ಪನೆಗಳಿಗೆ ಅವಕಾಶವಿತ್ತು ರಚಿಸಿರುವುದು ಸಹಜವಾಗಿದೆ. ಸೋಮದೇವನ ಕಥಾಸರಿತ್ಸಾಗರದ ಕಾದಂಬರಿ ಕಥೆಯಲ್ಲಿ ಮತ್ತು ಬಾಣನ ಕಾದಂಬರಿ ಕಾವ್ಯದಲ್ಲಿ ಹಲ ಬಗೆಯ ಭಿನ್ನತೆ ಪಾತ್ರಗಳಲ್ಲಿ ಕಂಡು ಬಂದರೂ ಈ ಎರಡು ಕೃತಿಗಳಿಗೂ ಗುಣಾಢ್ಯನ ಬೃಹತ್ಕಥೆಯೇ ಆಧಾರ ಎಂದು ಹೇಳಬಹುದು. ಆದರೆ ಬೃಹತ್ಕಥೆ ಮೂಲತಃ ಇಂದು ಉಪಲಬ್ಧವಿಲ್ಲ. ಬಾಣ ಕಾದಂಬರಿ ಕಾವ್ಯದಲ್ಲಿ ಕಾದಂಬರಿ ಹಾಗು ಅವಳ ತಂದೆ ತಾಯಿಯರನ್ನು ಮರ್ತ್ಯರಿಂದ ಬೇರ್ಪಡಿಸಿದ್ದಾನೆ. ಇವನ ಕಥೆಯಲ್ಲಿ ಶ್ರೇಷ್ಠ ಮಟ್ಟದ ನಿರೂಪಣೆಯನ್ನು ಕಾಣಬಹುದು. ಬಾಣ ತನ್ನ ಕೃತಿಯ ಪಾತ್ರಗಳನ್ನು ಮಾನವಾಂತಃಕರಣ, ದೈವಿಕ ಅನುಗ್ರಹಕ್ಕೆ ಒಳಗಾಗುವಂತೆ ರೂಪಿಸಿದ್ದಾನೆ. ದುಃಖ ವಿರಹ, ವೈರಾಗ್ಯ ಅಭಿಮಾನ, ಪ್ರೇಮ ಮೊದಲಾದ ಭಾವಗಳು ಕಾವ್ಯದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ.

ಬಾಣ ತಾನು ಆರಂಭಿಸಿದ ಕಾದಂಬರಿ ಕಾವ್ಯವನ್ನು ಮುಕ್ತಾಯಗೊಳಿಸಲಾಗಲಿಲ್ಲ. ಮುಕ್ತಾಯ ಮಾಡುವ ಮುಂಚೆಯೇ ದಿವಂಗತನಾದನು. ಅವನ ಮಗ ಭೂಷಣಭಟ್ಟ ಬಾಣ ಈ ಕೃತಿಯನ್ನು ಮುಗಿಸಿದ. ಇವನಿಗೆ ಪುಳಿಂದ ಎನ್ನುವ ಮತ್ತೊಂದು ಹೆಸರೂ ಇದ್ದಂತೆ ತಿಳಿದು ಬರುತ್ತದೆ.

ಯಾತೇ ದಿವಂ ಪಿತರಿ ತದ್ವಚಸೈವ ಸಾರ್ಧಂ
ವಿಚ್ಛೇದಮಾಪ ಭುವಿ ಯಸ್ತು ಕಥಾಪ್ರಬಂಧಃ।
ದುಃಖಂ ಸತಾಂ ತದಸಮಾಪ್ತಿ ಕೃತಂ ವಿಲೋಕ್ಯ
ಪ್ರಾರಬ್ಧ ಏಷ ಚ ಮಯಾ ನ ಕವಿತ್ವ ದರ್ಪಾತ್॥

ಎಂದು ಕಾದಂಬರಿಯ ಆರಂಭದಲ್ಲಿ ಬರೆದಿದ್ದಾನೆ.

ವಾಸವದತ್ತ ಕೃತಿಯ ಸುಬಂಧುವಿನ ಮಾರ್ಗವನ್ನು ಬಾಣ ಅನುಸರಿಸಿದ್ದಾನೆ ಎನ್ನುವ ಅಭಿಪ್ರಾಯವೂ ಇದೆ. ಆ ಕೃತಿಯ ಶೈಲಿ ಸಂವಿಧಾನಗಳಿಂದ ಬಾಣ ಪ್ರಭಾವಿತನಾಗಿರಬಹುದು ಎಂಬುದರಲ್ಲಿ ಸತ್ಯಾಂಶವಿದೆ. ಹಲವಾರು ಶತಮಾನಗಳು ಕಳೆದರೂ, ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಸಂಪ್ರದಾಯಗಳು, ಮಾರ್ಪಾಡುಗಳು ಕಂಡು ಬಂದರೂ ಬಾಣನ ಶೈಲಿ, ಕಥಾನಿರೂಪಣೆ ಸಂಸ್ಕೃತ ಸಾಹಿತ್ಯದಲ್ಲಿಯೇ ಮಾದರಿಯಾದುದು, ಅಪರೂಪವಾದುದು. ಬಾಣ ಪಾತ್ರರಚನೆಯಲ್ಲಿ ಕಥಾನಿರೂಪಣೆಯಲ್ಲಿ ಅದ್ವಿತೀಯ ಸಿದ್ಧಹಸ್ತ.

ಬಾಣನ ಶೈಲಿ ತುಂಬಿ ಹರಿಯುವ ಹೊಳೆಯಂತೆ. ಈ ಹೊಳೆ ದಂಡೆಯ ಮೇಲೂ ಹರಿಯುತ್ತದೆ. ಅವನ ಕಥೆಯನ್ನು ಒಂದೇ ಬಾರಿಗ ಊಹಿಸಿ, ಕಲ್ಪಿಸಿ ನಿರ್ಧರಿಸಲು ಅನುಸರಿಸಲು ಸಾಧ್ಯವಿಲ್ಲ. ಅವನು ಭಾವನೆಗಳನ್ನು, ಯೋಚನೆಗಳನ್ನು ರೀತಿ ನೀತಿಗಳನ್ನು ಕೂಲಂಕಷವಾಗಿ ವಿವೇಚಿಸಿ ನಡೆಯುತ್ತಾನೆ. ಈ ರೀತಿಯಿಂದ ಕಥೆ ವಿಸ್ತಾರವಾಗಿ ಬೆಳೆಯುತ್ತದೆ. ಅನುಪ್ರಾಸ, ಶ್ಲೇಷೋಪಮ, ಉತ್ಪ್ರೇಕ್ಷೆ, ಉಪಮೆ, ವಿರೋಧಾಭಾಸಗಳು ಇವನ ಶೈಲಿಯಲ್ಲಿ ಹೆಚ್ಚು. ಕವಿಯ ಶೈಲಿ ಬೇರೊಬ್ಬನನ್ನು ಅನುಸರಿಸಿದುದಲ್ಲ. ಬೇರೊಬ್ಬರು ಸುಲಭವಾಗಿ ಅನುಸರಿಸುವಂತಹದಲ್ಲ. ಕಥೆಯ ಬೆಳವಣಿಗೆಗೆ, ರಮಣೀಯತೆಗೆ ಕಾವ್ಯ ನಿಯಮಗಳಿಗೆ ಭಂಗ ಬಾರದಂತೆ ಪಾತ್ರ, ಸನ್ನಿವೇಶ, ಘಟನೆಗಳನ್ನು ಬೆಳೆಸಿದ್ದಾನೆ. ಬಾಣನ ಶೈಲಿಯಂತೆಯೇ ಭಾಷೆ ಹಾಗೂ ಶಬ್ದ ಭಂಡಾರ ಸುಂದರವಾದುದು; ಸಮೃದ್ಧವಾದುದು. ಬಾಣ ಮೂಲ ಕಥೆಯ ಬೆಳವಣಿಗೆಗೆ ಹೊಸ ಪಾತ್ರ, ಹೊಸ ಸನ್ನಿವೇಶಗಳನ್ನು ಹೆಣೆದು ರೂಪಿಸಿದ್ದಾನೆ. ಕಾದಂಬರಿಯ ಪ್ರೇಮದ ಕಥೆ ಸುಂದರವಾಗಿದೆ.

• ಕಾದಂಬರಿ ಕಾವ್ಯದ ನಾಯಿಕೆ. ಕಥೆ ಅವಳ ಹೆಸರಲ್ಲೂ ಹೆಣೆದುಕೊಂಡಿದೆ. ಅವಳ ರೂಪಗುಣಗಳೆರಡೂ ಅಪರೂಪವಾದುವು. ಅವಳ ಸೌಂದರ್ಯವೇ ಅವಳ ಹಲವು ಸಮಸ್ಯೆಗಳಿಗೂ ಕಾರಣವಾಗುತ್ತದೆ. ಬಾಣ ಪ್ರೀತಿಯ ಮಹತ್ವ, ಪ್ರಾಧಾನ್ಯತೆಗಳನ್ನು ನಿರೂಪಿಸುತ್ತಾನೆ. ಪ್ರೀತಿ ಶಾಶ್ವತ ಸುಂದರ. ಅದನ್ನು ಯಾವ ಅಗ್ನಿಯೂ ಸುಡಲಾರದು. ಯಾವ ಬಿರುಗಾಳಿಯೂ ಅಲುಗಿಸಲಾರದು. ಯಮಾಲಯವೇ ಎದುರಿನಲ್ಲಿ ನಿಂತರೂ ಅದು ತೃಣಸಮಾನ ಎಂಬುದು ಕಾದಂಬರಿಯ ಸ್ವಚ್ಛ ಮನಸ್ಸು, ಪ್ರೀತಿಗಳಿಂದ ತಿಳಿದು ಬರುತ್ತದೆ. ಕಾದಂಬರಿಯ ಪಾತ್ರ ಸುಂದರವಾಗಿದೆ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. — ಸಂ. ಸ.

ನನ್ನ ಮದುವೆ ನಿಮ್ಮೊಂದಿಗೇ (ಕಥಾ ಸಂಕಲನ).

ಲೇಖಕರು: ಶ್ರೀ ಮಿತ್ತೂರು.

ಪ್ರಕಾಶಕರು: ಜನಜೀವನ ಸಾಹಿತ್ಯ ಸದನ, ಮುಲ್ಕಿ (ದ. ಕ.)

ಪುಟಗಳು: ೯೩. ಬೆಲೆ: ರೂ. ೧-೦೦.

ಏಳು ಕಥೆಗಳ ಸಂಕಲನ 'ನನ್ನ ಮದುವೆ ನಿಮ್ಮೊಂದಿಗೇ'. ಹೆಸರು ವಿಲಕ್ಷಣ ಹಾಗೂ ಕುತೂಹಲಕಾರಕವಿರುವಂತೆಯೇ ಏಕ ವರ್ಣದ ಮುಖಪತ್ರವೂ ಪ್ರಚೋದಕವೇ ಇದೆ. ಕಥನ ಕಲೆ ನಾಟಕೀಯತೆಗೆ ಪುಟವಿತ್ತಂತೆ ಭಾಸವಾಗುತ್ತದೆ. ಭಾಷೆ ಸರಳ, ಸುಂದರವಿದೆ; ಚೌಪಾಟಿಯ ಸಂಜೆಯ ವರ್ಣನೆಗಳು ಕಾವ್ಯಮಯವೂ ಆಗಿವೆ.

ಬೆಂಗಳೂರಿಗೆ ಹೊರಟ ಭಟ್ಟರಿಗೆ ಬಸ್ಸಿನಲ್ಲೇ 'ತರುಣಿ'ಯೊಬ್ಬಳು ಗಂಟುಬಿದ್ದು ರಾತ್ರಿ ಹೋಟೇಲ್ ರೂಮಿನಲ್ಲಿ ಅವರನ್ನೂ ಅವರ ಸಂಪತ್ತನ್ನೂ ಸೂರೆ ಮಾಡಿದ ಪ್ರಸಂಗ ಗಂಡಿನ ಸ್ತ್ರೀ ಲಂಪಟತನವನ್ನೇ ಎತ್ತಿ ತೋರಿಸುತ್ತದೆ [ಗಂಟು ಬಿದ್ದ ನಂಟು] ಸುಶಿಕ್ಷಿತನೊಬ್ಬ ಬ್ರಾಹ್ಮಣನೆಂಬ ಕಾರಣದಿಂದ ನಿರುದ್ಯೋಗಿಯಾಗಿ ಹಸಿವೆಯಿಂದ ರಕ್ಷಿಸಲು ಮಗುವನ್ನೇ ಕೊಂದ ಹೃದಯ ವಿದ್ರಾವಕ ಸನ್ನಿವೇಶ ನ್ಯಾಯಾಲಯದಲ್ಲಿ ನ್ಯಾಯಾಧೀಶರು ನೀಡಿದ ನೂರೃವತ್ತು ಪುಟದ ತೀರ್ಪು—ಇಂದಿನ ಸಮಸ್ಯೆಯ ಮೇಲೆ ಚೆಲ್ಲಿದ ಕ್ಷ-ಕಿರಣ [ಕಂದಿ ಕೊಂದ ಮಗು] ಜಾತಿಭೇದದ ನೀತಿ ಈ ಕಾಲದಲ್ಲೂ ಇದೆ. ಅದರ ಪರಿಣಾಮವಾಗಿ 'ಹೀನ ಜಾತಿ'ಯವರು ಪಡುವ ಭಂಗ 'ಈ ಜಾತಿ—ಆ ನೀತಿ'ಯಲ್ಲಿ ಚಿತ್ರಿತವಾಗಿದೆ. ಆಭರಣಗಳ ಭಾರ ಹೊತ್ತ ರತ್ನ ಮಾಯವಾಗಿ ದರೋಡೆಗೆ ಒಳಗಾದ ಘಟನೆ 'ಮೋಹ ಪ್ರಿಯವಾದಾಗ'ದಲ್ಲಿದೆ. ನವನಾಗರಿಕತೆಯ ನಗ್ನ ಚಿತ್ರ ಗಂಡು—ಹೆಣ್ಣಿನ ಅನೈತಿಕ ಸಂಬಂಧವೆಂದು ಒಪ್ಪುವುದಾದರೆ, "ಸಂಭಾವಿತನ ಸಂತಾನ"ದಲ್ಲಿ ಇಂತಹ ಸಂಬಂಧವೊಂದರ ದುರಂತ ಚಿತ್ರವಿದೆ; ನಾಗರಿಕತೆಯ ಮುಂದೆ ಕನ್ನಡಿ ಹಿಡಿಯುತ್ತದೆ. ರೈತ ಲಿಂಗ—ಹೋರಿಯ ನಿಕಟ ಸಂಬಂಧ "ಲಿಂಗನ ಹೋರಿ"ಯಲ್ಲಿ ಮೂಡಿಬಂದಿದೆ. ನವಯುವತಿಯೊಬ್ಬಳು ಪರಪುರುಷನನ್ನು ಬೋಳೈಸುತ್ತ ವಂಚಿಸಿ ಸಂಪತ್ತನ್ನು ದೋಚಿ ಹೋದ ನಾಗರಿಕತೆಯ ಒಂದು ಚಿತ್ರ "ನನ್ನ ಮದುವೆ ನಿಮ್ಮೊಂದಿಗೇ"ಯಲ್ಲಿದೆ.

ವಸ್ತುವಿನಲ್ಲಿ ವಿಭಿನ್ನತೆ ಇಲ್ಲಿನ ಕಥೆಗಳಲ್ಲಿದ್ದು ಅದು ಸಮಾಜದ ನಾನಾ ಮುಖಗಳತ್ತ ತಿರುಗಾಡಿದೆ. ಹಳೆಯ—ಹೊಸ ವಸ್ತುಗಳನ್ನಾರಿಸಿ ಘಟನಾವಳಿಗಳನ್ನು ಕ್ರಮಬದ್ಧಗೊಳಿಸಬಲ್ಲ ಶಕ್ತಿ ಶ್ರೀ ಮಿತ್ತೂರರಲ್ಲಿದೆ. ಅವಾಸ್ತವತೆ ಕೆಲವೆಡೆ ಅವಕಾಶವಿದ್ದಂತೆ ಅನಿಸಿದರೂ ಇಂದಿನ ದಿನಗಳಲ್ಲಿ [illegible] ಬರುವುದು ಕಷ್ಟಸಾಧ್ಯವೇ ಸರಿ. ಒಟ್ಟಿನಲ್ಲಿ ಮನೋರಂಜನೆಯನ್ನು ಒಂದೂವರೆ ತಾಸು ನೀಡಿ 'ಹೀಗೂ ಒಮ್ಮೊಮ್ಮೆ ಆಗುವುದುಂಟು' ಎಂಬ ಉದ್ಗಾರವನ್ನು ನಮ್ಮಿಂದ ಹೊರಡಿಸುವಲ್ಲಿ ಈ ಸಂಕಲನ ಸಫಲವಾಗಿದೆ.

ಇದೇ ನಮ್ಮ ಸ್ವಾತಂತ್ರ್ಯವೇ?—([illegible]ಯ ನಾಟಕ)

ಬರೆದವರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಪ್ರಕಾಶನ. ವಿಚಾರ ಸಾಹಿತ್ಯಮಾಲೆ, ಕಡಿರುದ್ಯಾವರ, ದ. ಕ.

ಪುಟಗಳು. ೪೫, ಬೆಲೆ. ೦—೭೫,

ಎಂಟು ದೃಶ್ಯಗಳುಳ್ಳ ಏಕಾಂಕ ನಾಟ

ರೈತ ಬಾಂಧವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು.........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
(1 H.P. ಯಿಂದ 20 H.P. ವರೆಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಪೀಟರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು.

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ. ಮಾರಾಟ ವಿಭಾಗ: ಬಲ್ಮಠ ರಸ್ತೆ, ಮಂಗಳೂರು 1.

ಕವಿದು. ಬೆಲೆಯೇರಿಕೆ, ಅದನ್ನು ತಡೆಗಟ್ಟಲು ಸರಕಾರವು ಹೇರುವ ನಿಯಂತ್ರಣ ಇದರ ದುಷ್ಪರಿಣಾಮ. ಮಧ್ಯಮ ಹಾಗೂ ನಿಮ್ನ ವರ್ಗದ ದಯನೀಯ ಸ್ಥಿತಿ—ಇವುಗಳು ಇದೇ ನಮ್ಮ ಸ್ವಾತಂತ್ರ್ಯದ ಫಲ ಎಂಬ ಉದ್ಗಾರವನ್ನು ಹೊರಡಿಸುತ್ತಿ

ಹಳ್ಳಿಯ ರೈತ—ದೇಶದ ನರನಾಡಿ—ದುರಭ್ಯಾಸಗಳಲ್ಲೇ ಮೈಮರೆತಿರುವಾಗ, ಸಾಹುಕಾರರು ಲಾಭ ಬಡಕತನ, ಸರಕಾರಿ ಅಧಿಕಾರಿಗಳ ಲಂಚಗುಳಿತನಗಳಿಂದ ಬಡವರ ರಕ್ತ ಆರಿ ಹೋಗುತ್ತಿರುವಾಗ ಸಮಾಜ ಸೇವಾಕಾಂಕ್ಷಿಗಳು—ಜನತಾ ಪ್ರತಿನಿಧಿಗಳಾಗಿ ಕಾಡುವ ಕುತ್ತವನ್ನು ಹೇಗೆ ನಿವಾರಿಸಬಹುದೆಂಬುದನ್ನು ಸೂಚಿಸುವ ನಾಟಕವಿದು. ಇಂದಿನ ದಿನಗಳಲ್ಲಿ ಈ ನಾಟಕವನ್ನು ಆಡಿ ಮೆಚ್ಚಿದರೆ ಸಾಲದು, ಇದರಿಂದ ಅರಿತ ಸಾರವನ್ನು ಸಮಾಜ ಅರಗಿಸಿ ಆಚರಿಸಬೇಕು. ಇದು ಸಾಧ್ಯವಾದರೆ, ನಾಟಕ ಸಫಲವಾದಂತೆ.

ಕಡಿಮೆ ಸಂಖ್ಯೆಯ ಪಾತ್ರಗಳು, ಸರಳ ಸುಂದರ ಭಾಷೆ, ಅಭಿನಯ ಯೋಗ್ಯ ದೃಶ್ಯ ಸಂಯೋಜನೆ, ಚಿಕ್ಕ ಚಿಕ್ಕ ಸಂವಾದ— ಇವು ನಾಟಕದ ಅಭಿನೇಯತೆಯ ಯಶಸ್ಸಿನ ಮೂಲವೆಂದು ಹೇಳಬಹುದು. ಸಮಾಜದಲ್ಲಿ ಕಾಣಿಸಿಕೊಂಡಿರುವ ಜಾಡ್ಯ ದೂರೀಕರಣಕ್ಕೆ ಗೋಪಾಲಕೃಷ್ಣ ರಾಯರಂತಹ ಸಮಾಜ ರೋಗ ವೈದ್ಯರು ಮುಂದೆ ಬರಬೇಕು. ನಾಟಕದ ಪೂರ್ವಾರ್ಧ ಸಮಾಜದ ನಗ್ನ ಚಿತ್ರವಾದರೆ, ಉತ್ತರಾರ್ಧ ಭವಿಷ್ಯದ ಕಾಲ್ಪನಿಕ ಚಿತ್ರ. ಯಥಾರ್ಥವಾದ ಮತ್ತು ಆದರ್ಶವಾದಗಳ ಮಧುರಸಂಮಿಳನವನ್ನು ಮಾಡಿಸಿದ ಶ್ರೀ ಶಿರಾಡಿಪಾಲರ ಈ ಏಕಾಂಕಿ ಈಗಾಗಲೇ ಹಲವೆಡೆ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿದೆ— ಮುಂದೆಯೂ ಅಭಿನಯಿಸಲ್ಪಡಬಹುದು.

—ಗೋರಾ.

ವೈಣಿಕನನ್ನೇ ಮರೆತರೆ ಹೇಗೆ?

(ನಾಲ್ಕನೇ ಪುಟದಿಂದ)

ಗೊಡೋಲ್ಲ ಏನ್ಮಾಡೋದೂಂತ...'

'ಅಲ್ರಿ, ಇದು ಭಾರೀ ಸಮಸ್ಯೆಯೂ ಯ್ಯಲ್ಲಾ?'

ಮತ್ತೆ ನಿಮ್ಮ ಮೊಣಕಾಲ ಕೆಳಗಿನ ಬುದ್ಧಿಯವ್ರಿಗ ಏನು ಗೊತ್ತು? ಯಾವುದಕ್ಕೆ ರಿಸೊಲ್ಯೂಶನ್ ಬೇಕು, ಯಾವುದಕ್ಕೆ ಬೇಡ ಅನ್ನೋವಷ್ಟು ವಿವೇಕಾನೂ ಬೇಡವೆ?'

'ಅಂದ್ರೆ...?'

"ಕುಟುಂಬದ ಅಂತರಂಗದ ವಿಚಾರಗಳ ಸಂಬಂಧ ಗೊತ್ತುವಳಿ ಸ್ವೀಕರಿಸುವುದೆಂದ್ರೆ ಹ್ಯಾಗೆ? ಸಂಸಾರ ಗುಟ್ಟಾಗಿ ಸಾಗುತಿದ್ರೆ, ಹಾಲಿಗೆ ಕಾಳಿ ಹಿಂಡಿದ ಹಾಗ ನಾಳೆ ಸುರು ಮಾಡ್ಲಿ, ಎಲ್ರೂ ರೇಶ್ಮೆ ಸೀರೇನೇ ಉಡಬೇಕು; ಮೋಟಾರಿನ ಕಾರ್ನಲ್ಲೇ ತಿರುಗ್ಬೇಕೂಂತ....'

"ಅಂದ್ರೆ....'

'ಅಂದ್ರೆ ಏನೂ ಇಲ್ಲ. ವೈಯಕ್ತಿಕ ವಿಚಾರಗಳಿಗೆ, ಅದರಿಂದ ಮೂರನೆಯವರಿಗೆ ನಷ್ಟವಿಲ್ಲದಾಗ ಅದ್ರಲ್ಲಿ ಪ್ರವೇಶ ಮಾಡಬಾರದು. ನಾನೂ ನೀನೂ ಹಾಗೇ ಇರ್ಬೇಕು, ಹೀಗೇ ಇರ್ಬೇಕು, ಹಾಗೇ ನಡ್ಕೋಬೇಕೂಂತ ಹೇಳೋರು ಯಾರು? ಪರಕೀಯರಲ್ಲ. ನೋಡು, ಹಾಗೆ ಹೇಳೋರು ಹೊರಗೆ ಇಲ್ಲ, ಇಲ್ಲಿ, ಇಲ್ಲಿ, ಒಳಗೇ ಇದ್ದಾರೆ.'

"ಅಂದ್ರೆ..."

"ನಾನೇ ವೀಣೆ, ನೀನೇ ತಂತಿ, ಇವನೇ ವೈಣಿಕ....ಅವನಿಗಿಲ್ಲಿ ಕೆಲಸವಿಲ್ಲ... ನೀನು ವೈಣಿಕನನ್ನೇ ಮರೆತರೆ ಹೇಗೆ?'

"ಓ, ಹೌದ್ರಿ, ನೀವನ್ನೋದು ನಿಜ.... ಯಾರ್ಯಾರದ್ದೋ ಮಾತು ಕೇಳಿ__'

'ಏನೂ ಇಲ್ಲ. ನನ್ನ ಮಾತನ್ನೇ ಕೇಳದವ್ರು ಇನ್ನು ಯಾರ್ಯಾರ ಮಾತು ಕೇಳಾಕಂತೆ.. '

'ಓಯ್, ಸ್ವಲ್ಪ ಸುಮ್ಮನಿರೀಂದ್ರೆ...'

'ಏಯ್, ಯಾಕೆ....'

'ಅಯ್ಯೋ...'

'ಏನಾಯ್ತು?'

'ಏನೂ ...ಇಲ್ಲಾ...'

—ಗೋರಾ.

ಶ್ರಮಿಕ ಮುಂದಾಳು— ಶ್ರೀ ಗಿರಿ

(ಏಳನೇ ಪುಟದಿಂದ)

ಮಹಾತ್ಮಾ ಗಾಂಧೀಜಿಯವರ ಪ್ರಭಾವ ಮೂಡಲು ಅವರು ಒಪ್ಪಲಿಲ್ಲ. ಮುಂದೆ ಶ್ರೀ ಗಿರಿಯವರ ಮೇಲೆ ಬಿತ್ತು. ಇತರ ಅನೇಕ ಯುವಕರಂತೆ ಇವರೂ ವಕೀಲಿ ವೃತ್ತಿ ತ್ಯಜಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು; ಜೇಲುವಾಸವನ್ನೂ ಅನುಭವಿಸಿದರು. ಬಿಡುಗಡೆಯ ನಂತರ ಬಿ. ಎನ್. ರೇಲ್ವೆಯ ಕಾರ್ಮಿಕ ಸಂಘದ ಪ್ರಥಮ ಅಧ್ಯಕ್ಷರಾದರು.

ಇಲ್ಲಿಂದ ಶ್ರೀ ಗಿರಿಯವರ ಜೀವನದ ಹೊಸ ಮೆಟ್ಟಿಲು ಆರಂಭವಾಯಿತು. ರೇಲ್ವೆ ನೌಕರರ ಸಂಘಟಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು; ಅಮೋಘ ಸೇವೆ ಸಲ್ಲಿಸಿದರು. ಇದರಿಂದಲೇ ಅವರು ಶ್ರಮಿಕ ಮುಂದಾಳುವೆನಿಸಿದರು. ೧೯೩೪ರಲ್ಲಿ ಕೇಂದ್ರ ಶಾಸನ ಮಂಡಳಿಯಲ್ಲಿ ಸೇರಿದರೂ ಅಲ್ಲಿಯೂ ಕಾರ್ಮಿಕರ ವಕ್ತಾರರೆಂದೇ ಇವರು ಹೆಸರುಗಳಿಸಿದರು. ೧೯೩೭ರಲ್ಲಿ ಮದ್ರಾಸಿನಲ್ಲಿ ಶ್ರೀ ರಾಜಾಜಿ ಮಂತ್ರಿ ಮಂಡಳಿಯಲ್ಲಿ ಕಾರ್ಮಿಕ ಮಂತ್ರಿಯಾದರು. ಕ್ವಿಟ್ ಇಂಡಿಯಾ ಚಳುವಳಿಯ ವೇಳೆ ಮತ್ತೆ ಜೇಲು ಸೇರಿದ ಶ್ರೀ ಗಿರಿಯವರು ಮತ್ತೆ ಮದ್ರಾಸಿನಲ್ಲೇ ಪ್ರಕಾಶಂ ಸಚಿವ ಸಂಪುಟದಲ್ಲಿ ಮಂತ್ರಿಯಾದರು.

ಪ್ರಥಮ ಸಾರ್ವತ್ರಿಕ ಚುನಾವಣಾನಂತರ ಕೇಂದ್ರ ಸರಕಾರದಲ್ಲಿ ಕಾರ್ಮಿಕ ಸಚಿವರಾದರು. ತಾತ್ವಿಕ ಭಿನ್ನಾಭಿಪ್ರಾಯದಿಂದ ೧೯೫೪ರಲ್ಲಿ ರಾಜಿನಾಮೆಯಿತ್ತರು. ಅಂದಿನಿಂದಲೂ ಅವರ ಸೇವೆ ದೇಶಕ್ಕೆ ಒಂದಲ್ಲ ಒಂದು ರೀತಿಯಲ್ಲಿ ದೊರೆಯುತ್ತ ಬಂದಿದೆಯೆನ್ನಬಹುದು. ಉತ್ತರಪ್ರದೇಶ—ಕೇರಳ ರಾಜ್ಯಗಳಲ್ಲಿ ರಾಜ್ಯಪಾಲರಾಗಿದ್ದ ಇವರು ತಮ್ಮ ಹೊಸ ಹುದ್ದೆಗೇರುವುದಕ್ಕೆ ಮೊದಲು ಮೈಸೂರಿನ ರಾಜ್ಯಪಾಲರಿದ್ದರು. ಬೆಂಗಳೂರು ನಗರ ನೈರ್ಮಲ್ಯದಲ್ಲಿ ಶ್ರೀಯುತರು ತೋರಿಸಿದ ಆಸಕ್ತಿಯೆ ಇವರ ಸರಳತೆಗೊಂದು ಉದಾಹರಣೆ. ಯಾವುದೇ ಪದವಿಯಲ್ಲಿರಲಿ, ಸೇವೆಯೆಂಬುದು ಶ್ರೀಗಿರಿಯವರ ಬಳ್ಳಿ

ವಿ. ಇದರಿಂದಲೇ ಅವರು ಜನಪ್ರಿಯರಾಗಿದ್ದಾರೆ

ಶ್ರೀ ವಿ. ವಿ. ಗಿರಿಯವರು ತಮ್ಮ ಹೊಸ ಸೇವಾಕಾಲದಲ್ಲಿ ಸಂಪೂರ್ಣ ಯಶಸ್ಸು ಪಡೆಯಲಿ, ಉಳಿದವರಿಗೆ ಹಿಂದಿನವರಂತೆಯೇ ಮಾರ್ಗದರ್ಶಕರಾಗಲಿ.

ನೂತನ ರಾಷ್ಟ್ರಪತಿ

ಶಿಕ್ಷಣಜ್ಞ ಡಾ| ಜಾಕೀರ್ ಹುಸೇನ್

ಭಾರತದ ರಾಷ್ಟ್ರಪತಿಯಾಗಿ ೭೦ ವರ್ಷದ ಡಾ| ಜಾಕೀರ್ ಹುಸೇನ್ ಬಹುಮತದಿಂದ ಆಯ್ಕೆ ಹೊಂದಿದರು. ನಿವೃತ್ತರಾದ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರಂತೆಯೇ ಇವರು ಬಹು ದೀರ್ಘಕಾಲ ಶಿಕ್ಷಕರಾಗಿದ್ದವರು; ಶಿಕ್ಷಣರಂಗದಲ್ಲಿಯೇ ಹೆಸರು ಪಡೆದವರು.

ಡಾ| ಜಾಕೀರರದು ಸುಮಾರು ನಲುವತ್ತು ವರ್ಷಗಳ ಸಾರ್ವಜನಿಕ ಜೀವನ. ಇದರಲ್ಲಿ ಮೂವತ್ತು ವರ್ಷಗಳು ಅಲಿಗಡ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ, ಐದು ವರ್ಷಗಳು ರಾಜ್ಯಪಾಲರಾಗಿ, ಮತ್ತೈದು ವರ್ಷಗಳು ಉಪರಾಷ್ಟ್ರಪತಿಯಾಗಿ.

ಮಹಾತ್ಮಾ ಗಾಂಧಿಯವರ ಆಪ್ತರಾದ ಡಾ| ಜಾಕೀರರು ಮೂಲ ಶಿಕ್ಷಣದ ಜನ್ಮದಾತರೆಂದರೂ ತಪ್ಪಲ್ಲ. ಶ್ರೇಷ್ಠ ಸಾಂಸ್ಕೃತಿಕ ಮೌಲ್ಯಗಳ ಮೂರ್ತ ಸ್ವರೂಪಿ, ಮಾನವತಾವಾದಿ ಮತ್ತು ವಿಚಾರವಾದಿಗಳೆಂದಿವರು ಹೆಸರು ಪಡೆದಿದ್ದಾರೆ. ಉಪರಾಷ್ಟ್ರಪತಿಗಳೇ ರಾಜ್ಯಸಭೆಯ ಅಧ್ಯಕ್ಷರೂ ಆದುದರಿಂದ ಕಳೆದೈದು ವರ್ಷಗಳ ಕಾಲ ಡಾ| ಜಾಕೀರ್ ಹುಸೇನರು ಸರಕಾರಿ—ವಿರೋಧಿ ಪಕ್ಷದ ಸದಸ್ಯರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ತಿಳುವಳಿಕೆ ಮತ್ತು ಹೊಂದಿಕೊಳ್ಳುವಿಕೆಯು ಆಗತ್ಯವಿದೆ ಎಂಬ ಅರಿವನ್ನು ಅವರು ಹೊಂದಿದ್ದಾರೆ; ಸಂವಿಧಾನದ ಸಂರಕ್ಷಕರಾಗಿಯೇ ಹೊಸ ಮಹೋನ್ನತ ಹುದ್ದೆಗೇರಲಿದ್ದಾರೆ.

ಸೃಷ್ಟಿ ಸೌಂದರ್ಯ ವೀಕ್ಷಣೆಯಲ್ಲಿ ಹುಸೇನರಿಗೆ ಆಸಕ್ತಿ. ತಮ್ಮ ತೋಟವನ್ನು ಆಸ್ಥೆಯಿಂದ ನೋಡಿಕೊಳ್ಳುವುದೇ ಅವರ ಹಾಬಿ. ರಾಷ್ಟ್ರ ನಿರ್ಮಾಣಕಾರ್ಯದಲ್ಲೂ ಇವರದು ತುಂಬು ಹೃದಯದ ದುಡಿಮೆ. ದಿ| ಜವಾಹರಲಾಲರ ಅಚ್ಚುಮೆಚ್ಚಿನ ಈ ಭಾರತೀಯ ಮುಸ್ಲಿಮನು ಭಾರತದ ರಾಷ್ಟ್ರಪತಿಯಾಗಿ ಆಯ್ಕೆಗೊಂಡುದು—ನಮ್ಮ ದೇಶದ ಜಾತ್ಯತೀತತೆಗೊಂದು ಜ್ವಲಂತ ನಿದರ್ಶನ. ವಿದೇಶಿಯರದೂ ಇದೇ ಅಭಿಪ್ರಾಯ. ಇದು ಬರಿ ಅಭಿಪ್ರಾಯವಲ್ಲ, ಯಥಾರ್ಥ.

ಚಿಂತನ ಸತ್ಯವನ್ನು ಸರಳ ಶಬ್ದಗಳಲ್ಲಿ ಅಭಿವ್ಯಕ್ತಗೊಳಿಸುವ ಅಪೂರ್ವ ಕಲಾಕಾರ, ಶ್ರೇಷ್ಠ ಹಾಗೂ ಗಹನವಾದ ವಿಚಾರಗಳನ್ನು ಶ್ರೋತೃಗಳ ಮನಸ್ಸಿನ ಮೇಲೆ ಪ್ರಭಾವಯುತವಾಗಿ ಪ್ರತಿಬಿಂಬಿಸಬಲ್ಲ ಭಾಷಣಕಾರ—ಡಾ| ಜಾಕೀರ್.

ಉನ್ನತ ಮಟ್ಟದ ಶಿಕ್ಷಣ ವಿಚಕ್ಷಣರಾದ ಡಾ|| ಹುಸೇನರನ್ನುತ್ತಾರೆ: ರಚನಾತ್ಮಕ ಕಾರ್ಯದಿಂದ ಮಾತ್ರ ಮನಸ್ಸನ್ನು ಸುಸಂಸ್ಕೃತಗೊಳಿಸಬಹುದು. ಶಿಕ್ಷಣವು ಸಮತಳ ಭೂಮಿಯಲ್ಲಿ ಸಾವಕಾಶವಾಗಿ ಸಾಗುವ ನದಿಯಂತಿರಬೇಕು. ಶಿಕ್ಷಣವೆಂಬುದು ರಾಜ್ಯಕೀಯದ ಕೈಗೂಸಾಗಿರಬಾರದು.

ಡಾ| ಜಾಕೀರ್ ಹುಸೇನರ ನಾಮನಿರ್ದೇಶನದಿಂದ ತೊಡಗಿ ಅವರು ಆಯ್ಕೆಗೊಳ್ಳುವ ತನಕ ಅವರ ಬಗ್ಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅನುಕೂಲ -- ಪ್ರತಿಕೂಲ ಅಭಿಪ್ರಾಯಗಳು ವ್ಯಕ್ತವಾದುವು. ಇದು 'ಚುನಾವಣೆಯ ಆಹ್ವಾನ ಮಾತ್ರ, ಮುಂದಿನ ಐದು ವರ್ಷಗಳ ಕಾಲ ದೇಶದ ಕಲ್ಯಾಣ ಕಾರ್ಯದಲ್ಲಿ ಯಾವ ತೊಂದರೆಯೂ ತಲೆದೋರದು; ಬಾರದು.

ಮಿತಿಮೀರಿದ ತಾತ್ವಿಕ ನಿಷ್ಠೆಯಿಂದ ಕಾಂಗ್ರೆಸ್ಸು ಡಾ| ಜಾಕೀರರನ್ನು ರಾಷ್ಟ್ರಪತಿಯ ಸ್ಥಾನಕ್ಕೆ ಸೂಚಿಸಿತು. ಅದು ಅಪರಿಮಿತ ವಿಶ್ವಾಸದಿಂದಲೇ ಚುನಾವಣೆಯಲ್ಲಿ ಹೋರಾಡಿತು. ಅವರ ಆಯ್ಕೆಯಾದ ಮೇಲೆ, ಬರಿಯ ಕಾಂಗ್ರೆಸ್ಸು ಮಾತ್ರವಲ್ಲ, ಎಲ್ಲ ಭಾರತೀಯರೂ ಅವರಲ್ಲಿ ವಿಶ್ವಾಸವಿಟ್ಟಿದ್ದಾರೆ.

ಜನತೆ ತನ್ನಲ್ಲಿಟ್ಟಿರುವ ವಿಶ್ವಾಸದ ಬಲದಿಂದ ದೇಶದ ಗೌರವ— ಸ್ಥಾನಮಾನಗಳ ಸಂವರ್ಧನೆಗೆ ಡಾ| ಜಾಕೀರ್ ಹೋರಾಡುವರು; ಅವರ ಈ ಉನ್ನತ ಸ್ಥಾನಾರೋಹಣ ಉಪಚಾರಿಗಳ ಮನಃ ಪರಿವರ್ತನಕ್ಕೆ ನಾಂದಿಯಾಗಲಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S C. 68/67

ವಾದಿ:—P. ಮಾಧವರಾವ್ (ರಿಸೀವರ್)
ಪ್ರತಿ:—ಸೂರಪ್ಪ ಸೆಟ್ಟಿ

ಈ ನಮೂಲ್ಕ ಪ್ರತಿವಾದಿಗೆ ತಿಳಿಸುವುದೇನೆಂದ್ರೆ:—

ಪ್ರತಿವಾದಿಯಿಂದ ಬರತಕ್ಕ ಗೇಣಿ ಬಾಕಿ ಬಗ್ಗೆ ವಾದಿಯು ಮೇಲ್ಕಾಣಿಸಿದ ದಾವೆ ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ. 9—6—67 ಕ್ಕೆ ತನಿಖೆಗೆ ಇದೆ. ಆಕ್ಷೇಪ ಇದ್ದಲ್ಲಿ ಆ ದಿವಸ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು.

(ಹುಕುಂ ಪ್ರಕಾರ)

H. Laxminarayanyya
Advocate for Plaintiff

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. C£-4.17-4/65-66 dated 26—4—1966.

ಕಿರು ಹರಟೆ

ರಾಜಕೀಯ 'ದರ್ಶನಾವಲೋಕನಂ

ಏನ್ರಿ ಸಮಾಚಾರ ಮಿ. ಪಿಂಡಪ್ರಿಯ ……..

ರಾಷ್ಟ್ರಪತಿ ಚುನಾವಣೆ…ಅದಕ್ಕೆ….

ಅದಕ್ಕೆ….? ನಾವೇನು ಮಾಡ್ಬೇಕು. ಈ ಇಲೆಕ್ಷನಿನ ಜೊತೆಗೆ ನಮ್ಮ ಕಲೆಕ್ಷನ್ ಚೆನ್ನಾಗಿದ್ರೆ ಸಿಲೆಕ್ಷನಿಗೆ ಕಾದಿರಬಹುದಿತ್ತು ಆದರೆ……

ಆದ್ರೆ?

ನಮ್ಮ ಹಲವಾರು ಕೊಶ್ಚನ್‌ಗಳಿವೆಯಲ್ಲಾ!

ಅಂದ್ರೆ! ಅದು……

ಫುಡ್ ಕೊಶ್ಚನ್ನು……ಲ್ಯಾಂಗ್ವೇಜು ಕೊಶ್ಚನು….ಇನ್ನು ಬೋರ್ಡರ್ ಪ್ರೋಬ್ಲೆಮು….ಇತ್ಯಾದಿ, ಇತ್ಯಾದಿ.

ಆದಕ್ಕೂ ರಾಷ್ಟ್ರಾಧ್ಯಕ್ಷರಿಗೂ ಅದೇನು ಸಂಬಂಧ?….

ಅವ್ರು ನಮ್ ದೇಶದ ಹೆಡ್ಡು (Head of the nation).

ಅವ್ರನ್ನು ದೂರಿದ್ರೆ ಪಂಚ ಮಹಾಪಾತಕಗಳಲ್ಲೊಂದು ನಮ್ಮ ಪಾಲಿಗೆ ಪ್ರಾಪ್ತವಾದೀತು.

ಏನು ಪಾತಕವೋ? ಜಾತಕವೋ?

ಅಂತೂ ಮಂತ್ರಿಗಳ ಜಾತಕಫಲವೆಲ್ಲ ಗೊತ್ತಾಯ್ತಲ್ಲ.

ಶತಮಾನವಿಡೀ ಜಾರಿ ಬೀಳಲಿಕ್ಕಿಲ್ಲ ಎಂದು ಸೀಟು ಪರ್ಮನೆಂಟ್ ಮಾಡಿಕೊಂಡವರು ಸಹ ಮನೆಗೆ ಹೋದ್ರಲ್ಲಾ……..

ಅಂದ್ರೆ ಜನತೆಯ ಮನೋ ನಿರ್ಧಾರವೇ ಹಾಗೆ- ಹಳೆಯುದನ್ನು ತೊಳೆದು ಹೊಸತನ್ನು ಹೊಸೆಯುವಂತೆ ಹೊಸ ಹೊಸ ಮುಖಗಳುಬೇಕೆಂಬ ಅಭಿಲಾಷೆ, ಆದಕ್ಕಾಗಿ ಕೆಲವೆಡೆ 'ಹೊಸತಿ'ನ ಪ್ರಯೋಗ.

ಇದೂ ಒಂದು ಎಕ್ಸಪರಿಮೆಂಟು….

ಅಂದ್ರೆ ಹೊಸ ಹೊಸ ಅರೇಂಜುಮೆಂಟು….

ಆಗಲಿಕ್ಕಿದೆ ಅಂತ ನೀವು ಹೇಳುವುದೋ…

Of couse.

ಏನೋ? ಎಲ್ಲೆಲ್ಲೂ ನಿರುತ್ಸಾಹ…

ಉತ್ಸಾಹ ಬರಬೇಕಾದ್ರೆ ಉತ್ಸವವನ್ನು ತರುವಂತಹ ಇಂಪ್ರೂವ್‌ಮೆಂಟ್ಸ್ ಆಗಬೇಕು ಅಂತ…

ಇಂಪ್ರೂವ್‌ಮೆಂಟ್ಸ್…ಹ್ಹಹ್ಹಹ್ಹ. ಆದರ ಬದಲು ಸ್ಯಾಂಡಾಮೆಂಟ್ಸು ಮಾಡುವವರೇ ಡಬ್ಬಲ್ ಸ್ಟ್ಯಾಂಡೆಡ್ ಜನರೇ ಸ್ಯೆಂಟಿಪರ್ಸೆಂಟು ಇರುವಾಗ ಎಲ್ಲಾ ಗಡಿಬಿಡಿ ನಂಟು.

ಪೀಠದಲ್ಲಿ ರಾರಾಜಿಸಲು ಹವಣಿಸುವವರೇ ಹಲವು ಮಂದಿ. ಸಮಾಜೋದ್ಧಾರಕ್ಕೆ ಟೊಂಕ ಕಟ್ಟಿ ದುಡಿಯುವವರು ಅಪರೂಪ. ಕೆಲವರು ಕೆಸರಲ್ಲಿ ಕಮಲವಿರುವಂತೆ…

ಅದೇನ್ರಿ, ಕಮಲದಲ್ಲಿ ಕೆಸರು….?

ನಿಮ್ಮದೆಲ್ಲಾ ಉಪಟಾಟೆ. ತಿರ್ಗಾ ಮುರ್ಗಾ. ತಲೆ ಕೆಳಗು ನನ್ನದೇನೊಂದು ಇಸ್ಪೇಟಲ್ಲಾ? ಸಮಾಜವೇ ಉಪಟಾಟೆ. ಯೋಜನೆಗಳೆಲ್ಲಾ ಉಲ್ಟಾಪಲ್ಟಾ. ಎಲ್ಲಾ ಕಾಗದದ ಹುಲಿಗಳು ಪೇಪರ್ ಟೈಗರ್ ಅಂತಾರಲ್ಲಾ?

ಮತ್ತೆ 'ಈಟಿಂಗ್ ಟೈಗರ್'ಗಳೂ ಇವೆ ಅನ್ನಿ.

'ಹಳೆಯ ತಲೆಯನ್ನು ಕಳೆದು|
ಹೊಸತು ತಲೆಯನು ತಳೆದು |

ಬಂತು ನೋಡದೊ ಮುಖವು ಹೊಸತು ಮುಖವ? ಆದೇನು ಹೊಸ ಮುಖ?

ಹೊಸಮುಖ ಬರಲಿಕ್ಕಿದೇಂತ. ಸುತ್ತಿ ಸುತ್ತಿ ಬಂದದ್ದು ಹೋದಲ್ಲಿಗೆ.

ಎಲ್ಲಿಗೆ?…

ಪ್ರೆಸಿಡೆಂಟು….ಇಲೆಕ್ಷನು. ಸುಬ್ಬರಾಯರನ್ನು……

ಹೌದು….ಹೌದು. ವಿರೋಧ ಪಕ್ಷ ಒಕ್ಕಟ್ಟಾಗಿ ಟೊಂಕ ಕಟ್ಟಿತ್ತು.

ಆದಕ್ಕಾಗಿಯೇ ಸುಬ್ಬರಾಯರನ್ನು ನಿಲ್ಲಿಸಿದ್ದೆ?

ಅಂದ್ರೆ ಅವರು ಮೊದ್ಲು ಕೂತಿದ್ರೊ?

ಹಾಗಲ್ಲ. ಮಿ. ಪಿಂಡಪ್ರಿಯ. ಸ್ಪರ್ಧಾಳುವಾಗಿ… ಓಹೋ, I see. ಕಾಂಪಿಟೀಟರ್ ಆಗಿ ನಿಂತದ್ದು. ಆವರಿಗೆ ಸಾಕಷ್ಟು ಬೆಂಬಲವಿದೆ ಅಂತ……ಪೇಪರಿನಲ್ಲಿ ಬಂದಿದೆ ಅಂತ……

ನಾನು ಓದಿದ್ದೆ.

ಅವರಿಗೇ ಖಡಾಖಂಡಿತ ಜಯ…

ಅದು ಹೇಗೆ ಅಷ್ಟು ಶುವರ್ (sure) ಆಗಿ ಹೇಳಿದ್ರಿ. ಪಿ. ಪಿಂಡ ಪ್ರಿಯ… ನಿಮಗೇನು ಪೂರ್ಣ ಹೇಳುವ ವರೆಗೆ ಪೇಶನ್ಸ್ ಇಲ್ಲ.

What patience? ಅವರಿಗೇ… ಅವರಿಗೇ ಜಯ ಅಂತ ವಿರೋಧ ಪಕ್ಷಗಳ ಮುಖಂಡಾನು ಮುಖಂಡರು, ರಾಜಕೀಯ ಧುರೀಣರುಗಳು, ಹೇಳುತ್ತಿದ್ದ ಸೊಲ್ಲುಗಳು….ಆದರೆ…

ಅದ್ ಅಪ್ಪಡಿಯಾ! ಅವಾ….ಪಾರ್ಕಲಾಮಾ…

—ಶ್ರೀ ಮು. ಗೊ. ರಾವ್.

ವಾರ್ಷಿಕ ಸಮಾರಂಭ

ಉಡುಪಿ ಮೇ 11— ಉಡುಪಿ ಮೋಡರ್ನ್ ಸ್ಕೂಲ್ ಓಫ್ ಕಾಮರ್ಸಿನ ವಾರ್ಷಿಕ ಸಮಾರಂಭವು ತಾ. 7—6—1967ರಂದು ಜಿ. ಜಿ. ಜೋರ್ಜ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿತು.

ಪ್ರಾರ್ಥನೆಯಾದ ಬಳಿಕ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಟಿ. ಎ. ವಾಸುದೇವನವರು ಅಧ್ಯಕ್ಷರನ್ನೂ, ಅತಿಥಿಗಳನ್ನೂ ಸಭಿಕರಿಗೆ ಪರಿಚಯಮಾಡಿಸಿ, ಶಾಲೆಯ ವರದಿಯನ್ನು ಸವಿವರವಾಗಿ ತಿಳಿಸಿದರು. ಹಾಗೂ ಈ ಬಾರಿ ಪರೀಕ್ಷೆಗೆ ಕುಳಿತುಕೊಳ್ಳುವವರು ಒಳ್ಳೆಯ ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತರಲೆಂದು ಹಾರೈಸಿದರು. ಮುಖ್ಯ ಅತಿಥಿಗಳಾದ ಎನ್. ಸೀತಾರಾಮ ಕಾಮತರು ಉಡುಪಿಯಲ್ಲಿ ಈ ಶಾಲೆಯ ಮಹತ್ಸಾಧನೆ ಮತ್ತು ಅಭಿವೃದ್ಧಿಯ ವೇಗದ ಕುರಿತು ಮಾತನಾಡಿ ಈ ಶಾಲೆಗೆ ಮುಂಚೆ ನನ್ನಿಂದ ಆದಷ್ಟು ಸಹಾಯ ಮಾಡಿದ್ದೇನೆ, ಇನ್ನೂ ಮಾಡ ಬಲ್ಲೆ ಎಂದು ಭರವಸೆ ಕೊಟ್ಟರು. ಕ್ರಿಶ್ಚಿಯನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಎಲ್. ಬಿ. ಅನ್ನಾಜಿನವರು ಶಾಲೆಯ ಪ್ರಗತಿಯನ್ನು ಪ್ರಶಂಸಿಸಿ ಅದಕ್ಕೆ ಕಾರಣರಾದ ಟಿ. ಎ. ವಾಸುದೇವನರ ಸಾಮರ್ಥ್ಯವನ್ನು ಶ್ಲಾಘಿಸಿದರು. ಸಭಿಕರ ಪರವಾಗಿ ಬಿ. ರೋಹಿದಾಸ್ ನಾಯಕ್ ಮತ್ತು ಗೋಕುಲದಾಸ್ ಪೈಯವರು ಮಾತನಾಡಿದರು. ನಂತರ ಅಧ್ಯಕ್ಷರು ಶಾಲೆಯ ಪುರೋಭಿವೃದ್ಧಿ ಕುರಿತು ಮಾತನಾಡಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತರಲೆಂದು ಶುಭಕೋರಿದರು. ಬಿ. ರೋಹಿದಾಸ್ ನಾಯಕರಿಂದ ಧನ್ಯವಾದ ಸಮರ್ಪಣೆಯಾದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ದೀರ್ಘಾಯುಷಿಗಳ ಸಂಖ್ಯೆಯೇರಿದರೆ?

ನಿವೃತ್ತಿಯ ವಯಸ್ಸು ಎಷ್ಟು?

ಪಶ್ಚಿಮ ಜರ್ಮನಿಯ ಸಮಾಜದ ರಚನೆಯಲ್ಲಿ ,ಹಲವಾರು ಗಮನಾರ್ಹ ಬದಲಾವಣೆಗಳು ಕಂಡು ಬರುತ್ತಿವೆ. ಜರ್ಮನರಲ್ಲಿ ದೀರ್ಘಾಯುಗಳ ಸಂಖ್ಯೆ ಹೆಚ್ಚುತ್ತಿರುವುದು ಇದಕ್ಕೆ ಒಂದು ಕಾರಣ. ಈ ಹಿಂದೆ ಎಂದೂ ಇಲ್ಲದಷ್ಟು ಹಿರಿಯ ವಯಸ್ಕರು ಇಂದು ಪಶ್ಚಿಮ ಜರ್ಮನಿಯಲ್ಲಿ ಕಂಡು ಬರುತ್ತಿರುವರು.

ಪಶ್ಚಿಮ ಜರ್ಮನಿಯ ಸಮಾಜದ ರಚನೆಯಲ್ಲಿ ಇತ್ತೀಚೆಗೆ ಗಮನಾರ್ಹ ಬದಲಾವಣೆಗಳಾಗಿರುವುದು ಮ್ಯೆಂಜ್ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸಮೀಕ್ಷೆಯಿಂದ ತಿಳಿದು ಬಂದಿದೆ. ಈ ಬದಲಾವಣೆಗಳು ಜನರ ವಯೋವ್ಯತ್ಯಾಸಗಳಿಂದುಂಟಾಗಿದೆಯೆಂದು ಸಮೀಕ್ಷೆಯಿಂದ ವಿದಿತವಾಗಿದೆ. ಹಿರಿಯ ವಯಸ್ಕರ ಸಂಖ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ಈಗಿನ ಪಶ್ಚಿಮ ಜರ್ಮನಿಯ ಜನಸಂಖ್ಯೆ ೫೮೦ ಲಕ್ಷ ಇದರಲ್ಲಿ ೭೦ ಲಕ್ಷ ಮಂದಿ ೬೫ ವರ್ಷದವರು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು. ಒಂದು ದಶಲಕ್ಷ ಮಂದಿ ೮೦ ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು.

೧೯೮೦ರ ವೇಳೆಗೆ ಹಿರಿಯ ವಯಸ್ಕರ ಸಂಖ್ಯೆ ಶೇ.೧೪.೪ಕ್ಕೇರಬಹುದು. ಸಮೀಕ್ಷೆ ನಡೆಸಿರುವ ಪ್ರೊ|ಕಾಲಂರವರಪ್ರಕಾರ ಇವರಈಗಿನ ಪ್ರಮಾಣಶೇ.೧೨ಮಾತ್ರ. ಶೇ.೧೪ ಕ್ಕಿಂದ ಇವರ ಪ್ರಮಾಣ ಮತ್ತೆ ಶೇ.೧೩ಕ್ಕಿಳಿದು ಅನಂತರಲ ಪ್ರಮಾಣದಲ್ಲಿಯೇ ಸ್ಥಿತ್ಯಂತರವಾಗ ಬಹುದೆಂಬು… ಪ್ರೊ| ಕಾಲರ್‌ರ ಭವಿಷ್ಯವಾಣಿ.

ಮಧ್ಯಯುಗಗಳಲ್ಲಿ ಜರ್ಮನರ ಸ… ಸರಿ ಆಯುಃ ಪ್ರಮಾಣ ಕೇವಲ… ವರ್ಷವಾಗಿತ್ತಂತೆ; ೧೯೧೦ರ ವೇಳೆಗೆ… ದು ೪೭ ವರ್ಷಗಳಿಗೇರಿತು. ಈಗ ೭೪ ವರ್ಷ. ೧೯೧೦ರಿಂದೀಚೆಗೆ ೭೦ ವರ್ಷ ವಯಸ್ಕರ ಸಂಖ್ಯೆ ದ್ವಿಗುಣಗೊ… ದೆ. ಗಂಡಸರಿಗಿಂತ ಹೆಂಗಸರ ಸಂ… ಹೆಚ್ಚಾಗಿರುವುದು ಗಮನಾರ್ಹ ಸಂ… ಗಂಡಸರಿಗಿಂತ ಹೆಂಗಸರು ಹೆಚ್ಚು… ರ್ಘ ಕಾಲ ಬದುಕುವುದೂ ಹಾಗೂ… ಡನೆಯ ವಿಶ್ವಯುದ್ಧದಲ್ಲಿ ಗಂಡಸ… ಅಧಿಕ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟುದೂ… ಪ್ರಮಾಣ ವ್ಯತ್ಯಯಕ್ಕೆ ಕಾರಣವೆಂ… ಹೇಳಲಾಗಿದೆ.

ಮ್ಯೆಂಜ್ ವಿಶ್ವವಿದ್ಯಾನಿಲಯ ಹಿ… ವಯಸ್ಕರ ಬಗ್ಗೆ ಅಧ್ಯಯನ ನಡೆ… ರುವುದು. ಅವರ ಸಂಖ್ಯೆ ತಿಳಿ… ವುದಕ್ಕಲ್ಲ. ಅವರ ಬಗೆಗಿನ ಸಾಮಾ… ಕ ಅಧ್ಯಯನ ನಡೆಸುವುದಕ್ಕಾ… ವಯಸ್ಸಾದಂತೆ ದೈಹಿಕ ಹಾ… ಮಾನಸಿಕ ಶಕ್ತಿಗಳು ಕುಗ್ಗುವುದೆಂಬು… ಎಲ್ಲರ ಬಗ್ಗೆಯೂ ಹೇಳಬರುವಂತಿಲ್ಲ… ಬುದು ಈ ಅಧ್ಯಯನದಿಂದ ತಿಳಿದು… ದಿದೆ. ಅನೇಕ ಹಿರಿಯ ವಯಸ್ಕರು ದೈ… ಕ ಮತ್ತು ಮಾನಸಿಕ ಶಕ್ತಿಗಳನ್ನು ಪ… ರ್ಣವಾಗಿ ಹೊಂದಿರುವುದು ಕಂಡು… ದಿದೆ. ಇದರಿಂದಾಗಿ ವ್ಯಕ್ತಿ ವಿಶ್ರಾಂತಿ… ಯಸ್ಸಾವುದೆಂಬುದು. ಈಗ ಜರ್ಮನಿಯ… ಆಂದೋಲನವೆಬ್ಬಿಸಿದೆ.

ಕುಂದಾಪುರ "ರೂಪರಂಗ"ದ ಮಹಾಸಭೆ

ಕುಂದಾಪುರದ ಲಲಿತಾಕಲಾ ಸಂಸ್ಥೆ 'ರೂಪರಂಗ'ದ ವಾರ್ಷಿಕ ಮಹಾಸಭೆಯು ತಾ. 7ರಂದು ರೋಟರಿ ಕಾರ್ಯಾಲಯ 'ಕೃಷ್ಣವಾಸ'ದಲ್ಲಿ ಡಾ| ಎಚ್. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಪ್ರಾರ್ಥನೆಯಾದ ಬಳಿಕ… ಧ್ಯಕ್ಷರು ಸ್ವಾಗತಿಸಿದರು. ತರುವಾಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ರಾಮಚಂದ್ರ ಐತಾಳರು "ರೂಪರಂಗ"ದ ಚಟುವಟಿಕೆಗಳ ವರದಿಯನ್ನಿತ್ತರು. ಮುಂದಿನ ವರ್ಷದ ಕಾರ್ಯಕಾರೀ ಸಮಿತಿಗೆ ಈ ಕೆಳಗಿನವರನ್ನು ಆರಿಸಲಾಯಿತು. ಅಧ್ಯಕ್ಷರು–ಡಾ| ಎಚ್. ವೆಂಕಟರಮಣಯ್ಯ, ಉಪಾಧ್ಯಕ್ಷ… ಶ್ರೀ ಎಂ. ಎಂ. ಹೆಗ್ಡೆ, ಕೋಶಾಧಿಕಾರಿ ಶ್ರೀ ಕೆ. ರಾಮಚಂದ್ರ ಕೊತ್ವಾಲ್, ಜತೆಕಾರ್ಯದರ್ಶಿ—ಶ್ರೀ ಎ. ಶಂಕರ ನಾರಾಯಣ ಹೆಬ್ಬಾರ್, ಎಡ್ವೊಕೇಟ್. ಸದಸ್ಯರು ಸರ್ವಶ್ರೀ… ಚ್. ಎನ್. ನಕ್ಕತ್ತಾಯ, … ವ್, ಯು. ಗಣಪತಿ ಮ್ಯಪಾಡಿ, ಕಟೀಲ್ ನಾರಾಯಣ ಸ್ಯ. ಪಿ. ಜನಾರ್ಧನ ರಾವ್, … ನಾರಾಯಣ ಶ್ಯಾನುಭಾಗ, ಪಿ. ವಿ. ಕಾರಂತ, ಬಿ. ರತ್ನಾಕರ ಚಪ್ಪೇಗಾರ್, ಬಿ. ಸುಬ್ರಾಯ ಆಚಾರ್ ಮತ್ತು ಜಿ. ಕುಶಲ ಹೆಗ್ಡೆ.

ಶ್ರೀ ಕೆ. ರಾಮಚಂದ್ರ ಕೊತ್ವಾಲ್ ಮ… ತ್ತು ಎ. ಶಂಕರನಾರಾಯಣ ಹೆಬ್ಬಾರ್ ಸ… ತನಾಡುತ್ತಾ ಸಂಸ್ಥೆಯು ಮುಂದೆ ಕೈಗೊಳ್ಳಬಹುದಾದ ಕಾರ್ಯಕ್ರಮಗಳನ್ನು ವಿವರಿಸಿದರು. ಅಧ್ಯಕ್ಷರು ಸಂಸ್ಥೆಗೆ ಶುಭಕೋರಿ ಮಾತನಾಡಿದ ಮೇಲೆ ಶ್ರೀ ಎಂ. ಎಂ. ಹೆಗ್ಡೆಯವರು ವಂದನಾರ್ಪಣೆ ಗೈದರು.

M. G. M. COLLEGE OLD STUDENTS' ASSOCIATION,

UDIPI - 2, S. Kanara

Prof. P. Narayana Iyengar who has served the alma mater for decades, has retired from service this academic year.

As an expression of our regard and affection for Prof. Iyengar, the Association intends to present to him a Purse.

This, therefore, is an appeal to all the old students of the college to contribute generously, towards the purse. Amounts may be credited to S. B. Account No. 11234, "PROF. P. N. IYENGAR FAREWELL FUND" Account of Syndicate Bank Ltd., Udipi, Local Office, or send to the Treasurer, M. G. M. College Old Students' Association, Udipi-2 by about the 1st of June 1967. The presentation of the Purse will take place on a later date to be duly announced.

UDIPI-2, 20—4—1967. | N. S. PRABHU, President. | K. BHASKARA KINI, Secretary.

ಎರಡು ಜೇ ಹಕ್ಕಿಗಳು

(ಎರಡನೇ ಪುಟದಿಂದ)

ಹರಿಯುವ ಸದ್ದಿನಂತಿತ್ತು. ಕಾಡುಬೆಕ್ಕು ಸುಖವಾಗಿ ನಿದ್ರೆಯಲ್ಲಿ ಮುಳುಗಿತು. ಅರಣ್ಯದಲ್ಲಿ 'ಜೇ' ಸಂಸಾರ ನಿರಾಶವಾಗಿ ಹೋಗಿದ್ದರೂ ಅದೇ ಶಾಂತತೆ ನೆಲಸಿತ್ತು. ಅದೇ ನಕ್ಷತ್ರಗಾನ ಕೇಳಿಸುತ್ತಿತ್ತು. ಅಶಾಂತಿ ಇದ್ದುದೆಲ್ಲಾ ಗಂಡು 'ಜೇ' ಹಕ್ಕಿಯ ಹೃದಯದಲ್ಲಿ ಮಾತ್ರ ವೆಂದೆನ್ನಬಹುದು!

ಮಬ್ಬು ಹರಿಯುವ ಲಕ್ಷಣಗಳು ಒಂದೊಂದಾಗಿ ತೋರಿ ಬರಲಾರಂಭಿಸಿದವು. ಕಾಡಿನ ಹಕ್ಕಿಗಳ ಮೆಲ್ಲುಲಿಕೆ ಆರಂಭವಾಯಿತು. ಸೂರ್ಯ ಇನ್ನೂ ಪ್ರತ್ಯಕ್ಷನಾಗದಿದ್ದರೂ, ಅವನ ಕಿರಣಗಳು ಸಾಕಷ್ಟು ಬೆಳಕನ್ನು ಪಸರಿಸಿದವು.

ಗಂಡು "ಜೇ'ಗೆ ಅಷ್ಟೇ ಬೇಕಾಗಿತ್ತು!

ಗೂಡಿದ್ದ ಕಡೆಗೆ ಕುತೂಹಲದಿಂದ ಅದು ದೃಷ್ಟಿಯನ್ನು ಹರಿಸಿತು. ಹಿಂದಿನ ರಾತ್ರಿ ಇದ್ದ ಜಾಗದಲ್ಲಿ ಗೂಡು ಇರದಿರಲು, ಅದಕ್ಕೆ ಧಸಕ್ಕೆಂದಿತು. ಗೂಡನ್ನು ಹೊಂದಿಕೊಂಡಿದ್ದ ರೆಂಬೆಯು ಗಾಳಿಯಲ್ಲಿ ಓಲಾಡಿತು. ಆದರೆ, ಅದರ ಓಲಾಟ ನಿತ್ಯದಂತೆ ಕಂಡು ಬರಲಿಲ್ಲ. ಗಂಡು ಹಾರಿ ಬಂದು ನೋಡಿತು.

ಹಿರಿಯಾಸೆಯಿಂದ ಕಟ್ಟಿದ್ದ ಆದರ ಗೂಡಿನ ಚೂರುಗಳು ಬ್ರಹ್ಮಾಂಡದಂತಿದ್ದ ಆ ಮರದ ಬುಡದಲ್ಲಿ ಚದರಿ ಬಿದ್ದಿದ್ದು ತಮಗೆ ಒದಗಿದ್ದ ದುರವಸ್ಥೆಯನ್ನು ಹೇಳಿಕೊಂಡವು. ಹರಡಿ ಬಿದ್ದಿದ್ದ ಹೆಣ್ಣು 'ಜೇ' ಪುಕ್ಕಗಳು ಕಥೆಯೊಡನೆಗೊದಗಿದ ಕರುಣ ಕಥೆಯನ್ನು ತಿಳಿಸಿದವು.

ಗಂಡು 'ಜೇ'ಗೆ ಹೃದಯ ಗಂಟಲಿಗೆ ಬಂದು ಅಡಚಿಕೊಂಡಿತು!

ಆದರ ಕಂಠದಿಂದ ಹೊರಹೊಮ್ಮಿದ ಕರುಣಾಕ್ರಂದನವು ಕಾಂತಾರದಲ್ಲಿ ಶೋಕದ ಧ್ವನಿಯನ್ನು ಹರಿಯಿಸಿತು. ಎಷ್ಟೋ ಹೊತ್ತು, ಅದು ಹಾಗೆಯೇ ವಿಲಪಿಸುತ್ತಿತ್ತು.

ಸೂರ್ಯ ನಿಚ್ಚಳವಾಗಿ ಮೇಲೆದ್ದು ಬಂದ! ಅರಣ್ಯವು ತನ್ನ ನಿತ್ಯದ ರೂಪವನ್ನು ತಳೆಯ ತೊಡಗಿತು. ಕೆಂಪನೆಯ ಆಗಸದ ಹೊಂಬೆಳಕಿನಲ್ಲಿ ಮರಗಳೆಲ್ಲಾ ಮಿಂದು ನಿಂತವು.

ಉಳಿದ ಮರಗಳಂತೆ, ಬೃಹತ್ ವೃಕ್ಷದ ಎಲೆಗಳು ಚರಚರನೆ ಸದ್ದು ಮಾಡತೊಡಗಿದವು. ಆದರ ರೆಂಬೆಗಳು ಉಯ್ಯಾಲೆಯಾಡತೊಡಗಿದವು.

ಜೇ ಹಕ್ಕಿಯ ಹೊಟ್ಟೆಯು ಚುರುಗುಟ್ಟಿತು!

ಕಣ್ಣಿಗೆ ಕಂಡ ಒಂದೆರಡು ಕಾಳುಗಳನ್ನು ನುಂಗಿ ಹಸಿವೆಯನ್ನು ಶಮನ ಮಾಡಿಕೊಂಡಿತು. ಅದಕ್ಕೆ ಯಾವುದರಲ್ಲೂ ಮನಸ್ಸೇ ಇರಲಿಲ್ಲ. ಗೂಡಿದ್ದ ಕಡೆಗೆ ಹೋಗಿ ಮತ್ತೆ ಕೆಲಕಾಲ ನಿಂತಿತ್ತು.

ಕಾಡಿನ ಬೇರೆ ಬೇರೆ ಹಕ್ಕಿಗಳು ಎಬ್ಬಿಸಿದ ಸಂಗೀತದ ಧ್ವನಿಯು ಅದನ್ನು ಪೆಟ್ಟಿಟ್ಟು ಎಬ್ಬಿಸಿದಂತಾಯಿತು. ಹಕ್ಕಿಗಳ ಸಾಮೂಹಿಕ ಗಾನ ಅದರಲ್ಲಿ ಮತ್ತೆ ಒಂದು ವಿಧವಾದ ಲವಲವಿಕೆಯನ್ನು ಹರಿಯಿಸಿತು.

ಮರುದಿನ ಕ್ಷಣ ಅದರ ಜಡತೆ ಎಲ್ಲಿ ಮಾಯವಾಯಿತೋ!

ಅದು ರೆಕ್ಕೆಗಳನ್ನು ಟಪಟಪನೆ ಬಡಿಯಿತು!

ಹಿಂದು ಬರುತ್ತಿದ್ದ ಗಾನಸುಧೆ ಅದನ್ನು ಹಿಡಿದು ಸೆಳೆಯಿತು!

ಹಾಡುವ ಹಕ್ಕಿಗಳೊಂದಿಗೆ ಕಲೆತುಕೊಳ್ಳಲು ಅದು ಪುರ್ರನೆ ಹಾರಿ ಹೋಯಿತು!

ಅಮೃತ ಬಿಂದು

ಸುಳ್ಳು ಹೇಳುವುದು ತೀರಾ ಸುಲಭ ಆದರೆ ಒಂದೇ ಸುಳ್ಳು ಹೇಳುವುದು ಮಹಾ ಕಷ್ಟ.

o o o o

ಜಗತ್ತಿನ ಬಹುತೇಕ ದುಷ್ಪ್ರವೃತ್ತಿಗಳಿಗೆ ಹೇಡಿತನವೇ ಕಾರಣವಾಗಿದೆ. ಸುಳ್ಳಾಡಲು ಹೆದರುವ ಮನುಷ್ಯನು ಬೇರಾವುದಕ್ಕೂ ಹೆದರಲಾರ.

o o o o

ಸುಳ್ಳನ್ನು ಹಿಂಬಾಲಿಸದಿದ್ದರೆ ಅದರ ಪ್ರಕೃತಿ ಅದು ಸಾಯುತ್ತದೆ. ಅದರ ಬೆಂಬತ್ತಿದರೆ ಅದು ನೂರು ಮುಖದಿಂದ ಹಬ್ಬುತ್ತದೆ.

o o o o

ವಿರಾಮ ಯಾ ವಿಶ್ರಾಂತಿ ಎಂದರೆ ಕೆಲಸ ಬಿಟ್ಟು ನಿಷ್ಕ್ರಿಯನಾಗಿ ಕೂಡುವುದಲ್ಲ. ಮನ ಮುಟ್ಟಿ ಅರ್ಪಿಸಿಕೊಂಡ ಕಾಯಕವೇ ವಿಶ್ರಾಂತಿದಾಯಕ.

o o o o

ಆತ್ಮ ಸಂರಕ್ಷಣೆಯು ಪ್ರಕೃತಿಯ ಪರಮ ನಿಯಮ. ಆತ್ಮ ತ್ಯಾಗವು ಮಾನವತೆಯ ಚರಮ ಗುಣ.

o o o o

ನಿಸ್ವಾರ್ಥವನ್ನು ಬೋಧಿಸುವ ಮುರುಕು ವಿದ್ಯೆಯಾದರೂ ಸ್ವಾರ್ಥವನ್ನು ಬೋಧಿಸುವ ಚುರುಕು ವಿದ್ಯೆಗಿಂಥಾ ಮೇಲು.

o o o o

ತನ್ನ ಹಿತವನ್ನು ಸಾಧಿಸುವವನನ್ನು ಯಾರೂ ಸ್ವಾರ್ಥಿ ಎಂದು ಹೇಳುವುದಿಲ್ಲ; ಆದರೆ ತನ್ನ ಹಿತಕ್ಕೆ ಇನ್ನೊಬ್ಬರನ್ನು ಬಲಿಕೊಡುವವನು ಸ್ವಾರ್ಥಿಯಾಗುತ್ತಾನೆ.

ಪ್ರತಿ ವರ್ಷವೂ ಉನ್ನತಿಯೆಡೆಗೆ...

ಕೆನರಾ ಬ್ಯಾಂಕಿನ
ಸಾಧನ ಸಂಪತ್ತು
ರೂ. 123
ಕೋಟಿಗಳಿಗೂ ಮೀರಿದೆ



31-12-1966 ರಲ್ಲಿ

ಡಿಪಾಸಿಟ್‌ಗಳು	..	ರೂ. 114.04 ಕೋಟಿ
ಪಾವತಿಯಾದ ಬಂಡವಾಳ	..	ರೂ. 1.25 ಕೋಟಿ
ಕ್ಷೇಮ ನಿಧಿ	..	ರೂ. 1.36 ಕೋಟಿ
ವಿನಿಯೋಗಗಳು (ಇನ್ವೆಸ್ಟ್‌ಮೆಂಟ್ಸ್)		ರೂ. 36.35 ಕೋಟಿ
ಮುಂಗಡಗಳು (ಅಡ್ವಾನ್ಸಸ್)		ರೂ. 66.39 ಕೋಟಿ
ಸಾಧನ ಸಂಪತ್ತು	..	ರೂ. 123.57 ಕೋಟಿ

ನಿವ್ವಳ ಲಾಭ — ರೂ. 35.67 ಲಕ್ಷ

ಎಲ್ಲಾ ವಿಧಗಳಲ್ಲಿಯೂ ಸ್ಮರಣೀಯ ವರ್ಷವಿದು. ನಮ್ಮ ವಜ್ರಮಹೋತ್ಸವದ ವರ್ಷವು ನಾವು 60 ವರ್ಷ ರಾಷ್ಟ್ರದ ಸೇವೆಯನ್ನು ಯಶಸ್ವಿಯಾಗಿ ಮಾಡಿದ್ದರ ಹೆಗ್ಗುರುತಾಗಿದೆ. ಕೆನರಾ ಬ್ಯಾಂಕು ಅಧಿಕ ಶಕ್ತಿಯುತವಾಗಿ ಬೆಳೆಯುತ್ತಲೇ ಇದೆ. ನೀವು ನಮಗಿತ್ತ ಸಹಕಾರ ಹಾಗೂ ವಿಶ್ವಾಸ — ಇವೇ ನಮ್ಮ ಯಶಸ್ಸಿಗೆ ಕಾರಣಗಳಾಗಿವೆ. ಅಷ್ಟೇ ಅಲ್ಲದೆ ನಾವು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಸೇವೆ ಸಲ್ಲಿಸಲು ಪ್ರೋತ್ಸಾಹವನ್ನು ನೀಡಿವೆ. ನಿಮ್ಮ ಸಮೃದ್ಧಿಗಾಗಿ ಇನ್ನು ಮುಂದೆಯೂ ಅಧಿಕ ಪ್ರಮಾಣದಲ್ಲಿ ಸೇವೆ ನೀಡುವೆವೆಂದು ಮತ್ತೆ ಭರವಸೆ ನೀಡುತ್ತೇವೆ.

SERVING TO GROW GROWING TO SERVE · CANARA BANK LTD. ESTD. 1906

240ಕ್ಕೂ ಮಿಕ್ಕು ಶಾಖೆಗಳು!
ಅಗತ್ಯಕ್ಕನುಸಾರ ವ್ಯವಹಾರ!

ಕೆನರಾ ಬ್ಯಾಂಕ್ ಲಿಮಿಟೆಡ್ (ಸ್ಥಾಪನೆ 1906)

ರಿಜಿಸ್ಟರ್ಡ್ ಆಫೀಸು : ಲೈಟ್ ಹೌಸ್ ಹಿಲ್ ಮಂಗಳೂರು - ಆಡಳಿತ ಕಚೇರಿ : 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

SISTA'S-CD-18 KAN

NAVAYUGA 18—5—1967
Registered with the Registrar
of News Papers for India
under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ಇದು ನಮ್ಮ ಭಾರತ

ತಿರುವಿಜದ ದಿವ್ಯ ವೈದ್ಯ

ಅನುವಾದಕ: ಶ್ರೀ ಕೆ. ನಾರಾಯಣಾಚಾರ್,
ಕನ್ನಡ ಪಂಡಿತ, ಹುಮಚ.

ತಿರುವಿಜ (Tiruvizha) ವೆಂಬ ಸ್ಥಳವು ಕೇರಳ ತಾಲ್ಲೂಕಿನಲ್ಲಿದೆ. ಭೂಮಾರ್ಗ ಅಥವಾ ಜಲಮಾರ್ಗದಿಂದ ಅಲ್ಲಿಗೆ ಹೋಗಬಹುದು. ಕೊಟ್ಟಯಂ ಜಿಲ್ಲೆಯಲ್ಲಿ ವೈಕ್ಕಂನಿಂದ ವೆಂಬನಾಡ್ ಹಾದಿಯ ಮೇಲೆ ಒಂದು ಕಡವಿನ ಸರ್ವೀಸು ಇದೆ.

ವಾಕ್ ಶ್ರೋತ್ರನೇತ್ರಾಂಘ್ರಿವಿಹೀನ ಜಂತೋ:
ವಾಕ್ ಶ್ರೋತ್ರ ನೇತ್ರಾಂಘ್ರಿ ಸುಖಪ್ರದಾಯ ||
ಕುಷ್ಠಾದಿ ಸರ್ವೋನ್ನತ ರೋಗ ಹಂತ್ರೇ
ಶ್ರೀ ವೈದ್ಯನಾಥಾಯ ನಮಃ ಶಿವಾಯ ||

'ಮೂಕ, ಕಿವುಡ, ಕುರುಡ ಮತ್ತು ಕುಂಟರಿಗೆ ನಾಲಿಗೆ ಕಿವಿ ಕಣ್ಣು ಕಾಲುಗಳನ್ನು ಕೊಡುವ ಕುಷ್ಠ ಮುಂತಾದ ಕಠಿಣ ರೋಗಗಳನ್ನು ಪರಿಹರಿಸುವ ಶ್ರೀವೈದ್ಯನಾಥನಾದ ಶಿವನಿಗೆ ನಮಸ್ಕಾರ.'— ಶ್ರೀ ವೈದ್ಯನಾಥಾಷ್ಟಕ.

ಮದ್ರಾಸ್ ರಾಜ್ಯದ ತಂಜಾವೂರು ಜಿಲ್ಲೆಯಲ್ಲಿರುವ ವೈದೀಶ್ವರನ್ ಕೋಯಿಲ್‌ನ ವೈದೀಶ್ವರ ಸ್ವಾಮಿಯಂತೆ ತಿರುವಿಜದಲ್ಲಿರುವ ದೇವರು ಉತ್ಕೃಷ್ಟ ವೈದ್ಯರೆಂದು ಪ್ರಸಿದ್ಧಿಯಿದೆ. ಆತನ ಔಷಧವು ಮತಿಭ್ರಮೆ, ಹುಣ್ಣು, ಮೂಲವ್ಯಾಧಿ ಮತ್ತು ಇತರ ರೋಗಗಳಿಗೆ ಉತ್ತಮವಾದ ಉಪಶಾಮಕವಾಗಿದೆ. ಸದಾಕಾಲವೂ ಅಲ್ಲಿಗೆ ಜನರು ಹೋಗಿ ತಮ್ಮ ಕಷ್ಟಗಳಿಗೆ ಪರಿಹಾರ ಬಯಸುತ್ತಾರೆ. ದೇವರ ವಿಷಯದಲ್ಲಿ ಒಂದು ವಿಶೇಷವೇನೆಂದರೆ ರೋಗಿಗಳ ರೋಗೋಪಶಮನಕ್ಕಾಗಿ ಸ್ವಾಮಿಯು ಭೂಗರ್ಭದಿಂದ ಉದ್ಭವಿಸಿ ಬಂದನೆಂಬುದು.

ಪೂರ್ವದಲ್ಲಿ ಆ ಸ್ಥಳವು ಒಂದು ದಟ್ಟವಾದ ಕಾಡಾಗಿತ್ತು. ಈಗ ದೇವಾಲಯವಿರುವ ಸ್ಥಳದಲ್ಲಿ ಪಾಚಿಯಿಂದ ತುಂಬಿದ ಒಂದು ಕೊಳವಿತ್ತು. ಆ ಕಾಡಿನಲ್ಲಿ ನೆಲೆಸಿದ್ದ ಜನರಲ್ಲಿ ಉಲ್ಲಾಡರೆಂಬ ಒಂದು ಪಂಗಡವಿತ್ತು. ಅವರು ಆ ಕೊಳದಲ್ಲಿರುವ ಆಮೆಗಳನ್ನು ಹಿಡಿದು ತಿನ್ನುತ್ತಿದ್ದರು.

ಆಮೆಗಳು ಕೊಳದ ಬುಡದಲ್ಲಿ ಆಳವಾಗಿ ನೆಲದಲ್ಲಿ ತಾಗಿಕೊಂಡಿರುತ್ತಿದ್ದವು.

ಆಮೆಗಳು ಕೊಳದ ಬುಡದಲ್ಲಿ ಆಳವಾಗಿ ನೆಲದಲ್ಲಿ ತಾಗಿಕೊಂಡಿರುತ್ತಿದ್ದವು. ನೆಲ್ಲವನ್ನು ಕುಟ್ಟುತ್ತಾ ಉಲ್ಲಾಡರು ಆ ಕೊಳದಲ್ಲಿ ನಡೆದು ಹೋಗುತ್ತಿದ್ದರು. ಅವರ ಕೋಲು ಆಮೆಗಳ ಬೆನ್ನಿಗೆ ತಗಲಿದಾಗ ಅವು ನೆಲವನ್ನು ಬಿಟ್ಟು ಮೇಲಕ್ಕೆ ಬರುತ್ತಿದ್ದವು. ಕೂಡಲೇ ಆ ಜನರು ಚುರುಕಾಗಿ ಅವುಗಳನ್ನು ಹಿಡಿದು ಒಳ್ಳೆಯ ಭೋಜನವನ್ನು ಮಾಡುತ್ತಿದ್ದರು.

ಒಂದು ದಿನ ಒಬ್ಬ ಉಲ್ಲಾಡ ಹೆಂಗಸು ಕೈಯಲ್ಲಿ ಕೋಲು ಹಿಡಿದುಕೊಂಡು ಆ ಕೊಳದಲ್ಲಿ ಹೋಗುತ್ತಿದ್ದಾಗ ಅವಳೊಂದು ಗಟ್ಟಿಯಾದ ವಸ್ತುವಿನ ಮೇಲೆ ಕುಟ್ಟಿದಳು. ಆಗ ಆಮೆ ಮೇಲೆ ಬರುವ ಬದಲಾಗಿ ಆ ಕೊಳಕಾದ ನೀರಿನ ಮೇಲ್ಭಾಗಕ್ಕೆ ರಕ್ತವು ನೊರೆ ನೊರೆಯಾಗಿ ಬಂತು. ಅವಳು ಗಾಬರಿಗೊಂಡು ತಿರುಗಿ ನೆಲಕ್ಕೆ ಈಜಿ ಹೋಗಿ ತನ್ನ ಸ್ವಜನರಿಗೆ ಈ ಅದ್ಭುತವನ್ನು ತಿಳಿಸಿದಳು. ಆಗ ಹಲವಾರು ಜನರು ಅಲ್ಲಿಗೆ ಓಡಿ ಬಂದು ಭಯಾಶ್ಚರ್ಯಗಳಿಂದ ಮೌನವಾಗಿ ನಿಂತುಕೊಂಡರು.

ಬೇಗನೆ ಆ ಕೊಳವೆಲ್ಲವೂ ರಕ್ತದಿಂದ ಕೆಂಪಾಯಿತು.

ಆ ಜನರಿಗೆ ಅಪರಿಚಿತನಾದ ಒಬ್ಬ ವೃದ್ಧನು ಮುಂದೆ ಬಂದು—ಆ ರಕ್ತವು ಒಂದು ಸ್ವಯಂಭುಲಿಂಗದಿಂದ ಬಂದಿದೆಯೆಂದೂ ಆ ಕೊಳವಿರುವ ಸ್ಥಳದಲ್ಲೇ ಒಂದು ದೇವಾಲಯವನ್ನು ಕಟ್ಟಿಸಿದರೆ ಅದು ಅವರಿಗೆ ಶ್ರೇಯೋಭಿವೃದ್ಧಿಯನ್ನು ಮಾಡುವುದೆಂದೂ ವಿವರಿಸಿದನು.

ಆ ಪುರುಷನು ಬಹು ಆವೇಶದಿಂದ ಹೇಳಿದನು. ಅವನ ಮಾತುಗಳು ಜನರಿಗೆ ಭಾವನೆಯನ್ನು ಹುಟ್ಟಿಸಿದವು.

ಆಗ ಆ ಜನರು ಕೆಲಸಕ್ಕೆ ಪ್ರಾರಂಭಿಸಿದರು. ನೀರನ್ನು ಬತ್ತಿಸಿ ಅಲ್ಲಿ ದೇವಾಲಯವನ್ನು ಕಟ್ಟಿದರು. ಈ ಪ್ರಕಾರ ತಿರುವಿಜದ ಮಹಾದೇವನಿಗೆ ಒಂದು ಮಂದಿರವು ನಿರ್ಮಾಣಗೊಂಡಿತು.

ಮಳೆಗಾಲದಲ್ಲಿ ಕೆಲವು ವೇಳೆ ದೇವಾಲಯವು ನೀರಿನಲ್ಲಿ ಮುಳುಗಿದಾಗ ನೆಲದಿಂದಲೇ ದೇವರಿಗೆ ಪೂಜೆಯು ನಡೆಸಲ್ಪಡುತ್ತಿದೆ.

ಇದು ಆ ದೇವರ ಮೂಲ. ಇನ್ನು ಆತನ ಔಷಧದ ಕುರಿತು ನೋಡೋಣ.

ಈ ದೇವಾಲಯಕ್ಕೆ ಆಗಾಗ್ಗೆ ಬರುತ್ತಿದ್ದ ಒಬ್ಬ ಹುಚ್ಚನು ದೇವಾಲಯದ ನೌಕರರಿಗೆ ಅತಿ ತೊಂದರೆ ಕೊಡುತ್ತಿದ್ದನು. ಅವನು ವಿಶೇಷತಃ ದೇವಾಲಯದ ಪಾತ್ರೆ ತೊಳೆಯುವವನಿಗೆ ಪೀಡನೆ ನೀಡುತ್ತಿದ್ದನು. ಅವನನ್ನು ಹೊಡೆದು ಓಡಿಸಬಹುದಾಗಿತ್ತು. ಆದರೆ ಯಾರೊಬ್ಬನೂ ಆ ಕುರಿತು ಯೋಚಿಸಲಿಲ್ಲ. ಏಕೆಂದರೆ ಅದು ಅವನ ಶರೀರಕ್ಕೆ ಮಾತ್ರ ವೇದನೆ ಕೊಡಬಹುದು. ಹೊರತು ಅವನ ಬುದ್ಧಿಯನ್ನು ಸರಿಪಡಿಸಲಾರದು.

ಬುದ್ಧಿಯಿಲ್ಲದ ಪ್ರಾಣಿಗೆ ದೇಹದಂಡನೆ ಮಾಡಿದರೆ ಪ್ರಯೋಜನವೇನು?

ಆ ಹುಚ್ಚನ ಹುಚ್ಚಾಟವು ಮುಂದುವರಿಯುತ್ತಿತ್ತು. ಆತನ ಆಕ್ರಮಣಕ್ಕೆ ಗುರಿಯಾದ ಆ ಪಾತ್ರೆ ತೊಳೆಯುವ ದೇವಾಲಯದ ಸೇವಕನು ತಾಳಲಾರದಷ್ಟು ಪೀಡನೆಗೆ ಒಳಗಾದನು.

ಒಂದು ದಿನ ರಾತ್ರಿ ಆ ತೊಂದರೆಗೊಳಗಾದ ದೇವಾಲಯದ ಸೇವಕನು ನಿದ್ದೆ ಮಾಡಲೆಂದು ಮಲಗಿದ್ದಾಗ ಗಟ್ಟಿಯಾಗಿ ಕೂಗಿದನು. "ಸ್ವಾಮಿ ಯೇ! ನನ್ನ ಕೊರಳನ್ನು ಹಿಚುಕುತ್ತಿರುವ ಈ ಪೀಡನೆಯಿಂದ ನನ್ನನ್ನು ಯಾವಾಗ ವಿಮೋಚನೆಗೊಳಿಸುತ್ತಿ?"

ದೇವರು ಸ್ವತಃ ಸ್ವಪ್ನದಲ್ಲಿ ಅವನಿಗೆ ಹೇಳಿದಂತೆ ಕಂಡಿತು. "ಮಗನೇ! ಭಯಪಡಬೇಡ, ದೂರದಲ್ಲಿರುವ ಒಂದು ತೋಟದಲ್ಲಿ ಹಸಿರು ಬಣ್ಣದಿಂದ ನೀಲಿ, ಕೆಂಪು, ಕಪ್ಪು, ಹಳದಿ ಮತ್ತು ಬಿಳಿ ಬಣ್ಣಕ್ಕೆ ಬದಲಾಯಿಸುತ್ತಿರುವ ಒಂದು ಗಿಡಮೂಲಿಕೆ ಇದೆ. ಅದನ್ನು ಒಂದು ಹಿಡಿ ತೆಗೆದುಕೊಂಡು ಬಾ. ಅರೆದು ಹಿಂಡಿ ರಸ ತೆಗೆದು ಹಾಲಿನೊಡನೆ ಬೆರಸಿ ಸ್ವಲ್ಪ ಕಾಲ ನನ್ನ ಮುಂದೆ ಇಡು. ಆ ಮೇಲೆ ಸ್ವಲ್ಪ ಬಿಸಿನೀರಿನ ಜೊತೆಗೆ ಅದನ್ನು ಆ ಹುಚ್ಚನಿಗೆ ಕೊಡು. ಅವನು ಕಾರಿನಂತರ ತನ್ನ ಸ್ವಬುದ್ಧಿಯನ್ನು ಪಡೆಯುವನು."

ಆ ಸೇವಕನು ಬೆರಗಾಗಿ ಎದ್ದು ನೋಡುವಾಗ ಯಾರೂ ಕಾಣಿಸಲಿಲ್ಲ, ಆದರೆ ದೇವರೇ ಸ್ವಪ್ನದಲ್ಲಿ ತನ್ನೊಡನೆ ಮಾತಾಡಿದನೆಂದು ತಿಳಿದುಕೊಂಡನು. ಹೇಳಿದಂತೆ ಅವನು ಆ ಮೂಲಿಕೆಯನ್ನು ಸಂಗ್ರಹಿಸಿದನು. ಅದರ ರಸವನ್ನು ಹಾಲಿನೊಡನೆ ಬೆರಸಿ ಆ ಹುಚ್ಚನಿಗೆ ಹೇಗಾದರೂ ಕೊಟ್ಟು ಕುಡಿಸಿದನು.

ಆಶ್ಚರ್ಯವೆನಿಸುವಂತೆ ಆ ಹುಚ್ಚು ಮನುಷ್ಯನು ಸಂಪೂರ್ಣ ಸ್ವಸ್ಥನಾಗಿ ಸರಿಯಾದ ಬುದ್ಧಿಯುಳ್ಳ ಇತರರಂತೆಯೇ ನಡೆಯಲು ಶುರುಮಾಡಿದನು.

ಈ ಘಟನೆ ನಡೆದಂದಿನಿಂದ ತಿರುವಿಜ ಮಹಾದೇವನ ಔಷಧವು ಪ್ರಸಿದ್ಧಿಗೆ ಬಂತು.

ಬುದ್ಧಿ ಭ್ರಮೆಯುಳ್ಳ ಗಂಡಸರನ್ನೂ —ಅವರಲ್ಲಿ ಕೆಲವರು ಸಂಕೋಲೆಗಳಿಂದ ಕಟ್ಟಿ ತರಲ್ಪಡುತ್ತಾರೆ —ಆ ದೇವಾಲಯಕ್ಕೆ ತಂದು ಆ ಔಷಧವನ್ನು ಕೊಡುತ್ತಾರೆ.

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ-ಮದ್ದು
ನೂರಾರು ಕಾಹಿಲೆಗಳಿಗೆ ಮನೆಯಲ್ಲಿ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India

ನವಯುಗ

25—5—1967



೨೦
ಪೈಸೆ

ಕಥಾ ಪ್ರಪಂಚ

ಹೇಡಿಗಳು

ಕಥೆಗಾರರು
ಶ್ರೀ ಗೋಪಾಲ ರಾವ್, ಎ.

— ೧ —

ತಪ್ಪಿಯಾದರೂ ರಾಮ ಶಾಸ್ತ್ರಿಗಳ ಮನೆ ಅಂಗಳಕ್ಕೆ ಕಾಲಿಡದ ಸಾಹುಕಾರ ಕೆಂಚಪ್ಪನು ಇಂದು ಆತುರ ಆತುರನಾಗಿ ಬಂದು ಮನೆ ಎದುರು ನಿಂತ. ಒಳಗೆ ಹೋಗಲೇ ಬೇಡವೇ ಎಂದು ಕ್ಷಣಕಾಲ ಯೋಚಿಸಿ ಒಳಗೆ ಹೋಗುವುದೇ ಒಳಿತೆಂದು ತಿಳಿದು ಮುಂದಡಿಯಿಟ್ಟ. ಜಾವಡಿಯ ಕಂಬಕ್ಕೆ ಒರಗಿ ನಿಂತ ರಾಮ ಶಾಸ್ತ್ರಿಗಳು ಕೆಂಚಪ್ಪನನ್ನು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಶಾಸ್ತ್ರಿಯವರ ಮಡದಿ ಸಾವಿತ್ರಮ್ಮನವರು ಗೋಡೆಯ ಕಡೆಗೆ ಮುಖಮಾಡಿ ಅಳುತ್ತಿದ್ದರು. ತನ್ನ ಸಿಟ್ಟನ್ನು ಶಾಸ್ತ್ರಿಗಳ ಮೇಲೆ ಎಡೆಬಿಡದೆ ಪ್ರಯೋಗಿಸಬೇಕೆಂದು ತಿಳಿದು ಬಂದ ಕೆಂಚಪ್ಪನಿಗೆ ಇಲ್ಲಿಯ ಸ್ಥಿತಿಯನ್ನು ನೋಡಿ ಕ್ಷಣಕಾಲ ಏನು ಮಾಡಬೇಕೆಂದೇ ತಿಳಿಯಲಿಲ್ಲ. ಸಾವಿತ್ರಮ್ಮನವರು ತಿರುಗಿ ನೋಡಿದರಾದರೂ ಕೆಂಚಪ್ಪನನ್ನು ವಿಚಾರಿಸುವ ಸಾಹಸ ಮಾಡಲಿಲ್ಲ. ಪತಿ ಎದುರಿರುವಾಗ ತಾನು ಮಾತನಾಡುವುದು ಸರಿಯಲ್ಲವೆಂದು ಆಕೆ ತಿಳಿದಿರಬೇಕು ಎಂದು ಭಾವಿಸಿದ ಕೆಂಚಪ್ಪ. ಆದರೆ ಆಕೆಯ ದೃಷ್ಟಿಯಲ್ಲಿ ಈ ಎಲ್ಲಾ ಆಗಬಾರದ ಘಟನೆಗಳಿಗೆ ನೀನೇ ಕಾರಣ ಎಂಬ ಭಾವವಿದ್ದುದನ್ನು ಆತ ಗಮನಿಸಲಿಲ್ಲ. ಕೆಂಚಪ್ಪನ ಮನೆಯಾಳು ನಿನ್ನೆ ಸಾಹುಕಾರರ ಮನೆಯಲ್ಲಿ ನಡೆದ ಘಟನೆಯನ್ನು ಶಾಸ್ತ್ರಿಗಳಿಗೆ ಮುಂಚಿತವಾಗಿ ತಿಳಿಸಿದ್ದ. ಇದರಿಂದ ಶಾಸ್ತ್ರಿಗಳು ಮೌನಿಯಾಗಿದ್ದರು. 'ಶಾಸ್ತ್ರಿಗಳೇ!' ತಾನು ಬಂದ ಕಾರಣವನ್ನು ಜ್ಞಾಪಿಸಿಕೊಂಡ ಕೆಂಚಪ್ಪ ತಾನೇ ಮಾತಿಗೆ ಪೀಠಿಕೆ ಹಾಕಿದ.

"ಏನಾಗಬೇಕಿತ್ತು?" ಗಡುಸು ಧ್ವನಿಯಲ್ಲಿಯೇ ಕೇಳಿದರು ಶಾಸ್ತ್ರಿಗಳು.

"ನಿಮ್ಮ ಮಗ ಇಷ್ಟು ಮುಂದುವರಿಯುತ್ತಾನೆಂದು ನಾನು ತಿಳಿದಿರಲಿಲ್ಲ." ವಿಷಯವನ್ನೆತ್ತಿದ ಕೆಂಚಪ್ಪ.

"ನಿನ್ನ ಮಗಳೂ ಇಷ್ಟು ಮುಂದುವರಿಯುತ್ತಾಳೆಂದು ನನಗೆ ತಿಳಿದಿರಲಿಲ್ಲ.' ಎಂದರು ಶಾಸ್ತ್ರಿಗಳು ವ್ಯಂಗ್ಯ ಬೆರತ ಧ್ವನಿಯಲ್ಲಿ.

'ಶಾಸ್ತ್ರಿಗಳೇ! ನಿಮ್ಮ ವಿದ್ಯೆ ಕಲಿತ ಮಗನಿಗೆ, ತಾನು ಯಾರು, ಅವಳು ಯಾರು ಎಂದು ತಿಳಿದುಕೊಳ್ಳುವಷ್ಟು ತಿಳಿವು ಬೇಡವೇ? ಹಿರಿಯರಿಂದ ನೀವಿದ್ದು ಬುದ್ಧಿ ಹೇಳಲಾಗಲಿಲ್ಲವಲ್ಲ! ಅಲ್ಲ ಇದೆ 'ಅಪ್ಪ ಎನಿಸಿಕೊಂಡವನ' ನಿಮ್ಮ ಬೆಲೆ.' ತನ್ನಲ್ಲಿದ್ದ ವಿಷವನ್ನೆಲ್ಲಾ ಕಾರಿದ ಕೆಂಚಪ್ಪ!

'ಕೆಂಚಪ್ಪ! ನಾಲಗೆ ಬಿಗಿ ಹಿಡಿದು ಮಾತನಾಡು. ನಿನ್ನ ಮಗಳು ಸೂಳೆಯಂತೆ ಬೀದಿ ಬೀದಿ ಅಲೆದು ನನ್ನ ಮಗನ ಮನಸ್ಸನ್ನು ಕೆಡಿಸಿದಳು. ಇನ್ನು, ಸ್ಮಶಾನದ ದಾರಿ ಹಿಡಿದ ಮಗನನ್ನು ದೂರಿದರೆ ಪ್ರಯೋಜನವಿಲ್ಲ. ಬೀದಿನಾಯಿಯಂತೆ ತಿರುಗುವ ನಿನ್ನ ಮಗಳ ವಿಚಾರವನ್ನು ಮೊದಲು ನೋಡಿಕೋ.' ಗುಡುಗಿದರು ಶಾಸ್ತ್ರಿಗಳು.

'ಶಾಸ್ತ್ರಿಗಳೆ! ನಿಮ್ಮ ಮಗ ಸ್ಮಶಾನದ ದಾರಿ ಹಿಡಿದರೆ ನನ್ನ ಮಗಳು ಆಸ್ಪತ್ರೆಯ ದಾರಿಹಿಡಿದಿದ್ದಾಳೆ, ಅಷ್ಟೆ. ಅವಳೂ ಉಳಿಯಲಾರಳು. ಇಷ್ಟಕ್ಕೆಲ್ಲಾ ಕಾರಣ ನಿಮ್ಮ ಮಗ ಮತ್ತು ನೀವು' ಎಂದು ಮನಬಂದಂತೆ ಒದರಾಡಿದ ಕೆಂಚಪ್ಪ.

ಶಾಸ್ತ್ರಿಗಳ ಮಗನೊಡನೆ ವಾದಿಸಿ ಮನಸ್ವೇಚ್ಛೆಯಿಂದ ತನ್ನ ಆಸೆಯ ತೃಷೆಯನ್ನು ನೀಗಿಸಿಕೊಳ್ಳಬೇಕೆಂದಿದ್ದ ಕೆಂಚಪ್ಪನಿಗೆ ಆತ ತೀರಿಹೋದುದನ್ನು ಕೇಳಿ ವಿಸ್ಮಯವಾಯಿತು.

ಆತನೊಡನೆ ವಾದಿಸಿ ಪ್ರಯೋಜನವಿಲ್ಲವೆಂದು ಮನಗಂಡ ಶಾಸ್ತ್ರಿಗಳೇ ಬಾವಿ ಕಟ್ಟೆಯ ಕಡೆಗೆ ಹೆಜ್ಜೆ ಹಾಕಿದರು.

ಕೆಂಚಪ್ಪನಿಗೆ ಇನ್ನು ಅಲ್ಲಿ ನಿಲ್ಲುವುದು ಸರಿತೋರಲಿಲ್ಲ. ಎತ್ತಿ ಕಟ್ಟಿದ್ದ ಪಂಚೆಯನ್ನು ಕೆಳಕ್ಕೆ ಸರಿಸಿ ದಡಬಡನೆ ಶಬ್ದ ಮಾಡುತ್ತಾ ಅಲ್ಲಿಂದ ಹೊರಟು ಹೋದ.

ಒಮ್ಮೆ ಉಡುಪಿಯ ಕೃಷ್ಣದೇವಸ್ಥಾನಕ್ಕೆ ಮಡಿ ಬಟ್ಟೆಯುಟ್ಟು ಸಾವಿತ್ರಮ್ಮನವರು ಹೋಗುತ್ತಿದ್ದಾಗ, ಮೈಲಿಗೆ ಬಟ್ಟೆಯುಟ್ಟಿದ್ದ ಕೆಂಚಪ್ಪನ ಪತ್ನಿ ಗಂಗಮ್ಮ ಅವರನ್ನು ಮುಟ್ಟಿದಳಂತೆ. ಇದರಿಂದಾಗಿ ಹೆಂಗಸರೊಳಗೆ ಮಾತು ಬೆಳೆದು ರಾಮ ಶಾಸ್ತ್ರಿಗಳಿಗೂ ಸಾಹುಕಾರ ಕೆಂಚಪ್ಪನಿಗೂ ಇದ್ದ ವಿಶ್ವಾಸ ಮೂಲೆಗುಂಪಾಯಿತು. ಅಂದಿನಿಂದ ಇಂದಿನ ತನಕ ಕೆಂಚಪ್ಪ ಶಾಸ್ತ್ರಿಗಳ ಮನೆಯ ನೆರಳಿನತ್ತ ಕೂಡ ಸುಳಿಯಲಿಲ್ಲ.

— ೨ —

ತನ್ನ ಇದ್ದ ಬಿದ್ದ ಆಸ್ತಿಗೆ ಒಬ್ಬನಾದರೂ ವಾರಸುದಾರನು ಹುಟ್ಟಲೆಂದು ಅನೇಕ ದೇವರಿಗೆ ಹರಕೆ ಹೊತ್ತಿದ್ದರು ಶಾಸ್ತ್ರಿಗಳು ಮತ್ತು ಸಾವಿತ್ರಮ್ಮನವರು. ಅಪಾರ ಭಕ್ತಿಯಿಂದ ಆ ಭಗವಂತನನ್ನು ಸೇವಿಸುತಿದ್ದುದರ ಫಲವೋ ಎಂಬಂತೆ ಅನಂತನು ಅವರ ವಂಶವನ್ನು ಬೆಳಗಿದನು. ಗಂಡು ಮಗುವಿನ ತಾಯಿಯೆಂದು ಸಾವಿತ್ರಮ್ಮನವರಿಗೆ ಹಿರಿ ಬಂದಂತಾಗಿತ್ತು. ಅವನ ಪ್ರತಿ ಆಟ, ನಗೆ ಮಾತು ದಂಪತಿಗಳಿಗೆ ಚೈತನ್ಯರಸವಾಹಿನಿಯಾಗಿತ್ತು.

ಸೆಕೆಂಡರಿ ಸ್ಕೂಲಿನ ವಿದ್ಯಾಭ್ಯಾಸದ ಬಳಿಕ ಕಾಲೇಜು ಮೆಟ್ಟಿಲು ಹತ್ತುವುದು ಅನಂತನಿಗೆ ಅಷ್ಟು ಕಷ್ಟವಾಗಲಿಲ್ಲ. ಇಂಜಿನಿಯರನಾಗಬೇಕೆಂಬ ಆಸೆಯಿಂದ ಅನಂತ ಮುಂಬೈಗೆ ಹೋಗಿದ್ದ.

ತನ್ನ ಮಗ ಇಂಜಿನಿಯರನಾಗಿ ಬರಬೇಕು, ತಾನು ಹೇಳಿದ ಕನ್ಯೆಯನ್ನು ವರಿಸಿ ಸ್ವಂತ ಮನೆ ಕಟ್ಟಿ ತಾನು ಒಂದು 'ಜನ'ವೆಂದು ಕರೆಯಿಸಿಕೊಳ್ಳಬೇಕೆಂದು ರಾಮ ಶಾಸ್ತ್ರಿಗಳಿಗೆ ಆಸೆ ಇತ್ತು. ತಾಯಿ ಸಾವಿತ್ರಮ್ಮನವರದೂ ಇದೇ ತರಹ, ಆಸೆಯನ್ನೇ ಆಹಾರವನ್ನಾಗಿ, ಬಲವನ್ನಾಗಿ, ಜೀವನವನ್ನಾಗಿ ಮಾರ್ಪಡಿಸಿ ಬದುಕುತಿದ್ದರು.

ಡಿಗ್ರಿ ಹೊತ್ತು ಬರುವ ಮಗನಿಗೆ ಶ್ರೀಮಂತರ ಮಗಳನ್ನೇ ಆರಿಸಿದ್ದರು ಶಾಸ್ತ್ರಿಗಳು. ಬಡವನಾದರೂ ಡಿಗ್ರಿ ಪಡೆದವನಾಗಿರಬೇಕೆಂದು ಆ ಪಟ್ಟಣದ ಶ್ರೀಮಂತರು ಮದುವೆಗೆ ಒಪ್ಪಿದ್ದರು.

(ಹನ್ನೊಂದನೇ ಪುಟ ನೋಡಿರಿ)

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

ಒ. ಎ. 17/67.

ಪುಳ್ಳಪ್ಪ ಗೌಡ —ವಾದಿ.

VS

ಕಿಟ್ಟಿಯ, ಚನ್ನೆ ಸಂಕ್ರ ಹೊಲೆಯನ ಅಳಿಯ, ಪುತ್ತೂರು ತಾಲ್ಲೂಕು ಪುತ್ತೂರು ಕಸ್ಬಾ ಗ್ರಾಮದ ಬೊಟ್ಟತ್ತಾರು ಎಂಬಲ್ಲಿರುವುದು —ಪ್ರತಿವಾದಿ.

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. [illegible]—67ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉದಾಹರಣೆಯನ್ನು ಹಾಜರುಪಡಿಸದಿದ್ದಲ್ಲಿ ನಿಮ್ಮನ್ನು [illegible] ಕೋರ್ಟಿನವರಿಗೆ ಯುಕ್ತ ತೋರಿದಂತೆ ತೀರ್ಮಾನ ಮಾಡಲಾಗುವುದು, ತಿಳಿದಿರಿ.

(ಕೋರ್ಟಿನ ಹುಕುಂ ಪ್ರಕಾರ)

Pundarika M. K.
Advocate for Plaintiff

ಪುತ್ತೂರು, 6—4—67.

ಪುತ್ತೂರು ಎಡಿಶನಲ್ ಮು. ಕೋರ್ಟಿನಲ್ಲಿ

O. ಎ. 8/67

C. H. ಪದ್ಮಯ್ಯ ಗೌಡ —ವಾದಿ.

ಮತ್ತು

ದಿ॰ ರಾಮಣ್ಣಗೌಡ ಸಹಾ. ಪ್ರತಿವಾದಿರು, 2ನೇ ಪ್ರತಿವಾದಿ, ಮೋನಪ್ಪ ಗೌಡ, ಬೇರ್ಕಳ ಯಪ್ಪ ಗೌಡರ ಮಗ, ಸುಳ್ಯ ತಾಲೂಕು ಕೂತುಕುಂಜ ಗ್ರಾಮದ ಬೇರ್ಕ ಎಂಬಲ್ಲಿ, ಪೋಸ್ಟ್ ಕೂತುಕುಂಜ [ದ. ಕ.]

1ನೇ ಪ್ರತಿವಾದಿ ವಾದಿಗೆ ಬರೆಕೊಟ್ಟ ದಾವಾ ಅಡವಿನ ಅಸಲು ಬಡ್ಡಿ ಖರ್ಚಿನ ವಸೂಲು ಬಗ್ಗೆ ಮೇಲಿನ ದಾವೆಯು ಪ್ರತಿವಾದಿಗಳ ಮೇಲೆ ಮಾಡಿದ್ದಾಗಿರುತ್ತದೆ. ಸದ್ರಿ ಮೇಲಿನ ದಾವೆಯಲ್ಲಿ 2ನೇ ಪ್ರತಿವಾದಿಯ ಹಾಜರಾತಿ ಬಗ್ಗೆ ತಾ. 8—6—67ಕ್ಕೆ ಇಟ್ಟಿರುತ್ತದೆ. ಆ ದಿನ ನೀವು ಹಾಜರಾಗಿ ನಿಮ್ಮ ಉದಾಹರಣೆ ಕೊಡದಿದ್ದರೆ ನಿಮ್ಮನ್ನು [illegible] ಪರಿಗಣಿಸಿ ಕೋರ್ಟಿನವರಿಗೆ ಯುಕ್ತ ತೋರಿದಂತೆ ತೀರ್ಮಾನಿಸಲಾಗುವುದೆಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸಲಾಗಿದೆ.

(By order of the court)

U. P. Shivarama B. A., B. L.
Advocate for Plaintiff.

Puttur, S.K. 15—4—67.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು . ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಶನ್ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪುಟದಲ್ಲಿ:

ಅಂತರಿಕ್ಷ ಯಾತ್ರೆಗೆ ರಾಕೆಟ್ ಕಳಿಸುವ ಸಿಲ್ವಾಣ ಮನೆ ಕೇಯ ಕೇಪ್ ಕೆನೆವರಲ್ ಗಗನಯಾತ್ರೆಯ ಮಹತ್ವಪೂರ್ಣ ಶಿಲ್ಪಾಣವೆನಿಸಿದೆ

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೩೯ | ೨೫—೫—೧೯೬೭ | No. 39

ಅಗ್ನಿ ಪ್ರತಿಷ್ಠೆಯೆ?

ಈಜಿಪ್ತ ಮತ್ತು ಇಸ್ರಾಯೇಲುಗಳ ಗಡಿ ಪ್ರದೇಶದಲ್ಲಿದ್ದ ಸಂಯುಕ್ತ ರಾಷ್ಟ್ರ ಸಂಘದ ಶಾಂತಿ ರಕ್ಷಕ ಸೇನೆಯನ್ನು ಮರಳಿ ಕರೆದುಕೊಳ್ಳಬೇಕೆಂಬ ಸಂಯುಕ್ತ ಅರಬ ಪ್ರಜಾರಾಜ್ಯದ ಸೂಚನೆಯನ್ನು ಪ್ರಧಾನ ಕಾರ್ಯದರ್ಶಿ ಉ ಥಾಂಟರು ಸ್ವೀಕರಿಸಿ, ಈ ಸಂಬಂಧದಲ್ಲಿ ಆಜ್ಞೆ ವಿಧಿಸಿದರು. ತಮ್ಮ ನಿರ್ಧಾರಕ್ಕೆ ಬರ ಬೇಕಾದರೆ, ಮೊದಲು ಅವರು ತುಂಬ ಆಲೋಚನೆ ಮಾಡಿದ್ದಾರೆ, ಸಮಾಲೋಚನೆಯನ್ನೂ ಮಾಡಿದ್ದಾರೆ. ಈ ನಿರ್ಣಯವನ್ನು ಕಾರ್ಯರೂಪಗೊಳಿಸಿಯೂ ಆಯಿತು. ಇದೀಗ ೧೧ ವರ್ಷಗಳಿಗೆ ಮೊದಲು ಸ್ಥಾಪಿತವಾದ ಶಾಂತಿ ಸೇನೆಯು ಸ್ಥಾನದಲ್ಲಿ ಐಗುಪ್ತ—ಇಸ್ರಾಯೇಲುಗಳ ಟೆಂಕುಗಳು ಮುಖಾಮುಖಿಯಾಗಿ ನಿಂತಿವೆ; ಇಲಿ ಹಿಡಿಯಲು ಹೊಂಚು ಹಾಕುತ್ತಿವೆ.

ಇಸ್ರಾಯೇಲಕ್ಕೆ ಸಿರಿಯಾದ ಮೇಲೆ ಕಣ್ಣು. ತಮ್ಮ ಶತ್ರುಪಕ್ಷದ ಸದುಪಯೋಗ ಪಡೆದು ಸಿರಿಯಾವನ್ನು ಬಗ್ಗುಬಡೆಯಬೇಕು ಎಂಬುದು ಅದರ ಅಭಿಲಾಷೆ. ಒಂದು ಅರಬ ರಾಜ್ಯ ಸಿರಿಯಾದ ಮೇಲೆ ಇಸ್ರಾಯೇಲವು ಶಸ್ತ್ರವೆತ್ತುವುದನ್ನು ತಾನು ಸಹಿಸಲಾರೆ ಎಂಬುದು ಸಂಯುಕ್ತ ಅರಬ ಪ್ರಜಾರಾಜ್ಯದ ನಿರ್ಧಾರ. ಅದಕ್ಕಾಗಿ ತಾನು ಇಸ್ರಾಯೇಲದ ಮೇಲೆ ದಂಡೆತ್ತಿ ಹೋಗುವ ಅನಿವಾರ್ಯ ಪರಿಸ್ಥಿತಿ ತಲೆದೋರ ಬಹುದಾದುದರಿಂದ, ಸಂಯುಕ್ತ ರಾಷ್ಟ್ರ ಸಂಘದ ಸೇನೆಗೆ ಆಪಕೀರ್ತಿ ಬಾರದಂತೆ, ಅದನ್ನು ಮರಳಿ ಕರೆದುಕೊಳ್ಳಬೇಕೆಂದು ಅದು ಕೇಳಿದ್ದು ಸರಿಯೆಂಬ ಹಾಗೂ; ಆದರೆ, ಅದರ ಗ್ರಹಿಕೆಯೇ ತಪ್ಪು ಎಂದು ಹೇಳಲೇ ಬೇಕಾಗುತ್ತದೆ. ಶಾಂತಿ ರಕ್ಷಕ ಸೇನೆಯನ್ನು ಹಿಂದ ಕರೆದುಕೊಳ್ಳುವುದಕ್ಕೆ ಇಸ್ರಾಯೇಲವು ಸಮ್ಮತಿಸಲಿಲ್ಲ. ಇದಕ್ಕೆ ಅದಕ್ಕೆ ಆ ಸೇನೆಯ ಮೇಲಿದ್ದ ವಿಶ್ವಾಸಕ್ಕಿಂತಲೂ ತನ್ನ ಹುಂಬತನಕ್ಕೆಯೊಂತ ಸಿರಿಯಾವನ್ನು ಹಾಳುಗೆಡಹುವ ಮಾರ್ಗದಲ್ಲಿ ಮುಳ್ಳುಬೇಲಿ ಬಾರದಂತಾಗುವುದಲ್ಲ ಎಂಬುದೇ ಮುಖ್ಯ ಕಾರಣ. ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಾಸೇರರು ಸಿರಿಯಾದ ಮೇಲೆ ಆಕ್ರಮಣ ನಡೆಯುತ್ತಿದ್ದರೆ, ಇಸ್ರಾಯೇಲವನ್ನು ಧ್ವಂಸಗೊಳಿಸಲು ಸರ್ವ ಸಿದ್ಧತೆಯನ್ನೂ ಮಾಡಿದ್ದಾರೆ—ಉಭಯ ದೇಶಗಳೂ ತಂ ತಮ್ಮ ಸೇನಾ ಪಡೆಯನ್ನ ಕೇಂದ್ರೀಕರಿಸುವುದನ್ನೇ ಗುರಿಯನ್ನಾಗಿಟ್ಟುಕೊಂಡಿವೆ. ಏತನ್ಮಧ್ಯೆ, ಸಿರಿಯಾಕ್ಕೆ ಆವಶ್ಯಕ ನೆರವು ನೀಡಲು ಸೋವಿಯತ್ ರಶ್ಯಾವೂ ಮುಂದೆ ಬಂದಿದೆ. ಜೋರ್ಡಾನ್—ಇರಾಕಗಳ ಸೇನೆಗಳಿಗೂ ಜಾಗ್ರತರಾಗಿರಲು ಆಜ್ಞೆಗಳು ನೀಡಲ್ಪಟ್ಟಿವೆ. ಈಗೆ ಜ್ವಾಲಾಮುಖಿಯ ತಪ್ಪಲಿನಲ್ಲಿ ಮತ್ತೊಮ್ಮೆ ಗುಂಡು—ಬಂದೂಗಳು ಬೀಸಲು ತಯಾರಾಗಿ ನಿಂತಿವೆ; ಬಾಕಿಯುಳಿದಿರುವುದು ಬೆಂಕಿಯ ಕಿಡಿಯೊಂದರ ಹಾರಾಟ ಮಾತ್ರ. ಇಸ್ರಾಯೇಲವು ಈ ಕಿಡಿ ಹಾರಾಟಕ್ಕೆ ಅವಕಾಶ ನೀಡಿತೆಂದರೆ, ಪ್ರಾಯ: ಮೂರನೆಯ ಲೋಕ ಸಂಗ್ರಾಮಕ್ಕದು ನಾಂದಿಯಾದರೂ ಆಗ ಬಹುದು. ಆದರೂ 'ತಾನು ದುಡುಕುವುದಿಲ್ಲ' ಎಂಬ ಭರವಸೆಯನ್ನು ಅದು ನೀಡಿದೆ. ಈ ಭರವಸೆಯಲ್ಲೂ ರಾಜ್ಯಕೀಯ ತಾಂಡವವಾಡುವುದಾದರೆ, ಏನು ತಾನೇ ಮಾಡಲು ಸಾಧ್ಯ?

ಪ್ರಧಾನ ಕಾರ್ಯದರ್ಶಿ ಉ. ಥಾಂಟರು ಕೈಗೊಂಡ ನಿರ್ಣಯದ ಬಗ್ಗೆ ಭಿನ್ನಾಭಿಪ್ರಾಯವಿದ್ದೇ ಇದೆ. ಇದರಿಂದ ಕ್ಲೇಶ ಶಮನವಾಗುವ ಬದಲು ಅದು ಹೆಚ್ಚುವುದೆಂದೂ, ಇಬ್ಬರು ಶತ್ರುಗಳ ಸೇನೆಗಳು ಮುಖಾಮುಖಿಯಾಗಿ ನಿಲ್ಲುವಾಗ ಬೇಕಾಗಿಯಿರಲಿ, ಬೇಡವಾಗಿಯಾಗಲಿ ಘರ್ಷಣೆಯೇಳುವ ಅವಕಾಶ ಹೆಚ್ಚೆಂದೂ ಆದುದರಿಂದ ಮಧ್ಯ ಪ್ರಾಚ್ಯದಲ್ಲಿ ರಾಜ್ಯಕೀಯವು ಉಲ್ಬಣಾವಸ್ಥೆಗೇರಿ ವಿಶ್ವಶಾಂತಿಗೆ ಮಾರಕಪ್ರಾಯವಾಗುವುದೆಂದೂ ಹೇಳುವವರಿದ್ದಾರೆ ಆದರೆ, ಪ್ರಾಯ: ಪಾಶ್ಚಾತ್ಯ ದುಶ್ಶಕ್ತಿಗಳಿಂದ ಪ್ರೇರಿತವಾದ ಇಸ್ರಾಯೇಲದ ದೂರದ ದುರಾಲೋಚನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಇದೀಗವು ನೂರು ಬಾರಿ ಯೋಚಿಸಬೇಕು ಶಾಂತಿಯನ್ನೂ ಸಮತೋಲದಲ್ಲಿರುವ ಇನ್ನೊಂದು ಮಾರ್ಗವನ್ನೇ ಉ. ಥಾಂಟರು ಅನುಸರಿಸಿದರೆನ್ನ ಬಹುದು. ಇಸ್ರಾಯೇಲವು ಆಕ್ರಮಣ ಮಾಡಿದರೆ, ಶಾಂತಿಭಂಗ ಮಾಡಿದರೆ, ಅದು ತನ್ನ ನಾಲ್ಕೂ ಸುತ್ತಿನ ಬಲಗಳಿಂದ ರಕ್ಷಿಸಿಕೊಳ್ಳಬೇಕಾಗುವುದು. ಇದಕ್ಕದು ಸಿದ್ಧವಿರಲಾರದು. ಆದರೆ, ಒಂದು ಮಾತನ್ನು ನಾವು ಮರೆಯಬಾರದು. ಸಂಯುಕ್ತ ಅರಬ ಪ್ರಜಾರಾಜ್ಯ—ಇಸ್ರಾಯೇಲ; ಇಸ್ರಾಯೇಲ—ಸಿರಿಯಾಗಳ ನಡುವೆ ತೀವ್ರ ಭಿನ್ನಮತವಿದೆ ನಿಜ. ಇವುಗಳ ಪರಿಹಾರಕ್ಕೆ ಆಕ್ರಮಣ—ಶಕ್ತಿಯ ಪ್ರದರ್ಶನವೊಂದೇ ದಾರಿಯೆಂದು ಅವು ತಿಳಿದುಕೊಂಡಿರುವುದಾದರೆ, ಅದು ಸಾಧುವಲ್ಲ. ವಿಶ್ವಬಂಧುತ್ವ, ವಿಶ್ವಪ್ರೇಮದಲ್ಲಿ ಆಸಕ್ತಿ ಹೆಚ್ಚಲೇ ಬೇಕಾದ ಈ ಸಮಯದಲ್ಲಿ ಬಂದೂಕು ತಿಳುವಳಿಕೆಯನ್ನು ಹುಟ್ಟಿಸಿಕೊಂಡು ಶಾಂತಿಯುತ ಮಾತುಕತೆಗಳ ಮೂಲಕ ಸಂಬಂಧಗಳನ್ನು ಬಗೆ ಹರಿಸಿಕೊಳ್ಳಬೇಕೇ ಹೊರತು ಶಸ್ತ್ರ ಹಿಡಿಯುವುದರ ಮೂಲಕವಲ್ಲ. ಇದನ್ನು ತಿಳಿದು ಸೌಹಾರ್ದ ವಾತಾವರಣ ಸ್ಥಾಪಿತಗೊಳ್ಳಲಿ, ಅನಾವಶ್ಯಕ ಮಾರಕ ಹೋಮಕ್ಕೆ ಅಗ್ನಿ ಪ್ರತಿಷ್ಠೆಯಾಗದಿರಲಿ.

ಮೌನ ಸಮ್ಮತಿ

ಕೇರಳದ ಸಪ್ತವರ್ಣದ ಸರಕಾರವು ಮಹಾಜನ ಆಯೋಗದೊಡನೆ ವರ್ತಿಸಿದ ರೀತಿ ಅನುಚಿತವೆಂದೇ ಹೇಳಬೇಕು. ಕೇಂದ್ರ ಸರಕಾರವು ನೇಮಿಸಿರುವ ಈ ಆಯೋಗವು ಕರ್ನಾಟಕ—ಕೇರಳ ಗಡಿ ವಿವಾದದ ಬಗ್ಗೆ ಸಾಕ್ಷ್ಯ ಸಂಗ್ರಹಿಸಲು ತನ್ನ ರಾಜ್ಯಕ್ಕೆ ಆಗಮಿಸಿದಾಗ ಅದನ್ನು ಸ್ವಾಗತಿಸುವುದು ರಾಜ್ಯ ಸರಕಾರದ ಕರ್ತವ್ಯವಿತ್ತು. ಆಯೋಗದ ಕಾರ್ಯಕಲಾಪಗಳಲ್ಲಿ ತನಗೆ ಆಸಕ್ತಿಯಿರಲಿ, ಇಲ್ಲದಿರಲಿ, ಅದನ್ನು ಗೌರವದಿಂದ ಬರಮಾಡಿಕೊಳ್ಳಬೇಕಿತ್ತು. ತನಗೆ ಸಾಕ್ಷ್ಯಗಳನ್ನು ನೀಡುವ ಅಗತ್ಯವಿಲ್ಲವೆಂದು ತೋರಿದ ಮಾತ್ರಕ್ಕೆ ಅದರ ಬಗ್ಗೆ ಬರಿಯ ಅನಾಸ್ಥೆಯನ್ನೇ ಪ್ರದರ್ಶಿಸುವುದು ಉಚಿತವಲ್ಲ; ಕಾಸರಗೋಡಿನ ಹೆಚ್ಚಿನ ಪ್ರಜೆಗಳು ಈ ಆಯೋಗದಲ್ಲಿ ಆಸಕ್ತಿ ವಹಿಸಿದ್ದರು; ಸದ್ಯ ಅವರು ಕೇರಳ ರಾಜ್ಯದವರಾಗಿರುವುದರಿಂದ ಸರಕಾರವು ಆಸಕ್ತಿ ವಹಿಸಬೇಕಾಗಿತ್ತು. ಬರಿಯ ಸಾಮಾನ್ಯರಿಂದ ಅಲ್ಲದ ಅಧಿಕಾರಿ ಸರಕಾರಿ ಮತ್ತು ಪೋಲೀಸು ಪಡೆಯ ಸ್ವಾಗತ ಈ ಆಯೋಗಕ್ಕೆ ದೊರೆಯಿತು.

ಆದರೂ ಒಂದು ವಿಷಯ. ಕೇರಳ ಸರಕಾರದ ಮೌನವೆಂದರೆ, ಕಾಸರಗೋಡು ಜನತೆಯ ಅಭಿಪ್ರಾಯಕ್ಕೆ ತನ್ನ ವಿರೋಧವಿಲ್ಲವೆಂಬುದನ್ನೇ ಸಮರ್ಥಿಸುತ್ತದೆಯಲ್ಲವೆ? ಆಯೋಗಕ್ಕೆ ಅರ್ಪಿಸಲಾದ ಮೂನತ್ತರಷ್ಟು ಮಿಕ್ಕಿದ ಮನವಿಗಳೆಲ್ಲವೂ ಕಾಸರಗೋಡನ್ನು ಕರ್ನಾಟಕದಲ್ಲಿ ವಿಲೀನಗೊಳಿಸುವುದನ್ನೇ ಸಮರ್ಥಿಸುತ್ತವೆ. ಒಂದೇ ಒಂದು ದಾವೂ ವಿರೋಧಿಸುವುದಿಲ್ಲ ಆದುದರಿಂದ ಮಹಾಜನ ಆಯೋಗದ ಕಾರ್ಯವೂ ಸುಗಮವಾಯಿತು. ವಿಲೀನೀಕರಣವನ್ನು ಸಮರ್ಥಿಸಲು ಕೇರಳ ಸರಕಾರವೇ ಒಂದು ಸದವಕಾಶವೊದಗಿಸಿತೆಂದು ಸಮಾಧಾನ ಹೊಂದಬಹುದಲ್ಲವೆ?

ನರಸಣ್ಣನ ಸರಸ



'ಕಾಂಗ್ರೆಸ್ ಸರ್ಕಾರಗಳಿಗಿಂತ ಲೇಸಾಗಿ ನಡೆದರೆ, ಸಮ್ಮಿಶ್ರ ಸರ್ಕಾರಗಳನ್ನು ಜನ ಸ್ವಾಗತಿಸುವರು'—ಪಿ. ಎಸ್. ಪಿ ಯ ಪಕ್ಷಲೇಖ.

"ಹಾಡು ಹಿಂಬದ ಹೋದ್ರೆ ಉಣಿ ಮುಕ್ಕವಳ ಬಗ್ಗೆ"—ಇದು ಈಗಾಗಲೇ ಅನುಭವವೇದ್ಯವಾಗದೆ!

ಗೇಹ ರಾಜ್ಯದಲ್ಲಿ

ಬಂದ ಬುದ್ಧಿ ಗಳಿಗೆಯಲ್ಲಿ...

'ಏಯ್, ಕೇಳಿಸ್ತೇನೆ?'

'ಏನು?'

'ಮಹಾಜನ ಆಯೋಗವು....'

'ಎಂಥ ಆಯೋಗಾನೀ ಅದು?'

'ಅದೇ, ಮಹಾಜನ ಆಯೋಗ...'

"ಎಂಥದದ? ಮಹಾಜನ ಆಯೋಗ, ಜನಾಜನ ಆಯೋಗ, ತಳಾತಳ ಆಯೋಗ...'

'ಛೆ....ಛೆ...ಛೆ...ಮಹಾಜನ ಆಯೋಗವೆಂಪ್ರೆ ಕನ್ನಡ ಸೂರು..."

'ಮೈಸೂರು ಅಲ್ರಿ, ಕರ್ನಾಟಕ...'

"ಸರೀನಪ್ಪಾ, ಕರ್ನಾಟಕ—ಮಹಾರಾಷ್ಟ್ರ, ಕರ್ನಾಟಕ—ಕೇರಳ ರಾಜ್ಯಗಳ ಸೀಮಾ ವಿವಾದದ ವಿಷ್ಯ...'

"ಓ, ಅದ.......ಅಂದು ನಿಮ್ಮ ಟೋಪಿ ಸಕ ರತ್ನ ಸಂಡೆಪ್ಪ ಮಹಾರಿ ಹಾಳಗಳ ಚಲೆದೂಗಿಸಲು ಕುಡಿಸಿದ ತಮಲ... ಕನ್ನಡಿಗರ ಮೋಣಕೈಗಂಟಿಗೆ ಸವರಿದ ಬೆಲ್ಲ.....'

"ಅಂದ್ರೆ?'

'ಅಂದ್ರೇನಂತೆ? ಈ ನಿಮ್ಮ ಆಯೋಗ ರಚಿಸದೇ ಹೋಗ್ತಿದ್ರೆ, ಮಹಾರಾಷ್ಟ್ರದಲ್ಲಿ ಚವನರೂ ಸದೋಬಾ ಪಾಟೀಲರ ಹಿಂದೆ ಹೋಗುತಿದ್ರು......."

'ಹ್ಞಾಂ......'

'ಇನ್ನು ಕನ್ನಡಿಗರಿಗೆ... ಅವ್ರನ್ನು ಸಮಾಧಾನ ಮಾಡಬೇಕಾಗ್ರೆ ರಾವ ತಾಪತ್ರಯಾನೂ ಇಲ್ಲಾನ್ನಿ....'

'ಯಾಕ್? ಜನ್ಮಾ ಅಲ್ಪತೃಪ್ತರೇನು ಅವರ?"

"ಕೇಂದ್ರ ಸರ್ಕಾರ ತಾಯಿಯಾದ್ರೆ, ರಾಜ್ಯಗಳೆಲ್ಲಾ ಮಕ್ಕಳಾದ್ರೆ, ಕನ್ನಡ ಭಾರತದ ಕಂದು ಮಗು ಅನ್ನಬೇಕು. ಇದನ್ನ ಸಮಾಧಾನ ಪಡಿಸಬೇಕಾದ್ರೆ, ಏನೂ ಕಷ್ಟವಿಲ್ಲ. 'ಇಕ್ಲದೇ ಗಂಟು' ಕುರುಡಂತಾ ಅಂತ ತೋರ್ಸಿದ್ರೆ ಸಾಕು. ಉಳಿದವ್ರಾದೆ ಇಕ್ಲ ಕೊಡಿ ಅನ್ತಾರೆ, ಆಗ ಕಲ್ಲಾದ್ರೂ ಕೊಡ್ಬೇಕಾಗುತ್ತೆ..."

"ಹ್ಞಾಂ..."

"ಮತ್ತೆ ನೋಡಿ, ನಾಳೆ ಚವನರು ಬಂದು, ನಿಜಲಿಂಗಪ್ಪನವರೇ, ಬೆಳಗಾಂವಿ, ನಿಪ್ಪಾಣಿ ನಮಗೆ ಕೊಟ್ಬಿ ಬಿಡಿ. ನಿಮಗೆ ಕಾಸರಗೋಡನ್ನೂ ಊಟಿಯನ್ನೂ ಕೊಡುತ್ತೇವೆ ಅಂತ ಹೇಳಿದ್ರೆ ಸಾಕು, ನಾವು ಹ್ಞೂಂತ ಬಿಟ್ಟು "ಎಷ್ಟು ಒಳ್ಳೆಯ ಜನ! ಅಂತ ಅವರ ಬಾಯಿಂದ ಹೇಳ್ಸಿ, ನಮ್ಮ ಬೆನ್ನಿಗೆ ನಾವೇ ಚೂರಿ ಹಾಕ್ತೇವೆ...."

'ಪರ್ವಾಗಿಲ್ಲ ಕಣೇ, ನಿನ್ನ ಬುದ್ಧಿಗ ಕೊಡಬೇಕು...'

'ಕೊಡೋದೇನು ಬಂತ್ರಿ?'

'ಅಯ್ಯಪ್ಪ, ನಡೀಲಿ...'

'ನಡಿಯೋದೇನು? ನಾನ ಇದ್ದದ್ದನ್ನ ಹೇಳಿದೆ. ಮತ್ತೆ ನೋಡಿ, ಇರೋದು ಒಬ್ಬ ಆದೂ ಒಂದು ಆಯೋಗ....ಅದ್ರ ಮೇಲೆ ಅವ್ರೇ ಆ ಆಯೋಗದ ಅಧ್ಯಕ್ಷರು ಸದಸ್ಯರು. ಎಲ್ಲರೂ...'

'ಹ್ಞಾಂ....ಈಗ ಭಿನ್ನಾಭಿಪ್ರಾಯದ ಟಿಪ್ಪಣಿ ಬರೆಯುವವರಿಲ್ಲ ತಾನೆ?'

'ಮತ್ತೆ ನೋಡಿ, ಬೆಳಗಾಂವಿ ನಿಪ್ಪಾಣಿಗಳನ್ನು ಸ್ವಭಾವ ಮಹಾರಾಷ್ಟ್ರಕ್ಕೆ ದಾನ ನೀಡುವಂತೆ ಶಿಫಾರಸು ಮಾಡಿರುವುದಕ್ಕೂ ಚವನರಿಗೆ ಅನುಕೂಲವಾಗುವುದು...."

'ನೋಡು, ನಿನ್ನ ಉಳಿದೆಲ್ಲ ಮಾತು ಒಪ್ಪಿದೆ....'

'ಮತ್ಯಾವುದು ಒಪ್ಲಿಲ್ಲ?'

'ಇದೊಂದನ್ನ....'

'ಯಾಕೇಂತ ಕೇಳಬಹುದೆ?'

'ಕೇಳದೆ ಏನಂತ? ನೋಡು, ಒಬ್ಬ ಮನುಷ್ಯನನ್ನು ಜವಾಬ್ದಾರಿಯುತ ಪದವಿಯಲ್ಲಿ ಕೂತುಕೊಳ್ಳಿಸಿದ್ರೆ...'

'ಅಹಹ...ಎಂಥೆಂತಹ ಮಾತೀರಿ? ನೀವೆ ಅನ್ನುತಿದ್ರಿ, ನಾಯಿಯನ್ನು ತಂದು ಪಾಲಕಿಯಲ್ಲಿ ಕೂಡ್ರಿಸಿದ್ರೆ...'

'ಛೆ....ಛೆ....ಇದಂತಹ ಮಾತೆ?'

'ಎಂತಹ ಮಾತು ಅಂದ್ರೆ....?'

"ನ್ಯಾಯಾಧೀಶ ತನ್ನ ಮುಂದೆ ಬಂದ ಸಾಕ್ಷ್ಯಗಳ ಆಧಾರದಿಂದ ತೀರ್ಮಾನ ಕೊಡುತ್ತಾನೆ. ಸಾಕ್ಷ್ಯಗಳೇ ಸುಳ್ಳಾದುವೆಂದರೆ, ಆತನನ್ನೇಕ ದೂರಬೇಕು? ನೋಡುವವನ ಕಣ್ಣೇ ಕುರುಡಾದರೆ, ಕನ್ನಡಿಯದೇನು ತಪ್ಪು?'

'ಅದಿರ್ಲಿ.... ಏನಾದರೂ ನಾವು....'

'ನಮ್ಮದೆಂತಹದು? ಕೇರಳ ಸರಕಾರ ಆಯೋಗದೊಡನೆ ಸಹಕರಿಸಲಿಲ್ಲ. ಕಾಸರಗೋಡು ಕನ್ನಡಿಗರು ಚಂದ್ರಗಿರಿ ನದಿಯ ಉತ್ತರ ಭಾಗವಾದರೂ ಕರ್ನಾಟಕಕ್ಕೆ ಸೇರಬೇಕು ಅಂದ್ರು.... ನಾವೂನೂ ಹಾಗೇ ಅನ್ನುತ್ತೇವೇನ್ನ. ಮುಂದೇನಾಗುವುದೋ?'

"ಆಗುವುದೆಲ್ಲಾ ಆಗಲಿ. ಸಧ್ಯ ಇಲ್ಲದೆ ಇದ್ದದ್ದೂ ಬಂದೆ ಇದ್ದದ್ದು ಕೈಬಿಡದ ಉಳಿದ್ರೆ ಅಷ್ಟೇ ಸಾಕೂನ್ನು..."

"ನೀನು ಅನ್ನೋದು ನಿಜ. ಆದ್ರೆ ಮರಾಠಿಯವ್ರು ಸುಮ್ಮನಿರುತ್ತಾರೆಯೆ?'

'ಅದಕ್ಕೇ ನಾನಂದದ್ದು. ನಿಮ್ಮ ಆಯೋಗ ಅವ್ರಿಗೆ ಸಿಂಹದ ಪಾಲು ಕೊಟ್ರಿ. ಇಲ್ಲಾಂದ್ರೆ ಮತ್ತೆ ಇದಯ್ಯಲ್ಲಾ, ಶಿವಸೇನೆಯು ಮರಿ ಶುನಕ ಸೇನೆಯನ್ನ ಕಟ್ಟಿ ಬಿಡೋದು..."

'ಹ್ಞಾಂ...ಆಗ್ಲಿ....ಅದರೊಡನೆ ಹೋರಾಡಲು ನಮ್ಮವರೂ ಹುಲಿ ಸೇನೆಯನ್ನು ಕಟ್ಟಲು ಯೋಚಿಸಿಯಾರು....'

'ಹ್ಞ ಹ್ಞ ಹ್ಞ...ಅಲ್ರಿ, ಕೇರಳ ಸರಕಾರದ ಮೌನದ ಅರ್ಥವೇಂದರೆ, ಅದು ಕಾಸರಗೋಡನ್ನು ಕೈಬಿಡಲು ಒಪ್ಪುವುದಿಲ್ಲಾಂತ ತಾನೆ?'

"ಇದ್ದರೂ ಇರಬಹುದು ಮತ್ತೆ ನೋಡು, ಒಂದು ಮಾತ....'

"ಏನದು?"

"ಏನೂ ಇಲ್ಲ ಯಾವುದೋ ಒಂದು ಘಟನೆಯ ಬಗ್ಗೆ ಯಾವುದೇ ಬಗೆಯ ಕಾಲ್ಪನಿಕ ಕಾರಣಗಳನ್ನು ಕಲ್ಪಿಸುವುದು ಸರಿಯೆಂದು ನನಗನಿಸುವುದಿಲ್ಲ."

"ಅಂದ್ರೆ?"

'ಎಂತೆಂತಹ ರಾಜಕೀಯ ನಿರೀಕ್ಷಕರ ಊಹನೆಗಳೆಲ್ಲ ಮರಳಿನ ಮನೆಯಂತೆ ಉರುಳಿ ಹೋಗುತ್ತಿರುವಾಗ, ನಾನು, ನೀನು ಕಟ್ಟುವ ಕೀರಿನ ಮನೆ....'

"ಹೋಗಲಿ ಬಿಡಿ.... ನಮಗೇನಂತೆ?"

'ಏನೂ ಇಲ್ಲಾನ್ನು....'

"ಮತ್ತೆ ನೋಡಿ, ನಿಮ್ಮ ಗಿರಿಯವ್ರು ಭಾರಿ ಒಳ್ಳೆಯವ್ರೂಂತ ತಿಳ್ಕೊಂಡಿದ್ದೆ..."

'ಹೌದು, ಏನಾಯ್ತೀಗ?"

"ಇನ್ನು ಮುಂದೆ ಹಾಗೆ ತಿಳ್ಕೊಳ್ಳೋಕೆ ಕಷ್ಟ....'

'ಯಾಕೆ?'

'ಮತ್ಯಾಕೆ? ನೋಡಿ, ಕರ್ನಾಟಕಕ್ಕೇನಾದರೂ ಕೇಂದ್ರದಿಂದ ಕೆಲಸವಾಗಬೇಕಾದ್ರೆ ನನಗೆ ಫೋನ್ ಮಾಡಿರೀಂತ ಹೇಳಿದ್ದಾರಂತೆ ನೋಡಿ...ಉಪರಾಷ್ಟ್ರಪತಿಯಾಗಿರುವವರು ಹೀಗೆ ಒಂದು ರಾಜ್ಯದ ಮೇಲೆ ಪಕ್ಷಪಾತ ತೋರಿಸಬಹುದೆ?'

'ಅಯ್ಯೋ, ಎಲ್ಲಿ ಪಕ್ಷಪಾತ? ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳವ್ರಿಗೂ ಅವ್ರು ಹೀಗೇನೇ ಹೇಳಬಾರದೇಕೆ?"

'ಹ್ಞಾಂ....ನಿಮ್ಮದೊಂದುನಾನು ಮಾತ್ರ ನೀರಿನಲ್ಲಿ ಚಿತ್ರ ಬರೆಯಬಾರದು....ನೀವು ಗೋಡೆಯಲ್ಲೇ ಚಿತ್ರ ಬರೆಯಬಹುದು.... ಇಗ್ಲಿ, ಮತ್ತೆ ನೋಡಿ. ಕೆಂಪು ಚೀನಾದ ಚಾ—ಎನ್ ಲಾಯ್ ಗುಡುಗಿದ್ದಾರಂತೆ ಒಮ್ಮೆ ಯುದ್ಧ ಪ್ರಾರಂಭವಾಗಲಿ ಒಂದು ಕೈ ನೋಡಿಯೇ ಬಿಡ್ತೇವೆ ಅಂತ?

"ಗುಡುಗಲಿ, ಗುಡುಗಲಿ...."

"ಗುಡುಗಲಿಯ ಗರ್ಜನೆಯಿದೇನು?'

'ನೋಡಮ್ಮ, ಇಂತಹ ಗುಡುಗುಗಳಿ ಕೇಳಿ ಸಾಕಾಗಿದೆ. ಮತ್ತೆ ನೋಡು, ಡಿನ ಪಕ್ಕದಲ್ಲಿ ಮನೆ ಮಾಡಿದ ಮೇಲೆ ಹುಲಿಕರಡಿಗಳಿಗಂಜಿದರೆ ಹೇಗೆ?

ಅವು ನಮಗೆ ಉಪದ್ರವ ಮಾಡದಂತೆ ಎಚ್ಚರಿಕೆ ವಹಿಸಿ ಸಶಸ್ತ್ರರಾಗಿದ್ರೆ ಸರಿ...

"ಹ್ಞಾಂ.. ಅದಕ್ಕೇ ಇರಬೇಕು, ಅಣ್ವಸ್ತ್ರಹೀನ ರಾಷ್ಟ್ರಗಳಿಗೆ ಅಣು ದಾಳಿ ವಿರುದ್ಧ ಸೂಕ್ತ ಸಂರಕ್ಷಣೆಯ ಭರವಸೆ ದೊರೆಯದೆ ಭಾರತವು ಅಣ್ವಸ್ತ್ರ ನಿಷೇಧ ಸಂಬಂಧದ ಸೂಚನೆಯ ಬಗ್ಗೆ ಮೌನವಾಗಿದೆ....'

"ಇದ್ದರೂ ಇರಬಹುದು....

"ಈಗಲಾದರೂ ತುಸು ಬುದ್ಧಿ ಬಂತಲ್ಲಾ....'

"ಏನು ಬಂತೋ, ನಿನ್ನ ಹಾಗೆ...'

'ಹ್ಞಾಂ.... ಏನಂದ್ರಿ?"

'ಅನ್ನೋದೇನು. ಈಗ ಬಂದ ಬುದ್ಧಿ ಇನ್ನೊಂದು ಗಳಿಗೆಯಲ್ಲಿ ಹಾರಿ ಹೋಗುವುದಾದರೆ....'

'ಹಕ್ಕಿ ಬಂದಿತ್ತು ಅಂಗಳದಲ್ಲಿ, ಹಾರಿಯೇ ಹೋಯಿತ್ತು ಆ ಕ್ಷಣದಲ್ಲಿ....'

'ನಿನ್ನ ವೇದಾಂತ ಮೂಲೆಗಿಡು...'

"ಇಟ್ಟೆ..."

"ತುಸು ಇತ್ತ ಬಾ...'

'ಬಂದೆ....'

"....ಹ್ಞಾ....ಏನು?'

"....ಹ್ಞಾಂ....'

"ಹ್ಞ ಹ್ಞ....ಹ್ಞ....'

—ಗೋರಾ

ಶ್ರವಣ ಬೆಳ್ಗೊಳದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸಿದ್ಧತೆ.

ಮೇ ತಿಂಗಳ ಕೊನೆಯ ವಾರದಲ್ಲಿ ಶ್ರವಣ ಬೆಳ್ಗೊಳದಲ್ಲಿ ಸಲ್ಲತ್ತಾರನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಾ। ಎ. ಎನ್. ಉಪಾಧ್ಯೆಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರಗಿಸಲು ವಿವಿಧ ಏರ್ಪಾಡುಗಳು ನಡೆಯುತ್ತಿವೆ.

ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಟಿ. ಕಂಠದಾರ್ಯರು, ಭಾರತದ ಎಲ್ಲ ಕರ್ನಾಟಕ ಸಂಘಗಳು ಹಾಗೂ ಸಾಹಿತ್ಯ ಸಂಘಗಳು ಉದಾರ ಧನ ಸಹಾಯ ನೀಡಬೇಕೆಂದೂ ವಿನಂತಿಸಿಕೊಂಡಿದ್ದಾರೆ.

ಸಮ್ಮೇಳನದಲ್ಲಿ ಮೂರು ದಿನಗಳ ಕಾರ್ಯಕ್ರಮಗಳಿದ್ದು, ವಿವಿಧ ಗೋಷ್ಠಿಗಳಲ್ಲಿ ಹೆಸರಾಂತ ಸಾಹಿತಿಗಳು ಭಾಗವಹಿಸಲಿರುವರು. ಮನೋರಂಜನಾ ಕಾರ್ಯಕ್ರಮಗಳೂ ವಸ್ತು, ಕಲಾಪ್ರದರ್ಶನಗಳೂ ನಡೆಯುವುವು.

ಸಮ್ಮೇಳನದ ಸ್ವಾಗತ ಸಮಿತಿಯ ಕಚೇರಿಯು ತಿಪಟೂರಿನಲ್ಲಿದ್ದು ಅದರ ಅಧ್ಯಕ್ಷರು ಜಗದ್ಗುರು ಸ್ವಸ್ತಿ ಶ್ರೀ ಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ವರ್ಯ ಮಹಾಸ್ವಾಮಿಗಳು ಇರುವರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ವೇದಾಂತ ದರ್ಶನ

ಪರಿಪೂರ್ಣತ್ವ - ಸಾಧನೆ - ಗುರಿ

ಅನುವಾದಕರು
ಶ್ರೀ ಕೆ ಬಿ ವಾಸುದೇವ ರಾವ್.

ಧರ್ಮವೆಂಬುದು ಮೃಗಗಳಿಗೋಸ್ಕರವಲ್ಲ ಅದು ಯದಾರ್ಥದಲ್ಲಿ ಪೂರ್ತಿಯಾಗಿ ಬೆಳೆದ ಮನುಷ್ಯನು ತನ್ನ ಜೀವನದಲ್ಲಿ ವಿಶೇಷವಾಗಿ ಕೋರುತ್ತಿರುವ ಬೇಡಿಕೆಯನ್ನು ಉತ್ತರಿಸುವಂತಹದು. ಪ್ರತ್ಯಕ್ಷ ಗೋಚರವಾದ ಪ್ರಪಂಚದಲ್ಲಿ ಆಧ್ಯಾತ್ಮ ತತ್ವಗಳು ಅಥವ ಧಾರ್ಮಿಕ ಕ್ರಿಯೆಗಳು ಇಲ್ಲವೆಂದು ಹೇಳುವುದು ಧರ್ಮದ ನಿರಾಕರಣೆ ಸಮರ್ಥನೆಗೋಸ್ಕರ ದಿಕ್ಕುಗೆಟ್ಟ ನಾಸ್ತಿಕರು ಮುಂದಿಡುವ ಬುದ್ಧಿವಂತಿಕೆ ಎಂತೆ ತೋರುವ ವಿಚಿತ್ರವಾದಗಳೆಂದು ತೋರುತ್ತದೆ ಮನುಷ್ಯರಾದ ಕೆಲವರು ತಮ್ಮ ಆಂತರಿಕ ವಿಕಾಸ ಕ್ರಮದಲ್ಲಿ ಮೃಗಗಳ ಮಟ್ಟಕ್ಕಷ್ಟೆ ಬಂದಿರುವರು. ಯಾವುದಾದರೂ ಒಂದು ಪೀಳಿಗೆಯಲ್ಲಿ ಜನರೆಲ್ಲ ಈ ರೀತಿಯ ವಾದದವರಾದರೆ ಆಗ ಜೀವನದಲ್ಲಿನ ಶ್ರೇಷ್ಠ ಮೌಲ್ಯಗಳು ತಿರಸ್ಕರಿಸಲ್ಪಡುವುವು ಮಾತ್ರವಲ್ಲದೆ ಅತ್ಯುತ್ತಮ ಅನ್ವೇಷಣೆಯೇ ಪರಿಷ್ಕಾರವಿಲ್ಲದ್ದು ಸಹನಾತೀತವಾದದ್ದು ಆಗುವುದು.

ಅಂತರ್ಮುಖ ದೃಷ್ಟಿ ಎಷ್ಟು ಹೆಚ್ಚಾಗುವುದೋ ಅಷ್ಟೆ, ಮೇಲಕ್ಕೆ ವ್ಯಕ್ತಿಯ ಮುನ್ನಡೆ ಮತ್ತು ಉಬ್ಬು ಕಾಣಬಹುದು. ಆ ರೀತಿಯಲ್ಲಿ ವೀಕ್ಷಕನನ್ನು ಹೆಚ್ಚಿನ ಎತ್ತರಕ್ಕೆ ಉದ್ಧರಿಸಿದ್ದಾಗ ಕೆಳಗಣ ದೂರ ದೃಷ್ಟಿ ಅತಿ ದೂರದ ವರೆಗೆ ವ್ಯಾಪಿಸುವುದು. ನಾವು ಎಷ್ಟು ಎತ್ತರವಾದ ಪ್ರದೇಶದಿಂದ ನಮ್ಮ ಸುತ್ತಲೂ ನೋಡುವೆವೋ, ಅಷ್ಟೆ ವಿಶಾಲವಾಗಿದೆ ನಮ್ಮ ದೃಷ್ಟಿಯ ಮುಂದೆ ಉರುಳುವ ಭವಿಷ್ಯತ್ತು.

ಸಮಗ್ರತೆಯುಕ್ತ ಪ್ರಮಾಣದಲ್ಲಿ ಸಿದ್ಧನಾದಾಗ, ಅಂತಹ ವ್ಯಕ್ತಿ—ಸ್ವಾಧೀನಪಡಿಸುವ, ಮತ್ತು ರಕ್ಷಿಸುವ, ಸಂಪಾದಿಸುವ ಮತ್ತು ಸಂಗ್ರಹಿಸುವ, ತಿಂದು ಹಾಳುಮಾಡುವ, ನಿದ್ರೆ ಮಾಡುವ ಮತ್ತು ಸಂತತಿಯನ್ನುಂಟು ಮಾಡುವ, ಬೆಳೆಯುವ ಮತ್ತು ನಾಶವಾಗುವ—ಜೀವನದ ಕಡೆಗೆ ಜಿಗುಪ್ಸೆಯನ್ನು ಹೊಂದಿ, ಜೀವನದಲ್ಲಿ ಮಹತ್ವಾದ ಕರ್ತವ್ಯ, ಪರಮ ಉದ್ದೇಶಗಳನ್ನು ಕಂಡುಕೊಳ್ಳಲು ಹಾತೊರೆಯುವನು ತನ್ನ ಸ್ವಂತ—ಮನೆಯ ಗೋಡೆಗಳ ಹೊರಗೆ, ತನ್ನ ಗ್ರಾಮದ ಬೀದಿಗಳಾಚೆಗೆ ತನ್ನ ಪ್ರಾಂತ್ಯದ ಗಡಿಗಳಾಚೆಗೆ, ತನ್ನ ದೇಶದ ಮೇರೆಯನ್ನು ದಾಟಿ ಹೊರನೋಡುವ ಸಾಮರ್ಥ್ಯವನ್ನು ಆತನು ಹೊಂದುವನು. ಮಾತ್ರವಲ್ಲದೆ ಆತನಿಗೆ ಲೋಕದಲ್ಲಿ ಎಲ್ಲೆಲ್ಲೂ ಕಾಣುವ ಸಮಗ್ರ ಜೀವನವನ್ನು ಒಂದು ವಿಶಾಲವಾದ ವೀಕ್ಷಣೆಯಿಂದ ಅರಿತುಕೊಳ್ಳಲು ಸಾಧ್ಯವಾಗುವುದು. ಹೀಗೆ ಸಮಗ್ರತೆ ತೀವ್ರವಾದಂತೆಯೇ, ಆತನ ಗ್ರಹಿಕೆಯು ಮತ್ತು ಭಾವನೆಯು ಸೂಕ್ಷ್ಮತೆ ವರ್ಧಿಸುವುದು. ಅಲ್ಲದೆ ಆತನು ಮಾನವರ ಜೀವನವನ್ನು ಪರೀಕ್ಷಿಸಿದಂತೆಯೇ, ಜೀವನದ ವ್ಯಾಪ್ತಿ ಮತ್ತು ಪ್ರಸಾರವನ್ನು ಪ್ರಾಣಿ ಮತ್ತು ಸಸ್ಯಗಳ ರಾಜ್ಯದಲ್ಲಿಯೂ ಕಂಡುಕೊಳ್ಳುವನು.

ಸೂಕ್ಷ್ಮ ಮನಸ್ಸಿನ ಆಸಾಧಕನು ಅಥವಾ ಪೂರ್ತಿಯಾಗಿ ವಿಕಾಸ ಹೊಂದಿದ ಮನುಷ್ಯನು, ತನ್ನ ಸರ್ವವ್ಯಾಪಕವಾದ ವೀಕ್ಷಣೆಯಿಂದ ಜೀವನವನ್ನು ಒಂದಾಗಿ ಪರಿಶೋಧಿಸುವನು. ತನ್ನ ದೃಷ್ಟಿಯ ನಿಚ್ಚಳತೆಯ ಮೂಲಕ ಜೀವನವು ಸಂಚಾರ ಮಾಡಿದ ಪ್ರಗತಿಪರ ಹಂತಗಳನ್ನು ಕಾಣುವನು. ತಕ್ಷಣ ಜೀವನದ ರಂಗಭೂಮಿಯಲ್ಲಿ ಚೈತನ್ಯದಿಂದ ಮಿಡುಕುತ್ತಿರುವ ಅನಂತ ಜೀವಿಗಳು ಹೊರ ಬರುತ್ತಿವೆ. ಆದರೆ ಅಯ್ಯೋ! ಕಲ ಕಾಲದ ಚಟುವಟಿಕೆಯನ್ನು ತೋರಿಸಿದ ಬಳಿಕ ಮರಣವೆಂಬ ಎದುರುಗಡೆಯ ದ್ವಾರದಿಂದ ನಿರ್ಗಮಿಸುತ್ತಿವೆ. ನಿರಂತರವಾಗಿ ಆತ್ಮೀಯತೆಯ ಕ್ರಮಗಳಲ್ಲಿ ಯಾವುದಾದರೂ ಒಂದು ಮಾರ್ಗ ಮುಖೇನ ಶುದ್ಧೀಕರಿಸಲ್ಪಟ್ಟ ಅಥವಾ ಪವಿತ್ರಗೊಳಿಸಲ್ಪಟ್ಟ ಬುದ್ಧಿಯ ಗೋಪುರದಿಂದ, ಅಂತಹ ವ್ಯಕ್ತಿ ಈ ಅದ್ಭುತವನ್ನು ಗುರುತಿಸಿದಾಗ, ಶೋಕಾಂತವಾದ, ಅತಿ ವೇದನಾಜನಕವಾದ ನಿರಾಶೆಯಿಂದ ಕ್ಷೋಭೆಗೊಂಡು, ಆ ಮೂಲಕ ಗಲಿಬಿಲಿಯ ಕಂಗೆಟ್ಟ ಸ್ಥಿತಿಗೆ ಎರವಾಗುವನು.

ಭವಿಷ್ಯದೆಡೆಗೆ ನೋಟ



ಈ ಮಗುವಿನ ನಾಳೆಯ ಬದುಕಿಗೆ ಆಕೆಯ ಹೆತ್ತವರ ನಿಯತ ಉಳಿತಾಯ ಭದ್ರತೆಯನ್ನೊದಗಿಸಿದೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ಆಕೆಯ ಹೆಸರಿನಲ್ಲಿ ತೆರೆದ ಕ್ಯುಮುಲೇಟಿವ್ ಠೇವಣಾತಿ ಖಾತೆಯೇ ಆಕೆಯ ಭವಿತವ್ಯದ ರಕ್ಷೆಯೆನಿಸಿದೆ. ಆಕೆಯನ್ನು ಸಲಹುವ ಹಿರಿಯರ ದೂರದೃಷ್ಟಿಯಿಂದಾಗಿ ಈ ಮಗುವು ದೂರದ ಭವಿಷ್ಯದೆಡೆಗೆ ತುಂಬು ವಿಶ್ವಾಸದಿಂದ ನಗು ತುಂಬಿದ ಕಣ್ಣುಗಳಿಂದ ನೋಟ ಬೀರುತ್ತಿದೆ.

ನಿಮ್ಮ ಮಕ್ಕಳ ನಾಳೆಯ ಬದುಕಿನ ಭದ್ರತೆಗಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್ ಠೇವಣಾತಿ ಖಾತೆಯೊಂದನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ

ಸ್ವಗಂ ಅನಿಶ್ಚಿತಾವಸ್ಥೆಯ ಈ ಹಂತದಲ್ಲಿ, ಆತನು ಈ ಸಮಸ್ಯೆ ತನ್ನ ಸಾಮರ್ಥ್ಯವನ್ನು ಮೀರುವಷ್ಟು ಗಹನವಾಗಿದೆಯೆಂದು ಭಾವಿಸಿ, ತನ್ನ ಆರಂಭದ ನಿರ್ಣಯಗಳೆಲ್ಲವನ್ನು ಕೂಲಂಕಷವಾಗಿ ಪುನರ್ಮರ್ಶಿಸಲು ತೊಡಗುವನು. ಅದು ಹೇಗೆಂದರೆ:

ಮಾನವ ಜೀವನ ಬಾಣದ ಹಾರಾಟ
ಕತ್ತಲೆಯಿಂದ ಬೆಳಕಿಗೆ
ಬೆಳಕಿನಿಂದೊಮ್ಮೆ ತಿರುಗಿ ಕತ್ತಲೆಗೆ,
ಅದ ಸುಖದೆಡೆಗೋ ದುಃಖದೆಡೆಗೋ.
(ಆರ್. ಎಚ್. ಸ್ಟೋಡಾರ್ಡ್)

ಜೀವನವೆಂಬುದು ಅರ್ಥಹೀನ ಭ್ರಮೆಯಾದರೆ, ಅದರಲ್ಲಿ ನಾವು ಶೋಕಗಾನವನ್ನು ಹಾಡುತ್ತ ಮೂರ್ಖರಂತೆ ನಮ್ಮ ಜೀವನ ಯಾತ್ರೆಯನ್ನು ಗರ್ಭದಿಂದ ಪ್ರಾರಂಭಿಸಿ ಸ್ಮಶಾನದಲ್ಲಿ ಕೊನೆಗೊಳಿಸುವ ರೀತಿಯದಾದರೆ ಪ್ರಕೃತಿಯನ್ನು ಅಪಾಯಕಾರಿ ಭ್ರಾಂತಿಯೆಂದು ತಿಳಿಯಬೇಕಾದೀತು. ಜಗತ್ತಿನ ಎಲ್ಲಾ ಏರ್ಪಾಡುಗಳು ಅನರ್ಥಕಾರಿ ಅರಾಜಕತೆಯ ಗೊಂದಲವಾದರೆ, ನಮ್ಮ ಬಾಳು ಜೀವದ ತೊಳಲಾಟ ಮತ್ತು ಬಡಿದಾಟದ ಮೂಲಕ ನಮ್ಮನ್ನು ಶೀತಳ ಗೋರಿಯಲ್ಲಿ ಅವಸಾನಗೊಳಿಸುವುದಾದರೆ, ಅದು ಸೃಷ್ಟಿಕರ್ತನ ಪಾಲಿಗೆ ಅನಗತ್ಯವಾದ ದುಂದುಗಾರಿಯೆನಿಸುವುದು.

ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಪುರಾತನ ಮಹರ್ಷಿಗಳು ಜೀವನವು ಪೂರ್ಣತ್ವದ ಮಹತ್ತರದ ಸಾಧ್ಯತೆಗಳಿಂದ ಕೂಡಿರುವುದನ್ನು ಅವಲೋಕಿಸಿದರು, ದಾರ್ಶನಿಕನು ಪಾವನಮಯ ಅತಿ ಮಾನವತೆಯನ್ನು ಮಾತ್ರ ವೀಕ್ಷಿಸಿದ್ದರೆ, ಮಾನವನು ಅತಿಮಾನವತೆಯನ್ನು ಆತ್ಮಿಕದ ಹಾಗೂ ಧ್ಯಾನ ಮಾರ್ಗದ ಮೂಲಕ, ಈ ಜನ್ಮದಲ್ಲೇ ಸಾಧಿಸಬಹುದು ಎಂಬುದು ಮಹರ್ಷಿಗಳ ಅಭಿಮತ. ಮಾತ್ರವಲ್ಲದೆ ಸತ್ಯ ಅಥವಾ ನಿಜತ್ವ ಒಂದೇ ಆಗಿದ್ದು, ಅದರ ಪೂರ್ಣ ಸ್ವಭಾವದಲ್ಲಿ ಸರ್ವವ್ಯಾಪಿಯಾಗಿದೆ. ಆದುದರಿಂದ ಅವರು ಪ್ರಕೃತಿಯಲ್ಲಿನ ಸಕಲ ವಸ್ತುಗಳಿಗೂ ಜೀವನವೇ ಮೂಲವೆಂದು ನಿರ್ಣಯಿಸಿದರು. ಅಂತೆಯೆ ಅಸ್ತಿತ್ವದಲ್ಲಿರುವ, ಸಕಲ ಜೀವರಾಶಿಗಳ, ಜೀವನದ ಹಂತಹಂತಗಳಲ್ಲಿ, ಜೀವನ ಅಥವಾ ಸತ್ಯವು ವಿಭಿನ್ನ ಮಟ್ಟದಲ್ಲಿ ಹಾಗೂ ಭಾಷೆಯಲ್ಲಿ ಪ್ರಕಟವಾಗುತ್ತಿರುವುದನ್ನು ಅವರು ಕಂಡುಕೊಂಡರು. ಈ ಜೀವನದ ಚಹರೆಯ ಆಧಾರದ ಮೇಲೆ, ನಾವು ರೂಪಗಳಿಂದ ಜೋಡಿಸಲ್ಪಟ್ಟ ಪ್ರಪಂಚದ ಭಿನ್ನ ಭಿನ್ನ ಉಪಕರಣಗಳನ್ನು ನಾಲ್ಕು ಪಂಗಡಗಳಾಗಿ ವಿಭಾಗಿಸಿದರು (ಅ) ಜಡವಾದ ಬಂಡೆ ಜೀವನ (ಆ) ಸಸ್ಯ ಜೀವನ (ಇ) ಮೃಗ ಜೀವನ (ಈ) ಮಾನವ ಜೀವನ ಈ ನಾಲ್ಕು ವಿವಿಧ ಪ್ರಮಾಣದ ಪದರುಗಳಲ್ಲಿ ಅವರು ಅದರ ಪ್ರತ್ಯಕ್ಷತೆಯನ್ನು ಕಾಣಲು ಯತ್ನಿಸಿದರು. ಈ ರೀತಿ ಅವರು ಜಡವಾದ ಕಲ್ಲಿನಲ್ಲೂ ಜೀವನ ಸ್ಥಿತಿಗೊಂಡು ಸ್ಫುರಿಸುವುದನ್ನು ಕಂಡುಕೊಂಡರು. ನಾವು ಸಸ್ಯ ಜೀವನಕ್ಕೆ ಬರುವಾಗ, ಜೀವನವು ಹೊರಜಗತ್ತಿನ ಸ್ಥೂಲ ಜ್ಞಾನದ ರೂಪದಲ್ಲಿ ಬೆಳವಣಿಗೆಯ ಮೂಲಕ ಸ್ಫುರಿಸುವುದನ್ನು ಕಾಣಬಹುದು ಮೃಗ ಜೀವನವನ್ನು ಸಮೀಪಿಸಿ ಅದನ್ನು ಸಸ್ಯ ಜೀವನದೊಂದಿಗೆ ಹೋಲಿಸಿ ನೋಡಿದಾಗ, ಬಾಹ್ಯ ಪ್ರಪಂಚದ ಜ್ಞಾನವು ಇನ್ನೂ ಹೆಚ್ಚಾಗಿರುವುದನ್ನೂ ಪ್ರಾಯಶಃ ಸ್ವಲ್ಪ ಮಟ್ಟಿಗೆ, ಅವುಗಳಲ್ಲಿ ಕೆಲವಕ್ಕಾದರೂ ಒಳಜಗತ್ತಿನ ಜ್ಞಾನವಿರುವುದನ್ನೂ ಕಾಣಬಹುದು.

[ಎಂಟನೇ ಪುಟ ನೋಡಿರಿ]

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R E P 797/1965
O S. 226/1962
R I. A 916/1962

ಗಂಗಾಬಾಯಿ —ಅರ್ಜಿದಾರಳು
ಅಹಮ್ಮದ ಬ್ಯಾರಿ ಸಾಬಾ —ಎದ್ರಿರು

೨. ಅಲಿಯಬ್ಬ ಮೊಯಿದಿನ ಬ್ಯಾರಿಗಳ ಮಗ, C/o A K Corporation Malikapuram Vishaapatu-am.

೨ನೇ ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ

ಸದ್ರಿ ಅಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ಪಡೆಯುವ ಸ್ಥಿರಾಸ್ತಿಗಳನ್ನು ಲಿಲಾಂಗೆ ಅಪೇಕ್ಷಿಸಿ ಅರ್ಜಿದಾರಳು ದಾಖಲ್ ಸದ್ರಿ ಅಮಲ್ಜಾರಿಯು ತಾ. 31-5-1967ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉಜ್ರ್ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಸದ್ರಿ ಅಮಲ್ಜಾರಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Petitioner
Karkala 13—5—67

ಅಭಿಪ್ರಾಯ

ಮದರಾಸಿನಲ್ಲಿ

ಮದರಾಸಿನ ಬಿಸಿಲು ಹೆಸರು ಹೋದದ್ದಿದೆ. ಬಿಸಿಲು ಬಹಳ ಜೋರಾಗಿದ್ದಾಗ ಮೋಡ ಮುಸುಕಿ ದಿಢೀರನೆ ಮಳೆ ಬರುವದು ಅಲ್ಲಿ ವಿಶೇಷವೇನಲ್ಲ. ಈ ಸಲ ರಾಜಕೀಯದಲ್ಲಿ, ಚುನಾವಣಾ ಕಣದಲ್ಲಿ ನಡೆದದ್ದೂ ಅದೇ.

ಚುನಾವಣೆಯ ಸಮಯದಲ್ಲಿ ಭಾರತೀಯರ ಅಷ್ಟೇ ಅಲ್ಲದೆ ಅನ್ಯರ ಗಮನವೂ ಮದರಾಸಿನತ್ತವೂ ಇತ್ತು. ಅದಕ್ಕೆ ಕಾರಣವೆಂದರೆ ಮದರಾಸಿನಲ್ಲಿ ಅಂದರೆ ತಮಿಳು ನಾಡಿನಲ್ಲಿರುವ ಎರಡು ವೈಶಿಷ್ಟ್ಯಪೂರ್ಣ ವ್ಯಕ್ತಿಗಳು ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರ ಪ್ರಾಂತ್ಯ ಇದು. ಅದು ಮಾತ್ರವಲ್ಲ ಕಾಂಗ್ರೆಸ್ಸಿನ ಅಧ್ಯಕ್ಷರೇ ಹೋರಾಟಕ್ಕಿಳಿದಿದ್ದ ಕಣವಿದು. ಇದು ಮಿಸ್ಟರ್ ಚಕ್ರವರ್ತಿ ರಾಜಗೋಪಾಲಾಚಾರಿಯವರ ಪ್ರಾಂತ್ಯವೂ ಇದೆ. ಅವರಾದರೋ ಸ್ವತಃ ಕಣಕ್ಕಿಳಿದಿರಲಿಲ್ಲ. ಅಲ್ಲದೆ ಅವರ ಪಾರ್ಟಿಯೂ ಸಿಂಹದ ಪಾಲನ್ನು ಹೊಂದಿ ರಂಗದಲ್ಲಿ ನಿಂತಿರಲಿಲ್ಲ. ಆದರೂ ಕೊಳೆತ ಕಾಂಗ್ರೆಸ್ಸಿನ ಕಳೇಬರಕ್ಕೆ ಸಂಸ್ಕಾರ ನಡೆಸುವ ಪುರೋಹಿತ (ಬ್ರಾಹ್ಮಣ) ತಾನೆಂದು ಅವರಂದಿದ್ದ ಮಾತನ್ನು ಅವರು ಮರೆತಿರಲಿಲ್ಲ. ತಾನೂ ಕಣಕ್ಕಿಳಿಯದೆ, ಪಕ್ಷಕ್ಕೂ ಪ್ರಬಲ ಪಾತ್ರವೀಯದ ಅದೆಂತು ಅವರು ಕಾಂಗ್ರೆಸ್ಸಿನ ಕಾಲು ಜಾರಿಸುವರೆಂದು ಎಲ್ಲರೂ ಕುತೂಹಲದಿಂದ ನೋಡುತ್ತಿದ್ದರು. ಅವರ ಮಾತು ಮದ್ರಾಸಿನಲ್ಲಿ ಸತ್ಯವಾಯಿತು. ಕಾಂಗ್ರೆಸ್ಸ್ ಸೋತು ಹೋಯಿತು— ಇನ್ನೆಂದಿಗೂ ತಲೆ ಎತ್ತಲಾಗದಂತಹ ಬಲವಾದ ಆಘಾತವನ್ನು ಹೊಂದಿದೆ. ಇದೆಂತು ಸಾಧ್ಯವಾಯಿತು?

ಕಾಂಗ್ರೆಸ್ಸಿಗೆ ಪ್ರಬಲ ಪ್ರತಿಸ್ಪರ್ಧಿಗಳಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆದರೆ ಅದು ಮಣ್ಣು ಮುಕ್ಕಿಸುವ ಪ್ರಹಾರವೆಂದು ಯಾರೂ ತಿಳಿದುಕೊಂಡಿರಲಿಲ್ಲ. ಮುಂದಿನ ಸಾಲಿನಲ್ಲಿ ಶ್ರೀ ಭಕ್ತವತ್ಸಲಂರವರು ಮುಖ್ಯಮಂತ್ರಿಯಾಗಿರುವದಿಲ್ಲವೆಂದು ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರವರು ಘೋಷಿಸಿದ್ದರೇ ವಿನಃ ಕಾಂಗ್ರೆಸ್ಸ್ ಅಧಿಕಾರದಲ್ಲಿರುವದಿಲ್ಲವೆಂದು ಅವರು ಭಾವಿಸಿಯೂ ಇರಲಿಲ್ಲ. ಅಂತಹ ಅನುಮಾನ ಬರುತ್ತಿದ್ದಲ್ಲಿ ಅವರು ಕಳವಳದ ಕಾಳ್ಗಿಗೆಯ ಎತ್ತಿದ್ದರು. ಕಾಂಗ್ರೆಸ್ಸಿನ ಅಧ್ಯಕ್ಷ ಅಂಟಿಸ್ಸಿನ ಮುಖ್ಯಾದಯನ್ನು ಕಾಪಾಡುತ್ತಿದ್ದರು. ಶ್ರೀ ಮುರಾರ್ಜೀ ದೇಸಾಯಿಯವರೂ ಕೂಡಾ ಕೇರಳ—ಬಂಗಾಲಗಳಲ್ಲಿ ಕಾಂಗ್ರೆಸ್ಸ್ ಬರಲಿಕ್ಕಿಲ್ಲವೆಂದು ಹೇಳುತ್ತಿದ್ದರೇ ವಿನಃ ಮದರಾಸಿನಲ್ಲಿ ಸೋಲು ಸಿದ್ಧವೆಂದು ಸಾರಲಿಲ್ಲ. ಕಾಂಗ್ರೆಸ್ಸಿಗೆ ಪ್ರಬಲ ಪೈಪೋಟಿ ಸಿಗುತ್ತದೆಯೆಂದು ಶ್ರೀ ಸದೋಬಾ ಪಾಟೀಲರು ಎಚ್ಚರಿಕೆ ಇತ್ತಿದ್ದರೂ ಮದರಾಸಿನಲ್ಲಿ ಮರಣ ಪ್ರಹಾರ ದೊರೆಯುತ್ತದೆಂದು ಭವಿಷ್ಯ ನುಡಿದಿರಲಿಲ್ಲ.

೧೯೬೭ರಲ್ಲಿ ತಮಿಳುನಾಡಿನ ಮೊದಲ ಮಂತ್ರಿ ತಿರು ಅಣ್ಣಾದೊರೈಯೆಂದು ದ್ರಾವಿಡ ಮುನ್ನೇತ್ರ ಕಳಗಮಿನ ಕೆಲ ಮುಖಂಡರೂ ಹಿಂಬಾಲಕರೂ ಹೇಳುತ್ತಿದ್ದರೂ ಸ್ವತಃ ದ್ರಾ. ಮು. ಕಕ್ಕೆ ತಮಗೆ ಜಯ ಕಾದಿದೆಂಬುದನ್ನು ಗೊತ್ತಿರಲಿಲ್ಲ. ಹಾಗೆ ಗೊತ್ತಿರುತ್ತಿದ್ದಲ್ಲಿ ಇತರ ಪಕ್ಷಗಳೊಂದಿಗೆ ದ್ರಾ. ಮು. ಕ. ಒಪ್ಪಂದ ಮಾಡಿಕೊಳ್ಳುತ್ತಿರಲಿಲ್ಲ. ಅಲ್ಲದೆ ತಿರು ಅಣ್ಣಾದೊರೈಯವರು ತನ್ನ ಹುಟ್ಟೂರು ಕಾಂಚೀಪುರಮಿನಲ್ಲಿ ವಿಧಾನ ಸಭೆಯ ಸ್ಥಾನಕ್ಕೆ ಹೋರಾಟ ನಡೆಸುತ್ತಿದ್ದರು. ಅಲ್ಲಿ ಗೆಲ್ಲುವ ಧೈರ್ಯ ಅವರಿಗೆ ಎನಿತೂ ಇರಲಿಲ್ಲ. ಆದುದರಿಂದ ಮದರಾಸು ನಗರದಲ್ಲಿ ನಿಲ್ಲಬೇಕೆಂದಾಗಲೂ ಅವರ ಕಾಲು ನಡುಗುತ್ತಿತ್ತು. ಕೊನೆಗಲ್ಲಿ ಮಿಸ್ಟರ್ ರಾಜಾಜಿಯವರ ಸಲಹೆ ಮೇರೆಗೆ ಅವರು ಮದರಾಸು ನಗರದಲ್ಲಿ ವಿಧಾನ ಸಭೆಯ ಸ್ಥಾನಕ್ಕಲ್ಲ——ಲೋಕ ಸಭಾ ಸ್ಥಾನಕ್ಕೆ ಹೋರಾಟಕ್ಕಿಳಿದರು. ಕಳೆದ ಸಲ ಆ ಸ್ಥಾನವು ದ್ರಾ. ಮು. ಕ.ಕ್ಕೆ ಸಿಕ್ಕಿತ್ತು. ತಿರು ಅಣ್ಣಾದೊರೈಯವರಿಗಾಗಿ ಆ ಲೋಕ ಸಭಾ ಸದಸ್ಯ ಇನ್ನೊಂದು ಸ್ಥಾನದಲ್ಲಿ ಕಣಕ್ಕಿಳಿದರು. ಇಲ್ಲಾ ಗೆಲ್ಲುವ ಧೈರ್ಯ ಇದ್ದಲ್ಲಿ ತಿರು ಅಣ್ಣಾದೊರೈ ತನ್ನ ಹಿಂಬಾಲಕರ ಸ್ಥಾನವನ್ನು ಆಕ್ರಮಿಸಿದ ಬೇರೊಂದು ಸ್ಥಾನದಲ್ಲಿ ನಿಲ್ಲುತ್ತಿದ್ದರು. ಆದರೆ ಆ ಸ್ಥಳದಲ್ಲಿ ಮಿಸ್ಟರ್ ಸಿ. ಆರ್. ರವರ ಹಿಂಬಾಲಕರ ಸಂಖ್ಯೆ ಬಹಳ ಕಮ್ಮಿ. ಬ್ರಾಹ್ಮಣರು ಹಾಗೂ ಶ್ರೀಮಂತರು ಅಲ್ಲದೆ ದೊಡ್ಡ ಉನ್ನತ ಅಧಿಕಾರದಲ್ಲಿರುವವರು ಹೆಚ್ಚಾಗಿ ಇರುವ ಸ್ಥಳದಲ್ಲಿ ಬ್ರಾಹ್ಮಣ ದ್ವೇಷ ಹಾಗೂ ಕಮ್ಯೂನಿಸಂ ಪರ ದ್ರಾ. ಮು. ಕದ ಅಣ್ಣಾ ನಿಲ್ಲುವ ಧೈರ್ಯ ತೋರಿಸಿದರು! ನಿಂತರು, ಗೆದ್ದರು. ಆದರೆ ದಿಲ್ಲಿಗೆ ಹೋಗಲೇ ಇಲ್ಲ. ಇಲ್ಲೇ ಮುಖ್ಯಮಂತ್ರಿ ಆಗಿಬಿಟ್ಟರು. ಸಂ. ಸ. ಪಕ್ಷದ ಓರ್ವ ಲೋಕಸಭಾ ಸದಸ್ಯ ಒಂದು ಪ್ರಾಂತ್ಯದಲ್ಲಿ ಮಂತ್ರಿಯಾಗಿ ಬಿಟ್ಟದ್ದಕ್ಕೆ ಶ್ರೀ ರಾಮಮನೋಹರ ಲೋಹಿಯಾ ರಾಮ! ರಾಮ! ಮಾಡಿ ಬಿಟ್ಟರು. ಈ ದ್ರಾ. ಮು. ಕ. ದ ಅಣ್ಣಾನಿಗೆ ಹೇಳುವವರು ಯಾರು? ಹೇಳಿದರೂ ಕೇಳುವವರ್ಯಾರು? ಅವರ ಮಾತಿನಲ್ಲೇ ಹೇಳುವದಿದ್ದಲ್ಲಿ ಈ ರೀತಿ ಬಹು ಸಂಖ್ಯೆಯಲ್ಲಿ ಗೆಲ್ಲುವರೆಂಬುದನ್ನು ಅವರೇ ನಿರೀಕ್ಷಿಸಿರಲಿಲ್ಲ. ಗಾಳಿ ಬೀಸಿತು——ಮಾವಿನ ಹಣ್ಣುಗಳು ಡಬಡಬನೆ ಉದುರಿದುವು, ಯದಂಕ ಇನ್ನು ಹೋಗಿರುವದಿಲ್ಲ. ತಮಿಳು ನಾಡಿನ ವಿಧಾನಸಭೆಯ ಕೆಲಸ್ಥಾನಗಳಿಗೆ ಕೆಲ ಕಾರಣಗಳಿಂದಾಗಿ ಚುನಾವಣೆ ನಡೆದಿರುವದಿಲ್ಲ. ಅಂತಹ ಸ್ಥಳದಲ್ಲಿ ತಿರು ಅಣ್ಣಾದೊರೈ ಚುನಾವಣಾ ಕಣಕ್ಕಿಳಿದು ಗೆಲ್ಲಬಹುದಲ್ಲಾ? ಒಂದು ವೇಳೆ ಸೋತರೆ! ಒಳಗಿಂದೊಳಗೆ ಹೆದರಿಕೆ ಇರುವದರಿಂದ ಅವರನ್ನು ಒಂದು ಬಾಗಿಲಿನಿಂದ ತರಲು ಪ್ರಯತ್ನಿಸಲಾಗುತ್ತಿದೆ. ಮದ್ರಾಸು ನಗರಸಭೆ ದ್ರಾ. ಮು. ಕ. ಕೈಯಲ್ಲಿದೆ. ನಗರಸಭೆಗೆ ಒಬ್ಬರನ್ನು ಆರಿಸಿ ವಿಧಾನ ಪರಿಷತ್ತಿಗೆ ಕಳುಹಿಸುವ ಅಧಿಕಾರ ಇದೆ. ಅಂತಹ ಒಂದು ಸಂದರ್ಭ ಅದೃಷ್ಟವಶಾತ್ ಅವರಿಗೆ ಸಿಕ್ಕಿರುತ್ತದೆ. ಹೀಗೆ ತಿರು ಅಣ್ಣಾ ದೊರೈಯವರನ್ನು ನಗರ ಸಭೆಯ ಮೂಲಕ ವಿಧಾನ ಪರಿಷತ್ತಿಗೆ ತರಿಸಿ ಮುಖ್ಯಮಂತ್ರಿ ಪದವಿಯನ್ನು ಕಾಪಾಡಲು ಭಾರೀ ಪ್ರಯತ್ನ ನಡೆಯುತ್ತಿದೆ. ಹಾಗಿದ್ದರೂ ಭವಿಷ್ಯವಾದಿಗಳು ಸುಮ್ಮಗಿರುವದಿಲ್ಲ. ೧೯೬೭ರ ದಶಂಬರ ತಿಂಗಳೊಳಗೆ ದ್ರಾ. ಮು. ಕ. ಸರಕಾರ ಬಿದ್ದು ರಾಷ್ಟ್ರಪತಿ ಆಡಳಿತ ಜಾರಿಗೆ ಬರುತ್ತದೆಂದು ಪ್ರೊ. ಜಿ. ಯಸ್. ಪಂಡಿತರು ಭವಿಷ್ಯ ನುಡಿದಿರುವಾಗ 'ನಾಗರಿಕ' ಪತ್ರಿಕೆ ಪ್ರಕಟಿಸಿರುತ್ತದೆ. ಅದಕ್ಕೆ ಕಾರಣವಿಲ್ಲದಿಲ್ಲ.

ಇದು ಇತ್ತಂಡಗಳ ಚಿತ್ರ. ಕಾಂಗ್ರೆಸ್ಸಿಗೋ ಪೂರ್ಣ ಸೋತು ಹೋಗುವ ನಿಶ್ಚಯ ಇರಲಿಲ್ಲ. ಹಾಗೆಯೇ ದ್ರಾ. ಮು. ಕಕ್ಕೆ ಪೂರ್ಣ ಗೆಲ್ಲುವ ವಿಶ್ವಾಸ ಇರಲಿಲ್ಲ. ಹಾಗಾದದ್ದು ಹೇಗಾಗಲಿ ಏನು ಕಾರಣ? ಚುನಾವಣೆಯ ಬಿಸಿ ಮುಗಿದಿದ್ದು ಈಗ ಶಾಂತವಾಗಿ ಯೋಚಿಸಲು ಸಾಧ್ಯವಿದೆ. ಇದಕ್ಕೆ ತಿರು ಕಾಮರಾಜರವರಿತ್ತಿರುವ ಕಾರಣಗಳು ವಿಚಿತ್ರವೂ ಹಾಸ್ಯಾಸ್ಪದವೂ ಇವೆ. ಕಾಂಗ್ರೆಸ್ಸಿನ ಸೋಲಿಗೆ ಅಕ್ಕಿ ಹಾಗೂ ಹಿಂದಿಯೇ ಕಾರಣವೆಂದು ಹೇಳುತ್ತಿರುವ ತಿರು ಕಾಮರಾಜರವರು ಅದರ ಎಲ್ಲಾ ಜವಾಬ್ದಾರಿಯನ್ನು ಮಂತ್ರಿಮಂಡಲ ಅಂದರೆ ಅವರ ಸರಕಾರದ ಮೇಲೆಯೇ ಹೊರಿಸಿರುತ್ತಾರೆ. ಮತದಾನಕ್ಕೆ ಮೂರು ವಾರಗಳಿರುವಾಗ ಮದರಾಸಿನಲ್ಲಿ ಅಕ್ಕಿ ಹಂಚುವಿಕೆಯನ್ನು ನಿಲ್ಲಿಸಲಾಗಿತ್ತೆಂದು ತಿರು ಕಾಮರಾಜರು ಹೇಳಿರುತ್ತಾರೆ. ಮತದಾನದ ಸಮಯದಲ್ಲಿ ಮದರಾಸು ಮಹಾನಗರದ ಸರಕಾರದಿಂದ ನಿಯಮಿಸಲ್ಪಟ್ಟ ವಿತರಣೆಗಾರರಲ್ಲಿ ಅಕ್ಕಿ ಇರಲಿಲ್ಲವೆನ್ನುವದೇನೋ ನಿಜ. ಆದರೂ ಆಗ ಅಕ್ಕಿ ಮಾರುವವರು ಮನೆಮನೆಗೆ ಬಂದು ಅಕ್ಕಿ ಬೇಕೇ ಎಂದು ಕೇಳುತ್ತಿದ್ದರು. ಈ ಅಕ್ಕಿಗೆ ಸರಕಾರಿ ಅಕ್ಕಿಯಿಂದ ಸ್ವಲ್ಪ ಬೆಲೆ ಜಾಸ್ತಿ ಇರುತ್ತಿದ್ದರೂ ಅಕ್ಕಿ ಉತ್ತಮವಾಗಿರುತ್ತಿತ್ತು. ತಿರು ಕಾಮರಾಜರ ಈ ಮಾತಿನಿಂದಾಗಿ ಈಗ ವಚನ ಭ್ರಷ್ಟತೆಯ ಮೆಟ್ಟಿಲನ್ನೇರುತ್ತಿರುವ ದ್ರಾ. ಮು. ಕ. ದವರು ತಾವು ಆಡಳಿತ ಅಂಕುಶವನ್ನು ಕೈಗೆ ತೆಗೆದುಕೊಂಡಾಗ ಸೇಖರಿಸಿಟ್ಟಿದ್ದ ಅಕ್ಕಿ ಕಾಂಗ್ರೆಸ್ಸಿಗರಿಗೆನ್ನೇ ಒಂದು ತಿಂಗಳಿಗೂ ಸಾಕಾಗದ ಸ್ಥಿತಿಯಾದ ಕಾರಣ ಇದೀಗ ಒಡನೆ ರೂಪಾಯಿಗೆ ಮೂರು ಪಡಿ ಕೊಡಲು ಸಾಧ್ಯವಿಲ್ಲವೆಂದೂ ವಿತರಣೆಗಾರರಲ್ಲಿ ಸದಾ ಅಕ್ಕಿ ಸಿಗುವ ಹಾಗೆ ಮಾಡಲು ಏರ್ಪಾಡು ಮಾಡುವೆವೆಂದೂ ಹೇಳಿಕೊಂಡಿರುವರು. ಅಕ್ಕಿಯ ಪರಿಸ್ಥಿತಿ ಕರ್ನಾಟಕದಲ್ಲೂ ಅಷ್ಟು ಚೆನ್ನಾಗಿರಲಿಲ್ಲ. ಆದರೂ ಅಲ್ಲಿ ಅಧಿಕಾರದ ಅಂಕುಶ ಕಾಂಗ್ರೆಸ್ಸಿಗರ ಕೈಗೆ ಹೇಗೆ ಹೋಯಿತು? ಪಂಜಾಬಿನಲ್ಲಂತೂ ಗೋಧಿ ಧಾರಾಳವಾಗಿ ಸಿಗುತ್ತಿತ್ತು. ಅಲ್ಲಿ ಕಾಂಗ್ರೆಸ್ಸಿಗರ ಕಾಲು ಜಾರಲು ಏನು ಕಾರಣ? ಹೀಗಿರುವಾಗ ತಮಿಳು ನಾಡಿನಲ್ಲಿ ಕಾಂಗ್ರೆಸ್ಸಿನ ಅಪಜಯಕ್ಕೆ ಅಕ್ಕಿಯೇ ಮೂಲ ಕಾರಣವೆನ್ನುವದು ಸಮಂಜಸವಲ್ಲ. ಪಡಿ ಅಕ್ಕಿಗೆ ಎರಡೂಕಾಲು ರೂಪಾಯಿಗಳಿಗಿಂತಲೂ ಅಧಿಕ ಬೆಲೆ ಇದ್ದಾಗ ಒಂದು ರೂಪಾಯಿಗೆ ಮೂರು ಪಡಿ ಅಕ್ಕಿ ಹಾಕಿಸುತ್ತೇವೆಂದು ಯಾರಾದರೂ ಹೇಳಿದಲ್ಲಿ ಅದನ್ನು ನಂಬುವವನು ಯಾರು?

ಆದರೂ ಕಾಂಗ್ರೆಸ್ಸಿನ ಕಾಲು ಕುಸಿದು ಹೋಯಿತು. ಅದಕ್ಕೇನು ಕಾರಣ? ಅದಕ್ಕೆ ಹಿಂದಿ ಕಾರಣವೆನ್ನುತ್ತಾರೆ. ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರು ಹಿಂದಿಯಿಂದ ತಮಿಳಿಗೆ ಅಪಾಯವಿರುವದು ನಿಜವಾದಲ್ಲಿ ಕನ್ನಡಕ್ಕೂ, ತೆಲುಗಿಗೂ ಅಪಾಯ ಇರಲೇಬೇಕು. ಆದರೆ ಆ ಎರಡು ಪ್ರಾಂತ್ಯಗಳಲ್ಲೂ ಕಾಂಗ್ರೆಸ್ಸ್ ಅಧಿಕಾರಕ್ಕೆ ಬಂದಿದೆಯಲ್ಲಾ! ಹಿಂದಿ ಪ್ರಾಂತ್ಯಗಳೆನಿಸಿಕೊಂಡಿರುವ ಉತ್ತರ ಪ್ರದೇಶ—ಮಧ್ಯ ಪ್ರದೇಶಗಳಲ್ಲಿ ಕಾಂಗ್ರೆಸ್ಸಿನ ಕಾಲು ಕುಸಿದಿದೆಯಲ್ಲಾ. ತತ್ಸಮಯಕ್ಕೆ ಪಸರಿಗೆ ಮಾತ್ರ ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್ಸಿನ ಆಳ್ವಿಕೆ ನಡೆಯುತ್ತಿದೆಯಾದರೂ ಮುಂದಿನ ದಿನಗಳಲ್ಲಿ ಮುಗ್ಗರಿಸದಿರಬೇಕೆನ್ನಲು ಸಾಧ್ಯವಿಲ್ಲ. ಅಷ್ಟೇಕೆ; ಮಹಾ ಮಂತ್ರಿಗಳ ಮೂಗಿನಡಿಯಲ್ಲೇ ದಿಲ್ಲಿಯಲ್ಲೇ ಕಾಂಗ್ರೆಸ್ಸಿಗೆ ಹೆಸರು ಹೇಳಿಕೊಳ್ಳಲು ಮಾತ್ರ ಸ್ಥಾನಗಳು ಸಿಕ್ಕಿವೆಯಲ್ಲಾ! ಹಾಗಿರುವಾಗ ತಮಿಳು ನಾಡಿನಲ್ಲಿ ಮಾತ್ರ ಹಿಂದಿಯಿಂದ ಕಾಂಗ್ರೆಸ್ಸಿಗೆ ಬಲವಾದ ಮರಣಾಂತಿಕ ಪ್ರಹಾರ ಸಿಕ್ಕಿತೇ!

ಹಿಂದಿ ಭಾಷೆಗೆ ವಿರುದ್ಧವಾಗಿರುವ ಸ್ವತಂತ್ರ ಪಾರ್ಟಿ—ದ್ರಾ. ಮು. ಕ. ಮುಸ್ಲಿಂಲೀಗು ಸಮಯ ಸಾಧಕ ತಮಿಳು ಅರಸು ಕಳಗಂ, ಕಮ್ಯೂನಿಸ್ಟ್ ಪಾರ್ಟಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದವು. ಸ್ವತಂತ್ರ ಪಾರ್ಟಿಯವರು ಎಲ್ಲಾ ವಿಷಯಗಳಲ್ಲೂ ಸ್ವತಂತ್ರರಾಗಿರುವಂತೆ ಭಾಷೆಯ ವಿಷಯದಲ್ಲೂ ಅಷ್ಟೇ. ಉತ್ತರ ಪ್ರದೇಶದ ಶಾಖೆ ಹಿಂದೀ ವ್ಯಾವಹಾರಿಕ ಭಾಷೆಯಾಗಬೇಕೆಂದು ಗಂಟಲು ಹರಿದು ಹೋಗುವಂತೆ ಬೊಬ್ಬೆ ಹಾಕಿದಲ್ಲಿ ತಮಿಳು ನಾಡಿನ ಸ್ವತಂತ್ರ ಪಾರ್ಟಿಯ ಶಾಖೆ ಅಷ್ಟೇ ಜೋರಾಗಿ ಕೇಳುವವರ ಕಿವಿ ಕಿವುಡಾಗುವಂತೆ ಶಬ್ದ ಉಂಟು ಮಾಡುತ್ತದೆ. ಹಿಂದಿಯಿಂದಾಗಿ ಗಾಂಧಿ—ರಾಜಾಜಿಯವರಲ್ಲಿ ಕೌಟುಂಬಿಕ ಸ್ನೇಹ ನಡೆಯಿತ್ತಲ್ಲದೆ, ಅವರು ಇಲ್ಲಿಯ ಮುಖ್ಯಮಂತ್ರಿಯಾಗಿದ್ದಾಗ ಹಿಂದಿ ಹರಡಲು ಪ್ರಯತ್ನಿಸಿದ್ದರಾದರೂ ಕಾಂಗ್ರೆಸ್ಸನ್ನಳಿಸುವ ಏಕಮೇವ ಉದ್ದೇಶದಿಂದ ಹಿಂದಿಯನ್ನದುರಿಸಿ ಇಂಗ್ಲಿಷ್ ಭಾಷೆಯ ಆಳ್ವಿಕೆಗೆ ಆಹ್ವಾನವೀಯುತ್ತಿದ್ದಾರೆ! ಚುನಾವಣೆಯ ಪೂರ್ವ ದ್ರಾ. ಮು. ಕ.ವು ಹಿಂದಿಯನ್ನು ವಿರೋಧಿಸಿತು. ಈ ವಿಷಬೀಜವನ್ನು ಬಿತ್ತಿ ದ್ರಾ.ಮು.ಕ. ಬೆಳೆದದ್ದು. ಹಾಗಿದ್ದರೂ ಅನಿರೀಕ್ಷಿತವಾಗಿ ಆಳ್ವಿಕೆಯ ಅಂಕುಶಕ್ಕೆ ಬಂದೊಡನೆ, ಮುಖ್ಯಮಂತ್ರಿ ಜವಾಬ್ದಾರಿಯ ಸ್ಥಾನದಿಂದ ದಿಲ್ಲಿಗೆ ಹೋಗಿ ಬಂದ ಮೇಲೆ ಶಾಲೆಗಳಲ್ಲಿ ತ್ರಿಭಾಷಾ ಸೂತ್ರದಂತೆ ಹಿಂದಿಯನ್ನು ಕಲಿಸಲಾಗುತ್ತದೆಂದು ತಿರು ಅಣ್ಣಾದೊರೈಯವರನ್ನು ಅರುಹಿರುವರು. ಮುಸ್ಲಿಂಲೀಗಿಗಂತೂ ಉರ್ದು

ಮಿಂಚಿದ ಮಿಂಚು

ಬರೆದವರು
ಶ್ರೀ ಶಿವಶಂಕರ

ಅಲ್ಲದೆ ಅದ್ಯಾವ ಭಾರತೀಯ ಭಾಷೆಯೂ ವ್ಯಾವಹಾರಿಕ ಭಾಷೆಯಾಗಿರ ಬಾರದೆಂಬುದೇ ಹಟವಿದೆ. ತಮಿಳು ಅರಸು ಕಳ್ಗವಿನವರು ಒಂದು ನಿರ್ದಿಷ್ಟ ಅಭಿಪ್ರಾಯ ಹೊಂದಿರುವವರಲ್ಲಿ. ತಮಿಳು ಇಲ್ಲಿಯ ಸರಕಾರೀ ಭಾಷೆಯಾಗಿರ ಬೇಕೆನ್ನುವ ಮಟ್ಟಿಗೆ ಎಲ್ಲಾ ತಮಿಳು ಅರಸು ಕಳ್ಗವಿನ ಮುಂದಾಳುಗಳು ಒಪ್ಪಿಕೊಳ್ಳುತ್ತಾರಾದರೂ ಅಖಿಲ ಭಾರತೀಯ ಮಟ್ಟದಲ್ಲಿ ವ್ಯಾವಹಾರಿಕ ಭಾಷೆಯಾಗಿ ಹಿಂದಿ ಇರಬೇಕೆನ್ನುವದನ್ನು ಸ್ಪಷ್ಟವಾಗಿ ಸೂಚಿಸಲು ಅವರು ಹಿಂಜರಿಯುತ್ತಾರೆ. ಕಮ್ಯೂನಿಷ್ಟ್ ಪಾರ್ಟಿಗಳವರಂತೂ ಅಷ್ಟಿಟ ಸಮಯ ಸಾಧಕರಿದ್ದು ಹಿಂದಿ ವಿರೋಧಿ ಚಳುವಳಿಯ ಸಮಯವೂ ಹಿಂದಕ್ಕೆ ನಿಲ್ಲುವದಿಲ್ಲ. ಹಾಗೆಯೇ ಹಿಂದೀ ಪರ ಚಳುವಳಿ ನಡೆದಲ್ಲಿ ಅಲ್ಲೂ ಅವರು ಹಿಂದಕ್ಕುಳಿಯುವದಿಲ್ಲ. ಅವರಿಗೆ ಬೇಕಾಗಿರುವದು ರಕ್ತಪಾತ, ಗಲಾಟೆ ಇತ್ಯಾದಿ. ಇಂತಹ ಪಕ್ಷಗಳು ಒಂದಾಗಿ ಹಿಂದಿ ವಿರೋಧಿ ವ್ಯಾಘ್ರ, ಮುಖವಾಡವನ್ನು ಧರಿಸಿ ಕಾಂಗ್ರೆಸ್ಸಿನ ಹೋರಿಗಳನ್ನು ಹೊಡೆದು ಬಿಟ್ಟವೇನು?

ಕಾಂಗ್ರೆಸ್ಸಿನ ಅಧ್ಯಕ್ಷರು ಹೇಳುತ್ತಿರುವ ಹಿಂದಿ—ವಿರೋಧಿ ಚಂಡಮಾರುತವೆದ್ದಿದ್ದಾಗ ಅವರ ಪಕ್ಷ ವಹಿಸಿದ್ದ ಪಾತ್ರವಾದರೂ ಏನು? ಸ್ವತಃ ತಿರು ಕಾಮರಾಜರವರೇ ಉದ್ವಾತದಲ್ಲಿ ಆಡಿರಲಿಲ್ಲವೇ? ಹಿಂದಿ ವಿರೋಧಿಸಿ ತಮಿಳು ನಾಡಿಗೆ ಬಾರಿ ಬಂದಿದ್ದ ಶ್ರೀ ಸುಬ್ರಹ್ಮಣ್ಯಂ ಹಾಗೂ ಶ್ರೀ ಅಲಗೇಶನ್ ಸೋತು ಹೋಗಲು ಕಾರಣವೇನು? ಶ್ರೀ ಕಾಮರಾಜರು ತನ್ನ ಬಣ್ಣದ ಗಾಜಿನಿಂದ ನೋಡುತ್ತಿದ್ದಾರೆ. ತನ್ನನ್ನು ಬೀಳಿಸಿದವನು ನಿನ್ನೆಯ ವಿದ್ಯಾರ್ಥಿ ಹಾಗೂ ಹಿಂದಿ ವಿರೋಧಿ. ಅವನ ಆ ಗುಣದಿಂದಾಗಿ ತನ್ನನ್ನವ ಸೋಲಿಸಿರುವನು. ಇದು ಮಾನಸಿಕ ಭ್ರಮೆ ಅಲ್ಲದೆ ಬೇರೇನೂ ಅಲ್ಲ ಮತ್ತು ಚಂಡಮಾರುತವದ್ದಾಗ ಕಾಂಗ್ರೆಸ್ಸು ಅರ್ಗಳದಂತೆ ನಿಂತಿರಲಿಲ್ಲ. ಕಾಂಗ್ರೆಸ್ಸು ಕಾಡಿ ಗಾಳಿ ಬಂದತ್ತ ತಿರುಗುತ್ತಿತ್ತು. ಅದಕ್ಕಿಂತಲೂ ಚಂಡಮಾರುತದೊಂದಿಗೆ ತಮ್ಮ ಉಸಿರನ್ನು ಅನೇಕ ಕಾಂಗ್ರೆಸ್ಸಿಗರು ತಿರು ಕಾಮರಾಜರಿಂದ ಸಾಲಾಗಿ ನಿಂತು ಸೇರಿಸಿರುವರೆನ್ನಬಹುದು.

ಹೀಗೆ ತಮಿಳು ನಾಡಿನಲ್ಲಿ ಕಾಂಗ್ರೆಸ್ಸಿನ ಕುಸಿಯಲು ಅಕ್ಷಿಯಾಗಲೀ ಹಿಂದಿಯಾಗಲೀ ಕಾರಣ ಇರುವದಿಲ್ಲ. ಅದರ ಬದಲು ತಿರು ಕಾಮರಾಜರು ಹೇಳಿರುವಂತೆ ಅದರ ಪೂರ್ಣ ಹೊಣೆ ಕಾಂಗ್ರೆಸ್ಸಿನಗತ ಶಾಸಕ ವರ್ಗದ ಮೇಲೆಯೇ ಇದೆ. ತಿರು ಕಾಮರಾಜರು ಅದನ್ನೀಗ ಹೇಳುತ್ತಿರುವರಾದರೂ ಕಾಂಗ್ರೆಸ್ಸಿನ ನಾವೆಯನ್ನು ತನ್ನ ಕೈಯಲ್ಲೇ ಹುಟ್ಟು ಇರುವಾಗ ಆ ಪಾತಕ್ಕೆ ಚಂಡಮಾರುತದಿಂದ ತಪ್ಪಿಸಲಿಲ್ಲ? ಅವರಲ್ಲೇ ಭಕ್ತವತ್ಸಲಂ ಬೇಡವೆಂದರು. ಜನತೆಯೂ ಹೌದು, ಭಕ್ತವತ್ಸಲಂ ಬೇಡ, ಶ್ರೀ ಕಾಮರಾಜರೂ ಕೂಡಾ ಕೂಡದೆಂದಿತು; ಒಬ್ಬರನ್ನು ಬೀಳಿಸಿ ಇನ್ನೊಬ್ಬರು ಮೇಲೆ ಬರುತ್ತಿರುವ ಈ ಕಾಂಗ್ರೆಸ್ಸಿನಾಟದಿಂದ ದೇಶ ಹಾಳಾಗಿ ಹೋದದ್ದು ಸಾಕೆಂದಿತು. ಕಾಂಗ್ರೆಸ್ಸಿನ ಅಧ್ಯಕ್ಷರು ಒಂದು ವಿಧಾನಸಭೆಯ ಸ್ಥಾನಕ್ಕೆ ಹೋರಾಡುವರೇ? ಜನತೆ ಇಸ್ಸೀ' ಎಂದಿತು. ಇಲ್ಲದಿದ್ದಲ್ಲಿ ತಿರು ಕಾಮರಾಜರು ಹೇಗಾದರೂ ಆರಿಸಿ ಬರುತ್ತಿದ್ದರು. ಅವರನ್ನು ಕೆಳಕ್ಕೆ ತಳ್ಳಲು ದ್ರಾ. ಮು. ಕ. ದವರು ಪ್ರಯತ್ನಿಸಿರಲಿಲ್ಲ ಅವರಿಗೆ ಕಾಂಗ್ರೆಸ್ಸಿನ ಮೇಲೆ ದ್ವೇಷ ಇದ್ದರೂ ತಿರು ಕಾಮರಾಜರ ಮೇಲೆ ಅದಿನಿತೂ ದ್ವೇಷ ಇರಲಿಲ್ಲ ಅದಕ್ಕೆ ಕಾರಣವು ತಿರು ಕಾಮರಾಜರು, ಬ್ರಾಹ್ಮಣೇತರರಿರುವದ, ಮಾತ್ರವಲ್ಲ, ದ್ರಾ. ಮು. ಕ. ದ ಬೆಳವಣಿಗೆಗೆ ಮರೆಯಾಗಿ ನಿಂತು ಸಹಾಯ ಮಾಡಿದವರಲ್ಲಿ ಅಗ್ರಗಣ್ಯರಿದ್ದಾರೆ. ಈ ಉಪಕಾರವನ್ನು ದ್ರಾ. ಮು. ಕ. ದವರು ಮರೆಯುವಂತಿಲ್ಲ. ಇದು ಹಿಂದಿ ವಿರುದ್ಧ ನಡೆದ ದೊಂಬಿಯ ಸಮಯ ಮಾತ್ರವಲ್ಲ, ಆರಂಭದಿಂದಲೂ ಅಷ್ಟೇ. ದ್ರಾ. ಮು. ಕ. ದ ವಿಷಯದಲ್ಲಿ ತಿರುಕಾಮರಾಜರಿಗೆ ಹೃದಯದಲ್ಲ ಸ್ಥಾನ ಇದ್ದೇ ಇದೆ. ಆದರೆ ಅದು ಅಧಿಕಾರಕ್ಕೆ ಕಾಂಗ್ರೆಸ್ ಇರುವ ವರೆಗೆ ಬರಕೂಡದು, ಕಾಂಗ್ರೆಸ್ ಅಧಿಕಾರದಲ್ಲಿರಬೇಕು, ದ್ರಾ. ಮು. ಕ. ವಿರೋಧಿ ಪಕ್ಷ ಆಗಿರಬೇಕು. ಇದನ್ನ ತಿಳಿದುಕೊಂಡಿದ್ದ ದ್ರಾ. ಮು. ಕ. ವು ತಿರು ಕಾಮರಾಜರಿಗೆ ವಿರುದ್ಧವಾಗಿ ವಿರುದ್ಧ ನಗರದಲ್ಲಿ ಆರಂಭದಲ್ಲಿ ತಮ್ಮ ಅಭ್ಯರ್ಥಿಯನ್ನು ನಿಲ್ಲಿಸಿರಲಿಲ್ಲ. ಆದರೆ ಸ್ವತಂತ್ರ ಪಾರ್ಟಿಯ ಒತ್ತಡ ಅಧಿಕವಾಗಿ ಬಿದ್ದ ಕಾರಣ, ಅಲ್ಲದೆ, ಪಕ್ಕದ ಸ್ಥಾನದಲ್ಲಿ ಓರ್ವ ಕಾಂಗ್ರೆಸ್ಸಿನ ಹಳೆಯ ಧುರೀಣ ಹಾಗೂ ಸ್ವತಂತ್ರ ಪಾರ್ಟಿಯ ಅಭ್ಯರ್ಥಿ ನಿಂತದ್ದರಿಂದ, ಆ ಅಭ್ಯರ್ಥಿಯ ಸಂಬಂಧಿ ಹಾಗೂ ಅವರಿಂದ ಆರಿಸಲ್ಪಟ್ಟ ವಿದ್ಯಾರ್ಥಿಯೊಬ್ಬ ನಿಲ್ಲಬೇಕು. ಹುಡುಗ ಆತನೇ, ದ್ರಾ. ಮು. ಕ. ಪಗ್ಗವನ್ನು ಹಿಡಿಸುಗೊಳಿಸಿತ್ತು. ದ್ರಾ. ಮು. ಕ. ದ ಅತಿರಥ – ಮಹಾರಥರಾರೂ ಆ ಹುಡುಗನಿಗಾಗಿ ಪ್ರಚಾರಕ್ಕೆ ಹೋಗಿರಲಿಲ್ಲ. ಅಥವಾ ಅದಕ್ಕಿಂತಲೂ ಶ್ರೀ ಕಾಮರಾಜರ ವಿರುದ್ಧ ಪ್ರಚಾರಕ್ಕಾಗಿ ದ್ರಾ. ಮು. ಕ. ಅತಿರಥ—ಮಹಾರಥರ್ಯಾರೂ ಹೋಗಿರಲಿಲ್ಲ. ಇದು ಒಳಗಿನೊಳಗಿನ ರಾಜಕೀಯ ಸಂಬಂಧವೆಂದಾಗಿ. ಹಾಗಿದ್ದರೂ ಆ ಸ್ವತಂತ್ರ ಪಾರ್ಟಿಯ ಉಮೇದ್ವಾರರ ಪ್ರಚಾರದಿಂದಾಗಿ ಅಲ್ಲದೆ ತಿರು ಕಾಮರಾಜರ ಕಾಲಪತನದಿಂದಾಗಿ ಜನತೆ ಅವರನ್ನು ತಿರಸ್ಕರಿಸಿತು. ತಿರು ಕಾಮರಾಜರು ಕಾಲುಜಾರಿ ಬಿದ್ದರು. ಅವರೇ ಕಾಲು ಜಾರಿಬಿದ್ದರು ವಿನಃ ಹಿಂದಿ ಅವರನ್ನು ಹಿಡಿದು ಬೀಳಿಸಲಿಲ್ಲ.

ತಾನು ಬಿದ್ದ ಬಿದ್ದ ಮೇಲಾದರೂ ತಿರು ಕಾಮರಾಜರು ತಿದ್ದಿಕೊಳ್ಳಬೇಕಾಗಿತ್ತು. ಆದರ ಬದಲು ಅವರು ಅದೇನೇನೋ ಆಡಲಾರಂಭಿಸಿದರು. ತನ್ನನ್ನು ಸೋಲಿಸಿದರಕ್ಕಾಗಿ ಉತ್ತರದಿಂದ ಸೋಲಿನ ಪ್ರವಾಹ ಬಂದಿದೆಯೆಂದರು. ಅದಕ್ಕೆ ತಟ್ಟನೆ ಉತ್ತರವೂ ಬಂತು. ಹೌದು. ತಮಗೆ ಉತ್ತರದ ನಾಸಿಕದಿಂದ (ನೋಟುಗಳು ಅಚ್ಚಾಗುವ ಸ್ಥಳ) ಹಣ ಬಂದಿದೆಯೆಂದೂ ಕಾಂಗ್ರೆಸ್ಸಿಗರು ಉಪಯೋಗಿಸಿದ್ದು. ದಕ್ಷಿಣದ ಕೊಯಮುತ್ತೂರಿನ (ಕೃಷ್ಣನ್‌ನ ಕಪ್ಪು ನೋಟುಗಳು) ನೋಟುಗಳೆಂದು ಚುಟಕಿ ಹಾರಿಸಲ್ಪಟ್ಟಿತು. ತಿರುಕಾಮರಾಜರು ಕೈತೋರಿಸಿ ಅಪಶಕುನ ಹೇಳಿಸಿಕೊಂಡರು!

ಕಾಂಗ್ರೆಸ್ಸಿಗರ ಇಪ್ಪತ್ತು ವರ್ಷದ ದುರಾಡಳಿತದಿಂದಾಗಿ ಜನತೆ ಬೇಸತ್ತಿದೆಂಬುದರಲ್ಲಿ ಸಂದೇಹವಿಲ್ಲ. ಆ ಅಸಂತೋಷದ ಪರಿಣಾಮ ಎಲ್ಲೆಡೆಯೂ ಕಂಡು ಬಂದಿವೆ. (ಕಾಂಗ್ರೆಸ್ಸ ಪತನದ ಹಾದಿಯಲ್ಲಿ ಪ್ರಗತಿ ಹೊಂದಿವೆ. ಇನ್ನು ಇದನ್ನು ತಡೆಯಲು ಅದ್ಯಾರಿಗೂ ಸಾಧ್ಯವಾಗದು. ಆದುದರಿಂದ ಗೌರವವನ್ನುಳಿಸಿಕೊಳ್ಳಲು, ಗಾಂಧೀಜೀಯವರು ಹಿಂದೆಯೇ ಹೇಳಿರುವಂತೆ, ಕಾಂಗ್ರೆಸ್ ಪಕ್ಷವನ್ನ ಶೀಘ್ರಾತಿಶೀಘ್ರ ವಿಸರ್ಜಿಸಬೇಕು. ಭಿನ್ನ ಭಿನ್ನ ಅಭಿಪ್ರಾಯದವರು ರುಚಿಯವರು ಕಾಂಗ್ರೆಸ್‌ನಲ್ಲಿ ಕೆಲವಾರು ಕಾರಣಗಳಿಂದಾಗಿ ಇರುವದರಿಂದ ಪಕ್ಷವನ್ನು ವಿಸರ್ಜಿಸಿದೊಡನೆ ಅವರು ತಮ್ಮ ತಮ್ಮ ಒಲವಿನ ಪಕ್ಷಗಳತ್ತ ಹೋಗಿಬಿಡುವರು. ಅದೂ ಬೇಡವಾದಲ್ಲಿ ಹೊಸ ಪಕ್ಷವನ್ನು ಆಗಿನ ಪರಿಸ್ಥಿತಿಗನುಸಾರವಾಗಿ ಸ್ಥಾಪಿಸಬೇಕು. ಅದು ಆ ಪಕ್ಷಕ್ಕೆ ಸಂಬಂಧಪಟ್ಟ ವಿಷಯ.) ಜನತೆಗೆ ಬದಲಾವಣೆ ಬೇಕಾಗಿದೆ. ಆದರೆ ಇಲ್ಲಿ ಪ್ರಬಲ ಅಖಿಲ ಭಾರತೀಯ ಪಕ್ಷ ಯಾವದಿದೆ? ಹೆಸರಿಗೇನೋ ಸ್ವತಂತ್ರ ಪಾರ್ಟಿ, ಜನಸಂಘ, ಕಮ್ಯೂನಿಸ್ಟ್ ಪಾರ್ಟಿಗಳು, ಅಲ್ಲದ ಸೋಷ್ಯಲಿಸ್ಟ್ ಪಕ್ಷಗಳಿವೆ. ಅದರಲ್ಲಿ ಸ್ವತಂತ್ರ ಪಾರ್ಟಿಯ ಸ್ಥಾಪನಾಚಾರ್ಯ ಶ್ರೀ ರಾಜಾಜಿಯವರು ಇರುವದು ಮದರಾಸಿನಲ್ಲಿ. ಇತರ ಪಕ್ಷಗಳ ಮೇಲೆ ಒಂದಲ್ಲ ಒಂದು ರೀತಿಯ ಅಪಪ್ರಚಾರ ಹಾಗೂ ಕಟ್ಟು ಹೆಸರು ಇದ್ದೇ ಇದೆ. ಸ್ವತಂತ್ರ ಪಾರ್ಟಿಯ ಮೇಲೂ ಬ್ರಾಹ್ಮಣರ ಪಕ್ಷ, ಹಣವಂತರ ಪಕ್ಷ, ಸ್ಥಾಪಿತರ ಪಕ್ಷವೆಂಬ ಹೆಸರು ಇದ್ದೇ ಇದೆ. ಆದರೂ ಇವರೆಲ್ಲರ ಮಾತಿಗೆ ಬೆಲೆ ಇಲ್ಲವೆಂದಲ್ಲ. ಹಾಗೂ ಸಂಖ್ಯಾ ದೃಷ್ಟಿಯಲ್ಲೂ ಅದಕ್ಕೆ ಮಹತ್ವ ಇದ್ದೇ ಇದೆ. ಒಂದು ಹಿಡಿಯಷ್ಟು ಜನರು ಕಮ್ಯೂನಿಸ್ಟ್ ಹಾಗೂ ಸೋಷ್ಯಲಿಸ್ಟ್ ಪಕ್ಷಗಳ ಹಿಂದಿರುವರಾದರೂ ದ್ರಾ. ಮು. ಕ. ವೂ ತಾನೂ ಸಹ ತಾ[illegible]ವಾದ ಸರಕಾರೀ ಕಾರಣಕ್ಕಾಗಿರುವ ಪ್ರಗತಿಪರ ಪಕ್ಷದಿಂದ ಪ್ರಚಾರ ನಡೆಸಿಕೊಂಡಿರುವವರೆಂಬ ಹೆಸರನ್ನು [illegible] ಬಂದಾಗುವವರೆಗೂ ದ್ರಾ. ಮು. ಕ. ದಲ್ಲಿ ಇದ್ದರು. ಭಾರತೀಯ ಜನಸಂಘಕ್ಕೆ ಪ್ರಾಂತೀಯ ಜನ ಕೆಲವರ ಬೆಂಬಲ ಇದ್ದಾಗ್ಯೂ ಮಿಕ್ಕ ಘಾಟಿ ಪಕ್ಷಗಳು ಒಂದಾಗಿ ಬಿದ್ದದ್ದರಿಂದ ಭಾರತೀಯ ಜನಸಂಘಕ್ಕೆ ಸ್ಥಾನ ಸಿಗದೆ ಹೋಯಿತು. ಬ್ರಾಹ್ಮಣರು, ಶೂದ್ರರು, ಸಮಾದಿಗಳು, ಆಸ್ತಿಕರು, ನಾಸ್ತಿಕರು, ನಿವೃತ್ತಿ ಹೊಂದಿದವರು, ಶ್ರಮಿಕರು, ಧನವಂತರು, ಬಡವರೆಲ್ಲಾ ಒಂದಾಗಿ ಸೇರಿ ಕಾಂಗ್ರೆಸ್ಸಿನ ಕಾಲನ್ನೆಳೆದುವು. ಕಾಂಗ್ರೆಸ್ಸಿನ ದುರಾಡಳಿತ, ಅಧಿಕಾರ ಲಾಲಸೆಯಿಂದ ಬೇಸತ್ತಿದ್ದ ಜನತೆ ಕಾಂಗ್ರೆಸ್ಸನ್ನು ತಳ್ಳಿಬಿಟ್ಟಿತು. ಹೀಗೆ ಕಾಂಗ್ರೆಸ್ಸಿನ ಇತಿಶ್ರೀ ತಮಿಳು ನಾಡಿನಲ್ಲಾಯಿತು. ಇದರ ಬದಲು ಅನ್ಯಾನ್ಯ ಪಕ್ಷಗಳು ಪ್ರತ್ಯೇಕ ಪ್ರತ್ಯೇಕವಾಗಿ ಕಾಂಗ್ರೆಸ್ಸಿನ ಕಾಲನ್ನೆಳೆಯಲು ಪ್ರಯತ್ನಿಸುತ್ತಿದ್ದಲ್ಲಿ ಕಾಂಗ್ರೆಸ್ಸ್ ಸುಲಭವಾಗಿ ಜಯಪಡೆಯುದಿದ್ದರೂ ರಾಜಸ್ಥಾನ, ಉತ್ತರ ಪ್ರದೇಶಗಳ ಕಾಂಗ್ರೆಸ್ಸಿಗರ ಸಾಲಿಗೆ ಸೇರುತ್ತಿತ್ತು.

ತಮಿಳು ನಾಡಿನಲ್ಲಿ ಕಾಂಗ್ರೆಸ್ಸು ಸೋತಿದೆಯೆನ್ನುವದು ನಿಜವಾದರೂ ಸಂಯುಕ್ತ ಪಕ್ಷಗಳು ಗೆದ್ದಿವೆಯೆನ್ನುವದು ಸರಿಯಲ್ಲ. ಹಲವಾರು ಪಕ್ಷಗಳು ಶ್ರೀ ಸಿ. ರಾಜಗೋಪಾಲಾಚಾರಿ ಹಾಗೂ ತಿರು ಸಿ. ಯನ್. ಅಣ್ಣಾದೊರೈಯವರ ಮಾರ್ಗದರ್ಶನದಲ್ಲಿ ಚುನಾವಣಾ ರಂಗದಲ್ಲಿ ಹೋರಾಡಲಿಕ್ಕಾಗಿ ಒಂದಾದುವು ಇಪ್ಪತ್ತು ದುರಾಡಳಿತದ ಬಾಣಲೆಯ ಬಿಸಿ ತಡೆಯಲಾರದೆ ಜನತೆ ಹೊರಗೆ ಹಾರಿತು. ಆದರೆ ಅದು ಹಾರಿದ್ದು ನೇರ ಒಳಗೆನೇ ಎಂಬ ಅನುಭವ ಆಗ ಆಗಲಿಲ್ಲ. ಇದೀಗ ಆಗುತ್ತಿದೆ. ಸಂಯುಕ್ತ ರಂಗವು ಗೆದ್ದಲ್ಲಿ ಸಂಯುಕ್ತ ಮಂತ್ರಿಮಂಡಲ ಇರುವದರಿಂದ ಶ್ರೀ ರಾಜಾಜಿಯವರ ಮಾರ್ಗದರ್ಶನದಲ್ಲಿ ಆಡಳಿತ ನಡೆದೀತೆಂದು ಜನರು ಭಾವಿಸಿಕೊಂಡಿದ್ದರು. ಅಧಿಕ ಸಂಖ್ಯೆ ಸಿಕ್ಕಿದೊಡನೆ ದ್ರಾ. ಮು. ಕ. ಡಿಕ್ಕಿ ಕೊಟ್ಟಿತು. ಶ್ರೀ ಹಿಂಡೆ ಕೆಂಡವಾದರು. ಇದ್ದಕ್ಕಿದ್ದಂತೆ ಏನು ಮಾಡಲು? ಈಗ ದ್ರಾ. ಮು. ಕ. ವನ್ನು ಕಾಂಗ್ರೆಸ್ಸಿನ ಹೆಜ್ಜೆಯಲ್ಲೇ ಕಳೆ ಹಿಸಿಕೊಡಲು ಶ್ರೀ ರಾಜಾಜಿ ಹಿಂಜರಿ ಹಾಕುತ್ತಿದ್ದಾರೆ ಆದರೆ ಅದಕ್ಕಿಂತ ಮುಂಚೆ ಅವರಿಗೆ ಕೇಂದ್ರದಿಂದ ಕಾಂಗ್ರೆಸ್ಸನ್ನು ಕಾಲ್ತೆಗೆಸಬೇಕಾಗಿದೆ. ಕೇಂದ್ರದಲ್ಲಿ ಒಮ್ಮೆ ಕಾಂಗ್ರೆಸ್ ಕುಸಿದುಬಿತ್ತೆಂದರೆ ಒಡನೆ ತಮಿಳು ನಾಡಿನಲ್ಲಿ ದ್ರಾ. ಮು. ಕ. ದ ಆಳ್ವಿಕೆಯೂ ಅಂತ್ಯವಾಗುತ್ತದೆ. ವಿರುದ್ಧ ಪಕ್ಷಗಳ ಒಕ್ಕಟ್ಟು ಕಾಂಗ್ರೆಸ್ಸಿನ ನಾಶಕ್ಕೆ ಒಂದು ಕಾರಣ.

ತಮಿಳುನಾಡಿನಲ್ಲಿ ನಡೆದ ಇನ್ನೊಂದು ದುರ್ಘಟನೆಯೂ ಕಾಂಗ್ರೆಸ್ಸಿನ ಪತನಕ್ಕೆ ಕಾರಣ ಇದೆ. ತಿರು ಕಾಮರಾಜರೂ ತಿರು ರಾಮಸ್ವಾಮಿ ನಾಯ್ಕರ್‌ರವರೂ ಕೂಡಿ ಭಾಷಣವೀಯುತ್ತಿದ್ದರು. ಕಳೆದ ನವಂಬರ ಏಳರಿಂದ ತಿರು ಕಾಮರಾಜರು ಗೋಹತ್ಯಾ ನಿರೋಧ ಆಂದೋಲನದ ಮೇಲ ಅಲ್ಲಸಲ್ಲದ ಅಪಪ್ರಚಾರ ನಡೆಸುತ್ತ ಬರುತ್ತಿದ್ದಾಗೆ. ಸರಕಾರದ ವತಿಯಿಂದ ಹೊರಡಿರುವ ನ್ಯಾಯ ವಿಚಾರಣೆಯ ತೀರ್ಪಿನ ಪ್ರಕಾರವೂ ದಿಲ್ಲಿಯ ಗಲಾಟೆಗೆ ಗೋಹತ್ಯಾ ನಿರೋಧ ಆಂದೋಲನದವರು ಕಾರಣ ಇರುವದಿಲ್ಲ. ಹಾಗಿದ್ದರೂ ಅದನ್ನು ಕೇಳದ ಮೇಲೂ ಆಳ್ವಿಕೆಯ ಅಂಕುಶ ಹಿಡಿದುಕೊಂಡಿರುವ ಪಕ್ಷದ ಆ

(ಒಂಭತ್ತನೇ ಪುಟ ನೋಡಿರಿ)

ದಫ್ತರದ ಎಪ್ರೆಂಟಿಸ್

ಶಾಲೆಯ ಕಿರು ಜಗಲಿಯಲ್ಲಿ
ಬಾಲೆ ಬಾಲಕರು ಕಲೆತಿದ್ದಾರೆ.
ಮೀಸೆ ಬಂದವರೂ ಒರದ ದಾಡಿಯವರೂ
ಮೀಸೆಯೇ ಬಾರದವರೂ
ಕುಳ್ಳರು, ಕುಂಟರು, ಕಿವುಡರು, ಮೂಕರು,
ತಲೆಯೆಂಬುದಿರುವವರೆಲ್ಲರೂ
(ಅದಿಲ್ಲದೆ ಹೋದರೂ)
ಗುಂಡು ಹಾರಿದರೂ ಕೇಳದ ಹಾಗೆ
ಗಜಿಬಿಜೆನ್ನುತ ಆಡುತ್ತ
ನಟಿಸುತ್ತ ಕೂಡಿಹರು.

ಗಂಟೆ ಬಾರಿಸಿತು; ಫಸ್ಟ್ ಬೆಲ್ ಎಂದನೊಬ್ಬ.
ಬಾರಿಸಲಿ ಸೆಕೆಂಡ್ ನುಡಿದನಿನ್ನೊಬ್ಬ
ಹಕ್ಕುವರಿಗಿಂತ ಬಿಗಿನ್ನೆಂದಳು
ಲೋಕಿ ಮೂಗಿನ ಚೆಲು ಜಾಣೆ.
ಮತ್ತರ್ಧ ತಾಸವಧಿಯಿಲ್ಲವೇ
ಒಳ ಹೋಗೆ? ಪ್ರಶ್ನಿಸಿದ ಬೇರೊಬ್ಬ.
ಇಲ್ಲದೇನಂತೆ, ಆಪ್ಪರೊಳು
ನಾನೂ ಹೊರ ಬಂದಿರುವೆನೆಂದಳಿನ್ನೊಬ್ಬಳೆ—
ಕಂಬುಗ್ರೀವೆಯು ಕೊಂಕಿಸುತ
ಕೈಯ ತಿರುವುತ್ತ ಉಗುರಕೆರೆಯುತ್ತ.
ಇದೆಂತಹ ಪರೀಕ್ಷೆ? ಜೀವನವೆ ಪರೀಕ್ಷೆ

—ಇನ್ನೊಬ್ಬ ವೇದಾಂತದ ಸಾರ ಕಾರಿದನು.
ಇದರಲ್ಲಿ ಪಾಸಾಗದೆ ಹೋದೆಯಾದರೆ,
ಆದರಲಿಂತು? ಲೌಕಿಕದತ್ತ ಎಳೆ ತಂದಳವನ.
ಎಪ್ರಿಲ್ ಕಳೆದರೇನಂತೆ? ಆಕ್ಟೋಬರವಿದ್ದೇ ಇದೆ
—ಕಾಲಚಕ್ರದ ಗತಿಯ ಕಾಣಿಸಿದ ವೇದಾಂತಿ.
ನಿನಗೇನಂತೆ ಕುಬೇರನಿಗೆ?
ಆ ಮೇಲೆ ಎಪ್ರಿಲ್ ಬರಲಾರದೆ?
ನನಗೆ ಹಾಗಲ್ಲ; ಈ ಎಪ್ರಿಲದಲ್ಲೇ.
—ಮೂಗು ಕೊಂಕಿಸಿ ಉಗುರು ಕಚ್ಚಿದಳು.
ಒಳಗಡೆ—
ಸೂಪರವೈಜರು ಕಾದುಕುಳಿತಿದ್ದರು—
ಅಭ್ಯರ್ಥಿಗಳು ಎಲ್ಲಿ? ಎಂದು.
ಮರಳು ಕಲ್ಲುಗಳ ಮೇಲೆ ಕುಳಿತು
ನೀರು ಕುಡಿಯುತ್ತ ಲಲ್ಲೆ ಹೊಡೆಯುತ್ತ
ವೈನುರಿತ ಅಭ್ಯರ್ಥಿಗಳ ದೂರದಲಿ ಕಂಡು
ಉದ್ಗರಿಸಿದರವರು.
ಪರೀಕ್ಷೆಯೆಂದರೆ, ಸೀರಿಯಸ್‌ನೆಸ್ಸೇ
ಈಗೀಗ ಕಾಣೆ; ನಮ್ಮ ಕಾಲ ಹೇಗಿತ್ತು?

ಪಾಪ, ಅವರೆದು ಪರತಂತ್ರಯುಗ—
ವೆಂಬುದೇಕೆ ಮನವರಿಕೆಯಾಗಲಿಲ್ಲ?
ಇದು ಸ್ವತಂತ್ರಯುಗ—

ಕಟ್ಟುವೆವು ನಾವು ಹೊಸ ನಾಡೊಂದ
—ನಂದನ ವನವೊಂದನು.
ಅಲ್ಲಿ ಗೈಯುವ ದಾರಿಯನು ಕಾಂಕ್ರೀಟಿನಿಂ
ಹೊದಿಸುವ ಹೆಗ್ಗುರಿ ನಮ್ಮದು.
ಮರಳು ತುಂಬಿದೆ; ಜಲ್ಲಿಯೂ ಬಿದ್ದಿದೆ,
ನೀರೂ ಸುರಿಯುತ್ತಿದೆ ನಿರಂತರವಾಗಿ.

—ಆದರೆ, ಆದರೆ ಬೇಕೇ ಬೇಕಾದ ಸಿಮೆಂಟು?
ಫಾರೈನ್ ಎಕ್ಸ್‌ಚೇಂಜೇ ಬೇಕೆ ಅದಕೆ?
ಅದು ಸಿಕ್ಕೀತೆ? ಸಿಗದೆ ಹೋದರೆ?

ಮರಳು ಗಾಳಿಯಲಿ ಹಾರುವುದು;
ಜಲ್ಲಿ ಕನ್ನಡಿ ಬಾಗಿಲಲಿ ತೂರುವುದು;
ಮತ್ತೆ ನೀರು? ಹರಿಯುವುದು ವ್ಯರ್ಥವಾ

ಇಲ್ಲಿಗಾಯ್ತು ಇತಿಶ್ರೀ .... ಹೀಗಾಗ ಬೇಕೆ?
ಬಾರದು, ಬಾರದೇ ಬಾರದು..
ಆದಕೆಂದೆ ದಫ್ತರದ ಎಪ್ರೆಂಟಿಸ್ಸಾಗಬಾರದು.

—ಗೋರಾ

ಪರಿಪೂರ್ಣತ್ವ—ಸಾಧನೆ—ಗುರಿ

(..ನೇ ಪುಟದಿಂದ)

ಆದರೆ ಅಮೃತತ್ವವಾದ ಮನಸ್ಸಿನ ನಿರ್ಮಾಣದಲ್ಲಿ, ಆತನು ಬಾಹ್ಯ ಪ್ರಪಂಚದ ಪ್ರಜ್ಞೆ ಅಮೃತತ್ವವುಳ್ಳ ಜ್ಞಾನ ನಿಚ್ಚಳವಾಗಿ ವ್ಯಕ್ತವಾಗಿ ಪ್ರಕಾಶಿಸುವುದನ್ನು ಒಳ ಜಗತ್ತು ಅಷ್ಟೆ ಸ್ಪಷ್ಟತೆಯಿಂದ ಬೆಳಗುವುದನ್ನು ಕೂಡ ಕಾಣಲು ಸಾಧ್ಯ.

ಈ ರೀತಿ ನಾವು ಪ್ರಕೃತಿಯನ್ನು ವೀಕ್ಷಿಸಿದರೆ, ನಾವು ರೂಪದ ಹೊರ ನೋಟವ ವಿವಾದದ ಮಾರ್ಗಗಳ ಕಸಿವಿಸಿಯು, ಜೀವನ ಸಮಸ್ಯೆಗಳ ಹಾಗೂ ಬಿಕ್ಕಟ್ಟಿನ ಒಳ ಭಾಗದಲ್ಲಿ ಯೋಜನೆಯೊಂದು ಪ್ರಶಾಂತವಾಗಿ ತನ್ನನ್ನು ಪೂರೈಸಿಕೊಂಡು ಹರಿಯುತ್ತಿದೆ ಎನ್ನುವುದು ವೇದ್ಯವಾದೀತು. ಈ ಯೋಜನೆಯನ್ನು ಪೂರ್ತಿಗೊಳಿಸುವುದೇ ಜೀವನದ ಉಜ್ವಲ ಧ್ಯೇಯವಾಗಿರಬೇಕು. ಅತ್ಯಂತ ಕೆಳಗಿನ ವಿಕಾಸದಿಂದ ಪರಮೋಚ್ಚ ಬೆಳವಣಿಗೆಯ ಹಂತಗಳ ತನಕ, ಪ್ರತಿಯೊಂದು ಹಂತದಲ್ಲಿಯೂ ಪ್ರಜ್ಞೆಯ ಸ್ಥಾನವು ಇದೆ. ಆದುದರಿಂದ ಅದನ್ನು ಸಂಸ್ಕರಿಸುವುದು ಸಾಧ್ಯವಾದರೆ ಮಾತ್ರ, ಆದು ಜೀವನದ ಪ್ರಶಾಂತ, ಪರಿಪೂರ್ಣ, ಮಂಗಳಮಯ ಹಾಗೂ ದಿವ್ಯ ಗುರಿಯಾಗುವುದು. ನಮ್ಮ ಮನಸ್ಸು, ಬುದ್ಧಿ, ಶರೀರ ಮತ್ತು ಅದರ ಕರ್ಮಗಳು ಪವಿತ್ರ ಪ್ರಜ್ಞಾ ಕೇಂದ್ರದ ಅನ್ವೇಷಣೆಗಾಗಿ ಹೊರಡಲ್ಪಟ್ಟು, ಈ ಕಾರ್ಯಕ್ಷೇತ್ರಕ್ಕೆ ಜೀವನದ ಸುಖ ದುಃಖಗಳ ಮಧ್ಯೆ ಕಾಣಸಿಕೊಂಡಿದ್ದೇವೆ. ಶಕ್ತಿಯ ಪರಿಮಿತಿಗಳು, ಪ್ರಪಂಚದ ಅಪೂರ್ಣತೆಗಳು—ಇವನ್ನೆಲ್ಲ ನಮ್ಮನ್ನು ದಾರಿಯು ದ್ವಂದ್ವಕ್ಕೆ ಓಡಿಸಿ ನಮ್ಮ ಗುರಿಯನ್ನು ಶೀಘ್ರದಲ್ಲೇ ಮುಟ್ಟುವಂತೆ ಮಾಡುವ ಉತ್ತೇಜಕಾರಿ ಚಾಟಿಯ ಏಟುಗಳಾಗಿವೆ.

ಭೌತಿಕ ಆವರಣದಲ್ಲಿ ಯಾವ ಪ್ರಮಾಣದಲ್ಲಿ ಸುಖಾರಾಮವನ್ನು ಇಡುತ್ತೇವೆಯೋ ಅದೇ ಪ್ರಮಾಣದಲ್ಲಿ ದುಃಖವನ್ನು ಅನುಭವಿಸುವೆವು. ಯುಕ್ತವಾದ ಅ

ಮುಂದು

ಳುವಳಿಕೆಯಿಂದ ಮತ್ತು ವಿವೇಕದಿಂದ ನಮಗೆ ಸಂಬಂಧವಾದವುಗಳಿಂದ ವಿರಹಿತರಾಗುವುದು; ಕ್ರಮೇಣ ನಮ್ಮ ಶುದ್ಧ ಶಾಶ್ವತ ಆತ್ಮವನ್ನು ಸೇರುವುದೇ ಆಗಿದೆ. ದ್ವಂದ್ವಮಯವಾದ ಲೋಕವನ್ನು ಅಗಾಧವೂ ಸೂಕ್ಷ್ಮವೂ ಆದ ಹೊದಿಕೆಗಳ ಮೂಲಕ ವೀಕ್ಷಿಸುತ್ತ ಗೋಚರಿಸಲ್ಪಡುವ ದ್ವಂದ್ವವನ್ನು ಕ್ರಮಾನುಗತವಾಗಿ ನಿರ್ಮೂಲ ಮಾಡಲು ಸಾಧ್ಯವಾದರೆ, ಇದಕ್ಕಿಂತ ಸೂಕ್ಷ್ಮವಾಗಿರುವ ಸತ್ಯವು ನಮ್ಮಲ್ಲಿರಬೇಕೆಂದು ತೋರುತ್ತದೆ. ಈ ವಾಸ್ತವಿಕತೆಯು ಮಾ

ಲಕ ಪ್ರೇಮ ಮತ್ತು ದಾನಗಳು, ದ್ವೇಷ ಮತ್ತು ದುಃಖಗಳು ಇಂದು ಯಾವ ರೀತಿಯಲ್ಲಿ ಸಹಜವಾಗಿರುತ್ತವೆಯೋ ಅಷ್ಟೇ ಸಹಜವಾಗಿ ಸರ್ವವ್ಯಾಪಿಯಾದ ಪಾರಮಾರ್ಥಿಕ ಐಕ್ಯತೆಯು ಆ ದೂರದ ದೃಶ್ಯವನ್ನು ಕಾಣಲು ಸಾಧ್ಯವೆನಿಸುವುದು.

ಜೀವನವೆಲ್ಲ ಒಂದೇ ಆಗಿದೆ. ಒಂದು ಜೀವಿ ಬಾಹ್ಯ ಜಗತ್ತಿನ ಹಾಗೂ ಅಂತರ್ಜಗತ್ತಿನ ಪ್ರಜ್ಞೆ ಹೊಂದಿರುವುದಾದರೆ ಆ ಜೀವಿ ಬದುಕಿದೆಯೆನ್ನುವುದನ್ನು ತಿಳಿಯುತ್ತೇವೆ. ಆದುದರಿಂದ ಹೀಗೆ ಪ್ರಜ್ಞಾಪೂರ್ವಕವಾಗಿ ಜೀವಿಸಬೇಕೆಂದರೆ, ಏಕಮೇವಾದ್ವಿತೀಯ ಸರ್ವವ್ಯಾಪಿಯೂ ಆದ ಜೀವನವನ್ನು ವಿಧ ಉಪಕರಣಗಳಿಂದ ಅನುಭವಿಸಿ ದ ಪೂರ್ಣವಾಗಿ ಜೀವಿಸಬೇಕು. ಮನಸ್ಸು ಶುದ್ಧವಾದಂತೆ, ಅಂತರಿಕ ಚಂಚಲತೆಗಳು ವಿಮಲವಾಗುತ್ತ ಬಂದ ಹಾಗೆ, ವ್ಯಕ್ತಿಯ ಮೂಲಕ ಹೊರಬರುವ ಪ್ರಜ್ಞೆ (ಚಿತ್ತ) ಉತ್ತುಂಗಕ್ಕೇರುವುದು. ಆತನು ಲೋಕದ ಜೀವಿಗಳನ್ನು ತನ್ನ ಪ್ರಭಾವದ ಪ್ರೇಮಾಲಿಂಗನದಿಂದ ತನ್ನಡಗಿಸುವ ಪ್ರವಾದಿಯೋ, ಸಂತನೋ ಅಥವಾ ಮಹರ್ಷಿಯೋ ಆಗುತ್ತಾನೆ.

ಆ ವೇಳೆ, ಆತನು ಭಿನ್ನ ಭಿನ್ನವಾದ ಉಪಕರಣಗಳಿಂದ ದೃಗ್ಗೋಚರವಾಗುವ ವಿಚಿತ್ರ ಜೀವನವನ್ನು, ಲೋಕವ್ಯಾಪಿಯಾದ ಪ್ರಜ್ಞೆಯಿಂದ ಭಂಪಿಸಿ ಅನುಭವಿಸಬಲ್ಲವನಾಗಿ ಬಾಳುವನು. ಆತನು ಸಮಾಧಿಸ್ಥಿತಿ ಪಡೆದವನಾಗಿ ಅಂತಹ ಮನುಷ್ಯ— ಆತನು ಕೃಷ್ಣ ಅಥವಾ ಕ್ರಿಸ್ತ, ಮಹಮ್ಮದ ಅಥವಾ ಬುದ್ಧದೇವ, ಬಸವ ಅಥವಾ ಶಂಕರ, ವಿವೇಕಾನಂದ ಅಥವಾ ದಯಾನಂದ, ರಮಣ ಅಥವಾ ಅರವಿಂದ—ಹೀಗೆ ಯಾವ ಹೆಸರಿನಿಂದ ಬೇಕಾದರೂ ಕರೆಯಲ್ಪಡಲಿ— ತನ್ನ ಭೂಮಿಯನ್ನು ಆಂತರಿಕ ರಂಜಕತೆಯಿಂದ, ತನ್ನ ಕೃತಿಗಳನ್ನು ಬೋಧಿಸಿ ಸ್ವರ್ಗಕ್ಕೆ ಸಾಗಿಸುವನು.

ತನ್ನ ಪ್ರೇಮದ ಮಹೇಂದ್ರಜಾಲ ಶಕ್ತಿಯಿಂದ, ಹಾಗೂ ಜ್ಞಾನದ ದೀಪ್ತಿ ಮತ್ತು ಕ್ಷಿಪ್ರತೆಯ ಮೂಲಕ, ಆತನ ಮನಸ್ಸಿನಲ್ಲಿರುವ ಮೃಗೀಯತೆಯನ್ನು ಅಳಿಸಲು ಪ್ರಯತ್ನಿಸುವನು. ಮಾತ್ರವಲ್ಲದೆ ಅಖಿಲ ಜನಸಮೂಹವನ್ನು ಪರಸ್ಪರ ಪ್ರೇಮ ಸೌಹಾರ್ದದ ಬಲೆಯಲ್ಲಿ ಪ್ರಕಾಶಿತವಾದ ಸಹಬಾಳ್ವೆಯ ಮಯೂರ ಶಿಖರಕ್ಕೆ ಏರಿಸುವನು.

ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡು,
ಮಂಗಳೂರು-3
ಇವರು ತಮ್ಮ
67ನೇ ಶಾಖೆಯನ್ನು
1967ನೇ ಮೇ 24, ಬುಧವಾರ
ಬೆಳ್ಳಾರೆ ಪೇಟೆ
ನಂಬ್ರ 6/2, ಕುಂಬ್ರ-ನಿಂತಿಕಲ್ ರಸ್ತೆ,
ಸುಳ್ಯ ತಾಲೂಕು, ದಕ್ಷಿಣ ಕನ್ನಡ
ಎಂಬಲ್ಲಿ
ತೆರೆದಿರುತ್ತಾರಾಗಿ ತಿಳಿಸಲು
ಸಂತೋಷ ಪಡುತ್ತಾರೆ.

ಪರಿಚಯ

ನೈಷಧೀಯದ ಶ್ರೀ ಹರ್ಷ

ಬರೆದವರು ಶ್ರೀ ಸ. ನಾರಾಯಣ.

ಸಂಸ್ಕೃತ ಸಾಹಿತ್ಯದಲ್ಲಿ ನಮಗೆ ಇಬ್ಬರು ಶ್ರೀ ಹರ್ಷರ ಪರಿಚಯವಾಗುತ್ತದೆ. ಮೊದಲನೆಯ ಶ್ರೀ ಹರ್ಷ ಕ್ರಿ. ಶ. ಏಳನೆಯ ಶತಮಾನದವನು. ಕ್ರಿ. ಶ. ೬೦೬ ರಿಂದ ಕ್ರಿ. ಶ. ೬೪೮ರ ವರೆಗೆ ಸ್ಥಾಣೇಶ್ವರವನ್ನಾಳಿದ ಉತ್ತರ ಭಾರತದ ಸುಪ್ರಸಿದ್ಧ ನಾಗಾನಂದ, ರತ್ನಾವಳಿ ಮತ್ತು ಪ್ರಿಯದರ್ಶಿನಿ ನಾಟಕಗಳ ಕರ್ತೃ. ಸಂಸ್ಕೃತ ಸಾಹಿತ್ಯದಲ್ಲಿ ಈತನಿಗೂ ಗಣ್ಯ ಸ್ಥಾನವಿದೆ. ಎರಡನೆಯ ಶ್ರೀ ಹರ್ಷ ಕ್ರಿ. ಶ ೧೨ನೆಯ ಶತಮಾನದಲ್ಲಿದ್ದವನು. ಪ್ರತಿಭಾವಂತ ಕವಿಗಳಲ್ಲೊಬ್ಬ. ಈತನ ಪರಿಚಯವನ್ನು ಪ್ರಸ್ತುತ ಲೇಖನದಲ್ಲಿ ಮಾಡಿಕೊಡಲು ಪ್ರಯತ್ನಿಸಿದೆ.

'ನೈಷಧೀಯ ಚರಿತ' ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾದ ಮಹಾಕಾವ್ಯಗಳಲ್ಲೊಂದು. ಇದನ್ನು ಸಂಕ್ಷೇಪವಾಗಿ 'ನೈಷಧ' ಎಂದೂ ಕರೆಯುತ್ತಾರೆ. ನೈಷಧ ರಾಜ್ಯದ ಅರಸು ನಳನ ಕಥೆಯೇ ಕಾವ್ಯದ ಕಥಾವಸ್ತು. ಈ ಕಾವ್ಯದಲ್ಲಿ ೨೨ ಕಾಂಡಗಳಿವೆ.

ನೈಷಧೀಯ ಚರಿತ ಕಾವ್ಯದ ರಚನಕಾರ ಶ್ರೀ ಹರ್ಷ ೧೨ನೆಯ ಶತಮಾನದಲ್ಲಿ ಇದ್ದವನು. ಕನೂಜಿನ ಜಯಚಂದ್ರನ ಆಸ್ಥಾನ ಕವಿ ಎಂದು ತಿಳಿದುಬರುತ್ತದೆ. ಇವನ ತಂದೆ ಹೀರಾ ಮತ್ತು ಇವನ ತಾಯಿ ಮಾಮಲ್ಲದೇವಿ. ನೈಷಧ ಕಾವ್ಯ ಪಂಚ ಮಹಾಕಾವ್ಯಗಳಲ್ಲಿ ಒಂದು ಎಂದು ಪಂಡಿತರಿಂದ ಪ್ರಶಂಸೆಗೆ ಪಾತ್ರವಾಗಿದೆ—ಮನ್ನಣೆಗಳಿಸಿದೆ. ಕವಿ ಶ್ರೀ ಹರ್ಷನಿಗೆ ಈ ಕಾವ್ಯ ರಚನೆಯ ಮೂಲಕ 'ನವಭಾರತಿ' ಎಂಬ ಬಿರುದೂ ದೊರೆತಂತೆ ತಿಳಿದು ಬರುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಹಲವಾರು ಪ್ರಸಿದ್ಧ ಕವಿಗಳು ಶ್ರೀ ಹರ್ಷನ ಕಾವ್ಯ ಮತ್ತು ಅವನ ರಚನಾ ಸಾಮರ್ಥ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ಶ್ರೀ ಹರ್ಷನ ಮೇರೆಗೆ ಪುರಾಣ ಬೆರಳ ತುದಿಯಲ್ಲಿರುತ್ತಿತ್ತು. ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದ ಕವಿ ಶ್ರೀ ಹರ್ಷನು ಅಪ್ರತಿಮ ಬರಹಗಾರನೂ ಆಗಿದ್ದಾನೆ. ಉತ್ತಮ ವಿವರಣೆಗೆ ಅವನಲ್ಲಿ ಅಂತ್ಯವೇ ಇಲ್ಲ. ತನ್ನ ಮನೋಭಾವನೆಗಳನ್ನು ಕಾವ್ಯದ ನಾಯಕ ನಳನ ಪಾತ್ರದಲ್ಲಿ ಸತ್ವಪೂರ್ಣವಾಗಿ ರೂಪಿಸಿದ್ದಾನೆ.

ನೈಷಧೀಯ ಕವಿ ಶ್ರೀ ಹರ್ಷನ ಪ್ರಸಿದ್ಧ ಕಾವ್ಯ. ಇದು ಸರಳವಾದ ಚಮತ್ಕಾರಿಕ ಕೃತಿಯಾಗಿದೆ. ನಳನ ಪಾತ್ರವನ್ನು ಉನ್ನತವಾಗಿ ನಿರೂಪಿಸಿದ್ದಾನೆ. ನಾಯಕನ ಪಾತ್ರಕ್ಕೆ ಯಾವ ಬಗೆಯ ಕುಂದೂ ಉಂಟಾಗಿಲ್ಲ, ಕಾವ್ಯದ ನಾಯಕನಿಗೆ ಸಲ್ಲಬೇಕಾದ ಪ್ರಾಧಾನ್ಯ, ಗೌರವ ಸಮರ್ಪಕವಾಗಿ ದೊರೆತಿದೆ. ನೈಷಧೀಯ ಕಾವ್ಯದಲ್ಲಿ ಹರ್ಷ ತನ್ನ ಪಾಂಡಿತ್ಯ, ಚಾತುರ್ಯ, ಕಲ್ಪನೆಗಳನ್ನೂ ಸಮರ್ಪಕವಾಗಿ, ಯಥೋಚಿತವಾಗಿ ಬಳಸಿದ್ದಾನೆ. ಸಾಹಿತ್ಯ ಶಾಸ್ತ್ರದ ದೃಷ್ಟಿಯಿಂದ ಕಾವ್ಯ ರಂಜನೀಯವಾಗಿದೆ. ಈ ಕಾವ್ಯದಲ್ಲಿ ಕವಿಯ ಕಲಾ ನೈಪುಣ್ಯವನ್ನು ಕಾಣಬಹುದು. ಕವಿಯ ಸಾಹಿತ್ಯಾಭಿರುಚಿ ಗಣನೀಯವಾಗಿದೆ.

ನೈಷಧ ಕಾವ್ಯದ ಶೈಲಿಯೂ ಪಂಡಿತರಿಗೆ ಮಾತ್ರವೇ ಮೆಚ್ಚುಗೆಯಾಗುದುದಲ್ಲ. ಸಾಮಾನ್ಯ ಓದುಗರನ್ನೂ ಆಕರ್ಷಿಸಬಲ್ಲ ಶಕ್ತಿಯನ್ನು ಪಡೆದಿದೆ. ಕಾವ್ಯದ ಪದ್ಯಗಳು ಯಮಕ ಮತ್ತು ಶ್ಲೇಷೋಕ್ತಿ ಅಥವಾ ದ್ವಂದ್ವಾರ್ಥಗಳಿಂದ ಕೂಡಿವೆ. ಶ್ರೀಹರ್ಷ ನಿಸರ್ಗ ವರ್ಣನೆಯಲ್ಲಿ ಸಿದ್ಧಹಸ್ತ. ಅವನ ವರ್ಣನಾ ವೈಖರಿ ಮೇಲ್ಮಟ್ಟದ್ದು.

ಶ್ರೀ ಹರ್ಷ ಬಳಸಿರುವ ಭಾಷೆ ಸೊಗಸಾಗಿದೆ. ಅವನ ಶಬ್ದ ಭಂಡಾರ ಅಗಾಧವಾದುದು. ಅವನ ಕಲ್ಪನಾ ಶಕ್ತಿ, ನಿರೂಪಣಾ ಶಕ್ತಿ ಅದ್ಭುತವಾಗಿದೆ. ಯಾವ ಸಂದರ್ಭದಲ್ಲಿಯೂ ಅವನಿಂದ ಸಾಹಿತ್ಯ ಸರಸ್ವತಿಗೆ ಅಪಚಾರವಾಗುವುದಿಲ್ಲ. ಕೇವಲ ಪಾಂಡಿತ್ಯ ದೃಷ್ಟಿಯಿಂದ ಮಾತ್ರವೇ ಶ್ರೀ ಹರ್ಷ ಪ್ರಬಲನಲ್ಲ. ಅವನ ಲೋಕಾನುಭವ, ಭಾಷಾಜ್ಞಾನ, ಕಾವ್ಯ ರಚನಾಶಕ್ತಿ, ಅಭ್ಯಾಸ, ಅನುಭವ, ಸಂಸ್ಕಾರಗಳು ಅಗಾಧವಾಗಿವೆ. ಅವನಿಗೆ ತನ್ನ ಅನುಭವಗಳನ್ನು ನಿರೂಪಿಸುವ ಜಾಣ್ಮೆ ಶಕ್ತಿಯ ಪರಿಚಯವಿರುವುದರಿಂದ ಕಾವ್ಯ ರಮಣೀಯವಾಗಿದೆ. ಯಶಸ್ವಿಯೂ ಆಗಿದೆ.

ಖಂಡನಖಂಡ ಖಾದ್ಯ ಶ್ರೀ ಹರ್ಷನ ವೇದಾಂತ ಗ್ರಂಥ. ಶ್ರೀ ಹರ್ಷನ ಪದ್ಯಗಳಿಂದ ಬೇರ್ಪಟ್ಟ ಸಿಂಕ ಗ್ರಂಥ ತತ್ತ್ವಾಂದು ಕೃತಿ. ಈ ಕೃತಿಯಲ್ಲಿ ಕವಿ ತತ್ತ್ವಜ್ಞಾನವನ್ನು ನಿರೂಪಿಸುತ್ತಾನೆ. ಅವನ ನಿರೂಪಣೆ ಸಮಂಜಸವಾಗಿದೆ ಎಂದು ಹೇಳದಿರುವಂತಿಲ್ಲ. ಆದರೆ ಅವನ ಉಳಿದ ಕೃತಿಗಳು ಉಪಲಬ್ಧವಿಲ್ಲ. ಮೇಲಿನ ವೇದಾಂತ ಗ್ರಂಥವನ್ನು ಉದಯನಾಚಾರ್ಯರು ವಿಮರ್ಶೆ ಮಾಡಿದ್ದಾರೆ. ತಮ್ಮದೇ ಆದ ತರ್ಕ ಶೈಲಿಯಲ್ಲಿ ಟೀಕೆಯನ್ನು ಬರೆದಿದ್ದಾರೆ. ಶ್ರೀ ಹರ್ಷ ಹಲವು ಸಂಗತಿಗಳನ್ನು ತಮ್ಮ ವೇದಾಂತ ಗ್ರಂಥದಲ್ಲಿ ಪ್ರಸ್ತಾಪಿಸುತ್ತಾನೆ. ಅವನ ನಿರೂಪಣಾ ಶೈಲಿ—ಶಕ್ತಿಗಳನ್ನು ಗಮನಿಸಿದಾಗ ಅವನು ಶ್ರೇಷ್ಠ ಮಟ್ಟದ ತರ್ಕಶಾಸ್ತ್ರಜ್ಞನೂ ಹೌದು. ಎಂಬುದು ಅರಿವಾಗುತ್ತದೆ.

ಮದರಾಸಿನಲ್ಲಿ ಮಿಂಚಿದ ಮಿಂಚು

(ಏಳನೇ ಪುಟದಿಂದ)

ಅದೇನೇನೋ ಆಡಿದಲ್ಲಿ ಸುಮ್ಮಗುಳಿದೀತೇ? ಅಷ್ಟು ಮಾತ್ರವಲ್ಲ. ಶ್ರೀ ರಾಮಸ್ವಾಮಿ ನಾಯ್ಕರ್‌ರವರೂ ಅವರ ಹಿಂಬಾಲಕರೂ ಬ್ರಾಹ್ಮಣರನ್ನು, ಶಂಕರಾಚಾರ್ಯರ ಮಠಕ್ಕೆ ಸೇರಿದವರನ್ನು ನೋಡಿದಲ್ಲಿ ಒಡನೆ ತಿವಿಯಬೇಕೆಂದು ಹೇಳುತ್ತಿದ್ದಾಗಲೂ, ಅದಕ್ಕೆ ಕತ್ತಿ ತೆಗೆದುಕೊಳ್ಳಲು ನಿಧಿ ಸಂಗ್ರಹ ಆರಂಭಿಸಿದಾಗಲೂ, ಶಂಕರಾಚಾರ್ಯರ ಗೊಂಬೆ ಮಾಡಿ ಅದಕ್ಕೆ ಮೆಟ್ಟಿನ ಮಾಲೆ ಹಾಕಿ ರಸ್ತೆಯಲ್ಲಿ ಎಳೆದಾಗಲೂ ಶ್ರೀ ಕಾಮರಾಜರ ಕಾಂಗ್ರೆಸ್ಸ್ ಸರಕಾರ ಗಹಗಹಿಸಿ ನಗುತ್ತಿತ್ತು. ಅದಕ್ಕೆ ಬದಲಾಗಿ ಗೋಪ್ರೇಮಿಗಳನ್ನು ಗೋಳು ಹೊಯಿಸಿತು. ಹೊತ್ತು ಗೊತ್ತಿಲ್ಲದೆ ಸಿಕ್ಕಬಟ್ಟೆ ಸಿಕ್ಕಿದವರನ್ನು ಹಿಡಿದು ಶಿಕ್ಷಿಸಿತು. ಕಾಂಗ್ರೆಸ್ಸು ದ್ರಾವಿಡ ಕಳಗಮ್‌ನ ರಾಜಕೀಯ ರೂಪಾಂತರವೆಂಬುದು ಜನಜನಿತವಾಯಿತು. ಈ ಕಾಂಗ್ರೆಸ್ಸ್ ಬಂದಲ್ಲಿ ಗೋವಿನ ಹಾಗೂ ಗೋಭಕ್ತರ ರಕ್ತದ ಹೊಳೆಹರಿದೀತೆಂದು ಜನತೆ ಕಾಂಗ್ರೆಸ್ಸಿಗೆ ಧಿಕ್ಕಾರವಂದಿತು. ಶ್ರೀ ರಾಮಸ್ವಾಮಿ ನಾಯ್ಕರವರ ಗೋ—ಬ್ರಾಹ್ಮಣ ದ್ವೇಷವೇ ಕಾಂಗ್ರೆಸ್ಸಿನ ನಾಶಕ್ಕೊಂದು ಕಾರಣ. ಕಪಿ ತಾನು ಮಾತ್ರ ಕೆಡಲಿಲ್ಲ, ತಾನು ಹೊಕ್ಕ ಅರಣ್ಯವನ್ನು ಹಾಳುಗೆಡವಿ ಬಿಟ್ಟಿತು.

ಅದೇ ಸಮಯದಲ್ಲಿ ಇನ್ನೊಂದು ದುರ್ಘಟನೆ ಮದ್ರಾಸಿನಲ್ಲಿ ನಡೆಯಿತು. ತಿರು ರಾಮಸ್ವಾಮಿ ನಾಯ್ಕರವರ ಹಿಂಬಾಲಕ ತಿರು ಯಂ. ಆರ್. ರಾಧಾ ಓರ್ವ ಚಲಚಿತ್ರ ನಟ. ಹಾಗೆಯೇ ಯಂ. ಜಿ. ರಾಮಚಂದ್ರನ್ ಇನ್ನೋರ್ವ ಚಲಚಿತ್ರ ನಟ. ಅವನು ದ್ರಾ. ಮು. ಕ. ಕ್ಕೆ ಸೇರಿದವನು. ಆದರೆ ಬೆನ್ನೆಲುಬು. ಅದನ್ನು ಮುರಿದು ಹಾಕಲು ಕಾಂಗ್ರೆಸ್ಸ್ ತಿರು ರಾಧಾನನ್ನು ಉಪಯೋಗಿಸಿಕೊಂಡಿತು. ಗುಂಡಿನೇಟಿನಿಂದ ತಿರು ರಾಮಚಂದ್ರನನ್ನು ಕೊಲೆಮಾಡಲು ರಾಧಾ ಪ್ರಯತ್ನಿಸಿದರೂ ವಿಧಿವಿಲಾಸದಿಂದಾಗಿ ಸಾಧ್ಯವಾಗಲಿಲ್ಲ. ವಿಧಿಗೂ ಕಾಂಗ್ರೆಸ್ಸನ್ನು ಬೀಳಿಸಬೇಕಾಗಿತ್ತು. ರಾಧಾ ಕಾಂಗ್ರೆಸ್ಸಿನ ಸೋಲಿಗೆ ಕಾರಣನಾದ. ಅವನು ಹೊಡೆದದ್ದು ದ್ರಾ. ಮು. ಕ. ಕ್ಕಾದರೂ ಪೆಟ್ಟು ಬಿದ್ದದ್ದು ಕಾಂಗ್ರೆಸ್ಸಿಗೆ— ರಾಮಚಂದ್ರ ಉಳಿದುಕೊಂಡ. ಕಾಂಗ್ರೆಸ್ಸ್ ಸೋತು ಹೋಯಿತು. ಇದು ಚುನಾವಣೆಯ ಬಿಸಿ ಇರುವಾಗಲೇ ನಡೆದ ದುರ್ಘಟನೆಯಾದುದರಿಂದ ಚಲಚ್ಚಿತ್ರ ಪ್ರೇಮಿಗಳು ಅದರಲ್ಲೂ ಸ್ತ್ರೀಯರು ಮರೆಯಲೇ ಇಲ್ಲ.

ಇದರೊಂದಿಗೆ ತಿರುಕಾಮರಾಜರ ಪ್ರಚಾರ ಭಾಷಣ ವೈಖರಿಯೂ ಸೇರಿಕೊಂಡಿತು. ತಿರುಕಾಮರಾಜರು ಮಾತಾಡುವುದು ಬಹಳ ಕಮ್ಮಿ. ಅದರಲ್ಲೂ ಇದೀಗ ಸಾರ್ವಜನಿಕ ಸಭೆಗಳಲ್ಲಿ ಮಾತಾಡುವುದಿಲ್ಲವೆಂದು ಹಟ ಹಿಡಿದಿರುವರು. ಅವರು ಬಾಯಿ ಬಿಟ್ಟದ್ದೇ ಕಾಂಗ್ರೆಸ್ಸಿನ ಸೋಲಿಗೆ ಕಾರಣ. ಅವರು ಕಾಂಗ್ರೆಸ್ಸಿನ ಸೋಲಿಗಾಗಿ ಮಾತಾಡಬೇಕಾಗಿರುವುದನ್ನೆಲ್ಲಾ ಆದಾಗಲೇ ಮಾತಾಡಿ ಮುಗಿಸಿರುವುದರಿಂದ ಇನ್ನು ಮಾತಾಡಲು ಏನೂ ಉಳಿದಿಲ್ಲವೆಂದು ಕಾಣುತ್ತದೆ.

ಇವೆಲ್ಲಾ ಕಾಂಗ್ರೆಸ್ಸಿನ ಪತನಕ್ಕೆ ಕಾರಣಗಳಿವೆ. ಕಾಂಗ್ರೆಸ್ಸಿನ ಪತನದಿಂದ ಭಾಗ್ಯದ ಭಾಸ್ಕರನು ಉದಯಿಸಿರುವನೆಂದು ತಿಳಿದುಕೊಳ್ಳಬಾರದು. ಹಗಲು ಕನಸೇ ಸರಿ. ಇಲ್ಲಿ ಕಂಡು ಬಂದಿರುವ ಬೆಳಕು ಉದಯ ಸೂರ್ಯನದ್ದಲ್ಲ. ಕೇವಲ ಅದೊಂದು ರಾಜಕೀಯ ಮಿಂಚಿನ ಪ್ರಕಾಶ ಅಷ್ಟೇ. ಆದರ ಅಂತ್ಯಕ್ಕೂ ಆದೀಗಲೇ ಆರಂಭವಾಗಿದೆ. ದ್ರಾ.ಮು.ಕ ವು ಒಡೆದು ಹೋಗದಂತೆ ಹಿಡಿದುಕೊಳ್ಳಲಿಕ್ಕಾಗಿಯೇ ತಿರು ಅಣ್ಣಾದೊರೈ ದಿಲ್ಲಿಗೆ ಹೋಗದೆ ಇಲ್ಲೇ ನಿಂತಿರುವುದಾಗಿ ಹೇಳಲಾಗುತ್ತಿದೆ. ಅವರಾದರೋ ಹಿಂದಿನ ಬಾಗಿಲಿನಿಂದ ವಿಧಾನ ಪರಿಷತ್ತಿನೊಳಗೆ ಬಂದುಕೊಂಡು ಮುಖ್ಯಮಂತ್ರಿ ಪದವಿಗೆ ಕವಚ ಮಾಡಿಕೊಂಡಿರುವರು; ಇದು ಬಹಳ ಸಮಯ ಉಳಿಯುವಂತಹದಲ್ಲ, ಸ್ವಲ್ಪ ಸಮಯಕ್ಕೆ ಮಾತ್ರ. ಅನಂತರ ಪದವಿ ಬೇಕಾದಲ್ಲಿ ಪುನಃ ಚುನಾವಣೆಯಲ್ಲಿ ನಿಲ್ಲಬೇಕು. ಪಕ್ಷದೊಳಗೂ ಇದಾಗಲೇ ಎಳೆದಾಟಕ್ಕೆ ಆರಂಭವಾಗಿದೆ. ಇದು ಪಕ್ಷದೊಳಗಿನ ವಿಷಯ.

ಪಕ್ಷದ ಹೊರಗೆ, ಇಷ್ಟರ ವರೆಗೆ ಕೈಯಿತ್ತು ಸಹಕರಿಸಿ, ಅಧಿಕಾರದ ಆಸನದಲ್ಲಿ ಕುಳ್ಳಿರಿಸಿದ ಸ್ವತಂತ್ರ ಪಾರ್ಟಿಯೂ ಮರೆತು ನಿಲ್ಲಲಾರಂಭಿಸಿದೆ. ಸ್ವತಂತ್ರ ಪಾರ್ಟಿಯನ್ನೆದುರಿಸಲು ತೊಡಗಿದಲ್ಲಿ ದ್ರಾ. ಮು. ಕ. ಉರುಳುವುದು ಖಂಡಿತ. ಅದಕ್ಕೆ ಸ್ವತಂತ್ರ ಪಾರ್ಟಿಯ ಶಕ್ತಿ ಕಾರಣವಲ್ಲ. ಶ್ರೀ ಸಿ. ಆರ್. ರವರ ವೈಯಕ್ತಿಕ ಪ್ರಭಾವವೇ ಕಾರಣ ಇದೆ.

ಇನ್ನು ಕೆಲವೇ ತಿಂಗಳಲ್ಲಿ ಮದ್ರಾಸ್ ಮಹಾನಗರದ ನಗರಸಭೆಯ ಚುನಾವಣೆ ನಡೆಯಲಿಕ್ಕಿದೆ. ಆದರಲ್ಲಿ ಈ ಭಿನ್ನ ಭಿನ್ನ ಪಕ್ಷಗಳ ಶಕ್ತಿಯ ಪರೀಕ್ಷೆ ಆಗಲಿಕ್ಕಿದೆ.

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ
ಅಂಚೆ ವೆಚ್ಚ ರೇಲ್ವೆ ಮತ್ತು ವಿಮಾನ ರವಾನೆ ಖರ್ಚು
ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ
ರಿಯಾಯಿತಿ ದೊರೆಯುತ್ತದೆ.

ಚಂದಾ ಹಣ ಬಾಕಿ ಇರುವ ಚಂದಾದಾರರು ಆದಷ್ಟು ಬೇಗನೆ ಚಂದಾ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮುಂಬೈ ಪತ್ರ

ಅಣ್ಣನ ಮದುವೆ.

ಒಂದು ಸುಂದರ ಸಫಲ ಪ್ರಯೋಗ.

ಕನ್ನಡದಲ್ಲಿ ನಗೆನಾಟಕವೆಂದರೆ ಸರ್ವಸಾಮಾನ್ಯವಾಗಿ ನಮಗೆ ನೆನಪಾಗುವುದು ಕುರುಡನನ್ನೋ ಕಿವುಡನನ್ನೋ ಅಥವಾ ಮೂಕನನ್ನೋ ರಂಗಭೂಮಿಯ ಮೇಲೆ ತಂದು ಅವನ ಅಂಗಹೀನತೆಯ ಮೇಲೆ ಅಪಹಾಸ್ಯದ ದಾಳಿ ನಡೆಸುವುದು. ಅದನ್ನು ಬಿಟ್ಟರೆ ಹೇರಳವಾಗಿ ಅಶ್ಲೀಲ ಪದ ಪ್ರಯೋಗಗಳಿಂದ ನಿಮ್ನ ವರ್ಗದ ಹಾಸ್ಯ ಮಾಡುವುದು.

ಆದರೆ, ಮೇ ತಿಂಗಳ ಆರರಂದು ಮುಂಬಯಿಯ ಜೈಹಿಂದ್ ಕಾಲೇಜಿನ ಸಭಾಗೃಹದಲ್ಲಿ ರಂಗರಶ್ಮಿ ಅವರು ಪ್ರಯೋಗಿಸಿದ 'ಅಣ್ಣನ ಮದುವೆ' ಎಂಬ ನಗೆ ನಾಟಕವು ಈ ಸಾಮಾನ್ಯ ನಿಯಮಕ್ಕೊಂದು ಅಪವಾದದಂತಿತ್ತು. ಮೂಲ ಬಂಗಾಲಿಯಲ್ಲಿ ಶ್ರೀ ಶೈಲೇಶ್ ಗುಹ "ನಿಯೋಗಿ" ಅವರು ಬರೆದ 'ಪಾದಿರ್ ಬಿಯೆ' ಎಂಬ ನಾಟಕದ ಕನ್ನಡ ರೂಪಾಂತರವೇ 'ಅಣ್ಣನ ಮದುವೆ' ಇದನ್ನು ಕನ್ನಡಿಸಿ ದಿಗ್ದರ್ಶಿಸಿ ಪ್ರಯೋಗಿಸಿದ ಶ್ರೇಯಸ್ಸು ಮುಂಬಯಿಯ ತರುಣ ಜನಪ್ರಿಯ ನಟ ದಿಗ್ದರ್ಶಕ ಶ್ರೀ ಸದಾನಂದ ಸುವರ್ಣ ಅವರಿಗೆ ಸಲ್ಲುತ್ತದೆ.

ಅಣ್ಣ ಗಿರಿಧರರಾಯನಿಗೆ ಆರೋಗ್ಯಜ್ಞಾನವುಳ್ಳ ಹೆಂಡತಿಯನ್ನು ತರಬೇಕೆಂದು ಆಸರತ್ತು ಪ್ರೇಮಿ ತಮ್ಮ ಭೀಮರಾಯನಿಗೆ ಆಸೆಯಾದರೆ ಇನ್ನೊಬ್ಬ ತಮ್ಮ ನರಸಿಂಗರಾಯನಿಗೆ ಬರುವ ಅತ್ತಿಗೆ ಸುಂದರಿಯೂ ಮಹಿಳೆ ಆಗಿರಬೇಕು ಎಂದು ಆಸೆ. ಮೂರನೆಯ ತಮ್ಮ ಶ್ರೀಕಂಠರಾಯನಂತೂ ತನ್ನ ಅತ್ತಿಗೆ ಉತ್ತಮ ಗಾಯಕಿಯಾಗಿರಬೇಕು ಎಂಬ ಹಂಬಲವುಳ್ಳವ. ಮೂವರೂ ತಮ್ಮಂದಿರು ಅಣ್ಣನ ಮದುವೆ ಮಾಡಲು ಹುಡುಗಿಯರನ್ನು ಹುಡುಕುತ್ತಾರೆ. ಆದರೆ ತಮ್ಮಂದಿರ ಭಿನ್ನಾಭಿಪ್ರಾಯಗಳ ಪರಿಚಯವುಳ್ಳ ಅಣ್ಣ ಒಬ್ಬ ಬಡ ಹುಡುಗಿಯನ್ನು ವಿವಾಹವಾಗಿ ಅವಳಿಗೆ ತಮ್ಮಂದಿರ ಬೇಕುಗಳನ್ನು ಕಲಿಸಿ ಅನಂತರ ಮನೆಗೆ ಕರೆತರುತ್ತಾನೆ. ಇದು ಕಥಾಸಾರ.

ಅಣ್ಣನ ಗಿರಿಧರರಾಯನ ಪಾತ್ರದಲ್ಲಿ ಶ್ರೀ ಎನ್. ಜಿ. ಪಿಂಟೋರ ಅಭಿನಯ ಸಾಧಾರಣವಾಗಿತ್ತು. ಆದರೆ ಭೀಮ, ನರಸಿಂಗ ಮತ್ತು ಶ್ರೀಕಂಠನ ಪಾತ್ರದಲ್ಲಿ ಕ್ರಮವಾಗಿ ಸರ್ವಶ್ರೀ ರಾಜು ಜಿ. ಸಾಲಿಯಾನ್, ಕೆ. ಎಸ್. ಶ್ರೀನಿವಾಸ ಮತ್ತು ಮೋಹನ ರಾವ್ ಅತ್ಯುತ್ತಮ ಅಭಿನಯ ನೀಡಿದರು. ಈ ಮೂರೂ ಪಾತ್ರಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸುವಲ್ಲಿ ಸಮರ್ಥವೆನಿಸಿದುವು. ಈ ನಾಟಕದ ಉಳಿದ ಪಾತ್ರಗಳಾದ ಮದುವೆಯ ದಲ್ಲಾಳಿಗಳ ರೂಪದಲ್ಲಿ ಶ್ರೀ ಎಸ್. ಎಂ. ಶೆಟ್ಟಿ ಮತ್ತು ಶಂಕರ ಪಕ್ಕಳರು ತಮ್ಮ ಪಾತ್ರಗಳನ್ನು ಚೊಕ್ಕವಾಗಿ ನಿರ್ವಹಿಸಿದರು. ಇನ್ನೊಂದು ವಧುವಿನ ತಂದೆಯ ಪಾತ್ರದಲ್ಲಿ ಶ್ರೀ ವಿ. ಎಸ್. ಗುಡಿ ಅವರ ಸಂಭಾಷಣೆಗಳು ಎಷ್ಟೋ ಸಲ ಕೇಳಿ ಬರಲಿಲ್ಲ ಎಂಬೊಂದು ಆಕ್ಷೇಪಣೆಯನ್ನು ಬಿಟ್ಟರೆ ಅವರು ಉತ್ತಮವಾಗಿ ಅಭಿನಯಿಸಿದರು ಎಂದೇ ಅನ್ನಬಹುದು. ಈ ನಾಟಕದ ಏಕಮೇವ ಸ್ತ್ರೀ ಪಾತ್ರವೆನಿಸಿದ ಅತ್ತಿಗೆಯ ರೂಪದಲ್ಲಿ ಡಾ|| ಶ್ರೀಮತಿ ಶೈಲಜಾ ವಾಘ್ ಅವರು ತನ್ನ ಅತಿ ಚಿಕ್ಕ ಪಾತ್ರವನ್ನೂ ಬಹು ಸೊಗಸಾಗಿಯೇ ಅಭಿನಯಿಸಿ ಕಳೆಕಟ್ಟಿದರು. ಮನೆಯಾಳು ಕೋಚಂಡನ ಪಾತ್ರದಲ್ಲಿ ಆರ್. ಎಂ. ಭಟ್ ಅವರು ಚೆನ್ನಾಗಿಯೇ ಅಭಿನಯಿಸಿದರು.

ಮುಂಬಯಿಯ ಹಲವು ಹತ್ತು ಉದ್ಯೋಗ ವ್ಯವಹಾರಗಳಲ್ಲಿ ಹಂಚಿ ಹೋಗಿರುವ ಕನ್ನಡ ತರುಣರನ್ನು ಒಂದೆಡೆ ಸೇರಿಸಿ, ತರಬೇತಿಯಿತ್ತು, ಇಂತಹ ಒಂದು ಉತ್ತಮ ನಾಟಕವನ್ನು ಪ್ರಯೋಗಿಸಿದ ಶ್ರೀ ಸದಾನಂದ ಸುವರ್ಣರ ಸಾಹಸ ಅಭಿನಂದನೀಯವಿದೆ.

"ಈ ನಾಟಕದ ಇನ್ನೂ ಕೆಲವು ಪ್ರಯೋಗಗಳು ನಡೆಯಬೇಕು" ಎಂದು ಪ್ರೇಕ್ಷಕರು ಉದ್ಗರಿಸಿದುದೇ ಈ ನಾಟಕದ ಯಶಸ್ಸಿಗೆ ದೊರೆತ ದೊಡ್ಡ ಪ್ರಶಸ್ತಿ ಎಂದು ನಾವು ತಿಳಿಯುತ್ತೇವೆ. —ರಾಜರ್ಷಿ

ಕರ್ನಾಟಕ ಸಂಘ, ಮದ್ರಾಸು

ದಿನಾಂಕ 2—4—67ರಂದು ಕರ್ನಾಟಕ ಸಂಘದ ಡಾ. ಬಿ. ರಾಮರಾವ್ ಕಲಾಮಂಟಪದಲ್ಲಿ ಶ್ರೀಮತಿ ಲೀಲಾ ಶಿವರಾವ್ ಅವರ ಹಿಂದುಸ್ತಾನಿ ಶಾಸ್ತ್ರೀಯ ಮತ್ತು ದೇವರನಾಮ ಸಂಗೀತವು ಬಹು ಸಾಂಗವಾಗಿಯೂ ಶ್ಲಾಘನೀಯವಾಗಿಯೂ ನಡೆಯಿತು. ಇದೇ ಸಂದರ್ಭದಲ್ಲಿ ಈ ಸಾರಿಯ ಅದ್ಭುತ ಚುನಾವಣೆಯಲ್ಲಿ ಸ್ವತಂತ್ರ ಪಕ್ಷದಿಂದ ಶಾಸನ ಸಭೆಗೆ ಆಯ್ಕೆಯಾಗಿ ಬಂದ ಡಾ. ಹೆಚ್. ವಿ. ಹಂದೆಯವರಿಗೆ ಮಾನಪತ್ರವನ್ನು ಅರ್ಪಿಸಿ ಸತ್ಕರಿಸಲಾಯಿತು. ಡಾ. ಹಂದೆಯವರು ತಮ್ಮನ್ನು ಸತ್ಕರಿಸಿದುದಕ್ಕಾಗಿ ಕರ್ನಾಟಕ ಸಂಘದ ಸದಸ್ಯರನ್ನು ವಂದಿಸಿದರು.

ವಾರ್ಷಿಕೋತ್ಸವ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ 23ನೇ ವಾರ್ಷಿಕೋತ್ಸವವು ದಿನಾಂಕ 13-5-67 ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಯಶಸ್ವಿಯಾಗಿ ನಡೆಯಲ್ಪಟ್ಟಿತು.

ಸಮಾರಂಭದ ಅಂಗವಾಗಿ "ವಿದುರಾತಿಥ್ಯ' ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ಸರ್ವಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ಕೀರಿಕ್ಕಾಡು ಬಾಲಕೃಷ್ಣ ಭಟ್ (ವಿದುರ) ಯು. ಬಿ. ಗೋವಿಂದ ಭಟ್ (ಕೌರವ) ಡಾ|| ರಮಾನಂದ ಬನಾರಿ (ಶ್ರೀಕೃಷ್ಣ) ಕೀ. ವ. ಕೇಶವ (ಹಾಡುವಿಕೆ) ಬಿ. ರಾಮಕೃಷ್ಣ (ಮೃದಂಗ) ಬಿ. ಸುಬ್ರಾಯ (ಚೆಂಡೆ)ರ ಭಾಗವಹಿಸುವಿಕೆಯಿಂದ ನಡೆದು ತದನಂತರ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವತಿಯಿಂದ "ಕಂಸವಧೆ' 'ಕೃಷ್ಣಾರ್ಜುನ' ಎಂಬ ಯಕ್ಷಗಾನ ನಾಟಕಗಳು ಪ್ರದರ್ಶಿಸಲ್ಪಟ್ಟವು.

ಈ ಮಧ್ಯೆ ಕುಮಾರಿ ಚಂದ್ರಿಕಾಳಿಂದ ನೃತ್ಯ ಪ್ರದರ್ಶನವು ಕುಮಾರಿ ಶಶಿಕಲಾ, ಮತ್ತು ಕುಮಾರಿ ಪುಷ್ಪಗಂಧಿನಿಯರ ಹಿನ್ನೆಲೆ ಸಂಗೀತದೊಂದಿಗೆ ನಡೆಯಿತು.

ಆರಂಭದಲ್ಲಿ ಡಾ|| ಬನಾರಿಯವರು ಸ್ವಾಗತಿಸಿ ಪಾತ್ರ ಪರಿಚಯ, ಕಾರ್ಯ ಕಲಾಪಗಳ ವಿವರಣೆಯನ್ನಿತ್ತರು. ಕೊನೆಗೆ ಕಾರ್ಯದರ್ಶಿಗಳು ಧನ್ಯವಾದವಿತ್ತರು.

ಕೃಷಿಕರ ಸಮಸ್ಯೆಯ ಕುರಿತು ಮನವಿ

ತಾ. 17—5—67ರಂದು ಸೌತ್ ಕೆನರಾ ಚೇಂಬರ್ ಆಫ್ ಅಗ್ರಿಕಲ್ಚರ್ ಮಂಗಳೂರು ಇವರ ಆಫೀಸಿನಲ್ಲಿ ಮೈಸೂರು ರಾಜ್ಯದ ಸಹಕಾರ ಹಾಗೂ ಪಂಚಾಯತ್ ರಾಜ್ಯ ಮಂತ್ರಿ ಶ್ರೀ ಪಿ. ಎಂ. ನಾಡಗೌಡ ಹಾಗೂ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಜನಾಕಂ ದಿ ಮೈರೆ ಅವರುಗಳನ್ನು ಸನ್ಮಾನಿಸಿ ಮನವಿಯೊಂದನ್ನು ಅರ್ಪಿಸಲಾಯಿತು.

ಜಿಲ್ಲೆಯ ಕೃಷಿಕವರ್ಗವನ್ನು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಮಾನ್ಯ ಮಂತ್ರಿಗಳ ಹಾಗೂ ರಿಜಿಸ್ಟ್ರಾರರ ಮುಂದಿಡುತ್ತಾ ಜಿಲ್ಲೆಗೆ ಸಹಕಾರಿ ಕ್ಷೇತ್ರದಲ್ಲಿ ಆಧುನಿಕ ಮಣ್ಣಿನ ಪರೀಕ್ಷೆಯ ಲೆಬೊರೇಟರಿಯ ಸ್ಥಾಪನೆ ಒಂದನ್ನು ಮನವಿಯಲ್ಲಿ ಒತ್ತಿ ಹೇಳಲಾಯಿತು.

ಆಧುನಿಕ ಕೃಷಿ ಸಾಧನೆಗಳು ಪಂಪ್ ಸೆಟ್ಟುಗಳು ಹಾಗೂ ಕೃಷಿಕರ ಇನ್ನಿತರ ಅವಶ್ಯಕತೆಗಳ ತಯಾರಿಕೆ ಹಾಗೂ ವಿತರಣೆಗಳನ್ನು ಕೈಗೊಳ್ಳುವದೆ ಸಹಕಾರಿ ಕ್ಷೇತ್ರದಲ್ಲಿ ಕೂಡ ಒಂದು ಸಂಘವನ್ನು ಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ ಒತ್ತಾಯಿಸಲಾಯಿತು.

ಸಹಕಾರಿ ಸಂಘಗಳು ರೈತರಿಗೆ ಕೊಡತಕ್ಕ ಸಾಲಗಳ ಬಡ್ಡಿ ದರವನ್ನು ತಗ್ಗಿಸುವ ಸಾಧ್ಯಾಸಾಧ್ಯತೆಗಳನ್ನು ಕೂಡಲೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದೂ ಮನವಿಯಲ್ಲಿ ಕೇಳಿಕೊಳ್ಳಲಾಯಿತು. ಮನವಿಗೆ ಉತ್ತರಿಸುತ್ತಾ ರಿಜಿಸ್ಟ್ರಾರರು ಹಾಗೂ ಮಾನ್ಯ ಮಂತ್ರಿಗಳು ರೈತರ ಹಿತಾಸಕ್ತಿಗಳನ್ನು ಗಮನಿಸಿ ಸಜೀವವಾಗಿರತಕ್ಕಂತಾ ರೈತರದೇ ಆದ ಸಂಘವನ್ನು ಇಡೀ ರಾಜ್ಯದಲ್ಲಿ ಪ್ರಪ್ರಥಮವಾಗಿ ತಾವು ಇಲ್ಲಿ ಮಾತ್ರ ಕಂಡದ್ದಾಗಿಯೂ ಈ ಸಂಘದ ಚಟುವಟಿಕೆಗಳನ್ನು ಪ್ರಶಂಸಿಸಿದರು.

ಮನವಿಯಲ್ಲಿ ಕೇಳಿ ಕೊಂಡ ವಿಷಯಗಳು ಬಹಳ ಗಹನವಾದುವುಗಳಾಗಿದ್ದು ಇವುಗಳ ಬಗ್ಗೆ ತಾವಿಬ್ಬರೂ ಪ್ರತ್ಯೇಕವಾಗಿ ಕೂಲಂಕುಷ ಆಲೋಚಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಭರವಸೆಯನ್ನು ಇತ್ತರು

ಚೇಂಬರಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಅಥಿತಿಗಳನ್ನು ಸ್ವಾಗತಿಸಿದ ನಂತರ ಕಾರ್ಯದರ್ಶಿಯವರು ಮನವಿಯನ್ನರ್ಪಿಸಿದರು. ಶ್ರೀ ಪಿ. ಯಸ್. ತಿಂಮಪ್ಪ ಶೆಟ್ರು ವಂದನಾರ್ಪಣೆ ಗೈದರು.

'ಅಪ್ಸರಾ' ಆರಂಭೋತ್ಸವ.

ಉಡುಪಿ, ಜನಪ್ರಿಯ ಜಮೀನ್ದಾರ್ ಶ್ರೀ ಬೇಳಂಜೆ ಮೋನಪ್ಪ ಹೆಗ್ಡೆಯವರು ಉಡುಪಿಯ ಬಡಗುಪೇಟೆಯಲ್ಲಿ ನೂತನವಾಗಿ ನಿರ್ಮಿಸಿದ "ಅಪ್ಸರಾ ಎಂಬ ಅತ್ಯಾಧುನಿಕ ಮಾದರಿಯ ಬೋರ್ಡಿಂಗ್ ಮತ್ತು ಲೋಜಿಂಗ್ ಹಾಸಿನ ಪ್ರಾರಂಭೋತ್ಸವವು ತಾ. 19ರಂದು ಶ್ರೀ ಟಿ. ಎ. ಪೈಯವರಿಂದ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಕೃತಜ್ಞತಾ ಸಮರ್ಪಣೆ

ಬೆಳ್ಳಾರೆ ನಾರಾಯಣ ಶೇಕರ ಪುತ್ರನ ಡಾ|| ಕೆ. ಮಂಜುನಾಥ ರೈಗಳ ಅಳಿಯ ಚಿ|| ಪ್ರಭಾಶಂಕರನ ವಿವಾಹವು ದಿ|| ವಕೀಲ್ ಕದಿಂಜೆ ಮಹಾಬಲ ಹೆಗ್ಡೆಯವರ ಪುತ್ರಿ ವ ಶೆಟ್ಟಿಗುತ್ತು ಕೃಷ್ಣ ಅದ್ಯಂತಾಯ ಮತ್ತು ಮುಂಡ್ಕೂರು ನಡಿಗುತ್ತು ಕೃಷ್ಣ ಶೆಟ್ರ ಮೊಮ್ಮಗಳು ಚಿ|| ಸೌ|| ಕಸ್ತೂರಿಯೊಂದಿಗೂ ಕೆ. ಹೊನ್ನಯ್ಯ ಶೆಟ್ರ ಪುತ್ರಿ ವ ದಿ|| ಬಳ್ಪಾಡಿ ಬೀಡು ಮಂಜಪ್ಪ ರೈಗಳ ಮೊಮ್ಮಗಳು ನ ಡಾ|| ಕೆ. ಮಂಜುನಾಥ ರೈಗಳ ಪೌತ್ರಿ ಚಿ|| ಸೌ|| ಉಷಾಳ ವಿವಾಹವು ಬೆಳ್ಳಿಪಾಡಿ ಕಾಂತ ರೈಗಳ ಪುತ್ರ ವ ದಿ|| ಬೆಳ್ಳಿಪಾಡಿ ಉಂಮಲಿ ಕೊರಗಪ್ಪ ರೈಗಳ ಮೊಮ್ಮಗ ಚಿ|| ಪ್ರಭಾಕರನೊಂದಿಗೂ ತಾ. 19—5—67ನೇ ಶುಕ್ರವಾರದಂದು ಮಂಗಳೂರು ಟೌನ್ ಹಾಲ್‌ನಲ್ಲಿ ತಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದದಿಂದ ವಿಜೃಂಭಣೆಯಿಂದ ನೆರವೇರಿತು.

ಈ ಶುಭ ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದ, ಉಡುಗೊರೆಗಳನ್ನಿತ್ತ ಹಾಗೂ ಶುಭಕೋರಿ ಸಂದೇಶಗಳನ್ನು ಕಳುಹಿಸಿ ಕೊಟ್ಟ ಮಹನೀಯರುಗಳೆಲ್ಲರಿಗೆ ಪ್ರತ್ಯ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸಲು ಅಸಾಧ್ಯವಾದುದರಿಂದ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ.

ಬಿ. ನಾರಾಯಣ ಶೇಕ
'ರುಕ್ಮಿಣಿ ಪ್ರಿಯ ನಿವಾಸ'
ಗುರ್ದ್ಯಾಡಿ, P. O. ಪೆರ್ಮಾರ್ನ್
via — ಬೆಳ್ತಂಗಡಿ (ದ. ಕ.)

ಕೆ. ಹೊನ್ನಯ್ಯ ಶೆಟ್ಟಿ
ಸಂಪಾದಕ "ನವಯುಗ" ವಾರಪತ್ರಿಕೆ
ಪೋ. ಬಾ. ನಂ. 22, ಉಡುಪಿ (ದ. ಕ.)

ಬಸವಣ್ಣನ ಉವಾಚ

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ ಕೂಡಲ ಸಂಗಮದೇವಾ, ಎನಗಿದೇ ದಿವ್ಯ.

o o o

ಜಾತಿವಿಡಿದು ಸೂತಕವನರಸುವೆ, ಜ್ಯೋತಿವಿಡಿದು ಕತ್ತಲೆಯ ನರಸುವೆ, ಇದೇಕೋ ಮರುಳ ಮಾನವಾ? ಜಾತಿಯಲ್ಲಿ ಅಧಿಕನೆಂಬೆ; ವಿಪ್ರ ಕೋಟಿಗಳಿದ್ದಲ್ಲಿ ಫಲವೇನು? ಭಕ್ತ ಶಿಖಾಮಣಿ ಎಂಬುದು ವಚನ. ನಮ್ಮ ಕೂಡಲ ಸಂಗನ ಶರಣ ಪಾದಪುರುಷನನಂಬು, ಕೆಡಬೇಡ ಮಾನವ.

o o o

ಅರಸು ಮುನಿದು ನಮ್ಮನೇನು ಮಾಡುವರು? ಊರು ಮುನಿದು ನಮ್ಮನೇನು ಮಾಡುವುದು? ನಮ್ಮ ಹಸ್ತಿಗೆ ಕೂಸಕೂಳ ಬೇಡ, ನಮ್ಮ ಸೋಣ ಗಂಗೆ ತಳಿಗೆಯ ನಿಕ್ಕ ಬೇಡ. ಆನೆಯ ಮೇಲೆ ಹೋಹನ ಶ್ವಾನನ ಕಚ್ಚ ಬಲ್ಲುದೇ? ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

o o o

ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ, ಮತ್ತೊಂದಕ್ಕೆರಗಿದರೆ ಕಿವಿಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬರನೇನೆಂಬೆ ಕೂಡಲ ಸಂಗಮದೇವಾ.

o o o

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ! ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ! ನೀನು ಜಗಕ್ಕೆ ಬಲ್ಲಿದನ; ನಾನು ನಿನಗೆ ಬಲ್ಲಿದನು ಕಂಡಯ್ಯಾ! ಕರಿಯು ಕನ್ನಡಿಯೊಳಗಡಗಿದಂತಯ್ಯಾ, ಎನ್ನೊಳಗೆ ನೀನಡಗಿದೆ ಕೂಡಲ ಸಂಗಮದೇವ.

o o o o

ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು. ಕಂಗಳಿಚ್ಛೆಗೆ ಪರ ವಧುವನೆರೆವರು. ಲಿಂಗಲಾಂಛನ ಧಾಂಯಾದಲ್ಲಿ ಫಲವೇನು? ಲಿಂಗಪಥವ ತಪ್ಪಿ ನಡೆದವರು. ಜಂಗಮ ಮುಖದಿಂದ ನಿಂದೆ ಬಂದರೆ ಕೊಂಡ ಮಾರಿಂಗೆ ಹೋಹುದು, ತಪ್ಪದು ಕೂಡಲ ಸಂಗಮದೇವಾ.

o o o o

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ. ಕೊಲುವದು ತ್ರಿಜಗವೆಲ್ಲವ, ತನಗೆ ಹೇರಿ ಪ್ರವಿಯಿಲ್ಲ. ನಾಲ್ಕಡಿ ಮುನ್ನೈದುವದು ಲೋಕದ ಕಡೆಯನ ಕಾಂಬುದು, ಸೂಕ್ಷ್ಮ ಪಥದಲ್ಲಿ ನಡೆವುದು, ತನಗೆ ಬೇಟೆ ಒಡಲಿಲ್ಲ. ಜಹವೆಂಬ ಗಾರುಡಿಗನ ನುಂಗಿತ್ತು ಕೂಡಲ ಸಂಗನ ಶರಣರಲ್ಲದುಳಿದವರ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಸುಖಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ. 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ.

ಹೇಡಿಗಳು

(ಎರಡನೇ ಪುಟದಿಂದ)

ಅನಂತ ತಮ್ಮ ಮಾತನ್ನು ಎಂದಿಗೂ ಕಡೆಗಣಿಸುವುದಿಲ್ಲ ಎಂಬ ಭರವಸೆ ಶಾಸ್ತ್ರಿಗಳಿಗೆ.

ಡಿಗ್ರಿ ಹೊತ್ತ ಮಗನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದರು ದಂಪತಿಗಳು.

— ೩ —

ಐದು ವರುಷಗಳು ಕಳೆದಿವೆ. ಪ್ರಕೃತಿಯ ಚರ್ಯೆಗಳಲ್ಲಿ ಬದಲಾವಣೆ ಇಲ್ಲ. ಋತುಗಳು ಸರದಿ ತಪ್ಪದೆ ಕ್ರಮವಾಗಿಯೇ ಉರುಳುತ್ತಿವೆ.

ಬಿ. ಇ. ಪದವೀಧರನಾಗಿ ಹಳ್ಳಿಗೆ ಬಂದಿದ್ದಾನೆ ಅನಂತ. ಒಂದು ಮಾಸವಿಡಿ ಉಭಯ ಕುಶಲೋಪರಿಯಲ್ಲಿಯೇ ಕಳೆಯಿತು. ಒಂದು ದಿನ ಮುಂಜಾನೆ ರಾಮಶಾಸ್ತ್ರಿಗಳು ಮಗನೊಡನೆ ಮದುವೆಯ ಪ್ರಸ್ತಾಪವೆತ್ತಿದರು.

'ಅನಂತ! ನಾವಿಬ್ರು ಹೇಗೂ ಮುದುಕರಾದೆವು. ಇನ್ನು ನಿನ್ನ ಕೈಯಿಂದ ಒಂದು ತಾಳಿ ಕಟ್ಟಿಸಿ ನಿಶ್ಚಿಂತೆಯಿಂದಿರಬಹುದು ಅಂತ ನನ್ನ ಯೋಚ್ನೆ."

'ತಾಳಿ ಕಟ್ಟೋದಂದ್ರೆ ಸಾಮಾನ್ಯ ವಿಷಯವೇನಪ್ಪಾ? ನನ್ನ ಭವಿಷ್ಯತ್ತಿನ ಪ್ರಶ್ನೆ.' ಮಧ್ಯದಲ್ಲೇ ಬಾಯಿ ಹಾಕಿದ ಅನಂತ. "ಅದಕ್ಕೆಲ್ಲಾ ತಕ್ಕ ಏರ್ಪಾಡು ಮಾಡಿದ್ದೇನೆ ಅನಂತ. ಒಂದು ವಧು ಕೂಡ ನೋಡಿ ಆಗಿದೆ.' ಹೇಳಿದರು ಶಾಸ್ತ್ರಿಗಳು.

ಅನಂತನಿಗೆ ಪರಿಸ್ಥಿತಿಯ ಅರಿವಾಗ ತೊಡಗಿತು.

'ಅಪ್ಪಾ!, ಮದುವೆ ಆಗೋದು ನಾನೋ, ನೀವೋ?' ಸಿಟ್ಟಿನಿಂದಲೇ ಕೇಳಿದ ಅನಂತ.

ತಮ್ಮ ಕೈಯಾರೆ ಸಾಕಿ ಸಲಹಿದ ಮಗನಿಂದ ನೇರವಾಗಿ ಅನಿರೀಕ್ಷಿತವಾಗಿ ಬಂದ ಪ್ರಶ್ನೆಯಿಂದ ಶಾಸ್ತ್ರಿಗಳು ತತ್ತರಿಸಿ ಹೋದರು. ಆದರೂ ಧೃತಿಗೆಡಲಿಲ್ಲ. ನಿಧಾನವಾಗಿಯೇ ಉತ್ತರಿಸಿದರು ಶಾಸ್ತ್ರಿಯವರು.

"ಮಗೂ, ನಿನಗೆ ಮನ ಬಂದಂತೆ ಮಾಡು.'

ಅನಂತ ಹೆಚ್ಚು ಹೊತ್ತು ಅಲ್ಲಿ ನಿಲ್ಲಲಿಲ್ಲ. ಉಡುಪು ತೊಟ್ಟು ಹೊರಗೆ ಹೊರಟ.

ಹೋಗುವ ಸಮಯದಲ್ಲಿ ಸಾವಿತ್ರಮ್ಮನವರ ಕಣ್ಣುಗಳಲ್ಲಿದ್ದ ಅಶ್ರುಬಿಂದುಗಳನ್ನು ನೋಡದಿರಲಿಲ್ಲ.

— ೪ —

ಮನೆ ಬಿಟ್ಟು ಹೊರಟ ಅನಂತ ನೇರವಾಗಿ ಹೊಳೆಯ ದಡದ ಬಳಿಯಿದ್ದ ತೆಂಗಿನ ತೋಪಿನ ಕಡೆಗೆ ಹೊರಟ. ಅದು ಒಂದು ತಿಂಗಳಿಂದ ಸಾಹುಕಾರ ಕೆಂಚಪ್ಪನ ಮಗಳು ಚೆನ್ನಮ್ಮ ಮತ್ತು ಅನಂತನ ಮಿಲನ ಸ್ಥಾನವಾಗಿತ್ತು.

ನಗರದ ಕೃತಕ ಸೌಂದರ್ಯ ಸಾಧನಗಳಿಂದ ಅಲಂಕೃತರಾದ ತರುಣಿಯರಿಗ ಮಾರು ಹೋಗದ ಅನಂತ, ಸ್ವಾಭಾವಿಕ ಸುಂದರಿ ಹಳ್ಳಿಯ ಮುಗ್ಧ ಚೆನ್ನಮ್ಮನಲ್ಲಿ ಅನುರಕ್ತನಾದ. ಅವಳು ಸಮೀಪದಲ್ಲಿದ್ದಾಗ ಅನಂತ ತನ್ನನ್ನು ತಾನೆ ಮರೆಯುತ್ತಿದ್ದ. ತನ್ನಲ್ಲಿ ಸುಪ್ತವಾಗಿ ಅಡಗಿಕೊಂಡಿದ್ದ ಕಾಮನೆಗಳನ್ನು ಅವಳ ಸಂಗದಲ್ಲಿ ಕಳೆಯುತ್ತಿದ್ದ.

ಅಂದು ಚೆನ್ನಮ್ಮ ಬಂದವಳೇ ಅನಂತನನ್ನು ತಬ್ಬಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅನಂತ ಆಕೆಯನ್ನು ಸಂತೈಸಿದಾಗ ಮನೆಯಲ್ಲಿ ನಡೆದ ಘಟನೆಯನ್ನು ಹೇಳಿದಳು.

ವಯಸ್ಸಿಗೆ ಬಂದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದು ಕೆಂಚಪ್ಪನಿಗೆ ಸಹಿಸಲಿಲ್ಲ. ಇದರಿಂದಾಗಿ ತಾನಾಗಿಯೇ ಒಂದು ಕಡೆ ವರನೋಡಿ ಮದುವೆಯ ದಿನವನ್ನೂ ನಿಶ್ಚಯಿಸಿದ. ಇಂದಿನ ತನಕ ತನ್ನ ಮನಸ್ಸಿನಲ್ಲಿ ಅಡಗಿಸಿಟ್ಟುಕೊಂಡಿದ್ದ ಈ ರಹಸ್ಯವನ್ನು ಚೆನ್ನಮ್ಮ ಅನಂತನಲ್ಲಿ ತಿಳಿಸಿರಲಿಲ್ಲ.

ಅನಂತನಿಗೆ ಇದರಿಂದ ಬಹಳಷ್ಟು ನೋವಾಯಿತು. ಚೆನ್ನಮ್ಮನೇ ತನಗೆ ಮೋಸ ಮಾಡಿದಳು. ಇಷ್ಟರ ತನಕ ತನ್ನನ್ನು ಪ್ರೀತಿಸಿದುದು ಬರಿ ನಟನೆ. ಎಂದು ತಿಳಿದ ಅನಂತ ಆಕೆಯಿಂದ ಹೊರ ತೆರಳಿದ. ಚೆನ್ನಮ್ಮ ಆತನನ್ನು ಸ್ವಲ್ಪ ದೂರದ ತನಕ ಹಿಂಬಾಲಿಸಿದಳಾದರೂ ಕೊನೆಗೆ ತಾನೂ ಸಿಟ್ಟಿನಿಂದ ತೆರಳಿದಳು.

ಚೆನ್ನಮ್ಮನಲ್ಲದೆ ಬೇರೆಯವಳನ್ನು ವಿವಾಹವಾಗಲಾರೆನೆಂದು ಪ್ರತಿಜ್ಞೆಗೈದ ಅನಂತನು ತಾನಿನ್ನು ಬದುಕಿದ್ದು ಪ್ರಯೋಜನವಿಲ್ಲವೆಂದು ತಿಳಿದ. ತನ್ನ ತಾಯಿ ತಂದೆಯರ ಕೋಪಕ್ಕೂ ಪಾತ್ರನಾಗಲಾರ.

ಮನೆಗೆ ಬಂದವನೇ ಶಾಸ್ತ್ರಿಯವರನ್ನೂ, ಸಾವಿತ್ರಮ್ಮನವರನ್ನೂ ಕರೆದು ಸಾಷ್ಟಾಂಗ ನಮಸ್ಕಾರ ಮಾಡಿದ. ಆಶೀರ್ವದಿಸಿದರಾದರೂ ಮಗನ ಹುಚ್ಚು ವರ್ತನೆಗೆ ಕಾರಣವೇನೆಂದು ದಂಪತಿಗಳಿಗೆ ತಿಳಿಯಲಿಲ್ಲ.

ಮಾರನೆಯ ದಿನ ಮುಂಜಾನೆ ದಂಪತಿಗಳನ್ನು ಅನಂತನ ಮೃತ ಶರೀರ ಎದುರಿಸಿತು. ವಿಷ ಸೇವಿಸಿ ಆಗಲೇ ಐದಾರು ಗಂಟೆಗಳು ಗತಿಸಿದುದರಿಂದ ನಾನೇನೂ ಮಾಡಲಾರೆನೆಂದು ಪಂಡಿತರು ಹೇಳಿದರು.

ಅತ್ತ ಚೆನ್ನಮ್ಮ, ಅಪ್ಪನಲ್ಲಿ ಅನಂತ ಮತ್ತು ತನ್ನಲ್ಲಿಯ ಪ್ರಣಯ ವ್ಯವಹಾರವನ್ನು ಹೇಳಿದಳು. ಕೋಪದಿಂದ ನಡುಗುತ್ತಿದ್ದ ಕೆಂಚಪ್ಪನು ಆಕೆಯನ್ನು ಮನೆಯಿಂದ ಹೊರದಬ್ಬಿದನು ಗಂಗಮ್ಮ ಕಣ್ಣೀರು ಸುರಿಸಿದರೂ ಪ್ರಯೋಜನವಾಗಲಿಲ್ಲ. ಪರಿಣಾಮವಾಗಿ ಮರುದಿನ ಮೇಲೇರಿದ ಬಾವಿಯಲ್ಲಿ ಚೆನ್ನಮ್ಮನ ಹೆಣ ದೊರೆಯಿತು. ರೌದ್ರಾವತಾರದಿಂದ ಕೆಂಚಪ್ಪನು ರಾಮ ಶಾಸ್ತ್ರಿಗಳ ಮನೆಯ ಕಡೆ ಓಡಿದನು.

ಸಮಾಜದ ಕಟ್ಟಳೆಗಳನ್ನು ಎದುರಿಸಲಾರದೆ ಗುಪ್ತ ಪ್ರಣಯಿಗಳಿಬ್ಬರೂ ಹೇಡಿಗಳಂತೆ ಇಹಲೋಕವನ್ನು ತ್ಯಜಿಸಿದರು.

ಪುತ್ತೂರು ಪ್ರಿನ್ಸಿಪಾಲ್ ಮು.
ಕೋರ್ಟಿನಲ್ಲಿ

ಓ. ಎ. 155/64.

ಕೂಸಪ್ಪ ಗೌಡ —ವಾದಿ.

ಮತ್ತು

ಬೆಳ್ಳ ಗೌಡ ಸಹಾ —ಪ್ರತಿವಾದಿರು.

17ನೇ ಪ್ರತಿವಾದಿ ದೇವಮ್ಮ, ಕಿಟ್ಟ ಗೌಡರ ಹೆಂಡತಿ, ಸುಳ್ಯ ತಾಲೂಕು ಐವರ್ನಾಡು ಗ್ರಾಮದಲ್ಲಿ, ಪೋಸ್ಟ್ ಐವರ್ನಾಡು (ದ.ಕ.)

ವಾದಿಯು ಮಾಡಿದ ಮೇಲಿನ ದಾವೆಯಲ್ಲಿ 17ನೇ ಪ್ರತಿವಾದಿಯು ಹಾಜರಾತಿ ಬಗ್ಗೆ ತಾ. 3—6—67ಕ್ಕೆ ಇಟ್ಟಿರುವುದರಿಂದ ಸದ್ರಿ ನ್ಯಾಯದಿನ ನೀವು ಹಾಜರಾಗಿ ನಿಮ್ಮ ಉತ್ತರ ಕೊಡದಿದ್ದರೆ ನಿಮ್ಮನ್ನು ಶಿವಾಯಿ ಎಂತ ಪರಿಗಣಿಸಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸಲಾಗಿದೆ.

(By order of the Court)

U. P. Shivarama, B. A., B. L.
Advocate for Plaintiff.

Puttur, ತಾ. 15—4—67.

ಸಂಧ್ಯಾ—ಸುಂದರಿ

ಹಗಲು ಮುಗಿದು ರಜನಿ ಬರುತಿರೆ
ಮೇಘದಾಗಸದಲಿ ತೇಲುತಿರೆ
ಮಿಂಚು ಫಳಫಳನೆ ಮಿಂಚುತಿರೆ
ಕಾರ್ಮುಗಿಲಲಿ ಗುಡುಗುಡುಗುತಿರೆ

ಬಾಗಿಲಿನಲ್ಲಿ ನಿಂತಹ ಚಲುವೆ
ಯಾರಿಗಾಗಿ ನೀ ಕಾತರ ಪಡುವೆ
ಮಿಂಚುತಿಲ್ಲ ನಿನ್ನ ನಯನ
ಕಾಂತಿ ಹೀನವಾದ ವದನ

ಕೈಯಲಿಲ್ಲ ಧ್ವನಿಸುವ ವೀಣೆ
ಅನುರಾಗ—ರಾಗದಾಲಾಪನ ಕಾಣೆ
ಬಿಳುಚು ಹೋದ ತುಟಿಗಳೆರಡು
ತೋರುತಿರುವುವು ಮನಸಿನ ಬರಡು

ದೂರ ಹೋಗಿಹನೆ ನಿನ್ನಯ ಚಲುವ
ಮರೆಯಲಾರೆಯ ಅವನಾ ಒಲವ
ನೆನೆಯುತಿರುವೆಯಾ ಆತನ ಇರವ?
ಕಾಯುತಿರುವೆಯಾ ಆತನ ಬರವ?

—"ಮಲ್ಲಾರಿ"

In the Court of the II Addl Munsif of Puttur, S. K.

S. C. 111/1964.
S. E. P. 24/1967.

Messrs. Nemiraja Padival (Regd. Firm) by Partner Sri Rathnavarma Padival Mangalore ... —Petitioner.

Abbubaker Beary, Son of Mogral Puttur Abdul Beary, residing at Mondekolu village, Sulia Taluk, Post Mondekolu, S. Kanara ... Respondent.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,—

ಮೇಲಿನ ಅಮಲ್ದಾರಿಯಲ್ಲಿ ನಿಮ್ಮನ್ನು ಕೈದಿ ವಾರಂಟಿನಲ್ಲಿ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂದು ಅರ್ಜಿ ಕೊಟ್ಟಿರುವುದರಿಂದ, ಆ ಕುರಿತು ನಿಮ್ಮ ಆಕ್ಷೇಪಗಳನ್ನು 1967ನೇ ಇಸವಿ ಮೇ ತಿಂಗಳು 31ನೇ ತಾರೀಕಿನ ಹಗಲು ಗಂಟೆ 10ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

P. A. Ariga
Advocate for Petitioner

ಪುತ್ತೂರು, 1—4—1967.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ? ....

ಅದಕ್ಕಾಗಿ ಚಿಂತಿಸುವಿರೇಕೆ?..................

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ..........

ವೀಗಲ್ — ಪೆಟ್ರೋಲ್ / ಸೀಮೆ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

VEEGAL — 2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕ 'ಸರ್ವೀಸ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು:

ವಿಕ್ಟರ್ ಟ್ರೇಡಿಂಗ್ ಕೋಪೊರೇಶನ್

ಫಳನೀರು ರಸ್ತೆ, ಮಂಗಳೂರು-1. Ph. 6737

ಹಿಡುವಳಿದಾರರಿಗೆ ಉತ್ತಮ ಕೊಡುಗೆ

ವರ್ಜಿನ್ — ಕ್ರೂಡ್ ಆಯಿಲ್ ಪಂಪು ಸೆಟ್ಟುಗಳು.......

3 H. P.

ಧನ — ಇಲೆಕ್ಟ್ರಿಕ್ ಮೋಟಾರು ಮತ್ತು ಪಂಪು ಸೆಟ್ಟುಗಳು.......

(¼ H.P. to 30 H.P.)

ವಿತರಕರು:—

ನಿತ್ಯಾನಂದ ಇಂಡಸ್ಟ್ರಿಯಲ್ ಏಜನ್ಸೀಸ್

ಕಾರ್ಕಳ (ದ. ಕ.)

NAVAYUGA 25—5—1967
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಹಿಸಬೇಕಾಗಿ ವಿನಂತಿ. — ಸಂ. ನ.

ಸರೋಜಿನೀ ದೇವಿ—

ಬರೆದವರು: ಶ್ರೀ ಎಚ್. ಎಲ್. ನಾಗೇಗೌಡ.

ಪ್ರಕಾಶನ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು—೫.

ಪುಟಗಳು: ೧೪೧.

ಬೆಲೆ, ಸಾದಾಪ್ರತಿ ರೂ. ೨—೫೦.

ಕ್ಯಾಲಿಕೊ ಪ್ರತಿ ರೂ. ೬—೦೦.

ಭಾರತೀಯ ಸ್ವಾತಂತ್ರ್ಯ ಹೋರಾಟದ ಆರಂಭದ ವೇಳೆ ಕೋಗಿಲೆಯಂತೆ ಹಾಡುತ್ತಿದ್ದ ಸರೋಜಿನಿ ಗೋಖಲೆಯವರಿಂದ ದೇಶಸೇವಾದೀಕ್ಷೆ ಪಡೆದು, ಮಹಾತ್ಮರ ಇಹಲೋಕ ತ್ಯಾಗದೊಡನೆಯೇ ತಾನೂ ಲೀಲೆ ಮುಗಿಸಿದ ಮಹಾಮಹಿಳಾಮಣಿ. ಈಕೆ ಹೆತ್ತವರಿಗೆ ಮುದ್ದು ಮಗಳು, ಕೈ ಹಿಡಿದವನಿಗೆ ಮೋಹದ ಹೆಂಡತಿ, ಮಕ್ಕಳಿಗೆ ಪ್ರೀತಿಯ ತಾಯಿಯಾಗಿ, ದೇಶಕ್ಕೆ ಆದರ್ಶ ಸೇವಿಕೆಯಾಗಿ ದುಡಿದ ವೀರಾಂಗನೆ. ಭಾರತೀಯ ಮಹಿಳೆಯ ಮನೆ ಅಡುಗೆ ಮನೆ ಮಾತ್ರವಲ್ಲ; ಆಕೆಯಲ್ಲಿ ದೇಶದ ಆಗು ಹೋಗುಗಳ ಬಗ್ಗೆ ವಿಮರ್ಶಿಸುವ, ಅವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಪರಿಪಾಠ ಆದಿಕಾಲದಿಂದಲೂ ಇತ್ತು. ಈ ಪರಂಪರೆಯ ಆದರ್ಶ ನಾರೀಮಣಿ ಸರೋಜಿನಿದೇವಿ. ಸಂಪತ್ತಿನ ಸುಪ್ಪತ್ತಿಗೆಯ ನಾನಾ ಅಂತಸ್ತುಗಳನ್ನು ಏಂ ಇಳಿದ ಈಕೆ ದೇಶದ ಸ್ವಾತಂತ್ರ್ಯ ಹೋರಾಟ ಅನೇಕ ಘಟ್ಟಗಳಲ್ಲಿ ಹೋರಾಡಿದವಳು; ಮಹಿಳೆಯರಲ್ಲಿ ನವಜಾಗ್ರತಿಯ ಬೀಜವನ್ನು ಬಿತ್ತಿದವಳು. ಇವಳ ಚರಿತ್ರೆ ನೈಜಭಾರತೀಯ ಮಹಿಳೆಯ ಆದರ್ಶ ಸೇವೆಗಳ ಪಂಚಾಯಕ. ಕನ್ನಡದಲ್ಲಿ ಈಕೆಯ ಕುರಿತು ಬರೆದ ಗ್ರಂಥಗಳು ಬರಹಗಳು ಅಪರೂಪ. ಶ್ರೀ ಎಚ್. ಎಲ್. ನಾಗೇಗೌಡರು ಈ ಕೊರತೆಯನ್ನು ನೀಗಿಸಿದ್ದಾರೆ.

ಸರೋಜಿನಿ ಮತ್ತೀಕೆಯ ಹೆತ್ತವರು ಸಂಪ್ರದಾಯ ಶರಣರಾಗಿರಲಿಲ್ಲ. ಆದುದರಿಂದಲೇ ಈಕೆ ಇಂಗ್ಲೆಂಡಿಗೆ ಹೋಗಲು ಶಕ್ತಳಾದಳು; ಕವಿತೆ ಬರೆಯುವುದರಲ್ಲಿ ಪರಿಣತಿ ಪಡೆಯಲು ಸಮರ್ಥಳಾದಳು. 'ಭಾರತದ ಕೋಗಿಲೆ'ಯಾದಳು. ಆಧುನಿಕ ವಿಚಾರಧಾರೆಯ ಪ್ರವಾಹವನ್ನು ಕರಗತ ಮಾಡಿಕೊಂಡುದರಿಂದಲೇ ದೇಶ-ವಿದೇಶ ಸಂಚಾರ, ಅಂತಾರಾಷ್ಟ್ರೀಯ ಗೌರವ, ಪ್ರೀತಿ, ವಿಶ್ವಾಸಗಳಿಗೆ ಪಾತ್ರಳಾದಳು. ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿಯೂ ಮಹಿಳೆಯರು ಪಡೆಯದಂತಹ ಉನ್ನತ ಸ್ಥಾನವನ್ನು ಆಕೆ ಪಡೆದು ಅಮರಳಾದಳು. ಸ್ವತಂತ್ರ ಭಾರತದಲ್ಲಿ ಉತ್ತರ ಪ್ರದೇಶದಂತಹ ಹಿರಿಯ ರಾಜ್ಯವೊಂದರ ರಾಜ್ಯಪಾಲ ಪದವಿಯನ್ನು ನಿರ್ವಹಿಸಿದ ಕೀರ್ತಿ ಆಕೆಯದ್ದು. ಆದೂ ಎಲ್ಲರಿಗೂ ತೃಪ್ತಿಕರವಾಗಿ; ಪ್ರಥಮವಾಗಿ ವಿದೇಶ ಸಂಚಾರ ಮಾಡಿದ, ಪ್ರಥಮವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚೇತನದೊಂದಿಗೆ ದುಡಿದ, ಪ್ರಥಮವಾಗಿ ಕಾಂಗ್ರೆಸ್ ಅಧ್ಯಕ್ಷ ಪಟ್ಟವೇರಿದ, ಪ್ರಥಮವಾಗಿ ಗವರ್ನರ ಹುದ್ದೆ ಪಡೆದ ಭಾರತೀಯ ಶಕ್ತ ಮಹಿಳೆಯ ಚರಿತ್ರೆಯ ಸಂಗ್ರಹ ಸುಲಭವಲ್ಲ. ಈಕೆ ತನ್ನ ಆತ್ಮಕಥೆಯನ್ನು ಬರೆದಿಡಲಿಲ್ಲ. ಉಳಿದವರು ಈಕೆಯ ಬಗ್ಗೆ ಬರೆದಿರುವ, ವ್ಯಕ್ತಪಡಿಸಿರುವ ವಿಷಯಗಳನ್ನು ಸಂಗ್ರಹಿಸಿ ಶ್ರೀ ನಾಗೇಗೌಡರು ಅಧ್ಯಯನ ಪೂರ್ಣವಾಗಿ ಈ ಗ್ರಂಥವನ್ನು ಬರೆದಿದ್ದಾರೆ. ತಾನು ಆಧಾರವಾಗಿಟ್ಟುಕೊಂಡ ಗ್ರಂಥಗಳ ಯಾದಿಯನ್ನು ಅಂತ್ಯದಲ್ಲಿ ಕೊಟ್ಟಿದ್ದಾರೆ.

ಶ್ರೀ ನಾಗೇಗೌಡರು ರಾಜ್ಯದ ಸರಕಾರಿ ವಿಭಾಗದ ಜವಾಬ್ದಾರಿಯುತ ಪದದಲ್ಲಿರುವವರಾದರೂ ಅವರ ಸಾಹಿತ್ಯಾಭಿರುಚಿ ಪ್ರಶಂಸನೀಯ. ಉತ್ತಮ ಸುಂದರವಾದ ಭಾಷೆ, ಸರಳ ಶೈಲಿ, ಸ್ಫುಟವಾದ ಅಭಿವ್ಯಕ್ತಿ ಇವರಲ್ಲಿ ಮುಪ್ಪುಂಗೊಂಡ ಪ್ಯ ಮಾಡಿದೆ. ಪ್ರತಿಭೆ, ಅಭ್ಯಾಸ, ಸೇವಾನುರಾಗಗಳೂ ಶ್ರೀಯುತರಲ್ಲಿದೆ. ಎಂತಲೇ ಕಠಿನತರವಾದ ಈ ಗ್ರಂಥ ರಚನೆಯಲ್ಲಿವರು ಸಂಪೂರ್ಣ ಯಶ ಪಡೆದಿದ್ದಾರೆ. ಕನ್ನಡಿಗರಿಗೆ ಅಕ್ಕ ಸರೋಜಿನಿಯ ಇತಿವೃತ್ತವನ್ನೂ ಬಹುಮುಖ ಪ್ರತಿಭೆ - ಸೇವಾಸಕ್ತಿಯನ್ನೂ ತಿಳಿಸಿದ್ದಾರೆ. "ಸರೋಜಿನಿ ದೇವಿ'ಯ ಈ ಪರಿಷ್ಕರಿಸಿದ ನಾಲ್ಕನೆಯ ಮುದ್ರಣವನ್ನು ನಾವು ಸ್ವಾಗತಿಸುತ್ತೇವೆ, ಹೃದಯಪೂರ್ವಕವಾಗಿ.

ಕವನ ಕುಂಕುಮ: (ಕವನ ಸಂಕಲನ)

ಬರೆದವರ: ಶ್ರೀ ಸೊಡಂಕೂರು ತಿರುಮಲೇಶ್ವರ ಭಟ್.

ಪ್ರಕಾಶನ: ಯುಗ ಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ.

ಪುಟಗಳು: ೮೦, ಬೆಲೆ: ರೂ. ೧—೫೦

ಶ್ರೀ ಭಟ್ಟರು ಈ ಸಂಕಲನದಲ್ಲಿ ತನ್ನ ೩೮ ಕವಿತೆಗಳನ್ನು ಸಂಗ್ರಹಿಸಿ ಕನ್ನಡಿಗರ ಮುಂದಿಟ್ಟಿದ್ದಾರೆ. ಇಲ್ಲಿನ ಕವಿತೆಗಳ ದೃಷ್ಟಿ ಬಹುಮುಖವೆನಿಸಿದೆ. ಕವಿ, ದೇಶ, ಪ್ರಕೃತಿ ಸೌಂದರ್ಯ, ದೈವ, ರಾಷ್ಟ್ರಭಕ್ತಿ, ಪುರಾಣ—ಹೀಗೆ ಒಂದಲ್ಲ ಹಲವು ಗುರಿಗಳತ್ತ ಧಾವಿಸಿದೆ. ವೃತ್ತ, ಷಟ್ಪದಿ, ಪಿರಿಯಕ್ಕರಗಳೊಡನೆ ಆಧುನಿಕ ಛಂದಸ್ಸೂ ಇಲ್ಲಿ ಕಂಗೊಳಿಸುತ್ತದೆ. ಪಾಕ-ಶಯ್ಯೆಗಳಲ್ಲಿ ಸಾಮರಸ್ಯ ಎದ್ದು ಮೂಡಿರುವುದು ಗಮನೀಯ. ಕೊನೆಯಲ್ಲಿ ಎಂಟು ಭಾವಗೀತೆಗಳನ್ನು ಪ್ರತ್ಯೇಕವಾಗಿತ್ತು ಇದನ್ನು 'ಶೃಂಗಾರವಿಲಾಸಂ' ಎಂದು ಹೆಸರಿಸಿದ್ದಾರೆ.

ಇಲ್ಲಿನ ಕೆಲವು ಕವಿತೆಗಳು ಇತಿವೃತ್ತಾತ್ಮಕವಾಗಿವೆ. ಇದಕ್ಕೆ 'ಬೇಲೂರು ಹಳೇಬೀಡು', 'ಕಾರ್ಕಳದ ಗೋಮಟೇಶ' 'ಕವಿರನ್ನ' ಮೊದಲಾದುವನ್ನು ಉದಾಹರಿಸಬಹುದು. 'ಭಾರತದ ಮೊಗ ಬದಲಬೇಕು' ಕವಿತೆಯಲ್ಲಿ ಕವಿ ಇಂದಿನ ಅವಶ್ಯಕತೆಯನ್ನು ಹೇಗೆ ಪ್ರತಿಬಿಂಬಿಸಿದ್ದಾರೆ. 'ಸಿರಿವಂತ ಸಿರಿಯ ಮದದಿಂದ ಕಣ್ಗಾಣದಿರೆ ಬಡವ ಹಸಿವಿನಿಂ ಕಣ್ಣ ಕಾಣದಿಹನು...

ಭಾರತವಹಿಂಸಾ ಶಾಂತಿ ಸತ್ಯಗಳ ನೆಲೆವೀಡದಾಗ ಬೇಕು| ಎಲ್ಲೆಲ್ಲು ದಾರಿದ್ರ್ಯ ದ್ವೇಷ ಸ್ವಾರ್ಥಗಳಳಿಯುತೊಂದಾಗಿ ಭಾರತದ ಮೊಗ ಬದಲ ಬೇಕು||'

ಜಾತೀಯತೆಯ ಬಗ್ಗೆ ತಮ್ಮ ಅಭಿಮತವನ್ನು 'ಜಾತಿಯೊಂದೇ ಮಾನವತೆ" ಎಂದು ಗಂಟಾಘೋಷವಾಗಿ ಸಾರಿದ್ದಾರೆ. 'ವಿಶ್ವಬಾಂಧವ್ಯವೇ ಶಾಶ್ವತದ ಸುಖ ಕೇಳು' ಎಂಬುದಿವರ ದೃಢ ವಿಶ್ವಾಸ. "ಕಾಲಕ್ಕೆ ತಕ್ಕಂತೆ ಧರ್ಮ ಪರಿವರ್ತನವು ಲೀಲೆಯಿಂದಾಗಬೇಕೆನ್ನುವುದು ದಿಟ"ವೆನ್ನುತ್ತಾರೆ ಕವಿ. "ತಾಳಬಳವಲ್ಲವೀ ಸ್ವಾರ್ಥವ್ಯಾಳದ ವಿಷ'ವೆಂದು ಕೊರಗುವ ಕವಿ ಅದನ್ನು ಬಡಿದುಕೊಳ್ಳಬೇಕೆಂದು ಕರೆ ನೀಡುತ್ತಾರೆ.

'ನಾನು ಯಂತ್ರವು ನೀನು ಯಂತ್ರಿಕ ನೀನು ನಡೆಸಲು ನಡೆವೆನು' ಎಂಬುದರಲ್ಲಿ ಆಧ್ಯಾತ್ಮಿಕತೆಯ ಆಳವನ್ನು ನಾವು ಕಾಣಬಹುದು. ಊರ್ಮಿಳೆಯ ತ್ಯಾಗಮಯ ಜೀವನವನ್ನು ಕಂಡು ಪಟಕು ನೀರ. ಸುರಿಸುವ ಕವಿ "ದುರ್ಗಾವತರಣ"ದಲ್ಲಿ ಆಕೆಯನ್ನು ಅವತಾರವೆತ್ತುವಂತೆ ಕೈಮುಗಿದು ಬೇಡುತ್ತಾರೆ. "ದಿವ್ಯ ಜೀವನ" ಸಂಕಲನದ ಪುಟ್ಟ ಸುಂದರ ಕವಿತೆಯಾದರೆ, "ಕೈ ಹಿಡಿದು ನಡೆಸೆನ್ನ" ಸರಳವಾದ ಕವಿತೆ. 'ಬಡವರೇ ದೇವರೆಂದವರ ಸೇವೆಯು ಮೊಳ್ಪಡನವರತವದುವೆ ದೇವಾರಾಧನಂ | ದುಡಿತವೇ ಸೇವೆ ಬೆಮರೇ ತೀರ್ಥ ಹೃದಯವೇ ಗುಡಿಯು ದೇವರ ಪೂಜಿಸಲು ನಿದಾನಂ' ಎಂಬ ಕಾಲಧರ್ಮದ ಭರತವಾಕ್ಯ ಸ್ಮರಣೀಯವಿದೆ. ಕೊನೆಯ ಭಾವಗೀತೆಗಳು ಸಾಮಾನ್ಯವಾಗಿವೆ.

ಇಲ್ಲಿ ಎದ್ದು ಕಾಣುವುದು ಶ್ರೀ ಭಟ್ಟರ ಭಾಷಾಶೈಲಿ. 'ಹಳಗನ್ನಡದ' ಚೌಕಟ್ಟಿನಲ್ಲಿ ಹೊಸ ಕನ್ನಡವನ್ನು ಜೋಡಿಸುವ ಕಲೆ ಅವರ ಕರಗತವಾಗಿದೆ. ಇಂದಿನ ಜನಸಾಮಾನ್ಯರು ಇದನ್ನು ಅರ್ಥವಿಸಿಕೊಳ್ಳುವಲ್ಲಿ ತುಸು ತ್ರಾಸಪಡಬೇಕಾಗಬಹುದು. ಭಾವಾಭಿವ್ಯಕ್ತಿಯಲ್ಲಿ ಲಾಲಿತ್ಯ; ಆಧುನಿಕ ವಿಚಾರಧಾರೆಯಲ್ಲಿ ಆಸಕ್ತಿ, ಅಗಾಧ ಭಾಷಾ ಸಂಪತ್ತು, ಮತ್ತದಂ ಮೇಲೆ ಅಂಕುಶವಿಡುವ ಅಪೂರ್ವ ಕಲೆ- ಶ್ರೀ ಭಟ್ಟರ 'ಕವನ ಕುಂಕುಮ'ದಲ್ಲಿ ನಾವು ಕಾಣುತ್ತೇವೆ. ಈ ಸಂಕಲನವೊಂದು ವಿಶಿಷ್ಟಕರವಿದ್ದು ಕನ್ನಡಿಗರ ಸ್ವಾಗತಕ್ಕೆ ಅರ್ಹವಾಗಿದೆ.

—ಗೋರಾ

ದಿ।ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

1—6—1967



NAVAYUGA

೨೦ ಪೈಸೆ

ಕಥಾ ಪ್ರಪಂಚ

ಅಣಕಿಸುವ ಮಿಣುಕು ದೀಪ

ಬರೆದವರು: ಶ್ರೀ ಎಚ್. ಎಂ. ಅಡಿಗ

ದೂರದಲ್ಲಿ ಆರ್ತನಾದ ಕೇಳಿ ಬರುತ್ತಿತ್ತು. ಮಾಧವನೂ ಒಂದೇ ಸವನೆ ಧಾವಿಸುತ್ತಿದ್ದ...

ಹಾ! ಹಾ!! ಅಯ್ಯೋ!!!.....

ಬಾವಿಯಲ್ಲಿ 'ತಳ ತಳ' ನೀರಿನ ಶಬ್ದ. ಮಾಧವನು ಬರುತ್ತಿದ್ದ ಕ್ಷಣಮಾತ್ರದಲ್ಲಿ ಓಡಿಬಂದು ಬಾವಿಯಲ್ಲಿ ಮುಳುಗಿದ. ಮುಳುಗಿ ನೀರಿನಿಂದ ಮೇಲೆ ಬರುವ ಹೆಣ್ಣನ್ನು ಮೇಲಕ್ಕೆ ಎತ್ತಿ ಹಾಕಿದ. ಸತ್ತು ಹೋಗುತ್ತಿದ್ದ ಹೆಣ್ಣು ಜೀವವನ್ನು ಬದುಕಿಸಿದ....

ಮನೆಯ ಒಂದು ಫರ್ಲಾಂಗು ದೂರದಲ್ಲಿ ಒಂದು ಸರಕಾರಿ ಬಾವಿ. ಅದರ ಸುತ್ತು ಕಟ್ಟೆ. ಕಟ್ಟೆಯ ಸುತ್ತುಮುತ್ತಲು ಬಳ್ಳಿಗಳು ಬೆಳೆದುಕೊಂಡಿದ್ದವು. ಬೇಸಿಗೆ ಕಾಲದಲ್ಲಿ ಆ ಊರಿನ ಜನರಿಗೆ ನೀರನ್ನು ಪೂರೈಸುತ್ತಿತ್ತು ಆ ಬಾವಿ. ಅದಕ್ಕಾಗಿ ದೂರದಿಂದಲೂ ಜನರು ಬರುತ್ತಿದ್ದರು. ಅದರ ಉಪಯೋಗ ಪಡೆಯುತ್ತಿದ್ದರು. ಹೆಂಗಸರು ಗುಂಪು ಗುಂಪಾಗಿಬಂದು ನೀರನ್ನು ಕೊಂಡು ಹೋಗುತ್ತಿದ್ದರು. ಅದರ ಮಧ್ಯೆ 'ಆ ವಿಚಾರ—ಈ ವಿಚಾರ' ಬರುತ್ತಿತ್ತು. ಇದು ದಿನಾಲು ನಡೆಯುವ ಅವರ ಪದ್ಧತಿಯಾಗಿತ್ತು.

ಆದರೆ ಅದೇ ಬಾವಿಯಲ್ಲಿ ಭಾರತಿ ಹಾರಿದ್ದಳು. ಕಾರಣ ಯಾರಿಗೂ ತಿಳಿಯದು. ಸಂಜೆ ನೀರು ಸೇದಲು ಬಂದವಳು ರಾತ್ರಿ ಬಂದು ಹಾರುತ್ತೇನೆಂದು ದೃಢಚಿತ್ತದಿಂದ ನಿರ್ಧರಿಸಿಕೊಂಡು ಹೋಗಿದ್ದಳು. ಅಂತೆಯೇ ಕೈಯಲ್ಲಿ ಒಂದು ಚಿಕ್ಕ ದೀಪವನ್ನು ಹಿಡಿದುಕೊಂಡು. ದೀಪವನ್ನು ಬಾವಿಯ ಕಟ್ಟೆಯ ಮೇಲೆ ಇಟ್ಟು ಧುಮುಕಿ ಉರಿಯುವಂತೆ ಮಾಡಿ ಪ್ರಾಣ ನೀಗಿಸಲು ಹಾರಿದ್ದಳು. ಆದರೆ ವಿಧಿಯು ಅವಳ ಪ್ರಾಣ ತೆಗೆಯಲು ಹಿಂದೆ ಸರಿದು, ಕಷ್ಟವನ್ನು ಕೊಟ್ಟು, ಪ್ರಾಣವನ್ನು ಉಳಿಯುವಂತೆ ಮಾಡಿತು. ವಿಧಿಯ ವಿಕಟ ಅಟ್ಟಹಾಸದತ್ತ ಮಾನವನ ಕೈಮಾಡಬೇಕೆ?

ಭಾರತಿಯು ಓದಿದ್ದಳು. ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿದ್ದಳು. ಸಂಗೀತವನ್ನು ಕಲಿತಿದ್ದಳು. ಸಾಕಷ್ಟು ಜ್ಞಾನವನ್ನು ಸಂಪಾದಿಸಿದ್ದಳು. ನಡತೆಯಲ್ಲಿ, ಬುದ್ಧಿವಂತಿಕೆಯಲ್ಲಿ 'ಉತ್ತಮ'ಳೆಂದು ಸಾಕಷ್ಟು ಜನರಿಂದ ಮೆಚ್ಚುಗೆಯನ್ನು ಪಡೆದಿದ್ದಳು. ಬಾಲ್ಯಾವಸ್ಥೆಯಲ್ಲಿಯೇ ತಾಯಿಯನ್ನು ಕಳೆದುಕೊಂಡಿದ್ದಳು. ತಬ್ಬಲಿಯಾಗಿದ್ದಳು. ಮಲತಾಯಿಯ ಕರ್ಣ ಕಠೋರ ಉಕ್ತಿಗಳನ್ನು ಕೇಳಿ ಕೇಳಿ ಸಹಿಸಿಕೊಂಡು, ಬೆಳೆದು ನಿಂತವಳು. ಕಣ್ಣೀರು ಸುರಿದು ಸುರಿದು ಬಡವಾಗಿದ್ದಳು. ಜೀವನದಲ್ಲಿ ಹೊಸ ಬೆಳಕನ್ನು ಕಾಣಬೇಕೆಂದು ದಿನಾ ಹಂಬಲಿಸಿ, ಅಪ್ಪನ ತನಕ ಮಲತಾಯಿಯ ಕಠಿಣ ಶಬ್ದಗಳನ್ನು ಆಶೀರ್ವಾದವೆಂದು ತಿಳಿದು ದಿನ ಕಳೆಯುತ್ತಿದ್ದಳು. ಹಂಬಲಿಸಿಕೊಂಡು ಕಳೆಯುತ್ತಿದ್ದ ದಿನ ಇನ್ನೂ ಬರಲಿಲ್ಲ! ನಾಳೆ—ಬರುವ ತಿಂಗಳು, ಈ ವರ್ಷ ಮುಗಿಯುವುದರಲ್ಲಿಯೇ; ಬರುವ ವರ್ಷವೆಂದು ಹಂಬಲಿಸಿ, ಹೊಸ ಜೀವನದ ಕನಸನ್ನು ಕಾಣುತ್ತಿದ್ದರೂ ನನಸಾಗಲಿಲ್ಲ!! ನೋಡಲು ಬಂದ ಹುಡುಗರು ಒಂದಲ್ಲ ಒಂದು ಅಪಹಾಸ್ಯದ ಹೇಳಿ ಬೇಡವೆಂದು ತಿರಸ್ಕರಿಸಿ ಹೋಗುತ್ತಿದ್ದರು. ಮಲತಾಯಿಯು ಮತ್ಸರದಿಂದ ನೋಡಲು ಬಂದ ಹುಡುಗರ ಕಡೆಯವರಿಗೆ ಏನೆಲ್ಲಾ ಹೇಳಿಕೊಟ್ಟು 'ದೂರ' ಹೋಗುವಂತೆ ಮಾಡುತ್ತಿದ್ದಳು. ತಂದೆಯು ಮೌನಿ. ತನ್ನ ಮೊದಲ ಹೆಂಡತಿಯು ತನ್ನಲ್ಲಿಟ್ಟ ಪ್ರೀತಿಗಾಗಿ, ಪ್ರೀತಿಯ ಕುರುಹಾಗಿ ಕೊಟ್ಟು ಹೋದ ಕುಸುಮ—ಈ ಭಾರತಿ. ಈಗ ಭಾರತಿಯ ತಾಯಿ ಜೀವಂತವಾಗಿ ಇರುತ್ತಿದ್ದರೆ, ಇವಳಿಗೆ ಇಷ್ಟು ಕಷ್ಟವಿರುತ್ತಿತ್ತೆ ಎಂದು ಮನಸ್ಸಿನಲ್ಲಿ ಮರುಗುವನು. ಇತ್ತ ಕಿರಿಯ ಹೆಂಡತಿಯ ದರ್ಪ ಮಾತನ್ನು ಕೇಳಿ ಹೊರಟರೆ—ಅತ್ತ ಭಾರತಿಯ ಅವಸ್ಥೆ ನೋಡಲಾಗಬಹುದೇ! ಎಂದು ತಂದೆಯು ತಲೆಯನ್ನು ಕೆಡಿಸುವ ಸ್ಥಿತಿಗೆ ತಂದಿದ್ದವು, ಯೋಚನೆ ಮಾಡುತ್ತ ಕುರ್ಚಿಯ ಮೇಲೆ ಮೌನಿಯಾಗಿ ಕುಳಿತ್ತಿದ್ದ......

'ಅಪ್ಪಾ! ಯಾರೋ ಬಂದರು', ಎಂದು ಚಿಕ್ಕ ಮಗು ಓಡಿ ಬಂದು ಹೇಳಿ ಹೋಯಿತು. ನಾರಾಯಣ ರಾಯರು ತನ್ನೊಂದಿಗೆ ಬಂದ ಮಾಧವ ರಾಯರ ಪರಿಚಯ ಮಾಡಿಕೊಟ್ಟರು.

"ಆ ಮಾತು ಈ ಮಾತು......ಮಗಳ ಮದುವೆಯ ಮಾತು"........ ನೋಡಿ ರಾಯರೇ, ನೀವು ಮನಸ್ಸು ಮಾಡುವುದಾದರೆ ಮಾಧವರಾಯನನ್ನು ಕೇಳಿ ನೋಡುತ್ತೇನೆ. ಅವರು ಒಪ್ಪಿದರೆ ಬಹಳ ಚೆನ್ನಾದ ಜೋಡಿ ಆಗುತ್ತದೆ.

"ಆಯಿತು....ಮೌನ...."

ㅇ ㅇ ㅇ ㅇ

ಭಾರತಿ ಬಹಳ ಬೇಸರದಿಂದ ಜೀವನ ಸಾಗಿಸುತ್ತಿದ್ದಳು. ಧರ್ಮದ ಬಾವಿಯ ಬಳಿಗೆ ಒಮ್ಮೆ ನೀರು ತರಲು ಹೋದಾಗ ನೆರಮನೆಯ ಹೆಂಗಸು ಅಣಕಿಸಿತು. ವರುಷ ಇಪ್ಪತ್ತೆರಡು ದಾಟಿದರೂ ಇನ್ನು ಮದುವೆಯಾಗಿಲ್ಲ. ಈಗಿನ ಕಾಲದವರಿಗೆ ಏನೂ ಮಾನಮರ್ಯಾದೆಯೇ ಇಲ್ಲ. ನಾವು ಹೀಗೆಲ್ಲಾ ಇರುತ್ತಿದ್ದಿಲ್ಲ....ಹಾಗೆಹೀಗೆ ಎಂತ ಹೇಳಿತ್ತು ಆ ಹೆಂಗಸು.

ಹೌದು! ಅದೇ ದಿನ ಭಾರತಿ ಯೋಚಿಸಿದ್ದಳು—ಬಾವಿಯ ಮುಂದೆ ನಡೆದ ತನ್ನ ಬಾಳಿನ ಕತೆ! ಇಂದೇ ಬಾಳಿನ ಕೊನೆಯ ದಿನ! ನೋಡಲು ಬಂದು ನನ್ನನ್ನು ಸರಿಯಾಗಿ ಬಾಳ ಕಡಲಿನಲ್ಲಿ ಸಂಪೂರ್ಣ ಮುಳುಗಿಸಿದ. ಆದರೆ ಕಡಲಿನ ತೆರೆಯನ್ನು ತಡೆ ಹಿಡಿಯುವ ಬಗೆಎಂತು?

ಕೈಯಲ್ಲಿ ಮಿಣುಕು ದೀಪ. ಕಾರ್ಗತ್ತಲೆಯಲ್ಲಿ ದಾರಿ ಕಿರಿದಾಗಿ ಕಾಣಿಸುತ್ತಿತ್ತು. ಇಡೀ ಪ್ರಪಂಚವನ್ನು ನಿದ್ರಾ ದೇವಿಯು ತೋಳತೆಕ್ಕೆಯು ಆಲಂಗಿಸಿಕೊಂಡಿತ್ತು. ಎಲ್ಲೆಲ್ಲೂ ನಿಶ್ಶಬ್ದ ಆವರಿಸಿ ಕೊಂಡಿತ್ತು. ಭಾರತಿ ಒಂದೊಂದೇ ಹೆಜ್ಜೆಯನ್ನು ಇಡುತ್ತಾ ಮುಂದುವರಿದಳು ಅದರ ಪ್ರತಿ ಅನುಭವದೊಂದಿಗೆ, ಹಗಲಿನಲ್ಲಿ ನಡೆದ ವಿಷಯವು ಅಣಕಿಸುತ್ತಿತ್ತು. ಇನ್ನೆರಡು ಕ್ಷಣ! ಆ ಮೇಲೆ ನನ್ನ ಬಾಳು...ಈ ಬಾವಿಯಲ್ಲಿರುವ ನೀರಿನಲ್ಲಿ ಸಮಾಪ್ತಿ! ನನ್ನ ಆಶಾಗೋಪುರ....ಅಂದು ಬಂದ ಮಾಧವರಾಯರೊಡನೆ ನಾನೂ ಬಾಳನ್ನು ಸಾಗಿಸಬೇಕೆಂದು, ಹಂಬಲಿಸುತ್ತಿದ್ದ ನನ್ನ ಆಶೆ ಆಕಾಂಕ್ಷೆಯೆಲ್ಲಾ ನೀರು ಪಾಲು! ಕನಸಿನ ಸಾಮ್ರಾಜ್ಯವನ್ನು ಕಾಣಬಹುದು. ಆದರೆ ಆಳಲು ಸಾಧ್ಯವೆ? ಅ...ಧವ ರಾಯರು—ನಾನು ಹಂಬಲಿಸುತ್ತ...ವಷ್ಟೇ ಹಂಬಲಿಸುವುದಾದರೆ, ಈ ಗ...ವರಿಗೂ ಬರಬೇಕಿತ್ತು. 'ಗಂಡು'ಗ...ಭಾವನೆ ಹಾಗೆ; ಎನ್ನುತ್ತಲೆ ಬಾ...ಸನಿಹಕ್ಕೆ ಬಂದಿದ್ದಳು. ಕೊರಳಿನ...ಒಂದೇ ಒಂದು ಸರವನ್ನು ಕಳಚಿ...ಯ ಮೇಲಿಟ್ಟಳು. ಮಿಣುಕು ದೀಪದ...ಳಗೆ, ಕತ್ತಲಲ್ಲಿ ಒಂದು ಕಾಗದವನ್ನು...ಡಚಿ ಇಟ್ಟಳು....... ಮಾಧವ ರಾ...ನ್ನೂ ಒಮ್ಮೆ ಜ್ಞಾಪಿಸಿ, ಕಣ್ಣು ಮು...ಹಾರಿದಳು........

ㅇ ㅇ ㅇ

ದಿನದಿಂದ ದಿನಕ್ಕೆ ಮಾಧವ ರಾ...ಪ್ರೇಮ ಉಕ್ಕಿ ಹರಿಯುತ್ತಲಿದ್ದಿತು ...ಕ್ಷಣವನ್ನು ದೊಡ್ಡ ಪರಿಮಾಣದಲ್ಲಿ...ಯುತ್ತಿದ್ದರು. ಇನ್ನೊಮ್ಮೆ ತಿಂಗ...ಮ ರಾಯರ ಮನೆಗೆ ಹೋಗುತ್ತೇನೆ...ತನ್ನಲ್ಲಿಯೇ ಆಲೋಚಿಸಿ ಹೊರಟ...ದಾರಿಯ ಉದ್ದಕ್ಕೂ ಅದೇ ಯೋಚ...ತಲೆಯಲ್ಲಿ ತೂರಿ ಬರುವ ಪ್ರತಿಯೊ...ಯೋಚನೆಗೂ ತಾನೇ ಸಮಾಧಾನದ...ತ್ತರವನ್ನು ಕೊಡುತ್ತಿದ್ದರು. ಹಜ್ಜೆ ಹ...ಗೂ ಆ ಬಡ ಹುಡುಗಿಯ ಕನಸು...ಪ! ತಾಯಿಯಿಲ್ಲದ ತಬ್ಬಲಿ. ಅವಳ...ಸ್ಥೆ ಏನು? ಪ್ರಪಂಚದಲ್ಲಿ ಇಂತಹ ...ನಲ್ಲಿರುವ ಹುಡುಗಿಯರು ಎಷ್ಟು ...ಇಲ್ಲ? ನಾನು ಸಮಾಜ ಸುಧಾರಕ, ...ರೋಪಕಾರಿ ಎಂತ ಹೇಳಿದರೆ, ಇಡೀ ...ಶದ ಹುಡುಗಿಯರ ಈ ತರಹದ ಕ...ಪರಿಹರಿಸಲು ಸಾಧ್ಯವೆ? ಇಲ್ಲ! ಇಂತ...ಒಂದೊಂದೇ ಹುಡುಗಿಯರ ಕಷ್ಟ ಒ...ಬ್ಬರು ಪರಿಹರಿಸಿದರೆ, ಆಗ ಇಡೀ ದೇ...ಲ್ಲ ಸುಖ ನಮ್ಮ ಪಾಲಿಗೆ! ಹೌದು, ಉ...ಕಾರ ಮಾಡಲೇ ಬೇಕು ಎನ್ನುತ್ತಾ ಬ...ತ್ತಿರುವಾಗಲೇ ಆರ್ತನಾದ ಕೇಳಿ ಬರು...ತ್ತು. ಎಲ್ಲೋ ನೀರಿನ ಸದ್ದು—ಶಬ್ದ...ಚಿಕ್ಕ ದೀಪವು ಪಥವನ್ನು ಸೂಚಿಸು...ತ್ತು. ದೀಪದತ್ತ ಧಾವಿಸಿದರು ಮಾಧವ ರಾಯರು.

ಬಾವಿಯ ಕಟ್ಟೆಯ ಮೇಲೆ ದೀಪ... ಅದರ ಕೆಳಗೆ ಕಾಗದ.......

...ಇವೆಲ್ಲವೂ ಇನ್ನೂ ಸಂಶಯವನ್ನು ಹುಟ್ಟು ಮಾಡಿದುವು. ತಡ ಮಾಡದೆ ಬ...

(ಹನ್ನೊಂದನೇ ಪುಟ ನೋಡಿರಿ)

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಆಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77

ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:
ಆಕಸ್ಮಿಕ (ಕೆಜುವಲ್)
೧ಲಂ ಸೆಂಟಿಮೀಟರಿಗೆ ರೂ. 2-00
ಕಾಯಮು (ಕಂಟ್ರಾಕ್ಟ್)
೧ಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಸಂದರ್ಭದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಜಾಗವನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಬೆಲೆಯನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಒಂದು ಪ್ರಾಚೀನ ಶಿಲ್ಪಕಲೆ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೦	೧—೬—೧೯೬೭	No. 40

ಬರಿಯ ಗುಲ್ಲು ಬೇಡ

ಶ್ರವಣ ಬೆಳಗೊಳದಲ್ಲಿ ಗೋಮಟೇಶ್ವರನ ಪವಿತ್ರ ಸನ್ನಿಧಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಿತು. ಸಾಹಿತ್ಯ ಸಮ್ಮೇಳನವೊಂದು ಜಾತ್ರೆಯೆಂದು ವ್ಯಂಗ್ಯಾರ್ಥದಲ್ಲಿ ಟೀಕಿಸುವವರೂ ಉಂಟು; ಅದು ಸರಸ್ವತಿಯ ಜಾತ್ರೆಯೆಂದು ತೃಪ್ತಿ ಪಡುವವರೂ ಉಂಟು. ಇತ್ತೀಚೆಗಿನ ಕೆಲಸಮಯದಿಂದ ಸಾಹಿತ್ಯ ಸಮ್ಮೇಳನಗಳ ವಿಚಾರವಾಗಿ ಚುನಾವಣಾ ವೇಳೆಯ ಪಕ್ಷ—ಪ್ರತಿಪಕ್ಷಗಳ ದೋಷ-ಪ್ರತಿ ದೋಷಾರೋಪಣೆಯ ಪ್ರಣಾಳಿಯು ನಿರಾತಂಕವಾಗಿ ಹರಿದು ಬರುತ್ತಿರುವುದನ್ನು ಕಾಣುವಾಗ ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯಕೀಯದ ಬೇಳೆ ಬೇಯಿಸುವ ಕುಡಾರಿಗಳೂ ಇದ್ದಾರೆಂದು ಗೊತ್ತಾಗುತ್ತದೆ. ಸಾಹಿತ್ಯದ ಪವಿತ್ರ ಕ್ಷೇತ್ರದಲ್ಲೂ ರಾಜ್ಯಕೀಯದ ಹೊಲಸು ತಂದು ಕೆದರುವ ಪ್ರಯತ್ನವನ್ನೂ ಕೆಲವರು ಮಾಡುತ್ತಿರಬೇಕೆನಿಸುತ್ತದೆ. ಸಮ್ಮೇಳನ ನಡೆಯುವ ಸ್ಥಳದ ಬಗ್ಗೆ, ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ಬಗೆಗೆ ಬರುವ ಟೀಕೆಗಳೆಂಬುವುದರ ಮೇಲೆ ಎಲ್ಲಂದರಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡತುಂಡವಾಗಿ ಅಪ್ರಿಯವೂ ಅನಪೇಕ್ಷಣೀಯವೂ ಸಾಹಿತ್ಯರಂಗಕ್ಕೆ ನಿರುತ್ಸಾಹಕಾರಿಕವೂ ಮಾರಕವೂ ಆಗುವಂತೆ ಮಾತಾಡುವುದು, ಹೇಳಿಕೆ ನೀಡುವುದು ಉಚಿತ ಚಿಹ್ನೆಯೆನ್ನುವಂತಿಲ್ಲ. ಒಂದೇ ವರ್ಷ ಒಂದಕ್ಕಿಂತ ಹೆಚ್ಚಿನ ಸಮ್ಮೇಳನ ಸೇರುವ ಶಕ್ತಿ ಸದ್ಯ ಕನ್ನಡಿಗರಿಗಿಲ್ಲ. ಈ ಶಕ್ತಿಯೂ ನಮ್ಮ ಕಂಗಳವಾದರೆ, ಮತ್ತೆ ಯಾರ ಮನಸ್ಸನ್ನೂ ನೋಯಿಸಬೇಕಾಗಿಲ್ಲ. ಪುಟಕ ಬರೆದ ಕವಿಗೂ ಕವಿ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಬಂಬಹುದು; ಕನ್ನಡ ಬಾರದುಳಿದವನಿಗೂ ಅಧ್ಯಕ್ಷ ಪಟ್ಟ ದೊರೆಯಬಹುದು.

ಸಮ್ಮೇಳನದ ಏರ್ಪಾಡು ಮಾಡುವ ಹೊಣೆಗಾರಿಕೆ ಹೊತ್ತಿರುವವರು ಬೇರೆ ಯುವರಿರುತ್ತಾರೆ; ಇದಕ್ಕಾಗಿ ಸಾಮಾನ್ಯರು ಹಗರಣವೆಬ್ಬಿಸುವ ಅಗತ್ಯವಿಲ್ಲ. ಸಮ್ಮೇಳನ ಸೇರಬೇಕು, ಅಲ್ಲಿ ಏನಾಗಬೇಕು, ಅದರಲ್ಲಿ ಜೀವಕಳೆಯೇ ಇಲ್ಲವೆನ್ನುವವರು ಜೀವಕಳೆಯನ್ನು ತುಂಬ ಬೇಕು, ಸಾಬದನ್ನುವವರು ಇನ್ನೇನಾಗಬೇಕು —ಎಂಬ ಮುಂತಾದ ವಿಚಾರಗಳಲ್ಲಿ ರಚನಾತ್ಮಕ ಸಲಹೆಗಳನ್ನು ಮಾಡಬೇಕು. ನಮ್ಮ ದೇಶದ ಕೆಲವು ರಾಜ್ಯಕೀಯ ಪಕ್ಷಗಳಂತೆ ಬರಿಯ ಟೀಕೆ ಮಾಡುವುದರಿಂದಲೇ ಉದ್ಧಾರವಾಗುವುದಿಲ್ಲ. ಟೀಕೆಯೊಡನೆ ಸಲಹೆಯೂ ಬೇಕು. ಇಂತಹ ರಚನಾತ್ಮಕ ಸಲಹೆಗಳನ್ನು ಸಂಗ್ರಹಿಸಿ ಅವುಗಳ ಗುಣಾನುಕ್ರಮದಲ್ಲಿ ಉಚಿತವಾದುವನ್ನು ಅನುಷ್ಠಾನಕ್ಕೆ ತರಲು ಸಾಹಿತ್ಯ ಪರಿಷತ್ತು ಬದ್ಧವಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಾಂಸ್ಕೃತಿಕ, ಮಾನಸಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಉನ್ನತಿ ಸಾಧಿಸಲು ಬೇಕು ಎಂಬ ಆಶಯದಿಂದ ಸ್ಥಾಪನೆಗೊಂಡಿತ್ತು. ಇಂದು ಅದು ಬೇಡವೆನ್ನುವವರೂ ಇರಬಹುದು. ಆದರೆ, ನಿಯೋಜಿತ ಗುರಿಯನ್ನು ತಲಪಲು ಕನ್ನಡಿಗರಿಗೆ ಪರಿಷತ್ತಿನಿಂದ ಉತ್ತಮ ಸಾಧನ ಬೇರೊಂದಿರಲಾರದು. ಹಾಗೆಂದ ಮಾತ್ರಕ್ಕೆ ಪರಿಷತ್ತು ನಿರ್ದೋಷವಾಗಿದೆ; ಅದರ ಕಾರ್ಯಕ್ರಮಗಳು ಪರಿಪೂರ್ಣವಾಗಿವೆ; ಸಾಹಿತ್ಯ ಸಮ್ಮೇಳನಗಳು ಉದ್ದೇಶ ಸಾಧನೆಯಲ್ಲಿ ಸಮರ್ಥವಾಗಿವೆ ಎಂಬ ಪೂರ್ಣಭಾವನೆ ತಳೆಯಬೇಕು ಎಂದರ್ಥವಲ್ಲ.

ಸಾಹಿತ್ಯ ಪರಿಷತ್ತು ಕನ್ನಡಿಗರ ಸಾರ್ವಜನಿಕ ಸಂಸ್ಥೆ. ಹಾಗಾಗಿ ಅದರಲ್ಲಿ ನೂರು ಹತ್ತು ಮುಖಗಳ ಕೈವಾಡಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಪ್ರಾಪ್ತ ವಸ್ತುವಿನಿಂದ ತೃಪ್ತಿ ಪಡುವುದು ಬಹುಶ: ಮಾನವ ಪ್ರವೃತ್ತಿಗೆ ದೂರವಾದುದು; ಅಲ್ಲದೆ ಉತ್ಥಾನ ಪಥದ ನಡುವಣ ದೊಡ್ಡ ಆಂತಕ, ಆದುದರಿಂದ ಟೀಕೆ—ಸಲಹೆಗಳ ಮಳೆ ಸುರಿಯಬೇಕು; ಆದರೆ, ಇದು ಒನಕೆ ಧಾರೆಯಾದರೆ? ಪರಿಷತ್ತನ್ನು ಒಬ್ಬ ರೋಗಿಗೆ ಹೋಲಿಸುವವರೂ ಇದ್ದಾರೆ. ಅದಕ್ಕಂಟಿದ ರೋಗ ಗುಣವಾಗದ ರೋಗವೆಂದು ಅಸಹ್ಯಪಟ್ಟ ಮಾತು ಮಾಡುವವರೂ ಇದ್ದಾರೆ.

ಇಂತಹ ದುರ್ಭಾವನೆಗಳಿಗೆ ನೋಡುವವರು ನಿಂಧಿಮಾನಿಗಳಾಗಿರುವುದೇ ಕಾರಣವೆನ್ನಬೇಕು. ಪರತಂತ್ರದಲ್ಲಿಯೇ ಸುಖವನ್ನು ಕಾಣುವ ಕೆಲವು ಸ್ವಾತಂತ್ರ್ಯ ದ್ವೇಷಿಗಳೂ ಇದ್ದಾರೆನ್ನುವಾಗ ಇದು ವಿಸ್ಮಯಕಾರಕವಲ್ಲ. ಕನ್ನಡ ಸಾಹಿತ್ಯ ಪರಿಷತ್ತು ನಮ್ಮದು ಎಂಬ ಅಭಿಮಾನ ನಮ್ಮಲ್ಲಿ ಮೂಡಬೇಕು. ನಮ್ಮ ಶರೀರಕ್ಕೆ ರೋಗ ತಗಲಿದರೆ, ನಾವೇನು ಮಾಡುತ್ತೇವೆ? ಅದು ಅಶಕ್ಯವಾಗಿರಲಿ, ರೋಗ ಗುಣವಾಗದ್ದೇ ಇರಲಿ, ಬಡತನವಿರಲಿ, ದುಸ್ಥಿತಿಯಲ್ಲೇ ಇರಲಿ, ಅದನ್ನು ಶಕ್ತವಾದ ಎಲ್ಲ ಚಿಕಿತ್ಸೆಗೆ ನಾವು ಗುರಿ ಮಾಡುತ್ತೇವೆ. ಇಂತಹ ಉದಾರ ಭಾವನೆ ಬೆಳೆದು ಬಾರದೆ ಹೋದರೆ, ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಲಾರದು; ಟಿಬಿಯಂತಹ ಕ್ಷಯ ರೋಗಕ್ಕೂ ಔಷಧಿ ಸಿದ್ಧವಾಗುತ್ತಿರುವಾಗ, ಪರಿಷತ್ತಿನ ರೋಗಕ್ಕೆ ಚಿಕಿತ್ಸಕರು ಮುಂದೆ ಬರಬೇಕು, ಉತ್ಸಾಹದಿಂದ ದುಡಿಯಬೇಕು; ಬರೀಗುಲ್ಲು ನಿದ್ದೆಗೇಡು ಮಾತ್ರ, ಅದರಿಂದ ಯಾರಿಗೂ ಯಾವುದಕ್ಕೂ ಲಾಭವಿಲ್ಲ.

ಸಂರಕ್ಷಣಾ ವೆಚ್ಚ ಕಡಿತ

ಹೊಸ ಮುಂಗಡ ಪತ್ರದಲ್ಲಿ ಸಂರಕ್ಷಣೆಯ ವೆಚ್ಚವನ್ನು ಸ. ೫ ರು ಐದುಕೋಟಿ

> **ವಚನ ಸುಧೆ**
>
> ಯಸ್ಮಾತ್ತಾ ವಿರತ: ಪಾಪಾತ್
> ಕಲ್ಯಾಣೇ ಚ ನಿವೇಶಿತ:
> ತೇನ ಸರ್ವಮಿದಂ ಬುದ್ಧಂ
> ಪ್ರಕೃತಿರ್ವಿಕೃತಿಶ್ಚ ಯಾ॥
>
> ಪಾಪದಿಂದ ವಿಮುಕ್ತವಾಗಿ ಕಲ್ಯಾಣದಲ್ಲಿ ತಲ್ಲೀನವಾದ ಬುದ್ಧಿಯುಳ್ಳವನು ಪ್ರಪಂಚದಲ್ಲಿ ಪ್ರಕೃತಿ ಮತ್ತು ವಿಕೃತಿಯೆರಡನ್ನೂ ಚೆನ್ನಾಗಿ ತಿಳಿದಿದ್ದಾನೆ.

ರೂಪಾಯಿಗಳಷ್ಟು ಇಳಿಸಿದುದೂ ಮುರಾರ್ಜಿಯವರ ಗತ್ತುಗಾರಿಕೆಯೆಂದೇ ಹೇಳಬೇಕು. ಭಾರತವು ಯುದ್ಧಾಸಕ್ತಿ ಹೊಂದಿದೆ, ಅದು ನಮ್ಮ ಮೇಲೆ ಆಕ್ರಮಣ ಮಾಡ ಬಯಸುತ್ತದೆ ಎಂದು ಮುಂತಾಗಿ ಹೇಳಿ ಸೈನಿಕ ಸಹಾಯ ಪಡೆಯಲು ಕೈ ಮುಂದೆ ಮಾಡುವ ಪಾಕಿಸ್ತಾನಕ್ಕೂ ಅದರ ಮಿಲಿಟರಿ ಸಹಾಯಕ ರಾಷ್ಟ್ರಗಳಿಗೂ ಮುರಾರ್ಜಿ ಆಹ್ವಾನವನ್ನು ಈ ಮೂಲಕ ನೀಡಿದ್ದಾರೆ. ಇನ್ನು ಮುರಾರ್ಜಿ ಮುಂಗಡ ಪತ್ರದ ಮೂವತ್ತಾಲು ವೈಶಿಷ್ಟ್ಯ—ಆಯವನ್ನು ಕಡಿಮೆ ತೋರಿಸಿ, ವೆಚ್ಚವನ್ನು ಹೆಚ್ಚು ತೋರಿಸಿ, ಕೊರತೆಯನ್ನು ಕಾಣಿಸುವುದು—ಇದೆ. ಆದ್ದರಿಂದ ಸಂರಕ್ಷಣೆಯ ವೆಚ್ಚ ನಿಯೋಜಿಸಿದ್ದಕ್ಕಿಂತ ಕಡಿಮೆಯಾದರೂ ಆಗ ಬಹುದು. ಪಾಕಿಸ್ತಾನವು ಕಾಶ್ಮೀರ ಗಡಿಯ ಕೆಲವೆಡೆಯಲ್ಲಿ ಸೈನ್ಯ ಜಮಾವಣೆ ಮಾಡಿದೆ; ಗಂಡು—ಫಿರಂಗಿಗಳ ಮೂಲಕ ಪ್ರಕ್ಷೋಭೆ ನಡೆದಿದೆ. ನಮ್ಮ ರಕ್ಷಣಾ ಮಂತ್ರಿ ಸಿಂಗರು ನಾವು ಬಾಹ್ಯಾಕ್ರಮಣವನ್ನೆದುರಿಸಲು ಸಮರ್ಥರಿದ್ದೇವೆಂದು ಆತ್ಮವಿಶ್ವಾಸ ತೋರಿಸಿದ್ದಾರೆ. ಅಥವಾ ಇಲ್ಲಿಯೂ ಮುರಾರ್ಜಿಯವರ ಉಪಪ್ರಧಾನಿ ವೈಶಿಷ್ಟ್ಯ ಮೂಡಿದೆಯೇ, ಕಾದುನೋಡಬೇಕು.

ನವಯುಗದ ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಹಣ ಬಾಕಿಯಿರುವ ಚಂದಾದಾರರೆಲ್ಲರೂ ಚಂದಾಹಣವನ್ನು ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ. ಬರುವ ವಾರದಿಂದ ಬಾಕಿದಾರರಿಗೆ ಸಂಚಿಕೆಯನ್ನು ವಿ. ಪಿ ಮೂಲಕ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ.

ನರಸಣ್ಣನ ಸರಸ

"ಕಡಿಮೆ ಬೆಲೆಯ ಸಿಗರೇಟಿಗೆ ಬೆಲೆಯೇರಿದ್ದರಿಂದ ಸಿಗರೇಟು ಸೇದಲಾಗದವರು ಬೀಡಿ ಸೇದಬೇಕು ಎಂದು ಸಲಹೆ ನೀಡಿದ್ದಾರೆ, ಉಪಪ್ರಧಾನಿ."

"ಜೀವನೋಪಯೋಗಿ ವಸ್ತುಗಳ ಬೆಲೆಯೇರಿದ್ದರಿಂದ ಅಕ್ಕಿ ಕೊಳ್ಳಲಾಗದವರು ಮಣ್ಣು ನ್ನಬಹುದಲ್ಲ...."

ಗೇಹೆ ರಾಜ್ಯದಲ್ಲಿ

ಇರುವವರಿಗುಂಟು ಇಲ್ಲದವರಿಗಿಲ್ಲ

'ಹುಡು ಇಲ್ಲಿ ನೋಡೀಂದ್ರೆ....'

'ಎಂಥದನ್ನು ನೋಡೋದ?'

'ನೋಡೋದು ಎಂಥದೂಂದ್ರೆ? ಏನು, ನೋಡಿ ನೋಡಿ ಸಾಕಾಯ್ತೇನು?'

'ಹ್ಞಾಂ...ಅಲ್ಲ, ಹಾಗೇನೂ ಇಲ್ಲ.... ಮನೆಗೆ ಬರೋದೇ ತಡ, ಇಲ್ಲಿ ನೋಡೀಂದ್ರೆ, ಅಲ್ಲಿ ಹೋಗೀಂದ್ರೆ....ಅಂತ ಅಜ್ಞೆ ಕೊಡೋಕೇ ಸುರು ಮಾಡಿದ್ರೆ ಯಾಂಗೆ ತಾನೇ ರೇಗೋದಿಲ್ಲಾ?'

'ಅಯ್ಯೋ ಪಾಪ, ಅಜ್ಞೆಯನ್ನು ಪಾಲಿಸಿ ಪಾಲಿಸಿ ಸೊರಗಿ ಸೊರಗಿ ಕಡ್ಡಿಯೂ ಗಿದ್ದಾನೆ ಈ ದಾಸಾನುದಾಸ...'

'ಥೆ...ಥೆ...ಸೊರಗಲೂ ಇಲ್ಲ, ಕಡ್ಡಿಯಾಗಲೂ ಇಲ್ಲ...'

'ಮತ್ತೆ?'

'ಮತ್ತೆ, ಹಿಗ್ಗಿ ಹಿಗ್ಗಿ ಕಡ್ಡಿ ಪೈಲ್ವಾನ್...'

'ಹ್ಹ...ಹ್ಹ....ಹ್ಹ... ಸರಿಯಾಯ್ತು ನ್ನಿ. ಮುಂಗಡ ಪತ್ರ ಮಂಡಿಸೋ ಮಂತ್ರಿಗಳು ನುಡಿದಾಂಗೇ ನುಡಿದಿರಿ....'

'ಸರಿಯೇ...ಅಂದ ಹಾಗೆ ಅರ್ಥಮಂತ್ರಿ ಮುರಾರ್ಜಿದೇಸಾಯಿಯವರು ತಮ್ಮ 'ಉಪ ಪ್ರಧಾನಿ ಪದ' ದ ಮೊದಲ ಮುಂಗಡ ಪತ್ರವನ್ನು ಸಂಪೂರ್ಣವಾಗಿ ಸಂಸತ್ತಿನಲ್ಲಿ ಮಂಡಿಸಿದರು....'

'ಅದೇ ಎಂಥದೋ ಪೇಪ್ರಿನಲ್ಲಿ ಇತ್ತಂತೆ....'

'ಯಾರು ಹೇಳಿದ್ರು?'

'ಮತ್ಯಾರು? ಅಚ ಮನೆ ಮೂರ್ತಿ ಬಂದಿದ್ದ ನೋಡಿ, ಬೊಂಬಾಯಿಂದ....'

'ಹ್ಞಾಂ....ಬಂದಿದ್ದ. ಅವ್ನೇ ಹೇಳಿದ್ದೇನು.'

'ಥೆ...ಥೆ....ಅವ್ರಿಗಲ್ಲಾ ಮಾತಾಡೋಕೆ ಸಮಯವೆಲ್ಲೀಂದ್ರೆ....ಇಡೀ ದಿನ ಕೇರಂ ಬೋರ್ಡ್ ಉಂಟು, ಇಸ್ಪೀಟು ಎಲೆಯೂ ಉಂಟು...'

"ಅವ್ರು ಹೇಗೇ ಇರ್ಲಿ, ನಮ್ಗೇಕೆ? ಮತ್ತೆ ನಿಂಗೆ ಹೇಳಿದವ್ರು ಯಾರೂಂತ?"

"ಮತ್ಯಾರು? ಅವ ಸಿಗರೇಟು ತರ್ಲೋಕೆ ಹನ ಅಟ್ಟಿದ. ಜನ ಖಾಲಿ ಕೈಯಲ್ಲಿ ಮರಳಿ ಬಂತು. ಏನು ಅಂದ್ರೆ, ಕ್ರಯ ಏರುತ್ತ ಅಂತೆ. ಅಂಗಡಿ ಖಾಲಿ ಅಂದ್ಮಂತೆ...'

"ಅಲ್ವೋ ಅಂಗ್ಡಿ ಖಾಲಿಯಾಗಿರೋದಕ್ಕೂ ಮುಂಗಡ ಪತ್ರಕ್ಕೂ ಸಂಬಂಧವಿದೆ ಅಂತ ನಿಂಗೆ ಹೇಗೆ ಗೊತ್ತು?"

"ಅಯ್ಯಯ್ಯ, ಅಷ್ಟೂ ಗೊತ್ತಾಗೋದಿಲ್ವೆ? ನಿಮ್ಮ ಬೀಸಿಯವ್ರು ಅಲ್ಲ ಮುಂಗಡಪತ್ರ ಮಂಡಿಸೋದೇ ತಡ ಪೇಟೆಯಲ್ಲಿ ಕೆಲ ಕೆಲವು ವಸ್ತುಗಳೆಲ್ಲ ನುಂಗ ನೂಯು'

'ಅಂದ್ರೆ ಈ ಬಾರಿ ಸಿಗರೇಟಿಗೆ ಕರ ಹೆಚ್ಚು ಬಿದ್ದಿದೆ ಅಂತ ಹಾಗಾಯ್ತು....'

'ಪಾಪ, ಏನೂ ಗೊತ್ತಿಲ್ಲದವ್ರ ಹಾಗೆ ಮಾತಾಡ್ತೀರಾ?'

'ನಂಗೇನು ಗೊತ್ತು? ವಿಷಮ ಸನ್ನಿಪಾತ ಜ್ವರದಂತೆ ಬೆಲೆಯೇರುವುದು ನಿತ್ಯ ಕಾರ್ಯಕ್ರಮವಾಗಿರುವಾಗ....'

'ಅದು ಬಿಡಿ....ಹಿಮ್ಮ ಮುಂಗಡಪತ್ರ ಅಂಶ್ವೆ ಹುಚ್ಚು ಭೂತ....ಅದು ಯಾವ ವರ್ಷ ಯಾವುದರ ಮೇಲೆ ಎರಗುತ್ತೋ ಆ ಬ್ರಹ್ಮನೇ ಬಲ್ಲ.'

'ಅದ್ರೂ ಒಂದು ಮಾತು...'

'ಏನು?'

'ಹುಚ್ಚು ಭೂತ ಯಾವ ಗಳಿಗೆಯಲ್ಲಾ ಯಾರ ಮೇಲೂ ಎರಗಬಹುದು. ಅಲ್ವೆ? ಅದ್ರೆ ಮುಂಗಡ ಪತ್ರ ವರ್ಷಕ್ಕೊಂದೆ ಬಾರಿ.'

'ಅದೂ ಅಟ್ಟು ಹೋಯ್ತು ನೋಡಿ, ಈ ಬಾರಿ ಎರಡು ಸಲವಾಯ್ತು....ಮುಂದೆ...'

'ಹ್ಞಾ, ಅದೂ ಹೌದು. ಅದ್ರೂ ಇನ್ನೊಂದು ಮಾತು. ಪರಬ್ರಹ್ಮನನ್ನು ಧ್ಯಾನ-ಜ್ಞಾನಯೋಗ ಬಲದಿಂದ ಕಂಡವರಿದ್ದಾರೆ ನೋಡು. ಹಾಗೆಯೇ ಈ ಹುಚ್ಚ ಭೂತ ಈ ಸಾರಿಯಾರ ಮೇಲೆ ಎರಗುತ್ತ ಅನ್ನೋದನ್ನು ತಮ್ಮ ನಿಗೂಢ ಜ್ಞಾನದಿಂದ ಮೊದಲೇ ಅರಿತು ಕೊಂಡವರೂ ಇರುವುದುಂಟ...'

"ಇರಬಹುದೂನ್ನಿ. ಇಲ್ಲವಾದ್ರೆ, ಪೇಟೆಗೆ ಪೇಟೆಯಲ್ಲೇ ಮಾಲು ಇಲ್ಲವಾಗ ಬೇಕಾದ್ರೆ....ಅದೆಲ್ಲ ಇರ್ಲಿ, ನಮಗೇನಂತೆ?..."

'ಇರ್ಲಿ, ಇರ್ಲಿ... ನಮಗೇನೂ ಇಲ್ಲ. ಮಾಲು ಅಡಗಿಸಿಟ್ಟು ಹಣಮಾಡೋದಕ್ಕೂ ತಾಕತ್ತಿಲ್ಲ, ಮಾಲು ಕೊಂಡಿಟ್ಟು ಉಳಿತಾಯ ಮಾಡೋ ಹಾಗೂ ಇಲ್ಲ... ಬೆಲೆ ಏರುತ್ತ ಬಂದಂತೆ ಇಳಿಯುತ್ತ ಬರುವವರಿಗೆ ಏನು ಬಂದ್ರೆ ಏನು?'

'ಅಂದ್ರೆ?'

'ಅಂದ್ರೆ ಎಂಥದು? ನೋಡು, ಎಲ್ಲಾ ಇರುವವರಿಗೆ ಮಾತ್ರ.'

"ಅಂದ್ರೆ? ಬಿಡಿಸಿ ಹೇಳಿ...."

"ಮಳೆ ಬರುತ್ತೇನ್ನು ಕೊಡೆಯಿರುವವನು ಬಿಡಿಸುತ್ತಾನೆ, ಇಲ್ಲವಾದ್ರೂ ಕೊಳ್ಳಲು ತಾಕತ್ತಿರುವವನು ಕೊಂಡು ಕೊಳ್ಳುತ್ತಾನೆ. ಅದಿಲ್ಲದೆ ಹೋದ್ರೆ, ಕಡತರುವ ಶಕ್ತಿಯುಳ್ಳವ ಕಡ ತರುತ್ತಾನೆ. ಕೈ ಕೊಡುವ ಧೈರ್ಯವುಳ್ಳವ ಹಾಗೂ ಮಾಡುತ್ತಾನೆ...ಏನೂ ಇಲ್ಲದವ?"

'ನನೆದು ಕೊಂಡೇ ಹೋಗುತ್ತಾನೆ ಅಲ್ವೆ?"

'ಯಾವ ಆಸರೆ—ಶಕ್ತಿಯಿಲ್ಲದವ ಮತ್ತೆ ಮಾಡುವುದಾದ್ರೂ ಏನ? ಗಾಳಿ ಬಂದತ್ತ ತೂರಿ ಹೋಗುವುದು..."

'ಅದು ಹೌದನ್ನಿ. ಮಾಲು ಇರುವವರು ಕರಭಾರ ಬೀಳುವ ಮಾಲನ್ನು ಅಡಗಿಸಿಡಬಹುದು. ಹಣವಿರುವವರು ನಾಲ್ಕು ದಿನ ಮೊದಲೇ ಕೊಂಡು ದಾಸ್ತಾನ ಮಾಡಬಹುದು....'

'ಅದು ಸರಿ. ಅದ್ರೆ ನೋಡು, ಎಷ್ಟು ಮಾಲೂಂತ?'

'ತಮಗೆ ಶಕ್ತವಾದಷ್ಟು— ಬೇಕಾದಷ್ಟು. ಅದಷ್ಟೇ ಇರ್ಲಿ, ಲಾಭ ಲಭನೇ ನೋಡಿ."

'ಅದು ನಿಜ. ಒಂದು ವಿಲ್ಸ್ ಸಿಗರೇಟು ಪ್ಯಾಕಿಗ ೧೭ ಪೈಸೆ ಏರಿಕೆಯೆಂದ್ರೆ ನೂರುಪ್ಯಾಕೆನಲ್ಲಿ ೧೭ರೂಪಾಯಿ ಅಯ್ತಲ್ಲ!'

"ಅಲ್ರಿ, ಈಗ ಮುಖ್ಯವಾಗಿ ಭಾರಬಿದ್ದಿರೋದು. ಕಾಫಿ, ಚಹ, ಸಿಗರೇಟು ಮತ್ತು ಪಾದರಕ್ಷೆಗಳ ಮೇಲೆ. ಅದೂ ಮುಂದ ಗೂಟೊತ್ತು ಏಡುವ ತಾರೀಕಿನಿಂದ ಆದ್ರೆ, ಇಂದೇ ಮಾಯವಾದಾಂಗೇಕೆ?'

'ಅದೇ ಇರುವವರಿಗೆ ಇನ್ನೂ ಹಣ ಮಾಡೋ ಚಿಂತೆ.. ವಿಧ್ಯಾಪಥಿಯಲ್ಲಿ ಕೋಟ್ಯಾಧಿಪತಿ ಸಂಪಾದನೆ ಮಾಡುವವರೂ ಇದ್ದಾರೆ....'

'ಅಲ್ರಿ, ನೋಡಿ, ತಂಬಾಕಿನ ಮೇಲಿನ ಕರವೇ ಭಾರಿ ಪ್ರಮಾಣದ್ದಂತೆ....'

'ಹ್ಞಾಂ...ಸರಿಯೇ....'

ಹೇಗೆ?"

'ನೋಡು, ತಂಬಾಕೊಂದು ವಿಷ.'

'ಹ್ಞಾಂ...."

'ವಿದೇಶಗಳಲ್ಲಿ ಪ್ರತಿ ಸಿಗರೇಟು ಪ್ಯಾಕಿನಲ್ಲೂ ಸೂಚನೆ ಉತ್ತದಂತೆ—ಇದರಲ್ಲಿ ವಿಷವಿದೆ—ಇದನ್ನು ಸೇವಿಸುವುದರ ಮೂಲಕ ವಿಷಪಾನ ಮಾಡುತ್ತೀರಿ ಅಂತ....'

ಅಲ್ರಿ, ಹೀಗಲ್ಲಾ ಹೇಳೋದು ಯಾಕೆಂತ?'

'ಯಾಕೆ ಅಂದ್ರೆ? ಸಿಗರೇಟು ಸೇದೋದು ಒಂದು ಚಟ. ಪ್ರಜಾಪ್ರಭುತ್ವದಲ್ಲಿ ಸಿಗರೇಟು ಸೇದೋ ಸ್ವಾತಂತ್ರ್ಯವನ್ನು ಮೊಟಕು ಮಾಡಲು ಅವು ಬಯಸುವುದಿಲ್ಲ...ಅದಕ್ಕಾಗಿ ಸಾರಿ ಹೇಳೋದ....'

'ಅದು ಸುಳ್ಳು....ಸಿಗರೇಟು ಸೇದುವುದನ್ನು ಪ್ರತಿಬಂಧಿಸಿದ್ರೆ ಸರಕಾರದ ಬೊಕ್ಕಸ ಹೇಗೆ ತುಂಬುತ್ತದೆ?'

'ಹಾಗಾದ್ರೆ ಗಿಲ್ಲೇ ನೀನ....ಸಿಗರೇಟಿನ ವಿಷವಿರೇಂತ ಗೊತ್ತಿದ್ದೇ ಬೆಲೆ ಏರುವವರು ಆತ್ಮ ತ್ಯಾಗಮಾಡಿ ವಿಷ ಸೇವಿಸುತ್ತೀ. ಅಂತೂ ವಿಷದ ಬೆಲೆಯೂ ಈಗ ಮತ್ತ ವಿಪರೀತವಂತಾಯ್ತು...."

'ಹ್ಞಾ.... ಮತ್ತೆ ನೋಡಿ, ಒಂದು ಯೋಚನ ಬಂತು...."

"ಏನು?"

'ಅಲ್ಲ, ನಮ್ಮಲ್ಲಿಯೂ ಮದ್ಯದ ಬಾಟಲಿಗಳಿಗೆ ಹಾಗೆ—ಎಚ್ಚರಿಕೆ ಅಂತ ನೋಟೀಸು ಹಚ್ಚಿ ಸೇವಿಸುವುದಾದ್ರೆ ಸೇವಿಸಿ ಅಂತ ಓಪನ್ ಮಾರ್ಕೆಟು ಮಾಡಿ ಬಿಟ್ರೆ, ರಾಜ್ಯ ಸರಕಾರದ ಬೊಕ್ಕಸ ತುಂಬಿ ಬಿಡುತ್ತೆ...ಮತ್ತೆ ಕೇಂದ್ರದ ಮುಖ ನೋಡುವುದೇ ಬೇಡ....'

'ಸೂಕ್ತ ಸಲಹೆ. ಅದ್ರೆ, ಇದನ್ನು ಮತ್ತೆ ಮೊದಲು ಆನ ಪ್ಲಾನಿಗೆ ತರಬೇಕು—ರೂಪಾಯಿಗೆ ಪಲ್ಲ ಅಕ್ಕಿ ಕೊಡಲು ಕೇಂದ್ರದ ಮುಂದೆ ಕೈ ಚಾಚುವ ಕಳ್ಳಗಂ ಸರಕಾರ..."

"ಮತ್ತೆ ನೋಡಿ ಕಾಫಿ...ಚಹ...'

"ಹ್ಞಾಂ...ಇವುಗಳಲ್ಲೂ ವಿಷವಿದೆ ತಾನೆ?"

'ಮತ್ತೆ ಪಾದರಕ್ಷೆ...."

'ಜೂಮರ್ಗದಿಂದ ಸಾಗುವ ಮಾರ್ಗ.."

'ಅಂದ್ರೆ?"

'ಬೆಲೆಯೇರಿಕೆಗೆ ಮುಖ್ಯ ತಡೆಯೆಂದರೆ ಅಧಿಕೋತ್ಪಾದನ—ಇದು ಎಲ್ಲ ತಲೆಯಿರುವವರು ಒಳಕೊಂಡ ಸಿದ್ಧಾಂತ ತಾನೆ?"

'ಹ್ಞಾಂ...."

'ಪಾದರಕ್ಷೆಯ ಬೆಲೆಯೇರಿತು ಎಂದರೆ ಚರ್ಮದ ಉತ್ಪಾದನ ಹೆಚ್ಚಾಗ ಬೇಕು. ಅದಕ್ಕಾಗಿ..."

"ಅದಕ್ಕಾಗಿ?"

"ಅದಕ್ಕಾಗಿ ಗೋಹತ್ಯೆಯನ್ನು ಬೆಂಬಲಿಸಿ ಸತ್ಯಾಗ್ರಹ ಮಾಡಬೇಕು..."

'ರಾಮ ರಾಮ....."

'ಯಾಕೆ?

(ಹತ್ತನೇ ಪುಟ ನೋಡಿರಿ)



ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No 34/1967

ವೆಂಕಪ್ಪ ಶೆಟ್ಟಿ —ವಾದಿ

ಪದ್ಮರಾಜ ಹಲ್ಲ —ಪ್ರತಿವಾದಿ

ಪ್ರತಿವಾದಿ, ಪದ್ಮರಾಜ ಹಲ್ಲ, ಅದಪ್ಪನಲ್ಲಿ ಅಳಿಯ ಕಾರ್ಕಳ ತಾಲ್ಲೂಕು ರೆಂಜಾಳ ಗ್ರಾಮದಲ್ಲಿರುವವ—ಪ್ರತಿವಾದಿ ಅದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ.—

ವಾದಿಗೆ ನೀವು ತಾ. 18-3-64ರಲ್ಲಿ ರೂ 100ಕ್ಕೆ ಬರೆದುಕೊಟ್ಟ ಡಿಮಾಂಡು ಪ್ರೋಮಿಸರಿ ನೋಟಿನ ಅಸಲು ಬಡ್ಡಿ ರೂಪಾಯಿ 116-60 ನ್ನು ಬಂದಾಯಿ ಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಕಸ್ತು ದಾವೆಯು ತಾ. 14—6—1967ಕ್ಕೆ ನಿಮಗೆ ಖೈರ ನೋಟೀಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಅಪ್ರ ಎನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ದಾವೆ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Plaintiff

ಕಾರ್ಕಳ 26—6—67

ಮನ ಕರಗಿಸಬಲ್ಲ

ಅಪೂರ್ವ ವಿದ್ಯೆ - ಸಂಗೀತ

ಬರೆದವರು: ಶ್ರೀ ಸ ನಾರಾಯಣ

ಭಾರತದಲ್ಲಿ ಬಹಳ ಕಾಲದಿಂದಲೂ ಸಂಗೀತ ಪ್ರಚಾರದಲ್ಲಿದೆ. ವೈದಿಕ ಯುಗದಲ್ಲಿ ಏಳು ಸ್ವರಗಳನ್ನು ವಿಭಜಿಸಿದ್ದಂತೆ ತಿಳಿದು ಬರುತ್ತದೆ. ಆದರೆ ಆಗಿನ ಹೆಸರುಗಳು ಈಗಿನ ಹೆಸರುಗಳಿಂದ ಪ್ರತ್ಯೇಕವಾಗಿದ್ದವು. ವೀಣಾ, ವೇಣು, ಮೃದಂಗ, ದುಂದುಭಿ, ಭೂಮಿ ದುಂದುಭಿ, ಆಘಾತಿ ಮೊದಲಾದ ವಾದ್ಯಗಳು ಬಳಕೆಯಲ್ಲಿದ್ದಂತೆ ತಿಳಿದು ಬರುತ್ತದೆ. ರಾಮಾಯಣ ಮಹಾಭಾರತಗಳಲ್ಲಿ ಅನೇಕ ವಾದ್ಯಗಳ ಉಲ್ಲೇಖವಿದೆ.

ಸಂಗೀತ ನೃತ್ಯಗಳಿಗೆ ನಾಟ್ಯ ಶಾಸ್ತ್ರವೇ ಆಧಾರ ಗ್ರಂಥ. ಭರತ ಮುನಿಯ ನಾಟ್ಯ ಶಾಸ್ತ್ರದಲ್ಲಿ ಸಂಗೀತದ ಬಗೆಗೆ ಸ್ಪಷ್ಟವಾದ ಮತ್ತು ಸಂಕ್ಷಿಪ್ತವಾದ ಸಂಗತಿಗಳು ದೊರೆಯುತ್ತವೆ. ಸ್ವರ, ಗ್ರಾಮ, ಮೂರ್ಛನೆಗಳ ವ್ಯಾಖ್ಯೆ ಇದೆ. ರಾಗಗಳ ಉಲ್ಲೇಖವಿಲ್ಲ. ಸಮಾನ ಅರ್ಥದಲ್ಲಿ 'ಜಾತಿಯ' ಪ್ರಸ್ತಾಪವಿದೆ. ಸಂಗೀತದ ಜಾತಿಗಳು ಹದಿನೆಂಟು ಎಂದು ಹೇಳಿದೆ. ಮತಂಗ ಮುನಿಯ ಬೃಹದ್ದೇಶಿ ಗ್ರಂಥದಲ್ಲಿ ಮೊತ್ತ ಮೊದಲಿಗೆ ರಾಗಗಳ ಪರಿಚಯ ಉಂಟಾಗುತ್ತದೆ.

ಮತಂಗ ಮುನಿಯ ಕಾಲ ಕ್ರಿ. ಶ. ಐದನೆಯ ಶತಮಾನ ಎಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. ಮತಂಗ ಮುನಿಯು ದೇಶೀ ಸಂಗೀತದ ಪರಿಭಾಷೆಯ ಪ್ರಕಾರ ಸ್ತ್ರೀಯರು, ಬಾಲಕರು, ಗೋಪಾಲರು, ಕ್ಷಿತಿ ಪಾಲರು ಸ್ವೇಚ್ಛೆಯಿಂದ ಯಾವ ಹಾಡುಗಳನ್ನು ಹಾಡುತ್ತಿದ್ದರೋ ಅಥವಾ ಯಾವ ಬಗೆಯ ಶಾಸ್ತ್ರೀಯ ಶಿಕ್ಷಣ ಪಡೆಯದೆ ನಿಯಮಗಳನ್ನು ಅನುಸರಿಸದೆ ಆನಂದ ಪರವಶರಾಗಿ ಹಾಡುತ್ತಿದ್ದರೋ ಅವು 'ದೇಶೀಯ' 'ಪದಗಳು—ಹಾಡುಗಳು"?

ಅಬಲಾ ಬಾಲ ಗೋಪಾಲೈಃ ಕ್ಷಿತಿ
ಪಾಲೈರ್ ನಿಜೇಚ್ಛಯಾ ।
ಗೀಯತೇ ಸಾನು ರಾಗೇಣ ಸ್ವದೇಶೇ
ದೇಶಿರುಚ್ಯತೇ ॥

'ತವಾಸ್ಮಿ ಗೀತರಾಗೇಣ' ಎಂಬ ರಾಗ ಶಬ್ದದ ಬಳಕೆಯ ಮೂಲಕ ಕಾಳಿದಾಸನಿಗೂ ರಾಗಗಳ ಪರಿಚಯವಿತ್ತೆಂದು ತಿಳಿದು ಬರುತ್ತದೆ. ಕೆಲವರು ಇದೇ ಶ್ಲೋಕದ 'ಸಾರಂಗೇಣ' ಪದದ ಬಳಕೆಯಿಂದ ಕವಿ ಕಾಳಿದಾಸನಿಗೆ 'ಸಾರಂಗ' ರಾಗದ ಪರಿಚಯವೂ ಇತ್ತೆಂದು ಅಭಿಪ್ರಾಯ ಪಡುತ್ತಾರೆ. ಕಾಳಿದಾಸನ ಕಾಲದಲ್ಲಿ ಮುಖ್ಯರಾಗಗಳು ಹಲವು ಬಳಕೆಯಲ್ಲಿದ್ದವು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಬರಿಯ ಬಾಯಿ ಹಾಡುಗಾರಿಕೆಯು ಮಾತ್ರವೇ ಸಂಗೀತವಲ್ಲ. 'ಗೀತಂ ವಾದ್ಯಂ ಚ ನೃತ್ಯಂ ಚ ತ್ರಯಂ ಸಂಗೀತಮುಚ್ಯತೇ' — ಎನ್ನುತ್ತದೆ ಶಾಸ್ತ್ರ. ಲಯ ಮತ್ತು ಶ್ರುತಿ (ನಾದ, ಸಂಗೀತದ ಆಧಾರ ಸ್ತಂಭಗಳು. ಪ್ರಾಚೀನ ಸಂಗೀತಕ್ಕೆ ವೇದಗಾನವೇ ಮೂಲ. ಭರತ ಮುನಿ ಸಂಗೀತ ಶಾಸ್ತ್ರದ ಆದಿಪ್ರವರ್ತಕ. 'ನಾಟ್ಯಶಾಸ್ತ್ರ', ಆದಿ ಗ್ರಂಥ. ಈ ಗ್ರಂಥಕ್ಕೆ ಅಭಿನವಗುಪ್ತ, ನಾನ್ಯದೇವರ ವ್ಯಾಖ್ಯಾನ ಬರೆದಿದ್ದಾರೆ.

೧೩ನೆಯ ಶತಮಾನದ ಆದಿಭಾಗದಲ್ಲಿ ದೇವಗಿರಿ ಯಾದವ ಅರಸ ಸಿಂಘಣನ ಕೋಶಾಧ್ಯಕ್ಷ ಶಾರ್ಙ್ಗದೇವ 'ಸಂಗೀತ ರತ್ನಾಕರ' ಗ್ರಂಥವನ್ನು ರಚಿಸಿದ. ಇದು ಭಾರತೀಯ ಸಂಗೀತದ ಲಕ್ಷಣ ಗ್ರಂಥ. ಮತಂಗ ಮುನಿಯ ಬೃಹದ್ದೇಶಿ ಗ್ರಂಥದಲ್ಲಿ ರಾಗ ಸ್ವರೂಪಗಳ ಪ್ರಸ್ತಾಪವಿದೆ. ಸಂಗೀತ ಮಕರಂದದಲ್ಲಿ ರಾಗರಾಗಿಣಿ ಪದ್ಧತಿ ಮೂಲ ರೂಪದ ಪ್ರಸ್ತಾಪವಿದೆ. ಶಾರ್ಙ್ಗದೇವನ ಸಂಗೀತ ರತ್ನಾಕರ ಗ್ರಂಥದ ಬಗೆಗೆ ಕಲ್ಲಿನಾಥ, ಸಿಂಹ ಭೂಪಾಲ, ಗಂಗಾರಾಮ್ ವ್ಯಾಖ್ಯೆ ಬರೆದಿದ್ದಾರೆ.

ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನ ಕವಿ ಅಮೀರ್ ಖುಸ್ರು ಸಂಗೀತ ಶಾಸ್ತ್ರದ ಬಗೆಗೆ ಗ್ರಂಥ ರಚಿಸಿದ. ಆದರೆ ರಾಗ, ತಾಳ ಪ್ರಬಂಧ ವಾದ್ಯಗಳನ್ನು ರಚಿಸಿದ್ದಾನೆ. ಅಮೀರ್ ಖುಸ್ರು ಹಿಂದೂಸ್ಥಾನೀ ಉತ್ತರಾದಿ ಸಂಗೀತ ಶೈಲಿಯನ್ನು ನಿರೂಪಿಸಿದ. ಅವನ ಕಾಲದಿಂದ ಮುಂದಕ್ಕೆ ಭಾರತೀಯ ಸಂಗೀತ ಸಂಪ್ರದಾಯ ಉತ್ತರಾದಿ (ಹಿಂದೂಸ್ಥಾನಿ) ದಕ್ಷಿಣಾದಿ (ಕರ್ನಾಟಕ) ಎಂದು ಎರಡು ಬಗೆಯಾಯಿತು. ಚಾಲುಕ್ಯ ಸೋಮೇಶ್ವರನ ಕಾಲದಲ್ಲಿಯೇ ದಕ್ಷಿಣಾದಿ ಸಂಗೀತ (ಕರ್ನಾಟಕ)ದ ಉಗಮವಾಗಿತ್ತು ಎಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ.

ನಿಜಗುಣ ಶಿವಯೋಗಿಯ ಕೈವಲ್ಯ ಪದ್ಧತಿ ಗ್ರಂಥ ಸಂಗೀತದ ವಿಷಯವನ್ನು ಪ್ರಸ್ತಾಪಿಸಿರುವ (ಚರ್ಚಿಸಲ್ಪಟ್ಟಿರುವ) ಪ್ರಪ್ರಥಮ ಕನ್ನಡ ಗ್ರಂಥ ಉತ್ತರ ಮತ್ತು ದಕ್ಷಿಣ ಸಂಗೀತ ಸಮನ್ವಯಕ್ಕೆ ಕನ್ನಡಿಗ ಗೋಪಾಲನಾಯಕ ಪ್ರಯತ್ನಿಸಿದ. ಗೋಪಾಲನಾಯಕ ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನ ಗಾಯಕ ಅಮೀರ್ ಖುಸ್ರುವಿನ ಶಿಷ್ಯ.

ಪಾರ್ಶ್ವದೇವ, ವಿದ್ಯಾರಣ್ಯ, ಪುಂಡರೀಕ ವಿಠಲ ರಾಮಾಮಾತ್ಯ, ಅಚಲಾನಂದದಾಸ, ನರಹರಿ ತೀರ್ಥ, ಪುರಂದರ, ಕನಕದಾಸರು ಚಿಕ್ಕದೇವರಾಜ, ನಂಜರಾಜರು ಕರ್ನಾಟಕ ಸಂಗೀತಕ್ಕೆ ಅನುಪಮ ಸೇವೆ ಸಲ್ಲಿಸಿದ್ದಾರೆ. ಸಂಗೀತ ಸಮಯಸಾರ, ಸಂಗೀತ ಸಾರ, ಸದ್ರಾಗ ಚಂದ್ರೋದಯ, ರಾಗ ಮಂಜರಿ, ರಾಗ ಮಾಲಾ, ಸ್ವರ ಮೇಳ ಕಲಾನಿಧಿ, ರಾಗ ವಿಬೋಧ, ಚತುರ್ದಂಡಿ ಪ್ರಕಾಶಿಕಾ, ಗೀತ ಗೋಪಾಲ, ಮನಸೋಲ್ಲಾಸ, ಸಂಗೀತ ಗಂಗಾಧರ ಇವು ಕರ್ನಾಟಕ ಸಂಗೀತದ ಬಗೆಗೆ ಪೂರ್ಣ ಪರಿಚಯವನ್ನು ಒದಗಿಸಿಕೊಡುವ ಶಾಸ್ತ್ರೀಯ ಗ್ರಂಥಗಳು. ಉತ್ತರಾದಿ ಸಂಗೀತ ಪರಿಚಯಕ್ಕೆ ಅನುಪಮ ವಿಲಾಸ, ಅನುಪಮ ಸಂಗೀತ ರತ್ನಾಕರ, ಅನುಪಮಾಂಕುಶ ಉತ್ಕೃಷ್ಟ ಶಾಸ್ತ್ರೀಯ ಸಂಗೀತ ಗ್ರಂಥಗಳು. ತಾನ್‌ಸೇನ್, ಸದಾರಂಗ, ಅದಾರಂಗ, ಮಾನರಂಗ ಶ್ರೇಷ್ಠ ಸಂಗೀತ ಕಲಾವಿದರು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಕರ್ನಾಟಕ ಸಂಗೀತ ಶೈಲಿಯು ವೈಶಿಷ್ಟ್ಯಪೂರ್ಣ. ನಿರೂಪಣೆಯ ಪ್ರಸ್ತಾಪಕ್ಕೆ ವಿದ್ಯಾರಣ್ಯರ 'ಸಂಗೀತಸಾರ' ರಾಮಾಮಾತ್ಯರ "ಸ್ವರಮೇಳ ಕಲಾನಿಧಿ" ಉತ್ತಮ ಉದಾಹರಣೆಗಳು. ವೆಂಕಟಮಖಿಯ "ಚತುರ್ದಂಡಿ ಪ್ರಕಾಶಿಕೆ" ಉತ್ತಮ ಸಂಗೀತ ಶಾಸ್ತ್ರ ಲಕ್ಷಣ ಗ್ರಂಥ. ಇದರಲ್ಲಿ ೭೨ ಮೇಳರಾಗಗಳ ನಿರೂಪಣೆ ಇದೆ.

ಕಾವ್ಯಗಾನ ರಸ ಪ್ರವಾಹ ಕವಿ ಜಯದೇವನ ಗೀತ ಗೋವಿಂದದಿಂದ ಆರಂಭವಾಗುತ್ತದೆ. ವಿದ್ಯಾಪತಿ, ಚಂಡೀದಾಸ, ಚೈತನ್ಯ, ತುಳಸಿದಾಸ್, ಸೂರದಾಸ, ಮೀರಾಬಾಯಿ, ಗುರುನಾನಕ್, ತಾನಸೇನ್, ಕಬೀರ್, ರಕನಾಥ್, ತುಕಾರಾಮ್, ಕರ್ನಾಟಕದ ಪುರಂದರದಾಸರು. ಬಸವಾದಿ ಶರಣರು—ಶರಣೆಯರು, ಅನ್ನಮಾಚಾರ್ಯ, ಕ್ಷೇತ್ರಯ್ಯ, ನಾರಾಯಣ ತೀರ್ಥ, ತ್ಯಾಗರಾಜ, ಶ್ಯಾಮ ಶಾಸ್ತ್ರಿ, ಮುತ್ತು ಸ್ವಾಮಿ ದೀಕ್ಷಿತರು ಸಂಗೀತ ಸರಸ್ವತಿಯನ್ನು ಶ್ರದ್ಧಾ ಭಕ್ತಿಗಳಿಂದ ಪೂಜಿಸಿದ ಮಹಾ ವ್ಯಕ್ತಿಗಳು. ಈ ಪೀಳಿಗೆಯು ರಾಗಸುಧೆಗಣನೀಯವಾಗಿದೆ.

ರಾಗಾಂಗ, ಭಾಷಾಂಗ, ಕ್ರಿಯಾಂಗ, ಉಪಾಂಗ ಇವು ಸಂಗೀತದಲ್ಲಿ ಮುಖ್ಯವಾದ ನಾಲ್ಕು ಅಂಗ (ಭಾಗ)ಗಳು. ನಿಬದ್ಧ ಗಾಯನ—ನಿಯಮ ಪೂರಿತವಾದುದು, ಕೌಶಲ್ಯವೇ ಮುಖ್ಯ ಸಾಧನ. ಅನಿಬದ್ಧ ಗಾಯನ—ಅಂತರಿಕ ಅನುಭವ—ಆನಂದಗಳ ಕೃತಿ ಧ್ವನಿಯಾಗಿರುತ್ತದೆ. ಧ್ರುವ, ಪದ, ವರ್ಣ, ಗೀತ, ಸ್ವರಜತಿ, ತಿಲ್ಲಾನ, ತ್ರಿಪುಟ, ಚದುರಂಗ, ಪಲ್ಲವಿ ಇವು ರಾಗಗಳಿಯ ಪ್ರಧಾನವಾದುವು, ಕೀರ್ತನ, ಪದ, ಭಜನೆ, ರುಪ್ರಿ, ಅಷ್ಟಪದಿ, ಜಾವಳಿ ಇತ್ಯಾದಿಗಳು ಕಾವ್ಯಗಾನ ಸಮ್ಮಿಳನಕ್ಕೆ ಉದಾಹರಣೆಗಳು.

ಮಂದ್ರ, ಮಧ್ಯ, ತಾರಕ— ಎಂದು ಸಂಗೀತದಲ್ಲಿ (ಗಾಯನದಲ್ಲಿ) ಮೂರು ಶ್ರೇಣಿಗಳು, ನ್ಯಾಸ, ಅಪನ್ಯಾಸ, ವಿನ್ಯಾಸ ಇವು ಉಪಯುಕ್ತ ಸ್ವರಗಳು. ಸಾಹಿತ್ಯದ ರೂಪ ರಚನೆಗಳನ್ನು ತಿಳಿಯಲು ಪ್ರಸ್ತಾರ ಹಾಕಿರುತ್ತಾರೆ. ತಾನ, ವರ್ಣ, ಅಲಂಕಾರ, ಗಮಕಗಳು ಕ್ರಮ ಬದ್ಧ ರಚನಾ ವಿನ್ಯಾಸಗಳು.

ಸಂಗೀತ ಜನ ಮನ ರಂಜನೀಯ, ರಮಣೀಯ ಕಲೆ, ಸಂಗೀತದ ಬಗೆಗೆ ಸಾಕಷ್ಟು ಶಾಸ್ತ್ರ ಗ್ರಂಥಗಳು ಇವೆ. ಸಂಗೀತದ ಶಕ್ತಿ, ಸೌಂದರ್ಯಗಳು ಗಾಯಕನ ಸಾಧನೆ, ಶ್ರದ್ಧೆಗಳನ್ನು ಅವಲಂಬಿಸಿರುತ್ತದೆ.

ಇತ್ತೀಚಿಗೆ ಸಂಗೀತದ ಮೂಲಕ ಹ

(ಎಂಟನೇ ಪುಟ ನೋಡಿರಿ)



ರಥ ಚಲಿಸುವ ದಾರಿಯಲ್ಲಿ

ಸಹಸ್ರಾರು ಬಾಹುಕರು ರಥದ ಹಗ್ಗಕ್ಕೆ ಕೈನೀಡಿ, ಅದನ್ನು ಶಕ್ತಿಯನ್ನು ತಮ್ಮಲ್ಲಿ ತುಂಬಿಸಿ, ತೇರಿನ ಗಾಲಿಗಳನ್ನು ಮುಂದಕ್ಕೆ ಚಲಿಸುತ್ತಾರೆ. ಚಕ್ರಗಳ ಜತೆಗೆ ರಥ ಕೂಡಾ ಸಾಗುತ್ತದೆ ಸಾವಿರ ಭುಜಗಳ ಬಲವೇ ರಥವನ್ನು ಮುಂದೂಡುವ ಚೇತನ.

ಅನೇಕ ಶಕ್ತಿಯ ಸಂಘಟನೆಯೇ ಬೆಳೆಯುತ್ತಿರುವ ಸಂಸ್ಥೆಯ ಸಂಚಲನ ಶಕ್ತಿ. ಅಸಂಖ್ಯಾತ ಮಂದಿ ನೌಕರರ, ಗಿರಾಕಿಗಳ, ಶೇರುದಾರರ, ಹಿತೈಷಿಗಳ ಸಹಕಾರದ ಹಸ್ತವೇ ಸಿಂಡಿಕೇಟ್ ಬ್ಯಾಂಕನ್ನು ಪ್ರಗತಿಯ ದಾರಿಯಲ್ಲಿ ಚಲಿಸಿದ ಅವ್ಯಕ್ತ ಶಕ್ತಿ. ಕಿರಾ ಚಿಕ್ಕ ಗಾತ್ರದಲ್ಲಿ ಅಸ್ತಿತ್ವಕ್ಕೆ ಬಂದ ಈ ಬ್ಯಾಂಕು, ತನ್ನ ದೀರ್ಘ ಕಾಲದ ದಕ್ಷ, ಪ್ರಾಮಾಣಿಕ ಸೇವೆಯಿಂದ ಜನರ ವಿಶ್ವಾಸವನ್ನು ಗಳಿಸಿ, ಪೂರ್ಣ ಚೈತನ್ಯವನ್ನು ಮೈತುಂಬಿಸಿಕೊಂಡು, ಇಂದು ಬೃಹದ್ರಥದ ಗಾತ್ರದಲ್ಲಿ ಬೆಳೆದಿದೆ. ಬೆಳೆದು ಖಜಾನೆ ನಿಂತಿಲ್ಲ. ಸಹಸ್ರಾರು ಜನಬಲದಿಂದ ಏರುದಾರಿಯಲ್ಲಿ ದ್ರುತಗತಿಯಿಂದ ಮುನ್ನಡೆಯುತ್ತಿದೆ. ಬಹುಮುಖದ ಆರ್ಥಿಕ ಸೇವೆಯನ್ನು ವ್ಯಾಪಕ ಪ್ರಮಾಣದಲ್ಲಿ ನೀಡಲು ತನ್ನ ಪ್ರಯಾಣವನ್ನು ಮುಂದುವರಿಸುತ್ತಿದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.



ವಿಚಾರವೀಚಿ

'ಒಡಹುಟ್ಟಿದವರು'ನಲ್ಲಿ ಅನುಭವದ ಆಳ

ಬರೆದವರು: ಶ್ರೀಮತಿ ರಮಾ ನಾಗೇಶ.

ಜೀವನದ ಹೋರಾಟ ಎಷ್ಟು ಸ್ವಾಭಾವಿಕವೋ ಬರಹವು ಅಷ್ಟೇ ಸ್ವಾಭಾವಿಕವಾಗಿದ್ದರೆ ಆ ಬರಹದ ಮೇಲೆ ಓದುಗನಿಗಾಗುವ ಪರಿಣಾಮ ಅಷ್ಟೇ ಸ್ವಾಭಾವಿಕವಾಗಿರುವ ರೀತಿಯೇ ಬರಹಗಾರನ ಮೇಲೆ ನೂತನ ಗೌರವ, ಅಭಿಮಾನವೂ ಅದಕ್ಕೆ ಸ್ವಾಭಾವಿಕವಾದುದು.

ಮನಸ್ಸು ಸ್ವಾರ್ಥದ ಹೋರಾಟದಲ್ಲಿ ಎಲ್ಲರೂ ಅವರವರ ಸ್ವಾರ್ಥದ ಜೀವನ ಮಾಡುತ್ತ, ಶಕ್ತಿ ಮೀರಿ ದುಡಿಯುವುದು ತ್ಯಾಗ ಪ್ರೇಮದ ಕೆಲಸವನ್ನು ಮಾಡುತ್ತಾನೆ. ಮಹಾ ... ದಾನ ಧರ್ಮ ತತ್ತ್ವ ... ಆದರೆ ಮೋಕ್ಷ ಎಲ್ಲರಿಗೂ ಸಿಕ್ಕಿಬಿಟ್ಟರೆ ಗಂಟಲ್ಲ ... ಅದಕ್ಕೆ ಪ್ರಯತ್ನವೂ ಅತೀ ವಿವಿಧವಾಗಿರಬೇಕು ಎ ... —ಯೋಚಿಸುವಾಗ ... ಎನ್ನುವ ಮಾತು ... ಅಂಥ ಸ್ಥಿತಿ ಬರುತ್ತಿದ್ದರೆ ಆ ಸಂದರ್ಭದಲ್ಲಿ ಬದಲಾವಣೆ ಸಂಘರ್ಷವನ್ನು ... ಒಡಹುಟ್ಟಿದವರ ಜೀವನವನ್ನು ತಮ್ಮ ... ತೋರಿಸುತ್ತಾರೆ.

1) ... 2) ಆಳದ ಮೇರೆ ... ಯಶವಂತರಾಯ, 3) ... 4) ... 5) ಒಡಹುಟ್ಟಿದವರಲ್ಲ—... ವಾಸಂತಿ ... ಜೀವರಾಯರು.

ಮೇಲಿನ ಕುಟುಂಬದ ವ್ಯಕ್ತಿತ್ವವು ಓದುಗನ ಮೇಲೆ ಎಂಥ ಸ್ವಾಭಾವಿಕ ಪರಿಣಾಮ ಮಾಡುತ್ತದೆಂದು ಅನುಭವಿಸಿದವರು ಬಲ್ಲರು.

ಯಶವಂತರಾಯರು ಮುಕ್ತರೇ? — ಎಂಬ ಸಂಶಯ ಉದ್ಭವಿಸುತ್ತದೆ. ... ಬೇರೆ. ... ಆದರೆ 'ಒಡಹುಟ್ಟಿದವರು' ... ವ್ಯಕ್ತಿಗಳಲ್ಲಿ ಜೀವನದಲ್ಲಿ ... ಮಾಸಂತಿಯಂದೇ ಸ್ಪಷ್ಟವಾಗಿ ಹೇಳಬಹುದು.

ನನ್ನ ಈ ಬರಹದಲ್ಲಿ 'ಒಡಹುಟ್ಟಿದವರು' ... ಮಾತುಗಳನ್ನು ಅದು ಹುಟ್ಟಿಸುವ ಮನೋಭಾವಗಳನ್ನು ... ಪ್ರಯತ್ನಿಸುತ್ತೇನೆ.

೧"ಇವತ್ತು ನಮ್ಮ ಮನೆಗೆ ಬಂದು ... ಬಂದಿತ್ತು ... ದ ... ಅವಳ ... ಅವಲಕ್ಷಣ'—ಪುಟ ೨೨.

ಕಲಿತ ... ಕಲಿತ ... ನೋಡಲು ಬರಬೇಕಾದ ... ಬಗ್ಗೆ ಹೇಳುವ ಮಾತು.

೨ "ನಗನಿ, ಸುಧಾ ನಮ್ಮನ್ನು ಮುಳುಗಿಸಿದ, ಹೆಣ್ಣು ಕೊಟ್ಟ ಅವರನ್ನೂ ಮುಳುಗಿಸಿದ"—ಪುಟ ೩೨.

ಇಂಗ್ಲೆಂಡಿಗೆ ತನ್ನ ಮಗ ಕಲಿಯಲು ಹೋಗಿ ... ಬಲಿಬಿದ್ದಾಗ ... ಬಹಳ ದುಃಖದಿಂದ ತನ್ನ ... ಮಗನ ... ಆಡುವ ಮಾತು.

೩ 'ಜುಟ್ಟು ಕತ್ತರಿಸಿ ಮಾಡಬೇಕು, ದುಡ್ಡಿಗೆ ... ಪ್ರಪಂಚವಿಲ್ಲ. ಅವನು ... ಡಿಗ್ರಿ ಪಡೆದು ಬರಲಿ" — ಪುಟ ...

ತಳಿಖಾನೆ ... ಹಣವನ್ನು ದುಂದುವೆಚ್ಚ ಮಾಡುತ್ತಾ ಪುನಃ ಪುನಃ ... ಬೇಡಿದಾಗ ... ಆ ಸಂದರ್ಭದಲ್ಲಿ ... [... ವನನ್ನು] ಗಂಡನನ್ನ ಅವಿವೇಕತನಕ್ಕೆ ... ವಿದ್ಯಾಭ್ಯಾಸ ಮುಗಿಸಿ ಬರುವಂತೆ ಮಾಡಬೇಕು ಎಂದು ವಿವೇಕವಾಗಿ ಹೇಳುವ ಮಾತು.

೪ 'ಇವನ್ನು ... ಟ್ಯೂಟರ್ ... ಎಂಬುದಲ್ಲವೆ? ನನಗಂದೂ ಹಾಗೆ ಅನಿಸುತ್ತಿಲ್ಲ'—ಪುಟ ೫೬.

ಭಾರತೀಯ ... ತನ್ನ ... ಅದಿ ... [ಇಂಗ್ಲೆಂಡಿ ಪ ... ಸ್ವಭಾವ ...] ... ಹಾಗೆ ಅನಿಸುತ್ತಿಲ್ಲ ಎಂದು ... ವ್ಯಕ್ತಪಡಿಸುವ ಮಾತು.

೫ 'ಶೇಕ್ಸ್‌ಪಿಯರ್ ... ಶ' ಪುಟ ...

ಡಾ ... ಶೇಕ್ಸ್‌ಪಿಯರನ ಕುರಿತಿನವನ್ನು ಬಹಳ ... ಹೇಳದ ಹಾಗೆ ಇದ

೬ '... ನನಗೆ ... ಬಂದಿಲ್ಲ.

... ನನಗೆ ಇಷ್ಟವಿತ್ತು ... ಮುಂದಿನ ... ಮರಳಿ ಕೊಡುತ್ತೇನೆ. —ಪುಟ ೯೨

ಭಾರತೀಯ ವಿದ್ಯಾರ್ಥಿನಿ, ಭಾರತೀಯ ವಿದ್ಯಾರ್ಥಿ ... ಸಹಾಯ ಮಾತ್ರದಿಂದಲೇ ... ಪ್ರಸಂಗ, ಸುಧಾಕರ ... ರೀತಿಯ ... ಅಡಚಣೆಯಲ್ಲಿದ್ದ ... ತನ್ನ ... ಹಣ ಕೇಳುವ ಸಂದರ್ಭ.

೭) "ಇಲ್ಲದಿದ್ದರೆ ಬರುತ್ತದೆ ... ದವಳು ... ಉಂಟು ಗಂಡಸಿನ ಬಾಳು. ಇಲ್ಲದ ಹೋದರು, ಏನೆಂದೀಯ ಬಂದಗೆ ಒಡವೆ ... ಹಾಗೆ', ಪುಟ ೨೦೬.

ಬಾಳಿನಲ್ಲಿ ಹೆಣ್ಣಿನ ಸ್ಥಾನವೇ ಹಿರಿದು. ಬಾಳು ... ಮುಖ್ಯ ಎನ್ನುತ್ತಿದ ಈ ವಾಕ್ಯ.

೮) 'ದೇವರ ಗುಡಿಗಳು ಭಕ್ತಿ ಸಮರ್ಪಣೆಗೆ ಮಾತ್ರ ಸ್ಥಳವಲ್ಲವಷ್ಟೇ, ಈ ಕೆಲಸ ಕೇವಲ ವಿಗ್ರಹದ ಮುಂದೆ. ದೀಪದ ಬೆಳಕಿನಲ್ಲಿ ಅಲ್ಲಿಯ ... ನೋಡು; ಅನಂತರ, ಆ ಮೊದಲ—... ಬೀದಿ ... ಜನಾರ್ಧನನ ... ದೇವಾಲಯ' —ಪುಟ ೨೧೭

ಎಲ್ಲಾ ದೇವಾಲಯಗಳಲ್ಲೂ, ಜಾತ್ರೆ ಸಮಾರಂಭಗಳಲ್ಲೂ ... ಕಾಣಬಹುದಾದ ನೋಟವಿದು.

೯) ಮದುವೆ ಆಯಿತು—ಎಂದ ಕೂಡಲೇ ... ಸಮಸ್ಯೆ ... ಯೇ? ಅದು ಆಗಷ್ಟೇ ತೊಡಗುತ್ತದೆ. ಮದುವೆಯ ತನಕ ಗಂಡು—ಹೆಣ್ಣಿನ ಸಮಸ್ಯೆ ಒಂದು ತೆರನಾಗಿದ್ದರೆ, ಅನಂತರ ಹುಟ್ಟಿಕೊಳ್ಳುವ ಸಮಸ್ಯೆಗಳೇ ಬೇರೆ; ಇನ್ನೊಂದು ತೆರ'— ಪುಟ ೨೭೩.

ಮದುವೆಯಾದವರೆಲ್ಲರೂ ಅನುಭವಿಸಿ ತಿಳಿದ ಮಾತಿದು.

೧೦) '... —ಎಂದರೆ ... ಹೊತ್ತುಕೊಂಡು ಹೋಗಿ ಬಿಟ್ಟು ಬರಲು ಬರುತ್ತದೆಯೇ? ಎರಡು ಜೀವಗಳ ಪ್ರಶ್ನೆಯದು...ಎರಡು ಮನಸ್ಸುಗಳ ಪ್ರಶ್ನೆಯಲ್ಲವೇ? ನಮ್ಮ ... ಗಂಡು ... ತರಲು ಒಂದು ... ತಂದ ಮೇಲೆ ಉಳಿಸಿ, ... ಈ ಎರಡು ಮನಸ್ಸುಗಳಿದ್ದಲ್ಲವೇನು?' —ಪುಟ ೨೭೪.

ಹೆಣ್ಣು ಗಂಡಿನ ಸಮಸ್ಯೆ ಎಂದರೆ— ... ಬಾಳಬೇಕು... ವಿವೇಕವಾಗಿ ಆಲೋಚಿಸಿ ಬದುಕನ್ನು ಸಾಗಿಸಬೇಕು ಎಂದು ಅನುಭವ ಪೂರ್ಣವಾಗಿ ಹೇಳುತ್ತಾರೆ.

೧೧.) ... ಉಪಾಧ್ಯಾಯಿನಿಯಾದಳು. ಸ್ವತಂತ್ರಳಾದಳು ... ಹೊಟ್ಟೆಗೆ ... ದೂರೆಯಿತು ... ಸಮಸ್ಯೆಯು ... ತೊಡಗಿದುದು ಈಗ. ಅದರಿಂದಲೇ ... ಗಂಡನಿಲ್ಲದ ... ಹೆಣ್ಣು ... ಬೇಕು—ಎಂದು ಯೋಚಿಸುತ್ತ ... ಅವಳ ... ಪುಟ. ೩೯೧.

ಸಮಸ್ಯೆ—ಗಂಡು ಹೆಣ್ಣು—ಸಮಸ್ಯೆಯ ... ಇರುವ ... ಎಷ್ಟು ... ಎಂದು ಈ ಮಾತು ತಿಳಿಸುತ್ತದೆ.

೧೨. "ಆ ಮಾತಿಗೆ ಇನ್ನು ಉತ್ತರಕೊಡಲಾರದಾದಳು ವಾಸಂತಿ. ಅವಳು ತೇಲಿಸಿ ಉತ್ತರ ಕೊಟ್ಟಳು. ಕತೆಹೇಳಿ ಅವರ ಮನಸ್ಸನ್ನು ಆಡ್ಡಯೋಚನೆಗೆ ... ಳು. ಆದರೆ ಆ ಮಗು ಕೇಳಿದಪ್ರಶ್ನೆ ಮಾತ್ರ ಮನಸ್ಸನ್ನು ಕೊರೆಯ ತೊಡಗಿತು. ಆ ರಾತ್ರಿ ... ತನ್ನ ಪ್ರಶ್ನೆ ಮರೆಯಲಿಲ್ಲ. ಪುಟ ೩೯೩.

ಗಂಡನ ಮೇಲಿನ ... ಮಗಳ ... ಮನಸ್ಸಿನಿಂದಲೇ ... ನ್ನ ಅಳಿಸುವ ಪ್ರಕರಣವಿದು.

೧೩ '... ಗಳಿಗೆಗೆ ... ಭೂಮಿ ... ನಾಳ್ಯಾದಿನ ... ನಿಲ್ಲದೆ ಬಾಳಿಯೇನು ಎಂದು ... ಊಹಿಸಿರಬಹುದು! ಗಂಡಿಲ್ಲದೆ ಹೆಣ್ಣು ಬಾಳದೆಂದು ಈಗ ತಿಳಿದಿದೆ ಅದಕ್ಕೆ ... ವ ... ತಮ್ಮಯಿಂದ ... ಅವಳಿಗೆ ... ತೃಪ್ತಿ ... ಬೇಕು?'—ಪುಟ ೩೯೬.

ವಾಸಂತಿಗೆ ತಿಳುವಳಿಕೆ ಸಾಲದೆ ಹೋಗಿ ಈ ದಾರಿ ಹಿಡಿಯಬೇಕಾಯಿತು. ಎಂದು ಕಾಣಿಸುತ್ತದೆ ... ಸರಿಯಲ್ಲದ ಬದುಕಿಗೆ ತಿಳುವಳಿಕೆ ಬೇಕೇ?

೧೪. 'ಸಂಸಾರವೆಂದರೆ ನಾವು ಮಾಡಿದರುಂಟು, ಬೆಳೆಸಿದರೆ ಉಂಟು. ಅದು ತನ್ನಿಂದ ತಾನೇ ಹುಟ್ಟುವುದಿಲ್ಲ; ಕೂಡುವುದಿಲ್ಲ, ಬೆಳೆಯುವುದಲ್ಲ. ಅದು ಒಡೆದು ಬಹುದಾದ ... ಎಲ್ಲರ ಜೀವನದಲ್ಲೂ ಬರುತ್ತದೆ'—ಪುಟ ೩೯೯.

ಸಂಸಾರ ಎಂದರ ಇಷ್ಟೇ ಅಲ್ಲವೇ? ... ದಕ್ಕೂ ... ಏನಿದೆ?

೧೫ 'ಹೀಗೆಯೇ ... ಬಂದೆ ... ಎಂತಹುದೂ ಇಲ್ಲ. ದೇಹ ಅದು ... ಅದು; ಹಾಗೆ ಸುಮ್ಮನಿರುವುದು. ... ವೂ ಅಲ್ಲ; ನಿನ್ನ ಮೇಜಿನ ಮೇಲೆ ಇಟ್ಟುಕೊಂಡಿರುವ ಪುಸ್ತಕಗಳೇ ಹೇಳುತ್ತವೆ— ನಿನ್ನ ಮನಸ್ಸು ಏನು ಬೇಡುತ್ತದೆ—ಎಂದು. ... ತಪ್ಪು ... ನಾನು. —... ಭಾವಿಸಿಕೊಂಡು ... ಇಲ್ಲದ ... ಅನ್ನುವುದು ನಾನು." —ಪುಟ ೩೦೦,

—... ತಪ್ಪು ತಿಳುವಳಿಕೆಯಿಂದ, ಅಹಂಕಾರದಿಂದ ಸಂಸಾರದಲ್ಲಿ ಒಡಕು ಹುಟ್ಟಿಕೊಂಡು ಮುಂದಿನ ಬಾಳು ಯಾವ ದಾರಿ ಹಿಡಿಯಬಹುದು. ಎಂದು ಹೇಳಲಾಗದು, ಮೇಲಿನ ಅಂಥ ಸಂದರ್ಭದಲ್ಲಿ ಒಂದನ್ನು ತೋರಿಸುತ್ತದೆ.

ಒಡಹುಟ್ಟಿದವರು ಕುಟುಂಬದಲ್ಲಿ ಬಾಳಿನ ... ಸಾಮಾನ್ಯವಾದ ಮಾತುಗಳಿಂದ ... ಜನ ಜೀವನದ ಸ್ವಾಭಾವಿಕತೆಯ ಮೇಲೆ ಬೆಳಕು ಚೆಲ್ಲಿದ್ದಾರೆ ... ಕಾರಂತರು.

ತನ್ನ ... ಕಾಲದಲ್ಲಿ ... ಮತ್ತು ... ನೋಡುವವನು ... ನೂ ... ಆಗುವನು

೦ ೦ ೦

... ತನ್ನ ಯೌವನದಲ್ಲಿ ... ಜೀವನ ನಡೆಸದ ... ಇಲ್ಲದ ... ಮಾಡಿಯಾಗಿದ್ದರೆ ತಿಳಿಗೇಡಿ ... ಭವಿಷ್ಯದ ಬಗ್ಗೆ ... ಆತನಿಗೆ ಭವಿಷ್ಯವೆಂದು.

೦ ೦ ೦

... ಮತ್ತು ... ನೂ ... ತಿಳಿಗೇಡಿಗಳ ... ಉಪ್ಪಾಗ್ಗಿಷಣ.

ಇದು ನಮ್ಮ ಭಾರತ

ಅಮಿಬಿಯಾಸಿಸ್ ಬಗೆ ಸಂಶೋಧನೆ

ಭಾರತೀಯ ಡಾ| ಗೋಪಾಲರಾಯರ ಅವಿರತ ಪರಿಶ್ರಮ— ಸಾಧನೆಯ ಫಲ

ಉಷ್ಣವಲಯದ ಪ್ರದೇಶಗಳಲ್ಲಿ ವ್ಯಾಪಕವಾಗಿರುವ ಅಮಿಬಿಯಾಸಿಸ್ ರೋಗದ ಬಗೆಗೆ ಇದೀಗ ಕೈಗೊಳ್ಳಲಾಗಿರುವ ಒಂದು ಸಂಶೋಧನೆ ಕಾರ್ಯಕ್ರಮದಿಂದ ಈ ರೋಗ ಹಬ್ಬಿಸುವ ಕ್ರಿಮಿಯ ಬಗೆಗೆ ಹೊಸ ವಿಷಯಗಳು ತಿಳಿದು ಬಂದಿವೆ. ಈ ಕ್ರಿಮಿಯನ್ನು ಶೀಘ್ರವಾಗಿ ಕಂಡು ಹಿಡಿಯುವ ಹೊಸ ವಿಧಾನಗಳನ್ನು ಸಿದ್ಧಗೊಳಿಸಲಾಗುತ್ತಿದೆ.

ಉಸ್ಮಾನಿಯಾ ಮೆಡಿಕಲ್ ಕಾಲೇಜಿನ ವೈದ್ಯ ವಿಜ್ಞಾನ ಸಂಸ್ಥೆಯ ಪ್ಯಾಥಾಲಜಿ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರಾಗಿರುವ ಡಾ| ಎ. ಗೋಪಾಲರಾವ್ ಅವರ ನೇತೃತ್ವದಲ್ಲಿ ೧೯೬೪ರಲ್ಲಿ ಐದು ವರ್ಷಗಳ ಈ ಸಂಶೋಧನ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಮೆರಿಕದ ಮೇರಿಲ್ಯಾಂಡಿನ ಬೆಥೆಸ್ಡಾದ ನ್ಯಾಷನಲ್ 'ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್'ನ ಸಹಕಾರದೊಡನೆ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಭಾರತದಲ್ಲಿರುವ ಅಮೆರಿಕ ಸರಕಾರದ ಪಿ. ಎಲ್. ೪೮೦ ರ ನಿಧಿಗಳಿಂದ ಉಳಿದ ರೂಪಾಯಿಗಳನ್ನು ಈ ಕಾರ್ಯಕ್ರಮದಲ್ಲಿ ಉಪಯೋಗಿಸಲಾಗುತ್ತಿದೆ.

೧೯೬೨ರಲ್ಲಿ ಡಾ| ಗೋಪಾಲರಾವ್ ಅವರು ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಯ ಆಶ್ರಯದಲ್ಲಿ ಅಮೆರಿಕದಲ್ಲಿ ೬ ತಿಂಗಳ ಪರಿಶೀಲನ ಸಂಚಾರ ಕೈಗೊಂಡಿದ್ದಾಗ ಎನ್. ಐ. ಎಚ್. ನ ಅಧಿಕಾರಿಗಳೊಡನೆ ಅನೌಪಚಾರಿಕವಾಗಿ ನಡೆಸಿದ ಚರ್ಚೆಗಳಿಂದ ಈ ಸಂಶೋಧನ ಕಾರ್ಯಕ್ರಮ ರೂಪುಗೊಂಡಿತು.

ಇತ್ತೀಚೆಗೆ ಸಂಶೋಧನ ಪ್ರಗತಿಯ ಬಗೆಗೆ ಮಾತನಾಡುತ್ತಿದ್ದಾಗ, ಡಾ| ಗೋಪಾಲರಾವ್ ಅವರು, ಈ ರೋಗದ ಕೆಲವು ವಿಸ್ಮಯಕಾರಿ ಅಂಶಗಳನ್ನು ಪ್ರಸ್ತಾಪಿಸಿ, ೧೮೭೫ರಷ್ಟು ಹಿಂದೆಯೇ ರಷ್ಯದ ವಿಜ್ಞಾನಿಯೊಬ್ಬರು ಈ ರೋಗದ ಕಾರಣವನ್ನು ಕಂಡುಹಿಡಿದರೂ ಅದರ ಪ್ರಮುಖ ಅಂಶಗಳನ್ನು ಪತ್ತೆ ಹಚ್ಚಲು ಇನ್ನೂ ಸಾಧ್ಯವಾಗಿಲ್ಲ ಎಂದರು.

ಅಮಿಬಿಯಾಸಿಸ್ ರೋಗವು ಉಷ್ಣವಲಯದ ಪ್ರದೇಶಗಳಲ್ಲಿ ಹಬ್ಬಿದ್ದು, ಸಮಶೀತೋಷ್ಣವಲಯದಲ್ಲಿ ಅಪರೂಪವಾಗಿರುತ್ತದೆ. ಆದರೂ, ಈ ರೋಗಕ್ಕೆ ಕಾರಣವಾಗಿರುವ ಎಂಟಮೀಬಾ ಹಿಸ್ಟೊಲಿಟಿಕಾ ಎಂಬ ಕ್ರಿಮಿ ಯುರೋಪ್, ಅಮೆರಿಕಗಳ ಜನರಲ್ಲೂ ಕಂಡು ಬಂದಿದೆ. ಆದರೆ ಅದು ಕೇವಲ ರೋಗವಾಹಕ ಸ್ಥಿತಿಯಲ್ಲಿ ಸುಪ್ತವಾಗಿರುವುದು. ಉಷ್ಣವಲಯದಲ್ಲಿ ಈ ಕ್ರಿಮಿ, ಅಮೀಬಿಕ ಆಮಶಂಕೆ, ದೀರ್ಘಕಾಲಿಕ ಅಜೀರ್ಣ, ಹೆಪಟೈಟಿಸ್, ಪಿತ್ತಕೋಶದ ಹುಣ್ಣು ಮುಂತಾದ ಹಲವು ರೋಗಗಳಿಗೆ ಕಾರಣವಾಗುತ್ತಿದೆ.

ಈ ಕ್ರಿಮಿ ಭಿನ್ನ ದೇಶಗಳಲ್ಲಿ ಭಿನ್ನ ರೀತಿ ವರ್ತಿಸುವುದಕ್ಕೆ ಕಾರಣವೇನು? ಈ ಪ್ರಶ್ನೆಗೆ ಉತ್ತರವನ್ನು ಕಂಡು ಹಿಡಿಯುವುದು ಹೈದರಾಬಾದಿನ ಅಧ್ಯಯನದ ಮುಖ್ಯ ಗುರಿಗಳಲ್ಲೊಂದಾಗಿತ್ತು.

ಕಳೆದ ಎರಡೂವರೆ ವರ್ಷಗಳಲ್ಲಿ ಡಾ| ಗೋಪಾಲರಾವ್ ಮತ್ತು ಅವರ ಸಹಕಾರ್ಯಕರ್ತರು ಈ ರೋಗವು ವಿವಿಧ ಹಂತಗಳಲ್ಲಿ ನಾನಾ ರೂಪಗಳಲ್ಲಿದ್ದ ೫೫೦ ರೋಗಿಗಳನ್ನು ಪರಿಶೀಲಿಸಿದರು. ಸುಮಾರು ೧,೫೦೦ ಆರೋಗ್ಯಶಾಲಿ ಜನರನ್ನೂ ಪರಿಶೀಲಿಸಿದರು. ಈ ಅಧ್ಯಯನಕ್ಕೆ ಸಹಾಯಕವಾಗಿ, ಬಿಳಿ ಇಲಿ ಮತ್ತು ಗಿನಿ ಹಂದಿಗಳ ಮೇಲೆ ಬಹು ಎಚ್ಚರಿಕೆಯಿಂದ ಪ್ರಯೋಗಗಳನ್ನು ನಡೆಸಿದರು. ಉಷ್ಣವಲಯದ ಮತ್ತು ಸಮಶೀತೋಷ್ಣವಲಯದ ಪ್ರದೇಶಗಳಲ್ಲಿ ಆಹಾರ ಸೇವನೆಯ ಗುಣಾಂಶದಲ್ಲಿ ಅಂತರವಿದೆಯಾದುದರಿಂದ, ಆಹಾರ ಕ್ರಮಕ್ಕೂ ರೋಗವ್ಯಾಪ್ತಿಗೂ ಇರಬಹುದಾದ ಸಂಬಂಧವನ್ನು ಪರಿಶೀಲಿಸುವುದು ಈ ಪ್ರಾಣಿ ಪ್ರಯೋಗಗಳ ಗುರಿಯಾಗಿತ್ತು.

ಪೋಷಣೆ ಕಡಿಮೆಯಿರುವ ಆಹಾರವನ್ನು ಸೇವಿಸುವ ಪ್ರಾಣಿಗಳಲ್ಲಿ ಈ ಕ್ರಿಮಿ ರೋಗೋತ್ಪತ್ತಿ ಮಾಡಲು ಸಮರ್ಥವಾಗಿದೆ ಎಂದು ಈ ಪ್ರಾಣಿ ಪ್ರಯೋಗಗಳಿಂದ ಖಚಿತವಾಗಿ ತಿಳಿದುಬಂದಿದೆ. ಆದುದರಿಂದ ಅಲ್ಪ ಪೋಷಣೆಗೂ ಇದು ಉಷ್ಣವಲಯದ ದೇಶಗಳಲ್ಲಿ ಸಾರ್ವತ್ರಿಕವಾಗಿದೆ—ಅಮಿಬಿಯಾಸಿಸ್‌ನ ವ್ಯಾಪ್ತಿ ಹಾಗೂ ಉಗ್ರತೆಗೂ ಸಂಬಂಧವಿದೆ ಎಂದು ಭಾವಿಸಲಡ್ಡಿಯಿಲ್ಲ.

ಈ ಕ್ರಿಮಿಯು ಭಿನ್ನ ವ್ಯಕ್ತಿಗಳಲ್ಲಿ ಭಿನ್ನ ರೀತಿಗಳಲ್ಲಿ ವರ್ತಿಸುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ತೀವ್ರ ಆಮಶಂಕೆಯಿಂದ ನರಳಿ, ಅನಂತರ ಚೇತರಿಸುತ್ತಾನೆ. ಆದರೆ ಮತ್ತೊಬ್ಬ ವ್ಯಕ್ತಿ ಸೌಮ್ಯ ಆಮಶಂಕೆಯನ್ನು ಪಡೆದರೂ ಅನಂತರ ಜೀವ ಪರ್ಯಂತ ನರಳಿಕೊಂಡಿರಬೇಕಾಗುವುದು. ಇನ್ನೊಬ್ಬ ವ್ಯಕ್ತಿಯಲ್ಲಿ ಈ ಕ್ರಿಮಿ ಪಿತ್ತಕೋಶವನ್ನು ಬಾಧಿಸಬಹುದು. ಈ ಪರೋಪಜೀವಿಯ ಇಂಥ ಅನಿಶ್ಚಿತ ವರ್ತನೆಯ ಬಗೆಗೆ, ಹೈದರಾಬಾದಿನ ಸಂಶೋಧಕರು ವಿವಿಧ ಸಂದರ್ಭಗಳಲ್ಲಿ ಅಧ್ಯಯನ ನಡೆಸಿದರು.

ದೊಡ್ಡ ಜೀವಕೋಶಗಳನ್ನು ಹೊಂದಿರುವ ಎ. ಹಿಸ್ಟೊಲಿಟಿಕಾ ಮತ್ತು ಚಿಕ್ಕ ಕೋಶಗಳನ್ನುಳ್ಳ ಎ. ಹಾರ್ಟ್‌ಮನ್ನಿ ಈ ಎರಡು ರೀತಿಯ ಕ್ರಿಮಿಗಳ ಸ್ವಭಾವಗಳ ಬಗೆಗೂ ಸಂಶೋಧಕರು ಅಧ್ಯಯನ ನಡೆಸಿದರು. ಎ. ಹಾರ್ಟ್‌ಮನ್ನಿಯು ರೋಗವನ್ನು ಉಂಟುಮಾಡಲು ಅಸಮರ್ಥವಾಗಿದೆ ಎಂದು ಯುರೋಪಿನ ಹಾಗೂ ಅಮೆರಿಕದ ಸಂಶೋಧಕರು ಅಭಿಪ್ರಾಯಪಟ್ಟಿದ್ದರು. ಆದರೆ, ಎ. ಹಾರ್ಟ್‌ಮನ್ನಿಯು ತಯಾರಿಸುವ ಕೋಶಗಳು ಚಿಕ್ಕ ಗಾತ್ರವುಳ್ಳವುಗಳಾದರೂ, ಈ ಕ್ರಿಮಿ ಸಂಪೂರ್ಣ ನಿರುಪದ್ರವಿಯಲ್ಲ ಎಂದು ಹೈದರಾಬಾದಿನ ಅಧ್ಯಯನಗಳು ಸೂಚಿಸಿವೆ. ಇದುವರೆಗೆ ಭಾರತದ ಇತರ ಯಾವ ಸಂಶೋಧಕರೂ ಎ. ಹಾರ್ಟ್‌ಮನ್ನಿಯ ಸಂಶೋಧನೆ ನಡೆಸಿಲ್ಲವಾದುದರಿಂದ ಡಾ| ಗೋಪಾಲರಾವ್ ಅವರು ಈ ವಿಭಾಗದಲ್ಲಿ ಕ್ರಾಂತಿಕಾರೀ ಸಂಶೋಧನೆ ನಡೆಸುತ್ತಿದ್ದಾರೆ ಎನ್ನಬಹುದು.

ಭಾರತದಲ್ಲಿ ಈಗ ಈ ವಿಭಾಗದಲ್ಲಿ ರೋಗ ಪರೀಕ್ಷಾ ವಿಧಾನಗಳು ಸಮರ್ಪಕವಾಗಿಲ್ಲ. ಈ ಕೊರತೆಗೆ ಪರಿಹಾರ ಕಂಡು ಹಿಡಿಯುವುದು ಈ ಕಾರ್ಯಕ್ರಮದಿಂದ ದೊರೆಯಲಿರುವ ಒಂದು ಮುಖ್ಯ ಪ್ರಯೋಜನ. ಸಂಶೋಧಕರು ಈ ಕೊರತೆಯನ್ನು ನಿವಾರಿಸುವ ದಿನ ಹೆಚ್ಚು ದೂರವಿಲ್ಲ ಎಂದು ಹೇಳಲಾಗಿದೆ. ಪ್ರಸ್ತುತ ಜಠರ ಮತ್ತು ಕರುಳುಗಳಲ್ಲಿ ರೋಗ ಬಂದಾಗ ಮಾತ್ರ ಈ ಕ್ರಿಮಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆ. ದೀರ್ಘಕಾಲಿಕ ರೋಗಗಳಲ್ಲಿ, ಶೇಕಡ ೩೦ರಿಂದ ೪೦ರಷ್ಟು ಸಂದರ್ಭಗಳಲ್ಲಿ ಈ ಕ್ರಿಮಿಯನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ. ಈ ಪರಿಸ್ಥಿತಿಯನ್ನು ಸರಿಪಡಿಸಲು, ರಕ್ತ ಪರೀಕ್ಷೆಯ ಮೂಲಕ ಕ್ರಿಮಿಗಳನ್ನು ಪತ್ತೆ ಹಚ್ಚುವ ವಿಧಾನವೊಂದನ್ನು ಹೈದರಾಬಾದಿನಲ್ಲಿ ಕಂಡುಹಿಡಿಯಲಾಗಿದೆ.

ಡಾ| ಗೋಪಾಲರಾವ್ ಅವರು ಲಂಡನ್ ಯೂನಿವರ್ಸಿಟಿ ಸ್ಕೂಲ್ ಆಫ್ ಟ್ರಾಪಿಕಲ್ ಮೆಡಿಸಿನ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡುತ್ತಿದ್ದಾಗ ಅಮಿಬಿಯಾಸಿಸ್‌ನಲ್ಲಿ ಅವರ ಆಸಕ್ತಿ ಕೆರಳಿತು. ಆ ವಿಶ್ವವಿದ್ಯಾನಿಲಯದಿಂದ ಅವರು ಪಿಎಚ್. ಡಿ. ಡಿಗ್ರಿ ಪಡೆದರು.

೧೯೫೦ರಲ್ಲಿ ಉಸ್ಮಾನಿಯಾ ಮೆಡಿಕಲ್ ಕಾಲೇಜಿನ ಶಿಕ್ಷಕ ವೃಂದಕ್ಕೆ ಸೇರಿದನಂತರವೂ ಅವರು ಈ ವಿಷಯದಲ್ಲಿ ಅಧ್ಯಯನವನ್ನು ಮುಂದುವರಿಸಿದರು.

ತಮ್ಮ ಈಗಿನ ಸಂಶೋಧನ ಕಾರ್ಯದಲ್ಲಿ ಅವರು ಎನ್. ಐ. ಎಚ್.ನ ಸಹಕಾರಿಗಳೊಡನೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ಇವರಲ್ಲೊಬ್ಬರು ಡಾ. ಲೂಯಿಸ್ ಡೈಮಂಡ್. ಅವರು ಹೈದರಾಬಾದಿನ ಕಾರ್ಯಕ್ರಮದಲ್ಲಿ ನಿಕಟವಾಗಿ ಸಹಕರಿಸುತ್ತಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಅವರಿಲ್ಲಿಗೆ ಭೇಟಿಕೊಟ್ಟಿದ್ದರು. ಹೈದರಾಬಾದ್ ಮತ್ತು ಬೆಥೆಸ್ಡಾದ ನಡುವೆ ಸಂತತವಾಗಿ ಮಾಹಿತಿ ಮತ್ತು ವಿಚಾರಗಳ ವಿನಿಮಯವಾಗುತ್ತಿದೆಯಷ್ಟೆ ಅಲ್ಲದೆ, ಈ ಕಾರ್ಯಕ್ರಮದಲ್ಲಿ ಸಹಕರಿಸುವ ಅಮೆರಿಕದ ವಿಜ್ಞಾನಿಗಳು ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಹೈದರಾಬಾದಿಗೆ ಭೇಟಿಕೊಡುವರು.

ಈ ವರ್ಷ ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಈ ಕಾರ್ಯಕ್ರಮದ ಅಂತಿಮ ವರದಿ ಸಿದ್ಧವಾಗಲಿವೆ. ಈ ವರದಿಯು ಉಷ್ಣವಲಯದ ಬಹು ಕಠಿಣ ರೋಗವೊಂದರ ವಿರುದ್ಧವಾದ ಹೋರಾಟಕ್ಕೆ ಹೊಸ ಚೈತನ್ಯ ಒದಗಿಸಬಹುದಾದುದರಿಂದ, ವೈದ್ಯ ಪ್ರಪಂಚದಲ್ಲಿ ವಿಶೇಷ ಆಸಕ್ತಿಯನ್ನು ಕೆರಳಿಸಬಹುದು.

ಕುಪ್ಪಂ ರೇಲು ದುರಂತ

ಅಧಿಕಾರಿ ವರ್ಗ ನಿರ್ಮಿತವಲ್ಲವೆ?

ಮೊನ್ನೆ ಮೊನ್ನೆ ಕುಪ್ಪಂ ಬಳಿಯಲ್ಲಿ ಬೆಂಗಳೂರು–ಕೊಚ್ಚಿ ಎಕ್ಸ್‌ಪ್ರೆಸ್ ಬಂಡಿಗಾದ ಅಪಘಾತ ಇತ್ತೀಚೆಗೆ ನಡೆದ ರೇಲು ಅಪಘಾತಗಳಲ್ಲಿ ಭಾರೀ ದೊಡ್ಡದೆಂದು ಹೇಳಬೇಕು. ಸುಮಾರು ೭೦ಕ್ಕೂ ಮಿಕ್ಕಿದ ಮರಣಗಳೂ ಅದಕ್ಕಿಂತ ಹೆಚ್ಚು ಗಾಯಗೊಳ್ಳುವಿಕೆಯೂ ನಡೆದಿತ್ತು. ಆ ಪಘಾತದಲ್ಲಿ ಮೃತ್ಯುಮುಖರಾದವರಿಗೆ ಚಿರಶಾಂತಿಯನ್ನೂ ಅವರ ಕುಟುಂಬದವರಿಗೆ ಅನುಕಂಪವನ್ನೂ ಗಾಯಾಳುಗಳಿಗೆ ತೀವ್ರಗುಣಮುಖವಾಗುವ ಆಶಯವನ್ನೂ ರಾಜನಿಂದ ಹಿಡಿದು ಲೆಂಕನವರೆಗೂ ಎಲ್ಲರೂ ಪ್ರದರ್ಶಿಸಿದರು. ಹಾಗಾಯ್ತೆಂದು ಮತ್ತೆ ಮಾಡುವುದಾದರೂ ಏನು?

ಅಪಘಾತ ಹೇಗೆ ಸಂಭವಿಸಿತು, ಇದಕ್ಕೆ ಕಾರಣೀಭೂತರಾರು—ಎಂಬುದರ ಸಂಬಂಧವಾಗಿಯೂ ವಿಚಾರಣೆ ಆರಂಭವಾಗಿದೆ. ಇಲ್ಲಿಯೇ ಈ ದುರ್ಘಟನೆಯು ವಿಧಿಪ್ರೇರಿತವೆನ್ನುವುದಕ್ಕಿಂತ ಮನುಷ್ಯಪ್ರೇರಿತವೆಂಬುದು ತಿಳಿಯುತ್ತದೆ.

ಇದು ದುರ್ದೈವಿ ರೇಲು ನಿಜ—ಏಕೆಂದರೆ, ದುರಂತಕ್ಕೆ ಗುರಿಯಾದುದರಿಂದ, ಇದರ ಯಾತ್ರಿಕರೂ ದುರ್ದೈವಿಗಳೇ. ಆದರೆ, ಅದಕ್ಕೂ ಅವರಿಗೂ ದುರ್ದೈವದ ಮೂಲ ಇಂಜಿನ್—ಅಧಿಕಾರಿ ವರ್ಗ. ಹೊರಡುವಾಗಲೇ ಇಂಜಿನ್ನು ಸರಿಯಿರಲಿಲ್ಲ. ಈ ಇಂಜಿನ್ನು ಬೇಡ ಎಂದರು, ರೇಲ್ವೆ ಅಧಿಕಾರಿಗಳು ಕೇಳಲಿಲ್ಲವಂತೆ—ಮೇಲಧಿಕಾರಿಗಳ ಒತ್ತಾಯದಿಂದ ಚಾಲಕ ಓಡಿಸಿಕೊಂಡು ಬಂದನಂತೆ—ಕಂಬೊಸ್ಟೇಟ್ ನಿಲ್ದಾಣ ಬಂತು.—ಇಂಜಿನ್ನಿನ ವೇಗ ಕಡಿಮೆಯಾಗುತ್ತ ಬಂತು—ಇಂಜಿನ್ನು ಸರಿಯಿಲ್ಲ; ತೊಂದರೆ ಎಂದು ಮತ್ತೆ ಅಧಿಕಾರಿಗಳಿಗೆ ತಿಳಿಸಿದರೆ, ಜೋಲಾರಪೇಟೆಯ ವರೆಗೆ ಹೇಗಾದರೂ ಹೋಗು ಎಂಬ ಆಜ್ಞಾರೂಪದ ಉತ್ತರ ಬಂತಂತೆ.

ಚಾಲಕ ಅಧಿಕಾರಿಗಳ ಆಜ್ಞಾಭಂಗ ಮಾಡಲಾಗದೆ ಧೈರ್ಯಸಾಹಸ ಓಡಿಸಿ ಮುಂದುವರಿದ—ಬಂಗಾರಪೇಟೆ ಬಳಿ ... ಇಂಜಿನ್ನಿನ ಮೇಲಿನ ಹತೋಟಿ ತಪ್ಪಿತಂತೆ—ಪರಿಣಾಮವಾಯಿತು. ವೇಗವನ್ನು ನಿಯಂತ್ರಿಸಲಾಗದ ಅನಾಥವೆಂಬಂತೆ ... ಕಂಟ್ರೋಲರಿಗೆ ಇತ್ಯ ಸಂಗತಿ ತಿಳಿಸಿದರೆ, ಬಂದ ಉತ್ತರ—'ಇಂಜಿನ್ ಹೇಗೆ ಇರಲಿ; ರೈಲು ನಿಲ್ಲಿಸ

(ಹತ್ತನೇ ಪುಟ ನೋಡಿರಿ)

ಅಪೂರ್ವ ವಿದ್ಯೆ-ಸಂಗೀತ

(ಐದನೇ ಪುಟದಿಂದ)

ತ್ತೆ ಕೆಳೆಯಲು ಸಾಧ್ಯ ಎಂಬುದನ್ನು ಪ್ರಯೋಗಗಳ ಮೂಲಕ ಸಾಧಿಸಿ ತೋರಿಸುತ್ತೇವೆ ಎಂದು ಪ್ರಯತ್ನಿಸಿದರು. ಸಂಗೀತ ಜೀವಿಗಳ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ ಎಂಬುದು ನಿರ್ವಿವಾದ ಸಂಗತಿ. ಪೂರ್ವದಲ್ಲಿ ಸಂಗೀತಗಾರರು ಸಂಗೀತದ ಮೂಲಕ ಕೆಲವು ಪವಾಡಗಳನ್ನು ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ. ಸಂಗೀತದ ಮಹತ್ವಪೂರ್ಣ ಶಕ್ತಿಯನ್ನು ತಿಳಿಯಲು ಕೆಲವು ಸಂಗತಿಗಳನ್ನೂ ಹೇಳಬಹುದಾಗಿದೆ.

ಗುಂಡಕ್ರಿಯಾ, ಶ್ರೀರಾಗಗಳಿಂದ ಕಲ್ಲು ಕರಗಿಸಬಹುದು. ಪುನ್ನಾಗವರಾಳಿ ರಾಗದಿಂದ ಹಾವನ್ನೂ ಬರಮಾಡಬಹುದು. ದೀಪಕ ರಾಗವನ್ನು ಹಾಡಿ ಅಗ್ನಿಯನ್ನು ಕಾಣಬಹುದು. ಮೇಘಮಲ್ಹಾರ, ಅಮೃತವರ್ಷಿಣಿ ರಾಗಗಳಿಂದ ಮಳೆ ಸುರಿಸಬಹುದು ಎಂದು ಹೇಳುತ್ತಾರೆ. ಅದರಂತೆಯೇ ಮಾನವ ದೇಹ ಚಿಕಿತ್ಸೆಗೆ ರೋಗ ನಿವಾರಣೆಗೆ ಕೆಲವು ರಾಗಗಳು ಮೀಸಲಾಗಿದ್ದವು. ಜಯ ಜಯವಂತಿ ರಾಗ ಪಾರ್ಶ್ವ ವಾಯುವನ್ನು ಗುಣಪಡಿಸಬಲ್ಲುದು. ಬಹಾರ್, ಬಾಗೇಶ್ರಿ, ಗೌರಿಯೂ, ದರ್ಬಾರಿ, ಕಮಾಜ್ ರಾಗಗಳು ಉನ್ಮಾದ ನಿವಾರಿಸಬಲ್ಲವು. ಆದರೆ ಸೋಹನಿ, ತೋಡಿ, ಭೈರವಿ ರಾಗಗಳು ತಲೆ ಸುತ್ತುವುದನ್ನು. ಪೂರ್ವಿ ರಾಗ ರಕ್ತದ ಒತ್ತಡವನ್ನು, ತಿಲಂಗ್ ಜಲಾವಲ್, ಮುಲ್ತಾನಿ, ರಾಮಕಲಿ ಕ್ಷಯ ರೋಗವನ್ನು ನಿವಾರಿಸಬಲ್ಲವು ಎಂಬ ನಂಬಿಕೆ ಇದೆ. ಇದು ಸಂಗೀತ ಶಾಸ್ತ್ರಜ್ಞರ ಮಾತು. ಇಂದು ಸಂಗೀತದಿಂದ ದಕಲ್ಲನ್ನು ಕರಗಿಸಲು ಸಾಧ್ಯವಾಗದೆ ಇರಬಹುದು. ಆದರೆ ಶ್ರೋತೃಗಳ ಮನಸ್ಸನ್ನು ಕರಗಿಸಬಹುದು, ಅವರ ಕಣ್ಣಿಂದ ಆನಂದಾಶ್ರು ಸುರಿಯಬಹುದು. ಸಂಗೀತ ಅಪೂರ್ವ ವಿದ್ಯೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

ಕಾಯಕದಲ್ಲೇ ಕೈಲಾಸ ಕಂಡ

ಮಹಾತ್ಮಾ ಬಸವೇಶ್ವರ

ಮದ್ರಾಸದ ರಾಜ್ಯಪಾಲ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ಮಾಡಿದ ಭಾಷಣದ ಸಾರಾಂಶ.

ಬಸವಣ್ಣನವರು ವಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಅವರ ತಾಯಿ ಮಾದಲಾಂಬಿಕೆ, ತಂದೆ ಮಾದರಸ ಧಾರ್ಮಿಕರೂ, ದೈವಭಕ್ತರೂ ಆಗಿದ್ದರು. ಬಸವಣ್ಣನವರಿಗೆ ಬಾಲ್ಯದಲ್ಲಿ ಯೋಗ್ಯ ಶಿಕ್ಷಣ ದೊರೆಯಿತು. ಆಗಲೇ ಅಸಾಧಾರಣ ಪ್ರತಿಭೆ, ಕಲೆ ಹಾಗೂ ಸಾಮರ್ಥ್ಯಗಳು ಪ್ರಕಟಗೊಂಡವು.

ಬಾಲಕ ಬಸವಣ್ಣನವರ ಕಲ್ಪನಾಶಕ್ತಿ, ದೈವಭಕ್ತಿ, ಹಾಗೂ ಕುತೂಹಲದ ಗುಣಗಳು ಜನಮೆಚ್ಚುಗೆಯನ್ನು ಗಳಿಸಿದವು. ಆದರೆ ಬಾಲಕ ಬಸವಣ್ಣನವರ ಮನಸ್ಸಿಗೆ ಸಮಾಧಾನವಿರಲಿಲ್ಲ. ಅವರು ಉಚ್ಚ ಕುಲದಲ್ಲಿ ಜನಿಸಿದರು, ಉಚ್ಚ ಸಾಮಾಜಿಕ ಪರಂಪರೆಯಲ್ಲಿ ಬೆಳೆದರು. ಜನಿಸಿದ ಉಚ್ಚ ಕುಲವಾಗಲಿ, ಸಾಮಾಜಿಕ ಪರಂಪರೆಯಾಗಲಿ, ಬಸವಣ್ಣನವರ ಮನಸ್ಸಿಗೆ ಶಾಂತಿ ತರಲಿಲ್ಲ. ಬಸವಣ್ಣನವರು ತಮ್ಮ ಕಾಲದ ಧಾರ್ಮಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಸದಾ ಯೋಚಿಸುತ್ತಿದ್ದರು. ಯೋಚಿಸಿದಷ್ಟೂ ಚಿಂತಿತರಾಗುತ್ತಿದ್ದರು. ಕೊನೆಗೊಮ್ಮೆ ಅಂದಿನ ಸಮಾಜದ ನ್ಯೂನತೆಗಳನ್ನು ಸರಿಪಡಿಸಲು ಮಾರ್ಗವೊಂದು ಹೊಳೆಯಿತು.

ಈ ಗುರಿಸಾಧನೆಗಾಗಿ ಹುಟ್ಟಿದ ಸ್ಥಳವನ್ನೂ ಪ್ರಿಯ ತಂದೆತಾಯಿಗಳನ್ನೂ ತ್ಯಜಿಸಿ ಪ್ರಶಾಂತವಾದ ಸ್ಥಳವೊಂದಕ್ಕೆ ಹೋಗಲು ನಿರ್ಧರಿಸಿದರು. ಬಾಗೇವಾಡಿಯನ್ನು ಬಿಟ್ಟು ಕೃಷ್ಣಾ ನದಿಯ ದಂಡೆಯ ಮೇಲಿರುವ ಸಂಗಮ ಕ್ಷೇತ್ರಕ್ಕೆ ಬಂದರು. ಶೈವ ಧರ್ಮ ಗುರುಗಳಿಂದ ಜಾತವೇದ ಮುನಿಗಳು ಅವರಿಗೆ ಗುರುಗಳಾಗಿ ದೊರೆತಿದ್ದರು. ಇಲ್ಲಿಯೇ ಬಸವಣ್ಣನವರು ಅವರಿಂದ ಅನೇಕ ವಿಷಯಗಳನ್ನು ಕಲಿತುಕೊಂಡರು.

ಬಸವಣ್ಣನವರಿಗೆ ಸಂಗಮನಾಥನಲ್ಲಿ ಅಪಾರ ಪ್ರೀತಿ. ಕೊನೆಗೆ ಸಂಗಮನಾಥನನ್ನೇ ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು.

ಸಂಗಮನಾಥನಲ್ಲಿ ಅವರಿಗಿದ್ದ ಆಳವಾದ ಭಕ್ತಿ ಅವರ ವಿಚಾರಪ್ರಚೋದಕ ವಚನಗಳು, ಮತ್ತು ಕೌತುಕದ ಕಾರ್ಯಗಳು, ಸುತ್ತಲಿನ ಜನರನ್ನು ಆಕರ್ಷಿಸತೊಡಗಿದವು; ಕಲ್ಯಾಣದ ದೊರೆಗಳಾದ ಬಿಜ್ಜಳನ ಮಂತ್ರಿ ಬಲದೇವರವರೆಗೂ ಈ ವಾರ್ತೆ ಮುಟ್ಟಿತು.

ಕಲ್ಯಾಣಕ್ಕೆ ಬರುವಂತೆ ಬಲದೇವರು ಬಸವಣ್ಣನವರನ್ನು ಆಹ್ವಾನಿಸಿದರು. ಆಹ್ವಾನವನ್ನು ಅಂಗೀಕರಿಸಿ ಬಸವಣ್ಣನವರು ಕಲ್ಯಾಣಕ್ಕೆ ತೆರಳಿದರು. ಬಲದೇವರ ಮಗಳಾದ ಗಂಗಾಂಬಿಕೆಯನ್ನು ಮದುವೆಯಾಗಿ ಕಲ್ಯಾಣದಲ್ಲಿ ನೆಲಸಿದರು. ನಗರದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾದರು.

ಬಸವಣ್ಣನವರ ಕರ್ತವ್ಯ ಪ್ರಜ್ಞೆ, ಪ್ರಾಮಾಣಿಕತೆ, ಸದ್ವರ್ತನೆ, ಮತ್ತು ಸಾಮರ್ಥ್ಯಗಳಿಂದ ದೊರೆ ಬಿಜ್ಜಳನೂ ಪ್ರಭಾವಿತನಾದ. ಅನಂತರ ಅವರನ್ನು ತನ್ನ ಮಂತ್ರಿಗಳನ್ನಾಗಿ ನೇಮಿಸಿದ. ಬಸವೇಶ್ವರರು ಈ ಉನ್ನತ ಹುದ್ದೆಯನ್ನು ಸಂತೋಷದಿಂದ ಸ್ವೀಕರಿಸಿದರು. ಏಕೆಂದರೆ ಅದು ಹಿಂದು ಸಮಾಜ ಮತ್ತು ಧರ್ಮದ ಸುಧಾರಣೆಗೆ ಹಾಗೂ ಸಂಗಮ ಕ್ಷೇತ್ರದಲ್ಲಿದ್ದಾಗ ಈ ಸಮಸ್ಯೆಗಳಿಗೆ ತಾವು ಕಂಡ ಪರಿಹಾರ ಮಾರ್ಗದ ಸತ್ವ ಪರೀಕ್ಷೆಗೆ ಸದವಕಾಶವನ್ನು ಒದಗಿಸಿಕೊಟ್ಟಿತು. ಅವರು ಕಲ್ಯಾಣದ ನಾಗರಿಕರನ್ನು ಆಹ್ವಾನಿಸಿದರು. "ನಾನು ಶಿವ ಸೇವಕ, ನನಗೆ ಸದಾ ನಿಮ್ಮ ಸಹಕಾರಬೇಕು. ನಿಮ್ಮ ಶುಭಾಶಯಗಳೇ ನನಗೆ ರಕ್ಷೆಯಾಗಲಿ" ಎಂದು ವಿನಮ್ರವಾಗಿ ನುಡಿದರು.

ಧಾರ್ಮಿಕ ಕ್ಷೇತ್ರದಲ್ಲಿ ಬಸವಣ್ಣನವರ ಉದಯವಾದಾಗ, ಕರ್ನಾಟಕದಲ್ಲಿ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು ದುರ್ಬಲ ಸ್ಥಿತಿಯಲ್ಲಿದ್ದವು. ತ್ಯಾಗಕ್ಕೆ ಪ್ರಾಧಾನ್ಯವಿತ್ತು. ಸಮಾಜದಲ್ಲಿ ಅನೇಕ ಜಾತಿ ಪಂಗಡಗಳಿದ್ದವು.

ವಿವಿಧ ಧರ್ಮಗಳು ಆಗ ದೇವರ ಸಾಕ್ಷಾತ್ಕಾರಕ್ಕಾಗಿ ಬೋಧಿಸುತ್ತಿದ್ದ ಮಾರ್ಗಗಳು ಬಸವಣ್ಣನವರಿಗೆ ಹಿಡಿಸಲಿಲ್ಲ. ಜೀವಾತ್ಮ ಮತ್ತು ಪರಮಾತ್ಮ—ಇಬ್ಬರೂ ಬೇರೆ ಬೇರೆಯಲ್ಲ—ಇಬ್ಬರೂ ಒಂದೇ. ಈ ಅರಿವಿನಿಂದ ಮಾತ್ರ ಪರಮಾತ್ಮನ ಸಾಕ್ಷಾತ್ಕಾರ ಸಾಧ್ಯವೆಂದು ಅವರ ಅಭಿಪ್ರಾಯವಾಗಿತ್ತು.

ಈ ಕಾರಣದಿಂದಲೇ ಅವರು ಆಗಿನ ಕಾಲದ ಧಾರ್ಮಿಕ ಆಚಾರಗಳ ಸಾಂಪ್ರದಾಯಿಕ ವಿಧಾನಗಳ ವಿರುದ್ಧ ದಂಗೆ ಎದ್ದರು. ಜಾತಿ—ಮತ, ಮೇಲು—ಕೀಳುಗಳೆಂಬ ಯಾವ ಭೇದಭಾವಗಳಿಲ್ಲದೇ ಎಲ್ಲರೂ ದೇವರ ಅನುಗ್ರಹವನ್ನು ಸಂಪಾದಿಸಲು ಸಾಧ್ಯವಿರುವಂತಹ ಹೊಸ ಸಮಾಜವೊಂದನ್ನು ಸ್ಥಾಪಿಸಲು ಉದ್ಯುಕ್ತರಾದರು.

ಭಕ್ತಿ ಅಥವಾ ಶ್ರದ್ಧೆಯ ಬಗ್ಗೆ ಬಸವಣ್ಣನವರು ಹೊಂದಿದ್ದ ಕಲ್ಪನೆಯೇ ಅವರು ಮಹಾತ್ಮರಾಗಲು ಕಾರಣವಾಯಿತು.

ಬಸವಣ್ಣನವರು ಸ್ವತಃ ದೇವರ ಒಗವಿಶೇಷ ಒಲುಮೆಯನ್ನು ಬೆಳೆಸಿಕೊಂಡರಲ್ಲದೆ, ದೇವರ ಅನುಗ್ರಹಕ್ಕೆ ಪಾತ್ರರಾಗಲು ಪ್ರೇಮ ಮಾರ್ಗದ ಅನುಸರಣೆ ಎಷ್ಟೊಂದು ಅಗತ್ಯ ಹಾಗೂ ಮಹತ್ವಪೂರ್ಣ ಎಂಬುದನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟರು.

ಮುಕ್ತಿಯನ್ನು ಗಳಿಸಲು ಭಕ್ತಿ ಮಾರ್ಗವು ಏಕಮೇವ ಮಾರ್ಗವೆಂದು ಅವರು ಪುನಃಪುನಃ ಒತ್ತಿಹೇಳಿದರು. ದೇವರ ಅನುಗ್ರಹ ಸಂಪಾದಿಸಲು ಆಗ ಬೋಧಿಸಲಾಗುತ್ತಿದ್ದ ಜ್ಞಾನಮಾರ್ಗ ಮತ್ತು ಕರ್ಮ ಮಾರ್ಗಗಳು ಭಕ್ತಿ ಮಾರ್ಗದಷ್ಟು ಸತ್ವಶಾಲಿಯಾಗಿಲ್ಲವೆಂದೂ ಹೆಚ್ಚೆಂದರೆ ಅವು ಭಕ್ತಿಗೆ ಪೂರಕವಾದ ಮಾರ್ಗಗಳಾಗಿವೆಯೆಂದೂ ಹೇಳಿದರು.

ಭಕ್ತಿ ಮಾರ್ಗದ ಶ್ರೇಷ್ಠತೆಯನ್ನು ಪ್ರಶಂಸಿಸಿದ ಬಸವಣ್ಣನವರು, ಕೂಡಲ ಸಂಗಮದೇವ ನಾದಪ್ರಿಯನಲ್ಲವೆಂದೂ, ವೇದಪ್ರಿಯನಲ್ಲವೆಂದೂ, ಆದರೆ ಭಕ್ತಿ ಪ್ರಿಯನೆಂದೂ ಸ್ಪಷ್ಟಪಡಿಸಿದರು.

ಬಸವಣ್ಣನವರ ಈ ವಿಚಾರಧಾರೆಯನ್ನು ಅವರ ಸಮಕಾಲೀನರ ಬಹುತೇಕ ಜನರು ಉತ್ಸಾಹದಿಂದ ಸ್ವಾಗತಿಸಿದರು. ಚೆನ್ನಬಸವಣ್ಣನವರು ಬಸವಣ್ಣನವರ ಬಗ್ಗೆ ಪ್ರಸ್ತಾಪಿಸುತ್ತಾ "ಬಸವಣ್ಣನವರು ಭಕ್ತಿಯ ಶ್ರೇಷ್ಠತೆಯನ್ನು ನಾಲ್ಕು ಧರೆಯಲ್ಲಿ ಅವತರಿಸಿದ ಮಹಾನುಭಾವರೆಂದು" ಬಣ್ಣಿಸಿದ್ದಾರೆ. ಕನ್ನಡದ ಕವಿ ಹರಿಹರನು "ಭಕ್ತಿಯೇ ಬಸವಣ್ಣನವರ ಶಕ್ತಿಯ ಮೂಲ"ವೆಂದು ಹೇಳಿದ್ದಾನೆ. ಬಸವಣ್ಣನವರ ಅನುಯಾಯಿಗಳು "ಅವರನ್ನು ಭಕ್ತಿ ಭಂಡಾರಿ ಬಸವಣ್ಣನೆಂದು" ಕರೆದರು. ಈ ಬಿರುದು ಅವರಿಗೆ ಸರ್ವರೀತಿಯಲ್ಲಿ ಶೋಭಿಸಿತು.

ಬಸವಣ್ಣನವರು ತಮ್ಮ ಅನುಯಾಯಿಗಳಿಗೆ ಭಕ್ತಿಯ ನಿಜಸ್ವರೂಪವನ್ನು ಮನನ ಮಾಡಿಕೊಟ್ಟರು. ಅದು ಆತ್ಮಸಾಕ್ಷಾತ್ಕಾರಕ್ಕಾಗಿ ಅವರು ಅನುಸರಿಸುತ್ತಿದ್ದ

RANGE OF PRODUCTS **RANGE OF PRODUCTS**

Squashes, Crushes, Syrups, Biccola & Brinda (Special Syrups) Pickles Tomato Ketchup, Sweets & Toffees.

Canned Pineapple & Mango Slices Mango Pulp Pineapple Juice, Tomato Juice, Fruit Cocktail, Jams, Ginger, Preserve (a delicious desert relieves indigestion and gastric trouble.)

Sales Depot: **Bhavanthi Street, Mangalore-1.** PHONE: 3266

ಮಾರ್ಗ ಭಕ್ತಿಮಾರ್ಗ ತೋರಿಕೆಗೆ ಕಂಡು ಬರುವಷ್ಟು ಸುಲಭವಾಗಿಲ್ಲವೆಂದು. ಅದು ಅನೇಕ ಕಷ್ಟ ಹಾಗೂ ತೊಂದರೆಗಳಿಂದ ಯುಕ್ತವಾಗಿದೆಯೆಂದು ಹೇಳಿದರು. ಪ್ರಾಮಾಣಿಕವಾದ, ಆಡಂಬರ ರಹಿತವಾದ ಭಕ್ತಿಯಿಂದ ಮಾತ್ರ ಶಿವನನ್ನು ಒಲಿಸಿಕೊಳ್ಳಲು ಸಾಧ್ಯವೆಂದು ಬೋಧಿಸಿದರು.

ಶಿವನನ್ನು ಒಲಿಸಿಕೊಳ್ಳಲು ಜನರು ಮಾಡುತ್ತಿದ್ದ ಡಂಭಾಚಾರಗಳನ್ನು ಅವರು ಖಂಡಿಸಿದರು. ಶಿವನ ಸಾಕ್ಷಾತ್ಕಾರಕ್ಕೆ ಗುರುಲಿಂಗ ಜಂಗಮರ ಆಗತ್ಯವಿದೆಯೆಂದೂ ಗುರುವು ದೇವರಂತಿದ್ದು ಭಕ್ತನು ಅವರನ್ನು ಸಂಪೂರ್ಣ ಅವಲಂಬಿಸಬೇಕೆಂದೂ ಬೋಧಿಸಿದರು. ಗುರುವು ಭಕ್ತನನ್ನು ಆಧ್ಯಾತ್ಮ ಮಾರ್ಗದಲ್ಲಿ ಕೈ ಹಿಡಿದು ನಡೆಸುತ್ತಾನೆ. ದೇವರ ಸಾಕ್ಷಾತ್ಕಾರ ಮಾಡಿಸಿಕೊಳ್ಳಲು ನೆರವಾಗುತ್ತಾನೆ. ಆದ್ದರಿಂದ ಗುರುವು ಶ್ರೇಷ್ಠನೆಂದು ಹೇಳಿದರು.

ಭಕ್ತನಿಗೆ ಗುರುವಿನ ಆಗತ್ಯವನ್ನು ಒತ್ತಿ ಹೇಳುತ್ತ "ಮಡಿಕೆ ಮಾಡಲು ಮಣ್ಣು ಹೇಗೆ ಅಗತ್ಯವೋ, ಆಭರಣಗಳನ್ನು ಮಾಡಲು ಚಿನ್ನ ಹೇಗೆ ಅಗತ್ಯವೋ, ಹಾಗೆ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಗುರುವು ಅಗತ್ಯ"ವೆಂದು ನುಡಿದರು. ಜಂಗಮರ ಸಂಗವೂ ಅಷ್ಟೇ ಶ್ರೇಯಸ್ಕರವೆಂದೂ ಪ್ರತಿಪಾದಿಸಿದರು. ಜಂಗಮರು ಭಕ್ತನ ಹೃದಯದಲ್ಲಿ ಭಕ್ತಿಯ ಜ್ಯೋತಿಯನ್ನು ಬೆಳಗಿಸಲು ನೆರವಾಗುವರೆಂದು ತಿಳಿಸಿದರು.

ಧರ್ಮ ಕ್ಷೇತ್ರದಲ್ಲಿ ಭಕ್ತಿಯ ಮೇಲ್ಮೆಯನ್ನು ಸಾರಿದ ಬಸವಣ್ಣನವರು, ಸಮಾಜದಲ್ಲಿ ಸಮಾನತೆಯ ಮಹತ್ವವನ್ನು ಸಾರಿದರು. ದೇವರು ಬಸವಣ್ಣನವರಿಗೆ ರಾಜಕೀಯ ಅಧಿಕಾರವನ್ನು ಕರುಣಿಸಿದಾಗಲೂ ಅವರು ತಮ್ಮ ಈ ಅಧಿಕಾರವನ್ನು ವಿಶ್ವದ ಉತ್ಕರ್ಷ ಹಾಗೂ ಸಾಮಾಜಿಕ ನೂತನ ತತ್ವಗಳ ಮೇಲೆ ಆಧಾರಿತ ಪ್ರಗತಿಪರ ಸಮಾಜವೊಂದನ್ನು ನಿರ್ಮಿಸಲು ಬಳಸಿಕೊಂಡರು. ವೀರಶೈವ ಧರ್ಮವನ್ನು ಬಲಗೊಳಿಸುವುದರಿಂದ ತಾವು ಈ ಗುರಿ ಸಾಧಿಸುವುದಾಗಿಯೂ ನುಡಿದರು. ಅನೇಕ ದೈವಗಳ ಆರಾಧನ, ಮನಸ್ಸನ್ನು ಕೇಂದ್ರೀಕರಿಸಲು ಆತಂಕವೆಂದು ಭಾವಿಸಿದರು.

ದೇವನೊಬ್ಬ, ನಾಮ ಹಲವು ಎಂದರು. ಜಂಗಮರು ಶರಣರು ಮತ್ತು ಶಿವ ಭಕ್ತರು ಸಾಗುಕರೆಂಬ ತತ್ವದ ಮೇಲೆ ಬಸವಣ್ಣನವರು ವೀರಶೈವ ಸಮಾಜದ ಮಂದಿರವನ್ನು ನಿರ್ಮಿಸಿದರು. ಮಂದಿರವು ಎಲ್ಲರಿಗೂ ಮುಕ್ತವಾಗಿತ್ತು.

ವೀರಶೈವ ಧರ್ಮವು ಆಧ್ಯಾತ್ಮ ಜೀವನದಲ್ಲಿ ತ್ಯಾಗ ಅನವಶ್ಯಕವೆಂದು, ಷಟ್‌ಸ್ಥಲ ಮಾರ್ಗದಿಂದ ಮಾನವನು ತನ್ನಲ್ಲಿಯ ದೈವತ್ವವನ್ನು ಅರಿತು ಕೊಳ್ಳಬಲ್ಲನೆಂದು ಪ್ರತಿಪಾದಿಸಿದೆ.

ಬಸವೇಶ್ವರರು ಸಂಘಟಿಸಿದ ಈ ಹೊಸ ಸಮಾಜ ವ್ಯವಸ್ಥೆಯಲ್ಲಿ ಮಾನವನ ಸಮಾನತೆಯೇ ಮೊದಲನೆಯ ಮುಖ್ಯ ತತ್ವವಾಗಿದೆ. ಬಸವಣ್ಣನವರು, ವರ್ಣಧರ್ಮ ಅಥವಾ ವರ್ಗಸಿದ್ಧಾಂತವನ್ನು ಪ್ರತಿಪಾದಿಸುವುದನ್ನು ಸಹಿಸುತ್ತಿರಲಿಲ್ಲ. ಉಚ್ಚ ಕುಲದಲ್ಲಿ ಜನಿಸಿದವರು ಅಥವಾ ನೀಚ ಕುಲದಲ್ಲಿ ಜನಿಸಿದವರುಯೆಂಬ ಮಾತು ಅರ್ಥಹೀನವೆಂದು ಬಸವಣ್ಣನವರು ಖಂಡಿಸಿದರು. ಶಿವಭಕ್ತರೇ ಶ್ರೇಷ್ಠ ಕುಲಜರೆಂದು ಸಾರಿದರು.

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲವೆಂದು ಹೇಳಿ" ಶಿವ ಭಕ್ತರ ಹಿರಿಮೆಯನ್ನು ಪ್ರಕಟಿಸಿದರು. ಬಸವಣ್ಣನವರು ರೂಪಿಸಿದ ಈ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ—ಪುರುಷರಿಗೆ ಸಮಾನತೆಯಿತ್ತು. ಮಹಿಳೆಯರು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಪುರುಷರಷ್ಟೇ ಸ್ವಾತಂತ್ರ್ಯದಿಂದ ಭಾಗವಹಿಸುತ್ತಿದ್ದರು. ಅಕ್ಕ ಮಹಾದೇವಿ, ನೀಲಮ್ಮ, ಬಿಜ್ಜವ್ವ ಇವರೇ ಮೊದಲಾದವರ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಸಮಾನತೆಯನ್ನು ಸಾಧಿಸಿದ ಬಸವಣ್ಣನವರು, ಸಮಾಜದ ವ್ಯಕ್ತಿಗಳು ತಮಗೆ ಇಷ್ಟಬಂದ ವೃತ್ತಿಯನ್ನು ಕೈಗೊಳ್ಳಬಹುದೆಂದೂ, ಆದರೆ ಸದಾ ಕಾರ್ಯನಿರತರಾಗಿರಬೇಕೆಂದೂ ಹೇಳಿದರು. "ಕಾಯಕವೇ ಕೈಲಾಸ"ವೆಂದು ಹೇಳಿ ಕರ್ತವ್ಯದ ಹಿರಿಮೆಯನ್ನು ಸಾರಿದರು.

ವೀರಶೈವ ಧರ್ಮವು ಎದುರಿಸಬಹುದಾದ ಸಮಸ್ಯೆಗಳನ್ನು ಮುಂಚಿತವಾಗಿಯೇ ಊಹಿಸಿ ಅವುಗಳ ಪರಿಹಾರಕ್ಕಾಗಿ ಬಸವಣ್ಣನವರು "ಅನುಭವ ಮಂಟಪವನ್ನು" ಸ್ಥಾಪಿಸಿದರು. ವೀರಶೈವ ಧರ್ಮದ ಬಗ್ಗೆ ಶಿಕ್ಷಣ ನೀಡಲು ಜನಸಾಮಾನ್ಯರಿಗೆ ತಿಳಿಯುವ ಸರಳವಾದ ಸುಲಲಿತವಾದ ಕನ್ನಡ ಭಾಷೆಯಲ್ಲಿ ಧರ್ಮದ ಅರಿವು ಮಾಡಿಕೊಟ್ಟರು. ಬಸವಣ್ಣನವರ ಈ ವಚನಗಳು ಸಾಹಿತ್ಯವನ್ನು ಸಮೃದ್ಧಿಗೊಳಿಸಿದವು.

ವಿವಾಹ ಸಮಾರಂಭ

ಮೂಲ್ಕಿ—ಬಳ್ಕುಂಜೆ ಮೂಡುಮನೆ ನಾರಾಯಣ ಶೆಟ್ರ (ನಿವೃತ್ತ ಅಧ್ಯಾಪಕರು) ಸುಪುತ್ರ ಚಿ| ರಾಮಕೃಷ್ಣ ಶೆಟ್ರ ವಿವಾಹವು ಮಧ್ಯ ಕೆಂಜರ ಬಾಳಿಕೆ ಶ್ರೀ ಸುಬ್ಬ ಶೆಟ್ರ ಸುಪುತ್ರಿ ಚಿ| ಸೌ| ಪ್ರೇಮಾವತಿಯೊಂದಿಗೆ ತಾ. ೨೨—೫—67ರಲ್ಲಿ ಮಂಗಳೂರು "ಡೋನ್ ಬೋಸ್ಕೊ" ಹಾಲಿನಲ್ಲಿ ಅತಿ ವೈಭವದಿಂದ ನೆರವೇರಿಸಲ್ಪಟ್ಟಿತು.

ಇನ್ನೊಂದು ವಿಲೀನ





ವಿಜಯಾ ಬ್ಯಾಂಕ್ ಲಿಮಿಟೆಡ್

ವಿಜಯಾ ಬ್ಯಾಂಕ್ ಬಿಲ್ಡಿಂಗ್ಸ್
ಮಂಗಳೂರು 3

ಅಧ್ಯಕ್ಷ
ಸುಂದರರಾಮ ಶೆಟ್ಟಿ

ಕಾರ್ಯದರ್ಶಿ
ಜಯರಾಮ ಶೆಟ್ಟಿ

ಇರುವವರಿಗುಂಟು, ಇಲ್ಲದವರಿಗಿಲ್ಲ

(ನಾಲ್ಕನೇ ಪುಟದಿಂದ)

"ನಿನ್ಗ್ ತಲೆಯಿಲ್ಲದಾಗಲ್ಲ ಹೀಗೆ... ಇಲ್ಲಿ ನೋಡಿ, ಪೆಟ್ರೋಲು ಬೆಲೆಯೂ ಏರುತ್ತಂತೆ ..."

'ಇಲ್ಲವಾದ್ರೆ ನಮ್ಮ ಎಷ್ಟು ಬಸ್ಸುಗಳು ನಷ್ಟದಲ್ಲಿ ಹೇಗೆ ಓಡುವುದು?'

"ಅಂದ್ರೆ?"

'ನಷ್ಟ ಅಂತ ಹೇಳಿ ಮೊನ್ನೆ ಮೊನ್ನೆ ಸಾರಿಗೆ ದರ ಏರಿಸಿದ್ರು. ಏನೋ ನೋಡಿ ರುವಷ್ಟು ನೋಡಿಯೋದ್ರು ಆಯ— ವೆಚ್ಚ ಸರಿಗೂಡುತಿತ್ತೋ ಏನೋ! ಈಗ ಪೆಟ್ರೋಲು ಬೆಲೆಯೇರಿದ್ರಿಂದ ಮತ್ತೆ ಮೂಮೂಲು ಲಾಸಿಗೆ ತೊಂದ್ರೆಯಿಲ್ಲ...'

'ಅಂಚೆ ತಂತಿಗಳ ಬೆಲೆಯೂ ಏರುತ್ತಂತೆ...'

'ಅದು ಹೌದೇ... ಅದ್ರಿಂದ ಯಾರ್ಯಾರಿಗೆ ಕಾಗದ ಹಾಕ ಬೇಕು. ಎಲ್ಲಾ ಇವತ್ತೇ ಹಾಕಿ ಬಿಡೋದು ಒಳ್ಳೆಯದು...'

'ಯಾಕೆ? ಒಂದಷ್ಟು ಕಾರ್ಡು ಕವರು ತಂದು ಇಟ್ಟುಕೊಂಡ್ರೆ ಸಾಲದೆ?'

"ಊಹ್ಞೂಂ.... ನಾವು ಅಂಚೆಗೆ ಹಾಕುವ ದಿನ ಜಾರಿಯಿರುವಷ್ಟೇ ಬೆಲೆಯ ಅಂಚೆ ಚೀಟಿ ಅದಕ್ಕೆ ಹಚ್ಚಬೇಕು..'

'ಛೆ... ಇದು ಅನ್ಯಾಯ ಅಲ್ವೆ?"

'ಯಾವುದು?"

'ನೋಡಿ, ಸಿಗರೇಟು ಇಂಟು ಕೊಂಡು ಇಟ್ಟು ಬೆಲೆಯೇರಿದ ಮೇಲೆ ಉಪಯೋಗಿಸ ಬಹುದಂತೆ.... ಆಗ ಅತ ಹೆಚ್ಚು ಬೆಲೆ ಯಾರಿಗೂ ಕೊಡ ಬೇಕಾಗಿಲ್ಲ. ಅದ್ರೆ ಇಂದು ಆರು ಪೈಸೆಗೆ ಕೊಂಡ ಕಾರ್ಡು ನಾಳೆ ಅಂಚೆಗೆ ಮೂರುತಿಂಗಳ ಮೇಲೆ ಹಾಕಿದ್ರೆ ಏಕೆ ಒಂದೋ ಎರಡೋ ಪೈಸೆ ಹೆಚ್ಚು ತೆಂಬೇಕು?"

'ನಿನ್ನ ತಲೆ ಅಂದ್ರೆ ತಲೆ.... ನೋಡು, ಇಂದು ಮೂರು ಪೈಸೆಗೆ ಸಿಗರೇಟು ಕೊಂಡು ಮೂರು ತಿಂಗಳ ನಂತ್ರ ಆತ ನಾಲ್ಕು ಪೈಸೆಯ ಚಟಾನಂದ ಪಡೆಯುತ್ತಾನೆ.... ಅಂದ್ರೆ ಒಂದು ಪೈಸೆಯ ಚಟಾನಂದವನ್ನು ಹೆಚ್ಚಾಗಿ ಗಿಟ್ಟಿಸುತ್ತಾನೆ—ಮಧ್ಯ ದಲ್ಲಾಳಿ ವ್ಯಾಪಾರಿಗಳೂ ಹಣ ಮಾಡುತ್ತಾರೆ.....ಅದಕ್ಕಾಗಿ ಈ ಅವಧಿಯಲ್ಲಿ ಕೊನ್ನ ಎನ್ನುತ್ತಾರೆ. ಅಂಚೆತಂತಿ ಸೇವೆ—ಅಲ್ಲಿ ಇಲ್ಲಾನ್ನೋದಿಲ್ಲ. ಆದಕ್ಕೇ ನೋಡು ಸರಕಾರ ಹೇಳೋದು..."

'ಏನೆಂತ?'

'ಆವಶ್ಯಕತೆಗಿಂತ ಹೆಚ್ಚು ಕೂಡಿಡಬೇಡೀಂತ...."

'ಒಂದು ವೇಳೆ ಕೂಡಿಟ್ಟರೆ....'

'ಜನರಿಗೆ ನೋಯವಾಗುತ್ತದೆ. ಜನಸಾಮಾನ್ಯರ ತಲೆ ಒಡೆದು ಇರುವವರು ಮತ್ತೂ ಮೇಲೇರುತ್ತಾರೆ...'

'ಸಾಯಲಿ ಬಿಡು, ನಮಗೇನಂತೆ? ನಮ್ಮೊಡನೆ ಕೂಡಿಡೋಕೂ ಇಲ್ಲ, ಕೊಂಡು ಇಡೋಕೂ ಇಲ್ಲ... ಮತ್ತೆ...'

'ಅದೇ ಅಂದನಲ್ಲಾ... ಇರುವವರಿಗೆ! ಉಂಟು... ಇಲ್ಲದಿರುವವರಿಗೆ ಇಲ್ಲ...'

'ಅಂದ್ರೆ ನಾವು ಇಲ್ಲದಿರುವವರೇನು?'

"ಮತ್ತೆಂಥದು?'

"ಅಲ್ಲ...."

ಹ್ಞಾಂ...'

'ನಮಗೆ ಉಂಟು...."

'ಏನು?'

'ನನಗೆ......; ನಿಮಗೆ....'

'ಓ... ಅಬ್ಬಾ ಎಷ್ಟು ಒಳ್ಳೆಯವಳು!"

'ಅಯ್ಯೋ, ಹೋಗೀಂದ್ರೆ....'

—ಗೋರಾ

ಇನ್ನೊಂದು ಮೈಲಿಗಲ್ಲು
ವಿಜಯ ಬ್ಯಾಂಕಿನ ಮಹತ್ಸಾಧನೆ

ಈ ದಶಕದಲ್ಲಿ ತೀವ್ರಗತಿಯಿಂದ ಬೆಳೆದು ಬಂದ ಬ್ಯಾಂಕುಗಳಲ್ಲಿ ವಿಜಯಾ ಬ್ಯಾಂಕೂ ಒಂದು. ೧೯೬೦ರಲ್ಲಿ ರೂ. ೧.೪೪ ಕೋಟಿ ಠೇವಣಾತಿಗಳೂ ೨೧ ಶಾಖೆಗಳೂ ಇದ್ದರೆ, ೧೯೬೬ರಲ್ಲಿ ರೂ. ೮.೪೩ ಕೋಟಿ ಠೇವಣಾತಿ ಮತ್ತು ೬೩ ಶಾಖೆಗಳನ್ನು ಇದು ಹೊಂದಿರುವುದೇ ಪ್ರಗತಿಯ ವೇಗದ ಪ್ರತೀಕ. ಬ್ಯಾಂಕಿನ ವ್ಯವಸ್ಥಾಪಕ ವರ್ಗದವರು ತಮ್ಮ ಚಟುವಟಿಕೆಗಳಿಗೆ ವಿಸ್ತೃತರೂಪ ನೀಡುತ್ತ ಬಂದಿರುವುದೂ ಇದರಿಂದ ಜನಪ್ರಿಯತೆ ಗಳಿಸಿರುವುದೂ ಈ ಬಗೆಯ ಅಭಿವೃದ್ಧಿಗೆ ಮುಖ್ಯ ಕಾರಣವೆನ್ನಬಹುದು.

೧೯೬೬ ದೇಶದ ಪಾಲಿಗೆ ಭೀಕರ ಸಮಸ್ಯಾ ವರ್ಷ. ಆಹಾರದ ಅಭಾವ, ಔದ್ಯಮಿಕ ಉತ್ಪಾದನೆಯಲ್ಲಿ ಇಳಿತ ಹಾಗೂ ಬೆಲೆಯೇರಿಕೆಗಳು ದೇಶವನ್ನು ಕಾಡುತಿದ್ದುವು. ಬ್ಯಾಂಕಿಂಗ್ ವ್ಯವಹಾರವು ರಾಷ್ಟ್ರೀಕರಣಗೊಳ್ಳಬೇಕೆಂಬ ಕೂಗು ಕೇಳುತ್ತಿತ್ತು. ಅನಪೇಕ್ಷಿತ ಕಾರಣದಿಂದಲೂ ದೇಶದ ಅರ್ಥಿಕ ವ್ಯವಸ್ಥೆ ಕಳವಳಕಾರಕವೆನಿಸಿತ್ತು. ಹಾಗಿದ್ದರೂ, ವಿಜಯ ಬ್ಯಾಂಕು ವಿಜಯ ಶಾಲಿಯಾಗಿ ತಲೆಯೆತ್ತಿ ತನ್ನ ಅಸ್ತಿತ್ವವನ್ನು ಮೆರೆಸಿದೆ.

ಅಖಿಲಭಾರತೀಯ ವಾಣಿಜ್ಯ ಬ್ಯಾಂಕಿಂಗ್ ಠೇವಣಾತಿ ಹೆಚ್ಚಳವು ಕಳೆದ ವರ್ಷದಲ್ಲಿ ನೇ. ೧೬-೧೭ರಷ್ಟು ಇದ್ದರೆ ವಿಜಯ ಬ್ಯಾಂಕು ನೇ. ೪೭ರಷ್ಟು ಹೆಚ್ಚಳ ಸಾಧಿಸಿದೆ. ಹೊರಗೆ ನೀಡಿದ ಸಾಲವು ರೂ.೫.೫೦ ಕೋಟಿಯಿದ್ದು ಈ ಹೆಚ್ಚಳವೂ ಇದಕ್ಕೆ ಸಮಾನವಿದೆ. ಬ್ಯಾಂಕಿನ ಒಟ್ಟು ಆಸ್ತಿ ರೂ. ೬೨ ಲಕ್ಷಕ್ಕೆ ಸಮೀಪವಿದ್ದು ಇದು ಹಿಂದಿನ ವರ್ಷಕ್ಕಿಂತ ಸುಮಾರು ನೇ. ೫೦ರಷ್ಟು ಹೆಚ್ಚಳವನ್ನು ತೋರಿಸುತ್ತದೆ. ಎಲ್ಲರಂಗಗಳಲ್ಲಿಯೂ ಬೆಲೆಯೇರಿಕೆ, ಠೇವಣಾತಿಗಳ ಮೇಲಿನ ಬಡ್ಡಿದರ ಏರಿಕೆ, ನೌಕರರ ಸಂಬಳ—ಸಾರಿಗೆಗಳ ಏರಿಕೆ— ಇವುಗಳ ನಡುವೆಯೂ ಬ್ಯಾಂಕು ರೂ. ೧.೭೪ ಲಕ್ಷ ಲಾಭಗಳಿಸಿದ್ದು ಶೇರುದಾರರು ಆದಾಯ ತೆರಿಗೆಗೊಳಪಟ್ಟು ನೇ. ೬ರ ಡಿವಿಡೆಂಡು ಪಡೆಯುವರು. ಪಕ್ಷಾರ್ಥಕ್ಯದಲ್ಲಿ ಬ್ಯಾಂಕಿನ ಈ ಅಂಕೆ ಸಂಖ್ಯೆಗಳು ಪ್ರಗತಿಯ ಸ್ಥೂಲಚಿತ್ರವನ್ನು ತೋರಿಸುತ್ತವೆ.

ಬಂಡವಾಳ ರೂ.	೧೧.೦೬ ಲಕ್ಷ
ಕಾಯ್ದಿಟ್ಟ ನಿಧಿ ರೂ.	೬.೦೦ ಲಕ್ಷ
ಠೇವಣಾತಿ ರೂ.	೮೪೨.೯೩ ಲಕ್ಷ
ನೀಡಿದ ಸಾಲ ರೂ.	೫೪೯.೫೨ ಲಕ್ಷ
ನಿವ್ವಳ ಲಾಭ ರೂ.	೧.೭೪ ಲಕ್ಷ
ನೌಕರರು	೬೪೯.

ವರದಿ ವರ್ಷದಲ್ಲಿ ಹುಬ್ಬಳ್ಳಿ ಸಿಟಿ ಬ್ಯಾಂಕನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡ ವಿಜಯ ಬ್ಯಾಂಕು ಇದರ ಎರಡು ಶಾಖೆಗಳನ್ನು ಪಡೆಯಿತು. ೬ ಹೊಸ ಶಾಖೆಗಳನ್ನು ತೆರೆಯಿತು. ಹಲವು ಶಾಖೆಗಳನ್ನು ಉತ್ತಮ ಸ್ಥಾನ—ಭವನಗಳಿಗೆ ಸ್ಥಾನಾಂತರಿಸಿತು. ಮುಂದಿನ ವರ್ಷಗಳಲ್ಲಿ ಬ್ಯಾಂಕು ಇನ್ನೂ ಕೆಲವು ಬ್ಯಾಂಕುಗಳನ್ನು ತನ್ನಲ್ಲಿ ವಿಲೀನಗೊಳಿಸುವುದು; ಹಲವು ಶಾಖೆಗಳನ್ನು ಹೊಸದಾಗಿ ತೆರೆಯುವುದು. ಗ್ರಾಮೀಣ ಪ್ರದೇಶಗಳಲ್ಲಿ—ಉದಾಹರಣೆಗೆ, ಬೆಳಪುದಿ, ಕಾರ್ನಾಡು, ಉಜಿರೆ, ಸಿದ್ಧಾಪುರ ಮೊದಲಾದುವು-ಬ್ಯಾಂಕಿಂಗ್ ಆಸಕ್ತಿಯನ್ನು ಕುದುರಿಸುವಲ್ಲಿ ವಿಜಯ ಬ್ಯಾಂಕು ತುಂಬ ಆಸಕ್ತಿ ಹೊಂದಿದೆ. ಇದರಿಂದ ಬಂಡವಾಳವು ಚಲಾವಣೆಗೆ ಹೆಚ್ಚು ಹೆಚ್ಚಾಗಿ ಬರುವುದು ಸಾಧ್ಯವಾಗಿ, ಇಂದಿನ ಮುಖ್ಯ ಆವಶ್ಯಕತೆಗಳಲ್ಲಿ ಒಂದು ಈಡೇರುತ್ತದೆ.

೩೬ನೆಯ ವರ್ಷಕ್ಕೆ ಪಾದಾರ್ಪಣ ಮಾಡಿದ ವಿಜಯ ಬ್ಯಾಂಕು ತನ್ನ ಯೌವನದ ಅನುಭವ ಆಳದಿಂದ ಮುಂದೆ ಸಮೃದ್ಧ ವಸಂತಗಳನ್ನು ಕಾಣುವಂತಾಗಲಿ. ಇದಕ್ಕಾಗಿ ಶ್ರಮಿಸುತ್ತಿರುವ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟಿ, ಕಾರ್ಯದರ್ಶಿ ಶ್ರೀ ಪಿ. ಜಯರಾಮ ಶೆಟ್ಟಿ, ಡೈರಕ್ಟರರ ಮಂಡಳಿ, ನೌಕರ ವರ್ಗ, ಶೇರುದಾರರು, ಹಿತಚಿಂತಕರು— ಎಲ್ಲರಿಗೂ ಯಶ ದೊರೆಯಲಿ.

ವಿಜಯ ಬ್ಯಾಂಕು ದೇಶದ ಆರ್ಥಿಕ ವಿಜಯದ ಪ್ರಮುಖ ಸೇನಾಪತಿಯೆನಿಸಲಿ.

ಅಧಿಕಾರಿ ವರ್ಗ ನಿರ್ಮಿತವಲ್ಲವೆ?

(ಏಳನೇ ಪುಟದಿಂದ)

ಲಾಗದು.' ಲಿಖಿತ ಆಜ್ಞೆಯೂ ಚಾಲಕನ ಕೈ ಸೇರಿತು—ಮುಂದೆ...

ಇಂಜನ್ನು ಚಾಲಕನ ಕೃತಜ್ಞ್ಞತೆಯು ಖಂಡಿತವೆನಿಸಿತು. ಕುಪ್ಪಂ ನಿಲ್ದಾಣದ ಹತ್ತಿರ ವಿಶೇಷಕ್ಕೇರಿದ ಪರಿಸ್ಥಿತಿ ಅನುಭವಕ್ಕೆ ಬಂತು - ಭಾರಿ ಅನಾಹುತ ಆತಿ ಸಮೀಪದಲ್ಲಿದೆಯೆಂದು ಚಾಲಕ ಚಿಂತಿಸಿದ— ಅಪಾಯವಂತೂ ನಿಶ್ಚಿತ—ಆದರೂ ಅದನ್ನು ಕಡಿಮೆ ಮಾಡುವ ಬಗ್ಗೆ ನಿರ್ಧರಿಸಿದ. —ಇದು ಅನಿವಾರ್ಯವಾಗಿತ್ತು.

ಇಂಜಿನ್ನನ್ನು ಕುಪ್ಪಂ ನಿಲ್ದಾಣದ ಷಂಟಿಂಗ್ ಲೈನ್‌ಗೆ ಒಯ್ದು ನಿಲ್ಲಿಸುವುದು ಚಾಲಕನ ಗುರಿಯಿತ್ತು. ಆ ಲೈನಿಗೆ ಇಂಜಿನನ್ನು ಬದಲಾಯಿಸಿಕೊಳ್ಳುತ್ತಲೇ ಇತ್ತು. ಇಲ್ಲೇ ಇಂಜಿನ್ನು ಹಳಿಯಿಂದ ಮರಳು ಗುಡ್ಡಗೆ ಬಡಿಯಿತು—ನಿಂತುಬಿಟ್ಟಿತು. ಆದರೆ, ಒಂದು ಉಬ್ಬಿ ಬೆಂಡಾಗಿ ಉರುಳುವ ಸ್ಥಿತಿಗೆ ಬಂದು ಬಿತ್ತು. ಮೂರು ಡಬ್ಬಿಗಳಿಗೆ ಜಖಂ ಆಯಿತು, ಇಂಜಿನ್ನಿನಿಂದ ಡಬ್ಬಿಗಳು ಬೇರ್ಪಟ್ಟುವು.

ಉರುಳುವವರು ಉರುಳಿದರು, ಬೀಳುವವರು ಬಿದ್ದರು, ಅಯ್ಯಾಯ್ಯೋ ಎಂಬ ಚೀತ್ಕಾರ ಒಂದು ಕ್ಷಣ—ಸತ್ತವರಂತೂ ಸತ್ತರು—ಗಾಯಾಳುಗಳಲ್ಲಿ ಅನೇಕರು ಅಂಗವಿಕಲರೂ, ಅನಾಥರೂ ಇಲ್ಲದಿಲ್ಲ....

ಬ್ರೇಕು ಕೆಟ್ಟದ್ದರಿಂದ ಅಪಘಾತ ಸಂಭವಿಸಿರಬೇಕು ಎಂದು ಈಗ ಹೇಳಲಾಗುತ್ತಿದೆ. ರೇಲು ಭದ್ರತಾ ಶಾಖೆಯ ಅಧಿಕಾರಿಗಳು ವಿಚಾರಣೆ ಪ್ರಾರಂಭಿಸಿದ್ದಾರೆ. ಬ್ರೇಕು ಕೆಟ್ಟದ್ದೇ ಕಾರಣವೆನ್ನೋಣ, ಈ ಬಗ್ಗೆ ಸೂಚನೆ ಮೊದಲೇ ಕೊಟ್ಟಾಗಲೂ ಅಧಿಕಾರಿಗಳು ಅದನ್ನೇಕೆ ಕಿವಿಗೆ ಹಾಕಿಕೊಳ್ಳಲಿಲ್ಲ? ಹಾಗಿರುವಾಗ ಈ ಅಪಘಾತವು ದೈವ ಪ್ರೇರಿತವೆಂಬುದಕ್ಕಿಂತ ಮಾನವ ನಿರ್ಮಿತವೆಂದೇ ಹೇಳಬೇಕು.

ಅಪಾಯ ಸೂಚನೆಯಿತ್ತ ಚಾಲಕನು ಆ ಇಂಜನ್ನನ್ನೇ ಒಯ್ಯುವಂತೆ ಮಾಡಿದ ಅಧಿಕಾರಿ ವರ್ಗದ ನಿರ್ಲಕ್ಷ್ಯವು ಹೊಣೆಗಾರಿಕೆ ಈ ಅಪಘಾತದಲ್ಲಿದೆ. ಅಧಿಕಾರಿ ವರ್ಗ ಇದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಆಯೋಗದ ಆಗಮನ

ಮಣಿಪಾಲ, ಮೇ ೨೨—ಇಂದಿಲ್ಲಿ ಕಸ್ತೂರ್ ಬಾ ಮೆಡಿಕಲ್ ಕಾಲೇಜನ್ನು ಪರೀಕ್ಷೆ ಮಾಡಿದ ಮೈಸೂರು ವಿಶ್ವವಿದ್ಯಾನಿಲಯದ ಆಯೋಗದ ಅಧ್ಯಕ್ಷರಾದ ಮೇಜರ್ ಜನರಲ್ ಎಸ್ ಎಲ್ ಭಾಟಿಯಾರವರು ಮಣಿಪಾಲ ಕಾಲೇಜು ಉತ್ತಮ ಪ್ರಗತಿ ಸಾಧಿಸಿದೆ ಎಂದು ಹೇಳಿ ಅದು ಇನ್ನೂ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಕಾಲೇಜಿನ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ಆಯೋಗದ ಸದಸ್ಯರನ್ನು ಸ್ವಾಗತಿಸಿ ಕಾಲೇಜಿಗೆ ಬೆಂಬಲ ಕೊಟ್ಟದ್ದಕ್ಕಾಗಿ ವಿಶ್ವವಿದ್ಯಾನಿಲಯಕ್ಕೆ ಕೃತಜ್ಞತೆಗಳನ್ನು ಸೂಚಿಸಿದರು.

ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸದಸ್ಯರಾದ ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ ಮತ್ತು ಮೈಸೂರು ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾದ ಡಾ|| ಕೆ. ಜಿ. ದಾಸ್‌ರವರು ಉಪಸ್ಥಿತರಿದ್ದರು.

ವಿದಾಯ ಸತ್ಕಾರ

ಉಡುಪಿ, ಮೇ, 27. ಇಲ್ಲಿಂದ ಕುಂದಾಪುರಕ್ಕೆ ವರ್ಗವಾದ ವಿಜಯಾ ಬ್ಯಾಂಕಿನ ಮೆನೇಜರ್ ಶ್ರೀ ಶೀನಪ್ಪ ರೈಗಳನ್ನು ಸ್ಥಳೀಯ ಶಾಖೆಯ ಸಿಬಂದಿಯವರು ಡಾ| ಬಿ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರವಿತ್ತು ಗೌರವಿಸಿದರು. ಅಧ್ಯಕ್ಷರು ಶ್ರೀ ರೈಗಳ ಜನಪ್ರಿಯತೆ, ದಕ್ಷತೆಯನ್ನು ಶ್ಲಾಘಿಸಿ ಶುಭ ಕೋರಿ ಮಾತನಾಡಿದರು. ಶ್ರೀಗಳು ಮಾತನಾಡುತ್ತ ತನ್ನನ್ನು ಗೌರವಿಸಿದುದಕ್ಕೆ ವಂದನೆಗಳನ್ನರ್ಪಿಸಿದರು. ಆರಂಭದಲ್ಲಿ ಶ್ರೀ ಪ್ರಭಾಕರ ಹೆಗ್ಡೆಯವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಎಂ. ಎಸ್. ಅಮೀನ್‌ರವರು ಧನ್ಯವಾದಗಳನ್ನರ್ಪಿಸಿದರು.

ಬೆಳ್ಳಾರೆಯಲ್ಲಿ ವಿಜಯ ಬ್ಯಾಂಕ್ ಶಾಖೆ

ತಾ. 24—೬—67ರಂದು ವಿಜಯ ಬ್ಯಾಂಕಿನ 67ನೇ ಶಾಖೆಯು ದ. ಕ. ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ತೆರೆಯಲ್ಪಟ್ಟಿದೆ. ಈ ಗ್ರಾಮೀಣ ಶಾಖೆಯು ಬೆಳ್ಳಾರೆ ಮತ್ತು ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ಜನರಿಗೆ ಬ್ಯಾಂಕಿಂಗ್ ಸೌಕರ್ಯವನ್ನು ಒದಗಿಸಲು ತುಂಬಾ ಸಹಕಾರಿಯಾಗಿದೆ. ಪ್ರಾರಂಭದ ದಿನವೇ ಹಲವಾರು ಜನರು ಸ್ವಯಂಪ್ರೇರಣೆಯಿಂದ ಬೇರೆ ಬೇರೆ ಖಾತೆಗಳನ್ನು ತೆರೆದಿರುತ್ತಾರೆ. ಮಂಗಳೂರಿನಿಂದ ಬಂದಿದ್ದ ಡಿಪ್ಟಿ ಸೆಕ್ರೆಟರಿ ಶ್ರೀ ಸಿದ್ಧಳ ಶೆಟ್ಟರೂ ಈ ಹೊಸ ಶಾಖೆಯ ಮೆನೇಜರ್ ಶ್ರೀ ಬಾಲಕೃಷ್ಣ ರೈಗಳೂ ಗಣ್ಯರನ್ನು ಸ್ವಾಗತಿಸಿ ಬ್ಯಾಂಕಿನ ಮಾಹಿತಿಯನ್ನಿತ್ತರು. ಅತಿಥಿ ಅಭ್ಯಾಗತರುಗಳಿಗೆಲ್ಲ ಉಪಾಹಾರವನ್ನು ಏರ್ಪಡಿಸಲಾಗಿತ್ತು.

ನಾಟಕ ಪ್ರದರ್ಶನ

ಬ್ರಹ್ಮಾವರದ ಕೊಂಕಣಿಯುವಕರು ಕಳೆದ ತಾ. 21ರಂದು ಸ್ಥಳೀಯ ಎಸ್. ಎಮ್. ಎಸ್. ಹೈಸ್ಕೂಲಿನ ಹಾಲಿನಲ್ಲಿ "ಘುರ್ ವಿಭಾಟ್" ಎಂಬ ಕೊಂಕಣಿ ನಾಟಕವನ್ನು ಶಿಕ್ಷಕ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಯಶಸ್ವೀರೀತಿಯಲ್ಲಿ ಅಭಿನಯಿಸಿದರು.

ಅಣಕಿಸುವ ಮಿಣುಕು ದೀಪ

(ಎರಡನೇ ಪುಟದಿಂದ)

ವಿಯಲ್ಲಿ ಮುಳುಗಿದರು. ಕೈಗೆ ಸಿಕ್ಕಿದ ಪ್ರಾಣಿಯನ್ನು ಎಳೆದು ಮೇಲೆ ತಂದು ಹಾಕಿದರು.... ಕತ್ತಲೆಯಲ್ಲಿ ಗುರುತ ನ್ನು ಹಿಡಿಯಲು ಆಗಲಿಲ್ಲ. ಮಿಣುಕುವ ದೀಪವನ್ನು ದೊಡ್ಡದು ಮಾಡಿ ನೋಡಿದರು. ಬೆಚ್ಚಿ ಬಿದ್ದರು. ಹೌದು! ಭಾರತಿ! ನೀರು ಕುಡಿದು ಹೊಟ್ಟೆ ತುಂಬಿಸಿ ಕೊಂಡಿದ್ದಳು. ಮೂರ್ಛೆ ಹೋಗಿತ್ತು. ತನಗೆ ಗೊತ್ತಿರುವ ಪ್ರಥಮ ಚಿಕಿತ್ಸೆಗಳನ್ನೆಲ್ಲಾ ಮಾಡಿದರು...

ಒಂದು ಗಂಟೆ ಮೌನ....!

ಭಾರತಿ ಉಸಿರಾಡುವುದನ್ನು ನೋಡಿದರು...ಹಾರಿಹೋದ ಜೀವ ಮರಳಿ ಬಂದಿತು. "ಭಾರತೀ...! ಭಾರತಿ!! ಭಾರತಿ!!!..."

"ಹೂಂ!...ಯಾರು...?..."

"ಬಾವಿಯಲ್ಲಿ ಭಾರತಿ.......ಕಟ್ಟೆಯ ಮೇಲೆ ಕಾಗದ....ಮಿಣುಕು ದೀಪ....ಇದೆಲ್ಲ ಏನು ಭಾರತೀ?...ಇದರ ಅರ್ಥವೇ ಆಗುತ್ತಿಲ್ಲವಲ್ಲಾ?"

"ಕಾಗದ ಇದಯಲ್ಲಿ ಓದಿ."

"ಪ್ರಿಯ ಮಾಧವ......

ಜೀವನದಲ್ಲಿ ಬೇಸರವನ್ನು ಕಂಡು, ಜೀವನ ಬೇಡವೆಂತ ಗಂಗಾ ಮಾತೆಯ ಮಡಲಿನಲ್ಲಿ ಮಲಗಲು ಹೊರಡಿರುವೆ. ಆದರೆ ಕೊನೆಗೂ ನನಗೆ ಭರವಸೆಯಿದೆ. ನೀನು ನನ್ನ ಪ್ರಾಣದೇವರು. ಇನ್ನೊಂದು ಜನ್ಮದಲ್ಲಿಯಾದರೂ ನಿನ್ನ ಸತಿಯಾಗಿ ಬಾಳುತ್ತೇನೆಂಬುದು ನನಗೆ ಭರವಸೆಯಿದೆ. ಇದು ನನ್ನಾಸೆ. ಇದನ್ನು ಪೂರ್ತಿಗೊಳಿಸುವವರಗೂ ದೇವರು ಕೈಬಿಡಲಾರ! ದೇವರ ಕೃಪಾಕಟಾಕ್ಷವೊಂದು ಇದ್ದರೆ, ಯಾವ ಕಲಸವಲ್ಲೂ ನಾವು ಹಾಕೆಂದು ಭಾವಿಸಿದರೂ, ಅದನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಾನೆ. ದೇವರನ್ನು ಕಂಡವರಿಲ್ಲ! ಇದ್ದಾನೆ ಎನ್ನುವುದು ಮಾತ್ರ ಸತ್ಯ. ಆ ಪ್ರಶ್ನೆ ಮಾತ್ರ ಈಗ ಬೇಡ. ನೀನು ನನ್ನ ದೇವರು. ಅದಕ್ಕಿಂತ ಹೆಚ್ಚಿನದು ನನ್ನ ಪಾಲಿಗೆ ಬೇಕಿಲ್ಲ. ಈ ನನ್ನ ದುಃಖದ ವಾರ್ತೆಯನ್ನು ಕೇಳಿ ನೀನು ಬೇಸರಗೊಳ್ಳಬಹುದು. ಆದರೆ ನೀನು ಮಾತ್ರ ಹಾಗೆಂದೂ ಮಾಡಬೇಡ, ಇಂದಿನಿಂದ ನನ್ನನ್ನು ಮರೆತು ಬಿಡು.... ಇಂತು ನಿನ್ನವಳೆ....ಭಾರತೀ......."

ಈ ಕಾಗದವನ್ನು ಓದುತ್ತಿರುವಾಗಲೇ ಮಾಧವರಾಯರ ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿದು ಬರುತ್ತಿತ್ತು.

"ಭಾರತಿ" ಎಂದು ಮನಃಪೂರ್ವಕವಾಗಿ ತಬ್ಬಿ ಹಿಡಿದು ಕೊಂಡರು ಮಾಧವರಾಯರು...

ಮಿಣುಕು ದೀಪವು ಎಣ್ಣೆಯಾರಿಯೇ ಆರಿತು!

ಮರೆಯ ಹಣ್ಣಿನ ರುಚಿ

ಗುರು - ಶಿಷ್ಯ ಪ್ರಶ್ನೋತ್ತರ

ಬರೆದವರು

ಶ್ರೀ "ನವಗಿರಿನಂದ"

ನಾರಾಯಣ ಮಾಸ್ತರೆಂದರೆ ಇಡೀ ಶಾಲೆಯೇ ಭಯ ಭಕ್ತಿಯಿಂದ ತುಂಬಿ ಕೊಳ್ಳುತ್ತದೆ. ಅವರು ಶಾಲೆಗೆ ಬಂದರೆಂದರೆ ಹುಡುಗರೆಲ್ಲಾ ಗಪ್‌ಛಿಪ್. ಹಾಗಂತ ಅವರೇನೂ ಭಾರಿ ಆಳಲ್ಲ. ತೆಳ್ಳಗೆ ಬೆಳ್ಳಗೆ ನೌವಳು ವ್ಯ.

ಅವರು ಪಾಠ ಕಲಿಸುವ ರೀತಿ ಹಾಗಿತ್ತು. ಶಿಸ್ತು ನಿಯಮಗಳೇ ಅವರ ಅಕ್ಕಪಕ್ಕದ ಬಲಗಳು. ತಪ್ಪು ಮಾಡಿದ ಹುಡುಗನನ್ನು ನ್ಯಾಯವಾಗಿ ವಿಚಾರಿಸಿ ಅವನಿಂದಲೇ ತಪ್ಪೊಪ್ಪಿಸಿ ತೂಕದಂತೆ ಲೆಕ್ಕದಂತೆ ಶಿಕ್ಷೆಯನ್ನೂ ಕೊಟ್ಟು ಆ ಮೇಲೆ ಅವನನ್ನು ಪ್ರೀತಿಸಿ ತಿಂಡಿಕೊಟ್ಟು, ಬೆನ್ನು ತಟ್ಟುವರು.

ಅದೊಂದು ಕಾಲ. ನಾವೆಲ್ಲ ಆ ನಾರಾಯಣ ಮಾಸ್ತರ ಕೈಯಿಂದಲೇ ಶಿಕ್ಷಣ ಪಡೆದವರು. ಈಗ ಅವರು ತುಂಬ ವೃದ್ಧರಾಗಿ ಹೋಗಿದ್ದಾರೆ. ಸುಮ್ಮನೆ ಮನೆಯಲ್ಲೇ ಕುಳಿತು ಪತ್ರಿಕೆ ಓದುತ್ತಾ ಇರುತ್ತಾರೆ. ನಾನು ಊರಿಗೆ ಹೋದಾಗ ಒಮ್ಮೆ ಅವರ ದರ್ಶನ ಮಾಡದೆ ಇರುವುದಿಲ್ಲ. ಆಗ ನಾನು ಕೆಲವಾರು ಪ್ರಶ್ನೆಗಳನ್ನು ಹಾಕಿ ಅವರಿಂದ ಉತ್ತರ ಹೊಂದಿಸುತ್ತೇನೆ. ಅವರ ಬಾಯಿಯಿಂದ ಹೊರಡುವ ಉತ್ತರಗಳೆಲ್ಲ ಸಂಗ್ರಹ ಯೋಗ್ಯವಾದ ಮುತ್ತುಗಳು, ಮಣಿಗಳು ಎಂದು ನನಗನ್ನಿಸುವುದುಂಟು. ಅವುಗಳಲ್ಲಿ ಜ್ಞಾಪಕವಿದ್ದಷ್ಟನ್ನು ಈ ಕೆಳಗೆ ಬರೆಯುತ್ತಿದ್ದೇನೆ.

"ಕೆಟ್ಟ ಅಭ್ಯಾಸ ಕೆಟ್ಟ ಮಾತುಗಳು ಮುಂತಾದುವು ನಮ್ಮನ್ನು ಸೇರದಿರಬೇಕಾದರೆ ಏನು ಮಾಡಬೇಕು?"

ಉತ್ತರ:— "ಒಳ್ಳೆಯವರ ಸಹವಾಸದಲ್ಲಿರಬೇಕು, ಒಳ್ಳೆಯುದರಲ್ಲಿಯೇ ಮನಸ್ಸನ್ನು ತೊಡಗಿಸಬೇಕು. ಒಳಿತನ್ನು ಅನ್ವೇಷಿಸುವಂತಹ ಆಸಕ್ತಿ ಇದ್ದರಷ್ಟೇ ಇದೆಲ್ಲ ಸಾಧ್ಯ."

ಪ್ರ:— ಶಾಲೆಯಲ್ಲಿ ವಿದ್ಯೆ ಕಲಿಯದಿದ್ದರೆ ಹೊಟ್ಟೆ ತುಂಬುವುದಿಲ್ಲವೋ?

ಉ:— ಯಾಕಿಲ್ಲ? ಹೊಟ್ಟೆ ತುಂಬಿಸುವುದೊಂದೇ ವಿದ್ಯೆಯ ಗುರಿ ಅಲ್ಲವಪ್ಪಾ. ಮನುಷ್ಯರಿಗ ಇತರ ಪ್ರಾಣಿಗಳಿಗಿಂತ ಹೆಚ್ಚಿನ ವಿಶೇಷತೆಗಳೂ ಸೌಲಭ್ಯತೆಗಳೂ ಇವೆ. ಮನುಷ್ಯನದು ಪ್ರಾಗತಿಕ ಚೇತನ. ಇದನ್ನೆಲ್ಲ ತಿಳಿದು ಮನುಷ್ಯನ ಎಲ್ಲ ಅಭಿರುಚಿಗಳನ್ನೂ ಸಾರ್ಥಕಪಡಿಸಿಕೊಳ್ಳಬೇಕಾದರೆ ವಿದ್ಯೆ ಬೇಕು. ವಿದ್ಯೆ ಕಲಿಯದವನು ಪಶುವಿಗೆ ಸಮಾನನೆನ್ನುವುದು ಇದಕ್ಕೇ.

ಪ್ರ:— ಶಾಲೆಯ ಹೊರತು ಬೇರೆ ವಿಧವಾಗಿ ವಿದ್ಯೆ ಕಲಿಯಲು ಸಾಧ್ಯವೇ ಇಲ್ಲವೊ?

ಉ:— ಸಾಧ್ಯವಿಲ್ಲದೇನಿಲ್ಲ; ಮಾತ್ರ ಕಷ್ಟಸಾಧ್ಯ. ಶಾಲೆಯಲ್ಲಿ ಸುಲಭವಾಗಿ ಕ್ರಮವಾಗಿ ಸಾಧಾರವಾಗಿ ಎಲ್ಲರಿಗೂ ಕಲಿಯಲಾಗುತ್ತದೆ. ಆದರೆ ಶಾಲೆಯ ವಿದ್ಯೆಯೇ ಪರಿಪೂರ್ಣವೇನಲ್ಲ. ಲೋಕಾನುಭವದಿಂದ ಮತ್ತಷ್ಟೋ ಕಲಿಯಲಿಕ್ಕಿದೆ. ಶಾಲಾ ಕಾಲೇಜುಗಳೆಂಬ ವಿದ್ಯಾಂಗಣಗಳಲ್ಲಿ ಅಭ್ಯಾಸ ಮಾಡುತ್ತ ಪ್ರಪಂಚವೆಂಬ ಮಹಾ ವಿದ್ಯಾಂಗಣದಲ್ಲಿ ಕಲಿಯುತ್ತಿರುವುದೇ ಮಾನವನ ಬಾಳು. ಕಲಿತಷ್ಟೂ ಮುಗಿಯದು. ಎಷ್ಟು ಕಲಿತರೂ ಇನ್ನೂ ಇದೆ. ಅಂತಲೇ ಹೆಮ್ಮೆಪಡಬಾರದು. ನಿಜವಾದ ವಿದ್ಯಾವಂತನು ವಿನಯಶಾಲಿಯಾಗಿಯೇ ಇರುತ್ತಾನೆ.

ಪ್ರ:— ಯಾವಾಗಲೂ ಹೆಚ್ಚಾಗಿ ಪುಸ್ತಕ ಓದುತ್ತಾ ಇರುವವರೆಲ್ಲ ಬುದ್ಧಿವಂತರೋ?

ಉ:— ಹಾಗೆನ್ನಲು ಸಾಧ್ಯವಿಲ್ಲ. ಮೊದಲು ಅವರು ಓದುವ ಪುಸ್ತಕವು ಒಳ್ಳೆಯದಿರಬೇಕು. ಓದಿ ಮನನಮಾಡಿ ಓದಿ ತಿಳಿದುಕೊಂಡು ಸ್ವತಃ ಆಚರಣೆಗೆ ತರಬೇಕು. ಹಾಗೆಯೇ ತನ್ನ ಸುತ್ತಲಿನವರೂ ಆಚರಿಸಿಕೊಳ್ಳುವಂತಹ ಪ್ರೇರೇಪಕ ವರ್ತನೆಯುಳ್ಳವನಾಗಿರ ಬೇಕು.

ಪ್ರ:— ವಿದ್ಯೆ ಅನುಭವ ಮುಂತಾದುವುಗಳಿಂದ ಸರಿಯಾದ ಪ್ರಯೋಜನವಾವುದು?

ಉ:— ಮುಂದಿನ ತಲೆಮಾರಿನವರ ಜೀವನ ಸಂಸ್ಕೃತಿಗಳಿಗೆ ಇಂದಿನವರ ವಿದ್ಯಾನುಭವಗಳೇ ಆಧಾರ. ಇಂದಿನವರಿಗೆ ಹಿಂದಿನವರದು ಆಧಾರ. ಇದರಿಂದಲೇ ವಿದ್ಯಾನುಭವಗಳನ್ನು ಹೇಗೆ ಚೇತನಗೊಳಿಸಬೇಕೆಂಬುದನ್ನು ತಿಳಿದುಕೊಳ್ಳಬಹುದು.

ಪ್ರ:— ವಿದ್ಯಾಸಮಸ್ಯೆ ಶಿಕ್ಷಣ ಸಮಸ್ಯೆ ಅಂದರೇನು?

ಉ:— ವಿದ್ಯೆಯನ್ನು ಕಲಿಸುವುದು ಶಿಕ್ಷಣ. ವಿದ್ಯೆಗೂ ಬಾಳುವೆಗೂ ಹೊಂದಿಕೆಯಾಗುವಂತೆ ಕಲಿಸುವುದು ಹೇಗೆ? ಎಂಬ ಪ್ರಶ್ನೆಯೇ ಸಮಸ್ಯೆ. ಇದು ಸಾಮಾನ್ಯವಾದ ಸಮಸ್ಯೆಯಲ್ಲ. ಈ ಪ್ರಪಂಚವು ಒಳ್ಳೆಯದೂ ಕೆಟ್ಟದೂ ಆದ ನೂಲುಗಳಿಂದ ಹಾಸು ಹೊಕ್ಕಾಗಿ ಒಲೆಯ ಹಾಗೆ ಹೆಣೆಯಲ್ಪಟ್ಟಿದೆ. ಒಬ್ಬರಿಗಿಂತ ಒಬ್ಬರು ಮುಂದಾಗ ಬೇಕೆಂಬ ವಿಷಯದಲ್ಲಿ ಮಾನವರಿಗ ಸಹಜವಾಗಿಯೇ ಸ್ಪರ್ಧೆಯ ಗುಣವಿದೆ. ಇಂತಹ ಸ್ಪರ್ಧಾ ಪ್ರಪಂಚದಲ್ಲಿ ಜಯಪ್ರದವಾಗಿ ನಡೆಯಬೇಕಾದರೆ ಯೋಗ್ಯ ಶಿಕ್ಷಣ ಯೋಗ್ಯ ಗುರುಗಳಿಂದ ಯೋಗ್ಯ ರೀತಿಯಲ್ಲಿ ದೊರೆಯಬೇಕು. ಶಿಕ್ಷಣ ಕ್ರಮವು ಕಾಲಕ್ಕೆ ತಕ್ಕ ಹಾಗೆ, ಶಿಸ್ತು ತಪ್ಪದೆ ಸುಗಮಗೊಳ್ಳುತ್ತಾ ಹೋಗಬೇಕು. ಈ ಕೆಲಸ ಮಾಡುವಾಗ 'ಗುರು ಶಿಷ್ಯ' ಎಂಬ ಬುನಾದಿ ಭಾವನೆಗೆ ಭಂಗಬಂದರೆ ಎಲ್ಲ ಒಣ್ಣ ಮಸಿ ನುಂಗಿದ ಹಾಗಾಗುತ್ತದೆ.

ಈಗೀಗ ಈ ಬುನಾದಿ ಭಾವನೆ ಕದಲಿ ಬುಡಕಲಾಗಿ ಹೋದುದರಿಂದಲೇ ಉಪಾ

ರೈತ ಭಾಂಧವರ ಜೀವನ ಸಂಗಾತಿ..........

ಇಮಾನಿ ಕ್ರೂಡ್ ಆಯಿಲ್ ಇಂಜಿನ್

(5, 7, 10 & 13 H. P.) ಮತ್ತು ಪಂಪು ಸೆಟ್ಟುಗಳು..........

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು

(1 H.P. ಯಿಂದ 20 H.P. ವರೇಗೆ) ಮತ್ತು ಪಂಪು ಸೆಟ್ಟುಗಳು......

ಬ್ಲೂ ಸ್ಟಾರ್ ಸ್ಟಾರ್ಟರುಗಳು.........

ಪ್ರಪ್ರಥಮ ವಿಮಾ ರಕ್ಷಣೆಗೆ ಒಳಪಟ್ಟಿರುವ ಸ್ಟಾರ್ಟರ್‌ಗಳು

ಏಕೈಕ ವಿತರಕರು:—

ಸ್ವಾಮಿ ಇಲೆಕ್ಟ್ರಿಕಲ್ಸ್,

ರಿ. ಆಫೀಸು: ಕಾರ್ಕಳ, ವ್ಯಾಪಾರ ವಿಭಾಗ: ಬಲ್ಮಠ ರಸ್ತೆ, ಮಂಗಳೂರು-1.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....

ಅದಕ್ಕಾಗಿ ಚಿಂತಿಸುವಿರೇಕೆ?................

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ.........

ವೀಗಲ್ ಪೆಟ್ರೋಲ್ / ಚಿಮಿಣಿ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

VEEGAL 2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಬಿಡಿಭಾಗಗಳಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲರಿಗೂ ಪರಿಚಿತ 'ವಿಕ್ಟರ್'ರವರ ವ್ಯಾಪಾರ ಸಂಸ್ಥೆಯ ಉತ್ತಮ ಸೇವೆ.

ವಿತರಕರು:

ವಿಕ್ಟರ್ ಟ್ರೇಡಿಂಗ್ ಕೋರ್ಪೊರೇಶನ್

ಫಳನೀರು ರಸ್ತೆ, ಮಂಗಳೂರು-1. Ph. 5737

Registered with the Registrar
of News Papers for India
under No. R. N. 3540/'57

REGD. No. B. G. 176
LICENCE No. 31
Licensed to Post without Prepayment

ಧ್ಯಾಯರಿಗೆ ವಿದ್ಯಾರ್ಥಿಗಳ ಮೇಲೆ ಶಿಷ್ಯ ಭಾವನೆಯಿಲ್ಲ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರ ಮೇಲೆ ಗುರುಭಾವನೆಯಿಲ್ಲ. ಎಲ್ಲಾ ಕೂಲಿಗೆ ಕೆಲಸ ಮಾಡುವರ ಛಂದದಲ್ಲಿದೆ.

ಪ್ರ:— ಸಮಾಜದಲ್ಲಿ ಗಣ್ಯವ್ಯಕ್ತಿಯಾಗಬೇಕಾದರೆ ಏನು ಮಾಡಬೇಕು?

ಉ:— ದುರಭಿಮಾನ ಸದಭಿಮಾನಗಳ ತಾರತಮ್ಯವನ್ನು ಅರಿತುಕೊಳ್ಳಬೇಕು. ತನ್ನ ಬದುಕಿಗೆ ತಕ್ಕ ಯೋಗ್ಯತೆಯಲ್ಲಿ ನಡೆಯಬೇಕು. ನಡೆಯುತ್ತಾ ತನ್ನ ಯೋಗ್ಯತೆ ಹೆಚ್ಚುವಂತಹ ಗುರಿಯೂ ಬೇಕು.

ಪ್ರ:— ಸದಭಿಮಾನ ದುರಭಿಮಾನಗಳೆಂದರೇನು?

ಉ:— ತನ್ನ ಜನರ, ತನ್ನ ಭಾಷೆಯ ತನ್ನ ನಾಡಿನ, ತನ್ನ ದೇಶದ ಯೋಗ್ಯತೆಗಳನ್ನು ಕಾಪಾಡಿಕೊಳ್ಳುವ ಲಕ್ಷ್ಯವೇ ಸದಭಿಮಾನ. ಅದೇ ಹೊತ್ತಿಗೆ ಸೋದರ ಭಾಷೆಯ, ಸೋದರ ನಾಡಿನ ಜನರಿಗೆ ನೋವಾಗುವಂತೆ ಮಾಡುವುದು, ಸ್ವಾರ್ಥಕ್ಕಾಗಿ ಪರಪೀಡೆ, ಅನ್ಯಾಯ ಅಪ್ರಮಾಣ ಯೋಗ್ಯತೆಗೆ ಮೀರಿದ ದಂಭಾಚಾರ ಇತ್ಯಾದಿಗಳೆಲ್ಲ ದುರಭಿಮಾನ.

ಪ್ರ:— ಸಾಮಾನ್ಯವಾಗಿ ವಿದ್ಯಾರ್ಥಿಗಳ ಮನಸ್ಸಿನ ಒಲವು ಹೇಗಿರುತ್ತದೆ?

ಉ:— ವಿದ್ಯಾರ್ಥಿಗಳ ಮನಸ್ಸಿನ ಒಲವು ಹೆಚ್ಚಾಗಿ ಅನುಕರಣಶೀಲವಾಗಿದೆ. ಆದರೆ ಬಾಹ್ಯದಲ್ಲಿ ಕಂಡುಬಂತಹ ಭ್ರಮೆಗೆ ವಶವಾಗಿ, ತಮ್ಮ ಸಂಸ್ಕೃತಿಗಳನ್ನು ಅನಾಗರಿಕವೆಂದು ದೂರೀಕರಿಸುತ್ತ, ಪರಕೀಯರದನ್ನು ಸ್ವೀಕರಿಸುವ ಪ್ರವೃತ್ತಿ ಇರುತ್ತದೆ. ವಿದ್ಯೆಯನ್ನು ಕಲಿಸುವುದೆಂದರೆ ವಿದ್ಯಾರ್ಥಿಗಳಲ್ಲಿ ಸ್ವಯಂ ವಿಚಾರ ಶಕ್ತಿಯನ್ನು ತುಂಬುವಂತಹದ್ದಾಗಿರಬೇಕು. ಆಲೋಚನೆಯನ್ನು ಪ್ರಚೋದನೆಗೊಳಿಸುವಂತಹುದಾಗಿರಬೇಕು.

ಪ್ರ:— ಪರಕೀಯರು ನಮ್ಮ ದೇಶವನ್ನು ಆಳಿದುದರಿಂದ ಉಂಟಾದ ಮುಖ್ಯ ಹಾನಿ ಯಾವುದು?

ಉ:— ಪ್ರಜೆಗಳೆಲ್ಲಾ ಪರಕೀಯರಿಗೆ ಹಿತವಾಗಿಯೂ ತಮಗೆ ಘಾತಕವಾಗಿಯೂ ಇರುವಂತಹ ಅವರ ಆಡಳಿತ ಸೂತ್ರಕ್ಕೆ ಕಟ್ಟುಬಿದ್ದು, ಆ ಕಟ್ಟು ಬಲವಾಗುವಂತಹ ಶಿಕ್ಷಣದಲ್ಲೇ ತರಬೇತಿಹೊಂದಿ ತಮ್ಮನ್ನು ತಾವು ಮರೆತು ಹೋದುದು ಸಾಮಾನ್ಯ ಹಾನಿಯಲ್ಲ.

ಪ್ರ:— ಎಲ್ಲರೂ ಚೆನ್ನಾಗಿ ಕಲಿತು ತೀರಬೇಕಾದ ಭಾಷೆ ಯಾವುದು?

ಉ:— ಸಂದೇಹವೇನು?— ಅವರವರ ಮಾತೃಭಾಷೆಯನ್ನೇ.

ಪ್ರ:— ಇಂಗ್ಲೀಷು ಭಾಷೆಯನ್ನು ತಿರಸ್ಕಾರ ಮಾಡುವುದು ಉಚಿತವೋ?

ಉ:— ಉಚಿತವಲ್ಲ. ಯಾವ ಭಾಷೆಯನ್ನೂ ತಿರಸ್ಕಾರ ಮಾಡಬಾರದು. ಸಾಧ್ಯವಾದಷ್ಟೂ ಅನ್ಯ ಭಾಷೆಗಳನ್ನು ಕಲಿತುಕೊಳ್ಳುವುದೇ ಒಳ್ಳೆಯದು. ಮುಖ್ಯವಾಗಿ ನಮ್ಮ ದೇಶದವಟ್ಟಿಗೆ ಇಂಗ್ಲೀಷಿನ ವಿಷಯವಾಗಿ ಹೇಳುವುದಾದರೆ, ಇಂಗ್ಲೀಷರು ನಮ್ಮನ್ನು ಪರತಂತ್ರದಲ್ಲಿ ಬಿಗಿದು ಆಳಿ ಹೋದ ವ್ಯಕ್ತಿತ್ವಕ್ಕಾಗಿ ಅದೊಂದು ವರ ಪ್ರಸಾದದಂತಹ ಭಾಷೆಯನ್ನು ನಮಗೆ ಜೀರ್ಣಮಾಡಿಸಿ ಹೋಗಿದ್ದಾರೆ. ಅದಕ್ಕಾಗಿ ಸಂತೋಷ ಪಡಬೇಕು. ಜ್ಞಾನಾರ್ಜನೆಯ ದೃಷ್ಟಿಯಲ್ಲಿ ಅದು ನಮಗೆ ಅಗತ್ಯವಾದ ಭಾಷೆ. ಯೋಗ್ಯ ರೀತಿಯಲ್ಲಿ ಅದನ್ನು ಕಲಿತು, ಅದರಿಂದ ತಾಯಿಬಾಸೆಯನ್ನು ಪೋಷಣೆ ಮಾಡಿಕೊಳ್ಳಬೇಕು. ಆ ಭಾಷೆಗೆ ದಾಸರಾಗಿ ತಾಯಿಬಾಸೆಯನ್ನು ಅದರಿಂದ ತುಳಿಸುವುದಲ್ಲ.

ಪ್ರ: ಹಿಂದಿಯನ್ನು ದೇಶೀಯ ಭಾಷೆಯಾಗಿ ಸ್ವೀಕರಿಸುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?

ಉ: ಮೊದಲೇ ಹೇಳಿದೆನಲ್ಲ, ಭಾಷೆಯನ್ನು ಎಷ್ಟಾದರೂ ಕಲಿಯಬಹುದು. ದೇಶೀಯ ಭಾಷೆಯಾಗಿ ಹಿಂದಿಯನ್ನು ಸ್ವೀಕರಿಸಬೇಕಾದುದೂ ನ್ಯಾಯವೇ, ಮನಸ್ಸು ಮಾಡಿದರೆ ಅದನ್ನು ಕಲಿಯುವುದೇನೂ ಕಷ್ಟವಿಲ್ಲ. ಮನಸ್ಸಿಲ್ಲದೆ ಒತ್ತಾಯದಿಂದ ಕಲಿಯುವಂತೆ ಪ್ರೇರೇಪಿಸುವುದು ಮಾತ್ರ ಒಳ್ಳೆಯದಲ್ಲ. ಇಂಗ್ಲಿಷಿನಲ್ಲಿ ಒಂದು ಬಗೆಯ ಆಕರ್ಷಣೆಯಿರುವುದರಿಂದ ಇಷ್ಟಪಟ್ಟೇ ಅದನ್ನು ಕಲಿಯೋಣವೆನಿಸುತ್ತದೆ. ಹಿಂದೀಗೆ ಅಂತಹ ಆಕರ್ಷಣೆ ಹುಟ್ಟಲಿಲ್ಲ. ಆದುದರಿಂದಲೇ ಅದನ್ನು ಒತ್ತಾಯದಿಂದ ತರಬಾರದು. ಒತ್ತಾಯಿಸಿದರೆ ಅದೊಂದು ಭೂತದಂತೆ ಅನರ್ಥಕ್ಕೆ ಪ್ರೇರೇಪಿಸುತ್ತದೆ. ಈಗನೋಡಬಾರದೆ? ತಮಿಳರು ತಮಿಳಿನ ಮೋಹದ ಭರದಲ್ಲಿ ಹಿಂದಿಯ ಮೇಲಿನ ದ್ವೇಷದ ಮತ್ತಿನಲ್ಲಿ "ಸತ್ಯಮೇವ ಜಯತೇ" ಎಂಬ ಸಂಸ್ಕೃತವನ್ನು ತೆಗೆದು, ಆ ಸ್ಥಳದಲ್ಲಿ ತಮಿಳಿನ ಭಾಷಾಂತರವನ್ನು ಹಾಕಿದ್ದಾರೆ, ಅದು ಕೂಡಾ ಸರಿಯಾದ ಅರ್ಥ ಬಂದಿದೆಯೋ ಇಲ್ಲವೋ ಅಂತ ಇನ್ನೂ ಚರ್ಚೆ ಮಾಡುತ್ತಾ ಇದ್ದಾರೆ. ಸಂಸ್ಕೃತವೆಂಬುದು, ಬಾಳಿ ಬೆಳೆದು ಚರಮದೆಶೆಯನ್ನು ಮುಟ್ಟಿದ ಭಾಷೆ. ನಮ್ಮ ಎಲ್ಲಾ ಭಾಷೆಗಳಿಗೂ ಬೆನ್ನೆಲುಬಿನಂತಹದು. ತೂಕವಾಗಿಯೂ ಶಕ್ತಿಯುತವಾಗಿಯೂ ಇರುವ ಪದಗಳಿಂದ ಶ್ಲೋಕಗಳನ್ನೂ ಮಂತ್ರಗಳನ್ನೂ ಪ್ರಾಚೀನ ಋಷಿಮುನಿಗಳು ಬರೆದಿಟ್ಟಿದ್ದಾರೆ. ಎಲ್ಲರಿಗೂ ವಾಡಿಕೆಯಾಗಿ ಹೋಗಿದೆ. ಅಂಥಾದ್ದನ್ನೆಲ್ಲ ಎಷ್ಟೇ ಸರಿಯಾಗಿ ಭಾಷಾಂತರ ಮಾಡಿದರೂ ಅದರಲ್ಲಿದ್ದ ಭಾವಶಕ್ತಿ ಭಾಷಾಂತರದಲ್ಲಿ ಬರಲಿಕ್ಕೇ ಇಲ್ಲ. ಅದೇ ರೀತಿ ಎಲ್ಲರೂಬಲ್ಲ ಇಂಗ್ಲೀಷು ಶಬ್ದಗಳನ್ನೂ ಸ್ವಭಾಷಾ ವ್ಯಾಮೋಹದಿಂದ ಭಾಷಾಂತರಿಸುವ ಮಾತು. ರೈಲನ್ನು ಹೊಗೆಬಂಡಿ ಎನ್ನಬೇಕಾಗಿಲ್ಲ. ಕಾರನ್ನು ಯಂತ್ರ ವಾಹನ, ಸೈಕಲ್ಲನ್ನು ದ್ವಿಚಕ್ರಯಾನ, ಪಾದರಥ ಎಂದೆಲ್ಲ ಭಾಷಾಂತರಿಸಿಕೊಂಡರೆ ಏನು ಸಾರ್ಥಕವಾದೀತು? ಅನ್ಯಭಾಷೆಯ ಶಬ್ದಗಳನ್ನು ಹಾಗೆ ಹಾಗೇ ನಮ್ಮ ಭಾಷೆಯಲ್ಲಿ ತುಂಬಿಕೊಳ್ಳುತ್ತಾ ಇದ್ದರೇನೇ ಅದು ಸಜೀವ ಭಾಷೆಯೆನಿಸುತ್ತದೆ, ಇದೇ ನ್ಯಾಯದಲ್ಲಿ ನಮ್ಮ ಭಾಷೆಯಲ್ಲಿ ಉರ್ದು, ಹಿಂದಿ, ತಮಿಳು, ತೆಲುಗು, ಮರಾಠಿ, ಇಂಗ್ಲಿಷ್ ಮೊದಲಾದ ಅನೇಕ ಭಾಷೆಯ ಶಬ್ದಗಳು ಹಾಸುಹೊಕ್ಕಾಗಿ ಸೇರಿ ಸುಂದರವಾದುವೇ ಹೊರತು ಕೆಟ್ಟು ಹೋಗಲಿಲ್ಲ. ಅಡಿಗೆ ಮಾಡುವುದು ನಮ್ಮ ಅಡಿಗೆಯ ಮನೆಯಲ್ಲಿ, ನಮ್ಮ ಪಾತ್ರದಲ್ಲಿ, ನಮ್ಮ ಜನರೇ ಆಗಿರುವಾಗ ರುಚಿಗೆ ಬೇಕಾದ ವಿವಿಧ ಸಾಮಗ್ರಿಗಳು ಯಾವ್ಯಾವ ದೇಶದಿಂದ ಬಂದರೇನಂತೆ? ಇನ್ನೂ ಸೊಗಸಲ್ಲವೆ?

ಪ್ರ: ಹಾಳಾಗಲಿ, ನಾಶವಾಗಲಿ, ಮಣ್ಣು ತಿಂದು ಹೋಗಲಿ ಎಂದು ಮಾತುಮಾತಿಗೂ ಕೆಲವರು ಅನ್ನುತ್ತಾರಲ್ಲಾ. ಅವರಿಗೇನು ಮಾಡಬೇಕು?

ಉ:— ಏನು ಮಾಡುವುದೂ ಬೇಡ. ಸಹವಾಸದೋಷದಿಂದ ಅವರಿಗೆ ಹಾಗೆ ಅಭ್ಯಾಸವಾಗಿದೆ. ಅವರಿಗೆ ಅರಿಯದಂತೆಯೇ ಹೇಳುತ್ತಾರೆ. ಸಾಧ್ಯವಾದರೆ ಅವರನ್ನು ಒಳ್ಳೆಯ ಸಹವಾಸಕ್ಕೆ ತಿರುಗಿಸಬೇಕು. ಅಂಥವರ ಸಹವಾಸ ಬಿಡಬೇಕು. ಅಂತಹ ಮಾತು ಕೇಳಿ ಒಳಗೊಳಗೇ ನಗಬೇಕು. ಏಕೆಂದರೆ ಎಲ್ಲರೂ ಒಂದಾನೊಂದು ದಿನ ಹಾಗೆ ಆಗುವವರೇ.

ಪ್ರ:— ಸಮವೇಗವಾಗಿ ಬೆಲೆ ಏರಿಕೊಂಡೇ ಹೋಗುವುದು ಯಾವುದಕ್ಕೆ?

ಉ:— ಕಾಲಕ್ಕೆ. ಉದಾಸೀನವಿಲ್ಲದೆ ಒಂದು ದಿನದ ಕಾಲವನ್ನು ವಿಭಾಗಿಸಿಕೊಂಡು, ಆಯಾ ಕಾರ್ಯವನ್ನು ಆಯಾ ವಿಭಾಗದಲ್ಲಿ ಮಾಡಿ ಮುಗಿಸುವವನು ಬೆಲೆಯೇರಿಕೆಯ ಭಾರವಿಲ್ಲದೆ ಜೀವನದಲ್ಲಿ ಗೆಲುವು ಶಾಂತಿಯನ್ನು ಪಡೆಯುತ್ತಾನೆ.

ಪ್ರ:— ತಕ್ಕ ಯೋಗ್ಯತೆಯಿಲ್ಲದವನು ಏನು ಮಾಡುತ್ತಾನೆ?

ಉ:— ತನ್ನ ಯೋಗ್ಯತೆಯನ್ನು ಕುರಿತು ತಾನೇ ಹೇಳಿಕೊಳ್ಳುತ್ತಾನೆ.

ಪ್ರ:— ಜೀವನದಲ್ಲಿ ಮುಖ್ಯವಾಗಿ ನೋಡಿಕೊಳ್ಳಬೇಕಾದ ದೃಶ್ಯ ಯಾವುದು?

ಉ:— ಆತ್ಮವೆಂಬ ಕನ್ನಡಿಯಲ್ಲಿ ತನ್ನನ್ನೇ ತಾನು ನೋಡಿಕೊಳ್ಳಬೇಕು.

ಪ್ರ:— ಕಷ್ಟವಾಗಿರುವ ಕಾರ್ಯ ಯಾವುದು?

ಉ:— ಈ ಪ್ರಶ್ನೆ ಕೇಳುವ ನೀನು ಸೋಮಾರಿಯೋ, ಉತ್ಸಾಹಿಯೋ ಎಂಬುದನ್ನು ಮೊದಲು ಯೋಚಿಸಿಕೋ. ನೀನು ಸೋಮಾರಿಯಾದರೆ ಒಂದು ಕಡ್ಡಿಯನ್ನೆತ್ತಿ ಆಚೆಗೆ ಇಡಬೇಕಾದರೂ ನಿನಗೆ ಕಷ್ಟವೇ. ಉತ್ಸಾಹಿಯಾಗಿದ್ದರೆ ಕಷ್ಟವೆಂಬ ಕಾರ್ಯವು ಯಾವುದೂ ಇಲ್ಲ. ಸಾಧಿಸಿದರೆ ಸಬಳ ನುಂಗಬಹುದು ಅಂತ ಗಾದೆ. ಪುರುಷ ಪ್ರಯತ್ನಕ್ಕೆ ದೈವ ಸಹಾಯವುಂಟು ಎಂಬುದು ಆರ್ಯ ವಾಕ್ಯ. ಆದರೆ ಸೋಮಾರಿಗೆ ಏನೇನೂ ಇಲ್ಲ.

ಪ್ರ:— ತನ್ನ ಸಂಪತ್ತು ಅಭಿವೃದ್ಧಿಯಾಗಬೇಕಾದರೆ ಏನು ಮಾಡಬೇಕು?

ಉ:— ನ್ಯಾಯ ರೀತಿಯಲ್ಲಿ ಸಂಪಾದಿಸಬೇಕು. ಆಯ ನೋಡಿ ವ್ಯಯ ಮಾಡುವ ಪ್ರಜ್ಞೆ ಬೇಕು. ಇನ್ನೊಬ್ಬರ ಭಾಗ್ಯಕ್ಕೆ ಕರುಬಬಾರದು. ಇದ್ದುದರಲ್ಲಿ ತೃಪ್ತಿ ಪಟ್ಟರೆ ಅಭಿವೃದ್ಧಿಯ ಬಾಗಿಲು ತೆರೆದ ಹಾಗೆ.

ಪ್ರ:— ಸಂತೋಷವಾಗಿರಬೇಕಾದರೆ ಏನು ಮಾಡಬೇಕು?

ಉ:— ಕಳೆದು ಹೋದ, ಬಯಸಿದ್ದು ದೊರೆಯದ, ಚಿಂತೆಗಳನ್ನು ಬಿಟ್ಟು, ನಾಳಿನ ಆಶಾವಾದವನ್ನು ಮುಂದಿಟ್ಟುಕೊಂಡು ಬಾಳಲು ಕಲಿತರೆ ಸಂತೋಷ ತನ್ನಂತೆ ಬರುತ್ತದೆ.

ಪ್ರ:— ಜೀವಿತದ ಅಭಿವೃದ್ಧಿಗೆಲ್ಲ ಮೂಲಾಧಾರವಾವುದು?

ಉ:— ಜೀವಿಯ ಆರೋಗ್ಯ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 66 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

Edited, Printed & Published by K. H. Shetty at the Navayuga Press, Udipi, S. India.

ನವಯುಗ

8—6—1967

೨೦ ಪೈಸೆ

ಕಥಾ ಪ್ರಪಂಚ

ಯಾರು ಹಿರಿಯವರು ?

ಬರೆದವರು:
ಶ್ರೀ ಕರುಣಾಕರ, ಕೆ.

"ನಿಗೆ ಮದುವೆಯಾಗಿ ಹನ್ನೊಂದು ವರ್ಷಗಳಾದರೂ ವತ್ಸಲ ಒಂದೇ ಒಂದು ಮಗುವಿನ ತಾಯಿಯಾಗಲಿಲ್ಲ. ಇನ್ನಂತೂ ಆಗುವುದು ಖಂಡಿತ ಇಲ್ಲ' ಎಂದು ಶಾರದಮ್ಮ ತನ್ನ ಮಗ ಗೋಪಾಲನಿಗೆ ಹೇಳಿದಾಗ ಆತನು ಹುಬ್ಬು ಗಂಟಿಕ್ಕಿಕೊಂಡನು. "ಅಮ್ಮಾ, ನಾನೇನು ಮಾಡಲಿ? ಅವಳ ದುರ್ಭಾಗ್ಯದಿಂದಾಗಿ ನನ್ನ ವಂಶ ಬೆಳೆಯುವ ಚಿಂತೆ ಹೋಗಲಾಡಿದೆಯಮ್ಮಾ" ಎನ್ನುತ್ತ ಗೋಪಾಲ ಮಗನ ಮುಖ ನೋಡಿದ್ದು. ಪ್ರೀತಿ ಎಂದ ಶಾರದಮ್ಮ "ಮಗೂ ಗೋಪಾಲ, ನಿನಗಿನ್ನೂ ಒಂದೇ ಒಂದು ಮಗುವಿಲ್ಲವೇ! ನಮ್ಮ ವಂಶವನ್ನೇ ಬೆಳಗಿಸುವವನು ನೀನು ಒಬ್ಬನೇ! ನಿನಗೆಯೂ ಮಕ್ಕಳೇ ಇಲ್ಲ, ಎಂದಾಗ ನಿನ್ನಿಂದಾಗಿ ನಮ್ಮ ವಂಶ ಕೊನೆಯಾಗಬೇಕೋ ಗೋಪಾಲ್? ವತ್ಸಲ ಎಲ್ಲಾ ರೀತಿಯಲ್ಲಿಯೂ ಒಳ್ಳೆಯವಳು ಆಗಿದ್ದರೂ ನಾವೇನು ಮಾಡುವುದು" ಎಂದು ಚಿಂತಿಸಿದಳು. ಗೋಪಾಲ್ ಅತೀವ ದುಃಖದಿಂದ "ಅಮ್ಮಾ' ನಾನೇನು ಮಾಡಬೇಕು? ಮಕ್ಕಳು ಆಗದಿದ್ದುದು ನನ್ನ ಅಥವಾ ಅವಳ ತಪ್ಪೇನಮ್ಮಾ ಅದು ನಮ್ಮ ದುರ್ಭಾಗ್ಯ" ಎಂದನು. ಶಾರದಮ್ಮ "ಇದುವರೆಗೆ ನೀನು ನನ್ನ ಮಾತು ಕೇಳುತ್ತಿದ್ದಿಯಾದುದರಿಂದ ನಿನಗೊಂದು ಮಾತನ್ನು ಹೇಳ ಬಯಸುವೆನು. ಬಂಜೆಗೆ ಬಾರಿ ಪ್ರಯೋಜನ ಏನು? ಆಲೋಚಿಸಿ ನೋಡು. ನೀನು ರೂಪವತಿಯಾದ ಮತ್ತೊಬ್ಬಳನ್ನು ವಿವಾಹವಾದರೆ ..." ಮತ್ತೂ ಮಾತುಗಳನ್ನು ಹೇಳುವುದರೊಳಗಾಗಿ ಗೋಪಾಲ್ ಅಳುತ್ತಾ, ತನ್ನ ಹೃದಯದ ಬೇನೆಯನ್ನು ತಿಗೆದುಕೊಳ್ಳುತ್ತಾ 'ಅಮ್ಮಾ! ಆ ಮಾತೊಂದನ್ನು ಮಾತ್ರ ಹೇಳಬೇಡಮ್ಮಾ ಬೇಡ.' ಎಂದು ಅಳತೊಡಗಿದನು. ಇನ್ನು ಈ ವಿಷಯ ಮುಂದುವರಿಸಲು ಇಷ್ಟಪಡದೆ ಶಾರದಮ್ಮ ಮಗನನ್ನು ಸಮಾಧಾನ ಪಡಿಸಿದಳು.

ಗೋಪಾಲ್ ಬೆಂಗಳೂರಿನ '....ಬ್ಯಾಂಕ್'ನಲ್ಲಿ ಕ್ಯಾಶಿಯರ್ ಆಗಿದ್ದನು. ವಿಶೇಷ ಸ್ವಾರ್ಜಿತ ಆಸ್ತಿಯಿಲ್ಲದಿದ್ದರೂ ಒಂದು ಸ್ವಂತ ಮನೆ, ಹಿತ್ತಲು ಇತ್ತು. ಶಾರದಮ್ಮ ಆತನ ತಾಯಿ. ಮಗನೆಂದರೆ ಬಹಳ ಪ್ರೀತಿಯಿತ್ತು. ಅಂತೆಯೇ ಗೋಪಾಲ್ ತಾಯಿಯ ಮಾತು ಮೀರಿ ನಡೆಯುತ್ತಿರಲಿಲ್ಲ. ವತ್ಸಲ ಗೋಪಾಲ್‌ನ ಪತ್ನಿ. ಪತಿಗೆ ಅವಳ ಯಾವುದೊಂದು ರೀತಿಯಲ್ಲೂ ಶಾರದಮ್ಮನವರಿಗೆ ಎದುರಾಡಿರಲಿಲ್ಲ. ಅವರಿಗೆ, ತನ್ನ ಏಕಮಾತ್ರ ಸೊಸೆಯ ಮೇಲೆ ಅತೀವ ಮಮತೆಯಿತ್ತು. ಒಬ್ಬರನ್ನೊಬ್ಬರು ಅತೀವ ಪ್ರೀತಿಸುತ್ತಾ ಇದ್ದರು. ಆಗಾದುದರಿಂದ ಅವರ ಸಂಸಾರವೆಂಬ ನೌಕೆ, ಸಮುದ್ರದ ಭೀಕರ ತೆರೆಗಳಿಂದಾಗಿ ಏರಿಳಿತ ಹೊಂದದೆ ಒಂದೇ ರೀತಿಯಾಗಿ ಮುಂದುವರಿಯುತ್ತಿತ್ತು. ಆದರೆ ಮದುವೆಯಾಗಿ ಹನ್ನೊಂದು ವರ್ಷಗಳಾದರೂ, ವತ್ಸಲ ಮಾತ್ರ ಹೆರುವ ಸೂಚನೆಯಿರಲಿಲ್ಲ. ಶಾರದಮ್ಮ ಅದನ್ನು ಮನಸ್ಸಿನಲ್ಲಿಟ್ಟುಕೊಂಡರೂ, ಗೋಪಾಲ್ ಎಂದೂ ಆ ವಿಷಯ ಚಿಂತಿಸಲಿಲ್ಲ. ದಿನಗಳು ಮುಂದುವರಿಯುತ್ತಾ ಬಂದಂತೆ ಶಾರದಮ್ಮನವರಿಗೆ 'ವಂಶದ ಸಂಕಟ' ದಂತಾಯಿತು. ತಾನು ಮಗನನ್ನು ಪುನರ್ವಿವಾಹವಾಗುವಂತೆ ಮಾಡಿದರೆ ಗೋಪಾಲ್-ವತ್ಸಲರ ಪ್ರೇಮಕ್ಕೆ ಭಂಗ ತಂದಂತಾಗುವುದು, ಸುಮ್ಮನೆ ಕುಳಿತರೆ ತಮ್ಮ ವಂಶವೇ ನಾಶ ಹೊಂದುವುದು, ಈ ಎರಡರ ಮಧ್ಯೆ ಸಿಲುಕಿದರು. ಕೊನೆಗೆ ತಾನು ಗೋಪಾಲ್‌ನಿಗೆ ಈ ವಿಷಯ ತಿಳಿಸಿ ಏನದರೂ ಏರ್ಪಾಡು ಮಾಡುವುದೇ ಲೇಸು ಎಂದೆನಿಸಿ, ಈ ವಿಷಯ ಪ್ರಸ್ತಾಪಿಸಿದ್ದರು.

ದಿನಗಳು ಉರುಳಿದಂತೆ ಶಾರದಮ್ಮ, ಗೋಪಾಲನಿಗೆ ತಮ್ಮ ವಂಶದ ಪರಿಸ್ಥಿತಿ ಅರ್ಥವಾಗುವಂತೆ ಮಾಡಿದಳು. ಅವಳ ಅನುದಿನದ ಬೋಧನೆಯಿಂದಾಗಿ ಆತನಿಗೆ ತಾನು 'ಪುನರ್ವಿವಾಹ'ವಾಗುವುದೇ ಸರಿ ಎಂದು ಆಲೋಚಿಸಿದನು. ಅಂತೆಯೇ ಮನೆಯಲ್ಲಿಯೇ ಇದ್ದ ವತ್ಸಲಳಿಗೆ ತಿಳಿಯದಂತೆಯೇ, 'ಪುನರ್ವಿವಾಹ'ಕ್ಕೆ ಸಿದ್ಧತೆ ನಡೆಸತೊಡಗಿದನು. ಶಾರದಮ್ಮನು ಅವಳಿಗೆ ತಿಳಿಯದಂತೆ ಎಷ್ಟೇ ಜಾಗ್ರತೆ ಮಾಡಿದರೂ ಅವಳಿಗೆ ತಿಳಿದೇ ಹೋಯಿತು. ತನ್ನ ಮಗಳಂತೆ ತಿಳಿದಿದ್ದ ಶಾರದಮ್ಮನವರಿಗೂ ತುಂಬಾ ಸಂಕಟವಾಯಿತು. ಅಂದು ರಾತ್ರಿ ವತ್ಸಲ, ತನ್ನ ಪತಿಯೊಂದಿಗೆ ಆ ವಿಷಯ, ಈ ವಿಷಯ ಮಾತನಾಡುತ್ತಾ ಕೊನೆಗೆ 'ನೀವು ವಿವಾಹವಾಗುವಿರಂತೇ ಹೌದೇನು?" ಎಂದು ಪ್ರಶ್ನಿಸಿದಾಗ, ಗೋಪಾಲ್ ಬಹಳವಾಗಿ ಬೇಸರಗೊಂಡನು. ಮಾತು ಹೊರಡದೆ ಅವಳನ್ನೇ ನೋಡುತ್ತಿರಲು ಅವಳಲ್ಲಿ ಒಂದು ರೀತಿಯ ದೃಢತೆ ಎದ್ದು ತೋರುತ್ತಿತ್ತು. ಬಹಳ ದುಃಖದಿಂದ "ವತ್ಸಲ, ನಿನಗೆ ಈ ವಿಷಯ ಹೇಗೆ ತಿಳಿಯಿತು?" ಎಂದನು ವತ್ಸಲ ಸಮಾಧಾನದಿಂದಲೇ "ಪ್ರಿಯ, ನನಗೆ ತಿಳಿದುದಂತೋ ಇರಲಿ, ನನಗೆ ಈ ಸಂತೋಷದ ವರ್ತಮಾನ ತಿಳಿಸದೇ ಇರಲು ಕಾರಣವೇನು?' ಎಂದಾಗ ಗೋಪಾಲ್‌ನಿಗೆ ಒಮ್ಮೆ ವಿವಾಹವಾಗುವುದೇ ಬೇಡ ಎಂಬಂತೆ ತೋರಿತು, ಅವಳ ಮಾತುಗಳು ಅವಳ ಹೃದಯವನ್ನು ಬಿಚ್ಚಿ ತೋರಿಸಿದಂತಿತ್ತು. 'ವತ್ಸಲ, ವಿವಾಹ ಖಂಡಿತಕ್ಕೂ ಪುನಃ ಆಗಲಾರೆ, ನಿನ್ನಂತವಳನ್ನು ಬಿಟ್ಟು ಬಿಡಲು ಅಸಾಧ್ಯ' ಎಂದು ಕಣ್ಣೀರ್ಗರೆದನು. ವತ್ಸಲ ಧೈರ್ಯವಾಗಿ 'ನೀವು ಮದುವೆ ಆಗಲೇ ಬೇಕು ಅದರಲ್ಲಿ ತಪ್ಪೇನಿದೆ? ನೀವು ಮದುವೆಯಾಗದಿದ್ದರೆ ನಾನು ಜೀವ ಸಹಿತ ಬದುಕಲಾರೆ' ಎಂದಾಗ ಗೋಪಾಲ್ ಮುಂದೆ ಮಾತನಾಡದಾದನು. ಗೋಪಾಲ್ ಅತೀವ ದುಃಖಗೊಂಡರೂ ಅವಳು ಸಮಾಧಾನ ಪಡಿಸಿದಳು. ಈ ವಿಷಯ ತಿಳಿದ ನಂತರ ಶಾರದಮ್ಮನಿಗೆ ತನ್ನ ಹೆತ್ತ ಮಗಳಿಗಿಂತ ಹೆಚ್ಚು ಪ್ರೀತಿ ವತ್ಸಲಳ ಮೇಲುಂಟಾಯಿತು. ತನ್ನ ಮಗನ ಪುನರ್ವಿವಾಹಕ್ಕೆ ಎಲ್ಲಿ ಅಡ್ಡಿ ಬರುವಳೋ! ಎಂದು ಶಂಕಿಸಿದ್ದ ಅವಳಿಗೆ ಅವಳು ದೇವರಂತೆ ಕಂಡಳು.

ಸುಂದರನಾಗಿದ್ದ ಗೋಪಾಲ್‌ನಿಗೆ 'ಪುನರ್ವಿವಾಹ ವಾದರೂ ತಮ್ಮ ಮಗಳಂದಿರನ್ನು, ವರದಕ್ಷಿಣೆ ಸಹಿತ, ಧಾರೆ ಎರೆಯಲು ತುಂಬಾ ಮಂದಿ ಮುಂದೆ ಬಂದರು. ಗೋಪಾಲ್ ಅವರ ಆಸ್ತಿ, ಪಾಸ್ತಿಗಳನ್ನು ನೋಡಿಕೊಳ್ಳದೆ, ಗುಣವನ್ನು ತನ್ನ ಗುರಿಯಾಗಿಟ್ಟನು. ಆದರೆ ಕೆಲವೇ ನಿಮಿಷಗಳ ಸಮಯದಲ್ಲಿ ಅರಿಯುವ ಗುಣ ಸರಿಯಾದೀತೇ? ಅಂತೂ ರಾಜಾಜಿನಗರದ 'ಹೋಟೆಲ್ ಎಂಬೆಸೆಡರ್'ನ ಮ್ಯಾನೇಜರ್ ರಾಮಕೃಷ್ಣರಾಯರ ಮಗಳು ಕಲ್ಪನಾಳನ್ನು ನೋಡಿ ಒಪ್ಪಿಕೊಂಡನು. ದಿನಗಳೊಳಗೆ 'ಮದುವೆ ಶಾಸ್ತ್ರ'ವೂ ಮುಗಿಯಿತು. ಕಲ್ಪನಾ ಮನೆಗೆ ಬಂದು ಸೇರಿದಳು

ವತ್ಸಲ, ಕಲ್ಪನಾಳನ್ನು ಬಹಳ ಪ್ರೀತಿ ಆದರಗಳಿಂದಲೂ, ಸಹೋದರಿ ಭಾವದಿಂದಲೂ ನೋಡಿಕೊಳ್ಳುತ್ತಿದ್ದಳು. ಆದರೆ ಕಲ್ಪನಾಳಿಗೆ ವತ್ಸಲ ಅಲ್ಲಿರುವುದು ಇಷ್ಟ ಹಿಡಿಸಲಿಲ್ಲ. ಹೇಗಾದರೂ ವತ್ಸಲಳನ್ನು ದೂರ ಮಾಡಬೇಕೆಂದು ಬಯಸಿದಳು. ಇದನ್ನು ವತ್ಸಲ ಗಮನಿಸಿದಳು. ತಾಳ್ಮೆಯಿಂದ ಸಹಿಸಿಕೊಂಡಳು. ದಿನದಿಂದ ದಿನಕ್ಕೆ ಕಲ್ಪನಾಳ ಈ ಇರಾದೆ ಹೆಚ್ಚಾಯಿತು. ಒಂದೆರಡು ಸಲ ಗೋಪಾಲ್‌ನೊಡನೆ 'ನಾನೇಕೆ ಬೇರೆ ಇರಬಾರದು' ಎಂದೂ ಕೇಳಿದ್ದಳು. ಆಗ ಗೋಪಾಲ್ ಧೈರ್ಯವಾಗಿ "ನೀನು ಬೇರೆ ಇರುವುದಾದರೆ ಇರು. ಬೇಕಾದುದನ್ನು ನಡೆಸುವೆನು ನಾನು ಮಾತ್ರ ಹಾಗೆಂದಿಗೂ ಮಾಡಲಾರೆ' ಎಂದಿದ್ದನು ಆಗ ಕಲ್ಪನಳಿಗೆ, ಗೋಪಾಲ್‌ನಿಗೆ ವತ್ಸಲಳ ಮೇಲೆ ತನಗಿಂತ ಹೆಚ್ಚಿನ ಪ್ರೇಮವಿದೆ ಎಂಬುದು ಮನಸ್ಸಿಗೆ ಅರಿವಾಯಿತು. ತನ್ನನ್ನು ಸಂತಾನಾಭಿವೃದ್ಧಿಗೋಸ್ಕರ ಮಾತ್ರ ಮದುವೆಯಾದುದು ಎಂದು ತಿಳಿದು ವತ್ಸಲಳ ಮೇಲೆ ದ್ವೇಷ ಉಂಟಾಯಿತು.

ಅಂತೂ ಮೂರು ವರ್ಷಗಳು ಉರುಳಿದವು. ವತ್ಸಲಳನ್ನು ಕಲ್ಪನಾ ಬಹಳ ಹೀಯಾಳಿಸುತ್ತಿದ್ದಳು. ಆದರೆ ವತ್ಸಲ, ಯಾರೊಂದಿಗೂ ಈ ವಿಷಯ ತಿಳಿಸಲೇ ಇಲ್ಲ. ತಿಳಿಸಿದರೆ ಕಲ್ಪನಾಳಿಗೆ ತಕ್ಕ ಶಾಸ್ತಿ ಆಗುತ್ತದೆ ಎಂಬುದು ತಿಳಿದಿತ್ತು. ಈ ವಿಷಯ ಗೋಪಾಲ್ ಯಾ ಶಾರದಮ್ಮನಿಗೆ ತಿಳಿಯಲೇ ಇಲ್ಲ. ಗೋಪಾಲ್ ಈಗ ವತ್ಸಲಳ ಎಲ್ಲಾ ಗುಣಗಳನ್ನು ತಿಳಿದಿದ್ದನು. ದಿನದಿಂದ ದಿನಕ್ಕೆ ಕಲ್ಪನಾಳ ಒತ್ತಡ ಹೆಚ್ಚಾಗ ತೊಡಗಿತು ಶಾರದಮ್ಮನಿಗೆ ತಿಳಿಯದಂತೆ ತುಂಬಾ ಬಯ್ಗುಳನ್ನು ಕಾಣಿಕೆಯಾಗಿ ನೀಡಿದಳು. ಆದರೆ ವತ್ಸಲ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ ಕಲ್ಪನಾಳು ಕೊನೆ ಕೊನೆಗೆ 'ನೀನು ನಮ್ಮಿಬ್ಬರ ಪ್ರೇಮಕ್ಕೆ ಬಹಳವಾದ ವಿರೋಧಿ. ನೀನಿಲ್ಲದಿದ್ದರೆ ನಾವೆಷ್ಟು ಸುಖವಾಗಿರುತಿದ್ದೆವೋ!' ಎಂಬಿತ್ಯಾದಿ ಮಾತುಗಳನ್ನೂ ಹೇಳತೊಡಗಿದಳು. ವತ್ಸಲಳ ಮನಸಿಗೆ ತೋರಿತು! ಹೌದು, ತನ್ನಿಂದಾಗಿ ಗೋಪಾಲ್ ಕಲ್ಪನಾಳನ್ನು ಸರಿಯಾಗಿ ಪ್ರೇಮಿಸುವುದಿಲ್ಲ, ಇದಕ್ಕೆಲ್ಲಾ ನಾನೇ ಕಾರಣ.

ಮರುದಿನ ಬೆಳಿಗ್ಗೆ ಆರು ಗಂಟೆಗೆ ಶಾರದಮ್ಮ ಎದ್ದು ಕಾಫಿ ಮಾಡಿಯಾದರೂ, ಒಂದೇ ಒಂದು ದಿನ ತಪ್ಪದೆ ಬಂದು ಕಾಫಿ ಮಾಡುತ್ತಿದ್ದ ವತ್ಸಲ ಬಾರದಿದ್ದುದನ್ನು ಕಂಡ ಅವರು ಗಾಬರಿಗೊಂಡು ಅವಳ ಕೋಣೆಯ ಕಡೆಗೆ ಹೋಗಿ ಬಾಗಿಲು ತುಂಬಾ ಬಡಿದರೂ ಉತ್ತರ ಬರಲಿಲ್ಲ. ಗೋಪಾಲ್ ಮತ್ತಿತರರು ಸೇರಿ ಬಾಗಿಲ ಒಡೆದು ನೋಡಿದಾಗ ವತ್ಸಲ ಕುತ್ತಿಗೆಗೆ ಹಗ್ಗ ಕಟ್ಟಿ ನೇತಾಡುತ್ತಿದ್ದಳು. ಅವಳ ಪ್ರಾಣಪಕ್ಷಿ ಎಂದೋ ಹಾರಿ ಹೋಗಿತ್ತು. ಮಮತೆಯ ಕಿರುಚಿದ ಗೋಪಾಲ್. ಮೇಜಿನ ಮೇಲೆ ಚೀಟಿ ಒಂದಿತ್ತು "ಗೋಪಾಲ್, ನಾನು ನಿಮ್ಮ ಪ್ರೇಮಕ್ಕೆ ಅಡ್ಡಿ ಬರಲಾರೆ. ದಯಮಾಡಿ ನನ್ನನ್ನು ಮರೆತು ಕಲ್ಪನಾಳೊಂದಿಗೆ ಸುಖವಾಗಿ ಬಾಳುವೆ ನಡೆಸಿ". ಓದಿದಾಗ ಗೋಪಾಲ್ ಮೂರ್ಛಿತನಾದನು. ಮಹಜರು ನಡೆಸಿದ ಡಾಕ್ಟರ್ ವತ್ಸಲ ಮೂರು ತಿಂಗಳ ಗರ್ಭಿಣಿ ಎಂದು ತಿಳಿಸಿದಾಗ, ಎಲ್ಲರೂ ಮೌನ ಕಣ್ಣೀರ ಅರ್ಘ್ಯವಿತ್ತರು, ಮೃತಾತ್ಮಕ್ಕೆ!

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77
ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly
UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಹಾಳೆ ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಸಲ್ಲಿಸುವ ಸೌಕರ್ಯವಿರುವುದು.

ಮುಖಪತ್ರದಲ್ಲಿ.

ಆಧುನಿಕ ಭಾರತದ ನಿರ್ಮಾತೃ
ಪಂ। ಜವಾಹರಲಾಲ ನೆಹರು.
ಜನನ—14—11—1889.
ಮರಣ—27—5—1964.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೧	೮—೬—೧೯೬೭	No. 41

ಹಿರಿದ ಕತ್ತಿಯ ಸಂಯಮ

ಈಜಿಪ್ತ — ಇಸ್ರಾಯೇಲಗಳ ವೈರ ಇಂದು ನಿನ್ನೆಯದಲ್ಲ; ಅರಬ—ಯೆಹೂದ್ಯರ ಶತ್ರುತ್ವದಷ್ಟೇ ಹಳೆಯದಾದುದು. ಯೆಹೂದ್ಯರಿಗೊಂದು ರಾಜ್ಯಬೇಕು ಎಂದು ನಿರ್ಧಾರಕ್ಕೆ ಬಂದ ಹಿರಿಯ ರಾಷ್ಟ್ರಗಳು ಇಸ್ರಾಯೇಲದ ರಚಕರೆನಿಸಿ ಕೀರ್ತಿ ತಂದುಕೊಂಡರು. ತಮ್ಮ ಪ್ರಭುತ್ವ ಇಳಿಯುತ್ತ ಬರುವಾಗ, ತಮ್ಮ ಬೇಳೆ ಬೇಯಿಸಿಕೊಳ್ಳಲು ಅವುಗಳಿಗೆ ಒಂದೊಂದು ತುಣುಕು ಜಾಗ ಬೇಕಾಗುತ್ತದೆ. ಇದಕ್ಕೆಂದೇ, ಅರಬ ರಾಜ್ಯಗಳ ನಡುವೆ ತಮ್ಮ ಚಟುವಟಿಕೆಗಳನ್ನು ತೋರಿಸಲು ಅನುಕೂಲವಾಗಲೆಂದೇ ಅಂದು ಇಸ್ರಾಯೇಲದ ನಿರ್ಮಾಣಕ್ಕೆ ಪ್ರಾಶಸ್ತ್ಯ ದೊರೆಯಿತು; ಇಂದು ಅದರ ರಕ್ಷಣೆಗೆ ಅಗ್ರಸ್ಥಾನ ಲಭಿಸಿದೆ.

ಅಧ್ಯಕ್ಷ ನಸ್ಸೇರರ ಸಾಹಸ-ಧೈರ್ಯಗಳ ಪರಿಚಯ ಇನ್ನೊಮ್ಮೆ ಜಗತ್ತಿಗೆ ಆಗಲಿದೆಯೆ? ಸುಯೇಜ ಕಾಲುವೆಯ ರಾಷ್ಟ್ರೀಕರಣದ ವೇಳೆ ಇಂಗ್ಲೆಂಡಿನೊಡನೆ ಹೋರಾಡಿ ಅಂತರಾಷ್ಟ್ರೀಯ ವಿಜಯಶಾಲಿಯೆನಿಸಿದ ನಸ್ಸೇರರು ಈಗ ಮತ್ತೊಮ್ಮೆ ಹಾಗೆನಿಸುವರೆ? ಗಾಜಾದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸೇನೆಯು ಸಂಪೂರ್ಣವಾಗಿ ಹಿಂದೆ ಸರಿಯಿತು. ಈಜಿಪ್ತ ಮತ್ತು ಇಸ್ರಾಯೇಲಗಳ ಸೇನೆಗಳು ಮುಖಾಮುಖಿಯಾಗಿ ನಿಂತು ಹಣಾಹಣಿಗೆ ಸನ್ನದ್ಧವಾಗಿವೆ. ಎರಡೂ ಕಡೆಯೂ ವಿಪುಲ ಪ್ರಮಾಣದ ಸೇನೆಗಳು ಜಮೆಯಾಗಿವೆಯಂತೆ. ಅಮೇರಿಕ, ಬ್ರಿಟನ್‌ಗಳ ವಿಮಾನವಾಹಕ ನೌಕೆ ಮೊದಲಾದುವೂ ಎಲ್ಲೆಲ್ಲಿಗೋ ಹೋಗುತ್ತಿದ್ದವುಗಳು ಕೂಡ ಮಧ್ಯಪೂರ್ವದತ್ತ ನಂಗಾರ ಹಾಕಿವೆ. ಸೋವಿಯತ್ತು ಈಜಿಪ್ತಕ್ಕೆ ಸಹಾಯದ ಭರವಸೆಯಿತ್ತಿದೆ ಮಾತ್ರವಲ್ಲ, ಅಮೆರಿಕ ಇಂಗ್ಲೆಂಡುಗಳ ಮೇಲೆ ಬೆದರಿಕೆ ಎಸೆದು ಹಾಕಿದೆ. ಉ. ಥಾಂಟರು ಕಂಗಾಲಾಗಿದ್ದಾರೆ. ಭದ್ರತಾಮಂಡಳದ ಸಭೆ ಸೇರಿದರೂ ಇಸ್ರಾಯೇಲರ ಗೊತ್ತುವಳಿಯನ್ನು ಅಮೆರಿಕ ಮಂಡಿಸಲು ಮುಂದಾದರೂ ಅದು ಕೈಗೂಡುವ ಲಕ್ಷಣ ಅಗೋಚರವಾಗಿದೆ. ಇರಾಕ, ಜೋರ್ಡನ ಮೊದಲಾದ ಅರಬ ರಾಷ್ಟ್ರಗಳು ಈಜಿಪ್ತದ ಬೆಂಬಲಕ್ಕೆ ಬದ್ಧರಾಗಿವೆ. ಸುಯೇಜ ಕಾಲುವೆಯ ರಾಷ್ಟ್ರೀಕರಣದ ವೇಳೆ ಈಜಿಪ್ತಕ್ಕೆ ಸಂಪೂರ್ಣ ಸಹಕಾರ ನೀಡಿದ ದೇಶ ಭಾರತ. ಅಂದಿನ ಪ್ರಧಾನಿ ಜವಾಹರಲಾಲರ ಪುತ್ರಿ ಇಂದಿರಾ ಗಾಂಧಿ ಇಂದೂ ಭಾರತವು ಈಜಿಪ್ತದ ಹಿಂದಿದೆಯೆಂದು ಘೋಷಿಸಿದ್ದಾರೆ. ಮಧ್ಯಪೂರ್ವದ ಪರಿಸ್ಥಿತಿ ಉಲ್ಬಣಗೊಂಡಿದ್ದ ನಿಜ. ಆದರೆ, ಸಂಯಮವನ್ನು ಕಾದುಕೊಂಡು ಹೋಗುವ ಇರಾದೆಯನ್ನು ಇಕ್ಕಡೆಯವರೂ ಬಾಹ್ಯದಲ್ಲಿ ವ್ಯಕ್ತಪಡಿಸುತ್ತಾರೆ.

ಒಂದು ಮಾತು ನಿಜ. ಇಲ್ಲೇನಾದರೂ, ತಿಳಿದೇ ಇರಲಿ, ತಿಳಿಯದೆಯೇ ಇರಲಿ, ಅನಾಹುತ ಆರಂಭವಾಯಿತೆಂದರೆ, ಪರಿಸ್ಥಿತಿಯೆಲ್ಲಿ ಬಂದು ಮುಟ್ಟೀತು ಎಂದು ಹೇಳುವಂತಿಲ್ಲ. ವಿಯತನಾಮದ ಹೋರಾಟವು ತೀವ್ರವಾಗಿದ್ದರೂ ಎರಡೇ ಶಕ್ತಿಶಾಲಿ ರಾಷ್ಟ್ರಗಳ ಮತ್ತವುಗಳ ಕೈಗೊಂಬೆಗಳ ನಡುವಣ ತಿಕ್ಕಾಟವಿದು. ಮಧ್ಯ ಪ್ರಾಚ್ಯದ ಪಕ್ಕಟ್ಟು ಈಜಿಪ್ತ— ಇಸ್ರಾಯೇಲಗಳ ನಡುವಣ ಚಕಮಕಿ ಮಾತ್ರವಾಗಿ ನಿಲ್ಲಲಾರದು. ಸ್ವಹಿತಾಸಕ್ತಿಯಿಂದ ಅಮೇರಿಕೆ, ಇಂಗ್ಲೆಂಡ್—ರಶ್ಯ, ಅರಬ ರಾಷ್ಟ್ರಗಳೂ ಅದರಲ್ಲಿ ಸಕ್ರಿಯ ಭಾಗವಹಿಸದೆ ನಿಲ್ಲವು. ಆಗ ಎಂದೋ ನಿರೀಕ್ಷಿಸಿದ್ದ ಲೋಕ ಸಂಗ್ರಾಮದ ಅವತಾರವಾದರೂ ಆಗಬಹುದು. ಪರಂತು, ಪ್ರತ್ಯಕ್ಷ ಯುದ್ಧ ಎಂದು ಯಾರಿಗೂ ಬೇಡ; ತಮ್ಮ ಬಣ ಪ್ರತಿಷ್ಠೆಯ ಹೆಸರಿನಲ್ಲಿ ಶೀತಲ ಯುದ್ಧದಲ್ಲೇ ತೃಪ್ತಿ ಹೊಂದುವ ಚಟ ಜಾಗತಿಕ ಆರೋಗ್ಯದ ದೃಷ್ಟಿಯಿಂದ ಉಚಿತವೆಂದು ಹೇಳುವಂತಿಲ್ಲ. ದ್ವೇಷಮಯ ವಾತಾವರಣದಿಂದ ಶಾಂತಿ ನಿರ್ಮಾಣವಾಗದು. ಹಿರಿದ ಕತ್ತಿ ಹಿಡಿದವನನ್ನು ಸಂಯಮವೆಷ್ಟು ತನಕ ಸೆರೆ ಹಿಡಿದೀತು?

ರಾಜಕೀಯ ಬಿಡಾಡಿ

ಅರ್ಥಮಂತ್ರಿ ಮುರಾರ್ಜಿ ಭಾಯಿಯವರು ಸ್ಪಷ್ಟವಾದಿಗಳು, ಕ್ರಾಂತಿಕಾರಿ ವಿಚಾರವಾದಿಗಳು— ಅಥವಾ ಪ್ರಗತಿವಾದಿಗಳು ಎನ್ನಬಹುದು. ಭಾರತೀಯರಲ್ಲಿ ವಂಶ ಪಾರಂಪರ್ಯವಾಗಿ, ರಕ್ತಾನುಗತವಾಗಿ ಬಂದಿರುವ, ಬಂದು ಮನೆ ಮಾಡಿರುವ ಬಂಗಾರದ ಮೋಹವನ್ನು ದೂರಮಾಡಲು ೧೪ ಕ್ಯಾರೆಟ್ ಬಂಗಾರವನ್ನು ತಂದರು. ಇಂದಿನ ಪ್ಲಾಸ್ಟಿಕ್- ಇಲೇಸ್ಟಿಕ್ ಯುಗದಲ್ಲಿ ಬಂಗಾರದ ಅವಶ್ಯಕತೆಯಾದರೂ ಏನು? ಹೂವಿನ ಮೇಲೆ ಯಾವ ನಿಯಂತ್ರಣವಿದುವರೆಗಿಲ್ಲವಾದರೂ ಪ್ಲಾಸ್ಟಿಕ್‌ನ ಪರಿಮಳವಿಲ್ಲದ ಹೂವಿನ ಮೋಹ ನವನಾಗರಿಕ ಯುವತಿಯರಲ್ಲಿ ಹೆಚ್ಚುತ್ತಿರುವಾಗ, ಅವರಿಗೆ ಬಂಗಾರವಾದರೂ ಏಕೆ? ಮೂಗಂತೂ ಖಾಲಿ, ಈಗೀಗ ಕಿವಿಯೂ ಖಾಲಿ. ಗಂಟಲಿಗೆ ಮಾತ್ರ ಒಂದು ಹಾರ —ಅದು ಪ್ಲಾಸ್ಟಿಕ್ ಮಣಿಗಳದ್ದೇ ಚಂದ.— ಇದನ್ನು ಕಂಡೇ ಮುರಾರ್ಜಿ ಕಾನೂನು ತಂದರೆ, ತರುಣೀ ಪಿತರರು ರೊಚ್ಚಿಗೆದ್ದರು. ಅಕ್ಕಸಾಲಿಗರನ್ನು ಮುಂದೆ ಮಾಡಿ ಅವರಿಗೂ ತಮಗೂ ಲಾಭ ತಂದುಕೊಂಡರು. ಅದೇ ವೇಳೆ ಮುರಾರ್ಜೀಯವರು ಪಕ್ಷೀಯ ಕಾವ ರಾಜೀಕರಣ ಚಿಕಿತ್ಸೆಗೆ ಗುರಿಯಾದರು. ಈಗ, ಮತ್ತೆ, ಪುಟಕ್ಕಿಟ್ಟ ಚಿನ್ನದಂತೆ (೧೪ ಕ್ಯಾರೆಟ್ ಅಲ್ಲ) ಮತ್ತೆ ವಿತ್ತಮಂತ್ರಿಗಳಾಗಿದ್ದಾರೆ. ಸಂರಕ್ಷಣಾ ಶಾಖೆಯ ಕೆಲವೊಂದು ನೌಕರರನ್ನು ಅಪ್ಪಣೆ ಚೀಟಿಕೊಟ್ಟು ಮನೆಗೆ ಕಳಿಸಲಾಯಿತಂತೆ. ಈ ಬಗ್ಗೆ ಸಂಸತ್ತಿನಲ್ಲಿ ಆಕ್ಷೇಪಗಳು ಎದ್ದುವೆನ್ನಿ. ಇದಕ್ಕೆ ಮುರಾರ್ಜಿಭಾಯಿಯವರು ಖಂಡತುಂಡವಾದ ಉತ್ತರವಿತ್ತರು: "ಸರಕಾರವೆಂದರೆ ಬಿಡಾಡಿ ದನಗಳಿಗೆ ಆಶ್ರಯವೊದಗಿಸುವ ಪಂಜರಪೋಳವಲ್ಲ."

ಇಂತಹ ದಿಟ್ಟ ಉತ್ತರ ಮುರಾರ್ಜಿ ನೀಡಿಯೇ ನೀಡುತ್ತಾರೆ. ಆದರೆ, ಮಿತವ್ಯಯ ಸಾಧನೆಗೆ ಮಂತ್ರಿಗಳ ಸಂಖ್ಯೆಯೇಕೆ ಕಡಮೆ ಮಾಡಬಾರದ? ನೆನಪಿಡಿ, ಮುರಾರ್ಜಿಯವರ ಮಂತ್ರಿಮಂಡಳ ಹೀಗ ಇಲ್ಲ; ಈಗ ಈ ಪ್ರಶ್ನೆಯನ್ನು ಇಂದಿರಾ ಗಾಂಧಿಗೆ ಕೇಳಬೇಕು. 'ರಾಜಕೀಯ ಬಿಡಾಡಿಗಳಿಗೆ ಆಶ್ರಯ ನೀಡುವ ಪಂಜರ ಪೋಳವೇ ಸಚಿವ ಸಂಪುಟವೆಂದು ಎಲ್ಲ ಪಕ್ಷಗಳೂ ತಿಳಿದಿರುವಾಗ ಇಲ್ಲಿ ಗಾಂಧಿಯವರದ್ದೇನು ತಪ್ಪು?

ವಚನಸುಧೆ

ಅನಾಹೂತಃ ಪ್ರವಿಶತಿ
ಅಪೃಷ್ಟೋ ಬಹು ಭಾಷತೇ
ಅವಿಶ್ವಸ್ತೇ ವಿಶ್ವಸಿತಿ
ಮೂಢಚೇತಾ ನರಾಧಮಃ॥

ತಿಳಿಗೇಡಿಯಾದವನು ಕರೆಯದೆನೇ ಒಳ ಬರುತ್ತಾನೆ, ಮಾತಾಡಿಸದೆನೇ ಬಹಳಷ್ಟು ಆಡುತ್ತಾನೆ, ಅವಿಶ್ವಾಸನೀಯರಲ್ಲೇ ತುಂಬ ವಿಶ್ವಾಸವಿಡುತ್ತಾನೆ

ನವಯುಗದ ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಹಣ ಬಾಕಿಯಿರುವ ಚಂದಾದಾರರೆಲ್ಲರೂ ಚಂದಾಹಣವನ್ನು ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ. ಬರುವ ವಾರದಿಂದ ಬಾಕಿದಾರರಿಗೆ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನ ದಯವಿಟ್ಟು ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ,
ಉಡುಪಿ.

ನರಸಣ್ಣನ ಸರಸ



"ಭೀಮಸೇನರ ಕಟ್ಟಿಗೆ ಪ್ರತಿಯಾಗಿ ಕೃಷ್ಣರಾಯರ ಕಟ್ಟು ರಚಿತವಾಗಿದೆಯಂತೆ ಸಂಸತ್ತಿನಲ್ಲಿ."

"ಇವರಿಬ್ಬರ ನಡುವೆ ಸಾಮಂಜಸ್ಯ ಸಂಸ್ಥಾಪಿಸಲು ಮಧ್ಯಮ ರಾಯರ ಕಟ್ಟನ್ನೂ ಯಾಕೆ ತೆರೆಯ ಬಾರದು?"

ಗೇಹ ರಾಜ್ಯದಲ್ಲಿ

ಸೋಮಾರಿಗಳಿಗೆ ಸಮಯಾಭಾವ

‘ಹೌದ್ರಿ...’

‘ಹೌದು....’

‘ಎಂಥದು?’

‘ನೀನು ಹೇಳುವುದ...’

‘ನಾನೇನು ಹೇಳುತ್ತೀನೆ?’

‘ಹೇಳುವುದನ್ನೇ....’

‘ಹ್ಞಾಂ....ಅಲ್ಲಾ, ನೋಡಿ...’

‘ಎಂಥದೇ ಇದು?’

‘ಯಾವುದು?’

‘ಮೊದ್ಲಿಗೆ ಹಾಗಂತಂದು ಮತ್ತೆ ಅಲ್ಲಾ ನೋಡಿ ಅಂತ ವಿರೋಧಾಭಾಸ....’

‘ಅಯ್ಯಯ್ಯ, ಅಲ್ರಿ, ಮಾತನಾಡುವುದಕ್ಕೂ ಅದ್ರ ರೀತಿಗೂ ಕಡಿವಾಣ ಹಾಕೋ ವಿಚಾರವೇನು?’

“ಕಡಿವಾಣ ಹಾಕೋದು? ಅದೂ ನಿನ್ನ ನಾಲಿಗೆಗೆ....ಸಾಧ್ಯವಿಲ್ಲ....’

‘ಯಾಕೆ? ಒಂದು ಬಾರಿ ಹಾಕಿ ಸ್ಯಾಂಪಲ್ ನೋಡಿ ಬಿಡಿ...’

“ಮೊದಲಿಗೇ ಗೊತ್ತಾಗಿರೋ ಸಂಗ್ತಿಗಳಿಗೆ ಸ್ಯಾಂಪಲ್ ಯಾಕೆ?”

‘ಅಂದ್ರೆ?’

‘ಬೆಂಕಿ ಉರಿಯುತ್ತೆ, ಇಲ್ವೇ ಅಂತ ಸ್ಯಾಂಪಲ್ ನೋಡಿಯೇ ಗೊತ್ತಾಗ್ಬೇಕೇನು?”

“....ಅಂದ್ರೆ ...ಅಂದ್ರೆ.... ನಾನು ಬೆಂಕಿಂತಾಯ್ತು...’

‘ಅಲ್ವೇ, ನೀನು ಬೆಂಕಿಯಾಗ್ತಿದ್ರೆ ನಾನೇಕೆ ನಿನ್ನ ಮುಟ್ಟುತಿದ್ದೆ? ಆದೂ ಕಟ್ಟಿಗೆಯಲ್ಲಿ ಬೆಂಕಿ ಸುಪ್ತವಾಗಿದ್ದು ಅವಕಾಶ ದೊರಗಿದಾಗ ವ್ಯಕ್ತವಾಗುವಂತೆ....’

‘ಆಯ್ತಪ್ಪ... ಇನ್ನು ನಾನು ಮಾತಾಡೋಲ್ಲ....ಮುಗಿಯಿತಲ್ಲ?’

‘ಲಗಾಮು ಕಡಿದು ಹುಚ್ಚುಚ್ಚಾಗಿ ಓಡಾಡೋ ಕುದ್ರೆಗೆ ಕಡಿವಾಣ ಏಕೆ? ಸಂಕೋಲೆಯೇಕೆ? ಒಂದ್ಸಲ ಹಾಕಿದ್ರೂ ಬೆಕ್ಕಿನ ಕುತ್ತಿಗೆಗೆ ಹಗ್ಗ ಕಟ್ಟಿದಂತೆ....’

‘ಅಂದ್ರೆ?...’

‘ಬೆಕ್ಕು ಬಂಧನಪ್ರಿಯವಲ್ಲ, ದ್ವೇಷಿ. ಉರುಳು ತಲೆಯೊಳಗೆ ಉರುತ್ತಿರುವಾಗಲೇ ಹಲ್ಲು—ಉಗುರುಗಳು ವಿಮುಕ್ತಿಗೆ ಹೋರಾಡ ತೊಡಗುತ್ತವೆ.. ಹಾಗೆ...’

‘ಹ್ಞಾಂ....ಇರ್ಲಿ...ಏನಾದ್ರೆ ಏನಂತೆ? ನಾನೂ ಏನೋ ಹೇಳಬೇಕೂಂತಿದ್ದೆ... ...ಹ್ಞಾಂ.... ನೋಡಿ, ನಮ್ಮ ಇಂದಿರಾ ಗಾಂಧಿಯವರ ಕಿರಿಯ ಮಂತ್ರಿಗಳಿಗೆ ಕೆಲಸವಿಲ್ಲ ಅಂತ ನೋಡಿ... ಇದ್ರ ಮೇಲೆ, ಇನ್ನೂ ಕಲವು ಮಂತ್ರಿಗಳನ್ನು ನೇಮಿಸುವ ಕುರಿತು ತೀವ್ರವಾಗಿ ಪರಿಶೀಲಿಸುತಿದ್ದಾರಂತೆ....”

‘ಸ ಯಾಯ್ತು ಬಿಡು...’

“ಏನು?’

“ರಾಜಕೀಯ ನಿರುದ್ಯೋಗ ಸಮಸ್ಯೆ ತುಸು ಹತೋಟಿಯಲ್ಲಿಡಲು ಸಚಿವ ಸಂಪುಟದ ವಿಸ್ತರಣವೆಂದಾಯಿತು....”

‘ನೋಡಿ, ನೀವು ಹಾಗೆಲ್ಲಾ ಹೇಳಬ್ಯಾಡಿ. ಮಂತ್ರಿಗಳ ಸಂಖ್ಯೆ ಏನೂ ಮೊದಲಿಗಿಂತ ಹೆಚ್ಚಾಗಿರುವುದದಿಲ್ಲ. ಆದ್ರೆ, ಅವರಿಗೆ ಕಲಸ ಮಾತ್ರ ಕಡಿಮೆಯಾಗಿದೆಯಂತೆ...’

‘ಸರಿ....ಕೆಲಸವಿಲ್ಲ ಬೋರ್ಡ್ ಹಾಕಿ ಇಲ್ಲದವರನ್ನು ಮನೆಗೆ ಕಳಿಸುವುದು...’

‘ಅಹಹ....ಅದೇನು ಧಾರವಾಡದಲ್ಲಿ ಸರ್ವೇಯರಿಗೆ ಅಷ್ಟಕ್ಕೆ ಚೀಟಿ ಕೊಟ್ಟಂತೆಯೇನು? ಒಂದು ವೇಳೆ ಯಾರಾದರೂ ಒಬ್ಬರನ್ನು ಕಿತ್ತು ಹಾಕಿದರೆ...’

“ಏನಾದೀತು?”

‘ಮತ್ತೇಂಥದು? ಹುಮಾಯೂನ ಕಬೀರರನ್ನು ಕೈಬಿಟ್ಟು ಇಂದಿರಾಜಿ ಹೇಗೆ ಕೈ ಸುಟ್ಟುಕೊಂಡರು ನೋಡಿ? ಈಗಲೂ ಬಂಗಲಾ ಭೂತ ಬಂಗಲಾ ಆಗಿ ಅವರ ತಲೆ ಸುಡುತ್ತಿದೆಯಲ್ಲಾ....’

“ಅಂದ್ರೆ, ನಾನು ಅನ್ನುತಿದ್ದಲ್ಲಿಗೇ ನೀನೂ ಬಂದು ಮುಟ್ಟಿದೆ ಅಂದ ಹಾಗಾಯ್ತು....’

‘ಅಂದ್ರೆ?...’

‘ಮಂತ್ರಿಯಾಗಲಿರುವ ಅರ್ಹತೆಗಳಲ್ಲಿ ಅಭ್ಯರ್ಥಿಗಳ ಬಾಲ ಹಿಡಿದ ರಾವಣ ಸನ್ಯಾಸಿಗಳೆಷ್ಟು ಎಂಬುದೇ ಅಗ್ರ ಗಣ್ಯ ಎಂದು.... ಇಂತಹ ತುಂಡು ನಾಯಕರ ಒಟ್ಟು ಸಂಖ್ಯೆಗನುಸಾರವಾಗಿ, ಮಂತ್ರಿ ಮಂಡಳದ ಗಾತ್ರ ಯಾ ಪ್ರಮಾಣವಿರುವುದು ಎಂದು?....”

‘ಹ್ಞಾಂ....ಇದು ಪೂರ್ಣ ಸತ್ಯವಲ್ಲವಾದ್ರೂ ಇದ್ರಲ್ಲಿ ಸ್ವಲ್ಪ ಸತ್ಯಾಂಶವಿದೆಯೆಂಬುದೀಗ ಗೊತ್ತಾಗಿದೆ....’

“ಇರ್ಲಿ....ಆಫೀಸಿನಲ್ಲಿ ಕಾರಖಾನಸಿಗೆ, ಚಪ್ರಾಸಿಗೆ, ಆಫೀಸರ್ರಿಗೆ ಕೆಲಸವಿಲ್ಲ, ಅಂತ ಹೇಳಿದ್ರೆ ಹೇಗೆ ನಂಬೋದು? ಸರಕಾರ ಮಾತ್ರ ಅಲ್ವೇತಿ ಉಳಿತಾಯ ಯೋಜನೆಯನ್ನು ಕಾರ್ಯಗತಗೊಳಿಸಲು ಹಾಗೆ ಹೇಳಬೇಕಷ್ಟೆ....”

“ಯಾಕೆ?”

‘ಯಾಕೇಂದ್ರೇನೆ? ಚಪ್ರಾಸಿಗೇನೆ? ಒಂದು ಕಾಗದವನ್ನು ಎಲ್ಲಿ ಒಯ್ಯಬೇಕೋ ಅಲ್ಲಿಗೊಯ್ಯದ ಬೇರಡೆಗೆ ಒಯ್ಯುತ್ತ ಇದ್ರೆ ಸರಿ. ಗುಮಾಸ್ತರಿಗೆ ಒಬ್ಬೊಬ್ಬೇ ಚಪ್ರಾಸಿಯನ್ನು ಕೂಗುತ್ತ ಏನಾದರೂ ಕೆಲಸ ಹೇಳುತ್ತಿರುವಂತೆ ನಟಿಸಿದ್ರೆ ಸರಿ, ಇನ್ನು ಅಧಿಕಾರಿಗಳಿಗೆ? ಇದ್ದಾರಲ್ಲಾ ಗುಮಾಸ್ತರು—ಚಪ್ರಾಸಿಗಳು...”

‘ಹ್ಞಾಂ....ಒಳ್ಳೆದು ಹೇಳ್ತೀರಿ...”

‘ಹಾಗಿರುವಾಗ, ಮಂತ್ರಿಗಳಿಗೆ ಕೆಲಸವಿಲ್ಲ ಅಂದೆ....ಅದೂ ನಮ್ಮ ದೇಶದಲ್ಲಿ, ಜಗತ್ತಿನ ಜನ್ರು ಆಶ್ಚರ್ಯ ಸಂಗತಿ!”

‘ಅದೆಲ್ಲಾ ನನಗೆ ಗೊತ್ತಿಲ್ಲ.. ...ಆದ್ರೆ ಇಲ್ಲಿ ನೋಡಿ, ಸ್ವಯಂ ಮಂತ್ರಿಗಳೇ ಇಂದಿರಮ್ಮನಿಗೆ ದೂರಿಕೊಂಡಿದ್ದಾರಂತೆ.”

“ಅಯ್ಯೋ ಪಾಪವೆ! ಪ್ರಾಯಶಃ ಇದ್ರಲ್ಲೂ ರಹಸ್ಯ ಅಡಗಿರಬೇಕು...’

“ಅಯ್ಯೋ....ನಿಮ್ಮದೊಂದು....ಕೆಲಸವಿಲ್ಲಾಂತ ಅನ್ನೋದ್ರಲ್ಲೂ ರಹಸ್ಯವೇನೂಂತ?’

‘ನೋಡು, ಕೆಲಸವಿಲ್ಲಾಂತ ಅಂದವ್ರು ಕಿರಿಯ ಮಂತ್ರಿಗಳು ತಾನೆ?”

‘ಹ್ಞಾಂ...”

“ಹಿರಿಯ ಮಂತ್ರಿಗಳು ಮಾಡುವ ಕೆಲಸಕ್ಕಿಂತ ಹೆಚ್ಚು ಪ್ರಮಾಣದ ಕೆಲ್ಸ ತಾವು ಮಾಡುತ್ತೇವೇಂತ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳೋದಕ್ಕೆ__”

‘ಅಯ್ಯೊ....ಯಾರಾದ್ರೂ ಹಾಗೆ ಮಾಡ್ತಾರೇನು?”

‘ಯಾಕೆ? ನಮ್ಮ ಕೆಲಸದ ತಿಪ್ಪಮ್ಮ ಇಲ್ವೆ ಐವತ್ತು ಲೋಟಾ ಹಿಡಿದುಕೊಂಡು ಕಲು ತಾಸು ತಿಕ್ಕಬಸಿಯೋದಿಲ್ವೆ? ಆ. ಕಿರಿಯ ಮಂತ್ರಿಗಳಿಗೆ ಯಾಕೆ ಸುಬ್ಬ ಮಾಡಿದಾಗೆ ಮಾಡಬಾರದು? ಅವರೇಕೆ ದೂರಿಕೊಳ್ಳಬೇಕು?’

‘ಯಾಕೋ, ಏನು? ನಮ್ಮ ಇಂದಿರಮ್ಮ ಅವರಿಗೆ ತುಂಬ ಕೆಲಸ ಕೊಡೋ ವಿಚಾರ ಪ್ರಚಾರಮಾಡ್ತಿದ್ದಾರಂತೆ....”

“ಹ್ಞಾಂ, ಕೊಡಬಹುದನ್ನು....ಆದ್ರೆ ನಾನು ಹೇಳುವುದಾದ್ರೆ ಒಂದು ಕೆಲಸ ಮಾಡಿ ಈ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸ ಬಹುದು....’

‘ಏನು?’

‘ಕಿರಿಯ ಮಂತ್ರಿಗಳು ತಿಂಗಳಲ್ಲಿ ಹದಿನೈದು ದಿನವಾದ್ರೂ ಸಂಚಾರಮಾಡಿ ಉದ್ಘಾಟನೆ—ಅಧ್ಯಕ್ಷತೆಗಳನ್ನು ನಿಭಾಯಿಸಿ ಮಾಡಬೇಕು....’

“ಇದು ಆಗದು....”

‘ಯಾಕೆ?’

‘ಅಲ್ರಿ, ಲೈಸನ್ಸ್ ನೀಡೋರು ಹಿರಿಯ ಮಂತ್ರಿಗಳಿರುವಾಗ ಕಿರಿಯರನ್ನು ಕರೀತಾರೆ ಯಾರು?”

“ಓಹೋ, ಈಗ ತಿಳಿಯಿತು. ಈ ಕಿರಿಯರ ಸ್ಥಾನಮಾನವೇನೊಂತ ...”

“ಏನು? ಇವರಿಗೂ ಆಫೀಸಿನ ಛೋಟಾ ಆಫೀಸರಿಗೂ ಅಂತರವಿಲ್ಲ. ಇದ್ರಿಂದ್ಲೇ, ಇರುವ ಕೆಲಸವನ್ನ ಕಛೇರಿಯಲ್ಲಿ ಕುಳಿತು ಮುಗಿಸಿಬಿಡ್ತಾರೆ, ಸಂಚಾರವಿಲ್ಲದ್ದರಿಂದ ಕೆಲಸವೂ ಇಲ್ಲ...”

‘ಇದಕ್ಕೇನು ಪರಿಹಾರಾಂತ?

‘ಅಯ್ಯೊ, ಇದ್ಕೆಲ್ಲಾ ನಾವ್ಯಾಕೆ ತಲೆ ಕೆಡ್ಸಿ ಕೊಳ್ಬೇಕೆ? ಇದ್ದಾರೆ, ಇಂದಿರಮ್ಮನವರು.... ಮುರಾರ್ಜಿಯವರು.... ಕಾಮರಾಜರು....ಸದ್ಯ ನಮ್ಮ ಸಮಸ್ಯೆಗಳಿಗೇ ಪರಿಹಾರ ಹುಡುಕೋದಕ್ಕೆ ನಾವು ಅಸಮರ್ಥರಿರುವಾಗ....’

‘ಅದೆಂಥ ಸಮಸ್ಯೆ?’

“ಅಯ್ಯೋ....ಅದು ಅಂಥಿಂಥದ್ದಲ್ಲ..’

‘ಮತ್ತೆಂಥದು?’

‘ಛೆ...ಛೆ...ಬಾಸಲ್ಲಿ ಹೇಳೋದ್ರಿಂದ ಅದು ಪರಿಹಾರವಾಗುತ್ತೆ?”

‘ಬೇಡ, ಕಾರ್ಯದಲ್ಲೇ ಮಾಡಿತೋರ್ಸಿ....”

‘ಅದಕ್ಕೇ ನೋಡು....ಕಾರ್ಯ ಮಾಡೋಕೆ ವೇಳೆಯಿಲ್ಲ...”

‘ಅದು ಹೂವಾಗ್ಲೂ ಹಾಗೇನೆ, ಸೋಮಾರಿಗಳಿಗೆ ಸಮಯದ ಅಭಾವ..’

“ಅಂದ್ರ ನಾನು ಸೋಮಾರೀಂತ....

“ಛೆ....ಛೆ....ಅದು ಹೇಗೆ? ನೀವು ಎಷ್ಟಾದ್ರೂ....ಹ್ಞಾಂ...”

‘ಸದ್ಯ ಅಷ್ಟಾದ್ರೂ ಅಭಿಮಾನವಿದೆ ತಾನೆ?”

‘ಅಯ್ಯೋ... ಯಾಕೆ ಹಾಗೆ ಹೇಳ್ತೀರಾ....”

“ಅಲ್ಲ, ನಿನ್ನ ಬೆಂಕಿಕಾರೋ ನಾಲಿಗೆಲಿ ಈ ಮಾತು ಬರಬೇಕಾದ್ರೆ ಅದನ್ನ ನಾನು ಕೇಳ ಬೇಕಾದ್ರೆ ಭಾರೀ ಪುಣ್ಯ ಮಾಡಿರ್ಬೇಕು...”

‘ಶ್ಯ......ಹಾಗೆಲ್ಲ ಅನ್ನ ಬೇಡೀಂದ್ರ...”

“ಅನ್ನೋದಿಲ್ಲ....ನೀನಂದ ಹಾಗೆ....”

‘ಅಯ್ಯೋ....ಎಂಥದದು?’

“ಏನೂ ಇಲ್ಲ, ನೀನೇ ಅಂದೆಯಲ್ಲಾ....’

“ಅಂದದ್ದು ನಿಜ....ಹ್ಞಾಂ...’

— ಗೋರಾ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ಕನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಅಮೃತ ಬಿಂದು

ದೇವರು ಎದುರಿಗೆ ನಿಂತಿರುವಂತೆ ಕಲ್ಪಿಸಿ ಪ್ರಾರ್ಥಿಸಿದರೆ ಅದರಲ್ಲಿ ಅನನ್ಯತೆ ಇರುತ್ತದೆ. ದೇವರು ತಮ್ಮನ್ನು ಸದಾ ನೋಡುತ್ತಿರುವಂತೆ ನನೆಸಿ ಕಲಸ ಮಾಡಿದರೆ ಜೀವನ ಸಾರ್ಥಕತೆ ಪಡೆಯುತ್ತದೆ.

o o o o

ಈ ಜಗತ್ತಿನ ಜೀವನ ಒಂದು ನಾಟಕವೆಂದು ತಿಳಿದವರಿಗೆ ಜೀವನ ಒಂದು ಲಘು ಹಾಸ್ಯದಂತೆ. ಈ ಜಗತ್ತೇ ಸರ್ವಸ್ವವೆಂದು ತಿಳಿದವರಿಗೆ ಜೀವನ ಒಂದು ದುರಂತದಂತೆ.

o o o o

ಪ್ರಾಮಾಣಿಕತೆ, ಕಾರ್ಯತತ್ಪರತೆ ಹಾಗೂ ತನ್ಮಯತೆ ಇರುವ ಮನುಷ್ಯನು ಯಾವ ಕ್ಷೇತ್ರದಲ್ಲಿದ್ದರೂ ಕೀರ್ತಿಗಳಿಸುವನು.

ಶುದ್ಧ ಹರಟೆ

ನಿತ್ಯ ಪುರಾಣ

ಬರೆದವರು
ಶ್ರೀ "ನವಗಿರಿನಂದ"

"ಅಬ್ದೇಶ್ ಮಗಾ, ದಿನಾ ಬೆಳಗ್ಗೆ ಎದ್ದ ಕೂಡಲೇ ಪೇಪ್ರೂ, ಪೇಪ್ರೂ ಅಂತ, ಅಂಗಡೀಲಿ ಪೊಟ್ಲಾ ಕಟ್ಟಿ ಕೊಡೋ ಕಾಗದಾ ಕಂತೇನ ಬಿಡಿಸಿಕೊಂಡು ಹೀಗೆ ಓದ್ತಾ ಕೂತು ಬಿಡ್ತೀಯಲ್ಲಾ? ಅದಕ್ಕಿಂತ ಒಂದು ಒಳ್ಳೇ ಪುರಾಣಾನಾದರೂ ಓದ ಬಾರದೇ ಗಟ್ಟಿಯಾಗಿ? ರಾಮಾ ಕೃಷ್ಣಾ ಎಂಬ ಎರಡು ದೇವರ ನಾಮವಾದರೂ ಕಿವೀಗೆ ಬಿದ್ರೆ ಪುಣ್ಯಾ ಬಂದೀತಲ್ಲಾ!" ಎಂದಳು ನನ್ನ ಮಗನ ಅಜ್ಜಿ, ನನ್ನ ತಾಯಿ.

"ಈ ಪೇಪರು ಅಂದರೆ ಏನೆಂದು ತಿಳಿದಿದೀ ಅಮ್ಮಾ? ಇದೂ ಕೂಡಾ ಒಂದು ಪುರಾಣಾನೇ—ನಿತ್ಯ ಪುರಾಣ. ನಿತ್ಯಾ ಹೊಸ ಹೊಸ ಪುರಾಣ ಇದರಲ್ಲಿ ಬರುತ್ತಾ ಇರುತ್ತೆ. ಇದು ಹುಟ್ಟಿದ ಆದಿ ಪುರಾಣದ ಕತೆ ನಿನಗೆ ಗೊತ್ತೋ? ಕೇಳುತ್ತೀಯೋ ಸ್ವಲ್ಪ?" ಎಂದೆ.

"ಅದೇನೋ ಹೇಳಪ್ಪ. ಹೊಸ ಪುರಾಣ ಅಂತ ಆದ ಮೇಲೆ ಕೇಳಲೇ ಬೇಕು. ಹೇಳು ಮತ್ತೆ" ಎಂದು ಚಕ್ಕಪ್ಪವಾಗಿ ಕುಳಿತಳು ತಾಯಿ.

"ಅಮ್ಮಾ, ಅಪ್ಪ ಪುರಾಣ ಹೇಳ್ತಾರೇ ಆಕ್ರೀ, ಬನ್ರೀ...." ಎಂದು ನನ್ನ ಹೆಳ್ಳಿಗಳೂ ಮನೆಯವರನ್ನೆಲ್ಲ ಕೂಡ ಕರೆದುಕೊಂಡು ಕುಳಿತವು.

ಸ್ವಾಮಿ! ಶ್ರೀಮನ್ನಾರಾಯಣ ಮೂರ್ತಿಯ ನಾಭೀ ಕಮಲದಿಂದ ಹುಟ್ಟಿದ ಚತುರ್ಮುಖ ಬ್ರಹ್ಮನು ಈ ಪ್ರಪಂಚವನ್ನು ಸೃಷ್ಟಿಸಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ಜಾತಿಗಳನ್ನೂ, ತ್ರಿಗುಣಗಳನ್ನೂ ಸೃಷ್ಟಿಮಾಡಿ ಈ ಪ್ರಪಂಚದಲ್ಲಿ ನೆಲೆಗೊಳಿಸಿದನು. ಬ್ರಾಹ್ಮಣರು ವೇದ ವಿದ್ಯೆ ಇವುಗಳನ್ನೇ ಹೆಚ್ಚಾಗಿ ಕಲಿತು ಎಲ್ಲರಿಗೂ ಗುರುಗಳಾದರು. ಮಹಾ ಬಲಶಾಲಿಗಳಾದ ಕ್ಷತ್ರಿಯರು ಎಲ್ಲರನ್ನೂ ಆಳುವಂತಹ ಪ್ರಾಣವುಳ್ಳವರಾಗಿ ರಾಜರಾದರು. ವೈಶ್ಯರು ವ್ಯಾಪಾರಿಗಳಾದರು. ಶೂದ್ರರು ವ್ಯವಸಾಯ ಮಾಡುವವರಾದರು. ಹೀಗೆಯೇ ಜಗಳ ತಂಟೆ ಭೇದ ಯಾವುದೂ ಇಲ್ಲದೆ, ಕಾಲವು ಕಳೆಯುತ್ತಾ [illegible] ತಲೆಗಳು ಸುಖವಾಗಿ ಉರುಳಿಕೊಂಡು ಹೋದುವು. ಆ ಮೇಲೆ ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೆಯಾಯಿತು ಎಂಬ ಗಾದೆಯ ಹಾಗೆ ಕಾಲದ ಕುದುರೆ ಕತ್ತೆಯ ಹಾಗೆ ಕೂಗಲಿಕ್ಕೆ ಪ್ರಾರಂಭಮಾಡಿತು. ಬ್ರಾಹ್ಮಣರೆಲ್ಲಾ ತಲೆಯೊಳಗಿನ ವೇದಗಳಿಗೆ ಹೆಚ್ಚಾಗಿ ಕೆಲಸ ಕೊಡುತ್ತಾ ಬಂದ ಕಾರಣ ಅವರ ದೇಹವು ಸೊರಗಿಕೊಂಡಿತ್ತು. ಅವರ ಆಹಾರವೂ ಅಂತಹುದೇ. ಕ್ಷತ್ರಿಯರಿಗಾದರೆ ಹಾಗಲ್ಲ, ಬೇಕಾದುದನ್ನೆಲ್ಲಾ ತಿನ್ನಬಹುದು, ಅಂತಲೇ ಅವರ ಶಕ್ತಿಯೂ ಹೊಟ್ಟೆತುಂಬ ತಿಂದು ತಿಂದು ಅವರ ಬಲ ಹೆಚ್ಚಿಕೊಂಡೇ ಹೋಯಿತು. ಕೊನೆಗೆ ಸೊಕ್ಕಿನಿಂದ ಬುದ್ಧಿ ಮಂಕಾಯಿತು. ಬ್ರಾಹ್ಮಣರೂ ಋಷಿಮುನಿಗಳೂ ಬಲಹೀನರೆಂದು ತಿರಸ್ಕಾರದಿಂದ ನೋಡ ತೊಡಗಿದರು. ಪಾಪದ ಶೂದ್ರರನ್ನು ಪೀಡಿಸಿದರು. ತಮ್ಮನ್ನು ಯಾರೂ ಕೇಳುವವರಿಲ್ಲವೆಂದು ತಮ್ಮ ಇಚ್ಛಾನುಸಾರವಾಗಿ ನಡೆಯತೊಡಗಿದರು. ಆಗ ದೇವರ ಅಂಶದಿಂದ ಪರಶುರಾಮ ಎಂಬ ಶೂರ ಬ್ರಾಹ್ಮಣ ಹುಟ್ಟಿ, ತನ್ನ ಕೊಡಲಿಯನ್ನು ತಿರುಗಿಸಿಕೊಂಡು ಕ್ಷತ್ರಿಯ ಕುಲವನ್ನೇ ಕಡಿದು ಉರುಳಿಸುವೆನೆಂದು ಹೊರಟ. ಕಾಲಕ್ಕೆ ತಕ್ಕ ಹಾಗೆ ಕೋಲ ಕಟ್ಟಲೇ ಬೇಕು—ಎಂಬ ನ್ಯಾಯದಂತೆ ಬ್ರಾಹ್ಮಣರೆಲ್ಲ ಕ್ಷತ್ರಿಯರ ಹಾಗೆ ಆಗಿ ಬಿಟ್ಟರು. ಕ್ಷತ್ರಿಯರ ದೇಹಶಕ್ತಿಗಿಂತಲೂ ಬ್ರಾಹ್ಮಣರ ತಪಸ್ಸಿನ ಶಕ್ತಿ ಬಲು ದೊಡ್ಡದು. ಪರಶುರಾಮನು ಒಬ್ಬಿಬ್ಬರು ಒಳ್ಳೆಯ ಕ್ಷತ್ರಿಯರನ್ನು ಬಿಟ್ಟು, ಉಳಿದ ಕೆಟ್ಟ ಕ್ಷತ್ರಿಯ ಅರಸರನ್ನೆಲ್ಲಾ ಸಂಹಾರ ಮಾಡಿ, ಇಡೀ ಭೂಮಂಡಲವನ್ನು ತನ್ನ ವಶಪಡಿಸಿಕೊಂಡು, ಬ್ರಾಹ್ಮಣರಿಗೇ ದಾನ ಮಾಡಿಬಿಟ್ಟನು. ಭೂಮಿಯನ್ನು ಆಳುವ ಆಶೆಯು ಬ್ರಾಹ್ಮಣರಿಗೆ ಬೇಕಾಗಿರಲಿಲ್ಲ. ಅವರು ಒಳ್ಳೆಯ ಕ್ಷತ್ರಿಯರನ್ನೇ ಪ್ರತಿನಿಧಿಗಳನ್ನಾಗಿಟ್ಟುಕೊಂಡು ರಾಜ್ಯಭಾರ ನಡೆಯಿಸಿಕೊಂಡು ಬಂದರು.

'ಹೀಗೆಯೇ ಯುಗಗಳು ಕಳೆದು ಈ ಕಲಿಯುಗವೂ ಬಂತು. ಕಲಿಯುಗ ಅಂದ ಮೇಲೆ ಕೇಳಬೇಕೆ? ಪುನಃ ಅದೇ ರೀತಿ ಅರಸರೊಳಗೆ ಜಗಳ ಪ್ರಾರಂಭವಾಯಿತು. ಬ್ರಾಹ್ಮಣರಿಗೂ ಆಶೆ ಬಂದು ಬೇರೆ ಜಾತಿಯವರ ಕೆಲಸಕ್ಕೆ ತಲೆ ಹಾಕತೊಡಗಿದರು. ರಾಜ್ಯದ ಆಸೆ ಎಲ್ಲರಿಗೂ ಹಿಡಿಯಿತು. ಬ್ರಾಹ್ಮಣರ ಕೆಲಸ ವೈಶ್ಯನಿಗೆ ಬೇಕು, ವೈಶ್ಯನ ಕೆಲಸ ಬ್ರಾಹ್ಮಣನಿಗೂ ಬೇಕು. ಇದೇ ಮನಸ್ಸು ಪ್ರತಿ ಜಾತಿಯನ್ನೂ ಅಂಟಿತು. ಜಾತಿ ಸಂಕರವಾಯಿತು. ಎಲ್ಲಿ ನೋಡಿದರೂ ಕೊಲೆ, ಕಳವು, ಸುಲಿಗೆ, ರಕ್ತಪಾತ. ಈ ಅವಾಂತರವನ್ನು ನೋಡಿ ದೇವರು ಬುದ್ಧನ ಅವತಾರವನ್ನು ಎತ್ತಿ ಬಂದು, ಹಿಂಸೆ ಮಾಡಬಾರದೆಂದು ಎಲ್ಲರಿಗೂ ಬುದ್ಧಿ ಹೇಳಿದನು. ಆ ಬುದ್ಧಿಯನ್ನು ಜನರು ಸ್ವಲ್ಪ ಕಾಲ ಕೇಳಿದರೂ, ಆ ಮೇಲೆ ಜಗಳ ಮತ್ತೂ ಹೆಚ್ಚಾಯಿತು. ದೇಶದಲ್ಲಿ ಎಷ್ಟೋ ಗುಂಪುಗಳು, ಪಕ್ಷಗಳು, ಶಕ್ತಿಗಳು ಹುಟ್ಟಿದುವು. ಅರಸುಗಳ ಹೊಟ್ಟೇಕಿಚ್ಚು ದೇಶದಲ್ಲೆಲ್ಲಾ ಹಬ್ಬಿತು. ಆಗ ಪೃಥ್ವಿರಾಜನೆಂಬ ಅರಸನ ಮೇಲೆ ಜಯಚಂದನೆಂಬ ಅವನ ಕಡೆಯವನಿಗೇ ಭಾರಿ ಹೊಟ್ಟೇಕಿಚ್ಚು ಎದ್ದಿತು. ಜಯಚಂದ ಪೃಥ್ವೀರಾಜನನ್ನು ಕೊಲ್ಲಲಿಕ್ಕೆ ಪರದೇಶದ ಘೋರಿ ಎಂಬ ವಿಧರ್ಮದವನನ್ನು ಕರೆದ. ಕೊಂಚ ಹಾಳುತ್ತಿದ್ದ ಆ ಘೋರಿ ನನಗೇಕೆ ಸುಮ್ಮನೆ ಗೊಡವೆ ಎನ್ನುತ್ತಾನೆಯೇ? ಬಂದ! ಉತ್ಸಾಹದಿಂದ ಭಾರಿ ದಂಡು ಕಟ್ಟಿಕೊಂಡು ಬಂದ. ಮೊದಲು ಪೃಥ್ವೀರಾಜನನ್ನು, ಆ ಮೇಲೆ ತನಗೆ ವೀಳೆಯ ಇತ್ತ ಜಯಚಂದನನ್ನೂ ಕೊಂದ, ತಾನೇ ಈ ದೇಶಕ್ಕೆ ದೊರೆಯೂ ಆಗಿಬಿಟ್ಟ! ಇಬ್ಬರ ನ್ಯಾಯ ಮೂರನೆಯವನಿಗೆ ಆದಾಯ.

'ಪಂಕ್ತಿಗೆ ಆಗ ಘೋರಿ ಮೂರನೆಯವನಾದರೂ, ಅನಂತರ ಅವನ ಹಾಗಿನ ಪರಧರ್ಮದವರು ನಮ್ಮೊಳಗೆಲ್ಲಾ ಕಲೆತು ಸಹೋದರರೆನಿಸಿದರು. ಒಂದೇ ಭಾರತ ಮಾತೆಯ ಪುತ್ರರಾದರು. ಅವರೂ ನಮ್ಮನ್ನು ಆಳಿದರೆಂದ ಮೇಲೆ ಅವರನ್ನು ಕೂಡಾ ನಾವು ಹಾಗೆ ಭಾವಿಸಬೇಕಾದುದು ತಪ್ಪದ ಸಂಗತಿ ನಿಜವು.

'ಆದರೆ ಬ್ರಹ್ಮನು ನಿಯಮಿಸಿದ ನಮ್ಮ ಅರಸರಿಂದಲೇ ನಮಗೆ ಸುಖ ಸಿಕ್ಕದ ಮೇಲೆ ಪರರಾಜರೆನಿಸಿದವರಿಂದ ಸುಖವು ಬಂದೀತೆ? ಆ ಪರರಾಜ್ಯದಲ್ಲಿ ಒಬ್ಬಿಬ್ಬರು ಉತ್ತಮರು ಹುಟ್ಟಿ, ದೇಶದಲ್ಲೆಲ್ಲಾ ಒಂದು ಬಗೆಯ ಒಗ್ಗಟ್ಟನ್ನು ಸಾಧಿಸಲಿಕ್ಕೆ ನೋಡಿದರು. ಪರಜಾತಿಗಳನ್ನೆಲ್ಲಾ ಒಂದೇ ಜಾತಿ ಮಾಡಲಿಕ್ಕೆ [illegible] ನೋಡಿದರು. ಎಷ್ಟೋ ಮಹಾತ್ಮರು ಒಂದೊಂದು ಪಂಗಡವನ್ನೂ ಹುಟ್ಟಿಸಿದರು. ಎಷ್ಟೋ ದಾರಿ ತೋರಿದರು. ಅವೆಲ್ಲ ಸ್ವಲ್ಪ ಸ್ವಲ್ಪ ಕಾಲ ಬಾಳಿ, ಮತ್ತೆ ಕಲ್ಲು ಮುಳ್ಳೇ ತುಂಬ ತೊಡಗಿದುವು. ನಮ್ಮವರು ಪರಧರ್ಮದವರಾಗಿಯೂ, ಪರರು ನಮ್ಮ ಧರ್ಮದವರಾಗಿಯೂ ಒಟ್ಟು ಗಜಿಬಿಜಿಯಾಯಿತು. ಎಲ್ಲಿ ನೋಡಿದರೂ ನಾನು—ನೀನು, ಮೇಲು—ಕೀಳು, ಬೀಳು—ಏಳು ಎಂಬ ದೊಡ್ಡ ಜಗಳವೇ. ದೊಡ್ಡವರು, ಸಣ್ಣವರು, ಜಮೀನ್ದಾರರು, ಪಾಳೇಗಾರರು, ಅರಸರು, ಚಕ್ರವರ್ತಿಗಳು ಎಲ್ಲರೂ ಒಬ್ಬರೊಂದಿಗೊಬ್ಬರು ಜಗಳಮಾಡಿಕೊಂಡೇ ಇದ್ದರು. ಈ ಅಡಿ ಬುಡವಿಲ್ಲದ ಬಡಿದಾಟಗಳಿಂದ ಪಾಪದ ಪ್ರಜೆಗಳಿಗೆ ನೆಮ್ಮದಿಯಿಲ್ಲ, ಶಾಂತಿಯಿಲ್ಲ, ಸುಖವಿಲ್ಲ. ಇವಕ್ಕೆಲ್ಲ ಕಾರಣ ಆಶೆ, ಹೊಟ್ಟೆಕಿಚ್ಚು, ಅಸೂಯೆ.

"ಇಂತಹ ಗಲಿಬಿಲಿಯ ಸಮಯದಲ್ಲಿ ಇನ್ನೊಂದು ಮೂರನೆ ವೈಶ್ಯವೃತ್ತಿಯವರು ವ್ಯಾಪಾರಕ್ಕಾಗಿ ನಮ್ಮ ದೇಶಕ್ಕೆ ಬಂದರು. ಅವರು ಬಿಳಿಯ ಬಣ್ಣದವರು; ಜಾಣಾಕ್ಷರು; ಉಪಾಯಜ್ಞರು. ಅವರಲ್ಲಿಯೂ ಎರಡು ಮೂರು ಜಾತಿಭೇದವುಳ್ಳವರು ಒಬ್ಬರ ಮೇಲೊಬ್ಬರಾಗಿ ಬಂದರು. ಸ್ಪರ್ಧೆಗಿಳಿದರು, ತಮ್ಮೊಳಗೆ ಜಗಳ ಮಾಡುತ್ತ ಕಂಗಾಲರಾಗಿರುವ ನಮ್ಮ ಭೂಕಣವೇ ಅವರ ಸ್ಪ-

(ಒಂಭತ್ತನೇ ಪುಟ ನೋಡಿರಿ)

ಉಳಿತಾಯದ ಅಣೆಕಟ್ಟು



ಹರಿಯುವ ನೀರು ತೊರೆಯಾಗಿ, ಹೊಳೆಯಾಗಿ ದಾರಿಗುಂಟ ಸಾಗುವಾಗ ಅಲ್ಲಲ್ಲಿ ಕೆಸಲೊಡೆದು ಬಂಜರು ನೆಲ, ಮರುಭೂಮಿ, [illegible] ಪ್ರದೇಶಗಳಲ್ಲಿ ಹರಿದು, ನೀರಿನ ಅಪವ್ಯಯವಾಗುತ್ತದೆ. ನೀರಿನ ಅಪವ್ಯಯವನ್ನು ತಡೆ ಹಿಡಿಯಲು, ಅಣೆಕಟ್ಟನ್ನು ಹಾಕಿ, ನೀರನ್ನು ಶೇಖರಿಸಿ, ಅವಶ್ಯಕ ಸಂದರ್ಭದಲ್ಲಿ ವ್ಯವಸಾಯ ಮತ್ತಿನ್ನಿತರ ಉಪಯುಕ್ತಕರ ಉದ್ದೇಶಗಳಿಗಾಗಿ ನೀರು ದೊರೆಯುವಂತೆ ಮಾಡುತ್ತಾರೆ.

ನಿಮ್ಮ ಆದಾಯವು ಸಾಮಾನ್ಯವಾಗಿ ಒಂದೇ ದಾರಿಯಿಂದ ಹರಿದು ಬರುತ್ತದೆ. ಅದನ್ನು ವೆಚ್ಚ ಮಾಡಲು ಇರುವ ದಾರಿಗಳು ನೂರು. ಹಣದ ಅಪವ್ಯಯವನ್ನು ತಡೆಹಿಡಿದು, ಅದನ್ನು ಉಪಯುಕ್ತ ಮಾರ್ಗದಲ್ಲಿ ಬಳಸಲು ಹೊಳೆಗೆ ಅಣೆಕಟ್ಟನ್ನು ಹಾಕಿದಂತೆ ನಿಮ್ಮ ಖರ್ಚಿನ ಹಾದಿಗೆ ಒಂದು ಕಟ್ಟನ್ನು ಹಾಕಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ತೆರೆದ ಉಳಿತಾಯ ಖಾತೆಯೇ ನಿಮ್ಮ ವ್ಯಯದ ದಾರಿಗೆ ಹಾಕಿದ ಅಣೆಕಟ್ಟು. ಹಣ ನಿಮ್ಮ ಖಾತೆಯಲ್ಲಿ ಜಮೆಯಾಗಿ, ಕ್ರಮೇಣ ಅದು ಬೆಳೆದು, ಅವಶ್ಯಕ ಬಿದ್ದಾಗ ಉಪಯುಕ್ತ ಮಾರ್ಗದಲ್ಲಿ ಅದನ್ನು ಬಳಸಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ತೆರೆಯ ಹಿಂದೆ - ಮುಂದೆ

ರಾಷ್ಟ್ರಪತಿಗಳ ಚುನಾವಣೆ

ಬರೆದವರು: ಶ್ರೀ ಶಿವಶಂಕರ.

ಸರ್ವೋಚ್ಚ ನ್ಯಾಯಾಧೀಶರ ಸ್ಥಾನವನ್ನು ಬಿಟ್ಟರೆ, ಭಾರತದಲ್ಲಿ ಇರುವ ಸರ್ವೋಚ್ಚ ಸ್ಥಾನವೆಂದರೆ ರಾಷ್ಟ್ರಾಧ್ಯಕ್ಷರದ್ದು. ಅಂದರೆ ರಾಷ್ಟ್ರಾಧ್ಯಕ್ಷರ ಸ್ಥಾನಕ್ಕಿಂತಲೂ ಸರ್ವೋಚ್ಚ ನ್ಯಾಯಾಧೀಶರ ಸ್ಥಾನ ಉನ್ನತವೆಂಬುದರ ಅರ್ಥವಲ್ಲ. ಅವು ಬೇರೆ ಬೇರೆ ರಂಗಗಳು. ಆಯಾಯಾ ರಂಗಗಳಲ್ಲಿ ಅವರವರ ಪಾತ್ರವೇ ಹಿರಿಯದು ಇದ್ದರೂ, ಸರ್ವೋಚ್ಚ ಸ್ಥಾನ ರಾಷ್ಟ್ರಾಧ್ಯಕ್ಷರದೆಂದರೆ ತಪ್ಪಾಗಲಿಕ್ಕಿಲ್ಲ. ಸರ್ವೋಚ್ಚ ಸ್ಥಾನವು ಕೇವಲ ಅಲಂಕಾರಿಕವೇ ಅಥವಾ ಅಧಿಕಾರದ್ದೆ ಎಂಬುದು ಆ ಸ್ಥಾನದಲ್ಲಿ ಆಸೀನರಾಗುವ ವ್ಯಕ್ತಿಗಳನ್ನು ಹೊಂದಿಕೊಂಡಿದೆ. ಆ ಸ್ಥಾನಕ್ಕೆ ಜವಾಬ್ದಾರಿಯುತ ವ್ಯಕ್ತಿಯನ್ನು ಆರಿಸುವ ಸಮಯ ಬಂದಿತ್ತು. ಹಿಂದಿನ ಸಲಕ್ಕಿಂತ ಈ ಸಲದ ಚುನಾವಣೆ ಮಹತ್ವದ್ದಿದೆ. ಯಾಕೆಂದರೆ ಅದು ಕೇವಲ ಆರಿಸುವಿಕೆ ಇರುವದಿಲ್ಲ. ಚುನಾವಣೆಯೇ ಇದೆ. ಆದರೆ ಭಾರತದ ಪ್ರಜೆಗಳೆಲ್ಲರೂ ಮತ ಚಲಾಯಿಸಿ ಚುನಾಯಿಸುವಂತಹ ಚುನಾವಣೆಯಲ್ಲ. ಭಾರತದ ಪ್ರಜೆಗಳಿಂದ ಚುನಾಯಿಸಿ ಕಳುಹಿಸಲ್ಪಟ್ಟ ಪಾರ್ಲಿಮೆಂಟಿನ ಹಾಗೂ ರಾಜ್ಯ ಸಭೆಯ ಸದಸ್ಯರುಗಳು ಭಾರತದ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸುತ್ತಾರೆ. ಹಿಂದಿನ ಸಲ ವಿಧಾನ ಸಭೆಗಳಲ್ಲೂ ಸಂಸತ್ತಿನಲ್ಲೂ ಕಾಂಗ್ರೆಸ್ಸಿಗೆ ಸಂಪೂರ್ಣ ಬಹುಮತ ಇದ್ದುದರಿಂದ ನಡೆದ ಚುನಾವಣೆಗೆ ಅವರಿಂದ ಇತ್ತ ಲಕ್ಷ್ಯ ಕೇವಲ ಔಪಚಾರಿಕ ನಡೆಯುತ್ತಿತ್ತು. ಇತರ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸುವವರು ಬಹಳ ಮಂದಿ ಇರಲಿಲ್ಲ. ಈ ಸಲ ಹಾಗಲ್ಲ. ಕೆಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸೋಲುಂಡಿದೆಯಲ್ಲದೆ ಸಂಸತ್ತಿನಲ್ಲೂ ದೃಢ್ಯದಿಂದ, ಒಟ್ಟಿನ ಮತದಿಂದ ಪಡೆಸುವಷ್ಟು ಬಹುಮತ ಪಡೆಯುವದಿಲ್ಲ.

ಎದುರು ಪಕ್ಷಗಳಿಗೆ ಧೈರ್ಯ ಬಂದ ವಿಷಯ ಇದುವೇ ಇದೆ. ಹಿಂದೆ ಲೋಕಸಭಾ ಅಧ್ಯಕ್ಷರ ಚುನಾವಣೆ ಸಮಯ ಎದುರು ಪಕ್ಷಗಳಿಗೆ ಪ್ರಬಲ ಪ್ರಹಾರ ದೊರಕಿತ್ತು. ಹಾಗಿದ್ದೂ ಅವರು ಇನ್ನೂ ಒಂದು ಸಲ ಕಾಣ್ಕೆಯನ್ನು ಕಾಣಬೇಕೆಂದರೆ ಕೆಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸೇತರ ಮಂತ್ರಿಮಂಡಲ ಇರುವದೇ ಇದೆ. ನಿಜವಾಗಿ ಕಾಂಗ್ರೆಸ್ಸೇತರ ಪಕ್ಷ ಸಚ್ಚೆ ಬಹುಮತದಿಂದ ಅಧಿಕಾರಕ್ಕೆ ಬಂದ ಸಮಯದ ಡಿಂಡಿಮ ಮಾತ್ರ. ಇತರೆಡೆಗಳಲ್ಲಿ ಅಧಿಕಾರ ಬಂದುದರಿಂದ ಹಲವರು ಸೇರಿಯೂ ಮನೋಭಾವದಿಂದ ಕೆಲವರೂ, ಅಂತೂ, ಕಾಂಗ್ರೆಸ್ಸನ್ನು ಬೀಳಿಸಬೇಕೆಂಬ ಏಕಮೇವ ಉದ್ದೇಶವನ್ನಿಟ್ಟುಕೊಂಡಿರುವ ಪಕ್ಷಗಳವರು ಸೇರಿ ಮಂತ್ರಿಮಂಡಲವನ್ನು ರಚಿಸಿರುವರು. ಅಂತಹವರು ಎಲ್ಲಾ ವಿಷಯಗಳಲ್ಲೂ ಎಲ್ಲಾ ಸಮಯದಲ್ಲೂ ಒಂದಾಗಿರುತ್ತಾರೆನ್ನುವದು ಕಲ್ಪನೆಗೂ ಎಟುಕದ ಸಂಗತಿ.

ಆದನ್ನು ಸ್ಪಷ್ಟಪಡಿಸಲಿಕ್ಕಾಗಿಯೇಯೆಂಬಂತೆ ಈ ಸಲ ರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಯಿತು. ಚೈನಾದೊಂದಿಗೆ ಚಿಲ್ಲಾಟವಾಡಲು ಕಾತೊರೆಯುತ್ತಿರುವ ಕಮ್ಯೂನಿಸ್ಟರೂ ಭಾರತಾಂಬೆಯ ಪಾದತಲವೇ ಸ್ವರ್ಗವೆಂದು ಭಾವಿಸಿಕೊಂಡಿರುವ ಭಾರತೀಯ ಜನಸಂಘದವರೂ ಸೇರಿ ಓರ್ವ ವ್ಯಕ್ತಿಯನ್ನು ಭಾರತದ ರಾಷ್ಟ್ರಾಧ್ಯಕ್ಷನನ್ನಾಗಿ ಆರಿಸಲು ಸಾಧ್ಯವೇನು? ಪಾಕಿಸ್ಥಾನದೊಂದಿಗೆ ಸೇರಿಕೊಂಡಿತಾದರೂ ಸಿಕ್ಕಿ ಸ್ಥಾನವನ್ನು ಪಡೆದೇ ತೀರುವೆನೆನ್ನುವ ಅಕಾಲಿದಳದವರೂ ಅಖಂಡ ಭಾರತದ ಪಲ್ಲವಿ ಹಾಡುತ್ತಿರುವ ಭಾರತೀಯ ಜನಸಂಘದವರು ಸೇರಿ ಜಾಪ್ರನನ್ನು ರಾಷ್ಟ್ರಾಧ್ಯಕ್ಷನನ್ನಾಗಿ ಆರಿಸಲು ಸಾಧ್ಯವೇನು? ತಮ್ಮ ತಮ್ಮ ಸೌಕರ್ಯಕ್ಕಾಗಿ ಅವರು ಒಂದೇ ಮಂಡಲದಲ್ಲಿ ಇರಬಹುದು ಅಷ್ಟೇ. ಹೀಗೆ ಎದುರು ಪಕ್ಷಗಳ ಒಗ್ಗಟ್ಟೆನ್ನುವ ಬೆರ್ಚಪ್ಪನನ್ನು ಕಾಂಗ್ರೆಸ್ಸಿನ ಹೋರಿಗಳು ಬೆದರಿದ್ದು ಬಿಟ್ಟವು. ಬೆರ್ಚಪ್ಪನ ಬಣ್ಣ ಬಯಲಾದ ರೀತಿ ಹಾಗೂ ಹೋರಿಗಳು ಒಂದಾಗಿ ಹೇಗೆ ಹೋರಾಡಿದವೆನ್ನುವದನ್ನು ಈಗ ಸಾವಧಾನವಾಗಿ ಯೋಚಿಸಬಹುದು.

ಪಚ್ಚಿಸ ಸ್ಥಾನಗಳ ಫಲಿತಾಂಶ ಪ್ರಕಟವಾದೊಡನೆ, ಬದಲಾದ ಪರಿಸ್ಥಿತಿಗನುಸಾರವಾಗಿ, ದಿಲ್ಲಿಯಲ್ಲಿ ಫೆಬ್ರವರಿ ಇಪ್ಪತ್ತಾರರಂದು ಭಾರತೀಯ ಜನಸಂಘದ ಧುರೀಣರ ಸಭೆ ಕೂಡಿತ್ತು. ಆದರಲ್ಲಿ ಎಲ್ಲಾ ಪಕ್ಷಗಳವರೂ ಸೇರಿ ಒಮ್ಮತದಿಂದ ಭಾರತದ ರಾಷ್ಟ್ರಾಧ್ಯಕ್ಷರನ್ನಾರಿಸಬೇಕೆಂದು ಆ ಸಭೆಯಲ್ಲಿ ತೀರ್ಮಾನವಾಯಿತು.

ಇತ್ತ ಪ್ರಸವಾ ಪಕ್ಷದ ಧುರೀಣ ಸುರೇಂದ್ರನಾಥ ದ್ವಿವೇದಿಯವರು ಕಾಂಗ್ರೆಸ್ಸಿಗಂಗೊಂದು ಕಳಕಳಿಯ ವಿನಂತಿಯನ್ನು ಪರಿಸಿದರು. ಆದರಲ್ಲಿ ಕಾಂಗ್ರೆಸ್ಸಿಗರು ಎಲ್ಲಾ ಪಕ್ಷಗಳ ಧುರೀಣರನ್ನು ಕರೆದು ಸಮಾಲೋಚಿಸಿ ಒಮ್ಮತದಿಂದ ಒಬ್ಬರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಆರಿಸಬೇಕೆಂದು ತಿಳಿಸಲಾಯಿತು.

ಸ್ವತಂತ್ರ ಪಾರ್ಟಿಯವರೂ ಒಮ್ಮತದ ಆರಿಕೆಗೆ ಒಪ್ಪಿಗೆ ಸೂಚಿಸಿ ಶ್ರೀ ಜಯಪ್ರಕಾಶನಾರಾಯಣರನ್ನು ಆ ಸ್ಥಾನಕ್ಕೆ ತರಬೇಕೆಂದು ತಿಳಿಸಿದರು. ಆದರೆ ಶ್ರೀ ಜಯಪ್ರಕಾಶರು ತಾವು ಆ ರಾಜಕೀಯದಲ್ಲಿ ಆಸಕ್ತಿ ಇಲ್ಲವೆಂದೂ ಶ್ರೀ ಜಕೀರ್ ಹುಸೇನರನ್ನು ಆರಿಸಿಕೊಳ್ಳಬೇಕೆಂದೂ ಹೇಳಿದರು.

ಸಂಯುಕ್ತ ಸಮಾಜವಾದಿಗಳು ಈ ಸೂಚನೆಗೆ ಸಮ್ಮತಿ ಸೂಚಿಸಿದರೂ, ಶ್ರೀ ಮೆಹರ್‌ಚಂದ್ ಮಹಾಜನ್ ಮುಂತಾದ ಪಕ್ಷೇತರ ಹೆಸರುಗಳಿಗೆ ಬೆಂಬಲ ಸೂಚಿಸುವ ಲಕ್ಷಣವನ್ನು ವ್ಯಕ್ತಪಡಿಸಲಿಲ್ಲ.

ಇತ್ತ ಕಾಂಗ್ರೆಸ್ಸಿನ ಸ್ಥಿತಿ ಬೇರೆ ರೀತಿಯದಾಗಿತ್ತು. ಇದಕ್ಕೆ ಕೇಂದ್ರದಲ್ಲಿ ಮಂತ್ರಿಸಭೆಯನ್ನು ರಚಿಸುವ ಹೊಣೆ ಬಂದಿತ್ತು. ಆದುದರಿಂದ ತಮ್ಮ ಪಕ್ಷದ ಪ್ರಮುಖರನ್ನು ನೇಮಿಸುವ ಕಾರ್ಯದಲ್ಲಿ ಅದು ಮಗ್ನವಾಗಿತ್ತಾದರೂ, ಆರಂಭದಲ್ಲಿ ಇಂತಹ ಒಮ್ಮತದ ಆರಿಸುವಿಕೆಗೆ ಒಪ್ಪಿಕೊಂಡಿತು.

ಹೀಗೆ ಹೆಚ್ಚಿನ ಪಕ್ಷಗಳು ಒಮ್ಮತದ ಆರಿಸುವಿಕೆಯ ಮಾತನ್ನಾಡಿದರೂ ತಮ್ಮ ತಮ್ಮ ದೃಷ್ಟಿಯಲ್ಲಿರುವ ವ್ಯಕ್ತಿಗಳ ಹೆಸರುಗಳನ್ನು ಮುಂದಿಟ್ಟಾಗ ಒಬ್ಬರ ಹೆಸರನ್ನು ಇನ್ನೊಬ್ಬರು ಬೆಂಬಲಿಸುವ ಲಕ್ಷಣ ಕಂಡು ಬರುತ್ತಿರಲಿಲ್ಲ. ಆದುದರಿಂದ ಎಲ್ಲಾ ಪಕ್ಷದವರೂ ಸೇರಿ ಕೊನೆಯ ಉಪಾಯ ಇದ್ದ ಸ್ಥಿತಿಯನ್ನು ಮುಂದರಿಸುವ ವಿಧಾನಕ್ಕೆ ಶರಣೆಂದರು. ಕಾಂಗ್ರೆಸಿಗರಿಗೂ ಅದು ಸಮಾಧಾನಕರವೇ ಆಗಿತ್ತು. ಆದರಲ್ಲೂ ಕಾಂಗ್ರೆಸ್ಸಿನ ಅಧ್ಯಕ್ಷ ತಿರುಕಾಮರಾಜರಿಗೆ ಆದ ಆನಂದ ಅಷ್ಟಿಷ್ಟಲ್ಲ. ಆದರದು ಹೆಚ್ಚು ಸಮಯ ಉಳಿಯಲಿಲ್ಲ. ಪ್ರಜಾಪ್ರಭುತ್ವ ದಿನದಂದು ಶ್ರದ್ಧೇಯ ರಾಧಾಕೃಷ್ಣನರಾಡಿದ್ದ ಮಾತುಗಳು ಶ್ರೀಮತಿ ಇಂದಿರಾಜೀಯವರ ಮನಸ್ಸನ್ನು ಇರಿಯುತ್ತಿದ್ದುವು. ಆದುದರಿಂದ ಈ ಮುದುಕಪ್ಪನನ್ನು ಆದಷ್ಟು ಬೇಗನೆ ಮನೆಗೆ ಕಳುಹಿಸಿಬಿಡಬೇಕೆಂಬುದು ಆವರ ಇರಾದೆ. ಹಾಗಾಗಿ ತಿರುಕಾಮರಾಜರ ಪಲ್ಲವಿಯಾದ 'ನೋಡೋಣ' ವನ್ನೇ ಅವರು ಆರಂಭದಲ್ಲಿ ಆಡಿ ತನ್ನ ಪಕ್ಷಕ್ಕೆ ಜನರನ್ನು ಕಟ್ಟಿಕೊಂಡರು. ಮತ್ತು ತಿರುಕಾಮರಾಜರ ಅಭಿಪ್ರಾಯವನ್ನೆದುರಿಸಿದರು. ಇಲ್ಲಿ ತಿರು ಕಾಮರಾಜರು ಕೇವಲ ಪ್ರವೇಗೆ ಮರುಳಾಗಿ, ತನ್ನ ಸ್ಥಾನದ ಭದ್ರತೆಗಾಗಿ ಸುಮ್ಮಗುಳಿಯಬೇಕಾಯಿತು. ಅವರಿಗಿದ್ದ ಭಯವೆಂದರೆ ತಾನು ಸೂಚಿಸಿದ ಅಭ್ಯರ್ಥಿಯನ್ನು ಉತ್ತರದ ಪ್ರಾಂತ್ಯಗಳವರು ಆಧರಿಸದಿದ್ದಲ್ಲಿ ತನ್ನ ಮಾತಿಗೆ ಬೆಲೆ ಇಲ್ಲದೆ ಹೋಗುತ್ತದೆ. ಅಲ್ಲದೆ ಅವಾಗಲೇ ವಿಧಾನಸಭೆಯ ಸ್ಥಾನಕ್ಕೂ ಗೆದ್ದು ಬರಲಾಗದವನನ್ನು ಅಖಿಲ ಭಾರತ ಸ್ಥಾನದಿಂದ ಹೊರತಳ್ಳಲು ಅವರು ಹಿಂಜರಿಯಲಾರರೆಂದು ತಿರು ಕಾಮರಾಜರು ಬೆದರಿದರು. 'ಬೇಕಾದ್ದು ಮಾಡಿಕೊಳ್ಳಿ' – ತಿರು ಕಾಮರಾಜರು ಕಾಲ ಕಿತ್ತರು. ಒಲಿದರೆ ನಾರಿ, ಮುನಿದರೆ ಮಾರಿಯೆಂಬುದು ತಿರುಕಾಮರಾಜರಿಗೆ ಚೆನ್ನಾಗಿ ಗೊತ್ತು. ಇಷ್ಟೆಲ್ಲಾ ಗೊಂದಲವೆದ್ದ ಮೇಲೆ ತನ್ನ ಮಾನವನ್ನುಳಿಸಿಕೊಳ್ಳಲಿಕ್ಕಾಗಿಯೂ ಶ್ರದ್ಧೇಯ ರಾಧಾಕೃಷ್ಣನ್‌ರವರು ತಪ್ಪು ಆ ಜವಾಬ್ದಾರಿಯುತ ಸ್ಥಾನದಲ್ಲಿ ಮುಂದರಿಯುವದಿಲ್ಲವೆಂಬುದಾಗಿ ಸ್ಪಷ್ಟವಾಗಿ ಸೂಚಿಸಿದರು. ಹೀಗೆ ಶ್ರದ್ಧೇಯ ರಾಧಾಕೃಷ್ಣನ್‌ರವರಿಗೂ ಶ್ರೀಮತಿ ಇಂದಿರಾಜೀಯವರಿಗೂ ರೋಗಿ ಬಯಸಿದ್ದೂ ಹಾಲು, ವೈದ್ಯರಿತ್ತದ್ದೂ ಹಾಲೆಂಬಂತಾಯಿತು.

ಶ್ರದ್ಧೇಯ ರಾಧಾಕೃಷ್ಣನವರು ಸ್ಪಷ್ಟವಾಗಿ ನಕಾರ ಸೂಚಿಸಿದ ಮೇಲೆ ಮತ್ತೋರ್ವ ವ್ಯಕ್ತಿಯನ್ನು ಹುಡುಕುವ ಕೆಲಸ ಎಲ್ಲಾ ಪಕ್ಷಗಳವರಿಗೂ ಆಯಿತು. ವಿರುದ್ಧ ಪಕ್ಷಗಳವರಾದರೋ ಸರ್ವಾನುಮತದಿಂದ ಒಬ್ಬನನ್ನು ಆರಿಸುವ ಮಾತನ್ನು ಬಿಡದೆ ಕೇಳುತ್ತ ಬಂದರು. [illegible] ರೆ ಅವರೊಳಗೇನೇ ಏಕಾಭಿಪ್ರಾಯ [illegible] ದಿರಲಿಲ್ಲ. ಒಬ್ಬರು ಮೆಹರ್‌ಚಂ[illegible] ಮಹಾಜನ್‌ರವರ ಹೆಸರು ಹೇಳಿದ[illegible] ನ್ನೊಬ್ಬರು ಜನರಲ್ ಕರಿಯಪ್ಪನ[illegible] ಹೆಸರನ್ನೆತ್ತಿದೊಡನೆ ಮತ್ತೊಬ್ಬರು [illegible] ಯಪ್ರಕಾಶನಾರಾಯಣರಾಗ ಬೇಕೆಂ[illegible] ದರು. ಇದರಲ್ಲಿ ಶ್ರೀ ಜಯಪ್ರಕಾಶನಾ[illegible] ರಾಯಣರು ಆದಾಗಲೇ ತಮ್ಮ ಅಸ[illegible] ತಿಯನ್ನು ಸೂಚಿಸಿದ್ದರು. ಕೂಡಾ [illegible] ವಾ ಪಕ್ಷದವರು ಅವರ ಹೆಸರನ್ನು [illegible] ಲಿಲ್ಲ. ಚೈನೀ ಆಕ್ರಮಣ ಹಾಗೂ ಪಾ[illegible] ಸ್ಥಾನೀ ಆಕ್ರಮಣದ ಸಮಯದಲ್ಲಿ [illegible] ದಾನಿ ಜಯಪ್ರಕಾಶರು ಆಡಿ[illegible] ಮಾತುಗಳು ಅಲ್ಲದೆ ದೇಶದ್ರೋಹಿ [illegible] ಖ್ ಅಬ್ದುಲ್ಲಾನ ಪರವಾಗಿ ಅವರು [illegible] ದಿಸುತ್ತಿರುವ ನಿಧಾನ ಇವು ದೇಶ ಭ[illegible] ಗೆ ಅವರ ಮೇಲೆ ಕೋಪವನ್ನು ಬರಿ[illegible] ವ ಕಾರಣ ತಾನು ಒಂದು ವೇಳೆ [illegible] ತ್ಯುಚ್ಚ ಸ್ಥಾನದಲ್ಲಿ ಆಸೀನವಾದಲ್ಲಿ [illegible] ವರ್ತಿಸುವದೆಂಬ ತಳಮಳದಿಂದಾಗಿ [illegible] ರು ತಮಗೆ ಆ ಸ್ಥಾನ ಬೇಡವೆಂದೇ [illegible] ಹಿಡಿದರು. ಶ್ರೀ ಜಯಪ್ರಕಾಶನಾರಾ[illegible] ಣರ ಹೆಸರು ಜನಸಂಘದಂತಹ ಪಕ್ಷ[illegible] ಗೆ ಹಿಡಿಸದೆ ಇದ್ದಂತೆಯೇ ಶ್ರೀ ಮೆ[illegible] ಚಂದ್ ಮಹಾಜನರ ಹೆಸರು ಸ್ವತ[illegible] ಪಾರ್ಟಿ ಹಾಗೂ ವಿಭಜನಾವಾದಿ ಪ[illegible] ಳಗೆ ಮೆಚ್ಚಿನದ್ದಾಗಲಿಲ್ಲ. ಅದೇ [illegible] ಪ್ರಸವಾ ಮುಂತಾದ ಪಕ್ಷಗಳಿಗೆ [illegible] ಗೂ ಡಾ. ಪಿ. ಕೆ. ದಂತಹ ಪಕ್ಷ[illegible] ಗೆ ಮಾಜಿ ಮಹಾದಂಡನಾಯಕ [illegible] ಕರಿಯಪ್ಪನವರ ಹೆಸರು ನಡುಕವ[illegible] ಟು ಮಾಡಿತು. ಎದುರು ಪಕ್ಷಗಳ[illegible] ಈ ರೀತಿ ಮಾತುಕತೆಯಲ್ಲಿ ತೊಡಗಿದ[illegible] ಇವರೆಲ್ಲ ಒಂದಾಗಿ ಬಂದು ಹೆಸರನ್ನು [illegible] ಚಿಸುವರೆಂದು ಶ್ರೀಮತಿ ಇಂದಿರಾ [illegible] ಧೀಜೀಯವರು ಗಹಗಹಿಸಿ ನಗು[illegible] ರು. ಹಾಗಿದ್ದರೂ ಸ್ವತಂತ್ರ ಪಾ[illegible] ಯ ಪ್ರಮುಖ ಶ್ರೀ ಮಿನೂ ಮ[illegible] ನಿಯವರು ಪ್ರಧಾನಿ ಇಂದಿರಾಜೀಯ[illegible] ಕಂಡು ಸಮಾಲೋಚನೆ ನಡೆಸಿ[illegible] ಅಲ್ಲೂ ಎದುರು ಪಕ್ಷಗಳಲ್ಲಿ ಏಕಾಭಿ[illegible] ಯ ಬರಲಿಕ್ಕಿಲ್ಲವೆಂಬ ಭರವಸೆಯ [illegible] ಶ್ರೀಮತಿಜೀಯವರು ಹೆಸರುಗಳ [illegible] ಯನ್ನು ಕೂಡಲ ಹೇಳಿದರಲ್ಲದೆ, [illegible] ವರೆಗೆ ಕಾಂಗ್ರೆಸ್ಸ್ ತೀರ್ಮಾನಕ್ಕೆ ಬ[illegible] ರುವದರಿಂದ ಈ ಪಟ್ಟಿಯಲ್ಲಿ ಒಪ್ಪಿಗೆ[illegible] ಗುವ ಹೆಸರನ್ನು ಆರಿಸಿಕೊಳ್ಳೋಣವೆ[illegible] ಹೇಳಿದರು. ಶ್ರೀ ಮಸಾನಿ ಆ ಮಾ[illegible] ಇದ್ದಕ್ಕಿದ್ದಂತೆಯೇ ನಂಬಿ ಬಿಟ್ಟರು [illegible] ಕೀಯದ ಕಾಕ್ಕೆ ಮಾತುಗಳ ಅರ್ಥ [illegible] ರಿಗಾಗಲಿಲ್ಲ.

ಪ್ರಧಾನಿಯವರ ಅಭಿಪ್ರಾಯವ[illegible] ತಿಳಿದುಕೊಂಡ ಮೇಲೆ ಎದುರು ಪಕ್ಷ[illegible] ವರು ಗಂಭೀರವಾಗಿ ಸಮಸ್ಯೆಯನ್ನು [illegible] ಹರಿಸಲು ನಿರ್ಧರಿಸಿದರು. ಒಬ್ಬೊಬ್ಬ[illegible] ದಿಯ ಪ್ರಕಾರ ಅಭಿಪ್ರಾಯವ್ಯಕ್ತಪಡಿ[illegible]

ಕೊನೆಯಾಗ ಪು...8

ಹಾಗೆ ಡಾ|| ಎಮ್. ಕೆ. ಜೆ. ಅವರು ಸರ್ವೋಚ್ಚ ನ್ಯಾಯಾಧೀಶ ಶ್ರೀ ಕೆ. ಸುಬ್ಬರಾವ್ ಅವರ ಹೆಸರನ್ನು ಸೂಚಿಸಿದರು. ಅವರ ದೃಷ್ಟಿಯಲ್ಲಿ ಇದಕ್ಕೆ ಮುಖ್ಯವಾದ ಎರಡು ಕಾರಣಗಳಿದ್ದುವು. ಶ್ರೀ ಸುಬ್ಬರಾವ್ ಅವರು ಉತ್ತರದವರಲ್ಲ, ದಕ್ಷಿಣದ ಆಂಧ್ರದವರಿದ್ದಾರೆ. ಅಷ್ಟೇ ಅಲ್ಲ, ಅವರು ಬ್ರಾಹ್ಮಣರಲ್ಲ. ಇದು ಡಾ|| ಎಂ. ಕೆ. ಅವರಿಗೆ ಬೇಕಾಗಿದ್ದ ಸಂಗತಿ. ಕಮ್ಯೂನಿಷ್ಟೇತರರಿಗೆ ಇದು ಮುಖ್ಯ ವಿಷಯವಲ್ಲ. ಅವರಿಗೆ ಶ್ರೀ ಸುಬ್ಬರಾವ್ ಅವರು ಸರ್ವೋಚ್ಚ ನ್ಯಾಯಾಧೀಶರ ಸ್ಥಾನದಲ್ಲಿರುವ ಸಂಗತಿ ಬಹು ಮುಖ್ಯ. ಅಂದರೆ ಅವರಿಗೆ ಸಂವಿಧಾನದ ಅಕ್ಷರ ಎಲ್ಲಾ ಗೊತ್ತು. ಕಾನೂನು—ನಿಯಮ ಎಲ್ಲಾ ಅವರಿಗೆ ಅಭ್ಯಾಸವಾಗಿರುತ್ತದೆ. ಅದರಲ್ಲಿ ಯಾವ ರಾಜಕೀಯ ಪಕ್ಷಕ್ಕೆ ಅವರು ಸೇರಿದವರಲ್ಲ. ಆದರೆ ಈ ವಿಷಯ ಸಂಯುಕ್ತ ಸಮಾಜವಾದಿಗಳಿಗೆ ರುಚಿಸಲಿಲ್ಲ. ಅದರಲ್ಲೂ ಅವರಿಗೆ ಒಂದು ವಿಷಯ ಇತ್ತು. ಅದುವೇ ಶ್ರೀ ಸುಬ್ಬರಾವ್ ಹಿಂದಿ ಪ್ರಾಂತ್ಯದವರಲ್ಲವೆಂಬ ವಿಷಯ. ಆದರೂ ಡಾ|| ಎಮ್. ಕೆ. ದವರಿಂದ ಸೂಚಿಸಲ್ಪಟ್ಟ ವ್ಯಕ್ತಿಯ ಹೆಸರನ್ನೇ ಎದುರು ಪಕ್ಷಗಳವರು ಒಪ್ಪಿಕೊಂಡರು. ಮತ್ತೆ ಉಳಿದದ್ದು ಎರಡು ಕೆಲಸ—ಒಂದು ಸುಬ್ಬರಾವ್ ಅವರ ಅನುಮತಿ ಪಡೆಯುವದು, ಇನ್ನೊಂದು ತಮ್ಮ ಅಂಕೆಯ ಹೆಸರನ್ನು ಬಿಟ್ಟು ಉಳಿದವರ ಹೆಸರನ್ನು ಪ್ರಧಾನಿಯವರಿಗೆ ತಿಳಿಸುವದು. ಶ್ರೀ ಸುಬ್ಬರಾವ್ ಸರ್ವೋಚ್ಚ ನ್ಯಾಯಾಧೀಶರ ಸ್ಥಾನದಲ್ಲಿರುವದರಿಂದ ಈ ಸ್ಥಾನಕ್ಕೆ ಬರಲು ಒಪ್ಪುವರೇ ಎಂಬುದು ಎದುರು ಪಕ್ಷಗಳವರ ಸಂದೇಹವಾಗಿತ್ತು. ಇಂದು ದೇಶ ಹೋಗುತ್ತಿರುವ ದಿಶೆಯನ್ನು ಕಂಡ ದೇಶಭಕ್ತನು ಖಂಡಿತವಾಗಿ ಈ ಸ್ಥಾನಕ್ಕೆ ಬರಲು ಒಪ್ಪದಿರಲಾರನು. ರಾಜಕೀಯ ಅವನಿಗೆ ತಲೆನೋವು ಬರಿಸುವಂತಿದ್ದರೂ ದೇಶದ ದಿವಾಳಿತನ ಅವನಿಗೆ ಮೆಚ್ಚಿನ ವಿಷಯವಲ್ಲ. ಈ ದೃಷ್ಟಿಯಿಂದ ಶ್ರೀ ಸುಬ್ಬರಾವ ಅವರು ತಮ್ಮ ಸಮ್ಮತಿಯನ್ನು ಸೂಚಿಸಿದರಾದರೂ ಕಾಂಗ್ರೆಸ್ಸಿಗರು ಕೂಡಾ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದರು. ದೇಶದ ಕೆಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿಗರಿಗೆ ಬಹುಮತ ಇಲ್ಲವಾದರೂ ಸಂಸತ್ತಿನಲ್ಲಿ ಅವರಿಗೆ ಬಹುಮತ ಇದ್ದೇ ಇದೆ. ಅಲ್ಲದೆ ರಾಜಕೀಯ ಹುದ್ದೆಯಿಂದ ದೂರ ಉಳಿಯಬೇಕೆಂಬ ಇರಾದೆಯಿಂದ ಶ್ರೀ ಸುಬ್ಬರಾವ್ ಆ ರೀತಿ ಆಡಿದರು. ಕಾಂಗ್ರೆಸ್ಸಿಗರ ರಾಜಕೀಯ ಇನ್ನೂ ಮುಚ್ಚಲಾರದ ರಾಜಕೀಯ ತಜ್ಞರ ನೆನಪಿನಲ್ಲಿ ಶ್ರೀಮತಿಯವರು ಪ್ರಧಾನಿ ರಾಧಾಕೃಷ್ಣನರ ಹೆಸರನ್ನು ತಿರಸ್ಕರಿಸಿ, ಹುಸೇನರ ಪಟ್ಟಗಳನ್ನು ಕೂಡ ಹೇಳಿದಾಗಲೇ ರಾಜಕೀಯ ತಜ್ಞರು ಲೆಕ್ಕ ಹಾಕಿಕೊಂಡಿದ್ದರು. ಸ್ವತಃ ತನ್ನ ಪಕ್ಷದ ಅಧ್ಯಕ್ಷರ ಅಭಿಪ್ರಾಯವನ್ನೇ ಗಾಳಿಗೆ ತೂರಿಬಿಟ್ಟ ಶ್ರೀಮತಿ ಇಂದಿರಾಜಿ ಎದುರು ಪಕ್ಷಗಳು ಆರಿಸಿದ ಅಭ್ಯರ್ಥಿಯನ್ನು ಅನುಮೋದಿಸುವದುಂಟೇ? ಆದರೂ ರಾಜಕೀಯದ ಗಂಟನ್ನು ಸಿಲುಕಿಕೊಳ್ಳಬಾರದೆಂದೂ ಎದುರು ಪಕ್ಷಗಳವರೂ ಜಾಣತನದಿಂದ ಶ್ರೀ ಸುಬ್ಬರಾವ್ ಅವರ ಒಂದೇ ಒಂದು ಹೆಸರನ್ನು ಸೂಚಿಸಿದರು. ಗಂಟೆಯಲ್ಲಿ ಬಿಸಿಬಿಸಿ ಹಾಲನ್ನು ಕುಡಿದಂತಾಯಿತು ಇಂದಿರಾಜೀಯವರಿಗೆ. ಆದರೆ ರಾಜಕೀಯದಲ್ಲಿ ಇದಕ್ಕಿಂತಲೂ ಬಿಸಿ ಬಿಸಿ ದ್ರವವನ್ನು ಕುಡಿದಿರುವ ಶ್ರೀಮತಿಜೀ ಇದಕ್ಕೆ ಬೆದರುವದುಂಟೇ?

ಎದುರು ಪಕ್ಷದವರು ಒಂದೇ ಒಂದು ಹೆಸರನ್ನು ಸೂಚಿಸಿದುದರಿಂದ ತಿರುಕಾಮರಾಜರು ಹಾಗೂ ಶ್ರೀಮತಿ ಇಂದಿರಾಜೀಯವರು ತಲೆಕೆರೆಸಿಕೊಳ್ಳಲಾರಂಭಿಸಿದರು. ತಮ್ಮ ಅಭಿಪ್ರಾಯವನ್ನು ತಿಳಿಸಲು ಸಮಯ ಬೇಕೆಂದರು. ಇವರೊಂದಿಗೆ ಶ್ರೀ ಯಶವಂತ ಚವ್ಹಾಣ ಮುಂತಾದ ಪ್ರಮುಖರು ಕಲೆತರು, ಯೋಚಿಸಿದರು. ಎದುರು ಪಕ್ಷಗಳವರು ಸೂಚಿಸಿರುವ ಹೆಸರನ್ನು ಗಾಳಿಗೆ ತೂರಿಬಿಡಲು ಸಾಧ್ಯವಿಲ್ಲವೆಂಬುದನ್ನು ಅವರು ಕಂಡುಕೊಂಡರು. ಅವರಿಗೆದುರಾಗಿ ಅಂತಹ ಅತ್ಯುಚ್ಚ ಸ್ಥಾನದಲ್ಲಿದ್ದವರನ್ನೂ ನಿಲ್ಲಿಸುವದು ನಡೆಯದ ಮಾತು. ಶ್ರೀ ಛಾಗ್ಲಾ ಅಥವಾ ಶ್ರೀ ತ್ರಿಗುಣಸೇನ ಮುಂತಾದವರಿಗೆ ಬಿಳಿ ಟೊಪ್ಪಿ ಇಟ್ಟಂತೆ ಶ್ರೀ ಸುಬ್ಬರಾಯರಿಗೆ ಟೊಪ್ಪಿ ಇಡುವದು ಆಗದ ವಿಷಯ. ಅಲ್ಲದೆ ಅವರ ಬಳಿ ಹೋಗಲೂ ಅಧಿಕಾರದ ಅಂಕುಶ ಹಿಡಿದುಕೊಂಡಿರುವವರಿಗೆ ಎಲ್ಲಿಲ್ಲದ ಅಂಜಿಕೆ. ಅದಕ್ಕೆ ಕಾರಣವೆಂದರೆ ಬಹುಮತದ ಬಲದಿಂದ ಕಾಂಗ್ರೆಸ್ಸು ಘಟನೆಗೆ ತಿದ್ದುಪಡಿ ತಂದದ್ದನ್ನು ಅವರು ಒಂದೇ ಒಂದು ತುಟುಕು ಶಾಯಿಯ ಶಕ್ತಿಯಿಂದ ರದ್ದುಗೊಳಿಸಿದ್ದೇ ಇದೆ. ಅಂತಹವರನ್ನು ಶ್ರೀಮತಿ ಇಂದಿರಾಜೀ ಅಧ್ಯಕ್ಷರನ್ನಾಗಿ ಒಪ್ಪಿಕೊಳ್ಳುವದುಂಟೇ? ಆದುದರಿಂದಲೇ ಶ್ರೀ ಸುಬ್ಬರಾಯರು ಅಧ್ಯಕ್ಷರಾಗಿ ಆರಿಸಿ ಬಂದಲ್ಲಿ ತಾನು ರಾಜೀನಾಮೆ ಕೊಡುವದಾಗಿ ಡಾಣಾಡಂಗುರ ಸಾರಿದರು— ಶ್ರೀಮತಿ ಜೀಯವರು. ಇತ್ತ ಇಂದಿರಾಜೀ, ಕಾಮರಾಜ, ಯಶವಂತ ಚೌವಾಣ, ದ್ವಾರಕ ಪ್ರಸಾದ ಮಿಶ್ರ, ಮುಂತಾದ ಅತಿರಥ ಮಹಾರಥರು ಕಲೆತು ಗಂಭೀರವಾಗಿ ಯೋಚಿಸಲಾರಂಭಿಸಿದರು. ರಾಜಕೀಯದ ಕಚ್ಚಾಣ ಕಾದಿರುವದನ್ನು ಶ್ರೀ ಝಾಕೀರ ಹುಸೇನರು ಕಂಡರು. ಇದುವೇ ತಕ್ಕ ಸಮಯವೆಂಬುದನ್ನು ತಿಳಿದುಕೊಂಡರು. ಅವರು ಬಲವಾಗಿ ಒಂದು ಪಟ್ಟನ್ನಿತ್ತರು—ಮುಂದಿನ ಸರ್ತಿಯಿಂದ ತಾನು ಉಪಾಧ್ಯಕ್ಷನಾಗಿರಲು ಸಾಧ್ಯವಿಲ್ಲವೆಂದು ಸಾರ್ವಜನಿಕವಾಗಿ ಸಾರಿ ಬಿಟ್ಟರು. ಶ್ರೀಮತಿಜೀ ಇಂತಹ ಸಂದರ್ಭದತ್ತವೇ ಕಾದುಕೊಂಡಿದ್ದರು. ಅವರು ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನುರುಳಿಸುವ ಯೋಜನೆಯನ್ನು ಮುಂದಕ್ಕಿಟ್ಟರು. ಕಾಂಗ್ರೆಸ್ಸ್ ಈ ತಂತ್ರದಲ್ಲಿ ಪಳಗಿದ ಕೈ. ಉತ್ತರ ಪ್ರದೇಶದಲ್ಲಿ ಸ್ಥಳ ಸಿಗದೆ ಅಲೆಯುತ್ತಿದ್ದ ಶ್ರೀ ಅಜಿತ ಪ್ರಸಾದ ಜೈನರನ್ನು ಕೇರಳದಲ್ಲಿ ನಿಲ್ಲಿಸಿ ಐಕ್ಯತೆಯ ಹಾಡು ಹಾಡಿ ಗೆಲ್ಲಿಸಿರುವ ಅದೇ ಕಾಂಗ್ರೆಸ್ 'ಮುಸ್ಲಿಮ' ಅಂತ ಹಿಡಿದ್ದೇ ಆಟವನ್ನು ಆಡಿದರು. ಉಪಾಧ್ಯಕ್ಷನಾಗಿಯೇ ಮುಂದರಿಯಲಾರೆ, ಅಂದರೆ, ಅಧ್ಯಕ್ಷ ಪಟ್ಟವನ್ನು ಬಿಟ್ಟು ಕೊಡದಿದ್ದಲ್ಲಿ ಜಾಗ್ರತೆಯಿಂದು ಝಾಕೀರ ಹುಸೇನರು ಎಚ್ಚರಿಸಿದುದನ್ನು ಶ್ರೀಮತಿಜೀಯವರು ಲಾಭದಾಯಕವಾಗಿಯೇ ಉಪಯೋಗಿಸಿಕೊಂಡರು; ಶ್ರೀ ಝಾಕೀರ ಹುಸೇನರನ್ನು ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ಸ್ ಪಕ್ಷದಿಂದ ಅಭ್ಯರ್ಥಿಯನ್ನಾಗಿ ಆರಿಸಿ ಬಿಟ್ಟರು. ಇಂದಿರಾಜೀ ಮೊದಲ್ಗೊಂಡು ಎಲ್ಲಾ ಕಾಂಗ್ರೆಸ್ಸ್ ನಾಯಕರು "ಸೆಕ್ಯೂಲರಿಸಮ"ನ ನಾಮ ಜಪಿಸಲಾರಂಭಿಸಿದರು.

ಎದುರು ಪಕ್ಷಗಳವರೂ ಸುಮ್ಮಗಿರಲಿಲ್ಲ. ತಮ್ಮ ತಮ್ಮ ಪ್ರಚಾರ ಸಾಧನ ಪತ್ರಿಕೆಗಳ ಮೂಲಕ ಶ್ರೀ ಝಾಕೀರ ಹುಸೇನರ ವೈಯಕ್ತಿಕ ಬಂಡವಾಳವನ್ನು ಹೊರಗೆಡಹಿದರು. ಇವುಗಳಲ್ಲಿ ಶ್ರೀ ಝಾಕೀರ ಹುಸೇನರು ಹಿಂದೆ ತಮ್ಮ ಮೊಮ್ಮಗಳನ್ನು ಪ್ರೀತಿಸಿದ ಮುಸ್ಲಿಮೇತರ ಯುವಕನನ್ನು ಮತಾಂತರಗೊಳಿಸಿದ ರಾಷ್ಟ್ರಾಧ್ಯಕ್ಷರಾಗಿದ್ದ ಶ್ರದ್ಧೇಯ ರಾಧಾಕೃಷ್ಣನವರು 'ಸೆಕ್ಯೂಲರಿಸಮ'ನ ಭಯದಿಂದ ಮಥುರೆಯ ಮೀನಾಕ್ಷಿ ದೇವಸ್ಥಾನದ ಜೀರ್ಣೋದ್ಧಾರದ ಕಾರ್ಯದಲ್ಲಿ ಭಾಗವಹಿಸಲು ಹಿಂಜರಿದಿದ್ದಾಗ ಉಪ-ರಾಷ್ಟ್ರಾಧ್ಯಕ್ಷರಾದ ಶ್ರೀ ಝಾಕೀರ ಹುಸೇನರು ತಮಿಳು ನಾಡಿಗೆ ಬಂದು ಮಸೀದಿಯೊಂದನ್ನು ತೆರೆದುದು ಮಾತ್ರವಲ್ಲ, ಮಥುರೆಯಲ್ಲಿ ಮಾತಾಡುವಾಗ ಮಹಮ್ಮದೀಯರು ಸಾಧಾರಣ ಪ್ರಜೆಗಳಿರುವದಿಲ್ಲ. ಅವರು ಈ ಭೂಮಿಯನ್ನಾಳಿದವರ ಸಂತತಿಯವರಿದ್ದಾರೆಂದು ಜ್ಞಾಪಕ ಹುಟ್ಟಿಸಿ ಹೋಗಿದ್ದರು, ಅವರ ಸಹೋದರಾದಿ ಸಂಬಂಧಿಗಳ ಪಾಕಿಸ್ತಾನದಲ್ಲಿದ್ದು ಇವರೊಡನೆ ಸಂಪರ್ಕವಿಟ್ಟುಕೊಂಡಿರುವದರಿಂದ ಇವರು ಮತಾಂತರು ಮಾತ್ರವಲ್ಲ ಪಾಕಿಸ್ತಾನ ಪ್ರೇಮಿಗಳೂ ಇದ್ದಾರೆಂಬುದೇ ಎದುರು ಪಕ್ಷಗಳ ಪ್ರಚಾರ. ಇದನ್ನು ಅಲ್ಲಗೆಳೆಯಲು ಶ್ರೀ ಝಾಕೀರ ಹುಸೇನರಿಗೆನೇ ಸಾಧ್ಯವಾಗಿಲ್ಲ. ಅವರಾದರೋ ಅದು ಹಾಗಲ್ಲ, ಹೀಗಲ್ಲವೆಂದು ರಾಗ ತೆಗೆದು ಅಮೇರಿಕಕ್ಕೆ ಹೋಗಿಬಿಟ್ಟರು. ಇದಕ್ಕೆ ಸರಿಯಾದ ಉತ್ತರವನ್ನೀಯಲಾರದ ಕಾಂಗ್ರೆಸ್ಸು ಇದು ಮತೀಯ ದ್ವೇಷದ ಪ್ರಚಾರವೆಂದು ಬೊಬ್ಬೆ ಹಾಕಲಾರಂಭಿಸಿತು. ಅಷ್ಟೇ ಅಲ್ಲ, ಎದುರು ಪಕ್ಷಗಳ ಒಗ್ಗಟ್ಟನ್ನು ಒಡೆದು ಹಾಕಲು ಪ್ರಯತ್ನಿಸಿದರು. ಶ್ರೀಮತಿ ಇಂದಿರಾ ಗಾಂಧೀಜಿಯವರು ತಾವು ಪ್ರಧಾನಿಯಾದದ್ದ ಕಾರಣ ಪ್ರಾಂತ್ಯಗಳ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ಬಳಿಯೂ ಇದೇ ವಿಷಯವನ್ನು ಹೇಳಿದರು. ಸ್ವಲ್ಪ ಮಟ್ಟಿಗೆ ಅವರು ಗೆದ್ದರು.

ಕಾಂಗ್ರೆಸ್ಸ್ ಸಂಸದೀಯ ಕಾರ್ಯದರ್ಶಿ ಶ್ರೀ ಚಂದ್ರಶೇಖರರೂ ಚಟುವಟಿಕೆಯಿಂದ ಕಾರ್ಯರಂಗದಲ್ಲಿಳಿದರು. ಅವರ ಪ್ರಯತ್ನಕ್ಕೆ ಫಲ ಸಿಗದೆ ಹೋಗಲಿಲ್ಲ. ಎದುರು ಪಕ್ಷಗಳ ಮೈತ್ರಿ ಬಿರುಕುಬಿಡುವಂತೆ ಅವರು ಪ್ರಯತ್ನಿಸಿದರು.

ಶ್ರೀ ಸುಬ್ಬರಾಯರು ಚುನಾವಣಾ ಕಣಕ್ಕಿಳಿಯಲು ಮನಸ್ಸು ಮಾಡಿದ್ದು ಅವರ ಧೈರ್ಯವನ್ನು ಪ್ರಕಟಿಸುತ್ತದೆ. ತಾನೋ ಅತ್ಯುಚ್ಚ ಸ್ಥಾನದಲ್ಲಿರುವ ವ್ಯಕ್ತಿ ಕೆಲವೇ ತಿಂಗಳುಗಳಲ್ಲಿ ಹುದ್ದೆಯಿಂದ ಇಳಿಯಬೇಕಾಗಿದೆಯಾದರೂ, ಅದಕ್ಕಾಗಿ ಈಗಲೇ ಅದು ಆಳುವ ಪಕ್ಷದವರ ಕೋಪಕ್ಕೊಳಗಾಗಿ ಕಳೆಗಳೆಯುವದು ಕಷ್ಟದ ಕೆಲಸ. ಗೆಲ್ಲುವ ಭರವಸೆಯಾದರೂ ಏನು? ಅಷ್ಟು ಎದುರು ಪಕ್ಷಗಳವರು ಒಂದಾದರೂ, ಕಾಂಗ್ರೆಸ್ಸಿಗರ ಸಂಖ್ಯೆಯೇ ಅಧಿಕವಿರುವಾಗ ಇವರು ಗೆಲ್ಲುವದಾದರೂ ಹೇಗೆ? ಶ್ರೀ ಸುಬ್ಬರಾವ್ ಇದನ್ನೆಲ್ಲಾ ಯೋಚಿಸಿಕೊಂಡೇ ಅತ್ಯುಚ್ಚ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಂದರು.

ಆಗ ನ್ಯಾಯಾಲಯದ ರಂಗದಲ್ಲಿರುವ ಕೆಲ ನ್ಯಾಯವಾದಿಗಳೂ, ನ್ಯಾಯಾಧೀಶರೂ ಶ್ರೀ ಸುಬ್ಬರಾವ್ ಅವರ ವಿರುದ್ಧವಾಗಿ ಪ್ರಚಾರ ನಡೆಸಿದರು. ಅತ್ಯುಚ್ಚ ನ್ಯಾಯಾಲಯದ ಸ್ಥಾನಕ್ಕೆ ಇದು ಅಪಮಾನವೆಂದು ಅಪಪ್ರಚಾರ ಮಾಡಿದರು. ರಾಷ್ಟ್ರಾಧ್ಯಕ್ಷ ಪದವಿ ಸರ್ವೋಚ್ಚ ನ್ಯಾಯಾಧೀಶರ ಸ್ಥಾನಕ್ಕಿಂತ ಕಡಿಮೆ ಏನು? ಶ್ರೀ ಸುಬ್ಬಾರಾಯರು ಇವೆಲ್ಲಕ್ಕು ತಕ್ಕ ಬದಲಿತ್ತಿರುವರು.

ಶ್ರೀ ಸುಬ್ಬಾರಾಯರ ಪರವಾಗಿ ಪ್ರಚಾರ ಮಾಡಿದವರಲ್ಲಿ ಡಾ|| ಕರ್ಣಿ ಸಿಂಘರೂ ಒಬ್ಬರು. ಅವರು ಲೋಕಸಭೆಯಲ್ಲಿ ಸ್ವತಂತ್ರ ಸದಸ್ಯರಿದ್ದಾರೆ. ರಾಷ್ಟ್ರಾಧ್ಯಕ್ಷರ ಚುನಾವಣೆಯು ಎದುರು ಪಕ್ಷಗಳ ಒಗ್ಗಟ್ಟನ್ನು ವ್ಯಕ್ತಪಡಿಸಲಿರುವ ಸುಯೋಗವೆಂದವರು ಹೇಳಿದರು. ಆದರೆ ನಡೆದದ್ದೇನು?

ಕಾಂಗ್ರೆಸ್ಸಿಗರ ಪ್ರಚಾರದ ಕಾವೇರಿದಂತೆ ಇತ್ತ ಎದುರು ಪಕ್ಷಗಳ ಬೆಣ್ಣೆ ಕರಗುತ್ತ ಬಂತು. ಶ್ರೀ ಸುಬ್ಬರಾಯರ ಹೆಸರನ್ನು ಸೂಚಿಸಿದ ದ್ರಾವಿಡ ಮುನ್ನೇತ್ರ ಕಳಗವೇ ಮೀನಮೇಷ ಎಣಿಸಲಾರಂಭಿಸಿತು. ತಿರುಕಾಮರಾಜರು ಮದ್ರಾಸಿಗೆ ಬಂದು ಅಲ್ಲಿಯ ಮುಖ್ಯಮಂತ್ರಿ ತಿರು ಅಣ್ಣಾದೊರೈಯವರನ್ನು ಕಂಡದ್ದೇ ತಡ, ತಿರು ಅಣ್ಣಾದೊರೈಯವರು ಎದುರು ಪಕ್ಷಗಳು ಸೂಚಿಸಿರುವ ಶ್ರೀ ಸುಬ್ಬರಾಯರಿಗೆ ತಿರುನಾಮ ಹಾಕುವ ರೀತಿಯಲ್ಲಿ ಮಾತಾಡಲಾರಂಭಿಸಿದರು. ಅಣ್ಣಾ ಅಷ್ಟಕ್ಕೆ ಹೋದದ್ದೇ ತಡ ಅಸೆಂಬ್ಲಿ ತಂಬಿ (ತಮ್ಮ)ಗಳು ತಾವು ಝಾಕೀರ ಹುಸೇನ ಸಾಹೇಬರಿಗೇನೇ ಮತವೀಯುವದಾಗಿ ಭಾಷಣ ಬಿಗಿಯಲಾರಂಭಿಸಿದರು. ಆದರೆ ಕೊನೆಯಲ್ಲಿ ಡಾ|| ಮು. ಕ. ವು ಶ್ರೀ ಸುಬ್ಬರಾಯರಿಗೇನೇ ತಮ್ಮ ಮತಗಳನ್ನು ಹಾಕಿದೆಯಾದರೂ ಇದರಿಂದಾಗಿ ಡೋಲಾಯಮಾನ ಸ್ಥಿತಿಯಲ್ಲಿದ್ದ ಪಕ್ಷೇತರರು ಅಲ್ಲದೆ ಮುಖ್ಯವಾಗಿ ಕಾಂಗ್ರೆಸ್ಸಿಗರೇ ಶ್ರೀ ಸುಬ್ಬರಾಯರಿಗೆ ಸೋಲು ಸದಾ ಕಟ್ಟಿಟ್ಟಗಂಟು ಹಾಗೂ ಶ್ರೀ ಝಾಕೀರ ಹುಸೇನರಿಗೆ ಜಯವು ಖಂಡಿತವೆಂದು ತೀರ್ಮಾನಿಸಿಕೊಳ್ಳುವಂತಾಯಿತು. ಡಾ|| ಮು. ಕ. ದ ಅಬಿಮಾನಿಗಳು ಇದು ಅತ್ಯುತ್ತಮ ರೀತಿಯ ರಾಜಕೀಯವೆಂದು ಹೆಮ್ಮೆಯಿಂದ ಹಾಡಿಕೊಳ್ಳುತ್ತಿರುವರಾದರೂ ಅದರಿಂದ ದ ಅನಾಯುತ್ತಕ್ಕೆ ಅವರೇ ಕಾರಣವೆಂಬುದನ್ನು ಅಲ್ಲಗಳೆಯಲು ಅವರು ಅಸಮರ್ಥರೇ ಆಹುದು.

ಎದುರು ಪಕ್ಷಗಳಲ್ಲಿ ಸ್ವತಂತ್ರ ಪಾರ್ಟಿಯು ಸ್ಥಾನ ಬಲ ಹಿಂದೆ, ದಿರ ಅಚಾರ್ಯರು ಎದುರು ಪಕ್ಷಗಳ ಅಭ್ಯರ್ಥಿಗನೇ ಮತವೀಯಬೇಕೆಂದು ಅದಿಷ್ಟವರೂ ಶ್ರೀ ಝಾಕೀರ ಹುಸೇನರಿಗೆ ತಮ್ಮ ಬೆಂಬಲವಿದೆಯೆಂದು ಪ್ರಕಟಿಸಿದುದರಿಂದ ಪಾರ್ಟಿಯೊಳಗೇನೇ ಪರಸ್ಪರ ಅಪನಂಬಿಕೆ ತಲೆಯೆತ್ತಿ ಬಿಟ್ಟಿದ್ದಲ್ಲದೆ ಮೇಲೆ ತಿಳಿಸಿದ

(ಒಂಬತ್ತನೇ ಪುಟ ನೋಡಿರಿ)

ವಿಚಾರ ವೀಚಿ

ಪ್ರಾಚೀನ ಕಲೆ - ಮಲ್ಲವಿದ್ಯೆ

ಬರೆದವರು

ಶ್ರೀ ಸ. ನಾರಾಯಣ.

ಬಲಶಾಲಿಯಾದ ವ್ಯಕ್ತಿಯನ್ನು ಕಂಡೊಡನೆಯೇ 'ಜಟ್ಟಿ' (ಪೈಲ್ವಾನ್) ಎಂದು ಹೇಳುತ್ತೇವೆ. ಹಾಗೆಯೇ ದೃಢಕಾಯನಲ್ಲದ 'ನರಪೇತಲ'ನನ್ನು ಕಂಡಾಗ 'ಉಸ್ತಾದ್' ಎಂದು ಹಾಸ್ಯ ಮಾಡುವ ಸಂಭವವೂ ಉಂಟು. ಉತ್ತಮ ವ್ಯಕ್ತಿತ್ವ ಮತ್ತು ದೈಹಿಕ ಬಲವನ್ನು ಹೊಂದಿರುವ ಮನುಷ್ಯನನ್ನು ಕಂಡೊಡನೆಯೇ 'ಗಟ್ಟಿಮುಟ್ಟಾದ ಆಸಾಮಿ' ಎನ್ನುವ ಭಾವನೆ ನಮಗುಂಟಾಗುತ್ತದೆ.

ಮಲ್ಲವಿದ್ಯೆ ಭಾರತದ ಪ್ರಾಚೀನ ವಿದ್ಯೆಗಳಲ್ಲಿ ಒಂದು. ಇಂದಿಗೂ ಮಲ್ಲವಿದ್ಯೆಗೆ ಪ್ರಾಶಸ್ತ್ಯವಿದೆ. ಸಜ್ಜನರನ್ನು ದುಷ್ಟರಿಂದ ರಕ್ಷಿಸಲು ಬಲಬೇಕು. ಈ ಕಾರ್ಯ ನಿರ್ವಹಿಸಲು ಬಲಶಾಲಿಗಳೇ ಆಗಬೇಕು. ಶಕ್ತಿವಂತರಿಂದ ಮಾತ್ರ ರಕ್ಷಣಾ ಕಾರ್ಯ ಸಾಧ್ಯ. ಬರಿಯ ಜನವನ್ನು ಮಾತ್ರವೇ ಅಲ್ಲ ಸಮಾಜ, ನಗರ, ರಾಜ್ಯ, ರಾಷ್ಟ್ರಗಳನ್ನು ಸಮಸ್ತ ಸಂಪತನ್ನು ಕಾಪಾಡಲು ಶತ್ರುಗಳನ್ನು ಮರ್ದಿಸಲು ಬಲಶಾಲಿಗಳ ತಂಡವೇ ಬೇಕು. ಅಂತಹ ಶಕ್ತಿವಂತ ಯುವಕರನ್ನೇ ಸೈನ್ಯಕ್ಕೆ ಆರಿಸಿಕೊಳ್ಳುತ್ತಾರೆ. ಸತತ ಸಾಧನೆ ಮತ್ತು ಆರೋಗ್ಯ ರಕ್ಷಣೆ—ಉತ್ತಮ ಆಹಾರ ಸೇವನೆಗಳಿಂದ ದೈಹಿಕ ಶಕ್ತಿ ವೃದ್ಧಿಯಾಗುತ್ತದೆ. ಬಲವಿದೆಯೆಂದು ದುರ್ಬಲರ ಮೇಲೆ, ನಿಸ್ಸಹಾಯಕರ ಮೇಲೆ ಕೈ ಮಾಡಬಾರದು. ಹಾಗೆ ಮಾಡಿದರೆ ಅದು ಹಿಂಸೆ ಎನಿಸಿಕೊಳ್ಳುತ್ತದೆ. ಹಿಂಸೆಯನ್ನು, ಪರಪೀಡನೆಯನ್ನು ಎಲ್ಲ ಧರ್ಮಗಳು, ಶಾಸ್ತ್ರಗಳು ಬಹಿಷ್ಕರಿಸುತ್ತವೆ. ನಿಸ್ಸಹಾಯಕರನ್ನು ಅಶಕ್ತರನ್ನು ರಕ್ಷಿಸಬೇಕಾದುದು ಬಲಶಾಲಿಗಳ ಕರ್ತವ್ಯ. ಅದು ಧರ್ಮ.

ಪ್ರಾಚೀನ ಕಾಲದಲ್ಲಿ ಬಲಶಾಲಿಗಳಾದ ಜಟ್ಟಿಗಳಿಗೆ ಸಲ್ಲುತ್ತಿದ್ದ ಸನ್ಮಾನ ಇಂದು ಕಡಿಮೆಯಾಗಿದೆ. ಈಗ ಪೈಲ್ವಾನರಿಗೆ ಗೌರವ ಇಲ್ಲವೆಂದಲ್ಲ. ಪ್ರತಿಸ್ಪರ್ಧಿ ಮಲ್ಲರ ಕುಸ್ತಿ ಪ್ರಾಚೀನ ಭಾರತದಲ್ಲಿ ಜನಮನರಂಜನೆಯ ಪ್ರಮುಖ ಸಾಧನಗಳಲ್ಲಿ ಒಂದಾಗಿತ್ತು.

ಮಹಾಭಾರತ ಕಥೆಯ ವಿರಾಟ ಪರ್ವದಲ್ಲಿ (ಎರಡನೆಯ ಅಧ್ಯಾಯ) ಅಸಾಮಾನ್ಯ ಬಲಶಾಲಿ ಭೀಮಸೇನ ಜೀಮೂತನೆಂಬ ಜಟ್ಟಿಯೊಂದಿಗೆ ಕುಸ್ತಿ ಮಾಡಿದ. ಭೀಮ ಜೀಮೂತರ ಕಾಳಗದ ವಿವರಣೆ ಹೃದಯಂಗಮವಾಗಿದೆ. ಭೀಮಸೇನ ದೇಹಬಲದಲ್ಲಿ ಮಾತ್ರವಲ್ಲದೆ ಶಕ್ತಿಯಿಂದಲೂ ಅಸಾಧಾರಣ ವ್ಯಕ್ತಿ. ಪ್ರೇಕ್ಷಕ ಸಮೂಹದಿಂದ ಮಲ್ಲ—ರಂಗ ಶಾಲೆ (ಕುಸ್ತಿಯ ಅಖಾಡ—ಕಣ) ಕಿಕ್ಕಿರಿದು ತುಂಬಿತ್ತು. ಭೀಮಸೇನ ಶಾರ್ದೂಲದಂತೆ ಹೆಜ್ಜೆ ಇಡುತ್ತಾ ಮಲ್ಲರಂಗ ಪ್ರವೇಶಿಸಿದ. ಅವನಿಗೆ ತನ್ನ ಗುರುತು ಎಲ್ಲಿ ಸಿಗುವುದೋ ಎಂಬ ಅಂಜಿಕೆಯೂ ಇರುತ್ತದೆ. ಸಂಪ್ರದಾಯದಂತೆ ಭೀಮಸೇನ ಮತ್ಸ್ಯರಾಜ ವಿರಾಟರಾಯನಿಗೆ ನಮಸ್ಕರಿಸಿ ಕಾಛಾ ಕಟ್ಟತೊಡಗುತ್ತಾನೆ. ಅವನು ಕಾಛಾ ಕಟ್ಟಲಾರಂಭಿಸಿದಾಗ ಜನ ಸಮೂಹ ಹರ್ಷ ಧ್ವನಿಗೈದಿತು. ಇದು ಪ್ರಾಚೀನ ಭಾರತದಲ್ಲಿ ಮಲ್ಲರಿಗೆ ದೊರೆಯುತ್ತಿದ್ದ ಮರ್ಯಾದೆಯ ಒಂದು ಸಾಮಾನ್ಯ ಉದಾಹರಣೆ.

ಮಲ್ಲರಂಗ ಪ್ರವೇಶಿಸುವ ಮುಂಚೆ ಯೋಗ್ಯ ಗುರುವಿನಲ್ಲಿ ಜಟ್ಟಿಗಳು ಮಲ್ಲವಿದ್ಯೆಯನ್ನು ಕಲಿತು ಪಾರಂಗತರಾಗಿರುತ್ತಿದ್ದರು. ಗರುಡಿಯಲ್ಲಿ ಅವರು ಅಭ್ಯಾಸ ಮಾಡಿ ಜಾಣ್ಮೆ ಶಕ್ತಿಗಳನ್ನು ಸಂಪಾದಿಸಿಕೊಂಡಿರುತ್ತಿದ್ದರು.

ರಂಗ ಪ್ರವೇಶಿಸಿದ ಮಲ್ಲವಿದ್ಯಾ ಪ್ರವೀಣ ವೀರ ಯೋಧರು ಹೂಂಕಾರ ಮಾಡಿ ಮೊದಲು ಬಾಹು ಯುದ್ಧದಲ್ಲಿ ತೊಡಗುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಎತ್ತಿ ಹಾಕುತ್ತಿದ್ದರು. ಅನಂತರ ಎದುರಾಳಿಗಳು ತಾವು ಕಲಿತ ಜಾಣ್ಮೆಯನ್ನು ಬಳಸಿ ಕೌಶಲ್ಯದಿಂದ ಒಬ್ಬರನ್ನೊಬ್ಬರು ಎತ್ತಿ ಹಾಕಲು ಪ್ರಯತ್ನಿಸುತ್ತಿದ್ದರು. ರಂಗದಲ್ಲಿ ಪ್ರವೇಶಿಸುವ ಜಟ್ಟಿಗಳ ಕೈಗಳು ಜಡ್ಡಾಗಿರುತ್ತಿದ್ದವು.

ಜಟ್ಟಿಗಳ ಕುಸ್ತಿ ಪ್ರಸಂಗದಲ್ಲಿ ಬಳಸುತ್ತಿದ್ದ ನಾನಾ ಬಗೆಯ ಮಲ್ಲವಿದ್ಯಾ ಪಾರಿಭಾಷಿಕ ಪದಗಳೂ ಇವೆ. ಅರ್ಜುನ ಮಿಶ್ರ ತಾನು ಬರೆದ 'ಭಾರತ ದೀಪಕ' ಗ್ರಂಥದಲ್ಲಿ ಅನ್ಯ ಶಾಸ್ತ್ರಗಳಿಂದ ಸಂಗ್ರಹಿಸಿದ ಶಬ್ದಗಳನ್ನು ಉದ್ಧರಿಸಿ ವ್ಯಾಖ್ಯಾನ ಮಾಡಿದ್ದಾನೆ.

ಹೊಡೆಯುವುದಕ್ಕೆ 'ಕೃತದಾವ' ಮತ್ತು ಅದನ್ನು ತಪ್ಪಿಸುವುದಕ್ಕೆ — (ತಡೆಯುವುದಕ್ಕೆ) 'ಪ್ರತಿಕೃತ' ಎಂದು ಹೆಸರು. ಪರಸ್ಪರ ಸಂಘಾತವನ್ನು 'ಸನ್ನಿಪಾತ', ಮುಷ್ಟಿ ಹೊಡೆಯುವುದಕ್ಕೆ 'ಅವಧೂತ', ಬಿದ್ದು ಉಜ್ಜುವುದಕ್ಕೆ 'ಪ್ರಮಥ' ಮೇಲ್ಭಾಗದಲ್ಲಿ ಅಂದರೆ ಅಂತರಿಕ್ಷದಲ್ಲಿ ಎದುರಾಳಿಯನ್ನು ತಿರುವುದಕ್ಕೆ 'ಉನ್ಮಥನ' ಮತ್ತು ಸ್ಥಾನಚ್ಯುತ ಮಾಡುವುದಕ್ಕೆ 'ಪ್ರಾಚ್ಯಾವನ' ಎಂದು ಹೆಸರು.

ಕಳಕ್ಕ ಮುಖಿ ಮಾಡಿ ಕೊಂಡಿರುವ ಎದುರಾಳಿಯನ್ನು ತನ್ನ ಹೆಗಲಿನ ಮೇಲಿನಿಂದ ತಿರುಗಿಸಿ ಎತ್ತಿ ಹಾಕುವುದರಿಂದ ಉಂಟಾಗುವ ಶಬ್ದವನ್ನು 'ಬಂಧೋದ್ಧತ ನಿಸ್ವನ' ಎಂದು ಕರೆಯುತ್ತಿದ್ದರು. ಪಸ್ಪರಿಸಿದ ಭುಜಗಳಿಂದ ತರ್ಜನಿ ಮತ್ತು ಅಂಗುಷ್ಠದ ಮಧ್ಯ ಭಾಗದಿಂದ ಪ್ರಹಾರ ಮಾಡುವುದಕ್ಕೆ "ತಲಾಕ್ಷ್ಯ", ಅರ್ಧ ಚಂದ್ರ ಮುಷ್ಟಿಯನ್ನೂ "ವಜ್ರ" ಎನ್ನುತ್ತಿದ್ದರು. ಮುಷ್ಟಿಯನ್ನು ವಜ್ರ ಪ್ರಹಾರ ಮಾಡುವುದಕ್ಕೆ 'ಪ್ರಸೃತಿ' ಪಾದ (ಕಾಲು) ದಿಂದ ಹೊಡೆಯುವುದಕ್ಕೆ 'ಪಾದೋದ್ಧತಿ' ತೊಡೆಗಳಿಂದ ಒಸಗುವುದಕ್ಕೆ "ಶಿಲ ಘಟ್ಟನ" ಎದುರಾಳಿಯನ್ನು ರಭಸದಿಂದ ತನ್ನೆಡೆ ಎಳೆದು ಕೊಳ್ಳುವುದಕ್ಕೆ 'ಅಭ್ಯಾಕರ್ಷ' ಎಳೆದು ಹಿಂದಕ್ಕೆ ನೂಕುವುದನ್ನು "ವಿಕರ್ಷಣ" ಎಂದು ಕರೆಯುತ್ತಿದ್ದರು. ಮಲ್ಲವಿದ್ಯೆಗೆ ಸಂಬಂಧಿಸಿದ ನಾನಾ ಬಗೆಯ ಸಂಗತಿಗಳನ್ನು ಚಿತ್ರಗಳ ಮೂಲಕ ತಿಳಿಸಲು ಮತ್ತು ಕಲಿಯಲು ಪ್ರಾಚೀನ ಕಾಲದಲ್ಲಿ ಭಿತ್ತಿಯ ಮೇಲೆ ಚಿತ್ರಿಸಿ ನಾನಾ ವಿಧವಾದ ಪಟ್ಟುಗಳನ್ನೂ ಗರಡಿಗಳಲ್ಲಿ ಗುರುವಿನ ಅಭ್ಯಾಸ ಮಾಡುತ್ತಿದ್ದರು.

ಅಂಗನ ಮಲ್ಲ ಶಾಲೆಯಲ್ಲಿ ಭಂಗವಾಗದಲ್ಲಿ ವರ್ಣಿಸಲ್ಪಟ್ಟಿದೆ. ಮಲ್ಲರು (ಜಟ್ಟಿಗಳು) ಮಲ್ಲರಂಗ (ಕುಸ್ತಿಯ ಕಣ—ಅಖಾಡ) ಶಾಲೆಯನ್ನು ಸಜ್ಜುಗೊಳಿಸಿದ್ದರು. ತೂರ್ಯ ಭೇರಿ ಮುಂತಾದ ವಾದ್ಯಗಳು ಬಾರಿಸಲ್ಪಟ್ಟಿದ್ದವು. ನಾಗರೀಕರು, ಕುಳಿತುಕೊಳ್ಳುವ ಆಸನಗಳನ್ನು ಹೂಮಾಲೆ, ವರ್ಣರಂಜಿತ ಪತಾಕೆಗಳಿಂದ ಸಿಂಗರಿಸಿದ್ದರು. ನಗರ ವಾಸಿಗಳು, ಹಳ್ಳಿಗರು, ರಾಜ ಕರ್ಮಚಾರಿಗಳು, ಬ್ರಾಹ್ಮಣ ಕ್ಷತ್ರಿಯರಾದಿಯಾಗಿ ಸಮಸ್ತ ನಾಗರಿಕರು ವ್ಯವಸ್ಥಿತ ಆಸನಗಳಲ್ಲಿ ಕುಳಿತುಕೊಂಡಿದ್ದರು. ಸಮಸ್ತ ಪ್ರೇಕ್ಷಕ ವರ್ಗ ಆಸೀನರಾದ ಮೇಲೆ ವಾದ್ಯ ಮೊಳಗಲು ತೂರ್ಯ (ತುತ್ತೂರಿ) ಊದುತ್ತಾ ಸುಸಜ್ಜಿತ ಮಲ್ಲರ (ಜಟ್ಟಿಗಳ) ತಮ್ಮ ತಮ್ಮ ಉಸ್ತಾದ (ಗುರು) ರೊಡನೆ ರಂಗ ಪ್ರವೇಶಿಸಿದರು. ರಾಜನೆದುರು ನೇರಿಗೆ ಭಗೆ ಆಗಮಿಸಿದ ನಂದಗೋಪರು ಅವನಿಗೆ ಕಾಣಿಕೆಯನ್ನು ಅರ್ಪಿಸಿ ಸ್ಥಾನಗಳಲ್ಲಿ ಕುಳಿತುಕೊಂಡರು.

ಭಾಗವತ (೧೦-೪೨-೪೪) ದಲ್ಲಿ ಮಲ್ಲವಿದ್ಯೆಗೆ ಸಂಬಂಧಿಸಿದ ಅನೇಕ ಪಟ್ಟುಗಳ ಉಲ್ಲೇಖವಿದೆ ಅಷ್ಟೇ ಅಲ್ಲದೆ ಅನೇಕ ಪಾರಿಭಾಷಿಕ ಶಬ್ದಗಳ ಪ್ರಯೋಗವೂ ಇದೆ. ಪರಿಭ್ರಮಣ, ವಿಕ್ಷೇಪ, ಪರಿರಂಭ, ಅವಘಾತನ, ಉತ್ಸರ್ಪಣ, ಅನ್ಯೋನ್ಯ, ಪ್ರತಿರೋಧ, ಉತ್ಥಾಪನ, ಉನ್ನಯನ, ಸ್ಥಾಪನ, ಚಾಲನ ಮೊದಲಾದುವು ಮುಖ್ಯವಾಗಿ ಬಳಸಲಾಗುವ ಪಾರಿಭಾಷಿಕ ಶಬ್ದಗಳು.

ಮಲ್ಲವಿದ್ಯೆಗೆ ಸಂಬಂಧಿಸಿದ ಪೂರ್ಣ ವಿವರಗಳನ್ನು ಒದಗಿಸಬಲ್ಲ ಯಾವ ಗ್ರಂಥವೂ ನಮಗೆ ಉಪಲಬ್ಧವಿಲ್ಲ ನಮ್ಮ ದೌರ್ಭಾಗ್ಯ. ಮಲ್ಲವಿದ್ಯೆಗೆ ಸಂಬಂಧಿಸಿದಂತೆ ಪುರಾಣಗಳಲ್ಲಿ ಮತ್ತು ಟೀಕೆ(ವ್ಯಾಖ್ಯಾನ) ಗಳಲ್ಲಿ ಅಲ್ಪ ಸ್ವಲ್ಪ ಸಾಹಿತ್ಯ ಸಿಕ್ಕಿರುವುದು ಸಂತಸದ ಸಂಗತಿ. ಎಲ್ಲ ವ್ಯಕ್ತಿಗಳೂ ಮಲ್ಲವಿದ್ಯೆಯಲ್ಲಿ ತಜ್ಞರಲ್ಲ. ದೇಹಬಲ ಇದ್ದವರಲ್ಲಿ ಮಲ್ಲವಿದ್ಯಾ ಸುಸಂಸ್ಕಾರ... ಮಲ್ಲವಿದ್ಯೆ ಕಲಿಯುವವರನ್ನು ಉತ್ತೇಜಿಸಲಿಕ್ಕೆ, ಜಟ್ಟಿಗಳಂತೆ (ಮಲ್ಲರಂತೆ) ದೈಹಿಕ ಶಕ್ತಿ ಸಂಪಾದಿಸಬೇಕೆನ್ನುವ ಉತ್ಸಾಹಿಗಳಿಗೆ ಕೊರತೆ ಇಲ್ಲ. ಉತ್ಸಾಹಶಾಲಿ ವಿದ್ಯಾರ್ಥಿಗಳು, ಯುವಕರು, ಮಲ್ಲವಿದ್ಯೆಯ ಬಗೆಗೆ, ದೈಹಿಕ ಬಲ ಸಂಪಾದನೆ (ಶಕ್ತಿ ಸಂಪಾದನೆಯ) ಕಡೆಗೆ ಗಮನ ಹರಿಸುವುದು ಸೂಕ್ತ ಎಂದು ಅನುಚಿತವೆನಿಸದೇನಲ್ಲ.

APPLICATIONS are invited from Sec. Grade Trained Teachers to fill up leave Vacancies during the year 1967—68. Candidates must be prepared to report for duty forthwith

P. K. Venkata Rao,
Manager, Hindu Hr. Ele. School,
Kemmannu, Udipi, S. K.

28—5—1967, Kemmannu.

ಹೊಸಕರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿ ಪುಸ್ತಕ ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಂದಾಪುರ ಮುನ್ಸಿಫ್
ಕೋರ್ಟಿನಲ್ಲಿ

S. C. 15/1967.

ವಾದಿ —ಶೀನಾ ದಾಮು ಹತ್ವಾರ.
ಪ್ರತಿವಾದಿರು-ಸುಬ್ಬಣ್ಣ ಹತ್ವಾರ ಕೂಡಾ,

1ನೇ ಪ್ರತಿವಾದಿ, ಸುಬ್ಬಣ್ಣ ಹತ್ವಾರ, ನಾಗಪ್ಪ ... ನ ಮಗ, ದೇಜಾಡಿ ಗ್ರಾಮ,

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ನೀವು ಕೂಡಾ ಪ್ರತಿವಾದಿಯಿಂದ ವಾದಿಗೆ ಬರತಕ್ಕ ಕ್ರೋಧಿ, ವಿಶ್ವಾವಸು ಸಂವತ್ಸರಗಳ ಮೂಲಗೇಣಿ ಬಾಕಿ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯು ತಾ 9—6—1967ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ

(ಕೋರ್ಟು ಹುಕ್ಕುಂ ಪ್ರಕಾರ.)

Y. Tejappa Shetty
Advocate for plaintiff.

Coondapoor, 30—5—1967.

ರಾಷ್ಟ್ರಪತಿಗಳ ಚುನಾವಣೆ

(ಏಳನೇ ಪುಟದಿಂದ)

ತೆ ಡೋಲಾಯಮಾನ ಸ್ಥಿತಿಯಲ್ಲಿದ್ದವರನ್ನು ಕಾಂಗ್ರೆಸ್ಸಿನ ಶಿಬಿರಕ್ಕೆ ಕರೆತಂದಂತಾಯಿತು.

ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಹುಟ್ಟು ಗುಣವನ್ನು ಬಿಡಲೇ ಇಲ್ಲ. ರಾಜ್ಯಸಭೆಯಲ್ಲಿರುವ ಅವರ ಸದಸ್ಯ ಕಾಮ್ರೇಡ್ ನಿರೇನ್ ಘೋಷ್‌ರವರು ಶ್ರೀ ಸುಬ್ಬರಾಯರಿಗೆ ಉಪ— ರಾಷ್ಟ್ರಾಧ್ಯಕ್ಷ ಸ್ಥಾನವನ್ನಿತ್ತಲ್ಲಿ ಶ್ರೀ ಝಕೀರ ಹುಸೇನರಿಗೆ ರಾಷ್ಟ್ರಾಧ್ಯಕ್ಷರ ಪದವಿಯನ್ನು ಬಿಟ್ಟು ಕೊಡಲು ತಾವು ಸಿದ್ಧವೆಂದು ಹೇಳಿ ಜೊಡನೆ ಕಾಂಗ್ರೆಸ್ಸಿಗರ ಹಾಸ್ಯದ ವಸ್ತುವಾಗಿ ಬಿಟ್ಟರು. ಈ ರೀತಿ ಆರಂಭದಿಂದಲೇ ಅವರ ಬಣ್ಣ ಬಯಲಾಗುತ್ತ ಬರುತ್ತಿದ್ದರೂ ಕಾಮ್ರೇಡ್ ಭೂಪೇಶ್ ಗುಪ್ತರು ಎಡರು ಪಕ್ಷಗಳವರೊಂದಿಗೆನೇ ಇದ್ದರು. ಕೊನೆಯಲ್ಲಿ ಅವರು ಮಾಡಿದ್ದು ಅದೇ. ಚೈನಾ—ಪಾಕಿಸ್ತಾನಗಳೊಡನೆ ಸ್ನೇಹಾಚಾರ ಇರುವವರಗೆ ಇಲ್ಲಿಯ ಕಮ್ಯೂನಿಸ್ಟರು ಪಾಕಿಸ್ತಾನಿಗಳು ಘರಾಕೆನ್ನುವ ಅಭ್ಯರ್ಥಿಗೆ ಮತವೀಯದೆ ಇರುತ್ತಾರೆಂದು ಯಾರಾದರೂ ಭಾವಿಸಿಕೊಂಡಿದಲ್ಲಿ ಅಂತಹವರನ್ನು ಕರೆಯಲು ಸರಿಯಾದ ಹೆಸರೇ ಇಲ್ಲ.

ಪ್ರ. ಸ. ಪಾ ಹಾಗೂ ಸಂ. ಸ. ಪಾ.ದಗಳು ಶ್ರೀ ಸುಬ್ಬರಾಯರನ್ನು ಬೆಂಬಲಿಸಿದ್ದಾದರೂ ಭಾರತೀಯ ಜನಸಂಘದ ಪ್ರಚಾರ ವೈಖರಿಯನ್ನು ಖಂಡಿಸಲಾರಂಭಿಸಿದುದರಿಂದ ಡೋಲಾಯಮಾನ ಸ್ಥಿತಿಯಲ್ಲಿದ್ದವರು ಇದೆಲ್ಲಾ ತಮಗೇತಕ್ಕೆಂದು ಕಾಂಗ್ರೆಸ್ಸಿನ ಕೋಟೆಯೊಳಗೆನೇ ಹೋದರು.

ನಾಮ ಪತ್ರ ಸಲ್ಲಿಸಲು ಕೊನೆಯ ದಿನ ಎಪ್ರಿಲ್ ಹದಿಮೂರು. ಅಂದು ಶ್ರೀ ಸುಬ್ಬರಾಯರ ಹೆಸರನ್ನು ಸೂಚಿಸಿ ನಾಮ ಪತ್ರಕ್ಕೆ ಸಹಿಹಾಕಿದವರು ಸರ್ವ ಶ್ರೀ ಮಿನಾನಿ, ಆರ್. ಯಸ್. ಸಿಂಘದೇವ, ಚರಣ ಸಿಂಘ, ಅಟಲ ಬಿಹಾರಿ ವಾಜಪೇಯಿ, ಜಿ. ಯಮ್. ಯಸ್. ನಂಬೂದರಿಪಾದ, ಭೂಪೇಶ ಗುಪ್ತ, ಸುರೇಂದ್ರನಾಥ ದ್ವಿವೇದಿ, ನಾಥ ಪೈ, ಗುರ್ನಾಮಸಿಂಘ, ರಾವ್ ವೀರೇಂದ್ರ ಸಿಂಘ, ಮಧುಲಿಮಾಯಿ ಮತ್ತು ಬಲರಾಜ್ ಮಧೋಕ್, ಇಲ್ಲಿ ದ್ರಾ. ಮು. ಕ. ದವರ ಹೆಸರಿಲ್ಲದಿರುವುದು ಗಮನಾರ್ಹವಿದೆ. ಡಾ। ಹುಸೇನರ ನಾಮಪತ್ರಕ್ಕೆ ಸಹಿಹಾಕಿದವರು ಸರ್ವ ಶ್ರೀ ಶಿವನಾರಾಯಣ, ದರ್ಬಾರ ಸಿಂಘ, ಜಗನ್ನಾಥ ಪ್ರಸಾದ ಪಹಾಡಿಯಾ, ಪಿ. ಕೆ. ಆರ್. ವಿ. ರಾವ್, ಜೆ.ಕೆ. ಪಾ ಮತ್ತು ಚೌಧರಿ ಮಹಮ್ಮದ್.ಅದುವರೆಗೆ ಇವರಿಬ್ಬರ ನಾಮಪತ್ರಗಳು ದಾಖಲಾದವಷ್ಟು ಮಾತ್ರವಲ್ಲದೆ ಇನ್ನೂ ಹದಿನೆಂಟು ಜನರ ನಾಮಪತ್ರಗಳು ದಾಖಲಾಗಿದ್ದುವು. ಅವರ ಹೆಸರುಗಳು:— (೧) ಸುಬಿರಾಮ್, (೨) ಕೃಷ್ಣ ಕುಮಾರ ಚಟರ್ಜೀ, (೩) ಮಾನಸಿಂಘ (೪) ಯಂ. ಸಿ. ದಾವರ್, (೫) ಹರಿರಾಮ್, (೬) ಜಯದೇವ್ ಗುಪ್ತ (೭) ಕುಮಾರ ಕಮಲ ಸಿಂಘ (೮)ಸ್ವಾಮಿ ಸತ್ಯಭಕ್ತ, (೯) ಮೋತಿಲಾಲ ಬೇಲಾ ಬ್ಯಾ ಪಟೇಲ್, (೧೦) ಬ್ರಹ್ಮದೇವ್, (೧೧) ಯಮುನಾ ಪ್ರಸಾದ ತ್ರಿಶೂಲಿಯಾ, (೧೨) ಯಸ್. ಯಮ್. ಬಂಬೂರ್‌ಕರ್, (೧೩) ಯು. ಪಿ. ಚುಗಾನಿ, (೧೪) ಸದಾನಂದ, (೧೫) ರಾಮನಾಥ ತ್ಯಾಗಿ, (೧೬) ಚಂದ್ರದತ್ತ ಸೇನಾನಿ ಅಲ್ಲದೆ ಏಕಮಾತ್ರ ಮಹಿಳಾ ಅಭ್ಯರ್ಥಿ ಶ್ರೀಮತಿ ಮನೋಹರ ಹೋಳ್ಕರ್ ಮತ್ತು ಕರ್ಣಾಟಕದಿಂದ ಶ್ರೀ ಎಸ್. ಆರ್. ಯಸ್. ಹೊಯ್ಸಳ.

ನಾಮಪತ್ರ ಹಿಂದಕ್ಕೆ ತೆಗೆದುಕೊಳ್ಳಲು ಕೊನೆಯ ದಿನ ಎಪ್ರಿಲ್ ಹದಿನೆಂಟು.

ಸರ್ವ ಶ್ರೀ ರಾಮಲಾಲತ್ಯಾಗಿ, ಸದಾನಂದ ಹಾಗೂ ಜಯದೇವ ಗುಪ್ತರವರ ನಾಮಪತ್ರಗಳು, ಬಹಿಷ್ಕರಿಸಲ್ಪಟ್ಟವು. ಇದಲ್ಲದೆ ಇನ್ನಾರೂ ನಾಮಪತ್ರಗಳನ್ನು ಹಿಂದಕ್ಕೆ ತೆಗೆದುಕೊಳ್ಳಲೇ ಇಲ್ಲ. ಇಷ್ಟು ಜನ ಕಣದಲ್ಲಿಳಿದಿದ್ದರೂ ನಿಜವಾದ ಹೋರಾಟ ಡಾ। ಝಕೀರ ಹುಸೇನ ಹಾಗೂ ಶ್ರೀ ಸುಬ್ಬರಾಯರ ನಡುವೆ ನಡೆದದ್ದು. ಇದರಲ್ಲೂ ಕಾಂಗ್ರೆಸ್ಸಿಗೆ ಬಹುಮತ ಇರುವುದರಿಂದ ಡಾ। ಝಕೀರ ಹುಸೇನರ ಜಯ ನಿಜವೆಂದು ಭಾವಿಸಬಹುದಾಗಿತ್ತಾದರೂ ಶ್ರೀ ಸುಬ್ಬರಾಯರ ಸ್ಪರ್ಧೆಯಿಂದ ಕಾಂಗ್ರೆಸ್ಸಿಗರೇ ಹೆದರಿಬಿಟ್ಟರೆಂಬ ಬೆದರಿಕೆ ಕಾಡುತ್ತಿತ್ತು. ಅಂತೂ ಮೇ ಆರರಂದು ಚುನಾವಣೆ ನಡೆದೇ ಹೋಯಿತು. ಹತ್ತೊಂಭತ್ತು ಸ್ಥಳಗಳಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆಗಾಗಿ ಏರ್ಪಾಡು ಮಾಡಲಾಗಿತ್ತು. ಅಭ್ಯರ್ಥಿಗಳ ಹೆಸರುಗಳನ್ನು ಅಕಾರ ಪ್ರಕಾರವಾಗಿ ಹೆಸರು ಕಾಗದದಲ್ಲಿ ಅಚ್ಚು ಹೊಡೆಯಲಾಗಿತ್ತು. ವಿಧಾನಸಭಾ ಸದಸ್ಯ, ರಾಜ್ಯಸಭಾ ಹಾಗೂ ಲೋಕ ಸಭಾ ಸದಸ್ಯರು ಮಾತ್ರ ಇದರಲ್ಲಿ ಭಾಗವಹಿಸಲು ಸಾಧ್ಯ. ಅವರು ತಮಗೆ ಬೇಕಾದ ಅಭ್ಯರ್ಥಿಯ ಹೆಸರಿನೆದುರು ಬೋಲ್ ಪೊಯಿಂಟ್ ಪೆನ್ನಿನಲ್ಲಿ ಗುರುತು ಮಾಡುವರು. ಆ ಮತಪತ್ರವನ್ನು ಪೆಟ್ಟಿಗೆಗಳಲ್ಲಿ ಹಾಕಿದರು. ಆ ಪೆಟ್ಟಿಗೆಗಳನ್ನು ಡೆಲ್ಲಿಗೆ ಕಳುಹಿಸಿದರು.

ವಾತಾವರಣ ಅಷ್ಟು ಬಿಸಿಯಾಗಿತ್ತಾದರೂ ಉಪರಾಷ್ಟ್ರಾಧ್ಯಕ್ಷರ ಚುನಾವಣಾ ಫಲಿತಾಂಶ ಹೊರಬಿದ್ದೊಡನೆ ಎದುರು ಪಕ್ಷದವರು ಹಾಹಾಕಾರ ಹೊಡೆದರು. ಸರ್ವನಾಶವಾಯಿತೆಂದು ಹೇಳಿದರು. ಅಂತೂ ಮೇ ದಿನಾಂಕ ಒಂಭತ್ತರಂದು ಸಾಯಂಕಾಲ ಫಲಿತಾಂಶ ಪ್ರಕಟವಾಯಿತು. ಡಾ। ಝಕೀರ ಹುಸೇನರಿಗೆ ಜಯ ಸಿಕ್ಕಿತ್ತು.

ಶ್ರೀ ಸುಬ್ಬರಾಯರಿಗೆ ಕಾಂಗ್ರೆಸ್ಸಿನ ಮತ ನೀಡಿದ್ದರೆಂಬುದು ಸ್ಪಷ್ಟ. ಅದಕ್ಕಿಂತಲೂ ಮುಸ್ಲಿಂ ಲೀಗಿನವರೂ, ನಾಗಾಲೇಂಡಿನವರೂ ಅಲ್ಲದೆ ಅನ್ಯಾನ್ಯ ಪಕ್ಷಗಳಲ್ಲಿರುವ ಮುಸ್ಲಿಂ ಸದಸ್ಯರು ಶ್ರೀ ಝಕೀರ ಹುಸೇನರಿಗೆ ಮತದಾನ ಮಾಡಿರುವುದು ಗಮನಾರ್ಹ ವಿಷಯವಿದೆ. ಅಂತೂ ಕಾಂಗ್ರೆಸ್ಸಿಗರ ಭಾಷೆಯಲ್ಲಿ 'ಸೆಕ್ಯೂಲರಿಸಮ್'ಗೆ ಜಯವಾಯಿತು, ಎದುರು ಪಕ್ಷಗಳವರ ಭಾಷೆಯಲ್ಲಿ 'ದೇಶ ವಿದ್ರೋಹಿ, ಪ್ರತ್ಯೇಕತಾವಾದಿ ದುಶ್ಶಕ್ತಿಗಳಿಗೆ' ಜಯವಾಯಿತು. ಏನೇ ಇದ್ದರೂ ಶ್ರೀ ಸುಬ್ಬರಾಯರ ನ್ಯಾಯ ಪಾಂಡಿತ್ಯದೆದುರು ಶ್ರೀ ಝಕೀರ ಹುಸೇನರ ಅನುಭವವು ಪೂರ್ಣ ತಲೆ ತಗ್ಗಿಸಲೇ ಬೇಕು. ಶ್ರೀ ಝಕೀರ ಹುಸೇನರು ಕಾಂಗ್ರೆಸ್ಸಿಗರ ಅಂಕುಶಕ್ಕೆದುರಾಗಿ ಆಡುವವರಲ್ಲ. ಅಂತೂ ಚುನಾವಣೆ ಮುಗಿಯಿತು. ಶ್ರೀ ಝಕೀರ ಹುಸೇನ ಆರಿಸಲ್ಪಟ್ಟರು. ಎಪ್ರಿಲ್ ದಿನಾಂಕ ಹದಿಮೂರರಂದು ಮುಪ್ಪತ್ತೊಂದು ಗುಂಡುಗಳ ಗರ್ಜನೆಯೊಂದಿಗೆ ಅವರು ಅಧಿಕಾರವನ್ನು ವಹಿಸಿಕೊಂಡರು. ಆಗ ಅವರಾಡಿದ್ದ ಮಾತು ಬಹಳ ಮುಖ್ಯವಿದೆ 'ಅಖಿಲ ಭಾರತವೇ ಎನ್ನ ಮನೆ, ಮತ್ತು ಅದರ ಜನತೆಯೇ ನನ್ನ ಕುಟುಂಬ. ಅವರಿತ್ತಿರುವ ಕರೆ ಅಥವಾ ಘೋಷಣೆಯೂ ಅರ್ಥಪೂರ್ಣವಿದೆ. ಮಾತು ಕೆಲ್ಲಿಸಿರಿ—ಕಾರ್ಯ ಮುಂದರಿಸಿರಿ. ಇವೆರಡರ ಅರ್ಥದ ಹುತ್ತದಲ್ಲಿ ಅದ್ಯಾವ ವಿಷ ಸರ್ಪ ಅಡಗಿಕೊಂಡಿದೆಯೋ? ಜನ್ನಾರಂತೆ ಪ್ರತ್ಯೇಕ ಪಾಕಿಸ್ತಾನಕ್ಕಾಗಿ ಹೋರಾಡಿದವರು ಶ್ರೀ ಝಕೀರ ಹುಸೇನರಲ್ಲ. ಆದುದರಿಂದಲೇ ಅವರು ಭಾರತವೇ ನನ್ನ ಮನೆಯೆಂದಿರುವರು. ಹಾಗೆಯೇ ತನ್ನ ಮೊಮ್ಮಗಳನ್ನು ಪ್ರೀತಿಸಿದಾತ ಮುಸ್ಲಿಮನಾಗಲೇ ಬೇಕಾಯಿತು. ಆಗ ಮಾತ್ರ ಅವರ ಕುಟುಂಬದವನಾಗಲು ಸಾಧ್ಯವಾಯಿತು. ಅಂತೆಯೇ ಅಖಿಲ ಭಾರತ ಮತಾಂತರ ಹೊಂದಿದಾಗ ಮಾತ್ರ ಅವರ ಕುಟುಂಬವಾಗಲು ಸಾಧ್ಯವೇ ಎನ್ನುವ ಪ್ರಶ್ನೆ ಎದ್ದು ಬರುತ್ತದೆ. ಅಲ್ಲದೆ ಅವರ ಘೋಷಣೆಯ ಪ್ರಕಾರ ನೀವು ಸುಮ್ಮಗೆ ಇರಿ, ನಾನು ಆ ಕಾರ್ಯವನ್ನು ಪೂರ್ತಿಗೊಳಿಸಿ ಬಿಡುತ್ತೇನೆಂದು ಹೇಳಿದಂತಾಗುತ್ತದೆಯೇ? ಇದೇ ಸಮಯದಲ್ಲಿ ಪಾಕಿಸ್ತಾನದ ಕಿರುಕುಳ ಜಾಸ್ತಿಯಾಗುತ್ತಿದೆ. ಪ್ರಶ್ನೆಗಳಿಗೆ ಉತ್ತರ ಸಹಜವಾಗಿಯೇ ದೊರಕುವ ಸಂದರ್ಭ ಆದ.. ಶ್ರದ್ಧೇಯ ಝಕೀರ ಹುಸೇನರು ಇವನ್ನೆಲ್ಲ ಮಸಿಗೊಳಿಸಿಯಾರು. ಈಗಾಗಲೇ ಅವರು ಶೃಂಗೇರಿ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯ ಹಾಗೂ ಶ್ರೀ ಶ್ರೀ ಸುಶೀಲ ಕುಮಾರ ಜೈನರ ಆಶೀರ್ವಾದವನ್ನು ಪಡೆದು ಆಸೀನರಾಗಿದ್ದಾರೆ. ನಾವೂ ಶುಭಗಳಿಗೆಯನ್ನೇ ಎದುರು ನೋಡೋಣ.

ನಿತ್ಯ ಪುರಾಣ

(ಐದನೇ ಪುಟದಿಂದ)

ರ್ಧೆಯು ಆರಂಭವಾಯಿತು. ನಾವೆಲ್ಲ ಅವರಲ್ಲಿ ಯಾರಿಗೆ ಬೇಕಾದರೂ ಶರಣಾಗತರಾಗುವ ಎರೆದೆವು. ಅವರೊಳಗಿನ ಸ್ಪರ್ಧೆಯಲ್ಲಿ ಗದ್ದಲ ಒಂದು ಗುಂಪಿನವರಾದ ಆಂಗ್ಲರು ನಮಗೆ ಶರಣಾಗತ ರಕ್ಷಕರಾಗಿ, ನಮಗೆಲ್ಲಾ ತುಂಬ ಭರವಸೆಯನ್ನು ಕೊಟ್ಟರು. ಹಾಗೆಯೇ ತಮ್ಮ ಯುಕ್ತಿ ಶಕ್ತಿಗಳಿಂದ ಅರಸರೊಳಗಿನ ಕಲಹಗಳನ್ನೆಲ್ಲಾ ತಗಿಸಿ ದೇಶದಲ್ಲಿ ತಮ್ಮ ಪ್ರಭಾವವನ್ನೂ ಬೀರಿದರು. ನಮಗೆ ಸುಖ ನೆನಸಿತು. ಶಾಂತಿಯುಂಟಾದಂತೆ ತೋರಿತು. ಒಣಗಿ ಹ್ರಸುಪಟ್ಟು ಹೋದ ನಾವು ಸುಖವಾಗಿ ನಿದ್ದೆ ಮಾಡುವಂತ ಆಯಿತು. ದೇವರೇ ಒಂದು ಜೋಗುಳ ಹಾಡ ಮೈದಡವುತ್ತಿರುವ ಹಾಗೆ ತೋರಿತು ನಿದ್ದೆ ಮಾಡಿದೆವು, ಗೊರಕೆ ಹೊಡೆದೆವು.

ಇನ್ನು ಹೀಗೆಯೇ ಸುಖವಾಗಿ ನಿದ್ದೆ ಮಾಡಿಕೊಂಡಿದರೆ ಊಟ ನೀರು ಯಾವುದೂ ಇಲ್ಲದೆ ಎಲ್ಲರೂ ಸತ್ತು ಹೋಗುತಾರಲ್ಲಾ ಅಂತ ದೇವರಿಗಿಷ್ಟು ಕರುಣೆ ಬಂದಿರಬೇಕು. ಕಲಿಯುಗದ ಆದಿ ಅವತಾರವಾದ ಬುದ್ಧ ಭಗವಾನನು ಇನ್ನೊಂದು ಅವತಾರದಲ್ಲಿ ಜನ್ಮವೆತ್ತಿ ಮಹಾತ್ಮನಾಗಿ ಬಂದನು. ಅವನು ಎಲುಗಿ ಗೊರಕೆ ಹೊಡೆಯುತ್ತಿರುವವರ ಕಿವಿಗಳ ಬಳಿಯಲ್ಲಿ ಗಿರಿಗಿರಿ ರಾಟೆಯ ಚಕ್ರವನ್ನು ಸುತ್ತುತ್ತಾ, ತಟ್ಟಿ ತಟ್ಟಿ ಎಬ್ಬಿಸಲಾರಂಭಿಸಿದನು. ಜನರಿಗೆ ಭ್ರಾಂತಿಯಿಂದಲೂ ಮೋಹದಿಂದಲೂ ಹುಟ್ಟಿದ ಸ್ವಪ್ನಗಳನ್ನೆಲ್ಲ ಹೋಗಲಾಡಿಸಲು ತುಂಬಾ ಹೆಣಗಾಡಿದನು. ಆತನ ಪ್ರಯತ್ನದ ಫಲವಾಗಿ ಈ ದೇಶಕ್ಕೆ ಸ್ವತಂತ್ರ ಬಂತು. ಅರಸರ ಕತೆಗಳೆಲ್ಲ ಹೇಗಾಯಿತೆಂದ. ಗೊತ್ತೇ ಇದ್ದ ಕಾರಣ ಇಲ್ಲಿ ಪ್ರಜಾಪ್ರಭುತ್ವವೇ ಬಂದಿತು.

ಆದರೇನು? ಅರಸುತನವೆಂಬ ಮನೆತನದ ಕಾರ್ಭಾರು ಹೋಯಿತೇ ಹೊರತು ಅರಸುತನವೂ, ಅಧಿಕಾರಿಗಳೊಳಗಿನ ಕಲಹಗಳೂ ನಿತ್ಯಾ ನಡೆಯುತ್ತಲೇ ಇವೆ. ಈ ನಿತ್ಯ ಪುರಾಣದಲ್ಲಿ ಪ್ರತಿ ಐದು ವರ್ಷಗಳಿಗೊಮ್ಮೆ ಹೊಸ ಅಧ್ಯಾಯ ಪ್ರಾರಂಭವಾಗುತ್ತೆ. ಆಗೆಲ್ಲಾ ಹೊಸ ಹೊಸ ಸಂಚಿಕೆ ಹುಟ್ಟುತ್ತೆ. ಆ ಐವೈದು ವರ್ಷಗಳಿಗೆ ಹಿಂದೂ ಮುಂದೂ ಇರುವ ಎರಡೆರಡು ವರ್ಷಗಳೂ ಬಹಳ ಹುರುಪಿನ ವರುಷಗಳ; ಬಹಳ ಕುತೂಹಲದ ವರ್ಷಗಳು, ಆಗ ನಡೆಯುವ ಕತೆಗಳೆಲ್ಲ ಪೇಪರಿನಲ್ಲಿ ಬರುತ್ತಾ ಇರುತ್ತೆ. ಈಗ ಅಕ್ಕೇ ವಿಷಯದ ಕತೆ ನಿನ್ನೆ ನಡೆದ ಸಂಗತಿ ಈ ಪೇಪರಿನಲ್ಲಿ ಬಂದಿದೆ. ಓದಿದರೆ ಎಷ್ಟು ಸ್ವಾರಸ್ಯವಾಗಿದೆ ಗೊತ್ತೇ? ಗಟ್ಟಿಯಾಗಿ ಓದಲಾ?'

'ಬೇಡಾ ಬಿಡಿ. ಆ ಕತೆ ಗೊತ್ತಿದೆ. ಓದಿಬಿಟ್ರೆ ಹೊಟ್ಟೆ ತುಂಬಿ ಬಿಡುತ್ತೇನು?' ಎಂದು ನನ್ನ ಹೆಂಡತಿ ಒಳಗೆ ಹೋದಳು.

'ಪುರಾಣ ಮುಗಿಯಿತೇನಪ್ಪಾ?—'ಜಪಸರ ತಿರುಗಿಸುತ್ತಾ ರಾಮನಾಮ ಸ್ಮರಣೆಯಲ್ಲಿ ಮುಳುಗಿ ಹೋದ ನಮ್ಮ ತಾಯಿ ಅರಿವಿಗೆ ಬಂದು ಕೇಳಿದಳು.

'ಪುರಾಣವಲ್ಲ ಮಣ್ಣು! ಸತ್ಯದ ಹಾಗೆ ಕಾಣುವ ಒಂದು ಸುಳ್ಳು!' ಎಂದಳು ನನ್ನ ಹೆಂಡತಿ ಒಳಗಿನಿಂದಲೇ.

'ಇಲ್ಲಮ್ಮಾ, ಸತ್ಯವೇ. ನಮ್ಮ ಚಂತ್ರ ಪಾಠದಲ್ಲಿ ಉಂಟು ಈ ಕತೆ' ಎನ್ನುತ್ತ ಚರಿತ್ರೆ ಪುಸ್ತಕ ತೆರಲು ಓಡಿದ ನನ್ನ ಮಗ.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರನಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ವಿಜಯ—ಜಯಲಕ್ಷ್ಮಿ ಬ್ಯಾಂಕ್‌ಗಳ ಸಮಾವೇಶ ಸಮಾರಂಭ

ಮಂಗಳೂರು, 27 ಮೇ:— ಇಂದು ಪಶ್ಚಿಮ ಭಾರತೀಯ ಬ್ಯಾಂಕಿಂಗ್ ಇತಿಹಾಸದಲ್ಲಿ ಒಂದು ಪ್ರಮುಖ್ಯ ದಿನವಾಗಿದೆ. 43 ವರ್ಷ ಖ್ಯಾತಿಯ ಜಯಲಕ್ಷ್ಮಿ ಬ್ಯಾಂಕ್ ಲಿಮಿಟೆಡ್ ಅದರ 17 ಶಾಖೆಗಳೊಂದಿಗೆ ವಿಜಯಾ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡುದರಿಂದ ದಕ್ಷಿಣ ಭಾರತದ ಇತಿಹಾಸದ ಅತೀ ದೊಡ್ಡ ಬ್ಯಾಂಕ್ ವಿಲೀನತೆ ಜರಗಿದೆ. ವಿಲೀನತೆಯ ಸಂಬಂಧ ವಿಜಯಾ ಬ್ಯಾಂಕ್ ಲಿಮಿಟೆಡ್‌ನ ಹೆಡ್ ಆಫೀಸಿನಲ್ಲಿ ಇಂದು ವಿಜೃಂಭಣೆಯ ಸಮಾರಂಭ ನಡೆಸಲಾಯಿತು.

ಈ ವಿಲೀನತೆಯಿಂದ ವಿಜಯಾ ಬ್ಯಾಂಕ್ ಲಿಮಿಟೆಡ್‌ಗೆ ಈಗ ಮಹಾರಾಷ್ಟ್ರ, ಮದ್ರಾಸ್, ಮೈಸೂರು ಮತ್ತು ಕೇರಳಗಳಲ್ಲಿ 84 ಶಾಖೆಗಳುಂಟಾಗಿವೆ.

ಈಗ ವಿಜಯಾ ಬ್ಯಾಂಕ್ ಲಿಮಿಟೆಡ್‌ನ ಠೇವಣಿಗಳ ಮೊತ್ತವು ತನ್ನ ರೂ. 8,42,33,000 ಗಳೊಂದಿಗೆ ಜಯಲಕ್ಷ್ಮಿ ಬ್ಯಾಂಕ್ ಲಿಮಿಟೆಡ್‌ನ ರೂ. 1,73,53,000 ಸಹಾ ಸೇರಿ ಸರ್ವಕಾಲೀನ ದಾಖಲೆಯ ರೂಪಾಯಿ 10,15,61,000 ಆಗಿದೆ. ಚೆಯರ್‌ಮೆನ್ ಶ್ರೀ ಎಮ್. ಸುಂದರ್ ರಾಮ್ ಶೆಟ್ಟಿಯವರ ಸ್ಫೂರ್ತಿಯ ನಾಯಕತ್ವದಲ್ಲಿ 1964 ರಲ್ಲಿ 52 ಇದ್ದ ವಿಜಯಾ ಬ್ಯಾಂಕ್ ಲಿಮಿಟೆಡ್‌ನ ಶಾಖೆಗಳು 1967ರ ಜೂನ್ 1ರಲ್ಲಿ 84 ಶಾಖೆಗಳಾದುವು.

ವಿಶೇಷ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಬ್ಯಾಂಕ್‌ನ ಚಟುವಟಿಕೆಗಳನ್ನು ವಿಸ್ತರಿಸಿ ಸಾವಿರಾರು ಗಿರಾಕಿಗಳಿಗೆ ಹಲವು ಬ್ಯಾಂಕಿಂಗ್ ಅನುಕೂಲತೆಗಳನ್ನು ಒದಗಿಸಲಾಗುವುದು. ವಿದ್ಯುತ್ ಬಳಕೆಯ ಚಾರ್ಜುಗಳನ್ನು ಗಿರಾಕಿಗಳು ನೇರವಾಗಿ ಬ್ಯಾಂಕಿಗೆ ತುಂಬಿಸುವಂತೆ ಮಾಡಿ, ಉದ್ದ ಕ್ಯೂಗಳಲ್ಲಿ ಕಾಯುವುದು, ಖಾವತಿ ನಿರ್ಬಂಧದ ಅವಧಿಯನ್ನು ನೆನಪಿಡುವುದೇ ಮೊದಲಾದ ತೊಂದರೆಗಳಿಂದ ಮುಕ್ತರಾಗಿರುವಂತೆ ಪ್ರಥಮ ಮಾಡಿರುವುದು ವಿಜಯಾ ಬ್ಯಾಂಕ್ ಆಗಿದೆ. ಹುಬ್ಬಳ್ಳಿಯಲ್ಲಿ ಮೊದಲು ಆರಂಭಿಸಿದ ವ್ಯವಸ್ಥೆಯನ್ನು ಈಗ ಬೆಂಗಳೂರು ಮತ್ತು ಕೆಂಟೋನ್ಮೆಂಟ್‌ಗಳಿಗೆ ವಿಸ್ತರಿಸಿದ್ದು, ಶೀಘ್ರದಲ್ಲಿ ಮೈಸೂರು ರಾಜ್ಯದ ಇತರ ನಗರಗಳಲ್ಲಿಯೂ ಪ್ರಾರಂಭಿಸಲಾಗುವುದು.

1967ರ ಡಿಸೆಂಬರ ಅಖೈರಿಯೊಳಗೆ 100ನೇ ಶಾಖೆಯನ್ನು ತೆರೆಯುವುದೂ ಗುರಿಯಾಗಿದೆ.

(ವಿಶೇಷ ಪ್ರತಿನಿಧಿಯಿಂದ.)

ಕುಂದಾಪುರ ಮು. ಕೋರ್ಟಿನಲ್ಲಿ

O. S. 390/64.

ಯಜ್ಞನಾರಾಯಣ ಶಾಸ್ತ್ರಿ —ವಾದಿ

ಪದ್ಮನಾಭ ಶಾಸ್ತ್ರಿ ಕೂಡಾ —ಪ್ರತಿವಾದಿರು

10ನೇ ಪ್ರತಿವಾದಿಳು ರತ್ನಂಮ ಬಾರಕೂರು ಪದ್ಮನಾಭ ಶಾಸ್ತ್ರಿಗಳ ಮಗಳು, ಉಡುಪಿ ತಾಲ್ಲೂಕು ಹನೆಹಳ್ಳಿ ಗ್ರಾಮದ ಬಾರಕೂರು.

10ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಸುವದೇನೆಂದರೆ —

ವಾದಿಯು ನಿಂಮ ವಗೈರೆರ ಮೇಲೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ. 30-6-1967ಕ್ಕೆ ತನಿಖೆಗೆ ಗೊತ್ತಾಗಿರುತ್ತದೆ. ಸದ್ರಿ ದಾವೆಯಲ್ಲಿ ನಿಮ್ಮ ಕಡೆಯಿಂದ ಉದಾಹರಣೆ ದಾಖಲು ಮಾಡುವದಾಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ದಾಖಲು ಮಾಡಿಕೊಳ್ಳತಕ್ಕದ್ದು. ಇದ್ದ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವಾ ಫೈಸಲು ಮಾಡೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plaintiff.

ತಾರೀಖು 31—5—67,
ಮುಕ್ಕಾಂ: ಕುಂದಾಪುರ.

ವಿದ್ಯಾರ್ಥಿವೇತನ

ಬಂಟರ ಯಾನೆ ನಾಡವರ ಸಂಘದ ವಿದ್ಯಾರ್ಥಿ ಸಹಾಯ ನಿಧಿಯಿಂದ ಸಹಾಯ ಪಡೆಯಲಿಚ್ಛಿಸುವವರು ತಾರೀಕು 20-6-1967 ರೊಳಗೆ ಡಾ| ಸಂಜೀವ ಮಲ್ಲಿ, ಕಾರ್ಯದರ್ಶಿ, ವಿ. ಸ. ನಿಧಿ. ಬಿ. ಎ. ಯಸ್. ಸಂಘ, ಮಂಗಳೂರು-3. ಇವರಿಗೆ ಅರ್ಜಿ ಫೋರಂಗಳನ್ನು ಸಲ್ಲಿಸತಕ್ಕದ್ದು ಎಂದು ತಿಳಿದುಬರುತ್ತದೆ.

ರೆಫ್ರೆಶರ್ ಕೋರ್ಸು

ಮಣಿಪಾಲ, ಮೇ 31. ಇಲ್ಲಿಯ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಎಲ್ಲ ಮುಖ್ಯ ವಿಭಾಗಗಳೂ, ಉಚ್ಚ ಶಿಕ್ಷಣ ಹೊಂದಿದ ಹಾಗೂ ನುರಿತ ವೈದ್ಯರುಗಳೂ ಇರುವುದಾಗಿ ದಕ್ಷಿಣ ಕನ್ನಡದ ಜಿಲ್ಲಾ ಸರ್ಜನ್ ಡಾ| ಎ. ಬಿ. ಪಾಲ್‌ರವರು ಇಂದಿಲ್ಲಿ ನುಡಿದರು.

ಭಾರತದ ವೈದ್ಯಕೀಯ ಸಂಘದ ಉಡುಪಿ ಶಾಖೆ ಹಾಗೂ ಈ ಆಸ್ಪತ್ರೆಯ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಎರಡು ದಿನಗಳ ರೆಫ್ರೆಶರ್ ಕೋರ್ಸನ್ನು ಅವರು ಉದ್ಘಾಟಿಸುತ್ತಾ, ಮಣಿಪಾಲವು ಭಾರತದಲ್ಲಿ ವೈದ್ಯಕೀಯ ಸೌಕರ್ಯ ಹಾಗೂ ಶಿಕ್ಷಣದ ಮುಖ್ಯ ಕೇಂದ್ರಗಳಲ್ಲೊಂದಾಗಿದೆ ಎಂದು ತಿಳಿಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ|| ಟಿ. ಎಂ. ಎ. ಪೈಯವರು ಅಧ್ಯಕ್ಷ ಭಾಷಣ ಮಾಡುತ್ತಾ ವೈದ್ಯಕೀಯ ರಂಗದಲ್ಲಾಗಿರುವ ಹೊಸ ಪ್ರಗತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ವೈದ್ಯರುಗಳಿಗೆ ತಿಳಿಸುವುದಕ್ಕಾಗಿ ಆಗಾಗ ಇಂತಹ ಕೋರ್ಸುಗಳನ್ನು ಏರ್ಪಡಿಸಲಾಗುತ್ತಿದೆ ಎಂದರು. ಈ ಆಸ್ಪತ್ರೆಯನ್ನು ತಮ್ಮದೇ ಎಂದು ತಿಳಿದು ಇಲ್ಲಿ ಸಿಗುವ ಸೌಲಭ್ಯಗಳನ್ನು ರೋಗಿಗಳು ಸದುಪಯೋಗ ಪಡಿಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಅವರು ವೈದ್ಯರುಗಳಿಗೆ ಕರೆಯಿತ್ತರು.

ದಕ್ಷಿಣ ಕನ್ನಡದ ಮೆಡಿಕಲ್ ರಿಲೀಫ್ ಸೊಸೈಟಿಯ ಗೌರವ ಕಾರ್ಯದರ್ಶಿ ಶ್ರೀ ಟಿ. ಎ. ಪೈಯವರು ದೊಳನಾಡಿ ಜನರ ಆರೋಗ್ಯ ಮಟ್ಟವನ್ನು ಉತ್ತಮಗೊಳಿಸುವುದಕ್ಕಾಗಿ ವೈದ್ಯರು ಶ್ರಮಿಸಬೇಕೆಂದರು. ಮೊದಲಲ್ಲಿ ಡಾ| ಸಿ. ಆರ್. ನಾಯರ್‌ರವರು ಎಲ್ಲರನ್ನೂ ಸ್ವಾಗತಿಸಿದರು.

ಅಭ್ಯರ್ಥಿಗಳ ಹೆಚ್ಚಳ

ಮಣಿಪಾಲ, ಜೂನ್ ೧. ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ೮೦ ತೆರೆದಿಟ್ಟ ಸ್ಥಾನಗಳಿಗೆ ಪ್ರವೇಶ ಅಪೇಕ್ಷಿಸಿರುವ ಹಿಂದಿಗಿಂತ ಹೆಚ್ಚು ಅಭ್ಯರ್ಥಿಗಳಿಗಾಗಿ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಇಂದಿಲ್ಲಿ ಭಾಷಣ ಮಾಡಿದ ಬಳಿಕ ಇಂಟರ್‌ವ್ಯೂ ಮತ್ತು ಟೆಸ್ಟ್ ಆರಂಭವಾಯಿತು. ಈ ಕಾಲೇಜಿಗೆ ಪ್ರವೇಶ ಬಯಸಿರುವವರೆಲ್ಲರನ್ನೂ ಸೂಕ್ತ ರೀತಿಯಾಗ ಸೇರಿಸಿಕೊಳ್ಳಲಾಗುವುದೆಂದು ಡಾ| ಪೈಯವರು ಹೇಳಿ ತಾಂತ್ರಿಕ ಕಾಲೇಜುಗಳಿಗೆ ಪ್ರವೇಶ ಬಯಸುವವರ ಹೆಚ್ಚಳ ಪ್ರಪಂಚದಾದ್ಯಂತ ಇದೆ ಎಂದರು.

ಶ್ರೀ ರಮೇಶ ಪೈಯವರು ಇಂಟರ್‌ವ್ಯೂ ಕಾರ್ಡುಗಳನ್ನು ವಿತರಣೆ ಮಾಡುತ್ತಾ ಈ ಕಾಲೇಜು ಕ್ರಾಂತಿಕಾರಕ ರೀತಿಯಲ್ಲಿ ಆರಂಭವಾಗಿ ನಮ್ಮಂತಹ ಸ್ವತಂತ್ರ ದೇಶದಲ್ಲಿ ಖಾಸಗಿ ಪ್ರಯತ್ನಗಳ ಮಹತ್ವವನ್ನು ತೋರಿಸಿಕೊಟ್ಟಿದೆ ಎಂದರು.

ನಾಟಕ ಲೇಖನ ಸ್ಪರ್ಧೆ

ರಂಗಭೂಮಿ (ರಿ) ಉಡುಪಿ. ಇವರು ಏರ್ಪಡಿಸಿದ ಸಾಮಾಜಿಕ ನಾಟಕ ಲೇಖನ ಸ್ಪರ್ಧೆಗೆ ಒಟ್ಟು 18 ನಾಟಕಗಳು ಬಂದಿದ್ದು ಈ ಕೆಳಗಿನವುಗಳು ಬಹುಮಾನಗಳಿಸಿವೆ.

ಶ್ರೀ ಎನ್. ಕೆ. ಶಂಕರಪ್ಪ ಭದ್ರಾವತಿ ಇವರ 'ಮಂಗಳಾ' ನಾಟಕಕ್ಕೆ ಪ್ರಥಮ ಬಹುಮಾನ ರೂ. 100, ಉಡುಪಿಯ ಶ್ರೀ ಬಿ. ಸುಧಾಕರ ಭಕ್ತ ಇವರ 'ಅಕ್ಕಿಗೆ' ನಾಟಕಕ್ಕೆ ದ್ವಿತೀಯ ಬಹುಮಾನ ರೂ. 60, ಮತ್ತು ಶ್ರೀ ರೋಹಿದಾಸ ಜಿ. ಮಹಾರೆ, ಕುಮಟ; ಇವರ 'ಮಾಂಗಲ್ಯಯೋಗ' ನಾಟಕಕ್ಕೆ ವಿಶೇಷ ಬಹುಮಾನ ರೂ. 30.

ಡಾ| ಕೆ. ನಾಗಪ್ಪ ಆಳ್ವರು.

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 121/66.

ಚಂದ್ರಾವತಿ ಸಹಾ —ವಾದಿರು.
ಪುಟ್ಟಂಮ ಸಹಾ — ಪ್ರತಿವಾದಿರು.

1 ಪುಟ್ಟಂಮ, ವಿಮಲ ಹೆಂಗ್ಸಿನ ಮಗಳು 2. ಧರ್ಮರಾಜ ಶೆಟ್ಟಿ, ಪುಟ್ಟಂಮನ ಮಗ, ಇಬ್ಬರು ಕಾರ್ಕಳ ತಾಲ್ಲೂಕು ಮೊಂಟ್ರಾಡಿ ಗ್ರಾಮದ ಬೈರಲ್ಕೆ ಎಂಬಲ್ಲಿರುವವರಿಗೆ—

3 B ರಘುರಾಮ ಶೆಟ್ಟಿ, ರಿಸೀವರ್, ನಾಗಂಣ ಶೆಟ್ರ ಮಗ, ಕಾರ್ಕಳ ಕಸಬಾ ಗ್ರಾಮದಲ್ಲಿರುವವ ಕೂಡಾ 3 ಜನರಿಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯದಲ್ಲಿ ವಾದಿಗೆ 64-65, ಮತ್ತು 65—66ರ ಗೇಣಿ ಬಾಕಿ ಬಗ್ಗೆ ಮಾಡಿದ ವ್ಯಾಜ್ಯವು ತಾ. 3—7—1967ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರದ್ವಾರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮೆಲ್ಲರನ್ನು ಏಕಪಕ್ಷವಾಗಿ ದಾವೆಯನ್ನು ಮುಂದುವರಿಸಲಾದೀತು.

N. J. Kadamba
Advocate. Beltangady.

ಬೆಳ್ತಂಗಡಿ, 2—6—1967.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 464/1966.

ಕುಪ್ಪಯ್ಯ ಯಾನೆ ವೆಂಕಟ್ರಮಣ ಬ್ಯಾಂ —ವಾದಿ.

ಶಾಂತಾರಾಮ ರಾವ್ ಕೂಡಾ — ಪ್ರತಿವಾದಿರು.

ಕುಂದಾಪುರ ತಾಲ್ಲೂಕು ಹೊಂಬಾಡಿ ಮಂಡಾಡಿ ಗ್ರಾಮದಲ್ಲಿರುವ ದೇವರಾಯ ಕಾಮತರ ವಿಧವೆ 11ನೇ ಪ್ರತಿವಾದಿ ಗಿರಿಜ 1 ಈಕೆಯ ಮಗಳು 12ನೇ ಪ್ರತಿವಾದಿ ಭಾಗೀರಥಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಕಳೆದ ಶೋಭಕೃತು ಆದ ಅನುಗ್ರಾಹ್ಯ ಬರತಕ್ಕ ಮೂಲಗೇಣಿ ಗೇಣಿ ಬಾಕಿ ಬರ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 1—7—67ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಬಾಧೆಯ ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

S/d. N. S. Parameshwariah
Advocate for Pltf.,
Date: 31—5—67, Coondapoor.

ವಿದ್ಯಾರ್ಥಿಗಳು ಬೇಕು

ಬೆಂಗಳೂರು ಆಯುರ್ವೇದಿಕ್ ಕಾಲೇಜ್

ಜಯನಗರ ೪ನೇ ಬ್ಲಾಕ್, ಜೈನ ದೇವಸ್ಥಾನದ ಹತ್ತಿರ, ಬೆಂಗಳೂರು—೧೧.

ಹೊಸ ವರ್ಷಾರಂಭ ಜುಲೈ ೧

- ಉಚ್ಚ ವಿದ್ಯಾನುಭವವುಳ್ಳ ಪ್ರಾಧ್ಯಾಪಕರಿದ್ದಾರೆ.
- ಕೇಂದ್ರ ಮತ್ತು ರಾಜ್ಯ ಸರಕಾರ ಮನ್ನಣ ಇದೆ.
- ಸರಕಾರಿ ನೌಕರಿಗಳ ಅರ್ಹತೆ ಲಭಿಸುವುದು.
- ಹಾಸ್ಟೆಲ್ ಸೌಕರ್ಯವಿದೆ.
- ಮೇಧಾವಿಗಳಿಗೆ ಸ್ಕಾಲರ್‌ಶಿಪ್‌ಗಳಿವೆ.

ಅಲ್ಲದೆ ೩೦೦ ಹಾಸಿಗೆಗಳುಳ್ಳ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಾನುಭವದ ಸೌಕರ್ಯವಿದೆ.

ವಿದ್ಯಾರ್ಥಿನಿಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಮಾತ್ರ ಪ್ರವೇಶ. ಜೂನ್ ೧೫ರೊಳಗೆ ಅರ್ಜಿ ಸಲ್ಲಿಸಬೇಕು. ೧ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿ.

ಡಾ|| ಎಂ. ಗೋಪಾಲಕೃಷ್ಣರಾವ್, ಪ್ರಿನ್ಸಿಪಾಲ್

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ ರೈಲ್ವೆ ಮತ್ತು ವಿಮಾನ ರವಾನೆ ಖರ್ಚು ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯತಿ ದೊರೆಯುತ್ತದೆ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦.

READ &
ADVERTISE IN
NAVAYUGA WEEKLY

ಪರೀಕ್ಷೆ ಮುಗಿಯಿತೆ?

ಇಂದಿಗೆ ಪರೀಕ್ಷೆ ಮುಗಿಯಿತು
ಎಂದು ಸಿನಿಮಾ ಮಂದಿರದತ್ತ
ತೆರಳೆ ಅನುಮತಿಯ ಬೇಡಿದಳು ಅವಳು.
ಮುಗಿಯಿತೇ ಪರೀಕ್ಷೆ?
ಇಷ್ಟು ಸಲೀಸಾಗಿ?
ಮೂಗಿಗೇರಿತು ಬಿಡದೆ ಬೆರಳು.

ದೈವ ಪರೀಕ್ಷೆ, ಭೂತ ಪ್ರೇತ ಪರೀಕ್ಷೆ,
ಗುರುಹಿರಿಯರ ಪರೀಕ್ಷೆ ಮತ್ತೆ
ನಡೆಯುವ ಆ ಈ ಪರೀಕ್ಷೆ....
ನಿಂತರೂ ಪರೀಕ್ಷೆ, ಕುಳಿತರೂ ಪರೀಕ್ಷೆ.
ಕ್ಷಣ ಕ್ಷಣವೂ ಒಂದಲ್ಲ, ನೂರು ಪರೀಕ್ಷೆ—

ಶಾಲೆಯಲ್ಲಿ ವರ್ಷಂಪ್ರತಿ ನಾಲ್ಕಾರು ಪರೀಕ್ಷೆ—
ಅವುಗಳಲ್ಲಿ ಪಡೆದಿದ್ದಾಳೆ ಕ್ಲಾಸು ಫಸ್ಟು!
ಆದರೆ, ವಧು ಪರೀಕ್ಷೆ ಎಂಬ ಅಗ್ನಿ ಪರೀಕ್ಷೆಯಲ್ಲಿ
ಅವಳಿದುವರೆಗೂ ನಿಂತಿದ್ದಾಳೆ ಲಾಸ್ಟು!
ಇದಕಿನ್ನ ಬೇಕಲ್ಲವೇ ನಾನ್‌ಸೆನ್ಸು?

ಶಾಲೆಯಲ್ಲಿದೆಯೇನು?
ಓದಲಾಗದ, ಆಡಲಾಗದ ನಾಲ್ಕಾರು ಭಾಷೆ!
"ಮನೆ ಭಾಷೆ" ಬಂದಿಲ್ಲವೆ ಬೇರೆ ಭಾಷೆ;
ವ್ಯವಹಾರಕ್ಕೆ ಬಾರದ ಗಣಿತ—ಜಾಮಿಟ್ರಿ—

ಎಲ್ಲೆಲ್ಲಿಯದೋ ಓಬಿರಾಯನ ಕಥೆ ಹೇಳುವ
ಇತಿಹಾಸ, ಪಾಲಿಟಿಕ್ಸ್, ಸೋಶಿಯಲ್ ಸ್ಟಡೀಸ್....
ಕುಬೇರ ಪುತ್ರಪುತ್ರಿಯರು ಪ್ರವೇಶ ಪಡಬಲ್ಲ
ಮೆಡಿಕಲ್ ಇಂಜಿನಿಯರಿಂಗ್‌ಗೆ ಲೀಡು ಮಾಡುವ
ತಲೆ ಹೋಗದ ಅನರ್ಥ ಸಾಯನ್ಸ—
ಮೇಲುಂಟು ಕೆಮಿಸ್ಟ್ರಿ ಫಿಸಿಕ್ಸ!

ಇದೆಲ್ಲ ಏನು? ಇನ್ನೂ ಇದೆ...
ಓದಲಾಗದ ಪುಸ್ತಕದ ಬದನೆ—
ಇದನೋದಿ ಇದ ಕಲಿತು ಇದಬರೆದು
ಜೀವನದ ಪರೀಕ್ಷೆಗೇನ ಬರೆವರು?

ಹತ್ತಾರು ಬಾರಿ ವಧುಪರೀಕ್ಷೆಯಲ್ಲಿ
ಗ್ರೇಸನ್ನು ಬಿಡದೆ ಸೇರಿಸಿಯೂ
ಮಿನಿಮಮವೂ ಪಡೆಯಲಾರದ ಮಗಳು
ನಿರ್ಜೀವ ಪರೀಕ್ಷೆಗಳಲಿ ಹೊಡೆವಳು ಸೆಂಟು!
ಪುಸ್ತಕಕೆ ಪುಸ್ತಕವೇ ಆಕೆಗೆ ಬೈ ಹಾರ್ಟು!

ಬೈಹಾರ್ಟು ಬರುವವರ ಹಾರ್ಟು ಬೇಕಾರು?
ದೇವಕಳೆಯಿಲ್ಲದ ಬರಿಮೂರ್ತಿ!
ಜೀವನವೇ ಕಲೆ,
ಮಾನವನಾಗಿ ಬದುಕುವುದೆ ವಿಜ್ಞಾನ.
ವ್ಯವಹಾರವೇ ಪರೀಕ್ಷೆ—
ಇದರಲ್ಲಿ ಗೋತ ಹೊಡೆದವರು—
—ಕ್ಲಾಸೂ ಹೊಡೆಯಬಹುದು.
—ಗ್ಲಾಸೂ ಒಡೆಯಬಹುದು.
—ಬ್ಲೌಸು ಹಾಕದೆಯೆ ಮೆರೆಯಲೂ ಬಹುದು.
—ಇದು ನಾಗರಿಕತೆಯೆ?
—ಸುಸಂಸ್ಕೃತಿ—ನಾಗರಿಕತೆಯ ಹೆಸರಲ್ಲಿ
ನಡೆಯುವ ಸ್ವೈರ ವೃತ್ತಿಯೆ?
ಸ್ವಾತಂತ್ರ್ಯ ಸ್ವರ್ಗ, ಸ್ವೈರವೇ ನರಕ
ಇವುಗಳ ನಡುವಿನದು
ಆಕಾಶ ಪಾತಾಳಗಳ ಅಂತರ!

ನಾಗರಿಕತೆಯ ಶಿಕ್ಷಣ ನೀಡದಿರುವನಕ
ಅನಾಗರಿಕ ಪರೀಕ್ಷೆಯೇ ನಡೆಯುತ್ತದೆ.
ಅಶ್ಲೀಲ ವಸ್ತುವೇ ಮೆರೆಯುತ್ತದೆ
ಎಲ್ಲೆಲ್ಲು ಕೇಳುತ್ತಲಿರುತ್ತದೆ—
ಅಶಾಂತಿಯ ಕ್ರಾಂತಿಕಂಬು.

— ಗೋರಾ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಪತ್ರಿಕಾ ಪ್ರಪಂಚ.

ಬರೆದವರು: ಶ್ರೀ ಶ್ರೀಕರ್ ಎಲ್. ಭಂಡಾರ್ಕರ್.

ಪ್ರಕಾಶನ: ಎ. ಎಂ. ಜಿ. ಸಾಹಿತ್ಯ ಪ್ರಕಾಶನ, ಉಡುಪಿ.

ಪುಟಗಳು: ೫೫. ಬೆಲೆ: ೫೦ ಪೈಸೆ. ಸಮಾಜ ಶಿಕ್ಷಣಕ್ಕೆ ಮೀಸಲಾದ ಸಾಹಿತ್ಯವನ್ನು ಪ್ರಕಟಿಸಲು ಬದ್ಧಕಟಿಯಾಗಿರುವ ಎ. ಎಂ. ಜಿ. ಸಾಹಿತ್ಯ ಪ್ರಕಾಶನದ ಹತ್ತನೆಯ ಪ್ರಕಟಣೆಯಿದು. ಪತ್ರಿಕೋದ್ಯಮದಲ್ಲಿ ದುಡಿದು ಸಾಕಷ್ಟು ಅನುಭವವಿರುವ ಶ್ರೀ ಭಂಡಾರ್ಕರರು ಈ ಸಂಬಂಧದ ಹಲವಾರು ವಿಷಯಗಳನ್ನು ಕಲೆಹಾಕಿ ಪತ್ರಿಕಾಪ್ರಪಂಚದ ಆಗುಹೋಗುಗಳ—ರಸಪ್ರಸಂಗ ಇತ್ಯಾದಿಗಳನ್ನು ಇಲ್ಲಿ ಕನ್ನಡಿಗರ ಮುಂದಿಟ್ಟಿದ್ದಾರೆ. ಪತ್ರಿಕಾ ಪ್ರಪಂಚದ ಒಂದು ಸ್ಥೂಲ ಚಿತ್ರವನ್ನು ನಾವಿಲ್ಲಿ ಕಾಣುತ್ತೇವೆ.

'ಪತ್ರಿಕಾ ಪ್ರಪಂಚ' ಮುಖ್ಯವಾಗಿ ಭಾರತದಲ್ಲಿ, ಕನ್ನಡದಲ್ಲಿ ಬರೆದ ಒಂದು ಯುಕ್ತಿಗ. ಹಾಗಾಗಿ ಇದರಲ್ಲಿ ಕನ್ನಡದ ಪತ್ರಿಕಾ ಪ್ರಪಂಚದ ಬಗ್ಗೆ ಏನಾದರೂ ಇದೆಯೇ ಎಂದು ಇಣುಕಿ ನೋಡಿದರೆ, ನಿರಾಸೆಯಾಗುತ್ತದೆ. ಮೊದಲನೆಯ ಪುಟದಲ್ಲಿನ 'ನವಭಾರತ', 'ಸುಧಾ', 'ಕಸ್ತೂರಿ' ಎಂಬ ಹೆಸರುಗಳಿಂದಲೇ ನಾವು ತೃಪ್ತರಾಗಬೇಕು. ಹಾಗೆಯೇ 'ದಿ ಹಿಂದೂ' ವಿನ ಬಗ್ಗೆ ಹೆಚ್ಚು ವಿವರ ನೀಡಿದ ಲೇಖಕರು ಉಳಿದ ಸುಪ್ರಸಿದ್ಧ ಭಾರತೀಯ ಪತ್ರಿಕೆಗಳತ್ತ ಹೆಚ್ಚು ಗಮನ ಹರಿಸಲಿಲ್ಲ. "ಆದರ್ಶ ಪತ್ರಕರ್ತ" ಎಂಬ ಅಧ್ಯಾಯದಲ್ಲಿ ಗಾಂಧೀಜಿ ಮತ್ತು 'ಹರಿಜನ'ದ ಕತೆ, ಕೆಲವೆಡೆ ಬರುವ 'ಹಿಂದೂ' ಪತ್ರಿಕೆಯ ಉಲ್ಲೇಖ ಬಿಟ್ಟರೆ, ಹೆಚ್ಚಿನ ವಿಚಾರಗಳು ವಿದೇಶೀಯ ಪತ್ರಿಕಾ ಪ್ರಪಂಚಕ್ಕೆ ಸಂಬಂಧಿಸಿದವು. 'ನ್ಯೂಯಾರ್ಕ್ ಟೈಮ್ಸ್'ಗೆ ೧೧, ೪೭೩. ಊರುಗಳಲ್ಲಿ ಚಂದಾದಾರರಿದ್ದಾರೆ ನಿಜ. ಕನ್ನಡದ 'ಕಸ್ತೂರಿ" ಎಷ್ಟು ಪ್ರತಿ ಅಚ್ಚಾಗುತ್ತದೆ?

ಇದಕ್ಕೆಲ್ಲಾ ಒಂದೇ ಕಾರಣವೆನ್ನಬಹುದು. ಭಾರತದಲ್ಲಿ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವ ಯಾವ ಪರಿಪೂರ್ಣ ವ್ಯವಸ್ಥೆಯೂ ಇಲ್ಲವೆಂದು ತೋರುತ್ತದೆ. ಈ ಪುಸ್ತಿಕೆಯಿಂದ 'ಪತ್ರಿಕಾ ಪ್ರಪಂಚ'ದ ವಿದೇಶೀ ಸ್ವರೂಪವನ್ನು ಬಹಳವಾಗಿ, ಸ್ವದೇಶೀ ರೂಪವನ್ನು ಸ್ವಲ್ಪವಾಗಿ ನಾವು ತಿಳಿದುಕೊಳ್ಳುವುದು ಸಾಧ್ಯ. ಅಂಕೆ ಸಂಖ್ಯೆಗಳ ಸಂಗ್ರಹ ಮತ್ತು ಪ್ರಕಟಣೆಯ ಕಡೆಗೆ ಸರಕಾರದ ಗಮನ ಸೆಳೆಯುವ ಅಗತ್ಯವನ್ನೂ ಇದು ಪ್ರತಿಬಿಂಬಿಸುತ್ತದೆ.

ಸುಂದರವಾದ ಮುದ್ರಣ ಸರಳ ಭಾಷೆ ಪುಸ್ತಕದ ಮೆರಗನ್ನು ಹೆಚ್ಚಿಸಿವೆ.

ದಕ್ಷಿಣ ಕನ್ನಡ ಜಿಲ್ಲೆ: (ಪ್ರಗತಿಚಿತ್ರ)

ಪ್ರಕಾಶನ: ಮೈಸೂರು ಸರಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆ, ಬೆಂಗಳೂರು. ಪುಟಗಳು ೪೬.

ಪಂಚವಾರ್ಷಿಕ ಯೋಜನೆಗಳಿಂದಾದ ದಕ್ಷಿಣಕನ್ನಡ ಪ್ರಗತಿ ಚಿತ್ರವನ್ನು ರೂಪಿಸುವ ಹೊತ್ತಿಗೆಯಿದು. ಹದಿನೈದು ವರ್ಷಗಳ ಹಿಂದಿದ್ದ ಚಿತ್ರದೊಡನೆ ಇಂದಿನ ಚಿತ್ರವನ್ನು ನಾವು ತುಲನೆ ಮಾಡುವುದಾದರೆ, ಯೋಜನೆಗಳಿಂದ ನಾವು ಪ್ರಗತಿಹೊಂದಿದ್ದೇವೆಂದು ಹೇಳಲೇಬೇಕು. ಪ್ರಗತಿಯ ಸ್ಥೂಲ ಚಿತ್ರವನ್ನು ಅಂಕೆ ಸಂಖ್ಯೆಗಳ ಆಧಾರದೊಡನೆ ಇಲ್ಲಿ ಕೊಡಲಾಗಿದೆ. ಆರಂಭದಲ್ಲಿ ತುಳುನಾಡಿನ ಸಂಕ್ಷಿಪ್ತ ಪರಿಚಯವನ್ನೂ ನೀಡಿರುವುದು ಪುಸ್ತಿಕೆಯ ಮೌಲ್ಯವನ್ನು ಹೆಚ್ಚಿಸಿದೆ. ಕೆಲವು ಚಿತ್ರಗಳನ್ನು ಸೇರಿಸಿರುವುದು—ಇವುಗಳಿಗೂ ಪ್ರಗತಿ ಚಿತ್ರಕ್ಕೂ ಸಂಬಂಧವಿದ್ದಂತಿಲ್ಲವಾದರೂ— ಉಚಿತವಿದೆ.

'ಪಶ್ಚಿಮ ಕರಾವಳಿಯಲ್ಲಿ ಸೇತುವೆಯ ರಚನಾ ಕಾರ್ಯ'ವೆಂಬ ಒಂದು ಚಿತ್ರವಿದೆ. ಇದು ಯಾವ ಸೇತುವೆಯದ್ದು ಎಂದೂ ಸೂಚಿಸಿದ್ದರೆ ಉತ್ತಮವಿತ್ತೆನಿಸುತ್ತದೆ. ಪ್ರಾಯಃ ಅದರ ರಚನೆ ಈಗಾಗಲೇ ಮುಗಿದಿರಲೂ ಬಹುದು! ಪ್ರಗತಿಯ ಚಿತ್ರವನ್ನು ನೀಡುವಾಗ ಪಂಚವಾರ್ಷಿಕ ಯೋಜನೆಗಳಿಂದಾದ ಪ್ರಗತಿ ಕಾರ್ಯಕ್ಕೆ ಸಂಬಂಧಿಸಿದ ಚಿತ್ರಗಳಿಗೆ ಪ್ರಾಶಸ್ತ್ಯವಿರಬೇಕೆನಿಸುತ್ತದೆ. ಸುಳ್ಯ ತಾಲೂಕಿನ ರಚನೆಯಾಗಿ ಕೆಲ ಸಮಯ ಕಳೆಯಿತು. ಈ ಹೊತ್ತಗೆ ೧೯೬೭ರ ಕೊನೆಯಲ್ಲಿ ಅಚ್ಚಾದುದು. ಆದರೆ, ಜಿಲ್ಲೆಯ ನಕ್ಷೆಯಲ್ಲಿಯೂ ಒಳಗಡೆಯಲ್ಲಿಯೂ ಈ ತಾಲೂಕಿನ ಹೆಸರಿಲ್ಲದಿರುವುದು ಅನ್ಯಾಯ. ಸರಕಾರದಂತಹ ಹಿರಿಯ ಹೊಣೆಗಾರ ವ್ಯಕ್ತಿಗಳೇ ಈ ರೀತಿ ಮಾಡುವುದಾದರೆ ಸಾಮಾನ್ಯರ ಪಾಡೇನು? ಇಂತಹ ಲೋಪದೋಷಗಳಿಗೆ 'ಪ್ರಗತಿ ಚಿತ್ರ'ದಲ್ಲಿ ಅವಕಾಶ ನೀಡದಿರುವುದು ಸೂಕ್ತ.

—ಗೋರಾ.



ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವ

ಮಣಿಪುರ.—ಮಣಿಪುರ ಎಯ್ಡೆಡ್ ಹಾಯರ್ ಎಲಿಮೆಂಟರಿ ಮತ್ತು ಬೋರ್ಡ್ ಎಲಿಮೆಂಟರಿ ಶಾಲೆಗಳ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವು ಇತ್ತೀಚೆಗೆ ಶ್ರೀ ಶಿರ್ವಾಡಿ ವಿಠಲ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಕೇಶವ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಂ. ಗೋವಿಂದ ಭಟ್‌ರವರು ಬಹುಮಾನ ವಿತರಣೆ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಳೆ ವಿದ್ಯಾರ್ಥಿ ಸಂಘದ ಮಹತ್ವ, ಉದ್ದೇಶಗಳನ್ನು ವಿವರಿಸಿದರು. ಕಾರ್ಯದರ್ಶಿ ಶ್ರೀ ವಿ. ಬಿ. ನೊರೊನ್ಹರವರು ಧನ್ಯವಾದ ಸಮರ್ಪಿಸಿದರು.

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....
ಅದಕ್ಕಾಗಿ ಚಿಂತಿಸುವಿರೇಕೆ?...............
ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ.........

ವೀಗಲ್ ಪೆಟ್ರೋಲ್ / ಸೀಮೆ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

VEEGAL 2 H.P. 3·4 H.P. 5 H.P.

- ಬೇಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು:
ವಿಕ್ಟರ್ ಟ್ರೇಡಿಂಗ್ ಕೋಪ್ರೇಶನ್
ಫಳನೀರು ರಸ್ತೆ, ಮಂಗಳೂರು-1. Ph. 5737

WANTED a secondary grade teacher for Venkatramana Aided Elementary School, Moodubettu, Kukkuje. Apply immediately.

NAVAYUGA 8—6—1967
Registered with the Registrar
of News Papers for India
under No. K. N. 3646/'67

REGD. No. B. G. 176
LICENCE No. 31
Licensed to Post without Prepayment

ನಿಮಗೂ ಗೊತ್ತಿರಲಿ

ಒಂದೂಕಾಲು ಶತಮಾನದ ಪ್ರಕಾಶನ ಸಂಸ್ಥೆ

ದಿನಕ್ಕೊಂದು ಪುಸ್ತಕ ಪ್ರಕಾಶನ! ತಿಂಗಳಿಗೊಂದು ಪ್ರಕಟನೆಯನ್ನು ಹೊರ ತರುವುದೇ ನಮ್ಮಲ್ಲಿ ಎಷ್ಟೋ ಸಾಹಸದ ಮಾತು. ಹಾಗೊಂದು ವೇಳೆ ತರಲಾರಂಭಿಸಿದರೂ, ಅಂತಹ ಸಂಸ್ಥೆಯು ಚಿರಂಜೀವಿಯಾಗಿರದಂತೆ ಬಿಟ್ಟು ಓದುವ ಹವ್ಯಾಸದವರು ನೋಡಿಕೊಳ್ಳುತ್ತಾರೆ. ಹಾಗೂ ಹೀಗೂ ಕುಟುಕು ಜೀವದಿಂದ ಕೂಡಿದ್ದರೂ, ಕೆಲವಾರು ವರ್ಷಗಳ ವರೆಗೆ ಪ್ರಕಾಶನಾ ಸಂಸ್ಥೆಯೊಂದು ಉಳಿದಿರಬೇಕೆಂದರೆ, ಅದು ಕಳ ದರ್ಜೆಯ, ಕಾಮ ಕೇಳಿಯ, ಅಶ್ಲೀಲ ಹಾಸ್ಯದ, ಕೊಳಕು ಸಂಭಾಷಣೆಯ ಕ್ಷುಲ್ಲಕ ಪುಸ್ತಕಗಳನ್ನು ಪ್ರಕಟಿಸುತ್ತಿರಬೇಕು. ನಮ್ಮ ಪುಸ್ತಕ ಲೋಕದ ಮಟ್ಟ ಹೀಗಿದೆಯೆನ್ನುವಾಗ, ಜರ್ಮನಿಯ ಒಂದು ಪುಸ್ತಕ ಸಂಸ್ಥೆ, ದಿನಕ್ಕೊಂದು ಪುಸ್ತಕ, ಅದರಲ್ಲೂ ಅರೆ ಜ್ಞಾನದವರಿಗೆ ಅರ್ಥವೇ ಆಗದಂತಹ ಉಚ್ಚ ಮಟ್ಟದ ವೈಜ್ಞಾನಿಕ ವಿಷಯಗಳಿಂದೊಡಗೂಡಿದ ಪುಸ್ತಕಗಳನ್ನು ಪ್ರಕಟಿಸುತ್ತಾ, ಹಾಗೂ ೧೨೫ ವರ್ಷಗಳಾದರೂ ಉಳಿದಿದೆಯೆಂದರೆ ಅದೊಂದು ಅದ್ಭುತ ಪವಾಡವೇ ಸರಿ!

ಜೂಲಿಯಸ್ ಸ್ಪ್ರಿಂಗರ್ ಪಬ್ಲಿಷಿಂಗ್ ಕಂಪೆನಿ! ಇದೇ ಪುಸ್ತಕ ಪ್ರಕಾಶನಾ ಸಂಸ್ಥೆಯು ಮೇ ಹತ್ತನೆಯ ತಾರೀಖಿನಂದು ೧೨೫ ವರ್ಷಗಳ ತನ್ನ ಮಹೋನ್ನತ ಸೇವೆಯನ್ನು ಮುಗಿಸಿ ೧೨೬ನೆಯ ವರ್ಷಕ್ಕೆ ಕಾಲಿಟ್ಟು, ಅದರ ಕುರುಹಾಗಿ ತನ್ನ ಒಂದೂಕಾಲು ಶತಮಾನೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸಿಕೊಂಡು ಇಡಿ ಪುಸ್ತಕ ಲೋಕದ ಗಮನವನ್ನು ಸೆಳೆಯಿತು. ವೈಜ್ಞಾನಿಕ ಸಂಬಂಧಿತ ವಿಷಯಗಳನ್ನು ಪ್ರಕಟಿಸುವ ಸಂಸ್ಥೆಗಳಲ್ಲಿ ಇದಕ್ಕಿಂತ ದೊಡ್ಡದೂ, ಇಷ್ಟೊಂದು ಪ್ರಖ್ಯಾತಿಯನ್ನು ಗಳಿಸಿದುದೂ ಇಡೀ ಯೂರೋಪಿನಲ್ಲಿ ಬೇರೊಂದಿಲ್ಲ.

ವೈಜ್ಞಾನಿಕ ಸಂಶೋಧನೆಗಳಲ್ಲಿ ಆಸಕ್ತಿ ಹಾಗೂ, ಅವುಗಳನ್ನು ಕೈಗೊಳ್ಳುವುದರಲ್ಲಿ ಆಸ್ಥೆ ಇರುವವರಿಗೆ ಈ ಸಂಸ್ಥೆಯ ಪ್ರಕಟಣೆಗಳು ಅನಿವಾರ್ಯವಾಗಿದೆ. ವೈದ್ಯಕೀಯ, ವೈಜ್ಞಾನಿಕ, ತಾಂತ್ರಿಕ ವಿಷಯಗಳ ಬಗ್ಗೆ ಇಲ್ಲಿಂದ ಪ್ರಕಟವಾಗುವ ಪುಸ್ತಕಗಳು ಅವಿರತ ಸಂಶೋಧನೆಗಳ ನಂತರ, ಸಾಧ್ಯವಿರುವ ಆಧಾರಗಳ ಮೇಲೆ ಬರೆಯಲ್ಪಟ್ಟವಾಗಿರುತ್ತವೆ. ಇವುಗಳಿಗೆ ಬೇಕಾದ ವಿಷಯಗಳನ್ನು ಸಂಗ್ರಹಿಸಲು ವಿಶ್ವದ ಎಲ್ಲಾ ಖ್ಯಾತ ಲೇಖಕರ, ತಜ್ಞರ ಬರವಣಿಗೆಗಳನ್ನು ಆಧಾರವಾಗಿ ತಗೆದುಕೊಳ್ಳಲಾಗುವುದು.

ಮೇಲ್ಕಂಡ ಪ್ರಕಾಶನಾ ಸಂಸ್ಥೆಯನ್ನು ಆರಂಭಿಸಿದ ಜೂಲಿಯಸ್ ಸ್ಪ್ರಿಂಗರ್ ತನ್ನ ೨೫ನೆಯ ಹುಟ್ಟು ಹಬ್ಬದಂದು, ಎಂದರೆ ಕ್ರಿ. ಶ. ೧೮೪೨ ಮೇ ಹತ್ತರಂದು ಪುಸ್ತಕದ ಅಂಗಡಿಯೊಂದನ್ನು ತೆರೆದರು. ಸ್ಪ್ರಿಂಗರ್ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಪ್ಯಾರಿಸ್ ಮುಂತಾದೆಡೆಗಳಿಗೆಲ್ಲಾ ಸುತ್ತಿ, ಅಲ್ಲಿನ ಪ್ರಕಾಶನವನ್ನು ಕೂಲಂಕಷವಾಗಿ ಅಭ್ಯಸಿಸಿ ಬಂದಿದ್ದರು. ಅವರು ಪ್ರಕಾಶನವನ್ನು ಆರಂಭಿಸಿದಾಗ ಪ್ರಖ್ಯಾತ ಲೇಖಕರಾದ ಆಗಸ್ಟ್ ಬೋರ್ಕ್, ಜೆರಾಮಿಯಾಸ್ ಗೋಟ್ಟೆಲ್ಫ್ ಎಂಬುವರ ಕೃತಿಗಳು ಹೊರಬಂದವು. ೧೮೫೮ರಲ್ಲಿ, ಅವರು ಹೊರತಂದ ವರ್ನರ್ ಸೀಮನ್ಸರ ತಾಂತ್ರಿಕ ವಿಷಯದ ಕೃತಿಗಳು ಆ ವರ್ಗದ ಪುಸ್ತಕಗಳ ಪ್ರಕಟಣೆಗೆ ನಾಂದಿಯನ್ನು ಹಾಕಿ ಕೊಟ್ಟವು.

ಜೂಲಿಯಸ್ ಸ್ಪ್ರಿಂಗರ್ ಅವರು ೧೮೭೭ರಲ್ಲಿ ಮೃತರಾಗುವ ವೇಳೆಗೆ ಸಂಸ್ಥೆಯು ಬಹುಮಟ್ಟಿಗೆ ಬೆಳೆದು ನಿಂತಿತ್ತು. ಅವರ ಕಾಲಾನಂತರ ಅವರ ಮಕ್ಕಳು ಅದನ್ನು ರೂಢಿಸಿಕೊಂಡು ಬಂದರು. ೧೯೦೭ರಲ್ಲಿ ಸಂಸ್ಥೆಯು ಮೊಮ್ಮಕ್ಕಳ ಕೈಗೆ ಬಂದಿತು. ಫರ್ಡಿನಾಂಡ್ ಮತ್ತು ಸ್ಪ್ರಿಂಗರ್ ಎಂಬ ಹೆಸರಿನ ಆ ಮೊಮ್ಮಕ್ಕಳು ಈ ಐವತ್ತು ವರ್ಷಗಳಲ್ಲಿ, ವಿಜ್ಞಾನ, ಗಣಿತ, ವೈದ್ಯಕೀಯ ಗತಿಗೆ ಸಂಬಂಧಿಸಿದ ಪುಸ್ತಕಗಳನ್ನು ಹೇರಳವಾಗಿ ಪ್ರಕಾಶಿಸಿ, ಸಂಸ್ಥೆಯು ತಳಹದಿಯು ಪೂರ್ಣ ಭದ್ರತೆಯನ್ನು ಪಡೆಯುವಂತೆ ಮಾಡಿದರು; ಇವರೇ ೧೯೨೪ರಲ್ಲಿ ವಿಯನ್ನಾದಲ್ಲಿ ಮತ್ತೊಂದು ಪುಸ್ತಕ ಸಂಸ್ಥೆಯನ್ನು ತೆರೆದರು.

೧೯೪೫ರಲ್ಲಿ ಈ ಸಂಸ್ಥೆಗೆ ರಾಹುದೆಸೆ ಒದಗಿತು. ಅದೇ ಎರಡನೇ ಮಹಾ ಯುದ್ಧವು ಮುಗಿದು ಮಿತ್ರ ರಾಷ್ಟ್ರಗಳ ನಡುವೆ ಆದ ಒಪ್ಪಂದದ ಪ್ರಕಾರ ಬರ್ಲಿನ್ ನಗರವನ್ನು ನಾಲ್ಕು ಹೋಳಾಗಿ ವಿಭಜಿಸಲಾಯಿತು. ಸ್ಪ್ರಿಂಗರ್ ಸಂಸ್ಥೆಯ ಮುಂಭಾಗವು ಪಶ್ಚಿಮ ಬರ್ಲಿನ್‌ನಲ್ಲಿ ಉಳಿದುಕೊಂಡರೂ, ಉಳಿದೆಲ್ಲಾ ಭಾಗವು ರಷ್ಯ ಆಳ್ವಿಕೆಗೊಳಪಟ್ಟ ಪೂರ್ವಬರ್ಲಿನ್‌ನಲ್ಲಿ ಸೇರಿಹೋಯಿತು. ರಷ್ಯನ್ ಅಧಿಕಾರಿಗಳು ಕಟ್ಟಡದ ಸಮಸ್ತ ವಸ್ತುಗಳನ್ನೂ ವಶಪಡಿಸಿ ಕೊಂಡರು.

ಆದರೆ, ಫರ್ಡಿನಾಂಡ್ ಸಹೋದರರು ಎದೆಗುಂದದೆ, ಮತ್ತೆ ಪ್ರಕಾಶನ ಕಾರ್ಯವನ್ನು ಮುಂದುವರಿಸಿದರು. ೧೯೪೬ರಲ್ಲಿ, ಯುದ್ಧಾನಂತರದ ಮೊದಲ ಕೃತಿಯಾಗಿ ಕಾರ್ಲ್ ಜಾಸ್ಪರ್ಸ್ ಎಂಬ ತತ್ವವೇತ್ತರು ಬರೆದ "ವಿಶ್ವವಿದ್ಯಾ ನಿಲಯಗಳ ಉದ್ದೇಶ" ಎಂಬ ಪುಸ್ತಕವನ್ನು ಹೊರತರಲಾಯಿತು. ಯುದ್ಧ ಮುಗಿದಾಗಿನಿಂದ, ಇಂದಿನ ವರೆಗೆ ೩೭೫೦ ಪುಸ್ತಕಗಳು ಈ ಸಂಸ್ಥೆಯಿಂದ ಹೊರ ಬಂದಿದೆ. ಇದನ್ನು ಲೆಕ್ಕ ಹಾಕಿ ನೋಡಿದರೆ, ದಿನಕ್ಕೊಂದು ಹೊತ್ತಿಗೆಯಂತೆ ಹೊರ ಬಂದಿದೆಯೆಂದು ತಿಳಿದು ಬರುತ್ತದೆ.

ಪುಸ್ತಕಗಳನ್ನು ಮಾತ್ರವಲ್ಲದೆ, ಸ್ಪ್ರಿಂಗರ್ ಸಂಸ್ಥೆಯು ೧೫೦ ವೈಜ್ಞಾನಿಕ ಸಂಚಿಕೆಗಳನ್ನು ನಡೆಸುತ್ತಿದೆ. ಇವುಗಳ ಸಂಪಾದಕೀಯ ವರ್ಗವು ಅಂತಾರಾಷ್ಟ್ರೀಯ ಪಾರಿಶ್ರಮಿಕರಿಂದ ಕೂಡಿದೆ. ಇಂತಹ ದೇಶಗಳು ಮಾತ್ರ ಈ ಪುಸ್ತಕಗಳನ್ನು ಕೊಳ್ಳುತ್ತಿವೆಯೆಂದು ಹೇಳಲು ಸಾಧ್ಯವಿಲ್ಲ. ಇವುಗಳಿಗೆ ಬೇಡಿಕೆ ನೀಡದ ದೇಶಗಳೇ ಇಲ್ಲ. ಕಮ್ಯೂನಿಸ್ಟ್ ದೇಶಗಳಿಗೂ ಈ ಪುಸ್ತಕಗಳು ಅವಶ್ಯಬೇಕೇ ಬೇಕು!

ಸಂಸ್ಥೆಯು ಈಗ ೩೦ ನೋಬಲ್ ಪಾರಿತೋಷಕ ವಿಜೇತರ ಪುಸ್ತಕಗಳನ್ನು, ಅವರ ಮೂಲ ಭಾಷೆಗಳಲ್ಲಿಯೇ ಹೊರತರುವ ಕಾರ್ಯವನ್ನು ಕೈಗೊಂಡಿದೆ. ಈ ಸಂಸ್ಥೆಗೆ ಶುಭ ಸಂದೇಶಗಳು ಪ್ರಪಂಚದ ನಾನಾ ಮೂಲೆಗಳಿಂದ ಬಂದಿವೆ!

ಇರುವೆ

೧

ಇರುವೆಯ ಹಿಂಡದು ಕಾಣುತಿದೆ
ಸಾಲು ಸಾಲಾಗಿ ಸಾಗುತ್ತಿದೆ
ಮಾತನು ಆಡುತ
ದೇವನ ನೋಡುತ
ಗೂಡಿನ ಕಡೆಗೆಯೇ ಓಡುತಿದೆ

೨

ಉರಿಯುವ ಬಿಸಲಿಗೆ ಭಯಪಡದೆ
ಸತತವು ದುಡಿವುವು ಎಡೆ ಬಿಡದೆ
ಸುಂದರ ದಿನದಲ್ಲಿ
ಕೆಲಸದ ಕ್ಷಣದಲ್ಲಿ
ಕಾಳುಗಳನು ಶೇಖರಿಸುತಿವೆ

೩

ಅಲ್ಲೊಂದು ಮಿಂಚು ಗುಡುಗು
ಇಲ್ಲೊಂದು
ಸದ್ಯದಲೇ ಮಳೆರಾಯ ಬಹನೆಂದು
ಬಾನಕಡೆ ನೋಡುತಿವೆ
ಬೇಗನೆ ತಾ ಓಡುತಿವೆ
ಮುದದಲಿ ಮಳೆರಾಯನ
ಸ್ವಾಗತಿಸುತಿವೆ

೪

ತಂಪಾದ ಮಾರುತ ಬೀಸುತಿದೆ
ಮೋಡವು ಮುಗಿಲಲಿ ತೇಲುತಿದೆ
ಸೆಕೆಯಿಂದ ಬೆಂದ
ಬುವಿಗೆ ಆನಂದ
ಜಗವು ಸಸ್ಯ ಶ್ಯಾಮಲವಾಗುತಿದೆ.

೫

ಬೇಗ ಸೇರುವ ಅವಸರದಲ್ಲಿ
ಮಳೆಗಾಲವ ಕಳೆಯುವ ಲೀಲೆಯಲ್ಲಿ
ಗೂಡನು ಸೇರುತ
ನೆಮ್ಮದಿ ಬೀರುತ
ಸಂಗ್ರಹಿಸಿದ ಕಾಳನು ತಿನ್ನುತಿದೆ!

— "ಮಲ್ಲಾರಿ"

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
—ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

15—6—1967



೨೦ ಪೈಸೆ

ಕಥಾ ಪ್ರಪಂಚ

ವಿಮೋಚನೆ

ಬರೆದವರು. ಶ್ರೀ ಸ. ನಾರಾಯಣ.

ಗೀತ ಇಂಟರ್‌ವ್ಯೂ ಮುಗಿಸಿಕೊಂಡು ಮನೆಗೆ ಹಿಂದಿರುಗುವ ವೇಳೆಗೆ ಸಂಜೆ ಏಳು ಗಂಟೆಯಾಗಿತ್ತು. ಗೀತಳ ಅಣ್ಣ ಮತ್ತು ಅತ್ತಿಗೆ ಅವಳ ಬರುವನ್ನೇ ಎದುರು ನೋಡುತ್ತಿದ್ದರು. ಅವಳು ಉಲ್ಲಾಸದಿಂದಲೇ ಮನೆಗೆ ಬಂದಳು.

"ಇಂಟರ್‌ವ್ಯೂ ಆಗಿಯಿತೇನಮ್ಮ"

"ಹೂನಣ್ಣ"

"ತುಂಬ ಪ್ರಶ್ನೆಗಳನ್ನು ಕೇಳಿದರೇನಮ್ಮ"

"ಅವರೋ ಅವರ ಪ್ರಶ್ನೆಗಳೋ!"

"ಯಾಕೆ ಗೀತ ಹಾಗನ್ತೀಯ"

"ಅಪ್ಪಣ್ಣ ತಂದೆ, ತಾಯಿ, ವಾಸ ಸ್ಥಳ ವಿಚಾರಿಸೋದು ನ್ಯಾಯ. ನಿಮ್ಮ ಎತ್ತರ, ದಪ್ಪ ಎಷ್ಟು? ದಿನಕ್ಕೆ ಎಷ್ಟು ಊಟ ಮಾಡುತ್ತೀರಿ ಎಂದು ಕೇಳಬೇಕೇನಣ್ಣ"

"ಅಂತೂ ಇಂಟರ್‌ವ್ಯೂ ಮುಗಿಯಿತಲ್ಲ ಬಿಡು" ಎಂದರು ವೆಂಕಣ್ಣ.

'ಅಣ್ಣ ತಂಗಿ ಇಬ್ಬರಿಗೂ ಸರಿಯಾಗಿದೆ. ಏ ಗೀತಾ ತಿಂಡಿ ಕಾಫಿ ಬೇಕೋ, ಬೇಡ್ವೋ ಇಂಟರ್‌ವ್ಯೂ ಮುಗಿಸಿ ಬಂದ ಸಂಭ್ರಮದಲ್ಲಿ ಎಲ್ಲ ಬಿಟ್ಟುಬಿಟ್ಟೆಯೋ ಎಂದರು ಅವಳ ಅತ್ತಿಗೆ ಸರಳ.

'ಬಂದೆ ಅತ್ತಿಗೆ' ಎನ್ನುತ್ತಾ ಗೀತ ಒಳಕ್ಕೆ ನಡೆದಳು.

ಗೀತ ತಿಂಡಿ ಮುಗಿಸಿ ಕಾಫಿ ಕುಡಿಯುತ್ತಾ ಕುಳಿತಿದ್ದಳು. ವೆಂಕಣ್ಣ ತಂಗಿಯ ಸಮೀಪದಲ್ಲಿಯೇ ಕುರ್ಚಿ ಹಾಕಿಕೊಂಡು ಕುಳಿತುಕೊಂಡರು.

'ಇಂಟರ್‌ವ್ಯೂ ಏನೋ ಮುಗಿಯಿತು ಗೀತ, ಈಗಲೂ ಯೋಚನೆ ಮಾಡು. ನೀನು ಕೆಲಸಕ್ಕೆ ಸೇರೋದು ನನಗಂತೂ ಇಷ್ಟ ಇಲ್ಲವಮ್ಮ' ಎಂದರು ವೆಂಕಣ್ಣ.

'ನನ್ನ ಮಾತಿನಲ್ಲಿ ನಿನಗೆ ನಂಬಿಕೆ ಇಲ್ಲವೇನಣ್ಣ'.

'ಹಾಗಂತ ನಾನು ಹೇಳಿದನೇನಮ್ಮ ಕಾಲ ತುಂಬ ನಾಜೂಕು"

'..........'

'ನನಗೆ ಭಗವಂತ ಯಾವುದಕ್ಕೂ ಕೊರತೆ ಮಾಡಿಲ್ಲಮ್ಮ. ನಿನ್ನನ್ನು ಸಾಕುವ ಶಕ್ತಿ ಕೊಟ್ಟಿದ್ದಾನೆ. ನೋಡಿದ ಜನ ತಂಗಿಗೆ ಎರಡು ಹೊತ್ತು ಅನ್ನ ಹಾಕಲಾರದೆ ಕೆಲಸಕ್ಕೆ ಸೇರಿಸಿದ ಅಂತ ಆಡುಕೊಳ್ಳುಹುದು

"ನೀನು ಬೇಸರಪಟ್ಟುಕೊಳ್ಳುವುದಾದರೆ ನಾನು ಖಂಡಿತ ಹೋಗುವುದಿಲ್ಲಣ್ಣ"

"ಬೇಸರದ ವಿಷಯವಲ್ಲ ಗೀತ.... ನೀನು ಸುಖವಾಗಿದ್ದರೆ ಸಾಕು. ನಂಗಷ್ಟೇ ಬೇಕಾಗಿರೋದು ...ನೀನು ಕಂಡ ಹಾಗೆ ಅನೇಕ ಕಡೆ ಯೋಗ್ಯ ಗಂಡುಗಳನ್ನು ನೋಡಿದ್ದಾಯ್ತು.... ಯಾಕೋ ಕಂಕಣಬಲ ಕೂಡಿ ಬರುತ್ತಿಲ್ಲ.

'ಅಂತೂ ನನ್ನನ್ನು ಆದಷ್ಟು ಜಾಗ್ರತೆ ಮನೆಯಿಂದ ಓಡಿಸಬೇಕು ಅಂತ ನಿನ್ನ ಯೋಚನೆ"

'ಖಂಡಿತ ಇಲ್ಲಮ್ಮ.. ನನ್ನ ಕರ್ತವ್ಯ ನಾನು ನಿರ್ವಹಿಸಬೇಕಲ್ಲಮ್ಮ' ಎಂದರು ವೆಂಕಣ್ಣ.

"ಅತ್ತಿಗೆ ಅಣ್ಣ ಅಂತು ಹಿಡಿದ ಪಟ್ಟು ಬಿಡೋ ಹಾಗಿಲ್ಲ ನೀವೇನು ಅಂತೀರಾ ... ನೀವಾದರೂ ಒಪ್ಪಿಕೊಳ್ಳಿ ಅತ್ತಿಗೆ...... ಮನೆಯಲ್ಲಿ ಕೂತು ನಾನೇನು ಮಾಡಲಿ . ನೀವು ಯಾವ ಕೆಲಸಕ್ಕೂ ಬಿಡೋದೇ ಇಲ್ಲ.... ಒಳ್ಳೆ ನಿದ್ದೆ ಮಾಡಬೇಕು ಪ್ಲೀಸ್ (please) ನೀವಾದರೂ ಅಣ್ಣನಿಗೆ ಹೇಳಿ ಅತ್ತಿಗೆ" ಎಂದು ರಾಗ ಎಳೆದಳು ಗೀತ.

"ನಂದೇನಮ್ಮ ಇದೆ ನಿಮ್ಮಣ್ಣ ಉಂಟು ನೀನುಂಟು' ಎಂದರು ಸರಳ.

'ನಾನು ನೀವಿಬ್ಬರೂ ಒಪ್ಪಿಕೊಳ್ಳುವವರೆವಿಗೂ ಸತ್ಯಾಗ್ರಹ ಹೂಡುತ್ತೇನೆ ಅಷ್ಟೆ".

"ಹಾಗೆ ಮಾಡು ನನ್ನ ತಾಯಿ ನಿನಗೆ ಪುಣ್ಯ ಬರುತ್ತದೆ...ಅಯ್ಯೋ ಪೆದ್ದಿ ನೀನು ಬಿ. ಎಸ್ಸಿ. ಡಿಗ್ರಿ ಪಡೆದದ್ದು ದಂಡ ಕಣೆ ಇಂಟರ್‌ವ್ಯೂ ಮುಗಿಯಿತು. ನಾಳೆ ಆರ್ಡರ್ ಬಂದರೆ ಸೀದಾ ಹೋಗಿ ಕೆಲಸಕ್ಕೆ ಹಾಜರಾಗು.... ನಿಮ್ಮಣ್ಣನಿಗೆ ಹೋಗ್ಲಿ ಒಳ್ಳೆ ಅಂತ ಕೇಳಬೇಡ ..ಮಧ್ಯೆ ಗಲಾಟೆ ಮಾಡುವುದಕ್ಕೆ ನಾನು ಇರುತ್ತೇನಲ್ಲ" ಎಂದಳು ಸರಳ.

'ಅವಳ ಕಡೆಗೆ ನೀನು ಸೇರಿಕೊಂಡು ಬಿಟ್ಟೆಯೇನೆ?"

'ಅಲ್ರೀ ನಿಮಗ ಅಷ್ಟು ಗೊತ್ತಾಗುದಿಲ್ವೇ....ಅವಳಿಗಾ ಮದುವೆಯಾಗಿದ್ದಿದ್ದರೆ ಯಾವ ಯೋಚನೆ ಇರುತ್ತಿರಲಿಲ್ಲ. ಕಾಲೇಜಿನ ಓದು ಮುಗಿಯಿತಲ್ಲ. ಅವಳು ಒಂದೇ ಸಮನೆ ಮನೆಯಲ್ಲಿ ಕೂತು ಏನು ಮಾಡಬೇಕು. ಈಗ ಎಷ್ಟು ಜನ ಹುಡುಗಿಯರು ಕೆಲಸಕ್ಕೆ ಹೋಗುತ್ತಿಲ್ಲ. ಅದರಿಂದ ನಿಮಗೇನು ನಷ್ಟ ...ಅವಳ ಹಣ ಅವಳು ಉಳಿಸಿಕೊಳ್ಳಲಿ.... ಅವಳು ಒಂದೇ ಪಲ್ಲವಿ ಹಾಡುತ್ತಾಳೆ... ನೀವು ಬೇಡ ಅಂತೀರಿ ಸುಮ್ಮನೆ ಸಂತೋಷದಿಂದ ಒಪ್ಪಿಕೊಳ್ಳಿ...ಕೆಲಸಕ್ಕೆ ಹೋಗಲಿ ...ಆಫೀಸಿನ ಸಂಚಯವಾದರೂ ಆಗುತ್ತದೆ__ನಾಲ್ಕು ದಿನ ಬೇಸರವಾದರೆ ಅವಳೇ ಬಿಡುತ್ತಾಳೆ" ಎಂದು. ಸರಳ ವಾದಿಸಿದಳು.

'ಥ್ಯಾಂಕ್ಸ್ ಅತ್ತಿಗೆ' ಎಂದಳು ಗೀತ.

"ನನಗೆ ಅದೆಲ್ಲ ಏನೂ ಬೇಡ. ನೀನು ನಗು ನಗುತ್ತಾ ಇದ್ದರೆ ಸಾಕು' ಎಂದಳು ಸರಳ.

'ಅವಳೇ ಅನುಮತಿ ಕೊಟ್ಟು ನಿನ್ನ ಪರವಾಗಿ ಇರುವಾಗ ನನ್ನದೇನಿದೆಯಮ್ಮ ಗೀತ" ಎಂದು ಸೋತು ನುಡಿದರು ವೆಂಕಣ್ಣ.

— ೨ —

ವೆಂಕಣ್ಣ ಕಂಪೆನಿಯೊಂದರ ಮ್ಯಾನೇಜರರಾಗಿದ್ದರು. ನೋಡಿದ ಹತ್ತು ಜನ ಹೆಮ್ಮೆ ಪಡುವಂತ ಸುಂದರ ಸಂಸಾರ ಅವರದು. ಗೀತ ವೆಂಕಣ್ಣನವರ ಒಬ್ಬಳೇ ತಂಗಿ. ಸ್ವಪ್ರಯತ್ನ, ಪ್ರಾಮಾಣಿಕತೆ, ಪ್ರತಿಭೆಗಳಿಂದ ಹಿರಿಯ ಸ್ಥಾನಗಳಿಸಿದ್ದರು ವೆಂಕಣ್ಣ. ಅವರ ವಿದ್ಯಾಭ್ಯಾಸ ಮುಗಿಯುವ ಮೊದಲೇ ಅವರ ತಂದೆ ಕಣ್ಮುಚಿದ್ದರು. ಗೀತ ಹತ್ತು ವರ್ಷದವಳಿದ್ದಾಗಲೇ ಅವರ ತಾಯಿ ಹೃದಯಾಘಾತದಿಂದ ಕಣ್ಮರೆಯಾಗಿದ್ದರು. ವೆಂಕಣ್ಣ ಮತ್ತ ಸರಳ ಗೀತಳನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಗೀತಳ ಅತ್ತಿಗೆ ಸರಳ ಅವಳಿಗೆ ತಾಯಿ ಇಲ್ಲ ಎನ್ನುವ ಕೊರತೆಯನ್ನು ನೀಗಿಸಿದ್ದರು. ವಾಣಿ, ಪದ್ಮ ಮತ್ತು ಮಧು ವೆಂಕಣ್ಣನ ಮಕ್ಕಳು ಸರಳ ತನ್ನ ಮಕ್ಕಳಿಗೂ ಗೀತಳಿಗೂ ಎಂದೂ ಭೇಧ ಎಣಿಸಲಿಲ್ಲ. ಮೂವರು ಮಕ್ಕಳಿಗೂ ಗೀತ 'ಅತ್ತೆ'ಯಾಗಿರದೆ 'ಅಕ್ಕ'ಳಾಗಿದ್ದಳು.

ಸರಳ ಮತ್ತು ವೆಂಕಣ್ಣ ಗೀತಳ ವಿವಾಹಕ್ಕೆ ಹಲವಾರು ಬಗೆಯಲ್ಲಿ ಪ್ರಯತ್ನ ನಡೆಸಿದ್ದರೂ. ಅದರ ಯಾವ ಚಿಕ್ಕ ಕಾರಣದಿಂದಲೇ ವಿವಾಹ ಪ್ರಯತ್ನ ಮುರಿಯುತ್ತಿತ್ತು. ಗೀತ ಅತ್ತಿಗೆಯ ಅಕ್ಕರೆಯ ಆಶ್ರಯದಲ್ಲಿ ಬೆಳೆದು ಬಿ. ಎಸ್. ಸಿ. ಪದವೀಧರಳಾದಳು. ತಂಗಿಯ ಮನಸ್ಸಿಗೆ ಸ್ವಲ್ಪವೂ ನೋವಾಗದಿರುವಂತ ವರ್ತಿಸುತ್ತಿದ್ದ ವೆಂಕಣ್ಣ. ಗೀತ ಪದವೀಧರಳಾದ ತರುವಾಯ ಸುಮ್ಮನೆ ಮನೆಯಲ್ಲಿ ಕಾಲಹರಣ ಮಾಡುವುದಕ್ಕೆ ಬದಲಾಗಿ ಕೆಲಸಕ್ಕೆ ಸೇರುತ್ತೇನೆ ಎಂದಾಗ ವಿರೋಧಿಸಿದ್ದರು. ಸರಳ ನಾದಿನಿಯ ಪರವಾಗಿ ವಾದಿಸಿದರು.

ಕೂಡಲೇ ಒಂದು ಕೆಲಸಕ್ಕೆ ಸೇರಿಕೊಳ್ಳುವಂತೆ ಗೀತಳಿಗೆ ಕಛೇರಿಯ ಮುಖ್ಯಾಧಿಕಾರಿಗಳಿಂದ ಆರ್ಡರು ಬಂತು. ಗೀತ ಸಂತೋಷದಿಂದ ಒಪ್ಪಿದಳು. ವಿಷಯವನ್ನು ತಿಳಿದು ವಂಕಣ್ಣ 'ಸಂತೋಷವಮ್ಮ' ಎಂದರಷ್ಟೆ. 'ನಿನಗೆ ಕೆಲಸ ಸಿಕ್ಕಿತು ಎನ್ನುವ ಸಂತೋಷ ಸಂಭ್ರಮಗಳಲ್ಲಿ ನಮ್ಮನ್ನು ಮರೆತು ಬಿಡಬೇಡ' ಎಂದಳು ಸರಳ.

ಗೀತ ಸ್ವಲ್ಪವೂ ವಿಳಂಬ ಮಾಡದೆ ಕೆಲಸದ ಮೇಲೆ ಹಾಜರಾದಳು ಹೆಡ್‌ಕ್ಲಾರ್ಕ್ ಕಛೇರಿಯ ಸಹೋದ್ಯೋಗಿಗಳ ಪರಿಚಯ ಮಾಡಿಕೊಟ್ಟು ಕೆಲಸದ ರೀತಿ ನೀತಿಯನ್ನು ತಿಳಿಸಿದರು.

ಗೀತಳಿಗೆ ಹೊಸ ಪ್ರಪಂಚಕ್ಕೆ ಬಂದ ಅನುಭವವಾಗಿತ್ತು. ಗಟ್ಟಿಯಾಗಿ ಉಸಿರಾಡಲು ಅಂಜುವಂತಾಯಿತು. ಎಲ್ಲವೂ ಅವಳಿಗೆ ಒಂದೇ ಎಂದು. ಹೊಸ ಅನುಭವಗಳು ಕಾದಿರುತ್ತಿದ್ದವು.

ಕಛೇರಿಯ ಸಹೋದ್ಯೋಗಿಗಳ ಕಣ್ಣು ಸದಾ ತನ್ನ ಕಡೆಗೆ ಇರುತ್ತವೆ ಎಂಬುದನ್ನು ತಿಳಿಯಲು ಗೀತಳಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಕೆಲವರ ಹಸಿದ ಕ್ರೂರ ದೃಷ್ಟಿಯನ್ನು ನೋಡಿ ಗೀತ ಕಂಗಾಲಾದಳು. ಯಾರ ಕಡೆಗೂ ದೃಷ್ಟಿ ಹಾಯಿಸದೆ ಸದಾ ತನ್ನ ಕೆಲಸದ ಕಡೆಗೆ ಗಮನ ಹರಿಸುತ್ತಿದ್ದಳು.

ಕೆಲ ಯುವಕರು ಅವಳ ಪರಿಚಯ ಮಾಡಿಕೊಳ್ಳಲು ಉತ್ಸಾಹ ತಾಳಿದ್ದರು. ಗೀತ ಸಂಕೋಚವಿಲ್ಲದೆ ಎಲ್ಲರ ಸಹಾನುಭೂತಿಯನ್ನು ನಿರಾಕರಿಸಿದಳು. ಅವಳ ಬಗೆಗೆ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಟೀಕೆ ಮಾಡಿದರು.

ಗೀತ ಕೆಲಸಕ್ಕೆ ಸೇರಿದ ಒಂದು ವರ್ಷದೊಳಗಾಗಿಯೇ ಇದೊಂದು ಪಂಜರ ಎನ್ನುವ ಅನುಭವ ಅವಳಿಗಾಯಿತು. ಸರೋಜ ಗೀತಳ ಗೆಳತಿ. ಸರೋಜ ಸಹೋದ್ಯೋಗಿಯಾಗಿದ್ದುದು ಗೀತಳಿಗೆ ತುಂಬ ಅನುಕೂಲವಾಯಿತು.

ಸರೋಜ ಗೆಳತಿಗೆ ಕಛೇರಿಯ ಹಲ ಬಗೆಯ ಅನುಭವಗಳನ್ನು ತಿಳಿಸುತ್ತಿದ್ದಳು. ಗೆಳತಿಯ ಧೈರ್ಯ, ಸಹಕಾರ, ವಿಶ್ವಾಸಗಳಿಂದ ಗೀತಳಿಗೆ ಎಷ್ಟೋ ಧೈರ್ಯ ಬಂತು.

ಗೀತ ಕಛೇರಿಯಲ್ಲಿ ಸರೋಜಳ ವಿನಃ ಉಳಿದವರು ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಕೆಲವು ಗುಮಾಸ್ತರು "ಮೂಕಾಂಬೆ" ಎಂದು ಹೆಸರಿಟ್ಟರು. ಗೀತ ಮೊದಮೊದಲು ಗೆಳತಿಯೊಂದಿಗೆ ಹೋಟೆಲಿಗೆ ಬರಲೂ ಹಿಂಜರಿಯುತ್ತಿದ್ದಳು. "ಸದ್ಯಕ್ಕೆ ನನ್ನ ಜೊತೆ ಬಾ ಮಹರಾಯತಿ...... ನಿನ್ನ ರಾಜಕುಮಾರ ಬಂದ ತರುವಾಯ ನಾನೇನೂ ನಿನ್ನನ್ನು ಕರೆಯುವುದಿಲ್ಲ" ಎಂದು ಸರೋಜ ರೇಗಿಸುತ್ತಿದ್ದಳು. ಗೀತ ಕೋಪಗೊಳ್ಳದೆ ಗೆಳತಿಯೊಂದಿಗೆ ಹೊರಡುತ್ತಿದ್ದಳು.

— ೩ —

• ಗೋಪಾಲ ಸ್ವಾಮಿ ಕಛೇರಿಯ ಮುಖ್ಯಾಧಿಕಾರಿಗಳು. ಅವರು ವಿದ್ಯಾವಂತ

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಫೋನ್ 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫
++
ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++
ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.
ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ನೆಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಗೊಳಿಸುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಭಾರತದ ಪ್ರಧಾನಿಯವರು ನ್ಯೂ ನಲ್ ಪ್ರೆಸ್ ಕ್ಲಬ್ಬಿನ ಸತ್ಕಾರ ಕೂಟದಲ್ಲಿ ಮಾತನಾಡುತ್ತಿರುವುದನ್ನು ವೀಕ್ಷಿಸಬಹುದು.
(ಅಮೆರಿಕಾ ಸಂದರ್ಶನ ಕಾಲದಲ್ಲಿ)

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೪೨ | ೧೫—೬—೧೯೬೭ | No. 42

ನೆರೆ ಜಾರಿತು, ಮುಂದೆ?

ಜಾಗತಿಕ ಯುದ್ಧದ ಪ್ರಚ್ಛನ್ನ ಸಂಭವವನ್ನೇ ಎದುರು ನೋಡುತಿದ್ದವರು ಮಧ್ಯ ಪೂರ್ವದ ಕಾಲುಕೆದರಿ ಕರೆದ ಜಗಳ ಮೂರನೆಯ ಮಹಾಯುದ್ಧವಾಗುವುದೆಂದು ನಿರೀಕ್ಷಿಸಿದ್ದರು. ಆದರೆ, ಅವರ ನಿರೀಕ್ಷೆ ಸುಳ್ಳಾದುದು ಜಗತ್ತಿನ ಅದೃಷ್ಟ. ಅರಬ ರಾಷ್ಟ್ರಗಳೆಲ್ಲವೂ ಇಸ್ರಾಯೇಲನ್ನು ಬೂಪಟದಿಂದ ಅಳಿಸಿಬಿಡಬೇಕೆಂಬ ಘೋಷಣೆ ಮಾಡಿದ್ದರೂ ಸಂಯುಕ್ತ ರಾಷ್ಟ್ರಸಂಘದ ಸಮರ ವಿರಾಮದ ಕರೆಗೆ ಓಗೊಟ್ಟವು. ಯುದ್ಧವು ಭೀಕರವಾಗಿ, ನಿರ್ಣಾಯಕವಾಗಿಯೇ ಎಂಬಂತೆ ನಡೆಯಿತು. ಲಭ್ಯವಿರುವ ವಾರ್ತೆಗಳಂತೆ ಇಸ್ರಾಯೇಲನ್ನು ಅರಬ ಜಗತ್ತು ರೋಮಕಾಂಕಿಸುವುದಕ್ಕೂ ಅಶಕ್ತವಾಯಿತು. ಸಿನ್ಯಾಯ ಬಹು ಭಾಗ, ಜೋರ್ಡಾನದ ಕಲ ಭಾಗ ಇಸ್ರಾಯೇಲದ ಕೈವಶವಾಯಿತು, ಸಿರಿಯಾದ ಒಂದು ಮೂಲೆಯನ್ನೂ ಅದು ಹಿಡಿದುಕೊಂಡಿತ, ಅಂದರೆ ವಿಜಯದ ಗುರಿಯತ್ತ ಮುಂದುವರಿಯಿತು.

ಇಸ್ರಾಯೇಲದ ವಿಜಯಕ್ಕೆ ಅಮೆರಿಕ, ಬ್ರಿಟನ್ನುಗಳ ಅಪ್ರತ್ಯಕ್ಷ ಬೆಂಬಲವೇ ಕಾರಣವೆಂದು ಅಧ್ಯಕ್ಷ ನಸ್ಸೇರರು ಹೇಳುತ್ತಾರೆ; ಇಸ್ರಾಯೇಲೇ ಕ್ಯೈರೋದ ಮೇಲೆ ವಿಮಾನ ಧಾಳಿ ನಡೆಸಿ ಸಮರದ ಕಹಳೆಯೂದಿತು ಎಂದೂ ಅನ್ನುತ್ತಾರೆ; ಅದೇನೇ ಇದ್ದರೂ ಸಮರದಲ್ಲಿ ಈ ಬಗೆಯ ದೋಷಾರೋಪಣೆ ಸಹಜ. ಇದರ ಸತ್ಯಾಸತ್ಯತೆಯನ್ನ ಕಂಡು ಹಿಡಿದು ಇನ್ನೂ ಏನೂ ಮಾಡುವ ಹಾಗಿಲ್ಲ, ಕಂಡು ಹಿಡಿಯುವುದೂ ಸುಲಭವಲ್ಲ. ಅಮೆರಿಕೆಯು ಪಾಕಿಸ್ತಾನಕ್ಕೆ ನೀಡಿದ 'ಸೈನಿಕ ಶಕ್ತಿ'ಯು ಭಾರತದ ವಿರುದ್ಧ ಬಳಕೆಯಾದಾಗ, ಇದನ್ನು ಭಾರತ ಪ್ರತ್ಯಕ್ಷ ಪ್ರಮಾಣಗಳಿಂದ ತೋರಿಸಿ ಕೊಟ್ಟಾಗ, ಅಮೆರಿಕೆ ಏನು ಮಾಡಿತು? ಇಂದು ಅಮೆರಿಕ ಏನು ಮಾಡುತ್ತಿದೆ? ಮಧ್ಯ ಪೂರ್ವದಲ್ಲಿ ಸಮರ ವಿರಾಮವಾಗಿದೆ, ಸಂಯುಕ್ತ ರಾಷ್ಟ್ರ ಸಂಘದ ಮಾತಿಗೆ ಬೆಲೆ ಬಂದಿದೆ. ಎಂಬ ದೇಶಗಳ ಆಕ್ರೋಶ, ಘೋಷಣೆಗಳನ್ನು ಕಾಣಬೇಕಾಗಿ ಅವು ಸಮರ ವಿರಾಮವನ್ನು ಒಪ್ಪಿಕೊಳ್ಳುವುವು ಎಂದು ಯಾರೂ ಹೇಳುವಂತಿರಲಿಲ್ಲ. ಜೋರ್ಡಾನಿನ ರಾಜ ಹುಸೇನರು ಸಮರಾಂಗಣದಲ್ಲಿ ಸಂಚರಿಸಿ, ಇಸ್ರಾಯೇಲವನ್ನು ಬಗ್ಗುಬಡಿಯುವಂತೆ ತಮ್ಮ ಸೈನಿಕರನ್ನು ಉತ್ತೇಜಿಸುತ್ತಿದ್ದರೂ, ಸಮರ ವಿರಾಮವನ್ನು ಮೊತ್ತಮೊದಲು ಒಪ್ಪಿಕೊಳ್ಳಬೇಕಾಯಿತು. ಇವೇ ಮಾತು ಉಳಿದ ಅರಬ ರಾಜ್ಯ—ಅರ್ಥಾತ್ ಅರಬ ಜಗತ್ತಿಗೆ ಅನ್ವಯಿಸುತ್ತದೆ.

ಈಗ ಸಮರ ನಿಂತಿತು, ಸಮರಾನಂತರದ ರುದ್ರ ಪರಿಸ್ಥಿತಿ ಕಾಣಿಸಿಕೊಳ್ಳತೊಡಗಿದೆ. ಇಸ್ರಾಯೇಲ್ ತನ್ನ ಕೈವಶಮಾಡಿಕೊಂಡಿರುವ ಅರಬ ನೆಲವನ್ನು ಅದು ಮುಂದೇನು ಮಾಡುವುದು? ಈ ಭಾಗವನ್ನು ತನ್ನ ಸ್ವಾಯತ್ತದಲ್ಲೇ ಇರಿಸಿಕೊಂಡರೆ, ಇಸ್ರಾಯೆಲ್ ಯಹೂದ್ಯರ ರಾಜ್ಯವಾಗುಳಿಯುವ ಬದಲು ಅರಬರದೇ ರಾಜ್ಯವಾಗುವ ಭೀತಿಯಿದೆ. ಈಗಾಗಲೇ ಇಸ್ರಾಯೇಲ್ ವಶದಲ್ಲಿರುವ ನೆಲದಿಂದ ಸಿರಿಯಾ, ಜೋರ್ಡಾನಗಳಿಗೆ ನಿರಾಶ್ರಿತರಾಗಿ ಅರಬರು ದಾವಿಸತೊಡಗಿದ್ದಾರೆ. ಇವರೆಲ್ಲರ ಪುನರ್ನಿವೇಶನ, ಆಕ್ರಮಿತ ಭೂಪ್ರದೇಶಗಳ, ಅಕಾಬ ಆಖಾತದ ಟಿರಾನ್ ಜಲಸಂಧಿಯ ಭವಿಷ್ಯ ಮೊದಲಾದುವಿನ್ನೂ ನಿರ್ಧಾರಿತವಾಗಬೇಕಾಗಿದೆ. ಸಮರ ವಿರಾಮಾನಂತರದ ಭವಿಷ್ಯ ಗೊತ್ತುಪಡಿಸಲು ಭಾರತವು ನಾಲ್ಕು ಸೂತ್ರಗಳನ್ನು ಭದ್ರತಾ ಸಮಿತಿಯಲ್ಲಿ ಮುಂದಿಟ್ಟಿದೆಯೆಂದೂ ಇವನ್ನು ಹೆಚ್ಚಿನ ಆಫ್ರೋಏಷ್ಯಾ ದೇಶಗಳು ಒಪ್ಪಿಕೊಂಡಿವೆಯೆಂದೂ ಆದರೆ, ಪಾಶ್ಚಾತ್ಯ ದೇಶಗಳು ಒಪ್ಪಿಕೊಳ್ಳುವಂತಿಲ್ಲವೆಂದೂ ಹೇಳಲಾಗುತ್ತಿದೆ. ನಾಲ್ಕು ಸೂತ್ರಗಳು ಯಾವುವೆಂದು ತಿಳಿಯದಿದ್ದರೂ, ಅದರ ಬಗ್ಗೆ ಎದ್ದ ವಿವಾದವನ್ನು ಕೇಳುವಾಗ, ಈ ಸೂತ್ರಗಳು ಇಸ್ರಾಯೇಲಕ್ಕೆ ಹೆಚ್ಚು ಅನುಕೂಲವಾಗುವಂತಿಲ್ಲವೆಂದು ಖಂಡಿತಕ್ಕೂ ಹೇಳಬಹುದು. ಮಧ್ಯಪೂರ್ವದ ಸದ್ಯದ ಬಿಕ್ಕಟ್ಟಿಗೆ ಮೂಲ ಕಾರಣವೆಂದರೆ ಅಕಾಬಾ ಆಖಾತದ ಒಡೆತನ ಯಾರದ್ದು, ಟಿರಾನ್ ಜಲಸಂಧಿಯ ಮಾಲೀಕತ್ವ ಯಾರು ಎಂಬುದು. ಅಧ್ಯಕ್ಷ ನಸ್ಸೇರರು ಅದರ ಮೇಲೆ ಅಂತಾರಾಷ್ಟ್ರೀಯ ಅಧಿಕಾರವಿಲ್ಲ, ತನ್ನದೇ ಅಧಿಕಾರವೆಂದು ಸಾರಿದ್ದರಿಂದ, ಇಸ್ರಾಯೇಲದ ಕೈ ಕಟ್ಟಿತ, ಬಿಕ್ಕಟ್ಟು ಉಲ್ಬಣಿಸಿತು. ಈ ಆಖಾತವನ್ನು ಮಡಿಟರೇನಿಯನ್ ಸಮುದ್ರಕ್ಕೆ ಕಾಲುವೆಯ ಮೂಲಕ ಜೋಡಿಸುವ ಒಂದು ಯೋಜನೆಯೂ ಇಸ್ರಾಯೇಲದ ಮುಂದಿದೆ. ಅರಬರನ್ನು ದೂರವಿಟ್ಟೇ ತಮ್ಮ 'ವ್ಯಾಪಾರ'ನಡೆಸಲು ಅನುಕೂಲವಾದ ಈ ಯೋಜನೆಯನ್ನು ಪೂರ್ಣಗೊಳಿಸಲು ಪಾಶ್ಚಾತ್ಯ ದೇಶಗಳು ಸಹಾಯವನ್ನೂ ಮಾಡಿಯಾವು. ಈ ಹದರಿಕೆಯಿಂದಲೇ ನಸ್ಸೇರರು ದಿಟ್ಟ ಹೆಜ್ಜೆಯಿಟ್ಟರೆನ್ನಬೇಕು. ಅದನ್ನು ಇಸ್ರಾಯೇಲ್ ಕೆಣಕಿಸಿತು ಎನ್ನುವುದೂ ಸಹಜ. ಆದರೆ, 'ಸಶಸ್ತ್ರ' ಶಕ್ತಿ ಪ್ರದರ್ಶನದಿಂದ ಇತ್ಯರ್ಥವಾಗುವ ಪ್ರಶ್ನೆಯಲ್ಲ. ಅರಬರು ಮತ್ತು ಇಸ್ರಾಯೇಲರು ಕುಳಿತು ಒಂದು ಬಗೆಯ ಸಾಮರಸ್ಯವೇರ್ಪಡಬೇಕು — ಇದು ಭಾರತವು ಮುಂದಿಟ್ಟ ಸೂತ್ರಗಳ ಮೇಲೆಯೇ ಆದರೆ ಸಂತೋಷವೇ, ಅದಿಲ್ಲದೆ ಹೋದರೂ ಉಭಯ ಪಕ್ಷಗಳ ಗೌರವ—ಪ್ರತಿಷ್ಠೆ ಹಾಗೂ ಅಂತಾರಾಷ್ಟ್ರೀಯ ಸತ್ಯಗಳ ನೆಲೆಯಲ್ಲಿ ನಡೆಯಬೇಕು.

ವಚನ ಸುಧೆ

ಅಷ್ಟೌ ಗುಣಾಃ ಪುರುಷಂದೀಪಯಂತಿ
ಪ್ರಜ್ಞಾ ಚ ಕೌಲ್ಯಂ ಚ ದಮಃ ಶ್ರುತಂ ಚ
ಪರಾಕ್ರಮಶ್ಚಾ ಬಹುಭಾಷಿತಾ ಚ
ದಾನಂ ಯಥಾ ಶಕ್ತಿ ಕೃತಜ್ಞತಾ ಚ||

ಬುದ್ಧಿ, ಕುಲೀನತೆ, ದಮ, ಶಾಸ್ತ್ರಜ್ಞಾನ, ಪರಾಕ್ರಮ, ಮಿತಭಾಷಿತನ, ಯಥಾಶಕ್ತಿ ದಾನ ಮತ್ತು ಕೃತಜ್ಞತೆ — ಈ ಎಂಟು ಗುಣಗಳು ಮನುಷ್ಯನಿಗೆ ಶೋಭೆಯನ್ನೀಯುವುವು.

ದಾನವತೆಯು ತಾಂಡವಕ್ಕೆ ಅವಕಾಶ ದೊರೆಯಬಾರದು.

ಎಂ ಪಿ ಸಿ ಸಿ ಗೆ ಹೊಸ ಅಧ್ಯಕ್ಷ

ರಾಜ್ಯದ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಡಾ| ನಾಗಪ್ಪ



ಆಳ್ವಾರು ಅವಿರೋಧವಾಗಿ ಆಯ್ಕೆಗೊಂಡರು. ಶ್ರೀ ಜಿ. ವಿ. ಹಳ್ಳಿಕೇರಿಯವರು ಉಪಾಧ್ಯಕ್ಷರಾಗಿ ಚುನಾಯಿತರಾದರು. ಆಯ್ಕೆಯು ಏಕಮತವಾಗಿ ನಡೆದುದು ವಿಶೇಷವಾಗಿದೆ. ಶ್ರೀ ಮಹಮ್ಮದಾಲಿಯವರು ಮಂತ್ರಿಯಾಗಿ ನೇಮಕಗೊಂಡುದರಿಂದ ಡಾ| ಆಳ್ವಾರು ಈ ಪದವನ್ನು ಏರುವಂತಾಯಿತು. ಮಹಮ್ಮದಾಲಿಯವರ ಹಿಂದಿನ ಚುನಾವಣೆಯಲ್ಲಿ ಸೋತ ನಂತರ ಪಕ್ಷದ ಅಧ್ಯಕ್ಷರಾದವರು ಇಂದು ಇಂತಹುದೇ ಸರದಿಯೊಂದು ಡಾ| ಆಳ್ವರಿಗೆ ಬಂದಿದೆ. ಡಾ| ಆಳ್ವರು ಸ್ಪರ್ಧಿಸಿದ ಸುರತ್ಕಲ್ ಮತದಾನ ಕ್ಷೇತ್ರದಲ್ಲಿ ಪ್ರತಿಪಕ್ಷಗಳಿಗೆ ಪ್ರಚಾರ ಸಾಧನಗಳು ಧಾರಾಳ ಸಿಕ್ಕಿದ್ದುವು. ಮುಂದಿನ ಚುನಾವಣೆಯ ಪಕ್ಷವನ್ನು ಬಲಪಡಿಸಿಕೊಳ್ಳುವುದಕ್ಕೆ ಅಲ್ಲ ಎಂತಹ ಪ್ರತೀಕಾರ ಭಾವನೆ ಉದ್ಭವವಾಗಿತ್ತು ಎಂಬುದನ್ನು ಮುಖ್ಯಮಂತ್ರಿಯವರೂ ಕಣ್ಣಾರ ಕಂಡು ಬಲ್ಲರು. "ಏ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಎಲ್ಲಾ ಅಂತಾರಾಜ್ಯ ಗಡಿ ಪ್ರಶ್ನೆಗಳನ್ನೂ ಕೆಲಕಾಲ ಮುಂದೆ ಹಾಕಬೇಕು ಎಂದು ಬಯಸುತ್ತಾರೆ, ಮಂತ್ರಿ ಪೆಗಡೆ."

"ಗಡಿ ಪ್ರಶ್ನೆ ಸದಾ ಕೆದಕುತ್ತಿರಲು ಅವಕಾಶ ದೊರೆಯಬೇಕೇನು ಈ ರಾಜಕಾರಣಿಗಳಿಗೆ?"

ಪತ್ರಾವೇ:

ಗೇಹ ರಾಜ್ಯದಲ್ಲಿ

ಕುರುಡು ನಂಬಿಕೆಗಳಿಂದ ಪ್ರಭಾವಿತ ದೇಶ

'ಹಾದ್ರಿ, ಇಲ್ಲಿ ನೋಡೀಂದ್ರೆ ..'

'ಹ್ಞಾಂ....ನೋಡ್ತಾನೇ ಇದ್ದೀನಲ್ಲಾ ...?'

"ಅಲ್ರಿ, ಈಗ ಹೇಗೆ ಮೂರನೆಯ ಲೋಕ ಯುದ್ಧ ಆರಂಭವಾಯ್ತೇನ?"

'ಯಾಕೆ ಹಾಗಂತೀಯಾ?'

"ಮತ್ತೆಂಥದು? ಅರಬ ದೇಶಗಳೆಲ್ಲಾ ಒಂದಾಗಿ ಇಸ್ರಾಯೇಲದೊಡನೆ ಹೋರಾಡುತ್ತಿವೆಯಂತೆ...."

"ಅದು ಸರೀನ್ನ. ಆದ್ರೂ ಸಂಯುಕ್ತ ರಾಷ್ಟ್ರ ಸಂಘವು ಸಮರ ವಿರಾಮದ ಕರೆ ನೀಡಿದೆಯಲ್ಲಾ?'

"ಕರೆಯೇನೋ ನೀಡಿದೆ. ಆದರೆ, ಅದನ್ನ ಕೇಳಿದ್ದಾರೆ ಯಾರು?"

'ಸಧ್ಯ ಜೋರ್ಡಾನವೊಂದು ಕೇಳಿದೆ.'

'ಇಷ್ಟರಿಂದ್ಲೇ ವಿರಾಮವಾಗುತ್ತೆ? ಈಜಿಪ್ತು ನಿರಾಕರಿಸಿತಂತೆ. ಸಂಯುಕ್ತ ಅರಬರಾಜ್ಯ ಮತ್ತು ಇಸ್ರಾಯೇಲಗಳು ನೀನು ಮೊದಲು ಒಪ್ಪಬೇಕು, ನೀನು ಮೊದಲು ಒಪ್ಪಬೇಕೂಂತ ವಾದವಿವಾದ ನಡೆಸುತ್ತ ರಣರಂಗದಲ್ಲಿ ಹೋರಾಡುತ್ತಿವೆ...ಉಳಿದವ್ರೂ....'

"ಆದ್ರೂ ನೋಡು, ಲೋಕದ ಹಿರಿಯ ದೇಶಗಳು ನೇರವಾಗಿ ಕೈ ಹಾಕದೆ ಇದ್ರೆ ಲೋಕಯುದ್ಧ ಅಸಂಭವ. ನಮಗೂ ಪಾಕಿಸ್ತಾನಕ್ಕೂ ನಡೆದದ್ದೂ ಹೀಗೆಯೇ. ಪಾಪ ನಾವೇ ನೋಡಿಕೊಂಡದ್ದರಿಂದ ನಮ್ಮಲ್ಲೇ ನಿಂತಿತು?

'ಇದು ಹಾಗಲ್ಲ ನೋಡಿ, ಸೌದಿ ಅರೇಬಿಯಾದಿಂದ ಹಿಡಿದು ಲೆಬನಾನದ ತನಕ ಜೋರ್ಡಾನದಿಂದ ತೊಡಗಿ ಟ್ಯುನಿಸಿಯಾ ತನಕದ ವಿಶಾಲ ಅರಬ ಭೂಮಿ....'

"ಯಾಕೆ? ಇರಾಣವನ್ನೂ ಪಾಕಿಸ್ತಾನವನ್ನೂ ಸೇರಿಸಿಕೊ."

"ಇವ್ರೂ ಯುದ್ಧದಲ್ಲಿ ಸೇರಿಕೊಂಡಿದ್ದಾರಾ?"

"ಇಲ್ಲಾನ್ನ. ಆದ್ರೂ ಇರಾಣವು ಅವಶ್ಯಕ ನೆರವನ್ನ ಅರಬ ರಾಷ್ಟ್ರಗಳಿಗೆ ನೀಡುವುದೆಂದು ಹೇಳಲಾಗಿದೆ. ನಮ್ಮ ಫೀಲ್ಡ ಮಾರ್ಶಲ್ ಅಯ್ಯೂಬಖಾನರು ನಿಮಗೆ ಬೇಕಾದುದನ್ನ ಕೇಳಲು ಹಿಂಜರಿಯಬೇಡಿ; ಪೂರಯ್ಸುವ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದ್ದಾರೆ...."

"ಹ್ಞಾಂ....ಅಷ್ಟೂ ಮಾಡದಿದ್ದರೆ ಪಾಪ, ಇಸ್ಲಾಂಗೆ ಏನು ಉಪಕಾರ ಮಾಡಿದಂತಾಯಿತು? ಅದ್ರ ಮೇಲೆ...'

'ಏನು?'

'ಮತ್ತೇನಿಲ್ಲಾ, ನಮ್ಮ ಇಂದಿರಾಗಾಂಧಿಯವ್ರು...."

'ಯಾಕೆ ದಾಕ್ಷಿಣ್ಯ? ಹೇಳಿ ಬಿಡು...'

'ಪಾರ್ಲಿಮೆಂಟಿನಲ್ಲಿ ಹೇಳಿಕೆ ನೀಡಿದ್ರಲ್ಲಾ...'

'ಹೌದು, ವಿದೇಶ ಮಂತ್ರಿ ಛಗಲಾಕೂಡಾ ಅರಬ ಪ್ರಜಾರಾಜ್ಯಕ್ಕೆ ಭಾರತದ ಸಂಪೂರ್ಣ ಬೆಂಬಲವಿದೆಯೆಂದು ಗಂಟುಘೋಷವಾಗಿ ಸಾರಿದ್ದಾರೆ...."

'ಅದೇ ನೋಡಿ, ಈ ಹೇಳಿಕೆ ತುಂಬ ತಳಮಳಕಾರಕವಲ್ಲವೆ?"

"ಯಾಕೆ ಹಾಗಂತೀಯಾ? ಐಗುಪ್ತದ ನಸ್ಸೇರ ಭಾರತದ ಹಳೆಯ ಮಿತ್ರ. ಸುಯೇಜ ಕಾಲುವೆಯ ರಾಷ್ಟ್ರೀಕರಣ ಮಾಡಿದ ಮಹಾಧೀರ. ಕೆಣಕ ಬಂದ ಬ್ರಿಟಿಶ ಫ್ರೆಂಚರನ್ನು ಬರಿಗೈಯಿಂದಲೇ ಬಗ್ಗು ಬಡೆದ ಸಾಹಸಿ...ಅದರ ಮೇಲೆ, ಅರಬ ಜಗತ್ತಿನ ಅನಭಿಷಿಕ್ತ ದೊರೆಯೆಂದೂ ಆತನನ್ನು ಕರೆಯಬಹುದು.'

'ಅದು ಸರಿ, ಆದರೆ....'

"ಅದ್ರೂ ಇಲ್ಲ, ಹೋದ್ರೂ ಇಲ್ಲ. ಸುಯೇಜ ಕಾಲುವೆಯ ಮೇಲೆ ಐಗುಪ್ತಕ್ಕೆ ಸಂಪೂರ್ಣ ಅಧಿಕಾರವಿದೆಯೆಂದು ಮೊತ್ತ ಮೊದಲು ಸಾರಿದ ದೇಶ ಭಾರತ; ನಸ್ಸೇರರಿಗೆ ಬೆಂಬಲ ನೀಡಿದವರು ಅಂದಿನ ಭಾರತದ ಪ್ರಧಾನಿ ಜವಾಹರಲಾಲರು..'

"ಹೌದು, ಅದನ್ನೇ ನೋಡಿ, ಇನ್ನೊಂದು ರೀತಿಯಿಂದ ಛಗಲಾ ಅಂದದ್ದು? ವಿವಾದಾಸ್ಪದವಾಗಿರುವ ಅಕಾಬಾ ಆಖಾತದ ಮೇಲೆ ಐಗುಪ್ತದ ಪರಮಾಧಿಕಾರವನ್ನು ಭಾರತ ಹತ್ತು ವರ್ಷಗಳಿಗೆ ಮೊದಲೇ ಒಪ್ಪಿಕೊಂಡಿದೆಯೆಂದು...."

'ಹೌದು....ಇದ್ದುದನ್ನು ಇದ್ದಂತೆ ಹೇಳಿದರು. ಇದನ್ನೇ ಇಂದಿರಾ ಗಾಂಧಿಯವರೂ ಹೇಳಿ, ಅರಬ ಜಗತ್ತಿಗೆ ಬೆಂಬಲ ವ್ಯಕ್ತ ಪಡಿಸಿದರು...."

"ಇದೇ ನೋಡಿ ಅವಸಂದ—ವಿವೇಚನೆಯಿಲ್ಲದ ಮಾತು...."

'ಯಾಕೆ? ನಿನಗಿರುವಷ್ಟೂ ವಿವೇಕ ಅ ಕೆಗಿರುವುದಿಲ್ಲವೇನು?"

'ಅದೇನೊ....ಆದರೆ, ಕೆಲವೊಮ್ಮೆ ಚಿಕ್ಕವರಿಗಿರುವಷ್ಟು ವಿವೇಕ ದೊಡ್ಡವರಿಗಿರುವುದಿಲ್ಲ..."

"ಅಯ್ಯಮ್ಮ, ಏನು ಕಥೆ?'

'ಅರಬರು ಇಸ್ರಾಯೇಲನ್ನು ನಿರ್ನಾಮ ಮಾಡುವ ಕರೆ ನೀಡಿ ಹೋರಾಡುತ್ತಾರೆ, ಭಾರತವು ಇಸ್ರಾಯೇಲನ್ನು ಅಳಿಸಿ ಹಾಕಲು ಬಯಸುವುದಿಲ್ಲವಂತೆ— ಅದರ ಮೇಲೆ ಸಮರ ವಿರಾಮವನ್ನ ಸಾಧಿಸಬೇಕಂತೆ, ಮೊದಲಿದ್ದ ನೆಲೆಗಳಿಗೆ ಇಬ್ಬಣಗಳೂ ಸರಿಯ ಬೇಕಂತೆ...."

'ಹ್ಞಾಂ..."

'ನೋಡಿ, ಒಂದೆಡೆ ಅಕಾಬ ಆಖಾತದ ಮೇಲೆ ಸಾರ್ವಭೌಮಾಧಿಕಾರವನ್ನ ಒಪ್ಪುವುದರ ಮೂಲಕ ಬೆಂಬಲ, ಇಸ್ರಾಯೇಲನ್ನಅಳಿಸುವ ಅರಬ ನೀತಿಗೆ ವಿರೋಧ...'

'ಹ್ಞಾಂ....ಇರಲಿ ಬಿಡು....'

'ಮತ್ತೂ ನೋಡಿ, ಅಕಾಬ ಆಖಾತವು ಮುಕ್ತ ಜಲಮಾರ್ಗವಾಗಿರಬೇಕೆಂದು ಅರಬೇತರರೆಲ್ಲ ವಾದಿಸುತ್ತಿರುವಾಗ ನಾವದರ ಮೇಲೆ ಅರಬರ ಪರಮಾಧಿಕಾರವನ್ನೇಕೆ ಘೋಷಿಸಬೇಕಿತ್ತು? ಆ ಸಂಬಂಧ ಮನಸ್ಸ ಹಂಸಿದ್ದರೂ ಬಾಯಿ ಯಾಕೆ ಬಿಚ್ಚ ಬೇಕಿತ್ತು?'

'ಹ್ಞಾಂ...'

'ನೋಡಿ, ನಮಗೂ ಪಾಕಿಸ್ಥಾನಕ್ಕೂ ಹೋರಾಟ ನಡೆದಾಗ ಏನಾಗಿತ್ತು? ಕಾಶ್ಮೀರದ ಮೇಲೆ ಭಾರತದ ಸಾ... ಭೌಮಾಧಿಕಾರವನ್ನ ಒಪ್ಪುವ ಒಂದೇ ಒಂದು ಅರಬ ರಾಜ್ಯವಿದೆಯೆ? ಅರಬ ರಾಜ್ಯಗಳೆಲ್ಲಾ ಪಾಕಿಸ್ಥಾನಕ್ಕೆ ಸಹಾಯ ಹಸ್ತ ನೀಡಲುಮುಂದೆ ಬಂದಿದ್ದುವು. ನಿಮ್ಮ ನಸ್ಸೇರರಾದರೂ ಇಂದಿರಮ್ಮನಂತೆ ಬಾಯಿಬಿಡಲಿಲ್ಲ. ತಮಾಷೆ ನೋಡುತ್ತ ಕುಳಿತರು...ಇಂತಹ ಅರಬರಿಗೆ ನಾವು ಮತ್ತು ಬೆಂಬಲ ನೀಡುವುದು ಎಂದರೆ, ಪಾಕಿಸ್ತಾನಕ್ಕೇನೇ ನೆರವು ನೀಡಿದಂತೆ....'

"ಹ್ಞಾಂ....ಇದೂ ಒಂದು ಅಭಿಪ್ರಾಯ...."

'ಇರಲಿ, ಮತ್ತೆ ನೋಡಿ, ಅರಬರಾಜ್ಯಗಳಲ್ಲಿ, ಮುಖ್ಯವಾಗಿ ನಸ್ಸೇರರ ರಾಜ್ಯದಲ್ಲಿಯೇ ಏನಾಗುತ್ತಿದೆ'

'ಏನಾಗುತ್ತಿದೆ?'

'ಮತ್ತೆಂಥದು? ಭಾರತದ ಬಗ್ಗೆ, ಭಾರತೀಯರ ಬಗ್ಗೆ ಭಾರತೀಯ ಸಂಸ್ಕೃತಿ—ಸಭ್ಯತೆಗಳ ಬಗ್ಗೆ ನಿರಂತರ ಅಪಮಾನ......ಇದಕ್ಕೆ ಅಲ್ಲಿನ ಪತ್ರಿಕಾ ಪ್ರಪಂಚವೂ ತನ್ನ ಬೆಂಬಲವನ್ನು ನೀಡುತ್ತಿದೆ...'

"ಹ್ಞಾಂ...ಏನಂದೆ?"

'ಭಾರತವು ಕುರುಡು ನಂಬಿಕೆಗಳಿಂದ ಪ್ರಭಾವಿತವಾದ ಹಿಂದುಳಿದ ಧರ್ಮಾಂಧ ದೇಶವಂತೆ!'

"ಮತ್ತೆ?'

'ಧರ್ಮಾಂಧ ಪರಂಪರೆಯು ಅಂತರ್ವರ್ಣ ಬಾಂಧವ್ಯವನ್ನು ನಿಯಂತ್ರಿಸುತ್ತದಂತೆ.......ಅಶುದ್ಧ ಕೀಳು ಜಾತಿಯ ಹಿಂದುಗಳ ರಾಜ್ಯ ಬಿಹಾರಕ್ಕೆ ಶುದ್ಧ ಉತ್ತಮ ಜಾತಿಯ ಹಿಂದುಗಳಿರುವ ಇತರ ರಾಜ್ಯಗಳು ಆಹಾರಧಾನ್ಯ ಪೂರಯ್ಸದೆ ಇದ್ದುದರಿಂದಲೇ ಅಲ್ಲಿ ದುರ್ಗತಿ ಬಂದಿದ್ದೆಯಂತೆ!"

'ಹ್ಞಾಂ....ಇನ್ನೇನಾದ್ರೂ ಇದೆಯೆ?'

"ಇಲ್ಲದೆ ಉಂಟೆ? ಪವಿತ್ರವಾದ ಗಂಗಾನದಿ—ಅದರ ಉಪ ನದಿಗಳಲ್ಲಿ ವ್ಯಕ್ತ ದೇಹಗಳ ಭಸ್ಮ ತೇಲಿ ಬಿಡುವುದರಿಂದ ಅವುಗಳ ನೀರನ್ನು ನೀರಾವರಿಗೆ ಉಪಯೋಗಿಸಲು ನಾವು ನಿರಾಕರಿಸುತ್ತೇವಂತೆ. ನದಿ ದೇವಿಯಾದುದರಿಂದ, ಅಡ್ಡ ಅಣೆಕಟ್ಟು ಕಟ್ಟಲು ಬಯಸುವುದಿಲ್ಲವಂತೆ.... ಮತ್ತೆ ನೋಡಿ ನಮ್ಮ ಶಾಸ್ತ್ರೀ ಬಗ್ಗೆ ಅವರನ್ನುವುದು—ಭಾರತದ ಕ್ಲಿಷ್ಟ ಸಮಸ್ಯೆಗಳನ್ನು ಬಗೆಹರಿಸಲಾರದ ಕೀಳು ಮಟ್ಟದ ಮೇದುಳಿನ ಮನುಷ್ಯ...!'

"ಅರೀ, ದೇವರೆ, ಅಲ್ವೆ, ಇದನ್ನೆಲ್ಲಾ ನೀನು ಎಲ್ಲಿ ಓದಿದಿ?'

"ಎಲ್ಲಿ ಎಂಥದು? ಈಗ ಕೆಲವು ದಿನಗಳಲ್ಲಿ ಪತ್ರಿಕೆಗಳಿಗೆ ಇದೇ ಕೆಲಸ. ಇದನ್ನೆಲ್ಲಾ ತಿಳಿದೂ ತಿಳಿದೂ ನಮ್ಮ ಇಂದಿರಮ್ಮ ಸುಮ್ಮನೆ ಬೆಂಬಲವನ್ನು ಘೋಷಿಸಿ ಕೈ ಸುಟ್ಟುಕೊಂಡ್ರಲ್ಲಾಂತ...'

'ಒಂದು ಮಾತು ನಿಜಾನ್ನ....'

'ಯಾವುದು?'

"ಭಾರತ ಕುರುಡು ನಂಬಿಕೆಗಳಿಂದ ಪ್ರಭಾವಿತವಾದ ದೇಶ..."

'ಏನು, ನೀವೂ ಹಾಗನ್ನೋದೆ?'

"ನಿನ್ನ ಇಂದಿರಮ್ಮ ಅರಬ ಜಗತ್ತಿಗೆ ಬೆಂಬಲ ನೀಡಿದ್ದು ಇದೇ ಕುರುಡು ನಂಬಿಕೆಗಳಿಂದ ಪ್ರಭಾವಿತಳಾಗಿ ತಾನೆ? ಹತ್ತು ವರ್ಷಗಳ ನಡುವಣ ಅರಬ—ಭಾರತ ಸಂಬಂಧವನ್ನು ನೆನಪಿಸಿಕೊಂಡಿದ್ದರೆ, ಏಕಾಏಕಿ ಹಾಗನ್ನುತ್ತಿರಲಿಲ್ಲ ....ಸರಿ. ನೀನು ಅಂದದ್ದೂ ಸತ್ಯ...."

'ಏನು?'

(ಹದಿಮೂರನೇ ಪುಟ ನೋಡಿರಿ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಕುಂದಾಪುರ ಮು. ಕೋರ್ಟಿನಲ್ಲಿ.

O. S. 46/67.

ಬಿ. ಯೋಗೀಶ್ವರ ಹೊಳ್ಳ —ವಾದಿ

ಶಿವುಮನೆ ರಾಮ ಕೂಡಾ —ಪ್ರತಿವಾದಿರು

2, 3, 4, 5ನೇ ಪ್ರತಿವಾದಿರಿಗೆ ತಿಳಿಸುವುದೇನೆಂದರೆ—

2ನೇ ಪ್ರ. ಶಿವುಮನೆ ಮರ್ಲು, ಶೇಶಪ್ಪನ ಮಗ. 3ನೇ ಪ್ರ. ಸುಬ್ಬಿ ಬ್ಯಾ. ಮಂಜಪ್ಪನ ವಿಧವೆ. 4ನೇ ಪ್ರ. ಶಿವಪ್ಪ, ಮಂಜಪ್ಪನ ಮಗ. 5ನೇ ಪ್ರ. ಶಿವುನಾರಾಯಣ, ದೇವಿ ಹೆಂಗ್ಸಿನ ಮಗ —ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮಸ್ಥರು.

ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ನಿಮ್ಮ ಮೇಲೆ ಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 4-7-67ಕ್ಕೆ ತನಿಖೆಗೆ ಯಿಟ್ಟಿರುವದ್ರಿಂದ ಸದ್ರಿ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರು ಆಗಿ ಆ ಕುರಿತು ನಿಮ್ಮ ಉದಾಹರಣೆಯಿದ್ದ ಪಕ್ಷದಲ್ಲಿ ಹಾಜ್ರು ಮಾಡತಕ್ಕದ್ದು. ಯಿದ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ಪೈಸಲು ಮಾಡೋಣಾದೀತೆಂತ ಯಾಮೂಲಕ ನಿಮಗೆ ತಿಳಿಸಲಾಗೋಣಾಗುತ್ತದೆ.

M. Madhava Rao

Advocate for pltf.

ತಾರೀಖು: 5-6-67.

ಮೊಕ್ಕಾಂ: ಕುಂದಾಪುರ.

ಪರಿಚಯ

ಭಾರತೀಯ ಸಭ್ಯತೆಯ ಅಭೇದ್ಯ ದುರ್ಗ—

ಬಾಲೀ ದ್ವೀಪ

ಲೇಖಕರು:
ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

"ಪತಂಜಲಿ" ಮತ್ತು "ಪುಷ್ಯ ಮಿತ್ರ" ರವರ ಕಾಲದಲ್ಲಿ ಬೌದ್ಧ ಧರ್ಮದ ಪ್ರಭಾವವು ಕುಗ್ಗಿ ಸನಾತನ ಹಿಂದೂ ಧರ್ಮದ ಪುನರುಜ್ಜೀವನವಾಗುತಿದ್ದ ಕಾಲ; ಅಂದರೆ ಇಂದಿಗೆ ಸುಮಾರು ಎರಡು ಸಾವಿರ ವರ್ಷಗಳ ಮೊದಲು ಭಾರತ ದೇಶದಿಂದ ಧರ್ಮ ಪ್ರಚಾರಕರು, ವಿವಿಧ ಕಲಾಗಾರರು, ವ್ಯಾಪಾರಿಗಳು 'ಸ್ವರ್ಣ ಭೂಮಿ' ಮತ್ತು 'ಸ್ವರ್ಣ ದ್ವೀಪ' ಎಂಬ ದ್ವೀಪಗಳಲ್ಲಿ ನೆಲಸಿದ್ದರು. ಆಗ್ನೇಯ ಏಸ್ಯಾದಲ್ಲಿ ಹರಡಿಕೊಂಡಿರುವ ದ್ವೀಪಗಳಿಗೆ 'ಸ್ವರ್ಣ ದ್ವೀಪ'ಗಳೆಂದು ಕರೆಯಲಾಗುತ್ತಿತ್ತು ಎಂಬುದು ಭಾರತದ ಪ್ರಾಚೀನ ವಾಙ್ಮಯದಲ್ಲಿಯೂ, ವಿದೇಶೀಯ ಲೇಖಕರ ಲೇಖನಗಳಿಂದಲೂ ತಿಳಿದು ಬರುತ್ತದೆ. "ಈವಸ್ಸ್ಯದ್" ಎಂಬ ಯಾತ್ರಿಕನು ಕೂಡ 'ಜಾಬ್' ಎಂಬುದು ಒಂದು ದ್ವೀಪ ಸಮೂಹದ ಹೆಸರು; ಈ ಸಮೂಹದಲ್ಲಿ ಅನೇಕ ಚಿಕ್ಕ ಪುಟ್ಟ ದ್ವೀಪಗಳು ಸಮ್ಮಿಳಿತವಾಗಿವೆ. ಇವುಗಳಲ್ಲಿ ಚಿನ್ನ ದೊರಕುತ್ತದೆ. ಇವುಗಳ ಪೈಕಿ 'ಸುಬಿಜ' (ಶ್ರೀ ವಿಜಯ ಸುಮಾತ್ರಾ) ಎಲ್ಲದಕ್ಕಿಂತ ದೊಡ್ಡದು ಎಂದು ಬರೆದಿರುತ್ತಾನೆ. ಯಾವುದನ್ನು ಹಿಂದೂಗಳು ಸ್ವರ್ಣ ದ್ವೀಪವೆಂದು ಕರೆಯುತ್ತಾರೋ ಅದೇ "ಜಾವಜ್ ದ್ವೀಪ" ಇದರಲ್ಲಿ ಹೇರಳ ಚಿನ್ನ ದೊರಕುತ್ತದೆ ಎಂಬುದಾಗಿ 'ಅಲ್ಬೆರೂನಿ' ಎಂಬವನು ತನ್ನ ಗ್ರಂಥದಲ್ಲಿ ಬರೆದಿರುತ್ತಾನೆ. ಮೇಲಿನ ಇಬ್ಬರ ಅಭಿಪ್ರಾಯವನ್ನು ಗಿ೬ ನೆಯ ಶತಮಾನದಲ್ಲಿ 'ಬುದ್ಧ ಗುಪ್ತ'ನೆಂಬ ಬೌದ್ಧ ಭಿಕ್ಷು ತನ್ನ ಯಾತ್ರೆಯ ವರದಿಯಲ್ಲಿ ಸಮರ್ಥಿಸಿರುತ್ತಾನೆ. ಮಲಯದ ಜನರು "ಸುಮಾತ್ರಾ"ವನ್ನು 'ಪೂಲ್ ಮ ಯಿ ಮಾಸ್' ಅಂದರೆ 'ಚಿನ್ನದ ದ್ವೀಪ' ಎಂದು ಕರೆಯುತ್ತಾರೆಂದು Dr. Fer-nund ಎಂಬವರು ಉಲ್ಲೇಖಿಸಿರುವರು.

ಸ್ವರ್ಣ ದ್ವೀಪ ಯಾತ್ರೆ ಮತ್ತು ವುಗಳೊಡನೆ ವ್ಯಾಪಾರ ನಡೆಸುತಿದ್ದ ವರ್ಣನೆ "ಜಾತಕ ಕಥಾಕೋಶ" "ಕಥಾಸರಿತ್ಸಾಗರ' ಈ ಗ್ರಂಥಗಳಲ್ಲಿ ವಿಸ್ತಾರವಾಗಿ ದೊರಕುತ್ತದೆ. ಈಗಿನಂತೆ ಆಗ ಸಹ ಪದೇಪದೇ ಸಮುದ್ರದಲ್ಲಿ ಬಿರುಗಾಳಿ ಏಳುತಿದ್ದುದರಿಂದ ಹಡಗುಗಳು ಮುಳುಗಿ ಅದರ ಸಮಾಚಾರ ಭಾರತಕ್ಕೆ ಆಗಾಗ ದೊರಕುತಿತ್ತು. 'ಕಥಾಸರಿತ್ಸಾಗರ' ಗ್ರಂಥದಲ್ಲಿ ಒಂದು ಕಥೆ ಈ ರೀತಿ ಉಲ್ಲೇಖಿಸಲ್ಪಟ್ಟಿದೆ. "ಸಮುದ್ರ ಶೂರ"ನೆಂಬ ಒಬ್ಬ ಸಾಹುಕಾರ ವ್ಯಾಪಾರಕ್ಕಾಗಿ ಸ್ವರ್ಣ ದ್ವೀಪಕ್ಕೆ ಹೋದನು. ಬಿರುಗಾಳಿಯಿಂದ ಅವರ ಹಡಗು ಮಧ್ಯ ಪಥದಲ್ಲಿ ಒಡೆದು ಹೋಯಿತು. ಸಮುದ್ರದಲ್ಲಿ ತೇಲಿಕೊಂಡಿದ್ದ ಒಂದು ಹೆಣದ ಆಧಾರದಿಂದ ಅವನು ಸ್ವರ್ಣದ್ವೀಪದ ಸಡಸೇರಿ 'ಕಲಶ' ಎಂಬ ನಗರಕ್ಕೆ ಮುಟ್ಟಿದನು. ಈ ರೀತಿ ಅನೇಕ ಕಥೆ ಮತ್ತು ವ್ಯಾಖ್ಯಾನಗಳಲ್ಲಿ, ಭಾರತೀಯರು ಸ್ವರ್ಣದ್ವೀಪದೊಡನೆ ಚೆನ್ನಾಗಿ ನಿಕಟ ಸಂಪರ್ಕ ಬೆಳಸಿಕೊಂಡಿದ್ದರೆಂಬುದಕ್ಕೆ ತುಂಬಾ ಪ್ರಮಾಣಗಳು ದೊರೆಯುತ್ತವೆ.

ಅಭೇದ್ಯ ದುರ್ಗ

ಪ್ರಾಚೀನ ಕಾಲದಲ್ಲಿ ಇಲ್ಲಿಂದ ಹೋದ ವ್ಯಾಪಾರಿಗಳು ಮತ್ತು ಧರ್ಮ ಪ್ರಚಾರಕರು ಆಗ್ನೇಯ ಏಸ್ಯಾದಲ್ಲಿ ದೂರ-ದೂರ ಹರಡಿಕೊಂಡಿದ್ದ ದ್ವೀಪಗಳಲ್ಲಿ ಹೋಗಿ ನೆಲೆಸಿದ ನಂತರ ಅನೇಕ ಶತಮಾನಗಳಿಂದ ಭಾರತದೊಡನೆ ಸಂಬಂಧ ಇಲ್ಲದಿದ್ದರೂ ಇಂದಿಗೂ ಈ ದ್ವೀಪ ಸಮುದಾಯಗಳ ಅಂತರ್ಗತವಿರುವ "ಬಾಲಿದ್ವೀಪದಲ್ಲಿರುವವರು ಹಿಂದೂಗಳಾಗಿದ್ದಾರೆ. ಇವರು ವೇದ, ಭಗವದ್ಗೀತೆ ಇತ್ಯಾದಿಗಳನ್ನು ತಮ್ಮ ಧರ್ಮಗ್ರಂಥಗಳೆಂದು ಸ್ವೀಕರಿಸಿಕೊಂಡಿರುವುದು ಆಶ್ಚರ್ಯಕರವಾದ ವಿಷಯ. ಈಗಲೂ ಅಲ್ಲಿ ರಾಮಾಯಣ, ಮಹಾಭಾರತಗಳ ವಾಚನ ಪ್ರತಿ ಮನೆಯಲ್ಲಿ ಜರಗುತ್ತಿದೆ.

ಚಂಡಿಕಾ, ಶಿವಲಿಂಗ ಮೊದಲಾದ ದೇವತಾ ಆರಾಧನೆಗಳು ರೂಢಿಯಲ್ಲಿವೆ. ಭಾರತೀಯ ಭಾಷೆಯಲ್ಲಿರುವ ರತ್ನ, ಕರ್ಪೂರ, ಮೇರು, ಮಂಟಪ, ಪುಷ್ಪ, ಪಸುಲಿ, ಕುಸುಮ, ಮಂತ್ರ, ಧೂಪ, ಘಂಟೆ, ಸೂರ್ಯಾರ್ಚನೆ, ಶ್ರಾದ್ಧ, ಮರಣ ಇತ್ಯಾದಿ ಶಬ್ದಗಳು ಅಲ್ಲಿ ಇಂದಿಗೂ ಬಳಕೆಯಲ್ಲಿವೆ. ಬಾಲಿ ದ್ವೀಪದ ಧರ್ಮ-ಸಂಸ್ಕೃತಿ ಭಾರತದ ಪ್ರಾಚೀನ ವೈದಿಕ ಧರ್ಮ ಸಂಸ್ಕೃತಿಯ ದ್ಯೋತಕವಾಗಿರುತ್ತದೆ.

ಬಾಲಿ ದ್ವೀಪಕ್ಕೆ ಕೇವಲ ಒಂದೂವರೆ ಮೈಲು ದೂರವಿರುವ 'ಜಾವಾ" ದ್ವೀಪದಲ್ಲಿ ಪ್ರಕೃತ ಇಸ್ಲಾಮ್ ಮತ ಹರಡಿಕೊಂಡಿದೆ; ಅದರ ಸುತ್ತ ಮುತ್ತಲಿನ ದ್ವೀಪಗಳಲ್ಲಿ ಕ್ರೈಸ್ತಮತ, ಬೌದ್ಧ ಮತ, ಮತ್ತು ಇಸ್ಲಾಮ್ ಮತಗಳು ಭದ್ರವಾಗಿವೆಯಾದರೂ ಬಾಲಿದ್ವೀಪದ ಮೇಲೆ ಇವುಗಳ ಪ್ರಭಾವ ಬೀಳದಿರುವುದು ನೋಡಿದರೆ ಹಿಂದೂ ಧರ್ಮ—ಸಭ್ಯತೆ ಅಲ್ಲಿ ಎಷ್ಟು ಬಲವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಸುಮಾತ್ರಾ, ಜಾವಾ, ಬಾಲಿ, ಬೋರ್ನಿಯೊ ಮತ್ತು ಮಲಯದಿಂದ ಆವರಿಸಲ್ಪಟ್ಟಿರುವ ಪ್ರಶಾಂತ ಪ್ರದೇಶ ಇಂದಿಗೂ ಸಂಶೋಧಕರನ್ನು, ಪುರಾತತ್ವವೇತ್ತರನ್ನು ಅತಿ ಉತ್ಸುಕತೆಯಿಂದ ಇದಿರು ನೋಡುತ್ತಿದೆ. ಇಲ್ಲಿ ದೊರಕುವ ಸಂಸ್ಕೃತದ ಹೆಸರು ಭಾರತೀಯ ಸಂಸ್ಕೃತದ ಅಪಭ್ರಂಶ ರೂಪದಲ್ಲಿವೆ. ವ್ಯವಸ್ಥಿತ ರೀತಿಯಲ್ಲಿ ಇಲ್ಲಿ ಸಂಶೋಧನೆ ನಡೆಸಿದರೆ ಭಾರತದ ಅತಿ ಪ್ರಾಚೀನ ಹಾಗೂ ವೇದಕಾಲದ ಮೊದಲ್ಗೊಂಡು ಅತಿ ಮಹತ್ವಪೂರ್ಣ ವಿಷಯಗಳು ಇಲ್ಲಿಯ ಭೂಗರ್ಭದಿಂದ ನಾಗರಿಕ ಜಗತ್ತಿನ ಬೆಳಕಿಗೆ ಬರುವುದರಲ್ಲಿ ಆಶ್ಚರ್ಯವಿಲ್ಲ. ಇಲ್ಲಿಯ ಒಂದು ಪ್ರಮುಖ ನಗರ 'ಶಂಕಪುರ' ಎಂಬುದ ಇಂದಿಗೆ "ಸಂಗಕಪುರ" ಎಂದು ಕರೆಯಲ್ಪಡುತ್ತದೆ. ದೂರ ದೂರ ಪ್ರದೇಶಗಳ ಮತ ಸಂಪ್ರದಾಯಗಳು ತಮ್ಮ ಪ್ರಭಾವವನ್ನು ಈ ಬಾಲಿದ್ವೀಪದ ಮೇಲೆ ಬೀರಿದ್ದರೂ ಇಂದಿಗೂ ಇಲ್ಲಿ 'ಭಗವಾಧ್ವಜ' ಸರ್ವತ್ರ ಹಾರಾಡುತ್ತಿದೆ. ಹಿಂದೂ ಧರ್ಮದ ಮೇಲೆ ಇಲ್ಲಿಯವರಿಗಿರುವ ದೃಢನಿಷ್ಠೆಯನ್ನು ನೋಡಿದರೆ ನಾವು ಆಶ್ಚರ್ಯ ಪಡುವುದರ ಬದಲು ಗೌರವ ಮತ್ತು ಅಭಿಮಾನದಿಂದ ತಲೆಬಾಗಿಸಬೇಕಾಗುತ್ತದೆ.

ಸುಂದರ ಪುಷ್ಪ

ಬಾಲಿ ದ್ವೀಪದಲ್ಲಿ ಇಂದಿಗೂ ಇಷ್ಟೊಂದು ಸಮೃದ್ಧಿಯಾಗಿ ಹಿಂದೂ ಧರ್ಮ, ಸಂಸ್ಕೃತಿ ಉಳಿದಿರಲಿಕ್ಕೆ, ಡಚ್ ಶಾಸಕರಿಗೆ ಈ ಧರ್ಮದ ಮೇಲೆ ಅಸರಾಭಿಮಾನ ಮತ್ತು ಉತ್ಸುಕತೆ ಇರುವುದೇ ಮುಖ್ಯ ಕಾರಣವಾಗಿರುತ್ತದೆ. ಅವರು ಭಾರತೀಯ ಹಿಂದೂ ಸಂಸ್ಕೃತಿ ಮತ್ತು ತಮ್ಮ ಸಂಸ್ಕೃತಿಯನ್ನು ಭೇದ ಭಾವದಿಂದ ನೋಡಲಿಲ್ಲ. ಆದುದರಿಂದಲೇ ಕ್ರೈಸ್ತ ಧರ್ಮ ಬೋಧಕರನ್ನು ಬಾಲಿ ದ್ವೀಪಕ್ಕೆ ಬರಲಿಕ್ಕೆ ಎಡೆಕೊಡಲಿಲ್ಲ. ಪುರಾತತ್ವ ಶೋಧನೆಗೆ ಈ ದ್ವೀಪವನ್ನು ಒಂದು ಅದ್ಭುತವಾದ ವಿದ್ಯಾಲಯಕ್ಕೆ ಸಮಾನವಾಗಿ ಇಂದಿಗೂ ಭದ್ರವಾಗಿ ಇರಗೊಳಿಸಿದರು. ಬಾಲಿ ದ್ವೀಪದ ಕುರಿತು ಈ ವರೆಗೆ ಆಗಿರುವ ಶೋಧನೆಗಳೆಲ್ಲವೂ "ಡಚ್" ಮತ್ತು 'ಫ್ರೆಂಚ್' ಭಾಷೆಗಳಲ್ಲಿಯೇ ಆಗಿರುವುದರಿಂದ ಅವು ಸಾಕಷ್ಟು ಪ್ರಸಿದ್ಧಿ ಪಡೆಯಲಿಲ್ಲ. ಸಭ್ಯತೆ ಮತ್ತು ಸಾಂಸ್ಕೃತಿಕವಾಗಿ ಮಾತ್ರವಲ್ಲ ಭೌಗೋಳಿಕ ದೃಷ್ಟಿಯಿಂದಲೂ ಬಾಲಿದ್ವೀಪ ಒಂದು ಸುಪ್ರಸಿದ್ಧ ಪ್ರದೇಶವಾಗಿರುತ್ತದೆ. ಕಾರಣವೇನೆಂದರೆ ಇದರ ಉತ್ತರದಲ್ಲಿ ಕ್ರೈಸ್ತ ಮತ್ತು ಬೌದ್ಧ ಪಶ್ಚಿಮದಲ್ಲಿ ಇಸ್ಲಾಮ್ ಮತಾನುಯಾಯಿ ಪ್ರದೇಶಗಳು ಹರಡಿಕೊಂಡಿದ್ದು ಎಲ್ಲವುಗಳ ನಡುವಿರುವ ಈ ದ್ವೀಪದಲ್ಲಿ ಸನಾತನ ಆರ್ಯ ಧರ್ಮ ಸಂಸ್ಕೃತಿಯು ಒಂದು ಸುಂದರ ಪುಷ್ಪದಂತೆ ಸದಾ ಪ್ರಫುಲ್ಲಿತವಾಗಿ ಶೋಭಿಸಲ್ಪಡುತ್ತಿದೆ.

ಬಾಲಿದ್ವೀಪ ವಾಸಿಗಳ ಮುಖಾಕೃತಿ, ಮೈಬಣ್ಣ, ಅಂಗಾಂಗಗಳ ಸೌಂದರ್ಯ ಎಲ್ಲವೂ ಇವರು ಭಾರತೀಯ ಸಂತಾನದವರೆಂಬುದನ್ನು ಖಚಿತಗೊಳಿಸುತ್ತವೆ. ಇಲ್ಲಿಯ ಸ್ತ್ರೀಯರು ಸೌಂದರ್ಯ ಲಾವಣ್ಯತೆಯಲ್ಲಿ ಜಗತ್ಪ್ರಸಿದ್ಧರು. ಈ ದ್ವೀಪಕ್ಕೆ ಪ್ರಾಚೀನ ಕಾಲದ ಮಹಾದಾನಿ 'ಬಲಿ ಚಕ್ರವರ್ತಿ'ಯ ಹೆಸರನ್ನೇ ಇಡಲಾಗಿದೆ. ಬಲಿಚಕ್ರವರ್ತಿಯ ರಾಜಧಾನಿ ಇಲ್ಲಿಯೇ ಇತ್ತೆಂದು ಕೆಲವು ಇತಿ

(ಹನ್ನೆರಡನೇ ಪುಟ ನೋಡಿರಿ)

ಭವಿಷ್ಯದೆಡೆಗೆ ನೋಟ

ಈ ಮಗುವಿನ ನಾಳೆಯ ಬದುಕಿಗೆ ಆಕೆಯ ಹೆತ್ತವರ ನಿಯತ
ಉಳಿತಾಯ ಭದ್ರತೆಯನ್ನೊದಗಿಸಿದೆ. ಸಿಂಡಿಕೇಟ್ ಬ್ಯಾಂಕಿ
ನಲ್ಲಿ ಆಕೆಯ ಹೆಸರಿನಲ್ಲಿ ತೆರೆದ ಕ್ಯುಮುಲೇಟಿವ್
ಠೇವಣಾತಿ ಖಾತೆಯೇ ಆಕೆಯ ಭವಿತವ್ಯದ ರಕ್ಷೆ
ಯೆನಿಸಿದೆ. ಆಕೆಯನ್ನು ಸಲಹುವ ಹಿರಿಯರ
ದೂರದೃಷ್ಟಿಯಿಂದಾಗಿ ಈ ಮಗುವು
ದೂರದ ಭವಿಷ್ಯದೆಡೆಗೆ ತುಂಬು
ವಿಶ್ವಾಸದಿಂದ ನಗು ತುಂಬಿದ
ಕಣ್ಣುಗಳಿಂದ ನೋಟ
ಬೀರುತ್ತಿದೆ.

**ನಿಮ್ಮ ಮಕ್ಕಳ ನಾಳೆಯ ಬದುಕಿನ ಭದ್ರತೆಗಾಗಿ
ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್
ಠೇವಣಾತಿ ಖಾತೆಯೊಂದನ್ನು ತೆರೆಯಿರಿ.**

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ತಮಿಳ್ರಗ ಅರಸುವಿನ

ದ್ರಾ. ಮು. ಕ.ದ ಧಿಮಾಕು

ಬರೆದವರು : ಶ್ರೀ ಶಿವಶಂಕರ.

ಅನಿರೀಕ್ಷಿತವಾಗಿ ಚುನಾವಣೆಯಲ್ಲಿ ದ್ರಾ. ಮು. ಕ.ಕ್ಕೆ ಅಧಿಕ ಬಲ ಬಂದದ್ದೇ ತಡ, ಅಷ್ಟರ ವರೆಗೆ ಮೈತ್ರಿ, ದಳ, ಸಂಯುಕ್ತ—ರಂಗ—ಹೀಗೆ ರಂಗುರಂಗಾಗಿ ಮಾತಾಡುತ್ತಿದ್ದುದ್ದನ್ನೆಲ್ಲಾ ಗಾಳಿಗೆ ತೂರಿಬಿಟ್ಟು, ದ್ರಾ. ಮು. ಕ.ವು ಆಸನದತ್ತ ದೃಷ್ಟಿ ಹಾಯಿಸಿತು. ಅಲ್ಲಿ ಮುಖ್ಯವಾಗಿ ಮುಖ್ಯ ಮಂತ್ರಿ ಸ್ಥಾನಕ್ಕಾಗಿ ವಾಗ್ಯುದ್ಧ ನಡೆಯಲಾರಂಭವಾದುದರಿಂದ ಲೋಕಸಭೆಗೆ ಆರಿಸಲ್ಪಟ್ಟಿದ್ದ ತಿರು ಅಣ್ಣಾದೊರೈಯವರು ದಿಲ್ಲಿಗೆ ಹೋಗದೆ, ಆ ಸ್ಥಾನಕ್ಕೆ ಇಲ್ಲಿಂದಲೇ ದೊಡ್ಡ 'ಗುಡ್‌ಬೈ'ಯೆಂದು ಮುಖ್ಯ ಮಂತ್ರಿ ಸ್ಥಾನದಲ್ಲಿ ಆಸೀನರಾದರು (ಆದಾಗಲೇ, ದ್ರಾ. ಮು. ಕ.ದ ಕೈಯಲ್ಲಿರುವ ನಗರ ಸಭೆಯಲ್ಲೊಂದು ಉಪ-ಚುನಾವಣೆ ನಡೆಯಬೇಕಾಗಿ ಬಂದುದರಿಂದ ತಿರು ಅಣ್ಣಾದೊರೈಯವರು ಆ ಹಿಂದಿನ ಬಾಗಿಲಿನಿಂದ ವಿಧಾನ ಪರಿಷತ್ತಿನ ಸದಸ್ಯನೆಂಬ ಹೆಸರಿನ ಮೇಲೆ, ಪ್ರವೇಶಿಸಿದರು ಮತ್ತು ಮುಖ್ಯ ಮಂತ್ರಿ ಸ್ಥಾನವನ್ನು ಭದ್ರಪಡಿಸಿಕೊಂಡರು.) ಅಂತೂ ದ್ರಾ. ಮು. ಕ.ವು ಮಾರ್ಚ್ ಆರರಂದು ಆಳ್ವಿಕೆಯ ಅಂಕುಶವನ್ನು ಕೈಗೆ ತೆಗೆದುಕೊಂಡಿತು. ತಮಿಳು ನಾಡಿನಲ್ಲಿ ರಾಜಕೀಯ ನವಗ್ರಹಗಳು ಸಚಿವ ಮಂದಿರವನ್ನು ಹೊಕ್ಕುವು.

ಒಡನೆ ದ್ರಾ. ಮು. ಕ. ದ ದೃಢತೆಯ ಪರೀಕ್ಷೆ ನಡೆಯಿತು. ಅದು ರಾಷ್ಟ್ರಾಧ್ಯಕ್ಷರ ಚುನಾವಣೆ. ಆರಂಭದಲ್ಲಿ ದ್ರಾ. ಮು. ಕ.ವು ಎದುರು ಪಕ್ಷಗಳ ಅಭ್ಯರ್ಥಿ ಶ್ರೀ ಸುಬ್ಬಾರಾಯರಿಗೆ ಬೆಂಬಲವೀಯುವದಾಗಿ ಘೋಷಿಸಿತು. ಆದು ಅವರ ನಾಯಕರುಗಳು ದಿಲ್ಲಿಯಲ್ಲಿದ್ದ ವರೆಗೆ ಮಾತ್ರ. ಅವರು ಮದರಾಸಿಗೆ ಮರಳಿದ್ದೇ ತಡ, ಮನ ಬಂದಂತೆ ಮಾತಾಡಲಾರಂಭಿಸಿದರು. ಅನಂತರ ಅವರ ಸಂಸದಿನ ಸದಸ್ಯರು ದಿಲ್ಲಿಗೆ ಹೋದದ್ದೇ ತಡ, ಹುಸೇನರಿಗೆ ಹೇಳಿದ್ದು ಹುಸಿ ಮಾತೆಂದರು. ನಿಜವಾಗಿ ಅವರು ಶ್ರೀ ಸುಬ್ಬಾರಾಯರಿಗೇನೇ ಬೆಂಬಲ ಕೊಟ್ಟಿದ್ದರಾದರೂ ಅವರ ಮಾತನ್ನು ಯಾವರೀತಿ ಅರ್ಥಮಾಡಿಕೊಳ್ಳುವದು ಸಾಧ್ಯವಾಗದಂತಾಯಿತು. ಇತರ ವಿಷಯಗಳಲ್ಲೂ ದ್ರಾ. ಮು. ಕ. ವು ಹೀಗೆಯೇ ಮಾಡಿತೇಯೆನ್ನುವ ಸಂದೇಹ ಜನರಲ್ಲುಂಟಾಯಿತು. ಈ ಸಮಯದಲ್ಲಿ ಸೋತ ಕಾಂಗ್ರೆಸ್ಸಿಗರು ಸುಮ್ಮಗುಳಿಯದೆ, ಯಥಾಪ್ರಕಾರ ಅಪಪ್ರಚಾರ ನಡೆಸುತ್ತ ಬಂದರು. ಆಗ ತಮ್ಮ ಬೆಂಬಲ ಇಲ್ಲದೆ ಡಾ| ಝಾಕೀರ ಹುಸೇನರು ಜಯಗಳಿಸಬಹುದಾದರೂ, ಜನತೆಯ ಬೆಂಬಲವಿಲ್ಲದೆ, ಕೇವಲ ಅಧಿಕಾರದ ಅಂಕುಶವನ್ನು ಹಿಡಿದುಕೊಂಡು ಬಹಳ ದಿನ ಆಸನದಲ್ಲಿರಲು ಸಾಧ್ಯವಿಲ್ಲವೆಂಬುದು ದ್ರಾ. ಮು. ಕ. ದ ಗಮನಕ್ಕೆ ಬಂತು. ಅವರು ಜನತೆಯ ಗಮನ ಸೆಳೆದುಕೊಳ್ಳುವಂತಹ ಕಾರ್ಯಕ್ಕೆ ಕೈ ಹಾಕಿದರು.

ಸೌರಮಾನ ಯುಗಾದಿಯೆಂದರೆ ಮದರಾಸಿನಲ್ಲಿ ಮಹತ್ವಪೂರ್ಣ ಹಬ್ಬದ ದಿನ. ಅದನ್ನು ತಮಿಳು ಹೊಸ ವರ್ಷವೆಂದೇ ಕರೆಯುತ್ತಾರೆ. ಅಂತಹ ಪರ್ವಕಾಲದಲ್ಲಿ ಏನೇನಾದರೂ ವಿಶೇಷವನ್ನು ಪ್ರಭಾವವನ್ನು ಮಾಡಬೇಕೆಂಬ ಹಂಬಲಿಕೆಯಿಂದ ದ್ರಾ. ಮು. ಕ. ದ ನವಗ್ರಹಗಳು ಅತ್ತಿತ್ತ ನೋಡಿದುವು. ಅವುಗಳ ಕಣ್ಣಿಗೆ ಎದುರಿಗಿದ್ದ ನಾಮ ಫಲಕಗಳು ಕಣ್ಣಿಗೆ ಬಿದ್ದವು. ಅಹಾ! ಅದನ್ನು ಸುಲಭದಲ್ಲಿ ಜನತೆಯ ಗಮನವನ್ನು ಸೆಳೆದುಕೊಳ್ಳಲು ಸಾಧ್ಯ! ಬಹಳ ಸಂತೋಷವಾಯಿತು. ನವಗ್ರಹಗಳೂ ಸೈಯೆಂದುವು. ಅದು ವರೆಗೆ ಆಂಗ್ಲೇಯರಿಂದ ಅಧಿಕಾರದ ಅಂಕುಶವನ್ನು ಕೈಯಲ್ಲಿ ತೆಗೆದುಕೊಂಡಿದ್ದ ಕಾಂಗ್ರೆಸ್ಸು ನಾಮ ಫಲಕಗಳನ್ನು ಆಂಗ್ಲ ಭಾಷೆಯಲ್ಲೇ ಬರೆಸುತ್ತಿತ್ತು. ಆರಂಭದಲ್ಲಿ ದ್ರಾ.ಮು.ಕ.ವೂ ಅದಕ್ಕೆ ಅಪವಾದವಾಗಿರಲಿಲ್ಲ. ಈಗ ಹೊಸ ವರ್ಷದಂದು ಅವರಲ್ಲಿ ಹೊಸ ಆವೇಶ ಬಂತು. ಆ ಆವೇಶವಾದರೋ ಶುದ್ಧ ಅಂತಃಕರಣದಿಂದ ಸ್ಫುರಿಸುತ್ತಿದ್ದರೆ ವಾಗ್ವಾದಕ್ಕೆಡೆ ಇಲ್ಲದೆ ಹೋಗುತ್ತಿತ್ತು. ಆದರೆ ಕೇವಲ ಜನತೆಯ ಗಮನವನ್ನು ಸೆಳೆದುಕೊಳ್ಳಲಿಕ್ಕಾಗಿ ಮಾತ್ರ ಇದ್ದುದರಿಂದ ಪ್ರಶಂಸೆಯ ಬದಲು ಟೀಕೆಗೊಳಪಡಬೇಕಾಯಿತು. ಮಂತ್ರಿಗಳ ಹೆಸರುಗಳನ್ನು ಸೂಚಿಸುವ ನಾಮ-ಫಲಕಗಳನ್ನು ತಮಿಳಿನಲ್ಲಿ ಬರೆಯಲಾಗುವದೆಂದೂ, ಇನ್ನು ಮುಂದೆ ಆಂಗ್ಲ ಭಾಷೆಯ ಕಾಲ ಆಗಿ ಹೋಯಿತೆಂದೂ ತಮಿಳು ನಾಡಿನಲ್ಲಿ ಭಾರತೀಯ ಕಲಾಚಾರ—ಸಂಸ್ಕೃತಿಯ ಸೂರ್ಯನ ಉದಯವಾಯ್ತೆಂದೂ ಹುಮ್ಮಸ್ಸಿನಿಂದ ಕೂಗಲು ಹೋದ ಜನತೆ ಸಮುದ್ರದ ದಂಡೆಗೆ ಬಂದಿದ್ದರೇನು? ನಿಜದ ಉದಯ ಸೂರ್ಯನಲ್ಲ; ಕೇವಲ ಚಲಚಿತ್ರದಲ್ಲಿ ಕಂಡು ಬರುವ ಉದಯ ಸೂರ್ಯನಷ್ಟೇ.

ಮುಖ್ಯಮಂತ್ರಿಯವರ ಹೆಸರನ್ನು ಆಂಗ್ಲ ಪದ್ಧತಿಯಂತೆ ಬರೆಯುವಾಗ C. N. Annadurai ಯೆಂದು ಬರೆಯುವರು. ತಮಿಳು ತೃಷೆಯನ್ನು ತಣಿಸಿಕೊಳ್ಳಲು ಹೋದ ಜನತೆ ಕಾವು ತಣ್ಣೀರ ಊಟೆಯನ್ನು ಕಾಣುತ್ತಿಲ್ಲ, ಜಲಮರೀಚಿಕೆಯನ್ನು ಬೆನ್ನಟ್ಟುತ್ತ ಬಂದೆವೆಂಬುದನ್ನು ಮುಖ್ಯಮಂತ್ರಿಯವರ ನಾಮ-ಫಲಕದಿಂದ ತಿಳಿದುಕೊಂಡರು. ಅವರ ಹೆಸರನ್ನು ತಮಿಳಕ್ಷರಗಳಲ್ಲಿ ಸಿ. ಯನ್. ಅಣ್ಣಾದೊರೈಯೆಂದು ಕೆತ್ತಿಸಲಾಗಿತ್ತು. ಈ ಜನತೆಯಾದರೋ ಆ ವಿಶೇಷ ಸಂಭ್ರಮದಲ್ಲಿ ಭಾಗವಹಿಸಲು ಸೌರಮಾನ ಯುಗಾದಿಯಂದು (ತಮಿಳು ವರ್ಷ ಪೊರಪ್ಪು) ಸೇರಿತ್ತು. ಆ ಉತ್ಸವಕ್ಕೆ ತಿರು, ಈರಾ. ನೆಡುಂಜಳ್ಯಿಯನ್ [ವಿದ್ಯಾಮಂತ್ರಿ] ಅವರು ಅಧ್ಯಕ್ಷರಾಗಿದ್ದರು. ಜನತೆ ನೋಡುತ್ತಿದ್ದಂತೆ ಮುಖ್ಯ ಮಂತ್ರಿ ತಿರು ಸಿ. ಯನ್. ಅಣ್ಣಾದೊರೈಯವರು ವಿದ್ಯುತ್ಗುಂಡಿಯನ್ನೊತ್ತಿದರು. "ತಮಿಳ್ರಗ ಅರಸು—ತಲಮೆ ಚೆಯಲಗಂ" ನಾಮ ಫಲಕ ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿತು. ಇದನ್ನು ಹಿಂದೆ ಮೆಡ್ರಾಸ್ ಗವರ್ನಮೆಂಟ್—ಚೀಫ್ ಸೆಕ್ರೆಟೇರಿಯಟೆಂದು ಇಂಗ್ಲೀಷಿನಲ್ಲೂ ಸಾಮಾನ್ಯ ಜನತೆಯು ಮದ್ರಾಸು ಅಥವಾ ತಮಿಳುನಾಡು ಸರಕಾರ—ಕೇಂದ್ರ ಕಾರ್ಯಾಲಯ (ಸಚಿವಾಲಯ) ವೆಂದು ಕರೆಯುತ್ತಿತ್ತು. ಇದು ತಮಿಳು ಹೆಸರಿನ ಅರ್ಥವಿದೆ ಅಲ್ಲದೆ ಅದ್ಯಾವ ಅರಸೂ ಅಧಿಕಾರಕ್ಕೆ ಬಂದಿರುವ ಸಂದರ್ಭವಲ್ಲ. ಆಗ ಕಡಲಿನ ತಂಗಾಳಿ ಬೀಸಿತು. ಜನತೆ ಯೋಚಿಸಲಾರಂಭಿಸಿತು. ತಮಿಳ್ರಗ ಅರಸು ಯೆನ್ನಬೇಕಾದಲ್ಲಿ ಈ 'ರಾಜ್ಯ'ವನ್ನು 'ತಮಿಳ್ರಗಂ' ಅಥವಾ ತಮಿಳು ನಾಡೆಂದು ಕರೆಯಬೇಕು. ಆ ಸರಿ ಕೇಂದ್ರ ಸರಕಾರ ಅಥವಾ ಭಾರತೀಯ ಸಂವಿಧಾನದಲ್ಲಿ ಆ ರೀತಿ ಇಲ್ಲವಲ್ಲಾ! ಅಲ್ಲಿರುವದು ಮದ್ರಾಸು. ಈ ರೀತಿ ಇಲ್ಲಿ ಬದಲಾಯಿಸುವ ಮುಂಚೆ ಈ ತೀರ್ಮಾನವನ್ನು ಸಂಸದಿಗೆ ತಿಳಿಸಿ, ಅಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗಿತ್ತಲ್ಲ! ಅದೂ ಇರಲಿ. ಈ ವಿಷಯವನ್ನು ಅಲ್ಲಿಗೆ ತಿಳಿಸಿರುವರೇ ಅದರ ಅಗತ್ಯ ಇಲ್ಲವೇನು? ಅಧಿಕಾರಕ್ಕೆ ಬಂದ ಪಕ್ಷಗಳು ತಮಗಿಷ್ಟ ಬಂದ ಹೆಸರನ್ನು ಕೊಡವದೇ? ಸಂವಿಧಾನ ಹಾಗೂ ಸಂಸದಿನ ಆವಶ್ಯಕತೆಯಾದರೂ ಏನು? ಇದರ ಹಿಂದುಗಡೆ ಇರುವ ರಾಜಕೀಯವಾದರೂ ಏನು? ಅಷ್ಟು ಹೊತ್ತಿನಲ್ಲಿ ಇದರಲ್ಲೇನೂ ರಾಜಕೀಯ ಮಹತ್ವವಿಲ್ಲವೆಂದು ಮುಖ್ಯಮಂತ್ರಿಯವರು ಮುಂದಾಗಿ ಹೇಳುವದು ಕೇಳಿಸಿತು. ಅಲ್ಲದೆ ಅವರು ಜನತೆಯ ಬಳಿ ತಮ್ಮ ಅಂಗಡಿ, ಮನೆ ಮತ್ತು ಮಕ್ಕಳಿಗೆ ತಮಿಳು ಹೆಸರು ಇಡಬೇಕೆಂದೂ ವಿನಂತಿಸಿಕೊಂಡರು. ತಟ್ಟನೆ ಒಬ್ಬನು, 'ಅದೆಷ್ಟು ಮಂತ್ರಿಗಳಿಗೆ ತಮಿಳು ಹೆಸರು ಇಟ್ಟಿರುವಿರಿ'ಎಂದು ಗುಣುಗುಟ್ಟಿದನು. ತಿರು ಅಣ್ಣಾದೊರೈಯವರ ಮಂತ್ರಿಮಂಡಲದಲ್ಲಿ ತಿರುಮತಿ ಸತ್ಯವಾಣಿ, ಶ್ರೀ ಕರುಣಾನಿಧಿ, ಶ್ರೀ ಗೋವಿಂದಸ್ವಾಮಿ ಮುಂತಾದವರಿದ್ದಾರೆ.

ಇಲ್ಲಿ ಇನ್ನೊಂದು ತಮಾಷೆಯ ಘಟನೆ ನಡೆಯಿತು. 'ಸತ್ಯಮೇವ ಜಯತೆ' ನಲ್ಲುಡಿಯಲ್ಲಿ 'ವಾಯ್ಮೆಯೇ ವೆಲ್ಲುಂ' ಎಂಬುದಾಗಿ ಬದಲಾಯಿಸಲಾಗಿದೆ ಯೆಂದೂ ತಿಳಿದುಬಂತು. ಊರ ಮಕ್ಕಳ ಹೆಸರನ್ನು ತಮಿಳೀಕರಿಸಲ ಕರೆಯಿತ್ತ ಮುಖ್ಯಮಂತ್ರಿಯವರು ಶ್ರೀಮತಿ ಸತ್ಯವಾಣಿಯವರ ಹೆಸರನ್ನು ಬದಲಾಯಿಸುವರೇ, ನೋಡೋಣವೆಂದು ಜನತೆ ಸಂಭ್ರಮವನ್ನು ನೋಡುತ್ತ ಕುಳಿತುಕೊಂಡಿತು.

ಜನತಾಸಾಗರವನ್ನು ಸ್ವಾಗತಿಸುತ್ತ ಸಾರ್ವಜನಿಕ ಕಾಮಗಾರಿ ಮಂತ್ರಿ ತಿರುಮು— ಕರುಣಾನಿಧಿಯವರು, ಜನತಾಸಾಗರವನ್ನು ತೆಗೆದುಕೊಂಡು ಬಂದಿದ್ದ ಸರಕಾರೀ ವಾಹನಗಳ ಹೆಸರುಗಳನ್ನು "ತಮಿಳ್ರಗ ಅರಸು—ಪೋಕ್ಕುವರತ್ತು"ಎಂದು ಬದಲಾಯಿಸಲಾಗುತ್ತಿದೆಯೆಂದು ತಿಳಿಸಿದರು. ಹಿಂದಕ್ಕೆ ಅವನ್ನು 'ಮೆಡ್ರಾಸ್ ಗವರ್ನ್‌ಮೆಂಟ್ ಸ್ಟೇಟ್ ಟ್ರಾನ್ಸ್‌ಪೋರ್ಟ್'ಎಂದು ಕರೆಯಲಾಗುತ್ತಿತ್ತು. ಒಳ್ಳೆಯದು, ಇನ್ನಾದರೂ ಆಂಗ್ಲ ವ್ಯಾಮೋಹ ತೊಲಗೀತೆಂದು ಜನತೆ ಭಾವಿಸಿತು.

ಅಧ್ಯಕ್ಷಸ್ಥಾನದಿಂದ ತಿರು ಈರಾ. ನೆಡುಂಜಳ್ಯಿಯನ್ ಅವರು ಭಾಷಣ ಆರಂಭಿಸಿದರು. ಅವರು ಶ್ರೀ, ಶ್ರೀಮತಿ ಹಾಗೂ ಕುಮಾರಿ ಶಬ್ದಗಳ ಬದಲು ಇನ್ನು ಮುಂದೆ ತಿರು, ತಿರುಮತಿ ಹಾಗೂ ಸೆಲ್ವಿ ಶಬ್ದಗಳನ್ನು ಪ್ರಯೋಗಿಸುತ್ತದೆಂದರು. (ಮತಿಯನ್ನೇತಕ್ಕೆ ಇನ್ನೂ ಪೂರ್ಣ ಕಳೆದುಕೊಂಡಿಲ್ಲವೆಂದು ಯಾರೋ ಹೇಳಿದಂತಾಯಿತು.) ಈ ಸಂಭ್ರಮವನ್ನು ಅವರು ಚಾರಿತ್ರಿಕವೆಂದೇ ಘೋಷಿಸಿದರು. ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು.

ಕೆಲವೇ ದಿನಗಳಲ್ಲಿ ಇನ್ನೊಂದು ಸುದ್ದಿ ಪ್ರಸಾರವಾಯಿತು. ಅದನ್ನು ತಿಳಿಸಿದವರು ಆಕಾಶವಾಣಿ ಮಂತ್ರಿ(ಣಿ) ತಿರುಮತಿ ಸತ್ಯವಾಣಿ ಮುತ್ತು ಅವರು. ಆಕಾಶವಾಣಿಯನ್ನು ಇನ್ನು ಮುಂದೆ ವಾನೊಲಿಯೆಂಬುದಾಗಿ ಕರೆಯಲಾಗುತ್ತದೆಂದು ಅವರು ಅರುಹಿದರು. ಬೊಕ್ಕೆಯ ಮೇಲೆ ಬರೆಯೆಳೆದಂತಾಯಿತು. ಸತ್ಯಮೇವ ಜಯತೆಯನ್ನು ಬದಲಾಯಿಸಿದ ಜ್ಞಾಪಕ ಇನ್ನೂ ಸತ್ತಿಲ್ಲ. ಅಷ್ಟರಲ್ಲಿ ವಾನೊಲಿ ಬಂದು ಬಿಟ್ಟಿತು. ಇದರಲ್ಲಿ ತಮಾಷೆಯೆಂದರೆ ಇದನ್ನು ತಿಳಿಯಪಡಿಸಿದವರ ಹೆಸರು. ಅವರು ಅದನ್ನು ಘೋಷಿಸುವ ಮುಂಚೆ ತಮ್ಮ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಭಕ್ತಿ ಪರೀಕ್ಷೆ

ಗೋರ ಕುಂಬಾರ ಮತ್ತು ನಾಮದೇವ

ಅನು: ಶ್ರೀ ಕೆ. ನಾರಾಯಣಾಚಾರ್.

ಸಾಧು ಸಂತರು ವಿನೋದ ಪ್ರಿಯರು. ಅವರ ನಡತೆಯನ್ನು ತಿಳಿಯುವುದು ಕಷ್ಟ. ಜನರನ್ನು ಗದರಿಸುವುದು ಮಾತ್ರವಲ್ಲ, ಚೆನ್ನಾಗಿ ಹೊಡೆಯುವ ಸಾಧುಗಳೂ ಇದ್ದಾರೆ. ಅಂತಹ ಒಬ್ಬ ಸಾಧುವಿನ ವಿಷಯದಲ್ಲಿ ಅವನ ಗದರಿಕೆ ಮತ್ತು ಹೊಡೆತಗಳು ತಮ್ಮ ಶ್ರೇಯೋಭಿವೃದ್ಧಿಯ ಸೂಚನೆಗಳೆಂದು ಜನರು ತಿಳಿಯುತ್ತಿದ್ದರು.

ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಗೋರ ಕುಂಬಾರನೆಂಬೊಬ್ಬ ಸಾಧುವಿರುತ್ತಿದ್ದನು. ಅವನು ಜ್ಞಾನೇಶ್ವರನ ಸಮಕಾಲಿಕನು. ಮತ್ತು ಆ ಕಾಲದ ಸಾಧುಗಳಲ್ಲಿ ಎಲ್ಲರಿಗಿಂತ ಹಿರಿಯನು.

ಎಲ್ಲಾ ಸಾಧುಗಳೂ ಅವನನ್ನು ಗೌರವಿಸುತ್ತಿದ್ದರು. ಪ್ರೀತಿಯಿಂದ ಚಾಚಾಜೀ ಎಂದು ಕರೆಯುತ್ತಿದ್ದರು.

ಒಮ್ಮೆ ಜ್ಞಾನೇಶ್ವರ, ನಾಮದೇವ ಮತ್ತು ಮುಕ್ತಾಬಾಯಿಯವರನ್ನೊಳಗೊಂಡ ಒಂದು ಸಾಧುಗಳ ತಂಡವು ತೀರ್ಥಯಾತ್ರೆಗೆ ಹೋಗಿ ಹಿಂದಿರುಗಿ ಬರುತ್ತಾ ಗೋರ ಕುಂಬಾರನ ಮನೆಯಲ್ಲಿಳಿಯಿತು.

ಸಾಧುಗಳು ಒಟ್ಟಿಗೆ ಕುಳಿತಿದ್ದರು. ಅವರ ಸಮೀಪದಲ್ಲಿ ಒಂದು ಮರದ ಕೋಲು ಇಡಲ್ಪಟ್ಟಿತ್ತು.

ಮುಕ್ತಾಬಾಯಿ ಆ ಕೋಲನ್ನು ತೋರಿಸಿ 'ಅದೇನು?' ಎಂದು ಕೇಳಿದನು.

ಅದು "ತಾಪಿ" ಎಂದು ಗೋರ ಕುಂಬಾರನು ಹೇಳಿದನು. 'ಅದರಿಂದ ನಾನು ನನ್ನ ಮಣ್ಣಿನ ಗಡಿಗೆಗಳಲ್ಲಿ ಯಾವುದು ಸರಿಯಾಗಿ ಬಂದಿದೆ, ಯಾವುದು ಬಂದಿಲ್ಲವೆಂದು ಪರೀಕ್ಷಿಸುತ್ತೇನೆ.'

ಮುಕ್ತಾಬಾಯಿಯು ತಮಾಷೆಯಾಗಿ ಕೇಳಿದನು—"ನಾವು ಕೂಡ ಮಣ್ಣಿನ ಗಡಿಗೆಯಂತೆಯೇ, ನೀನು ನಮ್ಮನ್ನೂ ಪರೀಕ್ಷಿಸಬಲ್ಲೆಯಾ?"

ಏಕಾಗಬಾರದು; ಎಂದು ಹೇಳಿ ಗೋರ ಕುಂಬಾರನು ಪ್ರತಿಯೊಬ್ಬ ಸಾಧುವಿನ ತಲೆಗೂ ತಾಪಿಯಿಂದ ಬಡಿಯತೊಡಗಿದನು.

ಕೆಲವರು ಅದರ ಮಹತ್ವದ ಅರ್ಥ ತಿಳಿದರು. ಕೆಲವರು ತಮಾಷೆಯೆಂದು ತಿಳಿದರು.

ಆದರೆ ನಾಮದೇವನು ಅದು ತನಗೆ ಅವಮಾನಕರವೆಂದು ಭಾವಿಸಿ ಕೋಪದಿಂದ ಗುಡುಗಿದನು.

ಆದರೆ ಗೋರ ಕುಂಬಾರನು ಬಡಿಯುತ್ತಲೇ ಇದ್ದನು. ನಾಮದೇವನ ಸರದಿ ಬಂತು; ಗೋರ ಕುಂಬಾರನು ಅವನ ತಲೆಯ ಮೇಲ ಬಡಿದಾಗ "ಈ ಗಡಿಗೆ ಸರಿಯಾಗಿ ಬಂದಿಲ್ಲ"ವೆಂದು ಹೇಳಿದನು.

ಪ್ರೇಮಪೂರ್ವಕವಾದ ದನಿಯಿಂದ ಮತ್ತೆ ಹೇಳಿದನು:—"ನೀನೊಬ್ಬ ಸಾಧು ನಿಜ, ಆದರೆ ನಿನ್ನಲ್ಲಿ ಇನ್ನೂ ಅಹಂಕಾರವಿದೆ, ಗುರುವಾದ ಸೇವೆಯನ್ನು ಪಡೆದನ ನಿನ್ನ ಅಹಂಕಾರವು ತೊಲಗದು."

ನಾಮದೇವನಿಗೆ ಮಾನಭಂಗವಾಯಿತು. ಅವನು ತಿರುಗಿ ಪಂಢರಪುರಕ್ಕೆ ಬಂದು ವಿಠಲ ಸ್ವಾಮಿಯ ಸನ್ನಿಧಿಯಲ್ಲಿ ತನ್ನ ದುಃಖವನ್ನು ತೋಡಿಕೊಂಡನು.

ಸ್ವಾಮಿಯ ಉತ್ತರ ದೊರೆಯಿತು.— "ಗೋರನು ಹೇಳಿದ್ದು ಸರಿ. ನಾನು ಯಾವಾಗಲೂ ನಿನ್ನ ಸಂಗಡ ಇರುತ್ತೇನೆ ನೀನು ಒಬ್ಬ ಗುರುಗಳಿಂದ ಉಪದೇಶ ಪಡೆಯಬೇಕು. ಅಂತಹ ಗುರುವು ಮನುಷ್ಯರೂಪದಿಂದಿರುವ ನಾನು ಹೊರತು ಬೇರೆಯಲ್ಲ."

ಕೊನೆಗೆ ನಾಮದೇವನು ಶ್ರೀ ವಿಠೋಬಾ ಖೇಚರನನ್ನು ಗುರುವಾಗಿ ಮಾಡಿಕೊಂಡನು.

ಒಮ್ಮೆ ಜ್ಞಾನೇಶ್ವರ ಮತ್ತು ನಾಮದೇವರು ಒಟ್ಟಿಗೆ ಸಂಚರಿಸುತ್ತಿದ್ದರು. ಅನೇಕ ತೀರ್ಥಯಾತ್ರೆಗಳನ್ನು ಮಾಡಿ ಅವರು ರಾಜಸ್ಥಾನಕ್ಕೆ ಹೊರಟರು.

ಬಿಕಾನೇರಿನಿಂದ ೩೫ ಮೈಲುಗಳ ದೂರದಲ್ಲಿ "ಕೌಲಾಡ್‌ಜೀ" ಎಂಬೊಂದು ಸ್ಥಳವಿದೆ. ಅಲ್ಲಿ ಇಬ್ಬರಿಗೂ ಬಹು ಬಾಯಾರಿಕೆಯಾಯಿತು. ದಆರೆ ಹತ್ತಿರದಲ್ಲೆಲ್ಲೂ ನೀರು ಸಿಕ್ಕಲಿಲ್ಲ. ಕೊನೆಗೊಂದು ಬಾವಿಯನ್ನು ಅವರು ಕಂಡರು. ಆದರೆ ಬಾವಿಯು ಬಹಳ ಆಳವಾಗಿತ್ತು. ನೀರು ಕಡಿಮೆಯಾಗಿತ್ತು.

ಜ್ಞಾನೇಶ್ವರನು ಅಷ್ಟಸಿದ್ಧಿಗಳನ್ನು ಸ್ವಾಧೀನ ಪಡಿಸಿಕೊಂಡಿದ್ದನು. ಆದರೆ ಅತ್ಯಪೂರ್ವವಾಗಿ ಅವುಗಳನ್ನು ಪ್ರಯೋಗಿಸುತ್ತಿದ್ದನು. ಅವು ತನ್ನ ಆಧ್ಯಾತ್ಮಿಕ ಪ್ರಗತಿಗೆ ಆತಂಕವಾದವುಗಳೆಂದು ಅವನು ಭಾವಿಸಿದ್ದನು.

ಬೇರೇನೂ ಉಪಾಯಕಾಣದೆ ಲಘಿಮಾ ಸಿದ್ಧಿಯ (ಸಣ್ಣದಾಗಿ ಹಗುರವಾಗುವುದು) ಸಹಾಯದಿಂದ ಬಾವಿಗೆ ಇಳಿದು ರಂಧ್ರದಿಂದ ಬರುತ್ತಿದ್ದ ಸ್ವಲ್ಪ ನೀರಿನಿಂದ ತನ್ನ ಬಾಯಾರಿಕೆಯನ್ನು ತಣಿಸಿಕೊಂಡನು.

(ಹತ್ತನೇ ಪುಟ ನೋಡಿರಿ)



ಕೆನರಾ ಬ್ಯಾಂಕಿನ ಠೇವಣಿದಾರರಂತೆ ನೀವೂ ನೆಮ್ಮದಿಯ ಭಾವನೆಯಿಂದ ಆನಂದಿತರಾಗಲಿಚ್ಛಿಸುವಿರಿ

ಕೆನರಾ ಬ್ಯಾಂಕಿನ ಠೇವಣಿದಾರರು ಅನಿರೀಕ್ಷಿತವಾಗಿ ರೋಗರುಜಿನಗಳಿಗೆ ಅಥವಾ ದುರ್ಘಟನೆಗಳಿಗೆ ತುತ್ತಾಗಲಿಚ್ಛಿಸುವುದಿಲ್ಲ ಅವರು ನೆಮ್ಮದಿಯ ಭಾವನೆಯಿಂದಿರಲು, ಸುಖದಿಂದಿರಲು ಮತ್ತು ಭವಿಷ್ಯವನ್ನು ಆತ್ಮವಿಶ್ವಾಸದಿಂದ ಇದಿರು ನೋಡಲು ಬಯಸುತ್ತಾರೆ. ಮದುವೆ, ಪುತ್ರಜನನಗಳಂಥ ಸಂತೋಷದ ದಿನಗಳಲ್ಲಿ, ವೃದ್ಧಾವಸ್ಥೆಯಲ್ಲಿ ಮತ್ತು ಬೇರೆ ಯಾವುದೇ ಸಮಯದಲ್ಲಿ, ಕೆನರಾ ಬ್ಯಾಂಕ್ ನೀಡುವ ಸುರಕ್ಷಿತತೆಯ ಭಾವನೆ ಅವರಲ್ಲಿ ಇರುತ್ತದೆ. ನೀವು ಈಗಾಗಲೇ ಕೆನರಾ ಬ್ಯಾಂಕಿನ ಠೇವಣಿದಾರರಾಗಿರದಿದ್ದರೆ ಇಂದೇ ಆಗಿರಿ— ಕೆನರಾ ಬ್ಯಾಂಕಿನಲ್ಲಿ ಸೇವಿಂಗ್ಸ್ ಖಾತೆಯನ್ನು ತೆರೆದು, ಅದರಿಂದ ಉಂಟಾಗುವ ಆ ಸುಖ ಮತ್ತು ನೆಮ್ಮದಿಯ ಭಾವನೆಯನ್ನು ಹೊಂದಿ ಆನಂದಿತರಾಗಿರಿ. ಅದರಿಂದ ನಿಮ್ಮ ಮುಖದಲ್ಲಿ ಆತ್ಮವಿಶ್ವಾಸದ ಕಳೆ ಪ್ರತಿಬಿಂಬಿಸುವುದು.

GROW GROWING TO SERVE · CANARA BANK LTD ESTD 1906

ಸಾರ್ವ ಸಂಪತ್ತುಗಳು 123 ಕೋಟಿಗಿಂತಲೂ ಅಧಿಕ

240ಕ್ಕಿಂತಲೂ ಹೆಚ್ಚು ಶಾಖೆಗಳು

ಬಗತ್ತಿನಾದ್ಯಂತ ಪ್ರತಿನಿಧಿಗಳು

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ಲೈಟ್ ಹೌಸ್ ಹಿಲ್, ಮಂಗಳೂರು.
ಆಡಳಿತ ಕಛೇರಿ :
112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

SISTA S CB 19 KAN

ರಾಜ್ಯ ಶಾಸ್ತ್ರ

ಸಂಸದೀಯ ವ್ಯವಸ್ಥೆ ಮತ್ತು ವಿರೋಧಪಕ್ಷ

ಬರೆದವರು: ಶ್ರೀ ಸಿದ್ಧಯ್ಯ ಕಾಶೀಮಠ

ಭಾರತವು ಸಂಸದೀಯ ವ್ಯವಸ್ಥೆಯ ಆಡಳಿತ ಕ್ರಮವನ್ನು ಅಂಗೀಕರಿಸಿದೆ. ಇಂತಹ ವ್ಯವಸ್ಥೆಯಲ್ಲಿ ಸಂಸತ್ತಿನಲ್ಲಿ ಯಾವ ರಾಜಕೀಯ ಪಕ್ಷವು ಬಹುಮತವನ್ನು ಹೊಂದಿರುವುದೋ ಅದು ಸರ್ಕಾರವನ್ನು ರಚಿಸುತ್ತದೆ. ಅಲ್ಪ ಸಂಖ್ಯಾತವಾದ ಇತರ ಪಕ್ಷಗಳು ವಿರೋಧ ಪಕ್ಷ ಅಥವಾ ಎದುರು ಪಕ್ಷವಾಗುತ್ತವೆ.

ವಿರೋಧ ಪಕ್ಷವಾಗಿ ಅಂಗೀಕೃತವಾಗಬೇಕಾದರೆ, ಅದಕ್ಕೆ ಕೆಲವು ಷರತ್ತುಗಳು ವಿಧಾಯಕವಾಗಿವೆ. ಆ ಪಕ್ಷವು ಸಭೆಯ ಒಳಗೂ ಹೊರಗೂ ಸುವ್ಯವಸ್ಥಿತವಾಗಿರಬೇಕು. ಚುನಾವಣೆಯ ಸಂದರ್ಭದಲ್ಲಿ ಸ್ಪಷ್ಟವಾದ ಹಾಗೂ ತನ್ನದೇ ಆದ ಧ್ಯೇಯಾದರ್ಶಗಳನ್ನೂ ಕಾರ್ಯಕ್ರಮಗಳನ್ನೂ ಘೋಷಿಸಿರಬೇಕು. ಸಭೆ ನಡೆಯಲು ಅಗತ್ಯವಾದ 'ಕೋರಂ' ನಷ್ಟಾದರೂ ಅದಕ್ಕೆ ಸಂಖ್ಯಾಬಲವಿರಬೇಕು.

ಇಂಗ್ಲೆಂಡಿನಲ್ಲಿ ಗಣನೀಯವಾದ ಸಂಖ್ಯಾಬಲವುಳ್ಳ ಎರಡು ಪಕ್ಷಗಳಿವೆ. ಅವುಗಳಲ್ಲಿ ಒಂದು ಸರ್ಕಾರವನ್ನು ರಚಿಸುತ್ತದೆ. ಮತ್ತೊಂದು ವಿರೋಧ ಪಕ್ಷವಾಗಿ ಕೆಲಸ ಮಾಡುತ್ತದೆ. ಭಾರತದಲ್ಲಿ ಮೊನ್ನೆ ಮೊನ್ನೆಯ ವರೆಗೆ ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಸರ್ಕಾರಗಳನ್ನು ರಚಿಸುತ್ತಿತ್ತು. ಆದರೆ, ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಯ ನಂತರ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವು ಬಹುಮತವನ್ನು ಕಳೆದುಕೊಂಡಿದೆ. ಆದರೂ ಯಾವುದೇ ಒಂದು ಪಕ್ಷವು ಆ ರಾಜ್ಯಗಳಲ್ಲಿ ಸ್ಪಷ್ಟ ಬಹುಮತ ಗಳಿಸಿಲ್ಲ. ಆದ ಕಾರಣ ಹಲವು ಪಕ್ಷಗಳು ಒಂದುಗೂಡಿ ಸರ್ಕಾರಗಳನ್ನು ರಚಿಸಿವೆ. ಆ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಇತರ ಕೆಲವು ಅಲ್ಪ ಸಂಖ್ಯಾತ ಪಕ್ಷಗಳು ವಿರೋಧ ಪಕ್ಷಗಳಾಗಿ ಕೆಲಸ ನಿರ್ವಹಿಸುತ್ತಿವೆ.

ಇಂಗ್ಲೆಂಡಿನಲ್ಲಿ ವಿರೋಧ ಪಕ್ಷವು ಶಾಸನಬದ್ಧ ಅಂಗೀಕಾರ ಪಡೆದಿದೆ. ಅದನ್ನು 'Her Majesty's Opposition ಎಂದರೆ, ಸಾರ್ವಭೌಮರ ವಿರೋಧ ಪಕ್ಷವೆನ್ನುತ್ತಾರೆ. ವಿರೋಧ ಪಕ್ಷದ ನಾಯಕನಿಗೆ ಸಂಭಾವನೆಯನ್ನು ನೀಡುತ್ತಾರೆ. ಭಾರತದಲ್ಲಿ ಇಂತಹ ಶಾಸನಬದ್ಧ ಅಂಗೀಕಾರವಿಲ್ಲ. ಆದರೆ, ಒಂದೇ ಒಂದು ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕನಿಗೆ ಸಂಭಾವನೆ ಅಥವಾ ವೇತನವನ್ನು ನೀಡಲು ಅವಕಾಶಮಾಡಲಾಗಿದೆ.

ಇಂಗ್ಲೆಂಡಿನಲ್ಲಿ ವಿರೋಧ ಪಕ್ಷ ಹೆಚ್ಚಿನ ಸಂಖ್ಯಾಬಲವುಳ್ಳದ್ದಾಗಿದೆ. ಆದ ಕಾರಣ ಆಡಳಿತ ಪಕ್ಷವು ಪರಾಭವಗೊಂಡರೆ ತಾನೇ ಸರ್ಕಾರವನ್ನು ರಚಿಸುವ ಸ್ಥಿತಿಯಲ್ಲಿದೆ. ವಿರೋಧ ಪಕ್ಷವು ತನ್ನದೇ ಆದ ಒಂದು ಛಾಯಾ ಸಂಪುಟವನ್ನು ಏರ್ಪಡಿಸಿಕೊಂಡಿರುತ್ತದೆ. ಆದರೆ, ನಮ್ಮ ಭಾರತದಲ್ಲಿ ಆಡಳಿತ ಪಕ್ಷ ಪರಾಭವಗೊಂಡರೆ, ಬೇರೆ ಯಾವ ಒಂದು ವಿರೋಧ ಪಕ್ಷ ಸರ್ಕಾರವನ್ನು ರಚಿಸುವಷ್ಟು ಮಟ್ಟಿಗೆ ಸಂಖ್ಯಾಬಲವನ್ನು ಹೊಂದಿಲ್ಲ.

ಆಡಳಿತವನ್ನು ವಿಮರ್ಶೆಗೊಳಪಡಿಸುವುದರ ಮೂಲಕ ಸರ್ಕಾರವನ್ನು ಹತೋಟಿಯಲ್ಲಿಡುವುದು ವಿರೋಧ ಪಕ್ಷದ ಕರ್ತವ್ಯ. ವಿರೋಧ ಪಕ್ಷವು ಆಡಳಿತದ ಲೋಪದೋಷಗಳನ್ನು ಬಹಿರಂಗಪಡಿಸಿ ಪ್ರಜೆಗಳ ಕಷ್ಟಕಾರ್ಪಣ್ಯಗಳ ಕಡೆಗೆ ಸರ್ಕಾರದ ಗಮನ ಸೆಳೆಯುತ್ತದೆ. ಸರ್ಕಾರವು ವಿಮರ್ಶೆ ಅಥವಾ ಟೀಕೆಗಳನ್ನು ಕುಂಠಿತಗೊಳಿಸಲು ಅಥವಾ ಅಡಗಿಸಲು ಪ್ರಯತ್ನಿಸಬಾರದು.

ಸರ್ಕಾರದ ಬಗೆಗೆ ಮಾಡುವ ಟೀಕೆ ಅನೇಕ ರೂಪವಾಗಿರುತ್ತದೆ. ಅವುಗಳಲ್ಲಿ ಒಂದು ಮುಖ್ಯವಾದುದು. ಪ್ರಶ್ನೆಗಳನ್ನು ಹಾಕಿ ಸಮಾಚಾರಗಳನ್ನು ಪಡೆಯುವುದು. ಸದಸ್ಯರು ಮಂತ್ರಿಗಳನ್ನುದ್ದೇಶಿಸಿ, ಪ್ರಶ್ನೆಗಳನ್ನು ಕೇಳುವುದು ಬರಿಯ ಸಮಾಚಾರಗಳ ಸಂಗ್ರಹಕ್ಕಲ್ಲ, ಅಧಿಕಾರ ದುರುಪಯೋಗಗಳನ್ನು ಬಯಲಿಗೆಳೆಯುವುದು ಮತ್ತು ಸರ್ಕಾರದಿಂದ ಭರವಸೆಗಳನ್ನು ಪಡೆಯುವುದು, ಮತ್ತು ಅದನ್ನು ಕಂಗೆಡಿಸುವುದೂ ಅವರ ಉದ್ದೇಶ. ಇಂಥ ಸಂದರ್ಭಗಳಲ್ಲಿ ಆಡಳಿತದ ಲೋಪದೋಷಗಳ ಬಗೆಗೆ ಆಡಳಿತದ ಕಾರ್ಯವನ್ನು ಸಮರ್ಥಿಸಿಕೊಳ್ಳುವುದು ಮಂತ್ರಿಗಳಿಗೆ ಕಷ್ಟವಾಗುತ್ತದೆ. ಸಭೆಯ ದೈನಂದಿನ ಕಾರ್ಯಕಲಾಪಗಳಲ್ಲಿ ಮೊದಲನೆಯ ಒಂದು ಗಂಟೆಯ ಕಾಲ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯಲು ವಿನಿಯೋಗವಾಗುತ್ತದೆ. ಪ್ರಶ್ನೋತ್ತರಗಳೇ ಸರ್ಕಾರವು ಪ್ರಜೆಗಳ ಮನೋಭಾವವನ್ನು ಅರಿಯಲು ಸುಲಭವಾದ ಸಾಧನ. ಇದರಿಂದ ಸರ್ಕಾರ ತನ್ನ "ಕಾರ್ಯನೀತಿ ಯನ್ನು ಪ್ರಜೆಗಳ ಅಭೀಷ್ಟಕ್ಕನುಗುಣವಾಗಿ ರೂಪಿಸಿಕೊಳ್ಳಬಹುದು. ಹೀಗೆ ಸದಸ್ಯರು ಕೇಳಿದ ಪ್ರಶ್ನೆಗಳ ಪರಿಣಾಮವಾಗಿ ಸಾರ್ವಜನಿಕರ ಮನಸ್ಸಿನಲ್ಲಿ ಆಂದೋಳನವುಂಟಾಗಿ ಕೆಲವು ಆಯೋಗಗಳ ನೇಮಕವಾಗಿವೆ. ವಿಶೇಷ ನ್ಯಾಯಮಂಡಲಿ ಮತ್ತು ಕಾನೂನುಗಳು ಕೂಡ ಆಗಿವೆ.

ಯಾವುದಾದರೂ ಒಂದು ತ್ವರಿತವಾದ ವಿಷಯಕ್ಕೆ ಸಂಬಂಧಪಟ್ಟಂತೆ ಸದಸ್ಯರು ಅಲ್ಪಕಾಲಾವಧಿಯ ಪ್ರಶ್ನೆಯನ್ನು ಹಾಕಿ ಸಮಾಚಾರವನ್ನು ಸರ್ಕಾರದಿಂದ ಪಡೆಯಬಹುದು. ಅಥವಾ ತುರ್ತಿನ ಹಾಗೂ ಸಾರ್ವಜನಿಕ ಪ್ರಾಮುಖ್ಯವುಳ್ಳ ಯಾವುದಾದರೊಂದು ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯಬಹುದು. ಆಗ ಮಂತ್ರಿಗಳು ಅದರ ಬಗೆಗೆ ಒಂದು ಹೇಳಿಕೆಯನ್ನು ಕೊಡುವರು.

ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ಕಳವಳಕಾರಕ ಘಟನೆಗಳೇನಾದರೂ ನಡೆದಾಗ ಮತ್ತು ಸರ್ಕಾರ ಅದನ್ನು ತಡೆಗಟ್ಟಲು ಅಥವಾ ನಿವಾರಿಸಲು ತುರ್ತಾಗಿ ಸಾಕಷ್ಟು ಕಾರ್ಯಕ್ರಮವನ್ನು ಕೈಗೊಂಡಿಲ್ಲವೆಂದು ವಿರೋಧ ಪಕ್ಷಕ್ಕೆ ಕಂಡುಬಂದರೆ, ಅಂಥ ಕಾರ್ಯ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯನ್ನು ಮಂಡಿಸಿ, ಆ ವಿಷಯವನ್ನು ಸಭೆಯಲ್ಲಿ ಚರ್ಚಿಸಬಹುದು. ಚರ್ಚೆಯ ನಂತರ ಆ ಸೂಚನೆ ಸಭೆಯಿಂದ ಅಂಗೀಕೃತವಾದಲ್ಲಿ ಇದು ಸರ್ಕಾರದ ಖಂಡನೆಯಾಗುತ್ತದೆ.

ಸರ್ಕಾರವನ್ನು ಆಕ್ಷೇಪಿಸಲು ವಿರೋಧ ಪಕ್ಷಕ್ಕೆ ಬೇರೆ ಅವಕಾಶಗಳೂ ಉಂಟು. ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರು ಸಂಸತ್ತು ಅಥವಾ ವಿಧಾನ ಮಂಡಲವನ್ನುದ್ದೇಶಿಸಿ ಮಾಡುವ ಭಾಷಣದ ಮೇಲೆ ವಂದನಾರ್ಪಣೆ ಮಾಡುವ ಸೂಚನೆಯ ಮೇಲೆ ಚರ್ಚೆ ನಡೆಯುತ್ತದೆ. ಆ ಸೂಚನೆಗೆ ತಿದ್ದುಪಡಿಗಳನ್ನು ಮಂಡಿಸಬಹುದು. ವಿಶಾಲ ವ್ಯಾಪ್ತಿಯುಳ್ಳ ಆ ಚರ್ಚೆಯಲ್ಲಿ ಭಾಷಣದಲ್ಲಿ ಪ್ರಸ್ತಾಪಿಸಲ್ಪಡದಿರುವ ವಿಷಯಗಳು ಕೂಡ ಬರಬಹುದು. ಅಂತಹ ತಿದ್ದುಪಡಿ ಪ್ರಾಮುಖ್ಯವಾದುದಾಗಿದ್ದು ಅದು ಸಭೆಯಿಂದ ಅಂಗೀಕೃತವಾದಲ್ಲಿ ಸರ್ಕಾರ ಅಧಿಕಾರವನ್ನು ತ್ಯಜಿಸಬೇಕಾಗುತ್ತದೆ.

ಇನ್ನು ಆಯವ್ಯಯ ಪತ್ರದ ಮೇಲೆ ಚರ್ಚೆ ನಡೆಯುತ್ತದೆ. ಮೊದಲು ಅದರ ಮೇಲಿನ ಸಾಮಾನ್ಯ ಚರ್ಚೆ ನಡೆಯುವಾಗ ವಿರೋಧ ಪಕ್ಷದವರು ಯಾವುದಾದರೂ ಆಡಳಿತಕ್ಕೆ ಸಂಬಂಧಪಟ್ಟ ಮೂಲ ತತ್ವಗಳ ಮೇಲೆ ಮಾತನಾಡಬಹುದು. ಅನುದಾನಗಳ ಬೇಡಿಕೆಗಳನ್ನು ಮಂಡಿಸಿದಾಗ, ಸದಸ್ಯರು ಖೋತಾ ಸೂಚನೆಗಳನ್ನು ಮಂಡಿಸಬಹುದು. ಯಾವುದಾದರೂ, ಖೋತಾ ಸೂಚನೆ ಅಂಗೀಕೃತವಾದಲ್ಲಿ ಅದು ಸರ್ಕಾರದ ಖಂಡನೆಯಾಗುತ್ತದೆ.

ಸದಸ್ಯರು ಒಂದು ನಿರ್ಣಯದ ಮೂಲಕ ಸರ್ಕಾರದ ಯಾವುದೇ ಕಾರ್ಯ ಅಥವಾ ಕಾರ್ಯ ನೀತಿಯನ್ನು ಸಭೆ ಒಪ್ಪುತ್ತದೇ ಅಥವಾ ಒಪ್ಪುವುದಿಲ್ಲವೇ ಎಂಬುದನ್ನು ವ್ಯಕ್ತಪಡಿಸಬಹುದು; ಅಥವಾ ಸರ್ಕಾರ ಕಾರ್ಯೋನ್ಮುಖವಾಗುವಂತೆ ಒತ್ತಾಯಪಡಿಸಬಹುದು. ಅಥವಾ ಪ್ರಾಮುಖ್ಯವಾದ ಯಾವುದೇ ಒಂದು ವಿಷಯ ಅಥವಾ ಘಟನೆಯ ಕಡೆಗೆ ಸರ್ಕಾರದ ಗಮನ ಸೆಳೆಯಬಹುದು. ಅಥವಾ ಅಂಥ ಪರಿಸ್ಥಿತಿಯನ್ನು ಪರಿಶೀಲಿಸುವಂತೆ ಒತ್ತಾಯ ಮಾಡಬಹುದು.

ಶಾಸನ ಸಭೆಯು ಅನೇಕ ಸಮಿತಿಗಳನ್ನು ರಚನೆ ಮಾಡುತ್ತದೆ. ಇವುಗಳಲ್ಲಿ ವಿರೋಧ ಪಕ್ಷವೂ ಸಂಖ್ಯಾಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆಯುತ್ತದೆ. ಹಣಕಾಸಿಗೆ ಸಂಬಂಧಪಟ್ಟಂತೆ ಎರಡು ವಿತ್ತಿಯ ಸಮಿತಿಗಳಿರುತ್ತವೆ. ಒಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಇನ್ನೊಂದು ಅಂದಾಜು ಸಮಿತಿ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಧನವಿನಿಯೋಗಕ್ಕೆ ಸಂಬಂಧಪಟ್ಟ ಹಾಗೂ ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಲೆಕ್ಕ ಪರೀಕ್ಷೆಯ ವರದಿಯನ್ನು ಪರಿಶೀಲಿಸುತ್ತದೆ. ಈ ವರದಿಯು ಭಾರತದ ಮಹಾ ಲೇಖಾ ಪರೀಕ್ಷಕರಿಂದ ತಯಾರಿಸಲ್ಪಟ್ಟದ್ದು. ಈ ಲೆಕ್ಕ ಪರೀಕ್ಷೆಯ ವರದಿಗಳು ಸಭೆಯಿಂದ ಮಂಜೂರಾದ ಹಣವನ್ನು ಖರ್ಚು ಮಾಡುವುದರಲ್ಲಿ ಆಗಿರಬಹುದಾದ ಅಕ್ರಮಗಳನ್ನು ಬೆಳಕಿಗೆ ತರುತ್ತವೆ. ಇಂತಹ ಸಂದರ್ಭಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಇದಕ್ಕೆ ಹೊಣೆಯಾರೆಂಬುದನ್ನು ನಿರ್ಧರಿಸಿ ಮುಂದೆ ಇಂತಹ ಅಕ್ರಮಗಳು ನಡೆಯದಂತೆ ಮಾರ್ಗಗಳನ್ನು ಸೂಚಿಸಲು ವಿರೋಧ ಪಕ್ಷಕ್ಕೆ ಅವಕಾಶ ದೊರೆಯುತ್ತದೆ. ಅಂದಾಜುಗಳ ಸಮಿತಿ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ನಾನಾ ಯೋಜನೆಗಳ ಅಂದಾಜುಗಳನ್ನು ಪರಿಶೀಲಿಸಿ ಮಿತವ್ಯಯದ ಮಾರ್ಗಗಳನ್ನು ಸೂಚಿಸುವುದಲ್ಲದೇ ಬೇರೆ ನೀತಿಯನ್ನು ಸೂಚಿಸಲು ಅವಕಾಶ ದೊರೆಯುತ್ತದೆ.

ಅಧೀನ ಶಾಸನ ಸಮಿತಿ ಎಂಬ ಒಂದು ಸಮಿತಿ ಇದೆ. ಇದು ಸರ್ಕಾರಕ್ಕೆ ವಹಿಸಲ್ಪಟ್ಟಿರುವ ಅಧಿಕಾರಕ್ಕೊಳಪಟ್ಟಂತೆ ಅವರು ರಚಿಸುವ ನಿಯಮ ನಿಬಂಧನೆಗಳನ್ನು ಪರಿಶೀಲಿಸುತ್ತದೆ. ಸರ್ಕಾರಕ್ಕೆ ವಹಿಸಿರುವ ಅಧಿಕಾರ ವ್ಯಾಪ್ತಿಯೊಳಗೆ ನಿಯಮ ನಿಬಂಧನೆಗಳು ರಚಿತವಾಗಿವೆಯೋ ಎಂಬುದನ್ನು ಪರೀಕ್ಷಿಸುವುದು ಈ ಸಮಿತಿಯ ಕರ್ತವ್ಯ. ವಿರೋಧ ಪಕ್ಷವು ಪ್ರಮುಖ ಪಾತ್ರವನ್ನು ವಹಿಸಬಹುದಾದ ಮತ್ತೊಂದು ಮುಖ್ಯವಾದ ಸಮಿತಿಯೆಂದರೆ, ಅದು ಸರ್ಕಾರದ ಭರವಸೆಗಳಿಗೆ ಸಂಬಂಧಪಟ್ಟ ಸಮಿತಿ. ಮಂತ್ರಿಗಳು ಸಭೆಯಲ್ಲಿ ನೀಡಿದ ಭರವಸೆಗಳನ್ನು ಕಾರ್ಯಗತ ಮಾಡಿದ್ದಾರೆಯೋ ಇಲ್ಲವೆ, ಹಾಗೆ ಮಾಡಿದ್ದಲ್ಲಿ ಸಕಾಲದಲ್ಲಿ ಮಾಡಿದ್ದಾರೆಯೋ ಎಂಬುದನ್ನು ಪರಿಶೀಲಿಸುವುದು ಈ ಸಮಿತಿಯ ಕರ್ತವ್ಯ.

ಸಂಸದೀಯ ಪ್ರಜಾಪ್ರಭುತ್ವದ ವೈಶಿಷ್ಟ್ಯವೆಂದರೆ, ಶಾಸನ ಸಭೆಯಲ್ಲಿ ಚರ್ಚೆ ನಡೆದ ನಂತರ ತೀರ್ಮಾನಗಳನ್ನು ತೆಗೆದುಕೊಳ್ಳುವುದು. ಅಲ್ಪ ಸಂಖ್ಯಾತ ಪಕ್ಷಕ್ಕೆ ಎಂದರೆ, ವಿರೋಧ ಪಕ್ಷಕ್ಕೆ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳಲ್ಲಿಯೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಕಷ್ಟು ಅವಕಾಶವಿರಬೇಕು. ಆದಾಗ್ಯೂ ಬಹುಮತಾಭಿಪ್ರಾಯದಂತೆಯೇ ತೀರ್ಮಾನವಾಗುವುದು. ಈ ಕಾರಣದಿಂದಲೇ ಅಲ್ಪ ಸಂಖ್ಯಾತರಿಗೆ ಹೇಳುವ ಅವಕಾಶ ಬಹು ಸಂಖ್ಯಾತರಿಗೆ ಕಾರ್ಯಗತ ಮಾಡುವ ಅವಕಾಶ ಎಂದು ಹೇಳುತ್ತಾರೆ.

ಇಂಗ್ಲೆಂಡಿನಲ್ಲಿ ಕೆಲವು ಸಂದರ್ಭಗಳಲ್ಲಿ ಚರ್ಚೆಗೆ ತೆಗೆದುಕೊಳ್ಳುವ ವಿಷಯಗಳನ್ನು ಆರಿಸುವ ಹಕ್ಕನ್ನು ವಿರೋಧ ಪಕ್ಷಕ್ಕೆ ನೀಡುತ್ತಾರೆ. ಆದರೆ, ಭಾರತದಲ್ಲಿ ಈ ಪದ್ಧತಿ ಇನ್ನೂ ರೂಪುಗೊಂಡಿಲ್ಲ. ಇದಕ್ಕೆ ಕಾರಣ, ಇಲ್ಲಿ ವಿರೋಧ ಪಕ್ಷದಲ್ಲಿ ಬೇರೆ ಬೇರೆ ಆದರ್ಶಗಳನ್ನುಳ್ಳ ಅನೇಕ ಸಣ್ಣ ಸಣ್ಣ ಪಕ್ಷಗಳಿರುವುದರಿಂದ ಚರ್ಚೆ

ಗಾಗಿ ಆರಿಸಬಹುದಾದ ವಿಷಯಗಳಲ್ಲಿ ಒಮ್ಮತಕ್ಕೆ ಬರುವುದು ಕಷ್ಟವಾಗಬಹುದು. ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಗಳ ನಂತರ ನಾನಾ ವಿರೋಧ ಪಕ್ಷಗಳು ಒಂದುಗೂಡುವ ಪ್ರಯತ್ನ ನಡೆದಿದೆ. ಅನೇಕ ರಾಜ್ಯಗಳಲ್ಲಿ ಸರ್ಕಾರಗಳನ್ನು ರಚಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದರೂ ಸಂಯೋಜಿತ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುವುದರಲ್ಲಿ ಸಫಲರಾಗಿಲ್ಲ.

ಸರ್ಕಾರಕ್ಕೆ ಜವಾಬ್ದಾರಿಯುತವಾದ ವಿರೋಧ ಪಕ್ಷವಾಗಬೇಕಾದರೆ, ಅದು ಆಡಳಿತ ಲೋಪ ದೋಷಗಳನ್ನು ಬಯಲಿಗೆಳೆಯಬೇಕಲ್ಲದೆ, ಸರ್ಕಾರದ ಕಾರ್ಯನೀತಿಯಲ್ಲಿರಬಹುದಾದ ನ್ಯೂನತೆಗಳನ್ನು ತೋರಿಸಿ ಸೂಕ್ತವಾದ ಬೇರೆ ಕಾರ್ಯನೀತಿಯನ್ನು ರೂಪಿಸಬೇಕು.

ಸರ್ಕಾರದ ಅಂತಿಮ ಗುರಿ ಪ್ರಜೆಗಳ ಹಿತ, ಅವರ ಕ್ಷೇಮ, ಅವರ ಅಭ್ಯುದಯ. ಈ ಗುರಿಯನ್ನು ಸಾಧಿಸುವುದರಲ್ಲಿ ಸರ್ಕಾರ ಅನುಸರಿಸುವ ಕಾರ್ಯ ನೀತಿ ದೋಷಯುಕ್ತವಾದುದು, ಆದ ಕಾರಣ ಉದ್ದೇಶ ಸಾಧನೆ ಸಫಲವಾಗುವುದಿಲ್ಲವೆಂಬುದನ್ನು ತೋರಿಸುವುದು ವಿರೋಧ ಪಕ್ಷದ ಕರ್ತವ್ಯ. ಇದನ್ನು ಮಾಡಲು ಶಾಸನಸಭೆಗಳ ಕಾರ್ಯಕಲಾಪಗಳನ್ನು ನಡೆಸಲು ಕೆಲವು ನಿಬಂಧನೆಗಳು ರಚಿತವಾಗಿವೆ. ಕ್ರಮಬದ್ಧವಾಗಿ ಸರ್ಕಾರವನ್ನು ಟೀಕಿಸಲು ಈ ನಿಬಂಧನೆಗಳಲ್ಲಿ ವಿರೋಧ ಪಕ್ಷಕ್ಕೆ ಅಪಾರ ಅವಕಾಶಗಳಿವೆ. ಈ ನಿಬಂಧನೆಗಳ ವ್ಯಾಪ್ತಿಗೊಳಪಟ್ಟು ವಿರೋಧಪಕ್ಷ ತನ್ನ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು. ಮತ್ತು ಪ್ರಜೆಗಳ ಹಿತವನ್ನು ಸಾಧಿಸಬಹುದು. ಸಭೆಯಲ್ಲಿ ಅವ್ಯವಸ್ಥೆ ಅಥವಾ ಗೊಂದಲವನ್ನು ಎಬ್ಬಿಸುವುದು ವಿರೋಧ ಪಕ್ಷದ ಧ್ಯೇಯವಾಗಿರಬಾರದು. ಇಂತಹ ಕ್ರಮ ತಪ್ಪಿದ ಕೋಲಾಹಲವನ್ನು ಉಂಟುಮಾಡುವುದರಿಂದ ಸರ್ಕಾರವನ್ನು ಪೇಚಿಗೆ ಸಿಕ್ಕಿಸಬಹುದೇ ವಿನಃ ಯಾರು ಮತಕೊಟ್ಟು ಚುನಾಯಿಸಿದರೋ ಅವರ ಸೇವೆಯನ್ನು ಮಾಡಿದಂತಾಗುವುದಿಲ್ಲ. ಪ್ರಜೆಗಳು ಸದಸ್ಯರನ್ನು ಚುನಾಯಿಸಿ ಕಳುಹಿಸಿರುವುದು ತಮ್ಮ ಹಿತರಕ್ಷಣೆ ಹಾಗೂ ರಾಜ್ಯದ ಹಿತರಕ್ಷಣೆಯಾಗಲಿ ಎಂಬ ಉದ್ದೇಶದಿಂದ. ಆದರೆ, ಸಭೆಯಲ್ಲಿ ಕೋಲಾಹಲವನ್ನು ಎಬ್ಬಿಸುವುದರಿಂದ ಪ್ರಜೆಗಳ ಹಿತರಕ್ಷಣೆಯಾಗುವುದಿಲ್ಲ. ಅಲ್ಲದೇ, ವಿರೋಧ ಪಕ್ಷವೇನಾದರೂ ಸರ್ಕಾರವನ್ನು ಸೋಲಿಸಿ, ತಾನೇ ಸರ್ಕಾರವನ್ನು ರಚಿಸಿದರೆ ಆಗಲೂ ಇಂತಹ ಗೊಂದಲ ಅಥವಾ ಕೋಲಾಹಲ ಉಂಟಾದಾಗ ಅದನ್ನು ತಡೆಗಟ್ಟುವುದು ಕಷ್ಟವಾಗುತ್ತದೆ. ಆದುದರಿಂದ ತಮ್ಮ ಹಿತದೃಷ್ಟಿಯಿಂದಲೂ ವಿರೋಧ ಪಕ್ಷ ಗೌರವಯುತವಾದ ಪಾತ್ರವನ್ನು ವಹಿಸಬೇಕು. ಫಲಪ್ರದವಾದ ಹಾಗೂ ರಚನಾತ್ಮಕವಾದ ಟೀಕೆಗಳನ್ನು ನಿಬಂಧನೆಗಳ ವ್ಯಾಪ್ತಿಯೊಳಗೆ ಮಾಡಬೇಕು. ಆಗ ರಾಷ್ಟ್ರ ಕಲ್ಯಾಣ ಸಾಧನೆಯಾಗುತ್ತದೆ.

[ಆಕಾಶವಾಣಿ ಕೃಪೆಯಿಂದ]

ಮಧ್ಯ ಪೂರ್ವದ

ಪ್ರಚೋದಕ ಅಗ್ನಿವರ್ಷ

ಭದ್ರತಾ ಮಂಡಳಿಯಲ್ಲಿ ಮಧ್ಯಪ್ರಾಚ್ಯದ ಅಶಾಂತಿಯ ಮೋಡವನ್ನು ಚದರಿಸುವ ಉಪಾಯದ ಮೇಲೆ ಚರ್ಚೆ ನಡೆಯುತ್ತಿದ್ದಂತೆಯೇ ಇಸ್ರಾಯೇಲದ ವಿಮಾನ ಪಡೆಯು ಕೈರೋವಿನ ಮೇಲೆ ಆಕಾಶ ಧಾಳಿಯನ್ನು ಆರಂಭಿಸಿ ಅಗ್ನಿ ವರ್ಷವನ್ನು ಸುರಿಸಿತು. ಪತ್ರಿಕೆಗಳಲ್ಲಿ 'ಯುದ್ಧ ಆರಂಭವಾಯಿತು' ಎಂದು ದಪ್ಪಕ್ಷರಗಳಲ್ಲಿ ಪ್ರಕಟವಾಯಿತು. ಕೈರೋ ತನ್ನ ಮೇಲಾದ ವಿಮಾನಧಾಳಿಯನ್ನನುಲಕ್ಷಿಸಿ, ಇಸ್ರಾಯೇಲನವನ್ನು ಬಗ್ಗು ಬಡೆಯಲು ತೊಡಗಿತು. ಅರಬ ರಾಷ್ಟ್ರಗಳೆಲ್ಲವೂ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರ ಬೆಂಗಾವಲಿಗೆ ನಿಂತಿತು.

ಇದೀಗ, ಇಸ್ರಾಯೇಲದ ವಿರುದ್ಧ ಐಗುಪ್ತ, ಸಿರಿಯಾ, ಜೋರ್ಡಾನ್, ಸೌದಿ ಅರೇಬಿಯಾ, ಸುಡಾನ್, ಇರಾನ್, ಇರಾಕ್, ಲೆಬನಾನ್, ಟ್ಯುನಿಸಿಯಾ, ಮೊದಲಾದ "ಅರಬ ಜಗತ್ತು" ಒಂದಾಗಿ ಹೋರಾಟ ನೀಡುತ್ತಿವೆ. ಪಾಕಿಸ್ತಾನದ ಅಧ್ಯಕ್ಷ ಫೀಲ್ಡ್ ಮಾರ್ಶಲ್ ಆಯೂಬ ಖಾನರೂ ಅರಬರಿಗೆ ಸಾಧ್ಯವಿದ್ದ ಎಲ್ಲ ನೆರವನ್ನೂ ನೀಡುವುದಾಗಿ ಘೋಷಿಸಿದ್ದಾರೆ. ಅಂತೂ ಅರಬರಿಗೂ ಇಸ್ರಾಯೇಲಿಗೂ ಆರಂಭವಾದ ಈ ಕದನದ ಕೊನೆಯೆಲ್ಲಿ ಎಂದು ಹೇಳುವುದು ರಾಜಕೀಯ ಭವಿಷ್ಯಕಾರರಿಗೂ ಕಷ್ಟ. ಜಾಗತಿಕ ಶಾಂತಿ - ಅಶಾಂತಿಗಳು ದೊಡ್ಡ ರಾಷ್ಟ್ರಗಳನ್ನೇ ಮುಖ್ಯವಾಗಿ ಹೊಂದಿಕೊಂಡಿದೆ. ಚಿಕ್ಕವು ನಾಮ ಮಾತ್ರಕ್ಕೆ.

ಇಸ್ರಾಯೇಲದ ನಿರ್ಮಾಣಕ್ಕೆ ಪಾಶ್ಚಾತ್ಯ ಹಿರಿಯ ದೇಶಗಳೇ ಕಾರಣ. ಅರಬರ ವಿರುದ್ಧಾಭಿಪ್ರಾಯ ವ್ಯಕ್ತಪಡಿಸಿದರೂ ಯೆಹೂದ್ಯರಿಗೊಂದು ದೇಶ ಬೇಕು ಎಂದು ಅರಬ ಮರಳುಗಾಡಿನ ಮಧ್ಯೆ–ತಮಗೆ ಆಶ್ರಯವೊಂದಿರಲೆಂದು ಈ ಇಸ್ರಾಯೇಲ್ ಓಯಸಿಸ್ಸನ್ನು ತೋಡಿದರು. ಮೂರು ಕಡೆ ಅರಬ ಮರಳು ಸಮುದ್ರವೂ ಒಂದೆಡೆ ನೀರ ಸಮುದ್ರವೂ ಆವರಿಸಿರುವ ಇಸ್ರಾಯೇಲ್ ಯೆಹೂದ್ಯರಿಗೆಲ್ಲ ಪ್ರಿಯವಾಯಿತು. ಪಾಶ್ಚಾತ್ಯರ ತಾಳಕ್ಕೆ ಸರಿಯಾಗಿ ಕುಣಿಯಲು ಅದು ಇಚ್ಛಿಸುತ್ತದೆಯಾದುದರಿಂದ ಶಕ್ತಿ ಸಂಪನ್ನವಾಗಿಯೇ ಬೆಳೆದು ಬಂದಿತು.

ಇಸ್ರಾಯೇಲಿನ ಸೈನಿಕ ಶಕ್ತಿಯೇನೂ ಕಡಿಮೆಯಿಲ್ಲ. ಅರಬ ಜಗತ್ತು ತನ್ನೆದುರು ಒಂದಲ್ಲ ಒಂದು ದಿನ ಎದುರು ಬೀಳುವುದು ಎಂದೂ ಅದಕ್ಕೆ ಆರಂಭದಲ್ಲೇ ಗೊತ್ತು. ಅದಕ್ಕಾಗಿ ಯೆಹೂದ್ಯರು ತಕ್ಕ ಸಿದ್ಧತೆಯನ್ನು ಮೊದಲಿಂದಲೇ ಮಾಡಿಕೊಂಡಿದ್ದಾರೆ; ಅದರ ನಿರ್ಮಾಣಕ್ಕೆ ಪ್ರೇರಕರಾಗಿ ಕಾರಣವಾದವರೂ ಅದರ ಸೈನಿಕ ಶಕ್ತಿ ಬೆಳವಣಿಗೆಗೆ ಬೇಕಷ್ಟು ಸಹಾಯ ಮಾಡಿದ್ದಾರೆ. ಆದರೂ ಐಗುಪ್ತದ ವಿಮಾನ ಪಡೆಯು ಬಲಶಾಲಿಯೆಂದು ನಂಬಿದ್ದ ಇಸ್ರಾಯೇಲ್ ಅದನ್ನು ಮೊದಲು ನಾಶ ಮಾಡ ಬಯಸಿ ವಿಮಾನ ನೆಲೆಗಳ ಮೇಲೆ ಏಕಕಾಲದಲ್ಲಿ ಧಾಳಿಮಾಡಿದುದೇ ಈ ಸಮರ ಜ್ವಾಲೆಯೇಳಲು ಕಾರಣವಾಯಿತು. ಒಂದು ಅರಬ ರಾಷ್ಟ್ರದ ಮೇಲಾದ ಆಕ್ರಮಣವನ್ನೆದುರಿಸಲು ಇಡಿಯ ಅರಬ ಜಗತ್ತೇ ಬದ್ಧಕಂಕಣವಾಯಿತು. ಕೆಲವು ಇಸ್ರಾಯೇಲಿನ ವಿರುದ್ಧ ಯುದ್ಧ ಘೋಷಣೆಯನ್ನೂ ಮಾಡಿದುವು, ಕೆಲವು ಸೈನಿಕ ನೆರವನ್ನು ನೀಡಿದುವು.

ಒಟ್ಟಿನಲ್ಲಿ ಮಧ್ಯಪೂರ್ವ ನನೆಗುದಿಗೆ ಬಿದ್ದಿತು. ಇದುವರೆಗೆ ಬಂದಿರುವ ಸುದ್ದಿಗಳಂತೆ ಅಮೇರಿಕೆ—ಬ್ರಿಟನ್ನು ತಾಟಸ್ಥ್ಯವನ್ನು ವಹಿಸುತ್ತವೆ. ಇವುಗಳ ನಿರ್ಣಯವನ್ನೇ ಸೋವಿಯತ್ ನೀತಿ ಹೊಂದಿಕೊಂಡಿರುವುದರಿಂದ ಈಗ ಅದಕ್ಕೂ ತಟಸ್ಥವಾಗಿಯೇ ಉಳಿಯಬೇಕಾಗಿದೆ. ಏಶ್ಯದ ಜಪಾನ್ ತಾನೂ ತಟಸ್ಥವಾಗುವುದಾಗಿ ಹೇಳಿಕೊಂಡಿದೆ. ಫ್ರಾನ್ಸು ಕೂಡ ಈ ಯುದ್ಧದಲ್ಲಿ ಹೆಚ್ಚಿನ ಆಸಕ್ತಿವಹಿಸಿಲ್ಲ. ಅಂತೂ ಬರಿಯ ಅರಬ ಜಗತ್ತಿಗೆ ಮಾತ್ರ ಸಂಬಂಧಪಟ್ಟಂತೆ ಈ ಯುದ್ಧ ಮುಂದುವರಿದುದರಿಂದ, 'ಜಾಗತಿಕ ಯುದ್ಧ"ದಂತಹ ಬೃಹದ್ರೂಪ ಪಡೆಯಲಾರದು ಎಂದು ಊಹಿಸಲು ಅವಕಾಶವಿದೆ.

ಸಮರ ರಂಗದ ಸತ್ಯವಾರ್ತೆಗಳು ತಿಳಿಯಬೇಕಾದರೆ ಇನ್ನೂ ಕೆಲವು 'ಕಾಲ ಬೇಕಾಗುತ್ತದೆ. ಸತ್ಯ ಸಂಗತಿ ಹೊರಬರುವ ತನಕ ಉಭಯ ಪಕ್ಷಗಳ ಪ್ರಚಾರರೂಪದ ಅತಿರಂಜಿತ ಅಥವಾ ಸುಳ್ಳುವಾರ್ತೆಗಳನ್ನೇ ನಂಬಿಕೊರಬೇಕು.

ಆದುದರಿಂದ ಯಾರು ಗೆದ್ದರು ಅಥವಾ ಗೆಲ್ಲುವ ದಾರಿಯಲ್ಲಿದ್ದಾರೆ ಎಂದು ಈಗಲೇ ಹೇಳುವುದು ಸಾಧ್ಯವಿಲ್ಲ. ಮಧ್ಯಪೂರ್ವದ ಈ ಅಶಾಂತಿಯ ಜ್ವಾಲೆಯನ್ನು ಹಚ್ಚಿದ ಕೀರ್ತಿ ಇಸ್ರಾಯೇಲಕ್ಕೆ ಸಲ್ಲಬೇಕು— ಇದು ಪ್ರಧಾನಿ ಇಂದಿರಾ ಗಾಂಧೀಯವರ—ಭಾರತದ ಸ್ಪಷ್ಟ ಅಭಿಪ್ರಾಯ.

ಅತ್ತ ಭದ್ರತಾ ಸಮಿತಿಯಲ್ಲಿ ಸೋವಿಯತ್ತು ತಂದ ಸಂಪೂರ್ಣ ಕದನ ವಿರಾಮದ ಗೊತ್ತುವಳಿಯೊಂದು ಅವಿರೋಧವಾಗಿ ಆಯ್ಕೆಗೊಂಡುದರಿಂದ ಹೋರಾಟದ ಮುಂದರಿಕೆಗೊಂದು ತಡೆ ಬಿದ್ದಂತಾಗುವುದು. ಈ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ೪೮ ತಾಸುಗಳೊಳಗೆ ತರಬೇಕೆಂದೂ ಒತ್ತಾಯಿಸಿದೆ. ಇದು ನ್ಯಾಯ-- ಆದರೂ ಇದರ ಕಾರ್ಯಾಚರಣೆಗೆ ಕೆಲವು ದಿನಗಳಾದರೂ ಬೇಕು—ಇದು ವರೆಗಿನ ಅನುಭವ. ಆದರೆ, ಈ ಗೊತ್ತುವಳಿಯಿಂದ ಅಮೇರಿಕೆ—ಬ್ರಿಟನ್ನುಗಳು ಯಾವ ಪಕ್ಷವನ್ನೂ ಸೇರಿಕೊಳ್ಳವೆಂದು ನಾವು ತಿಳಿಯುವುದಾದರೆ, ಯುದ್ಧದ ಜ್ವಾಲೆ ಜಗತ್ತಿನಲ್ಲಿ ಬಹುದೂರ ಹರಡದು. ಇನ್ನು ಕೆಲ ದಿನಗಳಲ್ಲೇ ಎದ್ದ ಜ್ವಾಲೆ ನಂದಿಹೋಗುವುದೆಂದು ನಿರೀಕ್ಷಿಸಬಹುದು.

ಅರಬ ದೇಶಗಳು ಅಮೇರಿಕೆ ಮತ್ತು ಬ್ರಿಟನ್‌ಗಳ ಮೇಲೆ ಸಿಟ್ಟಿನ ಕಿಡಿ ಕಾರುತ್ತಿವೆ. ಕೆಲಕೆಲವು ಅರಬ ದೇಶಗಳು ಈಯೆರಡು ದೇಶಗಳೊಡನಿರುವ ರಾಜಕೀಯ ಸಂಬಂಧವನ್ನು ಕಡಿದುಕೊಂಡು [illegible]ಮಧ್ಯ ಪೂರ್ವದ ಎಣ್ಣೆ ಬಾವಿಗಳು ಈ ದೇಶಗಳ ಕೈ ಕಟ್ಟಿಕೊಂಡಿರುವಂತೆ ಮಾಡಿವೆ. ಸೋವಿಯತ್ತಿನ ಭಯವೂ ಇದೆ. ಇದು ಜಾಗತಿಕ ಶಾಂತಿ ಸ್ಥಾಪನೆಯ ದೃಷ್ಟಿಯಿಂದ ಒಳ್ಳೆಯದೇ ಆಯಿತು.

ಭಾರತವು ಸಂಯುಕ್ತ ಅರಬ ಗಣರಾಜ್ಯವನ್ನು ಬೆಂಬಲಿಸಿ ಅದು ತನ್ನ ಉತ್ತಮ ಮಿತ್ರ ಅರಬ ರಾಷ್ಟ್ರವೆಂದು ಸಾರಿದೆ. ಹೀಗೆ ಸಾರುವಲ್ಲಿ ಭಾರತವು ದುಡುಕಿತೆಂದೂ ಪಾಕ್—ಭಾರತ ಹೋರಾಟದ ವೇಳೆ ಅರಬ ರಾಷ್ಟ್ರಗಳು ಭಾರತಕ್ಕೆ ನೈತಿಕ ಬೆಂಬಲವನ್ನೂ ಕೊಡದೆ ಇದ್ದುದರ ಮುಯ್ಯಿ ತೀರಿಸಬೇಕೆಂದೂ ಅನ್ನುವ ಪ್ರತೀಕಾರ ವಾದಿಗಳೂ ಇದ್ದಾರೆ. ಅರಬ ಜಗತ್ತು ಭಾರತ—ಪಾಕ್ ಹೋರಾಟದ ವೇಳೆ ಭಾರತಕ್ಕೆ ಬೆಂಬಲ ನೀಡಿಲ್ಲ, ಪಾಕಿಸ್ಥಾನಕ್ಕೆ ಇರಾಣದ ವಿಮಾನಗಳು ಬಂದಿದ್ದುವು. ಇಂದಿಗಾದರೂ ಇರಾಣದ ಭಾರತದ ವಿರುದ್ಧ ಸೈನಿಕ ನೆರವು ಪಾಕಿಸ್ತಾನಕ್ಕೆ ದೊರೆಯುವುದೆಂದು ನಮ್ಮ ವಿದೇಶ ಸಚಿವ ಛಾಗ್ಲಾ ಹೇಳುತ್ತಾರೆ. ಈ ಸಂಗತಿಯನ್ನೇ ಪರ್ಯಾಯವಾಗಿ ಹೀಗೆ ಹೇಳುವುದೂ ಇದೆ. ಭಾರತದ ಬೆಂಬಲ ಸಂಯುಕ್ತ ಅರಬ ಪ್ರಜಾರಾಜ್ಯ. ಸಂಯುಕ್ತ ಅರಬ ಪ್ರಜಾರಾಜ್ಯದ ಬೆಂಬಲ ಪಾಕಿಸ್ತಾನಕ್ಕೆ. ಹಾಗಾಗಿ ಭಾರತವು ಪಾಕಿಸ್ತಾನವನ್ನೇ ಬೆಂಬಲಿಸುತ್ತದೆ ಎಂದು. ಇದು ಕುಚೋದ್ಯವಾದರೂ ಸತ್ಯದ ತಿಲಾಂಶವಾದರೂ ಇಲ್ಲದಿಲ್ಲ. ಭದ್ರತಾ ಸಮಿತಿಯ ಗೊತ್ತುವಳಿಯನ್ನು ಭಾರತವು ಸ್ವಾಗತಿಸಿ ಈ ಬಗೆಯ ಕಲಂಕವನ್ನು ತೊಡೆದುಕೊಳ್ಳುವ ಪ್ರಯತ್ನ ಮಾಡಿದೆಯೆನ್ನೋಣ.

ಸಮರ ವಿರಾಮ ಸ್ಥಾಪಿತವಾಗಬಹುದು; ಇದರ ಪರಿಣಾಮ...? ಎರಡೂ ಪಡೆಯ ಶಸ್ತ್ರಾಸ್ತ್ರಗಳು ವಿಮಾನಗಳು ಬೇಕಷ್ಟು ಹಾಳಾಗುವವು. ಎಷ್ಟೋ ಜೀವಿಗಳಿಗೆ ಹಾನಿ ಸಂಭವಿಸುವುವು. ಇತ್ತೀಚೆಗೆ ಪಾಕಿಸ್ತಾನಕ್ಕೆ ಮತ್ತೆ ಅಮೇರಿಕ ಬಿಡಿಭಾಗಗಳ ಹೆಸರಲ್ಲಿ ಶಸ್ತ್ರಾಸ್ತ್ರ ನೆರವನ್ನು ಪುನರಾರಂಭ ಮಾಡಿ ತನ್ನ ಮಾರುಕಟ್ಟೆಯನ್ನು ಬಲಪಡಿಸಿದಂತೆಯೇ ಇಸ್ರಾಯೇಲ—ಅರಬ ಹೋರಾಟದ ಪರಿಣಾಮವಾಗುವುದೆ?

ನವಯುಗದ ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಹಣ ಬಾಕಿಯಿರುವ ಚಂದಾದಾರರೆಲ್ಲರೂ ಚಂದಾಹಣವನ್ನು ಕಳುಹಿಸಿ ಕೊಡುವಂತೆ ಅಪೇಕ್ಷಿಸುತ್ತೇವೆ. ಬರುವ ವಾರದಿಂದ ಬಾಕಿದಾರರಿಗೆ ಸಂಚಿಕೆಯನ್ನು ವಿ. ಪಿ ಮೂಲಕ ಕಳುಹಿಸುತ್ತೇವೆ. ಅವನ್ನು ದಯವಿಟ್ಟು ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್,
ನವಯುಗ
ಉಡುಪಿ

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ ಸಂ. ನ.

ಪುನರ್ಜನ್ಮ— (ಮೂರಂಕಗಳ ಸಾಮಾಜಿಕ ನಾಟಕ)

ಬರೆದವರು: 'ಹರಿದಾಸ' ವಿದ್ವಾನ್.

ಪ್ರಕಾಶನ: ವೀಣಾ ಪ್ರಕಟಣಾಲಯ, ಬೆಳ್ತಂಗಡಿ, ದ. ಕನ್ನಡ.

ಪುಟಗಳು: ೧೧೦. ಬೆಲೆ: ರೂ. ೩.೦೦

ಶ್ರೀಮಂತ ಜಮೀನ್ದಾರ ರಮಾನಂದನ ಮೊದಲ ಪತ್ನಿ ಸೀತಾ ಪುತ್ರಾರ್ಥವಾಗಿ ಭವಾನಿಯನ್ನು ಸವತಿಯಾಗಿ ಸ್ವೀಕರಿಸುತ್ತಾಳೆ. ಚಕ್ರಪಾಣಿಯಲ್ಲಿ ಬಾಲ್ಯದಲ್ಲೇ ಅನುರಕ್ತಳಾಗಿದ್ದ ಭವಾನಿ ಆತನೊಡನೆಯೇ ಸ್ವರ್ಗಸುಖ ಪಡೆಯುತ್ತಾಳೆ. ಭವಾನಿಯನ್ನೂ ರಮಾನಂದನ ಸಂಪತ್ತನ್ನೂ ತನ್ನದಾಗಿಸಿಕೊಳ್ಳಲು ಚಕ್ರಪಾಣಿ ರಮಾನಂದನನ್ನೇ ಮುಗಿಸಿಬಿಡುವಷ್ಟು ಮುಂದುವರಿಯುತ್ತಾನೆ. ಈತನ ಮಿತ್ರ ಡಾಕ್ಟರನು ಔಷಧಿಯ ಹೆಸರಲ್ಲಿ ವಿಷವುಣಿಸುತ್ತಿರುತ್ತಾನೆ; ಒಂದು ದಿನ ರಮಾನಂದ ಸತ್ತನೆಂದೂ ಸರ್ಟಿಫಿಕೇಟು ದೊರೆಯುತ್ತದೆ. ಸುಡುಗಾಡಿನಲ್ಲಿ ಮಳೆಬಂದ ಕಾರಣ ಹೆಣಬಿಟ್ಟು ಎಲ್ಲರೂ ಮಾಡಿನೆಡೆ ಓಡಿದಾಗ ಸನ್ಯಾಸಿಯೊಬ್ಬ ಬಂದು ಅಲ್ಲಾಡುವ ಹೆಣವನ್ನು ಎತ್ತಿ ಒಯ್ಯುತ್ತಾನೆ; ಇನ್ನೊಂದು ಕೊಲೆಯನ್ನು ಅರಿಯದಂತೆ ಮಾಡಿ, ಚಕ್ರಪಾಣಿ ತನ್ನದಾರಿ ನಿಷ್ಕಂಟಕವಾಯಿತೆಂದು ನಲಿಯುತ್ತಾನೆ. ಚಕ್ರಪಾಣಿಗೆ ತನ್ನ ಮೇಲಿಗಿಂತಲೂ ತನ್ನ ಸಂಪತ್ತಿನ ಮೇಲೆ ಮಮತೆ ಎಂದು ತಿಳಿದ ಭವಾನಿಗೆ ಡಾಕ್ಟರರಂತಹ ಕಠೋರರನ್ನೂ ದೇವಾಂಶವನ್ನು ಕಂಡುಕೊಂಡ ಸೀತೆಯಿಂದ ರಮಾನಂದ ದೊರೆಯುತ್ತಾನೆ. ಮತ್ತೂ ಚಕ್ರಪಾಣಿ ತನ್ನ ತಂತ್ರ ಮುಂದುವರಿಸಲು, ಆತನನ್ನು ಭವಾನಿಯೇ ಇರಿದು, ತಾನೂ ಇರಿದುಕೊಳ್ಳುತ್ತಾಳೆ. ಇದು ನಾಟಕದ ಕಥೆ.

ನಾಯಕ ರಮಾನಂದ, ನಾಯಿಕೆ ಸೀತಾರವರ ಪಾತ್ರ ಆದರ್ಶಮಯವಾಗಿ ಇಲ್ಲಿ ಮೂಡಿದೆ. ಉದಾರತೆ, ಸರಳತೆ, ನಿಷ್ಕಲಂಕತೆಗಳ ಮುಪ್ಪುರಿಗೊಂಡಿದೆ. ಖಳನಾಯಕ ಚಕ್ರಪಾಣಿ ಪ್ರೇಮದ ಹೆಸರಿನಲ್ಲಿ ಹೆಣ್ಣನ್ನು ಒಲಿಸಿ, ಅದರ ಸಂಪೂರ್ಣ ದುರುಪಯೋಗ ಪಡಿಸಿಕೊಂಡ ವ್ಯಕ್ತಿ—ಮಹಾಭಾರತದ ದುರ್ಯೋಧನನಂತೆ ಕೊನೆಯುಸಿರುವವರೆಗೂ ಲೋಹಲೋಭಪಾಶ ಬಂಧಿತ. ಆತನ ಸಹಾಯಕನಾಗಿ ಬಂದ ಡಾಕ್ಟರ್ ಸೀತೆಯ ದೇವಮಾನವತೆಯಿಂದ ಹೃದಯ ಪರಿವರ್ತನೆಗೊಂಡದ್ದು ಆಕಸ್ಮಿಕವಾದರೂ ಸಂಭವನೀಯ. ಭವಾನಿ ತಾನು ತಪ್ಪು ಮಾಡುತ್ತಿರುವೆನೆಂದು ತಿಳಿತಿಳಿದೂ ಚಕ್ರಪಾಣಿಯನ್ನೆ ಸೇರುವುದು ಎಂದರೆ, ಪ್ರೇಮದ ಅಂಧತೆಯನ್ನೇ ತೋರಿಸುತ್ತದೆ. ಆದರೆ, ಇದರ ದುರುಪಯೋಗವಾದಾಗ? ಉಳಿದ ಪಾತ್ರಗಳಲ್ಲಿ ಗುಂಡಣ್ಣ, ವೈಲಾರಿ, ಕಾಶೀಬಾಯಿ—ಇವೆಲ್ಲವೂ ರಮಾನಂದ—ಸೀತೆಯರ ಪವಿತ್ರ ಚಾರಿತ್ರ್ಯಕ್ಕೆ ಪುಟವಿಡುತ್ತವೆ; ಚಕ್ರಪಾಣಿ—ಭವಾನಿಯರ ಅನೈತಿಕ ಸಂಬಂಧ ವ್ಯವಹಾರದ ಸೂಚನೆಯನ್ನೂ ನೀಡುತ್ತವೆ.

ಭಾಷೆ ಸರಳವಿದೆ; ಆಳು—ಕೈಕರ ಸಂವಾದದಲ್ಲಿ ಗ್ರಾಮೀಣ ಭಾಷೆಯನ್ನು ಬಳಸಿಕೊಂಡುದು ವಾಸ್ತವಿಕತೆಯ ದೃಷ್ಟಿಯಿಂದ ಉಚಿತವಿದೆ. ನಾಟಕದ ಉದ್ದೇಶ ನಿಷ್ಕಲಂಕ ಹೃದಯಿಗಳಿಗೆ ದೈವಸಹಾಯ ದೊರೆಯುತ್ತದೆಯೆಂಬುದೇ. ಹೆಚ್ಚು ಪ್ರೇಮದ ಬಂಧನವೂ ಚಿರವೆಂಬುದಲ್ಲ. ಚಕ್ರಪಾಣಿಯನ್ನು ಕೊಂದ ಭವಾನಿ ತನ್ನನ್ನೂ ತಾನು ಇರಿದು ಕೊಂಡುದರಿಂದ ಈ ಎರಡನೆಯದೇ ಮುಖ್ಯವಾಗದು. ಏಕೆಂದರೆ, ಆ ಸಮಯದಲ್ಲಿ ಭವಾನಿ ಪಶ್ಚಾತ್ತಾಪದಗ್ಧಳಾಗಿದ್ದಾಳೆ. ಸುಡುಗಾಡಿನಲ್ಲಿ ಮಳೆ ಬರುವ ಸನ್ನಿವೇಶವೊಂದನ್ನು ರಂಗಮಂಟಪದಲ್ಲಿ ಅಭಿನಯಿಸುವುದು ಶ್ರಮಸಾಧ್ಯ. ದೃಶ್ಯ ಸಂಯೋಜನೆ ಉತ್ತಮವಿದೆ; ಮಿತ ಸಂಖ್ಯೆಯ ಪಾತ್ರಗಳು, ಕುತೂಹಲಕಾರಿ ಕಥಾವಸ್ತು, ಚುಟುಕಾದ ಸಂವಾದ ಇವು ಪ್ರೇಕ್ಷಕರನ್ನೂ ವಾಚಕರನ್ನೂ ಆವಶ್ಯ ಸೆರೆಹಿಡಿಯುತ್ತದೆ. 'ದ್ರೋಹಿ'ಯಂತೆಯೇ 'ಪುನರ್ಜನ್ಮ'ಕೂಡಾ (ಹೆಸರು ಹಳೆಯದೆನಿಸಿದರೂ) ಒಂದು ಉತ್ತಮವಾದ ಅಭಿನಯ ಯೋಗ್ಯವಾದ, ಬೋಧಪ್ರದವಾದ, ನೀತಿ ಪ್ರೇರಕವಾದ ಸಾಮಾಜಿಕ ನಾಟಕ.

Temples of Udipi—

ಲೇಖಕರು: (ಮತ್ತು ಪ್ರಕಾಶಕರು:?) ಶ್ರೀ ಪಿ. ಗುರುರಾಜ ಭಟ್, ಇತಿಹಾಸ ಪ್ರಾಧ್ಯಾಪಕರು, ಎಂ. ಜಿ. ಎಂ. ಕಾಲೇಜ್, ಉಡುಪಿ, ದ. ಕನ್ನಡ.

ಪುಟಗಳು: ೧೪: ಬೆಲೆ: ?

ಶ್ರೀಕೃಷ್ಣನ ಉಡುಪಿಯು ದೇಗುಲಗಳ ಬೀಡು. ಉಡುಪಿಯ ಮುಖ್ಯ ನಗರ ಪ್ರದೇಶ, ಅದರ ಆಸುಪಾಸುಗಳಲ್ಲಿ ಸುಮಾರು ಇಪ್ಪತ್ತು ಸುಪ್ರಸಿದ್ಧ ದೇವಾಲಯಗಳಿದ್ದು, ಇವೆಲ್ಲವೂ ೯ರಿಂದ ೧೫ನೆ ಶತಮಾನದ ಮಧ್ಯಾವಧಿಯಲ್ಲಿ ನಿರ್ಮಿತವಾದುವೆಂದು ತಿಳಿಯುತ್ತದೆ. ತಮ್ಮ ಈ ಪುಸ್ತಿಕೆಯಲ್ಲಿ ಸಂಶೋಧಕ ಭಟ್ಟರು ಶಾಸನಗಳು, ಶಂಕರ ವಿಜಯ, ಶ್ರೀ ಮಧ್ವವಿಜಯ, ವಾಸ್ತು ಶಿಲ್ಪಗಳ ಆಧಾರದ ಮೇಲೆ ಈ ದೇವಮಂದಿರಗಳ ಮೇಲೆ ಹೊಸ ಬೆಳಕನ್ನು ಬೀರಿದ್ದಾರೆ.

ಉಡುಪಿಯ ಪುರಾತನ ದೇವಾಲಯ ಅನಂತೇಶ್ವರ ಜೈನ ಮಂದಿರವಾಗಿತ್ತು ಎಂಬ ತಿಳುವಳಿಕೆ ಸಾಮಾನ್ಯವಾಗಿ ಇದೆ—ಕೆಲವು ಸಂಶೋಧಕರ ಸಂಶೋಧನೆಯ ಫಲವದು. ಆದರೆ, ಶ್ರೀ ಭಟ್ಟರು ಅದು ಜೈನ ಮಂದಿರವಲ್ಲವೆಂದೂ ಅದು ಆರಂಭಕಾಲದಿಂದಲೂ ಶಿವಮಂದಿರವೇ ಆಗಿತ್ತು ಎಂಬುದನ್ನೂ ಸಕಾರಣವಾಗಿ ನಿರೂಪಿಸಿದ್ದಾರೆ. ದೇಗುಲದ ಮುಂದಿರುವ ಕಲ್ಲಿನ ಮಾನಸ್ತಂಭವೇ ಅದು ಜೈನ ಮಂದಿರವೆಂಬುದಕ್ಕೆ ಮುಖ್ಯಾಧಾರ. ಆದರೆ, ಈ ಬಗೆಯ ಶಿಲಾಸ್ತಂಭಗಳು ಹಿಂದೂ—ಜೈನ ಮಂದಿರಗಳಲ್ಲಿ ಕಂಡುಬರುತ್ತವೆಯೆಂದೂ ಅನಂತೇಶ್ವರದ ಸ್ತಂಭದ ಪೂರ್ವ ಮುಖದಲ್ಲಿ ನಂದಿಯೂ ಉತ್ತರ ಮುಖದಲ್ಲಿ ಸೂರ್ಯನೂ ಕೆತ್ತಲ್ಪಟ್ಟಿರುವುದು ಅದು ಶಿವಮಂದಿರವೇ ಎಂಬುದನ್ನು ಸಮರ್ಥಿಸುತ್ತದೆಂದೂ ಶ್ರೀ ಭಟ್ಟರು ನಿಷ್ಕರ್ಷಿಸಿದ್ದಾರೆ.

ಅನಂತ = ನಾಗ (ಸ್ಕಂದ), ಈಶ್ವರ=ಶಿವ. ಉಡುಪಿಯು ಪ್ರಾಚೀನ ಕಾಲದಿಂದಲೂ ಸ್ಕಂದನೊಡನೆ ಸಂಪರ್ಕವಿರಿಸಿಕೊಂಡಿರುವುದರಿಂದ ಶಿವನನ್ನು ಅನಂತೇಶ್ವರ ಎಂದು ಕರೆದಿರಬೇಕು. 'ಅನಂತಪದ್ಮನಾಭ' ಎಂಬ ಹೆಸರು ಮಾಧ್ವರು ಪ್ರಬಲರಾದ ಮೇಲೆಯೇ ಬಂದುದು, (ಸುಮಾರು ೧೩ನೆಯ ಶತಮಾನದ ನಂತರ) ಅಂತೆಯೇ ಅದು ಅಸಾಧುವಾದುದು. ಶ್ರೀ ಮಧ್ವಾಚಾರ್ಯರ ತಂದೆ ಮಧ್ಯಗೇಹಭಟ್ಟರು ಅನಂತೇಶ್ವರದ ಉಪಮಂದಿರದ ಶ್ರೀಕೃಷ್ಣನ ಆರಾಧಕರೇ ಹೊರತು ಅನಂತೇಶ್ವರನ ಉಪಾಸಕರಲ್ಲ. ಚಂದ್ರೇಶ್ವರ ಇತ್ತೀಚಿನ ನಿರ್ಮಾಣವಿದ್ದು ಇದೂ ಜೈನರ ಬಸದಿ ಎಂಬುದು ಅರ್ಥಹೀನವಾದುದು. ಉಡುಪಿಯಲ್ಲಿ ಸುಮಾರು ೯ನೆಯ ಶತಮಾನದಲ್ಲಿ ಅನಂತೇಶ್ವರದ ಉಪದೇವಸ್ಥಾನದಲ್ಲಿ ಶ್ರೀ ಹಸ್ತಾಮಲಕರು ಶ್ರೀಕೃಷ್ಣನನ್ನು ಸ್ಥಾಪಿಸಿದರು. ಈ ಮಂದಿರವೇ ಮುಂದೆ ಮಾಧ್ವರ ಕೈಗೊಂಬೆಯಾಗಿ ಇತಿಹಾಸದ ಅನೇಕ ಸಿಕ್ಕುಗಳಿಗೆ ಕಾರಣವಾಯಿತು. ಶ್ರೀಕೃಷ್ಣ ಮಂದಿರದ ರಚನೆಯು ಮೂರು ಬಾರಿ ಬದಲಾಗಿವೆ (೧೪೩೭, ೧೬೧೪ ಮತ್ತು ಕಳೆದ ಶತಮಾನ). ಹಾಗಾಗಿ ಇದು ಮೂಲದಲ್ಲಿ ಹೇಗಿತ್ತು ಎಂದು ಹೇಳುವುದು ಕಷ್ಟ. ಆದರೂ ಇಂದಿನಂತೆಯೇ ಪೂರ್ವದಲ್ಲಿ ಪ್ರವೇಶದ್ವಾರವಿದ್ದಿರಬೇಕು. ವಿಜಯ ನಗರರಾಜರ ಆಳಿಕೆಯಲ್ಲಿ ಈ "ಮಠದ' ಪ್ರಸಿದ್ಧಿ ಹೆಚ್ಚಿದ್ದಕ್ಕೆ ಆಧಾರಗಳಿವೆ — ಇವೆಲ್ಲವನ್ನೂ ಶ್ರೀ ಭಟ್ಟರು ಇಲ್ಲಿ ವಿವರವಾಗಿ, ಸಕಾರಣವಾಗಿ ವಿವೇಚಿಸಿದ್ದಾರೆ. ಆಸುಪಾಸಿನ ಇತರ ದೇವ ಮಂದಿರಗಳನ್ನು ಹೆಸರಿಸಿ ಅವುಗಳಲ್ಲಿ ಕೆಲವದರ ಸ್ಥೂಲಪರಿಚಯವನ್ನೂ ಮಾಡಿಕೊಟ್ಟಿದ್ದಾರೆ.

ಈ ಪುಸ್ತಿಕೆಯ ಆಕಾರ ಚಿಕ್ಕದು. ಆದರೆ, ಸಂಶೋಧನಾತ್ಮಕವಾದುದು. ಹಿಂದಿನ ಸಂಶೋಧನೆಗಳ ಆಧಾರದ ಮೇಲೆ ಈ ಸಂಶೋಧನ ನಡೆದುದು— ಇತಿಹಾಸದ ಮೇಲೂ, ಸತ್ಯದ ಮೇಲೂ ಇನ್ನೂ ಹೆಚ್ಚಿನ ಬೆಳಕು ಬೀರುವಲ್ಲಿ, ಬೀರುವಂತೆ ಮಾಡುವಲ್ಲಿ ಇದು ಸಮರ್ಥವಿದೆ. ಶ್ರೀ ಭಟ್ಟರ ಶ್ರಮ ಸಂಪೂರ್ಣ ಸಫಲವಾಗಿದೆ.

—ಗೋರಾ.

ಗೋರ ಕುಂಬಾರ ಮತ್ತು ನಾಮದೇವ

(ಏಳನೇ ಪುಟದಿಂದ)

ಮೇಲೆ ಬಂದು ಅವನು ನಾಮದೇವನನ್ನು ಕೇಳಿದನು:- "ನಿನಗೆ ಸ್ವಲ್ಪ ನೀರು ಕುಡಿಯಲೇ?"

"ಒಬ್ಬ ಸಾಧುವು ಇನ್ನೊಬ್ಬನು ತಂದ ನೀರನ್ನು ಕುಡಿಯಬಾರದು. ನನ್ನ ವಿಠಲ ಸ್ವಾಮಿಯೇ ನನಗೆ ನೀರನ್ನು ಕೊಡುವನು." ನಾಮದೇವನು ಹೇಳಿದನು.

ಹೀಗೆಂದು ಅವನು ಸ್ವಾಮಿಯ ಕುರಿತು ಭಕ್ತಿಭರಿತನಾಗಿ ಒಂದು ಸ್ತೋತ್ರವನ್ನು ಹಾಡಿದನು.

ಹೆಚ್ಚು ಸಮಯ ಹಿಡಿಯಲಿಲ್ಲ. ಬಾವಿಯು ಪೂರ್ಣವಾಗಿ ತುಂಬಿತು, ನೀರು ಉಕ್ಕಿ ಮೇಲೆ ಕೂಡ ಹರಿಯಿತು.

ನಾಮದೇವನು ನೀರನ್ನು ಕುಡಿದು ವಿಠಲ ಸ್ವಾಮಿಯನ್ನು ವಂದಿಸಿದನು.

ಇದನ್ನು ಕಂಡು ಜ್ಞಾನದೇವನು ಅತಿ ಸಂತೋಷಪಟ್ಟನು. ನಾಮದೇವನಿಗೆ ಹೀಗೆ ಹೇಳಿದನು:- "ಇದಕ್ಕಾಗಿಯೇ ನಾನು ನಿನ್ನ ಸಂಗಡ ಬಂದೆನು. ನಿಜವಾಗಿ ನೀನು ಮಹಾತ್ಮನು. ನೀನು ನಿನ್ನ ದೃಢ ಭಕ್ತಿಯಿಂದ ವಿಠಲ ಸ್ವಾಮಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಿ. ನಿನಗೂ ನಿನ್ನ ಪೂರ್ವಜರಿಗೂ ಜಯವಾಗಲಿ."

ಹರಿಯುತ್ತಿರುವ ನೀರಿನ ಒರತೆಯು ಬತ್ತಿ ಹೋಯಿತೇ ? ....

ಅದಕ್ಕಾಗಿ ಚಿಂತಿಸುವಿರೇಕೆ?..................

ನಿಮ್ಮ ಬೆಳೆಯ ರಕ್ಷಣೆಯ ಮಾರ್ಗ ಇಲ್ಲಿದೆ..........

ವೀಗಲ್

VEEGAL

ಪೆಟ್ರೋಲ್ / ಚಿಮಿಣಿ ಎಣ್ಣೆಯ ಇಂಜಿನು ಮತ್ತು ಪಂಪು ಸೆಟ್ಟುಗಳು

2 H.P. 3·4 H.P. 5 H.P.

- ಇದೀಗ ಸಿದ್ಧ ದಾಸ್ತಾನಿನಿಂದ ದೊರೆಯುತ್ತದೆ.
- ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲು ಅತಿ ಹಗುರ ಮತ್ತು ವ್ಯವಸ್ಥಿತವಾಗಿದೆ.
- ಒಂದು ವರ್ಷದ ಗ್ಯಾರಂಟಿ.
- ಎಲ್ಲಕ್ಕೂ ಮಿಕ್ಕಿ 'ವಿಕ್ಟರ್'ರವರ ಮಾರಾಟದ ನಂತರದ ಉತ್ತಮ ಸೇವೆ.

ವಿತರಕರು :

ವಿಕ್ಟರ್ ಟ್ರೇಡಿಂಗ್ ಕೋಪೊರೇಶನ್

ಫಳನೀರು ರಸ್ತೆ, ಮಂಗಳೂರು-1. Ph. 5737

ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್.ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ದ್ರಾ. ಮು. ಕ. ದ ಧಿಮಾಕು

(ಆರನೇ ಪುಟದಿಂದ)

ಹೆಸರನ್ನು ತಮಿಳ್ನಾಡೆಂದಿರಿಸಿಕೊಳ್ಳಬೇಕಾಗಿತ್ತು. ಸತ್ಯಕ್ಕೆ ಇವರು ಆದಾಗಲೇ ವಾರ್ನ್‌ಮೆಂಟ್ ಎಂದಿದ್ದಾರೆ. ಈಗ ವಾಣಿಯ ಬದಲು ಉಲಿ ಬಂದಿದೆ. ಇನ್ನು ಮುಂದಕ್ಕೆ ಇವರನ್ನು ತಿರುಮತಿ ವಾಯ್‌ಮೆಟ್ ಉಲಿ ಮುತ್ತೆನ್ನಬೇಕೇನು?....

ಇಂತಹ ಭಾಷಾ ಬಡಬಾಗ್ನಿಯಿಂದ ಹೊಟ್ಟೆಯ ಉರಿಯನ್ನು ತಣಿಸಲು ಸಾಧ್ಯವೇನು? ಚೈನಾದಲ್ಲಿ ಹಾಗೂ ಪಾಕಿಸ್ಥಾನದಲ್ಲಿ ಅಲ್ಲಿಯ ಸರ್ವಾಧಿಕಾರಿಗಳಿಗೆ ತಮ್ಮ ಜನತೆಯ ಹೊಟ್ಟೆಯನ್ನು ತಣ್ಣಗಿಡಲು ಸಾಧ್ಯವಾಗದಿದ್ದಾಗಲೆಲ್ಲಾ ಅವರು ಭಾರತದತ್ತ ಬೊಟ್ಟು ತೋರಿಸುತ್ತಾರೆ. ದ್ರಾ. ಮು. ಕ.ವೂ ಅದೇ ರೀತಿ ಹಿಂದಿನಿಂದಲೂ ಕೇಂದ್ರದತ್ತ, ಹಿಂದಿಯತ್ತ ಬೊಟ್ಟು ತೋರಿಸುತ್ತ ಬಂದಿರುವ ಪಕ್ಷವಿದೆ. ಈಗ ಕೂಡಾ ಅದೇ ಆಟವನ್ನಾಡಲು ಅವರು ಆರಂಭಿಸಿದರು. ಆದರೆ ಜನತೆ ಸುಮ್ಮಗಿರಬೇಕಲ್ಲಾ? ಮೊದಲಾದರೂ ಕೇಳೀತು, ಹಿಂದಿ ಬೇಡ, ಸಂಸ್ಕೃತ ಬೇಡ, ಲೆಕ್ಕ ಬೇಡ, ಚರಿತ್ರೆ ಬೇಡ, ಏನೂ ಬೇಡವೆಂದರೆ ಅದಕ್ಕೆ ಪ್ರಧಾನಂದ ಅದೀತ, ಬಾಲಕರಿಕೆಲ್ಲ. ಹೊಟ್ಟೆಯ ವಿಷಯದಲ್ಲಿ ಹಾಗಲ್ಲ. ಮೊದಲು ಗಲಾಟೆ ಮಾಡುವವರು ಬಾಲಕರೇ ಇದ್ದಾರೆ. ಆಮೇಲಿಂದ ಅವರು ಕೇಳಲಿಕ್ಕಾರಂಭಿಸಿದ್ದರು. ಅಣ್ಣಾಜೀ (ಅಣ್ಣಾದೊರೈ) ಮೂರು ಪಡಿ ಏನಾಯ್ತೆಂದು. ಆಗ ತಿರು ಅಣ್ಣಾದೊರೈಯವರು ರಾಜಕೀಯ ಮಾತಾಡಲಾರಂಭಿಸಿದರು. ಚುನಾವಣೆಗಿಂತ ಹಿಂದೆ ಸ್ವತಃ ಅವರೇ, ತಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಒಂದು ರೂಪಾಯಿಗೆ ಮೂರು ಪಡಿ ಅಕ್ಕಿ ಸಿಗುವಂತೆ ಮಾಡುತ್ತೇವೆಂದು ಭಾಷಣವಿತ್ತಿದ್ದರು. ಗದ್ದೆ ಮೇಲೆ ಅವರೇ ಹೇಳಲಾರಂಭಿಸಿದರು:— ಚುನಾವಣೆಯ ಬಿಸಿಯಲ್ಲಿ ಅದೇನೇನೋ ಆಡುತ್ತೇವೆ. ನಾವು ಮಾತ್ರವೇನು? ಸ್ವತಃ ಆಚಾರ್ಯ ಜ್ಯೋತಿ ಜವಾಹರಲಾಲ ನೆಹರೂರವರೇ ಗಾಂಧೀಜಿಯವರ ನಂತರ ಆಹಾರ ಅಭಾವದ ಬದಲು ಆಹಾರವನ್ನು ಇದೇ ದೇಶದಿಂದ ರಫ್ತು ಮಾಡಲಾಗುವದೆಂದೆಲ್ಲಾ ಹೇಳುತ್ತಿದ್ದರು. ಆದರೆ ಇಪ್ಪತ್ತು ವರ್ಷಗಳಿಂದ ಅಧಿಕಾರದಲ್ಲಿದ್ದರೂ ರಫ್ತು ಮಾಡುವದು ಹೋಗಲಿ ಅಭಾವವನ್ನು ನೀಗಿಸಲೂ ಈ ಕಾಂಗ್ರೆಸ್ಸಿಗರಿಂದ ಸಾಧ್ಯವಾಗಿರುವದಿಲ್ಲ. ಅದಲ್ಲ ಚುನಾವಣೆಯ ಚಂದ ಪೂರ್ವತ ಇರುತ್ತದೆ. ಅಷ್ಟೂ ಅಲ್ಲದೆ ನಾವಾದರೋ ಮೊನ್ನೆ ಮೊನ್ನೆ ಅಧಿಕಾರಕ್ಕೆ ಬಂದವರು. ಅವರಲ್ಲಾ ಅಧಿಕಾರವನ್ನು ತೆಗೆದುಕೊಂಡಾಗ ಕಣಜದಲ್ಲಿ ಅಕ್ಕಿಯೂ ಇರಲಿಲ್ಲ. ನಮಗೆ ಸಮಯ ಬೇಕೆಂದರು. 'ಸಮಯ' "ಸಮಯ'ವೆಂದರೆ ಆಯಿತೇ? ಅದಕ್ಕೂ ಒಂದು ಸಂಯಮ ಇಲ್ಲವೇ? ಅಷ್ಟು ಹೊತ್ತಿನಲ್ಲಿ ಶ್ರೀ ರಾಜಾಜೀಯವರೂ ಸಮಯದ ಸ್ವರ ತೆಗೆದರು. ಸಾರ್ವಜನಿಕರು ತಾತ್ಕಾಲಿಕವಾಗಿ ಶಾಂತವಾದರು.

ಮತ್ತೆ, ಪರಿಸ್ಥಿತಿ ಬದಲಾಗುವ ವರೆಗೂ ತಾವು ಸಂಬಳ ಸ್ವೀಕರಿಸುವದಿಲ್ಲವಾಗಿ ತಿರು ಅಣ್ಣಾದೊರೈಯವರು ಹೇಳಿದ್ದರು. ಸಂಬಳ ಸ್ವೀಕರಿಸದೆ ಹೇಗೆ ಇರುವದು? ಉಳ್ಳವಂಗೆ ಚಿಂತೆ ಇಲ್ಲ, ಇತರರಿಗೆ, ಪಕ್ಷದೊಳಗೂ ಹೊರದಾಟಕ್ಕೆ ಪ್ರಾರಂಭವಾಯಿತು. ಸಾರ್ವಜನಿಕರ ಸಹಸ್ರನಾಮ, ಪಕ್ಷದ ಹೊರದಾಟ—ಇವೆರಡನ್ನು ಒಂದೇ ಕಲ್ಲಿನಿಂದ ಹೊಡೆಯಬೇಕು. ಮೇ ದಿನವಂದು ಕೊಯಂಬುತ್ತೂರಿನಲ್ಲಿ ಸೇರಿದ್ದ ಸಹಸ್ರಾರು ಜನರ ಮುಂದೆ ತಮ್ಮ ಸೂತ್ರವನ್ನು ಮುಖ್ಯಮಂತ್ರಿ ತಿರು ಅಣ್ಣಾದೊರೈಯವರಿಟ್ಟರು. ಮೇ ದಿನಾಂಕ ಹದಿನೈದರಿಂದ ಒಂದು ರೂಪಾಯಿಗೆ ಒಂದು ಪಡಿ ಅಕ್ಕಿಯಂತೆ ಬಡವರಿಗೆ ರಾಜ್ಯದಲ್ಲೆಲ್ಲೂ ಕೊಡಲಾಗುವದೆಂದೂ, ಮೇ ದಿನಾಂಕ ಹದಿನಾರರಿಂದ ಮಂತ್ರಿಗಳು ಸಂಬಳ ಸ್ವೀಕರಿಸುವರೆಂದೂ ಹೇಳಿದರು. ವಾಕ್ಯದ ಎರಡನೇ ಭಾಗ ಜನತೆಯ ಕಿವಿಗೆ ಬಿದ್ದಿರಲಿಕ್ಕಿಲ್ಲ. ರೂಪಾಯಿಗೆ ಪಡಿಯೆಂಬುದು ಕಿವಿಗೆ ಬಿದ್ದೊಡನೆ ಸಹಸ್ರಾರು ಜನರು ಕೈಚಪ್ಪಾಳೆ ತಟ್ಟಿ ಸಂತೋಷ ವ್ಯಕ್ತಪಡಿಸಿದರು. ಅಲ್ಲೂ ತಿರು ಅಣ್ಣಾದೊರೈಯವರು ಮೂರು ಪಡಿಯ ಮಾತನ್ನು ಬಿಟ್ಟುಬಿಡದೆ, ಅದಕ್ಕೆ ಸಮಯಬೇಕೆಂದು ಹೇಳಿದರು. ಇಷ್ಟು ದಿನಗಳಿಂದ ಅಕ್ಕಿ ಕಾಣದೆ ಹೋಗುತ್ತಿದ್ದವರು ಇನ್ನು ಹದಿನೈದು ದಿನ ಕಾದು ನೋಡದಿರುತ್ತಾರೆಯೇ? ಈ ನಡುವೆ ಸ್ವಲ್ಪ ಯೋಚಿಸಲಾರಂಭಿಸಿದರು. ರೂಪಾಯಿಗೊಂದು ಪಡಿಯಂತೆ ಕೊಡುವವರು ಸರಕಾರದವರು. ಆದರ ಬೆಲೆ ತೆಗೆದುಕೊಳ್ಳುವದು ಹೆಚ್ಚು ಕಡಿಮೆ ಒಂದು ರೂಪಾಯಿ ಹದಿನೇಳು ಪೈಸೆಯಂತೆ. ಈ ನಷ್ಟವನ್ನು ಹೊರುವವರು ಯಾರು? ಇದನ್ನು ತುಂಬಿಸಿಕೊಳ್ಳಲು ದ್ರಾ. ಮು. ಕ. ಸರಕಾರದವರೇನಾದರೂ ಹೊಸ ತೆರಿಗೆ ಹಾಕೀತೇ? ಇಲ್ಲ, ಅದರ ಬದಲು ಕೇಂದ್ರದ ಬಳಿ ಕೇಳುತ್ತಾರಂತೆ. ಕೇಂದ್ರ ಕೊಟ್ಟೀತೇ? ನಾವು ನಷ್ಟದಲ್ಲಿ ಅಕ್ಕಿ ವ್ಯಾಪಾರ ಮಾಡುತ್ತೇವೆ, ನೀವು ನಷ್ಟ ತುಂಬಿಸಿಕೊಡಿ. ಹೇಗಿದೆ ವಾದ! ಅದು ಸಿಗದಿದ್ದರೂ ಸರಕಾರವೇ ಸಹಿಸಿಕೊಳ್ಳುತ್ತದಂತೆ. ಅಬ್ಬಾ! ಎಷ್ಟು ದಯಾರ್ದ್ರ ಹೃದಯಿಗಳಪ್ಪಾ, ಈ ನಮ್ಮ ಹೊಸ ಮಂತ್ರಿಗಳು!—ಸೂಸೆ ಸಂತೋಷವಾಗಿ ಹೇಳಿದಳು. ಅವರಪ್ಪನ ಗಂಟೇನು ಹೋಯಿತು? ಕೆರೆಯ ನೀರನು ಕೆರೆಗೆ ಚೆಲ್ಲುವವರಲ್ಲೂ ಮಹಾಮಂತರೇ. ಅಷ್ಟು ಕರುಣೆಯ ನಿಧಿಗಳು, ಪಕ್ಷ ಪರಿಸ್ಥಿತಿಯಂದ್ರರು ಇವರಿದ್ದಲ್ಲಿ ನಷ್ಟವನ್ನು ತಮ್ಮ ಪಕ್ಷ ವಹಿಸಿಕೊಳ್ಳುತ್ತದೆಂದು ಸಾರಲಿ. ನೋಡೋಣ. ಅತ್ತ ಅಬ್ಬರಿಸಬೇಕೇ?

ಮೇ ಹದಿನೈದು ಬಂತಾದರೂ ನ್ಯಾಯ ಬೆಲೆಯ ಅಂಗಡಿಗಳೆದುರು ಭಾವಿಸಿಕೊಂಡಿದ್ದ ರೀತಿಯಲ್ಲಿ ಜನರ ಸಾಲು ನಿಲ್ಲಲೇ ಇಲ್ಲ. ನಿಜವಾಗಿ ಪಡಿ ಅಲ್ಲಿ ಇರಲೇ ಇಲ್ಲ. ಕಾಂಗ್ರೆಸ್ ಮಂತ್ರಿ ಮಂಡಳವು (ಕೇಂದ್ರ ಸರಕಾರ) ಪಡಿಯನ್ನು ಆವಾಗಲೇ ರದ್ದುಗೊಳಿಸಿ ಅದರ ಸ್ಥಾನವನ್ನು ಲಿಟರ್ ಮತ್ತೆ ಕಿಲೋಗೆ ಕೊಟ್ಟಿತ್ತು. ಅಂತಹ ನ್ಯಾಯಬಾಹಿರ ಅಳತೆಯನ್ನು ದ್ರಾ. ಮು. ಕ. ಉಪಯೋಗಿಸ ಬಲ್ಲ ಧೈರ್ಯತಾಳೀತೇ? ಅದು ಯಥಾಪ್ರಕಾರ ಅಕ್ಕಿಯನ್ನು ಕಿಲೋ ಲೆಕ್ಕದಲ್ಲೇ ಕೊಡಲಾಯಿತು. ಅದರ ಬೆಲೆಯನ್ನು ಗುಣಿಸಿ, ಭಾಗಿಸಿ, ಕಳೆದು, ನೋಡಿ ಪಡಿಗೆ ಒಂದು ರೂಪಾಯಿ ಆರು ಪೈಸೆಯಾಗುತ್ತದೆಂದು ಗಣಿತಜ್ಞರು ಗಡಬಡಿಸಿದರು. ಆರು ಪೈಸೆಯಲ್ಲಿ ಆಗುವದೇನು? ಇಷ್ಟು ಕೊಟ್ಟದ್ದೇ ನಿಮ್ಮ ಪುಣ್ಯವಲ್ಲವೇನು? ಪಕ್ಷದ ಪ್ರಬಲ ಬೆಂಬಲಿಗ ಕೇಳಿಯೇ ಬಿಟ್ಟ. ಆಗುವದೇನಂತೆ, ಹೇಳಿದ ಮಾತಿಲ್ಲದವಂಗೆ ಮಾನಿಸಿ ಮೂದಲಿಸಿಯೇ ಬಿಟ್ಟಳು.

ಸಾಮಾನ್ಯ ಜನತೆ ಈ ರೀತಿ 'ರೂಪಾಯಿಗೆ ಪಡಿ ಅಕ್ಕಿ'ಯ "ಸಂಭ್ರಮ"ದಲ್ಲಿದ್ದಾಗ ದ್ರಾ. ಮು. ಕ.ದ ಬೆಂಬಲಿಗರು ಬೇರೆ ರೀತಿಯಲ್ಲಿ ಅಂದು ಹಬ್ಬವನ್ನಾಚರಿಸುತ್ತಿದ್ದರು. ಎಲ್ಲೆಲ್ಲೂ ವಿನೋದ ಸಭೆಗಳು. ಅಲ್ಲಿ ಮಂತ್ರಿಗಳ ಭಾಷಣಗಳ ಸುರಿಮಳೆ. ಅಂತಹ ಒಂದು ಸಭೆಯಲ್ಲಿ ಸಾರ್ವಜನಿಕ ಕಾಮಗಾರಿ ಮಂತ್ರಿ ಮಹಾಶಯ ತಿರು ಮು. ಕರುಣಾನಿಧಿಯವರು ಮಾತನಾಡುತ್ತ ದಿಲ್ಲಿದೇವತೆಗಳಿಗೆ ಎಚ್ಚರಿಕೆಯನ್ನಿತ್ತರು. ಕೇಂದ್ರ ಸರಕಾರವು ಗೋಧಿಯನ್ನು ಅರ್ಧ ಬೆಲೆಗೆ ಕಾಶ್ಮೀರದಲ್ಲಿ ಮಾರುತ್ತಿದೆ. ಅದಕ್ಕೆ ಕಾರಣವೇನು? ಹಾಗೆ ಮಾಡದಿದ್ದಲ್ಲಿ ಕಾಶ್ಮೀರಿಗಳು ಪಾಕಿಸ್ಥಾನಕ್ಕೆ ಸೇರುವರೆಂಬ ಭಯ ಅದಕ್ಕಿದೆ. ತಮಿಳುನಾಡಿಗೂ ಇದೇ ರೀತಿ ನಷ್ಟವನ್ನು ತುಂಬಿಸಿಕೊಡಬೇಕು. ಇಲ್ಲದಿದ್ದಲ್ಲಿ ಇಲ್ಲಿ ವಿಭಜನಾ ಮನೋಭಾವನೆ ಎದ್ದೀತು. ನುಡಿಯುತ್ತ ತಮಿಳುನಾಡಿನ ಜನತೆಯನ್ನು ಪ್ರೇರೇಪಿಸಲು ಎಷ್ಟು ಸಮಯಬೇಕಾದೀತು? ಅಷ್ಟು ಮಾತ್ರವಲ್ಲ, ಕೇಂದ್ರ ಸರಕಾರ ನಮಗೆ ಸ್ನೇಹಕರಕೊಡದಿದ್ದಲ್ಲಿ ನಾವು ಪಂತ್ರಿ ಮಂಡಲದಿಂದ ದೂರವಿರುವೆಂದು ಬಂಡೇಳಲು ಬೆದರುವದಿಲ್ಲವೆಂದೂ ತನ್ನ ಮನೋಭಾವನೆಯನ್ನು ವ್ಯಕ್ತಪಡಿಸಿದರು.

ಕಾಶ್ಮೀರಕ್ಕೆ ವಿಶೇಷ ಸವಲತ್ತು ಕೊಡಕೂಡದೆಂದೂ, ಸಂವಿಧಾನದಲ್ಲಿ ಅದಕ್ಕಿರುವ ವಿಶಿಷ್ಟ ಸ್ಥಾನವನ್ನು ರದ್ದುಗೊಳಿಸಬೇಕೆಂದೂ ಭಾರತೀಯ ಜನಸಂಘ ಹಾಗೂ ಇತರ ದೇಶಾಭಿಮಾನಿ ಪಕ್ಷಗಳು ಮೊದಲಿನಿಂದಲೂ ಹೇಳುತ್ತ ಬಂದಿದ್ದರೂ, ಕಾಂಗ್ರೆಸ್ ಸರಕಾರ ಕೇಳದಿರಲು ಕಾರಣವೇನೆಂಬುದು ಇದೀಗ ಸ್ಪಷ್ಟವಾಯಿತು. ಸಂವಿಧಾನದಲ್ಲಿ ವಿಶಿಷ್ಟ ಸ್ಥಾನ ಸೂಚಿಸದೆ ಕಾಶ್ಮೀರಕ್ಕೆ ವಿಶೇಷ ಸವಲತ್ತು ಕೊಟ್ಟಲ್ಲಿ ಇತರ ಪ್ರಾಂತ್ಯಗಳು ಸುಮ್ಮನಿರುವದಿಲ್ಲ. ಮು. ಕರುಣಾನಿಧಿ ಅವರುಗಳಿಗೆ ಈ ವಿಶಿಷ್ಟ ಸ್ಥಾನದ ಕುರಿತು ಗೊತ್ತಿಲ್ಲವೋ ಏನೋ. ಗೊತ್ತಿದ್ದಲ್ಲಿ ಜನತೆಯೆದುರು ಆ ರೀತಿ ಆಡಿ ಅವರನ್ನು ರೇಗಿಸುವದು ಯಾವ ನ್ಯಾಯ? ಅವರು ಮೊದಲು ವಿಶಿಷ್ಟ ಸ್ಥಾನದ ರಹಸ್ಯವನ್ನು ಕೇಳಲಿ. ಅನಂತರ ಎಲ್ಲವೂ ಸರಿಯಾಗುತ್ತದೆ. ಬರಗಾಲ ಪೀಡಿತ ಬಿಹಾರಿಗೇನೇ ಈ ರೀತಿ ನಷ್ಟ ತುಂಬಿಸಿಕೊಡಲು ತಯಾರಿಲ್ಲದ ಕೇಂದ್ರ ಸರಕಾರ ತಮಿಳುನಾಡಿಗೆ ಕೊಟ್ಟೀತೇ? ನ್ಯಾಯವೆಲ್ಲಿದೆ? ಇಲ್ಲಿ ತಿರು ಕರುಣಾನಿಧಿಯವರು ಸಮಸ್ತ ಕಾಶ್ಮೀರಿಗಳಿಗೆ ಅಪಮಾನ ಮಾಡಿದ್ದಾರೆ. ಕಾಶ್ಮೀರಿಗಳಲ್ಲಿ ಒಂದು ಗುಂಪಿನವರಿಗೆ ಮಾತ್ರ ಪಾಕಿಸ್ತಾನದೊಂದಿಗೆ ಸೇರಲು ಇಷ್ಟವಿದೆ ಅಷ್ಟೇ. ಇತರರಿಗೆ ಆ ಇಷ್ಟ ಇರುವದಿಲ್ಲ. ಹಾಗಿರುವಾಗ ಶ್ರೀಮಂತರಿಗೊಂದು ರೀತಿಯು, ಬಡವರಿಗೊಂದು ರೀತಿಯು ಅಕ್ಕಿ ಮಾರುತ್ತಿರುವ ದ್ರಾ. ಮು. ಕ.ದ ಕರುಣಾನಿಧಿ ಅವರ್ಗಳ್ ಈ ರೀತಿ ಎಲ್ಲಾ ಕಾಶ್ಮೀರಿಗಳನ್ನು ಒಂದೇ ತಕ್ಕಡಿಯಲ್ಲಿಡುವದು ಯಾವ ನ್ಯಾಯ?

ಇದನ್ನೆಲ್ಲಾ ಕೇಳಿದ ಮೇಲೆ ತಮಿಳುನಾಡಿನಾದ್ಯಂತ ರೂಪಾಯಿಗೆ ಪಡಿ ಅಕ್ಕಿ ಧೋರಣೆ ಅನ್ವಯಿಸುವದಿಲ್ಲವೆಂದೂ ಕೇವಲ ಮದರಾಸು ಮಹಾನಗರ, ಕೊಯಂಬುತ್ತೂರು, ತಿರುಚಿನಾಪಳ್ಳಿಗೆ ಮಾತ್ರ ಅನ್ವಯಿಸಲಾಗುವದೆಂಬ ವಿಷಯವೂ ತಿಳಿದು ಬಂತು. ತಿರು ಕರುಣಾನಿಧಿಯವರ ಭಾಷಣ ಕೇಳಿದ ಮೇಲೆ ಇತರ ಜಿಲ್ಲೆಗಳ ಜನತೆ ಸುಮ್ಮಗುಳಿದೀತೇ? ಅದೂ ಈಗಿನ ಪರಿಸ್ಥಿತಿಯಲ್ಲಿ — ಕೇಂದ್ರ ಸಹಾಯ ಕೊಡದಿದ್ದಲ್ಲಿ ನಾವೇ ನೋಟು ಹೂಡೆಯುತ್ತೇವೆಂದು ದ್ರಾ. ಮು. ಕ.ದ ಮಂದಿಗಳು ಒಬ್ಬ ಹೇಳುವದೇ ತಡ, ಇನ್ನೊಂದು ಪಕ್ಷದ ಹಿಂದಿಳು ರಾಜ್ಯ ಸರಕಾರ ನಮಗೆ ಹಣ ಕೊಡದಿದ್ದಲ್ಲಿ ನಾವೇ ನೋಟು ಮಾಡುವದಾಗಿ ಹೇಳುತ್ತಿರುವ ಈ ಕಾಲದಲ್ಲಿ. ಆ ಜಿಲ್ಲೆಗಳ ಜನರು ತಾವು ತಮಿಳುನಾಡಿನ ಸರಕಾರ ತಮಗೆ ನ್ಯಾಯ ಬೆಲೆಯ ಅಕ್ಕಿ ಕೊಡದಿದ್ದಲ್ಲಿ ತಾವೂ ಬಂಡಾಯವೇಳುವದಾಗಿ ಘೋಷಿಸದಿರುವದುಂಟೇ?

ದ್ರಾ. ಮು. ಕ. ದ ಧಿಮಾಕು ಈ ರೀತಿ ಇದೆ. ತನ್ನಷ್ಟೆ ಅದೆಷ್ಟೋ ಕಡಮೆ ರಾಜಿನಾಮೆಯ ಬಂಬಡವನ್ನು ದ್ರಾ. ಮು. ಕ. ಬಾರಿಸುತ್ತಿದೆ. ಇವನ್ನು ಒದಿಗೊತ್ತಿ ಸೇವಾ ಮನೋಭಾವನೆಯಿಂದ ರಾಷ್ಟ್ರೀಯ ದೃಷ್ಟಿಯಿಂದ ದ್ರಾ. ಮು. ಕ. ಪ್ರಯತ್ನಿಸಿದಲ್ಲಿ ಮಾತ್ರ ಅದಕ್ಕೆ ಯಶಸ್ಸು ಸಿಕ್ಕೀತು. ಇಲ್ಲದಿದ್ದಲ್ಲಿ ಅದು ಕೆಳಗಿಳಿಯುವ ಮುಂಚೆ ಜನತೆಯೇ ಕೆಳಗಿಳಿಸೀತು.



"NAVAYUGA" Kaanada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

ಬಾಲೀ ದ್ವೀಪ

(ಐದನೇ ಪುಟದಿಂದ)

ಜ್ಞಾನಿಗಳು ಅಭಿಪ್ರಾಯಪಡುತ್ತಿದ್ದಾರೆ. ಇನ್ನೊಂದು ಮಹತ್ತರ ವಿಷಯವೆಂದರೆ ಅತಿ ಪುರಾತನವಾದ ಒಂದು ಕಾಲದಲ್ಲಿ ಬಾಲಿ ಎಂಬುದು ದ್ವೀಪವಾಗಿರದೆ ಭಾರತ ಭೂಮಿಯದ್ದೇ ಒಂದು ಭಾಗವಾಗಿತ್ತೆಂದೂ, ಕಾಲಾಂತರದಲ್ಲಿ ಸಮುದ್ರದ ಏರಿಳಿತದ ಪ್ರಕೋಪದಿಂದ ಈ ಭಾಗವು ಭಾರತದಿಂದ ಬೇರ್ಪಡಿಸಲ್ಪಟ್ಟಿತೆಂದು ಅನೇಕ ಮಂದಿ ಸಂಶೋಧಕರು ಗಣನೆ ಮಾಡಿರುತ್ತಾರೆ. ಆಧುನಿಕ ಭೂಗರ್ಭ ಸಂಶೋಧಕರು ಈ ಕುರಿತು ಇನ್ನಷ್ಟು ಆಳವಾಗಿ ಸಂಶೋಧನೆ ನಡೆಸಿದರೆ ವಸ್ತುಸ್ಥಿತಿಯ ಸತ್ಯಾಂಶವು ಸಂಪೂರ್ಣವಾಗಿ ಬೆಳಕಿಗೆ ಬಂದು ಜಗತ್ತಿಗೆ ಮಹದುಪಕಾರವಾಗದಿರದು.

ಪ್ರಾಚೀನ ಉಲ್ಲೇಖ.

ಬಾಲಿಯ ಕುರಿತು ಈ ತನಕ ಪ್ರಾಚೀನ ಲೇಖ ಸಂಗ್ರಹ ಸಾಕಷ್ಟು ದೊರೆತಿಲ್ಲ. ಚೀನೀ ಯಾತ್ರಿಕರ ವಿವರಣೆಗಳಲ್ಲಿ 'ಮಗಂ', 'ಪೋ-ಲೀ' ದ್ವೀಪಗಳ ಉಲ್ಲೇಖ ದೊರಕುತ್ತದೆ. 'ಪೈಲ್ಯಟ್' ಎಂಬವನು "ಪೋ-ಲೀ" ಎಂಬುದು ಒಂದು ಪ್ರತ್ಯೇಕ ದ್ವೀಪವಲ್ಲ! ಬಾಲೀ ದ್ವೀಪವೇ ಅದು ಎಂದು ಸಿದ್ಧಪಡಿಸಿರುತ್ತಾನೆ. "ಲೆಂಗ್" ಕಾಲದ ಚರಿತ್ರೆಯಲ್ಲಿ 'ಪೋ—ಲೀ' ಕುರಿತಾಗಿ ವಿವರಿಸುವಾಗ ಇಲ್ಲಿನ ರಾಜ ವಂಶದ ಕುರಿತು ವಿಚಾರಿಸಿದಾಗ "ಶುದ್ಧೋದನ' ಮಹಾರಾಜನ ಮಹಾರಾಣಿ ಈ ದೇಶದ ಮಹಾರಾಜನ ಮಗಳಾಗಿದ್ದಳು; ಇಲ್ಲಿಯ ರಾಜನು ರೇಶ್ಮೆ ಬಟ್ಟೆ ಮತ್ತು ವಜ್ರ ಧಾರಣ ಮಾಡುತ್ತಿದ್ದನು; ಸ್ವರ್ಣ ಮಕುಟ ಧರಿಸುತ್ತಿದ್ದನು; ಸಪ್ತ ರತ್ನಗಳಿಂದ ಅಲಂಕೃತವಾಗಿ, ಸ್ವರ್ಣ ಖಡ್ಗ ಧರಿಸಿ ಸಿಂಹಾಸನದಲ್ಲಿ ಕುಳಿತು ಕೊಳ್ಳುತ್ತಿದ್ದನೆಂದು ಕೇಳಿದು ಬಂದಿದೆ ಎಂದು ಬರೆದಿರುತ್ತಾನೆ. ಈ ರಾಜನು ಅದ್ಯಾವುದೋ ಒಂದು ಧಾರ್ಮಿಕ ಕ್ಷತ್ರಿಯ ವಂಶದವನಾಗಿದ್ದನು ಎಂದು 'ಸ್ವೀ' ಎಂಬ ಒಂದು ವಂಶದ ವರ್ಣನೆಯಲ್ಲಿ ಕಂಡು ಬರುತ್ತದೆ; ಮಾತ್ರವಲ್ಲ ಅಲ್ಲಿಯ ನಿವಾಸಿಗರು ಗೋಲಾಕಾರವಾಗಿರುವ ಒಂದು ಭಯಾನಕವಾದ ಶಸ್ತ್ರವನ್ನು ಉಪಯೋಗಿಸುತ್ತಿದ್ದರು. ಅದರ ಮಧ್ಯ ಭಾಗದಲ್ಲಿ ಒಂದು ತೂತು ಇರುತಿತ್ತು. ಅದರ ಸುತ್ತಲಿನ ಅಂಚಿನಲ್ಲಿ ಗರಗಸದಂತೆ ಹರಿತವಾದ ಹಲ್ಲುಗಳಿರುತ್ತಿದ್ದವು. ಇದು ತನ್ನ ಗುರಿಯನ್ನೆಂದಿಗೂ ತಪ್ಪುತ್ತಿದ್ದಿಲ್ಲ. ಈ ಆಯುಧ 'ಚಕ್ರಾಯುಧ' ಎಂದು ಕಂಡು ಬರುತ್ತದೆ.

'ಥಾಟ್' ಎಂಬ ವಂಶೀಯ ಇತಿಹಾಸದಲ್ಲಿ ಬಾಲಿ ದ್ವೀಪದವರ ಕುರಿತು 'ಇವರು ಭಾರತೀಯ ಧರ್ಮ ಪದ್ಧತಿಯಂತೆ "ಕರ್ಣ ವೇಧ ಸಂಸ್ಕಾರ' ಮಾಡಿಸಿ ಕಿವಿಗಳಲ್ಲಿ ಭಾರತೀಯ ಮಾದರಿಯ ಆಭರಣ ಧರಿಸುತ್ತಿರುವರು; ಸೊಂಟಕ್ಕೆ ರೇಶ್ಮೆಯ ಪಟ್ಟಿಯನ್ನು ಬಿಗಿಯುತ್ತಿದ್ದರು" ಎಂದು ಉಲ್ಲೇಖಿಸಿರುತ್ತದೆ.

ಸ್ವಾತಂತ್ರ್ಯದ ಕೊನೆಯುಸಿರು

ಬಾಲಿ ದ್ವೀಪದ ಪ್ರಜೆಗಳು ಕ್ರಿ. ಶ. ೧೯೦೮ರ ತನಕ ತಮ್ಮ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಬಲವಾಗಿ ಶ್ರಮಿಸುತ್ತಿದ್ದರು. ಈ ದ್ವೀಪದಲ್ಲಿ ಸರ್ವ ಪ್ರಥಮ "ಉಗ್ರಸೇನ'ನೆಂಬ ಮಹಾರಾಜನು ಇದ್ದನೆಂದು ಕ್ರಿ. ಶ. ೯೧೪ರ ಒಂದು ಲೇಖನದಲ್ಲಿ ಕಂಡು ಬರುತ್ತದೆ "ಈ ರಾಜನು "ಜಾವಾ" ದ್ವೀಪದ ರಾಜನಾದ 'ಏರ್ಲಂಗ್'ನ ತಮ್ಮನಾಗಿದ್ದನು" ಎಂದು ಕ್ರಿ. ಶ. ೧೦೩೫ರ ಒಂದು ಶಿಲಾಲೇಖನದಲ್ಲಿ ಕಂಡುಬಂದಿದೆ. ಆ ಕಾಲದಲ್ಲಿ 'ಬಾಲಿ' 'ಜಾವ'ದ ಅಧೀನದಲ್ಲಿತ್ತು. ಬಾಲಿಯ ಇನ್ನೊಬ್ಬ ರಾಜನು ಜಾವಾ ದೇಶದ ಒಬ್ಬ ರಾಜ 'ಮಹೇಂದ್ರದತ್ತ'ನ ಮಗಳೊಡನೆ ವಿವಾಹವಾಗಿದ್ದನು. ಆ ರಾಜ್ಯಕನ್ಯೆ ಬಾಲಿ ರಾಜ್ಯದಲ್ಲಿ "ಗುಣಪ್ರಿಯ ಧರ್ಮಪತ್ನಿ' ಎಂದು ಪ್ರಸಿದ್ಧಿ ಪಡೆದಿದ್ದಳು. ಈಕೆಗೆ ತಂತ್ರವಿದ್ಯೆಯಲ್ಲಿ ಬಹಳ ಪ್ರೇಮವಿತ್ತು. ಇದರಿಂದಾಗಿ ಬಾಲಿಯಲ್ಲಿ ತಾಂತ್ರಿಕ ಸಾಧನೆಗಳ ಪ್ರಚಾರ ವೃದ್ಧಿಗೊಂಡಿತು. ಈ ರಾಣಿಗೆ 'ಇರ್ಗಲನ್' ಎಂಬ ಹೆಸರಿನ ಒಬ್ಬ ಪುತ್ರನು ಜನಿಸಿದನು. ಇವನ ವಿವಾಹ ಕೂಡಾ ಜಾವಾದ ಒಬ್ಬ ರಾಜಕುಮಾರಿಯೊಡನೆ ಜರಗಿತು. ಈ ರಾಜನ ಜಯಾಪಜಯಗಳ ಕಥೆಗಳು ಬಾಲೀ ಗ್ರಂಥಗಳಲ್ಲಿ ದೊರಕುತ್ತವೆ. ಈ ಗ್ರಂಥಗಳು ಹಸ್ತಲಿಖಿತದಲ್ಲಿದ್ದು ಇವುಗಳ ಪೈಕಿ ಒಂದು ಪ್ರತಿ ಕಲ್ಕತ್ತೆಯ ಲೈಬ್ರೇರಿಯಲ್ಲಿದೆ. ಈ ರಾಜನ ಪದವಿಸಹಿತ ಸಂಪೂರ್ಣ ಹೆಸರು "ಶ್ರೀ ಮಹಾರಾಜ ಲೋಕೇಶ್ವರ ಧರ್ಮವಂಶ-ಇರ್ಲಾಂಗಾಂತ ವಿಕ್ರಮೋತ್ತುಂಗ ದೇವ" ಎಂದಿತ್ತು, ಬಾಲೀ ಸಾಹಿತ್ಯದಲ್ಲಿ ಈ ರಾಜನನ್ನು "ವಿಷ್ಣು' ಮತ್ತು 'ರಾಣಿ'ಯನ್ನು 'ಲಕ್ಷ್ಮಿ'ಯೊಂದಿಗೆ ಹೋಲಿಸಲಾಗಿದೆ.

ಸುಮಾರು ಕ್ರಿ. ಶ. ೧೧೧೫ರಲ್ಲಿ ಬಾಲಿ ಪುನಃ ಸ್ವತಂತ್ರವಾಯಿತು. ೧೨೮೪ರಲ್ಲಿ ಜಾವಾದ ರಾಜನು ಬಾಲಿಯನ್ನು ತನ್ನಧೀನ ಪಡಿಸಿಕೊಂಡನು. "ಚಾಂ ಜು ಕುವಾ" ಎಂಬ ಚೀನೀ ಲೇಖಕನು ತನ್ನ ಐತಿಹಾಸಿಕ ಗ್ರಂಥದಲ್ಲಿ "ಜಾವಾದ ಅಧೀನವಿದ್ದ ೧೫ ರಾಜ್ಯಗಳಲ್ಲಿ ಬಾಲಿಯ ಹೆಸರು ಸಹ ಕಂಡುಬರುತ್ತದೆ" ಎಂದು ಬರೆದಿರುತ್ತಾನೆ. ೧೩೪೩ರ ತನಕ ಬಾಲಿ ಕೆಲವು ಕಾಲ ಸ್ವತಂತ್ರವಾಗಿಯೂ ಕೆಲವು ಕಾಲ ಜಾವಾದ ಅಧೀನವಾಗಿಯೂ ಇತ್ತು. ಕಡೆಗೆ ಬಾಲಿಯ ಸ್ವಾತಂತ್ರ್ಯ ನಾಶವಾಗಿ ಅದು ಜಾವಾದ ಒಂದು ಅಂಗವಾಯಿತು. ಜಾವಾದ ಮೇಲೆ ಮುಸಲ್ಮಾನರ ಧಾಳಿಯೂ ಆದಾಗ ಅಲ್ಲಿಯ ರಾಜನು ಓಡಿ ಹೋಗಿ ಬಾಲಿಯಲ್ಲಿ ಆಶ್ರಯ ಪಡೆದಿದ್ದನು; ಅವನ ವಂಶಸ್ಥರೇ ಅಲ್ಲಿ ಕೊನೆ ತನಕ ರಾಜ್ಯಭಾರ ಮಾಡಿದ್ದರು. ೧೮೪೯ರಲ್ಲಿ 'ಡಚ್ಚ'ರು ಬಾಲಿದ್ವೀಪದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. ಆದರೆ ರಾಜರು ಕೊನೆ ತನಕ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಇದ್ದರು. ೧೯೦೮ರಲ್ಲಿ ಅಂತಿಮ ಹೋರಾಟವೂ ಸಂಪೂರ್ಣ ವಿಫಲವಾಗಿ ೧೯೧೧ರಿಂದು "ಬಾಲಿ ಡಚ್' ಸಾಮ್ರಾಜ್ಯದ ಅಂಗವಾಯಿತು. ೧೯೪೯ ನವಂಬ್ರದಲ್ಲಿ ಇಂಡೋನೇಶ್ಯದೊಂದಿಗೆ ಇದು ಸಹ ಸ್ವತಂತ್ರವಾಯಿತು; ಪರಂತು ಡಚ್ಚರು ಮತ್ತು ಇಂಡೋನೇಶ್ಯಾದ ಪ್ರತಿನಿಧಿಗಳೊಳಗೆ ಆಗಿರುವ ಸಂಧಿಪತ್ರದ ಮೇಲೆ ಈ ತನಕ ಹಸ್ತಾಕ್ಷರ ಬೀಳಲಿಲ್ಲ. ಬಾಲಿ, ಇಂಡೋನೇಸ್ಯಾ ಒಕ್ಕೂಟದ ಒಂದು ಸದಸ್ಯ ರಾಜ್ಯವಾಗಿ ಅಂಗೀಕೃತವಾಗಿದೆ.

ಪ್ರಾಚೀನ ಅವಶೇಷ

ಇಂದಿಗೂ ಬಾಲಿ ದ್ವೀಪದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಈ ತ್ರಿಮೂರ್ತಿಗಳ ಪೂಜೆ ನಡೆಯುತ್ತಿದೆ. ಮಹಾಭಾರತ ಕಾಲದಲ್ಲಿ ಭಾರತ ದೇಶದಲ್ಲಿದ್ದಂತಹ ಉಡುಗೆ ತೊಡಿಗೆಗಳೇ ಇಂದಿಗೂ ಇಲ್ಲಿ ಬಳಕೆಯಲ್ಲಿದೆ. "ಅಂಗ ಕೋರಕಾಟ' (ಕಾಂಬೋಡ)ದ ಪ್ರಸಿದ್ಧ ಮಂದಿರ ಮತ್ತು ರಾಜಭವನಗಳಲ್ಲಿ ಅಂಕಿತವಾಗಿರುವ ಮೂರ್ತಿಗಳು ಬಾಲಿಯಲ್ಲಿ ಪ್ರಚಲಿತದಲ್ಲಿರುವ ಹಿಂದೂ ಧರ್ಮದ ಪ್ರತ್ಯಕ್ಷ ನಿದರ್ಶನಗಳಾಗಿರುತ್ತವೆ. ಭಾರತದ ಸಕಲ ವಿಧಾನದ ನೃತ್ಯಕಲೆಗಳನ್ನು ಮೂರ್ತಿಗಳು ನೆನಪು ತರಿಸುತ್ತಿವೆ. ಭಾರತದ ಪ್ರಾಚೀನ ನಾಟ್ಯ ಕಲೆಯನ್ನು ಪುನರುಜ್ಜೀವಿತಗೊಳಿಸಲಿಚ್ಛಿಸುವವರು ಬಾಲಿದ್ವೀಪಕ್ಕೆ ಹೋಗಲೇಬೇಕು ಈ ದೇಶದಿಂದ ಸಂಗೀತಜ್ಞರು, ವಾದ್ಯ ವಿದ್ಯೆಯ ಪಂಡಿತೋತ್ತಮರು, ಮೂರ್ತಿಕಲೆಗಾರರು, ನಟ-ನರ್ತಕರು, ಬಾಲಿ ದ್ವೀಪಕ್ಕೆ ಹೋದರೆ ಭಾರತದ ಅತಿ ಪ್ರಾಚೀನ ಕಲೆಯ ಶುದ್ಧ ಜ್ಞಾನದ ಸಂಪೂರ್ಣ ಅರಿವುಂಟಾಗುವುದು. ಸ್ವತಂತ್ರ ಭಾರತದ ಆತ್ಮವು ಎಂದಿಗೆ ಅಂತರ್ಮುಖಿಯಾಗುವುದೋ ಅಂದಿಗೆ ಭಾರತ ದೇಶಕ್ಕೆ ಇದು ಪ್ರಾಚೀನ ಜ್ಞಾನ ಲಾಲಸೆ ಉತ್ಪನ್ನವಾಗುವುದು. ಆಗ ಬಾಲಿಯು ಭಾರತಕ್ಕೆ ಅದರ ಪ್ರಾಚೀನ ಜ್ಯೋತಿಯನ್ನೊದಗಿಸಿ ಕೊಡುವುದು. ಕವಿ ಕಾಳಿದಾಸ ಮತ್ತು ವಿಕ್ರಮಾದಿತ್ಯ ಇವರ ಕಾಲಮಾನಗಳ ಬಗ್ಗೆ ಹೋಗುಗಳ ಕುರಿತು ಒಂದು ನವೀನ ಬೆಳಕು ವಿಕಸಿತವಾಗುವುದು. ರಾಮಾಯಣ—ಮಹಾಭಾರತಗಳ ಶುದ್ಧ ಸಂಸ್ಕರಣಗಳು ಪ್ರಕಾಶಕ್ಕೆ ಬರುವವು. ವರ್ತಮಾನ ಭಾರತ ದೇಶದಲ್ಲಿ ದೊರಕದಿರುವ ವೇದಗಳ ಅನೇಕ ಭಾಷ್ಯ ಮತ್ತು ಟಿಪ್ಪಣಿಗಳು ದೊರಕಬಹುದು.

ಬಾಲಿಯ ದೇವ ಮಂದಿರಗಳಲ್ಲಿರುವ ಮೂರ್ತಿಗಳಲ್ಲಿರುವ ಭಾರತೀಯ ಧರ್ಮ ಸಂಸ್ಕೃತಿಯ ಚಿಹ್ನೆಗಳು ಪ್ರತಿನಿತ್ಯ ನಷ್ಟ ಹೊಂದುತ್ತಾ ಇವೆ. ಆದುದರಿಂದ ಇವುಗಳ ಅಧ್ಯಯನ ಕಾರ್ಯ ಶೀಘ್ರವಾಗಿ ಆಗಬೇಕು. ಬಾಲಿ ದ್ವೀಪದಲ್ಲಿ ಮಾಡುವ ಸಂಶೋಧನೆಯ ಪರಿಣಾಮವು ಭಾರತದ ಅಜ್ಞಾತ ಇತಿಹಾಸಕ್ಕೆ ಒಂದು ವಿದ್ಯುದ್ದೀಪದಂತೆ ಪರಿಣಮಿಸುವುದು.

ಭಾಷೆ

ಬಾಲಿ ದ್ವೀಪದ ಕೆಲವು ನಗರಗಳಲ್ಲಿ ಮಾತ್ರ ವಿದೇಶೀಯರಿದ್ದಾರೆ. ಗ್ರಾಮಾಂತರ ಪ್ರದೇಶದ ಸ್ತ್ರೀಯರು ಸೊಂಟದ ವರೆಗೆ ಸೀರೆ ಉಡುತ್ತಾರೆ; ಅದರ ಮೇಲ್ಭಾಗಕ್ಕೆ ಬಟ್ಟೆ ಧರಿಸುವುದಿಲ್ಲ. ಇಲ್ಲಿಯ ಭಾಷೆ ಮಲಯಾ ಭಾಷೆಗೆ ಹೋಲುತ್ತಿದ್ದಾದರೂ ಅದರಲ್ಲಿ ಸಂಸ್ಕೃತ ಶಬ್ದಗಳೇ ಹೆಚ್ಚು ಕಂಡು ಬರುತ್ತವೆ. ಇಲ್ಲಿ ಸಂಸ್ಕೃತ ಭಾಷೆಯ ವಿದ್ವಾಂಸರು ಬಹಳ ಮಂದಿ ಇದ್ದಾರೆ. ಇಲ್ಲಿಯ ಬ್ರಾಹ್ಮಣರು ಸಂಸ್ಕೃತದ ಪಾಂಡಿತ್ಯವಿದ್ದು ಇಂದಿಗೂ ಸಂಸ್ಕೃತ ಭಾಷೆಯ ಅಧ್ಯಯನ—ಅಧ್ಯಾಪನ ಮಾಡುತ್ತಿದ್ದಾರೆ. ಇಲ್ಲಿ ಇಂದಿಗೂ ಸ್ವಯಂವರ ಪದ್ಧತಿ ಬಳಕೆಯಲ್ಲಿದೆ. ಯೌವ್ವನಕ್ಕೆ ಪಾದಾರ್ಪಣೆ ಮಾಡಿದ ಸುಸಂಸ್ಕೃತ ಯುವತಿ ಅನೇಕ ಯುವಕರಲ್ಲಿ ಒಬ್ಬನನ್ನು ತನ್ನಿಚ್ಛೆಯಂತೆ ಆರಿಸಿ ವರಿಸಿಕೊಳ್ಳುತ್ತಾಳೆ.

ಕ್ರಿ. ಶ. ೭೩೨ರಲ್ಲಿ ಜಾವಾದಲ್ಲಿ "ಸಂಜಯ' ನೆಂಬ ಒಬ್ಬ ಮಹಾ ಪ್ರತಾಪಿ ರಾಜನಿದ್ದನು. ಈತನು ಜಾವಾದೊಂದಿಗೆ ಬಾಲಿ ಮತ್ತು ಸುಮಾತ್ರಾ ದ್ವೀಪಗಳಲ್ಲಿಯೂ ದೇವನಾಗರಿ ಲಿಪಿಯ ಪ್ರಚಾರ ಮಾಡಿದ್ದನು. ದಕ್ಷಿಣ ಭಾರತದ ಒಬ್ಬ ರಾಜ 'ಕೇಸರೀ ಧರ್ಮದೇವ"ನು ಹತ್ತನೆಯ ಶತಾಬ್ಧಿಯಲ್ಲಿ, ಅಶೋಕ ಚಕ್ರವರ್ತಿಯಂತೆ ಅನೇಕ ಶಿಲಾಲೇಖಗಳನ್ನು ಕೆತ್ತಿಸಿದನು. ಇವುಗಳಲ್ಲಿ ಒಂದು ಇಂದಿಗೂ ಉಳಿದಿದೆ. ಇದರಲ್ಲಿ ಬಾಲೀ ಮತ್ತು ಸಂಸ್ಕೃತ ಭಾಷೆಯಿಂದ ಕೂಡಿದ್ದು ಅಕ್ಷರ ದೇವನಾಗರಿ ಮತ್ತು ದಕ್ಷಿಣ ಹಿಂದೂಸ್ಥಾನದ ಒಂದು ಲಿಪಿಯಿಂದ ಸಮ್ಮಿಳಿತವಾಗಿದೆ. ಇಲ್ಲಿ ಪುರಾತನ ರೀತಿಯ ಗ್ರಾಮ ಪಂಚಾಯತುಗಳಿವೆ. ಭೂಮಿಯ ಒಡೆತನ ಒಬ್ಬ ವ್ಯಕ್ತಿಯದ್ದಾಗಿ ಇರದೆ ಇರುವ ಗ್ರಾಮದ ಒಡೆತನದ್ದಾಗಿರುತ್ತದೆ. ಒಂದು ವೇಳೆ ಭಾರತದೊಂದಿಗೆ ಬಾಲೀ ದ್ವೀಪದ ಪ್ರಾಚೀನ ಸಂಬಂಧ ಪುನಃ ಜೋಡಿಸಲ್ಪಟ್ಟರೆ ಈ ದೇಶದ ಗ್ರಾಮಗಳಲ್ಲಿ ಅತಿ ಮಹತ್ವದ ಪ್ರಗತಿಯಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಮಿಲನವನ್ನು ಅತಿ ಆತ್ಮೀಯತೆಯಿಂದ ಅಪ್ಪಿಕೊಳ್ಳಲು ಬಾಲಿಯು ಇಂದಿಗೂ ಆತುರದಿಂದಿದೆ.

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ ರೇಲ್ವೆ ಮತ್ತು ವಿಮಾನ ರವಾನೆ ಖರ್ಚು ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯತಿ ದೊರೆಯುತ್ತದೆ.

ಕೃಷಿಕನ ಹಾಡು

— ೧ —

ನಾನೊಬ್ಬ ದೀನ ಮನುಜ, ಬಹಳ
ದೀನನು ನಾನು
ತತ್ವಗಳ ಸುಧೆಯನ್ನು ನಾನು ಅರಿಯೆ,
ನನ್ನ, ಕಷ್ಟದಾ ವಿಷ ಗಳಿಗೆಯಲಿ, ದೇವ,
ನಾ ನಿನ್ನ ದೈನ್ಯದಿ ನೆನೆಯುತಿರುವೆ.

— ೨ —

ಕಷ್ಟದಾ ಸಮಯದಲಿ ನಿನ್ನ ನೆನೆವೆ
ಸುಖ ಬಂದಾಗ ನಿನ್ನ ಮರೆವೆ
ನೀನೆ ನಮ್ಮ ಸಮಯಕಷ್ಟ ಗೆಳೆಯನು
ವಿಷಮತೆಯೊಳು ಕೂಡ ನೀನೆ ನಮ್ಮ
ಬಂಧುವು!

— ೩ —

ಗುಡಿ ಗೋಪುರಗಳ ಗಂಟೆ ನಾದಗಳ ನಾ
ಕೇಳಿ ತಿಳಿಯೆ!
ಪ್ರಾರ್ಥನೆಯ ಅಮೂಲ್ಯ ರತ್ನಗಳ ನಾ
ಸ್ವಲ್ಪವೂ ಅರಿಯೆ!
ನೀನೆ ಸೂರ್ಯ ತಾರೆಗಳ ಅಧಿಪತಿಯಾಗಿ
ಮೆರೆಯುತಿರಲು,
ಧೂಪ ದೀಪಗಳ ನಿನಗಾಗಿ ನಾ
ಬೆಳಗಲಾರೆ!
ನಾ ಟುಲ್ಲ—ಇದು ತಥ್ಯ—
ನೀ ಸರ್ವ ಶಕ್ತ.

— ೪ —

ನಾನೊಬ್ಬ ದೀನ ಮನುಜ, ಬಹಳ
ದೀನನು ನಾನು
ತತ್ವಗಳ ಸುಧೆಯನ್ನು ನಾನು ಅರಿಯೆ.
ಮರವನ್ನು ಕಡಿಯುವೆ, ಮಣ್ಣನ್ನು
ಅಗೆಯುವೆ,
ಮಳೆಯಲ್ಲೂ ಕೂಡ ನನ್ನ ಕೆಲಸವನು
ಮಾಡುತಿರುವೆ
ಬೆವರನ್ನು ಬಚ್ಚುವೆ, ಬಹಳ ಸೋತು
ಹೋಗುವೆ
ಕೆಲಸದಾಭಾರದಿಂ ಬಹಳ ಬಳಲುವೆ,
ನನ್ನ ಎಲುಬುಗಳು ಸೋತು ಸುಣ್ಣ
ಆದಾಗ
ಮರಳಿ ಮನೆಯತ್ತ ಹಾದಿ
ಹಿಡಿಯುವೆ.

— ೫ —

ನಾ ನನ್ನ ಕೆಲಸದಲ್ಲಿ ಮಗ್ನನಾಗಿರುವಾಗ
ನನ್ನನ್ನೆ ನಾನು ಮರೆಯುತಿರುವೆ,
ಅಂತಿರಲು ಮಮ ಪಾಡು, ದೇವ,
ಹೇಳು ನೀ, ಎಂದು ನಾ ನಿನ್ನ ನೆನೆವೆ?

— ೬ —

ನನ್ನ ಸತಿ ಪುತ್ರರಿಗಾಗಿ,
ನನ್ನ ದೇಹಳಿಗಾಗಿ,
ಹೊತ್ತು ಹೊತ್ತು ದುಡಿದು
ಬಳಲುತಿರುವೆ.
ಒಂದು ಹಿಡಿ ಅನ್ನದಾಸವಿಯನ್ನು
ಸವಿಯಲು
ದೇಹವನು ಬಹಳ ಸವೆಸುತಿರುವೆ

— ೭ —

ಆಲಸ್ಯವನೆ. ವಿಶ್ವಕರ್ಮ ನಿಂದಿಸುತ್ತಿರಲು
ಮಣಿಯನ್ನು ಜಪಿಸಿ ನಾ ಸಮಯ
ಕಳೆಯಲಾರೆ.
'ದೇವರೇ ಕೃಷಿಕ ನಾ ಬಂಧು'— ಇದು
ತಥ್ಯ
ಶಾಸ್ತ್ರ ತತ್ವಗಳನ್ನು ನಾ ಅರಿಯಲಾರೆ.

— ೮ —

ಮೂಢ ಮನುಜರು ಎಂದೂ ನಿನ್ನ
ಜಪಿಸುತಿಹರು
ಆದರೆ, ನಾ ನಿನ್ನ ಜಪಿಸಲಾರೆ
'ಕಾಯಕವೆ ಕೈಲಾಸ' 'ಕರ್ಮವೇ
ಪೂಜೆ'
ಇದೆ ನಾನು ತಿಳಿದಿರುವ ಅನಂತ
ತತ್ವ.

— ೯ —

ಕಾಯಕವೇ ಜೀವ, ಕಾಯಕವೆ ವಿಧಿಯು
ನನ್ನ ಕಾಯಕದಲಿ ನಾ ನಿನ್ನ ಪೂಜಿಸು
ತ್ತಿರುವೆ.
ಕೆಲಸವೇ ನನ್ನ ಗುಡಿ, ಕೆಲಸವೇ ನನ್ನ
ಮಡಿ
ನನ್ನ ಕೆಲಸದಿ ನಾ ನಿನ್ನ ಅರ್ಚಿಸು
ತ್ತಿರುವೆ.

— ೧೦ —

ದೀನ ಮನುಜನ ನಾನು, ಬಹಳ
ಸಾಧುವು ನಾನು
ತತ್ವಗಳ ಸುಧೆಯನ್ನು ನಾನು
ಅರಿಯೆ
ನಾನು ಸುರಿಸುವ ಬೆವರೆ ನನಗೆ ಗಂಗಾ
ಸ್ನಾನ
ಅದುವೆ ನಾ ನಿನಗರ್ಪಿಸುವ ಅರ್ಘ್ಯ
ಪಾದ್ಯ.

"ಕಾಯಕವೆ ಕೈಲಾಸ' 'ಕರ್ಮವೇಪೂಜೆ'
ಕೃಷಿಕ ಬಂಧುವು ನೀನೆ, ನಾ ನಿನ್ನ
ನೆನೆವೆ

— ಶ್ರೀ ರಾಜಗೋಪಾಲ್, ಪಿ. ಕೆ.

ಕುರುಡು ನಂಬಿಕೆಗಳಿಂದ ಪ್ರಭಾವಿತ ದೇಶ

(ನಾಲ್ಕನೇ ಪುಟದಿಂದ)

'ಅಲ್ಲಾ ಕೆಲವು ವೇಳೆ ಚಿಕ್ಕವರೇ ದೊಡ್ಡವರಿಗಿಂತ ವಿವೇಕಶಾಲಿಯಾಗಿದ್ದಾರೆ—'

"ಹ್ಞಾಂ...."

"ಹ್ಞಾಂ ಎಂಥದು? ಇತ್ತ ಬಾ, ನೋಡೋಣ, ಮೂರು ದಿನಾ ಓದಿ ಓದಿ ಪಾಸ್ಯಕಷ್ಟಗಳದೆಷ್ಟು ಗುಳಿ ಬಿದ್ದಿ - ಯೋ!'

'ಛಿ ...ಹೋಗೇಂದ್ರೆ....'

"ಎಲ್ಲಿಗೆ ಹೋಗೋದೆ?'

'ಬನ್ನಿ ಹಾಗಾದ್ರೆ....'

"ಜಾರ್ದ ಉಂಟೆ?"

—ಗೋರಾ.

ಮನೆಯೇ ಸ್ವರ್ಗ
ಜರ್ಮನ್ ಕಾರ್ಮಿಕರ ಗೃಹ ಜೀವನ.

ಜರ್ಮನ್ ಕಾರ್ಮಿಕರ ಗೃಹ ಜೀವನದ ಬಗ್ಗೆ ನಿಮಗೇನು ತಿಳಿದಿದೆ! ಈ ಬಗ್ಗೆ ಮಾಹಿತಿ ಸಂಪಾದಿಸಿರುವ ರೆನೇಟ್ ವಾಲ್ಡರವರ ಪುಸ್ತಕ 'ಕಾರ್ಮಿಕರ ಒಳ ಜೀವನ' ವೆಂಬುದು ಬಹು ಸ್ವಾರಸ್ಯಕರವಾಗಿದೆ. ಈ ಕಾರ್ಮಿಕರಲ್ಲಿಯೂ ವಿವಿಧ ವರ್ಗಗಳಿದ್ದು ಒಂದು ವರ್ಗದವರ ಜೀವನ ರೀತಿ ಮತ್ತೊಂದು ವರ್ಗದವರ ಜೀವನ ರೀತಿಯಿಂದ ವಿಭಿನ್ನವಾಗಿವೆ. ಆದರೂ ಅವರೆಲ್ಲರೂ ಮನೆಯೇ ಸ್ವರ್ಗವೆಂದು ತಿಳಿದು ಉತ್ತಮ ಗೃಹ ಜೀವನ ನಡೆಸುವುದರಲ್ಲಿ ಆಸಕ್ತರಾಗಿರುವರಂತೆ.

ಜರ್ಮನಿಯ ಕೈಗಾರಿಕಾ ಕಾರ್ಮಿಕರ ಉದ್ಯೋಗ ಜೀವನಕ್ಕೂ ಅವರ ಒಳ ಜೀವನಕ್ಕೂ ಭಾರಿ ವ್ಯತ್ಯಾಸ. ಉದ್ಯೋಗ ಜೀವನದ ಆಧಾರದ ಮೇಲೆ ಜರ್ಮನಿಯ ಕಾರ್ಮಿಕರ ಒಳ ಜೀವನದ ವಿಧಾನಗಳನ್ನು ನಿರ್ಧರಿಸುವಂತಿಲ್ಲ. ಅಂತೆಯೇ ಕಾರ್ಮಿಕರಲ್ಲಿಯೂ ಹಲವು ವರ್ಗಗಳು ಹುಟ್ಟಿಕೊಂಡಿದ್ದು ಒಂದು ವರ್ಗದವರ ಜೀವನ ರೀತಿ ಮತ್ತೊಂದು ವರ್ಗದವರ ಜೀವನ ರೀತಿಯಿಂದ ಬಹುಮಟ್ಟಿಗೆ ಬೇರೆಯಾಗಿವೆ ಯುದ್ಧ ಪೂರ್ವದ ಕಾರ್ಮಿಕ ಜೀವನದ ರೀತಿ ನೀತಿಗಳಿಗೂ, ಯುದ್ಧಾನಂತರದ ಕಾರ್ಮಿಕರ ರೀತಿನೀತಿಗಳಿಗೂ ಅಜಗಜಾಂತರ. ಅನುಭವ ಪಡೆದಿರುವ ಕಾರ್ಮಿಕರು ಅನನುಭವಿಗಳಾದ ಕಾರ್ಮಿಕರಿಗಿಂತ ಶ್ರೇಷ್ಠರೆಂಬ ಭಾವನೆ ಬೇರೂರುತ್ತಿರುವ ಕಾಲ ಬಂದಿದೆ; ಅಂತೆಯೇ ಅವರ ಜೀವನ ವಿಧಾನಗಳಲ್ಲಿಯೂ ಭೇದಗಳು ಕಂಡು ಬರದೆ ಗತ್ಯಂತರವಿಲ್ಲ.

ಆದರೂ ಜರ್ಮನಿಯ ಕಾರ್ಮಿಕ ವರ್ಗದವರು ಜೀವನ ವಿಧಾನಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನಗಳು ನಡೆಯದೆ ಇಲ್ಲ. ಸಮಾಜ ಶಾಸ್ತ್ರಜ್ಞೆ ರೆನೇಟ್ ವಾಲ್ಡರ ಪುಸ್ತಕ "ಕಾರ್ಮಿಕರ ಒಳಜೀವನ'ದಲ್ಲಿ ಈ ಬಗ್ಗೆ ಸ್ವಲ್ಪ ಮಟ್ಟಿನ ಮಾಹಿತಿ ಒದಗಿಸಿರುವರು. ಈ ಪುಸ್ತಕದ ಮಾಹಿತಿಯಿಂದ ತಿಳಿದುಬರುವದೇನೆಂದರೆ ಜರ್ಮನಿಯ ಕಾರ್ಮಿಕ ವರ್ಗಗಳ ಜೀವನ ವಿಧಾನಗಳಲ್ಲಿ ಏನೇ ಒಳಭೇದಗಳಿರಲಿ ಅವರೆಲ್ಲರೂ ಉತ್ತಮ ಗೃಹ ಜೀವನದಲ್ಲಿ ಆಸಕ್ತಿಯುಳ್ಳವರೆಂಬುದು.

ಕಾರ್ಮಿಕ ವರ್ಗದವರಿಗೆ ಹೆಚ್ಚು ವಿರಾಮಕಾಲಬೇಕೆಂಬ ಕೂಗು ಈಚೀಚೆಗೆ ಹೆಚ್ಚು ಹೆಚ್ಚಾಗಿ ಕೇಳಿ ಬರುತ್ತಿದ್ದರೂ ನಿಜಕ್ಕೂ ಅವರಿಗೆ ಹೆಚ್ಚು ವಿರಾಮಕಾಲ ದೊರೆಯುತ್ತಿಲ್ಲ. ವಾರಕ್ಕೆ ೪೫ ಗಂಟೆಗಳ ದುಡಿಮೆ, ಮನೆಯಿಂದ ಕಾರ್ಖಾನೆ, ಕಾರ್ಖಾನೆಯಿಂದ ಮನೆ, ಇವುಗಳಿಗೆ ಹೋಗಿ ಬರುವುದರಲ್ಲಿಯೇ ಅವರ ಕಾಲದ ಬಹುಭಾಗ ವ್ಯಯವಾಗುತ್ತದೆ. ಅವರಿಗೆ ತಿಂಡಿ ನೀರು ತಿನ್ನಲು ಬಟ್ಟೆ ಬದಲಾಯಿಸಲು ಉಳಿಯುವ ಕಾಲವನ್ನು ಕ್ರಿಯಾತ್ಮಕ ವಿರಾಮ ಕೇಳಿ ಯೆಂದು ಹೇಳ ಬರುವಂತಿಲ್ಲ

ಅನೇಕ ಕಾರ್ಮಿಕರಿಗೆ ಗೃಹ ಜೀವನದ ಮೇಲ ವ್ಯಾಮೋಹ ಹೆಚ್ಚುತ್ತಿದೆಯಂತೆ ಗೃಹ ಕೃತ್ಯಗಳನ್ನು ನೋಡಿಕೊಳ್ಳುವುದರ ಜೊತೆಗೆ ಮಕ್ಕಳು ಮರಿಗಳ ಪೋಷಣೆ ಹಾಗೂ ಗಂಡನ ಪೋಷಣೆ ಗೃಹಿಣಿ ನಿರ್ವಹಿಸಬೇಕೆಂಬುದು ಕಾರ್ಮಿಕ ವರ್ಗದವರ ನಿರೀಕ್ಷೆ. ಅಂದವಾದ ಮನೋಲ್ಲಾಸ ನೀಡುವ ಮನೆ, ಹೂಂದಾಣಿಕೆಯಿಂದ ಕೂಡಿರುವ ಗೃಹ ಜೀವನ—ಇವು ಜರ್ಮನ್ ಕಾರ್ಮಿಕ ವರ್ಗದವರಿಗೆ ಅತಿ ಪ್ರಿಯವೆನಿಸಿವೆಯಂತೆ. ಒಟ್ಟಿನಲ್ಲಿ ಮನೆಯೇ ಅವರಿಗೆ ಸ್ವರ್ಗವಾಗಬೇಕಿದೆ.

ಬೌದ್ಧಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಕಾರ್ಮಿಕ ವರ್ಗದವರು ಹೆಚ್ಚಿನ ಆಸಕ್ತಿ ತೋರುತ್ತಿಲ್ಲವಂತೆ. ಅವರ ಆರೋಗ್ಯ ಕಾಪಾಡಿಕೊಳ್ಳುವುದು, ಮಕ್ಕಳು ಮರಿಗಳಿಗೆ ವಿಚಾರವಿಲ್ಲದ ಜೀವನ ಸೌಖ್ಯವನ್ನೊದಗಿಸುವುದು—ಇವೇ ಅವರ ಬಹು ಮುಖ್ಯ ಜೀವನದುದ್ದೇಶಗಳು. ಓದು, ಬರಹಗಳಿಗಿಂತ ತೋಟದಲ್ಲಿ ಕೆಲಸ ಮಾಡುವುದು ಅವರಿಗೆ ಪ್ರಿಯಕರ ಹವ್ಯಾಸ.

ಆದರೆ ಅವರ ಔದ್ಯೋಗಿಕ ಅಂತಸ್ತು ಹೆಚ್ಚಿದಂತೆ ಅವರ ಜೀವನ ಮಟ್ಟವೂ ಏರುವುದಂತೆ ಓದು, ಬರೆಹ, ರಾಜಕೀಯ, ಸಾಮಾಜಿಕ ವ್ಯವಹಾರಗಳತ್ತ ಗಮನ ಹರಿಸು ಕೊಡುವರಂತೆ. ಆದರೆ ಆಗಲೂ ಉತ್ತಮ ಗೃಹ ಜೀವನದ ಹಂಬಲ ಅವರನ್ನು ಬಿಡುವುದಿಲ್ಲವಂತೆ.

ದಿ|ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —

-ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಡಾ: ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ ಖ. ಪ್ರತ್ಯೇಕ)

— ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ಎಲ್ಲೆಲ್ಲಿ ಏನೇನು?

ವಿಶೇಷ ವಾರ್ಡಿನ ಉದ್ಘಾಟನೆ

ಮಣಿಪಾಲ, ಜೂನ್ ೩—ಇಲ್ಲಿಯ ಕಸ್ತೂರ್ಬಾ ಜನರಲ್ ಆಸ್ಪತ್ರೆಯನ್ನು ರೋಗಿಗಳ ಸೇವೆಗಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ ಎಂದು ಇಂದಿಲ್ಲಿ ಆಸ್ಪತ್ರೆಯಲ್ಲಿ ೨೦ ಹಾಸಿಗೆಗಳಿರುವ ವಿಶೇಷ ವಾರ್ಡನ್ನು ಉದ್ಘಾಟಿಸುತ್ತಾ ಏಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ನುಡಿದರು.

ಈ ಹಾಸಿಗೆಗಳನ್ನು ಉದಾರಿಗಳು ತಲಾ ೩೦೦೦ ರೂ. ದಾನ ಕೊಟ್ಟದ್ದರಿಂದ ಒದಗಿಸಲಾಗಿದ್ದು ಉಚಿತ ವಾರ್ಡಿನಲ್ಲಿ ಬಡ ರೋಗಿಗಳಿಗಾಗಿ ೧೩ ಹಾಸಿಗೆಗಳನ್ನು ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಕೊಡುತ್ತದೆಂದೂ, ಸದ್ಯದಲ್ಲೇ ಆರಂಭಿಸಬೇಕೆಂದಿರುವ ಆರೋಗ್ಯ ಕೇಂದ್ರ ಸಿದ್ಧವಾದ ನಂತರ ಉಚಿತ ವಾರ್ಡಿನಲ್ಲಿ ಇನ್ನೂ ಹೆಚ್ಚು ಹಾಸಿಗೆಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಂದೂ ಅವರು ಹೇಳಿದರು.

ಮೆಡಿಕಲ್ ರಿಲೀಫ್ ಸೊಸೈಟಿಯ ಖಜಾಂಚಿ ಶ್ರೀ ಪಿ. ಶ್ರೀಪತಿ ಆಚಾರ್ಯರವರು ವಂದನೆಗಳನ್ನು ಅರ್ಪಿಸಿದರು.

ಪರೀಕ್ಷಾ ಫಲಿತಾಂಶ

ಮಣಿಪಾಲ, ಜೂನ್ ೮—ಮೈಸೂರು ವಿಶ್ವವಿದ್ಯಾನಿಲಯ ಕಳೆದ ನವಂಬರ್–ಏಪ್ರಿಲ್ ತಿಂಗಳುಗಳಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಇಲ್ಲಿಯ ಮಣಿಪಾಲ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ವರ್ಷದಲ್ಲಿ ಶೇಕಡಾ ೭೨ ಮತ್ತು ದ್ವಿತೀಯ ವರ್ಷದಲ್ಲಿ ಶೇಕಡಾ ೬೩ರಷ್ಟು ತೇರ್ಗಡೆಯಾಗಿದ್ದು, ಇಡೀ ವಿಶ್ವವಿದ್ಯಾನಿಲಯದಲ್ಲಿ ಈ ಎರಡು ಪರೀಕ್ಷೆಗಳಲ್ಲಿ ಕ್ರಮವಾಗಿ ೬೭ ಮತ್ತು ೫೯ ಸರಾಸರಿ ಪ್ರಮಾಣ ಬಂದಿರುವುದಕ್ಕಿಂತ ಇದು ಹೆಚ್ಚಾಗಿದೆ ಎಂದು ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ. ವೆಂಕಟರಮಣ ಭಟ್ಟರವರು ಇಂದಿಲ್ಲಿ ಹೇಳಿದರು.

ಈ ಕಾಲೇಜಿನ ಈ ಸಲದ ಫಲಿತಾಂಶಗಳು ಹಿಂದಿನ ವರ್ಷಗಳಿಗಿಂತ ಉತ್ತಮವಾಗಿದ್ದು ಒಟ್ಟು ೨೭ ವಿದ್ಯಾರ್ಥಿಗಳು—ಪ್ರಥಮ ವರ್ಷದಲ್ಲಿ ೧೬ ಮತ್ತು ದ್ವಿತೀಯ ವರ್ಷದಲ್ಲಿ ೧೧—ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

Navayuga Enterprise Ltd.,
Registered Office:
Palukote, UDIPI.

NOTICE

The register of members and Share transfer books of the Company will remain closed from 16th June to 10th July, 1967 (both days inclusive).

(By order of the Board)

Udipi, Date 3-6-'67) K. Honnayya Shetty, Mg. Director.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0–19 ಪೈಸೆ.

ರಖಂ ಪ್ರತಿಗಳಿಗೆ ವಿಚಾರಿಸಿರಿ :–

ನವಯುಗ ಪ್ರೆಸ್, ಉಡುಪಿ.

ಆರೋಗ್ಯ ಕೇಂದ್ರ ಮಾದರಿಯ ಆಸ್ಪತ್ರೆಯ ಉದ್ಘಾಟನೆ

ಕಳೆದ ತಾ. 24ರಂದು, ಮಣಿಪುರದಲ್ಲಿ ಉಡುಪಿ ತಾಲೂಕು ಬೋರ್ಡ್ ವತಿಯಿಂದ ನಡೆಯುತ್ತಿರುವ ಆರೋಗ್ಯ ಕೇಂದ್ರ ಮಾದರಿಯ ದವಾಖಾನೆಯ ಉದ್ಘಾಟನಾ ಸಮಾರಂಭವು ಶ್ರೀ ಅದಮಾರು ಮಠದ ಶ್ರೀ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರಿಂದ ನೆರವೇರಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ತಾ. ಬೋ. ಅಧ್ಯಕ್ಷ ಶ್ರೀ ಎಂ. ಮಧ್ವರಾಜ್‌ರವರು ವಹಿಸಿದ್ದರು.

ಮಣಿಪುರ ಪಂಚಾಯತ್ ಅಧ್ಯಕ್ಷ ಶ್ರೀ ಎನ್. ಎ. ಬಲ್ಲಾಳರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಬಿ. ಗಂಗಾಧರ ಆಚಾರ್ಯರು ಸಂದೇಶಗಳನ್ನೋದಿದರು. ಬಳಿಕ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ಎಸ್. ಶೆಟ್ಟರು ಮಾತನಾಡಿದರು.

ಶ್ರೀ ಅದಮಾರು ಮಠಾಧೀಶರು ಉದ್ಘಾಟಿಸುತ್ತಾ ಮಣಿಪುರಕ್ಕೆ ಆರೋಗ್ಯ ಕೇಂದ್ರ ದೊರಕಿದುದರ ಪ್ರಯೋಜನವನ್ನು ವಿವರಿಸಿ, ಜನರು ಆರೋಗ್ಯವಂತರಾಗಿ ಬಾಳಲಿ ಎಂದು ಹಾರೈಸಿದರು. ಮಾತ್ರವಲ್ಲದೇ ಶ್ರೀ ಮಠದಿಂದ, ಆಸ್ಪತ್ರೆಯ ಸ್ವಂತ ಕಟ್ಟಡದ ಬಗ್ಗೆ ರೂ 601ನ್ನು ಸಮರ್ಪಿಸಿದರು. ಉಪಸ್ಥಿತರಿದ್ದವರು ಜನತೆಯ ಸೇವೆಯ ಪವಿತ್ರ ಕೆಲಸವಾದ ಈ ಆಸ್ಪತ್ರೆಯ ಕಟ್ಟಡದ ಬಗ್ಗೆ ರೂ. 1900 ಧನಸಹಾಯ ಕೊಡುವುದಾಗಿ ಆಶ್ವಾಸನೆಯಿತ್ತರು.

ಸಭಿಕರ ಪರವಾಗಿ ಡಾ|| ಯು. ಕೆ. ಆಚಾರ್ಯರು ಮಾತನಾಡಿದರು. ಬಳಿಕ ಅಧ್ಯಕ್ಷ ಭಾಷಣವಾಯಿತು. ಕೊನೆಯಲ್ಲಿ ಪಂಚಾಯತ್ ಅಧ್ಯಕ್ಷರು ಧನ್ಯವಾದ ಸಮರ್ಪಿಸಿದರು.

ಶ್ರೀ ಕೃಷ್ಣಾಪುರ ಮಠಾಧಿಪತಿಗಳ ಜನ್ಮೋತ್ಸವ

ಉಡುಪಿಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರ ಜನ್ಮದಿನೋತ್ಸವ ಸಮಾರಂಭವು ತಾ. 9 ರಂದು ಶ್ರೀ ಮಠದಲ್ಲಿ ವೈಭವದಿಂದ ನೆರವೇರಿತು. ಈ ಸಂಬಂಧ ರಾತ್ರಿ ಶ್ರೀ ಮಠದ ಶ್ರೀ ಕೃಷ್ಣ ಸಭಾ ಮಂದಿರದಲ್ಲಿ ಮಂಗಳೂರಿನ ಶ್ರೀ ವಿಶು ಕುಮಾರ್ ಮತ್ತು ಮಿತ್ರವೃಂದದವರಿಂದ "ಸಮಯಕ್ಕೊಂದು ಸುಳ್ಳು" ಎಂಬ ಸಾಮಾಜಿಕ ನಾಟಕವೂ, ಮಾಸ್ಟರ್ ವಿಠಲ್ ಮತ್ತವರ ಬಳಗದವರಿಂದ ನೃತ್ಯ ಕಾರ್ಯಕ್ರಮವೂ ಯಶಸ್ವಿಯಾಗಿ ಜರಗಿತು. ಕೊನೆಯಲ್ಲಿ ಮಠದ ಪರವಾಗಿ ಶ್ರೀ ಬನ್ನಂಜೆ ರಾಮಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ವಾರ್ಷಿಕೋತ್ಸವ
ಸರೋಜಿನಿ ಸ್ತ್ರೀ–ಶಿಶು ಸೇವಾ ಸಮಾಜ, ಐಕಳ

ಇದರ ಪ್ರಥಮ ವಾರ್ಷಿಕೋತ್ಸವವು ಇದೇ ತಾ. 4ರಂದು ಕುಮಾರಿ ಸುಲೋಚನ, ಡಿಪ್ಯುಟಿ ಡಿ. ಒ. ಮುಲ್ಕಿ ಬ್ಲಾಕ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಪುಷ್ಪ ನಾಯಕ್‌ರವರ ಸ್ವಾಗತ ನೃತ್ಯವಾದ ನಂತರ ಸಮಾಜದ ಶಿಕ್ಷಕಿ ಸ್ವಾಗತ ಭಾಷಣ ಮಾಡಿದರು. ಕುಮಾರಿ ಶಶಿಕಲಾ ನಾಯಕ್‌ರವರು ವರದಿ ವಾಚನ ಮಾಡಿದರು. ಕುಮಾರಿ ಸುಮತಿ ಶೆಟ್ಟಿಯವರು ಧನ ಸಹಾಯದ ವಿವರವನ್ನಿತ್ತರು. ಸಭಿಕರ ಪೈಕಿ ಶ್ರೀ ಕೆ. ಕೊರಗಪ್ಪ ಶೆಟ್ಟಿ, ಶ್ರೀ ಕೆ. ಬಿ. ಶೆಟ್ಟಿ, ಡಾ| ಸಂಜೀವನಾಥ ಐಕಳರವರು ಈ ಸಮಾಜದ ವಿದ್ಯಾರ್ಥಿನಿಯರ ಚಟುವಟಿಕೆಗಳ ಬಗ್ಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿ, ಈ ಸಮಾಜದ ಸ್ಥಾಪನೆಯ ಸದುಪಯೋಗವನ್ನು ವಿದ್ಯಾರ್ಥಿನಿಯರು ಪಡೆಯಬೇಕೆಂದು ಕೇಳಿಕೊಂಡರು.

ನಂತರ ಸ್ತ್ರೀ ಚಾರಿತ್ರ್ಯದ ಬಗ್ಗೆ ಮಹಾಭಾರತದೊಳಗಿನ ಒಂದು ಕಥೆಯ ವಾಚನವನ್ನು ಮಾಡಲಾಯಿತು. ಅಧ್ಯಕ್ಷರ ಬೋಧಪ್ರದವಾದ ಭಾಷಣಾನಂತರ ಕುಮಾರಿ ಮನೋರಂಜನಿಯವರು ಧನ್ಯವಾದ ಸಮರ್ಪಿಸಿದರು.

ಎಮ್. ಜಿ. ಎಮ್. ಕಾಲೇಜಿನ ಅಪೂರ್ವ ಯಶಸ್ಸು

ಉಡುಪಿ ಜೂನ್ ೩:—ರಾಜ್ಯದ ಜಿಲ್ಲೆಯ ಇತಿಹಾಸದಲ್ಲೇ ಮೊದಲ ಬಾರಿ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿಗಳು ದ. ಪ್ರಿ., ಬಿ. ಎಸ್. ಸಿ., ಬಿ. ಕಾಂ. ಡಿಗ್ರಿ ಮೊದಲ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯದ ಒಟ್ಟು 60 ರ್‍ಯಾಂಕುಗಳಲ್ಲಿ 22ನ್ನು ಪಡೆದು ಒಂದು ನೂತನ ವಿಕ್ರಮವನ್ನು ಸ್ಥಾಪಿಸಿದ್ದಾರೆ. ಈ ಪೈಕಿ ಕುಮಾರಿ ಮೀರಾ ಚಂದ್ರಾವತಿ ಇಂಗ್ಲೀಷಿನ ಪ್ರಥಮ ರ್‍ಯಾಂಕನ್ನೂ, ಕುಮಾರಿ ಕಸ್ತೂರಿ ಸಂಸ್ಕೃತದ ಪ್ರಥಮ ರ್‍ಯಾಂಕನ್ನೂ ಹೊಂದಿರುವರು. ಅಂತೆಯೇ ಪ್ರಿ. ಯೂನಿವರ್ಸಿಟಿ ಪರೀಕ್ಷೆಗೆ ಕೂತ ಒಟ್ಟು 693 ವಿದ್ಯಾರ್ಥಿಗಳಲ್ಲಿ 308 ತೇರ್ಗಡೆ ಹೊಂದಿರುವರಲ್ಲದೆ ಆ ಪೈಕಿ 70 ಮಂದಿ ಪ್ರಥಮ ವರ್ಗ ಪಡೆದಿದ್ದಾರೆ. ವಿಶ್ವವಿದ್ಯಾನಿಲಯದ ಪ್ರಥಮ 10 ಸ್ಥಾನಗಳಲ್ಲಿ ನಾಲ್ಕು ಸ್ಥಾನಗಳನ್ನು ಈ ಒಂದೇ ಕಾಲೇಜು ಪಡೆದಿದೆ. ಕಟಪಾಡಿ ರತ್ನಾಕರ ನಾಯಕ ಎರಡನೇ ಸ್ಥಾನವನ್ನೂ, ನರಸಿಂಹ ಪೈ ನಾಲ್ಕನೆಯದನ್ನೂ, ನಾಗರಾಜ ನಾಯಕ್ ಆರನೇ ಸ್ಥಾನವನ್ನೂ, ವೆಲಂಟೈನ್ ಲೂಯಿಸ್ ಏಳನೆಯದನ್ನೂ ಪಡೆದಿದ್ದಾರೆ.

ಶಾಲಾ ಕಾಲೇಜು ಲೈಬ್ರೆರಿಗಳಿಗೆ ಉಪಯುಕ್ತ ಪುಸ್ತಕಗಳು

ಪುಸ್ತಕ	ಲೇಖಕ	ರೂ. ಪೈ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು. ಶಿ. ಹರಿದಾಸ ಭಟ್)	2=00
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು. ಶಿ. ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿನೇವಾ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಬಿಂದ ಮುಗುಳು	(ಎಸ್. ಗೋಪಿಚಂದ ರಾವ್)	1=00
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ್)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣಯಾತ್ರೆ	(ನಚಿಕೇತ)	1=50
ಭಾರತದ ವೀರಾಂಗನೆಯರು	(ಕೆ. ಎನ್. ಭಟ್ ಶಿರಾಡಿಪಾಲ್)	1=50
ಮೀರಿ ಕೊಟ್ಟ ಬೆಂಡೋಲೆ	(ಎಸ್. ಸದಾಶಿವ ರಾವ್)	1=80
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=50
ಮನೆ ಮದ್ದು	(ಡಾ| ಕೊರಡ್ಕಲ್ ವೆಂಕಟರಾವ್)	2=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಾಲ್ಕನೇ ಪುಟದಿಂದ)

ಮಗೆ ಬಂದರ ಬೇಡವಾದರೆ ಅದನ್ನು ಬೇರೆಡೆಗೆ ಒಯ್ಯುತ್ತೇವೆ" ಎಂದೂ ಘೋಷಿಸಿದ್ದರು! ದ. ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲೇ ಕಾಂಗ್ರೆಸ್ಸು ಪ್ರಚಂಡ ಸೋಲನ್ನು ಪಕ್ಷೀಯ ರಾಜನೀತಿಯ ಕಾರಣದಿಂದ ಉಣ್ಣುವಾಗ, ಡಾ| ನಾಗಪ್ಪ ಆಳ್ವರ ಸೋಲಿನಲ್ಲಿ ಮಹತ್ವವೇನೂ ಉಳಿಯುವುದಿಲ್ಲ. ಇಂತಹ ತುರುಸಿನ ಕ್ಷೇತ್ರದಲ್ಲಿ ಸ್ಪರ್ಧೆಗಿಳಿಯಲು ಒಪ್ಪಿದುದೇ ಅವರ ಕೆಚ್ಚೆದೆಯ ಪ್ರತೀಕ. ಜಟ್ಟಿ ಕಾಳಗದಲ್ಲಿ ಗೆಲ್ಲದಿದ್ದರೂ ಆತನ ಶ್ರಮ ವ್ಯರ್ಥವಾಗುವುದಿಲ್ಲ. ರಾಜ್ಯದಲ್ಲೂ ದೇಶದಲ್ಲೂ ಕಾಂಗ್ರೆಸ್ಸು ಪಕ್ಷದ ಸಂಘಟನೆ ಬಲವಾಗಬೇಕು; ಅಂತಃಕಲಹಗಳು ಕೊನೆಗೊಳ್ಳಬೇಕು—ಎಂಬ ಬಯಕೆ ಹುಟ್ಟಿರುವ ಈ ವೇಳೆಯಲ್ಲಿ ಡಾ| ಆಳ್ವರ ಮೇಲೆ ಹೆಚ್ಚಿನ ಹೊಣೆಗಾರಿಕೆ ಬಂದಿದೆ. ಮಿತಭಾಷಿಗಳೂ, ಸರಳ ಹೃದಯರೂ ಕಾರ್ಯಸಾಧಕರೂ ಆದ ಡಾ| ಆಳ್ವಾ ತಮ್ಮ ನಗುಮುಖದಿಂದಲೇ ಯಶಗಳಿಸಬಲ್ಲರು. ಪಕ್ಷದೊಳಗಿನ ಕೊಳಚೆಯನ್ನು ತೊಳೆಯುವ ಸಾಮರ್ಥ್ಯ ಅವರಲ್ಲಿದೆ ನಿಜ, ಪಕ್ಷೀಯರ ಸಹಾಯವಿಲ್ಲದೆ ಯಾರಾದರೂ ಏನು ಮಾಡಿಯಾರು? ಡಾ| ಆಳ್ವರು ವಿಶಿಷ್ಟ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಏರಿದ್ದಾರೆ. ಈ ಮುಳ್ಳಿನ ಕಿರೀಟವನ್ನು ಅವರು ಯಶಸ್ವಿಯಾಗಿ ಧರಿಸಲಿ; ರಾಜ್ಯದ ಕಾಂಗ್ರೆಸ್ಸಿಗೆ ಅಂಟಿದ ಕುತ್ತವನ್ನು ಈ ವೈದ್ಯ ದೂರ ಮಾಡಲಿ.

ಶುಂಠಿ–ಕರಿಮೆಣಸು

ಹಿಂದ ಕೇಳಿದ್ದು

ಕೊಡುವೆ ಲೋನ್ ಉಪದೇಶವದಕೆ ಫೀ ಬೇಡ| ಪದವೀಧರೆಯ ಕೈ ಹಿಡಿದು ನೀ ಮುಂದೆ ಸಾಗು| ಬಾಲಿಗೋಸುಗ ಗೋವುಗಳನು ನೀ ಕಟ್ಟು |ಹಾಲಿಬಿದ್ದಿಹ ಮನೆಗೆ ತೋರಿಕಲೆ ಬಿಟ್ಟು.

ಯೋಜನೆಯ ಪ್ಲಾನು

ಸಿದ್ಧವಾಗಿದೆ ಪಂಚವಾರ್ಷಿಕದ ಪ್ಲಾನು| ಬಿದ್ದು ಹೋಗಿದೆ ಅದಕೆ ಬಹುದೊಡ್ಡ ಬ್ಯಾನು| ಅದು ಏನು ಗೊತ್ತಾಯ್ತೆ ಕುಸಿದ ಕಳಪಾಯ! ತರುಕಿರ್ಪ ಅದರೊಳಗೆ 'ಆರ್ಥಿಕದ ಕಾಯು'

—ಶ್ರೀ ಮ. ಗೋ. ರಾವ್.

ವಿಮೋಚನೆ

(ಎರಡನೇ ಪುಟದಿಂದ)

ದು ಎನ್ನುವ ಕಾರಣದಿಂದ ಮೇಲಧಿಕಾರಿಗಳಾಗಿದ್ದರು. ಅವರಿಗೆ ಸಾಕಷ್ಟು ದುರ್ವ್ಯಸನಗಳ ಪರಿಚಯವೂ ಇತ್ತು.

ಗೀತಳ ಸೌಂದರ್ಯ ಗೋಪಾಲ ಸ್ವಾಮಿಯವರ ದೃಷ್ಟಿಯನ್ನು ತುಂಬಿತು. 'ಪರವಾಗಿಲ್ಲ ಹುಡುಗಿ ಚೆನ್ನಾಗಿದ್ದಾಳೆ' ಎಂದುಕೊಂಡರು ಗೋಪಾಲ ಸ್ವಾಮಿ. ತಾವಾಗಿಯೇ ಮುಂದುವರಿದು ಸಲುಗೆಯಿಂದ ಮಾತನಾಡ ತೊಡಗಿದರು. ಕಛೇರಿಯ ಇಳಿತ ಗುಮಾಸ್ತರು ತಪ್ಪು ಮಾಡಿದಾಗ ಸಿಡಿದು ನಿಲ್ಲುತ್ತಿದ್ದ ಸಾಹೇಬರು ಗೀತಳ ತಪ್ಪನ್ನು ಕಂಡಾಗ ತಮ್ಮ ಕೋಣೆಗೆ ಕರೆಯಿಸಿಕೊಂಡ "ಹೀಗೆ ತಪ್ಪು ಮಾಡಬಾರದು, ಸರಿಯಾಗಿ ಕೆಲಸ ಮಾಡಿ, ನಿಮಗೆ ಹೊಸ ಅನುಭವ... ಅಗತ್ಯವಾದರ ಸಂಕೋಚವಿಲ್ಲದ ಕೇಳಿ ತಿಳಿಸುತ್ತೇನೆ... ನೀವು ಸಂಕೋಚಪಟ್ಟುಕೊಳ್ಳಬಾರದು" ಎಂದು ಸಲಹೆ ನೀಡಿ ದೇಶಾವರಿ ನಗ ನಕ್ಕರು.

ಸಂಜೆ ಸರೋಜ 'ಸಾಹೇಬರ ಕೃಪಾದೃಷ್ಟಿ ಅಮ್ಮಾವರ ಕಡೆಗ ಹರಿದಿದೆ" ಎಂದಳು.

'ಥೂ ನಾಚಿಕೆ ಕೆಟ್ಟವರು - ಸ್ವಲ್ಪವೂ ವಿವೇಕವಿಲ್ಲ' ಎಂದಳು ಗೀತ.

'ಅಯ್ಯೋ ಪಾಪ! ಈಗ ಎರಡು ವರ್ಷಗಳ ಮುಂಚೆ ಅವರ ಶ್ರೀಮತಿ ಹೋಗಿಬಿಟ್ಟರಂತ ಕಣೆ... ಅದಕ್ಕೆ ವಿವೇಕ ಹೋಗಿದೆ..." ಎಂದಳು ಸರೋಜ.

— ೪ —

ಒಂದು ತಿಂಗಳ ದುಡಿಮೆಯ ನಂತರ ಆ ತಿಂಗಳ ಸಂಬಳ ಗೀತಳ ಕೈಸೇರಿತು. ಗೀತ ಸಂಭ್ರಮದಿಂದ ಹಣವನ್ನು ತೆಗೆದುಕೊಂಡು ಹೋಗಿ ಅಣ್ಣನ ಕೈಗಿತ್ತಳು. "ಈ ಮನೆಯ ಯಜಮಾನಿ ನಿನ್ನ ಅತ್ತಿಗೆ ಅವಳಿಗೆ ಕೊಡು.. ಅಂದ ಹಾಗೆ ಅದು ನಿನ್ನ ಹಣ... ನೀನು ದುಡಿದು ಸಂಪಾದಿಸಿದುದು ನೀನೇ ಇಟ್ಟುಕೋ...." ಎಂದನು ವೆಂಕಣ್ಣ. ಗೀತ ಹಣವನ್ನು ಅತ್ತಿಗೆಯ ಕೈಗಿತ್ತಳು. ಸರಳೆ 'ಇದು ನಿನ್ನ ಹಣ... ಇದನ್ನು ಖರ್ಚು ಮಾಡಲು ಇಟ್ಟುಕೊಳ್ಳಲು ನಿನಗೆ ಸ್ವಾತಂತ್ರ್ಯವಿದೆ.... ಏನಾದರೂ ಮಾಡಿಕೋ ನನಗೇಕೆ?" ಎಂದರು.

"ನಿಮ್ಮಿಬ್ಬರಿಗೂ ಸಂತೋಷವಾಗಿ ಮಾಡುತ್ತೇನೆ" ಎಂದುಕೊಂಡಳು ಗೀತ.

ಮರುದಿನ ಸಂಜೆ ಗೀತ, ನಾಣಿ ಪದ್ಮ ಮತ್ತು ಮಧು ಇವರೊಂದಿಗೆ ಪೇಟೆಗ ನಡೆದಳು. ಮಕ್ಕಳಿಗೆ ತಿಂಡಿ, ಹಣ್ಣು, ಗೊಂಬೆಗಳನ್ನು ಕೊಡಿಸಿ ಕೆಲವು ಬಟ್ಟೆಗಳನ್ನು ಕೈಯಲ್ಲಿ ಹಿಡಿದು ಮನೆಗೆ ಬಂದಳು.

ನಾಣಿ, ಪದ್ಮ ಮತ್ತು ಮಧು ಸಂತೋಷದಿಂದ ಕುಣಿದಾಡಿದರು. ಗೀತ ಬಟ್ಟೆಯ ಕಟ್ಟನ್ನು ಬಿಚ್ಚಿ, 'ಅತ್ತಿಗೆ ಇದು ನಿಮಗೆ ಸೀರೆ ರವಿಕೆ ಬಟ್ಟೆ. ಇಗೋ ನೋಡಿ ಇದು ಅಣ್ಣನಿಗೆ ಪಂಚೆ ಸಿಲ್ಕ್ ಶರಟಿನ ಬಟ್ಟೆ. ಇದು ಪದ್ಮಿಗೆ ಲಂಗದ ಬಟ್ಟೆ ಇವುಗಳು ನಾಣಿ ಮಧುಗೆ. ಚೆನ್ನಾಗಿದೆಯೋ ನೋಡಿ. ಆರಿಸಿ ತಂದಿದ್ದೇನೆ' ಎಂದಳು.

"ಇದನ್ನೆಲ್ಲ ಯಾಕೆ ತಂದೆ?" ಎಂದರು ಸರಳ.

'ಹಣ ನಿನ್ನದು ಏನಾದರೂ ಮಾಡಿಕೊ ಅಂತ ಇಬ್ಬರೂ ಹೇಳಿದಿರಿ' ಎಂದಳು ಗೀತ.

'ಅದು ಸರಿ ನನಗೆ, ನಿನ್ನ ಅತ್ತಿಗೆಗೆ ಹುಡುಗರಿಗೆ ಎಲ್ಲ ಆಯ್ತು....ನಿನಗೇನು ತಂದುಕೊಂಡೆ' ಎಂದು ಪ್ರಶ್ನಿಸಿದರು ವೆಂಕಣ್ಣ.

"ನನಗೆ ಯಾಕಣ್ಣ ನೀನು ಅತ್ತಿಗೆ ನನಗೆ ಇದ್ದೀರಲ್ಲ' ಎಂದಳು ಗೀತ.

"ಗೀತ ಹೃದಯ ಬಂಗಾರ" ಎಂದು ಆನಂದದಿಂದ ಹೃತ್ಪೂರ್ವಕವಾಗಿ ನುಡಿದರು ವೆಂಕಣ್ಣ. 'ನಿಜ' ಎಂದಿತು ಸರಳೆಯ ಆತ್ಮ.

— ೫ —

ವೆಂಕಣ್ಣ ಪತ್ರವನ್ನು ಹೆಂಡತಿಯ ಕೈಗೆ ಕೊಡುತ್ತಾ 'ನಾನು ಇದಕ್ಕಾಗಿಯೇ ಬೇಡ ಅಂದದ್ದು, ನನ್ನ ಮಾತು ಕೇಳಿದಳಾ....ನೋಡು ಅವರು ಏನಂತ ಬರೆದಿದ್ದಾರೆ. ಹುಡುಗ 'ನಿಮ್ಮ ಹುಡುಗಿ ಉದ್ಯೋಗದಲ್ಲಿದ್ದಾಳೆ.....ಉದ್ಯೋಗದಲ್ಲಿರುವ ಯಾವ ಹುಡುಗಿಯನ್ನು ವಿವಾಹವಾಗಲು ನಾನು ಸಿದ್ಧನಾಗಿಲ್ಲ' ಎಂದು ಹೇಳಿದನಂತೆ. ಈ ವರೆವಿಗೂ ಮಾಡಿದ ಪ್ರಯತ್ನ ನೀರಿನಲ್ಲಿ ಹೋಮ ಮಾಡಿದಂತಾಯ್ತು. ಹುಡುಗ ವಿದ್ಯಾವಂತ. ದೊಡ್ಡ ಅಧಿಕಾರದಲ್ಲಿದ್ದಾನೆ. ಉತ್ತಮ ಸಂಬಂಧ ಅಂದುಕೊಂಡಿದ್ದೆ. ಈ ಸಾರಿಯಾದರೂ ಅವಳ ವಿವಾಹ ನಡೆಯುತ್ತದೆ ಅಂತ ಕನಸು ಕಟ್ಟಿದ್ದೆ...."ಎಂದರು ವೆಂಕಣ್ಣ.

"ನಾಳು ನೀವು ಕೂಗಾಡಬೇಡಿ.... ಗೀತ ಮನೆಗೆ ಬರೋ ಹೊತ್ತು. ಕೇಳಿದರೆ ಬೇಸರಪಟ್ಟುಕೊಳ್ಳುತ್ತಾಳೆ. ಪ್ರಪಂಚದಲ್ಲಿ ಅವನೊಬ್ಬನೇ ಗಂಡಲ್ಲ ಇರೋದು. ಈಗ ಯಾವ ಪ್ರಮಾದವೂ ನಡೆದಿಲ್ಲ. ಅಂತಹ ಬುದ್ಧಿ ಇರೋರಿಗೆ ಗೀತಾನ ಕೊಡೋದು ಬೇಡ. ದೇವರಿದ್ದಾನೆ. ಗೀತಳಿಗೆ ಏನೂ ಹೇಳಬೇಡಿ. 'ಸುಮ್ಮನಿದ್ದುಬಿಡಿ" ಎಂದಳು ಸರಳ.

ವೆಂಕಣ್ಣ ಯಾವ ಮಾತನ್ನೂ ಆಡಲಿಲ್ಲ.

— ೬ —

ಅನಿರೀಕ್ಷಿತವಾಗಿ ಮನೆಗೆ ಬಂದ ಬಂಧುವನ್ನು ಕಂಡ ಸರಳ ಆಶ್ಚರ್ಯಗೊಂಡರು.

ಪ್ರಭಾಕರ ಸರಳೆಯ ಸಮೀಪದ ಬಂಧು. ಶಿವಮೊಗ್ಗದ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ. ಅವನನ್ನು ಬೆಂಗಳೂರಿಗೆ ವರ್ಗಾಯಿಸಿದ್ದರು. ಪ್ರಭಾಕರ ಬೆಂಗಳೂರಿಗೆ ಬಂದು ಕೆಲಸದ ಮೇಲೆ ಹಾಜರಾದ, ಅಂದು ಸಂಜೆಯೇ ಸರಳೆಯ ಭೇಟಿಗಾಗಿ ಬಂದ.

'ಚೆನ್ನಾಗಿದ್ದೀಯೇನೋ ಪ್ರಭಾಕರ... ಅಂತೂ ನಮ್ಮ ನೆನಪು ನಿನಗಿದೆ.... ಮನೆ ಹುಡುಕಿಕೊಂಡು ಬಂದೆಯಲ್ಲ ಅದೇ ಸಂತೋಷ ಬಿಡು' ಎಂದರು ಸರಳ.

"ಏನೋ ಇಷ್ಟರ ಮಟ್ಟಿಗೆ ಇದ್ದೇನಕ್ಕ—ಭಾವ ಇನ್ನೂ ಬಂದಿಲ್ಲವೇನು?'

"ಬರೋ ಸಮಯ.... ಬಾ ಕೂತ್ಕೋ. ನಿಮ್ಮ ತಾಯಿ-ತಂದೆ ಎಲ್ಲ ಚೆನ್ನಾಗಿದ್ದಾರೇನಪ್ಪ'

'ಹ್ಞ ಅಕ್ಕ"

"ಇದೇನು ಬೆಂಗಳೂರಿಗೆ ಬಂದಿದ್ದೆ.... ಯಾವಾಗ ಬಂದೆ'

'ನಿನ್ನೆ ಬಂದೆ ಅಕ್ಕ....ನನಗೆ ಇಲ್ಲಿಗೆ ವರ್ಗವಾಗಿದೆ'

'ಮತ್ತೆ ಎಲ್ಲಿ ಇಳಿದು ಕೊಂಡಿದ್ದೀಯ'

'ಅನ್ನಪೂರ್ಣ ವಿಲಾಸ ಇದ್ದೇ ಇದೆಯಲ್ಲ....' ಎಂದ ಪ್ರಭಾಕರ.

'ಯಾವಾಗ ಬಂದೆಯೋ ಪ್ರಭಾಕರ' ಎನ್ನುತ್ತಲೇ ವೆಂಕಣ್ಣ ಪ್ರವೇಶಿಸಿದರು.

"ಚೆನ್ನಾಗಿದ್ದೀರಾ ಭಾವ....ನಾನು ನಿಮ್ಮೂರಿಗೆ ಬಂದು ಬಿಟ್ಟಿದ್ದೇನೆ' ಎಂದ ಪ್ರಭಾಕರ.

ಅತ್ತಿಗೆಯ ಸೂಚನೆಯ ಮೇರೆಗೆ ಗೀತ ತಿಂಡಿ ತಂದಿಟ್ಟಳು.

"ಸ್ವಲ್ಪ ನಿಂತ ಕೋ ಗೀತ....ಇವನು ಪ್ರಭಾಕರ ಅಂತ ನಿನ್ನ ಅತ್ತಿಗೆಯ ಸಮೀಪದ ಬಂಧು....ತಮ್ಮ....ಪ್ರಭಾಕರ ಇವಳು ನನ್ನ ತಂಗಿ ಗೀತ...ನಿನಗೆ ಪರಿಚಯ ಇರಬಹುದು" ಎಂದರು ವೆಂಕಣ್ಣ.

'ನೋಡಿ ತುಂಬ ದಿನ ಆಗಿತ್ತು. ಮತ್ತೆ ನಿನ್ನೆ ಆಫೀಸಿನಲ್ಲಿ ನೋಡಿದೆ'—' ಎಂದ ಪ್ರಭಾಕರ.

'ಸರಿ ಹೋಯ್ತು ಅಂದ ಹಾಗೆ ಇಬ್ಬರೂ ಒಂದೇ ಆಫೀಸಿನವರೇ ಆದ್ರಿ. ಗೀತ ನಿತ್ಯ ಸಂಜೆ ಮನೆಗೆ ಬರೋದು ಸ್ವಲ್ಪ ಹೊತ್ತಾಗುತ್ತದೆ.... ನಾಜೂಕಿನ ಕಾಲ. — ಇನ್ನು ಮುಂದೆ ಇಬ್ಬರೂ ಒಟ್ಟಾಗಿ ಮನೆಗೆ ಬರಬಹುದು...ಸರಿತಾನೆ ಪ್ರಭಾಕರ ಎಂದರು ವೆಂಕಣ್ಣ.

"ದಯವಿಟ್ಟು ಒತ್ತಾಯ ಮಾಡಬೇಡಿ ಭಾವ. ನಾನು ನಿಮ್ಮ ಬಂಧು, ಅಭಿಮಾನಿ, ನಿಮ್ಮ ಅಂತಃಕರಣವನ್ನು ನಾನು ಬಲ್ಲೆ. ಆದರೆ ಮನೆಯಲ್ಲಿರುವಂತಹ ಒತ್ತಾಯ ಮಾತ್ರ ಮಾಡಬೇಡಿ. ನೀವು ಕರೆದಾಗ ಬರುತ್ತೇನೆ. ನಿಮ್ಮ ಸೂಚನೆಯಂತೆ ನಿತ್ಯ ನಿಮ್ಮ ತಂಗಿಯನ್ನು ಮನೆ ತಲುಪಿಸುತ್ತೇನೆ. ಹೀಗೆ ಹೇಳಿದ ಅಂತ ಬೇಸರ ಪಟ್ಟುಕೊಳ್ಳಬೇಡಿ' ಎಂದ ಪ್ರಭಾಕರ.

ಕಾಫಿ ಲೋಟವನ್ನು ತಂದಿಟ್ಟ ಗೀತ 'ಅಬ್ಬ ಎಂತಹ ಸ್ವಾಭಿಮಾನಿ' ಎಂದುಕೊಂಡಳು.

'ಇವನ ಸ್ವಭಾವವೇ ಹೀಗೆ ಕಣಮ್ಮ ಆಫೀಸಿನಲ್ಲಿಯೂ ಗಲಾಟೆ ಮಾಡುವುದು, ಹಾಗೇನಾದರೂ ಮಾಡಿದರೆ ಕಿವಿ ಹಿಡಿದು ಎಳೆದುಕೊಂಡು ಬಾ' ಎಂದರು ಸರಳ.

"ಕಿವಿಹಿಂಡಿಸಿಕೊಳ್ಳುವುದು ಒಳ್ಳೆಯದ್ದಲ್ಲ. ಕಣಕ್ಕ' ಎಂದ ಪ್ರಭಾಕರ.

— ೭ —

ಕಛೇರಿಗೆ ಬರುವಾಗ ಬೇರೆ ಬೇರೆಯಾಗಿ ಬರುತ್ತಿದ್ದರೂ ಸಂಜೆ ಗೀತ ಮತ್ತು ಪ್ರಭಾಕರ ಒಟ್ಟಾಗಿ ಕಛೇರಿಯಿಂದ ಹೊರಡುತ್ತಿದ್ದರು. ಸರೋಜ ವಿನಾ ಉಳಿದ ಯಾವ ಗಂಡಸರೊಂದಿಗೂ ಮಾತನಾಡದಿದ್ದ ಗೀತ ಪ್ರಭಾಕರನೊಂದಿಗೆ ಮಾತನಾಡುತ್ತಿದ್ದುದು ಅನ್ಯೋನ್ಯತೆಯಿಂದ ಇದ್ದುದು ಕೆಲವರಿಗೆ ಸಂದೋರಲಿಲ್ಲ.

ಗೀತ ಮತ್ತು ಪ್ರಭಾಕರರ ಸ್ನೇಹ ಅನ್ಯೋನ್ಯತೆಯ ವಿಷಯ ಕಿವಿಯಿಂದ ಕಿವಿ ದಾಟಿ ಗೋಪಾಲ ಸ್ವಾಮಿಯವರ ಕಿವಿ ಮುಟ್ಟಿತು. ಒಂದು ದಿನ ಇಬ್ಬರೂ ಸಂತೋಷದಿಂದ ಮಾತನಾಡುತ್ತ ಬರುತ್ತಿದ್ದುದನ್ನು ಕಂಡರು. ಆಗ ಅವರ ಹೃದಯಕ್ಕೆ ಹುಳಿ ಹಿಂಡಿದಂತಾಯಿತು.

ಪ್ರಭಾಕರ ಹೀಗೆ ಪ್ರಬಲಿಸಬಹುದು ಎಂದು ಅವರು ನಿರೀಕ್ಷಿಸಿರಲಿಲ್ಲ.

'ನಮ್ಮನ್ನೆಲ್ಲ ಎಂತ ಬಿಟ್ಟು ಈಗ ನಾವೆಲ್ಲ ಯಾರಮ್ಮ' ಎಂದಳು ಸರೋಜ.

'ನೀನು ಹೀಗೆ ಅನ್ನುತ್ತೀಯೇನೆ ಸರೋಜ...ನಾನು...' ಎಂದಳು ಗೀತ.

'ಗೊತ್ತು ಕಣೆ ನೀನೇನು ಹೇಳಬೇಡ, ಬೆಕ್ಕು....ಎಂದಳು ಸರೋಜ. ಗೀತಳ ಕೆನ್ನೆ ಕಂಪಾಯಿತು.

ಒಂದು ದಿನ ಗೋಪಾಲ ಸ್ವಾಮಿ ಪ್ರಭಾಕರನನ್ನು ಕೋಣೆಗೆ ಬರಮಾಡಿಕೊಂಡು "ಗೀತ ಕಛೇರಿಯ ಕೆಲಸಗಾರಳು. ನೀವು ಅವರೊಂದಿಗೆ ಅನ್ಯೋನ್ಯದಿಂದ ವರ್ತಿಸುವುದು, ಅವರ ಜೊತೆ ಸುತ್ತುವುದು ಸರಿಯಲ್ಲ. ಕಛೇರಿಯ ಹೆಸರು ಬೀದಿಯ ಪಾಲಾಗಬಾರದು. ಗೀತ ಅವಿವಾಹಿತ ಕನ್ಯೆ. ನೀವು ಅವರೊಂದಿಗೆ ಅತಿ ಸಲುಗೆ ಬೆಳೆಸುವುದು ಸರಿಯಲ್ಲ. ನನಗೇ ಈ ವಿಷಯವಾಗಿ ಅನೇಕ ದೂರುಗಳು ಬಂದಿವೆ" ಎಂದರು.

"ನನಗೆ ಎಲ್ಲ ವಿಷಯಗಳು ಗೊತ್ತಿವೆ.



NAVAYUGA 15—6—1967
Registered with the Registrar of News Papers for India under No. R. N. 3546/'67

REGD. No. B. G. 176
LICENCE No. 31
Licensed to Post without Prepayment

ನಿಮ್ಮ ಸಲಹೆಗೆ ವಂದನೆಗಳು" ಎಂದು ಪ್ರಭಾಕರ ಹೊರಬಂದ.

ಪ್ರಭಾಕರನ ಕೆಲಸದಲ್ಲಿ ಯಾವ ತಪ್ಪನ್ನೂ ಕಂಡು ಹಿಡಿಯುವಂತಿರಲಿಲ್ಲ ಗೋಪಾಲ ಸ್ವಾಮಿ ಪ್ರಭಾಕರನನ್ನು ಟೀಕಿಸಲು ಕಾರಣ ಹುಡುಕುತ್ತಿದ್ದರು. ಅವರಿಗೆ ಯಾವ ಕಾರಣವೂ ದೊರೆಯಲಿಲ್ಲ. ಹೆಚ್ಚು ಕೆಲಸವಿದ್ದ ಕಾರಣ ಒಂದು ಬಾರಿ ಪ್ರಭಾಕರ ರೆಕಾರ್ಡುಗಳನ್ನು ಕಾಲದಲ್ಲಿ ತಲುಪಿಸಲು ಸಾಧ್ಯವಾಗಲಿಲ್ಲ. ಸಾಹೇಬರು ಕೋಪಗೊಂಡು 'ಇಷ್ಟು ಕೆಲಸಕ್ಕೆ ಎಷ್ಟು ದಿನಬೇಕು' ಎಂದರು.

"ನಾನು ಮನುಷ್ಯ, ನನಗಿರುವುದು ಎರಡೇ ಕೈ ನನ್ನಿಂದ ಸಾಧ್ಯವಾದಷ್ಟು ಜೋರಾಗಿ ಕೆಲಸ ಮಾಡುತ್ತಿದ್ದೇನೆ ಅತಿ ಜರೂರಾದರೆ ನೀವು ಮಾಡಿಬಿಡಿ" ಎಂದ ಪ್ರಭಾಕರ.

"ಮಿ, ಪ್ರಭಾಕರ ಈ ಬಗೆಯ ವಿರೋಧ ಸರಿಯಲ್ಲ. 'ಪರಿಣಾಮ ಏನಾಗಬಹುದೆಂದು ಯೋಚಿಸಿ, ನಾನು ನಿಮ್ಮ ಮೇಲಾಧಿಕಾರಿ ಎಂಬುದನ್ನು ಮರೆಯಬೇಡಿ" ಎಂದರು ಗೋಪಾಲ ಸ್ವಾಮಿ.

'ಯಾವ ಅಧಿಕಾರದ ಭಯವೂ ನನಗಿಲ್ಲ' ಎಂದು ಅಂಜದೆ ನುಡಿದ ಪ್ರಭಾಕರ. ಒಂದು ವಾರದೊಳಗಾಗಿಯೇ 'ನಿಮ್ಮನ್ನು ಮಡಿಕೇರಿಗೆ ವರ್ಗಾಯಿಸಿದೆ' ಎನ್ನುವ ಆರ್ಡರು ಪ್ರಭಾಕರನ ಕೈ ಸೇರಿತು.

ಗೀತ ಮತ್ತು ಪ್ರಭಾಕರ ಮೇಲಾಧಿಕಾರಿಗಳ ಕೋಣೆ ತಲುಪಿದರೂ ಗೋಪಾಲ ಸ್ವಾಮಿ "ಏನು ಎನ್ನುವಂತೆ" ಕತ್ತೆತ್ತಿ ನೋಡಿದರು. ಗೀತ ಪತ್ರ ಒಂದನ್ನು ಮೇಜಿನ ಮೇಲಿಟ್ಟಳು. ಗೋಪಾಲ ಸ್ವಾಮಿ ಪತ್ರವನ್ನು ಓದಿ "ನೀವು ರಾಜೀನಾಮೆ ಸಲ್ಲಿಸಿದ್ದೀರಿ......ನಿಮ್ಮಂತಹ ಉತ್ತಮ ಕೆಲಸಗಾರರು ಕೆಲಸ ಬಿಡಬಾರದು.... ಮಿ. ಪ್ರಭಾಕರರಿಗ ಅನ್ಯಾಯವಾಗಿ ಕಾರಣವಿಲ್ಲದೆ ತೊಂದರೆ ಮಾಡಿದ್ದರೆ. ನಾನು ಇವೆರಡನ್ನು ನಿರೀಕ್ಷಿಸಿರಲಿಲ್ಲ. ನಾನು ನಿಸ್ಸಹಾಯಕ" ಎಂದರು.

"ನಿಮ್ಮ ಅಭಿಮಾನಕ್ಕೆ ವಂದನೆಗಳು. ರಾಜೀನಾಮೆಯನ್ನು ದಯವಿಟ್ಟು ಸ್ವೀಕರಿಸಿ ಮುಂದಿನ ತಿಂಗಳ ಮೂವತ್ತನೆಯ ತಾರೀಕು ನನ್ನ ವಿವಾಹ. ಆಹ್ವಾನ ಪತ್ರಿಕೆ ಕಳುಹಿಸುತ್ತೇವೆ. ದಯವಿಟ್ಟು ಬನ್ನಿ. ಈ ವಿಷಯ ನಿಮಗೆ ಹೇಳಿಹೋಗಲು ಬಂದೆವು. ನಿಮಗೆ ತೊಂದರೆ ಕೊಟ್ಟಿದ್ದೇವೆ. ಕ್ಷಮಿಸಿ ಬಿಡಿ" ಎಂದಳು ಗೀತ.

ಗೋಪಾಲ ಸ್ವಾಮಿ "ಸಂತೋಷ" ಎಂದು ಪೇಲವರಿ ನಗೆ ನಕ್ಕರು.

ಕೆಲವು ನುಡಿ ಮುತ್ತುಗಳು

ವಿವೇಕಕ್ಕಿಂತಲೂ ಸುರಕ್ಷಿತವಾಗಿ ನಿನಗೆ ಮಾರ್ಗದರ್ಶನ ಮಾಡುವವರಿಲ್ಲ.

ಕಿವಿಗಳಿಗಿಂತಲೂ ಕಣ್ಣುಗಳಿಗಿಂತಲೂ ಹೆಚ್ಚು ವಿಶ್ರಾಂತಿಯನ್ನು ನಾಲಿಗೆಗೆ ಕೊಡು.

ಕೈಯಿಂದ ಬಿದ್ದುದನ್ನು ಹೆಕ್ಕಬಹುದು; ಆದರೆ ಬಾಯಿಂದ ಬಿದ್ದುದನ್ನು ಹೆಕ್ಕಲಸಾಧ್ಯ.

"ನಿನ್ನ ನಿಯಂತ್ರಣಾತೀತ ಮಾತುಗಳೇ ನಿನ್ನ ವೈರಿಗಳೆಂದು ತಿಳಿ.

ಮಾತು ಬಲ್ಲವನಿಗೆ ಜಗಳವಿಲ್ಲ.

ಕೇಳಿಕೆಯನ್ನು ನಿರಾಕರಿಸುವಾಗಲೂ ವಿನಯಶೀಲನಾಗಿರು.

ಹೆಚ್ಚು ಮಾತುಗಳನ್ನಾಡಿ ಪಶ್ಚಾತ್ತಾಪ ಪಡುವಂತಾಗದಿರಲಿ.

ಮೌನಂ ಪಂಡಿತ ಲಕ್ಷಣಂ.

ಪರರ ಅಪಜಯದ ಬಗ್ಗೆ ಸಂತೋಷದ ಮಾತುಗಳಾಡಬೇಡ. ನೀನೂ ಸೋಲುವೆ.

ಕಠಿಣತರದ ಹಾಸ್ಯೋಕ್ತಿಗಳು ಮೈತ್ರಿಗೆ ವಿರೋಧ.

ವಾಚಾಳಿತನವು ವಾಗ್ಮಿಯ ಲಕ್ಷಣವಲ್ಲ.

ಸಿಹಿ ಮಾತುಗಳನ್ನಾದರೂ ಗೋಡೆಗಳು ಕಿವಿಗೊಟ್ಟಾವೆಂದು ತಿಳಿ.

ವಿವೇಕವೂ ಸರ್ವತ್ರ ವಿಜಯ ಸಾಧನಾ ಮಾರ್ಗವಲ್ಲದಿರುವಾಗ ಅವಿವೇಕದ ಗತಿ?

ಬಡಾಯಿ-ಹೆಗ್ಗಳಿಕೆಗಳು ನಿನ್ನ ಬಗ್ಗೆ ತಾತ್ಸಾರ ಭಾವನೆಯನ್ನು ಬೆಳೆಸಲೇ ಸಹಾಯಕ.

ಹೇಳಿದ ಮಾತಿಗೆ ತಪ್ಪಬೇಡ.

ಪಾಲಿಸಲಾಗದ ಮಾತನ್ನು ಸರ್ವಥಾ ಹೇಳಬೇಡ.

ಸ್ವಾರ್ಥ ಸಾಧಕರ ಹೊಗಳಿಕೆ—ಜಾಗ್ರತೆ!

ಸಂಗ್ರಹ—ಶ್ರೀ ಎಚ್.ಎಂ. ನಾರಾಯಣ ಭಟ್.

ಸಮುದ್ರವು ತನ್ನ ನೀರನ್ನು ಆವಿಯಾಗಿ ಕಳುಹಿಸಿ ಪ್ರಪಂಚದ ಸಸ್ಯ ಸಮೃದ್ಧಿಗೂ ಜನ ಜೀವನಕ್ಕೂ ಆಧಾರವಾಗಿರುವಂತೆ ಹೆಂಗಸು ತನ್ನ ಕಂಬನಿಯ ಆಳದಿಂದ ಜಗತ್ ಹೃದಯವನ್ನು ಆವರಿಸಿ ಪುನೀತಗೊಳಿಸಿರುವಳು

o o o o

ಪ್ರಪಂಚದ ಸರ್ವವಿಚಾರಗಳನ್ನು ಅರಿತಿರುವವರು ಹೆಚ್ಚು ಜಾಣರಲ್ಲ, ಬದಲು ತನ್ನನ್ನು ತಾನು ಅರಿತುಕೊಂಡವನು ನಿಜವಾದ ಜಾಣ

o o o

ಸಹನೆ ಆದರ ಸ್ಥಾನದಲ್ಲಿ ಉತ್ತಮವಷ್ಟೆ ಅದರೆ ನಿನ್ನನ್ನು ಸಹಿಸದೆ ನಿನ್ನ ಕೊರಳು ಕಡಿಯಲು ಬಂದವನನ್ನು ಸಹಿಸುವುದು ಸಹನೆಯಾಗದು.



(ಹೊಸ ಮುದ್ರಣ)

ವೇದವು ಸಾರುತ್ತಿದೆ:

"ಏಳಿ, ಎಚ್ಚರಗೊಳ್ಳಿ; ತಿಳಿದವರ ಕಾಲಿಗ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾದ್ದಿಲ್ಲ. ತಿಳಿದವ ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ
ಗೀತೆಯ ಸಮೂಲ ಭಾಷಾಂತರವು

ಗೀತೆಯ ಕೈಗನ್ನಡಿಯಾಗಿ

ಹೊಸ ಆವೃತ್ತಿಯಾಗಿ ಪ್ರಕಟವಾಗಿದೆ
ಅದನ್ನು ಎಲ್ಲರೂ ಓದಬೇಕಾಗಿದೆ.

—"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" ಎಂದು ವರಾಹ ಪುರಾಣವೂ ಸಾರುತ್ತದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೇ ಒಂದೂವರೆ ರೂಪಾಯಿ
2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty at the Navayuga Press, Udipi, S, India.

ನವಯುಗ

22—6—1967

೨೦
ಪೈಸೆ

ಕಥಾ ಪ್ರಪಂಚ

ಪಥ ಭ್ರಾಂತ

ಬರೆದವರು. ಶ್ರೀ ಕೋ. ಶಿವಾನಂದ ಕಾರಂತ

ಬಾಗಿದ ಮರದ ಕೆಳಗಡೆ ಕುಳಿತು ಚಂದ್ರಶೇಖರ ಯೋಚಿಸುತ್ತಿದ್ದ. ಎಲ್ಲರಂತೆ ತಾನೂ ಒಬ್ಬ ಮನುಷ್ಯನಾಗಬೇಕೆಂಬ ಹಂಬಲ. ಆದರೆ ಆತ ಹುಟ್ಟಿದ ಪರಿಸರಣ ಅಂತಹುದಾಗಿರಲಿಲ್ಲ. ಯಾವುದೋ ಅನಾಥಾಲಯದಲ್ಲಿ ಬೆಳೆದು ಬಂದ. ಅಲ್ಲಿನ ವಾತಾವರಣವೂ ಅವನನ್ನು ಕ್ರುದ್ಧಗೊಳಿಸಿತ್ತು. ಅಲ್ಲಿನ ವಿದ್ಯಾರ್ಥಿಗಳಿಗೋ ಕೇವಲ ತಂದೆತಾಯಿಗಳು ಅವರ ಪಾಲಿಗಿರಲಿಲ್ಲ ಅಷ್ಟೆ! ಹೊಲಸು ಮಾತುಗಳ ತಾಣ ಅವರ ನಾಲಗೆಗಳು. 'ಏನು ಚಂದ್ರನ್, ಯಾರ ಕುರಿತು ಚಿಂತೆ? ಪಾರ್ಕ್‌ನಲ್ಲಿ ಭೆಟ್ಟಿಯಾಗುತ್ತೀ ಎಂದಿದ್ದಿಯಾ? ನೋಡಪ್ಪಾ ಚಪ್ಪಲಿ ಮಾತ್ರ ಮುಖವನ್ನು ಚುಂಬಿಸೀತು ಜೋಕೆ' ಎನ್ನುತ್ತಿದ್ದ ಒಬ್ಬ ಗೆಳೆಯ.

'ಏನು ರಾಯರು, ಇವತ್ತು ಯಾರ ಮನೆಗೆ ದರ್ಶನ ಕೊಟ್ಟು ಬಂದಿರಿ? ಹಕ್ಕಿ ಕೈಗೆ ಬಂತೋ' ಎಂದು ಇನ್ನೊಬ್ಬ ದಿಕ್ಕುಗೆಡಿಸುತ್ತಿದ್ದ. ಛೆ! ಇಂತಹ ಕಸಂನಲ್ಲಿ ತಾನು ಬೆಳೆಯ ಬೇಕಾಗಿ ಬಂತೇ? ಅವರಿಗೂ ಅಕ್ಕ ತಂಗಿಯರಿಲ್ಲವೇ? ಇಲ್ಲ.... ಹಾಗಾಗಿರಲಾರದು....ಯಾವುದೋ ಸಂಕಷ್ಟ ಅವರ ಹೃದಯಗಳನ್ನು ಒತ್ತಿ ಈ ಮಾತುಗಳನ್ನು ಆಡಿಸುತಿದ್ದಿರಬೇಕು. ಒಂದು ದಿನ ಚಂದ್ರ ತನ್ನ ವಾತಾವರಣಕ್ಕೆ ಬೇಸತ್ತು ಕಾರ್ಖಾನೆಯಲ್ಲಿ ದುಡಿದು ಹಣ ಸಂಪಾದಿಸಿ ಕುಂದಾಪುರಕ್ಕೆ ಬಂದ. ಬರುವಾಗ ಏನೆಲ್ಲ ಆತಗೋಪುರಗಳು ಮಹಲಿನ ಮೇಲೆ ಮಹಲುಗಳು, ಮಹಡಿಯ ಮೇಲೆ ಮಹಡಿಗಳು. ಅವೆಲ್ಲ ನಿರ್ಧಕವಾಗಬೇಕೆ?

ಅನಾಥಾಶ್ರಮದಿಂದ ಬಿಡುಗಡೆ ಹೊಂದಿ ಕುಂದಾಪುರದಲ್ಲಿ ಶಾಲೆ ಸೇರಿದಾಗ ಕೆಲವು ದಿನಗಳೇನೋ ಆನಂದದಲ್ಲಿ ದಾಟಿ ಹೋದುವು. ಆದರೆ ಮನಸ್ಸಿನಲ್ಲಿ ಹುಟ್ಟಿದ ಭಾವನೆಗಳೆಲ್ಲ ಭ್ರಮೆ ಎನಿಸಿದಾಗ ಈ ಊರನ್ನು ಬಿಟ್ಟು ಬಿಡೋಣವೇ ಎಂದನ್ನಿಸಿತು; ಆ ಕಾಲದಲ್ಲಿ ಅವನ ಪಾಲಿಗೆ ಬಂದು ಒದಗಿದಳು ಉಮಾ, ಮಧುರವಾದ ಹೆಸರಿಗ ತಕ್ಕಂತೆ ಮೃದು ಭಾವ, ಗುಣ. ಅವಳು ಚಂದ್ರನಂತೆ ಕಷ್ಟ ಉಂಡವಳಲ್ಲ. ಹಾಗಿದ್ದರೆ ಅವಳ ಸ್ನೇಹದಿಂದ ಅವನಿಗೆ ಇನ್ನೊಂದು ಹೊರೆ ಹೆಚ್ಚಾಗುತಿತ್ತೋ ಏನೋ! ಅವಳನ್ನು ಕಂಡಾಗ ಅವನಿಗೆ ತನಗೂ ಒಬ್ಬ ಅಕ್ಕ ಹೀಗೇ ಇದ್ದಿದ್ದಳು ಎಂದನ್ನಿಸಿತು. ಅವಳನ್ನು ನೆನೆದಾಗಲೇ ಕಣ್ಣು ತುಂಬಿ ಬಂತು. ತಾನು ಅನಾಥಾಲಯಕ್ಕೆ ಸೇರಿದ ಕೆಲವು ವರುಷಗಳ ಅನಂತರ ವೃತ್ತ ಪತ್ರಿಕೆಯಲ್ಲಿ ಅವಳ ವಿಚಾರ ಓದಿದ್ದ. ರೈಲು ಕಂಬಿಯ ಮೇಲೆ ಛಿನ್ನಕೆಯಾಗಿದ್ದಳು ಅಕ್ಕ ಹತ್ಯೆ! ಆಕೆ ಬೇರಾರಲ್ಲ, ಚಂದ್ರುವಿನ ಅಕ್ಕ. ಜೀವನದಲ್ಲಿ ಬೇಸತ್ತು ಹಾಗೆ ಬಂದವಳಾಕೆ. ಕೊನೆಗೆ ಯಾರೂ ಗತಿ ಇಲ್ಲವೆಂದು ತಿಳಿದು ಚಿರಂತನವಾದ ಆನಂದವನ್ನು ಕೊಡುವ ಸ್ವರ್ಗಕ್ಕೆ ತನ್ನ ದೇಹವನ್ನು ಸಲ್ಲಿಸಿದ್ದಳು.

ಇಂದು ಉಮಾ! ಯಾರಿಗೂ ತಿಳಿಯದಂತೆ ಅವಳು ಬಂದು ಇವನನ್ನು "ಚಂದ್ರಾ" ಎಂದು ಕರೆದಾಗ ಯಾವುದಾದರೂ ಪೂರ್ವ ಜನ್ಮದ ಸಂಬಂಧವಿದೆಯೇ? ಎಂದೆನ್ನಿಸಿತು ಆತನಿಗೆ ಅವಳು ಇವನೊಡನೆ ಇನ್ನೇನನ್ನೂ ಹೇಳಲು ಬಯಸಲಿಲ್ಲ. ತಂದೆಯ ಕರುಣೆಯಿಂದ ತಿಂಗಳು ತಿಂಗಳಿಗೆ ಅವನಿಗೆ ಹಣ ಸಲ್ಲಿಸುತಿದ್ದಳು. ಅದು ತಾನು ಸಲ್ಲಿಸಲೇ ಬೇಕಾದ ಸೇವೆ ಎನ್ನುವಷ್ಟು ಭಾವ ಅವಳಲ್ಲಿ ನೆಲೆ ನಿಂತಿತ್ತು. ಒಮ್ಮೆ ಚಂದ್ರಶೇಖರ ಅವಳ ಮನೆಗೆ ಬಂದಿದ್ದ. ಆಕೆಯ ತಂದೆ ಅವಳಿಗೆ ಏನನ್ನೋ ಹೇಳುತಿದ್ದರು. ನಿಜ, ಆತನಿಗದು ಈಗಲೂ ನೆನಪಿದೆ. ಅದು "Deliverance, where is the deliverance to be bound? Our master has joyfully taken up this bonds of creation. He is bound with us all forever" ಈ ಶ್ರೀಮಂತರು ಹೀಗ ಹೇಳುವುದೇ ಎಂದು ಆತನಿಗನ್ನಿಸಿತ್ತು. ಆಗ ಅವಳು ಕೇಳಿದ್ದಳು 'ಚಂದ್ರಾ, ನಿಮಗೆ ಪುಸ್ತಕ ಓದುವ ಹುಚ್ಚಿಲ್ಲವೇ? ನೋಡಿ, ನಿಮಗೆ ಓದಲು ಮನಸ್ಸಿದ್ದರೆ ಕಾರಂತರ ಕಾದಂಬರಿಗಳಿವೆ. "ಚೋಮನ ದುಡಿ" ಓದಿದ್ದಿರೇನು? ಒಮ್ಮೆ ಓದಿ ನೋಡಿ. ನಮ್ಮಪ್ಪನಿಗೆ ಅವರ ಹಾಗೂ ರವೀಂದ್ರರ ಪುಸ್ತಕಗಳೆಂದರೆ ಭಗವದ್ಗೀತೆ ಇದ್ದ ಹಾಗೆ."

ಮನೆಗೆ ಬಂದು ಪುಸ್ತಕ ತೆರೆದು ಓದಲು ಕುಳಿತ. "ಅಬ್ಬಾ, ಕಾದಂಬರಿಕಾರರ ಪ್ರತಿಭೆಯೇ! ಹೊಲೆಯರ ನಿಜ ಜೀವನವನ್ನು ಇಷ್ಟು ಸ್ವೈಜವಾಗಿ ಬರೆಯ ಬೇಕಿದ್ದರೆ ಅವರೆಷ್ಟು ಅನುಭವಶಾಲಿಗಳು? ಹಾಗಾದರೆ ತಾನೊಬ್ಬನೇ ಈ ಜಗತ್ತಿನಲ್ಲಿ ಕಷ್ಟಪಟ್ಟವನಲ್ಲ. ಚೋಮನಂತಹವರೂ ಸಹಸ್ರ ಮಂದಿ ಇದ್ದಾರೆ. ಅದರಲ್ಲಿ, ತಂದೆ, ಮಗಳ ಹಾದರವನ್ನು ನೋಡಲಾಗದೆ ದುಡಿಯನ್ನು ಬಾರಿಸುತ್ತಾನೆ, ತನ್ನ ಹೃದಯದ ಡಮರು ನಿಲ್ಲುವ ತನಕವೂ ಬಾರಿಸುತ್ತಾನೆ. ಪಾಪ, ಆ ಬಡಪಾಯಿ ಮರ್ಯಾದೆಯನ್ನೇ ಚಿನ್ನವೆಂದು ಬಗೆದಿದ್ದ. ಆ ಮುದಿ ಎದೆಗೆ ಎಂಥ ಬರಸಿಡಿಲು ಬಡಿದಿರಬಹುದು? ಛೆ, ತಾನು ಮಾತ್ರ ತನ್ನ ಕಷ್ಟವನ್ನೇ ದೊಡ್ಡದೆಂದು ಎಣಿಸುತಿದ್ದೇನಲ್ಲ; ಏನೊಂದು ಹುಚ್ಚು ನನಗೆ!

ಧೀರಭಾವದಿಂದ ಅಂದು ಉಮೆಯ ಮನೆಯ ಬಾಗಿಲನ್ನು ಬಡಿದ. ಉಮಾ ಎಂದಿಗಿಂತ ಚೆನ್ನ ಕಂಡಳು ಪ್ರಾಯಶಃ ಪ್ರೀತಿಸಿದವರ ಕಣ್ಣಿಗೆ ಪ್ರೀತಿಗೆ ಭಾಜನವಾದವರು ಯಾವಾಗಲೂ ಸುಂದರವಾಗಿ ತೋರುತ್ತಿರಬೇಕು. ಹಚ್ಚಿಕೊಂಡಿದ್ದ ಪೌಡರ್ ಸೆಕೆಯ ಬೆವರಿನಿಂದಾಗಿ ಮುಖದ ಮೇಲೆ ಇಳಿಯುತಿದ್ದಾಗ ಅವನಿಗ ಅವಳು ಇನ್ನೂ ಚೆನ್ನ ಕಂಡಳು. 'ಉಮಾ, ಈಗೋ ಪುಸ್ತಕ' ಎಂದು ಅಧೀರ ಭಾವದಿಂದ ಅವಳಿಗೆ ಪುಸ್ತಕ ಕೊಡುತ್ತಿದ್ದಾಗಲೇ ಭ್ರಮರಮುಕರಂದ ಸವಿಯಾತು. ಅನ್ಯಾಯವಾಗಿ ಗುಡುಗು, ಸಿಡಿಲುಗಳೇ ಎಲ್ಲೆಲ್ಲೂ ಬಡಿಯಲಾರಂಭಿಸಿದುವು. ಇದು ಸಲ್ಲದ ಆಟ!

"ಚಂದ್ರಾ, ಏಕೆ ಪಥಭ್ರಾಂತನಾದೆ? ದಾರಿ ತಪ್ಪಿದೆಯಾ? ಉಂಡವರ ಮನೆಗೆ ಎರಡು ಬಗೆದೆಯಾ? 'ಚೋಮನ ದುಡಿ' ಓದಿ ನೀನು ತಿಳಿದುದೂ ಇಷ್ಟೇ ಏನು? ಕುಲೀನ ಮನೆತನದವರಿಗೆ–ಅದು ಹೋಗಲಿ ಮನುಷ್ಯ ಜಾತಿಗೇನೇ ಮರ್ಯಾದೆ ಮುಖ್ಯ ಚಂದ್ರಾ, ಏನು ಮಾಡಿಬಿಟ್ಟೆ?" ಎಂದು ಯಾರೋ ಹಿಂಬದಿಯಿಂದ ಕೂಗಿ ಕರೆದಂತಾಯ್ತು. ಆ ಗೊಂದಲದಲ್ಲಿ ಉಮೆಯ ಆ ಮಾತೂ ಕಿವಿಗೆ ಬೀಳಬೇಕೆ?

"ಚಂದ್ರಾ, ನಮ್ಮ ತಂದೆಗೆ ವರ್ಗವಾಯಿತು. ಇದೇ ನನ್ನ ನಿನ್ನ ಕೊನೆಯ ಭೇಟಿಯು ಉಡುಗೊರೆ' ಛೆ! ಅವಳೂ ಇದನ್ನು ಬಯಸಿದ್ದಳೇ? ಹಾವನ್ನು ತುಳಿದವರಂತೆ ಮಿಂಚಿನ ವೇಗದಿಂದ ಅಲ್ಲಿಂದ ಜಾಡಿಬಂದ. ಮರಗಿಡಗಳೂ, ಮನೆಮಾರುಗಳೂ, ಎಲ್ಲವೂ ದೂರವಾದುವು. ಉಮಾ ಎಂದೋ ದೂರ ಸಂದಳು. ಪಥಭ್ರಾಂತ ಏನಾದೆಯೋ!

'ನಿನ್ನ ಸ್ಥಾನ ಯಾವುದು ಚಂದ್ರಾ! ಎಲ್ಲಿಗೆ ನೀನು ಎಳೆದು ತಂದೆ?" "ನಾ.. ಈ ಗೊಂದಲ ದೂರ ತೊಲಗಿ ಹೋ... ಕಿರುಚಿ ಹೇಳಿದ ಚಂದ್ರಶೇಖರ. ಅವನಿಗೀಗ ಏಕಾಂತ ಬೇಕಿತ್ತು. ಎಲ್ಲಿಗೆ ತೆರಳಲಿ? ಯಾರನ್ನು ಆಶ್ರಯಿಸಲಿ? ತಾನೇಕೆ ಭ್ರಮಿತನಾದೆ? ಇದು ಸರಿಯೇ? ಒಂದೇ, ಎರಡೇ ಪ್ರಶ್ನೆಗಳು. ಪ್ರಶ್ನೆಗಳ ಅನಂತ ಚಕ್ರವ್ಯೂಹ. ಒಂದನ್ನೊಂದನ್ನು ಒಡೆಯುತ್ತ ಹೋಗಂತೆ ಏಳನೇ ಬಾಗಿಲು "ಅದೇ ಮರ್ಯಾದೆಯ ಪ್ರಶ್ನೆ" ಅವನನ್ನು ಕಾಡತೊಡಗಿತ್ತು. ಆ ಬಾಗಿಲನ್ನು ಒಡೆಯಲು ಮಾತ್ರ ಅವನಿಂದಾಗಲೇ ಇಲ್ಲ.

ಬಾಗಿದ ಮರದ ಕೆಳಗಡೆ ಚಂದ್ರಶೇಖರ ಭೂತ, ವರ್ತಮಾನ, ಭವಿಷ್ಯಗಳ ಬಗ್ಗೆ ಯೋಚಿಸುತ್ತಿದ್ದ. ತೀಡುತಿದ್ದ ತಂಗಾಳಿಯು ಕರಿಯ ಸಮೂಹವನ್ನೇ ಅವನ ಪಾಲಿಗೆ ತಂದಂತಿತ್ತು. ಜೀವನದಲ್ಲಿ ಇದು ತನಕ ಯಾರೂ ಮಾಡದ ತಪ್ಪನ್ನು ತಾನು ಮಾಡಿದ್ದೇನೆ. ಅದನ್ನು ಕ್ಷಮಿಸುವವರು ಯಾರೂ ಇಲ್ಲವೇ? ಒಂದು ಕಾರ್ಯ ಮಾಡುವಾಗ ವಿವೇಕ ಬೇಡವೇ? ತನ್ನಿಂದ ಅಕ್ಷಮ್ಯ ಅಪರಾಧವಾಯಿತು. ಬಿಡುಗಡೆ ಬೇಕು ತನಗೀಗ. ಪರಿಚಯವಿದ್ದ ಯಾವುದೋ ಅಂಗಡಿಗೆ ಯಾರೋ ತನ್ನನ್ನು ಕರೆದುಕೊಂಡು ಹೋದಂತೆ ಭಾಸವಾಯಿತು. ಏನನ್ನೋ ತೆಗೆದುಕೊಂಡ. ನದಿಯ ಬಳಿ ಯಾರೋ ತಂದು ಬಿಟ್ಟಂತಾಯ್ತು. ಏನೋ ತಿನ್ನ ತೊಡಗಿದ. ಜಗತ್ತು ಮರೆಯಿತು.

"ಹೇ ಪಥಭ್ರಾಂತ, ನಿನ್ನ ಕೆಲಸವಿನ್ನೂ ಮುಗಿದಿಲ್ಲ. ನನ್ನೊಡನೆ ಬಾ, ನಿನ್ನನ್ನು ನಾನು ಕರೆದೊಯ್ಯುತ್ತೇನೆ. ಚಿಂತಿಸಬೇಡ, ನಿನ್ನ ಕೈ ನಾನು ಹಿಡಿದಿದ್ದೇನೆ. ದುರಂತದ ಕೈಯನ್ನು ಆನಂದವು ಬಂದು ಹಿಡಿದಿದೆ ಎಂದು ತಿಳಿ!" ಚಂದ್ರು ಆ ಮಾಲಿನಲ್ಲಿ ಮೋಡಗಳ ಮೆಟ್ಟಿಲುಗಳನ್ನು ಏರುತ್ತ ಏರುತ್ತ ಹೋದ. ಸ್ವರ್ಣ ಅಂಚಿನ ನಭಪ್ರಾಂತ. ಚಂದ್ರತಾರೆಗಳಿರುವ ರಾಜ್ಯ ಬಾ, ಕಥ ಬ್ರಹ್ಮ, ನಾನು ನಿನ್ನನ್ನು ತಲುಪಿಸುತ್ತೇನೆ' ಎಂದು ಯಾವುದೋ ನಿರಾಕಾರ ದೇಹವೊಂದು ಅವನನ್ನು ಎಲ್ಲಿಗೋ ಕೊಂಡೊಯ್ದಿತು. ಆ ಆದಿ ಅಂತ್ಯರಹಿತವಾದ ದೇಹವನ್ನು ಚಂದ್ರ ಬೆರಗುಗಣ್ಣುಗಳಿಂದ ನೋಡುತ್ತಲೇ ನಿಂತ. ಆದರೂ, ಇನ್ನೂ ಆತ ನೋಡುತ್ತಿದ್ದಾನೆ.

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ

ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ.

ಶ್ರೀ ಕೆ. ಕೆ. ಶೆಟ್ಟಿ ಎಂ.ಎಲ್.ಸಿ. ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಮೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲನ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೋ, ಉಡುಪಿ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ: ⋯

ಪಿ. ಎಲ್. ೪೮೦ ಯೋಜನೆಯನ್ವಯ ಭಾರತ ಕ್ಕಾಗಮಿಸುತ್ತಿರುವ ಆಹಾರ ಧಾನ್ಯ ವಿತರಣೆಯಾಗುತ್ತಿದೆ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೩	೨೨—೬—೧೯೬೭	No. 43

ವಚನ ಸುಧೆ

ಸತ್ಯಂ ರೂಪಂ ಶ್ರುತಂ ವಿದ್ಯಾ
ಕೌಲ್ಯಂ ಶೀಲಂ ಬಲಂ ಧನಂ
ಶೌರ್ಯಂ ಚ ಚಿತ್ರಭಾಷ್ಯಂ ಚ
ದ ಶೇಮೇ ಸ್ವರ್ಗಯೋನಯ:||

ಸತ್ಯ, ವಿನಯ, ಶಾಸ್ತ್ರಜ್ಞಾನ, ವಿದ್ಯೆ, ಕುಲೀನತೆ, ಶೀಲ, ಬಲ, ಧನ, ಶೂರತೆ, ಮತ್ತು ಚಮತ್ಕಾರದಿಂದ ಕೂಡಿದ ಮಾತು ಇವು ಸ್ವರ್ಗಸಾಧನಗಳು.

ನಮ್ಮ ಚೀನಾ ನೀತಿ

ಮಧ್ಯಪೂರ್ವದಲ್ಲಿನ ಯುದ್ಧಜ್ವಾಲೆ ಹೇಗೋ ಒಮ್ಮೆಗೆ ಕೊನೆಗೊಂಡಿತು. ಇನ್ನುಳಿದಿರುವುದು ಇಸ್ರಾಯೇಲ್ ತಾನು ವಶಪಡಿಸಿಕೊಂಡಿರುವ ಅರಬ ದೇಶವನ್ನು ಬಿಟ್ಟುಕೊಟ್ಟು ಉಭಯ ಪಕ್ಷೀಯರೂ ಶಾಶ್ವತ ನೆಲೆಯಲ್ಲಿ ಸಂಧಾನಕ್ಕೆ ಬರುವುದು—ಇದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವೇ ಇಲ್ಲ. ಆದರೂ ಯುದ್ಧ ಸ್ತಂಭನಗೊಂಡುದರಿಂದ ನಾವು ಸ್ವಲ್ಪವಾದರೂ ತೃಪ್ತರಾಗಬಹುದು. ಇದೇ ಹೊತ್ತಿನಲ್ಲಿ ಚೀನಾ—ಭಾರತಗಳ ನಡುವಣ ವಿರಸಕ್ಕೆ ಹೆಚ್ಚಿನ ಕಳೆ ಬಂದಿದೆ. ರಾಜಕೀಯ ಸ್ಥಿತ್ಯಂತರಗಳನ್ನು ದುರುಪಯೋಗಪಡಿಸುವುದು ಕೆಂಪು ಚೀನಾದ ಅಭ್ಯಾಸ. ಪಾಕಿಸ್ತಾನದೊಂದಿಗೆ ನಮ್ಮ ಹೋರಾಟ ನಡೆಯುತಿದ್ದ ವೇಳೆ ಕೆಲವು ಆಡುಗಳ ಹೆಸರಲ್ಲಿ ಅಲ್ಟಿಮೇಟಂ ನೀಡಿದ್ದನ್ನೂ ಸ್ಮರಿಸಬಹುದು. ಭಾರತೀಯ ರಾಯಭಾರಿ ಕಛೇರಿಯ ರಘುನಾಥ ಮತ್ತು ವಿಜಯರ ಕೊರಳಿಗೆ ಆರೋಪದ ಮಾಲೆಯನ್ನೇ ಕಟ್ಟಿ, ಅವರನ್ನು ಅಮಾನುಷವಾಗಿ ಕಂಡ, ಪೀಡಿಸಿ, ನೋಯಿಸಿ ಕಾಡಿದರು ಚೀನೀಯ ಸರಕಾರ ಮತ್ತು ಅವರ ರೆಡ್‌ಗಾರ್ಡುಗಳು. ಒಂದು ದೇಶದ ರಾಯಭಾರಿ ಕಛೇರಿಯ ಕಾರ್ಯಕರ್ತರನ್ನು ಎಷ್ಟು ದುಷ್ಟವಾಗಿ, ಎಷ್ಟು ಹೀನವಾಗಿ, ಎಷ್ಟು ಪಾಶವಿಕವಾಗಿ ಕಾಣುವುದ ಸಾಧ್ಯವೋ ಅಷ್ಟೂ ಬಗೆಯ ದೌರ್ಜನ್ಯವನ್ನು ಚೀನವು ಭಾರತೀಯ ರಾಯಭಾರಿ ಕಛೇರಿಯ ಮೇಲೆ ಕಾರಿತೃಪ್ತಿಪಡೆಯಿತು. ಚೀನಾ ಬಿಟ್ಟು ಹೋಗಬೇಕೆಂಬ ಆಜ್ಞೆಯನ್ನು ಈ ಸಿಬ್ಬಂದಿಯವನ್ನು ಮನ್ನಿಸಿದರು. ಹಾಂಗ್‌ಕಾಂಗ್ ಗಾಗಿ ಅವರು ಭಾರತಕ್ಕೆ ಮರಳಿದರು ನಿಜ. ಪೀಕಿಂಗ್ ವೀರ ರಘುನಾಥರನ್ನು ಭಾರತೀಯ ಜನತೆ ಆದರದಿಂದ ಬರಮಾಡಿಕೊಂಡಿತು. ಅವರ ನಿಷ್ಠೆ—ತಾಳ್ಮೆ—ಆತ್ಮಶಕ್ತಿಗಳನ್ನು ಮೆಚ್ಚಿಕೊಂಡಿತು.

ಈ ಘಟನೆ ಭಾರತೀಯ ರಾಜಕಾರಣದಲ್ಲಿ ದೊಡ್ಡ ಕೋಲಾಹಲವನ್ನು ಹುಟ್ಟಿಸಿದೆ. ಪೀಕಿಂಗ್ ಕ್ರಮಕ್ಕೆ ಪ್ರತಿಕ್ರಮವಾಗಿ ನವದೆಹಲಿಯೂ ಇಲ್ಲಿನ ಪೀಕಿಂಗ್ ರಾಯಭಾರಿ ಕಛೇರಿಯ ಕಾರ್ಯಕರ್ತರ ಮೇಲೆ ಸರ್ಪಗಾವಲು ಹಾಕಿದೆ. ದೇಶಬಿಟ್ಟು ತೆರಳುವಂತೆಯೂ ಕೆಲವರಿಗೆ ಆಜ್ಞೆಮಾಡಿದೆ. ಆದರೆ ಚೀನೀ ರಾಯಭಾರಿ ಕಛೇರಿಯು ಭಾರತದ ಆಜ್ಞೆಯನ್ನು ಮನ್ನಿಸದೆ ೫೦ ಕೋಟಿ ಭಾರತೀಯರ ಸರಕಾರಕ್ಕೆ ಅಪಮಾನವನ್ನೂ ಮಾಡಿದೆ. ಇದಕ್ಕೆ ಸೂಕ್ತ ಕ್ರಮವನ್ನೂ ಮಾಡಿದೆ. ಇದಕ್ಕೆ ಸೂಕ್ತ ಕ್ರಮವನ್ನು ರಾಜ್ಯಕೀಯ ವಲಯದಲ್ಲಿ ಕೈಗೊಳ್ಳಲಾಗುತ್ತಿದೆ. ಆದರೆ, ಕೆಂಪು ಚೀನೀಯರಂತೆ ಅವರ ಮೇಲೆ ಅಮಾನುಷ ದೌರ್ಜನ್ಯ ತೋರಿಸುವುದಿಲ್ಲ. ಅಷ್ಟು ಅಸಂಸ್ಕೃತರೂ ಅನಾಗರಿಕರ- ಭಾರತೀಯರಲ್ಲ; ರಾಜ್ಯಕೀಯ ದಿವಾಳಿ ಖೋರರಲ್ಲ. ಆದರೂ ಚೀನೀಯರ ಕೃತಿಗಳಿಂದ ಭಾರತದಲ್ಲಿ ತೀವ್ರ ಪ್ರತಿಕ್ರಿಯೆಗಳು ಗೋಚರವಾಗುತ್ತಿವೆ. ಭಾರತವು ಚೀನದೊಳಗಿನ ತನ್ನ ರಾಯಭಾರಿ ಸಂಪರ್ಕವನ್ನು ಕಡಿದುಕೊಳ್ಳಬೇಕು ಎಂಬುದು ಒಂದಾದರೆ, ಕೆಂಪು ಚೀನಾವನ್ನು ಸರಿದಾರಿಗೆ ತರಬಹುದೆನ್ನುವ ಸಪ್ನ ನೀತಿಯನ್ನು ಬಿಟ್ಟುಬಿಡಬೇಕು ಎಂಬುದು ಇನ್ನೊಂದು. ವಿಶ್ವದ ವಿಶಾಲ ದೇಶಗಳಲ್ಲಿ ಒಂದಾದ ಚೀನಾವನ್ನು ಹೇಗಾದರೂ ಮಾಡಿ ಸಂಯುಕ್ತರಾಷ್ಟ್ರ ಸಂಘದ ಸದಸ್ಯನಾಗಿ ಸೇರಿಸುವುದಕ್ಕೆ ಭಾರತ ಬೆಂಬಲ ನೀಡುತ್ತಲೇ ಬಂದಿದೆ, ಒಂದು ವೇಳೆ ಇದು ಸಾಧ್ಯವಾದರೆ ಚೀನಾದ ಅವಿಧೇಯತೆಗೊಂದು ಅಂಕುಶ ಹಾಕಿದಂತೆ ಎಂದೂ, ಇದರಿಂದ ಕಾದಾಟಕ್ಕೆಡೆಯಾಗುವ ಸಾಧ್ಯತೆಯಿದೆಯೆಂದೂ ಹಿಂದಿನ ಪ್ರಧಾನಿ ಜವಾಹರಲಾಲರ ನೀತಿ—ಇದನ್ನೇ ಇಂದೂ ನಾವು ಅನುಸರಿಸುತಿದ್ದೇವೆ. ಚೀನೀಯ ಇಂದಿನ ದುರ್ನೀತಿಯಿಂದ ನೊಂದ ಸಂಸತ್ತು ಇದು ನೆನಸಾಗದ ಸುಂದರ ಸ್ವಪ್ನವೆಂದು ವರ್ಣಿಸಿತು. ಚೀನಾದೊಂದಿಗಿನ ರಾಜ ತಾಂತ್ರಿಕ ಸಂಬಂಧವನ್ನು ನಾವು ಕಡಿದುಕೊಂಡ್ರೆ, ನಮಗೇನೂ ಬಾಧಕವಿಲ್ಲವೆಂದೂ ಸದಸ್ಯರು ವಾದಿಸಿದರು. ಜಗತ್ತಿನ ಅನೇಕ ರಾಷ್ಟ್ರಗಳು ಚೀನಾದೊಂದಿಗೆ ರಾಜ್ಯಕೀಯ ಸಂಬಂಧವಿರಿಸಿಲ್ಲ—ಕೆಲವರಿಗೆ ಕುಮಿಟಾಂಗ್ ಚೀನವೇ ಬೃಹತ್ತಾಗಿದೆ—ವಾಣಿಜ್ಯ ಸಂಬಂಧವನ್ನೂ ಹೊಂದಿರುವುದಿಲ್ಲ. ಭಾರತವು ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಂಡ ಮಾತ್ರಕ್ಕೆ ಕೆಂಪು ಚೀನಾವು ಭಾರತವನ್ನು ಮತ್ತೆ ಆಕ್ರಮಣ ಮಾಡುವ ಸಂಭವ ಹೆಚ್ಚಿದೆಯೆಂಬುದರಲ್ಲಿ ಸ್ವಲ್ಪಾಂಶ ಸತ್ಯವಿದೆ. ಆದರೆ ಭಾರತದೊಡನೆ ಚೀನೀ ಸರಕಾರವು ಮೈತ್ರಿಯಿಂದಿರಬೇಕೆಂದು ಎಂದೂ ಹಾರ್ದಿಕವಾಗಿ ಬಯಸುತ್ತಿಲ್ಲ; ಇದು ಕಂಡಿತ. ಆಡುಗಳ ಅಪಹರಣದ ಮೇಲೆ ಪ್ರತಿ ನೋಟೀಸು ನೀಡಿದ ಚೀನಾ, ಭಾರತೀಯ ರಾಯಭಾರಿ ಕಛೇರಿಯನ್ನು ಮುತ್ತಿಗೆ ಹಾಕಿ, ನೌಕರರನ್ನು ಹಿಂಸೆಗೆ ಗುರಿಪಡಿಸಿದ ಚೀನಾ ಏನು ಮೈತ್ರಿಯನ್ನು ಬಯಸೀತು?

ಚೀನಾದ ಈ ಚಿತ್ರಹಿಂಸೆಗೊಂದು ಅರ್ಥವಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮಧ್ಯ ಪ್ರಾಚ್ಯದ ಸಮಸ್ಯೆಗು ಪರಿಹಾರದಲ್ಲಿ ಭಾರತವು ಮಹತ್ವದ ಪಾತ್ರ ವಹಿಸುತ್ತಿದೆ. ಅದು ಯಶಗಳಿಸಲಿ, ಬಿಡಲಿ, ಆ ಮಾತು ಬೇರೆ. ಭಾರತವು ಮಂಡಿಸಿದ ನಾಲ್ಕಂಶಗಳ ಸಲಹೆಗಳು ಅರಬ ರಾಷ್ಟ್ರಗಳಿಗೆ ಅನುಕೂಲವಾಗುವಂತಿವೆ. ಅರಬರಿಗೆ ಬೆಂಬಲ ನೀಡಿ ಮೊದಲೇ ಅವರ ಮೆಚ್ಚುಗೆ ಪಡೆದ ಭಾರತವನ್ನು ಈಗ ಅರಬರು ಮತ್ತಷ್ಟು ವಿಶ್ವಾಸಕ್ಕೆ ತಂದುಕೊಂಡರೆ ಅಸಹಜವೇನೂ ಇಲ್ಲ. ಹೀಗಾದಲ್ಲಿ, ತನ್ನ ರಾಜ್ಯಕೀಯ ಬೇಳೆ ಮಧ್ಯ ಪೂರ್ವದ ಅರಬ ಜಗತ್ತಿನಲ್ಲಿ ಸುಲಭವಾಗಿ ಬೇಯುವುದಿಲ್ಲವೆಂದು ತಿಳಿದು ಕೆಂಪು ಚೀನಾ ಭಾರತವನ್ನೆ ಅವಿಶ್ವಸ್ಥ ರಾಷ್ಟ್ರವೆಂದು ತೋರಿಸಲು ಸೊಂಟ ಕಟ್ಟಿದಂತಿದೆ. ಭಾರತವಿಂದು ಮಾಡಬೇಕಾದುದೇನು? ಚೀನಾದೊಂದಿಗಿನ ತನ್ನ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳಬೇಕು—ಬೇಡ ಎಂಬಂತಹ ನಿರ್ಣಯ ಮಹತ್ವಪೂರ್ಣವಾದುದು. ತುಂಬ ಯೋಚಿಸಿಯೇ ತೆಗೆದುಕೊಳ್ಳಬೇಕಾದುದು. ವಿದೇಶ ಸಚಿವ ಛಗಲಾರು ಈ ಮಾತನ್ನೇ ಅಂದು ದು ಉಚಿತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಅವಸರದಿಂದ ಮುಂದುವರಿಯದೆ, ಭವಿಷ್ಯವನ್ನು ಸಂಪೂರ್ಣ ಕಡೆಗಣಿಸದೆ, ದೇಶದ ರಕ್ಷಣೆ ಗೌರವ—ಪ್ರತಿಷ್ಠೆಗಳಿಗೆ ಕುಂದು ತರದಂತೆ ನಿರ್ಣಯಕ್ಕೆ ಬರುವುದು ಅಗತ್ಯವಿದೆ. ಕೆಂಪು ಚೀನಾದ ಬಗ್ಗೆ ಭಾರತದ ನಿಲುವೇನು—ಎಂಬುದನ್ನು ಸರಕಾರವು ಜನಾಭಿಪ್ರಾಯವನ್ನು ಸಂಘಟಿಸಿ ನಿರ್ಧಾರಕ್ಕೆ ಬರುವ ಕಾಲವೀಗ ಸನ್ನಿಹಿತವಾಗಿದೆ.

ರಾಗದ್ವೇಷ ದೂರೀಕರಣ

ರಾಜ್ಯದ ಆಹಾರಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಆರ್ಯ ಸೇವಾ ಆಶ್ರಮದ ಆಶ್ರಯದಲ್ಲಿ ಸಸ್ಯಾಹಾರಿಗಳ ಸಂಘದ ಸ್ಥಾಪನೆಯ ಕುರಿತು ಏರ್ಪಡಿಸಲಾಗಿದ್ದ ನಾಗರಿಕರ ಸಭೆಯಲ್ಲಿ ಮಾತನಾಡುತ್ತ ಶಾಕಾಹಾರ ಸೇವನೆಯಿಂದ ಮಾನವನಲ್ಲಿ ಮನೋನಿಗ್ರಹಶಕ್ತಿಯು ಬರುವುದೆಂದೂ ಇದರಿಂದ ರಾಗದ್ವೇಷಗಳನ್ನು ಅಡಿಮೆಗೊಳಿಸಬಹುದೆಂದೂ ಸಾತ್ವಿಕ ಆಹಾರ ಸೇವನೆಯಿಂದ ಮನುಷ್ಯನ ಮನಸ್ಸು ಶುದ್ಧ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

'ಮುಂಬಯಿಯ ಕ್ರಿಶ್ಚಿಯನ್ ಕಾನ್ವೆಂಟೊಂದರಲ್ಲಿ ಹಿಂದೂ ಹುಡುಗಿಯರೂ ಕುಂಕುಮ ಇಡಬಾರದು, ಬಳೆ ತೊಡಬಾರದು ಎಂಬ ಆಜ್ಞೆಯಾಗಿದೆಯಂತೆ''

"ಅವರ ಆಜ್ಞೆ ಪಾಲಿಸುವುದಕ್ಕಾಗಿಯೇ ನಮ್ಮ ಹುಡುಗಿಯರು ಕಾನ್ವೆಂಟು ಸೇರುವುದಲ್ಲವೆ?

ಗೇಹರಾಜ್ಯದಲ್ಲಿ

ಸ್ವಾವಲಂಬನ ಮತ್ತು ಸರ್ವೋದಯ

'ಹೌದ್ರೀ, ಇದೇನೂಂತ?'

'ಯಾವುದು?'

'ಇಷ್ಟು ಇಸ್ರಾಯೇಲ್—ಅರಬರ ಜಗಳ ಒಮ್ಮೆಗೆ ನಿಂತಿತಾದ್ರೂ, ಅದರ ಬದಲಿಗೆ ಚೀನಾ–ಭಾರತಗಳ ನಡುವೆ 'ವೈಮನಸ್ಸು' ಹೆಚ್ಚುತ್ತಿದೆಯಲ್ಲಾ....'

'ಏನನ್ನುತ್ತೀಯೋ? ಅರಬ ಜಗಳಕ್ಕೂ ಚೀನೀಯರ ಜೋಸ್ಗೂ ಏನು ಸಂಬಂಧ?'

'ಸಂಬಂಧವೇನೂ ಇಲ್ಲಾನ್ನಿ. ಚೀನೀ ಸರಕಾರವು ಭಾರತೀಯ ರಾಯಭಾರಿಯೊಡನೆ ತೋರಿಸಿದ ವರ್ತನೆ ಅಮಾನುಷ ಮಾತ್ರವಲ್ಲ; ಅಸಭ್ಯ ಮತ್ತು ಅನಾಗರಿಕವಲ್ಲವೆ?'

'ಹ್ಞೂಂ....ಆದುದರಿಂದಲೇ ನಾವು ಆ ಆಜ್ಞೆಯನ್ನು ಶಿರಸಾವಹಿಸಲು ಮುಂದಾಗುತ್ತೇವೆ....'

"ಅವರ ರಾಯಭಾರಿ ಮಾತ್ರ ಭಾರತ ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ ಮುಖಕ್ಕೆ ಮಸಿ ಬಳೆದದ್ದು ಮಾತ್ರವಲ್ಲ, ಪಾಕಿಸ್ತಾನಿ ರಾಯಭಾರಿ ಕಚೇರಿಯ ನೆರವಿನಿಂದ ಪರಾರಿಯಾದವನೆಂದೂ ಸುದ್ದಿ....ಅಲ್ಲ, ನಮ್ಮ ಅಸಹಾಯಕತೆ ಎಲ್ಲಿಗೆ ಬಂತೂಂತ....'

"ನೋಡು, ಲೋಕದ ಕ್ರಮವೇ ಹಾಗೆ. ದುಡಿಯುವವನು ದುಡಿದೇ ಜೀವ ಬಿಡುತ್ತಾನೆ. ಸೋಮಾರಿ ಸೋಮಾರಿಯಾಗಿಯೇ ವೈಭವದಿಂದ ಮೆರೆಯುತ್ತಾನೆ. ಆಜ್ಞಾಪಾಲಕನ ಮೇಲೆ ಒಂದರ ಮೇಲೊಂದು ಬಲಾತ್ಕಾರದ ಆಜ್ಞೆ ಬರುತ್ತದೆ; ಅದನ್ನು ಮೀರುವವನು ಆಗ ನಗುತ್ತಿರುತ್ತಾನೆ...."

"ಅಲ್ರೀ, ಕೆಂಪು ಚೀನಾವು ಈ ಬಗೆಯ ಕುತಂತ್ರ ಹೂಡಲು ಈ ಅವಧಿಯನ್ನೇ ಏಕೆ ಆರಿಸಿತೂಂತ?'

'ಏಕೇಂತ ಹೇಗೆ ಹೇಳುವುದು? ಏನಾದರೊಂದು ತಂಟೆ ಅದಕ್ಕೆ ಬೇಕೇ ಬೇಕು. ಸೆಕೆಗಾಲ ಆರಂಭವಾಗಿದೆ ನೋಡು, ಹಿಮಾಲಯದ ಹಿಮವೂ ಕರಗುತ್ತಾ ಇದೆ. ಮತ್ತೆ ಆಕ್ರಮಣ ಮಾಡಲು ಕಾಲು ಕೆದರುತ್ತಿರುವುದು ಇದ್ದರೂ ಇರಬಹುದು....'

"ಹ್ಞೂಂ....ಆದ್ರೆ ಮೇಲೆ, ದಲ್ಯಾಲಾಮಾರಿಗೆ ರಾಜನೈತಿಕ ನೆರವು ನೀಡುವುದೂ ಭಾರತ ಸರಕಾರದ ಪರಿಶೀಲನೆಯಲ್ಲಿದೆಯಂತೆ....'

'ಸರೀನ್ನು. ನಮ್ಮ ಸರಕಾರದ ಪರಿಶೀಲನೆಯಲ್ಲಿ ಏನಿದೆ ಏನಿಲ್ಲ ಎನ್ನುವುದು ಅದಕ್ಕೂ ಗೊತ್ತಿಲ್ಲಾನ್ನು. ನೋಡು, ಮೊನ್ನೆ ಶಿಕ್ಷಣ ಮಂತ್ರಿ ಹೇಳಿದರು—ಶಿಕ್ಷಣ ಆಯೋಗದ ಅನೇಕ ಶಿಫಾರಸುಗಳನ್ನು ಸರಕಾರ ಅಂಗೀಕರಿಸಿದೆಯಂತೆ. ಆದರಲ್ಲಿ ಶಿಕ್ಷಕರ ವೇತನ ಹೆಚ್ಚಿಸ ಬೇಕೆಂಬುದೂ ಒಂದಂತೆ. ಆದರೆ, ಇದಕ್ಕಾಗಿ ಹಣವನ್ನೆಲ್ಲಿಂದ ತರಬೇಕು ಎಂಬುದನ್ನೂ ಸರಕಾರ ಪರಿಶೀಲಿಸುತ್ತಿದೆಯಂತೆ...."

'ಅದೇ ನೋಡಿ ತಮಾಷೆ, ಎಂಮ್ಮೆಲ್ಲೆ ಎಂಪಿಗಳ ಸಾರಿಗೆ—ಭತ್ತೆ ಏರಿಸಲು ಹಣವೆಲ್ಲಿಂದ ಬರುತ್ತದೆ ಎಂದು ಅವರಿಗೆ ಶಿವ ಪ್ರೇರಣೆಯಾಗುತ್ತದೆ. ಆದರೆ, ದೇಶದ ಭಾವಿಪ್ರಜಾಪತಿಗಳಂದ ಶಿಕ್ಷಕರಿಗೆ ನೀಡಲು ಮಾತ್ರ ಹಣವಿರುವುದಿಲ್ಲ....ಅವರು ಪರಿಶೀಲಿಸಿ ಸಾಕ್ಷಿ ಅನ್ನ ಬೇಕಾದರೆ ಒಂದು ಪಂಚವಾರ್ಷಿಕ ಯೋಜನೆಯೇ ಕಳೆಯ ಬೇಕಾಗ ಬಹುದು..."

'ಆದುದರಿಂದಲೇ ನೋಡು, ಇಂದು ಶಿಕ್ಷಕ ವೃತ್ತಿಯೆಂಬುದು ಅನಾಕರ್ಷಕ ವೃತ್ತಿಯಾಗಿದೆ. ಈ ವೃತ್ತಿಯನ್ನೇ ಶಾಶ್ವತವಾಗಿ ಮುಂದುವರಿಸ ಬಯಸುವವರು, ತರಬೇತಿ ಪಡೆದವರು ಬೆರಳೆಣಿಕೆಯಷ್ಟು ಮಾತ್ರ. ಶಿಕ್ಷಣದ ಮಹತ್ವವನ್ನೂ ಅದರ ಹಿರಿಮೆಯನ್ನೂ ಅರಿಯದೆ ಉಪಜೀವನಕ್ಕಾಗಿಯೇ ಈ ವೃತ್ತಿಯನ್ನು ಅವಲಂಬಿಸುವವರು ಏನು ತಾನೇ ಮಾಡಿಯಾರು?'

"ಇಲ್ಲಿ ಬಿಡಿ, ಇದು ಇಂದು ನಿನ್ನಿನ ಸಮಸ್ಯೆಯಲ್ಲ. ಆರಂಭದಿಂದಲೂ ಇದ್ದದ್ದೇ ಅನ್ನಿ...'

'ಅಂದರೆ, ಕೊನೆಯವರೆಗೂ ಇರುವಂತಹದ್ದು ಅನ್ನು...'

"ಅಲ್ರಿ, ಸರಿಯಾಗಿ ಉಣ್ಣೋಕೂ ತಿನ್ನೋಕೂ, ಉಡೋಕೂ ಇಲ್ಲದ ದೇಶದಲ್ಲಿ ವಿದ್ಯೆಯತ್ತ ಪೂರ್ಣಗಮನ ಹರಿಸೋದು ಹೇಗೆ? ಬೇಡಿಯಾದರೂ ಜೀವ ಉಳಿಸಬೇಕಲ್ಲ? ಮೊದ್ಲಿಗೆ?'

'ಅದಕ್ಕೇ ಅಂದದ್ದು. ಅನ್ನ ಒದಗಿಸುವ ತಾಕತ್ತೇ ನಮ್ಮಲ್ಲಿಲ್ಲವೆಂದ ಮೇಲೆ ವಿದ್ಯೆ ಕೊಡೋ ಗೋಜಿಗೆ ಹೋದದ್ದು ಯಾಕೇಂತ?'

'ಅಂದ್ರೆ, ಏನನ್ನುತ್ತೀರಾ ನೀವು? ವಿದ್ಯೆ ಕೊಡೋದೂ ತಪ್ಪೆ?'

"ತಪ್ಪೂಂತ ನಾನು ಅನ್ನಲಿಲ್ಲ. ಆದರೆ, ಐಡ್ಡಾಯ ಶಿಕ್ಷಣ, ಧರ್ಮಾರ್ಥ ಶಿಕ್ಷಣದ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಏಕದಂ ಬೆಳೆಸಿಕೊಂಡರೆ ಏನು ಪ್ರಯೋಜನ?'

"ಅಂದ್ರೆ ಏನಾಯ್ತು ಈಗ?'

"ಆಗೋದೇನು? ಶಿಕ್ಷಣ ಶಾಖೆಯ ವೆಚ್ಚ ಮಿತಿ ಮೀರಿದೆ—ಅನುತ್ತೀರ್ಣತೆಯ ಪ್ರಮಾಣ ಹೆಚ್ಚುತ್ತಿದೆ— ಜನತೆಯ ಹಣ ಅನಾವ್ಯಯವಾಗುತ್ತಿದೆ. ಜನತೆಗೆ ಯಾವ ಪ್ರಯೋಜನವನ್ನೂ ನೀಡದೆ ಬೀದಿಬಸವ—ಬಸವಿಯರಾಗಿ ತಿರುಗುತ್ತಿರುವ ಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆ" 'ಭೀಕರವಾಗುತ್ತಿದೆ..."

"ಅದಕ್ಕೆ ಏನಂತೀರಾ ನೀವು?'

'ಅಲ್ವೇ, ನಾನು ನೀನು ಹೇಳಿದ ಮಾತನ್ನು ಯಾರು ಕೇಳ್ತಾರೆ?'

"ಬೇರೆ ಯಾರೂ ಬೇಡ. ನಾನು ಕೇಳ್ತೀನಲ್ಲಾ...."

"ಅಯ್ಯೋ, ನಿನ್ನದೊಂದ.... ನೀನು ಕೇಳದಿದ್ರೆ ಏನು?'

'ಅಂದ್ರೆ ಅಷ್ಟೂ ತಿರಸ್ಕಾರ ಅಲ್ವೇ? ಈ ಗಂಡು ಜಾತಿಯ ಗುಣವೇ ಹಾಗೆ.. ಕ್ಕೆ ಹಿಡಿಯುವ ತನಕ ... ಆಹಹ....'

"ಏನು! ಆ ವೇಳೆ..."

"ಮತ್ತೆ ಹೆಣ್ಣು ಎಂಥವಳು?'

'ಹೌದು, ವಿದೇಶದಲ್ಲಿಯಾಗುತಿದ್ರೆ ಯಾವಾಗ್ಲೋ ಡೈವರ್ಸ್ ಆಗಿ ಹೋಗ್ತಿತ್ತು..."

'ಭಾರೀ ಚಲೋದು. ನಾವೂ ಈಗ ಅವರನ್ನೇ ಅನುಕರಿಸುತ್ತೇವಲ್ಲಾ? ಇಲ್ಲಿಯೂ ಕಾನೂನು ಪ್ರಕಾರ ಅದಕ್ಕೆ ಅವಕಾಶವಿದೆ ತಾನೆ?'

"ಇಲ್ಲ...ಅದ್ರೆ, ಇದು ಲೈಂಗಿಕ ಶಿಕ್ಷೆಯೇ ಮೋಕ್ಷವೆಂದು ನಂಬಿದ ಅಮೆರಿಕೆಯಲ್ಲ, ಇಂಗ್ಲಂಡು ಅಲ್ಲ..."

"ಅದು ಸರೀನ್ನು...ಇದು ಪವಿತ್ರ ಭಾರತ ಭೂಮಿ, ಪರಮಪವಿತ್ರ ಭಾರತಾಂಬೆಯ ನೆಲ....'

"ನಮ್ಮದು ಇಷ್ಟರಲ್ಲೇ ಆಯ್ತು, ಎಲ್ಲ ಗತಕಾಲದ ಸುಂದರ ಸ್ವಪ್ನ. ಒಂದೂ ನನಸಾಗಲೊಲ್ಲದು....'

"ಅಲ್ವೆ, ಅಷ್ಟೆಲ್ಲಾ ನಿರಾಶೆಯಾದ್ರೆ ಹೇಗೆ? ಭಾರತ, ಕಾಲಬಂಜೆಯೆಂದು ಒಪ್ಪುವುದಿಲ್ಲ. ಇಲ್ಲಿನ ಜನರನ್ನು ಉದ್ಧಾರ ಮಾಡಲು ಭಗವಂತ ಅವತಾರ ತಾಳುತ್ತಾನೆ. ಆಗಾಗ ಆತನ ಅಂಶದಿಂದ ವಿಭೂತಿ ಪುರುಷರೂ ಉದಯಿಸುತ್ತಾರೆ...."

"ಸರೀನ್ನಿ. ಅಂಥವರನ್ನು ನಾವು ಬೇಗನೆ ಮುಗಿಸಿಯೂ ಬಿಡುತ್ತೇವೆ...'

'ಹಾಗನ್ನ ಬೇಡ.......ಕಳೆದುಕೊಳ್ಳುತ್ತೇವೆ ಎನ್ನು....'

'ಹೇಗೆಂದರೂ ಪರಿಣಾಮ ಒಂದೇ ತಾನೆ? ಅದಕ್ಕೇ ಇಂಬೇಕು, ಒಳ್ಳೆಯವರು ಬೇಗ ಸಾಯುತ್ತಾರೆ ಅನ್ನೋದು....'

'ನೋಡು, ಹಾಗೂ ಅಲ್ಲ, ಬೇಗ ಸತ್ತವರು ಒಳ್ಳೆಯವರು ಅನ್ನು....'

"ಆಯ್ತಪ್ಪ, ಆಯ್ತು. ಹೇಗೆ ಬೇಕಾದ್ರೂ ಇರ್ಲಿ. ಈಗ ನೋಡಿ, ಅರಬರು ಕಳೆದು ಕೊಂಡ ಭೂಭಾಗವನ್ನು ಅವರು ಮರಳಿ ಪಡೆಯ ಬಲ್ಲರೆ?'

"ಒಂದು ನಾಲ್ಕಾಣೆ ಇಟ್ಟು ಕೇಳಿದ್ರೆ ಹೇಳಿಯೇ ಬಿಡ್ತಿದ್ದ..."

'ಹಣ ಇಷ್ಟೇ ಆದ್ರೆ ನಿಮ್ಮ ಹತ್ರನೇ ಯಾಕೆ ಕೇಳ್ಬೇಕು?'

'ಯಾಕೆ ಅಂದ್ರೆ? ನೋಡು. ಇಲ್ಲಿಯೇ ನೀನು ತಪ್ಪಿರೋದು,'

'ಏನು?'

'ನಿನ್ನ ಹಣಾನ ನನ್ನ ಮುಂದೆ ಇಟ್ಟು ಪ್ರಶ್ನೆ ಕೇಳಿದ್ರೆ ಹಣ ಎಲ್ಲಿಗೂ ಹೋಗಲ್ಲ. ನನ್ನ ಬಳೀನೇ ಇರುತ್ತೆ...'

'ಜ್ಯೋತಿಷ್ಯರತ್ರ ಕೇಳಿದ್ರೆ ಅವ್ರ ಕೈಗೆ ಹೋಗುತ್ತೆ....'

"ಜ್ಯೋತಿಷ್ಯರ ಸಂಪಾದನೆ ಅಲ್ಲಿಗೇ ಅಗ್ದೇ ಹೋಗ್ಲಿ, ನಮಗೇನಂತೆ?'

'ಓ, ಇದು ಬರಿಯ ಸ್ವಾರ್ಥವಾಯ್ತು, ಮತ್ತೆ ಸರ್ವೋದಯವೆಲ್ಲಿ?"

"ಸರ್ವೋದಯ ಅಂದ್ರೆ ತನ್ನನ್ನು ಪೋಲು ಮಾಡಿ ಬಿಡುವುದಲ್ಲ. ಪ್ರತಿಯೊಂದು ವಿಭಾಗದಲ್ಲಿ ಪ್ರತಿಯೊಬ್ಬನೂ ಸ್ವಾವಲಂಬಿಯಾದರೆ, ಆಗ ಸರ್ವೋದಯ ತಾನಾಗಿಯೇ ಆಗುತ್ತದೆ. ಸ್ವಾವಲಂಬನವೆಂಬುದು ಸ್ವಾರ್ಥ ಕಲುಷಿತವಲ್ಲ."

"ಅಲ್ರಿ, ಇದು ಹೇಗೆ ಸಾಧ್ಯ?'

"ವ್ಯಕ್ತಿ ವ್ಯಕ್ತಿಯೂ ಸ್ವಾವಲಂಬನಾ

(ಹದಿಮೂರನೇ ಪುಟ ನೋಡಿರಿ)

ದ. ಕ. ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 469/67
in O. S. 94/67

ಪುಟ್ಟಣ್ಣ ಗೌಡ —ವಾದಿ

ಮತ್ತು

ಸಾಂತಪ್ಪ ರೈ ಕೂಡಾ —ಪ್ರತಿವಾದಿರು

2ನೇ ಪ್ರತಿವಾದಿ—ವೇದಾವತಿ, 1ನೇ ಪ್ರತಿವಾದಿ ಸಾಂತಪ್ಪ ರೈ ಮಗಳು, ವಮಾಬಲ ರೈ ಹೆಂಡ್ತಿ, ಸುಳ್ಯ ತಾಲೂಕು, ಪಾಲ್ತಾಡಿ ಗ್ರಾಮ.

3ನೇ ಪ್ರತಿವಾದಿ– ಗೋಪಾಲಕೃಷ್ಣ ರೈ, 1ನೇ ಪ್ರತಿವಾದಿ ಸಾಂತಪ್ಪ ರೈ ಮಗ, ಸುಳ್ಯ ತಾಲೂಕು ನಾರ್ಣಂಜ ಗ್ರಾಮದ ರೆಂಜಾಳ.

2 ಮತ್ತು 3ನೇ ಪ್ರತಿವಾದಿಗೆ–

ಪ್ರತಿವಾದಿರ ಮೇಲೆ ವಾದಿಯು ಮೆಂಡೆಟರಿ ಇಂಜಂಕ್ಷನಿಗೂ ಪರ್ಮನೆಂಟು ಇಂಜಂಕ್ಷನಿಗೂ ಮಾಡಿದ ದಾವೆಯಲ್ಲಿ ಪ್ರತಿವಾದಿರಕ್ಕೆ ಜೇಕು ನೋಟೀಸಿಗೂ ಮತ್ತು R I A 469/67ನೇ ಅರ್ಜಿ ಹುಕುಂ ಪ್ರಕಾರ ಈ ದಾವೆಯ ತೀರ್ಮಾನದ ತನಕ ದಾವಾ ಆಸ್ತಿಗೆ ಪ್ರತಿವಾದಿರು ಯಾ ಅವರ ಕಡೆ ಜನರು ಯಾವ ರೀತಿಯಲ್ಲಿಯೂ ಅಕ್ರಮ ಪ್ರವೇಶ ಮಾಡದಂತೆಯೂ ಕಾಮಗಾರಿಗಳು ವಗೈರೆ ಮಾಡಿಸದಂತೆಯೂ ವಗೈರೆ ನಿವೃತ್ತಿಗಳಿಗೆ ಅರ್ಜಿ ಮಾಡಿದ್ದರಿಂದ್ದು, ಅವುಗಳ ತನಿಕೆ ಮುದ್ದತು ತಾ. 8—7—67ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಬರಹ ಮೂಲಕ ಆ ಮುದ್ದತು ದಿನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸ ತಕ್ಕದ್ದು. ಇದಕ್ಕೆ ತಪ್ಪಿದರೆ ಅದರಲ್ಲಿ ಶಿವಾಯಿ ಎಂತ ಮಾಡಿ ಈ ದಾವೆಯನ್ನು ಅರ್ಜಿ ತನಿಕೆಯನ್ನು ಮುಂದರಿಸಿ ಕ್ರಮದಂತೆ ತೀರ್ಮಾನಿಸಲಾಗುವದೀತು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Sd. A. Radhakrishna Gowda
ವಾದಿ ಪರ ಎಡ್ವಕೇಟ್
Advocate Puttur, S. K.

ಪುತ್ತೂರು, ದ. ಕ. ತಾ. 19—8—67.

ಪ್ರಣಯಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1–75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಆಂಗ್ಲ ಭಾಷೆಯ ಮಹಾತ್ಮೆಯರಿತ

ದ್ರಾ. ಮು. ಕ. ಮಂತ್ರಿಮಂಡಲ

ಬರೆದವರು
ಶ್ರೀ ಶಿವಶಂಕರ

ವಿಶ್ವವಿದ್ಯಾಲಯ ಅನುದಾನ ಆಯೋಗವು ಬೇಸಿಗೆಯ ಸಮಯದಲ್ಲಿ ದೇಶದಾದ್ಯಂತ ಎಂಟು ಸ್ಥಳಗಳಲ್ಲಿ ಆಂಗ್ಲ ಭಾಷೆಯನ್ನು ಹೇಳಿಕೊಡಲು ಏರ್ಪಾಡು ಮಾಡುತ್ತದೆ. ಇಲ್ಲಿ ಕಾಲಿಪೋಲಿ ಜನರಿಗೆ ಆಂಗ್ಲ ಭಾಷೆಯನ್ನು ಹೇಳಿಕೊಡಲಾಗುವದಿಲ್ಲ. ಕಲಾಶಾಲೆಗಳಲ್ಲಿ ಆಂಗ್ಲ ಭಾಷೆಯನ್ನು ಹೇಳಿಕೊಡುತ್ತಿರುವ ಉಪನ್ಯಾಸಕರು ಮಾತ್ರ ಇದರಲ್ಲಿ ಭಾಗವಹಿಸಬಹುದು. ಈ ಎಂಟು ಕೇಂದ್ರಗಳಲ್ಲಿ ಮದ್ರಾಸು ಒಂದಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಇಲ್ಲಿಯ ಬ್ರಿಟಿಷ್ ಕೌನ್ಸಿಲ್ ಸಹಕರಿಸುತ್ತದೆ. ಬ್ರಿಟಿಷರ ಆಕ್ರಮಣದ ಅಂತ್ಯವಾಗಿ ಇಪ್ಪತ್ತು ವರ್ಷಗಳು ಸಂದರೂ ಇನ್ನೂ ವಿದ್ಯಾರಂಗದಲ್ಲಿ ನಮ್ಮ ಕಾಲಮೇಲೆ ನಮ್ಮಿಂದ ನಿಲ್ಲಲು ಸಾಧ್ಯವಾಗಿಲ್ಲವೇ? ಪ್ರಶ್ನೆ ಸಹಜವಾಗಿ ಇರುತ್ತದೆ. ಬ್ರಿಟಿಷರು ಬರುವ ಮುಂಚೆ ಇಲ್ಲಿನ ಜನತೆ ಅವಿದ್ಯಾವಂತರಾಗಿದ್ದರೇನು? ನಿಜವಾಗಿ ಆಂಗ್ಲ ಭಾಷೆಯನ್ನು ಹೇಳಿಕೊಡುವ ವಿಧಾನವನ್ನು ಉಪನ್ಯಾಸಕರಿಗೆ ತಿಳಿಸಲಿಕ್ಕಾಗಿ ಈ ತರಬೇತಿ ಶಿಬಿರ ಇರುತ್ತಿದ್ದಲ್ಲಿ ಆ ಪ್ರಶ್ನೆಗಳಿಗೆ ಉತ್ತರ ಕೊಡಬಹುದಾಗಿತ್ತು. ಆದರೆ ನಿಜವಾಗಿ ಆ ಉದ್ದೇಶಕ್ಕಾಗಿ ಶಿಬಿರ ಇರುವದೂ ಇಲ್ಲ, ಬ್ರಿಟಿಷ್ ಕೌನ್ಸಿಲಿನವರಾದರೋ ಆ ಉದ್ದೇಶದಿಂದ ಸಹಕರಿಸುವದೂ ಇಲ್ಲ.

ಮದ್ರಾಸಿನ ಶಿಕ್ಷಣ ಶಿಬಿರದ ಆರಂಭೋತ್ಸವಕ್ಕೆ ದಕ್ಷಿಣ ಭಾರತದಲ್ಲಿರುವ ಬ್ರಿಟಿಷ್ ಡೆಪ್ಯೂಟಿ ಹೈಕಮಿಶ್ನರ್ ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡುತ್ತ, ಇಂಗ್ಲಿಷ್ ಜ್ಞಾನ ಕಮ್ಮಿಯಾದಲ್ಲಿ ಭಾರತದ ಸಾಂಸ್ಕೃತಿಕ ಐಕ್ಯತೆಗೆ ನಿಜವಾಗಿ ಅಪಾಯ ಬರುತ್ತದೆ. ಕೇಂದ್ರ ಸರಕಾರ ಹಾಗೂ ಕೆಲ ರಾಜ್ಯ ಸರಕಾರಗಳಿಗೆ ಅದರ ಮನವರಿಕೆಯಾಗಿದೆಯೆಂದು ಹೇಳಿದರು. ನಮ್ಮ ಸಾಂಸ್ಕೃತಿಕ ಐಕ್ಯತೆಯ ಮೇಲೆ ಪ್ರಶಂಸಾ ಪತ್ರ ನೀಡುವವರು ಕ್ರಿಸ್ತಮತ ಅನುಸಾರಕ ಹಾಗೂ ಇಂದಿನ ಆಕ್ರಮಣಗಾರ ಬ್ರಿಟಿಷ್ ದೂತ ನಿವಾಸದ ಅಧಿಕಾರಿ! ಇಲ್ಲಿಯ ಜನರಿಗೆ ಇಂಗ್ಲಿಷ್ ಜ್ಞಾನ ಬರುವ ಮುಂಚೆ ಸಾಂಸ್ಕೃತಿಕ ಐಕ್ಯತೆಯ ಗಂಧಗಾಳಿಯೂ ಅವರಲ್ಲಿದ್ದಿಲ್ಲವೇನು? ಯೇಸು ಕ್ರಿಸ್ತನು ಹುಟ್ಟಿದ್ದನ್ನೆಲ್ಲಾಗುವ ವರ್ಷಕ್ಕಿಂತಲೂ ನೂರಾರು ವರ್ಷಗಳ ಹಿಂದ ಕೇರಳದ ಶಂಕರಾಚಾರ್ಯರು ಕಾಶ್ಮೀರದಲ್ಲಿ ಹೋಗಿ ಮಠ ಸ್ಥಾಪಿಸಲು ಹೇಗೆ ಸಾಧ್ಯವಾಯಿತು? ಚಾಣಾಕ್ಯನಿಗೆ ಮಗಧದ ಸಾಮ್ರಾಜ್ಯ ಸ್ಥಾಪಿಸಿ ಕೊಡಲು ಸಾಧ್ಯವಾಯಿತೆಂತು? ಅಶೋಕನಿಗೆ ಅನೇಕಾನೇಕ ದೇಶಗಳಿಗೆ ಮತ ಪ್ರಸಾರಕರನ್ನು ಕಳುಹಿಸಲು ಸಾಧ್ಯವಾಯಿತೆಂತು? ಇವಲ್ಲಾ ಹೇಗೆ ಸಾಧ್ಯವಾಯಿತು. ಅವರು ಇಂಗ್ಲಿಷ್ ಕಲಿತಿದ್ದರೇನು? ಅದೇ ಈಗ ಕೇರಳದ ಶಂಕರನಿಗೆ ಕಾಶ್ಮೀರದಿಂದ ಬೇಡ, ತಮಿಳುನಾಡಿನಿಂದ ಅಕ್ಕಿ ಸಿಗುವದಿಲ್ಲ! ಇಂಗ್ಲಿಷ್ ಜ್ಞಾನ ಪಡೆದಿರುವ ಮರಾಠಿಗರು ಇಂದು ಶಂಕರಾಚಾರ್ಯರ ಮಠಾಧಿಗಳನ್ನು ನಾಶ ಮಾಡಲು ಮುಂದಾಗಿದ್ದಾರೆ! ಬಂಗಾಲದ ಡಾ| ಶಾಮಪ್ರಸಾದ ಮುಖರ್ಜಿ (ಲೋಕ ಸಭಾ ಸದಸ್ಯನಿಗೆ) ಭಾರತದಲ್ಲಿ ಇಂಗ್ಲಿಷ್ ಕಲಿತವರಲ್ಲ, ಇಂಗ್ಲೇಂಡಿನಲ್ಲೇ ಇಂಗ್ಲಿಷ್ ಕಲಿತಿದ್ದ ಜವಾಹರಲಾಲ ನೆಹರೂಜೀಯವರು ಭಾರತದ ಪ್ರಧಾನಿಯಾಗಿದ್ದಾಗಲೇ ಕಾಶ್ಮೀರಕ್ಕೆ ಹೋಗಿ ಬರಲು ಸಾಧ್ಯವಾಗಲಿಲ್ಲ! ವಾಸ್ತವ್ಯಸ್ಥಿತಿ ಹೀಗಿದ್ದರೂ ಬ್ರಿಟಿಷ್ ಅಧಿಕಾರಿಯು ಇಲ್ಲಿಯ ಸಾಂಸ್ಕೃತಿಕ ಐಕ್ಯತೆಗೆ ಇಂಗ್ಲಿಷ್ ಅತ್ಯಗತ್ಯವೆನ್ನುತ್ತಾರೆ! ಇಲ್ಲಿಯವರಿಗೆ ಇಂಗ್ಲಿಷ್ ಜ್ಞಾನ ಬರುವ ಮುಂಚೆ ಗೋಭಕ್ಷಕ ಕ್ರಿಸ್ತೀಯ ಮತ ಪ್ರಸಾರಕರಿಗೆ ಎಲ್ಲಿಡೆಗೂ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಗೋ ಭಕ್ತರು ಅವರನ್ನು ಮುಟ್ಟುತ್ತಿರಲಿಲ್ಲ. ಇಂದು ಇಂಗ್ಲಿಷ್ ಜ್ಞಾನ ಬಂದದೆ. ಗೋ ಭಕ್ತ ಶಬ್ದ ಗೊಡ್ಡು ಸಂಪ್ರದಾಯದ ಶಬ್ದವಾಗಿ ಬಿಟ್ಟು ಗೋ ಭಕ್ಷಕನೆಂಬುದು ಸಾಂಸ್ಕೃತಿಕ ಪ್ರಗತಿಯ ಪದವಾಗಿ ಬಿಟ್ಟಿದೆ! ಈ ರೀತಿ ಸಾಂಸ್ಕೃತಿಕ ಐಕ್ಯತೆಯನ್ನುಂಟು ಮಾಡಿರುವ ಬ್ರಿಟಿಷರ ಪ್ರತಿನಿಧಿಯು ಇಂದೂ ತನ್ನ ಪಾಠವನ್ನು ಬಿಟ್ಟಿಲ್ಲ, ಭಾರತೀಯರಿಗೆ ಪಾಠಾಳವೇ ಗತಿಯನ್ನುತ್ತಿದ್ದಾನೆ. ಅವನ ಮಾತಿನ ಅರ್ಥವಾಗಿರುವವರಿಗೆ ಮಾತ್ರ ಐಕ್ಯತೆಯ ಮನವರಿಕೆಯಾಗಿರುತ್ತದೆ!

ಇಲ್ಲಿ ಬ್ರಿಟಿಷ್ ಅಧಿಕಾರಿಯು ನಮ್ಮ ಸಂಸ್ಕೃತಿಯ ಅವಹೇಳನೆ ಮಾಡಿರುವದು ಮಾತ್ರವಲ್ಲ. ನಮ್ಮ ವಿದ್ಯಾಮಂದಿರವನ್ನು ಬೂಟುಗಾಲಿನಿಂದ ಒದೆದು ಅಪವಿತ್ರಗೊಳಿಸಿದ್ದಾನೆ. 'ನನ್ನ ನಾಡಿನ ಭಾಷೆಯನ್ನು ನಿಮ್ಮ ಜನರಿಗೆ ಹೇಳಿಕೊಡದಿದ್ದಲ್ಲಿ ನೀವು ಹಾಳಾಗಿ ಹೋಗುವಿರಿ.' ಈ ಮಾತನ್ನು ಆ ಅಧಿಕಾರಿ ಒಗ್ಗರಣೆ ಹಾಕಿ ಹೇಳಿದ್ದಾನೆ, ಅಷ್ಟೇ— ಮತ ಪ್ರಸಾರಕರು ಬಂದು, ಪಾಪಿಗಳೇ ನಮ್ಮ 'ದೇವರ"ನ್ನು ನಂಬದಿದ್ದಲ್ಲಿ ನರಕಕ್ಕೆ ಹೋಗುವಿರೆಂದು ಹೇಳುವಂತೆ. ಅದವರಿಗೆ ಅಭ್ಯಾಸವಾಗಿ ಬಿಟ್ಟಿದೆ. ಹಾಗೆಯೇ ಅದನ್ನು ಕೇಳುವದು ಇಂಗ್ಲಿಷ್ ಬಲ್ಲವರಿಗೆ ಅಭ್ಯಾಸವಾಗಿ ಬಿಟ್ಟಿದೆ. ಇಲ್ಲದಿದ್ದಲ್ಲಿ ಅಲ್ಲಿ ಸೇರಿದ್ದ ಐವತ್ತು ಪ್ರಾಧ್ಯಾಪಕ ಹಾಗೂ ಉಪನ್ಯಾಸಕರಲ್ಲಿ ಒಬ್ಬನಾದರೂ 'ಅಯ್ಯಾ! ಸಂಸ್ಕೃತಿ, ಐಕ್ಯತೆ, ವಿದ್ಯೆ ಅದಕ್ಕೆಲ್ಲಾ ಇಲ್ಲಿ ಬೇಕಾದಷ್ಟು ಮಂತ್ರಿಗಳಿದ್ದಾರೆ. ಆ ವಿಷಯಗಳ ಮೇಲಣ ಉಪನ್ಯಾಸಕ್ಕಾಗಿ ಈ ಗೋಷ್ಠಿಯನ್ನಾರಂಭಿಸುವದಲ್ಲ. ಮಾತಾಡುವದಿದ್ದಲ್ಲಿ ಇಂಗ್ಲಿಷ್ ಭಾಷೆ ಹಾಗೂ ಕಲಿಸುವ ವಿಧಾನದ ಕುರಿತು ಮಾತಾಡೆಂ'ದು ಎಚ್ಚರಿಸದೆ ಬಿಡುತ್ತಿರಲಿಲ್ಲ. ಹಿಂದಿ—ವಿರುದ್ಧ ಮದರಾಸಿನಲ್ಲಿ ಭಾರೀ ಗಲಾಟೆಯಾಗುವ ಮುಂಚೆ ಇದೇ ಬ್ರಿಟಿಷ್ ಕೌನ್ಸಿಲಿನವರು ಇಂತಹ ಪ್ರಾಧ್ಯಾಪಕ ಹಾಗೂ ಉಪನ್ಯಾಸಕರನ್ನಲ್ಲದ ಸಂಬಂಧಪಟ್ಟ ಇತರ ವ್ಯಕ್ತಿಗಳನ್ನೂ ಕರೆದು ತಮ್ಮ ಮನದಭಿಲಾಷೆಯನ್ನು ತಿಳಿಸಿದ್ದರು. ಅಷ್ಟೇ ಅಲ್ಲ, ಕೇಂದ್ರದ ವಿರುದ್ಧ ಇಲ್ಲಿಯ ಕೆಲ ಜನರು ಅದರಲ್ಲೂ ವಿದ್ಯಾರ್ಥಿಗಳು ಬಂಡೆದ್ದಾಗ ಅವಾಗ ನೆಂವಾದವರು ಈ ಬ್ರಿಟಿಷ್ ಕೌನ್ಸಿಲಿಗೆ ಸಂಬಂಧಪಟ್ಟವರಿದ್ದರೆನ್ನಲಾಗುತ್ತಿದೆ. ಅದರಿಂದಾದರೂ ನಮ್ಮ ವಿದ್ಯಾಮಂತ್ರಿಗಳು ಹುಷಾರಾಗಬೇಕಾಗಿತ್ತು. ಅದರ ಬದಲು ನೀವೇ ಅವರನ್ನು ಕರೆದು ಸತ್ಕರಿಸುತ್ತಿದ್ದೀವೆ.

ಆ ಆರಂಭೋತ್ಸವದಲ್ಲಿ ಅಂದು ಉಪನ್ಯಾಸಕರು ಮಾತ್ರ ಭಾಗವಹಿಸಿದ್ದಿಲ್ಲ. ತಮಿಳುನಾಡಿನ ವಿದ್ಯಾಮಂತ್ರಿ ತಿರು ಆರ್. ನೆಡುಂಜೆಳಿಯನ್ ಕೂಡಾ ಇದ್ದರು. ಅವರಾದರೂ ಬ್ರಿಟಿಷ್ ಅಧಿಕಾರಿಯನ್ನು ಎಚ್ಚರಿಸಿದರೇ, ಇಲ್ಲ! ಅದಕ್ಕಿಂತಲೂ ಅವರು ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿಬಿಟ್ಟರು. ಸುಮಾರು ಒಂದು ಶತಮಾನದಿಂದ ಇಂಗ್ಲಿಷ್ ಇಲ್ಲಿರುವದರಿಂದ ಅದು ನಮ್ಮ ಪಿತೃಧನದಲ್ಲಿ ಒಂದಂಶವಾಗಿ ಬಿಟ್ಟಿರುತ್ತದೆಂದು ನಮ್ಮ ಮಂತ್ರಿಗಳು ನುಡಿದರು. ಬ್ರಿಟಿಷ್ ಅಧಿಕಾರಿಗಳು ಮನಸ್ಸಿನೊಳಗೆನೇ ನಕ್ಕಿರಬಹುದು. 'ಅಲ್ಲಾ! ಒಂದೂವರೆ ಶತಮಾನಗಳ ಸಂಪರ್ಕದಿಂದ ಆಂಗ್ಲೇಯರು ನಿಮ್ಮ ಕುಟುಂಬದವರಾಗಿ ಹೋಗಿಲ್ಲವೇನು? ಅವರನ್ನೇತಕ್ಕೆ ನೀವು ಓಡಿಸಿದಿರಿ? ಬ್ರಿಟಿಷ್ ಅಧಿಕಾರಿಗಳನ್ನು ಕಂಡಕಂಡಲ್ಲಿ ಗುಂಡಿಕ್ಕಿದಿರಿ. ಇಲ್ಲೇ ಇದ್ದು ಹೋರಾಡುವದು ಕಷ್ಟವೆಂದು ತಿಳಿದು ಪರದೇಶಗಳಲ್ಲಿ ಅಲೆದು ಸೈನ್ಯ ಶೇಖರಣೆ ಕೂಡಾ ಮಾಡಿದ್ದಿರಲ್ಲಾ! ಅದೆಲ್ಲಾ ಏತಕ್ಕೆ?' ಆ ಬ್ರಿಟಿಷ್ ಅಧಿಕಾರಿ ಕೇಳುತ್ತಿದ್ದಲ್ಲಿ ನಮ್ಮ ಮಂತ್ರಿಗಳು ಅದೇನು ಉತ್ತರ ಕೊಡುತ್ತಿದ್ದರೋ! "ನಾವು ಕ್ರಾಂತಿ ನಡೆಸಿಲ್ಲ. ಸತ್ಯಾಗ್ರಹ ಹೂಡಿಲ್ಲ, ಉತ್ತರದ ಹಿಂದೀ ವಾದಿಗಳು ನಡೆಸಿದ ಪಿತೂರಿ ಅವೆಂದು ಹೇಳುತ್ತಿರೋ ಏನೋ!" ಅಂತೂ, ಆಗ ನಮ್ಮ ಮಂತ್ರಿಯವರ ಮನಸ್ಸೆಂಬ ಕಬ್ಬಿಣ ಸರಿಯಾಗಿ ಬಿಸಿಯಾಗಿರಲಿಲ್ಲವೆಂದು ಕಾಣುತ್ತದೆ. ಇಲ್ಲದಿದ್ದಲ್ಲಿ ಕಾದ ಕಬ್ಬಿಣಕ್ಕೆ ಬಡಿದು ಹದಗೊಡುವದರಲ್ಲಿ ಪಳಗಿರುವ ಬ್ರಿಟಿಷ್ ಅಧಿಕಾರಿಯು ಆ ಸಮಯವನ್ನು ವ್ಯರ್ಥ ಹಾಳುಮಾಡುತ್ತಿರಲಿಲ್ಲ.

ಇಂಗ್ಲಿಷಿನ ಮೇಲಿನ ಹತೋಟಿಯನ್ನು ನಾವು ಬಿಟ್ಟು ಬಿಟ್ಟಲ್ಲಿ ವಿಜ್ಞಾನ ಹಾಗೂ ಯಂತ್ರ ಶಾಸ್ತ್ರದ ಪ್ರಪಂಚದಲ್ಲಿ ಎದೆ ತಟ್ಟಿ ಇಂಡಿಯಾ ನಿಲ್ಲಲು ಸಾಧ್ಯವಿಲ್ಲವೆಂದೂ ತಿರು ಆರ್— ನೆಡುಂಜೆಳಿಯನ್ ತಿಳಿಸಿರುವರು. ಇಂಗ್ಲಿಷಿನ ಜ್ಞಾನವಿಲ್ಲದ ರಷ್ಯಾ, ಜರ್ಮನಿ, ಜಪಾನು, ಇಸ್ರೇಲ್, ಫಿಜಿ —ಮುಂತಾದ ದೊಡ್ಡ ಹಾಗೂ ಚಿಕ್ಕಪುಟ್ಟ ದೇಶಗಳು ವಿಜ್ಞಾನ ಹಾಗೂ ಯಂತ್ರ ಶಾಸ್ತ್ರದ ಪ್ರಪಂಚದಲ್ಲಿ ಎದೆ ಬಡಿದುಕೊಂಡು ನಿಂತಿವೆಯೋ? ಇಂಗ್ಲಿಷಿನಿಂದಾಗಿ ನಾವು ಎದೆ ತಟ್ಟಿ ನಿಲ್ಲುವವಲ್ಲ, ಇಂಗ್ಲಿಷ್ ನಮ್ಮ ಎದೆ ಮೆಟ್ಟಿನಿಂತಿರುತ್ತದೆ, ಅಷ್ಟೇ. ಅಂಥ ಅನುಸರಣೆಯ ಅಭ್ಯಾಸವನ್ನು ಬಿಟ್ಟು, ನಮ್ಮ ಪಥದಲ್ಲಿ, ನಮ್ಮ ಪದಗಳಿಂದಲೇ, ನಮ್ಮ ಪದ್ಧತಿಯಲ್ಲೇ ನಾವು ಪ್ರಗತಿ ಹೊಂದುವದೇ ಯುಕ್ತವಿದೆ.

ಜ್ಞಾನ ತೃಷೆಯ ವಿಶ್ವದಲ್ಲಿ ಆಂಗ್ಲ ಭಾಷೆ ಅತೀವ ಉಪಯುಕ್ತ ಸಾಧನವಿದ್ದೆ ನಾವದನ್ನು ಕಳೆದುಕೊಳ್ಳಬಾರದು. ಇದನ್ನು ಹೇಳಿದವರ್ಯಾರು? ಅದೇ ವಿದ್ಯಾಮಂತ್ರಿ ತಿರು ಆರ್. ನೆಡುಂಜೆಳಿಯನ್. ಈ ಸಮಾರಂಭಕ್ಕೆ ಹಿಂದೆ ಇದೇ ವಿದ್ಯಾಮಂತ್ರಿಗಳು ತನ್ನ ಕಾರ್ಯಾಲಯದ ಕೋಣೆಯೆದುರಿನಲ್ಲಿದ್ದ ಆಂಗ್ಲನಾಮಫಲಕವನ್ನು ತೆಗೆಸಿ ತಮಿಳು ನಾಮ ಫಲಕವನ್ನು ತೂಗಹಾಕಿಸಿದ್ದರು. ಅವರು ಮಾತ್ರವಲ್ಲ ದ್ರಾ. ಮು. ಕ. ದ ಇತರ ಮಂತ್ರಿಗಳೂ ತಮ್ಮ ಆಂಗ್ಲ ನಾಮಫಲಕಗಳನ್ನು ಬದಲಾಯಿಸಿದ್ದರು. ಅಷ್ಟೇ ಅಲ್ಲ; ಮದ್ರಾಸ್ ಗವರ್ನಮೆಂಟ್—ಚೀಫ್ ಸೆಕ್ರೆಟೇರಿಯಟೆಂದಿದ್ದ ಫಲಕವನ್ನು ತಮಿಳಿನ ಅರಸು—ತಲಮೈ ಚಲಮೈ ಸೆಯಲಗಮೆಂ

(ಹನ್ನೆರಡನೇ ಪುಟ ನೋಡಿರಿ)



ಗಡಿಯಾರದ ಮುಳ್ಳಿಗಿಂತ ವೇಗವಾಗಿ ಚಲಿಸುವ ವಸ್ತು ಇನ್ನೊಂದಿದೆಯೇ? ಗಾಳಿ, ಸಿಡಿಲು, ಮಿಂಚು, ವಿಮಾನ, ರಾಕೆಟ್? ಯಾವುವೂ ಅಲ್ಲ, ಸಮಯಕ್ಕಿಂತ ಹೆಚ್ಚಿನ ವೇಗದಲ್ಲಿ ಇನ್ನೊಂದು ವಸ್ತು ಚಲಿಸೀತೇ? ಸಮಯದ ಸೂಚಕವೇ ಗಡಿಯಾರದ ಮುಳ್ಳು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಯಾವ ಆರ್ಥಿಕ ಸಮಸ್ಯೆಗೂ ಕೇಳಿಕೆಗೂ ಕ್ಷಿಪ್ರ ಪರಿಹಾರ ದೊರೆಯುವುದು. ನಮ್ಮ ಬ್ಯಾಂಕಿನ ಸೇವೆಯು ಗಡಿಯಾರದ ಮುಳ್ಳಿನಷ್ಟೇ ಗತಿಶೀಲವೂ, ನಿಯಮಿತವೂ ಆಗಿದೆ. ಶೀಘ್ರ ಸೇವೆಯೊಂದಿಗೆ ದಕ್ಷತೆಯೂ ಸೇರಿರುವುದರಿಂದ ಸಿಂಡಿಕೇಟ್ ಬ್ಯಾಂಕು ನೀವು ಆರಿಸಬೇಕಾದ ಆದರ್ಶ ಸಂಸ್ಥೆಯಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಶಬ್ದ ಚಿತ್ರ

ನಗೆಗಾರ ಮಾರ್ಕ್ ಟ್ವೇನ್

ಬರೆದವರು
ಶ್ರೀ ಪಿ. ಕೆ. ಪ್ರಕಾಶರಾವ್, ಕೆಮ್ಮಣ್ಣು.

ಬ್ರಿಟನ್ನಿನ ಬ್ಯಾಂಕ್ ವ್ಯವಹಾರ, ಇಟಲಿಯ ಸಂಗೀತ, ಜರ್ಮನಿಯ ತತ್ವಜ್ಞಾನ, ಫ್ರಾನ್ಸಿನ ವೈನು—ಇದ್ದಂತೆಯೇ ಅಮೇರಿಕದ 'ನಗೆ'ಯೂ ಎಂದು ಹೇಳುತ್ತಾರೆ. ಹತ್ತೊಂಭತ್ತನೆಯ ಶತಮಾನದಲ್ಲಿ 'ಲ್ಯಾಂಗ್ ಹಾರ್ನ್ ಕ್ಲೆಮೆನ್ಸ್' ಎಂಬೊಬ್ಬ ಬಡ ಗಾವಿಲ ಅಮೇರಿಕದ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ತೆರೆದನು. "ಮಾರ್ಕ್‌ಟ್ವೇನ್" ಎಂಬ ಕಾವ್ಯನಾಮದಿಂದ ಈ ನಗೆಗಾರನು ಬರೆದ ನಗೆ ಬರಹಗಳು ತಿಳಿನಗೆಯ ತೆರೆದೆರೆಗಳನ್ನು ಜಗತ್ತಿನಾದ್ಯಂತ ಹಬ್ಬಿ ಹರಡಿಸಿವೆ.

ಇಂಗ್ಲಿಷ್ ಸಾಹಿತ್ಯದಲ್ಲಿ ಚಾರ್ಲ್ಸ್ ಡಿಕನ್ಸ್‌ನನ್ನು ಹೊರತು "ಮಾರ್ಕ್‌ಟ್ವೇನ್"ನನ್ನು ಮೀರಿಸಿದ ಇನ್ನೊಬ್ಬ ನಗೆ ಬರಹಗಾರನಿಲ್ಲ. ಜಗತ್ತಿನ ಸಾಹಿತ್ಯಕ್ಕೆ "ಮಾರ್ಕ್ ಟ್ವೇನ್" ಅಮೇರಿಕದ ಒಂದು ಕಾಣಿಕೆ.

ಬಾಳಿನ ಮೇಲೆ ಬೆಳಕು

ಮಾರ್ಕ್‌ಟ್ವೇನ್ ೧೮೩೫ರ ನವೆಂಬರ್ ಹದಿಮೂರರಂದು ಸಂಯುಕ್ತ ಸಂಸ್ಥಾನದ ಮಸೂರಿಯ ಹಳ್ಳಿಯೊಂದರಲ್ಲಿ ಜನಿಸಿದನು. ಹುಟ್ಟಿನಿಂದಲೇ ಆತನು ಬಡತನದ ಹೊರೆಯನ್ನು ಹೊತ್ತು ತಂದಿದ್ದ. ವಿದ್ಯೆಯಂತೂ ಮಾಯಾಫಲ. ಷೇಕ್ಸ್‌ಪಿಯರ್ ಮತ್ತು ಡಿಕನ್ಸ್‌ರಂತೆ ಎಲ್ಲೋ ಚೂರು ಚೂರು ಕಲಿತ. ಒಬ್ಬ ಚರಿತ್ರಕಾರ ಹೇಳುವಂತೆ ಅವನಿಗೆ ವಿದ್ಯೆ ದೂರವಾದುದೇ ಅವನ ಹಾಸ್ಯದ ಕುಸುರನ್ನು ಪಸರಿಸಲು ನೆರವಾಯಿತು. ಅವನಿಗೆ ವಿದ್ಯೆಯ ಗಾಳಿ ಸೋಕಿದ್ದರೆ ಅವನೊಬ್ಬ "ರಾಜಕಾರಣಿ' ಯಾಗುತ್ತಿದ್ದ ಇಲ್ಲವೇ ಇನ್ನಾವುದೋ ಅಧಿಕಾರಿಯಾಗುತ್ತಿದ್ದ. 'ಮಾರ್ಕ್‌ಟ್ವೇನ್" ಮಾತ್ರ ಸಾಹಿತ್ಯ ಪರಿಸರದಿಂದ ನುಸುಳಿಯೇ ಹೋಗುತ್ತಿದ್ದ. ಫ್ಲೋರಿಡಾದ ಹಸಿರು ಹಚ್ಚನೆ ಪ್ರಕೃತಿ ಆತನಿಗೆ ಉತ್ತಮ ಶಿಕ್ಷಣ ಅಸಾಧಾರಣವಾಗಿತ್ತು. ಸಾವಿನಗಳಿಗೆ ಬಂದಾಗಲೂ ಎಳವೆಯ ನಸುಕಿನಲ್ಲಿ ತಾನುಂಡ ಪ್ರಕೃತಿಯ ಸವಿಯನ್ನು ನೆನಪಿಗೆ ತಂದಿದ್ದಾನೆ. "ಕಾಡಿನಾಳಗಳಲ್ಲಿನ ತೂರಿಬರುವ ನಸು ಬೆಳಕು, ಏಕರಸವಾಗಿ ಹಾಯ್ದು ಬರುವ ವಿವಿಧ ಸೌರಭಿ ಸ್ರೋತ್ರ, ವನಸುಮಗಳ ಪರಾಗಗಳನ್ನು ಹೊತ್ತು ತರುವ ಮೆಲುಗಾಳಿ, ಮಳೆಯಿಂದೊದ್ದೆಯಾದ ಮರದೆಲೆಗಳು, ಗಾಳಿ ಬೀಸಿದಾಗ ಮರಗಳಿಂದ ಮಳೆ ನೀರು ಹನಿಯುವ ಸದ್ದು, ನಿರಭ್ರ ಬಾನಿನ ಕೆಳಗೆ ಆ ಅನಂತ ವಿಸ್ತಾರ, ಭವ್ಯವಾದ ಪ್ರೇಯರಿ ಇವೆಲ್ಲ ತನ್ನನ್ನು ಮರಳಿ ಕರೆಯುವಂತೆ ಮೃತ್ಯುಹಾಸಿಗೆಯಲ್ಲಿ ಕೆಮ್ಮುತ್ತ ಮಲಗಿದ್ದ ಮಾರ್ಕ್‌ಟ್ವೇನ್‌ನಿಗೆ ತೋರುತ್ತಿದ್ದವು.

ಪ್ರತಿಭಾವಂತ

ಮಾರ್ಕ್‌ಟ್ವೇನನ ಅನನ್ಯಾದೃಶ ಪ್ರತಿಭೆ ಜಗತ್ತಿಗೇನೇ ಹೊಸಕಣ್ಣನ್ನು ಕೊಟ್ಟನೆನ್ನಬೇಕು. 'ಇನ್ನಿಲ್ಲ ಮುನ್ನಿಲ್ಲ' ವೆಂಬಂತೆ ಜಗತ್ತಿಗೆ ಮಾರ್ಕ್‌ಟ್ವೇನ್ ಒಬ್ಬನೇ; ಇಬ್ಬರಿಲ್ಲ. ಆತನ ನಗೆಬರಹಗಳು ಮುಖ್ಯವಾಗಿ ಮೂರು ಹೊತ್ತಿಗೆಗಳಲ್ಲಿ ಅಚ್ಚಾಗಿವೆ. "ಮಿಸ್ಸಿಸ್ಸಿಪಿಯ ಮೇಲಿನ ಬಾಳುವೆ", 'ಟಾಮ್‌ಸಾಯರ್', 'ಹಕ್ಲ್‌ಬರ್ರಿ ಫಿನ್" ಇವೇ ಮೂರು ಹೆಸರಾಂತ ಟ್ವೇನನ ಗ್ರಂಥಗಳು. ಇವೆಲ್ಲ ಬರೆಯ ನಿರಾಳ ನಗೆಯಿಂದ ತುಂಬಿ ಕಂಗೊಳಿಸುತ್ತವೆ. ನಗಲು ಬಾರದವನಿಗೆ ಈ ಗ್ರಂಥಗಳು ಹಾಸ್ಯ ವಾಯುವಿನಂತೆ ಭಾಷೆ ಕೇಳುವಾಗಲೇ ನಮಗೆ ನಗುವ ಮನಸ್ಸಾಗುತ್ತದೆ. ಇನ್ನವನ ಕಥೆಯ ವೃತ್ತಾಂತವೇಕೆ?. "ಕಾನ್‌ಸ್ಟಂಟಿನೋಪೋಲಿಟನ್ ಸ್ಪೈರು ಡೆಲ್ಲಾಸ್ಕಾಮ್ಸ್ ಟರ್ನ್ಸ್‌ಗೆ ಸೆಲ್ ಶ್ಯಾಫ್ಟ್" ಎಂಬ ಮುಂತಾದ ಶಬ್ದಗಳು ಮಾರ್ಕ್‌ಟ್ವೇನನ ನಾಮಕರಣದಿಂದ ಜಗದ್ವಿಖ್ಯಾತವಾದ ಹೆಸರು. ಎಂತಹ ವಾಚಾಳಿಯಾದರೂ ಇಂತಹ ನುಡಿಗಟ್ಟುಗಳನ್ನೋದುವಾಗ ಬಿಕ್ಕಳಿಸದಿರಲಾರ. ಅವನ ವ್ಯಕ್ತಿತ್ವವೂ ಹಾಗೆಯೇ. ಅಲ್ಲಸಲ್ಲದ ಗುಣಾಕಾರ ಭಾಗಹಾರಗಳಲ್ಲಿ ಹೊತ್ತು ಕಳೆಯುವುದೆಂದರೆ ಆತನಿಗೆ ಪರಮ ಪ್ರೀತಿ. ಒಂದು ಬೆಳಕಿನ ವರ್ಷದಲ್ಲಿ (ಬೆಳಕು ಒಂದು ವರ್ಷದಲ್ಲಿ ಸಂಚರಿಸುವ ದೂರದಲ್ಲಿ) ಎಷ್ಟು ಅಡಿ ಎಷ್ಟು ಅಂಗುಲಗಳಿವೆ ಎಂದು ಹುಡುಕುವ ಹುಚ್ಚು ಕೆಲಸಗಳಲ್ಲಿ ಅವನ ವ್ಯಾಸಂಗ ಮುಗಿಯುತ್ತದೆ.

ಪ್ರತಿಭೆ ಮುಗುಳಾಗಿದ್ದಾಗ ಇವನು ಫಿಲಡಲ್ಫಿಯಾದ Saturday Evening Post ಮುಂತಾದ ಪತ್ರಿಕೆಗಳಿಗೆ ಹರಟೆ ಬರೆಯುತ್ತಿದ್ದ. ಕಾಸು ಸಂಪಾದನೆಯೂ ಈ ರೀತಿ ದೊರೆಯುತ್ತಿತ್ತು. ಅದಷ್ಟು ಲೀಕರ್ ಕುಡಿದು, ಇಸ್ಪೀಟು ಆಡಿ ವ್ಯಯಿಸದಂತೆ ತಾಯಿ ಆತನಿಗೆ ಬೋಧಿಸುತ್ತಿದ್ದಳು ಎಂದು ಅವನೇ ತನ್ನ ಆತ್ಮಕತೆಯಲ್ಲಿ ಬರೆದುಕೊಂಡಿದ್ದಾನೆ. ದಿನಕ್ಕೊಮ್ಮೆ ಮತವನ್ನು ಬದಲಿಸುವುದು, ಇಂದಾಡಿದನ್ನು ನಾಳೆ ಅಲ್ಲಗಳೆಯುವುದು—ಇವೆಲ್ಲ ಅಮೇರಿಕದ ಸಂಪ್ರದಾಯಗಳು. ಮಾರ್ಕ್‌ಟ್ವೇನನೂ ಹಾಗೆಯೇ ಇದ್ದನಂತೆ. ಇಂದು ನಾಸ್ತಿಕನಾಗಿದ್ದರೆ ನಾಳೆ ಅಂಧ ಕ್ರಿಶ್ಚಿಯನ್, ಇಂದು ಚಂಚಲನಾಗಿದ್ದರೆ ನಾಳೆ ಕಡು ಕಠಿಣ. ಹೀಗೆ ಮಾರ್ಕ್‌ಟ್ವೇನ್ ಇದ್ದ ಅಮೇರಿಕದ ಆ ಪರಿಸರದಲ್ಲಿ. ಆದರೆ ಅವನ ರಸಿಕತೆ ಮಾತ್ರ ರಸಿಕತೆಯಾಗಿಯೇ ಇತ್ತು-ಕೊನೆಯ ತನಕವೂ.

ಮಿಸ್ಸಿಸ್ಸಿಪಿಯ ಮೇಲಿನ ಬಾಳ್ವೆ

ಮಿಸ್ಸಿಸ್ಸಿಪಿ ನದೀ ತೀರದ ತನ್ನ ಬಾಳಿನ ಕುರಿತು ಬರೆದ ಹೊತ್ತಿಗೆಯೊಂದರಿಂದ 'ಕ್ಲೆಮೆನ್ಸ್' ಎಂದಿದ್ದ ತರುಣ ನಗೆಗಾರ ಮೊದಲ ಬಾರಿಗೆ ಮಾರ್ಕ್‌ಟ್ವೇನ್ ಎಂದೆನಿಸಲು ತಂದೆತಾಯಿಗಳಿಟ್ಟ ನಲ್ಮೆಯ ಹೆಸರು ಹಳೆತನದ ಹಿಮರಾಶಿಯಲ್ಲಿ ಮುಳುಗಿ ಹೋಯಿತು. ಭವಿತವ್ಯಕ್ಕೆ 'ಮಾರ್ಕ್‌ಟ್ವೇನ್" ನಿರಂತರನಾದ. ಈ ಗ್ರಂಥದಲ್ಲಿ ನಗೆಗಾರನು ಮಿಸ್ಸಿಸ್ಸಿಪಿ ನದಿಯನ್ನು ಹಗಲಲ್ಲೂ, ರಾತ್ರಿಯಲ್ಲೂ, ನೀರಿನುದ್ದಕ್ಕೂ, ನೀರಿನಾಳಕ್ಕೂ, ಉಗಮದಿಂದ ಸಂಗಮಕ್ಕೂ, ಸಂಗಮದಿಂದ ಉಗಮಕ್ಕೂ, ಇಳಿತ ಭರತಗಳೆರಡರಲ್ಲಿಯೂ ನೀರಿನಲ್ಲಿ ಕಣ್ಣು ಮುಳುಗಿಸಿ ನೋಡಿದ್ದಾನೆ. ಇದೇ ಸಮಯದಲ್ಲಿ ಲಿಂಕನನ ನೇತೃತ್ವದಲ್ಲಿ ಗುಲಾಮಗಿರಿಯ ನಿವಾರಣೆಗಾಗಿ ಅಂತಃಯುದ್ಧವೊಂದು ಪ್ರಾರಂಭವಾಗಲು ಮಾರ್ಕ್‌ಟ್ವೇನ್ ಕಾರಣಾಂತರದಿಂದ ಪಶ್ಚಿಮದಲ್ಲಿ ಕೆಲಿಫೋರ್ನಿಯಾಕ್ಕೆ ತೆರಳಬೇಕಾಗಿ ಬಂತು. ಈ ಪ್ರಯಾಣದ ಕತೆಯನ್ನು Roughing it ಎಂಬ ಇನ್ನೊಂದು ಪುಸ್ತಕದಲ್ಲಿ ತಿಳಿವಾಗಿ ಚಿತ್ರಿಸಿದ್ದಾನೆ. ಅದರಲ್ಲೂ ಕಥೆಯ ತುಂಬಾ ನಗೆಯ ಥಳಕು Jackass Rabbit ಎಂಬ ಪ್ರಾಣಿ ಇದೆಯೇ? ಆ ಪ್ರಾಣಿ ತಾನು ಮಾಡಿದ ಪಾಪಕೃತ್ಯಗಳ ಕುರಿತು ತಾನೇ ಯೋಚಿಸುತ್ತದಂತೆ; ಹಂಬೋಲ್ಟ್ ಜಿಲ್ಲೆಯ ನೀರು ಬಹಳ ಖಾರವಂತೆ; ಟಾಹೂ ಸರೋವರದ ನೀರಿನಿಂದ ೧೫೦ ಅಡಿ ಆಳದ ವಸ್ತು ಮುಳುಗಿದ್ದರೂ ಅದು ಮೇಲ್ನೋಟಕ್ಕೆ ತೋರುತ್ತದಂತೆ-ಇವೆಲ್ಲ ಟ್ವೇನನ ಕಥೆಗಳು, ಇವುಗಳಲ್ಲಿ ಸತ್ಯದ ಕೊನೆಯೆಲ್ಲಿ! ಸಟೆಯ ಮೊದಲೆಲ್ಲಿ? ಎಂಬುದನ್ನು ತಿಳಿಯುವುದೇ ದುಷ್ಕರವಾದುದು.

ಕೆಲಿಫೋರ್ನಿಯಾದಲ್ಲಿ ಪತ್ರಿಕೆಗಳಿಗಾಗಿ ಟ್ವೇನ್ ಬಹಳ ವ್ಯವಸಾಯ ಮಾಡಿದನು. 'ಹಾರುವ ಕಪ್ಪೆ" 'ಹೆದರಿದ ಮನುಷ್ಯ' ಮುಂತಾದ ಅನೇಕ ಕಿರುಗತೆಗಳು ಗರಿಗೆದರಿ ಬಂದುವು. ಪ್ರತಿಯೊಂದರಲ್ಲೂ ನಗು! ನಗು! ನಗು! ಆದರೆ ಇವೆಲ್ಲಾ ಆತನ ವಿದೇಶಖ್ಯಾತಿಯನ್ನೇನೂ ತರಲಿಲ್ಲ. ಆದಕ್ಕೆ, ಮಾರ್ಕ್‌ಟ್ವೇನ್ ಜಗತ್ತಿನ ರಸಿಕನಾಗಲಿಕ್ಕೆ ಅವನ ಮುಂದಿನ ಕೃತಿ Innocents Abroad ಬೇಕಾಗಿ ಬಂತು. ಅಲೆಗ್ಸಾಂಡರನು ಕತ್ತಿ ಹಿಡಿದು ಜಗತ್ತನ್ನೇ ಗೆಲ್ಲ ಹೊರಟರೆ, ಮಾರ್ಕ್‌ಟ್ವೇನ್ ಲೆಕ್ಕಣಿಕೆಯಿಂದಲೇ ಸಮಸ್ತ ಜನಕೋಟಿಯನ್ನು ತನ್ನ ಕಾಲಾಳುಗಳನ್ನಾಗಿ ಮಾಡಿಕೊಂಡ.

ಜೀವನದಲ್ಲಿ ಪ್ರಣಯ

ಮಿತ್ರನಾದ ಚಾರ್ಲಿ ಲ್ಯಾಂಗ್‌ಡನ್ ಒಂದು ದಿನ ಮಾರ್ಕ್‌ಟ್ವೇನ್‌ನಿಗೆ ತನ್ನ ತಂಗಿಯಾದ ಒಲಿವಿಯಾಳ ಒಂದು ಚಿತ್ರವನ್ನು ತೋರಿಸಲು ಈ ತರುಣ ಸಂಪೂರ್ಣ ಮನಸೋಲುವಂತಾಯಿತು. ಡೋರಾ, ಮತ್ತು ಡೇವಿಡ್ ಕೋಪರ್‌ಫೀಲ್ಡ್—ಇವರ ಪ್ರೇಮಕಥೆಯಂತೆ ಮಾರ್ಕ್‌ಟ್ವೇನ್ ಈ ಚೆಲುವಿನ ಕನ್ಯೆಯನ್ನು ಮನಸಾರೆ ಮೆಚ್ಚಿ, ಪ್ರೀತಿಸಿ, ವರಿಸಿದನು. ಒಲಿವಿಯಾ ಮತ್ತು ಮಾರ್ಕ್‌ಟ್ವೇನರ ನಡವಳಿಕೆಗಳು ತೀರಾ ವ್ಯತಿರಿಕ್ತವಾಗಿದ್ದವು. ಮಾರ್ಕ್‌ಟ್ವೇನ್ ಎಷ್ಟೊಂದು ಕಠಿಣನಿದ್ದನೋ ಆಕೆಯು ಅಷ್ಟೇ ಕೋಮಲೆ. ಈತನೆಷ್ಟು ಸಂಶಯಾತ್ಮನಿದ್ದನೋ ಆಕೆಯು ಅಷ್ಟೇ ಶ್ರದ್ಧೆಯುಳ್ಳವಳಾಗಿದ್ದಳು. ಇವನೊಂದು ಕೆತ್ತದ ವಜ್ರದಂತೆ ಆಕೆ ಮಿದುವಾದ ಹೂವಿನಂತೆ. ಆದರೆ ಇವರಿಬ್ಬರ ಪ್ರಣಯಜೀವನಕ್ಕೆ ಈ ವ್ಯತಿರಿಕ್ತತೆಗಳಿಂದ ಯಾವ ತಡೆಯೂ ಉಂಟಾಗಲಿಲ್ಲ. ಬದಿಯಲ್ಲಿ ಪ್ರಣಯಿನಿ, ಮುಂದೆ ಬರೆಯುವ ಮೇಜು, ಕಾಲ ಕೆಳಗೆ ಜಗತ್ತು ಇರಲು ಮಾರ್ಕ್‌ಟ್ವೇನನಿಗೆ ಮತ್ತೇನು ಬೇಕು?

ಡಿಕನ್ಸ್ ಮತ್ತು ಮಾರ್ಕ್‌ಟ್ವೇನ್

ಡಿಕನ್ಸ್ ಇಂಗ್ಲಿಷ್ ಸಮಾಜದಲ್ಲಿ ತಾನೊಪ್ಪದುದನ್ನೆಲ್ಲಾ ನಂಜುಗಳ ನಗೆಯ ಗುರಿಯಾಗಿ ಮಾಡಿ ಗಾಳಿಗೆ ಕಟ್ಟಿದ್ದನು. ಬ್ರಿಟನ್ನಿನ ಸಂಸ್ಥೆಗಳು, ಜನವರ್ಗ, ಶ್ರೀಮಂತರು ಇವರನ್ನೆಲ್ಲಾ ದೋಷಾರೋಪಣೆಯಿಂದ ತೆಗಳಿದ್ದಾನೆ. ಅದಕ್ಕಿಂತ ಮೇಲಿನ ಯಾವ ವಿಷಯಗಳನ್ನೂ ಆತನು ಚರ್ಚಿಸಿಲ್ಲ. ಆದರೆ ಮಾರ್ಕ್‌ಟ್ವೇನನ ವಿಷಯದಲ್ಲಿ ಮಾತ್ರ ಈ ನಗೆ ನೋಟಕ್ಕೆ ಸೀಮೆಯೇ ಇಲ್ಲ. ನೀಲಿ ಮುಗಿಲಿನ ತನಕ ಅದು ಹಬ್ಬಿದೆ. ದೇವರ ಸರ್ವಶಕ್ತತೆಯನ್ನು ಅವನು ಲೆಕ್ಕಣಿಕೆಯಲ್ಲಿ ಸವೆದು ನೋಡಿದ್ದಾನೆ. ಬೈಬಲ್ ನಂಬಲರ್ಹವೇ? ನರಕವು ಸತ್ಯವೇ?—ಮುಂತಾದ ಎಲ್ಲಾ ಆಗುಹೋಗುಗಳನ್ನವನು ರಸದೃಷ್ಟಿಯಿಂದ ನೋಡಿದ್ದಾನೆ. "ಆಡು ಮುಟ್ಟದುದಿಲ್ಲ." ಎನ್ನುತ್ತಾರಲ್ಲ ಹಾಗೆ.

ಟಾಮ್‌ಸಾಯರ್ ಮತ್ತು ಹಕ್ಲ್‌ಬರ್ರಿಫಿನ್

"ಟಾಮ ಸಾಯರ್" ಎಂಬುದು ಆತನಿಗೆ ಮೊದಲ ಬಾರಿಗೆ ಕೀರ್ತಿ ತಂದ ಕೃತಿ. ಇದು ಮಕ್ಕಳಿಗೆ ಹೇಳುವ ಕಥೆ ಎಂತಿದ್ದು ತೀರ ಆಹ್ಲಾದಕರವಿದ್ದು ನಕ್ಕು ನಗಿಸು

(ಹನ್ನೊಂದನೇ ಪುಟ ನೋಡಿರಿ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. ೪ 17—4/೦5—೬೬ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಗುರು ದೇವರ

ಸ್ಫೂರ್ತಿ ದೇವಿ - ನಲಿನಿ

ಬರೆದವರು: ಶ್ರೀ ಸ ನಾರಾಯಣ

ರವೀಂದ್ರನಾಥ ಟಾಗೂರರು ವಂಗ ದೇಶದ ಹೆಸರಾಂತ ಕವಿ. ಬಂಗಾಳದ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಪರಂಪರೆಯನ್ನು ಪ್ರಚಾರಕ್ಕೆ ತಂದ ಪ್ರತಿಭಾವಂತ ಬರಹಗಾರರು. ಅವರ ಸೇವೆ ಕೇವಲ ವಂಗ ನಾಡಿಗೆ ಮಾತ್ರವೇ ಸೀಮಿತವಾಗಿ ಉಳಿಯಲಿಲ್ಲ. ರವೀಂದ್ರರ ಸಾಹಿತ್ಯ ಸೇವೆ ರಾಷ್ಟ್ರದ ಮನೆ ಮಾತು. ರವೀಂದ್ರರು ರಚಿಸಿದ ಸಾಹಿತ್ಯ ಓದುಗರ, ಸಾಹಿತ್ಯಾಭಿಮಾನಿಗಳ ಹಿರಿಯ ಆಸ್ತಿ. ಅಸಾಧಾರಣ ಪಾಂಡಿತ್ಯ-ಪ್ರತಿಭೆಗಳಿಂದ ರಾಷ್ಟ್ರಕವಿಯಾಗಿ ಮಾತ್ರವೇ ಅಲ್ಲದೆ ಅಂತರರಾಷ್ಟ್ರೀಯ ಕೀರ್ತಿ ಪಡೆದ ಮಹಾವ್ಯಕ್ತಿ ಅವರು. ಅವರು ಸಾಮಾನ್ಯರಾಗಿ ಜನಿಸಿದರು. ಸಾಮಾನ್ಯರಂತೆ ಜೀವಿಸಿದರು ಆದರೆ ಅವರು ಅಸಾಮಾನ್ಯ ವ್ಯಕ್ತಿ ವಿಶ್ವಮಾನ್ಯ ವ್ಯಕ್ತಿ. ಗೀತಾಂಜಲಿ ಮೊದಲಾದ ಭಾವನಾಮಯ ಭವ್ಯ ಕವಿತೆಗಳನ್ನು ರಚಿಸಿ ನೋಬೆಲ್ ಪಾರಿತೋಷಕವನ್ನು ಪಡೆದರು.

ಅವರ ಅಪಾರ ಅನುಭವ, ಜ್ಞಾನ, ಪಾಂಡಿತ್ಯ, ಪ್ರತಿಭೆಗಳು ಅವರ ಬರಹಗಳಲ್ಲಿ— ಅವರ ಕವನಗಳಲ್ಲಿ ಪ್ರತ್ಯಕ್ಷವಾಗಿ ಸ್ಫುಟಿಸುತ್ತಿವೆ. ರವೀಂದ್ರರ ಭವ್ಯ ಭಾವನೆ, ವಿಶಾಲ ಅಂತಃಕರಣಗಳು ಕವನಗಳಲ್ಲಿ ಅಸ್ಪೃಶ್ಯವಾಗಿವೆ. ಅವರು ಕವಿಗಳಾಗಿ, ಸಮಾಜ ಸೇವಕರಾಗಿ, ಕಲಾವಿದರಾಗಿ, ಮಾನವ ಪ್ರೇಮಿಯಾಗಿ, ರಾಷ್ಟ್ರಭಕ್ತರಾಗಿ, ಧರ್ಮಾಭಿಮಾನಿಗಳಾಗಿ ಬದುಕಿ ಬಾಳುವೆಯನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ರವೀಂದ್ರರ ಬರಹಗಳು ರಾಷ್ಟ್ರದ ಪ್ರಮುಖ ಭಾಷೆಗಳಿಗೆ ಮಾತ್ರವೆ ಅನುವಾದಿತವಾಗಿರದೆ ವಿಶ್ವದ ವಿವಿಧ ಪ್ರಮುಖ ಭಾಷೆಗಳಿಗೂ ಭಾಷಾಂತರಹೊಂದಿವೆ.

ಕವಿ—ಕಲಾವಿದರಿಗೆ ಮಾತ್ರವಲ್ಲದೆ ಪ್ರತಿ ವ್ಯಕ್ತಿಯೂ ಕರ್ತವ್ಯದ ಕಡೆಗೆ ಗಮನ ಹರಿಸಲೂ ಸ್ಫೂರ್ತಿ ಅಗತ್ಯ. ಕವಿ ಕಲಾವಿದರಿಗೆ ಸ್ಫೂರ್ತಿಯ ಬೆಳಕು ಕಾಣದಿದ್ದರೆ ಕೆಲಸವೇ ಸಾಗದು. ಕಲಾವಿದನ ಬಾಳಿನಲ್ಲಿ ವ್ಯಕ್ತಿಯೋ, ಸಜೀವ ವಸ್ತುವೋ ಅಥವಾ ಪ್ರಕೃತಿಯು ಯಾವುದಾದರೊಂದು ಮೂಲವೋ ಸ್ಫೂರ್ತಿ ನೀಡಿ ಅವನ ಮನದ ಕಲಾಶಕ್ತಿಯನ್ನು ಪ್ರಚೋದಿಸಿ ಅವನ ಅಂತರಂಗದಲ್ಲಿ ಅಡಗಿರುವ ಕಲಾ ಶಕ್ತಿಯನ್ನು ಬೆಳಕಿಗೆ ತರಲು ಅವಕಾಶವಾಗಬಹುದು— ಸಹಕಾರಿಯಾಗಬಹುದು.

ರವೀಂದ್ರರ ಕಾವ್ಯಧಾರೆಯ ಚಲನೆಗೆ ಪ್ರೋತ್ಸಾಹ ನೀಡಿದ ಹಲವರಲ್ಲಿ ನಲಿನಿ ಎಂಬುವಳು ಒಬ್ಬಳು. ರವೀಂದ್ರರು ಆಕೆ ಬಗ್ಗೆ ಕೆಲವು ಸಂಗತಿಗಳನ್ನೂ ಸ್ಪಷ್ಟವಾಗಿ ಬಹಿರಂಗ ಪಡಿಸಿದ್ದಾರೆ.

ಸತ್ಯೇಂದ್ರನಾಥರು ರವೀಂದ್ರರ ಹಿರಿಯಣ್ಣ, ನಿವೃತ್ತ ನ್ಯಾಯಾಧೀಶರು. ರವೀಂದ್ರರನ್ನು ವಿಲಾಯಿತಿಗೆ ಕಳುಹಿಸಬೇಕೆಂಬ ಆಕಾಂಕ್ಷೆ ಸತ್ಯೇಂದ್ರರಿಗೆ ವಿಶೇಷವಾಗಿತ್ತು. ವಿಲಾಯಿತಿಯ ವ್ಯವಹಾರಗಳು, ಸಂಸ್ಕೃತಿ ಭಾರತೀಯತೆಯಿಂದ ಭಿನ್ನವಾಗಿದ್ದುದರಿಂದ ರವೀಂದ್ರರಿಗೆ ಅವುಗಳ ಪರಿಚಯ ಇಲ್ಲದಿದ್ದುದರಿಂದ, ಅಲ್ಪ ಪರಿಚಯ ಪಡೆಯುವ ಸಲುವಾಗಿ ಬೊಂಬಾಯಿಯಲ್ಲಿದ್ದ ಗೆಳೆಯ ದಾದೋಬಾ ಪಾಂಡುರಂಗ ಎಂಬುವರಲ್ಲಿಗೆ ರವೀಂದ್ರರನ್ನು ಸತ್ಯೇಂದ್ರರು ಕಳುಹಿಸಿದರು. ಬೊಂಬಾಯಿಯಲ್ಲಿದ್ದ ದಾದೋಬಾ ಪಶ್ಚಿಮ ಸಂಸ್ಕೃತಿಯ ಪ್ರತಿರೂಪವಾಗಿದ್ದರು. ಅವರ ಮನೆಯವರೆಲ್ಲರೂ ಇಂಗ್ಲಿಷ್ ಶಿಕ್ಷಣ ಮತ್ತು ಸಂಸ್ಕೃತಿ ಎಲ್ಲಿ ನುರಿತವರಾಗಿದ್ದರು.

ನಲಿನಿ ದಾದೋಬಾರ ಮಗಳು. ನಲಿನಿ ಕೆಲಕಾಲ ಇಂಗ್ಲೇಂಡಿನಲ್ಲಿದ್ದು ಬೊಂಬಾಯಿಗೆ ಬಂದಿದ್ದಳು. ಇವಳ ಹೆಸರ ನಲಿನಿ ಎಂಬುದಾಗಿಂದೆ 'ಅನ್ನಾ" ಎಂಬುದಾಗಿತ್ತು. ಅನ್ನಾ ಸುಶಿಕ್ಷಿತಳು ಮೇಲಾಗಿ ಸುಸಂಸ್ಕೃತ ಮನೋಭಾವದಳು. ಸರಳ ಹೃದಯದ ಅನ್ನಾ ಕವಿ ಹೃದಯದ ರವೀಂದ್ರರೊಂದಿಗೆ ಹೊಂದಿಕೊಂಡಳು. ಆರಂಭದ ದಿನಗಳಲ್ಲಿ ರವೀಂದ್ರರು ಅನ್ನಾಳೊಂದಿಗೆ ಮಾತನಾಡಲು ಅಂಜುತ್ತಿದ್ದರಂತೆ. ಹೀಗೆ ಅಂಜುತ್ತಿದ್ದುದು ಭಯದಿಂದಲ್ಲ, ಸಂಕೋಚದಿಂದ. ಅನ್ನಾಳ ಹತ್ತು ಮಾತುಗಳಿಗೆ ಒಂದೇ ಮಾತಿನಲ್ಲಿ ಉತ್ತರಿಸುತ್ತಿದ್ದರಂತೆ. ರವೀಂದ್ರರ ಕಾವ್ಯಾಭಿಮಾನ— ಅಭಿರುಚಿ—ಆಸಕ್ತಿ—ಶಕ್ತಿಯನ್ನು ಅರಿತ ಅನ್ನಾ ಅವರೊಂದಿಗೆ ಕವನಗಳ ವಿಷಯವಾಗಿ ಮಾತನಾಡಲಾರಂಭಿಸಿದಳು. ಇದರಿಂದ ರವೀಂದ್ರರು ಅವಳ ನಿಕಟವರ್ತಿಗಳಾದರು. ಅನ್ನಾಳಿಗಾಗಿ ರವೀಂದ್ರರು ತಮ್ಮ ಹೊಸ ಕಾವ್ಯ "ಕವಿ-ಕಹಿನಿ"ಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದರು. ಅವರು ಓದಿ ಹೇಳುವಾಗ ಅನ್ನಾ ಮುಗ್ಧ ಮನೋಭಾವದಿಂದ ಆಲಿಸಿ "ಈ ಕವಿತೆ ಎಷ್ಟು ಚೆನ್ನಾಗಿದೆ? ಇದನ್ನೆಲ್ಲ ಹೇಗೆ ಬರೆದಿರಿ?" ಎಂದು ಪ್ರಶ್ನಿಸುತ್ತಿದ್ದಳು. "ಇದನ್ನೆಲ್ಲ ನನಗೊಬ್ಬ ದೇವತೆ ಹೇಳುತ್ತಾಳೆ" ಎಂದು ನಗುತ್ತಾ ಹೆಮ್ಮೆಯಿಂದ ಉತ್ತರಿಸುತ್ತಿದ್ದರಂತೆ ರವೀಂದ್ರರು. ರವೀಂದ್ರ ಕವನಗಳೆಲ್ಲ ಪುಸ್ತಕ ರೂಪದಲ್ಲಿ ಪ್ರಕಟವಾದಾಗ ಜ್ಯೋತೀಂದ್ರನಾಥರು ಅನ್ನಾಳಿಗೊಂದು ಪ್ರತಿಯನ್ನು ಕಳುಹಿಸಿದರಂತೆ.

"ರವೀಂದ್ರರು ನನಗೆ ಈ ಕವನವನ್ನು ಹತ್ತಾರು ಬಾರಿ ಓದಿ ಹೇಳಿದ್ದಾರೆ. ಆದರ ಅಂದಾಜು ಬೇಕಿದ್ದರೆ ತಿಳಿಸಿ, ಅವೆಲ್ಲವುಗಳ ಕಂಠಪಾಠವಾಗಿವೆ"— ಎಂದು ಅನ್ನಾ ಜ್ಯೋತೀಂದ್ರನಾಥರಿಗೆ ಬರೆದ ಪತ್ರದಲ್ಲಿ ತಿಳಿಸಿದಳಂತೆ. ಅನ್ನಾಳ ಈ ಉತ್ತರವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿದಾಗ ಅನ್ನಾ ಮೂಲ ಬಂಗಾಲಿ ಕವನಗಳನ್ನು ಕಂಠಪಾಠ ಮಾಡಬೇಕಾದರೆ, ರವೀಂದ್ರರಿಗೆ ಇಂಗ್ಲೀಷ್ ರೀತಿ ನೀತಿಗಳನ್ನು ಕಲಿಸುವುದರ ಜೊತೆಗೆ ಅವರಿಂದ ಬಂಗಾಲಿಯನ್ನು ಕಲಿತಳೆಂದು ತೋರುತ್ತದೆ.

ಕವಿ ರವೀಂದ್ರರು ಅವಳನ್ನು ಅನ್ನಾ ಎಂದೇ ಸಂಬೋಧಿಸುವುದು ಅಭ್ಯಾಸವಾಗಿತ್ತು. ಆದರೆ ಆ ಹೆಸರು ಅವಳಿಗೇಕೋ ಒಪ್ಪಿಗೆ ಆಗಲಿಲ್ಲ. ಒಮ್ಮೆ 'ನನ್ನ ಚಿಕ್ಕ ಆಸೆಯನ್ನು ಪೂರೈಸುವಿರಾ' ಎಂದು ಅನ್ನಾ ರವೀಂದ್ರರನ್ನು ಪ್ರಶ್ನಿಸಿದಳು. ರವೀಂದ್ರರು 'ಸಾಧ್ಯವಿದ್ದರೆ ಆಗಬಹುದು' ಎಂದು ಉತ್ತರಿಸಿದರು. ಆಗ ಅನ್ನಾ—'ನನಗೇಕೋ ಅನ್ನಾ ಎನ್ನುವ ಹೆಸರು ಇಷ್ಟವಿಲ್ಲ, ನಿಮ್ಮ ಕವನ ಭಂಡಾರದಿಂದ ನನಗಾಗಿ ಉತ್ತಮವಾದ ಹೆಸರೊಂದನ್ನು ಆರಿಸುವಿರಾ" ಎಂದು ಪ್ರಾರ್ಥಿಸಿದಳು. "ಅದಕ್ಕೇನಂತೆ? ಇಂದಿನಿಂದ ನಿನ್ನನ್ನು ನಲಿನಿ ಎಂದು ಕೂಗಲೇ" ಎಂದರು ರವೀಂದ್ರರು. ಆ ಕ್ಷಣವೇ ರವೀಂದ್ರರು ಸೂಚಿಸಿದ ಹೆಸರನ್ನು ಅನ್ನಾ ಸಂತೋಷದಿಂದ ಮೆಚ್ಚಿದಳು. ಅಂದಿನಿಂದ ಅನ್ನಾ 'ನಲಿನಿ' ಆದಳು.

ರವೀಂದ್ರರು ನಲಿನಿಯ ಹೆಸರಿನಿಂದ ಕವನಗಳನ್ನು ರಚಿಸತೊಡಗಿದರು. ಕವನಗಳಲ್ಲಿ ತನ್ನ ಪ್ರತಿರೂಪವನ್ನು ಕಂಡ ನಲಿನಿ ಸಂತಸಗೊಂಡಳು. ರವೀಂದ್ರರು "ನಲಿನಿ ಖೊಲೊ ಗೊ ಅಂಖಿ' ಎಂಬ ಕವನವನ್ನು ನಲಿನಿಯ ನಿಶ್ಚಿತ ರೂಪವನ್ನು ಆಧಾರವಾಗಿಟ್ಟುಕೊಂಡೇ ಹೆಣೆದಿದ್ದಾರೆ. ಈ ಸಂಗತಿಯನ್ನು ಅವರೇ ಒಪ್ಪಿಕೊಂಡಿದ್ದಾರೆ.

"ನಾನು ನನ್ನ ಜೀವಮಾನದಲ್ಲಿ ಅವಳನ್ನೆಂದಿಗೂ ಮರೆಯಲಾರೆ, ಅವಳ ಹೃದಯ ಸ್ಫಟಿಕದ ತೆರೆ, ಅವಳ ಆಕರ್ಷಣೆಯಿಂದ ನಾನು ಪ್ರಭಾವಿತನಾದರೂ, ಉಪೇಕ್ಷೆಯ ದೃಷ್ಟಿಯಿಂದ ಎಂದೂ ನೋಡಲಿಲ್ಲ. ಅವಳ ಮನಸ್ಸು ಸಮುದ್ರದ ತೆರೆಯಂತೆ ವಿಶಾಲ ಹಾಗೂ ಗಂಭೀರ ಮೌನದಿಂದ ಆಚ್ಛಾದಿತವಾಗಿತ್ತು.' ಎಂದು ತಮ್ಮ ವೃದ್ಧಾಪ್ಯದಲ್ಲಿ ರವೀಂದ್ರರು ದಿಲೀಪ ಕುಮಾರ ರಾಯರೊಂದಿಗೆ ಹೇಳಿದ್ದಾರೆ.

'ಜೀವನ ಯಾತ್ರೆಯ ಪರಿಭ್ರಮಣದ ಮಧ್ಯದಲ್ಲಿ ಒಮ್ಮೊಮ್ಮೆ ಮನದ ಮಂದಿರಕ್ಕೆ ದೇವತೆಯೊಬ್ಬಳ ಪ್ರವೇಶವಾದಾಗ ಹೃದಯ ಕ್ಷೇತ್ರ ವಿಸ್ತೃತವಾಗುತ್ತದೆ. ಅವಳು ಕರೆಯದೆಯೇ ಬರುತ್ತಾಳೆ. ಕೊನೆಗೊಂದು ದಿನ ಕೂಗಿದರೂ ಮಾರ್ದನಿಗೊಡದಷ್ಟು ದೂರವಾಗಿ ಅಜ್ಞಾತ ವ್ಯಕ್ತಿಯಾಗುತ್ತಾಳೆ' ಎಂದು ರವೀಂದ್ರರು ತಮ್ಮ ಸಹಜ ಸರಳ ರಹಸ್ಯ ಭಾಷೆಯಲ್ಲಿ ಹೀಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಂಗತಿಯು ನಿರೂಪಣೆ ನಲಿನಿಯನ್ನು ನಿರ್ದೇಶಿಸಿ ಬರೆದುದೇ ಆಗಿದೆ.

"ಓ ಎನ್ನ ನಲಿನಿ, ಲಜ್ಜಾವತಿಯಾದ ನಲಿನಿ, ಬಹುಜನರ ಕಂಗಳಲ್ಲಿ ಸೌಂದರ್ಯ ವಿರಾಜಿಸಿದರೆ, ನಿನ್ನ ನೇತ್ರಗಳಲ್ಲಿ ಪ್ರೇಮವೇ ರಂಗುರಂಗಾಗಿದೆ. ಓ ಸುಕೋಮಲ ನಲಿನಿ, ಎಲ್ಲಿ ಮಧುರ ರೂಪ ಭಾಸವಾಗುವುದೋ ಅಲ್ಲಿ ಪ್ರಕೃತಿ ವಿಲೀನವಿದೆ"—ಇದು ರವೀಂದ್ರರು ಬರೆದ ಕವನದ ಪಂಕ್ತಿಗಳ ಅರ್ಥ. ಈ ಸಾಲುಗಳಲ್ಲಿ ನಲಿನಿಯ ರೂಪದ ಪ್ರಸ್ತಾಪವಿದೆ. ಕವಿ ರವೀಂದ್ರರಿಗೆ ನಲಿನಿಯ ಬಗ್ಗೆ ಯಾವ ಮಟ್ಟದ ವಿಶಾಲ ಹಾಗೂ ಶ್ರೇಷ್ಠ ಭಾವನೆ ಇತ್ತು ಎಂಬುದು ಈ ಸಾಲುಗಳಿಂದ ತಿಳಿಯುತ್ತದೆ. ನಲಿನಿ ಕವಿ ರವೀಂದ್ರರ ಸ್ಫೂರ್ತಿಯ ದೇವತೆ, ಶಕ್ತಿ ಸ್ವರೂಪಿಣಿ ಎಂಬುದು ಸ್ಪಷ್ಟವಾಗಿದೆ. ಅವರು ತಮ್ಮ ಅನೇಕ ಕವನಗಳಲ್ಲಿ ಪ್ರತ್ಯಕ್ಷವಾಗಿ— ಅಪ್ರತ್ಯಕ್ಷವಾಗಿ ನಲಿನಿಯ ಸೌಂದರ್ಯ, ಗುಣ, ಮನೋಭಾವ, ಅಂತಃಕರಣಗಳನ್ನು ರೂಪಿಸಿದ್ದಾರೆ. ನಲಿನಿ ರವೀಂದ್ರರ ಕವನಗಳ ಉಸಿರು—ಸ್ಫೂರ್ತಿ ಸ್ವರೂಪಿಣಿ.

ಕಾನನದ ಕುಸುಮವೇ

ಕಾನನದ ಕುಸುಮಗಳಿವು
ಮಾನಿನಿಗೆ ಬೇಡದವು
ಕಾನನದ ಬಳಿಯಿರಲಹುದು ಸೌರಭವು.
ವನದಲ್ಲಿ ಒಡಹುಟ್ಟಿ
ಘನಕುಸುಮವು ತಲೆಯೆತ್ತಿ
ಬನದಲ್ಲೆ ನಾಶವನು ಹೊಂದುವ
ಕುಸುಮವು.
ನಿನಗಿನಿತು ಮುದವಿಲ್ಲ
ಬನವೆಲ್ಲ ಪರಿಮಳದ
ಇನಿದಾದ ಸುಧೆಯನ್ನು ಹರಡುತ್ತಿರುವೆ.
ಕಾನನದ ಲತೆಯಲ್ಲಿ
ನಿನ್ನ ಸೃಜಿಸಿದ ಈಶ
ವನದಲೆಲ್ಲೆಡೆ ಸುಗಂಧ ಸೂಸುತಿರುವೆ.
ದಿವ್ಯ ಬಾಳುವೆ ನಿನ್ನ
ಭವ್ಯ ಬಂಧುರವೆನ್ನ
ನಮ್ಮ ಬಾಳದು ಇರಲಿ ನಿನ್ನಂತೆಯೇ.
ನೀನು ಹುಟ್ಟುವ ವೇಗ
ಹನನವೂ ಅತಿವೇಗ
ನನ್ನ ಮೂಡಲಿ ಸುಮವೆ ನಿನ್ನಂತೆಯೇ.

ಮ. ಗೋ. ರಾವ್.

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ ಅಂಚೆ ವೆಚ್ಚ ರೇಲ್ವೆ ಮತ್ತು ವಿಮಾನ ರವಾನೆ ಖರ್ಚು ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ ರಿಯಾಯತಿ ದೊರೆಯುತ್ತದೆ.

ವಿವೇಚನೆ

ಅರಬ ಗಣರಾಜ್ಯದ ಅಧ್ಯಕ್ಷ ನಾಸರ್

ಬರೆದವರು: ಶ್ರೀ ಎಚ್. ಸುಂದರರಾವ್

೧೯೫೨ನೇ ಜುಲೈ ೨೩ನೇ ತಾರೀಕು ಇದು ಈಜಿಪ್ತ ದೇಶದಲ್ಲಿ ಒಂದು ಮಹತ್ವದ ದಿನ. ಅಂದು ೩೪ನೇ ವರ್ಷ ಪ್ರಾಯದ ಕರ್ನಲ್ ಗಮಾಲ್ ಅಬ್ದೆಲ್ ನಾಸರರು ಈಜಿಪ್ಟಿನಲ್ಲಿ ಒಂದು ಸ್ವತಂತ್ರ ಅರಬೀ ಗಣರಾಜ್ಯವನ್ನು ಸ್ಥಾಪಿಸಿದರು. ಬ್ರಿಟಿಷರ ಆಶ್ರಯದಲ್ಲಿ ದೇಶವನ್ನು ಆಳುತ್ತಿದ್ದ ಅರಸು ಫರೂಕರ ನಿರಂಕುಶ ಅಧಿಕಾರವನ್ನು ಕೊನೆಗೊಳಿಸಿ, ಸಮಾಜವಾದಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಕ್ರಾಂತಿ ಪುರುಷ ನಾಸರ್. ಮೊದಲಿನಿಂದಲೂ ಅವರು ಸ್ವಾತಂತ್ರ್ಯ ಪ್ರೇಮಿ. ತನ್ನ ಚಿಕ್ಕ ವಯಸ್ಸಿನಲ್ಲಿಯೇ ಸೈನ್ಯವನ್ನು ಸೇರಿದರು. ದೇಶಕ್ಕೋಸ್ಕರ ಯಾವ ತ್ಯಾಗಕ್ಕೂ ಸೈನ್ಯವು ಸಿದ್ಧವಿರಬೇಕೆಂದು ಅವರು ತನ್ನ ಸಹೋದ್ಯೋಗಿ ಸೈನ್ಯಾಧಿಕಾರಿಗಳಲ್ಲಿ ಪ್ರಚಾರ ಮಾಡಿದರು. ದೇಶದಲ್ಲಿ ಹಬ್ಬಿದ್ದ ದುರಾಡಳಿತೆ, ಅನ್ಯಾಯ, ಭ್ರಷ್ಟಾಚಾರಗಳನ್ನು ಸೈನ್ಯ ಬಲದಿಂದ ದಮನ ಮಾಡಬೇಕಲ್ಲದೆ, ಬೇರ್ಯಾವ ಉಪಾಯವಿಲ್ಲವೆಂಬುದನ್ನು ಚೆನ್ನಾಗಿ ತಿಳಿದುಕೊಂಡರು. ಎರಡನೇ ಮಹಾಯುದ್ಧದ ನಂತರ ಅರಬೀ ದೇಶಗಳೆಲ್ಲವೂ ಒಂದಾಗಿ ಬಾಳಬೇಕೆಂಬ ಮಹದುದ್ದೇಶವನ್ನು ನಾಸರರು ಘಂಟಾಘೋಷವಾಗಿ ಸಾರಿದರು. ಜನಜಾಗೃತಿಯ ಈ ಯುಗದಲ್ಲಿ ಅರಬಿಯರು ಪುರಾತನ ಕಟ್ಟುನಿಟ್ಟುಗಳಿಗೆ ಶರಣು ಹೋಗದೆ, ನವ ಚೈತನ್ಯವನ್ನು ಪಡೆದು ಪ್ರಗತಿಯ ದಾರಿಯಲ್ಲಿ ಮುಂದೆ ಸಾಗಬೇಕೆಂದು ಜನರನ್ನು ಪದೇ ಪದೇ ಹುರಿದುಂಬಿಸಿದರು. ಅರಬರಲ್ಲಿ ವ್ಯಾಪಕವಾಗಿ ಕಂಡುಬರುವ ದಾರಿದ್ರ್ಯ, ಅಜ್ಞಾನ ಮೂಢನಂಬಿಕೆಗಳು, ಇಡಿ ಜನಾಂಗದ ಅವನತಿಗೆ ಕಾರಣವೆಂದು ಅವರು ತಿಳಿದು ಅವುಗಳ ನಿವಾರಣೆಯೇ ಅರಬೀ 'ಜನತಾ ಕ್ರಾಂತಿಯ" (Peple's Revo-lution) ಮುಖ್ಯ ಗುರಿಯೆಂದು ಅವರು ಹೇಳಿದರು. ಅರಬ ಜನಾಂಗವು ಒಂದೇ ಮನಸ್ಸಿನಿಂದ, ಒಗ್ಗಟ್ಟಿನಿಂದ ಈ ಸಮಸ್ಯೆಗಳನ್ನು ಪರಿಹರಿಸಬೇಕು. ಅರಬೀ ರಾಷ್ಟ್ರೀಯತೆಯನ್ನು ಪುನರುದ್ಧರಿಸಿ, ಬಲಪಡಿಸಿ, ಮಧ್ಯ ಏಸಿಯಾ ಪ್ರದೇಶದಲ್ಲಿ ಹರಡಿ, ಭಿನ್ನ ಭಿನ್ನವಾಗಿ ಚದರಿದ ಅನೇಕ ಅರಬ ರಾಷ್ಟ್ರಗಳೊಳಗೆ ಭಾವೈಕ್ಯತೆಯನ್ನೂ, ಸಂಯಮವನ್ನೂ, ಸಾಧಿಸಿ, ಸಾಧ್ಯವಾದರೆ ಆ ದೇಶಗಳನ್ನೆಲ್ಲಾ ಒಟ್ಟು ಕೂಡಿಸಿ ಒಂದೇ ಸಮಗ್ರ ರಾಷ್ಟ್ರವನ್ನಾಗಿ ಪುನಃ ರಚಿಸುವ ಒಂದು ವಿಶಾಲ ಕನಸನ್ನು ಕಂಡರು.

ಪಾಶ್ಚಾತ್ಯ ರಾಷ್ಟ್ರಗಳು, ಮುಖ್ಯವಾಗಿ ಅಮೆರಿಕ ಮತ್ತು ಬ್ರಿಟನ್, ಹೊಸದಾಗಿ ಇಸ್ರೇಲ್ ರಾಜ್ಯವನ್ನು, ಎರಡನೆ ಮಹಾಯುದ್ಧದ ನಂತರ, ನಿರ್ಮಿಸುವಾಗ ಹೂಡಿದ ಕುತಂತ್ರಗಳು ನಾಸೇರರಿಗೆ ಸಹಿಸಲಿಲ್ಲ. ಸಹಸ್ರಾರು ಅರಬರು ನಿರಾಶ್ರಿತರಾಗಿ ಜೋರ್ಡಾನ್ ಸಿರಿಯಾ ದೇಶಗಳಿಗೆ ಬಂದು ನೆಲೆಸಿದ ಪ್ರಕರಣವನ್ನು ಅವರು ಇನ್ನೂ ಮರೆಯಲಿಲ್ಲ. ಈ ದುರಂತವು ನಾಸೆರರ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿದೆ. ಇಸ್ರೇಲ್ ರಾಜ್ಯಕ್ಕೆ ಅಮೆರಿಕ, ಬ್ರಿಟನ್ ಮುಂತಾದ ದೇಶಗಳು ಕೊಟ್ಟ ಪ್ರೋತ್ಸಾಹ, ಆರ್ಥಿಕ ಸಹಾಯ, ಆ ರಾಜ್ಯದ ಶೀಘ್ರ ಬೆಳವಣಿಗೆಗೆ ಕಾರಣವಾದರೂ, ಇಸ್ರೇಲ್— ಅರಬ್ ಪರಸ್ಪರ ವೈಷಮ್ಯಕ್ಕೆ ಕೂಡ ಕಾರಣವಾಯಿತೆನ್ನಬಹುದು.

ನಾಸೆರರು ಈಜಿಪ್ಟ ರಾಜ್ಯದ ಅಧ್ಯಕ್ಷರಾದ ನಂತರ— ಅವರಿಟ್ಟು ಕೊಂಡ ಧ್ಯೇಯಗಳು ಮುಖ್ಯವಾಗಿ ಮೂರು. ೧) ರಾಷ್ಟ್ರದ ಬಡತನವನ್ನು ನಿರ್ಮೂಲಮಾಡಿ ಜನರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವುದು; ೨) ಮಧ್ಯ ಏಸ್ಯಾದ ಅರಬ ರಾಜ್ಯಗಳೊಳಗೆ ಒಕ್ಕಟ್ಟನ್ನು ಬಲಪಡಿಸಿ ಒಂದು ಸಂಯುಕ್ತ ಅರಬ ರಾಷ್ಟ್ರವನ್ನು ಸ್ಥಾಪಿಸುವುದು. ಈ ಪ್ರದೇಶದಲ್ಲಿ ಸುಮಾರು ೧೨ ಪ್ರತ್ಯೇಕ ಅರಬ ರಾಷ್ಟ್ರಗಳಿವೆ, ೩) ಪಾಶ್ಚಿಮಾತ್ಯ ದೇಶಗಳ ಪ್ರಭಾವವನ್ನು ನಿರ್ಮೂಲ ಮಾಡಿ ಮಧ್ಯ ಏಸ್ಯಾದ ಪ್ರದೇಶವನ್ನು ಅಮೆರಿಕ, ಬ್ರಿಟನ್ ಮುಂತಾದ ದೇಶಗಳ ಪ್ರಾಬಲ್ಯದಿಂದ ವಿಮುಕ್ತಗೊಳಿಸುವುದು.

ತನ್ನ ಮೊದಲನೇ ಉದ್ದೇಶವನ್ನು ನಾಸೇರರು ಬಹು ಯಶಸ್ವಿಯಾಗಿ ಸಾಧಿಸಿದ್ದಾರೆ. ಅನೇಕ ಭೂ ಸುಧಾರಣೆಯ ಕಾನೂನುಗಳನ್ನು ಜಾರಿಗೆ ತಂದಿದ್ದಾರೆ. ಶತಮಾನಗಳಿಂದಲೂ ಬೇರೂರಿದ ಅನ್ಯಾಯಗಳನ್ನು ನಿರ್ಮೂಲ ಮಾಡಿ, ರೈತನಿಗೆ ತಾನು ಉಳುವ ಭೂಮಿಯ ಹಕ್ಕನ್ನು ಕೊಟ್ಟಿದ್ದಾರೆ. ಕೃಷಿರಂಗದಲ್ಲಿ ಇದು ಅತಿ ದೊಡ್ಡ ಕ್ರಾಂತಿಯನ್ನುಂಟು ಮಾಡಿದೆ. ಆಹಾರ ಸಾಮಗ್ರಿಗಳ ಬೆಳೆಯು ಹೆಚ್ಚಿದೆ. ರೈತರಲ್ಲಿ ನವೀನವಾದ ಉತ್ಸಾಹವನ್ನುಂಟು ಮಾಡಿದೆ. ದೊಡ್ಡ ಮಾಲಿಕರ ಯುಗವು ದೇಶದಲ್ಲಿ ಸಮಾಪ್ತಿಯಾಗಿದೆ. ಸಹಸ್ರಾರು ಎಕ್ರೆ ಬಂಜರು ಭೂಮಿಯನ್ನು ನೀರಾವರಿ ಯೋಜನೆಗಳಿಂದ ಫಲವತ್ತಾಗಿ ಮಾರ್ಪಡಿಸಲಾಗಿದೆ. ನೈಲ್ ನದಿಯು ಆವರಿಸಿಕೊಂಡ ಸಹಸ್ರಾರು ಫಲವತ್ತಾದ ಎಕರೆಗಳನ್ನು ಸಾಗುವಳಿಗೆ ಉಪಯೋಗಿಸಿಕೊಂಡಿದ್ದಾರೆ. ಆಧುನಿಕ ಕೃಷಿ ವಿಧಾನಗಳನ್ನು ದೇಶದಲ್ಲೆಲ್ಲಾ ಜಾರಿಗೆ ತಂದಿದ್ದಾರೆ. ದೊಡ್ಡ ಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸಿದ್ದಾರೆ. ಅನೇಕ ದೊಡ್ಡ ಉದ್ಯಮಗಳು ನಾಸೆರರು ಅಧ್ಯಕ್ಷರಾದ ನಂತರ ಸ್ಥಾಪಿಸಲ್ಪಟ್ಟವು— ಸಕ್ಕರೆ, ಉಕ್ಕು, ಕಬ್ಬಿಣ, ಮದ್ದು, ಯಂತ್ರಗಳು ಇತ್ಯಾದಿ. ಬ್ಯಾಂಕುಗಳನ್ನೂ ಇತರ ಸಂಸ್ಥೆಗಳನ್ನೂ ರಾಷ್ಟ್ರೀಕರಣ ಮಾಡಿದ್ದಾರೆ. ವಿದ್ಯಾ ಪ್ರಚಾರವು ರಭಸದಿಂದ ಸಾಗುತ್ತದೆ— ಶಾಲೆಗಳು, ವಿಶ್ವವಿದ್ಯಾಲಯಗಳು, ತಾಂತ್ರಿಕ, ಔದ್ಯೋಗಿಕ ತರಬೇತಿ ಕೇಂದ್ರಗಳು ಹೆಚ್ಚುತ್ತಾ ಹೋಗಿವೆ. ಸಾರಿಗೆ ಸೌಲಭ್ಯಗಳು ಹೆಚ್ಚಿಸುವುದಕ್ಕೆ ಸರ್ವ ಪ್ರಯತ್ನವೂ ಮಾಡಲಾಗುತ್ತದೆ. ನಾಸೆರರು ಸಾಧಿಸಿದ ಅತಿ ಮಹತ್ತಾದ ಕಾರ್ಯವೆಂದರೆ ಈಗ ರಭಸದಿಂದ ಕಟ್ಟಲ್ಪಡುವ ಆಸ್ವಾನ್ ಅಣೆಕಟ್ಟು: ಇದರ ಹಿನ್ನೆಲೆಯು ಆಶ್ಚರ್ಯಕರವಾಗಿದ್ದು, ದೇಶದಲ್ಲಿ ಹರಿಯುವ ನೈಲ್ ನದಿಯ ನೀರನ್ನು ಒಟ್ಟುಕೂಡಿಸಿ, ಅದನ್ನು ಕೃಷಿಗೆ ಉಪಯೋಗವಾಗಲು ಒಂದು ದೊಡ್ಡ ಯೋಜನೆಯನ್ನು ನಾಸೇರರು ಮಾಡಿದರು. ಇದು ಪೂರ್ಣವಾದ ನಂತರ ವಿಶ್ವದಲ್ಲಿಯೇ ಇದು ಅತಿ ದೊಡ್ಡದಾದ ಅಣೆಕಟ್ಟಾಗುತ್ತದೆ. ಇದಕ್ಕೆ ತಗಲುವ ವೆಚ್ಚವು ಬಹಳ ದೊಡ್ಡದು. ಮೊಟ್ಟಮೊದಲು, ಅಮೆರಿಕ, ಬ್ರಿಟನ್, ಮತ್ತು ಫ್ರಾನ್ಸ್ ದೇಶಗಳು ಧನ ಸಹಾಯ ಒದಗಿಸುತ್ತೇವೆಂದು ಮಾತು ಕೊಟ್ಟಿದ್ದರು. ಆದರೆ ನಾಸೇರರು ಬಾಗದಾದ್ ಒಕ್ಕೂಟಕ್ಕೆ ಸೇರದೆ—ಭಾರತದ ಜವಾಹರಲಾಲರ ಪ್ರತಿಭೆಯ ಪರಿಣಾಮವಾಗಿ ಒಂದು ನಿರ್ಲಿಪ್ತ ಧೋರಣೆಯನ್ನು ಅಂಗೀಕರಿಸಿದರು. ಈ ಧೋರಣೆಯನ್ನು ನಾಸೆರರು ಬಹಿರಂಗವಾಗಿ ೧೯೫೫ರಲ್ಲಿ ಘೋಷಿಸಿದರು. ಅಮೆರಿಕ ಮತ್ತು ಬ್ರಿಟನ್ನಿಗೆ ಇದರಿಂದ ಬಹಳ ಉದ್ರೇಕವಾಯಿತು. ಮಧ್ಯ ಏಸಿಯಾ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯಕ್ಕೆ ಕುಂದು ಬರುತ್ತದೆಂಬ ಭೀತಿಯು ಈ ದೇಶಗಳ ನಾಯಕರಲ್ಲಿ ಬೆಳೆಯಿತು. ೧೯೫೬ರಲ್ಲಿ ಬ್ರಿಟನ್ ಅಮೆರಿಕ ದೇಶಗಳು ಧನ ಸಹಾಯವನ್ನು ನಿರಾಕರಿಸಿದುವು ಮಾತ್ರವಲ್ಲದೆ, ಇಸ್ರೇಲ್‌ಗೆ ಧಾರಾಳ ಶಸ್ತ್ರಾಸ್ತ್ರಗಳನ್ನು ಒದಗಿಸಿದುವು. ಇಸ್ರೇಲ್ ಅರಬ ದೇಶಗಳ ನಡುವೆ ಮೊದಲೇ ಬೇರೂರಿದ ಪರಸ್ಪರ ದ್ವೇಷವು ಮತ್ತಷ್ಟೂ ಹೆಚ್ಚಾಯಿತು. ಆದರೆ ನಾಸೆರರು ಹೆದರಲಿಲ್ಲ. ತಕ್ಷಣವೇ ಅವರು ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಿಸಿದರು. ಆ ಕಾಲುವೆಯಿಂದ ದೊರಕುವ ಲಾಭವು ಎಲ್ಲಾ ಈಜಿಪ್ಟಿಗೆ ಬರಬೇಕೆಂದು ನಿರ್ಣಯಿಸಿ, ಇಷ್ಟರವರೆಗೆ ಅಧಿಕಾರದಲ್ಲಿದ್ದ ಸಂಸ್ಥೆಯನ್ನು ರದ್ದುಗೊಳಿಸಿದರು. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಇದರಿಂದ ಉಂಟಾದ ಆರ್ಥಿಕ ನಷ್ಟ ಅಪಾರವಾಗಿತ್ತು. ಅದಕ್ಕಿಂತಲೂ ಹೆಚ್ಚಾದದ್ದು ಈ ದೇಶಗಳ ಗೌರವಭಂಗ. ಈ ದೇಶಗಳು ಸುಮ್ಮನಿರಲಿಲ್ಲ. ಅಮೆರಿಕ, ಬ್ರಿಟನ್, ಫ್ರಾನ್ಸ್ ದೇಶಗಳು ಯುದ್ಧಕ್ಕೆ ತಯಾರಾದುವು. ನಾಸೆರರನ್ನು ನಾಶಮಾಡುವ ಒಳ ಸಂಚು ಈಗ ಬಯಲಾಯಿತು. ಅವರ ಸಮಾಜವಾದವು ಈ ದೇಶಗಳಿಗೆ ಹಿತವೆನಿಸಿರಲಿಲ್ಲ. ಅಪಾರ ತೈಲ ಸಂಪತ್ತುಳ್ಳ ಅರಬೀ ರಾಷ್ಟ್ರಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಬೇಕೆನ್ನುವ ಈ ದೇಶಗಳ ಮಹತ್ವಾಕಾಂಕ್ಷೆಯನ್ನು ನಾಸೆರರು ಸಹಿಸಲಿಲ್ಲ. ೧೯೫೬ ಒಕ್ಟೋಬರದಲ್ಲಿ- ಇಸ್ರೇಲೀ ಸೈನ್ಯದ ಸಹಾಯದಿಂದ ಬ್ರಿಟಿಷ್ ಮತ್ತು ಅಮೆರಿಕನ್ ಸೈನ್ಯಗಳೂ ಸೂಯೆಜ ಪ್ರದೇಶವನ್ನು ಹೊಕ್ಕುವು. ಆದರೆ ನಾಸೆರರ ಅರಬ ಯೋಧರು ಅವರನ್ನು ಅಪ್ರತಿಮ ಶೌರ್ಯ ಸಾಹಸಗಳಿಂದ ಎದುರಿಸಿದರು. ಯುದ್ಧರಂಗದಲ್ಲಿ ಅರಬರು ಜಯಶಾಲಿಯಾಗದಿದ್ದರೂ, ಪ್ರಪಂಚದ ಸಹಾನುಭೂತಿಯು ಅರಬರ ಮೇಲಿದ್ದಿತು. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಈ ಸಮಸ್ಯೆ ಚರ್ಚಿಸಲಾಯಿತು. ಭಾರತದ ಪರವಾಗಿ ಶ್ರೀ ವಿ. ಕೆ. ಕೃಷ್ಣಮೆನನರು ನಾಸೆರರ ಧೋರಣೆಯನ್ನು ಬಲಪಡಿಸಿದರು. ಸೇನೆಗಳು ವಾಪಸು ಕರೆಯಬೇಕೆಂದು ನಿರ್ಣಯವಾಯಿತು.

ಇದು ನಾಸೆರರ ಅತಿ ಮಹತ್ತಾದ ವಿಜಯ. ನಂತರ ಆಸ್ವಾನ್ ಅಣೆಕಟ್ಟಿಗೆ ರಷ್ಯ ದೇಶದ ಸಹಾಯ ದೊರಕಿ, ಕೆಲಸವು ಭರದಿಂದ ಸಾಗಿತು. ೧೯-೫-೧೯೬೪ರಲ್ಲಿ ಈ ಬೃಹತ್ ಯೋಜನೆಯ ಶಂಕುಸ್ಥಾಪನೆಯನ್ನು ನಾಸೆರ್ ಮತ್ತು ಆಗಿನ ರಷ್ಯನ್ ಪ್ರಧಾನಿ ಶ್ರೀ ಕ್ರುಶ್ಚೇವ್‌ರವರು ಸಂಭ್ರಮದಿಂದ ನೆರವೇರಿಸಿದರು. ಇದು ಪ್ರಪಂಚದಲ್ಲಿಯೇ ಅತಿ ಅಮೋಘವಾದ ಯೋಜನೆ–ಸುಮಾರು ೬೦,೦೦೦,೦೦೦ ಕ್ಯೂಬಿಕ್ ಮೀಟರ್ ನೀರನ್ನು ಒಂದು ಬೃಹತ್ಸರೋವರದಲ್ಲಿ ಕೂಡಿಸುತ್ತದೆ. ಈ ಅಣೆಕಟ್ಟಿನ ಎತ್ತರ ೪೦೦ ಅಡಿ, ಉದ್ದ ೩|| ಮೈಲು, ಮತ್ತು || ಮೈಲು ಅಗಲ. ಸರೋವರದ ಅಳತೆ ೪೦೦ ಮೈಲು ಉದ್ದ ಮತ್ತು ಸುಮಾರು ೬ ಮೈಲು ಅಗಲ. ನಿರುಪಯೋಗಿ ಭೂಮಿಯನ್ನೇ ನಂದನವನವನ್ನಾಗಿ ಮಾಡುವ ಈ ಮಹಾ ಯೋಜನೆ ನಾಸೆರ್ ಆಡಳಿತದ ಅತಿ ಮಹತ್ತಾದ ಸಾಧನೆ. ನೈಲ್ ನದಿಯ ಪ್ರವಾಹ ತಡೆದು ಲಕ್ಷೋಪ ಲಕ್ಷ ಜನರಿಗೆ, ನೀರು, ಬೆಳಕು ಒದಗಿಸಿ ಕೊಡುವ ಯೋಜನೆ ಇದು. ಪೂರ್ಣವಾದ ನಂತರ ಇದು ಸುಮಾರು ೨|| ಮಿಲಿಯ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ನೀಡುತ್ತದೆ. ಅನೇಕ ಲಕ್ಷ ಎಕರೆ ಭೂಮಿಯನ್ನು ಫಲವತ್ತಾಗಿ ಮಾಡುವುದು. ಈಜಿಪ್ಟಿಗೆ ಮಾತ್ರವಲ್ಲ, ಇಡಿ ಅರಬ ಜಗತ್ತಿಗೆ ನವೀನ ಯುಗವನ್ನು ಅದು ನೀಡಬಲ್ಲುದು.

ನಾಸೆರರು ಅರಬ ಜನಾಂಗದ ಒಗ್ಗಟ್ಟನ್ನು ಸಾಧಿಸಿದ ಪ್ರಯತ್ನಗಳು ಶ್ಲಾಘನೀಯವಾದುವು. ಪ್ಯಾಲೆಸ್ಟೈನ್ ಯುದ್ಧಗಳಲ್ಲಿ ಅರಬರು ಅನುಭವಿಸಿದ ಅಪಜಯಕ್ಕೆ ಅರಬರಲ್ಲಿ ಐಕ್ಯತೆ ಇಲ್ಲದಿರುವುದೇ ಮುಖ್ಯ ಕಾರಣವೆಂದು ನಾಸೆರರ ಅಭಿಪ್ರಾಯ. ಅನೇಕ ರಾಜ್ಯಗಳು ಹಿಂದುಳಿದ ರಾಷ್ಟ್ರಗಳು. ಮಧ್ಯಕಾಲದ ಮೂಢ ನಂಬಿಕೆಗಳು, ಗಾಢವಾದ ಅಜ್ಞಾನ, ಸಂಕುಚಿತ ಭಾವನೆಗಳು ಈ ದೇಶಗಳಲ್ಲಿ ವ್ಯಾಪಕವಾಗಿ ಹರಡಿವೆ. ಕೆಲವು ರಾಷ್ಟ್ರಗಳು (ಉದಾಹರಣೆಗಾಗಿ ಸೌದಿ ಅರೇಬಿಯಾ, ಕುವೈಟು ಮತ್ತು ಇರಾಕ್) ಆರ್ಥಿಕ ಸ್ಥಿತಿಯಲ್ಲಿ ಮುಂದರಿದಿವೆ. ಯಾಕೆಂದರೆ ಅವುಗಳಲ್ಲಿದ್ದ ತೈಲ ಸಂಪತ್ತಿನಿಂದ, ೧೯೫೮ರ

ಲ್ಲಿ ಈಜಿಪ್ಟ ಮತ್ತು ಸಿರಿಯಾ ದೇಶಗಳು ಒಂದಾಗಿ ಕೂಡಿ "ಅರಬೀ ಗಣ ರಾಜ್ಯ"ವೆಂಬ ಸಂಯುಕ್ತ ರಾಷ್ಟ್ರವನ್ನು ಸ್ಥಾಪಿಸಿದುವು. ಇದಕ್ಕೆ ಹಗಲು ರಾತ್ರಿ ಎಂಬಂತೆ ಶ್ರಮಿಸಿದುದು ನಾಸೆರರು. ಎಲ್ಲಾ ಅರಬೀ ರಾಷ್ಟ್ರಗಳು ಒಂದಾಗಿ ಸೇರಿ ಒಂದು ವಿಶಾಲವಾದ ಅರಬೀ ರಾಷ್ಟ್ರದ ಕನಸನ್ನು ಕಂಡವರು ಅವರು. ಆದರೆ ಪರಸ್ಪರ ಮತ ಭೇದಗಳು, ಒಳಗಿನ ತಿಕ್ಕಾಟ, ಸಂಶಯ, ಅಸೂಯೆಗಳಿಂದ ಈ ಕನಸು ನನಸಾಗದೆ ಉಳಿದಿದೆ. ಪಾಶ್ಚಾತ್ಯ ದೇಶಗಳ ಕುತಂತ್ರವೂ ಬಹು ಮಟ್ಟಿಗೆ ಈ ಸೋಲಿಗೆ ಕಾರಣ. ಸಿರಿಯಾ ದೇಶವು ಕೂಡ ೧೯೬೧ರಲ್ಲಿ, ಅರಬೀ ಗಣರಾಜ್ಯದಿಂದ ಬೇರ್ಪಡೆ ಹೊಂದಿತು. ಆದರೂ ಅರಬೀಯರಲ್ಲಿ ಒಂದು ತರದ ಭಾವೈಕ್ಯತೆ ಬೆಳೆಯುತ್ತಾ ಇದೆ. ಮೊನ್ನೆ ನಡೆದ ಯುದ್ಧದಲ್ಲಿ ಇದು ನಿಸ್ಸಂದೇಹವಾಗಿ ಬೆಳಕಿಗೆ ಬಂತು. ಇದಕ್ಕೆ ಶ್ರಮಿಸಿದವರು ನಾಸೆರರು.

ನಾಸೆರರ ಮೂರನೆಯ ಉದ್ದೇಶವು ಮಧ್ಯ ಏಸಿಯಾದಲ್ಲಿ ಪಾಶ್ಚಾತ್ಯ ದೇಶಗಳ ಪ್ರಾಬಲ್ಯವನ್ನು ಕಡಿಮೆ ಮಾಡಿ ಅರಬಿ ಜನಾಂಗವು ಕೆಲವು ದಶ್ಯಕ್ತಿಗಳಿಂದ ಪಾರಾಗ ಬೇಕೆಂಬುದು. ಈ ಪಾತ್ರವನ್ನು ಅರಬರು ವಹಿಸಿ ಸಾರ್ಥಕರಾಗುವರೋ ಎಂಬುದು ಒಂದು ದೊಡ್ಡ ಪ್ರಶ್ನೆ. ನಾಸೆರರು ತಿಳಿದ ಹಾಗೆ—ಅರ್ಹತೆ ಪಡೆಯದೆ ಯಾವ ಜನಾಂಗವೂ ಮುಂದಕ್ಕೆ ಬರಲಾರದು ಎಂದು. ಆದ ದರಿಂದಲೇ ಅರಬರ ಆರ್ಥಿಕ, ನೈತಿಕ, ಮಟ್ಟವನ್ನು ಏರಿಸುವುದು ಅತಿ ಮುಖ್ಯವಾದ ಕರ್ತವ್ಯವೆಂದು ಅವರು ನಂಬಿದ್ದಾರೆ. ಸ್ವಾವಲಂಬನೆ-ನಾಸೆರ ರಾಜಕೀಯದ ಅತಿಮುಖ್ಯವಾದ ತತ್ವ. ಭಾವೋದ್ರೇಕದಿಂದ ಮಾತ್ರ ಒಂದು ಜನಾಂಗವು ಸಮಸ್ಯೆಗಳನ್ನು ಬಗೆಹರಿಸಲಾರದು. ಅಮೇರಿಕ, ಬ್ರಿಟನ್, ಇಸ್ರೇಲ್ ದೇಶಗಳು ಮಾಡುವ ಕುತಂತ್ರಗಳನ್ನು ಎದುರಿಸಲಿಕ್ಕೆ ಅರಬರಲ್ಲಿ ಉಜ್ವಲ ದೇಶಪ್ರೇಮ, ತ್ಯಾಗಬುದ್ಧಿ ಬಹು ಮುಖ್ಯ ಸಾಮರ್ಥ್ಯ— ವಿದ್ಯೆ, ಸಹನೆ, ಆಧುನಿಕ ದೃಷ್ಟಿಕೋನ — ಇವೆಲ್ಲಾ ಇರಬೇಕು ಎಂದು ಅವರು ಹೇಳುತ್ತಾರೆ. ಜವಾಹರಲಾಲರು ನಾಸೆರರ ಒಬ್ಬ ಪೂಜ್ಯ "ಹಿರಿಯರು". ಜವಾಹರಲಾಲರ ವಿದೇಶ ನೀತಿಯನ್ನು ನಾಸೆರರು ಒಪ್ಪಿದ್ದಾರೆ. ಕೆಲವು ಅರಬ ರಾಜ್ಯಗಳು, ಪಾಕಿಸ್ತಾನದ ಪ್ರೇರಣೆ ಮೇರೆಗ 'ಇಸ್ಲಾಂ ಒಕ್ಕೂಟ'ವನ್ನು ಸ್ಥಾಪಿಸುವ ಪ್ರಯತ್ನ ಮಾಡಿದ್ದಾಗ, ನಾಸೆರರು ಇದನ್ನು ಒಪ್ಪಲಿಲ್ಲ. ಜವಾಹರಲಾಲರ 'Secular' ತತ್ವವನ್ನು ಅವರು ಅಂಗೀಕರಿಸಿದ್ದಾರೆ. ಭಾರತದ ಮೇಲೆ ನಾಸೆರರಿಗೆ ನಿಕಟ ಸ್ನೇಹವಿದೆ. ನಾಸೆರರಿಲ್ಲದಿದ್ದರೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿಯೂ, ಕಾಸಾಬ್ಲಾಂಕ್ ಪರಿಷತ್ತಿನಲ್ಲಿಯೂ ಭಾರತದ ವಿರುದ್ಧ ಪಾಕಿಸ್ತಾನವು ಮಾಡಿದ ಅಪಪ್ರಚಾರವು ಸುಲಭವಾಗಿ ಮುಸ್ಲಿಂ ರಾಷ್ಟ್ರಗಳು ಒಪ್ಪುತ್ತಿದ್ದುವು.

ನಾಸೆರರ ಪ್ರತಿಷ್ಠೆ ಈಗ ಸ್ವಲ್ಪ ಕುಂದಿದೆಯೆಂದು ಹಲವರು ಹೇಳಬಹುದು. ಅರಬರ ಇತ್ತೀಚಿನ ಸೋಲು ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಆದರೂ ನಾಸೆರರು—ಅರಬ ಜನಾಂಗದ ಅತಿ ಪ್ರಬಲ ನಾಯಕ—ಅವರ ತಾಳ್ಮೆ, ತಿಳುವಳಿಕೆ ಹೃದಯ ವೈಶಾಲ್ಯ, ಆಧುನಿಕ ಮನೋಭಾವ ಯಾವ ಅರಬ ನಾಯಕರಲ್ಲೂ ನಾವು ಕಾಣಲಾರೆವು. ಅವರು ಈಜಿಪ್ಟಿನ ಅಧ್ಯಕ್ಷರಾಗಿ ಉಳಿದದು—ಒಳ್ಳೆಯದೇ. ಈಗ ವಿಶ್ವದ ಮುಂದೆ ಇರುವ ಅರಬೀ—ಇಸ್ರೇಲ್ ಪ್ರಶ್ನೆಯ ಪರಿಹಾರದಲ್ಲಿ ನಾಸೆರರಂತಹ ನಾಯಕರು ವಹಿಸಬೇಕಾದ ಪಾತ್ರ ದೊಡ್ಡದು.

ಚೆಟ್ಟಿ ಬಾಬು ಹೇಳುತ್ತಾರೆ

ಶಿಕ್ಷಣವೇ ಅಮೇರಿಕದ ಆರ್ಥಿಕ ಪ್ರಗತಿಗೆ ಆಧಾರ

ಶ್ರೀ

ಮದರಾಸಿನ ಪ್ರಮುಖ ಶಿಕ್ಷಕರೊಬ್ಬರು ಇತ್ತೀಚೆಗೆ ಅಮೇರಿಕಾ ಪ್ರವಾಸ ಮಾಡಿ ಹಿಂತಿರುಗಿ ಬಂದಿದ್ದಾರೆ. ಅಮೇರಿಕದಲ್ಲಿ ಶಿಕ್ಷಣವು ಅತ್ಯುತ್ತಮ ಹೂಡಿಕೆಯಾಗಿರುತ್ತದೆ, ಅಲ್ಲಿ ಶಿಕ್ಷಣವು ದೇಶದ ಆರ್ಥಿಕ ಅಭಿವೃದ್ಧಿಗೆ ಆಧಾರವಾಗಿದೆ ಎಂಬ ಅಭಿಪ್ರಾಯವನ್ನವರು ವ್ಯಕ್ತಪಡಿಸಿದ್ದಾರೆ.

ಸೆಕೆಂಡರಿ ಶಿಕ್ಷಣದ ಜಂಟಿ ಡೈರೆಕ್ಟರಾಗಿರುವ ಎಸ್. ವಿ. ಚೆಟ್ಟಿಬಾಬು ಅವರು ಕಳೆದ ಸೆಪ್ಟೆಂಬರಿನಿಂದ ಆರು ತಿಂಗಳುಗಳ ವರೆಗೆ ಅಮೇರಿಕದಲ್ಲಿದ್ದರು. ಅವರು ಆ ದೇಶದ ಶಿಕ್ಷಣ ಸ್ವರೂಪವನ್ನು ಹಾಗೂ ವಿಧಾನಗಳನ್ನು ನಿಕಟವಾಗಿ ಪರಿಶೀಲಿಸಿದರು.

ನಾಗರಿಕತೆಯೆಂದರೆ ಜೀವನದ ಅವಕಾಶಗಳಿಗೆ ಪ್ರವೇಶ ಎಂದು ಮ್ಯಾಕ್ಸ್ ಲರ್ನರ್ ಅವರು ಮಾಡಿರುವ ವರ್ಣನೆಯು ಅಮೇರಿಕಕ್ಕೆ ಚೆನ್ನಾಗಿ ಅನ್ವಯವಾಗುತ್ತಿದೆ, ಏಕೆಂದರೆ ಅದು ಅವಕಾಶಗಳ ನಾಡು ಎಂದವರು ಹೇಳಿದರು.

ದೇಶದ ಪ್ರತಿಯೊಂದು ಹೈಸ್ಕೂಲಿನಲ್ಲಿ ಆಚರಣೆಯಲ್ಲಿರುವ ಮಾರ್ಗದರ್ಶನ ಮತ್ತು ಸಲಹೆ ನೀಡಿಕೆಯು ಈ ಹೇಳಿಕೆಯನ್ನು ಸ್ಪಷ್ಟಪಡಿಸುವ ಒಂದು ನಿದರ್ಶನ ಎಂದವರು ಹೇಳಿದರು. ಸಲಹೆಗಾರರು ಪ್ರತಿಯೊಬ್ಬ ವಿದ್ಯಾರ್ಥಿ ಅನುಸರಿಸಬೇಕಾದ ವೃತ್ತಿ ಅಥವಾ ಶೈಕ್ಷಣಿಕ ತರಬೇತಿಯ ಬಗೆಗೆ ಮಾರ್ಗದರ್ಶನ ನೀಡುವರು. ಈ ವಿಷಯದಲ್ಲಿ ಸಲಹೆಗಾರರು ವಿದ್ಯಾರ್ಥಿಗಳ ತಾಯ್ತಂದೆಯರೊಡನೆಯೂ ಸಮಾಲೋಚಿಸುವರು ಎಂದು ಚೆಟ್ಟಿಬಾಬು ಹೇಳಿದರು. ಹೀಗೆ ಶಾಲಾ ವ್ಯವಸ್ಥೆಯಲ್ಲಿ ವೃತ್ತಿಯ ಆಯ್ಕೆಗೆ, ಪ್ರಯೋಜನಕರ ಕೌಶಲ್ಯಗಳ ಮತ್ತು ಉದ್ಯೋಗಗಳ ಆಯ್ಕೆಯ ಅವಕಾಶಕ್ಕೆ ಮಹತ್ವ ಕೊಡಲಾಗುತ್ತಿದೆ ಎಂದವರು ಹೇಳಿದರು. "ಅಮೇರಿಕದಲ್ಲಿ ಯಾರೇ ಆಗಲಿ, ಉದ್ಯೋಗಕ್ಕೆ ಅವಶ್ಯವಿರುವ ಕೌಶಲ್ಯವಿರುವವರು ನಿರುದ್ಯೋಗಿಗಳಾಗುವುದಿಲ್ಲ. ಇದು ಅಮೇರಿಕದ ಪ್ರಜಾಪ್ರಭುತ್ವದ ಮೂಲ ತತ್ವಗಳಲ್ಲೊಂದು" ಎಂದು ಚೆಟ್ಟಿಬಾಬು ಹೇಳಿದರು.

ಚೆಟ್ಟಿಬಾಬು ಈಗ ಅಮೇರಿಕದಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಅನೇಕ ನವೀನ ಕಾರ್ಯಕ್ರಮಗಳನ್ನು ಪರಿಶೀಲಿಸಿದರು. ವಿಜ್ಞಾನ ಶಿಕ್ಷಣದಲ್ಲಿ ಗಮನಾರ್ಹ ಬದಲಾವಣೆಯಾಗಿದೆ ಎಂದವರು ಅಭಿಪ್ರಾಯಪಟ್ಟರು. ಕಲಿವಿನ ಹೊಸ ವಿಧಾನದಲ್ಲಿ, ಮಕ್ಕಳು ನಿರ್ವಹಿಸುವ ಪಾತ್ರ ಹೆಚ್ಚು ವಿಶಾಲವಾಗಿದೆ, ಏಳು ಮತ್ತು ಎಂಟು ವರ್ಷದ ಮಕ್ಕಳಿಗೂ ಪ್ರಯೋಗಾಲಯದ ಹಾಗೂ ಕೆಲಸದ ಅನುಭವಕ್ಕೆ ಅವಕಾಶ ಅಧಿಕವಾಗಿದೆ ಎಂದರವರು.

'ಕಲಿವಿನ ವಿಧಾನವು ವಿದ್ಯಾರ್ಥಿ ತನ್ನ ವ್ಯಕ್ತಿತ್ವವನ್ನು ಶೋಧಿಸುವ ಸಂತೋಷಕರ ಕಾರ್ಯವಾಗುವಂತೆ ಮಾಡಲು ಶಿಕ್ಷಕ ಪ್ರಯತ್ನಿಸುತ್ತಾನೆ. ತನ್ನ ಮನಸ್ಸಿನಲ್ಲಿರುವ ಕೆಲವು ವಿಷಯಗಳನ್ನು ತಿಳಿಸುವುದಷ್ಟೇ ತನ್ನ ಕರ್ತವ್ಯವಾಗಿರದೆ, ಮಗುವಿನ ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗುವುದೂ ತನ್ನ ಕರ್ತವ್ಯ ಎಂಬ ಪ್ರಜ್ಞೆ ಆತನಿಗಿದೆ,'' ಎಂದರವರು.

ಆದುದರಿಂದ ಶಿಕ್ಷಕ ಸದಾ ಜಾಗೃತನಾಗಿರಬೇಕಾಗುತ್ತದೆ, ಆತನಲ್ಲಿ ಶೈಕ್ಷಣಿಕ ವಿಧಾನಗಳ ಬಗೆಗೆ ಅತ್ಯಾಧುನಿಕ ಜ್ಞಾನ ಗಳಿಸುವ ಇಚ್ಛೆಯಿರಬೇಕು. ನಾಲ್ಕು ವರ್ಷಗಳ ತರಬೇತಿಯ ಅವಧಿಯು ಬಲು ಮಟ್ಟಿಗೆ ಈ ಅವಶ್ಯಕತೆಗೆ ಪರಿಹಾರ ನೀಡುತ್ತದೆ, ಪ್ರಾಥಮಿಕ ಶಾಲಾ ಶಿಕ್ಷಕರೂ ಈ ನಾಲ್ಕು ವರ್ಷಗಳ ತರಬೇತಿ ಪಡೆಯಬೇಕಾಗಿದೆ.

ಶಾಲೆಗಳ ಕಾರ್ಯ ನಿರ್ವಹಣೆಯಲ್ಲಿ ಸ್ಥಳೀಯ ಸ್ವಾಯತ್ತತೆ ಅಧಿಕವಾಗಿರುವುದು ಚೆಟ್ಟಿಬಾಬು ಅವರ ಮೇಲೆ ಪ್ರಭಾವ ಬೀರಿದ ಅಮೇರಿಕದ ಶಿಕ್ಷಣದ ಇನ್ನೊಂದು ಮಹತ್ವದ ಅಂಶ. ಪ್ರತಿಯೊಂದು ಸಮುದಾಯಕ್ಕೆ ಸ್ವಂತ ಶಾಲಾ ಮಂಡಳಿಯಿದೆ, ಸದಸ್ಯರಿಂದ ಕ್ರಮಬದ್ಧವಾಗಿ ಚುನಾಯಿತವಾಗಿರುವ ಈ ಮಂಡಳಿಯು ಶಾಲೆಗಳನ್ನು ನಡೆಸುವುದು, ಸ್ಥಳೀಯ ಅವಶ್ಯಕತೆಗಳಿಗೆ ಮತ್ತು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಶಾಲಾ ಕೋರ್ಸುಗಳನ್ನು ಸಿದ್ಧಪಡಿಸುವುದು ಮತ್ತು ಶಿಕ್ಷಣಕ್ಕಾಗಿ ತೆರಿಗೆಯನ್ನು ವಿಧಿಸುವುದು. ಬಿಸಿ ಊಟ ಅಥವಾ ಉಚಿತ ಹಾಲು ಮುಂತಾದ ವಿಶೇಷ ಕಾರ್ಯಕ್ರಮಗಳಿಗೆ ಫೆಡರಲ್ ಅಥವಾ ರಾಜ್ಯ ಸರಕಾರ ಸಹಾಯ ನೀಡುವುದು.

ಅಟ್ಲಾಂಟಿಕ್ ನಗರದಲ್ಲಿ ನಡೆದ ಸಮ್ಮೇಳನವೊಂದರಲ್ಲಿನ ಪ್ರದರ್ಶನವೊಂದರಲ್ಲಿ ಚೆಟ್ಟಿಬಾಬು ಅವರು ಅಮೇರಿಕದ ಶಾಲೆಗಳಲ್ಲಿ ಬಳಕೆಯಲ್ಲಿರುವ ವಿವಿಧ ರೀತಿಯ ಶಿಕ್ಷಣ ಸಾಧನಗಳನ್ನು ವೀಕ್ಷಿಸಿದರು. ಅಮೇರಿಕದ ಶಾಲೆಗಳಲ್ಲಿ ಬಳಕೆಯಲ್ಲಿರುವ ಟೆಲಿವಿಷನ್ ಟೇಪ್ ರಿಕಾರ್ಡರುಗಳು ಮತ್ತು ಎಲೆಕ್ಟ್ರಾನಿಕ್ ಉಪಕರಣಗಳು ಮುಂತಾದ ಪರಿಷ್ಕೃತ ಉಪಕರಣಗಳನ್ನು ಪಡೆಯಲು ಪ್ರಕೃತ ಭಾರತಕ್ಕೆ ಸಾಧ್ಯವಾಗಲಾರದು ಎಂಬುದನ್ನು ಅವರು ಒಪ್ಪಿಕೊಂಡರು. ಆದರೆ ಅಮೇರಿಕದಲ್ಲಿ ಶಿಕ್ಷಣ ಸಾಧನಗಳನ್ನು ಕಡಿಮೆ ವೆಚ್ಚದಲ್ಲಿ ಒದಗಿಸುವ ಕಾರ್ಯದಲ್ಲಿ ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿರುವ ಸಹಕಾರ ಅವರನ್ನು ಅಚ್ಚರಿಗೊಳಿಸಿತ್ತು; ಕೈಗಾರಿಕೆಗಳು ಮತ್ತು ಉದ್ಯಮಗಳು ಶಿಕ್ಷಣಕ್ಕೆ ಸಂಬಂಧಿಸಿದ ಅತ್ಯಾಧುನಿಕ ಉಪಕರಣಗಳನ್ನು ತಯಾರಿಸಲು ಶೈಕ್ಷಣಿಕ ಅಧಿಕಾರಿಗಳೊಡನೆ ಸಹಕರಿಸುವುವು.

ಅಮೇರಿಕದ ಶಿಕ್ಷಣದ ಪ್ರಮುಖ ಲಕ್ಷಣಗಳನ್ನು ಪರಿಶೀಲಿಸಿ, ಅರಿತುಕೊಂಡುದಷ್ಟೇ ಅಲ್ಲದೆ, "ನನ್ನ ಕೆಲವು ತಪ್ಪು ತಿಳಿವಳಿಕೆಗಳನ್ನು ತಿದ್ದಿಕೊಂಡಂತೆ, ಅಮೇರಿಕನ್ನರಲ್ಲಿ ಭಾರತದ ಬಗೆಗಿರುವ ಕೆಲವು ತಪ್ಪು ಕಲ್ಪನೆಗಳನ್ನು ತಿದ್ದಲೂ ನಾನು ಪ್ರಯತ್ನಿಸಿದೆ" ಎಂದು ಚೆಟ್ಟಿಬಾಬು ಹೇಳಿದರು. ಇಂಥ ಪರಸ್ಪರ ಪರಿಣಾಮಕಾರಿತ್ವವು ಅಂತಾರಾಷ್ಟ್ರೀಯ ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮದ ಧ್ಯೇಯಗಳಲ್ಲೊಂದು. ಈ ಕಾರ್ಯಕ್ರಮದ ಮೇರೆಗೆ ಚೆಟ್ಟಿಬಾಬು ಮತ್ತು ಭಾರತದ ಇತರ ೧೪ ಶಿಕ್ಷಕರು ಅಮೇರಿಕದಲ್ಲಿ ಪ್ರವಾಸ ಮಾಡಿದರು. ಒಟ್ಟು ೭೦ ರಾಷ್ಟ್ರಗಳ ಶಿಕ್ಷಕರು, ಅಮೇರಿಕದ ಶಿಕ್ಷಣ ಕಚೇರಿ ಏರ್ಪಡಿಸಿದ ಈ ವಾರ್ಷಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಭಾರತದ ಕಾರ್ಯಕ್ರಮವನ್ನು ಅಮೇರಿಕದ ಶಿಕ್ಷಣ ಕಚೇರಿಯು, ಅಮೇರಿಕದ ಶೈಕ್ಷಣಿಕ ಫೌಂಡೇಷನ್ನಿನ ಮೂಲಕ ವ್ಯವಸ್ಥೆಗೊಳಿಸಿತ್ತು.

ಮದರಾಸಿನ ಪಾಚಯಪ್ಪಾಸ್ ಕಾಲೇಜಿನ ಪದವೀಧರರಾಗಿರುವ ಚೆಟ್ಟಿಬಾಬು ಅವರು ೧೭ ವರ್ಷಗಳ ವರೆಗೆ ಶಿಕ್ಷಕ ವೃತ್ತಿಯಲ್ಲಿದ್ದರು, ಶೈಕ್ಷಣಿಕ ಆಡಳಿತ ವಿಭಾಗದಲ್ಲಿ ೮ ವರ್ಷಗಳ ಅನುಭವ ಪಡೆದಿದ್ದಾರೆ. ಅಮೇರಿಕದಿಂದ ಭಾರತಕ್ಕೆ ಹಿಂದಿರುವಾಗ ಅವರು ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಹಾಲೆಂಡ್ ಮತ್ತು ಇಂಗ್ಲೆಂಡ್‌ಗಳನ್ನು ಸಂದರ್ಶಿಸಿದರು.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಞಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಬೇಟೆ	1—50
ಭಾರತದ ವೀರಾಂಗನೆಯರು	1—50
ಮೇರಿಕೊಟ್ಟ ಬೆಂಡೋಲೆ	1—80
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ಘಂಟಮಾಲಾ	2—50
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ

ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ

ಒಂದು ದೇಶದ ಬೆನ್ನೆಲುಬು ಅಲ್ಲಿನ ಜನ. ಜನ ಅಂದರೆ, ದೇಶಕ್ಕೆ ಉಪ್ಪು ಇದ್ದ ಹಾಗೆ, ಜನರ ಬೆನ್ನೆಲುಬು ಸಂಸ್ಕೃತಿಯಾದರೆ, ಸುಸಂಸ್ಕೃತ ನಾಗರಿಕ ಜನತೆಗೆ ಭೂಷಣ ವಿದ್ಯೆ—ಶಿಕ್ಷಣ.

ಸುಸಂಸ್ಕೃತ ನಾಗರಿಕ ಎಂದರೆ ಯಾರು? ಪ್ಯಾಂಟು, ಕೋಟು, ಬೂಟು ಮೊದಲಾದುವುಗಳಿಂದ ಪಾಶ್ಚಾತ್ಯ ಮಾದರಿಯಲ್ಲಿ ಅಲಂಕೃತನಾದವನಲ್ಲ; ಸಂಸ್ಕೃತಿ ಹೊರ ವೇಷಗಳಿಂದ ತೋರುವುದಲ್ಲ; ಒಳ ಹೃದಯ ಮತ್ತು ಹೊರಕೃತ್ಯಗಳಿಂದ ವ್ಯಕ್ತವಾಗುವಂಥಹದು.

ದೇಶದ ಆಗುಹೋಗುಗಳಲ್ಲಿ ಶಿಕ್ಷಣದ ಪಾತ್ರ ಮಹತ್ವಪೂರ್ಣವಾಗಿದೆ; ಇದನ್ನು ಎಲ್ಲರೂ ಒಪ್ಪುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ರೂಪಿಸಿದ್ದ ಶಿಕ್ಷಣ ಪ್ರಣಾಳಿ ದೋಷಯುಕ್ತವೆಂದು ಕೊಂಡ ನಾವಿಂದು ನಮ್ಮ ನಿರೂಪಿತ ಪ್ರಣಾಳಿಯೂ ದೋಷವಿದೂರವೆಂದು ಹೇಳಲು ನಿರಾಕರಿಸುತ್ತಿದ್ದೇವೆ. ಕಳೆದ ಇಪ್ಪತ್ತು ವರ್ಷಗಳಿಂದ ನಾವು ನಡೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡುವುದಾದರೆ, ನಡುವೆ ನಾವು ಒಂದಲ್ಲ, ಹಲವು ಬಾರಿ ದಾರಿಯ ದಿಶೆಯನ್ನು ಬದಲಾಯಿಸಿದ್ದೇವೆ.

ಶಿಕ್ಷಣ ಆಯೋಗದ ನೇಮಕವನ್ನು ಮಾಡಿದ ಕೇಂದ್ರ ವಿದ್ಯಾ ಸಚಿವ ಛಗಲಾ, ಆಯೋಗದ ವರದಿ ಕೈ ಸೇರಿದೊಡನೆಯೇ ಆ ಖಾತೆಯನ್ನು ತ್ಯಜಿಸಿ ವಿದೇಶ ವ್ಯವಹಾರಗಳ ಹೊರೆ ಹೊತ್ತರು. ಇದು ಕಾಕತಾಳೀಯವೇ ಎನ್ನೋಣ; ಆದರೆ, ಅವರ ಈ ಸ್ಥಾನಾಂತರದಿಂದ ಆಯೋಗದ ವರದಿಯ ಅಂಶಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತಷ್ಟು ವಿಲಂಬವಾಗುವುದು ಖಂಡಿತ. ಇದೀಗಲೇ ವ್ಯಕ್ತವಾಗತೊಡಗಿದೆ.

ನಮ್ಮ ರಾಜ್ಯದ ಶಿಕ್ಷಣರಂಗವೂ ಇದಕ್ಕೆ ಅಪವಾದವಲ್ಲ. ಅಂಕೆ ಸಂಖ್ಯೆಗಳನ್ನು ನೋಡುವಾಗ, 'ಹೊಸ ಪದ್ಧತಿ'ಯು ಬಂದ ಮೇಲೆ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣ ಇಳಿಯುತ್ತ ಬಂದಿದೆ. ಹಿಂದೊಮ್ಮೆ ಶ್ರೀ ಕಂಠಿ ಮಹಾಶಯರು ಗದರಿಸಿಯೂ ಇದ್ದರು: ಕಡಿಮೆ ಫಲಿತಾಂಶ ತಂದ ಶಾಲೆಗಳ ಅಧ್ಯಾಪಕರನ್ನು ದಂಡಿಸಲಾಗುವುದು ಎಂದು. ಇದನ್ನು ಕಾರ್ಯಗತ ಮಾಡಿದ್ದರೋ ಇಲ್ಲವೋ ಸರಿಯಾಗಿ ತಿಳಿದಿಲ್ಲ. ಸದ್ಯ ಇವರ ವಿದ್ಯಾಮಂತ್ರಿ ಸ್ಥಾನ ಮಾನ್ಯ ಶಂಕರ ಗೌಡರ ಪಾಲಿಗೆ ಬಂದಿದೆ.

ಇತ್ತೀಚೆಗೆ ಸರಕಾರ ಹಲವು ವಿಚಾರಗಳತ್ತ ದೃಷ್ಟಿ ಹರಿಸಿದೆ. ಅಧ್ಯಾಪಕರ ವೇತನವನ್ನು ನೇರವಾಗಿ ಚೆಕ್ಕುಗಳ ಮೂಲಕ ಕೊಡುವುದೂ ಇವುಗಳಲ್ಲಿ ಒಂದು. ಜೂನ್ ೬೮ರ ವೇತನವನ್ನು ಜುಲೈ ೧ರಂದು ಚೆಕ್ಕುಗಳಿಂದ ನೀಡುವ ಮೂಲಕ ಈ ಮಹಾಕ್ರಾಂತಿಯೊಂದು ತಲೆದೋರಲಿದೆ ಎಂದು ತಿಳಿಯುತ್ತದೆ. ಆದರೆ, ಈ ಸಂಬಂಧದಲ್ಲಿ ವಿದ್ಯಾಂಗ ಶಾಖಾ ಡೈರೆಕ್ಟರರು, ವಿದ್ಯಾಮಂತ್ರಿಗಳು ಒಂದರ ಮೇಲೊಂದು ಹೇಳಿಕೆ ನೀಡುವುದಷ್ಟೇ ಕಾಣುತ್ತಿದೆ ಹೊರತು, ಜುಲೈ ಒಂದಕ್ಕೆ ವೇತನ ಸಿಗುವ ಲಕ್ಷಣ ಗೋಚರವಾಗುತ್ತಿಲ್ಲ.

ಹಲವು ಶಾಲೆಗಳ ವ್ಯವಸ್ಥಾಪಕವರ್ಗವು ಕ್ರಮವಾಗಿ ವೇತನ ವಿತರಣೆ ಮಾಡುತ್ತಿದ್ದು, ಹಾಗೆ ವೇತನ ಪಡೆಯುತ್ತಿದ್ದ ಅಧ್ಯಾಪಕರಿಗೆ ಹೊಸ ಉಪಕ್ರಮದಿಂದ ತೊಂದರೆ ತಲೆದೋರುವುದು. ಅಷ್ಟು ಮಾತ್ರವಲ್ಲ, ಮಾಧ್ಯಮಿಕ ಶಾಲೆಗಳಿಗಿಂತ ಹೆಚ್ಚು ಸುಲಿಗೆ ನಡೆಯುವುದು ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ. ಶಿಕ್ಷಣ ಶಾಖೆಯು ಮೊತ್ತ ಮೊದಲು ಖಾಸಗಿ ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೆ ನೇರ ಸಂಬಳ ಬಟವಾಡೆ ಮಾಡುವತ್ತ ಪ್ರಾಶಸ್ತ್ಯ ನೀಡಬೇಕಿತ್ತು; ತಮ್ಮ ತುಟ್ಟಿ ಬತ್ತೆಯನ್ನು ದೊಡ್ಡ ಮೊತ್ತವನ್ನೂ ಕಬಳಿಸುವ ವಿದ್ಯಾದುರಂಧರ ಮೆನೇಜರ ಮಹಾಶಯರೂ ಈ ರಾಜ್ಯದಲ್ಲಿದ್ದಾರೆಂಬುದು ಸೂರ್ಯನಷ್ಟೇ ಸತ್ಯ.

ಆದರೆ, ಒಂದು ಮಾತು ಹೇಳಲೇಬೇಕೆನಿಸುತ್ತದೆ. ಸರಕಾರ ಯಾವ ಕ್ರಮವನ್ನೇ ಕೈಗೊಳ್ಳಲಿ, ಸಾಕಷ್ಟು ಪೂರ್ವಸಿದ್ಧತೆಯೊಂದಿಗೆ ಮಾಡಬೇಕು. ನಿರ್ದಿಷ್ಟಪಡಿಸಿದ ತಾರೀಕಿನಂದು ತನ್ನ ಯೋಜನೆ ಕಾರ್ಯಗತಗೊಳಿಸಲು ಬೇಕಾದ ವ್ಯವಸ್ಥೆಯನ್ನು ಮೊದಲೇ ಮಾಡಿರಬೇಕು. ಹೈಸ್ಕೂಲು ಅಧ್ಯಾಪಕರ ವೇತನ ವಿತರಣೆಯ ಬಗ್ಗೆ ಇಂತಹ ತಯಾರಿಯೂ ಸಾಲದು.

ಉತ್ತೀರ್ಣತೆಯ ಪ್ರತಿಶತ ಕಡಿಮೆಯಾಗುವುದಕ್ಕೆ ಹಲವು ಕಾರಣಗಳಿವೆ. ಸಮರ್ಥ ಅಧ್ಯಾಪಕರ ಅಭಾವ, ಅಧ್ಯಾಪಕರ ನಿಯುಕ್ತಿಯಲ್ಲಿ ವಿಲಂಬ, ವ್ಯವಸ್ಥಾಪಕ ವರ್ಗದ ನಿರಾಸಕ್ತಿ ಅಥವಾ ಜಂಬೂ ಸವಾರಿ ಒಂದೆಡೆ ನಿಲ್ಲುವುದಾದರೆ, ವಿದ್ಯಾರ್ಥಿಗಳ ಮಾನಸಿಕ ಮಟ್ಟಕ್ಕೆ ಮೀರಿದ ಅಭ್ಯಾಸ ಕ್ರಮ, ಹೆಚ್ಚಿನ ಬಾಹ್ಯ ಆಕರ್ಷಣೆ, ಪ್ರಭಾವ, ವಿದ್ಯಾರ್ಥಿಗಳ ಹಾಗೂ ಹೆತ್ತವರ ಅಪರ್ಯಾಪ್ತ ಲಕ್ಷ್ಯ ಇನ್ನೊಂದೆಡೆ ನಿಲ್ಲುವುವು. ಎಲ್ಲಕ್ಕಿಂತ ಹೆಚ್ಚಾಗಿ ಪ್ರಶ್ನಪತ್ರ, ಮೌಲ್ಯಮಾಪನದ ಕ್ರಮಗಳು, ಗ್ರೇಸ್ ಮಾರ್ಕು ನೀಡುವ ಪದ್ಧತಿಗಳು ಅನರ್ಥ ಪರಂಪರೆಗೆ ಕಾರಣ.

ಇವೆಲ್ಲವನ್ನೂ ಪರಿಶೀಲಿಸಿ ಸೂಕ್ತ ಸಲಹೆ ಮಾಡಲು ಸಮಿತಿಯ ಮೇಲೆ ಸಮಿತಿಗಳು, ಆಯೋಗದ ಮೇಲೆ ಆಯೋಗಗಳು ನಿರ್ಮಾಣಗೊಳ್ಳಬಹುದು— ಆದರೆ, ವ್ಯಾವಹಾರಿಕವಾಗಿ ಶಿಕ್ಷಣ ಮಟ್ಟ ಏರುವ ಕ್ರಮ ಕೈಗೊಳ್ಳುವತ್ತ ತೀವ್ರ ಲಕ್ಷ್ಯ ಹರಿಸುವುದು ಅಗತ್ಯ.

ಎಸ್ ಎಸ್ ಎಲ್. ಸಿ. ಯಲ್ಲಿರುವ ಐಚ್ಛಿಕ ವಿಷಯಗಳ ಅಧ್ಯಯನವನ್ನು ಮುಂದಿನ ವರ್ಷದಿಂದ ಕೈಬಿಡಲಾಗುವುದೆಂದೂ ಈ ವಿಷಯಗಳ ಅಧ್ಯಯನಾವಧಿಯನ್ನು ಭಾಷೆಗಳ ಅಧ್ಯಯನಕ್ಕೆ ಒದಗಿಸಲಾಗುವುದೆಂದೂ ವಿದ್ಯಾ ಸಚಿವರು ಅಂದಿದ್ದಾರೆ. ಇದರಿಂದ ವಿದ್ಯಾರ್ಥಿಗಳ ತಲೆಯ ಮೇಲಿನ ಹೊರೆಯಲ್ಲಿ ಮೂರರಲ್ಲೊಂದಂಶ ಇಳಿಯುವುದು ಮಾತ್ರವಲ್ಲ, ಭಾಷಾಧ್ಯಯನಕ್ಕೆ ಹೆಚ್ಚಿನ ಅವಕಾಶ ದೊರೆತು, ವಿದ್ಯಾರ್ಥಿಗಳ ಅಭಿಪ್ರಾಯ ಪ್ರಕಟಣಾ ಸಾಮರ್ಥ್ಯ, ಶಬ್ದ ಸಂಪತ್ತು ಬೆಳೆಯುವುದು. ಈ ಸತ್ಯ ನಮ್ಮ ಸರಕಾರಕ್ಕೆ ತಡವಾಗಿಯಾದರೂ ಮನವರಿಕೆಯಾದುದು ಸಂತೋಷವೇ.

ಎಸ್. ಎಸ್. ಎಲ್. ಸಿ. ಯ ನಂತರ ಎರಡು ವರ್ಷಗಳ ಅವಧಿಯ ಪದವಿಪೂರ್ವ ಅಭ್ಯಾಸ ನಡೆಯುವುದು. ಇಂದಿನ ಹಾಯರ್ ಸೆಕೆಂಡರಿ ಶಾಲೆಗಳಲ್ಲಿ ೧೨ನೆ ತರಗತಿಯನ್ನು ತೆರೆಯಲಾಗುವುದು. ಮುಂದೆ, ಕಾಲೇಜುಗಳಲ್ಲಿ ಮೂರು ವರ್ಷಗಳ ಪದವಿ ಶಿಕ್ಷಣ. ಹೀಗೆ ಒಬ್ಬನು ಮೊತ್ತಮೊದಲ ಪದವಿ ಪಡೆಯುವಾಗ ೧೫ ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ.

ಮರಳಿ ಬ್ರಿಟಿಷರ ಕಾಲದತ್ತ ಸಂದಾಯಿತು. ಇರಲಿ. ಇಲ್ಲಿಯೂ ಒಂದು ಮಾತಿದೆ. ೧೧ ಮತ್ತು ೧೨ನೆ ತರಗತಿಗಳನ್ನು ಹಾಯರ್ ಸೆಕೆಂಡರಿ ಶಾಲೆಗಳಲ್ಲಿ ಕಲಿಸುವ ವ್ಯವಸ್ಥೆಯಿರುವುದು— ಇಲ್ಲಿ ಪ್ರಾಜ್ಞ ಅಧ್ಯಾಪಕರು ದೊರೆಯುತ್ತಾರೆಯೆ? ಸ್ನಾತಕೋತ್ತರ ಪದವೀಧರರು ಬೇಕೆನ್ನುವ ಸರಕಾರ ಅವರ ವೇತನವನ್ನು ಪದವೀಧರ ಸಮಾನವಾಗಿ ಮಾಡಿದರೆ, ಯಾರು ಬರುತ್ತಾರೆ? ಆಗ, ಈ ಜ್ಯೂನಿಯರ್ ಕಾಲೇಜು ಶಿಕ್ಷಣ ಇಂದಿನ ಹಾಯರ್ ಸೆಕೆಂಡರಿಗಿಂತಲೂ ನಿಕೃಷ್ಟವಾಗುವುದು.

ಕಾಲೇಜುಗಳಲ್ಲಿ ಅನುತ್ತೀರ್ಣತೆಯ ಮುಖ್ಯ ಕಾರಣ ಅಲ್ಪ ಜ್ಞಾನವಲ್ಲ; ಪರಭಾಷೆಯಲ್ಲಿ ತಮಗೆ ತಿಳಿದಿರುವುದನ್ನು ಅಭಿವ್ಯಕ್ತಿಗೊಳಿಸುವ ಶಕ್ತಿಯಿಲ್ಲದುದು— ಇದನ್ನು ಅವಶ್ಯ ಒಪ್ಪಬೇಕು. ಇದಕ್ಕಿರುವ ಏಕಮೇವ ಪರಿಹಾರ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಯನ್ನಾಗಿ ಮಾಡುವುದು. ನಮ್ಮ ರಾಜ್ಯದ ಮೂರೂ ವಿಶ್ವವಿದ್ಯಾಲಯಗಳು ಕನ್ನಡ ಮಾಧ್ಯಮ ವಿಭಾಗವನ್ನೂ ತೆರೆಯಲು ಒಪ್ಪಿವೆ. ಆದರೆ, ನಮ್ಮಲ್ಲಿರುವ ಆಂಗ್ಲ ಭಾಷಾ ವ್ಯಾಮೋಹವು ಇದನ್ನು ಸರಳವಾಗಿ ಕಾರ್ಯಗತಗೊಳಿಸಲು ಬಿಡವುದಿಲ್ಲ. ಕೆಲ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ವಿಭಾಗವನ್ನು ತೆರೆಯುವುದಕ್ಕೂ ಹೋಗುವುದಿಲ್ಲ. ಹೀಗಾಗದಿರಬೇಕಾದರೆ, ವಿಶ್ವವಿದ್ಯಾಲಯ— ಸರಕಾರಗಳು ಕ್ರಮ ಕೈಗೊಳ್ಳಬೇಕು. ಪ್ರತಿ ಕಾಲೇಜಿನಲ್ಲೂ ಪ್ರಾದೇಶಿಕ ಭಾಷಾ ಮಾಧ್ಯಮದ ಒಂದೊಂದು ವಿಭಾಗವನ್ನಾದರೂ ತೆರೆಯುವಂತಾಗಬೇಕು.

ಶಿಕ್ಷಣಾ ಸಚಿವ ಶ್ರೀ ಗೌಡರು ಮುಂದಿನ ಐದು ವರ್ಷಗಳಲ್ಲಿ ಸಾಮಾನ್ಯ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಪ್ರಾದೇಶಿಕ ಭಾಷೆ ಬೋಧ ಭಾಷೆಯಾಗುವುದೆಂದು ಹೇಳಿದ್ದಾರೆ. ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣದ ಬೋಧ ಭಾಷೆಯ ಸ್ಥಾನ ಕನ್ನಡಕ್ಕೆ ದೊರೆಯಲು ಹತ್ತು ಐದು ವರ್ಷ ಅವಧಿಯನ್ನು ಅವರು ಕೇಳಿದ್ದಾರೆ. ಮಾನ್ಯ ಮಂತ್ರಿಯವರ ಆಶಯ ಸ್ವಾಗತಾರ್ಹ. ಆದರೆ, ಇಂಗ್ಲಿಷ್ ಭಾಷೆಯ ವ್ಯಾ

(ಕಡೇ ಪುಟ ನೋಡಿರಿ)

ಶಾಲಾ ಕಾಲೇಜು ಲೈಬ್ರರಿಗಳಿಗೆ ಉಪಯುಕ್ತ ಪುಸ್ತಕಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	ರೂ.ಪೈ. 1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಏಶಿಯಾದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿನೇವಾ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯುಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಬಿರಿದ ಮುಗುಳು	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ್)	0=90
ಹಸುರು ಪಂಜಿ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಮಣಿಮಾಲೆ	(ನಚಿಕೇತ)	1=50
ಭಾರತದ ವೀರಾಂಗನೆಯರು	(ಕೆ.ಎನ್.ಭಟ್ ಶಿರಾಡಿಪಾಲ್)	1=50
ಮೀರಿ ಕೊಟ್ಟ ಬಂಡೋಲಿ	(ಎಸ್. ಸದಾಶಿವ ರಾವ್)	1=80
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=50
ಮನೆ ಮದ್ದು	(ಡಾ| ಕೊರಡ್ಕಲ್ ವೆಂಕಟರಾವ್)	2=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೂ ಗೊತ್ತಿರಲಿ

ಸಂಯುಕ್ತ ಜನಾಂಗಗಳು

ಅನು: ಶ್ರೀ ಕೆ. ನಾರಾಯಣಾಚಾರ್.

ಇಪ್ಪತ್ತೆರಡು ವರ್ಷಗಳ ಮೊದಲು ೧೯೪೫ನೇ ಜೂನು ತಾ. ೨೬ರಲ್ಲಿ ಐದು ರಾಷ್ಟ್ರಗಳ ಪ್ರತಿನಿಧಿಗಳು 'ಸಾನ್ ಫ್ರಾನ್ಸಿಸ್‌ಕೋ'ದಲ್ಲಿ ಒಟ್ಟುಗೂಡಿ ಎಲ್ಲಾ ಜನಾಂಗಗಳಲ್ಲಿ ಶಾಂತಿಯನ್ನು ಕಾಪಾಡುವ ಒಂದು ಜಾಗತಿಕ ಸಂಸ್ಥೆಯ ರಚನೆಗೆ ಪ್ರಮಾಣಪತ್ರವನ್ನು (Charter) ಬರೆದರು. ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವ ಒಂದು ಸಾಮೂಹಿಕ ಶಕ್ತಿಯನ್ನು ರೂಪಿಸುವುದಕ್ಕೆ ಪ್ರತಿನಿಧಿಗಳು ಎರಡು ತಿಂಗಳ ಕಾಲದಲ್ಲಿ ಅಭಿಪ್ರಾಯ ಪ್ರಕಟಿಸಿ ವಿಚಾರಮಾಡಿ ಚರ್ಚಿಸಿದರು.

ಆ ಪರಿಷತ್ತಿನ ಮುಂದಾಳುಗಳು ತಮ್ಮ ಕೆಲಸದ ಪ್ರಾರಂಭದ ನೆಲೆಯಾಗಿ 'ಡಂಬರ್‌ಟನ್ ಓಕ್ಸ್' ಸೂಚನೆಗಳನ್ನು ಉಪಯೋಗಿಸಲು ನಿರ್ಣಯಿಸಿದರು. ಇದು ಗ್ರೇಟ್ ಬ್ರಿಟನ್, ಚೈನಾ ರಿಪಬ್ಲಿಕ್, ಸೋವಿಯಟ್ ರಶ್ಯಾ ಮತ್ತು ಸಂಯುಕ್ತ ಸಂಸ್ಥಾನಗಳು ಮೊದಲು ತಯಾರಿಸಿದ ಒಂದು ಸ್ಥೂಲ ಕಲ್ಪನೆಯಾಗಿತ್ತು. ಪ್ರತಿನಿಧಿಗಳು ಡಂಬರ್ ಟನ್ ಓಕ್ಸ್ ಪ್ರಮಾಣ ಪತ್ರವನ್ನು ಪರಿಶೀಲಿಸಿ ತಿದ್ದುಪಡಿಗಳನ್ನು ಮಾಡಿದರು. ಮತ್ತು ಹೊಸ ಸೂಚನೆಗಳನ್ನು ಮುಂದಿಟ್ಟರು. ತೀರ್ಮಾನಿಸಲಿಕ್ಕೆ ಕಷ್ಟವಾದ ಅನೇಕ ಪ್ರಶ್ನೆಗಳಿದ್ದವು. ಭದ್ರತಾ ಸಮಿತಿಗೆ ಎಷ್ಟರ ಮಟ್ಟಿಗೆ ನಿರಾಕರಣೆಯ (Veto) ಅಧಿಕಾರವಿರಬೇಕು? ಅಂತಾರಾಷ್ಟ್ರೀಯ ಘರ್ಷಣೆಗೆ ಎಡೆ ಕೊಡುವ ಒಂದು ವಿವಾದವು ಬೆಳೆಯುತ್ತಿರುವಾಗ ಸಂಯುಕ್ತ ಜನಾಂಗಗಳು ಕೈಹಾಕ ಬೇಕಾದರೆ, ಯಾವಾಗ ಎಂಬುದನ್ನು ಕೌನ್ಸಿಲು ಹೇಗೆ ತೀರ್ಮಾನಿಸಬೇಕು? ಜನರಲ್ ಎಸೆಂಬ್ಲಿಯಲ್ಲಿ ಓಟಿನ ಅಧಿಕಾರಗಳಿಗೆ ಮೂಲವು ಯಾವುದಾಗಿರಬೇಕು? ಸಂಯುಕ್ತ ಜನಾಂಗಗಳ ಕಾರ್ಯಾಚರಣೆಯ ವೆಚ್ಚವು ಎಲ್ಲಿಂದ ಬರಬೇಕು? ಪ್ರತಿಯೊಂದು ವಿಷಯವೂ ಸೂಕ್ಷ್ಮವಾಗಿ ಪರೀಕ್ಷಿಸಲ್ಪಟ್ಟು ಚರ್ಚಿಸಲ್ಪಟ್ಟಿತು. ಕೂನೆಗೆ ಕಾರ್ಯಾನುಕೂಲವಾದ ಒಂದು ಪ್ರಮಾಣ ಪತ್ರವು ತಯಾರಿಸಲ್ಪಟ್ಟಿತು.

ಈ ಅಂತಾರಾಷ್ಟ್ರೀಯ ರಚನಾತ್ಮಕ ಪ್ರಯತ್ನಗಳ ಪ್ರಧಾನ ಕಾರ್ಯವು 'ಸಾನ್ ಫ್ರಾನ್ಸಿಸ್ಕೋ' ಸಿವಿಕ್ ಸೆಂಟರ್ ಒಪೆರಾ ಹೌಸಿನ, ಶೋಭಾಯಮಾನವಾದ ಕಟ್ಟಡದಲ್ಲಿ ಜರಗಿತು. ಅಲ್ಲಿ ಜೂನ್ ತಾ. ೨೫ನೇ ದಿನ ಕೊನೆಯದ್ದಾಗಿ ಬರವಣಿಗೆಯನ್ನು ಬದಲಾಯಿಸಿ ತಿದ್ದಿ ಸರಿಪಡಿಸಿದ ನಂತರ ಆ ಪ್ರಮಾಣ ಪತ್ರವು ವಿಧಿಪೂರ್ವಕವಾಗಿ ಸರ್ವಸಮ್ಮತವಾಗಿ ಸ್ವೀಕೃತವಾಯಿತು. ಆ ಪರಿಷತ್ತಿನ ವರದಿಯು "ಈ ಸಂದರ್ಭದಲ್ಲಿ ಪ್ರತಿನಿಧಿಗಳೂ ಎಲ್ಲಾ ಶ್ರೋತೃವೃಂದವೂ ಎದ್ದು ನಿಂತು ಜಯಘೋಷ ಮಾಡಿದರೆಂದು" ಹೇಳುತ್ತದೆ.

ಮರುದಿನ ನೆರೆದ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು ಆ ಪ್ರಮಾಣ ಪತ್ರಕ್ಕೆ ಹಸ್ತಾಕ್ಷರವಿಟ್ಟರು. ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾದ ಹೆರ್ರಿ. ಎಸ್. ಟ್ರೂಮನ್ನರು ಅದನ್ನು ಹೀಗೆ ವರ್ಣಿಸಿದರು—"ಇದು ಭೂಮಂಡಲದ ಎಲ್ಲಾ ಜನಾಂಗಗಳ" ಯುದ್ಧವು ಅನಿವಾರ್ಯವಾದುದಲ್ಲ, ಶಾಂತಿಯನ್ನು ಕಾಪಾಡಬಹುದು, ಎಂಬ ದೊಡ್ಡ ನಂಬಿಕೆಯ ಪ್ರಕಟಣೆಯಾಗಿದೆ. ಅಕ್ಟೋಬರ ತಾ. ೨೪ರಲ್ಲಿ ಆ ಪ್ರಮಾಣ ಪತ್ರವನ್ನು ಎಲ್ಲರಿಗೂ ಅನ್ವಯಿಸತಕ್ಕ ಅಧಿಕೃತ ಪತ್ರವೆಂದು ಮಾಡಲು ಸಾಕಷ್ಟು ಭಾಗವಹಿಸುವ ಜನಾಂಗಗಳು ದೃಢ ಪಡಿಸಿದವು. ಒಂದು ದೊಡ್ಡ ಕನಸು ನನಸಾಯಿತು. ಸಂಯುಕ್ತ ಜನಾಂಗ ಸಂಸ್ಥೆಯು ಜನ್ಮವೆತ್ತಿತು.

ಸಂಯುಕ್ತ ಜನಾಂಗಗಳ ಪ್ರಮಾಣ ಪತ್ರವು ೧೯ ಅಧ್ಯಾಯಗಳಲ್ಲಿ ೧೧೧ ಪ್ರಕರಣಗಳನ್ನು ಒಳಗೊಂಡಿದೆ. ಅದರ ಪ್ರಸ್ತಾವನೆಯು ಹೀಗೆ ಹೇಳುತ್ತದೆ—

ಸಂಯುಕ್ತ ಜನಾಂಗಗಳ ಜನರಾದ ನಾವು ನಮ್ಮ ಜೀವಮಾನದಲ್ಲಿ ಎರಡು ಸಲ ಮಾನವ ಸಮುದಾಯಕ್ಕೆ ಹೇಳಬಾರದ ದುಃಖಗಳನ್ನು ತಂದೊಡ್ಡಿದ ಯುದ್ಧದ ಜ್ವಾಲೆಯಿಂದ ಮುಂದಿನ ಜನಾಂಗವನ್ನು ಕಾಪಾಡಿ ಉಳಿಸುವುದಕ್ಕೆ ನಿರ್ಣಯಿಸಿರುತ್ತೇವೆ—

ಮೂಲಭೂತವಾದ ಮನುಷ್ಯನ ಹಕ್ಕುಗಳಲ್ಲಿ, ಅವನ ಗೌರವ ಮತ್ತು ಯೋಗ್ಯತೆಯಲ್ಲಿ, ಸ್ತ್ರೀ ಪುರುಷರ ಮತ್ತು ಸಣ್ಣ ದೊಡ್ಡ ಎಲ್ಲಾ ರಾಷ್ಟ್ರಗಳ ಸಮಾನವಾದ ಹಕ್ಕುಗಳಲ್ಲಿ ನಂಬಿಕೆಯನ್ನು ದೃಢಪಡಿಸುವುದಕ್ಕೆ.

ಅಂತಾರಾಷ್ಟ್ರೀಯ ಕಾನೂನಿನ ಮೂಲಗಳಿಂದ ಮತ್ತು ಪರಸ್ಪರ ಒಪ್ಪಂದಗಳಿಂದ ಮುಂದೆ ಬರುವ ಕರ್ತವ್ಯಗಳಿಗೆ ಗೌರವ ಮತ್ತು ನ್ಯಾಯವನ್ನು ಕಾಪಾಡುವ ಪರಿಸ್ಥಿತಿಗಳನ್ನು ನಿರ್ಮಿಸುವುದಕ್ಕೆ ಮತ್ತು ಹೆಚ್ಚಿನ ಸ್ವಾತಂತ್ರ್ಯದಿಂದ ಸಾಮಾಜಿಕ ಅಭಿವೃದ್ಧಿ ಮತ್ತು ಉತ್ತಮವಾದ ಜೀವನ ಮಟ್ಟಗಳನ್ನು ಊರ್ಜಿತ ಪಡಿಸುವುದಕ್ಕೆ,

ಮತ್ತು ಈ ಉದ್ದೇಶಗಳಿಗೆ, ಸಹನೆಯನ್ನು ಕೈಗೊಂಡು ಉತ್ತಮ ನೆರೆಮನೆಯವರಂತೆ ಶಾಂತಿಯಿಂದ ಜೀವಿಸುವುದಕ್ಕೆ ಮತ್ತು ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ನಮ್ಮ ಶಕ್ತಿಯನ್ನು ಒಟ್ಟುಗೂಡಿಸುವುದಕ್ಕೆ ಮತ್ತು ಕ್ರಮಗಳ ಪದ್ಧತಿ ಮತ್ತು ತತ್ವಗಳನ್ನು ಒಪ್ಪಿ ಸರ್ವ ಸಾಮಾನ್ಯವಾದ ಹಿತಕ್ಕಾಗಿಯಲ್ಲದೆ ಇತರ ಉದ್ದೇಶಗಳಿಗೆ ಆಯುಧ ಶಕ್ತಿಯನ್ನು ಪ್ರಯೋಗಿಸ ಬಾರದೆಂದು ಸ್ಥಿರಪಡಿಸುವುದಕ್ಕೆ.

ಎಲ್ಲಾ ಜನಾಂಗಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಊರ್ಜಿತ ಪಡಿಸಲು ಬೇಕಾದ ಅಂತಾರಾಷ್ಟ್ರೀಯ ಸಾಧನಗಳನ್ನು ಪ್ರಯೋಗಿಸುವುದಕ್ಕೆ.

ಈ ಉದ್ದೇಶಗಳನ್ನು ಸಾಧಿಸಲು ನಮ್ಮ ಯತ್ನಗಳನ್ನು ಸಂಘಟಿಸುವುದಕ್ಕೆ ನಾವು ನಿರ್ಣಯಿಸಿರುತ್ತೇವೆ.

ಇದಕ್ಕನುಸಾರವಾಗಿ ನಮ್ಮ ಆಯಾಯ ಸರಕಾರಗಳು, ಉಚಿತವಾದ ಮತ್ತು ಉತ್ತಮವಾದ ರೂಪದಲ್ಲಿ ಕಂಡು ಬರುವ ತಮ್ಮ ಪೂರ್ಣ ಅಧಿಕಾರಗಳನ್ನು ಪ್ರದರ್ಶಿಸಿದ ಈ ಸಾನ್‌ಫ್ರಾನ್ಸಿಸ್ಕೋ ನಗರದಲ್ಲಿ ನೆರೆದ ತಮ್ಮ ಪ್ರತಿನಿಧಿಗಳ ಮೂಲಕ ಸಂಯುಕ್ತ ಜನಾಂಗಗಳ ಪ್ರಮಾಣ ಪತ್ರವನ್ನು ಮುಂದಿಡಲು ಒಪ್ಪಿ ಈ ಮೂಲಕವಾಗಿ 'ಸಂಯುಕ್ತ ಜನಾಂಗಗಳು' ಎಂದು ತಿಳಿಯಲ್ಪಡುವ ಒಂದು ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸುತ್ತೇವೆ.

ಈ ದಿನ ಈ ಸಂ. ಜ. ಸಂಸ್ಥೆಯ ಮೆಂಬರುಗಳು ೬೦ ಸಂಖ್ಯೆಯಲ್ಲಿ ನಿಂತಿರುತ್ತದೆ.

(ಭವನ್ಸ್ ಜರ್ನಲ್ ಪತ್ರಿಕೆಯಿಂದ)

ನಗೆಗಾರ ಮಾರ್ಕ್ ಟ್ವೇನ್

(ಆರನೇ ಪುಟದಿಂದ)

ತ್ತದೆ. ಟಾಮ ಸಾಯರ್ ಎಂಬಾತ ತನಗೆ ಶಿಕ್ಷೆಯಾಗಿ ಬಂದ ಗೋಡೆಗೆ ಸುಣ್ಣ ಬಳಿವ ಕೆಲಸವನ್ನು ಚಾಣಾಕ್ಷತೆಯಿಂದ ಉಳಿದ ಹುಡುಗರಿಗೆ ಹಂಚಿಹಾಕಿದ ಚಾತುರ್ಯದ ಕಥೆ ಇದಾಗಿದೆ. ಹಾಗೆಯೇ ಹಕ್ಲ್‌ಬರ್ರಿ ಫಿನ್ ಒಂದು ಕೊಲೆಯ ಕಥೆ.

ಮಾರ್ಕ್‌ಟ್ವೇನನ ಹೇಳಿಕೆಗಳು ವಚನಗಳು ಅಳಿವಿಳಿವಿಲ್ಲದವು. ಇತರ ಶ್ರೇಷ್ಠ ಪುಂಗವರ ವಾಕ್ಯಗಳಂತೆ ಅವೂ ರಸಯುಕ್ತವಾಗಿದ್ದು ಮಾರ್ಕ್‌ಟ್ವೇನನ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ-'ಚರ್ಚುಗಳಿಗೆ ಅಧಿಕಾರ ಸಿಕ್ಕುವ ಮುನ್ನ ಮನುಷ್ಯರು ಮನುಷ್ಯರಾಗಿದ್ದರ; ತಲೆಯೆತ್ತಿ ಸ್ವಾತಂತ್ರ್ಯದಿಂದ ನಡೆಯಬಲ್ಲವರಿದ್ದರು."

"ಎರಿಸ್ಟೋಕ್ರೆಸಿ [ಶ್ರೀಮಂತಿಕೆ] ಯೆಂಬುದು ಗುಲಾಮರನ್ನು ಹಿಡಿದು ಆಳುವ ಒಂದು ಸಂಗಡ."—ಮುಂತಾದ ವಾಕ್ಯಗಳು ಕಿಡಿಕಾರುವಂತಹವಿವೆ. ಮಾರ್ಕ್ ಟ್ವೇನ್ ಕ್ರಿಸ್ತಾಲಯಗಳಿಗೆ ಹೋಗುವುದನ್ನು ವಿರೋಧಿಸುತ್ತಿದ್ದ. ಆತನ ಮಗಳಾದ ಸೂಸೀ ಆತನ ನಡವಳಿಕೆಗಳಿಂದ ಮನ ತುಂಬ ಮೆಚ್ಚಿಕೊಳ್ಳುತ್ತಿದ್ದಳು.

ಹೋದಲ್ಲಿ, ಬಂದಲ್ಲಿ, ಕಂಡವಸ್ತುಗಳ ಮೇಲೆ ನಗೆಬರಹಗಳನ್ನು ಬರೆಯುತ್ತಿದ್ದುದು ಈತನ ಕವಿತ್ವವನ್ನು ಸಾರಿಹೇಳುವ ಇನ್ನೊಂದು ಸೂಚೀ ಬಾಣವೆನ್ನಬಹುದು. ಇಂತಹ ಮಹಾಸಾಹಿತಿಗಳ ಲೇಖನಗಳನ್ನು ಓದಿ, ಸಂತೋಷಪಟ್ಟು ಅವರು ಹಗಲೂ ರಾತ್ರಿ ದುಡಿದ ಸಾಹಿತ್ಯರಂಗಕ್ಕೆ ನಮ್ಮ ಕಿಂಚಿತ್ ಸೇವೆಯನ್ನರ್ಪಿಸುವುದೇ ಇಂತಹ ಪ್ರತಿಭಾವಂತ ವ್ಯಕ್ತಿಗಳಿಗೆ ನಾವು ಸಲ್ಲಿಸಬಹುದಾದ ಸೇವೆ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಅಡಿನ್ ಬೆಲೆಯ ಪುಸ್ತಕ

ಹೊಸ ಮುದ್ರಣ - ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ
ದಯಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ತಾಲುಕೋಟೆ, ಉಡುಪಿ, ದ. ಕನ್ನಡ.

ದ್ರಾ. ಮು. ಕ. ಮಂತ್ರಿಮಂಡಲ

(ಐದನೇ ಪುಟದಿಂದ)

ವು ಬದಲಾಯಿಸಿದರು. ಹಾಗೆಯೇ ಸ್ಟೇಟ್ ಟ್ರಾನ್ಸ್‌ಪೋರ್ಟೆಂದು ಇದ್ದುದನ್ನು ಪೋಕ್ಕುವರ್‌ದೆಂದೂ ಬದಲಾಯಿಸಿದರು. ಆಗ ಈ ಉಪಯುಕ್ತ ಸಾಧನದ ಆವಶ್ಯಕತೆಯ ಜ್ಞಾಪಕ ಮಂತ್ರಿ ಮಹಾಶಯರಿಗೆ ಇದ್ದಿರಲಿಲ್ಲವೇನು? ಉಪಯುಕ್ತ ಸಾಧನದ ಉಪಯೋಗವನ್ನು ನಿಲ್ಲಿಸಿದುದರಿಂದಾಗಿ ಈ ವಾಹನ ದುರ್ಘಟನೆಗಳು ನಡೆಯುವದು ಹೆಚ್ಚಾಗಿದೆಯೆಂದು ಈ ಮಂತ್ರಿಯವರು ಹೇಳುವರೇ?

ನಮ್ಮ ರಾಷ್ಟ್ರದ ಪ್ರಗತಿ ಹಾಗೂ ವಿದ್ಯಾರಂಗದ ಒಳಿತಿಗಾಗಿ ಇಂಗ್ಲಿಷ್ ವಿದ್ಯಾಭ್ಯಾಸ ಅತ್ಯಗತ್ಯವೆಂಬುದನ್ನು ಮದ್ರಾಸ್ ಸರಕಾರ (ತಮಿಳ್ ಅರಸು) ಅರಿತು ಕೊಂಡಿದೆ. ಅದು ಆಂಗ್ಲ ಭಾಷೆಯ ಮಹಾತ್ಮೆಯನ್ನು ಕಂಡುಕೊಂಡಿದೆಯೆಂದೂ ವಿದ್ಯಾ ಮಂತ್ರಿಗಳು ತಿಳಿಸಿದರು. ಆಂಗ್ಲ ಭಾಷೆಯ ಆಕ್ರಮಣ ಪೂರ್ವ ಇಲ್ಲಿ ರಾಷ್ಟ್ರ ಒಂದಿರಲಿಲ್ಲವೇನು? ಇಲ್ಲಿಯ ವಿದ್ಯಾರಂಗದ ಮಟ್ಟ ಬಹಳ ಕೆಳಮಟ್ಟದಲ್ಲಿತ್ತೇನು? ಹಾಗಿದ್ದಲ್ಲಿ ಹುಯೆನ್ ತ್ಸಾಂಗ್, ಫಾಹಿಯೂನ್ ಮೊದಲಾದವರು ಇಲ್ಲೇತಕ್ಕೆ ಬಂದಿದ್ದರು? ಇಂದು ನಾವು ಯಾವ ದಿಸೆಯಲ್ಲಿ ಪ್ರಗತಿ ಹೊಂದುತ್ತಿದ್ದೇವೆ? ಇಂದು ಭಾಷಾ ಜಗದಾಟ ಹೆಚ್ಚಾಗುತ್ತಿದೆಯೇ ಅಥವಾ ಕಮ್ಮಿಯಾಗುತ್ತಿದೆಯೇ? ತಿರು ನೆಡುಂಜೆಳ್ಳಿಯನ್ ಅವರಿಗೆ ಇವೆಲ್ಲಾ ಗೊತ್ತಿಲ್ಲವೇನು?

ವಿದ್ಯಾಭ್ಯಾಸದಲ್ಲಿ ಮಾಧ್ಯಮಿಕ ಭಾಷೆಯು ತಾಯ್ನುಡಿಯಾಗಿರುವಾಗ ಪರಭಾಷೆಗಳಿಂದ ಪ್ರಭುತ್ವದ ಅಪಾಯವಿಲ್ಲವೆಂದು ತಿರು ನೆಡುಂಜೆಳ್ಳಿಯನ್ ಅವರು ಹೇಳಿರುವರು. ಈ ಮಾತು ಆಂಗ್ಲ ಭಾಷೆಗೆ ಮಾತ್ರ ಅನ್ವಯಿಸುತ್ತದೇನು? ಇನ್ನು ಪರಭಾಷೆಗಳಿಂದ ಅಪಾಯವಿಲ್ಲವೆಂದಾದಲ್ಲಿ ದೇಶೀಯ ಅನ್ಯ ಭಾಷೆಗಳಿಂದ ಅಪಾಯ ಬರಲು ಸಾಧ್ಯವೇನು? ದೇಶ, ರಾಷ್ಟ್ರ, ಮುಂತಾದ ಪದಗಳನ್ನು ಈ ಸಮಯದಲ್ಲಿ ತಿರು ನೆಡುಂಜೆಳ್ಳಿಯನ್ ಉಪಯೋಗಿಸಿದ್ದಾರೆ. ನಮ್ಮ ದೇಶದ್ದೇ ಭಾಷೆಯಾದ ಹಿಂದಿಯನ್ನು ನಾಶವಾಗಲೆನ್ನುವದು ರಾಷ್ಟ್ರೀಯನ ಪ್ರಗತಿ ಸೂಚಕ ಚಿಹ್ನೆಯೇ? ಅಥವಾ ಇಂಗ್ಲಿಷ್ ಜ್ಞಾನದ ಮಹಾತ್ಮೆಯೇ? ಇಂಗ್ಲಿಷ್ ಮತ್ತು ಹಿಂದಿಯನ್ನು ಒಂದೇ ತಕ್ಕಡಿಯ ಎರಡು ತಟ್ಟೆಗಳಲ್ಲಿ ತೂಗಲು ಸಾಧ್ಯವಿಲ್ಲ. ಹಿಂದಿ ನಮ್ಮದೇ ಭಾಷೆ ಇದೆ. ಹಾಗಿರುವಾಗ ನಮ್ಮ ಮಕ್ಕಳು ಹಿಂದಿ ಕಲಿತರೆ ವಿದ್ಯಾ ಮಂತ್ರಿಗಳಿಗಾಗಲೀ ಅಥವಾ ದ್ರಾ. ಮು. ಕ. ಕ್ಕಾಗುವ ನಷ್ಟವೇನು. ಹಿಂದಿಯ ಎದುರು ತಿರು ನೆಡುಂಜೆಳ್ಳಿಯನ್ ಹೋರಾಟ ನಡೆಸಿದ್ದೇಕೆ?

ತಿರು ನೆಡುಂಜೆಳ್ಳಿಯನ್‌ರವರು ದ್ರಾ. ಮು. ಕ.ದ ಧುರೀಣರಂತೆ ಆಂಗ್ಲ ಭಾಷೆಯ ಕುರಿತು ಭಾಷಣವಿತ್ತಿರುವರು. ದ್ರಾ. ಮು. ಕ. ಕ್ಕೆ ಆಂಗ್ಲ ಭಾಷೆಯ ಮೇಲೆ ಅಷ್ಟು ವ್ಯಾಮೋಹವಿರಲು ಕಾರಣವೇನೆಂಬ ಪ್ರಶ್ನೆ ಬರುತ್ತದೆ. ಆಗ ದ್ರಾ. ಮು. ಕ. ದ ಮೂಲದತ್ತ ದೃಷ್ಟಿ ಹಾಯಿ

ಸಬೇಕಾಗುತ್ತದೆ. ನಾಗಪ್ರದೇಶ ಹಾಗೂ ಇತರ ಸ್ಥಳಗಳಿಗೆ ಹೋಗಿದ್ದ ಕ್ರಿಸ್ತೀಯ ಮತಪ್ರಸಾರಕರು ಅಲ್ಲಿಯ ಜನರಿಗೂ ಭಾರತದಲ್ಲಿರುವ ಇತರ ಜನರಿಗೂ ಸಂಬಂಧವೇ ಇಲ್ಲವೆಂದೂ, ಇವರ ಸಂಸ್ಕೃತಿಯೇ ಪ್ರತ್ಯೇಕವೆಂದೂ, ಅಲ್ಲದೆ ಅನ್ಯ ಜನರು ಇವರ ಮೇಲೆ ಅಧಿಕಾರ ನಡೆಸಲು ಪ್ರಯತ್ನಿಸುತ್ತಿದ್ದಾರೆಂದೂ ಹೇಳಿ, ಅವರ ಸಹಾಯಕ್ಕೆ ತಮ್ಮನ್ನು ಸ್ವತಃ ದೇವರೇ ಕಳುಹಿಸಿದ್ದೆಂದು ಹೇಳುತ್ತ, ಮದ್ದು, ಬಿಸ್ಕಿಟು, ಪುಡಿಕಾಸು ವಗೈರೆಗಳ ಪ್ರಲೋಭನೆ ತೋರುತ್ತ, ತಮ್ಮ ತಳುಕು ಬೆಳಕಿನ ತರುಣಿಯರ ತಂಡದಿಂದ ಅವರ ಮನಸೆಳೆಯುತ್ತಾ.... ಹೀಗೆ ಅನ್ಯಾನ್ಯ ಉಪಾಯಗಳಿಂದ ನಾಜೂಕಾಗಿ ತಮ್ಮ ಬುಟ್ಟಿಯೊಳಗೆ ಹಾಕಿಕೊಂಡರು. ತಮಿಳುನಾಡಿನಲ್ಲಿ ನಡೆದದ್ದು ಅಷ್ಟೇ. ತಮಿಳೇ ಅತಿ ಪ್ರಾಚೀನ ಭಾಷೆ. ಸಂಸ್ಕೃತ ಅದರ ಮೇಲೆ ಆಕ್ರಮಣ ನಡೆಸುತ್ತಿದೆ.... ಇತ್ಯಾದಿ ಅಪಪ್ರಚಾರ ನಡೆಸಿದ ಪರಿಣಾಮವಾಗಿ ಕಲ ಜನರು ಅವರ ಬಲೆಯಲ್ಲಿ ಬಿದ್ದುಬಿಟ್ಟರು. ಅದಕ್ಕೆ ಅವರ ಶಾಲೆ—ಕಲಾಶಾಲೆಗಳೂ. ಅಧಿಕಾರ—ಅಂತಸ್ತೂ ಸಹಾಯ ಮಾಡಿದುವು. ಈ ಆಂಗ್ಲ ಶಾಲೆಗಳಲ್ಲಿ ಕಲಿತ ತಮಿಳರ ವೇಷ-ಭೂಷಣ; ನಡೆ-ನುಡಿ, ರೀತಿ-ನೀತಿ ಎಲ್ಲವೂ ಬದಲಾದುವು ತಮ್ಮ ತಂದೆ ಅವರಿಗ ಕೇವಲ ಬೋಳು ಬಪ್ಪ. ಆಂಗ್ಲೇಯರೇ ನವನಾಗರಿಕತೆಯ ದೇವದೂತರು, ಇಂತಹ ಮಿಥ್ಯಾಜ್ಞಾನವನ್ನು ಹೊಂದಿದ ತರುಣರ ತಂಡ ಆಂಗ್ಲ ಭಾಷೆಯಲ್ಲೇ ತಮಿಳಿನ ಹೆಸರಿನಲ್ಲಿ ಅನ್ಯ ಭಾಷೆಯನ್ನು ದ್ವೇಷಿಸಲಾರಂಭಿಸಿತು. ಬ್ರಿಟಿಷರ ಒಡೆದು ಆಳುವ ನೀತಿ ಫಲಿಸಿತು. ಭಾರತದಲ್ಲಿ ಸ್ವಾತಂತ್ರ್ಯ ಸಮರದ ಬೇಗೆ ಹಬ್ಬಿದ್ದಾಗ ಇಲ್ಲಿ ಬ್ರಿಟಿಷರು ಜಸ್ಟೀಸ್ ಪಾರ್ಟಿ ಹುಟ್ಟುವಂತೆ ಮಾಡಿದರು. ಕೊನೆಯಲ್ಲಿ ಅನೇಕ ರೀತಿಯ ದೇಶಪ್ರೇಮಿಗಳು ಅದರಲ್ಲಿ ಸೇರಿ ಬಿಟ್ಟರು. ತಿರು ರಾಮಸ್ವಾಮಿ ನಾಯ್ಕರ್‌ರವರು ದ್ರಾವಿಡ ಕಳಗವನ್ನು ಕಟ್ಟಿದರು. ಆದರೆ ಆ ಮುದುಕ ಎಳೆಹೆಣ್ಣನ್ನು ಮದು

ವೆಯಾದುದರಿಂದ ತರುಣರಿಗೆ ಕೋಪ ಬಂದು ಅವರು ತಿರು ಅಣ್ಣಾದೊರೈಯವರ ನೇತೃತ್ವದಲ್ಲಿ ಹೊರ ಬಂದು ದ್ರಾವಿಡ ಮುನ್ನೇಟ್ರ ಕಳಗವನ್ನು ಕಟ್ಟಿಕೊಂಡರು. ಅದು ರಾಜಕೀಯ ಪಕ್ಷವಾಗಿ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಚುನಾವಣೆಯಲ್ಲಿ ನಿಂತು ಇಂದು ಆಳುವ ಪಕ್ಷವಾಗಿ ಬಿಟ್ಟಿದೆ. ಹೀಗಿರುವಾಗ ಹಳೆಯ ವಾಸನೆ ಹೋಗುವದುಂಟೇ? ಈ ನಡುವೆ ಅನೇಕ ಬದಲಾವಣೆಗಳಿಗೊಳಪಟ್ಟಿರುವರಾದರೂ ಹಳೆಯ ಅಭ್ಯಾಸ ಸಾಧಾರಣ ಮಟ್ಟಿಗೆ ಹಾಗೆಯೇ ಇದೆ. ಅದು ಆಗೊಮ್ಮೆ ಈಗೊಮ್ಮೆ ಮುಖ ತೋರಿಸುತ್ತಿರುತ್ತದೆ. ಇಲ್ಲಿ ನಡೆದದ್ದು ಅದೇ. ತಿರು ಅಣ್ಣಾದೊರೈಯವರಲ್ಲಿ ಬಹಳ ಬದಲಾವಣೆ ಆಗಿದೆ. ಅದುದರಿಂದಲೇ ಅವರು ತಿರು ನೆಡುಂಜೆಳ್ಳಿಯನ್ ಅವರಿಗೆ ಎಚ್ಚರಿಕೆಯನ್ನು ಇತ್ತಿರುವರು. ಮಂತ್ರಿಯಾಗುವ ಮುಂಚೆ ತಿರು ನೆಡುಂಜೆಳ್ಳಿಯನ್ ಧೋತಿ ಕಟ್ಟಿಕೊಂಡಿದ್ದರು. ಶ್ರೀ ವೆಂಕಟ್ರಾಮನ್ ಇದ್ದ ಸ್ಥಾನಕ್ಕೆ ಈಗ ಹೋದೊಡನೆ ಇವರೂ ಪ್ಯಾಂಟಿಗೆ ಆರಂಭಿಸಿ ಬಿಟ್ಟರು. ದ್ರಾ. ಮು. ಕ.ದ ತಯಾರಿ ಕಲಾ ಶಾಲೆಯಂತಿರುವ ಪಚ್ಚೈಯಪ್ಪ ಕಲಾ ಶಾಲೆಯ ವಿದ್ಯಾರ್ಥಿಗಳ ನಡುವೆ ಮಾತಾಡುವಾಗ ತಿರು ನೆಡುಂಜೆಳ್ಳಿಯನ್ ಸ್ವಲ್ಪ 'ತಮಾಷೆ'ಯಿಂದ ಮಾತಾಡಿದರು. ವಿದ್ಯಾ ಮಂತ್ರಿಯವರು ಆಗ್ಗದ ರಾಜಕೀಯ ತಮಾಷೆಯ ಮಾತುಗಳನ್ನಾಡಿದ್ದಕ್ಕೆ ತಿರು ನೆಡುಂಜೆಳ್ಳಿಯನ್‌ರಿಗೆ ತಿರು ಅಣ್ಣಾದೊರೆಯವರು ತಮ್ಮನಿಗೆ ಅಣ್ಣ ಹೇಳಬೇಕಾಗುವ ಮಾತುಗಳನ್ನು ಹೇಳಿರುವರು. ಈ ಸಲವೂ ಅವರು ತಮ್ಮನ ಕಿವಿ ಹಿಡಿದೆ ಬಿಡಲಿಕ್ಕಿಲ್ಲ. ಹಾಗಿದ್ದರೂ ಮೂಲತಃ ದ್ರಾ. ಮು. ಕ.ಕ್ಕೆ ಹಿಂದಿ ಹಾಗೂ ಸಂಸ್ಕೃತದ ಮೇಲೆ ದ್ವೇಷವೂ ಆಂಗ್ಲ ಭಾಷೆಯ ಮೇಲೆ ವ್ಯಾಮೋಹವೂ ಇದೆ. ಇದು ಅವರ ಗುಲಾಮಿ ಮನೋಭಾವನೆಯ ಲಕ್ಷಣವೂ ಇದೆ. ತಿರು ನೆಡುಂಜೆಳ್ಳಿಯನ್‌ರಿಗೆ ಅದು ಗೊತ್ತು. ಅದನ್ನವರು ಜನತೆ ತಪ್ಪಾಗಿ ತಿಳಿದುಕೊಂಡಿದೆ, ನಾವು ನೈಜ ದೇಶಭಕ್ತರೇ ಇದ್ದೇವೆಂದು ಹೇಳಿರುವರು. ಅದನ್ನು ಮುಂದಿನ ದಿನಗಳಲ್ಲಿ ಕಂಡು ಕೊಳ್ಳಬಹುದು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಅಮೃತ ಬಿಂದು

ಜಾಡಿ ಮಾತು ಅದರ ನಿರ್ಮಾತರಿಗೆ ಕ್ರೀಡೆಯಾದರೆ ತಿಳಿಗೇಡಿಗಳ ದುಃಸ್ವಪ್ನ; ಬುದ್ಧಿವಂತರ ಉಪೇಕ್ಷಾವಸ್ತು.

o o o

ಜೀವನದ ಚಿಕ್ಕ ವಿಚಾರಗಳಲ್ಲಿ ಮನುಷ್ಯನು ನಿರಾಸೆ ಹೊಂದಬೇಕು. ಹಾಗಾದರೆ ಮಾತ್ರ ಜೀವನದ ದೊಡ್ಡ ವಿಚಾರಗಳ ಮಹತ್ವವನ್ನು ಆತನು ಗ್ರಹಿಸಬಲ್ಲ.

o o o o

ಭಗವಂತನು ಯಾರನ್ನೂ ಸ್ವತಂತ್ರನನ್ನಾಗಿ ಮಾಡಿಲ್ಲ. ಸಿರಿವಂತನಿಗೆ ಬಡವರ ಆಶ್ರಯ ಬೇಕು. ಬಡವರಿಗೆ ಸಿರಿವಂತರ ಆಶ್ರಯಬೇಕು. ಜಗತ್ತು ದೊಡ್ಡ ಕಟ್ಟಡದಂತೆ ಅದರ ಪ್ರತಿಯೊಂದು ಕಲ್ಲೂ ಒಂದನ್ನೊಂದು ಆಶ್ರಯಿಸಿ ನಿಂತಿರುವುದರಿಂದಲೇ ಕಟ್ಟಡ ನಿಂತಿದೆ, ಒಂದೇ ಕಲ್ಲು ಎಷ್ಟೇ ಚೆನ್ನಾಗಿದ್ದರೂ ಮನೆಯಾಗದು.

o o o

ಯಾವ ಮನುಷ್ಯನನ್ನು ಯಾ ಗೆಳೆಯನನ್ನು ಅಳೆಯಿಸಿ ನಿಲ್ಲದಿರು; ಜೀವಿಸದಿರು. ನಿನ್ನನ್ನು ನೀನು ಅಳೆಯಿಸು. ತನ್ನ ಕರ್ತವ್ಯ, ಜವಾಬ್ದಾರಿಗಳನ್ನು ತಿಳಿದವನೇ ಇತರರ ಬಗೆಗೂ ಕರ್ತವ್ಯ ನಿರ್ವಹಿಸುವನು.

o o o

ಜೀವನವೆಂಬುದು ಒಂದು ಯುದ್ಧದಂತೆ, ಜೀವನವನ್ನು ನಿರಾಸೆಯಿಂದ ಎದುರಿಸುವವನು ತನ್ನ ಕರ್ತವ್ಯ ಬಿಟ್ಟೋಡುವ ಸೈನಿಕನಂತೆ ಖಂಡನೆಗೆ ಅರ್ಹನು. ಸೈನಿಕನ ಪರಮ ಸಂಪತ್ತೆಂದರೆ ಧೈರ್ಯ ಹೇಗೋ ಹಾಗೆಯೇ ಜೀವನದ ವಿರುತಗ್ಗುಗಳನ್ನು ಧೃತಿಯಿಂದ ಎದುರಿಸುವುದು ಕರ್ತವ್ಯ.

o o o o

ತನ್ನ ಸೇವಕನಿಗೆ ತನ್ನ ಗುಟ್ಟನ್ನು ಹೇಳುವವನು ಆತನನ್ನು ತನ್ನ ಯಜಮಾನನಾಗಿ ಪರಿವರ್ತಿಸಿಕೊಳ್ಳುವನು.

o o o

ನಿಸ್ವಾರ್ಥವನ್ನು ಬೋಧಿಸುವ ಮೂರ್ಖರು ವಿದ್ಯೆಯಾದರೂ ಸ್ವಾರ್ಥವನ್ನು ಬೋಧಿಸುವ ಚುರುಕು ವಿದ್ಯೆಗಿಂತ ಮೇಲು.

o o o

ತನ್ನ ಹಿತವನ್ನು ಸಾಧಿಸುವವನನ್ನು ಯಾರೂ ಸ್ವಾರ್ಥಿ ಎಂದು ಹೇಳುವುದಿಲ್ಲ. ಆದರೆ ತನ್ನ ಹಿತಕ್ಕೆ ಇತರರನ್ನು ಬಲಿಕೊಡುವವನು ಸ್ವಾರ್ಥಿಯಾಗುತ್ತಾನೆ.

o o o o

ಹೂಗಳಿಗಾಗಿ ಶೀಘ್ರ ಜಾಗೃತವಾಗುವ ಹೃದಯವೇ ಶೀಘ್ರವಾಗಿ ಮುಳ್ಳುಗಳಿಂದ ಚುಚ್ಚಿಸಿಕೊಳ್ಳಬೇಕಾಗುತ್ತದೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.



ಅಲ್ಲಿಯೇ ಆಚೆ ಮೊಹಾನೂರು

ಮೊಹಾನೂರು ಎಲ್ಲಿದೆ? ಮೊಹಾನೂರು ಮದ್ರಾಸ್ ರಾಜ್ಯದಲ್ಲಿ 10,000ಕ್ಕಿಂತ ಕಡಿಮೆ ಜನವಸತಿಯ ಒಂದು ಚಿಕ್ಕ ಗ್ರಾಮ. ಅದರ ಹೆಸರನ್ನು ನೀವು ಎಂದಿಗೂ ಕೇಳದಿರಲೂ ಸಾಕು. ಆದರೆ ಕೆನರಾ ಬ್ಯಾಂಕಿನ ಶಾಖೆ ಅಲ್ಲಿದೆ. ಸಣ್ಣ ಊರುಗಳಲ್ಲಿಯೂ, ಬ್ಯಾಂಕುಗಳಿಲ್ಲದ ಪ್ರದೇಶಗಳಲ್ಲಿಯೂ ಬ್ಯಾಂಕಿಂಗಿನ ಸೌಲಭ್ಯಗಳನ್ನು ತರಲು ಯಾವಾಗಲೂ ಪ್ರಯತ್ನಿಸುತ್ತಿರುವ ಕೆನರಾ ಬ್ಯಾಂಕ್ ದೇಶದಲ್ಲೆಲ್ಲ ಜಾಳಿಗೆಯಂತೆ ಹರಡಿದ 240ಕ್ಕೂ ಹೆಚ್ಚಿನ ತನ್ನ ಶಾಖೆಗಳ ಬಗ್ಗೆ ಹೆಮ್ಮೆ ಪಡುವಂತಿದೆ. ಇಂತಹವೇ ಪ್ರಯತ್ನಗಳನ್ನು ಮುಂದುವರಿಸುತ್ತಿರುವ ಕೆನರಾ ಬ್ಯಾಂಕ್ ಭವಿಷ್ಯದಲ್ಲಿ ಒಂದು ಮಹತ್ವಾಕಾಂಕ್ಷೆಯಾದ ಯೋಜನೆಯನ್ನು ಇಟ್ಟುಕೊಂಡಿದೆ—ಅದೆಂದರೆ ಉಳಿತಾಯವನ್ನು ಕೆನರಾ ಬ್ಯಾಂಕಿನಲ್ಲಿ ಕೂಡಿ ಸಿಟ್ಟು ಅವರ ಮೂಲಕ ಎಲ್ಲೆಡೆಯಲ್ಲಿಯೂ ಜನರು ಸುಖಸಮೃದ್ಧಿಯನ್ನೂ, ಸುರಕ್ಷಿತತೆಯನ್ನೂ ಉಪಭೋಗಿಸುವಂತಾಗಬೇಕು.

SERVING TO GROW GROWING TO SERVE
CANARA BANK LTD ESTD 1906

ಠೇವಣಿ ಸಂಪತ್ತು ರೂಪಾಯಿ 123 ಕೋಟಿಗಳಿಗಿಂತಲೂ ಅಧಿಕ
—240ಕ್ಕಿಂತಲೂ ಹೆಚ್ಚು ಶಾಖೆಗಳು
—ಜಗತ್ತಿನಾದ್ಯಂತ ವ್ಯವಹಾರ

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ ಲೈಟ್ ಹೌಸ್ ಹಿಲ್, ಮಂಗಳೂರು
ಆಡಳಿತ ಆಫೀಸು:
112, ಜಯರಾಮರಾಜೇಂದ್ರ ರೋಡ್, ಬೆಂಗಳೂರು.

SISTA'S-CB-25 KN

ಸ್ವಾವಲಂಬನ ಮತ್ತು ಸರ್ವೋದಯ

(ನಾಲ್ಕನೇ ಪುಟದಿಂದ)

ಪಥದಲ್ಲಿ ಭ್ರಮಿಸುವುದರಿಂದ ಶಾಂತಿ—ಅಹಿಂಸೆಗಳ ಬಲದಿಂದ...'

'ಹ್ಞಾಂ.......ಅಂದ್ರೆ, ಸ್ವಾವಲಂಬನೆಯಿಂದು ನಮ್ಮ ರೋಗಕ್ಕೆ ನಾವೇ ಮದ್ದು ಕೊಡಬೇಕು, ನಮ್ಮ ಮಕ್ಕಳಿಗೆ ನಾವೇ ಶಿಕ್ಷಣ ನೀಡಬೇಕು....'

"ಹೌದು, ಮತ್ತ್ಯಾರು?'

'ಅದು ಹೇಗೆ ಸಾಧ್ಯ?"

"ಮತ್ತೆ ರೋಗ ಬಂದರೆ ಔಷಧಿ ಕುಡಿಸೋಕೆ ನರ್ಸ್ ಬರಬೇಕೂಂತೀಯೊ? ನಮ್ಮ ಮಕ್ಕಳಿಗೆ ಬೇಕಾದ ಶಿಕ್ಷಣ ಊರವರಿಂದ ಕೊಡಿಸ ಬೇಕೂಂತೀಯ?"

'.......ಅಂದ್ರೆ...ಹ್ಞಾಂ...ತಿಳೀತು, ಇಲ್ಲ....ಇಲ್ಲ. ಸ್ವಾವಲಂಬನವನ್ನು ವ್ಯಕ್ತಿಯೂ ಸಮಾಜವೂ ಸಾಧಿಸಿದರೆ, ದೇಶದಲ್ಲಿ ಸರ್ವೋದಯವಾಗುತ್ತದೆ...."

'ಆಗ ಕೆಂಪು ಚೀನಾವನ್ನೂ ನಾವು ಎದುರಿಸಬಲ್ಲೆವು; ಅರಬ ಜಗತ್ತಿಗೆ ಬೆಂಬಲ ನೀಡಿದ್ದರಿಂದಾದ ಅಪಮಾನದಿಂದಲೂ ಮುಖ ತೊಳೆದೇವು. ನಮ್ಮ ಸರ್ವ ಸಮಸ್ಯೆಗಳಿಗೂ ಉತ್ತರ ನೀಡಿಯೇವು...."

'ಹ್ಞಾಂ. .ಅದು ಹೌದೂನ್ನಿ...'

"ಯಾವುದು?...'

"ಯಾವುದೂಂತ ನಾನೇ ಹೇಳಬೇಕೆ?'

"ಬೇಡ ಕಣೇ...ಅರ್ಥವಾಯ್ತು...."

'ಅಂತ್ರಿ? ಏನಾಯ್ತು...."

'ನೋಡು. ಊಂ...'

'ಹ್ಞಾಂ...'

—ಗೋರಾ.

ಜನಸಂಘದ ಕಾರ್ಯಕರ್ತರ ಸಭೆ.

ಉಡುಪಿ—ಜೂನ್ ತಾ. 14ರಂದು ಉಡುಪಿ ಮಂಡಳ ಜನಸಂಘದ ಕಾರ್ಯಕರ್ತರ ಸಭೆ ಸೇರಿ ಸದಸ್ಯರ ಸಂಗ್ರಹದ ಬಗ್ಗೆ ಪರಿಶೀಲಿಸಲಾಯ್ತು. ವಾರ್ಡು ಸಮಿತಿಗಳನ್ನು ರಚಿಸುವ ಬಗ್ಗೆ ಮತ್ತು ಇತರ ಕಾರ್ಯವಸ್ಥೆ ಬಗ್ಗೆ ಚರ್ಚಿಸಲಾಯ್ತು. ಕಾರ್ಯಾಲಯ ಕಾರ್ಯದರ್ಶಿಯಾಗಿ ಶ್ರೀ ಮಲ್ಪೆ ಭಾಸ್ಕರ ಭಟ್ಟರನ್ನು ನಿಯುಕ್ತಿ ಮಾಡಲಾಯಿತು. ಉಡುಪಿ ಮಂಡಲದ ಸರ್ವ ಸದಸ್ಯರ ಸಮ್ಮೇಳನವನ್ನು ಜುಲೈ ತಿಂಗಳಲ್ಲಿ ನಡೆಸುವ ಬಗ್ಗೆ ನಿರ್ಣಯವನ್ನು ಸ್ವೀಕರಿಸಲಾಯ್ತು.

ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಬಿ. ಕಾಶೀರಾವ್‌ರವರು ಸಭೆಯಲ್ಲಿ ಉಪಸ್ಥಿತರಿದ್ದು ಪ್ರಾಂತೀಯ ಪ್ರತಿನಿಧಿ ಸಭೆಯಲ್ಲಿ ಸ್ವೀಕರಿಸಲಾದ ನಿರ್ಣಯಗಳ ಬಗ್ಗೆ ಸಭೆಯಲ್ಲಿ ಮಾಹಿತಿ ಇತ್ತರು. ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀಯುತ ಅನಂತಕೃಷ್ಣ ಶರ್ಮ, ಜಪ್ಪು ಲಕ್ಷ್ಮಣ ಪೈ, ಮತ್ತು ರಾಮದಾಸ ನಾಯಕರವರೂ ಮುಂದಿನ ಕಾರ್ಯಕ್ರಮದ ಬಗ್ಗೆ ಮಾತನಾಡಿದರು.

ಬಿಹಾರ ಕ್ಷಾಮ ಪರಿಹಾರ ನಿಧಿ

ಶ್ರೀ ಪೇಜಾವರ ಮಠದ ಶ್ರೀಪಾದಂಗಳವರ ಕರೆ

ಬಿಹಾರದಲ್ಲಿ ಭೀಕರ ಬರಗಾಲಕ್ಕೆ ಬವಣೆಪಡುತ್ತಿರುವ ನಮ್ಮ ಬಾಂಧವರ ದುಃಖಪೂರಿತ ಜೀವನವನ್ನು ಸ್ಮರಿಸಿದಾಗ ನಮ್ಮ ಹೃದಯವು ತತ್ತರಿಸುತ್ತದೆ. ಅನ್ನ—ವಸ್ತ್ರ—ಔಷಧಗಳ ಅಭಾವದಿಂದ ಉಪವಾಸ—ರೋಗ ರುಜಿನಗಳಿಗೆ ಈಡಾಗಿ ಲಕ್ಷಾಂತರ ಮಂದಿ ನಮ್ಮ ಸೋದರರು ಅಲ್ಲಿ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಅಲ್ಲಿಂದ ಬರುತ್ತಿರುವ ದುರಂತ ವಾರ್ತೆಗಳನ್ನು ಕೇಳಿ ಎದೆ ಕರಗದ ಭಾರತೀಯನೇ ಇರಲಾರ. ಆದರೆ ಕೇವಲ ಸಹಾನುಭೂತಿಯನ್ನು ಮಾತಿನಿಂದ ವ್ಯಕ್ತಪಡಿಸುವದರಿಂದ ನಮ್ಮ ಕರ್ತವ್ಯ ಮುಗಿದಂತಾಗುವದಿಲ್ಲ. ದೇಹದ ಯಾವುದೇ ಭಾಗದಲ್ಲಿಯೇ ಆಗಲಿ ಒಂದು ಹುಣ್ಣು ಎದ್ದರೆ ಇತರ ಎಲ್ಲಾ ಭಾಗಗಳೂ ಅದರ ಕಡೆಗೇ ಗಮನ ನೀಡಿ ಅದರ ವೇದನೆಗಾಗಿ ಪ್ರಯತ್ನಿಸುವಂತೆ ಭಾರತದ ಯಾವುದೇ ಭಾಗದಲ್ಲಿ ಆದ ಅನರ್ಥವು ನಮಗೂ ಬಂದಿರುವ ಆಪತ್ತೆಂದು ಭಾವಿಸಿ ಪರಿಹಾರಕ್ಕಾಗಿ ಶ್ರಮಿಸುವದು ಭಾರತೀಯರ ಕರ್ತವ್ಯವಾಗಿದೆ. ನಮ್ಮ ರಾಷ್ಟ್ರೀಯ ಪ್ರಜ್ಞೆ ಹಾಗೂ ಚಾರಿತ್ರ್ಯಗಳ ಪರೀಕ್ಷೆಯ ಸಂದರ್ಭವಿದು. ಮಾನವೀಯ ಸಹೃದಯತೆ ಸೇವಾವೃತ್ತಿ, ಹಾಗೂ ತ್ಯಾಗ ಭಾವನೆ, ಮುಂತಾದ ಮಹತ್ವದ ಸದ್ಗುಣಗಳನ್ನು ವ್ಯಕ್ತಪಡಿಸಲು ಮತ್ತು ಬೆಳೆಸಿಕೊಳ್ಳಲು ಸೂಕ್ತವಾದ ಕಾಲವಿದು.

ದುಃಖಿ ಸಂತಪ್ತರಾದ ದೀನದಲಿತರಿಗೆ ಸೇವೆ ಸಲ್ಲಿಸಿ ತನ್ಮೂಲಕ ಸರ್ವಾಂತರ್ಯಾಮಿಯಾದ ಭಗವಂತನ ಕೃಪೆಯನ್ನು ಗಳಿಸಬೇಕೆನ್ನುವ ಸಜ್ಜನರಿಗೆ ಇದಕ್ಕಿಂತ ಹೆಚ್ಚಿನ ಸುಸಂದರ್ಭವು ದೊರೆಯಲಾರದು. ಸೂರ್ಯ ಚಂದ್ರರಿಗೆ ಗ್ರಹಣ ಹಿಡಿದಾಗ ಪುಣ್ಯಕಾಲವಿದೆಂದು ನಂಬಿ ವಿವಿಧ ದಾನ ಧರ್ಮಗಳನ್ನು ನಾವು ಮಾಡುತ್ತಿರುವೆವು. ನಮ್ಮ ದೇಶದ ಒಂದು ಭಾಗಕ್ಕೆ ಬರಗಾಲದ ಭೀಕರ ಗ್ರಹಣವು ಹಿಡಿದಿರುವ ಈ ಪರ್ವಕಾಲದಲ್ಲಿ ನಮ್ಮ ದಾನಧರ್ಮಗಳ ಧಾರೆಯು ಅಖಂಡವಾಗಿ ಬಿಹಾರದ ಕಡೆಗೆ ಹರಿಯಬೇಕಾಗಿದೆ. ಈ ದೃಷ್ಟಿಯಿಂದ ನಮ್ಮ ಕರ್ತವ್ಯ ಪಾಲನೆಯೆಂದು ಶ್ರೀ ಪೇಜಾವರ ಮಠದ ಪರವಾಗಿ ಬಿಹಾರದ ಯಾವದಾದರೊಂದು ಸೂಕ್ತವಾದ ಸ್ಥಳದಲ್ಲಿ ಸ್ಥಳೀಯ ಕಾರ್ಯಕರ್ತರ ಸಹಕಾರವನ್ನು ಪಡೆದು ಒಂದು ಆಹಾರ ಅಥವಾ ಔಷಧ ವಿತರಣೆ ಕೇಂದ್ರವನ್ನು ಏರ್ಪಡಿಸಬೇಕೆಂದು ನಮ್ಮ ಅಪೇಕ್ಷೆಯಾಗಿದೆ. ಇದರ ಸಲುವಾಗಿ ನಮ್ಮ ಪ್ರತಿನಿಧಿಗಳನ್ನು ಸ್ಥಳೀಯ ಪರಿಸ್ಥಿತಿಯ ಪರಿಶೀಲನೆಗಾಗಿ ಮತ್ತು ಸಮಾಲೋಚನೆಗಾಗಿ ಕಳಿಸಿರುತ್ತೇವೆ. ಅವರು ಹಿಂದಿರುಗಿದ ಕೂಡಲೇ ಅಲ್ಲಿನ ವರದಿಯನ್ನು, ಸೇವಾ ಕಾರ್ಯದ ಆವಶ್ಯಕತೆಯನ್ನೂ ವಿಮರ್ಶಿಸಿ ಈ ಸೇವಾ ಕೇಂದ್ರದ ಸ್ಥಳ ಮತ್ತು ಸ್ವರೂಪಗಳನ್ನು ನಿರ್ಧರಿಸಿ ಬೇಗನೆ ಕಾರ್ಯಾರಂಭ ಮಾಡಲಾಗುವದು.

ಈ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಸಹಾಯದ ಆವಶ್ಯಕತೆಯಿದೆ. ಶ್ರೀಕೃಷ್ಣನ ಮಹಾ ಸೇವೆಯೆಂದು ಭಾವಿಸಿ ಭಕ್ತಿಯಿಂದ ಉದಾರವಾಗಿ ಈ ಕಾರ್ಯಕ್ಕೆ ಧನ ಸಹಾಯ ಮಾಡಬೇಕಾಗಿ ನಮ್ಮ ಅಪೇಕ್ಷೆ. ತನ್ನಲ್ಲಿದ್ದ ಅನ್ನ—ಹಾಗೂ ನೀರಿನಲ್ಲಿ ಸ್ವಲ್ಪವನ್ನಾದರೂ ತನಗಾಗಿ ಉಳಿಸಿಕೊಳ್ಳದೇ ಸರ್ವವನ್ನು ಹಸಿದುಬಂದ ಆರ್ತರಿಗೆ ಕೊಟ್ಟು, ತಾನು ಸ್ವತಃ ಉಪವಾಸದಿಂದ ಅನೇಕ ದಿನಗಳನ್ನು ಕಳೆದು ಭಗವಂತನ ಅನುಗ್ರಹವನ್ನು ಪಡೆದ ರಂತಿದೇವನಂತಹ ಮಹಾತ್ಯಾಗಿಯ ನಾಡಿನಲ್ಲಿ ನಾವು ಇರುವೆವು. ಹೀಗಿರುವಾಗ ನಮ್ಮ ಜನತೆಯು ಸಂಕಟ ಕಾಲದಲ್ಲಿ ನಮ್ಮ ಸಂಪತ್ತು ಹಾಗೂ ಶಕ್ತಿಯ ಒಂದು ಸಣ್ಣ ಅಂಶವನ್ನಾದರೂ ಈ ಪವಿತ್ರ ಸೇವಾ ಕಾರ್ಯಕ್ಕೆ ಅರ್ಪಿಸುವದು ನಮ್ಮ ಆದ್ಯ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಆದ್ದರಿಂದ ನಮ್ಮ ಕರೆಗೆ ಓಗೊಟ್ಟು ಮಹಾಜನರು ಈ ಕಾರ್ಯಕ್ಕೆ ಉತ್ಸಾಹದಿಂದ ಧನಸಹಾಯ ಮಾಡಿ ಸರ್ವಾಂತರ್ಯಾಮಿಯಾದ ಭಗವಂತನ ಅನುಗ್ರಹವನ್ನು ಪಡೆಯಬೇಕಾಗಿ ನಮ್ಮ ಅಪೇಕ್ಷೆ.

ಈ ಸಂದರ್ಭದಲ್ಲಿ ಪ್ರತಿಯೊಬ್ಬರಲ್ಲಿ, ವಯ್ಯಕ್ತಿಕವಾಗಿ ಸಂದರ್ಶಿಸಿ, ಸಹಾಯ ನಿಧಿ ಸಂಗ್ರಹಿಸಲು ಸಾಧ್ಯವಾಗಲಾರದು. ಆದುದರಿಂದ ಈ ಕರೆಯನ್ನು ಮನ್ನಿಸಿ ಸ್ವಯಂ ಪ್ರೇರಣೆಯಿಂದ ವಿಶೇಷ ರೀತಿಯಲ್ಲಿ ಸಹಾಯ ಸಲ್ಲಿಸಲು ಮುಂದೆ ಬರಬೇಕಾಗಿ ಅಪೇಕ್ಷಿಸುತ್ತೇವೆ. ಆಹಾರ ಧಾನ್ಯ ಮತ್ತು ವಸ್ತು ರೂಪಗಳಲ್ಲಿಯೂ ಸಹಾಯವನ್ನು ಸ್ವೀಕರಿಸಲಾಗುವುದು. ಈ ರೀತಿ ಸಹಾಯ ಸಲ್ಲಿಸುವವರು ನಮಗೆ ತಿಳಿಸಿದಲ್ಲಿ ಅದನ್ನು ಯಾವ ಕಡೆಗೆ ತಲುಪಿಸಬೇಕೆಂಬುದರ ಬಗ್ಗೆ ಸೂಕ್ತ ಸೂಚನೆಯನ್ನು ನೀಡಲಾಗುವದು.

ಸೂಚನೆ: ಈ ನಿಧಿಗೆ ಸಹಾಯ ಸಲ್ಲಿಸುವವರು ತಮ್ಮ ಚೆಕ್ ಡ್ರಾಫ್ಟ್ ಅಥವಾ ಮನಿಆರ್ಡರಗಳನ್ನು ಶ್ರೀ ಶ್ರೀ ಪೇಜಾವರ ಮಠದ ಶ್ರೀ ಪಾದಂಗಳವರು, ಬಿಹಾರ ಕ್ಷಾಮ ಪರಿಹಾರ ನಿಧಿ, ಪೂರ್ಣಪ್ರಜ್ಞ ವಿದ್ಯಾಪೀಠ ಕಟ್ಟಡ, ಪೂರ್ಣಪ್ರಜ್ಞ ನಗರ, ಬೆಂಗಳೂರು—28. ಈ ವಿಳಾಸಕ್ಕೆ ಕಳಿಸಿ ರಸೀದಿ ಪಡೆಯಬಹುದು.

(ಮೂರನೇ ಪುಟದಿಂದ)

ಗೊಳ್ಳುವುದೆಂದೂ ಹೇಳಿದರೆಂದು ವರದಿಯಾಗಿದೆ. ಆಹಾರಮಂತ್ರಿ ಸ್ಥಾನದಲ್ಲಿರುವ ಶ್ರೀ ಜತ್ತಿಯವರು ರಾಜ್ಯದಲ್ಲಿ ಆಹಾರದ ಅಭಾವವಿಲ್ಲವೆಂದು ಗುಡುಗಿದರೂ ದೇಶದ ಆಹಾರ ಸಮಸ್ಯೆ ಭೀಷಣವೆಂಬುದನ್ನು ಒಪ್ಪದಿರಲಾರದು. ಕಾಳಗಾಲದ ಅಭಾವವೇ ನಮ್ಮ ಪ್ರಮುಖ ಸಮಸ್ಯೆಯಾಗಿರುವಾಗ, ರಾಗ ದ್ವೇಷಗಳನ್ನು ದೂರ ಮಾಡಲು ಶುದ್ಧತೆ ಮತ್ತು ಸಂಯಮಗಳನ್ನು ಸಾಧಿಸಲು ಈ ಆಹಾರವನ್ನು ಗಳಿಸುವುದೇ ಪ್ರಶ್ನೆಯಾಗಿದೆ. ಆಹಾರ ಸಮಸ್ಯೆಯ ಪರಿಹಾರಕ್ಕೆ ಮಾಂಸಾಹಾರವೇ ಕಾರಕವೆಂದು ರಾಜಮ್ಮನವರೂ ಮಂತ್ರಿಯಾಗಿದ್ದಾಗ ಸಾರಿದ್ದರು. ಆದರೂ ಒಂದು ಪ್ರಯೋಗ ಮಾಡಬಹುದು. ನಮ್ಮ ದೇಶದ ಸಂಸತ್ತುಗಳು, ಶಾಸಕ ಸಭೆಗಳಲ್ಲಿ ಸರಕಾರದಲ್ಲಿ ಇರಬೇಕಾದಷ್ಟು ಸಂಯಮ, ಪರಿಶುದ್ಧತೆ, ಅಲ್ಲಿಂದ ದೂರವಾಗಬೇಕಾದಷ್ಟು ರಾಗ ದ್ವೇಷಗಳು ಮತ್ತಿಲ್ಲಿಯೂ ಇಲ್ಲವೆಂಬುದಕ್ಕೆ ಅನುಭವವೇ ಸಾಕ್ಷಿ; ಇಲ್ಲಿನ ಸದಸ್ಯರಿಗೂ ನೌಕರರಿಗೂ ಬರಿಯ ಶಾಕಾಹಾರವನ್ನು ಮಾತ್ರ ಬಳಸಬೇಕೆಂಬ ನಿಯಮ ಹೇರಿದರೆ ಹೇಗೆ? ಇದು ಮಾನಪ್ರತಿಬಂಧ ಶಾಸನದಂತಾಗಬಹುದೆಂಬ ಭೀತಿಯಿರುವುದಾದರೆ, ಶಾಸಕರಾಗುವ, ಸರಕಾರಿ ನೌಕರರಾಗುವ ಅಧಿಕಾರ ಶಾಕಾಹಾರಿಗಳಿಗೆ ಮಾತ್ರವೇ ಇದೆ ಎಂದು ವಿಧಿಸಿದರೆ! ಇದು 'ಅಬ್ರಹ್ಮಣ್ಯ' ಎಂದು ಜನರು ಎನ್ನದಿರರೆ? ಮತ್ತೆ ಪಾವಿತ್ರ್ಯ ಇತ್ಯಾದಿ ಎಲ್ಲಿಂದ ಬರಬೇಕು?

ವಿದಾಯ

ಪಡುಗಡಲ ತಡಿಯ ಮಂಜೇಶ್ವರ ಕ್ಷೇತ್ರದಿಂ
ಪತ್ತು ಮೈಲುಗಳ ದೂರದಿ ಹರಿವ ಹೊಳೆಯ ದಡ
ದಿಹ ಆನೆಕಲ್ಲ ನೆರೆಯೂರದುವೆ ನೊಡಂಕೂರು
ಕಂಗು ತೋಂಟಗಳಿಂದ ತೆಂಗು ಬಾಳೆಗಳಿಂದ
ಪ್ರಕೃತಿ ದೇವಿಯು ಪಚ್ಚೆ ಸೀರೆಯನ್ನುಟ್ಟಂತೆ
ಕಂಗೊಳಿಸುವೀಯೂರು ಹವ್ಯಕರ ನೆಲೆವೂರು.
ಆ ಹವ್ಯಕ ಬ್ರಾಹ್ಮಣರಲಿ 'ಮುತ್ತನ ಮನೆ'ಯ
ಸಾಧ್ವಿ ಸಾವಿತ್ರಿ—ನಾರಾಯಣರ ಹಿರಿಯ ಮಗ
ಶಾಮ ಭಟ್ಟರು ತನ್ನಯರುವತ್ತನೆಯ ವರ್ಷ
ತುಂಬಿದೀ ದಿನದಿ ಅಧ್ಯಾಪಕೋದ್ಯೋಗದಿಂ
ತಾಂ ನಿವೃತ್ತಿಯ ಪಡೆದು ವಿಶ್ರಾಂತಿ ಸುಖದಿನಂ
ಗಳನಿದಿರು ನೋಡುತಿಹರಿಳಿಹರೆಯ ಮುದುರಿಸಿರೆ.
ಮೂವತ್ತು ವರ್ಷಕೂ ಮಿಕ್ಕಿ ವಿದ್ಯಾದಾನ
ಗೆಯ್ದು ವಿದ್ಯೆಯ ನಳಿಸಿ ವಿದ್ಯಾಮೃತವ ಕುಡಿಸಿ
ತನ್ನೂರ ಬಾಲರ್ಗೆ ಚೇತನವನಿತ್ತಿಹರು.
ಆನೆಕಲ್ಲಲಿ ತಾನೆ ಸಾಲೆಯೊಂದನು ನಡೆಸಿ
ಜ್ಞಾನ ದೀಪವನುರಿಸಿ ಜನಮನದ ತಮ ಹರಿಸಿ
ಪಲ ಮಂದಿಗಿಂದು ವಿದ್ಯಾಗುರುಗಳಾಗಿಹರು.
ಸಚ್ಚರಿತೆ ಶಂಕರಿಯ ಕೈವಿಡಿದು ದಾಂಪತ್ಯ
ಜೀವನವ ನಡೆಸುತಾಕೆಯ ಪುಣ್ಯ ಗರ್ಭದಲಿ
ನವನಿಧಿಗಳಂತೆ ನವ ಪುತ್ರರಂ ಮೇಣುಭಯ
ಪುತ್ರಿಯರ ಪಡೆದ ಪುಣ್ಯಾತ್ಮರಿವರೇ ಧನ್ಯ
ಕೃಷಿ ವಿದ್ಯೆ ವ್ಯವಹಾರ ಕ್ಷೇತ್ರಂಗಳಲಿ ದುಡಿದು
ಸತ್ಫಲವ ಪಡೆಯುತುದ್ಯೋಗದಿಂದ ವಿದಾಯ
ಮಂಪೊಂದಿದೀ ಶಾಮ ಭಟ್ಟರ್ಗೆ ಪರಮಾತ್ಮ
ನಾಯುರಾರೋಗ್ಯ ಸುಖಸಂಪದವ ಕರುಣಿಸಲಿ!
ದೇಶರಕ್ಷಣೆಗಾಗಿ ದುಡಿದ ಯೋಧಂ ಪಿರಿಯ
ಮಗನವನ ಹೆಗ್ಗಲಿ ಹೊರೆಯಿಳಿಸಿ ತಾಸುಖಿಯೆನಿಸಿ
ಮಡದಿ ಮಕ್ಕಳ್ವೆರಸಿ ಮಧುರ ಜೀವನ ನಡೆಸಿ
ಶಾಮ ಭಟ್ಟರ್ ಬಾಳ್ಗೆ ತಾಂ ಶತಾಯುಷಿಯೆನಿಸಿ!

—ಎಸ್. ತಿರುಮಲೇಶ್ವರ ಭಟ್ಟ, ವಿದ್ವಾನ್.

(ತಾ. 7-6-67ಕ್ಕೆ 60 ವರ್ಷ ತುಂಬಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಶ್ರೀ ಎಸ್. ಶಾಮ ಭಟ್ಟರಿಗೆ ವಿದಾಯ ಬಯಸಿ ಬರೆದುದು.)

ಎ. ಬಿ. ಶೆಟ್ಟಿ ವಿದ್ಯಾರ್ಥಿ ನಿಲಯ ಮೈಸೂರು–2.

ಮೈಸೂರು ನಗರದ ವಾಣಿ ವಿಲಾಸ ಮೊಹಲ್ಲಾದಲ್ಲಿರುವ ಮೇಲ್ಕಂಡ ವಿದ್ಯಾರ್ಥಿನಿಲಯ ತಾ. 1-7-67ರಿಂದ ಆರಂಭವಾಗುವುದು. ಸೇರಲಿಚ್ಛಿಸುವ ಕಾಲೇಜು ವಿದ್ಯಾರ್ಥಿಗಳು ತಾ. 26-6-67ರ ಒಳಗೆ ಗೊತ್ತಾದ ಫಾರಂನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಎ. ರಾಮಣ್ಣ,
ಕಾರ್ಯದರ್ಶಿ.

ಮೈಸುಟ್ಟುಕೊಂಡವರಿಗೆ ಚಿಕಿತ್ಸೆ

ಮೈ ಸುಟ್ಟು ಗಾಯಗೊಂಡಿರುವಂಥವರನ್ನು ಅಮೇರಿಕದ ಸರಕಾರದ ನೆರವಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿರುವ ಬರ್ನ್ಸ್ ಸೆಂಟರಿನಲ್ಲಿ ಸೇರಿಸಬಹುದಾಗಿದೆ. ಚಿಕಿತ್ಸೆ ಹಾಗೂ ಪುನರುದ್ಯೋಗದ ಎಲ್ಲ ಸೌಲಭ್ಯಗಳನ್ನೂ ಈ ಕೇಂದ್ರದಲ್ಲಿ ಉಚಿತವಾಗಿ ಒದಗಿಸಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ಮಣಿಪಾಲದ 41ನೇ ನಂಬರಿಗೆ ಟೆಲಿಫೋನಿನಲ್ಲಿ ತಿಳಿಸಿದರೆ ಗಾಯಗೊಂಡವರನ್ನು ಕರೆತರಲು ಆಸ್ಪತ್ರೆಯಿಂದ ಆ್ಯಂಬುಲೆನ್ಸ್ ಕಳಿಸಲಾಗುತ್ತದೆ. ಅಂತಹ ರೋಗಿಗಳ ಚಿಕಿತ್ಸೆ ನಡೆಸುವುದಕ್ಕಾಗಿ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸಾ ಕ್ರಮದಲ್ಲಿ ಪರಿಣತರಾದ ಶಸ್ತ್ರ ವೈದ್ಯರಿದ್ದಾರೆ. ಹಿಂದೆ ಮೈಸುಟ್ಟುಕೊಂಡವರೂ ಸಹ ಮಂಗಳವಾರ ಬೆಳಿಗ್ಗೆ ಮಣಿಪಾಲಕ್ಕೆ ಬಂದು ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿರುವ ಶಸ್ತ್ರ ವೈದ್ಯರಿಂದ ಪುನರುದ್ಯೋಗದ ಬಗೆ ಸಲಹೆ ಪಡೆಯಬಹುದಾಗಿದೆ. ಈ ಎಲ್ಲ ಸೌಲಭ್ಯಗಳನ್ನೂ ಉಚಿತವಾಗಿ ಒದಗಿಸಲಾಗಿದೆ. ಜನರು ಇದರ ಪ್ರಯೋಜನ ಪಡೆಯಬೇಕೆಂದು ಕೋರಲಾಗಿದೆ.

ಬೇಕಾಗಿದ್ದಾರೆ

ಶ್ರೀ ಶಾರದಾ ಎಲಿಮೆಂಟರಿ ಶಾಲೆ, ಮೂಡುಮುಂಡ ಇವರಿಗೆ ಸೆಕೆಂಡರಿ ಗ್ರೇಡ್ ತರಬೇತಾದ ಒಬ್ಬ ಉಪಾಧ್ಯಾಯರು ಬೇಕಾಗಿದ್ದಾರೆ. ಅರ್ಜಿಯನ್ನು ಕೆಳಗಿನ ವಿಳಾಸಕ್ಕೆ ಕಳಿಸಿರಿ.

Manager,
Sri Sharada Aided Ele. School,
P. O. Moodumunda,
Via—Baaui, S. K.

ನಮಗೆ ಸುಖ, ಶಾಂತಿ ಏಕಿಲ್ಲ?

ಲೇಖಕರು— ಶ್ರೀ ವಾ. ಆ. ಹೋದಿಕೆ

ಇಂದು ಮಾನವನು ಪ್ರಗತಿಯ ಶಿಖರಕ್ಕೆ ಮುಟ್ಟಿದ್ದಾನೆ. ಸುಖ ಸೌಕರ್ಯಗಳು ಬೆಳೆದಿವೆ. ಆಹಾರ ವಿಹಾರ, ವಿಚಾರ ಪ್ರಚಾರ ತುಂಬಾ ವಿಕಾಸಗೊಂಡಿವೆ. ವಿಜ್ಞಾನದ ಬಲದಿಂದ ವಿಕಾಸ ವೈಭವಗಳೆಲ್ಲ ಪ್ರಾಪ್ತವಾಗಿವೆ. ವೇದಾಂತದ ಬಲದಿಂದ ವಿಚಾರಕ್ಷೇತ್ರ ವಿಸ್ತಾರಗೊಂಡಿದೆ. ಅಂಧ ಪರಂಪರೆ, ಮೂಢ ನಂಬಿಕೆ, ಗೊಡ್ಡು ರೂಢಿ, ಕರ್ಮಕಾಂಡ ಬಹಳಷ್ಟು ದೂರಾಗಿವೆ. ವಾಹನ ಸೌಕರ್ಯದಿಂದಾಗಿ ಜಲಸ್ಥಳ ಆಕಾಶ ಸಂಚಾರಗಳೆಲ್ಲ ಸಾಧಿಸಿವೆ. ಮಾನವನಿಗೆ ಯಾವುದೇ ಹಿಂಸ್ರ ಪಶುಪಕ್ಷಿಯ ಭೀತಿ ಎಂಬುದು ಉಳಿದಿಲ್ಲ

ಇಷ್ಟಿದ್ದೂ ವಿಚಾರವಂತ ಮಾನವನಿಂದು ಸುಖಿಯಾಗಿಲ್ಲ. ಹೆಂಡತಿ ಮಕ್ಕಳು, ಹೊಲಮನೆ, ವಿಪುಲ ಹಣ ಮತ್ತು ಸಂಪತ್ತು, ಎಲ್ಲವೂ ಇದ್ದು ಮನಸ್ಸಿಗೆ ನೆಮ್ಮದಿ ಇಲ್ಲ. ಇಷ್ಟೆಲ್ಲ ವಿಕಾಸ ವೈಭವದ ಮಧ್ಯದಲ್ಲೂ ಸುಖಶಾಂತಿ ಎಂಬುದಿಲ್ಲ. ಇಂಥ ಮಾನಸಿಕ ಅಶಾಂತಿಯನ್ನು ಮರೆಯಿಸಲೋಸುಗವೇ ಮದ್ಯಮಾದಕಗಳಂಥ ದುರ್ವ್ಯಸನಗಳೂ, ನಾಟಕ ಸಿನೆಮಾ ಆಟ ನೋಟಗಳಂಥ ಮನೋರಂಜನೆಗಳೂ ಭರಭರಾಟೆಯಿಂದ ನಡೆಯುತ್ತಲಿವೆ. ಇಷ್ಟೆ ಅಲ್ಲ, ಬಹಳಷ್ಟು ದುಡಿತದ ಒಳ ಉದ್ದೇಶವು ಸಹ ಮಾನಸಿಕ ಅಶಾಂತಿ ಶಮನವೇ ಇರುತ್ತದೆ.

ತೋರಿಕೆಗೆ ಜಗಜ್ಜೇತನೆಂದು ಮೆರೆಯುತ್ತಿರುವ ಮನುಷ್ಯನಿಗಿಂದು ಇಷ್ಟೊಂದು ಅಸಹಾಯತೆ ಅನಿಸುತ್ತಿರಲಿಕ್ಕೆ ಕಾರಣವೇನು? ಧರ್ಮಕರ್ಮ, ದೈವಗ್ರಹಗಳ ಭೀತಿ ಎಂದೋ ಹೋಗಿಬಿಟ್ಟಿದೆ. ವಿಚಾರಶೀಲ ಮನುಷ್ಯರಿಂದು ಶುದ್ಧ ವಿಚಾರವಾದಿಯಾಗಿದ್ದಾರೆ. ಮತ್ತು ವಿಚಾರವಾದಿಗಳಿಗೆ ಇಂದಿನ ಸ್ಥಿತಿ ಅಸಹ್ಯವಾಗಿದೆ. ಯಾಕೆಂದರೆ ದೇವಧರ್ಮ, ದುರ್ವ್ಯಸನ ಮೊದಲಾದುವುಗಳನ್ನು ಆಶ್ರಯಿಸಿ, ಅವುಗಳ ಮಾದಕತೆಯ ಗುಂಗಿನಲ್ಲಿ ವಸ್ತುಸ್ಥಿತಿಯನ್ನು ಮರೆಯಲು ಅವರು ಇಚ್ಛಿಸುವುದಿಲ್ಲ ತಮ್ಮ ಬುದ್ಧಿಯ ತೀಕ್ಷ್ಣತೆಯನ್ನು ಮೊಟಕುಗೊಳಿಸಲು ಬಯಸುವದಿಲ್ಲ.

ಆದ್ದರಿಂದ ತನ್ನ ಬುದ್ಧಿಯ ಬಲದಿಂದಲೇ ಪರಿಸ್ಥಿಯ ವಿಶ್ಲೇಷಣೆ ಮಾಡಿ ನೋಡಿದಾಗ ಅವರಿಗೆ ಕಂಡು ಬರುವುದು ಏನು? ಮನುಷ್ಯನು ವ್ಯಕ್ತಿಶಃ ಎಷ್ಟೇ ಸಂಪನ್ನತೆ ಸಂಪಾದಿಸಿದ್ದರೂ ಅವನು ವಾಸಿಸುತ್ತಿರುವ ಸಮಾಜವಿನ್ನೂ ಸಂಪನ್ನವಾಗಿಲ್ಲ. ತನ್ನ ಸುತ್ತಲಿನ ಸಮಾಜದಲ್ಲಿ ಅಸಂಖ್ಯ ಅಭಾವಗಳು ತಾಂಡವವಾಡುತ್ತಲಿವೆ. ಸಮಾಜವಾದರೋ ಮನುಷ್ಯನಿಗೆ ಪೂರ ದೇಹವಾಗಿದೆ, ಪೂರ ಉಸಿರಾಗಿದೆ ಸಮಾಜದಲ್ಲಿ ಇಲ್ಲದ್ದು ತನ್ನಲ್ಲಿ ಎಷ್ಟೇ ಇದ್ದರೂ ಅದು ಮಾನಸಿಕ ಸುಖ ಶಾಂತಿ ಕೊಡಲಾರದು.

ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಲ್ಲಿ ಜನರಿಗೆ ಇದರ ಅರಿವು ಇರುವದರಿಂದಲೇ ದಾನಧರ್ಮ, ಪರೋಪಕಾರ, ಸಮಾಜ ಸೇವಾಕಾರ್ಯ ಮೊದಲಾದವು ನಡೆಯುತ್ತ ಬಂದಿವೆ. ಆದರೆ ಎಷ್ಟೋ ಕಾಲದಿಂದ ಇವು ನಡೆಯುತ್ತ ಬಂದಿದ್ದರೂ ಸಮಾಜದಲ್ಲೇನೂ ಹೆಚ್ಚಿನ ಪರಿವರ್ತನವಾಗಿಲ್ಲ. ಮತ್ತು ದಾನಿಗಳು, ಪರೋಪಕಾರಿಗಳು, ಸಮಾಜ ಸೇವಕರು ಇವರಿಗೂ ಕ್ಷಣಿಕ ಸಮಾಧಾನವಲ್ಲದೆ ಹೆಚ್ಚಿನ ಸುಖಶಾಂತಿ ಲಭಿಸಿಲ್ಲ ಹೀಗೇಕೆ?

ಯಾಕೆಂದರೆ ಸಮಾಜದಲ್ಲಿ ಆಗಬೇಕಾಗಿರುವದು ಆಮೂಲ ಕ್ರಾಂತಿಯೇ ಹೊರತು ತಾತ್ಕಾಲಿಕ ಪರಿಹಾರವಲ್ಲ. ಜೀವನ ಕ್ರಾಂತಿಯೇ ಹೊರತು ಕೆಲವೊಂದು ಪರೋಪಕಾರದ ಕೆಲಸಗಳಲ್ಲ. ಆದ್ದರಿಂದ ಇಂಥ ದಾನಧರ್ಮ, ಪರೋಪಕಾರ, ಸಮಾಜಸೇವಾ ಕಾರ್ಯಗಳು ಅನಂತಕಾಲ ನಡೆದರೂ, ಅಸಂಖ್ಯವಾಗಿ ನಡೆದರೂ ಸಮಾಜ ಪರಿಸ್ಥಿತಿಯಲ್ಲಿ ಮಾತ್ರ ಯಾವುದೇ ಪರಿವರ್ತನವಾಗದು.

ಅನ್ಯಾಯಿಕ ಸಮಾಜದಲ್ಲಿ ನೈತಿಕ ಮನುಷ್ಯ ಬೆಳೆಯಲಾರ. ಅಶಾಂತ ಸಮಾಜದಲ್ಲಿ ಯಾವನೂ ಶಾಂತ ಜೀವನ ನಡೆಸಲಾರ. ದುಃಖಿಗಳ ಮಧ್ಯದಲ್ಲಿ ಯಾವನೂ ಸುಖಿಯಾಗಿ ಬಾಳಲಾರ. ಅಜ್ಞಾನಿಗಳ ಮಧ್ಯದಲ್ಲಿ ಯಾವ ಜ್ಞಾನಿಯೂ ಜ್ಞಾನಾಮೃತ ಸವಿಯಲಾರ.

ಆದ್ದರಿಂದ ಪ್ರತಿಯೊಬ್ಬನೂ ತನ್ನ ಬಗ್ಗೆ ಬಯಸುವದನ್ನು ಇಡೀ ಸಮಾಜಕ್ಕೂ ದೊರಕಿಸಿ ಕೊಡಲು ಪ್ರಯತ್ನಿಸಬೇಕು. ಹಲ ಕೆಲವರಿಗೆ ಮಾತ್ರವಲ್ಲ, ಕೆಲವು ವ್ಯಕ್ತಿಗಳಿಗೆ ಮಾತ್ರವಲ್ಲ, ಇಡೀ ಸಮಾಜಕ್ಕೆ.

ಇದು ಹೇಗೆ ಸಾಧ್ಯ? ಇಡೀ ಸಮಾಜವು ಒಂದು ವ್ಯಕ್ತಿಯಂತೆ, ಒಂದು ಜೀವದಂತೆ, ಒಂದು ದೇಹದಂತೆ ವಿಚಾರಿಸಲಿಕ್ಕೂ ದುಡಿಯಲಿಕ್ಕೂ ಹತ್ತಿದಾಗಲೇ ಮಾತ್ರ ಇದು ಸಾಧಿಸೀತು.

ಇನ್ನೂ ಸಮಾಜವೆಂದೊಡನೆ ಇಡೀ ಮಾನವ ಸಮಾಜವೆಂದೂ, ನಮ್ಮ ಅಳವಿಗೆ ಮಿಕ್ಕಿದ್ದೆಂದೂ ಚಿಂತೆಗೊಳ್ಳಬೇಕಿಲ್ಲ ಸಮಾಜವೆಂದರೆ ಪ್ರಥಮ ಮಟ್ಟದಲ್ಲಿ ನಮ್ಮ ಊರು. ಊರಿನ ಮಟ್ಟಿಗೇ ನಮ್ಮ ಜೀವನವು ಪರಿಮಿತವಾಗಿಲ್ಲ ಎಂಬುದೇನೋ ನಿಜ. ಆದರೂ ನಮ್ಮ ಜೀವನದಲ್ಲಿಯ ಅರ್ಧಕ್ಕಿಂತ ಹೆಚ್ಚಿನ ಭಾಗವು ನಮ್ಮ ಊರಿಗೆ ಹೊಂದಿಕೊಂಡಿರುತ್ತದೆ. ಆದ್ದರಿಂದ ಅಭ್ಯಾಸ ಮಾಡಿದರೆ, ಊರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡು ಹಿಡಿದರೆ, ಅದರ ಬಲದಿಂದಲೇ ಹೊರಗಿನ ಕ್ಷೇತ್ರದ ಇನ್ನಿತರ ಸಮಸ್ಯೆ ಬಗೆಹರಿಸಲು ಸಹಾಯವಾಗುವಂತಿದೆ.

ಪ್ರತಿಯೊಂದು ವಿಷಯಕ್ಕೂ ಬೃಹದ್ರೂಪಕೊಟ್ಟು ಅದು ತನ್ನ ಅಳವಿನಲ್ಲಿಯ ವಿಷಯವಲ್ಲೆಂದು ಕಲ್ಪಿಸಿ, ಪ್ರತಿಯೊಬ್ಬನೂ ಕೈಬಿಡುತ್ತಿರುವದೇ ಇಂದಿನ ಬಿಡಿಸಲಾರದ ಸಮಸ್ಯೆಗಳಿಗೆ ಕಾರಣವಾಗಿವೆ. ಪ್ರತಿಯೊಂದ ವಿಷಯದಲ್ಲೂ ಮೇಲೆ ಮೇಲೆ, ಮೇಲ್ಮಟ್ಟದಲ್ಲಷ್ಟೇ ವಿಚಾರ ನಡೆಯುವಂತೆ ಮಾಡುತ್ತಿದ್ದೇವೆ. ಅಥವಾ ತೌ ಅನ್ಯರು ಮಾಡಲೆನ್ನುತ್ತೇವೆ. ಕೆಳಮಟ್ಟದಲ್ಲಿ ಒಂದರ ವಿಚಾರವೂ ನಡೆಯುತ್ತಿಲ್ಲ ಅಥವಾ ನಾವು ಸ್ವತಃ ನಮ್ಮ ಬುದ್ಧಿಶಕ್ತಿ ಉಪಯೋಗಿಸಿ ಅವಂಬದಾರ ಯುಕ್ತಿ ಏನೊಂದೂ ಮಾಡುತ್ತ ಇಲ್ಲ.

ಹಸಿ ಹಸಿ ಕೂಡ ಹಳ್ಳ. ತನ ತನ ಕಣಿ ರಾಶಿ ಅಗಳನ ಮೇಲಿಂದಲೇ ಇಡೀ ತಪೇಲಿಯಲ್ಲಿಯ ಅನ್ನದ ಪರೀಕ್ಷೆ ಮಾಡುತ್ತದ. ಒಂದೊಂದು ಇಷ್ಟಿಗೆ ಬೆಟ್ಟಿಯಾಗಿರುವಂತ ನೋಡಿದರೆ ಗೋಡೆಯು ಗಟ್ಟಿಯಾಗಿಯೇ ಇರುತ್ತದೆ. ಪಿಂಡದಲ್ಲಿ ಇರುವುದೇ ಬ್ರಹ್ಮಾಂಡದಲ್ಲಿ ಇರುತ್ತದೆ. ಇದನ್ನು ಗೊತ್ತಿದ್ದೂ ನಾವು ಪಿಂಡವನ್ನು ಬಿಟ್ಟು ಬ್ರಹ್ಮಾಂಡಕ್ಕೆ ಹಾರುತ್ತೇವೆ ಅಂಗಳ ದಾರಲು ಕಲಿಯದೆ ಗಗನಕ್ಕೆ ಹಾರಬೇಕೆನ್ನುತ್ತೇವೆ. ಅಕ್ಷರ ಕಲಿಯುವ ಪ್ರಯತ್ನ ಮಾಡದೆ ಇಡೀ ವೇದವನ್ನೇ ಓದಿ ಬಿಡಬೇಕೆನ್ನುತ್ತೇವೆ ಪ್ರಯೋಗ ಮಾಡದೆ ಪ್ರಚಾರ ಮಾಡುತ್ತೇವೆ. ಅನುಭವ ಪಡೆಯದೆ ಉಪದೇಶ ಮಾಡುತ್ತೇವೆ ಹೀಗೆ ಎಷ್ಟು ಕಾಲ ನಡೆಸುತ್ತಿದ್ದರೆ ತಾನೇ ಪ್ರಯೋಜನವಾದೀತು? ಹೀಗಾಗಿ "ಇದಂ ಚ ನಾಸ್ತಿ. ಪರಂ ಚ ನ ವಿದ್ಯತೇ" ಇದೂ ಇಲ್ಲ ಅದೂ ಇಲ್ಲ. ಸಣ್ಣದು ಮಾಡುವುದಿಲ್ಲ. ದೊಡ್ಡದು ಸಾಧ್ಯವಾಗುವದಿಲ್ಲ ಎಂಬಂತಾಗಿದೆ ನಮ್ಮ ಪರಿಸ್ಥಿತಿ.

ಇದರಿಂದ ಕಂಡು ಬರುವದಿಷ್ಟೇ. ನಾವು ಮುಂದುವರೆದಿರುವದು, ಮತ್ತು ಮುಂದುವರಿಯುತ್ತಿರುವದು ವಿಚಾರದಲ್ಲಿ ಮಾತ್ರ. ಆಚಾರದ ವಿಷಯದಲ್ಲಂತೂ ನಮ್ಮಷ್ಟು ಹಿಂದುಳಿದವರು ಯಾರೂ ಇಲ್ಲ. ಜಗತ್ತಿಗೇ ಅದ್ವೈತ ಸಿದ್ಧಾಂತದ ಬೆಳಕು ತೋರಿದ ಭಾರತದಲ್ಲಿರುವಷ್ಟು ದ್ವೈತ—ಒಡಕು—ಭೇದಭಾವ ಬೇರಾವ ಸಮಾಜದಲ್ಲೂ ಇಲ್ಲ ಹೀಗಾಗಿಯೇ ಹಿಂದೂ ತತ್ವಜ್ಞಾನವು ಜಗತ್ತಿನಲ್ಲಿಯೇ ಸರ್ವಶ್ರೇಷ್ಠವೆಂಬ ವಿಜಯ ಪತಾಕೆ ಮೆರೆಸಬಹುದಾದರೂ, ಹಿಂದೂ ಸಮಾಜವು ಮಾತ್ರ ಅಧೋಗತಿಯಿಂದ ಮೇಲಕ್ಕೆ ಏಳುತ್ತ ಇಲ್ಲ.

ಒಟ್ಟಿಗೆ ನಮ್ಮಲ್ಲಿ ಉಚ್ಚತರದ ತತ್ವಜ್ಞಾನವಿದೆ ಆದರೆ ಅದಕ್ಕೆ ತಕ್ಕ ಆಚರಣವಿಲ್ಲ ಶ್ರೇಷ್ಠತರದ ಸಿದ್ಧಾಂತಗಳಿವೆ. ಆದರೆ ಅವುಗಳಿಗೆ ತಕ್ಕ ಸಾಧನೆ ಇಲ್ಲ. ಪೂರ್ಣ ಶಬ್ದಗಳಿವೆ ಆದರೆ ಅವುಗಳಿಗೆ ತಕ್ಕ ಕಾರ್ಯಯೋಜನೆ ಇಲ್ಲ. ನಮ್ಮ ಘನತರ ವಿಚಾರಗಳ ಬಗ್ಗೆ ನಮಗೆ ಅಭಿಮಾನವಿದೆ. ಆದರೆ ನಮ್ಮ ನೀತಿಹೀನ ಆಚರಣೆಯ ಬಗ್ಗೆ ಅನುತಾಪವಿಲ್ಲ. ವಿಚಾರದ ಮಟ್ಟಿಗೇನೋ ನಾವು ಮಹಾಶೂರರು. ಆದರೆ ಪ್ರತ್ಯಕ್ಷ ಕೃತಿಯ ವಿಷಯದಲ್ಲಿ ಮಹಾ ಹೇಡಿಗಳು.

ವಿಚಾರ ಮಾತ್ರದಿಂದಲೇ ಸುಖ ಸಿಗುವಂತಿದ್ದರೆ ನಮ್ಮಷ್ಟು ಸುಖಿಗಳು ಜಗತ್ತಿನಲ್ಲಿ ಬೇರಿನ್ನಾರೂ ಇರುತ್ತಿರಲಿಲ್ಲ. ಆದರೆ ವಿಚಾರ ಮತ್ತು ಆಚಾರಗಳು ಮೇಳಗೂಡಿದಾಗಲೇ ಸುಖ ಶಾಂತಿಯೆಂಬುದು ನಿಸರ್ಗದ ಸಿದ್ಧಾಂತ. ವಿಚಾರ ಮತ್ತು ಆಚಾರಗಳಲ್ಲಿಯ ವಿಸಂಗತಿ ಹೆಚ್ಚಿದಷ್ಟು ಅಶಾಂತಿ ಅಸುಖ ಹೆಚ್ಚು. ಹೀಗಾದ್ದರಿಂದಲೇ ಪಶುಗಳಲ್ಲಿರುವಷ್ಟು ಸುಖಶಾಂತಿಯೂ ಕೂಡ ಮನುಷ್ಯನಿಗೆ ಲಭಿಸುತ್ತ ಇಲ್ಲ.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

R. C. P. No 304/1966.

ಶ್ರೀನಿವಾಸಾಚಾರ್ಯ —ಅರ್ಜಿದಾರ

ಮತ್ತು

ಎಲಿಜಬೆತ್ ಕೂಡಾ —ಯೆದ್ರಿರು

ಇವರೊಳಗೆ

ಉಡ್ಪಿ ತಾಲ್ಕು ಉಪ್ಪೂರು ಗ್ರಾಮದ ಕುದ್ರು ಜುವಾಂ ಬಾಪ್ತಿಸ್ ಪಸಂಘಾರ ನಾರೀ ಸುವಾರೆಸ್ ಬೊಂಬಾಯಿಯಲ್ಲಿ G.I.P. Western Railway ಯಲ್ಲಿರುವ 2ನೇ ಎದ್ರಿ ರೋಬರ್ಟ್ ಪಸಂಘಾ, ಗ್ರೇಂಟ್ ರೋಡ್ ಮೊಹಂಬಾ ವೆ ಪಶನಿನಲ್ಲಿರುವ 3ರಿಂದ 6 ನೇ ಎದ್ರಿರು ಜುಲಿಯಾನಾ ಪಾಸಾಂಘಾ, ಪಿರೋಮೇನಾ ಪಸಂಘಾ, ಎಲಿಸ್ ಪಸಂಘಾ, ಮತ್ತು ಪ್ರಿಸಿಲ್ಲಾ ಪಸಂಘಾ ಇವರಿಗೆ ತಿಳಿಯಪಡಿಸುವುದು.—

ಅರ್ಜಿಯಲ್ಲಿ ಹೇಳುವ ಮೃತನ ಸೊತ್ತಾಗಿರುವ ಕೋರ್ಟು ಡಿಪೋಜಿಟು ಹಣ ವಗೈರೆಯನ್ನು ಪಡ್ಕು ಕೇಳಿ ಮಾಡಿದ ಸದ್ರಿ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ಕೂಡಾ ತಾ. 29—6—67ಕ್ಕೆ ಇಡಲ್ಪಟ್ಟಿದೆ ಅದಕ್ಕೆ ನಿಮ್ಮದೇನಾದ್ರೂ ಆಕ್ಷೇಪ ಇದ್ರೆ ನೀವು ಆ ದಿವಸ ಕೋರ್ಟು ಮುಂದೆ ಹಾಜರಾಗಿ ಉಧರಿಸಿಕೊಳ್ಳತಕ್ಕದ್ದು.

(By order)

P. N. Krishnamoorthi Rao
B. A, L L, B
Advocate for Petitioner

Place, Udipi S K.
Date, 11—6—1967.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ನಿರೋಧಿಸುವ ವಿಚಾರ ಮತ್ತು ಉಪಾಯಗಳನ್ನು ತಿಳಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.



NAVAYUGA 22—6—1967
Registered with the Registrar
of News Papers for India
under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ಮಕ್ಕಳ ಕಣ್ಣುಗಳನ್ನು ದೃಷ್ಟಿ ಮಾಂದ್ಯದಿಂದ ದೂರವಿಡಿರಿ

ದೃಷ್ಟಿ ಮಾಂದ್ಯಕ್ಕೆ ಆಂಬ್ಲಿಯೋಪಿಯಾ ಎಂದು ಆಂಗ್ಲ ಭಾಷೆಯಲ್ಲಿ ಹೆಸರು. ತೀರಾ ಚಿಕ್ಕ ವಯಸ್ಸಿನ ಮಕ್ಕಳಿಗೆ ದೃಷ್ಟಿ ಮಾಂದ್ಯ ಉಂಟಾದಾಗ, ಅದನ್ನು ಆದಷ್ಟು ಬೇಗ ಅರಿತುಕೊಂಡು ಚಿಕಿತ್ಸೆ ನಡೆಸಿದಲ್ಲಿ ಗುಣ ಹೊಂದುವ ಸಂಭವವಿದೆ. ಅದಕ್ಕೆ ಬದಲು, ಉದಾಸೀನ ಮಾಡಿದಲ್ಲಿ ದೃಷ್ಟಿಯನ್ನೇ ಕಳೆದುಕೊಳ್ಳುವ ಸ್ಥಿತಿಯೂ ಏರ್ಪಡಬಹುದು.

ದೃಷ್ಟಿ ಮಾಂದ್ಯವಾಗಲೀ, ಅದನ್ನು ಗುಣಪಡಿಸುವುದಾಗಲೀ ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಂಡಿರುವಷ್ಟು ಸುಲಭವಾದ ವಿಷಯವಲ್ಲ. ಪ್ರಾರಂಭದಲ್ಲಿ ಅದು ಕೇವಲ ಮೆಳ್ಳೆಗಣ್ಣಿನಂತೆಯೇ ಕಂಡು ಬಂದರೂ ಹೋಗು ಹೋಗುತ್ತಾ ಅದರ ಪರಿಣಾಮವು ಕೆಟ್ಟದ್ದಾಗುವುದು. ಹೆಚ್ಚು ನಿದರ್ಶನಗಳಲ್ಲಿ ಕಣ್ಣನ್ನು ಕಳೆದುಕೊಳ್ಳಬೇಕಾಗಿ ಬರುವುದೂ ಉಂಟು.

ಮಗುವಿನ ತೀರಾ ಸಣ್ಣ ವಯಸ್ಸಿನಲ್ಲಿಯೇ ಅದಕ್ಕಿರುವ ಅಥವಾ ಇರಬಹುದಾದ ದೃಷ್ಟಿ ಮಾಂದ್ಯವನ್ನು ಕಂಡು ಹಿಡಿದು ಅದನ್ನು ನೇತ್ರ ಚಿಕಿತ್ಸಕರ ಬಳಿಗೆ ಕರೆದೊಯ್ದು ಸೂಕ್ತ ಚಿಕಿತ್ಸೆ ನಡೆಸಬೇಕು. ಹಾಗಲ್ಲದೆ, ಆಗ ಅಲಕ್ಷ್ಯದಿಂದಿದ್ದು ಆ ಮಗುವಿಗೆ ಎಂಟು ವರ್ಷಗಳಾಗಿ ಹೋದ ಮೇಲೆ ಗುಣಪಡಿಸುವುದೆಂದರೆ ಸಾಧ್ಯವೇ ಇಲ್ಲದ ಮಾತೆನ್ನಲಾಗಿದೆ. ಫಲಿತವಾಗಿ, ಮಗುವಿಗೆ ಚೆನ್ನಾಗಿ ನೋಡಬಲ್ಲ ಉಪಯುಕ್ತವಾದಂತಹ ಒಂದೇ ಒಂದು ಕಣ್ಣಿರುತ್ತದೆ. ಮತ್ತೊಂದು ದಿನೇ ದಿನೇ ಕೊಂಚಕೊಂಚವಾಗಿ ಕೆಡುತ್ತಲೇ ಇದ್ದು, ಕೊನೆಗೆ ತನ್ನ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತದೆ.

ಮೆಳ್ಳೆಗಣ್ಣನ್ನು ಸುಲಭವಾಗಿ ಕಂಡು ಹಿಡಿಯಬಹುದು. ಎರಡೂ ಕಣ್ಣುಗಳೂ ಒಳಗೆ ಸೇರಿಕೊಂಡಂತೆ ತೋರುತ್ತಿದ್ದು ಅವುಗಳೆರಡರ ಪಟಲಗಳೂ ಮೂಗಿನ ತುದಿಯನ್ನೇ ನೋಡುತ್ತಿರುವಂತಿರುತ್ತವೆ. ತೀರಾ ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಒಂದು ಕಣ್ಣು ಮಾತ್ರ ತುಸ ಮೆಳ್ಳೆಗಣ್ಣಾಗಿದ್ದರೆ, ಅದನ್ನು ಕಂಡು ಹಿಡಿಯುವುದು ಕಷ್ಟವೇ! ಏಕೆಂದರೆ, ಆ ಕಣ್ಣಿನ ಪಾಪೆಯು ಓಡಾಡುವುದರೊಂದಿಗೆ, ಮತ್ತೊಂದು ಕಣ್ಣಿನ ಪಾಪೆಯೂ ಸಹಕಾರ ನೀಡುತ್ತಿರುತ್ತದೆ. ಹೀಗಾಗಿ, ಸಾಮಾನ್ಯವಾಗಿ ನೋಡಿದಾಗ ಮಗುವಿನ ದೃಷ್ಟಿ ಚೆನ್ನಾಗಿದ್ದಂತೆ ತೋರುವುದು. ಈ ರೀತಿ ಮೆಳ್ಳೆಗಣ್ಣಿರುವ ಮಗುವು ತನ್ನ ತಲೆಯನ್ನು ಆಚೀಚೆ ತಿರುಗಿಸುವುದು ಜಾಸ್ತಿ. ಆದರೆ, ಅದೆಲ್ಲಾ ಮಗುವಿನ ಚೇಷ್ಟೆ ಎಂದು ಹೆತ್ತವರೂಹಿಸಿ ಸುಮ್ಮಗಿದ್ದು ಬಿಡುತ್ತಾರೆ. ಹುಡುಗರು ಕೆಲವೊಮ್ಮೆ ಒಂದು ಕಣ್ಣನ್ನು ಮುಚ್ಚಿಕೊಂಡು ಮತ್ತೊಂದರಿಂದ ಮಾತ್ರ ನೋಡುತ್ತಾರೆ. ಅದೆಲ್ಲಾ ಆಟವೆಂದು ಸುಮ್ಮಗಿದ್ದಲ್ಲಿ ದೋಷವು ಬೆಳೆಯುತ್ತಲೇ ಹೋಗುತ್ತದೆ. ಕೊನೆಯಲ್ಲಿ ಮಕ್ಕಳು ಕುರುಡಾಗುವುದರಲ್ಲಿ ಇದು ಪರ್ಯವಸಾನಗೊಳ್ಳುತ್ತದೆ.

ಯಾವುದೊಂದು ವಸ್ತುವನ್ನೂ ಒಂದು ಮಗುವು ಕೆಲಕಾಲ ನಿಟ್ಟಿಸಿ ನೋಡುತ್ತಿತ್ತೆಂದರೆ, ದೃಷ್ಟಿ ಮಾಂದ್ಯ ಕಾಲಿಟ್ಟಿದೆಯೆಂದರ್ಥ. ಉಪೇಕ್ಷೆಯಿಂದ ಇದ್ದಲ್ಲಿ ದೇಹದ ಜೀವಾಣುಗಳು ಶಕ್ತಿ ಕುಂದಿದ ಕಣ್ಣನ್ನು ಅಲಕ್ಷ್ಯಮಾಡಿಕೊಂಡೇ ಬಂದು, ಅದು ನಾಶವಾಗುವಂತೆ ಮಾಡುವುವು.

ಒಂದು ವಸ್ತುವು ಎಷ್ಟು ದೂರ, ಹಾಗೂ ಆಳಗಳಲ್ಲಿರುವುದೆಂಬುದನ್ನು ಅರಿಯಲು ಶಕ್ತಿಶಾಲಿಯಾದ ಎರಡೂ ಕಣ್ಣುಗಳ ಆವಶ್ಯಕತೆಯಿದೆ. ಒಂದು ಕಣ್ಣನ್ನು ಮುಚ್ಚಿಕೊಂಡು ಒಂದು ಲೋಟದಿಂದ ಮತ್ತೊಂದು ಲೋಟಕ್ಕೆ ದ್ರವವೊಂದನ್ನು ಬಗ್ಗಿಸಲು ಯತ್ನಿಸಿದಲ್ಲಿ ಕಣ್ಣು ಸರಿಯಿದೆಯೇ ಎಂಬುದನ್ನು ಕಂಡು ಹಿಡಿಯಬಹುದು. ಪ್ರತಿ ಹತ್ತು ಪ್ರಯೋಗಗಳಿಗೆ ಒಂಭತ್ತರಲ್ಲಿ ನೀರು ಕೆಳಗೆ ಸುರಿದು ಹೋಗುವುದು. ಒಂದೇ ಕಣ್ಣನ್ನು ತೆರೆದುಕೊಂಡು ಬೀಗದ ಕೈ ದ್ವಾರದೊಳಗೆ ಬೀಗದ ಕೈಯನ್ನು ನುಗ್ಗಿಸಲು ಯತ್ನಿಸುವುದರಿಂದಲೂ ಅದೆಷ್ಟು ಕಷ್ಟವೆಂದು ಅರಿಯಬಹುದಾಗಿದೆ. ಇಂದಿನ ಪ್ರಸ್ತುತ ವಾಹನ ನಿಬಿಡ ಪ್ರದೇಶಗಳಲ್ಲಿ ಸಂಚರಿಸುವಾಗ ದೃಷ್ಟಿ ಮಾಂದ್ಯವುಳ್ಳವರಿಗೆ ಎಂತಹ ಕಷ್ಟವಿದೆಯೆಂಬುದನ್ನು ಇದರಿಂದಲೇ ಅರಿತುಕೊಳ್ಳಬಹುದಾಗಿದೆ.

ಒಂದೆರಡು ವರ್ಷಗಳ ಮಕ್ಕಳು ಕಣ್ಣಿನ ಪರೀಕ್ಷೆಗೆ ಪೂರ್ಣ ಸಹಕಾರ ನೀಡುವುದಿಲ್ಲವೆಂದರೂ, ಮಾಡಿಸದೇ ಬಿಟ್ಟಲ್ಲಿ ದೃಷ್ಟಿ ಮಾಂದ್ಯದ ಸಮಸ್ಯೆಯು ಒಂದೊಂದು ವರ್ಷಕ್ಕೂ ಸೇಕಡಾ 12ರಂತೆ ಹೆಚ್ಚುತ್ತಾ ಹೋಗುವುದು. ಅಂದರೆ, ಮಗುವಿಗೆ ವಯಸ್ಸು ಎಂಟಾಗುವಾಗ ಕಣ್ಣಿನ ದುರಸ್ತಿಯ ಪ್ರಶ್ನೆಯೇ ಉಳಿದಿರುವುದಿಲ್ಲ.

ಮೆಳ್ಳೆಗಣ್ಣು, ದೃಷ್ಟಿ ಮಾಂದ್ಯಗಳು ಸಾಮಾನ್ಯವಾಗಿ ಅನುವಂಶಿಕಗಳು. ಆದರೆ, ಮಗುವಿಗೆ ಎರಡು ವರ್ಷಗಳಾಗುವವರೆಗೆ ನ್ಯೂನತೆಯನ್ನು ಕಂಡು ಹಿಡಿಯಲೂ ಸಾಧ್ಯವಿಲ್ಲ. ಆದರೂ ವೈದ್ಯರು ಕಂಡು ಹಿಡಿದಷ್ಟೇ ಆದರೆ ಆ ಎಳೆವಯಸ್ಸಿನಲ್ಲಿ ಗುಣಪಡಿಸಿಬಿಡಬಹುದು. ಹೆಚ್ಚೆಂದರೆ ಒಂದು ಕನ್ನಡಕದ ಸಹಾಯವೇ ಸಾಕಾಗಬಹುದು. ಕೆಲವೊಮ್ಮೆ ಸಣ್ಣ ಶಸ್ತ್ರ ಚಿಕಿತ್ಸೆಯೂ ಬೇಕಾಗಬಹುದು.

ಸಾಧಾರಣವಾಗಿ, ಇತ್ತೀಚಿನವರೆಗೆ ದೃಷ್ಟಿ ಮಾಂದ್ಯ, ಮೆಳ್ಳೆಗಣ್ಣುಗಳ ಬಗ್ಗೆ ನೆದರ್ ಲೇಂಡ್ಸಿನ ನೇತ್ರಜ್ಞರು ಈಗ ಆರಂಭಿಸಿರುವಂತಹ ಹೋರಾಟವನ್ನು ಎಲ್ಲೂ ಆರಂಭಿಸಿರಲಿಲ್ಲ. ಹಾಲೆಂಡಿನ ಸಮುದ್ರವನ್ನು ಮುಚ್ಚಿ ಪಡೆಯಲಾಗಿರುವ ಜ್ಯೂಡರ್ ಜೀ ಪ್ರದೇಶದ ಇದಕ್ಕಾಗಿ ಸತತ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಇವರ ನಿರಂತರ ಸಾಧನೆಗಳ ಫಲಿತಾಂಶವಾಗಿ ದೃಷ್ಟಿಮಾಂದ್ಯವನ್ನು ಗೆಲ್ಲಬಹುದೆಂದು ನಂಬಲಾಗಿದೆ.

ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ

(ಹತ್ತನೇ ಪುಟದಿಂದ)

ಮೋಹಿಗಳಾದ ಕೆಲವು ಪಟ್ಟಭದ್ರಶಕ್ತಿಗಳನ್ನು ಇವರು ಗೆಲ್ಲ ಬೇಕಾಗುತ್ತದೆ; ಅದು ಸಾಧ್ಯವೆ?

ಒಂದು ಉದಾಹರಣೆ. ಮಾಧ್ಯಮಿಕ ಶಾಲಾ ಬೋಧ ಭಾಷೆ ಪ್ರಾದೇಶಿಕ ಭಾಷೆ ಆದರೆ, ಇತ್ತೀಚಿನ ಕೆಲವು ವರ್ಷಗಳಿಂದ ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸಂಖ್ಯೆ ಹೆಚ್ಚುತ್ತಿರುವುದೂ, ಇವುಗಳಲ್ಲಿ ಕನ್ನಡ ಮಾತೃಭಾಷೆಯಾಗುವವರು ಭರ್ತಿಯಾಗುವುದೂ ನಿರಾಂತಕವಾಗಿ ನಡೆದು ಬಂದಿದೆ. ಹೀಗಾದಲ್ಲಿ ಲಾಭವೇನು?

ತಮ್ಮ ದೇಶಕ್ಕೆ ಬರುವ ಭಾರತೀಯರಿಗಾಗಿ ಅಮೆರಿಕೆ—ಇಂಗ್ಲೆಂಡುಗಳಲ್ಲಿ ಭಾರತೀಯ ಭಾಷಾ ಮಾಧ್ಯಮದ ಶಾಲೆಗಳಿಲ್ಲ. ಭಾರತದಲ್ಲಿಯೂ ಹಾಗೆಯೇ ಆಗಬೇಕು—ವರ್ಗಾವಣೆ ಹೊಂದುವ ಅಖಿಲ ಭಾರತೀಯ ಸೇವೆಯಲ್ಲಿರುವವರಿಗೆ ಅನುಕೂಲವಾಗುವಂತೆ ಹಿಂದೀ ಮಾಧ್ಯಮವನ್ನು ತೆರೆಯಬೇಕೇ ಹೊರತು ಇಂಗ್ಲಿಷ್ ಮಾಧ್ಯಮವನ್ನಲ್ಲ. ಒಬ್ಬ ಸಾಮಾನ್ಯ ವಿದ್ಯಾರ್ಥಿ ಇಂಗ್ಲಿಷಿಗಿಂತ ಸುಲಭವಾಗಿ ಹಿಂದಿಯನ್ನು ಕಲಿಯಬಲ್ಲ; ಅದರ ಶಬ್ದ ಸಂಪತ್ತು ಭಾರತೀಯನಿಗೆ ಪರಿಚಿತವೇ ಇರುತ್ತದೆ. —ಗೋರಾ.

ಶುಂಠಿ—ಕರಿಮೆಣಸು

ಚುನಾವಣಾ ಪೂರ್ವದಲ್ಲಿ

ಎಲ್ಲೆಡೆಯಲಿ ನಡೆಯುತಿತ್ತು ಚುನಾವಣಾ ಪ್ರಚಾರ। ಹೇಳಿದನು ಜನ ಸಾಮಾನ್ಯ ಬೇಡ ನಿಮ್ಮುಪಚಾರ। ಹಿಂದೆ ಒಮ್ಮೆ ಹೇಳಿದ್ದಿರಿ ಮಾಡಿಸುವೆನು ಸೇತು। ಎಂದೋ! ಎಲ್ಲೊ! ಬಿದ್ದು ಹೋಯ್ತು, ಹಿಂದೆಕೊಟ್ಟ ಮಾತು.।

ಗಾವಿಲರು

ಹೋಗುವರು ತಲೆಗೆ ಗಾಂಧಿ ಟೋಪಿಯನು ಧರಿಸಿ। ಗಾಹು ಮಾಡುವವನೂ ಗಾಳಕನಂತೆ ನಟಿಸಿ। ಗಾವಳಿಗೆ ಕುಡಿಯುವನು ಗಾಂಜವನು ತಂದು। ಗಾವಿಲರು ಉಣ್ಣುವರು ತಿಳಿಗಂಜಿ ಬೆಂದು.

ಟಾಷ್ಕೆಂಟ ಶರತ್ತು

ನಡೆಯಿತು ಕಲಹದೊಪ್ಪಂದ ಟಾಷ್ಕೆಂಟನಲ್ಲಿ। ಅಯ್ಯೋ! ಹೋದರು ನಮ್ಮ ಶಾಸ್ತ್ರಿಯವರಲ್ಲಿ। ಕುಸಿಯಿತಲೆ ಭಾರತದ ಆಧಾರ ಸ್ತಂಭ। ಮುರಿಯುವ ಆಯೂಬಿ ಟಾಷ್ಕೆಂಟ ಕಂಭ.।

ಇಂದಿನ ರಾಜಕೀಯ

ಬಿದ್ದು ಹೋಗಿದೆ ರಾಜಕೀಯದಲಿ ತೂತು। ಅದು ಏಕೆ? ಹಾಗಿತ್ತು ಕೇಳುವಿರೋ ಮಾತು। ಹೇಳುವರು ಈ ಮಾತು ಚುನಾವಣೆಯ ಹೇತು। ಕೇಳಿರ್ಕೆ ಮಾನವರ ಸುಧಾರಣೆಯ ಮಾತು.

—ಶ್ರೀ ಮ. ಗೋ. ರಾವ್

ದಿ|ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)
ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ-ಮದ್ದು
ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

29—6—1967



೨೦ ಪೈಸೆ

ಕಥಾ ಪ್ರಪಂಚ

ವೇಷಧಾರಿ

ಬರೆದವರು : ಶ್ರೀ ಸ. ನಾರಾಯಣ

ಕಾಲೇಜಿನ ವಾರ್ಷಿಕೋತ್ಸವ ನಾಟಕದೊಂದಿಗೆ ಮುಕ್ತಾಯವಾಯಿತು. ಕಾಲೇಜಿನ ವಿದ್ಯಾರ್ಥಿಗಳೇ ನಾಟಕದಲ್ಲಿ ಅಭಿನಯಿಸಿದ್ದರು. ವಿದ್ಯಾರ್ಥಿಗಳ ಹೃದಯಸ್ಪರ್ಶಿ ಅಭಿನಯವನ್ನು ಕಂಡು ಪ್ರೇಕ್ಷಕರು ಆನಂದಿಸಿದರು.

ನಾಟಕ ಮುಗಿದ ನಂತರ ಪ್ರೇಕ್ಷಕರು ಸಭಾಂಗಣದಿಂದ ಹೊರ ಬಿದ್ದರು. ಎಲ್ಲರೂ ನಾಟಕದಲ್ಲಿ ನಾಯಕನ ಪಾತ್ರವನ್ನು ವಹಿಸಿದ್ದ ಸುಧಾಕರನನ್ನು ಪ್ರಶಂಸಿಸುತ್ತಾ ನಡೆದರು. ಸುಧಾಕರ ಆ ವೇಳೆಗೆ ಹಲವಾರು ಕಾಲೇಜು ನಾಟಕಗಳಲ್ಲಿ, ಕಲಾವಿಲಾಸಿ ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರಿಗೆ ಪರಿಚಿತನಾಗಿದ್ದ.

ನಾಟಕ ಮುಗಿಸಿಕೊಂಡು ಕೋಣೆಗೆ ಬಂದು ಸುಧಾಕರ ಉಡುಪು ಬದಲಿಸಿ ಬಣ್ಣವನ್ನು ಅಳಿಸಿಕೊಳ್ಳುತ್ತಿದ್ದ. ಅಲ್ಲಿಯೇ ಇದ್ದ ಅವನ ಅನೇಕ ಗೆಳೆಯರು "ಇವತ್ತು ನಿಂದು ವಂಡರ್ಫುಲ್ ಆಕ್ಟಿಂಗ್ ಕಣೋ" ಎಂದು ಬೆನ್ನು ತಟ್ಟಿದರು.

ಮಹಮದ್ ಪೀರ್, ವರದಾಚಾರ್, ಹಿರಣ್ಣಯ್ಯ, ರಾಘವಾಚಾರ್ಯ ಇಂತಹ ಸಿಂಹಗಳು ಮೆರೆದ ನಾಡಿನಲ್ಲಿ ನಂದೇನು ಮಹಾ ಬಿಡ್ರೋ.... ಏನೋ ಸುಮಾರಾಗಿ ನಾಲ್ಕು ಮಾತನಾಡಿದ್ದೇನೆ ಅಷ್ಟೆ 'ಎಂದು ಸೌಜನ್ಯದಿಂದಲೇ ನುಡಿದ ಸುಧಾಕರ.

ಕಾಲೇಜಿನ ಪ್ರಿನ್ಸಿಪಾಲ್ ಡಾ. ಉಮಾಶಂಕರ ಉತ್ತಮ ವರ್ಗದ ವಿಮರ್ಶಕರೂ ಆಗಿದ್ದರು. ಶಿಷ್ಯನ ಪ್ರತಿಭೆಯ ಪರಿಚಯ ಅವರಿಗೂ ಇತ್ತು. ಅಂದಿನ ಅವನ ಅಭಿನಯವನ್ನು ಕಂಡು ಆನಂದಿಸಿದ್ದರು. ಶಿಷ್ಯನಿಗೆ ಶುಭಾಶಯ ಹೇಳಲು ತಾವೇ ಬಣ್ಣದ ಕೋಣೆಗೆ ಬಂದರು.

ಉಮಾಶಂಕರ್ ಕೋಣೆಯೊಳಕ್ಕೆ ಪ್ರವೇಶಿಸುತ್ತಿದ್ದಂತೆಯೇ ವಿದ್ಯಾರ್ಥಿಗಳೆಲ್ಲ ನಿಶ್ಶಬ್ದರಾಗಿ ನಿಂತರು. ಉಮಾಶಂಕರ್ ಸುಧಾಕರನ ಕೈ ಕುಲುಕುತ್ತಾ 'ಕನ್‌ಗ್ರಾಜುಲೇಷನ್ಸ್ ಮಿ. ಸುಧಾಕರ, ನನಗೆ ತುಂಬಾ ಸಂತೋಷವಾಯಿತು. ಅಭಿನಯ ಕಲೆಯನ್ನೇ ಜೀವನದ ಅರ್ಥ ಎಂದು ನೀವು ಅನುಸರಿಸಿದ್ದರೂ, ಆ ಕಲೆಯನ್ನು ಕೈ ಬಿಡಬೇಡಿ. ಮರೆಯಬೇಡಿ" ಎಂದರು.

"ನಿಮ್ಮ ಅಭಿಮಾನ ದೊಡ್ಡದು ಸಾರ್" ಎಂದ ಸುಧಾಕರ.

ಉಮಾಶಂಕರ್ ಸಹೋದ್ಯೋಗಿಗಳೊಂದಿಗೆ ತೆರಳಿದರು.

ಸುಧಾಕರನ ನಾಟಕಾಭಿನಯ ನಿರೀಕ್ಷಿಸಲು ಅವನ ಹಲವಾರು ಅಭಿಮಾನಿಗಳೂ ಆತ್ಮೀಯರೂ ಬಂದಿದ್ದರು. ಅವನ ಅಕ್ಕ ಮತ್ತು ಭಾವ ಅವರ ಇಬ್ಬರು ಮಕ್ಕಳು ಪ್ರಮುಖರು.

ನಾಟಕ ಮುಗಿದ ನಂತರ ಅವನಿಗಾಗಿ ಅವನ ಅಕ್ಕ ಮತ್ತು ಭಾವ ತಮ್ಮ ಮಕ್ಕಳೊಂದಿಗೆ ಕಾಲೇಜಿನ ಗೇಟಿನ ಬಳಿ ಕಾಯುತ್ತಾ ನಿಂತಿದ್ದರು.

"ಸುಧಾ ಅಂತೂ ಪ್ರಚಂಡ, ನಾನು ಏನೋ ಅಂತಿದ್ದೆ.... ಅವನು ಅಷ್ಟು ಚೆನ್ನಾಗಿ ಅಭಿನಯಿಸುತ್ತಾನೆ ಅನ್ನೋದು ನನಗೆ ಗೊತ್ತೇ ಇರಲಿಲ್ಲ" ಎಂದರು ಸುಧಾಕರನ ಅಕ್ಕ ವಿಮಲ.

"ನಿನ್ನ ತಮ್ಮ ಕೇಳಬೇಕೆ?" ಎಂದು ನಗುತ್ತಾ ನುಡಿದರು ರಾಮಕೃಷ್ಣ. ಗಂಡ ಹೆಂಡತಿ ಇಬ್ಬರೂ ನಾಟಕದ ವಿಷಯವನ್ನು ವಿಮರ್ಶೆ ಮಾಡುತ್ತಾ ನಿಂತರು.

"ಹುಡುಗರಿಗೆ ನಿದ್ದೆ. ಎಷ್ಟು ಹೊತ್ತು ಇಲ್ಲಿ ನಿಲ್ಲೋದು.... ಇವನು ಬರಲೇ ಇಲ್ಲ. ಎಂದರು ವಿಮಲ.

"ಈ ಮಹಾತ್ಮನನ್ನು ನಂಬಿ ಕಾದು ಪೂರೈಸಿದವರು ಯಾರಿದ್ದಾರೆ...... ನಾನೇ ಹೋಗಿ ನೋಡಿಕೊಂಡು ಬಂದು ಬಿಡುತ್ತೇನೆ' ಎಂದರು ರಾಮಕೃಷ್ಣ.

'ಸರಿ ಹಾಗೆ ಮಾಡಿ' ಎಂದಳು ವಿಮಲ.

ಅದೇ ವೇಳೆಗೆ ಕಾರೊಂದು ಬಂದು ಅವರ ಮುಂದೆ ನಿಂತಿತು. ಮುಂದುಗಡೆ ಕುಳಿತಿದ್ದ ಒಬ್ಬ ಗಣ್ಯ ವ್ಯಕ್ತಿ ಕಾರಿನಿಂದಿಳಿದು 'ನಮಸ್ಕಾರ ರಾಮಕೃಷ್ಣ. ನನ್ನ ನೆನಪಿದೆಯೋ?' ಎಂದು ಪ್ರಶ್ನಿಸಿದರು.

'ಹಲೋ ಆನಂದ್ ಕ್ಷೇಮವೇನಯ್ಯ" ಎಂದು ಕೈ ಚಾಚಿದರು ರಾಮಕೃಷ್ಣ, ಇಬ್ಬರೂ ಕುಶಲ ಸಂಭಾಷಣೆ ನಡೆಸುತ್ತಾ ನಿಂತರು.

ಅದೇ ವೇಳೆಗೆ ಸುಧಾಕರ ತನ್ನ ನಾಲ್ವರು ಗೆಳೆಯರೊಂದಿಗೆ ಅಲ್ಲಿಗೆ ಬಂದ.

"ಲೇಟಾಗಿ ಹೋಯ್ತು ಕ್ಕ.... ನಾನೇನು ಮಾಡಲಿ... ಹೋಗೋಣ....' ಎಂದ ಸುಧಾಕರ, ಆನಂದ ರಾಯರು ಅವನನ್ನೇ ನೋಡುತ್ತಾ ನಿಂತರು.

'ಸುಧಾ ಇವರು ಆನಂದರಾಯರು ಅಂತ. ನನ್ನ ಕಾಲೇಜು ಮಿತ್ರರು. ಆನಂದ ಇವರು ಸುಧಾಕರ ಅಂತ. ನನ್ನವಳ ತಮ್ಮ... ಫೈನಲ್ ಎಂ. ಎ. ನಲ್ಲಿದ್ದಾನೆ. ಇವತ್ತಿನ ನಾಟಕದಲ್ಲಿ....' ಎಂದರು ರಾಮಕೃಷ್ಣ.

"ತುಂಬ ಸಂತೋಷ... ಅಂತೂ ಇವರು ಪ್ರತಿಭಾವಂತ ವ್ಯಕ್ತಿ ಎಂದೇ ಕಾಣುತ್ತದೆ....' ಎಂದರು ಆನಂದರಾಯರು. ಕಾರಿನಲ್ಲಿ ಕುಳಿತಿದ್ದ ಆನಂದ ರಾಯರ ಪತ್ನಿ ಮತ್ತು ಪುತ್ರಿ ಕೆಳಕ್ಕಿಳಿದರು.

'ಇವಳು ನನ್ನ ಮಗಳು ವಾಣಿ, ಅವಳು ಇವಳ ಅಮ್ಮ.... ಅರ್ಥಾತ್ ನನ್ನ....' ಎಂದು ಹಾಸ್ಯದ ಧಾಟಿಯಲ್ಲಿ ನುಡಿದರು ಆನಂದ ರಾಯರು.

"ಇವತ್ತು ತುಂಬಾ ಹೊತ್ತಾಗಿದೆ, ಮಾತನಾಡಲು ಅವಕಾಶವಿಲ್ಲ. ನಾಳೆ ನಿನ್ನ ಮನೆಯವರನ್ನು ಕರೆದುಕೊಂಡು ಬಂದು ಬಿಡು' ಎಂದು ಆಹ್ವಾನ ನೀಡಿದ ರಾಮಕೃಷ್ಣ.

'ನಾವೇ ಬರಬೇಕು ಅನ್ನುವುದೇನು ನೀನೇ ಎಲ್ಲರನ್ನು ಕರೆದುಕೊಂಡು ಬಾ" ಎಂದರು ಆನಂದರಾಯರು.

"ಯಾರೂ ಯಾರ ಮನೆಗೂ ಬರುವುದು ಬೇಡ. ಇಬ್ಬರೂ ನಾಳೆ ಸಂಜೆ ಇದೇ ಸ್ಥಳದಲ್ಲಿ ಭೇಟಿ ಮಾಡಿ' ಎಂದ ಸುಧಾಕರ.

ಎಲ್ಲರೂ ನಗುವಿನಲ್ಲಿ ಪಾಲ್ಗೊಂಡರು.

— ೨ —

ಅಂದು ಸಂಜೆ ಆನಂದರಾಯರು ಮನೆಗೆ ಹಿಂದಿರುಗಿದರೂ, ಅವರ ಕಳೆಗುಂದಿದ ಮುಖವೇ 'ಹೋದ ಕೆಲಸವಾಗಿಲ್ಲ' ಎಂದು ಹೇಳುತ್ತಿತ್ತು. ಇಂದಿರಮ್ಮ ವಿಷಯವನ್ನೂ ಆಳವಾಗಿ ವಿಚಾರಿಸದೆ "ಏನಾಯ್ತು" ಎಂದರು.

ಆನಂದರಾಯರು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾ ಭಾರವಾದ ಧ್ವನಿಯಲ್ಲಿ, "ಈ ಸಂಬಂಧವೂ ಕೂಡಿ ಬರೋದಿಲ್ಲ ಕಣೆ. ಹತ್ತು ಸಾವಿರ ವರದಕ್ಷಿಣೆ. ಎರಡು ಖರ್ಚು ಹಾಕಿ ಮದುವೆ ಮಾಡಿಕೊಡಬೇಕು, ನಿನ್ನ ಭಾವೀ ಅಳಿಯನನ್ನು ವಿದೇಶಕ್ಕೆ ಓದಲು ಕಳುಹಿಸಬೇಕು. ಈ ಕಾಲದ ಜನ ಮನುಷ್ಯರಲ್ಲ ಕಣೆ, ನಿರ್ದಯರು ಇನ್ನೊಬ್ಬರ ಕಷ್ಟ ಸುಖ ನೋಡುವುದಿಲ್ಲ. ಹಣ ಸುಲಿಯುವುದರಲ್ಲಿ ತಕ್ಕರನ್ನೂ, ಪಠಾಣರನ್ನೂ ಮೀರಿಸುತ್ತಾರೆ" ಎಂದು ಬೇಸರದಿಂದ ನುಡಿದರು.

'ವಾಣಿ ತಂದೆ ತಾಯಿ ಇಬ್ಬರಿಗೂ ಕಾಫಿಯನ್ನು ತಂದು ಕೊಟ್ಟಳು.

'ವಾಣಿ' ಎಂದು ಕೂಗುತ್ತಾ ಅವಳ ಗೆಳತಿ ರಮಾ ಒಳಕ್ಕೆ ಪ್ರವೇಶಿಸಿದಳು. ವಾಣಿ ಗೆಳತಿಯೊಂದಿಗೆ ಹೊರಕ್ಕೆ ನಡೆದಳು.

"ನೀವು ಏನೂ ತಿಳಿದುಕೊಳ್ಳೋದಿಲ್ಲ ಅಂದರೆ ಒಂದು ಮಾತು ಹೇಳ್ತೀನಿ" ಎಂದರು ಇಂದಿರಮ್ಮ.

'ಇದರಲ್ಲಿ ಸಂಕೋಚ ಮುಚ್ಚುಮರೆ ಏನಿದೆ ಹೇಳು'

"ನಿಮ್ಮ ಸ್ನೇಹಿತರು ರಾಮಕೃಷ್ಣರನ್ನು ಈ ವಿಷಯವಾಗಿ ವಿಚಾರಿಸಿದರೆ'

"ರಾಮಕೃಷ್ಣನಿಗೆ ಮದುವೆಯ ವಯಸ್ಸಿನ ಮಗ ಎಲ್ಲಿದ್ದಾನೆ'

"ಅವರಿಗೆ ಮಗ ಇಲ್ಲ ನಿಜ, ಅವರ ಮೈದುನ ಸುಧಾಕರ ಅಂತ ಹುಡುಗ ಇಲ್ವೆ.... ಹುಡುಗ ತುಂಬ ಚೂಟಿ....'

"ನಿಜ ಕಣೆ ನಿನ್ನ ಮಾತು... ಅಂತಹ ಸಮಯದಲ್ಲಿ ನೆನಪು ಮಾಡಿದೆ.... ನಾಳೆಯೇ ಕಾಗದ ಬರೆಯುತ್ತೇನೆ' ಎಂದರು ಆನಂದರಾಯರು.

"ಈ ಸಂಬಂಧವಾದರೂ ಕೈಗೂಡುವಂತೆ ಅನುಗ್ರಹಿಸು 'ಭಗವಂತ' ಎಂದು ಪ್ರಾರ್ಥಿಸಿತು ಅವರ ಮಾತೃ ಹೃದಯ.

"ವಿಮಲ ಸ್ವಲ್ಪ ಬರ್ತೀಯ ಇಲ್ಲಿ"

"ಅದೇನು ಹೇಳಿ"

'ಒಂದು ಶುಭ ಸಮಾಚಾರ ಈಗೋ ಇಲ್ಲಿದೆ' ಎಂದು ರಾಮಕೃಷ್ಣ ಪತ್ರವನ್ನು ಪತ್ನಿಯ ಕೈಗಿತ್ತರು.

'ನನ್ನದೇನಿದೆ ಮದುವೆ ಆಗೋನು ಅವನು, ಅವನು ಒಪ್ಪಿಕೊಂಡರೆ ಆಯ್ತು'

'ಯಾಕೆ ನಿನಗೆ ಒಪ್ಪಿಗೆ ಇಲ್ವೆ?"

'ಅವನೊಂದು ಶುದ್ಧ ವಕ್ರ ಅದಕ್ಕೆ ಹೇಳಿದೆ'

'ನೀನು ಈ ಜವಾಬ್ದಾರಿ ವಹಿಸಿಕೊಂಡು ಒಪ್ಪಿಕೊಂಡು ಬಿಟ್ಟರೆ ಆಯ್ತು. ಅವನೂ ಒಪ್ಪುತ್ತಾನೆ....'

'ಒಂದು ವೇಳೆ ಅವನು ... ಒಪ್ಪಿದರೆ ಆಯ್ತು..... ಅಪ್ಪ ಒಪ್ಪಬೇಕಲ್ಲ...

"ಲೇ ನೀನೇ ಮಧ್ಯೆ ತಲೆ ಹರಟೆ ಮಾಡಬೇಡ. ನೀನು ಮೊದಲು ಒಪ್ಪಿಕೋ.." ಅವನು ಅವನಪ್ಪ ನಮ್ಮಪ್ಪ ಎಲ್ಲ ಒಪ್ಪಿಕೊಳ್ಳುತ್ತಾರೆ"

"ಹಾಗೇನು?" ಎಂದು ನಗುತ್ತಾ ನುಡಿದಳು ವಿಮಲ.

ಪತಿಯ ಸಲಹೆಯನ್ನು ವಿಮಲ ತಿರಸ್ಕರಿಸುವಂತಿರಲಿಲ್ಲ.

ಪರೀಕ್ಷೆ ಮುಗಿದಿತ್ತು. ಸುಧಾಕರ ಕಾದಂಬರಿಯೊಂದನ್ನು ಹಿಡಿದು ಕೋಣೆಯಲ್ಲಿ ಓದುತ್ತಾ ಕುಳಿತಿದ್ದ. ವಿಮಲ ಒಳಕ್ಕೆ ಪ್ರವೇಶಿಸಿದರು. ಅಕ್ಕನನ್ನು ಸುಧಾಕರ ಸ್ವಾಗತಿಸಿದ.

'ಪರೀಕ್ಷೆ ಮುಗಿದರೂ ತುಂಬಾ ಓದುತ್ತಿದ್ದೀಯಲ್ಲೋ ಸುಧಾ' ಎನ್ನುತ್ತಾ ವಿಮಲ ಮಂಚದ ಮೇಲೆ ಕುಳಿತುಕೊಂಡರು.

'ಮರುಳು ಸೇತುವೆ ಕಾದಂಬರಿ ಚೆನ್ನಾಗಿದೆ ಅಂದರು ಓದ್ತಿದ್ದೇನೆ"

'ಸರಿ ನನ್ನ ಒಂದು ವಿಷಯ ಕೇಳೋಣ ಅಂತ ಬಂದೆ.... ನೀನು ಏನೂ ತಿಳಿದುಕೊಳ್ಳಬಾರದು"

'ಇದೇನಕ್ಕ ಒಗಟಿನ ಹಾಗೆ ಮಾತನಾಡುತ್ತಿದ್ದೀಯ"

"ಅಮ್ಮ ಕಣ್ಣು ಮುಚ್ಚೋದಕ್ಕೆ ಮುಂಚೆ 'ವಿಮಲ ಸುಧಾ ನಿನ್ನ ತಮ್ಮ ಅಲ್ಲ ಕಣೆ ಮಗ ಅಂತ ಹೇಳಿದ್ದಳು' ಅಮ್ಮನಿಗೆ ಕೊಟ್ಟ ಮಾತನ್ನು ನಾನು ಉಳಿಸಿ ಕೊಳ್ಳಬೇಕು. ತಾಯಿಯ ಕರ್ತವ್ಯವನ್ನು ನಿರ್ವಹಿಸಬೇಕು"

"ಇದೇನಕ್ಕ ಹೀಗೆ ಹೇಳ್ತೀಯ...."

(ಹದಿನೈದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಫೋನ್ 77
ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಹಳೆಯ ಚಲನಚಿತ್ರವೊಂದರಲ್ಲಿ ಓರ್ವ ಕೈದಿಯ ಪಾತ್ರ.

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೪೪ | ೨೯—೬—೧೯೬೭ | No. 44

ಹೊಣೆಗಾರಿಕೆ ಬೇಕು

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಸ್ಥಾಪಿತವಾಗಿವೆ. ಹಾಗಾಗಿ ಕಾಂಗ್ರೆಸ್ಸು, ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಹೊಣೆಗಾರಿಕೆಯ ಮನೋವೃತ್ತಿ ಹೆಚ್ಚಬೇಕು. ಯಜಮಾನಿಕೆ ಪಡೆದವ, ಅವನು ಏಣಿ ಏರುತ್ತಿರುವ ಯುವಕನೇ ಆದರೂ, ತನ್ನ ಜವಾಬ್ದಾರಿಯನ್ನು ಅರಿಯದೆ ಹೋದರೆ, ಯಜಮಾನಿಕೆಯನ್ನು ಹೇಗೆ ನಿಭಾಯಿಸಿಯಾನು? ನಮ್ಮ ದೇಶವು ಪ್ರಜಾಪ್ರಭುತ್ವವಾದಿ ಸ್ವತಂತ್ರ ಪ್ರಜಾಪ್ರಭುತ್ವ. ಇದರ ಆಡಳಿತ ಸುಸೂತ್ರವಾಗಿ ನಡೆಯಬೇಕಾದರೆ, ರಾಜಕೀಯ ಪಕ್ಷಗಳು ಹೊಣೆ ಹೊರಿಸುವುದರಲ್ಲಿ ತಮ್ಮ ಶಕ್ತಿಯನ್ನು ತೋರಿಸಿ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳದೆ, ಹೊಣೆ ನಿರ್ವಹಿಸುವುದರಲ್ಲಿಯೇ ಶಕ್ತಿಯ ಸದುಪಯೋಗ ಮಾಡಿ, ಬೇರೆಯವರು ತಮ್ಮ ಬೆನ್ನು ತಟ್ಟುವಂತೆ ಮಾಡಬೇಕು. ನಮ್ಮ ನೂರಾರು ತಲೆ ತಿನ್ನುವ ಸಮಸ್ಯೆಗಳಲ್ಲಿ ಇದೂ ಒಂದು ಎಂಬುದನ್ನು ಈ ಶಾಸಕರು ಇನ್ನೂ ತಿಳಿದುಕೊಂಡಿಲ್ಲ.

ಇತ್ತೀಚಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಕೇಂದ್ರದ ಸಚಿವರಾದ ಕೆ. ಸಿ. ಪಂತ್ ಮತ್ತು ಸತ್ಯನಾರಾಯಣ ಸಿಂಹರು ಬಿರ್ಲಾರಿಂದ ನಿಯಮಿತ ವೇತನ ಪಡೆಯುತಿದ್ದಾರೆಂದು ಸಂಸತ್ತಿನಲ್ಲಿ ಆರೋಪ ಹೊರಿಸಲಾಯಿತು. ಸರಕಾರದಲ್ಲಿ ಸಚಿವರಲ್ಲಿ ತಮ್ಮ ಗಮನಕ್ಕೆ ಬಂದ ತಪ್ಪು ದೋಷ— ಕೊರತೆಗಳನ್ನು ಎತ್ತಿ ಹೇಳುವುದು, ಸಂಬಂಧಿಸಿದವರ ಗಮನಕ್ಕೆ ತರುವುದು ಸದಸ್ಯರ ಕರ್ತವ್ಯ. ಸರಕಾರಿ ಪಕ್ಷೀಯರಿಗಿಂತಲೂ ಈ ಕರ್ತವ್ಯದ ಹೊಣೆ ವಿರೋಧಿ ಪಕ್ಷೀಯರ ಮೇಲೆ ಹೆಚ್ಚು. ಬಿರ್ಲಾ ಅಂದರೆ, ದೇಶದ ಹಿರಿಯ ಉದ್ದಿಮೆದಾರರು, ಸುಸಂಪನ್ನರು. ಒಂದು ವೇಳೆ ಆರೋಪಿತ ಸಚಿವರು ನಿಯಮಿತ ವೇತನ, ಅದನ್ನು ಯಾವ ಹೆಸರಿನಲ್ಲೇ ಕರೆಯಲಿ, ಪಡೆಯುವುದು ನಿಜವಾದರೆ, ಅದರಿಂದ ದೇಶ ಹಿತಕ್ಕೆ ತುಂಬ ಹಾನಿ ತಟ್ಟುವುದು; ಸರಕಾರದ ನೀತಿ ರೂಪಿಸುವಲ್ಲಿಯೂ ಈ ಸಂಬಂಧ ತನ್ನ ಪಾತ್ರ ವಹಿಸದುಳಿಯದು. ಅದುದರಿಂದ, ಹೇರಿದ ಆರೋಪ ಗಂಭೀರ ಸ್ವರೂಪದ್ದು. ಇದನ್ನು ಮನಗಂಡ ಪ್ರಧಾನಿಯವರು ಸಚಿವ ಸಮಿತಿಯೊಂದನ್ನು ರಚಿಸಿ ವಿಚಾರಣೆ ನಡೆಸಲು ಕೇಳಿಕೊಂಡರು. ವಿತ್ತ ಮಂತ್ರಿ ದೇಸಾಯಿ, ಗೃಹ ಮಂತ್ರಿ ಚವಾನ ಮತ್ತು ವಿದೇಶ ಮಂತ್ರಿ ಛಗಲಾ —ಇವರಿಂದ ಕೂಡಿದ ಸಮಿತಿಯು ಸಚಿವದ್ವಯರ ಮೇಲೆ ಹೇರಲಾದ ಆರೋಪಕ್ಕೆ ಸಾಕಷ್ಟು ಆಧಾರಗಳಿಲ್ಲವೆಂದೂ ಅವರು ವೇತನ ಪಡೆಯುತಿದ್ದಾರೆಂಬುದನ್ನು ನಂಬಲಾಗದೆಂದೂ ಒಮ್ಮತದ ನಿರ್ಧಾರಕ್ಕೆ ಬಂದಿದ್ದಾರೆ. ಇದನ್ನು ಸಂಸತ್ತಿಗೆ ತಿಳಿಸುತ್ತ ಪ್ರಧಾನಿಯವರೂ ತನ್ನ ಅಭಿಪ್ರಾಯವೂ ಇದೇ ಎಂದು ಘೋಷಿಸಿದರು.

ವಾಸ್ತವಿಕವಾಗಿ ಪ್ರಕರಣ ಇಲ್ಲಿಗೆ ಕೊನೆಗೊಳ್ಳಬೇಕಾಗಿತ್ತು. ಅಥವಾ ವಿರೋಧಿ ಪಕ್ಷದ ಸದಸ್ಯರು ಮುಖ್ಯವಾಗಿ ಆರೋಪ ಹೊರಿಸಿದ ಮೂವ್ವ ಸದಸ್ಯರು ಪ್ರಧಾನಿಗಳ ಹೇಳಿಕೆಯಿಂದ ತೃಪ್ತರಾಗದಿರುವುದಾದರೆ, ಆರೋಪವನ್ನು ಸಿದ್ಧಪಡಿಸಲು ಪ್ರಮಾಣ ಸಂಗ್ರಹ ಮಾಡತೊಡಗಬೇಕಿತ್ತು. ಆಧಾರಗಳೊಂದಿಗೆ ತನ್ನ ಆರೋಪ ಮಾಡಿದರೆ, ಕಣ್ಣಿದ್ದೂ ಕುರುಡನಂತೆ ವರ್ತಿಸುವುದು ಸಾಧ್ಯವಿಲ್ಲ. ಆದರೆ, ನಮ್ಮ ಸಂಸತ್ತಿನಲ್ಲಿ ನಡೆದುದೇನು? ಹೇಳಿಕೆಗೆ ಅತೃಪ್ತಿ ಪ್ರದರ್ಶನ, ಗುಲ್ಲು, ಗೊಂದಲ, ಗಲಭೆ, ಮತ್ತು ಅಂತಿಮ ಅಸ್ತ್ರ— ಸಭಾತ್ಯಾಗ! ಇದು ಏನನ್ನು ಸೂಚಿಸುತ್ತದೆ? ವಿರೋಧಿ ಪಕ್ಷೀಯರ ಬೇಜವಾಬ್ದಾರಿಯನ್ನು ಮಾತ್ರ ತಾನೆ? ಸಚಿವರನ್ನೂ ಕೇಂದ್ರ ಸರಕಾರವನ್ನೂ ಪೇಚಿನಲ್ಲಿ ಸಿಕ್ಕಿಸುವ ಅವಕಾಶವೊಂದು ತಪ್ಪಿತಲ್ಲಾ ಎಂಬ ತೀವ್ರ ಅಸಮಾಧಾನ ಅವರಿಗೆ ಅಷ್ಟೆ. ಈ ಬಗೆಯ ಅಸಮಾಧಾನ—ಅತೃಪ್ತಿಯಿಂದ ಪ್ರತಿ ಪಕ್ಷೀಯರು ಎಂತು ದೇಶದ ಆಡಳಿತೆಯಲ್ಲಿ ನೆರವಾದಾರು? ಹೊಣೆಗೆಟ್ಟು ವರ್ತಿಸುವುದರಿಂದ ಯಾವ ಲಾಭವಾದೀತು? ಸರಕಾರದ ಗೋಣು ಮುರಿಯುವುದೆ ತಮ್ಮ ಉದ್ದೇಶವೆಂದು ಇವು ಬಗೆದಷ್ಟು ದಿನ ದೇಶಹಿತ ಸಾಧಿತವಾಗದು. ಪ್ರಾಮಾಣಿಕವಾದ ಪ್ರಜಾಸತ್ತಾತ್ಮಕವಾದ ಮನೋವೃತ್ತಿ ನಮ್ಮ ಮಾನ್ಯ ಸದಸ್ಯರಲ್ಲಿ ಮೂಡದೆ ಹೋದರೆ, ಅಂಥವರಿಂದ ಪ್ರಜಾಹಿತ ಸಾಧನೆಯಾಗದು; ಬದಲು ಪ್ರಜೆಗಳಿಗೆ ಅಹಿತವೇ ಆಗುವುದು. ಇದನ್ನು ನಮ್ಮ ಪಾರ್ಲಿಮೆಂಟ್ ಸದಸ್ಯರು ಮಾತ್ರವಲ್ಲ, ವಿಧಾನ ಸಭೆ—ವಿಧಾನ ಪರಿಷತ್ತುಗಳ ಸದಸ್ಯರೂ ಮನವರಿಕೆ ಮಾಡಿಕೊಳ್ಳಬೇಕು. ಹೊಣೆಗಾರಿಕೆಯ ಶಿಸ್ತು ನಿರ್ವಹಿಸದ ಶಾಸಕರು ಜನತೆಯ ಶಾಸನವೇನು ಸಾಧಿಸಿಯಾರು?

ಮುಂದಿನ ಐದು ವರ್ಷಗಳು....

ಕಾಂಗ್ರೆಸ್ಸು ಕಾರ್ಯಕಾರಿಣಿ ಸಭೆ ಸೇರಿ ಹತ್ತಂಶಗಳ ಕಾರ್ಯಕ್ರಮವನ್ನು ರೂಪಿಸಿತು. ಕಾಂಗ್ರೆಸ್ಸು ಶಕ್ತಿಹೀನವಾಗುತ್ತಿರುವುದಕ್ಕೆ ಅದರ ನೀತಿಯು ಅನಿರ್ಧಾರಿತವಾಗಿರುವುದೂ ಒಂದು ಕಾರಣವೆಂಬುದನ್ನು ಒಪ್ಪಿಕೊಂಡರೆ, ಈಗ ಸ್ವೀಕೃತವಾದ ನೀತಿಗಳು ಸ್ಥಿರ ನೀತಿಯ ರೂಪ ಪಡೆಯಬಹುದೆನಿಸುತ್ತದೆ. ಅಂಗೀಕೃತ ನೀತಿಯಲ್ಲಿ ದೇಶದ ಮಾಜಿ ರಾಜ-ಮಹಾರಾಜರ ರಾಜಧನವನ್ನು ನಿಲ್ಲಿಸುವುದು, ಬ್ಯಾಂಕುಗಳ ಮೇಲೆ ಹೆಚ್ಚಿನ ಸಾಮಾಜಿಕ ಅಂಕುಶ ಹೇರುವುದು, ಭೂಸುಧಾರಣೆಯನ್ನು ತ್ವರಿತವಾಗಿ ವ್ಯವಹೃತಗೊಳಿಸುವುದು, ಜನರಲ್ ಇನ್ಶ್ಯೂರೆನ್ಸನ್ನು ರಾಷ್ಟ್ರೀಕರಣಗೊಳಿಸುವುದು ಇತ್ಯಾದಿ ಸೇರಿಕೊಂಡಿವೆ. ಭೂಸುಧಾರಣೆಯ ನೀತಿಯು ನಮ್ಮ ಸ್ವಾತಂತ್ರ್ಯದಷ್ಟೇ ಹಳೆಯದಾಗಿದೆ. ಈ ಸಂಬಂಧಲ್ಲಿ ಕಾನೂನುಗಳಾದರೂ ಅವುಗಳು ಸಂಪೂರ್ಣವಾಗಿ ವ್ಯವಹಾರಕ್ಕೆ ಬಂದಿರುವುದಿಲ್ಲ. ಕೆಲವು ರಾಜ್ಯಗಳಲ್ಲಿ ಈ ಸಂಬಂಧದ ಮಸೂದೆಯಿನ್ನೂ ರೂಪಿತವಾಗುತ್ತಿದೆ. ಚುನಾವಣೆಯ ದೃಷ್ಟಿಯಿಂದ ಕಾಂಗ್ರೆಸ್ಸು ಭೂಸುಧಾರಣೆಯನ್ನು ಕಟ್ಟುನಿಟ್ಟಾಗಿ ಜಾರಿಗೆತರಲು ಹೆದರಿತ್ತು. ಇಂದು ಪರಿಸ್ಥಿತಿ ಹಾಗಿಲ್ಲ. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸು ಸೋತು ಹೋದುದರಿಂದ ಈ ಬಗೆಯ ಡೋಲಾಯಮಾನ ನೀತಿಯಿಂದ ಚುನಾವಣೆಯಲ್ಲಿ ಯಶಸಿಗದು ಎಂಬುದು ನಿಶ್ಚಿತವಾಗಿದೆ. ಆದರೆ, ಈಗ ಕಾಂಗ್ರೆಸ್ಸು ಭೂಸುಧಾರಣೆಯನ್ನು ಕಾರ್ಯಗತಗೊಳಿಸಿದರೂ ಕಾಂಗ್ರೆಸ್ಸೇತರ ಸರಕಾರಗಳು ಏನು ಮಾಡಿಯಾವು? ಕೇಂದ್ರದ ಸಲಹೆಗಳನ್ನು ರಾಜ್ಯವು ಮನ್ನಿಸದೇ ಹೋದರೆ, ಕೇಂದ್ರ—ರಾಜ್ಯ ತಿಕ್ಕಾಟವಾಗಬಹುದು. ಅಥವಾ ಹಲವು ಪಕ್ಷಗಳ ಸರಕಾರಗಳಲ್ಲಿ ಬಿರುಕು ಬಿದ್ದರೂ ಬೀಳಬಹುದು. ರಾಜಧನ ನಿಲ್ಲಿಸುವುದರಿಂದ ಮಾಜಿ ರಾಜ—ಮಹಾರಾಜರೂ ಮುನಿಯಬಹುದು, ಈ ಸಂಬಂಧದಲ್ಲಿ ಸಂವಿಧಾನ ತಿದ್ದುಪಡಿಯಾಗಬೇಕಾದುದೂ ಅಗತ್ಯವಾದುದರಿಂದ ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಬೆಂಬಲವನ್ನೂ ಕಾಂಗ್ರೆಸ್ಸು ಪಡೆದುಕೊಳ್ಳಬೇಕಾಗುವುದು. ಅಂತೂ ಮುಂದಿನ ಐದು ವರ್ಷಗಳ ಕಾಲ ಭಾರತವು ಯಾವ ದಾರಿ ಹಿಡಿಯುತ್ತದೆ ಎಂಬುದು ಕುತೂಹಲಕಾರಕವಿದೆ.

> **ವಚನ ಸುಧೆ**
>
> ಅನುಬಂಧಂ ಚ ಸಂಪ್ರೇಕ್ಷ್ಯ
> ವಿಪಾಕಂ ಚೈವ ಕರ್ಮಣಾಮ್
> ಉತ್ಥಾನಮಾತ್ಮನಶ್ಚೈವ
> ಧೀರಃ ಕುರ್ವೀತ ವಾ ನ ವಾ||
>
> ಮೊದಲು, ಮಾಡುವ ಕೆಲಸದ ಪ್ರಯೋಜನ, ಪರಿಣಾಮ ಮತ್ತು ತನ್ನ ಉನ್ನತಿಯ ವಿಚಾರವನ್ನು ಮಾಡಿ, ಆ ಮೇಲೆ ಕೆಲಸವನ್ನು ಮಾಡಬೇಕೇ, ಬೇಡವೇ ಎಂಬುದನ್ನು ಧೀರನು ಗೊತ್ತು ಮಾಡಬೇಕು.

ನರಸಣ್ಣನ ಸರಸ



"ಮಾಜಿ ರಾಜ-ಮಹಾರಾಜರ ಗೌರವಧನವನ್ನು ನಿಲ್ಲಿಸುವಂತೆ ಎಲ್ಲ 'ಮಾಜಿ'ಗಳ ಪೆನ್‌ಶನ್ ಯಾಕೆ ನಿಲ್ಲಿಸ ಬಾರದೂಂತ? ಆಗ ಉಳಿತಾಯವೂ ತುಂಬ ಆಗುತ್ತೆ..."

ಗೇಹ ರಾಜ್ಯದಲ್ಲಿ

ಸಮಸ್ಯಾ ಪರಿಹಾರಕ-ಸಂಜೀವಿನಿ

'ಹೌದ್ರೀ....'

'ಹೌದು..'

'ಏನು?'

'ಒಳ್ಳೆಯದು'

'ಹ್ಞಾಂ....'

'ಹಾಂ....'

'ಅಲ್ರಿ, ಏನಿದೂಂತ?'

'ಯಾವುದು?'

"ಅಲ್ಲ, ಏನೋ ಹೇಳಿದ ಹಾಗೆ ನೋಡಿ, ಏನೋ ಕೇಳಿದ್ರೆ ಏನೋ ಹೇಳಿ ಬಿಟ್ಟಾಂತ..."

'ಕೇಳಿದವ್ರು ಯಾರು? ಹೇಳಿ ಬಿಟ್ಟವ್ರು ಯಾರು?"

"ಒಂದು ನಾನು, ಮತ್ತೊಂದು...."

"ನಾನೂನ್ನು...."

'ಹೌದು...'

"ಅಲ್ಲಾಂತಂದವ್ರು ಯಾರು?"

"ಅವ್ರು ಇಲ್ಲಿಲ್ಲ...."

"ಇಲ್ವಾದ್ರೆ ಬೇಡ..."

"ಬೇಕೂಂದ್ರೆ ಬರ್ತಾರೇನು?"

'ಬಂದ್ರೂ ಸರಿಕೊಳ್ತಾರೇನು?'

"ಹಾಳಾಗಿ ಹೋಗ್ಲಿ, ನಮಗೇನಂತೆ?"

'ಬೇರೆಯವ್ರೂನ್ನು....'

"ಹೇಳೋ ಮಾತು ಹೇಳುವವರಿಗೂ ಕೇಳುವವರಿಗೂ ಬಿಟ್ಟು ಉಳಿದವ್ರಿಗೆ ಅಂತ ತಾನೇ ಧರ್ಮ!'

'ಹ್ಞಾಂ, ಅದೇ ನಮ್ಮಿಂದಿನ ಆಪದ್ಧರ್ಮ....'

"ಪುಣ್ಯಕ್ಕೆ, ಈ ಧರ್ಮ ಬ್ಲಾಕ್ ಆಗಿ ರೋದಿಲ್ಲ..."

'ಸರೀನ್ನು...."

"ಅಲ್ರಿ, ಈಗ ಒಂದು ಹೊಸ ಯೋಚನೆ ಹೊಳೆದಿದೆಯಂತೆ...."

"ಯಾರಿಗೆ?"

'ಸರಕಾರದ ಮಂತ್ರಿಗಳಿಗೆ...'

"ಯಾಕಂತೆ?'

"ಏರುತ್ತಿರುವ ಜನ ಸಂಖ್ಯೆಯನ್ನು ಇಳಿಸಲು, ದೇಶದ ಸಮಸ್ಯೆಗಳನ್ನು ತೊಡೆದೋಡಿಸಲು....'

'ಒಂದು ಯೋಚನೆಯನ್ನು ಕಾರ್ಯರೂಪಕ್ಕೆ ತರುವುದರಿಂದ ಹಲವಾರು ಸಮಸ್ಯೆಗಳು ಪರಿಹಾರವಾಗುವುದಾದರೆ ಯಾಕೆ ಆಗ ಬಾರದು?"

'ಆಗಬಹುದೂನ್ನಿ. ಆದರೆ....?"

'ಆದರೆ ಏನು?'

'ಯೋಜನೆಯು ಕಾರ್ಯಗತವಾಗುವ ಸಾಧ್ಯಾಸಾಧ್ಯತೆಯ ಬಗ್ಗೆ ವಿವೇಚನೆ ಬೇಡವೆ?'

'ಅಲ್ಲ, ಸದ್ಯ ಮಂತ್ರಿಗಳ ತಲೆಯಲ್ಲಿ ಹೊಳೆದು ಬಂದ ಯೋಚನೆ ಅಂದ ಮೇಲೆ ಅದು ಅನರ್ಥಕಾರಿಯಂತೂ ಆಗಿರಲಾರದು. ದೇಶದ ಸರ್ವ ಸಮಸ್ಯಾ ಸಂಜೀವಿನಿಯನ್ನು ಪ್ರಾಣಪಣವಿಟ್ಟಾದರೂ ಕಾರ್ಯಗತಗೊಳಿಸುವುದು ದೇಶೀಯರಾದ ನಮ್ಮ ಕರ್ತವ್ಯ, ಧರ್ಮ....'

'ಅದು ನಿಜಾನ್ನಿ. ಆದರೆ, ಎಂತಹ ಸಂಜೀವಿನಿಯಾದರೂ ಅದು ಸೇವ್ಯವಾಗಿರಬೇಕು ನೋಡಿ."

'ಅಯ್ಯೋ, ಏನಂತೀರಿ? ಹುಳಿ ಹುಪ್ಪಡಿಗಳಿಂದ ತುಂಬಿದ ಬೆಲ್ಲ, ಕೊಳೆತ ಗೇರು ಹಣ್ಣುಗಳ ಗಂಗಸರ ಸೇವಿಸುವವರು ಸಂಜೀವಿನಿಯನ್ನು ಸೇವಿಸದೆ ಹೋದರೆ?'

"ಗಂಗಸರದ ಸೇವನೆಯಿಂದ ಒಂದು ಬಗೆಯ ಅಲೌಕಿಕ ತೃಪ್ತಿ ಬರುತ್ತದಂತೆ; ತನ್ನ ತಾ ಮರೆತು ಬೀದಿಯಲ್ಲಿ ಹೊರಳಾಡುವುದರಲ್ಲೇ ಸ್ವರ್ಗ ಸುಖ ಸಿಗುತ್ತದಂತೆ. ಆದರೆ, ಇದು ಹೇಗಾದೀತು?"

'ಅದೆಲ್ಲಾ ಬಿಡು, ಸದ್ಯ ಅಂತಹ ಸಂಜೀವಿನಿ ಯಾವುದು? ಅದರ ಆವಿಷ್ಕರ್ತರು ಯಾರು? ಅದರ ಉದ್ದೇಶವೇನು? ಅದರ ಪ್ರಥಮ ಪ್ರಯೋಗಯೆಲ್ಲಿ ನಡೆಯಿತು? ಪರಿಣಾಮವೇನು? ಎಂಬಿತ್ಯಾದಿಗಳನ್ನು ಅರಿಸ ಬೇಕೆಂಬ ಕುತೂಹಲ ಇಮ್ಮಡಿಸುತ್ತಿದೆ. ದೇವಿ, ಕೃಪೆದೋರಿ ತಿಳಿಸುವಂಥವಳಾಗು...."

"ಎಲೈ ಬೆಸಗೊಳ್ಳುವ ಎನ್ನ ಪತಿದೇವನೆಂಬ ಪ್ರಾಣಿಯೇ...."

'ಏ, ಏನೇ ಇದು, ಪ್ರಾಣಿಯೆನ್ನುತ್ತೀಯ?"

"ಅಯ್ಯೋ, ಯಾಕ್ರಿ ಇಷ್ಟು ಸಿಟ್ಟು? ಈ ಸಂಜೀವಿನಿ ಪ್ರಯೋಗ ಮಾಡಿಸಿಕೊಂಡ ಮಾತ್ರಕ್ಕೆ ಮಾನವನೂ ಪ್ರಾಣಿಗಿಂತ ಕಡೆ...."

'ಅಯ್ಯೋ ದೇವರೆ, ಅಂತಹ ಮಹಾ ಯೋಜನೆಯೇನಪ್ಪಾ..."

"ಇಲ್ಲಿ ಕೇಳಿ, ಮೂರು ವರ್ಷ ಕಾಲ ದೇಶದಲ್ಲಿ ಶಿಶು ಜನನವನ್ನು ತಡೆ ಹಿಡಿದರೆ ಮತ್ತೆ ಮೂರು ವರ್ಷದಲ್ಲಿ ದೇಶದ ಸಮಸ್ಯೆಗಳೆಲ್ಲ ದೂರವಾಗುವುವು; ದೇಶದಲ್ಲಿ ರಾಮ ರಾಜ್ಯ ಸ್ಥಾಪನೆಯಾಗುವುದು...'

"ಭಲೆ, ಭಲೆ..ಭಾರಿ ಒಳ್ಳೆಯ ಆಲೋಚನೆ—ಯೋಚನೆ. ಅವಶ್ಯವಾಗಿ ಇದನ್ನು ಕಾರ್ಯಗತ ಮಾಡಿಕೊಳ್ಳಲೇ ಬೇಕು...'

"ಅದು ಸರಿ. ಆದರೆ, ಇದು ವ್ಯವಹಾರ್ಯವೇ ಅಂತ...."

'ಸದುದ್ದೇಶವನ್ನು ಅದು ಅವ್ಯವಹಾರ್ಯವೇ ಇರಲಿ, ವ್ಯವಹಾರ್ಯಗೊಳಿಸುವಲ್ಲಿಯೇ ನಮ್ಮ ವೀರ್ಯತೆ...."

'ಅದು ಸರೀನ್ನಿ. ಪಾಕಿಸ್ತಾನದ ಪದೇ ಪದೇ ನಡೆಯುವ ಆಕ್ರಮಣದಿಂದ ತಪ್ಪಿಸಲು ಕಾಶ್ಮೀರವನ್ನು ಕಿತ್ತು ಕೇರಳದತ್ತ ಇಡಲು ಸಾಧ್ಯವೇನು? ನೋಡಿ, ಮಹಮ್ಮದ ತೊಗ್ಲಕನ ಕಥೆಯಾದೀತು..."

'ದಿಲ್ಲಿಯ ರಾಜಧಾನಿಯನ್ನು ದೇವನೂರಿಗೆ ತಂದವನಲ್ಲವೆ?'

"ಹ್ಞಾಂ..."

"ಇರ್ಲಿ. ಸದ್ಯ ಈ ಸಂಜೀವಿನಿಯ ಸೇವನೆಯಲ್ಲಿ ಯಾವ ತೊಂದರೆಯಿದೆ?"

'ಅಲ್ರಿ, ಮೂರು ವರ್ಷಗಳ ಕಾಲ ಮಕ್ಕಳು ಹುಟ್ಟಬಾರದು ಎಂಬುದು ಲೈಂಗಿಕವಾಗಿಯಾದರೂ ಅವ್ಯವಹಾರ್ಯವಲ್ಲವೆ?"

"ಇರಬಹುದು. ದೇಶದ ಸಮಸ್ಯೆಗಳಿಗೆ ಉತ್ತರಿಸಲು ಜನತೆಯೂ ತುಸು ತ್ಯಾಗ ಮಾಡಬೇಕು."

'ಹ್ಞಾಂ....'

'ಸರಕಾರ ಈ ಬಗ್ಗೆ ಕಾನೂನು ಮಾಡಬೇಕು....'

'ಹೌದು ಹೌದು, ನಿಮ್ಮ ಸರಕಾರ ಎಲ್ಲವನ್ನೂ ಕಾನೂನುಗಳಿಂದ ಸಾಧಿಸುತ್ತೆ. ಆವಶ್ಯಕ ಪದಾರ್ಥಗಳ ಮೇಲೆ ನಿಯಂತ್ರಣ ಶಾಸನ ಹೇರಿ, ಬ್ಲಾಕ್ ಮಾರ್ಕೆಟ್ ಬೆಳೆಸುತ್ತಿದೆ; ಬ್ಲಾಕ್ ಮನಿ ... ತತ್ತು ಬ್ಲಾಕ್ ಬಂಡವಳವನ್ನು ... ತ್ತಿದೆ. ವಿವಾಹದ ಕಠಿಣ ಮದುವೆ ... ಸಿ ಅನೈತಿಕ ಲೈಂಗಿಕ ಸಂಬಂಧವನ್ನು ... ಳಸುತ್ತದೆ; ಗರ್ಭಪಾತವನ್ನು ಕಾನೂ... ಬದ್ಧಗೊಳಿಸಿ, ಲೈಂಗಿಕ ಸ್ವೈರ ಪ್ರವೃ... ಪ್ರೋತ್ಸಾಹ ಕೊಡುತ್ತದೆ; ನಿರಪ... ಸ್ತ್ರೀ ಪಾಶವಿಕ ಪುರುಷನಿಂದ ಪ್ರಾ... ಪ್ರಾಯಕ್ಕೆ ಗುರಿಯಾಗಲೂ ಬಹು... ಇನ್ನು ನಿಮ್ಮ ಈ ಸಂಜೀವಿನಿಯ... ಪ್ರಯೋಗಿಸಿದರೆ, ಮತ್ತೇನು? ಕ... ಮಾಸದ ನಾಯಿಗಳು—ಕಾಡಿನ ಕ... ಪ್ರಾಣಿಗಳು...."

"ಏ, ನೀನನ್ನುವುದು ಬರಿಯ ಕ... ಮಾತ್ರ. ಇವರಲ್ಲಿ ವಾಸ್ತವಿಕತೆಯಿದೆ... ದು ಹೇಗೆ ಗೊತ್ತು?"

"ಈಗ ನೋಡಿ, ಯಾವ ... ನಿರ್ಬಂಧವೂ ಇಲ್ಲದೆ ಲೈಂಗಿಕ ಸ... ಬಹಳ ಕ್ಲಿಷ್ಟವಾಗಿದೆ. ಇಂದು ಅನೈ... ವ್ಯವಹಾರ ದಿನದಿಂದ ದಿನ ಹೆಚ್ಚಿ... ಮಾಜ ಅಧಃಪತಿತವಾಗುತ್ತಿದೆ. ಹೆಚ್ಚು... ನಿಮ್ಮ ಆದರ್ಶ ಪಾನಪ್ರತಿಬಂಧವನ್ನೇ ... ಡಿ. ಕಾನೂನು ... ರ್ಣ ಅಸಫಲ... ಹುಜೀವಂತ ಹೆಂಡಂದಿರು ಇರಬಾರದು... ತ ಕಾನೂನು-ಉಪ ಪತ್ನಿಯರಿಗೇನು ... ರತೆಯಿದೆ? ನಮ್ಮ ಜನರು ಕಾನೂನಿನ... ಳ ಹೊಕ್ಕು ಅದರಿಂದ ಹೊರಬರುವ ... ಧಾನ ಹುಡುಕುವುದರಲ್ಲೇ ಬುದ್ಧಿ... ರು...."

'ಹ್ಞಾಂ...ಅದೂ ಹೌದು....'

'ನೋಡಿ, ಸರಕಾರದ ಕಣ್ಣು ತಪ್ಪಿ... ಕಪ್ಪು ಹಣ ಸಂಪಾದಿಸುವಲ್ಲೇ ತಮ್ಮ ... ರ್ಯ, ಕೀರ್ತಿಯಿದೆಯೆಂದು ನಂಬಿ ದ... ಯುತ್ತಿರುವ ಜನರಿರುವ ದೇಶದಲ್ಲಿ ... ವ ಕಾನೂನೂ ನಿಷ್ಪ್ರಯೋಜ... ದೇಶದ ಸಮಸ್ಯೆಗಳ ಬಗ್ಗೆ ಅನುಕ... ಲೇಶ ಮಾತ್ರವಿಲ್ಲದ ಜನರು ದೇಶೋದ್ಧಾ... ರಕ್ಕೆ ಏನು ನೆರವು ಮಾಡಿಯಾರು?"

'ಹ್ಞಾಂ...ಅಂದ್ರೆ ಸಂಜೀವಿನಿ ಪ್ರಯೋ... ಗ ಅಯಶಸ್ವಿಯಾಗುವುದು ಎಂದು ... ನೇ ನಿನ್ನ ಅಂಬೋಣ...'

"ಹ್ಞಾಂ...."

"ಹಾಗಾದರೆ ಇನ್ನೊಂದು ಸಂಜೀವಿ... ಪ್ರಯೋಗ ಮಾಡಬಹುದು— ಇದರಿ... ನಮ್ಮ ದೇಶದಲ್ಲಿ ಖಂಡಿತಕ್ಕೂ ಸಮಸ್ಯಾ ಪರಿಹಾರ....'

"ಯಾವುದದು?"

'ಒಂದು ವರ್ಷ ಕಾಲ ದೇಶದಲ್ಲಿ ... ಕಾರವನ್ನು ಶಿಕ್ಷಣ ಸಂಸ್ಥೆಗಳನ್ನು ಪೊ... ಲೀಸು, ಸೇನೆಗಳನ್ನು ಎಲ್ಲವನ್ನೂ ಅಮಾ... ನತ್ತುಗೊಳಿಸುವುದು"

'ಆಗ?'

"ಆಗ ಏನು, ಯಾರು ಏನು ಬೇಕಾ... ರೂ ಮಾಡಬಹುದು...."

"ಅಯ್ಯೋ, ಅದು ಅರಾಜಕತೆ...."

"ರಾಷ್ಟ್ರಪತಿಗಳು ಒಂದು ವರ್ಷ ... ಷಮ ಪರಿಸ್ಥಿತಿಯನ್ನು ಹಿಂತೆಗೆದುಕೊ... ಡು ಅರಾಜಕತೆಯನ್ನು ಸಾರಿ ಬಿಟ್ಟರೆ... ತೆಗೆದು ಕೋ, ಬ್ಲಾಕ್ ಮನಿ ಮಾರ್ಕೆಟ್ ಮಾ... ಯವಾಗುವುದು. ಜನಸಂಖ್ಯೆ ಕಡಿಮೆಯಾ... ದರೂ ಅರ್ಥಕ್ಕರ್ಥ ಕಡಿಮೆಯಾಗುವುದು. ನಮ್ಮ ಸಮಸ್ಯೆಗಳೆಲ್ಲ ಪರಿಹಾರವಾಗುವ...

(ಹದಿಮೂರನೇ ಪುಟ ನೋಡಿರಿ)

ಕರ್ನಾಟಕ ಸಂಘ, ಉಡುಪಿ

ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ। ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕ ದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,

ಪಾಲಂಕೋಟೆ, ಉಡುಪಿ, ದ. ಕ.

ನಾಟ್ಯ

ವಿವೇಚನೆ

ಸಮಾಜದ ಸಂಘಟನೆ ಸಮಯ ಸಂಜೀವಿನಿ

ಬರೆದವರು: ಶ್ರೀ ಶಿವಶಂಕರ

ನಮ್ಮ ದೇಶದ ಇತಿಹಾಸದ ಪುಟವತ್ತ ನಾವು ಸಿಂಹಾವಲೋಕನ ಗೈದಲ್ಲಿ ಒಂದು ವಿಷಯ ಸ್ಪಟಿಕದಂತೆ ಸ್ಪಷ್ಟವಾಗಿ ತಿಳಿದು ಬರುತ್ತದೆ. ನಾವೆಲ್ಲರೂ ಒಂದಾಗಿ ಒಕ್ಕಟ್ಟಿನಿಂದ ಧ್ಯೇಯಕ್ಕಾಗಿ ಶ್ರಮಿಸಿದಾಗಲೆಲ್ಲಾ ಗುರಿಯ ಉನ್ನತ ಶಿಖರವನ್ನು ತಲುಪಿರುವೆವು. ಆದರೆ ಅದೇ ನಾವು ನಮ್ಮೊಳಗನೇ ಕಚ್ಚಾಡಿ ಕೊಂಡಾಗಲೆಲ್ಲಾ ಪತನದ ಕೊನೆಯ ಪಡಿಯಲ್ಲಿ ಬಿದ್ದಿರುವೆವು.

ಭವ್ಯ ಭಾರತದ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಆಡಿರುವ ನುಡಿಮುತ್ತುಗಳಿವು. ಇದು ನೂರರಲ್ಲಿ ನೂರು ನಿಜ. ಕಾಲಾಚಾರ್ಯ, ಜಯಭಂಗ ಹಾಗೂ ಅಂಪಹನರು ಶಕರನ್ನು, ಮಹಮ್ಮದೀಯರನ್ನು ನಮ್ಮ ದೇಶದ ಮೇಲೆ ಆಕ್ರಮಣ ನಡೆಸಬೇಕೆಂದು ಕೇಳಿಕೊಂಡಾಗ ಮೊದಲು ಅವರು ಸಿದ್ಧರಿರಲಿಲ್ಲ. ಆದರೆ ಅದೇ ಶಕರು ಅಥವಾ ಮಹಮ್ಮದೀಯರು ಈ ದೇಶ ದ್ರೋಹಿಗಳತ್ತ ಆಶ್ವಾಸನೆಯ ಮೇಲೆ ದಂಡೆತ್ತಿಕೊಂಡು ಬಂದರು. ಭಾರತೀಯರೆಲ್ಲರೂ ಭಗವಾ ಬಾವುಟದಡಿಯಲ್ಲಿ ಒಂದಾಗಿ ಸೇರುವುದರಿಂದಲೇ ಪರಕೀಯರಿಗೆ ಆಕ್ರಮಣ ನಡೆಸಲು ಸಾಧ್ಯವಾಗಿಲ್ಲವೆಂದು ಅವರು ಭಾವಿಸಿಕೊಂಡಿದ್ದರು. ಜಯಚಂದನಂತಹವರು ಅದನ್ನು ಸುಳ್ಳಾಗಿಸಿದರು. ನಮ್ಮ ದೇಶದ ದಶ ದಿಕ್ಕುಗಳಿಂದಲೂ ಶಿಲ್ಪಿಗಳು ಒಂದಾಗಿ ಸೇರಿ ಸೋಮನಾಥ ದೇವಾಲಯವನ್ನು ಕಟ್ಟಿದರು. ಆದರೆ ಅದೇ ನಮ್ಮ ದೇಶದ ನಾಲ್ಕು ರಾಜರುಗಳು ಒಂದಾಗಿ ಸೇರದೆ ಇದ್ದ ಕಾರಣ ದೇವಾಲಯವನ್ನು ಆಕ್ರಮಣಗಾರರು ಧ್ವಂಸಗೊಳಿಸಿ ಬಿಟ್ಟರು. ಇಲ್ಲಿ ಒಂದು ವಿಷಯ ಸ್ಪಷ್ಟವಾಗುತ್ತದೆ. ಆ ಕಾಲದಲ್ಲಿ ಪ್ರಜೆಗಳಲ್ಲಿ ಒಕ್ಕಟ್ಟಿತ್ತು. ಕನ್ಯಾಕುಮಾರಿಯಿಂದ ಹಿಮಾಲಯದ ತುತ್ತ ತುದಿಗೂ ಪ್ರಜೆಗಳು ಹೋಗುತ್ತಿದ್ದರು. ನೇಪಾಳದ ದೇವಸ್ಥಾನದಲ್ಲಿ ಪೂಜೆ ನಡೆಸಬೇಕಾದರೆ ಕೇರಳದಿಂದ ಬ್ರಾಹ್ಮಣರು ಹೋಗಬೇಕು. ಕೇರಳದ ಕವಿ ಕಾಶ್ಮೀರ ರಾಜನ ಆಸ್ಥಾನದಲ್ಲಿ ಆಸ್ಥಾನ ಕವಿಯಾಗಿದ್ದ. ರಾಮೇಶ್ವರದಿಂದ ಪ್ರಯಾಗ ಅಥವಾ ಬದರಿನಾಥ, ಕೇದಾರನಾಥಕ್ಕೆ ಅಲ್ಲಿ ಹೋಗುವಾಗ ಹಾಗೆಯೇ ಕಾಶ್ಮೀರದಿಂದ ಕನ್ಯಾಕುಮಾರಿಗೆ ಬರುವಾಗ ದಾರಿಯಲ್ಲೋ, ಇನ್ನೆಲ್ಲೋ ಅವರನ್ನು ತಡೆದು ನೀನು ಮಲೆಯಾಳಿ ಮರಳಿ ಹೋಗು; ನೀನು ಹಿಂದಿ ಮಾತಾಡುವವ ಆದುದರಿಂದ ಹಿಂತಿರುಗಿ ಹೋಗು, ನೀನು ಕಾಶ್ಮೀರಿ ಇಲ್ಲಿಂದ ಕಾಶ್ಮೀಗೆ, ಬಂಗಾಲಿಗೆ ಬಂದ ದಾರಿಗೆ ಸುಂಕವಿಲ್ಲವೆಂದು ಯಾರೂ ಅನ್ನುತ್ತಿರಲಿಲ್ಲ. ಅದರ ಬದಲು ಅವರಿಗೆ ತಂಗಲು ಛತ್ರಗಳನ್ನು ಕಟ್ಟುತ್ತಿದ್ದರು. ಅವರಿಗೆ ಅದೆಲ್ಲೆಲ್ಲಾ ಸುಸ್ವಾಗತ ಸದಾ ಸಿದ್ಧವಾಗಿತ್ತು. ಈ ರೀತಿ ಮೂಲತಃ ದೇಶದಲ್ಲೆಲ್ಲಾ ಐಕ್ಯತೆ ಹಾಗೂ ಒಗ್ಗಟ್ಟು ಇದ್ದುದರಿಂದಲೇ ಉತ್ತಮೋತ್ತಮ ದೇವಸ್ಥಾನಗಳಿದ್ದು ಸಿಂಧುವು, ಕಾವ್ಯ ಹೊನಲು ಹೊನಲಾಗಿ ಹರಿಯಿತು. ಪರಕೀಯರಿಗೆ ಅವನ್ನು ನಾಶಮಾಡಲು ಸಾಧ್ಯವಾಯಿತೇ ವಿನಃ, ಆ ದಾಖಲೆಗಳನ್ನು ಮುರಿಯಲು ಸಾಧ್ಯವಾಗಲಿಲ್ಲ. ಮಾನಸಿಂಹರ ಅರಮನೆಯನ್ನು ತಾಜಮಹಾಲನ್ನಾಗಿ ರೂಪಾಂತರಿಸಲು ಸಾಧ್ಯವಾಯಿತೇ ವಿನಃ ಅಂತಹದೇ ಪ್ರತ್ಯೇಕ ತಾಜಮಹಾಲನ್ನು ಕಟ್ಟಲು ಅದ್ಯಾರಿಗೂ ಸಾಧ್ಯವಾಗಲಿಲ್ಲ. ಅಂದರೆ ಈ ದೇಶದ ಜನತೆ ಧಾರ್ಮಿಕ ದಾರಿಯಿಂದ ಪೋಷಿಸಲ್ಪಟ್ಟಿತ್ತು. ರಾಜಕೀಯ ದೃಷ್ಟಿಯಿಂದ ನೋಡಿದಲ್ಲಿ ಜಯಚಂದಾದಿಗಳನ್ನು ಕಾಣಬಹುದು. ಇಲ್ಲಿಯ ರಾಜರು ಹೊಡೆದಾಡಿಕೊಳ್ಳುತ್ತಿದ್ದುದನ್ನು ಕಾಣಬಹುದು. ಆ ಒಂದು ವಿಷಯದ ಮೇಲೆ, ಚೇರ- ಚೋಳ ರಾಜರು ತಲೆಗಳನ್ನು ಚೆಂಡಾಡಿಕೊಳ್ಳುತ್ತಿದ್ದರೆಂಬ ವಿಷಯದ ಮೇಲೆ, ಇಲ್ಲಿ ಒಗ್ಗಟ್ಟಿರಲಿಲ್ಲವೆನ್ನುವುದು ಸತ್ಯಕ್ಕೆ ದೂರವಾದ ಸಂಗತಿಯೇ ಇದೆ. ಪುಷ್ಪಮಿತ್ರಾದಿ ಮಹಾರಾಜರು ಅಶ್ವಮೇಧ, ರಾಜಸೂಯಯಾಗ— ಯಜ್ಞಾದಿಗಳನ್ನು ಮಾಡುತ್ತಿದ್ದರೆಂದರೆ ಅಖಿಲ ಭಾರತದ ಚಕ್ರಾಧಿಪತಿಯೊಬ್ಬನ ಛತ್ರದಡಿಯಲ್ಲಿ ವೈಭವ ಹಾಗೂ ಗೌರವದಿಂದಿತ್ತೆಂಬುದು ಸ್ಪಷ್ಟವಾಗುತ್ತದೆ. ಆ ದೃಷ್ಟಿಯಿಂದ ನೋಡುವಾಗ ರಾಜಕೀಯ ದೃಷ್ಟಿಯಿಂದಲೂ ಇಲ್ಲಿ ಒಗ್ಗಟ್ಟಿತ್ತೆನ್ನುವುದು ತಿಳಿದು ಬರುತ್ತದೆ. ಈ ಒಗ್ಗಟ್ಟಿನ ಭಯವೇ ಘೋರಿಯನ್ನು ಹೆದರಿಸಿದ್ದು, ಘಜನಿಯನ್ನು ಗಾಬರಿಗೊಳಿಸಿದ್ದು.

೧೮೫೭ರ ಸ್ವಾತಂತ್ರ್ಯ ಸಮರದಲ್ಲೂ ನಮ್ಮಲ್ಲಿ ಒಕ್ಕಟ್ಟು ಇರುವ ವರೆಗೂ ಭಾರತದ ಬಾನಿನಲ್ಲಿ ಭಗವಾ ಬಾವುಟ ಹಾರಾಡುತ್ತಿತ್ತು. ಆದರೆ ದುರಾದೃಷ್ಟವಶಾತ್ ನಮ್ಮಲ್ಲಿ ಬಿಕ್ಕಟ್ಟು ಬೀಡು ಬಿಟ್ಟದ್ದೇ ತಡ ಭಗವೆಯನ್ನು ಭರಭರನೆ ಕಿತ್ತೆಸೆದು ಯೂನಿಯನ್ ಜಾಕನ್ನು ನತದೃಷ್ಟ ಭಾರತೀಯನ ಮೇಲೇ ಹಾರಿಸಿದನು. ಆಗ ಈ ಒಕ್ಕಟ್ಟಿನ ಹೆಸರು ಎಲ್ಲಿಂದ ಪುಟಿದೆದ್ದಿತು? ಕೇವಲ ಧಾರ್ಮಿಕ ತಳಹದಿಯ ಮೇಲೆ ಐಕ್ಯತೆಯ ಮಹಾ ಮಂದಿರ ನಿರ್ಮಾಣವಾಯಿತೇ? ಬ್ರಿಟಿಷರು ಭಾರತೀಯರನ್ನು ಮತಾಂತರಿಸುತ್ತಿದ್ದುದು ನಿಜ, ಗೋವಧೆ ನಡೆಸುತ್ತಿದ್ದದ್ದು ನಿಜ, ಭಗವಾ ಧ್ವಜವನ್ನು ಬಿಸಾಡಿ ಬಿಟ್ಟದ್ದು ನಿಜ. ಹಾಗಿದ್ದು ಐಕ್ಯತೆಯ ಪ್ರಬಲ ಪ್ರವಾಹದಲ್ಲಿ ಆಂಗ್ಲೇಯರೇತಕ್ಕೆ ಅಲುಗಾಡಲಿಲ್ಲ? ಇಲ್ಲಿ ಬ್ರಿಟಿಷರ ರಾಜಕೀಯ ಫಲವಿತ್ತು. ಧಾರ್ಮಿಕ ನೌಕೆಗೆ ರಾಜಕೀಯದ ಗುಂಡು ಹೊಡೆದು ತೂತುಮಾಡಿ ಬ್ರಿಟಿಷರು ಮುಳುಗಿಸಿದರು. ಅವರು ಅಣ್ಣತಮ್ಮಂದಿರ ನಡುವೆ ಆಸನದ ಆಸೆ ತೋರಿಸಿ ಬಿಕ್ಕಟ್ಟಿನ ಬೀಜ ಬಿತ್ತಿದರು. ಬ್ರಿಟಿಷರು ಅಂದು ಗೆದ್ದರು. ಆದರೆ ಅನಂತರವಾದರೂ ಪುನಃ ಭಾರತೀಯರೇತಕ್ಕೆ ಬಿಕ್ಕಟ್ಟಿನ ಬೀಳನ್ನು ಕಿತ್ತೊಗೆದು ಐಕ್ಯತೆಯ ಪವಿತ್ರ ಜಲದಿಂದ ಪಾವನರಾಗಲಿಲ್ಲ? ಇಂಗ್ಲೀಷರು ಇಲ್ಲಿ ತಮ್ಮ ಆಟವನ್ನಾಡಿದರು. ಹಿಂದೂಗಳನ್ನು ಹೊಡೆದು ಹಿಂಸಿಸುವುದರೊಟ್ಟಿಗನೇ ಒಡೆದು ಬೇರ್ಪಡಿಸುವ ದಾರಿಯನ್ನೂ ಕಂಡು ಹಿಡಿದರು. ಭಾಷೆ, ಜಾತಿ, ಸಂಸ್ಕೃತಿ, ವೇಷ—ಭೂಷಣ, ಆಚಾರ—ಪದ್ಧತಿ, ಆಹಾರ—ವಿಹಾರ ಹೀಗೆ ಅದೆಲ್ಲಿಲ್ಲೂ ವಿವಿಧತೆ, ಭಿನ್ನತೆಯೇ ಭಾರತೀಯರಲ್ಲಿದ್ದು ಅವರು ಅಜ್ಞಾತ ಕೂಪದಲ್ಲಿರುವ ಮಂಡೂಕಗಳು. ಅವರು ಕಲ್ಲು—ಮರ, ಪಶು—ಪಕ್ಷಿ ಮಾತ್ರವಲ್ಲ ಜನನೇಂದ್ರಿಯಗಳನ್ನು ಪೂಜಿಸುವ ಒರಟು ಕಾಡು ಜನರು. ಅವರು ಅನಾಗರಿಗರು. ಹೀಗೆಲ್ಲಾ ಹೀಗಳೆದು, ಅವರನ್ನು ತಾವು ಸುಶಿಕ್ಷಿತ ನಾಗರಿಕರನ್ನಾಗಿಸಲು ಬಂದಿರುವ ದೇವದೂತರೆಂದು ಢಾಣಾಢಂಗುರ ಹೊಡೆದರು. ಅವರು ಭಾಷಾಬಡಿದಾಟವನ್ನು ಅಂತ್ಯಗೊಳಿಸಲು ಇಂಗ್ಲೀಷನ್ನು ಕಲಿಸಿದರು! ಜಾತಿ ಜಗಳವನ್ನು ನಿಲ್ಲಿಸಲು ಎಲ್ಲರನ್ನೂ ಕ್ರಿಸ್ತೀಯರಾಗಲು ಏರ್ಪಾಡುಮಾಡಿದರು! ವೇಷ-ಭೂಷಣದ ವಿವಿಧತೆಯನ್ನು ಕೊನೆಗೊಳಿಸಲಿಕ್ಕಾಗಿ ಎಲ್ಲರಿಗೂ ಪೇಂಟ್ ಹಾಕಲು ಕ್ರಾಪ್ ಮಾಡಿಸಲು ಹೇಳಿಕೊಟ್ಟರು! ಪೂಜಾ ಪದ್ಧತಿಯನ್ನು ಒಂದೇ ಗೊಳಿಸಲು ಎಲ್ಲರೂ ಇಗರ್ಜಿಗೆ ಬರಬೇಕೆಂದು ಹೇಳಿದರು! ಹೀಗೆ ಬ್ರಿಟಿಷರ "ಏಕತೆ'ಯ ರೋಡ್ ರೋಲರ್ ಭಾರತೀಯರ 'ಭಿನ್ನತೆ"ಯ ಮೇಲೆ ಹರಿಯಿತು. ಈ ರೋಡ್‌ರೋಲರಿನ ಅಡಿಗೆ ಬಿದ್ದ ಭಾರತೀಯರು ತಾವು ಧನ್ಯರಾದೆವೆಂದೇ ಭಾವಿಸಿಕೊಂಡರು. ಅವರು ಬಾಲಕಳೆದುಕೊಂಡ ನರಿಯ ಹಾಗೆ ಇತರರನ್ನು ತಾವಾಗಿಯೇ ಬಂದು ರೋಡ್ ರೋಲರಿನ ಅಡಿಗೆ ಬೀಳಲು ಕರೆದರು. ಹೀಗೆ ಬ್ರಿಟಿಷರ ರೋಡ್‌ರೋಲರ್ ಮುಂದರಿಯಿತು.

೧೯೪೭ರಲ್ಲಿ ನಡೆದದ್ದು ಅದೇ, ಭಾರತೀಯರು ಒಂದಾದುದರಿಂದ ಆಂಗ್ಲೇಯರನ್ನು ಅಟ್ಟಲು ಸಾಧ್ಯವಾಯಿತು. ಜನತೆ ತ್ರಿವರ್ಣದಡಿಯಲ್ಲಿ ಒಂದಾಯಿತು. ಆದರೆ ಅಲ್ಲೂ ನಮ್ಮ ಬಿಕ್ಕಟ್ಟಿನ ಬಲದಿಂದ ಕಾಳಸರ್ಪ ಭುಸ್ಸೆಂದು ಭುಸುಗುಟ್ಟುತ್ತ, ಹೆಡೆಯೆತ್ತಿ ಓಡೋಡಿ ಬಂತು. ಹಿಂಜರಿಯದೆ ಹಿಂದೂಗಳೂ ಒಂದಾಗಿ ನಿಂತಿದ್ದರಿಂದ ಆಂಗ್ಲೇಯರ ಆಸನ ಅಲುಗಾಡಿತು. ಅವರು ಮುಸ್ಲಿಮರನ್ನು ಮುಂದಕ್ಕೆ ಬಿಟ್ಟರು; ಹಿಂದೂಗಳನ್ನು ಹೀಗಳೆದರು. ಆದರೆ ದುರಾದೃಷ್ಟವಶಾತ್ ಅವರು ಹೀಗಳೆದುದನ್ನೇ ಹೊಗಳಿಕೆಯೆಂದು ಭ್ರಮಿಸಿ ಅವರೊಂದಿಗೆ [illegible]ಂಡು ಹಿಂದೂಗಳನ್ನೇ ಹೀಗಳೆಯಲಾರಂಭಿಸಿದರು. ಅವರು ವಾತ್ಸಲ್ಯಮಯಿ ಮಾತೆಯ ಪವಿತ್ರ ಮೊಲೆಹಾಲನ್ನು ರಕ್ತವೆಂದು ರಾದ್ಧಾಂತವೆಬ್ಬಿಸಿ ಪರದೇಶಗಳಿಂದ ಡಬ್ಬಿಯಲ್ಲಿ ಬಂದ ಬಿಳಿಹುಡಿಯೇ ಉತ್ತಮ ವೈಜ್ಞಾನಿಕ, ಪೋಷಕಾಂಶ ಇರುವ ಹಾಲೆಂದು ಹಾಡಿದರು. ಶ್ರೀಮತಿ ಇಂದಿರಾಜೀ ಅಂದಂತೆ ನಾವು ಪತನದ ಪ್ರಪಾತದಲ್ಲಿ ಬಿದ್ದೆವು. ಸದಾ ವಾತ್ಸಲ್ಯಮಯಿ ಮಾತೃಭೂಮಿಯ ವಿಭಜನೆಯ ಘಾತಕ ನಡೆದು ಹೋಯಿತು!

೧೮೫೭ರಿಂದ ೧೯೪೭ರ ಹೊತ್ತಿಗೆ ಬರುವಾಗ ಬ್ರಿಟಿಷ್ ಮಾದರಿಯ ಒಕ್ಕಟ್ಟಿನ ರೋಡ್ ರೋಲರ್ ಬಹಳ ಮುಂದರಿದಿತ್ತು. ಭಾಷಾವಾರು ಪ್ರಾಂತ್ಯ (ರಾಜ್ಯ) ರಚನೆಗೆ ಅಖಿಲ ಭಾರತ ಪಕ್ಷಗಳ ಪಕ್ಷವೆನಿಸಿಕೊಳ್ಳುತ್ತಿದ್ದ ಕಾಂಗ್ರೆಸ್ಸೇ ಸ್ವತಃ ಜೋಗುಳ ಹಾಡಿ ಬಿಟ್ಟಿತ್ತು. ಅಂದರೆ ಭಾಷಾಭೇದ ಆದಾಗಲೇ ಬಲಿತು ಪಾಕಿಸ್ತಾನದ ರೀತಿಯಲ್ಲಿ ಭಾಷಾವಾರು ರಾಜ್ಯ ನಿರ್ಮಾಣದ ನಿಲುವಿಗೆ ನಾವು ಬಂದಿದ್ದೆವು! ಬ್ರಿಟಿಷರನ್ನು ಕಳುಹಿಸಿಬಿಟ್ಟ ಮೇಲಂತೂ ಅದೇ ದಾರಿಯಲ್ಲಿ ನಾವು ತೀವ್ರಗತಿಯಲ್ಲಿ ಮುಂದರಿದೆವು. ಬ್ರಾಹ್ಮಣರ ಜುಟ್ಟನ್ನು ಕತ್ತರಿಸಿ, ಅವರ ಹಣೆಯ ಮೇಲಿನ ನಾಮವನ್ನು ನೆಕ್ಕುವ ನಾಯಿ ಸಮಾನ ಪ್ರಗತಿಶೀಲರು ಎದ್ದು ನಿಂತರು. ನಿಶ್ಶೇತರರನ್ನು ಸಿಗಿದೇ ಬಿಡುತ್ತೇವೆಂದು ಸಿಡಿದವರು ಕೆಲವರು. ನಾ[illegible]ಗೆ ಇತರರನ್ನು ಬರಗೊಡದ ನಾಗಗಳೇ ನಾವೆಂದು ಅಲ್ಲಿಯ ಕ್ರಿಸ್ತೀಯರು ಕಿರುಚಿದರು. ಹೌದು. ಇಂದಿರಾಜಿ ಅಂದಂತೆ ನಾವು ಪತನ ಪಥದಲ್ಲಿ ಕರವೇಗದಲ್ಲಿ ಪ್ರಗತಿ ಹೊಂದಿದೆವು. ನಮ್ಮ ಪತನ ನಿಶ್ಚಯವೆಂದು ಕೆಲವರು ಹೇಳಿದರು.

ಆಗ ಚೈನಾದ ಕಮ್ಯೂನಿಸ್ಟರೂ, ಪಾ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪರಿಚಯ

ಸಂಗೀತ ಸಾಮ್ರಾಟ ತ್ಯಾಗರಾಜರು

ಲೇಖಕರು: ಶ್ರೀ ಎಚ್. ಎಂ. ನಾರಾಯಣ ಭಟ್.

ಕರ್ನಾಟಕ ಸಂಗೀತದ ಕೀರ್ತಿಧ್ವಜವನ್ನು ಯುಕ್ತರಾಷ್ಟ್ರ ಸಂಘದ ಮೇಲೂ ಹಾರಿಸಲು ಸಾಧ್ಯವಾಗಿರುವ ಕಾಲವಿದು. ಗಾನಕೋಗಿಲೆ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯ ಮಧುರಭಕ್ತಿ ಕೀರ್ತನಾಲಾಪವನ್ನು ಕೇಳಿ ತಲೆದೂಗಿದವರು ಶ್ರೀ ತ್ಯಾಗರಾಜರ "ಕ್ಷೀರ ಸಾಗರ ಶಯನ...." ಮುಂತಾದ ಪ್ರಸಿದ್ಧ ಗಾನಗಳ ಆಲಾಪನಾ ಪ್ರವಾಹದಲ್ಲಿ ಮುಳುಗಿದರೆ ಆಶ್ಚರ್ಯವಿಲ್ಲ. ಹಾಗೆ ಕರ್ನಾಟಕ ಸಂಗೀತದ ಅಪ್ರಮೇಯ ಶಕ್ತಿಯೂ ಆತ್ಮಸಾಕ್ಷಾತ್ಕಾರ ಕ್ಷಮತೆಯೂ ಎಷ್ಟು ಹಿರಿಯ ಮಟ್ಟದ್ದೆಂದು ಪ್ರದರ್ಶಿಸಿದ ತ್ಯಾಗರಾಜರ ಇನ್ನೂರನೇ ಜನ್ಮದಿನವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ರಾಷ್ಟ್ರವ್ಯಾದ್ಯಂತ ಆಚರಿಸಲಾಯಿತು.

ಭಕ್ತ ಕುಟುಂಬ

ಆ ಸಂಗೀತ ಸಾಮ್ರಾಟನ ಜೀವನ ಹೇಗಿತ್ತು? ದಕ್ಷಿಣ ಭಾರತದಲ್ಲಿ ಸಂಗೀತದ ಜನ್ಮಭೂಮಿಯೆಂದೇ ಪರಿಗಣಿಸಲ್ಪಡುವ ತಂಜಾವೂರು ಜಿಲ್ಲೆಯ ತಿರುವಾರೂರಿನಲ್ಲಿ ೪-೫-೧೭೬೭ರಂದು ತ್ಯಾಗರಾಜರು ಜನಿಸಿದರು. ತಂದೆ ರಾಮಬ್ರಹ್ಮರು ರಾಮಾಯಣ ಪಾರಾಯಣದಲ್ಲಿ ಪ್ರಸಿದ್ಧಿ ಪಡೆದಿದ್ದರು. ಕಾವೇರಿ ನದೀ ತೀರದ ತಿರುವೆಯ್ಯಾರ್ ಎಂಬಲ್ಲಿ ಒಂದು ಮನೆ ಮತ್ತು ಪಶುಪತಿ ಕೋವಿಲ್‌ನಲ್ಲಿ ಸ್ವಲ್ಪ ಸ್ಥಳವನ್ನು ತಂಜಾವೂರು ಮಹಾರಾಜರು ರಾಮಬ್ರಹ್ಮನಿಗೆ ದಾನ ವಿತ್ತಿದ್ದು ಆ ಭಕ್ತ ಕುಟುಂಬವು ಅಲ್ಲಿ ವಾಸ ಮಾಡಿತು. ಅಲ್ಲಿಂದ ತಂಜಾವೂರಿಗೆ ೭ ಮೈಲಿ ಮಾತ್ರ. ತಂಜಾವೂರಿನ ಸಂಗೀತ—ಸಾಹಿತ್ಯಗಳ ಮತ್ತು ಮತ—ವಿಜ್ಞಾನಗಳ ಮಂದಾನಿಲವನ್ನು ಸೇವಿಸುತ್ತ ತ್ಯಾಗರಾಜರು ಬೆಳೆದಿದ್ದರು.

ಸಂಗೀತ ಗುರು

ಸೊಂಠಿ ವೆಂಕಟರಮಣಯ್ಯ ಎಂಬವರು ತ್ಯಾಗರಾಜರ ಪ್ರಥಮ ಸಂಗೀತ ಗುರುವಾಗಿದ್ದರು. ತನ್ನ ಶಿಷ್ಯನ ಸಂಗೀತ ಸ್ಫೂರ್ತಿ ಮತ್ತಷ್ಟು ಬೆಳೆಯುವಂತೆ ಪ್ರೋತ್ಸಾಹಿಸಲು ಆ ಗುರುವಿಗೆ ಸಾಧ್ಯವಾಯಿತು. ಭಕ್ತಿಪೂರಿತ ಕೀರ್ತನೆಗಳನ್ನು ಸ್ವತಹಾ ರಚಿಸಲು ತ್ಯಾಗರಾಜರಿಗೇ ಸಾಧ್ಯವಾಗಿತ್ತು. ಈ ಮಧ್ಯೆ ರಾಮಕೃಷ್ಣಯತೀಂದ್ರರಿಂದ ತಾರಕ ಮಹಾ ಮಂತ್ರವನ್ನೂ ಕಲಿಯಲು ಸಾಧ್ಯವಾಯಿತು.

ಹಣ ಬೇಡ

ತನ್ನ ಅನುಗ್ರಹಸಿದ್ಧಿಗಳು ಧನಾರ್ಜನಾ ವಿಧಾನಗಳಾಗಲು ತ್ಯಾಗರಾಜರಿಗೆ ಉದ್ದೇಶವಿರಲಿಲ್ಲ. ಹೀಗಾಗಿ ತನ್ನ ಅಣ್ಣನೊಂದಿಗೇ ವಿರಸವಾಯಿತು. ತಾವು ವಿವಾಹವಾಗಿದ್ದ ಪತ್ನಿಯನ್ನೂ ಕುಟುಂಬವನ್ನೂ ಬಿಟ್ಟು ತ್ಯಾಗರಾಜರು ಸಂಗೀತೋಪಾಸನೆಯ ಹೊಸ ಯುಗವನ್ನೇ ಪ್ರವೇಶಿಸಿದರು.

ತ್ಯಾಗರಾಜರ ಆರಾಧನಾ ಮೂರ್ತಿ ಶ್ರೀರಾಮನಾಗಿದ್ದನು. ಒಮ್ಮೆ ಯಾರೋ ತ್ಯಾಗರಾಜರ ಪೂಜಾ ವಿಗ್ರಹವನ್ನೇ ನದಿಗೆ ಎಸೆದಿದ್ದರು. ಆದರೂ ಅತಿ ಅದ್ಭುತಕರ ವಿಧಾನದಲ್ಲಿ ಅದು ತ್ಯಾಗರಾಜರನ್ನೇ ಮರಳಿ ಸೇರಿತು. ಹಾಗೆ ಪೂಜಾ ವಿಗ್ರಹ ಕಾಣೆಯಾಗಿದ್ದಾಗ ಹೃದಯ ವೇದನೆ—ವಿಕಾರದಿಂದ ವಿರಚಿಸಿದ ಕೃತಿಗಳೇ ಇಂದು ಪರಮೋತ್ಕೃಷ್ಟ ಕೃತಿಗಳಾಗಿ ಪರಿಗಣಿಸಲ್ಪಡುವುದು!

ಒಂದು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ತ್ಯಾಗರಾಜರು ವಿರಚಿಸಿದ್ದರೂ ಸುಮಾರು ೮೦೦ ಕೀರ್ತನೆಗಳು ಮಾತ್ರವೇ ಈ ತನಕ ಸಂಗ್ರಹಿಸಲ್ಪಟ್ಟಿವೆ.

ತೋಡಿ, ಶಂಕರಾಭರಣ, ಕಾಂಬೋಧಿ ಮುಂತಾದ ಕೆಲವು ರಾಗಗಳ ಆವಿಷ್ಕರಣದಲ್ಲಿ ತ್ಯಾಗರಾಜರು ಅದ್ವಿತೀಯರೆನ್ನಲಾಗಿದೆ.

ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿನ ಅಪಾರ ಪಾಂಡಿತ್ಯದಿಂದಾಗಿ ತ್ಯಾಗರಾಜರ ಕೃತಿಗಳಿಗೆ ನವಚೈತನ್ಯ ಮೂಡಿತು.

"ಪ್ರಹ್ಲಾದ ಭಕ್ತಿ ವಿಜಯಂ", "ನೌಕ ಚರಿತ್ರಂ" ಎಂಬೀ ಕೃತಿಗಳಲ್ಲಿ ತ್ಯಾಗರಾಜರ ಕವಿತಾ ಚಮತ್ಕಾರ ಪ್ರಕಟವಾಗಿದೆ.

ತ್ಯಾಗರಾಜರು ಶಿಷ್ಯರೊಂದಿಗೆ ತಮಿಳುನಾಡಿನ ಪ್ರಧಾನ ಕ್ಷೇತ್ರಗಳೆಲ್ಲವನ್ನೂ ಸಂದರ್ಶಿಸಿದ್ದರೂ ಎಲ್ಲಾ ಕ್ಷೇತ್ರಗಳಲ್ಲಿಯೂ ಭಕ್ತಿಪೂರ್ವಕ ಕೀರ್ತನೆಗಳನ್ನು ಹಾಡಿದ್ದರು.

ಮುತ್ತುಸ್ವಾಮಿ ದೀಕ್ಷಿತರೂ ಶ್ಯಾಮಶಾಸ್ತ್ರಿಯೂ ತ್ಯಾಗರಾಜರ ಸಮಕಾಲೀನರಾಗಿದ್ದು ತ್ಯಾಗರಾಜರ ಸಾಧನೆಗಳನ್ನು ಕೊಂಡಾಡಿರುವರು.

ತೀರ್ಥಾಟನಾ ಕೇಂದ್ರ

ಸುಮಾರು ೮೦ ವಯಸ್ಸಿನ ತನಕವೂ ತ್ಯಾಗರಾಜರು ಜೀವಿಸಿದ್ದರು. ಕೊನೆಗೆ ಆರಾಧನಾ ಮೂರ್ತಿಯಾಗಿದ್ದ ಶ್ರೀ ರಾಮನ ದಿವ್ಯ ದರ್ಶನ ಲಭಿಸಿ ೬-೧-೧೮೪೭ರಂದು ನಿತ್ಯ ಸಮಾಧಿಯನ್ನೈದಿದರು. ತಿರುವೈಯಾರಿನಲ್ಲಿ ತ್ಯಾಗರಾಜರ ಭೌತಿಕಾವಶೇಷ ಸಂಸ್ಕರಿಸಲ್ಪಟ್ಟಿತು. ಸಂಗೀತ ವಿದ್ವನ್ಮಣಿಗಳ ಹಾಗೂ ಸಂಗೀತ ಪ್ರೇಮಿಗಳ ತೀರ್ಥಾಟನ ಕೇಂದ್ರವಾಗಿ ತ್ಯಾಗರಾಜ ಸಮಾಧಿಯು ಎಂದೆಂದಿಗೂ ಮೆರೆಯುತ್ತಿರುವುದು.

ತ್ಯಾಗರಾಜರಿಗೆ ಆದರಾಂಜಲಿಗಳನ್ನು ಅರ್ಪಿಸಲು "ಆಕಾಶವಾಣಿ"ಯೂ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿತು.

ವಿನೋದ ವೀಚಿ

ಭಳಿರೇ, ಮಾತಿನ ಮಲ್ಲಿ

೧

ಬರೆದವರು: ಶ್ರೀ ಮ. ಗೋ. ರಾವ್.

"ಓ ಎನ್ನ ಚೆಂಗಲಾಬಿ"

"........"

ಏನೇ ಇದು. ಮೌನವ್ರತ ಧಾರಣೆಮಾಡಿದಂತಿದೆಯಲ್ಲಾ?

'......'

'ಸಿಟ್ಯಾಕೆ ಸಿಡುಕ್ಯಾಕೆ ಎಲೆ ಚಿನ್ನವ್ವಾ'

"ಹ್ಞ! ಸಾಕೊಂದ್ರೆ ನಿಮ್ಮ...."

'ನನ್ನ!!'

"ನಿಮ್ಮ .... ಕವಿತಾ ಲಹರಿ ಸಾಕೊಂತ....'

"ಓಹೋ. ನೀನು ತಪ್ಪು ತಿಳಿದೆ. ಅದು ನನ್ನದಲ್ಲ ಚಿನ್ನ. ಯಾರೋ ಹಿಂದೆ ಬರೆದುದನ್ನು ನಾನಂದುದು ಅಷ್ಟೆ'

"ಆದಿರ್ಲಿ....ರೀ ... ಮದರಾಸಿನಲ್ಲಿ ಅಕ್ಕಿ...."

'ಹೌದಾದು. ಅವರೆಲ್ಲ ಅಕ್ಕಿಯನ್ನು ಹೆಕ್ಕಿ ಹೆಕ್ಕಿ, ಸೊಕ್ಕಿಹೋಗಿದ್ದಾರೆ"

'ನಿಮ್ಮದೆಲ್ಲಾ ಹೀಗೇ.... ಯಾವಾಗ್ಲೂ ಕೊಂಕೇ ಮಾತನಾಡುವುದು'

'ಕೊಂಕು.... ಹ್ಹ ಹ್ಹ ಹ್ಹ... ಜಗತ್ತಿಗೆ ಮಂಕುಬೂದಿ ಎರಚಿದ್ದಾನೆ ಆ ಮುಕ್ಕಣ್ಣ, ಅಂತಿರುವಾಗ ನನ್ನದೇನು ಮಹಾ !!...'

"ಅಯ್ಯೋ...."

"ಏನೇ ಇದು ಅಪಶಕುನ"

"ನಾ ಹೇಳೋದು ಸ್ವಲ್ಪ....ಕೇಳಿ..... ಮತ್ತೆ....'

"Oh! I see. ನೀನು ಹೇಳುವುದನ್ನು ಪೂರ್ಣ ಕೇಳಬೇಕೆಂಬ ಕುತೂಹಲದಲ್ಲಿದ್ದೇನೆ ಬೇಗ ಹೂಂ'

'ಮದರಾಸಿನ ಕತೆ..."

'ಹಾಂ. ನಿಲ್ಲಿಸು. ಅದರಿಂದ ವ್ಯಥೆ ಬರುವ ಅಂಶವಿದ್ದರೆ ಮಾತ್ರ ಅದನ್ನು ಬಿಟ್ಟು ಬಿಡು ಧೀರೆ'

"ಅದ್ಯಾಕೆ ಯಕ್ಷಗಾನ ರೀತಿಯ ಅರ್ಥ ವೈಖರಿ ಪ್ರಾರಂಭಿಸಿದಂತಿದೆಯಲ್ಲಾ'

'ಹಾಗೇನಲ್ಲ..."

"ಹಾಗೆಲ್ಲಾಂದ್ರೆ ಮತ್ತೆ ನಾನು ತುಂಬ ರೇಗಿ..."

"ಓಹೋ ಸರಿ....ಸರಿ....ಮತ್ತೆ ನೀನು ತುಂಬ ರೇಗಿ, ರೇಗಿ ಹಣ್ಣಾಗಿ ಬಸವಳಿದು ಬೆಂಡಾಗಿ ನನ್ನ ಬಳಿಗೆ ಬಂದು ಮರುಗುವಿಯೋ"

'ಯಾ....ಕೆ... ಮರುಗಬೇಕು. ಈಗಿನ ಕಾಲ 'ಸ್ತ್ರೀ ಆಡಳಿತ'ದ ಕಾಲ. ಸ್ತ್ರೀಯರಿಗೆ ಪ್ರಧಾನ ಪಾತ್ರ ಎಲ್ಲದರಲ್ಲೂ ಕೊಡಬೇಕಾದುದು"

'ಗಂಡಸಾದವನ ಕರ್ತವ್ಯವೆನ್ನುವುದೇನು?"

'ಸರಿ...ಸರಿ ಚೆನ್ನಾಗಿ ನುಡಿದಿರಿ. ಗಂಡಸಾದವ್ರು ಹೆಂಗಸರ ಬೇಡಿಕೆ........"

'Shut up.....ಸಾರ್.....ಮುಚ್ಚು ಬಾಯಿ. ಸ್ತ್ರೀ ರಾಜ್ಯಭಾರವೆಂದೊಡನೆ ಸ್ತ್ರೀಯರಿಗೆ ಪ್ರಾಧಾನ್ಯತೆ ಕೊಡಬೇಕೆಂದು ಹೇಳುವುದು ಅರ್ಥವಿಲ್ಲದ ಮಾತು. ಇಂದಿರಮ್ಮ ಪ್ರಧಾನಿಯಾದರೆ ಅದು ಸ್ತ್ರೀಯರಿಗೆ ಸಮಾನ ಹಕ್ಕು ಇದೆ ಎಂಬುದನ್ನು ಪ್ರತಿಪಾದಿಸುತ್ತದೆ. ಆದರೆ ಸ್ತ್ರೀಗೆ ಬಾಗಿ ನಡೆಯಬೇಕು. ಎಂದೆಲ್ಲಿಯೂ ಬರೆದಿಲ್ಲ. ಸ್ತ್ರೀಯರ ಪ್ರಧಾನ ಕಸುಬು ಪತಿಯೇ ಪರದೈವವೆಂದು ತಿಳಿದು ಆತನ ಪಾದ ಸೇವೆಯೇ ಪರಮ ಪಾವನ ಎಂದು ತಿಳಿದು ಕರ್ತವ್ಯಮುಖಳಾಗುವುದು.'

"ದೊಡ್ಡ ಪುರಾಣ ವಾಚನವೇ ಮಾಡಿಬಿಟ್ಟಿರಿ....ಆದರೆ.... ಹಕ್ಕು ..."

"ಹುಂ. ಹಕ್ಕು ಇದೆ, ಹಕ್ಕು ಇದೆ ಎಂದು ಹೇಳಿ ಸಿಕ್ಕ ಸಿಕ್ಕವರ ಕೂಡೆ ಸ್ಪರ್ಧೆ ತರ್ಕ ಮಾಡಿ ತುಕ್ಕು ಹಿಡಿದ ಕಬ್ಬಿಣದಂತಾಗಬೇಕಷ್ಟೆ"

'ಹಕ್ಕಿನ ದುರುಪಯೋಗ ಪಡಿಸಬಾರದೆಂದು ನನಗೂ ಗೊತ್ತು ಸ್ವಾಮಿ...'

"ಭಲೆ !! .... ಹಕ್ಕಿನ ಪ್ರಶ್ನೆಯ ಹಿಂದೆಯೇ "ಸ್ವಾಮಿಗಳೂ' ಬಂದರೋ?'

"ಹಾಗಲ್ಲ. ಮಾತುಮಾತಿಗೆ ಹೇಳಿದೆ ಅಷ್ಟೆ'

"ಮಾತು ಮಾತಿಗೆ ವೈರ. ನೀತಿ ಮಾರ್ಗಕೆ ಧೈರ...."

"ಅದನ್ನು ಮೊದಲೇ ನಿಮ್ಮಿಂದ ತಿಳಿದಿದ್ದೇನೆ ನಾಥಾ'

"ನೋಡು. ಇದು ಆಧುನಿಕ ಯುಗ' ಕಲ್ಚರ್‍ದ್ದು ವೇಶನು, ಹಿಂದಿನ ಪೊಳ್ಳು ಸಂಪ್ರದಾಯಗಳೆಲ್ಲ ಮಾಸಿಹೋಗಿವೆ. ಎಲ್ಲೆಲ್ಲೂ ಲೇಟೆಸ್ಟು ಮೊಡೆಲು, ಲೇಟೆಸ್ಟು ಪೇಶನು, ಲೇಟೆಸ್ಟು ಕಲ್ಚರು."

"ನಿಮ್ಮ ಮಾತೂ ಲೇಟೆಸ್ಟೇ"

"ಆದಿರ್ಲಿ ಈಗ ಧೈರ್ಯಂ ಸರ್ವತ್ರ ಸಾಧನಂ..."

"ಹಾಂ! ಅದೇ ನಾನು ಹೇಳ್ತಿರೋದು. ಎಲ್ಲಾ ಕಡೆಯಲ್ಲೂ ಗಗನಕ್ಕೇರುತಿದೆ ವ

(ಹನ್ನೊಂದನೇ ಪುಟ ನೋಡಿ)

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಸಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ನೆದರ್‌ಲ್ಯಾಂಡಿನಲ್ಲಿ

ಹೆತ್ತವರ ಅನುಮತಿಯಿಲ್ಲದೆ ಮದುವೆಯಿಲ್ಲ!

ಸಾಧಾರಣವಾಗಿ ಪ್ರಾಯ ಬಂದ ಹುಡುಗನನ್ನು ದೇವಸ್ಥಾನಕ್ಕೆ ಬಿಟ್ಟ ಗೂಳಿಯೆಂದು ವ್ಯವಹರಿಸುವುದುಂಟು. ಅದೇ ಮೀಸೆ ಮೊಳೆಯುತ್ತಿರುವ ಅವನಿಗೆ ನೋಡುವ ಕಡೆಯೆಲ್ಲಾ ನಾವೀನ್ಯತೆ ಕಂಡು ಬರುತ್ತದೆ, ಸನಾತನವೆಲ್ಲದರೊಂದಿಗೂ ಸಂಘರ್ಷಿಸುವ ಹಂಬಲ ಹುಟ್ಟಿಕೊಳ್ಳುತ್ತದೆ. ಮೀಸೆ ಬಂದವನು ದೇಶಕಾಣದೆಂ ಗುಸ್ಸೆ ಅಪ್ಪನಲ್ಲದೆ ಗಾದೆ ಹುಟ್ಟೀತೇ? ವಿಶ್ವದ ಯಾವುದೇ ಮೂಲೆಗಳಲ್ಲಿ ನೋಡಿದರೂ, ಯುವ ಜನರ ಲಕ್ಷಣ ಹೀಗೆಯೇ!

ನೆದರ್‌ಲೇಂಡ್ಸಿನ ಯುವ ಜನರು ಈ ನಿಯಮಗಳಿಗೆ ಹೊರತಾದವರೇನಲ್ಲ. ನೆದರ್‌ಲೇಂಡ್ಸಿನ ಒಟ್ಟು ಹನ್ನೆರಡೂವರೆ ಮಿಲಿಯ ಜನ ಸಂಖ್ಯೆಯಲ್ಲಿ ೧೫ರಿಂದ ೧೯ ವರ್ಷಗಳೊಳಗಿನ ಯುವ ಜನರು ಶೇಕಡಾ ಎಂಟು ಭಾಗದಷ್ಟಿದ್ದಾರೆ. ಗಂಡುಗಳ ಒಟ್ಟು ಸಂಖ್ಯೆಯಲ್ಲಿ ಸೇಕಡಾ ಆರರಂತೆಯೂ ಹೆಣ್ಣುಗಳಲ್ಲಿ ಸೇಕಡಾ ಐದರಂತೆಯೂ ಒಂದಿಲ್ಲೊಂದು ಯುವಕ ಸಂಘಗಳ ಸದಸ್ಯರಾಗಿದ್ದಾರೆ. ಅಂತಹ ಸಂಘಗಳಿಗೆ ಸದಸ್ಯರಾಗಲು ಹತ್ತೊಂಬತ್ತು ವರ್ಷಗಳ ಮಿತಿಯನ್ನು ದಾಟಬೇಕೆಂದು ವಿಧಿಸಲಾಗಿದ್ದರೂ ಅವರೆಲ್ಲರೂ ಸಂಘದ ಚಟುವಟಿಕೆಗಳಲ್ಲಿ ಭಾಗಿಗಳಾಗಿದ್ದಾರೆ.

ಸಂಘಗಳಲ್ಲಿ ಕ್ರೀಡೆಗಳಿಗೆ ಪ್ರಾಶಸ್ತ್ಯ ನೀಡುವವುಗಳಿಗೆ ಹಾಲೆಂಡ್ ದೇಶದ ಯುವಕರು ವಿಶೇಷ ಪುರಸ್ಕಾರ ನೀಡಿದ್ದಾರೆ. ಹೊರಾವರಣ ಕ್ರೀಡೆಗಳಲ್ಲಿಯೂ ಅವರಿಗೆ ಕಾಲ್ಚೆಂಡೆಂದರೆ ಜೀವ. ವ್ಯಾಯಾಮ ಶಾಲೆಗಳ ಮೇಲೂ ಅವರಿಗೆ ವಿಪರೀತ ಮೋಹ! ದೇಶದ ವ್ಯಾಯಾಮ ಶಾಲೆಗಳೆಲ್ಲದರ ಒಟ್ಟು ಸದಸ್ಯ ಸಂಖ್ಯೆಯಾದ ೩೪೦,೦೦೦ದಲ್ಲಿ ೨,೭೭,೮೦೦ ಮಂದಿ ಎಳೆಯರೇ! ಜನಪ್ರಿಯ ಕ್ರೀಡೆಗಳಲ್ಲಿ ಮೂರನೆಯ ಸ್ಥಾನ ಈಜುವಿಕೆಗೆನ್ನಬಹುದು. ಒಟ್ಟು ಈಜುಗಾರ ಸದಸ್ಯರ ಸಂಖ್ಯೆಯಾದ ೫೬,೧೦೦ರಲ್ಲಿ ೭೦,೭೦೦ ಸದಸ್ಯರು ಅಲ್ಲಿ ವಯಸ್ಕರೇ ಆಗಿದ್ದಾರೆ.

ಈ ವಯಸ್ಸಿನವರಿಗೆ ಶಾಲೆಗಳಲ್ಲಿರುವ ಸಂಘಗಳೂ ತುಂಬಾ ಪ್ರೀತ್ಯಾಸ್ಪದ ವಿಷಯಗಳೆನಿಸಿವೆ. ಸಾಹಿತ್ಯ, ಸಂಗೀತ, ಕ್ರೀಡೆ ಮುಂತಾದವುಗಳಿಗೆ ಸಂಬಂಧಿಸಿದ ಸಂಘಗಳು ಶಾಲೆಗಳಲ್ಲಿದ್ದು ಅವು ಸ್ಥಳೀಯ, ಅಂತರ್ದೇಶೀಯ ಅಂತರಾಷ್ಟ್ರೀಯ ಚರ್ಚಾಕೂಟ, ಸ್ಪರ್ಧೆಗಳು ಮುಂತಾದವನ್ನು ನಡೆಸುತ್ತಿರುತ್ತವೆ. ಇಂತಹವೇ ಅವು ಅಷ್ಟೊಂದು ಜನಪ್ರಿಯತೆಗಳಿಸಿವೆ.

ಡಚ್ ಸಂಘಗಳ ಬಗ್ಗೆ ತಿಳಿಯುವ ಮುನ್ನ ಡಚ್ಚರ ಪೂರ್ವೇತಿಹಾಸವನ್ನು ಸ್ವಲ್ಪ ಅರಿಯುವುದೊಳ್ಳೆಯದು. ಅವರು ಜಾತೀಯ ಪ್ರಶ್ನೆಗಳಿಗೆ ಸ್ವಲ್ಪ ಹೆಚ್ಚಿನ ಮಹತ್ವವನ್ನು ನೀಡುತ್ತಾರೆಂದೆನ್ನಬಹುದು. ಅವರ, ಕ್ರೀಡೆ ವಿದ್ಯಾಭ್ಯಾಸ ಮುಂತಾದ ವಿಷಯಗಳಲ್ಲಿಯೂ ಸಮಾನ ಗುಣದವರನ್ನೇ ಆರಿಸುತ್ತಾರೆ. ಹೀಗಾಗಿ ಅಲ್ಲಿರುವ ಸಂಘಗಳೂ ಕ್ಯಾಥೋಲಿಕ್, ಪ್ರಾಟೆಸ್ಟೆಂಟ್ ಮತ್ತು ಸ್ವತಂತ್ರಗಳೆಂದು ವಿಂಗಡಿಸಬಹುದಾಗಿವೆ.

ಎರಡನೇ ಮಹಾಯುದ್ಧವು ಮುಗಿದು, ನೆದರ್‌ಲೇಂಡ್ಸ್ ಐದು ವರ್ಷಗಳ ಪರ್ಯಂತ ನಾಜೀ ಆಳ್ವಿಕೆಗೊಳಪಟ್ಟಿದ್ದಾಗ, ಆಕ್ರಮಣಕಾರಿಯನ್ನು ಎದುರಿಸುವ ಸಲುವಾಗಿ ಈ ಎಲ್ಲಾ ಸಂಘಗಳೂ ತಮ್ಮ ಆಂತರಿಕ ವೈಷಮ್ಯವನ್ನು ಮರೆತು ಕೆಲಸ ಮಾಡಿದ್ದವು. ನಾಜೀ ಆಳ್ವಿಕೆಯು ಬಂದೊಡನೇ ನೆದರ್‌ಲೇಂಡ್ಸಿನ ಎಲ್ಲಾ ಸಂಘಗಳೂ ಮುಚ್ಚಬೇಕೆಂದು ಆಜ್ಞೆ ಮಾಡಲಾಯಿತು. ಹಾಗಿದ್ದರೂ ಸ್ವಾತಂತ್ರ್ಯವನ್ನು ಮರಳಿ ಪಡೆದೊಡನೆಯೇ ಎಲ್ಲಾ ಸಂಘಗಳೂ ತಮ್ಮ ಚಟುವಟಿಕೆಗಳನ್ನಾರಂಭಿಸಿದವು. ಅದಕ್ಕೆ ಮುನ್ನವೂ ಸಂಘಗಳ ಕಾರ್ಯಗಳು ರಹಸ್ಯವಾಗಿಯೇ ನಡೆಯುತ್ತಿದ್ದವು.

ಇದೆಲ್ಲದರ ಫಲಿತಾಂಶವಾಗಿ ೧೯೪೫ರ ಜುಲೈಯಲ್ಲಿ ಡಚ್ ಯೂತ್ ಕೌನ್ಸಿಲ್ ಎಂಬ ಸಂಸ್ಥೆಯನ್ನು ಆರಂಭಿಸಲಾಯಿತು. ಹಿಂದೆ ನೆದರ್‌ಲೇಂಡ್ಸ್ ಸಂಸ್ಥಾನದ ಆರಂಭದ ಪ್ರಣಾಳಿಕೆಯು ೧೫೭೯ರಲ್ಲಿ ಹಸ್ತಾಕ್ಷರ ಕಂಡ ಉಟ್ರೆಕ್ಟ್‌ನಲ್ಲಿಯೇ ಯುವಕ ಸಂಘದ ಉದ್ಘಾಟನೆಯೂ ಆಯಿತು.

ನೆದರ್‌ಲೇಂಡ್ಸಿನಲ್ಲಿರುವ ಐವತ್ತನಾಲ್ಕು ಯುವಕ ಸಂಘಗಳೂ ಈ ಕೇಂದ್ರ ಸಂಸ್ಥೆಗೆ ಬದ್ಧವಾಗಿದ್ದುಕೊಂಡೇ ಕೆಲಸ ಮಾಡುವುವು. ಡಚ್ ಯುವ ಜನರು ಸ್ವಭಾವತಃ ಸ್ವಾಭಿಮಾನಿಗಳು, ಉದಾರ ಹೃದಯ, ಅನುಕಂಪಗಳುಳ್ಳವರು. ಆರ್ತರೆ ಸ್ವದೇಶದಲ್ಲಿರಲಿ, ಹೊರದೇಶದಲ್ಲಿರಲಿ ಅವರ ಸಹಾನುಭೂತಿ ಖಂಡಿತ ದೊರಕುವುದು. ಈಚೆಗೆ ಟಿಬೆಟ್ ನಿರಾಶ್ರಿತರಿಗಾಗಿ ಅವರು ಮನೆಮನೆಗೆ ತೆರಳಿ ನಿಧಿಯನ್ನು ಸಂಗ್ರಹಿಸಿದರು. ಇವರಲ್ಲಿಯೇ ಒಂದು ಬಳಗವು ರಾಜಕುಮಾರಿ ಬೀಟ್ರಿಕ್ಸ್‌ರಿಂದ ಆರಂಭಿಸಲ್ಪಟ್ಟಿದ್ದು ಇರಾನಿನಲ್ಲಿ ಭೂಕಂಪದಲ್ಲಿ ನಾಶ ಹೊಂದಿನ ಡಾಶಾಡ್ಜ್ ಎಂಬ ಹಳ್ಳಿಯ ಪುನರ್ನಿರ್ಮಾಣ ಕಾರ್ಯದಲ್ಲಿ ಅದು ಪೂರ್ಣ ಸಹಾಯವನ್ನು ನೀಡಿತ್ತು.

ಈ ಸಂಘಗಳಿಗೆ ರಾಣಿ ಜೂಲಿಯಾನಾ ಮತ್ತು ಪ್ರಿನ್ಸ್ ಬರ್ನ್‌ಹಾರ್ಡ್‌ರ ಪೂರ್ಣ ಆಶೀರ್ವಾದವಿದೆ. ಅವರ ವಿವಾಹದ ರಜತೋತ್ಸವದ ಕಾಲದಲ್ಲಿ ಈ ಯುವಜನ ಸಂಘಕ್ಕೆ ಬೇಕಾದಂತೆ ಸನ್ಮಾನ ನೀಡಲಾಯಿತು.

ಡಚ್ ಯುವಕರಿಗೆ ಹದಿನೆಂಟು ತುಂಬುವಾಗಲೇ ಸ್ವಂತ ಕಾರನ್ನು ಹೊಂದುವ ಹಂಬಲ ಹೆಚ್ಚು. ಹುಡುಗಿಯರಿಗೂ ಈ ಚಟ ತಪ್ಪಿದ್ದಲ್ಲ. ಫ್ರಾಂಕ್ ಸಿನಾತ್ರಾ ಮತ್ತು ಬೀಟಲ್ಸ್ ಎಂದರೆ ಅವರಿಗೆ ತುಂಬಾ ಇಷ್ಟ.

ಈ ಯುವಜನರಲ್ಲಿಯೇ 'ಪ್ರೊವೊಸ್' ಎಂಬೊಂದು ಪಂಗಡವಿದೆ. ಇವರ ಮುಖ್ಯ ಕಾರ್ಯ ಪ್ರೊವೊಕೇಶನ್ ಎಂದರೆ, ಕೆರಳಿಸುವುದು, ಶಾಂತಿಯನ್ನು ಕದಡಿ, ಪ್ರಾವಖ್ಯತೆ ಪಡೆಯುವುದೇ ಅವರ ಮುಖ್ಯ ಉದ್ದೇಶ. ವಾತಾವರಣ ಕಲ್ಮಷಿತವಾದರೆ, ರಸ್ತೆಗಳಲ್ಲಿ ವಾಹನಗಳು ಹೆಚ್ಚಿದರೆ, ವಿಯಟ್‌ನಾಂನಲ್ಲಿ ಅನ್ಯಾಯ ಜರುಗುತ್ತಿದೆಯೆಂದು ಅವರಿಗೆ ಅನಿಸಿದ್ದರೆ—ಹೀಗೇ ಯಾವುದೇ ಕಾರಣಕ್ಕೂ ಅವರು ಹಾರಾಡಲಾರಂಭಿಸುತ್ತಾರೆ.

ಡಚ್ ಪ್ರಜೆ ರಾಜಕೀಯ ಅರ್ಹತೆ ಪಡೆಯಲು ೨೧ ವರ್ಷ ದಾಟಬೇಕು. ಆವನಿಗೆ ಮೂವತ್ತಾಗುವ ವರೆಗೂ ತಂದೆ ತಾಯಿಯರ ಸಮ್ಮತಿಯಿಲ್ಲದೆ ಮದುವೆ ಮಾಡಿಕೊಳ್ಳಬಾರದೆಂದಿದೆ.

ಸಾಧಾರಣವಾಗಿ ಡಚ್ ಯುವಜನರು ಎಷ್ಟೇ ಕ್ರಾಂತಿಶೀಲರಾಗಿದ್ದರು, ತಂದೆ ತಾಯಿಯರಿಗೆ ಕೊಡಬೇಕಾದ ಮರ್ಯಾದೆಯನ್ನು ಕೊಟ್ಟೇ ಕೊಡುತ್ತಾರೆ.

ಹೆತ್ತವರಿಗೆ ಇಷ್ಟವಿಲ್ಲದ, ಅವರ ಪೂರ್ಣ ಅನುಮೋದನೆ ದೊರಕದ ಮದುವೆಗಳನ್ನು ಸಾಮಾನ್ಯವಾಗಿ ಅವರು ಮಾಡಿಕೊಳ್ಳುವುದೇ ಇಲ್ಲ!

ಅರಳುವ ಶಿಶು

ಶ್ರೀಕೃಷ್ಣನ ಬಾಲ್ಯಲೀಲೆಗಳು ಯಾವ ಹಿಂದೂ ಗೃಹಿಣಿಯ ಮನವನ್ನು ಮುಗ್ಧಗೊಳಿಸಿಲ್ಲ. ಭಾಗವತದ ಪುಟಗಳಲ್ಲಿ ವರ್ಣಿಸಲಾದ ಬಾಲಕೃಷ್ಣನ ಮುದ್ದುಲೀಲೆಗಳ ಮಧುರ ಸ್ಮೃತಿಗಳು ಪ್ರತಿ ಭಾರತೀಯ ತಾಯಿಯ ನರ ನಾಡಿಗಳಲ್ಲಿ ಸ್ಪಂದಿಸುತ್ತಿರುವಾಗ, ಆಕೆ ತನ್ನ ಒಡಲಲ್ಲಿ ಹುಟ್ಟಿದ ಶಿಶುವಿನಲ್ಲಿ ಆ ಭಗವಂತನ ಪ್ರತಿರೂಪವನ್ನು ಕಾಣುವುದು ಸಹಜವೇ.

ಶಿಶುವು ಸದಾಕಾಲ ಶಿಶುವಾಗಿ ಉಳಿಯಲಾದೀತೆ? ಅದು ಬೆಳೆಯುತ್ತಿರಬೇಕು. ಮುಂದಾ ಬೆಳೆದು ಸಕಾಲದಲ್ಲಿ ಅರಳಿ, ಬೆಳೆಯುವ ಮರದಂತೆ ಹೂ, ಹಣ್ಣುಗಳನ್ನು, ನೆರಳು, ಆಸರೆಯನ್ನು, ಗಾಳಿ ಮತ್ತು ಕಂಪನ್ನು ನೀಡುತ್ತಿರಬೇಕು.

ನಿಮ್ಮ ಮಗುವಿನ ನಾಳೆಯ ಬದುಕನ್ನು ಅರಳಿಸಲು ನೀವು ಇಂದೇ ಸನ್ನಾಹ ಮಾಡಬೇಕು. ನಿಮ್ಮ ಮಗುವಿನ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಕ್ಯುಮುಲೇಟಿವ್ ಡಿಪಾಸಿಟ್ ಖಾತೆಯನ್ನು ತೆರೆದು ಕ್ರಮವಾಗಿ ಅದರಲ್ಲಿ ಉಳಿಸುತ್ತಾ ಬನ್ನಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು, ಮಣಿಪಾಲ, ಮೈಸೂರು ರಾಜ್ಯ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಸೇಟಿ	1—50
ಭಾರತದ ವೀರಾಂಗನೆಯರು	1—50
ಮೇರಿಕೊಟ್ಟ ಬೆಂಕ್ರೋಲೆ	1—80
ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ಘಂಟಮಾರಾ	2—50
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಆಕಾಶವಾಣಿಯ ಮೂಲಕ

ಜಾಹೀರಾತು - ರಸಹಪ್ಟೈವಾಗಬಹುದು

ಬರೆದವರು: ಶ್ರೀ ಆರ್. ರಾಜಪ್ಪ ಶೆಟ್ಟಿ

ಭಾರತ ಸರ್ಕಾರದವರು ೧೯೬೪ ಡಿಸೆಂಬರ್ ೪ರಂದು ವಾರ್ತಾ ಮತ್ತು ಪ್ರಸಾರ ಮಾಧ್ಯಮದ ಬಗ್ಗೆ ನಿಯಮಿಸಿದ ಸಮಿತಿಯು ರೇಡಿಯೋ ಮತ್ತು ಟೆಲಿವಿಷನ್ ವಿಷಯದ ಬಗೆಗೆ ತನ್ನ ವರದಿಯನ್ನು ಸಲ್ಲಿಸಿ, ಅಖಿಲ ಭಾರತ ಆಕಾಶವಾಣಿಯ 'ವಿವಿಧ ಭಾರತಿ' ಕಾರ್ಯಕ್ರಮದಲ್ಲಿ ಜಾಹೀರಾತನ್ನು ಪ್ರಾರಂಭಿಸಬೇಕು ಎಂದು ಒತ್ತಾಯಿಸಿದೆ. 'ವಿವಿಧ ಭಾರತಿ'ಯು ಒಂದು ಲಲಿತ ಕಾರ್ಯಕ್ರಮವಿದ್ದು, ಹೆಚ್ಚಾಗಿ ಚಲನಚಿತ್ರ ಸಂಗೀತವನ್ನೇ ಪ್ರಸಾರ ಮಾಡುತ್ತಿದ್ದು, ಇದರಲ್ಲಿ ಜಾಹೀರಾತನ್ನು ಸೇರಿಸಿದರೆ, ಆದರ ಕಾರ್ಯಕ್ರಮದ ಗುಣಮಟ್ಟದಲ್ಲಿಯಾಗಲೀ ಮಾತಿನಲ್ಲಿಯಾಗಲೀ ಯಾವ ಕುಂದು ಕೊರತೆ ತೋರಲಿಕ್ಕಿಲ್ಲ ಎಂದು ಸಮಿತಿಯು ಭಾವಿಸಿದೆ.

ಆರ್ಥಿಕ ದೃಷ್ಟಿಯಿಂದ ಆಕಾಶವಾಣಿಯು ತನ್ನ ಕಾಲ ಮೇಲೆ ನಿಂತುಕೊಳ್ಳಲೆಂದು ಜಾಹೀರಾತಿನ ಸೇರ್ಪಡೆಗೆ ಸಮಿತಿಯು ಶಿಫಾರಸು ಮಾಡಿದೆ. ಜಾಹೀರಾತಿನಿಂದ ಬರುವ ಹಣದಿಂದ ಆಕಾಶವಾಣಿಯು ಇನ್ನೂ ವಿಶಾಲವಾಗಿ ವಿಸ್ತರಿಸಿ, ಆಧುನಿಕ ಸಲಕರಣೆಯಿಂದ ಕೂಡಿಕೊಂಡು ಕೆಲಸ ಮಾಡಲೂ ಸಮರ್ಥವಾಗುವದು.

ವಿಭಿನ್ನ ಮತಗಳು

ಆಕಾಶವಾಣಿಯ ಮೂಲಕ ಜಾಹೀರಾತಿನ ಬಳಕೆಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ಇವೆ. ಇಂತಹ ಜಾಹೀರಾತು ಅವಶ್ಯ ಎಂದು ವಾದಿಸುವವರಿಗೆ ಅನೇಕ ಮಹತ್ವದ ಕಾರಣಗಳ ಬೆಂಬಲವಿದೆ. ಜಾಹೀರಾತುಗಳು ಉತ್ತಮ ಆದಾಯವನ್ನು ತರುವವು ಎಂಬ ಬಗ್ಗೆ ವಿವಾದವೇ ಇಲ್ಲ.

ಜಾಹೀರಾತನ್ನು ಪ್ರಸಾರ ಮಾಡುವ ಆಕಾಶವಾಣಿ ಸಂಸ್ಥೆಗಳೆಲ್ಲ ಹೆಚ್ಚಿನ ಆದಾಯ ಪಡೆದ ಉದಾಹರಣಗಳೇ ಅಗಿವೆ. ಲಾಭದಾಯಕವಾಗಿ ಕೆಲಸ ಮಾಡುವ ಆಕಾಶವಾಣಿ ಸಂಸ್ಥೆಗಳು ಶಿಕ್ಷಣ ಮತ್ತು ಇತರ ಮಹತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಕ್ತಿಯುತವಾಗಿವೆ. ಆಕಾಶವಾಣಿಯ ಜಾಹೀರಾತಿನಿಂದ ಬೇಡಿಕೆಗಳು ಹೆಚ್ಚಾಗಿ, ಸರ್ವಾಂಗೀಣ ಆರ್ಥಿಕ ಚಟುವಟಿಕೆಗಳು ಪ್ರಗತಿ ಹೊಂದುವವು ಎಂಬ ಅಭಿಪ್ರಾಯವೂ ಇದೆ.

ಇನ್ನು ಕೆಲವರು ಜಾಹೀರಾತುಗಳು ಆಕಾಶವಾಣಿಯನ್ನು ಪ್ರವೇಶಿಸ ಬೇಕಾಗಿಲ್ಲ ಎಂದು ವಾದಿಸುವರು. ಜಾಹೀರಾತುಗಳ ಸೇರ್ಪಡೆಯಿಂದ ಪ್ರಸಾರ ಕಾರ್ಯಕ್ರಮಗಳ ಗುಣಮಟ್ಟ ಇಳಿಯುತ್ತದ. ಸಮಾಜ ಮತ್ತು ವ್ಯಕ್ತಿಗಳು ಜಾಹೀರಾತಿನಿಂದ ಹಾಳಾಗಬಹುದು. ಏಕೆಂದರೆ ಶ್ರೋತೃಗಳ ಮನವನ್ನಾಕರ್ಷಿಸಲಿಕ್ಕೆಂದು ಜಾಹೀರಾತು ಮಾಡುವವರು ಮನುಷ್ಯ ದೌರ್ಬಲ್ಯದ ಗುಣಗಳ ದುರ್ಲಾಭವನ್ನು ಪಡೆಯಲೆಳಸುವರು ಮತ್ತು ಕಾಲಾಂತರದಲ್ಲಿ ಜಾಹೀರಾತಿನ ದುಷ್ಪರಿಣಾಮ ತಲೆದೋರುವದು ಎಂಬ ಅಭಿಪ್ರಾಯವೂ ಇದೆ. ಅಲ್ಲದೆ ಜಾಹೀರಾತುದಾರರು ಶ್ರೋತೃಗಳು ಹೆಚ್ಚಾಗಿ ಯಾವ ವೇಳೆಯಲ್ಲಿ ತಮ್ಮ ರೇಡಿಯೋಗಳನ್ನು ಹಾಕುವರೋ ಅಂತಹ ಸಮಯದಲ್ಲಿಯೇ ಜಾಹೀರಾತನ್ನು ಪ್ರಸಾರ ಮಾಡಲು ತವಕಪಡುವುದರಿಂದ, ಆಕಾಶವಾಣಿಯ ಮನಾನಂದದ ಶೈಕ್ಷಣಿಕ ಮತ್ತು ಉದ್ಬೋಧಕರವಾದ ಉತ್ತಮ ಕಾರ್ಯಕ್ರಮಗಳಿಗೆ ಚ್ಯುತಿ ಬರುತ್ತದೆ ಎಂಬ ಮಾತೂ ಕೇಳಿಬರುತ್ತದೆ.

ಈಗ ಜಗತ್ತಿನ ಇತರ ದೇಶಗಳಲ್ಲಿ ಆಕಾಶವಾಣಿಯ ಮೂಲಕ ಜಾಹೀರಾತಿನ ಸ್ಥಿತಿಗತಿಯನ್ನು ಸ್ವಲ್ಪ ಅವಲೋಕಿಸೋಣ.—

ಆಕಾಶವಾಣಿಯ ಮೂಲಕ ಜಾಹೀರಾತನ್ನು ಜಗತ್ತಿನ ಅನೇಕ ರಾಷ್ಟ್ರಗಳ ಬಾನುಲಿಕಟ್ಟೆಗಳು ಪ್ರಸಾರ ಮಾಡುತ್ತಿವೆ. ಈ ಶತಮಾನದ ೧೯೨೦ರ ದಶಕದಲ್ಲಿ ಇಂತಹ ಸಂಪ್ರದಾಯ ಪ್ರಾರಂಭವಾಯಿತು. ಅಮೇರಿಕೆಯೇ ಆಕಾಶವಾಣಿ ವ್ಯಾಪಾರ ವಿಭಾಗವನ್ನು ಪ್ರಾರಂಭಿಸಿದ ಮೊದಲ ದೇಶ. ಅಲ್ಲಿಂದೀಚೆ ಅನೇಕ ರಾಷ್ಟ್ರಗಳು ಇಂತಹ ಕ್ರಮವನ್ನು ಅನುಸರಿಸಿವ. ಇತ್ತೀಚೆಗೆ ಟೆಲಿವಿಜನ್ ಮೂಲಕವೂ ಜಾಹೀರಾತಿನ ಪ್ರಸಾರ ನಡೆದಿದೆ.

ಜಪಾನಿನ ನಿಪ್ಪನ್ ಹೊಸೋ ಕೆಯೋಕೈ ಎಂಬ ಆಕಾಶವಾಣಿ ಕಾರ್ಪೊರೇಷನ್ ಒಂದನ್ನು ಬಿಟ್ಟರೆ, ಉಳಿದೆಲ್ಲ ಜಪಾನಿನ ರೇಡಿಯೋ ಕಾರ್ಪೊರೇಷನ್ನುಗಳು ಸರಕುಗಳ ಜಾಹೀರಾತನ್ನು ಮಾಡಿ ಹಣ ಪಡೆಯುತ್ತಿವೆ ಮತ್ತು ತಮ್ಮ ವ್ಯಾಪಾರೀ ವಿಭಾಗದಿಂದಲೇ ತಮ್ಮೆಲ್ಲ ಆದಾಯವನ್ನೂ ಗಳಿಸುತ್ತಿವೆ.

ರೇಡಿಯೋ ಸಿಲೋನಂತೂ ಚಿರಪರಿಚಿತ. ರೇಡಿಯೋ ಸಿಲೋನ್ ಒಂದು ವಾರಕ್ಕೆ ೩೨೧ ಗಂಟೆಗಳನ್ನು ಪ್ರಸಾರ ಕಾರ್ಯದಲ್ಲಿ ತೊಡಗಿರುತ್ತದೆ. ಇದರಲ್ಲಿ ರಾಷ್ಟ್ರೀಯ ಸೇವೆಗೆ೨೪೪||| ಗಂಟೆ ಮೀಸಲು. ಉಳಿದ ೭೬| ಗಂಟೆಗಳು ವ್ಯಾಪಾರೀ ವಿಭಾಗದ ಸೇವೆಗೆ. ವ್ಯಾಪಾರೀ ವಿಭಾಗದಲ್ಲಿ ಕೇವಲ ಜಾಹೀರಾತುಗಳನ್ನು ದೇಶ ವಿದೇಶಗಳ ಶ್ರೋತೃಗಳಿಗೆ ಪ್ರಸಾರ ಮಾಡುವದೇ ಧ್ಯೇಯ. ೧೯೬೩—೬೪ ರಲ್ಲಿ ರೇಡಿಯೋ ಸಿಲೋನಿನ ಉತ್ಪನ್ನವು ೪೦, ೩೫, ೬೭೬ ರೂ. ಮತ್ತು ಅದರ ವೆಚ್ಚವು ೨೧,೩೫,೪೩೦ ರೂಗಳು. ರೇಡಿಯೋ ಸಿಲೋನಿನ ಕಾರ್ಯಕ್ರಮಗಳು ಬಹು ಜನಪ್ರಿಯವಾಗಿವೆ. ಅದರಲ್ಲೂ ಯುವಕ ಯುವತಿಯರಿಗೆ ಹೆಚ್ಚು ಪ್ರಿಯವಾಗಿವೆ. ಪ್ರಸಾರ ವಿಷಯದ ಸಿಲೋನ್ ಸಮಿತಿಯು ರೇಡಿಯೋವು ಹೆಚ್ಚು ಉತ್ತಮ ಸೇವೆ ನೀಡಬೇಕೆಂದೂ, ಪ್ರವಾಸೋದ್ಯಮವನ್ನು ಬೆಳಸಿ ಸಿಲೋನಿನ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಜಾಹೀರಾತು ಮಾಡಬೇಕೆಂದು ಶಿಫಾರಸು ಮಾಡಿದೆ.

ಕಾಂಬೋಡಿಯಾದಲ್ಲಿ ಮಿತವಾಗಿ ಜಾಹೀರಾತಿಗೆ ಆಸ್ಪದವಿದೆ. ಅಲ್ಲಿನ ರೇಡಿಯೋ ಪ್ರಸಾರದ ಶೇಕಡ ೩ರಷ್ಟು ಗಂಟೆಗಳಲ್ಲಿ ಜಾಹೀರಾತಿನ ಪ್ರಸಾರಕ್ಕೆ ಅನುವು ಇದೆ.

ಹಾಂಗ್‌ಕಾಂಗಿನಲ್ಲಿಯ ಹಾಂಗ್‌ಕಾಂಗ್ ಕಮರ್ಷಿಯಲ್ ಬ್ರಾಡ್‌ಕಾಸ್ಟಿಂಗ್ ಕಂಪೆನಿಯು ತನ್ನ ಪ್ರಸಾರದ ಶೇಕಡ ಹತ್ತರಷ್ಟು ಸಮಯವನ್ನು ಜಾಹೀರಾತಿಗೆ ಉಪಯೋಗಿಸುತ್ತಿದೆ.

೧೯೬೨ ವರೆಗೂ ರೇಡಿಯೋ ಮಲೇಶಿಯಾವು ಸರಕಾರೀ ಬೊಕ್ಕಸದಿಂದಲೇ ತನ್ನೆಲ್ಲ ವೆಚ್ಚದ ಹಣವನ್ನು ಪಡೆಯುತ್ತಿದ್ದಿತು. ಆ ಮೇಲೆ ಅಲ್ಲಿ ವಾಣಿಜ್ಯ ಜಾಹೀರಾತು ವಿಭಾಗವನ್ನು ಪ್ರಾರಂಭಿಲಾಗಿದೆ.

ಫಿಲಿಫ್ಫೈನ್ಸ್‌ನಲ್ಲಿ ಅನೇಕಾನೇಕ ಪ್ರಸಾರ ಕೇಂದ್ರಗಳಿವೆ. ಕೆಲವುಗಳನ್ನು ಸರಕಾರ ತನ್ನ ಹತೋಟಿಯಲ್ಲಿ ಇಟ್ಟಕೊಂಡಿದೆ. ಬೇರೆ ಕೆಲವುಗಳನ್ನು ವಿಶ್ವವಿದ್ಯಾನಿಲಯದವರು ಧರ್ಮ ಪ್ರಚಾರ ಸಂಸ್ಥೆಯವರೂ ಇಟ್ಟುಕೊಂಡಿದ್ದಾರೆ. ಕೆಲವು ಖಾಸಗೀ ಜನರು ಇವುಗಳನ್ನು ನಡೆಸುತ್ತಾರೆ. ಇಲ್ಲಿ ಸರಕಾರೀ ನಿಯಂತ್ರಣದ ಒಂದು ಪ್ರಸಾರ ಸಂಸ್ಥೆ ಜಾಹಿರಾತನ್ನು ಸ್ವೀಕರಿಸುವದಿಲ್ಲ, ಮತ್ತೊಂದು ಸ್ವೀಕರಿಸುತ್ತದೆ.

ಅಮೆರಿಕೆಯಲ್ಲಿ ಆಕಾಶವಾಣಿಯ ಮೂಲಕ ಜಾಹೀರಾತನ್ನು ಮಾಡಿ, ಪ್ರಚಾರ ಮಾಧ್ಯಮದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಲಾಗಿದೆ. ಪತ್ರಿಕೆಗಳಲ್ಲಿ ಮತ್ತು ನೇರ ಅಂಚೆ ಮುಖಾಂತರದ ಜಾಹೀರಾತು ಕ್ರಮಗಳನ್ನು ಬಿಟ್ಟರೇ ರೇಡಿಯೋ ಪ್ರಸಾರದ ಜಾಹೀರಾತುಗಳೇ ಬಹು ಪ್ರಭಾವಯುತವಾಗಿವೆ. ಅಮೆರಿಕೆಯ ಫೆಡರಲ್ ಟ್ರೇಡ್ ಕಮೀಷನ್ನಿನವರು ರೇಡಿಯೋ ಮತ್ತು ಟೆಲಿವಿಜನ್ನುಗಳ ಜಾಹೀರಾತಿನ ಮೇಲ್ವಿಚಾರಣೆ ಮಾಡಿ ವ್ಯಾಪಾರೀ ಪ್ರಕಟನೆಗಳ ತನಿಖೆಯನ್ನೂ ಮಾಡುವದು.

ಕಾನಡದಲ್ಲಿ ಪ್ರಸಾರ ಸಮಯದ ಶೇಕಡ ಇಪ್ಪತ್ತರಷ್ಟು ಗಂಟೆಗಳನ್ನು ಜಾಹೀರಾತಿಗೆಂದು ಬಳಸಲಾಗುತ್ತಿದೆ.

ಲ್ಯಾಟಿನ್ ಅಮೇರಿಕೆಯಲ್ಲಿಯ ಸ್ಥಿತಿಯ ಬಗ್ಗೆ ಹೇಳಬೇಕಂದರೆ, ದಿ ಬರ್ಮುಡಾ ಬ್ರಾಡ್‌ಕಾಸ್ಟಿಂಗ್ ಕಂಪನಿಯು ಖಾಸಗೀ ಸಂಸ್ಥೆಯಾಗಿದ್ದು ಜಾಹೀರಾತು ಪ್ರಸಾರದಿಂದಲೇ ತನ್ನೆಲ್ಲ ಆದಾಯವನ್ನು ಪಡೆಯುತ್ತಿದೆ. ಒಂದೆರಡು ಕೇಂದ್ರ ಮತ್ತು ಧಾರ್ಮಿಕ ರೇಡಿಯೋ ಸ್ಟೇಷನ್ನುಗಳನ್ನು ಬಿಟ್ಟರೆ, ಕೋಸ್ಟಾರಿಕನ್ ರೇಡಿಯೋ ಸ್ಟೇಷನ್ನುಗಳೆಲ್ಲ ಜಾಹೀರಾತಿನಿಂದ ಸಾಕಷ್ಟು ಹಣಗಳಿಸುತ್ತಿವೆ.

ಡೊಮಿನಿಕನ್ ರಿಪಬ್ಲಿಕ್ಕಿನಲ್ಲಿಯೂ ಜಾಹೀರಾತುಗಳೇ ರೇಡಿಯೋಗಳಿಗೆ ಎಲ್ಲ ಆದಾಯವನ್ನು ತಂದುಕೊಡುತ್ತಿವೆ.

ಮೆಕ್ಸಿಕೊದಲ್ಲಿಯೂ ಸಹ, ಹೆಚ್ಚಾಗಿ ರೇಡಿಯೋ ಸ್ಟೇಷನ್ನುಗಳು ಖಾಸಗಿಯವರ ನಿಯಂತ್ರಣದಲ್ಲಿ ಇದ್ದು ತಮ್ಮ ಆದಾಯವನ್ನು ಜಾಹೀರಾತಿನಿಂದಲೇ ಪಡೆಯುತ್ತಿವೆ.

ಬ್ರೆಜಿಲಿನ ಪ್ರಸಾರ ಸಮಯದಲ್ಲಿ ಶೇಕಡ ೨೫ರಷ್ಟು ಜಾಹೀರಾತಿಗೇ ಮೀಸಲು ಗಿರಿಸಲಾಗಿದೆ.

ನೈಜೀರಿಯಾದಲ್ಲಿ ೧೯೬೦ ನವೆಂಬರ್‌ನಲ್ಲಿ ಆಕಾಶವಾಣಿಯ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಲಾಯಿತು. ೧೯೬೪ರ ವೇಳೆಗೆ ನೈಜೀರಿಯಾದ ಹದಿಮೂರು ಪ್ರಾದೇಶಿಕ ರೇಡಿಯೋ ಕೇಂದ್ರಗಳಲ್ಲಿ ವಾಣಿಜ್ಯ ಪ್ರಸಾರ ವಿಭಾಗವನ್ನು ಪ್ರಾರಂಭಿಸಲಾಯಿತು.

ಲೈಬೀರಿಯಾದ ಆಕಾಶವಾಣಿ ಕಾರ್ಪೊರೇಷನನ್ನು ಖಾಸಗಿಯವರು ನಡೆಸುತ್ತಿದ್ದು, ಸರಕಾರದಿಂದ ಸಹಾಯ ಧನ ಪಡೆಯುತ್ತಿದೆ. ಎಲ್ಲ ವೆಚ್ಚವನ್ನು ಜಾಹೀರಾತಿನ ಹಣದಿಂದ ತೂಗಿಸುತ್ತಿದೆ.

ದಕ್ಷಿಣ ಆಫ್ರಿಕೆಯ ಸೌಥ ಆಫ್ರಿಕನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಸಾರ್ವಜನಿಕ ಸೇವಾ ಸಂಸ್ಥೆಯಿದ್ದು ಅದನ್ನು ಒಂಭತ್ತು ಜನ ಗೌವರ್ನರ್ ಮಂಡಳಿಯು ನಿಯಂತ್ರಿಸುತ್ತಿದೆ. ಈ ಕಾರ್ಪೊರೇಷನ್ ರೇಡಿಯೋ ಲೈಸನ್ಸ್ ಮತ್ತು ವ್ಯಾಪಾರೀ ವಿಭಾಗದ ಜಾಹೀರಾತುಗಳಿಂದ ಆದಾಯ ಪಡೆಯುತ್ತಿದೆ.

ಜಾಹೀರಾತುದಾರರು ಈ ಕಾರ್ಪೊರೇಷನ್ನಿನ ಸೇವೆಯನ್ನು ಅತಿಯಾಗಿ ಬಯಸುತ್ತಿದ್ದಾರೆ.

ಕೆಲವು ನಿಯಮಗಳನ್ವಯ ಜಾಹೀರಾತುದಾರರು, ನಂತಿಕೆಯನ್ನು ಎತ್ತುವ ಆಂದೋಲನದಲ್ಲಿ ತೆ ಡಗಿದ ಕೆಲವು ಧಾರ್ಮಿಕ ಸಂಸ್ಥೆಗಳಿಗೆ ರೇಡಿಯೋ ಪ್ರಸಾರದ ಸಮಯ ದಾನ ಮಾಡುತ್ತಾರೆ.

ಆಸ್ಟ್ರೇಲಿಯಾದಲ್ಲ ಕಳೆದ ನಾಲ್ವತ್ತು ವರ್ಷಗಳಲ್ಲಿ ವಾಣಿಜ್ಯ ಜಾಹೀರಾತಿನ ರೇಡಿಯೋ ಕೇಂದ್ರಗಳು ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ. ಇಂತಹ ಕೇಂದ್ರಗಳ ಸಂಖ್ಯೆ ೧೧೦ ಕ್ಕೂ ಹೆಚ್ಚು. ಪತ್ರಿಕೆ ಮತ್ತು ಚಲನಚಿತ್ರಗಳಷ್ಟೇ ರೇಡಿಯೋ ಜಾಹೀರಾತುಗಳು ಪ್ರಭಾವಶಾಲೀ ಎಂದು ಇಲ್ಲಿ ಖರಷಣಿತವಾಗಿವೆ. ರಾಷ್ಟ್ರೀಯ ರೇಡಿಯೋ ಕೇಂದ್ರಗಳಷ್ಟೇ ವಾಣಿಜ್ಯ ರೇಡಿಯೋ ಕೇಂದ್ರಗಳು ಮಹತ್ವವನ್ನು ಗಳಿಸಿವೆ.

ನ್ಯೂಝಿಲೇಂಡಿನಲ್ಲಿ ೧೯೩೭ರಿಂದ ರೇಡಿಯೋ ಪ್ರಸಾರದಲ್ಲಿ ವಾಣಿಜ್ಯ ಜಾಹೀರಾತುಗಳನ್ನು ಪ್ರಚುರಪಡಿಸಲಾಗಿದೆ. ಈಗ ಅನೇಕಾನೇಕ ರೇಡಿಯೋ ಕೇಂದ್ರಗಳು ವಾಣಿಜ್ಯ ತಳಹದಿಯ ಮೇಲೆ ಕೆಲಸ ಗೆಯ್ಯುತ್ತಿವೆ.

ರೇಡಿಯೋ ಪ್ರಸಾರದಲ್ಲಿ ಸೇರ್ಪಡೆಯಾದ ವ್ಯಾಪಾರೀ ಜಾಹೀರಾತಿನ ಕಾರ್ಯಕ್ರಮಗಳು ಮನರಂಜನೆಗೆ ಪ್ರಸಿದ್ಧವಾಗಿವೆ. ಜಾಹೀರಾತಿಗಾಗಿರುವ ಪ್ರಸಾರಗಳು ವೈವಿಧ್ಯಪೂರ್ಣ ನಾಟಕೀಯ ಸುಕುಮಾರ ಪ್ರಯೋಗಗಳನ್ನು ಒದಗಿಸಿ, ಸ್ವಲ್ಪ ವೇಳೆಯನ್ನು ಜಾಹೀರಾತಿನ ಪ್ರಚಾರಕ್ಕೆಂದು ಬಳಸುವವು. ಅನೇಕ ಸಲ ಜಾಹೀರಾತು ಪ್ರಸಾರ ವೇಳೆಯಲ್ಲಿ ಉದ್ಯೋದಕ ಗುಣ ಪ್ರಧಾನ ವಿಮರ್ಶೆ ಮತ್ತು

ಸಂಸ್ಮರಣೆ

ಗುರುದೇವ ಮತ್ತು ನಾಯಿ

ಕೆಲ ವರ್ಷಗಳಿಗೆ ಮೊದಲು ಗುರುದೇವರ ಮನಸ್ಸು ಶಾಂತಿನಿಕೇತನವನ್ನು ಬಿಟ್ಟು ಬೇರೆಲ್ಲಿಯಾದರೂ ಉಳಿದುಕೊಳ್ಳಲು ಬಯಸುತ್ತಿತ್ತು. ಅವರ ಆರೋಗ್ಯವೂ ಉತ್ತಮವಿರಲಿಲ್ಲ. ಇದರಿಂದಾಗಿಯೋ ಅಥವಾ ಬೇರಾವುದೇ ಕಾರಣದಿಂದಾಗಿಯೋ ಅವರು ಶ್ರೀನಿಕೇತನದ ಮೂರಂತಸ್ತಿನ ಹಳೆಯ ಕಟ್ಟಡದಲ್ಲಿ ಕೆಲದಿನ ವಾಸಮಾಡಿದರು. ಅನಿವಾರ್ಯ ಪರಿಸ್ಥಿತಿಯಿಂದಾಗಿಯೇ ಅವರೀ ನಿರ್ಣಯಕ್ಕೆ ಬಂದಿರಬೇಕು. ಅವರು ಎಲ್ಲಕ್ಕಿಂತ ಎತ್ತರವಾದ ಅಂತಸ್ತಿನಲ್ಲಿಯೇ ಇರತೊಡಗಿದರು. ಆ ಸಮಯದಲ್ಲಿ ಅಂತಸ್ತನ್ನು ಏರುವುದಕ್ಕೆ ಅಗಲಕಿರಿದಾದ ತಿರುವು (ಸುರುಳಿ) ಮೆಟ್ಟಲುಗಳಿದ್ದುವು. ಮುದುಕರೂ ಕೃಶಕಾಯರೂ ಆದ ರವೀಂದ್ರನಾಥರು ಇವುಗಳನ್ನು ಏರುವುದು ಅಸಮರ್ಥವಾಗಿತ್ತು. ಹಾಗಿದ್ದರೂ ಬಹಳ ಕಷ್ಟದಿಂದ ಅವರನ್ನು ಶ್ರೀನಿಕೇತನದ ಮೂರನೆಯ ಮಹಡಿಗೆ ತಂದರು.

ರಜೆಯ ದಿನಗಳಾಗಿದ್ದುವು. ಆಶ್ರಮದ ಬಹ್ವಂಶ ಜನರು ಹೊರಹೋಗಿದ್ದರು. ಒಂದು ದಿನ ನಾನು ಸಪರಿವಾರವಾಗಿ ಗುರುದೇವರ 'ದರ್ಶನ'ಕ್ಕಾಗಿ ಹೊರಟೆ. 'ದರ್ಶನ'ವೆಂಬ ಪದವನ್ನು ವಿಶೇಷ ದರ್ಶನೀಯವಾಗಿಯೇ ನಾನು ಬಳಸಿದ್ದೇನೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ನಾನು ಎಂದಾದರೂ ಗುರುದೇವರ ಬಳಿಗೆ ಹೋಗುವಾಗ, ಅವರು "ದರ್ಶನಾರ್ಥಿ ಇದ್ದಾರೇನು?" ಎಂದು ಮುಗುಳ್ನಗುತ್ತ ಕೇಳುತ್ತಿದ್ದರು. ಮೊದಮೊದಲು ನಾನೂ ಬಂಗಾಳಿಯಲ್ಲೇ ಮಾತಾಡುತ್ತಿದ್ದೆ. ಆದರೆ, ನನ್ನ ಬಂಗಾಳಿ ಹಿಂದಿ ಕಡೆನುಡಿಗಳ ಮೂಲಕ ಅನುವಾದವಾಗಿ ಬಿಡುತ್ತಿತ್ತು. ಹೊರಗಣ ಅತಿಥಿಗಳನ್ನು ನಾನು ಕರಕೊಂಡು ಹೋಗುವಾಗ ಅವರ ಬಳಿ ಹೇಳುತ್ತಿದ್ದೆ— "ಓರ್ವ ಮಹಾಶಯರು ತಮ್ಮ ದರ್ಶನಾಪೇಕ್ಷೆಯಿಂದ ಆಗಮಿಸಿದ್ದಾರೆ"— ಈ ಮಾತು ಹಿಂದಿ ಭಾಷೆಯಲ್ಲಿ ಪ್ರಚಲಿತವಿರುವಷ್ಟು ಬಂಗಾಳಿಯಲ್ಲಿಲ್ಲ. ಆದುದರಿಂದಲೇ ಗುರುದೇವರು ತುಸು ನಗುತ್ತಿದ್ದರು. ನನ್ನ ಈ ಭಾಷೆ ಬಹುತೇಕ ಪುಸ್ತಕೀಯವೆಂದೂ ಇದರಲ್ಲಿನ 'ದರ್ಶನ' ಪದವನ್ನು ಗುರುದೇವರು ಎತ್ತಿಕೊಂಡರೆಂದೂ ಮುಂದೆ ತಿಳಿಯಿತು. ಇದರಿಂದಾಗಿ, ಅಸಮಯದಲ್ಲೆಂದಾದರೂ ತಮ್ಮ ಬಳಿಗೆ ಬಂದು ಬಿಟ್ಟರೆ, ಅವರು ನಕ್ಕು ಪ್ರಶ್ನಿಸುತ್ತಿದ್ದರು— "ದರ್ಶನಾರ್ಥಿ ಇದ್ದಾರೇನು?" ನಮ್ಮ ದೇಶದ ದರ್ಶನಾರ್ಥಿಗಳಲ್ಲಿ ಸಮಯ—ಅಸಮಯ, ಸ್ಥಾನ—ಅಸ್ಥಾನ, ಅವಸ್ಥೆ—ಅನವಸ್ಥೆ ಮೊದಲಾದುವುಗಳನ್ನು ಗಣಿಸುವಂತಹ ಪ್ರಗಲ್ಭರೆಷ್ಟು ಮಂದಿ? ತಡೆಹಿಡಿದರೂ ನುಗ್ಗಿ ನುಸುಳುವವರೇ ಹೆಚ್ಚು ಮಂದಿಯೆಂದು ದುಃಖದಿಂದಲೇ ಹೇಳಬೇಕಾಗಿದೆ. ಇಂತಹ ದರ್ಶನಾರ್ಥಿಗಳಿಂದ ಗುರುದೇವರು ತುಸು ಹೆದರಿಯೇ ಇರುತ್ತಿದ್ದರು. ನಾನು ಮಕ್ಕಳುಮರಿಗಳೊಂದಿಗೆ ಒಂದು ದಿನ ಶ್ರೀನಿಕೇತನವನ್ನು ಮುಟ್ಟಿದೆ, ಹಲವು ದಿನಗಳಿಂದ ಅವರನ್ನು ಕಂಡಿರಲಿಲ್ಲ.

ಅಲ್ಲಿ ಗುರುದೇವರು ಬಹಳ ಆನಂದದಿಂದಿದ್ದರು; ಒಂಟಿಯಾಗಿದ್ದರು. ಶಾಂತಿನಿಕೇತನದಲ್ಲಿರುತ್ತಿದ್ದಂತೆ ನೂಕುನುಗ್ಗಲು ಇಲ್ಲಿ ಇರಲಿಲ್ಲ. ನಾವು ಮೇಲೇರಿದಾಗ, ಗುರುದೇವರು ಹೊರಗೊಂದು ಕುರ್ಚಿ ಹಾಕಿ ಸಮ್ಮುಖ ಕುಳಿತು ಮುಳುಗುವ ಸೂರ್ಯನತ್ತ ಏಕ ದೃಷ್ಟಿಯಿಂದ ನೋಡುತ್ತಿದ್ದರು. ನಮ್ಮನ್ನು ಕಂಡು ಮಂದಹಾಸ ಬೀರಿದರು; ಮಕ್ಕಳೊಡನೆ ತುಸು ತಮಾಷೆಮಾಡಿದರು; ಕುಶಲ ಸಮಾಚಾರ ಕೇಳಿದರು; ಮತ್ತೆ ಸುಮ್ಮನಾದರು. ಅದೇ ಹೊತ್ತಿನಲ್ಲಿ ಅವರ ನಾಯಿ ಮೆಲ್ಲ ಮೆಲ್ಲನೆ ಮೇಲೆ ಬಂತು; ಅವರ ಕಾಲ ಪಕ್ಕದಲ್ಲಿ ನಿಂತು ಬಾಲವಾಡಿಸತೊಡಗಿತು. ಗುರುದೇವರು ಅದರ ಬೆನ್ನ ಮೇಲೆ ಕೈಯಾಡಿಸಿದರು. ಅದು ಕಣ್ಣು ಮುಚ್ಚಿ ತನ್ನ ರೋಮ ರೋಮಗಳಿಂದ ಆ ಸ್ನೇಹ ರಸಪಾನದ ಅನುಭವ ಮಾಡಿಕೊಳ್ಳಲಾರಂಭಿಸಿತು. ನಮ್ಮತ್ತ ನೋಡುತ್ತ, ಗುರುದೇವರು ಹೇಳಿದರು— "ನೋಡಿದೆ ತಾನೆ? ಇವರು ಬಂದು ಬಿಟ್ಟರು. ನಾನಿಲ್ಲಿರುವೆನೆಂದು ಇವರಿಗೆ ಹೇಗೆ ಗೊತ್ತಾಯಿತು? ಬಹಳ ಆಶ್ಚರ್ಯ! ಮತ್ತೆ ನೋಡು, ಇವರ ಮುಖದಲ್ಲಿ ತೃಪ್ತಿಯ ಸೆಲೆ ಎಷ್ಟೊಂದು ತುಂಬಿ ತುಳುಕುತ್ತಿದೆ!"

ನಾನು ಆ ನಾಯಿಯ ಆನಂದವನ್ನು ನೋಡತೊಡಗಿದೆ. ಯಾರೊಬ್ಬರೂ ಅದಕ್ಕೆ ದಾರಿ ತೋರಿಸಲಿಲ್ಲ. ನಿನ್ನ ಸ್ನೇಹದಾತ ಇಲ್ಲಿಂದ ಎರಡು ಮೈಲು ದೂರದಲ್ಲಿದ್ದಾರೆಂದು ಯಾರೂ ಅದರೊಡನೆ ಹೇಳಿರಲಿಲ್ಲ. ಹಾಗಿದ್ದರೂ ಅದು ಬಂದುಬಿಟ್ಟಿದೆ! ಇದೇ ನಾಯಿಯನ್ನು ಕುರಿತಾಗಿ ಅವರು 'ಆರೋಗ್ಯ'ದಲ್ಲಿ ಈ ಹೆಸರಿನ ಒಂದು ಕವಿತೆಯನ್ನು ಬರೆದಿದ್ದರು-'ಪ್ರತಿದಿನ ಮುಂಜಾನೆ ಈ ಭಕ್ತ ಶುನಕ ಸ್ತಬ್ಧನಾಗಿ ಆಸನದ ಬಳಿ ನನ್ನ ಕೈಗಳಿಂದ ಅದರ ಸಂಸ್ಪರ್ಶವನ್ನು ಹೊಂದುವ ತನಕ ಕುಳಿತಿರುತ್ತದೆ. ಸ್ಪರ್ಶಮಾತ್ರದಿಂದಲೇ ಅದರ ಅಂಗ—ಪ್ರತ್ಯಂಗಗಳು ಆನಂದ ಪ್ರವಾಹ ಹರಿಯತೊಡಗುತ್ತದೆ. ಈ ಮೂಕ ಪ್ರಾಣಿ ಸಮುದಾಯದಲ್ಲಿ ಈಯೊಂದು ಜೀವ ಮಾತ್ರ ಒಳಿತು—ಕೆಡುಕು ಎಲ್ಲವನ್ನೂ ಭೇದಿಸಿ ಸಂಪೂರ್ಣ ಮನುಷ್ಯನನ್ನು ನೋಡಲು ಶಕ್ತವಾಗಿದೆ-ಯಾರಿಗೆ ಪ್ರಾಣ ನೀಡಬಹುದು, ಯಾರಲ್ಲಿ ಅಹೇತುಕ ಪ್ರೇಮವಿಡಬಹುದು, ಯಾರ ಚೇತನವು ಅಸೀಮ ಚೈತನ್ಯ ಲೋಕದಲ್ಲಿ ದಾರಿ ತೋರಿಸಬಲ್ಲುದು ಎಲ್ಲವನ್ನೂ ಅದು ತಿಳಿದುಕೊಂಡಿದೆ. ನಾನು ಈ ಮೂಕ ಹೃದಯದ ಪ್ರಾಣಪಣ ಆತ್ಮನಿವೇದನವನ್ನು ನೋಡುವಾಗ, ಇದರಲ್ಲಿ ತನ್ನ ದೀನತೆಯನ್ನು ಪ್ರಕಟಿಸುತ್ತಿದೆ— ಅದು ತನ್ನ ಸಹಜ ಜ್ಞಾನದಿಂದ ಮಾನವನಲ್ಲಿ ಯಾವ ಅಮೂಲ್ಯ ಆವಿಷ್ಕಾರವನ್ನು ಮಾಡಿದೆ ಎಂದು ಊಹಿಸಲೂ ಅಸಮರ್ಥ. ತನ್ನ ಕಂಡುದನ್ನು, ಭಾಷಾಹೀನ ದೃಷ್ಟಿಯ ಕರುಣ ವ್ಯಾಕುಲತೆಯನ್ನದು ತಿಳಿಸಲಾರದು ನಿಜ. ಆದರೆ, ನನಗೆ ಈ ಸೃಷ್ಟಿಯಲ್ಲಿ ಮಾನವನ ನಿಜ ಪರಿಚಯವನ್ನು ಮಾಡಿಕೊಡುತ್ತಿದೆ!"— ಕವಿಯ ಮರ್ಮಭೇದಿ ದೃಷ್ಟಿಯು ಈ ಭಾಷಾಹೀನ ಪ್ರಾಣಿಯ ಕರುಣ ದೃಷ್ಟಿಯಲ್ಲಿ ಮಾನವನೊಳಗೆ ಮಾತ್ರ ಕಾಣಬಹುದಾದ ವಿಶಾಲ ಮಾನವ ಸತ್ಯವನ್ನು ಕಂಡುಕೊಂಡಿದೆ.

ನಾನು ಈ ಕವಿತೆಯನ್ನು ಓದುವಾಗ, ನನ್ನ ಮುಂದೆ ಶ್ರೀನಿಕೇತನದ ಮೂರನೆಯ ಮಹಡಿಯ ಮೇಲಿನ ಆ ಘಟನೆ ಪ್ರತ್ಯಕ್ಷವಾಗಿ ಕಣ್ಣಿಗೆ ಕಟ್ಟುತ್ತದೆ. ಕಣ್ಣು ಮುಚ್ಚಿ ಪಡೆಯುವ ಅಪರಿಮಿತ ಆನಂದ, ಮೂಕ ಹೃದಯದ ಪ್ರಾಣಪಣ ಆತ್ಮನಿವೇದನ ಮೂರ್ತಿಮತ್ತಾಗಿ ನಿಲ್ಲುತ್ತದೆ. ಅಂದು ಅದು ನನಗೊಂದು ಚಿಕ್ಕ ಘಟನೆಯಾಗಿತ್ತು. ಆದರೆ, ಇಂದದು ಜಗತ್ತಿನ ಅನೇಕ ಮಹಿಮಾನ್ವಿತ ಘಟನೆಗಳ ಸಾಲಿನಲ್ಲಿ ಸೇರಿಹೋಗಿದೆ. ಈ ಪ್ರಸಂಗದ ಬಗ್ಗೆ ಇನ್ನೊಂದು ಆಶ್ಚರ್ಯಕರ ವಿಷಯವನ್ನೂ ಹೇಳಬಹುದು. ಗುರುದೇವರ ಚಿತಾಭಸ್ಮ ಕಲಕತ್ತೆಯಿಂದ ಆಶ್ರಮಕ್ಕೆ ತಂದಾಗ, ಈ ನಾಯಿಯು ತನ್ನ ಸಹಜ ಬೋಧ ಬಲದಿಂದಲೇ ಆಶ್ರಮದ ಬಾಗಿಲ ತನಕವೂ ಬಂದಿತ್ತು. ಚಿತಾಭಸ್ಮದೊಡನೆ, ಅನ್ಯ ಆಶ್ರಮವಾಸಿಗಳೊಡನೆ ಶಾಂತಿ—ಗಂಭೀರ ಭಾವದಿಂದ ಉತ್ತರಾಯಣದ ತನಕ ಬಂದಿತ್ತು. ಆಚಾರ್ಯ ಕ್ಷಿತಿಮೋಹನ ಸೇನರು ಎಲ್ಲರಿಗೂ ಮುಂದಿದ್ದರು. ಆ ನಾಯಿ ಚಿತಾಭಸ್ಮದ ಕಲಶದ ಬಳಿ ಸ್ವಲ್ಪಕಾಲ ಮೌನಧ್ಯಾನದಿಂದ ಕುಳಿತೂ ಇತ್ತು ಎಂದು ಅವರು ಹೇಳಿದರು.

(ಡಾ| ಹಜಾರಿ ಪ್ರಸಾದ ದ್ವಿವೇದಿಯವರ ಲೇಖದಿಂದ ಆಯ್ದ ಭಾಗ)

ಸಂಪೂರ್ಣ ಪ್ರಕಟನಾ ಸೇವೆಗಳು ಲಭ್ಯವಾಗುವವು.

ಭಾರತದಲ್ಲಿ

ಬಾನುಲಿ ಶಾಖೆಯು ಇದೇ ಆಗಸ್ಟ್ ೧ರಿಂದ ಆಕಾಶವಾಣಿಯ ಮೂಲಕ ವಾಣಿಜ್ಯ ಪ್ರಸಾರವನ್ನು ಪ್ರಾರಂಭಿಸುವುದೆಂದು ಗೊತ್ತಾಗಿದೆ. ಜಾಹೀರಾತಿನಿಂದ ಬರುವ ಆದಾಯದಿಂದ ರೇಡಿಯೋ ಮತ್ತು ಟೆಲಿವಿಜನ್‌ಗಳು ಆರ್ಥಿಕ ದೃಷ್ಟಿಯಿಂದ ಸುಸಂಪನ್ನವಾಗಿ ಬಲಯುತವಾಗಿ ಬೆಳೆದು, ಸಮಾಜ ಸೇವೆಯ ಸಮರ್ಥ ವಾಹಕಗಳಾಗಿ ಕೆಲಸ ಮಾಡಲು ಸುಸಜ್ಜಿತವಾಗುವ ನಿರೀಕ್ಷೆಯಿದೆ.

ಆಕಾಶವಾಣಿ, ವಾಣಿಜ್ಯ ವಿಭಾಗ— ನಮ್ಮ ಬಾನುಲಿ ಪ್ರಸಾರದ ಒಂದು ಹೊಸ ಘಟ್ಟ; ರಜತ ಘಟ್ಟವೂ ಆಗಬಹುದು!

ಮಾನವತೆಯ ಪ್ರತೀಕ

ಮನುಕುಲ ಪರಿಹಾರ ಸಮಾಜ

ಬಿಹಾರ— ಪ್ರಕೃತಿಯ ವಿಕೋಪಕ್ಕೆ ಈಡಾದ ಕಂಗಾಲಾದ ಒಂದು ರಾಜ್ಯ. ಪ್ರಕೃತಿ ಮಾತೆಯ ಮುನಿಸಿನಲ್ಲಿ ತಾಂಡವವಾಡುತ್ತಿದೆ, ಆದರೂ ಮಾನವನ ದಯೆಗೆ, ಕರುಣೆಗೆ ಕೊರತೆಯಿಲ್ಲ. ಕ್ಷಾಮ ಪೀಡಿತ ಜನತೆಯ ಸೇವೆ ಮಾಡಲು ಅನೇಕ ಸಂಸ್ಥೆಗಳು ಅಹೋರಾತ್ರಿ ಶ್ರಮಿಸುತ್ತಿವೆ. "ಮನುಕುಲ ಪರಿಹಾರ ಸಮಾಜ"—ಈ ಬಗೆಯ ಸಂಸ್ಥೆಗಳಲ್ಲಿ ಒಂದು. ಅಭಾವ ಪೀಡಿತರಿಗೆ ಉಚಿತ ಭೋಜನವನ್ನು ಇದು ಒದಗಿಸುತ್ತದೆ.

ಪಲಮಾವು ಜಿಲ್ಲೆಯು ತೀವ್ರ ಕ್ಷಾಮಕ್ಕೆ ಗುರಿಯಾದುದು. ಇದರ ರಾಜಧಾನಿ ಡಾಲ್ಟನ್‌ಗಂಜ್ ಇಲ್ಲಿಂದ ೨೨ ಮೈಲು ದೂರದ ಪಟ್ಟಣ ರಾಂಕಾ. ಇಲ್ಲಿಯೇ 'ಮನುಕುಲ ಪರಿಹಾರ ಸಮಾಜ'ದ ಕೇಂದ್ರವಿರುವುದು. ಇದು ಆರಂಭವಾದುದು ಮಾರ್ಚಿ ೨೨ರಂದು. ಇಲ್ಲೀಗ ಪ್ರತಿದಿನ ೨೨ ಸಾವಿರ ಜನರು ಊಟ ಮಾಡುತ್ತಾರೆ.

ಇಲ್ಲಿನ ಊಟ ವೈವಿಧ್ಯಮಯ. ಕಿಚಡಿ ಅಥವಾ ಚಪಾತಿಯ ಜತೆಗೆ ತರಕಾರಿಗಳಿಂದ ಮಾಡಿದ ರುಚಿಕರವಾದ ಪಲ್ಯ.

ಭೋಜನಾಲಯದಲ್ಲಿ ಮಧ್ಯರಾತ್ರಿಯ ಹೊತ್ತಿಗೆ ಅಡುಗೆಯ ಕೆಲಸ ಆರಂಭವಾಗುತ್ತದೆ. ಬೆಳಗಾಗುವ ಹೊತ್ತಿಗೆ ಸುಮಾರು ೧೦,೦೦೦ ಕಿಲೋದಷ್ಟು ಆಹಾರ ತಯಾರಾಗುತ್ತದೆ. ಇದನ್ನು ಲಾರಿಗಳ ಮೂಲಕ ಆಹಾರ ವಿತರಣಾ ಉಪಕೇಂದ್ರಗಳಿಗೆ ಒಯ್ಯುತ್ತಾರೆ.

ಭೋಜನಾಲಯದ ದ್ವಾರಗಳು ಎಲ್ಲರಿಗೂ ಮುಕ್ತವಿವೆ. ಪ್ರವೇಶದಲ್ಲಿ ಯಾವ ನಿರ್ಬಂಧವೂ ಇಲ್ಲ. ಬೇಕಷ್ಟು ಉಣ್ಣಬಹುದು. ಅಡುಗೆ ಇತ್ಯಾದಿಗಳಿಗಾಗಿ ಭೋಜನಾಲಯದಲ್ಲಿ ದಿನವೂ ಎಂಟು ಸಾವಿರ ಗ್ಯಾಲನ್ ನೀರು ಮತ್ತು ಒಂಬತ್ತು ಬಂಗಾಲಿ ಮಣ ಉರುವಲು ವೆಚ್ಚವಾಗುತ್ತದೆ. ನೀರಿನ ಟ್ಯಾಂಕರುಗಳು ಕನಾರ್ ನದಿಯಿಂದ ನೀರು ತರುತ್ತವೆ; ಹತ್ತಿರದ ಕಾಡುಗಳಿಂದ ಸೌದೆ ತರುತ್ತಾರೆ.

ಗೋಧಿ, ಮುಸುಕಿನ ಜೋಳ, ಆಲೂಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಉಪ್ಪು— ಇವುಗಳನ್ನು ಭೋಜನ ತಯಾರಿಯಲ್ಲಿ ಬಳಸುತ್ತಾರೆ. ಇವನ್ನು ಸಂಗ್ರಹಿಸಿಡಲು ೧೦ ದಾಸ್ತಾನು ಮಳಿಗೆಗಳೂ ಇಲ್ಲಿವೆ.

ರಾಂಕಾ ಭೋಜನಾಲಯಕ್ಕೆ ತನ್ನದೇ ಆದ ಹಿಟ್ಟಿನ ಗಿರಣಿಯಿದೆ; ಚಪಾತಿ ತಯಾರಿಸುವ ವಿದ್ಯುತ್ ಯಂತ್ರವಿದೆ.—ಇದರ ಕಾರ್ಯ ಪ್ರಮಾಣ ಗೊತ್ತೆ? ಒಂದು ನಿಮಿಷಕ್ಕೆ ಮೂವತ್ತು ಚಪಾತಿ! ಮನುಕುಲ ಪರಿಹಾರ ಸಮಾಜವು ಅಧಿಕ ಹಣ, ದಕ್ಷ ಜನ, ಉತ್ತಮ ಆಡಳಿತಗಳಿಂದ ಈ ಬೃಹದ್ಯೋಜನೆಯನ್ನು ಕಾರ್ಯಗತ ಮಾಡಿದೆ!

ಇಲ್ಲಿ ೧೫೦ ಕೆಲಸಗಾರರಿದ್ದಾರೆ. ಇವರಲ್ಲಿ ೫೦ ಮಂದಿ ಮಹಿಳೆಯರು — ಗುಜರಾತು—ಮುಂಬಯಿಗಳಿಂದ ಸೇವೆ ಸಲ್ಲಿಸುವುದಕ್ಕಾಗಿ ಇಲ್ಲಿ ಬಂದವರು. ತಮ್ಮ ಊಟ—ಪ್ರಯಾಣ ಇತ್ಯಾದಿ ವೆಚ್ಚವನ್ನು ಈ ಸ್ವಯಂ ಸೇವಕರು ತಾವೇ ನೋಡಿಕೊಳ್ಳುತ್ತಾರೆ.

(ಹದಿಮೂರನೇ ಪುಟ ನೋಡಿರಿ)

ಸಹಕಾರ ರಂಗ

ಆರ್ಥಿಕ ಕ್ಷೇತ್ರದಲ್ಲಿ ಅಪೂರ್ವ ಪಾತ್ರ

ಇಪ್ಪತ್ತು ವರ್ಷಗಳ ಹಿಂದೆ, ಅಂದರೆ ಸ್ವಾತಂತ್ರ್ಯ ಬಂದ ಸರಿಸುಮಾರಿನಲ್ಲಿ, ಸಹಕಾರ ಸಂಸ್ಥೆ ಅಥವಾ ಸಹಕಾರ ಸಂಘವು ಭೂಮಿಯನ್ನು ಹೊಂದಿರುವ ಜನರಿಗೆ ಸಾಲವನ್ನು ನೀಡುವ ಸಂಸ್ಥೆ ಎಂದೆನಿಸಿಕೊಂಡಿದ್ದಿತು. ಇಂದು ಸಹಕಾರ ಸಂಸ್ಥೆಗೆ ವಿಶಾಲವಾದ ಅರ್ಥವಿದೆ. ಸಾಲ ಹಾಗೂ ವ್ಯವಸಾಯದ ಅಗತ್ಯತೆಗಳನ್ನು ಅವು ಪೂರೈಸುತ್ತವೆ. ರೈತರ ಅಧಿಕ ಉತ್ಪತ್ತಿಯನ್ನು ಮಾರಾಟ ಮಾಡುವ ಸೌಲಭ್ಯಗಳನ್ನು ಸಹಕಾರ ಸಂಸ್ಥೆಗಳು ನೀಡುತ್ತಿವೆ. ಸುಮಾರು ಶೇಕಡ ೫೦ರಷ್ಟು ರೈತರಿಗೆ, ಈ ಸೌಲಭ್ಯಗಳನ್ನು ನೀಡಲಾಗುತ್ತದೆ. ಇದಲ್ಲದೇ, ಗ್ರಾಮಾಂತರ ಪ್ರದೇಶಗಳಲ್ಲಿ ಗೃಹಕೈಗಾರಿಕೆಗಳನ್ನು ನಡೆಸಲು ಅಗತ್ಯವಾದ ಸಾಲದ ಹಾಗೂ ಇತರ ಸೌಲಭ್ಯಗಳನ್ನು ಸಹಕಾರ ಸಂಸ್ಥೆಗಳು ನೀಡುತ್ತಿವೆ.

ಸಹಕಾರ ಪ್ರಯತ್ನದಿಂದ ಅನೇಕ ಕೈಗಾರಿಕೋತ್ಪನ್ನಗಳು ತಯಾರಾಗುತ್ತಿವೆ. ಕಬ್ಬನ್ನು ಬಳಸಿ ಸಕ್ಕರೆ ತಯಾರಿಸುತ್ತಿರುವುದು ಇದಕ್ಕೆ ಉತ್ತಮ ಉದಾಹರಣೆ. ಆನಂದ ಕೋ ಆಪರೇಟೀವ್ ಮಿಲ್ಕ್ ಸಪ್ಲೈ ಯೂನಿಯನ್, 'ಅಮೂಲ್' ಎಂಬ ಹಾಲಿನ ಪುಡಿಯನ್ನು ತಯಾರಿಸುವ ಮೂಲಕ ಇಡೀ ರಾಷ್ಟ್ರಾದ್ಯಂತ ಹೆಸರನ್ನು ಗಳಿಸಿದೆ. 'ಕೋ ಆಪ್ಟೆಕ್ಸ್' ಎನ್ನುವ ಕೈಮಗ್ಗ ನೇಯ್ಗೆಯ ಸಹಕಾರ ಸಂಸ್ಥೆ ಬಟ್ಟೆಗಳು ಗಣನೀಯವಾಗಿ ವಿದೇಶಿ ವಿನಿಮಯವನ್ನು ಸಂಪಾದಿಸುತ್ತಿವೆ.

ವಸ್ತುಗಳ ಬೆಲೆ ಏರುತ್ತಿರುವ ಈ ಕಾಲದಲ್ಲಿ, ದೊಡ್ಡ ನಗರಗಳಲ್ಲಿ, ಸಹಕಾರ ಸಂಸ್ಥೆಗಳು ದಿನಬಳಕೆಯ ವಸ್ತುಗಳಾದ ಆಹಾರ ದಿನಸಿಗಳು, ಸಕ್ಕರೆ, ಎಣ್ಣೆ ಮುಂತಾದವನ್ನು ನ್ಯಾಯ ಬೆಲೆಯಲ್ಲಿ ಮಾರಾಟ ಮಾಡುತ್ತಿವೆ. ಹೀಗೆ ಸಹಕಾರ ಸಂಸ್ಥೆಗಳು ವಿವಿಧ ರೀತಿಯ ಆರ್ಥಿಕ ಸಂಬಂಧವಾದ ಕಾರ್ಯಕ್ರಮಗಳನ್ನು ನಡೆಸುತ್ತಿವೆ.

ಸ್ವಾತಂತ್ರ್ಯದ ನಂತರ

ಸ್ವಾತಂತ್ರ್ಯದ ನಂತರ ಸಹಕಾರ ಚಳುವಳಿಯು ತನ್ನ ಪ್ರಾಮುಖ್ಯತೆಯನ್ನು ಪಡೆಯಿತು. ೧೯೫೧ರಲ್ಲಿ ಯೋಜಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಂಡಾಗ, ಸುಮಾರು ೧ ಲಕ್ಷ ಸಹಕಾರ ಸಂಸ್ಥೆಗಳಿದ್ದವು. ಈಗ ಅದು ಮೂರು ಪಟ್ಟು ಅಧಿಕಗೊಂಡಿದೆ. ೧೯೫೧ರಲ್ಲಿ ೧೪ ಲಕ್ಷ ಸದಸ್ಯರಿದ್ದರೆ, ೧೯೬೪—೬೫ರಲ್ಲಿ ಅದು ೪೫ ದಶಲಕ್ಷಕ್ಕೆ ಏರಿತು. ಷೇರು ಬಂಡವಾಳವು ೧೦ರಷ್ಟು ಏರಿತು. ಈಗ ಅದು ೩೪೦ ಕೋಟಿ ರೂ.ಗಳನ್ನು ಮುಟ್ಟಿದೆ. ಎಲ್ಲಾ ಬಗೆಯ ಸಹಕಾರ ಸಂಸ್ಥೆಗಳ ದುಡಿಯುವ ಬಂಡವಾಳವು ೧೯೬೩—೬೪ರಲ್ಲಿ ೨೧೦೦ ಕೋಟಿ ರೂ.ಗೆ ಮುಟ್ಟಿತ್ತು. ಸ್ವಾತಂತ್ರ್ಯದ ನಂತರದ ವರ್ಷಗಳಲ್ಲಿ ಸ್ಥಾಪಿಸಿದ ಪ್ರೈಮರಿ ಕ್ರೆಡಿಟ್ ಸೊಸೈಟಿಗಳ ಸಂಖ್ಯೆ ೧ ಲಕ್ಷವನ್ನು ಮೀರಿದೆ. ಒಟ್ಟು ಸಾಲವು ೩೦೦ ಕೋಟಿ ರೂ.ಗಳನ್ನು ದಾಟಿದೆ. ಸ್ವಾತಂತ್ರ್ಯಕ್ಕೆ ಮುನ್ನ, ಸಾಲದ ಹಣವು ಕೇವಲ ಕೆಲವೇ ಕೋಟಿ ರೂ.ಗಳಾಗಿದ್ದಿತ್ತು.

ಆರಂಭದಲ್ಲಿ ಸಾಲ ನೀಡುವ ಕಾರ್ಯ ಮಾತ್ರ ನಡೆಸುತ್ತಿದ್ದ ಸಹಕಾರ ಕಾರ್ಯಕ್ರಮವು ಈಗ ಅನೇಕ ರೀತಿಯ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಹಾಸುಹೊಕ್ಕಾಗಿದೆ; ಮೀನುಗಾರಿಕೆ, ಹಾಲಿನ ಮಾರಾಟ, ಕೈಗಾರಿಕೆಗಳು, ಉತ್ಪಾದನೆ, ಮಾರಾಟ, ಸಾರಿಗೆ, ಮುದ್ರಣ, ವೈದ್ಯಕೀಯ ಸಹಾಯ ಮತ್ತು ವಿದ್ಯಾಭ್ಯಾಸ ಮುಂತಾದ ಕ್ಷೇತ್ರಗಳಲ್ಲಿ ಈಗ ಸಹಕಾರಿ ಪ್ರಯತ್ನಗಳನ್ನು ಕಾಣಬಹುದು.

ಈ ಹಿಂದೆ ಸಾಲವನ್ನು ಜಮೀನಿನ ಆಧಾರದ ಮೇಲೆ ನೀಡಲಾಗುತ್ತಿತ್ತು. ಇದರಿಂದ ಸಣ್ಣ ಹಿಡುವಳಿಗಾರರಿಗೆ ಸಾಕಷ್ಟು ಹಣ ದೊರೆಯುತ್ತಿರಲಿಲ್ಲ. ಅಂತಹವರಿಗೆ ಈಗ ವ್ಯಕ್ತಿಯ ಆಧಾರದ ಮೇಲೆ ಅಥವಾ ಉತ್ಪನ್ನದ ಆಧಾರದ ಮೇಲೆ ಸಾಲ ನೀಡಲಾಗುತ್ತಿದೆ.

ಹಿಂದೆ, ಮಧ್ಯಸ್ಥಿಕೆಗಾರರ ಮೂಲಕ ರೈತರು ತಮ್ಮ ಉತ್ಪಾದನಾ ವಸ್ತುಗಳನ್ನು ಮಾರುತ್ತಿದ್ದರು. ಇದರಿಂದ ರೈತರಿಗೆ ಅನಾನುಕೂಲವಾಗುತ್ತಿತ್ತು. ಇದನ್ನು ನಿವಾರಿಸಲು ಈಗ ಸುಮಾರು ೩೦೦೦ ಮಾರ್ಕೆಟಿಂಗ್ ಸಹಕಾರ ಸಂಘಗಳು ದೇಶದಾದ್ಯಂತ ಕೆಲಸ ಮಾಡುತ್ತಿವೆ.

ಈ ಸಂಘಗಳು ರೈತರ ಉತ್ಪಾದನಾ ವಸ್ತುಗಳನ್ನು ಉಗ್ರಾಣಗಳಲ್ಲಿ ಶೇಖರಿಸಿ, ಸರಿಯಾದ ಬೆಲೆ ದೊರೆತಾಗ ಮಾರಾಟ ಮಾಡುತ್ತವೆ. ಈ ಮೂಲಕ ಮಧ್ಯಸ್ಥಿಕೆಗಾರರ ಅನೀತಿಯುತ ಕಾರ್ಯವನ್ನು ತೊಡೆದು ಹಾಕಿದಂತಾಗಿದೆ.

ಸಹಕಾರದ ಮೂಲಕ ಸಕ್ಕರೆ ಕಾರ್ಖಾನೆ, ಸಣಬು ಮತ್ತು ಭತ್ತದ ಗಿರಣಿಗಳು ಕೆಲಸ ಮಾಡುತ್ತಿವೆ. ಇದರಿಂದ ರೈತರಿಗೆ ಅಧಿಕ ಲಾಭ ದೊರೆತಿದೆ.

ಸಹಕಾರೀ ಬೇಸಾಯ

ರೈತರು ತುಂಡು ಜಮೀನನ್ನು ಹೊಂದಿರುವುದರಿಂದ ಯಂತ್ರೋಪಕರಣಗಳನ್ನು ಬಳಸಿ, ವ್ಯವಸಾಯ ಮಾಡಲು, ಆರ್ಥಿಕವಾಗಿ ಲಾಭವಾಗುತ್ತಿರಲಿಲ್ಲ. ಆದ್ದರಿಂದ ಸಹಕಾರ ತತ್ವದ ಮೇಲೆ, ಈ ತುಂಡು ಭೂಮಿಗಳ ರೈತರು ಸಹಕರಿಸಿ, ಸಹಕಾರೀ ಬೇಸಾಯ ಪದ್ಧತಿಯನ್ನು ಕಾರ್ಯಾಚರಣೆಯಲ್ಲಿ ತಂದಿದ್ದಾರೆ. ಎರಡನೆಯ ಯೋಜನೆಯ ಕೊನೆಯ ಹೊತ್ತಿಗೆ, ೧೬೦೦ ಸಹಕಾರೀ ಬೇಸಾಯ ಫಾರಂಗಳು ಯಂತ್ರೋಪಕರಣಗಳನ್ನು ಬಳಸಿ ವ್ಯವಸಾಯ ಕಾರ್ಯಕ್ರಮವನ್ನು ಆರಂಭಿಸಿದ್ದವು. ಈಗ, ೫೦೦೦ಕ್ಕಿಂತ ಹೆಚ್ಚು ಸಹಕಾರಿ ಬೇಸಾಯ ಫಾರಂಗಳು ಕೆಲಸ ಮಾಡುತ್ತಿವೆ.

ಕೈಗಾರಿಕಾ ಸಹಕಾರಿ ಸಂಘಗಳು

ಭಾರತವು ಗೃಹಕೈಗಾರಿಕೆ ಮತ್ತು ಗ್ರಾಮ ಕೈಗಾರಿಕೆಗೆ ಬಹು ಪುರಾತನ ಕಾಲದಿಂದಲೂ ಪ್ರಸಿದ್ಧಿಯಾಗಿದ್ದಿತು. ಈ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು, ಈಗ ಸಹಕಾರಿ ಸಂಘಗಳು ಉಪಯುಕ್ತವಾಗಿವೆ. ಈ ಸಂಘಗಳ ಮೂಲಕ ಹಣ, ಯಂತ್ರೋಪಕರಣಗಳು ತಾಂತ್ರಿಕ ಜ್ಞಾನ ದೊರೆಯುತ್ತಿವೆ. ಸಹಕಾರ ತತ್ವದ ಮೇಲೆ, ವಿದ್ಯುತ್‌ಚಾಲಿತ ಮಗ್ಗಗಳು, ವ್ಯವಸಾಯೋತ್ಪನ್ನ ಉಪಕರಣಗಳು, ಚರ್ಮ ಹಾಗೂ ಪಾದರಕ್ಷೆಯ ಕೈಗಾರಿಕೆಗಳು ನಡೆಯುತ್ತಿವೆ. ಕೆಲವು ಕಡೆ, ಸಹಕಾರಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗಿದೆ.

ಬಳಕೆದಾರರ ಸಹಕಾರ ಸಂಘಗಳು

೧೯೬೨ನೇ ನವೆಂಬರ್ ತಿಂಗಳಲ್ಲಿ ೫೦೦೦೦೦ ಜನಸಂಖ್ಯೆಯುಳ್ಳ ನಗರಗಳಲ್ಲಿ ಕೇಂದ್ರ ಯೋಜಿತ ಕಾರ್ಯಕ್ರಮವಾಗಿ ಸಗಟು ಹಾಗೂ ಚಿಲ್ಲರೆ ವ್ಯಾಪಾರದ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಲಾಯಿತು. ಈ ಕಾರ್ಯಕ್ರಮಕ್ಕೆ ೧೦ ಕೋಟಿ ರೂ.ಗಳ ಬಂಡವಾಳವನ್ನು ಹಾಕಲಾಯಿತು. ಮೂರನೆ ಯೋಜನೆ ಕೊನೆಯ ಹೊತ್ತಿಗೆ ಸುಮಾರು ೨೬೭ ಸಗಟು ವ್ಯಾಪಾರದ ಮಳಿಗೆಗಳು ಮತ್ತು ೮೦೦೦ ಸಣ್ಣ ವ್ಯಾಪಾರದ ಅಂಗಡಿಗಳು ಪ್ರಾರಂಭವಾಗಿದ್ದವು. ಈಗ ಈ ಕಾರ್ಯಕ್ರಮವನ್ನು ೧೦೦೦೦ ಜನಸಂಖ್ಯೆಯುಳ್ಳ ಎಲ್ಲಾ ಪಟ್ಟಣಗಳಿಗೆ ವಿಸ್ತರಿಸಲಾಗಿದೆ. ಶೇಕಡ ೨೦ರಷ್ಟು ಜನಸಂಖ್ಯೆಗೆ ನ್ಯಾಯ ಬೆಲೆಯಲ್ಲಿ ಬಳಕೆ ವಸ್ತುಗಳನ್ನು ನೀಡುವುದು ಇದರ ಉದ್ದೇಶವಾಗಿದೆ.

ರೂಪಾಯಿಯ ಅಪಮೌಲ್ಯದ ನಂತರ, ಇಲಾಖೆಯ ಅಂಗಡಿಗಳನ್ನು ತೆರೆಯಲು ಆರಂಭವಾಯಿತು. ದಹಲಿಯಲ್ಲಿ ಸೂಪರ್ ಬಜಾರಿನಲ್ಲಿ ಪ್ರತಿದಿನದ ಮಾರಾಟ ಸುಮಾರು ೧ ಲಕ್ಷ ರೂ.ಗಳಷ್ಟಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮೂಲಕ ದಿನಬಳಕೆಯ ವಸ್ತುಗಳನ್ನು ಮಾರಲಾಗುತ್ತಿದೆ. ಸೈಕಲ್ ರಿಕ್ಷಾ ಮತ್ತು ಗ್ರಂಥ ಪ್ರಕಟನೆಯ ಕ್ಷೇತ್ರಕ್ಕೂ ಸಹಕಾರ ಕಾರ್ಯಕ್ರಮ ವಿಸ್ತಾರಗೊಂಡಿದೆ. ಸೈಕಲ್ ರಿಕ್ಷಾ ಎಳೆಯುವವರು, ಸೈಕಲ್ ರಿಕ್ಷಾ ಬದಲು ಈಗ ಸಹಕಾರ ಸಂಸ್ಥೆಗಳಿಂದ ಆಟೋರಿಕ್ಷಾಗಳನ್ನು ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ. ಸೈಕಲ್ ರಿಕ್ಷಾದಿಂದ ಎರಡು ಹೊತ್ತು ಊಟಕ್ಕೂ ಆದಾಯ ಬರುತ್ತಿರಲಿಲ್ಲವಾದರೆ, ಈಗ ಆಟೋರಿಕ್ಷಾ ನಡೆಸುವುದರಿಂದ ದಿನಕ್ಕೆ ೫ ರಿಂದ ೧೦ ರೂ. ಗಳನ್ನು ಗಳಿಸುತ್ತಿದ್ದಾರೆ.

ಕೇರಳದಲ್ಲಿ ಸಾಹಿತ್ಯ ಪ್ರವರ್ತಕ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ಸದಸ್ಯರ ಪುಸ್ತಕಗಳನ್ನು ಮುದ್ರಿಸುವ ಪ್ರಕಟಿಸುವ ಕೆಲಸವನ್ನು ಈ ಸಂಘವು ನಿರ್ವಹಿಸುತ್ತಿದೆ. ೧೦ ವರ್ಷಗಳಲ್ಲಿ ೧೨೦೦ ಪುಸ್ತಕಗಳನ್ನು ಈ ಸಂಘವು ಪ್ರಕಟಿಸಿದೆ. ಸದಸ್ಯ ಗ್ರಂಥ ಕರ್ತನು ತನ್ನ ಗ್ರಂಥದ ಬೆಲೆಯ ಶೇಕಡ ೩೦ರಷ್ಟನ್ನು ರಾಯಲ್ಟಿಯಾಗಿ ಪಡೆಯುತ್ತಾನೆ.

ಸರ್ಕಾರದ ಪಾತ್ರ

ಸಹಕಾರ ಆಂದೋಲನವನ್ನು ಯಶಸ್ವಿಯಾಗಿ ಮಾಡಲು ಸರ್ಕಾರವು ಮಹತ್ವದ ಪಾತ್ರವಹಿಸಿದೆ. ಸಹಕಾರ ಪ್ರಯತ್ನಕ್ಕೆ ಉಪಯುಕ್ತ ಮಸೂದೆಗಳನ್ನು ತರುವುದು, ಆರ್ಥಿಕ ಸಹಾಯ ನೀಡುವುದು ಮತ್ತು ಸಂಪೂರ್ಣ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನ ನೀಡುವುದು ಇವೇ ಕಾರ್ಯಕ್ರಮಗಳ ಮೂಲಕ ಸರ್ಕಾರ ಸಹಕಾರ ಪ್ರಯತ್ನವನ್ನು ಪ್ರೋತ್ಸಾಹಿಸಿದೆ. ಸಹಕಾರ ಸಂಘಗಳು ತಮ್ಮ ಕಾರ್ಯವನ್ನು ತಾವೇ ನಿರ್ವಹಿಸಲು ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರದ ಮಟ್ಟದಲ್ಲಿ ಅಂತೂ ಸಹಕಾರ ಕಾರ್ಯಕ್ರಮದ ಫೆಡರೇಷನ್‌ಗಳನ್ನು ರೂಪಿಸಲಾಗಿದೆ. ಅಧಿಕಾರಿಗಳ ಮೇಲೆ ಅವಲಂಬನೆಯಾಗುವುದನ್ನು ಕಡಿಮೆ ಮಾಡಲಾಗುತ್ತಿದೆ.

ಸದಸ್ಯರಿಗೆ ಉಪಯುಕ್ತ ಶಿಕ್ಷಣ ನೀಡಿ, ಸಹಕಾರ ಧೋರಣೆವನ್ನು ರೂಪಿಸಲು ರಾಷ್ಟ್ರೀಯ ಸಹಕಾರ ಯೂನಿಯನ್ ಒಂದು ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ಸಹಕಾರ ಸಂಘಗಳನ್ನು ನಡಸುವವರಿಗೆ ಮತ್ತು ಸಿಬ್ಬಂದಿಗಳಿಗೆ ತಾಂತ್ರಿಕ ಜ್ಞಾನದಲ್ಲಿ ಹಾಗೂ ವ್ಯವಹಾರ ಮೇಲ್ವಿಚಾರಣೆಯಲ್ಲಿ ತರಪೇತನ್ನು ನೀಡಲು ವ್ಯವಸ್ಥೆ ಮಾಡಲಾಗುತ್ತಿದೆ. ಈ ಎಲ್ಲಾ ಕ್ರಮಗಳಿಂದ ಸಹಕಾರ ಚಳುವಳಿಯು ದೇಶದಲ್ಲಿ ಸುವ್ಯವಸ್ಥೆಯಿಂದ ನಡೆಯಲು ಭದ್ರ ಬುನಾದಿಯನ್ನು ಹಾಕಿದಂತಾಗಿದೆ.

ಪ್ರಧಾನ ಮಂತ್ರಿಯವರ

ಕ್ಷಾಮ ಪರಿಹಾರ ನಿಧಿಗೆ
ಕಾಣಿಕೆ ನೀಡಿರಿ

ಈ ನಿಧಿಗೆ ಕಳುಹಿಸುವ ಹಣ ಅಥವಾ ವಸ್ತುಗಳಿಗೆ
ಅಂಚೆ ವೆಚ್ಚ ರೈಲ್ವೆ ಮತ್ತು ವಿಮಾನ ರವಾನೆ ಖರ್ಚು
ವರಮಾನ ತೆರಿಗೆ ಹಾಗೂ ಸುಂಕಗಳಲ್ಲಿ
ರಿಯಾಯತಿ ದೊರೆಯುತ್ತದೆ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಇತಿಹಾಸ

ಬೊಕ್ಕಸ ತುಂಬಿಸಲು ರಾಜ ವೇಶ ಹಾಕಿದರು

ಅನು : ಶ್ರೀ ಕೆ. ನಾರಾಯಣಾಚಾರ್.

ಹತ್ತನೆಯ ಶತಮಾನದಲ್ಲಿ ಪೌರನೆಂಬ ಒಬ್ಬ ಅರಸನು ಸಿಂಧು ದೇಶದ ಗಡಿಯ ಕಚ್ಛದಲ್ಲಿ ಒಂದು ಸಣ್ಣ ರಾಜ್ಯವಾಳುತ್ತಿದ್ದನು. ಅವನ ರಾಜಧಾನಿಯು ಪದ್ಧಾರಘರವೆಂಬುದಾಗಿತ್ತು. ಅವನು ತನ್ನ ಬೊಕ್ಕಸದ ಹಣವನ್ನೆಲ್ಲಾ ಖರ್ಚುಮಾಡಿ ಒಂದು ದೊಡ್ಡ ಕೋಟೆ ಕಟ್ಟಿಸಿದನು.

"ನಾನು ನನ್ನ ಬೊಕ್ಕಸವನ್ನು ತುಂಬಿಸಬೇಕು. ಇದಕ್ಕೆ ಒಂದೇ ಒಂದು ಉಪಾಯವೇನೆಂದರೆ ಸಿಂಧುರಾಜ ರಣಚಂಡನ ರಾಜಧಾನಿಯಾದ ನಗರಥಟ್ಟವನ್ನು ಸೂರೆಮಾಡಬೇಕು. ಮೊದಲಾಗಿ ರಣಚಂಡನ ಕೋಟೆಯ ದುರ್ಬಲ ಪ್ರದೇಶವನ್ನು ಕಂಡು ಹಿಡಿದು ಅವನ ಸೈನ್ಯದ ಶಕ್ತಿಯನ್ನು ತಿಳಿದುಕೊಳ್ಳಬೇಕು" ಹೀಗೆ ಅವನು ಆಲೋಚಿಸಿದನು.

ಮರುದಿನ ನಗರಥಟ್ಟದಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯು ಬಂದು ಅರಮನೆಯ ಕುದುರೆಲಾಯದಲ್ಲಿ ತನಗೊಂದು ಸಣ್ಣ ಉದ್ಯೋಗವನ್ನು ಕೊಡಬೇಕೆಂದು ಕೇಳಿಕೊಂಡನು. ಅದು ಪೌರನೇ ಆಗಿದ್ದನು.

ದಿನ ಕಳೆದಂತೆ ಈ ಹೊಸ ಕುದುರೆ ಕಾಸ್ತಾರನು ಪ್ರಧಾನ ಕಾಸ್ತಾರನೊಡನೆ ಸ್ನೇಹಗಳಿಸಿದನು. ಅವನಿಗೆ ಒಂದು ಹೆಣ್ಣು ಕುದುರೆಯಲ್ಲಿ ಮೋಹವುಂಟಾಯಿತು. ಅದಕ್ಕೆ ಯಾವಾಗಲೂ ಜೀನು ಹಾಕಿರುತ್ತಿತ್ತು. ಆದರೂ ಅದರ ಮೇಲೆ ಯಾರೊಬ್ಬರೂ ಕುಳಿತುಕೊಳ್ಳುತ್ತಿರಲಿಲ್ಲ.

"ಆ ಕುದುರೆಯ ಮೇಲೆ ಯಾರೂ ಕುಳಿತುಕೊಳ್ಳುವುದಿಲ್ಲ, ಅದೇಕೆ?' ಎಂದು ಅವನು ಪ್ರಧಾನ ಕಾಸ್ತಾರರನ್ನು ಕೇಳಿದನು. ಅವನು ಹೀಗೆ ಉತ್ತರ ಕೊಟ್ಟನು:- "ಈ ಕುದುರೆಗೆ ಫುಲ್‌ಮಲ್ ಎಂದು ಹೆಸರು. ಇದು ಬಹು ತುಡುಕಿನದು. ಇದರ ಮೇಲೆ ಯಾರು ಸವಾರಿ ಮಾಡುವನೋ ಅವನಿಗೆ ರಣಚಂಡನ ತಂಗಿಯಾದ ರಾಜೀವಿಯನ್ನು ಮದುವೆ ಮಾಡಿ ಕೊಡಲಾಗುವುದು."

ಪೌರನು ಲಕ್ಷ್ಯವಿಟ್ಟು ಕುದುರೆಯನ್ನು ನೋಡಿದನು. ಅದು ನಿಜವಾಗಿ ಬಹು ತುಡುಕಿನದ್ದಾಗಿತ್ತು. ಆದರೆ ತಾನು ಅತಿ ಚತುರನಾದ ಕುದುರೆ ಸವಾರನು. ತನಗೆ ಅದರ ಮೇಲೆ ಸವಾರಿ ಮಾಡಲು ಕಷ್ಟವೇನೂ ಆಗಲಾರದು.

ಆದರೆ ಅವಸರದಿಂದ ಏನೂ ಮಾಡಬಾರದು. ತಾನು ಶತ್ರುಗಳ ನಗರದಲ್ಲಿದ್ದೇನೆ. ತಾನು ಬಂದುದು ಒಂದು ಉದ್ದೇಶಕ್ಕಾಗಿ. ಹೀಗೆ ಆಲೋಚಿಸಿ ಸಿಂಧು ರಾಜ್ಯದ ಸೈನ್ಯಬಲವನ್ನು ಜಾಗ್ರತೆಯಿಂದ ಪರೀಕ್ಷಿಸುತ್ತಾ ತನ್ನ ಸಣ್ಣ ಉದ್ಯೋಗವನ್ನೇ ಹಿಡಿದು ಅವನು ಮುಂದರಿದನು.

ಆಗ ಒಂದು ದಿನ ಅರಮನೆಯ ಎದುರಿನ ಕೊಳದಲ್ಲಿ ಲಾಖೀ ಎಂಬ ಒಂದು ಚಲೋ ಕುದುರೆಗೆ ಅವನು ನೀರೆಯುತ್ತಿದ್ದಾಗ ಮಹಾರಾಣಿಯು ಅವನನ್ನು ನೋಡಿದಳು.

ಒಬ್ಬ ಸುಂದರ ತರುಣನು ಒಂದು ಸುಂದರವಾದ ಕುದುರೆಯ ಮೇಲೇರಿರುವುದು ರಾಣಿಯ ಲಕ್ಷ್ಯವನ್ನು ಆ ಕಡೆಗೆ ಸೆಳೆಯಿತು. ಅವಳು ಯೋಚಿಸಿದಳು:—ಈ ಅಪರಿಚಿತ ವ್ಯಕ್ತಿಯು ಯಾರು? ಇವನು ನನ್ನ ರಾಜೀವಿಗೆ ಒಳ್ಳೆಯ ಗಂಡನಾಗಬಹುದು. ಒಳ್ಳೆ ಕುದುರೆ ಸವಾರನಂತೆ ಕಾಣುತ್ತಾನೆ. ಇವನು ಫುಲ್‌ಮಲ್ಲಿನ ಮೇಲೆ ಸವಾರಿ ಮಾಡಬಲ್ಲನೇ?"

ರಾಣಿಯು ಅವನನ್ನು ಕರತಂದು ಕೇಳಿದಳು. ಪೌರನು ಉತ್ತರ ಕೊಟ್ಟನು. 'ಮಹಾರಾಣಿ!" ನಾನೊಬ್ಬ ಜೀವನ ನಿರ್ವಾಹಕ್ಕಾಗಿ ಕಚ್ಛ ದೇಶದಿಂದ ಬಂದ ಬಡ ಹುಡುಗ. ನಾನು ನಿಮ್ಮ ಕುದುರೆಲಾಯದಲ್ಲಿ ಒಬ್ಬ ಕಾಸ್ತಾರನಾಗಿ ಕೆಲಸ ಮಾಡುತ್ತಿದ್ದೇನೆ.'

ರಾಣಿಯು ಆ ಸುಂದರ ತರುಣನನ್ನು ನೋಡಿ ಕೇಳಿದಳು— "ನೀನು ಫುಲ್‌ಮಲ್ಲಿನ ಮೇಲೆ ಸವಾರಿ ಮಾಡಬಲ್ಲೆಯಾ?"

ಅದರಲ್ಲೇನೂ ಕಷ್ಟವಿಲ್ಲವೆಂದು ಪೌರನು ಉತ್ತರಕೊಟ್ಟನು. 'ಹಾಗಾದರೆ ನಾಳೆ ಬೆಳಿಗ್ಗೆ ಅರಮನೆಯ ಉದ್ಯಾನದಲ್ಲಿ ನೀನು ಸವಾರಿ ಮಾಡಬೇಕು. ನಾನೂ ನನ್ನ ಪತಿಯೂ ಅವರ ತಂಗಿಯೂ ನಿನ್ನನ್ನು ನೋಡುವೆವೆಂದು ರಾಣಿಯು ಹೇಳಿದಳು.

ಮರುದಿನ ರಣಚಂಡನೂ ಇಬ್ಬರು ಹೆಂಗಸರೂ ಆತುರದಿಂದ ನಿರೀಕ್ಷಿಸುತ್ತಿದ್ದರು. ಕೂಡಲೇ ಅರಸನು ಅಬ್ಬರಿಸಿದನು. ಕುದುರೆಯು ಉದ್ಯಾನಕ್ಕೆ ಹಾರಿಕೊಂಡು ಬರುತ್ತಿತ್ತು. ತರುಣನಾದ ಪೌರನು ಸುಲಭವಾಗಿ ಸವಾರಿ ಮಾಡುತ್ತಿದ್ದನು.

'ಶಹಬಾಸ್! ಹುಡುಗ! ಈಗ ನನ್ನ ತಂಗಿಗೆ ಯೋಗ್ಯನಾದ ಗಂಡನು ನನಗೆ ದೊರಕಿದನು. ಎಂಟು ದಿನಗಳೊಳಗೆ ನನ್ನ ತಂಗಿಯನ್ನು ಕೊಟ್ಟು ನಿನಗೆ ಮದುವೆ ಮಾಡುವೆನು" ಎಂದು ಅರಸನು ಗಟ್ಟಿಯಾಗಿ ಹೇಳಿದನು.

ಪೌರನು ಅರಮನೆಯ ಕಡೆಗಟ್ಟಿನ ಕೆಳಗೆ ಸುಮ್ಮನೆ ನಿಂತು ಹೇಳಿದನು:— "ನಾನು ನಿಜವಾಗಿ ಯಾರೆಂದು ತಿಳಿದರೆ ನಿನ್ನ ಮಾತಿನಂತೆ ನಡೆಯಲಾರೆ. ನಾನು ನಿನ್ನ ಕಡುವೈರಿಯಾದ ಕಚ್ಛದ ರಾಜಾ ಫುಲಾಜಿಯ ಮೊಮ್ಮಗನು."

ಫುಲಾಜಿಯು ಹೆಸರೆತ್ತಿದ ಕೂಡಲೆ ಅರಸನ ಮುಖವು ಕೋಪದಿಂದ ಕೆಂಪಾಯಿತು:—"ಅವನನ್ನು ಹಿಡಿಯಿರಿ, ಬಡಿಯಿರಿ, ಕೊಂದುಹಾಕಿರಿ" ಎಂದು ಗಟ್ಟಿಯಾಗಿ ಕೂಗಿದನು.

ಆದರೆ ಯಾರೊಬ್ಬನೂ ಮುಂದೆ ಬರುವ ಮೊದಲು ಪೌರನು ಓಡಿಹೋದನು. ಅವನು ಪರಬಲದ ಪರೀಕ್ಷೆಯ ಕಾರ್ಯವನ್ನು ಮುಗಿಸಿದ್ದನು. ಫುಲ್‌ಮಲ್‌ನಂತಹ ಒಂದು ಚಲೋ ಕುದುರೆಯು ಅವನ ಸ್ವಾಧೀನಕ್ಕೆ ಬಂದಿದೆ. ವಾಯುವೇಗದಿಂದ ಅವನು ಕುದುರೆಯ ಮೇಲೇರಿ ಕಚ್ಛ ದೇಶದ ಕಡೆಗೆ ಧಾವಿಸಿದನು.

ಪದ್ಧಾರಘರವನ್ನು ತಲುಪಿದೊಡನೆಯೇ 'ಯುದ್ಧಕ್ಕೆ ಸಿದ್ಧರಾಗಿರಿ' ಎಂದು ಅವನು ತನ್ನ ಜನರಿಗೆ ಆಜ್ಞೆಕೊಟ್ಟನು.

ಮೂರು ವಾರಗಳೊಳಗೆ ಪೌರನ ಸೈನ್ಯವು ನಗರಥಟ್ಟಕ್ಕೆ ಮುತ್ತಿಗೆ ಹಾಕಿತು. ಯುದ್ಧವು ಭಯಂಕರವಾಯಿತು. ಆದರೆ ಪೌರನು ರಹಸ್ಯವನ್ನೆಲ್ಲಾ ತಿಳಿದಿದ್ದನು. ಎಂಟು ದಿನಗಳೊಳಗೆ ನಗರಥಟ್ಟದ ಕೋಟೆಯು ಬಿದ್ದುಹೋಯಿತು.

ವಿಜಯೀ ಸೇನೆಯು ಶತ್ರುರಾಜಧಾನಿಯನ್ನು ಪ್ರವೇಶಿಸುವಾಗ ಪೌರನು ಕಟ್ಟುನಿಟ್ಟಿನ ಆಜ್ಞೆಕೊಟ್ಟನು:— "ಶತ್ರುಗಳನ್ನು ಸೂರೆಮಾಡಬಾರದು. ಜನರಿಗೇನೂ ತೊಂದರೆ ಕೊಡಬಾರದು.'

ಇಬ್ಬರು ಅರಸರು ಸಂಧಿಸಿದಾಗ ಪೌರನು ಹೇಳಿದನು- 'ನಿಮ್ಮ ರಾಜಧಾನಿಯನ್ನು ಸೂರೆ ಮಾಡಬಾರದೆಂದು ನಾನು ಕೊಟ್ಟ ಆಜ್ಞೆಯಿಂದ ನಾನು ನಿಮ್ಮನ್ನು ನಾಶಮಾಡಲು ಬಂದವನಲ್ಲವೆಂದು ತಿಳಿಯಬಹುದು. ಫುಲ್‌ಮಲ್ ಕುದುರೆಯ ಮೇಲೆ ನಾನು ಸವಾರಿ ಮಾಡಿರುವುದರಿಂದ ನೀವು ನಿಮ್ಮ ತಂಗಿಯನ್ನು ನನಗೆ ಮದುವೆ ಮಾಡಿಕೊಡಲು ಬದ್ಧರಾಗಿರುತ್ತೀರಿ. ನಾನು ಈಗ ಇನ್ನೊಂದು ವಿಷಯ ಕೇಳುತ್ತೇನೆ. ಹತ್ತು ಲಕ್ಷ ನಾಣ್ಯಗಳನ್ನು ನೀವು ನನಗೆ ನಗದಾಗಿ ಕೊಡಬೇಕು.' ರಣಚಂಡನು ಒಪ್ಪಿದನು. ಪೌರನು ತನಗೊಂದು ಸುಂದರಿಯಾದ ಮಡದಿಯನ್ನೂ ತನ್ನ ಕ್ಷೀಣವಾದ ಬೊಕ್ಕಸಕ್ಕೆ ಧಾರಾಳ ಸಂಪತ್ತನ್ನೂ ಪಡೆದನು.

ಭಳಿರೇ ಮಾತಿನ ಮಲ್ಲಿ

(ಆರನೇ ಪುಟದಿಂದ)

ಸ್ತುಗಳ ಬೆಲೆ. ಆದರೆ ಮದರಾಸಿನಲ್ಲಿ ಅಣ್ಣಾದೊರೈಗಳ ದಿಟ್ಟತನದ ಸಾಹಸ"

'ಅದಕ್ಕೇನು ಧೈರ್ಯ ಬೇಕು ಕಣೇ! ನಾಳೆ ಬೇಕಿದ್ರೆ ನೀನೂ ರೇಟು ಡೌನ್ ಮಾಡ್ತಿ"

"ಆದರೆ....ಎಷ್ಟು ಸಮಯ ನಡೆಯುತ್ತೆ ಅಂತ ನೋಡ್ಬೇಕಲ್ಲಾ ದೊರೈ..."

'ಅಣ್ಣಾ ದೊರೈ ಒಬ್ರು ಸಾಲ್ದೂಂತ ನನ್ನನ್ನು ದೊರೈ ಮಾಡೋ ಅಂದಾಜಲ್ವೇ"

"ಹಾಗಲ್ಲ...ರೀ... ಮಾತು ಮಾತಿಂಗೆ ಪ್ರೀತಿಯಿಂದ ಉಲಿದೆ...ಅಷ್ಟೆ.'

"ನಮ್ಮಲ್ಲೂ ಬೆಲೆ ಕಮ್ಮಿಯಾದೀತು. ತಾಳುವಿಕೆಗಿಂತನ್ಯ ತಪವು ಇಲ್ಲ. ಆದ್ರಿಂದ ಸೈರಣೆ ಮುಖ್ಯ ಕಣೇ''

"ತಾಳಿ ಬಾಳಿದರೆ ಕಾಳು ಕೇಳಿದಲ್ಲಿ ಮಂದೆ ಬೀಳ ಬಹುದೆಂಬುದು ನಿಮ್ಮ ಆಲೋಚನೆ ತಾನೆ? ತಾಳುವಿಕೆ ಎಲ್ಲಿಯವರೆಗೆ? ಇನ್ನು ತಾಳಿದರೆ ಹಾಳಾಗಿ ಹೋಳು ಹೋಳಾಗಿ ಗೋಳು ಹೊಡೆಯುವುದೊಂದೆ ಬಾಕಿ"

"Well said ..Woll said... ಭಳಿರೇ...ಮಾತಿನ ಮಲ್ಲಿ! ಕರ್ನಾಟಕ ಕವಯತ್ರಿ ಸಾರ್ವಭೌಮೆ!...ತರ್ಕಗುಣ ಚಾಪಂತೆ!...ತರ್ಕೋಕ್ತ ಗುಣನಿರತೆ....'

"ಅಯ್ಯೋ....ಸಾಕು ನಿಮ್ಮ ಬಿರುದಾವಳಿಗಳು....ಸಾಕು....ಸಾಕು....ಸಾಕು ....ಉಪಾಧಿಗಳ ಉಪ ಆರತಿ"

"ಸಾಕೆ?...ಹ್ಹ ಹ್ಹ ಹ್ಹ...."

ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ. ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಕುಸುಮವಧು	0=25
ಸನ್ಯಾಸಿಯ ಗೋರಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಎಲ್ಲಾ ತರದ
ಫಾರ್ಮುಗಳಿಗೆ
ದಯಮಾಡಿ ವಿಚಾರಿಸಿರಿ
ನವಯುಗ ಪ್ರೆಸ್
ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಕನಕದಾಸ ರಚಿತ
ಹರಿಭಕ್ತಿಸಾರ
ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
ರಖಂ ಪ್ರತಿಗಳಿಗೆ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಸಮಾಜದ ಸಂಘಟನೆ ಸಮಯ ಸಂಜೀವಿನಿ

(ಐದನೇ ಪುಟದಿಂದ)

ಕಿಸ್ಥಾನದ ಮುಸ್ಲಿಮರೂ ನಮ್ಮ ಮೇಲೆ ಆಕ್ರಮಣ ನಡೆಸಿದರು. ಮತ್ತೆ ಇಲ್ಲಿಯ ಜನತೆ ಒಂದಾಗಿ ಎದ್ದು ನಿಂತಿತು. ದ್ರಾವಿಡ ನಾಡು ಅಥವಾ ತಮಿಳು ನಾಡಿನ ತಂಟೆಯೂ, ಸಿಖ್ಖಿಸ್ಥಾನದ ಸಿಡಿಮಿಡಿಯೂ ಸ್ಥಬ್ಧವಾಗಿ ಬಿಟ್ಟಿತು. ಆಸೇತು ಹಿಮಾಚಲ ತನಕ ಒಕ್ಕಟ್ಟಿನ ಪ್ರವಾಹ ಒಂದು ರೀತಿಯಲ್ಲಿ ಹರಿಯಿತು. ಕಮ್ಯೂನಿಸ್ಟರೂ, ಮತಾಂಧರೂ ಆ ಪವಿತ್ರ ಗಂಗಾ ಪ್ರವಾಹದಲ್ಲಿ ಮುಳುಗಲು ಮುಂದೆ ಬರಲಿಲ್ಲವೆನ್ನುವದು ನಿಜವಾದರೂ, ಹೆಚ್ಚಿನವರು ವಿವಿಧತೆ-ಭಿನ್ನತೆಗಳ ವಿಶೇಷಣಗಳನ್ನು ಬದಿಗೆ ಸರಿಸಿ ಒಂದಾದರು.

ಹೀಗೆ ಒಕ್ಕಟ್ಟಿನ ಸಂದರ್ಭಕ್ಕಾಗಿ ಶ್ರಮಿಸಿದಾಗಲೆಲ್ಲಾ ನಾವು ಗುರಿಯನ್ನು ತಲುಪಿರುವೆವು. ನಾವು ಎಚ್ಚೆತ್ತೆವು, ಎಚ್ಚೆತ್ತೆದ್ದೆವು, ನಂತರ ಗುರಿಯನ್ನು ಮುಟ್ಟಿಯೇ ಬಿಟ್ಟೆವು. ಅಂದು ನಮ್ಮ ಮುಂದೆ ಒಂದು ಗುರಿ ಅಥವಾ ಧ್ಯೇಯ ಇತ್ತು. ಅಂಗ್ಲೇಯರನ್ನು ದೂಡುವ, ಚೈನಿಯರನ್ನು ಚದರಿಸುವ ಗುರಿ ನಮ್ಮ ಮುಂದೆ ಇತ್ತು. ಆದರೆ ಇಂದೇನಿದೆ? ಸೋಶಿಯಾಲಿಸಂ, ಸೆಕ್ಯೂಲರಿಸಂ ಇಂತಹ ಇಸಮ್‍ಗಳೇನೋ ಇವೆ. ಆ ಪದಗಳ ಅರ್ಥ ಇಂದ ಶ್ರೀ ಸಾಮಾನ್ಯನಿಗೆ ಗೊತ್ತಿರುವದಿಲ್ಲ. ಶ್ರೀ ಸಾಮಾನ್ಯರು ಹಾಗಿರಲಿ ಆ ಪದಗಳನ್ನು ಎಡೆಬಿಡದೆ ಜಪಿಸುತ್ತಿರುವವರಿಗೂ ಅದರ ಅರ್ಥ ಗೊತ್ತಿರುವದಿಲ್ಲ. ಅವರು ಒಮ್ಮೆ ಹಾಗೆನ್ನುತ್ತಾರೆ, ಇನ್ನೊಮ್ಮೆ ಹೀಗೆನ್ನುತ್ತಾರೆ. ರಾಷ್ಟ್ರಾಧ್ಯಕ್ಷರ ಹಾಗೂ ಅವರ ಅಂಗರಕ್ಷಕರ ಸಂಬಳಕ್ಕಿರುವ ವ್ಯತ್ಯಾಸ ಎಷ್ಟು! ಸರ್ವರಿಗೂ ಸಮಾನ ಮತಾಧಿಕಾರವಿದೆಯೆನ್ನಲಾಗುತ್ತಿದೆ. ಪದವೀಧರರಿಗೆ, ಉಪಾಧ್ಯಾಯರಿಗೆ ಹಾಗೂ ಇನ್ನು ಅಂತಹ ಕೆಲವರಿಗೆ ಶ್ರೀ ಸಾಮಾನ್ಯನಿಗಿಂತ ಮತಾಧಿಕಾರ ಅಧಿಕವಿದೆ. ಮದುವೆಯ ವಿಷಯದಲ್ಲೂ ಅಷ್ಟೇ. ಸಾಮಾನ್ಯ ಜನಕೋಟಿ ಹೇಗಿರಲಿ, ಸರಕಾರಿ ಉದ್ಯೋಗಸ್ಥರ ವಿಷಯದಲ್ಲೂ ಹಾಗೆನೇ. ಮಹಮ್ಮದೀಯ ಉದ್ಯೋಗಸ್ಥನು ಮನಸ್ಸಿಗೆ ಬಂದಂತೆ ಮದುವೆ (ನಿಖಾ) ಮಾಡಿಕೊಳ್ಳಬಹುದು, ಹಾಗೆನೇ ಮನ ಬಂದಂತೆ ವಿಚ್ಛೇದನ (ತಲಾಖ್) ಮಾಡಿ ಕೊಳ್ಳಬಹುದು. ದೇವಸ್ಥಾನದ ವಿಷಯದಲ್ಲೂ ಹಾಗೆನೇ, ಇಗರ್ಜಿ ಹಾಗೂ ಮಸೀದೆಯ ಆಡಳಿತದಲ್ಲೂ ಯಾರೂ ಕೈ ಹಾಕುವಂತಿಲ್ಲ. ಶಾಲೆಗೆ ಸೇರುವದಕ್ಕೂ, ಉದ್ಯೋಗಕ್ಕೆ ಸೇರುವಾಗಲೂ ಹಾಗೇನೇ. ಕೆಲವರಿಗೆ ವಿಶೇಷ ಸೌಲಭ್ಯ! ರಾಜ್ಯಗಳ ವಿಷಯದಲ್ಲೂ ಹಾಗೆನೇ. ಕಾಶ್ಮೀರಕ್ಕೆ ಒಂದು ಕಾನೂನು, ಕೇರಳಕ್ಕೊಂದು ಕಾನೂನು, ನಾಗಾಲೇಂಡಿಗೆ ಪ್ರತ್ಯೇಕ ಕಾನೂನು! ಇಂತಹ ಭಿನ್ನತೆ, ವಿವಿಧತೆ ಎಲ್ಲೆಲ್ಲೂ ತಾಂಡವವಾಡುತ್ತಿದ್ದು, ಮತ್ತೂ ಸೋಶಿಯಾಲಿಸಮಿನ ಸದ್ದು ಕೇಳಬರುತ್ತಿದೆ! ಸೋಶಿಯಾಲಿಸಂ ಅಂದರೆ ಸಮತಾವಾದ ಅಲ್ಲವೆನ್ನುವದು ಇದರಿಂದ ಸ್ಪಷ್ಟವಾಗುತ್ತದೆ. ಅದು ಸಮಾಜವಾದವಿದೆ. ಸಮಾವಾದವಾದರೋ ಮಾರ್ಕ್ಸ್ ಏಂಜಲ್ಸರ ಸಮಾನತೆಯ ವಾದವಲ್ಲ, ಅದು ಸಮಾಜದ ಸಂಘಟನೆಯ ಸೊಲ್ಲು ಇದೆ. ನಾವು ಒಂದು ಸಮಾಜಕ್ಕೆ—ಭಾರತೀಯ ಅಥವಾ ಹಿಂದೂ ಸಮಾಜಕ್ಕೆ ಸೇರಿದವರೆಂಬ ಸ್ಪಷ್ಟ ನೈಜ ಹಾಗೂ ನೈಸರ್ಗಿಕ ಚಿತ್ರವನ್ನು ನಮ್ಮ ಕಣ್ಮುಂದಿಡಲಿಕ್ಕಾಗಿಯೇ ಆ ಶಬ್ಧವಿದೆ. ನಾವು ಒಂದು ಸಮಾಜಕ್ಕೆ ಸೇರಿದವರೆಂಬ, ನೈಸರ್ಗಿಕ ಭಾವನೆಯ ಭಾಸ್ಕರನ ಉದಯವಾಯಿತೆಂದರೆ ನಂತರ ಅಲ್ಲಿ ಅದ್ಯಾವ ಸಮಾಜದ್ರೋಹಿ, ರಾಷ್ಟ್ರದ್ರೋಹಿ ಕುಕೃತ್ಯಗಳ ಅಂಧಕಾರಕ್ಕೆಡೆಯಿಲ್ಲದೆ ಹೋಗುತ್ತದೆ. ಇಂದು ಬೇಕಾಗಿರುವದಾದರೂ ಈ ಸಮಾಜದ ಸಂಘಟನೆಯೇ ಇದೆ. ಅದೇ ಇಂದಿನ ಸಮಯ ಸಂಜೀವಿನಿ ಇದೆ.

ಸೆಕ್ಯೂಲರಿಸಮಿನ ಸದ್ದೂ ಹಾಗೆನೇ. ರಾಷ್ಟ್ರಾಧ್ಯಕ್ಷರೊಬ್ಬರಿಗೆ ಒಂದು ದೇವಸ್ಥಾನದ ಉತ್ಸವದಲ್ಲಿ ಭಾಗವಹಿಸಲು ಸೆಕ್ಯೂಲರಿಸಮಿನ ಗೋಡೆ ಅಡ್ಡ ಬರುತ್ತದೆ. ಆದರೆ ಉಪರಾಷ್ಟ್ರಾಧ್ಯಕ್ಷರಿಗೆ ಮಸೀದಿಯ ಉತ್ಸವದಲ್ಲಿ ಭಾಗವಹಿಸಲು ಸೆಕ್ಯೂಲರಿಸಂ ಸ್ವಾಗತವೀಯುತ್ತದೆ. ಅಲ್ಲದೆ ತಮತಮಗೆ ಬೇಕಾದವರನ್ನು ಬೇಕಾದ ಸ್ಥಾನಕ್ಕೆ ತರಲು ಸೆಕ್ಯೂಲರಿಸಮಿನ ನಾಮಸ್ಮರಣೆ ಮಾಡುವಂತೆಯೇ, ತಮಗೆ ಬೇಕಾದವರನ್ನು ಉನ್ನತ ಸ್ಥಾನದಿಂದ ಪಾತಾಳಕ್ಕೆ ಮೆಟ್ಟಿಬಿಡಲೂ ಅದರ ಜಪಮಾಡಲಾಗುತ್ತಿದೆ! ಸೆಕ್ಯೂಲರಿಸಮಿನ ಶೂನ್ಯ ಈ ರೀತಿ ಹಿಗ್ಗುವದೂ ಉಂಟು, ಕುಗ್ಗುವದೂ ಉಂಟು! ನಮಗಿಂದು ಬೇಕಾಗಿರುವದು ಈ ರೀತಿಯ ಮಾಯೋತಿಯ ಸೆಕ್ಯೂಲರಿಸಂ ಅಲ್ಲ. ನಮಗಿಂದು ಬೇಕಾಗಿರುವದು ಶೈವ, ವೈಷ್ಣವ, ಸಿಖ್ಖ-ಆರ್ಯ ಸಮಾಜ, ಕ್ರಿಶ್ಚಿಯನ್-ಮುಹಮ್ಮದೀಯ, ಇಂತಹ ಭಿನ್ನ ಭಿನ್ನ ಭಿನ್ನತೆಗಳಿಲ್ಲದೆ ಸಾಮಾನ್ಯವಾಗಿ ಈ ದೇಶದ ಮಣ್ಣಿನಲ್ಲುಂಟಾಗಿರುವ ಪಾರಂಪರ್ಯದಿಂದ ಬಂದಿರುವ ಸೆಕ್ಯೂಲರಿಸಂ ಅಲ್ಲಿ ಅದ್ಯಾವ ಪ್ರತ್ಯೇಕ ಮತದ ಅಧಿಕಾರ ನಡೆಯುವಂತಿಲ್ಲ. ಅಲ್ಲಿ ಶ್ರೇಷ್ಠಸ್ಥಾನ ದೇಶಭಕ್ತಿಗೆ ಮೀಸಲು. ಈ ದೇಶದಲ್ಲಿ ಹುಟ್ಟಿ, ಈ ದೇಶದ ಮಕ್ಕಳಿಗಾಗಿ ಅಂದರೆ ಜನತೆಗಾಗಿ, ಮರ್ಯಾದೆಗಾಗಿ, ಉನ್ನತಿಗಾಗಿ, ಒಳ್ಳೆಯದಕ್ಕಾಗಿ ದುಡಿದು ಸ್ವರ್ಗವನ್ನೈದಿರುವ ಎಲ್ಲಾ ಮುಂದಾಳುಗಳನ್ನು ಆರಾಧಿಸುವಂತಹ ಸೆಕ್ಯೂಲರಿಸಂ. ಇದು ಭಾರತ ದೇಶವಿದೆ. ಇಲ್ಲಿ ಭಾರತ ಧರ್ಮದ ಧರ್ಮಶಾಸನ ಮಾತ್ರ ನಡೆಯಲು ಸಾಧ್ಯ.

ಇಂತಹ ಸೋಶಿಯಾಲಿಸಂ—ಸೆಕ್ಯೂಲರಿಸಂ ಬೇಕೇ ವಿನಃ ಕತ್ತರಿಯ ಮುಂದಕ್ಕೆ ಹಿಡಿಯಲಾಗುವ ಗೊಂಬಿನ ರೀತಿಯ ಸೋಶಿಯಾಲಿಸಂ—ಸೆಕ್ಯೂಲರಿಸಂ ಅಲ್ಲ. ನಮಗೆ ಬೇಕಾಗಿರುವದು ನಮ್ಮ ಸಮಾಜದ, ಸಂಪೂರ್ಣ ಭಾರತೀಯ ಸಮಾಜದ ಸಂಘಟನೆ. ಈ ದೇಶದ ಪ್ರತಿಯೋರ್ವ ಪ್ರಜೆಯೂ ಪ್ರತಿಯೊಬ್ಬನನ್ನು ತನ್ನ ಸಮಾಜಬಾಂಧವ ಹಾಗೂ ರಾಷ್ಟ್ರಬಂಧುವೆಂದು ಗುರುತಿಸುವ, ಗೌರವಿಸುವಂತಹ ಸಮಾಜ ಸಂಘಟನೆಯೇ ಇಂದು ಬೇಕಾಗಿರುವ ಸಂಜೀವಿನಿ ಇದೆ. ಅಲ್ಲಿ ಮುಷ್ಕರಗಳಿಗೆ ಘೇರಾವೋಗಳಿಗೆ, ಮತೀಯ ಮಾರಾಮಾರಿ, ಭಾಷಾ ಬಡಿದಾಟ, ಪ್ರಾದೇಶಿಕ ಪರದಾಟ ವಗೈರೆಗಳಿಗೆ ಅದಿನಿತೂ ಸ್ಥಳವಿರದು. ರಾಷ್ಟ್ರಭಕ್ತಿ, ಸಮಾಜ ಪ್ರೇಮದ ಪ್ರಖರ ಭಾಸ್ಕರನೆದುರು ಈ ಮೇಘಗಳು ಮುಖ ತೋರಿಸುವಂತಿಲ್ಲ. ಪ್ರ[...] ಪ್ರಧಾನಿಯವರೂ ಪರಾಮರ್ಶಿಸಿಯೇ [...] ಸಮಾಜದ ಸಂಘಟನೆಗೆ ಕಳಕಳಿಸುತ್ತಿ[...] ಯುತ್ತಿರುವರು. ಇದಕ್ಕೆ ಓಗೊಡುವದು ಪ್ರ[...] ತೀಯೋರ್ವ ದೇಶಭಕ್ತನ ಕರ್ತವ್ಯವಿ[...]

ನಮ್ಮಲ್ಲಿರುವ ಮಿಥ್ಯ ಭಿನ್ನತೆಗಳ [...] ದವನ್ನು ಬದಿಗೊತ್ತಿ, ಒಂದೇ ಭಾವ[...] ಯಿಂದ ವಾತ್ಸಲ್ಯಮಯಿ ಭಾರತ ಮಾ[...] ಯ ಸ್ಫೂರ್ತಿದಾಯಕ ಚಿತ್ರವನ್ನು ಕ[...] ಣ್ಮುಂದೆ ಇಟ್ಟುಕೊಂಡು ಮುಂದಕ್ಕೆ [...] ದಲ್ಲಿ ಇಂದು ಕಂಡು ಬರುತ್ತಿರುವ ಸಮ[...] ಸ್ಯೆಗಳೆಂಬ ರಾಕ್ಷಸನನ್ನು ನಿರ್ನಾಮ[...] ಡಲು ಸಾಧ್ಯ. ಇಂದಿನ ಸಮಸ್ಯೆಗಳ[...] ರೋ ಶಾಶ್ವತವಾಗಿ ಇರುವಂತಹವಲ್ಲ[...] ಹಲವಾರು ರೀತಿಯ ಸಮಸ್ಯೆಗಳು ಹಿಂ[...] ಯೂ ನಮ್ಮ ಪೂರ್ವಜರನ್ನು ಪೀಡಿಸಿ[...] ಆವರಾದರೋ ಧೈರ್ಯಗುಂದದೆ ಸಮಾ[...] ಸಂಘಟನೆಯ ಸಂಜೀವಿನಿಯಿಂದ ಅ[...] ನ್ನು ಬಗೆಹರಿಸಿರುವರು. ನಮಗೂ [...] ನಂಬಿಕೆ ಹಾಗೂ ಧೈರ್ಯ ಅತ್ಯಗತ್ಯವಿದೆ.

ಈ ರೀತಿ ಇತಿಹಾಸದ ಸಿಂಹಾವಲೋಕನ, ಸಮಾಜ ಸಂಘಟನೆ, ಪುನರುತ್ಥಾನಗಳ ಕುರಿತು ಶ್ರೀಮತಿ ಇಂದಿರಾ ಗಾಂಧಿಜೀಯವರು ದೆಹಲಿಯ ಮೆಟ್ರೊಪೊಲಿಟನ್ ಕೌನ್ಸಿಲಿನ ಸದಸ್ಯರ ನಡುವೆ ಮಾತಾಡಿದರು. ವಾತಾವರಣಕ್ಕನುಸಾರವಾಗಿ ಅದಕ್ಕೆ ತಕ್ಕಂತೆ ಶ್ರೀಮತಿಜೀಯವರ ಭಾಷಣವಿತ್ತರೇ, ಅಥವಾ ಈ ಸತ್ಯ ಸಂಗತಿ ನಿಜವಾಗಿ ಅವರ ಹೃದಯದಿಂದಲೇ ಹೊರ ಬಂದಿರುತ್ತದೆಯೇ ಯೆನ್ನುವದು ಚ[...] ರ್ಚೆಯ ವಿಷಯವಲ್ಲ. ಆದರೂ ಸಮಾಜ ಸಂಘಟನೆ, ರಾಷ್ಟ್ರೀಯ ಪುನರುತ್ಥಾನದಂತಹ ಆಶಾದಾಯಕ ಮಾತಿನ ಪ್ರವಾಹ ಹರಿಯದೆ ಚುನಾವಣಾ ಭಾಷಣದ ವಾದ ಸರಿ ಹಿಂದಿಲಾರದು.

ಆದರೆ ಬರಿಯ ಮಾತುಗಳಿಂದ ಸ್ವಲ್ಪ[...] ತೂ ಪ್ರಯೋಜನವಾಗಲಾರದು. ಆಸನದ ಮೇಲೆ ಆಯಸ್ಸನ್ನು ಕಳೆಯಬಹುದು ಅಷ್ಟೇ. ನಿಜವಾಗಿ ರಾಷ್ಟ್ರದ ಪುನರುತ್ಥಾನವಾಗಬೇಕೆಂದಲ್ಲಿ ನಾವು ಇತಿಹಾಸದತ್ತ ಸಿಂಹಾವಲೋಕನ ಮಾಡಿ ಸಮಾಜ ಸಂಘಟನೆಯ ಮಂಗಲಕರ ಪವಿತ್ರ ಕಾರ್ಯಕ್ಕೆ ಮುಂದಾಗಲೇ ಬೇಕು. ಆಗ, ಆಗ ಮಾತ್ರ ಭಾರತದ ಬಾವುಟ ಗೌರವದಿಂದ ಬಾನೆತ್ತರಕ್ಕೆ ಹಾರುತ್ತದೆ.

ಶಾಲಾ ಕಾಲೇಜು ಲೈಬ್ರರಿಗಳಿಗೆ ಉಪಯುಕ್ತ ಪುಸ್ತಕಗಳು

		ರೂ.ಪೈ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು. ಕು.ಶಿ.ಹರಿದಾಸ ಭಟ್)	2=00
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು. ಕು.ಶಿ.ಹರಿದಾಸ ಭಟ್)	1=75
ಹಿರೋಶಿಮಾದಿಂದ ಜಿವೇವಾ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯುಗಟ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಬಿರಿದ ಮುಗುಳು	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣಮುಕ್ತಿ	(ನಚಿಕೇತ)	1=50
ಭಾರತದ ವೀರಾಂಗನೆಯರು	(ಕೆ.ಎನ್.ಭಟ್ ಶಿರಾಡಿಪಾಲ್)	1=50
ಮೇರಿ ಕೊಟ್ಟ ಬೆಂಡೋಲೆ	(ಎಸ್. ಸದಾಶಿವ ರಾವ್)	1=80
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=50
ಮನೆ ಮದ್ದು	(ಡಾ| ಕೊರಡ್ಕಲ್ ವೆಂಕಟರಾವ್)	2=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 563/1966

ವಾದಿ— ರಾಮಣ್ಣ ಸಟ್ಟ,

ಪ್ರತಿವಾದಿರು— ಕೊರಗಮ್ಮ ಹೆಗ್ಗಡ್ತಿ ಇವರು

16ನೇ ಪ್ರತಿವಾದಿ ಶಂಕರಸೆಟ್ಟಿ, ತಿಮ್ಮ ಸೆಟ್ಟಿರ ಮಗ, ಮೊಳಹಳ್ಳಿ ಗ್ರಾಮದ ಕೆಲಕೆರೆಯಲ್ಲಿರುವವ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಈ ಕೋರ್ಟ್ R. E. P. 679/1966 ರಲ್ಲಿ ಅರ್ಜಿದಾರನು ತನ್ನ ಹಣವನ್ನು ಪ್ರತಿವಾದಿರಿಂದ ತನಗೆ ಕೊಡಿಸಬೇಕಾಗಿ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 6—7—1967ಕ್ಕೆ ತಿರ್ಕಿಗೆ ಇರುತ್ತದೆ, ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ತಿಳಿಸಿರುತ್ತದೆ.

(ಕೋರ್ಟು ಹುಕುಂ ಪ್ರಕಾರ)

Y. Tejappa Shetty
Advocate for Pltf.

Coondapoor, 16—6—1967

ಮನುಕುಲ ಪರಿಹಾರ ಸಮಾಜ

(ಒಂಭತ್ತನೇ ಪುಟದಿಂದ)

ಮನುಕುಲ ಪರಿಹಾರ ಸಮಾಜಕ್ಕೆ ಪ್ರತಿ ದಿನ ಸುಮಾರು ೨೦ ಸಾವಿರ ರೂಪಾಯಿ ವೆಚ್ಚವಾಗುತ್ತಿದೆ.

ಮನುಕುಲ ಪರಿಹಾರ ಸಮಾಜವು ಮಾನವತೆಯ ಪ್ರತೀಕ — ಇದು ಮುಂದಿನ ಸೆಪ್ಟೆಂಬರದ ವರೆಗೂ ಮುಂದುವರಿಯುತ್ತದೆ ಅದುವರೆಗೆ ಇದಕ್ಕೆ ಬೇಕಾಗುವ ಹಣ ಸುಮಾರು ಒಂದು ಕೋಟಿ ರೂಪಾಯಿ. ಈ ಹಣವೆಲ್ಲಿಂದ ಬರುತ್ತದೆ? ಗುಜರಾತ್ ರಾಜ್ಯವು ಪೂರಯಿಸುತ್ತದೆ — ಅಲ್ಲಿನ ಜನತೆ ಸ್ವೇಚ್ಛೆಯಿಂದ ಮುಂದೆ ಬಂದು ಈ ಸಮಾಜದ ಮೂಲಕ ತಮ್ಮ ಮಾನವ ಸಹಜ ಕರುಣಾ ಪ್ರವಾಹವನ್ನು ಹರಿಸಿದೆ — ಕೃತಾರ್ಥವಾಗಿದೆ.

ಮನುಕುಲ ಪರಿಹಾರ ಸಮಾಜವು ಬಿಹಾರದ ಕ್ಷಾಮ ಪೀಡಿತರನ್ನು ಕಂಡೇ ನೊಂದ ಆರಂಭವಾದುದಲ್ಲ. ಇದು ೧೯೫೦ರಷ್ಟು ಹಿಂದೆಯೇ ಸ್ಥಾಪಿತವಾಗಿತ್ತು. ನೇತ್ರ ಚಿಕಿತ್ಸೆ ಮಾಡಿಕೊಳ್ಳುವ ಬಡ ಜನರ ಸೇವೆಯೇ ಅಂದಿನದರ ಗುರಿಯಿತ್ತು (ಅಲಹಾಬಾದಿನ ಚಿತ್ರ ಕೂಟದ ಮಹಾರಾಜ ಗುರುದೇವ ರಣಛೋಡದಾಸ್ ಅವರು ರಾಂಕಾದ ಭೋಜನಾಲಯದ ಮುಖ್ಯಸ್ಥರಾಗಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ.) ಕಳೆದ ವರ್ಷ, ಒರಿಸ್ಸಾದಲ್ಲಿ ಬರಗಾಲ ಬಡಿದಾಗ, ಅಲ್ಲಿಯೂ ಈ ಸಮಾಜವೊಂದು ಭೋಜನ ಕೇಂದ್ರವನ್ನು ತೆರೆದಿತ್ತು. ಅಲ್ಲಿ ಪ್ರತಿದಿನ ಹತ್ತು ಸಾವಿರ ಜನರು ಉಚಿತ ಭೋಜನ ಪಡೆಯುತ್ತಿದ್ದರು.

ಬಿಹಾರದಲ್ಲಿ ಬರಗಾಲ ಅಂದರೆ, ಭಾರತದಲ್ಲಿ ಬರಗಾಲವೆಂದರ್ಥ. ಇದನ್ನು ನೀಗಿಸುವುದು ಪ್ರಕೃತಿಯ ಕರುಣೆಯಾದರೂ ಅದನ್ನು ಎದುರಿಸುವುದು ಪ್ರತ್ಯೇಕ ಭಾರತೀಯನ ಕರ್ತವ್ಯ. ಭಾರತದ ವಿವಿಧ ರಾಜ್ಯಗಳು ಒಂದಾಗಿ ಅಭಾವಾಸುರನನ್ನು ದಮನಿಸ ತೊಡಗಿದರೆ, ಪ್ರಕೃತಿಯ ಆಟೋಪದಿಂದ ಜನ ಕಂಗಾಲಾಗದು. ಅದು ತನ್ನ ಕರುಣೆಯನ್ನು ತೋರಿಸುವವರೆಗೆ ಬಿಹಾರಿ ಜನರನ್ನು ಬದುಕಿಸುವುದು ಭಾರತೀಯರ ಧರ್ಮ. ಇದಕ್ಕಾಗಿಯೇ 'ಮನುಕುಲ ಪರಿಹಾರ ಸಮಾಜ'ದಂತಹ ಸೇವಾ ಸಂಸ್ಥೆಗಳು ಹೆಚ್ಚಬೇಕು. ಇತ್ತೀಚೆಗೆ ಉಡುಪಿಯ, ಶ್ರೀ ಪೇಜಾವರ ಮಠಾಧೀಶರೂ ಇಂತಹ ಪರಿಹಾರಕಾರ್ಯವನ್ನು ಒಂದು ಗ್ರಾಮದಲ್ಲಿ ಆರಂಭಿಸಲು ಯೋಜಿಸಿದ್ದಾರೆ. ರಾಜ್ಯದ ಜನತೆ ಅವರಿಗೆ ಬಲವಾಗಬೇಕು; ತನ್ನ ಹೊಣೆಯನ್ನು ನಿರ್ವಹಿಸಬೇಕು, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಸಭ್ಯ ನಾಗರಿಕನ ಲಕ್ಷಣವಲ್ಲ

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 631/1966

ಶ್ರೀನಿವಾಸ ಶೆಟ್ಟಿಯ —ವಾದಿ

ಕೊರಗ ಆಚಾರಿ ಪೌತಿ ಕೂಡಾ —ಪ್ರತಿವಾದಿಯು.

ಕುಂದಾಪುರ ತಾಲ್ಲೂಕು ಗೋಪಾಡಿ ಗ್ರಾಮದಲ್ಲಿರುವ ಕೊರಗ ಆಚಾರಿ ವಿಧವೆ ಸರಸ್ವತಿ ದಾವೆಯ 2ನೇ ಪ್ರತಿವಾದಿ ಜಾನಕಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ವಾದಿಗೆ 1_2ನೇ ಪ್ರತಿವಾದಿಯು ತಾರೀಕು 14_10-1963ರಲ್ಲು ರೂ. 150 00 ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಬರವಸೂಲ ಕೊಳ್ಳುವರೆ ವಾದಿಯು ಪ್ರತಿವಾದಿರ ಮೇರೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 4—7—1967ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿದಿವ್ಸ ಮೇಲಿನ ಕೋರ್ಟು ಮುಂಜಿನ ಹಗಲು 11ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಯ ಪಡಿಸಿಯದೆ.

N. S. Parameshwaran
Advocate for Plff.
Date 19—6—67, Coondapoor.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಭಾರತದರ್ಪಣ: ಸಂಪುಟ—೧

ಲೇಖಕರು: ಶ್ರೀ ಮಡಿಯೂಲ ನಾರಾಯಣ ಭಟ್.

ಪ್ರಕಾಶನ ಲೋಕಸೇವಾ ವೃಂದ, ಸತ್ಯಸಾಯಿ ವಿಹಾರ, ಅಳಿಕೆ, ಮಯೂ ವಿಟ್ಲ (ದ. ಕ)

ಪುಟಗಳು: ೩೩೪

ಬೆಲೆ: ಸಾದಾ ಪ್ರತಿ ರೂ ೩. ೫೦. ಕ್ಯಾಲಿಕೋ ಪ್ರತಿ ರೂ. ೫.೦೦.

ದರ್ಪಣ ಅಂದರೆ ಕನ್ನಡಿ. ಇದರಲ್ಲಿ ನಮ್ಮ ಮುಖವನ್ನು ನಾವು ಅವಲೋಕಿಸುವಾಗ, ಆದರ ಪ್ರತಿಚ್ಛಾಯೆ ಇದ್ದಕ್ಕಿದ್ದಂತೆ ಕಾಣಿಸುತ್ತದೆ. ಮುಖದ ಸೌಂದರ್ಯದೊಡನೆ ಅದರ ಏರುಪೇರುಗಳೂ ಗೋಚರವಾಗುತ್ತವೆ. ಪ್ರಸ್ತುತ ಪುಸ್ತಕವು ಭಾರತದ ಮುಂದೆ ಹಿಡಿದ ಕನ್ನಡಿ. ಭಾರತದ ಇಂದಿನ ಸತ್ಯ ಸಂಗತಿಗಳು ಇಲ್ಲಿ ವಾಸ್ತವಿಕವಾಗಿ ಚಿತ್ರಿತವಾಗಿವೆ.

ಭಾರತೀಯ ಸಂಸ್ಕೃತಿಯ ಹಿರಿಮೆಯನ್ನರಿತ ಓರ್‌ಮನ್ ಅದನ್ನು ಆಳವಾಗಿ ಅಧ್ಯಯನ ನಡೆಸಿ, ಪ್ರತ್ಯಕ್ಷ ದರ್ಶನ ಪಡೆಯಲು ಭಾರತ ಸಂಚಾರ ಕೈಗೊಳ್ಳುತ್ತಾರೆ. ತಾನು ಪಡೆದ ಅನುಭವಗಳನ್ನು ಭಾರತೀಯ ಸಂಸ್ಕೃತಿಯ ಮಹತ್ವವನ್ನು, ಇಂದು ಅದಕ್ಕಾಗುತ್ತಿರುವ ಅಪಚಾರಗಳನ್ನು ಕೂಡ ತನ್ನೊಬ್ಬ ಅಮೇರಿಕನ್ ಮಿತ್ರ ಸಿಲ್ವರನಿಗೆ ಪತ್ರ ಮೂಲಕ ತಿಳಿಸುತ್ತಾರೆ ಅಂದರೆ, ಪ್ರಸ್ತುತ ಗ್ರಂಥವು ಪತ್ರಪ್ರಣಾಳಿ ಶೈಲಿಯಲ್ಲಿದೆ. ಪರದೇಶೀಯನೊಬ್ಬನು ಭಾರತೀಯ ಸಂಸ್ಕೃತಿಯ ಆಳವನ್ನು ಹೊಕ್ಕು ಅದನ್ನು ಹಿಂದಿನ ಹಿರಿಮೆ ಮತ್ತು ಇಂದಿನ ದಯನೀಯ ಸ್ಥಿತಿಯೊಡನೆ, ಅವಕಾಶವೊದಗಿದಾಗ ಪಾಶ್ಚಾತ್ಯ ಸಂಸ್ಕೃತಿಯೊಡನೆ ತುಲನಾತ್ಮಕವಾಗಿ ವಿವೇಚಿಸುವುದು ಅಸಹಜವಲ್ಲ. ಸಿಲ್ವರ್ ಕೂಡ ಪಾಶ್ಚಾತ್ಯ ಸಂಸ್ಕೃತಿ-ಸಂಪ್ರದಾಯಗಳ ಜಂಜಾಟದಿಂದಾಗಿ ಜೀವನದಲ್ಲಿ ನಿರಾಶೆಯನ್ನು ಅಪ್ಪಿ ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತನಾಗ ಬೇಕಾದರೂ ಸಿಲ್ವರರೂ ಓರ್‌ಮನ್ನರ ಅಭಿಪ್ರಾಯವನ್ನು ಒಪ್ಪಿರಲೇ ಬೇಕು. ಭಾರತೀಯ ಸಂಸ್ಕೃತಿ ದೊಡ್ಡದು; ಅದರ ಅರ್ಥ ವಿಶಾಲವಾದುದು; ಅದರ ಸಂಪ್ರದಾಯಗಳು ಅರ್ಥಪೂರ್ಣವಾದುದು. ಆದರೆ, ಇದನ್ನು ಕಂಡುಕೊಳ್ಳುವತ್ತ ಹೆಚ್ಚಿನ ಭಾರತೀಯರು ಪ್ರಯತ್ನಿಸದೆ, ಅಂಧಾನುಕರಣೆಯಲ್ಲಿ ತಲ್ಲೀನರಾಗುತ್ತಿದ್ದಾರೆ; ಕೆಲವರು ಪಾಶ್ಚಾತ್ಯರನ್ನೂ ಅನುಕರಣೆ ಮಾಡುತಿದ್ದಾರೆ. ಒಟ್ಟಿನಲ್ಲಿ ಇಂದು ಭಾರತೀಯ ಸಂಸ್ಕೃತಿ "ಅಂಧ"ವಾಗಿಯೇ ಕಾಣುತ್ತಿದೆ; ಇದರ ಪುನರುತ್ಥಾನವಾದರೆ ಮಾತ್ರ ಭಾರತ ಬದುಕೀತು, ಜಗತ್ತಿಗೆ ನೇ, ದಾರಿದೀಪ ಹಿಡಿದೀತು.

'ಭಾರತ ದರ್ಪಣ'ದ ಮೊದಲ ಭಾಗವು ಭಾರತದ ನೂರಾರು ಸಮಸ್ಯೆಗಳಲ್ಲಿ ಕೆಲವನ್ನು ಮಾತ್ರ ವಿಶ್ಲೇಷಿಸುತ್ತದೆ. (ಉಳಿದುದನ್ನು ಮುಂದಿನ ಸಂಪುಟದಲ್ಲಿ ವಿಶ್ಲೇಷಿಸಲಾಗುವುದೆಂದು ಲೇಖಕರು ಭರವಸೆ ನೀಡಿದ್ದಾರೆ.) ಭಾರತದ ವಿವಿಧತೆಯಲ್ಲೇ ಏಕತೆಯ ಬೀಜವಡಗಿರುವುದು ಇಲ್ಲಿನ ವೈಶಿಷ್ಟ್ಯ. ಆತ್ಮ ಪರಮಾತ್ಮ ಸಂಬಂಧವಾದ ದಾರ್ಶನಿಕ ಸಿದ್ಧಾಂತ ನಿಷ್ಕೃಷ್ಟ ಜ್ಞಾನಿಕವಾದುದು. ವರ್ಣಾಶ್ರಮ ವ್ಯವಸ್ಥೆ ಗುಣ ಕರ್ಮ ವಿಭಾಗ ಮಾತ್ರ — ಇಲ್ಲಿ ಮೇಲು ಕೀಳು ಎಂಬ ಭಾವನೆಯಿಲ್ಲ — ಇದು ಸಂಸ್ಕೃತಿಯ ಪಂಚಾಂಗ. ಇದನ್ನು ನಾವು ಮನವರಿಕೆ ಮಾಡಿಕೊಂಡ ನಂತರ ಸಾಮಾಜಿಕ ಸ್ಥಿತಿಗತಿಗಳು — ರೈತ, ಕಾರ್ಮಿಕ, ಭಿಕ್ಷುಕ, ಶ್ರೀಮಂತ, ಮಧ್ಯಮ ಹಿಮ್ನವರ್ಗಗಳು, ಆರ್ಥಿಕ ದುಸ್ಥಿತಿ — ಶೋಷಕ ಮತ್ತು ಶೋಷಿತ ವರ್ಗಗಳು, ಕಪ್ಪು ಹಣದ ಪ್ರಾಬಲ್ಯ; ಶೈಕ್ಷಣಿಕ ಅಭದ್ರತೆಗಳ ಮೇಲೆ ಬೆಳಕು ಬಿದ್ದಿರುವುದು ಕಾಣುತ್ತದೆ. ಇವನ್ನು ವಿವೇಚಿಸುವಲ್ಲಿ ಹಲವಾರು ಘಟನೆಗಳ ಉಲ್ಲೇಖವೂ ಇದೆ. ಇವೆಲ್ಲವೂ ಅಪ್ರಿಯವೆನಿಸ ಬಹುದಾದರೂ ಮೂಗಿಲ್ಲದವನು ಕನ್ನಡಿ ನೋಡಿದಂತೆ ಅಷ್ಟೆ. ಮೂಗಿಲ್ಲವೆನ್ನುವ ಸತ್ಯವನ್ನು ದರ್ಪಣ ಕಾಣಿಸದಿರುವುದು ಸಾಧ್ಯವಿಲ್ಲ. ಓರ್‌ಮನ್ನರು ಇಲ್ಲಿನ ಸಮಸ್ಯೆಗಳನ್ನು ಅಮೇರಿಕನ್ ಸ್ಥಿತಿಯೊಂದಿಗೆ ಹೋಲಿಸಿ ನಿಷ್ಪಕ್ಷಪಾತ ನಿರ್ಣಯಕ್ಕೆ ಬಂದಿದ್ದಾರೆ. ಇಲ್ಲಿ ಆಧ್ಯಾತ್ಮಿಕವಾದದ ಮೇಲೆ ಭೌತಿಕ ವಾದದ ದಪ್ಪ ಹೊದಿಕೆ ಮುಸುಕಿರುವುದನ್ನು ಎತ್ತಿ ತೋರಿಸಿದ್ದಾರೆ. ಹಾಗೆಂದು ಜಾನಕಿಯಂತಹ ಸಚ್ಚರಿತ್ರರೂ ಇಲ್ಲದಿದ್ದಾರೆ — ಇತಿಹಾಸದ ಅವಧಿಯಲ್ಲಿ ಸಾವಿರಾರು ಬಾರಿ ಆಘಾತ ತಿಂದರೂ ಭಾರತೀಯ ಸಂಸ್ಕೃತಿ ಚೈತನ್ಯ ಕುಂದಿಲ್ಲ, ಅದರ ದೀಪ್ತಿ ತುಸು ಮುಸುಕಾಗಿದೆ. ಮಾತ್ರ, ಈ ಕಿಲುಬು ತೆಗೆಯದೆ ಭಾರತೀಯರಿಗೆ ನೆಮ್ಮದಿಯಿಲ್ಲವೆಂದೂ ಅವರು ಸೂಚಿಸುತ್ತಾರೆ.

ಓರ್‌ಮನ್ನರಂತಹ ವ್ಯಕ್ತಿಯ ಲೇಖನಿಯಿಂದ ಶ್ರೀ ನಾರಾಯಣ ಭಟ್ಟರು ಸತ್ಯದರ್ಶನ ಮಾಡಿದ್ದಾರೆ. ಇಲ್ಲಿನ ವಿವೇಚನೆಯಲ್ಲಿ ಅತಿಶಯೋಕ್ತಿಯೇನೂ ಇಲ್ಲ. ನಮ್ಮ ಜೀವನವನ್ನು ನಾವೇ ಪರಾಮರ್ಶಿಸಿ ನಿಷ್ಪಕ್ಷಪಾತ ನಿರ್ಧಾರಕ್ಕೆ ಬರುವುದಾದರೆ, ಓರ್‌ಮನ್ನರ ಮಾತುಗಳು ಅಕ್ಷರಶಃ ಸತ್ಯವೆಂದು ಮನಗಾಣುತ್ತೇವೆ. ಶ್ರೀ ಭಟ್ಟರು ಸಂಸ್ಕೃತಿಯ ಆರಾಧಕರು; ಅದರ ಬಗ್ಗೆ ಜನತೆಯಲ್ಲಿ ಹೆಚ್ಚಿನ ತಿಳುವಳಿಕೆ ಮೂಡಬೇಕು, ಜನ ಜೀವನದಲ್ಲದು ಪ್ರತಿಬಿಂಬಿತವಾಗಬೇಕು, ಸುಸಂಸ್ಕೃತ ನಾಗರಿಕರಾಗಿ ಭಾರತೀಯರು ಬದುಕಬೇಕು — ಇದು ಅವರ ಮನೀಷೆ. 'ಭಾರತ ದರ್ಪಣ'ವನ್ನು ಓದಿ. ನಮ್ಮ ನಮ್ಮಲ್ಲಿರುವ ಕುಂದುಕೊರತೆಗಳನ್ನು ನಾವು ಕಂಡುಕೊಳ್ಳಬೇಕು, ಅದರ ದೂರೀಕರಣಕ್ಕೆ ನಾವು ಪ್ರಯತ್ನಿಸಬೇಕು; ಯಶಗಳಿಸಬೇಕು. ದಾನವತೆ, ಪಾಶವೀಕತೆಯ ಮೇಲೆ ದೇವತ್ವ ಮತ್ತು ಮಾನವತ್ವಗಳು ವಿಜಯಭೇರಿ ಬಾರಿಸಬೇಕು.

ಶ್ರೀ ಭಟ್ಟರ ಈ ಕೃತಿ ಅಪೂರ್ವವಾದುದು, ಅವರ ಸಾಹಸ ಸ್ತುತ್ಯವಾದುದು; ಶ್ರಮ ಸ್ವಾಗತಾರ್ಹವಾದುದು. ಈ 'ದರ್ಪಣ'ವಿಲ್ಲಿಗೇ ಮುಗಿಯದೆ ಮುಂದುವರಿದು ಜನತೆಯಲ್ಲಿ ನವಚೇತನದ ಅರಿವು ಮೂಡಬೇಕು; ಲೋಕ ಕಲ್ಯಾಣವಾಗಬೇಕು.

—ಗೋರಾ.

ಸಮಸ್ಯಾ ಪರಿಹಾರಕ— ಸಂಜೀವಿನಿ

(ನಾಲ್ಕನೇ ಪುಟದಿಂದ)

ದು. ಮತ್ತೆ ಸರಕಾರಕ್ಕೆ ಇಪ್ಪತ್ತೈದು ವರ್ಷಗಳ ನಿಶ್ಚಿಂತೆ...."

'ಅಲ್ರಿ, ಅರಾಜಕತೆಯೆಂದರೆ!'

'ಅಯ್ಯೋ, ಪೆದ್ದಿ, ಪರಿಹಾರ ಕಾಣದು ಪರಿಹರಿಸಲಾರದ ಸಮಸ್ಯೆಗಳನ್ನು ಹೊತ್ತು ೫೦ ಕೋಟಿ ಜನ ಅಂಜುತ್ತಂಜುತ್ತ ದಿನದೂಡುವುದೆಂದರೆ, ಅರಾಜಕತೆಯಿಂದ ಭಿನ್ನವೇನು?'

'ಅಂದರೆ, ಇದು ಅಘೋಷಿತ ಅರಾಜಕತೆ, ಅದು ಘೋಷಿತ ಅರಾಜಕತೆ...'

"ಹೃಂ.... ಸರಿ. ಹೇಗಿದೆ ಸಂಜೀವಿನಿ. ಡಾಕ್ಟರರ ಸಂಜೀವಿನಿಯಿಂದ ಸಮಾಜ ಅನೀತಿಗೆ ಇಳಿಯ ಬಹುದು. ಈ ಸಂಜೀವಿನಿಯಿಂದ ಹೊಸ ಸಮಾಜ ಸೃಷ್ಟಿಯಾಗುವುದ . ..'

'ಏನೋ, ನನಗೆ ಹೆದರಿಕೆ ..'

'ಅಯ್ಯೋ, ಪೆದ್ದಿ, ಸಮಸ್ಯಾ ಪರಿಹಾರಕ್ಕೆ ಸೊಂಟ ಕಟ್ಟಿದವಳು ಹೆದರಿದರೆ ಹೇಗೆ!"

"ತುಸು ಹತ್ತಿರ ಬನ್ನೀಂದ್ರೆ ..."

"ನೀನೊಬ್ಬ.....ಹೆದರ ಬೇಡ್ವೆ...'

'ಒಲ್ಲಾಸ್ನೀ, ನೀವೊಬ್ರು ಬಳಿಯಿದ್ರೆ ...ಹೆದರಿಕೆಯಿಲ್ಲ..."

ನಿನಗೇಕೆ ಹೆದರಿಕೆ? ಹೆದರ ಬೇಕಾದವ್ರು ನಮ್ಮ ಮಂತ್ರಿ ಮಾಗಧರು. ಸಂಜೀವಿನಿಯ ಡಾಕ್ಟರರು...."

'ಹೋಗಿ, ಬಿಡೀಂದ್ರೆ...'

'ಹೃಂ ...'

—ಗೋರಾ

ಯುವತಿಯರ ನಗುವಿನ ಶಬ್ದ ಮಾಧುರ್ಯ ಜಗದ ಎಲ್ಲ ಸಂಗೀತಕ್ಕಿಂತ ಹಿರಿದು.

೦ ೦ ೦

ಸಭ್ಯತೆ, ಸೌಶೀಲತೆಗಳ ಬೆಲೆ ತೆಗೆದುಕೊಂಡ ನಗುವು ಅತೀ ಹೀನ ಪ್ರದರ್ಶನವೆನಿಸುವದು.

೦ ೦ ೦

ಸಮುದ್ರದ ನೀರು ಆವಿಯಾಗಿ ಮೇಲೇರಿದಾಗಲೇ ಅತೀ ಪವಿತ್ರಗೊಳ್ಳುತ್ತವೆ. ಮನುಷ್ಯನ ಭಾವನೆಯೂ ಮೇಲ್ಮಟ್ಟಕ್ಕೇರಿದರೆ ಮಾತ್ರ ಪಾವನವಾಗುತ್ತದೆ.

ಆರೋಗ್ಯದ ಮೂಲ

ನಿಮ್ಮ ಹಲ್ಲುಗಳ ಸಂರಕ್ಷಣೆ

ಈಗ ಕೈಗೊಳ್ಳಲಾಗುತ್ತಿರುವ ಶೇ ಪ್ರತಿಶತ ಶಸ್ತ್ರ ಚಿಕಿತ್ಸೆಗಳಲ್ಲಿ ಶೇಕಡ ಐವತ್ತು ಹೊಟ್ಟೆಗೇ ಸಂಬಂಧಿಸಿವೆ. ಹಲ್ಲುಗಳ ಸ್ವಚ್ಛತೆಯ ಬಗ್ಗೆ ಲಕ್ಷ್ಯ ಕೊಟ್ಟರೆ ಮತ್ತು ಆಹಾರವನ್ನು ಸರಿಯಾಗಿ ಅಗಿದು ತಿಂದರೆ, ಈ ಚಿಕಿತ್ಸೆಗಳ ಅಗತ್ಯವುಂಟಾಗುವುದಿಲ್ಲ.

—ಚಾರ್ಲ್ಸ್ ಮೇ.

ದೇಶದಲ್ಲಿ ಪ್ರಥಮತಃ ದಂತ ವಿಜ್ಞಾನದ ಶಿಕ್ಷಣವನ್ನು ಆರಂಭಿಸಿದ ಶ್ರೇಯಸ್ಸು ನಮ್ಮ ಭೂಸೇನೆಗೇ ಸಲ್ಲುತ್ತದೆ.

ಎರಡನೆಯ ವಿಶ್ವ ಸಮರದ ನಂತರ ಹಲ್ಲುಗಳ ರೋಗಗಳಿಂದ ಮಾನವಶಕ್ತಿ ವ್ಯರ್ಥಗೊಳ್ಳದಂತೆ ನೋಡಿಕೊಳ್ಳುವ ಹಾಗೂ ಯೋಧರನ್ನು ಹೋರಾಟಕ್ಕೆ ಸಮರ್ಥರಾಗಿರುವಂತೆ ನೋಡಿಕೊಳ್ಳುವ ಹೊಣೆ ಸೇನಾ ದಂತ ವೈದ್ಯಕೀಯ ದಳಕ್ಕೆ ಸೇರಿದೆ.

ಯೋಧನು ಎಲ್ಲಿಯೇ ಸೇವೆ ಸಲ್ಲಿಸುತ್ತಿರಲಿ, ಅವನ ಹಲ್ಲುಗಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಲಾಗುತ್ತದೆ. ವರ್ಷದಲ್ಲಿ ಒಂದು ಸಲ ಅವನ ಹಲ್ಲುಗಳನ್ನು ಪರೀಕ್ಷಿಸಿ ಸೂಕ್ತ ಚಿಕಿತ್ಸೆ ಕೊಡಲಾಗುತ್ತದೆ. ಸೇನೆಯಲ್ಲಿ ದಂತ ವಿಜ್ಞಾನಿಗಳು ಹಲ್ಲುಗಳ ಸ್ವಚ್ಛತೆಯ ಬಗ್ಗೆ ಯೋಧರು ನೆನಪಿಟ್ಟುಕೊಳ್ಳಬೇಕಾದ ಅಗತ್ಯಗಳನ್ನು ವಿವರಿಸುತ್ತಾರೆ.

ಒಂದು ವೇಳೆ ಹಲ್ಲಿನ ಚಿಕಿತ್ಸೆ ನಡೆಸುವುದೇ ಆದರೆ, ಅದನ್ನು ಉಚಿತವಾಗಿ ನಡೆಸಲಾಗುತ್ತದೆ, ಹಲ್ಲುಗಳ ಸೆಟ್ಟನ್ನು ಉಚಿತವಾಗಿ ಒದಗಿಸಲಾಗುತ್ತದೆ.

ಸೇನೆಯ ದಂತ ಚಿಕಿತ್ಸಾ ಶಿಬಿರದಲ್ಲಿ ಒಂದು ದಿನ ಕಳೆದರೆ ಸಾಕು, ದಂತ ವಿಜ್ಞಾನಿಗಳು ಯೋಧರಿಗೆ ಯಾವರೀತಿ ನೆರವಾಗುತ್ತಿದ್ದಾರೆಂಬುದು ಮನವರಿಕೆಯಾಗುತ್ತದೆ. ಸೇನೆಯ ದಂತ ಚಿಕಿತ್ಸಾ ಶಿಬಿರದ ಕಚೇರಿ ಎಲ್ಲಿಯೇ ಇರಲಿ ಅದು ದಂತ ರೋಗಿಗಳಿಗೆ ಸಮಾಧಾನ ತರುವ ಕೇಂದ್ರವಾಗಿದೆ. ಹಲ್ಲಿನ ಚಿಕಿತ್ಸೆ ಆರಂಭಿಸುವ ಮುನ್ನ ರೋಗಿಯು ಚಲಿಸಬಲ್ಲ ಸುಖಾಸನದಲ್ಲಿ ಕುಳಿತುಕೊಳ್ಳುತ್ತಾನೆ. ವಿದ್ಯುಚ್ಛಕ್ತಿ ಯಂತ್ರದ ಸಹಾಯದಿಂದ ಹಲ್ಲನ್ನು ಕೀಳಲಾಗುತ್ತದೆ. ಎಲ್ಲವೂ ಅತ್ಯಂತ ಜಾಗರೂಕತೆಯಿಂದ ನಡೆಯುತ್ತದೆ.

ದಂತ ಚಿಕಿತ್ಸಾ ಕೇಂದ್ರದಲ್ಲಿ ಸೇವಾ ಭಾವನೆಯಿಂದ ಶ್ರಮಿಸುವ ವೈದ್ಯರ ತಂಡವಿರುವುತ್ತದೆ. ಚಿಕಿತ್ಸೆಗಳನ್ನು ಆರಂಭಿಸುವ ಮೊದಲು ಅವರು ಯೋಧರಿಗೆ ಹಲ್ಲಿನ ಆರೋಗ್ಯದ ಬಗ್ಗೆ ಸರಳವಾದ ಭಾಷೆಯಲ್ಲಿ ಹಿತೋಪದೇಶ ನೀಡುತ್ತಾರೆ. ಸೇನಾ ದಂತ ವೈದ್ಯರು ಪುಣೆಯ ರಕ್ಷಣಾ ಬಲದ ಮೆಡಿಕಲ್ ಕಾಲೇಜಿನ ದಂತ ವಿಜ್ಞಾನ ವಿಭಾಗದಲ್ಲಿ ವಿಶೇಷ ಜ್ಞಾನವನ್ನು ಪಡೆದವರು. ಶಸ್ತ್ರ ಚಿಕಿತ್ಸೆಗಳಲ್ಲಿ ಮತ್ತು ದಂತರಕ್ಷಣೆಯಲ್ಲಿ ಅವರು ವಿಶೇಷ ಜ್ಞಾನವನ್ನು ಸಂಪಾದಿಸಿರುತ್ತಾರೆ. ದಂತ ವಿಜ್ಞಾನಿಗಳು ಯೋಧರಲ್ಲಿ ಕಂಡು ಬರುವ ದಂತ ರೋಗಗಳನ್ನು ಕಂಡು ಹಿಡಿಯಲು ಆಗಾಗ್ಗೆ ಅವರ ದಂತಗಳನ್ನು ಪರೀಕ್ಷಿಸುತ್ತಾರೆ. ಯೋಧನು ದೂರದಲ್ಲಿ ರಾಷ್ಟ್ರ ರಕ್ಷಣೆಯಲ್ಲಿ ತೊಡಗಿದಾಗ ಅವನ ಕುಟುಂಬದವರ ಪಾಲನೆ ಪೋಷಣೆಗೂ ವಿಶೇಷ ಗಮನ ಕೊಡಲಾಗುತ್ತದೆ.

ದಂತ ವಿಜ್ಞಾನಿಗಳು ದಂತಗಳ ನಾಶವನ್ನು ತಡೆಗಟ್ಟಲು ನಡೆಸಿದ ಯತ್ನಗಳು ಮತ್ತು ದಂತ ರಕ್ಷಣೆ ಅಧಿಕಾರಿಗಳು ದಂತ ರೋಗಗಳನ್ನು ಪ್ರತಿಬಂಧಿಸಲು ಕೈಗೊಳ್ಳುವ ಕ್ರಮಗಳು ವಿಫಲಗೊಂಡಾಗ; ಆ ಅಗತ್ಯವನ್ನು ಪೂರೈಸಲು ದಂತ ಸಂಬಂಧವಾದ ತಂತ್ರಜ್ಞರು ಕಾಣಿಸಿಕೊಳ್ಳುತ್ತಾರೆ. ನಷ್ಟವಾದ ಹಲ್ಲುಗಳ ಸ್ಥಾನದಲ್ಲಿ ಕೃತ್ರಿಮವಾದ ಹಲ್ಲುಗಳನ್ನು ಕೂಡಿಸುತ್ತಾರೆ. ಈ ಕೃತ್ರಿಮ ಸೆಟ್ಟುಗಳಿಂದ ಹಲ್ಲು ಇಲ್ಲದವರೂ ಆಹಾರವನ್ನು ಸರಿಯಾಗಿ ಅಗಿದು ತಿನ್ನಲು ಸಾಧ್ಯವಾಗಿದೆ.

ಆರೋಗ್ಯ ರಕ್ಷಣೆಯಲ್ಲಿ ದಂತ ವಿಜ್ಞಾನಿಗಳ ಸೇವೆ ಮಹತ್ವಪೂರ್ಣ. ಏಕೆಂದರೆ, ಅವರು ಯಾವುದೇ ಬಗೆಯ ನೋವಾಗದಂತೆ ದೇಹಕ್ಕೆ ಅನುಪಯುಕ್ತವಾದ ಭಾಗಗಳನ್ನು ತೆಗೆದು ಹಾಕಿ ಅವುಗಳ ಸ್ಥಾನದಲ್ಲಿ ಉಪಯುಕ್ತವಾದ ಭಾಗಗಳನ್ನು ಜೋಡಿಸುತ್ತಾರೆ. ಅನೇಕ ಸಲ ಹುಳುಕು ಹಲ್ಲುಗಳನ್ನು ತೆಗೆದು ಹೊಸ ಹಲ್ಲುಗಳನ್ನು ಕೂಡಿಸುವುದರಿಂದ ವ್ಯಕ್ತಿಯು ಆರೋಗ್ಯವಂತನಾಗುತ್ತಾನೆ. ಅಷ್ಟೇ ಅಲ್ಲ ಹೆಚ್ಚು ಆಕರ್ಷಕ ವ್ಯಕ್ತಿತ್ವ ಅವನದಾಗುತ್ತದೆ.

ದಂತ ರೋಗಗಳು ಎಂದೂ ಒಮ್ಮೆಲೇ ಪ್ರಕಟಗೊಳ್ಳುವುದಿಲ್ಲ ಎಂದು ಹೇಳಲಾಗುತ್ತದೆ. ದಂತಗಳು ನಿರುಪಯೋಗಿಯಾಗಲು ಬಹಳ ಸಮಯ ಹಿಡಿಯುತ್ತದೆ. ಅನೇಕ ಸಲ ಹಲ್ಲು ನೋವು ಕಾಣಿಸಿಕೊಂಡಾಗಲೇ ರೋಗಿಗೆ ಅದರ ಅರಿವಾಗುತ್ತದೆ. ಸೇನೆಯಲ್ಲಿ ದಂತ ವಿಜ್ಞಾನದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ಇಂತಹ ನಾಶವನ್ನು ತಪ್ಪಿಸಲಾಗುತ್ತದೆ.

ಎಲ್ಲೆಲ್ಲಿ ಏನೇನು?

ವಂಕಿಧಾರಣೆ

ಮಣಿಪಾಲದ ಕಸ್ತೂರ್ ಬಾ ಜನರಲ್ ಆಸ್ಪತ್ರೆಯ ಕುಟುಂಬ ಯೋಜನಾ ಕೇಂದ್ರದ ಆಶ್ರಯದಲ್ಲಿ ಇದೇ ದಿ. ೨೨ರಂದು ಅತ್ತೂರಿನ ಗ್ರಾಮೀಣ ಹಿರಿಗೆ ಕೇಂದ್ರದಲ್ಲೂ ಬರುವ ಜುಲೈ ೧ರಂದು ಗುಂಡಿಬೈಲಿನ ಏಕಾಡೆಮಿ ಸಂಗೀತ ಶಾಲೆಯಲ್ಲೂ ಅಪರಾಹ್ನ ಎರಡರಿಂದ ಐದು ಗಂಟೆಯವರೆಗೆ ವಂಕಿಧಾರಣಾ ಶಿಬಿರಗಳನ್ನು ನಡೆಸಲಾಗುತ್ತದೆ. ಆ ಸಂದರ್ಭಗಳಲ್ಲಿ ಕುಟುಂಬ ಯೋಜನೆ ಕುರಿತ ಚಲನ ಚಿತ್ರಗಳನ್ನೂ ಪ್ರದರ್ಶಿಸಲಾಗುವುದು.

ಮುನ್ಸಿಪಲ್ ಪ್ರವಾಸಿ ಮಂದಿರದ ಉದ್ಘಾಟನೆ

ಉಡುಪಿ ಜೂನ್ 17:—ಸುಮಾರು 19 ಸಾವಿರ ರೂ. ವೆಚ್ಚದಲ್ಲಿ ಕಟ್ಟಿಸಲಾದ ನಗರ ಸಭೆಯ ಪ್ರವಾಸಿ ಮಂದಿರದ ಉದ್ಘಾಟನೆಯು ಸಿಂಡಿಕೇಟ್ ಬ್ಯಾಂಕಿನ ಮುಖ್ಯಾಧಿಕಾರಿ ಹಾಗೂ ಮಾಜಿ ನಗರ ಸಭಾಪತಿ ಶ್ರೀ ಕೆ. ಕೆ. ಪೈಯವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ನಗರ ಸಭಾಪತಿ ಡಾ. ಪಿ. ವಿ. ವ್ಯಾಸರಾಯರು ವಹಿಸಿದ್ದರು.

ನಗರ ಸಭಾಪತಿ ಶ್ರೀ ಕೆ. ಎಂ. ಮಧ್ಯಸ್ಥರು ಸ್ವಾಗತಿಸಿದ ತರುವಾಯ ನಗರ ಸಭಾ ಸದಸ್ಯ ಶ್ರೀ ಎನ್. ಸೀತಾರಾಮ ಕಾಮತರು ನಗರ ಸಭೆಯ ಪ್ರವಾಸಿ ಮಂದಿರದ ಉದ್ದೇಶವನ್ನು ವಿವರಿಸಿದರು. ತಾಲೂಕು ಬೋರ್ಡ್ ಸದಸ್ಯ ಶ್ರೀ ಬಿ. ಶಾಳಪ್ಪ ಶೆಟ್ಟರು ವಿದ್ಯುದ್ದೀಪಗಳನ್ನು ಉದ್ಘಾಟಿಸಿದರು. ಶ್ರೀ ಕೆ. ಕೆ. ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ನಗರ ಸಭೆಯ ನವೀನ ಸೌಕರ್ಯಗಳು ಉಡುಪಿಯ ಬೆಳವಣಿಗೆಯಲ್ಲಿ ಸಹಕರಿಸುತ್ತವೆಂದರು.

ಅಧ್ಯಕ್ಷ ಶ್ರೀ ಡಾ| ವ್ಯಾಸರಾಯರು ಶೈಕ್ಷಣಿಕ ಹಾಗೂ ಪುಣ್ಯಕ್ಷೇತ್ರವಾಗಿರುವ ಉಡುಪಿಗೆ ಆಗಮಿಸುವ ಜನರಿಗೆ ನಗರ ಸಭೆಯು ಇನ್ನಷ್ಟು ಸೌಕರ್ಯಗಳನ್ನೊದಗಿಸುವಂತಾಗಲಿ ಎಂದರು. ಕೊನೆಯಲ್ಲಿ ಶ್ರೀ ಆರ್. ನರಸಿಂಹ ಪಾಂಗಣ್ಣನವರು ಧನ್ಯವಾದಗಳನ್ನು ಸಮರ್ಪಿಸಿದರು.

ವಿದಾಯ ಸತ್ಕಾರ

ಶಿರ್ವ ಜೂ. 16 ಶಿರ್ವ ಲೋಕಲ್ ಫಂಡ್ ಹೊಸ್ಪಿಟಲಿನ ಜನಪ್ರಿಯ ಕಂಪೌಂಡರ್ ಆಗಿದ್ದ ಶ್ರೀ ಕೆ. ರಘುರಾಮ ಹೆಗ್ಡೆಯವರಿಗೆ ಮಲ್ಪೆಗೆ ವರ್ಗವಾದುದರಿಂದ ಶಿರ್ವ ಮೆಡಿಕಲ್ ಆಫೀಸರರಾದ ಡಾ. ದಾಸ್ ಅವರು ಏರ್ಪಡಿಸಿದ ಬೀಳ್ಕೊಡುವ ಸಮಾರಂಭವು ಸ್ಥಳೀಯ ಎಲ್. ಎಫ್. ಆಸ್ಪತ್ರೆಯಲ್ಲಿ ಡಾ| ಯು. ಕೆ. ಆಚಾರ್ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಸ್ಥಳೀಯ ಆಸ್ಪತ್ರೆಯ ಡಾ. ಎನ್. ದಾಸ್ ಅವರು ಸ್ವಾಗತ ಭಾಷಣ ಮಾಡಿದರು. ಸಭಿಕರಲ್ಲಿ ಡಾ. ವೈ. ಆರ್. ಶೆಟ್ಟಿ, ಡಾ| ಕೆ. ಆರ್. ವೆಂಕಟಕೃಷ್ಣ, ಡಾ. ಶ್ರೀದೇವಿ ನಂಬಿಯಾರ್, ಡಾ. ಟಿ. ಎನ್. ಕೆ. ನಂಬಿಯಾರ್, ಶ್ರೀ ಎಲ್. ಮೆಂಡೋನ್ಸ್, ಶ್ರೀ ಬಿ. ಜಯರಾಮ ಶೆಟ್ಟಿ, ಶ್ರೀ ಬಿ. ಬಾಲಕೃಷ್ಣ ಶೆಟ್ಟಿ ಮೊದಲಾದವರು ಅತಿಥಿಗಳ ಗುಣಗಾನವನ್ನು ಮಾಡುತ್ತ ಅವರ ಕಾರ್ಯದಕ್ಷತೆ, ಜನಪ್ರಿಯತೆಯ ಕುರಿತು ಹೇಳಿದರು. ಅನಂತರ ಅತಿಥಿಗಳಾದ ಶ್ರೀ ಕೆ. ಆರ್. ಹೆಗ್ಡೆಯವರು ಸಮಯೋಚಿತವಾದ ಉತ್ತರವನ್ನಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಿರ್ವಕ್ಕೆ ಹೆಗ್ಡೆಯವರು ಸಲ್ಲಿಸಿದ ಜನಸೇವೆ, ಆಸ್ಪತ್ರೆಯ ಏಳಿಗೆಗಾಗಿ ದುಡಿದ ವಿಚಾರಗಳನ್ನೂ ಜನಪ್ರಿಯತೆಯನ್ನೂ ಎತ್ತಿ ಹೇಳಿದರು. ಅನಂತರ ಡಾ. ಎನ್. ದಾಸ್ ಅವರು ಧನ್ಯವಾದವನ್ನಿತ್ತರು.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0–60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಾಲುಕೋಟೆ, ಉಡುಪಿ, ದ. ಕ.

ದಿವಾಕರ

ದಿವಾಕರ ಓ ದಿವ್ಯಾಕಾರ
ದಿವಿಜ ಘನಂಧರ ಧೀರ!
ಚರಾ ಚರಾ ಚೇತನೆಕರಬೀರ
ಬಾಳ ಬೆಳಗಿಸುವ ಚಿದಂಬರ!

ಪ್ರಭಾಕರ ಹೃನ್ಮನೋಹರ
ಸಚ್ಚಿದಾನಂದ ತಮೋಹರ
ಏಕರೂಪವರ ಅಜಹರಿಯು ಹರ
ಹರಸೈ ನಿನ್ನಯ ಪೂಜೆಗೆ ಬಹರ!

ಪಂಕಜಾಪ್ತ ಖಗಲೆರೆಯು ಸುಧೀರ
ಪೊಳೆಯುವ ಚಿನ್ಮಯ ಪದಕಧರ!
ತಿಮಿರ ಬೆಳಕಿನೊಳಡುಮ ಲಜ್ಜಾವೀರ

ತಿರೆಯ ತೀರದಾ ನಾ ಪ್ರವರ!
ನೇಸರ ಜಡತೆಗಾ ನೀ ಸರಿಸೈ ಪರ—
ಮೇಶ್ವರ ರೂಪಿ ಪ್ರಕಾಶಕರ!
ಕನ್ನಡ ಮಾತೆಯ ಮುಕುಟಮಣೇಶ್ವರ
ಕಣ್ಣನೆ ತೆರಸುವ ಅಂಶುಧರ!

—ತ್ರಿಮೂರ್ತಿ

ದಿವಂಗತ ಮಡಿಕೇರಿ ವಿಶ್ವನಾಥ ರೈಗಳು

ಮಡಿಕೇರಿಯ ಅತಿ ಪುರಾತನ ಮನೆತನದ, ಹಾಗೂ ಆಗಿನ ಪ್ರಸಿದ್ಧ ವಕೀಲರಾಗಿದ್ದ ಶಾಸ್ತ್ರಿ ಮನೆ ಗುಡ್ಡಪ್ಪ ರೈಗಳ ಪುತ್ರರೂ ಆದ ಶ್ರೀ ಯಂ. ಜಿ. ವಿಶ್ವನಾಥ ರೈಗಳು ಇದೇ ತಾ. 11ರಲ್ಲು ತಮ್ಮ 73ನೇ ವಯಸ್ಸಿನಲ್ಲಿ ಮೃತರಾದರೆನ್ನಲು ವಿಷಾದವಾಗುತ್ತದೆ.

ದಿವಂಗತರು ಮಡಿಕೇರಿ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಮಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡಿದರು. ಅವರ ತಂದೆಯವರು ಮುಣಪಟ್ಟಿ ಮೇರೆ ಮಡಿಕೇರಿಗೆ ಬಂದು ತಮ್ಮ ಕಾಫಿತೋಟದ ಕೆಲಸದಲ್ಲಿ ಮಗ್ನರಾದರು. ದಿವಂಗತ ವಿಶ್ವನಾಥ ರೈಗಳು ಮಡಿಕೇರಿ ಮುನಿಸಿಪಾಲಿಟಿಯಲ್ಲಿಯೂ ಕೊಡಗು ಟೆಂಪಲ್ ಕಮಿಟಿಯಲ್ಲಿಯೂ ಒಳ್ಳೆ ಸೇವೆ ಸಲ್ಲಿಸಿರುತ್ತಾರೆ. ಭಾಗಮಂಡಲದ ತಲಕಾವೇರಿಗೆ ಮೋಟಾರು ರಸ್ತೆ ಆಗಬೇಕೆಂದು ಮೊಟ್ಟಮೊದಲು ಪ್ರಯತ್ನಿಸಿದವರು ದಿ| ರೈಗಳೇ, ಅದು ಈಗ ಕಾರ್ಯರೂಪಕ್ಕೆ ಬಂದು ಜನತೆಗೆ ತುಂಬಾ ಉಪಕಾರವಾಗಿರುತ್ತದೆ. ವಿಶ್ವನಾಥ ರೈಗಳು ಸುಸಂಸ್ಕೃತರೂ, ಅಹಂಭಾವ ಇಲ್ಲದವರಾಗಿಯೂ ಉದಾರಿಗಳೂ ಆಗಿದ್ದರು.

ಮಂಜೇಶ್ವರದಬಳಿ "ಕುಚ್ಚಪಳ್ಳ" ಎಂಬಲ್ಲಿಗೆ ಪೋಷ್ಟಾಪಿಸು ಮತ್ತು ರೈಲ್ವೆ ಸ್ಟೇಶನ್ ಆಗಲು ಇವರ ಪ್ರಯತ್ನವೇ ಕಾರಣವಾಗಿದೆ. ಅಲ್ಲದೆ ಅವರಿಗೆ ಕೇರಳ ಆಸ್ತಿಗಳಿವೆ.

ದಿ| ರೈಗಳಿಗೆ 3 ಜನ ಗಂಡು ಮಕ್ಕಳು ಮತ್ತು 9 ಜನ ಹೆಣ್ಣು ಮಕ್ಕಳಿರುತ್ತಾರೆ. ಹಿರಿಮಗನು ಮೆಡಿಕಲ್ ಪ್ರೇಕ್ಟೀಸನರಾಗಿ ಮದ್ರಾಸ್‌ದ್ರೆಯಲ್ಲಿರುತ್ತಾರೆ. ಬಾಕಿಯವರು ಕಾಲೇಜುಗಳಲ್ಲಿ ಓದುತ್ತಾರೆ. ಅವರ ಪ್ರಥಮ ಪುತ್ರಿ ಮಂಗಳೂರಿನ ಪ್ರಸಿದ್ಧ ಡಾಕ್ಟರ್ ದೇವದಾಸ ಆಡಪರವರ ಧರ್ಮಪತ್ನಿ. ಎರಡನೇ ಮಗಳು ಮಾಜಿ ಯಂ. ಪಿ. ಶಂಕರಾಳ್ವರ ಮಗ ವಕೀಲ್ ಸೋಮಶೇಖರ ಆಳ್ವರ ಪತ್ನಿ. ಮೂರನೇ ಪುತ್ರಿಯು ವಕೀಲ್ ಶ್ರೀನಿವಾಸ ಆಳ್ವರ ಮಗ ಇಂಗ್ಲೀಷ್ ಕಂಪೆನಿಯ 'ಟಿ' ತೋಟದ ಅಶೋಕ ಕುಮಾರ ಆಳ್ವರ ಪತ್ನಿಯಾಗಿರುತ್ತಾರೆ.

—(ಶಿವರ್ಣ ಹಿತೈಷಿ)

ತಾನು ತಿಳಿದವನೆಂಬ ಅಹಂಕಾರವಿರುವವನಿಗಿಂತ ಹಿರಿಯ ತಿಳಿಗೇಡಿ ಬೇರಿಲ್ಲ.

o o o

ಜೀವನದ ತೃಪ್ತಿಗಿರುವ ಪ್ರಧಾನ ದಾರಿಯೆಂದರೆ ಜೀವನದ ಮೇಲಿರುವ ಆಸಕ್ತಿಯಾಗಿದೆ.

ವೇಷಧಾರಿ

(ಎರಡನೇ ಪುಟದಿಂದ)

ದಾದರೂ ನಾನು ನಿನಗೆ ಪ್ರತಿ ಹೇಳಿದ್ದೇ ನೇನಕ್ಕ…ನೀನು ನನಗೆ ಅಕ್ಕನೂ ಹೌದು ಅಮ್ಮನೂ ಹೌದು …. ಈಗ ಯಾಕಕ್ಕ ಆ ಮಾತು'

'ನಿಮ್ಮ ಭಾವನ ಸ್ನೇಹಿತರು ಗೋವಿಂದರಾಯರು ಅವರ ಮಗಳು ವಾಣಿ ನಿನಗೆ ಗೊತ್ತು ತಾನೆ'

'ಹೌದು'

'ವಾಣಿ ನೋಡಿದ್ದಿಯಷ್ಟೆ"

"ಮಾತನಾಡೋ?'

"ನಾನು ಏನಕ್ಕ ಮಾತನಾಡಲಿ … ನೀವು ನಾಟಕ ಆರಂಭಿಸಿದ್ದೀರ'

"ನಾಟಕವೂ ಇಲ್ಲ ರೂಪಕವೂ ಇಲ್ಲ. ಆ ಹುಡುಗಿ ನಿನ್ನೇ ಮದುವೆಯಾಗುತ್ತೇನೆ ಅಂತ ಹಟ ಹಿಡಿದಿದೆಯಂತೆ…. ನೀನು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಬಿಡು…ನಾನು ನಿಮ್ಮ ಭಾವ ನಿನ್ನನ್ನು ನಂಬಿ 'ಹುಂ' ಎಂದು ಬಿಟ್ಟಿದ್ದೇವೆ. ಯಾವುದಕ್ಕೂ ಸಂಕೋಚ ಬೇಡ. ಹೇಳಿಬಿಡು…"

"ಅಕ್ಕಾ…."

"ಏನೋ ಅದು .."

"ಅವತ್ತು ಅವರ ಮನೆಯಲ್ಲಿ ಉಪಚಾರ ಮಾಡಿದಾಗಲೇ ನನಗೆ ಅನುಮಾನ ಬಂತು . ಅಂತೂ ನೀನು ಒಪ್ಪಿಕೊಂಡು ಬಿಟ್ಟಿದ್ದೀಯ, ಸರಿ … ಅಪ್ಪ ಒಂದು ವೇಳೆ…"

"ಅಪ್ಪ ಆಗಲೇ 'ತಥಾಸ್ತು' ಅಂದು ಬಿಟ್ಟಿದ್ದಾರೆ.

"ಅಂದರೆ ಈಗ …"

'ತಮ್ಮ ಸಮ್ಮತಿ ಅಷ್ಟೆ"

'ಒಂದು ವೇಳೆ ನಾನು ಬೇಡ ಅಂತ ಹಟ ಹಿಡಿದರೆ .."

'ಕಿವಿ ಹಿಡಿದು ಎಳೆದುಕೊಂಡು ಬಂದು ಹಸೆಯ ಮೇಲೆ ಕೂಡಿಸುತ್ತೇನೆ' ಎಂದು ನಗುತ್ತ ನುಡಿದರು ವಿಮಲ.

'ಓೋ ಆ ಛಾನ್ಸು ಅವಳಿಗ್ಯಾಕೆ ಕೊಡ್ತೀಯೋ, ವಾಣಿಗೆ ಕೊಡೊ" ಎನ್ನುತ್ತಲೇ ಪ್ರವೇಶಿಸಿದರು ರಾಮಕೃಷ್ಣ.

ಸುಧಾಕರ ಅಲ್ಲಿಂದ ಸದ್ದಿಲ್ಲದೆ ನುಸುಳಿದ

ಶುಭ ಮುಹೂರ್ತದಲ್ಲಿ ವಾಣಿ ಸುಧಾಕರರ ವಿವಾಹ ವೈಭವದಿಂದ ನೆರವೇರಿತು.

— ೩ —

'ವಾಣಿ'

"ಏನಕ್ಕ"

"ಏನಕ್ಕನೋ ಏನು ತಂಗಿಯೋ?… ಎಷ್ಟು ಗಂಟೇನಮ್ಮ'

'ಎರಡು ಗಂಟೆ'

"ಅವನು ಎಷ್ಟು ಹೊತ್ತಿಗೆ ಬರ್ತಾನೋ?ಏನೋ ನೀನು ಊಟ ಮಾಡಮ್ಮ'

"ಅವರು ಬರ್ಲಿ ಅಕ್ಕ…'

"ನಾಕಮ್ಮ ಸಾಕು ನಿಮ್ಮ ಸಹವಾಸ . .ಅವನು ಕಾಲೇಜು ……ನಾಟಕ…ಅಭ್ಯಾಸ….ಸ್ನೇಹಿತರು ಅಂತ ಹೊರಟು ಬಿಡುತ್ತಾನೆ….ಅವನಿಗೆ ಹೊತ್ತುಗೊತ್ತು ಒಂದೂ ಇಲ್ಲ .ನೀನು ಅವನಿಗೋಸ್ಕರ ಊಟ ಇಲ್ಲದೆ ಕಾಯ್ತಾಕೂತ್ಕೋ…ನಾಳೆ ನಿನ್ನ ಅಪ್ಪ ಅಮ್ಮ ಬಂದರೆ ನನ್ನ ಮಗಳಿಗೆ ಹೊಟ್ಟೆ ತುಂಬ ಊಟ ಹಾಕ್ತೀರೋ ಇಲ್ಲೋ ಅಂತ ಕೇಳ್ತಾರೆ' ಎಂದರು ವಿಮಲ ಅವರಿಗೆ ನಾದಿನಿಯ ಬಗೆಗೆ ಅಪಾರ ಅಭಿಮಾನ. ವಾಣಿ ಅವರನ್ನು 'ಅಕ್ಕ'ನೆಂದೇ ಕರೆಯುತ್ತಿದ್ದಳು.

'ನಾನು ಹೇಳಿದರಂತೂ ಕೇಳುವುದಿಲ್ಲ … ನೀನಾದರೂ ಹೇಳು ವಾಣಿ…. ಹೊತ್ತು ಹೊತ್ತಿಗೆ ಸರಿಯಾಗಿ ಬಂದು ತಿಂಡಿ ಊಟ ಮುಗಿಸಿಕೊಂಡು ಹೋಗಲಿ…. ಈ ಪುಣ್ಯಾತ್ಮನನ್ನು ಕಾಯೋದೇ ಒಂದು ಕೆಲಸ…. ಇವನಿಗೆ ಅದೆಂದು ವಿವೇಕ ಬರುತ್ತದೆಯೋ ನಾನು ಕಾಣೆ…." ಎಂದರು. ವಾಣಿ ಮೃದುವಾಗಿ ನಕ್ಕಳು.

ಸುಧಾಕರ ಸದ್ದಿಲ್ಲದೆ ಒಳಕ್ಕೆ ಪ್ರವೇಶಿಸಿದ

"ಇಷ್ಟು ಹೊತ್ತಿಗ ಮನೆ ನೆನಪು ಬಂತೇನಪ್ಪ…. ಬಾ…" ಎಂದರು ವಿಮಲ.

'ಅಕ್ಕ ತುಂಬ ಹಸಿವೆಯಾಗಿಬಿಟ್ಟಿದೆ..'

"ಅದಕ್ಕೆ ಮನೆ, ಮಡದಿ ನೆನಪು ಬಂದಿರೋದು … ಆ ಲೆಲ್ಲೀ ಆ ಹುಡುಗಿ ಅನ್ನ ಬಿಟ್ಟು ನಿನಗಾಗಿ ಕಾಯುತ್ತಿರುತ್ತದೆ. ನೀನು ಊರನ್ನೆಲ್ಲ ಸುತ್ತಿ ತೋಚಿದಾಗ ಬರುತ್ತೀಯ…. ಊಟದಹೊತ್ತಿಗೆ ಸರಿಯಾಗಿ ಬರಬಾರದೆ"

"ಅಕ್ಕ ಕಾಲೇಜು ಕೆಲಸ ಅಂದ್ರೆ ಏನು ಅಂತ ತಿಳಿದುಕೊಂಡಿದ್ದೀಯ…."

"ವಾಣಿ ಇವನಿಗೆ ಮೊದಲು ಊಟಕ್ಕೆ ಹಾಕಮ್ಮ…. ಇನ್ನು ಇಲ್ಲೇ ನಾಟಕ ಆರಂಭವಾದೀತು" ಎಂದರು ವಿಮಲ

— ೪ —

ಸಮೀಪದ ಬಂಧುಗಳೊಬ್ಬರ ಮನೆಯ ವಿವಾಹಕ್ಕೆ ವಾಣಿ ಹೊರಟಿದ್ದಳು. ಮಗಳನ್ನು ಕರೆದೊಯ್ಯಲು ಅವಳ ತಂದೆ ಒಂದು ವಾರ ಮುಂಚೆಯೇ ಬಂದಿದ್ದರು. ಗೋವಿಂದರಾಯರು ಎಲ್ಲರಿಗೂ ಹಾರ್ದಿಕ ವಾಗ್ನಿಮಂತ್ರಣ ನೀಡಿದರು. ಸುಧಾಕರ ಇಲ್ಲವೆನ್ನದೆ ಒಪ್ಪಿಕೊಂಡ.

ವಿವಾಹಕ್ಕೆ ತಪ್ಪದೆ ಬರುವಂತೆ ವಾಣಿ ಸ್ವಾಗತ ನೀಡಿದಳು.

"ಖಂಡಿತ ಬರುತ್ತೀರಿ ತಾನೆ"

'ಬರೋಣ ಅಂದು ಕೊಂಡಿದ್ದೇನೆ…. ಅನುಕೂಲ…."

"ಈ ರಾಗವೇನೂ ಬೇಡ ನಿಮ್ಮ ರಾಜಕಾರ್ಯ ಇದ್ದೇ ಇದೆ. ಎರಡು ದಿನದ ಮಟ್ಟಿಗೆ ಕಾಲೇಜಿಗೆ ರಜೆ ಹಾಕಿ ಬನ್ನಿ…'

'ಬರಲೇ ಬೇಕೇನೇ'

'ಕಣಿ ಕೇಳಿ….ನೀವು ಬಾರದೆ ಹೋದರೆ….ನಾನು ಮಾತೇ ಆಡೋಲ್ಲ"

'ನಾನು ಧನ್ಯನಾದೆ' ಎಂದ ಸುಧಾಕರ.

"ನಾನು ಅಕ್ಕನಿಗೆ ಹೇಳುತ್ತೇನೆ'

"ಅಯ್ಯೋ ಅಯ್ಯೋ ಹಾಗೆ ಮಾಡಬೇಡ್ವೆ ನಿನಗೆ ಪುಣ್ಯ ಬರುತ್ತದೆ… ಖಂಡಿತ ಬರುತ್ತೇನೆ… ವಾಣಿ ಪ್ಲೀಜ್" ಎಂದ ಸುಧಾಕರ

"ಅಂತೂ ನೀವು ನಾಟಕದ ಬುದ್ಧಿ ಬಿಡೋದಿಲ್ಲ" ಎಂದು ನಗುತ್ತಾ ನುಡಿದಳು ವಾಣಿ.

"ಹುಟ್ಟುಗುಣ ಕಣೆ" ಎಂದ ಸುಧಾಕರ

ಸುಧಾಕರ ವಿವಾಹಕ್ಕೆ ಹೋಗಲಿಲ್ಲ. ವಾಣಿಗೆ ತುಂಬ ಬೇಸರವಾಯಿತು.

'ವಿಚಿತ್ರ ವ್ಯಕ್ತಿ' ಎಂದರು ಗೋವಿಂದರಾಯರು. ವಾಣಿ ಬಹು ದಿನಗಳ ವರೆಗೆ ಬಿಗುಮಾನದಿಂದಲೇ ಇದ್ದಳು. ಸುಧಾಕರ ಬಾರದಿದ್ದುದಕ್ಕೆ ಕಾರಣ ತಿಳಿಸಿ 'ಕ್ಷಮಿ



(ಹೊಸ ಮುದ್ರಣ)

ವೇದವು ಸಾರುತ್ತಿದೆ:

"ಏಳಿ, ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾದ್ದಿಲ್ಲ. ತಿಳಿದವ ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ
ಗೀತೆಯ ಸಮೂಲ ಭಾಷಾಂತರವು

ಗೀತೆಯ ಕೈಗನ್ನಡಿಯಾಗಿ

ಹೊಸ ಆವೃತ್ತಿಯಾಗಿ ಪ್ರಕಟವಾಗಿದೆ
ಅದನ್ನು ಎಲ್ಲರೂ ಓದಬೇಕಾಗಿದ

—"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? . ಗೀತೆಯನ್ನು ಚೆನ್ನಾಗಿ ಓದಬೇಕು"
ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450ಕ್ಕೂ ಮಿಕ್ಕಿದ ಪುಟಗಳುಳ್ಳ
ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೀ ಒಂದೂವರೆ ರೂಪಾಯಿ
2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

NAVAYUGA 29—6—1967
Registered with the Registrar
of News Papers for India
under No. R. N. 3546/'57

REGD. No. B G. 176
LICENCE No. 31
Licensed to Post without Prepayment

ಸಿಬಿಡು ಚಿನ್ನ' ಎಂದಾಗ ಅವಳ ಬಿಗುಮಾನ ಕರಗಿತು.

— ೫ —

ಮನೆಯಲ್ಲಿ 'ಸತ್ಯನಾರಾಯಣ ವ್ರತ'ವನ್ನು ಆದ್ದೂರಿಯಿಂದ ನಡೆಸಲು ಗೋವಿಂದ ರಾಯರು ಸಿದ್ಧತೆ ನಡೆಸಿದ್ದರು. ಅನೇಕ ಬಂಧು ಮಿತ್ರರು ಗೋವಿಂದರಾಯರ ಆಹ್ವಾನವನ್ನು ಅಂಗೀಕರಿಸಿ ಬಂದಿದ್ದರು. ವಿಮಲ ಮತ್ತು ವಾಣಿ ಒಂದುವಾರ ಮುಂಚೆಯೇ ಬಂದಿದ್ದರು. ಸುಧಾಕರ ಪತ್ನಿಗೆ "ಖಂಡಿತ ಬರುತ್ತೇನೆ" ಎಂದು ಭಾಷೆ ಕೊಟ್ಟಿದ್ದ.

ಊರಿಗೆ ಹೊರಡುವ ಮುಂಚೆ ವಾಣಿ ಹಟ ಹಿಡಿದಳು. 'ನಿಮ್ಮ ಮಾತನ್ನ ನಾನು ನಂಬಲಾರೆ. ನೀವು ಯಾವುದೋ ಕಾರಣ ಹೇಳಿ ತಪ್ಪಿಸಿ ಕೊಳ್ಳುತ್ತೀರಿ. ನೀವು ನನ್ನೊಂದಿಗೆ ಹೊರಟು ಬಿಡಿ. ಇಲ್ಲವಾದರೆ ನಾನು ಹೋಗುವುದಿಲ್ಲ' ಎಂದಳು ವಾಣಿ.

'ನಿನ್ನ ಕೋಪ, ಬೇಸರ ಸಹಜ ವಾಣಿ ಆದರೆ ಹೋದ ಸಾರಿ ನಾನು ಮದ್ರಾಸಿನ ನಾಟಕೋತ್ಸವಕ್ಕೆ ಹೋಗಲೇ ಬೇಕಾಯ್ತು. ಬರಲಾಗಲಿಲ್ಲ. ನೀನೇ ನನ್ನ ಮಾತನ್ನು ನಂಬದಿದ್ದರೆ ನಾನೇನು ಹೇಳಲಿ. ಈ ಬಾರಿ ಅಕ್ಕ ಬರುತ್ತಾಳೆ. ಖಂಡಿತನಾನು ಆ ದಿನವಾದರೂ ಬಂದೇ ಬರುತ್ತೇನೆ. ಅನುಮಾನ ಪಡುವುದು ಬೇಡ" ಎಂದು ಭಾಷೆ ನೀಡಿದ. ವಾಣಿ ಸಂತೃಪ್ತಳಾಗಿ ಒಪ್ಪಿಕೊಂಡಳು.

ವಾಣಿ ಮತ್ತು ವಿಮಲ ಸುಧಾಕರ ಮತ್ತು ರಾಮಕೃಷ್ಣರಿಗೆ ಅಗತ್ಯ ಸೂಚನೆಗಳನ್ನಿತ್ತು ಪ್ರಯಾಣ ಬೆಳೆಸಿದರು.

— ೬ —

ರಾಮಕೃಷ್ಣ ರೈಲಿನಲ್ಲಿ ಪ್ರಯಾಣ ಮಾಡಿ ಗೆಳೆಯನ ಮನೆ ತಲುಪಿದರು. ಸುಧಾಕರ ಗೆಳೆಯರ ಕಾರಿನಲ್ಲಿ ಬರುವುದಾಗಿ ತಿಳಿಸಿದ್ದ. ಅವನಿಗಾಗಿ ಮನೆಯವರೆಲ್ಲ ಕಾದು ಬೇಸರಗೊಂಡರು.

'ಕೈ ಕೊಟ್ಟ ಕಣಮ್ಮ....' ಎಂದರು ವಿಮಲ. ವಾಣಿಗೆ ಅಳುವಂತಾಗಿತ್ತು, ರಾಮಕೃಷ್ಣ 'ಬರುತ್ತೇನೆ ಅಂದಿದ್ದ ಸ್ವಲ್ಪ ನಿಧಾನವಾಗಿ ಬರಬಹುದು' ಎಂದರು. ಪೂಜಾ ಕಾರ್ಯ ಆರಂಭವಾದರೂ ಸುಧಾಕರ ಬರಲಿಲ್ಲ. ಯಾವ ಕಾರಣದಿಂದ ಬಾರದಿರಬಹುದು ಎಂದು ಎಲ್ಲರೂ ಯೋಚಿಸಿದರು.

ಕಾವಿಯ ಉಡುಪಿನಲ್ಲಿದ್ದ ಯುವಕನೋರ್ವ ಮನೆಯ ಬಾಗಿಲಲ್ಲಿ ನಿಂತು 'ಭವತಿ ಭಿಕ್ಷಾಂ ದೇಹಿ' ಎಂದು ಕೂಗಿದ. ಬಾಗಿಲಲ್ಲಿ ಇದ್ದವರೊಬ್ಬರು "ಸ್ವಾಮಿ ಇವತ್ತು ಮನೆಯಲ್ಲಿ ದೇವರ ಸೇವೆ. ಸ್ವಲ್ಪ ಕಾಲ ಕುಳಿತಿದ್ದು ಪ್ರಸಾದ ತೆಗೆದುಕೊಂಡು ಹೋಗಿ' ಎಂದರು. ಯುವಕ ಸನ್ಯಾಸಿ ಬಾಗಿಲಲ್ಲಿ ಕುಳಿತ.

ಯುವಕ ಸನ್ಯಾಸಿ ವರ್ಚಸ್ವಿಯಾಗಿದ್ದ. ಯಾರೋ ಅಗಾಧ ಪಂಡಿತ ಪ್ರತಿಭಾವಂತ ವ್ಯಕ್ತಿ ಎನ್ನುವಂತಿತ್ತು ಅವನ ನಿಲುವು. ನೋಡಿದವರು ಭಕ್ತಿಯಿಂದ ತಲೆಬಾಗ ಬೇಕಾದಂತಹ ವಾಕ್ ವೈಖರಿ ಸನ್ಯಾಸಿಯದು.

ಸುಧಾಕರ ಬರಲಿಲ್ಲ, ಬರಲಿಲ್ಲ ಎನ್ನುತ್ತಲೇ ಎಲ್ಲರೂ ಕಾರ್ಯಮಗ್ನರಾಗಿದ್ದರು. ಪೂಜೆ ಮುಗಿಯಿತು. ಸುಧಾಕರನ ನಡವಳಿಕೆಯಿಂದ ಕೆಲವರಿಗೆ ಬೇಸರ, ಕೆಲವರಿಗೆ ಕೋಪ ಬಂದಿತ್ತು.

ಯುವಕ ಸನ್ಯಾಸಿ 'ಭವತಿ ಭಿಕ್ಷಾಂ ದೇಹಿ' ಎಂದ.

ಯಾರೋ ಒಬ್ಬರು ಪ್ರಸಾದ ತಂದಿತ್ತರು. 'ಉಹುಂ' ಎಂದು ನಿಂತ. ಸ್ವಲ್ಪ ಹೊತ್ತಿನ ತರುವಾಯ ಹುಡುಗನೊಬ್ಬ ಪ್ರಸಾದ ತಂದು ಕೊಡಲು ಹೋದ. ಸನ್ಯಾಸಿ ನಿರಾಕರಿಸುತ್ತಾ "ವಿವಾಹಿತ ಯುವತಿಯು ಕೈಯಿಂದಲೇ ಪ್ರಸಾದ ಸ್ವೀಕರಿಸುತ್ತೇವೆ. ಅದು ಗುರುವಾಜ್ಞೆ' ಎಂದ. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಮನೆಗೆ ಬಂದ ಸನ್ಯಾಸಿಯ ವ್ರತ ಭಂಗವಾಗಬಾರದೆಂದು ಗೋವಿಂದರಾಯರೇ ಮಗಳಿಗೆ ಪ್ರಸಾದ ನೀಡುವಂತೆ ಸೂಚಿಸಿದರು.

ವಾಣಿ ಪ್ರಸಾದವನ್ನು ತಂದು ಕೊಡಲು ಹೋದಾಗ ಸನ್ಯಾಸಿ ಅವಳ ಎರಡು ಕೈಗಳನ್ನು ಹಿಡಿದುಕೊಂಡ. ವಾಣಿ 'ಅಪ್ಪ' ಎಂದು ಕಿರುಚಿದಳು. ನಿಮಿಷದೊಳಗಾಗಿ ಎಲ್ಲರೂ ಹಾಜರಾದರು; ಕೆಲವರು ಸನ್ಯಾಸಿಯನ್ನು ಹೀನಾಮಾನವಾಗಿ ಬೈದರು. ಕೆಲವರು ದಂಡಿಸಲು ಮುಂದಾದರು. ಸನ್ಯಾಸಿ ನಿರ್ಭೀತನಾಗಿ ನಿಂತಿದ್ದ. ಅವನಿಗೆ ಅಂಜಿಕೆಯೇ ಇರಲಿಲ್ಲ.

'ರಾವಣ ಸನ್ಯಾಸಿ. ಇಂತಹವರಿಂದಲೇ ಧರ್ಮ, ನೀತಿ, ನ್ಯಾಯ ಕೆಟ್ಟು ಹೋಗಿರೋದು. ಪೋಲೀಸರಿಗೆ ಒಪ್ಪಿಸಿ. ನಾಲ್ಕು ಏಟು ಬಿದ್ದರೆ ಇನ್ನು ಮುಂದೆ ಇಂತಹ ಕೆಲಸ ಮಾಡುವುದಿಲ್ಲ" ಎಂದರು ಹಿರಿಯರೊಬ್ಬರು.

ಸನ್ಯಾಸಿಯ ನಡವಳಿಕೆಯನ್ನು ಕಂಡು ರಾಮಕೃಷ್ಣ ಕೋಪತಾಳಿ ಅವನೆದುರಿನಲ್ಲಿ ನಿಂತು 'ನಿನಗೆ ನಾಚಿಕೆ ಆಗುವುದಿಲ್ಲವೆ? ನಿನಗೆ ಈ ವೇಷ ಕೇಡು" ಎಂದರು.

'ನಾಚಿಕೆಪಡಬೇಕಾದಂತಹ ಕೆಲಸ ನಾನು ಮಾಡಿಲ್ಲ.'

'ಆ ಹುಡುಗಿ ಕೈ ಹಿಡಿಯಲು ನಿನಗೇನು ಅಧಿಕಾರವಿದೆ?"

'ಅದನ್ನು ಕೇಳುವುದಕ್ಕೆ ನಿಮಗೇನು ಅಧಿಕಾರವಿದೆ?"

'ಆ ಯುವತಿ ಪರಸ್ತ್ರೀ... ಬೇರೆಯವನ ಹೆಂಡತಿ'

'ನಿಮಗೆ ನನಗಲ್ಲ—"

'ಥೂ ಭಂಡ...ಇಂತಹವರಿಗೆ ಮಾತಿನಿಂದ ಪ್ರಯೋಜನವಿಲ್ಲ....ದಂಡದ ಪ್ರಯೋಗವೇ ಸರಿ....' ಎಂದು ತೋಳು ಮುದುರಿದರು ರಾಮಕೃಷ್ಣ.

'ಭಾವ...ನಾನು ಅವಳ ಕೈ ಹಿಡಿದ್ದು ತಪ್ಪು ಅಂತ ಅವಳೇ ಹೇಳಿ ಬಿಡ್ಲಿ ಸಾಕು....ನಿಮ್ಮ ಶಿಕ್ಷೆಗೂ ಒಳಗಾಗ್ತೀನೆ—ಈ ಕಾವಿಯನ್ನೇ ಖಾಯಂ ಆಗಿ ಧರಿಸುತ್ತೇನೆ" ಎಂದು ಅಂಟಿಸಿಕೊಂಡಿದ್ದ ಗಡ್ಡ ಮೀಸೆಗಳನ್ನು ಕಿತ್ತುಹಾಕುತ್ತಾ ರುಮಾಲು ತೆಗೆದು, ಕಾವಿ ಅಂಗಿ ಕಳಚಿದ ಸುಧಾಕರ.

'ಸಾಕು ಬಾರೋ ವೇಷಧಾರಿ" ಎಂದಳು ವಿಮಲ.

ಆ ವೇಳೆಗೆ ವಾಣಿ ನಾಚಿಕೆಯಿಂದ ಕೆಂಪೇರಿ ಕ್ಷ್ಮರೆಯಾಗಿದ್ದಳು.

ಪ್ರಶ್ನೋತ್ತರ

ಅವಳು:— ಓ ಮನದನ್ನ
ನೆರಳಿನೊಲೆನ್ನ
ಹಿಂಬಂದುದು ಏಕೆ!

ಅವನು:— ಎಲೆ ಓ ಚಿನ್ನ
ನೀ ನನ್ನೊಲಿದೆನ್ನ
ಹಿಡಿದೆಳೆದುದು ಏಕೆ!

ಅವಳು:— ಓ ಬಾಳಂದ
ಬಿರುಗಣ್ಣಿಂದ
ನೋಡಿದುದೇತಕ್ಕೆ!

ಅವನು:— ಓಹೋ ನಲ್ಲೆ
ಮಾಮ ಕಣ್ಣಲ್ಲೆ
ಕಂಡುದುದೇತಕ್ಕೆ?

ಅವಳು:— ನನ್ನನು ನೋಡಿ
ನೋಟದೆ ಕಾಡಿ
ಕೂಡಿದುದೇತಕ್ಕೆ!

ಅವನು:— ನೀನೆದೆ ಹೊಕ್ಕು
ಮುಗುಳ್ನಗೆ ನಕ್ಕು
ಕಾಡಿಸುದೇತಕ್ಕೆ?

ಅವಳು:— ಓಹೋ! ದುಂಬಿ
ನೀನೆನ್ನೆದ ದುಂಬಿ
ಹಾಡಿದುದೇತಕ್ಕೆ!

ಅವನು:— ಹಾ! ನೀನರಳಿ
ನನ್ನೆಡೆ ಹೊರಳಿ
ಕಾಡಿದುದೇತಕ್ಕೆ!

ಅವಳು:— ನನ್ನೆದೆ ಹೊಕ್ಕು
ಅಲ್ಲೇ ಸಿಕ್ಕು
ಒಪ್ಪಿದುದೇತಕ್ಕೆ!

ಅವನು:— ನಿನ್ನೆದ ತೆರೆದು
ಅಲ್ಲೇ ಹಿಡಿದು
ಅಪ್ಪಿದುದೇತಕ್ಕೆ!

"ತ್ರಿಮೂರ್ತಿ"

ವಿ|ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ-ಮದ್ದು
ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦.



Edited, Printed & Published by K. H. Shetty at the Navayuga Press, Udipi, S. India.

ನವಯುಗ

6—7—1967

೧೦
ಪೈಸೆ

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಸಿಬಿಡು ಚಿನ್ನ' ಎಂದಾಗ ಅವಳ ಬಿಗುಮಾನ ಕರಗಿತು.

— ೫ —

ಮನೆಯಲ್ಲಿ 'ಸತ್ಯನಾರಾಯಣ ವ್ರತ'ವನ್ನು ಆದ್ಧೂರಿಯಿಂದ ನಡೆಸಲು ಗೋವಿಂದ ರಾಯರು ಸಿದ್ಧತೆ ನಡೆಸಿದ್ದರು. ಅನೇಕ ಬಂಧು ಮಿತ್ರರು ಗೋವಿಂದರಾಯರ ಆಹ್ವಾನವನ್ನು ಅಂಗೀಕರಿಸಿ ಬಂದಿದ್ದರು. ವಿಮಲ ಮತ್ತು ವಾಣಿ ಒಂದುವಾರ ಮುಂಚೆಯೇ ಬಂದಿದ್ದರು. ಸುಧಾಕರ ಪತ್ನಿಗೆ "ಖಂಡಿತ ಬರುತ್ತೇನೆ" ಎಂದು ಭಾಷೆ ಕೊಟ್ಟಿದ್ದ.

ಊರಿಗೆ ಹೊರಡುವ ಮುಂಚೆ ವಾಣಿ ಹಟ ಹಿಡಿದಳು. 'ನಿಮ್ಮ ಮಾತನ್ನ ನಾನು ನಂಬಲಾರೆ. ನೀವು ಯಾವುದೋ ಕಾರಣ ಹೇಳಿ ತಪ್ಪಿಸಿ ಕೊಳ್ಳುತ್ತೀರಿ. ನೀವು ನನ್ನೊಂದಿಗೆ ಹೊರಟು ಬಿಡಿ. ಇಲ್ಲವಾದರೆ ನಾನು ಹೋಗುವುದಿಲ್ಲ' ಎಂದಳು ವಾಣಿ.

'ನಿನ್ನ ಕೋಪ, ಬೇಸರ ಸಹಜ್ಯವಾಣಿ ಆದರೆ ಹೋದ ಸಾರಿ ನಾನು ಮದ್ರಾಸಿನ ನಾಟಕೋತ್ಸವಕ್ಕೆ ಹೋಗಲೇ ಬೇಕಾಯ್ತು. ಬರಲಾಗಲಿಲ್ಲ. ನೀನೇ ನನ್ನ ಮಾತನ್ನು ನಂಬದಿದ್ದರೆ ನಾನೇನು ಹೇಳಲಿ. ಈ ಬಾರಿ ಅಕ್ಕ ಬರುತ್ತಾಳೆ. ಖಂಡಿತನಾನು ಆ ದಿನವಾದರೂ ಬಂದೇ ಬರುತ್ತೇನೆ. ಅನುಮಾನ ಪಡುವುದು ಬೇಡ" ಎಂದು ಭಾಷೆ ನೀಡಿದ. ವಾಣಿ ಸಂತೃಪ್ತಳಾಗಿ ಒಪ್ಪಿಕೊಂಡಳು.

ವಾಣಿ ಮತ್ತು ವಿಮಲ ಸುಧಾಕರ ಮತ್ತು ರಾಮಕೃಷ್ಣರಿಗೆ ಆಗತ್ಯ ಸೂಚನೆಗಳನ್ನಿತ್ತು ಪ್ರಯಾಣ ಬೆಳೆಸಿದರು.

— ೬ —

ರಾಮಕೃಷ್ಣ ರೈಲಿನಲ್ಲಿ ಪ್ರಯಾಣ ಮಾಡಿ ಗೆಳೆಯನ ಮನೆ ತಲುಪಿದರು. ಸುಧಾಕರ ಗೆಳೆಯರ ಕಾರಿನಲ್ಲಿ ಬರುವುದಾಗಿ ತಿಳಿಸಿದ್ದ. ಅವನಿಗಾಗಿ ಮನೆಯವರೆಲ್ಲ ಕಾದು ಬೇಸರಗೊಂಡರು.

'ಕೈ ಕೊಟ್ಟ ಕಣಮ್ಮ....' ಎಂದರು ವಿಮಲ. ವಾಣಿಗೆ ಅಳುವಂತಾಗಿತ್ತು. ರಾಮಕೃಷ್ಣ 'ಬರುತ್ತೇನೆ ಅಂದಿದ್ದ ಸ್ವಲ್ಪ ನಿಧಾನವಾಗಿ ಬರಬಹುದು' ಎಂದರು. ಪೂಜಾ ಕಾರ್ಯ ಆರಂಭವಾದರೂ ಸುಧಾಕರ ಬರಲಿಲ್ಲ. ಯಾವ ಕಾರಣದಿಂದ ಬಾರದಿರಬಹುದು ಎಂದು ಎಲ್ಲರೂ ಯೋಚಿಸಿದರು.

ಕಾವಿಯ ಉಡುಪಿನಲ್ಲಿದ್ದ ಯುವಕನೋರ್ವ ಮನೆಯ ಬಾಗಿಲಲ್ಲಿ ನಿಂತು 'ಭವತಿ ಭಿಕ್ಷಾಂ ದೇಹಿ' ಎಂದು ಕೂಗಿದ. ಬಾಗಿಲಲ್ಲಿ ಇದ್ದವರೊಬ್ಬರು "ಸ್ವಾಮಿ ಇವತ್ತು ಮನೆಯಲ್ಲಿ ದೇವರ ಸೇವೆ. ಸ್ವಲ್ಪ ಕಾಲ ಕುಳಿತಿದ್ದು ಪ್ರಸಾದ ತೆಗೆದುಕೊಂಡು ಹೋಗಿ' ಎಂದರು. ಯುವಕ ಸನ್ಯಾಸಿ ಬಾಗಿಲಲ್ಲಿ ಕುಳಿತ.

ಯುವಕ ಸನ್ಯಾಸಿ ವರ್ಚಸ್ವಿಯಾಗಿದ್ದ. ಯಾರೋ ಅಗಾಧ ಪಂಡಿತ ಪ್ರತಿಭಾವಂತ ವ್ಯಕ್ತಿ ಎನ್ನುವಂತಿತ್ತು ಅವನ ನಿಲುವು. ನೋಡಿದವರು ಭಕ್ತಿಯಿಂದ ತಲೆಬಾಗ ಬೇಕಾದಂತಹ ವಾಕ್ ವೈಖರಿ ಸನ್ಯಾಸಿಯದು.

ಸುಧಾಕರ ಬರಲಿಲ್ಲ, ಬರಲಿಲ್ಲ ಎನ್ನುತ್ತಲೇ ಎಲ್ಲರೂ ಕಾರ್ಯಮಗ್ನರಾಗಿದ್ದರು. ಪೂಜೆ ಮುಗಿಯಿತು. ಸುಧಾಕರನ ನಡವಳಿಕೆಯಿಂದ ಕೆಲವರಿಗೆ ಬೇಸರ, ಕೆಲವರಿಗೆ ಕೋಪ ಬಂದಿತ್ತು.

ಯುವಕ ಸನ್ಯಾಸಿ 'ಭವತಿ ಭಿಕ್ಷಾಂ ದೇಹಿ' ಎಂದ.

ಯಾರೋ ಒಬ್ಬರು ಪ್ರಸಾದ ತಂದಿತ್ತರು. 'ಊಹುಂ' ಎಂದು ನಿಂತ. ಸ್ವಲ್ಪ ಹೊತ್ತಿನ ತರುವಾಯ ಹುಡುಗನೊಬ್ಬ ಪ್ರಸಾದ ತಂದು ಕೊಡಲು ಹೋದ. ಸನ್ಯಾಸಿ ನಿರಾಕರಿಸುತ್ತಾ "ವಿವಾಹಿತ ಯುವತಿಯ ಕೈಯಿಂದಲೇ ಪ್ರಸಾದ ಸ್ವೀಕರಿಸುತ್ತೇನೆ. ಅದು ಗುರುವಾಜ್ಞೆ' ಎಂದ. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಮನೆಗೆ ಬಂದ ಸನ್ಯಾಸಿಯ ವ್ರತ ಭಂಗವಾಗಬಾರದೆಂದು ಗೋವಿಂದರಾಯರೇ ಮಗಳಿಗೆ ಪ್ರಸಾದ ನೀಡುವಂತೆ ಸೂಚಿಸಿದರು.

ವಾಣಿ ಪ್ರಸಾದವನ್ನು ತಂದು ಕೊಡಲು ಹೋದಾಗ ಸನ್ಯಾಸಿ ಅವಳ ಎರಡು ಕೈಗಳನ್ನು ಹಿಡಿದುಕೊಂಡ. ವಾಣಿ 'ಅಪ್ಪ' ಎಂದು ಕಿರುಚಿದಳು. ನಿಮಿಷದೊಳಗಾಗಿ ಎಲ್ಲರೂ ಹಾಜರಾದರು; ಕೆಲವರು ಸನ್ಯಾಸಿಯನ್ನು ಹೀನಾಮಾನವಾಗಿ ಬೈದರು. ಕೆಲವರು ದಂಡಿಸಲು ಮುಂದಾದರು. ಸನ್ಯಾಸಿ ನಿರ್ಭೀತನಾಗಿ ನಿಂತಿದ್ದ. ಅವನಿಗೆ ಅಂಜಿಕೆಯೇ ಇರಲಿಲ್ಲ.

'ರಾವಣ ಸನ್ಯಾಸಿ. ಇಂತಹವರಿಂದಲೇ ಧರ್ಮ, ನೀತಿ, ನ್ಯಾಯ ಕೆಟ್ಟು ಹೋಗಿರೋದು. ಪೋಲೀಸರಿಗೆ ಒಪ್ಪಿಸಿ. ನಾಲ್ಕು ಏಟು ಬಿದ್ದರೆ ಇನ್ನು ಮುಂದೆ ಇಂತಹ ಕೆಲಸ ಮಾಡುವುದಿಲ್ಲ" ಎಂದರು ಹಿರಿಯರೊಬ್ಬರು.

ಸನ್ಯಾಸಿಯ ನಡವಳಿಕೆಯನ್ನು ಕಂಡು ರಾಮಕೃಷ್ಣ ಕೋಪತಾಳಿ ಅವನೆದುರಿನಲ್ಲಿ ನಿಂತು 'ನಿನಗೆ ನಾಚಿಕೆ ಆಗುವುದಿಲ್ಲವೆ? ನಿನಗೆ ಈ ವೇಷ ಕೇಡು" ಎಂದರು.

'ನಾಚಿಕೆಪಡಬೇಕಾದಂತಹ ಕೆಲಸ ನಾನು ಮಾಡಿಲ್ಲ.'

'ಆ ಹುಡುಗಿ ಕೈ ಹಿಡಿಯಲು ನಿನಗೇನು ಅಧಿಕಾರವಿದೆ?"

'ಅದನ್ನು ಕೇಳುವುದಕ್ಕೆ ನಿಮಗೇನು ಅಧಿಕಾರವಿದೆ?"

'ಆ ಯುವತಿ ಪರಸ್ತ್ರೀ...ಬೇರೆಯವನ ಹೆಂಡತಿ'

'ನಿಮಗೆ ನನಗಲ್ಲ__"

'ಥೂ ಭಂಡ...ಇಂತಹವರಿಗೆ ಮಾತಿನಿಂದ ಪ್ರಯೋಜನವಿಲ್ಲ....ದಂಡದ ಪ್ರಯೋಗವೇ ಸರಿ....' ಎಂದು ತೋಳು ಮುದುರಿದರು ರಾಮಕೃಷ್ಣ.

'ಭಾವ...ನಾನು ಅವಳ ಕೈ ಹಿಡಿದ್ದು ತಪ್ಪು ಅಂತ ಅವಳೇ ಹೇಳಿ ಬಿಡಲಿ ಸಾಕು....ನಿಮ್ಮ ಶಿಕ್ಷೆಗೂ ಒಳಗಾಗುತ್ತೇನೆ__ಈ ಕಾವಿಯನ್ನೇ ಖಾಯಂ ಆಗಿ ಧರಿಸುತ್ತೇನೆ" ಎಂದು ಅಂಟಿಸಿಕೊಂಡಿದ್ದ ಗಡ್ಡ ಮೀಸೆಗಳನ್ನು ಕಿತ್ತು ಹಾಕಿ ರುಮಾಲು ತೆಗೆದು, ಕಾವಿ ಅಂಗಿ ಕಳಚಿ ಸುಧಾಕರ.

'ಸಾಕು ಬಾರೋ ವೇಷಧಾರಿ" ಎಂದಳು ವಿಮಲ.

ಆ ವೇಳೆಗೆ ವಾಣಿ ನಾಚಿಕೆಯಿಂದ ಕೆಂಪೇರಿ ನೀರೆಯಾಗಿದ್ದಳು.

ಪ್ರಶ್ನೋತ್ತರ

ಅವಳು:— ಓ ಮನದನ್ನ
ನೆರಳಿನೊಲೆನ್ನ
ಹಿಂಬಂದುದು ಏಕೆ!

ಅವನು:— ಎಲೆ ಓ ಚಿನ್ನ
ನೀನೊಲಿದೆನ್ನ
ಹುಡಿದಳೆದುದು ಏಕೆ!

ಅವಳು:— ಓ ಬಾಳಂದ
ಬಿರುಗಣ್ಣಿಂದ
ನೋಡಿದುದೇತಕ್ಕೆ!

ಅವನು:— ಓಹೋ ನಲ್ಲೆ
ಮಮ ಕಣ್ಣಲ್ಲೆ
ಕಂಡುದುದೇತಕ್ಕೆ?

ಅವಳು:— ನನ್ನನು ನೋಡಿ
ನೋಟದೆ ಕಾಡಿ
ಕೂಡಿದುದೇತಕ್ಕೆ!

ಅವನು:— ನೀನೆದೆ ಹೊಕ್ಕು
ಮುಗುಳ್ನಗೆ ನಕ್ಕು
ಕಾಡಿಸುದೇತಕ್ಕೆ?

ಅವಳು:— ಓಹೋ! ದುಂಬಿ
ನೀನೆದೆದುಂಬಿ
ಹಾಡಿದುದೇತಕ್ಕೆ!

ಅವನು:— ಹಾ! ನೀನರಳಿ
ನನ್ನೆಡೆ ಹೊರಳಿ
ಕಾಡಿದುದೇತಕ್ಕೆ!

ಅವಳು:— ನನ್ನೆದೆ ಹೊಕ್ಕು
ಅಲ್ಲೇ ಸಿಕ್ಕು
ಒಪ್ಪಿದುದೇತಕ್ಕೆ!

ಅವನು:— ನಿನ್ನೆದೆ ತೆರೆದು
ಅಲ್ಲೇ ಹಿಡಿದು
ಅಪ್ಪಿದುದೇತಕ್ಕೆ?

"ತ್ರಿಮೂರ್ತಿ"

ವಿದ್ವಾನ್ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ - ಮದ್ದು
ಸಾಧಾರಣ ಕಾಹಿಲೆಗಳಿಗೆ ಮನೆಯಲ್ಲಿ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty at the Navayuga Press, Udipi, S, India.

ನವಯುಗ

6—7—1967

೨೦
ಪೈಸೆ

ಕಥಾ ಪ್ರಪಂಚ

ಸಂಶಯದ ಸುಳಿಯಲ್ಲಿ

ಬರೆದವರು
ಶ್ರೀ ಎಚ್. ಸುಬ್ರಾಯ ಭಟ್ಟ.

"ಹಲ್ಲೋ ಮಿಸ್ಟರ್ ಸುಬ್ಬು! ಯಾವಾಗ ಬಂದೆ?" ಎಂದು ಕೈಕುಲುಕಲು ಮುಂದಾಗಿ ಬಂದ ನಾಗರಾಜನನ್ನು ಕಂಡಾಗ ನನಗಾದ ಆನಂದ ಹೇಳಿ ತೀರದು

ನಾಲ್ಕು ವರ್ಷಗಳ ಅನಂತರ ಅದೂ ಅನಿರೀಕ್ಷಿತವಾಗಿ ನಮ್ಮಿಬ್ಬರ ಭೇಟಿಯೂ ಗಿತ್ತು. ಕಾರ್ಯಾರ್ಥವಾಗಿ ಹೊರಟ ನನಗೆ ಮಿತ್ರನ ಸಂದರ್ಶನ ಸಂತೋಷವನ್ನೇ ತಂದಿತ್ತು.

ಕಾಲೇಜನ್ನು ಅರ್ಧದಲ್ಲಿಯೇ ಬಿಟ್ಟಿದ್ದ ನಾಗರಾಜ ಅವರೆಗೂ ಎಲ್ಲಿರುವನೆಂಬ ಅರಿವೇ ನನಗಿರಲಿಲ್ಲ ಕಾಲೇಜು ದಿನಗಳಲ್ಲಿ ನಾವಿಬ್ಬರೂ ಗಳಸ್ಯ ಕಂಠಸ್ಯ ಮಿತ್ರರಾಗಿದ್ದೆವು.

ತಂದೆಯ ನಿಧನ ನಾಗರಾಜನ ಶಿಕ್ಷಣದ ಮೇಲೆ ಪರಿಣಾಮ ಬೀರಲು ಕಾರಣವಾಯಿತು. ಮಡದಿಯ ಕೈಗೊಂಬೆಯೂ ಗಿದ್ದ ಶಾಂತರಾಮ ತಮ್ಮನ ಓದಿಗೆ ಸಹಾಯ ನೀಡಲು ಮುಂದಾಗದ ಕಾರಣ ನಿರ್ವಾಹವಿಲ್ಲದೆ ಕಾಲೇಜನ್ನು ಬಿಟ್ಟು ನಾಗರಾಜ ಮಧ್ಯ ರಾತ್ರಿಯಲ್ಲಿಯೇ ರೂಮನ್ನೂ ಬಿಟ್ಟು ಪರಾರಿಯಾಗಿದ್ದ.

ನಾಲ್ಕುದಿನ ನಾಗರಾಜನನ್ನು ಕಾಣದ ಮನ ಅಶಾಂತಿಯ ಅಲೆಗಳಲ್ಲಿಯೇ ತೇಲಿದ್ದರೂ ಮುಂದೆ ಅದು ದಿನಗಳೆದಂತೆ ಮನದಿಂದ ದೂರಾಗ ತೊಡಗಿತು. ಆಗೊಮ್ಮೆ ಈಗೊಮ್ಮೆ ನೆನಪಾದರೂ ಅದರಿಂದಾವ ಕಡುಕೂ ನನಗಾಗಿರಲಿಲ್ಲ.

ಅಂದು ಅಕಸ್ಮಾತ್ತಾಗಿಯೇ ಬಸ್ಸು ನಿಲ್ದಾಣದಲ್ಲಿ ಸಂಧಿಸಿದ ಮಿತ್ರನನ್ನು ಕಂಡಾಗ ಹಿಂದಿನದೆಲ್ಲವೂ ಒಮ್ಮೆಯೇ ಕಣ್ಮುಂದೆ ಸುಳಿದಂತಾಯಿತು.

ಮೌನ ಧರಿಸಿ ನಿಂತ ನನ್ನನ್ನು ಮತ್ತೊಮ್ಮೆ ಎಚ್ಚರಿಸಿದ ನಾಗರಾಜ ಬಲವಂತದಿಂದಲೇ ನನ್ನನ್ನು ಹತ್ತಿರದ ಹೋಟೆಲಿಗೆ ಎಳೆದೊಯ್ದನು.

ಇಬ್ಬರೂ ಎದುರುಬದುರಾಗಿಯೇ ಕುಳಿತೆವು. ಬಳಿಯಲ್ಲಿ ನಿಂತು ತಿಂಡಿ ನಾಮಾದಿ ಒಪ್ಪಿಸಿದ ಮಾಣಿಗೆ ನಾಗರಾಜನೇ ಎರಡು ಸ್ವೀಟ್ ತರಲು ಅರ್ಡರ್ ಮಾಡಿದನು. ಜೊತೆಗೆ ಖಾರವೂ ಬಂತು.

ನನ್ನ ಕೈ ತಿಂಡಿಯ ತಟ್ಟೆಯ ಮೇಲಿದ್ದರೂ ಕಣ್ಣು ನಾಗರಾಜನನ್ನೇ ಸುತ್ತುವರಿದಿತ್ತು. ಅದೇ ಮುಖ; ಅದೇ ಚಿಗುರು ಮೀಸೆ, ಗುಂಗುರು ಕೂದಲು; ಎಲ್ಲವೂ ಮೊದಲಿನಂತಿದ್ದರೂ ದೇಹ ಮಾತ್ರ ಮೊದಲಿಗಿಂತ ಸ್ವಲ್ಪ ಸ್ಥೂಲವಾಗಿ ಕಾಣುತಿತ್ತು.

ತಿಂಡಿ ಬರಿದಾಗುತ್ತಿದ್ದಂತೆ ಕಾಫಿಯೂ ಬಂತು. ಕಾಫಿಯನ್ನು ಗುಟುಕರಿಸುತ್ತಾ 'ಸುಬ್ಬು ನೀನು ಮೊದಲಿಗಿಂತ ಸೊರಗಿದೆ ಹಾಗೆ ಕಾಣ್ತಾ ಇದೆ, ಏನಾಯ್ತು ನಿಂಗೆ" ಎಂದಾಗ —"ಏನೂ ಇಲ್ಲ ಬಿಡು. ನೀನೇ ಸ್ವಲ್ಪ ಸ್ಥೂಲವಾದ ಕಾರಣ ನಿಂಗೆ ಹಾಗೆ ಕಾಣಿಸ್ತಾ ಇರ್ಬೇಕು" ಅಂದೆ.

"ಈಗ ಯಾವ ಉದ್ಯೋಗ ಹಿಡಿದಿದ್ದಿ? ಎಲ್ಲಿ ಕೆಲ್ಸ?" ಅಂದನು.

'ಕೆಲ್ಸ ಊರಲ್ಲಿಯೇ ಶಾಲಾ ಮಾಸ್ತರಿಕೆ! ಅದಿರಲಿ. ನಿನ್ನ ವಿಷಯ ಹೇಳಲೇ ಇಲ್ಲವಲ್ಲ" ಅಂದೆ.

"ನನ್ನ ವಿಷಯ ಏನು ಕೇಳೋದು ಬಿಡು. ನಾನೇನೂ ನಿನ್ನಂತೆ ಕಾಲೇಜು ಪೂರೈಸಿಲ್ಲ. ಹೆತ್ತವರ ನೆರವಂತೂ ಮೊದಲೇ ಇಲ್ಲ" ಎಂದ ನಾಗರಾಜನ ಮಾತಿನಲ್ಲಿ ನನಗೆ ಯಥಾರ್ಥಕ್ಕಿಂತಲೂ ವ್ಯಂಗ್ಯವೇ ಮೇಲೆದ್ದು ಕಾಣುತ್ತಿತ್ತು.

'ಜೀವನೋಪಾಯಕ್ಕಾದರೂ ಒಂದು ಉದ್ಯೋಗ ಬೇಕಲ್ಲ ಅದನ್ನಾದರೂ ಹೇಳಬಾರದೆ?' ಅಂದೆ.

'ನಾನೀಗ ಇನ್ಸೂರೆನ್ಸ ಏಜೆಂಟು ಕಣೋ' ಅಂದನು.

"ಓಹೋ ಹೀಗೋ ಸಮಾಚಾರ? ಅದಕ್ಕಾಗಿಯೇ ನನ್ನ ಉದ್ಯೋಗದ ವಿಚಾರ ಕದಕಿ ಕೇಳಲು ಕಾರಣ ಅಂತ ಕಾಣುತ್ತೆ' ಅಂದೆ ಪರಿಹಾಸವಾಗಿ.

"ಹೌದು ಸುಬ್ಬು. ನಮ್ಮಿಬ್ಬರ ಮಿತ್ರತ್ವ ಉಳಿಯಲು ಮುಂದಿರುವ ದಾರಿ ಅದೊಂದೇ ಆಗಿದೆ. ಅದ್ದರಿಂದ ಈಗೆಷ್ಟು ಕೊಡ್ತಿ ಎಂಬುದನ್ನು ಹೇಳಿಬಿಡು ಮೊದಲು," ಎಂದನು.

"ಈಗಾಗಲೇ ಸೇರಿರುವುದಕ್ಕೆ ಪ್ರೀಮಿಯಮ್ ಹಣ ಕಟ್ಟಲು ಸಾಧ್ಯವಿಲ್ಲದಿರುವಾಗ ಹೇಗೆ ಮಾಡಲಿ ಹೇಳು?" ಅಂದೆ.

'ಏನು ಅಂತಹ ತಾಪತ್ರಯ ನಿಂಗೆ? ಮನೆಯಲ್ಲಿ ಮಕ್ಕಳು ಮರಿ ತುಂಬಾ ಇವೆಯೇನೋ?' ಅಂದನು.

"ಸದ್ಯ ಅದಿಲ್ಲವಾದರೂ ಬರುವ ಹಣ ಖರ್ಚಿಗೆ ಸಾಲುತ್ತಿಲ್ಲ ನೋಡು. ಬೆಲೆ ಏರಿಕೆಯ ಇಂದಿನ ದಿನದಲ್ಲಿ ನಮ್ಮಂತಹ ಬಡ ಅಧ್ಯಾಪಕರ ಜೀವನ ನಿನ್ನಂಥವನಿಗೆ ಹೇಗೆ ಗೊತ್ತಾಗಬೇಕು ಹೇಳು" ಎಂದಾಗ ನಾಗರಾಜ ನಗುತ್ತಾ ಬಿಲ್ ಕೈಗೆತ್ತಿಕೊಂಡು ಹಣ ತೆತ್ತು ಹೊರ ಹೊರಡುವಂತೆ ಸೂಚಿಸಿದ.

ನಾನು ಬಂದ ಕಾರ್ಯವನ್ನೇ ಮರೆತು ಮಿತ್ರನ ಜೊತೆ ತಿರುಗಾಡುವುದು ನನಗುಚಿತವಾಗಿ ಕಾಣಲಿಲ್ಲ.

'ನಾಗರಾಜ! ನಾನೀಗ ಒಂದು ಅವಸರದ ಕೆಲಸಕ್ಕೆ ಬಂದಿರುವೆ. ಅದಿನ್ನೂ ಆಗಿಲ್ಲ. ನಿನ್ನ ವಿಳಾಸ ಕೊಟ್ಟಿಡು. ಆ ಮೇಲೆ ಸಿಗುವೆ.' ಎಂದೆ.

'ಯಾವುದಪ್ಪಾ ಅಂತಹ ಮಹತ್ಕಾರ್ಯ! ನಾನು ಕೇಳಬಾರದೇನೋ?' ಅಂದಾಗ ನನ್ನಿಂದ ಹೇಳದುಳಿಯಲಾಗಲಿಲ್ಲ.

'ಮತ್ತೇನಿಲ್ಲ ನೋಡು. ಈ ವರ್ಷ ಮನೆಯಲ್ಲಿ ಮಂಗಲಕಾರ್ಯ ನೆರವೇರಿಸುವ ಇಚ್ಛೆ ಹಿರಿಯರದ್ದು. ಆದಕ್ಕಾಗಿ ಇಲ್ಲಿ ಒಬ್ಬರನ್ನು ನೋಡಿ ಬರಬೇಕೆಂಬ ಹಿರಿಯರ ಒತ್ತಾಯವೇ ನನ್ನಲ್ಲಿಗೆ ಬರಮಾಡಿತು.' ಅಂದೆ.

'ಬಹಳ ಸಂತೋಷ ಸುಬ್ಬು. ಆಗುವ ಕಾಲಕ್ಕೆ ಎಲ್ಲವೂ ಆಗಿಯೇ ತೀರಬೇಕು. ನನಗೆಲ್ಲಾ ಇಲ್ಲಿ ಪರಿಚಿತರೇ ಆಗಿದ್ದಾರೆ. ನಿನಗೆ ತೊಂದ್ರೆ ಇಲ್ಲವಾದ್ರೆ ನಾನೂ ಬರುವೆ." ಎಂದ. ಮಿತ್ರನನ್ನು ಬಿಟ್ಟು ಹೋಗಲು ಮನ ಒಪ್ಪದಾಯಿತು. ಕ್ಷಣಕಾಲ ಮೌನವಲ್ಲಿಯೇ ದಾರಿ ಸಾಗಿತು. ನನ್ನಿಂದ ಪಡೆದ ವಿಳಾಸದ ಮನೆಗೆ ನನ್ನನ್ನು ಕರೆದೊಯ್ದ ನಾಗರಾಜ ಮೌನವ್ರತವನ್ನೇ ಧರಿಸಿ ಕುಳಿತುದನ್ನು ಕಂಡ ನನಗೆ ಆಶ್ಚರ್ಯವೆನಿಸಿತು. ನಾನಂದು ಬರಲಿರುವೆನೆಂಬ ವಿಚಾರ ಮೊದಲಾಗಿಯೇ ತಿಳಿದಿದ್ದ ಕಾರಣ ನಮ್ಮಿಬ್ಬರನ್ನೂ ಆದರದಿಂದಲೇ ಬರಮಾಡಿಕೊಂಡರು.

'ನಮ್ಮ ಮನೆತನಕ್ಕೆ ಸಂಬಂಧಿಸಿದ ವಿಷಯವನ್ನೂ ಬಹಿರಂಗವಾಗಿ ಪ್ರಸ್ತಾಪಿಸುವುದುಚಿತವಲ್ಲವೆಂದು ನಾನು ಮಿತ್ರನೊಬ್ಬನನ್ನೇ ವರಾಂಡದಲ್ಲಿ ಕುಳ್ಳಿರಿಸಿ ಉಪ್ಪರಿಗೆಯನ್ನೇರಿದೆ.

ಮಾತು ಪೂರೈಸಿ ಹೊರಟು ನಿಂತಾಗ ನನ್ನನ್ನು ನಾಗರಾಜ ಮೌನದಿಂದಲೇ ಹಿಂಬಾಲಿಸಿದನು. ಕೆಲ ತಾಸುಗಳ ಹಿಂದೆ ನಕ್ಕು ನಲಿಯುತ್ತಿದ್ದ ನಾಗರಾಜನ ಮುಖ ಕಂದಿದುದನ್ನು ಕಂಡಾಗ ಅಸಂತೋಷದ ಕಾರಣ ಅರಿಯಲು ನಾನು ಮಾಡಿದ ಪ್ರಯತ್ನ ವ್ಯರ್ಥವೆನಿಸಿತು.

'ನಾಗರಾಜ! ನಿನ್ನ ರೂಮಿಗೆ ಹೋಗೋಣ.' ಎಂದಾಗ—

'ಬೇಡ ಸುಬ್ಬು! ನೀನು ಊರಿಗೆ ಹೋಗಿ ಬಿಡು.' ಎಂದಾಗ ಅವನ ದನಿಯೇ ಅವನು ದುಃಖಿ ಎಂಬುದನ್ನು ಸೂಚಿಸುತ್ತಿತ್ತು. 'ಆದಾಗದು. ಇಲ್ಲಿಗೆ ಬಂದ ಮೇಲೆ ನಿನ್ನ ರೂಮನ್ನು ನೋಡಿಯೇ ಹೋಗಬೇಕೆಂದಿರುವೆ.' ಎಂಬ ನನ್ನ ಒತ್ತಾಯಕ್ಕೆ ಮಣಿಯಲೇ ಬೇಕಾಗಿ ಒಲ್ಲದ ಮನದಿಂದಲೇ ನನ್ನನ್ನು ರೂಮಿಗೆ ಕೊಂಡೊಯ್ದನು.

ಮಿತ್ರನ ಚಿಂತೆಗೆ ಕಾರಣವರಿಯಲೇಬೇಕೆಂಬ ನಿರ್ಧಾರದಿಂದಲೇ ಅವನ ರೂಮನ್ನು ಸೇರಿದೆನು.

ಕೋಣೆ ಚಿಕ್ಕದಾದರೂ ಚೊಕ್ಕವಾಗಿತ್ತು. ಗೆಳೆಯನ ಅಚ್ಚುಕಟ್ಟುತನ ಕಂಡು ಮನಸಾರೆ ಹೊಗಳಿದೆ. ಅದೆಲ್ಲವಕ್ಕೂ ನಾಗರಾಜನ ಉತ್ತರ ಶೂನ್ಯವಾಗಿತ್ತು. 'ನಾಗರಾಜ! ನಿನಗೇನಾಯ್ತು ಹೇಳು? ಒಮ್ಮಿಂದೊಮ್ಮೆಲೇ ನಿನ್ನ ಮನ ಕವಿದ ಕಾರ್ಮೋಡ ಯಾವುದು ಹೇಳು? ಮಿತ್ರನಾದ ನನ್ನಲ್ಲಿಯೂ ಮುಚ್ಚುಮರೆಯೇ? ಎಂದಾಗ—

ಕಣ್ಣೀರಿಳಿಸುವ ಗೆಳೆಯನನ್ನು ಕಂಡು ನನಗೂ ಕನಿಕರವೆನಿಸಿತು. ಯಾವುದೋ ಹೇಳಲಾರದ ಸಂಕಟದಲ್ಲಿಯೇ ಬಿದ್ದಿರಬೇಕೆಂಬ ಸಂದೇಹ ಬರತೊಡಗಿತು.

ಯೋಚನಾಕ್ರಾಂತನಾಗಿ ಕುಳಿತ ನನ್ನ ಬುದ್ಧಿಗೆ ಮಂಕು ಕವಿಯಿತು. ಕುಳಿತು ಬೇಸರ ಮೆಲಿಸಿದಾಗ ಮೇಜಿನ ಮೇಲಿನದೊಂದು ಕಾದಂಬರಿಯೊಂದನ್ನು ಕೈಗೆತ್ತಿಕೊಂಡು ಮೆಲ್ಲ ಪುಟ ತಿರುವಿ ಹಾಕತೊಡಗಿದೆ.

ಹಾಳೆಗಳ ಮಧ್ಯದಲ್ಲಿ ಅಡಗಿ ಕುಳಿತಿದ್ದ ಪತ್ರ ಒಂದು ನನ್ನ ಮನ ಸೆಳೆಯಿತು.

ಕದ್ದು ಓದುವ ಚಟ ನನಗಿಲ್ಲವಾದರೂ ಸ್ವಾಭಾವಿಕವಾಗಿಯೇ ನನ್ನ ಲಕ್ಷ್ಯ ಅತ್ತ ಹರಿಯಿತು. ಅದೊಂದು ಪ್ರೇಮ ಪತ್ರವಾಗಿತ್ತು. ಸಾದ್ಯಂತವಾಗಿ ಓದಿದ ನನಗೆ ಮಿತ್ರನ ಜೀವನದ ನಿಜ ಪರಿಚಯವಾಗತೊಡಗಿತು. ಆದರಿಂದೇನಾದರೂ ಅನಾಹುತ ಘಟಿಸಿರಬಹುದೇ ಎಂಬ ಸಂಶಯ ನಿವಾರಣೆಗಾಗಿ ನಾನೇ ಕೇಳಿದೆ.

"ನಾಗರಾಜ! ನೀನು ದೂರದ್ದಾದರೂ ಪ್ರೇಮಪಾಶದಲ್ಲಿ ಸಿಲುಕಿರುವೆಯಾ?" ಎಂದೆ.

ಅವನ್ಯುತ್ತರ ಬಾರದಿರಲು "ಹೇಳು! ನನ್ನಲ್ಲಿಯೂ ಮುಚ್ಚುಮರೆ ಬೇಡ" ಎಂದು ಒತ್ತಾಯಿಸಿದ.

"ಅದರ ವಿಚಾರ ಕೇಳಬೇಡ ಸುಬ್ಬು. ನೀನು ಬಂದ ಕೆಲಸವಾಗಿಲ್ಲವೇ ಇನ್ನು! ಮೊದಲು ಇಲ್ಲಿಂದ ಹೊರಟುಬಿಡು" ಎಂದನು.

"ಹಾಗೆಲ್ಲಾ ಹೇಳಬೇಡ. ನಿಜ ವಿಚಾರವೇನು ಹೇಳು. ನಿನಗೀಗ ಬಂದ ಸಂಕಟ ಎಂತಹದಾದರೂ ಯಾವುದೆಂದು ಮೊದಲು ಹೇಳು. ಅದರ ಪರಿಹಾರ ಮಾರ್ಗ ಹುಡುಕಲು ಪ್ರಯತ್ನಿಸುವೆ. ಸುಮ್ಮನೆ ಇಲ್ಲದನ್ನು ಯೋಚಿಸಿ ತಲೆ ಕೆಡಿಸಿಕೊಳ್ಳಬೇಡ" ಅಂದೆ.

"ಅದು ನಿನ್ನಿಂದಾಗದ ಕೆಲಸ."

'ಇಲ್ಲ, ಖಂಡಿತವಾಗಿಯೂ ಸಾಧ್ಯವಿದೆ' ಎಂದು ಒತ್ತಾಯಿಸಿದೆ.

(ಹನ್ನೊಂದನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ

ಹೋಟೆಲ್ ಶಿವಪ್ರಸಾದ

ಫೋನ್ 77
ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು, ಕಾಗದದ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಲಭ್ಯವಿರುವುದು.

ಮುಖಪತ್ರದಲ್ಲಿ: ...

ಒಂದು ನೃತ್ಯ ಭಂಗಿ.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೫	೬—೭—೧೯೬೭	No. 45

ಬಹು ವರ್ಣದ ಅಂಗಿ

ಭಾರತದ ವಿವಿಧ ರಾಜ್ಯಗಳಲ್ಲಿ ಎಂಟರಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ರಚನೆಗೊಂಡು ಒಂದು ನೂರು ದಿನಗಳು ಸಂದುವು. ಈ ದಿನಗಳಲ್ಲಿ ಕಾಂಗ್ರೆಸ್ಸು ಮತ್ತು ಕಾಂಗ್ರೆಸ್ಸೇತರ ಸರಕಾರಗಳ ಕಾರ್ಯಕಲಾಪಗಳು ಹೇಗೆ ನಡೆದುವು ಎಂದು ಸಿಂಹಾವಲೋಕನ ಮಾಡಿದರೆ ತಪ್ಪಲ್ಲ; ಇಂದಿನ ಪ್ರಕ್ಷುಬ್ಧ ವಾತಾವರಣದಲ್ಲಿ ಇದು ಅಗತ್ಯವೂ ಹೌದು. ರಾಜಸ್ಥಾನದಲ್ಲಿ ಒಂದು ಉದಾಹರಣೆ ವಿರೋಧೀ ಪಕ್ಷಗಳ ಮನೋವೃತ್ತಿಗೆ ಉತ್ತಮ ನಿದರ್ಶನ. ರಾಜ್ಯಪಾಲರಾಗಿದ್ದ ಡಾ। ಸಂಪೂರ್ಣಾನಂದರು ಕಾಂಗ್ರೆಸ್ಸನ್ನು ಮಂತ್ರಿ ಮಂಡಳ ರಚಿಸಲು ಆಮಂತ್ರಿಸಿದಾಗ, ವಿರೋಧಿಗಳು ತಮಗೇ ಬಹುಮತವೆಂದು ಬೊಂಬಿಯೆದ್ದರು; ನವದೆಹಲಿಯ ತನಕವೂ ಮೆರವಣಿಗೆ ಹೋಯಿತು. ಈ ಅಶಾಂತಿಯಿಂದಲೇ ರಾಜ್ಯಪಾಲರೂ ರಾಜೀನಾಮೆ ನೀಡಬೇಕಾಯಿತು. ಮುಂದೆ ರಾಜ್ಯಪಾಲರಾಗಿ ಬಂದ ಹುಕುಂ ಸಿಂಗರು ತಂತಮ್ಮ ಬೆಂಬಲಿಗರ ಜೊತೆ ಪಡೆದಾಗಲೂ 'ಹುಡುಗಾಟಿಕೆ'ಯೇ ನಡೆಯಿತು. ಆದರೂ ಜಾಣ್ಮೆಯಿಂದ ಮಾನ್ಯರದ ಸ್ವರನ್ನು ಕಂಡು, ಕೇಳ ಕಾಂಗ್ರೆಸ್ಸಿಗೇನೇ ಬೆಂಬಲವಿದೆಯೆಂದು ಅವನ್ನೇ ಮಂತ್ರಿ ಮಂಡಲ ರಚಿಸುವಂತೆ ಕೇಳಿಕೊಂಡರು. ವಿರೋಧಿಗಳ ನಾಟಕ ಮುಗಿಯಿತು. ಆ ದಿನದಿಂದ ಇಂದಿಗೂ ಒಬ್ಬೊಬ್ಬ ಪ್ರತಿಪಕ್ಷೀಯರು ಕಾಂಗ್ರೆಸ್ಸು ಸೇರುತ್ತಿದ್ದಾರೆ. ಅಧಿಕಾರ ದಾಹದಿಂದ ಕಾಂಗ್ರೆಸ್ಸು ಕೆಟ್ಟು ಹೋಗಿದೆಯೆಂಬ ಪ್ರತಿ ಪಕ್ಷೀಯರ ಆರೋಪ ಅವರ ಮಟ್ಟಿಗೂ ಅಪವಾದವಾಗಿಲ್ಲ.

ಕಾಂಗ್ರೆಸ್ಸೇತರ ಸರಕಾರಗಳು ಏನು ಮಾಡಿದುವು? ಯಾವ ದಾರಿ ಹಿಡಿದುವು—ಎಂಬ ಪ್ರಶ್ನೆಗಳಿಗೆ ಕಾಂಗ್ರೆಸ್ಸು ಏನು ಮಾಡಿತು, ಯಾವ ದಾರಿ ಹಿಡಿಯಿತು ಎಂಬ ಸವಾಲು ರೂಪದ ಉತ್ತರವೇ ದೊರೆಯುತ್ತದೆ. ಒಂದೇ ಪಕ್ಷ ಅಧಿಕಾರದಲ್ಲಿರುವ ಮದ್ರಾಸಿನಲ್ಲಿ ರೂಪಾಯಿಗೆ ಪಲ್ಲವಕ್ಕಿನಾದರೂ ಕಿಲೋಅಕ್ಕಿ ಕೆಲನೆಡೆ ದೊರೆಯುವಂತಾಯ್ತು. ಆದರೆ, ರಾಜ್ಯದ ಸರ್ವಾಂಗೀಣ ದೃಷ್ಟಿಕೋಣದಿಂದ ಏನೂ ನಡೆದಿಲ್ಲ. ಕೆಲವೊಂದು ರಂಗಗಳಲ್ಲಿ ದಿಟ್ಟತನವನ್ನದು ತೋರಿಸಿದೆ— ಇದು ರಾಷ್ಟ್ರೀಯ ಹಿತಕ್ಕೆ ಅದೆಷ್ಟು ಹಿತಕಾರಿಯೋ ಹೇಳಬರುವಂತಿಲ್ಲ. ಆದರೂ ಪ್ರತ್ಯೇಕ ದ್ರಾವಿಡ ಸ್ಥಾನದ 'ಉದ್ದೇಶ'ದಿಂದ ತಾನು ಕೈ ತೊಳೆದುಕೊಂಡಿದೆಯೆಂದು ಅದು ಸಾರುವುದು ಪಕ್ಷದ ನೀತಿಯಲ್ಲಿ ಎದ್ದು ಬರುವ ಸುಧಾರಣೆ, ಪ್ರಗತಿ, ಉಳಿದವೆಲ್ಲವೇನು? ಒರಿಸ್ಸಾ—ಒಂದು ರೀತಿಯಿಂದ ಸಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಜನತೆಯನ್ನು ತೃಪ್ತಿಪಡಿಸಲು ಹೆಣಗಾಟ ನಡೆಯುತ್ತಿದೆ, ಪಂಜಾಬ—ಹರಿಯಾನಗಳಲ್ಲಿ ಮಂತ್ರಿ ಮಂಡಳವನ್ನು ವಿಶಾಲ ತಳಹದಿಯ ಮೇಲೆ ವಿಸ್ತರಿಸುವ ಕಾರ್ಯ ಸಾಗುತ್ತಿದೆ. ಬಿಹಾರ ದುರ್ಭಿಕ್ಷಕ್ಕೆ ಒಳಗಾಗಿದೆ. ಕೇರಳ ಪಾನಪ್ರತಿಬಂಧವನ್ನು ಕಿತ್ತು ಹಾಕಿ ಹೊಸ ತೆರಿಗೆಗಳಿಂದ ಜನತೆಯನು ಬದುಕಿಸಿದೆ. ಅಲ್ಲಿನ ಮುಸ್ಲಿಂ ಲೀಗು ಪಾನಪ್ರತಿಬಂಧಕ್ಕೆ ಪರವಾಗಿದ್ದರೂ ಸಂಯುಕ್ತ ರಂಗ ಪತಾಕೆಯಿಂದ ಹೊರ ನಡೆಯುವುದಿಲ್ಲ. ಆರ್ಥಿಕ ನೀತಿಯು ಕ್ಲಿಷ್ಟವಾಗಿದೆ, ಅಧಿಕಾರದಲ್ಲಿ ಮೋಹವೂ ಇದೆ. ಈ ಎಲ್ಲ ರಾಜ್ಯಗಳ ದಾರಿಯೊಂದು ರೀತಿಯಾದರೆ, ಬಂಗಾಳದ ಗತ್ತುಗಾರಿಕೆಯೇ ಬೇರೆ. ಕಮ್ಯೂನಿಸ್ಟ್ ಅಧಿಕ ಸಂಖ್ಯಾಕರಾಗಿರುವ ಸಂಯುಕ್ತ ರಂಗ ಸರಕಾರದ ಗುರಿಯೇನು ಎಂಬುದನ್ನು ಯಾರೂ ಹೇಳಲಾರರು. ಮುಖ್ಯಮಂತ್ರಿ—ಉಪಮುಖ್ಯಮಂತ್ರಿಗಳ ನಡುವೆಯೇ ತೀವ್ರ ಭಿನ್ನಮತವಿದೆ. ಸಂಪುಟದಲ್ಲಿಯೂ ಒಮ್ಮತವಿಲ್ಲ. ನಕ್ಸಲ್‌ಬರಿ ...ಗೊಂದಲ ಬರಿಯ ಗೊಂದಲವಲ್ಲ. ಬರಿಯ ಗೊಂದಲವಾಗಿದ್ದರೆ, ಅದನ್ನು ಆಗಲೇ ನಿಲ್ಲಿಸಿಬಿಡಬಹುದಿತ್ತು. ಭೂಮಿ ಸಂಬಂಧದ ಲಕ್ಷ್ಯದ ಚಳವಳಿ ಟಾಸುರೂಪ ತಾಳಿರುವುದನ್ನೂ ಅಲ್ಲಿ ಅರಾಜಕತೆಯು ಹಬ್ಬಿರುವುದನ್ನೂ ಯಾರಾದರೂ ಕಾಣಬಹುದು. ಇದನ್ನು ಗಮನಿಸುವ ಅಗತ್ಯವಿಲ್ಲವೆಂದೂ ಕಮ್ಯೂನಿಸ್ಟರ ಅಭಿಪ್ರಾಯವಿರಬಹುದು. ಚೀನೀಯ ಆಕ್ರಮಣದ ವೇಳೆಯೂ ಈ ಪ್ರದೇಶದ ಕಮ್ಯೂನಿಸ್ಟರು ಅವರಿಗೆ ನೆರವಾಗುವ ಭರವಸೆಯನ್ನೂ ನೀಡಿದ್ದರಂತೆ! ಮಾವನ ನೀತಿ ಎಂತೆ ಮೊದಲು ಹಳ್ಳಿಗಳನ್ನು ನಂಗಿ ಅವುಗಳ ಸಹಾಯದಿಂದ ನಗರಗಳನ್ನು ಕಬಳಿಸಬೇಕು. ಪಶ್ಚಿಮ ಬಂಗಾಳ ಸರಕಾರದ ವರ್ತನೆಯನ್ನು ಕಾಣುವಾಗ, ಕಮ್ಯೂನಿಸ್ಟರು ರಾಜ್ಯಕ್ಕೆ ಕೆಂಪು ಬಣ್ಣ ಬಳಿಯಲು ಉದ್ದೇಶಿಸಿದ್ದೇವೆಂದು ಇದನ್ನು ರಂಗದ ಕಮ್ಯೂನಿಸ್ಟೇತರ ಪಕ್ಷೀಯರು ವಿರೋಧಿಸುವುದಾರಿಂದೂ ಊಹಿಸಿದರೆ ತಪ್ಪಲ್ಲ. ಸಂಪುಟದಲ್ಲಿ ಒಮ್ಮತದ ಅಭಾವಕ್ಕಿರುವ ಮುಖ್ಯಕಾರಣವೇ ಇದು. ರಾಜ್ಯಪಾಲರ ಹೊಣೆಗಾರಿಕೆ ಇಲ್ಲಿ ತುಂಬ ಹೆಚ್ಚಾಗಿರುವುದು.

ಈ ನೂರು ದಿನಗಳಲ್ಲಿ ಕಾಂಗ್ರೆಸ್ಸೇತರ ಸರಕಾರವಿರುವ ರಾಜ್ಯಗಳಲ್ಲೂ ಕೇ ನದೆ ಪೋಲೀಸರ ಗೋಳಿಬಾರು ನಡೆದಿದೆ, ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಲು ಯಾವ ಸರಕಾರವೂ ಒಪ್ಪಿರುವುದಿಲ್ಲ, ಗೋಲಿಬಾರಿನ ಸಮರ್ಥನೆಯನ್ನೇ ಅದು ಮಾಡಿದೆ. ಮೊದಲಿಗೆ ಇದು ಕಾಂಗ್ರೆಸಿನ ಕೆಲಸವಾಗಿದ್ದರೆ, ಈಗ ಸಂಯುಕ್ತರಂಗದ ಕರ್ತವ್ಯವಾಗಿದೆ. ಸತ್ಯಾಗ್ರಹ, ನಾಚಿಗೆ, ನಾಚಿಗೆ, ಎಂಬ ಉದ್ಗಾರ ಹೊರಡುವವು ಪ್ರತಿಪಕ್ಷವಾಗಿ ನಿಂತ ಕಾಂಗ್ರೆಸ್ಸಿನ ಪಾಲಿಗೆ ಬಂದಿವೆ. ಅದಲು-ಬದಲು ಮುಂಗಡ ಪತ್ರದಲ್ಲಿ ಹೊಸ ತೆರಿಗೆ ಹಾಕುವ ಅಧಿಕಾರ ಕೇಂದ್ರವನ್ನೇ ಹೆಚ್ಚಾಗಿ ನಂಬುವ ಇಲ್ಲವೇ ಅಭಾವ ಕೊರತೆ ತೋರಿಸುವ, ಇನ್ನು ಅನುಲು ಕುಡಿಸಿ ಹಣ ಗಳಿಸುವ ಪ್ರವೃತ್ತಿ ಕಂಡು ಬಂದಿದೆ. ಯಾವ ಪಕ್ಷದ ಸರಕಾರವಿದ್ದರೂ ಇದು ಇರುವಂಥದ್ದೇ. ಆದುದರಿಂದ, ಈ ನೂರು ದಿನಗಳಲ್ಲಿ ಜನತೆಯ ಮಟ್ಟಿಗೆ ಏನೂ ಬದಲಾವಣೆಯಾದಂತೆ ಗೋಚರಿಸುತ್ತಿಲ್ಲ! ಹಳೆಯ ಏಕವರ್ಣದ ಅಂಗಿ ಕಿತ್ತು ಬಿಸುಟು ಬಹುವರ್ಣದ ಅಂಗಿಯೊಂದು ಮಂದಿ ತೊಟ್ಟಿದೆ. ಚಲ್ತಿ ಮಾತಿನಲ್ಲಿ ಬಹುವರ್ಣದ ಅಂಗಿ ಹದಿನಾಲ್ಕರ ಹುಡುಗನ ಪ್ರೀತಿ ತಾನೇ. ಈತನ ಹುಡುಗಾಟಿಕೆಯ ಕಾರುಬಾರು ನೋಡುವವರು ಯಾರು?

ವಚನ ಸುಧೆ

ಸತ್ಯೇನ ರಕ್ಷ್ಯತೇ ಧರ್ಮೋ
ವಿದ್ಯಾ ಯೋಗೇನ ರಕ್ಷ್ಯತೇ
ಮೃಜಯಾ ರಕ್ಷ್ಯತೇ ರೂಪಂ
ಕುಲಂ ವೃತ್ತೇನ ರಕ್ಷ್ಯತೇ॥

ಸತ್ಯದಿಂದ ಧರ್ಮ, ಯೋಗದಿಂದ ವಿದ್ಯೆ, ಸ್ನಾನದಿಂದ ರೂಪ, ಸದಾಚಾರದಿಂದ ಕುಲದ ರಕ್ಷಣೆಯಾಗುತ್ತದೆ.

ವಿ. ಎಸ್. ಕುಡ್ವಾ

ಜೂನ್ ತಾರೀಕು ೩೦ರಂದು ೬೮ ವರ್ಷಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯ ಸರ್ವಾಂಗೀಣ ಉನ್ನತಿಗಾಗಿ ಪ್ರಮುಖ ಸಾಹಸಮಯ ಜೀವನವನ್ನು ಬದುಕಿದ ಶ್ರೀ ವಿ. ಎಸ್. ಕುಡ್ವಾ ಅವರು ತನ್ನ ಇಹ ಲೋಕಯಾತ್ರೆಯನ್ನು ಮುಗಿಸಿದಾಗ ಜಿಲ್ಲೆ ಅನಾಥವೆಂಬಂತಾಯಿತು. ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸ ಪಡೆದ ಬಳಿಕ ಶ್ರೀಯುತರು ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಶಿಕ್ಷಣ ಪಡೆದರು. ಮುಂದವರು ಜಿಲ್ಲೆಯ ಔದ್ಯಮಿಕ ಕ್ಷೇತ್ರದಲ್ಲಿ ಊದಿದ ಕ್ರಾಂತಿ ಕಹಳೆಗೆ ಇದು ಮೇಳವಾಯಿತು. ಸಿ. ಪಿ. ಸಿ. ಕಂಪೆನಿಯ ಮತ್ತು ಕೆನರಾ ಸ್ಪ್ರಿಂಗಿನ ಹೆಸರು ಕೇಳದವರು ದೇಶದಲ್ಲಿಯೇ ವಿರಳ.

(ಹತ್ತನೇ ಪುಟ ನೋಡಿರಿ)

ನರಸಣ್ಣನ ಸರಸ



"ರಾಜ್ಯದ ಆಹಾರ ಪರಿಸ್ಥಿತಿ ಬಗ್ಗೆ ಕಳವಳಬೇಡ, ಕೇಂದ್ರ ನೋಡಿಕೊಳ್ಳುತ್ತದೆ ಎಂದಿದ್ದಾರಲ್ಲಾ ಆಹಾರ ಮಂತ್ರಿ ಪತ್ತಿಯವರು... ಇನ್ನೇನು ಹೆದರಿಕೆ?"

"ಹೆದರಿಕೆಯೇಕೆ? ಅನೋರಿಕೆ ಕೊಡುತ್ತದೆ; ಅದು ಬರುವ ತನಕ ತಾಳ್ಮೆಯಿಂದ ಉಪವಾಸ ಮಾಡಿದರೆ ಸಾಕು .."

ಗೇಹ ರಾಜ್ಯದಲ್ಲಿ

ಚೆಂಡು ನಿಮ್ಮದು, ಗೋಲು ನಮ್ಮದು

"ಹೌದ್ರಿ....'

'ಏನ್ಘಡಾ?"

'ಅಲ್ಲ, ಇದೇನು ತಮಾಷೆ ಅಂತ__'

"ಯಾವುದು?'

'ನೋಡಿ, ಕೆಂಪು ಚೀನೀಯರು ಟಿಬೆಟ್ ರಾಯಭಾರಿ ಕಚೇರಿಯ ಮುಂದೂ ಮತಪ್ರದರ್ಶನಕ್ಕೆ ಆರಂಭ ಮಾಡಿದ್ದಾರಂತೆ...."

"ಹೌದು, ಏನಾಯ್ತೀಗ?"

'ಆಗೋದೇನೂ ಇಲ್ಲಾನ್ನಿ. ಅಲ್ಲ, ಈ ಚೀನೀಯರಿಗೆ ಮಾಡುವುದಕ್ಕೆ ಬೇರೇನೂ ಕೆಲಸವೇ ಇಲ್ಲವೇಂತ..."

'ಯಾಕೆ ಹಾಗಂತೀಯಾ?'

"ಅಲ್ಲ, ಕಳೆದ ಸುಮಾರು ಮೂರೂ ನಾಲ್ಕು ತಿಂಗಳುಗಳ ಅವಧಿಯಲ್ಲಿ ಚೀನೀಯರ ಮತಪ್ರದರ್ಶನಕ್ಕೆ ಗುರಿಯಾದ ರಾಯಭಾರಿ ಕಛೇರಿಗಳಲ್ಲಿ ಒಂಬತ್ತನೆಯದಂತೆ ಬರ್ಮಾದಯದು....!"

"ಅಂದರೆ, ನಮ್ಮದು ಎಂಟನೆಯದ್ದು ಅಂದ ಹಾಗಾಯ್ತು....'

'ಅಲ್ಲ, ಇವ್ರಿಗೆ ಇದೇ ಕೆಲಸವೇಂತ?'

"ಹ್ಞೂಂ, ತಮ್ಮ ಜೇಳೆ ಬೇಯಿಸಲು ಪ್ರದರ್ಶನ—ಮುತ್ತಿಗೆ ಮೊದಲಾದುವುಗಳನ್ನು ಮಾಡುವುದಕ್ಕಾಗಿಯೇ ಒಂದು ವಿಭಾಗವನ್ನು ಮಾವ ಸಾಕಿದ್ದಾನೆ ತೋರುತ್ತದೆ....'

"ಹ್ಞೂಂ.... ಇದ್ದರೂ ಇರಬಹುದೂನ್ನಿ. ಅಲ್ಲವಾದರೆ ತಿಂಗಳಿಗೆರಡು— ಮೂರು ದೇಶಗಳೊಡನೆ ಮನಸ್ತಾಪ ಹೆಚ್ಚಿಸುತ್ತ ಹೋಗುವುದಿಲ್ಲ...."

"ಅದ್ರೂ ನೋಡು, ಕೆಂಪುಚೀನಾ ದುಷ್ಟ ಸ್ವಭಾವ ಮತ್ತೊಮ್ಮೆ ಜಗಜ್ಜಾಹೀರಾಯ್ತು...'

"ಹೇಗೆ?"

'ಬರ್ಮಾದೊಡನೆ ಅದು ಒಡಂಬಡಿಕೆ ಮಾಡಿಕೊಂಡಿದೆ, ಅನಾಕ್ರಮಣ, ಸೀಮಾ ವಿವಾದ- ಮೊದಲಾದುವುಗಳ ಬಗ್ಗೆ ಮಹತ್ವಪೂರ್ಣ ತಿಳುವಳಿಕೆ ಇವೆರಡರಲ್ಲೂ ಹುಟ್ಟಿದೆ. ಅವುಗಳ ಸಂಬಂಧ ಮಧುರವೆಂದೇ ನಂಬಲಾಗಿತ್ತು. ಆದರೆ, ಈಗ ನೋಡುವಾಗ, ಈ ಬರ್ಮಾ ದ್ರಾಕ್ಷಿಯಲ್ಲೂ ಚೀನ ಹುಳ ಹುಡುಕುತ್ತಿದೆ ಅಂದ ಹಾಗಾಯ್ತು.'

"ಅಂತೂ ಚೀನಾದ ಹೆಗ್ಗುರಿ ಒಂದೇ..."

'ಹೌದು, ಬಲದಿಂದಾಗಲಿ, ಛಲದಿಂದಾಗಲಿ, ಏಷ್ಯಾದಲ್ಲಿ ತನ್ನನ್ನೆಲ್ಲರೂ ಬಲವಂತರು ಎಂದು ಕರೆದು ತಲೆತಗ್ಗಿಸಬೇಕು...'

'ಮತ್ತೆ, ಹೈಡ್ರೋಜನ್ ಬಾಂಬೂ ತನ್ನ ಬಳಿಯಿರುವಾಗ..."

"ಹ್ಞೂಂ, ಇಂತಹ ಪಟಿಂಗರಿಗೂ ಬುದ್ಧಿ ಬರುವುದಂತೆ. ಜಪಾನಿ ವಿದೇಶಾಂಗ ಸಚಿವರೆನ್ನುತ್ತಾರೆ, ಇನ್ನು ಹತ್ತು, ಇಪ್ಪತ್ತು, ಮೂವತ್ತು, ನಲ್ವತ್ತು, ಐವತ್ತು ವರ್ಷಗಳೊಳಗಾದರೂ ಕೆಂಪು ಚೀನಾಕ್ಕೆ ಬುದ್ಧಿ ಬಂದೇ ಬರುವುದು; ಆದುವರೆಗೆ ಅದನ್ನು ಅದರಷ್ಟಕ್ಕೇ ಬಿಟ್ಟುಬಿಡಿ ಅನ್ನುತ್ತಾರೆ...."

ಸಾಲುಸಿ.

'ತುಡುಗು ಹುಡುಗನ ಹಾಗೆ...."

'ಹ್ಞೂಂ, ಚೀನಾವೂ ಹಾಗೇನೇ ಅಲ್ಲವೇನು?"

"ಹೌದೂನ್ನಿ ... ರಂಗೂನಿನ ಆಡಳಿತವನ್ನು ಸೇನೆಗೆ ಒಪ್ಪಿಸಿದ್ದಾರಂತೆ..."

"ಹ್ಞೂಂ, ಸೈನಿಕ ಅಧ್ಯಕ್ಷರು ಸೇನೆಯನ್ನು ಕರೆದರು....'

'ಅಷ್ಟೇನೆಯ?'

'ಊಹ್ಞೂಂ, ಹಾಗೆಲ್ಲ ಬಹಳ ಲಘುವಾಗಿ ತೆಗೆ'ದು ಕೊಳ್ಳಬೇಡ. ಪ್ರಸಂಗ ವಿಕೋಪಕ್ಕೆ ಹೋದರೂ, ಅಥವಾ ಹೋಗಿದ್ದರೂ ಪಥ ನಡೆಯ ಬೇಕಲ್ಲ__'

"ಅದು ಹೋಗ್ಲಿ, ನೋಡಿ ಮೊನ್ನೆ ಅಧಿವೇಶನ ನಡೆಯಿತಲ್ಲ!'

'ಜಂಪ್ರೆ ಎ ಐ ಸಿ ಸಿ...."

'ಅದೇ ನೋಡಿ ನಿಮ್ಮ ಟೋಪೀ ಅಧಿವೇಶನ ..'

"ಹ್ಞೂಂ....ಅಂತೂ ನಿನಗೆ ಕಾಂಗ್ರೆಸ್ ಅನ್ನೋಕೆ ನಾಲಗೆ ತಿರುಗೋದಿಲ್ಲ...."

'ಅಲ್ರಿ, ಅದು ನಿಜವಾಗಿಯೂ ಟೋಪಿ ಹಾಕೋರ ಅಧಿವೇಶನವಲ್ಲವೇನು?'

'ಯಾಕೆ ಹಾಗಂತೀಯ?'

'ನೋಡಿ, ನಿಮ್ಮ ಕಾಂಗ್ರೆಸ್ನು ಎಲ್ಲೆಲ್ಲಿ ಸರಕಾರ ಮಾಡಿತ್ತೋ, ಅಲ್ಲೆಲ್ಲ ಹೊಸ ಹೊಸ ತೆರಿಗೆಗಳ ರಾಶಿಯೋ ರಾಶಿ...'

'ಮತ್ತೆ ಆಯವ್ಯಯ ತೂಗಿಸಲು ಮಾಡುವುದಾದರೂ ಏನು?'

'ನೋಡಿ, ಪಶ್ಚಿಮ ಬಂಗಾಳದಲ್ಲಿ ಎಷ್ಟೋ ಕೋಟಿ ರೂಪಾಯಿಗಳ ಕೊರತೆ ತೋರಿಸಿದ್ದಾರಂತೆ .."

'ತೋರಿಸಬಹುದೂನ್ನು. ಇದನ್ನು ತುಂಬಿ ಕೊಡೋರು ಯಾರು?"

"ಕೇಂದ್ರ...."

"ಅದಕ್ಕೆಲ್ಲಿಂದ ಹಣ ಬರಬೇಕು...."

'ಅದೆಲ್ಲ ನಮಗೆ ಗೊತ್ತಿಲ್ಲ. ಕೇಂದ್ರ ಎಲ್ಲಿಂದಾದ್ರೂ ತರಲಿ. ಬೇರೆ ದೇಶಗಳಿಂದ ಸಾಲ ತರ್ಲಿ — ಸಾಲ ತೀರಿಸೋ ಜವಾಬ್ದಾರಿ ನಮಗಿಲ್ಲ, ನೆನಪಿರ್ಲಿ—ಬೇರೆ ರಾಜ್ಯಗಳ ಮೇಲೆ ತೆರಿಗೆ ವಿಧಿಸಿ ನಮಗೆ ಕೊಡ್ಲಿ, ಇನ್ನು ನೋಟು ಪ್ರಿಂಟು ಮಾಡಿ ಕೊಟ್ರೂ ಪರ್ವಾಗಿಲ್ಲ...."

'ಹೀಗೆಲ್ಲ ಮಾಡಿದ್ರೆ ನೀವೂ ನಾವೂ ಎಲ್ರೂ ಟಿಕೇಟು ತೆಗೆದುಕೊಳ್ಳಬೇಕಾದ ಬಹುದು, ನಾಲ್ಕು ದಿನ ಬೇಗನೇ...'

"ಎಲ್ಲಿಗೆ?'

"ಯಮನೂರಿಗೆ...."

"ಹ್ಞೂಂ, ಅದಿರ್ಲಿ, ಅಲ್ಲ, ಎಲ್ರಿಗೂ ಟೋಪಿ ಹಾಕಿದ ಮೇಲೆ ನಿಮಗೆ, ಅಂದ್ರೆ ನಿಮ್ಮ ಕಾಂಗ್ರೆಸಿಗರಿಗೆ ಮತ್ಯಾರೂ ಸಿಗಲಿಲ್ಲ, ಪಾಪ, ಮಾಜಿ ರಾಜ—ಮಹಾರಾಜರ ತಲೆಯೇ ಕಾಣಿಸಿತು, ಅಲ್ಲಾ ...."

'ಅಲ್ಲಾ, ಯಾಕೆ? ಏನಾಯ್ತು?"

'ಆಗೋದೇನು? ಈಗ ಅವ್ರ ತಲೆಗೆ ದೊಡ್ಡ ಟೋಪಿಯಿಡಬೇಕೂಂತ ಕೇಂದ್ರ ಸರಕಾರಕ್ಕೆ ಆದೇಶ ನೀಡಿದ್ದೀರಂತೆ...'

'ಹ್ಞೂಂ, ರಾಜಧನ ರದ್ದು ಮಾಡುವ ಬಗ್ಗೆ ಸ್ವೀಕೃತವಾದ ಕಾಂಗ್ರೆಸ್ ಗೊತ್ತುವಳಿಯ ಬಗ್ಗೆ ತಾನೇ ನೀನು ಹೇಳುವುದು?'

'ಹ್ಞೂಂ...., ಅದೇ...'

'ಗೊತ್ತುವಳಿ ಮಾಡಿದೆಯೊನ್ನು. ಆದರೆ, ಸಂವಿಧಾನದ ೨೯೧ನೆಯ ಅನುಚ್ಛೇದ ಮಾಜಿ ಅರಸರಿಗೆ ರಾಜಧನ ಪಡೆಯುವ ಅಧಿಕಾರ ನೀಡುತ್ತದೆ. ೩೬೨ನೆಯ ಅನುಚ್ಛೇದ ಅವರಿಗೆ ಇತರ ವಿಶೇಷ ಸೌಲಭ್ಯಗಳನ್ನು ಕೊಡುತ್ತದೆ. ಮತ್ತೆ ನೋಡು, ಅವರ ರಾಜಧನ ಆದಾಯ ತೆರಿಗೆಗೆ ಹೊರತು....!

"ಹ್ಞೂಂ..."

'ಇದನ್ನು ಕಿತ್ತು ಹಾಕದೆ ಹೋದರೆ, ಗೊತ್ತುವಳಿ ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲ...'

"ಹೌದು. ಅದಕ್ಕೇನಂತೆ? ಸಂವಿಧಾನ ನಿಮ್ಮ.... ಓಹೋ, ಮರೆತೆ, ಈ ಬಾರಿ ಸಂವಿಧಾನ ನಿಮ್ಮ ಕ್ರೀಡಾಂಗಣದ ಪುಟಚೆಂಡಾಗಿಲ್ಲ.... ಹ್ಞೂಂ... ಆದ್ರೂ ಏನಂತೆ? ಎಲ್ರಿಗೂ ಟೋಪಿ ಹಾಕುವುದಕ್ಕೆನೇ ಹೊರಟ ನಿಮ್ಮ ಮರಿಪಕ್ಷಗಳಿವೆಯೆನ್ನಿ.... ಅಥವಾ ನಿಮಗೂ ಟೋಪಿ ಹಾಕುವ ದಾರಿ ಕಲಿಸಿಕೊಟ್ಟ ಪಕ್ಷಗಳಿವೆ— ಅವುಗಳ ಬೆಂಬಲ ಪಡೆಯುವುದು ಚೆಂಡು ನಿಮ್ಮದು ಎಂದು ಗೋಲು ನಮ್ಮದು ಎಂದು ಹೊಡೆದೇ ಬಿಡುವುದು....'

"ಹ್ಞೂಂ, ಪಂಪ್ಯಾಗಿಲ್ಲ ಕಣೋ ನೀನು...'

'ನಾನೇನು? ಎಲ್ಲಾ ನೀವೇ, ನೋಡಿ, ಬೆಂಗಳೂರಲ್ಲಿ ಏನೆಲ್ಲಾ ಮಾಡಿದ್ರಿ! ಎಷ್ಟು ಗೊಂದಲ. ಅಲ್ಲ ತಮ್ಮ ತಲೆಯೊಡೆಯುವ ಯೋಜನೆ ನಡೆದಿದೆಯೆಂದು ಡಂಗುರವಾಗಿಯೂ ಸಾರುವುದೆ! ಅಷ್ಟೂ ನಾಚಿಕೆ ಬೇಡವೆ"

'ಇದ್ದುದನ್ನು ಇದ್ದಂತೆ ಹೇಳಲು ಭಯವೇಕೆ?"

'ಅಲ್ರಿ, ನಿಮ್ಮ ಮುಖ್ಯ ಮಂತ್ರಿಗಳ ತಲೆಯೊಡೆಯ ಬೇಕಾದ್ರೆ, ಏನಾಗಬೇಕು! ಮೆರವಣಿಗೆಯೇಕೆ ಗೌಜಿಯೇಕೆ? ಅಂತಃ ಶಾಂತಮೂರ್ತಿ ಮಹಾತ್ಮನ ಎದೆಯನ್ನು ಪ್ರಶಾಂತ ವಾತಾವರಣದಲ್ಲಿ ಯೇ ಒಡೆಯಲಾಯಿತಂತೆ. ಮತ್ತೆ ನಿಜಲಿಂಗಪ್ಪನವರ ತಲೆಯೇನು?"

"ಅಂಪ್ರೆ?'

"ಅಂಪ್ರೆ ಎಂಥದು? ಈಗ ಮಂತ್ರಿ—ಮಾಗಧರ ತಲೆಯೊಡೆಯಬೇಕಾದ್ರೆ ರಾಜಧಾನಿಯೇ ಆಗಬೇಕಾಗಿಲ್ಲ. ಕಲ್ಲು ಬಾಳವ ಸಮಾರಂಭದಲ್ಲೇ ಅವರ ತಲೆಗೂ ಕಲ್ಲು ಹಾಕಬಹುದು.'

'ಅದೇನು ಅಷ್ಟು ಸುಲಭವೆ!"

"ಅಯ್ಯೋ, ಇವರನ್ನು ಮೋಹಿಸಬೇಕಾದರೆ ಯಾವ ಮೋಹಿನಿಯೂ ಬೇಡ. ನಾಲ್ಕು ಹೂಮಾಲೆ, ಇಬ್ಬರು ಫೊಟೋಗ್ರಾಫರ್ ಧಾರಾಳ. ಟಿಫಿನ್ ಮಂತ್ರಿಗಳ ಲೆಕ್ಕದಲ್ಲೇ ನಡೆಯಬಹುದು; ಇಲ್ಲ, ಅವರ ಬೆಂಬಲಿಗರಾದ ಲೈಸೆನ್ಸ್ ಧಾರಿಗಳು ಮುಂದೆ ಬರುತ್ತಾರೆ.., ಮತ್ತೆ ಯಾರೋ ಒಬ್ಬ ಕಿಡಿಗೇಡಿಯೋರ್ವನ...ಎಂದು ವರದಿ ಮಾಡಿದರಾಯ್ತು ...'

"ಅದೆಲ್ಲಾ ಸ್ವಾಮಾನ್ಯ ಬಿಡು....ಅಮೆರಿಕೆಯಂತಹ ದೇಶದಲ್ಲೂ ಕೆನ್ನೆಡಿಯಂಥ ಅಧ್ಯಕ್ಷರನ್ನೂ ಗುಂಡಿಟ್ಟು ಕೊಂದರಂತೆ. ಅದಲ್ಲಾ ಮೋಸಗಾರರ ಕೃತ್ಯ....'

"ಓಹೋ, ಸ್ವಾತಂತ್ರ್ಯ ತಲೆಯೊಡೆದವರೆ, ವಿರೋಧಿ ಪಕ್ಷಗಳಗ ಸ್ವಾಗ ಸಿಗುತ್ತ...."

"ಅದು ಅವರನ್ನೆ ಕೇಳಬೇಕು...."

'ಹೋಗಲಿ ಬಿಡಿ ... ಸುಮ್ಮಸುಮ್ಮನೆ ಒಂದೊಂದೇ ಗೌಜಿ ಆರಂಭ ಮಾಡುವುದು....'

'ಆದು ವಿರೋಧಿ ಪಕ್ಷಕ್ಕೆ ಹೆಚ್ಚು ಅನ್ವಯಿಸುತ್ತದೆ...."

"ಇರಬಹುದು — ನೋಡಿ, ಸರಕಾರ — ವಿರೋಧಿ ಪಕ್ಷಗಳೆಲ್ಲವೂ ಒಂದೇ ಬೋಹದ ನಾಣ್ಯಗಳು ತಾನೇ."

"ಹ್ಞೂ, ಅಷ್ಟಾದರೂ ಒಪ್ಪಿಕೊಂಡೆ ತಾನೆ?'

"ಸತ್ಯ ಒಪ್ಪ ಬೇಕಾದರೆ ಯಾಕೆ ಹಿಂದೆ ಮುಂದೆ ನೋಡಬೇಕು?"

'ಭಾರಿ ಸತ್ಯವಂತ ತಾನೇ ನೀನು..."

"ಹೌದು ನಿಮ್ಮ ಹಾಗೇನೇ......ಅಯ್ಯೋ, ನೋವಾಯಿತು....'

"ಎಲ್ಲಿ?"

'ಇಲ್ಲಿ...."

"ಪಾಪ....ಈಗ...? ಪಾಪಿಯಾಯಿತು ತಾನೇ...'

'ಆಗುವ ದಾರಿಯಲ್ಲಿ..."

'ಹ್ಞೂಂ..."

—ಗೋರಾ.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26-4-1966.

ವಿದ್ಯಾ ಇಲಾಖೆಯು ದುರ್ಬಲ ಇಲಾಖೆಯಾಗಬಾರದು

ಶಿಕ್ಷಣ ಪ್ರಪಂಚದ ಪಕ್ಷಿನೋಟ

ಲೇಖಕರು
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ಶಿಕ್ಷಣವು ಪ್ರಜಾಪ್ರಭುತ್ವದ ಸರ್ವಸ್ವ. ದೇಶದ ಆರ್ಥಿಕ ಪ್ರಗತಿ, ತಾಂತ್ರಿಕ ಮುನ್ನಡೆಗಳಿಗೆ ಇದುವೇ ಮೂಲ ಮಂತ್ರ. ಸ್ವಾತಂತ್ರ್ಯ, ಸಾಮಾಜಿಕ, ನ್ಯಾಯ ಮುಂತಾದವುಗಳ ಉಳಿಯುವಿಕೆಗೆ ಶಿಕ್ಷಣವೇ ಅಡಿಗಲ್ಲು. ಶಿಕ್ಷಣದ ಮುನ್ನಡೆಯೆಂದರೆ ರಾಷ್ಟ್ರದ ಮುನ್ನಡೆ. ನಾಳಿನ ಸಮಾಜವನ್ನು ಉತ್ತಮಗೊಳಿಸುವಂತಹದೇ ಶಿಕ್ಷಣ. ಸುಪ್ತವೂ—ಗುಪ್ತವೂ ಆಗಿರುವ ಅನಂತ ಕರ್ತೃತ್ವ ಶಕ್ತಿಯನ್ನು ವಿಕಸನಗೊಳಿಸುವುದೇ ಶಿಕ್ಷಣದ ಗುರಿ. "ಜನ್ಮನಾ-ಜಾಯತೇ ಜಂತು" ಎಂಬಂತೆ ಜನಿಸುವಾಗ ಪಶು ಸಮಾನನಾಗಿ ಜನಿಸುವ ಮಾನವನನ್ನು "ಮಾನವ"ನೆಂದು ರೂಪಿಸುವ ಮಹತ್ವ ಪಾತ್ರ ಶಿಕ್ಷಣದ್ದು. ಜ್ಞಾನದಾನ ಇಡಿ ಭೂಮಂಡಲದಲ್ಲಿ ಎಲ್ಲಾ ದಾನಗಳಿಗಿಂತಲೂ ಹೆಚ್ಚು ಪುಣ್ಯಪ್ರದವಾದುದು. ಹುಟ್ಟಿದ ಮಗುವು ಸಾಯುವ ತನಕ ಪಡೆಯುವ ಅನುಭವ ಹಾಗೂ ಒಂದೇ ಮಾತಿನಲ್ಲಿ ಹೇಳುವುದಾದರೆ, ಜನಾಂಗದ ಸರ್ವತೋಮುಖವಾದ ಅಭಿವೃದ್ಧಿಯೇ ಶಿಕ್ಷಣ—ಎನ್ನಲು ಸಂಶಯವಿಲ್ಲ.

ಪ್ರಾಥಮಿಕ ಶಿಕ್ಷಣವೇ ಮಗುವಿನ ಜೀವನದ ಪ್ರಮುಖ ಅಡಿಗಲ್ಲು. ಮಗುವಿನ ಮುಂದಿನ ಜೀವನದಲ್ಲಿ ಆ ವಿದ್ಯೆಯೇ ಪ್ರತಿಬಿಂಬಿಸುವುದು. ವಿದ್ಯಾಗಂಧವಿಲ್ಲದೆ ಕಾಡಿನಲ್ಲಿ ಬೆಳೆದ ಮರದಂತಿರುವ ಮಗುವಿಗೆ ಅಕ್ಷರ ಜ್ಞಾನವನ್ನು ನೀಡುವ ಕಾರ್ಯವು ಯೋಚಿಸಿದಷ್ಟು ಸುಲಭವಲ್ಲ—ಇವು ಸುಲಭವಾಗಲು ವಿದ್ಯಾರ್ಥಿಗಳು—ಪಾಲಕರು—ಅಧ್ಯಾಪಕರು—ಸರಕಾರ ಇವುಗಳೊಳಗಿನ ಪರಸ್ಪರ ಸಹಕಾರ—ಸ್ವಾವಲಂಬನಗಳು ಅತ್ಯಗತ್ಯ. ಪ್ರಾಥಮಿಕ ಶಿಕ್ಷಣಕ್ಕೆ ಸರಕಾರ ಗಮನ ಕೊಡದೆ ಹೋದಲ್ಲಿ ನಿಜವಾಗಿಯೂ ಮಾಧ್ಯಮಿಕ ಹಾಗೂ ಉಚ್ಚ ಅಭ್ಯಾಸಗಳ ಫಲಕಾರಿಯಾಗವು. ಪ್ರಾಥಮಿಕ ಶಿಕ್ಷಣವೇ ಉಚ್ಚ ಶಿಕ್ಷಣದ ಅಡಿಗಲ್ಲು.

ಸಕೆಂದರೆ ವಿದ್ಯಾಭ್ಯಾಸದಲ್ಲಿ ಮೂರು ಶ್ರೇಣಿಗಳಿವೆ, ಪ್ರಾಥಮಿಕ—ಮಾಧ್ಯಮಿಕ ಹಾಗೂ ಕೊನೆಯದು. ಪ್ರಾಥಮಿಕ ಮತ್ತು ಮಾಧ್ಯಮಿಕ ಶ್ರೇಣಿಗಳು ಬಹಳ ಮುಖ್ಯವಾದವುಗಳು — ಏಕೆಂದರೆ ರಾಷ್ಟ್ರೀಯ ವಿದ್ಯಾಭ್ಯಾಸದ ಪೂರ್ಣ ಕಟ್ಟಡದ ಪಂಚಾಂಗದ ಇಟ್ಟಿಗೆಗಳು. ಈ ಬುನಾದಿಯು ಕಟ್ಟು ಹೋದರೆ ಇಡಿ ಕಟ್ಟಡವೇ ಕಟ್ಟು ಹೋಗಬಹುದು.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿ

ಅನಾದಿಕಾಲದಲ್ಲಿ ವಿದ್ಯಾಭ್ಯಾಸವು ಗುರುಕುಲಗಳಲ್ಲಿ ನಡೆಯುತ್ತಿತ್ತು. ಅಂದಿನ ಕಾಲದ ವಿದ್ಯಾರ್ಜನೆಗೂ—ಇಂದಿನ ಕಾಲದ ವಿದ್ಯಾರ್ಜನೆಗೂ ಅಜಗಜಾಂತರವಿದೆ. ವಿದ್ಯೆಯೆಂದರೆ ತನ್ನ ಮತ್ತು ಸಮಾಜದ ಉತ್ತಮ ಸ್ಥಿತಿಗೆ ದಾರಿಯೆಂಬ ಭಾವನೆ ಪ್ರತಿಯೊಬ್ಬರಲ್ಲೂ ಬರಬೇಕು.

ವಿದ್ಯೆ ವಿನಯವನ್ನು ನೀಡುತ್ತದೆ, ವಿನಯದಿಂದ ಅರ್ಹತೆ, ಅರ್ಹತೆಯಿಂದ ಧನ; ಧನದಿಂದ ಧರ್ಮ, ಧರ್ಮದಿಂದ ಸುಖ.

"ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ" ಎಂಬಂತೆ ವಿದ್ಯೆಯಿಂದ ವಿನಯ, ವಿನಯದಿಂದ ಸತ್ಪಾತ್ರತೆ ದೊರೆಯುವುದು. ಕೇವಲ ಅಲಂಕಾರ ವಿದ್ಯಾರ್ಥಿಯಾಗಿ "ಪುಸ್ತಕಂ ಹಸ್ತಭೂಷಣಂ" ಎಂಬಂತೆ ಪುಸ್ತಕಗಳನ್ನು ಕೈಯಲ್ಲಿ ಹಿಡಿದು ನವೀನ ವಸ್ತ್ರಗಳನ್ನು ಧರಿಸಿ, ಶಾಲೆ—ಕಾಲೇಜುಗಳಿಗೆ ಹೋಗುವುದು ಸುಸಂಸ್ಕೃತ ವಿದ್ಯಾರ್ಥಿಯ ಲಕ್ಷಣವೆಂದು ಹೇಳಲು ಅಸಾಧ್ಯ. ಮಾನವನ ಅಂತರ್ಯದಲ್ಲಿ ಅಡಗಿರುವ ಸುಪ್ತಚೇತನವನ್ನು ಆತನ ಮಾನಸಿಕ ಮೂಲ ಶಕ್ತಿಯ ಪ್ರಚೋದನೆಗೊಳಿಸಿ ಉತ್ತಮ ಸಂಸ್ಕಾರ ಹೊಂದಿದ ಸಂಪೂರ್ಣ ಜೀವಿಯನ್ನಾಗಿ ಮಾಡುವುದೇ ಶಿಕ್ಷಣ ಎನ್ನಬಹುದು. ಮಾನಸಿಕ ಏಕೀಭವಿಕವಾದ ಕೇಂದ್ರೀಕರಣವೇ ವಿದ್ಯೆಯೆನ್ನಬಹುದು. ಕೀಳು ಬುದ್ಧಿಯನ್ನು ತಿದ್ದುವುದೇ ವಿದ್ಯೆಯಾಗಿದೆ.

> ವಿದ್ಯೆವುಳ್ಳವನ ಮುಖವು
> ಮುದ್ದು ಬರುವಂತಿಕ್ಕು
> ವಿದ್ಯೆಯಿಲ್ಲದವನ ಬರಿ ಮುಖವು
> ಹಾಳೂರ ಹದ್ದಿನಂತಕ್ಕು—ಸರ್ವಜ್ಞ.

ಎಂದು ಸರ್ವಜ್ಞ ಕವಿ ಹಾಡಿದ್ದಾನೆ. ಅಂತೆಯೇ

> ಮಕ್ಕಳಿಗೆ ತಂದೆ ಬಾಲ್ಯದೊಳು
> ಅಕ್ಕರ ವಿದ್ಯೆಗಳ ನಂಪದಿರ್ದೊಡೆ
> ತಂದೆ ಕೊಂದಂ
> ಲಕ್ಕ ಧನವಿರಲು ಕೆಡುಗುಂ
> ಚಿಕ್ಕಂದಿನಾ ವಿದ್ಯೆ ಪೊರೆಗು
> ಚೂಡಾರತ್ನಾ||

ಎಂಬುದಾಗಿ ಚಿಕ್ಕಂದಿನ ವಿದ್ಯೆಯ ಕುರಿತು ಹಾಡಿದ್ದಾನೆ ಕವಿ.

ಇದಕ್ಕಾಗಿಯೇ ೧೯೧೩ರಲ್ಲಿ ಕಡ್ಡಾಯ ಶಿಕ್ಷಣ ಮಸೂದೆಯನ್ನು ಮೈಸೂರು ಸರಕಾರವು ಅನುಮೋದಿಸಿತು. ಭಾರತದಲ್ಲಿ ಮೊದಲಿಗೆ ಕಡ್ಡಾಯ ಶಿಕ್ಷಣವನ್ನು ಜ್ಯಾರಿಯಲ್ಲಿ ತಂದ ಕೀರ್ತಿ ಬರೋಡಾ ಸಂಸ್ಥಾನಕ್ಕೆ ಸಲ್ಲುವುದು. ೧೮೯೩ರ ಸುಮಾರಿಗೆ ಅಲ್ಲಿನ ದೊರೆ ಸಯ್ಯಾಜಿ ರಾವ್‌ರವರು ಇದಕ್ಕಾಗಿ ರಾಜಾಜ್ಞೆ ಹೊರಡಿಸಿದ್ದರಂತೆ. ಬಂಗಾಳ ಹಾಗೂ ಪಂಜಾಬ್‌ಗಳು ೧೯೧೯ರಲ್ಲೂ ಮದ್ರಾಸ್ ಸರಕಾರ ಅದರ ಮುಂದಿನ ವರ್ಷವೂ ಮೈಸೂರನ್ನು ಅನುಸರಿಸಿ ಕಾಯಿದೆಗಳನ್ನು ಮಾಡಿದವು. ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದಕ್ಕೆ ಸಂಬಂಧಿಸಿದಂತೆ ನಮ್ಮ ರಾಜ್ಯದಲ್ಲೂ ವಿಧಿಗಳನ್ನು ಸೇರಿಸಲಾಗಿದೆ.

ಒಟ್ಟು ವಿದ್ಯಾಭ್ಯಾಸಕ್ಕೆ ಮೂರನೇ ಯೋಜನೆಯಲ್ಲಿ ಒದಗಿಸಲಾದ ೪೯೭ ಕೋಟಿ ರೂಪಾಯಿಗಳಲ್ಲಿ ೨೦೯ ಕೋಟಿ ರೂಪಾಯಿಗಳನ್ನು ಪ್ರೈಮರಿ ಶಾಲಾ ಅಭಿವೃದ್ಧಿಗಾಗಿ ನೀಡಿದ್ದರು. ಈ ವೆಚ್ಚವನ್ನು ೧೯೬೧—೬೬ರೊಳಗೆ ಪ್ರಾರಂಭವಾಗುವ ಶಾಲೆಗಳಿಗೆಂದು ನಿಯೋಜಿಸಿದ್ದರು. ಮೂರನೇ ಯೋಜನೆಯಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ೧೭೬ ಕೋಟಿ ರೂಪಾಯಿಗಳನ್ನು ಒದಗಿಸಿದ್ದರಲ್ಲದೆ ಅವುಗಳಲ್ಲಿ ೧೨೪ ಕೋಟಿ ರೂಪಾಯಿಗಳನ್ನು ಪ್ರೈಮರಿ ಹಾಗೂ ಮಾಧ್ಯಮಿಕ ಶಿಕ್ಷಣಕ್ಕಾಗಿ ವ್ಯಯಿಸಿದ್ದರು. ಹೀಗೆ ಸರಕಾರವು ನಮ್ಮ ಶಿಕ್ಷಣದ ಬಗ್ಗೆ ತನು-ಮನ-ಧನಗಳನ್ನಿತ್ತು ಶ್ರಮಿಸುತ್ತಿರುವುದು ದೇಶದ ಏಳಿಗೆಗೆ ದಾರಿಯೆನ್ನಲು ಸಂದೇಹವಿಲ್ಲ.

ಮಧ್ಯಾಹ್ನದ ಊಟ.

ಬಡದೇಶವಾದ ನಮ್ಮ ನಾಡಿನ ಮಕ್ಕಳು ಪಾಲು ಜನರಿಗೆ ಊಟದ ಸಮಸ್ಯೆ ಬಹು ದೊಡ್ಡ ಸಮಸ್ಯೆಯಾಗಿದ್ದುದರಿಂದ ಹಳ್ಳಿಗಾಡಿನಲ್ಲಿ ರೈತ ಜನ ಕೋಟಿಯ ಮಕ್ಕಳು, ತಮ್ಮ ತಂದೆ—ತಾಯಿಗಳ ಜೊತೆ ಮನೆಗೆಲಸ-ಹೊಲ ಕೆಲಸಗಳಲ್ಲಿ ಪಾಲುಗೊಳ್ಳುವುದೇ ನಿತ್ಯ ನಿಯಮವಾಗಿತ್ತು. ಈಗ ಭಾರತದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ ಜಾರಿಗೆ ಬಂದಿದೆ. ಶಾಲೆಗೆ ಹೋಗುವ ಮಕ್ಕಳಿಗೆ ಪುಷ್ಟಿಕರವಾದ ಆಹಾರ ಬೇಕು. ಇದನ್ನು ನೀಡುವ ಸದುದ್ದೇಶದಿಂದ ಅಮೇರಿಕಾದ 'ಕೋ ಆಪರೇಟಿವ್ ಫಾರ್ ಅಮೇರಿಕನ್ ರಿಲೀಫ್ ಎವ್ವೆರಿವೇರ್' ಸಂಸ್ಥೆ (Care ಸಂಸ್ಥೆ) ಹಾಲಿನ ಪುಡಿ, ರವೆ, ಎಣ್ಣೆಯನ್ನು ಇತ್ತೀಚೆಗೆ ಕೊಡುತ್ತಾ ಬರುತ್ತಿದೆ.

ಮೈಸೂರು ರಾಜ್ಯದಲ್ಲಿ ಈ ಕಾರ್ಯಕ್ರಮದ ಪ್ರಾರಂಭವು ೧೯೬೨ನೇ ಸಪ್ಟೆಂಬರ್ ತಿಂಗಳಲ್ಲಿ ಬೆಂಗಳೂರಿನಿಂದ ೨೦ ಮೈಲು ದೂರದ ಊದಿಗೆರೆ ಗ್ರಾಮದಲ್ಲಿ ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಶ್ರೀ ಚೆಸ್ಟರ್ ಬೌಲ್ಸ್‌ರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಶ್ರೀಮತಿ ಚೆಸ್ಟರ್ ಬೌಲ್ಸ್‌ರೂ ಹಾಜರಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಆಗಿನ ವಿದ್ಯಾ ಸಚಿವರಾಗಿದ್ದ ಶ್ರೀ ಎಸ್. ಆರ್. ಕಂಠಿಯವರು ವಹಿಸಿದ್ದರು.

ಅತಿ ಶ್ರೀಮಂತ ರಾಷ್ಟ್ರವೆನಿಸಿದ ಅಮೇರಿಕವು ತನ್ನ ಸಮೃದ್ಧಿಯನ್ನು ಇತರ ಅನಭಿವೃದ್ಧ ನಾಡುಗಳೊಡನೆ ಹಂಚಿಕೊಳ್ಳುವ ಕಾರ್ಯಕ್ರಮವು ಪುಣ್ಯಪ್ರದವಾದುದೆನ್ನಬಹುದು. ತನ್ನ ಆಹಾರ ಉತ್ಪಾದನೆಯಲ್ಲಿ ಶೇಕಡಾ ಇಂತಿಷ್ಟು ಇತರ ರಾಷ್ಟ್ರಗಳಿಗೆ ನೀಡುತ್ತಿರುವ ಅಮೇರಿಕಾ ಶಾಂತಿ, ಸ್ವಾತಂತ್ರ್ಯಗಳಿಗೆ ನೀಡುವ ಕಾಣಿಕೆಯ ರೂಪವಾಗಿದೆ. ಇದರಿಂದ ವಿವಿಧ

(ಎಂಟನೇ ಪುಟ ನೋಡಿರಿ)

ನಿಮ್ಮ ಹಣವನ್ನು ಚೆಲ್ಲುವಿರಾ?

ಎಷ್ಟೇ ಶ್ರೀಮಂತನಿರಲಿ, ಯಾರೂ ಹಣವನ್ನು ಚೆಲ್ಲುವಷ್ಟು ವಿವೇಕಹೀನರಲ್ಲ. ಆದರೂ ನಮ್ಮಲ್ಲಿ ಬಹು ಮಂದಿ ಮಾಡುತ್ತಿರುವುದೇನನ್ನು? ನಮ್ಮ ಕಣ್ಣನ್ನು ಸೆಳೆದ ಯಾವ ವಸ್ತುವೇ ಇರಲಿ ನಮಗೆ ಅನವಶ್ಯಕವೆನಿಸಿದರೂ, ಅದಕ್ಕಾಗಿ ನಾವು ವೆಚ್ಚ ಮಾಡುತ್ತಿರುವುದು ಹಣದ ಚೆಲ್ಲಾಟವಲ್ಲದೆ ಮತ್ತೇನು?

ಸಾಮೂಹಿಕ ಉಳಿತಾಯ ಯೋಜನೆಯೆಂದರೇ—ಉಳಿತಾಯದ ಮೊತ್ತ ಎಷ್ಟೇ ಕಿರಿದಾಗಿರಲಿ—ಸರಕು, ಸಾಮಾಗ್ರಿಗಳ ಮೇಲಿನ ಬೇಡಿಕೆಯ ಒತ್ತಡವನ್ನು ಇಳಿಸಿ, ಅವುಗಳ ಬೆಲೆಯನ್ನು ಕೆಳಮುಖ ಮಾಡಬಹುದಾಗಿದೆ.

ಬೆಲೆ ಏರಿಕೆ ಹಣದ ಉಬ್ಬರದ ಈ ಸಂದಿಗ್ಧ ಕಾಲದಲ್ಲಿ ನಾವು ಖರ್ಚಿನಲ್ಲಿ ಮಿತಿಯನ್ನೂ ಅನವಶ್ಯಕ ವೆಚ್ಚಗಳಲ್ಲಿ ಕಡಿತವನ್ನೂ ಸಾಧಿಸುವುದು ತೀರಾ ಅವಶ್ಯಕ. ಸಂಖ್ಯೆಯಲ್ಲಿ ಹೇರಳವಿರುವ ದುಂದು ವೆಚ್ಚಗಳನ್ನು ಒಂದೊಂದಾಗಿ ಕಡಿಮೆಗೊಳಿಸಿದಲ್ಲಿ ಆ ಮೂಲಕ ಉಳಿಸಲಾಗುವ ಹಣವೇ ಒಂದು ನಿಧಿಯಾಗಬಲ್ಲುದು. ಹೀಗೆ ಉಳಿಸಿದ ಹಣದಿಂದ ಬೆಲೆ ಇಳಿದಂತೆ, ನೀವು ಹೆಚ್ಚು ಹೆಚ್ಚು ಸರಕುಗಳನ್ನು ಪಡೆಯಬಲ್ಲಿರಿ.

ಉಳಿತಾಯ ಸಾಧಿಸಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್ ಠೇವಣಾತಿಯೊಂದನ್ನು ತೆರೆಯಿರಿ. ತಿಂಗಳ ವರಮಾನಕ್ಕೆ ಬಂದಂತೆ ಖಾತೆಯಲ್ಲಿ ಹಣ ಕೂಡಿಡುತ್ತಾ ಬನ್ನಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ವಿವೇಚನೆ

ಕಾಂಗ್ರೆಸ್ಸಿಗರೂ ಕ್ರಾಂತಿಯನ್ನು ಕಾಯುತ್ತಾರೆಯೆ?

ಬರೆದವರು: ಶ್ರೀ ಶಿವಶಂಕರ.

ಕಾಂಗ್ರೆಸ್ಸಿನವರ [illegible] ಪಥಕ್ಕೆ ಬರುತ್ತಿರಲಿಲ್ಲ. ಅಹಿಂಸಾವಾದಿ ಶ್ರೀ ಮೋಹನದಾಸ ಕರಮಚಂದ ಗಾಂಧೀಜೀ ಹಾಗೂ [illegible] ಜೀಯವರ ಹೆಸರು. ಆ ಆದರ್ಶ ಗಾಂಧೀಜೀಯವರು ನಿಧನರಾಗಿ ಕಾಂಗ್ರೆಸ್ಸಿನ ಸದಸ್ಯರಾಗಿ ಇಲ್ಲದಿದ್ದರೂ ಕಾಂಗ್ರೆಸ್ಸೆಂದರೆ ಗಾಂಧೀಜೀಯವರ [illegible] ದಿತ್ತು. ಗಾಂಧೀಜೀಯವರ [illegible] ಅಹಿಂಸೆಯ ವಿಷಯದಲ್ಲಿ ಯೇಸು ಕ್ರಿಸ್ತನ ಅವತಾರವೇ ಎನ್ನಲಾಗುತ್ತಿತ್ತು. [illegible] ಇಂತಹ ವಿಷಯಗಳನ್ನು ಬಿಟ್ಟುಬಿಟ್ಟರೂ ಅಹಿಂಸೆಗೂ ಗಾಂಧೀಜೀಗೂ ಅನ್ಯೋನ್ಯ [illegible] ಭಿನ್ನಾಭಿಪ್ರಾಯಕ್ಕೆಡೆ ಇಲ್ಲ. ಅಹಿಂಸೆಯ [illegible] ಯಿಂದಲೇ ಅವರು ಭಾರತವಿಭಜನೆಯ ಮಾತೃಹತ್ಯೆಯ ಪಾಪವನ್ನು ಒಪ್ಪಿಕೊಂಡರು. ಅಷ್ಟೇ ಅಲ್ಲ, ಪಾಕಿಸ್ತಾನ ರಚನೆಯ ನಂತರವೂ ಮುಸಲ್ಮಾನರ ದುಷ್ಕೃತ್ಯಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕೆಂದು ಹಿಂದೂಗಳಿಗೆ ಕರೆ ಇತ್ತರು. ಗಾಂಧೀಜೀಗೆ ಅದೇ ಅಂತ್ಯವನ್ನುಂಟು ಮಾಡಿತು. ಆದರೂ ಕಾಂಗ್ರೆಸ್ಸು ಅಹಿಂಸೆಗೆ ಪೂರ್ಣ [illegible] ಕೊಡುತ್ತ ಬಂದಿತು; ಪಾಕಿಸ್ತಾನವೀಯುತ್ತಿರುವ [illegible] ಪೀಡೆಯನ್ನು [illegible] ನ್ನಿದೆ (ಡಿ| [illegible]) ಇದಕ್ಕೆ ಅಪವಾದ [illegible]. ಹೀಗೆ ಕಾಂಗ್ರೆಸ್ಸು ಅಹಿಂಸೆ ಮತ್ತು ಶಾಂತಿ-ಸಮಾಧಾನದ ಮಾತುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿರುವ ಪಕ್ಷವೆಂಬುದು ಜನತೆಯ ಅಭಿಪ್ರಾಯ.

'ಕ್ರಾಂತಿ' ಪದ ಕಿವಿಗೆ ಬಿದ್ದೊಡನೆಯೇ ಕಾಂಗ್ರೆಸ್ಸಿಗರಿಗೆ [illegible]. [illegible] ಕ್ರಾಂತಿಯುತವಾಗಿ ಸ್ವರಾಜ್ಯವನ್ನು ಸಂಪಾದಿಸಿದ್ದೇವೆನ್ನುವದು ಅವರ ಅಗ್ಗದ ಬಗ್ಗಳಿಕೆಯ ಮಾತು. ಭಾರತವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ತಪ್ಪಿಸಲಿಕ್ಕಾಗಿ ಜೀವವನ್ನು ತುಚ್ಛವಾಗಿಸಿ ಹೋರಾಡಿದ ಕ್ರಾಂತಿಕಾರ ದೇಶಭಕ್ತರ ಹೆಸರನ್ನು ಕೇಳಿದ ಮಾತ್ರಕ್ಕೆ ಅವರ ಎದೆ [illegible]. ಶ್ರೀ ಜವಾಹರಲಾಲರೇಯವರೇ ಕ್ರಾಂತಿಕಾರ ಶ್ರೀ ಸುಭಾಸ್ ಬಾಬೂರವರ ವಿರುದ್ಧ ಬ್ರಿಟಿಷರ ಪರವಾಗಿ [illegible] ಇದೇ ಕಾರಣ.

ಆದರೆ, ಅದೇ ಶ್ರೀ ಜವಾಹರಲಾಲ ನೆಹ್ರೂಜೀಯವರು [illegible] (ದಿನಾಂಕ [illegible]) [illegible] ದಿಂದ ಆಚರಿಸಲು [illegible]. ಮೇ ಒಂದನೇ ದಿನವೂ ರಕ್ತಪಾತದ [illegible]. [illegible] ಕಾಂಗ್ರೆಸ್ಸಿಗರು [illegible] ಮಹಾನಗರದ [illegible] ಮೇ ದಿನವೆಂದು [illegible] ಗಳನ್ನು ಕೂಗುತ್ತಿದ್ದ ಸಂದರ್ಭದಲ್ಲಿ ಇದೇ ವೇದಿಕೆಯ ಮೇಲಿಂದ [illegible]

[illegible] ರಕ್ತದ ಹೊಳೆ ಹರಿಸಿ [illegible] ಸೋಷಿಯಲಿಸ್ಟ [illegible] ಕಾಂಗ್ರೆಸ್ಸು [illegible] ರಲಿಕ್ಕಿಲ್ಲ. ಶ್ರೀ [illegible] ಕಾಂಗ್ರೆಸ್ಸ್ [illegible] ಕಾಂಗ್ರೆಸ್ಸು [illegible] ಕಾಂಗ್ರೆಸ್ಸಿ [illegible] ಸ್ಥಾಪಿಸುವೆವೆಂದರೆ ಕಾಂಗ್ರೆಸ್ಸು ಅಧಿಕಾರ [illegible]. ಅಧಿಕಾರ [illegible] ಕಾಂಗ್ರೆಸ್ಸಿಗರ [illegible] ಪ್ರದರ್ಶನ. [illegible] 'ಅವಿಷ್ಯಾರ್' [illegible] ಕ್ರಾಂತಿಯ [illegible] ಕೋರಿಸಿದ್ದರೆ.

ಶ್ರೀ [illegible] ಕಾಂಗ್ರೆಸ್ಸಿನ [illegible] ಕಾಂಗ್ರೆಸ್ಸನ್ನು ಅಧಿಕಾರದ ಆಸನದಲ್ಲಿ [illegible]. ಆದರೆ ಶ್ರೀ ಇ. ಎಸ್. ಕೆ. ಕೆ. [illegible] [illegible] ಹಿಂ [illegible] ಕಾಂಗ್ರೆಸ್ಸಿನ [illegible] ಕಂಪ್ಲೀಶರಿಗೆ [illegible].

ಶ್ರೀ ಅಂತೋಣಿ ಪಿಳ್ಳೈ ಅಲ್ಲದೆ ಶ್ರೀ ಕಣ್ಣಾದಾಸನ್ ಅಂದ [illegible] ಕಾಂಗ್ರೆಸ್ಸಿನ [illegible] ಕಾಂಗ್ರೆಸ್ [illegible] ಕಾಂಗ್ರೆಸ್ಸಿ [illegible] ಕಾಂಗ್ರೆಸ್ಸಿಗರು [illegible].

[illegible] "[illegible]" [illegible]

ರಾದರೂ ರಾಗತಿಗೆಯಲು ಇಂದು ಸಾಧ್ಯವೇನು? ಶ್ರೀ ಅಂತೋಣಿ ಪಿಳ್ಳೈ, ಶ್ರೀ ಕಣ್ಣಾದಾಸನ್‌ರಂತಹವರು ಕಾಂಗ್ರೆಸ್ಸ್ ಸೇರುತ್ತಿರುವಾಗ ಅಂದರೆ ಕಾಂಗ್ರೆಸ್ಸಿನ ನೊಗಕ್ಕೆ ಕುತ್ತಿಗೆ ಕೊಡಲು ಮುಂದಕ್ಕೆ ಬರುತ್ತಿರುವಾಗ ಸ| ಶ್ರೀ ಅಜಯ ಮುಖರ್ಜಿ, ಹರೇ ಕೃಷ್ಣ ಮೆಹ್ತಾಬ, ಪವಿತ್ರ ಮೋಹನ ಪ್ರಧಾನ, ಶ್ರೀ ಗೋಪಾಲ ಶಾಸ್ತ್ರಿ, ಕುಂಭಾರಾಮ ಆರ್ಯ, ಮೂಲಚಂದ ದೇಶಲೆಹರಾ, ಹುಮಾಯೂನ ಕಬೀರರಂತಹ ಭಾರೀ ಭಾರೀ ಕುಳಗಳು ನೊಗದಿಂದ ಕುತ್ತಿಗೆಯನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಹಾದು ಬಸವಣ್ಣಗಳಾಗಿರಲು ಅವರಿಗೆ ಇಷ್ಟವಿರುವದಿಲ್ಲ. ಆದರೂ ಅವರಿಗೆ ಕಾಂಗ್ರೆಸ್ಸಿನ 'ಮೂಲ ತತ್ವ"ದ ಮೇಲೆ ಭಿನ್ನಾಭಿಪ್ರಾಯ ಇರುವದಿಲ್ಲ. ಅಂದರೆ ಸಹ-ಕಾಂಗ್ರೆಸ್ಸಿಗರ ಮೇಲೆ ಇವರಿಗೆ ದ್ವೇಷ ವಿನಃ ಕಾಂಗ್ರೆಸ್ ಪಕ್ಷದ ಮೇಲೆ ದ್ವೇಷ ಇರುವದಿಲ್ಲ. ಇವರ ಹೃದಯದಲ್ಲಿ ಅದೇ ಶಾಂತ ಮೂರ್ತಿ ಗಾಂಧೀಜಿಯವರ ಮೂರ್ತಿ ಗಾಢವಾಗಿ ಇದೆ. ಅಂತೋಣಿ ಪಿಳ್ಳೈ, ಕಣ್ಣಾದಾಸನರಂತಹವರು ಕ್ರಾಂತಿ, ಬಂಡಾಯ, ರಕ್ತದ ಹೊಳೆ ಇತ್ಯಾದಿ ಮಾತುಗಳನ್ನಾಡಿದರೂ ಈ ಹಳೆ ಕುಳಗಳು, ಗಾಂಧೀಜೀಯವರ ಜಟ್ಟಿಗಿದ್ದವರು "ಕ್ರಾಂತಿ'ಯ ಕಲ್ಪನೆ ಕೂಡಾ ಮಾಡಲಾರರೆನ್ನುವದು [illegible]ವಾದ. ಅವರಿಗೆ ಕಾಂಗ್ರೆಸ್ಸಿನ ಮೇಲೆ ಗಾಢವಾದ ಭಕ್ತಿ, ಭಾರೀ ಪ್ರೀತಿ ಇದ್ದ ಕಾರಣವೇ ಕಾಂಗ್ರೆಸ್ಸಿನಿಂದ ಹೊರಬಂದರೂ, ಹೋರಿಗಳ ಹೋರಾಟ ಕಣದಿಂದ ಕಾಲ್ತೆಗೆದರೂ, "ಜನ— ಕಾಂಗ್ರೆಸ್ಸೆಂ"ಬ ಹೆಸರಿನಡಿಯಲ್ಲಿ ತಾವು ಕಾಂಗ್ರೆಸ್ಸ್ ಜನರೆಂದು ಜನತೆಯ ನಡುವೆ ಪ್ರಚಾರಮಾಡಲಾರಂಭಿಸಿದರು. ಜನರೂ ಸ್ವಲ್ಪ ಮಟ್ಟಿಗೆ ನಂಬಿದರು. ಆದರಲ್ಲಿ ಕೆಲವರು ಅಧಿಕಾರದ ಅಂಕುಶವನ್ನು ಕೈಗೆ ತೆಗೆದುಕೊಂಡರು. ಮಹಾಜು[illegible]ಯ [illegible] ದೃಶ್ಯವೂ ದಾರುಣ ಹಾಸ್ಯದಲ್ಲಿ ಕೊನೆಗೊಂಡಿತು. ಇನ್ನು ಇವರಿಗೆ ಜನರ ಆವಶ್ಯಕತೆಯಾದರೂ ಏನ, ಕಾಂಗ್ರೆಸ್ಸಿನ ಆವಶ್ಯಕತೆ ಯಾದರೂ ಏನು?

ಭೀಕರ ಬರಗಾಲದ ಬವಣೆಯಿಂದ ಬಿಹಾರು ಬಡಬಡಿಸುತ್ತಿರುವಾಗ, ಭಾರತದಲ್ಲಿ ರಾಜಕೀಯ ಪಕ್ಷಗಳಿಗೆ ಬರಗಾಲ ಬಂದಿಲ್ಲವೆಂಬುದನ್ನು ಜಗಜ್ಜಾಹಿರಗೊಳಿಸಲಿಕ್ಕಾಗಿಯೇ ಎನ್ನುವ ರೀತಿಯಲ್ಲಿ ಈ ಜನರಿಗೂ ಕಾಂಗ್ರೆಸ್ಸಿಗರಿಗೂ ಬೇಡವಾದ ಈ 'ಗಾಂಧೀ ಭಕ್ತರು' ಬಿಹಾರಿನಲ್ಲಿ ಬಡಾಯಿ ಕೊಚ್ಚಿಕೊಳ್ಳಲು ಒಂದಾದರು. ಬಿಹಾರಿನಲ್ಲಿ ಅವರ ಜಾತಿಯವರು ಆದಾಗಲೇ 'ಜನ ಕ್ರಾಂತಿದಳ'ವನ್ನು ರಚಿಸಿದ್ದು, ಅಧಿಕಾರದ ಅಂಕುಶವನ್ನು ಕೈಗೆ ತೆಗೆದುಕೊಂಡಿದ್ದಾರೆ. ಬಿಹಾರಿನಲ್ಲಿ ಬರಗಾಲ ಬಂದಿರುವದಾದರೂ ಆಹಾರ ಪದಾರ್ಥ ಹಾಗೂ ನೀರಿಗೆ ತಾನೇ! ಹೆಸರುಗಳಿಗೆ ಬರಗಾಲ ಬಂದಿಲ್ಲ. ಅಂತೆಯೇ ಹೊಸ ಪಕ್ಷವನ್ನು ಸ್ಥಾಪಿಸಬೇಕೆಂದಾಗ ಹಲವಾರು ಹೆಸರುಗಳು ಮುಂದೆ ಬ[illegible]ದುವು. ಕೊನೆಯಲ್ಲಿ ಅವರು ಆರಿಸಿಕೊಂಡದ್ದು 'ಭಾರತೀಯ ಕ್ರಾಂತಿದಳ'ವೆಂಬ ಹೆಸರನ್ನು. ಕ್ರಾಂತಿಯಲ್ಲೂ ಫ್ರಾನ್ಸಿನ ಕ್ರಾಂತಿ, ಆಂಗ್ಲೇಯ ಕ್ರಾಂತಿ, ಅಮೇರಿಕದ ಕ್ರಾಂತಿ, ಕಮ್ಯುನಿಸ್ಟ್ ಕ್ರಾಂತಿ..., ಹೀಗೆ ಹಲವಾರು ವಿಧದ ಕ್ರಾಂತಿಗಳಿವೆಯೇ ಏನೋ! ಇಲ್ಲಿ ಮನಸೆಳೆಯುವ ವಿಷಯ ಅದಲ್ಲ. ಅಲ್ಲಿ ಕಲೆತವರು ಹೆಸರು ಹಳೆಯ ಕಾಂಗ್ರೆಸ್ಸಿಗರು, ಎಲ್ಲರೂ ಹಳೆಯ ಕುಳಗಳು. ಅದರಲ್ಲಿ ಯಾರು ಕಡಿಮೆ—ಅಜಯ ಮುಖರ್ಜಿಯವರೇ, ಹರೇಕೃಷ್ಣ ಮೆಹತಾಬರೇ.... ಇವರೆಲ್ಲರೂ ಹಳೆಯ ಕಾಂಗ್ರೆಸ್ಸಿಗರಿದ್ದ ಕಾರಣವೇ ಗಾಂಧೀಜೀಯವರನ್ನು ಮರೆತು ಬಿಡಲು ಅವರಿಂದ ಸಾಧ್ಯವಾಗಲಿಲ್ಲ. ಬಂಗಾಲದ ಶ್ರೀ ಮುಖರ್ಜಿಯವರು ಈ ಹಿಂಸೆಯನ್ನೆದುರಿಸಲೆಂದು ದೇಶದಲ್ಲಿ ಹೊಸ ಪಕ್ಷದ ಆವಶ್ಯಕತೆ ಇದೆಯೆಂದರೆ, ಹರಿಯಾಣದ ಶ್ರೀ ಬಲವಂತರಾಯರು ಮಹಾತ್ಮಾ ಗಾಂಧೀಜೀಯವರನ್ನೇ ತನ್ನ ವಾದ ಪುಷ್ಟಿಗಾಗಿ ಕರೆದರು. ಗಾಂಧೀಜೀಯವರ ಅಹಿಂಸಾ ವಾದದ ತಳಹದಿಯ ಮೇಲೆ ಹೊಸ ಪಕ್ಷ ಕಟ್ಟಲ್ಪಡಬೇಕೆಂಬುದು ಅವರ ಅಭಿಪ್ರಾಯ. ಅಂತೂ ಅವರೆಲ್ಲರೂ ಹಿಂಸೆಯನ್ನು ಹೀಗಳೆದರು. ಆದರೂ ತಮ್ಮ ನವೀನ ಪಕ್ಷಕ್ಕೆ 'ಕ್ರಾಂತಿ ದಳ'ವೆಂಬ ಹೆಸರನ್ನಿಟ್ಟರು.

ಕ್ರಾಂತಿ ಅದೆಷ್ಟು ಶಾಂತವಾಗಿ ನಡೆದರೂ "ಹಿಂಸೆ' ಅಲ್ಲಿ ಇಲ್ಲದಿರುವದಿಲ್ಲ. ಭಗತ್ ಸಿಂಘ್, ಚಂದ್ರಶೇಖರ್, ಸುಭಾಸ್‌ಬೋಸ್, ಅರವಿಂದ ಬಾಬು, ಭಾಯಿ [illegible] —ಕ್ರಾಂತಿಕಾರರ ನಾಮಾವಳಿಯ ಗ್ರಂಥ ಸಂಪುಟವನ್ನೇ ಹೊರಡಿಸಬಹುದು. ಕ್ರಾಂತಿಯೆಂದೊಡನೆ ಜ್ಞಾಪಕಕ್ಕೆ ಬ[illegible]ವದಾದರೂ ಇವರ ಹೆಸರುಗಳೇ [illegible] ಎಸೆಯುವದು, ಶ್ರೀಮದ್ ಭಗವದ್ಗೀತೆಯನ್ನು ನಗು ನಗುತ್ತ ಓದುತ್ತ [illegible]ಗಂಭವನ್ನೇರುವದು ಇದು ಕ್ರಾಂತಿಯೆಂದೊಡನೆ ಕಣ್ಣು ಮುಂದಕ್ಕೆ ಬರು[illegible]ಲ್ಲವದು—ಶಾಂತಿ ಅಥವಾ ಕಾಂಗ್ರೆಸ್ಸೆಂದೊಡನೆ ಸತ್ಯಾಗ್ರಹ—ಚರಕ ಕಣ್ಣ ಮುಂದೆ ಬಂದು ನಿಂತಂತೆ. ಹಾಗಿರುವಾಗ ಈ ಹಳೆಯ ಕಾಂಗ್ರೆಸ್ಸಿಗರು, ಗಾಂಧೀಜೀಯವರ ಒಡನಾಡಿಗಳೆಂದು ಕ್ರಾಂತಿಯ ಪಕ್ಷವನ್ನು ಕಟ್ಟಲು ಬರಗಾಲದ ಎದೆಯ ಮೇಲೆ [illegible] ಕುಳಿತುಕೊಂಡಿದ್ದಾರಲ್ಲಾ! ಅವರಾದರೋ ಭಾರತೀಯರ ಕ್ರಾಂತಿದಳವನ್ನು ಅಥವಾ ಭಾರತೀಯ ಕ್ರಾಂತಿಕಾರರ ದಳವನ್ನು ಕಟ್ಟಿರುವದಿಲ್ಲ; 'ಭಾರತೀಯ ಕ್ರಾಂತಿದಳ'ವೆಂಬ ಹೊಸ ಪಕ್ಷವನ್ನು ಸ್ಥಾಪಿಸಿ, ಕಾಂಗ್ರೆಸ್ಸಿನಲ್ಲಿ ಉಳಿದಿರುವ 'ಉತ್ತಮ'ರನ್ನು ಕಾಂಗ್ರೆಸ್ಸ ತೊರೆದು ತಮ್ಮೊಂದಿಗೆ ಸೇರಬೇಕೆಂದು ಕೇಳಿಕೊಳ್ಳುತ್ತಿದ್ದಾರೆ.

'ಕ್ರಾಂತಿ' "ಶಾಂತಿ" ಪದಗಳು ಹಳೆ

ಸಾಹಿತ್ಯ ಸಂಸದ

ಕಾಶ್ಮೀರದ ಕವಿಗಳು

ಬರೆದವರು: ಶ್ರೀ ಸ. ನಾರಾಯಣ.

ಇತಿಹಾಸದಲ್ಲಿ ಕಾಶ್ಮೀರಕ್ಕೆ ವಿಶೇಷ ಪ್ರಾಮುಖ್ಯತೆ. ಸಂಸ್ಕೃತ ಸಾಹಿತ್ಯ ಸಂಪುಟದಲ್ಲಿ ಕಾಶ್ಮೀರದ ಸಂಪತ್ತಿ ಒಂದು ಪ್ರಮುಖ ಅಧ್ಯಾಯ. ಬಿಲ್ಹಣ ಕಾಶ್ಮೀರದ ಪ್ರಮುಖ ಕವಿ. ೧೮ ಅಂಕಗಳ 'ವಿಕ್ರಮಾಂಕದೇವ ಚರಿತ' ಬಿಲ್ಹಣನ ಪ್ರಸಿದ್ಧ ಕಾವ್ಯ. ಕ್ರಿ. ಶ. ೧೦೭೬ರಿಂದ ೧೧೨೭ರ ವರೆಗೆ ಕಲ್ಯಾಣವನ್ನಾಳಿದ ಚಾಲುಕ್ಯದ ಅರಸನಾದ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ಕವಿ ಬಿಲ್ಹಣ ಆಶ್ರಯದಾತನ ಮೆಚ್ಚಿಗೆಗಾಗಿ ಕಾವ್ಯವನ್ನು ರಚಿಸಿದ. ಅರಸ ವಿಕ್ರಮಾದಿತ್ಯನಿಂದ ಮನ್ನಣೆಯನ್ನು ಪಡೆದು ಪ್ರಶಂಸೆಗೆ ಒಳಗಾದ. ಕವಿ ಬಿಲ್ಹಣ, ವಿಕ್ರಮಾಂಕದೇವ ಚರಿತದಲ್ಲಿ ಚಾಲುಕ್ಯ ವಿಕ್ರಮಾದಿತ್ಯನ ಬಗೆಗೆ ಮತ್ತು ಅರಸರ ಆಳ್ವಿಕೆಯ ಬಗೆಗೆ ಕೆಲವು ಅಮೂಲ್ಯ ಸಂಗತಿಗಳು ತಿಳಿದು ಬರುತ್ತವೆ. ಬಿಲ್ಹಣ ಕಾವ್ಯವನ್ನು ಕ್ರಿ. ಶ. ೧೦೮೮ಕ್ಕೆ ಪೂರ್ವದಲ್ಲಿಯೇ ರಚಿಸಿದಂತೆ ತಿಳಿದುಬರುತ್ತದೆ.

ಬಿಲ್ಹಣ ಕಾಶ್ಮೀರದಲ್ಲಿ ಜನಿಸಿದ ಕವಿ. ಬಿಲ್ಹಣ ಅರಸ ವಿಕ್ರಮಾದಿತ್ಯನಿಂದ ಗೌರವಿಸಲ್ಪಟ್ಟು, ಆಸ್ಥಾನ ಕವಿಯಾಗಿ ನೇಮಕವಾಗುವವರೆಗೆ ಅನೇಕ ರಾಜ್ಯಗಳನ್ನು, ಅರಸು ಕುವರರನ್ನೂ ಸಂದರ್ಶಿಸಬೇಕಾಯಿತು. ಆದರೆ ಕೊನೆಗೆ ವಿಕ್ರಮಾದಿತ್ಯ ಆಹ್ವಾನಿಸಿ ಆಶ್ರಯ ನೀಡಿ ಆದರಿಸಿದ. 'ವಿದ್ಯಾಪತಿ' ಎನ್ನುವ ಗೌರವವನ್ನು ಪಡೆದ ಬಿಲ್ಹಣ. ವಿಕ್ರಮಾಂಕದೇವ ಚರಿತದಂತೆಯೇ ಇನ್ನೊಂದು ನಾಟಕವನ್ನು ಬಿಲ್ಹಣ ರಚಿಸಿದ. ಆ ನಾಟಕದ ಹೆಸರು ಕರ್ಣ ಸುಂದರಿ.

ವಿಕ್ರಮಾಂಕದೇವ ಚರಿತೆ ಐತಿಹಾಸಿಕ ಸಂಗತಿಗಳನ್ನು ಒಳಗೊಂಡ ಉತ್ತಮ ಕಾವ್ಯ. ಕರ್ಣ ಸುಂದರಿ ಪ್ರೇಮ ಕಥಾವಸ್ತುವಿನ ಉತ್ತಮ ನಾಟಕ. ಬಿಲ್ಹಣನ ಕಾವ್ಯ ರಚನೆಯಲ್ಲಿ ಸರಳತೆ ಹಾಗೂ ರಮಣೀಯತೆ ಕಾಣಬರುತ್ತದೆ. ಅವನ ಪಾತ್ರ ರಚನೆ, ಸನ್ನಿವೇಶ, ನಿರೂಪಣಾ ಶೈಲಿ ಆಕರ್ಷಣೀಯವಾಗಿದೆ.

ವಿಕ್ರಮಾಂಕದೇವ ಚರಿತ ಕಾವ್ಯದಲ್ಲಿ ಹಲವಾರು ಉತ್ತಮ ಸಂಗತಿಗಳಿವೆ. ಇತಿಹಾಸದ ಘಟನೆಗಳು, ಸಂಗತಿಗಳು ಈ ಕಾವ್ಯದಲ್ಲಿ ಪ್ರಸ್ತಾಪಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಕಾವ್ಯದ ರಮಣೀಯತೆಗೆ ಭಂಗ ಬಾರದಂತೆ ಕವಿ ಇತಿಹಾಸದ ಸಂಗತಿಗಳನ್ನು ಬಳಸಿಕೊಂಡು ಜನಮನ ಮೆಚ್ಚುವಂತೆ, ಕಾವ್ಯ ಸೂತ್ರವನ್ನು ಅನುಸರಿಸಿ ಕಾವ್ಯವನ್ನು ರಚಿಸಿದ್ದಾನೆ. ವಿಕ್ರಮಾದಿತ್ಯನ ಪಾತ್ರ ನಿರೂಪಣೆಯಲ್ಲಿ, ಸನ್ನಿವೇಶಗಳ ರಚನೆಯಲ್ಲಿ ವೈವಿಧ್ಯತೆ ಇದೆ. ಕಾವ್ಯದಲ್ಲಿ ಕಾಣಬರುವ ಐತಿಹಾಸಿಕ ಪ್ರಮುಖ ಘಟನೆಗಳು, ಸಂಗತಿಗಳು ಐತಿಹಾಸಿಕ ವಂದಿಯಾಗಿಲ್ಲ. ಕಾವ್ಯದ ಪ್ರಮುಖ ಅಧ್ಯಾಯಗಳಾಗಿವೆ.

ವಿಕ್ರಮಾಂಕದೇವ ಚರಿತ ಕಾವ್ಯ ಚಾಲುಕ್ಯ ಮನೆತನದ ಪ್ರಮುಖ ವ್ಯಕ್ತಿಯ ನಿರೂಪಣೆಯೊಂದಿಗೆ ಆರಂಭವಾಗುತ್ತದೆ. ನಾಯಕ ಅರಸನಾಗಿ ಸಿಂಹಾಸನವನ್ನೇರಿದ ಸಂಗತಿ ಆರಂಭದಲ್ಲಿಯೇ ಪ್ರಸ್ತಾಪಿಸಲ್ಪಡುತ್ತದೆ. ವಿಕ್ರಮಾದಿತ್ಯನ ಅಣ್ಣ ಸೋಮೇಶ್ವರನ ಸಂಗತಿಯೂ ತಿಳಿದು ಬರುತ್ತದೆ. ವಿಕ್ರಮಾದಿತ್ಯ ತನ್ನ ತಮ್ಮ ಜಯಸಿಂಹನೊಂದಿಗೆ ಯುದ್ಧ ಮಾಡಿ ಸೋಲಿಸಿದ ಸಂಗತಿಯೂ ಕಾವ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ ಮತ್ತು ಪ್ರಬಲ ಆಜನ್ಮ ಶತ್ರುಗಳಾದ ಚೋಳರನ್ನು ಅಡಗಿಸಿದ ವಿಷಯವೂ ನಿರೂಪಿಸಲ್ಪಟ್ಟಿದೆ. ಕಾವ್ಯದಲ್ಲಿ ೭ರಿಂದ ೧೩ನೆಯ ಕಾಂಡದ ವರೆಗೆ ಕಾವ್ಯ ಸೂತ್ರವನ್ನು ಅನುಸರಿಸಿ ಬರೆದಿರುವುದು ಕಾಣ ಬರುತ್ತದೆ. ವೀರ ಚರಿತ ಕಾವ್ಯದಂತೆ ಕಾಣ ಬರುತ್ತದೆ. ಇಲ್ಲಿ ಕಾಣ ಬರುವ ಸ್ವಯಂವರದ ವರ್ಣನೆಯು ರಂಜನೀಯವಾಗಿದೆ. ಕರಹಟ್ಟದ ಶಿಲಾಹಾರ ಅರಸು ಮನೆತನದ ರಾಜಕುಮಾರಿ ಚಂದ್ರಲೇಖೆ ಸ್ವಯಂವರದಲ್ಲಿ ವಿಕ್ರಮಾದಿತ್ಯನನ್ನು ವರಿಸುತ್ತಾಳೆ. ವಿಕ್ರಮಾದಿತ್ಯನ ವಿವಾಹ ಚಂದ್ರಲೇಖೆಯೊಂದಿಗೆ ವೈಭವದಿಂದ ನೆರವೇರುತ್ತದೆ. ವಿಕ್ರಮಾಂಕದೇವ ಚರಿತ ಕಾವ್ಯದ ಕೊನೆಯ ಅಂಕದಲ್ಲಿ ಕವಿ ಬಿಲ್ಹಣ ತನ್ನ ಹಾಗೂ ತನ್ನ ಕುಟುಂಬದ ಸಂಗತಿಗಳನ್ನು, ಅರಸನ ಸಂಗತಿಗಳನ್ನೂ ಮತ್ತು ಕೆಲವು ಪ್ರಮುಖ ಸಂಗತಿಗಳನ್ನು ವಿವರಿಸಿ— ನಿರೂಪಿಸುತ್ತಾನೆ.

ಕರ್ಣಸುಂದರಿ ನಾಲ್ಕು ಅಂಕಗಳ ನಾಟಕ. ಬಿಲ್ಹಣ ಈ ನಾಟಕದಲ್ಲಿ ಪ್ರೇಮಿಗಳಿಬ್ಬರ ಕಥೆಯನ್ನು ನಿರೂಪಿಸುತ್ತಾನೆ. ಚಾಲುಕ್ಯ ಅರಸ ಕಾಮದೇವ ಮತ್ತು ವಿದ್ಯಾಧರ ರಾಜಕುಮಾರಿ ಕರ್ಣ ಸುಂದರಿಯರ ವಿವಾಹ ವೃತ್ತಾಂತವೇ ನಾಟಕದ ಕಥಾವಸ್ತು. ಅಂತಃಪುರಕ್ಕೆ ಅಮಾತ್ಯ ಕರ್ಣಾಸುಂದರಿಯ ಪರಿಚಯ ಮಾಡಿಕೊಡುತ್ತಾನೆ. ಅರಸ ಕಾಮದೇವ ಮೊದಲಿಗೆ ಅನುಪಮ ಸುಂದರಿ, ವಿದ್ಯಾಧರಕುವರಿ ಕರ್ಣಾಸುಂದರಿಯನ್ನು ಸ್ವಪ್ನದಲ್ಲಿ ನೋಡುತ್ತಾನೆ. ಅನಂತರ ಚಿತ್ರದಲ್ಲಿ ನೋಡುತ್ತಾನೆ. ಅರಸ ಅವಳ ಸೌಂದರ್ಯಕ್ಕೆ ಮಾರುಹೋಗಿ ಅನುರಕ್ತನಾಗುತ್ತಾನೆ.

ಅರಸನ ಅನ್ಯ ಮನಸ್ಕತೆ ಮತ್ತು ಅವನ ಪ್ರೇಮ ಸಂಗತಿಯನ್ನು ತಿಳಿದ ರಾಣಿ ಕೋಪಗೊಳ್ಳುತ್ತಾಳೆ. ತಂತ್ರ ಒಂದನ್ನು ಹೂಡಿ ಓರ್ವ ಬಾಲಕನಿಗೆ ಕರ್ಣಸುಂದರಿಯಂತ ಉಡುಪು ಆಭರಣಗಳನ್ನು ತೊಡಿಸಿ ವಿವಾಹಕ್ಕೆ ಏರ್ಪಾಡು ಮಾಡುತ್ತಾಳೆ. ಮಂತ್ರಿ ರಾಣಿಯ ಯೋಜನೆಯನ್ನು ಗ್ರಹಿಸಿ ನಾಟಕದ ಕಥೆಯನ್ನು ಬದಲಿಸುತ್ತಾನೆ.

ಕರ್ಣ ಸುಂದರಿಯ ವೇಷ ಭೂಷಣ ಧರಿಸಿ ನಿಂತಿದ್ದ ಬಾಲಕನ ಸ್ಥಳದಲ್ಲಿ ನಿಜವಾಗಿ ಕರ್ಣ ಸುಂದರಿಯನ್ನೇ ಸಕಾಲದಲ್ಲಿ ತಂದು ನಿಲ್ಲಿಸಿ ವಿವಾಹಕ್ಕೆ ಏರ್ಪಾಡು ಮಾಡುತ್ತಾನೆ. ಅಮಾತ್ಯನ ತಂತ್ರ ಫಲಿಸುತ್ತದೆ. ಅರಸ ಕಾಮದೇವನ ಆಸೆ ಈಡೇರುತ್ತವೆ. ಕವಿ ಬಿಲ್ಹಣ ತನ್ನ ಈ ಕರ್ಣ ಸುಂದರಿ ನಾಟಕಕ್ಕೆ ಕಾಳಿದಾಸನ ಮಾಳವಿಕಾಗ್ನಿಮಿತ್ರ, ಶ್ರೀ ಹರ್ಷನ ರತ್ನಾವಳಿ ನಾಟಕಗಳ ಕಥೆಯನ್ನು ಆಧಾರವಾಗಿಟ್ಟುಕೊಂಡಿದ್ದಾನೆ. ಆ ನಾಟಕಗಳ ಮಾದರಿಯನ್ನು ಅನುಸರಿಸಿದ್ದಾನೆ.

ಕಲ್ಹಣ ಕಾಶ್ಮೀರದ ಮತ್ತೊಬ್ಬ ಕವಿ. ಕಲ್ಹಣ ತನ್ನ ರಾಜತರಂಗಿಣಿ ಕೃತಿಯಲ್ಲಿ ಕಾಶ್ಮೀರದ ಸಂಪೂರ್ಣ ಇತಿಹಾಸವನ್ನು ನಿರೂಪಿಸಿದ್ದಾನೆ. ಕಾಶ್ಮೀರದ ಅನೇಕ ವಿಷಯಗಳು ಈ ಕೃತಿಯಲ್ಲಿ ಸ್ಪಷ್ಟತೆಯ ಮೇರೆಗೆ ನಿರೂಪಿಸಲ್ಪಟ್ಟಿವೆ. ರಾಜತರಂಗಿಣಿ ಸಂಸ್ಕೃತದಲ್ಲಿರುವ ಐತಿಹಾಸಿಕ ಕಾವ್ಯಗಳಲ್ಲಿ ಪ್ರಮುಖವಾದುದು. ಈ ಕೃತಿ ಅನೇಕ ದೃಷ್ಟಿಗಳಿಂದ, ಕಾರಣಗಳಿಂದ ವೈಶಿಷ್ಟ್ಯಪೂರ್ಣವಾದುದು.

ಕಲ್ಹಣ ತನ್ನ ರಾಜತರಂಗಿಣಿಯಲ್ಲಿ ಅನೇಕ ವೈಯಕ್ತಿಕ ಸಂಗತಿಗಳನ್ನು ಪ್ರಸ್ತಾಪಿಸಿದ್ದಾನೆ. ಕ್ರಿ. ಶ. ೧೦೮೯ರಿಂದ ೧೧೦೧ರ ವರೆಗೆ ಕಾಶ್ಮೀರವನ್ನಾಳಿದ ಹರ್ಷನ ಆಸ್ಥಾನದಲ್ಲಿ ಕಲ್ಹಣ ತಂದೆ ಚಂಪಕ ಅಮಾತ್ಯನಾಗಿದ್ದ. ಹರ್ಷನ ಮರಣಾನಂತರ ಜಯಸಿಂಹ ಸಿಂಹಾಸನವನ್ನೇರಿ ಕ್ರಿ. ಶ. ೧೧೨೮ರಿಂದ ೧೧೫೫ರ ವರೆಗೆ ರಾಜ್ಯಭಾರ ಮಾಡುತ್ತಾನೆ. ಈ ಸಂದರ್ಭದಲ್ಲಿ ಕಲ್ಹಣನಿಗೆ ರಾಜ್ಯಮಾನ್ಯತೆ ದೊರೆತು, ಅರಸನ ಆಶ್ರಯ, ಪ್ರೋತ್ಸಾಹ ದೊರೆತಂತೆ, ಅರಸನ ಅನುಗ್ರಹಕ್ಕೆ ಕವಿ ಪಾತ್ರನಾದಂತೆ ತಿಳಿದು ಬರುವುದಿಲ್ಲ. ರಾಜತರಂಗಿಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಗಳು ಸಮಕಾಲೀನ ಕಾಶ್ಮೀರದ ಪರಿಸ್ಥಿತಿಯ ಪರಿಚಯ ಮಾಡಿಕೊಡುತ್ತವೆ. ಕಾಶ್ಮೀರದ ಆರಂಭದ ಪೂರ್ಣ ಇತಿಹಾಸ ಪರಿಚಯಕ್ಕೆ ಆಧಾರವಾದ 'ನೀಲ ಮತ ಪುರಾಣ' ಗ್ರಂಥ ವಿಶೇಷವಾಗಿ ರಾಜತರಂಗಿಣಿಯ ಮೇಲೆ ಪ್ರಭಾವ ಬೀರಿರುವಂತೆ ಕಾಣಬರುತ್ತದೆ.

ರಾಜತರಂಗಿಣಿ ಗ್ರಂಥ ಹನ್ನೊಂದು ಸಂಕಲಿತ ರಾಜ ಕಥೆಗಳಿಂದ ಮತ್ತು ನೀಲ ಮುನಿಯ ನೀಲ ಮತ ಪುರಾಣದ ಆಧಾರದಿಂದ ರಚಿಸಲ್ಪಟ್ಟಿದೆ ಎಂದು ಕಲ್ಹಣ ತಿಳಿಸುತ್ತಾನೆ. ಶಿಲಾ ಶಾಸನಗಳ ಮತ್ತು ಆಧಾರ ಗ್ರಂಥಗಳ ಕಾಲ, ಸಂಗತಿಗಳನ್ನು ನಿರೂಪಿಸುತ್ತಾನೆ. ರಾಜತರಂಗಿಣಿ ವಿಷಯ ಸಂಪೂರ್ಣವಾಗಿ ಎಂಟು ಗ್ರಂಥ (ಪುಸ್ತಕ)ಗಳಲ್ಲಿ ಅಡಕವಾಗಿವೆ. ಕೊನೆಯ ಗ್ರಂಥದಲ್ಲಿ ಜಯಸಿಂಹನ ಪ್ರಭುತ್ವದ ವಿಷಯವಿದೆ. ಕ್ರಿ. ಶ. ೧೧೪೮ರಲ್ಲಿ ಕಲ್ಹಣ ರಾಜತರಂಗಿಣಿಯ ರಚನೆಯನ್ನು ಆರಂಭಿಸಿ ಒಂದು ವರ್ಷದ ಅವಧಿಯೊಳಗಾಗಿ ಕಾವ್ಯವನ್ನು ಬರೆದು ಮುಗಿಸಿದ.

ರಾಜತರಂಗಿಣಿ ಚರಿತ್ರೆಯ ವಿಷಯವನ್ನು ಒಳಗೊಂಡ ಗ್ರಂಥ; ಆದರೆ ಕಾವ್ಯಕೃತಿಯ ಮಾದರಿಯನ್ನು ಅನುಸರಿಸಿ ನಿರೂಪಿಸಿದಾಗ ಮಹಾ ಕಾವ್ಯವಾಗಿ ಕಾಣ ಬರುತ್ತದೆ. ಈ ಕಾವ್ಯದಲ್ಲಿ ಶಾಂತಿ ರಸಕ್ಕೆ ವಿಶೇಷ ಪ್ರಾಧಾನ್ಯತೆ ಇದೆ. ಈ ಐತಿಹಾಸಿಕ ಕಾವ್ಯದಲ್ಲಿ ಕವಿ ನಿರೂಪಿಸುವ ವಿಷಯಗಳು ಹಾಗೂ ಶೈಲಿ ಸವಿಸ್ತಾರವಾಗಿವೆ. ಕಲ್ಹಣನ ಉದ್ದೇಶ್ಯ ಸ್ಪಷ್ಟವಾಗಿದೆ, ಸದುದ್ದೇಶಪೂರಿತವಾಗಿದೆ. ಅರಸರ ಚರಿತ್ರೆಯನ್ನು ನಿರೂಪಿಸುವ ಪ್ರಯತ್ನದಲ್ಲಿ ಕವಿ ಯಶಸ್ವಿಯಾಗಿದ್ದಾನೆ. ಕವಿಗೆ ಅದೃಷ್ಟದಲ್ಲಿ, ಭವಿಷ್ಯದಲ್ಲಿ ನಂಬಿಕೆ ಹೆಚ್ಚು. ಆ ದೃಷ್ಟಿ ಒಂದೇ. ಜೀವನದ ಏರು ಪೇರುಗಳಿಗೆ ಕಾರಣ ಎಂಬುದು ಅವನ ಅಭಿಪ್ರಾಯ.

([illegible])

ಯ—ಹೊಸ ಕಾಂಗ್ರೆಸ್ಸಿಗರ ವಾಯಿಯಲ್ಲಿ ಬೇಕು ಬೇಕಾದಂತೆ ನರ್ತಿಸುತ್ತಿವೆ. ಅಧಿಕಾರದ ಆಸನದಲ್ಲಿರುವ ವರೆಗೆ ಶಾಂತಿಯ ನಾಮವನ್ನವರು ಜಪಿಸುತ್ತಾರೆ. ಅವರನ್ನಲ್ಲಿಂದ ಓಡಿಸಿಬಿಟ್ಟೊಡನೆ ಅವರು ಕ್ರಾಂತಿಯ ಮಾತನಾಡುತ್ತಾರೆ. ರಕ್ತದ ಹೊಳೆಯನ್ನೂ ಹರಿಸುತ್ತಾರೆ! ಹೀಗೆ ಕ್ರಾಂತಿಯ ಮೂಲಕ ಆಸನದಲ್ಲಿ ಆಸೀನರಾಗುವದೇ ತಡ, ಇತರರಿಗೆ ಶಾಂತಿಯ ದೀಕ್ಷೆ ಕೊಡಲು ಆರಂಭಿಸಿಬಿಡುತ್ತಾರೆ. ಇದರಲ್ಲಿ ಹಳೆಯ ಕಾಂಗ್ರೆಸ್ಸಿಗರೂ ಹೊಸ ಕಾಂಗ್ರೆಸ್ಸಿಗರೂ ಸಮಾನರೇ ಇರುತ್ತಾರೆ. ಹೀಗೆ ಅಧಿಕಾರದ ಆಸನಕ್ಕಾಗಿ ಕಾಂಗ್ರೆಸ್ಸಿಗರೂ ಕ್ರಾಂತಿಯನ್ನು ನಡೆಸುತ್ತಾರೆ, ರಕ್ತದ ಹೊಳೆಯನ್ನು ಹರಿಸುತ್ತಾರೆ! ಇದು ವಿಷಾದದ ವಿಷಯ ನಿಜ. ಆದರೆ ಅಷ್ಟೆ ಸತ್ಯವೂ ಇದೆ. ಅನ್ಯ ಪಕ್ಷದವರು ಕಾಂಗ್ರೆಸ್ಸನ್ನು ಕ್ರಾಂತಿಗಾರರ ಪಕ್ಷ, ರಕ್ತದ ಹೊಳೆ ಹರಿಯಿಸುವವರ ಪಕ್ಷವೆಂದು ಹೇಳುತ್ತಿದ್ದಲ್ಲಿ ಅದು ಅವರವರ ಪ್ರಚಾರ ವೈಖರಿಯೆನ್ನಬಹುದು. ಇಲ್ಲಿ ಹಾಗಲ್ಲ. ಈ ಮಾತುಗಳು ಕುದುರೆಯ ಬಾಯಿಯಿಂದ ಮಾತ್ರವಲ್ಲ ಜೋಡೆತ್ತುಗಳ ಬಾಯಿಯಿಂದಲೇ ಬಂದಿವೆ.

ಹಿಂದೆ ಗಾಂಧೀಜೀ, ನೆಹ್ರೂಜೀಯಂತಹ ಕಾಂಗ್ರೆಸ್ಸಿನ ನೇತಾರರು ಕ್ರಾಂತಿಯನ್ನು ಹೀಗಳೆಯುತ್ತಿದ್ದರಲ್ಲದೆ ಕ್ರಾಂತಿಕಾರರ ದೇಶಭಕ್ತರನ್ನು ಹೀಗಳೆದು ದೇಶದ್ರೋಹಿಗಳೆಂದೂ ಕರೆದಿರುವರು. ಕೆಂಪು ಕೋಟೆಯ ವಿಚಾರಣೆಯ ಸಮಯದಲ್ಲೂ ಸುಭಾಸಬಾಬೂಜೀಯವರ ಕ್ರಾಂತಿ ಪಡೆಯ ಸೇನಾಧಿಕಾರಿಗಳ ವಿರುದ್ಧವಾದ ಹೂಡಲು ಹಿಂಜರಿದಿರಲಿಲ್ಲ. ಇದಕ್ಕೆ ಸುಭಾಷರು ಸಾಗಿದ್ದ ದಾರಿಯೇ ಕಾರಣ ಇದೆ. ಆದರೆ ಇಂದಿನ ಕಾಂಗ್ರೆಸ್ಸು ಹಾಗಿರುವದಿಲ್ಲ. ತಿರು ಕಣ್ಣಾದಾಸನ್ ಹಾಗೂ ಮಿಸ್ಟರ್ ಅಂತೋಣಿ ಪಿಳ್ಳೆಯವರ ಶಬ್ದಗಳಲ್ಲೇ ಹೇಳುವದಿದ್ದಲ್ಲಿ ಅದು ರಕ್ತಪಾತ ಹಾಗೂ ಬಂಡಾಯಕ್ಕಾಗಿ ಕಾದುಕೊಂಡಿದೆಯೇ ವಿನಃ ಕಾರ್ಯಪ್ರವೃತ್ತವಾಗಿಲ್ಲವೆಂದು ಬೇಸತ್ತ ಕಾಂಗ್ರೆಸ್ಸಿಗರು ಹೊರಬಂದು ತಮ್ಮದೇ ಆದ ಕ್ರಾಂತಿ ದಳ ಅಥವಾ ಅದಕ್ಕಿಂತಲೂ ಬಂಡಾಯದಳವನ್ನು ಕಟ್ಟಿಕೊಂಡಿರುವರು. ಈಗ ಕ್ರಾಂತಿಯಲ್ಲಿ, ರಕ್ತದ ಹೊಳೆ ಹರಿಯಿಸುವದರಲ್ಲಿ ಯಾರು ಯಾರನ್ನು ಮೀರುತ್ತಾರೆಂಬುದನ್ನು ನೋಡಬೇಕಾಗಿದೆ. ಇದರ ಪೂರ್ಣ ಲಾಭವನ್ನು ಪಡೆಯುವವರು ಕಮ್ಯೂನಿಸ್ಟರಿದ್ದಾರೆ. ಅವರಿಗೆ ಬಂಡಾಯವೇಳುವದು, ರಕ್ತದ ಹೊಳೆ ಹರಿಸುವದೆಂದರೆ ಸಾಮಾನ್ಯ. ಆದ ಈಗಿನ ಕಾಂಗ್ರೆಸ್ಸಂತೂ ಅವರಿಗೆ ಸುಸಂಧಿಗಳನ್ನೇ ಒದಗಿಸುತ್ತಿದೆ. ಇಂತಹ ಸದವಕಾಶವನ್ನು ಅವರೂ ಬಿಟ್ಟುಕೊಡಲಾರರು. ಹಾಗಿರುವಾಗ ಶ್ರೀ ಸಾಮಾನ್ಯನು ಯೋಚಿಸಬೇಕಾಗಿಯದೆ—ನಾವು ಈ ರಾಜಕೀಯ ಪುಢಾರಿಗಳ ಆಟದ ದಾಳಗಳಾಗಬೇಕೇ?

ಶಿಕ್ಷಣ ಪ್ರಪಂಚದ ಪಕ್ಷಿ ನೋಟ

(ಐದನೇ ಪುಟದಿಂದ)

ರಾಷ್ಟ್ರಗಳು ಪರಸ್ಪರ ಸಹಕಾರ—ನೆರವುಗಳಿಂದ ಇರಲು ದಾರಿಯನ್ನು ಬಹುದು.

ಶಾಲಾ ಕಟ್ಟಡಗಳು

ರಾಷ್ಟ್ರದಲ್ಲೆಡೆ ಶಾಲೆಗಳ ಸಂಖ್ಯೆ ಏರುತ್ತಿದೆ. ಚಂಡಿಗಢದ ಸುಸಜ್ಜಿತವಾದ ಶಾಲೆಯ ಕಟ್ಟಡಗಳು ಆಧುನಿಕ ನಿರ್ಮಾಣಕ್ಕೆ ಹಿಡಿದ ಕನ್ನಡಿಯಂತಿವೆ. ಕೇರಳದಲ್ಲಿ ಹುಲ್ಲು ಛಾವಣಿಗಳ ಕಟ್ಟಡಗಳೇ ಅಧಿಕ ದೂರದ ನೇಪಾಳದಲ್ಲಿ ಶಾಲೆಯ ಗೋಡೆಯನ್ನು ಬಿದಿರಿನಿಂದ ಹೆಣೆಯುತ್ತಾರೆ. ದೆಹಲಿಯ ಅಸಂಖ್ಯ ಶಾಲೆಗಳು ಡೇರೆಗಳಲ್ಲಿ ನಡೆಯುತ್ತಿವೆ. ಮಳೆಯ ಹೊಡೆತ, ಬಿಸಿಲಿನ ಬೇಗೆ— ಇವುಗಳ ದಾವಳಿ ತಪ್ಪಿರುವಾಗ ವಿಶೇಷವಾಗಿ ಶಾಲೆಗಳನ್ನು ದೊಡ್ಡ ಮರದ ಕೆಳಗೆ ನಡೆಯಿಸುವರು. ಒಮ್ಮೊಮ್ಮೆ ಸ್ಥಳಾವಕಾಶವೇ ಮೇಲ್ಬಾವಣಿ. ಎಷ್ಟೋ ಹಳ್ಳಿಗಳಲ್ಲಿ ಗ್ರಾಮವಾಸಿಗಳೇ ಮುಂದೆ ಬಂದು ಶಾಲಾ ಕಟ್ಟಡಗಳನ್ನು ಕಟ್ಟಲು ಸಿದ್ಧರಾಗಿ ಉಚಿತ ಸಹಕಾರಗಳನ್ನು ಕೊಡುತ್ತಾರೆ. ಶಿಕ್ಷಣ ಪ್ರಸಾರವೇ ಹೊರತು—ಗೋಡೆಗಳು ಮುಖ್ಯವಲ್ಲ ಎಂಬುದು ನಮ್ಮ ಧೋರಣೆಯಾಗಿದೆ.

ಅಧ್ಯಾಪಕ:— ನಮ್ಮ ಸಮಾಜದಲ್ಲಿ ಉಪಾಧ್ಯಾಯನಿಗೆ ಒಳ್ಳೆಯ ಸ್ಥಾನವಿತ್ತು. ಅವನಿಗೆ ದೊರಕುವ ಪ್ರತಿಫಲ ತೀರ ಕಡಿಮೆಯೆಂದಾದರೂ ಸಮಾಜದಲ್ಲಿ ಗೌರವವಿತ್ತು. ಶಿಕ್ಷಕ ದೇಶದ ಪ್ರಥಮ ವರ್ಗದ ಪ್ರಜೆ—ಶಿಕ್ಷಕರಾದವರು ರಾಷ್ಟ್ರಾಧ್ಯಕ್ಷರೂ ಆಗಬಹುದಂತೆ! ನಮ್ಮ ಮೊದಲನ ರಾಷ್ಟ್ರಾಧ್ಯಕ್ಷರಾದ ಶ್ರೀ ರಾಧಾಕೃಷ್ಣನ್‌ರು ಮೊದಲು ಶಿಕ್ಷಕರು ಆ ಮೇಲೆ ರಾಷ್ಟ್ರಾಧ್ಯಕ್ಷರು ಆದವರು.

ದೇಶ ರಕ್ಷಣೆಗೆ ಸಮರ್ಥ ಮಿಲಿಟರಿ ನಾಯಕನ ಅಗತ್ಯ ಎಷ್ಟು ಅವಶ್ಯಕವೋ ಅಷ್ಟೇ ದೇಶದ ಭವಿಷ್ಯಕ್ಕೆ ಒಳ್ಳೆಯ ಶಿಕ್ಷಕನ ಅವಶ್ಯಕತೆಯಿದೆ. ಹಣ ಸಾಲದೆಂದು ಮಿಲಿಟರಿ ಬಲವನ್ನು ಕಡಿಮೆ ಮಾಡಿಕೊಂಡರೆ—ಒದಗುವ ದುರ್ಗತಿ—ಶಿಕ್ಷಕನನ್ನು ಉಪೇಕ್ಷಿಸಿದರೆ—ಅವನ ಸಂಕಟವನ್ನು ನಿವಾರಿಸದಿದ್ದರೆ ಬಂದೊದಗುವುದು. ಇಂತಹ ಅರಿವು ಸರಕಾರಕ್ಕೆ ಆದುದರಿಂದಲೇ ಸರಕಾರವು ಶಿಕ್ಷಣದತ್ತ ಹೆಚ್ಚು ಗಮನವನ್ನಿತ್ತಿದೆ. ದಿಟ್ಟ ಹೆಜ್ಜೆಯನ್ನಿಟ್ಟು ಶ್ರೇಷ್ಠ ದರ್ಜೆಯ ಶಿಕ್ಷಕರನ್ನು ನಿರ್ಮಿಸುವ ಕೆಲಸದಲ್ಲಿ ಎಷ್ಟು ವೆಚ್ಚವಾದರೂ—ಮಾಡಲೇ ಬೇಕು. ಈ ರೀತಿಯ ಧೋರಣೆಯಿಂದ ಮುಂದುವರಿದರೆ ಶಿಕ್ಷಣ ಪ್ರಪಂಚ ನಿಜವಾಗಿಯೂ ಸುಧಾರಿಸೀತು. "ಅಧ್ಯಾಪಕನ ಸ್ಥಾನಮಾನ ಉತ್ತಮಗೊಳಿಸುವುದು ಸರಕಾರ ಮತ್ತು ಸಮಾಜದ ಕರ್ತವ್ಯ" ಎಂದು ಶ್ರೀ ಎಸ್. ಮುಕುಂದ ರಾಯರು ನುಡಿದ ಮಾತು ಅಕ್ಷರಶಃ ಸತ್ಯ. ಶಿಕ್ಷಣವು ಶಾಲೆಯಲ್ಲಿ ಮಾತ್ರವಲ್ಲದೆ—ವಾಚನಾಲಯ, ರೇಡಿಯೋ, ಸಂಘ ಸಂಸ್ಥೆಗಳು, ಸಾರ್ವಜನಿಕ ಸಂಸ್ಥೆ, ಚಲಚ್ಚಿತ್ರ, ನಾಟಕ, ಹಬ್ಬ, ಪ್ರವಾಸ, ಪ್ರದರ್ಶನ, ಸಂತೆ, ಉತ್ಸವ, ವಸ್ತು ಸಂಗ್ರಹಾಲಯ, ಕುಟುಂಬ, ಶಾಲೆ, ಸಮಾಜ, ಸಂಸ್ಕಾರ—ಹೀಗೆ ಹಲವಾರು ವಿಧಗಳಲ್ಲಿ ಶಿಕ್ಷಣ ಪ್ರಪಂಚವು ಒಳಗೊಂಡಿದೆ.

ಮಕ್ಕಳ ಸಾಹಿತ್ಯ

ಚಿಕ್ಕ ಮಕ್ಕಳ ಸಾಹಿತ್ಯ ರಚನೆಯ ವಿಚಾರದಲ್ಲಿಯೂ ಸರಕಾರವು ತುಂಬಾ ಗಮನಕೊಟ್ಟು— ಅದರ ಲೇಖಕರನ್ನು ಪ್ರೋತ್ಸಾಹಿಸಿರುವುದು ಗಮನಾರ್ಹ ವಿಚಾರವಾಗಿದೆ. ಇಂತೆಯೇ ಚಿಕ್ಕ ಮಕ್ಕಳಿಗಾಗಿ ಅಲ್ಲಲ್ಲಿ ಶಿಶುವಿಹಾರ ಕೇಂದ್ರಗಳನ್ನೂ ಸರಕಾರ ತೆರೆದಿದೆ.

ತ್ರಿಗುಣಸೇನರ ಯೋಗ್ಯ ಸೂಚನೆ

ಕೇಂದ್ರ ವಿದ್ಯಾ ಮಂತ್ರಿಯವರಾದ ಶ್ರೀ ತ್ರಿಗುಣಸೇನರು ಶಿಕ್ಷಣದ ಕುರಿತು ಕೆಲವಾರು ಸೂಚನೆಗಳನ್ನಿತ್ತುದು ಯೋಗ್ಯವಾದ ವಿಚಾರವಾಗಿದೆ.

(೧) ಈಗಿನ ಶಿಕ್ಷಣ ಪದ್ಧತಿಯಲ್ಲಿ ತ್ರಿಭಾಷಾ ಸೂತ್ರದಿಂದಾಗಿ ವಿದ್ಯಾರ್ಥಿಗಳಿಗೆ ಕಲಿಯುವ ಕೆಲಸದ ಭಾರವು ಅಧಿಕವಾಗಿದೆ. (೨) ಶಿಕ್ಷಣದಲ್ಲಿ ವಿಷಯಗಳು ಹೆಚ್ಚಿವೆ; ಸಾಮರ್ಥ್ಯವು ಕಡಿಮೆಯಾಗಿದೆ. ಹೀಗಾಗಿ ಭೂರಿಗಾಗಿ ಬೇಯಿಸಿದ ಅಡುಗೆಯಾಗಿದೆ— ರುಚಿಗಾಗಿ ಮಾಡಿದ ಪಾಕವಾಗಲಿಲ್ಲ. (೩) ಕಡಿಮೆ ಸಂಬಳದ ಉಪಾಧ್ಯಾಯರಿಂದಲೂ — ವೈವಿಧ್ಯವಿಲ್ಲದ ವಾತಾವರಣದಿಂದಲೂ ವಿದ್ಯಾರ್ಥಿಗಳ ಅಭಿವೃದ್ಧಿಗೆ ತಡೆಯಾಗುತ್ತವೆ

ಭಾಷೆಗಳನ್ನು ಕಡ್ಡಾಯವಾಗಿ ಕಲಿಸುವುದು ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷೆಯೆಂದು ಚರ್ಚಿಲ್ಲರು ಹೇಳಿದ್ದಾರೆ

ಇನ್ನೊಂದು ಮುಖ್ಯ ವಿಚಾರವೆಂದರೆ —"ದಕ್ಷಿಣ ಕನ್ನಡದಲ್ಲಿ ಕಾಣುವುದೇ ಇಡಿ ದೇಶದ ವಾಸ್ತವಿಕ ಚಿತ್ರವಾದರೆ--ವಿದ್ಯಾರ್ಥಿಗಳು ಉಚ್ಚ ಮಟ್ಟದಲ್ಲಿದ್ದು ಯೋಚಿಸುತ್ತಾ ಕೀಳು ಮಟ್ಟದಕ್ಷರದ ಕಟ್ಟಡಗಳಲ್ಲಿ ಕಲಿಯಬೇಕೆಂಬುದು ಸರಕಾರದ ಧೋರಣೆ, ನಮ್ಮಲ್ಲಿನ ಶಾಲೆಗಳ ಕಟ್ಟಡಗಳಿಗಿಂತಲೂ ಪಾಶ್ಚಾತ್ಯ ದೇಶಗಳ ಹಂದಿಗೂಡುಗಳೂ ಉತ್ತಮವಾಗಿವೆ. ಇಲ್ಲಿ ಕಟ್ಟಡಗಳ ದುರಸ್ತಿಯ ಗ್ರಾಂಟು ಕಡಿಮೆ" ಎಂಬುದಾಗಿ ತಾ. ೧೦-೬-೬೭೮ ಜೂನ್ ತಿಂಗಳ 'ಗ್ರಾಮ ಸೇವಕ'ದಲ್ಲಿನ ಸಂಪಾದಕೀಯ ಲೇಖನದ ಸಾರವೂ ಯೋಗ್ಯವಾಗಿದೆ. ಕಾಲ ಬದಲಾದಂತೆ ಶಿಕ್ಷಣದ ಮಂದಿರಗಳೂ ಆಧುನಿಕವಾಗಿರಬೇಕಾದುದು ಅತ್ಯಗತ್ಯ, ಶಾಲೆ ದೇವಾಲಯವಾಗಬೇಕಾದರೆ ಕಟ್ಟಡವೂ ಸುಂದರವಾಗಿರಬೇಕು.

ನಮ್ಮ ಗಮನವೆತ್ತ?

ಮಾನವ ಜೀವನದಿಂದ ದೂರ

ಬರೆದವರು
ಡಾ| ಎರಿಕ್ ಫ್ರೋಮ್.

(ಪ್ರಸ್ತುತ ಲೇಖವು ಅಮೇರಿಕಾದ ಸುವಿಖ್ಯಾತ ಮನೋವಿಜ್ಞಾನಿ ಡಾ| ಎರಿಕ್ ಫ್ರೋಮ್ ಎಂಬವರು ಇತ್ತೀಚೆಗೆ ಕೊಟ್ಟಿರುವ ಭಾಷಣದ ಆಧಾರದಿಂದಿದೆ. ಅವರು "ದಿ ಸೇನ್ ಸೊಸಾಯಿಟಿ"ಎಂಬ ಹೆಸರಿನ ಒಂದು ಪುಸ್ತಕವನ್ನೂ ಬರೆದಿರುತ್ತಾರೆ. ವೈದ್ಯಕೀಯ ನೊಬೆಲ್ ಪಾರಿತೋಷಕ ಪಡೆದವರು.)

ಅಮೇರಿಕಾವು ದಕ್ಷಿಣ ವಿಯಟ್ನಾಮಿಗೆ ಸ್ವಾತಂತ್ರ್ಯ ದೊರಕಿಸಲು ಸಹಾಯ ಮಾಡಿರುತ್ತದೆಂದು ನಾವು ಭಾವಿಸಿದರೂ, ಇಂದು ಅದೇ ಸಕಲ ಮಾನವ ಜಾತಿಗೊಂದು ಮಹಾ ಗಂಡಾಂತರವನ್ನೂ ತಂದೊಡ್ಡಿಲ್ಲವೇ? ಮೊದಲನೇ ಮಹಾಯುದ್ಧದಿಂದಾರಭ್ಯ ದಿನೇದಿನ ಹೆಚ್ಚುತ್ತಿರುವ ಕ್ರೂರತೆಯನ್ನು ವಿವರಿಸುವುದೇ ನನ್ನೀ ಅಭಿಪ್ರಾಯ. ಎರಡನೇ ಮಹಾಯುದ್ಧದ ನಂತರ ಮನುಷ್ಯನಲ್ಲಿ ವಿವೇಕ ಶಕ್ತಿ ಎಂಬುದೇ ಉಳಿದಿರುವುದಿಲ್ಲ. ಮನುಷ್ಯನನ್ನು ವಿನಾಶದಿಂದ ತಡೆಯುವ ಶಕ್ತಿಯೆಂದರೆ ವಿವೇಕವೊಂದೇ.

ವೈಯುಕ್ತಿಕ ದೃಷ್ಟಿಯಲ್ಲಿ ಅನೇಕ ರಾಷ್ಟ್ರಗಳ ಮುಖಂಡರು ಪ್ರತಿಷ್ಠಿತ ಮತ್ತು ಸಹೃದಯ ಸಜ್ಜನರು ಆಗಿರುತ್ತಾರೆ; ಆದರೂ ಪರಮಾಣು ಅಸ್ತ್ರಗಳನ್ನೂ ಉಪಯೋಗಿಸಲು ಉದ್ಯುಕ್ತರಾಗುತ್ತಾರೆ. ಅಂಥಾ ಘಾತಕ ಅಸ್ತ್ರಗಳನ್ನು ಉಪಯೋಗಿಸಬಾರದೆಂದು ಅವರಿಗೂ ಅನಿಸಿದೆ. ಆದರೆ ರಾಜನೈತಿಕ ಉದ್ದೇಶಗಳಿಗಾಗಿ ಅವನ್ನು ಉಪಯೋಗಿಸಲು ತಪ್ಪಿಲ್ಲವೆಂದು ಅವರ ನಂಬಿಕೆ.

ಸಹಸ್ರಾರು ವರ್ಷಗಳಿಂದ ಮನುಷ್ಯನು ಪ್ರಗತಿಯ ಸ್ವಪ್ನವನ್ನು ಕಾಣುತ್ತಲಿದ್ದು ಇಂದು ಅದು ಸಾಕಾರವಾಗಿ ಸಂಭವಿಸುತ್ತ ಬರುತ್ತಿರುವಾಗ ಅದರ ನಾಶದ ಕಡೆಗೊಯ್ಯುತ್ತಿರವಾಗಲೂ ಮನುಷ್ಯನು ದುರ್ಲಕ್ಷ್ಯವನ್ನೂ ತಾಳುತ್ತಿರುತ್ತಾನೆಂಬುದನ್ನು ಹೇಗೆ ತಿಳಿಯಲಿ?

ಇದರ ಕಾರಣವೆಂದರೆ ಸಂ. ೧೯೧೪ನೇ ಇಸ್ವಿಯ ಮೊದಲನೇ ಜಾಗತಿಕ ಯುದ್ಧದ ನಂತರ ಮಾನವತೆಯ ಕಡೆಗೆ ಪ್ರೇಮ ಆದರಗಳು ನಮ್ಮಲ್ಲಿ ಕಡಿಮೆಯಾಗುತ್ತ ಬಂದಿವೆ. ವಿನಾಶದ ಕಡೆಗೂ, ನಮ್ಮ ನೈತಿಕ ವಿರೋಧವು ಕ್ಷೀಣವಾಗುತ್ತದೆ. ಇನ್ನು ವಿಯತ್ನಾಮ್ ಯುದ್ಧದಲ್ಲಂತೂ ನಮ್ಮ ದುರ್ಲಕ್ಷ್ಯತೆಯು ಪರಮಾವಧಿಯನ್ನು ಸೇರಿರುತ್ತದೆ. ಏಕೆಂದರೆ ವಿಯತ್ನಾಮಿನ ಈ ಯುದ್ಧದಲ್ಲಿ ಶತ್ರು ಸೈನಿಕರಿಗಿಂತ ಅಸಹಾಯೀ ಜನತೆಯನ್ನು ಅಧಿಕವಾಗಿ ಕೊಂದು ಹೀಡೆಗೀಡಾಗಿರುತ್ತೇವೆ. ದಕ್ಷಿಣ ವಿಯತ್ನಾಮಿನ ಸೇನೆಯು ತನ್ನ ಕೈದಿಗಳ ಮೇಲೆ ಹೊರಿಸುತ್ತಿರುವ ಚಿತ್ರಹಿಂಸೆಯನ್ನು ನಾವು ನೋಡಿಯೂ ನೋಡದಂತೆ ಮಾಡುತ್ತಿದ್ದೇವೆ....ಚಿಕ್ಕ ರಾಷ್ಟ್ರದ ಜನರು ನಿತ್ಯದ ಅವಿರತ ಬಾಂಬು ಎಸೆತದಿಂದ ದಣಿದು ಹತಾಶರಾಗಿ ನಮ್ಮ ಶರ್ತಗಳಿಗೆ ಒಳಗಾಗಬೇಕೆಂಬುದಕ್ಕಾಗಿಯೇ ನಾವು ಅವರ ಮೇಲೆ ನಿತ್ಯವೂ ಬಾಂಬಿನ ಮಳೆಯನ್ನು ಸುರಿಯುತ್ತಿದ್ದೇವೆ...ಈ ದೃಷ್ಟಿಯಿಂದ ಪರಿಶೀಲಿಸಿದರೆ; ನಾವು ಬೇರೊಂದು ರಾಷ್ಟ್ರದೊಡನೆ ಯುದ್ಧ ಮಾಡುತ್ತಿದ್ದೇವೆ ಎಂಬುದಕ್ಕಿಂತ ಮಧ್ಯಯುಗದ ಅತ್ಯಾಚಾರದ ಸಿದ್ಧಾಂತವನ್ನು ಅನುಸರಿಸುತ್ತಿದ್ದೇವೆ. ಇಂದು ನಾವು ನಮ್ಮ ವಿಚಾರದ ವರ್ತಮಾನವನ್ನು ಲೋಕಕ್ಕೆ ಕೊಡುತ್ತೇವೆ; ಆದರೆ ನಾವು ಎಷ್ಟು ಜನರನ್ನು ಸಂಹಾರ ಮಾಡಿದ್ದೇವೆ ಎಂಬುದನ್ನು ಹೇಳುವುದಿಲ್ಲ. ಅದೇ ಸಮಾಚಾರವನ್ನು ಜನರು ಮುಂಜಾನೆ ಚಾ ಕುಡಿಯುತ್ತಾ ಇಲ್ಲವೇ ತಮ್ಮ ಆಫೀಸು ಕಚೇರಿಗಳಿಗೆ ಹೋಗುತ್ತ ಕೇಳುತ್ತಿರುತ್ತಾರೆ. ಇಂಥಾ ಮನೋವೃತ್ತಿಯೇ ಜನರಲ್ಲಿ ಉಳಿಯುತ್ತೆಂದರೆ ಮುಂದೆ ನಮ್ಮ ಆತ್ಮನಲ್ಲಿ ಇನ್ನೂ ಬಾಕಿ ಉಳಿದಿರುವ ಕಿಂಚಿತ್ ವಿವೇಕ ಶಕ್ತಿಯು ಕೂಡ ನಾಶವಾಗಿ ಕೊನೆಗೆ ಮಾನವತೆಯ ಭಾವನೆಯೇ ಲೋಪವಾಗಬಹುದು.

ಲೋಕದ ಸಕಲ ಧರ್ಮಗಳ ಉದ್ದೇಶವು ಮನುಷ್ಯನನ್ನು ವಿನಾಶಕಾರಿ ಪ್ರವೃತ್ತಿಗಳಿಂದ ತಡೆಯುವುದಾಗಿದೆಂಬುದು ಎಲ್ಲರಿಗೂ ತಿಳಿದ ವಿಷಯ. ಇದು ಕ್ರೈಸ್ತ, ಬೌದ್ಧ ಯಾ ಯಹೂದಿ ಯಾವುದೇ ಧರ್ಮವಾಗಿದ್ದರೂ ಸರಿ, ಕೊಲ್ಲುವುದಕ್ಕಿಂತ ಜೀವವನ್ನು ಉಳಿಸಲು, ಮನುಷ್ಯನು ಹೆಚ್ಚಿನ ಆಸಕ್ತಿ, ಹೆಚ್ಚಿನ ಗೌರವ ಕೊಡಬೇಕೆಂದು ಇವೆಲ್ಲ ಧರ್ಮಗಳು ಸಾ

ರುತ್ತಿವೆ. ನಮ್ಮ ನೈತಿಕ ಆಚರಣೆಯ ಮೂಲ ಸಿದ್ಧಾಂತವು ಕೃತಿಯೊಂದು ಜೀವಂತ ಪ್ರಾಣಿ ಮನುಷ್ಯ ಆದರೆ ವ್ಯಕ್ತಿಯಿಂದ ಕಾಣುಪ್ಪರ್ಶ ಆಗಿರಬೇಕೆಂಬುದನ್ನು ಡಾಕ್ಟರ್ ಆಲ್ಬರ್ಟ್ ಸ್ವೈಟ್ಸ್ ವೆಲ್ಸರ ಹೇಳಿರುತ್ತಾರೆ. ಇದು ಕೇವಲ ಧಾರ್ಮಿಕ ಸಿದ್ಧಾಂತವೇ ಅಲ್ಲ. ಮಾನವತಾ ದರ್ಶನದ ತತ್ವವೂ ಆಗಿರುತ್ತದೆ. ಹಾಗೆಯೇ ಲೋಕ ತಂತ್ರದಲ್ಲೂ ಅಪರಾಧಿಯಾಗಿರುವವನ ಕೂಡ ಪ್ರತಿಯೊಬ್ಬ ಮನುಷ್ಯನ ಜೀವವು ಸುರಕ್ಷಿತವಾಗಿರಬೇಕೆಂಬುದು ತದಂತರ್ಗತ ಮನ್ನಣೆಯಾಗಿದೆ.

ಇಂದು ಪರಮಾಣುವಿನ ವಿನಾಶಕ್ತಿಯಿಂದಲೂ ನಮ್ಮ ಸಭ್ಯತೆಯನ್ನೇ ನಾಶಗೊಳಿಸುತ್ತಿರುವ ವಿಚಾರಗಳಿಂದಲೇ ನಮಗೆ ಹೆಚ್ಚಿನ ಭಯವಿರುತ್ತದೆ. ಏಕೆಂದರೆ ನಮ್ಮ ನೈತಿಕ ಮಟ್ಟವು ಕುಂಠಿತಗೊಂಡಾಗುತ್ತಿದೆ; ಏಕೆಂದರೆ ಆ ಸಭ್ಯತೆಯ ಆಧಾರವು [illegible] ಪ್ರೇಮದಿಂದ [illegible] ಇದೆ. ಮನುಷ್ಯನಿಗೆ [illegible] ಕಂಡು ಬರುತ್ತಿರುವ ವಿನಾಶ, [illegible] ಸ್ವಾತಂತ್ರ್ಯ [illegible] ನಮ್ಮ ಇಚ್ಛಾನುಸಾರ ಕೆಲಸ ಮಾಡಿಸುವ ನಿಯಂತ್ರಣ ಪದ್ಧತಿಯನ್ನು ನಾವೀಗ ತಡೆಯಬೇಕು.

ಸ್ವತಂತ್ರತೆಯ ಇಚ್ಛೆಯ ಪ್ರತಿರೋಧ ಮನುಷ್ಯನಲ್ಲಿ [illegible], ಅದು ಅವನ [illegible] ಅತಿಸ್ವಲ್ಪವುದು. ಎಲ್ಲರಿಗೂ ಪಡಿಸಲಾಗಿದೆ. ಅಂಥಾ ಇಚ್ಛೆಯನ್ನು ಅನಾದರಗೊಳಿಸುವುದು ನಮಗದು ಶೋಭಿಸುವುದಿಲ್ಲ. ಸ್ವತಂತ್ರತೆಯಿಲ್ಲದೆಯೂ ಮನುಷ್ಯನು ವಿನಾಶವನ್ನು ತ್ಯಜಿಸಿ ಜೀವನವನ್ನು ಸ್ವೀಕರಿಸಿದರೆ, ಆತನು ಮನುಷ್ಯನೆಂದೆಣಿಸಿಕೊಳ್ಳಲರ್ಹನು. ಆದರೆ ಮನುಷ್ಯನನ್ನು ಕೊಲ್ಲುವುದರ ಭಯವಿಲ್ಲದೆ ಹಾಗೂ ವಿನಾಶಕಾರಿ ವೃತ್ತಿಯನ್ನು ಬಿಡದೆ ಇದ್ದರೆ, ಮನುಷ್ಯನಿಗೆ ಸ್ವತಂತ್ರತೆಯನ್ನು ನೀಡುತ್ತೇವೆ ಎಂಬುದರಲ್ಲಿ ಅರ್ಥವೇನಿದೆ? ಏಕೆಂದರೆ ಮಾನವತೆಯ ಭಾವನೆಯಿಲ್ಲದಿದ್ದರೆ, ಮನುಷ್ಯನು ಪ್ರಾಣಿಯಾಗಿಯೇ ಉಳಿಯುವನು. ವಿನಾಶವನ್ನು ವಿರೋಧಿಸುವ ನಮ್ಮ ವಿವೇಕವು ಕಡಿಮೆಯಾಗುತ್ತಿರುವುದು ನಮಗೀಗ ಕಾಣಬರುತ್ತಿದೆ. ವರ್ತಮಾನ ಔದ್ಯೋಗಿಕ ಮತ್ತು ನಾಗರಿಕ ಸಮಾಜದಲ್ಲಿ ನಾವು ಮನುಷ್ಯನನ್ನು ನಿರ್ಜೀವಿ ವಸ್ತುವಿನಂತೆ ಪರಿಗಣಿಸುತ್ತಿದ್ದೇವೆ; ನಾವು ಅವನೊಡನೆ ಪ್ರೇಮದ ವ್ಯವಹಾರವನ್ನಿಡುವುದಿಲ್ಲ. ನಮ್ಮ ಯಂತ್ರಗಳೂ, ನಮ್ಮ ಸಂಸ್ಥೆಗಳೂ ಹೀಗೆ ಇಷ್ಟವೆಂದು ತಿಳಿದು ನಾವು ಮನುಷ್ಯನನ್ನು ದುರ್ಲಕ್ಷಿಸುತ್ತಿದ್ದೇವೆ; ಆದರಿಂದಲೇ ಈಗ ಹೆಚ್ಚಿನ ಭೀತಿಯಿಂದ.

ಪುತ್ತೂರು ಎಡಿಷನಲ್ ಮುನ್ಸಿಫ್ ಕೋರ್ಟಿನಲ್ಲಿ

R. L. P. No 192/1962
R. L. A. No. 136/1967
R. L. A No 409/1967

ಸೀತಾರಾಮ ಭಂಡಾರಿ —ಅರ್ಜಿದಾರರು.

VS.

ಕೇಪಪ್ಪ ಪೂಜಾರಿ ಮತ್ತು ಇತರರು —ಎದುರಿಯವರು.

1. ಶಾಂತಪ್ಪ ರೈ, ಚನ್ನಪ್ಪ ರೈಗಳ ಮಗ, ಗೌಳೀ ಬೈಲು, ಮುಡಿಕೇರಿ, ಕೊಡಗು.

2. ರಾಮನಾಥ, ಪರಮೇಶ್ವರ ಹೆಂಗಸಿನ ಮಗ, ಓವರ್ ಸಿಯರ್ ಕೆಲಸ, ಕುಂದಾಪುರ, ದ. ಕ.

3. ಬಾಲಕೃಷ್ಣ ರೈ, ಶಂಕರಪ್ಪ ರೈಗಳ ಮಗ, ಮುಗಳಿಪಾದ, ಸಾಲೆಡ್, ಬೊಂಬಾಯಿ ವೆಸ್ಟ್-64.

ಮೇಲಿನ ಮೂರು ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲೆ ಹೆಸರು ಕಾಣಿಸಿರುವ ಅರ್ಜಿದಾರರು ಈ ಕೋರ್ಟಿಗೆ ಬಂದು ಅರ್ಜಿಯನ್ನು ಸಲ್ಲಿಸಿ, ಅದರಲ್ಲಿ ಕಾಣಿಸಿರುವ ಬಾಬತ್ತಿನಲ್ಲಿ ತಾನು ಒಳ್ಳೆಯಾಗಿದ್ದೇನೆಂದೂ, ಅದನ್ನು ಪುನಃ ತನ್ನ ಸ್ವಾಧೀನಕ್ಕೆ ಬಿಟ್ಟುಕೊಡಬೇಕೆಂದೂ ಪ್ರಾರ್ಥಿಸಿ ಕೊಂಡಿರುತ್ತಾರೆ. ಸದ್ರಿ ಅರ್ಜಿಯ ವ್ಯವಹರಣೆಯು ತಾರೀಖು 6-7-1967ನೇ ನಿಮ್ಮ ಹಾಜರಾತಿಗೆ ಗೊತ್ತುಪಡಿಸಿದೆ. ನೀವು ಕೋರ್ಟಿನಲ್ಲಿ ಬೆಳಿಗ್ಗೆ 11 ಘಂಟೆಗೆ ಸ್ವತಃ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆಗಳಿರುವುದಾದರೆ ಅಂಥಾ ಆಕ್ಷೇಪಗಳನ್ನು ಕೋರ್ಟಿಗೆ ತಿಳಿಸಬೇಕು. ಇದಕ್ಕೆ ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯವಹರಣೆಯು ಮುಂದುವರಿಯುವುದು ತಿಳಿದಿರಲಿ.

(By order of Court.)

A. P. Gowrishankar,
Advocate for Plaintiff.

ಪುತ್ತೂರು, ದ. ಕ. 15-6-67.

ಶ್ರೀ ಆದಿ ಚುಂಚನಗಿರಿ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ

ಮೈಸೂರು ನಗರದ ಪಡುವಾರ ಹಳ್ಳಿಯಲ್ಲಿ ಕಟ್ಟಿಸಿರುವ ಶ್ರೀ ಆದಿ ಚುಂಚನಗಿರಿ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವವನ್ನು, ಶ್ರೀ ಆದಿ ಚುಂಚನಗಿರಿ ವಿದ್ಯಾರ್ಥಿನಿಲಯದ ಶ್ರೀ ಆದಿ ಚುಂಚನಗಿರಿ ಮಠಾಧೀಶರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೆಚ್. ಹೊಂಬೇಗೌಡರವರು, ತಾ. 26-7-67ರಂದು ನೆರವೇರಿಸಿದರು.

ಪ್ರಾರ್ಥನೆಯಾದ ನಂತರ ನಿಲಯದ ಅಧ್ಯಕ್ಷ ಡಾ|| ಎಂ. ಎಲ್. ಮರಿಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು.

ಶ್ರೇಷ್ಠ ನ್ಯಾಯಾಧೀಶರು ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿದ ನಂತರ ಸ್ವಾಮೀಜಿಯವರು ತೆಂಗಿನ ಸಸಿಯನ್ನೂ ಶ್ರೀ ಹೊಂಬೇಗೌಡರು ಸಪೋಟ ಸಸಿಯನ್ನೂ ನೆಟ್ಟರು.

ನಿಲಯದ ವಾರ್ಡನ್ ಶ್ರೀ ಬಿ. ಎಲ್. ಸಣ್ಣಯ್ಯನವರು ಶುಭ ಸಂದೇಶಗಳನ್ನು ಓದಿದರು.

ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ನಿಲಯದ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದಿಟ್ಟರು. ಅವರು ತಮ್ಮ ವರದಿಯಲ್ಲಿ 144 ಮಂದಿಗೆ ಅವಕಾಶ ಕಲ್ಪಿಸಲು 72 ಕೊಠಡಿಗಳನ್ನು ಕಟ್ಟಬೇಕೆಂದಿದ್ದರೂ, ಈಗ ಕೇವಲ 19 ಕೊಠಡಿಗಳು ಮಾತ್ರ ಆಗಿವೆಯೆಂದರು. ನಿಲಯದ ಗ್ರ್ಯಾಂಟಿಗಾಗಿ ಸರಕಾರಕ್ಕೆ ಒಂದುವರೆ ವರ್ಷದ ಹಿಂದೆ ಅರ್ಜಿ ಕಳುಹಿಸಿದರೂ ಅದು ಏನಾಯಿತೆಂಬುದೇ ಗೊತ್ತಿಲ್ಲವೆಂದರು.

ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೆಚ್. ಹೊಂಬೇಗೌಡರು ಮಾತನಾಡುತ್ತಾ ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಪ್ರಯೋಜನ ಏನೆಂಬುದು ಚೆನ್ನಾಗಿ ಗೊತ್ತಿದೆ. ಮಾರ್ಗವೇ ಇಲ್ಲದಂತಹ ಮಾರಗೌಡನ ಹಳ್ಳಿಯಲ್ಲಿ ಹುಟ್ಟಿದ ಮಕ್ಕಳ ವಿದ್ಯಾರ್ಥಿ ನಿಲಯದ ಸಹಾಯ ಪಡೆದು ಒಬ್ಬರು ಶ್ರೇಷ್ಠ ನ್ಯಾಯಾಧೀಶರು ಒಬ್ಬರು ಚೀಫ್ ಇಂಜನೀಯರ್, ಒಬ್ಬರು ತೋಟಗಾರಿಕೆಯ ಇಲಾಖೆ ಮುಖ್ಯಾಧಿಕಾರಿಗಳು ಆಗಿರುವುದನ್ನು ಪ್ರಸ್ತಾಪಿಸಿ ಬೆಂಗಳೂರಿನ ವಿದ್ಯಾರ್ಥಿ ನಿಲಯವಿಲ್ಲದಿದ್ದರೆ ನಾವು ಕೆಲವರು ಇಂದು ಈ ಸ್ಥಾನದಲ್ಲಿ ಇರುತ್ತಿರಲಿಲ್ಲ. ಅಂತಿರುವಾಗ ಎಂತಹ ಸಣ್ಣ ವಿದ್ಯಾರ್ಥಿ ನಿಲಯವಾದರೂ ಅಲ್ಲಿಗೆ ಹೋಗುವ ಮನಸ್ಸು ಇದ್ದುದರಿಂದಲೇ! ಇಂದು ಇಲ್ಲಿಗೆ ಬಂದಿದ್ದೇನೆ. ಇಲ್ಲಿಯ ವ್ಯವಸ್ಥಾಪಕರು ತಮ್ಮ ಆರು ಲಕ್ಷ ರೂಪಾಯಿಯ ಕಟ್ಟಡ ಪೂರ್ತಿಯಾಗಿಲ್ಲ ಸಾರ್ವಜನಿಕರ ಸಹಕಾರ ದೊರೆಯುತ್ತಿಲ್ಲವೆಂದು ನಿರುತ್ಸಾಹ ಪಡಬೇಕಾಗಿಲ್ಲ. ಈಗ ವಿದ್ಯಾವಂತ ಸ್ವಾಮೀಜಿಯವರಿದ್ದಾರೆ, ಅವರ ಸಹಾಯ ಪಡೆದು ಈ ವಿದ್ಯಾರ್ಥಿ ನಿಲಯವನ್ನು ಪೂರ್ತಿ ಮಾಡಲು ಎಲ್ಲರೂ ಮನಸ್ಸು ಮಾಡಬೇಕು. ಜನ ಖಂಡಿತ ಸಹಾಯ ಮಾಡುತ್ತಾರೆ ಎಂದರು. ತನ್ನೊಡನೆ ವಿದ್ಯಾರ್ಥಿ ನಿಲಯದಲ್ಲಿದ್ದವರೊಬ್ಬರು ಇಂದು ಚುಂಚನಗಿರಿಯ ಸ್ವಾಮೀಜೀಯಾಗಿರುವುದು ಅವರ ಸಮ್ಮುಖದಲ್ಲಿ ಈ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದು ಸಂತೋಷವೆಂದರು.

ಸ್ವಾಮೀಜಿಯವರು ತಮ್ಮ ವಿದ್ವತ್‌ಪೂರ್ಣವಾದ ಭಾಷಣದಲ್ಲಿ ವಿದ್ಯಾಭ್ಯಾಸದ ಮಹತ್ವವನ್ನು ವಿವರಿಸಿದರಲ್ಲದೆ ವಿದ್ಯಾರ್ಜನೆಗಾಗಿ ಬರುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ದೇಶದ ಶ್ರೀಮಂತ ಜನ ಮುಂದೆ ಬರಬೇಕು. ದಾನವನ್ನೀಯುವಾಗ ಅಗ ಬಾ ಈಗ ಬಾ ಎನ್ನದೆ ಬಂದಾಗಲೇ ಕೊಡುವ ಹವ್ಯಾಸವನ್ನಿಟ್ಟುಕೊಳ್ಳಬೇಕು. ವಿದ್ಯಾದಾನಕ್ಕಿಂತ ದೊಡ್ಡ ದಾನವಿಲ್ಲವೆಂಬುದನ್ನು ಕೆಲ ಶ್ಲೋಕಗಳ ಮೂಲಕ ವಿವರಿಸಿದರು.

ಮೈಸೂರಲ್ಲಿರುವ ವಿದ್ಯಾರ್ಥಿ ನಿಲಯದ ಕಟ್ಟಡದ ಕೆಲಸ ಪೂರ್ಣವಾಗಬೇಕೆಂಬುದನ್ನು ಅವರು ಒಪ್ಪಿ ಆ ಬಗ್ಗೆ ತಾನು ಪ್ರಯತ್ನ ಮಾಡುವುದಾಗಿಯೂ ಈ ಕಾರ್ಯಕ್ಕಾಗಿ ಈಗಾಗಲೇ ದಾನ ಮಾಡಿರುವವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಗಳಾದ ಕೆಂಪಣ್ಣ ಮತ್ತು ಶ್ರೀ ಕಂಠಯ್ಯನವರ ಸೇವೆಯನ್ನು ಅವರು ಪ್ರಶಂಸಿಸಿ ವಿದ್ಯಾರ್ಥಿ ನಿಲಯಕ್ಕೆ ಪೂರ್ಣ ಯಶಸ್ಸನ್ನು ಕೋರಿದರು.

ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ವಂದನೆಗಳನ್ನರ್ಪಿಸಿದರು.

ಲೋಕ ಸೇವಾ ಹೈಸ್ಕೂಲಿನಲ್ಲಿ ಹೈಯರ್ ಸೆಕೆಂಡರಿ ಉದ್ಘಾಟನೆ

ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಮೈಸೂರು ವಿಧಾನ ಸಭಾ ಸದಸ್ಯರೂ ಆದ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜಿಲ್ಲಾ ಡೆಪ್ಯುಟಿ ಕಮಿಶನರ್ ಶ್ರೀ ಎಚ್. ಎಲ್. ನಾಗೇಗೌಡರು ಲೋಕಸೇವಾ ಹೈಸ್ಕೂಲಿನಲ್ಲಿ ಹೈಯರ್ ಸೆಕೆಂಡರಿ ವಿಭಾಗವನ್ನು ತಾ. 24-6-67ರಲ್ಲಿ ಉದ್ಘಾಟಿಸಿದರು. ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಮಾತನಾಡುತ್ತ ಲೋಕ ಸೇವಾ ವೃಂದವು ನಮ್ಮ ಸಂಸ್ಕೃತಿಯ ಕೆಲವೊಂದು ಮೌಲ್ಯಗಳನ್ನು ಎತ್ತಿಹಿಡಿಯುತ್ತದೆಂಬ ಕಾರಣಕ್ಕೆ ಬೇಕಾಗಿ ನಾನು ಇದರ ಕಾರ್ಯಕಲಾಪಗಳಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ್ದೇನೆ. ಯಾವುದೇ ಒಂದು ಸಂಸ್ಥೆಯು ನಿರಂತರವಾಗಿ ಗಂಗಾ ಪ್ರವಾಹದಂತೆ ಮುಂದುವರಿಯಬೇಕು. ಲೋಕ ಸೇವಾ ವೃಂದದ ಮೂಲಕ ಶ್ರೀ ನಾರಾಯಣ ಭಟ್ಟರು ಒಂದು ದೊಡ್ಡ ಧ್ಯೇಯವನ್ನು ಮುಂದಿಟ್ಟಿದ್ದಾರೆ.

ಈಗ ತೆರೆಯಲ್ಪಟ್ಟ ಈ XIನೇ ತರಗತಿಯು ಒಂದು ಸಾಮಾನ್ಯವಾದ ಘಟನೆಯೆಂದು ತಿಳಿಯುವುದು ಬೇಡ. ನಾಳೆ ಇದೇ ಸ್ಥಳದಲ್ಲಿ ಕಾಲೇಜೇ ಮೊದಲಾದುವು ನಡೆಯಲಿವೆ.

ಕೇವಲ ಹಣ ಸಂಪಾದನೆಯ ದೃಷ್ಟಿಯಿಂದ ಕಲಿತ ವಿದ್ಯೆಯಿಂದ ನಮ್ಮ ಜೀವನವು ಸಫಲತೆಗೊಳ್ಳದು. ನಾವು ದಕ್ಷಗಳ ಕುರಿತೇ ಮಾತನಾಡುತ್ತೇವೆ ಹೊರತು ನಾವು ಕಾರ್ಯತತ್ಪರರಾಗುವುದಿಲ್ಲ. ನಾವು ವಿದ್ಯಾಭ್ಯಾಸ ಕ್ರಮದಲ್ಲಿಯೂ ಸಾಕಷ್ಟು ಪ್ರಗತಿಯನ್ನು ಹೊಂದಲಿಲ್ಲ. ವಿದ್ಯಾರ್ಥಿಗಳ ಸರ್ವತೋಮುಖವಾದ ಅಭಿವೃದ್ಧಿಗೆ ಈ ಬಗೆಯ ಸಂಸ್ಥೆಗಳು ಬಹಳ ಪ್ರಾಮುಖ್ಯವಾಗಿವೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಉತ್ತಮ ಮನೋಭಾವನೆಯನ್ನು ಕಲಿತು ದೇಶದ ಉನ್ನತಿಗಾಗಿ ದುಡಿಯುವಂತಾಗಲಿ" ಎಂದರು.

ಶ್ರೀ ನಾಗೇಗೌಡರು ತಮ್ಮ ಉದ್ಘಾಟನಾ ಭಾಷಣದ "ನಾನು ಈ ಸಂಸ್ಥೆಯೊಡನೆ ವಿಶೇಷವಾದ ಸಂಪರ್ಕವನ್ನಿಟ್ಟುಕೊಂಡು ಅದರ ತಿರುಳನ್ನು ಹಿಸುಕಿ ನೋಡಿದ್ದೇನೆ. ಲೋಕ ಸೇವಾ ವೃಂದವು ನಡೆಸಿರುವ ಕಾರ್ಯಕಲಾಪಗಳು ನನಗೆ ಮೆಚ್ಚಿಕೆಯಾಗಿವೆ. XIನೇ ತರಗತಿಯನ್ನು ತೆರೆಯುವುದರ ಮೂಲಕ ಲೋಕ ಸೇವಾ ವೃಂದವು ಇದೊಂದು ಹೊಸ ಹೆಜ್ಜೆಯನ್ನಿಟ್ಟಂತಾಗಿದೆ. ಇಂತಹ ನೂರಾರು ಸಂಸ್ಥೆಗಳನ್ನು ಕ್ರೈಸ್ತರು ಆರಂಭಿಸಿದ್ದಾರೆ. ಇದರಿಂದಲೇ ಶ್ರೀ ನಾರಾಯಣ ಭಟ್ಟರಿಗೂ ಪ್ರಚೋದನೆಯು ಬಂದಿರಬಹುದು.

ಲೋಕ ಸೇವಾ ವೃಂದವು ಈ ವರೆಗೆ ಬೆಳೆದು ಬಂದಂತೆಯೇ ಇನ್ನೂ ಬೆಳೆದು ಬಂದು ವಿಶ್ವವಿದ್ಯಾನಿಲಯವಾಗಿ ಲೋಕ ಕಲ್ಯಾಣಕ್ಕೆ ನೆರವಾಗಲಿ" ಎಂದು ನುಡಿದರು.

ನಂತರ ಲೋಕ ಸೇವಾ ಹೈಸ್ಕೂಲಿನ ಹಾಸ್ಟೆಲ್ ಕಟ್ಟಡವನ್ನು ಉದ್ಘಾಟಿಸುತ್ತಾ ತಮ್ಮ ಭಾಷಣದಲ್ಲಿ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ S. S. ಕೃಷ್ಣರಾಯರು "ಸ್ವಾತಂತ್ರ್ಯಾನಂತರ ನಮ್ಮ ದೇಶದೆಲ್ಲೆಡೆಗಳಲ್ಲೂ ಅನೈತಿಕತೆ ಹಾಗೂ ಸ್ವೇಚ್ಛಾಚಾರಗಳು ಕಂಡು ಬರುತ್ತಿವೆ. ವಿಚಾರನಂತರ ತಲೆ ತಿನ್ನುವ ಸಮಸ್ಯೆಯಿದು. ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು ಲೋಕ ಸೇವಾ ವೃಂದದಂತಹ ಸಂಸ್ಥೆಗಳು ಸ್ಥಾಪನೆಯಾಗಬೇಕು" ಎಂದರು.

ಈ ಸಂಸ್ಥೆಗೆ ರೂ. 1125/-ರಷ್ಟು ಮಿಕ್ಕಿ ಧನ ಸಹಾಯವನ್ನು ನೀಡಿದ ಮಹನೀಯರುಗಳ ಭಾವ ಚಿತ್ರಗಳನ್ನು ಹೆರಡಾಳದ ಡಾ|| ಪಿ. ಎಚ್. ಶಾಸ್ತ್ರಿಯವರು ಅನಾವರಣಗೈದರು.

ಸಂಸ್ಥೆಯ ಪೋಷಕರ ನೆಲೆಯಿಂದ ಶ್ರೀ ಮಾಗುಳಿ ರಾಮಕೃಷ್ಣ ಭಟ್ಟರು, ಶ್ರೀ ನಡಿಬೈಲು ನಾರಾಯಣ ಭಟ್ಟರು, ಕುನಾರ್ಶಿನ ಶ್ರೀ ನಡಿಬೈಲು ಗೋವಿಂದ ಭಟ್ಟರು, ಸಂಸ್ಥೆಗೆ ಶುಭವನ್ನು ಕೋರಿ ಮಾತನಾಡಿದರು.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ಹೆಡ್ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

(ಮೂರನೇ ಪುಟದಿಂದ)

ಇದೇ ಬಗೆಯ ಹಲವಾರು ಸಹಸಂಸ್ಥೆಗಳ ಸ್ಥಾಪನೆಗೂ ಶ್ರೀ ಕುಡ್ವರು ಕಾರಣಪುರುಷರಾಗಿದ್ದಾರೆ. ಶ್ರೀಯುತರ ಸೇವೆ ಬರಿಯ ಉದ್ಯಮರಂಗದಲ್ಲಿ ಮಾತ್ರವಲ್ಲ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಮೊದಲಾದ ಒಂದಲ್ಲ ಹಲವು ರಂಗಗಳಿಗೂ ಸಂದಿದೆ. ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳವಳದಲ್ಲಿ ಇವರು ಭಾಗವಹಿಸಿದ್ದರು. 'ನವಭಾರತ' ದೈನಿಕ ಪತ್ರಿಕೆಯ ಸಂಪಾದಕರಾಗಿದ್ದರು. ಇದಕ್ಕೆ ಮೊದಲೂ 'ಸ್ವದೇಶಾಭಿಮಾನಿ' ಮುಂತಾದ ಪತ್ರಿಕೆಗಳನ್ನೂ ಇವರು ಆರಂಭಿಸಿದ್ದರು. ಸುರತ್ಕಲ್ಲಿನ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ರಚನೆಯಲ್ಲೂ ಶ್ರೀ ಕುಡ್ವರ ಸೇವೆ ಸಂದಿದೆ. ಜಿಲ್ಲೆಯ ಹಳೆಯ ರೂಪವನ್ನು ಹೊಸದಾಗಿಸುವಲ್ಲಿ ಅಹರ್ನಿಶಿ ದುಡಿದು ಕೊನೆಯ ತನಕವೂ ಸಾಹಸಮಯ ಜೀವನವನ್ನು ಬಾಳಿದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಕುಡ್ವಾ ಒಬ್ಬರು. ಅವರ ನಿಧನದಿಂದ ಜಿಲ್ಲೆ ಮಾತ್ರವಲ್ಲ, ದೇಶದ ಉದ್ದಿಮೆಯ ರಂಗವೂ ಬಡವಾಯಿತು. ಮೃತರ ಆತ್ಮ ಚಿರಶಾಂತಿ ಪಡೆಯಲಿ, ಉದ್ಯಮರಂಗದ ನಷ್ಟ ಹೊಸ ರಕ್ತದ ಮೂಲಕ ತುಂಬಿ ಬರಲಿ

ಕಾಶ್ಮೀರದ ಕವಿಗಳು

(ಏಳನೇ ಪುಟದಿಂದ)

ಕಲ್ಹಣನ ಕಾಶ್ಮೀರದ ಅರಸರ ಚರಿತ್ರೆ 'ರಾಜತರಂಗಿಣಿ' ಗ್ರಂಥದ ತರುವಾಯವೂ ಮುಂದುವರಿಯುತ್ತದೆ. ಜೋನರಾಜ ಅರಸ ಜಯಸಿಂಹನ ಚರಿತ್ರೆಯನ್ನು ಅವನ ಕಾಲದ ವರೆಗೆ ನಿರೂಪಿಸಿದ್ದಾನೆ. (ಕ್ರಿ.ಶ. ೧೪೫೯) ಅನಂತರದ ಚರಿತ್ರೆಯನ್ನು ಅಂದರೆ ಕ್ರಿ.ಶ. ೧೪೫೯ರಿಂದ ೧೪೮೬ರ ವರೆಗಿನ ಐತಿಹಾಸಿಕ ಸಂಗತಿಗಳನ್ನು ಜೋನರಾಜನ ಶಿಷ್ಯ ಶ್ರೀವರ ಬರೆದಿದ್ದಾನೆ.

ಕವಿ ಕಲ್ಹಣ ಶಿವನ ನಿಷ್ಠಾವಂತ ಭಕ್ತ. ಅವನ "ಅರ್ಧನಾರೀಶ್ವರ ಸ್ತೋತ್ರ" ಅತ್ಯುತ್ತಮ ಭಕ್ತಿ ಸ್ತೋತ್ರ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ.

O. S. No 116/66

ಶ್ರೀ ಸೋದೆ ವಾದಿರಾಜ ಮಠ, ಉಡುಪಿ
— ವಾದಿಯು.

ಮತ್ತು

ಬಾಬ ಪೂಜಾರಿ ಕೂಡಾ — ಪ್ರತಿವಾದಿಯು

ಸಪ್ಲಿಮೆಂಟು 3ನೇ ಪ್ರತಿವಾದಿ ಅಪ್ಪು ಹೆಂಗುಸು — ಸಿದ್ರಿ ಬಾಬ ಪೂಜಾರಿಯ ವಿಧವೆ, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಸಗ್ರಿಯಲ್ಲಿರುವವಳು—

ವಾದಿಯು ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೊಕದ್ದಮೆಯ ವಿಚಾರಣೆಯು ತಾ. 22.7.67ಕ್ಕೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉತ್ತರಿಸದೆ ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

(By order of Court)

Sri V. G. Kedlaya,
M. A. LL. B.,
Advocate for Plaintiff.

ಉಡುಪಿ, ತಾ. 29-6-67.

ಮುಂಬಯಿ ಪತ್ರ

ಶ್ರೀ ಶೇಖರ ಇಡ್ಯ ಅವರಿಗೆ ಸತ್ಕಾರ.

ಮುಂಬಯಿಯ ಮಹರ್ಷಿ ದಯಾನಂದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ ಶೇಖರ ಇಡ್ಯ ಅವರು ಮೂಡಬಿದರೆಯ ಮಹಾವೀರ ಕಾಲೇಜನ್ನು ಸೇರಿಕೊಂಡ ಸಂದರ್ಭದಲ್ಲಿ, ಮುಂಬಯಿಯ ಗೆಳೆಯರು ಹೋಟೆಲ್ ಸ್ವಾಗತದಲ್ಲಿ ತಾ. 28—6—67ರಂದು ಅವರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಶ್ರೀ ಶೇಖರ ಇಡ್ಯ ಅವರು ತಮ್ಮೂರಿಗೆ ಮರಳುತ್ತಿರುವ ಬಗ್ಗೆ ಶ್ರೀ ಯದು ಜಿ. ಶೆಟ್ಟಿ ಅವರು ಶುಭಕೋರಿದ ಬಳಿಕ ಶ್ರೀ ಟಿ. ಎಸ್. ಶಿವಪುರ ಅವರು ಮಾತಾಡುತ್ತಾ ಯಕ್ಷಗಾನ ಸಂರಕ್ಷಣಾ ಸಮಿತಿಯನ್ನು ಕಟ್ಟಿ, ಈ ಮಹಾನ್ ಕಲೆಯ — ಅಳಿಯುತ್ತಿರುವ ಭವ್ಯತೆಯ ಸಂರಕ್ಷಣೆಗಾಗಿ ಅವರು ಮಾಡಿದ ಸಾಹಸಪೂರ್ಣ ಹೋರಾಟದ ಪರಿಚಯವನ್ನು ಮಾಡಿಕೊಟ್ಟರು. ಎಲೆಮರೆಯ ಕಾಯಿಯಂತೆ ಇದ್ದು ಸದಾ ಸಾಹಿತ್ಯ ಮತ್ತು ಸಂಸ್ಕೃತಿಯ ಸೇವೆಯಲ್ಲಿ ತೊಡಗಿದ್ದ ಶ್ರೀಯುತರು "ಒಬ್ಬ ಅತ್ಯುತ್ತಮ ಸ್ನೇಹಿತ"ರಾಗಿದ್ದರು ಎಂದು ಮೋಹನ ಮೂಡಬಿದ್ರಿ ಅವರು ಹೇಳಿದರು. ತನ್ನ ವಿದ್ಯಾಭ್ಯಾಸ ಕಾಲದಲ್ಲಿಯೇ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದು ಅಲ್ಲಿ ಸಿರಿಗನ್ನಡ ಕೂಟವನ್ನು ಸಂಸ್ಥಾಪಿಸಿ ಆ ಮೂಲಕ 'ಸರ್ವಜ್ಞ ಸಾಹಿತ್ಯ ಪರಿಚಯ' ದಂತಹ ಅತ್ಯುತ್ತಮ ಹಾಗೂ ಸ್ಮರಣೀಯ ಕಾರ್ಯಕ್ರಮವನ್ನು ನಡೆಸಿದುದನ್ನೂ, ಮುಂಬಯಿ ಕನ್ನಡ ಸಂಘ, ಕರ್ನಾಟಕ ಸಂಘ ಹಾಗೂ ರೂಪಾರೇಲ್ ಕಾಲೇಜಿನ ಕನ್ನಡ ಸಂಘದ ಅವಿಭಾಜ್ಯ ಅಂಗದಂತಿದ್ದು ಈ ಸಂಘಗಳ ಹಲವು ಹತ್ತು ಕಾರ್ಯಕ್ರಮಗಳಲ್ಲಿ ದುಡಿಯುತ್ತಿದ್ದುದನ್ನೂ ಶ್ರೀ ತಿಮ್ಮಂಜಿ ಪರಾರಿ ಅವರು ನೆನಪು ಮಾಡಿಕೊಟ್ಟರು. ವಿದ್ಯಾಪ್ರಸಾರಕ ಮಂಡಳಿಯ ಸಂಸ್ಥಾಪಕರಲ್ಲೊಬ್ಬರಾದ ಶ್ರೀಯುತರು ಮುಂಬೈ ಕನ್ನಡ ಸಾಹಿತ್ಯ ಕೂಟದ ಗೌ|| ಕಾರ್ಯದರ್ಶಿಯೂ ಆಗಿದ್ದು ಮಾಡಿದ ಅಪಾರ ಚಟುವಟಿಕೆಗಳನ್ನು ಮನಸಾರೆ ಪ್ರಶಂಸಿದರು.

ಸತ್ಕಾರ ಸಭೆಗೆ ಪ್ರತಿವಂದನೆ ಸಲ್ಲಿಸುತ್ತಾ ಶ್ರೀ ಶೇಖರ ಇಡ್ಯ ಅವರು — ನಾನು ಮುಂಬೈಯಲ್ಲಿ ಗಳಿಸಿದ ದೊಡ್ಡ ಸಂಪತ್ತು ಅಂದರೆ ನನ್ನ ಮಿತ್ರ ಬಳಗ — ಅದರ ಬಗ್ಗೆ ನಾನು ಅಭಿಮಾನ ಪಡುತ್ತೇನೆ, ಎಂದು ಕೃತಜ್ಞತೆಯನ್ನು ಸಲ್ಲಿಸಿದರು.

—ರಾಜರ್ಷಿ.

ವಿವಾಹ

ಶಿರ್ವ, ಎಸ್. ಎನ್. ರಾವ್ ಹರಿದಾಸ್‌ರವರ ಅಳಿಯ ವ ಕಂದಾರ್ಣಿ ದಿ| ಶೇಷಪ್ಪಯ್ಯನವರ ಪುತ್ರ ಚಿ| ಜಗದೀಶ ರಾವ್‌ರವರ ವಿವಾಹವು ಕಟೀಲಿನಲ್ಲಿರುವ ಬಪ್ಪನಾಡು ಮೋಹನ ರಾಯರ ಪುತ್ರಿ ಚಿ| ಸೌ| ಉಮಾದೇವಿಯೊಡನೆ ಪಾವಂಜೆ ಶ್ರೀ ಜ್ಞಾನ ಶಕ್ತಿ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ತಾ. 2—6—67ರಂದು ವಿಜೃಂಭಣೆಯಿಂದ ನಡೆಯಿತು.

ಕಾಪು ಅನಂತ ಶೆಟ್ರು ನಿಧನ

ಉಡುಪಿ, ಜಿಲ್ಲೆಯ ಪ್ರಸಿದ್ಧ ಹಾಗೂ ಹಿರಿಯ ಸಾರಿಗೆ ಸಂಸ್ಥೆಯಾದ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯ ಸಂಸ್ಥಾಪಕ ಡೈರೆಕ್ಟರರಲ್ಲೊಬ್ಬರೂ ಸಂಸ್ಥೆಯ ವರ್ಕಿಂಗ್ ಮೆನೇಜರರೂ ಆಗಿದ್ದ ಶ್ರೀ ಕಾಪು ಅನಂತ ಶೆಟ್ಟರು 78ನೇ ವಯಸ್ಸಿನಲ್ಲಿ ತಾ. 27—6—67 ರಂದು ಹೃತ್ಕ್ರಿಯೆ ನಿಂತು ಸ್ವರ್ಗಸ್ಥರಾದರೆನ್ನಲು ವಿಷಾದವಾಗುತ್ತದೆ. ದಿವಂಗತರು ಜಿಲ್ಲಾ ಬೋರ್ಡು, ನಗರ ಸಭೆಗಳ ಸದಸ್ಯರಾಗಿಯೂ ವಿಜಯ ಬ್ಯಾಂಕಿನ ಡೈರೆಕ್ಟರರಾಗಿಯೂ ಸೇವೆ ಸಲ್ಲಿಸಿದ್ದರು. ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಾಗಿ ಜನಪ್ರಿಯತೆಗಳಿಸಿದ್ದರು. ಕೊನೆತನಕವೂ ಕಾರ್ಯನಿರತ ಉದ್ಯೋಗ ಪ್ರಿಯರಾಗಿದ್ದರು, ನವಯುಗದ ಅಭಿಮಾನಿಗಳಾಗಿದ್ದು ಹಲವು ವಿಧದಿಂದ ಸಹಕಾರ ನೀಡಿದವರಾಗಿದ್ದರು. ಇವರು, ತಮ್ಮ ಹಿಂದೆ ಪತ್ನಿ ಮತ್ತು ಮೂರು ಗಂಡು ಮಕ್ಕಳನ್ನು ಬಿಟ್ಟು ಅಗಲಿರುವರು.

ಎಂ. ಜಿ. ಎಂ. ಕಾಲೇಜಿನ ಸಾರ್ವಜನಿಕ ಸನ್ಮಾನ

ಉಡುಪಿ, ಕಳೆದ ಪರೀಕ್ಷೆಯ ಮೈಸೂರು ವಿಶ್ವವಿದ್ಯಾನಿಲಯದ 60 ರ್‍ಯಾಂಕುಗಳಲ್ಲಿ 22 ರ್‍ಯಾಂಕುಗಳನ್ನು ಗಳಿಸಿದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನವರನ್ನು ಇದೇ ತಾ. 2ರಂದು ಅಲಂಕಾರ್ ಥಿಯೇಟರಿನಲ್ಲಿ ಡಾ| ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಿತಿಯವರು ಸಾರ್ವಜನಿಕ ಸಭೆಯಲ್ಲಿ ಸನ್ಮಾನಿಸಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಸಮಿತಿಯ ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಮನೋಹರ ಪ್ರಭುಗಳು ಸಂದೇಶಗಳನ್ನು ವಾಚನಗೈದರು. ಶ್ರೀ ಕೆ. ಕೆ. ಪೈಗಳವರು ಮಾನಪತ್ರವನ್ನು ಓದಿ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರಿಗೆ ಒಪ್ಪಿಸಿದರು. ರ್‍ಯಾಂಕು ಗಳಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಧ್ಯಕ್ಷರು ಪುಷ್ಪಹಾರ ಮತ್ತು ಗುಚ್ಛಗಳನ್ನು ಅರ್ಪಿಸಿದರು. ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರೊ| ಸೇತು ಮಾಧವರಾಯರೂ, ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಡಾ| ಶಂಕರ್ ಅರ್ ಮೊಕಾಶಿ ಇವರೂ ಒಂದೇ ಕಾಲೇಜು ೨೦ಕ್ಕಿಂತಲೂ ಹೆಚ್ಚು ರ್‍ಯಾಂಕು ಗಳಿಸಿದ ಬಗ್ಗೆ ವಿದ್ಯಾರ್ಥಿಗಳನ್ನೂ ಪ್ರಾಧ್ಯಾಪಕರನ್ನೂ ಆಡಳಿತೆದಾರರನ್ನೂ ಅಭಿನಂದಿಸಿ ಭಾಷಣವಿತ್ತರು.

ಪದ್ಮಶ್ರೀ ಡಾ| ಟಿ. ಮಾಧವ ಪೈಗಳು ವಿದ್ಯಾರ್ಥಿಗಳು ಇಷ್ಟರಲ್ಲೇ ತೃಪ್ತರಾಗದೆ ಇನ್ನೂ ಹೆಚ್ಚಿನ ಉನ್ನತಿಯನ್ನು ಗಳಿಸಬೇಕೆಂದೂ ಮುಂದೆ ಜೀವನನಿರ್ವಹಣದಲ್ಲಿಯೂ ಅವರು ಯಶಗಳಿಸುವುದಕ್ಕಾನುಕೂಲವಾಗುವಂತೆ ಪ್ರಯತ್ನ ಮತ್ತು ದುಡಿಮೆಗಳ ಕಡೆಗೆ ಲಕ್ಷ್ಯ ಕೊಡಬೇಕೆಂದೂ ಹೇಳಿ ಆಶೀರ್ವದಿಸಿ ಕಾಲೇಜು ಇನ್ನಷ್ಟು ಉಚ್ಚ ಮಟ್ಟವನ್ನು ಗಳಿಸುವಂತಾಗಲೆಂದರು. ಕಾಲೇಜು ಟ್ರಸ್ಟಿನ ಅಧ್ಯಕ್ಷ ಶ್ರೀ ಅರೂರ್ ಲಕ್ಷ್ಮೀನಾರಾಯಣ ರಾಯರೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಆಶೀರ್ವದಿಸಿದರು. ಕಾಲೇಜಿನ ಸುಪ್ರಿಂಟೆಂಡೆಂಟ್ ಶ್ರೀ ಟಿ. ಎ. ಪೈಯವರೂ ಪ್ರಿನ್ಸಿಪಾಲ್ ಕು. ಶಿ. ಹರಿದಾಸಭಟ್ಟರೂ ಉತ್ತರಿಸುತ್ತಾ ಕಾಲೇಜು ಒಂದು ಆದರ್ಶ ಉನ್ನತ ಮಟ್ಟದ ಸಂಸ್ಥೆಯಾಗಬೇಕೆಂದಿರುವ ತಮ್ಮ ಉದ್ದೇಶವನ್ನು ನಿವೇದಿಸಿದರಲ್ಲದೆ ಸನ್ಮಾನಿಸಿದ ಬಗ್ಗೆ ಕೃತಜ್ಞತೆ ಸೂಚಿಸಿದರು.

ಅಧ್ಯಕ್ಷ ಶ್ರೀ ಕಾರಂತರು ರ್‍ಯಾಂಕು ಹೊಂದುವುದು ಅದೃಷ್ಟದ ಆಟವೆಂದೂ ರ್‍ಯಾಂಕಿನಿಂದಲೇ ವಿದ್ಯಾರ್ಥಿಗಳು ತೃಪ್ತರಾಗದೆ ಭಾವೀ ಜೀವನದ ಯಶಸ್ಸಿಗಾಗಿ ಬೇಕಾದ ಜ್ಞಾನ ಮತ್ತು ಗುಣ ಸಂಪತ್ತನ್ನ ವಿದ್ಯಾಭ್ಯಾಸದ ಕಾಲದಲ್ಲಿ ಪಡೆದುಕೊಳ್ಳಬೇಕೆಂದೂ ಪ್ರಾಧ್ಯಾಪಕರ ಸಲಹೆಗಳನ್ನು ಪಾಲಿಸಿ ಕೊಳ್ಳಬೇಕೆಂದೂ ಹೇಳಿ ಕಾಲೇಜಿಗೆ ತಮ್ಮ ಮೆಚ್ಚುಗೆ ಸೂಚಿಸಿದರು.

ಅಂತ್ಯದಲ್ಲಿ ಶ್ರೀ ಎಮ್. ಸೋಮಶೇಖರ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಉಪಹಾರ ಸತ್ಕಾರವನ್ನೇರ್ಪಡಿಸಲಾಗಿತ್ತು.

ಎ. ಶಾಂತಾರಾಮ ಪೈಗಳ ನಿಧನ

ಮಂಗಳೂರು, ಕರ್ನಾಟಕದ, ಮುಖ್ಯವಾಗಿ ದ. ಕನ್ನಡದ ಕಮ್ಯೂನಿಸ್ಟ್ ಮುಂದಾಳುಗಳೂ ಟ್ರೇಡ್ ಯೂನಿಯನ್ ಕಾರ್ಯಕರ್ತರೂ ಆದ ಶ್ರೀ ಎ. ಶಾಂತಾರಾಮ ಪೈಗಳು ತಮ್ಮ 46ನೇ ವರ್ಷದಲ್ಲಿ ತಾ 8ರಂದು ಹೃತ್ಕ್ರಿಯೆ ನಿಂತು ನಿಧನ ಹೊಂದಿದರೆಂದು ತಿಳಿದು ಬರುತ್ತದೆ.

ಸ್ವಾತಂತ್ರ್ಯ ವಿಶೇಷಾಂಕ

ವಾಡಿಕೆಯಂತೆ 'ನವಯುಗ'ದ
ಸ್ವಾತಂತ್ರ್ಯ ವಿಶೇಷಾಂಕವು
ಆಗೋಸ್ತು 15ಕ್ಕೆ
ವಿಶಿಷ್ಟ ರೀತಿಯಲ್ಲಿ
ಪ್ರಕಟವಾಗಲಿದೆ.

ಲೇಖನಗಳನ್ನು ಆಮಂತ್ರಿಸಲಾಗಿದೆ.



MR. HARISH JAIN

to lead Indian Delegation to IAA AA World Advertising Conference

We learn that Mr. Harish C Jain, Chairman and Managing Director, National Advertising Service Private Ltd of Bombay, who is also the Regional President and Director of the World Council of the International Advertising Association, will be attending the forthcoming Board of Directors Meeting of the Association in London on June 24, 1967

He will also be participating in the IAA World Advertising Conference to be held at the Royal Festival Hall, London from June 26 to June 29, 1967

Mr Jain has been selected to lead the Indian Delegation by AAA of India.

This is the fourth time that Mr. Jain will be leading Indian Delegations to International Advertising Conferences In 1955, he participated in IAA Conference in Zurich, in 1960 led Indian Delegation at the Asian Advertising Congress in Tokyo and in 1964 IAA Conference in New York.

Mr Jain is a Director of the Audit Bureau of Circulations Ltd, Vice President of the Advertising Club and holds offices of several other business and social institutions.

He served on the Press Consultative Committee appointed by the Government of India He has been nominated a director of the North Bombay Central Consumers' Cooperative Wholesale & Retail Stores Ltd, by the Government of Maharashtra.

Mr. Jain was appointed a Justice of the Peace by the Maharashtra Government. He is the first J P. from the Advertising World

Mr Jain will avail himself of this opportunity to visit NAS Associates and clients in the U. K. and some of the Western and Eastern European countries. He will spend about a month and a half in Europe.

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

ರಖಂ ಪ್ರತಿಗಳಿಗೆ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಸಂಶಯದ ಸುಳಿಯಲ್ಲಿ

(ಎರಡನೇ ಪುಟದಿಂದ)

'ಹಾಗಾದರೆ ನೀನಿಂದು ಹೋದ ಕೆಲಸವಾಗಿಲ್ಲವೇ ಹೇಳು?' ಎಂದನು.

'ಕೆಲಸ ಪೂರೈಸಿಕೊಂಡೇ ಬಂದಿರುವೆ'.

"ಮೊದಲು ಇಲ್ಲಿಂದ ಹೊರಟು ಬಿಡು'.

"ಹುಚ್ಚನಂತಾಡ ಬೇಡ!" ಎಂದು ಅಬ್ಬರಿಸಿದೆ.

'ರೋಹಿಣಿ....ರೋಹಿಣಿ....ನೀನು...'

'ರೋಹಿಣಿ ನನಗೆ ತಂಗಿಯಾಗಬೇಕು' ಎಂಬ ಮಾತನ್ನು ಕೇಳಿದಾಗ ನಾಗರಾಜನ ಕಣ್ಣುಗಳ ಕಾಂತಿ ಪ್ರಕಾಶಮಾನವಾಯಿತು.

"ನಿನಗೆ ತಂಗಿ ನಿಜವೇ ಸುಬ್ಬು?" ಎಂಬ ಮಾತಿನಲ್ಲಿ ಅವನ ಆಶ್ಚರ್ಯ ಮೇಲೆದ್ದು ಕಾಣುತಿತ್ತು.

"ಹೌದು! ನನ್ನ ತಂಗಿಯ ಮದುವೆಗೆ ಬೇಕಾಗಿ ಬಂದವ್ವ."

"ನನ್ನ ಕ್ಷಮಿಸಿ ಬಿಡು ಸುಬ್ಬು' ಎಂದು ನನ್ನ ಎರಡೂ ಕೈ ಹಿಡಿದ ನಾಗರಾಜನ ವರ್ತನೆ ಆಶ್ಚರ್ಯವನ್ನುಂಟು ಮಾಡಿತು.

"ಮೊದಲು ನನ್ನ ಕೈ ಬಿಡ. ನಿನ್ನಿಂದೇನೂ ಘಟಿಸಿಲ್ಲ." ಎಂದರೂ 'ಒಮ್ಮೆ ಕ್ಷಮಿಸಿರುವೆ, ನೆಂದು ಹೇಳಿ ಬಿಡು." ಎಂದು ಒತ್ತಾಯಿಸಿದಾಗ, ಗೆಳೆಯನ ಸಂತೋಷಕ್ಕಾಗಿ 'ಕ್ಷಮಿಸಿರುವೆ' ನೆನ್ನಬೇಕಾಯಿತು.

"ನಾನು ರೋಹಿಣಿಯನ್ನು ಪ್ರೀತಿಸಿರುವೆ ಸುಬ್ಬು. ಆಸು ನನ್ನ ಪ್ರೇಮ ಹೊರತು ಅನ್ಯರಾರೂ ಅರಿಯರು. ಆದರೆ ನೀನಲ್ಲಿಗೆ ಹೋದುದನ್ನು ಕಂಡು; ನಿನಗೆ ದೊರಕಿದ ಆದರೋಪಚಾರದ ಜೊತೆಗೆ ರೋಹಿಣಿಯ ಅಲಂಕಾರ; ತುಟಿಯಲ್ಲಿ ತುಂಟ ನಗು, ಕಣ್ಣುಗಳ ಕಾಂತಿ ನನ್ನಲ್ಲಿ ಸಂಶಯ ತಂದಿತು. ಗುಟ್ಟಾಗಿಯೇ ನಡೆಸುವ ಮಾತುಗಳಲ್ಲಿ ಪಣ;' ಚಿನ್ನ ಮೊದಲಾದ ಒಂದೊಂದು ಶಬ್ದವೂ ನನ್ನ ಸಂಶಯಕ್ಕೆ ಪುಷ್ಟಿ ನೀಡಿತು. ನಿನ್ನೆದುರು ರೋಹಿಣಿ ನಾಚಿ ನಡೆದುದನ್ನು ಕಂಡು; ನೀನು ಮಂಗಳ ಕಾರ್ಯಕ್ಕಾಗಿ ಬಂದಿರುವೆನೆಂಬುದನ್ನು ಕೇಳಿ; ರೋಹಿಣಿ ನನ್ನ ಕೈ ಬಿಡುವಳೆಂದೇ ಹುಚ್ಚನಂತಾದೆ.' ಎಂಬ ನಾಗರಾಜನ ಮಾತುಗಳನ್ನು ಕೇಳಿ ನಕ್ಕು ಬಿಟ್ಟೆ.

'ಎಲ್ಲವೂ ಮನಸ್ಸಿನಲ್ಲಿ ಮುಂದಿಗೆ ತಿಂದು ಬಿಟ್ಟೆಯಲ್ಲ. ಆಗಲಿ, ಈಗಾದರೂ ನಿಜ ವಿಚಾರ ಅರಿತು ಕೊಂಡೆಯಲ್ಲ. ಸಂಶಯ ಕಿಟ್ಟೆದ್ದು ನಾಗರಾಜ' ಎಂದು ತಂಗಿಯ ಮದುವೆಗೆ ಆಮಂತ್ರಣವಿತ್ತೇ ಮಿತ್ರನಿಂದ ಬೀಳ್ಗೊಂಡು ಹೊರಟು ನಿಂತಾಗ ರೋಹಿಣಿ ನಾಗರಾಜನನ್ನರಸಿ ಬರುವುದನ್ನು ಕಂಡಾಗ ನನಗೆ ಸಂತೋಷವೆನಿಸಿತು.

ಸಂಸ್ಕೃತಿ

ಭಾರತೀಯ ಸಂಸ್ಕೃತಿಯ ಹಿರಿಮೆ

ಲೇಖಕರು

ಶ್ರೀ ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ನೋಬೆಲ್ ಪುರಸ್ಕಾರ ವಿಜೇತ "ಡಾ| ಅಲೈಕ್ಸಿಸ್ ಕ್ಯರಲ್" ಎಂಬವರು ತನ್ನ ಸುಪ್ರಸಿದ್ಧ ವೈಜ್ಞಾನಿಕ ಗ್ರಂಥ "Man the unknown" ಎಂಬುದರಲ್ಲಿ, ವೈಜ್ಞಾನಿಕ ಪ್ರಪಂಚದಲ್ಲಿ ಪಾಶ್ಚಾತ್ಯರು ಅದ್ಭುತ ಪ್ರಗತಿ ಪಥಕ್ಕೆ ಹೋಗಿದ್ದರೂ ಕೂಡ ಪಾಶ್ಚಾತ್ಯ ಸಭ್ಯತೆಯ ಅಭಿಮಾನಿಗಳ ಶೋಚನೀಯ ಪರಿಸ್ಥಿತಿ ಕುರಿತು ಅತ್ಯಂತ ಮಾರ್ಮಿಕವಾಗಿ ವಿವೇಚನೆ ಮಾಡುತ್ತಾ "Man should be the measure of all. On the contrary, he is a strange in the world he has created. He has been incapable of organising this world for himself, because he did not possess a Practical knowledge of his own nature."

"Thus the enormous advance gaind by the sciences of inanimate mator over those of living things is one of the greatest catastrophies ever sufferd by humanity."

"We are unhappy. We degenifight morally and mentally. We are the victimess the backwardness of the sciences of life over those of matter The only possible remedy for this evil is a mu chmoreprofound knowledge of ourselves. The sciences of man has become the most necessary of all sciences." ಅಂದಿದ್ದಾರೆ. ತಾತ್ಪರ್ಯವೇನೆಂದರೆ ಮನುಷ್ಯನಿಗೆ ಪ್ರತಿಯೊಂದು ವಸ್ತುವಿನ ಜ್ಞಾನ ಪ್ರಾಪ್ತಿಯು ಅಗತ್ಯವಿತ್ತು; ಆತನು ಬಾಹ್ಯ ಪ್ರಾಕೃತಿಕ ವಸ್ತುವಿನ ಜ್ಞಾನವನ್ನು ಬಹಳ ಮಟ್ಟಿಗೆ ದೊರಕಿಸಿಕೊಂಡನು; ಆದರೆ ತನ್ನದೇ ಆಗಿರುವ ಜ್ಞಾನವನ್ನು ವಿಕಸಿತಗೊಳಿಸಲಿಲ್ಲ. ಆದುದರಿಂದ ಅವನು ತನ್ನ ಕಾಲ್ಪನಿಕ ಜಗತ್ತಿನ ಒಬ್ಬ ವಿದೇಶೀಯನಂತೆ ಪರಿಗಣಿಸಲ್ಪಟ್ಟನು. ಆತ್ಮ ವಿದ್ಯೆಯ ಮೇಲೆ ಆಧರಿಸದ ಭೌತಿಕ ವಿಜ್ಞಾನದ ಉನ್ನತಿಯು ಮಾನವಕೆಗೆ ಒದಗುವ ಒಂದು ದುಃಖಪ್ರದ ಘಟನೆಯಾಗಿರುತ್ತದೆ. ನಾವು ಇದೇ ಭೌತಿಕ ವಿಜ್ಞಾನದ ಉನ್ನತಿ ಮತ್ತು ಆತ್ಮ ಜ್ಞಾನದ ಹಾನಿಗೆ ಬಲಿ ಬಿದ್ದಿದ್ದೇವೆ. ನಾವು ದುಃಖಿತರಾಗಿದ್ದೇವೆ. ಸದಾಚಾರ ಮತ್ತು ಮಾನಸಿಕ ದೃಷ್ಟಿಯಿಂದ ನೋಡುವುದಾದರೆ ನಮ್ಮ ಅಧಃಪತನವಾಗಿರುತ್ತದೆ. ಈ ತರದ ಕೆಡುಕಿಗೆ ಏಕ ಮಾತ್ರ ನಿವಾರಣೆ, ನಾವು ನಮ್ಮ ಆತ್ಮಕ್ಕೆ ಮಹಾನ್ ಗಂಭೀರ (ಆಳ) ವಾದ ಜ್ಞಾನವನ್ನು ದೊರಕಿಸಿಕೊಳ್ಳುವುದಾಗಿರುತ್ತದೆ. ವರ್ತಮಾನ ಪರಿಸ್ಥಿತಿಯಲ್ಲಿ ಆತ್ಮ ವಿಜ್ಞಾನವೇ ಎಲ್ಲಾ ವಿಜ್ಞಾನಗಳಿಗಿಂತ ಅತ್ಯಧಿಕ ಸಂಗ್ರಹವಾಗಬೇಕಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಒಂದು ಮಹತ್ವಪೂರ್ಣ ವಿಶೇಷತೆ ಎಂದರೆ ಅದು "ಬ್ರಹ್ಮ" ಮತ್ತು 'ಆತ್ಮ"ಗಳಿಗೆ ಅತ್ಯಧಿಕವಾದ ಪ್ರಮುಖ ಸ್ಥಾನವನ್ನೀಯುತ್ತದೆ.

ಇಹಚೇದವೇದೀಥಥ ಸತ್ಯ ವಸ್ತಿ, ನಚೇದಿ ಹಾವೇ ದೀನ್ಮ ಹತೀ—ವಿನಷ್ಟಿ:। ಭೂತೇಷು, ಭೂತೇಷು ಚಿಂತಯಧಿರಾ: ಪ್ರೇತ್ಯಾಸ್ಮಾಲ್ಲೋಕಾದದಮೃತಾ ಭವನ್ತಿ॥ ಆತ್ಮಾವ ಅತೀ: ದ್ರಷ್ಟವ್ಯ: ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತ ವ್ಯಯು:।"

—'ಬೃಹದಾರಣ್ಯದ ಉಪನಿಷತ್"

'ಒಂದು ವೇಳೆ ಈ ಜೀವನದಲ್ಲಿ ನೀನು ಬ್ರಹ್ಮರನ್ನು ತಿಳಿದುಕೊಂಡೆಯಾದರೆ ಒಳ್ಳೆಯದು; ಇಲ್ಲದೇ ಹೋದರೆ ನಿನಗೆ ಬಹಳ ದೊಡ್ಡ ಹಾನಿಯಾಯಿತು ಅಥವಾ ಬಲುದೊಡ್ಡ ವಿನಾಶವಾಯಿತೆಂದು ತಿಳಿ. ಜ್ಞಾನೀ ಜನರು ಎಲ್ಲಾ ಪ್ರಾಣಿಗಳಲ್ಲಿ ಬ್ರಹ್ಮ ಸಾಕ್ಷಾತ್ಕಾರ ಮಾಡುತ್ತಾ ಮೃತರಾಗಿ ಅವರ ಪದವಿಯನ್ನು ದೊರಕಿಸಿಕೊಳ್ಳುತ್ತಾರೆ. ಆತ್ಮದ ಶ್ರವಣ (ತಿಳುವಳಿಕೆ) ವನ್ನೂ ಮಾಡಿಕೊಳ್ಳಬೇಕು, ಅಥವಾ ನಿದಿಧ್ಯಾಸನ ಮಾಡಬೇಕು; ಮತ್ತು ಆದರಪ್ಪೇ (ಆತ್ಮನಪ್ಪೇ). ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಭಾರತೀಯ ಸಂಸ್ಕೃತಿಯ ಈ ಮಹತ್ವವನ್ನು ನಾವೆಂದಿಗೂ ಮರೆಯಬಾರದು. ಬಾಹ್ಯ ವಿಜ್ಞಾನದ ಉನ್ನತಿಯನ್ನು ಮಾಡಿಕೊಳ್ಳುತ್ತಾ ಮಾನವನು ಇದರಲ್ಲಿಯೇ ಆಸಕ್ತನಾಗಿ ಜೀವಾತ್ಮ ಪರಮಾತ್ಮರ ಅಸ್ತಿತ್ವವನ್ನೇ ಅಲ್ಲಗಳೆಯತೊಡಗಿದನು. ಇದರಿಂದಾಗುತ್ತಿರುವ ಭಯಾನಕ ಪರಿಣಾಮವನ್ನೇ ಡಾ। ಅಲೆಕ್ಸಿಸ್ ಕ್ಯರಲ್' ರವರು ತನ್ನ ಉಪರೋಕ್ತ ವಾಕ್ಯಗಳಲ್ಲಿ ವಿಶದೀಕರಿಸಿರುವುದಾಗಿರುತ್ತದೆ.

ಜಗತ್ತನ್ನು ಸುಖಿಯನ್ನಾಗಿರಿಸಲಿಕ್ಕೆ ನೆರವಾದಷ್ಟು ಭೌತಿಕ ವಿಜ್ಞಾನವು ಜಗತ್ತನ್ನು ಸುಖಿಯನ್ನಾಗಿಸಲಿಕ್ಕೆ ಪ್ರಯೋಜನಕಾರಿಯಾಗಲಿಲ್ಲ. ಹೈಡ್ರೋಜನ್ ಮೊದಲಾದ ಇಂದಿನ ಆವಿಷ್ಕಾರದ ಮೂಲಕ ಅತ್ಯಂತ ಅಲ್ಪ ಸಮಯಾವಧಿಯಲ್ಲಿ ಅತಿ ಹೆಚ್ಚಿನ ಸಂಖ್ಯಾ ಪ್ರಮಾಣದಲ್ಲಿ ಮಾನವ ಸಂಹಾರಕ್ಕೆ ಸಹಾಯಕ ಸಾಧನವಾಗಿ ಪರಿಣಮಿಸಿದೆ. ವೈಜ್ಞಾನಿಕ ಪ್ರಗತಿಯನ್ನು ನಾವು ವಿರೋಧಿಸುತ್ತೇವೆಂದು ಯಾರೂ ಭಾವಿಸಬಾರದು. ವಿಜ್ಞಾನವು ಅವಶ್ಯವಾಗಿ ಪ್ರಗತಿ ಹೊಂದಬೇಕು. ಪರಂ

ಕ್ಷಾಮ ನಿವಾರಣೆಗಾಗಿ

ಇಂದೇ

ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ವರೆಗೆ ಕೊಡದೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಬಗ್ಗೆ ಮನಿ ಆರ್ಡರ್ ಶುಲ್ಕ, ಅಂಚೆ ವೆಚ್ಚ ಮತ್ತು ರಿಜಿಸ್ಟ್ರೇಶನ್ ಚಾರ್ಜು ಕೊಡಬೇಕಾಗಿಲ್ಲ. ವಿಶಿಷ್ಟ, ಬಟ್ಟೆಬರೆ, ಡಬ್ಬಿಗಳಲ್ಲಿ ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಣೆ. ಮತ್ತು ರೈಲ್ವೆ ಕಚೇರಿಗಳು, ಬ್ಯಾಂಕುಗಳು ತೆರಿಗೆ ಅಧಿಕಾರಿ ಮತ್ತು ಸುಂಕ ಆಫೀಸುಗಳಲ್ಲಿ ರಸೀದಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಫ್ಯಾಮಿನ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನವ್ಯ ದಿಲ್ಲಿ—1

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 128/1965

S. E. P. 476/1966.

K. ರಾಘವೇಂದ್ರ ರಾವ್— ಅರ್ಜಿದಾರ.

VS

ಗೋಪಾಲ ಕೆ. ಭಂಡಾರಿ, C/o ಚಂದ್ರ ವಿಲಾಸ ಹೇರ್ ಡ್ರೆಸಿಂಗ್ ಸೆಲೂನ್, ಮಣಿಪಾಲ.

—ಎದ್ರಿ.

ಸದ್ರಿ ಎದ್ರಿಗೆ—

ಅರ್ಜಿದಾರರು ನಿಮ್ಮ ಮೇಲೆ ಪಡೆದ ಡಿಕ್ರಿಯ ಅನ್ವಯದಲ್ಲಿ ನಿಮ್ಮ ಚರಸೊತ್ತು ಪಲ್ಲ ಬಗ್ಗೆ ಹಾಜರು ಪಡಿಸಿದ ಇಸ್ತಿಹಾರಿನ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ತಾ. 25—7—1967ರಲ್ಲಿ ಹಾಜರಾಗಿ ತಿಳಿಸತಕ್ಕದ್ದು.

ಸಿ. ರಾಮಚಂದ್ರ ರಾವ್, B.A., B.L.
ಎಡ್ವಕೇಟ್

ಉಡುಪಿ, 26—6—1967.

NAVAYUGA 6—7—1967

Registered with the Registrar
of News Papers for India
under No. R. N. 3646/'57

REGD: No. B G. 176
LICENCE No. 31
Licensed to Post without Prepayment

ಕು ಅದರ ಜೊತೆಯಲ್ಲಿಯೇ ಆಧ್ಯಾತ್ಮ ವಿಕಾಸ ಮತ್ತು ಲೋಕ ಹಿತಾತ್ಮಕ ಭಾವನೆಯ ವಿಕಸನವೂ ಆಗಲೇ ಬೇಕು. ಈ ಎರಡು ಮಹಾನ್ ತತ್ವ ವಿಕಸನದ ಹೊರತು ಕೇವಲ ವಿಜ್ಞಾನದ ಉನ್ನತಿ ಮಾತ್ರ ಆದರೆ ಅದರ ಪರಿಣಾಮಗಳ ಕುರಿತು ಪ್ರಖ್ಯಾತ ವಿದ್ವಾಂಸರಾದ 'Rene Gu-enon ಎಂಬವರು ತನ್ನ" The crisis of Modern world ಎಂಬ ಸುಪ್ರಸಿದ್ಧ ಗ್ರಂಥದ ೬೬—೬೭ ನೆಯ ಪುಟದಲ್ಲಿ 'By seeking to cut the sciences completely a way from any higer principle, under preteset of assuring their independence, the modern conception robs th-em of all deeper meening and even of all real interest from the paint of knowle-dge and it can only being them to a blind alley en-closing them as it does, in a hopelessly limited realm.. In taking on its modern form scence has last not only in depth but also in—stability for, it can find nothing in it that is stable and no fixed point on which to been itself 'ತಾತ್ಪರ್ಯವೇನೆಂದರೆ" ವಿಜ್ಞಾನದ ಸ್ವತಂತ್ರತೆಯನ್ನು ಉಳಿಸಿಕೊಳ್ಳುವ ನೆವದಿಂದ ಅದನ್ನು ಉಚ್ಚ ಸಿದ್ಧಾಂತದಿಂದ ಪ್ರತ್ಯೇಕವಿರಿಸುವ ಆಧುನಿಕ ವಿಚಾರ ಸರಣಿಯು ಅದನ್ನು ಗಂಭೀರ ಅರ್ಥ ಮತ್ತು ಜ್ಞಾನದ ದೃಷ್ಟಿಯಿಂದ, ವಾಸ್ತವಿಕ ಹಿತದಿಂದಲೂ ವಂಚಿತನನ್ನಾಗಿ ಮಾಡಲಾಗುತ್ತಿದೆ; ಮತ್ತು ಒಂದು ಅನ್ಯ ಮಾರ್ಗದ ಕಡೆಗೆ ಅದನ್ನೊಯ್ದು ಅದರ ಕ್ಷೇತ್ರವನ್ನು ಅತ್ಯಂತ ಸೀಮಿತಗೊಳಿಸಿ ಬಿಡಲಾಗುತ್ತದೆ. ವರ್ತಮಾನ ಕಾಲದ ಈ ಸ್ವರೂಪವನ್ನು ಸ್ವೀಕಾರ ಮಾಡುವುದರಿಂದ ವಿಜ್ಞಾನವು ತನ್ನ ಗಾಂಭೀರ್ಯವನ್ನು ಮಾತ್ರವಲ್ಲದೆ ತನ್ನ ಸ್ಥಿರತೆಯನ್ನು ಸಹ ಕಳೆದುಕೊಂಡಿರುತ್ತದೆ. ಕೇವಲ ಪರಿವರ್ತನ ಶೀಲ ಪದಾರ್ಥಗಳ ಜೊತೆಯಲ್ಲಿ ಸಂಬಂಧವಿರಿಸಿಕೊಳ್ಳುವುದರಿಂದ ಸ್ಥಿರವಾದ ಯಾವ ಜ್ಞಾನವೂ ಉಳಿಯದಂತಹ ಪರಿಣಾಮ ಉಂಟಾಗುತ್ತದೆ." ಎಂದು ವಿವರಿಸಿರುತ್ತಾರೆ. ಗಂಭೀರವಾದ ಈ ವಿವೇಚನೆಯಿಂದಲೂ, ಭಾರತೀಯ ಸಂಸ್ಕೃತಿಯಲ್ಲಿನ ಮೂಲತತ್ವ ಆಧ್ಯಾತ್ಮಿಕ ತತ್ವಗಳಿಗೆ ಪ್ರಾಮುಖ್ಯತೆ ಕೊಡುತ್ತಾ, ವಿಜ್ಞಾನದ ಪ್ರಗತಿ ಸಾಧನೆ ನಡೆಸುತ್ತಿರುವುದು ಅತಿ ಮಹತ್ವಪೂರ್ಣವೆಂದು ಕಂಡು ಬರುತ್ತಿದೆ. ಇಂತಹ ಹಿರಿಮೆಯುಳ್ಳ ಸಂಸ್ಕೃತಿಯನ್ನು ಜೀವದತ್ತವಾಗಿ ನಡೆದಿರುವ ಪುಣ್ಯ ಪುಂಜರ ಭಾರತ ದೇಶ ಧನ್ಯ—ಧನ್ಯ.

ಕೇರಳದ ಹಳೆಯ ಪಟ್ಟಣಗಳು

ಕೊಡುಂಗಲ್ಲೂರ್ ಮತ್ತು ವಂಚಿ ಪಟ್ಟಣಗಳು

ಕೇರಳದ ಪುರಾತನ ಕಾಲದ ಪಟ್ಟಣಗಳ ಬಗ್ಗೆ ಜ್ಞಾಪಿಸಿದರೆ ಮೊದಲು ನೆನಪಾಗುವುದು ಕೊಡುಂಗಲ್ಲೂರ್. ಈ ಹೆಸರು ಕ್ರಿ. ಶ. ೮೦೦ರ ನಂತರ ಮಾತ್ರವೇ ಕಾಣುತ್ತದೆ. ಅದಕ್ಕೆ ಮೊದಲು ಆ ಪಟ್ಟಣದ ಹೆಸರು 'ಮುಚಿರಿ' ಎಂದಾಗಿತ್ತು. ಪೆರಿಪ್ಲೂಸಿನವರೂ ಟಾಲೆಮಿಯೂ 'ಮುಸಿರಿಸ' ಎಂದು ಕರೆದುದೂ ಇದೇ ನಗರವನ್ನು. ಯವನರ ಹಡಗುಗಳು ವ್ಯಾಪಾರಕ್ಕಾಗಿ ಕೇರಳದ ರೇವುಗಳೊಂದಿಗೆ ಸಂಪರ್ಕವಿರಿಸಿದ್ದಾಗಿ ಕ್ರಿ. ಶ. ಆರನೇ ಶತಮಾನದ ತಮಿಳು ಗ್ರಂಥಗಳು ಹೇಳಿವೆ. ೮ನೇ ಶತಮಾನದ ಆರಂಭದಲ್ಲಿ ಕಾಂಚೀಪುರದ 'ದಂಡಿ' ಬರೆದ 'ದಶಕುಮಾರ ಚರಿತ'ದಲ್ಲೂ ಕೇರಳದ ರೇವುಗಳು ಯವನ ಹಡಗುಗಳನ್ನು ಸ್ವಾಗತಿಸಿದ್ದಾಗಿ ಉಲ್ಲೇಖಿಸಲಾಗಿದೆ. ಸಮುದ್ರದಲ್ಲಿ ಉಪೇಕ್ಷಿಸಲ್ಪಟ್ಟ ಮಿತ್ರಗುಪ್ತನು ಯವನರ ಹಡಗಿನಲ್ಲಿ ರಕ್ಷಿಸಲ್ಪಟ್ಟ ಕಥೆಯಿದೆ.

ಕ್ರಿಸ್ತಪೂರ್ವ ಒಂದನೇ ಶತಮಾನದಿಂದ ಕ್ರಿ. ಶ. ಆರನೇ ಶತಮಾನದ ವರೆಗಿನ ರೋಮನ್ ನಾಣ್ಯಗಳು ಕೇರಳದ ಹಲವೆಡೆಗಳಲ್ಲೂ ಅಂದು ಚೇರ ರಾಜ್ಯದಲ್ಲಿದ್ದ ಕೊಯಂಬುತ್ತೂರು ಪ್ರದೇಶದಲ್ಲೂ ಲಭಿಸಿದ್ದವು. ಅಂದು "ಯವನ"ರಾಗಿ ಅರಬರೂ ಪರ್ಷಿಯನರೂ ಪರಿಗಣಿಸಲ್ಪಟ್ಟಿದ್ದರು. ಪಾಶ್ಚಾತ್ಯ ರಾಷ್ಟ್ರಗಳಿಂದ ಕೊಂಕಣದಲ್ಲೂ ಮುಂಬಯಿಯಲ್ಲೂ ನೆಲಸಿದ್ದ ಕೆಲವು ವರ್ಗದ ಜನರನ್ನೂ 'ಯವನ'ರೆಂದೆ ಕರೆಯಲಾಗಿತ್ತು.

ಮುಚಿರಿಗೆ ಹಡಗಗಳಲ್ಲಿ ಭಂಗಾರ ಬಂದು ಕಾಳು ಮೆಣಸು ಹೇರಿಕೊಂಡು ಯವನರು ಮರಳುತ್ತಿದ್ದರು.

ಮುಚಿರಿಯ ಬೀದಿಗಳಲ್ಲಿ ಮದ್ಯ ಪ್ರವಹಿಸುವುದೂ ಜನರು ಭತ್ತ ವಿಕ್ರಯಿಸಿ ಮೀನು ಖರೀದಿಸುವುದೂ ಕಾಳು ಮೆಣಸಿನ ಕಟ್ಟುಗಳು ಸಮುದ್ರ ತೀರದಲ್ಲಿ ರಾಶಿ ಹಾಕಲ್ಪಟ್ಟಿರುವುದೂ ಹಡಗದಲ್ಲಿ ಬಂದ ಭಂಗಾರವನ್ನು ದೋಣಿಗಳ ಮೂಲಕ ದಡಕ್ಕೆ ಸಾಗಿಸುವುದೂ ಐದನೇ ಶತಮಾನದ ಕವಿ ಪರಣಾರ್ 'ಪುರನಾನೂರ್' ಎಂಬ ಕೃತಿಯಲ್ಲಿ ಚಲೋದಾಗಿ ವರ್ಣಿಸಿದ್ದಾರೆ. ಇಂಗ್ಲೀಷರದನ್ನು ಕ್ರೇಂಗನೂರ್ ಎಂದರು.

ವಂಚಿ ಪಟ್ಟಣ

ಚೇರ ರಾಜಧಾನಿಯಾಗಿದ್ದ ವಂಚಿ ಪಟ್ಟಣವು ಕೊಡುಂಗಲ್ಲೂರಿಗೂ ತಿರುವಂಚಿಕುಳಕ್ಕೂ ಸಮೀಪವಾಗಿತ್ತು.

ವಂಚಿ ಪಟ್ಟಣದ ಸೌಂದರ್ಯವನ್ನೂ ಸುಭದ್ರತೆಯನ್ನೂ ವರ್ಣಿಸಿದ ಹಳೆಯ ಕಾಲದ ಕವಿಗಳು ಅಲ್ಲಿನ ಸೈನಿಕರ ವಾದ್ಯಘೋಷದ ಬಗ್ಗೂ ವರ್ಣಿಸಿದ್ದಾರೆ.

ಮದ್ಯಪಾನದ ಶರುವಾಯ ಪ್ರತಿಯೊರ್ವನೂ 'ಮಧು ಪಾತ್ರೆ'ಯನ್ನು ಇತರರತ್ತ ನೀಡಿದಾಗ ಸ್ನೇಹಿತರು ಆ ಪಾತ್ರೆಗಳನ್ನು ಸ್ವೀಕರಿಸಿ ಕೆಲವು ಬಿಂದುಗಳನ್ನು ಕೈಬೆರಳುಗಳಿಂದ ನೆಲಕ್ಕೆ ಸಿಡಿದು ಆ ಬಳಿಕವೇ ಕುಡಿಯುವ ಪದ್ಧತಿಯಾಗಿತ್ತು; ಆ ಬಿಂದುಗಳೆಲ್ಲವೂ ಒಂದಾಗಿ ಹರಿದು ಬೀದಿಗಳಲ್ಲಿ ಆನೆಗಳ ಚಲನ ವಲನಗಳಿಂದಾಗಿ ಕೆಸರಾಗಿದ್ದುದಾಗಿ ವರ್ಣನೆಯ ಸಾರಾಂಶ.

— ಎಚ್. ಎಂ.

ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
ವಿವಿಧ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)
ಡಾ| ಕೊರಡ್ಕಲ್ ವೆಂಕಟರಾವ್ ವಿರಚಿತ
ಮನೆ - ಮದ್ದು
ಸಾಧಾರಣ ಕಾಯಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ ಖ. ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

"ವಲ್ಲರಿ"

ಓಹೋ! ಸುಮವಲ್ಲರಿ
ಆನಂದದ ಝುಲ್ಲಿ||
ಈಗಾದರೋ ಕಾರ್ಗಾಲ
ನೀ ನಗುವೇ ಕಿಲ—ಕಿಲ!
ನಿನ್ನನಾರಿ ಗೆಲ್ಲಲು?
ನಕ್ಕರೆ ಹೂ ಚಲ್ಲಲೂ!
ಹಬ್ಬಿರುವೆ ಮರದೆತ್ತರ
ನೀ ಕಾಣುವೆ ಬಹು ವಿಸ್ತರ!
ಪಚ್ಚೆ ಹಸುರು ಮಧ್ಯೆ ಮುತ್ತು,
ಕೋಮಲೆ ನಿನದೇನು ಗತ್ತು!
ಈಂಟಿದ ಸೊಗಸನು ಕಣ್ಣು
ನಾಸಿಕ ಪರಿಮಳವನ್ನು!
ಹೀರಲು ಬಂದನು ಭ್ರಮರ,
ನಾನಾಗುವೆ ಬಣ್ಣಗಾರ!

—"ಮಲ್ಲಾರಿ"

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. 14/1967

1) U. ಲಕ್ಷ್ಮೀನಾರಾಯಣ, 2) ಲಲಿತಮ್ಮ, 3) U. ಮುರಲೀಧರ, 4) U. ಶ್ರೀಪತಿ ರಾವ್, 5) U. ರಾಘವೇಂದ್ರಾಚಾರ್ಯ,
6) U. ಮಧ್ವಾಚಾರ್ಯ. 7) U. ಮೋಹನಾಚಾರ್ಯ, 8) U. ಜನಾರ್ಧನಾಚಾರ್ಯ, 9) ಅಕಲಂಕ— — ಮೈನರೀ ಕ್ಷೇನು ಚಂತಕಳು ವ ಗಾರ್ಡಿಯನ್—ತಾಯಿ— 2ನೇಯವಳು—

9ನೇಯವಳು ಉಡುಪಿ ಶ್ರೀನಿವಾಸಾಚಾರ್ಯರ ವಿಧವೆಯೂ ಮಿಕ್ಕವರು ಸದ್ರಿಯವರ ಮಕ್ಕಳಾಗಿಯೂ ಇರುತ್ತಾರೆ— ಉಡುಪಿ ಕಸಬಾ ಭಂಡಾರಿ ಓಣಿಯಲ್ಲಿ ರಥಾನಿವಾಸ ಯೆಂಬಲ್ಲಿರುವವರು— ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ—

ತಾರೀಕು 16—11—1964ರಲ್ಲಿ ಉಡುಪಿ ಶಹಾರಿನಲ್ಲಿ ಮೃತಪಟ್ಟಿದ್ದ ಉಡುಪಿ ಶ್ರೀನಿವಾಸಾಚಾರ್ಯರ ಬಾಬ್ತು ಅರ್ಜಿಯಲ್ಲಿ ವಿವರಿಸಿದ ಸೆಕ್ಯೂರಿಟಿಗಳ ಮತ್ತು ಬೇಂಕ್ ಡಿಪೋಜಿಟಿನಲ್ಲಿರುವ ಹಣವನ್ನು ಪಡೆಯುವರೆ ನಮ್ಮ ಹೆಸರಿನಲ್ಲಿ ವಾರೀಸು ಹಕ್ಕು ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 20—7—1967ಕ್ಕೆ ಇಟ್ಟಿದೆ. ಆಕ್ಷೇಪವುಳ್ಳವರು ಆ ದಿವಸ ಪೂರ್ವಾಹ್ನ 11ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು—

K. Balachandra Rao,
Advocate for Petitioner
Udipi, Dated: 27—6—1967.

Edited, Printed & Published by K. H. Shetty at the Navayuga Press, Udipi S. India

ನವಯುಗ

13—7—1967



೧೦ ಪೈಸೆ

ಕಥಾ ಪ್ರಸಂಚಿ

ಮನೆಗೆ ಬಂದ ಮದುಮಗ

ಕಥೆಗಾರರು:
ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ನನ್ನ ಶಾಲಾ ಜೀವನವು ಮುಗಿದೊಡನೆಯೇ ನಾನು ಕಾಲೇಜು ಸೇರಲು ಮದ್ರಾಸಿಗೆ ಬಂದೆನು. ಕಾಲೇಜು ಆರಂಭವಾಗಲು ಮತ್ತೂ ದಿನಗಳಿದ್ದುದರಿಂದ ನಾನು ಮದ್ರಾಸು ನಗರವನ್ನೆಲ್ಲಾ ತಿರುಗಿ ನೋಡತಕ್ಕದ್ದನ್ನೆಲ್ಲಾ ಕಣ್ತುಂಬಾ ನೋಡಿದೆ. ಒಂದು ದಿನ ಬೀಚಿನಲ್ಲಿ ಸಿಮೆಂಟ್ ಬೆಂಚಿನ ಮೇಲೆ ಕುಳಿತಿದ್ದಾಗ ನನ್ನಷ್ಟೇ ಹರಯದ ತರುಣರಿಬ್ಬರು ಬಂದು ನನ್ನ ಹತ್ತಿರವೇ ಇದ್ದ ಮತ್ತೊಂದು ಬೆಂಚಿನ ಮೇಲೆ ಕುಳಿತರು. ಅವರು ಕೂಡಾ ನನ್ನಂತೆಯೇ ಮದ್ರಾಸಿಗೆ ಹೊಸತಾಗಿ ಬಂದವರು. ಕಾಲೇಜ್ ಕಲಿಯುವುದಕ್ಕಾಗಿಯೇ ಬಂದವರು.

ಕೆಲವು ನಿಮಿಷಗಳ ತರುವಾಯ ಅವರಲ್ಲೊಬ್ಬನು ನನ್ನತ್ತ ತಿರುಗಿ—"ಕ್ಷಮಿಸಿ, ಪಾರ್ಕ್ ಎಲ್ಲಿದೆಯೆಂದು ನಿಮಗೆ ಗೊತ್ತೇನು?" ಎಂದು ಕೇಳಿದನು. ನಾನು ಕೂಡಲೇ ತತ್ತರಿಸಿ "ನನಗೆ ಗೊತ್ತಿಲ್ಲ. ನಾನೂ ಈ ಸ್ಥಳಕ್ಕೆ ಹೊಸತಾಗಿ ಬಂದವನು" ಎಂದೆನು.

"ಹಾಗೋ, ನಾವೆಲ್ಲ ಒಂದೇ ದೋಣಿಯಲ್ಲಿ ಸಾಗುತ್ತಿದ್ದೇವೆ" ಎಂದು ಹೇಳಿ—ಅನರೀರ್ವರೂ ನಗೆಯಾಡಿದರು.

"ನೀವು ಮದ್ರಾಸ್ ನಗರವನ್ನೆಲ್ಲಾ ಸುತ್ತಬೇಕೆಂದು ಬಂದವರಿರಬೇಕಲ್ಲವೇ" ಎಂದೆನು ನಾನು.

'ದಯವಿಟ್ಟು ತಪ್ಪು ಎಣಿಸಬಾರದು. ಕಾಲೇಜಿಗೆ ಸೇರುವುದಕ್ಕಾಗಿಯೇ ಬಂದಿರುವೆವು' ಎಂದರು.

'ನಾನು ಕೂಡಾ ಹಾಗೇ......"

ಈ ರೀತಿಯಾಗಿ ನಮ್ಮ ಸ್ನೇಹವು ಪ್ರಾರಂಭವಾಯಿತು. ಕೆಲವೇ ದಿನಗಳಲ್ಲಿ ನಾವು ಪ್ರಾಣಸ್ನೇಹಿತರೆನಿಸಿದೆವು. ಕಾಲೇಜಿಗೂ ಸೇರಿದ್ದಾಯಿತು. ವಸತಿಗಾಗಿ ರೂಮನ್ನು ಪಡೆದು ಹತ್ತಿರದಲ್ಲೇ ಇರುವ ಹೋಟೆಲೊಂದರಲ್ಲಿ ಊಟದ ಏರ್ಪಾಡನ್ನು ಮಾಡಿದ್ದಾಯಿತು. ಕಾಲೇಜು, ಹೋಟೆಲು, ಸಿನೆಮಾ ಇತ್ಯಾದಿ ಯಾವ ಒಂದು ಕಾರ್ಯಗಳಿಗೂ ನಾವೆಲ್ಲಾ ಜೊತೆಯಾಗಿಯೇ ಹೋಗುತ್ತಿದ್ದೆವು. ನಮ್ಮನ್ನು ಕಂಡು ನಮ್ಮ ಹಲವಾರು ಸ್ನೇಹಿತರು 'ತ್ರಿಮೂರ್ತಿ ದೇವತೆಗಳು' ಎಂದು ಕರೆಯುತ್ತಿದ್ದರು.

ಅವರಲ್ಲಿ ನಾನು ಬಹಳ ಬಡವನು ರಾಮನು, ಸಾಧಾರಣ ಶ್ರೀಮಂತನು. ಕೃಷ್ಣನು ಶ್ರೀಮಂತನಾಗಿದ್ದನು. ಜಮೀನ್ದಾರನ ಮಗನಾಗಿದ್ದನು.

○ ○ ○ ○

ನಮ್ಮ ವಾರ್ಷಿಕ ಪರೀಕ್ಷೆಯು ಮುಗಿದ ಕೂಡಲೇ ನಾವು ನಮ್ಮ ರಜಾ ದಿನವನ್ನು ನಮ್ಮ ತಂದೆ-ತಾಯಿಯರೊಂದಿಗೆ ಕಳೆಯುವುದೆಂದು ನಿರ್ಧರಿಸಿ ನಾನು ತಿರುಚ್ಚಿಗೆ, ಕೃಷ್ಣನು ಮಧುರೆಗೆ, ರಾಮುವು ರಾಮನಾಡಿನಲ್ಲಿರುವ ಹಳ್ಳಿಗೆ ಹೊರಟೆವು. ರಜೆಯನ್ನು ಕಳೆದು ಪುನಃ ನಮ್ಮ ಕಾಲೇಜು ಪ್ರಾರಂಭವಾಗಲು ಸ್ವಲ್ಪ ದಿನಗಳಿರುವಾಗಲೇ ನಾನು ನನ್ನ ಹಿರಿಯರನ್ನು ಬೀಳ್ಕೊಂಡು ರೈಲು ಹತ್ತಿದೆ.

ಒಂದು ಗಂಟೆಯ ನಂತರ ರೈಲು ಒಂದು ಸ್ಟೇಷನ್‌ನಲ್ಲಿ ನಿಂತಿತು. ಹಲವಾರು ಪ್ರಯಾಣಿಕರು ಇಳಿದರು. ಆದದರಿಂದ ನನಗೆ ಕುಳಿತುಕೊಳ್ಳಲು ಅನುಕೂಲವಾಯಿತು. ಕಿಟಕಿಯ ಬದಿಯಲ್ಲಿಯೇ ಕುಳಿತೆನು. ಅಲ್ಲಿಂದ ಹೊರಟ ರೈಲು ಒಂದು ಗಂಟೆಯ ನಂತರ ಒಂದು ಚಿಕ್ಕ ಸ್ಟೇಷನಲ್ಲಿ ತಂಗಿತು. ಆಗ ಮಧ್ಯರಾತ್ರಿಯಾಗಿತ್ತು. ಒಂದು ಹುಡುಗಿಯು ಹದಿನೇಳರ ಹರಯದ ಹುಡುಗಿಯನ್ನು ಕರೆದುಕೊಂಡು ರೈಲಿನ ಪ್ರತಿಯೊಂದು ಕೋಣೆಯೊಳಗೆ ಇಣಿಕಿ ನೋಡುತ್ತಿದ್ದಳು. ಆಗ ಎಲ್ಲಾ ಕೋಣೆಯು ಜನರಿಂದ ತುಂಬಿತ್ತು. ನಾನು ಕಿಟಕಿಯ ಹೊರಗೆ ತಲೆ ಹಾಕಿ ನೋಡುತ್ತಿದ್ದೆ. ಆ ಮುದುಕಿಯು ನನ್ನ ಸಮೀಪವೂ ಬಂದು—ಒಳಗೆ ಇಣಿಕಿ ನೋಡಿ—"ಒಂದು ಸೀಟಾದರೂ ಇದೆಯೇ? ಬೇರೆಲ್ಲೂ ಸೀಟಿಲ್ಲ. ದಯವಿಟ್ಟು ಒಂದು ಸೀಟು ಕೊಡಿಸಿ" ಎಂದಳು ನನ್ನೊಂದಿಗೆ.

'ಒಂದು ಸೀಟು ಮಾತ್ರ ಹೇಗಾದರೂ ಮಾಡಬಹುದು. ಯಾರಿಗೆ?' ನಾನು ಕನಿಕರದಿಂದ ನುಡಿದೆ

'ನನ್ನ ತಮ್ಮನ ಮಗಳು ಮದ್ರಾಸಿಗೆ ಹೋಗಲಿಕ್ಕಿದ್ದಾಳೆ."

'ಹಾಗೋ, ನನ್ನ ಹತ್ತಿರ ಇಲ್ಲಿ ಒಂದು ಸೀಟು ಖಾಲಿ ಇದೆ. ಬೇಕಿದ್ದರೆ ಬರಬಹುದು.'

ಕೂಡಲೇ ಒಬ್ಬ ಆಳು ಅವಳ ಬ್ಯಾಗ್ ಇತ್ಯಾದಿಗಳನ್ನು ಕಂಪಾರ್ಟ್‌ಮೆಂಟಿನೊಳಗೆ ತಂದು ಹಾಕಿದ. ಅಷ್ಟರಲ್ಲಿ ರೈಲಿನ ಮೂರನೇ ಸಿಳ್ಳು ಹೊಡೆಯಿತು. ರೈಲು ನಿಧಾನವಾಗಿ ಚಲಿಸತೊಡಗಿತು. ಶಾಂತಳು ಗಡಿಬಿಡಿಯಲ್ಲಿ ಕಂಪಾರ್ಟ್‌ಮೆಂಟಿನೊಳಗೆ ಹೊಕ್ಕು ಜನರನ್ನು ಬದಿಗೆ ಸರಿಸುತ್ತಾ ತನ್ನ ಸೀಟಿನತ್ತ ಹೋಗಲು ಪ್ರಯತ್ನಿಸಿದಳು. ತನ್ನ ಪರ್ಸನ್ನು ಶಾಂತಾಳು ಮರೆತಿದ್ದಳು. ಅದು ಅವಳ ಅತ್ತೆಯ ಕೈಯಲ್ಲೇ ಇತ್ತು. ಆದರೆ ಅದೃಷ್ಟವಶಾತ್ ಅತ್ತೆಗೆ ಪರ್ಸಿನ ನೆನಪಾಗಿ ಕಿಟಕಿಯ ಬಳಿಗೆ ಓಡಿ ಬಂದು ನನ್ನೊಂದಿಗೆ ಪರ್ಸನ್ನು ಕೊಡುತ್ತಾ 'ಅವಸರದಲ್ಲಿ ಶಾಂತಾ ಪರ್ಸ್ ಮರೆತಿದ್ದಾಳೆ. ಅವಳಿಗೆ ಕೊಡಿರಿ.' ಎನ್ನುತ್ತಿರುವಾಗಲೇ ರೈಲು ಹೊರಟೇ ಬಿಟ್ಟಿತು. ನಾನು ಪರ್ಸನ್ನು ತೆರೆದು ನೋಡಿದಾಗ ಅವಳು ಪಡೆದಿದ್ದ ರೈಲ್ವೆ ಟಿಕೆಟ್ ಇದರಲ್ಲಿತ್ತು. ನನ್ನ ಟಿಕೆಟನ್ನೂ ಅದರೊಳಗಿಟ್ಟು ನನ್ನ ಬ್ಯಾಗಿನಲ್ಲಿ ಪರ್ಸನ್ನು ಇರಿಸಿಕೊಂಡು ಏನು ನಡೆಯುವುದೆಂಬುದನು ಕಾದು ಕುಳಿತೆನು. ಅಷ್ಟರಲ್ಲಿ ಶಾಂತಳು ಹೇಗೂ ನನ್ನ ಸಮೀಪ ಬಂದು ಸೀಟಿನಲ್ಲಿ ಕುಳಿತಳು.

ಸ್ವಲ್ಪ ಹೊತ್ತಿನಲ್ಲಿಯೇ ರೈಲು ಇನ್ನೊಂದು ಸ್ಟೇಷನ್‌ನಲ್ಲಿ ನಿಂತಿತು. ಅಲ್ಲಿ ಅವಳಿಗೆ ಬಾಯಾರಿಕೆಯೆಂದಳು. ಆಗ ನಾನು ಸೋಡವನ್ನು ತರಿಸಿದೆನು. ಶಾಂತಾಳು ತನ್ನ ಪರ್ಸಿಗಾಗಿ ತಡಕಾಡಿದಳು. ತಾನು ಅತ್ತೆಯ ಕೈಯ್ಯಲ್ಲೇ ಬಿಟ್ಟು ಬಂದಿರುವುದಾಗಿ ಆಗ ನೆನಪಿಗೆ ಬಂದು—ಮೂಕಳಂತಾದಳು. 'ಅಯ್ಯೋ, ನನ್ನ ಪರ್ಸನ್ನು ನಾನು ಅತ್ತೆಯ ಹತ್ತಿರವೇ ಬಿಟ್ಟು ಬಂದಿರುವೆ! ಏನು ಮಾಡಲಿ! ಟಿ. ಸಿ. ಬಂದರೆ ನಾನೇನು ಮಾಡಲಿ?" ಎಂದು ಒಮ್ಮೆಲೆ ನುಡಿದಳು.

ನಾನು ನನ್ನ ಪರ್ಸ್ ತೆರೆದು ಸೋಡದ ಹಣವನ್ನು ಕೊಟ್ಟೆನು.

'ನಿನ್ನ ಅವಸರದಲ್ಲಿ ನೀನು ಪರ್ಸನ್ನು ಅತ್ತೆಯಿಂದ ತೆಗೆದುಕೊಳ್ಳದೆ ರೈಲುಗಾಡಿ ಹತ್ತಿರುವೆ. ಅದೃಷ್ಟವಶಾತ್ ಅವರಿಗೆ ನೆನಪಾಗಿ ನನ್ನೊಂದಿಗೆ ಕೊಟ್ಟಿದ್ದಾರೆ" ಎಂದು ಹೇಳಿ ಪರ್ಸನ್ನು ಅವಳಿಗೆ ಕೊಟ್ಟೆನು.

'ಈ ಬಗ್ಗೆ ದೇವರಿಗೆ ತುಂಬಾ ಕೃತಜ್ಞ'

'ನೀನು ನನಗೇ ಕೃತಜ್ಞಳಾಗಬೇಕು."

"ಮೊದಲು ನಿಮಗೆ, ಆ ಮೇಲೆ ದೇವರಿಗೆ....'

○ ○ ○

ಜಮೀನ್ದಾರ್ ರಾಮಚಂದರ್‌ನ ಮೂರನೆಯ ಮಗಳು ಶಾಂತಾಕುಮಾರಿ. ಜಮೀನು, ತೋಟ ಇತ್ಯಾದಿಗಳಿದ್ದ ರಾಮಚಂದರ್‌ನಿಗೆ ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಒಂದನೆ ಮಗನು ಗ್ರ್ಯಾಜುವೇಟ್ ಆಗಿ ಕಮರ್ಷಿಯಲ್ ಬ್ಯಾಂಕಿನ ಮ್ಯಾನೇಜರನಾಗಿದ್ದನು. ಎರಡನೆಯ ಗೋಪಾಲಕೃಷ್ಣ ಎಂಬವನು ಮದ್ರಾಸಿನಲ್ಲಿ ಕಾಲೇಜಿನಲ್ಲಿ ಕಲಿಯುತ್ತಿದ್ದಾನೆ. ಶಾಂತಾಕುಮಾರಿಯ ಇಬ್ಬರು ಅಕ್ಕಂದಿರಿಗೂ ವಿವಾಹವಾಗಿದೆ. ಚಿಕ್ಕಂದಿನಲ್ಲೇ ಗಂಡನನ್ನು ಕಳೆದುಕೊಂಡು ವಿಧವೆಯೆನ್ನಿಸಿದ ಶೇಷಿಯಮ್ಮಾಳ್ ರಾಮಚಂದರ್‌ನ ಅಕ್ಕ. ಅವಳಿಗೆ ಮಕ್ಕಳಿಲ್ಲ. ಅದಕ್ಕಾಗಿಯೇ ಶಾಂತಾಕುಮಾರಿಯು ಮಗುವಾಗಿರುವಾಗಲೇ ತಾನೇ ಅವಳನ್ನು ತಂದು ಮನೆಯಲ್ಲಿ ಸಾಕಿ ಬೆಳೆಸಿದ್ದಳು. ಶೇಷಿಯಮ್ಮಾಳ್‌ಳಿಗೆ ತನ್ನ ಗಂಡನ ಆಸ್ತಿಯಿತ್ತು. ಜೀವನ ಹೇಗೂ ಹೋಗುತ್ತಿತ್ತು.

ಶಾಂತಾ ಕುಮಾರಿಯ ಶಾಲಾ ಜೀವನ ಮುಗಿಯಲು ಅವಳನ್ನು ಮದ್ರಾಸಿಗೆ ಉಚ್ಚ ಶಿಕ್ಷಣಕ್ಕಾಗಿ ಕಳುಹಿಸಿಕೊಟ್ಟಳು. ಅವಳ ಅತ್ತೆ. ಬೇಸಿಗೆಯ ರಜೆಯಲ್ಲಿ ವರ್ಷಕ್ಕೊಮ್ಮೆ ಮಾತ್ರ ತನ್ನ ತಂದೆ ತಾಯಿಯರಲ್ಲಿಗೆ ಹೋಗಿ ವಿಶ್ರಮಿಸಿ ಬರುತ್ತಿದ್ದಳು. ಚಿಕ್ಕಂದಿನಿಂದಲೂ ಅತ್ತೆಯೇ ಸಲಹಿದುದರಿಂದಾಗಿ, ತನ್ನ ತಂದೆ ತಾಯಿಯರಿಗಿಂತಲೂ ತನ್ನ ಅತ್ತೆಯೊಡನೆಯೇ ಅವಳಿಗೆ ಬಹಳ ಸಲುಗೆ, ಪ್ರೀತಿ; ಈಗ ಹದಿನೇಳರ ಹರಯದ ಶಾಂತಾ ಚೆಲುವೆಯಾಗಿ ಕಾಣುತ್ತಿದ್ದಳು. ಆಕರ್ಷಣೆಯು ಮೈಕಟ್ಟು ಅವಳಲ್ಲಿತ್ತು.

ರೈಲು ಹೋಗುತ್ತಲೇ ಇತ್ತು. ಆಗಲೇ ಮಧ್ಯರಾತ್ರಿಯಾಗಿತ್ತು. ನನಗೆ ನಿದ್ರೆಯು ಜೊಂಪು ಬರಹತ್ತಿತು. "ನಿನಗೂ ನಿದ್ರೆ ಬಂದರೆ ಸ್ವಲ್ಪ ಒರಗಿಕೋ" ಎಂದು ಹೇಳಿ ನಾನು ನನ್ನ ಸೀಟಿನಲ್ಲೇ ಸ್ವಲ್ಪ ಒರಗಿಕೊಂಡೆ. ನಮಗಿಬ್ಬರಿಗೂ ನಿದ್ರೆ ಬಂದಿತು. ಬೆಳಗ್ಗಿನ ಜಾವ ನಾಲ್ಕು ಗಂಟೆಯ ಹೊತ್ತಿಗೆ ನಾನು ಎದ್ದು ಕುಳಿತೆ. ಅವಳಿಗೂ ಎಚ್ಚರವಾಗಿತ್ತು.

ಆ ಮೇಲೆ ನಮ್ಮ ರೈಲು ಒಂದು ಸ್ಟೇಷನ್‌ನಲ್ಲಿ ನಿಂತಿತು ನಾನು ಸ್ನಾನದ ಕೋಣೆಗೆ ಹೋಗಿ ಬಂದೆ. ಆಗಲೇ ಟಿ. ಸಿ. ಅಧಿಕಾರಿ ನಮ್ಮ ಕಂಪಾರ್ಟ್‌ಮೆಂಟಿಗೆ ಪ್ರವೇಶಿಸಿ ಟಿಕೇಟ್ ಪರಿಶೀಲಿಸತೊಡಗಿದ ನಾನು ನನ್ನ ಮುಖವನ್ನು ಕಿಟಕಿಯ ಹೊರಬದಿಗೆ ಚಾಚಿ ಹೊರಬದಿಯ ದೃಶ್ಯಗಳನ್ನು ವೀಕ್ಷಿಸುತ್ತಿದ್ದೆ.

"ಟಿಕೆಟ್, ಟಿಕೆಟ್ ಪ್ಲೀಸ್ ಎಂದು ಹೇಳಲು ಅವಳು ಟಿಕೆಟಿಗಾಗಿ ತನ್ನ ಪರ್ಸ್ ತೆಗೆದಳು. ಅಷ್ಟರಲ್ಲಿ ಟಿ. ಸಿ. ನನ್ನನ್ನು ಪೆನ್ಸಿಲಿನಿಂದ ಚುಚ್ಚಿ ಟಿಕೆಟ್ ಪ್ಲೀಸ್' ಎಂದು ಹೇಳಲು ನಾನು ಅವನತ್ತ ಮುಖ ಮಾಡಿದೆ.

ಆಗ ಅವನಿಗೆ ಆಶ್ಚರ್ಯವಾಯಿತು. 'ನೀನು, ನೀನು, ಬಾಲನ್! ಯಾವ ಕಡೆ ಪ್ರಯಾಣ? ಕ್ಷೇಮವೇ? ನಮ್ಮ ಭೇಟಿಯಾಗದೆ ಮೂರು ತಿಂಗಳಾಯಿತು" ಎಂದು ಒಮ್ಮೆಲೇ ನುಡಿದನು.

ಅಷ್ಟರಲ್ಲಿ ಶಾಂತಳು ಪರ್ಸ್ ತೆರೆದು ಟಿಕೆಟಿಗಾಗಿ ತಡಕಾಡುತ್ತಿರಲು ಅದರಿಂದ ಎರಡು ಟಿಕೆಟುಗಳು ಕೆಳಗೆ ಬಿದ್ದವು. ಅವಳು ಅದನ್ನು ಹೆಕ್ಕುವ ಮೊದಲೇ ಟಿ. ಸಿ. ಹೆಕ್ಕಿ ತೆಗೆದುಕೊಂಡನು. ಶಾಂತಾಳ್ ಎರಡು ಟಿಕೆಟ್ ಎಲ್ಲಿಂದ ಎಂದು ಆಶ್ಚರ್ಯಪಟ್ಟಳು. ಆ ಟಿಕೆಟುಗಳಲ್ಲಿ— ಒಂದು

(ಎಂಟನೇ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೋಟೆಲ್ ಶಿವಪ್ರಸಾದ

ಫೋನ್ 77 ಕುಂದಾಪುರ, ದ. ಕ.

ನಲ್ವತ್ತಾರನೆ ವರ್ಷ
Telephone 226.

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೬	೧೩—೭—೧೯೬೭	No. 46

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮
++
ಜಾಹೀರಾತು ದರಗಳು:
ಅಧಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++
ಸೂಚನೆಗಳು
ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.
ಚಂದಾದಾರರಿಗೆ—
ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.
ಮುಖಪತ್ರದಲ್ಲಿ:

ಮತ್ತೊಂದು ತೆಲಂಗಾಣ

ಪಶ್ಚಿಮ ಬಂಗಾಲದ ವಿದ್ಯಮಾನಗಳನ್ನು ಇಡಿಯ ದೇಶವೇ ಕಣ್ಣಿನಲ್ಲಿ ಎಣ್ಣೆ ಸುರಿದು ನೋಡಿಕೊಳ್ಳುತ್ತಿದೆ. ನಕ್ಸಲ್‌ಬಾರಿಯಲ್ಲಿನ ಶಾಂತಿ—ಸುವ್ಯವಸ್ಥೆಗಳು ಧೂಳಿಧೂಸರಿತವಾಗಿವೆಯೆಂಬುದಕ್ಕೆ ಪ್ರತ್ಯಕ್ಷ ಪ್ರಮಾಣಗಳು ದೊರೆಯುತ್ತಿವೆ. ಅಲ್ಲಿ ಕಮ್ಯೂನಿಸ್ಟರ ಕಾರಸ್ಥಾನವು ನಡೆದಿದ್ದು ಈಗಲೂ ಅದು ಮುಂದುವರಿಯುತ್ತಲೇ ಇದೆ. ಇದರ ಗಾಳಿಯು ಅನ್ಯತ್ರ ಹರಡಿದ್ದುದರಿಂದಲೇ "ಘೇರಾವೊ"ದ ದುಷ್ಟ ವರ್ತನೆಯು ಪಶ್ಚಿಮ ಬಂಗಾಳದಲ್ಲಿ ಎಲ್ಲೆಲ್ಲೂ ಕಾಣಿಸಿತು; ಅದು ಉಲ್ಬಣವೂ ಗೊಳ್ಳುತ್ತಿದೆ. ಇದೇ ರೀತಿ ಮುಂದುವರಿದರೆ, ಇಡಿಯ ಪಶ್ಚಿಮ ಬಂಗಾಳದಲ್ಲಿ ಶಾಂತಿ—ಸುವ್ಯವಸ್ಥೆಗಳು ಕೈ ಬಿಡುವ ದಿನಗಳೂ ನಿಕಟ ಭವಿಷ್ಯದಲ್ಲೇ ಗೋಚರಿಸಿದರೂ ವಿಸ್ಮಯಪಡಬೇಕಾಗಿಲ್ಲ.

ಕೇಂದ್ರ ಸರಕಾರದ ಗೃಹಮಂತ್ರಿಗಳು ರಾಜ್ಯದ ವಿದ್ಯಮಾನಗಳ ಬಗ್ಗೆ ಆಸಕ್ತಿ ತಳೆದಿದ್ದು, ಪರಿಸ್ಥಿತಿ ಕೈಮೀರುವುದಕ್ಕೆ ಮೊದಲೇ ಅದನ್ನು ಹತೋಟಿಗೆ ತರಬೇಕೆಂಬ ಇಚ್ಛೆಯುಳ್ಳವರಾಗಿದ್ದರು. ಇದಕ್ಕಾಗಿ ಕೇಂದ್ರದ ಸರ್ವಪ್ರಕಾರದ ನೆರವನ್ನೂ ಅವರು ರಾಜ್ಯ ಸರಕಾರಕ್ಕೆ ನೀಡುವುದಾಗಿ ವಿಶ್ವಾಸವಿತ್ತಿದ್ದರು. ಆದರೆ, ಪಶ್ಚಿಮ ಬಂಗಾಳದ ಸಂಯುಕ್ತ ಸರಕಾರವು ಈ ಕಡೆಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲ; ಇಂದಿಗಾದರೂ ಅದು ಪರಿಸ್ಥಿತಿ ಗಂಡಾಂತರಕಾರಿಯಲ್ಲವೆಂಬ ದೃಢ ನಂಬುಗೆಯನ್ನೇ ತಳೆದಂತಿದೆ. ಇದಕ್ಕೆ ಇರುವ ಮುಖ್ಯ ಕಾರಣವೆಂದರೆ, ಅಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ರಾಜ್ಯದ ಸಚಿವ ಸಂಪುಟದಲ್ಲಿಯೇ ಇರುವ ಭಿನ್ನಾಭಿಪ್ರಾಯ. ಮುಖ್ಯ ಮಂತ್ರಿ—ಉಪ ಮುಖ್ಯ ಮಂತ್ರಿಗಳು (ಇವರಿಬ್ಬರೂ ಬೇರೆ ಬೇರೆ ಪಕ್ಷಕ್ಕೆ ಸೇರಿದವರು) ಪರಸ್ಪರ ಅವಿಶ್ವಾಸದಿಂದಲೇ ಒಬ್ಬರನ್ನೊಬ್ಬರು ನೋಡುತ್ತಿದ್ದಾರೆ. ಒಬ್ಬರು ಸೂಚಿಸಿದ ಕ್ರಮವು ಮತ್ತೊಬ್ಬರಿಗೆ ಸರ್ವಥಾ ಒಪ್ಪಿತವಾಗುವಂತಿಲ್ಲ. ಹಾಗಾಗಿ ನಕ್ಸಲ್‌ಬರಿಯೆಂಬುದು ರಾಜ್ಯ ಸರಕಾರದ ಪಾಲಿಂದಿರುವ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ಉಳಿದಿದೆ. ಇದರಿಂದಾಗಿಯೇ ಅಲ್ಲಿನ ಜನತೆಯ ಶಾಂತಿ ಭಂಗವಾಗಿದೆ. ಅಲ್ಲಿ ಕಮ್ಯೂನಿಸ್ಟರು ತಮ್ಮ ಪ್ರಚಾರದ ದೊಡ್ಡ ಸತ್ರಗಳನ್ನೇ ತೆರೆದಿರುವಂತಿದೆ. ಇದುವರೆಗೆ ಸಂಭವಿಸಿದ ಅನೇಕಾನೇಕ ದುರ್ಘಟನೆಗಳು, ಹಿಂಸಾಕೃತ್ಯಗಳು ಮತ್ತು ಕಾಯಿದೆ ಬಾಹಿರವೆನಿಸಿದ ಚಟುವಟಿಕೆಗಳು ನಾಗರಿಕ ಅಧಿಕಾರಗಳಿಗೆ ತೀವ್ರ ಕಳವಳವನ್ನುಂಟುಮಾಡಿವೆ. ಕಮ್ಯೂನಿಸ್ಟರು ತಮ್ಮ ದಾನವತೆಯಿಂದ ಅಲ್ಲಿ ನರ್ತಿಸುವುದರೊಡನೆ—ವ್ಯವಸ್ಥೆಗೂ ದೊಡ್ಡ ಸವಾಲು ಹಾಕಿದ್ದಾರೆ. ಇತ್ತೀಚೆಗೆ ಅಲ್ಲಿಗೆ ಕಂಪುಚೀನೀಯ ರಾಯಭಾರಿ ಕಚೇರಿಗೆ ಸಂಬಂಧಿಸಿದ ಪ್ರಮುಖ ಬಹಿಷ್ಕೃತ ವ್ಯಕ್ತಿ ಕೆಲ ಕಮ್ಯೂನಿಸ್ಟರೊಂದಿಗೆ ಸಂದರ್ಶನವಿತ್ತನೆಂದೂ ಗೊತ್ತಾಗಿದೆ. ಈ ಸಂದರ್ಶನದ ಉದ್ದೇಶವೂ ವಿಶದವಾಗಿಯೇ ಇದ್ದಿರಬೇಕು. ಗಲಭೆ ಎಬ್ಬಿಸುವವರು ಶರಣಾಗತರಾಗಬೇಕೆಂದೂ ಸರಕಾರವು ಘೋಷಿಸಿತ್ತು; ಇದಕ್ಕೆ ನೀಡಿದ್ದ ಅವಧಿಯೂ ಕೊನೆಗೊಂಡಿತ್ತು. ಸರಕಾರವು ಬಾಯಲ್ಲಿ ನಕ್ಸಲ್‌ಬಾರಿ ಹತೋಟಿಯಲ್ಲಿದೆಯೆಂದು ಹೇಳುತ್ತಿರುವುದು ನಿಜ; ಆದರೆ, ಸತ್ಯ ಸಂಗತಿ ಇದಕ್ಕೆ ತುಂಬ ದೂರ. ಗಲಭೆ ಎಳುವವರನ್ನೂ ಶರಣರಾಗಲಿಲ್ಲ. ಇದಕ್ಕೆ ಕ್ರಮ ಕೈಕೊಳ್ಳಬೇಕೇ, ಬೇಡವೇ ಎಂಬುದರ ಬಗ್ಗೆ ಮುಖ್ಯಮಂತ್ರಿ ಅಜಯ ಮುಖರ್ಜಿಯವರಲ್ಲಿ ಉತ್ತರವಿಲ್ಲ. ಇತ್ತೀಚೆಗೆ ಎಡ ಕಮ್ಯೂನಿಸ್ಟ್ ಪಕ್ಷದಿಂದ ಉಚ್ಚಾಟನಹೊಂದಿದ ಸುಶೀಲರಾಯ್ ಚೌಧುರಿಯವರು ಪಶ್ಚಿಮ ಬಂಗಾಳದ ತೀವ್ರಗಾಮಿ ಕಮ್ಯೂನಿಸ್ಟರು "ಸಮಾನಾಂತರ ಪಕ್ಷ"ವೊಂದನ್ನು ಕಟ್ಟುವುದಾಗಿ ಹೇಳುತ್ತಾರೆ. ಕಮ್ಯೂನಿಸ್ಟ್ ಪಕ್ಷದ ಸಾಮಾನ್ಯ ಸದಸ್ಯರನ್ನು ಆಕರ್ಷಿಸಿ 'ನವಪರಿಷ್ಕರಣ'ವಾದಿಗಳನ್ನು ಪ್ರತ್ಯೇಕಿಸುವುದು ಈ ಹೊಸ ಪಕ್ಷದ ಉದ್ದೇಶವೆಂದೂ ಹೇಳಲಾಗಿದೆ. "ನವಪರಿಷ್ಕರಣವಾದವು 'ಮಾವೊವಾದ'ವೆನ್ನುವುದರಲ್ಲಿ ಅಭ್ಯಂತರವಿಲ್ಲ. ನಕ್ಸಲ್ ಬಾರಿಯು, ಹಿಂದೆ ತೆಲಂಗಾಣವು ಕಮ್ಯೂನಿಸ್ಟರ ಕೈಗೊಂಬೆಯಾಗಿ ನವೆದಂತೆ, ನವೆಯುತ್ತಿದೆ. ಇದಕ್ಕೆ ಕಮ್ಯೂನಿಸ್ಟರು ಬೀಜ ಬಿತ್ತಿದವರು; ರಾಜ್ಯ ಸರಕಾರದ ಅಸಹಾಯಕತೆ ಅದನ್ನು ಬೆಳೆಸುತ್ತಿದೆ.

ಇತ್ತೀಚೆಗೆ ಕೇಂದ್ರ ಸಚಿವ ಸಂಪುಟದಲ್ಲಿ ನಕ್ಸಲ್ ಬಾರಿಯ ಬಗ್ಗೆ ಭಾರಿ ಚರ್ಚೆ ನಡೆಯಿತು. ಅಲ್ಲಿನ ಶಾಂತಿ—ವ್ಯವಸ್ಥೆಗಳನ್ನು ರಕ್ಷಿಸಲು ರಾಜ್ಯ ಸರಕಾರವು ಹಿಂಜರಿಯುತ್ತಿರುವುದರಿಂದ, ದೇಶದ ಹಿತದೃಷ್ಟಿಯಿಂದ ಕೇಂದ್ರವು ಹಸ್ತಕ್ಷೇಪ ಮಾಡಬಾರದೇಕೆ — ಎಂಬ ಪ್ರಶ್ನೆಯೆದ್ದಿತು. ರಾಜ್ಯದ ವಿದ್ಯಮಾನಗಳ ಹೊಣೆ ರಾಜ್ಯಕ್ಕೆ; ಅಲ್ಲಿ ಕೇಂದ್ರವು ಕೈಹಾಕಬಹುದಾದರೂ ರಾಜ್ಯ ಸರಕಾರವು ಅದನ್ನು ಮೆಚ್ಚುವುದಿಲ್ಲವಾದರೆ? ಅಜಯ ಮುಖರ್ಜಿಯವರ ಸರಕಾರ ಕೇಂದ್ರದ ಹಸ್ತಕ್ಷೇಪವನ್ನು ಎಂದಿಗೂ ಬಯಸುವುದಿಲ್ಲ; ಆದರೂ ಕೇಂದ್ರದ ಆ ಜನ ಒಳಗೊಳಗೇ ತುಂಬಿತ್ತು. ಶ್ರೀ ಚವನರು ಇತ್ತೀಚಗೆ ಒಂದು ಹೇಳಿಕೆಯಿತ್ತು ಇವರ ಹಾಗೂ ಎತ್ತರದ ಭ್ರಮನಿರಸನ ಮಾಡಿದರು. ಪಶ್ಚಿಮ ಬಂಗಾಳದ ಈಗಿನ ವಿದ್ಯಮಾನಗಳಿಂದಾಗಿ ಕೇಂದ್ರವು ಹಸ್ತಕ್ಷೇಪ ಮಾಡುವುದಿಲ್ಲವೆಂದು ಭರವಸೆಯಿತ್ತರು. ಬಂಗಾಳವು ನಮ್ಮ ಗಡಿಯ ರಾಜ್ಯ. ಅಲ್ಲೀಗ ಹರಡಿರುವುದೀಗ ಮಾವೋ ಕೆಂಪು ತತ್ವದ ಪ್ರಚಾರ. ಇದು ದೇಶದ್ರೋಹದ ಕಾರ್ಯ. ಇದು ನಿಲ್ಲದೆ ಹೋದರೆ, ಕ್ರಮ ಕೈಗೊಳ್ಳಲು ರಾಜ್ಯ ಸರಕಾರ ಅಸಮರ್ಥವಾಯಿತು ಎಂದರೆ, ಆಡಳಿತೆಯು ಕುಸಿದಂತೆಯೇ ಸರಿ. ಇಂತಹ ಪರಿಸ್ಥಿತಿಯೊದಗಿದಾಗ ದೇಶವನ್ನು ಉಳಿಸುವುದಕ್ಕಾಗಿ ಕೇಂದ್ರವು ಬಂಗಾಳದಲ್ಲಿ ಹಸ್ತಕ್ಷೇಪ ಮಾಡಲು ಹಿಂಜರಿಯಬಾರದು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಮೊದಲೇ ಎಚ್ಚರಿರಬೇಕು.

ವಚನ ಸುಧೆ

ಯೋ ಧರ್ಮಮರ್ಥಂ ಕಾಮಂ
ಚ ಯಥಾ ಕಾಲಂ ನಿಷೇವತೇ
ಧರ್ಮಾರ್ಥಕಾಮ ಸಂಯೋಗೇ
ಸೋಮುತ್ರೇಹ ಚ ವಿದಂತಿ॥

ಸಮಯಾನುಸಾರ ಧರ್ಮ, ಅರ್ಥ ಮತ್ತು ಕಾಮಗಳನ್ನು ಸೇವಿಸುವವನು ಇಹ ಮತ್ತು ಪರಗಳಲ್ಲಿ ಧರ್ಮಾರ್ಥ ಮತ್ತು ಕಾಮಗಳನ್ನು ಹೊಂದುತ್ತಾನೆ.

ಕಾಲಕ್ಕೆ ಕೈ ಮುಗಿತ

ಒಂದು ಕಾಲದಲ್ಲಿ ಪಾನಪ್ರತಿಬಂಧ ಶಾಸನವನ್ನು ಮಾಡುವುದರಲ್ಲೇ ಆದರ್ಶವಿದೆಯೆಂದು ನಂಬಿದ್ದ ಕಾಂಗ್ರೆಸ್ಸಿನ ವರ್ತನೆ ಇದಕ್ಕೆ ತೀರ ವಿರುದ್ಧವಾಗಿದೆ ಇಂದು. ಇಂದಿನ ಕಥೆ ಮನೆಯಲ್ಲಿ ಇಲಿ ಇದೆಯೆಂ

(ಹತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 115/67. O. S. 364/64.
ಕುಪ್ಪಯ್ಯ ಸೆಟ್ಟಿ — ಅರ್ಜಿದಾರ.
1. ಕೃಷ್ಣಿ ಹೆಂಗಸು, 2. ಕಾಳ, 3. ನಾಗ, 4. ಗೋವಿಂದ, ಕುಂದಾಪುರ ತಾಲ್ಕು ದೇವಲ್ಕುಂದ ಗ್ರಾಮ — ಎದ್ರಿರು.
ಈ ಮೂಲ್ಕ ಎದ್ರಿರಿಗೆ ತಿಳಿಯ ಪಡಿಸುವುದೇನೆಂದ್ರೆ—
ಡಿಕ್ರಿದಾರನು ಡಿಕ್ರಿಯ ಪ್ರಕಾರ ತನಗೆ ಬರತಕ್ಕ ಆವೇಜು ನ್ಸಲಿ ಬಗ್ಗೆ ಎದ್ರಿರ ಹಕ್ಕಿನ ಆಸ್ತಿಯನ್ನು ಜಪ್ತು ಮಾಡಿ ಏಲಂಗೆ ಅಪೇಕ್ಷಿಸಿ ಏಲಂ ಇಸ್ತಿಹಾರು ಹಾಜರ್ಪಡಿಸುತ್ತಾನೆ. ತಾ. 3-8-67ಕ್ಕೆ ಸದ್ರಿ ಅರ್ಜಿ ಇನ್ನಾರಿಯಲ್ಲಿ ಇಸ್ತಿಹಾರು ಶರ್ತ ನಿರ್ಣಯಕ್ಕೆ ಇಟ್ಟಿರುತ್ತದೆ ಆಕ್ಷೇಪ ಇದ್ದಲ್ಲಿ ಆ ದಿವ್ಸ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ exparte ಹುಕುಂ ಆಗುತ್ತದೆ.
(ಹುಕುಂ ಪ್ರಕಾರ.)
H. Laxminarayanayya
Advocate for petitioner.
ಕುಂದಾಪುರ, 8—7—67.

ಅಹಮ್ಮದಾಬಾದಿನಲ್ಲಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟ್ ಇದರ ಕಳೆದ ವರ್ಷದ ಪದವೀದಾನ ಸಮಾರಂಭದಲ್ಲಿ ಶ್ರೀ ಎಂ. ಸಿ. ಬಾಗ್ಲಾರವರು ಲಕ್ಷ್ಮೀಪ್ರಸಾದ ಬೇಪ ಎಂಬವರಿಗೆ ಯೋಗ್ಯತೆಯ ವಿದ್ಯಾರ್ಥಿ ವೇತನ ಬಹುಮಾನವನ್ನು ಕೊಡುತ್ತಿರುವುದು.

ವರಸಣ್ಣನ ಸರಸ



"ಪಠ್ಯ ಪುಸ್ತಕಗಳಲ್ಲಿ ಅಬದ್ಧ ಶಬ್ದಗಳೇ ತುಂಬಿ ಹೋಗಿವೆಯಂತೆ..."
"ಕುಲವ ನಾಲಿಗೆಯರುಹಿತು, ಅಷ್ಟೆ."

ಗೇಹೆ ರಾಜ್ಯದಲ್ಲಿ

ಸೀಟಿ ಸಿಂಗಾರವಾದಾಗ . . . .

'ಓಯ್, ಇದು ಎಂಥದ್ರಿ....'

"ಯಾವುದ?"

'ನೋಡಿ, ಇವತ್ತಿನ ಪೇಪ್ರಿನಲ್ಲಿದೆ ನೋಡಿ..."

'ಏನು?'

'ಅಯ್ಯೋ, ಪೇಪ್ರು ನೋಡ್ಲಿಲ್ವೆ?"

"ಛೆ....ಛೆ.... ನೋಡದೆ ಉಂಟೆ?'

"ಇದ್ರೂ ನನ್ನ ಬಾಯಿಂದ್ಲೇ ಕೇಳೋ ಆತುರ... ಹ್ಞಾಂ....?

"ಪಾಪ, ನಿನ್ನ ಬಾಯಿಂದ ಮಾತು ಹೊರಟರೆಂದ್ರೆ ಮುತ್ತು ಉದುರಿತೆಂತ ಅರ್ಥ ಅಲ್ವೆ?"

'ಸಾಕು ಬಿಡೀಂದ್ರೆ....ನೋಡಿ, ಹೀಗೆ ಆದ್ರೆ, ಮುಂದೆ ಗತಿಯೇನೂಂತ__"

"ಅದನ್ನಾದ್ರೂ ನೀನೂಂತ, ನಾನು ರಿಗೇಂತ ತಿಳಿಯದೆ ಗತಿಯನ್ನು ಗೊತ್ತು ಮಾಡೋದು ಹ್ಯಾಗೇಂತ...'

'ನೋಡಿ, ಇವತ್ತಿನ ಪೇಪ್ರಿನಲ್ಲಿ ಬಂದಿತ್ತು....ಯುನೋದ ಜನರಲ್ ಎಸೆಂಬ್ಲಿಯ ಕಥೆ....'

'ಅದ್ಯಾವ ಕಥೆ....?'

"ಅಲ್ರಿ, ಮೊನ್ನೆ ಅರಬರೂ ಇಸ್ರೇಲಿಗರೂ ಯುದ್ಧ ಆಯ್ತು ನೋಡಿ ..."

'ಅಯ್ಯೋ, ಅದೆಂಥದ್ದ? ಯುದ್ಧ ಮೊದಲೂ ಆಯಿತು; ಕೊನೆಯೂ ಕಂಡಿತು..."

"ಅದು ಹೌದ್ರಿ, ಆದ್ರೆ ಇಸ್ರಾಯೇಲು ಅರಬ ದೇಶಗಳ ಕೆಲವೊಂದು ಭೂಭಾಗಗಳನ್ನು ಹಿಡಿದು ಕೊಂಡಿದೆ ತಾನೆ?"

"ಹೌದು...."

"ಅಲ್ಲಿಂದ ಅದು ಹಿಂದೆ ಸರಿಯಬೇಕು ಎಂದು ಕೇಳಿಕೊಳ್ಳುವ ಗೊತ್ತುವಳಿ ಪರಾಜಿತವಾಯಿತಂತೆ....'

"ಇಸ್ರಾಯೇಲ್ ಸಾಮ್ರಾಜ್ಯವಾದಕೀಜ್ಯೆ...'

"ಏನಿದು?'

"ಅಲ್ಲಾ, ಇಸ್ರಾಯೇಲ್ ಗೆದ್ದಿತು; ಗೆದ್ದ ಎತ್ತಿನ ಬಾಲ ಹಿಡಿದು ಬಿಡುವುದು."

'ಆ ಹ ಹ....ನಿಮ್ಮ ಚಂದವೆ?'

"ಅಲ್ಲ, ಇನ್ನು ಯಾಕೆ ಚಂದವಾಗ್ಬೇಕು?"

'ಇಲ್ಲವಾದ್ರೂ ಭಾರೀ ಚಂದದವ್ರು...'

"ಅಲ್ವೆ, ಹೆಸ್ರೇ ಚಂದ ಇರುವಾಗ ಮತ್ತ್ಯಾವುದು ಚಂದ ಏಕೆ ಇರ್ಬೇಕು? ನಿನ್ನಲ್ಲಿ ಯಾವುದೂ ಇಲ್ಲವಲ್ಲಾ...."

'ಹೋಗ್ಲಿ ಬಿಡಿ....'

"ಇರೋದನ್ನು ಬಿಟ್ಟುಬಿಟ್ರೆ ಮತ್ತೆ ನಾನೂ ನಿನ್ನ ಹಾಗೇನೇ ಆಗಬೇಕಾಗಬಹುದು....'

'ಹೌದು, ನಾ ವು ಇರೋದನ್ನೆಲ್ಲ ಬಿಟ್ಟು ಬಿಟ್ಟಿದ್ದೇನೆ. ಅಲ್ವೆ...ಏನೇನು ಕೇಳಬೇಕಾಗಿದೆಯೋ, ನಿಮ್ಮ ಬಾಯಿಯಿಂದ....?'

'ಅಯ್ಯೋ, ಏನೇ ಇದು? ಹಾಗೆಲ್ಲಾ ಮಾಡಿದ್ರೆ ಮತ್ತೆ ಮಾತನಾಡುವುದಾದ್ರೂ ಹೇಗೆ? ನೋಡು, ನಿನ್ನ ಇಂದಿರಾ ಗಾಂಧಿಗೆ ಭಾರಿ ದುಃಖ ಆಗಿರಬೇಕು...."

'ಯಾಕೆ?'

'ಮತ್ಯಾಕೆ? ಅಲಿಪ್ತ ನೀತಿಯ ಸಾರ್ವಭೌಮ ಶಾಂತಿ ಮಂತ್ರ ಪಾಠಕರಿಗಾದ ಪರಾಭವ ತಾನೇ ಇದು?'

"ಅಂದರೆ?"

"ನೋಡು, ಭದ್ರತಾ ಮಂಡಳದಲ್ಲಿ ಪಾಶ್ಚಾತ್ಯರು (ಅಮೇರಿಕಾ — ಬ್ರಿಟನ್) ಮೊದಲೇ ಆಟವಾಡಿ ಯುದ್ಧ ನಿಲ್ಲಿಸಬೇಕೆಂದು ಮಾತ್ರ ಅಂದು ಅಂಬರನ್ನೂ ಇಸ್ರೇಲಿಗಳನ್ನೂ ಕೇಳಿಕೊಳ್ಳುವಂತೆ ಮಾಡಿದರು....'

'ಅದು ಹೌದು. ಯಾವಾಗಲೂ ಯುದ್ಧ ಪೂರ್ವ ಗುಂಟೆಕ್ಕೆ ಮರಳಬೇಕೆಂದೂ ಅದೇ ವೇಳೆ ಕರೆ ನೀಡುವುದು ಸಂಪ್ರದಾಯ ತಾನೆ? ಪಾಕಿಸ್ತಾನ ನಮ್ಮ ಮೇಲೆ ಆಕ್ರಮಣ ಮಾಡಿದಾಗ, ನಾವವರನ್ನು ಬಡಿದೋಡಿಸಿದಾಗ ಭದ್ರತಾ ಮಂಡಳಿ ಮಾಡಿದ್ದು ಹೀಗೆ ಅಲ್ಲವೆ?"

"ನೋಡು, ಅದೇ ಸಮಯದಲ್ಲಿ ಭಾರತ ಹಿಂದೆ ಸರಿಯುವಂತೆಯೂ ಕೇಳಿಕೊಳ್ಳಬೇಕೆಂದು ಸೂಚಿಸಿತ್ತು. ಆದರೆ, ಅದು ಸಾಧ್ಯವಾಗಲಿಲ್ಲ.'

'ಅದು ಹೌದು. ಒಮ್ಮೆಗೆ ಯುದ್ಧವಾದರೂ ನಿಲ್ಲಲಿ ಎಂದು ಸಮರ ವಿರಾಮದ ಕರೆಗೆ ಬೆಂಬಲ ನೀಡಿತ್ತು ಭಾರತ."

"ಹ್ಞಾಂ...ಆದರೆ, ಇದು ನೋಡು, ಇಸ್ರೇಲ್ ತಾನು ಹಿಡಿದುಕೊಂಡ ಅರಬ ಭಾಗವನ್ನು ತಾನಾಗಿ ಬಿಟ್ಟು ಕೊಡಲು ಸಿದ್ಧವಿಲ್ಲ, ಭದ್ರತಾ ಮಂಡಳಿಯು ಹಾಗೆ ಕೇಳಿಕೊಳ್ಳಲಿಲ್ಲ. ಸಂಯುಕ್ತ ರಾಷ್ಟ್ರ ಸಂಘವೂ ಕೇಳಿಕೊಳ್ಳಲಿಲ್ಲ. ವಿಫಲವಾಯಿತು, ಅಂದರೆ, ಅರಬರ ನೆಲ ಅರಬರಿಗಿಲ್ಲ ಎಂದಾಯಿತು."

'ನೋಡಿ, ನಾನೂ ಹೇಳಿದ್ದು ಇದೇನೇ. ಇದರಲ್ಲೆಲ್ಲಾ ಅಮೇರಿಕೆಯ ಕೈವಾಡ ತುಂಬ ಇದೆ. ಇಲ್ಲವಾದರೆ ರಾಷ್ಟ್ರಗಳು ಗೈರು ಹಾಜರಾಗುವುದೆಂದರೆ ಅರ್ಥವೇನು?

"ಇದಕ್ಕೆ ಅರ್ಥವೂ ಇದೆ."

"ಏನು?'

"ಸುಯೇಜ ಕಾಲುವೆ, ಅಕಾಬ ಜಲಸಂಧಿಗಳ ಸಂಬಂಧದಲ್ಲಿ ಪಾಶ್ಚಾತ್ಯರಿಗೆ ಹಿತಕಾರಕವಾದ ಒಡಂಬಡಿಕೆಯು ಸಾಧ್ಯವಾದರೆ, ಏನಾದರೂ ಆಗಬಹುದು.'

"ಅಂದರೆ, ನ್ಯಾಯ—ಅನ್ಯಾಯ ಬೇಡ.'

"ರಾಜಕೀಯ ಧರ್ಮಕೀಯದಲ್ಲಿ ನ್ಯಾಯ— ಅನ್ಯಾಯ ಯಾವುದೂ ಇಲ್ಲ.... ಗೆದ್ದವರ ಪಕ್ಷವೇ ನ್ಯಾ ಯ ಶೀ ಲ, ಏಕೆಂದರೆ, ಅದು ಶಕ್ತಿ ಶೀಲ.

'ಅದು ಸರಿ, ಧರ್ಮಕೀಯ ಅಂದರೆ..'

'ಅದು ಹೊಸ ಶಬ್ದ ಸಂಪತ್ತು. ಅದೂ ರಾಜಕೀಯದ ಪರ್ವತ ಪ್ರಸವ...'

'ಅಂದರೆ...'

'ಅಂದರೆ, ನೋಡು, ಇದು ಮೊದಲು ಇಡಿಯ ಭಾರತದಲ್ಲಿ ನ ಡೆ ಯು ತ್ತಿ ತ್ತು. ಮುಂದೆ, ಗುಡ್ಡಗಾಡಗಳಿಗೆ ಪರಿಸೀಮಿತವಾಯಿತು. ಆದರೆ, ಈಗದು ಮತ್ತೆ ಬಯಲಿಗೆ ಇಳಿಯುತ್ತಿದೆ.'

'ಅಂದರೆ, ಏನು? ಹೇಳಬಾರದೆ?"

'ಓಹೋ, ನೋಡು, ಬಿ ಹಾ ರ ದ ಲ್ಲಿ ಬರಗಾಲ ಇದೆ ... ಭಾ ರ ತೀ ಯ ರು ಆಹಾರಕ್ಕಾಗಿ ತೊಳಲಾಡುತಿದ್ದಾರೆ. ಅಲ್ಲಿ ಕ್ರೈಸ್ತ ಮಿಶನರಿಗಳು ಅನ್ನದ ಪ್ರಲೋಭನೆಯನ್ನು ತೋರಿಸಿ ಮತಾಂತರ ಕಾರ್ಯ ನಡೆಸಿ, ಧರ್ಮಕೀಯದ ನಾಟಕ ಆಡುತಿದ್ದಾರೆ...'

"ಹ್ಞಾಂ...."

"ಇದೆಲ್ಲಾ ಹೀಗೇ ನಡೆದರೆ, ನಮ್ಮ ಗತಿ ಏನಾದೀತೂಂತ?"

'ಬಿಹಾರದಲ್ಲಿ ಬಿಹಾರಿ ಲ್ಯಾಂಡ್ ಬೇಕು ಎಂದು ಇನ್ನೊಬ್ಬ ಪಾದ್ರಿ ತಾನು ತಯಾರಿಸಿದ ಭಾರತೀಯ ಕ್ರಿಸ್ತೀಯರಿಗೆ ಪಾಠ ಕಲಿಸಬಹುದು...."

'ದುಃಖವೆಂದರೆ, ನಾವು ಭಾರತೀಯರು, ನಮ್ಮ ಸೋದರರು ಪಡುವ ಪಾಡನ್ನು ಕಂಡೂ ಅಂಥವರ ಚರ್ಮವನ್ನು ಸುಲಿದು ಡೋಲು ತಯಾರಿಸುತ್ತಿದ್ದೇವೆ; ಅವರ ರಕ್ತವನ್ನು ಹೀರಿಯೇ ಬೊಜ್ಜು ಬೆಳೆಸುತ್ತೇವೆ...."

'ಅಂದರೆ..."

"ಕೇಳೆ, ಇತ್ತೀಚೆಗೆ ಭಾರತದ ಬಗ್ಗೆ ವಿದೇಶೀ ಪತ್ರಿಕೆಗಳು ಬರೆಯುತ್ತ ಬಂದಿದ್ದುವು—ಇದೊಬ್ಬ ಸಂದರ್ಶಕನ ವರದಿಯಿಂದಾನ್ನು—ಬಿಹಾರದಲ್ಲಿ ನಿಮ್ನ ಜಾತಿಯ ಜನರು ಹೆಚ್ಚು. ಆದುದರಿಂದ ಇಲ್ಲಿ ಆಹಾರದ ಅಭಾವ ಕಾಣಿಸಿದಾಗ, ಉಳಿದ ಉಚ್ಚ ಜಾತಿಯವರಿರುವ ರಾಜ್ಯಗಳು ಆಹಾರವೊದಗಿಸಿ ಅವರನ್ನು ಬದುಕಿಸುವಲ್ಲಿ ಆಸಕ್ತಿ ವಹಿಸುವುದಿಲ್ಲ ಎಂದು...."

'ಅದಕ್ಕೇ ಇಸಾಯಿ ಕಸಾಯಿಗಳು ಅಲ್ಲಿ ಬಂದು ತಮ್ಮ ಧರ್ಮಕೀಯದ ಆಹಾರವಿತ್ತು ಬಲೆ ಬೀಸುತಿದ್ದಾರೆ....'

'ಹೌದು. ಆದರೆ ನೋಡು. ಒಬ್ಬ ಆಂಗ್ಲ ಎಂಡ್ರ್ಯೂಸ್...'

'ಹ್ಞಾಂ, ಕೇಳಿದ್ದೇನೆ, ಮಹಾತ್ಮರ ಶಿಷ್ಯ..."

(ಒಂಭತ್ತನೇ ಪುಟ ನೋಡಿರಿ)

ಕ್ಷಾಮ ನಿವಾರಣೆಗಾಗಿ

ಇಂದೇ

ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ವರೆಗೆ ಕೊಡದೆ ಇರುವವರು ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಬಗ್ಗೆ ಮನಿ ಆರ್ಡರ್ ಶುಲ್ಕ, ಅಂಚೆ ವೆಚ್ಚ ಮತ್ತು ರಿಜಿಸ್ಟ್ರೇಶನ್ ಚಾರ್ಜು ಕೊಡಬೇಕಾಗಿಲ್ಲ. ಔಷಧಿ, ಬಟ್ಟೆಬರೆ, ಡಬ್ಬಿಗಳಲ್ಲಿ ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಾಟ, ಮತ್ತು ರೈಲ್ವೆ ವೆಚ್ಚಗಳು, ವರಮಾನ ತೆರಿಗೆ, ಅಬಕಾರಿ ಮತ್ತು ಸುಂಕ ಇತ್ಯಾದಿಗಳಲ್ಲಿ ರಿಯಾಯಿತಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 146/67.

ಮಾದಪ್ಪ [illegible] ಕೊಠಾರಿ — ವಾದಿಯು.

[illegible] ಹಂದೆ ಕೊಠಾರಿ [illegible].

[illegible] ಕೋಟೇಶ್ವರ ಗ್ರಾಮದ [illegible] 1, (3rd defendant) ಮತ್ತು ಲಕ್ಷ್ಮೀನಾರಾಯಣ [illegible] 1, (7th defendant, ಕೊಠಾರಿ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಕೇಸಿನ ಪ್ರತಿವಾದಿಯಿಂದ [illegible] ತಾರೀಕು 29—7—67ಕ್ಕೆ ತನಿಖೆ ಬಗ್ಗೆ ಇಟ್ಟಿರುತ್ತದೆ. ಆ ದಿನದಲ್ಲಿ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿನ ನೀವು ಸ್ವತಹಾ ವ ಪ್ಲೀಡರ ಮುಖಾಂತ್ರ ಹಾಜರಾಗಿ ನಿಮ್ಮ ಉಜ್ರನ್ನು [illegible] ಸಂಗತಿಯನ್ನು ನಿಮಗೆ ಈ ಮೂಲಕ ತಿಳಿಸಿಯದೆ.

(By order of the court)

A. Narayan Rao
Advocate for Plaintiff.

Coondapoor, 7—7—67.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 765/62. S. E. P. 30/1967.

ಪದ್ಮಾವತಿ ಯಾನೆ ಕೃಷ್ಣಬಾಯಿ
—ಅರ್ಜಿದಾರಳು.

1. ಹಸನ ಸಾಹೇಬ್ರ 2. ಲಕ್ಷ್ಮಿ ಶೇರೆಗಾರ್ತಿ ಸಹಾ —ಎದ್ರಿರು.

ಎದ್ರಿ. ಹಸನ್ ಸಾಹೇಬ, ಮಾವುದ ಉಮ್ಮರ ಸಾಹೇಬರ ಮಗ, ಕುಂದಾಪುರ ತಾಲೂಕು ಯಡ್ತರ ಗ್ರಾಮ ಇವರಿಗೆ—

ಅರ್ಜಿದಾರಳು ಮೇಲ್ಕಂಡ ಡಿಕ್ರಿಯನ್ನು 2ನೇ ಎದ್ರಿಯಿಂದ ಟ್ರಾನ್ಸ್‌ಫರ ಪಡೆದು ಟ್ರಾನ್ಸ್‌ಫರ ಮಂಜೂರು ಬಗ್ಗೆ ಅರ್ಜಿದಾರಳು ಮೇಲ್ಕಂಡ ಅಮಲ್ಜಾರಿ ಮಾಡಿರುತ್ತಾಳೆ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 26—7—1967ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯಿ ಮುಂದಿನ ಹುಕುಂ ನೀಡಲಾಗುವುದು ಎಂಬ ಸಂಗ್ತಿ ನಿಮಗೆ ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ತಿಳಿಸಲಾಗಿಯದೆ.

K. Raghunatha Shenoy
Advocate for Petr.

Coondapoor, 6—7—67.

ಅಭಿಪ್ರಾಯ

ದೇಶ ದ್ರೋಹಕ್ಕೆ ಉಗ್ರ ದಂಡನೆ ಬೇಕು

ಚೀನಾ—ಭಾರತಗಳ ರಾಯಭಾರಿಗಳ ಸಂಬಂಧದ ಹಗರಣ ಒಂದು ಘಟ್ಟಕ್ಕೆ ಬಂತು ನಿಂತಿತು. ಆದರೆ, ಇದು ಇಲ್ಲಿಗೇನೇ ಮುಗಿಯುವುದಿಲ್ಲ. ದೇಶದ ಒಳಗಣ ಅಶಾಂತಿ ಹೆಚ್ಚುತ್ತಿರುವಂತೆ ಹೊರಗೂ ದೇಶದ ಶಾಂತಿಗೆ ಭಂಗ ಬರುತ್ತಿದೆ. ಚೀನೀಯ ರಾಯಭಾರಿ ಕಚೇರಿಯ ಕೆಲವು ನೌಕರರನ್ನು ಭಾರತದಿಂದ ಚೀನಾಕ್ಕೆ ಕಳಿಸಲಾಯಿತು ನಿಜ. ಆದರೆ, ಈ ಚೀನೀಯ ಪರಿವಾರಕ್ಕೆ ಸಂಬಂಧಿಸಿದ ಮಹಿಳೆಯರು ಇನ್ನೂ ಇಲ್ಲೇ ಇದ್ದಾರೆ. ಈ ಮಹಿಳೆಯರು ತಮ್ಮ ಪೂಜ್ಯ ಪತಿದೇವರು ಮಾಡುತ್ತಿದ್ದ ಕಾರ್ಯಗಳನ್ನೇ ಮತ್ತೂ ಮುಂದುವರಿಸುವುದರಲ್ಲಿ ನಿಸ್ಸೀಮರು.

ಭಾರತವು ಶಾಂತಿಪ್ರಿಯವೆಂದ ಮಾತ್ರಕ್ಕೆ ದೇಶದಲ್ಲಿ ಶಾಂತ ರಸವೇ ತುಂಬಿ ತುಳುಕುತ್ತಿದೆ ಎನ್ನುವುದು ವ್ಯಂಗ್ಯೋಕ್ತಿಯಾದೀತು. ನಕ್ಸಲ್‌ಬರಿಯ ಹೊಯ್ದಾಟ, ಮಿಜೋ—ನಾಗಾಗಳ ಬಂಡಾಟ, ಬೆಂಗಳೂರಿನ ಶಾಸ್ತ್ರೀಜಿಗಿನ ಹೊಡೆದಾಟ—ಇವೆಲ್ಲವೂ ಒಂದೊಂದು ನಿದರ್ಶನ ಮಾತ್ರ. ದೇಶವ್ಯಾಪ್ತವಾದ ಆಹಾರ—ಅರ್ಥ ಉದ್ಯಮ ಮೊದಲಾದ ಅಶಾಂತಿಗೆ ಮಿತಿಯಿಲ್ಲ— ಅಂದರೆ, ಶಾಂತಿಪ್ರಿಯ ದೇಶ ಭಾರತ ಅಶಾಂತಿಯನ್ನೂ ಎದುರಿಸುತ್ತಿದೆ.

ಭಾರತದ ಸಂಸ್ಕೃತಿ ಮಾನವೀಯತೆಯಿಂದ ಪ್ರೇರಿತವಾದುದು. ಈ ಮಾನವೀಯತೆಯ ಆಧಿಕ್ಯದಿಂದಲೇ ನಾವೂ, ನಮ್ಮ ದೇಶವೂ ಪರಾಕ್ರಮಣಕ್ಕೆ ತುತ್ತಾಗುವಂತಾಯಿತು — ವಿದೇಶೀಯರನ್ನು— ಮಿತಿಮೀರಿ ಆದರಿಸಿದುದರಿಂದಲೇ ನಮ್ಮ ಸಂರಕ್ಷಣಾ ವಿಭಾಗಗಳನ್ನೂ ಅವರ ಮುಂದ ಬಿಚ್ಚಿ ತೋರಿದ್ದರಿಂದಲೇ ಚೌ ಎನ್ ಲಾಯ್ ಆಕ್ರಮಣ ಮಾಡಿದುದು, ಪಾಕಿಸ್ತಾನವೂ ಧಾಳಿಯಿಟ್ಟಿತು.

ನಾರಿಯೆಂದರೆ ಭಾರತೀಯರಿಗೆ ಪೂಜ್ಯ. ನಾರಿಯರ ಆಮಿಷವನ್ನು ತೋರಿಸಿಯೇ ವಿದೇಶೀಯರು ಭಾರತೀಯರನ್ನು ಹಿಂದೆಯೇ ದುರ್ಬಲಗೊಳಿಸಿದರು. ಅವರನ್ನು ನೈತಿಕವಾಗಿ ಕೆಡಿಸುವಲ್ಲಿ ಒಂದು ಹೆಜ್ಜೆ ಮುಂದುವರಿಸಿದರು. ಭಾರತೀಯರ ರಹಸ್ಯಗಳನ್ನು ಈ ನಾರಿಯರ ಮೂಲಕ ಅರಿತು, ಇವರನ್ನು ಮುಷ್ಟಿಯಲ್ಲಿಟ್ಟು ತಲೆತಗ್ಗಿಸುವಂತೆ ಮಾಡಿದರು. ಇದು ಇಂದಿಗೂ ತಪ್ಪಿಲ್ಲ. ಚೀನೀ ರಾಯಭಾರಿ ಕಚೇರಿಗೆ ಸಂಬಂಧಿಸಿದ ನಾರಿಯರು ಏನು ಮಾಡುತ್ತಿರಬಹುದು? ಅವರನ್ನು ಇಲ್ಲಿ ಇಟ್ಟುಕೊಂಡಿರುವ ಉದ್ದೇಶವಾದರೂ ಏನು?

ರಾಜತಾಂತ್ರಿಕ ಸಂಬಂಧವನ್ನು ಕೆಂಪು ಚೀನದೊಡನೆ ಕಡಿದುಕೊಳ್ಳಬಾರದು—ಇದು ಭಾರತ ಸರಕಾರದ ದದಿಮದನಾ ನಂತರ ಹೊರಟ ನವನೀತ ಇರಬಹುದು—ಸಂಬಂಧ ಕಡಿದು ಕೊಳ್ಳುವುದರಿಂದ ಇಡಿಯ ದೇಶದ ಹಿತಕ್ಕೆ ತೊಂದರೆಯಂತೆ ಸರಿ. ರಾಜಕಾರಣದ ಸೂಕ್ಷ್ಮತ್ರವನ್ನು ರಾಜಕಾರಣಿಗಳೇ ಬಲ್ಲರು; ಶ್ರೀಸಾಮಾನ್ಯನೇನು ಬಲ್ಲ? ಆದರೆ, ಆತ ಒಂದು ಮಾತು ಹೇಳಬಲ್ಲ, ಭಾರತೀಯರ ರಹಸ್ಯಗಳನ್ನು ಸಂಗ್ರಹಿಸುವುದಷ್ಟೇ ಚೀನೀ ರಾಯಭಾರಿ ಕಛೇರಿಯ ಉದ್ದೇಶವೆಂಬುದಾದರೆ, ಅದನ್ನು ಆದಷ್ಟು ಶೀಘ್ರದಲ್ಲೇ ಬರ್ಖಾಸ್ತು ಮಾಡುವುದೇ ಒಳ್ಳೆಯದು.

ಇಂದು ದೇಶದಲ್ಲಿ ಪಂಚಮ ದಳೀಯರ ಕಾರ್ಯಭಾರ ನಿರಂತರವಾಗಿ ಸಾಗುತ್ತಿರುವಂತೆ ಭಾಸವಾಗುತ್ತಿದೆ. ಇಲ್ಲಿನ ಕಮ್ಯುನಿಸ್ಟರಲ್ಲಿ ಇಬ್ಬಣಗಳಿವೆಯಾದರೂ, ಕೆಂಪು ಚೀನೀಯರ ಹಸ್ತಕರದ್ದೇ ಮೇಲುಗೈಯಾಗಿದೆ. ಕೇರಳದಲ್ಲಂತೂ ಶಸ್ತ್ರರಂಗದ ಹೆಸರಿನಲ್ಲಿ ನಡೆಯುವುದು ಇವರದ್ದೇ ಅಧಿಕಾರ. ಬಂಗಾಳದಲ್ಲೂ ಇದೇ ಕಥೆ. ಉಳಿದೆಡೆಯಲ್ಲೂ ಬೇಳೆ ಬೇಯಿಸುವ ಕಲೆ ಇವರ ಕರಗತವಾಗಿದೆ. ಕಳೆದ ಚುನಾವಣೆಯ ವೇಳೆ ಕೆಂಪು ಚೀನಾದಿಂದ ಇವರು ಧನ ಪಡೆದಿದ್ದಾರೆಂಬುದು ಬರಿಯ ಊಹಾಪೋಹವಿದ್ದರೂ ಇರಬಹುದು—ಆದರೆ, ಇವರಿಗೆ ಭಾರತದಲ್ಲಿನ ನಿಷ್ಠೆಗಿಂತ ಚೀನದಲ್ಲಿ ಅಧಿಕ ಆಸಕ್ತಿ ಎಂಬುದಕ್ಕೆ ಅವರ ಉದ್ಗಾರಗಳ ಸಾಕ್ಷಿಯೇ ಸಾಕು.

ಹಿಂದೆಯೂ ಇಂದೂ ಈ ಕಮ್ಯೂನಿಸ್ಟರು ಮಾಡುವುದು ಒಂದೇ—ಭಾರತದ ರಹಸ್ಯಗಳನ್ನು ಕ್ರಮಬದ್ಧವಾಗಿ ಕೆಂಪು ಚೀನಾಕ್ಕೆ ಮುಟ್ಟಿಸುವುದ —ಇಂತಹುದೇ ಇನ್ನೊಂದು ಗುಂಪು ಪಾಕಿಸ್ತಾನದಲ್ಲಿ ಕಿಷ್ಕಿಂಧಿ ಅಸ್ತ್ರ ರಹಸ್ಯಗಳನ್ನು ಮಾಟ್ಟಿಸುತ್ತಿದೆ. ಚೀನಾ - ಪಾಕಿಸ್ತಾನಗಳ ಮೈತ್ರಿಯ ರಹಸ್ಯಗಳಲ್ಲಿ ಇದೂ ಒಂದು. ಎರಡೂ ದೇಶಗಳು ತಂತಮ್ಮ ಹಸ್ತಕರಿಂದ ಭಾರತದ ರಹಸ್ಯಗಳನ್ನು ತರಿಸಿಕೊಂಡು, ಅವನು ವಿನಿಮಯ ಮಾಡಿ ಭಾರತವನ್ನು ಬಗ್ಗುಬಡಿಯಲು ಸೊಂಟಕಟ್ಟಿವೆ. ಪಾಕಿಸ್ತಾನಕ್ಕೆ ಕಾಶ್ಮೀರವೊಂದು ಸಾಕು, ಕೆಂಪು ಚೀನಾಕ್ಕೆ ಉಳಿದ ಭಾರತವೇ ಬೇಕು.

ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮ ಮಂತ್ರಿ ಮಾಗಧರ ನಾಲಿಗೆ ಬಹಳ ಸಡಿಲಾಗಿದೆ. ಅಮೆರಿಕೆಯ ದಂಡನಾಯಕರಾಗಿ ದ್ವಿತೀಯ ಮಹಾಯುದ್ಧದಲ್ಲಿ ಮಿತ್ರ ಪಕ್ಷಕ್ಕೆ ಜಯಶ್ರೀಯನ್ನೊದಗಿಸಿದ ಮೇ| ಜ| ಮೆಕ್ ಆರ್ಥರ್‌ರು ಕೊರಿಯಾ ಯುದ್ಧದಲ್ಲಿ ಅಮೆರಿಕೆ ಜಯಗಳಿಸಬೇಕಾದರೆ, ಆಟಂ ಬಾಂಬಿನ ಪ್ರಯೋಗ ನಡೆಸಬೇಕಾದೀತು ಎಂದು ಒಂದು ಮಾತಿನಿಂದ ಪದಚ್ಯುತರಾದರು. ಸತ್ಯದ ಹೆಸರಿನಲ್ಲಿ ರಹಸ್ಯ ಸ್ಫೋಟವಾಗುವಂತಹ ಅನ್ಯಾಯ ಶಾಸಕರು ಮಾಡುವಷ್ಟು ಮತ್ತಾರೂ ಮಾಡುವುದಿಲ್ಲ. ಇದಕ್ಕೆ ಮಿತಿ ಹೇರಬೇಕು. ದೇಶದ ಭದ್ರತೆ—ರಕ್ಷಣೆಗಳಿಗೆ ಹಾನಿಕಾರಕವಾಗಬಹುದಾದ ಮಿಲಿಟರಿ ವಿಚಾರಗಳನ್ನು ಸಂಸತ್ತಿನಲ್ಲಿಯೇ ಆಗಲಿ ಬಹಿರಂಗ ಪಡಿಸಬಾರದು. ಸಂರಕ್ಷಣಾ ವಿಭಾಗಗಳಿಗೆ ವಿದೇಶೀಯರನ್ನು ಕರೆದುಕೊಂಡು ಹೋಗಬಾರದು—ಸ್ವದೇಶೀಯರಿಗಂತೂ ನಿಯಂತ್ರಣವಿದೆ. ಈ ವಿಭಾಗದ ನೌಕರರ ಮುಖದಿಂದಲೂ ರಹಸ್ಯ ಹೊರಬೀಳದಂತೆ ಎಚ್ಚರಿಕೆಯಿರಬೇಕು.

ನಮ್ಮ ಆಡಳಿತೆಯಲ್ಲಿ ಬಿಗುವು ಬಾರದೆ ಇದಾವುದೂ ಸಾಧ್ಯವಿಲ್ಲ. ದೇಶದ್ರೋಹದ ಕೃತ್ಯವೆಸಗಿದವನಿಗೆ ಅವನು ಸ್ವದೇಶಿಯರಲಿ, ವಿದೇಶಿಯರಲಿ—ಉಗ್ರ ದಂಡನೆಯೇ ದೊರೆಯಬೇಕು—ಇಲ್ಲವಾದರೆ ನವತಿಯನ್ನು ನೆಮ್ಮದಲ್ಲಿ ದೇಶದ ಮಾನವರು ಒಬ್ಬೊಬ್ಬರಿಂದಾಗಿ ಪರರ ಉದರದಲ್ಲಿ ಸಮಾವೇಶಗೊಳ್ಳುವ ಭೀತಿಯಿದೆ.

ಜಗತ್ತು ಆತನ ಪುಟ್ಟ ಕೈಗಳಲ್ಲಿ

ಚಿಕ್ಕ ಗೋಪು ತನ್ನ ಪುಟ್ಟ ಕೈಗಳಲ್ಲಿ ಚಿತ್ರ ಪುಸ್ತಕವನ್ನು ಹಿಡಿದು ಜಗತ್ತಿನ ಕೌತುಕಗಳನ್ನು ಕಂಡು ಆನಂದಿಸುತ್ತಿದ್ದಾನೆ. ಸುತ್ತಣ ಸೋಜಿಗಗಳನ್ನು ಅರಿಯುವ ತಿಳಿಯುವ ಕುತೂಹಲ ಚಿತ್ತವೇ ಆತನ ಮನಸ್ಸನ್ನು ವಿಕಸಿಸಲು ನೆರವಾಗಬಲ್ಲುದು. ಶಿಶುವಿರಲಿ, ಬಾಲಕನಿರಲಿ ಹೆಚ್ಚು ಹೆಚ್ಚು ತಿಳಿದಂತೆ ಜಗತ್ತು ಅಷ್ಟು ಚಿಕ್ಕದಾಗಿ ಕಾಣುತ್ತದೆ.

ಹೆತ್ತವರಾದ ನಾವು ಮಕ್ಕಳಲ್ಲಿ ಉತ್ತಮ ಹವ್ಯಾಸಗಳಲ್ಲಿ ಆಸಕ್ತಿ ಚಿಗುರುವಂತೆ ಮಾಡಿ, ಮನಸ್ಸು ಬೆಳೆದಂತೆ, ಬದುಕಿಗೆ ಅನುವಾಗುವ ಆ ಹವ್ಯಾಸಗಳೂ ಅವರಲ್ಲಿ ಬೆಳೆಯುವುದನ್ನು ಕಂಡು ಆನಂದ ಪಡಬೇಕು. ನಿಮ್ಮ ಮಕ್ಕಳ ಬೆಳವಣಿಗೆಗೆ, ವಿದ್ಯಾಭ್ಯಾಸಕ್ಕೆ ಹಾಗೂ ಮುಂದಿನ ಉದ್ಯೋಗ ಜೀವನಕ್ಕಾಗಿ ಅವರಿಗೆ ಯೋಗ್ಯ ಅವಕಾಶವನ್ನು ನೀಡಲು ನೀವು ಇಂದೇ ಸನ್ನಾಹ ಮಾಡಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ನಿಮ್ಮ ಮಕ್ಕಳ ಹೆಸರಿನಲ್ಲಿ ಕ್ಯುಮುಲೇಟಿವ್ ರೆಕರಿಂಗ್ ಖಾತೆಯನ್ನು ತೆರೆದು, ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬಂದಲ್ಲಿ ನಿಮ್ಮ ಮಕ್ಕಳ ಭವಿಷ್ಯಕ್ಕೆ ಒಂದು ಭದ್ರ ತಳಹದಿಯನ್ನು ನೀವು ನೀಡಿದಂತಾಗುವುದು.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು ಮಣಿಪಾಲ, ಮೈಸೂರು ರಾಜ್ಯ

ಪ್ರಾಮಾಣಿಕ ಸಹಕಾರದಿಂದ ಅಭ್ಯುದಯ ಸಾಧ್ಯ

ಮಣಿಪಾಲ, ಜೂನ್ 20—ಎಕಾಡೆಮಿ ಆಫ್ ಜನರಲ್ ಎಜುಕೇಶನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ ಎಂ ಎ ಪೈಯವರು ಇಂದಿಲ್ಲಿ ಮಾತನಾಡುತ್ತಾ, ಅಜ್ಞಾನವನ್ನು ಹೋಗಲಾಡಿಸುವ ಪ್ರಯತ್ನದಲ್ಲಿ ಪ್ರಾಮಾಣಿಕವಾದ ಪ್ರಬಲ ಸಹಕಾರ ಇದ್ದರೆ ಅಭ್ಯುದಯ ಉಂಟಾಗುತ್ತದೆಂಬುದನ್ನು ಎಕಾಡೆಮಿಯ ಪ್ರಗತಿ ಸ್ಪಷ್ಟಪಡಿಸಿದೆ ಎಂದರು.

ಕಳೆದೊಂದು ವರ್ಷದಲ್ಲಿ ಹೊಸ ಸಂಸ್ಥೆಗಳನ್ನು ಸ್ಥಾಪಿಸುವ ಬದಲಾಗಿ ಈಗಾಗಲೇ ಸ್ಥಾಪಿಸಿರುವ 20 ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ಗಮನ ಕೊಡಲಾಯಿತೆಂದು ಎಕಾಡೆಮಿಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಅವರು ವರದಿಯನ್ನೋದುತ್ತಾ ತಿಳಿಸಿದರು. ಎಕಾಡೆಮಿಯ ಶಾಲಾ ಕಾಲೇಜುಗಳು ಕಳೆದ ಮಾರ್ಚ್ ಎಪ್ರಿಲ್ ತಿಂಗಳುಗಳಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶಗಳಿಸಿವೆ ಎಂದರು.

ಎಕಾಡೆಮಿಯ ಕಾಲೇಜುಗಳ ಸ್ಥಾಪನೆಗಾಗಿ ಎರಡೂವರೆ ಕೋಟಿ ರೂಪಾಯಿಗಳಿಗೂ ಮಿಕ್ಕಿ ವಿನಿಯೋಗಿಸಲಾಗಿದೆ ಎಂದು ಅವರು ನುಡಿದರು. ಅವುಗಳಲ್ಲಿ ಒಟ್ಟು ಹತ್ತು ವಿದ್ಯಾರ್ಥಿಗಳಿದ್ದುದರಿಂದಲೂ, ಅವುಗಳಿಂದ ಶಿಕ್ಷಣ ಪಡೆದವರೂ, ಪದವಿಯೋತ್ತರ ಪದವೀಧರರೂ ಆವರೆಗೆ ತೇರ್ಗಡೆಯಾಗಿದ್ದಾರೆಂದೂ ಒಟ್ಟು ಹತ್ತು ಕಾಲೇಜುಗಳ ಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತಾ ತಿಳಿಸಿದರು.

ಎಕಾಡೆಮಿ ಸಂಸ್ಥೆಗಳಲ್ಲಿ ಉತ್ತಮ ಮಟ್ಟ ಕಾಯ್ದುಕೊಳ್ಳಲಾಗುತ್ತಿದೆ ಎಂದು ಅವರು ಹೇಳಿ, ಈಗ ಬೇರೆಯಲ್ಲಿ ಕಾಲೇಜುಗಳಲ್ಲಿ ಪ್ರವೇಶ ಸಿಗದಿರುವ ವಿದ್ಯಾರ್ಥಿಗಳಿಗಾಗಿ ಇನ್ನೂ ಒಂದು ಕಾಲೇಜನ್ನು ಆರಂಭಿಸುವ ಆಲೋಚನೆಯನ್ನು ವ್ಯಕ್ತಪಡಿಸಿದರು.

ಡಾ| ಪೈಯವರ ಅಪಾರ ಸಾಧನೆಯನ್ನೂ ಕ್ರಾಂತಿಕಾರಿ ವಿಚಾರಗಳನ್ನೂ ಶ್ರೀ ಪಿ. ಶ್ರೀಪತಿ ಆಚಾರ್ಯ ಮತ್ತು ಪ್ರೊ|| ಕು. ಶಿ. ಹರಿದಾಸ ಭಟ್ಟರವರು ಪ್ರಶಂಸಿಸಿದರು. ಸಭೆಯು ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.



ಸತ್ಯಕ್ಕೆ ದೂರವಾದ ಈ ರಾಜಕೀಯ ಅಪಪ್ರಚಾರ ಇನ್ನಾದರೂ ನಿಲ್ಲಲಿ

ತಾರೀಖು 18-6-1967ರ ಉಡ್ಪಿಯಿಂದ ಹೊರಡುವ "ವಿಕಾಸ" ವಾರ ಪತ್ರಿಕೆಯಲ್ಲಿ "ಸೋತ ಅಭ್ಯರ್ಥಿಗಳ ಪ್ರತೀಕಾರದ ಪ್ರತಾಪ" ಹಾಗೂ "ಕುಂದಾಪುರದಲ್ಲಿ ಉದ್ದೇಶಪೂರ್ವಕ ರಾಜಕೀಯ ದ್ವೇಷ ಸಾಧನೆಯೇ?" ಎಂಬ ದುರುದ್ದೇಶಪೂರ್ವಕ ಲೇಖನವನ್ನೋದಿ ಬೆಚ್ಚಿ ಬೆರಗಾದೆ. ಆದರೂ ಸತ್ಯವನ್ನು ತಿಳಿಯುವ ದೃಷ್ಟಿಯಿಂದ ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಸಂಬಂಧಪಟ್ಟವರನ್ನು ಈ ವಿಚಾರದಲ್ಲಿ ಕೇಳಿ ತಿಳಿದು ವಿಚಾರಿಸಿದಾಗ ಮೇಲಿನ ವಿಚಾರ ಸತ್ಯಕ್ಕೆ ಅತೀ ದೂರವಾದದು ಹಾಗೂ ಸ್ಥಳೀಯ ಸಂಸ್ಥೆಗಳ ಮೇಲೆ ಸದಾ ಕೆಸರೆರಚುವ ಹವ್ಯಾಸವೆಂದು ನನಗೆ ತಿಳಿದು ಬಂದಿದೆ. ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯು ಉದ್ದೇಶಪೂರ್ವಕವಾಗಿ ಅಥವಾ ರಾಜಕೀಯ ಹಿನ್ನೆಲೆಯಿಂದಾಗಲೀ ಯಾರನ್ನೂ ವರ್ಗಾವರ್ಗಿ ಮಾಡಲಿಲ್ಲವೆಂದು ಸಕಾರಣವನ್ನು ಕೊಟ್ಟು ತಿಳಿಸ ಬಯಸುತ್ತೇನೆ. ಯಾವುದೇ ಸಂಸ್ಥೆಯ ಮೇಲೆ ವಿಮರ್ಶಕವಾದ ರಚನಾತ್ಮಕ ಟೀಕೆಗಳಿದ್ದರೆ ಅದನ್ನು ಎಲ್ಲರೂ ಸ್ವಾಗತಿಸುತ್ತಾರೆ. ಹಾಗಿಲ್ಲದೇ ಕೇವಲ ಸ್ಥಳೀಯ ಸಂಸ್ಥೆಗಳ ಮೇಲೆ ಈ ರೀತಿಯಲ್ಲಿ ರಾಜಕೀಯ ಬಣ್ಣ ಬಳಿದು ವಿಷ ಕಾರುವುದು ಯಾವ ಗಂಧರ್ವ-ಕೀಚಕರಿಗೂ ಭೂಷಣವಲ್ಲವೆಂದು ಬಲ್ಲವರು ತಿಳಿಯುತ್ತಾರೆ. ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಕುರಿತು ....

ಇವರಿಗೆ ಕಳೆದ ವರ್ಷವೇ ವರ್ಗವಾಗಿತ್ತು. ಆ ವರ್ಗಾವರ್ಗಿಯನ್ನು ತಾಲೋಕು ಅಭಿವೃದ್ಧಿ ಮಂಡಲಿಯೇ ರದ್ದುಪಡಿಸಿ ಅವರನ್ನು ಆ ಹೈಸ್ಕೂಲಿನಲ್ಲೇ ಒಂದು ವರ್ಷ ಮುಂದುವರಿಸಲಾಗಿತ್ತು. ಆದರೆ ಈ ವರ್ಷ ಆ ಒಂದು ಹೈಸ್ಕೂಲಿಗೆ ಪಿ. ಯು. ಸಿ. ಗೆ ಬಯೊಲೊಜಿ ಕೊಡಬೇಕೆಂದು ಕೇಳಿಕೊಳ್ಳಲಾಗಿದ್ದು ಸದ್ರಿ ಪಾಠವು ಮಂಜೂರಾಗಿದ್ದು ಆ ಪಾಠದಲ್ಲಿ ಎಂ. ಎಸ್. ಸಿ ಪದವಿ ಹೊಂದಿದ ಅಧ್ಯಾಪಕರನ್ನು ಈ ಒಂದು ಹೈಸ್ಕೂಲಿಗೆ ತಂದು, ಈ ಹೈಸ್ಕೂಲಿನ ಅಧ್ಯಾಪಕರನ್ನೂ ಆ ಹೈಸ್ಕೂಲಿಗೆ ವರ್ಗಾಯಿಸುವುದು ಅನಿವಾರ್ಯವಾಗಿತ್ತು. ಇಲ್ಲದೆ ಈ ವರ್ಗಾವರ್ಗಿ ಬಗ್ಗೆ ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಮಾನಸಿಕ ಅನುಕಂಪನವನ್ನು ಪಡೆಸ. ಅಂತಹ ಇನ್ನಾವುದೇ ಕಾರಣವನ್ನೂ ಕೊಟ್ಟು ಅರ್ಜಿಯನ್ನು ಅಧಿಕಾರಿ ಸ್ಥಾನಕ್ಕೆ, ತನ್ನ ವರ್ಗಾವಣೆಯನ್ನು ರದ್ದು ಪಡಿಸುವರೇ ಕೊಟ್ಟಿದ್ದಿಲ್ಲ. ಅಥವಾ ಆ ಒಂದು ಹೈಸ್ಕೂಲಿನ ಊರಿನವರಾಗಲೀ ಸಾರ್ವಜನಿಕ ಸಂಘ ಸಂಸ್ಥೆಗಳಾಗಲೀ ಆ ಮುಖ್ಯೋಪಾಧ್ಯಾಯರನ್ನು ಅಲ್ಲಿಯೇ ಇರಗೊಡಿಸಬೇಕೆಂದು ಮನವಿ ಮಾಡಿಕೊಂಡಿದ್ದು ಇಲ್ಲ. ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಸಹೋದರರು ಸಹಾ ಅಧ್ಯಾಪಕರಾಗಿದ್ದು ರಾಜಕೀಯದಲ್ಲಿ ಪ್ರವೇಶಿಸದಂತವರಾಗಿರುವಾಗ, ಸದ್ರಿ ಸಹೋದರರ ಕಾಂಗ್ರೆಸ್ ವಿರೋಧಿ ಕೆಲಸಕ್ಕಾಗಿ ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರಿಗೆ ವರ್ಗವಾಗಿದೆಯೆಂಬುದರ ಔಚಿತ್ಯವೇನು? ಆ ಮುಖ್ಯೋಪಾಧ್ಯಾಯರ ಸಹೋದರರು ರಾಜಕೀಯದಲ್ಲಿ ಪ್ರವೇಶಿಸಿದ್ದರೆ ಅವರ ಮೇಲೆ ಖಂಡಿತವಾಗಿಯೂ ಅವರ ಅಧಿಕಾರ ಸ್ಥಾನಕ್ಕೆ ಬರಹ ಮೂಲಕದ ದೂರನ್ನು ಕೊಡಲಾಗುತ್ತಿತ್ತು. ಸಿಳು ಮಾತನ್ನೇ ಉತ್ಪ್ರೇಕ್ಷೆ ಮಾಡಿ ಪತ್ರಿಕೆಯಲ್ಲಿ ಅಚ್ಚು ಹಾಕಿಸುವ ಆ ಲೇಖಕನ ಉದ್ದೇಶ ರಾಜಕೀಯ ಹಿನ್ನೆಲೆಯುಳ್ಳದ್ದು, ಕುಂದಾಪುರ ತಾಲೋಕು ಅಭಿವೃದ್ಧಿ ಮಂಡಲಿಯು ಅಧಿಕಾರ ಸ್ಥಾನದ ಮೇಲೆ ಕಟ್ಟು ಕಥೆಯ ಆಧಾರದಿಂದ ಕೆಸರೆರಚುವುದಾಗಿದೆ ಹೊರತು ವಸ್ತುಸ್ಥಿತಿಯನ್ನು ಬಿಂಬಿಸುವದಲ್ಲ. ಕಳೆದ ವರ್ಷವೇ ವರ್ಗವಾಗಿದ್ದ ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರಿಗೆ ಒಂದು ವರ್ಷ ಅವಧಿಯನ್ನು ಆ ಒಂದು ಹೈಸ್ಕೂಲಿನಲ್ಲಿಯೇ ಕೊಟ್ಟು ಈ ವರ್ಷ ಅವರನ್ನು ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಲಾಗಿದೆ.

ಇದೇ ಶಾಲೆಯ ಇನ್ನೊಬ್ಬ ಹಿರಿಯ ಅಧ್ಯಾಪಕರನ್ನು ಐದು ಮೈಲಿನ ಒಳಗೇ ಇರುವ ನಾಗರಿಕ ಸಂಪರ್ಕದಿಂದ ಕೂಡಿದ ಹಿರಿಯ ಹೈಸ್ಕೂಲಿಗೇ ವರ್ಗಾಯಿಸಿರುವುದು ನಿಜ. ಅವರ ಆ ಒಂದು ಹೈಸ್ಕೂಲಿನ ಸ್ಥಾನಕ್ಕೆ ಕಳೆದ 23 ವರ್ಷಗಳಿಂದಲೂ ಬರಬೇಕೆಂದು ಸಾಧಿಸುತ್ತಿರುವ ಅಧ್ಯಾಪಕರ ಆಶಾಗೋಪುರಗಳು, 23 ವರ್ಷಗಳ ಪರ್ಯಂತ ಕನಸಾಗಿಯೇ ಉಳಿದು ಇಂದು ನೆನಸಾಗಿದ್ದು, 23 ವರ್ಷ ಅನನ ಕೂಲತೆಯಿಂದ ಬಳಲುತ್ತಿರುವ ಆ ಪಾಠ ಕಲಿಸುವ ಅಧ್ಯಾಪಕರೊಬ್ಬರು ಇಂದು ಅನುಕೂಲತೆಯನ್ನು ಪಡೆದಿದ್ದರೆ ಇದು ಆಡಳಿತೆಯ ಹಿತದೃಷ್ಟಿಯಿಂದ ಅನ್ಯಾಯವೇ? ಇವರ ವರ್ಗಾವಣೆಗೆ ಮೋ ಅನೀತಿಯ ಕಲ್ಪನೆಯ ಕಾರಣಗಳನ್ನು ಕೊಟ್ಟಿರುವ ಲೇಖಕರ ಉದ್ದೇಶವೇನು? ಮೇ ತಿಂಗಳಲ್ಲಿ ನಡೆದ ಮುಖ್ಯೋಪಾಧ್ಯಾಯರ ಸಭೆಯಲ್ಲಿ ಇವರ ಮಗಳು ಅಧ್ಯಾಪಿಕೆಯಾಗಿರುವ ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಚರಿತ್ರೆ ಕಲಿಸುವ ಅಧ್ಯಾಪಕರ ಬದಲು ವಿಜ್ಞಾನ ಕಲಿಸುವ ಅಧ್ಯಾಪಕರು ಬೇಕೆಂದು ಮಂಡಿಸಿ ನಿರ್ಣಯಿಸಿದ ಮೂಲಕ ಆ ಒಂದು ಹೈಸ್ಕೂಲಿನ ಚರಿತ್ರೆ—ಕಲಿಸುವ ಅಧ್ಯಾಪಕರನ್ನು ಕಿರಿಯ ಮಾದ ಮಕ್ಕಳು ತರಬೇತಾಗದ ಈ ಅಧ್ಯಾಪಿಕೆಯ ಸ್ಥಾನವನ್ನು ತರಬೇತಾದ ವಿಜ್ಞಾನ ಅಧ್ಯಾಪಕರಿಂದ ಭರ್ತಿ ಮಾಡಬೇಕಾಗಿ ಬಂದುದು ಅನಿವಾರ್ಯ. ಇದು ಟಿ. ಡಿ. ಬಿ.ಯ ಸೂಚನೆಯೂ ಆಗಿದೆ. ಈ ಅಧ್ಯಾಪಿಕೆಯು ತಂದೆಯು ಆ ಕ್ಷೇತ್ರೀಯ ಗಳಿಯಿಂದ ಆ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಮಂಡ ನೆಗನುಸಾರವಾಗಿ ನಡೆದ ಆಡಳಿತಾಪರ ಕಾರ್ಯಾಚರಣೆಯಾಗಿರುವಾಗ ಅನಾವಶ್ಯಕವಾಗಿ ಬೋರ್ಡನ್ನು ಹಳಿಯುವ ಮಟ್ಟಕ್ಕೆ ಮುಟ್ಟಿದ ಲೇಖಕರ ಹಿನ್ನೆಲೆಯೇನು?

ಆ ಒಂದು ಶಾಲೆಯಲ್ಲಿ ಕಳೆದ 14 ವರ್ಷಗಳಿಂದ ಅಧ್ಯಾಪಕರಾಗಿರುವವರೊಬ್ಬರ ಪತ್ನಿ ಅದೇ ಹೈಸ್ಕೂಲಿನಲ್ಲಿ ಅಧ್ಯಾಪಿಕೆಯಾಗಿರುವುದು ನಿಜ. ಈ ಅಧ್ಯಾಪಕರು ತಮ್ಮ ನೇಮಕವಾದಂದಿನಿಂದ ಇಂದಿನ ವರೆಗೆ ಈ ಹೈಸ್ಕೂಲಿನಲ್ಲಿಯೇ ಅಧ್ಯಾಪಕರಾಗಿದ್ದು ಎಲ್ಲಾ ತರದ ಸೌಲಭ್ಯಗಳನು ಪಡೆದಿರುವಾಗ ಇದೇ ಸ್ಥಾನಕ್ಕೆ ಈ ಊರಿನವರೇ ಆದ ಹಲವು ಮಂದಿ ಅಧ್ಯಾಪಕರು ಕಳೆದ 14 ವರಷಗಳಿಂದಲೂ ಪ್ರಯತ್ನ ಪಡುತ್ತಿದ್ದರೂ ಅವರ ಕನಸು ನೆನಸಾಗಲಿಲ್ಲ. ಇಂದು ಅವರ ವರ್ಗಾವರ್ಗಿ ಆದಾಗ ಅವರ ಸ್ಥಾನಕ್ಕೆ ಬಂದವರು ತನ್ನ ನೇಮಕವಾದಂದಿನಿಂದ ಇಂದಿನ ವರೆಗೆ ಕಾಸರಗೋಡು, ಕಾರ್ಕಳ, ಉಡ್ಪಿ ಮೊದಲಾದ ಹೊರ ತಾಲೂಕಿನಲ್ಲಿ ಕೆಲಸ ಮಾಡಿ ಈಗಲೂ ಸಹಾ ಕುಂದಾಪುರದಿಂದ ಸುಮಾರು 20 ಮೈಲು ದೂರವಿರುವ ಹೈಸ್ಕೂಲಿನಲ್ಲಿ ಕೆಲಸ ಮಾಡುತ್ತಿದ್ದು ಬಹುಮಾದ ಕಷ್ಟವನ್ನು ಅನನುಕೂಲತೆಯನ್ನೂ ಪಟ್ಟವರಿದ್ದು ಈಗ ತನ್ನೂರಿನ ಶಾಲೆಗೆ ಈ ಅಧ್ಯಾಪಕರ ಬದಲಿಗೆ ಬಂದದಿದ್ದರೆ ಇದು ಅನ್ಯಾಯವೇ? ಈ ಅಧ್ಯಾಪಕರ ಪತ್ನಿಯನ್ನು ಈ ಅಧ್ಯಾಪಕರು ವರ್ಗವಾದ ಶಾಲೆಗೆ ವರ್ಗ ಮಾಡಲು ಆಡಳಿತೆಯು ಸಿದ್ಧವಿದ್ದರೂ ಪತಿಪತ್ನಿಯರೇ ಅದಕ್ಕೆ ತಯಾರಿಲ್ಲದಿರುವುದರಿಂದ ಪತ್ನಿಯ ವರ್ಗಾವಣೆ ಆಗಿಲ್ಲ. ಈ ವರ್ಗಾವಣೆ ಬೇಕೆಂದು ತಿಳಿಸಿದಲ್ಲಿ ಆಡಳಿತೆಯು ಇದಕ್ಕೆ ಸದಾ ಸಿದ್ಧವಿದೆ ಎಂದು ತಿಳಿದು ಬಂದಿದೆ.

ದೊಡ್ಡ ಹೈಸ್ಕೂಲಿನ ಹಿರಿಯ ಪ್ರತಿಭಾವಂತ ಮುಖ್ಯೋಪಾಧ್ಯಾಯರನ್ನು ತೀರಾ ಕಿರಿಯ ಹಳ್ಳಿಯ ಹೈಸ್ಕೂಲೊಂದಕ್ಕೆ ವರ್ಗಾಯಿಸಲಾಗಿದೆಯೆಂದು ಉಲ್ಲೇಖಿಸಲಾಗಿದೆ. ಅವರನ್ನು ಒಂದು ಹೈಸ್ಕೂಲಿನಿಂದ ಇನ್ನೊಂದು ಹೈಸ್ಕೂಲಿಗೆ ವರ್ಗಾಯಿಸಲಾಗಿದೆಯೇ ಹೊರತು ಮತ್ತಾವ ಕಿರಿಯ ಶಾಲೆಗೆ ವರ್ಗಾಯಿಸಲಾಗಿಲ್ಲ. ಈ ಪ್ರತಿಭಾವಂತ ಮುಖ್ಯೋಪಾಧ್ಯಾಯರಿಗೂ ಕಳೆದ ವರ್ಷವೇ ಆ ಶಾಲೆಯಿಂದ ಡಿ. ಸಿ ಯವರ ವರ್ಗಾಯಿಸಿ ಆಜ್ಞೆ ಹೊರಡಿಸಿದಾಗ, ಅವರು ಬಂದು ತಾಲೂಕು ಅಭಿವೃದ್ಧಿ ಮಂಡಳಿಯ ಅಧಿಕಾರ ಸ್ಥಾನಕ್ಕೆ ಮನವಿ ಮಾಡಿಕೊಂಡ ಮೇರೆಗೆ ಅವರನ್ನು ಒಂದು ವರ್ಷದ ಮಟ್ಟಿಗೆ ಅದೇ ಶಾಲೆಯಲ್ಲಿಯೇ ಮುಂದುವರಿಸಲಾಗಿತ್ತು. ಆದರೆ, ಈ ಮುಂದುವರಿದ ಅವಧಿಯಲ್ಲಿ ತನ್ನ ಸಹಾಯಕ ಅಧ್ಯಾಪಕರೊಡನೆ, ವಿದ್ಯಾರ್ಥಿಗಳೊಡನೆ ಮತ್ತು ಸಾರ್ವಜನಿಕರೊಡನೆ ಅವರು ವಿನಾ ಮನಸ್ತಾಪ ಕಟ್ಟಿಕೊಂಡರು. ಆಡಳಿತೆಯ ಹುಕುಂಗಳನ್ನು ದುರುಪಯೋಗಪಡಿಸುತ್ತಿದ್ದು ಶಾಲೆಯನ್ನು ಅನಧಿಕೃತವಾಗಿ ಮುಚ್ಚುತ್ತಿದ್ದು, ಈಗ ನಾಲ್ಕು ವರುಷ ತುಂಬಿದ ನಂತರ ವರ್ಗಾಯಿಸಿರುವುದು ಅನ್ಯಾಯವೇ? "ಶಿಕ್ಷಣವೇನೆಂದರಿಯದ ತಮ್ಮ ಬಳಗದ ಮಂದಿಗೆ ಸದ್ರಿ ಮುಖ್ಯೋಪಾಧ್ಯಾಯರ ಹಿರಿಯ ಸ್ಥಾನವೆಂದು ಸೂಚಿಸಲಾಗಿದೆ. ಇದರ ಔಚಿತ್ಯವೇನೆಂದು ಅರ್ಥವಾಗುವುದಿಲ್ಲ. ಪ್ರತಿಭಾವಂತರೆಂದು ಕರೆದುಕೊಂಡಿರುವ ಮುಖ್ಯೋಪಾಧ್ಯಾಯರ ಬದಲಿಗೆ ಬಂದ ಈ ಮುಖ್ಯೋಪಾಧ್ಯಾಯರು ಕಳೆದ ಸುಮಾರು ಹದಿನೆಂಟು ವರ್ಷಗಳಿಂದ ಪದವೀಧರ ಅಧ್ಯಾಪಕರಾಗಿ ಕೆಲಸ ಮಾಡುತ್ತಾ ಇದ್ದು ಕಳೆದ ಐದಾರು ವರುಷಗಳಿಂದ ಮುಖ್ಯೋಪಾಧ್ಯಾಯರಾಗಿ ಎರಡು ಹೊಸ ಹೈಸ್ಕೂಲುಗಳನ್ನು ಸ್ಥಾಪಿಸಿ ಅವುಗಳ ಕಟ್ಟಡಗಳನ್ನೂ ಸಹ ಪೂರ್ಣಗೊಳಿಸಿ ಆ ಎರಡು ಶಾಲೆಯ ವಿದ್ಯಾರ್ಥಿಗಳನ್ನು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕಳುಹಿಸಿ ಉತ್ತಮ ಫಲಿತಾಂಶವನ್ನು ತಂದ ಹಿರಿಮೆ ಅವರ ಪಾಲಿಗಿರುವಾಗ "ಶಿಕ್ಷಣವೇನೆಂದರಿಯದವರೆಂದು' ಹಳಿದ ಲೇಖಕರ ವ್ಯಕ್ತಿತ್ವದ ಯೋಗ್ಯತೆಯನ್ನು ವಾಚಕರೇ ಈ ಮೂಲಕ ಅಳೆಯ ಬೇಕಾಗಿದೆ. ಈ ಅಧ್ಯಾಪಕರನ್ನು "ತಮ್ಮ ಬಳಗದ ಮಂದಿ'ಯೆಂದು ಸಹಾ ಉಲ್ಲೇಖಿಸಲಾಗಿದೆ. ಅಂದರೆ ಯಾರ ಬಳಗವೆಂದು ಅರ್ಥವಾಗುವುದಿಲ್ಲ. ಬೋರ್ಡಿನ ವರ್ಗಾವಣೆ ಸಮಿತಿಯಲ್ಲಿ ಆರೇಳು ಸದಸ್ಯರಿದ್ದು ಅವರಲ್ಲಿ ಈ ಸಾಮಾನ್ಯ ವರ್ಗಾವಣೆಯು ಅವರ ಸರ್ವಾನುಮತದ ನಿರ್ಣಯವಾಗಿದ್ದು ಅದರಲ್ಲಿ ಯಾರ ಬಳಗದವರು ಈ ಮುಖ್ಯೋಪಾಧ್ಯಾಯರೆಂಬ ಸೂಚನೆಯು ಅರ್ಥವಾಗುವುದಿಲ್ಲ. ಆದರ ಬದಲು ಆ ಲೇಖಕರ ಬಳಗ ಯಾವುದೆಂದು ಬಹು ಸುಲಭದಲ್ಲಿ ಮೇಲಿನ ವಿಚಾರಗಳಿಂದ ಗುರುತಿಸಿ ಕೊಳ್ಳಲು ಸಾಧ್ಯವಾಗುತ್ತದೆ.

ಆದ್ದರಿಂದ ಮೇಲಿನ ಎಲ್ಲಾ ವಿಚಾರಗಳನ್ನು ಸವಿವರವಾಗಿ ವಿಮರ್ಶಿಸಿದಾಗ "ವಿಕಾಸ"ದಲ್ಲಿ ಬಂದ ಲೇಖನ ಸತ್ಯಕ್ಕೆ ಅತಿ ದೂರವಾಗಿದೆ. ಕಳೆದು ಹೋದ ಮಹಾ ಚುನಾವಣೆಗೂ ಈಗಿನ ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಲಿಯ ಕಾರ್ಯಕಲಾಪಗಳಿಗೂ ಏನೂ ಸಂಬಂಧವಿಲ್ಲವೆಂದು ನನಗೆ ಭಾಸವಾಗುತ್ತಿದೆ. ಪತ್ರಿಕೆಗಳಲ್ಲಿ ಗಂಧರ್ವ—ಕೀಚಕರಂತಹವರು ಇಂಥ ಲೇಖನಗಳನ್ನು ಪ್ರಕಟಿಸಿ ಪ್ರಜಾಶಕ್ತಿಯನ್ನು ಅಡ್ಡದಾರಿಗೆ ಎಳೆಯುವುದು; ಜನತೆಯ ಹಿತದೃಷ್ಟಿಯಿಂದ ಸರ್ವಥಾ ಸಮಂಜಸವಲ್ಲ. ಚುನಾವಣೆಯ ಕಾಲದಲ್ಲೂ ವಿರೋಧಿಪಕ್ಷದ ಕೆಲವು ಧುರೀಣರು ತಮ್ಮ ಚುನಾವಣಾ ಪ್ರಚಾರದ ಭಾಷಣದಲ್ಲಿ ಈ ಅಭಿವೃದ್ಧಿ ಮಂಡಳಿಯನ್ನು ಬಾಯಿಗೆ ಬಂದಂತ ಹಿನ್ನೆಲೆಯಿಲ್ಲದೆ ದೂಷಿಸಿದ್ದರು. ಆದರೆ ಅನಂತರ ಈ ವಿಚಾರದಲ್ಲಿ ಸರಕಾರದಿಂದ ವಿಚಾರಣೆಗೆ ಬಂದಾಗ ಆ ಧುರೀಣರು ತನ್ನ ಮುಂಚಿನ ಹೇಳಿಕೆಯಿಂದ ನುಣಿಚಿಕೊಂಡರು. ಹೀಗಿದೆ ನಮ್ಮ ವಿರೋಧಿಪಕ್ಷಗಳ ಪ್ರಚಾ

ವನ ಸಂಪತ್ತು

ಆರ್ಥಿಕ ಪ್ರಗತಿಯ ಸಾಧನ

ಲೇಖಕರು: ಶ್ರೀ ಜಗಜೀವನ ರಾಮ್

(ಕೇಂದ್ರ ಆಹಾರ ಮಂತ್ರಿ)

ಸಸಿಗಳನ್ನು ನೆಡುವುದು ಮತ್ತು ಈ ಸಸಿಗಳು ಮರವಾಗಿ ಬೆಳೆದಾಗ ಅವುಗಳಿಗೆ ರಕ್ಷಣೆ ನೀಡುವುದು, ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಮಾತ್ರವಲ್ಲ, ಮಾನವ ಹಾಗೂ ಪ್ರಾಣಿ ಪ್ರಪಂಚದ ಅಸ್ತಿತ್ವದ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ.

ಭಾರತ ಸರ್ಕಾರದವರು ೧೯೫೨ರಲ್ಲಿ ಅರಣ್ಯಗಳಿಗೆ ಸಂಬಂಧಿಸಿದಂತೆ ಒಂದು ಕಾರ್ಯ ನೀತಿಯನ್ನು ಅನುಸರಿಸಿದರು. ಈ ಕಾರ್ಯನೀತಿಯಲ್ಲಿ ದೇಶದ ಒಟ್ಟು ಭೂಭಾಗದ ಮೂರರಲ್ಲಿ ಒಂದು ಭಾಗದಷ್ಟು ಪ್ರದೇಶ ಅರಣ್ಯವಾಗಿರಬೇಕೆಂದು ಸೂಚಿಸಲಾಗಿದೆ. ಆದರೆ ಈಗ ದೇಶದ ಶೇ. ೨೨ರಷ್ಟು ಪ್ರದೇಶದಲ್ಲಿ ಮಾತ್ರ ಅರಣ್ಯಗಳಿವೆ

ವಿಶ್ವದ ಒಟ್ಟು ಜನ ಸಂಖ್ಯೆಯ ಶೇ. ೧೫ರಷ್ಟು ಭಾರತದಲ್ಲಿದೆ. ಆದರೆ ಈ ಜನಸಂಖ್ಯೆಯ ಮಾನದಿಂದ ಅರಣ್ಯದ ಪ್ರಮಾಣ ತೀರ ಕಡಿಮೆ ಎಂದೇ ಹೇಳಬಹುದು. ವಿಶ್ವದ ಒಟ್ಟು ಅರಣ್ಯ ಪ್ರದೇಶದ ಶೇ. ೨ರಷ್ಟು ಮಾತ್ರ ಭಾರತದಲ್ಲಿದೆ.

ವಿಶ್ವದಲ್ಲಿ ತಲಾ ಮೂರು ಎಕರೆಗಳಷ್ಟು ಅರಣ್ಯ ಪ್ರದೇಶವಿದ್ದರೆ, ಭಾರತದಲ್ಲಿ ತಲಾ ಅರ್ಧ ಎಕರೆಯಷ್ಟಿದೆ. ಈ ಅಂಕಿ ಅಂಶಗಳು ನಮ್ಮ ದೇಶದಲ್ಲಿ ಅರಣ್ಯ ಸಂಪನ್ಮೂಲ ಅಭಿವೃದ್ಧಿ ಅಗತ್ಯವನ್ನು ಸೂಚಿಸುತ್ತದೆ.

ಜನಸಂಖ್ಯೆಯ ಅಭಿವೃದ್ಧಿಯೊಂದಿಗೆ ಅರಣ್ಯ ಉತ್ಪನ್ನಗಳ ಬಗ್ಗೆ ಬೇಡಿಕೆಯೂ ಹೆಚ್ಚಿದೆ. ವಿಶೇಷವಾಗಿ ಕೈಗಾರಿಕೆಗಳಿಗೆ ಬೇಕಾಗುವ ಮರಗಳ ಬೇಡಿಕೆ ತೀವ್ರಗತಿಯಲ್ಲಿ ಹೆಚ್ಚಿದೆ. ಇನ್ನು ಕೆಲವು ವರ್ಷಗಳಲ್ಲಿ ಈ ಬೇಡಿಕೆಯ ಪ್ರಮಾಣ ದ್ವಿಗುಣಗೊಳ್ಳಲಿದೆ.

ಯಾವುದೇ ದೇಶದ ಪ್ರಗತಿ, ರಕ್ಷಣೆ ಹಾಗೂ ಉತ್ಕರ್ಷಕ್ಕೆ ಅರಣ್ಯ ಸಂಪತ್ತಿನ ಅಭಿವೃದ್ಧಿ ಅಗತ್ಯವೆನಿಸಿದೆ. ಹಿಂದಿನಂತೆ ಈ ವರ್ಷವೂ ದೇಶಾದ್ಯಂತ ವನಮಹೋತ್ಸವವು ನಡೆಯಿತು. ಕ್ಷಾಮ ಮತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಯು ಇಡಿ ದೇಶಕ್ಕೆ ಕಳವಳವನ್ನು ಉಂಟು ಮಾಡಿರುವ ಇಂದಿನ ಸಮಯದಲ್ಲಿ ವನಮಹೋತ್ಸವಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ.

ಗಿಡಮರಗಳು, ಪ್ರಕೃತಿಯ ಶೋಭೆಯನ್ನು ಹೆಚ್ಚಿಸುವುದರ ಜೊತೆಗೆ ನಮಗೆ ಬೇಕಾಗುವ ಕಟ್ಟಿಗೆಯನ್ನು, ಇಂಧನವನ್ನು ಕೊಟ್ಟು ಮತ್ತು ಇತರ ಉತ್ಪನ್ನಗಳನ್ನು ನೀಡುತ್ತವೆ. ಮಳೆಯ ನೀರಿನಿಂದ ಭೂಮಿಯ ಸಾರವು ಕೊಚ್ಚಿ ಹೋಗದಂತೆ ಆಸರೆ ನೀಡುತ್ತವೆ. ಬಿರುಗಾಳಿಗಳಿಂದ ಬೆಳೆಗಳಿಗೆ ಹಾನಿ ತಗಲದಂತೆ ಅವುಗಳನ್ನು ರಕ್ಷಿಸುತ್ತವೆ. ಬೇಸಾಯ ಪ್ರಧಾನವಾದ ಭಾರತದಂತಹ ರಾಷ್ಟ್ರಗಳಲ್ಲಿ ಗಿಡಮರಗಳು ನಿರ್ವಹಿಸುವ ಪಾತ್ರ ಮಹತ್ವಪೂರ್ಣವಾಗಿದೆ.

ದೇಶದ ಜನಸಂಖ್ಯೆ ಹೆಚ್ಚುತ್ತಿದೆ. ಈ ಹೆಚ್ಚಳದ ಜೊತೆಗೆ ಅರಣ್ಯ ಪ್ರದೇಶಗಳ ಸಾಗುವಳಿಗೂ ಬೇಡಿಕೆ ಹೆಚ್ಚಿದೆ. ಇಷ್ಟೇ ಅಲ್ಲ ದೇಶದ ಅನೇಕ ಕಡೆ ಅರಣ್ಯಗಳನ್ನು ಕಡಿದು ರಸ್ತೆಗಳನ್ನು ನಿರ್ಮಿಸಲಾಗಿದೆ.

ದೇಶದ ಹಿತ ದೃಷ್ಟಿಯಿಂದ ಅದರ ವಿಸ್ತೀರ್ಣದ ಮೂರರಲ್ಲಿ ಒಂದು ಭಾಗದಷ್ಟು ಅರಣ್ಯ ಇರಬೇಕು ಎಂಬುದು ಗಮನಿಸಬೇಕಾದ ಸಂಗತಿ. ಆದರೆ ಭಾರತದಲ್ಲಿ ಈಗ ಭೂವಿಸ್ತೀರ್ಣದ ಶೇ ೨೨ರಷ್ಟು ಪ್ರದೇಶದಲ್ಲಿ ಮಾತ್ರ ಅರಣ್ಯಗಳಿವೆ. ಅಪೇಕ್ಷಿತ ಹೆಚ್ಚುವರಿಯಾಗದಿರುವುದು ಚಿಂತನೆ ಹುಟ್ಟಿಸುವಂತೆ ಮಾಡಿದೆ.

ವನಸಂಪತ್ತಿನ ಅಭಿವೃದ್ಧಿಯು ಮಹತ್ವದ್ದೆಂದು ಮನಗಾಣಲಾಗಿದೆ. ಆದರೂ, ಈ ಗುರಿ ಇನ್ನೂ ಸಾಧ್ಯವಾಗಿಲ್ಲ. ದೇಶದ ಜನಸಂಖ್ಯೆಯ ಹೆಚ್ಚಳ, ಆಹಾರದ ಬಗ್ಗೆ ಅಧಿಕ ಬೇಡಿಕೆ ಇವೆಲ್ಲವುಗಳನ್ನು ಗಮನಿಸಿದಾಗ ಈ ಗುರಿ ಸಾಧನೆಯು ಮಂದಗತಿಯಿಂದ ನಡೆಯುವ ಸಂಭವವಿದೆ.

ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಪ್ರವಾಸ ಮಾಡುವವರಿಗೆ ಗಿಡ–ಮರಗಳಿಲ್ಲದ ವಿಶಾಲವಾದ ಬಯಲು ಪ್ರದೇಶಗಳು ಕಣ್ಣಿಗೆ ಬೀಳುತ್ತವೆ. ಈ ಪ್ರದೇಶಗಳಲ್ಲಿ ಹಲವು ಕಡೆ ಗಿಡಮರಗಳನ್ನು ಬೆಳೆಸಬಹುದಾಗಿದೆ. ಕೆರೆ–ಕಾಲುವೆಗಳ ದಂಡೆಗಳ ಮೇಲೆ ರಸ್ತೆಗಳ ಪಕ್ಕದಲ್ಲಿ, ಹೊಲಗದ್ದೆಗಳ ಮೇರೆಗಳಲ್ಲಿ, ಶಾಲೆ–ಕಾಲೇಜುಗಳ ಆವರಣದಲ್ಲಿ ಸಸಿಗಳನ್ನು ನೆಡಬಹುದಾಗಿದೆ. ಈ ಪ್ರದೇಶಗಳಲ್ಲಿ ವನಸಂಪತ್ತನ್ನು ಬೆಳೆಸಲು ಯೋಜನಾಬದ್ಧ ಯತ್ನಗಳು ನಡೆಯಬೇಕಾಗಿದೆ. ಸಾರ್ವಜನಿಕರು ಮತ್ತು ಸಂಘಸಂಸ್ಥೆಗಳು ಈ ಕಾರ್ಯದಲ್ಲಿ ಸಹಕರಿಸಬೇಕು.

ಮನಸ್ಸು ಮಾಡಿದರೆ ಇದು ಅಂತಹ ಕಠಿಣ ಕೆಲಸವೇನೂ ಅಲ್ಲ ಆದರೆ ಈ ದಿಶೆಯಲ್ಲಿ ದೃಢವಾದ ಪ್ರಯತ್ನಗಳು ನಡೆಯಬೇಕು. ವನಮಹೋತ್ಸವದ ಈ ಸಂದರ್ಭದಲ್ಲಿ ಸಸಿಗಳನ್ನು ನೆಡುವ ಕಾರ್ಯವನ್ನು ಉತ್ಸಾಹದಿಂದ ಕೈಗೊಂಡು ನಮ್ಮ ಭೂಮಿಯು ಕೆಲವು ವರ್ಷಗಳಲ್ಲೇ ಹಸಿರಿನಿಂದ ಸುಂದರವಾಗಿ ಕಂಗೊಳಿಸುವಂತೆ ಮಾಡೋಣ. ಈ ಸಂದರ್ಭದಲ್ಲಿ ನಮ್ಮ ನೆಚ್ಚಿನ ಪ್ರಧಾನಮಂತ್ರಿ ದಿವಂಗತ ನೆಹರೂ ಅವರ ನುಡಿಗಳು ಸ್ಮರಣಾರ್ಹವಾಗಿವೆ.

"ನಮಗೆ ಅರಣ್ಯಗಳು ಅನೇಕ ಕಾರಣಗಳಿಂದಾಗಿ ಅಗತ್ಯವಾಗಿವೆ. ಅವುಗಳನ್ನು ನಾವು ರಕ್ಷಿಸೋಣ. ನಾವು ಈ ವರೆಗೆ ವನಸಂಪತ್ತಿಗೆ ಮಾಡಿರುವ ಹಾನಿ ಗಮನಾರ್ಹವಾಗಿದೆ. ಜನಸಂಖ್ಯೆಯು ಹೆಚ್ಚಿದಂತೆ ಆಹಾರಕ್ಕೆ ಬೇಡಿಕೆ ಹೆಚ್ಚುವುದು ನಿಜ. ಆದರೆ ನಿರ್ದಿಷ್ಟವಾದ ಪ್ರದೇಶದಲ್ಲೇ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಈ ಅಗತ್ಯವನ್ನು ಪೂರೈಸಬೇಕು. ಅದಕ್ಕಾಗಿ ಅರಣ್ಯಗಳನ್ನು ಕಡಿಯುವ ಅಗತ್ಯವಿಲ್ಲ. ಅರಣ್ಯಗಳು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತವೆ".

ನೆಹರೂಜಿ ಅವರ ಈ ನುಡಿಗಳಲ್ಲಿ ವನಸಂಪತ್ತು ಅಭಿವೃದ್ಧಿಗೊಳಿಸುವ ಆಶಯ ಪ್ರತಿಬಿಂಬಿತವಾಗಿದೆ. ನೆಹರೂ ಅವರ ಈ ನುಡಿಗಳನ್ನು ನಾವು ನೆನಪಿನಲ್ಲಿಟ್ಟುಕೊಂಡು ಅರಣ್ಯಗಳ ಬಗ್ಗೆ ಕ್ರಿಯಾಶೀಲವಾದ ನೀತಿಯನ್ನು ಅನುಸರಿಸೋಣ. ವನಮಹೋತ್ಸವದ ಕಾಲದಲ್ಲಿ ಅಷ್ಟೇ ಅಲ್ಲ, ಸದಾ ಅರಣ್ಯಗಳ ಏಳಿಗೆಗಾಗಿ ಶ್ರಮಿಸೋಣ. ಬೆಳೆಯುತ್ತಿರುವ ಮರ — ಪ್ರಗತಿ ಹೊಂದುತ್ತಿರುವ ರಾಷ್ಟ್ರ ಸಂಕೇತವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ.

ರದ ವೈಖರಿ! ಇದನ್ನೆಲ್ಲಾ ನೈಜತೆಯ ದೃಷ್ಟಿಯಿಂದ ವಾಸ್ತವಿಕವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ನಾನಿಲ್ಲಿ ಬರೆಯಬೇಕಾಯಿತು. ಈ ಎಲ್ಲಾ ಕಾರಣಗಳಿಂದಲೂ ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಲಿಯು ನಿರುಪದ್ರವಿ ಅಧ್ಯಾಪಕರಿಗೆ ಯಾವ ರೀತಿಯಿಂದಲೂ ಅನ್ಯಾಯದ ವರ್ಗಾವರ್ಗಿಯನ್ನು ಖಂಡಿತ ಮಾಡಲಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ನಾನು ತಿಳಿಸಲು ಬಯಸುತ್ತೇನೆ. ಕೇವಲ ಒಂದು ವರ್ಗದವರ ಅಭಿಪ್ರಾಯವನ್ನು ಮಾತ್ರ ಸಾರ್ವಜನಿಕರು ತಿಳಿದುಕೊಂಡರೆ ಸಾಲದು. ಇದರಲ್ಲಿ ಸತ್ಯಾಂಶವಿದೆಯೇ ಎಂಬುದನ್ನು ಸಾರ್ವಜನಿಕರು ಪರಿಶೀಲಿಸಬೇಕು. ಈ ದೃಷ್ಟಿಯಿಂದ ಮೇಲಿನ ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ಈ ಲೇಖನ ಬರೆದಿರುವುದಾಗಿದೆ.

—ಶ್ರೀ ಎಸ್. ಎಸ್. ಕೆಂಚನೂರ್.

ವಿಚಾರ ವೀಚಿ

ಇಂದಿನ ಶಿಕ್ಷಣ ಪದ್ಧತಿ ಬದಲಾಗಬೇಕು

(ವಿನೋಬಾ)

ಇಂದು ಉತ್ಪಾದನೆ ಬೆಳೆಸಬೇಕೆಂದು ಎಲ್ಲರೂ ಹೇಳುವವರೇ, ಆದರೆ ಕಾನೂನು ಮಾಡಿ, ಆಜ್ಞೆ ಹೊರಡಿಸಿ ಉತ್ಪಾದನೆ ಬೆಳೆಸ ಬರುತ್ತದೆಯೋ? ಉತ್ಪಾದನೆಯನ್ನು ನೀವು ನಾವೇ ಮಾಡಬೇಕಲ್ಲವೇ? ಉತ್ಪಾದನೆಯ ದೃಷ್ಟಿಯಿಂದ ಶಿಕ್ಷಣ ಕೊಟ್ಟರಲ್ಲವೆ ಉತ್ಪಾದನೆ ಬೆಳೆದೀತು? ಇಂದಿನ ಪದ್ಧತಿಯ ಶಿಕ್ಷಣದಿಂದ ದೇಶದ ದಾರಿದ್ರ್ಯವೆಂದ ದೂರ ದೂರಾದೀತೆ? ಇಂದು ಹುಡುಗರು ೨೧ ವರ್ಷದವರಾಗುವ ವರೆಗೂ ಕಲಿಯುತ್ತಲೇ ಇರುತ್ತಾರೆ ಆರನೆಯ ವರ್ಷದಲ್ಲೇ ಶಿಕ್ಷಣಕ್ಕೆ ಆರಂಭವಾಗುತ್ತದೆ. ಈ ೧೫ ವರ್ಷಗಳ ಶಿಕ್ಷಣ ಕಾಲದಲ್ಲಿ ಅವರಿಗೆ ಉದ್ಯೋಗದ್ದೇ ಆಗಲಿ, ಪರಿಶ್ರಮದ್ದೇ ಆಗಲಿ ಸ್ಪರ್ಶ ಕೂಡ ಆಗುವದಿಲ್ಲ. ಅವರಿಗೆ ಬಿಸಿಲು ಗಾಳಿ ಮಳೆಯಾವದೂ ಸಹನವಾಗುವದಿಲ್ಲ! ಅವರಿಗೆ ಹೊಲದಲ್ಲಿ ದುಡಿಯುವ ಅಭ್ಯಾಸವೂ ಇರುವದಿಲ್ಲ! ಬಡಿಗತನ ಕಮ್ಮಾರಿಕೆಗಳೂ ಬರುವದಿಲ್ಲ, ಅಡಿಗೆ ಮಾಡಲು ಬರುವದಿಲ್ಲ. ನೇಯಿಗೆಯೂ ಬರುವದಿಲ್ಲ, ಉಣ್ಣಲಿಕ್ಕೇನೋ ಬರುತ್ತದೆ. ಆದರೆ ಜಗಿಯುವದು ಹೇಗೆ? ಪಚನ ಮಾಡಿಕೊಳ್ಳುವದು ಹೇಗೆ? ಇದು ಕೂಡ ಅವರಿಗೆ ತಿಳಿಯುತ್ತಿರುವದಿಲ್ಲ. ಆಹಾರ ವಿಹಾರ ಶಾಸ್ತ್ರಗಳ ಜ್ಞಾನವೂ ಅವರಿಗೆ ಇರುವದಿಲ್ಲ. ಈ ಪ್ರಕಾರವಾಗಿ ವ್ಯಾವಹಾರಿಕ ದೃಷ್ಟಿಯಲ್ಲಿ ನಿರುಪಯೋಗಿಯಾಗಿ ಅವರು ಶಿಕ್ಷಣ ಮುಗಿಸುತ್ತಾರೆ.

ಸ್ವದೇಶಿ ವಿದೇಶಿಗಳ ವಿವೇಕ

೨೧ ವರ್ಷ ವಯಸ್ಸಾಗುವ ವರೆಗ ಮಕ್ಕಳ ಎಲುಬು ಬೆಳೆಯುತ್ತಿರುತ್ತದೆ. ಅವರ ಶರೀರ ಬೆಳೆ[illegible]. ಈ ವಯಸ್ಸಿನಲ್ಲಿಯೇ ಅವರ ಶರೀರಗಳು ಮೆತ್ತಗಾಗಿ ಉಳಿದರೆ ಜೀವನಕ್ಷೇತ್ರದಲ್ಲಿ ಮಾಡಬೇಕಾಗುವ ಪುರುಷಾರ್ಥ ಮತ್ತು ಪರಾಕ್ರಮ ಅವರಿಂದ ಹೇಗೆ ತಾನೇ ಸಾಧ್ಯ? ಸಂಪೂರ್ಣ ಛತ್ರಛಾಯೆಯಲ್ಲಿ ಬೆಳೆದವರು ದೇಶದ ಮೇಲೆ ಬರುವ ಸಂಕಟಗಳನ್ನು ಹೇಗೆ ಎದುರಿಸಿಯಾರು? ಪರಾಕ್ರಮ ಹೇಗೆ ಮಾಡ್ಯಾರು? ಅನ್ನ ವಸ್ತ್ರಗಳ ಬಗ್ಗೆ ಸಹ ಪರದೇಶಗಳ ಹತ್ತರ ಬೇಡಬೇಕಾಗುತ್ತಿರುವದು ಅದೆಂತಹ ಸ್ವರಾಜ್ಯ? ದೇಶವು ಪರತಂತ್ರವಿದ್ದಾಗ ಅನೇಕ ವಸ್ತುಗಳು ಪರದೇಶಗಳಿಂದ ಬರುತ್ತಿದ್ದವು. ಸ್ವರಾಜ್ಯವಾದ ತರುವಾಯವಾದರೂ ಅವು ಬರುವದು ಬಂದಾಗಿದೆಯೇ? ಸ್ವರಾಜ್ಯ ಬರುವ ಮೊದಲು ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಬೇಕೆಂಬ ವಿವೇಕವು ಸ್ವಲ್ಪವಾದರೂ ಇತ್ತು. ಅದೂ ಈಗ ಸಂಪೂರ್ಣ ಮರೆತಂತೆಯೇ ಆಗಿದೆ.

ಇನ್ನೂ ನಾವು ನಮ್ಮ ಶಿಕ್ಷಣ ಪದ್ಧತಿ ಬದಲಿಸದಿದ್ದರೆ ದೇಶದ ವಿಕಾಸವಾಗುವದೇ ಕಷ್ಟವಿದೆ. ಅದಕ್ಕಾಗಿಯೇ ಜೀವನ ಶಿಕ್ಷಣ ಬೇಕಾಗಿದೆ ನಮ್ಮ ಸಮಾಜದಲ್ಲಿ ಶಾರೀರಿಕ ಶ್ರಮದ ಬೆಲೆಯೇ ಬೇರೆ. ಮಾನಸಿಕ ಪರಿಶ್ರಮದ ಬೆಲೆಯೇ ಬೇರೆ. ಜೀವನಶಿಕ್ಷಣದಲ್ಲಿ ಹೀಗಾಗದು. ಜೀವನ ಶಿಕ್ಷಣದಿಂದ ಸಮಾಜದ ಇಂದಿನ ರಚನೆಯನ್ನೇ ಬದಲಿಸಬೇಕಾಗಿದೆ. ಪ್ರಾಮಾಣಿಕವಾದ ಶಾರೀರಿಕ ಹಾಗೂ ಬೌದ್ಧಿಕ ಶ್ರಮಗಳೆರಡೂ ನೈತಿಕ ದೃಷ್ಟಿಯಿಂದ ಒಂದೇ ಆದ್ದರಿಂದ ಅವೆರಡಕ್ಕೂ ಆರ್ಥಿಕ ಪ್ರತಿಫಲ ಒಂದೇ ರೀತಿ ದೊರೆಯಬೇಕು. ನಿಜವಾಗಿಯೂ ನೈತಿಕ ವಸ್ತುವಿನ ಬೆಲೆಯನ್ನು ಆರ್ಥಿಕ ವಸ್ತುವಿನಲ್ಲಿ ಅಳೆಯುವದೇ ಶಕ್ಯವಿಲ್ಲ. ಜೀವನ ಶಿಕ್ಷಣದ ಕಲ್ಪನೆಯನ್ನು ಸರಕಾರವು ತತ್ವತಃ ಮಾನ್ಯ ಮಾಡುತ್ತದೆ. ಆದರೆ ಸರಕಾರಿ ಶಿಕ್ಷಣದಲ್ಲಿ ಮಾತ್ರ ಸರಕಾರವು ವಿವಿಧ ಪ್ರಕಾರಗಳನ್ನು ಬಡಿಸುತ್ತಲಿದೆ. ಆದರೆ ಇದು ಕೇವಲ ಸರಕಾರದ ತಪ್ಪಲ್ಲ ಸಮಾಜದ್ದೇ ತಪ್ಪು. ನಾನಾ ಪ್ರಕಾರದ ಶಿಕ್ಷಣ ಸಂಸ್ಥೆಗಳು ನಡೆಯುತ್ತಿರುವಲ್ಲಿ ಪರಿಸ್ಥಿತಿಗಳನ್ನು ಎದುರಿಸುವದು ಬಿಟ್ಟು ಹೊಂದಿಕೊಳ್ಳಲಿಕ್ಕೇ ಜನ ಕಲಿಯುತ್ತಾರೆ. ಪರಿಸ್ಥಿತಿಯನ್ನೇ ಬದಲಿಸುವ ಎದೆಗಾರಿಕೆ ಅವರು ತೋರಿಸುವದಿಲ್ಲ ಸಮಾಜವಾದೀ ಸಮಾಜವೆಂಬ ಕಲ್ಪನೆಯೇನೋ ಚನ್ನಾಗಿದೆ. ಆದರೆ ಬಂಡವಾಳದಾರರು ಸಹ ಆ ಸಮಾ

(ಒಂಭತ್ತನೇ ಪುಟ ನೋಡಿರಿ)

ಮನೆಗೆ ಬಂದ ಮದುಮಗ

(ಎರಡನೇ ಪುಟದಿಂದ)

ಮಧುರೆಯಿಂದಲೂ, ಮತ್ತೊಂದು ತಿರುಚಿನಾಪಳ್ಳಿಯಿಂದಲೂ ಕೊಡಲಾಗಿತ್ತು. ಟಿ. ಸಿ. ಅದನ್ನು ಪರಿಶೀಲಿಸಿ ನನ್ನ ಹತ್ತಿರ ಕೊಡುತ್ತಾ—'ನಿನ್ನನ್ನು ನಂಬಲಾರೆ ಬಾಲನ್; ನಿನ್ನ ಮದುವೆಯಾಗುವಾಗಲೂ, ನಿನ್ನ ಸ್ನೇಹಿತನಾದ ನನ್ನನ್ನು ಬಿಟ್ಟು ಗುಟ್ಟಿನಲ್ಲಿ ಆದೆಯಲ್ಲ!' ಎನ್ನಲು ಶಾಂತಾಳ ಮುಖವು ನಾಚಿಗೆಯಿಂದ ಕೆಂಪೇರಿತು.

"ಚಾಂದ್", ದಯವಿಟ್ಟು ಕ್ಷಮಿಸು. ನನಗೆ ನಿನ್ನಲ್ಲಿಗೆ ಬಂದು ಹೇಳಲು ಬಿಡುವಿರಲಿಲ್ಲ. ಮರೆತೆನು, ನನ್ನ ವಿವಾಹದ ಆಮಂತ್ರಣವನ್ನು ಪೋಸ್ಟ್ ಮಾಡಿದ್ದೆ ಅಲ್ಲದೆ ಅದರೊಂದಿಗೇ ನಿನಗೊಂದು ಪತ್ರವನ್ನೂ ಇರಿಸಿದ್ದೆ. ಈಗೀಗ ಟಪ್ಪಾಲಿಗೆ ಹಾಕಿದ ಕಾಗದ ಪತ್ರಗಳು ತಲುಪುದೇ ಕಷ್ಟವಾಗಿರುವಾಗ—ತಲುಪದ ಇದ್ದಿರಲೂಬಹುದು. "ಐ ಯೇಮ್ ಸ್ಸಾರಿ" ಎಂದು ಸುಳ್ಳಾಡಿದೆ.

"ಏನೇನು ಹೇಳಬೇಡ, ಬಾಲನ್. ಇಂತಹ ಸುಂದರಿ ಹುಡುಗಿಯನ್ನು ಕೈಹಿಡಿಯುವ ನಿನಗೆ ಆ ಸಮಯದಲ್ಲಿ, ನನ್ನನ್ನು ಮರೆತುದರಲ್ಲಿ ತಪ್ಪೇನಿದೆ? ಹಾಂ!" ಎಂದು ತಮಾಷೆಯಾಡಿದನು. ಮತ್ತು ಪುನಃ ಹೀಗೆಂದನು: "ಬಾಲನ್, ಈ ನಿನ್ನ ಚೆಲುವೆಯಾದ ಹೆಂಡತಿಯ ಹೆಸರೇನು?"

ಏನೊಂದೂ ಅಚಲಿತನಾಗದೆ ನಾನು ಹೇಳಿದೆ 'ಶ್ರೀ....ಮತಿ ಶಾಂತಾ ಬಾಲಕೃಷ್ಣನ್'

ನಮ್ಮಲ್ಲಿ ದೊಡ್ಡ ನಗುವಿನ ಅಲೆಗಳು ಹೊರಟವು.

ಟಿ. ಸಿ. ಯ ಆಫೀಸ್ ಕೆಲಸ ಮುಗಿಯಿತು. ಮತ್ತೊಂದು ಕಂಪಾರ್ಟ್‌ಮೆಂಟಿಗೆ ಹೋಗುವಾಗ ಶಾಂತಳನ್ನು ಉದ್ದೇಶಿಸಿ "ತಂಗಿ, ಬಾಲನ್ ನನ್ನ ಒಳ್ಳೆಯ ಮಿತ್ರ. ಅವನು ಸುಳ್ಳನುಡಿದ. ಅವನ ಮೇಲೆ ನಿನ್ನ ಕಣ್ಣಿರಲಿ. ಅವನ ಹೆಸರನ್ನು ಪಡೆದ" ನಗುತ್ತಾ ನುಡಿದು ಆದೊಂದು ಸ್ಟೇಷನ್‌ನಲ್ಲಿ ರೈಲು ನಿಂತಾಗ—ಇಳಿದು—ಮತ್ತೊಂದು ಕಂಪಾರ್ಟ್‌ಮೆಂಟಿಗೆ ಹೋದನು.

ಶಾಂತಾಳು ಏನೂ ಹೇಳದೆ ನಗುತ್ತಿದ್ದಳು. ನಂತರ ಬಾಲನ್ ಕಡೆ ತಿರುಗಿ—"ನನ್ನ ಟಿಕೆಟ್ ನಿಮ್ಮ ಪರ್ಸಿನೊಳಗೆ ಹೇಗೆ ಹೋಯಿತು? ನೀವೇನು ಮಂತ್ರವಾದಿಯೇ?"

"ನಿನ್ನ ಯಾವ ವಸ್ತುಗಳಿಗೂ ಅದಷ್ಟು ಆಯಸ್ಕಾಂತೀಯ ಗುಣವಿದೆ ಗೊತ್ತೋ? ಅದು ಪರ್ಸಿನೊಳಕ್ಕೆ ಹೋಗಿಯಿತು."

ಹೀಗೇ ನಾವಿಬ್ಬರೂ ಲೋಕಾಭಿರಾಮವಾಗಿ ಮಾತನಾಡತೊಡಗಿದೆವು. ಇನ್ನು ನಮ್ಮ ಗುರಿಯನ್ನು ತಲುಪಲು ಒಂದು ಗಂಟೆಯು ಉಳಿದಿತ್ತು.

'ಇನ್ನು ಒಂದು ಗಂಟೆಯೊಳಗೇ ನಾವಿಬ್ಬರೂ ನಮ್ಮ ಮಿತ್ರತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ನಮ್ಮ ಸ್ನೇಹವು ಇಷ್ಟಕ್ಕೇ ನಿಲ್ಲಬಾರದೆಂದು ನನ್ನ ಮಹದಾಶೆ." ಎಂದೆನು ನಾನು.

"ನನಗೂ ಅದೇ ಆಶೆ. ಟಿ. ಸಿ. ನಮ್ಮನ್ನು ಗಂಡ ಹೆಂಡತಿಯರನ್ನಾಗಿ ಮಾಡಿಬಿಟ್ಟ....' ಎನ್ನುತ್ತಾ ನಗೆಯಾಡಿದಳು. ಮತ್ತೆ ಸ್ವಲ್ಪ ಹೊತ್ತು ಯೋಚಿಸಿ ನುಡಿದಳು—

'ನನ್ನ ಅಣ್ಣನಾದ ಕೃಷ್ಣ ಎಂಬವನು ಮದ್ರಾಸಿನಲ್ಲಿ ಕಲಿಯುತ್ತಿದ್ದಾನೆ. ನನ್ನನ್ನು ಎಗ್‌ಮೋರ್ ಸ್ಟೇಷನ್‌ನಲ್ಲಿ ಕಾಯುತ್ತಿರಬಹುದೀಗ. ಕಾಲೇಜಿಗೆ ಸೇರಿಸಲು ಎಲ್ಲಾ ಏರ್ಪಾಡುಗಳನ್ನೂ ಅವನು ಮಾಡಿರಬಹುದು. ನನ್ನ ಅಣ್ಣ ನಮ್ಮಿಬ್ಬರನ್ನೂ ರೈಲಿನಿಂದ ಇಳಿಯುವುದನ್ನು ನೋಡಬಾರದು.

'ಹಾಗಾದರೆ ನಾನೊಂದು ಕೆಲಸ ಮಾಡುವೆ. ನಾನು ತಂಬರಮ್ ರೈಲು ನಿಲ್ದಾಣದಲ್ಲಿಳಿದು ವಿದ್ಯುತ್ ರೈಲಿನಲ್ಲಿ ಎಗ್‌ಮೋರನ್ನು ತಲಪುವೆನು. ಏನಾದರೂ ಪ್ರತಿ ಆದಿತ್ಯವಾರ ಸಂಜೆ ಗಂಟೆ ೪ಕ್ಕೆ ನಾವೀರ್ವರೂ ಬೀಚಿನಲ್ಲಿ ಸಂದರ್ಶಿಸೋಣ. ನೆನಪು!' ಎಂದು ಹೇಳಲು ಅವಳೂ ಹಾಗೆಯೇ ಆದೀತೆಂದು ನನಗೆ ಭಾಷೆಯಿತ್ತಳು.

ನಾನು ತಂಬರಮ್ ನಿಲ್ದಾಣದಲ್ಲಿಳಿದು ಎಗ್‌ಮೋರ್ ಸ್ಟೇಷನನ್ನು ವಿದ್ಯುತ್ ರೈಲ್‌ನ ಮೂಲಕ ತಲಪಿದೆನು. ಅವಳು ಅದೇ ರೈಲಿನಲ್ಲಿ ಹೋದಳು.

ನೇರವಾಗಿ ನಾನು ರೂಮಿಗೆ ಹೋದಾಗ ರಾಮುಡು ಹೇಳಿದನು— 'ಕೃಷ್ಣ ಈಗ ಬಂದಾನು. ಅವನು ತನ್ನ ತಂಗಿಯನ್ನು ಇದಿರ್ಗೊಳ್ಳಲು ಹೋಗಿದ್ದಾನೆ.' ಎಂದನು. ಶಾಂತಾ ಹೇಳಿದ ಕೃಷ್ಣನು ಇವನೋ ಎಂಬಷ್ಟು ಸಂಶಯ ನನ್ನಲ್ಲಾಯಿತು. ಮತ್ತೆ ಸ್ವಲ್ಪ ನಿಮಿಷಗಳಲ್ಲೇ ಕೃಷ್ಣನು ನಮ್ಮ ರೂಮಿಗೆ ಬಂದನು. ತಾನು ತಂಗಿಯನ್ನು ರೈಲ್ವೆ ಸ್ಟೇಷನ್‌ನಲ್ಲಿ ಕಾಣದೆಂದೂ, ಅವಳನ್ನು ಕಾಲೇಜಿಗೆ ಸೇರಿಸಲಿಕ್ಕಿದೆಯೆಂದೂ, ಕಾಲೇಜ್ ಹಾಸ್ಟೆಲ್‌ನಲ್ಲಿ ಅವಳನ್ನು ಕಳುಹಿಸಿದುದಾಗಿಯೂ ಹೇಳಿದನು. ನನ್ನ ಸಂಶಯವು ಆಗ ನಾಶವಾಯಿತು. ಶಾಂತಳ ಅಣ್ಣ ಇವನೇ ಎಂದು ನಿಶ್ಚೈಸಿದೆನು.

o o o

ಆದಿತ್ಯವಾರ ಬಂದಿತು. ನಾನು ಟಿಪ್‌ಟಾಪ್ ಆಗಿ ಉಡುಗೆಗಳನ್ನು ಧರಿಸಿ ರೂಮಿನಿಂದ ಹೊರಡುತ್ತಿರುವಾಗಲೇ ಕೃಷ್ಣನು ಹೇಳಿದನು! "ನೀನೊಬ್ಬನೇ ಹೋಗುವೆಯೋ? ಸ್ವಲ್ಪ ನಿಮಿಷ ತಡೆ. ನಾನೂ ಬರುವೆನು," ಎಂದನು.

(ಹನ್ನೊಂದನೇ ಪುಟ ನೋಡಿರಿ)

ಅಭಿಪ್ರಾಯ

ಭಾರತವು ಪ್ರಗತಿ ಹೊಂದಿದೆ

ಬರೆದವರು: ಶ್ರೀ ಕೆ. ನರಸಿಂಹ ಪೈ

ಕವಿಪುಂಗವ ರವೀಂದ್ರರು, ಪಂಪ, ರನ್ನರು, ಗೋಖಲೆ, ರಾನಡೆ, ದಾದಾಬಾಯಿ ನವರೋಜಿ, ಸರೋಜಿನಿ ನಾಯ್ಡು, ಬಾಲಗಂಗಾಧರ ತಿಲಕ, ವೀರ ವಲ್ಲಭ ಭಾಯಿ ಪಟೇಲ, ಪರಮಪೂಜ್ಯ ಮೋಹನದಾಸ ಕರಮಚಂದ ಗಾಂಧಿ, ವಿಶ್ವ ಖ್ಯಾತಿಯ ಮೋತಿಲಾಲ ನೆಹರು, ಅಂತಾರಾಷ್ಟ್ರೀಯ ಖ್ಯಾತಿಯ ಜವಾಹರಲಾಲ ನೆಹರು, ಶಾಂತಿದೂತ, ಸಣ್ಣ ಮೂರ್ತಿ ದೊಡ್ಡ ಕೀರ್ತಿ, ವಿಶ್ವಶಾಂತಿಯ ಲಾಲಬಹದೂರ ಶಾಸ್ತ್ರಿ, ನೆಚ್ಚಿನ ಪ್ರಧಾನಿ ಇಂದಿರಾ, ಧೈರ್ಯ ಸ್ಥೈರ್ಯದ ಪ್ರತೀಕ ಚವ್ಹಾಣ, ಮುತ್ಸದ್ದಿ ಕಾಮರಾಜ, ರಾಯಭಾರಿ ವಿಜಯಲಕ್ಷ್ಮಿ ಪಂಡಿತ, ಜ್ಞಾನಿ ರಾಧಾಕೃಷ್ಣನ್, ವಿಜ್ಞಾನಿ C. V. ರಾಮನ್ ಮೊದಲಾದ ಮಹಾನ್ ಮಹಾನ್ ವಿದ್ವನ್ಮಣಿಗಳು ಜನಿಸಿದ ನಾಡು ಭಾರತ. ಅವರ ಶ್ರಮ, ಪ್ರಯತ್ನ, ಯತ್ನ, ನಾಯಕತ್ವ, ಚಾಣಾಕ್ಷತೆ, ನೈಪುಣ್ಯ, ಅವಿಶ್ರಾಂತ ಸೇವೆ, ತ್ಯಾಗ, ಸ್ಥಿರ ಪ್ರಯತ್ನಗಳಿಂದಾಗಿ ಭಾರತ ಸರ್ವತೋಮುಖ ಪ್ರಗತಿ, ಅಭಿವೃದ್ಧಿ ಪಡೆದಿದೆ.

ಪ್ರಪಂಚದ ಶಾಂತಿಯನ್ನೇ ಬಯಸುವ ಭಾರತಕ್ಕೆ, ಪರಕೀಯರ ನೆರವು ಲಭಿಸಿದುದು, ಚಿನ್ನ ಪುಟಕ್ಕೆ ಕೊಟ್ಟಂತಾಗಿದೆ. ಚಿಕ್ಕಚೊಕ್ಕ ಜಪಾನ, ವಿಶ್ವಪ್ರಬಲ ರಾಷ್ಟ್ರ ರಶ್ಯ, ಸಂಪತ್ ಸಮೃದ್ಧ ರಾಷ್ಟ್ರ ಅಮೇರಿಕಾ, ಮೈತ್ರಿ ರಾಷ್ಟ್ರ ಇಂಗ್ಲಾಂಡ್ ಮಿತ್ರತಮ ರಾಷ್ಟ್ರಗಳು ಯಾಂತ್ರಿಕ ಸಹಾಯ, ಸಲಕರಣೆ, ಸಾಹಿತ್ಯ, ಸಲಹೆಗಳನ್ನು ಕೊಟ್ಟು ಭಾರತದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅಮೇರಿಕದ ಆರ್ಥಿಕ ನೆರವು, ಆಹಾರ ಧಾನ್ಯಗಳ ಸರಬರಾಯಿ ನೀಡಿ ಭಾರತದ ಅಭ್ಯುದಯಕ್ಕೆ ನೆರವಾಗಿದ್ದಾರೆ. ರಶ್ಯದ ಯಾಂತ್ರಿಕ ನೆರವಿನ, ತಜ್ಞರ ಸಲಹೆಗಳಿಂದ ಭಾಕ್ರಾ ನಂಗಲ್, 'ಹಿರಾಕುಡ್', ಅಣೆಕಟ್ಟುಗಳ ನಿರ್ಮಾಣದಿಂದ, ನೀರಾವರಿ, ಕೃಷಿ, ಬೆಳೆಗಳ ಉತ್ಪಾದನೆ ದ್ವಿಗುಣಿತವಾಗಿದೆ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಾರತ ಪಾರಂಪರ್ಯವಾಗಿ ಪ್ರಗತಿ ಸಾಧಿಸಿ, ವಿಶ್ವ ಖ್ಯಾತಿಗಳಿಸಿದೆ. ಸರ್ವ ಧರ್ಮಸಮನ್ವಯಾಚಾರ್ಯ, ರಾಮಕೃಷ್ಣ ಪರಮಹಂಸ, ಅಮೇರಿಕದ ಜನತೆಯ ಹೃದಯ ಪರಿವರ್ತಿಸಿದ ವಿವೇಕಾನಂದ, ರಾಜಾರಾಮ ಮೋಹನ್ ರಾಯಿ, ದಯಾನಂದ ಸರಸ್ವತಿ, ತುಕಾರಾಮ, ಜ್ಞಾನೇಶ್ವರ, ಕಬೀರ, ತುಳಸಿದಾಸ್, ದ್ವೈತ, ಅದ್ವೈತ ಸಿದ್ಧಾಂತಿಗಳಾದ ಶ್ರೀ ಶಂಕರಾಚಾರ್ಯ, ಶ್ರೀ ಮಧ್ವಾಚಾರ್ಯ, ಪುರಂದರ ದಾಸ್, ಜ್ಞಾನಿ ಕನಕದಾಸ, ಬಸವೇಶ್ವರ, ರಾಮಾನುಜಾಚಾರ್ಯ, ಮೊದಲಾದ ಧರ್ಮ ಸಂಸ್ಕೃತಿ ರಕ್ಷಕರು ಜನಿಸಿ ಭಾರತದ ದೇವ ಭಕ್ತಿ, ಚತುರ್ವಿಧ ಪುರುಷಾರ್ಥ ಸಾಧನೆಯ ಮಾರ್ಗದರ್ಶಕರಾಗಿ, ಧರ್ಮಾಗ್ರೇಸರರಾಗಿ ಮೆರೆದು ಬೆಳಗಿಸಿ ಮೋಕ್ಷ ಸಾಧನೆಯ, ಸಾಧಕನ ಕೈದೀವಿಗೆಯಾಗಿದ್ದು, ಭಾರತ ಧರ್ಮ ಜಾಗೃತಿಯನ್ನು ಪ್ರಪಂಚದ ಇತರ ರಾಷ್ಟ್ರಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಆಧ್ಯಾತ್ಮಿಕತೆಯ ಪ್ರಭಾವದಿಂದಾಗಿ ಭಾರತದ ಪ್ರಗತಿಯಾದುದು ಎಂಬುದರಲ್ಲಿ ಸಂಶಯವಿಲ್ಲ. ವಿದ್ಯಾಕ್ಷೇತ್ರದಲ್ಲಿ ಭಾರತ ಪ್ರಗತಿ ಸಾಧಿಸಿದೆ. ಭಾರತ ಜನತಾ ಸರಕಾರದ ಸಹಾಯ, ಸಲಹೆ, ಸಲಕರಣೆ, ಆರ್ಥಿಕ ನೆರವಿನಿಂದಾಗಿ, ಶಾಲೆಗಳು, ಪ್ರೌಢ ವಿದ್ಯಾಶಾಲೆಗಳು, ಪ್ರಥಮ ಶ್ರೇಣಿಯ, ಉಚ್ಚಮಟ್ಟದ ಶಿಕ್ಷಣ ನೀಡಿದ ಕಾಲೇಜುಗಳ ನಿರ್ಮಾಣದಿಂದಾಗಿ ವಿದ್ಯಾವಂತರಾಗಿ, ನಿರಕ್ಷರತೆ ಕೆಲವೇ ವರ್ಷಗಳಲ್ಲಿ ಭಾರತದಲ್ಲಿರಲಾರದು.

ವಿಶಾಲವಾಗಿರುವ ಭಾರತ, ದಿನದಿನವೂ ಏರುತ್ತಿರುವ ಜನಸಂಖ್ಯೆಯಿಂದಾಗಿ ಆಹಾರ ಪೂರೈಕೆಯ. ಜಟಿಲ ವ್ಯಕ್ತಿ ಸಮಸ್ಯೆ ಬಗೆಹರಿಸಲು ಏಕೈಕ ಯೋಜನೆ ಎಂದರೆ ಬಂಜರು ಬಿದ್ದಿರುವ ಸ್ಥಳವನ್ನು ಕೃಷಿ, ಬೆಳೆ, ಬೆಳೆಸುವವರಿಗೆ ಸರ್ವವಿಧದ ಸಹಾಯ ಸರಕಾರ ಕೊಟ್ಟು, ನೀರಿನ ಸರಬರಾಯಿ, ಪಂಪುಸೆಟ್ಟುಗಳ ವಿತರಣೆ, ಬೀಜಗಳ ಮತ್ತು ಆಧುನಿಕ ಗೊಬ್ಬರಗಳನ್ನೊದಗಿಸಿ, ಹೆಚ್ಚು ಬೆಳೆ ಬೆಳೆಸುವ ಏರ್ಪಾಡು ಮಾಡಿದರೆ ಭಾರತ ಮತ್ತಷ್ಟು ಪ್ರಗತಿ ಹೊಂದುವುದು. ಕೃಷಿ ಪ್ರಧಾನ ರಾಷ್ಟ್ರ ಭಾರತ, ಕೃಷಿಯಿಂದಲೇ ದುರ್ಭಿಕ್ಷವನ್ನು ಹೋಗಲಾಡಿಸಬಹುದು.

ಪಂಚವಾರ್ಷಿಕ ಯೋಜನೆಗಳಿಂದ, ನೀರಾವರಿ, ವಿದ್ಯುತ್, ಅಣೆಕಟ್ಟುಗಳ ನಿರ್ಮಾಣ, ಹಲವಾರು ವಿದ್ಯಾ ಯೋಜನೆಗಳು, ವಿದ್ಯಾರ್ಥಿ ವೇತನಗಳಿಂದ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿದೆ. ವಿಮಾನಗಳ ತಯಾರಿಕೆ, ಹಡಗು ತಯಾರಿಕೆ ಭಾರತದಲ್ಲೇ ಆಗುವುದು ಅಭಿಮಾನಪಡತಕ್ಕದ್ದಾಗಿದೆ. ವಿದ್ಯಾ ಕ್ಷೇತ್ರದಲ್ಲಿ ತುಂಬಾ ಅಭಿವೃದ್ಧಿಯಾಗಿದ್ದು, ಎಂಜಿನಿಯರ್, ಡಾಕ್ಟರ್, ಪದವೀಧರರು ಭಾರತದಾದ್ಯಂತ, ಭಾರತದ ಸರ್ವತೋಮುಖ ಅಭಿವೃದ್ಧಿಗೆ, ಪ್ರಗತಿಗೆ ಒಂದಲ್ಲ ಒಂದು

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ರಖಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಇಂದಿನ ಶಿಕ್ಷಣ ಪದ್ಧತಿ ಬದಲಾಗಬೇಕು

(ಏಳನೇ ಪುಟದಿಂದ)

ಜವಾಬ್ದಾರಿ ಸ್ವರೂಪದ ಸಮಾಜವೊಂದಿಗೆ ಹೊಂದಿಕೊಳ್ಳಲಿಕ್ಕೆ ತಯಾರಿದ್ದಾರೆ. ಇದರ ಮೇಲಿಂದಲೇ ಸಮಾಜವಾದಕ್ಕೆ ಕುತ್ತು ತಪ್ಪಿದ್ದಲ್ಲ ಎಂದು ನನಗೆ ಅನಿಸುತ್ತದೆ. ಜನರು ಸಮಾಜವಾದ ಶಬ್ದವನ್ನು ಬೇಕಾದಂತೆ ತಿರುವಿಸಿ ಇರಿಸಿದ್ದು, ಅದರೊಳಗಿಂದ ಯಾವ ಅರ್ಥ ಬೇಕಾದರೂ ಹೊರಡುವಂತೆ ಮಾಡಿದ್ದಾರೆ.

ಎರಡು ದೃಷ್ಟಿ...... ಎರಡು ಶಕ್ತಿ

ಶಿಕ್ಷಣದ ಕಡೆಗೆ ಎರಡು ದೃಷ್ಟಿಗಳಿಂದ ನೋಡಬೇಕು. ಆತ್ಮಿಕ ದೃಷ್ಟಿಯಿಂದ ಮತ್ತು ಪರಿಸ್ಥಿತಿಯ ದೃಷ್ಟಿಯಿಂದ. ಶಿಕ್ಷಣದಿಂದ ಆತ್ಮೋನ್ನತಿ ಸಾಧಿಸಬೇಕು; ಮತ್ತು ಪರಿಸ್ಥಿತಿಯನ್ನು ಎದುರಿಸುವ ಶಕ್ತಿಯೂ ಬರಬೇಕು. ಇಂದಿನ ಶಿಕ್ಷಣವು ಇವೆರಡರಲ್ಲಿ ಒಂದು ಒರೆಗಲ್ಲಿಗೂ ಹತ್ತುವದಿಲ್ಲ.

ಚೌಕಟ್ಟನ್ನೇ ಸಂಪೂರ್ಣ ಬದಲಿಸಬೇಕು

ಎರಡು ಪ್ರಕಾರದ ಬುದ್ಧಿಯ ಶಕ್ತಿಗಳಿಗನ್ನೇ ಇಂದಿನ ಶಿಕ್ಷಣದ ಸಂಬಂಧವಿರುಕ್ಕಡೆ ಮೊದಲನೆಯದು ಸ್ಮರಣಶಕ್ತಿ ಮತ್ತು ಎರಡನೆಯದು ತರ್ಕಶಕ್ತಿ. ಹುಡುಗರಲ್ಲಿ ನೆನಪಿಡುವ ಶಕ್ತಿ ಎಷ್ಟಿದೆ ಎಂಬುದರದೇ ಪರೀಕ್ಷೆ ತೆಗೆದುಕೊಳ್ಳಲಾಗುತ್ತದೆ. ಆದರೆ ಸ್ಮರಣಶಕ್ತಿ ಏನೂ ಬುದ್ಧಿಯ ಸರ್ವೋಚ್ಚ ಶಕ್ತಿಯಲ್ಲ. ಅದೊಂದು ಸರ್ವಸಾಮಾನ್ಯ ಶಕ್ತಿ. ಇಂತಹ ಶಕ್ತಿ ಪಶುಗಳಲ್ಲಿ ಸಹ ಎಷ್ಟೋ ಪ್ರಮಾಣದಲ್ಲಿ ಕಾಣಿಸುತ್ತದೆ. ಮೋಟರ್ ಹಾರ್ನ್ ಕೇಳುತ್ತಲೇ ಶಹರದಲ್ಲಿಯ ಪಶುಗಳು ಒಂದು ಬದಿಗೆ ಸರಿಯುತ್ತವೆ. ತಾವು ಬದಿಗೆ ಸರಿದು ಬಿಟ್ಟರೆ ಮೋಟರ ಸಂಕಟವಾಗಿ ದಾಟಿ ಬಿಡುತ್ತದೆ ಎಂಬ ತರ್ಕಶಕ್ತಿ ಅವುಗಳಿಗೆ ಇದೆ. ಇದರ ಮೇಲಿಂದ ತರ್ಕ ಹಾಗೂ ಸ್ಮರಣಶಕ್ತಿಗಳು ಸರ್ವ ಸಾಮಾನ್ಯ ಪಶುಗಳಲ್ಲಿಯೂ ಸಹ ಇರುತ್ತವೆ ಎಂದು ಕಂಡು ಬರುತ್ತದೆ. ಆದರೆ ಬುದ್ಧಿಯಲ್ಲಿ ಇದಕ್ಕಿಂತ ಎಷ್ಟೋ ಹೆಚ್ಚಿನ ಶಕ್ತಿಗಳು ಇರುತ್ತವೆ. ಆದರೆ ಶಿಕ್ಷಣದಲ್ಲಿ ಅವುಗಳ ವಿಕಾಸದ ಬಗ್ಗೆ ಯಾವದೇ ಪ್ರಯತ್ನ ನಡೆಯುವದು ಕಾಣುವದಿಲ್ಲ. ನಿರ್ಭಯತೆ, ಉದ್ಯಮ ಶೀಲತೆ, ಸಮರ್ಪಣ ಬುದ್ಧಿ, ಸತ್ಯ ಗ್ರಹಣದ ಊರ್ಮಿ ಮೊದಲಾದ ಬುದ್ಧಿಯ ಶಕ್ತಿಗಳನ್ನೆಷ್ಟೋ ಎಣಿಸಿಹೇಳಬಂದೀತು. ಬುದ್ಧಿಯ ಶಕ್ತಿಗಳು ಅನಂತವಾಗಿವೆ ಎಂದೇ ಮಾನವ ಶಾಸ್ತ್ರಜ್ಞರು ಹೇಳುತ್ತಾರೆ. ವಿಶ್ವದಲ್ಲಿರುವ ಶಕ್ತಿಗಳೆಲ್ಲವೂ ನಮ್ಮ ಬುದ್ಧಿಯಲ್ಲಿರುತ್ತವೆ. ಅನಂತಂ ವೈ ಅನಂತಾ ವಿಶ್ವೇ ದೇವಾಃ" ಸಾಧ್ಯವಾದ ಮಟ್ಟಿಗೆ ಇವೆಲ್ಲ ಶಕ್ತಿಗಳನ್ನು ವಿಕಾಸಗೊಳಿಸುವುದು ಶಿಕ್ಷಣದ ಕಲಶ. ಆದರೆ ಪ್ರತ್ಯಕ್ಷ ಜೀವನೋಪಯೋಗ ಕೆಲಸಗಳಲ್ಲಿ ಪ್ರಯೋಜನವಲ್ಲದೆ ಈ ಶಕ್ತಿಗಳನ್ನು ವಿಕಾಸಗೊಳಿಸಲು ಬರಲಿಕ್ಕಿಲ್ಲ. ಗುಣಗಳು ಒರೆಗೆ ಹತ್ತುವಂತೆಯೂ ಅವುಗಳ ವಿಕಾಸವಾಗುವಂತೆಯೂ ಶಿಕ್ಷಣದ ಯೋಜನೆಯಲ್ಲೇ ಇರಬೇಕು. ಆದರೆ ಇಂದು ಶಿಕ್ಷಕರು ಚರ್ಚೆಯಲ್ಲಿ ಕುಳಿತಿರುತ್ತಾರೆ. ಮತ್ತು ವಿದ್ಯಾರ್ಥಿಗಳ ಬೆಂಚಿನ ಮೇಲೆ ಕುಳಿತಿರುತ್ತಾರೆ. ಹೀಗೆ ಕುಳಿತುಕೊಂಡಿರುವ ಶಿಕ್ಷಣದಿಂದ ವಿಕಾಸವಾಗದು. ಕಲಿಯುವ ಶಿಕ್ಷಣದಲ್ಲಿ ನೂರರಲ್ಲಿ ೬೦ ಅಂಶ ಅಜ್ಞಾನ ವ್ಯಾಪಿಸಿರುತ್ತದೆ! ೬೦ ಅಂಶಜ್ಞಾನ ತೋರಿಸಿದರೆ ದಾಟಿ ಬಿಡುತ್ತಾರೆ. ಆತ್ಮ ವಿಕಾಸ ದೃಷ್ಟಿಯಿಂದ ಈ ಶಿಕ್ಷಣ ನಿರುಪಯೋಗಿ. ಒಂದು ಕ್ಷಣ ಕೂಡ ಇದು ಸತ್ಯವಲ್ಲ. ಈ ಶಿಕ್ಷಣದ ಚೌಕಟ್ಟನ್ನೇ ಸಂಪೂರ್ಣವಾಗಿ ಬದಲಿಸಲಿಕ್ಕೆ ಬೇಕು.

ರೀತಿಯಲ್ಲಿ ಶ್ರಮಿಸುತ್ತಾರೆ. ಭಂಡವಾಳಗಾರರ ಆರ್ಥಿಕ ನೆರವು, ಕಾರ್ಮಿಕ ಜೀವಿಗಳ ಅವಿಶ್ರಾಂತ ಶ್ರಮ, ಕಾಂಗ್ರೆಸ್ ಮುತ್ಸದ್ದಿಗಳ ಚಾಣಾಕ್ಷತೆ, ಕಾಂಗ್ರೆಸ್ಸೇತರರ ಬಾಲಿಕತ್ವತೆ, ಇನ್ನೊಂದೆಡೆ ಜ್ಞಾನಿಗಳ ಜ್ಞಾನ ಪ್ರಸಾರ, ವಿಜ್ಞಾನಿಗಳ ವಿಚಕ್ಷಣೆ, ಯೋಧರ ವೀರ ಧೀರ ಸಾಹಸ, ಒಂದೆಡೆ ತ್ಯಾಗಿಗಳ ತ್ಯಾಗ. ಇನ್ನೊಂದೆಡೆ ಪತ್ರಿಕಾ ಪ್ರಪಂಚದ ಪ್ರಚಾರ, ವಾಗ್ಮಿಗಳ ಜಾಣ್ಮೆ, ಭಾಷಣ ವೈಖರಿ ನಾರಿಗೆ ಸಂಪರ್ಕದವರ ಚತುರತೆ ವಾರ್ತಾ ಪ್ರಚಾರಕರ ಸೇವೆ, ಲೇಖಕರ ಲೇಖನಿ, ಕಲಾ ಉಪಾಸಕರ ಕಲಾ ಸೇವೆ, ಧರ್ಮ ಬೋಧಕರ ಧರ್ಮ ಅನುಷ್ಠಾನ, ಅತಿ ಹೆಚ್ಚಿನದಾಗಿ ಜನರ ಸೇವೆ ಜನಾರ್ದನನ ಸೇವೆ ಎಂಬ ಭಾವನೆ ನವ ವಿಧ ಭಕ್ತಿಯುತವಾದ ದೇವಸ್ಮರಣೆ ಭಾರತದ ಪ್ರಗತಿಗೆ ಮೂಲಾಧಾರವಾಗಿದೆ.

ಸೆಟ್ಟಿ ಸಿಂಗಾರವಾದಾಗ....

(ನಾಲ್ಕನೇ ಪುಟದಿಂದ)

'ಹೌದು. ಅವನೇದಿದ್ದ—ಆಂಗ್ಲೇಯರಿಗೆ ಭಾರತದಲ್ಲಿ ಸೇವೆ ಸಲ್ಲಿಸಬೇಕೆಂದಿದ್ದರೆ ನಿಸ್ವಾರ್ಥ ಭಾವದಿಂದ ಮಾಡಬೇಕು. ಯಾವುದೇ ಪದವಿ, ಧನ ಮತ್ತು ಪ್ರಲೋಭನೆಗಳಿಂದಲ್ಲ....'

'ಅದು ಸರಿ. ಆದರೆ, ಲೋಕವನ್ನೆಲ್ಲಾ ಇಸಾಯಿ ಮಾಡಬೇಕೆಂದು ಪಾದ್ರಿಗಳ ಭಗೀರಥ ಪ್ರಯತ್ನ. ಇಸ್ಲಾಂಮಯ ಮಾಡಬೇಕೆಂದು ಆಂಬರ ಆತುರ, ರಕ್ತಮಯ ಮಾಡಬೇಕೆಂದು ಚೀನಿಯರ ಹೇರಾಸೆ....ನಾವು ಇವನ್ನೆಲ್ಲಾ ನೋಡುತ್ತಲೇ ಕೈಕಟ್ಟಿ ಜಾತ್ಯತೀತತೆಯ ಮಂತ್ರಪಠಿಸಿ ಸುಮ್ಮನಿದ್ದೇವೆ...'

'ಹಾಗೇನೂ ಇಲ್ಲಾನ್ನಾ....'

'ಮತ್ತೇನು ಮಾಡುತಿದ್ದೇವೆ?'

'ಈ ಸಂಬಂಧದಲ್ಲಿ ಏನು ಮಾಡಬಹುದೂಂತ ಗಂಭೀರವಾಗಿ ಪರ್ಯಾಲೋಚಿಸುತಿದ್ದೇವೆ...'

'ಹ್ಹೂಂ....ಏನೋ ಹೇಳ್ತಾರಲ್ಲಾ.... ಸೆಟ್ಟಿ ಸಿಂಗಾರವಾದಾಗ...'

'ಹ್ಹೂಂ....ಅದೂ ಹೌದನ್ನೋ. ಆದರೂ ಇದಕ್ಕೆಲ್ಲ ಗಡಿಬಿಡಿಯಿಂದ ಕ್ರಮ ಕೈಕೊಂಡರೆ ಅಂತಾರಾಷ್ಟ್ರೀಯ ಅಂತಸ್ತಿನಲ್ಲಿ ನಾವೆಲ್ಲ ಕುಸಿದು ಬಿಡಬಹುದು.'

'ಕಟ್ಟಿಡಿ, ನೋಡೋಣ ನಿಮ್ಮ ಅಂತಾರಾಷ್ಟ್ರೀಯ ಅಂತಸ್ತನ್ನು. ರಾಷ್ಟ್ರೀಯ ಅಂತಸ್ತೇ ಇಲ್ಲದವರಿಗೆ ಅಂತಾರಾಷ್ಟ್ರೀಯವಂತೆ, ಅಂತಾರಾಷ್ಟ್ರೀಯ...'

'ಏ, ಅಲ್ವೆ, ಮನೆಯಲ್ಲಿ ಮಂಗನಾದ್ರೂ ಹೊರಗಡೆ ರಂಗನಾಗ್ಬೇಕು...'

'ಹೌದು. ನಿಮ್ಮ ಈ ಪಾದ್ರಿಗಳು ಮಾಡುತಿರುವುದೂ ಇದನ್ನೇ. ನೋಡಿ, ಬೊಂಬಾಯಿಯ ಮಹಿಳಾ ಕಾಲೇಜಿನಲ್ಲಿ ಪ್ರಿನ್ಸಿಪಲ್ ಮದರೋ ಸಿಸ್ಟರೋ ಏನು ಮಾಡಿದರು? ಕುಂಕುಮ ಹಾಕಬಾರದು, ಬಳೆ ಇಡಬಾರದು...'

"ಅದು ಸರಿ."

'ಯಾಕೆ?'

"ಹಿಂದೂ ತಂದೆತಾಯಿಂದಿರಿಗೆ ಸ್ವಲ್ಪ ಫಾದರ್, ಬ್ರದರ್, ಮದರ್, ಸಿಸ್ಟರ್‌ಗಳಲ್ಲಿರುವಷ್ಟು ವಿಶ್ವಾಸ ತಮ್ಮ ಅಪ್ಪ, ಅಮ್ಮ, ತಂಗಿಯರಲ್ಲಿಲ್ಲ. ಎಂತಲೇ ಕಾನ್ವೆಂಟು ಮೋಹ ಅವರಲ್ಲಿ ಮನೆ ಮಾಡಿದೆ...ಹಾಗಿರ ವಾಗ...'

"ಇದೆಲ್ಲ ಒಂದು ವಿಚಿತ್ರ. ಇಂತಹ ಅನ್ಯಾಯ—ಅಪಚಾರವನ್ನು ಯಂದೂ ಸರಕಾರ ಕಣ್ಣು ಮುಚ್ಚಿ ಕುಳಿತಿದೆ. ಜನತೆನ್ನ ಕಾ ಮರೆತು ಹಣ ಮಾಡುವುದರಲ್ಲೇ ಮುಳುಗಿದೆ....'

"ಹ್ಹೂಂ. ಆದರೂ ಇದು ಬಹುಕಾಲ ಮುಂದುವರಿಯದು...."

"ಹೆದರ ಬೇಡಿ, ಒಂದು ದಿನ ಕೇಳಿಯೇ ಕೇಳುವುದು ಘೋಷಣೆ ಎಸ್. ಎಮ್. ಪಾರಕ್ ಮುದಾರಾಬಾದ್..."

'ಏ, ಏನೇ ಇದು.... ಯಾರದು ಪಾರಕರು?'

"ಎಸ್. ಎಂ. ಪಾರಕರ ..."

"ಯಾರವರು? ಎಲ್ಲಿದ್ದಾರೆ, ಯಾಕೆ ಮುದಾರಾಬಾದ್....'

"ಅಯ್ಯೋ....ಎಸ್ ಅಂದ್ರೆ ಶಾಂತಿಂಕ ಅರ್ಥ, ಎಂ ಅಂದ್ರೆ ಮಂತ್ರಾಂತ, ಪಾರಕ ಅಂದ್ರೆ ಪಠಿಸುವವರೂಂತ...."

'ಹ್ಹ ಹ್ಹ....ಪರ್ವಾಗಿಲ್ಲ ಕಣೇ ನೀನು ....ಆದರೂ...."

"ಏನು?"

"ಹಾಗಾಗಬಾರದು...."

"ಅಯ್ಯೋ ಹೆದ್ರಿಕೆ...'

'ನಾಸಿರುವಾಗ?'

'ಇಲ್ಲಾನ್ನಿ....'

— ಗೋರಾ.

ಬಂಟರ ಯಾನೆ ನಾಡವರ ಸಂಘ ಮುಂಬಯಿ

ಈ ಸಂಘದ ವಾರ್ಷಿಕ ಮಹಾಸಭೆಯು ಇದೇ ಜುಲೈ ತಿಂಗಳ ತಾ. 23ಕ್ಕೆ ದಾದರಿನ ಕಿಟ್ಟ ಭಂಡಾರಿ ಹಾಲ್‌ನಲ್ಲಿ ಸಾಯಂಕಾಲ ಗಂಟೆ 3ಕ್ಕೆ ಸರಿಯಾಗಿ ಅಧ್ಯಕ್ಷ ಡಾ|| ಯಚ್. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದಸ್ಯರೆಲ್ಲರೂ, ಇದನ್ನೆ ಆಮಂತ್ರಣವೆಂದು ತಿಳಿದು ಅಂದಿನ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಚಂದಗಾಣಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ.

—ಆಡಳಿತ ಸಮಿತಿ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. P. No. 10/1967.

ದಾವಿದ ಕಾಸ್ತೆಲಿನೊ — ಅರ್ಜಿದಾರ.

ಸಮಸ್ತ ಜನರಿಗೆ ಈ ಮೂಲಕ ತಿಳಿಸುವದೇನೆಂದ್ರೆ—

ಅರ್ಜಿದಾರನ ತಮ್ಮ ಹಾಲ ಮೃತಪಟ್ಟಿರುವ ಬಲ್ತಿಜಾರ ಕಾಸ್ತೆಲಿನೊರಿಗೆ ಬಂತಕ್ಕ ಅರ್ಜಿಯಲ್ಲಿ ಕಾಣಿಸಿದ ದಾವಣಗೆರೆ ಚಿಗಟೇರಿ ಜನರಲ್ ಆಸ್ಪತ್ರೆಯಲ್ಲಿ Patients Deposit ನಲ್ಲಿರುವ ರೂಪಾಯಿ 998-28 ನ್ನು ಪಡೆಯುವರೆ ತನ್ನ ಹೆಸರಲ್ಲಿ Succession certificate ಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 21—7—37ಕ್ಕೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉಜುರಾತ ಕೊಡತಕ್ಕದ್ದು. ತಪ್ಪಿದ್ರೆ ಸದ್ರಿಯವರ ಗೈರು ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Petitioner

Karkala, 26—6—67.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. 18/1967

1. ಶಾರದ — ರಾಮರಾಯರ ಮಗಳು, ಮ N. ಕುಪ್ಪಣ್ಣ ಭಟ್ಟ ವಿಧವೆ—

2. ಶ್ರೀಕಾಂತಿ, 3. ಸುನೀತ, 4. ಸೀತಾರಾಮ, 5. ರಾಘವೇಂದ್ರ, 6. ಶೋಭ—

1ನೇಯವಳ ವಿನ್ನಾನರ ಮಕ್ಕಳು—ಕ್ಷೇಮ ಬಂತಕಳು ಮ ಗಾರ್ಡಿಯನ್. ತಾಯಿ—1ನೇಯವಳು.

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಪಾಡಿಗಾರದಲ್ಲಿರುವವರು — ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ತಾರೀಕು 19—2—1967ರಲ್ಲು ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಪಾಡಿಗಾರದಲ್ಲಿ ಮೃತಪಟ್ಟ ಸೀತಾರಾಮ ಭಟ್ಟ ಮಗ N. ಕುಪ್ಪಣ್ಣ ಭಟ್ಟ ಬಾಬ್ತು 'The Udipi co-operative Town Bank Ltd., No. 41, Udipi' ಯವರಲ್ಲಿ ಡಿಪೋಜಿಟು [illegible] ಪಡೆಯುವರೆ ಅರ್ಜಿಯಲ್ಲಿ ವಿವರಿಸಿದ [illegible] ತಮ್ಮ ಹೆಸರಲ್ಲಿ [illegible] ಕೊಡಬೇಕಾಗಿ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 19-7-1967ಕ್ಕೆ ಇಟ್ಟಿದೆ. ಆಕ್ಷೇಪವುಳ್ಳವರು ಆ ದಿನ್ನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳಬಹುದು.

K. Balachandra Rao
Advocate for Petitioners.

Udipi, 3—7—1967.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ಹೆ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉಚ್ಚ ಸಂಪ್ರದಾಯ
ಕಾಯ್ದುಕೊಳ್ಳಲು ಕರೆ

ಮಣಿಪಾಲ, ಜೂ. ೧—ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ॥ ಟಿ. ಎಂ. ಎ. ಪೈಯವರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಹೊಸ ವಿದ್ಯಾರ್ಥಿಗಳನ್ನುದ್ದೇಶಿಸಿ ನಿನ್ನೆ ಮಾತನಾಡುತ್ತಾ, ಈ ಕಾಲೇಜನ್ನು ಇಲ್ಲಿ ೧೪ ವರ್ಷಗಳ ಹಿಂದೆ ಆರಂಭಿಸಲಾಯಿತೆಂದೂ, ಈ ಸಂಸ್ಥೆ ರೂಢಿಸಿಕೊಂಡಿರುವ ಉಚ್ಚ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ತಿಳಿಸಿದರು.

ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಮುಖ್ಯಾಧಿಕಾರಿ ಡಾ॥ ಸಿ. ಎಚ್. ಶಿವರಾಮನ್‌ರವರೂ ಸಹ ಒಳ್ಳೆಯ ಗುಣ ಹಾಗೂ ನಡತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

ಬಂಟರಯಾನೆ ನಾಡವರ ಸಂಘ
ಮುಂಬಯಿ

ಮೇಲಿನ ಸಂಘದ ಸ್ನೇಹಕೂಟ ಸಮಾರಂಭವು ಇದೇ ತಾ. ೨-೭-೬೭ರಂದು ಕಿಂಗ್ ಜೋರ್ಜ್ ಸ್ಕೂಲಿನ ಹಾಲಿನಲ್ಲಿ ಸಂಘದ ಅಧ್ಯಕ್ಷರಾದ ಡಾ॥ ಯಚ್. ಬಾಲಕೃಷ್ಣ ಶೆಟ್ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಸಭಿಕರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಗೌ. ಪ್ರಧಾನ ಕಾರ್ಯದರ್ಶಿ ಶ್ರೀ ಯನ್. ಗೋಪಾಲ ಶೆಟ್ರು ಧನ್ಯವಾದ ಸಮರ್ಪಿಸಿದರು. ಲಘು ಉಪಹಾರವಾದ ನಂತರ ನಾಡವ ಕಲಾವೃಂದದವರ ವಿವಿಧವಿನೋದಾವಳಿಗಳಿಂದ ಜನರನ್ನು ಮನೋರಂಜನಗೊಳಿಸಲಾಯ್ತು. ಕೋಡು ಭೋಜ ಸಟ್ರಿಂದ ಬರೆದು ನಿರ್ದೇಶಿಸಲ್ಪಟ್ಟ 'ಬೇಸ್ ಬೇಲ್' ಎಂಬ ತುಳು ನಾಟಕ ಮತ್ತು 'ಭಕ್ತ ಪ್ರಹ್ಲಾದ' ಎಂಬ ಯಕ್ಷಗಾನವು ಅಂದಿನ ವಿಶೇಷ ಕಾರ್ಯಕ್ರಮಗಳಾಗಿದ್ದುವು.

ದಿ। ವಿ. ಎಸ್. ಕುಡ್ವರಿಗೆ
ಶ್ರದ್ಧಾಂಜಲಿ

ಮಣಿಪಾಲ, ಜು. ೧—ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ॥ ಟಿ ಎಂ. ಎ ಪೈಯವರು ಇಂದಿಲ್ಲಿ ಮಾತನಾಡುತ್ತಾ ದಿವಂಗತ ಶ್ರೀ ವಿ. ಎಸ್. ಕುಡ್ವರು ಸ್ವಯಂ ಮಹಾ ವ್ಯಕ್ತಿಗಳಲ್ಲೊಬ್ಬರಾಗಿದ್ದರೆಂದೂ ಅವರು ಅನೇಕರಿಗೆ ಸ್ಫೂರ್ತಿ ದಾಯಕರಾಗಿದ್ದಾರೆಂದೂ ನುಡಿದರು.

'ಶ್ರೀ ಕುಡ್ವರು ಸ್ವಲ್ಪ ಕಾಲ ಎಕಾಡೆಮಿಯ ಅಧ್ಯಕ್ಷರಾಗಿದ್ದರು. ಅವರು ಎಕಾಡೆಮಿಯ ಎಲ್ಲ ಸಂಸ್ಥೆಗಳ ಬಗ್ಗೆ, ಅದರಲ್ಲೂ ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜು ಹಾಗೂ ಮೂಲ್ಕಿಯ ವಿಜಯ ಕಾಲೇಜಿನ ಬಗ್ಗೆ ವಿಶೇಷ ಅಭಿಮಾನ ಇಟ್ಟುಕೊಂಡಿದ್ದರು ಎಂದು ಕಸ್ತೂರ್ಬಾ ಮೆಡಿಕಲ್ ಕಾಲೇಜು ಹಾಗೂ ಮಣಿಪಾಲ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಜಂಟಿ ಸಭೆಯಲ್ಲಿ ಅವರು ತಮ್ಮ ಹಳೆಯ ಸಹವಾಸಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ ತಿಳಿಸಿದರು.

ಶ್ರೀ ಕುಡ್ವರು ಬರಿಯ ಪ್ರಾಮಾಣಿಕವಾದ ಕಠಿಣ ಕೆಲಸದ ಮೂಲಕ ಜೀವನದಲ್ಲಿ ಉನ್ನತಸ್ಥಿತಿಯೊಗಿದ್ದರೆಂದು ಶ್ರೀ ರಮೇಶ ಪೈಯವರು ಹೇಳಿದರು. ಡಾ। ಸಿ. ಎಚ್. ಶಿವರಾಮನ್‌ರವರು ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಸಭೆ ಅಂಗೀಕರಿಸಿತು.

ದಿವ್ಯ ಸ್ಮರಣೆ

ನನ್ನ ಹೃದಯದಾಳದಲ್ಲಿ ಹುದುಗಿದ್ದ ನೆನಪು "ನವಯುಗ"ದಿಂದ ಮೇಲೆದ್ದುಕೊಂಡಿದ್ದು ಸನ್ಮಾನ್ಯ ಶ್ರೀಯುತ ವಿ. ಎಸ್. ಕುಡ್ವಾರವರ ನಿಧನ ವಾರ್ತೆ, ಸವಿವರವಾಗಿ ನವಯುಗದ ಸಂಪಾದಕೀಯದಲ್ಲಿ ಓದುವಾಗ "ಓ ಆ ಮಹನೀಯರೋ' ಅನಿಸಿತು. ಶ್ರದ್ಧಾಂಜಲಿ ಒಸರಿತು.

ನನ್ನ ಯಜಮಾನರಿಗೂ ಶ್ರೀ. ಕುಡ್ವರಿಗೂ ಬಹಳ ಸ್ನೇಹ. ಒಂದು ದಿನ ಯಜಮಾನರೊಂದಿಗೆ ಕುಡ್ವರೂ ಮನೆಗೆ ಬಂದಿದ್ದರು. ನಾನೇ ಕಾಫಿ ತಂದು ಇಬ್ಬರಿಗೂ ಕೊಟ್ಟೆ. ಕನ್ನಡ ಗೊತ್ತಿಲ್ಲದ ನನ್ನ ಯಜಮಾನರು ಕುಡ್ವರಿಗೆ ನನ್ನ ಪರಿಚಯ ಮಾಡಿಸುತ್ತ, ಈ ಹುಡುಗ ಯಾವಾಗ ನೋಡಿದರೂ ಏನೋ ಬರೆಯುತ್ತಾ ಇರುತ್ತಾನೆ. ನೀವು ಸ್ವಲ್ಪ ಓದಿ ನೋಡುವಿರಾ,' ಎಂದರು.

ನೋಡೋಣ, ತಾರಪ್ಪ, ಒಳ್ಳೆಯದಿದ್ದರೆ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸುವಾ' ಎಂದು ಕುಡ್ವರು, ನಾನು ಕೊಟ್ಟ ಒಂದು ಸಣ್ಣ ಕತೆಯನ್ನು ತೆಗೆದುಕೊಂಡು, ಹೋಗಿ, ಮರುವಾರದ" ಸ್ವದೇಶಾಭಿಮಾನಿ'ಯಲ್ಲಿ ಪ್ರಕಟಿಸಿಯೂ ಬಿಟ್ಟರು. (1930) ಕತೆಯ ಹೆಸರು "ವೀರನಾರಿ"

ಇದುವೇ ಹೊಟ್ಟೆ ಮೊದಲು ಅಚ್ಚಿನಲ್ಲಿ ಕಂಡ ನನ್ನ ಮೊದಲನೇ ಕತೆ.

ಈ ಪ್ರೋತ್ಸಾಹದಿಂದ ಧೈರ್ಯಗೊಂಡ ನಾನು ಹಂಪನಕಟ್ಟೆಯಲ್ಲಿದ್ದ 'ನವಯುಗ" ಆಫೀಸಿಗೆ ಹೋಗಿ ಶ್ರೀ ಎ. ಬಿ. ಶೆಟ್ಟಿಯವರ ಕೈಗೇ ಕೊಟ್ಟೆ ಎರಡನೇ ಕತೆಯನ್ನು. ಅವರು ನನ್ನ ಬೆನ್ನು ತಟ್ಟಿದರು. ಹೀಗೆ ಎರಡನೆಯದನ್ನು ಆಚ್ಚುಕಾಣಿಸಿದುದು' "ನವಯುಗ'ವೇ. ಅದಕ್ಕೆ ವಿಶ್ವಾಸ ಹುಟ್ಟಿಸಿದವರು ಕುಡ್ವರು.

ಶ್ರೀ ಕುಡ್ವಾರವರ ನೆನಪಿನ ಹಿಂದೆಯೇ ಮೊದಲೇ ನಿಧನರಾದ ಎ. ಬಿ. ಶೆಟ್ಟಿಯವರೂ ನೆನಪಿಗೆ ಬರುತ್ತಾರೆ. ನನಗರಿಯದಂತೆಯೇ ಆ ದಿವ್ಯ ಸ್ಮರಣೆಗಳಿಂದ ಅವರಿಗೂ ಶ್ರದ್ಧಾಂಜಲಿ ತುಂಬುತ್ತಿದೆ.

—ಮೂದರಬೆಟ್ಟು ರಂಗರಾವ್.

(ಮೂರನೇ ಪುಟದಿಂದ)

ಬಾದರಿಂದ ಇಳಿಯೆಗೋಡಿಸಲು ಅಥವಾ ಹಿಡಿಯಲು ಅಸಮರ್ಥರಾದವರು ಮನೆಗೆ ಕಿಚ್ಚಿಟ್ಟು ಸುಟ್ಟುರುಹಿದಂತೆ ಎನ್ನುವವರೂ ಇದ್ದಾರೆ. ಪಾನಪ್ರತಿಬಂಧವನ್ನು ವ್ಯವಹಾರಕ್ಕೆ ತರುವಾಗಲೂ ಕಾಂಗ್ರೆಸ್ಸು ಸರಕಾರ ಅದಕ್ಕೆ ಸಂಪೂರ್ಣ ಪರವಾಗಿಯೇ ಇತ್ತು ಎನ್ನುವಂತಿಲ್ಲವಾದರೂ ಮಹಾತ್ಮರ ಇಚ್ಛೆಯೆಂದು ಅದು ಕಾಯಿದೆಯಾಗುತ್ತ ಬಂತು. ಅದು ಇಡಿಯ ಕರ್ನಾಟಕ ರಾಜ್ಯಕ್ಕೆ ಇನ್ನೂ ಅನ್ವಯವಾಗಿರುವುದಿಲ್ಲ. ಹಾಗಿರುವಾಗಲೇ ಕಳೆದ ವರ್ಷ ಅದನ್ನು ಸಡಿಲುಗೊಳಿಸಲಾಯಿತು; ಈ ವರ್ಷ ಮತ್ತೆ ಅದನ್ನು ಸಡಿಲಿಸಿ ರಾಜ್ಯ ಸರಕಾರಕ್ಕೆ ವಾರ್ಷಿಕ ೪ ಕೋಟಿ ರೂಪಾಯಿ ಆದಾಯ ತರುವಂತೆ ಮಾಡಲು ನಿರ್ಧರಿಸಿದೆ, ಕಾಂಗ್ರೆಸ್ಸ ಶಾಸನ ಸಭಾ ಪಕ್ಷ. ನನೆಗುದಿಗೆ ಬಿದ್ದಿದ್ದ ಈ ಶಾಸನನ ಕತ್ತು ಇಷ್ಟರಲ್ಲೇ ತುಂಡಾಗಲಿದೆ. ಅಲ್ಲಿಗೆ ತಾವು ಇಟ್ಟುಕೊಂಡ ಆದರ್ಶ ಮತ್ತು ಕಂಡುಕೊಂಡ ಯಥಾರ್ಥಗಳ ಅಂತರ ಕಾಂಗ್ರೆಸ್ಸಿಗೆ ತೋರುತ್ತದೆ. ಜನತೆಯ ನೈತಿಕ ಪುನರುತ್ಥಾನದ ಮೂಲವೆಂದು ಪ್ರತಿಬಂಧವನ್ನು ವರ್ಣಿಸಲಾಗಿತು. ಆದರೆ, ಇಂದು ಅದು ಜನತೆಯ, ಸರಕಾರಿ ನೌಕರರ ಅನೈತಿಕ ವ್ಯವಹಾರಗಳ ಕೇಂದ್ರವಾಗಿದೆ. ಹೀಗಾಗಬಾರದಿತ್ತು; ಆದುದನ್ನು ಅನುಭವಿಸಲೇ ಬೇಕು ಕಾಲಕ್ಕೆ ಕೈ ಮುಗಿಯದಿರುವುದು ಯಾವನಿಂದ ಸಾಧ್ಯ?

ಭಗವತ್ ನಿವೇದನ

ಎಲ್ಲಾ ಒಬ್ಬನೆ ನಾಮದ ಹಂತ |
ಬಲ್ಲಿದ ತಿಳಿದಿಹ ಭಗವಂತ ।
ಎಲ್ಲೆಡೆಯಲ್ಲಿಯು ನಾನಾ ಹೆಸರು |
ನಿನ್ನಯ ನಾಮದ ಪರನೆಯ ಕೊಸರು।
ಎಲ್ಲರ ಬಾಯಲಿ ರಾಮಾಕೃಷ್ಣ ಮ |
ತ್ತೆಲ್ಲರ ಬಾಯಲಿ ಅಲ್ಲಾ ಕ್ರಿಸ್ತಾ|
ಯಾವುದರಲ್ಲೂ ಎಲ್ಲದರಲ್ಲೂ
ಅಡಗಿಹ ನೀತನು ಎಲ್ಲೆಲ್ಲೂ.
ಚೂತಿಕ ವೃಕ್ಷದ ಮೇಗಡೆಯಲ್ಲಿ
ಇಂಚರ ಗೈಯುವ ಕೋಗಿಲೆಯಲ್ಲಿ
ಇಲ್ಲಿ ದೇವಳದ ಕಂಶಿಲೆಯಲ್ಲಿ
ಕಾಜನಿಕ್ಕಿದ ಪಟದಲ್ಲಿ.
ಎಲ್ಲೆಡೆಯಲ್ಲಿಯು ನೀನಿರುವೆ
ಎಂದು ನನ್ನಡೆಗೆ ನೀ ಬರುವೆ?
ದೇಶದಲ್ಲೆಲ್ಲೆಡೆ ಕೂರೆ ರು ಕನ್ನ
ನಿನ್ನ ಮಂದಿರಕೆ ತಂದರು ಬನ್ನ
ಹರಿಯಿತು ಬವಣೆಯ ಕಲಹದ ಜೊನ್ನ
ಇರಿದರು ವೈರಿಯು ಶಿರವನು ಮುನ್ನ
ಎಂದು ಇಲ್ಲಿ ಗೈತರಲಿಹೆಯೋ?
ಬಂದು ನಂದನನವಾಡುವೆಯೋ?
ಅಸ್ತಿವಾರವೇ ಅಲುಗ ತೊಡಗಿದೆ
ಶ್ರಮಿಕ ಸಾರ್ಜನೆಗೆ ಅಗಳ ಬಿದ್ದಿದೆ
ನಿನ್ನರ್ಚಕರಿಗೆ ಆಗಳನೇಯದೆ
ನನ್ನಿ ಮದುರಕೆ ಓಡಿಸಿದೆ.
ದೇಶದಳೊಳಿತನು ಸಾಧಿಸಲೋಸುಗ
ನಾಶವ ದೂರಕೆ ದೂಡೊಮ್ಮೆ
ಆಗು ಹೋಗುಗಳ ನಿಯಾಮಕ ಧಾತೃ
ಕೃತಮುಖ ನೀ ಹೊಡೆನೋಡಿಕು ಕೃಚ್ಛ್ರ
ನಿನ್ನ ಆಣತಿಯ ನಿಯೋಗಿ ಈತ
ನನ್ನ ಆಣ್ಮ ನೀ ಕೊಡದಿರು ಘಾತ
ಭಾವ ಪೂಜೆ ಏನು ಮಾಡುವೆನು
ಭಾವಿಕ ನಿನ್ನನು ಬೇಡುವೆನು.
ಯುಗ ಯುಗಗಳ ಜಜ್ಞೇಶ್ವರ ನೀನು
ಯಾವ ಕಾಣ್ಕೆ ನಿನಗೀಯಲಿ ನಾನು
ನೀನಿತ್ತುದನೇ ಕೊಡುವೆನು ನಿನಗೆ
ನೀಲಾಂಜನವಾ ಬೆಳಗುವಾ ಬಗೆ
ಅವುರು ನಾನು ಅರಿತಿಲ್ಲ
'ಪ್ರಧಾನ' ನಿನ್ನೊಳೆ ಇಹುದಲ್ಲ.

— ಶ್ರೀ ಪು. ಗೋ. ರಾವ್.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 289/1965.

ಶ್ರೀ ಕೃಷ್ಣದೇವರು—ಯವರ ಪರ್ಯಾಯ ಸ್ವಾಮಿಗಳು—ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಸ್ವಾಮಿಗಳು—ವಾದಿಗಳು,

ಮತ್ತು

ಹೇಬ್ಬಾ ಆಲಿಯ ಕೂಡಾ—ಪ್ರತಿವಾದಿಗಳು,

ಸಲ್ಲಿಮೆಂಟು ೩ನೇ ಪ್ರತಿವಾದಿಳು,

ಯವರೊಳಗೆ

ಪ್ರಸುತ್ತ—ಶೇಕ್ ಅಬ್ದುಲ್ ಕರೀಮ್ ಸಾಹೇಬರ ವಿಧವೆ—ಕಾರ್ಕಳ ಕಸಬಾ ಸಾಲ್ಮರದಲ್ಲಿ ಯಿರುವವಳು.

ವಾದಿಯು ಶ್ರೀ ಕೃಷ್ಣದೇವರ ಭಂಡಾರಕ್ಕೆ ಪ್ರತಿವಾದಿಯಿಂದ ಮೂಲಗೇಣಿ ಬರತಕ್ಕದ್ದ ವಿಚಾರಿ ದಾವಾರಿ ಸಂಪತ್ರದಗಳ ಗೇಣಿಕೇಳಿ ಹೂಡಿದ ಮೇಲಿನ ದಾವೆಯಲ್ಲಿ ಸಲ್ಲಿಮೆಂಟು ೨ನೇ ಪ್ರತಿವಾದಿಳಿಗೆ ೩ ಸಾರಿ ನೋಟೀಸು ಮಾಡಿಸಿದಾಗ್ಯೂ ತಿಳ್ಳದಿರುವದ್ರಿಂದ ಯಾಮೂಲಕ ತಿಳಿಸಾಗದೇನೆಂದ್ರೆ, ಸದ್ರಿ ನಂಬ್ರ, ತಾ. ೩೧.೭.೬೭ಕ್ಕೆ ಯಿಡಲಾಗಿದೆ. ಏನಾದರೂ ಅಕ್ಷೇಪವಿದ್ರೆ ಆ ದಿವಸ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಂಡು ಮಾಡಿಕೊಳ್ಳುವದು. ಯಿಲ್ಲವಾದ್ರೆ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Plaintiff.

Udipi, 7—7—67.

THE VIJAYA BANK, LTD., KAUP
Registered Office: Light House Hill Road, Mangalore

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವು ಬಹುಕಾಲದಿಂದ ಬಾಕಿಯಿದ್ದು ಸದ್ರಿಯವರಿಗೆ ಅನೇಕ ಬಾರಿ ನೋಟೀಸು ಮ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟು ಕೇಳಿ ಕೊಂಡಾಗ್ಯೂ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಸುವುದೇನೆಂದರೆ ಇದೇ ಜುಲೈ ತಿಂಗಳ ತಾರೀಕು ೨೦ರ ಒಳಗೆ ಸದ್ರಿ ಸಾಲಗಳನ್ನು ಮರುಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸದಿದ್ದರೆ ಸದ್ರಿ ನಗಗಳನ್ನು ತಾ. ೨೨—೭—೧೯೬೭ನೇ ಶನಿವಾರ ಪೂರ್ವಾಹ್ನ ಗಂಟೆ ೧೧ಕ್ಕೆ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು, ವಿಳಾಸ	ಮೊಬಲಗು, ತಾ. ೩೦-೬-೬೭ರ ತನಕ ಬಡ್ಡಿ ಕೂಡಾ
269/64	ಎ. ಎಸ್. ಹಸನಬ್ಬ ಹಾಜಿ ಹಮಬ್ಬರ ಮಗ, ಮರ್ಚಂಟ್, ಪಣಂಬೂರು.	1084—45
18/66	ಮೋನಪ್ಪ ಸಿ. ಕಾಂಚನ್, ಪೆಗ್ಗು ಕೋಟಿಯಾನರ ಮಗ, ಫಿಶ್ ಮರ್ಚಂಟ್, ಪಡುಗ್ರಾಮ, P. O. ಕಾಪು.	521—30
35/66	ಗೋಪಾಲ ನಾಯ್ಕ, ಅಣ್ಣಪ್ಪ ನಾಯ್ಕರ ಮಗ, ಮಾಜೂರು ಗ್ರಾಮ, P. O. ಕರಂಬಾಡಿ	101—60
169/35	ಬಾಲಕೃಷ್ಣ ಎ. ಶೆಟ್ಟಿ, ಅಣ್ಣಪ್ಪ ಶೆಟ್ಟಿ, ಬೆಳಪು ಕಲ್ಲಿಪುಗುತ್ತು, P. O. ಬೆಳಪು	349—05

KAUP
8—7—1967

K. Bhojaraja Hegde
Manager

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=60
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

READ & ADVERTISE IN NAVAYUGA WEEKLY

ಮನೆಗೆ ಬಂದ ಮದುಮಗ

(ಎಂಟನೇ ಪುಟದಿಂದ)

'ಐ ಯೇವ್, ಸಾರಿ, ಕೃಷ್ಣ ನಾನು ನಿನಗೆ ತಿಳಿಸಲು ಮರೆತೆ, ನನ್ನ ಅತ್ತೆಯ ಮಗಳು ಹೆಂಗಸರ ಕಾಲೇಜಿನಲ್ಲಿ ಕಲಿಯುತ್ತಿರುವಳು. ಅವಳ ರೂಮಿಗೆ ಹೋಗಲಿಕ್ಕಿದೆ" ಎಂದು ಹೇಳಿ ನಾನು ನೆಟ್ಟಗೆ ಬೀಚಿನತ್ತ ಕಾಲುಹಾಕಿದೆ.

ಪ್ರತಿ ಆದಿತ್ಯವಾರ ನಾನೂ— ಶಾಂತಳೂ ಬೀಚ್‌ನಲ್ಲಿ ಭೇಟಿಯಾಗುತ್ತಿದ್ದು, ಮಾತುಕತೆ—ಸರಸ ಸಂಭಾಷಣೆಗಳಲ್ಲಿ ಕಳೆಯುತ್ತಿದ್ದೆವು. ಕೆಲವು ತಿಂಗಳುಗಳು ಹೀಗೆ ಕಳೆದವು.

"ಇನ್ನೊಂದು ಆಂದರೆ ಬರುವ ಆದಿತ್ಯವಾರ ನಾವು ಸಿನಿಮಾಕ್ಕೆ ಹೋಗೋಣ' ಎನ್ನಲು ಅವಳು ಒಪ್ಪಿದಳು.

ಆ ಆದಿತ್ಯವಾರವೂ ಬಂತು. ನಾವು ಬೀಚಿನಲ್ಲಿ ಭೇಟಿಯಾಗಿ ಸಿನಿಮಾಕ್ಕೆ ಹೊರಟೆವು. ನಾನು ರೂಮಿನಿಂದ ಹೊರಡಬೇಕಾದರೆ ಸ್ವಲ್ಪ ಸಮಯಗಳ ಹಿಂದೆಯೇ ಕೃಷ್ಣ ಮತ್ತು ರಾಮುಡು ಹೊರಟಿದ್ದರು. ಅವರಿಬ್ಬರೂ ನಮ್ಮನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದುದು, ಇಬ್ಬರಿಗೂ ತಿಳಿಯಲಿಲ್ಲ. ನಾವು ಥಿಯೇಟರಿನ ಒಳಗೆ ಹೋಗಲು, ಅವರಿಬ್ಬರೂ ಒಳಗೆ ಬಂದು ಸಿನಿಮಾ ನೋಡಿದರು. ನಾನು ಶಾಂತಳನ್ನು ಟ್ಯಾಕ್ಸಿಯಲ್ಲಿ ಕುಳ್ಳಿರಿಸಿ ಅವಳ ಹಾಸ್ಟೆಲಿಗೆ ಬಿಟ್ಟೆನು. ನನ್ನ ರೂಮನ್ನು ತಲುಪಿದೆನು. ಕೃಷ್ಣ ಮತ್ತು ರಾಮುಡು ರೂಮಿನಲ್ಲಿದ್ದರು. ಅವರಿಗೇನೂ ತಿಳಿಯದಂತಿದ್ದರು.

ಶಾಂತಳ ತಂದೆ ರಾಮಚಂದ್ರನು ದೊಡ್ಡ ಶ್ರೀಮಂತ. ಅಹಂಕಾರಿಯೂ, ಜ್ಞಾನಶೂನ್ಯನೂ ಆದ ರಾಮಚಂದರ್ ಐಶ್ವರ್ಯದ ಆರಾಧಕ. ಬಡವರು ಶ್ರೀಮಂತರ ಸೇವೆಗಾಗಿಯೇ ಹುಟ್ಟಿದವರೆಂದು ಅವನ ನಂಬಿಕೆ. ಆಳುಗಳನ್ನು ಗುಲಾಮರಂತೆಯೇ ಕಾಣುತ್ತಿದ್ದನು. ಆದರೆ ಅವನ ಮಕ್ಕಳು ಉತ್ತಮ ಗುಣದವರು. ಇವರ ಪೈಕಿ ಕೃಷ್ಣನು ಒಳ್ಳೆಯವನಾಗಿದ್ದನು.

ನನಗೂ ಶಾಂತಳಿಗೂ ಪ್ರೇಮವಿದ್ದ ವಿಚಾರ ತಿಳಿದಿದ್ದರೂ ಅವನು ನನ್ನೊಂದಿಗೆ ಆ ವಿಚಾರವನ್ನೇ ಪ್ರಸ್ತಾಪಿಸಲಿಲ್ಲ. ಅದು ಅವನಿಗೆ ಸಂತೋಷದ ವಿಷಯವೇ ಆಗಿತ್ತು.

ಪ್ರಾಪ್ತ ವಯಸ್ಕಳಾದ ಶಾಂತಳಿಗೆ ವಿವಾಹ ಮಾಡಿಸುವರೆ, ರಾಮಚಂದರ್ ಹುಡುಗನನ್ನು ಹುಡುಕುವುದಕ್ಕಾಗಿ ಹಲವು ಕಡೆಗಳಿಗ ಸುತ್ತಿದನು. ಕೊನೆಗೆ ತನ್ನಂತೆಯೇ ಜಮೀನ್ದಾರನ ಮಗನೆನ್ನಿಸಿದ ಕೇಶವನೆಂಬ ವಿದ್ಯಾರ್ಥಿಯನ್ನು ಗೊತ್ತು ಮಾಡಿದನು.

ಕೂಡಲೇ ತನ್ನ ಮಗಳು ಶಾಂತಳಿಗೆ ಪತ್ರ ಬರೆದನು. ಒಂದು ವಾರದ ರಜೆ ತೆಗೆದುಕೊಂಡು ಊರಿಗೆ ಬರಬೇಕೆಂದು ಪತ್ರದಲ್ಲಿ ತಿಳಿಸಿದನಲ್ಲದೆ ಕಾರಣವನ್ನು ತಿಳಿಸಲಿಲ್ಲ. ಇದರಿಂದ ಗಲಿಬಿಲಿಗೊಂಡ ಶಾಂತ ಒಂದು ವಾರದ ರಜೆಯನ್ನು ಪಡೆದು ಊರಿಗೆ ಬಂದಳು. ತಂದೆಯು ಸತ್ಯ ಸಂಗತಿಗಳನ್ನು ವಿವರಿಸಿ ಹೇಳಿದನು.

"ನನಗೀಗ ಬೇಡ ನನ್ನ ವಿದ್ಯಾರ್ಥಿ ಜೀವನ ಮುಗಿಯಲಿ. ಆ ವೇಳೆ ನೋಡೋಣ' ಎಂದಳು ಶಾಂತ.

ಆದರೂ ಮರು ದಿನ ಕೇಶವನೆಂಬ ಆ ಹುಡುಗನು ಬಂದನು. ಹುಡುಗನನ್ನು ಹುಡುಗಿಯನ್ನು ಒಪ್ಪಿದನು. ಮದುವೆಗೆ ದಿನ ನಿಶ್ಚೈಸಲೂ ಹೇಳಿಕೆಯಾಯಿತು. ತಾನು ೫೦೦೦ ರೂಪಾಯಿ ವರದಕ್ಷಿಣೆ ಕೊಡುವೆನೆಂದೂ ರಾಮಚಂದರ್ ನುಡಿದನಲ್ಲದೆ, ವಿವಾಹದ ಸರ್ವ ಖರ್ಚುಗಳನ್ನೂ ತಾನೇ ನೋಡವೆನೆಂದು ನುಡಿದನು. ಇವೆಲ್ಲದಕ್ಕೂ ಶಾಂತಾ ಒಪ್ಪಳದೇ ವಿರೋಧವಿತ್ತು, ಆದರೆ ಏನು ತಾನೇ ಮಾಡಿಯಾಳು? ಕ್ರಿಸ್‌ಮಸ್ ರಜೆಗೆ ಮತ್ತೂ ಎರಡು ತಿಂಗಳಿರುವುದರಿಂದ ಆ ಸಂದರ್ಭದಲ್ಲಿಯೇ ವಿವಾಹವು ಜರಗುವುದೆಂದು ನಿಶ್ಚಿತವಾಯಿತು. ಶಾಂತಾಕುಮಾರಿಯು ಉಭಯ ಸಂಕಟಕ್ಕೆ ಸಿಲುಕಿದಳು.

ಶಾಂತಳು ತನ್ನ ವಿದ್ಯೆಯನ್ನು ಮುಂದುವರಿಸುವ ಸಲುವಾಗಿ ಪುನಃ ಮದ್ರಾಸಿಗೇ ಬಂದಳು. ಅವಳು ಚಿಂತೆಯ ಮೂರ್ತಿಯಾಗಿದ್ದು—ಹಗಲೂ ರಾತ್ರಿಯೂ ಅಳುತ್ತಲೇ ಅಳುತ್ತಲೇ ದಿನಕಳೆದಳು. ಅವಳ ಮುಖವನ್ನು ಕಂಡು ಕೃಷ್ಣನು ಹಲವು ಬಾರಿ ಏನೆಂದು ಕೇಳಿದ್ದನು. ಕೃಷ್ಣನಿಗೆ ವಿಷಯವೂ ತಿಳಿದಿತ್ತು. ಅವಳು ಮಾತ್ರ ತನ್ನ ವಿವಾಹದ ಬಗ್ಗೆ ಅಣ್ಣನಲ್ಲಿ ತಿಳಿಸಲೇ ಇಲ್ಲ.

ವಿವಾಹಕ್ಕೆ ದಿನವೂ ಸಮೀಪಿಸಿದಂತೆಯೇ, ಅತ್ತ ವಧುವಿನ ಮನೆಯಲ್ಲೂ— ವರನ ಮನೆಯಲ್ಲೂ—ವಿವಾಹಕ್ಕೆ ಬೇಕಾದ ಸಕಲ ಸಿದ್ಧತೆಗಳೂ ಭರದಿಂದ ಸಾಗಿದವು. ಚಪ್ಪರ ತಳಿರು ತೋರಣಗಳು—ಸುಣ್ಣ ಬಣ್ಣಗಳು—ಹೀಗೆ ಕಟ್ಟಡವು ಅಮರಾವತಿಯೋ ಎಂಬಷ್ಟು ಅಲಂಕೃತವಾಗತೊಡಗಿತು. ಹಲವಾರು ಮಹನೀಯರುಗಳಿಗೆ ವಿವಾಹದ ಆಮಂತ್ರಣ ಕಳುಹಿಸಲ್ಪಟ್ಟಿತು.

o o o

ವಿವಾಹವು ಸಮೀಪಿಸುತ್ತಿದ್ದಂತೆಯೇ ಕೃಷ್ಣನಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಈ ವಿವಾಹವನ್ನೇ ನಿಲ್ಲಿಸಬೇಕೆಂದು ತೀವ್ರವಾಗಿ ಯೋಚನಾಪರನಾದನು ನಾನು ರೂಮಿನಿಂದ ಹೊರಗೆ ಹೋಗಿದ್ದ ಸಮಯದಲ್ಲಿ ರಾಮುಡು ಮತ್ತು ಕೃಷ್ಣ ರೂಮಿನಲ್ಲಿದ್ದುಕೊಂಡು ವಿಚಾರ ವಿಮರ್ಶೆಗ ತೊಡಗಿದರು.

'ರಾಮುಡು, ಅಂದು ಬಾಲಕೃಷ್ಣನ್ ನನ್ನ ತಂಗಿಯೊಂದಿಗೆ ಸಿನಿಮಾಕ್ಕೆ ಹೋದ ವಿಚಾರ ನಿನಗೆ ನೆನಪಿದೆಯೇ?

'ಅದು ನಿನ್ನ ತಂಗಿಯೇ? ನನ್ನೊಂದಿಗೆ ಇಷ್ಟರವರೆಗೂ ನೀನು ತಿಳಿಸಿಲ್ಲ!"

"ಅದೇ ನನ್ನ ತಲೆಯಲ್ಲಿ ಸುಳಿಯುತ್ತಿದೆ. ನನಗೇನೂ ತೋಚುತ್ತಿಲ್ಲ ರಾಮುಡು ಅವಳು ಅವನನ್ನು ಪ್ರೀತಿಸಿದ್ದರೂ ಇಂದೀಗ ಅವಳ ವಿವಾಹವು ಮತ್ತೊಬ್ಬನೊಂದಿಗೆ ನಡೆಸಲು ತಂದೆ ನಿಶ್ಚೈಸಿಯೂ ಆಗಿಗಿದೆ.'

'ಓ, ಮೈ ಗಾಡ್! ನಿನ್ನ ತಂಗಿ!! ಈ ವಿಚಾರದಲ್ಲಿ ಬಾಲನ್ ಮತ್ತು ನಿನ್ನ ತಂಗಿಯ ಬಗ್ಗೆ ಏನು ಮಾಡಬಹುದು? ರಾಗ ಬರುವಾಗ ತಂತಿ ಕಡಿಯಿತು ಎಂಬಂತಾಗಿದೆ, ಇನ್ನು ದಿನವೂ ಇಲ್ಲ"

"ನನಗೂ ಆ ಹುಡುಗ ಒಪ್ಪಿಗೆಯಿಲ್ಲ. ಬಾಲನ್ ಬುದ್ಧಿವಂತ, ವಿದ್ಯಾವಂತ—ಎಲ್ಲದರಲ್ಲೂ ಅವನೇ ಅವಳಿಗೆ ಯೋಗ್ಯ. ಮನಸ್ಸಿದ್ದರೆ ಮಾರ್ಗವಿದೆಯೆಂಬಂತೆ ಈ ವಿವಾಹವೇ ನಿಲ್ಲುವಂತೆ ಪ್ರಯತ್ನಿಸೋಣ"

ಅಷ್ಟರಲ್ಲಿ ನಾನು ಬಂದೆನು. ಕೂಡಲೇ ಕೃಷ್ಣನು ವಿಷಯ ತಿರುಗಿಸಿ ನನ್ನಲ್ಲಿ ಹೀಗೆಂದನು—"ಬಾಲನ್, ನನ್ನ ತಂದೆಯಿಂದ ನನಗೆ ಈಗ ತಾನೇ ಪತ್ರ ಬಂತು, ಬರುವ ಆದಿತ್ಯವಾರ ನನ್ನ ತಂಗಿಗೆ ಮದುವೆ. ನಾನು ಮತ್ತು ರಾಮುಡು ನಾಳೆ ಹೊರಡುವೆವು."

'ಬಹಳ ಸಂತೋಷ. ಹೋಗಿ ಬನ್ನಿ. ಯಾವ ರೈಲಿನಲ್ಲಿ?"

'ರಾಮುಡು ಹೇಗೂ ಬರುವನು. ಹಾಗೆಯೇ ನೀನು ಕೂಡಾ ಈ ಶುಭಕಾರ್ಯದಲ್ಲಿ ಭಾಗಿಯಾಗಬೇಕು. ನಾವು ಈ ದಿನದ ರಾತ್ರಿಯ ಟ್ರೈನಿಗೇ ಹೋಗೋಣ' ಎಂದನು ಕೃಷ್ಣ.

"ನನಗೆ ಕಾಲೇಜಿಗೆ ತಪ್ಪಿಸಲು ಮನಸ್ಸಿಲ್ಲ. ನೀವಿಬ್ಬರು ಹೋಗಿ."

'ಹಾಗೆಂದರೆ ಹೇಗೆ? ನಿನ್ನ ಅತ್ತೆಯ ಮಗಳಿಗೂ ನಿನಗೂ ವಿವಾಹ ಜರಗುವಾಗ ನೀನು ನಮ್ಮನ್ನು ಆಮಂತ್ರಿಸದಿದ್ದರೆ ಹೇಗೆ?"

"ನನ್ನ ಅತ್ತೆಯ ಮಗಳ! ನಾನು ಅವಳನ್ನು ಮದುವೆಯಾಗಲಾರೆ"

'ನೀನು ಪ್ರತಿ ಆದಿತ್ಯವಾರ ಸಂಜೆ ನಿನ್ನ ಅತ್ತೆಯ ಮಗಳೊಂದಿಗೆ ಕಳೆದಿರುವಿ. ಅವಳು ಕೊನೆಗೆ ನಿನ್ನನ್ನೇ ಮೋಸ ಮಾಡಿದಳೋ?"

"ಬಡ ಮನುಷ್ಯ, ಪಾಪ' ಎಂದು ರಾಮುಡು ನುಡಿದ.

'ಅವಳು ನಿನ್ನ ಕೈಯಿಂದ ಜಾರಿ ಹೋಗಿದ್ದರೆ ನಾನು ಅವಳನ್ನು ನಿನಗೇ ಹಿಡಿದು ಕೊಡುವೆ" ಎಂದು ತಮಾಷೆ ಮಾಡಿದನು ಕೃಷ್ಣ.

"ನೀವಿಬ್ಬರೂ ನನ್ನನ್ನು ತಮಾಷೆ ಮಾಡುತ್ತಿರುವಿರಿ! ಇನ್ನೂ ಏನಾದರೂ ಶಬ್ದಗಳು ಮರೆತ್ತಿದ್ದರೆ ಬೇಗನೆ ಹೇಳಿ ಮುಗಿಸಿ" ಎಂದು ಸಿಟ್ಟಿನಿಂದ ನುಡಿದೆ ನಾನು.

'ನಿನ್ನನ್ನು ಬಿಟ್ಟು ನಾವು ಹೋಗಲಾರೆವು. ನೀನು ಬರಬೇಕು. ಇದೇ ನನ್ನ ಕಡೆಯ ಹೇಳಿಕೆ'

ಕೊನೆಗ ನಾನು ಒಪ್ಪಲೇ ಬೇಕಾಯಿತು. ರಾಮುಡು ಮರುದಿನ ಬರುವೆನೆಂದು ಹೇಳಿದ. ನಾನು ಮತ್ತು ಕೃಷ್ಣ ಅಂದಿನ ರೈಲು ಹತ್ತಿ, ವಿವಾಹದ ಮನೆಯನ್ನು ತಲುಪಿದೆವು. ಅತಿಥಿ ಗೃಹದ ಒಂದು ಕೋಣೆಯಲ್ಲಿ ನನ್ನನ್ನು ಕುಳ್ಳಿರಿಸಿದನು ಕೃಷ್ಣ.

ಕೆಲವು ಗಂಟೆಗಳ ತರುವಾಯ ನಾನು ಅವರ ಮನೆಗೆ ಊಟಕ್ಕೆಂದು ಹೋದೆನು. ಶಾಂತಳು ನನ್ನ ಬದಿಯಲ್ಲಿ ಎರಡು ಬಾರಿ ಹಾದು ಹೋದಳು. ಅವಳೇ ನನ್ನ ಶಾಂತಳೆಂದು ಆಗ ದೃಢವಾಯಿತು. ಅವಳು ನನ್ನನ್ನು ನೋಡಿಯೂ ನೋಡದವಳಂತೆಯೇ ಮಾಡಿದಳು. ಆದರೆ ಅವಳ ಮುಖದಲ್ಲಿ ಸಂತೋಷದ ಕಳೆಯಿರಲಿಲ್ಲ.

ಮದುವೆಗೆ ಮುಂಚಿನ ದಿನ ಇನ್ನೂರು ಜನರನ್ನೊಳಗೊಂಡ ದಿಬ್ಬಣವು ಬಂದು ಅತಿಥಿ ಗೃಹದಲ್ಲಿ ತಂಗಿಕೊಂಡಿತು. ಅವರಿಗೆ ರಾತ್ರಿ ಊಟದ ಏರ್ಪಾಡುಗಳೆಲ್ಲಾ ಮುಗಿದುವು.

ರಾತ್ರಿ ಹತ್ತುಗಂಟೆಗೆ ಕೃಷ್ಣನು ಶಾಂತಳ ಕೋಣೆಗೆ ಹೋದನು. ಅವಳು ಮಲಗಿದ್ದಳು. ಆದರೆ ನಿದ್ರೆ ಬಂದಿರಲಿಲ್ಲ. 'ಶಾಂತಾ ಏಳು. ನಿನ್ನ ವಿವಾಹದ ನಂತರ ನೀನು ಇಲ್ಲಿರಲಾರೆ. ನಿನ್ನ ಗಂಡನ ಮನೆಗೇ ಹೋಗಲಿಕ್ಕಿದೆ. ಸ್ವಲ್ಪ ಮಾತನಾಡು' ಎಂದನು.

ಅವಳು ಅಳುತ್ತಿದ್ದಳು. ಎದ್ದು ಕುಳಿತು ಮೌನವಾಗಿಯೇ ಇದ್ದಳು.

'ಶಾಂತಾ, ನಿನ್ನಲ್ಲಿರುವ ದುಃಖವನ್ನು ನನ್ನೊಂದಿಗೆ ಹೇಳಲಿಲ್ಲವೆಂದಾದರೆ, ನಾನೀಗಲೇ ಹೋಗುವೆನು. ನಿನ್ನ ವಿವಾಹಕ್ಕೇ ಬರಲಾರೆ'

'ಅಣ್ಣಾ, ನಿನಗೇಕೆ ಇಷ್ಟೆಲ್ಲಾ ಚಿಂತೆ?'

'ನಿನ್ನ ಮನಸ್ಸನ್ನು ತಿಳಿದು ಅದಕ್ಕೆ ತಕ್ಕ ಸಹಾಯವನ್ನು ಮಾಡುವ ಸಲುವಾಗಿ."

"ಅಣ್ಣಾ, ಅದು ಸಮಯ ಮೀರಿದೆ. ನೀನೀಗ ಏನು ಮಾಡಲೂ ಸಾಧ್ಯವಿಲ್ಲ. ವೃಥಾ ಏನೇನೋ ಹೇಳದಿರು."

'ಮನಸ್ಸಿದ್ದರೆ ಮಾರ್ಗವಿದೆ ನಾನು ನಿನಗೆ ಏನು ಬೇಕಿದ್ದರೂ ಅದನ್ನು ಮಾಡಿಸಿಯೇ ತೀರುವೆನೆಂದು ಭಾಷೆ ಕೊಡುವೆನು. ಹೇಳು.'

'ನಾನು ಈ ಮದುವೆಗೆ ಒಪ್ಪಲಾರೆ. ನನಗೆ ವಿವಾಹವೇ ಬೇಡ.'

"ಮೊದಲೇ ಹೇಳುತ್ತಿದ್ದರೆ ಇಷ್ಟರಲ್ಲೇ ಕೆಲಸ ಮುಗಿಯುತ್ತಿತ್ತು."

''ಭಾಷೆ ಕೊಟ್ಟು ಈ ಮಾತೇ?'

'ಸಮಯ ಮೀರಿತು ಶಾಂತಾ. ಹುಡುಗ ನನಗೂ ಒಪ್ಪಿಗೆಯಿಲ್ಲ. ಆಗಲಿ, ಹಣೆಯ ಬರಹಕ್ಕೆ ದುಃಖಿಸಿ ಫಲವಿಲ್ಲ." ಎಂದನು ಕೃಷ್ಣ.

ರಾತ್ರಿಯಿಡೀ ಶಾಂತಳು ಅತ್ತು ಅತ್ತು ದುಃಖಿಸಿಯೇ ಬೆಳಗು ಮಾಡಿದಳು. ಅಂತು ಬೆಳಿಗ್ಗೆಯಾಯಿತು.

ಶಾಂತಳ ತಾಯಿಯು ಬಂದು ಸಮಾರಂಭಕ್ಕೆ ತಯಾರಾಗಲು ಎಬ್ಬಿಸಿ, ಅವಳಿಗೆ ಸ್ನಾನ ಮಾಡಿಸಿದಳು. ಉಡುಗೆ ತೊಡುಗೆಗಳನ್ನು ಧರಿಸಲು ತಿಳಿಸಿದರು. ಆಗ ಕೃಷ್ಣನು ಅಲ್ಲಿಗೆ ಬಂದನು. ಅವಳ ಕಣ್ಣನ್ನು ನೋಡುತ್ತಿದ್ದಂತೆಯೇ ಅವನಿಗೆ ಆಶ್ಚರ್ಯವೂ ಆಯಿತು. ಕಣ್ಣುಗಳು ಕಾಯಿಸಿದ ಕಬ್ಬಿಣದಂತೆ ಕೆಂಡವಾಗಿತ್ತು.

o o o o

ಮದುವೆಗೆ ಮುಹೂರ್ತ ಸನ್ನಿಹಿತವಾಯಿತು. ಬೆಳಿಗ್ಗೆ ವರನ ದಿಬ್ಬಣವು ಬಂದಿತು. ಅದೇ ಹೊತ್ತಿಗೆ ರಾಮುಡು ರೈಲಿನಿಂದಿಳಿದು ಅತಿಥಿ ಗೃಹದ ಸಮೀಪಕ್ಕೆ ಬಂದನು. ಅಲ್ಲಿ ಯಾರೂ ಇರಲಿಲ್ಲ. ಒಬ್ಬಳು ಕುರುಡಿಯಾದ ಮುದುಕಿಯೂ, ಇಬ್ಬರು ಹುಡುಗಿಯರೂ, ಒಬ್ಬಳು ಕೆಲಸದವಳೂ ಕುಳಿತುಕೊಂಡಿದ್ದರು. ಅವರು ವರನ ಕಡೆಯ ಬೆಲೆ ಬಾಳುವ ವಸ್ತುಗಳೆಲ್ಲವನ್ನು ಕಾಯ್ದುಕೊಂಡು ಕುಳಿತಿದ್ದರು. ಆ ಮುದುಕಿಯ ಪರಿಚಯ ಅವನಿಗಿತ್ತು. ರಾಮುಡು ಆ ಮುದುಕಿಯೊಂದಿಗೆ—

'ಅಜ್ಜಮ್ಮ, ಹೇಗಿದ್ದೀ? ಆರೋಗ್ಯವೇ?'

'ಅಯ್ಯೋ, ಇದ್ದೇನೆ. ನನಗೆ ಎರಡು ಕಣ್ಣುಗಳೂ ಕಾಣಿಸುತ್ತಿಲ್ಲ. ನೀನು ಯಾರೆಂದು ನನಗೆ ಗೊತ್ತಾಗಲಿಲ್ಲ.'

"ನಾನು ರಾಮುಡು.'

'ಓಹೋ, ತಿಳಿಯಿತು. ಇಂಗ್ಲೆಂಡಿನಿಂದ ಯಾವಾಗ ಬಂದೆ? ನೀನು ಡಾಕ್ಟರ್ ಅಲ್ಲವೇ?"

'ನಾನು ಕಳೆದ ವರ್ಷವೇ ಇಂಗ್ಲೆಂಡಿ

NAVAYUGA 13—7—1967

Registered with the Registrar
of News Papers for India
under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ನಿಂದ ಬಂದಿದ್ದೆ. ಮದ್ರಾಸಿನಲ್ಲಿದ್ದೆ. ಮದ್ರಾಸಿನಿಂದೀಗಲೇ ಬಂದೆ. ನಾನು ರೈಲಿನಿಂದ ಇಳಿದಾಗ—ನನಗೆ ವಧುವಿನ ಹೆಸರು ಶಾಂತಾಳೆಂದು ತಿಳಿಯಿತು. ಅವಳು ಮದ್ರಾಸಿನ ಕಾಲೇಜಿನಲ್ಲಿ ಎರಡನೆಯ ವರ್ಷದ ವಿದ್ಯಾರ್ಥಿನಿಯೆಂದೂ ಹೇಳಿದರು. ಆದರೆ ಹುಡುಗಿಯನ್ನು ನೀವು ಯಾರೂ ಸರಿಯಾಗಿ ನೋಡಲಿಲ್ಲ ಕಾಣಬೇಕು. ಹುಡುಗಿ ಮಾತ್ರ....' ಅಲ್ಲಿಗೇ ಮಾತು ನಿಲ್ಲಿಸಿದನು.

"ಏನು, ಏನು, ಹುಡುಗಿಯ ಬಗ್ಗೆ ಏನಾಗಿದೆ ಹೇಳು."

'ಮತ್ತೇನಾಗಿಲ್ಲ. ಅವಳ ಎರಡು ಕಣ್ಣುಗಳೂ ಕುರುಡು. ನಿನ್ನೆ ಮಗ ಅವಳನ್ನು ಹೇಗೆ ಒಪ್ಪಿದನೆಂದು ನನಗೆ ಆಶ್ಚರ್ಯ. ನನ್ನ ಆಸ್ಪತ್ರೆಗೆ ದಿನಂಪ್ರತಿ ಕಣ್ಣಿನ ಚಿಕಿತ್ಸೆಗಾಗಿ ಬರುತ್ತಿದ್ದಳು. ನಾನು ನೇತ್ರ ವೈದ್ಯನೆಂಬುದು ನಿನಗೆ ತಿಳಿದಿಲ್ಲವೇ? ಕಳೆದ ಮೂರು ವರ್ಷಗಳಿಂದಲೂ ಅವಳು ನನ್ನಿಂದಲೇ ಚಿಕಿತ್ಸೆಯನ್ನು ಪಡೆಯುತ್ತಿದ್ದಳು. ಇನ್ನು ಎರಡು ಮೂರು ವರ್ಷಗಳು ಕಳೆದರೆ ಅವಳ ಕಣ್ಣುಗಳು ಸಂಪೂರ್ಣ ಕುರುಡಾಗುವುವು.'

'ಓ ದೇವರೇ! ಅವಳು ಕುರುಡಿಯೇ!! ಕಣ್ಣಿನ ರೋಗವಿದೆಯೇ?' ಎಂದು ಜೋರಾಗಿ ಅಳತೊಡಗಿದಳು, ಹಣೆ ಹಣೆ ಬಡಿಯಹತ್ತಿದಳು. ಕೆಲಸದ ಹೆಂಗಸು ಓಡಿಹೋಗಿ ಅವಳ ಅಳಿಯಂದಿರಾದ ಶೇಖರ ಮತ್ತು ಮುನಿಯೆಂಬವರನ್ನು ಕರೆತಂದಳು. ಅತ್ತೆಯು ಬೊಬ್ಬೆ ಹಾಕುತ್ತಿದ್ದುದನ್ನು ಕಂಡು ಅಳಿಯಂದಿರಿಬ್ಬರೂ ಗಳಿಯುಂದಿರಾದರು.

ರಾಮು ಅಲ್ಲಿಂದ ಮಾಯವಾದನು.

ಅತ್ತೆಯು ಹುಡುಗಿಯ ಕಣ್ಣಿಗೆ ರೋಗವಿದೆಯೆಂದೂ, ಇನ್ನು ಎರಡು ವರ್ಷಗಳಲ್ಲೇ ಅವಳ ಕಣ್ಣು ಸಂಪೂರ್ಣ ಹೋಗುವುದೆಂದೂ— ಮದ್ರಾಸಿನ ಡಾಕ್ಟರೇ ನುಡಿದರೆಂದು ಹೇಳಿ ತುಂಬಾ ಅತ್ತಳು." ಇಂತಹ ಹುಡುಗಿಯನ್ನು ಆರಿಸಿದ ನೀವು ಕೂಡಾ ಕುರುಡರೇನು? ಎಂದು ಅವರಿಗೆ ತುಂಬಾ ಶಪಿಸಿದಳು.

ಗಾಯಗೊಂಡ ಹುಲಿಯಂತೆ ಇಬ್ಬರು ಅಳಿಯಂದಿರೂ ಮದುವೆ ಚಪ್ಪರಕ್ಕೆ ಧಾವಿಸಿದರು.

o o o

ಮದುಮಗಳು ಬೆಲೆ ಬಾಳುವ ಆಭರಣಗಳಿಂದಲೂ, ಹೂಮಾಲಿಕೆಗಳಿಂದಲೂ ಅಲಂಕೃತಳಾಗಿ ಮದುವೆ ಮಂಟಪಕ್ಕೆ ಹೋಗಲು ಸಕಲ ಸಿದ್ಧತೆಗಳಾದುವು. ಬ್ಯಾಂಡುವಾಲಗಗಳು ಮೊಳಗುತ್ತಿದ್ದುವು. "ಮೈಕ" ಬೊಬ್ಬಿಡುತ್ತಿತ್ತು. ಮದುವೆ ಚಪ್ಪರವು ಕಿಕ್ಕಿರಿದ ಜನರಿಂದ ಗಲಗಲ ಗದ್ದಲಗಳಿಂದ ತುಂಬಿತ್ತು. ಅಷ್ಟರಲ್ಲಿ ಕೃಷ್ಣನು ಶಾಂತಳಿದ್ದ ಕೋಣೆಗೆ ಬಂದನು ಅವಳೊಂದಿಗೆ ಕೆಲವು ಜನ ಸ್ತ್ರೀಯರು ಇದ್ದರು.

"ಶಾಂತಾ ಇಲ್ಲಿ ಬಾ. ಒಂದು ಗುಟ್ಟಿನ ವಿಷಯವಿದೆ" ಎಂದು ಹೇಳಿ ಸ್ವಲ್ಪ ದೂರ ಕರೆದೊಯ್ದು 'ನಾನು ನಿನಗೊಂದು ಬಹುಮಾನ ಕೊಡುವೆ. ಈ ಕಣ್ಣಡಕವನ್ನು ಧರಿಸು. ಮದುಮಗಳಾದ ನೀನು ಇನ್ನೂ ಚಂದ ಕಾಣುವಿ' ಎಂದನು.

"ಅಣ್ಣಾ, ನಾನು ಕುರುಡಿಯಲ್ಲ....' ಎಂದು ಹೇಳಿ ಅತ್ತಳು.

"ಅಲ್ಲ. ಆದರೂ ನೀನು ಕೆಲವೇ ನಿಮಿಷ ಧರಿಸಬೇಕು. ಯಾರಾದರೂ ಪ್ರಶ್ನಿಸಿದರೆ ಏನೂ ಉತ್ತರಿಸಬೇಡ. ಹಾಗೆಂದು ನನಗೆ ಭಾಷೆ ಕೊಡು"

ಕೊನೆಗೆ ಉಪಾಯವಿಲ್ಲದ್ದೆ ಒಪ್ಪಿದಳು. ಮುಹೂರ್ತ ಸನ್ನಿಹಿತವಾಯಿತು. ಪುರೋಹಿತರು—'ಮುಹೂರ್ತ ಬಂತು. ತನ್ನಿ ಮದುಮಗಳನ್ನು!' ಎಂದು ಬೊಬ್ಬಿಟ್ಟರು.

ಶಾಂತಾಳನ್ನು ಕೆಲವು ಸ್ತ್ರೀಯರು ಕರೆದುಕೊಂಡು ಮದುವೆ ಮಂಟಪಕ್ಕೆ ತಂದರು.

o o o

ಮದುಮಗನ ಬಳಿ ಮದುಮಗಳು ಕುಳಿತೊಡನೆಯೇ "ಶಿವಪೂಜೆಯಲ್ಲಿ ಕರಡಿ ನುಗ್ಗಿದಂತೆ"ಯೇ ಎರಡು ಹುಲಿಗಳು ಕೆಂಡ ಕಾರುತ್ತಾ ಹಾಜರಾದವು. ಶೇಖರ್ ಮತ್ತು ಮುನಿಯರಿಬ್ಬರೂ ಬಂದರು. ಮದುಮಗಳ ಕಣ್ಣಿಗೆ ಕಣ್ಣಡಕವೂ ಹಾಕಿರುವುದು ಕಂಡು ಅವರ ಸಿಟ್ಟು ನೆತ್ತಿಗೇರಿತು. "ಈ ಕುರುಡಿಯ ವಿವಾಹವು ಆಗುವುದೇ ಬೇಡ; ಮದುವೆ ನಿಲ್ಲಿಸಿ! ನಿಲ್ಲಿಸಿ!" ಎಂದರು. ಸಂಭ್ರಮದಿಂದ ಕೂಡಿದ ಸಭೆಯೆಲ್ಲವೂ ಸ್ಮಶಾನಸದೃಶವಾಯಿತು. ಶೇಖರ್ ರಾಮಚಂದರ್‌ನ ಸಮೀಪಕ್ಕೆ ಓಡಿ ಹೋಗಿ ಈ ರೀತಿ ಅಬ್ಬರಿಸಿದನು—'ನೀನು ಮೋಸಗಾರ! ಹುಡುಗಿಯ ಕಣ್ಣು ಸರಿಯಿಲ್ಲವೆಂದು ನೀನು ತಿಳಿಸಿಲ್ಲ. ಈ ಮದುವೆಯೇ ಬೇಡ.'

'ಕುರುಡಿ! ಹಾಗಾದರೆ ಪರೀಕ್ಷಿಸೋಣ.'

ಎಂದು ಅವಳ ಕಣ್ಣಡಕವನ್ನು ಎಳೆದು ಬಿಸಾಡಿದರು ರಾಮಚಂದರ್. ಅವಳ ಕಣ್ಣಿನಿಂದ ನೀರಿಳಿಯುತ್ತಿತ್ತು. ಮೊದಲಿನ ದಿನ ನಿದ್ದೆಯಿಲ್ಲದುದರಿಂದ ಕೆಂಪಾಗಿತ್ತು ಕಣ್ಣು. ಇದನ್ನು ಕಂಡ ವರನ ಕಡೆಯವರು ಅವಳು ಕುರುಡಿಯೆಂದೇ ಪ್ರತಿಪಾದಿಸಿ— ತಮ್ಮ ದಿಬ್ಬಣಗಳನ್ನು ಹಿಂದೆ ಒಯ್ದೇ ಬಿಟ್ಟರು. ರಾಮಚಂದರ್ ಮೂರ್ಛಿತನಾಗಿ ಬಿದ್ದನು. ವಿವಾಹವು ಒಮ್ಮೆಲೆ ನಿಂತಿತು.

ಆದರೆ ಶಾಂತಾ, ಅವಳ ಅಣ್ಣ, ರಾಮು, ಈ ಸಂತೋಷದಿಂದ ಕುಣಿದಾಡುತ್ತಿದ್ದರು.

ಒಡನೆಯೇ ಕೃಷ್ಣನು ಮೈಕದಲ್ಲಿ ಹೀಗೆಂದು ಬೊಬ್ಬಿಟ್ಟನು—'ಮಿತ್ರರೇ, ಬಾಂಧವರೇ, ವಿವಾಹವು ನಿಂತಿರುವ ವಿಚಾರ ನಿಮಗೆ ತಿಳಿದಿದೆ. ನನ್ನ ತಂಗಿ ನಿಜವಾಗಿಯೂ ಕುರುಡಿಯಲ್ಲ. ವಿವಾಹವಾಗುವ ಆತುರದಲ್ಲಿ ಹುಡುಗ—ಹುಡುಗಿಯರಿಗೆ ಮೊದಲಿನ ರಾತ್ರಿಯೆಲ್ಲಾ ನಿದ್ರೆಯೇ ಇಲ್ಲದೆ ಇರಲೂಬಹುದು. ಕಳೆದ ರಾತ್ರಿ ಶಾಂತಾ ನಿದ್ರೆಯೇ ಮಾಡಿರಲಿಲ್ಲ. ಅದಿರಲಿ. ಒಂದು ವಿಷಯ, ಅವಳ ಮದುವೆ ಈಗ ನಿಂತಿದ್ದರೂ—ಇಂದೇ ಅವಳ ಮದುವೆಯು ಇನ್ನೊಬ್ಬನೊಂದಿಗೆಯೆಂದು ನಿರ್ಧರಿಸಿದ್ದೇವೆ. ಆದುದರಿಂದ ದಯವಿಟ್ಟು ವಿವಾಹಕ್ಕೆ ನಿಂತು ವಧೂವರರನ್ನು ಆಶೀರ್ವದಿಸಬೇಕೆಂದು ವಿನಂತಿ" ಕೃಷ್ಣನು ನನ್ನನ್ನು ಸಭೆಯಲ್ಲಿಯೇ ಎಳೆದುಕೊಂಡೇ ಹೋದನು. ರಾಮಚಂದರ್ ಕುಳಿತುಕೊಂಡು ಅಳುತ್ತಿದ್ದನು— "ಅಯ್ಯೋ ನಾನು ನಿದ್ದೆ ಬಿಟ್ಟು ಮಾಡಿದ ಎಲ್ಲಾ ಏರ್ಪಾಡುಗಳೂ ವ್ಯರ್ಥವಾಯಿತಲ್ಲ! ನಾನಿನ್ನು ಯಾರಿಗೆ ಮುಖ ತೋರಿಸಲಿ?"

'ಅಪ್ಪಾ, ನೀವು ಒಪ್ಪಿದರೆ ಈ ವಿವಾಹ ಇಂದೇ ನಡೆಯುವುದು. ಮುಂದೆ ಇಡಲು ಸಾಧ್ಯವಿಲ್ಲ. ನನ್ನ ಮಿತ್ರ ಬಾಲಚಂದರ್ ಇದ್ದಾನೆ. ಅವನು ನನ್ನ ಕ್ಲಾಸ್ ಮೇಟ್ ಸಾಧಾರಣ ಶ್ರೀಮಂತನೂ, ಯೋಗ್ಯ ಮನೆತನದವನೂ ಆಗಿರುವನು. ನಿಮಗೆ ಇದರಲ್ಲಿ ವಿರೋಧವಿಲ್ಲದಿದ್ದರೆ ಕೂಡಲೇ ವಿವಾಹ ನಡೆಸಬಹುದು" ಎನ್ನುತ್ತಾ ನನ್ನನ್ನು ಕಾಣಿಸಿದನು

ಮತ್ತೇನು? ತಂದೆಯು ಒಪ್ಪಿದನು. ವಿವಾಹವೂ ನಡೆಯಿತು'.

o o o

ಮದುವೆ ಮುಗಿದ ನಂತರ ಒಂದು ದಿನ ಕೃಷ್ಣ, ರಾಮು, ಮತ್ತು ನಾನು ಮಹಡಿಯ ಮೇಲೆ ಕುಳಿತ ಮಾತುಕತೆಯಾಡುತ್ತಿದ್ದೆವು. ಅಷ್ಟರಲ್ಲಿ ಶಾಂತಳು ತಿಂಡಿಯನ್ನು—ಚಹವನ್ನು ತಂದಳು. "ಇಲ್ಲಿ ಸೇವಕರಿರಲು ನೀನೇಕೆ ತರುವಿ? ನೀನು ಕುರುಡಿ. ಎಲ್ಲಿಯಾದರೂ ಬಿದ್ದರೆ ಎಲ್ಲಾ ಹುಡಿ ಹುಡಿಯಾದೀತ.' ಎಂದು ಕೃಷ್ಣನು ತಮಾಷೆ ನುಡಿದನು.

'ಶಾಂತಳು ಮದುವೆಗೆ ಸ್ವಲ್ಪ ಮುಂಚೆ ಕುರುಡಿ" ಎನ್ನುತ್ತಾ ರಾಮುವು ನಗೆಯಾಡಿದನು.

'ಕೃಷ್ಣಾ, ನೀನು ತಪ್ಪು ಮಾಡಿದೆ. ಮದುವೆಗೆ ಹಲವಾರು ಜನ ಬಂದಿರಲು ನೀನು ನನ್ನನ್ನೇ ಸಿಕ್ಕಿಸಿ ಹಾಕಿಸಿದೆ. ಬೇರೆ ಯಾರನ್ನಾದರೂ ಎಳೆದು ತರಬೇಕಿತ್ತು.'

'ಬೇರೆ ಯಾರು ಯಾರೇಕೆ? ಪ್ರತಿ ಆದಿತ್ಯವಾರ ಬೀಚಿಗೆ ಕರೆದವರು, ಸಿನಿಮಾಕ್ಕೆ ಒಯ್ದವರು, ಬೇರೆ ಯಾರಿದ್ದರು ಆ ದಿನ? ಇದೇ "ಮದುಮಗ".

'ಸಾಕು ತಮಾಷೆ! ನಿನಗೆ ಎಲ್ಲಾ ಗೊತ್ತಿದೆ.'

"ಪ್ರೇಮಕ್ಕೆ ಕಣ್ಣಿಲ್ಲದಾಗ, ನಿಮ್ಮಿಬ್ಬರಿಗೂ ಕಣ್ಣಿರಲಿಲ್ಲ. ಏಕೆಂದರೆ ನಿಮ್ಮಿಬ್ಬರನ್ನೂ ನಾನು ನೆರಳಿನಂತೆ ಹಿಂಬಾಲಿಸುತ್ತಿದ್ದೆ. ಆದರೆ ನಿಮಗಿಬ್ಬರಿಗೂ ಅದು ಗೊತ್ತೇ ಇರಲಿಲ್ಲ.'

ಚದರಿದ ಹೃದಯಗಳು ಒಮ್ಮೆಲೇ ಬಿರಿತಂತೆ ನಗುವಿನ ಅಲೆಗಳು ಅಲೆಅಲೆಯಾಗಿ ಮಹಡಿಯ ಮೇಲಿಂದ ಗಗನಕ್ಕೆ ಮುಟ್ಟಿದವು.

(ಇಂಗ್ಲಿಷ್ ಕಥೆಯ ಆಧಾರ)

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ವಿವಿಧ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ| ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನಾನಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty at the Navayuga Press, Udipi, S, India.

ನವಯುಗ

20—7—1967

೨೦
ಪೈಸೆ

ಕಥಾ ಪ್ರಪಂಚ

ನಾನೀಗ ಸತ್ಯಸಂಧ

ಬರೆದವರು
ಶ್ರೀ ಎಚ್. ಎಂ. ನಾರಾಯಣ ಭಟ್.

ತನ್ನ ಹಣವನ್ನಾಗಲೀ ಸಾಧನವನ್ನಾಗಲೀ ಇತರರು ಕಳವು ಮಾಡಬಾರದೆಂದಾಗ ಪ್ರತಿಯೋರ್ವನೂ ಸಾಧಾರಣವಾಗಿ "ಸತ್ಯವಾನ"ನಾಗುತ್ತಾನೆ.

ನಾನು ಈಗ ಸಾಮಾನ್ಯವಾಗಿ ಸತ್ಯವಂತನು. ಕಳೆದ ಬೇಸಗೆಯಲ್ಲಿ ಮಂಗಳೂರಿನ ಒಂದು ಹೋಟೆಲಲ್ಲಿ ಉಪಾಹಾರ ಸೇವಿಸಿದೆ. 'ಬಿಲ್' ಕೈಯಲ್ಲಿ ಹಿಡಕೊಂಡು 'ಕೇಶಿಯರ್'ನ ಬಳಿ ಸೇರಿ ಜೇಬು ಹುಡುಕಿದಾಗ 'ಚಿಲ್ಲರೆ' ಸ್ವಲ್ಪ ಕಡಿಮೆಯೆಂದು ಗೊತ್ತಾಯ್ತು. 45 ಪೈಸೆ ಪೈಕಿ 5 ಪೈಸೆ ಇಲ್ಲ. ಉಳಿದಿರುವ ನೋಟು ರೂ. 100ರದು. ಅದನ್ನು ಮುರಿಯಲು ಕೇಶಿಯರನಲ್ಲಿಯೂ ಇಲ್ಲ. "ನೀವು ಮತ್ತೆ ಕೊಡಿ" ಎಂದು ಅಪ್ಪಣೆ ಸಹಿತ ನಾನು ಹೊರಟ್ಹೋದೆ. ಇನ್ನೂ ಕೆಲವೆಲ್ಲಾ ವ್ಯಾಪಾರ ಮಾಡಬೇಕಾಗಿದೆ. ಆಗ ಚಿಲ್ಲರೆಯಾಗುತ್ತದೆ. ಅಂತೂ ಯೋಗ್ಯನಾಗಿದ್ದ ಕೇಶಿಯರ್ ಉದಾರತೆಯನ್ನೇ ಪ್ರದರ್ಶಿಸಿದನೆನ್ನಿ. ನನ್ನಲ್ಲಿ ಆತನಿಗೆ ಇಷ್ಟೊಂದು ವಿಶ್ವಾಸ? ನನಗೆ ಆತನಲ್ಲಿ ಗೌರವವೂ ಆದರವೂ ಉಂಟಾದವು. ಆದರೂ ಆ ಐದು ಪೈಸೆಯನ್ನು ಅಂದೇ ಕೊಡಲು ನನಗೂ ಮರೆತು ಹೋಗಿತ್ತು. ಈ ಬಗ್ಗೆ ಬಹಳ ಬೇಸರವಿತ್ತು. ಪ್ರಕಟಣೆಗೆ ಸ್ವೀಕಾರಾರ್ಯವಲ್ಲದ ಲೇಖನಗಳನ್ನು ಆ ಪುಗಳ ಸೃಷ್ಟಿ ಕರ್ತರಿಗೆ ಹಿಂದಿರುಗಿ ಕಳುಹಿಸುವಾಗ ಪತ್ರಿಕಾ "ಸಂಪಾದಕ"ರಾಗುವ ಬೇಸರದಂತೆ.

ಕೆಲವೇ ದಿನಗಳಲ್ಲಿ ನಾನು ಮತ್ತೊಮ್ಮೆ ಅದೇ ಪಟ್ಟಣಕ್ಕೆ ಹೋದೆ. ಈ ಐದು ಪೈಸೆಯ ಮರುಪಾವತಿಗೆಂದಲ್ಲ ಇತರ ಅಗತ್ಯಗಳಿದ್ದುವು. ಅಂದು ಬಾಕಿ ಹಣದ ಮರುಪಾವತಿಗಾಗಿ ಒಂದು ಮೈಲು ನಡೆದೇ ಆ ಊರಿನ ಬಸಿನಲ್ಲಿ ಅದೇ ಹೋಟೆಲಿಗೆ ಹೋದೆ, ನನ್ನ ಸತ್ಯ ಸಂಧತೆಯನ್ನು ಪ್ರದರ್ಶಿಸಲು!

ಅಲ್ಲಿಯೋ ಆಗ ಕೇಶಿಯರ್ ಬೇರೆ. ಮೊದಲಿದ್ದ ಕೇಶಿಯರ್ ಊಟದ ಬಿಡುವಿನಲ್ಲಿ. ನನಗೆ ಬೇಸರವಾಯ್ತು. ನಾನು ಉಣ್ಣದ ನಡೆದು ಸತ್ಯ ಸಂಧತೆ ವ್ಯಕ್ತಪಡಿಸುವ ಪ್ರದರ್ಶನಕ್ಕಾಗ ಅದನ್ನು ಕಾಣ ಬೇಕಾದವನೇ ಇಲ್ಲ! ಅಲ್ಲಿದ್ದ ಕೇಶಿಯರ್‌ನಿಗೆ ಪೂರ್ವವೃತ್ತಾಂತಗಳನ್ನೆಲ್ಲಾ ವಿವರಿಸಿ ಐದು ಪೈಸೆಯ ಒಂದು ನಾಣ್ಯವನ್ನು ಕೊಟ್ಟೆ. ಆತನಿಗೆ ನನ್ನ ಕಥೆ ಪುರಾಣಗಳಲ್ಲಿ ಶ್ರದ್ಧೆಯಿದ್ದಂತೆ ತೋರಲಿಲ್ಲ. ಅದು ಹಾಗಿರಲಿ! ನಾಣ್ಯವನ್ನು ಉದಾಸೀನ ಭಾವದಿಂದ ಪಡೆದು ಮೇಜಿನೊಳಗೆ ಹಾಕಿ ಇತರರಿಂದ ಹಣ ವಸೂಲಿ ಕಾರ್ಯದಲ್ಲಿ ಮಗ್ನನಾದ. ನನ್ನೆಡೆಗೆ ನೋಟವೂ ಇಲ್ಲ. ಉಪಕಾರ ಸ್ಮರಣೆಯ ಮಾತು ಹಾಗೆಯೇ ಉಳಿಯಲಿ. ನಾನು ಮತ್ತೂ ಕೆಲವು ನಿಮಿಷ ಕಾದು ನಿಂತೆ. ಕೇಶಿಯರ್ ಸ್ನೇಹಾಗಿ ಸಮೀಪದ ಕೊಠಡಿಯೊಳಕ್ಕೆ ಪ್ರವೇಶಿಸಿದ. ಹಾಗೆ ಹೋಗಲು ವಿಶೇಷ ಅಗತ್ಯವೇನೂ ಇದ್ದಿಲ್ಲ. ಪ್ರಾಯಶಃ ನಗೆಯನ್ನು ನಿಯಂತ್ರಿಸಲಾಗಿರಬೇಕು. ಅಲ್ಲಿಂದ ನಗುವ ಶಬ್ದ ಕೇಳಿದೊಡನೆ ನಾನು ನನ್ನ ದಾರಿಗೆ ನಡೆದೆ. ಯಾರಲ್ಲೂ ಹೇಳಲಿಲ್ಲ. ಹೇಳಿದರೆ ಕೇಳಿದವರೂ ನಕ್ಕಾರು?

ಅಪಮೌಲ್ಯ

ಸತ್ಯಸಂಧನಾಗುವ ಇಚ್ಛೆ ಮಾತ್ರ ನನ್ನನ್ನು ಬಿಟ್ಟುಹೋಗದು. ಒಂದು ದಿನ ಜೀನಸಿನ ಅಂಗಡಿಯಲ್ಲಿ ಸಾಧನಗಳ ಪಟ್ಟಿ ಕೊಟ್ಟು ಗಾಡಿ ತರಲು ಹೋದೆ. ಗಾಡಿ ಬಂದೊಡನೆಯೇ ಪಟ್ಟಿ ಪ್ರಕಾರದ ಜೀನಸುಗಳನ್ನು ಪರಿಶೋಧಿಸಿ "ಲೋಡಿಂಗ್" ಸಾಗಿತು. ಬಿಲ್ ಪ್ರಕಾರದ ಹಣ ತೆತ್ತು ನಾನು ಮನೆಗೆ ಹೋಗಿ ನೋಡುತ್ತೇನೆ. ಬಿಲ್ ಸರಿಯಿಲ್ಲ. ರೂ. 680ರ ಬದಲಾಗಿ ರೂ 580 ಮಾತ್ರವೇ ಬಿಲ್‌ನಲ್ಲಿದ್ದುದು. ಸಾಹುಕಾರನಿಗೆ ಕೂಡಿಸುವಾಗ ತಪ್ಪಿಹೋದುದು ಬಿಲ್‌ನಲ್ಲಿ ಸ್ಪಷ್ಟವಾಗಿಯೇ ಕಾಣುತ್ತಿತ್ತು. ನಾನು ಸೀದಾ ಸಾಹುಕಾರನ ಭೇಟಿಗೆಂದು ಮರಳಿದೆ ಸಾಹುಕಾರ ಅಂಗಡಿಯಲ್ಲಿಲ್ಲ. ಆತನ ಮನೆಗೆ ಹೋದೆ. ಬಿಲ್ ತೋರಿಸಿದೆ ಕೂಡಿಸುವಾಗ ಬಿಟ್ಟು ಹೋಗಿದ್ದ ರೂ. 100ನ್ನು ಕೊಟ್ಟೆ ಆತನಿಗೆ ಸಂತೋಷವಾಗ ಬೇಡವೆ? ಆಗಲಿಲ್ಲ. ತನ್ನ ಬಿಲ್ ಸರಿಯಿಲ್ಲವೆಂಬ ಅಪಮಾನ ಭಾವ ತಾಳಿದವನಂತ ತಲೆ ತಗ್ಗಿಸಿ ಕುಳಿತ. ಪ್ರಾಯಶಃ ಆತನನ್ನು ತಪ್ಪಿತಸ್ಥನಾಗಿ ಮಾಡಿದ ನನ್ನ ಮೇಲೆ ದ್ವೇಷವೇ ಬೆಳೆದಂತೆ ಭಾಸವಾಯಿತು. ಕೊನೆಗೆ ಸಂತೋಷವಾಯಿತೆಂದೂ ಧನ್ಯವಾದವೆಂದೂ ಶಬ್ದಗಳೂ ಹೊರಬಿದ್ದುವು. ಆದರೂ, "ಹೇಗಿದ್ದರೂ ಸಂಜೆ ನಮ್ಮ ಲೆಕ್ಕ ಪರಿಶೋಧಕರು ಈ ವ್ಯತ್ಯಾಸವನ್ನು ಕಂಡು ಹಿಡಿಯುತ್ತಿದ್ದರು....(ಆಗ ನೀವು ತಪ್ಪಿತಸ್ಥರಾಗುತ್ತಿದ್ದಿರಿ)" ....ಎಂದೂ ಹೇಳಿ ನನ್ನ ಸತ್ಯಸಂಧತೆಯ ಅಪಮೌಲ್ಯ ಮಾಡುವ ಯತ್ನ ಮಾಡಿದ ಏನು ಬೇಕಾದರೂ ಹೇಳಲಿ;ಮಾಡಲಿ. ನಾನು ಮಾತ್ರ ನನ್ನ ಸತ್ಯವನ್ನು ಬಿಡುವಂತಿಲ್ಲ.

ಸತ್ಯಮೇವ ಜಯತೇ...

ಶಾಸ್ತ್ರಿಗಳ ಹೋಟೆಲೆಂದು ಈಗಿಲ್ಲ. ಅದೊಂದು ಭಾಗ್ಯ. ಆ ಶಾಸ್ತ್ರಿಗೆ ನಾನು ಇನ್ನೂ ರೂಪಾಯಿ ಹತ್ತು ಕೊಡಲು ಬಾಕಿಯಿದೆ. ನಾನು ಕಾಲೇಜಿಗೆ ಹೋಗುತ್ತಿದ್ದಾಗ ಊಟ ಮಾಡಿದ ಬಾಬ್ತು ಬಾಕಿ ಹಣವದು. ಸುಮಾರು 20 ವರ್ಷ ಕಳೆದರೂ "ಎಂಜಲು ಕಪ್ಪೆ ಶಾಸ್ತ್ರಿಗಳ ಬಗ್ಗೆ ನೆನಪಾದರೂ ಇದೆ. ಹಣ ಕೊಡಲು ಬಾಕಿಯಿದೆಯೆಂಬ ನೆನಪಿದೆ; ಕೊಡಬೇಕೆಂಬ ಉತ್ಸಾಹಪೂರ್ಣ ಮನಸ್ಸೂ ಇದೆ. ಇನ್ನೇನು ಕೊಟ್ಟರಾಯ್ತು. ಮೂರನೇ ಒಂದಂಶ ಮಾತ್ರ ಬಾಕಿ ಈಗಲೂ ಆ ರಸ್ತೆಯಲ್ಲಿ ಹೋಗಲು ಒಂದು ತರದ ಅಂಜಿಕೆ. ಜೇಬಿನಲ್ಲಿ ಹಣವಿಲ್ಲದಿದ್ದಾಗ ಆಕಸ್ಮಾತ್ತಾಗಿ ಆ ರಸ್ತೆಯಲ್ಲಿ ನಡೆಯುವಾಗ- ಪಕ್ಕನೆ ಶಾಸ್ತ್ರಿಗಳು ಪ್ರತ್ಯಕ್ಷರಾಗಿ ಹಣ ಕೇಳಿದರೆ? ಬರಲಿಕ್ಕಿಲ್ಲ; ಕೇಳಲಿಕ್ಕಿಲ್ಲ. ನನ್ನ ಹಾಗೆಯೇ ಅನೇಕರೂ ಉಂಡ ಕಾಸು ಕೊಡದೆ ಬಾಕಿ ಮಾಡಿ—ದಾಕ್ಷಿಣ್ಯಕ್ಕೆ ಊಟ ಹಾಕಿದ್ದರಿಂದಾಗಿ ಮಿಕ್ಕ ಹೋಟೆಲ ಮಾಲಕರೂ ಹೊಸ ಹೊಸ ಭವನಗಳನ್ನು ಸ್ವಂತವಾಗಿಯೇ ನಿರ್ಮಿಸುವಾಗ ಆ ಶಾಸ್ತ್ರಿ ಊರನ್ನೇ ಬಿಟ್ಟು ಓಡಿ ಹೋಗಬೇಕಾಗಿ ಬಂತು. ಶಾಸ್ತ್ರಿ ಅಪ್ರತ್ಯಕ್ಷನಾದ ವಾರ್ತೆ ನನಗೂ ಹಿತಕರವಾಗಿಯೇ ಇತ್ತು. ಆದರೆ ಈಗ ನನಗೆ ಪಶ್ಚಾತ್ತಾಪವಾಗುತ್ತಿದೆ. ಆ ಶಾಸ್ತ್ರಿ ಒಂದು ವೇಳೆ ಈಗ ಇಲ್ಲದಾಗಿದ್ದರೂ ಚಿಂತೆಯಿಲ್ಲ. ಅವರ ವಾರೀಸುದಾರರು 'ಸಕ್ಸೆಶನ್ ಸರ್ಟಿಫಿಕೇಟು" ಹಾಜರುಪಡಿಸಿ "ಇಂಡೆಮ್ನಿಟಿ ಬೋಂಡ" ತೆತ್ತು ನನ್ನಿಂದ ಸಲ್ಲಬೇಕಾದ ಹಣವನ್ನು ಯಾವಾಗ ಬೇಕಾದರೂ ಪಡಕೊಳ್ಳಬಹುದಾಗಿದೆ. ಒಂದು ಕಾಲದಲ್ಲಿ ನಾನೂ "ಇನ್ಶ್ಯೂರ್" ಮಾಡಿದ್ದೆನಾದ್ದರಿಂದ "ಜೀವವಿಮಾ ಕಾರ್ಪೊರೇಶನ "ನವರು ಅಪೇಕ್ಷಿಸುವಂತಹ ಪುರಾವೆಗಳನ್ನೇ ಸ್ವೀಕರಿಸಿ ಋಣಪಾವತಿ ಮಾಡಲು ನಾನೂ ಸಿದ್ಧ!

ಸತ್ಯ ಸಮಾಧಿಸಿತು

ಒಮ್ಮೆ ಬೇರೊಂದು ನಗರದಲ್ಲಿ ಹೋಟೆಲ ಮಾಲಕ ಅಯ್ಯರ್ ಓಡಿ ಹೋದುದಾಗಿರಲಿಕ್ಕಿಲ್ಲ. ಮೈಸೂರಿನಲ್ಲಿ ನಾನು ವಿದ್ಯಾಭ್ಯಾಸ ತೀರಿಸಿ ಹೊರಟಾಗ ಆ ಅಯ್ಯರ್‌ಗೆ ರೂ. 15 ಸಲ್ಲಲು ಬಾಕಿಯಿತ್ತು. ಬೇಗನೇ ಕಳುಹಿಸಿ ಕೊಡುವುದಾಗಿ ಹೇಳಿ; ಹೇಗೋ ಅಂದು ಅಲ್ಲಿಂದ ಬಂದೆ. ಮತ್ತೆ ಕಳುಹಿಸಿ ಕೊಟ್ಟಿದ್ದೆನೋ ನೆನಪಿಲ್ಲ. ಎಷ್ಟು ಹಣ ನಾನು ಕೊಟ್ಟಿದ್ದೆನೋ ನೆನಪಿಲ್ಲ. ಎಷ್ಟು ಹಣ ನಾನು ಕೊಟ್ಟಿದ್ದೆ! ಮೂರು ವರ್ಷಗಳಲ್ಲಿ ಅವರು ನನ್ನಿಂದ ಎಷ್ಟು ಹಣ ಪಡೆದರು? ನನಗೆ ಬಿಸ್ಸಿ ನೀರು ಕುಡಿಸಿದರ —ಕಾಫಿಯೆಂದು!

ನಾನು ನಿರುದ್ಯೋಗಿಯಾಗಿ ಮನೆಯಲ್ಲಿದ್ದಾಗ ಅಯ್ಯರ್ ಬಂದೇ ಬಂದರು. ಒಂದು ಪ್ರೇತ ಪ್ರತ್ಯಕ್ಷನಾಗಿ ಹಣಕ್ಕೆಂದು ಕೈಹಿಡಿದ ಹಾಗೆ ಒಂದು ಅನುಭವ! ರೂ. 15 ವಸೂಲಿಗೆ ಮೈಸೂರಿಂದ ಇಲ್ಲಿಯ ತನಕವೂ? ಖರ್ಚಿಗೇ ರೂ. 25 ಬೇಕಾಗುವುದ! ನಾನ ಭಾವಿಸಿಯೇ ಇರಲಿಲ್ಲ ಇಂತಹ ನಷ್ಟದ ವ್ಯವಹಾರ.

ನನ್ನ ಮಾತಿನ ಸರಣಿಯಲ್ಲಿಯಾಗಲೀ ಧಾಟಿಯಲ್ಲಾಗಲೀ ವ್ಯತ್ಯಾಸವಿಲ್ಲ. ಅಂದೊಂದು ಇದೊಂದು ಹೇಳುವ ಅಭ್ಯಾಸ ನನಗಿಲ್ಲ. ಅಂದು ಹೇಳಿದುದನ್ನೇ ಇಂದೂ ಹೇಳುವುದು. ಬೇಗನೇ ಕಳುಹಿಸಿ ಕೊಡುವುದಾಗಿ ಅಂದೂ ಹೇಳಿದ್ದೆ; ಈಗಲೂ ಹಾಗೆಯೇ ಹೇಳುತ್ತೇನೆ. ಯಾಕೆಂದರೆ ಒಮ್ಮೊಮ್ಮೆ ಒಂದೊಂದು ವಿಧದ ಮಾತು ನನಗೆ ಅಭ್ಯಾಸವಿಲ್ಲ.

ಆದರೆ ನನ್ನ ಮನೆಯವರು ಭಿನ್ನಾಭಿಪ್ರಾಯದವರು. ಅಯ್ಯರನ್ನು ಸ್ವಾಗತಿಸಿ ಅವರ ಕಾಫಿ ಮಂತಹ ನೀರನ್ನೇ ಕುಡಿಸಿ ಸತ್ಕರಿಸಿ ಕುಳ್ಳಿರಿಸಿದರು. ನೆರೆಮನೆಗಳೆಲ್ಲವನ್ನೂ ಸಂದರ್ಶಿಸಿ ಯಾಚಿಸಿ ಸಂಗ್ರಹವಾದ ರೂ. 5ನ್ನು ಅರ್ಪಣೆ ಮಾಡಿದರು. ಅಯ್ಯರಿಗೆ ಸಂತುಷ್ಟಿಯಿಲ್ಲ. ಅವರಿಗೆ ಸಲ್ಲಬೇಕಾದ ಹಣವೂ ದಾರಿ ಖರ್ಚಿನ ಬಾಬ್ತು ರೂ. 25 ಕೂಡಾ ರೂ. 40 ಬೇಕಂತೆ. "ಅಷ್ಟು ಸಿಗಲೇ ಬೇಕು"- ಎಂದವರ ಕೇಳಿಕೆ. ಕೊನೆಗಂತೂ ನನ್ನ ಸತ್ಯವೇ ಜಯಿಸಿತು. ಅಯ್ಯರ್ ರೂ. 5ರ ಸಹಿತ ಹಿಂತಿರುಗಿದರು. ಮತ್ತೆ ಈ ವರೆಗೂ ಬರಲಿಲ್ಲ. ಇನ್ನೂ ಬರುವ ಹಾಗೂ ಇಲ್ಲ. ಬಂದರೆ ಸತ್ಯ ಪ್ರಕಾರದ ಮರುಪಾವತಿಗೆ ಸದಾ ಸಿದ್ಧ! ಈ ಕುರಿತು ಪತ್ರಿಕೆಯಲ್ಲಿ ಜಾಹೀರಾತು ಹಾಕೋಣವೆಂದಿದ್ದ. ಆದರೆ ಜಾಹೀರಾತಿನ ವೆಚ್ಚವು ಇಲ್ಲಿ ಬೇಕಾದ ವಿವಾಜಿಗಿಂತಲೂ ಹೆಚ್ಚಾಗುವುದರಿಂದಾಗಿ ಆ ಯೋಚನೆಯನ್ನೇ ಕೈ ಬಿಟ್ಟೆ!

ಮತ್ತೂ ಹಿಂದೆ

ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಹೆಡ್ ಮಾಸ್ಟರ್ ನನ್ನಲ್ಲಿ ಹೋಟೆಲಿನಿಂದ ಕಾಫಿ ತರ ಹೇಳುವುದು ವಾರಕ್ಕೆರಡು ಮೂರು ಬಾರಿಯಾದರೂ ಇತ್ತು. ಅವರಿಗೆ ಮಧ್ಯಾಹ್ನ ಊಟದ ಬದಲಾಗಿ 'ಕೃಷ್ಣ ಭವನ'ದ ಕಾಫಿ ಮಾತ್ರ ತಿಂಡಿ. ಆ ಕಾಲದಲ್ಲಿ ಊಟಕ್ಕಾದರೆ ಹೋಟೆಲಲ್ಲಿ ಎರಡಾಣೆ. ಕಾಫಿ ತಿಂಡಿಯಾದರೆ ಒಂದು—ಒಂದೂ ಕಾಲಾಣೆಯಲ್ಲಿ

(ಹನ್ನೊಂದನೆ ಪುಟ ನೋಡಿರಿ)

ಅತ್ಯಾಧುನಿಕ ಸಲಕರಣೆ — ಸೌಕರ್ಯಗಳಿಂದ ಕೂಡಿದ
ಭೋಜನ, ಉಪಾಹಾರ ಮತ್ತು ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್ 77   ಕುಂದಾಪುರ, ದ. ಕ

ನಲ್ವತ್ತಾರನೆ ವರ್ಷ
Telephcne 226.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೪೭ | ೨೦—೭—೧೯೬೭ | No. 47

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ
ನವಯುಗ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪
++
ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲದನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಎರಡು ವರ್ಷಗಳ ಮೊದಲು
ಮಹಾರಾಷ್ಟ್ರದ ಕೃಷ್ಣಾನದಿಯಲ್ಲಿ
ದೊರೆತ ಪ್ರಾಚೀನ ಕಾಲದ ಒಂದು
ಹಿಂದೂ ದೇವತೆಯ ಕಂಚಿನ ಪ್ರತಿಮೆ;

ಬೆಲೆ ಏರಿಕೆಗೆ ತಡೆ

ಗಜೇಂದ್ರಗಡಕರ ಆಯೋಗವು ಇತ್ತೀಚೆಗೆ ಸಲ್ಲಿಸಿದ್ದ ತನ್ನ ವರದಿಯಲ್ಲಿ ಕೇಂದ್ರ ಸರಕಾರಿ ನೌಕರರಿಗೆ ಅಲ್ಪ ಪ್ರಮಾಣದ ತುಟ್ಟಿ ಭತ್ತೆಯ ಹೆಚ್ಚಳವನ್ನು ಶಿಫಾರಸು ಮಾಡಿತ್ತು. ಈ ಭತ್ತೆಯ ಹೆಚ್ಚಳವೇನೂ ಸಾಲದು ಎಂಬುದಾಗಿ ನೌಕರ ವರ್ಗವು ತನ್ನ ಅತೃಪ್ತಿಯನ್ನೂ ತೋರಿಸಿದೆ. ಕೇಂದ್ರ ಅರ್ಥ ಮಂತ್ರಿ ಮೊರಾರ್ಜಿ ದೇಸಾಯಿಯವರು ರಾಜ್ಯಗಳ ಅರ್ಥಮಂತ್ರಿ-ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿಯೂ ಈ ತುಟ್ಟಿ ಭತ್ತೆಯ ಹೆಚ್ಚಳದ ಪ್ರಶ್ನೆಯನ್ನು ಚರ್ಚಿಸಿದರು. ಹಿಂದೊಮ್ಮೆ ಕೇಂದ್ರವು ತನ್ನ ನೌಕರರ ವೇತನಾದಿಗಳನ್ನು ಹೆಚ್ಚಿಸುವಾಗ ತಮ್ಮೊಡನೆ ವಿಚಾರ ವಿನಿಮಯ ಮಾಡಬೇಕೆಂದು ರಾಜ್ಯಗಳು ಕೇಳಿದ್ದುವು. ಈ ಪರಿಷತ್ತಿನಲ್ಲಿ ಎದ್ದು ಬಂದ ಅಭಿಪ್ರಾಯ ಎರಡು: ಬೆಲೆಯೇರಿಕೆಯನ್ನು ಎದುರಿಸಲು ವೇತನ—ಭತ್ತೆಯೇರಿಸುವುದು ಪರಿಹಾರವೆನಿಸಲಾರದು; ಕೇಂದ್ರವು ತನ್ನ ನೌಕರರ ಭತ್ತೆ ಹೆಚ್ಚಿಸಿದರೆ, ರಾಜ್ಯವೂ ಹೆಚ್ಚಿಸಬೇಕಾಗುವುದು— ಈ ವೆಚ್ಚವನ್ನು ಕೇಂದ್ರ ನೆರವಿಲ್ಲದೆ ಮಾಡುವುದು ಸಾಧ್ಯವಿಲ್ಲ. ಇವೆರಡನ್ನೂ ಬಿಟ್ಟು ಇನ್ನೂ ಒಂದೆರಡು ಸಲಹೆಗಳು ಮುಂದೆ ಬಂದುವೆಂದು ತಿಳಿದಿದೆ —ಮೊದಲನೆಯದಾಗಿ, ವೇತನ— ಬೆಲೆ ಸ್ತಂಭನಗೊಳಿಸುವುದು; ಮತ್ತು ಎರಡನೆಯದಾಗಿ, ಏರಿಸಿದ ಹೆಚ್ಚಿನ ತುಟ್ಟಿ ಭತ್ತೆಯನ್ನು ಉಳಿತಾಯ ಪತ್ರಗಳ ಮೂಲಕ ನೀಡುವುದು.

ಬೆಲೆಯೇರಿಕೆಯು ದಿನದಿಂದ ದಿನಕ್ಕೆ ಏರುತ್ತಿದೆ. ಮಾನವೀಯತೆಯ ದೃಷ್ಟಿಯಿಂದ ನಿಯಮಿತ ವೇತನ ಪಡೆಯುತ್ತಿರುವ ಎಲ್ಲರ ಗೋಳೂ ದಯನೀಯವಾಗುತ್ತ ಬರುತ್ತಿದೆ. ಹೀಗಿರುವಾಗ ಬೆಲೆಯೇರಿಕೆಯನ್ನು ಅಂಕೆಯಲ್ಲಿಟ್ಟುಕೊಳ್ಳುವತ್ತ ಸರಕಾರದ ದೃಷ್ಟಿ ಹರಿಯಬೇಕು. ತನ್ನ ವೇತನ—ಸಂಪಾದನೆಯಲ್ಲಿ ಅವಶ್ಯಕ ವಸ್ತುಗಳನ್ನೊಬ್ಬ ಕೊಂಡುಕೊಳ್ಳಬಲ್ಲನಾದರೆ, ಅವನಿಗೆ ವೇತನ —ಭತ್ತೆಗಳ ಹೆಚ್ಚಳ ಬೇಕಿಲ್ಲ. ಆದುದರಿಂದ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಮುಖ್ಯ ಕರ್ತವ್ಯ, ಬೆಲೆಯೇರಿಕೆಗೊಂದು ಸ್ತಂಭನ ಹಾಕುವುದು. ಬೆಲೆಯೇರಿದಂತೆ ಭತ್ತೆಯನ್ನು ಹೆಚ್ಚಿಸುತ್ತ ಹೋಗುವುದೆಂದರೆ, ಇದು ಮುಗಿಯದ ಕತೆಯೇ ಸರಿ. ಇತ್ತೀಚೆಗಿನ ಒಂದೆರಡು ವರ್ಷಗಳ ಅನುಭವವೇ ಇದನ್ನು ಸಾರಿ ಹೇಳುತ್ತದೆ. ಕೇಂದ್ರವು ತುಟ್ಟಿಭತ್ತೆಯನ್ನು ಏರಿಸಿದೊಡನೆಯೇ ರಾಜ್ಯ ಸರಕಾರಗಳು ಇದುವರೆಗೂ ಏರಿಸಿಲ್ಲ; ಎನ್.ಜಿ.ಒ.ಗಳ ಮನವಿ, ಪ್ರದರ್ಶನ— ಮುಷ್ಕರ— ಇತ್ಯಾದಿಗಳಿಗೆ ಶರಣುಹೋದ ನಂತರವೇ.. ಬಹುದಿನಗಳಾದ ನಂತರವೇ— ಏರಿಸಿದ್ದೆಂಬುದನ್ನು ಮರೆಯಬಾರದು. ನೌಕರರೂ ನೆಮ್ಮದಿಯಾಗಿ ಬಾಳುವಂತೆ ಈ ಹೆಚ್ಚಳ ನೀಡದೆ ಹೋದರೆ, ಅತೃಪ್ತ ನೌಕರರು ಸರಕಾರದೊಡನೆ ಸಹಕರಿಸಲಾರರು; ಇದು ಒಪ್ಪಲೇಬೇಕು. ವೇತನ ಬೆಲೆ ಯೇರಿಕೆಗಳನ್ನು ಸ್ತಂಭನಗೊಳಿಸುವ ವಿಚಾರ ಮಹತ್ವಪೂರ್ಣವಾದುದು. ರೂಪಾಯಿಯ ಅಪಮೌಲ್ಯವನ್ನು ಘೋಷಿಸಿ ಭಾರತ ಸರಕಾರ ಕೈಸುಟ್ಟುಕೊಂಡಿತು. ಅಂದು ವಿದೇಶೀ ವಿನಿಮಯಗಳಿಕೆಯಲ್ಲಿ ಹೆಚ್ಚಳವಾಗಬಹುದೆಂಬ ನಿರೀಕ್ಷೆ ಸತ್ಯವಾಗಲಿಲ್ಲ ಎಂದೀಗ ಸರಕಾರವೇ ಒಪ್ಪಿಕೊಂಡಿದೆ. ಹಾಗೆಯೇ ಈ 'ಸ್ತಂಭನ' ನೀತಿಯ ಒಂದಂಶ—ವೇತನ ಸ್ತಂಭನ— ಸಂಪೂರ್ಣವಾಗಿ ಯಶಸ್ವಿಯಾಗಬಹುದು. ಆದರೆ, ಅದರ ಇನ್ನೊಂದಂಶವಾದ ಬೆಲೆ ಸ್ತಂಭನ ಮಾಡುವುದು ಸರಕಾರಕ್ಕೆ ಸಾಧ್ಯವಿದೆಯೆ? ಕಿಲೋ ಒಂದೂವರೆ ರೂಪಾಯಿಯೆಂದು ಗೊತ್ತುಮಾಡಿದ ಸಕ್ಕರೆಯನ್ನು ನಿಗದಿಮಾಡಿದಷ್ಟು ಪೂರೈಸುವಷ್ಟು ತಾಕತ್ತು ಇರದ ಸರಕಾರ ಕಿಲೋ ಐದು-ಆರು ರೂಪಾಯಿಗೆ ಮಾರುವ ಕಪ್ಪು ಮಾರುಕಟ್ಟೆದಾರರನ್ನು ಕಂಡೂ ಕಂಡೂ ಸುಮ್ಮನುಳಿಯುತ್ತದೆ. ಅವರ ಕೂದಲು ಕೊಂಕಿಸುವ ಶಕ್ತಿಯಿಲ್ಲದ ಸರಕಾರ ಬೆಲೆ ಸ್ತಂಭನವನ್ನೂ ಜ್ಯಾರಿಗೆ ತಂದರೆ ಮತ್ತೆ ಮಾರುಕಟ್ಟೆಯೆಲ್ಲವೂ ಕಪ್ಪಾಗುವುದು; ಹಣವೆಲ್ಲವೂ ಕಪ್ಪಾಗುವುದು —ಜನ ಬೆಪ್ಪಾಗಿ ಜೀವ ಬಿಡಬೇಕಾಗಬಹುದು.

ಹೆಚ್ಚಿನ ತುಟ್ಟಿಭತ್ತೆಯನ್ನು ಉಳಿತಾಯ ಪತ್ರಗಳ ಮೂಲಕ ನೀಡುವ ಸಲಹೆ ಮೊರಾರ್ಜಿ ಭಾಯಿಯವರದ್ದೇ. ಹಿಂದೊಮ್ಮೆ ಅವರು ಇಂತಹದೇ ಹೆಚ್ಚಳವನ್ನು ಪ್ರೈಜ್ ಬಾಂಡುಗಳ ರೂಪದಲ್ಲಿ ನೀಡಬೇಕೆಂದಿದ್ದರು. ಅಂದದು ಸಫಲವಾಗಲಿಲ್ಲ. ಈ ಸಲಹೆ ನಿರುಪಯುಕ್ತವೇ. ಇಂದಿನ ತುಟ್ಟಿಯ ದಿನಗಳಲ್ಲಿ ದಿನ ದೂಡುವುದೇ ದುಸ್ತರವಾಗಿರುವಾಗ, ಈ ಉಳಿತಾಯ ಪತ್ರಗಳನ್ನು ಹಿಡಿದು ಏನು ಮಾಡಬಹುದು? ಬ್ಯಾಂಕುಗಳಲ್ಲಿ ಅಡವಿಟ್ಟು ಸಾಲ ತೆಗೆಯಬಹುದೋ ಏನೋ! ಹೀಗಾಗಿ ನಮ್ಮ ಮುಂದಿರುವ ಸಮಸ್ಯೆಗೆ ಸೂಕ್ತ ಪರಿಹಾರವರಸುವುದು ಬಹಳ ಕಠಿಣ. ಇವೆಲ್ಲಕ್ಕೂ ಬೆಲೆಯೇರಿಕೆಯೊಂದೇ ಕಾರಣ. ಅತಿಪ್ರಸರಣವು ಬೆಲೆಯೇರಿಕೆಗೆ ಮುಖ್ಯ ಕಾರಣವೆಂಬುದು ನಿಜ. ಆದರೆ, ಉತ್ಪಾದನೆಯ ಕೊರತೆಯೂ ಇನ್ನೊಂದು ಕಾರಣವೆಂಬುದೂ ಅಷ್ಟೇ ಸತ್ಯ. ವ್ಯಾಪಾರಿಗಳ ಲಾಭ ಬಡುಕತನವೂ ಇನ್ನೊಂದು ಕಾರಣ. ಸರಕಾರವು ಕಾಯಿದೆ ಬದ್ಧವಾಗಿ ತನಗೆ ನೀಡಿರುವ ಅಧಿಕಾರಗಳನ್ನು ಕಟ್ಟುನಿಟ್ಟಾಗಿ ಕಾರ್ಯಾಂಗವು ಪಾಲಿಸುವಂತೆ ನೋಡಿಕೊಂಡರೆ, ಸಾಕು. ನಿಯಂತ್ರಣದ ಅಗತ್ಯವಿಲ್ಲ; ಮುಕ್ತ ಮಾರುಕಟ್ಟೆಗೆ ಅವಕಾಶ ಕೊಟ್ಟರೆ ಸಾಕು, ಬೆಲೆಗಳು ಏರುವ ದಾರಿ ಹಿಡಿಯಲಾರವು. ಆದರೆ, ರಾಜಕೀಯ ಬೇಳೆ ಮತ್ತು ಪೇಟೆಯ ಬೇಳೆಗಳಿಗೆ ಗಂಟು ಹಾಕುವ ಸರಕಾರಿ ನೀತಿ ಇದಕ್ಕೆಂದೂ ಪೂರಕವಾಗಲಾರದು. ಸರಕಾರದ ಕೆಚ್ಚು ಬೆಲೆ ಇಳಿತವನ್ನು ಸಾಧಿಸುವಲ್ಲಿ ವ್ಯಕ್ತವಾಗಬೇಕು, ಸ್ತಂಭನವನ್ನಲ್ಲ.

ವಚನ ಸುಧೆ

ಕಿನ್ನು ಮೇ ಸ್ಯಾದಿದಂ ಕೃತ್ವಾ
ಕಿನ್ನು ಮೇ ಸ್ಯಾದಕುರ್ವತಃ
ಇತಿ ಕರ್ಮಾಣಿ ಸಂಚಿಂತ್ಯ
ಕುರ್ಯಾದ್ವಾ ಪುರುಷೋ ನ ವಾ॥

ಕಾರ್ಯಾರಂಭಕ್ಕೆ ಮೊದಲು ಅದನ್ನು ಮಾಡುವುದರಿಂದ ಲಾಭವೇನು, ಕೈಬಿಡುವುದರಿಂದ ಹಾನಿಯೇನು ಎಂಬುದನ್ನು ವಿವೇಚಿಸಿ ಮುಂದುವರಿಯಬೇಕು.

ಮೊಳಹಳ್ಳಿ ಶಿವರಾವ್

ಸಹಕಾರ ಆಂದೋಲನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೊಂದು ಹೆಸರು ಶ್ರೀ ಮೊಳಹಳ್ಳಿ ಶಿವರಾಯರು. ಇಲ್ಲಿ ಇವರು ಸಹಕಾರದ ಬೀಜವನ್ನು ಬಿತ್ತಿದರು; ಅದನ್ನು ಪೋಷಿಸಿ ಬರಿಸಿದರು, ನೀರು ಹೊಯ್ದು ಬೆಳೆಸಿದರು; ಈ ಹೆಮ್ಮರದ ಫಲವನ್ನು ಜಿಲ್ಲೆಯ ಮೂಲೆ ಮೂಲೆಯ ಜನರಿಗೂ ದೊರೆಯುವಂತೆ ಮಾಡಿದರು. ಶ್ರೀ ಶಿವರಾಯರು ನಿಸ್ವಾರ್ಥ ಭಾವದಿಂದ ಈ ರಂಗದಲ್ಲಿ ಅಹರ್ನಿಶಿ ದುಡಿದರು. ತ್ಯಾಗ ಜೀವಿಗಳಾದ ಇವರು ಶಿಕ್ಷಣ ರಂಗಕ್ಕೂ ತನ್ನ ಸೇವೆಯನ್ನು ಸಲ್ಲಿಸಿದ್ದರು. ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಲ್ಲೂ ಆಸಕ್ತರಾಗಿದ್ದರು. ಪುತ್ತೂರು ತಾಲೂಕಿಗೆ ಸೇರಿದ ಶ್ರೀಯುತರ ಆರಂಭಿಕ ಕಾರ್ಯಕ್ಷೇತ್ರವು ಪುತ್ತೂರೇ ಆಗಿದ್ದರೂ ಅಲ್ಲಿಂದದು ಇಡಿಯ ಜಿಲ್ಲೆಗೆ ಹರಡತೊಡಗಿತು. ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿ, ಜಿಲ್ಲಾ ಬೋರ್ಡಿನ ಸದಸ್ಯರಾಗಿ ಅವರು ಉತ್ತಮ ರೀತಿಯ ಸೇವೆ ಸಲ್ಲಿಸಿದ್ದರು. ಶ್ರೀ ಮೊಳಹಳ್ಳಿಯವರದ್ದು ಸೇವಾ ಜೀವನ, ನಿಸ್ವಾರ್ಥ ಕರ್ಮಯೋಗಿಯೆಂದು ಹೆಸರಾದವರು. ಜಿಲ್ಲೆಯಲ್ಲಿ ಇಂದು ಸುಸ್ಥಿರವಾಗಿ ಹಬ್ಬಿರುವ ಸಹಕಾರಿ ರಂಗವೇ ಶ್ರೀ ಶಿವರಾಯರ ತ್ಯಾಗದ ಫಲ. ಇಂಥ ಕರ್ಮಯೋಗಿ ನಮ್ಮ ನಡುವಿನಿಂದ ದಿನಾಂಕ ೭ರಂದು ಅಗಲಿ ಹೋದರು. ನಾವು ಬಡವಾದೆವು. ಅವರು ಆರಂಭಿಸಿದ ಕಾರ್ಯವನ್ನು ನಾವು ತಪ್ಪದೆ ಮುಂದು ವರಿಸೋಣ, ಇದೇ ಅವರಿಗೆ ನಾವರ್ಪಿಸುವ ಶ್ರದ್ಧಾಂಜಲಿ.

ನರಸಣ್ಣನ ಸರಸ



"ಹಿಂದಿಯೇತರ ಜನ ಅಪೇಕ್ಷಿಸುವಷ್ಟು ಕಾಲ ಇಂಗ್ಲಿಷು ಸಹ ಭಾಷೆಯಾಗಿರಲು ಒಪ್ಪುವ ನಾವು ಸ್ವದೇಶಿ ಆಡಳಿತೆಯೊಡನೆ ವಿದೇಶೀ ಆಡಳಿತವನ್ನೂ ಯಾಕೆ ಸಹ ಆಡಳಿತೆಯಾಗಿ ಆರಂಭಿಸ ಬಾರದೂಂತ?"

ಗೇಹ ರಾಜ್ಯದಲ್ಲಿ

ಸುತ್ತಲೂ ಲತ್ತೆಕೊಡುವ ಕತ್ತೆ

“ಹೌದ್ರಿ, ಈ ಮಾವನಿಗೆ ಆಗಿರೋದಾದ್ರೂ ಏನೂಂತ?’

‘ಯಾಕೆ? ಈಗ ಆದುದಾದ್ರೂ ಏನು?’

“ನೋಡಿ, ಅವನು ಸಾಕಿರೋ ‘ಸೇನೆ’ ವಿದೇಶಗಳಲ್ಲಿ ರಾಯಭಾರಿ ಕಛೇರಿಗಳನ್ನು ಮುತ್ತಿಗೆ ಹಾಕುವುದರಲ್ಲಿ ಮಗ್ನವಾಗಿದೆ.’

‘ಉಪ್ಪಿತ್ತ ಮನೆಯ ಆಜ್ಞೆಯನ್ನು ಸೇನೆ ಶಿರಸಾವಹಿಸುತ್ತಿದೆ ಅನ್ನಿ....”

‘ಅದೂ ಹೌದು. ಆದ್ರೆ ಇದರ ಅರ್ಥ?’

‘ಯಾವುದರದ್ದು?”

“ರಾಯಭಾರಿ ಕಛೇರಿಯನ್ನು ಘೇರಾವೊ ಮಾಡುವುದು...”

‘ನೋಡು, ಇದಕ್ಕೆ ಕೇರಳದ ಸಪ್ತರಂಗ ಸರಕಾರದ ಮಂತ್ರಿಯೊಬ್ಬರು ವಿವರಣೆ ನೀಡಿದ್ದಾರೆ...’

‘ಯಾವ ಮಂತ್ರಿ?”

“ಯಾವ ಮಂತ್ರಿಯಾದರೇನಂತೆ?” ಅಲ್ಲಿನ ಕಾರ್ಮಿಕ ಸಚಿವರಂತೆ, ಶ್ರೀ ಮಥಾಯ್ ಮಾಂಜೂರಾನ್ ಅಂತೆ....’

‘ಓಹೋ, ಇರಲಿ. ಏನಂತೆ ಅವರ ವ್ಯಾಖ್ಯಾನ....”

“ಭಾರೀ ಸ್ವಾರಸ್ಯವಿದೆ. ಬಂಡವಾಳಶಾಹಿಗಳು ನಡೆಸುತ್ತಿರುವ ಕಾರ್ಮಿಕರ ಶೋಷಣೆಯನ್ನು ತಪ್ಪಿಸಲು ಘೇರಾವೋ ಅಗತ್ಯವಾಗಬಹುದು...’

“ಓ, ಹಾಗಾದರೆ ಸರಿಹೋಯಿತು. ಇವರು ಘೇರಾವೋದ ಪ್ರಬಲ ಸಮರ್ಥಕರೆಂಬುದರಲ್ಲಿ ಸಂದೇಹವೇಕೆ? ಪಾಪ, ಮೊನ್ನೆ ಮೊನ್ನೆ ಒಬ್ಬ ಡಾಕ್ಟರರನ್ನೂ ಅಲ್ಲಿ ಘೇರಾವೋ ಮಾಡಿದರಂತೆ. ಭಾರಿ ಬಂಡವಾಳಶಾಹಿಯಾಗಿರಬೇಕು; ಶೋಷಕರಾಗಿರಬೇಕು....”

“ಮತ್ತೆಂಥದು? ಹತ್ತು ಜನ ಕತ್ತಿ—ಸುತ್ತಿ ಹಿಡಿದು ಯಾರ ಬಳಿಗಾದರೂ ಬಂದು ಏನು ಹೇಳುತ್ತಾರೋ, ಅದನ್ನು ಮಾಡಬೇಕು. ಇಲ್ಲವಾದರೆ ಅವರು ದೊಡ್ಡ ಬಂಡವಾಳ ಶಾಹಿ...’

“ಅಂದರೆ?”

“ಅಂದ್ರೆ ಏನಿಲ್ಲ. ಒಂದೇ ನಿಮಿಷದಲ್ಲಿ ನಿನ್ನನ್ನು ನೀನು ಬಂಡವಾಳ ವಾದಿಯನ್ನಾಗಿಯೂ ಮಾಡಿಕೊಳ್ಳಬಹುದು ಅಥವಾ ಕಾಮ್ರೇಡನಾಗಿಯೂ ರೂಪಿಸಿಕೊಳ್ಳಬಹುದು....’

“ಅಂದರೆ? ಸ್ವಲ್ಪ ಅರ್ಥವಾಗುವಂತೆ ಹೇಳಿ ಅಂದ್ರೆ....”

‘ಹ್ಞೂಂ ...ನೋಡು, ಈಗ ನಿನ್ನ ಬಳಿಗೆ ಕತ್ತಿ-ಸುತ್ತಿ ಹಿಡಿದವರು ಬರ್‍ತಾರೆ, ಏನಾದ್ರೂ, ಯಾವುದಕ್ಕಾದ್ರೂ ಸಹಾಯವೋ ವಂತಿಗೆಯೋ ವರಾಡವೋ ಅಥವಾ ಮತ್ತೇನೋ ಕೇಳ್ತಾರೆ ಅನ್ನು. ನೀನು ಕೊಟ್ಟೆ ಅಂದ್ರೆ ಕಾಮ್ರೇಡ್ ಆಗಿ ಬಿಟ್ಟೆ. ಕೊಡಲಿಲ್ಲಾಂತಂದ್ರೆ ತೆಗೆದುಕೋ, ಬಂಡವಾಳವಾದಿ. ಇನ್ನೂ ತಮಾಷೆಯೆಂದ್ರೆ...’

“ಹ್ಞೂಂ....ಹೇಳು, ಮುಂದುವರಿಸಿ ..’

‘ಯಾರು ಎಷ್ಟು ಉದಾರವಾಗಿ ಕಾಣಿಕೆ ನೀಡುತ್ತಾರೋ ಅವ್ರು ಅಷ್ಟು ದೊಡ್ಡ ಕಾಮ್ರೇಡ್ ಆಗುತ್ತಾರೆ. ಯಾರು ಎಷ್ಟು ಸ್ಪಷ್ಟವಾದ ಮಾತುಗಳಿಂದ ತಿರಸ್ಕರಿಸುತ್ತಾರೋ ಅವ್ರು ಅಷ್ಟೇ ದೊಡ್ಡ ಬಂಡವಾಳವಾದಿಯೆನಿಸ್ತಾರೆ.’

“ಓಹೋ, ಹಾಗೆ. ಇರ್‍ಲಿ. ಅದೆಲ್ಲಾ ನಮಗ್ಯಾಕೆ? ನಾವು ಯಾರು, ಹೇಗೆ ಅನ್ನುವುದಂತೂ ನಮಗೆ ಗೊತ್ತಿದೆ ತಾನೆ?’

‘ಅದೇ ಮುಖ್ಯ ಬೇಕಾಗಿರೋದು. ನಮ್ಮ ಬಗ್ಗೆ ನಾವೇ ತಿಳಿದುಕೊಳ್ಳದೆ ಹೋದ್ರೆ ಮತ್ತೆ ನಾವು ಇಂಥವರೇ ಎಂದು ಹೇಳುವವರ್‍ಯಾರು? ಸದ್ಯ ಅಷ್ಟಾದ್ರೂ ಗೊತ್ತಿದೆ. ಸಂತೋಷ.’

‘ಆ ಮಾವೋ ವಾದಿಗಳಿಗೆ ಅದೂ ಗೊತ್ತಿರೋದಿಲ್ಲ. ಅದೇನೋ ಕೆಂಪು ಚೀನದ ಅಧ್ಯಕ್ಷರನ್ನು ಪಟ್ಟದಿಂದ ಇಳಿಸಲು ಕಣ ತೊಟ್ಟ ಅವರಿಗೆ ಯಶ ಸಿಕ್ಕಿತು, ಸಿಕ್ಕಿತು ಅನ್ನುವಷ್ಟರಲ್ಲೇ ಪಾಪ, ಗಾಣ ಮುರಿಯಿತಂತೆ...."

‘ಅಂದ್ರೆ ಮಾವನಿಗೆ ತಕ್ಕ ಅಳಿಯ ಸಿಗಲಿಲ್ಲಾಂತಾಯ್ತು. ಮತ್ತೆ ನೋಡು, ಸ್ವದೇಶದಲ್ಲಿ ಮಾನ ಹೋದ್ರೂ ವಿದೇಶಗಳಲ್ಲಿ ಮೂಗು ಮೇಲೆ ಮಾಡ್ತಿರ್‍ತಾನೆ...”

‘ಅಂದ್ರೆ?’

“ತನ್ನ ಸಾಮ್ರಾಜ್ಯವಾದದ ನೀತಿಯಿಂದ ವಿದೇಶಗಳಲ್ಲಿ ಗಾಳ ಹಾಕುತ್ತ ಇದ್ದಾನೆ...’

“ಹೌದ್ರಿ, ನೋಡಿ, ನಕ್ಸಲ್ ಬಾರಿಯಲ್ಲಿ ಕೆಂಪು ಚೀನೀಯರಿಂದಲೇ ಪ್ರೇರಿತವಾದ ಗಲಭೆ ನಡೆಯುತ್ತಿದೆ. ಅಲ್ಲಿ ಸಶಸ್ತ್ರ ಹೋರಾಟ ನಡೆಯುತ್ತಿದೆ—ಎಂದು ಪೀಕಿಂಗ್ ರೇಡಿಯೋ ಪ್ರಸಾರ ಮಾಡತೊಡಗಿದೆ...”

‘ನಕ್ಸಲ್‌ಬಾರಿಯಲ್ಲಿ ಗುಡುಗು ಎಂಬ ಶಿರೋನಾಮೆಯಲ್ಲಿ ಚೀನದ ಪೀಪಲ್ಸ್ ಡೈಲಿ ಸಂಪಾದಕೀಯ ಬರೆದಿದೆಯಂತೆ.... ಅಲ್ಲ, ತಮ್ಮ ದೇಶದ ಗುಡುಗನ್ನು ಸಹಿಸಲಾರದ ಈ ಮಾವನಿಗೆ ಬೇರೆಯವ್ರ ಕಥೆ ಯಾಕೇಂತ....”

‘ಅದೇ ನಾನೂ ಕೇಳೋದು. ಪಶ್ಚಿಮ ಬಂಗಾಳದ ಸಂಯುಕ್ತ ಸಚಿವ ಸಂಪುಟದಲ್ಲಿಯೇ ಭಿನ್ನಾಭಿಪ್ರಾಯವಿದೆಯಂತೆ....’

‘ಪುಣ್ಯಕ್ಕೆ ಮುಖ್ಯಮಂತ್ರಿಗಳು ಅಲ್ಲಿ ಪೋಲೀಸ್ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ. ಆದ್ರೂ ಈ ಕ್ರಮದಿಂದ ತಪ್ಪಿಸಿಕೊಂಡಿರಲು ಕಿಡಿಗೇಡಿಗಳಿಗೆ ಮೊದಲೇ ಸೂಚನೆ ಹೋಗಿರಲೂ ಬಹುದು...’

‘ಅದೂ ಸಾಧ್ಯ ತಾನೆ? ಅಂತೂ ಮುಖರ್ಜಿಯವರು ಗೆದ್ದರೂನ್ನಿ....”

‘ಹೇಗಂತೀಯ?’

‘ರಾಜ್ಯದ ಶಾಂತಿ ಸುವ್ಯವಸ್ಥೆಗಳಿಗೆ ಭಂಗಬಾರದಂತೆ ಪೋಲೀಸು ಕ್ರಮ ಕೈಕೊಂಡರು. ಇನ್ನು ಕೆಲವು ಸಮಯ ಸುಮ್ಮನಿದ್ದು ಮತ್ತೆ ತಲೆಯೆತ್ತಿದರೆ ಸಾಕು ತಾನೆ?’

‘ರಾಜ್ಯದಲ್ಲಿ ಕೇಂದ್ರದ ಹಸ್ತಕ್ಷೇಪ ನಡೆಯುವುದು ಒಮ್ಮೆಗೆ ತಪ್ಪಿತಲ್ಲ....’

“ಅದಕ್ಕಿಂತ ಹೆಚ್ಚಿಗೆ, ಅಧಿಕಾರ ಕೈಗಳಲ್ಲಿ ಉಳಿಯಿತಲ್ಲಾ ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ....’

‘ಇದ್ದರೂ ಇರಬಹುದು...’

‘ಇರಬಹುದು ಯಾಕೆ? ಇದೇನ್ರಿ...’

“ಹ್ಞೂಂ....’

‘ಮತ್ತೆ ನೋಡಿ, ಅದೇಂತದೋ ಚೀನೀಯರು ನೇಪಾಳದ ಮೇಲೆ ಭಾರಿ ಕಣ್ಣು ಇಟ್ಟು ಕೊಂಡಿದ್ದಾರಂತೆ....’

“ಹ್ಞೂಂ.... ಹಾಗಂತಾರೆ, ರಶ್ಯನ್ನರು...’

‘ಹಾಗಿಲ್ಲಾಂತಾದ್ರೆ ಖಟ್ಮಂಡುವಿನಲ್ಲೂ ಚೀನಾ ಯಾಕೆ ಗುಲ್ಲು ಎಬ್ಬಿಸಬೇಕಾಗಿತ್ತು?’

“ವಿದ್ಯಮಾನಗಳೆಲ್ಲ ಹಾಗೇನೇ ಅನ್ನಿ. ಟಿಬೇಟಿನಿಂದ ಖಟ್ಮಂಡುವಿನ ವರೆಗಿನ ಪರ್ವತ ಮಾರ್ಗ ಅವರಿಗೆ ಮಿಲಿಟರಿ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಇಲ್ಲಿನ ಸಂಕಗಳನ್ನು ೭೦ ಟನ್ ಭಾರದ ವಾಹನಗಳ ಓಡಾಟಕ್ಕೆ ಅನುಕೂಲವಾಗಿ ನಿರ್ಮಿಸುತ್ತಿದೆಯಂತೆ ಚೀನ...’

‘ಅಲ್ರಿ, ನೇಪಾಳದಲ್ಲಿ ಚೀನಾ ಯಾಕೆ ರಸ್ತೆ ನಿರ್ಮಿಸುತ್ತಿದೆ?”

‘ಯಾಕೆ ಅಂದ್ರೆ? ನೋಡು, ಹಿಂದೆ ಇದು ನೇಫಾದಲ್ಲಿ ಚೀನೀಯರು ಮಾಡಿದ್ದಾದರೂ ಏನು? ನಮಗೆ ತಿಳಿಯದಂತೆಯೇ ನಮ್ಮ ಭೂ ಭಾಗದಲ್ಲಿ ರಸ್ತೆ ಮಾಡಿದರು, ಸೇತುವೆ ಕಟ್ಟಿದರು. ಮತ್ತೆ ಇದು ನಮ್ಮದೇ ಎಂದರು; ಸೇನೆ, ಟ್ಯಾಂಕುಗಳನ್ನು ತಂದು ಯುದ್ಧ ಆರಂಭಿಸಿದರು. ವಿವಾದವಿಲ್ಲದ ಪ್ರದೇಶವನ್ನು ವಿವಾದಗ್ರಸ್ತ ಪ್ರದೇಶವನ್ನಾಗಿ ಮಾಡಿದರು....”

‘ಇದು ಹೌದ್ರಿ... ನೋಡಿ, ನೇಪಾಳದ ಒಳಗೆ ಅಲ್ಲಲ್ಲಿ ರಹಸ್ಯವಾಗಿ ಶಸ್ತ್ರಾಸ್ತ್ರಗಳ ಡಿಪೋವನ್ನು ಅದು ಇಟ್ಟಿದೆಯಂತೆ....’

‘ಅಲ್ಲ, ಅದು ಏನು ಮಾಡೀತು ಎಂದು

(ಒಂಭತ್ತನೇ ಪುಟ ನೋಡಿರಿ)

NAVAYUGA
Independence Day Special 1967

You are aware that the INDEPENDENCE SPECIAL of your favourite Weekly ‘NAVAYUGA’ has over the years earned a reputation for the sumptuous fare it offers to its extensive readership spread over nineteen districts of Mysore State.

The ‘Special’ will be issued as usual on August 15th this year to mark the 20th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the ‘Navayuga Independence Special’ a fitting medium to convey the message of your goods to hundreds of homes in the state.

Kindly send your advertisement material on or before August 4th, 1967.

ADVERTISEMENT RATES

Full Page	...Rs. 200/-	Back Cover Page	...Rs. 500/-
Half Page	...Rs. 100/-	Inside Ist Cover Page	...Rs. 400/-
Quarter Page	...Rs. 60/-	Inside 2nd Cover Page	...Rs. 300/-

MECHANICAL DATA

Paper size ... 15" × 10" Size of type page ...13" × 8"
(37·5 Cm. × 25 Cm.) Half Crown (32·5 Cm. × 20 Cm.)

Date of Publication: 15—8—1967

Kindly send the advt. matter to
The Advt. Manager,
NAVAYUGA,
P. B. No. 22, Udipi, S. K.

In the Court of the Munsif of Coondapur

S. C. 180/1967.

A. A. Naik-by Power of Attorney Syndicate Bank Ltd.— Plaintiff

Vs

Manjayya Shetty ... Defendant

Please take notice that the above suit filed against you for rent is posted to 11—8—1967 for hearing at 11 o'clock in the above court and you are called upon to be present in the said Court either in person or through a duly authorised Advocate failing which the suit will be proceeded with Ex parte and decided.

(By order of the Court)

Sd/—K. Raghunath Shenai
Advocate

Coondapoor, 13—7—1967.

ಸಾಹಿತ್ಯ ಸಂಸದ

ಸಂಪ್ರದಾಯ ಸ್ಥಾಪಕ-ದಂಡಿ

ಲೇಖಕರು : ಶ್ರೀ ಸ ನಾರಾಯಣ.

ದಂಡಿ ಸಂಸ್ಕೃತ ಸಾಹಿತ್ಯದ ಪ್ರಿಯರಿಗೆ ಚಿರಪರಿಚಿತ, ಹೆಸರಾಂತ ಕವಿ. ಕಾವ್ಯ ಲಕ್ಷಣ ಸೂತ್ರ, ಆದರ್ಶ ಕಾವ್ಯದ ರೀತಿ—ನೀತಿ, ಕಾವ್ಯದ ಸಂಪ್ರದಾಯ—ನಿಯಮಗಳನ್ನೂ ಮೊದಲಿಗೆ ತನ್ನ "ಕಾವ್ಯಾದರ್ಶ"ದಲ್ಲಿ ನಿರೂಪಿಸಿದ್ದಾನೆ. ಕಾವ್ಯಾದರ್ಶ ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುವ ಉತ್ತಮ ಸಾಹಿತ್ಯ ಶಾಸ್ತ್ರ ಗ್ರಂಥ—ಲಕ್ಷಣ ಗ್ರಂಥ. ಸಂಸ್ಕೃತ ಸಾಹಿತ್ಯದ ಆರಂಭದ ದಿನಗಳಲ್ಲಿ ಕಾವ್ಯ ಯಾವ ಬಗೆಯ ಲಕ್ಷಣಗಳಿಂದ ಕೂಡಿರಬೇಕಿತ್ತು. ಕಾವ್ಯದ ಲಕ್ಷಣಗಳೇನು ಎಂಬುದನ್ನು ದಂಡಿ ಪ್ರಸ್ತಾಪಿಸಿದ್ದಾನೆ.

ಕಾವ್ಯಾದರ್ಶದಲ್ಲಿ ಮೂರು ಅಧ್ಯಾಯಗಳಿವೆ. ಮೂರು ಅಧ್ಯಾಯಗಳಲ್ಲಿಯೂ ಪ್ರತ್ಯೇಕವಾಗಿ ಕಾವ್ಯದ ವಿವಿಧ ಲಕ್ಷಣ-ಸೂತ್ರಗಳನ್ನು ವಿವರಿಸಿದೆ. ಮೊದಲನೆಯ ಅಧ್ಯಾಯದಲ್ಲಿ ಕಾವ್ಯಗಳ ವಿವರಣೆ ಇದೆ. ಅಲ್ಲದೆ ಕಾವ್ಯದ ಉತ್ತಮ ಶೈಲಿಯ ಪ್ರಸ್ತಾಪ, ವಿದರ್ಭ ಮತ್ತು ಗೌಡಿ ರೀತಿಗಳ ಬಗೆಗೆ ಇರುವ ವ್ಯತ್ಯಾಸ ಪ್ರಸ್ತಾಪಿಸಲ್ಪಟ್ಟಿದೆ. ಎರಡನೆಯ ಅಧ್ಯಾಯದಲ್ಲಿ ಅಲಂಕಾರಗಳ ವಿವರಣೆ ನಿರೂಪಿಸಲ್ಪಟ್ಟಿದೆ. ಮೂರನೆಯ ಅಧ್ಯಾಯದಲ್ಲಿ ಸಾಹಿತ್ಯ (ಕಾವ್ಯ)ದ ದೋಷಗಳು ಮತ್ತು ಯಮಕಗಳ ಪ್ರಸ್ತಾಪವಿದೆ.

ರಮಣೀಯವಾದ ಪದಗಳ ಜೋಡಣೆಯಲ್ಲಿ ದಂಡಿ ಸಿದ್ಧಹಸ್ತ— ಪಾರಂಗತ. (ದಂಡಿನಃ ಪದಲಾಲಿತ್ಯಂ) ಅವನು ರಚಿಸಿರುವ ಶ್ಲೋಕಗಳ ಶೈಲಿ ಆಕರ್ಷಣೀಯವಾಗಿದೆ. ದಂಡಿ ತನ್ನ ಕಾವ್ಯಾದರ್ಶದಲ್ಲಿ ತನ್ನ ಸ್ವಂತ ಉದಾಹರಣೆಗಳನ್ನೇ ನೀಡಿದ್ದಾನೆ, ಅವನ ವಿವರಣೆಗಳು ಉದಾಹರಣೆಗಳು ಓದುಗರ ಮೇಲೆ ಪರಿಣಾಮಕಾರಿ ಪ್ರಭಾವ ಬೀರುತ್ತವೆ ಎಂಬುದು ಸ್ಪಷ್ಟವಾಗಿದೆ. ಓದುಗ ಒಂದು ಬಾರಿ ಕಾವ್ಯಾದರ್ಶವನ್ನು ಓದಿದ ನಂತರ ಆ ಗ್ರಂಥದಲ್ಲ ಪ್ರಸ್ತಾಪಿಸಿರುವ ವಿವರಣೆಗಳು, ಅಚ್ಚಳಿಯದೆ ಮನದ ನೆನಪಿನಲ್ಲಿ ಉಳಿಯ ಬಲ್ಲವು.

ದಂಡಿ ಮತ್ತು ಭಾಮಹರ ಸಂಬಂಧದ ಬಗೆಗೆ ಸ್ಪಷ್ಟವಾದ ಅಭಿಪ್ರಾಯ ಪಂಡಿತರಲ್ಲಿಲ್ಲ. ಕಲ್ಪಿಸಿದ ಸಂಬಂಧವನ್ನು ಸಾದಿಸಿ ತೋರಿಸಲು ಸಾಕಷ್ಟು ಸಾಕ್ಷ್ಯಗಳೂ ದೊರೆಯುವುದಿಲ್ಲ. ದಂಡಿ ಮತ್ತು ಭಾಮಹ ಇಬ್ಬರೂ ಒಬ್ಬರು ಮತ್ತೊಬ್ಬರ ದೃಷ್ಟಿಯನ್ನು ಒಪ್ಪಲಾರರು. ಇಬ್ಬರ ನಿರೂಪಣಾ ಶೈಲಿ, ದೃಷ್ಟಿಗಳಲ್ಲ ಭಿನ್ನತೆ ಇರುವುದಾದರೂ ಇಬ್ಬರ ವಾದವನ್ನು ಅಲ್ಲಗಳೆಯುವಂತಿಲ್ಲ. ಇಬ್ಬರ ನಿರೂಪಣೆಯಲ್ಲಿಯೂ ತಿಳಿಯಲು ಸಾಕಷ್ಟು ಅಂಶಗಳು ಇವೆ. ದಂಡಿ ಕಾವ್ಯ ರಚನೆಯ ಸೂತ್ರವನ್ನು ಅನುಸರಿಸಿ ಹೊಸ ಸಂಪ್ರದಾಯ ಶೈಲಿಗಳನ್ನು ರೂಪಿಸಿದ್ದಾನೆ ಎಂಬುದು ಸ್ಪಷ್ಟವಾಗಿದೆ.

೯ನೆಯ ಶತಮಾನದಲ್ಲಿದ್ದ ರಾಷ್ಟ್ರಕೂಟ ದೊರೆ ನೃಪತುಂಗ ದಂಡಿಯ ಕಾವ್ಯಾದರ್ಶವನ್ನು ಆಧಾರವಾಗಿಟ್ಟುಕೊಂಡು 'ಕವಿರಾಜ ಮಾರ್ಗ' ಗ್ರಂಥವನ್ನು ರಚಿಸಿದ್ದಾನೆ ಕವಿ ರಾಜಮಾರ್ಗ ಕಾವ್ಯವಲ್ಲವಾದರೂ ಕನ್ನಡದಲ್ಲಿ ಉಪಲಬ್ಧವಿರುವ ಮೊದಲ ಲಕ್ಷಣಗ್ರಂಥ ಎಂಬುದನ್ನು ಇಲ್ಲಿ ಸ್ಮರಿಸಬಹುದು

ದಂಡಿಯ ಕಾಲವನ್ನು ಕ್ರಿ. ಶ. ೭ನೆಯ ಶತಮಾನವೆಂದು ಊಹಿಸಬಹುದಾಗಿದೆ. ದಂಡಿ ಸಂಸ್ಕೃತ ಸಾಹಿತ್ಯದ ಉತ್ತಮ ಲಕ್ಷಣ ಗ್ರಂಥ ಕಾವ್ಯಾದರ್ಶವನ್ನೂ ರಚಿಸಿರುವಂತೆಯೇ ಉತ್ತಮ ಕಾವ್ಯ ಒಂದರ ರಚನೆಗಾರನೂ ಆಗಿದ್ದಾನೆ. ದಶಕುಮಾರ ಚರಿತೆಯ ಕರ್ತೃ ದಂಡಿ ಎಂಬುದು ಆಧಾರಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ

ದಶಕುಮಾರ ಚರಿತೆ ಹೆಸರೇ ಹೇಳುವಂತೆ ಹತ್ತು ರಾಜಕುಮಾರರ ಕಥೆ. ಇದು ಗದ್ಯ ಕಥೆ ಅಲಂಕಾರ ಸಂಗ್ರಹದ ಪ್ರಕಾರ ಇದು ಕಥೆ—ಒಂದು ಕಲ್ಪಿತ ವೃತ್ತಾಂತ ಈ ಕಾವ್ಯದಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಐದು ಉಚ್ಛ್ವಾಸಗಳ ಪೂರ್ವ ವೃತ್ತಾಂತ. ಎರಡನೆಯದು ಎಂಟು ಉಚ್ಛ್ವಾಸಗಳ ದಶಕುಮಾರ ಚರಿತೆ. ಮೂರನೆಯದು ಒಂದು ಉಚ್ಛ್ವಾಸದ ಉತ್ತರ ಪೀಠಿಕೆ. ಈ ಮೂರು ಭಾಗಗಳಲ್ಲಿಯ ಶೈಲಿಯು ಒಂದೇ ಬಗೆಯಾಗಿರದೆ ಮೂರು ಭಾಗಗಳ ಶೈಲಿಯೂ ಪ್ರತ್ಯೇಕವಾಗಿರುವುದು ಮತ್ತೊಂದು ವೈಶಿಷ್ಟ್ಯ.

ದಶಕುಮಾರ ಚರಿತೆಯ ಪೂರ್ಣ ಕಥೆಯನ್ನು ದಂಡಿಯೇ ಬರೆದಿದ್ದು ಕಾರಣಾಂತರಗಳಿಂದ ಆರಂಭ ಮತ್ತು ಅಂತ್ಯದ ಭಾಗ ಕಳೆದುಹೋಗಿ ಆ ಭಾಗಗಳನ್ನು ಕಥೆಯ ಪೂರ್ಣ ಪರಿಚಯವಿದ್ದ ಬರಹಗಾರರು ಬರೆದಿರಬಹುದೆಂದು ಕೆಲ ಪಂಡಿತರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯವನ್ನು ಒಪ್ಪುವಲ್ಲಿ ದಶಕುಮಾರ ಚರಿತೆ ಇರುವ ಭಾಗವಷ್ಟೇ ಕವಿ ದಂಡಿಯಿಂದ ಬರೆಯಲ್ಪಟ್ಟ ಭಾಗ ಎಂಬುದು ಸ್ಪಷ್ಟವಾಗುತ್ತದೆ. ಉಳಿದ ಪೂರ್ವ ಪೀಠಿಕೆ ಮತ್ತು ಉತ್ತರ ಪೀಠಿಕೆ ಬೇರೆಯವರ ರಚನೆ ಎಂದು ಹೇಳಬೇಕಾಗುತ್ತದೆ.

ದಂಡಿಯ ಜೀವನದ ಬಗೆಗೆ ಯಾವ ವಿವರಗಳೂ ಕಾಣಬರುವುದಿಲ್ಲ ದಶಕುಮಾರ ಚರಿತ್ರೆಯನ್ನು ಪರಿಶೀಲಿಸಿದಾಗ ಕವಿ ದಂಡಿ ದಕ್ಷಿಣ ಭಾರತೀಯ, ವಾತ್ಸ್ಯಾಯನನ ಕಾವ್ಯಸೂತ್ರ ಮತ್ತು ಕೌಟಿಲ್ಯನ ಅರ್ಥಶಾಸ್ತ್ರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ. ಶ್ರೀಮಂತ ಮತ್ತು ರಾಜ ಕುಟುಂಬಗಳ ಪರಿಚಯವಿತ್ತು ಆನ್ನುವ ಸಂಗತಿ ತಿಳಿದು ಬರುತ್ತದೆ. ದಂಡಿಗೆ ಶ್ರೀ ದಂಡಿ ಎನ್ನುವ ಹೆಸರು ಇದ್ದಿತೆಂದು ತಿಳಿದು ಬರುತ್ತದೆ

ದಂಡಿಯ ಕಾಲವನ್ನು ನಿರ್ಧರಿಸಲು ಎರಡು ಸಂಗತಿಗಳು ನಮಗೆ ಆಧಾರ ಒದಗಿಸಿ ಕೊಡುತ್ತವೆ. ಎಂಟನೆಯ ಶತಮಾನದಲ್ಲಿದ್ದ ವಾಮನ ದಂಡಿಯ ಕಾವ್ಯಾದರ್ಶವನ್ನು ಉಲ್ಲೇಖಿಸುತ್ತಾನೆ, ಅನುಸರಿಸುತ್ತಾನೆ. ಎರಡನೆಯದಾಗಿ ದೊರೆ ಪ್ರವರಸೇನನ ಪ್ರಾಕೃತ ಕೃತಿ ಸೇತುಬಂಧವನ್ನು ದಂಡಿ ತನ್ನ ಕೃತಿಯಲ್ಲಿ ಉಲ್ಲೇಖಿಸುತ್ತಾನೆ. ಸೇತುಬಂಧ ಕ್ರಿ. ಶ. ೫ನೆಯ ಶತಮಾನದಲ್ಲಿ ರೂಪುಗೊಂಡ ಕೃತಿ ಈ ಕಾರಣಗಳಿಂದ ದಂಡಿಯ ಕಾಲವನ್ನು ೫ರಿಂದ ೮ನೆಯ ಶತಮಾನ ಎಂದು ಊಹಿಸಬಹುದಾಗಿದೆ. ಬಾಣ ಮತ್ತು ಸುಬಂಧು ದಂಡಿಯ ಸರಳ, ಸುಂದರ ಶೈಲಿಯನ್ನು ಮೆಚ್ಚಿ ಅನುಸರಿಸಿದಂತೆ ಕಾಣಬರುತ್ತದೆ.

ದಂಡಿಯ ಉತ್ತಮ ಕೃತಿಗಳಲ್ಲೊಂದಾದ ಕಥಾಸಾರವನ್ನು ಅನುಸರಿಸಿ ನೋಡಿದಾಗ ಮತ್ತೊಂದು ಸಂಗತಿ ತಿಳಿದು ಬರುತ್ತದೆ. ಕಂಚಿಯ ಪಲ್ಲವ ಅರಸ ಸಿಂಹವರ್ಮನ ಆಹ್ವಾನದ ಮೇರೆಗೆ ದಂಡಿಯ ಮುತ್ತಜ್ಜ (ಅಜ್ಜನ ತಂದೆ) ದಾಮೋದರ ಸಿಂಹ ವರ್ಮನ ಆಸ್ಥಾನಕ್ಕೆ ಹೋಗುತ್ತಾನೆ. ಸಿಂಹವರ್ಮನ ಆಳ್ವಿಕೆಯ ಅವಧಿ ಕ್ರಿ. ಶ. ೭ನೆಯ ಶತಮಾನದ ಪೂರ್ವಾರ್ಧ ಎಂಬುದು ಸ್ಪಷ್ಟವಾಗಿದೆ. ಪ್ರೊ. ಕೀತ್ ಕ್ರಿ. ಶ. ೭ನೆಯ ಶತಮಾನಕ್ಕೆ ಪೂರ್ವದಲ್ಲಿಯೇ ದಂಡಿ ವಾಸವಾಗಿದ್ದ, ಕಾವ್ಯಾದರ್ಶ ಭಾಮಹನಿಗಿಂತಲೂ ಮೊದಲೇ ರಚಿತವಾಗಿದ್ದ ಕೃತಿ ಎಂದು ಅಭಿಪ್ರಾಯ ಪಡುತ್ತಾರೆ.

ದಶಕುಮಾರ ಚರಿತೆ ಸಂಸ್ಕೃತ ಸಾಹಿತ್ಯ ಪ್ರಕಾರದಲ್ಲಿ ಒಂದು ಉತ್ತಮ ಕಥೆ. (ಕಥನ ಕಾವ್ಯ) ಈ ಚರಿತ್ರೆಯಲ್ಲಿರುವ ಕಥಾವಸ್ತುವು ಸ್ವಾರಸ್ಯಕರವಾಗಿದೆ. ನಗರ ಜೀವನದ ಕೀಳು ಜನತೆಯ ಪರಿಚಯವೂ ಆಗುತ್ತದೆ. ದಂಡಿಯ ಉತ್ತಮ ಶೈಲಿಯ ಪರಿಚಯ ಈ ಕೃತಿಯಿಂದ ಆಗುತ್ತದೆ. ಅವನ ಪದ ಲಾಲಿತ್ಯ, ಪ್ರಸಿದ್ಧವಾದುದು. ಅವನ ಪದ ಜೋಡಣೆಯಲ್ಲಿ ಮಾಧುರ್ಯ, ಸಂಗೀತಧಾರೆ ಹರಿಯುತ್ತದೆ. ಪ್ರಾಸಬದ್ಧವಾದ ಪದರಚನೆಯಲ್ಲಿ ದಂಡಿ ಪ್ರಸಿದ್ಧ. ಏಳನೆಯ ಅಧ್ಯಾಯದಲ್ಲಿ ಕವಿ ಪ್ರಾಸಕ್ಕೆ ಪದಗಳ ಸರಳತೆ—ಸೌಂದರ್ಯಗಳಿಗೆ ಭಂಗ ಬಾರದಂತೆ ಶ್ಲೋಕಗಳನ್ನು ರಚಿಸಿದ್ದಾನೆ—ಪದಗಳನ್ನು ಹೆಣೆದಿದ್ದಾನೆ. ಅವಂತಿ ಸುಂದರಿ ಕಥಾ ದಂಡಿಯ ಮತ್ತೊಂದು ಉತ್ತಮ ಕಾವ್ಯ. ಇದು ಪ್ರಸಿದ್ಧ ಪ್ರಣಯ ಕಾವ್ಯ. ಇದರಲ್ಲಿ ಉತ್ತಮ ಪ್ರೇಮ ಕಥೆಯೊಂದು ನಿರೂಪಿಸಲ್ಪಟ್ಟಿದೆ. ಕಲವು ಪಂಡಿತರು ದಶಕುಮಾರ ಚರಿತೆಯನ್ನು ಬರೆದ ಕವಿಯೇ ಕಾವ್ಯಾದರ್ಶದ ಕರ್ತೃ ಅಲ್ಲ. ಇಬ್ಬರೂ ಪ್ರತ್ಯೇಕ ಕವಿಗಳು ಎಂದು ಅಭಿಪ್ರಾಯ ಪಡುತ್ತಾರೆ.

ಅವಂತಿ ಸುಂದರಿ ಕಥಾ ಗ್ರಂಥ ೧೯೨೪ರಲ್ಲಿ ಮೊದಲಿಗೆ ಪ್ರಕಟವಾಯಿತು ಈ ಕಥಾ ಸಾರದಲ್ಲಿ ದಂಡಿಯ ಜೀವನಕ್ಕೆ ಸಂಬಂಧಿಸಿದ ಕಲ ಸಂಗತಿಗಳು ತಿಳಿದು ಬರುತ್ತವೆ. ಕಥಾಸಾರದ ಪ್ರಕಾರ ದಂಡಿ ಕಿರಾತಾರ್ಜುನೀಯ ಕೃತಿಯ ಕರ್ತೃ ಕವಿ ಭಾರವಿಯ ಮಲಮಗ ಕಂಚಿಯಲ್ಲಿನ್ದ ಪಲ್ಲವದೊರೆ ನರಸಿಂಹ ವರ್ಮನ ಆಸ್ಥಾನದಲ್ಲಿದ್ದಾಗ ಅವಂತಿ ಸುಂದರೀ ಕಥೆಯನ್ನು ರಚಿಸಿದ. ಅವಂತಿ ಸುಂದರಿ ಕಥೆಯ ಪರಿಚಯ ದಶಕುಮಾರ ಚರಿತೆಯ ಆರಂಭದ ಪೂರ್ವ ಪೀಠಿಕೆಯಲ್ಲಿ ಆಗುತ್ತದೆ. ವಿಮರ್ಶಕರು—ಸಂಶೋಧಕರು ಒಬ್ಬನೇ ಕವಿ ತನ್ನ ಎರಡು ಪ್ರತ್ಯೇಕ ಗ್ರಂಥಗಳಲ್ಲಿ ಎರಡು ಕಥೆಗಳನ್ನು ಪ್ರಸ್ತಾಪಿಸಿರುವುದು ಸಹಜವಾಗಿಲ್ಲ. ಎರಡನೆಯ ಗ್ರಂಥ ಕ್ರಿ. ಶ. ೭ನೆಯ ಶತಮಾನದಲ್ಲಿ ಪ್ರತ್ಯೇಕ ಕವಿಯಿಂದ ಬರೆಯಲ್ಪಟ್ಟಿರಬೇಕು ಎಂದ ಅಭಿಪ್ರಾಯ ಪಡುತ್ತಾರೆ.



ವಿವೇಚನೆ

ತುಷ್ಟೀಕರಣ ಧೋರಣೆಯಲ್ಲಿ ಪಂದ್ಯಾಟ

ಬರೆದವರು: ಶ್ರೀ ಶಿವಶಂಕರ

ಬರಬರುತ್ತ ಭಾರತದಲ್ಲಿ ರಾಜಕೀಯವೆಂದರೆ ಅಧಿಕಾರದ ಆಸನವನ್ನು ಗಿಟ್ಟಿಸಿಕೊಳ್ಳುವದಕ್ಕೆ ನಡೆಯುವ ಪಂದ್ಯಾಟವೆಂದಾಗಿದೆ. ಅದೆಂತಾದರೂ ಆಸನವನ್ನು ದಕ್ಕಿಸಿಕೊಳ್ಳಬೇಕೆಂಬ ಆಸೆ ಒಬ್ಬನಲ್ಲಿ ಅಂಕುರಿಸಿತೆಂದರೆ ಒಡನೆ ಅವನು ರಾಜಕೀಯ ರಂಗದಲ್ಲಿ ಕಾಣಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಆ ರೀತಿ ಕಾಣಿಸಿಕೊಳ್ಳುವದಲ್ಲಿ ಪಂದ್ಯಾಟ ನಡೆಯುತ್ತದೆ. ಅಲ್ಲಿ ಗೆದ್ದ ಮೇಲೆ ಆ ಸ್ಥಾನವನ್ನು ಭದ್ರಪಡಿಸಿಕೊಳ್ಳುವದರೊಟ್ಟಿಗೇನೇ ಎದುರ ಅಥವಾ ವಿರೋಧಿ ಪಕ್ಷಗಳವರನ್ನು ಜರೆಯುವದಕ್ಕೂ ಪಂದ್ಯಾಟ ನಡೆಯಬೇಕಾಗುತ್ತದೆ. ಇಲ್ಲ, ಗೆದ್ದನೆಂದರೆ ಆಸನ ಅವನಿಗಾಗಿ ತೆರವಾಗಿರುತ್ತದೆ. ಅವನಲ್ಲಿ ಆಸೀನನಾಗುವದೇ ಬಾಕಿ. ಹಾಗೆ ಆಸೀನನಾದ ಮೇಲೆ ಹಿಂದೆ ಇದ್ದವರು ನಡೆಸಿದ್ದ ಓಲಗದಲ್ಲಿ ಬದಲಾವಣೆ ನಡೆಸುವ ಕ್ರಮದಲ್ಲಿ ತಾನೊಂದು ಕೈ ಮೇಲೆಂಬುದನ್ನು ತೋರಿಸಬೇಕಾಗುತ್ತದೆ. ಅಲ್ಲದೆ ಅನೇಕಾನೇಕ ರೀತಿಯಲ್ಲಿ ಹಿಂದಿದ್ದವರು ಕೈಲಾಗದೆಂಬುದನ್ನು ಕಾಣಿಸಬೇಕಾಗುತ್ತದೆ. ಈಗ ಅಂತಹ ಕೆಲಸಗಳಲ್ಲಿ ತುಷ್ಟೀಕರಣವೂ ಒಂದು ಇದೆ.

ತುಷ್ಟೀಕರಣವೆಂದರೆ ಯಾವುದಾದರೊಂದು ನಿರ್ದಿಷ್ಟ ಕೋಮಿನವರನ್ನು ತೃಪ್ತಿಪಡಿಸಲಿಕ್ಕಾಗಿ ನಡೆಸುವ ರಾಜಕೀಯ ಯೋಗ, ರಾಜಕೀಯಜ್ಞರಿಗ ಇದೊಂದು ನಿಶಿಷ್ಟ ಕಲೆ. ಆದರೆ ನಿಷ್ಪಕ್ಷಪಾತಿ ಸಜ್ಜನರು ಅದನ್ನು 'ಕುಸ್ಪ ಕಲೆ'ಯನ್ನುವರು. ಹಾಗೂ ಇದೊಂದು ಜಾಡ್ಯವೆನ್ನುವರು. ಏನಿದ್ದರೂ ರಾಜಕೀಯದಲ್ಲಿ ಇದಿಂದು ಮುಖ್ಯ ಸ್ಥಾನವನ್ನು ಪಡೆದಿರುತ್ತದೆ. ಆ ರಂಗದಲ್ಲಿಂದು ಪ್ರಬಲ ಪಂದ್ಯಾಟ ನಡೆಯುತ್ತದೆ.

ಆಲ್ ಇಂಡಿಯಾ ನೇಶನಲ್ ಕಾಂಗ್ರೆಸ್ಸಿನ ಆರಂಭವೇ ಆ ರೀತಿ ಎನ್ನಬಹುದು. ಆರಂಭದಲ್ಲಿ ಅದೊಂದು ರಾಜಕೀಯ ಪಕ್ಷವಾಗಿರಲಿಲ್ಲ. ಅದು ಪೌರಬಳಗದ ಠರಾವುಗಳನ್ನು ನಿರ್ಣಯಿಸಿ ಸರಕಾರಕ್ಕೆ (ಅದಕ್ಕೆಂಶೆಯೂ ಅಂದಿನ ಆಕ್ರಮಣಗಾರರಿಗೆ) ಸಮರ್ಪಿಸುತ್ತಿತ್ತು. ಆ ರೀತಿ ಹುಟ್ಟಿ ಬೆಳೆದು ಕ್ರಮೇಣ ರಾಜಕೀಯ ರಂಗದಲ್ಲಿ ಕಾಲಿಡಬೇಕಾಯಿತು. ಆಗ ಅಂದಿನ ಪರಿಸ್ಥಿತಿಗನುಸಾರವಾಗಿ ಆಡಳಿತದ ಅಂಶ ಸ್ಥಾನ ಪಡೆಯಲು ಪಂದ್ಯಾಟ ನಡೆಸುವಂತಿರಲಿಲ್ಲವಾದ ಕಾರಣ, ಬ್ರಿಟಿಸರ ಒಳ ಆಡಳಿತರಂಗದಲ್ಲಿ ಕೆಲ ಸ್ಥಾನಗಳನ್ನು ಕೊಡಲು ಕೇಳಿ ಕೊಂಡಿತು; ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲ ಹವಣಿಸಿತು. ವೇಷಗಳನ್ನು ಹಾಕಿಕೊಳ್ಳಬೇಕಾಗುತ್ತಿತ್ತು. ಸ್ತ್ರೀಯರಿಗೆ ಸ್ಥಾನ, ಹರಿಜನರಿಗೆ ಸ್ಥಾನ, ಕ್ರಿಶ್ಚಿಯನರಿಗೆ ಸ್ಥಾನ, ಮುಹಮ್ಮದೀಯರಿಗೆ ಸ್ಥಾನ....ಈ ರೀತಿ ಸ್ಥಾನದ ಮೇಲೆ ಸ್ಥಾನಗಳನ್ನು ಸೂಚಿಸುತ್ತಿದ್ದ ಕಾಂಗ್ರೆಸ್ಸು ಅಧಿಕಾರದ ಸ್ಥಾನವನ್ನೇ ಗಿಟ್ಟಿಸಿಕೊಂಡಿತು. ಕೋಮಿನ ಹೆಸರಿನ ಮೇಲೆ ಸ್ಥಾನಗಳನ್ನು ಸೂಚಿಸುವಾಗ ಆಯಾಯಾ ಕೋಮಿನವರ ಮನಸ್ಸನ್ನೆಳೆದು ಕೊಳ್ಳಲಿಕ್ಕಾಗಿ ಅವರಿಗೆ ಮಾತ್ರ ಹಿತಕರವಾಗಿರುವಂತಹ ಕಾರ್ಯಗಳನ್ನೆಸಗಲು ಆ ಸ್ಥಾನವನ್ನು ಹಿಡಿದುಕೊಂಡವ ಪ್ರಯತ್ನಿಸಲೇ ಬೇಕಾಗುತ್ತದೆ. ಈ ಅಭ್ಯಾಸ ಅದರ ರಕ್ತದಲ್ಲಿ ಒಂದಾಗಿ ಬಿಟ್ಟಿದೆ. ಈಗಲೂ ಇದೇ ಕಪ್ಪು ಕನ್ನಡಕದ ಮೂಲಕವೇ ಕಾಂಗ್ರೆಸ್ಸ್ ನೋಡುತ್ತಿದೆಯೆಂದಲ್ಲಿ ನೈಜ ನಿಷ್ಪಕ್ಷಪಾತಿ ಒಪ್ಪಿಕೊಳ್ಳದಿರಲಾರ. ಕಾಂಗ್ರೆಸ್ಸಿನ ಮಟ್ಟಿಗೆ ಇದು ನೂರಕ್ಕೆ ನೂರು ನಿಜ. ಆಡಳಿತದ ಅಂಕುಶವನ್ನು ಕೈಗೆ ತೆಗೆದುಕೊಂಡ ಮೇಲೂ ಕಾಂಗ್ರೆಸ್ಸು ಹಿಂದಿನ ಚಾಳಿಯನ್ನು ಬಿಟ್ಟಿರುವದಿಲ್ಲ. ಭಾರತವು ಸೆಕ್ಯುಲರ್ ರಾಷ್ಟ್ರವೆಂದು ಸಾರಲಾಗಿರುತ್ತದೆ ಆದರೆ ಕಾಂಗ್ರೆಸ್ಸ್ ಶಾಸನವನ್ನು ಕೈಗೆ ತೆಗೆದುಕೊಂಡು ಇಪ್ಪತ್ತು ವರ್ಷಗಳಾದರೂ ಹಿಂದುಗಳಿಗೆ ಮಾತ್ರ ಅನ್ವಯವಾಗುವ ಹಿಂದೂ ಕೋಡು ಬಿಲ್ಲನ್ನು ತಂದಿದೆಯಲ್ಲದೆ ಕ್ರಿಶ್ಚಿಯನ್ ಕೋಡು ಬಿಲ್ಲನ್ನಾಗಲೀ, ಮುಹಮ್ಮದೀಯ ಕೋಡು ಬಿಲ್ಲನ್ನಾಗಲೀ ತಂದಿರುವದಿಲ್ಲ. ಅದೇನು ಹಿಂದೂಗಳಿಗೆ ಮಾತ್ರ ಕೋಡ, ಬೇಕಾಗಿಗಿದೆಯೋ ಕಾಂಗ್ರೆಸ್ಸಿನ ಪೋರಿಗಳಿಗೆ ಮಾತ್ರ ಗೊತ್ತು. ಇದು ಹಿಂದೂಗಳ ರಾಷ್ಟ್ರ, ಆದುದರಿಂದ ಇಲ್ಲಿಯ ನ್ಯಾಯಕ್ಕೆ ಹಿಂದೂ ನ್ಯಾಯವೆನ್ನುವ ದೃಷ್ಟಿಯಿಂದ ಹಿಂದೂ ಕೋಡ್ ಬಂದಿದ್ದಲ್ಲಿ ಅದು ಇಲ್ಲಿರುವ ಎಲ್ಲಾ ಪ್ರಜೆಗಳಿಗೂ ಅನ್ವಯವಾಗಬೇಕು. ಆದರೆ ಅದು ಅಂತಿರುವದಿಲ್ಲ. ಅಷ್ಟೇ ಅಲ್ಲ, ಒಂದೇ ಸರಕಾರೀ ಕಾರ್ಯಾಲಯದಲ್ಲಿ ಇಬ್ಬರು (ಒಬ್ಬನು ಮುಸ್ಲಿಂ, ಇನ್ನೊಬ್ಬನು ಮುಸ್ಲಿಮೇತರ) ಕೆಲಸ ಮಾಡುವವರಾದಲ್ಲಿ ಆ ಮುಸ್ಲಿಂ ಉದ್ಯೋಗಸ್ಥನು ನಾಲ್ಕೈದು ಮದುವೆಗಳನ್ನು ಮಾಡಿಕೊಳ್ಳಬಹುದು. ಅದರಲ್ಲಿ ಯಾವಾಕೆಯನ್ನು ಬಿಡಬೇಕಾಗಿಲ್ಲ. ಇನ್ನಿತರು ಆ ರೀತಿ ತಮಗಿಷ್ಟ ಬಂದಷ್ಟು ಹೆಣ್ಣುಗಳನ್ನು ಮದುವೆಮಾಡಿಕೊಳ್ಳುವಂತೆಯೂ ಇಲ್ಲ, ಹಾಗೆನೇ ತಲಾಕ್ ಮಾಡಲೂ ಸಾಧ್ಯವಿರುವದಿಲ್ಲ. ಪೂಜಾಸ್ಥಳದ ವಿಷಯದಲ್ಲೂ ಹಾಗೆನೇ. ಹಿಂದೂ ರಿಲೀಜ್ಯಸ್ ಎಂಡೋಮೆಂಟು ಬಂದಿದೆ. ಇದು 'ಹಿಂದೂ'ಗಳ ಪೂಜಾಸ್ಥಳದ ಮೇಲೆ ಮಾತ್ರ ದರ್ಬಾರು ನಡೆಸಲು ಸಾಧ್ಯ. ಈ ಎಂಡೋಮೆಂಟಿನಲ್ಲಿ ಯಾರೂ ಬೇರಾದರೂ ಉದ್ಯೋಗಸ್ಥರಿರಬಹುದು! ವಿದ್ಯಾರಂಗದಲ್ಲೂ ಅಷ್ಟೇ. ಕ್ರಿಶ್ಚಿಯನ್ ಶಾಲೆಗಳಲ್ಲಿ ಬೈಬಲ್ ಕಲಿಯಲೇ ಬೇಕು. ಉರ್ದು ಶಾಲೆಗಳಲ್ಲಿ ಖುರಾನ್ ಕಲಿಯಬೇಕು. ಆದರೆ ಅನ್ಯ ಶಾಲೆಗಳಲ್ಲಿ ಶ್ರೀಮದ್ ಭಗವದ್ಗೀತೆಯನ್ನೂ ಕಲಿಸಲೇ ಬಾರದು. ಉದ್ಯೋಗ ರಂಗದಲ್ಲಾದರೂ ಬೇರೆ ರೀತಿ ಉಂಟೇ? ಅಲ್ಲೂ ಅವರಿಗೆ ಇಷ್ಟು ಕಾದಿರಿಸಲಾಗಿದೆ, ಇವರಿಗೆ ಮೊದಲ ಸ್ಥಾನ....ಈ ರೀತಿ. ಈ ಕ್ರಮ ಶಾಸನ, ರಂಗದಲ್ಲೂ ಕಾಲಿಟ್ಟು ಕೊಂಡಿದೆ. ಅಲ್ಲಾ ನೋಮಿನೇಟೆಡ್ ಎಂಬ ನಾಮವನ್ನು ಧಾರಣೆಲಾಗಿದೆ, 'ಆಂಗ್ಲೋ – ಇಂಡಿಯನ'ರಿಗೆ ವಿಶೇಷ ಸ್ಥಾನ! ಇದಕ್ಕೆಲ್ಲಾ ಕಾರಣ ಪಕ್ಷವಾಗಿರುವ ಕಾಂಗ್ರೆಸ್ಸನ್ನು ಕೋಮುವಾದೀಸೆಂದೇ ಕೆಲವರು ಕರೆಯುವದುಂಟು.

ಕಾಂಗ್ರೆಸ್ಸಿನ ನಂತರ ಉಂಟಾದ ಪಕ್ಷಗಳು ಅಧಿಕಾರಕ್ಕಾಗಿ ಪೋಟಿ ನಡೆಸುತ್ತಿರುವಾಗ ಈ ರಂಗದಲ್ಲೂ ಪಂದ್ಯಾಟ ಹೂಡಿಯೇ ಆಗಬೇಕು. ಇದು ಹೇಗೆ ನಡೆಯುತ್ತಿರುವದನ್ನು ತಮಿಳು ನಾಡಿನಲ್ಲಿ ಕಾಣಬಹುದು. ಇಲ್ಲಿ ಕಾಂಗ್ರೆಸ್ಸಿಗರ 'ಕಾಳ ಶಾಸನ'ದ ಕೊನೆಯಾಗಿ, ದ್ರಾ. ಮು. ಕ. ದ ಸರ್ಕಾರ ಬಂದಿರುತ್ತದೆ.

ಗಲಾಟೆ ರಾಷ್ಟ್ರೀಯ ಜ್ವಾಲಾ ಪ್ರವಾಹದಿಂದ ತಪ್ಪಿಸಿಕೊಂಡ ಬ್ರಿಟಿಷ್ ಅಧಿಕಾರಿಯೊಬ್ಬನು ಪ್ರವಾಹದ ದಿಕ್ಕನ್ನು ಬದಲಾಯಿಸಲಿಕ್ಕಾಗಿ ಕಾಂಗ್ರೆಸ್ಸನ್ನು ಸ್ಥಾಪಿಸಿದಂತೆ, ಕ್ರಿಸ್ತೀಯ ಮತಪ್ರಸಾರಕನೊಬ್ಬನು ಹಿಂದೂ ರಾಷ್ಟ್ರವನ್ನು ನಷ್ಟಭ್ರಷ್ಟವಾಡಲಿಕ್ಕಾಗಿ "ಪ್ರತ್ಯೇಕ ವಿಶಿಷ್ಟ ದ್ರಾವಿಡಕತನ"ದ ವಿಷ ಬೀಜವನ್ನು ಬಿತ್ತಿದನು. ಕ್ರಿಸ್ತೀಯರು ಈ ರೀತಿ ಬಿತ್ತಲ್ಪಟ್ಟ ವಿಷ ಬೀಜಕ್ಕೆ ಅನ್ಯರಾಷ್ಟ್ರಗಳಿಂದ ಪ್ರವಾಹದಂತೆ ಬಂದ ಹಣದಿಂದ ನೀರೆರೆದರು, ಶಾಲೆಗಳ ಮೂಲಕ ಗೊಬ್ಬರವನ್ನು ಹಾಕಿದರು, ಮತ ಪ್ರಸಾರಣೆಯ ಮೂಲಕ ಆರೈಕೆ ಮಾಡಿದರು. ಮತ್ತು ಶಾಸನದ ಮೂಲಕ ರಕ್ಷಣೆ ಮಾಡಿದರು. ಅದಿಂದು ವಿಷ ವೃಕ್ಷವಾಗಿ ಬೆಳೆದು ನಿಂತಿದೆ. "ದ್ರಾವಿಡತನ"ದ ವಿಷಜಾವಲ್ಲಿ ಮೊಸಳೆ ಕಣ್ಣೀರು ಸುರಿಸುತ್ತಾ, ಉರಿಯುತ್ತಿದ್ದ ಬೆಂಕಿಗೆ ಗಾಳಿ ಹಾಕಿದವರಲ್ಲಿ ಮುಂದಾದವರು ಮುಸ್ಲಿಮರು. ಹಿಂದೂಗಳ ಬಿಕ್ಕಟ್ಟು ಅದುವೇ ಮುಹಮ್ಮದೀಯ ಮತಾನುಯಾಯಿಗಳಿಗೆ ಬೇಕಾಗಿರುವ ಹಿಟ್ಟು. ಬ್ರಾಹ್ಮಣರನ್ನು ದ್ವೇಷಿಸುವ ದ್ವೇಷಾಗ್ನಿಗೆ ಗಾಳಿ ಯಾವ ದಿಕ್ಕಿನಿಂದ ಬಂದರೂ ಸರಿ, ಅದು ಬರಮಾಡಿಕೊಳ್ಳುತ್ತದೆ. ಅಂತೆಯೇ ದ್ರಾವಿಡ ಕಳಗವಿನ ತಂದೆ ತಿರುರಾಮಸ್ವಾಮಿ ನಾಯ್ಕರ್ ಹಾಗೂ ದ್ರಾವಿಡ ಮುನ್ನೇತ್ರ ಕಳಗವಿನ ಮುಂದಾಳು ತಿರು ಅಣ್ಣಾದೊರೈಯವರಿಗೆ ಜಿನ್ನಾ ಸತ್ತಾಗ ಮನಸ್ಸಿಗೆ ಆದಷ್ಟು ನೋವು, ಜವಾಹರಲಾಲ್ ನೆಹ್ರೂಜೀ ನಿಧನರಾದಾಗ ಆಗಲಿಕ್ಕಿಲ್ಲ! ಇವರಿಬ್ಬರ ಹುಟ್ಟುದಿನವನ್ನಾಚರಿಸುವಾಗ ಅದ್ಯಾವ ಮುಹಮ್ಮದೀಯನು ಖಂಡನೂ ಬಾರದಿದ್ದರೂ, ಮುಹಮ್ಮದೀಯ ಮತ ಸ್ಥಾಪಕ ಮುಹಮ್ಮದರ ಜನ್ಮದಿನಾಚರಣೆಯ ಸಮಯ ತಿರು ರಾಮಸ್ವಾಮಿ ನಾಯ್ಕರ್‌ರವರು ಭಾಗವಹಿಸದೆ ಇರುವದಿಲ್ಲ. ರಾಮನವಮಿಗೆ, ರಾಮಾನುಜಾಚಾರ್ಯರ ಜನ್ಮದಿನದಂದು, ಅಗಸ್ತ್ಯರ ಅಥವಾ ಕಂಭರ ಜನ್ಮದಿನದಂದು ರಜೆ ಕೊಡದೆ ಇರುವ ದ್ರಾವಿಡ ಮುನ್ನೇತ್ರ ಕಳಗವಿನ ಮಂತ್ರಿಮಂಡಲವು ಮಿಲಾಡಿನಬಿಗೆ ರಜೆ ಕೊಟ್ಟಿರುತ್ತದೆ, 'ತಮಿಳ್ರ್, ತಮಿಳ್ರ್ ನಾಡೆ'ಂದು ತಮಟೆ ಬಾರಿಸುತ್ತಿರುವ ದ್ರಾ. ಮು. ಕ. ವು ರಾಮನವಮಿಗೆ ರಜೆ ಕೊಡಲಾರದು. ಅದರಲ್ಲೇನೂ ಆಶ್ಚರ್ಯವಿಲ್ಲ. ಶ್ರೀ ರಾಮಚಂದ್ರ ಪ್ರಭು ಉತ್ತರ ಭಾರತದವ! ಅವನು ತಮಿಳನಲ್ಲ—ಅಷ್ಟೇ ಅಲ್ಲ, ತಮಿಳುನಾಡಿನ ಮೇಲೆ ಆಕ್ರಮಣ ನಡೆಸಿದ್ದಾನೆ! ಅಂತಹವನನ್ನು 'ಶುದ್ಧ ತಮಿಳರು' (ಪಚ್ಚೈ ತಮಿಳ್ರನ್) ಗೌರವಿಸುವದುಂಟೆ! ಜಗತ್ತಿನ ಮಹಾನ್ ಮೂರು ಶಾಸ್ತ್ರಗಳಲ್ಲಿ ಒಂದಾದ ವಿಶಿಷ್ಟಾದ್ವೈತದ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀ ರಾಮಾನುಜಾಚಾರ್ಯರು ತಮಿಳು ರಾಜ್ಯದವರಿದ್ದಾರೆ. ತಮಿಳು ಅಕ್ಷರಗಳನ್ನು ಕಂಡುಹಿಡಿದು, ವ್ಯಾಕರಣವನ್ನೂ ಬರೆದವರೆಂದು ಅಗಸ್ತ್ಯರಿಗೆ ಕೈಮುಗಿಯಲಾಗುತ್ತಿದೆ. ಆದರೆ ಈ ಅಗಸ್ತ್ಯರಾದರೋ ಉತ್ತರದಿಂದ ಬಂದ ಬ್ರಾಹ್ಮಣ (ಪಾಪಾನ್) ನಲ್ಲವೇ! ಇಂತಹವರ ಹುಟ್ಟುದಿನ ಗೊತ್ತಿದ್ದರೂ, ಅದಕ್ಕೆ ರಜೆ ಕೊಡುವದು ದ್ರಾ. ಮು. ಕ. ದ ಧೋರಣೆಗೆ ಸರಿಬರಲಿಕ್ಕಿಲ್ಲ. ಕಂಭರ ಕರ್ಮವಾದರೂ ಏನು? ಅವರೇಕೆ ತಮಿಳಿನಲ್ಲಿ ರಾಮಾಯಣವನ್ನು ಬರೆದರು? ಕಂಭಾಯಣ ಬರೆಯಲಿಲ್ಲವೇಕೆ? ಆದುದರಿಂದ ಅವರ ಹುಟ್ಟು ಹಬ್ಬಕ್ಕೂ ರಜೆ ಕೊಡುವದು ದ್ರಾ. ಮು. ಕ. ದ ಪಾಲಿಗೆ ನ್ಯಾಯಪೂರ್ಣವಾಗಿರುವದಿಲ್ಲ! ಶ್ರೀ ತಿರುವಳ್ಳುವರ್ ಜನ್ಮದಿನ ಗೊತ್ತಿಲ್ಲವಂತೆ! (ಅದನ್ನು ಕಂಡು ಹಿಡಿಯುವದು ಕಷ್ಟವೇನು?) ಆದುದರಿಂದ ಅವರ ಮುಕ್ತಿ ದಿನದಂದು ದ್ರಾ.ಮು.ಕ. ರಜೆಕೊಟ್ಟಿರುತ್ತದೆ. 'ಮುಕ್ತಿದಿನ'ದಂದು ರಜೆ ಕೊಡಲು ಕಾರಣವೆಂದರೆ, ಜನ್ಮದಿನೋತ್ಸವವನ್ನು ಕೊಂಡಾಡುವದು ಹಿಂದೂಗಳ ಅಭ್ಯಾಸ. ಸತ್ತ ದಿನವನ್ನಾಚರಿಸುವದು ಮುಹಮ್ಮದೀಯರ ಅಭ್ಯಾಸ ಇದೆ. ಆದುದರಿಂದಲೇ ದ್ರಾ. ಮು. ಕ. ಕ್ಕೂ ಸಂಬಂಧವಿರಲು ಕಾರಣವೇನೆಂದು ಕೇಳಿದಲ್ಲಿ, ರಾಮಾನುಜಾಚಾರ್ಯರನ್ನು ತೆಗಳುವ, ದೇವರಲ್ಲಿ ನಂಬಿಕೆಯಿಲ್ಲದಿರುವ (ಬಾಹ್ಯಾಡಂಭರ – ಅಷ್ಟೇ) ಹಾಗೂ ದೇವಸ್ಥಾನಗಳನ್ನು 'ಪ್ರಣಯ ವಿಲಾಸ'ಗಳೆಂದು ಪರಿಗಣಿಸುತ್ತಿರುವ ದ್ರಾ. ಮು. ಕ.ದವರು ನಾಚಿಕೆ ಇಲ್ಲದೆ ನಾಚ್ಚಿಯಾರ್ ಹೆಸರನ್ನು ಹೇಳುತ್ತಾರೆ!

ದ್ರಾ.ಮು.ಕ. ಮತ್ತು ಮುಸ್ಲಿಂರ ಅನ್ಯೋನ್ಯತೆಯ ಅನುಭವ ಸ್ಪಷ್ಟವಾಗಿ ಪ್ರಕಟವಾದದ್ದು ಚುನಾವಣೆಯ ಸಮಯದಲ್ಲಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ಮತ್ತೂ ಜನಾಬ್ ಇಸ್ಮಾಯಿಲರನ್ನು ತಿರು ಅಣ್ಣಾದೊರೈಯವರು ಒಂದೇ ತಕ್ಕಡಿಯ ಎರಡು ತಟ್ಟೆಗಳಲ್ಲಿಟ್ಟು ತೂಗಿದರು. ಚುನಾವಣಾ ಮುಗಿದ ಮೇಲೆ ದ್ರಾ. ಮು. ಕ. ಮತ್ತು ಮುಸ್ಲಿಂಲೀಗೆಂಬ ಗಂಡು ಹೆಣ್ಣಿಗೆ ಆಚಾರ್ಯರ ಅವಶ್ಯಕತೆಯಾದರೂ ಏನು? ದ್ರಾ. ಮು. ಕ. ಹುಡುಕಿ ನೋಡಿತು. ಅದರ ಕಣ್ಣಿಗೆ ಅದ್ಯಾವನೊಬ್ಬ ನ್ಯಾಯಶಾಲಿ ಸಮರ್ಥ ಬ್ರಾಹ್ಮಣ ಗೋಚರವಾಗಲೇ ಇಲ್ಲ. ಆದರೆ ಸುಲಭವಾಗಿ ಮುಹಮ್ಮದೀಯರು ಸಿಕ್ಕಿದರು. ದ್ರಾ. ಮು. ಕ. ಬಂದದ್ದಾದರೂ ಎಲ್ಲಿಂದ? ಹಾವನ್ನೂ ಹಾರುವನನ್ನೂ ಒಂದೇ ಸಮಯದಲ್ಲಿ ಕಂಡಲ್ಲಿ ಮೊದಲು ಹಾರುವನನ್ನು ಕೊಲ್ಲೆಂದು ಕಲಿಸಿತ್ತರುವ ತಿರು ರಾಮ

ಸ್ವಾಮಿ ನಾಯ್ಕರ್ ಅವರ ಅಂಗಳದಲ್ಲಿ ಆರೈಕೆಯಲ್ಲಿ ಬೆಳೆದ ವಿಷ ವೃಕ್ಷ ಅದಲ್ಲವೇ? ಇದರ ಪೂರ್ಣ ಲಾಭವನ್ನು ಮುಸ್ಲಿಂ ಮಂತ್ರಿ ಪಡೆದುಕೊಂಡರು. ಮಿಲಾಡ್‌ನಬಿಗೆ ರಜೆಕೊಟ್ಟೊಡನೆ ಅವರ ದ್ರಾ. ಮು. ಕ.ವನ್ನು ಕೆಲವರು ಮತ ದ್ವೇಷ ಪಕ್ಷವೆನ್ನುತ್ತಾರೆ. ಆದರದು ನಿಜವಲ್ಲವೆಂಬುದನ್ನು ದ್ರಾ. ಮು. ಕ.ವಿಂದು ನಿರೂಪಿಸಿರುತ್ತದೆಂದವರು ಸ್ಪಷ್ಟವಾಗಿ ಸಾರಿದರು. ಅನ್ಯ ಮತಗಳ (ಬೌದ್ಧ, ಜೈನ, ಸಿಖ್ಖ, ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಇತ್ಯಾದಿ ಇತ್ಯಾದಿ) ಸ್ಥಾಪಕರ ಹುಟ್ಟಿದ ಅಥವಾ ಕಾಲವಾದ ದಿನದಂದು (ಕ್ರಿಸ್ತೀಯು ಸಹವೊಂದು ಅಪವಾದ) ರಜೆ ಕೊಡದ ದ್ರಾ. ಮು. ಕ.ವು ಮಹಮ್ಮದರ ದಿನದಂದು ಮಾತ್ರ ರಜೆ ಕೊಟ್ಟಿರುವ ಕಾರಣ ಅದು ಮತವನ್ನು ಪ್ರೀತಿಸುವ ಪಕ್ಷವೆಂದಾದಲ್ಲಿ ಯಾವ ಮತವೆಂಬುದನ್ನು ಪ್ರತ್ಯೇಕವಾಗಿ ಸೂಚಿಸಬೇಕಾಗಿರುವದಿಲ್ಲ. ಮಹಮ್ಮದರಂತೂ ಭಾರತದಲ್ಲಿ ಬೇಡವಾದರೂ ತಮಿಳುನಾಡಿನಲ್ಲಿ ಹುಟ್ಟಿದ ಮತ ಸ್ಥಾಪಕರಿರುವದಿಲ್ಲವಾದರೂ ಉಂಟು. ರಜೆಕೊಟ್ಟಿದೆಯೆನ್ನುವದರಿಂದ ಯಾವ ಮತವನ್ನು ದ್ರಾ. ಮು. ಕ.ವು ತನ್ನ ಬುಟ್ಟಿಯೊಳಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಿದೆಯೆನ್ನುವದು ಸ್ಪಷ್ಟವಾಗುತ್ತದೆ.

ಮೂಲವನ್ನು ಕೆದಕಿ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದಲ್ಲಿ ಆಕ್ರಮಣಗಾರ ಕ್ರಿಸ್ತೀಯರು ತಮ್ಮ ಸಾಮ್ರಾಜ್ಯ ದಾಹವನ್ನು ತೃಪ್ತಿಪಡಿಸಿಕೊಳ್ಳಲಿಕ್ಕಾಗಿ ತೋಡಿರುವ ಎರಡು ಬಾವಿಗಳು ಕಾಂಗ್ರೆಸ್ಸು ಹಾಗೂ ದ್ರಾ. ಮು. ಕ. ಇವು ಭಾರತೀಯನ ಬಾಯಾರಿಕೆಗೆ ಪ್ರಯೋಜನವಾಗುವದಿಲ್ಲ. ಹಾಗಿದ್ದರೂ, ನಡುರಾತ್ರಿ ಹೊತ್ತಿನಲ್ಲೇ ಅದನ್ನು ಗುರುತಿಸಿಕೊಂಡರೂ ಹಚ್ಚ ಹಗಲು ಹೊತ್ತಿನಲ್ಲೇ ಅದರಲ್ಲಿ ಬೀಳುವವರ ಸಂಖ್ಯೆಗೇನೂ ಬರಗಾಲ ಬಂದಿರುವದಿಲ್ಲ. ಒಂದೊಂದು ಕಾರಣಕ್ಕಾಗಿ ಒಬ್ಬೊಬ್ಬರು, ತಮ್ಮ ತಮ್ಮ ತೃಷೆಯನ್ನು ತೀರಿಸಿಕೊಳ್ಳುವದಕ್ಕಾಗಿ, ಅದರಲ್ಲಿ ಬೀಳುತ್ತಾ ಇರುತ್ತಾರೆ. ಹಾಗೆ ಬಿದ್ದವರು ಅದರಿಂದ ಮೇಲೆ ಬರುವದೆಂಬುದಿಲ್ಲ. ಹಾಗಿದ್ದರೂ ಕಾಂಗ್ರೆಸ್ಸನ್ನು ಅನ್ನಿಬೆಸೆಂಟ್, ಬಾಲಗಂಗಾಧರ್ ಟಿಳಕ್, ಶ್ರದ್ಧಾನಂದ, ಮದನ ಮೋಹನ ಮಾಲವೀಯ ಮುಂತಾದವರು ಆಗಾಗ ಶುದ್ಧಗೊಳಿಸುತ್ತಿದ್ದರು.

ಅಧಿಕಾರದ ಅಂಕುಶವನ್ನು ಅಂಗೈಯಲ್ಲೇ ಇಟ್ಟುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವ ರಾಜಕೀಯ ಪಕ್ಷಗಳ ನಡುವೆ ಪಂದ್ಯಾಟ ನಡೆಯುವದು ಸ್ವಾಭಾವಿಕವೇ ಇದೆ. ಅದಕ್ಕೊಂದು ಮಿತಿ ಅಥವಾ ಸೀಮೆಯೆಂಬುದು ಇರುವದಿಲ್ಲ. ಅದರಲ್ಲೂ ಒಂದೇ ರೀತಿಯವರ ನಡುವೆ ಇಂತಹ ಸ್ಪರ್ಧೆ ಏರ್ಪಟ್ಟಿತ್ತೆಂದರೆ ಅವರು ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸುವರೇ ವಿನಃ ಅನ್ಯ ದಾರಿ ಹಿಡಿಯಲು ಮುಂದಾಗುವದಿಲ್ಲ. ತುಷ್ಟೀಕರಣದ ಧೋರಣೆಯೂ ಇದೇ ಆಗಿದೆ. ಕಾಂಗ್ರೆಸ್ಸು ಆರಂಭದಿಂದಲೂ ತುಷ್ಟೀಕರಣದ ಧೋರಣೆಯನ್ನು ತಳೆದಿರುತ್ತದೆ. ಅಧಿಕ ಸಂಖ್ಯೆಯ ಹಿಂದೂಗಳಿಂದ ಕನಿಷ್ಠ ಸಂಖ್ಯೆಯ ಮುಸ್ಲಿಮರಿಗೆ ಅನ್ಯಾಯವಾಗುತ್ತಿರುವ ಕಾರಣ ಅವರಿಗೆ ಜಾಸ್ತಿ ಸ್ಥಾನ ಪ್ರತ್ಯೇಕವಾಗಿ ಸಿಗಬೇಕೆಂಬ ಕೂಗಿನಿಂದ ಆರಂಭವಾಗಿ, ಅನ್ಯಾಯದ ಅಂತ್ಯಕ್ಕಾಗಿ ಜಿನ್ನಾಗೆ ಪ್ರತ್ಯೇಕ ಪಾಕಿಸ್ಥಾನವನ್ನು ಕೊಡಬೇಕಾಗಿದೆಯೆಂದು ಕಾಂಗ್ರೆಸ್ಸು ಸಾರಿತು. ಇದು ಕಹಿ ನೆನಪು.

ಇಂದು! ಇಂದೂ ಅದೇ ಗಾದರ್ಭರಾಗ! ಇದಕ್ಕೆ ಅಡೆತಡೆ, ಲಂಗು-ಲಗಾಮು ಏನೂ ಇಲ್ಲ! ಈ ಅನ್ಯಾಯವನ್ನು ಸರಿಪಡಿಸಲಿಕ್ಕಾಗಿ ಭಾರತದ ಅಧ್ಯಕ್ಷ ಸ್ಥಾನವನ್ನು 'ಮಹಮ್ಮದೀಯ'ನೆಂಬ ಏಕಮೇವ 'ಯೋಗ್ಯತೆ'ಯುಳ್ಳ ವ್ಯಕ್ತಿಗೆ ಬಿಟ್ಟುಕೊಡಬೇಕೆಂದು ಕಾಂಗ್ರೆಸ್ಸು ಕರೆ ಇತ್ತಾಗ, ದ್ರಾ. ಮು. ಕ. ಕಳವಳಪಡಲು ಕಾರಣವು ಅದೇ ಇದೆ. ತುಷ್ಟೀಕರಣ ಧೋರಣೆಗನುಸಾರವಾಗಿ ಆಯ್ಕೆಯ ಸ್ಥಾನವನ್ನು 'ಮುಸ್ಲಿಮನಿಗೆ ಬಿಟ್ಟುಕೊಡುವದೇ? ಯೋಗ್ಯತಾ[illegible] ಸರ್ವೋಚ್ಚ ಸ್ಥಾನದಲ್ಲಿದ್ದ ಸಾಮರ್ಥ್ಯಶಾಲಿಗೆ ಕೊಡುವದೇ? ಡೋಲಾಯಮಾನ ಪರಿಸ್ಥಿತಿಯಲ್ಲಿ ದ್ರಾ. ಮು. ಕ. ಚಿಂತಿಸಿತು. ಏನು ಮಾಡುವುದೆಂದು ಅದಕ್ಕೆ ಗೊತ್ತಾಗಲಿಲ್ಲ. ಕೊನೆಯಲ್ಲಿ ಅಡಿಗೆ ಬಿದ್ದರೂ ಮೀಸೆಗೆ ಮಣ್ಣಾಗಿಲ್ಲವೆಂಬ ಜಟ್ಟಿಯಂತೆ ಇವರೂ ಅಧ್ಯಕ್ಷರ ಸ್ಥಾನವಲ್ಲದಿದ್ದರೂ ಉಪಾಧ್ಯಕ್ಷರ ಸ್ಥಾನ ನಿಮಗೇನೇ, ತುಷ್ಟೀಕರಣವಿಗೆ ಶರಣೆಂದರು. ತಮ್ಮದು ಕಾರ್ಮಿಕರ ಪಕ್ಷವೆನ್ನುತ್ತಾರೆ, ದ್ರಾ. ಮು. ಕ.ದವರು. ಶ್ರೀ. ವಿ. ವಿ. ಗಿರಿಯವರು ಕಾರ್ಮಿಕರ ಮುಂದಾಳು ಇದ್ದಾರೆ. ಅವರು ಮುಖಂಡರಾಗಿದ್ದಾಗ ಆ ಕಾರ್ಮಿಕ ಸಂಘಟನೆಗಳು ಒಳ್ಳೆಯ ರೀತಿಯಲ್ಲಿದ್ದವು. "ಕಾರ್ಮಿಕರ ಪಕ್ಷ"ವೆಂದು ಭಾಷಣ ಬಿಗಿಯುತ್ತಿರುವ ದ್ರಾ. ಮು. ಕ. ದವರೂ ಹಾಗೂ ಕಾರ್ಮಿಕರದ್ದೇ ಪಕ್ಷ ತಮ್ಮದೆಂದು ಎಡೆಬಿಡದೆ ಹೇಳುತ್ತಿರುವ ಕಮ್ಯೂನಿಸ್ಟರೂ ತುಷ್ಟೀಕರಣದ ಹೊಂಡದಿಂದ ಮೇಲಕ್ಕೆ ಬಂದು ಧ್ಯೇಯ ಗಿರಿಯನ್ನೇರುವದರಲ್ಲಿ ತಪ್ಪಿ ಜಾರಿಬಿದ್ದರು.

ತುಷ್ಟೀಕರಣ ಕನ್ನಡಿಯನ್ನು ಧರಿಸಿರುವ ರಾಜಕೀಯ ಪಕ್ಷಗಳು ಅನ್ಯಪಕ್ಷಗಳನ್ನು ಕೋಮುವಾರು—ಜಾತೀಯವಾದಿ ಪಕ್ಷಗಳೆಂದು ಜರೆಯುತ್ತಿವೆ. ನಿಜವಾಗಿ ಇವರದು ಗಾಜಿನ ಮನೆಯಲ್ಲೆಂಬುದನ್ನು ಮರೆಮಾಚುತ್ತಾರೆ. ಅದರಿಂದೇನು ಪ್ರಯೋಜನ? ಸಾವಧಾನವಾಗಿಯಾದರೂ ಜನತೆ ಅದನ್ನು ಗುರುತಿಸಿಕೊಂಡ ಮೇಲೆ ತುಷ್ಟೀಕರಣ ಧೋರಣೆಯಲ್ಲಿ ಪಂದ್ಯಾಟ ನಡೆಸುತ್ತಿರುವವರನ್ನು ಸರಿದಾರಿಗೆ ತಾರದೆ ಬಿಡುವದಿಲ್ಲ. ಇದಕ್ಕೆ ಸಮಯ ಹಿಡಿಯಬಹುದು ಅಷ್ಟೇ.

ಚೀಣದ ಬಾಂಬಿನಿಂದ ನೆರೆಹೊರೆಗೆಲ್ಲ ಬೆದರಿಕೆ

ಚೀಣವು ಸಿಂಕಿಯಾಂಗ್ ಪ್ರಾಂತ್ಯದ ಮರಳುಗಾಡಿನಲ್ಲಿ ಪ್ರಥಮ ಜಲಜನಕ ಬಾಂಬ್ ಆಸ್ಫೋಟನೆ ಮಾಡಿದುದನ್ನು ಪೇಕಿಂಗ್‌ನಲ್ಲಿ ವೈಭವದ ದಿನವಾಗಿ ಆಚರಿಸಲಾಯಿತು. ನವ ಚೀಣಾ ವಾರ್ತಾ ಸಂಸ್ಥೆ ವರದಿ ಪ್ರಕಾರ ತೀಯೆನ್ಮಾನ್ ಚೌಕದಲ್ಲಿ ಬಹು ವಿಜೃಂಭಣೆಯ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಕೊನೆ ಮೊದಲಿಲ್ಲದ ಮಾವೋ ಭಾವಚಿತ್ರಗಳ ಮೆರವಣಿಗೆ, ತೋಫಗಳ ಆರ್ಭಟ, ಹಾಡು ಕುಣಿತಗಳ ಗದ್ದಲ ನಡೆಯಿತು. 'ಪೀಪಲ್ಸ್ ಡೈಲಿ' ಪತ್ರಿಕೆಯು ವಿಶೇಷ ಸಂಚಿಕೆಯೊಂದನ್ನು ಹೊರಡಿಸಿ ಥರ್ಮೋ ನ್ಯೂಕ್ಲಿಯರ್ ಪ್ರಯೋಗ 'ಎಲ್ಲ ಜನತೆಗಳಿಗೂ ಸಂತಸದ ವಾರ್ತೆ'ಯಾಗಿದೆಯೆಂದು ಸಾರಿತು.

ಆದರೆ ಇಳೆಯ ಮೇಲಿರುವ ಎಲ್ಲ ಜನರಿಗೆ, ಸದಸದ್ವಿವೇಕಿಗಳಿಗೆ ಇದೇನೂ ಸಂತಸದ ವಾರ್ತೆಯಾಗಿಲ್ಲ. ಬದಲು ದುಃಖದ ಸಂಗತಿಯು ಆಗಿದೆ.

ಬಾಂಬು ಪ್ರಯೋಗದ ಮರುದಿನದಿಂದಲೇ ಅನೇಕ ಏಶಿಯದ ದೇಶಗಳ ವಾತಾವರಣದಲ್ಲಿ ಅಣುವಿಕಿರಣ ಮಟ್ಟವು ಉಪದ್ರವಕಾರೀ ರೀತಿಯಲ್ಲಿ ಬೆಳೆಯತೊಡಗಿತು. ಜಪಾನಿನ ನಿಸ-ಯೋಕಾ ಮತ್ತು ಕನಗಾವಾ ಪ್ರಾಂತ್ಯಗಳ ವಾತಾವರಣದಲ್ಲಿ ಅಣುವಿಕಿರಣ ಧೂಳು ನೂರು ಪಾಲು ಹೆಚ್ಚಿದೆಯೆಂದು ಅಲ್ಲಿಂದ ಬಂದ ವರದಿಗಳು ತಿಳಿಸುತ್ತವೆ. ಇದೇ ವಿಷದ ಧೂಳು ಕಾಶ್ಮೀರದ (ಭಾರತ) ಗುಲ್ ಮಾರ್ಗ್ ಪ್ರದೇಶದಲ್ಲೂ ಪತ್ತೆ ಮಾಡಲ್ಪಟ್ಟಿದ್ದು ಏಶಿಯದ ಬೇರೆ ಕೆಲವು ಪ್ರದೇಶಗಳಲ್ಲಿ ಕೂಡ ಕಂಡುಬಂದಿದೆ. ನ್ಯೂಕ್ಲಿಯರ್ ಪ್ರಯೋಗವು ಲಕ್ಷಾಂತರ ಜನರ ಆರೋಗ್ಯಕ್ಕೆ ಎಂಥ ಹಾನಿ ಬಗೆಯುತ್ತದೆಯೆಂದು ಅಂದಾಜು ಮಾಡುವುದು ಕಷ್ಟ. ಅದೂ, ತನ್ನ ತೀರಾ ಕೆಳಮಟ್ಟದ ತಾಂತ್ರಿಕತೆಯಿಂದಾಗಿ ಚೀಣವು "ಕೊಳಕು" ಬಾಂಬುಗಳನ್ನು ಮಾತ್ರವೇ ತಯಾರಿಸಬಹುದೆಂಬುದನ್ನು ಗಣನೆಗೆ ತೆಗೆದುಕೊಂಡಾಗ ಇನ್ನಷ್ಟು ಕಳವಳಕ್ಕೆ ಕಾರಣವಾಗುತ್ತದೆ.

ನಾನಾ ಮಾಧ್ಯಮಗಳ ಮೂಲಕ ಪ್ರಮುಖ ನ್ಯೂಕ್ಲಿಯರ್ ಶಕ್ತಿರಾಜ್ಯಗಳು ತೀವ್ರ ರೀತಿಯಲ್ಲಿ ಅಣು ಬಾಂಬುಗಳ ಪರೀಕ್ಷೆ ನಡೆಸಿದ ಕಾಲವೊಂದಿತ್ತು. ಆದರೆ ಭೂಮಂಡಲದ ಮೇಲಿನ, ಅದೇ ರೀತಿ ಸಾಗರ ಮಹಾಸಾಗರಗಳ ಮೇಲಿನ ವಾತಾವರಣವು ವಿಷಪೂರಿತವಾಗುವ ಗಂಡಾಂತರ ಎಷ್ಟೊಂದು ತೀವ್ರ ರೀತಿಯಲ್ಲಿ ಬೆಳೆಯಿತೆಂದರೆ ಸಮಸ್ತ ಮಾನವ ಕುಲಕ್ಕೇ ಉಂಟಾಗಿರುವ ಈ ಬೆದರಿಕೆಯನ್ನು ತಡೆಗಟ್ಟುವುದೆಂತು ಎಂದು ಎಲ್ಲರೂ ಒಟ್ಟಾಗಿ ಯೋಚಿಸುವಂತಾಯಿತು. ಸೋವಿಯೆತ್ ಒಕ್ಕೂಟದ ಉಪಕ್ರಮದ ಮೇರೆಗೆ ವಾತಾವರಣದಲ್ಲಿ, ಅಂತರಿಕ್ಷದಲ್ಲಿ ಮತ್ತು ಜಲಾಂತರಾಳದಲ್ಲಿ ನ್ಯೂಕ್ಲಿಯರ್ ಪರೀಕ್ಷೆಗಳನ್ನು ನಿಷೇಧಿಸುವಂಥ ಒಪ್ಪಂದವೊಂದಕ್ಕೆ ೧೯೬೩ ಆಗಸ್ಟ್ ೫ರಂದು ಮಾಸ್ಕೋದಲ್ಲಿ ಸಹಿ ಹಾಕಲಾಯಿತು. ಅನಂತರ ೧೦೦ ರಾಜ್ಯಗಳು ಇದಕ್ಕೆ ಸಹಿ ಹಾಕಿದಾಗ ಒಪ್ಪಂದದ ಅಗಾಧ ಮಹತ್ವವು ವ್ಯಕ್ತವಾಯಿತು. ಎಲ್ಲ ಖಂಡಗಳ ಜನಕ್ಕೆ ಭಯಪಡುವುದಕ್ಕೆ ಕಾರಣವಿಲ್ಲವೆಂದು ತೋರುತ್ತಿತ್ತು. ಆದರೆ ಚೀಣಿ ನಾಯಕರು ಪ್ರತಿಯೊಬ್ಬರೂ ಅನಿಷ್ಟವೆಂದು ತಿಳಿದಿರುವ ಇದನ್ನು ಮುಂದುವರಿಸುತ್ತ ಜನರ ಆಶೆಗಳನ್ನೇ ಹಾಳು ಮಾಡಿದ್ದಾರೆ. ಅರ್ಥಾತ್ ಅವರು ಜನತೆಗಳ ಜೀವಾಳದ ಹಿತಗಳಿಗೆ ಹೊಂದಿಕೊಂಡು ಹೋಗಲು ತಯಾರಿಲ್ಲ.

ಮಾವೋ ಮತ್ತವರ ಬಳಗ ಇಷ್ಟೊಂದು ತೀವ್ರವಾಗಿ ಯಾಕೆ ಥರ್ಮೋ ನ್ಯೂಕ್ಲಿಯರ್ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ? ಪೇಕಿಂಗಿನ ಅಧಿಕೃತ ಪ್ರಚಾರವು ಈ ಪ್ರಶ್ನೆಗೆ ಹೀಗೆ ಉತ್ತರ ಕೊಡುತ್ತದೆ: "ಚೀಣದ ಮೇಲೆ ಹಲ್ಲೆ ನಡೆದರೆ ಅದನ್ನು ಉಚ್ಚಾಟಿಸುವುದಕ್ಕಾಗಿ." ಅರ್ಥಾತ್ ಈ ಹೇಳಿಕೆಗೆ ಪ್ರತಿ ಹೇಳುವುದು ಕಷ್ಟ. ಯಾಕೆಂದರೆ ರಕ್ಷಣೆ ಪ್ರತಿಯೊಂದು ರಾಷ್ಟ್ರದ ಸಾರ್ವಭೌಮ ಹಕ್ಕಾಗಿದೆ. ಆದರೆ ಏಶಿಯಾದಲ್ಲಿ ಶಾಂತಿ ಸುರಕ್ಷಿತೆಗಳ ಬಗ್ಗೆ ಗಂಭೀರವಾಗಿ ಯೋಚಿಸುವವರು ಮಾತ್ರ ತುಂಬಾ ಎಚ್ಚರಗೊಳ್ಳುವಂತೆ ಈ ವಿಶಿಷ್ಟ ಸನ್ನಿವೇಶವು ಉಂಟಾಗಿದೆ.

ವಿಸ್ತರಣವಾದೀ ಧೋರಣೆಯ ಪುನರುಜ್ಜೀವನ

ಚೀಣದ ಪಾಳೆಗಾರ ದೊರೆಗಳು ಏಶಿಯದಲ್ಲಿ ಶತಮಾನಗಳ ಕಾಲ ಅನುಸರಿಸಿಕೊಂಡು ಬಂದಿದ್ದ ಪ್ರಾದೇಶಿಕ ವಿಸ್ತರಣಾ ನೀತಿಯನ್ನು ಇಂದಿನ ಮಾವೋತ್ಸೆ-ತುಂಗರ ಗುಂಪು ಪುನರುಜ್ಜೀವನಗೊಳಿಸಿದೆಯೆಂಬುದು ಒಂದು ಬಹಿರಂಗ ರಹಸ್ಯವಾಗಿದೆ. ಇದಕ್ಕೆ ಉದಾಹರಣೆಯಾಗಿ ಕೆಲವು ಸಮಯದ ಹಿಂದೆ ಪೇಕಿಂಗ್ ನಾಯಕರು ಗಾಳಿ ಹಾಕಿ ಹೊತ್ತಿಸಿದ ಭಾರತ–ಚೀಣಾ ಗಡಿ ಘರ್ಷಣೆಯನ್ನೇ ನೋಡಬಹುದು. ಭಾರತದ ಪ್ರಧಾನಿ ಇಂದಿರಾ ಗಾಂಧಿ ಮೊನ್ನೆ ದಿನ ಸಿಂಕಿಯಾಂಗಿನಲ್ಲಿಯ ಆಸ್ಫೋಟನೆ 'ಕಳವಳ ಹುಟ್ಟಿಸಿದೆ" ಎಂದು ಹೇಳಿರುವುದಕ್ಕೆ ಕಾರಣವಿಲ್ಲದಿಲ್ಲ. ದೇಶದಲ್ಲಿ ಅವ್ಯವಸ್ಥೆಯನ್ನುಂಟು ಮಾಡಿದ ಬಳಿಕ ಮಾವೋವಾದಿಗಳು ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವುದಕ್ಕಾಗಿ ತೀವ್ರ ರೀತಿಯ ಕ್ರಮಗಳನ್ನು ಕೈಕೊಳ್ಳಬಹುದೆಂದು ಕೆಲವು ವಿದೇಶಿ ವೀಕ್ಷಕರು ಅಭಿಪ್ರಾಯ ಪಡುತ್ತಾರೆ. ಫ್ರಾನ್ಸ್ ಪ್ರೆಸ್ ಸುದ್ದಿ ಸಂಸ್ಥೆಯು ಇತ್ತೀಚಿಗೆ ಪೇಕಿಂಗ್ ರೇಡಿಯೊ "ಗಡಿ ಯುದ್ಧಗಳಿಗೆ ಜನ ಸಿದ್ಧರಾಗಬೇಕೆ"ಂದು ಕರೆಕೊಟ್ಟಿತೆಂದು ವರದಿ ಮಾಡಿತು. ಈ ಕರೆಯೇ ಬೇಕಷ್ಟು ವಿಷಯವನ್ನು ಹೇಳುತ್ತದೆ.

ಚೀಣದ ಲಷ್ಕರೀ ನಾಯಕರು ಸೇನಾಪಡೆಗಳಿಗೆ ನ್ಯೂಕ್ಲಿಯರ್ ಅಸ್ತ್ರಗಳ ಬಳಕೆ ವಿಧಾನವನ್ನು ಅತ್ಯಂತ ಪಟ್ಟು ಹಿಡಿದು ಕಲಿಸುತ್ತಿದ್ದಾರೆಂದು ಹಲವಾರು ಸತ್ಯ ಸಂಗತಿಗಳಿಂದ ವ್ಯಕ್ತವಾಗುತ್ತಿದೆ.

ಚೀಣಾದಲ್ಲಿಯ ಮೂರು ನ್ಯೂಕ್ಲಿಯರ್ ಆಸ್ಫೋಟನೆ ಬಗ್ಗೆ ಟೋಕಿಯೋದಲ್ಲಿ ಒಂದು ವರ್ಣರಂಜಿತ ಚಿತ್ರವನ್ನು ತೋರಿಸಲಾಯಿತೆಂದು ಜಪಾನೀ ಮತ್ತು ಇನ್ನೂ ಕೆಲವು ದೇಶಗಳ ಪತ್ರಿಕಾ ವರದಿಗಳಿಂದ ತಿಳಿಯುತ್ತದೆ.

ಚೀಣದ ಅಣು ಶಸ್ತ್ರಾಸ್ತ್ರಗಳ ಉಪಾಯವನ್ನು ರಕ್ಷಣೆಗೆ ಸಿದ್ಧಪಡಿಸಲಾಗಿ

(ಒಂಭತ್ತನೇ ಪುಟ ನೋಡಿರಿ)

ವಿನೋಬಾ ವಾಣಿ

ಸಮಾಜವಾದ ಭಾರತಕ್ಕೆ ಹೊಸತಲ್ಲ

ನಾವೀಗ ಬಹಳ ಜಾಗ್ರತೆ, ಎಚ್ಚರಿಕೆಯಿಂದಿರಬೇಕು; ನಮ್ಮ ಹೊಣೆಗಾರಿಕೆ, ಧರ್ಮ ಇವುಗಳನ್ನು ಸರಿಯಾಗಿ ತಿಳಿದು ಮುನ್ನಡೆಯಬೇಕು. ಸ್ವತಂತ್ರರಾಗುವ ವರೆಗೆ ನಮಗೆ ಧರ್ಮವೆಂಬುದೇ ಇರಲಿಲ್ಲ. ಸ್ವರಾಜ್ಯ ಸಿಗುವ ವರೆಗೆ ಪರಂಪರೆಯಿಂದ ಬಂದಿದ್ದ ಸಂಸ್ಕಾರ, ರೂಢಿಗಳನ್ನು ಪಾಲಿಸುತ್ತಿದ್ದೆವು ಮಾತ್ರ. ಸ್ವತಂತ್ರ ಕರ್ತಾ ಎಂದರೆ ಕರ್ತೃವು ಯಾವಾಗಲೂ ಸ್ವತಂತ್ರವಾಗಿರಬೇಕು ಎಂದು ಪಾಣಿನಿಯವರು ಹೇಳಿದ್ದಾರೆ. ಸ್ವತಂತ್ರತೆ ಇಲ್ಲದೆ ಕರ್ತಾ ಆಗುವುದೇ ಇಲ್ಲ. ಆದ ಕಾರಣ ಗುಲಾಮರಿಗೆ ಧರ್ಮ ಎಂಬುದೇ ಇರುವುದಿಲ್ಲ.

ನಮ್ಮ ದೇಶದಲ್ಲಿ ಕೋಟ್ಯಾಂತರ ಜನರಿದ್ದರೂ ನಾವು ಗುಲಾಮರಾಗಿದ್ದುದನ್ನು ಕಂಡು ವಿದೇಶೀ ಜನರು ಆಶ್ಚರ್ಯಪಡುತ್ತಿದ್ದರು. ನಾವೇನು ಮನುಷ್ಯರೇ? ಕರ್ತೃತ್ವ ಶೂನ್ಯ ಸ್ಥಿತಿಯಲ್ಲಿ ಇದ್ದ ನಾವು ಮನುಷ್ಯರೆಂದೆನಿಸಲು ಅರ್ಹರೇ? ಏಕೆಂದರೆ ಕರ್ತೃತ್ವವಿಲ್ಲದಿದ್ದಲ್ಲಿ ಧರ್ಮ ಇರುವುದು ಅಸಾಧ್ಯ ಎಂದವರು ಸಂದೇಹಪಡುತ್ತಿದ್ದರು.

ಪ್ರಾಣಿಗಳಿಗೆ ಪಾಪ ಪುಣ್ಯ ಇವುಗಳ ವಿಚಾರವೇ ಇಲ್ಲ. ಗುಲಾಮ ದೇಹಕ್ಕೂ ಹಾಗೆಯೇ. ಆದರೆ ಎಷ್ಟೊ ವರ್ಷ ಪ್ರಯತ್ನಪಟ್ಟುದರ ಪರಿಣಾಮವಾಗಿ ನಮಗೆ ಸ್ವರಾಜ್ಯವು ಸಿಕ್ಕಿತು. ಅದರೊಡನೆ ಧರ್ಮಾಚರಣೆಯ ಅಧಿಕಾರವು ನಮಗೆ ದೊರೆತಿದೆ. ನಾವು ದೇಶವನ್ನು ಕಟ್ಟಬಹುದು, ಸಮಾಜ ರಚನೆ ಮಾಡಬಹುದು. ಒಳ್ಳೇ ರಚನೆ ಮಾಡಿದರೆ ಸುಖವನ್ನು, ಮತ್ತು ಕೆಟ್ಟದನ್ನು ಮಾಡಿದರೆ ದುಃಖವಾದೀತು. ಎರಡಕ್ಕೂ ಕಾರಣ ನಾವೇ ಎಂಬುದನ್ನು ನಾವು ತಿಳಿಯದಿದ್ದರೆ ನಮಗೆ ಗತ್ಯಂತರವಿಲ್ಲ.

ಕಳೆದ ಎರಡು ಸಾವಿರ ವರ್ಷಗಳಲ್ಲಿ ಸಿಗದೆ ಇದ್ದ ಸಂಧಿಯು ನಮಗೀಗ ಸಿಕ್ಕಿದೆ. ಆತ್ಮ ಜ್ಞಾನದ ಪ್ರಾಚೀನ ಶಕ್ತಿ, ವಿಜ್ಞಾನದ ಅರ್ವಾಚೀನ ಶಕ್ತಿ, ಇವೆರಡನ್ನು ಹೊಂದಿಸಿಕೊಂಡು ಮುಂದುವರಿದರೆ ಈ ದೇಶಕ್ಕೆ ಎಲ್ಲ ತರದ ಕ್ಷೇಮವಾಗುತ್ತದೆ.

ಭಾರತದ ಜ್ಞಾನಿಗಳು ಮಾನವತೆಗಿಂತಲೂ ಹೆಚ್ಚು ವ್ಯಾಪಕವಾಗಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದಲೇ ನಮ್ಮ ಸಮಾಜದಲ್ಲಿ ಗೋಮಾತೆಗೂ ಸ್ಥಾನಕೊಡಲಾಗಿದೆ. ಇದು ಭಾರತ ದೇಶದ ಒಂದು ವಿಶಿಷ್ಟತರದ ಸಮಾಜವಾದ. ಇಂದಿನ ಸಮಾಜವಾದವು ಪಶ್ಚಿಮದಲ್ಲಿ ಹುಟ್ಟಿದ್ದು, ಮಾನವರೆಲ್ಲರಿಗೂ ಸಮಾನ ಅಧಿಕಾರವಿದೆಯೆಂದು ಅದು ಸಾರುತ್ತದೆ. ಆದರೆ ಭಾರತದ ಸಮಾಜವಾದವು ಸಕಲ ಪ್ರಾಣಿಗಳಿಗೂ ಸಂರಕ್ಷಣೆ ನೀಡುತ್ತದೆಂಬುದು ಪಾಶ್ಚಾತ್ಯ ಸಮಾಜವಾದಕ್ಕಿಂತಲೂ ವಿಶಾಲವಾದ ಸಮಾಜವಾದವಾಗಿದೆ. ಅಂಥ ಯೋಗ್ಯತೆಯನ್ನೀಗ ನಾವು ಪಡೆದಿಲ್ಲವೆಂಬ ಮಾತು ಬೇರೆ. ಪಾಶ್ಚಾತ್ಯರಲ್ಲಿ 'ಹ್ಯುಮಾನಿಟಿ'—ಮಾನವತೆ ಎಂಬುದೇ ದೊಡ್ಡ ಶಬ್ದ; ಆದರೆ ನಮ್ಮಲ್ಲಿ 'ಭೂತದಯೆ' ಎಂಬುದೇ ದೊಡ್ಡ ಶಬ್ದ ಸರ್ವಶ್ರೇಷ್ಠವಾದ್ದು.

ಪಂಚಮುಖಿ ಪರಮೇಶ್ವರ ಅರ್ಥಾತ್ ಸರ್ವ ಸಮ್ಮತಿಯನ್ನು ನಾವು ಒಪ್ಪುತ್ತೇವೆ. ಬಹುಮತವಾದವನ್ನಲ್ಲ. ಈ ಮಾತು ಕಲ್ಯಾಣ ರಾಜ್ಯಕ್ಕೂ ಅನ್ವಯಿಸುತ್ತದೆ. ಪರಮಾವಧಿ ಅಧಿಕಾರವು ಕೆಲವೇ ಜನರ ಕೈಯಲ್ಲಿದ್ದು ಜನ ಜೀವನದ ಪ್ರತಿಯೊಂದು ಅಂಗವೂ ದಿಲ್ಲಿಯಿಂದ ನಿರ್ಣಯಿಸಲ್ಪಟ್ಟು ಸರಕಾರದ ವಶದಲ್ಲಿರಬೇಕು, ಎಂಬುದನ್ನೇ ಇಂದು ಕಲ್ಯಾಣರಾಜ್ಯವೆನ್ನುತ್ತೇವೆ. ಇಷ್ಟೆಲ್ಲ ಅಧಿಕಾರವನ್ನು ಸರಕಾರಕ್ಕೆ ಕೊಡುವುದರಿಂದ ಜನತೆಯೆಲ್ಲ ಪರಾಧೀನವಾಗುತ್ತದೆ, ಅನಾಥವಾಗುತ್ತದೆ. ಆದರೆ ಸರಕಾರದ ಅಧಿಕಾರವು ಆದಷ್ಟು ಕಡಿಮೆಯಾದರೇನೇ ನಿಜವಾದ ಜನ ಕಲ್ಯಾಣವಾದೀತು, ಪ್ರಜಾತಂತ್ರವು ಉಳಿದೀತು.

ಪರಮಾತ್ಮನ ಸತ್ತೆಯಲ್ಲಿ ಪ್ರತಿಯೊಬ್ಬನಿಗೂ ಅವಶ್ಯವಿದ್ದಷ್ಟು ಬುದ್ಧಿಯನ್ನು ಭಗವಂತನು ಹಂಚಿ ಕೊಟ್ಟಿದ್ದಾನೆ. ಆದುದರಿಂದಲೇ ಆತನು ನಿಶ್ಚಿಂತನಾಗಿ ಕ್ಷೀರ ಸಾಗರದಲ್ಲಿ ಶಾಂತನಾಗಿ ಮಲಗಿದ್ದಾನೆಂದು ಚಿತ್ರಿಸಿರುತ್ತಾರೆ. ಅವನು ಪರಮಾವಧಿ ತಟಸ್ಥತೆಯನ್ನು ಅನುಭವಿಸುತ್ತಲಿದ್ದು ದೇವರು ಇದ್ದಾನೆಯೇ ಇಲ್ಲವೋ ಎಂಬಂತೆ ಸಂಶಯವಾಗುತ್ತದೆ!

ಸರಕಾರವೂ ಅದರಂತೆಯೇ ಆಗಬೇಕು. ಸಾರ್ವತ್ರಿಕ ವಿಭಜನೆಯಾಗುವುದೇ ಸರ್ವೋತ್ತಮ ಸತ್ತೆಯ ಲಕ್ಷಣ. ಒಟ್ಟಾರೆ ಸರಕಾರದ ಅಧಿಕಾರವೂ ಪರಮಾತ್ಮನ ಸತ್ತೆಯನ್ನನುಸರಿಸಬೇಕು. ಸರಕಾರದ ಮೇಲೆ ತನ್ನ ವರ್ಚಸ್ಸು ಇರಬೇಕೆಂದು ಪ್ರತಿಯೊಬ್ಬನೂ ಬಯಸುತ್ತಿದ್ದಾನೆ.

ಔರಂಗಜೇಬನ ಕಾಲದಲ್ಲಿ ಲೋಕಮತಕ್ಕೆ ಬೆಲೆಯೇ ಇದ್ದಿಲ್ಲ. ಆದರೆ ಇಂದು ಮತಗಣನೆಯ ನಾಟಕ ಮಾತ್ರ ನಡೆಯುತ್ತದೆ. ನಾವು ಜಾಗ್ರತೆಯಿಂದಿರದಿದ್ದರೆ, ಐದೈದು ವರ್ಷಗಳ ಮಟ್ಟಿಗೆ ನಾವು ನಾವು ಆರಿಸಿಕೊಟ್ಟವರು, ನೌಕರರಾಗಿರುತ್ತೇವೆಂಬ ನೆವನದಲ್ಲಿ ನಮ್ಮ ಮೇಲೆ ಸಂಪೂರ್ಣ ಮಾಲಿಕರಾಗಿರುವರು.

ಸ್ವರಾಜ್ಯ ಪ್ರಾಪ್ತಿಯ ಮೊದಲು ನಮ್ಮ ಹಿತ ಸಾಧನೆಗಾಗಿ ನಾವು ತುಂಬಾ ಶ್ರಮಿಸುತ್ತಿದ್ದೆವು. ಇಂದಾದರೂ ಪ್ರತಿಯೊಂದಕ್ಕೂ ಸರಕಾರದ ಮೋರೆ ನೋಡುತ್ತಿದ್ದೇವೆ. ಪ್ರಜೆಗಳು ಕೈ ಕಟ್ಟಿ ಕೂತು, ಸರಕಾರದ ಕೈಗೆ ಎಲ್ಲ ಒಪ್ಪಿಸುವುದು ಸ್ವರಾಜ್ಯದ ಲಕ್ಷಣವಲ್ಲ. ಗುಲಾಮರಿಂದು ನಾವು ನಿಜವಾಗಿ ಸ್ವತಂತ್ರರೆಂದೆನಿಸಬೇಕಾದರೆ ಸ್ವತಂತ್ರ ಪ್ರಜೆಗಳು ತಮ್ಮ ಧರ್ಮ ಏನೆಂಬುದನ್ನೂ ಸರಿಯಾಗಿ ತಿಳಿದುಕೊಳ್ಳಬೇಕು, ದೇಶದ ಪ್ರತಿಯೊಂದು ಸಮಸ್ಯೆಯನ್ನೂ ಕೈಗೆ ಎತ್ತಿ ಜನ ಶಕ್ತಿಯ ಬಲದಿಂದ ಅದನ್ನೂ ಬಿಡಿಸಲಿಕ್ಕೆ ಸಿದ್ಧರಾಗಬೇಕು. ಇಲ್ಲವಾದರೆ, ನಮ್ಮ ಯಾವತ್ತು ಶಕ್ತಿಯು ಸರಕಾರದ ಕೈ ಸೇರಿ, ಜಗತ್ತಿನಲ್ಲೆ ಶಾಂತಿಯನ್ನಿರಿಸುವುದು ಕಠಿಣವಾದೀತು.

('ಭೂದಾನ'ದಿಂದ ಆಧಾರದಿಂದ ಬರೆದದ್ದು

—ಎಸ್. ಯು. ಆರ್.)

ಹೂವಿನ ಕಥೆ

ಮೊಗ್ಗೆಗೆ ಏನೂ ತಿಳಿಯಲಿಲ್ಲ!

ಕಳಿಸಿದವರು;

ಶ್ರೀ ಬಪ್ಪನಾಡು ಭಗವಾನ್‌ದಾಸ್.

ಜೀವನ ಮರಣಗಳು ಅಭಿನ್ನ ಮಿತ್ರರು ಜೀವಿತವನ್ನು ಮರಣವು ನೆರಳಿನಂತೆ ಬೇಟೆಯಾಡುತ್ತ ಬೆನ್ನ ಹಿಂದೆಯೇ ಇರುತ್ತದೆ. ನಾವು ಅದನ್ನು ಮರೆತರೂ ಅದು ನಮ್ಮನ್ನು ಮರೆಯದು. ಮೃತ್ಯು ದೇವತೆ ಬಾಹುವಿನಲ್ಲಿ ಸಿಕ್ಕಿಕೊಂಡ ಮಾನವನ ಕರ್ತವ್ಯವು ಏನು? ಜೀವಿತ ಸಾರ್ಥಕ್ಯ—ಪರಮಾರ್ಥವೇನು? ಇದೇ ಮಾನವನ ಜೀವಿತ ಚರಿತ್ರೆಯಲ್ಲಿ ಅಂತಿಮ ಪ್ರಶ್ನೆ. ಮೊತ್ತ ಮೊದಲಿನ ಪ್ರಶ್ನೆ ಕೂಡಾ ಇದೇ. ತಮ್ಮ ಜೀವಿತದಲ್ಲಿ ನಗುತ್ತಾ ಸಹಜೀವಿಗಳನ್ನು ನಗಿಸುತ್ತಾ ಜೀವಿತದಲ್ಲಿನ ಅಂಧಕಾರವನ್ನು ನೀಗಿಸಿ ಬೆಳಕನ್ನು ಕಾಣುವದೇ! ಯಾವ ಆನಂದ ವಾಹಿನಿಯಲ್ಲಿ ಸೃಷ್ಟಿ ರೂಪಾಕೃತಿಗಳು ಧರಿಸಿರುವವೋ ಅದರಲ್ಲೇ ಎಲ್ಲಾ ಮುಳುಗುವದೇ! ಸಮಗ್ರ ಜೀವನವು ಕಾಲ ಪ್ರಮಾಣದ ಮೇಲೆ ಆಧರಿಸಿಲ್ಲ. ಪೂರ್ಣ ವಿಕಾಸವು ಆತ್ಮ ಸಮರ್ಪಣೆಯಲ್ಲಿ, ದೈವಾಂಕಿತ ಜೀವಿತದಲ್ಲಿಯೇ ಸಾಧ್ಯ.

ತರುಣ ಅರುಣನ ಕೆಂಪು ಕಿರಣಗಳು ಸುಕುಮಾರ ಹೂವಿನ ಮುಗ್ಗೆಗಳನ್ನರಳಿಸುವಂಥ ಸುಂದರ ಸುಪ್ರಭಾತ. ದಕ್ಷಿಣ ಪವನಗಳು ಹೂವಿನ ಸೌರಭವನ್ನು ಯಾವ ಆತ್ಮೀಯನಿಗೋ ಕೊಡಲೋಸುಗ ಹೊತ್ತು ಕೊಂಡು ಹೋಗುತ್ತವೆ.

ಹೂಬುಟ್ಟಿಯನ್ನು ಹಿಡಿದುಕೊಂಡು ಹೂದೋಟದಲ್ಲಿ ತೋಟಗಾರನು ಅಡಿಯನ್ನಿಟ್ಟು ಪೂರ್ತಿಯಾಗಿ ವಿಕಸಿಸಿರುವ ಹೂವುಗಳಿಗೆ ಅವನು ಮಹೋಪಕಾರಿಯಾಗಿ ಕಂಡುಬಂದನು; ಅರಳಿದ ಸುಮಗಳಿಗೆ ಯಮಕಿಂಕರನಂತೆ ಕಂಡುಬಂದನು.

ಹೂವಿನ ವನದಲ್ಲಿ ಆನಂದ ವಿಷಾದಗಳು ರಾತ್ರಿ ಹಗಲಿನ ತೆ ಕತ್ತಲೆ ಬೆಳಕಿನಂತೆ ಆವರಿಸಿಕೊಂಡಿತು. ಒಂದು ಮೊಗ್ಗೆ ಅರಳಿದ ವನಪುಷ್ಪದೊಡನೆ ಕಂಪಿತ ಸ್ವರದಿಂದ ಹೀಗಂದಿತು: "ಅಕ್ಕಾ ನೋಡು ಆ ವನಮಾಲಿ ಕಾಲಕಿಂಕರನಂತೆ ಹೇಗೆ ಬರುತ್ತಿದ್ದಾನೆ ನೋಡು. ಬರೀ ನಿರ್ದಯನು, ಕಟುಕನಂಥವನು, ಬೇಗಾದೊಡನೆ ನಮ್ಮ ಕತ್ತಿಗೆ ಹಿಸುಕುವದರಿಂದಲೇ ಈತನ ಜೀವನ ಪ್ರಾರಂಭ" ಅರಳಿದ ಹೂವು ಮುಗುಳುನಗುತ್ತಾ, 'ವಿಶ್ವನಾಥನು ನಿಮಗೆ ಪೂರ್ಣ ಜೀವಿತವನ್ನು ಪ್ರಸಾದಿಸಿರುವನು. ನಗುತ್ತಾ ಪರಿಮಳಾದಿ ಮಧುರ ಗಂಧವನ್ನು ಹೊರಚಿಮ್ಮುತ್ತಾ ಅನಂತ ಮೌನ ಮುಗ್ಧ ಸಂಗೀತದೊಡನೆ ವಿಶ್ವಾಸಿಗಳನ್ನು ಪರವಶದಲ್ಲಿ ಮುಳುಗಿಸುತ್ತಾ ಜೀವಿಸುತ್ತೇವೆ. ಆಕೃತಿ ಧರಿಸಿದ ಆನಂದವೇ ನಮ್ಮ ಅಸ್ತಿತ್ವ. ಆನಂದವನ್ನು ಪ್ರತಿ ಹೃದಯದಲ್ಲಿಯೂ ಮೊಳಗಿಸುವುದೇ ನಮ್ಮ ಜೀವನದ ಧ್ಯೇಯ. ಆದರೆ ನಮ್ಮ ಅಂತಿಮ ಲಕ್ಷ್ಯ ಚರಮಾಕಾಂಕ್ಷೆ ಮಾತ್ರ ಅದೇ ಅಲ್ಲ; ನಮ್ಮ ಅಂತಿಮ ಸಾಧನೆಯೆಲ್ಲಾ ನಮ್ಮ ಜೀವಿತದಲ್ಲಿ ಅಂತಿಮ ಗಮ್ಯವಾದ ಆ ಅದ್ಭುತ ಪಾದ ಪ್ರಾಪ್ತಿಗಾಗಿಯೇ ಆಗಿರುವದು. ನನ್ನಲ್ಲಿ ಹೃದಯ ವಿಕಾಸ ಪ್ರಾರಂಭಿಸಿದಂದಿನಿಂದ—ಆ ಕ್ಷಣದಿಂದ—ಆ ವಿಶ್ವನಾಥನ ಚರಣ ಕಂಜದಗಳಲ್ಲಿ ನನ್ನನ್ನು ಸಮರ್ಪಿಸಿಕೊಳ್ಳಬೇಕೆಂಬ ಇಚ್ಛೆಯಿದೆ. ನನ್ನ ಆತ್ಮೇಶ್ವರನ ಸನ್ನಿಧಿಗೆ ಸೇರಿಸುವಂಥ ದಯಾಶಾಲಿ—ಪರಮ ಗುರುವು ಈತನೇ. ಇಷ್ಟು ದಿನವೂ ಈತನ ಆಗಮನಕ್ಕಾಗಿಯೇ ಎದುರು ನೋಡುತ್ತಿದ್ದೆ. ಇದೀಗ ನನ್ನ ಚಿರವಾಂಛೆ ಫಲೋನ್ಮುಖವಾಗುವಂಥಹ ಶುಭ ತರುಣವು ಬಂದಿರುತ್ತದೆ. ನನ್ನ ಜನ್ಮ ಈ ದಿನ ಸಫಲವಾಗುತ್ತದೆ. ಈ ದಿನ ನಿನಗೆ ಬದ್ಧ ಶತ್ರುವಾಗಿ ಕಾಣುವಂಥ ಈ ತೋಟ ಮಾಲಿ ನಾಳೆ ಆತ್ಮೇಶ್ವರನ ಪಾದಸನ್ನಿಧಿಗೆ ಸೇರಿಸುವಂಥ ಸಂದೇಶವಾಹಿಯಾಗಿ ಕಾಣಿಸುತ್ತಾನೆ.

ಮೊಗ್ಗೆಗೆ ಅರ್ಥವಾಗದ ರೆಪ್ಪೆಯಾಡಿಸದೆ ಪುಷ್ಪವನ್ನು ನೋಡುತ್ತಾ ನಿಂತಿತು.

(ತೆಲುಗಿನಿಂದ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಸುತ್ತಲೂ ಲತ್ತೆ ಕೊಡುವ ಕತ್ತೆ

(ನಾಲ್ಕನೇ ಪುಟದಿಂದ)

ಯಾರೂ ಹೇಳಲಾರರು. ಇಲ್ಲವಾದರೆ, ಅಸಾಧಾರಣ ವಿವಾದವೆಬ್ಬಿಸುತ್ತ ವ್ಯರ್ಥ ಗುಲ್ಲು ಯಾಕೆ ಎಬ್ಬಿಸಬೇಕು?"

"ಇಲ್ಲಿ.... ಅದೊಂದು ಕತ್ತೆಯು ಹಾಗೆ..."

'ಹ್ಞಾಂ, ಸುತ್ತಲೂ ಲತ್ತೆ ಕೊಡುವ ಕತ್ತೆ ಅನ್ನಿ__"

'ಮತ್ತೆಂಥದು? ಇಂತಹ ಕೆಂಪು ಚೀನಾವನ್ನು ಬೆಂಬಲಿಸುವ ಗಾರ್ದಭ ಭಕ್ತರು ನಮ್ಮ ದೇಶದಲ್ಲಿ ಇದ್ದಾರಲ್ಲಾ ಎಂದು ನನಗೆ ಭಾರಿ ದುಃಖವಾಗುತ್ತದೆ.'

'ಅಲ್ವೆ, ಅದಕ್ಕೆಲ್ಲಾ ದುಃಖ ಯಾಕೆ?'

'ಮತ್ತೇನು ಸುಖ ಪಡಬೇಕೆ?'

'ಹಾದು....'

'ಯಾಕೆ ಹಾಗಂತೀರಿ?'

'ದುಃಖ ಯಾಕೆ ಪಡಬೇಕು?"

'ನಮ್ಮ ಈ ಕೆಲ ಜನಂಗೆ ಇನ್ನೂ ಬುದ್ಧಿ ಬರಲಿಲ್ಲವಲ್ಲಾಂತ..."

"ನಾನು ಹೇಳುವುದಾದರೆ, ಅದಕ್ಕಾಗಿ ದುಃಖಿಸಬಾರದು.'

"ಮತ್ತೆ?"

"ದುಃಖಿಸಲೇ ಬೇಕಾದ್ರೆ ಈ ಅಲ್ಪಸಂಖ್ಯಾಕ ದೇಶದ್ರೋಹಿಗಳನ್ನು ಅಂಕೆಯಲ್ಲಿ ಇರಲು ಉಳಿದವರಿಗೆ ಆಗಲಿಲ್ಲವಲ್ಲಾ ಎಂಬುದಕ್ಕೆ ದುಃಖಿಸಬೇಕು...'

"ಹ್ಞಾಂ... ಇನ್ನು ಸುಖಪಡಬೇಕು ಯಾಕೆ?"

'ಅಯ್ಯೋ, ಅಷ್ಟೂ ತಿಳಿಯೋದಿಲ್ವೆ?"

'ಹೇಳೀಂದ್ರೆ..."

"ಇನ್ನೂ ಅಧಿಕ ಸಂಖ್ಯಾಕರು ಅವರ ದಾರಿ ತುಳಿಯಲಿಲ್ಲವೆಂಬುದಕ್ಕೆ....'

'ನಿಮ್ಮದೆಲ್ಲಾ ಹೀಗೇ.... ಸಮಾಧಾನಕ್ಕೊಂದು ಸ್ಫೂರ್ತಿ....'

"ಇಂದು ದೇಶಾಗಿರೋದೂ ಅದೇ.... ಭವಿಷ್ಯ ಅಸ್ಥಿರವಾಗಿರುವಾಗ...."

'ಛಿ... ಏನದು...."

"ಏನೂ ಇಲ್ಲ...ಭವಿಷ್ಯದ ಬಗ್ಗೆ ಯೋಚಿಸುವಾಗ....'

'ಅಯ್ಯೋ..."

—ಗೋರಾ.

ನೆರೆಹೊರೆಗೆಲ್ಲ ಬೆದರಿಕೆ

(ಏಳನೇ ಪುಟದಿಂದ)

ಲ್ಲ. ಚೀಣದ ಸೇನೆ ತಮ್ಮ ದೇಶದಲ್ಲೇ ನ್ಯೂಕ್ಲಿಯರ್ ಬಾಂಬಿನ ಉಂ ಹೆಚ್ಚುವುದಿಲ್ಲವೆಂದು ಈ ಚಿತ್ರವು ಸೂಚಿಸುತ್ತದೆ.

ಪಶ್ಚಿಮದ ಕೆಲವು ಸೈನಿಕ ತಜ್ಞರ ಅಭಿಪ್ರಾಯದ ಪ್ರಕಾರ ಇನ್ನೂ ೮—೧೦ ವರ್ಷಗಳ ಕಾಲ ಚೀಣದ ನ್ಯೂಕ್ಲಿಯರ್ "ಯುದ್ಧಶಿರ"ಗಳು "ಪ್ರತಿ ಪ್ರಹಾರ" ಹಾಕಲು ಶಕ್ತವಾಗುವುದಿಲ್ಲ. ನಾಗರೋತ್ತರ ಗುರಿಗಳನ್ನು ತಲಪುವುದಿಲ್ಲ. ಪೇಕಿಂಗಗೂ ಇದು ಗೊತ್ತಿನ್ನುವುದರಲ್ಲಿ ಅನುಮಾನವಿಲ್ಲ. ಹಾಗಿದ್ದರೂ, ಅದು ಬಹು ಅವಸರದಿಂದ ತನ್ನ ನ್ಯೂಕ್ಲಿಯರ್ ಅಸ್ತ್ರಗಳ ರಾಶಿ ಹಾಕುತ್ತಿದೆ ಯಾಕೆ? ಇದೇನು ಉತ್ಪ್ರೇಕ್ಷಿತ ಪ್ರಶ್ನೆ ಅಲ್ಲ. ಏಶಿಯದ ಅನೇಕ ದೇಶಗಳಿಗೆ ಇದು ಜೀವಾಳದ ಮಹತ್ವದ ಪ್ರಶ್ನೆಯಾಗಿದೆ. ಚೀಣೀಯರ ಉದ್ದೇಶವೇನು?

ಶೆಟ್ಟೀಸ್ ಆಪ್ಟಿಕ್ಸ್ ಎಂಡ್ ಕಾಂಟೆಕ್ಟ್ ಲೆನ್ಸ್ ಕ್ಲಿನಿಕ್ ಮುಂಬೈಯಲ್ಲಿ ನೂತನ ನೇತ್ರ ಚಿಕಿತ್ಸಾ ಕೇಂದ್ರ

ಇಂಗ್ಲೆಂಡ್ ತರಬೇತಾದ ಮತ್ತು ಜಗತ್ತಿನಾದ್ಯಂತ ಪಯಣಿಸಿ ಪರಿಣತಿ ಪಡೆದ ನೇತ್ರತಜ್ಞ ಡಾ|| ಎನ್. ಬಿ. ಶೆಟ್ಟಿಯವರ ಹೊಸ ಚಿಕಿತ್ಸಾ ಕೇಂದ್ರ ಇತ್ತೀಚೆಗೆ ಮುಂಬಯಿಯ ಪೋರ್ಟ್‌ನಲ್ಲಿ ತೆರೆಯಲ್ಪಟ್ಟಿದೆ. ನೇತ್ರ ಪರೀಕ್ಷೆಯನ್ನು ಇಲ್ಲಿ ಅತ್ಯಾಧುನಿಕ ಉಪಕರಣಗಳಿಂದ ಮಾಡುವುದಲ್ಲದೆ, ಮೆಳ್ಳಗಣ್ಣು, ದೃಷ್ಟಿ ದೋಷಗಳು ಇವುಗಳ ನಿವಾರಣೆಗೂ ಸೂಕ್ತ ಸಲಹೆ ಕೊಡಲಾಗುವುದು. ಇವರು ದೃಷ್ಟಿ ದೋಷಗಳನ್ನು ಸರಿಪಡಿಸುವುದರಲ್ಲಿ ಅತ್ಯಾಧುನಿಕ ಶೋಧ— ಒಳಗಣ್ಣು ಕನ್ನಡಕವೆನಿಸಿದ (Contact Lens) ತಜ್ಞರೂ ಆಗಿರುತ್ತಾರೆ. ಇಂಥ ಪರಿಪೂರ್ಣ ದೃಷ್ಟಿಯ ಚಿಕಿತ್ಸಾ ಕೇಂದ್ರಗಳು ಭಾರತದಲ್ಲಿಯೇ ವಿರಳ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯವರೊಬ್ಬರಿಂದ ಸ್ಥಾಪಿಸಲ್ಪಟ್ಟದ್ದು ಇದೇ ಮೊದಲನೆಯದು. ತರುಣರಾದ ಡಾ|| ಶೆಟ್ಟರು ಮುಂಬಯಿ ಉಪನಗರ ಚೆಂಬೂರಿನಲ್ಲಿ ಸಮಾಜ ಸೇವಾರ್ಥ ನಡೆಯುತ್ತಿರುವ "ಲಾಯನ್ಸ್ ಕ್ಲಿನಿಕ್"ನಲ್ಲೂ ನೇತ್ರ ವಿಭಾಗದ ಗೌರವ ಚಿಕಿತ್ಸಕರಾಗಿರುವರು.

ಯಕ್ಷಗಾನ "ಸುಗ್ರೀವ ಸಖ್ಯ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ ೪ರಂದು 'ಸುಗ್ರೀವ ಸಖ್ಯ' ಎಂಬ ಕಥಾಭಾಗದ ಯಕ್ಷಗಾನ ತಾಳ ಮದ್ದಳೆಯು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಪುದಿಯೂರು ನಾರಾಯಣ ರೈಗಳ ವತಿಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೆ. ಪಿ. ಕೇಶವ, ಗೋಪಾಲಕೃಷ್ಣ ಭಟ್, ಬಿ. ಪಿ. ವಿನೋದ, ನಾರಾಯಣ ನಾಯಕ ಮಾಸ್ಟರ್, ತಿಮ್ಮಪ್ಪ ಗೌಡ, ಸಾಂತಪ್ಪ ಮಾಸ್ಟರ್, ಬಿ. ಶ್ರೀಧರ, ಯಂ. ಎನ್. ರೈ. ಸಾಂತಪ್ಪ ರೈ ಮೊದಲಾದವರು ಭಾಗವಹಿಸಿದ್ದರು.

ಭಾರತದ ದಂತ ಸಂಘದ ಶಾಖೆ

ಮಣಿಪಾಲ, ಜು. ೮—ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ದಂತ ಶಿಕ್ಷಣದ ಡೈರೆಕ್ಟರ್ ಡಾ|| ಸುಂದರ್ ಜೆ. ವಝಿರಾನಿಯವರ ಅಧ್ಯಕ್ಷತೆಯಲ್ಲಿ ಭಾರತದ ದಂತ ಸಂಘದ ೩೬ನೇ ಶಾಖೆಯನ್ನು ಇತ್ತ ದಕ್ಷಿಣ ಕನ್ನಡದ ಜನರಲ್ಲಿ ದಂತ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿಯೂ, ದಂತ ಶಿಕ್ಷಣದ ಮಟ್ಟವನ್ನು ಹೆಚ್ಚಿಸಿದಂತ ವೈದ್ಯರುಗಳು ರೋಗಿಗಳಿಗೆ ನೂತನ ಪ್ರಗತಿಯ ಪ್ರಕಾರ ಉತ್ತಮ ಸೇವೆ ಸಲ್ಲಿಸುವುದಕ್ಕಾಗುವಂತೆ ವೈದ್ಯಕೀಯ ಹಾಗೂ ದಂತ ವಿಜ್ಞಾನಗಳಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಚರ್ಚಿಸುವ ಅವಕಾಶ ಒದಗಿಸುವುದಕ್ಕಾಗಿಯೂ ಆರಂಭಿಸಲಾಗಿದೆ.

೫೦ ಸದಸ್ಯರಿರುವ ಈ ಶಾಖೆಗೆ ಡಾ|| ಜಿ. ಎಲ್. ಸಾಲ್ದಾನಾರವರು ಉಪಾಧ್ಯಕ್ಷರಾಗಿಯೂ, ಡಾ|| ಕೆ. ಎಸ್. ಭಟ್‌ರವರು ಗೌರವ ಕಾರ್ಯದರ್ಶಿಯವರಾಗಿಯೂ, ಡಾ|| ವಿ. ಕೆ. ಖನ್ನಾರವರು ಜಂಟಿ ಕಾರ್ಯದರ್ಶಿಯಾಗಿಯೂ, ಡಾ|| ಎಸ್. ಆರ್. ಪ್ರಭುರವರು ಖಂಜಾಂಚಿಯಾಗಿಯೂ, ಶ್ರೀ ಕೃಷ್ಣ ರಾಜು ಮತ್ತು ಶ್ರೀ ಜಿ. ಸಿ. ಡಿ. ಸಿಲ್ವಾರವರು ವಿದ್ಯಾರ್ಥಿ ಪ್ರತಿನಿಧಿಗಳಾಗಿಯೂ ಆಯ್ಕೆಯಾಗಿದ್ದಾರೆ.

ಬೆತ್ತಕ್ಕಿಂತ ಪ್ರೀತಿ ಉತ್ತಮ ಮಾಧ್ಯಮ

ಮಣಿಪಾಲ, ಜೂ. ೧೦—ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದರಲ್ಲಿ ಬೆತ್ತಕ್ಕಿಂತ ಅಧ್ಯಾಪಕರ ಪ್ರೀತಿ ಉತ್ತಮ ಮಾಧ್ಯಮವಾಗಬಲ್ಲುದೆಂದು ಇಲ್ಲಿ ಇಂದು ಸ್ಥಳೀಯ ಇಂಗ್ಲಿಷ್ ಪ್ರಾಥಮಿಕ ಶಾಲೆಯ ಹೆತ್ತವರ ಹಾಗೂ ಅಧ್ಯಾಪಕರ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ನುಡಿದರು.

ಸಂಗೀತ ಹಾಗೂ ನಟನೆಯ ಮೂಲಕ ಅಧ್ಯಾಪಕರು ಪಾಠ ಹೇಳಿದರೆ ಮಕ್ಕಳ ಮನಸ್ಸಿನಲ್ಲಿ ಚೆನ್ನಾಗಿ ನಾಟುತ್ತದೆಂದೂ ಅವರು ಒತ್ತಿ ಹೇಳಿದರು. ಮಕ್ಕಳ ಕೈ ಬರಹ ಕೆಡುತ್ತಿರುವುದನ್ನು ಅವರು ಪ್ರಸ್ತಾಪಿಸಿ, ಸ್ಲೇಟು ಅಥವಾ ಕಾಗದದ ಮೇಲೆ ಬರೆಯುವುದಕ್ಕೆ ಆರಂಭಿಸುವ ಮುನ್ನ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸಬೇಕೆಂದು ಸೂಚಿಸಿದರು.

ಸಂಘದ ಅಧ್ಯಕ್ಷ ಡಾ| ಎಚ್. ಶಾಂತಾರಾಂರವರು ಸದಸ್ಯರನ್ನು ಸ್ವಾಗತಿಸಿದರು. ಮುಖ್ಯೋಪಾಧ್ಯಾಯಿನಿ ಹಾಗೂ ಕಾರ್ಯದರ್ಶಿಯವರಾದ ಕುಮಾರಿ ಚಂದ್ರಾ ಯಿನಿ ನಾಯಕ್‌ರವರು ವಂದನೆಗಳನ್ನು ಅರ್ಪಿಸಿದರು.

ಉಚಿತ ಚುಚ್ಚು ಮದ್ದು

ಉಡುಪಿಯ ರೋಟರಿ ಕ್ಲಬ್ ಮತ್ತು ಇಂಡಿಯನ್ ಮೆಡಿಕಲ್ ಅಸೋಶಿಯೇಶನಿನ ಉಡುಪಿ ಶಾಖೆಯ ಜಂಟಿ ಆಶ್ರಯದಲ್ಲಿ ಟಿ. ಎ. ಬಿ. ಚುಚ್ಚು ಮದ್ದನ್ನು ಉಚಿತವಾಗಿ ಹಾಕುವುದನ್ನು ಉಡುಪಿಯಲ್ಲಿ ತಾ. ೧೦ರ ಆರಂಭಿಸಲಾಗಿದೆ ಎಂದು ತಿಳಿದು ಬರುತ್ತದೆ.

ತೊಲಗು ಚಿಂತೆ ದೂರಕೆ

ಎನ್ನನೇಕೆ ಕಾಡುತಿರುವೆ
ಬನ್ನ ಬರಿದೆ ಪಡುತಲಿರುವೆ
ನಿನ್ನ ಗರ್ವವೆಲ್ಲ ಬಲ್ಲೆ
ಎನ್ನ ನೀನು ಒಲಿಸಲೊಲ್ಲೆ
ತೊಲಗು ಚಿಂತೆ ದೂರಕೆ
ಬೇಡ ಸಾಕು ಹಂಚಿಕೆ||

ಕಾಲವೆಷ್ಟೊ ಕಳೆದುದಾಯ್ತು
ಸೋಲನೆಷ್ಟೊ ಕಂಡುದಾಯ್ತು
ಬಾಳಿನಲ್ಲಿ ಧೈರ್ಯ ಬಂತು
ಖೂಳ ನಿನಗೆ ಕಾಲ ಬಂತು
ತೊಲಗು ಚಿಂತೆ ದೂರಕೆ
ಬೇಡ ಸಾಕು ಹಂಚಿಕೆ||

ಬಗ್ಗದವರ ಬೆನ್ನನೇರ್ವೆ
ಬಗ್ಗದಿರಲು ಬೆದರುತಿರ್ವೆ
ಬಗ್ಗಿ ನಿನಗೆ ನಡೆಯಲಿಲ್ಲ
ಸಗ್ಗ ಸೊಗವು, ದೊರಕದಿಲ್ಲ
ತೊಲಗು ಚಿಂತೆ ದೂರಕೆ
ಬೇಡ ಸಾಕು ಹಂಚಿಕೆ

ಕಾ. ಶ. ನಾ. ಭ. ರಾ. ಭಾ. ಪ್ರವೀಣ.
ಚಿಕ್ಕ ಸೊಡ್ಲೂರು. ದ. ಕೊಡಗು.

ಯೋಗ!

ಯೋಗವಂತೆ ಯೋಗ!
ಹಾಳಾಗ್ಹೋಗ !!
ನಾ ಹುಟ್ಟಿದ್ದೇ ಕಲಿಯುಗ
ಆರುವರ್ಷ — ಶಾಲೆಗೆ ಸೇರಿದಾಗ,
ಪಾಸಾಗುತ್ತಾ ಬಂದೆ ಬೇಗ ಬೇಗ
ಪಾಸಾದರೂ ಹೊಡೆದೊಡೆದು ಲುಂಗ!
ಹಣೆಯಲಿಲ್ಲ ಬಹ್ಮ ಬರೆಹದ ಯೋಗ
ಎಲ್ಲಿ ಕೇಳಿದರೂ ಖಾಲಿಯಿಲ್ಲ ಜಾಗ
ನನಗೆ ಹೇಗೆ ಸಿಗಬೇಕು ಉದ್ಯೋಗ!
ಕಾಯ ಬೇಕಂತೆ ಯೋಗ!
ಸುಡುಗಾಡಾಗ!!

"ಮಲ್ಹಾರಿ"

ಪುತ್ತೂರು ಲೇಂಡ್ ಟ್ರೈಬ್ಯೂನಲ್‌ನಲ್ಲಿ

L. R. A. 64/1966.

ಪಾತ್ರ ತೋಟ ಸುಬ್ಬಣ್ಣ ಭಟ್ಟ. ಅರ್ಜಿದಾರ

1. ಮುಂಡಪ್ಪ ಬಂಗ, ದ್ಯಮ್ಮಕ್ಕ ಹೆಂಗ್ಸಿನ ಮಗ. 2. ಜಲಜಾಕ್ಷಿ—ಮುಂಡಪ್ಪ ಬಂಗರ ಹೆಂಡತಿ. ಇಬ್ಬರೂ ಬಂಟ್ವಾಳ ತಾಲ್ಲೂಕು ವೀರಕಂಬ ಗ್ರಾಮದ ಮುಡಿಪೂರು ಎಂಬಲ್ಲಿರುವವರು. ಪೋಸ್ಟು: ವೀರಕಂಬ ದ.ಕ. —ಎದ್ರಿರು

ಟ್ರೈಬ್ಯೂನಲ್‌ನ ಹುಕುಂ ಪ್ರಕಾರ ಎರಡೂ ಜನ ಎದ್ರಿರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ _

ಅರ್ಜಿದಾರರು 1965 _1966ನೇ 1ನೇ ಪದ ಗೇಣಿ ಬಾಕಿಯ ವಸೂಲಿಗಾಗಿ ದಾಖಲು ಮಾಡಿದ ಮೇಲ್ಕಾಣಿಸಿದ L. R. A. 64/1966ನೇ ಅರ್ಜಿಯು 11-8-1967ಕ್ಕೆ ಎದ್ರಿರ ಹಾಜರಾತಿ ಬಗ್ಗೆ ಮೇಲ್ಕಾಣಿಸಿದ ಟ್ರೈಬ್ಯೂನಲ್‌ನಲ್ಲಿ ಇರುತ್ತದೆ. ಆದ್ದರಿಂದ ನೀವು 11-8-1967ಕ್ಕೆ ಮೇಲ್ಕಾಣಿಸಿದ ಪುತ್ತೂರು ಲೇಂಡ್ ಟ್ರೈಬ್ಯೂನಲ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಸ್ವತಃ ಯಾ ವಕೀಲ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮನ್ನು ಏಕ್ಸ್ ಪಾರ್ಟಿ ಮಾಡಿ ಟ್ರೈಬ್ಯೂನಲ್‌ನವರಿಗೆ ಯುಕ್ತ ಕಂಡ ರೀತಿಯಲ್ಲಿ ಮುಂದುವರಿಸಬಾದೀತು.

(By order of Tribunal)

Pulu. Narayana Bhat
Advocate for applicant.

ಪುತ್ತೂರು, 13—7—1967.

ಕ್ಷಾಮ ನಿವಾರಣೆಗಾಗಿ ಇಂದೇ ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ತನಕ ಕೊಡದೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಒಸ್ ನಾಪ ಆರ್ಡರ್ ಶುಲ್ಕ, ಅಂಚೆ ವೆಚ್ಚ ಮತ್ತು ರಿಜಿಸ್ಟ್ರೇಶನ್ ಚಾರ್ಜು ಕೊಡಬೇಕಾಗಿಲ್ಲ. ಔಷಧಿ, ಬಟ್ಟೆಬರೆ, ಡಬ್ಬಿಗಳಲ್ಲಿ ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಾಟ, ಮತ್ತು ರೈಲ್ವೆ ವೆಚ್ಚಗಳು, ವರಮಾನ ತೆರಿಗೆ, ಅಬಕಾರಿ ಮತ್ತು ಸುಂಕ ಇತ್ಯಾದಿಗಳಲ್ಲಿ ರಿಯಾಯಿತಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ದಿಲ್ಲಿ—1

ಸಂಸ್ಮರಣೆ

ಮೈನಾವೂ ಕರುಣೆ ಹುಟ್ಟಿಸುತ್ತದೆ

ಅದಾಗ ತಾನೇ ನಾನು ಶಾಂತಿ ನಿಕೇತನದಲ್ಲಿ ಸೇರಿಕೊಂಡಿದ್ದೆ. ಗುರುದೇವರು ಆಗ ಅಷ್ಟು ಧೃಷ್ಟರಾಗಿರಲಿಲ್ಲ. ಮುಂಜಾನೆ ಪ್ರತಿದಿನ ಅವರು ತಮ್ಮ ಉಪವನದಲ್ಲಿ ತಿರುಗಾಡಲು ಹೊರಡುತಿದ್ದರು. ಒಂದು ದಿನ ನಾನೂ ಅವರೊಡನೆ ಹೊರಟೆ. ನನ್ನೊಡನೆ ಇನ್ನೊಬ್ಬ ಹಳೆಯ ಅಧ್ಯಾಪಕರೂ ಇದ್ದರು. ಸತ್ಯ ಹೇಳುವುದಾದರೆ, ನಾನಾಗಿ ಗುರುದೇವರೊಡನೆ ತಿರುಗಾಟಕ್ಕೆ ಹೋದುದಲ್ಲ; ಅವರೇ ನನ್ನನ್ನು ಕರೆದಿದ್ದರು. ಗುರುದೇವರು ತೋಟದಲ್ಲಿನ ಒಂದೊಂದು ಹೂವನ್ನು, ಎಲೆಯನ್ನು ಗಮನವಿಟ್ಟು ನೋಡಿಕೊಳ್ಳುತ್ತ, ಆ ಹಳೆಯವರೊಡನೆ ಮಾತನಾಡುತ್ತ ದಾರಿ ನಡೆಯುತಿದ್ದರು. ನನ್ನ ಪಾಲಿಗೆ ಕೇಳುವ ಕೆಲಸ ಬಂದಿತ್ತು. ಮಾತಾಡುತ್ತ ಗುರುದೇವರಂದರು.—"ಅಲ್ಲ, ಸ್ವಾಮಿ, ಆಶ್ರಮದ ಕಾಗೆಗಳೆಲ್ಲ ಎಲ್ಲಿ ಹೋದುವು? ಅವುಗಳ ಸ್ವರವೇ ಈಗ ಕೇಳುತ್ತಿಲ್ಲ." ನನ್ನ ಒಡನಾಡಿ ಅಧ್ಯಾಪಕರಿಗಾಗಲೀ ನನಗಾಗಲೀ ಈ ಮಾತಿನ ಸತ್ಯ ತಿಳಿದಿರಲಿಲ್ಲ. ನಿಜವಾಗಿಯೂ ಆಶ್ರಮದಲ್ಲಿ ಕೆಲವು ದಿನಗಳಿಂದ ಕಾಗೆಗಳು ಕಂಡು ಬರುತ್ತಿರಲಿಲ್ಲವೆಂದು ಮುಂದೆ ತಿಳಿಯಿತು. ಕಾಗೆಯೆಂದರೆ, ಸರ್ವವ್ಯಾಪಿ ಪಕ್ಷಿಯೆಂದು ನಾನಿದುವರೆಗೆ ಅಂದುಕೊಂಡಿದ್ದೆ. ಈ "ಮಹಾತ್ಮ"ರು ಕೂಡ ಆಗಾಗ ಪ್ರವಾಸ ಹೊರಡುವುದುಂಟು, ಅವರಿಗೂ ಪ್ರವಾಸ ಹೋಗುವ ಅಧಿಕಾರವಿದೆ ಎಂದು ನನಗಾಗಲೇ ಮನವರಿಕೆಯಾದುದು. ಒರ್ವ ಲೇಖಕ ಕಾಗೆಗಳನ್ನು ಆಧುನಿಕ ಸಾಹಿತ್ಯಿಕರಿಗೆ ಹೋಲಿಸಿದ್ದಾನೆ, ಇದಕ್ಕೆ ಕಾರಣವೂ ಇಲ್ಲದಿಲ್ಲ. ಇವರೆಲ್ಲರ ಉದ್ದೇಶ ಒಂದೇ—ಕುಚೇಷ್ಟೆಗಾಗಿ ಕುಚೇಷ್ಟೆ. ಕಾಗೆಗಳ ಪ್ರವಾಸವಾದರೂ ಕುಚೇಷ್ಟೆಗಾಗಿಯೇ ಇದೆಯೇನು? ಏಕೆಂದರೆ ಒಂದು ವಾರದ ನಂತರ ಸಾವಿರಾರು ಕಾಗೆಗಳು ಬಂದು ಆಶ್ರಮದಲ್ಲಿ ತುಂಬಿದುವು!

ಒಂದು ದಿನ ಮುಂಜಾನೆಯಲ್ಲೇ ನಾನು ಗುರುದೇವರ ಬಳಿ ಬಂದಿದ್ದೆ. ಒಂದು ಕುಂಟು ಮೈನಾ ಪಕ್ಷಿಯು ಕಿರಿಚುತ್ತ ಇತ್ತು. ಗುರುದೇವರೆಂದರು—"ಇದನ್ನು ನೋಡು, ಪಾಪ, ತನ್ನ ಗುಂಪಿನಿಂದ ಹೊರಬಿದ್ದಿದೆ. ಪ್ರತಿನಿತ್ಯ ಇಲ್ಲಿಗೇನೇ ಬಂದು ಕುಯ್ಯಲಿಡುತ್ತಿದೆ. ಇದರ ನಡಿಗೆಯಲ್ಲೊಂದು ಕರುಣಾಭಾವ ನನಗೆ ಕಾಣಿಸುತ್ತಿದೆ." ಗುರುದೇವರು ಹೇಳದಿರುತಿದ್ದರೆ, ನನಗದರ ಕರುಣಭಾವವು ಅರ್ಥವಾಗುತ್ತಿರಲಿಲ್ಲ. ಮೈನಾ ಕರುಣ ಭಾವ ಹುಟ್ಟಿಸುವ ಪಕ್ಷಿ ಎಂಬುದರಲ್ಲಿ ನನಗೇನೂ ವಿಶ್ವಾಸವಿರಲಿಲ್ಲ. ಅದು ಪರರ ಮೇಲೆ ಅನುಕಂಪ ಬೀರುವ ಪಕ್ಷಿ ಎಂದು ನಾನು ನಂಬಿದ್ದೆ. ಮೂರು ನಾಲ್ಕು ವರ್ಷಗಳಿಂದ ನಾನು ಹೊಸ ಮನೆಯಲ್ಲಿ ವಾಸ ಮಾಡಿಕೊಂಡಿದ್ದೇನೆ. ಮನೆ ಕಟ್ಟಿದವರು ಗೋಡೆಯಲ್ಲಿ ನಾಲ್ಕೂ ಸುತ್ತು ಒಂದೊಂದು ಗವಾಕ್ಷವನ್ನು ಇಟ್ಟಿದ್ದಾರೆ—ಇದು ಆಧುನಿಕ ವೈಜ್ಞಾನಿಕ ಉಪಾಯಕ್ಕೆ ಸಹಾಯಕವೆನಿಸಬಹುದು. ಹಾಗಾಗಿ ಪ್ರತಿ ವರ್ಷವೂ ಒಂದಲ್ಲ ಒಂದು ಮೈನಾ ದಂಪತಿ ಮಾಡಿನೆಡೆ ತಮ್ಮ ಮನೆ ಹೂಡಿಯೇ ಬಿಡುತ್ತದೆ. ಹುಲ್ಲುಕಡ್ಡಿ ಮತ್ತು ಹರಕು ಚಿಂದಿಗಳ ಅಂಬಾರಿ ಆಗುತ್ತವೆ; ಈ ಮಹನೀಯರು ಗೊಬ್ಬರದ ಮುದ್ದೆಯನ್ನೂ ಹೊತ್ತು ತಂದು ತಮ್ಮ ಮನೆ ಕಟ್ಟುತ್ತಾರೆ. ಇದರಿಂದ ಬೇಸತ್ತು ನಾವು ಈ ಗವಾಕ್ಷಗಳನ್ನು ಇಟ್ಟಿಗೆಯಿಂದ ತುಂಬಿ ಮುಚ್ಚಿಬಿಡುತ್ತೇವೆ. ಆದರೆ ಅವಕ್ಕೇನು? ಸಿಕ್ಕ ಎಡೆಗಳ ಉಪಯೋಗವನ್ನು ಮಾಡ ತೊಡಗುತ್ತವೆ. ಪತಿ-ಪತ್ನಿಗಳು ಒಂದು ಹುಲ್ಲುಕಡ್ಡಿ ಕಚ್ಚಿತಂದು ಗವಾಕ್ಷದೆಡೆಯಿಟ್ಟವು ಎಂದರೆ, ಆಗ ನೋಡಬೇಕು, ಅವುಗಳ ಅಭಿಮಾನವನ್ನು! ಪತ್ನೀದೇವಿಯ ಬಗ್ಗೆ ಹೇಳುವುದೇನು? ಒಂದು ಹುಲ್ಲುಗಡ್ಡಿ ಎತ್ತಿ ತಂದಳು ಅಂದರೆ, ಒಂಟಿ ಕಾಲಲ್ಲಿ ನಿಂತು ತುಸು ರೆಕ್ಕೆ ಬಡಿಯಿತು, ಕೊಕ್ಕನ್ನು ತನ್ನ ಪಾದಗಳಿಂದಲೇ ತೊಳೆದುಕೊಂಡಿತು, ಮತ್ತು ನಾನಾ ಪ್ರಕಾರದ ಮಧುರ ಹಾಗೂ ವಿಜಯೋದ್ಘೋಷವಾಣಿಯಲ್ಲಿ ಹಾಡತೊಡಗಿತು. ನಾವಲ್ಲಿಯೇ ಇದ್ದೇವೆಂಬುದರ ಲಕ್ಷ್ಯವೂ ಅದಕ್ಕಿಲ್ಲ! ಅದೇ ವೇಳೆ ಕಾಗದದ ಚೂರನ್ನೊ ಗೊಬ್ಬರದ ತುಂಡನ್ನೋ ಕಚ್ಚಿಕೊಂಡ ಪತಿದೇವರೂ ಅದೇ ವೇಳೆಗೆ ಅಲ್ಲಿ ಬಂದು ಮುಟ್ಟಿದರೆ.—ಎಂದರೆ ಮತ್ತೆ ಕೇಳುವುದೇನು? ದಂಪತಿಗಳ ನೃತ್ಯ-ಸಂಗೀತ, ಆನಂದಗಳಿಂದ ಇಡಿಯ ಮನೆಯೇ ಪ್ರತಿಧ್ವನಿತವಾಗುವುದು. ಈ ಕಾರ್ಯಕ್ರಮ ಮುಗಿದ ವೇಳೆಯೇ ಪತ್ನೀದೇವಿಯು ನಮ್ಮ ಕಡೆ ತಿರುಗಿ ನಿಶ್ಚಿಂತ ವಾಣಿಯಲ್ಲಿ ಮಾತನಾಡತೊಡಗುತ್ತಾಳೆ. ಪತಿ ದೇವರೂ ಮುಗುಳ್ನಗುತ್ತ ನಮ್ಮತ್ತ ನೋಡುತ್ತ ತುಸು ರಿಮಾರ್ಕ್ (ಷರಾ) ಜೋಡಿಸುತ್ತಾರೆ; ಮುಖ ತಿರುಗಿಸುತ್ತಾರೆ. ಪಕ್ಷಿಗಳ ಭಾಷೆ ನನಗೆ ಗೊತ್ತಿಲ್ಲ; ಆದರೆ, ಅವುಗಳ ನಡುವೆ ನಾನೂ ಸ್ಪಷ್ಟವಾಗಿ ಈ ಬಗೆಯ ಮಾತುಕತೆಯೇ ನಡೆಯುತ್ತದೆ ಎಂದು ನನಗೆ ವಿಶ್ವಾಸವಿದೆ—

ಪತ್ನಿ—ಈ ಮನುಷ್ಯರು ಇಲ್ಲಿ ಹೇಗೆ ಬಂದರು?

ಪತಿ—ಊಂ, ಪಾಪ, ಬಡವರು ಬಂದು ಬಿಟ್ಟರು. ಇರ್ಲಿ ಬಿಡು. ಏನು ಮಾಡಬಲ್ಲರು!

ಪತ್ನಿ—ಅದೇನಿದ್ದರೂ ಇದು ನಮ್ಮ ಪ್ರೈವೇಟ್ ರೂಮ್ ಎಂಬುದಾದರೂ ಇವರು ಜ್ಞಾಪಕವಿಡ ಬೇಡವೆ?

ಪತಿ—ಪಾಪ, ಇವರು ಮನುಷ್ಯರು. ಅಷ್ಟು ಬುದ್ಧಿ ಎಲ್ಲಿಂದ ಬರಬೇಕು!

ಪತ್ನಿ—ಸಾಯಲಿ, ಬಿಡಿ.

ಪತಿ—ಮತ್ತೇನಂಥದು?

ಈ ಬಗೆಯ ಮೈನಾ ಪಕ್ಷಿ ಕರುಣ ಭಾವ ವ್ಯಕ್ತ ಪಡಿಸುತ್ತದೆ ಎಂಬುದರಲ್ಲಿ ನನಗೇನೇನೂ ವಿಶ್ವಾಸವೇ ಇರಲಿಲ್ಲ. ಗುರುದೇವರ ಮಾತನ್ನು ನಾನು ಯೋಚಿಸಿ ನೋಡಿದಾಗ, ಅದರ ಮುಖದಲ್ಲಿ ಒಂದು ಕರುಣಭಾವ ನಿಜಕ್ಕೂ ಕಾಣಿಸುತಿತ್ತು. ಪ್ರಾಯಶಃ ಹಿಂದಿನ ಸ್ವಯಂವರ ಸಭೆಯಲ್ಲೆದ್ದ ಯುದ್ಧದಲ್ಲಿ ಪೆಟ್ಟುತಿಂದು ಸೋಲುಂಡ ವಿಧುರಪತಿಯಿರಬೇಕು; ಅಥವಾ ಬೆಕ್ಕಿನ ಆಕ್ರಮಣದವೇಳೆ ಪತಿಯನ್ನು ಕಳೆದುಕೊಂಡು ಯುದ್ಧದಲ್ಲಿ ಗಾಯಗೊಂಡು ಏಕಾಂತ ವಿಹಾರ ಮಾಡುತ್ತಿರುವ ವಿಧವೆ ಪತ್ನಿಯಿರಬೇಕು. ಪಾಪ, ಇದಕ್ಕೇಕೆ ಈ ಬಗೆಯ ದುಸ್ಥಿತಿ! ಇದೇ ಮೈನಾವನ್ನು ಉದ್ದೇಶಿಸಿಯೇ ಗುರುದೇವರು ಒಂದು ಕವಿತೆಯನ್ನು ಮುಂದೆ ಬರೆದಿರಬೇಕು—ಆ ಕವಿತೆಯ ಒಂದು ಭಾಗದ ಸಾರಾಂಶ ಹೀಗಿದೆ—

"ಆ ಮೈನಾಕ್ಕೆ ಆದುದಾದರೂ ಏನೆಂದು ಯೋಚಿಸುತ್ತೇನೆ. ತನ್ನ ಸಂಗಡದಿಂದ ಅದೇಕೆ ಪ್ರತ್ಯೇಕವಾಯಿತು? ಮೊದಲೊಮ್ಮೆ ನನ್ನ ಉಪವನದ ಸೇವಲ ಮರದ ಬುಡದಲ್ಲಿ ಕಂಡಿದ್ದೆ. ಒಂದು ಕಾಲು ಕುಂಟಾದಂತೆ ಅನಿಸಿತು. ಅನಂತರ ಪ್ರತಿ ದಿನವೂ ಮುಂಜಾನೆ ನೋಡುತಿದ್ದೇನೆ— ಸಂಗಾತಿಯಿಲ್ಲದೆ ಏಕಾಕಿಯಾಗಿ ಕೀಟಗಳ ಬೇಟೆಯಾಡುತ್ತಿದೆ. ಚಾವಡಿ ಹತ್ತಿ ಬರುತ್ತದೆ. ನರ್ತಿಸುತ್ತ ತನ್ನ ಕಲರವವನ್ನು ಹೊರಡಿಸುತ್ತದೆ; ನನ್ನಿಂದ ಎಳ್ಳಷ್ಟೂ ಅಂಜುವುದಿಲ್ಲ. ಇದಕ್ಕೇಕೆ ಈ ದುರವಸ್ಥೆ? ಯಾವುದಕ್ಕೆ ದಂಡನೆಯೆಂದು ಇದು ತನ್ನ ಸಮಾಜದಿಂದ ನಿರಾಶ್ರಿತವಾಯಿತು? ಯಾವ ತಪ್ಪಿಗಾಗಿ ಇದು ಸಂಕಟವನ್ನು ಸ್ವೀಕರಿಸಿತು? ತುಸು ದೂರದಲ್ಲೇ ಹಲವು ಮೈನಾಗಳು ಒಂದಾಗಿ ಗಜಬಜನೆನ್ನುತ್ತಿವೆ; ಹುಲ್ಲ ಮೇಲೆ ಓಡುತ್ತ ನಲಿಯುತ್ತ ಇವೆ. ಹಾರುತ್ತ ಇವೆ, ಶಿರೀಷ ಪುಷ್ಪದ ಮರದ ಗೆಲ್ಲುಗಳ ಮೇಲೆ. ಆದರೆ, ಈ ಅನಾಶ್ರಿತೆಗೆ ಆದಾವುದರ ಗೊಡವೆಯೂ ಇಲ್ಲ. ಇದರ ಜೀವನದಲ್ಲಿ ಎಲ್ಲಿ ಗಂಟು ಬಿದ್ದಿದೆಯೆಂಬುದನ್ನೇ ಯೋಚಿಸುತ್ತಿದ್ದೇನೆ. ಬಿಸಿಲಿನಿಂದ ತೊಡಗಿ ಆಹಾರ ಹೆಕ್ಕುತ್ತ, ಎಲೆಗಳ ಮೇಲೆ ಹಾರುತ್ತ ತಿರುಗುತ್ತಿದೆ, ಇಡಿಯ ದಿನ. ಇದನ್ನು ಯಾರು ಸಂಕಟಕ್ಕೆ ಗುರಿ ಮಾಡಿದರು ಎಂಬುದು ಗೊತ್ತಾಗುವುದಿಲ್ಲ. ಇದರ ನಡಿಗೆಯಲ್ಲಿ ವೈರಾಗ್ಯ ಭಾವನೆಯೂ ಗೋಚರಿಸುವುದಿಲ್ಲ. ಕಣ್ಣುಗಳಲ್ಲೂ ಉರಿ ಕಾಣಿಸುವುದಿಲ್ಲ."

ನಾನೀಗ ಈ ಕವಿತೆಯನ್ನು ಓದುವಾಗ ಆ ಮೈನಾದ ಕರುಣ ಮೂರ್ತಿ ಸ್ಪಷ್ಟವಾಗಿ ನನ್ನ ಮುಂದೆ ಬಂದು ನಿಲ್ಲುವುದು. ಇದನ್ನು ನಾನು ಕಂಡೂ ಕಾಣಲಿಲ್ಲ, ಕವಿಯ ಕಣ್ಣುಗಳು ಅದರ ಮರ್ಮಸ್ಥಳವನ್ನು ಮುಟ್ಟಿ ಬಿಟ್ಟವು— ಇದು ಹೇಗೆ ಎಂದು ಯೋಚಿಸುತ್ತ ಚಕಿತನಾಗಿ ಬಿಡುತ್ತೇನೆ. ಒಂದು ದಿನ ಆ ಮೈನಾ ಹಾರಿ ಹೋಯಿತು. ಸಾಯಂಕಾಲ ಕವಿವರ ಗುರುದೇವರು ಅದನ್ನು ಕಾಣಲಿಲ್ಲ. 'ಆ ಕೊಂಬೆಯ ತುದಿಯಲ್ಲಿ ಅಂಧಕಾರದಲ್ಲಿ ಜೀಂಗುರ ಕೀಟ ಝಂಕಾರ ಮಾಡುತ್ತಿರುವಾಗ, ಗಾಳಿಯಲ್ಲಿ ಬಿದಿರುಮೆಳೆ—ಎಲೆಗಳು ಝರಝರಿಸುತ್ತಿರುವಾಗ, ನಿದ್ರೆಯಿಂದೆಬ್ಬಿಸುವ ಸಂಧ್ಯಾತಾರೆ, ಮರದೆಡೆಗಳಿಂದ ಕಳೆಯುತ್ತಿರುವಾಗ ಇದು ಒಂಟಿಯಾಗಿ ಹೊರಡುತಿತ್ತು. ಅದು ಮಾಯವಾಗುವುದು ಎಂದರೆ ಅದೆಷ್ಟು ಕರುಣ!'

(ಶ್ರೀ ಹಜಾರಿ ಪ್ರಸಾದ ದ್ವಿವೇದಿಯವರ ನಿಬಂಧದಿಂದ ಆಯ್ದುದು.)

ಸ್ವಾತಂತ್ರ್ಯ ವಿಶೇಷಾಂಕ

ವಾಡಿಕೆಯಂತೆ 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಆಗೋಸ್ತು 15ಕ್ಕೆ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗಲಿದೆ.

ಲೇಖನಗಳನ್ನು ಆಮಂತ್ರಿಸಲಾಗಿದೆ.

ಗೋವಿಂದ ದಾಸ ವಿದ್ಯಾದಾಯಿನೀ ಕಾಲೇಜ್‌ನ ಉದ್ಘಾಟನೆ

ಸುರತ್ಕಲ್, ಸುರತ್ಕಲ್ಲಿನಲ್ಲಿ ಗೋವಿಂದ ದಾಸ ವಿದ್ಯಾದಾಯಿನೀ ಕಾಲೇಜನ್ನು ಮೈಸೂರು ವಿಶ್ವ ವಿದ್ಯಾನಿಲಯದ ಉಪಕುಲಪತಿ ಶ್ರೀ ಕೆ. ಎಲ್. ರಾಮಚಂದ್ರನ್ ಇವರು ಜೂನ್ 30ರಂದು ಉದ್ಘಾಟಿಸಿದರು. ಎಚ್. ವಿ. ಸಂಘದ ಅಧ್ಯಕ್ಷರಾದ ಶ್ರೀ ಬಿ. ವಿ. ಕೃಷ್ಣಯ್ಯ, ಎಡ್ವೋಕೇಟ್ ಇವರು ಸ್ವಾಗತಿಸುತ್ತಾ, ಮೊದಲು ಎಲಿಮೆಂಟರೀ ಶಾಲೆಯಾಗಿದ್ದು ಈಗ ಉನ್ನತವಾಗಿ ಅಭಿವೃದ್ಧಿಗೆ ಬಂದಿರುವ ಈ ಸಂಸ್ಥೆ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡುವಷ್ಟು ಮುಂದುವರಿದಿದೆ ಎಂದೂ ಈ ಸಂಸ್ಥೆಗೆ ಉತ್ತೇಜಕರು ಗೋವಿಂದದಾಸರ ಕುಟುಂಬದವರು ಸುಮಾರು ಒಂದು ಲಕ್ಷ ರೂಪಾಯಿಯನ್ನು ದಾನಮಾಡಿರುವರೆಂದೂ, ದಾನವಾಗಿ ಸಹಾಯ ನೀಡಿದ ದಿ| ಗೋವಿಂದ ದಾಸರ ಸುಪುತ್ರರೂ ದಾಸ್‌ಪ್ರಕಾಶ್ ನ ಮಾಲಿಕರೂ ಆದ ಶ್ರೀ ಕೆ. ಸೀತಾರಾಮ ರಾವ್ ಇವರಿಗೆ ಸಂಸ್ಥೆಯು ಚಿರಋಣಿಯಾಗಿದೆ ಎಂದೂ ಗೋವಿಂದ ದಾಸರ ಸ್ಮರಣೆಗಾಗಿ ಈ ಕಾಲೇಜಿಗೆ 'ಗೋವಿಂದ ದಾಸ ವಿದ್ಯಾದಾಯಿನೀ ಕಾಲೇಜ್' ಎಂದು ಹೆಸರಿಡಲಾಗಿದೆ ಎಂದೂ ಹೇಳಿದರು.

ಸದ್ಯ ಪ್ರಿನ್ಸಿಪಾಲ್‌ರಾಗಿರುವ ಶ್ರೀಮತಿ ವಿನತಾ ರಾವ್ ಇವರು ಶುಭಸಂದೇಶಗಳನ್ನು ಓದಿದ ಬಳಿಕ ಉದ್ಘಾಟಕರು ಕಾಲೇಜಿನ ನಾಮಫಲಕವನ್ನು ಅನಾವರಣ ಗೈದು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಸ್ಥಾನ ಪಡೆದಿರುವ ಈ ಕಾಲೇಜಿನ ವಿದ್ಯಾರ್ಥಿಗಳ ಕೀರ್ತಿ ನಾನಾದೇಶಗಳಲ್ಲಿ ಬೆಳಗಲಿ ಮತ್ತು ದಿ| ಗೋವಿಂದ ದಾಸರ ಕುಟುಂಬಕ್ಕೆ ಹಾಗೂ ಉಳಿದವರಿಗೆ ಶ್ರೇಯಸ್ಸಾಗಲಿ ಎಂದು ಹರಸಿದರು.

ಸಭಾಧ್ಯಕ್ಷ ಶ್ರೀ ಕೆ. ಯಸ್. ಎನ್. ಅಡಿಗರು ಕಾಲೇಜಿನ ವಾತಾವರಣ, ವಿದ್ಯಾರ್ಥಿಗಳ ಉತ್ಸುಕತೆ, ಅಧ್ಯಾಪಕರುಗಳ ಪ್ರೋತ್ಸಾಹ, ಊರವರ ಸಹಾಯವನ್ನು ವಿವರಿಸಿದರು. ದಿಟ್ಟ ಹೆಜ್ಜೆಯನ್ನಿರಿಸಿ ಕಾಲೇಜನ್ನು ಸ್ಥಾಪಿಸಿದ ವಿದ್ಯಾದಾಯಿನೀ ಸಂಸ್ಥೆಯವರ ಧೈರ್ಯ ಹಾಗೂ ಅದಕ್ಕೆ ಬೇಕಾದ ಸಹಾಯಗಳನ್ನು ತಿಳಿಸಿ ಕಾಲೇಜಿನ ಪ್ರಗತಿಗಾಗಿ ಉದಾರ ಸಹಾಯ ನೀಡಿದ ಮಹನೀಯರುಗಳ ಔದಾರ್ಯತೆಯನ್ನು ಪ್ರಶಂಸಿಸಿದರು.

ಕೊನೆಯಲ್ಲಿ ಸಂಘದ ಕೋಶಾಧಿಕಾರಿ ಶ್ರೀ ಪಿ. ಶ್ರೀನಿವಾಸ್ ರಾವ್, ಎಡ್ವೋಕೇಟ್ ಇವರು ಧನ್ಯವಾದಗಳನ್ನು ಸಮರ್ಪಿಸಿದರು.

ಹೇಗೆ ನಂಬಲಿ?

ನಂಬುವುದು ಹೇಗಿವರನ್ನು ಸೋಲಿಸಿ
ದವರ?
ನಂಬದಿರಿ; ಎಂ. ಪಿ. ಎಮ್ಮೆಲ್ಲೆಗಳ,
ಮಂತ್ರಿಗಳ;
ಆ ಸೋಲಿಸಿದರೆಂದೆನ್ನ ಕೇಳುವುದೇಕೆ?
ಪ್ರತಿಸ್ಪರ್ಧಿಗಳನವರು ಸೋಲಿಸಿಲ್ಲವೆ?—
ಜೋಕೆ!

—ಎಚ್. ಎಂ. ನಾರಾಯಣ ಭಟ್.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಆಶಾ—ಲತಾ: (ಕಥಾ ಸಂಗ್ರಹ).

ಲೇಖಕರು: ಶ್ರೀ ಎಲ್. ಎಂ. ಕಾಮತ್.

ಪ್ರಕಾಶಕರು: ನವಕುಲ ಪ್ರಕಾಶನ, ರೂಂ. ನಂ. ೧೬, ಸಿರಿನ್ ಬ್ಯಾ ಬಿಲ್ಡಿಂಗ್ ನಂ. ೧, ಲಿಬರ್ಟಿ ಗಾರ್ಡನ್ ಹೌಸಿಂಗ್ ಕಾಲೊನಿ, ಮಲಾಡ್ (ಈಸ್ಟ್) ಬೊಂಬಾಯಿ—೬೪.

ಪುಟಗಳು: ೧೧೭ ಬೆಲೆ: ರೂ. ೧-೫೦.

ಉದಯೋನ್ಮುಖ ಬರಹಗಾರರಲ್ಲಿನ ಪ್ರತಿಭೆಯನ್ನು ಗುರುತಿಸಿ ಅವರ ಕೃತಿಗಳನ್ನು ಪ್ರಕಟಿಸಲು ನೆರವಾಗಬೇಕೆಂಬ ಹೊಸ ಯೋಜನೆಯನ್ನು ರೂಪಿಸಿದ ಪ್ರಕಾಶಕರ ಮೂಲಕ ಲೇಖಕರು ತಮ್ಮ ಪ್ರಥಮ ಕಥಾ ಸಂಕಲನವನ್ನು ಕನ್ನಡಮ್ಮನ ಪಾದ ಪದ್ಮಗಳಿಗೆ ಅರ್ಪಿಸಿದ್ದಾರೆ. ಇಲ್ಲಿ ಐದು ಕಥೆಗಳಿವೆ.

ಒಂದು ಹೆಣ್ಣಿನಿಂದ ಆಕರ್ಷಿತನಾಗಿ, ಆಕೆಯೊಡನೆ ಕನಸಿನ ಸಾಮ್ರಾಜ್ಯದಲ್ಲಿ ರಮಿಸಿ ತನ್ನ ಆಶಾ ಪೂರಿತ 'ಅತೃಪ್ತ' ಯುವಕನ ಒಂದು ಚಿತ್ರ 'ಆಶಾ—ಲತಾ'. ಇದು ಕನಸೆಂದು ಲೇಖಕರು ಕೊನೆಯಲ್ಲಿ ಹೊತ್ತು ಹಾಕಿದರೂ ಕನಸಿಗೂ ಮನಸಿಗೂ ಒಂದಲ್ಲ ಒಂದು ಸಂಬಂಧ ಅವಶ್ಯ ಇರಲೇ ಬೇಕಲ್ಲವೆ? ತಂಗಿ ಇಂದಿರಾ ತನಗಿಂತ ಬುದ್ಧಿವಂತೆಯಾದುದಕ್ಕೆ ರೇಗಿ ದ್ವೇಷಿಸುತ್ತಿದ್ದ ಉದ್ಧಟ ಅಣ್ಣ ಶಂಕರ ಮುಂದೊಂದು ದಿನ ಭಗಿನೀ ದ್ವಿತೀಯೆಯ ದಿನ ಆಕೆಯ ಮರಣಕ್ಕೆ ತಾನೇ ಕಾರಣನೆಂದು ನೊಂದ ಪರಿವರ್ತಿತನಾದ ಘಟನೆ 'ಪರಿವರ್ತನೆ'. ಗ್ರಾಮ ರಾಜಕೀಯದ ಒಂದು ದಾನವ ಚಿತ್ರ 'ಆಗಲಾರದ್ದು ಆಗಿ ಹೋಯಿತು'. ಮಿತ್ರನನ್ನು ಇದಿರುಗೊಳ್ಳಲು ಹೋದಾಗ ಆ ಮಿತ್ರನ ಭಾವಿಪತ್ನಿಯೆಂದು ತಿಳಿಯದೆ ಆಕೆಯಲ್ಲಿ ಮನಸೋತು, ಸತ್ಯ ಬಯಲಾದಾಗ ಪೆಚ್ಚಾದ ಯುವಕನ ಕಥೆ 'ಸಂಧಿಕಾಲ'. ಆಫೀಸಿನಲ್ಲಿ ಲೇಡಿ ಕ್ಲಾರ್ಕರಿಗಾಗಿ ಬಾಯಿ ಬಿಡುತ್ತಿದ್ದ ಯುವಕ ನೌಕರರ ಮೇಲೆ ಕೃಪೆದೋರಿ ಮೆನೇಜರು ಮಂಟು ಕಳಿಸಿದ್ದು ಅರ್ಧ ವಯಸ್ಸು ದಾಟಿದ ಕುಮಾರಿಯನ್ನು — ಇದು 'ನಮ್ಮ ಬಯಕೆ ಈಡೇರಿತು'ವಿನ ಘಟಕ.

ಇಲ್ಲಿರುವ ಕಥೆಗಳ ವಸ್ತುವಿನಲ್ಲಿ ಹೆಚ್ಚಿನ ಹೊಸತನವೆಂಬುದಿಲ್ಲ. ಆದರೆ, ಕಥೆಯನ್ನು ಕುತೂಹಲಕಾರಿಯಾಗಿ ಹೇಳುವಲ್ಲಿ ಲೇಖಕರು ಯಶಗಳಿಸಿದ್ದಾರೆ. ವಸ್ತು, ತಂತ್ರ, ಕುತೂಹಲತೆಯಲ್ಲಿ "ಪರಿವರ್ತನೆ ಮತ್ತು "ನಮ್ಮ ಬಯಕೆ ಈಡೇರಿತು" ಗಳಲ್ಲಿ ತುಸು ಹೊಸತನ ತಲೆಹಾಕಿದೆ. ಕಥನಕಲೆಯ ವಾಸನೆ ಲೇಖಕರಿಗಿದೆ. ಭಾಷೆ ಸರಳವಾಗಿದೆ, ಸುಂದರವೂ ಇದೆ. ಆದುದರಿಂದಲೇ ತನ್ನ ಮೊತ್ತ ಮೊದಲ ಕಥಾ ಸಂಗ್ರಹವಿದೆಂದು ಅವರು ಹೆಮ್ಮೆಯಿಂದ ಅಂದು ಕೊಳ್ಳಬಹುದು. ಚಿತ್ರಗಾರರ ಮುಖಚಿತ್ರ ನವೀನತೆಗೆ ಒಪ್ಪುತ್ತದೆ. ಪ್ರಕಾಶಕರ ಪ್ರಯತ್ನ ಮುಂದುವರಿಯಲಿ.

ಮಂಗಳ ಗ್ರಹಿಕೆ: (ಕವನ ಸಂಗ್ರಹ)

ಕವಿ: ಶ್ರೀ ಪಿ. ಶ್ಯಾಮ ಭಟ್.

ಪ್ರಕಾಶಕರು: ಗೀತಾ ಪ್ರಕಾಶನ, ಕಾಸರಗೋಡು.

ಪುಟಗಳು: ೨೮ ಬೆಲೆ: ೦—೫೦.

ಇದೊಂದು 'ಮಂಗಳ ಗ್ರಹಿಕೆ' ದೇಶ ಲೋಕಕ್ಕೆ ಶುಭಕಾಮನೆ. ಇಲ್ಲಿನ ೨೩ ಕವನಗಳೂ ಒಂದಲ್ಲ ಒಂದು ಪೂಜ್ಯ ಗ್ರಹಿಕೆಯಿಂದಲೇ ಬರೆಯಲ್ಪಟ್ಟಿವೆ.

ಕಾಡ ಸುಮವ ಕಾಂಬರಿಲ್ಲ
ಜೀವನೊಂದಿದೆ
ಬರಲಿ ನಿದ್ದೆ, ಬದುಕಿ ಗೆದ್ದೆ
ಬಟ್ಟೆ ಹೊಂದಿದೆ ॥

(ಬರಲಿ ನಿದ್ದೆ)

—ಇಲ್ಲಿನ ವ್ಯಂಗ್ಯ ಅನ್ಯೋಕ್ತಿಗಳು ಹೃದಯ ಸ್ಪರ್ಶಿಯಿವೆ; ಭಾವ ವ್ಯಂಜಕವಿದೆ.

ಬಾಡಿ ಬೀಳ್ವ ಸುಮದ ಬಾಳು
ಕ್ಷಣಿಕವಿಹುದು ಬಲ್ಲೆನು ।
ಆದರೇನು ಅದನು ಪಡೆವ
ಮೋಹ ಕಳೆಯಲೊಲ್ಲೆನು ॥

(ಎಂಥ ಬನವ ಕಂಡೆ ನಾನು)

—ಇಲ್ಲಿನ ಹೃದಯದ ರತಿ— ಮಾನವ ಸಹಜವಾದದು; ಈ ಮೋಹದ ಕಾರಣವಾಗಿಯೇ ಪ್ರಪಂಚ ನಡೆಯುತ್ತದೆ. ಇದೂ ಇಲ್ಲವಾದರೆ ಜೀವನ ನೀರಸ....?

ಭಾರತ, ಕಾಶ್ಮೀರ, ಕಾಸರಗೋಡು, ಮಂ. ಗೋವಿಂದ ಪೈ ಮೊದಲಾದವರಿಗೆ ಸಂಬಂಧಿಸಿದ ಕೆಲ ಕವಿತೆಗಳೂ ಇಲ್ಲಿವೆ. ಪದಬಂಧದ ಗಂಭೀರತೆ, ಕಲವೆಡೆ ಕಾಣುವ ಭಾವ ಸೌಂದರ್ಯ ಶ್ರೀ ಭಟ್ಟರ ಕವಿಹೃದಯದ ಜ್ವಲಂತ ನಿದರ್ಶನಗಳು. "ಜಗ ಜೀವನ ಚಿರಯೌವನ, ನಿತ್ಯ ವಸಂತ ...." ಈ 'ಮಂಗಳ ಗ್ರಹಿಕೆ'ಯಲ್ಲಿ ಹೊಸ ರೀತಿಯಲ್ಲಿ ಮೂಡಿ ಬಂದ ಭಾವ ಲೋಕೋತ್ತರವಾದದ್ದು.

ಒಟ್ಟಿನಲ್ಲಿ "ಮಂಗಳ ಗ್ರಹಿಕೆ'ಯೆಂದು ಉತ್ತಮವಾದ ಸಂಕಲನ. ಆದರೂ ಇದರಲ್ಲಿ ಬಗೆಬಗೆಯ ಕವಿತೆಗಳನ್ನು ಮಿಶ್ರಮಾಡದೆ ಇರುತಿದ್ದರೆ, ಮತ್ತಷ್ಟು ಚೆನ್ನಾಗಿರುತ್ತಿತ್ತು.

—ಗೋರಾ.

ಚುಂಟಿಕಸ್ತಾಣ

ಬೆನ್ನಟ್ಟು ಅರಿಗಳಂ

ದೇಶದೆಲ್ಲೆಡೆ ಒಕ್ಕೊರಲ ಕೂಗು: ಅನ್ನ ಬೇಕು! ಓಡಿಸಿರಿ ಶಸ್ತ್ರಗಳ ಹಿಡಿದು ಗನ್ನು ಜಾಕು! ಗೋಣಿಯಲಿ 'ಇಲಿ' ಬಂದು ಕೊರೆಯುತಿದೆ ಕನ್ನ! ಇದಿರಿಸಲಿ ಬೇಕಯ್ಯ ಈ ದೊಡ್ಡ ಬನ್ನ॥

ಆಯೋಗ

ಆಯೋಗ ನೇಮಕಕೆ! ಸಚಿವರ ನಿರ್ಧಾರ! ಸ್ವೀಕರಿಸಿದನು ಎಸ್. ಜಿ. ವೈ. ತೃಪ್ತಿಯೊಡೂರ! ಹುಡುಕಲಿದೆ ವೇತನದ ಆಯೋಗ ಹಾದಿ! ಕೊಡಲಿಹುದು ಸರಕಾರ ಎಲ್ಲರಿಗು ಖಾದಿ॥

ದೇಶದುದ್ಧಾರ!

ಪರರ ಎಂಜಲಿಗೆಂದು ಕೈಯೊಡ್ಡ ಬೇಡಿ! ದೇಶದುದ್ಧಾರಕ್ಕೆ ಇದು ನಂಜು ನೋಡಿ!

ಆದರೇನ್ಮಾಡುವುದು ಬೇರೆ ವಿಧಿಯಿಲ್ಲವಯ್ಯ! ಅಮೆರಿಕವು ಧಾನ್ಯಗಳ ಕೊಡುತಿಹುದು 'ಬಯ್ಯ'!

ಕೇವಲ ಕುಚೋದ್ಯ?

ಮಂತ್ರಿವರ್ಯರೆಲ್ಲ ಪಾದಯಾತ್ರೆ ಗೈದರಂತೆ! ಯಂತ್ರ ಬಿಟ್ಟು ಇಂತು ನಡಿಗೆ ಬಹಳ ಕಡಿಮೆಯಂತೆ! ಹೇಳುತಿದ್ದ ರೈತ "ಅವರು ಕಾರುಗಳನ್ನು ಮಾರಿ! ಕೊಡಬೇಕು ಎನಗೆ ಬೇಗ ಉಚ್ಛಳಿಯ ಹೋರಿ"॥

ಗಡಿ ಗಲಭೆಯಂತ್ಯಕ್ಕೆ?

ಗಡಿಗಲಭೆಯಂತ್ಯಕ್ಕೆ ನಾಯಕರುಗಳ ಭೇಟಿ! ಯಾವುದೇ ನಿರ್ಣಯಕ್ಕೆ ಬರಲಿಲ್ಲವೆಂಬ ದಾಟಿ! ತಿರುಗುತಿದೆ ಏಕ ಸದಸ್ಯ ಆಯೋಗದ ಚಕ್ರ! ತುರುಕುವರು ಗಡಿನಾಡಿಗ ಸಂಶಯದ ಎರಕ॥

ರಾಜಕೀಯದ ಆಟ

ಎಲ್ಲೆಲ್ಲಿ ನೋಡಿದರು ಗೋಲೀಬಾರು ನಿಧನ! ಕೇಳಯ್ಯ ಬೆಕ್ಕರಯ್ಯ 'ಏನಿದರ ಹದನ?' ರಾಜ್ಯಗಳ ಎಲ್ಲೆಡೆಯ ನಾದ ಗಂಭೀರ! ರಾಜಕೀಯ ದಾಟದಲಿ ಗೆದ್ದವನೆ ಧೀರ!

ಮಾ. ಗೋ. ರಾವ್.



ನಾನೀಗ ಸತ್ಯಸಂಧ

(ಎರಡನೇ ಪುಟದಿಂದ)

ಯೇ ನಿವೃತ್ತಿಯಾಗುತ್ತಿತ್ತು. ಅರ್ಧಾಣೆಗೆ ದೊಡ್ಡ ಗ್ಲಾಸು ತುಂಬಾ ಕಾಫಿ ಅಥವಾ ಟೀ! ಈಗಿನ ನಾಲ್ಕು 'ಸಿಂಗಲ್' ಆಗಿನ ಅರ್ಧ ಗ್ಲಾಸಾಗದು. ತಿಂಡಿಯ ಅವಸ್ಥೆಯೂ ಹಾಗೆಯೇ! ನನಗೋ ಮಧ್ಯಾಹ್ನ ಊಟವಾಗಲೀ "ಫಲಾಹಾರ"ವಾಗಲೀ ಇದ್ದಿಲ್ಲ. 'ನೀನೂ ಕಾಫಿ ಕುಡಿದುಕೋ' ಎಂದು ಅವರಿಗೆ ಕಾಫಿಗೆ ಹೇಳುವಾಗಲೆಲ್ಲಾ ಹೆಡ್‌ಮಾಸ್ಟರ್ ನನಗೆ ಆಜ್ಞಾಪಿಸಿದ್ದರು. ನಾನು ಸಂತೋಷದಿಂದ ತಲೆಯಲ್ಲಾಡಿಸುತ್ತಾ ಹೋಟೆಲಿನಲ್ಲಿ 'ಕಾಫಿ' ಮಾತ್ರ ಕುಡಿದು ಮಾಸ್ಟರಿಗೆ ಕಾಫಿ ಮತ್ತು ತಿಂಡಿ ತರುತ್ತಿದ್ದೆ.

ಒಂದು ದಿನ ಮಾಸ್ಟರ್ ವಿಚಾರಿಸಿದರು—

'ನೀನು ಏನು ತಿಂಡಿ ತೆಗೆದು ಕೊಂಡೆ? .."

"ಇಲ್ಲ, ಸಾರ್, ಏನೂ ತೆಗೆದುಕೊಳ್ಳಲಿಲ್ಲ. ನೀವು ಹೇಳಿದ ಹಾಗೆ ಬರೆ 'ಕಾಫಿ" ಮಾತ್ರವೇ ಕುಡಿದಿದ್ದೇನೆ...'

'ಅಯ್ಯಯ್ಯೋ!.... 'ಕಾಫಿ' ಎಂದು ನಾನು ಹೇಳಿದ್ದು ಕಾಫಿ ಮತ್ತು ತಿಂಡಿ ಸಹಿತವಾಗಿತ್ತು....ನೀನು ಹೀಗೆ ಬರೇ 'ಕಾಫಿ' ಹೀರಿ ಬರುವುದೆಂದು ನನಗೆ ಗೊತ್ತಿರಲಿಲ್ಲ.... ನಾನು ಈ ಮೊದಲೇ ವಿಚಾರಿಸದಿದ್ದುದು ನನ್ನದೇ ತಪ್ಪು.... ಇಗೋ, ಎರಡಾಣೆ! ಈಗಲೇ ಹೋಗಿ ಕಾಫಿ ತಿಂಡಿ ಸೇವಿಸಿ ಬಾ...ಎಂದು ನಾಣ್ಯಕೊಟ್ಟು ಆಜ್ಞಾಪಿಸುತ್ತಾ ಬೆನ್ನು ತಟ್ಟಿ ಸತ್ಯ ಸಂಧತೆಯನ್ನು ಕೊಂಡಾಡಿದ್ದರು.

ಹರ್ಷದ ಸೊಬಗು

ಮುಂಜು ಕವಿಯಿತು
ಮೋಡ ಮುಸುಕಿತು
ಬಾನಿನಗಲದಿ ಹರಡಿತೂ—

ಮಳೆಯು ಬಂದಿತು
ನೀರು ಹರಿಯಿತು
ಭೂಮಿ ಯೆಲ್ಲಾ ತೊಯ್ದಿತೂ

ಫಸಲು ಬೆಳೆಯಿತು
ಹರ್ಷ ಉಕ್ಕಿತು
ರೈತ ಮನವರಳಿತೂ

ಐಕ್ಯತೆ ಹಟ್ಟಿತು
ಶಕ್ತಿ ಬೆಳೆಯಿತು
ನಮ್ಮ ರಾಷ್ಟ್ರ ಬೆಳಗಿತ

ಸತ್ಯ ಗೆದ್ದಿತು
ಮಿಥ್ಯ ಕುಗ್ಗಿತ
ಸ್ವತಂತ್ರ ಭಾರತ ಹಿಗ್ಗಿತೂ—

—ಕೆ. ಟಿ. ಸ್ವಾಮಿ

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

NAVAYUGA 20—7—1967
Registered with the Registrar of News Papers for India under No. R. N. 3540/'57

REGD. No. B. G. 176
LICENCE No. 31
Licensed to Post without Prepayment

ಶುದ್ಧ ಹರಟೆ

ಶರ್ಕರೋಪಾಖ್ಯಾನ . . . !

ಬರೆದವರು : ಶ್ರೀ ಮ. ಗೋ. ರಾವ್.

"ಎಷ್ಟು ಸ್ವಾಮಿ ಕಾಫಿ ಕಾಸು?"

"ಹದಿನೈದು ಪೈಸಾ ಕೊಡಿರಾಯ್ರು...."

"ಹಾಂ! ....ಹದಿನೈದು ಪೈಸ.. .ಆದೇನು ಆಟಕಾರಿ ತೆರಿಗೆಯ ಪ್ರಭಾವ. ಅಷ್ಟು ಬೇಗನೆ ಕಾರ್ಯಗತವಾಯಿತೋ?'

'ಅಂಪ್ರೆ ನಿಮ್ಮಲ್ಲೊಂದು ಫಿಕ್ಸೆಡ್ ರೇಟೊಂತ...'

'ಅದ್ಯಾಗೆ ಸ್ವಾಮಿ.... .. ಫಿಕ್ಸೆಡು ರೇಟೊಂತಇಡ್ಲೋದು, ಸರಕಾರವೇ ಫಿಕ್ಸೆಡ್ ರುಲೂಂತಾ ..'

'Stop...ನೋಡಿ, ನೀವು ಸರಕಾರವನ್ನ ದೂರೋದು. ನನಗೆ ಅಷ್ಟೊಂದೇನೂ ಸರಿಕಾಣೋಲ್ಲ ಆದರೆ. .'

"ಆದರೆ ಹೊಸ ತೆರಿಗೆಗಳು ಬಂದು....'

'ದೇಶದಲ್ಲಿ ಶ್ರೀ ಸಾಮಾನ್ಯನಿಗೆ ಮಾತ್ರ ಕಾಲ್ಮುರಿದು ಬಿದ್ದವನ ಮೇಲೆ ಒರಳು ಕಲ್ಲು ಇಟ್ಟಂತಾಯಿತು'

'ಅದು ಸರಿ. ಶ್ರೀ ಸಾಮಾನ್ಯನಿಗೆ ಮಾತ್ರವಲ್ಲ, ನಮ್ಮ ಹೋಟೇಲು ಮಾಲ್ಹಕರ ಪರಿಸ್ಥಿತಿ....'

"ಪರಿಸ್ಥಿತಿ?"

'ಗಂಭೀರಾವಸ್ಥೆಗೆ ಮುಟ್ಟಿದೆ.'

'ಗಂಭೀರವೋ... ?.....ಚಿಂತಾಜನಕವೋ? ಅಂತೂ...'

'ನಮಗೆ ಬೇಕಾಗುವ ಅವಶ್ಯ ಸಾಮಗ್ರಿಗಳು ಸಿಗುವುದು ದುಃಸ್ಸಾಧ್ಯವಾಗಿದೆ. ಅದೆಲ್ಲ ನಾನು ಹೇಳಬಾರದ್ದು. ಆದರೆ...."

"ಹೇಳಿ...ಹೇಳಿ....ನೀವೊಂದು ಪ್ಯಾಂಟಿಗೆ ಬನ್ನಿ',

"ಮೈದಾ....ಸಕ್ರೆ.....ಕಡ್ಲೆ...ಅಕ್ಕಿ ...'

"ಇದೇನು? ನೃಸಿಂಹಾಚಾರ್ರೆ ನಿಮ್ಮ ಅಂಗಡಿ ಬಿಲ್ಲನ್ನು ನನ್ನ ಹತ್ರ ಹೇಳಿ ಏನು ಪ್ರಯೋಜನ? ಅದನ್ನು..."

'ಹಾಗಲ್ಲ. ಸಕ್ರೆ ಈಗ ಬಹಳ ತುಟ್ಟಿಯಾಗಿದೆ"

"ಅಂಪ್ರೆ ಕಂಟ್ರೋಲ್ ಸಕ್ರೆ ಇನು ಮುಂದೆ ಸಿಗು....'

"ಕಂಟ್ರೋಲ್ ಸಕ್ರೆ ಹಾಗಿರ್ಲಿ. ಅಂಗಡಿಗಳಲ್ಲೂ ಒಳಗಿಟ್ಟು ಕೊಂಡು...'

" 'Impossible'. ಅಂಗಡಿಗಳಲ್ಲಿ ಅದು ಹ್ಯಾಗ ಸಕ್ರೆ ಸಿಗೋದು? ಸಕ್ರೆ ನಿಯಂತ್ರಿಸಲ್ಪಟ್ಟಿದು ನಿಮಗೆ...."

'ಎಲ್ಲಾ ಗೊತ್ತು ಸ್ವಾಮಿ. ಎಲ್ಲಾ ಕಳ್ಳ ಮಾರ್ಗದ ವಹಿವಾಟು! ಕಳ್ಳಸಂತೆ ಖದೀಮರ ತಾಕಲಾಟ"

'Correct ಬಹುತ್ ಅಚ್ಛಾ ಬಾತ್ ಹೈ'

'ಅಚ್ಛಾಬಾತೋ? ಹ್ಹಹ್ಹಹ್ಹ ಎಲ್ಲ ನಮ್ಮ ಸರಕಾರದ ಕಾರ್ಯ ವೈಭವ"

"ಛೆ...ಅಲ್ಲಿ ವರೆಗೆ ಹೋಗ್ಬೇಡಿ. ಇಷ್ಟು ಸಣ್ಣ ವಿಷಯಕ್ಕೆ...''

"ಅಲ್ಲಿಯುವರೆಗಲ್ಲ. ಅಗತ್ಯ ಬಿದ್ರೆ ಅದಕ್ಕಿಂತಲೂ ಮೇಲೆ ಹೋಗ್ಬೇಕಾಗುತ್ತೆ" ಜಾಸ್ಮ ಶಂಕಣ್ಣ "ಒಂದು ಗ್ಲಾಸು ಥಂಡಾ ಪಾನೀ ಲಾವೋ" ಎಂದು ಕಿರಿಚಿಕೊಂಡ.

'ಅಂಪ್ರೆ ನಮ್ಮ ಸರಕಾರ ಏನನ್ನೂ ಸಾಧಿಸಿಲ್ಲ ಅಂತ ನಿಮ್ಮ...'

"ಮತ್ತೇನು? ಏನನ್ನು ಸಾಧಿಸಿತು? ಬಡ ಜನರಿಗೆ ಮುಷ್ಕರ ಹೂಡುವ ಸಿದ್ಧಿ ಕೊಡ ಮಾಡಿತು ಅಷ್ಟೆ' ಪೇಪರ್ ಪಾಪಣ್ಣನೂ ಮಾತು ಕೂಡಿಸಿದ.

'ಅದೆಲ್ಲ ನಿಮ್ಮಂಥವರ ದೃಷ್ಟಿಕೋನ. ನೋಡಿ, ನಮ್ಮ ಸರಕಾರ..."

'ನೋಡಿ, ಈಗ ಮದ್ರಾಸಿನಲ್ಲಿ ಅಣ್ಣಾದೊರೈ ಕಾರಭಾರು, ಅದೂ ಅಲ್ಲಿಯ ಸರಕಾರ ಈಗ ಅಂಬೆಗಾಲಿಕ್ಕುತ್ತದಷ್ಟೆ. ಏನೊಂದು ದಿಟ್ಟತನ! ಧೈರ್ಯದಿಂದ ಅಕ್ಕಿ ಧಾರಣೆ ಇಳಿಸಿ ಬಡ ಜನತೆಯ ಪ್ರಾಣ ರಕ್ಷಣೆ ಮಾಡೋದು ಎಷ್ಟೊಂದು ಪುಣ್ಯದ ಕೆಲಸ! ನಿಮ್ಮವ ಪ್ರಾಯಕ್ಕೆ ಬಂದವ, ಪಳಗಿದವ, ಅವನೇನನ್ನ ಸಾಗಿಸಿದ?..."

"ಲಂಚ ನಿರೋಧ ಸಮಿತಿ' ಮಾಡಿ ಭ್ರಷ್ಟಾಚಾರದ ಬೀಜ ಬಿತ್ತಿದ? ಅ ನಿಯಂತ್ರಣ ಈ ನಿಯಂತ್ರಣ ಎಂದು ಕಾಳಸಂತೆ ಖೋರರಿಗೆ ಜನ್ಮವಿತ್ತ. ಪ್ರೋಹಿಬಿಶನ್ ತಂದು ಮಾರ್ಗದ ಮಧ್ಯೆ ಮಧ್ಯ ದಂಗಡಿ ತೆರೆದ. ಇನ್ನೀಗ ತೆಗೆಯುವುದಂತೆ ಸೇತುವೆ ನಿರ್ಮಿಸಿ ನಿತ್ಯ ಕಂಟ್ರಾಕ್ಟರ ರು.." ಪಾಪಣ್ಣ ಟೇಬಲ್ ತಟ್ಟಿ ಹೇಳಿದರು.

"ಸಾಕು....ಸಾಕು...ನಿಲ್ಲಿಸಿ...ಶಾಂತಂ ....ಪಾಪಂ....ನಾನು ಕಾಂಗ್ರೆಸ್ಸಿಗನೆಂದ್ರ ಎಣಿಸಿ ನೀವಿಷ್ಟು ಉದ್ಬುದ್ಧ ನೂತನಾಡುತ್ತಿದ್ದೀರಿ ಅಂತ ತೋರುತ್ತೆ...ಹುಂ. ....ನಾನು ಈ ಬಾರಿ ತಟಸ್ಥ, ಪಕ್ಷ ರಹಿತರ ಪಂಗಡದವ."

'ಯಾವ ಪಕ್ಷವಾದರೇನು? ಪರಿಸ್ಥಿತಿ ರೂಕ್ಷಾವಸ್ಥೆಗೆ ತಲುಪಿದೆಯಲ್ಲಾ." ನೃಸಿಂಹಾಚಾರ್ರ ಕೊಂಕು ನುಡಿ. "ನಮ್ಮದು ಜಾತ್ಯಾತೀತ ರಾಷ್ಟ್ರವೆಂಬುವದಕ್ಕೆ ದೃಷ್ಟಾಂತ ಡಾ| ಝಾಕೀರ ಹುಸೇನರು ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಯಾದದ್ದು. Perfect selection. ಅಲ್ವೇ ಆಚಾರ್ರೆ?"

'.........."

'ಒಂದು ಪ್ಲೇಟು ಚಟನಿ ಇಂಗೆ ಕೊಂಡು ಬಾ' ಹಾಸ್ಯ ಶಂಕಣ್ಣನ ಓರ್ಡರು.

ಅಲ್ಲಿದ್ದವರೆಲ್ಲ ಆಗ ಗೊಳ್ಳೆಂದು ನಕ್ಕರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 226/1960.
R. E. P. 132/1966.

ಜಲಜಾಕ್ಷಿ ಅಮ್ಮ—(ಪೌತಿ)—ವಾರೀಸುದಾರರು. ಕೆ. ಗೋಪಾಲಕೃಷ್ಣ ಭಟ್ಟ ಕೂಡಾ —ಅರ್ಜಿದಾರರು.

ಮತ್ತು

1, ವೆಂಕಪ್ಪ ಶೆಟ್ಟಿ—ದೂದಮ್ಮ ಶೆಡ್ತಿರ ಮಗ—

2, ಸಂತೋಷಕುಮಾರ್, 3 ಸುರೇಶಕುಮಾರ್, 4, ಸುರೇಶಕುಮಾರ—5, ದಿನೇಶಕುಮಾರ್, 6. ರಮೇಶಕುಮಾರ್—ಪ್ರಾಯಸರು ಗಾರ್ಡಿಯನ್—ತಂದೆ—ಸೀತಾರಾಮ ಶೆಟ್ಟಿ. ಸೀತಮ್ಮ ಶೆಡ್ತಿರ ಮಕ್ಕಳು —ಎದುರು.

1ನೇಯವನು ಕುಂದಾಪುರ ತಾಲೂಕು ಮೊಳಹಳ್ಳಿ ಗ್ರಾಮದಲ್ಲಿಯೂ ಮಿಕ್ಕವರು ಉಡುಪಿ ತಾಲೂಕು ಶಿವಳ್ಳಿ ಗ್ರಾಮದಲ್ಲಿಯೂ ಇರುವವರು.

ಇವರೊಳಗೆ

ಸದ್ರಿ ಎದುರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ಅಮಲ್ದಾರಿಯ ಮೃತ 1ನೇ ಅರ್ಜಿದಾರಳು ಜಲಜಾಕ್ಷಿ ಅಮ್ಮನ ವಾರೀಸುದಾರರಾಗಿ ತಮ್ಮನ್ನು ಕಕ್ಷಿಯಲ್ಲಿ ಸೇರಿಸಿದ ಮೇರೆಗೆ ಈ ಅಮಲ್ದಾರಿಯನ್ನು ಮುಂದುವರಿಸುವರೆ ಪರ್ಮಿಶನ್ ಕೊಟ್ಟು ಅಮಲ್ದಾರಿಯ ಎಲ್ಲಾ ನಿವೃತ್ತಿಗಳನ್ನು ಕೊಡಿಸಬೇಕೆಂತ ಅರ್ಜಿದಾರರು ಹುಕುಂ ಕೇಳಿರುವದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದರೆ ಸದ್ರಿ ಅಮಲ್ದಾರಿಯ ಮುಂದಿನ ತಾರೀಕು 26—7—1967ನೇ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao
Advocate for Petitioners.
Udipi, 10—7—1967.

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

-ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲಿ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 171/1967.

ವಾದಿ— ವೆಂಕಟಾಚಲ ಪತ್ವಾರ.

ಪ್ರತಿವಾದಿರು— 1. ಬಚ್ಚು ಹೆಂಗ್ಸು, ಚಂದು ಹೆಂಗ್ಸಿನ ಮಗಳು. 2. ತುಂಗು ಹೆಂಗ್ಸು, 1ನೇ ಪ್ರತಿವಾದಿಳ ಮಗಳು, ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದಲ್ಲಿರುವವರು, P. O. Koni.

ವಾದಿಗೆ ಪ್ರತಿವಾದಿರು ತಾ. 7-9-1963 ರಲ್ಲಿ ಬರೆದು ಕೊಟ್ಟ ಚಾಲಗೇಣಿ ಎದುನಾಡಿ ಪ್ರಕಾರ ವರುಷ 1ರ ಅಕ್ಕಿ ಮೂಡಿಗೆ 4 ನಗದು ರೂಪಾಯಿ 13 00ರಂತೆ ಚಾಲಗೇಣಿಗೆ ಅನುಭವಿಸುವ ಸ್ಥಳದ ಬಾಬ್ತು ಕಳೆದ ವಿಶ್ವಾವಸು ಸಂವತ್ಸರದ ಆದೆವಾಶಿ ಗೇಣಿ ಬಾಕಿಗೆ ಮೇಲ್ಕಂಡ ದಾವಾ ವಾದಿಯು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ 7-8-67ನೇ ದಿವಸ ಹಗಲು 11ಗಂಟೆಗೆ ಹಾಜರ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ತಿವ್ವಾಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

K. Raghunatha Shenoy
Advocate for Plff.
Coondapoor, 6—7—67.

Edited Printed & Published by K. H. Shetty at the Navayuga Press Udipi S. India

ನವಯುಗ

27—7—1967



೨೦ ಪೈಸೆ

ಧರ್ಮ - ಅಧರ್ಮ

ಬರೆದವರು.
ಶ್ರೀ ಐ ಎಚ್ ಶಾಂತಾರಾಮ ಶೆಟ್ಟಿ, ಬ್ರಹ್ಮಾವರ.

ಉಡುಪಿ ತಾಲೂಕು ಬ್ರಹ್ಮಾವರ ಪಿರ್ಕಾ ಬಂಕರ್ಣರು ರಸ್ತೆಯ ಮನೆಯಲ್ಲಿ ಗಲಾಟೆಯೋ ಗಲಾಟೆ ಆದರೂ ಆಸುಪಾಸಿನ ನೆರೆಹೊರೆಯವರು ತಮ್ಮ ಮಟ್ಟಿಗೆ ತಾವು ತಟಸ್ಥರಾಗಿದ್ದರು.

ದಾರಿ ಹೋಕರು ಗಲಾಟೆ ಏನೆಂದು ಮನೆಯೊಳಗೆ ಇಣಿಕಿ ನೋಡಲು, ಪಾರ್ಥಿವ ಶರೀರದ ಮುಂದೆ ಒಬ್ಬಾಕೆ ಹೆಂಗಸು, ಬಾಯಿ ಬಾಯಿ ಬಿಡುತ್ತ ಅಳುತ್ತ ಕುಳಿತಿದ್ದಳು

ಆರು ಮಂದಿ ಯುವಕರು ಕರವಸ್ತ್ರವನ್ನು ಮುಖಕ್ಕೆ ಅಡ್ಡ ಹಿಡಿದು ಅಳುತ್ತಿದ್ದರು.

ಅದನ್ನು ಕಂಡ ದಾರಿ ಹೋಕರಿಗೆ ಕರುಳಿರಿದಂತಾಗಿ ಮನೆಯೊಳಗೆ ನುಗ್ಗಿ ತಾಯಿ ಮಕ್ಕಳಿಗೆ ಸಮಾಧಾನ ಪಡಿಸಿ ಶವದ ದಹನ ಕ್ರಿಯೆಗೆ ಏರ್ಪಡಿಸಿದರು

ದೇವದಾಸರದ್ದು ಮಧ್ಯಮ ತರಗತಿಯ ಸಂಸಾರ, ಧನವಂತರೂ ಅಲ್ಲ, ತೀರ ಬಡವರ ಸಾಲಿಗೆ ಸೇರತಕ್ಕವರೂ ಅಲ್ಲ. ಆದರೆ ಆರ್ಥಿಕ ಅಡಚಣೆ ತಪ್ಪಿದ್ದಲ್ಲ. ದೇವದಾಸರು ಅಸಿಸ್ಟೆಂಟ್ ಇಂಜನೀಯರು. ದೇವರು ದೇವದಾಸರಿಗೆ ಹಣದ ವಿಚಾರದಲ್ಲಿ ಪಕ್ಷಪಾತ ಮಾಡಿದರೂ ಮಕ್ಕಳ ವಿಚಾರದಲ್ಲಿ ಪಕ್ಷಪಾತ ಮಾಡಿರಲಿಲ್ಲ.

ದೇವರ ಕ್ರಮವೇ ಹಾಗಲ್ಲವೇ? ಹಣವಿದ್ದವರಿಗೆ ಹಣ ಕೊಡುತ್ತಾ ಹೋಗುವುದು, ಬಡವರಿಗೆ ಮಕ್ಕಳು ಹೆಚ್ಚುತ್ತಾ ಹೋಗುವುದು —ದೈವಲೀಲೆಯಾಗಿರಬೇಕು. ಹಾಗೆ ಮಾಡದಿದ್ದರೆ ನಿರಾಕಾರಮೂರ್ತಿಯಾದ ದೇವರನ್ನು ಸಾಕಾರ ಮೂರ್ತಿಯಾದ ಮಾನವನು ಪೂಜಿಸುತ್ತಿದ್ದನೇ?

ಶುಕ್ರವಾರ ಪತ್ನಿ ಪುತ್ರರ ದುರ್ಭಾಗ್ಯವೆಂಬಂತೆ ಅಂದು ಕೆಲಸ ಮುಗಿಸಿಕೊಂಡು ಮನೆಗೆ ಬಂದ ದೇವದಾಸರಿಗೆ ಎದೆಯಲ್ಲಿ ಏನೋ ಒಂದು ರೀತಿ ನೋವು ಕಾಣಿಸಿ ಕೊಂಡಂತಾಗಿ ಒಂದು ಗಂಟೆಯ ನಂತರ, ಶಿವಸಾಯುಜ್ಯವನ್ನು ಸೇರಿ ಅವರ ಪತ್ನಿ ಲಲಿತಮ್ಮನವರನ್ನು ಪುತ್ರರಾದ ಶ್ರೀಧರ, ಮಹಾಬಲ, ಸುಂದರ, ಶಿಶುಧರ, ಶೇಖರ, ರಘುನಂದನರನ್ನು ಅನಾಥರಾಗಿ ಮಾಡಿದರು

○ ○ ○ ○

ಮೂಲೆಯಲ್ಲಿ ಅಳುತ್ತ ಕುಳಿತ ತಾಯಿ ಲಲಿತಮ್ಮನವರನ್ನು ನೋಡಿ ಅವರ ಮಕ್ಕಳು ಆರು ಮಂದಿ ಅವರೊಡನೆ ಬಂದು ಕುಳಿತರು

ಅವರಲ್ಲಿ ಹಿರಿ ಮಗನಾದ ಶ್ರೀಧರನು ಆರಂಭಿಸಿದ

"ಅಮ್ಮ, ಮಾನವನಾಗಿ ಹುಟ್ಟಿದ ಮೇಲೆ ಯಾವುದಕ್ಕೂ ಹೆದರಬಾರದಮ್ಮ. ಕಷ್ಟ ಸುಖವು ಮರ್ತ್ಯ ಲೋಕದಲ್ಲಿ ಹುಟ್ಟಿದ ಮೃಗ-ಪಕ್ಷಿ ಮಾತ್ರ, ಮಾನವರಿಗೆ ತಪ್ಪಿದ್ದಲ್ಲ. ಅದನ್ನು ಧೈರ್ಯದಿಂದ ಎದುರಿಸಬೇಕಮ್ಮ ನೀನು ಹೀಗೆ ಅಳುತ್ತ ಕೂಡಬಾರದು."

"ಅದಕ್ಕಲ್ಲ, ಶ್ರೀಧರ ನನ್ನ ಚಿಂತೆ ನಮ್ಮ ಮುಂದಿನ ಜೀವನ ಹೇಗೆ ನಡೆಯುತ್ತದೆ? ಆದಾಯವಿಲ್ಲದೆ ನೆಚ್ಚಿ ಎಷ್ಟು ದಿವಸ ಮಾಡಬಹುದು?'

"ಅಮ್ಮ ಯಾವುದಕ್ಕೂ ಹೆಚ್ಚಿನ ಸಿಂಹಾವಲೋಕನ ಮಾಡುವುದು ಬೇಡಮ್ಮ ಸ್ವಲ್ಪ ಹಿಂದಿನದ್ದೆ ತಿಳಿಯುವುದಾದರೆ ನಮ್ಮ ದಿವಂಗತರಾದ ಸ್ವದಾಸಿಗಳು ಹೇಗಿದ್ದರಮ್ಮ? ಬಡತನದಲ್ಲಿ ಹುಟ್ಟಿ ತಂದೆಯನ್ನು ಕಳೆದು ಕೊಂಡರು. ಧೈರ್ಯದಿಂದ ಜೀವನದ ಸಮಸ್ಯೆಗಳನ್ನೆಲ್ಲ ಎದುರಿಸಿ, ವಿಶ್ವವಂದ್ಯರಾಗಿ ಬಾಳಲಿಲ್ಲವೆ? ಅಮ್ಮಾ ಹಾಗೆ, ಬಂದ ದೆಲ್ಲವನ್ನು ಧೈರ್ಯವಾಗಿ ಎದುರಿಸುವ. ನಾನು ಏನೇ ಆದರೂ ನಿಮ್ಮನ್ನೆಲ್ಲ ಸುಖ ಜೀವನದಲ್ಲಿ ನಡೆಸಿಕೊಂಡು ಹೋಗುತ್ತೇನಮ್ಮ".

ಅದಕ್ಕೆ ಎರಡನೆಯವನಾದ ಮಹಾಬಲನು "ಅಮ್ಮಾ ಶ್ರೀಧರನ ಒಣ ವೇದಾಂತಕ್ಕೆ ಬೆಲೆಕೊಡಬೇಡಮ್ಮ ನಮ್ಮ ಪಿತ್ರಾರ್ಜಿತವಾದ ಆಸ್ತಿಯನ್ನು ಮಾರಿ ಜೀವನ ಮಾಡೋಣ ಎಂದನು.

ಅದಕ್ಕೆ ಮೂರನೆಯವನಾದ ಸುಂದರನು

"ಅಮ್ಮಾ ನಾವು ಇಷ್ಟು ಮಂದಿ ಮೀಸೆ ಹೊತ್ತ ಗಂಡಾಸರಾಗಿದ್ದು; ಆಸ್ತಿಮಾರಿ ಜೀವನ ಮಾಡುವುದೆಂದರೆ ನಾವು ಗಂಡಾಗಿ ಹುಟ್ಟಿ ಏನು ಸಾರ್ಥಕ?" ಎಂದನು, ಅದಕ್ಕೆ ಶಿಶುಧರನು,

ಹೌದಮ್ಮ ಸುಂದರಣ್ಣ ಹೇಳಿದ ಹಾಗೆ ನಮಗೆ ಸ್ವಂತ ಸಂಪಾದಿಸಿ ಆಸ್ತಿ ಮಾಡಲಿಕ್ಕೆ ಆಗದಿದ್ದರೂ ಹಿಂದಿನವರೂ ಮಾಡಿಟ್ಟ ಆಸ್ತಿಯನ್ನು ಮಾರಿ ಜೀವಿಸಿದರೆ ತಂದೆಯ ಆತ್ಮಕ್ಕೆ ಸುಖಸಿಕ್ಕಲಾರದು. ಅದು ಅಲ್ಲದೆ, ಕುಳಿತು ಉಂಡರೆ ಕುಡಿಕೆ ಹೊನ್ನಿದ್ದರೂ ಸಾಲದು ಎಂದು ಬಲ್ಲವರು ಹೇಳುತ್ತಾರೆ ಆಸ್ತಿ ಮಾರಿದ ಹಣ ಎಷ್ಟು ದಿವಸ ಬಂದೀತು? ಜೀವಮಾನ ಪರ್ಯಂತ ತೀಡಿದು ಹಾಕಲಾರದಂತ, ಅಪವಾದ!

ದೇವದಾಸರಂತಹ ಪುಣ್ಯಾತ್ಮರ ಹೊಟ್ಟೆಯಲ್ಲಿ ಭೂಭಾರವಾದಂತಹ ಮಕ್ಕಳು ಹುಟ್ಟಿದರಲ್ಲವೆಂದೂ ಎಲ್ಲರಿಗೂ ಹೇಳಲಿಕ್ಕೆ ದಾರಿ ಮಾಡಿಕೊಟ್ಟಂತಾಗುವುದು. ಅಂಥ ಯೋಚನೆ ಬೇಡ ಮಹಾಬಲಣ್ಣ" ಎಂದನು.

ಅದಕ್ಕೆ ಐದನೆಯವನಾದ ಶೇಖರನು.

"ಪಿತ್ರಾರ್ಜಿತವಾದ ಆಸ್ತಿಯನು ಮಾರುವುದು ಬೇಡಮ್ಮ ನಾನು ಯಾರಿಂದಾದರೂ ಹಣ ಲಪಟಾಯಿಸಿ ತಂದು ನಿಮ್ಮ ಜೀವನವನ್ನು ಹೊರೆಯುತ್ತೇನಮ್ಮ' ಎಂದನು.

'ಪರರಿಂದ ಲಪಟಾಯಿಸಿ ತಂದು ಬಾಳುವುದ ಜೀವನವಲ್ಲ ಶೇಖರಣ್ಣ ಅದಕ್ಕಿಂತ ಮರಣವೇ ಲೇಸು? ಇನ್ನೊಬ್ಬರಿಗೆ ವಂಚಿಸುವಂತಹ ಹೀನ ಕೃತ್ಯ ಇನ್ನೊಂದಿಲ್ಲ' ಎಂದನು ಕಿರಿಯವನಾದ ರಘುನಂದನ.

ಆ ಮಾತಿಗೆ ಶೇಖರನು ಕೆರಳಿದನು.

'ಏನು, ನನಗಿಂತ ಕಿರಿಯವನಾದ ನೀನು ನನಗೆ ಬುದ್ಧಿವಾದ ಹೇಳಲು ಹೊರಟಿಯೋ?

"ವಿವೇಕವು ಹಿರಿಯರಲ್ಲಿ ಜಾಸ್ತಿ, ಕಿರಿಯವರಲ್ಲಿ ಕಡಿಮೆ ಎಂಬತಾರತಮ್ಯವಿಲ್ಲ. ಅದನ್ನು ಉಪಯೋಗಿಸಿದ ಹಾಗೆ ಉಂಟು ಶೇಖರಣ್ಣ, ಹಿರಿಯರು ವಿವೇಚಿಸದೆ, ಸುಸಂಸ್ಕೃತಿಗೆ ಇಳಿದರೆ ಅವರನ್ನು ವಿವೇಕ ಮಾರ್ಗದಲ್ಲಿ ಕೊಂಡು ಹೋಗುವುದು, ಕಿರಿಯರ ಧರ್ಮ" ಎಂದನು ರಘುನಂದನ.

'ಇದು ಧರ್ಮ ಅಧರ್ಮದ ಪ್ರಶ್ನೆ ಅಲ್ಲ. ಜೀವನದ ಪ್ರಶ್ನೆ ರಘುನಂದನ. ತ್ರೇತಾಯುಗವಲ್ಲ, ಇದು ಕಲಿಯುಗ, ಅನ್ಯಾಯ ಮಾಡದೆ ಹಣ ಮಾಡಲು ಸಾಧ್ಯವಿಲ್ಲ" ಎಂದನು ಕೆರಳಿದ ಶೇಖರ.

"ಹಣವೆ ಜೀವನದ ಸರ್ವಸ್ವವಲ್ಲ, ಸನ್ಮಾರ್ಗವೆ ನಿಜವಾದ ಧನ, ಶೇಖರಣ್ಣ ಅದು ಅಲ್ಲದೆ, ಪ್ರಾಣವನ್ನಾದರೂ ಕಳೆದು ಕೊಳ್ಳಬಹುದು ವಿನಾ: ಮಾನವನ್ನು ಕಳೆದುಕೊಳ್ಳಬಾರದಣ್ಣ'

ಎಂದನು, ರಘುನಂದನ

ಅದಕ್ಕೆ ಕೋಪೋದ್ದೀಪಿತನಾಗಿ ಶೇಖರನು

"ನಿನ್ನ ಒಣ ವೇದಾಂತ ಬೇಡ ನೀನು ಸನ್ಮಾರ್ಗದಲ್ಲಿ ನಡೆ ನಿನ್ನನ್ನು ರಾಮಕೃಷ್ಣ ಪರಮಹಂಸರ ಅವಪರವತಾರ ಎಂತ ಎಷ್ಟು ಜನರು ಆದರಿಸುತ್ತಾರೆ ನೋಡುವ ನಾನು ಇದೇ ಮಾರ್ಗದಲ್ಲಿ ನಡೆದು ಸಮಾಜದಲ್ಲಿ ಯಾವ ಸ್ಥಾನವನ್ನು ಪಡೆಯುತ್ತೇನೆ ನೋಡು" ಎಂದನು

ಈ ಮಾತುಗಳನ್ನು ಕೇಳಿ ಮಹಾಬಲನು

'ಶೇಖರನ ಮಾತು ನಿಜ ಇಂದಿನ ಆಡ್ಯತೆಗೆ ಹಣವೇ ಮುಖ್ಯ ಹೊರತು ಗುಣವಲ್ಲ ಈ ಇಪ್ಪತ್ತನೆಯ ಶತಮಾನದಲ್ಲಿ ಮಹತ್ವಾಕಾಂಕ್ಷೆವುಳ್ಳವರು ಹಣ ಮಾಡಲಿಕ್ಕೆ ಹಾತೊರೆಯಬೇಕಲ್ಲವೆ? ತತ್ವಕ್ಕಲ್ಲ. ಉಪದೇಶ ಮಾಡಲಿಕ್ಕೆ ತತ್ವ ವಿನಾ ಆಚರಿಸಲಿಕ್ಕಲ್ಲ' ಎಂದನು ಮಹಾಬಲ.

ಹೀಗೆ ಒಮ್ಮತಕ್ಕೆ ಬರದಿದ್ದುದರಿಂದ ಜೀವನದ ಸಮಸ್ಯೆ ಎದುರಿಸಲು ಬ್ರಹ್ಮಾವರವನ್ನು ಬಿಟ್ಟು ಕುಟುಂಬ ಸಹಿತ ಮುಂಬಯಿಗೆ ಹೋದರು.

○ ○ ○

ಶ್ರೀಧರನು ಸ್ನೇಹಿತರ ಶಿಫಾರಸಿನಿಂದ ಟಾಟಾ ಕಂಪೆನಿ ಸೇರಿದನು ಶಿಶುಧರನು ಅಮೀನನಾಗಿ ಸೇರಿದನು. ಸುಂದರ ರೈಲ್ವೆಯಲ್ಲಿ ಸೇರಿದನು ರಘುನಂದನನು ಸಬ್ ಇನ್‌ಸ್ಪೆಕ್ಟರನಾಗಿ ಆಯ್ಕೆಯಾದನು.

ಮಹಾಬಲ ಶೇಖರ ಉತ್ತಮ ಗೃಹಸ್ಥರಂತೆ ಬಟ್ಟೆಬರೆ ತೊಡುತ್ತಾ, ಪೇಟೆಯಲ್ಲಿ ಅವರಿವರಿಂದ ಲಪಟಾಯಿಸುತ್ತಾ ಜೀವನ ಸಾಗಿಸಲು ಪ್ರಾರಂಭಿಸಿದರು. ಹೀಗೆ ಅವರ ಜೀವನ ಸಾಗುತ್ತಾ ಇತ್ತು. ಒಂದು ವರ್ಷದ ತನಕ.

ಅಂದು ಎಪ್ರಿಲ್ ಹನ್ನೆರಡು, ಕಾಂಗ್ರೆಸ್ ವಸ್ತು ಪ್ರದರ್ಶನ ವೀಕ್ಷಿಸಲು ಪೋಲೀಸ್ ಸುಪರಿಂಟೆಂಡೆಂಟ್‌ರು ನಾಗರಿಕ ಉಡುಪಿನಲ್ಲಿ ಪತ್ನಿ ಸಮೇತ ಹೋದರು. ಅಲ್ಲೇ ಇದ್ದ ಶೇಖರ ಮತ್ತು ಮಹಾಬಲರು ಇವರು ಯಾರೋ ಶ್ರೀಮಂತರು ಎಂದು ಭಾವಿಸಿ ಸುಪರಿಂಡೆಂಟ್‌ರ ಪತ್ನಿಯ ಕೊರಳಲ್ಲಿ ಇದ್ದ ಹಾರವನ್ನು ಅಪಹರಿಸಿ ಪರಾರಿಯಾದರು. ಅಲ್ಲೇ ಇದ್ದ ಪೋಲೀಸ್ ಇನ್‌ಸ್ಪೆಕ್ಟರನು ಪತ್ತೇದಾರಿ ಮಾಡಿದರಾದರೂ ಅಪರಾಧಿ ಸಿಕ್ಕಲಿಲ್ಲ.

○ ○ ○ ○

ಅಂದು ಅಣ್ಣ ತಮ್ಮಂದಿರೆಲ್ಲ ಒಟ್ಟುಗೂಡಿ ಊಟ ಮಾಡಿದ ಮೇಲೆ, ತಾಯಿ ಲಲಿತಮ್ಮನೊಡನೆ ಮಾತಾಡುತ್ತಾ ಕುಳಿತರು.

ಆಗ ಮಹಾಬಲನು ತಾವು ಆ ದಿನ ಮ

(ಹನ್ನೊಂದನೇ ಪುಟ ನೋಡಿರಿ)

ಸುಸ್ವಾಗತ!
ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ



ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ
ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.
ಫೋನ್: 77

ಟೆಲಿಫೋನ್ ನಂಬರ್
Telephone 226.

Estd 1921

NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿಯರ್ಥದಿಂದ ಕೂಡಿರಬೇಕು. ಕಾಗದ ತಾಳಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮಧ್ಯ ಪ್ರದೇಶದ ನೇಪಾ ನಗರದಲ್ಲಿ ನೇಪಾ ಮಿಲ್ಸ್‌ನಲ್ಲಿ ವೃತ್ತ ಪತ್ರಿಕೆಗಳಿಗೆ ಉಪಯೋಗಿಸುವ ಕಾಗದ ತಯಾರಿಕಾ ಯಂತ್ರ ಕಾರ್ಯಮಗ್ನವಾಗಿದೆ.

ನವಯುಗ

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೪೮ | ೨೭—೭—೧೯೬೭ | No. 48

ಶಿಕ್ಷಣ ಮಾಧ್ಯಮ

ಕೇಂದ್ರ ಶಿಕ್ಷಣ ಸಚಿವ ಡಾ| ತ್ರಿಗುಣ ಸೇನರು ಇತ್ತೀಚೆಗೊಂದು ಹೇಳಿಕೆಯಿತ್ತು ದೇಶದಲ್ಲಿ ಪ್ರಾದೇಶಿಕ ಭಾಷೆಯನ್ನೇ ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ಮಾಧ್ಯಮವನ್ನಾಗಿ ಮಾಡುವುದಕ್ಕೆ ಸರಕಾರ ತಾತ್ವಿಕವಾಗಿ ಒಪ್ಪಿಕೊಂಡಿದೆಯೆಂದು ಸಾರಿದ್ದಾರೆ. ಇದು ದೇಶದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ನವಕ್ರಾಂತಿಯ ಪ್ರಥಮ ರಶ್ಮಿಯೆಂದು ಹೇಳಲೇಬೇಕು ಸುಮಾರು ನೂರು ವರ್ಷಗಳಿಂದಲೂ ಭಾರತೀಯರನ್ನು ತಿನ್ನುತ್ತಿದ್ದ ಪ್ರಶ್ನೆ ಇದು–ನಮ್ಮ ಶಿಕ್ಷಣ ಮಾಧ್ಯಮ ಯಾವುದಾಗಬೇಕು? ಇದಕ್ಕೆ ಉತ್ತರವು ಲಭ್ಯವಾಗುವುದಕ್ಕೆ ಸ್ವಾತಂತ್ರ್ಯ ದೊರೆತು ಇಪ್ಪತ್ತು ವರ್ಷಗಳು ಬೇಕಾದುವು. ನಾವು ಹಿಂದಿನಿಂದಲೂ ಶಿಕ್ಷಣ ಮಾಧ್ಯಮವು ಎಲ್ಲ ಹಂತಗಳಲ್ಲಿಯೂ ಪ್ರಾದೇಶಿಕ ಭಾಷೆಯೇ ಆಗಬೇಕೆಂದು ಸಮರ್ಥಿಸುತ್ತ ಬಂದಿದ್ದೇವೆ. ಇಂದದು ನೈತಿಕ ವಿಜಯಗಳಿಸಿತು.

ರಾಜ್ಯದ ಶಿಕ್ಷಣ ಸಚಿವ ಶ್ರೀ ಶಂಕರಗೌಡರು ವಿಧಾನ ಸಭೆಯಲ್ಲಿ ಮಾತನಾಡುತ್ತ ಮುಂದಿನ ಐದು ವರ್ಷಗಳಲ್ಲಿ ಪದವಿ ಶಿಕ್ಷಣವನ್ನೂ ಮತ್ತೆ ಐದು ವರ್ಷಗಳಲ್ಲಿ ವೃತ್ತಿಪರ ಶಿಕ್ಷಣವನ್ನೂ ಪ್ರಾದೇಶಿಕ ಭಾಷೆಯಲ್ಲಿ ನೀಡುವ ಯೋಚನೆ ಸರಕಾರದ್ದು ಎಂದಿದ್ದರು. ಈಗ ಈ ಮಾತಿಗೊಂದು ಹೆಚ್ಚಿನ ಬೆಲಬಂದಂತಾಯಿತು. 'ಪ್ರಾದೇಶಿಕ ಭಾಷೆಗಳು ಬೆಳೆದಿಲ್ಲ; ಅವುಗಳಲ್ಲಿ "ಶಿಕ್ಷಣ ಮಾಧ್ಯಮ"ದ ಕಾರ್ಯ ನಿರ್ವಹಿಸುವ ಕ್ಷಮತೆಯಿಲ್ಲ; ಇಂಗ್ಲಿಷ್ ಭಾಷೆಯೊಂದೇ ಶಿಕ್ಷಣ ಮಾಧ್ಯಮದ ಕಾವ ಧೇನು' ಎಂದು ವಾದಿಸುವ ಆಂಗ್ಲ ಭಾಷಾ ಪಕ್ಷಪಾತಿಗಳೂ ನಮ್ಮಲ್ಲಿದ್ದಾರೆ. ವಿಶ್ವ ವಿದ್ಯಾಲಯದ ಹಂಗಿನಲ್ಲಿ ಪ್ರಾದೇಶಿಕ ಭಾಷಾಭ್ಯಾಸವನ್ನು ಮೀರಿಯಿರುವುದೆ ಎಂದು ಮೂಗು ಮುರಿಯುವವರೂ ಇದ್ದಾರೆ. ಇದಕ್ಕೆ ಉತ್ತರವೊಂದೇ — ಬ್ರಿಟಿಷ್ ಚಕ್ರಾಧಿಪತ್ಯದಲ್ಲಿದ್ದಾಗ ಈಗಿನಷ್ಟು ಕರಭಾರವಿರಲಿಲ್ಲ; ಅಭಾವವಿರಲಿಲ್ಲ ಅದೇ ಉತ್ತಮವೆನ್ನುವ ಗುಲಾಮೀ ಪ್ರವೃತ್ತಿಯಿದು. ಕೆಲವೇ ಮಂದಿ 'ಭಾಗ್ಯಶಾಲಿ'ಗಳಿಗಾಗಿ ಲಕ್ಷಾಂತರ ಮಂದಿ ಬಡವರನ್ನು ಬಲಿಕೊಡುವುದು. ಪ್ರಜಾಪ್ರಭುತ್ವದಲ್ಲಿ ಇಲ್ಲದ ಮಾತು. ಎಂತಹ ಶಿಕ್ಷಣ ಮಾಧ್ಯಮ ಮಾತೃಭಾಷೆಯೇ ಆಗಬೇಕು. ಇನ್ನು ಕೇಂದ್ರ–ರಾಜ್ಯ ಸರಕಾರಿ ನೌಕರರು ವರ್ಗಾವಣೆ ಹೊಂದುವುದರಿಂದ, ಅವರ ಮಕ್ಕಳ ಉಪಯೋಗಾರ್ಥವಾಗಿ ಈಗ ಇಂಗ್ಲಿಷ್ ಮಾಧ್ಯಮದ ಶಾಲೆಗಳಿರುವಂತೆ ಹಿಂದೀ ಮಾಧ್ಯಮದ ಶಾಲೆಗಳನ್ನು ಅತ್ಯಂತಾವಶ್ಯಕವೆನಿಸಿದಲ್ಲಿ ತೆರೆಯಬಹುದು. ಶಿಕ್ಷಣದ ಮಾಧ್ಯಮವು ಪ್ರೌಢ ಶಾಲಾ ಮಟ್ಟದ ವರೆಗೆ ಮಾತೃಭಾಷೆಯೇ ಆಗಿರುವಾಗ, ಈ ಶಿಕ್ಷಣವು ಸಮರ್ಪಕವಾಗಿಯೇ ನೀಡಲ್ಪಡುತ್ತಿರುವುದು ಸರ್ವವೇದ್ಯವಿರುವಾಗ, ಇದನ್ನು ವಿಶ್ವವಿದ್ಯಾಲಯಗಳಿಗೂ ಮುಂದುವರಿಸುವುದು ಅನ್ಯಾಯವಲ್ಲ. ಕೆಲವು "ಮಡಿವಂತ"ರಿಗಾಗಿ ದೇಶದ ಸಂಪತ್ತನ್ನು ವ್ಯರ್ಥ ಪೋಲು ಮಾಡುವುದು ಪ್ರಜಾಸತ್ತೆಗೆ ಭೂಷಣವಲ್ಲ. ಪರ್ಯಾಪ್ತ ಸಂಖ್ಯೆಯ ಉತ್ತಮ ಅಧ್ಯಾಪಕರು, ಬೋಧನೋಪಕರಣಗಳು— ಇತ್ಯಾದಿಯಿರುವ ಪ್ರೌಢಶಾಲೆಗಳ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಗಳಿಸುತ್ತಿವೆ. ಆದರೆ, ವಿಶ್ವವಿದ್ಯಾನಿಲಯ ಪ್ರವೇಶಿಸಿದೊಡನೆಯೇ ಈ ಮಕ್ಕಳ ಬುದ್ಧಿಗೆ ಮಂಕು ಕವಿಯುತ್ತದೆ— ಇಂಗ್ಲಿಷ್ ವಾತಾವರಣದಿಂದ. ಹಾಗಾಗಿ ಅನುತ್ತೀರ್ಣತೆಯ ಪ್ರಮಾಣ ಹೆಚ್ಚುವುದಕ್ಕೆ ಇದೂ ಒಂದು ಕಾರಣ.

ಪರದೇಶೀಯ ಭಾಷೆಯಲ್ಲಿ ಶಿಕ್ಷಣ ನೀಡುವುದು ಗುಲಾಮಿಯತೆಯನ್ನು ಹೇರಿದಂತೆ; ಕಡೆಪಕ್ಷ ಗುಲಾಮಿಯತೆಗೆ ಮಾರುಹೋದಂತೆ. ಅದರೂ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗ ಬೇಕಾದರೆ, ರಾಜ್ಯದ ಅಧಿಕೃತ ಭಾಷೆ ಮೊದಲು ಪ್ರಾದೇಶಿಕ ಭಾಷೆಯಾಗ ಬೇಕು. ನಮ್ಮ ಕನ್ನಡ ರಾಜ್ಯದಲ್ಲಿ ಕನ್ನಡ ಬಾರದ ಅಧಿಕಾರಿಗಳು ಇದ್ದಾರೆಂದ ಕಿಂವದಂತಿ. ಆರೊಂದಿಗೆ ರಾಜ್ಯಪಾಲ ಪಾರಕರು ಕನ್ನಡವನ್ನು ಕಲಿಯುತ್ತಿದ್ದು, ಇನ್ನು ಕೆಲಸಮಯದಲ್ಲೇ ಅವರು ಸಾರ್ವಜನಿಕ ಸಮಾರಂಭಗಳಲ್ಲಿ ಕನ್ನಡದಲ್ಲೇ ಭಾಷಣ ಮಾಡುವರು ಎಂಬ ಸುದ್ದಿ—ಇದು ಉಳಿದವರಿಗೆ ಮಾರ್ಗದರ್ಶಕ. ಹಿಂದೀ ಭಾಷೆಯೊಂದನ್ನು ಬಿಟ್ಟು ಉಳಿದ ಭಾಷೆಗಳಲ್ಲಿ ಪದವೀತ್ಯಾದಿ ತರಗತಿಗಳ ಪಠ್ಯ ಪುಸ್ತಕಗಳ ಅಭಾವವೂ ಇದೆ. ಈ ಕೊರತೆಯನ್ನು ಮುಂದೆ ಮಾಡುವ ಮೇಧಾವಿ ಆಂಗ್ಲಪ್ರಿಯರು ಕಾಯಿಯಿಲ್ಲ, ಮತ್ತೆ ಪೆನ್ನು ಏಕೆ? ಎಂದು ಕೇಳುತ್ತಾರೆ. ಪೆನ್ನು ಮೊದಲು ಬಂದಿತೆಂದರೆ, ಕಾಯಿ ತನಗೆ ತಾನಾಗಿಯೇ ಬರುತ್ತದೆ ಎಂಬ ವ್ಯವಹಾರ ಸತ್ಯವನ್ನು ಅವರು ಉದ್ದೇಶಪೂರ್ವಕ ಮರೆ ಮಾಚುತ್ತಾರೆ. ಗುಜರಾಥ ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಎಲ್ಲರಿಗೂ ಮಾದರಿಯಾಗಿದೆ. ಇತ್ತೀಚೆಗಾದ ವಿಚಾರದಂತೆ ಇಂಗ್ಲಿಷ್ ಭಾಷೆಯ ಪಠ್ಯಪುಸ್ತಕಗಳನ್ನು ಭಾರತವು ಅನುವಾದಿಸಿಕೊಳ್ಳಬಹುದ; ಇದಕ್ಕೆ ತಗಲುವ ವೆಚ್ಚವೂ ಕಡಿಮೆ; ವಿದೇಶೀ ವಿನಿಮಯವೂ ಉಳಿಯುವುದು ರಾಜ್ಯ–ಕೇಂದ್ರ ಸರಕಾರಗಳೂ ವಿಶ್ವವಿದ್ಯಾಲಯಗಳೂ ಪರಿಣತರಿಂದ ಒಂದು ಬಾರಿ ಆವಶ್ಯಕ ಪುಸ್ತಕಗಳನ್ನೂ ತಯಾರಿಸಿಕೊಂಡವೆಂದರೆ, ಮತ್ತೆ ಈ ಪರಂಪರೆಯು ಮುಂದುವರಿಯುವುದು. ಯಾವ ಹೆಚ್ಚಿನ 'ಲಾಭ'ವೂ ಇಲ್ಲದೆ ಈಗಾಗಲೇ ಕೆಲವೊಂದು ಶಾಸ್ತ್ರಗ್ರಂಥಗಳು ಕನ್ನಡದಲ್ಲಿ ಹೊರ ಬಂದಿವೆ; ಡಾ| ಶಿವರಾಮಕಾರಂತರು ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಕನ್ನಡದಲ್ಲಿಯೇ ಬರೆದಿದ್ದಾರೆ— ಅಂದರೆ, ಕನ್ನಡದಲ್ಲಿಯೂ ಗಹನವೆಂದು ಕರೆಯಲಾಗುವ ವಿಷಯವನ್ನು ವ್ಯಕ್ತಪಡಿಸುವುದು ಸಾಧ್ಯವೆಂದಂತಾಯಿತು. ಮಗು ಮೊದಲು ತೊದಲ ಬಹುದು. ಈ ದೋಷಕ್ಕಾಗಿ ಅದು ಮಾತನಾಡಲೇ ಬಾರದು ಎಂದು ಬಾಯಿ ಬಿಗಿ ಹಿಡಿದರೆ? ಪ್ರಾದೇಶಿಕ ಭಾಷೆಗಳೇ ಶಿಕ್ಷಣ ಮಾಧ್ಯಮವಾಗುವಂತಹ ಅಂತಿಮ ನಿರ್ಣಯವನ್ನು ಬೇಗನೇ ಮಾಡಿ ತಕ್ಕ ಸ್ಪಷ್ಟ ಭೂಮಿಯನ್ನು ನಿರ್ಮಿಸಿ ಮುಂದುವರಿಯಲು ಎಲ್ಲರೂ ಮುಂದಾಗ ಬೇಕು.

> **ವಚನ ಸುಧೆ**
>
> ಮಹತೇ ಯೋಪಕಾರಾಯ
> ನರಸ್ಯ ಪ್ರಭವೇನ್ನರಃ॥
> ತೇನ ವೈರಂ ಸಮಾಸಜ್ಯ
> ದೂರಸ್ಥೋಸ್ಮೀತಿ ನಾಶ್ವಸೇತ್॥
>
> ಅತ್ಯಂತ ಅಪಕಾರ ಮಾಡಬಲ್ಲವನೊಡನೆ ವೈರವನ್ನು ಕಟ್ಟಿಕೊಂಡು, ತಾನಾತನಿಂದ ದೂರವಿದ್ದೇನೆ—ತನಗೇನೂ ಅಪಾಯ ತಟ್ಟದು—ಎಂದು ನಿಶ್ಚಿಂತನಾಗಿರುವುದು ಎಂದಿಗೂ ಸಲ್ಲದು.

ಏನು ಸಂಗತಿ?

ವಿಧಾನ ಸಭಾ ಸದಸ್ಯ ಶ್ರೀ ಗೋಪಾಲ ಗೌಡರು ಮೊನ್ನೆ ತಾ. ೨೦ರಂದು ಒಂದು ಒಳ್ಳೆಯ ಸಂಗತಿಯನ್ನು ಬಹಿರಂಗಗೊಳಿಸಿದರು — ವಿಧಾನ ಸಭೆಯಲ್ಲಿಯೇ. ದಾವಣಗೆರೆಯಲ್ಲಿನ ಮೆಡಿಕಲ್ ಕಾಲೇಜಿನ ಸೀಟುಗಳಲ್ಲಿ ಕೆಲವನ್ನು ಮಂತ್ರಿ—ಮಾಗಧರಲ್ಲಿ ಹಂಚಲಾಗಿದೆ ಎಂಬ ಸೂಚನೆಯೊಡನೆ ಪಾಲು ಪಟ್ಟಿಯೂ ಇರುವ ಪತ್ರವೊಂದು ತನಗೆ ಬಂದಿದೆಯೆಂದು, ಅವರು ಬಹಿರಂಗಪಡಿಸಿ, ಆ ಪಾಲು ಪಟ್ಟಿಯನ್ನು ಓದಿ ಹೇಳಿದರು. ಇಂಥದೇ ಇನ್ನೊಂದು ಪತ್ರ ಶ್ರೀ ಸಿದ್ಧವೀರಪ್ಪನವರಿಗೂ ಬಂದಿದೆಯಾದರೂ ಅದನ್ನು ಓದುವ ಅವಕಾಶ ನಿರಾಕೃತವಾಯಿತು. ಶ್ರೀ ಗೌಡರಿಗೆ ಇದೊಂದು ಸೋಜಿಗವಾಗಿರಬಹುದು; ಅಥವಾ ಸಚಿವರನ್ನು ಪೇಚಿಗೆ ಗುರಿಮಾಡುವ ಸಾಧನವೆನಿಸಿದರೂ ಇರಬಹುದು. ಹೇಳಿ ಕೇಳಿ, ದಾವಣಗೆರೆಯದ್ದು 'ಪಗಡಿ ಕಾಲೇಜು' ಹಂಚಿಕೆದಾರರಲ್ಲಿ ಒಬ್ಬರು ಸ್ವಾಮಿಗಳೇ ಹೆಚ್ಚಿನ ಪಾಲು ಪಡೆದಿದ್ದಾರೆ. ಮಂತ್ರಿಗಳ ಸಂಖ್ಯೆಯೂ ಐದಾರು. ಪಾಪ, ಮಂತ್ರಿಗಳಾದ ತಪ್ಪಿಗೆ ಅವರ ಸಂಬಂಧಿಗಳೂ ಮಿತ್ರರೂ ಮೆಡಿಕಲ್ ಕಾಲೇಜದಲ್ಲಿ ಸೀಟು ಪಡೆಯಬಾರದೆ? ಆ ಹಂಚಿಕೆಯ ಪಟ್ಟಿಯನ್ನು ನೋಡುವಾಗ, ಬೇಡಿಕೆ ಇದಕ್ಕೂ ಹೆಚ್ಚಿತ್ತು ಎಂದು ಊಹಿಸಬಹುದು; ಪರಮಾಧಿಕಾರ ಕಾಲೇಜಿನ ಆಡಳಿತದಲ್ಲೇ ಉಳಿದಿರುವಾಗ, ಮಂತ್ರಿಗಳಿಗೇಕೆ ಭರ್ತ್ಸನೆ?

ನರಸಣ್ಣನ ಸರಸ

"ರಾಜಸ್ಥಾನದ ನಾಟಕ ಮುಗಿದ ಮೇಲೆ ಮಧ್ಯಪ್ರದೇಶದ ಕಾಂಗ್ರೆಸ್ ಶಾಸಕರು ಅಭಿನಯಕ್ಕೆ ತೊಡಗಿದ್ದಾರೆ...."

"ಪಾಪ, ಮಿಶ್ರ ಪೇಚಿನಲ್ಲಿ ಬಿದ್ದರಷ್ಟೆ..."

ಗೇಹ ರಾಜ್ಯದಲ್ಲಿ

ರಾಜಕಾರಣಿಗಳ ಲೆಕ್ಕಾಚಾರ

ಲೀ ಖಿ

'ಹೌದ್ರೀ ...'

"ಹ್ಞಾಂ....ಏನು ಹಾಹಾಕಾರ?"

'ಅಲ್ರಿ, ಇದೆಂಥದೋಂತ?'

'ಯಾವುದು?'

"ಅಲ್ರಿ, ಎಂ. ಪಿ.ಯಲ್ಲಿ ಮೂವತ್ತಾರು ಜನ ಕಾಂಗ್ರೆಸ್ಸು ಶಾಸಕರು ವಿರೋಧಿ ಪಕ್ಷ ಸೇರಿದರಂತಲ್ಲಾ....'

"ಅಯ್ಯೋ, ಇದ್ರಲ್ಲೇನಿಲ್ಲಾ ಏನು ವಿಶೇಷಾಂತ?'

"ಯಾಕೆ? ಏನೂ ವಿಶೇಷಾನೇ ಇಲ್ಲಾಂತೀರಾ?'

'ನೂರಕ್ಕೆ ನೂರರಷ್ಟೂ ಇಲ್ಲ'

'ಅಲ್ರಿ, ಒಂದು ಸರಕಾರದ ಉಳಿವು—ಅಳಿವಿಗೆ ಕಾರಣವೆನಿಸುವ ಈ ಘಟನೆಗೆ ಏನೂ ಮಹತ್ವವಿಲ್ಲ ಅಂತೀರಾ?'

"ಏನೇನೂ ಮಹತ್ವವಿಲ್ಲ ..'

"ಯಾಕೆ?'

"ರಾಜಕೀಯ ಅಂದರೆ ಹಾಗೇನೇ. ಇದನ್ನೇ ರಾಜಕೀಯ ಅನ್ನೋದು....'

'ಅಂದ್ರೆ....'

'ಅಂದ್ರೆ ಎಂಥದು? ನೋಡು, ಹಿಂದೆ ಎಲ್ಲಾ ಚಿಕ್ಕ ಪುಟ್ಟ ರಾಜರು ಇದ್ರು—ಇಸ್ಟೇಟು ರಾಜರೇ ಅನ್ನಬೇಕಾದ್ರೆ. ಇವ್ರು ಒಬ್ರ ಮೇಲೆ ಒಬ್ರು ಸವಾರಿ ಮಾಡೋಕೆ ಬೇಕಾದಾಗ ಆರಂಭ ಮಾಡ್ತಿದ್ರು..."

'ಅದೆಲ್ಲಾ ಬಿಡಿ. ಹಿಂದಿನ ಕಾಲದ ಮಾತು..."

'ಹೌದು, ಇಂದು ಪ್ರಜಾಸತ್ತೆ ಬಂದಿದೆ. ಪ್ರಜೆಗಳೇ ರಾಜರೂಂತ ಅನ್ನುತ್ತಾರೆ. ಮತದಾರರು, ತಮ್ಮವರಲ್ಲೇ ಒಬ್ಬನನ್ನ, ಶಾಸಕನನ್ನಾಗಿ ಆರಿಸುತ್ತಾರೆ— ಇವನೇ ಮಹಾರಾಜ ಅವನು ಶಾಸನ ಸಭೆಯಲ್ಲಿ ಹೋಡೆದಾಡಿದ್ರೆ ಏನು ತಪ್ಪು?'

'ಅಲ್ರಿ, ಕಾಂಗ್ರೆಸ್ ಶಾಸಕರು ಪಕ್ಷತ್ಯಾಗ ಮಾಡಿ ವಿರೋಧಿ ಪಕ್ಷ ಸೇರುವುದೆಂದರೆ?"

'ಇದ್ರಲ್ಲೇನ? ವಿರೋಧಿ ಪಕ್ಷದವ್ರು ಕಾಂಗ್ರೆಸ್ಸು ಸೇರ ಬಹುದಾದ್ರೆ ಕಾಂಗ್ರೆಸಿಗರು ಯಾಕೆ ವಿರೋಧಿ ಪಕ್ಷ ಸೇರಬ್ಬಾರದೂಂತ?"

'ನಾನು ಅಂದದ್ದು ಸೇರಬ್ಬಾರದೂಂತಲ್ಲ. ಅದಕ್ಕೆ ತ್ಯಾಗಕ್ಕೆ ಏನಾದ್ರೂ ಕಾರಣವಿರಬೇಕಲ್ಲ ತಾನೆ?'

"ಓಹೋ, ಕಾರಣಕ್ಕೇನಂತೆ? ಕೋಳಿ ಕುರುಮರಿ ನ್ಯಾಯ ಇದೆ ತಾನೆ? ಇನ್ನು ಅಷ್ಟು ಹಿಂದೆ ಹೋಗಲು ಮನಸ್ಸಿಲ್ಲವಾದ್ರೆ ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು ಕಾಣುವ ನಿತ್ಯ ಸತ್ಯ—ಅಧಿಕಾರ....'

'ಅಲ್ರಿ, ಇನ್ನು ಅಲ್ಲಿನ ಕಥೆ?'

'ಮಿಶ್ರ ಸರಕಾರ ಪತನವಾದಂತೆಯೇ ....'

"ಯಾಕೆ, ಉರ ಳಲಿಲ್ಲ?

"ಅಯ್ಯೋ, ನೀನೊಬ್ಬಳು. ಪಾಪ, ಭಾರಿ ಕಾತುರ್ಯದಿಂದ ಅಧಿಕಾರ ಈ ಬಾರಿ ಕೈಗೆ ಬಂದಿದೆ. ಹಾಗಿರುವಾಗ, ಅವನು ಬಿಟ್ಟು ಬಿಡೋದು ಅಂದರೆ, ಸುಲಭವೇನು?'

"ಅಯ್ಯೋ, ಅದು ಹೇಗಾಗುತ್ತೆ? ವಿಧಾನ ಸಭೆಯಲ್ಲಿ ಬಹುಮತವಿಲ್ಲವೆಂದಾದ ಮೇಲೆ ಕಾಂಗ್ರೆಸ್ಸು ಅಧಿಕಾರ ತ್ಯಾಗ ಮಾಡಲೇ ಬೇಕಲ್ಲವೆ?'

'ಖಂಡಿತವಾಗಿ....'

"ಮತ್ಯಾಕೆ ಮಾಡಲಿಲ್ಲ? ಟೋಪಿಯವರಿಗೆ ಅಧಿಕಾರ ಬಿಡೋ ಮನಸ್ಸಿಲ್ಲ ಅಲ್ಲ?'

'ಹಾಗೆಲ್ಲಾ ಅನ್ನ ಬೇಡ. ನೋಡು, ರಾಜಸ್ಥಾನದಲ್ಲಿ ಏನಾಯಿತು? ಸುಖಾಡಿಯಾ ತಾನು ಸರಕಾರ ರಚಿಸುವುದಿಲ್ಲ ಎಂದು ತಿಳಿಸಿದ್ದರು. ಉತ್ತರ ಪ್ರದೇಶದಲ್ಲಿ ತನಗೆ ಬಹುಮತ ವಿಲ್ಲವಾದ ಮೇಲೆ ಆದು ಹಿಂದೆ ಸರಿಯಿತು...ಇಂತಹ ಉತ್ತಮ ಸಂಪ್ರದಾಯ ಕಾಂಗ್ರೆಸ್ಸು ಹಾಕಿ ಕೊಟ್ಟಿರುವಾಗ...."

"ಹ್ಞಾಂ....ಇದ್ರಲ್ಲಿ ಸ್ವಲ್ಪಾಂಶ ಸತ್ಯ ಇದೆ ಅನ್ನಿ, ಆದ್ರೂ ಅಧಿಕಾರ ಸುರೆ ಕುಡಿದವರಿಗೆ ಎಚ್ಚರವಾಗೋದು ತುಸು ತಡ ತಾನೆ?"

'ಛೆ...ಛೆ...ನೀನು ಹಾಗೆಲ್ಲಾ ಮಿಶ್ರರ ಮೇಲ ಆರೋಪ ಹೊರಿಸಬಾರದು. ಅವರೇನೂ ಅಧಿಕಾರ ಬಯಸಿ ಹೋಗಲಿಲ್ಲ. ಆದರೂ ಹಲವು ವರ್ಷಗಳಿಂದ ಅಧಿಕಾರ ಲಕ್ಷ್ಮಿ ಅವರಿಗೆ ಒಲಿದು ಮಾಲೆ ಹಾಕಿದ್ದಾಳೆ. ಈಗ, ಆ ಮಾಲೆಯ ಮೂವತ್ತಾರು ಹೂಗಳು ಉದುರಿದುವು ಎನ್ನುತ್ತಾರೆ. ಇದು ಹೌದೋ ಅಲ್ಲವೋ, ತನ್ನ ಮಾಲೆಯಲ್ಲಿ ಎಷ್ಟು ಹೂಗಳು ಇನ್ನೂ ನಳನಳಿಸುತ್ತಿವೆ ಎಂದು ಲೆಕ್ಕ ಮಾಡಲು ಸಮಯ ಬೇಡವೆ?"

'ಬೇಕಪ್ಪಾ ಬೇಕು. ಆದ್ರೂ ಒಂದು ನೋಡಿ..."

'ಏನು?"

'ಪ್ರಾಯಶಃ ನಿಮ್ಮ—ಹ್ಞಾ ಯಾಕೆ, ನಿಮ್ಮ ಅಲ್ಲಾನ್ನಿ, ನಮ್ಮ—ರಾಜಕಾರಣಿಗಳು ಗಣಿತದಲ್ಲಿ ಭಾರೀ ಹಿಂದೇಂತ ತೋರುತ್ತೆ...."

"ಶಾಬಾಸ್, ಒಂದು ಬ್ರಹ್ಮಸತ್ಯ ನಿನ್ನ ಬಾಯಿಯಿಂದ ಬಂತು....'

'ಏನು? ಏನದು?'

"ರಾಜಕಾರಣಿಗಳು ಲೆಕ್ಕದಲ್ಲಿ ಭಾರೀ ಹಿಂದೇಂತಂದೆಯಲ್ಲಾ?'

'ಮತ್ತೆಂಥದು? ಮಿಶ್ರರಿಗೆ ತಮ್ಮ ಪಕ್ಷೀಯರನ್ನು ಲೆಕ್ಕ ಮಾಡಲು ಎಷ್ಟು ದಿನಬೇಕು? ಇದನ್ನು ಖಾತ್ರಿ ಮಾಡಿಕೊಳ್ಳಲು ಅವರಿಗೆ ವಿಧಾನ ಸಭೆಯನ್ನು ಮುಂದೂಡುವ ಅವಶ್ಯವಾದರೂ ಏನಿತ್ತು?"

'ಲೆಕ್ಕ ಮಾಡಲು ಹೊತ್ತು ಗೊತ್ತು ಮಾಡಿದವರಿದ್ದಾರೆಯೋ"

'ಓಹೋ, ಅಂದ್ರೆ ಹೋದಷ್ಟು ಸಮಯ ಹೋಗಲಿ ಅಂತ ಅಲ್ಲವೆ? ಅಷ್ಟರೊಳಗೆ ಏನಾದರೂ ಕೂಡಿಸಿಕೊಳ್ಳಲು ಸಾಧ್ಯವಾದರೂ ಆಗ ಬಹುದು..."

"ನೋಡು, ಈಯೆಲ್ಲಾ ವಿಚಾರದಲ್ಲಿ ಮುಖ್ಯಮಂತ್ರಿ ಮಿಶ್ರರಿಗೂ ಅಧಿಕಾರ ಇದೆ ತಾನೆ? ಅವರ ಸಲಹೆಯಂತೆ, ರಾಜ್ಯಪಾಲರು ವಿಧಾನ ಸಭೆಯನ್ನು ಮುಂದೂಡಿದರು. ಇನ್ನು ಮಿಶ್ರರು ತನ್ನ ಪರಿಸ್ಥಿತಿಯೇನೆಂದು ಸರಿಯಾಗಿ ತಿಳಿದು ಕೊಂಡು, ವಿಧಾನ ಸಭೆಯನ್ನು ವಿಸರ್ಜಿಸಿ, ನಡುಗಾಲ ಚುನಾವಣೆಯನ್ನೂ ನಡೆಸುವಂತೆಯೂ ಕೇಳಿ ಕೊಳ್ಳ ಬಹುದು...'

"ಯಾಕೆ? ವಿರೋಧಿ ಪಕ್ಷೀಯರಿಗೆ ಸರಕಾರ ರಚಿಸಲು ಅವಕಾಶ ಕೊಡಬಾರದೇಕೆ?'

"ಅದನ್ನು ಯೋಚಿಸ ಬೇಕಾದವರು ರಾಜ್ಯಪಾಲರು.'

"ಹ್ಞಾಂ....ಅದು ಹೌದೂನ್ನಿ. ನಿಮ್ಮ ಅಭಿಪ್ರಾಯ ಹೇಗೇಂತ?'

'ನನ್ನದೇನು ಬಂತು? ನೀನೇ ಅಂದೆ ನೋಡು, ರಾಜಕಾರಣಿಗಳು ಗಣಿತದಲ್ಲಿ ಭಾರೀ ಹಿಂದೇಂತ...'

'ಹೌದು—ಇದ್ರಲ್ಲಿ ಸತ್ಯತುಂಬಿದೇಂದ್ರಿ. ಏನು ಸತ್ಯಾಂಶ....'

'ಓಹೋ ರೂಪಾಯಿಗೆ ನೂರು ಪೈಸೆ ಸತ್ಯ ಇದೆ ನೋಡು. ಇವರು ಗಣಿತದಲ್ಲಿ ಬುದ್ಧಿವಂತರಾಗಿದ್ರೆ ಎಲ್ರೂ ಸಿಸಿಎಮ್ಮೋ ಸಿಬಿಡಬ್ಲ್ಯೂ ತೆಗೆದು ಕೊಂಡು ಯಾವ ಮೂಲೆಯಲ್ಲಾದ್ರೂ ಎಂಜಿನಿಯರರೋ ಡಾಕ್ಟರರೋ ಆಗಿ ಸರಕಾರವನ್ನೂ ಜನರನ್ನೂ ಗೋಳು ಹೊಯ್ಯುತಿದ್ರು. ಪುಣ್ಯಕ್ಕೆ ಅದ್ರಲ್ಲಿ ಹಿಂದೆ ಆದ್ರಿಂದ ಕಲಿಯುವ ಹಿಂದೆ ಆದ್ರಿಂದ ಕಲೆಯನ್ನೇ ಕಲ್ತು ರಾಜ್ಯಕೀಯ ಕಲೆಯಲ್ಲಿ ತರಬೇತಿ ಹೊಂದಿ ಆಡಳಿತೆಗೂ ಒಂದು ಕಲೆ ತರಲು ಪ್ರಯತ್ನಿಸುತ್ತಾರೆ, ಗಣಿತ ಪಂಡಿತರಿಂದ ಗೋಳು ಹೊಯ್ಸಿ ಕೊಳ್ತಿದ್ದಾರೆ....'

'ನಿಮ್ಮಥೆ ಒಳ್ಳೆದು. ಏನು, ಎಲ್ಲಾ ರಾಜಕಾರಣಿಗಳೂ ಕಲಾ ಪಂಡಿತರೇ ಏನು? ಗಣಿತ ಬರುವವರು ಕೆಲವರಾದರೂ ಇದ್ದಾರೆ...'

'ಇಲ್ಲದೇನಂತೆ! ಪಾಪ, ಗ್ರೇಸು ಮಾರ್ಕು ಪಡೆದ ಕೆಲವು ಗಣಿತ ಪಂಡಿತರೂ ಇರಬಹುದು...ಆದೇನಿದ್ದರೂ ರಾಜಕಾರಣಿಗಳ ಲೆಕ್ಕಾಚಾರದಂತೆ ಲೆಕ್ಕ ನಡೆಯುವುದಿಲ್ಲ....ಇದು ಖಂಡಿತ.'

'ಹೇಗೆ?'

"ಅಯ್ಯೋ, ಅಂಗೈ ನೋಡುವುದಕ್ಕೆ ಕನ್ನಡಿ ಯಾಕೆ ಬೇಕು?'

'ಅಂದರೆ?"

(ಒಂಭತ್ತನೇ ಪುಟ ನೋಡಿರಿ)

ರೂ. 1ಕ್ಕೆ 1,10,000 ಗೆಲ್ಲಲೇ ಬೇಕು

ಈಗ ಮಾರಾಟಕ್ಕಿರುವ ಟಿಕೆಟುಗಳು	ಟಿಕೆಟು ಒಂದಕ್ಕೆ	ಪುಸ್ತಕ ಒಂದಕ್ಕೆ	ನಾಲ್ಕು ಪುಸ್ತಕಗಳಿಗೆ	ಪ್ರಥಮ ಬಹುಮಾನ	ಇತರ ಬಹುಮಾನಗಳು	ಮುಗಿಯುವ ತಾರೀಖು	ತೆಗೆಯುವ ತಾರೀಖು
ಶ್ರೀ ನಾರಾಯಣ ಹಾಲ್ ಫಂಡ್ ರ್‍ಯಾಫಲ್	ರೂ. 1	12 ಟಿಕೆಟುಗಳು ರೂ. 10	48 ಟಿಕೆಟುಗಳು ರೂ. 36	ಅಂಬಾಸ್ಸಡರ್ ಕಾರು	100	10-8-67	15-8-67
ಸ್ಟೇಡಿಯಂ ಫಂಡ್ ರ್‍ಯಾಫಲ್	ರೂ. 1	25 ಟಿಕೆಟುಗಳು ರೂ. 20	100 ಟಿಕೆಟುಗಳು ರೂ. 75	ಅಂಬಾಸ್ಸಡರ್ ಕಾರು	100	17-8-67	21-8-67
ಡಿ. ಬಿ. ಚಾರಿಟೀಸ್	ರೂ. 2	14 ಟಿಕೆಟುಗಳು ರೂ. 21	56 ಟಿಕೆಟುಗಳು ರೂ. 80	ರೂ. 40,000	370	18-8-67	31-8-67
ಸ್ಯೆಂಟ್ ಗ್ರೀಗೋರಿಯಸ್ ಕಾಲೇಜು ರ್‍ಯಾಫಲ್	ರೂ. 1	10 ಟಿಕೆಟುಗಳು ರೂ. 8	40 ಟಿಕೆಟುಗಳು ರೂ. 30	ಅಂಬಾಸ್ಸಡರ್ ಕಾರು	200	15-8-67	31-8-67
ಕೆ. ಸಿ. ಚಾರಿಟೀಸ್	ರೂ. 1	14 ಟಿಕೆಟುಗಳು ರೂ. 10	56 ಟಿಕೆಟುಗಳು ರೂ. 35	ರೂ. 1,15,000	575	28-9-67	29-10-67
ಜೆ. ಪಿ. ಚಾರಿಟೀಸ್ ರ್‍ಯಾಫಲ್	ರೂ. 1	12 ಟಿಕೆಟುಗಳು ರೂ. 9	48 ಟಿಕೆಟುಗಳು ರೂ. 32	ರೂ. 1,00,000	551	15-9-67	8 10-67

ಟಿಕೆಟ್ಟುಗಳಿಗೆ, ಪುಸ್ತಕಗಳಿಗೆ, ಫಾರಮುಗಳಿಗೆ ಇಡೀ ಭಾರತ ದೇಶದಲ್ಲಿಯೇ ಅಧಿಕೃತವಾಗಿ ಮೈಸೂರು ಸಂಸ್ಥಾನದಲ್ಲಿ ರೂ. ೧,೧೦,೦೦೦, ರೂ. ೪೦,೦೦೦, ರೂ. ೫,೫೦೦ಗಳನ್ನು ಗಳಿಸಿ ಕೊಟ್ಟಿರುವುದಲ್ಲದೆ ಪ್ರತಿಯೊಂದು ಡ್ರಾದಲ್ಲಿಯೂ ಅನೇಕ ದೊಡ್ಡ ದೊಡ್ಡ ಬಹುಮಾನಗಳನ್ನು ಗಳಿಸಿ ಕೊಡುತ್ತಾ ಪ್ರಜೆಗಳಿಂದ ಮನ್ನಣೆಪಡೆದ ರಾಜ್ಯದ ಏಕಮಾತ್ರ ಅದೃಷ್ಟವಂತ ಹಂಚಿಕೆದಾರರಾದ ಎಂ. ಎ. ಹನ್ನಾನ್, ಲಕ್ಷ್ಮಿ ಡಿಸ್ಟ್ರಿಬ್ಯೂಟರ್ಸ್ ೧೯೨, ಬಳೇಪೇಟೆ ಮೈನ್ ರೋಡು ಬೆಂಗಳೂರು-೨. ಅವರಿಂದಲೇ ನೇರವಾಗಿ ಪಡೆಯಿರಿ.

ಪೋಸ್ಟ್ ಮೂಲಕ ಟಿಕೆಟ್ಟುಗಳು ಬೇಕಾದವರು ಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಿ ಟಿಕೆಟ್ಟುಗಳನ್ನು ಪಡೆಯಬಹುದು.

ವಿಧಾಯಕ ಕಾರ್ಯಕರ್ತರಿಗೆ ಒಂದು ಮನವಿ

ಗಾಂಧೀ ಜನ್ಮಶತಾಬ್ದೋತ್ಸವದಲ್ಲಿ ನಿಮ್ಮ ಪಾತ್ರ

೧೯೬೯ರ ಅಕ್ಟೋಬರ್ ೨ನೆಯ ದಿನಾಂಕದಿಂದ ೧೯೭೦ನೆಯ ಜನವರಿ ೩೦ನೆಯ ದಿನಾಂಕದ ವರೆಗೆ ಸಮಗ್ರ ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಮಹಾತ್ಮಾ ಗಾಂಧೀಜಿಯ ಜನ್ಮಶತಾಬ್ದ್ಯುತ್ಸವವನ್ನು ಬಹಳ ಉತ್ಸಾಹದಿಂದ ಆಚರಿಸಬೇಕೆಂದು ಗೊತ್ತಾಗಿದೆ. ರಾಷ್ಟ್ರಪಿತ ಗಾಂಧೀಜಿಯು ಭಾರತೀಯರಿಗೆ ಸ್ವಾತಂತ್ರ್ಯಪ್ರಾಪ್ತಿಯನ್ನು ಮಾಡಿಕೊಟ್ಟು ಅವರ ಸುಪ್ತ ಶಕ್ತಿಗಳ ವಿಕಾಸಕ್ಕೆ ಅಪೂರ್ವ ಹಾಗೂ ಅದ್ಭುತ ಅವಕಾಶವನ್ನು ಒದಗಿಸಿಕೊಟ್ಟ ಸಂಗತಿಯು ಸಂಸ್ಮರಣೀಯವಾಗಿದೆ. ಪರದಾಸ್ಯ ಸಂಕಟದಲ್ಲಿ ಬಿದ್ದು ಆತ್ಮವಿಸ್ಮೃತಿಗೆ ಆಹುತಿಯಾಗಿ ಸ್ವಸಾಮರ್ಥ್ಯದ ಪ್ರಭಾವವನ್ನೇ ಅರಿಯದಂತಾಗಿದ್ದ ಭಾರತೀಯರಲ್ಲಿ ತಮ್ಮ ಸತ್ಯಾಗ್ರಹದ ದಿವ್ಯ ಮಂತ್ರೋಪದೇಶದಿಂದ ಸ್ವಾಭಿಮಾನ ಜ್ಯೋತಿಯನ್ನು ಬೆಳಗಿಸಿದ ಮಹಾವಿಭೂತಿ ಜಗದ್ವಂದ್ಯ ಗಾಂಧೀಜೀಯ ಪುಣ್ಯಪ್ರಭಾವದಿಂದಲೇ ಇಂದು ನಾವೆಲ್ಲರೂ ಸ್ವತಂತ್ರ ಭಾರತದ ಸ್ವಾಭಿಮಾನಿ ಪ್ರಜೆಗಳಾಗಿರುವೆವು. ಈ ಮಾತಿನ ದಿವ್ಯ ಸ್ಮರಣೆಯು ಎಲ್ಲರಿಗೂ ಇರಲೇಬೇಕು. ನಿಸ್ತೇಜ ನಾಗಿ ನಿರ್ವೀರ್ಯವಾಗಿದ್ದ ಜನಾಂಗದಲ್ಲಿ ಆತ್ಮಶಕ್ತಿಯ ತೇಜಸ್ಸನ್ನು ಜಾಗ್ರತಗೊಳಿಸಿದ ಅವರ ಅಂದಿನ ಕಾರ್ಯವು ಒಂದು ಪವಾಡವೇ ಸರಿಯೆಂದರೆ ತಪ್ಪಾಗದು. ಅವರು ತಮ್ಮ ಕಾರ್ಯದಲ್ಲಿ ಬರೀ ಕ್ರಾಂತಿಕಾರಿಗಳಿಗೆ ಮಾತ್ರವಲ್ಲದೇ ರಚನಾತ್ಮಕ ಕಾರ್ಯಕರ್ತರಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದರೆಂಬುದನ್ನು ಮರೆಯಲಾಗದು. ಭಾರತೀಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಲ್ಲಿ ಆಗಬೇಕಿದ್ದ ಸುಧಾರಣೆಗಳನ್ನು ವಿಧಾಯಕ ರೀತಿಯಲ್ಲಿ ಮಾಡಿ ಒಂದು ನೂತನ ದೃಷ್ಟಿಯನ್ನು ಕೊಟ್ಟುದಲ್ಲದೇ ಒಂದು ನವೀನ ದರ್ಶನವನ್ನು ಅವರು ಪ್ರತಿಪಾದಿಸಿದರು. ಸ್ವಾವಲಂಬನ, ಸ್ವಯಂಪೂರ್ಣತೆ, ಆಧ್ಯಾತ್ಮಿಕ ದೃಷ್ಟಿಕೋನ ಇವುಗಳ ಆವಶ್ಯಕತೆಯ ಅರಿವನ್ನು ಮಾಡಿಕೊಟ್ಟು ತನ್ಮೂಲಕ ಅತ್ಯದ್ಭುತ ಸಂಘಟನೆಯನ್ನು ಸಾಧಿಸಿದರು; ಮತ್ತು ಅದರ ಫಲವಾಗಿ ರಕ್ತಪಾತವಿಲ್ಲದೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು.

ಈ ಹಿನ್ನೆಲೆಯನ್ನು ಮರೆಯದೆ ಸ್ವಾತಂತ್ರ್ಯೋತ್ತರ ಭಾರತದ ಆಗು ಹೋಗುಗಳ ಒಂದು ಸಿಂಹಾವಲೋಕನವು ಈಗ ಸ್ವಾಭಾವಿಕವೂ ಅಗತ್ಯವೂ ಆಗಿದೆ. ಅದಕ್ಕೆ ಗಾಂಧೀ ಜನ್ಮಶತಾಬ್ದ್ಯುತ್ಸವವು ಒಂದು ಸುಸಂಧಿಯನ್ನು ಒದಗಿಸಿಕೊಡುತ್ತದೆ. ಯಾಕೆಂದರೆ ಈಗ ಅನೇಕ ಜನ ಗಾಂಧೀ ಭಕ್ತರಲ್ಲಿ ಗಾಂಧೀ ಅನುಯಾಯಿಗಳಲ್ಲಿ ಹೊಸ ಪಂಕ್ತಿಯ ಒತ್ತಡದ ಮೂಲಕ ರಚನಾತ್ಮಕ ಕಾರ್ಯಕ್ರಮಗಳ ಪಾತ್ರದ ಬಗೆಗೆ ಒಂದು ಬಗೆಯ ಸಂದೇಹವೂ ಅಶ್ರದ್ಧೆಯೂ ತಲೆದೋರುತ್ತಿದೆ. ಈ ಮಾತಿನ ಅನೇಕ ನಿದರ್ಶನಗಳು ಎಲ್ಲೆಲ್ಲಿ ದೊರೆಯುತ್ತವೆ. ಉದಾಹರಣೆಗಾಗಿ, ಗಾಂಧೀಜಿಗೆ ಅತ್ಯಂತ ಪ್ರಿಯವಾಗಿದ್ದ ರಾಷ್ಟ್ರೀಯ ಐಕ್ಯ, ಖಾದೀ ಗ್ರಾಮೋದ್ಯೋಗಗಳು, ಮದ್ಯಪಾನಪ್ರತಿಬಂಧ, ಸಾಮಾಜಿಕ ಸಮತೆ, ಆರ್ಥಿಕ ಸ್ವಾವಲಂಬನ, ಜಾತ್ಯತೀತತೆ ಇವುಗಳ ಪುರಸ್ಕಾರವನ್ನು ಇಂದಿನ ಸರಕಾರಗಳು ಉತ್ಸಾಹದಿಂದ ಮಾಡುವ ಬದಲು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವಂತೆ ತೋರುತ್ತಿದೆ. ಅರ್ಥಾತ್ ಗಾಂಧೀಜಿಯ ತತ್ವಗಳ ಅನುಷ್ಠಾನವಾಗಲೀ ಆಚರಣೆಯಾಗಲೀ ಕಟ್ಟುನಿಟ್ಟಿನ ನಿಷ್ಠೆಯಿಂದ ನಡೆಯುತ್ತಿಲ್ಲ. ಗಾಂಧೀಜಿ ದರ್ಶನವನ್ನು ಅವರ ಅನುಯಾಯಿಗಳೂ ಜನತೆಯೂ ಅವರ ಮರಣಾನಂತರದಲ್ಲಿ ಮರೆತು ಬಿಡುವ ಭೀತಿ ಇದೆಯೆಂದು ಡಾ. ರಾ. ರಾಜೇಂದ್ರ ಪ್ರಸಾದರು ೩೧-೧೨-೧೯೫೦ರಲ್ಲಿ ಗಾಂಧೀ ಜ್ಞಾನ ಮಂದಿರ, ವರ್ಧಾ, ಈ ಸಂಸ್ಥೆಯ ಉದ್ಘಾಟನೆಯ ಕಾಲಕ್ಕೆ ಕಣ್ಣೀರು ಸುರಿಸುತ್ತ ವ್ಯಕ್ತಪಡಿಸಿದ ಅಭಿಪ್ರಾಯವು ಸತ್ಯವಾಗುವ ಲಕ್ಷಣಗಳು ಕಾಣತೊಡಗಿವೆ.

"ಯೇಸುಕ್ರಿಸ್ತನು ತನ್ನ ಮರಣಾನಂತರ ಮೂರುದಿನ ಬೆಳಗಾಗುವ ಮುನ್ನವೆ, ತನ್ನ ಅನುಯಾಯಿಗಳು ತನ್ನ ಉಪದೇಶವನ್ನು ಮರೆತು ಬಿಡುವರೆಂದು ಹೇಳಿದ್ದನು. ಹಾಗೆಯೇ ಮ. ಗಾಂಧೀಯವರ ತತ್ವವನ್ನು, ದರ್ಶನವನ್ನು, ಅವರ ಅನುಯಾಯಿಗಳು ಮತ್ತು ಜನರು ಮರೆಯುವ ಗಂಡಾಂತರವಿದೆ. ಜಗತ್ತು ಉಳಿಯಬೇಕಾದರೆ ಅವರ ಉಪದೇಶಗಳನ್ನು ಅದು ಅಂಗೀಕರಿಸಲೇ ಬೇಕು. ಹಾಗೆ ಮಾಡದಿದ್ದರೆ ಮುಂದೇನಾಗುವದೆಂಬುದನು ಹೇಳಲಾಗದು.'

— ಡಾ. ರಾಜೇಂದ್ರ ಪ್ರಸಾದ.

ಈ ಭೀತಿಯನ್ನು ತಪ್ಪಿಸಿ ಗಾಂಧೀಜಿಯ ತತ್ವಗಳಲ್ಲಿ ಜನರ ಶ್ರದ್ಧೆಯು ಅಚಲವಾಗಿ ಉಳಿಯುವಂತೆ ಮಾಡುವದು ವಿಧಾಯಕ ಕಾರ್ಯಕರ್ತರ ಮಹತ್ವದ ಹೊಣೆಯಾಗಿದೆ. ಅವರ ಸತ್ವ ಪರೀಕ್ಷೆಯ ಸಮಯವೇ ಇದು ಎಂದು ಹೇಳಬಹುದು. ರಭಸದಿಂದ ನುಗ್ಗಿ ಬರುವ ಆಪಾಯಕಾರಕ ವಿಚಾರಗಳ ತತ್ವಪ್ರಣಾಲಿಗಳ ಅಭಿಯೋಗವನ್ನು ಯಶಸ್ವಿಯಾಗಿ ಎದುರಿಸಿ ಸ್ವತಂತ್ರ ಭಾರತದ ಸರ್ವಾಂಗೀಣ ಉನ್ನತಿಗೆ, ಶ್ರೇಯಸ್ಸಿಗೆ ಗಾಂಧೀ ಮಾರ್ಗವೇ ಶ್ರೇಷ್ಠ ಸಾಧನವೆಂಬುದನ್ನು ಮನಗಾಣಿಸಿಕೊಡುವ ಮಹತ್ವದ ಪಾತ್ರವು ತಮಗೆ ಸೇರಿರುವದು. ಆದುದರಿಂದ ತಾವೆಲ್ಲರೂ ಧೀರೋದಾತ್ತ ರೀತಿಯಲ್ಲಿ ಗಾಂಧೀದರ್ಶನದ ಪುನರ್ವಿಮರ್ಶೆಯನ್ನು ಮಾಡಿ ಅದರ ವಾಸ್ತವತೆಯನ್ನು, ಶಕ್ತಿ ಸಂಪನ್ನತೆಯನ್ನು ದೃಢೀಕರಿಸಬೇಕು. ಮತ್ತು ಸಂಶಯಾತ್ಮಕ ಸಂದೇಹಗಳನ್ನು ನಿವಾರಿಸಿ ಅವರೂ ಹುರುಪಿನಿಂದ ರಚನಾತ್ಮಕ ಕಾರ್ಯಗಳಲ್ಲಿ ಪ್ರತ್ಯಕ್ಷಾಪ್ರತ್ಯಕ್ಷವಾಗಿ ತೊಡಗುವಂತೆ ಮಾಡಬೇಕು.

ಈ ಸಮ್ಮೇಳನವನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷರೂ, ನಿಷ್ಠಾವಂತ ಗಾಂಧೀ ಅನುಯಾಯಿಗಳೂ, ಅಖಿಲ ಭಾರತ ಖಾದೀ ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರೂ ಆದ ಶ್ರೀ ಎನ್. ಢೇಬರರು ಉದ್ಘಾಟಿಸುವರು. ಹಾಗೆಯೆ ಅ. ಭಾ. ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ, ಅ. ಭಾ. ಗಾಂಧೀ ಜನ್ಮಶತಾಬ್ದಿ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ ದಿವಾಕರ ರಂಗರಾಯರೂ ಈ ಸಮ್ಮೇಲನದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡುವರು. ಅಲ್ಲದೆ ಇನ್ನೂ ಅನೇಕ ಗಣ್ಯ ಗಾಂಧೀ ಭಕ್ತರು ಆಗಮಿಸಿ ಸಮ್ಮೇಲನಕ್ಕೆ ಯೋಗ್ಯ ಮಾರ್ಗದರ್ಶನವನ್ನು ಮಾಡಲಿರುವರು. ರಚನಾತ್ಮಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ನಾವೆಲ್ಲರೂ ತಮ್ಮ ಅನುಭವದ ಹಾಗೂ ತಾವು ಇಂದು ಎದುರಿಸುತ್ತಿರುವ ಸಮಸ್ಯೆಗಳ ಪರಿಚಯ ಲಾಭವನ್ನು ಒದಗಿಸಿಕೊಟ್ಟು ಗಾಂಧೀ ಮಾರ್ಗದಲ್ಲಿ ಜನತಾಶ್ರದ್ಧೆಯು ಅವಿಚಲವಾಗಿ ಉಳಿಯುವುದಕ್ಕೆ ನೆರವಾಗಬೇಕು. ಮತ್ತು ೧೯೬೯ನೇ ಅಕ್ಟೋಬರ್ ೨ನೆಯ ದಿನಾಂಕದಿಂದ ಗಾಂಧೀಯುಗದ ಅಂತ್ಯವಾಯಿತು ಎನ್ನದೆ ದ್ವಿಗುಣಿತ ಉತ್ಸಾಹದಿಂದ ಕೂಡಿದ ದ್ವಿತೀಯ ಶತಕಾರಂಭವಾಗುವಂತೆ ಅದನ್ನು ಯಶಸ್ವಿಯಾಗಿ ಬೆಳೆಸಬೇಕಾಗಿ ವಿನಂತಿ.

ರಾಮಚಂದ್ರ ವಡವಿ,
ಕಾರ್ಯದರ್ಶಿ, ಗಾ. ಸ್ಮಾ. ನಿಧಿ,
ವಿ. ಜೆ. ನಾಯಕ,
ಗೌ. ಕಾರ್ಯದರ್ಶಿ, ಮೈಸೂರು ರಾಜ್ಯ
ಗಾಂಧೀ ಜನ್ಮಶತಾಬ್ದಿ ಸಮಿತಿ,
ಬೆಂಗಳೂರು. ಬೆಂಗಳೂರು.
ಗಾಂಧೀ ಸ್ಮಾರಕ ನಿಧಿ
ಕರ್ನಾಟಕ ಶಾಖಾ.

ಆಸರೆ ನೀಡುವ ಛತ್ರಿ

ಕೋಲು ಮುರಿದ, ಬಟ್ಟೆ ಹರಿದ ಛತ್ರಿ ಬೀಸುವ ಮಳೆ, ಗಾಳಿಯಿಂದ ಯಾವ ರಕ್ಷಣೆ ನೀಡಬಲ್ಲುದು?



ಸಿಂಡಿಕೇಟ್ ಬ್ಯಾಂಕಿನಲ್ಲಿರುವ ನಿಮ್ಮ ಉಳಿತಾಯ ಖಾತೆಯಲ್ಲಿ ಹಣ ಹೆಚ್ಚು ಜಮೆಯಾದವ್ತು ನಿಮ್ಮ ಬಲ ಅಷ್ಟು ವೃದ್ಧಿಯಾಗಿ ನಿಮಗೆ ದೊರೆಯುವ ರಕ್ಷಣೆಯೂ ಹೆಚ್ಚುತ್ತದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿರುವ ನಿಮ್ಮ ಉಳಿತಾಯ ಖಾತೆ ನಿಮಗೆ ಯಾವ ಕಾಲಕ್ಕೂ ಆಸರೆಯೊದಗಿಸುವುದು.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ರಾಜಕೀಯ

ತುಷ್ಟೀಕರಣ ಪಂದ್ಯಾಟದ ಕಳದಲ್ಲಿಳಿದ ಮೇಲೆ...

ಬರೆದವರು: ಶ್ರೀ ಶಿವಶಂಕರ

ಕ್ರೀಡೋತ್ಸಾಹಿಗಳು ಪಂದ್ಯಾಟದ ಕಳದಲ್ಲಿಳಿದರೆಂದರೆ ಒಬ್ಬರನ್ನೊಬ್ಬರು ಸೋಲಿಸಲು ಪ್ರಯತ್ನಿಸುತ್ತಾರೆಯೇ, ವಿನಃ ಸೋಲಲು ಯಾವನೂ ಪ್ರಯತ್ನಿಸುವದಿಲ್ಲ. ಅದರಲ್ಲೂ ಕ್ರೀಡೋತ್ಸಾಹಿಯು ನಿಜಕ್ರೀಡಾಪಟುವಲ್ಲದಿದ್ದಲ್ಲಿ ತೀರಿತು, ಅವನು ಯಾವ ಅಡ್ಡ ಹಾದಿಯನ್ನು ಹಿಡಿಯಲೂ ಹಿಂಜರಿಯುವದಿಲ್ಲ. ಅವನಿಗೆ ನ್ಯಾಯ— ಅನ್ಯಾಯ ಮುಖ್ಯವಲ್ಲ ಅವನಿಗೆ ಆಗತ್ಯ ಬೇಕಾಗಿರುವದು ಗೆಲುವೆಂಬ ಹೆಸರು ಅಷ್ಟೇ. ಇದು ರಾಜಕೀಯ ಪಕ್ಷಗಳಿಗೂ ಅನ್ವಯವಾಗುತ್ತದೆ.

ಮದ್ರಾಸು ಇನ್ನು, ತಮಿಳುನಾಡಿನಲ್ಲಿ ದ್ರಾವಿಡ ಮುನ್ನೇಟ್ರ ಕಳಗಂ ಮತ್ತು ಕಾಂಗ್ರೆಸ್ಸಿನ ನಡುವೆ ಪ್ರಬಲ ಪೋಟಿ ನಡೆಯುತ್ತಿದೆ. ವಿಧಾನ ಸಭೆಯಲ್ಲಿ ದ್ರಾ. ಮು. ಕ. ದವರು ಅಧಿಕ ಸಂಖ್ಯೆಯಲ್ಲಿರುವದರಿಂದ ಅವರ ಆಳ್ವಿಕೆ ನಡೆಯುತ್ತಿದೆಯಾದರೂ ವಿಧಾನ ಪರಿಷತ್ತಿನಲ್ಲಿ ಅಧಿಕ ಸಂಖ್ಯೆಯಲ್ಲಿರುವವರು ಕಾಂಗ್ರೆಸ್ಸಿಗರಿದ್ದಾರೆ. ಆದ್ದರಿಂದ ಎರಡು ರೀತಿಯ ಆಟ ಅಥವಾ ಜೋಡಾಟ ಇಲ್ಲಿ ನಡೆಯುತ್ತಿದೆ. ವಿಧಾನ ಸಭೆಯ ದ್ರಾ. ಮು. ಕ. ಹಾಗೂ ವಿಧಾನ ಪರಿಷತ್ತಿನ ಕಾಂಗ್ರೆಸ್ಸಿಗರೊಳಗೆ ನಡೆಯುವ ಪಂದ್ಯಾಟದ ಕುರಿತು ಬೇರೆ ಇನ್ನೊಂದು ಸಲ ನೋಡೋಣ. ಈ ಸಲ ವಿಧಾನ ಸಭೆಯಲ್ಲಿ ನಡೆದ ಪಂದ್ಯಾಟವನ್ನು ನೋಡುವ.

ಕಾಂಗ್ರೆಸ್ಸಿಗರೂ ದ್ರಾ. ಮು. ಕ. ದವರೂ ತುಷ್ಟೀಕರಣದ ಪಂದ್ಯಾಟದಲ್ಲಿ ಮಗ್ನರಾಗಿರುವರೆಂಬುದನ್ನು ಕಳೆದ ವಾರ ಕಂಡಿರುವೆವು. ರಾಜಕೀಯ ವೇದಿಕೆಯನ್ನು ಬಿಟ್ಟು ವಿಧಾನ ಸಭೆಯೊಳಗೆನೇ ಪಂದ್ಯಾಟದ ಸವಾಲ ಕೇಳಿ ಬಂದಿರುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವಿ. ಸ. ಸದಸ್ಯ ಶ್ರೀ ವಿ. ಕೆ. ಕೋದಂಡರಾಮನ್ ಹಾಗೂ ಶ್ರೀ ಕೆ. ವಿನಾಯಕಂರವರಿತ್ತ ಸವಾಲನ್ನು ಮುಖ್ಯಮಂತ್ರಿ ತಿರು ಅಣ್ಣಾದೊರೈಯವರು ಸ್ವೀಕರಿಸಿದರು. ಸರಕಾರಿ ಉದ್ಯೋಗರಂಗದಲ್ಲಿ ಮುಸ್ಲಿಮರಿಗೆ ಸಿಗಬೇಕಾಗಿರುವ ಪಾಲು ಸಿಗುತ್ತಿಲ್ಲವೆಂದು ಶ್ರೀ ವಿನಾಯಕಂರವರು ತಾನು ಪಳಗಿರುವ 'ಒಡೆದು ಆಳುವ ನೀತಿ'ಗನುಸಾರವಾಗಿ ಹೇಳಿದರು. ದ್ರಾ. ಮು. ಕ. ಕ್ಕೂ ಮುಸ್ಲಿಂ ಲೀಗಿಗೂ ಚುನಾವಣಾ ಮೈತ್ರಿ ಇದ್ದು, ಶ್ರೀ ಅಣ್ಣಾದೊರೈಯವರ ಮಂತ್ರಿಮಂಡಲದಲ್ಲಿ ಓರ್ವ ಮುಸ್ಲಿಮರ್ ಇದ್ದಾರೆಂಬುದು ಇಲ್ಲಿ ಜ್ಞಾಪಿಸಿಕೊಳ್ಳಬೇಕಾಗಿರುವ ವಿಷಯ. ಮುಸ್ಲಿಂ ಲೀಗನ್ನು ಈ ಗುಂಪಿನಿಂದ ಹೊರ ಬರಿಸಬೇಕೆಂಬುದು ಕಾಂಗ್ರೆಸ್ಸಿಗರ ಇಚ್ಛೆ. ಅದಕ್ಕಾಗಿ ಪ್ರಯತ್ನ ನಡೆಯುತ್ತಾ ಇದೆ. ಆ ತಳಹದಿಯ ಮೇಲೆಯೇ ಶ್ರೀ ವಿನಾಯಕಂರವರು ಮೂಕಿನ ವಿಷ ಗಾಳಿಯನ್ನು ಪ್ರಯೋಗಿಸಿದರು. ಕಾಂಗ್ರೆಸ್ಸಿನ ಆಳ್ವಿಕೆ ನಡೆಯುತ್ತಿದ್ದಾಗ ನಾವು ಅವರಿಗೆ ಸಿಂಹಪಾಲನ್ನು ಕೊಡುತ್ತಿದ್ದೆವು, ಈಗ ಅವರಿಗೆ ತಕ್ಕ ಪಾಲು ಸಿಗುತ್ತಿಲ್ಲ. ಆದುದರಿಂದ ಮುಸ್ಲಿಮರೇ, ಮುನ್ನೆಚ್ಚರಿಕೆಯಿಂದ ದ್ರಾ. ಮು. ಕ. ವನ್ನು ದಬ್ಬಿಬಿಟ್ಟು ಕಾಂಗ್ರೆಸ್ಸಿನೊಂದಿಗೆ ಕೂಡಿಕೊಳ್ಳಿರೆಂದು ಶ್ರೀ ವಿನಾಯಕಂರವರು ಒಂದು ಕೈಯಿಂದ ದ್ರಾ. ಮು. ಕ. ಕ್ಕೆ ಪ್ರಹಾರ ಕೊಟ್ಟರು, ಇನ್ನೊಂದು ಕೈಯಿಂದ ಮಹಮ್ಮದೀಯರನ್ನು ಕರೆದರು. ತುಷ್ಟೀಕರಣದ ಪಂದ್ಯದಲ್ಲಿ ಕ್ರೀಡಾಪಟುವಿರುವ ತಿರು ಅಣ್ಣಾದೊರೈ ಸುಮ್ಮಗೆ ಇರುವರೇ? ಪೆಟ್ಟು ಕೊಡಲು ಬಂದ ಕೈಯನ್ನು ಹಾಗೆನೇ ಹಿಡಿದು ಹಿಂದಕ್ಕೆ ತಳ್ಳಿ ಬಿಟ್ಟರು. ಅವರದಿಸಿಕೂ ಅಸಹ್ಯ ಪಡದೆ ಅದನ್ನೊಪ್ಪಿಕೊಂಡರು. ಹೌದು, ಇಂದು ಮಹಮ್ಮದೀಯರಿಗೆ ಸರಕಾರೀ ರಂಗದಲ್ಲಿ ಸಿಗಬೇಕಾಗಿರುವ ಸ್ಥಾನ ಸಿಗುತ್ತಿಲ್ಲವೆಂದು ಆದರೆ ಅದಕ್ಕೆ ಹೊಣೆ ದ್ರಾ. ಮು. ಕ. ಅಲ್ಲ, ಕಾಂಗ್ರೆಸ್ಸೇ ಕಾರಣ ಇದೆಯೆಂದು ಅಬ್ಬರಿಸಿದರು. ಪಂದ್ಯಾಟದ ದೃಷ್ಟಿಯಲ್ಲಿ ಇದು ಸರಿ ಇರಬಹುದು. ಒಬ್ಬರನ್ನೊಬ್ಬರು ಜಟ್ಟಿಗಳು ಬೀಳಿಸಲು ಪ್ರಯತ್ನಿಸಿದ್ದಾರೆನ್ನಬಹುದು. ಆದರೆ ಇವರಿಬ್ಬರಿತ್ತದ್ದು ತಪ್ಪಾದ ಪೆಟ್ಟೆಂಬುದನ್ನು ವಿಚಾರವಂತನು ತಿಳಿದುಕೊಳ್ಳದಿರಲಾರನು.

ಸರಕಾರೀ ಉದ್ಯೋಗಗಳಲ್ಲಿ ಮುಸ್ಲಿಮರಿಗೆ ಸಿಗಬೇಕಾಗಿರುವ ಸ್ಥಾನ ಸಿಗುತ್ತಿಲ್ಲವೆಂದರೆ ಅರ್ಥವೇನು? ಇವನು ಶೈವನು, ಅವನು ಬ್ರಾಹ್ಮಣನು, ಮತ್ತೊಬ್ಬ ಮಹಮ್ಮದೀಯನು, ಇನ್ನೊಬ್ಬನು ಈಸಾಯಿ, ಆಚೆ ಇರುವ ಆರ್ಯಸಮಾಜ ಬೇರೆಯ ಬ್ರಹ್ಮಸಮಾಜ.... ಈ ರೀತಿ ಯಾರನ್ನಾದರೂ ಕುರಿತು ಎಲ್ಲಾದರೂ ಸರಕಾರೀ ರಂಗದಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆಯೇ? ಅಥವಾ ಭಾರತ ಸರಕಾರದಲ್ಲಿ ಇಂತಿಷ್ಟು ಉದ್ಯೋಗಸ್ಥರು ಇರಬೇಕು, ಅದರಲ್ಲಿ ಕ್ರಿಸ್ತೀಯರು ಇಷ್ಟು, ಮುಸ್ಲಿಮರು ಅಷ್ಟು, ಸಿಕ್ಕರು ಇನ್ನಷ್ಟು ಜೈನರು, ಮತ್ತಷ್ಟು.... ಈ ರೀತಿ ಹಂಚಿಕೊಳ್ಳಲಾಗಿದೆಯೇ? ಅಲ್ಲಾ ಯಾವ ಕರಾರಾದರೂ ಒಡಂಬಡಿಕೆ ಇದೆಯೇ? ಇಂತಹ ಉದ್ಯೋಗಕ್ಕೆ ಇಷ್ಟು ಸಮಯ ಮುಸ್ಲಿಮೇತರ ಇರಬೇಕು; ಇಷ್ಟು ಸಮಯ ಮುಸ್ಲಿಂ ಇರಬೇಕೆಂಬ ಒಪ್ಪಂದ ಏನಾದರೂ ಇದೆಯೇ? ಇಂತಹ ಸ್ಥಾನ ಮುಸ್ಲಿಮರಿಗೆ ಸಿಗಬಾರದೆಂಬ ತಡೆ ಇದೆಯೇ? ಮಹಮ್ಮದೀಯನೇ ಮರಳು ಹಿಂದಕ್ಕೆಂಬ ಘೋಷ ಫಲಕ ಎಲ್ಲಾದರೂ ಇದೆಯೇ? ಎಲೇ, ಮಹಮ್ಮದೀಯನೇ! ನೀನಾಗಲೇ ನಗುನಗುತ ಪಾಕಿಸ್ತಾನವನ್ನು ತೆಗೆದುಕೊಂಡಿರುವೆ. ಇಲ್ಲಿ ನಿನಗೇನಿಲ್ಲ. ನಿನಗಿಲ್ಲಿ ಕೆಲಸ ಸಿಗಲಾರದು, ಆದರಲ್ಲೂ ಸರಕಾರವಂತೂ ಕೆಲಸ ಕೊಡಲಾರದು.... ಈ ರೀತಿ ಎಲ್ಲಾದರೂ ನಡೆದಿದೆ ಏನು? ನೈಜ ಸ್ಥಿತಿ ತೀರಾ ಭಿನ್ನವಿದೆ. ಮಹಮ್ಮದೀಯರಿಗೆ ರಿಯಾಯಿತಿ ತೋರಿಸಿದಂತೆ ಕಂಡ ಬರುತ್ತದೆ. ಸರಕಾರಿ ಕೆಲಸವನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋಗಿ ಅಲ್ಲಿದ್ದು, ಕಾಲಕಾಲಾಂತರಗಳಿಂದ ಹಿಂದಕ್ಕೆ ಬಂದವರನ್ನು ಆಯಾಯ ಕೆಲಸಗಳಿಗೆ ತೆಗೆದುಕೊಳ್ಳಲಾಗಿರುತ್ತದೆ. ಸಾಧಾರಣವಾಗಿ ಶ್ರೀ ಸಾಮಾನ್ಯನಿಗೆ ಗೊತ್ತಿರುವ ವಿಷಯ ಒಂದೇ ಒಂದು— ಸರಕಾರಿ ರಂಗದಲ್ಲಿ ಸ್ಥಾನ ಖಾಲಿಯಾದಲ್ಲಿ ಅವರು ಸಂಬಂಧಪಟ್ಟ ಆಯೋಗಕ್ಕೆ ತಿಳಿಸಲಾಗುತ್ತವೆ. ಉದಾ: ಮದ್ರಾಸಿನಲ್ಲಿ, ಎಲ್ಲಾ ಪ್ರಾಂತ ಸರಕಾರದಲ್ಲಿ, ನೌಕರರ ಆವಶ್ಯಕತೆ ಒದಗಿದಾಗ ಮದರಾಸು ಪಬ್ಲಿಕ್ ಸರ್ವಿಸ್ ಕಮಿಶನ್ ಒಂದು ಜಾಹಿರಾತನ್ನು ಪ್ರಕಟಿಸುತ್ತದೆ. ಅದಕ್ಕೆ ಬೇಕಾದ ವಿದ್ಯಾರ್ಹತೆ ಉಳ್ಳವರು ಅರ್ಜಿ ಸಲ್ಲಿಸುತ್ತಾರೆ. ಒಂದು ದಿನ ಅವರಿಗೆ ಪರೀಕ್ಷೆ ನಡೆಯುತ್ತದೆ. ಆದರಲ್ಲಿ ಉತ್ತಮರನ್ನು ಕೆಲಸಕ್ಕೆ ಕ್ರಮಶಃ ತೆಗೆದುಕೊಳ್ಳಲಾಗುತ್ತದೆ. ಇಲ್ಲಿ "ಹರಿಜನ, ಗಿರಿಜನ" ರಂತಹವರಿಗೆ ರಿಯಾಯಿತಿ ತೋರಿಸಲಾಗುತ್ತಿದೆ. ಕೆಲವೆಡೆ "ಆಂಗ್ಲೋ—ಇಂಡಿಯನ್ನ"ರಿಗೆ ರಿಯಾಯಿತಿ ತೋರಿಸಲಾಗುತ್ತಿದೆ. ಇವನ್ನು ಪತ್ರಿಕೆಯಲ್ಲೇ ಜಾಹಿರಾತಿನೊಂದಿಗೆ ಪ್ರಕಟಿಸುತ್ತಾರೆ. ಇವಲ್ಲದೆ ಮುಸ್ಲಿಮರೂ ಕ್ರಿಸ್ತೀಯರೂ ಕಮ್ಮಿ ಸಂಖ್ಯೆಯವರಿರುವ ಕಾರಣ, ಅಧಿಕ ಸಂಖ್ಯೆಯವರು ಅವರ ಮೇಲೆ ಅನ್ಯಾಯ ಮಾಡಿದರೆಂದು ಯಾರೂ ಹೇಳಬಾರದೆನ್ನುವದಕ್ಕಾಗಿ ಅವರಿಗೆ ಸ್ವಲ್ಪ ಮಟ್ಟಿಗೆ ರಿಯಾಯಿತಿ ತೋರಿಸಲಾಗುತ್ತಿದೆನ್ನುವ ಮಾತು ಕೇಳಿ ಬರುತ್ತಿದೆ. ಆದರೆ ಇದು ಆರೋಪಕ್ಕಿಂತ ಅಧಿಕವಾಗಿ ಏನೂ ಇರಲಾರದು. ಇಲ್ಲಿ ಇನ್ನೊಂದು ವಿಷಯ ಇದೆ. ಈ ಆರಿಕೆ ಕೆಲವೊಮ್ಮೆ ಸಂಬಂಧಪಟ್ಟ ಆಯೋಗದವರ ಮುತುವರ್ಜಿಗೊಳಪಟ್ಟೂ ಇರುತ್ತದೆ. ಇವೆಲ್ಲಾ ಒಳಗಿಂದೊಳಗೆ ಇರುವ ವಿಷಕ್ರಿಮಿಗಳು. ಲಂಚಾವತಾರ ತಾಂಡವವಾಡುತ್ತಿದೆಯೆನ್ನುವಾಗ ಈ ಜಾತ್ಯವತಾರ, ಭಾಷಾವತಾರದ ಆಟ ನಡೆಯುವದರಲ್ಲಿ ಸೋಜಿಗವಿರಲಾರದು. ಈ ದೃಷ್ಟಿಯಲ್ಲೂ ಲಾಭ ಹೊಂದುವವರು ಮಹಮ್ಮದೀಯರೇ ಇದ್ದಾರೆ, ಈಗೀಗ ಮಲೆಯಾಳಿಗಳ ಹೆಸರೂ ಅಲ್ಲಿ ಕೇಳಿ ಬರುತ್ತಿದೆ. ಇದು ಆರಿಸುವವರಿಗೆ ಅರ್ಥಾತ್ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಪಟ್ಟ ವಿಷಯ ಇದೆ. ಇಂತಹವರು ಎಂದಾದರೊಂದು ದಿನ ಸಿಕ್ಕಿ ಬೀಳುತ್ತಾರೆ, ಆಗ ಸರಕಾರದ ಧೋರಣೆ ಅಥವಾ ಕಾನೂನು ಅವರನ್ನು ರಕ್ಷಿಸಲಾರದು. ಕಾನೂನಿನ ಬೆಂಬಲದಿಂದ ಯಾರೂ ಅಂತಹ ಕೆಲಸಗಳಿಗೆ ಕೈ ಹಾಕುವಂತಿಲ್ಲ. ಶ್ರೀ ಸಾಮಾನ್ಯನ ಸಾಮಾನ್ಯ ದೃಷ್ಟಿಗೆ ಗೋಚರವಾಗುವದು ಇಷ್ಟೇ. ಇನ್ನು ಒಳಗಿಂದೊಳಗೆ ಮಹಮ್ಮದೀಯರ ಮತದಾಶೆಯಿಂದ ಕಾಂಗ್ರೆಸ್ಸಿಗರೂ ದ್ರಾ. ಮು. ಕ. ದವರು ಅದೇನಾದರೂ ಕಾರಸ್ಥಾನ ನಡೆಸಿರುವದು ಅವನಿಗೆ ಗೊತ್ತಿರಲಿಲ್ಲ. ಇದೀಗ ಶ್ರೀ ವಿನಾಯಕಂ ಹಾಗೂ ಶ್ರೀ ಅಣ್ಣಾದೊರೈ ಬಾಯಿ ತೆರೆದಿರುವಾಗ ಶ್ರೀ ಸಾಮಾನ್ಯನಿಗೆ ವಾಸನೆ ಬಂದಿರುತ್ತದೆ. ಆದರೂ ನಿರೂಪಿಸಲು ಅವನ ಬಳಿ ಸಾಕ್ಷ್ಯ ಇಲ್ಲದ ಕಾರಣ ಅವನು ಸುಮ್ಮಗುಳಿಯ ಬೇಕಾಗಿರುತ್ತದೆ.

ಕೆಳಗೆ ಬಿದ್ದ ಜಟ್ಟಿಗೆ ಶ್ರೀ ಅಣ್ಣಾದೊರೈ ಇಟ್ಟ ಇನ್ನೊಂದು ಪ್ರಹಾರವನ್ನಿತ್ತರು. ಇದು ಅಖಿಲ ಭಾರತ ಸಮಸ್ಯೆ. ಆದುದರಿಂದ ನಾನೇನೂ ಮಾಡುವಂತಿಲ್ಲವೆಂದು ಅವರು ಕೈತೊಳೆದುಕೊಂಡರು. ಅಖಿಲ—ಭಾರತದ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವದು ಕೇಂದ್ರ ಸರಕಾರದ ಕರ್ತವ್ಯ. ಕೇಂದ್ರ ಸರಕಾರ ಕಾಂಗ್ರೆಸ್ಸಿಗರ ಕೈಯಲ್ಲಿದೆ. ಅಂದರೆ ಕಾಂಗ್ರೆಸ್ಸಿಗರು ಮುಸ್ಲಿಮರ ಏಳಿಗೆಗಾಗಿ ಏನನ್ನೂ ಮಾಡಿರುವದಿಲ್ಲ. ಅವರಿಗೆ ಸಿಗಬೇಕಾಗಿರುವ ಪಾಲನ್ನು ಕೊಡದೆ ತಮ್ಮ ಪಕ್ಷದ ಬೆಳವಣಿಗೆಗಾಗಿ ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ಸಿಗೆ ಮತವೀಯದ ಮುಸ್ಲಿಮರನ್ನು ಕಾಂಗ್ರೆಸ್ಸ್ ಹೋರಿಗಳ ಕಾಲಿನಿಂದ ತುಳಿಯುತ್ತಿವೆ. ಅವರ ಆಶಾಭಾಸ್ಕರನ ಉದಯ ಇದೋ ಆಗುತ್ತಿದೆ. ನೋಡಿ ಉದಯ ಸೂರ್ಯನನ್ನೆಂದು ತಿರು ಅಣ್ಣಾದೊರೈ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೈ ತೋರಿಸಲು ಹೋದ ಕಾಂಗ್ರೆಸ್ಸಿನ ಶ್ರೀ ವಿನಾಯಕಂ ದ್ರಾ. ಮು. ಕ. ದ ಕೊರವಂಜಿ ಶ್ರೀ ಅಣ್ಣಾದೊರೈಯವರಿಂದ ಅಪಶಕುನ ಹೇಳಿಸಿಕೊಂಡರು. ಶ್ರೀ ಅಣ್ಣಾದೊರೈಯವರು ಚುಚ್ಚಿದ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವದರಲ್ಲಿ ಪ್ರವೀಣರು. ಅಂತೆಯೇ ಶ್ರೀ ವಿನಾಯಕಂ ಚುಚ್ಚಿದ ಮುಳ್ಳನ್ನು ಅವರು ಅಂತಹದ್ದೇ ಮುಳ್ಳಿನಿಂದ ತೆಗೆದು ಎರಡನ್ನೂ ಶ್ರೀ ವಿನಾಯಕಮಿಗೆ ಚುಚ್ಚಿ ಬಿಟ್ಟರು; "ಬಾ, ಮುಸ್ಲಿಂ ನೊಣವೇ ಎನ್ನ ಹಾದಿ ಮನೆಗೆಂದು ಕಾಂಗ್ರೆಸ್ಸ್ ಜೇಡ ಶ್ರೀ ವಿನಾಯಕಂ ಕರೆದು, ದ್ರಾ. ಮು. ಕ. ದ ಕತ್ತಲ ಮನೆಯಿಂದ ಹೊರ ಬರಲು ಕರೆ ಇತ್ತಾಗ, ಕತ್ತಲ ಮನೆಯೊಡೆಯ ಶ್ರೀ ಅಣ್ಣಾದೊರೈಯವರು, "ಇಪ್ಪತ್ತು ವರ್ಷಗಳಲ್ಲಿ ನೀನೇತಕ್ಕೆ ಬಿಟ್ಟೆಯೋ, ಈ ನೊಣವನ್ನಿಂತು ಹಾರಲು? ಈಗ ಬಂತೇನು ಜ್ಞಾಪಕ? ಈ ನೊಣವನ್ನು ಕೊಬ್ಬಿಸಲು ಬೇಕಾದಷ್ಟು ಹೊಲಸಿದೆ ಈ ಕತ್ತಲ ಮನೆಯಲ್ಲಿ. ನೀ, ತೆಂಳು ತೆರಳೆ"ಂದು ಹೇಳಿ ಬಿಟ್ಟರು.

ರಾಜಕೀಯ ಪಕ್ಷಗಳವರು ತಮ್ಮ ತಮ್ಮ ಪಕ್ಷಗಳ ಬೆಳವಣಿಗೆಗಾಗಿ ಹಗರಣ ನಡೆಸುತ್ತಿರುವದು ಹೊಸದೇನಲ್ಲ. ತಮ್ಮ ನಾಲಗೆಗಳಿಗನುಸಾರವಾಗಿ ಸಿಕ್ಕಿದೆಲ್ಲವನ್ನೂ ಒಮ್ಮೆಲೇ ನುಂಗಿ ಬಿಡದೆ ಕಚ್ಚಿ ಕಡಿದು ತುಂಡುಮಾಡಿ ಸಾಧ್ಯವಾದಷ್ಟನ್ನು ಮಾತ್ರ ಅವರು ನುಂಗಿಕೊಳ್ಳುತ್ತಾರೆ. ಸಿಕ್ಕಿದ್ದಕ್ಕೆ ನಾಲಗೆಯಲ್ಲಿ ನೀರು ಬಿಡುವದೂ ಉಂಟು, ಅದನ್ನು ಹುಳಿಯೆನ್ನುವದೂ ಇದೆ. ಆದರೆ ವಿಚಾರಶೀಲನಿಗೆ, ಪ್ರಜ್ಞಾವಂತನಿಗೆ ಆತ ಯಾಕೆ ಹುಳಿಯೆಂದ, ಯಾತಕ್ಕಾಗಿ ನೀರು ಸುರಿಸುತ್ತಿದ್ದಾನೆ, ಯಾತಕ್ಕಾಗಿ ಸ್ವಲ್ಪ ಸ್ವಲ್ಪವನ್ನೇ ನುಂಗುತ್ತಿದ್ದಾನೆಂಬುದು ಗೊತ್ತಾಗುತ್ತದೆ. ಅವನು ಒಡನೆಯೇ ಕೇಳಿ ಬಿಡುತ್ತಾನೆ- ಇಪ್ಪತ್ತು ವರ್ಷಗಳಿಂದ ಮಹಮ್ಮದೀಯರಿಗೆ ನೀವು ಕೊಟ್ಟಿರುವ ಪುಲಾವಿಗಿಂತ ಹೆಚ್ಚು ನೂರಿಪ್ಪತ್ತು ದಿನಗಳಲ್ಲಿ ಇವರು ಹೇಗೆ ಕೊಟ್ಟಾರು? ಮಹಮ್ಮದೀಯರ ಮತದ ಭ್ರಾಂತಿಯಿಂದ ಆ ಮತ ಮರೀಚಿಕೆಯ ಹಿಂದುಗಡೆ ಇಪ್ಪತ್ತು ವರ್ಷ ನೀವು ಓಡಿದಿರೇನು? ಇಂತಹ ಪ್ರಶ್ನೆಗಳ ಸುರಿಮಳೆಗೆ ಕೆದ ಮೇಲೆ ಸೌಮ್ಯವಾಗಿ ನೀವಿಬ್ಬರೂ ತುಷ್ಟೀಕರಣ ಪಂದ್ಯಾಟದ ಕಳದಲ್ಲಿಳಿದಿ

ರುವಿರಿ. ನಿನಗಿದೋ ನಮಸ್ಕಾರವೆನ್ನು ವನು.

ಈ ದ್ವಾಟ ಅಲ್ಲಿಗೇನೇ ಅಂತ್ಯವಾಗಲಿಲ್ಲ. ಇಸ್ಲಾಂ ಪೆಟ್ಟು ಪ್ರಯೋಜನವಿಲ್ಲವೆಂದ ತಿಳಿದೊಡನೆ ಕ್ರಿಸ್ತೀಯ ಪೆಟ್ಟನ್ನು ಶ್ರೀ ಅಣ್ಣಾ ದೊರೈಯವರಿಗೆ ಕೊಡಲಾಯಿತು; ದಿವಂಗತ ನೆಹರವರಾಜ ಕರಂಚಂದ ಗಾಂಧೀಜೀಯವರು ಒಂದು ಶಬ್ದದ ಪ್ರಚಾರ ಮಾಡಿಬಿಟ್ಟಿದ್ದರು. ಅದುವೇ ಹರಿಜನ, 'ಹೊಲೆಯ'ರನ್ನು ದೂರವಿರಕೂಡದೆಂಬ ಕಾರಣದಿಂದ ಅವರನ್ನ ಗಾಂಧೀಜೀಯವರು ಹರಿಜನ ಎಂಬ ಹೆಸರಿನಿಂದ ಕರೆಯಲಾರಂಭಿಸಿದರು. ಇಂದು ಅದೇ ಹೆಸರಿನಿಂದ ಅವರು ಕರೆಯಲ್ಪಡುತ್ತಿದ್ದಾರೆ 'ಹೊಲೆಯರು' ಮಾತ್ರ ಹರಿಜನರೇನು? ನಾವೆಲ್ಲಾ ಯಾರು? ಯಾರೇ ಇದ್ದರೂ ಹರಿಯ ಜಪ ಮಾಡುವವರೇ ಇದ್ದೇವೆ. ಅಲ್ಲದೆ ಹರಿಜನರಲ್ಲವೋ ಕರಿ ಜನರು ನೀವೆಂದು ಹಳಿಯುವವರಿರುವದಿಲ್ಲ..(ತಮಿಳಿನಲ್ಲಿ ಕೆಲವರು 'ಹ' ಅಕ್ಷರವನ್ನು ಉಪಯೋಗಿಸುವದಿಲ್ಲ. ಅದು ಉತ್ತರದ ಭಾಷೆ - ಸಂಸ್ಕೃತದಿಂದ ಬಂದಿದೆಯಂತೆ ಆದುದರಿಂದ 'ಹ' ಅಕ್ಷರದ ಬದಲ 'ಕ' ಅಕ್ಷರವನ್ನು ಅವರು ಉಪಯೋಗಿಸುತ್ತಾರೆ. ಆಗ 'ಹರಿಜನ'ರು 'ಕರಿಜನ'ರಾಗುತ್ತಾರೆ. ಆದರೆ ಈ ದೃಷ್ಟಿಯಿಂದ ಇಲ್ಲಿ ತಿಳಿಸಿಲ್ಲ. ಐರೋಪ್ಯ ಮತಪ್ರಸಾರಕರು ಕೂಗುವ ವಿಧಾನ ಇದಿದೆಂಬುದನ್ನ ಸೂಚಿಸಲಿಕ್ಕಾಗಿ ಮಾತ್ರ ತಿಳಿಸಲಾಗಿದೆ.) 'ಹರಿ'ಯೆಂಬನ್ಯಾವನೂ ಇಲ್ಲ. ಅವರಿಗೆ ಕರೆಯುವದು ಮಾತ್ರ ಗೊತ್ತು. ಅದೇ ಧಾಟಿಯಲ್ಲಿ ಅವರು ಇರುವದು ಒಬ್ಬನೇ ಒಬ್ಬ ಅವನೇ 'ಅಲ್ಲಾ'ನೆಂದು ಅರ್ಭಟಿಸುತ್ತಾರೆ. ಇನ್ನು ಕೆಲವರು— ಹುಚ್ಚಾ! ಹರಿ, ಅಲ್ಲಾ ಏನೂ ಇಲ್ಲ. ಇರುವದು ಹೋಲಿ ಗೋಸ್ಟ್, ಹೋಲಿ ಫಾದರ್ ಮತ್ತು ಹೋಲಿ ಸನ್ ಅಷ್ಟೇ ಅಂದು ಬಿಡುತ್ತಾರೆ... ಏನೇ ಇರಲಿ, ಬಿಹಾರಿನ ಭೀಕರ ಬರಗಾಲದ ನೆಪದಿಂದ ಇಂತಹ ಹಲವಾರು ಹರಿಜನರನ್ನು ಕ್ರಿಸ್ತೀಯರು ಕ್ರಿಸ್ತಜನರನ್ನಾಗಿ ಮತಾಂತರಿಸಿದ ಕುತಂತ್ರದ ಹಾಗೂ ಖಂಡನೀಯ ಘಟನೆಗಳ ಕುರಿತು ಭಾರತದ ಲೋಕಸಭೆಯಲ್ಲಿ ಮಾತು ಕೇಳಿಬಂದಿರುತ್ತದೆ. ಕ್ರಿಸ್ತೀಯರ ಮತವ್ಯಾಪಾರ ಬರಗಾಲದ ಸ್ಥಳಕ್ಕ ಮಾತ್ರ ಸೀಮಿತವಲ್ಲ. ತಮಿಳುನಾಡಿನಲ್ಲೂ ಅವರ ಅಟ್ಟಹಾಸನಡೆಯುತ್ತಿದೆ. ಮುಖ್ಯವಾಗಿ ಅವರು ಗುಡಿಸಲು ಸ್ಥಳಗಳನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಅವರೂ ಒಂದು ಗುಡಿಸಲು ಹಾಕಿಕೊಂಡು ರಾತ್ರಿ ಶಾಲೆ, ಮಕ್ಕಳಿಗೆ ಹೇಳಿಕೊಡುವ ಶಾಲೆ, ಪ್ರಾರ್ಥನಾ ಸಂಗತಿ... ಹೀಗೆ ಮೊಸೆ ಒಳಬಿಟ್ಟು ಈ ಮತೀಯ ಸಿಳಿಗೆ ಒಳಗೆ ಹೋಗಿ ಬಿಡುತ್ತದೆ. ಅಲ್ಲೊಂದು ಇಗರ್ಜಿ ಬರುತ್ತದೆ ಅದು ಮೆಲ್ಲಗೆ ವಿಶಾಲ ಕಟ್ಟಡ ಎದ್ದು ನಿಲ್ಲುತ್ತದೆ. ಬಹಳಷ್ಟು ದೂರಕ್ಕ ಕಾಣುವ ಶಿಲುಬೆ ಆ ಕಟ್ಟಡದ ತುದಿಯಲ್ಲಿರುತ್ತದೆ. ಅದು ದೊಡ್ಡ ಇಗರ್ಜಿಯಾಗುತ್ತದೆ. ಇಷ್ಟೇ ಅಲ್ಲದ ಅಲ್ಲಿ ಅನೇಕಾನೇಕ ರೀತಿ ಕರಪತ್ರಗಳನ್ನು ಹಂಚಲಾಗುತ್ತದೆ. ಅಲ್ಲಿಂದ ಸ್ತ್ರೀಯರು ಗುಂಪು ಗುಂಪಾಗಿ ಗುಡಿಸಲಲ್ಲಿ ಬಾಳುವ ಸ್ತ್ರೀಯರೊಂದಿಗೆ ಬೆರೆತು ಅವರ ಮನಸ್ಸನ್ನು ಒಲಿಸಿಬಿಟ್ಟು, ದೊಡ್ಡ ಕಟ್ಟಡ ಏಳುವ ಹೊತ್ತಿಗೆ ಅಲ್ಲಿಯವರೆಲ್ಲರೂ ಕ್ರಿಸ್ತೀಯರಾಗಿ ಬಿಡುತ್ತಾರೆ. ಇದಕ್ಕೆ ಹಣ ಎಲ್ಲಿಂದ ಬರುತ್ತದೆ, ಹೇಗೆ ಬರುತ್ತದೆ... ಆಶ್ಚರ್ಯಜನಕ ವಿಷಯವೇ ಇದೆ. ಧರ್ಮಾಭಿಮಾನಿಗಳಿಗೆ ಈ ಧನ ಪ್ರವಾಹಕೆದುರು ನಿಲ್ಲಲು ಸಾಧ್ಯವಾಗಿರುವದಿಲ್ಲ ಅವರ ಮಾತಿಗೆ ಅಲ್ಲಿ ಬೆಲೆಯೇ ಇಲ್ಲ. ಹಿಡಗು ಈ ರೀತಿ ಹಬ್ಬುತ್ತಾ ಇದೆ. ಆದರೂ ಇನ್ನು ಕೆಲನೆಡೆ ಅವರಿಗೆ ಅವರು ಭಾವಿಸಿರುವ ಮಟ್ಟಿಗೆ ಫಲ ಸಿಕ್ಕಿರುವದಿಲ್ಲ. ಅಲ್ಲಿಯ ಜನರು ಈ ಆಕರ್ಷಣೆಗೆ ಬಲಿಯಾಗಿಲ್ಲ. ಅವರಿನ್ನೂ ಯೋಚಿಸುತ್ತಾ ಇದ್ದಾರೆ. ಇತರೆಡೆಗಳಲ್ಲಿ ನಡೆದಿರುವ ಮತೀಯ ವ್ಯಾಪಾರದ ಪರಿಚಯ ಅವರಿಗಾಗಿರುತ್ತದೆ ಆದುದರಿಂದ ಅವರು ಸ್ವಲ್ಪಮಟ್ಟಿಗೆ ಎಚ್ಚರದಿಂದ ಇದ್ದಾರೆ. ಅವರು ಕಣ್ಣು ಮುಚ್ಚಿಕೊಂಡಿರುವವರಲ್ಲ. ನಿಸರ್ಗದತ್ತ ನೋಟ ಬೀರುವವರಿದ್ದಾರೆ. ಅಬ್ಬಾ! ಆ ಬಣ್ಣದ ಚಿಟ್ಟೆ! ಆಕರ್ಷಣೆಯ ಅಪರೂಪ ಆಕೃತಿ. ಹೂವಿನ ಬಳಿಗೆ ಹೋಗುವಾಗ ಅದರ ಸಡಗರವೇನ! ಎಂತಹ ಮನಕುಸುಮ ಕೂಡಾ ಅದರ ಆಕರ್ಷಣೆಗೆ ಬಲಿಯಾಗಲೇಬೇಕು. ಆದರೆ ಅದೇ ಚಿಟ್ಟೆ, ಆ ಹೂವಿನ ಮಕರಂದವನ್ನು ಹೀರಿದ ಮೇಲೆ ಅತ್ತ ಹಿಂತಿರುಗಿ ನೋಡುವದಾದರೂ ಇದೆಯೇ? ಈ ಕ್ರಿಸ್ತೀಯ ಮತ ಪ್ರಸಾರಕರು ಮಾಡುತ್ತಿರುವದಾದರೂ ಅದೇ ಕೆಲಸವಲ್ಲವೇ? ನನ್ನಲ್ಲಿರುವ 'ಹಿಂದೂ'ವನ್ನು ಹೀರಿದ ಮೇಲೆ, ಕ್ರಿಸ್ತೀಯನಾಗಿ ಬಿಟ್ಟ ಮೇಲೆ ನಾನು ಯಾರೋ ಅವನು ಯಾರೋ! ಅವನಂತೆ ನಾನೂ ಬಾಲ ಕಳೆದುಕೊಂಡ ಮೇಲೆ ಇತರರನ್ನ ಅದಕ್ಕಾಗಿ ಪ್ರೋತ್ಸಾಹಿಸಬೇಕು. ಪ್ರಣಯಿಗಳೆನ್ನುವವರು ಆಡುವ ಆಟಕ್ಕೆ ಮಿತಿ ಇದೆಯೇ? ಎಲ್ಲಿಯ ವರೆಗೆ? ನಲ್ಲೆಯ ಕೊರಳಿಗೆ ನುಣಿಕಟ್ಟಿದರಾಯಿತು. ಆಟ ಎಲ್ಲಾ ಮುಗಿದಂತೆನೇ. ಅದೇ ರೀತಿ ತನ್ನ ಕೊರಳಿಗೆ ಹಗ್ಗ ಹಾಕುವ ವರೆಗೆ ಅವನು ಆಟವಾಡುತ್ತಾನೆ. ಒಮ್ಮೆ ಅವನು ಹಗ್ಗ ಹಾಕಿದನೆಂದರೆ ಮುಗಿಯಿತು. ಅನಂತರ ತಾನೂ ಅದೇ ರೀತಿ ಬೇರೆಯವರ ಕುತ್ತಿಗೆ ಹೊಂಚು ಹಾಕುತ್ತಿರಬೇಕು! ಯಾಕೆ ಈ ರೀತಿಯ ಬಾಳ್ವೆ! ಇದೇ ರೀತಿಯಲ್ಲಿ ಇರಬಹುದಲ್ಲಾ! 'ಹರಿಜನ' ಹೆಸರಿನ ಕಲಿಗೆಯಡಿಯಲ್ಲಿ ಆರಾಮವಾಗಿ ಇರಬಹುದಲ್ಲಾ? ಸರಕಾರ ಒಂದಿಷ್ಟು ಕೊಡುತ್ತಿದ್ದ ಮತದ ಹಕ್ಕಿವ್ಯಾಪಾರದಲ್ಲಿ ನಾನೇಕೆ ತಕ್ಕೆ ಅದನು ಕಳೆದುಕೊಳ್ಳಬೇಕ? ಆದುದರಿಂದ ಅವರು ಪ್ರತಿಭಟಿಸುತ್ತಿದ್ದಾರೆ ನಿಜವಾಗಿ ಬಡವರ ಉದ್ಧಾರಕ್ಕ ನೀವು ಬಂದಿರವದಾದಲ್ಲಿ ಆ ಪುಸ್ತಕವನ್ನು ಕೊಂಡು ಹೋಗಿ ಪುಸ್ತಕ ತಿನ್ನಲು ನಾವೇನು ಕತ್ತೆಗಳೇ, ಅದರ ಬದಲ ಒಂದಿಷ್ಟು ಗಂಜಿ ನೀರಿಗೆ ಏರ್ಪಾಡು ಮಾಡಿಕೊಡಿರೆಂದು ಧೈರ್ಯದಿಂದ ಹೇಳುತ್ತಾರೆ.

ಕ್ರಿಸ್ತೀಯರು ಈಗೊಂದ ... ಕ್ಕೆ ಬಂದಿದ್ದಾರೆ ಈ ಹಗ್ಗವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕು, ಇಲ್ಲವೇ ಅದನ್ನು ಹರಿದೊಗೆಯಬೇಕು. ಈ ತಮ್ಮ ಮತೀಯ ಆಟಕ್ಕಾಗಿ ಅವರು ರಾಜಕೀಯ ಪಧಾರಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ರಾಜಕೀಯ ವ್ಯಾಪಾರದಲ್ಲಿ ನುಂತವರು ಇದಕ್ಕೆ ಬಲಿಯಾಗುತ್ತಿದ್ದಾರೆ. ಅವರು ವಿಧಾನಸಭೆ, ಲೋಕಸಭೆಗಳಲ್ಲಿ ಕ್ರಿಸ್ತೀಯರ ಗೊಂಬೆಗಳಂತೆ ಆಡುತ್ತಿದ್ದಾರೆ. ಅಣ್ಣಾದೊರೈಯವರ ಬಳಿಯೂ ಬಂದದ್ದು ಇದೇ ಬೆಕ್ಕು. ಹರಿಜನರಿಗೆ ಸಿಗುತ್ತಿರುವ ನಿಯೋಜಿತ-ಸವಲತ್ತುಗಳು ಅವನು ಕ್ರಿಸ್ತೀಯನಾದರೂ ಸಿಗಲೇಬೇಕು. ಅಲ್ಲವೇ, ಮತ್ತೆ, ನಿನ್ನೆ ಕೊಡುತ್ತಿದ್ದವನಿಗೆ ಇಂದು ನಿಲ್ಲಿಸಿಬಿಟ್ಟರೆ ಅವನ ಕುಟುಂಬ ರಥ ಹೋಗುವದಾದರೂ ಹೇಗೆ? ವ್ಯಕ್ತಿಗೆ ತಾನೇ ಸಹಾಯ ಮಾಡುತ್ತಿದ್ದದ್ದು? ಕ್ರಿಶ್ಚಿಯನ್ ಆದೊಡನೆ ಅವನಿಗೆ ಕೊಂಬು ಬರುತ್ತದೆಯೇ?... ವಾದಸರಣಿ ಉದ್ದವಾಗುತ್ತ ಹೋಗುತ್ತದೆ.

ಈ ಸಹಾಯ ಸವಲತ್ತು ಕೊಟ್ಟಿದ್ದಾದರೂ ಯಾರಿಗೆ?—'ಹರಿಜನರಿ'ಗೆ. ಅಂದರೆ ಉತ್ತಮ ಜಾತಿಯವರು ಕೆಳಜಾತಿಯವರನ್ನು ಮುಂದಕ್ಕೆ ಬಾರದಂತೆ ತಡೆದಿದ್ದರು, ಆ ಕಾರಣದಿಂದಾಗಿ ಅವರು ಹಿಂದುಳಿದಿರುವರ. ಅವರನ್ನು ಮುಂದಕ್ಕೆ ತರಬೇಕು. ಅದಕ್ಕಾಗಿ ಅವರಿಗೆ ವಿಶೇಷ ರಿಯಾಯತಿ ಕೊಡಲಾಗುತ್ತಿದೆ ಅವನು ಅನ್ಯ ಮತಕ್ಕೆ ಮತಾಂತರಿಸಲ್ಪಟ್ಟನೆಂದರೆ (ಕ್ರಿಸ್ತೀಯಮತದಲ್ಲಿ ಅಲ್ಲಿ ಜಾತಿಭೇದ ಇಲ್ಲವೆನ್ನಲಾಗುತ್ತಿದೆ; ಅಲ್ಲಿ ಎಲ್ಲರೂ ಸಮಾನ ಎನ್ನಲಾಗುತ್ತಿದೆ) ಆಗ ಕೆಳಜಾತಿಯವನಿರುದಿಲ್ಲ ಅವನಿಗೆ ಇಂತ ಸವಲತ್ತು ಕೊಡುವದರಲ್ಲಿ ಅರ್ಥವಿಲ್ಲ. ಈ ಒಂದು ಚಿಕ್ಕ ವಿಷಯವನ್ನ ಬದಿಗೊತ್ತಿಬಿಡ, ಕೇವಲ ಕ್ರಿಸ್ತೀಕರಣ ಹಂದ್ಯಾಟದ ಬಯಲಿನಿಂದ ತಿರು ಅಣ್ಣಾದೊರೈಯವರು ಮತಾಂತರಿಗೂ ಸವಲತ್ತು ಕೊಡುವ ಕುರಿತು ಯೋಚಿಸುವದಾಗಿ ಹೇಳಿರುವರು. ಈ ಹಗ್ಗವೂ ಕ್ರಿಸ್ತೀಯರ ಕೈಗೆ ಹೋದಲ್ಲಿ ಎಲ್ಲೆಲ್ಲೂ ಕೇರಳ, ಗೋವಾ ನಾಗಾಲೇಂಡ್, ಮಿಝೋ ಲೇಂಡ್‌ಗಳನ್ನೇ ಕಾಣಬಹದು.

ಕಾಂಗ್ರೆಸ್ಸಿಗರೂ ದ್ರಾ. ಮು. ಕ. ದವರೂ ತ ಸ್ತೀಕರಣದ ಕಳದಿಗಿಳಿದ್ದಾರೆ. ಯಾರು ಯಾರನ್ನು ಮಿಂಚಿಸುತ್ತಾರೋ!



ಐ ಎಸ್. ಐ.ಯಲ್ಲಿ ವಿದ್ಯುತ್ ಇಸ್ತ್ರಿ ಪೆಟ್ಟಿಗೆ ಮತ್ತು ಉಷ್ಣೋತ್ಪಾದಕಗಳನ್ನು ಪರಿಶೀಲನೆ ಮಾಡುತಿದ್ದಾರೆ.

ಪ್ರಗತಿ ಪಥದಲ್ಲಿ ಭಾರತ

ಭಾರತೀಯ ಮಾನಕಗಳ ಸಂಸ್ಥೆ

ವಸ್ತುಗಳ ಗುಣನಿಯಂತ್ರಣವೇ ಭಾರತೀಯ ಮಾನಕಗಳ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈ ಸಂಸ್ಥೆಯವರು ಸಂಬಂಧಿಸಿದ ಕೈಗಾರಿಕೆಗಳೊಂದಿಗೆ ಸಮಾಲೋಚನೆ ನಡೆಸಿ ಅವು ತಯಾರಿಸುತ್ತಿರುವ ಉತ್ಪನ್ನಗಳ ಗುಣಾಂಶದ ಮಾನಕಗಳನ್ನು ಗೊತ್ತುಪಡಿಸುತ್ತಾರೆ. ಹೀಗೆ ಸಿದ್ಧಗೊಳಿಸಿದ ಮಾನಕಗಳನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಒಳಸುವಂತೆ ನೋಡಿಕೊಳ್ಳುತ್ತಾರೆ.

ಭಾರತೀಯ ಮಾನಕಗಳ ಸಂಸ್ಥೆಯವರು ರೂಪಿಸುವ ಮಾನಕಗಳು ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತವೆ. ಭಾರತೀಯ ಮಾನಕಗಳ ಉಪಯೋಗವನ್ನು ಅಧಿಕಗೊಳಿಸಲು ರಾಜ್ಯ ಮಟ್ಟದಲ್ಲಿ ಆಗಾಗ್ಗೆ ಸಭೆ ಸಮ್ಮೇಳನಗಳು ನಡೆಯುತ್ತವೆ.

ಭಾರತೀಯ ಮಾನಕಗಳ ಸಂಸ್ಥೆಯನ್ನು, ಭಾರತ ಸರ್ಕಾರದ ನಿರ್ಣಯದ ಪ್ರಕಾರ ೧೯೪೭ರಲ್ಲಿ ಸ್ಥಾಪಿಸಲಾಯಿತು. ವೈಜ್ಞಾನಿಕ ಹಾಗೂ ದೇಶದ ಕೈಗಾರಿಕಾ ತಾಂತ್ರಿಕಸಂಸ್ಥೆಗಳು ಈ ಸಂಸ್ಥೆಯಸ್ಥಾಪನೆಯಲ್ಲಿ ಸಹಕರಿಸಿವೆ. ಭಾರತೀಯ ಮಾನಕಗಳ ಸಂಸ್ಥೆಯು ಒಂದು ಸ್ವಯಂ ಅಧಿಕಾರವುಳ್ಳ ಸಂಸ್ಥೆಯಾಗಿದೆ. ಐ. ಎಸ್. ಐ ಸರ್ಟಿಫಿಕೇಶನ್ ಮಾರ್ಕ್‌ಗಳ ಕಾನೂನಿನ ಪ್ರಕಾರ ಕಾರ್ಯನಿರ್ವಹಿಸುತ್ತಿದೆ.

ಕಾರ್ಯಯೋಜನೆಯ ಮೇರೆಗೆ ಭಾರತೀಯ ಮಾನಕಗಳ ನಿಬಂಧನೆಗಳನ್ನು ಅಂಗೀಕರಿಸಿ ಈ ಗುಣಾಂಶದ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೆಗಳಿಗೆ, ಲೈಸನ್ಸ್‌ಗಳನ್ನು ನೀಡಲಾಗುತ್ತಿದೆ. ಈ ವಸ್ತುಗಳ ತಯಾರಕರು, ಈ ಕಾರ್ಯಯೋಜನೆಯನ್ವಯ ತಾವು ತಯಾರಿಸುವ ವಸ್ತುಗಳ ಮೇಲೆ ಐ ಎಸ್. ಐ. ಮುದ್ರೆಯನ್ನು ಹಾಕುತ್ತಾರೆ. ಅಂದರೆ ಅವರು

(ಒಂಭತ್ತನೇ ಪುಟ ನೋಡಿರಿ)

ಕನ್ನಡದ ಕಡುಗಲಿ
ನಿಡುಗಲ್ಲು ನಾಯಕ—
ತಿಪ್ಪಯ್ಯ

ಲೇಖಕರು :
ಸುರತ್ಕಲ್ ರಾಮಕೃಷ್ಣ ಹೆಬ್ಬಾರ್

ವಿಜಯನಗರದ ಅರಸ ಕೃಷ್ಣದೇವರಾಯನು ಆಳುತ್ತಿದ್ದ ಕಾಲದಲ್ಲಿ ನಡೆದ ಕಥೆಯಿದು.

ಆಗ ವಿಜಾಪುರದಲ್ಲಿ ಮುಸ್ಲಿಮರು ಆಳುತ್ತಿದ್ದರು. ಅವರ ಆಶ್ರಯದಲ್ಲಿ ತಿಮ್ಮರಾಜ ಎಂಬ ಸರದಾರನಿದ್ದನು. ಆತನು ಹಿಂದು ಅಲ್ಲದೆ ಕ್ಷತ್ರಿಯನೂ ಆಗಿದ್ದನು. ಅವನಿಗೆ ಒಬ್ಬಳು ಅವಿವಾಹಿತೆಯಾದ ಪ್ರಾಯಪ್ರಬುದ್ಧ ಮಗಳಿದ್ದಳು.

ಮುಹಮ್ಮದೀಯರ ರಾಜ್ಯದಲ್ಲಿ ಆಗ ವಿಪರೀತ ಅನ್ಯಾಯಗಳೇ ನಡೆಯುತ್ತಿದ್ದವು. ತಿಮ್ಮರಾಜನು ದೂರ ಯುದ್ಧಕ್ಕೆ ಹೋಗಿ ತಿರುಗಿ ಬಂದಾಗ ಅವನ ಮಗಳು ತುಂಬು ಬಸುರಿಯಾಗಿದ್ದಳು. ತಿಮ್ಮರಾಜನಿಗೆ ಇದರಿಂದ ಬಹಳ ದುಃಖವಾಯಿತು.

ಕೆಲವೇ ದಿನಗಳಲ್ಲಿ ತಿಮ್ಮರಸನ ಮಗಳು ಒಂದು ಗಂಡು ಕೂಸನ್ನು ಹೆತ್ತಳು. ತನ್ನ ಕೀರ್ತಿಗೆ ಕಳಂಕ ತಂದ ಆ ಶಿಶುವನ್ನು ತಿಮ್ಮರಸನು ತಿಪ್ಪೆಯಲ್ಲಿ ಎಸೆದು ಬಂದನು.

ಅದು ದನಗಳನ್ನು ಬೆಟ್ಟಕ್ಕೆ ಕೊಂಡೊಯ್ಯುವ ಚಿಕ್ಕ ಕಾಲುದಾರಿ. ಆ ದಾರಿಯಲ್ಲಿ ಕಮ್ಮನೆಂಬ ಗೌಳಿಗನು ಬೆಟ್ಟಕ್ಕೆ ಹೋಗುತ್ತಿರುವಾಗ ಮಗುವನ್ನು ಕಂಡು ತನ್ನ ಮನೆಗೊಯ್ದನು.

ಕಮ್ಮನು ಮಗುವಿಗೆ ಹಸುವಿನ ಹಾಲನ್ನು ದಿನಾಲೂ ಉಣ್ಣಿಸತೊಡಗಿದನು. ತಿಪ್ಪೆಯಲ್ಲಿ ದೊರೆತ ಮಗುವಾದುದರಿಂದ 'ತಿಪ್ಪಯ್ಯ' ಎಂದೇ ಹೆಸರಿಸಿದನು.

ಹಳ್ಳಿಗರು ಕೊಂಪೆಯೆನಿಸಿದ ಅಲ್ಲಿ ಬಯಲಾಟ, ಹುಲಿ ಬೇಟೆ, ಕುಸ್ತಿಯಾಟ, ಜೊತೆಗೆ ಗೋಸಂಗೋಪನೆಗಳಲ್ಲಿ ಅವನು ಆಸಕ್ತನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ದಿನವೂ ದನಗಳನ್ನು ಅಟ್ಟಿಕೊಂಡು ಬೆಟ್ಟಕ್ಕೆ ಹೋಗುತ್ತಿದ್ದನು. ಒಂದೆರಡು ಹಸುಗಳನ್ನು ಅಟ್ಟಿಕೊಂಡು ಬಂದ— ಹುಲಿಗಳನ್ನೆದುರಿಸಿ ಸೀಳಿಹಾಕಿದ್ದನು. ಗೌಳಿಗರೆಲ್ಲರಿಗೆ ಈತನೇ ಮುಖ್ಯಸ್ಥ.

ವಿಜಾಪುರದ ಅರಸ ಕಂದಾಯ ವಸೂಲಾದ ಒಡವೆ ಹಾಗೂ ಲೂಟಿ ಮಾಡಿ ತಂದ ವಸ್ತುಗಳನ್ನು ಅದೇ ಸ್ಥಳದಿಂದ ಸಾಗಿಸುತ್ತಿರಲು—ತಿಪ್ಪಯ್ಯನು ಹಲವು ಗೌಳಿಗರನ್ನು ಕೂಡಿಸಿ ಅವರ ಮೇಲೆರಗಿ ಆ ವಸ್ತುಗಳನ್ನೆಲ್ಲಾ ತನ್ನ ವಶಮಾಡಿಕೊಂಡನು. ಇದರಿಂದಾಗಿ ವಿಜಾಪುರದ ಅರಸನಿಗೆ ಅತ್ಯಂತ ಕಷ್ಟವಾಯಿತು.

ವಿಜಾಪುರದ ಸುಲ್ತಾನನು ದೊಡ್ಡ ದಂಡನ್ನು ಕಮ್ಮನ ಮನೆಗೆ ಕಳುಹಿಸಿದನು. ಕಮ್ಮನನ್ನು—ತಿಪ್ಪಯ್ಯನನ್ನು ಗಡಿಪಾರಾಗಿ ಹೋಗಬೇಕೆಂದು ಆಜ್ಞೆ ವಿಧಿಸಿದನು.

ಕಮ್ಮನು ವಚನದಂತೆ ತಿಪ್ಪಯ್ಯನೊಡನೆ ಊರನ್ನು ತ್ಯಜಿಸಿದನು. ಹಳ್ಳಿಯವರೆಲ್ಲರೂ ಮಮ್ಮಲ ಮರುಗಿದರು. ಕೆಲವರು ತಿಪ್ಪಯ್ಯನ ಮೇಲಿನ ಮಮತೆಯಿಂದ ತಮ್ಮ ತಮ್ಮ ಹಸುಗಳೊಂದಿಗೆ ಅವರ ಹಿಂದೆಯೇ ನಡೆದರು.

ಆ ಮೇಲೆ ತಿಪ್ಪಯ್ಯ ಮತ್ತು ಕಮ್ಮರು ವಿಜಯನಗರ ರಾಜ್ಯದಲ್ಲಿ ಒಂದೆಡೆ ಇರತೊಡಗಿದರು.

ವಿಜಯನಗರದ ಅರಸನು ಹುಲಿಗಳನ್ನು ಸಾಕಿದ್ದನು. ಪ್ರತಿ ವರ್ಷ ಜಟ್ಟಿಗಳೊಡನೆ ಈ ಹುಲಿಗಳ ಕುಸ್ತಿಯನ್ನು ಮಾಡಿಸುವುದು ಅವನ ಸಂಪ್ರದಾಯ. ಹಲವರು ಈ ಸಂದರ್ಭದಲ್ಲಿ ಹುಲಿಗಳ ಪಾಲಾಗುತ್ತಿದ್ದರು. ಕೇವಲ ರಾಜ್ಯದ ಆನಂದಕ್ಕಾಗಿಯೇ ಈ ಜೂಜು ನಡೆಯುತ್ತಿತ್ತು.

ಒಂದು ದಿನ ಒಮ್ಮೆಲೇ ಎರಡು ಹುಲಿಗಳು ತಮ್ಮ ಸರಪಳಿಯನ್ನು ಹರಿದು ಬಯಲಿಗೆ ಬಂದವು. ಸಿಕ್ಕಿದವರನ್ನು ನುಂಗುತ್ತಾ ಬರತೊಡಗಿದವು. ಯಾರಿಗೂ ಆವುಗಳನ್ನೆದುರಿಸಲು ಸಾಧ್ಯವಾಗಲಿಲ್ಲ.

ಊರೆಲ್ಲಾ ಗೋಳೋ ಗೋಳು! ತಿಪ್ಪಯ್ಯನಿಗೆ ಇದು ತಿಳಿದೊಡನೆಯೇ ಬರಿಗೈಯಲ್ಲೇ ಓಡೋಡಿ ಬಂದು ಹುಲಿಗಳ ಮೈ ಮೇಲೆ ಧೈರ್ಯದಿಂದ ಎರಗಿ ಎರಡು ತಾಸುಗಳ ತನಕ ಭಯಂಕರ ಕಾದಾಟ ಮಾಡಿ ನೆತ್ತರಲ್ಲಿ ಮಿಂದ ತಿಪ್ಪಯ್ಯ. ಆತ ಆ ಹುಲಿಗಳೆರಡನ್ನೂ ಸೀಳಿ ವಿಜಯದಿಂದ ಹಾರಿದನು. ಎಲ್ಲರೂ ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟರು.

ಈ ವಾರ್ತೆ ಅರಸನು ತಿಳಿದು ಕೊಂಡನಾದರೂ ಪ್ರಾರಂಭದಲ್ಲಿ ವಿಸ್ಮಯಗೊಂಡನಲ್ಲದೆ ಕೊನೆಗೆ—ಒಬ್ಬ ಕ್ಷುಲ್ಲಕ ಮನುಷ್ಯನೆಂದು ತೀರ್ಮಾನಿಸಿಕೊಂಡು ತಿಪ್ಪಯ್ಯನತ್ತ ಹೆಚ್ಚು ಗಮನವನ್ನು ಕೊಡದೆ ಹೋದನು.

ಇಂತಿರಲು, ಅದೊಂದು ದಿನ ವಿಜಯನಗರ ರಾಜರ ಕೀರ್ತಿಯೇ ಅಳಿಸುವುದರಲ್ಲಿತ್ತು. ಜಗತ್ ಪ್ರಸಿದ್ಧ ಜಟ್ಟಿಯೊಬ್ಬನು ವಿಜಯ ನಗರದ ಆಸ್ಥಾನಕ್ಕೆ ಬಂದು ಎಲ್ಲರನ್ನೂ ಸೋಲಿಸಿ ವಿಜಯ ಗರ್ವದಿಂದ ಇನ್ನ್ಯಾರಾದರೂ ಇದ್ದರೆ ಬರಲಿ ಎಂದು ಭುಜತಟ್ಟತೊಡಗಿದನು. ಉಪಾಯ ಕಾಣದೆ ಅರಸನು ಕೂಡಲೇ ತಿಪ್ಪಯ್ಯನನ್ನು ಕರೆಸಿದನು. ತಿಪ್ಪಯ್ಯನು ಭುಜ ತಟ್ಟಿ ಆ ಜಟ್ಟಿಯೊಡನೆ ದ್ವಂದ್ವ ಯುದ್ಧ ಮಾಡಿ ಕೆಡಹಿದನು. ಕೂಡಲೇ ಅರಸನು ಸಿಂಹಾಸನದಿಂದ ಎದ್ದು ಬಂದು ಸಂತೋಷದಿಂದ ತಿಪ್ಪಯ್ಯನನ್ನು ಅಪ್ಪಿಕೊಂಡನು. ನೆರೆದವರೆಲ್ಲರೂ ಆನಂದಾಶ್ರುಗಳನ್ನು ಸುರಿಸಿದರು.

ಆ ಮೇಲೆ ತಿಪ್ಪಯ್ಯನನ್ನು ಐನೂರು ರಾವುತರ ಮೇಲಿನ ಸರದಾರನನ್ನಾಗಿ ಅರಸನು ನಿಯಮಿಸಿದನು. ಮುಂದೆ ತಿಪ್ಪಯ್ಯನ ಅಭಿಲಾಷೆಯಂತೆ ಪಾಳೆಯಗಾರನನ್ನಾಗಿ ಮಾಡಿದನು. ಅವನಿಗೆ 'ನಾಯಕ' ಎಂಬ ಬಿರುದನ್ನು ಕೊಟ್ಟು ಅವನ ಮನೆಗೆ ಕಳುಹಿಸಿಕೊಟ್ಟನು.

ಮನೆಗೆ ಮರಳಿದ ತಿಪ್ಪಯ್ಯನು ಆ ಭಾಗದಲ್ಲಿನ ಎಲ್ಲಾ ಅಡವಿಯನ್ನು ಕಿತ್ತು ಊರನ್ನಾಗಿ ಮಾಡಿದನು. ತನ್ನ ವಸತಿಯನ್ನು ನಿಡುಗಲ್ಲಿನಲ್ಲಿ ಮಾಡಿದನು. ಅಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿಸಿಕೊಂಡು ಆ ಭಾಗದ ಆಡಳಿತವನ್ನು ಚೆನ್ನಾಗಿ ನೋಡಿಕೊಂಡಿದ್ದನು. ಇವನ ವಂಶದವರೇ ಮುಂದೆ ನಿಡುಗಲ್ಲನ್ನು ಆಳಿಕೊಂಡು ಬಂದರು.

ಕಂಬನಿ

ಎಳೆಯ ಹರೆಯದ ಗೆಳೆಯ ಸೇವಾನಿರತ ಹೃದಯ
ತೊರೆಯುತಿಂದೀ ಇಳೆಯ, ಸಗ್ಗವನ್ನೇರಿದೆಯ?
ನಿನ್ನ ಅಕಾಲದ ನಿಧನದಿಂದೂರ ಸಕಲ ಜನ
ಇಂದು ಕಂಬನಿಗರೆವರಲ್ತೆ ತಾಂ ನೊಂದು ಮನ

ನಿನ್ನ ಕೆಲಸವ ಬಿಟ್ಟು, ಪರರ ಕರೆಗೊಗೊಟ್ಟು
ದುಡಿದ ನಿನಗಾಯ್ತು ಈ ಬಗೆಯ ಕಾಲನಪೆಟ್ಟು
ಸ್ವಾರ್ಥವಿರಹಿತನಾಗಿ ಸುಖ ಭೋಗಗಳ ನೀಗಿ
ಪರಹಿತಕ್ಕಾಗಿ ತನುಸವೆದ ನೀನಹೆ ಚಾಗಿ.

ಸೌಭಾಗ್ಯವತಿ ಸತಿಯು ತಾನು ವರಿಸುವ ಮೊದಲು
ಸೇವಾವಧು ಸ್ವಯಂ ನಿನ್ನನೇ ವರಿಸಿದಳು
ನಿನ್ನ ನವತಾರುಣ್ಯ ಭೋಗಕ್ಕಾಗಿರದನ್ಯ
ಹಿತಕಾರ್ಯದಿಂ ಸಫಲವಾಯ್ತು, ನೀನೇ ಧನ್ಯ!

ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದ ಸುಪವಿತ್ರ
ಧ್ಯೇಯದಿಂ ತೋರಿದೆ ನೀನಧ್ಯಾಪನ ಪಾತ್ರ
ಸಹಕಾರ ಸೌಹಾರ್ದ ಸ್ನೇಹ ಸೌಜನ್ಯಾರ್ದ್ರ—
ಹೃದಯ, ಹಾ! ವಿಧಿ ನಿನ್ನ ಮೇಲೆ ಕ್ರೋಧವ
ತೋರ್ದ.

ಉರು ನಾಡಿನಲಿ ಜನಿಸಿ ಹಿರಿಯ ಕೀರುತಿ ಗಳಿಸಿ
"ಮುಡಿಪು" ಕ್ಷೇತ್ರಕ್ಕಾಗಿ ತನುವ ಮುಡಿಪಾಗಿರಿಸಿ
ತನ್ನವರಿಗಾಗಿ ಹಗಲಿರುಳೆನ್ನದೆ ಶ್ರಮಿಸಿ
ತನ್ನ ಪೆಸರನ್ನುಳಿಸಿ ತನು ತೊರೆದೆ ಸಹಕರಿಸಿ

ಗೆಳೆಯ ಲಕ್ಷ್ಮೀನಾರಾಯಣನ ಸೇವಾಜನಿತ
ಕೀರ್ತಿ ಲಕ್ಷ್ಮಿಯು ವರಿಸಿ ನಿನ್ನ ಪೆಸರನ್ವರ್ಥ.
ಪರಹಿತ ಪರೋಪಕಾರಾದಿ ಸೇವಾಕಾರ್ಯ
ನಿನ್ನ ಜೀವನದೊಂದು ಕ್ಷಣವಾಗಿರದು ವ್ಯರ್ಥ.

ಪರಹಿತಕ್ಕಾಗಿ ದುಡಿದಾತ್ಮ ಶಾಂತಿಯ ಪಡೆಗೆ
ನಿನ್ನ ಪೆಸರೀ ನಾಡೊಳಮರವಾಗುತ್ತುಳಿಗೆ
ಸನ್ಮಿತ್ರ ಬಾಂಧವರನಗಲ್ದ ನೇಹಿಗ ನಿನಗೆ
ಕೊಡುವೆವೀ ಕಂಬನಿಯ ಕೊಡುಗೆಯಂ ಸ್ಮರಿಸಿ ನಿಂಗೆ!

—ಎಸ್. ತಿರುಮಲೇಶ್ವರ ಭಟ್, ವಿದ್ವಾನ್.

(ತಾ 26—6—67ರಂದು ಹೃದಯಾಘಾತಕ್ಕೀಡಾಗಿ ನಿಧನ ಹೊಂದಿದ ಜನಪ್ರಿಯ ಸಾರ್ವಜನಿಕ ಸೇವಾಸಕ್ತ ಶ್ರೀ ಕೊಡಕಲ್ಲು ಲಕ್ಷ್ಮೀನಾರಾಯಣ ಭಟ್, ಉನ್ನಾಡು, ಇವರನ್ನು ಸ್ಮರಿಸಿ ಬರೆದುದು.)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

Publication.

In the Court of the Munsit of Udipi.

O. P. 21/67

1. Lilly Rodrigues, w/o Montu Mariyan Rodrigues
2. Ronald Rodrigues,
3. Violet Rodrigues,
4. Sinthia Rodrigues,
5. Oswalt Rodrigues,
6. Sily Rodrigues,
7. Godwin Rodrigues,

(2–7: Children of No. 1. and are minors by guardian Petition No. 1)

All are residing in Puthuru village, Udipi Taluk.

—Petitioners

In the matter of debts due to the estate of the deceased Montu Mariyan Rodrigues.

The above application for issue of succession certificate stands posted to 18—8—1967. Those who have any objection may appear before the Court on that day at 11 A. M. and defend themselves, failing which the adove application will be disposed off in their absence.

By order of Court.

Sd. Sri V. G. Kedlaya, *M. A., LL. B.,*
Advocate, Udipi.

Udipi, D/. 17-7-67.

ಅವರಿವರ ಮೋಜಿನ ಪ್ರಸಂಗಗಳು

ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

೧. ಸುಂದರಾಂಗಿ

ಸೌಂದರ್ಯ ಸಾಧನಗಳಿಗೆ ಹೇರಳವಾಗಿ ಹಣ ಸುರಿಯುವ ಲಂಡನ್ನಿನ ಓರ್ವ ಮಹಿಳೆಯು ಒಮ್ಮೆ ಜಾರ್ಜ್ ಬರ್ನಾರ್ಡ್ ಷಾರವರನ್ನು ಕೇಳಿದಳು: "ನಾನು ಎಷ್ಟು ವಯಸ್ಸಾದವಳಂತೆ ಕಾಣುತ್ತೇನೆ"? ಷಾ ಅವಳನ್ನೊಮ್ಮೆ ಆಪಾದ ಮಸ್ತಕ ನೋಡಿ—"ಹೊಳೆಯುವ ನಿನ್ನ ಹಲ್ಲುಗಳನ್ನು ನೋಡಿದರೆ 18 ವರ್ಷ ಎನ್ನಬಹುದು; ರೇಶಿಮೆಯಂಥ ಗುಂಗುರು ಕೂದಲುಗಳನ್ನು ಕಂಡರೆ 19 ವರ್ಷ ಎನ್ನಬಹುದು. ನಿನ್ನ ವರ್ತನೆಯನ್ನು ನೋಡಿದರೆ 14 ವರ್ಷ ಮಾತ್ರ ಎನ್ನಬಹುದು" ಎಂದು ಹೇಳಲು ಇದರಿಂದ ಸಂತೋಷದಿಂದ ಬ್ಬಿದ ಆಕೆಯು—"ಅದು ಸರಿ, ನಾನು ಎಷ್ಟು ವಯಸ್ಸಾದವಳಂತೆ ಕಾಣುತ್ತೇನೆ?" ಎನ್ನಲು ಷಾ ಹೇಳಿದರು." 18, 19, 14 ಇವುಗಳನ್ನು ಕೂಡಿಸಿದರೆ ಅದೇ ನಿನ್ನ ಪ್ರಶ್ನೆಗೆ ಉತ್ತರ" ಎಂದರು.

೨. ಮಾಂಸಾಹಾರದ ತೇಜೋಭಂಗ

ಡಾ| ಬರ್ನಾರ್ಡ್ ಷಾರವರು ಇಂಗ್ಲೆಂಡಿನ ಸುಪ್ರಸಿದ್ಧ ನಾಟಕಕಾರರಾಗಿದ್ದರು. ಅವರಿಗೆ ನೋಬೆಲ್ ಬಹುಮಾನ ಸಿಕ್ಕಿದ ಸಂದರ್ಭದಲ್ಲಿ ಕೆಲವು ಸದ್ಗೃಹಸ್ಥರು ಅವರಿಗೆ ಸತ್ಕಾರ ಮಾಡಿದರು. ಭೋಜನದ ಅಂಗವಾಗಿ ಯಥೇಷ್ಟ ಮಾಂಸಾಹಾರವನ್ನು ತಯಾರಿಸಿದ್ದರು. ಭೋಜನಕ್ಕೆ ಎಲ್ಲರೂ ಕುಳಿತುಕೊಂಡಾಗ ಷಾ ಊಟ ಮಾಡದೆ ನಿರಾಕರಿಸಿ ಹೀಗೆಂದರು: "ಈ ಊಟವನ್ನುಂಡು ನನ್ನ ಹೊಟ್ಟೆಯನ್ನು ಸ್ಮಶಾನ ಭೂಮಿಯನ್ನಾಗಿ ಮಾಡಲಾರೆ". ಷಾ ಶಾಖಾಹಾರಿಯೆಂದು ಆ ಸದ್ಗೃಹಸ್ಥರಿಗೆ ಆ ಮೇಲೆ ತಿಳಿಯಿತು.

೩. ಭಾಷಣ ಭೈರವ

ಒಬ್ಬರು ಮಹಾ ಭಾಷಣಕಾರರೆನ್ನಿಸಿದವರು ಒಂದು ಸಭೆಯಲ್ಲಿ ಎಷ್ಟು ಹೊತ್ತಾದರೂ ಭಾಷಣವನ್ನು ಮುಗಿಸಲೇ ಇಲ್ಲ. ಇದರಿಂದ ಬೇಸರಗೊಂಡ ಸಭೆಯೆಲ್ಲಾ ಖಾಲಿಯಾಗಲು—ಒಬ್ಬ ಮಾತ್ರ ಕುಳಿತಿದ್ದನಂತೆ. 'ನೀವಾದರೂ ಕೇಳುತ್ತಿರುವಿರಲ್ಲ ಪರವಾಯಿಲ್ಲ' ಎಂದು ಆ ಭಾಷಣ ಭೈರವರೆನ್ನಲು— 'ನಾನು ನಿಮ್ಮ ಭಾಷಣ ಕೇಳಲು ಕುಳಿತಿಲ್ಲ. ನಿಮ್ಮ ಭಾಷಣವಾದ ಮೇಲೆ ನಾನು ಭಾಷಣ ಮಾಡಲು' ಎಂದರಂತೆ.

೪. ಸ್ವರ್ಗ ವಲ್ರೀ ಇದು?

ಭೂಲೋಕದಲ್ಲಿ ಸಹೋದ್ಯೋಗಿಗಳಾಗಿದ್ದ ಇಬ್ಬರು ಉಪಾಧ್ಯಾಯರು ಸತ್ತು ಪರಲೋಕದಲ್ಲಿ ಭೇಟಿಯಾದರು. 'ಅಬ್ಬಾ, ಆ ಕಂಠಶೋಷಣೆ, ಆ ದರಿದ್ರ ಜೀವನ ನಡೆಸಿ ಸಾಕಾಗಿತ್ತಪ್ಪಾ. ಸದ್ಯ ಈ ಸ್ವರ್ಗವನ್ನು ಕಂಡೇನೇ ಎಂದು ಹಂಬಲಿಸುತ್ತಾ ಇದ್ದೆ' ಎಂದರು ಒಬ್ಬರು. ಅದಕ್ಕೆ ಇನ್ನೊಬ್ಬರು, "ಸ್ವರ್ಗವಲ್ರೀ ಇದು? ನೀವೆಲ್ಲಿದ್ದೀರಿ? ಎಂದು ಪ್ರಶ್ನಿಸಿದರಂತೆ.

೫. ಹೆಸರಿನ ಕೊನೆಗೆ ನ...

ಒಂದು ಸಲ ಬೀರಬಲ್ಲನೊಂದಿಗೆ ಅಕ್ಬರ ಬಾದಷಹನು ಕೇಳಿದನು. 'ಯಾವ ಉದ್ಯೋಗಸ್ಥರ ಹೆಸರಿನ ಮುಂದೆ....ನ ಎಂಬ ಅಕ್ಷರ ಬರುವುದೋ—ಅಂದರೆ ಜವಾನ—ಕಾಂಕೂನ—ಪೈಲ್‌ವಾನ ಇತ್ಯಾದಿಯವರೆಲ್ಲಾ ಅಯೋಗ್ಯರೂ, ಅಹಂಕಾರಿಗಳೂ ಆಗಿರುತ್ತಾರಲ್ಲವೆ?' ಎಂದು ಕೇಳಿದನು.

ತಕ್ಷಣವೇ ಬೀರಬಲ್ಲನು— 'ಹೌದು ಮೆಹರ್ ಬಾನ! ನಿಮ್ಮ ಮಾತು ಸತ್ಯ ಮೆಹರ್ ಬಾನ!' ಎನ್ನಲು ಅಕ್ಬರನು ಬೀರಬಲ್ಲನನ್ನು ನೋಡಿ — ಕೊನೆಗೆ ಜೋರಾಗಿ ನಕ್ಕನು.

೬. ಅಸಹ್ಯಮುಖ...

ಎಷ್ಟೇ ರೂಪವಂತರಾಗಿರಲಿ, ಹೆಂಗಸರು ತುಟಿಗೆ "ಬಣ್ಣ ಹಚ್ಚಿ" ಕೊಳ್ಳುತ್ತಿರುವಾಗ, ಗಂಡಸರು ಕ್ಷೌರ ಮಾಡಿಕೊಳ್ಳುತ್ತಿರುವಾಗ ಅವರ ಮುಖ ಭಂಗಿಗಳು ನೋಡಲು ಅಸಹ್ಯಕರವಾಗಿರುತ್ತವೆ.

೭. ರೈಟ್ರು—

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಅ. ನ. ಕೃ.ರವರ ಪತ್ನಿ ಒಂದು ಸಾರ್ವಜನಿಕ ಸಭೆಗೆ ಹೋದಾಗ ಅವರ ಸಮೀಪದಲ್ಲಿದ್ದ —ಮಹಿಳೆಯೊಬ್ಬಳು—ತನ್ನ ಜೊತೆಯಲ್ಲಿನ ಮತ್ತೊಬ್ಬಾಕೆಗೆ ಅವರನ್ನು ತೋರಿಸಿ "ಇವರೇ ಅ. ನ. ಕೃ. ಅವರ ಪತ್ನಿ" ಎಂದು ಪರಿಚಯ ಮಾಡಿಸಿದಳು. ಆಕೆ ಶ್ರೀಮತಿ ಅ. ನ. ಕೃ.ರೊಡನೆ—"ನಿಮ್ಮ ಯಜಮಾನ್ರಿಗೆ ಏನು ಕೆಲ್ಸಾ?" ಎಂದು ಕೇಳಲು—"ರೈಟರ್" ಎಂದಳು.

"ನಮ್ಮ ಯಜಮಾನ್ರೂ ಅಷ್ಟೇ; ಡಿಸ್ಟ್ರಿಕ್ಟ್ ಆಫೀಸಿನಲ್ಲಿ ರೈಟ್ರು" ಎಂದು ಆಕೆ ನುಡಿದಳು.

೮. ಮೂವರು ಕಿವುಡರು

ಕಿವಿಮಂದವಾಗಿದ್ದ ಮೂವರು ಮುದುಕರು ಬಸ್ಸಿಗಾಗಿ ಕಾಯುತ್ತಿದ್ದರು. ಒಬ್ಬನೆಂದ—'ತುಂಬಾ ಗಾಳಿ ಅಲ್ಲವೇ?"

'ಶನಿವಾರ ಅಲ್ಲ ಭಾನುವಾರ" ಇನ್ನೊಬ್ಬನ ಉತ್ತರ.

ಮೂರನೆಯವ ನಗುತ್ತಾ 'ನಿಜ, ನೀವು ಹೇಳಿದ್ದು. ಇದರ ಹಣೆಯ ಬರಹವೇ ಇಷ್ಟು!' ಎಂದ.

೯. ಅಯ್ಯೋ ನೀವಾ? ಬನ್ನಿ

ಒಬ್ಬ ಗೃಹಸ್ಥ ನಿತ್ಯವೂ ರಾತ್ರಿ ಮನೆಗೆ ತುಂಬಾ ಹೊತ್ತಾಗಿ ಬರುತ್ತಿದ್ದ. ಅವನ ದುರಭ್ಯಾಸವನ್ನು ತಪ್ಪಿಸಲು ಹೆಂಡತಿ ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಒಂದು ರಾತ್ರಿ, ಇದ್ದದ್ದರಲ್ಲಿ ಸ್ವಲ್ಪ ಹೊತ್ತಿಗೆ ಮುಂಚೆ ಗಂಡ ಬಂದು ಬಾಗಿಲು ತಟ್ಟಲು, ಅವಳು ಬಾಗಿಲು ತೆಗೆಯುತ್ತಾ ಈಗಲೇ ಒಂದು ಉಪಾಯ ಹೂಡಬೇಕೆಂದು—'ಅಯ್ಯೋ ನೀವಾ? ಬನ್ನಿ ನಾನೆಲ್ಲೋ? ನಮ್ಮ ಯಜಮಾನರೋಂತಿದ್ದೆ" ಎಂದಳು. ಅಂದಿನಿಂದ ಮೇಲೆ ಸಂಜೆಯಾದ ಕೂಡಲೇ ಮನೆಗೆ ಬರತೊಡಗಿದನು.

೧೦. ಕೋಳಿ

'ತುಂಬ ಉಪಯುಕ್ತ ಪ್ರಾಣಿ ಯಾವುದು?'

'ಕೋಳಿ ಸಾರ್'

"ಹೇಗೋ?"

"ಜನರು ಅದನ್ನು ಹುಟ್ಟುವುಕ್ಕೆ ಮೊದಲೂ ತಿನ್ನುತ್ತಾರೆ; ಅದು ಸತ್ತ ಮೇಲೂ ತಿನ್ನುತ್ತಾರೆ ಸಾರ್'

ಭಾರತೀಯ ಮಾನಕಗಳ ಸಂಸ್ಥೆ

(ಏಳನೇ ಪುಟದಿಂದ)

ತಯಾರಿಸಿದ ವಸ್ತುಗಳ ಗುಣಾಂಶದ ಮಟ್ಟಗೆ ಭಾರತೀಯ ಮಾನಕಗಳ ಸಂಸ್ಥೆ ಆಶ್ವಾಸನೆ ನೀಡುತ್ತದೆ ಎಂದು ಹೇಳಬಹುದು.

ಈ ಸಂಸ್ಥೆಯ ತನಿಖಾಧಿಕಾರಿಗಳು ಕೈಗಾರಿಕೆಗಳಿಗೆ ಆಕಸ್ಮಿಕ ಭೇಟಿ ನೀಡಿ ಅಥವಾ ಮಾರುಕಟ್ಟೆ ಆಕಸ್ಮಿಕ ಭೇಟಿ ನೀಡಿ ಅಲ್ಲಿ ಐ. ಎಸ್. ಐ. ವಸ್ತುಗಳನ್ನು ತನಿಖೆಗಾಗಿ ಆರಿಸಿಕೊಳ್ಳುತ್ತಾರೆ.

ಬಳಿಕ ಅವುಗಳನ್ನು ಪ್ರಯೋಗಾಲಯಕ್ಕೆ ತೆಗೆದುಕೊಂಡು ಅವುಗಳ ಗುಣಾಂಶವಲ್ಲೇನಾದರೂ ವ್ಯತ್ಯಾಸವಾಗಿದೆಯೇ ಎಂಬುದನ್ನು ಪರೀಕ್ಷಿಸುತ್ತಾರೆ. ಇಂತಹ ತನಿಖೆಗಳಿಂದ ಗ್ರಾಹಕರಿಗೆ ಉತ್ತಮ ಗುಣಾಂಶದ ವಸ್ತುಗಳು ಲಭ್ಯವಾಗುತ್ತವೆ.

In the Court of Muneiff
Udipi

S. E. A. 7/67 in S. C 623/64

Narsamma Shedthi and another —Petitioners

vs.

Sitarama Dore Ballal and others ...Respts.

The application filed by the Petitioner for transfer of the decree to the original side is posted to 14—8—67. The 1st Respondent Sitarama Dore Ballal of Katpadi beedu is directed to appear in Court either in person or by pleader on that day at 11 a. m. failing which the matter will be decided in his absence.

K. L. Aithal,
Vakil for Petrs.

Udipi, 20—7—67.

ರಾಜಕಾರಣಿಗಳ ಲೆಕ್ಕಾಚಾರ

(ನಾಲ್ಕನೇ ಪುಟದಿಂದ)

'ಅಂದ್ರೆ, ನಿನ್ನ ತಲೆ. ನಿನ್ನ ಮುಖ ನೋಡಬೇಕಾದ್ರೆ ನಿಂಗೆ ಕನ್ನಡಿ ಬೇಕೂನ್ನು. ಅಂಗೈ ನೋಡೋಕೆ ಕಣ್ಣೇ ಸಾಲದೆ?'

'ಸಾಕೊನ್ನಿ...."

"ಹಾಗೆ....ತುಸು ಕಣ್ಣರಳಿಸಿ ಸುತ್ತ ನೋಡು...."

"ನೋಡಿದೆ...'

"ನಿಸ್ತಲೆ... ಏನು ನೋಡೋದೆ?"

'ಕಣ್ಣರಳಿಸಿ ನೋಡಿದೆ....'

"ಏನನ್ನ...."

'ನಿಮ್ಮ ಕೆನ್ನೋರೆಯನ್ನ..."

"ಛೀಂ....ನೀನೊಂದು ಶುದ್ಧ ಮೊದ್ದು... ಅಲ್ಲಾ, ತುಸು ರಾಜಕಾರಣಿಗಳ ಕಥೆಯನ್ನು ನೋಡೂಂತಂದ್ರೆ."

"ಕಥೆಯನ್ನು ಏನು ನೋಡೋದು.... ಹ್ಞಾಂ....ತೋರ್ಸಿ, ನೋಡ್ತಾ ಇರ್ತೀನೆ ...'

'ರಾಜಕಾರಣಿಗಳ ಲೆಕ್ಕಾಚಾರವೆಲ್ಲವೂ ಸುಳ್ಳಾಗುತ್ತ ಬಂದಿದೆ ಅನ್ನೋಕೆ ನಮ್ಮ ದೇಶದ ಮೂರು ಪಂಚವಾರ್ಷಿಕ ಯೋಜನೆಗಳೇ ಪ್ರತ್ಯಕ್ಷ ಸಾಕ್ಷಿ. ಆಹಾರಸ್ವಾವಲಂಬನೆಯಲ್ಲಿ ಈ ಲೆಕ್ಕಾಚಾರಿಗಳು ತುಂಬ ಜಾರಿ ಬಿದ್ದಿದ್ದಾರೆ. ಎಂಟು ಎಂಟು ಅರುವತ್ತ ನಾಲ್ಕು ಎಂಬ ಮಾನವನ್ನೇ ಇವರು ತೆಗೆದುಕೊಂಡಿದ್ದಾರೆ. ಇನ್ನು ಉತ್ಪಾದನೆಯಲ್ಲಿಯೂ...."

'ಅಯ್ಯೋ, ಇದೆಲ್ಲಾ ಏನು ರಾಜಕಾರಣಿಗಳು ಮಾಡ್ತಾರೆ? ಎಲ್ಲಾ ಡಿಪಾರ್ಟ್‌ಮೆಂಟಲ್ ಗಣಿತ ಪಂಡಿತರೇ ಮಾಡುವುದಲ್ವಾ?'

"ನೋಡು, ಇಲ್ಲೇ ಲೆಕ್ಕಾಚಾರ ತಪ್ಪು. ಸರಕಾರಕ್ಕೊಡೋ ಮೂರು ಕಾಸಿಗೆ—ಅದು ದೊರೀ ಬೇಕಾದ್ರೆ ಭಾರಿ ರಾಮಾಯಣ ಬೇರೇನ್ನು—ಬುದ್ಧಿವಂತ ಲೆಕ್ಕಾಚಾರಿಗಳೆಲ್ಲಿರ್ತಾರೆ? ಮಾಹತ್ತೋ ಮೂವತ್ತೈದೋ, ಇನ್ನು ಹೆಚ್ಚೆಂದರೆ ನಲ್ವತ್ತರ ಬುದ್ಧಿವಂತ್ರು—ಇನ್ನು ಕಾಯ್ದಿರಿಸಿದು ಭಾರಿ ಬುದ್ಧಿವಂತ್ರು ಬೇರೆ--ಇರ್ತಾರೆ. ಅವ್ರೇನೋ ತಪ್ಪಸಟ್ಟ ಎಂಟು ಎಂಟು ಹದಿನೆಂಟರ ಮಾನದಲ್ಲಿ ಲೆಕ್ಕಾಚಾರ ಮಾಡಿದ್ರೆ, ಇದು ರಾಜಕಾರಣಿಗಳಿಗೆ ಹೇಗೆ ತೃಪ್ತಿಯಾಗಬೇಕು? ಎಷ್ಟಾದರೂ ಕಲಾಪಂಡಿತರು; ಕಲಾವಿದರು—ಬಳ್ಳಿಯಲ್ಲೇ ನಾರಿಯನ್ನು, ಕೇಶದಲ್ಲೇ ಭ್ರಮರವನ್ನು, ಮುಖದಲ್ಲೇ ಕಮಲವನ್ನು ಮೂಗಿನಲ್ಲೇ ಸಂಪಗೆಯನ್ನು ಕಾಣುವ ಹಸುರು ಕನಸಿನವರು.'

'ಹ್ಞಾಂ...'

"ಅದ್ರಿಂದ್ಲೇ, ಅಧಿಕಾರಿ ಲೆಕ್ಕಾಚಾರಿಗಳ ಲೆಕ್ಕ ಅವರಿಗೆ ತೃಪ್ತಿ ತರುವುದಿಲ್ಲ. ಅವರು ಎಂಟು ಎಂಟು ಅರುವತ್ತನಾಲ್ಕರ ಮಾನ ಬಳಸಿ ಲೆಕ್ಕಾಚಾರ ಮಾಡ್ತಾರೆ—ಅಂಕೆ ಸಂಖ್ಯೆ ಮುಂದೆ ಇಡುತ್ತಾರೆ.. ಆದ್ರೆ...'

ಏನ ?'

'ಎಂಟು ಎಂಟು ಹದಿನಾರೇ ಆಗುವುದು ತಾನೆ? ಎಂತ್ಲೇ ಎಲ್ಲಾ ಲೆಕ್ಕಾಚಾರದ ಇಸ್ಪೀಟು ಮನೆ ಮುರಿದು ಬೀಳುತ್ತೆ. ಕನಸು ಕನಸಾಗಿಯೇ ಉಳಿಯುತ್ತೆ....'

'ಅಂದ್ರೆ, ರಾಜಕಾರಣಿಗಳ ಲೆಕ್ಕ ಒಂದೂ ಸರಿಯಾಗೋದಿಲ್ಲಾ...."

'ಆದದ್ದಾದರೂ ಎಲ್ಲಿ?'

'ಆಗೋಕೆ ಸಾಧ್ಯಾನೂ ಇಲ್ಲ?"

'ಇಲ್ಲದೆ ಏನು? ಗಣಿತ ಪಂಡಿತರು ರಾಜಕಾರಣಿಯಾದ್ರೆ ಆವರೂ ಆಗ ಬಹುದು__'

'ಅವರ್ಯಾಕೆ ಬರ್ತಾರೆ? ಒಂದಕ್ಕೆ ಒಂದು ಕೂಡ್ಸಿದ್ರೆ ಎರಡು ಅನ್ನೋಕೂ ಬಾರದವನೂ ಪಿ ಸಿ ಎಂ ಬೇಕೊಂತ ಸತ್ಯಾಗ್ರಹ ಮಾಡೋ ಈ ಕಾಲ್ದಲ್ಲಿ....'

"ಹೆದ್ರ ಬೇಡ್ವೇ....ಗ್ರೇಸು ಇರುವ ತನಕ ನಿಶ್ಚಿಂತೆ... ಇನ್ನು ಒಂದ್ವೇಳೆ ಲಾಟ್ರಿಯೇ ಅನ್ನು, ಇವೆಯಲ್ಲಾ, ರಾಜಕಾರಣ—ಎಚ್ ಇಪಿ—ಇದಕ್ಕೆ ಯಾರೂ ಸೇರಬಹುದು—ಮುಳ್ಕದ್ಬರ....'

"ಅದೇ ಈಗ ಬಂದಿರೋ ಗಂಡಾಂತರ ...."

'ಹ್ಞಾಂ... ರದ್ದು..."

'ಏನು?'

'ಏನೂ ಇಲ್ಲ...ಹ್ಞಾಂ....'

'ಅಯ್ಯೋ....'

'ಪಾಪ, ನನ್ನ ಲೆಕ್ಕಾಚಾರ ಎಂದೂ ಸುಳ್ಳಾಗೋದಿಲ್ಲ....'

'ಭಾರಿ ..ಆಯ್ತು'

'ಸ್ನಾನ ಮಾಡೆ...'

'ಹೂಂ..."

—ಗೋರಾ.

ಎಲ್ಲೆಲ್ಲಿ ಏನೇನು?

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಉದ್ಘಾಟನಾ ಸಮಾರಂಭ

ಕಲ್ಯಾಣಪುರದಲ್ಲಿ ಮಂಗಳೂರು ಬೋರ್ಡ್ ಆಫ್ ಎಜ್ಯುಕೇಶನ್ ಆಫ್ ದಿ ಡಯೋಸಿಸ್ ಹಾಗೂ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜ್ ಆಡಳಿತ ಮಂಡಳಿಯ ಆಶ್ರಯದಲ್ಲಿ ತೆರೆಯಲಾದ ಮಿಲಾಗ್ರಿಸ್ ಕಾಲೇಜನ್ನು ಶ್ರೀ ಟಿ. ಎ. ಪೈಯವರು ತಾ. 15ರಂದು ಉದ್ಘಾಟಿಸಿದರು. ಶ್ರೀ ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂದಿನ ಶೈಕ್ಷಣಿಕ ಸಮಸ್ಯೆಗಳ ಕುರಿತು ಪ್ರಸ್ತಾಪಿಸಿ ಇಂದು ಸ್ವಂತ ಶಕ್ತಿಯಿಂದ ತನ್ನ ಜೀವನ ಮಾರ್ಗವನ್ನು ಕಂಡು ಹುಡುಕುವ ವಿದ್ಯೆಯು ಆವಶ್ಯವಾಗಿದೆಯೆಂದರು. ನಮ್ಮ ವಿದ್ಯಾರ್ಥಿಗಳು ತಮ್ಮ ದೃಷ್ಟಿಕೋನವನ್ನು ಇತರ ವಿಷಯಗಳಲ್ಲಿ ಹರಿಸುವುದು ಆವಶ್ಯವಾಗಿದೆಯೆಂದರು. ಎಲ್ಲಾ ವೃತ್ತಿಯನ್ನೂ ಗೌರವ ಆಧಾರದಿಂದ ನಾವು ಕಾಣಬೇಕೆಂದರು. ಕೊನೆಯದಾಗಿ ಅವರು ಡಾ| ಮಾಧವ ಪೈಗಳು ಹಾಗೂ ಡಾ| ಎ. ವಿ. ಬಾಳಿಗಾರವರಂಥಾ ಪ್ರಧಾನ ಶಾಲೆಗಳಿಗೆ ಜನ್ಮವಿತ್ತ ಕಲ್ಯಾಣಪುರ, ಈಗ ಸ್ಥಾಪನೆಗೊಂಡ ಕಾಲೇಜಿನ ಮೂಲಕ ಇನ್ನೂ ಹೆಚ್ಚಿನ ಇಂತಹ ವ್ಯಕ್ತಿಗಳನ್ನು ನಿರ್ಮಿಸಲೆಂದೂ ಹಾರೈಸಿದರು.

ಸಮಾರಂಭದ ಅಧ್ಯಕ್ಷರಾಗಿದ್ದ ಮಂಗಳೂರಿನ ಬಿಷಪ್ ಡಾ ಬೆಸಿಲ್ ಡಿಸೋಜಾರವರು ತಮ್ಮ ಭಾಷಣದಲ್ಲಿ ದ. ಕ. ಜಿಲ್ಲೆಯು ಶೈಕ್ಷಣಿಕವಾಗಿ ಮುಂದುವರಿಯುತ್ತಿರುವುದಕ್ಕೆ ತನ್ನ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಉಡುಪಿ, ಮಣಿಪಾಲಗಳು ವಿಶೇಷತ ಮುಂದುವರಿಯಲು ಡಾ| ಮಾಧವ ಪೈಗಳ ದೂರದೃಷ್ಟಿ ಮತ್ತು ಮುತ್ಸದ್ದಿತನವೇ ಕಾರಣವೆಂದರು.

ಆರಂಭದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ರೆ| ಫಾ| ಮೊನ್ಸಿಜರ್ ಡಿ. ಜೆ. ಡಿಸೋಜಾರವರು ಸ್ವಾಗತಿಸಿದರು. ಪ್ರೊ| ಗ್ರಿಗರಿ ಎಲ್. ಅಲ್ಮೇಡಾರವರು ಕಾರ್ಡಿನಲ್ ಗ್ರೇಶಿಯಸ್ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು. ಮತ್ತೂರು ಫಿಲೋಮಿನಾ ಕಾಲೇಜಿನ ಕರೆಸ್ಪಾಂಡೆಂಟ್ ರೆ| ಫಾ| ಸತ್ರಾಪ್ರೋರವರು ಸಂಸ್ಥೆಗೆ ಶುಭಕೋರಿ ಮಾತನಾಡಿದರು.

ಕೊನೆಯಲ್ಲಿ ಪ್ರಿನ್ಸಿಪಾಲ್ ಶ್ರೀ ಪಿ. ಗುರುರಾಜ್ ಭಟ್ಟರು ಧನ್ಯವಾದ ಸಮರ್ಪಿಸಿದರು.

ದಿ| ಮೊಳಹಳ್ಳಿ ಶಿವರಾಯರಿಗೆ ಶ್ರದ್ಧಾಂಜಲಿ

ಶ್ರೀ ಮೊಳಹಳ್ಳಿ ಶಿವರಾಯರ ನಿಧನಕ್ಕಾಗಿ ಸಂತಾಪ ಸೂಚಕ ಸಭೆಯೊಂದು ತಾ. 17 ರಂದು ದ. ಕ. ಜಿಲ್ಲಾ ಸಹಕಾರಿ ಯೂನಿಯನಿನ ಆಶ್ರಯದಲ್ಲಿ ಶ್ರೀ ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾಭವನದಲ್ಲಿ ಜರಗಿತು.

ಸಭೆಯಲ್ಲಿ ಸರ್ವಶ್ರೀ ನಾರಾಯಣ ನಾಯಕ್, ಶ್ರೀ ಎಸ್. ನರಸಪ್ಪಯ್ಯ, ಶ್ರೀ ಕೆ ವಿಶ್ವನಾಥ ಕಾಮತ್, ಶ್ರೀ ಎಸ್. ಮುಕುಂದ ರಾವ್, ಶ್ರೀ ನೆರಳಕಟ್ಟೆ ಶ್ರೀನಿವಾಸರಾವ್, ಮೊದಲಾದವರಲ್ಲದೆ ಇನ್ನೂ ಅನೇಕ ಸಹಕಾರಿ ಬಂಧುಗಳು ದಿ| ಮೊಳಹಳ್ಳಿಯವರ ಬಹುಮುಖ ಪ್ರತಿಭೆ ಹಾಗೂ ಸೇವಾ ತತ್ಪರತೆಯನ್ನು ಸ್ಮರಿಸುತ್ತಾ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಕೊನೆಯಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಶ್ರೀ ಪ್ರಭಾಕರರಾಯರು ದಿ| ಮೊಳಹಳ್ಳಿಯವರು ಸಾಧಿಸಿದ ಕೆಲಸಕಾರ್ಯಗಳನ್ನು ಸಂಕ್ಷೇಪವಾಗಿ ವಿವರಿಸಿದರು. ಅವರ ಮೇಲ್ಪಂಕ್ತಿಯನ್ನು ನಾವೆಲ್ಲ ಅನುಸರಿಸಬೇಕೆಂದರು.

ಈ ಸಭೆಯಲ್ಲಿ ದಿ| ಮೊಳಹಳ್ಳಿಯವರ ಸವಿನೆನಪಿಗೋಸ್ಕರ ಉತ್ತಮ ಸ್ಮಾರಕವೊಂದನ್ನು ಮಾಡಬೇಕೆಂದು ಗೊತ್ತುಪಡಿಸಲಾಯಿತು. ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ತೀರ್ಮಾನಿಸಲಾಯಿತು. ದ. ಕ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ದ. ಕ. ಜಿಲ್ಲಾ ಕೃಷಿಕರ ಉತ್ಪನ್ನ ಮಾರಾಟ ಸಹಕಾರಿ ಸಂಘ, ದ. ಕ. ಜಿಲ್ಲಾ ಸಹಕಾರಿ ಯೂನಿಯನ್ ದ. ಕ. ಜಿಲ್ಲಾ ಸೆಂಟ್ರಲ್ ಹೋಲ್‌ಸೇಲ್ ಸ್ಟೋರ್ಸ್ ಇದರ ಅಧ್ಯಕ್ಷರುಗಳು, ನಗರಸಭೆಯ ಅಧ್ಯಕ್ಷರು ಹಾಗೂ ಎಲ್ಲಾ ತಾಲೂಕು ಮಾರಾಟ ಸಂಘದ ಅಧ್ಯಕ್ಷರುಗಳು ಈ ಸಮಿತಿಯ ಸದಸ್ಯರಾಗಿರಬೇಕೆಂದು ತೀರ್ಮಾನಿಸಲಾಯಿತು.

ಡಾ| ಟಿ. ಮಾಧವ ಪೈಗಳ ಹುಟ್ಟುಹಬ್ಬ ಮತ್ತು ಎಕಡೆಮಿಯ ರಜತೋತ್ಸವ ಆಚರಣೆಯ ಸಿದ್ಧತೆ

ಮಣಿಪಾಲದ ಎಕಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಜತೋತ್ಸವ ಹಾಗೂ ಡಾ| ಟಿ. ಎಂ. ಎ. ಪೈಯವರ 70ನೆಯ ಜನ್ಮದಿನೋತ್ಸವ ಆಚರಣೆಯನ್ನು 1968ನೇ ಏಪ್ರಿಲ್ ತಿಂಗಳಲ್ಲಿ ಆಚರಿಸುವ ಸಲುವಾಗಿ ತಾ. 16ರಂದು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಜರಗಿಸಲಾಯಿತು. ಶ್ರೀ. ಟಿ. ರಮೇಶ ಪೈಗಳು ಸ್ವಾಗತಿಸಿ ಸಲಹೆಗಳನ್ನು ಆಮಂತ್ರಿಸಿದರು ಶ್ರೀಗಳಾದ ಡಾ| ಸಿ. ಎಚ್. ಶಿವರಾಮನ್, ಡಾ| ಕೆ. ಮೋಹನದಾಸ್ ಪೈ, ಡಾ| ಶಾಂತಾರಾಮ, ಪ್ರೊ. ಚಂದ್ರಶೇಖರ್, ಕೆ. ಎಸ್. ಕಾಮತ್, ಯು. ಪುಂಡಲೀಕ ಶೆಣೈ, ಎ. ಜಿ. ಆಳ್ವ, ಪ್ರಿನ್ಸಿಪಾಲ್ ವೆಂಕಟ್ರಮಣ ಭಟ್ಟ, ಪ್ರಿನ್ಸಿಪಾಲ್ ಕು. ಶಿ. ಹರಿದಾಸ್ ಭಟ್ಟ, ಟಿ. ಆರ್. ಎ. ಪೈ, ಕೆ. ಡಿ. ಶೆಣೈ ಮೊದಲಾದವರು ಹಲವಾರು ಸೂಚನೆಗಳನ್ನಿತ್ತರು.

ಈ ಸಭೆಯಲ್ಲಿ ಒಂದು ಕೋಟಿ ರೂ. ಸಂಗ್ರಹಿಸುವ ಸೂಚನೆಯನ್ನು ವ್ಯಕ್ತಪಡಿಸಲಾಗಿ, ಡಾ| ಪೈಗಳ ಹುಟ್ಟುಹಬ್ಬದ ಸ್ಮಾರಕಾರ್ಥವಾಗಿ ವಿವಿಧ ವಿಷಯಗಳ ಸಂಶೋಧನೆ, ಅಧ್ಯಯನ ಕೇಂದ್ರ, ಗೃಹಿಣೀ ವಿದ್ಯಾಲಯ, ಸ್ಕಾಲರ್‌ಶಿಪ್ ಫಂಡ್ ಮೊದಲಾದವನ್ನು ರಚಿಸುವ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಅನೇಕ ಸದಸ್ಯರುಗಳಿರುವ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರ ಭಾಷಣಾನಂತರ ಸಭಾಂತ್ಯವಾಯಿತು.

"ಲೋಕ ಸೇವಾ ವೃಂದ"

ಲೋಕ ಸೇವಾ ಜೂನಿಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿ ಶಾಲಾ ಪರಾರದಲ್ಲೇ 'ಲೋಕಸೇವಾ ಬಾಲಕುಟೀರ' ವೆಂಬ ನೂತನ ವಿದ್ಯಾರ್ಥಿ ನಿಲಯವೊಂದನ್ನು ತಾ. 14-7-67 ರಂದು ಆರಂಭಿಸಲಾಗಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 22/67.

1. ಸಂಜೀವಿ ಜಿ. ಸೇರಿಗಾರ, 2. ಕೃಷ್ಣಮೂರ್ತಿ, 3. ಅರುಣ ಸೇರಿಗಾರ, ಶ್ರೀಮ ಟಿಂಕರರು ತಾಯಿ—1ನೇ ಅರ್ಜಿದಾರಳು —ಅರ್ಜಿದಾರರು.

ಮತ್ತು

ಅಂಬಾ ಆರ್. ಸೇರಿಗಾರ, ಆರ್. ಪಿ. ಸೇರಿಗಾರರ ಹೆಂಡತಿ, ಅಜಂಟಾ ಕೆಫೆ, ಬೆಳಗಾಂ —ಎದುರಿ.

ಇವರಿಗೆ

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನೆಂದರೆ—

1ನೇ ಅರ್ಜಿದಾರರ ಗಂಡ 2, 3ನೇ ಅರ್ಜಿದಾರರ ತಂದೆ ದಿ. ರಾಮ ಸೇರಿಗಾರರ [illegible] ಹಣವನ್ನು ಪಡೆಯಲು ಅರ್ಜಿದಾರರು ಸಕ್ಸೆಶನ್ ಸರ್ಟಿಫಿಕೇಟಿಗಾಗಿ [illegible] ಅರ್ಜಿದಾರರು 1ನೇ ಅರ್ಜಿದಾರರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿ ಹಾಕಿರುವರು. ಸದ್ರಿ ಅರ್ಜಿ ವಿಚಾರಣೆಗಾಗಿ ಸದ್ರಿ ಅರ್ಜಿಯು ತಾ. 18-8-1967ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಇದೆ. ಬಗ್ಗೆ ಇದರ ಬಗ್ಗೆ ಯಾರಿಗಾದರೂ ಆಕ್ಷೇಪ ಹೇಳತಕ್ಕದ್ದಿದ್ದಲ್ಲಿ ಸದ್ರಿ ದಿವಸ ಸದ್ರಿ ಕೋರ್ಟಿನ ಮುಂದೆ ಹಗಲು 10 ಗಂಟೆಗೆ ಹಾಜರಾಗಿ ಆಕ್ಷೇಪ ಮಾಡಿಕೊಳ್ಳತಕ್ಕದ್ದೆಂತಲೂ ಸದ್ರಿ ಈ ಮೂಲಕ ಯಾವತ್ತೂ ಜನರಿಗೆ ತಿಳಿಸಲಾಗಿದೆ.

B. Krishna Bhat
Advocate for Petitioners

ಉಡುಪಿ, ತಾ. 18-7-67.

ಸಂಕ್ಷಿಪ್ತ ಸುದ್ದಿಗಳು

ಚಲನಚಿತ್ರಗಳಿಗೆ ರಾಷ್ಟ್ರೀಯ ಬಹುಮಾನಗಳನ್ನು ನೀಡುವ ನಿಬಂಧನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಈಗ ಹೊಸ ಬಗೆಯ ವರ್ಗದ ಚಿತ್ರಗಳಿಗೆ ಬಹುಮಾನಗಳನ್ನು ಕೊಡಲು ನಿರ್ಧರಿಸಲಾಗಿದೆ.

o o o o

ರಾಜ್ಯ ಸಭೆಯ ಸದಸ್ಯರೂ ಮತ್ತು ಪ್ರಖ್ಯಾತ ಅರ್ಥ ಶಾಸ್ತ್ರಜ್ಞರೂ ಆದ ಪ್ರೊ| ಡಿ ಆರ್. ಗಾಡ್ಗಿಲ್ ಅವರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ.

o o o o

ರೇಣುಗುಂಟದಿಂದ ತಿರುಪತಿಗೆ ಬ್ರಾಡ್‌ಗೇಜ್ ಲೈನನ್ನು 30 ಲಕ್ಷರೂ ಗಳಲ್ಲಿ ರಚಿಸಲು ರೈಲ್ವೆ ಮಂತ್ರಿ ಶಾಖೆಯು ಒಪ್ಪಿಗೆ ನೀಡಿವೆ.

o o o o

ಇರಾಕಿಗೆ ವಿಮಾನ ಮೂಲಕ ಕಳುಹಿಸುವ ಪಾರ್ಸೆಲ್‌ಗಳಿಗೆ ತಗಲುವ ಅಂಚೆ ದರದಲ್ಲಿ ಜುಲೈ 15ರಿಂದ ಬದಲಾವಣೆಯಾಗಿದೆ.

o o o

ಮೈಸೂರು ರಾಜ್ಯ ಸರ್ಕಾರವು ಉದ್ದೇಶಿಸಿರುವಂತೆ 1967-68ನೇ ಸಾಲಿನ ರಾಜ್ಯದ ವಸತಿ ಯೋಜನೆಗೆ 6 ಕೋಟಿ ರೂ. ಗಳನ್ನು ಕೇಂದ್ರ ಕಾಮಗಾರಿ ವಸತಿ ನಿರ್ಮಾಣ ಮತ್ತು ಸರಬರಾಜು ಮಂತ್ರಿ ಶಾಖೆಯು ಒದಗಿಸ ವ ನಿರೀಕ್ಷೆಯಿದೆ

o o o o

ಲ್ಯಾಟಿನ್ ಅಮೇರಿಕದ ಮೆಕ್ಸಿಕೋ ಕಾಲೇಜಿನಲ್ಲಿ ಭಾರತದ ಮಧ್ಯಯುಗದ ಚರಿತ್ರೆ ಹಾಗೂ ಸಂಸ್ಕೃತ ಭಾಷಾ ಸಾಹಿತ್ಯ ವಿಷಯಗಳ ಕುರಿತು ಎರಡು ತರಗತಿಗಳು ಈ ವರ್ಷದಿಂದ ಆರಂಭವಾಗಲಿವೆ.

o o o

1967ರ ಏಪ್ರಿಲ್ ತಿಂಗಳಲ್ಲಿ ಭಾರತವು 92.49 ಲಕ್ಷ ರೂ. ಗಳನ್ನು ರಫ್ತು ವ್ಯಾಪಾರವನ್ನು ಮತ್ತು 169,74 ಲಕ್ಷ ರೂ. ಗಳನ್ನು ಆಮದು ವ್ಯಾಪಾರವನ್ನು ನಡೆಸಿತೆಂದು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿ ಶಾಖೆಯು ಪ್ರಕಟಣೆಯು ತಿಳಿಸುತ್ತದೆ. ಈ ವ್ಯವಹಾರದಲ್ಲಿ ಭೂತಾನ್ ಮತ್ತು ಸಿಕ್ಕಿಂಗಳೊಂದಿಗೆ ನಡೆದ ವ್ಯಾಪಾರವು ಸೇರಿಲ್ಲ.

o o o o

ಕುಶಲ ಕಲೆಗಾರರಿಗೆ ತರಬೇತಿ ನೀಡುವ ಕಾರ್ಯಕ್ರಮದ ಪ್ರಕಾರ, ರಾಜ್ಯದಲ್ಲಿನ 15 ಸಂಸ್ಥೆಗಳು ಮತ್ತು ಕೇಂದ್ರಗಳು 1967ರ ಜನವರಿ ತಿಂಗಳವರೆಗೆ 4,400 ಹೆಚ್ಚು ಜನ ಕಲಾವಿದರಿಗೆ ಎಂಜನಿಯರಿಂಗ್ ವೃತ್ತಿಗಳು ಮತ್ತು ಇತರ ವೃತ್ತಿಗಳಲ್ಲಿ ತರಬೇತಿ ನೀಡಿವೆ.

o o o o

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O S 12/67.

ನಾಗಮ್ಮ ಸಹಾ —ವಾದಿರು.

VS

ಮುತ್ತಯ್ಯ ಹೆಗ್ಡೆ ಸಹಾ —ಪ್ರತಿವಾದಿರು.

12ನೇ ಪ್ರತಿವಾದಿ ಬಾಬು ಹೆಗ್ಡೆ, 20ನೇ ಪ್ರತಿವಾದಿ ಪದ್ಮಯ್ಯ, 21ನೇ ಪ್ರತಿವಾದಿ ಸಂಜೀವ, ಕಾವೇರಿ ಹೆಗಡ್ತಿಯ ಮಕ್ಕಳು. 55ನೇ ಪ್ರತಿವಾದಿ ತಿಮ್ಮಯ್ಯ, ಕೊರಪ್ಪೊಳುಯೊನೆ ಚೆನ್ನಕ್ಕನ ಮಗ, 56ನೇ ಪ್ರತಿವಾದಿ ಕರಿಯ, ಓಬಕ್ಕನ ಮಗ, ಎಲ್ಲರೂ ಬೆಳ್ತಂಗಡಿ ತಾಲ್ಲೂಕು, ಕರಿಮಣೇಲು ಗ್ರಾಮದಲ್ಲಿರುವವರು.

ವಾದಿಯು ದಾವಾ ಆಸ್ತಿಯಲ್ಲಿ ಆತಳಹಿಸೆ ಬಗ್ಗೆ ಮಾಡಿದ ವ್ಯಾಜ್ಯವು ತಾ. 16-8-1967 ರಲ್ಲೂ ನಿಮ್ಮ ಹಾಜರಾತಿ ಬಗ್ಗೆ ಇದೆ. ಅದಕ್ಕೆ ನಿಮ್ಮ ಆಕ್ಷೇಪವೇನಾದರೂ ಇದ್ದರೆ ನೀವು ಆ ದಿವಸ ಸ್ವತಹಾ ಯಾ ವಕೀಲರ ಮುಖಾಂತ್ರ ಬೆಳಿಗ್ಗೆ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟಾ ಮಾಡಿ ವ್ಯಾಜ್ಯ ಇತ್ಯರ್ಥ ಮಾಡಲಾಗುವುದು ಎಂಬುದಾಗಿ ಕೋರ್ಟಿನ ಹುಕುಂ ಪ್ರಕಾರ ಆದ ನೋಟೀಸು.

N. J. Kadamba
Advocate, Belthangady

ಬೆಳ್ತಂಗಡಿ, 17-7-1967.

ಸ್ವಾತಂತ್ರ್ಯ ವಿಶೇಷಾಂಕ

ವಾಡಿಕೆಯಂತೆ 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಅಗೋಸ್ತು 15ಕ್ಕೆ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗಲಿದ.

ಲೇಖನಗಳನ್ನು ಆಮಂತ್ರಿಸಲಾಗಿದೆ

ನೇತ್ರತಜ್ಞ ಡಾ| ಎನ್. ಬಿ. ಶೆಟ್ಟಿಯವರಲ್ಲಿ ನಿಮ್ಮ ದೃಷ್ಟಿದೋಷ ನಿವಾರಣಾರ್ಥ ಇಂದೇ ಸಲಹೆ ಕೇಳಿರಿ. Phone 261448



Shetty's OPTICS & CONTACT LENS CLINIC
London Qualified Optometrists

ನೇತ್ರ ಪರೀಕ್ಷೆಗಾಗಿ, ದೃಷ್ಟಿದೋಷಗಳ ನಿವಾರಣೆಗಾಗಿ ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಿದ ವಿಶಿಷ್ಟ ಕೇಂದ್ರ

7 ಈ ಗನ್ ಬಿಲ್ಡಿಂಗ್, ಬಾರ್ಬೋರ್ನ್‌ಗೇಟ್ ಪೋಸ್ಟ್ ಆಫೀಸಿನ ಎದುರು

ಮುಂಬಯಿ—1

ಪ್ರಾಚೀನ ಸಂಸ್ಕೃತಿಯು ಹಿರಿಮೆ ಬೆಳಗಲು

ವೇದಾಧ್ಯಯನ ಸೌಕರ್ಯಗಳು ಹೆಚ್ಚಬೇಕು

ಬರೆದವರು
ಶ್ರೀ ಎಚ್. ಎಂ. ನಾರಾಯಣ ಭಟ್.

ವೇದಗಳ ಕುರಿತು ಸಂಶೋಧನೆ ನಡೆಸಲು ವಿವಿಧ ಸಂಸ್ಥೆಗಳು ಇತ್ತೀಚೆಗೆ ಹಲವೆಡೆಗಳಲ್ಲಿಯೂ ಶ್ರದ್ಧೆ ವಹಿಸಿದಂತಿದೆ. ಇದರಿಂದಾಗಿ ವೈದಿಕ ಸನಾತನಿಗಳಿಗೆ ಸ್ವಲ್ಪ ಸಮಾಧಾನವಾಗದಿರದು. ಆದರೆ ಇಂತಹ ಸಂಶೋಧನೆಗಳ ಪರಿಧಿಯೊಳಗೆ ನಾಮಾವಶೇಷವಾಗುತ್ತಿರುವ ವೇದ ವಿದ್ಯೆಯನ್ನು ಹೇಗೆ ಪುನರುದ್ಧರಿಸಬಹುದೆಂಬ ವೇ ಇಂದಿನ ಸಮಸ್ಯೆ. ಇನ್ನೊಂದು ದಶಮಾನದೊಳಗೆ ಕೇರಳದಿಂದ ಯಜುರ್ವೇದವೂ ಸಾಮವೇದವೂ ಅಪ್ರತ್ಯಕ್ಷವಾಗಬಹುದಾಗಿ ಪಂಡಿತ ರಾಜಶೇಖರಾಂಗಾಟ್ ನಾರಾಯಣನ್ ನಂಬೂದಿರಿ ಪಾಡ್ ಭಯ ವ್ಯಕ್ತಪಡಿಸಿದ್ದಾರೆ.

ಋಗ್ವೇದದ ಸ್ಥಿತಿ ಇಷ್ಟು ಚಿಂತಾಜನಕವಲ್ಲವೆಂದೂ ಅವರ ಅಭಿಪ್ರಾಯ. ಹೆಸರಿಗೆ ಮಾತ್ರವೇ ಆದರೂ ಎರಡು ಕೇಂದ್ರಗಳಲ್ಲಿ ಋಗ್ವೇದದ ಅಧ್ಯಯನ ನಡೆಯುತ್ತಿದೆ.

ಹಳೆಯ ಕಾಲದಿಂದಲೇ ಕೇರಳದಲ್ಲಿ ವೇದಾಧಿಕಾರಿಗಳು ವೇದಾಧ್ಯಯನಕ್ಕೆ ಸಾಕಷ್ಟು ಪ್ರಚಾರ-ಪ್ರೋತ್ಸಾಹ ನೀಡುತ್ತಾ ಬಂದರು. ಆದರೆ ಹೊರನಾಡಗಳ ಸ್ಥಿತಿ ಬೇರೆಯೇ ಆಗಿತ್ತು. ಪ್ರತಿ ವ್ಯಕ್ತಿಗೂ ಕುಟುಂಬ ಭಾರ—ಜೀವನ ನೌಕೆ ನಡೆಸಬೇಕಾಗಿ ಬಂದಾಗ ಪ್ರತಿಯೊಬ್ಬನೂ ಒಂದೊಂದು ಉದ್ಯೋಗವನ್ನು ವಹಿಸಬೇಕಾಗಿ ಬರುವುದು ಸ್ವಾಭಾವಿಕ. ಕೇರಳದಲ್ಲಿ ಬ್ರಾಹ್ಮಣರ ಘಟನಾ ವಿಲಕ್ಷಣವೂ ಪರಿಸ್ಥಿತಿಯೂ ಅಂದು ವೇದಾಧ್ಯಯನವನ್ನು ಸಾಮಾನ್ಯವಾಗಿ ಪ್ರೋತ್ಸಾಹಿಸಿತು.

"ಕಂಠ ಪಾಠ" ಮಾತ್ರವಲ್ಲ

ವೇದಗಳ ಅಕ್ಷರಾಧ್ಯಯನ (ಕಂಠಪಾಠ) ದಂತೆಯೇ ಅರ್ಥ ಚಿಂತನೆಯಲ್ಲೂ ಹಿಂದಿನ ಕಾಲದಲ್ಲಿ ಶ್ರದ್ಧೆ ಹರಿದಿತ್ತು. ಹೀಗಿಲ್ಲವಾಗಿದ್ದರೆ "ಮೀಮಾಂಸೆ"ಗೆ ಇಷ್ಟು ಪ್ರಚಾರ ಲಭಿಸುತ್ತಿರಲಿಲ್ಲ. ನಿಗೂಢವಾದ ವೇದವನ್ನು ಪ್ರವೇಶಿಸಲಿರುವ ಅತಿ ಪ್ರಧಾನ ಉಪಾಯವು ಮೀಮಾಂಸಾ ಶಾಸ್ತ್ರವೆನ್ನಲಾಗಿದೆ. ಜೈಮಿನೀಯ ಸೂತ್ರಗಳ ಪ್ರಾಚೀನ ವ್ಯಾಖ್ಯಾನಗಳೇ 'ಶಾಬರ ಭಾಷ್ಯ', 'ವಾರ್ತಿಕ' ಮುಂತಾದವುಗಳು.

ಕೇರಳದಲ್ಲಿ ಅನೇಕ ಮಂದಿ ಮೀಮಾಂಸ ಪಂಡಿತರಿದ್ದರು. ಆಶ್ರಿತ ಮಹಾರಾಜರುಗಳ ಆಸ್ಥಾನಗಳಲ್ಲಿ "ಪಟ್ಟೇರಿ"ಗಳೆಂಬ ಪಂಡಿತರಿದ್ದರು. ಅವರ ವಶ ಅನೇಕ ತಾಳೆಯೋಲೆ ಗ್ರಂಥಗಳಿದ್ದವು. ಈ ಪೈಕಿ ಕೆಲವು ಇಂದಿಗೂ ಚೆನ್ನಮ್ಮಾರ್ ಸಭಾಮಠದಲ್ಲಿ ಸಂರಕ್ಷಿಸಲ್ಪಟ್ಟಿವೆ

ಟಿಪ್ಪುವಿನ ಆಕ್ರಮಣ

ಟಿಪ್ಪು ಸುಲ್ತಾನನ ಸಾಮ್ರಾಜ್ಯ ವಿಸ್ತರಿಸಲ್ಪಡುವವರೆಗೂ ಕೇರಳದಲ್ಲಿ ವೇದಾಧ್ಯಯನವೂ ಅರ್ಥ ಚಿಂತನವೂ ಅನುಷ್ಠಾನವೂ ಪ್ರಚಾರದಲ್ಲಿತ್ತು. ಆ ಬಳಿಕ ಇಲ್ಲಿನ ರಾಜವಂಶಗಳನುಭವಿಸಿದ ಕ್ಷೀಣದಿಂದಾಗಿ ಇಲ್ಲಿನ ಸಾಮಾಜಿಕ ಪದ್ಧತಿಗಳಲ್ಲಿ ಕೆಲವೊಂದು ಬದಲಾವಣೆಗಳಾದವು. ಮತ್ತು ಒಮ್ಮೆ ವೇದಾಧ್ಯಯನದ ಬಗ್ಗೆ ಮೂಡಿ ಬೆಳೆದ ಆಸಕ್ತಿ ಈ ಶತಮಾನದ ಪ್ರಾರಂಭದ ವರೆಗೂ 'ನಂಬೂದಿರಿ'ಯವರಲ್ಲಿ ಸಾರ್ವತ್ರಿಕವಾಗಿತ್ತು.

ಆದರೆ, ಕೇರಳದಲ್ಲಿ ಅಂದು ವೇದಾಧ್ಯಯನ ಸಾಗುತ್ತಿದ್ದುದ್ದು ಗ್ರಾಮಪಾಠಶಾಲೆಗಳಲ್ಲೋ ದೇವಾಲಯಗಳಲ್ಲೋ ಆಗಿರಲಿಲ್ಲ. ಪ್ರತಿ ನಂಬೂದಿರಿ ಗೃಹದಲ್ಲೂ ವೇದದ ಪ್ರಾಥಮಿಕ ಪಾಠಗಳನ್ನು ಕಲಿಯುವ ಸೌಕರ್ಯವಿತ್ತು.

ಋಗ್ವೇದದಲ್ಲಿ ಸಂಹಿತಾನಂತರದ ಅಧ್ಯಯನ ಸೌಲಭ್ಯವು ತ್ರಿಶೂರು ಮತ್ತು ತಿರುನಾವಾಯಿಗಳಲ್ಲಿದ್ದ 'ಬ್ರಹ್ಮಸ್ವ ಮಠ'ಗಳು ಒದಗಿಸಿದ್ದವು. ಇತರ ವೇದಗಳ ಅಧ್ಯಯನಕ್ಕೆ ಹೀಗೆ ಸಾಮುದಾಯಿಕ ಪ್ರೋತ್ಸಾಹವಿದ್ದಿಲ್ಲ. ಆದರೂ ದೇವಾಲಯಗಳಲ್ಲೂ ವೈದಿಕ ಗೃಹಗಳಲ್ಲೂ ಮುಖಂಡರ ಮನೆಗಳಲ್ಲೂ ವೇದಾಧ್ಯಯನ ಸೌಕರ್ಯಗಳು ಕಲ್ಪಿಸಲ್ಪಟ್ಟಿದ್ದವು.

ಕ್ರಮೇಣ ವೇದಾಧ್ಯಯನದೊಂದಿಗೆ ಅರ್ಥ ಚಿಂತನಾ ವಿಧಾನ ಅಪ್ರಧಾನವಾಗುತ್ತಾ ಬಂತು.

ನಾಮಾವಶೇಷವಾಗಿರುವ ವೇದಾಧ್ಯಯನ ಪರಂಪರೆಯನ್ನು ಬೆಳೆಸುವುದು ಕಷ್ಟ. ವೇದ ಪಠನಕ್ಕೆ ಬೇಕಾಗುವ ಸ್ವರ ಮತ್ತು ಉಚ್ಚಾರಗಳೂ ವಿಶಿಷ್ಟ. ತ್ರೈಸ್ವರ್ಯ, ಕಂಪ, ಪ್ರಚಯ ಮುಂತಾದವುಗಳಲ್ಲಿ ಸರಿಯಾಗಿ ಶ್ರದ್ಧೆ ಹರಿಸಿ ಶ್ರೋತೃಗಳಿಗೆ ಅನುದ್ವೇಗಕರವಾಗಿ ವೇದಾಧ್ಯಯನ ಮಾಡಲು ಸಾಮರ್ಥ್ಯವುಳ್ಳವರ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿರುವುದಾಗಿ ಓರ್ವ ಪಂಡಿತರು ವಿವರಣೆಯಿತ್ತರು. ಗುರುವಿನಿಂದ ಪ್ರತ್ಯಕ್ಷ ಪಾಠಕೇಳದೆ ಕೇವಲ "ಪುಸ್ತಕ ಪಠನ"ದಿಂದಾಗಿ ಸರಿಯಾದ ವೇದೋಚ್ಚಾರಣೆ ಸಾಧ್ಯವಾಗುವುದು ಸಂಶಯ. ಇಂತಹ ಅಧ್ಯಯನ ಸೌಕರ್ಯ ಕಲ್ಪಿಸಲು ಈ ಮೊದಲು ಹೇಳಿದ "ಸಂಶೋಧನೆ" ಎಷ್ಟು ಫಲಪ್ರದವೊ ಕಂಡೇ ತಿಳಿಯಬೇಕಾಗಿದೆ.

ಇನ್ನಷ್ಟು ಆಕರ್ಷಕವಾಗಬೇಕು

ಭಾರತದ ವಿವಿಡೆಡೆಗಳಲ್ಲಿ ಮಠಾಧಿಪತಿಗಳೂ ಧರ್ಮಾಧಿಕಾರಿಗಳೂ ಅನೇಕ ವೇದ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ. ಶ್ರೀ ಶೃಂಗೇರಿ ಮಠ, ಕಾಂಚಿ ಕಾಮಕೋಟಿ ಪೀಠ ಮುಂತಾದೆಡೆಗಳಲ್ಲಿ ವೇದಾಧ್ಯಯನಕ್ಕೆ ತುಂಬು ಮನಸ್ಸಿನ ಪ್ರೋತ್ಸಾಹ ಪುರಸ್ಕಾರಗಳು ಲಭಿಸುತ್ತಿವೆ.

ವೇದಾಧ್ಯಯನಕ್ಕೆ ಇನ್ನಷ್ಟು ಸೌಲಭ್ಯಗಳೂ ಪ್ರೋತ್ಸಾಹಗಳೂ ಬೇಕು. ವೇದಶಾಸ್ತ್ರವು ಇತರ ಶಾಸ್ತ್ರಗಳಿಗಿಂತ ಕಡೆಗಣಿಸಲ್ಪಡಬಾರದು.

ಅರ್ಥ ಸಾರವನ್ನು ಗ್ರಹಿಸದ ವೇದವನ್ನೋದುವವರನ್ನು ದೊಡ್ಡ ಮಾಡನ್ನು ಹೊರುತ್ತಾ ನಿಲ್ಲುವ ಕಂಬಗಳಿಗೆ ಮಹರ್ಷಿಗಳು ಹೋಲಿಸಿದ್ದಾರೆ. ವೇದಾಧ್ಯಯನಕ್ಕೆ ಪ್ರೋತ್ಸಾಹ ಲಭಿಸಬೇಕಾದರೆ ಸಂಸ್ಕೃತ ಭಾಷೆಯ ಪ್ರಚಾರ ಹೆಚ್ಚಬೇಕು.

ಮೈಸೂರು, ಬೆಂಗಳೂರು, ಉಡುಪಿ, ತಿರುಪತಿ, ಅಣ್ಣಾಮಲೈ, ವಾರಣಾಸಿ ಮುಂತಾದೆಡೆಗಳಲ್ಲಿ ಸಂಸ್ಕೃತ ಪಠನ ಸೌಕರ್ಯಗಳೇ ... ಈ ದೃಷ್ಟಿ ... ಸ್ತುತ್ಯರ್ಹವಾಗಿದೆ.

(ಸಂಗ್ರಹ)

ಧರ್ಮ - ಅಧರ್ಮ

(ಎರಡನೇ ಪುಟದಿಂದ)

ಸ್ತು ಪ್ರದರ್ಶನದಲ್ಲಿ ನಡೆಸಿದ ಸರದ ಅಪಹಾರದ ಸುದ್ದಿಯನ್ನು ತಿಳಿಸಿ ಶೇಖರನೊಡನೆ ಆ ಸರವನ್ನು ತೋರಿಸಲು ಹೇಳಿದನು.

ಅವನ್ನು ಕೇಳಿದ ರಘುನಂದನನು ಆದು ಸುಪರಿಂಟೆಂಡೆಂಟ್‌ರ ಪತ್ನಿಯ ಸರವೆಂದು ತಿಳಿಸಿ, 'ಕಾನೂನು ರೀತ್ಯ ನಾನು ನಿಮ್ಮನ್ನು ಆರೆಸ್ಟ್ ಮಾಡಿತ್ತೇನೆ' ಎಂದನು.

ಲಲಿತಮ್ಮನವರು ಆ ರೀತಿ ಮಾಡಬಾರದೆಂದು ಮಗನಲ್ಲಿ ದೈನ್ಯದಿಂದ ಕೇಳಿಕೊಂಡರು.

ಮೂರನೆಯ ದಿನ ರಘುನಂದನನು ತನ್ನ ಡ್ಯೂಟಿಯ ಮೇಲೆ ಹೊರಟು, ಸ್ಟೇಷನ್ನಿನಿಂದ ಕೆಲವು ಮಂದಿ ಅನುಯಾಯಿಗಳೊಡನೆ ಮನೆಗೆ ಬಂದು, ಮಹಾಬಲ ಮತ್ತು ಶೇಖರರನ್ನು ಬಂಧಿಸಿ ಪೋಲೀಸ್ ಸುಪರಿಂಟೆಂಡೆಂಟರ ಎದುರಿನಲ್ಲಿ ಮಾಲು ಸಹಿತ ಹಾಜರು ಪಡಿಸಿದನು. ಪೋಲೀಸ್ ಸುಪರಿಂಟೆಂಡೆಂಟರು ಅವನ ಪ್ರಾಮಾಣಿಕತೆಗೆ ತಲೆದೂಗಿದರು. ಕೋರ್ಟಿನಲ್ಲಿ ವಿಚಾರಣೆ ಪ್ರಾರಂಭವಾಯಿತು. ಶೇಖರನು, ತನ್ನಿಬ್ಬರೊಳಗೆ ನಡೆದ ವಾಗ್ವಾದವನ್ನು ನ್ಯಾಯಾಧೀಶರುದುರು ವಿವರಿಸಿದನು. ನ್ಯಾಯಾಧೀಶರು, ಅವನ್ಯಕ್ಕೆ ಎಂದೂ ಬೆಲೆಯಿಲ್ಲವೆಂತಲೂ ಸತ್ಯವೇ ನಿಜವಾದ ಪಳಿಗೆಯೆಂತಲೂ ಬರೆದಿರುವಂತೆ ಹೇಳಿ ಇನ್ನು ಮುಂದೆ ಅಂತಹ ಅಕೃತ್ಯಕ್ಕೆ ಇಳಿಯಬಾರದೆಂದು ಬುದ್ಧಿವಾದ ಹೇಳಿ ಅವರನ್ನು ಬಿಡುಗಡೆ ಮಾಡಿದರು.

ರಘುನಂದನನ ಪ್ರಾಮಾಣಿಕತೆಗೆ ತಲೆದೂಗಿದ ಸುಪರಿಂಟೆಂಡೆಂಟರು ಅವನ ಭಡ್ತಿಗೆ ಶಿಫಾರಸು ಮಾಡಿದರು. ಸರಕಾರವು ಅವರ ಶಿಫಾರಸನ್ನು ಅಂಗೀಕರಿಸಿತು.

ಮೇಘ ಯಾನ

ನೀಲಾಗಸದಲಿ ಮೇಘಯಾನ ಹೊರಟಿರಲು
ಅದನೆ ಮನದಿ ನಾ ನೆನೆದು ನವಿಯುತಿರಲು
ಚೆಲುವೆಯಾಗಿ ಚಿಮ್ಮಿತು ನನ್ನ ವ್ಯೋಮನ
ನವಿದಂತಾಯಿತು ಅವ್ಯಕ್ತನ ಅಕ್ಷಣ.

ನಿಮಿಷ ನಿಮಿಷಕೂ ಹೊಸ ಹೊಸ ಬಣ್ಣ!
ಬರೆವ ಕಲೆಗಾರನಾರೋ ತಿಳಿಯದಣ್ಣ
ಸೀಳಿ ಗಾಳಿಯಲಿ ತೇಲುತಿದೆ ತೂಗಿ
ನೋಡುತಿರುವನು ಚಂದ್ರನೂ ಬೆರಗಾಗಿ!

ಸೊಬಗ ಸೋನೆ ಸುರಿದು ಹರಿಯಿತು
ವಿಶ್ವವೆಲ್ಲ ಹೊನ್ನ ಸಲಿಲದಲ್ಲಿ ಮುಳುಗಿತು
ನಿಂತನಲ್ಲೇ ಬಹಳ ಕಾಲ ಅದನೋಡ ತೆ
ಮೇಘಯಾನದ ಕನಸನೇ ಕಟ್ಟುತ.

ಚಿತ್ರ ಕಲೆಗಾರನಲ್ಲ ಚಿತ್ರಿಸಲು ನಾನು
ಕಾಣಬಲ್ಲೆ ನವಿಯಬಲ್ಲೆ ಯಾನ ಸಿರಿಯನು
ಅನುಭವಿಸಬೇಕು ಯಾನ ಸುಖವನು
ಮರೆಯಲಾರೆ ಬರೆಯಬಲ್ಲೆ ನಾನು!

"ಮಲ್ಲಾರಿ"

ಕ್ಷಾಮ ನಿವಾರಣೆಗಾಗಿ

ಇಂದೇ
ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ತನಕ ಕೊಡದೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ
ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಬಗ್ಗೆ ಮನಿ ಆರ್ಡರು ಶುಲ್ಕ, ಅಂಚೆ ವೆಚ್ಚ ಮತ್ತು ರಿಜಿಸ್ಟ್ರೇಶನ್ ಚಾರ್ಜು ಕೊಡಬೇಕಾಗಿಲ್ಲ. ಔಷಧಿ, ಬಟ್ಟೆಬರೆ, ಡಬ್ಬಿಗಳಲ್ಲಿ ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಾಟ, ಮತ್ತು ರೈಲ್ವೆ ವೆಚ್ಚಗಳು, ವರಮಾನ ತೆರಿಗೆ, ಆಬಕಾರಿ ಮತ್ತು ಸುಂಕ ಇತ್ಯಾದಿಗಳಲ್ಲಿ ರಿಯಾಯತಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರಿಟೇರಿಯಟ್, ರಾಷ್ಟ್ರಪತಿ ಭವನ, ನ್ಯೂ ಡೆಲ್ಲಿ—1



NAVAYUGA 27—7—1967
Registered with the Registrar
of News Papers for India
under No. K N. 3546/'57

REGD. No. B G. 176
LICFNCE No 31
Licensed to Post without Prepayment

ಆರೋಗ್ಯ ವಿಚಾರ

ಮಜ್ಜಿಗೆಯ ಪ್ರಾಧಾನ್ಯತೆ

(ದಿವ್ಯ ಜೀವನದಿಂದ)

ಮಜ್ಜಿಗೆಯಲ್ಲಿ ನಮ್ಮ ನಿತ್ಯಾಹಾರದ ಹಲವು ವಸ್ತುಗಳಲ್ಲಿ ಲಭಿಸುವ ಪುಷ್ಟಿಕರ ಅಂಶಗಳು ಇವೆ. ಮಜ್ಜಿಗೆಯಿಂದ ಇತರ ಕೆಲವು ಆಹಾರಗಳಿಂದ ದೊರೆಯುವುದಕ್ಕಿಂತ ಹೆಚ್ಚಿನ ಬಲವನ್ನೂ ವೀರ್ಯವನ್ನೂ ಹೊಂದಲು ಸಾಧ್ಯ. ಮಜ್ಜಿಗೆಯಲ್ಲಿ ನಮ್ಮ ಶರೀರದ ಬೆಳವಣಿಗೆಗೆ ಸಹಾಯಕವಾದ ವಸ್ತುಗಳಿವೆ. ಆಯುರ್ವೇದದಲ್ಲಿನ ಆಹಾರ ವಿಧಾನದ ಅಧ್ಯಾಯವೊಂದರಲ್ಲಿ ಆಹಾರ ವಸ್ತುಗಳಲ್ಲಿ ಮಜ್ಜಿಗೆಯ ಪ್ರಾಧಾನ್ಯತೆಯನ್ನು ಪೂರ್ಣವಾಗಿ ವಿವರಿಸಿದೆ.

"ತೃಪ್ತಿಯಾಗಿ ಉಂಡು ಉಪ್ಪು ಬೆರಸಿದ ಮಜ್ಜಿಗೆಯನ್ನು ಕುಡಿದು ನೆಮ್ಮದಿ ಅನುಭವಿಸಿರಿ. ಮಜ್ಜಿಗೆ ಸೇವಿಸುವವರು ಎಂದೂ ರೋಗರುಜಿನಗಳಿಗೆ ಗುರಿಯಾಗರು. ಸುರಲೋಕದಲ್ಲಿ ದೇವತೆಗಳಿಗೆ ಅಮೃತಪಾನ ಪ್ರಿಯವಾಗಿರುವಂತೆ ಭೂಲೋಕದಲ್ಲಿ ಮಾನವರಿಗೆ ತಕ್ರಪಾನ (ಮಜ್ಜಿಗೆ) ಸೂಚಿಸಿದೆ."

ರೋಗರಹಿತ ಸುಖಜೀವನ ನಡೆಸಲು ಅನುಕೂಲವಾಗುವಂತಹ 'ತಕ್ರಕಲ್ಪ' (ಮಜ್ಜಿಗೆ)ದ ವಿವರಣೆಯು ಕಲ್ಪಕೋಶ ಎಂಬ ಗ್ರಂಥದಲ್ಲಿ ದೊರೆಯುವುದು. ವಂಶಾನುಗತವಾಗಿ ಬಂದ ಮಹಾ ವ್ಯಾಧಿಗಳೂ ಈ ಕಲ್ಪ ಚಿಕಿತ್ಸೆಯ ಮೂಲಕ ಗುಣವಾಗುವುವು.

ಚಂದ್ರ ಸಂಪುಟಿತ, ಅಮೃತಕರಣ ಎಂಬಿವೇ ಮೊದಲಾದ ತಕ್ರಚಿಕಿತ್ಸಾ ವಿಧಾನಗಳು ಹಲವಿವೆ. ಆದರೆ ಈ ಮುಂದೆ ವಿವರಿಸುವ ವಿಧಾನ ಅತ್ಯುತ್ತಮವಾದದು. ಇದನ್ನು ಆಚರಿಸಲು ಸುಲಭ, ಶೀಘ್ರ ಫಲಪ್ರದ. ಈ ಕಲ್ಪ ಚಿಕಿತ್ಸೆ ೪೦ ದಿನಗಳು ನಡೆಯಬೇಕು. ಮೊಸರು ಮತ್ತು ಮಜ್ಜಿಗೆ ತಯಾರಿಸುವುದರಲ್ಲಿ ಅನೇಕ ವಿಧಗಳುಂಟು, ಅತ್ಯಂತ ಸುಲಭವೂ ಉಪಯೋಗಕರವೂ ಆದ ಬಗ್ಗೆ ಇಲ್ಲಿ ವಿವರಿಸಿದೆ.

ಮೊಸರು ಮಾಡಲು ಹಸುವಿನ ಹಾಲೇ ಶ್ರೇಷ್ಠ.

ಹಸುವಿನ ಹಾಲು ಸ್ವತಃ ಒಂದು ರಸಾಯನ. ಅಪ್ಪಟ ಹಸುವಿನ ಹಾಲಿನಿಂದ ಮೊಸರು ತಯಾರಿಸಿರಿ, ಮೂರು ಪಾಲು ಮೊಸರಿಗೆ ಒಂದು ಪಾಲು ನೀರು ಸೇರಿಸಿರಿ, ಅರ್ಧ ಭಾಗ ಮೊಸರನ್ನು ಕಡೆದು ಬೆಣ್ಣೆ ತೆಗೆಯಿರಿ, ಉಳಿದ ಅರ್ಧವನ್ನು ಸೇರಿಸಿ ಕಡೆದು ಮಜ್ಜಿಗೆ ಮಾಡಿರಿ. ಬೆಳಗ್ಗೆ ಹಾಲು ಕಾಯಿಸಿ ಹೆಪ್ಪು ಹಾಕಿರಿ. ಇಪ್ಪತ್ನಾಲ್ಕು ಘಂಟೆ ಕಾಲ ಇಟ್ಟದ್ದು ಮಜ್ಜಿಗೆ ಮಾಡಿರಿ. ಹುಳಿ ಮೊಸರು ಈ ಚಿಕಿತ್ಸೆಗೆ ಉಪಯುಕ್ತವಾದುದು. ೪೮ ಘಂಟೆಗಳ ಕಾಲ ಇಟ್ಟಿದ್ದ ಮೊಸರು ಈ ಚಿಕಿತ್ಸೆಗೆ ಅನುಪಯುಕ್ತವಾದುದಾಗುವುದು. ಆದರಿಂದ ಹಾನಿಯಾದೀತು. ಮೊಸರನ್ನಾಗಲಿ ಮಜ್ಜಿಗೆಯನ್ನಾಗಲಿ ಹಿತ್ತಾಳೆ ತಾಮ್ರದ ಪಾತ್ರೆಗಳಲ್ಲಿಡದೆ ಬಿದಿರ ಅಂಡೆಯಲ್ಲಾಗಲಿ ಮಣ್ಣಿನ ಮೊಗೆಯಲ್ಲಾಗಲಿ ಇಡಿರಿ.

ತಕ್ರಕಲ್ಪ ಚಿಕಿತ್ಸೆ ಆರಂಭಿಸುವ ಮುಂಚೆ ವಮನ, ವಿರೇಚನ, ನಸ್ಯ, ನಿರೂಹಣ ಮತ್ತು ಅನುವಾಸನಾದಿ ಪಂಚಕರ್ಮಗಳ ಮೂಲಕ ಘಟಶುದ್ಧಿ ಮಾಡಿಕೊಳ್ಳಿರಿ. ಇವುಗಳಿಂದ ದೇಹ ಮಾತ್ರವಲ್ಲದೆ ಇಂದ್ರಿಯಗಳೂ ಶುದ್ಧವಾಗುವುವು. ಚಿಕಿತ್ಸೆಯ ಕಾಲದಲ್ಲಿ ಬ್ರಹ್ಮಚರ್ಯ ಪಾಲಿಸಿರಿ. ೪೦ ದಿನಗಳ ವರೆಗೆ ಚಿಕಿತ್ಸೆ ಸಾಗಲಿ. ಪ್ರಾತಃಕಾಲ ಸ್ನಾನ ಮಾಡಿರಿ. ಸೂರ್ಯೋದಯಾನಂತರ ೫೦ ರೂಪಾಯಿ ತೂಕ ಮಜ್ಜಿಗೆ ಕುಡಿಯಿರಿ. ಸೂರ್ಯ ಮುಳುಗುವಾಗ ಮತ್ತೆ ಇಷ್ಟೇ ಸೇವಿಸಿರಿ. ಮರುದಿನ ಬೆಳಿಗ್ಗೆ ೫ ತೊಲ ಸಂಜೆ ೫ ತೊಲದಂತೆ ಹೆಚ್ಚಿಸಿರಿ. ಈ ರೀತಿ ದಿನಕ್ಕೆ ೧೦ ತೊಲದಂತೆ ನಲವತ್ತು ದಿನಗಳ ಕಾಲ ಹೆಚ್ಚಿಸುತ್ತ ಹೋಗಿರಿ.

ಬರಿಯ ಮಜ್ಜಿಗೆ ಕುಡಿಯಲು ನಿಮಗೆ ಸಾಧ್ಯವಾಗದ್ದರೆ ಸ್ವಲ್ಪ ಜೀರಿಗೆಯನ್ನೂ ಇಂಗನ್ನೂ ಹುರಿದು ಪುಡಿ ಮಾಡಿ ಸೈಂಧವ ಲವಣದ ಪುಡಿಯೊಡನೆ ಬೆರಸಿ ಹಾಕಿಕೊಂಡು ಕುಡಿಯಿರಿ.

೪೧ನೆಯ ದಿನದಿಂದ ಪ್ರತಿನಿತ್ಯ ೧೦ ತೊಲ ಮಜ್ಜಿಗೆ ಕಡಿಮೆ ಮಾಡುತ್ತಾ ಚಿಕಿತ್ಸೆಯ ಮೊದಲ ದಿನ ಸೇವಿಸಿದ ೧೦೦ ತೊಲದ ಮಟ್ಟಕ್ಕೆ ಬನ್ನಿರಿ.

ಕಲ್ಪ ಮುಗಿದೊಡನೆ ನಿಮ್ಮ ಮಾಮೂಲು ಆಹಾರ ತೆಗೆದುಕೊಳ್ಳಲು ಆರಂಭಿಸಬೇಡಿರಿ. ಕೆಲವು ದಿನಗಳು ಉಪ್ಪು ಮೆಣಸಿನ ಕಾಯಿಗಳನ್ನು ಉಪಯೋಗಿಸಬೇಡಿರಿ.

ಪ್ರಾರಂಭದಲ್ಲಿ ಹಣ್ಣಿನ ರಸಗಳನ್ನೂ ಬೆಂಡೆಕಾಯಿ, ಸೋರೆಕಾಯಿ ಮೊದಲಾದುವನ್ನೂ ಉಪಯೋಗಿಸಿರಿ. ಈ ಕಲ್ಪವನ್ನು ಮಳೆಗಾಲದಲ್ಲೂ, ಚಳಿಗಾಲದಲ್ಲೂ (ವರ್ಷಋತು, ಶರದೃತು) ಅನುಷ್ಠಾನ ಮಾಡುವುದು ಉತ್ತಮ.

ಮಜ್ಜಿಗೆ ತಿಳಿಯಾಗಿದ್ದರೆ ಭೇದಿಯಾಗುವುದನ್ನು ತಡೆಯುವುದು. ಹುಳಿಯಾಗಿದ್ದರೆ ಪಿತ್ತಹರ, ಜೀರ್ಣಶಕ್ತಿ ಹೆಚ್ಚಿಸುವುದು. ಅಗ್ನಿ ವೃದ್ಧಿ ಮಾಡಿ ವಾತ ಮತ್ತು ಕಫಗಳ ದೋಷವನ್ನು ಹೋಗಲಾಡಿಸುವುದು.

ಶೀತಕಾಲದಲ್ಲಿ ಜೀರ್ಣಶಕ್ತಿ ಹೆಚ್ಚಿಸಿ ನಾಲಗೆಯ ಅರುಚಿಯನ್ನು ಹೋಗಲಾಡಿಸುವುದು. ನಾಡಿಗಳನ್ನು ಶುದ್ಧಗೊಳಿಸುವುದು.

(ದೀರ್ಘಾಯು)

ಡಾ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 76 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

ಡಾ| ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ವಿಜ್ಞಾನ

ಎಕ್ಸ್-ರೇ ತರಬೇತಿಗೆ "ಮಾಯಾ ವಿದ್ಯಾರ್ಥಿ"

ಎಕ್ಸ್—ರೇ ತಾಂತ್ರಿಕರ ತರಬೇತಿಗಾಗಿ ಅಮೆರಿಕದ ವೈದ್ಯ ಶಾಲೆಗಳಲ್ಲಿ ಹಾಗೂ ತರಬೇತಿ ಕೇಂದ್ರಗಳಲ್ಲಿ "ಮಾಯಾ ವಿದ್ಯಾರ್ಥಿ"ಯೊಬ್ಬ ಹಾಜರಾಗಲಿದ್ದಾನೆ.

ಈ "ವಿದ್ಯಾರ್ಥಿ" ಮಾನವನ ಅಸ್ತಿಪಂಜರದ ಸುತ್ತ ನಿರ್ಮಿಸಿದ ವಿಶೇಷ ರೀತಿಯ ಡಮ್ಮಿ. ರಬ್ಬರ್ ಹಾಗೂ ಪ್ಲಾಸ್ಟಿಕ್ ವಸ್ತುಗಳಿಂದ ಮುಖ್ಯ ಅವಯವಗಳನ್ನು ರೂಪಿಸಿ ಅವನ್ನು ಸೂಕ್ತ ಸ್ಥಳಗಳಲ್ಲಿ ಜೋಡಿಸಲಾಗಿದೆ.

ಸಾಂಪ್ರದಾಯಿಕವಾಗಿ ಎಕ್ಸ್—ರೇ ತಂತ್ರ ವಿಜ್ಞಾನದ ಅಧ್ಯಯನಕ್ಕೆ ವಿದ್ಯಾರ್ಥಿಗಳು ಪರಸ್ಪರರ ಎಕ್ಸ್—ರೇ ಗ್ರಹಣವನ್ನು ನಡೆಸುತ್ತಾರೆ. ಈ ವಿಧಾನದಲ್ಲಿ ಮಿತಿ ಮೀರಿದ ಎಕ್ಸ್—ರೇ ವಿಸರ್ಜನೆಗೆ ಅವಕಾಶವಿದೆ

ಡಮ್ಮಿಯನ್ನು ಎಕ್ಸ್—ರೇ ಮಾಡುವಾಗ ಇಂಥ ಅಪಾಯಯುಕ್ತ ಅವಕಾಶವಿಲ್ಲ. ಈ ಸಂದರ್ಭದಲ್ಲಿ ನಿಜವಾದ ಮನುಷ್ಯನನ್ನು ಎಕ್ಸ್—ರೇ ಮಾಡಿದಾಗ ದೊರಕುವಂತಹ ಛಾಯಾ ಚಿತ್ರಗಳೇ ದೊರಕುತ್ತವೆ.

ಕನೆಕ್ಟಿಕಟ್ ರಾಜ್ಯದ ಸ್ಟ್ಯಾಂಫರ್ಡಿನಲ್ಲಿರುವ ಅಲ್ಡರ್‌ಸನ್ ಸಂಶೋಧಕ ಪ್ರಯೋಗ ಶಾಲೆಯವರು ಸಿದ್ಧಪಡಿಸಿರುವ ಈ ಡಮ್ಮಿಗಳ ಮಾರಾಟವನ್ನು ರೈತೀನ್ ಕಂಪೆನಿಯ ಉಪಸಂಸ್ಥೆಯಾದ ಮೆಕ್‌ಲೆಟ್ ಲ್ಯಾಬರೇಟರೀಸ್ ಕಾರ್ಪೊರೇಟೆಡ್ ಅವರು ನೋಡಿಕೊಳ್ಳುತ್ತಾರೆ.

ಡಮ್ಮಿಯ ಕೀಲುಗಳಿಗೆ ಮರಡುಗಳನ್ನು ಜೋಡಿಸಿದ್ದು, ಎಕ್ಸ್—ರೇಗೆ ಕುಳಿತುಕೊಳ್ಳುವವರು ವಹಿಸುವ ನಾನಾ ಭಂಗಿಗಳನ್ನು ಈ ಡಮ್ಮಿಯೂ ವಹಿಸಿಕೊಳ್ಳಬಲ್ಲದು.

ಇದರಲ್ಲಿ ಎಡ ಹೃತ್ಕುಕ್ಷಿಯಿಂದ ಹೊರಡುವ ನಾಳಗಳ ಸಮೂಹವೂ ಇದ್ದು ಮನುಷ್ಯನ ಶರೀರದ ನಾಳಗಳಂತೆಯೇ ಕಾಣುತ್ತವೆ. ಈ ಜಾಲದ ಟೊಳ್ಳು ನಾಳಗಳು ಹೃದಯದಿಂದ ಕುತ್ತಿಗೆ ಹಾಗೂ ಕೆಳ ಹೊಟ್ಟೆಯ ವರೆಗೆ ಹಬ್ಬಿವೆ. ಸೂಕ್ಷ್ಮ ನಾಳಗಳಲ್ಲಿಯೂ ದ್ರವವನ್ನು ತುಂಬಬಹುದಾಗಿದೆ. ರಕ್ತ ಪರಿಚಲನೆಯ ಎಕ್ಸ್—ರೇ ಛಾಯಾ ಚಿತ್ರಗಳು ನೈಜವಾಗಿ ಕಂಡು ಬರುವುವು. ನೈಜತೆಗಾಗಿ ಚಿಕ್ಕದೊಂದು ಪಂಪು, ಶುದ್ಧ ರಕ್ತ ನಾಳಗಳಲ್ಲಿ ದ್ರವ ನಿಮಿಷಕ್ಕೆ ೭೨ ಸಾರಿ ಹೊರಬರುವ ಹಾಗೆ ಕೆಲಸ ಮಾಡುವುದು.

ಚಂದಾ ಹಣ ಬಾಕಿ ಇರುವ ಚಂದಾದಾರರು ಆದಷ್ಟು ಬೇಗ ಚಂದಾ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

READ &
ADVERTISE IN
NAVAYUGA WEEKLY